(B) 025211

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ಆರನೆಯ ಅಧಿವೇಶನ

Sixth Session

ಸಂಪುಟ ೧೦ - (ಕ್ರಮಾಂಕ ೧ರಿಂದ ೫)

Volume X - (No. 1 to 5)

(೩ನೇ ಸೆಪ್ಟೆಂಬರ್ ೧೯೯೭, ೪ನೇ ಸೆಪ್ಟೆಂಬರ್ ೧೯೯೭, ೮ನೇ ಸೆಪ್ಟೆಂಬರ್ ೧೯೯೭,
೯ನೇ ಸೆಪ್ಟೆಂಬರ್ ೧೯೯೭ ಮತ್ತು ೧೦ನೇ ಸೆಪ್ಟೆಂಬರ್ ೧೯೯೭)

(3rd September 1997, 4th September 1997, 8th September 1997,
9th September 1997 and 10th September 1997)

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು.
Karnataka Legislature Secretariat Bangalore

ವಿಷಯಾನುಕ್ರಮಣಿಕೆ

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

ಸಂಪುಟ ೧೦ - (ಕ್ರಮಾಂಕ ೧ರಿಂದ ೫)

(೩ನೇ ಸೆಪ್ಟೆಂಬರ್ ೧೯೯೭, ೪ನೇ ಸೆಪ್ಟೆಂಬರ್ ೧೯೯೭, ೮ನೇ ಸೆಪ್ಟೆಂಬರ್ ೧೯೯೭,
೯ನೇ ಸೆಪ್ಟೆಂಬರ್ ೧೯೯೭ ಮತ್ತು ೧೦ನೇ ಸೆಪ್ಟೆಂಬರ್ ೧೯೯೭)

ಬುಧವಾರ, ೩ನೇ ಸೆಪ್ಟೆಂಬರ್ ೧೯೯೭

ಸಾಯನ ಸೌರ ಭಾದ್ರಪದ ೧೯೧೮ (ಶಕ)

1. ವಿತ್ತೀಯ ಕಾರ್ಯಕಲಾಪ: 1

ಅ) 1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ: 1

- ಶ್ರೀ ಮಂಜುನಾಥ್ ಸಿ.ಕುನ್ನೂರ್
  ಶ್ರೀ ಜೆ.ಸಿ.ಮಾಧುಸ್ವಾಮಿ
  ಶ್ರೀ ಸಿ.ಎಸ್.ಪುಟ್ಟೇಗೌಡ
  ಶ್ರೀ ಕೆ.ವಿಶ್ವೇಶ್ವರ ಹೆಗಡೆ
  ಶ್ರೀ ಎಸ್.ಪಿ.ಮುದ್ದಹನುಮೇಗೌಡ
  ಶ್ರೀ ಎಸ್.ಸುರೇಶ್‌ಕುಮಾರ್
  ಶ್ರೀ ಎಂ.ಶಿವಾನಂದ

2. ಸಚಿವರ ಹೇಳಿಕೆ: 116

ವಿಷಯ:- ಕಾವೇರಿ ವಿಚಾರದಲ್ಲಿ ಕೇಂದ್ರ ಸರ್ಕಾರವು ನಿರೂಪಿಸಿರುವ ಕರಡು ಯೋಜನೆಗೆ ಕರ್ನಾಟಕ ರಾಜ್ಯ ಸರ್ಕಾರದ ಉಪವಾಕ್ಯವಾರು ಅಭಿಪ್ರಾಯ : ಆಕ್ಷೇಪಣೆಗಳು 116

ಶ್ರೀ ಕೆ.ಎನ್.ನಾಗೇಗೌಡ
(ಭಾರಿ ನೀರಾವರಿ ಸಚಿವರು)

ಶ್ರೀ ವಾಟಾಳ್ ನಾಗರಾಜ್

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ

ಶ್ರೀ ಬಿ.ಎಸ್.ಯಡಿಯೂರಪ್ಪ

3. ವಿತ್ತೀಯ ಕಾರ್ಯಕಲಾಪ (ಮುಂದುವರಿದುದು):- 127

1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ 127

ಶ್ರೀ ವಸಂತ ವಿ.ಸಾಲಿಯಾನ

ಶ್ರೀ ರೇವುನಾಯಕ್ ಬೆಳಮಗಿ

ಶ್ರೀ ಗೋವಿಂದ ಎಂ.ಕಾರಜೋಳ

ಶ್ರೀ ಎ.ಟಿ.ರಾಮಸ್ವಾಮಿ

ಶ್ರೀ ಕೆ.ಜಯರಾಮಶೆಟ್ಟಿ

ಶ್ರೀ ಬಿ.ನಂಜಾಮರಿ

ಶ್ರೀ ಯು.ಆರ್.ಸಭಾಪತಿ

ಶ್ರೀ ವಿ.ಶಿವರಾಜ್

ಶ್ರೀ ರಾಜಶೇಖರ ಶೀಲವಂತ

ಶ್ರೀ ಅಲ್ಲಂ ವೀರಭದ್ರಪ್ಪ

ಶ್ರೀ ಟಿ.ಹೆಚ್.ಬಸವರಾಜು

ಶ್ರೀ ಎನ್.ಯೋಗೀಶ್ ಭಟ್

ಶ್ರೀ ಬಿ.ಶಿವರಾಮ್

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ

ಗುರುವಾರ, ೪ನೇ ಸೆಪ್ಟೆಂಬರ್ ೧೯೯೭

ಸಾಯನ ಸೌರ ಭಾದ್ರಪದ ೧೯೧೮ (ಶಕ)

1. ವಿತ್ತೀಯ ಕಾರ್ಯಕಲಾಪ

ಅ) 1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಸರ್ಕಾರದ ಉತ್ತರ 257

ಶ್ರೀ ಹೆಚ್.ಕೆ.ಕುಮಾರಸ್ವಾಮಿ

ಶ್ರೀ ಬಿ.ಮುನಿಯಪ್ಪ

ಶ್ರೀ ಸಿ.ಆರ್.ಸಗೀರ್ ಅಹಮದ್

ಶ್ರೀ ಎ.ರಾಮದಾಸ್

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ

ಶ್ರೀ ಎಸ್.ಆರ್.ಲಕ್ಷ್ಮಯ್ಯ

2. ಸಚಿವರಿಂದ ಹೇಳಿಕೆ 314

ವಿಷಯ:- ಕರ್ನಾಟಕ ಹಾಲು ಮಹಾ ಮಂಡಳಿ ಬಗ್ಗೆ 314

ಶ್ರೀ ಹೆಚ್.ಡಿ.ರೇವಣ್ಣ
(ವಸತಿ ಸಚಿವರು)

ಶ್ರೀ ಕೆ.ಎನ್.ನಾಗೇಗೌಡ
(ಭಾರಿ ನೀರಾವರಿ ಸಚಿವರು)

ಜೆ.ಹೆಚ್.ಪಟೇಲ್
(ಮುಖ್ಯಮಂತ್ರಿಗಳು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಬಿ.ಎಸ್.ಯಡಿಯೂರಪ್ಪ

ಶ್ರೀ ವಾಟಾಳ್ ನಾಗರಾಜ್

3. ಆ) 1997-98ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೆಯ ಕಂತು) ಮಂಡನೆ 383

- ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು)

ಶ್ರೀ ಬಿ.ಎಸ್.ಯಡಿಯೂರಪ್ಪ

ಇ) 1987-88 ಹಾಗೂ 1988-89ನೇ ಆರ್ಥಿಕ ವರ್ಷಗಳಿಗೆ ಹೆಚ್ಚುವರಿ ಅನುದಾನ ಬೇಡಿಕೆಗಳ ಮಂಡನೆ 394

- ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

4. ಶಾಸನ ರಚನೆ (ವಿಧೇಯಕಗಳ ಮಂಡನೆ) ಹಾಗೂ ಅಂಗೀಕಾರ: 396

ಅ) ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕ 1997 396

- ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಆ) ಕರ್ನಾಟಕ ಧನ ವಿನಿಯೋಗ (ನಂ.4) ವಿಧೇಯಕ 1997 397

- ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಇ) ಕರ್ನಾಟಕ ಧನ ವಿನಿಯೋಗ (ನಂ.5) ವಿಧೇಯಕ 1997 397

- ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಈ) ಕರ್ನಾಟಕ ಧನ ವಿನಿಯೋಗ (ನಂ.6) ವಿಧೇಯಕ 1997 398

- ಶ್ರೀ ಸಿದ್ಧರಾಮಯ್ಯ
(ಉಪ ಮುಖ್ಯಮಂತ್ರಿಗಳು)

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ: 404

ವಿಷಯ:- ವಿಷಯ ಸಮಿತಿಗಳನ್ನು ತೆಗೆದುಹಾಕಿ ಬೇಡಿಕೆಗಳ ಮೇಲೆ ಹೆಚ್ಚು ದಿವಸಗಳ ಕಾಲ ಚರ್ಚೆ ಮಾಡಲು ಅನುಕೂಲ ಮಾಡಿಕೊಡುವ ಕುರಿತು. 404

ಶ್ರೀ ಹೆಚ್.ಎನ್.ನಂಜೇಗೌಡ

ಶ್ರೀ ಜೆ.ಹೆಚ್.ಪಟೇಲ್
(ಮುಖ್ಯಮಂತ್ರಿಗಳು)

ಶ್ರೀ ಬಿ.ಎಸ್.ಯಡಿಯೂರಪ್ಪ

ಶ್ರೀ ವಾಟಾಳ್ ನಾಗರಾಜ್

ಶ್ರೀ ಸಿ.ಭೈರೇಗೌಡ
(ಕೃಷಿ ಸಚಿವರು)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ
(ಅರಣ್ಯ ಸಚಿವರು)

ಶ್ರೀ ಬಿ.ಆರ್.ಯಾವಗಲ್

6. ಶಾಸನ ರಚನೆ 413

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು 413

ಅ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (2ನೇ ತಿದ್ದುಪಡಿ) ವಿಧೇಯಕ 413

- ಶ್ರೀ ಪಿ.ಜಿ.ಆರ್.ಸಿಂಧ್ಯಾ
(ಸಾರಿಗೆ ಸಚಿವರು)

7. ಸಚಿವರ ಹೇಳಿಕೆ 416

ವಿಷಯ:- ವಿದ್ಯುತ್ ದರ ಏರಿಕೆ ಪರಿಷ್ಕರಣೆ ಕುರಿತು 416

- ಶ್ರೀ ಶರಣಬಸಪ್ಪ ದರ್ಶನಾಪುರ
(ಇಂಧನ ರಾಜ್ಯ ಸಚಿವರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ವಾಟಾಳ್ ನಾಗರಾಜ್

ಶ್ರೀ ಎಸ್.ಎನ್.ಪಾಟೀಲ್
(ಸಹಕಾರ ಸಚಿವರು)

ಶ್ರೀ ಆರ್.ಶ್ರೀನಿವಾಸ್

ಶ್ರೀ ಜಿ.ವಿ.ಶ್ರೀರಾಮರೆಡ್ಡಿ

ಶ್ರೀ ಹೆಚ್.ಎನ್.ನಂಜೇಗೌಡ

ಶ್ರೀ ಟಿ.ಬಿ.ಜಯಚಂದ್ರ

ಶ್ರೀ ಎಸ್.ಪಿ.ಮುದ್ದಹನುಮೇಗೌಡ

ಶ್ರೀ ಎಸ್.ಸುರೇಶ್‌ಕುಮಾರ್

ಶ್ರೀ ವಾಟಾಳ್ ನಾಗರಾಜ್

ಶ್ರೀ ಜಿ.ವಿ.ಶ್ರೀರಾಮರೆಡ್ಡಿ

ಶ್ರೀ ಸಿ.ಭೈರೇಗೌಡ
(ಕೃಷಿ ಸಚಿವರು)

8. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ 441

ಅ) ಆಲೂಗೆಡ್ಡೆ ಬೆಲೆ ಬಹಳ ಇಳಿದಿರುವ ಬಗ್ಗೆ 441

- ಶ್ರೀ ಹೆಚ್.ಎಸ್.ಪ್ರಕಾಶ್

ಶ್ರೀ ಹೆಚ್.ಎನ್.ನಂಜೇಗೌಡ

ಶ್ರೀ ಕೆ.ಶ್ರೀನಿವಾಸಗೌಡ

ಶ್ರೀ ಸಿ.ಭೈರೇಗೌಡ
(ಕೃಷಿ ಸಚಿವರು)

ಶ್ರೀ ಎ.ಟಿ.ರಾಮಸ್ವಾಮಿ

9. ಪ್ರಕಟಣೆ 445

10. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ 446

ಅ) ಹೇಮಾವತಿ ನದಿ ನೀರನ್ನು ಮಾರ್ಕೋನಹಳ್ಳಿ ಜಲಾಶಯಕ್ಕೆ ಬಿಡುವ ಬಗ್ಗೆ 446

ಶ್ರೀ ಡಿ.ನಾಗರಾಜಯ್ಯ

ಶ್ರೀ ಎಸ್.ಪಿ.ಮುದ್ದಹನುಮೇಗೌಡ

ಶ್ರೀ ಟಿ.ಬಿ.ಜಯಚಂದ್ರ

ಶ್ರೀ ಕೆ.ಎನ್.ನಾಗೇಗೌಡ
(ಭಾರಿ ನೀರಾವರಿ ಸಚಿವರು)

ಶ್ರೀ ಸಿ.ಭೈರೇಗೌಡ
(ಕೃಷಿ ಸಚಿವರು)

ಆ) ಪೆಟ್ರೋಲ್, ಡೀಸೆಲ್ ಹಾಗೂ ಗ್ಯಾಸ್ ಬೆಲೆ ಏರಿಕೆ ಕುರಿತು 453

- ಶ್ರೀ ಎಸ್.ಸುರೇಶ್‌ಕುಮಾರ್

ಶ್ರೀ ವಾಟಾಳ್ ನಾಗರಾಜ್

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಪಿ.ಜಿ.ಆರ್.ಸಿಂಧ್ಯ
(ಸಾರಿಗೆ ಸಚಿವರು)

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಯ ಸ್ಥಾಪನೆಯಿಂದ ಉಂಟಾಗತಕ್ಕ ಅನಾಹುತಗಳ ಬಗ್ಗೆ 458

- ಶ್ರೀ ಯು.ಆರ್.ಸಭಾಪತಿ

ಶ್ರೀ ಕೆ.ಜಯಪ್ರಕಾಶ್ ಹೆಗಡೆ
(ಬಂದರು ಮತ್ತು ಮೀನುಗಾರಿಕೆ ಸಚಿವರು)

ಶ್ರೀ ಎಂ.ಸಿ.ನಾಣಯ್ಯ
(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

11. ಅನುಬಂಧ I, II, III, IV 461-488

ಸೋಮವಾರ, ೮ನೇ ಸೆಪ್ಟೆಂಬರ್ ೧೯೯೭

ಸಾಯನ ಸೌರ ಭಾದ್ರಪದ ೧೯೧೮ (ಶಕ)

1. ಸಂತಾಪ ಸೂಚನೆ 489

ಮದರ್ ಥೆರೇಸಾರವರ ನಿಧನ ಕುರಿತು

- ಶ್ರೀ ಜೆ.ಹೆಚ್.ಪಟೇಲ್
(ಮುಖ್ಯಮಂತ್ರಿಗಳು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಬಿ.ಎಸ್.ಯಡಿಯೂರಪ್ಪ

ಶ್ರೀ ವಾಟಾಳ್ ನಾಗರಾಜ್

ಶ್ರೀ ಜಿ.ವಿ.ಶ್ರೀರಾಮರೆಡ್ಡಿ

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ

ಶ್ರೀ ಬಿ.ಮುನಿಯಪ್ಪ

ಶ್ರೀ ಜೆ.ಎ.ಫರ್ನಾಂಡೀಸ್

ಶ್ರೀಮತಿ ಬಿ.ಟಿ.ಲಲಿತಾನಾಯಕ್

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್

2. ವರದಿಯನ್ನೊಪ್ಪಿಸುವುದು 502

3. ಅಧ್ಯಕ್ಷರ ಅಪ್ಪಣೆ ಮೇರೆಗೆ 502

ಅ) ಪೆಟ್ರೋಲ್ ಬೆಲೆ ಏರಿಕೆಗೆ ಸಂಬಂಧಪಟ್ಟ ವಿಚಾರ 502

- ಶ್ರೀ ಎಂ.ಸಿ.ನಾಣಯ್ಯ
(ಕಾನೂನು ಸಚಿವರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಬಿ.ಎಸ್.ಯಡಿಯೂರಪ್ಪ

ಶ್ರೀ ವಾಟಾಳ್ ನಾಗರಾಜ್

ಶ್ರೀ ಎಸ್.ಸುರೇಶ್‌ಕುಮಾರ್

ಶ್ರೀ ಎಂ.ವೀರಪ್ಪಮೊಯಿಲಿ

ಶ್ರೀ ಜೆ.ಹೆಚ್.ಪಟೇಲ್
(ಮುಖ್ಯಮಂತ್ರಿಗಳು)

ಆ) ಮೈಸೂರಿನಲ್ಲಿ ವಕೀಲರ ಚಳುವಳಿ ಸತ್ಯಾಗ್ರಹ
ನಡೆಯುತ್ತಿರುವ ವಿಚಾರ 511

ಶ್ರೀ ವಾಟಾಳ್ ನಾಗರಾಜ್

ಶ್ರೀ ಎ.ರಾಮದಾಸ್

ಶ್ರೀ ಹೆಚ್.ಎನ್.ನಂಜೇಗೌಡ

ಶ್ರೀ ಎಂ.ಸಿ.ನಾಣಯ್ಯ
(ಕಾನೂನು ಸಚಿವರು)

4. ಗಮನ ಸೆಳೆಯುವ ಸೂಚನೆಗಳು 514

i) ಖೋಟಾ ದಾಖಲೆ ಸೃಷ್ಟಿಸಿ ಸೋಮವಾರಪೇಟೆ
ತಾಲ್ಲೂಕಿನ ಕುಮಾರಧಾರ ತಪ್ಪಲಿನಲ್ಲಿ ಒಂದು
ಕೋಟಿ ರೂಪಾಯಿ ಬೆಲೆ ಬಾಳುವ ಹೊನ್ನೆ ಮರವನ್ನು 514

ಅರಣ್ಯ ಇಲಾಖೆಯವರು ಲೂಟಿ ಮಾಡಿರುವುದು.

- ಶ್ರೀ ಎಂ.ಪಿ.ಅಪ್ಪಚ್ಚುರಂಜನ್

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ
(ಅರಣ್ಯ ಸಚಿವರು)

ii) ತುಮಕೂರು ಜಿಲ್ಲೆಯ 8 ತಾಲ್ಲೂಕುಗಳು ಹಾಗೂ ಕೋಲಾರ ಜಿಲ್ಲೆಯ ಕೆಲವು ತಾಲ್ಲೂಕುಗಳನ್ನು ಕಪ್ಪು ಹಾಗೂ ಬೂದು ಪ್ರದೇಶ ಎಂದು ವರ್ಗೀಕರಿಸುವ ಹಾಗೂ ರೈತರ ಕೊಳವೆ ಬಾವಿಗಳಿಗೆ ವಿದ್ಯುತ್ ಸರಬರಾಜು ನಿಲುಗಡೆ. 522

- ಶ್ರೀ ಜೆ.ಸಿ.ಮಾಧುಸ್ವಾಮಿ

ಶ್ರೀ ಟಿ.ಬಿ.ಜಯಚಂದ್ರ

ಶ್ರೀ ಎಸ್.ಪಿ.ಮುದ್ದಹನುಮೇಗೌಡ

ಶ್ರೀ ಬಿ.ಎಸ್.ಶಿವನಂಜಪ್ಪ

ಶ್ರೀ ಆರ್.ನಾರಾಯಣ

ಶ್ರೀ ಶರಣಬಸಪ್ಪ ದರ್ಶನಾಪುರ್
(ವಿದ್ಯುತ್ ರಾಜ್ಯ ಮಂತ್ರಿಗಳು)

ಶ್ರೀ ಜೆ.ಹೆಚ್.ಪಟೇಲ್
(ಮುಖ್ಯಮಂತ್ರಿಗಳು)

5. ಅಧ್ಯಕ್ಷರ ಅಪ್ಪಣೆ ಮೇರೆಗೆ 538

ಬೆಳಗಾಂ ವಿಭಜನೆಯ ಬಗ್ಗೆ 538

- ಶ್ರೀ ಚಂದ್ರಶೇಖರ ಮಾಮನಿ

6. ನಿಯಮ 67ರ ಮೇರೆಗೆ ಚರ್ಚೆ 542

ರಾಜ್ಯದಲ್ಲಿ ಕೆಲವು ಭಾಗಗಳಲ್ಲಿ ಉಂಟಾಗಿರುವ ಬರಗಾಲ, ಅನಾವೃಷ್ಟಿಯಿಂದ ಜನಗಳು ಬೇರೆ ಕಡೆ ವಲಸೆ ಹೋಗುತ್ತಿರುವುದು 542

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಬಿ.ಎಸ್.ಯಡಿಯೂರಪ್ಪ

ಶ್ರೀ ವಾಟಾಳ್ ನಾಗರಾಜ್

ಶ್ರೀ ಜಿ.ವಿ.ಶ್ರೀರಾಮರೆಡ್ಡಿ

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ

ಶ್ರೀಮತಿ ಬಿ.ಟಿ.ಲಲಿತಾನಾಯಕ್

ಶ್ರೀ ಎಂ.ವೀರಪ್ಪಮೊಯಿಲಿ

ಶ್ರೀ ಬಿ.ಆರ್.ಯಾವಗಲ್

ಶ್ರೀ ಶ್ರೀರಂಗದೇವರಾಯಲು

ಶ್ರೀ ವಿಶ್ವೇಶ್ವರ ಹೆಗಡೆ

ಶ್ರೀ ಕೆ.ಶ್ರೀನಿವಾಸ್‌ಗೌಡ

ಶ್ರೀ ಬಿ.ಶಿವರಾಮ್

ಶ್ರೀ ಜೆ.ಸಿ.ಮಾಧುಸ್ವಾಮಿ

ಶ್ರೀ ರೇವುನಾಯಕ್‌ಬೆಳಮಗಿ

ಶ್ರೀ ಎ.ಬಿ.ಮಲಕರೆಡ್ಡಿ

ಶ್ರೀ ಶಿವಾನಂದ ಎಸ್.ಪಾಟೀಲ್

ಶ್ರೀ ಗುತ್ತೇದಾರ್ ಸುಭಾಷ್

ಶ್ರೀ ಅಶೋಕ ಕಾಟ್ವೆ

ಶ್ರೀ ಮಂಜುನಾಥ್ ಸಿ.ಕುನ್ನೂರ್

ಶ್ರೀ ಸಂಗಣ್ಣ ಕರಡಿ

ಶ್ರೀ ಬಸವರಾಜ್

ಮಂಗಳವಾರ, ೯ನೇ ಸೆಪ್ಟೆಂಬರ್ ೧೯೯೭

ಸಾಯನ ಸೌರ ಭಾದ್ರಪದ ೧೯೧೮ (ಶಕ)

1. ಅಧ್ಯಕ್ಷರ ಅಪ್ಪಣೆ ಮೇರೆಗೆ:- 638

ಅ) 1956ರಲ್ಲಿ ಆದ ಭಾಷಾವಾರು ಪ್ರಾಂತ್ಯ ರಚನೆ ಮೇಲೆ ಮೆಡಿಕಲ್ ಕಾಲೇಜುಗಳ ಸೀಟಿನ ಹಂಚಿಕೆ 638

- ಶ್ರೀ ವೈಜನಾಥ್ ಪಾಟೀಲ್

ಡಾ. ಎ.ಬಿ.ಮಲಕರೆಡ್ಡಿ

ಶ್ರೀಮತಿ ಪ್ರಮೀಳಾ ನೇಸರ್ಗಿ

ಡಾ. ಎಂ.ಶಂಕರ್‌ನಾಯಕ್
(ವೈದ್ಯಕೀಯ ಶಿಕ್ಷಣ ಸಚಿವರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಜೆ.ಹೆಚ್.ಪಟೇಲ್
(ಮುಖ್ಯಮಂತ್ರಿಗಳು)

ಆ) ಈಚಲು ಮರದಿಂದ ಸೇಂದಿ ಇಳಿಸುವ ಕಾರ್ಮಿಕರ ವಿಷಯ: 654

ಶ್ರೀ ಸುಭಾಷ್ ಆರ್.ಗುತ್ತೇದಾರ್

ಶ್ರೀ ಕಾಗೋಡು ತಿಮ್ಮಪ್ಪ

ಶ್ರೀ ಜೆ.ಹೆಚ್.ಪಟೇಲ್
(ಮುಖ್ಯಮಂತ್ರಿಗಳು)

ಇ) ಬೀಳಗಿ ತಾಲ್ಲೂಕಿನ ಹೆರಕಲ್ ಗ್ರಾಮದಲ್ಲಿ ತಾಲ್ಲೂಕು ಪಂಚಾಯಿತಿ ಸದಸ್ಯರಿಗೆ ಶಾಲೆಯ ಶಿಕ್ಷಕರೊಬ್ಬರು ಅವಮಾನ ಮಾಡಿರುವುದು. 656

- ಶ್ರೀ ರಾಜಶೇಖರ ಶೀಲವಂತ

ಈ) ದಕ್ಷಿಣ ಕನ್ನಡ ಜಿಲ್ಲೆಯನ್ನು ತುಳು ಜಿಲ್ಲೆಯನ್ನಾಗಿ ನಾಮಕರಣ ಮಾಡುವುದು 658

- ಶ್ರೀ ಕೆ.ಜಯರಾಮಶೆಟ್ಟಿ

ಉ) ಖಾಸಗಿ ಡೆಂಟಲ್ ಹಾಗೂ ಮೆಡಿಕಲ್ ಕಾಲೇಜುಗಳ ಕುರಿತು 660

- ಶ್ರೀ ಎಸ್.ಸುರೇಶ್‌ಕುಮಾರ್

ಊ) ಬಾಗೇಪಲ್ಲಿ ಕ್ಷೇತ್ರದ ವಿದ್ಯುಚ್ಛಕ್ತಿ ಮಂಡಳಿ ವಿಚಾರ 662

- ಶ್ರೀ ಜಿ.ವಿ.ಶ್ರೀರಾಮರೆಡ್ಡಿ

ಋ) ಗ್ರಂಥಾಲಯಕ್ಕೆ ಕನ್ನಡ ಪುಸ್ತಕಗಳನ್ನು ಖರೀದಿಸುವಲ್ಲಿ ತಾರತಮ್ಯ 665

- ಶ್ರೀ ಬಿ.ಎಸ್.ಯಡಿಯೂರಪ್ಪ

ಎ) ಸಚಿವ ಸಂಪುಟದ ಸಭೆಯನ್ನು ಹುಬ್ಬಳ್ಳಿಯಲ್ಲಿ ನಡೆಸುವುದು 667

- ಶ್ರೀ ವಾಟಾಳ್ ನಾಗರಾಜ್

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ

ಏ) ಕೋಲಾರ ಜಿಲ್ಲೆಯು ಪರ್‌ಕ್ಯಾಪಿಟಾ ಇನ್‌ಕಂ ಕಡಿಮೆ ಇರತಕ್ಕಂಥ ಜಿಲ್ಲೆಯಾಗಿರುವುದು 674

- ಶ್ರೀ ಜಿ.ವಿ.ಶ್ರೀರಮಾರೆಡ್ಡಿ

ಐ) ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಸುಟ್ಟ ಗಾಯಗಳ ವಿಭಾಗವನ್ನು ಆಧುನೀಕರಿಸುವುದು 676

- ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು)

ಶ್ರೀ ಎಸ್.ಸುರೇಶ್‌ಕುಮಾರ್

ಶ್ರೀಮತಿ ಪ್ರಮೀಳಾ ನೇಸರ್ಗಿ

ಡಾ. ಎಂ.ಶಂಕರ್‌ನಾಯಕ್
(ವೈದ್ಯಕೀಯ ಶಿಕ್ಷಣ ಸಚಿವರು)

2. ಕಂದಾಯ ಸಚಿವರ ಹೇಳಿಕೆ:- 684

ವಿಷಯ:- ರಾಜ್ಯದಲ್ಲಿ ಬರಗಾಲ ಉಂಟಾಗಿರುವ ಬಗ್ಗೆ 684

- ಶ್ರೀ ರಮೇಶ್ ಸಿ.ಜಿಗಜಿಣಗಿ
(ಕಂದಾಯ ಸಚಿವರು)

3. ಶಾಸನ ರಚನೆ 721

ಎ) ಪರ್ಯಾಲೋಚನಾ ಪ್ರಸ್ತಾಪ:- 721

ಅ) ಕೂಡಲ ಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ 1997 721

- ಶ್ರೀ ರಮೇಶ್ ಸಿ.ಜಿಗಜಿಣಗಿ
(ಕಂದಾಯ ಸಚಿವರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀಮತಿ ಪ್ರಮೀಳಾ ನೇಸರ್ಗಿ

ಶ್ರೀ ಎಂ.ಸಿ.ನಾಣಯ್ಯ
(ಕಾನೂನು ಸಚಿವರು)

ಶ್ರೀ ವಾಟಾಳ್ ನಾಗರಾಜ್

ಶ್ರೀ ಎಂ.ವೀರಪ್ಪ ಮೊಯಿಲಿ

ಶ್ರೀ ಶಿವಶಂಕರಪ್ಪ ರಾಚಪ್ಪ ಕಾಶಪ್ಪನವರ್

(ಅಂಗೀಕರಿಸಲಾಯಿತು)

ಆ) ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1997 747

- ಶ್ರೀ ರಮೇಶ್ ಸಿ.ಜಿಗಜಿಣಗಿ
(ಕಂದಾಯ ಸಚಿವರು)

ಶ್ರೀ ಹೆಚ್.ಎನ್.ನಂಜೇಗೌಡ

ಶ್ರೀ ಎಂ.ವೀರಪ್ಪಮೊಯಿಲಿ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಕಾಗೋಡು ತಿಮ್ಮಪ್ಪ

ಶ್ರೀ ಎಂ.ಸಿ.ನಾಣಯ್ಯ
(ಕಾನೂನು ಸಚಿವರು)

(ವಿಧೇಯಕದ ಚರ್ಚೆಯನ್ನು ಮುಂದೂಡಲಾಯಿತು)

ಇ) ಕರ್ನಾಟಕ ಸ್ಟ್ಯಾಂಪ್ (ಎರಡನೇ ತಿದ್ದುಪಡಿ) ವಿಧೇಯಕ, 1997 — 769

- ಶ್ರೀ ರಮೇಶ್ ಸಿ.ಜಿಗಜಿಣಗಿ
(ಕಂದಾಯ ಸಚಿವರು)

ಶ್ರೀಮತಿ ಪ್ರಮೀಳಾ ನೇಸರ್ಗಿ

ಶ್ರೀ ಹೆಚ್.ಎನ್.ನಂಜೇಗೌಡ

(ಅಂಗೀಕರಿಸಲಾಯಿತು)

ಈ) ಮಾನವ ನೇತ್ರಗಳ (ಚಿಕಿತ್ಸೆ ಮತ್ತು ಸಂಶೋಧನಾ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದಕ್ಕೆ ಅಧಿಕಾರ ನೀಡುವುದು) ಮತ್ತು ಕಾನೂನುಗಳ (ನಿರಸನ) ಕರ್ನಾಟಕ ವಿಧೇಯಕ, 1996
-ಪರ್ಯಾಲೋಚನಾ ಪ್ರಸ್ತಾವ — 775

- ಡಾ. ಹೆಚ್.ಸಿ.ಮಹದೇವಪ್ಪ
(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ಅಂಗೀಕರಿಸಲಾಯಿತು)

ಉ) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ 1997 776

- ಶ್ರೀ ಎಂ.ವಿ.ಗುತ್ತೇದಾರ್
(ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀಮತಿ ಪ್ರಮೀಳಾ ನೇಸರ್ಗಿ

ಶ್ರೀ ಜೆ.ಸಿ.ಮಾಧುಸ್ವಾಮಿ

ಶ್ರೀ ಬಿ.ಬಿ.ಚಿಮ್ಮನಕಟ್ಟಿ

ಶ್ರೀ ಎಂ.ವೀರಪ್ಪಮೊಯಿಲಿ

- (ಅಂಗೀಕರಿಸಲಾಯಿತು)

ಊ) ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ, 1997 796

- ಶ್ರೀ ಎಂ.ವಿ.ಗುತ್ತೇದಾರ್
(ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಎಂ.ವೀರಪ್ಪಮೊಯಿಲಿ

ಶ್ರೀಮತಿ ಪ್ರಮೀಳಾ ನೇಸರ್ಗಿ

- ವಿಧೇಯಕದ ಚರ್ಚೆಯನ್ನು ಮುಂದುವರೆಸಲಾಯಿತು

ಋ) ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) 810
ವಿಧೇಯಕ, 1996

- ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್
(ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು)

(ಅಂಗೀಕರಿಸಲಾಯಿತು)

ಎ) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ 812
ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ 1997

- ಡಾ. ಎಂ.ಶಂಕರ್‌ನಾಯಕ್
(ವೈದ್ಯಕೀಯ ಶಿಕ್ಷಣ ಸಚಿವರು)

ಶ್ರೀ ಎಸ್.ಸುರೇಶ್‌ಕುಮಾರ್
(ರಾಜಾಜಿನಗರ)

- (ಅಂಗೀಕರಿಸಲಾಯಿತು)

4. ಗಮನ ಸೆಳೆಯುವ ಸೂಚನೆಗಳು:- 818

ವಿಷಯ:- (ಅ) ಬಿಜಾಪುರ ಜಿಲ್ಲೆಯ ಇಂಡಿ, ಬಸವನ 818
ಬಾಗೇವಾಡಿ ಹಾಗೂ ಬಿಜಾಪುರ
ತಾಲ್ಲೂಕುಗಳನ್ನು ಕಪ್ಪು ಹಾಗೂ ಬೂದು
ಬಣ್ಣ ಎಂದು ವರ್ಗೀಕರಿಸಿರುವುದು

- ಶ್ರೀ ಶಿವಾನಂದ ಪಾಟೀಲ್

ಶ್ರೀ ತಿಪ್ಪೇಸ್ವಾಮಿ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು)

ಆ) ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆ ದರದ 823
ಕುಸಿತದಿಂದ ರೈತರಿಗೆ ಉಂಟಾಗಿರುವ ತೊಂದರೆ

- ಶ್ರೀ ಬಿ.ಶಿವರಾಮು

ಶ್ರೀ ಡಿ.ಟಿ.ಜಯಕುಮಾರ್
(ತೋಟಗಾರಿಕಾ ಸಚಿವರು)

5) ಪ್ರಕಟಣೆ 840

ಬುಧವಾರ, ೧೦ನೇ ಸೆಪ್ಟೆಂಬರ್ ೧೯೯೭

ಶಾಲಿವಾಹನ ಶಕೆ - ಭಾದ್ರಪದ ೧೯೧೮ (ಶಕ)

1.	ಸಭೆಯ ಮುಂದಿಡಲಾದ ಕಾಗದ ಪತ್ರಗಳು	841
2.	ಗಮನ ಸೆಳೆಯುವ ಸೂಚನೆ	842
	ವಿಷಯ:- ಕಾರವಾರ ಜಿಲ್ಲೆಯ ಕುಮಟಾ ಮತ್ತು ಅಂಕೋಲಾ ತಾಲ್ಲೂಕಿನಲ್ಲಿ ಕೃಷಿ ಭೂಮಿಯನ್ನು ನಿಗದಿತ ಉದ್ದೇಶಕ್ಕೆ ಬಳಸದೇ ಇರುವುದು	842
	- ಶ್ರೀ ವಿಶ್ವೇಶ್ವರ ಹೆಗ್ಗಡೆ	
	ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಕೈಗಾರಿಕಾ ಸಚಿವರು)	
	ಶ್ರೀ ಬಿ.ಎಸ್.ಯಡಿಯೂರಪ್ಪ:-	
3.	ಅರ್ಧ ಗಂಟೆ ಕಾಲಾವಧಿ ಚರ್ಚೆ	855
	ವಿಷಯ:- ಬೆಂಗಳೂರು ನಗರದ ಮೇಲು ಸೇತುವೆ ನಿರ್ಮಾಣದ ಪ್ರಗತಿ ಬಗ್ಗೆ	855
	- ಶ್ರೀ ಎನ್.ರಾಜಣ್ಣ	
	ಶ್ರೀ ಎಂ.ಶ್ರೀನಿವಾಸ್	
	ಶ್ರೀ ಎಸ್.ಸುರೇಶ್‌ಕುಮಾರ್	
	ಶ್ರೀ ರಾಮಲಿಂಗಾರೆಡ್ಡಿ	
	ಶ್ರೀ ಬಿ.ಮುನಿಯಪ್ಪ	

ಶ್ರೀ ಪಿ.ಎಸ್.ಪ್ರಕಾಶ್

ಶ್ರೀಮತಿ ಡಿ.ಹೇಮಾವತಿ

ಶ್ರೀಮತಿ ಪ್ರಮೀಳಾ ನೇಸರ್ಗಿ

ಶ್ರೀ ವಾಟಾಳ್ ನಾಗರಾಜ್

ಶ್ರೀ ಅನಂತ್‌ನಾಗ್
(ನಗರಾಭಿವೃದ್ಧಿ ಸಚಿವರು)

4. [illegible] ಮೇರೆಗೆ: 881

[illegible] ಸ್ಟೇಡಿಯಂಗೆ ನೀಡಿರುವ ಜಾಗ[illegible] 881
ಮತ್ತು ಆಸ್ಪತ್ರೆಗೆ ನೀಡಿರುವ ಬಗ್ಗೆ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಹೆಚ್.ಎನ್.ನಂಜೇಗೌಡ

ಶ್ರೀ ಬಿ.ಎಸ್.ಯಡಿಯೂರಪ್ಪ

ಶ್ರೀ ವಾಟಾಳ್ ನಾಗರಾಜ್

ಶ್ರೀ ಅಜಯಕುಮಾರ್ ಸರ್‌ನಾಯಕ್
(ಕ್ರೀಡಾ ಸಚಿವರು)

5. ಅರ್ಧ ಗಂಟೆ ಕಾಲಾವಧಿ ಚರ್ಚೆ: 894

ಅ) ಮೈಸೂರು ಜಿಲ್ಲೆಯ ನಂಜನಗೂಡು ಬಳಿ ಇರುವ 894
ಕಪಿಲಾ ನದಿಯಲ್ಲಿ ನೀರು ಕಲುಷಿತ

ಶ್ರೀ ಎ.ರಾಮದಾಸ್

ಶ್ರೀ ಬಸವರಾಜ್ ನೀಲಪ್ಪ ಶಿವಣ್ಣನವರ್
(ತಂತ್ರಜ್ಞಾನ ಮತ್ತು ಪರಿಸರ ಸಚಿವರು)

ಆ) ತುಂಗಾ ಮೇಲ್ದಂಡೆ ಯೋಜನೆಯ ಬಗ್ಗೆ 900

ಶ್ರೀ ಮಂಜುನಾಥ್ ಸಿ.ಕುನ್ನೂರ್

ಶ್ರೀ ಯು.ಬಿ.ಬಣಕಾರ್

ಶ್ರೀ ತಿಪ್ಪೇಸ್ವಾಮಿ
(ಸಣ್ಣ ನೀರಾವರಿ ಸಚಿವರು)

ಶ್ರೀ ಸಿ.ಆರ್.ಸಗೀರ್ ಅಹಮದ್

ಶ್ರೀ ಕೆ.ಎನ್.ನಾಗೇಗೌಡ
(ಭಾರಿ ನೀರಾವರಿ ಸಚಿವರು)

ಶ್ರೀ ಟಿ.ಬಿ.ಜಯಚಂದ್ರ

6. ನಿಯಮ 69ರ ಮೇರೆಗೆ ಚರ್ಚೆ: 927

ವಿಷಯ: (ಅ) ಕಾಡುಗಳ್ಳ ವೀರಪ್ಪನ್ ಬಗ್ಗೆ 927

- ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ವಾಟಾಳ್ ನಾಗರಾಜ್

ಶ್ರೀ ಬಿ.ಎಸ್.ಯಡಿಯೂರಪ್ಪ

ಶ್ರೀ ಎಂ.ವೀರಪ್ಪ ಮೊಯಿಲಿ

ಶ್ರೀ ಜೆ.ಹೆಚ್.ಪಟೇಲ್
(ಮುಖ್ಯಮಂತ್ರಿಗಳು)

ಆ) ಸಹಕಾರ ಸಂಘಗಳಲ್ಲಿ ಸಾಲಗಳ ಮೇಲೆ ಹೆಚ್ಚು ಬಡ್ಡಿ ವಸೂಲಿ ಮಾಡುತ್ತಿರುವ ಬಗ್ಗೆ 998

ಶ್ರೀ ಜೆ.ಸಿ.ಮಾಧುಸ್ವಾಮಿ

ಶ್ರೀ ಕಾಗೋಡು ತಿಮ್ಮಪ್ಪ

ಶ್ರೀ ಎಸ್.ಎಸ್.ಪಾಟೀಲ್
(ಸಹಕಾರ ಸಚಿವರು)

7. ಸಚಿವರ ಹೇಳಿಕೆ 1017

ಗ್ರಂಥಾಲಯಗಳಿಗೆ ಪುಸ್ತಕ ಖರೀದಿಸುವ ಬಗ್ಗೆ 1017

ಶ್ರೀ ಎಂ.ಸಿ.ನಾಣಯ್ಯ
(ಕಾನೂನು ಸಚಿವರು)

ಶ್ರೀ ಹೆಚ್.ಎನ್.ನಂಜೇಗೌಡ

ಶ್ರೀ ವಾಟಾಳ್ ನಾಗರಾಜ್

ಶ್ರೀ ಬಿ.ಎಸ್.ಯಡಿಯೂರಪ್ಪ

8. ಶಾಸನ ರಚನಾ ಕಾರ್ಯಕಲಾಪ 1035

ಎ) ಪರ್ಯಾಲೋಚನಾ ಪ್ರಸ್ತಾವ: 1035

ಅ) ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ, 1997 (ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ) 1035

- ಶ್ರೀ ಎಂ.ವಿ.ಗುತ್ತೇದಾರ್
(ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

9. ಅಧ್ಯಕ್ಷರ ಅಪ್ಪಣೆ ಮೇರೆಗೆ:- 1039

ವಿಷಯ: ಅ) ಚನ್ನರಾಯಪಟ್ಟಣದಲ್ಲಿ ಕಳ್ಳತನ 1039

- ಶ್ರೀ ಸಿ.ಎಸ್.ಪುಟ್ಟೇಗೌಡ

ಶ್ರೀ ಎ.ಟಿ.ರಾಮಸ್ವಾಮಿ

ಶ್ರೀ ಆರ್.ರೋಷನ್‌ಬೇಗ್
(ಗೃಹ ಸಚಿವರು)

ಆ) ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬಿಗೆ ನ್ಯಾಯ ಬೆಲೆ ನೀಡುವ ಬಗ್ಗೆ 1046

- ಶ್ರೀ ಬಿ.ಬಿ.ಶಿವಕುಮಾರ್

ಶ್ರೀ ಉಮೇಶ್ ವಿ.ಕತ್ತಿ
(ಸಕ್ಕರೆ ಸಚಿವರು)

ಇ) ಬೆಂಗಳೂರು ನಗರದ ಅವೆನ್ಯೂ ರಸ್ತೆಯಲ್ಲಿ ನಾಮಫಲಕಗಳನ್ನು ಕಿತ್ತುಹಾಕಿರುವುದು 1048

- ಶ್ರೀ ಪಿ.ಎಸ್.ಪ್ರಕಾಶ್

ಶ್ರೀ ಎಂ.ಪಿ.ಪ್ರಕಾಶ್
(ಗ್ರಾಮೀಣಾಭಿವೃದ್ಧಿ ಸಚಿವರು)

ಈ) ಮೈಸೂರಿನ ಆಲನಹಳ್ಳಿಯಲ್ಲಿ ಹೆಣ್ಣುಮಗಳ ಕೊಲೆಯಾಗಿರುವುದು 1050

- ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ

ಶ್ರೀ ಆರ್.ರೋಷನ್‌ಬೇಗ್
(ಗೃಹ ಸಚಿವರು)

ಉ) ಬೆಂಗಳೂರಿನ ಕಂಠೀರವ ಕ್ರೀಡಾಂಗಣದ ಬಳಿ ಇರುವ ಸರ್ಕಾರಿ ಭೂಮಿ ಒತ್ತುವರಿ 1052

- ಶ್ರೀ ಸಿ.ಎಂ.ಲಿಂಗಪ್ಪ

ಶ್ರೀ ಅಜಯಕುಮಾರ್ ಸರ್‌ನಾಯಕ್
(ಕ್ರೀಡಾ ಸಚಿವರು)

ಊ) ಬಾಗಲಕೋಟೆ ಜಿಲ್ಲೆ ಉದ್ಘಾಟನೆಯ ಸಂದರ್ಭದಲ್ಲಿ ಶಾಸಕರಿಗೆ ಅಗೌರವ ಸೂಚಿಸಿರುವುದು 1054

- ಶ್ರೀ ಬಿ.ಬಿ.ಚಿಮ್ಮನಕಟ್ಟಿ

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್
(ಕ್ರೀಡಾ ಸಚಿವರು)

ಋ) ಮಡಿಕೇರಿ ತಾಲ್ಲೂಕಿನ ಭಾಗಮಂಡಲದಲ್ಲಿ ನಡೆದಿರುವ ಸಣ್ಣ ಮಕ್ಕಳ ಕೊಲೆಗಳು 1055

- ಶ್ರೀ ಡಿ.ಎಸ್.ಮಾದಪ್ಪ

ಶ್ರೀ ಆರ್.ರೋಷನ್‌ಬೇಗ್
(ಗೃಹ ಸಚಿವರು)

ಎ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವುದರ ಬಗ್ಗೆ 1057

- ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ

ಶ್ರೀ ಶರಣಬಸಪ್ಪ ದರ್ಶನಾಪುರ
(ಇಂಧನ ರಾಜ್ಯ ಸಚಿವರು)

ಏ) ಪಟ್ಟಣದ ಸದಸ್ಯರಿಗೆ ಮುನಿಸಿಪಾಲಿಟಿ ಸಭೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು 1057

- ಶ್ರೀ ಜೆ.ಸಿ.ಮಾಧುಸ್ವಾಮಿ

ಶ್ರೀ ಮಿರಾಜುದ್ದೀನ್ ಎನ್.ಪಟೇಲ್
(ಪೌರಾಡಳಿತ ಸಚಿವರು)

ಐ) ಶಿಕಾರಿಪುರ ತಾಲ್ಲೂಕಿನ ಉಡುಗುಣಿಯಲ್ಲಿ ವಿದ್ಯುತ್‌ನ ಸಿಂಗಲ್ ಫೇಸ್‌ನಿಂದ ಆಗಿರುವ ತೊಂದರೆ ಬಗ್ಗೆ 1059

- ಶ್ರೀ ಅರಗ ಜ್ಞಾನೇಂದ್ರ

ಶ್ರೀ ಶರಣಬಸಪ್ಪ ದರ್ಶನಾಪುರ್
(ಇಂಧನ ಖಾತೆ ಸಚಿವರು)

8. ಸಚಿವರ ಹೇಳಿಕೆ: 1062

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಕುರಿತು 1062

- ಶ್ರೀ ಜಿ.ಬಸವಣ್ಣಪ್ಪ
(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಶ್ರೀ ಆರ್.ಸುರೇಶ್‌ಕುಮಾರ್

ಶ್ರೀ ವಾಟಾಳ್ ನಾಗರಾಜ್

ಶ್ರೀ ಸಿದ್ಧರಾಮಯ್ಯ
(ಉಪ ಮುಖ್ಯಮಂತ್ರಿಗಳು)

ಕರ್ನಾಟಕ ವಿಧಾನ ಸಭೆ

ಬುಧವಾರ 3ನೇ ಸೆಪ್ಟೆಂಬರ್ 1997ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.20ಕ್ಕೆ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ವಿತ್ತೀಯ ಕಾರ್ಯಕಲಾಪಗಳು:

1997-98ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ:

ಅಧ್ಯಕ್ಷರು: ಈಗ ಬೇಡಿಕೆಗಳ ಮೇಲೆ ಚರ್ಚೆ. ಮೊದಲು ಮಂಜುನಾಥ್ ಸಿ.ಕುನ್ನೂರ್‌ರವರೇ, ನೀವು ಮಾತನಾಡಿ. ಎಲ್ಲಾ ಸದಸ್ಯರಿಗೂ ತಿಳಿಸಬಯಸುವ ವಿಷಯವೆಂದರೆ ಇಂದು ಬೇಡಿಕೆಗಳ ಮೇಲೆ ಬಹಳ ಜನರು ಮಾತನಾಡುವವರಿದ್ದಾರೆ. ಈಗ ಸಮಯ ಸರಿಯಾಗಿ 10-30 ಗಂಟೆಯಾಗಿದೆ. ಮಾತನಾಡುವ ಪ್ರತಿಯೊಬ್ಬ ಸದಸ್ಯರೂ 20 ನಿಮಿಷದ ಮೇಲೆ ಒಂದು ಸೆಕೆಂಡ್ ಕೂಡ ಹೆಚ್ಚು ಸಮಯ ಮಾತನಾಡಬಾರದು. ಆ 20 ನಿಮಿಷದೊಳಗೇ ಭಾಷಣವನ್ನು ಮುಕ್ತಾಯ ಮಾಡಬೇಕು. ಇಲ್ಲಿ ಬೆಲ್ ಇದೆ, ಅದನ್ನು ಬೇಕಾದರೆ ನಿಮಗೇ ಕೊಟ್ಟುಬಿಡುತ್ತೇನೆ. ಮಂಜುನಾಥ್‌ರವರೇ, ನೀವು ಮಾತನಾಡಿ.

+ ಶ್ರೀ ಮಂಜುನಾಥ್ ಸಿ.ಕುನ್ನೂರ್ (ಶಿಗ್ಗಾಂವ್): ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಸದನದ ಮುಂದಿಟ್ಟಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವೊಂದು ಮಾತುಗಳನ್ನಾಡಲು ಇಚ್ಛೆಪಡುತ್ತೇನೆ. ಮೊದಲನೆಯದಾಗಿ, ನೀರಾವರಿ ಬಗ್ಗೆ ಮಾತನಾಡಬೇಕೆಂದರೆ ಈಗಾಗಲೇ ಇದರ ಬಗ್ಗೆ ನಮ್ಮ ನಾಯಕರು ಎಲ್ಲಾ ವಿಷಯಗಳನ್ನು ಮಾನ್ಯ ಸದನದ ಮುಂದೆ ಇಟ್ಟಿದ್ದಾರೆ. ಕ್ರಿ.ಶ.2000 ಇಸವಿಯೊಳಗೆ ಬಚಾವತ್ ಅವಾರ್ಡ್ ಪ್ರಕಾರ ಯು.ಕೆ.ಪಿ.ಯನ್ನು ಮುಖ್ಯವಾಗಿ ನಾವು ಮುಗಿಸಬೇಕಾಗಿದೆ. ಈ ವಿಚಾರದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ವ್ಯಾಪ್ತಿಯಲ್ಲಿ ಬರತಕ್ಕಂಥ ತುಂಗ ಮೇಲ್ದಂಡೆ ಯೋಜನೆ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಈ ತುಂಗಾ ಮೇಲ್ದಂಡೆ ಯೋಜನೆಯನ್ನು 1991ರಲ್ಲಿ ಮಂಜೂರಾತಿಯನ್ನು ಕೊಟ್ಟಿದ್ದಾರೆ. 1991ರಿಂದ ಇಲ್ಲಿಯವರೆಗೆ ಈ ಒಂದು ಯೋಜನೆಯ ಪ್ರಗತಿಯನ್ನು ನೋಡಿದರೆ ಇದು ಒಂದು ಆಮೆ ನಡಿಗೆಯಂತೆ ಸಾಗುತ್ತಿದೆ ಎನ್ನುವುದನ್ನು ನಾನು ಸರ್ಕಾರಕ್ಕೆ ಗಮನಕ್ಕೆ ತರಬೇಕಾಗಿದೆ. ಅದರಲ್ಲೂ ಕೂಡ ಈ ತುಂಗಾ ಮೇಲ್ದಂಡೆ ಯೋಜನೆ 1991ರಲ್ಲಿ ಜಾರಿಗೆ ಬಂದಾಗ ಮಾಲತಿ

ಜಲಾನಯನವನ್ನು ಒಳಗೊಂಡು ಈ ಯೋಜನೆಯನ್ನು ತರಬೇಕಾಗಿದೆ. ಆದರೆ ಮಾಲತಿ ಜಲಾನಯನವನ್ನು ಈ ಯೋಜನೆಯಲ್ಲಿ ಇವತ್ತು ಜಾರಿಗೆ ಅದನ್ನು ತಂದಿರುವುದಿಲ್ಲ. ಈ ಮಾಲತಿ ಜಲಾನಯನವನ್ನು ಒಳಗೊಂಡು ಜಾರಿಗೆ ತಂದಿದ್ದೇಯಾದರೆ ಇವತ್ತು ಈ ಭಾಗದಲ್ಲಿ ಅದರಲ್ಲೂ ಧಾರವಾಡ, ದಕ್ಷಿಣ ಭಾಗದ ಜನರಿಗೆ ಸಾಕಷ್ಟು ಅನುಕೂಲ ಆಗತಕ್ಕಂಥ ಒಂದು ವಾತಾವರಣ ಇದೆ. ಹಾವೇರಿ ನೂತನವಾಗಿ ಜಿಲ್ಲೆಯಾಗಿದೆ.

ಅಧ್ಯಕ್ಷರು: ಮುಂಡರಿಗಿ, ಧಾರವಾಡ....

ಶ್ರೀ ಮಂಜುನಾಥ್ ಸಿ.ಕುನ್ನೂರ್: ಇವತ್ತು 1991ರಿಂದ 1997ನೇ ಇಸವಿಯವರೆಗೆ ಕೇವಲ 1860.66 ಲಕ್ಷ ರೂಪಾಯಿಯನ್ನು ಮಾತ್ರ ಖರ್ಚು ಮಾಡಲಾಗಿದೆ. ಈ 1997-98ನೇ ಇಸವಿಯಲ್ಲಿ ಸುಮಾರು 10 ಕೋಟಿ ರೂಪಾಯಿಯನ್ನು ಈ ಯೋಜನೆಗಾಗಿ ನಿಗದಿಪಡಿಸಿದ್ದಾರೆ. ಒಟ್ಟು 670 ಕೋಟಿ ರೂಪಾಯಿ ಈ ಯೋಜನೆಗೆ ಬೇಕಾಗುತ್ತದೆ ಎನ್ನುವ ಅಂಕಿಅಂಶವನ್ನೂ ಕೂಡ ಕೊಟ್ಟದ್ದಾರೆ. ಇದರಿಂದ ಕೇವಲ 10 ಕೋಟಿ ರೂಪಾಯಿ ಅಲ್ಲ, ಸುಮಾರು 7 ವರ್ಷದಲ್ಲಿ 19 ಕೋಟಿ ರೂಪಾಯಿ ಖರ್ಚು ಮಾಡಿದಾಗ ಇನ್ನು 670 ಕೋಟಿ ರೂಪಾಯಿಗಳನ್ನು 2000 ಇಸವಿಯೊಳಗೆ ಕೊಟ್ಟು ಮುಗಿಸುತ್ತೀರೋ ಇಲ್ಲವೋ ಎನ್ನುವ ಸಂಶಯ ಕೂಡ ಆ ಭಾಗದ ಜನತೆಗೆ ಮತ್ತು ನಮಗೂ ಕೂಡ ಇದೆ. ಆ ಕಾರಣ ಸರ್ಕಾರ ಮಂಜೂರು ಮಾಡಿದ ಪ್ರಕಾರ ಈ ತುಂಗಾ ಯೋಜನೆಗೆ ಕನಿಷ್ಠಪಕ್ಷ 200 ಕೋಟಿ ರೂಪಾಯಿಗಳನ್ನು ಆದರೂ ತಾವು ಈ ವರ್ಷದ ಬಜೆಟ್‌ನಲ್ಲಿ ಇಟ್ಟರೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಈ ಯೋಜನೆಯನ್ನು ಮುಂಚಿತವಾಗಿ ಪ್ರಾರಂಭ ಮಾಡುವಾಗ ಪ್ರಮುಖವಾಗಿ ಈ ಮಾಲತಿ ಜಲಾನಯನವನ್ನು ಒಳಗೊಂಡು ಮಾಡಬೇಕೆಂದು ಆ ಯೋಜನೆಯ ರೂಪುರೇಷೆ. ಆದರೆ ಅದರಲ್ಲಿ ಒಟ್ಟು ಮೂರು ಭಾಗಗಳು ಇದೆ. ಒಂದು ಭಾಗ ಮಾಲಿತಿ ಜಲಾನಯನವನ್ನು ಒಳಗೊಂಡು ತುಂಗಾ ಯೋಜನೆಯನ್ನು ಜಾರಿಗೆ ತರತಕ್ಕಂಥಾದ್ದು. ಇನ್ನು ಎರಡನೇ ಭಾಗ ಗಾಜನೂರು ಹತ್ತಿರ ಕ್ರೆಸ್ಟ್ ಗೇಟ್‌ನ್ನು ಅಲ್ಲಿ ಕಟ್ಟಿಸಿ ಸುಮಾರು 340 ಕಿಲೋಮೀಟರ್ ಉದ್ದದ ಕಾಲುವೆಯನ್ನು ರಚಿಸಿ ಈ ಯೋಜನೆಯನ್ನು ಮಾಡತಕ್ಕಂಥಾದ್ದು. ಈ ಯೋಜನೆಯ ಮುಖ್ಯವಾದ ಅಂಶ ಮೊದಲನೆ ಅಂಶ ಪ್ರಮುಖವಾಗಿ ಯಾವ ವಿಷಯವನ್ನು ಕೈಗೆತ್ತಿಕೊಳ್ಳಬೇಕಾಗಿತ್ತು, ಆ ವಿಷಯವನ್ನು ಇವತ್ತು ಬಿಟ್ಟಿದ್ದಾರೆ. ಅದಕ್ಕೆ ಸರ್ಕಾರದವರು ಏನು ಉತ್ತರವನ್ನು ಕೊಡುತ್ತಾರೆಂದರೆ ಮಾಲತಿ ಜಲಾನಯನವನ್ನು ಕೈಗೆತ್ತಿಕೊಂಡರೆ ಸುಮಾರು 25 ಸಾವಿರ ಎಕರೆ ಜಮೀನುಗಳು ಮುಳುಗಡೆಯಾಗುತ್ತದೆ. ಕೆಲವು ಹಳ್ಳಿಗಳು ಕೂಡ ಮುಳುಗಡೆಯಾಗುತ್ತವೆ ಎನ್ನುವ ಕಾರಣದಿಂದ ಈ ಯೋಜನೆಯನ್ನು ಕೈಬಿಡಲಾಗಿದೆ ಎನ್ನುವುದನ್ನು ನಾನು ಒಂದು ಪ್ರಶ್ನೆ ಹಾಕಿದಾಗ ಉತ್ತರವನ್ನೂ ಕೂಡ ಕೊಟ್ಟಿದ್ದಾರೆ. ಆದರೆ ಇವತ್ತು ಜಮೀನು ಮುಳುಗಡೆಯಾಗುತ್ತದೆ ಅಥವಾ ಈ ಒಂದು ಹಳ್ಳಿಗಳು ಮುಳುಗಡೆಯಾಗುತ್ತದೆ ಎನ್ನುವ ವಿಚಾರದಿಂದ ಈ ಯೋಜನೆಯನ್ನು ಕೈಬಿಟ್ಟರೆ ಅದು

ಸರಿಯಾದಂತಹ ಕ್ರಮವಾಗುವುದಿಲ್ಲ. ಆ ಕಾರಣ ಇವತ್ತು ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನ್ನು ನಾವು ಮಾಡುವಾಗ ಬೀಳಗಿ ತಾಲ್ಲೂಕಿನಲ್ಲಿ ಸುಮಾರು 50-55 ಹಳ್ಳಿಗಳು ಮುಳುಗಡೆಯಾಗಿವೆ. ಸರ್ಕಾರದವರು ಇಂತಹ ಸಂದರ್ಭದಲ್ಲಿ ಯೋಗ್ಯವಾದಂತಹ ಪರಿಹಾರ ಹಣವನ್ನು ಇವತ್ತು ಆ ರೈತರಿಗೆ ಕೊಡಬೇಕಾಗುತ್ತದೆ. ಇವತ್ತು ಅಲ್ಲಿ ಕೆಲವು ಪ್ರದೇಶ ಮುಳುಗಡೆಯಾದರೆ ಲಕ್ಷಾಂತರ ಎಕರೆ ನೀರಾವರಿ ಆಗತಕ್ಕಂಥ ಸಂದರ್ಭ ಬರುತ್ತದೆ. ಈ ಮಾಲತಿ ಜಲಾನಯನವನ್ನು ಒಳಗೊಂಡು ನೀರಾವರಿ ಮಾಡತಕ್ಕಂಥ ಸಂದರ್ಭ ಬಂದರೆ ಕೇವಲ ಹಾವೇರಿ ಜಿಲ್ಲೆಯಲ್ಲಿ ಇರತಕ್ಕಂಥ ತಾಲ್ಲೂಕುಗಳು ಅಷ್ಟೇ ಅಲ್ಲ, ಗದಗ ಜಿಲ್ಲೆಯಲ್ಲಿ ಇರತಕ್ಕಂಥ ತಾಲ್ಲೂಕುಗಳೂ ಕೂಡ ಮತ್ತು ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಶಿಗ್ಗಾಂವಿ, ಶಿರಹಟ್ಟಿ, ಸವಣೂರು, ಮುಂಡರಿಗಿ ಕೊಪ್ಪಳ ಈ ಭಾಗಗಳಿಗೆ ನೀರಾವರಿ ಆಗತಕ್ಕಂಥ ಒಂದು ಯೋಜನೆ ಇರುವುದರಿಂದ ಇದನ್ನು ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಂತಹ ಈ ಯೋಜನೆಯ ಬಗ್ಗೆ ಇವತ್ತೂ ಕಾಣದ ಕೈಗಳು ಇವತ್ತು ಶತಪ್ರಯತ್ನವನ್ನು ಮಾಡುತ್ತಿರುವುದರಿಂದ ಈ ಯೋಜನೆ ಕೈಗೂಡಿಲ್ಲ ಎನ್ನುವ ವಾದವನ್ನು ನಾವು ಇವತ್ತು ರೈತರಿಂದ ಕಾಣುತ್ತಿದ್ದೇವೆ. ಈ ಒಂದು ಪರಿಸ್ಥಿತಿ ಇರುವಾಗ ಇವತ್ತು ಏನು ನಾವು ತುಂಗಾ ಮೇಲ್ದಂಡೆ ಯೋಜನೆಗೆ ಹೆಚ್ಚು ಒತ್ತನ್ನು ನಾವು ಕೊಡಬೇಕಾಗಿದೆ. ಹೆಚ್ಚು ಹಣವನ್ನೂ ಕೂಡ ಕೊಡಬೇಕಾಗಿದೆ. ಈ ಯೋಜನೆ ಅನುಷ್ಠಾನ ಮಾಡತಕ್ಕಂಥ ಸಂದರ್ಭದಲ್ಲಿ ಇವತ್ತು ನಾವು ಕೇವಲ 19 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಈ ಸಂದರ್ಭದಲ್ಲಿ ಆಂಧ್ರಪ್ರದೇಶದ ಸರ್ಕಾರದವರೂ ಕೂಡ ಅಲ್ಲಿ ರೈತ ಸಂಘಟನೆಗಳೂ ಕೂಡ ಹೈಕೋರ್ಟ್‌ಗೆ ಹೋಗಿ ಈ ಕೆಲಸವಾಗಬಾರದು ಎನ್ನುವ ತಡೆಯಾಜ್ಞೆಯನ್ನು ಕೂಡ ತರುವುದಕ್ಕೆ ಪ್ರಯತ್ನ ಮಾಡಿದರು. ಅದರ ವಿರುದ್ಧ ನಮ್ಮ ಸರ್ಕಾರದವರೂ ಕೂಡ ಇವತ್ತು ಅಲ್ಲಿ ವಿರೋಧವನ್ನು ವ್ಯಕ್ತಪಡಿಸಿದಾಗ, ಆಂಧ್ರ ಉಚ್ಚನ್ಯಾಯಾಲಯ ಇದರ ಒಂದು ಸ್ಟೇಯನ್ನೂ ಕೂಡ ಇವತ್ತು ಮಾಡಲಾಗಿದೆ. ಇವತ್ತು ಈ ಒಂದು ಯೋಜನೆ ಬಚಾವತ್ ಅವಾರ್ಡ್‌ನ ಪ್ರಕಾರ ಯುಕೆಪಿ ವ್ಯಾಪ್ತಿಯಲ್ಲಿ ಬರುವುದರಿಂದ ಈ ಯೋಜನೆ ಅನುಷ್ಠಾನಗೊಳಿಸುವುದಕ್ಕೆ ಯಾವುದೇ ತೊಂದರೆ ಇರುವುದಿಲ್ಲ. ಹೀಗಾಗಿ ಇವತ್ತು ನಾವು ಹೆಚ್ಚು ಹಣವನ್ನು ಕೊಟ್ಟು ತ್ವರಿತಗತಿಯಿಂದ ಈ ಒಂದು ಕಾರ್ಯಕ್ರಮವನ್ನು ಮಾಡಿದ್ದೇಯಾದರೆ ಖಂಡಿತವಾಗಿ ಈ ಒಂದು ಭಾಗದ ರೈತರಿಗೆ ವರದಾನವಾಗತಕ್ಕಂಥ ಒಂದು ಸಂದರ್ಭ ಬರುತ್ತದೆಂದು ನಾನು ಸರ್ಕಾರದ ಗಮನವನ್ನು ಸೆಳೆಯಬೇಕಾಗಿದೆ. ಇವತ್ತು ಏನೇ ಆಗಲಿ, ಒಟ್ಟಾರೆ ಈ ಯೋಜನೆಯನ್ನು ನಾವು ತ್ವರಿತಗತಿಯಿಂದ ಇದನ್ನು ಜಾರಿಗೆ ತರತಕ್ಕಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ಹೇಳಿ ಈಗ ಸರ್ಕಾರದವರು ಕೊಟ್ಟ 10 ಕೋಟಿ ರೂಪಾಯಿ ಯಾವುದೇ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. 200 ಕೋಟಿ ರೂಪಾಯಿಯಾದರೂ ಕೂಡ ಇವತ್ತು ಈ ಯೋಜನೆಗೆ ಕೊಟ್ಟು ಈ ಯೋಜನೆಯನ್ನು ಮುಂದುವರೆಸಿಕೊಂಡು ಹೋಗಬೇಕೆಂದು ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಇನ್ನು ನಾನು

ಸಾರಿಗೆ ಇಲಾಖೆಯ ಬಗ್ಗೆ ಕೂಡ ಕೆಲವೊಂದು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಸಾರಿಗೆ ವ್ಯವಸ್ಥೆಯಲ್ಲಿ ಸನ್ಮಾನ್ಯ ಸಿಂಧ್ಯಾರವರು ಈ ಇಲಾಖೆಯನ್ನು ಹೊತ್ತುಕೊಂಡು ಬಳಿಕ ತಾವು ಜವಾಬ್ದಾರಿಯುತವಾಗಿ ಧೈರ್ಯವಾಗಿ ಒಂದು ನಿಲುವನ್ನು ತೆಗೆದುಕೊಂಡು ಈ ಕೆ.ಎಸ್.ಆರ್.ಟಿ.ಸಿ ಟ್ರೈಫರ್‌ಕೇಟ್ ಮಾಡತಕ್ಕಂಥ ಒಂದು ಪ್ರಯತ್ನವನ್ನು ಮಾಡುತ್ತಿದ್ದೀರಿ. ಅದಕ್ಕೆ ನಾವು ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ತಾವು ಈ ಕಡೆ ಕುಳಿತಾಗ ತಮ್ಮ ಭಾಷಣವನ್ನು ಓದಿ ನೋಡಿದೆ. ಮಾನ್ಯ ಅಜೀಜ್‌ಸೇಠ್‌ರವರು ಒಂದು ಸಂದರ್ಭದಲ್ಲಿ ಮಂತ್ರಿಗಳಾಗಿದ್ದಂತಹ ಕಾಲದಲ್ಲಿ ತಾವು ಇಳಿವಯಸ್ಸಿನಲ್ಲಿ ಮಂತ್ರಿಯಾಗಿ ಹೆಚ್ಚು ಜವಾಬ್ದಾರಿಯನ್ನು ಹೊರಬೇಕಾಗಿದೆ ಎನ್ನುವ ಮಾತನ್ನು ಹೇಳಿ ತಾವು ಟ್ರೈಫರ್‌ಕೇಟ್ ಮಾಡತಕ್ಕಂಥ ವಿಷಯದ ಬಗ್ಗೆ ತಾವು ಸರ್ಕಾರದ ಗಮನವನ್ನು ಸೆಳೆದಿದ್ದೀರಿ. ತಾವು ಏನು ಗಮನವನ್ನು ಸೆಳೆದಿದ್ದೀರಿ, ಅದನ್ನು ತಮ್ಮ ಕೈಗೆ ಈ ಇಲಾಖೆ ಬಂದನಂತರ, ಏನು ಕ್ರಮವನ್ನು ಕೈಗೊಂಡು ಇವತ್ತು ಟ್ರೈಫರ್‌ಕೇಟ್ ಮಾಡುತ್ತಿದ್ದೀರಿ ಅದು ಅತ್ಯುತ್ತಮವಾದಂತಹ ಕೆಲಸವಾಗಿದೆ. ಅದಕ್ಕೆ ತಾವು ಹೇಳಿದಿರಿ, ಅಧಿಕಾರಿಗಳು ವಿರೋಧ ಮಾಡಬಹುದು. ಕೆಲವು ಕಾರ್ಮಿಕರು ಒಳ್ಳೆಯವರು ಇದ್ದಾರೆ. ಇಲ್ಲಿ ಕೆಲಸ ಮಾಡತಕ್ಕಂಥವರು 10 ಸಾವಿರಗಟ್ಟಲೆ ಕಾರ್ಮಿಕರು ಇದ್ದರೂ ಕೂಡ ಎಲ್ಲರೂ ಒಳ್ಳೆಯವರು ಇದ್ದಾರೆ. ಆದರೆ ಸರಿಯಾದಂತಹ ಲೀಡರ್‌ಶಿಪ್ ಕಾರ್ಮಿಕರಲ್ಲಿ ಇಲ್ಲ ಎನ್ನುವ ಮಾತನ್ನು ಹೇಳಿರುವುದನ್ನು ನೋಡಿದಾಗ ಅದು ನಿಜ ಎನಿಸುತ್ತದೆ. ಕೆಲವರು ವಿರೋಧ ಮಾಡುವುದು ಸ್ವಾಭಾವಿಕ. ಏಕೆಂದರೆ ಅವರು ಬೆಂಗಳೂರಿನಿಂದ ಬೆಳಗಾಂಗೆ ಹೋಗಬೇಕು, ಕಾರವಾರಕ್ಕೆ ಹೋಗಬೇಕು, ಗುಲ್ಬರ್ಗಕ್ಕೆ ಹೋಗಬೇಕು. ಆ ರೀತಿ ಅಧಿಕಾರಿಗಳು ವಿರೋಧ ಮಾಡಬಹುದು. ಆದರೆ ಅದೆಲ್ಲಾ ಕೂಡ ತಾವು ಇವತ್ತು ಯಾವುದೇ ಒಂದು ಶಕ್ತಿ ಇದ್ದರೂ ಕೂಡ ಅದನ್ನು ಮೆಟ್ಟಿ ಇವತ್ತು ಟ್ರೈಫರ್‌ಕೇಟ್ ಮಾಡತಕ್ಕಂಥ ವಿಷಯದಲ್ಲಿ ಒಂದು ದೊಡ್ಡ ನಿಲುವನ್ನು ಮಾಡುವುದಕ್ಕೆ ಏನು ತೆಗೆದುಕೊಂಡಿದ್ದೀರಿ ಅದನ್ನು ಅಭಿನಂದಿಸುತ್ತೇನೆ.

ಅಧ್ಯಕ್ಷರು: ಅದಕ್ಕೆ ನನಗೆ ಸಿಂಧ್ಯಾರವರು 2-3 ಬಾರಿ ಸರ್, ಕುನ್ನೂರ್‌ರವರಿಗೆ ಮಾತನಾಡುವುದಕ್ಕೆ ಹೇಳಿ ಎಂದು ಹೇಳಿದರು. ಈಗ ಅರ್ಥವಾಯಿತು ಏಕೆ ಎಂದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾನು ನಿಮ್ಮನ್ನು ಭೇಟಿನೇ ಆಗಿಲ್ಲ. ಹೀಗೆ ಹೇಳಿಬಿಟ್ಟರೆ ಹೇಗೆ?

ಶ್ರೀ ಮಂಜುನಾಥ್ ಸಿ.ಕುನ್ನೂರ್: ತಮಗೆ ಟ್ರೈಫರ್‌ಕೇಟ್ ಮಾಡಿರುವುದರ ಬಗ್ಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಒಟ್ಟಾರೆ ಈ ಇಲಾಖೆಯ ಆಡಳಿತ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ತಾವು ವಿಫಲವಾಗಿದ್ದೀರಿ ಎನ್ನುವ ಮಾತನ್ನು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಏಕೆಂದರೆ ಇತ್ತು ಈ ಇಲಾಖೆಯಲ್ಲಿ ತಾವೇ ಮಾತನಾಡಿದ್ದೀರಿ, ಈ ರಾಜ್ಯದಲ್ಲಿ ಸುಮಾರು 60-70 ಲಕ್ಷ ಜನ ಪ್ರಯಾಣಿಕರು

ಪ್ರಯಾಣ ಮಾಡುತ್ತಿದ್ದಾರೆ. ಸುಮಾರು ನಾಲ್ಕು ಕೋಟಿ ಜನಸಂಖ್ಯೆ ಇರತಕ್ಕಂಥ ಈ ರಾಜ್ಯದಲ್ಲಿ ಕಾರ್ಮಿಕವರ್ಗದವರಿಗೆ ಉದ್ಯೋಗಸ್ಥರಿಗೆ, ವ್ಯಾಪಾರಸ್ಥರಿಗೆ, ವಿದ್ಯಾರ್ಥಿಗಳಿಗೆ ಎಲ್ಲರೂ ಕೂಡ ಏನು ಪ್ರಯಾಣವನ್ನು ಮಾಡುತ್ತಿದ್ದಾರೆ, ಅವರಿಗೆ ವಿಶೇಷವಾದಂತಹ ಸೌಲಭ್ಯವನ್ನು ತಮಗೆ ಒದಗಿಸಲಿಕ್ಕೆ ಆಗದಿದ್ದರೂ ಕನಿಷ್ಟ ಮೂಲಭೂತವಾದ ಸೌಕರ್ಯವನ್ನು ಒದಗಿಸುವುದರಲ್ಲಿ ತಾವು ವಿಫಲರಾಗಿದ್ದೀರಿ ಎಂದು ನೇರವಾಗಿ ಹೇಳಬೇಕಾಗುತ್ತದೆ. ಇವತ್ತು ನಮ್ಮ ಮತಕ್ಷೇತ್ರದಲ್ಲೇ ಆಗಲೀ ಯಾರಾದರೂ ಒಂದು ಬಸ್ಸನ್ನು ಕೊಡಿಸಿ ಎಂದು ಕೇಳಿದರೆ, ಒಂದು ಬಸ್ಸನ್ನು ಯಾವ ಕಾಲಕ್ಕೆ ಅದು ಬಿಟ್ಟಾಗಿದೆ, ಯಾವ ಸಮಯಕ್ಕೆ ನೀವು ಅದನ್ನು ಓಡಿಸಬೇಕಾಗಿದೆ, ಯಾವ ವರ್ಗಕ್ಕೆ ಆ ಬಸ್ಸುಗಳು ಬೇಕಾಗಿದೆ, ಅಂತಹವರಿಗೆ ಸಮಯಕ್ಕೆ ಸರಿಯಾಗಿ ನಾವು ಬಸ್ಸುಗಳನ್ನು ಒದಗಿಸಬೇಕು ಅಂದರೆ ಇವತ್ತು ನಮ್ಮಿಂದ ಅದು ಆಗುತ್ತಾ ಇಲ್ಲ. ಇವತ್ತು ತಮ್ಮ ಇಲಾಖೆಯವರಿಂದಲೂ ಕೂಡ ಅದು ಆಗುತ್ತಾ ಇಲ್ಲ. ಆದಕಾರಣ ಇದರ ಬಗ್ಗೆ ತಾವು ಕಟ್ಟನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕಾದುದು ಅತಿ ಅವಶ್ಯಕ ಇದೆ. ಕೇವಲ ರಾಜ್ಯದ ಕೇಂದ್ರದಲ್ಲಿ ಕುಳಿತುಕೊಂಡು ಇವತ್ತು ನಾವು ಅಧಿಕಾರಿಗಳಿಗೆ ಹೇಳಿದರೆ ಈ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ತಾವು ಪ್ರತಿಯೊಂದು ಡಿಪೋಗಳಿಗೆ ಕೂಡ ಭೇಟಿಯನ್ನು ಕೊಡಬೇಕಾಗಿದೆ. ಜವಾಬ್ದಾರಿಯನ್ನು ಹೊತ್ತ ನಂತರ ಪ್ರತಿ ಡಿಪೋಗಳಿಗೆ ತಾವು ಹೋಗಬೇಕು. 20 ಜಿಲ್ಲೆಗಳೇನಿವೆ ಅಲ್ಲಿಗೆ ಹೋಗಬೇಕು. ಹೊಸದಾಗಿ ಮತ್ತೆ 9 ಜಿಲ್ಲೆಗಳು ಆಗಿದೆ. ಈ 29 ಜಿಲ್ಲೆಗಳಿಗೆ ಹೋಗತಕ್ಕಂತಹ ಪ್ರಯತ್ನವನ್ನು ತಾವು ಮಾಡಿ, ತಮ್ಮ ಇಲಾಖೆಯ ಮುಖ್ಯಾಧಿಕಾರಿಗಳು ಕೂಡ ಅಲ್ಲಿಗೆ ಹೋಗಬೇಕಾಗುತ್ತದೆ. ಆದರೆ ಇವತ್ತು ಯಾರೂ ಕೂಡ ಅಲ್ಲಿಗೆ ಹೋಗುತ್ತಾ ಇಲ್ಲ, ಯಾರೂ ಕೂಡ ಅಲ್ಲಿ ಸಭೆಗಳನ್ನು ಮಾಡುತ್ತಾ ಇಲ್ಲ; ಯಾರೂ ಕೂಡ ಜನರ ಸಂಕಷ್ಟಗಳನ್ನು ಏನು ಎಂದು ತಿಳಿದುಕೊಂಡರೂ ಸಹ ಅದನ್ನು ಬಗೆಹರಿಸುವುದಕ್ಕೆ ಆಗುತ್ತಾ ಇಲ್ಲ. ಈ ದಿಸೆಯಲ್ಲಿ ತಾವು ಹೆಚ್ಚು ಪ್ರಯತ್ನವನ್ನು ಇವತ್ತು ಮಾಡಬೇಕಾಗಿದೆ. ಇವತ್ತು ನಾವು ಗ್ರಾಮಾಂತರ ಪ್ರದೇಶದಲ್ಲಿ ಯಾರಾದರೂ ಬಂದು ಕೇಳಿದಾಗ ನಾನಂತೂ ನೇರವಾಗಿ ಹೇಳುತ್ತಿದ್ದೇನೆ. ಇವತ್ತು ಕೆ.ಎಸ್.ಆರ್.ಟಿ.ಸಿ ಇಲಾಖೆಯಾಗಲಿ, ಕೆ.ಇ.ಬಿ.ಇಲಾಖೆಯಾಗಲಿ ಈ ಎರಡು ಇಲಾಖೆಯಲ್ಲಿ ಸರ್ಕಾರದಲ್ಲಿ ನಮಗೆ ಪ್ರಾಮಾಣಿಕವಾಗಿ ಕೆಲಸಗಳನ್ನು ಮಾಡಿಸಿಕೊಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ನೇರವಾಗಿ ಹೇಳುತ್ತಿದ್ದೇನೆ. ಈ ಎರಡು ಇಲಾಖೆಗಳನ್ನು ಪೋಸ್ಟ್‌ಮಾರ್ಟಮ್ ಮಾಡಬೇಕು ಅಥವಾ ಇವೆರಡೂ ಸತ್ತ ಇಲಾಖೆಗಳು ಎನ್ನುವ ಮಾತನ್ನೂ ಕೂಡ ನಾನು ಹೇಳುತ್ತಿದ್ದೇನೆ. ಯಾಕೆಂದರೆ ಅಷ್ಟೊಂದು ಸಮಸ್ಯೆಗಳನ್ನು ನಾವು ಇವತ್ತು ಎದುರಿಸಬೇಕಾಗಿದೆ. ಇವತ್ತು ನಮ್ಮ ಮತಕ್ಷೇತ್ರವಾದ ಸವಣೂರು ತಾಲ್ಲೂಕಿನಲ್ಲಿ ಕಡಕೊಳ ಭಾಗದ ಜನರು ತಾಲ್ಲೂಕು ಕೇಂದ್ರಕ್ಕೆ ಬರಲಿಕ್ಕೆ ಬಸ್ ಬೇಕು ಎಂದು ಅನೇಕ ಸಾರಿ ಮನವಿಗಳನ್ನು ಮಾಡಿಕೊಂಡರೂ ಸಹಿತ ಅಲ್ಲಿದ್ದಂತಹ ಶೆಡ್ಯೂಲ್ ಬಸ್‌ಗಳನ್ನು ಕ್ಯಾನ್ಸಲ್ ಮಾಡಿದ್ದಾರೆ. ಎರಡು ಸಾವಿರ 'ಸಿ' ರೂಟ್ ಬಸ್‌ಗಳನ್ನು ಕ್ಯಾನ್ಸಲ್ ಮಾಡಿದ್ದೇವೆ. ಅವುಗಳನ್ನು ಪುನಃ

ಪ್ರಾರಂಭಿಸುವುದಾಗಿ ಹೇಳಿದ್ದೀರಿ. ತಾವು ಏನು ಹೇಳಿದ್ದೀರಿ, ಇವತ್ತು ಆ ಕೆಲಸವನ್ನು ಮಾಡಿದ್ದೀರಾ ಎನ್ನತಕ್ಕಂಥ ಪ್ರಶ್ನೆಯನ್ನು ನಾನು ತಮಗೆ ಕೇಳಬೇಕಾಗಿದೆ. ಎರಡು ಸಾವಿರ ಬಸ್‌ಗಳನ್ನು ನಮ್ಮ ಸರ್ಕಾರ ಇದ್ದಾಗ ಏನು 'ಸಿ' ರೂಟ್‌ಗಳನ್ನು ಕ್ಯಾನ್ಸಲ್ ಮಾಡಿದ್ದರೋ, ಇವತ್ತು ತಾವು ಬಂದ ಮೇಲೆ ಎಷ್ಟು ಬಸ್‌ಗಳನ್ನು ಪ್ರಾರಂಭ ಮಾಡಿದ್ದೀರಿ? ಎಷ್ಟು ರೂಟ್‌ಗಳನ್ನು ಕ್ಯಾನ್ಸಲ್ ಆದಂಥವು ಪುನಃ ಪ್ರಾರಂಭ ಮಾಡಿದ್ದೀರಿ ಎನ್ನುವಂಥದ್ದನ್ನೂ ಕೂಡ ತಾವು ಹೇಳಬೇಕಾಗಿದೆ. ಕಾರಣ, ಇವತ್ತು ಇದರ ಬಗ್ಗೆ ಸಮಯಕ್ಕೆ ಸರಿಯಾಗಿ ಯಾವ ವರ್ಗಕ್ಕೆ, ಯಾವ ಜನರಿಗೆ ಎಷ್ಟು ಬಸ್‌ಗಳನ್ನು ಇವತ್ತು ನಮಗೆ ಅವಶ್ಯಕವಾಗಿ ಬೇಕಾಗಿದೆಯೋ ಅವುಗಳನ್ನು ಪೂರೈಸಿದರೆ ಮಾತ್ರ ಸಾಕು, ನಿಮ್ಮ ಇಲಾಖೆಗೆ ಒಳ್ಳೆಯ ಹೆಸರು ಬರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ 11 ಗಂಟೆಗೆ ಒಂದು ಬಸ್ ಇದೆ ಅಂದರೆ ಒಂದು ಗಂಟೆಗೆ ಬರುತ್ತದೆ. ಬೆಳಿಗ್ಗೆ 9 ಗಂಟೆಗೆ ಒಂದು ಬಸ್ ಇದೆ ಎಂದು ಹೇಳಿದರೆ ಅದು 11 ಗಂಟೆಗೆ ಬರುತ್ತದೆ. ಸಾಯಂಕಾಲ 6 ಗಂಟೆಗೆ ಒಂದು ಬಸ್ ಇದೆ ಅಂತೆಂದರೆ ಒಂದು ದಿವಸ ಆ ಬಸ್ಸೇ ಬರುವುದಿಲ್ಲ, ಇವತ್ತು ಇಂತಹ ಪರಿಸ್ಥಿತಿ ಇರುವಾಗ ಈ ಇಲಾಖೆಯ ಮೇಲೆ ಸಂಪೂರ್ಣವಾದ ನಂಬಿಕೆಯನ್ನು, ವಿಶ್ವಾಸವನ್ನು ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಜನರು ಕಳೆದುಕೊಂಡಿದ್ದಾರೆ ಎನ್ನುವುದನ್ನು ನಾನು ನೇರವಾಗಿ ಹೇಳಬೇಕಾಗಿದೆ. ಈ ದಿಸೆಯಲ್ಲಿ ತಾವು ಹೆಚ್ಚು ಪ್ರಯತ್ನವನ್ನು ಮಾಡಬೇಕು. ಸುಮಾರು 100ಕ್ಕೆ ಮೇಲ್ಪಟ್ಟು ಡಿಪೋಗಳು ಇವೆ. ಎಲ್ಲಾ ಡಿಪೋಗಳನ್ನು ಸುಧಾರಿಸುವಂತಹ ಪ್ರಯತ್ನವನ್ನು ತಾವು ಮಾಡಬೇಕು. ಈ ಒಂದು ವಿಚಾರದಲ್ಲಿ ತಾವು ಹೆಚ್ಚು ಡಿಪೋಗಳನ್ನು ಕೂಡ ಸ್ಥಾಪಿಸುವಂತಹ ಕೆಲಸವನ್ನು ಮಾಡಬೇಕು. ಇವತ್ತು ನಮ್ಮ ಸವಣೂರಿಗೆ ಒಂದು ಡಿಪೋ ಸ್ಯಾಂಕ್ಷನ್ ಆಗಿ 3 ವರ್ಷಗಳಾಯಿತು. ಆದರೂ ಕೂಡ ಆ ಕೆಲಸ ಪ್ರಾರಂಭವಾಗುತ್ತಾ ಇಲ್ಲ. ಅನೇಕ ಜನ ಸವಣೂರಿನಿಂದ ನಾಗರೀಕ ವೇದಿಕೆಯನ್ನು ಕೂಡ ಮಾಡಿಕೊಂಡು ತಮ್ಮ ಹತ್ತಿರವೂ ಕೂಡ ಬಂದಿದ್ದರು. ತಮ್ಮ ಕೇಂದ್ರ ಕಛೇರಿಗೆ ಅಷ್ಟೇ ಅಲ್ಲ, ತಮ್ಮ ಕ್ಷೇತ್ರ ಕನಕಪುರಕ್ಕೂ ಕೂಡ ಒಂದೆರಡು ಸಾರಿ ಭೇಟಿ ಆಗಿ ಬಂದಿದ್ದೇವೆ ಎಂದು ನಮ್ಮ ಪಕ್ಷದ ಕಾರ್ಯಕರ್ತರೇ ಸಹ ನನ್ನ ಮುಂದೆ ಹೇಳಿದರು. ಇವತ್ತು ಸುಮಾರು 13 ಎಕರೆಯಲ್ಲಿ ಒಂದು ಹಾರ್ಟ್ ಆಫ್ ದಿ ಸಿಟಿ ಬಸ್‌ಸ್ಟ್ಯಾಂಡ್, ಎಕ್ಸಿಟ್ಟಿಂಗ್ ಬಸ್‌ಸ್ಟ್ಯಾಂಡ್ ಎಲ್ಲಿ ಇದೆ, ಅದರ ಪಕ್ಕದಲ್ಲಿರುವಂತಹ ಒಂದು ಪ್ರದೇಶದಲ್ಲಿ ಈ ಬಸ್ ಡಿಪೋಗಾಗಿ ನಾವು ಒಂದು ಜಾಗವನ್ನು ಕೊಟ್ಟಿದ್ದೇವೆ. ಸುಮಾರು 8 ಲಕ್ಷ ರೂಪಾಯಿಯನ್ನು ಆ ಜಮೀನಿಗೆ ಕೊಟ್ಟು ಕಬ್ಜಾವನ್ನೂ ಕೂಡ ತಾವು ಪಡೆದುಕೊಂಡಿದ್ದೀರಿ. ಇವತ್ತು ಆ ಡಿಪೋಗೆ ಬೇಕಾಗಿರತಕ್ಕಂತಹ ಅನುದಾನವನ್ನು ತಾವು ಕೊಟ್ಟು ಕೂಡಲೇ ತಾವು ಆ ಡಿಪೋವನ್ನು ಪ್ರಾರಂಭ ಮಾಡಬೇಕು. ಯಾರೋ ಒಬ್ಬರು ಆ ಸವಣೂರಿನಲ್ಲಿ who is in no way concerned to the property has filed a suit. ಒಂದು ಸೂಟನ್ನು ಕೋರ್ಟಿನಲ್ಲಿ ಕೂಡ ಅವರು ಫೈಲ್ ಮಾಡಿದ್ದಾರೆ. ಕೋರ್ಟಿನಲ್ಲಿಯೂ ಕೂಡ ಈ ಕೆಎಸ್‌ಆರ್‌ಟಿಸಿಗೆ ತೆಗೆದುಕೊಂಡತಹ ಜಮೀನನ್ನು ಬಿಟ್ಟು ಉಳಿದ ಜಮೀನುಗಳಿಗೆ ತಾಕೀತ್ತನ್ನು ಕೊಡತಕ್ಕಂತಹ ಕೆಲಸವನ್ನು

ಮಾಡಿದ್ದಾರೆ. ನಾನು ಒಂದು ಸಾರಿ ಪ್ರಶ್ನೆ ಹಾಕಿದಾಗ ಅದಕ್ಕೆ ತಾವು ಉತ್ತರ ರೂಪದಲ್ಲಿ ಕೋರ್ಟಿನಲ್ಲಿ ವ್ಯಾಜ್ಯ ನಡೆದಿರುವ ಕಾರಣ ಇದನ್ನು ಸ್ಥಗಿತಗೊಳಿಸಿದ್ದೇವೆ ಎನ್ನತಕ್ಕಂತಹ ಉತ್ತರವನ್ನು ತಾವು ಕೊಟ್ಟಿದ್ದೀರಿ. ಆದರೆ ಕೋರ್ಟಿನವರೂ ಕೂಡ ಈ ಕೆಎಸ್ಆರ್‌ಟಿಸಿ ಜಮೀನನ್ನು ಬಿಟ್ಟು ಎನ್ನತಕ್ಕಂತಹ ಮಾತನ್ನು ಅದರಲ್ಲಿ ತಿಳಿಸಿದ್ದಾರೆ. ಇವತ್ತು ಯಾವುದೇ ಒಂದು ತೊಂದರೆ ಆ ಡಿಪೋದ ಕೆಲಸವನ್ನು ಮುಂದುವರಿಸುವುದಕ್ಕೆ ಅಲ್ಲಿ ಇಲ್ಲ. ಸವಣೂರು ಬಹಳ ಒಂದು ಹಿಂದುಳಿದಂತಹ ಅದರಲ್ಲೂ ವಿಶೇಷವಾಗಿ ಅಲ್ಪಸಂಖ್ಯಾತರು ಹೆಚ್ಚಿಗೆ ಇರತಕ್ಕಂತಹ ಊರು once upon a time it was called as a Nawab's Kingdom. ಅಲ್ಲಿ ಅಲ್ಪಸಂಖ್ಯಾತರು ಹೆಚ್ಚಿಗೆ ಇರುವುದರಿಂದ ಆ ಪ್ರದೇಶದ ಅಭಿವೃದ್ಧಿಯಾಗಬೇಕಾದರೆ ಬಸ್ಸಿನ ಸಂಪರ್ಕ ಅತಿ ಅವಶ್ಯಕವಾಗಿ ಬೇಕು. ಕಾರಣ ಇವತ್ತು ಅಲ್ಲಿ ಬಸ್‌ಗಳು ಬರಬೇಕಾಗಿವೆಯೋ ಆ ಬಸ್‌ಗಳನ್ನು ತಾವು ಡಿಪೋ ಮಾಡುವ ಮುಖಾಂತರವೇ ಮಾಡಿದರೆ ಸುಧಾರಿಸಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ತಾವು ಡಿಪೋವನ್ನು ಅಲ್ಲಿ ಕೂಡಲೇ ಮಾಡಿಕೊಡಬೇಕು ಎಂದು ತಮ್ಮನ್ನು ಆ ನಾಗರೀಕರ ವೇದಿಕೆಯ ಪರವಾಗಿ ಹಾಗೂ ಸಮಸ್ತ ನಾಗರೀಕರ ಪರವಾಗಿ ಬಹುದಿವಸಗಳ ಒಂದು ಬೇಡಿಕೆ ಇದು ನೆನಗುದಿಗೆ ಬಿದ್ದಿರುವುದರಿಂದ ಕಳಕಳಿಯಿಂದ ಅದನ್ನು ಮಾಡಿಕೊಡಬೇಕೆಂದು ತಮ್ಮನ್ನು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಶಿಗ್ಗಾಂವಿಯಲ್ಲಿ ಒಂದು ಬಸ್‌ಸ್ಟ್ಯಾಂಡನ್ನು ರಾಷ್ಟ್ರೀಯ ಹೆದ್ದಾರಿಗೆ ಹೊಂದಿ ಕೂಡ ಸುಮಾರು 4 ವರ್ಷದಿಂದ ಅಲ್ಲಿ ಮಂಜೂರಾಗಿತ್ತು. ಅಲ್ಲಿ ಈಗಾಗಲೇ ಕಟ್ಟಡ ಪ್ರಾರಂಭವಾಗಿದೆ. ಆದರೆ ಆ ಕಟ್ಟಡವೂ ಕೂಡ ಬಹಳ ನಿಧಾನವಾಗಿ ಸಾಗುತ್ತಿದೆ. ಅದರ ಪಕ್ಕದಲ್ಲಿ ಕಟ್ಟುವಂತಹ ಕಟ್ಟಡಗಳು ಬಸ್‌ಸ್ಟ್ಯಾಂಡ್ ಆಗಿದೆ ಎಂದ ಮೇಲೆ ಪಕ್ಕದಲ್ಲಿರುವಂತಹ ಕಟ್ಟಡಗಳು ಈಗಾಗಲೇ ಸ್ಲಾಬ್‌ಗಳನ್ನು ಹಾಕಿ ಮುಗಿಯಲಿಕ್ಕೆ ಬಂದಂತಹ ಪರಿಸ್ಥಿತಿಯನ್ನು ನಾವು ನೋಡುತ್ತಾ ಇದ್ದೇವೆ. ಆದರೆ ಅಲ್ಲಿ ಪ್ರಾರಂಭವಾದಂತಹ ಬಸ್‌ಸ್ಟ್ಯಾಂಡ್ ಆಗಿದೆ ಎಂದಮೇಲೆ ಪಕ್ಕದಲ್ಲಿರುವಂತಹ ಕಟ್ಟಡಗಳು ಈಗಾಗಲೇ ಸ್ಲಾಬ್‌ಗಳನ್ನು ಹಾಕಿ ಮುಗಿಯಲಿಕ್ಕೆ ಬಂದಂತಹ ಪರಿಸ್ಥಿತಿಯನ್ನು ನಾವು ನೋಡುತ್ತಾ ಇದ್ದೇವೆ. ಆದರೆ ಅಲ್ಲಿ ಪ್ರಾರಂಭವಾದಂತಹ ಬಸ್‌ಸ್ಟ್ಯಾಂಡ್ ಸರ್ಕಾರದ ಕೆಲಸದ ವೇಗ ಬಹಳ ಕಡಿಮೆಯಿರುವುದರಿಂದ ಕೆಲಸವನ್ನು ಮಾಡಿಸುವ ದೃಷ್ಟಿಯಿಂದ ಇದನ್ನು ತ್ವರಿತಗತಿಯಿಂದ ಕೆಲಸ ಮಾಡುವುದು ಅಗತ್ಯವಿದೆ. ಕಾರಣ, ತಾವು ಸಂಬಂಧಿಸಿದವರಿಗೆ ತಿಳಿಸಿ ಅದನ್ನು ಕೂಡಲೇ ಆ ಕೆಲಸವನ್ನು ಮಾಡಿಸಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತಾ ಇದ್ದೇನೆ. ಇನ್ನು ಬಂಕಾಪುರದಲ್ಲಿಯೂ ಕೂಡ ಇವತ್ತು ರಾಷ್ಟ್ರೀಯ ಹೆದ್ದಾರಿಯನ್ನು ಹೊಂದಿಕೊಂಡಂತೆ ಒಂದು ಬಸ್‌ಸ್ಟ್ಯಾಂಡ್ ಆಗಬೇಕು ಎನ್ನುವಂತಹ ಬೇಡಿಕೆಯನ್ನು ಜನರು ಇಟ್ಟಿದ್ದಾರೆ. ಈಗಾಗಲೇ ಅಲ್ಲಿ ಎರಡು ಎಕರೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನು ಹೊಂದಿಕೊಂಡಂತೆ ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಅಲ್ಲಿ ಸುಮಾರು ಎರಡು ಸಾವಿರ ಮೇಲ್ಪಟ್ಟು ಜನಸಂಖ್ಯೆಯಿರುವುದರಿಂದ ಒಂದು ಬಸ್‌ಸ್ಟ್ಯಾಂಡ್ ಕೂಡ ಅಲ್ಲಿ ಆಗತಕ್ಕದ್ದು ಅತೀ

ಅವಶ್ಯಕತೆ ಇರುವುದರಿಂದ ತಾವು ಅಲ್ಲಿ ಮಾಡಿಕೊಡಬೇಕು ಅಂತ ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಂಡು ಒಟ್ಟಾರೆ ಈ ಒಂದು ಇಲಾಖೆಯ ಮೇಲೆ ನಾನು ಇನ್ನು ಹೆಚ್ಚಿಗೆ ಮಾತನಾಡಬೇಕಾಗಿತ್ತು. ಯಾಕೆಂದರೆ ಸಮಯದ ಅಭಾವ ಕೂಡ ಇರುವುದರಿಂದ ನಾನು ಹೆಚ್ಚು ಮಾತನಾಡದೆ ಈ ಒಂದು ಇಲಾಖೆಯಲ್ಲಿ ತಾವು ಹೆಚ್ಚು ಚುರುಕಾಗುವಂತೆ ಇದನ್ನು ಸಂಪೂರ್ಣವಾಗಿ ಬದಲಾವಣೆ ಮಾಡತಕ್ಕಂತಹ ಒಂದು ಸಾರಿಗೆ ಇಲಾಖೆಯ ಒಂದು ಕರ್ತವ್ಯವನ್ನು ತಾವು ಮಾಡಬೇಕು ಎಂದು ಇವತ್ತು ವಿನಂತಿಸಿಕೊಂಡು ಇನ್ನು ಕೆಲವು ಅಪಘಾತಗಳ ಬಗ್ಗೆ ಕೂಡ ಈ ಸಂದರ್ಭಗಳಲ್ಲಿ ಹೇಳತಕ್ಕಂಥದ್ದು ಅವಶ್ಯಕತೆ ಇದೆಯೆಂದು ನನಗೆ ಅನ್ನಿಸುತ್ತದೆ. ಕೇವಲ ತಮ್ಮ ಇಲಾಖೆಯಿಂದ ಅಷ್ಟೇ ಅಲ್ಲ ಇವತ್ತು ಪಿಡಬ್ಲ್ಯೂಡಿ ಇಲಾಖೆ, ಪೊಲೀಸ್ ಇಲಾಖೆ, ಕೂಡ ಇವರ ಜೊತೆಯಲ್ಲಿ ಸೇರಿಕೊಂಡು ಇವತ್ತು ವ್ಯವಸ್ಥಿತವಾದಂತಹ ಸಾರಿಗೆ ನೀತಿಯನ್ನು ರೂಪಿಸತಕ್ಕಂಥದ್ದು ಅತಿ ಅವಶ್ಯಕತೆ ಇದೆ. ಈ ಸಾರಿಗೆ ನೀತಿಯನ್ನು ತಾವು ಮಾಡುವಾಗ ಅಲ್ಲಿ ಇವತ್ತು ಬಹುಶಃ ನಮ್ಮ ಸರ್ಕಾರದವರು ಪ್ರತಿ ವರ್ಷ ಈ ಅಪಘಾತ ರಾಜ್ಯದಲ್ಲಿ ಈ ನ್ಯಾಷನಲ್ ಹೈವೆನಲ್ಲಿ, ಸ್ಟೇಟ್ ಹೈವೆಯಲ್ಲಿ ನಡೆಯುತ್ತಿವೆ. ಇವತ್ತು ಇಂಟೀರಿಯರ್ ರೂಟ್ಸ್‌ನ್ನು ನಾವು ಬಿಡೋಣ. ಇಲ್ಲಿ ಅಪಘಾತಗಳು ಆಗತಕ್ಕಂತಹ ಅಂಕಿಅಂಶಗಳನ್ನು ತೆರೆದು ನೋಡಿದಾಗ ಸಮಗ್ರವಾಗಿ ಇವತ್ತು ಈ ಸದನದಲ್ಲಿ ಒಂದು ದಿವಸ ಎಲ್ಲಾ ಸದಸ್ಯರೂ ಕೂಡ ಚರ್ಚೆ ಮಾಡಿದರೆ ಆ ಸಮಯ ಕಡಿಮೆಯೇನೋ ಎನ್ನತಕ್ಕಂಥ ಭಾವನೆ ನನಗೆ ಬರುತ್ತಿದೆ. ಯಾಕೆಂದರೆ ರಸ್ತೆಗಳು ಹಾಗೆಯೇ ಇದ್ದರೆ ವಾಹನಗಳ ಸಂಖ್ಯೆ ವಿಪರೀತವಾಗಿ ಬೆಳದಂತಹ ಪರಿಸ್ಥಿತಿ ಮತ್ತು ಆ ವಾಹನಗಳನ್ನು ನಡೆಸುವಂತಹವರಿಗೆ ತಾವು ಲೈಸೆನ್ಸ್ ಕೊಡತಕ್ಕಂತಹ ಪದ್ಧತಿಯನ್ನು ನೋಡಿದಾಗ ನಮ್ಮ ರಾಜ್ಯದಲ್ಲಿ ಆಗಲಿ, ಅಥವಾ ವಿವಿಧ ರಾಜ್ಯಗಳಲ್ಲೇ ಆಗಲಿ ಬಹಳ ಲಘುವಾಗಿ ಲೈಸೆನ್ಸ್‌ಗಳನ್ನು ಕೊಡತಕ್ಕಂಥ ಒಂದು ಕೆಲಸವನ್ನು ತಮ್ಮ ಇಲಾಖೆಯವರು ಮಾಡುತ್ತಿರುವುದರಿಂದ ಅದರ ಸುಧಾರಣೆಯನ್ನು ತಾವು ಮಾಡತಕ್ಕದ್ದು ಬಹಳ ಅವಶ್ಯಕತೆ ಇದೆ. ಇವತ್ತು ಜನಸಂಖ್ಯೆ ಏನಾದರೂ ಹೆಚ್ಚು ಕಡಿಮೆಯಾಗುತ್ತಿದೆ ಅಂದರೆ ಹಿಂದಿನ ಕಾಲದಲ್ಲಿ ಯಾವುದಾದರೂ ರೋಗ ಬಂದರೆ, ಆ ರೋಗಕ್ಕೆ ತುತ್ತಾಗಿ ಜನಸಂಖ್ಯೆಯು ಕಡಿಮೆಯಾಗುತ್ತಿತ್ತು ಎನ್ನತಕ್ಕಂಥ ಮಾತನ್ನು ನಾವು ಕೇಳಿದರೆ ಇವತ್ತು ಏನಾಗಿದೆ ಎಂದರೆ ಈ ಅಪಘಾತಗಳ ಮುಖಾಂತರ ಆಗುತ್ತಿದೆ. ಇವತ್ತು ಪತ್ರಿಕೆಗಳನ್ನು ನೋಡಿದರೆ ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ 10 ಸಾವು, 20 ಸಾವು, 50 ಸಾವು, ಅದಕ್ಕೆ ಇತಿಮಿತಿ ಇದೆಯೇ ಎನ್ನುವಂತಹ ಅಂಕಿಅಂಶಗಳನ್ನು ನಾವು ನೋಡಿದಾಗ ಮಾನವೀಯರಾದ ನಾವು ಮಾನವೀಯತೆಯ ದೃಷ್ಟಿಯಿಂದ ಇವತ್ತು ಏತಕ್ಕೆ ಇಷ್ಟೊಂದು ಅಪಘಾತಗಳು ಸಂಭವಿಸುತ್ತಿದೆ, ಇದಕ್ಕೆ ನಾವು ಏನು ಕಡಿವಾಣ ಹಾಕಬೇಕಾಗಿದೆ, ಯಾವ ರೀತಿಯಾಗಿ ಇವತ್ತು ರಾಷ್ಟ್ರೀಯ ಹೆದ್ದಾರಿಗಳನ್ನು, ರಾಜ್ಯ ಹೆದ್ದಾರಿಗಳನ್ನು ನಾವು ಸುಧಾರಿಸಬೇಕಾಗಿದೆ, ಎನ್ನುವುದರ ಬಗ್ಗೆ ತಾವು ಇವತ್ತು ಚಿಂತನೆಯನ್ನು ಮಾಡಬೇಕಾಗಿದೆ. ತಾವು ಹೇಳಿದಂತೆ ಒಂದು ರೈಟ್ಸ್ ಸಂಸ್ಥೆಯವರು ಒಂದು ವರದಿಯನ್ನು ಚೆನ್ನಾಗಿ ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ಸರ್ವೆಯನ್ನೂ ಕೂಡ

ಅವರು ಮಾಡಿದ್ದಾರೆ. ಆ ರೈಟ್ಸ್ ಸಂಸ್ಥೆಯವರು ಹಾಕಿಕೊಟ್ಟಂತಹ ಕೆಲವು ಅಂಶಗಳನ್ನು ಪಾಲನೆ ಮಾಡಬೇಕಾಗಿದೆ ಎನ್ನತಕ್ಕದ್ದನ್ನು ತಾವು ತಿಳಿಸಿದ್ದೀರಿ. ಆ ರೈಟ್ಸ್ ಸಂಸ್ಥೆಯ ವರದಿ ನನ್ನ ಕೈಗೆ ಸಿಕ್ಕಿಲ್ಲ. ಇವತ್ತು ಆ ರೈಟ್ಸ್ ಸಂಸ್ಥೆಯ ಕೆಲವು ವಿಚಾರಗಳನ್ನು ನೋಡಿದಾಗ ಅದನ್ನು ಪತ್ರಿಕೆಗಳಲ್ಲಿ ನೋಡಿದಾಗ ಇವತ್ತು ಅದನ್ನೂ ಕೂಡ ನಾವು ತಿಳಿದುಕೊಳ್ಳತಕ್ಕಂಥದ್ದು ಅವಶ್ಯಕತೆ ಇದೆ. ಆ ಮಾದರಿಯಲ್ಲಿ ಇವತ್ತು ಹೆಚ್ಚು ಕೆಲಸವನ್ನು ನಾವು ಮಾಡಬೇಕಾಗಿದೆ.

10.50 ಪಿ.ಎಂ

ಜೊತೆಗೆ ಜೆ.ಸಿ.ಲಿನ್‌ರವರು ಕೊಟ್ಟಂಥ ವರದಿ, ಉತ್ತಮವಾದ ವರದಿ ಆಗಿದ್ದು ಅದನ್ನೂ ಕೂಡ ಪಾಲನೆ ಮಾಡತಕ್ಕಂಥ ಅವಶ್ಯಕತೆ ಇದೆ. ಇದನ್ನು ಸಂಪೂರ್ಣವಾಗಿ ಜಾರಿಗೆತಂದರೆ ಇನ್ನು ಒಳ್ಳೆಯದಾಗುತ್ತದೆ ಎಂಬ ಸಲಹೆಯನ್ನು ಈ ಸಂದರ್ಭದಲ್ಲಿ ಕೊಟ್ಟು ಒಟ್ಟಾರೆ ಇವೊತ್ತು ಅಪಘಾತಗಳನ್ನು ಕಡಿಮೆ ಮಾಡುವುದರ ಕಡೆಗೆ ಸಮಗ್ರವಾಗಿ ಚಿಂತಿಸಿ ಚರ್ಚಿಸಿ ಕೆಲವು ಕಟ್ಟುನಿಟ್ಟಿನ ಕ್ರಮಗಳನ್ನು ಹಾಕಿಕೊಳ್ಳಬೇಕು ಎಂಬತಕ್ಕಂಥ ವಿಚಾರವನ್ನು ತಮಗೆ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇನ್ನು ಸಣ್ಣನೀರಾವರಿ ವಿಚಾರದ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಾದರೆ, ಸಣ್ಣ ನೀರಾವರಿ ಇಲಾಖೆ ಬಹಳ ಪ್ರಾಮುಖ್ಯವಾದ ಒಂದು ಇಲಾಖೆ....

ಶ್ರೀಮತಿ ಬಿ.ಟಿ.ಲಲಿತಾನಾಯಕ್: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಇದುವರೆಗೂ ಮಾನ್ಯ ಸದಸ್ಯರು ಬಸ್ಸಿನ ಬಗ್ಗೆ ಹೇಳುತ್ತಿದ್ದರು, ಅದರ ಸಂಬಂಧವಾಗಿ ನನ್ನ ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಬಸ್ಸಿನಲ್ಲಿ ಮಹಿಳೆಯರಿಗೆ ಸೀಟು ಎಂದು ಮಾಡಿದ್ದೀರಲ್ಲಾ ಮಹಿಳೆಯರಿಗಾಗಿ ಆ ಸೀಟನ್ನು ಬಿಟ್ಟುಕೊಡುತ್ತಾ ಇಲ್ಲ. ಅದಕ್ಕೆ ದಯವಿಟ್ಟು ಮಾನ್ಯ ಮಂತ್ರಿಗಳು ಅದನ್ನು ಗಮನಿಸಬೇಕು. ಮಹಿಳೆಯರಿಗೆ ಎಂದು ಇದ್ದಾಗ ಪುರುಷರಿಗೆ ಏಕೆ ಅವರಿಗೆ ಬಿಟ್ಟು ಕೊಡಬೇಕು ಎನ್ನುವ ಭಾವನೆ ಬರುತ್ತಿದೆ. ಆದ್ದರಿಂದ ದುರ್ಬಲರಿಗೆ ಎಂದಾದರೂ ತಾವು ಮಾಡಬಹುದಲ್ಲಾ. ಈಗ ಬಾಣಂತಿ ಇರಬಹುದು, ಮಕ್ಕಳನ್ನು ಎತ್ತುಕೊಂಡು ಬಂದಂತಹವರು, ವೃದ್ಧರು ಇಂತಹವರು ಬಂದರೂ ಕೂಡ ಸೀಟನ್ನು ಬಿಟ್ಟುಕೊಡಲಾರದಷ್ಟು ಒಂದು ರೀತಿಯ ಕ್ರೌರ್ಯ ತೋರಿಸುತ್ತಿದ್ದಾರೆ. ಆದುದರಿಂದ ನನಗನಿಸುತ್ತದೆ ಮಹಿಳೆಯರಿಗೆ ಎಂಬ ಶಬ್ದವನ್ನು ತೆಗೆದುಹಾಕಿ, ಗಟ್ಟಿಮುಟ್ಟಾದ ಮಹಿಳೆಯರು ನಿಂತುಕೊಳ್ಳುತ್ತಾರೆ, ಈಗ 30-40 ವರ್ಷಗಳಿರುವ ಮಹಿಳೆಯರಿಗೆ ತೊಂದರೆಯಾಗುವುದಿಲ್ಲ. ಆದರೆ ವೃದ್ಧರಾದ ಮಹಿಳೆಯರಿಗೂ ಕೂಡ ಸೀಟು ಬಿಡುವುದಿಲ್ಲ ಎನ್ನುತ್ತಾರೆ. ಆದ್ದರಿಂದ ವೃದ್ಧರಿಗೆ ಅಥವಾ ದುರ್ಬಲರಿಗೆ ಎಂದು ಒಂದು ಶೀರ್ಷಿಕೆಯನ್ನಾದರೂ ಮಾಡುತ್ತೀರಾ? ಅವರಿಗೆ ಸೀಟನ್ನು ಬಿಟ್ಟುಕೊಡದೇ ಇದ್ದರೆ ದಂಡವನ್ನು ಹಾಕುವಂಥ ವ್ಯವಸ್ಥೆಯನ್ನಾದರೂ ಮಾಡಿ ಎಂದು ವಿನಂತಿ ಮಾಡುತ್ತಿದ್ದೇನೆ. ಏಕೆಂದರೆ ಬಹಳ ಮಹಿಳೆಯರು ಇವೊತ್ತು

ಹೇಳುತ್ತಾರೆ ಏನೇ ಆಗಲೀ ಸೀಟು ಬಿಟ್ಟುಕೊಡುವುದಿಲ್ಲ, ಎಂತಹ ತೊಂದರೆಯಲ್ಲಿದ್ದರೂ ಬಿಟ್ಟುಕೊಡುವುದಿಲ್ಲ ಮಗುವನ್ನು ಹೀಗೆ ಜೋತಾಡಿಕೊಂಡೇ ಆ ಹೆಣ್ಣುಮಗಳು ನಿಲ್ಲಬೇಕು. ಆ ತರಹ ಪರಿಸ್ಥಿತಿ ಇದೆ. ಆದುದರಿಂದ ಮಂತ್ರಿಗಳು ಅದರ ಬಗ್ಗೆಯೂ ಗಮನಹರಿಸಬೇಕು....

ಅಧ್ಯಕ್ಷರು: ಕೆ.ಎಸ್.ಆರ್.ಟಿ.ಸಿ.ಯವರು ಬೋರ್ಡ್ ಹಾಕಿ ಹೃದಯ ಪರಿವರ್ತನೆ ಮಾಡುವುದಕ್ಕೆ ಆಗುತ್ತದೆಯೇ? ಜನರ ಮನಸ್ಸು ಅಷ್ಟು ಹೀನಸ್ಥಿತಿ ತಲುಪಿದ್ದರೆ ಅವರು ಬೋರ್ಡ್ ಹಾಕಿ ಹೃದಯ ಪರಿವರ್ತನೆ ಮಾಡುದಕ್ಕಾಗುತ್ತದೆಯೇ? ಇದಕ್ಕೆ ಯಾವುದೇ ಕಾನೂನು ಬೇಕಾಗಿಲ್ಲ. ಯಾವುದೇ ಮನುಷ್ಯನಿಗೆ ಆತನ ಮನಸ್ಸು ಜೀವಂತವಾಗಿದ್ದರೆ ತಾನಾಗಿಯೇ ಸ್ವಯಂಪ್ರೇರಿತನಾಗಿ ಸೀಟು ಕೊಡಬೇಕು.

ಶ್ರೀಮತಿ ಬಿ.ಟಿ.ಲಲಿತಾನಾಯಕ್: ಯಾವುದನ್ನೂ ಕೂಡ ಮನಸ್ಸು ಪರಿವರ್ತನೆ ಇಲ್ಲದೆ ಮಾಡುವುದಕ್ಕಾಗುವುದಿಲ್ಲ. ಇವೊತ್ತು ಹೆಂಡ, ಸಾರಾಯಿ ಬಿಡಿರಿ ಎನ್ನುತ್ತೇವೆ, ಅದು ಅವರ ಮನಸ್ಸಿನಲ್ಲಿ ಬರಬೇಕು. ಮಾನ್ಯ ಅಧ್ಯಕ್ಷರೆ, ನಿಜವಾಗಿಯೂ ಕೂಡ ನಾವು ಕಾನೂನು ಪ್ರಕಾರ ಮಾಡುವುದು ಬೇಕಾಗಿಲ್ಲ. ಎಷ್ಟೋ ಕಾನೂನುಗಳು ನಮಗೆ ಅಗತ್ಯ ಇಲ್ಲ. ಮನುಷ್ಯನ ಮನಸ್ಸು ದಿನೇ ದಿನೇ ಕ್ರೌರ್ಯದ ಕಡೆಗೆ ಹೋಗುತ್ತಿರುವುದರಿಂದ ನಾವು ಬಲವಂತವಾಗಿ ಅವರ ಮೇಲೆ ಹೇರಬೇಕಾಗಿದೆ. ಆದ್ದರಿಂದ ಈ ವಿಷಯದಲ್ಲೂ ನಾವು ಅದನ್ನು ಹೇರಬೇಕೇನೋ ಎಂದು ನನಗೆ ಅನ್ನಿಸುತ್ತದೆ.

ಅಧ್ಯಕ್ಷರು: ನೋಡೋಣ ಇದರ ಬಗ್ಗೆ ಮಾತನಾಡೋಣ.

ಶ್ರೀ ಕುಂಬ್ಳೆ ಸುಂದರ್‌ರಾವ್: ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಹಾಗೆ ಹೇಳುವುದಾದರೆ, ಕೇರಳದಲ್ಲಿ ಮಹಿಳೆಯರಿಗೆ ರಿಸರ್ವೇಷನ್ ಇದೆ ಅದು ಇಂಪ್ಲಿಮೆಂಟ್ ಆಗಿದೆ, ಅಲ್ಲಿ ಗಂಡಸರು ಹತ್ತಿರ ಹೋಗುತ್ತಾ ಇಲ್ಲ. ಕಂಡಕ್ಟರ್ ಬರುವಾಗಲೇ ಹೇಳುತ್ತಾರೆ, ಆ ಸೀಟು ಬಿಟ್ಟುಬಿಡಿ ಅದು ನಿಮಗೆ ಇರುವಂತದ್ದಲ್ಲ ಎಂದು ಅದು ಅಲ್ಲಿ ಚಾಚೂತಪ್ಪದೆ ಪಾಲಿಸಲ್ಪಡುತ್ತಿದೆ, ಹೆಂಗಸರಿಗೆ ಅದು ಸಮಸ್ಯೆ ಆಗುವುದಿಲ್ಲ. ಇಲ್ಲಿ ಕಂಡಕ್ಟರ್, ಡ್ರೈವರ್‌ಗಳು ಗಂಡಸರು ಹೆಂಗಸರ ಸೀಟಿನಲ್ಲಿ ಕುಳಿತಾಗ ಮತ್ತೆ ಎಬ್ಬಿಸಬೇಕಾಗುತ್ತದೆ, ಆದ್ದರಿಂದ ಮಾನ ಹೋಗುತ್ತದೆ ಕುಳಿತುಕೊಳ್ಳಬೇಡಿ ಎಂದು ಎಷ್ಟುಸಾರಿ ಹೇಳುತ್ತಾರೆ.

ಅಧ್ಯಕ್ಷರು: ಇದು ಒಂದೊಂದು ರಾಜ್ಯದಲ್ಲಿ ಒಂದೊಂದು ಸಮಸ್ಯೆ ಇದೆ. ಕೇರಳದಲ್ಲಿ ಗಂಡಸರು ಹೆಣ್ಣುಮಕ್ಕಳ ಹತ್ತಿರವೇ ಹೋಗುವುದಿಲ್ಲ. ಅಲ್ಲಿ ಆ ಸಮಸ್ಯೆ, ಇಲ್ಲಿ ಬಿಟ್ಟೇ ಬರುವುದಿಲ್ಲ ಇಲ್ಲಿ ಈ ಸಮಸ್ಯೆ. ಏನು ಮಾಡುತ್ತೀರಿ.

ಶ್ರೀ ಮಂಜುನಾಥ ಸಿ.ಕುನ್ನೂರ್: ಸಣ್ಣ ನೀರಾವರಿ ಇಲಾಖೆಯ ಮಂತ್ರಿಗಳ ಗಮನ

ಸೆಳೆಯಬೇಕೆಂದರೆ ತಮ್ಮ ಇಲಾಖೆಯಲ್ಲಿ ಇವೊತ್ತು ಮೀಸಲಾಗಿರತಕ್ಕಂಥ ಹಣ ಬಹಳಷ್ಟು ಕಡಿಮೆ ಪ್ರಮಾಣದಲ್ಲಿ ಈ ಒಂದು ಇಲಾಖೆಗೆ ಸಿಗುತ್ತಿದೆ. ಆದರೆ ಇದೊಂದು ಪ್ರಮುಖವಾದಂಥ ಇಲಾಖೆ. ಇವೊತ್ತು ರಾಜ್ಯದಲ್ಲಿ ಇರತಕ್ಕಂಥ ಕೆರೆಗಳ ಹೂಳನ್ನು ತೆಗೆಯತಕ್ಕಂಥದ್ದು ಮತ್ತು ಹೊಸ ಕೆರೆಗಳನ್ನು ನಿರ್ಮಾಣ ಮಾಡತಕ್ಕಂಥದ್ದು ಮತ್ತು ಇವೊತ್ತು ನದಿ ಮತ್ತು ಹಳ್ಳಗಳು ಯಾವಯಾವ ಮತಕ್ಷೇತ್ರಗಳಲ್ಲಿ ಇದ್ದಾವೋ ಅಲ್ಲಿ ಬ್ಯಾರೇಜುಗಳನ್ನು, ಬ್ರಿಡ್ಜ್‌ಗಳನ್ನು ಕಟ್ಟತಕ್ಕಂಥ ಕೆಲಸವನ್ನು ಮಾಡತಕ್ಕಂಥದ್ದು ಇವು ಮುಖ್ಯವಾಗಿ ತಾವು ಮಾಡಬೇಕಾದಂಥ ಕೆಲಸಗಳು. ಇವೊತ್ತು ಈ ವಿಷಯದಲ್ಲಿ ತಾವು ಬಹಳ ಕಡಿಮೆ ಹಣವನ್ನು ಕೊಡುತ್ತಿದ್ದೀರಿ. ಆದಕಾರಣ ಇದಕ್ಕೆ ಹೆಚ್ಚು ಹಣವನ್ನು ಒದಗಿಸಿ ಪ್ರತಿ ಮತಕ್ಷೇತ್ರದಲ್ಲಿ ಕೆಲವು ಕೆಲಸಗಳನ್ನಾದರೂ ತಾವು ತೆಗೆದುಕೊಳ್ಳತಕ್ಕಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಬೇಕಾಗಿದೆ. ಇವೊತ್ತು ನಮ್ಮ ಮತಕ್ಷೇತ್ರದಲ್ಲಿ ಮೋತಿತಲಕ್ ಕೆರೆಗೆ, ಶಿಗ್ಗಾವಿ ತಾಲ್ಲೂಕಿನ ಗಂಗೆಬಾವಿ ಕೆರೆ ಅದನ್ನು ತಾವು ತೆಗೆದುಕೊಂಡಿದ್ದೀರಿ. ಆಯವ್ಯಯದಲ್ಲಿ ಎಷ್ಟು ಹಣವನ್ನು ಇಟ್ಟಿದ್ದೀರಿ ಎಂದರೆ ಗಂಗೆಬಾವಿ ಕೆರೆಗೆ ಅದರ ಪ್ಲಾನ್ ಮತ್ತು ಎಸ್ಟಿಮೇಟ್ ಸೇರಿ 50 ಲಕ್ಷ ಬೇಕಾದಂಥ ಹಣಕ್ಕೆ ತಾವು ಬಜೆಟ್‌ನಲ್ಲಿ ಒದಗಿಸಿದಂಥ ಹಣ ಎಷ್ಟು ಎಂದರೆ ಒಂದು ಸಾವಿರ ರೂಪಾಯಿ. ಇನ್ನೂ ಅನೇಕ ಕೆಲಸಗಳಿಗೆ ತಾವು, ಈ ಮೋತಿತಲಕ್ ಕೆರೆಗೆ ಒಂದು ಕೋಟಿ ರೂಪಾಯಿಗೂ ಮೇಲ್ಪಟ್ಟು ಹಣ ಬೇಕಾಗಿದೆ ಎಂದರೆ ಆಯವ್ಯಯದಲ್ಲಿ ತಾವು ಒದಗಿಸಿದ್ದು ಕೇವಲ ಒಂದು ಸಾವಿರ ರೂಪಾಯಿ. ಅಂದರೆ ಇವೊತ್ತು ಏನಾಗಿದೆ ಎಂದರೆ ಆ ಭಾಗದ ಜನರಲ್ಲಿ ಈ ಸರ್ಕಾರ ಬಂದಮೇಲೆ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದಾರೆ ಎಂಬ ತಪ್ಪು ಕಲ್ಪನೆ ಬರುವುದಕ್ಕೆ ಪ್ರಾರಂಭವಾಗಿದೆ. ತಾವು ಯಾವುದೇ ಕೆಲಸಗಳನ್ನು ಆಯವ್ಯಯದಲ್ಲಿ ಇಡಿರಿ, ಕನಿಷ್ಟಪಕ್ಷ ಇವೊತ್ತು ಪಿ.ಡಬ್ಲ್ಯೂ.ಡಿ. ಇಲಾಖೆಯ ನೀತಿಯಂತೆ 1/3 ಭಾಗದಷ್ಟು ಹಣವನ್ನಾದರೂ ಕೂಡ ಬಜೆಟ್‌ನಲ್ಲಿ ಇಟ್ಟು ಆ ಕೆಲಸವನ್ನು ಮಾಡಿದ್ದಾದರೆ ಇವೊತ್ತು ಜನರಿಗೆ ಒಂದು ವಿಶ್ವಾಸ ಮತ್ತು ನಂಬಿಕೆ ಬರುತ್ತದೆ. ಅದರ ಬದಲಾಗಿ ಇವೊತ್ತು 50 ಲಕ್ಷ, ಒಂದು ಕೋಟಿ, ಎರಡು ಕೋಟಿ ಈ ರೀತಿಯಾಗಿ ಹಣವನ್ನು ಇವೊತ್ತು ತಾವು ಇಟ್ಟು ಆ ಕೆಲಸಗಳಿಗೆ ಕೇವಲಸಾವಿರ ರೂಪಾಯಿಯಂತೆ, ತಮ್ಮದು ಬಜೆಟ್ ಎಷ್ಟು ಎಂದರೆ ಒಂದೇ ಸಾವಿರ. ಬಹಳ ಎಂದರೆ ಎರಡು ಸಾವಿರ. ಈ ರೀತಿಯಾಗಿ ತಾವು ಕೆರೆ ಹೂಳನ್ನು ತೆಗೆಯುವುದಕ್ಕಾಗಲಿ, ಏತನೀರಾವರಿ ಯೋಜನೆಗಾಗಲಿ ಇಟ್ಟಂಥ ಸಂದರ್ಭವನ್ನು ನಾವು ಕಾಣುತ್ತಿದ್ದೇವೆ. ಒಂದುವೇಳೆ ಆಯವ್ಯಯದಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಧೇ ಹೋದರೂ ಪರವಾಗಿಲ್ಲ ಆದರೆ ತೆಗೆದುಕೊಂಡಮೇಲೆ ಕನಿಷ್ಟಪಕ್ಷ ಹಣವನ್ನು ಇಡುವುದಕ್ಕೆ ಪ್ರಯತ್ನ ಮಾಡಬೇಕು. ಇವೊತ್ತು ಗಂಗೆಬಾವಿ ಕೆರೆ ಎನ್ನತಕ್ಕಂಥದ್ದು ಬಹಳ ಮುಖ್ಯವಾದ ಕೆರೆ, ಅದರ ಮೇಲೆ ಕ್ಯಾಚ್‌ಮೆಂಟ್ ಏರಿಯಾ ಕೂಡ ಇದೆ. ಅಲ್ಲಿ ಬೇಡ್ತಿ ಹಳ್ಳದಿಂದ ನೀರನ್ನು ಕೂಡ ತರಲಿಕ್ಕೆ ಆಗಲಿಕ್ಕೆ ಆಗುತ್ತದೆ. ನಾನು ಹಲವಾರು ಸಾರಿ ಈ ಒಂದು ಕೆರೆಯ ಬಗ್ಗೆ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಆಗಲೀ, ನಬಾರ್ಡ್ ಯೋಜನೆಯಲ್ಲಾಗಲೀ ಈ ಕೆರೆಯನ್ನು ತೆಗೆದುಕೊಂಡು

ಅಲ್ಲಿ ಕೆಲವು ಜಮೀನುಗಳು ಮುಳುಗಡೆಯಾದರೂ ಚಿಂತೆ ಇಲ್ಲ; ಅದರಿಂದ ಹತ್ತು ಸಾವಿರ ಎಕರೆಗೂ ಮೇಲ್ಪಟ್ಟು ನೀರಾವರಿಯಾಗುತ್ತದೆ ಎಂಬ ಒಂದು ಅಂದಾಜು ಇದ್ದರೂ ಕೂಡ ಅಲ್ಲಿ ಆ ಕೆಲಸಕ್ಕಾಗಿ ತಮ್ಮ ಬಜೆಟ್‌ನಲ್ಲಿ ಒಂದು ಸಾವಿರ ರೂಪಾಯಿಯನ್ನು ಇಟ್ಟಿದ್ದೀರಿ. ಕೊನೆಪಕ್ಷ ಈ ವರ್ಷ ತಾವು ಸರ್ವೆಯನ್ನಾದರೂ ಮಾಡಿಸಿ ಅದನ್ನು ಇನ್‌ವೆಸ್ಟಿಗೇಷನ್ ಡಿಪಾರ್ಟ್‌ಮೆಂಟ್‌ಗೆ ವಹಿಸಿಕೊಟ್ಟು ಈ ಒಂದು ಕಾಮಗಾರಿಯನ್ನು ತಾವು ನಬಾರ್ಡ್‌ನೊಳಗೆ ತೆಗೆದುಕೊಂಡರೆ ಬಹಳ ಸಂತೋಷವಾಗುತ್ತದೆ. ಇನ್ನು ಬತ್ತಿಗೆರಿ ಬಗ್ಗೆ ಪಿ.ಡಬ್ಲ್ಯೂ.ಡಿ.ಸಚಿವರು ಬಹಳ ತೊಂದರೆಯನ್ನು ತೆಗೆದುಕೊಂಡು ಅಂದರೆ ಸಾಕಷ್ಟು ಪ್ರಯತ್ನವನ್ನು ಮಾಡಿ ಸುಮಾರು 2,88,00,000 (ಎರಡು ಕೋಟಿ ಎಂಭತ್ತೆಂಟು ಲಕ್ಷ) ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ತಾವು ಮಂಜೂರಾತಿಯನ್ನೂ ಕೂಡ ಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ನನ್ನ ತಾಲ್ಲೂಕಿನ 4-5 ಹಳ್ಳಿಗಳು ಮತ್ತು ಹಾನಗಲ್ ತಾಲ್ಲೂಕಿನ 4-5 ಹಳ್ಳಿಗಳು ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವುದರಿಂದ ಒಂದು ದೊಡ್ಡ ಯೋಜನೆಗೆ ತಾವು ಮಂಜೂರಾತಿಯನ್ನು ಕೊಟ್ಟಿರುವುದರಿಂದ ಅದನ್ನು ನಾನು ಈಗಾಗಲೇ ಸಚಿವರ ಗಮನಕ್ಕೆ ತಂದಿದ್ದೇನೆ. ಇವೊತ್ತು ಈ ಕೆಲಸ ನಬಾರ್ಡ್‌ನಲ್ಲಿ ಮಂಜೂರಾಗಿದೆ. ಇವೊತ್ತು ಆ ಕೆಲಸ ಕೇವಲ ನೀರನ್ನು ತೆಗೆದುಕೊಂಡು ಹೋಗತಕ್ಕಂಥದ್ದು ಏನು ಮಾಡುತ್ತಿದ್ದಾರೆ ಅದನ್ನು ಸ್ವಲ್ಪ ಮಾರ್ಪಾಡುಮಾಡಿ ಆ ಬತ್ತಿಗೆರೆಯನ್ನು ಸ್ವಲ್ಪ ಹೈಟ್ ಮಾಡಿದರೆ ನಮ್ಮ ಭಾಗದಲ್ಲಿ ಇರತಕ್ಕಂಥ ಇನ್ನೂ ಕೆಲವು ಪ್ರದೇಶಗಳ ರೈತರ ಬೇಡಿಕೆಯಂತೆ ಹೆಚ್ಚು ಉಪಯುಕ್ತಕಾರಿ ಆಗುವುದರಿಂದ ಈ ಒಂದು ಕೆಲಸವನ್ನು ಕೂಡ ತಾವು ಮಾಡಬೇಕು ಎಂಬ ಸಲಹೆಯನ್ನು ಕೂಡ ಈ ಸಂದರ್ಭದಲ್ಲಿ ಕೊಟ್ಟು, ಇನ್ನು ಸವಣೂರಿನಲ್ಲಿ ಇರತಕ್ಕಂಥ ಮೋತಿತಲಕ್ ಕೆರೆ, ಹತ್ತಿಮತ್ತೂರಿನಲ್ಲಿ ಇರತಕ್ಕಂಥ ಒಂದು ಕೆರೆ ಈ ಎಲ್ಲಾ ಕೆರೆಗಳ ಪರಿಸ್ಥಿತಿಯನ್ನು ನನ್ನ ಮತಕ್ಷೇತ್ರದಲ್ಲಿ ನೋಡಿದರೆ ಸುಮಾರು ನಾಲ್ಕುನೂರು ಎಕರೆಗೆ ಮೇಲ್ಪಟ್ಟು ಆ ಕ್ಷೇತ್ರಗಳ ವಿಸ್ತೀರ್ಣ ಇದೆ. ಅಲ್ಲಿ ಏನಾಗಿದೆ ಎಂದರೆ ಆ ಕೆರೆಗಳ ಹೂಳನ್ನು ತೆಗೆಯುವುದು ಬೇರೆ. ಆದರೆ ಇವೊತ್ತು ದುರ್ದೈವದಿಂದ ಸೋಷಿಯಲ್ ಫಾರೆಸ್ಟ್ ಇಲಾಖೆಯವರು ಅಲ್ಲಿ ಜಾಲಿ ಗಿಡಗಳನ್ನು ಬೆಳೆಸತಕ್ಕಂಥ ಪರಿಸ್ಥಿತಿಯನ್ನೂ ಕೂಡ ತಾವು ನೋಡಿದ್ದೀರಿ. ಯಾವುದೇ ಕೆರೆಗಳಲ್ಲಿ ಇಂತಹ ಕೆಲಸಗಳನ್ನು ಮಾಡುತ್ತಿದ್ದರೆ ಅದರ ಬಗ್ಗೆ ತಾವು ಕಟ್ಟಾಜ್ಞೆಯನ್ನು ಮಾಡಬೇಕು. ಈಗಾಗಲೇ ಬೆಳೆಸಿದ್ದರೆ ಆ ಗಿಡಗಳನ್ನು ತೆಗೆಯಲಿಕ್ಕೆ ಹೇಳಬೇಕು. ಇನ್ನು ಮುಂದೆ ಯಾವುದೇ ಕೆರೆಗಳು ಇರಲಿ ಅಲ್ಲಿ ಜಾಲಿ ಗಿಡಗಳನ್ನು ಅಥವಾ ಬೇರೆ ಯಾವುದೇ ಗಿಡಗಳನ್ನು ಬೆಳೆಸಬಾರದು. ಇವೊತ್ತು ಸೋಷಿಯಲ್ ಫಾರೆಸ್ಟ್ ಇಲಾಖೆಯಿಂದ ಕೆಲವು ಕೆಲಸಮಾಡಬೇಕು ಎಂದು ಹೇಳಿದಾಗ ಅದರ ಒಂದು ಉಪಯುಕ್ತತೆಯನ್ನು ಕೆರೆಯಲ್ಲಿ ಬೆಳೆದು ಅವರ ಕಾಮಗಾರಿಯನ್ನು ತೋರಿಸತಕ್ಕಂಥ ಕೆಲಸವನ್ನು ಅವರು ಮಾಡಬಾರದು. ಇವತ್ತು ಈ ಜಾಲಿ ಗಿಡಗಳನ್ನು ನಮ್ಮ ಭಾಗದಲ್ಲಿ ಏನು ಬೆಳೆಸಿದ್ದಾರೆ. ಅದನ್ನು

ತೆಗೆಯುವಂತಹ ಕೆಲಸವನ್ನು ಮಾಡಿಸಬೇಕು. ಮತ್ತೆ ಹೆಚ್ಚು ದುಡ್ಡನ್ನು ಬಿಡುಗಡೆ ಮಾಡಿ ಮೋತಿತೆಲಕ್ ಕೆರೆ ಮತ್ತು ಅತ್ತಿಮತ್ತೂರು ಕೆರೆಗಳಲ್ಲಿ ಹೂಳನ್ನು ಎತ್ತಿಸುವಂತಹ ಕೆಲಸವನ್ನು ಮಾಡಿಸಬೇಕು. ಈ ಎರಡು ಕೆರೆಗಳ ಹೆಸರನ್ನು ನಾವು ಪಠ್ಯಪುಸ್ತಕವನ್ನು ಓದುವಂತಹ ಸಂದರ್ಭದಲ್ಲೂ ಇವು ದೊಡ್ಡ ಕೆರೆಗಳು ಎಂದು ಇತ್ತು. ಇಂತಹ ಪರಿಸ್ಥಿತಿಯಲ್ಲಿ ಇದನ್ನು ತಾವು ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಅರಣ್ಯ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಇವತ್ತು ಇರಣ್ಯ ಇಲಾಖೆಯಲ್ಲಿ ಸಾಗುವಾನಿ ಗಿಡಗಳನ್ನು ಬೆಳೆಯುತ್ತಿದ್ದಾರೆ. ಈ ಗಿಡಗಳನ್ನು ರಾಜ್ಯದಲ್ಲಿ ಹೊಸದಾಗಿ ಬೆಳೆಯುತ್ತಿದ್ದಾರೆ, ಇದನ್ನು ಮಾಲ್ಕಿ ಲ್ಯಾಂಡ್‌ಗಳಲ್ಲೂ ಕೂಡ ಬೆಳೆಯುತ್ತಿದ್ದಾರೆ. ಇದರ ಬಗ್ಗೆ ಸಮಗ್ರವಾಗಿ ಎಲ್ಲೆಲ್ಲಿ ಎಷ್ಟು ಗಿಡಗಳನ್ನು ಬೆಳೆದಿದ್ದಾರೆಂಬ ಬಗ್ಗೆ ಸರ್ವೆ ಮಾಡಿಸಬೇಕಾಗುತ್ತದೆ, ಮತ್ತೆ ರೈತರಿಗೆ ತಿಳುವಳಿಕೆಯನ್ನು ಕೊಡುವಂಥಾದ್ದು ಅತಿ ಅವಶ್ಯವಿದೆ. ಈ ಗಿಡಗಳು ಎಷ್ಟು ವರ್ಷಗಳು ಇರುತ್ತವೆ, ಮತ್ತು ಇದರ ಅಂದಾಜು ಬೆಲೆ ಎಷ್ಟು ಎಂಬ ಬಗ್ಗೆ ತಾವು ವಿಚಾರ ಮಾಡಬೇಕಾಗುತ್ತದೆ. ಕೆಲವು ಸಹಕಾರ ಸಂಘಗಳ ಮುಖಾಂತರ ಕಂಪೆನಿಗಳನ್ನು ಮಾಡಿಕೊಂಡು ನಮ್ಮ ಶಿಗ್ಗಾವಿ ತಾಲ್ಲೂಕಿನಲ್ಲಿ ಶ್ರೀ ಉಪಾಸಿ ಎನ್ನುವವರು ಒಂದು ಪ್ಲಾಂಟೇಷನ್ ಅನ್ನು ಮಾಡಿಕೊಂಡಿದ್ದಾರೆ. ಅದೇ ರೀತಿಯಲ್ಲಿ ಧಾರವಾಡ ಜಿಲ್ಲೆಯಲ್ಲೂ ಕೂಡ ಕೆಲವರು ಸಂಘಗಳನ್ನು ಮಾಡಿಕೊಂಡು ರೈತರಿಗೆ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇವರು ಸಂಘಗಳಿಗೆ ಸದಸ್ಯರಾಗುವುದಕ್ಕೆ ಸಾವಿರ ರೂಪಾಯಿಗಳೆಂದು ಮಾಡಿ ಈ ಗಿಡದ ಕಿಮ್ಮತ್ತು 20 ವರ್ಷಗಳಿಗೆ ಐವತ್ತು ಸಾವಿರ ರೂಪಾಯಿಗಳಾಗುತ್ತದೆ, ಒಂದು ಲಕ್ಷ ರೂಪಾಯಿಗಳಾಗುತ್ತದೆಂದು ಇವತ್ತು ಆ ರೈತರಿಗೆ ಮೋಸ ಮಾಡುವಂತಹ ಪ್ರಯತ್ನಗಳು ನಡೆಯುತ್ತಿವೆ. ಈ ರೀತಿಯಾಗಿ ಯಾರು ರೈತರಿಗೆ ವಂಚಿಸುತ್ತಿದ್ದಾರೋ ಅಂಥವರ ಮೇಲೆ ನಿಗಾ ಇಡಬೇಕು. ಈ ಸಾಗುವಾನಿ ಮರ ಎಷ್ಟು ವರ್ಷಕ್ಕೆ ಬರುತ್ತದೆ, ಎಷ್ಟು ಬೆಲೆ ಬರುತ್ತದೆ. ಅದಕ್ಕೆ ನೀವು ಏನು ಮಾಡಬೇಕು, ಅದರ ಬಗ್ಗೆ ತಮ್ಮ ಇಲಾಖೆಯಿಂದ ಪ್ರಚಾರ ಮಾಡುವಂಥಾದ್ದು ಮತ್ತು ಜನರಿಗೆ ಇದನ್ನು ತಿಳಿಸುವಂತಹ ಪ್ರಯತ್ನವನ್ನು ಮಾಡಬೇಕೆಂದು ತಿಳಿಸುತ್ತೇನೆ. ಇನ್ನು ನ್ಯಾಷನಲ್ ಹೈವೇ ಮತ್ತು ರಾಷ್ಟ್ರೀಯ ಹೆದ್ದಾರಿ ಇವುಗಳ ಪಕ್ಕದಲ್ಲಿ ನೀಲಗಿರಿ ಮರಗಳನ್ನು ತಾವು ಬೆಳೆಸುತ್ತಿದ್ದೀರಿ. ಈ ಗಿಡಗಳನ್ನು ಬೆಳೆಸುವಂಥಾದ್ದು ಸಮಂಜಸವಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೆ, ನಾನು ಇಲಾಖಾಧಿಕಾರಿಗಳಿಗೆ ರಸ್ತೆಗಳ ಬದಿಯಲ್ಲಿ ನೀಲಗಿರಿ ಮರಗಳನ್ನು ಬೆಳೆಸಬಾರದೆಂದು ಅದರ ಬದಲಾಗಿ ಹಣ್ಣಿನ ಗಿಡಗಳು ಮತ್ತು ಹುಣಿಸೆಮರಗಳನ್ನು ಬೆಳೆಸಬೇಕೆಂದು ಆದೇಶವನ್ನು ಕೊಟ್ಟಿದ್ದೇನೆ.

ಶ್ರೀ ಮಂಜುನಾಥ ಸಿ.ಕುನ್ನೂರು: ಮಾನ್ಯ ಅಧ್ಯಕ್ಷರೆ, ತಾವು ಆ ರೀತಿ ಆದೇಶವನ್ನು ಕೊಟ್ಟಿದ್ದಕ್ಕೆ ನನಗೆ ಸಂತೋಷವಾಗಿದೆ. ಹಿಂದಿನ ಸೆಕ್ರೆಟರಿಯಾಗಿದ್ದಂತಹ ಮಾನ್ಯ

ಹನುಮಂತಪ್ಪನವರು ಈ ವಿಚಾರವನ್ನು ಮಾನ್ಯ ಅರಣ್ಯಮಂತ್ರಿಯವರಿಗೆ ಹೇಳಬೇಕೆಂದು ಮೇಲಿಂದ ಮೇಲೆ ಹೇಳುತ್ತಿದ್ದರು. ಇದನ್ನು ಹೇಳುವಂತಾದ್ದೇ ಅಲ್ಲ, ಪ್ರಾಕ್ಟಿಕಲ್ಲಾಗಿ ಆಗಬೇಕೆಂದು ಆಗಿದೆ, ನಿಜವಾಗಿಯೂ ಸಂತೋಷದ ವಿಚಾರವಾಗಿದೆ. ಅಲ್ಲಿ ತಾವು ಆದೇಶ ಹೊರಡಿಸಿದಂತೆ ನೀಲಗಿರಿಯ ಗಿಡಗಳಿಗೆ ಬದಲಾಗಿ ಬೇವಿನಗಿಡಗಳು, ಮಾವಿನ ಗಿಡಗಳು, ಆಲದ ಗಿಡ,....

ಅಧ್ಯಕ್ಷರು: ಎಲ್ಲಾ ಮಾನ್ಯ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ತಮ್ಮತಮ್ಮಲ್ಲೇ ನಡೆಯುತ್ತಿರುವಂತಹ ಚರ್ಚೆ ಬಹಳ ಏರಿದ ಧ್ವನಿಯಲ್ಲಿ ನಡೆಯುತ್ತಿದೆ. ಇದರಿಂದ ಸಭೆಗೆ ಗೌರವವನ್ನು ತರುವುದಿಲ್ಲ. ನಾನು ಪದೇ ಪದೇ ಶಾಲೆಯಲ್ಲಿ ಹೇಳುವಂತಹ ರೀತಿಯಲ್ಲಿ ನಾನು ಹೇಳುವುದಕ್ಕೆ ತಾವುಗಳು ಅವಕಾಶ ಮಾಡಬೇಡಿ. ತಮ್ಮ ತಮ್ಮಲ್ಲೇ ಏನಾದರೂ ಚರ್ಚೆ ಮಾಡುವುದಾದರೆ ಮೆಲುಧ್ವನಿಯಲ್ಲಿ ಮಾಡಿ, ಅಥವಾ ತೀರಾ ಅಗತ್ಯವೆಂದರೆ ಹೊರಗಡೆ ಹೋಗಿ ಕಾಫಿಯನ್ನು ಕುಡಿದುಕೊಂಡು ಬನ್ನಿ. ದಯಮಾಡಿ ಸಭೆಯ ಕಲಾಪಕ್ಕೆ ಅಗೌರವವನ್ನು ಸೂಚಿಸುವುದು ಬೇಡ.

ಶ್ರೀ ಮಂಜುನಾಥ್ ಸಿ.ಕುನ್ನೂರು: ಮಾನ್ಯ ಅಧ್ಯಕ್ಷರೆ, ಬಸರಿಗಿಡ, ಆಲದಗಿಡ, ಅರಳೆಗಿಡ ಇಂತಹ ಗಿಡಗಳನ್ನು ರಸ್ತೆಗಳ ಬದಿಯಲ್ಲಿ ಹಾಕುವುದರಿಂದ ವಾಹನಗಳ ಸಂಚಾರಕ್ಕೂ ಕೂಡ ಅನುಕೂಲವಾಗುತ್ತದೆ. ಇದರಿಂದ ಒಳ್ಳೆಯ ಹವೆಯನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಆದುದರಿಂದ ಈ ರೀತಿಯಲ್ಲಿ ತಾವು ಕ್ರಮ ತೆಗೆದುಕೊಳ್ಳುವಂಥ ಅವಶ್ಯಕತೆ ಇದೆ. ಇನ್ನು ನೀಲಗಿರಿ ಗಿಡಗಳನ್ನು ರಸ್ತೆಗಳ ಬದಿಯಲ್ಲಿ ಬೆಳೆಯುವುದರ ಬದಲು ಮಾಲ್ಕಿ ಜಮೀನುಗಳಲ್ಲಿ ಅದರಲ್ಲೂ ಬಯಲುಸೀಮೆಗಳಲ್ಲಿ ಬೆಳೆಸುವಂಥಾದ್ದು ಪ್ರೋತ್ಸಾಹ ಕೊಡುವಂಥ ಅವಶ್ಯಕವಿದೆ ಎಂದು ಹೇಳುತ್ತೇನೆ. ವೈಜ್ಞಾನಿಕವಾಗಿ ಅಲ್ಲ ಗಿಡಗಳನ್ನು ಬೆಳೆದರೆ ನೀರಿನ ಪ್ರಮಾಣ ಕಡಿಮೆಯಾಗುತ್ತದೆಂಬ ಆರೋಪಗಳು ಊಹಾಪೋಹಗಳು ಇತ್ತು. ಆದರೆ ಈಗ ಆ ರೀತಿಯಾಗುವುದಿಲ್ಲವೆಂಬ ವಿಚಾರವಿರುವುದರಿಂದ ಬಯಲುಸೀಮೆಗಳಲ್ಲಿ ವಿಶೇಷವಾಗಿ ಒತ್ತು ಕೊಟ್ಟು ಇದರಿಂದ ರೈತರಿಗೆ ಅನುಕೂಲವಾಗುವ ಸ್ಥಿತಿಯಲ್ಲಿರುವುದರಿಂದ ಮತ್ತು ಇದು ಕಟ್ಟಿಗೆ, ಫ್ಯಾಕ್ಟರಿಗಳಿಗಾಗಲಿ ಎಲ್ಲಾ ದೃಷ್ಟಿಯಿಂದಲೂ ಅನುಕೂಲವಿರುವುದರಿಂದ ಅದಕ್ಕೆ ಉತ್ತೇಜನ ಕೊಡುವಂಥಾದ್ದು ಅವಶ್ಯಕವಿದೆ ಎಂದು ಹೇಳುತ್ತೇನೆ. ಇನ್ನು ಗಾರ್ಡ್‌ಗಳ ಬಗ್ಗೆ ಬಹಳಷ್ಟು ದಿವಸಗಳಿಂದ ಅಪಾಯಿಂಟ್‌ಮೆಂಟ್ ಮಾಡಿಕೊಂಡಿಲ್ಲ. ಇವರನ್ನು ನೇಮಕ ಮಾಡಿಕೊಳ್ಳದೇ ಇರುವುದರಿಂದ ಕಳ್ಳಸಾಗಾಣಿಕೆಗಳೂ ಕೂಡ ಹೆಚ್ಚಾಗಿದೆ. ಎಲ್ಲೆಲ್ಲಿಂದ ಯಾವ ರೀತಿಯಲ್ಲಿ ಹೋಗಬೇಕೆಂಬ ಬಗ್ಗೆ ತಮ್ಮದೇ ಆದಂತಹ ರೂಟ್‌ಗಳನ್ನು ಮಾಡಿಕೊಂಡು ಅರಣ್ಯಗಳಲ್ಲಿ ಕಳುವು ಮಾಡುತ್ತಿರುವಂತಹ ಅನೇಕ ದೂರುಗಳು ಇವೆ. ಇವತ್ತು ನಮ್ಮ ಮುನ್ಸಿ ಮತಕ್ಷೇತ್ರದಿಂದ ಸುಮಾರು 3-4ವರ್ಷಗಳಿಂದ ಶೇ.25ರಷ್ಟು ಅರಣ್ಯ ಪ್ರದೇಶಗಳು ಕಡಿಮೆಯಾಗಿದೆ, ಎಂದು ನೇರವಾಗಿ ಆರೋಪವನ್ನು ಮಾಡಿದರೂ ತಪ್ಪಾಗುವುದಿಲ್ಲ. ಅಲ್ಲಿನ ಅಧಿಕಾರಿಗಳಿಂದ

ಬೇರೆಯವರಿಂದ ಈ ವಿಚಾರವನ್ನು ತಿಳಿದುಕೊಂಡಿದ್ದೇವೆ. ಇದೇ ರೀತಿಯಲ್ಲಿ ರಾಜ್ಯದ ಇತರ ಭಾಗಗಳಲ್ಲೂ ಈ ರೀತಿಯಾಗಿ ನಡೆಯುತ್ತಿದೆ ಎನ್ನುವಂಥ ಘಟನೆಗಳನ್ನೂ ಸಹ ನಾವು ತಿಳಿದುಕೊಂಡಿದ್ದೇವೆ. ಹೀಗೆ ಕಳ್ಳಸಾಗಾಣಿಕೆಯಾಗುವಂತಹದ್ದು ತಡೆಯಬೇಕು. ಮತ್ತೆ ಆರ್.ಆಫ್.ಓ ಗಳಿಗೆ ಅದರಲ್ಲೂ ಸೋಷಿಯಲ್ ಫಾರೆಸ್ಟ್ ಆರ್.ಎಫ್.ಓ ಗಳದಲ್ಲ, ರೆಗ್ಯುಲರ್ ಆರ್.ಎಫ್.ಓಗಳು ಯಾರಿದ್ದಾರೆ ಅವರು ಹೆಚ್ಚು ಮಲೆನಾಡಿನ ಅರಣ್ಯಪ್ರದೇಶಗಳಲ್ಲಿ ಬರುವಂತಹ ಆರ್.ಎಫ್.ಓಗಳ ಅಂಕಿಸಂಖ್ಯೆಯನ್ನು ನೋಡಿದರೆ ಸುಮಾರು 125ರಿಂದ 150 ಮಂದಿಗಳು ಬರಬಹುದು. ಅವರಿಗೆ ವಾಹನಗಳನ್ನು, ಜೀಪ್‌ಗಳನ್ನು ಕೊಡುವಂತಹ ಪ್ರಯತ್ನ ಮಾಡಬೇಕು. ನೀವು ಅವರಿಗೆ ವಾಹನಗಳನ್ನು ಕೊಡದಿದ್ದರೆ ಅಲ್ಲಿ ಅವರಿಗೆ ಕಳ್ಳರನ್ನು ಹಿಡಿಯುವಂಥಾದ್ದಕ್ಕೆ ಆಗಲಿ ಅಥವಾ ಕಾಡನ್ನು ಸುತ್ತಿ ಬರುವಂಥಾದ್ದಕ್ಕೇ ಆಗಲಿ ಸಾಧ್ಯವಾಗುವುದಿಲ್ಲ. ಅವರಿಗೆ ಈ ವಾಹನಗಳ ಅವಶ್ಯಕತೆ ಇದೆ, ಇದನ್ನು ರಾಜ್ಯದ ಎಲ್ಲಾ ಆರ್.ಎಫ್.ಓಗಳಿಗೆ ಕೊಡುವಂತಹ ಅವಶ್ಯಕತೆ ಇದೆ. ತಾವು ಡಿ.ಎಫ್.ಓ ಮತ್ತೆ ಮೇಲಿನ ಅಧಿಕಾರಿಗಳಿಗೆ ಜೀಪ್‌ಗಳನ್ನು ಕೊಟ್ಟಿದ್ದೀರಿ. ಅಲ್ಲಿ ಮೇಲಿನ ಅಧಿಕಾರಿಗಳಿಗೆ ತಮ್ಮದೇ ಆದಂತಹ ರೀತಿಯ ವಾಹನಗಳ ವ್ಯವಸ್ಥೆ ಇದೆ. ನೀವು ಈ ಡಿ.ಎಫ್.ಓ.ಗಳಿಗೆ ಮತ್ತು ಮೇಲಿನ ಅಧಿಕಾರಿಗಳಿಗೆ ಜೀಪ್‌ಗಳನ್ನು ಕೊಡುವುದರಿಂದ ಅವರ ಕುಟುಂಬದವರಿಗೆ ಉಪಯೋಗ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆಯೇ ವಿನಃ ಆ ಜೀಪ್‌ಗಳು ಸಾರ್ವಜನಿಕರ ಹಿತದೃಷ್ಟಿಯಿಂದ ಕಾಡನ್ನು ರಕ್ಷಣೆ ಮಾಡುವಂತಹ ದೃಷ್ಟಿಯಲ್ಲಿ ಅದು ಉಪಯೋಗವಾಗುತ್ತಾ ಇಲ್ಲ. ಎಲ್ಲಿ ಅರಣ್ಯ ಪ್ರದೇಶ ಹೆಚ್ಚು ಇದೆ ಅಲ್ಲಿ ಆರ್.ಎಫ್.ಓಗಳಿಗೆ ಅದನ್ನು ಕೊಡುವಂತಹ ಪ್ರಯತ್ನವನ್ನು ತಾವು ಮಾಡಬೇಕು. ಅರಣ್ಯ ಪ್ರದೇಶಗಳಲ್ಲಿ ಒತ್ತುವರಿ ಮಾಡುವಂತಹ ವಿಚಾರದಲ್ಲೂ ಕೂಡ ತಾವು ನಿಗಾ ಇಟ್ಟು ನಮ್ಮ ಮತಕ್ಷೇತ್ರದಲ್ಲಿ ತಡಾಸ್ ಎಂಬ ಪ್ರದೇಶದಲ್ಲಿ ಸುಮಾರು ನೂರಕ್ಕೂ ಹೆಚ್ಚು ಅವರು ಕುಂತಿ ಕೊರವರ ಸಮಾಜಕ್ಕೆ ಸೇರಿದವರು ಒತ್ತುವರಿ ಮಾಡಿದರು. ಆ ಅರಣ್ಯ ಪ್ರದೇಶ ರಿಸರ್ವ್ ಫಾರೆಸ್ಟ್ ಕೂಡ ಅಲ್ಲ. ಮೊದಲು ಅದು ರೆವಿನ್ಯೂ ಇಲಾಖೆಯಲ್ಲಿತ್ತು, ನಂತರ ಅದನ್ನು ಫಾರೆಸ್ಟ್ ಇಲಾಖೆಗೆ ವರ್ಗಾಯಿಸಲಾಯಿತು ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಯಾವ ಪ್ರಕರಣಗಳಲ್ಲಿ ಅವರಿಗೆ ಭೂಮಿಯನ್ನು ಮಂಜೂರಾತಿಯನ್ನು ಮಾಡಿದ್ದಾರೋ, ಎಸ್.ಸಿ. ಜನಾಂಗಕ್ಕೆ ಸೇರಿದಂತಹ ಈ ಕುಂತಿ ಕೊರವರ ಜನಾಂಗಕ್ಕೆ ಆ ಜಮೀನನ್ನು ಕೊಡಿಸುವಂಥ ಕೆಲಸವನ್ನು ಮಾಡಬೇಕೆಂದು ಕೋರುತ್ತೇನೆ. ಇನ್ನು ನಮ್ಮ ಸರ್ಕಾರ ಇದ್ದಂತಹ ಕಾಲದಲ್ಲಿ ಅಂದರೆ 1993ನೇ ಇಸವಿಯಿಂದ ಈ ಅವಾರ್ಡ್‌ಗಳೆನ್ನು ಫಾರೆಸ್ಟರ್ಸ್ ಆಗಲಿ, ಗಾರ್ಡ್‌ಗಳಿಗಾಗಲಿ, ಅಥವಾ ಆರ್.ಎಫ್.ಓಗಳಿಗೆ ಗೋಲ್ಡ್ ಮೆಡಲ್‌ಗಳನ್ನು, ಸಿಲ್ವರ್ ಮೆಡಲ್‌ಗಳನ್ನು ಕೊಡುತ್ತಿದ್ದರು. ಅದನ್ನು ತಾವು ತೆಗೆದು ಹಾಕಿದ್ದೀರೆಂದು ಕೇಳಿದ್ದೇನೆ. ಅದಕ್ಕೆ ಬೇಕಾದಂತಹ ಹಣ ಏನೂ ಹೆಚ್ಚಾಗುವುದಿಲ್ಲ. ಈ ಅವಾರ್ಡ್‌ಗಳನ್ನು ಕೊಡುವಂಥಾದ್ದು ಅವಶ್ಯಕತೆ ಇದೆ. ಆ ಅಧಿಕಾರಿಗಳು ಮಾರಲಿ ಇನ್ನೂ ಹೆಚ್ಚು ಚುರುಕಾಗಿ ಕೆಲಸವನ್ನು ಮಾಡಲು ಸಾಧ್ಯವಾಗುತ್ತದೆ. ಆದುದರಿಂದ ಈ

ಅವಾರ್ಡ್ ಕೊಡುವಂತಹ ಕೆಲಸವನ್ನು ಮುಂದುವರೆಸಬೇಕೆಂದು ಹೇಳುತ್ತೇನೆ. ಇನ್ನು ಸಾಮಾನ್ಯ ಆಡಳಿತದ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗ ಈ ಆಡಳಿತ ಸುಧಾರಣೆಯಾಗಬೇಕಾದರೆ 1983ನೇ ಇಸವಿಯಿಂದ ಇಲ್ಲಿಯವರೆಗೆ ಈ ಶಾಸಕರುಗಳಿಂದ ಶಿಫಾರಸ್ಸು ಮಾಡುವಂತಹ ವ್ಯವಸ್ಥೆ ಏನು ಇದೆ, ಅದು ಹೋಗಬೇಕು. ಇದು ಎಲ್ಲಿಯವರೆಗೂ ಹೋಗುವುದಿಲ್ಲವೋ ಅಲ್ಲಿಯವರೆಗೂ ರಾಜ್ಯದ ಆಡಳಿತ ಸುಧಾರಣೆ ಸುಧಾರಿಸುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಘಂಟಾಘೋಷವಾಗಿ ಹೇಳುತ್ತೇನೆ. ಈ ವಿಷಯದಲ್ಲಿ ಆಡಳಿತ ಪಕ್ಷದ ಶಾಸಕರಿಗೆ ಒಂದು ರೀತಿಯಲ್ಲಿ, ವಿರೋಧಪಕ್ಷದ ಶಾಸಕರಿಗೆ ಒಂದು ರೀತಿಯಲ್ಲಿ ಮಾಡತಕ್ಕಂಥಾದ್ದು ಈ ರೀತಿ ಮಾಡದೇ ಯಾವುದೇ ಶಾಸಕರ ಮಾತನ್ನು ಗಣನೆಗೆ ತೆಗೆದುಕೊಳ್ಳಧೇ ಒಂದು ನೀತಿಯನ್ನು ತಯಾರು ಮಾಡಿ ಸರ್ಕಾರದ ಪಾಲಿಸಿಯನ್ನು ಒಂದು ನಿರ್ದಿಷ್ಟವಾದಂತಹ ಸರ್ಕಾರದ ಮಟ್ಟದಲ್ಲಿ ಯಾವುದೇ ಪಕ್ಷದವರಾಗಲಿ ಎಲ್ಲರನ್ನೂ ಒಳಗೊಂಡಂತೆ ಒಂದು ನಿರ್ಧಾರವನ್ನು ತೆಗೆದುಕೊಂಡದ್ದೇ ಆದರೆ ಈ ಆಡಳಿತ ವ್ಯವಸ್ಥೆ ಸರಿಯಾದಂತಹ ಮಾರ್ಗದಲ್ಲಿ ನಡೆಯುವುದಕ್ಕೆ ಸಾಧ್ಯವಾಗುತ್ತದೆನ್ನುವಂತಹ ಮಾತನ್ನು ತಾವು ತಿಳಿದುಕೊಳ್ಳಬೇಕಾಗುತ್ತದೆ, ಇಲ್ಲದಿದ್ದರೆ ಏಕಪಕ್ಷೀಯವಾಗಿ ಅದರಲ್ಲೂ ಮನ ಬಂದಂತೆ ಅಧಿಕಾರಿಗಳು ವರ್ತಿಸತಕ್ಕಂಥ ಅವಕಾಶಗಳು ಇದೆ. ಅದರಲ್ಲೂ ಬೆಂಗಳೂರಿನಲ್ಲಿ ಮೂರು ಶಾಸಕರುಗಳ ಹಿಂದೆ ಮುಂದೆ ಇರುತ್ತಾರೋ ಅಂಥವರಿಗೆ ಅಧಿಕಾರದ ಗದ್ದುಗೆ ಸಿಗುತ್ತದೆ. ಪ್ರಾಮಾಣಿಕವಾದಂಥ, ಉತ್ತಮವಾದಂಥ ಅನೇಕ ಅಧಿಕಾರಿಗಳು ಅವರು ಯಾರು ಬರುವುದಿಲ್ಲವೋ ಅವರು ಎಂತೆಂಥ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಪರಿಸ್ಥಿತಿ ಕೂಡ ಬರುತ್ತದೆ. ಆ ಕಾರಣ ಇದರ ಬಗ್ಗೆ ಇಂದು ನೀತಿಸಂಹಿತೆಯನ್ನು ತಾವು ಮಾಡಿ ಇದರ ಬಗ್ಗೆ ದೃಢವಾದಂಥ ನಿರ್ಧಾರ ಕೈಗೊಂಡರೆ ಮಾತ್ರ ಈ ರಾಜ್ಯದ ಒಂದು ಹಿತ, ಈ ರಾಜ್ಯದ ಒಂದು ಭವಿಷ್ಯ ನಮ್ಮ ಎಲ್ಲರ ಕೈಯಲ್ಲಿದೆ ಎನ್ನುವುದರ ಬಗ್ಗೆ ತಿಳಿದುಕೊಂಡು, ಅದನ್ನು ಹಸ್ತಕ್ಷೇಪ ಮಾಡದೆ ಇವತ್ತು ನೇರವಾಗಿ ಸರ್ಕಾರದಿಂದಲೇ ವರ್ಗಾವಣೆಯಾಗತಕ್ಕಂಥ ಕೆಲಸವನ್ನು ಮಾಡುವುದನ್ನು ತಾವು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಗೃಹ ಇಲಾಖೆಯಲ್ಲಿ ಆರಕ್ಷಕ ಸೇವೆಗಳ ಬಗ್ಗೆ ಒಂದೇ ಒಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇವತ್ತು ಈ ಇಲಾಖೆ ಬಹಳ ನಿಷ್ಠುರವಾಗಿ ಕೆಲಸ ಮಾಡಬೇಕಾಗಿದೆ. ಇವತ್ತು ಅನೇಕ ನಿರಪರಾಧಿಗಳು ಪೊಲೀಸ್ ಠಾಣೆಗೆ ಹೋಗಿ ಒಂದು ದೂರನ್ನು ಕೊಟ್ಟರೆ ಅಪರಾಧಿಗಳನ್ನು ಬಂಧಿಸುವುದರ ಬದಲಾಗಿ ನಿರಪರಾಧಿಗಳನ್ನು ಬಂಧಿಸಿ ಕಳುಹಿಸಿಕೊಡತಕ್ಕಂಥ ಒಂದು ವ್ಯವಸ್ಥೆ ಸ್ವಾತಂತ್ರ್ಯ ಸಿಕ್ಕಿ ಇಷ್ಟು ವರ್ಷಗಳಾದರೂ ಇವತ್ತಿನದಿವಸವೂ ಕೂಡ ನಾವು ಕಾಣುತ್ತಿದ್ದೇವೆಂದರೆ ಇದು ನಿಜಕ್ಕೂ ಬಹಳ ಖೇದವೆನಿಸುತ್ತದೆ. ಈ ವಿಷಯದಲ್ಲಿ ತಾವು ಯಾವ ವ್ಯಕ್ತಿ ಪೊಲೀಸ್ ಠಾಣೆಗೆ ಹೋಗುತ್ತಾನೆ ಅವರು ನೇರವಾಗಿ ಸಬ್‌ಇನ್‌ಸ್ಪೆಕ್ಟರ್‌ನ್ನು ಭೇಟಿಯಾಗುವುದಕ್ಕೆ ಮುಂಚಿತವಾಗಿಯೇ ಆ ಪೊಲೀಸ್ ಠಾಣೆಯಲ್ಲಿ ಒಂದು ಕೌಂಟರ್ ತೆರೆದು ಇವತ್ತು ಅವರ ದೂರನ್ನು, ಫಿರ್ಯಾದಿಯನ್ನು ದಾಖಲು ಮಾಡಿಕೊಂಡು ಆ

ಚೀಟಿಯನ್ನು ಪಡೆದುಕೊಂಡು ನಂತರ ಸಬ್‌ಇನ್‌ಸ್ಪೆಕ್ಟರ್ ಭೇಟಿಯಾಗುವ ಕೆಲಸವಾದರೆ ಅಲ್ಲಿ ಕೆಲಸವನ್ನು ಪೊಲೀಸ್ ಸಬ್ ಇನಸ್ಪೆಕ್ಟರ್ ಆಗಲಿ ಅಥವಾ ಅಲ್ಲಿರತಕ್ಕಂಥವರು ಕೆಲಸ ಮಾಡುತ್ತಾರೆಂದು ನಾವು ಹೇಳಬೇಕಾಗಿದೆ. ಇವತ್ತು ಅನೇಕ ಜನ ಪೊಲೀಸ್ ಠಾಣೆಗೆ ಹೋದರೆ ನಮಗೆ ಹೊಡೆಯುತ್ತಾರೋ, ಬಡಿಯುತ್ತಾರೋ ಅಥವಾ ಎಲ್ಲಿ ನಮ್ಮನ್ನು ಒಳಗೆ ಹಾಕುತ್ತಾರೋ ಎನ್ನುವ ಭಯಭೀತಿಯನ್ನು ಇವತ್ತೂ ಕೂಡ ಕಾಣುತ್ತಿದ್ದೇವೆ. ಕಾರಣ, ಇದನ್ನು ತಪ್ಪಿಸುವುದಕೋಸ್ಕರ ಇವತ್ತು ಜನರಿಗೆ ಪೊಲೀಸ್ ಠಾಣೆಯ ಮೇಲೆ ನಂಬಿಕೆ ವಿಶ್ವಾಸ ಮೂಡಬೇಕಾದರೆ, ನೀವು ಆ ಕೌಂಟರ್‌ಗಳನ್ನು ತೆರೆಯಲೇ ಬೇಕು, ಆ ಕೆಲಸವನ್ನು ಈ ವರ್ಷದಿಂದಲೇ ಕೂಡಲೇ ಜಾರಿಗೆ ತರಬೇಕೆಂದು ಒಂದು ಸಲಹೆಯನ್ನು ತಮಗೆ ಕೊಡುತ್ತೇನೆ. ಇನ್ನು ನಮ್ಮ ಮತಕ್ಷೇತ್ರದಲ್ಲಿ 10ನೇ ಕೆಆರ್‌ಪಿ ಬೇಟಾಲಿಯನ್ ಅನ್ನು ಮಂಜೂರು ಮಾಡಿದ್ದಾರೆ, ಅದರ ಅವಶ್ಯಕತೆ ಬಹಳ ಇದೆ. ಆ ಭಾಗದಲ್ಲಿ ಮೂರ್‍ನಾಲ್ಕು ಜಿಲ್ಲೆಗಳಲ್ಲಿ ಆ ಬೇಟಾಲಿಯನ್ ಇಲ್ಲದೇ ಇರುವುದರಿಂದ ಹಾಗೂ ಇವತ್ತು ನಮ್ಮ ಮತಕ್ಷೇತ್ರ ಸೂಕ್ಷ್ಮ ಮತಕ್ಷೇತ್ರವಾಗಿರುವುದರಿಂದ ಇದರ ಬಗ್ಗೆ ಈಗಾಗಲೇ ನೂರು ಎಕರೆ ಜಮೀನನ್ನೂ ಕೂಡ ಕೊಟ್ಟಿದ್ದೇವೆ, ಆ 10ನೇ ಕೆಆರ್‌ಪಿ ಬೇಟಾಲಿಯನ್ ಅನ್ನು ಕೂಡಲೇ ಪ್ರಾರಂಭ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಗೃಹಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ನಾನು ಇನ್ನು ಅನೇಕ ವಿಷಯಗಳ ಬಗ್ಗೆ ಮಾತನಾಡಬೇಕಾಗಿತ್ತು, ಆದರೂ ಕೂಡ, ಇವತ್ತು ನಾನು ಮಾತನಾಡುವುದಕ್ಕೆ ಸಮಯ ಸಿಗುತ್ತದೋ ಇಲ್ಲವೋ ಎಂದು ತಿಳಿದುಕೊಂಡಿದ್ದೆ, ಅಧ್ಯಕ್ಷರು, ಇವತ್ತು ನಮ್ಮ ಯುವಕರಿಗೆ ಬಹಳ ಉದಾರವಾಗಿ ಮಾತನಾಡಲು ಸಮಯ ಕೊಟ್ಟಿದ್ದಕ್ಕಾಗಿ ನಾನು ಅವರಿಗೆ ಹೃತ್ಪೂರ್ವಕವಾಗಿ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಸನ್ಮಾನ್ಯ ಅಧ್ಯಕ್ಷರೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸಹಕಾರಿ ಇಲಾಖೆಯ ಮೇಲೆ ಮಾತನಾಡುವುದಕ್ಕೆ ನಾನು ಬಯಸುತ್ತೇನೆ. ಇವತ್ತು ಈ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಭಾವನಾತ್ಮಕವಾದ ಸಂಬಂಧ ಸೇರಿಕೊಂಡು ನಾವೇನಾದರೂ ಮಾತನಾಡುವುದೇ ಕಷ್ಟ, ಕೇಳುವುದೇ ಕಷ್ಟ, ಅಲ್ಲಿ ಆಡಳಿತವನ್ನು ನಿಗ್ರಹ ಮಾಡುವುದೇ ಕಷ್ಟ ಎನ್ನುವ ಸ್ಥಿತಿ ನಿರ್ಮಾಣವಾಗಿಬಿಟ್ಟಿದೆ. ವಾಸ್ತವವಾಗಿ ಇವತ್ತು ಬಹಳ ಹಣ ಭಾರತ ದೇಶದಲ್ಲಿ ಹಾಗೂ ವಿಶ್ವಮಟ್ಟದಲ್ಲಿ ವೆಚ್ಚವಾಗುತ್ತಿರುವುದು ಈ ಇಲಾಖೆಯ ಕೆಳಗೆ. ತಮಗೆ ಗೊತ್ತಿರುವಂತೆ ಈ ಇಲಾಖೆಯಡಿಯಲ್ಲಿ ನಲವತ್ತು ಸಾವಿರ ಅಂಗನವಾಡಿಗಳು ಈ ರಾಜ್ಯದಲ್ಲಿದ್ದಾವೆ. ಅದರ ಜೊತೆಗೆ ಮಹಿಳಾ ಕಲ್ಯಾಣ ಹಾಗೂ ಶಿಶು ಕಲ್ಯಾಣಕ್ಕೆ ವಿಪುಲವಾಗಿ ಸರ್ಕಾರಿ ಹಣ, ಸ್ವಯಂಸೇವಾ ಸಂಸ್ಥೆಗಳ ಹಣ ಹಾಗೂ ವಿದೇಶದಿಂದಲೂ ಕೂಡ ಸಾಕಷ್ಟು ಹಣ ಇವತ್ತು ಬರುತ್ತಿದೆ. ಈ ಸ್ವಯಂಸೇವಾ ಸಂಸ್ಥೆಗಳು ಸ್ವಂತಸೇವಾ ಸಂಸ್ಥೆಗಳಾಗಿದ್ದಾವೆ, ಸ್ವಾಹಸೇವಾ ಸಂಸ್ಥೆಗಳಾಗಿದ್ದಾವೆ. ಇದರ ಬಗ್ಗೆ ನಾವು ಮಾತನಾಡಬೇಕೆಂದರೆ ಬಹುಶಃ ಇಲ್ಲಿ ಒಂದೆರಡು ಸಾರಿ ಸೂಕ್ಷ್ಮವಾಗಿ ಈ ಇಲಾಖೆಯಲ್ಲಿ

ಏನಾಗುತ್ತಿದೆ ಎಂದು ಮಾತನಾಡುವುದಕ್ಕೆ ಪ್ರಯತ್ನ ಮಾಡಿದ್ದೆವು. ಕನಿಷ್ಟ ಒಂದು ತಾಲ್ಲೂಕಿಗೆ 38, 39, 40 ಲಕ್ಷದಷ್ಟು ಹಣ ಪೂರಕ ಪೋಷಕ ಆಹಾರಕ್ಕೆಂದು ಬಿಡುಗಡೆಯಾಗುತ್ತದೆ, ಇದು ಎಲ್ಲಾ ಹಂತದಲ್ಲೂ ದುರುಪಯೋಗವಾಗುತ್ತಿದೆ. ಎನ್‌ಸಿಸಿಎಫ್, ಕೆಸಿಸಿಎಫ್, ಲ್ಯಾಂಫ್ಸ್ ಅಥವಾ ಮಹಿಳಾ ಸಂಘಗಳವತಿಯಿಂದ ಇದನ್ನು ವಿತರಣೆ ಮಾಡಬೇಕೆಂದು ನಿಯಮ ಮಾಡಿಕೊಂಡು ಇವತ್ತು ಎನ್‌ಸಿಸಿಎಫ್, ಕೆಸಿಸಿಎಫ್‌ನವರು ಮಧ್ಯ ಬಂದಾಗ ಇವರು ಅವರ ಜೊತೆ ಒಪ್ಪಂದ ಮಾಡಿಕೊಳ್ಳುವುದಿಲ್ಲ. ಇನ್ನಾವುದೋ ಟಿಎಪಿಎಂಎಸ್ ಗೋ ಅಥವಾ ಇನ್ನಾವುದೋ ಸಂಸ್ಥೆಗೆ ಈ ವ್ಯವಹಾರವನ್ನು ಕೊಟ್ಟಂತೆ ಕೊಟ್ಟು ಯಾರು ಬಲವಾಗಿರುತ್ತಾರೆ ಅವರು ಅಲ್ಲಿ ಬೇನಾಮಿಯಾಗಿ ಟ್ರೇಡ್ ಮಾಡುತ್ತಿದ್ದಾರೆ. ಸುಮಾರು ಶೇಕಡ 15ರಿಂದ 20, 30ರಷ್ಟು ಹಣ ಅಲ್ಲಿ ಹೋಗುತ್ತದೆ, ಇದೆಲ್ಲವನ್ನೂ ಸರ್ಕಾರ ಭರಿಸಬೇಕಾಗಿದೆ. ಇವತ್ತು ಯಾರು ವರ್ತಕನಿದ್ದಾನೆ ಅವನಿಗೆ ನೀವು ಕರೆದು ನೇರವಾಗಿ ಟೆಂಡರ್ ಮಾಡಿದ್ದರೆ, ಇವನನ್ನೇ ಕರೆದು ಸರಬರಾಜು ಮಾಡುವುದು ಎಂದು ಹೇಳಿದ್ದರೆ, ಬಹುಶಃ ಇವರಿಗೆ ಕೊಡುವ ಕಮಿಷನ್ ಆದರೂ ನಮಗೆ ಉಳಿಯುತ್ತಿತ್ತು. ಇದು ಮಹಿಳೆಯರು ಹಾಗೂ ಮಕ್ಕಳ ಹೆಸರಿನಲ್ಲಿ ಈ ರಾಜ್ಯದಲ್ಲಿ ನಡೆಯುತ್ತಿರುವ ಹಣ ದುರುಪಯೋಗವಿದು. ಇವರು ಎಲ್ಲಿಯವರೆಗೆ ಬಂದಿದ್ದಾರೆಂದರೆ, ನನ್ನ ಮತಕ್ಷೇತ್ರದಲ್ಲಿ ತುಮಕೂರಿನ ಒಂದು ಕೆಡಿಪಿ ಸಭೆಯಲ್ಲಿ ನಾನು ಕೇಳಿದೆ. ಸ್ವಶಕ್ತಿ ಎಂದು ಒಂದು ಕಾರ್ಯಕ್ರಮ ಮಾಡಿದ್ದಾರೆ. ಮಹಿಳೆಯರ ಜೀವನ ಸುಧಾರಣೆ ಮಾಡುವುದಕ್ಕೆ, ಅವರಿಗೆ ಯಾರಾದರೂ ಸ್ವಯಂಸೇವಾ ಸಂಘಗಳು ತರಬೇತಿ ಕೊಡಬೇಕಾಗುತ್ತದೆ, ಅದಕ್ಕೊಂದು ಸಂಸ್ಥೆ ಇಟ್ಟುಕೊಂಡಿರುವವರು, ಕಸಬಿನ ಬಗ್ಗೆ ತರಬೇತಿ ಕೊಡಬೇಕೆಂದು ಆ ಕಾರ್ಯಕ್ರಮ ಮಾಡಿದ್ದಾರೆ. ಇಡೀ ಜಿಲ್ಲೆಯಲ್ಲಿ ಯಾರೂ ಇಲ್ಲ, ನಾಲ್ಕರಿಂದ ಐದು ಜನಕ್ಕೆ ಒಂದರಿಂದ ಐದು ಲಕ್ಷ ರೂಪಾಯಿವರೆಗೆ ಸರ್ಕಾರಿ ಹಣವನ್ನು ಕೊಟ್ಟು ಕುಳಿತು ಬಿಟ್ಟಿದ್ದಾರೆ, ಇದನ್ನು ಯಾವ ಮಾನದಂಡದ ಮೇಲೆ ಕೊಟ್ಟರು ಎನ್ನುವುದು ಗೊತ್ತಿಲ್ಲ. ಇದರಿಂದ ಒಂದಷ್ಟು ಜನರಿಗೆ ಉದ್ಯೋಗವಾಗಿಬಿಟ್ಟಿದೆ. ನಾನು ಸ್ವಶಕ್ತಿಯಲ್ಲಿ ಹಣ ತೆಗೆದುಕೊಳ್ಳುತ್ತೇನೆ, ಬಡ ಮಕ್ಕಳಿಗೆ, ರಸ್ತೆ ಪಕ್ಕದಲ್ಲಿರುವ ಮಕ್ಕಳಿಗೆ ರಾತ್ರಿ ಆಶ್ರಯ ಕೊಡುವುದಕ್ಕೆ ಹಣತೆಗೆದುಕೊಳ್ಳುತ್ತೇನೆ, ನಾನು ಇಂತಿಂಥ ಕಾರ್ಯಕ್ರಮಗಳನ್ನು ಮಾಡುತ್ತೇನೆಂದು ಸೊಸೈಟಿಗಳನ್ನು, ಸಂಘಗಳನ್ನು ರಿಜಿಸ್ಟರ್ ಮಾಡಿಸುವುದು, ಇವರು ಮುಂದೆ ಬಂದು ಅರ್ಜಿ ಕೊಡುವುದು, ಇವರು ಏನು ಮಾಡುವುದೆಂದರೆ, ಇವರು ಅವರು ಸೇರಿಕೊಂಡು ಅವನಿಗೆ ಕೊಟ್ಟಂತೆ ಮಾಡುವುದು ಇವನು ಇಟ್ಟುಕೊಂಡಂತೆ ಮಾಡುವುದು. ಇವತ್ತು ಹದಿನೇಳು ಲಕ್ಷ ರೂಪಾಯಿಗಳನ್ನು ಏನು ತಾವು ಸ್ವಶಕ್ತಿ ಕಾರ್ಯಕ್ರಮದಲ್ಲಿ ಖರ್ಚು ಮಾಡಿದ್ದೀರಿ, ಇದರಲ್ಲಿ ಶೇಕಡ 10ರಷ್ಟು ಹಣವೇನಾದರೂ ಈ ರಾಜ್ಯದಲ್ಲಿ ಉಪಯೋಗವಾಗಿದೆಯಾ ಎಂದು ಕೇಳುತ್ತೇನೆ. ಯಾರ್‍ಯಾರಿಗೆ ಸ್ವಶಕ್ತಿ ಕಾರ್ಯಕ್ರಮದಡಿ ಅವನಿಗೆ ತರಬೇತಿ ಕೊಡುವುದಕ್ಕೆ ಅವನಿಗೆ ಶಕ್ತಿ ಇದೆ ಅವನು ಅರ್ಹ ವ್ಯಕ್ತಿ ಎಂದು ನೀವು ಏನು ಗುರ್ತು ಮಾಡಿದ್ದೀರಿ, ಅದಕ್ಕೆ ತಾವು ಏನು ಸ್ಟಾಂಡರ್ಡ್ ನಿಗದಿ ಮಾಡಿದ್ದೀರೆಂದು

ಕೇಳುತ್ತೇನೆ. ಯಾರು ಬೇಕಾದರೂ ಅವರು ಮಾಡಿಕೊಳ್ಳಬಹುದು, ನಾನೊಂದು ಸಂಘ ಮಾಡಿದ್ದೇನೆ ನಾನು ಈ ತರಬೇತಿಯನ್ನು ಕೊಡುತ್ತೇನೆಂದು ಯಾರೋ ರಾಜಕೀಯದಲ್ಲಿ ಪ್ರಭಾವವಿರುವವರನ್ನು ಹಿಡಿದುಕೊಂಡು ಇಲ್ಲಿ ಬಂದು ಕುಳಿತುಕೊಂಡು ಇವರು ಅರ್ಜಿ ಹಾಕಿದರೆ, ನೇರವಾಗಿ ತಾಲ್ಲೂಕು ಮಟ್ಟದಲ್ಲೂ ಕೇಳುವುದಿಲ್ಲ, ಜಿಲ್ಲಾ ಮಟ್ಟದಲ್ಲೂ ಕೇಳುವುದಿಲ್ಲ, ಇಲ್ಲಿ ಕುಳಿತುಕೊಂಡು ರಾಜ್ಯಮಟ್ಟದಲ್ಲಿ ಅಂಥವರಿಗೆ ಇವತ್ತು ಆ ವ್ಯವಸ್ಥೆಯನ್ನು ಮಾಡಿ ಸರ್ಕಾರಿ ಹಣವನ್ನು ನೇರವಾಗಿ ಕೊಡುತ್ತಿದ್ದಾರೆ. ಇಂಥ ಕಾರ್ಯಕ್ರಮಗಳನ್ನು ಎಲ್ಲಿಯವರೆಗೆ ಮಾಡಿಕೊಂಡು ಹೋಗುತ್ತೀರೆಂದು ಕೇಳಿದರೆ, ಇದನ್ನು ನಾವ್ಯಾರೂ ಪರಿಹಾರ ಮಾಡುವ ಮಟ್ಟದಲ್ಲಿ ಇಲ್ಲವೆನ್ನುವ ಸ್ಥಿತಿಗೆ, ಬಂದುಬಿಟ್ಟಿದ್ದಾರೆ. ಅವರೇ ಬಂದು ಒಂದು ಎಸ್‌ಕ್ವೈರಿ ಮಾಡಿದರು, ಅವರು ಹುಡಿಕಿಕೊಂಡು ಹೋದರು, ಈಗ ಒಂದು, ಎರಡು ಮೂರು, ನಾವೆಲ್ಲಾ ಇಲ್ಲಿ ರೈಸ್ ಮಾಡಿದ್ದೇವೆ, ಕೇಳುತ್ತೇವೆಂದು ಗೊತ್ತಾದಾಗ ಟೈಲರಿಂಗ್ ಮೆಷಿನ್, ಇತ್ಯಾದಿ, ಒಂದು ಬೋರ್ಡ್ ತಗುಲಿಹಾಕಿ ಬಿಟ್ಟು ಇಲ್ಲೊಂದು ಸಂಘ ಇತ್ತು ಸಂಸ್ಥೆ ಇತ್ತು ಎಂದು ತೋರಿಸುತ್ತಾರೆ. ಅದು ಎಷ್ಟು ವರ್ಷದಿಂದ ನಡೆಯುತ್ತಿತ್ತು, ಯಾರು ನಡೆಸುತ್ತಿದ್ದರು, ಅವನಿಗಿರುವ ಅನುಭವವೇನು, ಅಲ್ಲಿರುವ ಶಿಕ್ಷಕರ್ಯಾರು, ಅಲ್ಲಿ ಕಲಿಯುವವರಾರು ಎನ್ನುವ ಮಾಹಿತಿ ಏನಾದರೂ ಈ ಸರ್ಕಾರಕ್ಕೆ ಇದೆಯಾ? ಕೇಳಿದವರಿಗೆ ಹಣ ಕೊಟ್ಟು ಕುಳಿತುಕೊಂಡುಬಿಡುವುದು. ರಾಜ್ಯಮಟ್ಟದಲ್ಲಿ, ಎಲ್ಲಾ ಬೆಂಗಳೂರಿನಲ್ಲಿರುವ ಬುದ್ಧಿವಂತ ಮಹಿಳೆಯರನ್ನು ಇಟ್ಟುಕೊಂಡು ಗ್ರಾಮೀಣ ಪ್ರದೇಶದ ಸುಧಾರಣೆ ಮಾಡುವುದಕ್ಕೆ ಒಂದು ಸಲಹಾ ಸಮಿತಿಯನ್ನು ಮಾಡಿಕೊಂಡಿದ್ದಾರೆ. ಇದು ಯಾವ ಉದ್ದೇಶದ ಸಲುವಾಗಿ ಎನ್ನುವುದನ್ನು ಹೇಳುವುದಕ್ಕೆ ನಾನು ಬಯಸುವುದಿಲ್ಲ. ಏಕೆಂದರೆ, ನಾನು ಹೇಳಿದಂತೆ, ಇದಕ್ಕೆ ಭಾವನಾತ್ಮಕವಾದ ಅಟಾಚ್‌ಮೆಂಟ್ ಬಂದು ಯಾರಾದರು ಹೆಚ್ಚಿಗೆ ಮಾತನಾಡುತ್ತೇವೆಂದರೆ ಅದು ನನಗೇ ಪ್ರಿವಿಲೇಜ್ ಆಗುತ್ತಿದೆ, ಅದನ್ನು ಹೇಳಬೇಕಾ ಬೇಡವೇ, ಹೇಳಬಹುದಾ, ಬೇಡವೇಎಂದು. ಇದರಿಂದ ಮಹಿಳೆಯರನ್ನು ಪಾರು ಮಾಡಬೇಕಾಗಿದೆ. ತಾವೇನು ಅವರ ಹೆಸರನ್ನು ಹೇಳಿಬಿಟ್ಟಿದ್ದೀರಿ, ಅದರಿಂದ ಪಾರಾಗಬೇಕಾಗಿದೆ. ಇವರು ಪೂರಕ ಪೌಷ್ಟಿಕ ಆಹಾರದಲ್ಲಿ 300ರಿಂದ 350 ಕ್ಯಾಲರಿ ಶಕ್ತಿ ನೀಡುವಂಥ 10ರಿಂದ 12 ಗ್ರಾಂ ಪ್ರೋಟೀನ್ ನೀಡುವಂಥ 3ರಿಂದ 4 ಗ್ರಾಂ ಖನಿಜ ಮತ್ತು ಕೊಬ್ಬು ಅಥವಾ ವಿಟಮಿನ್ ನೀಡುವಂಥ ಆಹಾರವನ್ನು ಒಂದು ದಿವಸಕ್ಕೆ ಒಂದು ಮಗುವಿಗೆ ಕೊಡಬೇಕಾಗಿದೆ ಎಂದು ಹೇಳುತ್ತಾರೆ; ಅದನ್ನು ಎಷ್ಟರಲ್ಲಿ ಎಂದರೆ ಒಂದು ರೂಪಾಯಿಯ ಖರ್ಚಿನಲ್ಲಿ ಕೊಡಬೇಕು. ಬೆಳಿಗ್ಗೆಯಿಂದ ಸಂಜೆಯವರೆಗೆ, ಬೆಳಿಗ್ಗೆ 10.00 ಗಂಟೆಗೆ ಕುಳ್ಳಿರಿಸಿಕೊಂಡರೆ 1.00 ಗಂಟೆಯವರೆಗೆ ಒಂದು ರೂಪಾಯಿ ವೆಚ್ಚದಲ್ಲಿ ಇವರು ಇದನ್ನು ಕೊಡಬೇಕಾಗುತ್ತದೆ. ಕೊಡುತ್ತಿರುವ ಆಹಾರವೇನು ಎಂದು ತಮಗೆ ಗೊತ್ತು, ಇದು ಆರು ದಿವಸದ ಕಾರ್ಯಕ್ರಮ. ಒಂದು ದಿವಸ ಶಕ್ತಿಯುತ ಆಹಾರ, ಆರ್‌ಟಿ ಎನ್ನುತ್ತಾರೆ, ಮೂರು ದಿವಸ ಕರ್ನಾಟಕ ಆಗ್ರೋ ಕಾರ್ನ್‌ರವರು ತಯಾರಿಸಿರುವ ಪ್ರೋಟೀನಸ್ ಫುಡ್ ಎಂದು ಹೇಳುತ್ತಾರೆ. ಆ ಆಗ್ರೋ ಕಾರ್ನ್‌ಗೆ ಅದನ್ನೆಲ್ಲಾ ತಯಾರು

ಮಾಡುವುದಕ್ಕೆ ಸೌಲಭ್ಯವಿದೆಯಾ, ಸಾಮರ್ಥ್ಯವಿದೆಯಾ ಎಂದು ಅವರೇ ಯೋಚನೆ ಮಾಡಬೇಕಾಗುತ್ತದೆ: It is basically a unit to process maize; ಮೇಜ್ ಅನ್ನು ಪ್ರೋಸೆಸ್ ಮಾಡುವುದಕ್ಕೆ ಮೇಜ್‌ನಿಂದ ಸೋಜಿ ಮಾಡುವುದಕ್ಕೆ ಮಾಡಿದಂಥ ಪ್ಲಾಂಟ್, ನೀವು ಗೋಧಿನಲ್ಲಿ ರವೆ ಮಾಡುವುದಕ್ಕೇ ಬರುವುದಿಲ್ಲ. ಅವರು ಮಾಡಿದ ಪದಾರ್ಥವನ್ನು ಕೊಡುತ್ತೇವೆಂದು ಹೇಳುತ್ತಾರೆ, ಇವರು ಸಿಎಫ್‌ಟಿಆರ್‌ಐ ಫಾರ್ಮುಲ ಏತಕ್ಕೆ ತೆಗೆದುಕೊಳ್ಳಲಿಲ್ಲವೆಂಬುದು ನನಗೆ ಗೊತ್ತಾಗಲಿಲ್ಲ. ಮೊದಲು ಈ ಸಿಎಫ್ ಟಿಆರ್‌ಐ ಫಾರ್ಮುಲದ ಮೇಲೆ ಮಕ್ಕಳಿಗೆ ಒಂದಿಷ್ಟು ತಂಬಿಟ್ಟು ಇತ್ಯಾದಿ ಮಾಡಿಸಿ ಕೊಡುತ್ತಿದ್ದರು, ಮೂರರಿಂದ ಆರು ವರ್ಷದ ಮಕ್ಕಳು ಶಾಲೆಗೆ ಹೋಗುವವರು ಅಷ್ಟೋ ಇಷ್ಟೋ ತಿನ್ನುತ್ತಿದ್ದವು. ಇವತ್ತು ಏನು ಮಾಡಿದ್ದಾರೆಂದರೆ, ಈ ಡೀಲರ್ಸ್ ಇವರ ನಡುವೆ ಒಂದು ಒಪ್ಪಂದವಾಯಿತು. ಗೋಧಿ ಸಿಗುವುದಿಲ್ಲ, ರವೆ ಸಿಗುವುದಿಲ್ಲ, ಇಲ್ಲಿ ರಾಜ್ಯದಮಟ್ಟದಲ್ಲಿ ಮೂರ್‍ನಾಲ್ಕು ಅಧಿಕಾರಿಗಳ ನಡುವೆ ಗೊಂದಲ ಸೃಷ್ಟಿಯಾಗಿಬಿಟ್ಟಿದೆ, ಆ ಧಾರಣೆಯಲ್ಲಿ ತೆಗೆದುಕೊಂಡಿದ್ದು ತಪ್ಪು, ಈ ಸಹಕಾರ ಸಂಘದಲ್ಲಿ ಏತಕ್ಕೆ ತೆಗೆದುಕೊಳ್ಳಲಿಲ್ಲವೆಂದು ಒಬ್ಬರು ಹೇಳುವುದು, ಇಲ್ಲ ಸಹಕಾರ ಸಂಘಕ್ಕಿಂತ ಕಡಿಮೆ ಧಾರಣೆಯಲ್ಲಿ ನ್ಯಾಯಬೆಲೆ ಅಂಗಡಿಯ ಮುಖಾಂತರ ಸರಬರಾಜು ಮಾಡಲು ಭಾರತ ಸರ್ಕಾರ ಒಪ್ಪಿತ್ತು. ನೀವು ಅಲ್ಲಿ ತೆಗೆದುಕೊಳ್ಳಿ ಎಂದು ಒಬ್ಬರು ಹೇಳುವುದು, 9 ರೂಪಾಯಿ 60 ಪೈಸೆ ಒಂದು ಕೆ.ಜಿ.ಗೋಧಿಗೆ ಏತಕ್ಕೆ ಕೊಟ್ಟಿರಿ, 6 ರೂಪಾಯಿ 30 ಪೈಸೆಗೆ ಕೆ.ಜಿ.ಗೋಧಿ ಸಿಗುತ್ತಿತ್ತು ಎಂದು ವಾದ ಒಂದು ಕಡೆಯಾದರೆ, ಇನ್ನೊಂದು ಕಡೆ, ಇಲ್ಲ, ನಾವು ಎನ್‌ಸಿಸಿಎಫ್‌ನಲ್ಲೇ ನಾವು ಕೊಳ್ಳಬೇಕಾಗಿತ್ತು. ಇಲ್ಲಿ ಕೊಂಡದ್ದು ಏತಕ್ಕೆ ಎಂದು ಒಂದು ವಾದ. ನ್ಯಾಯಬೆಲೆ ಅಂಗಡಿಗಳಿಂದ ಅಕ್ಕಿ ಬರುತ್ತದೆ, ಬಿಲ್ ಮಾತ್ರ ಸೋನಮಸೂರಿ ಅಕ್ಕಿಗೆ ಮಾಡುತ್ತಿದ್ದಾರೆ. 1995-96ನೇ ಸಾಲಿನಲ್ಲಿ 10 ರೂಪಾಯಿ 90ಪೈಸೆ ಯಿಂದ 11 ರೂಪಾಯಿವರೆಗೆ ಒಂದು ಕೆ.ಜಿ.ಅಕ್ಕಿಗೆ ಬಿಲ್ ಮಾಡಿದ್ದಾರೆ. ಕಡಲೆಕಾಯಿ ಎಣ್ಣೆ ಬಿಲ್ ವಾಸ್ತವವಾಗಿ ಏನಿತ್ತೋ ಅದಕ್ಕಿಂತ ನಾಲ್ಕು ರೂಪಾಯಿ ಜಾಸ್ತಿ ಬಿಲ್ ಆಗುತ್ತದೆ. ಏನೇನು ಪದಾರ್ಥಗಳಿಗೆ ಬಿಲ್ ಆಗಿದೆ ಎನ್ನುವುದನ್ನು ತಾವು ತೆಗೆದು ನೋಡಿದರೆ ನಾವು ಮಾತನಾಡುವುದೇ ಬೇಕಾಗಿಲ್ಲ, ಯಾರಿಗೆ ಎಷ್ಟು ಬೇಕೋ ಅಷ್ಟು, ಒಪ್ಪಂದವಲ್ಲಾ. ಯಾರನ್ನೋ ಅಧಿಕಾರಿ ಕರೆಯುತ್ತಾರೆ, ಯಾರೋ ಕೆಸಿಸಿಎಫ್ ಪ್ರತಿನಿಧಿ, ಎನ್‌ಸಿಸಿಎಫ್ ಪ್ರತಿನಿಧಿ ಎಂದು ಕುಳ್ಳಿರಿಸಿಕೊಳ್ಳುವುದು, ಆತ ಒಂದು ರೇಟ್ ಕೋಟ್ ಮಾಡುವುದು, ಏತಕ್ಕೆ ಮಾಡುತ್ತಿರೆಂದು ಯಾರೂ ಪ್ರಶ್ನೆ ಮಾಡುವಂತಿಲ್ಲ, ಏಕೆಂದರೆ, ಅವರಿಗೆ ರಾಷ್ಟ್ರೀಯ ಕನ್ಸೂಮರ್ ಕೋ ಆಪರೇಟಿವ್ ಫಡರೇಷನ್ ಅಟ್ಯಾಚ್ ಆಗಿದೆ, ಅವರನ್ನು ಪ್ರಶ್ನೆ ಮಾಡಿಬಿಟ್ಟರೆ ನಮಗೇನು ಆಗುತ್ತದೆಯೋ ಎಂದು ತಿಳಿದುಕೊಂಡು ಅವರು ಹೇಳಿದ ಧಾರಣೆಗಳನ್ನೇ ನಿಗಧಿ ಮಾಡಿಬಿಟ್ಟು

11.20 ಪಿ.ಎಂ

ಇವತ್ತು ಎಷ್ಟುಹಣ ಇಲ್ಲಿ ಲೂಟಿ ಮಾಡಿದ್ದಾರೆ ಎಂದರೆ, ಆ ಬಗ್ಗೆ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ಕಮಿಟಿಯವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ತುಮಕೂರು ಮತ್ತು ಮೈಸೂರಿನಲ್ಲಿ ಹೇರಳವಾಗಿ ಇದರಲ್ಲಿ ಹಣ ದುರುಪಯೋಗವಾಗಿದೆ, ಆಹಾರಕ್ಕೆ ಕೊಡಬೇಕಾದ ಹಣದಲ್ಲಿ ಗೊಂಬೆ ಕೊಂಡಿದ್ದಾರೆ, ಆಹಾರಕ್ಕೆ ಕೊಡಬೇಕಾದ ಹಣದಲ್ಲಿ ಕುಡಿಯುವ ನೀರಿಗೆ ವ್ಯವಸ್ಥೆ ಕಲ್ಪಿಸಲು ವೆಚ್ಚ ಮಾಡಲಾಗಿದೆ, ಆಹಾರಕ್ಕೆ ಕೊಡಬೇಕಾದ ಹಣದಲ್ಲಿ ಕಟ್ಟಡ ಕಟ್ಟಲಾಗಿದೆ, ಇದನ್ನೆಲ್ಲಾ ತನಿಖೆ ಮ್ಾಡಿ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಿ ಎಂದು ಸಮಿತಿಯವರು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿದ್ದಾರೆ. ಆದರೆ ಆ ಬಗ್ಗೆ ಇವತ್ತಿನವರೆಗೂ ಸರ್ಕಾರ ಏನೂ ಕ್ರಮ ಕೈಗೊಂಡಿಲ್ಲ. ಇವತ್ತಿನವರೆಗೆ ಸರ್ಕಾರದವರು ಆ ವರದಿಯನ್ನು ತೆಗೆದು ಓದುವ ಕೃಪೆಯನ್ನೇ ಮಾಡಿಲ್ಲ. ಮಾನ್ಯ ಶಾಣಪ್ಪನವರ ಅಧ್ಯಕ್ಷತೆಯ ಒಂದು ಕಮಿಟಿ ಮತ್ತು ಶ್ರೀಮತಿ ಪ್ರಮೀಳಾ ನೇಸರ್ಗಿಯವರ ಅಧ್ಯಕ್ಷತೆಯ ಇನ್ನೊಂದು ಕಮಿಟಿಯವರು ಯಾರ್‍ಯಾರು ಇದರಲ್ಲಿ ಎಷ್ಟೆಷ್ಟು ಹಣ ಮಾಡಿದ್ದಾರೆ? ಇವರನೆಲ್ಲಾ ಏನೇನು ಮಾಡಿದ್ದೀರಿ ಎಂಬ ಬಗ್ಗೆ ತಮ್ಮ ಸಮಿತಿಯ ವರದಿಗಳಲ್ಲಿ ಹೇಳಿದ್ದಾರೆ. ಆದರೆ ಸರ್ಕಾರ ಆ ಸಮಿತಿ ವರದಿಗಳನ್ನು ತೆಗೆದು ಓದುವುದೇ ಇಲ್ಲ, ಹಾಗಾದರೆ ಈ ಸಮಿತಿಗಳು ಏಕೆ ಬೇಕು? ವರದಿಯಲ್ಲಿ ಮೈಸೂರು ಮತ್ತು ತುಮಕೂರಿನಲ್ಲಿ ಇದೊಂದು ದೊಡ್ಡ ಹಗರಣವಾಗಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ 25 ಕೋಟಿ ರೂ.ಗಳು ಲೂಟಿಯಾಗಿದೆ ಎಂದು 'ಕನ್ನಡ ಪ್ರಭ' ಪತ್ರಿಕೆಯಲ್ಲಿ ಬಂದಂತಹ ವರ್ತದಿಯನ್ನು ಕೋಟ್ ಮಾಡಿ ವರದಿ ಕೊಟ್ಟಿದ್ದಾರೆ. ಅದನ್ನು ನೋಡುವವರೇ ದಿಕ್ಕಿಲ್ಲ. ಈ ಮಧ್ಯೆ ಏನಾಗಿದೆ ಎಂದರೆ, ನಾವೆಲ್ಲಾ ಈ ಬಗ್ಗೆ ಕೇಳುತ್ತೇವೆ ಎಂದು ಆರ್ಟಿಫಿಷಿಯಲ್ ಇಂಟರಫ್ಶನ್ ಆಗುತ್ತಿದೆ. ಮಕ್ಕಳಿಗೆ ವಾರ ಅಥವಾ 15 ದಿವಸಗಳ ಕಾಲ ಆಹಾರ ಧಾನ್ಯವನ್ನೇ ಇಲ್ಲದಂತೆ ಮಾಡಲಾಗುತ್ತಿದೆ. ಶಾಸಕರಾದ ನಾವು ಆಗ ಏನು ಮಾಡಬೇಕು? ಯಾವುದೋ ಒಂದು ಫುಡ್ ಆ ಹುಡುಗರಿಗೆ ಕೊಡಿ ಎಂದು ಹೇಳಬೇಕಾಗುತ್ತದೆ. ಆಗ ಒಂದು ಅಡ್‌ಹಾಕ್ ಅರೇಂಜ್‌ಮೆಂಟ್ ಮಾಡುತ್ತೇವೆ ಎನ್ನುವುದು, ಯಾರೋ ಅಧಿಕಾರದಲ್ಲಿರುವವರು ಕುಳಿತುಕೊಂಡು ಯಾರಿಗೋ ಒಬ್ಬರಿಗೆ ಆರ್ಡರ್ ಕೊಟ್ಟಂತೆ ಮಾಡುವುದು; ಇದು ಸರಿಯಾದ ವ್ಯವಸ್ಥೆ ಆಗಲೇ ಇಲ್ಲ. ನೀವು ಫೀಡಿಂಗ್ ಪ್ಯಾಟ್ರನ್ ಏಕೆ ಚೇಂಜ್ ಮಾಡಿದಿರಿ? ನೀವು ಗೋಧಿ ಕೊಡುತ್ತಿದ್ದುದನ್ನು ಏಕೆ ಬಿಡಿಸಿದಿರಿ? ನೀವು ತಂಬಿಟ್ಟು ಕೊಡುತ್ತಿದ್ದುದು ಏಕೆ ಬಿಟ್ಟಿರಿ? ವಾರದಲ್ಲಿ ಆರೂ ದಿವಸ ಒಂದೇ ಆಹಾರ ಏಕೆ ಕೊಟ್ಟಿರಿ ಎಂದರೆ ಇವತ್ತಿನವರೆಗೂ ಈ ಇಲಾಖೆ ಮೇಲೆ ಕ್ರಮ ಜರುಗಿಸುವವರೇ ಇಲ್ಲ. ಮೇಲಿನಿಂದ ಕೆಳಗಿನವರೆಗೂ ಕೂಡ ಹೆಣ್ಣುಮಕ್ಕಳನ್ನೇ ಇದರ ಆಡಳಿತವನ್ನು ನೋಡಿಕೊಳ್ಳಲಿಕ್ಕೆಂದು ಬಿಟ್ಟು ಬಿಟ್ಟಿದ್ದಾರೆ. ನಾನು ಅವರು ಅಸಮರ್ಥರು ಎಂದು ಹೇಳುತ್ತಿಲ್ಲ. ಆದರೆ ಇಲ್ಲಿ ಒಂದು ಇಲಾಖೆ ನಡೆಯಬೇಕಾಗಿದೆ, ಸರ್ಕಾರ ನಡೆಯಬೇಕಾಗಿದೆ, ಆಡಳಿತ ಬಿಗಿಯಾಗಬೇಕಾಗಿದೆ. ಕೋಟ್ಯಾಂತರ ರೂ.ಗಳ

ಹಣವನ್ನು ತಾವು ಈ ಇಲಾಖೆ ಕೆಳಗಡೆ ವಿನಿಯೋಗಿಸುತ್ತಿದ್ದೀರಿ. ಸೋಷಿಯಲ್ ವೆಲ್‌ಫೇರ್‌ನಿಂದ ವುಮನ್ ಡೆವಲಪ್‌ಮೆಂಟ್‌ವರೆಗಿನ ಎಲ್ಲಾ ಹೆಡ್‌ಗಳ ಹಣವನ್ನು ತೆಗೆದುಕೊಂಡು ಬಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ನೀವು ಡೈವರ್ಟ್ ಮಾಡಿಕೊಂಡಿರುತ್ತೀರಿ. ಈ ಇಲಾಖೆಯಲ್ಲಿ ಸುಮಾರು 30-40 ಸ್ಕೀಮ್‌ಗಳನ್ನು ಲಾಂಚ್ ಮಾಡಿಕೊಳ್ಳಲಾಗಿದೆ. ಇವುಗಳನ್ನೆಲ್ಲಾ ಮಾನಿಟರ್ ಮಾಡುವವರು ಯಾರು? ಈ ಇಲಾಖೆಗೆಂದೇ ಪ್ರತ್ಯೇಕವಾದ ಸಚಿವಾಲಯ ಸೃಷ್ಟಿಸಲಾಯಿತು. ಆದರೆ ಅಲ್ಲಿ ಏನಾಗಿದೆ ಎಂದರೆ, ತಾಲ್ಲೂಕು ಮಟ್ಟದಲ್ಲಿ 11 ಸೂಪರ್‌ವೈಸರ್‌ಗಳು ಇರಬೇಕಾದ ಕಡೆ ಒಬ್ಬೊಬ್ಬರು ಸೂಪರ್‌ವೈಸರ್‌ಗಳಿದ್ದಾರೆ. ಅಸಿಸ್ಟೆಂಟ್ ಸಿ.ಡಿ.ಪಿ.ಓ.ಗಳಂತೂ ಪತ್ತೆಯೇ ಇಲ್ಲ. ಇವರ ಕಛೇರಿ ನಡೆಯುವ ಕಡೆ, ಸುಮಾರು 200-300 ಸೆಂಟರ್‌ಗಳು ಇರುವ ಕಡೆ ಒಬ್ಬ ಸಿ.ಡಿ.ಪಿ.ಓ. ಜೊತೆಗೆ ಒಬ್ಬೊಬ್ಬರು ಅಥವಾ ಇಬ್ಬರು ಸೂಪರ್‌ವೈಸರ್‌ಗಳು ಇರುತ್ತಾರೆ. ಇವರು ದಿವಸಕ್ಕೆ ಇಷ್ಟು ಅಂಗನವಾಡಿಯನ್ನು ನೋಡಿಕೊಂಡು ಬನ್ನಿ ಎಂದು ಹೇಳಬೇಕು, ಅವರು ಹೋಗಿ ನೋಡಿಕೊಂಡು ಬಂದು ಇವರಿಗೆ ವರದಿ ಸಲ್ಲಿಸಬೇಕು. ಇಷ್ಟೆಲ್ಲಾ ಯಾರು ಮಾಡುತ್ತಾರೆ? ಅವರು ತಾನೇ ಹೇಗೆ ನೋಡಲು ಸಾಧ್ಯ? ನನ್ನ ತಾಲ್ಲೂಕಿನ ಉದಾಹರಣೆಯನ್ನೇ ಕೊಡುವುದಾದರೆ, 11 ಜನ ಸೂಪರ್‌ವೈಸರ್ ಹುದ್ದೆಗಳು ಮಂಜೂರಾಗಿರುವ ಕಡೆ ಕೇವಲ ಒಬ್ಬರು ಸೂಪರ್‌ವೈಸರ್ ಮಾತ್ರ ಅಲ್ಲಿದ್ದಾರೆ. ಇಡೀ ಅಂಗನವಾಡಿ ಸೂಪರ್‌ವೈಸರ್‌ಗಳ ಪೈಕಿ ಒಬ್ಬರೇ ಒಬ್ಬರು ಅಲ್ಲಿರುವುದು. ಅದೇರೀತಿ 2-3 ಅಸಿಸ್ಟೆಂಟ್ ಸಿ.ಡಿ.ಪಿ.ಓ.ಗಳು ಇರಬೇಕೆಂದು ತಾವು ತಮ್ಮ ಪ್ಯಾಟ್ರನ್‌ನಲ್ಲಿ ಹೇಳಿದ್ದೀರಿ, ಅವರಲ್ಲಿ ಒಬ್ಬ ಅಸಿಸ್ಟೆಂಟ್ ಸಿ.ಡಿ.ಪಿ.ಓ.ಇದ್ದಾರೆಂದರೆ ಅದೇ ನಮಗೆ ಇವತ್ತು ಭಾರಿ ಪುಣ್ಯ. ನಿಮ್ಮ ಅಂಗನವಾಡಿ ಸಿ.ಡಿ.ಪಿ.ಓ.ಕಥೆಯೇನು? ಆತ ತಿಂಗಳಿಗೆ 15-16 ಮೀಟಿಂಗ್‌ಗಳನ್ನು ಅಟೆಂಡ್ ಮಾಡಬೇಕಾಗುತ್ತದೆ. ಇಮ್ಯುನೈಸೇಷನ್ ಮೀಟಿಂಗ್ ಡಾಕ್ಟರುಗಳ ಹತ್ತಿರ ಮೀಟಿಂಗ್, ಇ.ಓ. ಹತ್ತಿರ ಮೀಟಿಂಗ್, ಜಿಲ್ಲಾ ಪರಿಷತ್ತಿನಲ್ಲಿ 4 ಮೀಟಿಂಗ್, ಫುಡ್ ಡಿಸ್ಟ್ರಿಬ್ಯೂಷನ್ ಬಗ್ಗೆ ಮೀಟಿಂಗ್ ಹೀಗೆ ಸಿ.ಡಿ.ಪಿ.ಓ. ಹಲವಾರು ಮೀಟಿಂಗ್‌ಗಳನ್ನು ಅಟೆಂಡ್ ಮಾಡಬೇಕಾಗುತ್ತದೆ. ಇವತ್ತು ಸಿ.ಡಿ.ಪಿ.ಓ. ಕೆಲಸ ಮಾಡುವ ಸ್ಟೇಜ್‌ನಲ್ಲಿ ಇಲ್ಲ. ಆ ಸಿ.ಡಿ.ಪಿ.ಓ.ಗೆ ಯಾರಾದರೂ ಅಸಿಸ್ಟ್ ಮಾಡಬೇಕಾದವರು ಇದ್ದಿದ್ದರೆ ಬಹುಶಃ ಇವತ್ತು ಸ್ವಲ್ಪ ಮಟ್ಟಿಗೆ ಸೂಪರ್‌ವೈಸ್ ಮಾಡಬಹುದಾಗಿತ್ತು. ಎಷ್ಟೋ ಅಂಗನವಾಡಿ ಶಿಕ್ಷಕಿಯರು ಇವತ್ತು ಅಂಗನವಾಡಿಗೆ ಹೋಗುವುದೇ ಇಲ್ಲ. ಇನ್ನೊಂದು ಕಥೆ ಏನಾಗಿದೆ ಎಂದರೆ, 30 ಜನಕ್ಕಿಂತ ಹೆಚ್ಚಿನ ಸ್ಟ್ರೆಂತ್ ಅನ್ನು ಅಂಗನವಾಡಿಯಲ್ಲಿ ಇವತ್ತು ತೋರಿಸಬೇಕಾಗಿದೆ. ಇಷ್ಟೆ ಸಂಖ್ಯೆಯಲ್ಲಿ ಇರಬೇಕು ಎಂದು ನೀವ್ಯಾಕೆ ಇವತ್ತು ಇಂಪೋಸ್ ಮಾಡಿದ್ದೀರಿ? 10-15 ಸ್ಟ್ರೆಂತ್ ಇರುವವರೆಲ್ಲಾ 30 ಜನಕ್ಕೆ ಅಟೆಂಡೆನ್ಸ್ ಕೊಡುತ್ತಾರೆ. ಒಂದು ಕಡೆ ಅಟೆಂಡೆನ್ಸ್ ತಪ್ಪು ಕೊಡುತ್ತಾರೆ, ಇನ್ನೊಂದು ಅಷ್ಟು ಹೆಚ್ಚುವರಿ ತೋರಿಸಿದ ಜನಕ್ಕೆ ಆಹಾರ ಪದಾರ್ಥಗಳನ್ನು ಬಳಸಿದ್ದೇವೆ ಎಂದು ತೋರಿಸುತ್ತಾರೆ. ನಾವು ಬರೆಯುವುದು, ಪಾಪ ಅವರಿಗೆ 450-500 ರೂ. ಸಿಗುವ

ಕಾರ್ಯಕರ್ತರಿಗೆ ನೀನು ರವೆ ತೆಗೆದುಕೊಂಡು ಹೋದೆಯಾ? ಬೆಲ್ಲ ತೆಗೆದುಕೊಂಡು ಹೋದೆಯಾ? ಅಕ್ಕಿ ತೆಗೆದುಕೊಂಡು ಹೋದೆಯಾ ಎಂದು ರಿವ್ಯೂ ಮಾಡುವಂತಹ ಪರಿಸ್ಥಿತಿ ನಿರ್ಮಾಣ ಮಾಡಿದ್ದೀರಿ. ಎಷ್ಟು ಜನ ಬರುತ್ತಾರೋ ಅಷ್ಟು ಜನರ ಬಗ್ಗೆ ಮಾತ್ರ ಅಕೌಂಟ್ಸ್ ಕೊಡಲಿಕ್ಕೆ ಹೇಳಿ. ಉಳಿಕೆ ಎಷ್ಟಾಗಿದೆಯೋ ಅದನ್ನು ತಂದು ತೋರಿಸಲಿಕ್ಕೆ ಹೇಳಿ. ಆ ಅಂಗನವಾಡಿ ಸೆಂಟರ್‌ಗೆ ಇಷ್ಟು ಫುಡ್ ಕೊಡಬೇಕೆಂದರೆ ಅಷ್ಟೆ ತೆಗೆದುಕೊಂಡು ಹೋಗಬೇಕು ಎನ್ನುವ ನಿಯಮೇನೂ ಇಲ್ಲ. ಅಂತಹ ನಿಯಮ ಮಾಡುವಂತಹ ಅಗತ್ಯ ಕೂಡ ಇಲ್ಲ. ಈ ರೀತಿಯಲ್ಲಿ ಅಲ್ಲಿ ಎಲ್ಲಾ ತರಹದಲ್ಲಿ ದುರುಪಯೋಗವಾಗುತ್ತಿದೆ. ಇವತ್ತು ಅಲ್ಲಿ ಕಾರ್ಯಕರ್ತರಾಗಬೇಕೆಂದರೆ ಅವರಿಗೆ ಎರಡು ರೀತಿಯ ಆಕರ್ಷಣೆ ಇದೆ. ಫ್ರೀಯಾಗಿ ಫುಡ್ ಗ್ರೈನ್ಸ್ ಸಿಗುತ್ತದೆ ಎನ್ನುವುದೊಂದು ಆಕರ್ಷಣೆ, ಇನ್ನೊಂದು ಆಕರ್ಷಣೆ ಏನು ಅಂದರೆ ಇವತ್ತಲ್ಲ ನಾಳೆ ನಾವು ಖಾಯಂ ಆಗುತ್ತೇವೆ ಎಂಬುದು. ನೀವು ಇವತ್ತು ಇವರನ್ನು ಖಾಯಂ ಮಾಡುವಂತಹ ಸ್ಥಿತಿಯಲ್ಲಿ ಇಲ್ಲ. ಆದರೂ ಕೂಡ ಇವತ್ತಲ್ಲಾ ನಾಳೆ ನಮಗೆ ಖಾಯಂ ಮಾಡುತ್ತಾರೆ ಎಂದು ಅವರು ನಿಮ್ಮನ್ನು ನಂಬಿಕೊಂಡಿದ್ದಾರೆ. ಸುಮಾರು 40ಸಾವಿರ ಜನ ಇಂತಹ ಕಾರ್ಯಕರ್ತರು ಇವತ್ತು ಕರ್ನಾಟಕದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಏನಾದರೂ ನಾಳೆ ನೀವು ಗ್ಯಾರಂಟಿ ಒದಗಿಸಿದ್ದೀರಾ? ಇವರನ್ನು ಏನಾದರೂ ಪ್ರಾವಿಡೆಂಟ್ ಫಂಡ್ ಯೋಜನೆ ಅಡಿಯಲ್ಲಿ ತಂದಿದ್ದೀರಾ? ಇವರನ್ನು ಏನಾದರೂ ತಾವು ಗ್ರೂಪ್ ಇನ್‌ಶೂರೆನ್ಸ್ ಕಾರ್ಯಕ್ರಮದ ವ್ಯಾಪ್ತಿಗೆ ತರುತ್ತೀರಾ? 40 ಸಾವಿರ ಕಾರ್ಯಕರ್ತರು, 40 ಸಾವಿರ ಸಹಾಯಕರು ಹೀಗೆ ಒಟ್ಟು 80 ಸಾವಿರ ಜನರಿರುವ ಸೆಕ್ಟಾರ್ ಇದು. ಅವರಿಗೇನಾದರೂ ರಕ್ಷಣೆ ಒದಗಿಸುವುದು ನಿಮ್ಮ ಸರ್ಕಾರದ ಜವಾಬ್ದಾರಿ ಅಲ್ಲವೇ? ಅವರನ್ನು ಯಾವುದಾದರೂ ಸ್ಕೀಮ್ ಕೆಳಗಡೆ ತಾವು ತೆಗೆದುಕೊಂಡು ಬರುತ್ತೀರಾ? ಪ್ರಾವಿಡೆಂಟ್ ಫಂಡ್‌ನವರು ಒಂದು ಸ್ಕೀಮ್ ಅನ್ನು ಜಾರಿಗೆ ತಂದಿದ್ದಾರೆ. ನೀವು ಇವತ್ತು ಪ್ರಾವಿಡೆಂಟ್ ಫಂಡ್‌ಗೆ ಹಣ ಕಟ್ಟಿಕೊಂಡು ಹೋದರೆ ಆಮೇಲೆ ಅವರು ಫ್ರೀಯಾಗಿ ಇನ್‌ಶೂರೆನ್ಸ್ ಕೊಡುತ್ತಾರೆ, ಫ್ರೀಯಾಗಿ ಪೆನ್‌ಷನ್ ಕೊಡುತ್ತಾರೆ. ಅವರು ಆ ಫ್ರೀ ಪೆನ್‌ಷನ್‌ಗಾದರೂ ಅವೈಲಬಲ್ ಆಗಬೇಕು ಅಂತಂದರೆ ಎಷ್ಟು ವರ್ಷಗಳು ನೀವು ಪ್ರಾವಿಡೆಂಟ ಫಂಡ್‌ಗೆ ಕಾಂಟ್ರಿಬ್ಯೂಟ್ ಮಾಡುತ್ತೀರಿ ಎಂದು ಕೇಳುತ್ತಾರೆ. ಆದುದರಿಂದ ದಯಮಾಡಿ ಅವರನ್ನು ಪ್ರಾವಿಡೆಂಟ್ ಫಂಡ್ ವ್ಯಾಪ್ತಿಗೆ ತನ್ನಿ. ಆ ಸೆಕ್ಟಾರ್ ಅನ್ನು ಇಂತಹ ಕಾರ್ಯಕ್ರಮದೊಳಗೆ ತರಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ನಾನು ಸ್ಪಷ್ಟವಾಗಿ ಸರ್ಕಾರವನ್ನು ಕೇಳಬಯಸುತ್ತೇನೆ, ಈ ಫುಡ್ ಅಲಾಟ್‌ಮೆಂಟ್ ಕಾಂಟ್ರಾಕ್ಟ್‌ನಲ್ಲಿ ಆಗಿರುವ ಸ್ಕ್ಯಾಂಡಲ್ ಬಗ್ಗೆ ತಾವು ಏನು ಕ್ರಮ ಜರುಗಿಸಿದ್ದೀರಿ, ಈ ಬಗ್ಗೆ ಮೇಲ್ಮನೆಯಲ್ಲಿ ಸನ್ಮಾನ್ಯ ಉಗ್ರಪ್ಪನವರ ಅಧ್ಯಕ್ಷತೆಯ ಸಮಿತಿ ವರದಿ ಕೊಟ್ಟಿದ್ದಾರೆ, ಕೆಳಮನೆಯಲ್ಲಿ ಶ್ರೀಮತಿ ಪ್ರಮೀಳಾ ನೇಸರ್ಗಿ ನೇತೃತ್ವದ ಸಮಿತಿಯವರು ಒಂದು ವರದಿ ಕೊಟ್ಟಿದ್ದಾರೆ. ಇದರ ಮೇಲೆ ತಾವು ಏನಾದರೂ ಕ್ರಮ ಜರುಗಿಸಿದ್ದೀರಾ? ಕ್ರಮ ಜರುಗಿಸಲಿಕ್ಕೆ ನಿಮಗೆ ಇರತಕ್ಕ

ತೊಂದರೆಯೇನು? ಏತಕ್ಕಾಗಿ ಈ ಸರ್ಕಾರ ಆ ಕಡೆಗೆ ಆಲೋಚನೆ ಮಾಡುತ್ತಿಲ್ಲ. ಕೋಟ್ಯಾಂತರ ರೂಪಾಯಿ ಹಗಲು ದರೋಡೆ ನಡೆದುಕೊಂಡು ಹೋದರೂ ಕೇಳುವುದೂ ಇಲ್ಲ, ಹೇಳುವುದೂ ಇಲ್ಲ, ನಾವು ಹೀಗೇ ಇರುತ್ತೇವೆ, ಹೀಗೇ ಹೋಗುತ್ತೇವೆ, ಮಹಿಳಾ ಮತ್ತು ಮಕ್ಕಳು ಎಂದರೆ ದೇವರಿಗೆ ಸಮ, ಇದು ಚೆನ್ನಾಗಿ ನಡೆದುಕೊಂಡು ಹೋಗುತ್ತಿದೆ, ದೇವರು ಏನೂ ತಪ್ಪು ಮಾಡುವುದಿಲ್ಲ ಎನ್ನುವಂತಹ ಸ್ಥಿತಿಯನ್ನು ಏಕೆ ನಿರ್ಮಾಣ ಮಾಡಿದ್ದೀರಿ? ಇದೊಂದು ಇಲಾಖೆ ಆಡಳಿತದ ಕೆಳಗಡೆಯೇ ನಡೆಯಬೇಕಾಗಿದೆ. ದಯಮಾಡಿ ಇಲಾಖೆಯನ್ನು ತಾವು ಆಡಳಿತದ ಕೆಳಗಡೆ ತರಬೇಕು. ಕೋ-ಆಪರೇಟಿವ್ ಸೊಸೈಟೀಸ್‌ಗೆ ಕೊಡಬೇಕು, ಮಹಿಳಾ ಸೊಸೈಟಿಗೆ ಕೊಡಬೇಕು, ಲ್ಯಾಂಪ್ಸ್‌ಗೆ ಕೊಡಬೇಕು ಎಂದು ಹೇಳುತ್ತಿದ್ದೀರಿ. ಇದರಲ್ಲಿ ಏನು ತಪ್ಪು ಎಂಬುದು ನನಗೆ ಗೊತ್ತಿಲ್ಲ. ವ್ಯಾವಹಾರಿಕವಾಗಿ ನಾವು ಮಾತನಾಡುವುದರಲ್ಲಿ ಏನು ತಪ್ಪು? ನಿಮ್ಮ ಸೊಸೈಟಿಯವರು ಕೊಡುವುದಕ್ಕಿಂತ ಉತ್ತಮ ಮಟ್ಟದ ಆಹಾರ ಧಾನ್ಯವನ್ನು ನಿಮಗೆ ಒಬ್ಬ ವ್ಯಕ್ತಿ ನಾನು ಸರಬರಾಜು ಮಾಡುತ್ತೇನೆ ಎಂದರೆ, ನಾಲ್ಕು ಜನರ ಮಧ್ಯೆ ಒಂದು ಸ್ಪರ್ಧೆ ಸೃಷ್ಟಿಯಾಗಿ, ಒಳ್ಳೆಯ ಆಹಾರ ಸರಬರಾಜು ಮಾಡುತ್ತೇವೆ ಅಂದರೆ, ಟೆಂಡರ್ ಕರೆದು ನೆಗೋಷಿಯೇಟ್ ಮಾಡಿ ಅಂತಹವನಿಗೇ ವಹಿಸುವುದರಲ್ಲಿ ಏನು ತಪ್ಪು? ಇದಕ್ಕ್ಯಾಕೆ ನಾವು ಸ್ಯಾನ್‌ಕ್ಟಿಟಿಯನ್ನು ಅಟ್ಯಾಚ್ ಮಾಡಿಕೊಂಡು ಕುಳಿತಿದ್ದೇವೆ ಎಂಬುದು ನನಗೆ ಅರ್ಥ ವಾಗುತ್ತಿಲ್ಲ. ಇವತ್ತು ಸರಿ ಸುಮಾರು 90 ಸಹಕಾರಿ ಸಂಘಗಳು ತಮಗೇನು ಸಪ್ಲೈ ಮಾಡುತ್ತಿವೆಯೋ, ಅವೆಲ್ಲವೂ ಏಜೆಂಟರುಗಳ ಮೂಲಕವೇ ಸಪ್ಲೈ ಮಾಡುತ್ತಿದ್ದಾರೆ. ಅವರ್ಯಾರೂ ಸಂಘದಿಂದ ಮಾಡುತ್ತಿಲ್ಲ. ಅವರು 3-7 ಪರ್ಸೆಂಟ್ ಕಮೀಷನ್ ತೆಗೆದುಕೊಳ್ಳುತ್ತಾರೆ. ನಾವೆಲ್ಲಾ ಹೋರಾಟ ಮಾಡಿ ಅದಕ್ಕೆ ಕೊಡಿ, ಇದಕ್ಕೆ ಕೊಡಿ ಅಂದೆವು. ಈಗ ತಿರುಗಿಕೊಂಡು ನೋಡುವುದರೊಳಗೆ ಅವರಿಗೆ ಇನ್‌ಫ್ರಾಸ್ಟ್ರಕ್ಚರ್ರೇ ಇಲ್ಲ, ಅವರ ಹತ್ತಿರ ಹಣ ಇಲ್ಲ; ಒಂದು ವರ್ಷಕ್ಕೆ 30-40 ಲಕ್ಷ ರೂ. ಕ್ಯಾಪಿಟಲ್ ಇವತ್ತು ಇದಕ್ಕೆ ಬೇಕಾಗಿದೆ. ತಾವು 3-6 ತಿಂಗಳು, ಮಾರ್ಚ್ ಎಂಡ್‌ವರೆಗೆ ಬಿಲ್ ಹಣ ಪಾವತಿಸುವುದಿಲ್ಲ. ಅಷ್ಟನ್ನು ತಡೆದುಕೊಳ್ಳಲಿಕ್ಕೆ ಇವುಗಳಿಗೆ ಶಕ್ತಿಯಿಲ್ಲ. ಅಕಸ್ಮಾತ್ ಆಹಾರ ಧಾನ್ಯ ಕೊಟ್ಟರೂ ಅವರ ಹತ್ತಿರ ವಿತರಣೆ ಮಾಡಲಿಕ್ಕೆ ವಾಹನಗಳಿಲ್ಲ, ಅವರ ಹತ್ತಿರ ವ್ಯಕ್ತಿಗಳಿಲ್ಲ, ಸಿಬ್ಬಂದಿಗಳಿಲ್ಲ. ಅಂಗನವಾಡಿ ಸೆಂಟರ್‌ಗೆ ಹೋಗಿ ಪ್ಯಾಕ್ ಮಾಡಿ, ಒಂದೊಂದು ಅಂಗನವಾಡಿಗೆ ಇಷ್ಟು ಇಳಿಸಬೇಕು ಅನ್ನುವುದಕ್ಕೆ, ಬರೀ ಎಮರ್ಜೆನ್ಸಿಗೆ, ಯಾವುದಾದರೂ ತುರ್ತು ಕಾರ್ಯಕ್ರಮಕ್ಕೆ ನೀವು ಟೆಂಡರ್ ಕರೆಯುವುದಕ್ಕಾಗುವುದಿಲ್ಲ, ಕೊಳ್ಳುವುದಕ್ಕಾಗುವುದಿಲ್ಲ, ಮತ್ತೊಂದು ಮಾಡುವುದಕ್ಕಾಗುವುದಿಲ್ಲ ಅಂದಾಗ, ಕೆ.ಸಿ.ಸಿ.ಎಫ್.ನಲ್ಲಿ ಕೊಳ್ಳಿ, ಜನತಾ ಬಜಾರ್‌ನಲ್ಲಿ ಕೊಳ್ಳಿ, ಕೋ-ಆಪರೇಟಿವ್ ಸೊಸೈಟಿಯಲ್ಲಿ ಕೊಳ್ಳಿ ಅಂತ ನಾವು ಕೇಳಿದ್ದೆವು. ನೀವು ವರ್ಷದ ವ್ಯವಹಾರ ಮಾಡುವಾಗ, ಕುಳಿತುಕೊಂಡು ಏಕೆ ನೀವು ನೆಗೋಷಿಯೇಟ್ ಮಾಡುವುದಿಲ್ಲ, ಏಕೆ ಕ್ವಾಲಿಟಿ ಸ್ಪೆಸಿಫೈ ಮಾಡುವುದಿಲ್ಲ, ಕ್ವಾನ್‌ಟಿಟಿ ಸ್ಪೆಸ್ಪಿಫೈ ಮಾಡಿ ಟೆಂಡರ್ ಕರೆಯುತ್ತಿಲ್ಲ,

ಬಿಡ್ ಮಾಡಲಿಕ್ಕೆ ಕೊಡುತ್ತಿಲ್ಲ ಎಂಬುದು ನನಗೆ ಅರ್ಥವಾಗುತ್ತಿಲ್ಲ. ದಯಮಾಡಿ ಆ ಕಡೆ ಸನ್ಮಾನ್ಯ ಸಚಿವರು ಯೋಚನೆ ಮಾಡಬೇಕು. ಇವತ್ತು ನಮ್ಮನ್ನು ಎರಡು ಶಾಪಗಳಿಂದ ಪಾರು ಮಾಡಬೇಕು. ನಿಮ್ಮನ್ನು ನಂಬಿಕೊಂಡು ನಮ್ಮ ಮಕ್ಕಳನ್ನು ಅಂಗನವಾಡಿಗೆ ಕಳುಹಿಸುತ್ತಿದ್ದೇವೆ. ನಮ್ಮನೆಯಲ್ಲಿಯಾದರೂ ನಾವು ತಿಂಡಿ ಕೊಡುತ್ತಿದ್ದೆವು, ಬಡವರೋ, ಸಾಹುಕಾರರೋ, ದೇವರು ಕೊಟ್ಟಿದ್ದರಲ್ಲಿ ಒಂದು ಚೂರು ಹಂಚಿಕೊಡುತ್ತಿದ್ದೆವು, ನೀವು ಪ್ರತಿ ದಿವಸ ಬೆಳಗಿನಿಂದ ಸಾಯಂಕಾಲದವರೆಗೂ ಚಿತ್ರಾನ್ನವನ್ನೇ ಕೊಟ್ಟುಕೊಂಡು ಕುಳಿತುಕೊಂಡು ಬಿಟ್ಟರೆ ಆ ಮಕ್ಕಳ ಗತಿ ಏನು? ಬೇಕಾದರೆ ತಾವು ಇದರ ಬಗ್ಗೆ ರಿಪೋರ್ಟ್ ತರಿಸಿ. ತುಮಕೂರು ಜಿಲ್ಲೆಯಲ್ಲಿ ಒಂದು ವರ್ಷದಿಂದ ರೈಸ್ ಪ್ರೋಗ್ರಾಮ್ ಬಿಟ್ಟು ಮತ್ತೇನನ್ನೂ ಕವರ್ ಮಾಡಿಲ್ಲ; ಖಂಡಿತಾ ಮಾಡಿಲ್ಲ. ನಾನಿಲ್ಲಿ ಹುಡುಗಾಟಕ್ಕೆ ಇಲ್ಲಿ ನಿಂತು ಮಾತನಾಡುತ್ತಿಲ್ಲ. ತುಮಕೂರು ಅಂಗನವಾಡಿಗಳಲ್ಲಿ ಕಳೆದ ಒಂದು ವರ್ಷದಿಂದ ಬರೀ ಚಿತ್ರಾನ್ನ ಬಿಟ್ಟು ಬೇರೇನನ್ನೂ ಕೊಟ್ಟಿಲ್ಲ. ಕೊಡುವವರು ಯಾರು? ಆ ಕಡೆ ಫೇರ್ ಪ್ರೈಸ್ ಡಿಪೋ ಇಟ್ಟುಕೊಂಡು ಈ ಕಡೆಗೆ ಅಂಗನವಾಡಿಗೆ ಫುಡ್ ಸಪ್ಲೈ ಮಾಡುವುದು, 3.90 ಅಥವಾ 5 ರೂ.ಗೆ ಅಕ್ಕಿ ತೆಗೆದುಕೊಂಡು ಈ ಕಡೆ ಅದನ್ನೇ 10ರಿಂದ 10.30 ರೂ.ವರೆಗೆ ಮಾರುತ್ತಿರುವ ಜನ ಇವತ್ತು ಅಲ್ಲಿದ್ದಾರೆ. ಸೊಸೈಟಿ ರೈಸ್ ಅನ್ನೇ ಇವತ್ತು ಅಲ್ಲಿಗೆ ಕೊಡುತ್ತಿದ್ದಾರೆ. ಸೋನಾ ಮಸೂರಿ ಅಕ್ಕಿಯನ್ನೇನೂ ನಮ್ಮ ಹುಡುಗರು ಅಲ್ಲಿ ತಿಂದಿಲ್ಲ. ಆದರೆ ದಾಖಲೆಗಳಲ್ಲಿ ಮಾತ್ರ 10 ರೂ.ಯಿಂದ 12 ರೂ.ಬೆಲೆಯ ಸೋನಾ ಮಸೂರಿ ಅಕ್ಕಿಯನ್ನೇ ಸಪ್ಲೈ ಮಾಡಲಾಗುತ್ತಿದೆ ಎಂದು ಬರೆಯುತ್ತಾರೆ. ದಯಮಾಡಿ ತಾವು ಆ ಕಡೆಗೆ ಹೆಚ್ಚಿಗೆ ಯೋಚನೆ ಮಾಡಬೇಕು. ಇದಲ್ಲದೆ ಮಹಿಳಾ ಅಭಿವೃದ್ಧಿಗಾಗಿ ಸರ್ಕಾರದವರು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಇದರಲ್ಲಿ ಸುಮಾರು ಕಾರ್ಯಕ್ರಮಗಳು ಪಟ್ಟಣ ಪ್ರದೇಶಕ್ಕೇ ಸೀಮಿತವಾದಂತಹ ಕಾರ್ಯಕ್ರಮಗಳಾಗಿವೆ. ಮಹಿಳಾ ಅಭಿವೃದ್ಧಿ ನಿಜವಾಗಿ ಆಗಬೇಕು, ನಿಜವಾಗಿ ಏನಾದರೂ ಮಹಿಳೆಯರು ಶೋಷಿತರಾಗಿ ಬದುಕಿದ್ದಾರೆ ಅಂದರೆ, ತಾವು ನಮ್ಮಂತಹ ಗ್ರಾಮೀಣ ಪ್ರದೇಶಗಳಿಗೆ ಬರಬೇಕು. ಅಲ್ಲಿ ಏನಾದರೂ ಇವತ್ತು ಆಗುತ್ತಿದೆಯೇ? ಇವತ್ತು ಮಹಿಳೆಯರಿಗೆ ಏನಾದರೂ ನಾವು ತಯಾರಿ ಮಾಡಿಸಿ, ಅವರಿಗೆ ಏನಾದರೂ ಪ್ರೋತ್ಸಾಹ ಕೊಡುತ್ತೇವೆ ಎಂದರೆ, ಅವರು ನಮ್ಮನ್ನು ಕೇಳುವುದೊಂದೇ, ಟೈಲರಿಂಗ್ ಮೆಷಿನ್ ಕೊಡಿಸಿ, ಟೈಲರಿಂಗ್ ಟ್ರೈನಿಂಗ್ ಕೊಡಿಸಿ ಎಂದು. ತಮ್ಮ 'ಡ್ವಾಕ್ರಾ' ಸ್ಕೀಮ್ ಇವತ್ತಿನ ದಿವಸ ಫೇಲಾಗಿದೆ. ಡ್ವಾಕ್ರಾದಲ್ಲಿ ನಾವು ಏನಾದರೂ ಇವತ್ತು ಒಂದು ಪ್ರಾಡಕ್ಟ್ ಅನ್ನು ತಯಾರು ಮಾಡಿದರೆ, ಅದನ್ನು ಮಾರಲಿಕ್ಕೆ ಮಾರ್ಕೆಟ್ ಇಲ್ಲ. ಇನ್ನು ಬೇರೆ ವ್ಯವಸ್ಥೆ ಕಡೆ ನಮ್ಮ ಹೆಣ್ಣುಮಕ್ಕಳಿಗೆ ಇವತ್ತು ತರಬೇತಿ ಕೊಡುವ ಕಾರ್ಯಕ್ರಮ ಆಗಬೇಕಾಗಿದೆ. ಅದೇ ರೀತಿ ಅಂಗವಿಕಲರಿಗೆ ಕೂಡ ಪ್ರೋತ್ಸಾಹ ಕೊಡುತ್ತಿದ್ದೀರಿ. ಅದು ಸಾಕಾಗುತ್ತಿಲ್ಲ. ಅಂಗವಿಕಲರಿಗೆ ಮಾಸಾಶನ 75 ರೂ.ಗಳನ್ನು ಕೊಡುತ್ತಿದ್ದೀರಿ. ಅದನ್ನು ಕನಿಷ್ಠ 150 ರೂ.ಗಳಿಗಾದರೂ ಹೆಚ್ಚಿಸಬೇಕು. ಕೈ, ಕಾಲು, ಕಣ್ಣು ಇಲ್ಲದಂಥ ಒಬ್ಬ ಮನುಷ್ಯ ಇವತ್ತಿನ ದಿವಸ ಕೇವಲ 75

ರೂಪಾಯಿಗಳಲ್ಲಿ ಒಂದು ತಿಂಗಳು ಜೀವನ ಮಾಡುವುದಕ್ಕೆ ಸಾಧ್ಯ ಎಂದು ಕೊನೆಯ ಪಕ್ಷ ಯೋಚನೆ ಮಾಡುವುದಕ್ಕೂ ಸಾಧ್ಯವಿಲ್ಲ. ಆ ಅಂಗವಿಕಲರಿಗೆ 150 ರೂಪಾಯಿಯಿಂದ 300 ರೂಪಾಯಿ ವರೆಗಾದರೂ ಮಾಸಾಶನ ಕೊಡಬೇಕಾಗಿತ್ತು. ಸ್ವಾತಂತ್ರ್ಯ ಹೋರಾಟಗಾರರಿಗೆ 500, 700, 1000 ರೂಪಾಯಿಗಳಷ್ಟು ಮಾಸಾಶನ ಕೊಡುತ್ತಿದ್ದಾರೆ. ನಡೆಯುವುದಕ್ಕಾಗುವುದಿಲ್ಲ, ಕುಳಿತುಕೊಳ್ಳುವುದಕ್ಕಾಗುವುದಿಲ್ಲ, ನಿಂತುಕೊಳ್ಳುವುದಕ್ಕಾಗುವುದಿಲ್ಲ, ನೋಡುವುದಕ್ಕಾಗುವುದಿಲ್ಲ ಎನ್ನುವ ಮನುಷ್ಯನಿಗೆ ಸ್ವಲ್ಪ ಹೆಚ್ಚಿಗೆ ಮಾಸಾಶನವನ್ನು ನೀಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ದೇವದಾಸಿಯರ ಬಗ್ಗೆ ಹೇಳುವುದಾದರೆ, ಸವದತ್ತಿ ಏರಿಯಾದಲ್ಲಿ ಮತ್ತು ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿ ಈ ಏರಿಯಾಗಳು ಮಾತ್ರ ದೇವದಾಸಿಯರಿಗೆ ಮೀಸಲು, ಇಲ್ಲಿ ಮಾತ್ರ ದೇವದಾಸಿಯರು ಇರುವುದು ಎಂದು ಸರ್ಕಾರ ತಿಳಿದುಕೊಂಡಿದೆ. ಇದು ತಪ್ಪು ಅಭಿಪ್ರಾಯ. ಈ ದೇವದಾಸಿ ಪದ್ಧತಿ ಎಲ್ಲಾ ಭಾಗದಲ್ಲೂ ಇತ್ತು. ಆದರೆ ಅವರುಗಳು ದೇವದಾಸಿಯರೆಂದು ಹೇಳಿಕೊಂಡಿರಲಿಲ್ಲ ಮತ್ತು ಅವರನ್ನು ಐಡೆಂಟಿಫೈ ಮಾಡಿರಲಿಲ್ಲ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಇಲಾಖೆ): ಮಾನ್ಯ ಅಧ್ಯಕ್ಷರೆ, ಇದು ಮಾನ್ಯ ಮಾಧುಸ್ವಾಮಿಯವರ ಕಲ್ಪನೆ ಅಷ್ಟೆ. ದೇವದಾಸಿಯರು ಕೇವಲ ಕೆಲವೇ ಸ್ಥಳದಲ್ಲಿ ಇದ್ದಾರೆಂದು ನಾವು ಯಾರೂ ತಿಳಿದುಕೊಂಡಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಅದು ನನ್ನ ಕಲ್ಪನೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ ಅದು ನನ್ನ ಕಲ್ಪನೆ ಅಲ್ಲ. ಸರ್ಕಾರದವರು ಕೊಟ್ಟಿರುವ ಮಾಹಿತಿ ಪುಸ್ತಕದಲ್ಲಿ-'ಈ ಕಾರ್ಯಕ್ರಮ ಬೆಳಗಾವಿ ಜಿಲ್ಲೆಗೆ ಸೀಮಿತ' ಎಂದು ಹೇಳಿದ್ದಾರೆ. ಇದು ನನ್ನ ಕಲ್ಪನೆ ಅಲ್ಲ. ನಾನು ಪುಸ್ತಕವನ್ನು ಓದಿಕೊಂಡು ಬಂದು ಮಾತನಾಡುತ್ತಿದ್ದೇನೆ. Their narration or government's narration is, this programme is for Belgaum. ನಾನು ಹೇಳುತ್ತಿಲ್ಲ, ದಯಮಾಡಿ ನಾನು ಹೇಳುತ್ತಿರುವುದನ್ನು ಅರ್ಥಮಾಡಿಕೊಳ್ಳಿ ಸರ್ಕಾರ ಕಾರ್ಯಕ್ರಮ ಹಾಕಿರುವುದು ಆ ಜಿಲ್ಲೆಗೆ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಮಾನ್ಯ ಅಧ್ಯಕ್ಷರೆ, ವೇಶ್ಯಯರೆ ಬೇರೆ, ದೇವದಾಸಿಯರೇ ಬೇರೆ. ಅದನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ದಯಮಾಡಿ ಎರಡನ್ನೂ ಕ್ಲಬ್ ಮಾಡಬೇಡಿ.

SRI J.C.MADHUSWAMY: I am not talking that. ಸರ್ಕಾರ ಆ ಜಿಲ್ಲೆಗೆ ಸ್ಕೀಂ ಕೊಟ್ಟಿರುವುದನ್ನು ಹೇಳುತ್ತಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಮಾನ್ಯ ಅಧ್ಯಕ್ಷರೆ, ದೇವದಾಸಿಯರು ಎಂದರೆ ದೇವಸ್ಥಾನಕ್ಕೆ ಹೋಗಿ ಅವರಿಗೆ ಮುತ್ತು ಕಟ್ಟಿ ಅವರನ್ನು ದೇವದಾಸಿಯರನ್ನಾಗಿ ಮಾಡುವುದು ಅದು ಒಂದು ಭಾಗ. ಪ್ರೊಫೆಶನಲ್ ಆಗಿ ಇವತ್ತು ಏನು ವೇಶ್ಯೆಯರು ಇದ್ದಾರೆ ಅವರೇ ಬೇರೆ. ಈಗ ಹೇಳಿದ್ದನ್ನು ದಯಮಾಡಿ ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ದಯವಿಟ್ಟು ಕ್ಷಮಿಸಬೇಕು. ನಾವು ಯಾರೂ ಅಂಬೆಗಾಲು ಇಟ್ಟುಕೊಂಡು ಓಡಾಡುವ ಮಕ್ಕಳಲ್ಲ. ನಮ್ಮಲ್ಲಿ ಗ್ರಾಮದೇವತೆಗಳಿಗೆ ದೇವದಾಸಿ ಎಂದು ಬಿಡುತ್ತಿದ್ದರು. ಅದೂ ಕೂಡ ಒಂದೇ ಜನಾಂಗದವರನ್ನು ಬಿಡುತ್ತಿದ್ದರು. ಅವರು ಆಗಿರುವ ಮಕ್ಕಳಿಗೆ ತಂದೆಯ ಹೆಸರು ಗೊತ್ತಿಲ್ಲ. ನಾನು ಈ ಸ್ಪೆಸಿಫಿಕೇಷನ್, ಡೆಫಿನೆಷನ್ ಗೊತ್ತಿದ್ದೇ ಮಾತನಾಡುತ್ತಿದ್ದೇನೆ. ನಮ್ಮ ಕಡೆಯೂ ದೇವದಾಸಿ ಪದ್ಧತಿ ಉಂಟು. ಮಾನ್ಯ ಸಚಿವರು ಹೇಳಿದ ಅರ್ಥದಲ್ಲಿ ನಾನು ಮಾತನಾಡುತ್ತಿಲ್ಲ.

ಅಧ್ಯಕ್ಷರು: ಇಲ್ಲಿಗೆ ಇದು ಸಾಕು. He is a bad customer to deal with this..

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದನ್ನು ಇನ್ನು ಹೇಗೆ ಬಿಡಿಸಿ ಹೇಳಲಿ.

MR. SPEAKER: He knows many more details.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಹಾಗಾಗಿ ದೇವದಾಸಿಯವರಿಗೆ ಪುನರ್‌ವಸತಿ ಆಗಬೇಕಾಗಿದೆ. ಇಡೀ ತುಮಕೂರು ಜಿಲ್ಲೆಗೆ ಒಂದೇ ಒಂದು ದೇವದಾಸಿಗೆ ಪುನರ್‌ವಸತಿ ಮಾಡುವುದಕ್ಕೆ ಸರ್ಕಾರ ಬಜೆಟ್‌ನಲ್ಲಿ ಹಣ ಕೊಟ್ಟಿದೆ. ಇದನ್ನು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಗಮನಿಸಬೇಕು. ನಮ್ಮ ತುಮಕೂರು ಜಿಲ್ಲೆಯಲ್ಲಿ ಒಂದು ಜನಾಂಗ ದೇವದಾಸಿ ಪದ್ಧತಿಯ ಆಚರಣೆಯನ್ನು ನಡೆಸುತ್ತಿದೆ. ಮಾನ್ಯ ಸಚಿವರು ತುಮಕೂರು ಜಿಲ್ಲೆಗೆ ಬಂದರೆ ಅವರನ್ನು ನೋಡಬಹುದು. ಆದರೆ ಸವದತ್ತಿಯ ಎಲ್ಲಮ್ಮ ದೇವರಿಗೆ ಸೇರಿದಂಥ ದೇವದಾಸಿಯರಷ್ಟು ಅಲ್ಲದಿದ್ದರೂ ಆ ರೀತಿಯಲ್ಲೇ ಇವರ ಜೀವನವನ್ನು ವ್ಯಯ ಮಾಡತಕ್ಕಂಥ, ಹಾಗೆಯೇ ಇವರಿಗೆ ರಕ್ಷಣೆ ಇಲ್ಲದೆ ಬದುಕತಕ್ಕಂಥ ಹೆಣ್ಣುಮಕ್ಕಳು ಇದ್ದಾರೆ. ಮಾನ್ಯ ಸಚಿವರು ಹೇಳಿದ ರೀತಿಯಲ್ಲಿ ವೇಶ್ಯೆ ಕಾರ್ಯಕ್ರಮ ಅದು ಅಲ್ಲ. ಅಂಥ ದೇವದಾಸಿಯರಿಗೆ ಪುನರ್‌ವಸತಿ ಮಾಡುವುದಕ್ಕೆ ಸರ್ಕಾರ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕು. ವಿಧವೆಯರಿಗೆ ಮದುವೆ ಮಾಡಲಿಕ್ಕೆ ಏನು ಹಣ ಕೊಡುತ್ತಿದ್ದಾರೆ ಅದನ್ನು ಸರ್ಕಾರ ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು 3-4 ಜನ ಐ.ಎ.ಎಸ್. ಅಧಿಕಾರಿಗಳ ಮಧ್ಯೆ ಆಗಿರುವ ಗೊಂದಲದಿಂದ ಸುಮಾರು

ಒಂದೂವರೆ ತಿಂಗಳಿನಿಂದ ಮಕ್ಕಳಿಗೆ ಫುಡ್‌ಗ್ರೇನ್ಸ್ ಸಿಗದೇ ಇರತಕ್ಕಂಥ ಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಇದನ್ನು ಮೊದಲು ಎನ್‌ಕ್ವೈರಿ ಮಾಡಿಸಬೇಕು. ಆಹಾರಧಾನ್ಯಗಳ ಸರಬರಾಜಿನಲ್ಲಿ ಸುಮಾರು 20 ರಿಂದ 25 ಕೋಟಿ ರೂಪಾಯಿಗಳ ಅವ್ಯವಹಾರ, ದುರುಪಯೋಗವಾಗಿದೆ ಎಂದು; ತುಮಕೂರು ಪ್ರೆಸ್‌ನಲ್ಲಿ ವರದಿಯಾಗಿದೆ. ಹಾಗೆಯೇ ಸನ್ಮಾನ್ಯ ಉಗ್ರಪ್ಪನವರು ವಿಧಾನಪರಿಷತ್ತಿನಲ್ಲಿ ವರದಿ ಮಾಡಿದ್ದಾರೆ. ಮತ್ತು ವಿಧಾನಸಭೆಯಲ್ಲಿ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಇದರ ಬಗ್ಗೆ ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಹೆಚ್ಚಿನ ಆಸಕ್ತಿ ತೆಗೆದುಕೊಂಡು ತಪ್ಪಿತಸ್ಥರ ಬಗ್ಗೆ ತಕ್ಷಣ ಎನ್‌ಕ್ವೈರಿ ಮಾಡಿಸಿ....

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೆ ಬೆಳಕಿಗೆ ಬಂದಿರತಕ್ಕಂಥ ಸ್ಕ್ಯಾಂಡಲ್‌ಗಳನ್ನೆಲ್ಲಾ, ಇನ್ನೂ ಏನೇನು ಸ್ಕ್ಯಾಂಡಲ್‌ಗಳು ಈ ಸರ್ಕಾರದಲ್ಲಿ ಇವೆಯೋ ಗೊತ್ತಿಲ್ಲ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಸುಮಾರು 35 ಕೋಟಿ ರೂಪಾಯಿಗಿಂತಲೂ ಹೆಚ್ಚು ದುರುಪಯೋಗವಾಗಿದೆ ಎಂದು ತಿಳಿದುಬಂದಿದೆ. ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕಂಥ ಕಾಲದಲ್ಲಿ ಇದಕ್ಕೆ ಯಾರು ಯಾರು ಹೊಣೆಗಾರರು, ಯಾರ್ಯಾರಿಗೆ ಏನೇನು ಶಿಕ್ಷೆ ಕೊಟ್ಟಿದ್ದಾರೆ? ಅದರ ಸತ್ಯಾಸತ್ಯತೆಗಳು ಏನು? ಇದರ ಬಗ್ಗೆ ವಿವರವಾದಂಥ ಹೇಳಿಕೆಯನ್ನು ಕೊಡಬೇಕು. ಏಕೆಂದರೆ ಇದು ಭಾರಿ ದೊಡ್ಡ ಸ್ಕ್ಯಾಂಡಲ್ ಆಗಿದೆ. ಇಲ್ಲಿಯವರೆಗೆ ಇಂಥದ್ದು ಬೆಳಕಿಗೆ ಬಂದಿರಲಿಲ್ಲ. ಮತ್ತು ಇದರ ಬಗ್ಗೆ ಯಾರೂ ಅಷ್ಟು ಗಮನ ಹರಿಸಿರಲಿಲ್ಲ. ಮಕ್ಕಳು ಮತ್ತು ಮಹಿಳೆಯರ ಹೆಸರಿನಲ್ಲಿ ಸುಮಾರು 35 ಕೋಟಿ ರೂಪಾಯಿಗಳಷ್ಟು ದುರುಪಯೋಗವಾಗಿದೆಯೆಂದರೆ ಇದು ಕ್ಷಮಿಸಲಾರದಂಥ ಅಪರಾಧವಾಗಿದೆ. ಈ ಸ್ಕ್ಯಾಂಡಲ್‌ನಲ್ಲಿ ಇಬ್ಬರು ಐ.ಎ.ಎಸ್. ಅಧಿಕಾರಿಗಳು ಶಾಮೀಲಾಗಿರುವುದರಿಂದ ಅವರಿಗೆ ರಕ್ಷಣೆ ಕೊಡುವ ದೃಷ್ಟಿಯಿಂದ ಈ ಹಗರಣವನ್ನು ಮುಚ್ಚಿಹಾಕುವುದಕ್ಕೆ ಪ್ರಯತ್ನಪಡುತ್ತಿದ್ದಾರೆಂದು ನಮ್ಮ ಗಮನಕ್ಕೆ ಬಂದಿದೆ. ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕಂಥ ಕಾಲದಲ್ಲಿ ವಿವರವಾಗಿ ಪ್ರಾಮಾಣಿಕವಾದಂಥ ಉತ್ತರವನ್ನು ನೀಡುತ್ತಾರೆಂದು ನಾವು ನಿರೀಕ್ಷೆ ಮಾಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಇನ್ನು ಸಹಕಾರ ಕ್ಷೇತ್ರದ ಬಗ್ಗೆ ಮಾತನಾಡಲು ಬಯಸುತ್ತೇನೆ. ಸಂಘ ಶಕ್ತಿಯಲ್ಲಿ ಬಲವಿದೆಯೆಂದು ನಾವೆಲ್ಲಾ ಆ ಸಂಘದಲ್ಲಿ ಬೆಳೆದು ಬಂದವರು. ನಾನು ಒಂದು ಸಹಕಾರಿ ಸಂಘದಲ್ಲಿ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿದ್ದೇನೆ. ರಾಜ್ಯದಲ್ಲಿ ಈ ಸಹಕಾರಿ ಕ್ಷೇತ್ರಕ್ಕೆ ದೊಡ್ಡ ಇತಿಹಾಸವಿದೆ. ಈ ಸಹಕಾರಿ ಕ್ಷೇತ್ರಕ್ಕೆ 3 ಸಲ ಮಾತ್ರ ಆಯಾಮ ಸಿಕ್ಕಿದೆ. ಒಂದು ಸಲ ಮಾನ್ಯ ರಾಮಕೃಷ್ಣ ಹೆಗಡೆಯವರು ಎಲೆಕ್ಟ್ ಆಗಿ ಆ ಸಂಪುಟದಲ್ಲಿ ಮಾನ್ಯ ಜಾಲಪ್ಪನವರು ಸಹಕಾರ ಸಚಿವರಾಗಿದ್ದಾಗ ಸರ್ಕಾರವೇ ರೈತರ ಸಾಲ ಮತ್ತು ಬಡ್ಡಿಯನ್ನು ತೀರಿಸಿದಾಗ ಸಹಕಾರಿ ಸಂಘಗಳು ಪುನಶ್ಚೇತನಗೊಂಡವು. 2ನೇ ಸಲ ಕಾಂಗ್ರೆಸ್‌ನವರು-ರೈತರು ಪಡೆದ ಸಾಲದ

ಮೇಲೆ ಬಡ್ಡಿ ಏನು ಹಾಕಲಾಗಿತ್ತೋ ಅದರ ಮೇಲೆ 5 ಪರ್ಸೆಂಟ್ ಇನ್ಸೆಂಟಿವ್ ಕೊಟ್ಟಾಗ ಸ್ವಲ್ಪ ಬಡ್ಡಿ ಕಡಿಮೆಯಾಗಿ ಸಹಕಾರಿ ಸಂಘಗಳು ಚೇತನಕ್ಕೆ ಬಂದವು. 3ನೇ ಸಲ ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬಂದಮೇಲೆ-ರೈತರ ಕೃಷಿ ಸಾಲದ ಮೇಲೆ ಬಡ್ಡಿ ಏನು ಇತ್ತೋ ಅದನ್ನು ಮನ್ನಾ ಮಾಡಿದ್ದೇವೆಂದು ಸರ್ಕಾರ ಹೇಳಿದಮೇಲೆ ಸಹಕಾರಿ ಸಂಘಗಳು ಒಂದು ಹಂತಕ್ಕೆ ಬಂದವು. ಈ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದುಬಿಟ್ಟಿತು, ಸಹಕಾರಿ ಕ್ಷೇತ್ರಕ್ಕೆ ಭಾರೀ ಒತ್ತಾಸೆಯಾಗಿ ನಿಲ್ಲುತ್ತದೆಂದು ನಾವು ಆಸೆ ಇಟ್ಟುಕೊಂಡಿದ್ದವು. ಆದರೆ ಆ ರೀತಿ ವಾಸ್ತವವಾಗಿ ಆಗುತ್ತಿಲ್ಲ. ನಮ್ಮ ಸಹಕಾರ ಸಚಿವರಿಗೆ ಸಹಕಾರ ಎಂದರೆ-ಸೊಸೈಟಿಗಳು, ಬ್ಯಾಂಕುಗಳು, ಅಪೆಕ್ಸ್ ಬ್ಯಾಂಕ್, ಫೆಡರೇಷನ್‌ಗಳು ಇಂಥ ಸಂಸ್ಥೆಗಳು ಅಷ್ಟೇ ಕಾಣುತ್ತದೆ. ನಾನು ಅವರನ್ನು ದೂಷಣೆ ಮಾಡುವುದಿಲ್ಲ. ನಾನು ಆ ಕ್ಷೇತ್ರದಲ್ಲಿ ಬೆಳೆದುಬಂದವನು ಮತ್ತು ಒಳ್ಳೆಯ ಭಾವನೆಗಳನ್ನು ಇಟ್ಟುಕೊಂಡಿರುತ್ತೇನೆ. ಸಹಕಾರಿ ಕ್ಷೇತ್ರದಲ್ಲಿ ಪರಸ್ಪರ ಒಳ್ಳೆಯದು ಮಾಡಬೇಕೆಂದು ಸರ್ಕಾರ ಭಾವಿಸಿಲ್ಲ. ಏಕೆಂದರೆ ಇಷ್ಟು ದೊಡ್ಡ ಪುಸ್ತಕದಲ್ಲಿ ಸಂಘದ ಸದಸ್ಯರಿಗಾಗಿ, ರೈತರಿಗಾಗಿ ಒಂದೇ ಒಂದು ಯೋಜನೆಯನ್ನೂ ಸಹ ಹಾಕಿಕೊಂಡಿಲ್ಲ. ಒಬ್ಬ ರೈತನಿಗೆ, ಸಹಕಾರಿ ಸಂಘದ ಸದಸ್ಯನಿಗೆ ಇಂಥ ಸವಲತ್ತುಗಳನ್ನು ಕೊಡುತ್ತೇವೆ, ಈ ಸರ್ಕಾರ ಅವನಿಗೆ friend, philosopher and guide-- ಏನು ಕೋಆಪ್‌ರೇಟೀವ್ ಮೂವ್‌ಮೆಂಟ್ ಎಂದು ಹೇಳುತ್ತೇವೆ ಅದರಂತೆ ನಡೆದುಕೊಳ್ಳುತ್ತೇವೆಂದು ಎಲ್ಲಿಯೂ ಹೇಳಲೇ ಇಲ್ಲ. ಯಾವುದೋ ಸೊಸೈಟಿಯಿಂದ ಅಂಗಡಿ ಕಟ್ಟುವುದಕ್ಕೆ 50 ಸಾವಿರ ಕೊಡುತ್ತಾರೆ, ಬ್ಯಾಂಕಿಂಗ್ ಕೌಂಟರ್ ಮಾಡುತ್ತೇವೆಂದು ಇವರಿಗೆ 50 ಸಾವಿರ ರೂ.ಬರುತ್ತದೆ. ಇದರಲ್ಲಿ 20 ರಿಂದ 25 ಸಾವಿರ ರೂಪಾಯಿ ಖರ್ಚು ಮಾಡಿ ಇದು ಆಗುತ್ತದೋ ಬಿಡುತ್ತದೋ ಗೊತ್ತಿಲ್ಲ. ಏಕೆಂದರೆ ಇದನ್ನು ಯಾರೂ ಕೇಳುವುದಿಲ್ಲ. ಇದು ಸರ್ಕಾರದ ಹಣ ನೇರವಾಗಿ 50 ಸಾವಿರ ರೂಪಾಯಿ ಬಂದುಬಿಡುತ್ತದೆ. ನಬಾರ್ಡ್‌ನವರು ಅಗ್ರಿಕಲ್ಚರ್ ಫೈನಾನ್ಸ್ ಎಂದು ಶೇಕಡ ಮೂರೂವರೆಯಿಂದ 5 ಪರ್ಸೆಂಟ್‌ಗೆ ಹಣ ಕೊಡುತ್ತಿದ್ದರು. ನಂತರ ಒಂದು ಕಡೆ ಒಂದೂವರೆ ಪರ್ಸೆಂಟ್ ಮತ್ತು ಇನ್ನೊಂದು ಕಡೆ 2 ಪರ್ಸೆಂಟ್ ಜಾಸ್ತಿ ಮಾಡಿ ಐದು ಪರ್ಸೆಂಟ್ ಮತ್ತು ಏಳೂವರೆ ಪರ್ಸೆಂಟ್‌ಗೆ ಬಡ್ಡಿ ಜಾಸ್ತಿ ಮಾಡಿದರು. ಆದರೆ ಈ ಸರ್ಕಾರ ಏನು ಮಾಡಿದ್ದಾರೆಂದರೆ ರೈತ ಸ್ಥಳದಲ್ಲಿಯೇ 16ರಿಂದ 18 ಪರ್ಸೆಂಟ್ ಬಡ್ಡಿ ಕೊಡುವ ಹಾಗೆ ಮಾಡಿದ್ದಾರೆ. ರಿಸರ್ವ್‌ಬ್ಯಾಂಕ್‌ನಲ್ಲಿ ಇದ್ದರೆ ರೈತರ ರಕ್ಷಣೆಗೆ ಬರುವುದಿಲ್ಲ, ಕಂಟ್ರೋಲ್‌ಗಳು, ಕ್ಲಚ್‌ಗಳು ಜಾಸ್ತಿ ಆಗುತ್ತವೆಂದು, ಕೇಂದ್ರದಲ್ಲಿ ಇವರದೇ ಸರ್ಕಾರ ಇದ್ದಂಥ ಕಾಲದಲ್ಲಿ ನ್ಯಾಷನಲ್ ಅಗ್ರಿಕಲ್ಚರಲ್ ರೂರಲ್ ಡೆವಲಪ್‌ಮೆಂಟ್ ಬ್ಯಾಂಕ್ ಎಂದು ಮಾಡಿದರು. ಇವರ ಸರ್ಕಾರ ಆ ಬ್ಯಾಂಕ್‌ನ ಪ್ರಿನ್ಸಿಪಾಲ್‌ಗೆ ಮುಖಕ್ಕೆ ಹೊಡೆದಿದ್ದಾರೆ. ಅಲ್ಲಿಂದ 5 ಪರ್ಸೆಂಟ್‌ಗೆ ಬರುವ ಹಣವನ್ನು ಇವರು ಅಪರೇಷನಲ್ ಹಣವನ್ನು ಮೆಯಿಂಟೇನ್ ಮಾಡಲಿಕ್ಕೆ 18 ಪರ್ಸೆಂಟ್‌ಗೆ ಇಳಿಸುತ್ತಾರೆ. ಇದಕ್ಕೋಸ್ಕರ ಈ ಸಹಕಾರಿ ಸಂಘದ ಎಲೆಕ್ಷನ್ ನಡೆಯಬೇಕೇ? ನಾವು ಕೇಳಿದರೆ-ನೀವು ಏನು ಹೇಳುತ್ತೀರೋ ಹೇಳಿಕೊಳ್ಳಿ ನಾನು

ಹೇಳುವುದನ್ನು ಹೇಳಿ ಆಯಿತು' ಎಂದು ಆವತ್ತು ಸಹಕಾರ ಸಚಿವರು ಹೇಳುತ್ತಿದ್ದರು. ನಾವು ಅದನ್ನು ಕೇಳಿಸಿಕೊಂಡಿಲ್ಲ ಎಂದು ತಿಳಿದುಕೊಂಡಿರಬಹುದು. It is on record. ಇದು ಚರ್ಚೆಗೆ ಬಂದಾಗ ಮಾತನಾಡುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ 25-26 ಸಾವಿರ ಸಹಕಾರ ಸಂಘಗಳು ಇವೆ. ಇದರಲ್ಲಿ ವಸ್ತುಸ್ಥಿತಿ ಎಂದರೆ ವಿ.ಎಸ್.ಎಸ್.ಗಳು, ಎಸ್.ಸಿ.ಎಸ್.ಗಳು ಮತ್ತು ಲಾರ್ಜ್‌ಸ್ಕೇಲ್ ಸೊಸೈಟಿಗಳು ಅಂದರೆ ಏನು ಎಲ್.ಎಂ.ಸಿ.ಎಸ್.ಗಳು ಇವು ನೇರವಾಗಿ ರೈತರಿಗೆ ಸಹಾಯ ಮಾಡುವಂಥ ಸೊಸೈಟಿಗಳಾಗಿವೆ. ಅಲ್ಲಿ ಬಹುಶಃ ಲೋನ್ ಮೇಲೆ, ಇಂಟರೆಸ್ಟ್ ಮೇಲೆ ಸಬ್ಸಿಡಿ ಸಿಗಬಹುದೆಂದು ಆಸೆ ಇಟ್ಟುಕೊಂಡು ಸುಮಾರು ಜನ ಹಣ ತೆಗೆದುಕೊಳ್ಳುತ್ತಿದ್ದರು. ಆದರೆ, ಸಾಲ ತೆಗೆದುಕೊಳ್ಳುವ ರೈತನಿಗೆ ಬಡ್ಡಿಯಲ್ಲಾಗಲಿ ಸಾಲದಲ್ಲಾಗಲಿ ಯಾವುದೇ ಕನ್ಸಿಷನ್ ಇಲ್ಲವೆಂದು ನಬಾರ್ಡ್‌ನವರು ಹೇಳಿದ್ದಾರೆ, ಆದ್ದರಿಂದ 2 ರಿಂದ 3 ಪರ್ಸಂಟ್ ಬಡ್ಡಿ ರೇಟ್ ಜಾಸ್ತಿ ಮಾಡುತ್ತೇವೆಂದು ಇವತ್ತು ದಿಢೀರ್ ಆಗಿ ಸಾಲ ಕೊಡುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ಹಳೆ ಮೈಸೂರು ಕಡೆ ಮಳೆ ಇಲ್ಲದೆ ಸಾಲ ತೆಗೆದುಕೊಂಡು ರೈತನು ಇವತ್ತು ಆ ಸಾಲವನ್ನು ಕಟ್ಟುವುದಕ್ಕೆ ಆಗದೆ ನರಳುತ್ತಿದ್ದಾನೆ. ಅವರಿಗೆ ಹಣ ಕಟ್ಟುವ ಶಕ್ತಿ ಇಲ್ಲ. ಆದರೆ ಇಲ್ಲಿಯ ಮುಖ್ಯ ಕಛೇರಿಯಿಂದ ''ನಿಮಗೆ ರೀ-ಫೈನಾನ್ಸ್ ಕೊಡುವುದಕ್ಕೆ ಆಗುವುದಿಲ್ಲ, ನಿಮ್ಮದು ರಿಕವರಿ ಪೊಸಿಷನ್ ಚೆನ್ನಾಗಿಲ್ಲ' ಎಂದು ಒಂದು ಆದೇಶ ಹೋಗುತ್ತದೆ. ಉದಾಹರಣೆಗೆ ಹೇಳುವುದಾದರೆ- ಒಬ್ಬ ಸಾಲ ತೆಗೆದುಕೊಂಡು ಸದಸ್ಯ ಅಥವಾ ರೈತ ''ನಾನು ಸಾಲ ತೆಗೆದುಕೊಂಡಿದ್ದೇನೆ, ಮತ್ತು ಆ ಹಣವನ್ನು ಕಟ್ಟುತ್ತೇನೆ ನನಗೆ ಪುನಃ ಹಣ ಕೊಡಿ ಎಂದು ಕೇಳಿದಾಗ, ಆ ವ್ಯಕ್ತಿಗೆ ಪುನಃ ಸಾಲ ತೆಗೆದುಕೊಳ್ಳುವುದಕ್ಕೆ ಅರ್ಹತೆ, ಯೋಗ್ಯತೆ ಇಲ್ಲವೆಂದರೆ ಆ ಸಹಕಾರಿ ಸಂಘ ಉಳಿಯುತ್ತದೆಯೇ? ಆ ವ್ಯಕ್ತಿ ಬಾಕಿ ಇರುವ ಸಾಲದ ಹಣವನ್ನು ಕಟ್ಟುತ್ತಾನೆಯೇ? ಇದನ್ನು ಸರ್ಕಾರ ಯೋಚನೆ ಮಾಡಬೇಕು. ಯಾರು ಸಾಲದ ಹಣವನ್ನು ಕಟ್ಟುತ್ತಾರೆ ಕನಿಷ್ಟ ಅವರಿಗೆ ಸಾಲ ಕೊಡಬೇಕು. ಮಾನ್ಯ ನಾಣಯ್ಯನವರು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಿದ್ದಂಥ ಸಮಯದಲ್ಲಿ ಅವರು ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರು ಆಗಿದ್ದರು ಆಗ ಅವರು ಒಪ್ಪಿಕೊಂಡರು. ಅವರು ನಮಗೆ we have drawn a scheme ಎಂದು ಹೇಳಿದರು. ಯಾರು ಸಾಲ ಪಡೆದುಕೊಂಡ ಹಣವನ್ನು ಪ್ರಾಮಾಣಿಕವಾಗಿ ಕಟ್ಟುತ್ತಾರೆ ಅವರಿಗೆ ಸಾಲ ಕೊಡುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ ಎಂದು ಹೇಳಿದ್ದರು. ಸರ್ಕಾರದಿಂದ ಸಂಬಂಧಪಟ್ಟವರು ಮಹಾರಾಷ್ಟ್ರದ ಕೊಲ್ಲಾಪುರಕ್ಕೆ ಹೋಗಿ ಬೇಕಾದರೆ ನೋಡಬಹುದು. ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯಲ್ಲಿ ವಿ.ಎಸ್.ಎಸ್. ಸ್ಟಕ್ಚರಲ್ಲಿ 8- 10 ವರ್ಷದ ಹಿಂದೆ ಪಾಸ್‌ಬುಕ್ ಮತ್ತು ಐಡೆಂಟಿಫಿಕೇಷನ್ ಕಾರ್ಡ್ ಅಲ್ಲಿ ಇಂಟ್ರಡ್ಯೂಸ್ ಮಾಡಿದರು. ಆ ಜಿಲ್ಲೆಯ ಪಕ್ಕದಲ್ಲಿ ನಾವೆಲ್ಲಾ ಇದ್ದೀರಿ. ಒಂದು ಹಸಿರುಕಾರ್ಡ್‌ನ್ನು ರೈತ ಇಟ್ಟುಕೊಂಡು ನನ್ನದು ಇಷ್ಟು ಜಮೀನು ಇದೆಯೆಂದು ಹೇಳಿ ಸೊಸೈಟಿಗೆ ನಾನು ಮಾರ್ಟಗೇಜ್ ಮಾಡುತ್ತೇನೆಂದು ಅಲ್ಲಿ ಆಧಾರ ಮಾಡಿದ್ದರೆ, ಆ ರೈತ ಇಡೀ ರಾಜ್ಯದಲ್ಲಿ 5ರಿಂದ 10 ಸಾವಿರ ರೂಪಾಯಿ ಎಮರ್ಜೆನ್ಸಿ ಸಾಲ

ತೆಗೆದುಕೊಳ್ಳಬಹುದು. ಡಿಸಿಸಿ ಬ್ಯಾಂಕಿನಲ್ಲಿಯಾದರೆ ಇನ್ನು ಜಾಸ್ತಿ ಹಣವನ್ನು ಸಾಲ ತೆಗೆದುಕೊಳ್ಳಬಹುದು. ಇವತ್ತಿನ ದಿವಸ ಸಣ್ಣದಾಗಿ ಟರ್ನ್‌ಓವರ್ ಮಾಡುವವರಿಗೂ ಕೂಡ ಕಮರ್ಷಿಯಲ್ ಬ್ಯಾಂಕ್‌ಗಳು ಕ್ರೆಡಿಟ್ ಕಾರ್ಡ್‌ಗಳನ್ನು ಕೊಡುತ್ತಿದೆ. ಲಕ್ಷಾಂತರ ರೂಪಾಯಿಗಳ ಆಸ್ತಿಯನ್ನು ಇಟ್ಟುಕೊಂಡಿರುವಂತಹ ರೈತ, ವರಮಾನ ಇರತಕ್ಕಂತಹ ರೈತ ಬೆಂಗಳೂರಿನಲ್ಲಿ 5,000 ರೂಪಾಯಿಗಳನ್ನು ಡ್ರಾ ಮಾಡುವುದಕ್ಕೆ ಶಕ್ತಿ ಇಲ್ಲ. ಇಂತಹ ಯೋಜನೆಗಳನ್ನು ಮಾಡಿ. ಸಾಲಗಳನ್ನು ಇಂತಹ ತಿಂಗಳಿಗೆ ತೆಗೆದುಕೊಳ್ಳಬೇಕು, ಇಂತಹ ತಿಂಗಳಿಗೆ ಸಾಲವನ್ನು ತೀರಿಸಬೇಕೆಂದು ಏಕೆ ಈ ರೀತಿಯಾಗಿ ಮಾಡುತ್ತೀರಿ. ಒಂದು ಸೊಸೈಟಿಯಲ್ಲಿ ಅವನದು ಅಕೌಂಟ್ ಓಪನ್ ಮಾಡಿ, ಅವನಿಗೆ ಡ್ರಾಯಿಂಗ್ ಕೆಪ್ಯಾಸಿಟಿ ಎಂದು ಹೇಳಿ ಅವನು ಯಾವಾಗಲಾದರೂ ಸಹ ಡ್ರಾ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕೊಡಿ, ಯಾವಾಗ ಬೇಕಾದರೂ ಸಹ ಸಾಲವನ್ನು ಕಟ್ಟುವುದಕ್ಕೆ ಅವಕಾಶವನ್ನು ಕೊಡಿ. ಇವತ್ತೇ ಸಾಲತೆಗೆದುಕೊಳ್ಳಬೇಕು, ಇವತ್ತಿನೊಳಗೆ ಸಾಲವನ್ನು ತೀರಿಸಬೇಕೆಂದು ಏಕೆ ಹೇಳುತ್ತೀರಿ? ನಾನು ಮಧ್ಯದಲ್ಲಿ ಸಾಲವನ್ನು ತೀರಿಸುತ್ತೇನೆ, ಮತ್ತೆ ನನಗೆ ಸಾಲವನ್ನು ಏಕೆ ಕೊಡುವುದಿಲ್ಲ? ಇಲ್ಲ ಇಂತಹ ತಿಂಗಳಿನಲ್ಲಿ ಎಸ್‌ಸಿ ಹೋಗಬೇಕು, ಈ ತಿಂಗಳಿನಲ್ಲಿ ಸ್ಟೇಟ್‌ಮೆಂಟ್ ಹೋಗಬೇಕು, ಈ ತಿಂಗಳಿನಲ್ಲಿ ರಿಲೀಸ್ ಆರ್ಡರ್ ಹೋಗಬೇಕು, ಅದಕ್ಕೆ ಮೊದಲು ಸೂಪರ್‌ವೈಸರ್ ಸರ್ಟಿಫೈಡ್ ಮಾಡಬೇಕು, ಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿಯವರು ಎಷ್ಟು ಪರ್ಸೆಂಟ್ ಜಾಸ್ತಿ ಮಾಡುತ್ತೇನೆ, ಎಷ್ಟು ಪರ್ಸೆಂಟ್ ಕಡಿಮೆ ಮಾಡುತ್ತೇವೆಂದು ಒಪ್ಪಬೇಕು, ನಬಾರ್ಡ್‌ನವರು ಎಷ್ಟು ಕೊಡುತ್ತೇನೆಂದು ಒಪ್ಪಬೇಕು, ಇದು ಸಹಕಾರಿ ಸಂಘನಾ? ನಿಮ್ಮ ಬ್ಯಾಂಕ್‌ಗಳವರು ಇದ್ದಾರೆ, ಇವತ್ತು ವ್ಯವಸ್ಥೆಯು ಪ್ರೈವೇಟೈಸ್ ಆಗಿದೆ. ನಿಮಗಿಂತಲೂ ಸುಲಭವಾಗಿ ಹಣವನ್ನು ಕೊಡುತ್ತಾರೆ. ನಿಮಗಿಂತಲೂ ಎರಡು ಮೂರು ದಿವಸಗಳಲ್ಲಿ ಮ್ಯಾನೇಜರ್‌ರವರು ಸಾಲವನ್ನು ಮಂಜೂರು ಮಾಡಿಕೊಡುತ್ತಾರೆ. ತಾವು ಏನಾದರೂ ಇದೇ ಪದ್ಧತಿಯನ್ನು ಮುಂದುವರೆಸಿಕೊಂಡು ಹೋದರೆ ಖಂಡಿತವಾಗಿ 90ರಷ್ಟು ವಿಎಸ್‌ಎಸ್‌ಗಳನ್ನು ಮುಚ್ಚುತ್ತೀರಿ. ಇವತ್ತು ತಮಗೆ ಇದರ ಗಂಭೀರತೆ ಅರ್ಥವಾಗಿಲ್ಲ. ಇದನ್ನು 5- 8- 10 ವರ್ಷಗಳನ್ನು ಬಿಟ್ಟು ಇದನ್ನು ನೋಡಬೇಕಾದರೆ ಎಲ್ಲಾ ಸುಸ್ತಿ ಬಿದ್ದಾಗ ಗೊತ್ತಾಗುತ್ತದೆ. ನಾವು ಏನು ಮಾಡಿದ್ದೇವೆ ಎಂದು. ಒಂದು ಕಡೆಯಲ್ಲಿ ಅಡಿಷನಲ್ ಶೇರ್ ತೆಗೆದುಕೊಂಡು ಹೋಗುತ್ತಾರೆಂದು ಹೇಳುತ್ತೀರಿ, ಒಂದು ಸಲ 18 ಪರ್ಸೆಂಟ್ ಬಡ್ಡಿ ಹಾಕುತ್ತೇವೆಂದು ಹೇಳುತ್ತೀರಿ, ನಾವೇನು ಮಾಡೋಣ ಡಿಸಿಸಿ ಬ್ಯಾಂಕ್‌ನವರು, ಅಪೆಕ್ಸ್ ಬ್ಯಾಂಕ್‌ನವರು ಹಾಕುತ್ತಾರೆಂದು ತಾವು ಹೇಳಿ, ಸರ್ಕಾರ ಎಂದು ಹೇಳಿದರೆ ನಿಮಗೆ ಸ್ಪರ್ಧೆಯನ್ನು ಮಾಡುತ್ತಿರುವವರು ಯಾರು ಎಂದು ಗೊತ್ತಿದೆಯಾ? ಇವತ್ತಿನ ದಿವಸ 7 ಪರ್ಸೆಂಟಿಗೆ ಸಾಹುಕಾರರ ಸಾಲವನ್ನು ಪ್ರೈವೇಟ್ ಜನರು ಕೊಡುತ್ತಿದ್ದಾರೆ. ನೀವು ರೈತರಿಗೆ 18 ಪರ್ಸೆಂಟ್ ಚಾರ್ಜ್‌ನ್ನು ರೈತರಿಗೆ ಮಾಡುತ್ತಿದ್ದೀರಿ. (1) to the extent of two lakhs ಎರಡು ಲಕ್ಷಕಿಂತಲೂ ಜಾಸ್ತಿಗೆ ಏನು ಹೇಳುತ್ತೀರಿ ಎಂದರೆ ಸಂಘದ ಇಷ್ಟವೆಂದು ಇದು ದೇಶದ ಸರ್ಕಾರ, ಇದು ಯಾರಿಗೆ ಸಹಕಾರ, ತಾವು ಒಂದು

ಆದೇಶವನ್ನು ಮಾಡಿ ನಿಮ್ಮ ಆಪರೇಷನ್ ಕಾಸ್ಟ್ ಎಷ್ಟು ಬರುತ್ತದೆ ಅದನ್ನು ಕಡಿಮೆ ಮಾಡಿ ಎಂದು ಹೇಳಬೇಕು. ಎಲ್ಲೆಲ್ಲಿ ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಬೇಕು. ಡಿಸಿಸಿ ಬ್ಯಾಂಕ್‌ನವರಿಗೆ, ಅಪೆಕ್ಸ್ ಬ್ಯಾಂಕ್‌ನವರಿಗೆ ಇಷ್ಟೇ ಮಾರ್ಜಿನ್ ಇಟ್ಟುಕೊಳ್ಳಬೇಕೆಂದು ಹೇಳಬೇಕೆಂದು ಹೇಳಿ ಒಂದು ಆದೇಶವನ್ನು ಕೊಡಬೇಕು. ನಾವೇನು ಮಾಡುವುದಕ್ಕೆ ಆಗುವುದಿಲ್ಲ ಅದು ಸ್ವಾಯತ್ತ ಸಂಸ್ಥೆ ಎಂದರೆ. ಎರಡನೆಯದಾಗಿ ಸ್ಪಷ್ಟವಾಗಿ ಒಂದು ಸಂಘವನ್ನು ಗುರುತಿಸಬೇಕೆಂದರೆ ಆ ಸಂಘಕ್ಕೆ ಇಷ್ಟು ಅಮೌಂಟ್ ಎಂದು ಕೊಡಬೇಕು. ವ್ಯಕ್ತಿ ವ್ಯಕ್ತಿಗಳ ಎಸ್.ಸಿ.ಯನ್ನು ಅಪ್ರೂವಲ್ ಮಾಡುತ್ತಿರುವಂತಹ ಸಿಸ್ಟಂ ಸರಿಯಿಲ್ಲ. ನಾನು ಡಿಸಿಸಿ ಬ್ಯಾಂಕ್‌ಗೆ ಜವಾಬ್ದಾರನಾಗಿರುವುದಿಲ್ಲ. ನಾನು ವಿಎಸ್‌ಎಸ್‌ನಲ್ಲಿ ಜವಾಬ್ದಾರನಾಗಿರುತ್ತೇನೆ. ನಾನು ಮಾರ್ಟ್‌ಗೇಜ್ ಆಗುವುದು ಅಲ್ಲಿಗೆ, ಆದರೆ ಏನು ಮಾಡುತ್ತಿದ್ದೀರಿ ಎಲ್ಲಾ ರೆಕಾರ್ಡ್ಸ್ ಅವರಿಗೆ ಹೋಗುತ್ತದೆ. ಈ ಸ್ಥಿತಿಯನ್ನು ತಪ್ಪಿಸದೇ ಹೋದರೆ ವಿಎಸ್‌ಎಸ್‌ಗಳನ್ನು ಉಳಿಸುವುದಿಲ್ಲ. ಇನ್ನೊಂದು ಕಡೆ ಸಿಸಿಎ ಮತ್ತು ಸಿಸಿಸಿಗಳು ಏನಾಯಿತು? (2) comman cadre Authority, Comman cadre Committee ಇದನ್ನು ಗಮನಿಸಬೇಕು. ಯಾವುದೋ ಒಂದು ಸೊಸೈಟಿಯಲ್ಲಿ ಒಬ್ಬ ಸೆಕ್ರೆಟರಿಯು ಇರುತ್ತಾರೆ 4,000 ಅಥವಾ 4,500 ರೂಪಾಯಿಗಳು ಸಂಬಳ ಎಂದು ರೆಸಲ್ಯೂಷನ್ ಬರೆಸಿಕೊಂಡು ಬರುತ್ತಾನೆ. ಇನ್ನೊಂದು ಸೊಸೈಟಿಗೆ ಅವನಿಗೆ ಟ್ರಾನ್ಸ್‌ಫರ್ ಮಾಡುತ್ತೀರಿ, ಪಾಪ ಆ ಸಂಘಕ್ಕೆ 20,25ಸಾವಿರ ರೂಪಾಯಿಗಳ ವರಮಾನ ಇರುವುದಿಲ್ಲ ನಿಮ್ಮ ಸೆಕ್ರೆಟರಿಗೆ ಇವತ್ತು 5,000 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ನಿಮಗೆ ಗೊತ್ತಿರಬಹುದು 1,000 ಸಂಬಳವನ್ನು ತೆಗೆದುಕೊಳ್ಳತಕ್ಕಂತಹ ಸೆಕ್ರೆಟರಿಯವರು ಇದ್ದಾರೆ, ಎರಡು ಸಾವಿರ ಚಿಲ್ಲರೆ, ಮೂರು ಸಾವಿರ ಚಿಲ್ಲರೆ ಸಂಬಳವನ್ನು ತೆಗೆದುಕೊಳ್ಳತಕ್ಕಂತಹ ಸೆಕ್ರೆಟರಿಯವರು ಇದ್ದಾರೆ ನಿಮ್ಮ ಇಷ್ಟ ಬಂದಷ್ಟು ಸಂಬಳವನ್ನು ಫಿಕ್ಸ್ ಮಾಡಿದಂತಹ ಸೆಕ್ರೆಟರಿಗಳು ಒಂದೇ ಹುದ್ದೆಯಲ್ಲಿದ್ದಾರೆ. ಅವರನ್ನು ಎಲ್ಲಿಗೆ, ಯಾವ ಸೊಸೈಟಿ ಹಾಕಿದರೆ ಫಿಜಿಬಲ್ ಎಂದು ಡಿಸಿಸಿ ಬ್ಯಾಂಕ್‌ನಲ್ಲಿ ಯೋಚನೆಯನ್ನು ಮಾಡುತ್ತಿಲ್ಲ. ಒಂದು ಸಹಕಾರ ಸಂಘದ ಸೆಕ್ರೆಟರಿಯನ್ನು ಈ ಸಂಘದಿಂದ ಮತ್ತೊಂದು ಸಂಘಕ್ಕೆ ವರ್ಗಾವಣೆಯನ್ನು ಮಾಡುತ್ತೇನೆಂದು ಹೇಳುವುದಕ್ಕೆ ನೀವು ಯಾರು? ಡಿಸಿಸಿ ಬ್ಯಾಂಕ್‌ನವರು ಕಾಮನ್ ಕೇಡರ್ ಅಥಾರಿಟಿಗೆ ಹೈಕೋರ್ಟ್ ಸ್ಟೇಯನ್ನು ಕೊಟ್ಟು ಮೇಲೆ ನೀವು ಇನ್ನು ಏಕೆ ಅಪರೇಟ್ ಮಾಡುತ್ತಿದ್ದೀರಾ? ಇದನ್ನು ಯಾರು ಕೇಳಲೇ ಬಾರದು. ಇದರ ಕಡೆ ಗಮನವನ್ನು ತಾವು ಕೊಡಬೇಕು, ಡಿಸಿಸಿ ಬ್ಯಾಂಕ್‌ಗಳು ಹೇಳುವುದು ಎಲ್ಲಾ ಸರಿಯೆಂದು ಭಾವಿಸಿದ್ದರೆ ಅದು ಅಷ್ಟು ಚೆನ್ನಾಗಿಲ್ಲ. ಸೊಸೈಟಿಗಳು ಬ್ಯಾಂಕ್‌ಗಳು ಬಹಳ ದಿವಸಗಳು ಉಳಿಯುತ್ತವೆಂದು ತಾವು ನಂಬಬಾರದು. ನಿಮ್ಮ ಸರ್ಕಾರಕ್ಕೆ ಒಂದು ಹೆಸರು ಇದೆ ಅದನ್ನು ಉಳಿಸಿಕೊಳ್ಳಿ. ಸೊಸೈಟಿಗಳು ಪುನಶ್ಚೇತನ ಆಗಿದ್ದು ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ. ಇಲ್ಲಿ ನಿಂತುಕೊಂಡು ಮುಷ್ಕರವನ್ನು ಮಾಡಿದ್ದೆವು, ಅವತ್ತು ನಿಮ್ಮ ಪಾರ್ಟಿಯಿಂದ ಗೆದ್ದವರು ಇಲ್ಲಿದ್ದರು. ಏನಾದರೂ ಮಾಡಿ ಸಾಲ ಮನ್ನಾ ಮಾಡಿ,

ಬಡ್ಡಿಯನ್ನು ಮನ್ನಾ ಮಾಡಿ ಎಂದು. ಅಂತಹ ಪ್ರಿನ್ಸಿಪಲ್, ತತ್ವ ಎಲ್ಲಿಗೆ ಹೋಯಿತು. ಆವತ್ತು ನಬಾರ್ಡ್ ನಿಬಂಧನೆಗಳನ್ನು ಎಲ್ಲಾ ತೆಗೆದು ಹಾಕಿ ಎಂದು ಹೇಳುತ್ತಿದ್ದರು ಇವತ್ತು ಏಕೆ ನಬಾರ್ಡನ್ನು ತೋರಿಸುತ್ತಿದ್ದೀರಿ? ಮಾಡಿ ಸ್ವಾಮಿ ಅಧಿಕಾರಕ್ಕೆ ಬಂದಾಗ ಏನು ಮಾತನಾಡುತ್ತಿದ್ದೇವೆ ಅದನ್ನು ಇತ್ಯರ್ಥ ಮಾಡಬೇಕು. ಇನ್ನು ಪಿಎಲ್‌ಡಿ ಬಗ್ಗೆ ಅಂತೂ ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಪಿಎಲ್‌ಡಿ ಬ್ಯಾಂಕ್‌ಗೆ ಈ ರಾಜ್ಯದಲ್ಲಿ ಬೇರೆ ಯಾರೂ ಸಮರ್ಥರು ಇಲ್ಲ. ಆ ಬೋರ್ಡ್ ಅಷ್ಟೇ, ಯಾರು ಡಿಸ್ಟ್ರಿಕ್ಟ್ ಡೈರಕ್ಟರ್ ಗೆದ್ದಿರುತ್ತಾರೆ ಅದು ಒಂದು ಸೊಸೈಟಿಯಲ್ಲಿ ಎಲಿಜಿಬಿಲ್ ಆಗಿರುತ್ತಾರೆ. ಅಕಸ್ಮಾತ್ ಜಾಸ್ತಿ ಎಂದರೆ ಒಂದೋ ಎರಡೋ ಓಟನ್ನು ಹಾಕುವುದಕ್ಕೆ ಎಲಿಜಬಲ್ ಆಗುತ್ತಾರೆ. ತಾವು ಕಾನೂನು ಮಾಡಿಬಿಟ್ಟರಿ ಯಾರದ್ದು ರೆಕವರಿ ಪೊಜಿಷನ್ ಇಷ್ಟು ಪರ್ಸೆಂಟ್ ಇಲ್ಲ ಅವರಿಗೆ ಪ್ರಸೆಂಟೇಷನ್ ರೈಟ್ ಇಲ್ಲ. ಇದು ಯಾವ ದೇಶದ ಕಾನೂನು? ನೀವು ಸ್ವಲ್ಪ ಯೋಚನೆಯನ್ನು ಮಾಡಿ ನೋಡಬೇಕು. ಯಾರೋ ಸುಸ್ತಿಯಾದರೆ ಆ ಮೆಂಬರ್ಸ್‌ನ್ನು ರೆಪ್ರೆಸೆಂಟ್ ಮಾಡಲಿಕ್ಕೆ ಅಪೆಕ್ಸ ಇನ್‌ಸ್ಟಿಟ್ಯೂಷನ್ ಬರುವುದಿಲ್ಲವೆಂದು ನಿರ್ಬಂಧವನ್ನು ಮಾಡಿದರೆ ಕೋ ಆಪರೇಟೀವ್ ಮೂವ್‌ಮೆಂಟ್ ಬೆಳೆಯುತ್ತದೆಯೇ? ನೀವು ಕೊಡುವ ಸಾಲಕ್ಕೂ ಆ ಬ್ಯಾಂಕ್‌ನ್ನು ಪ್ರತಿನಿಧಿಸುವುದಕ್ಕೂ ಏನು ಸಂಬಂಧ? ದಯಮಾಡಿ ಇದನ್ನು ತೆಗೆಯಬೇಕು. ಇವತ್ತು ನಿಮ್ಮ ಹತ್ತಿರ ಡೈರಕ್ಟರ್‌ಗಳು ಇದ್ದಾರೆ ಆದರೆ ಅವರುಗಳ ಹೆಸರನ್ನು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಅವರವರ ಬ್ಯಾಂಕ್‌ಗಳು ಮಾತ್ರ ಎಲಿಜಿಬಲ್ ಆಗುತ್ತಿದೆ. ಬೇಕಾದರೆ ತುಮಕೂರಿನಲ್ಲಿ 9 ಪಿಎಲ್‌ಡಿ ಬ್ಯಾಂಕ್‌ಗಳು ಡಿಸ್‌ಕ್ವಾಲಿಫೈಡ್ ಆಗಿದೆ ಅದರ ರೆಕಾರ್ಡ್ಸ್‌ನ್ನು ತೆಗೆಸಿ ನೋಡಿ. ಇಡೀ 9 ಪಿಎಲ್‌ಡಿ ಬ್ಯಾಂಕ್‌ಗಳಲ್ಲಿ ಮಾತ್ರ ಚುನಾವಣೆಯನ್ನು ನಡೆಸುವುದಕ್ಕೆ ಕ್ವಾಲಿಫೈಡ್ ಎನ್ನುತ್ತಾರೆ. ನೀವು ಮ್ಯಾನೇಜ್ ಮಾಡುವಾಗ ನೋಡಬೇಕು, ಕೇಳಬೇಕು ನಮ್ಮ ಬ್ಯಾಂಕ್‌ಗೆ ಬಂದಿದೆ ಇಂತಹ ಅಕೌಂಟ್‌ನ್ನು ಇಂತಹ ಲೋನ್‌ನ್ನು....

ಅಧ್ಯಕ್ಷರು: ಅದು ಅಕ್ಚ್ಯುಲಿ ಹಾಗಿಯೇ ಇರುತ್ತದೆಯೇ? ರೆಕವರಿ ಪೊಸಿಷನ್ ಅಥವಾ ಡೈರಕ್ಟರ್ ಆಗಿ ಆಯ್ಕೆಯಾಗುವುದಕ್ಕೆ ಆ ರೀತಿಯಾಗಿ ಮ್ಯಾನೇಜ್ ಮಾಡುತ್ತಾರಾ?

ಶ್ರೀ ಜೆ.ಸಿ.ಮಾಧುಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, there are managing like that,

ಅಧ್ಯಕ್ಷರು: ಅದಕ್ಕೆ ಗೊತ್ತಾಗಲಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಪಿಎಲ್‌ಡಿ ಬ್ಯಾಂಕ್ ಸ್ಟ್ರಕ್ಚರ್‌ನಲ್ಲಿ ಕೇಳಬೇಕು. ಅಲ್ಲಿ ಒಂದು ಸಾರಿ ಡೈರಕ್ಟರ್ ಆದರೆ ಕನಿಷ್ಟ ಪಕ್ಷ 15 ರಿಂದ 20 ವರ್ಷಗಳು ಮುಂದುವರೆಯುತ್ತಾರೆ. ಈ ರೀತಿಯಾಗಿ ಇದೆ.

ಅಧ್ಯಕ್ಷರು: ಪಿಸಿಎಆರ್‌ಡಿ ಬ್ಯಾಂಕ್‌ಗಳು.

ಶ್ರೀ ಜೆ.ಸಿ.ಮಾಧುಸ್ವಾಮಿ: ಅದನ್ನೇ ನಾನು ಹೇಳಿದೆ.

ಶ್ರೀ ಎನ್.ಎಸ್.ಪಾಟೀಲ್ (ಸಹಕಾರ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ನಾವು ಅಮೆಂಡ್‌ಮೆಂಟ್ ತಂದಿದ್ದೇವೆ. ಆಗ ಅಮೆಂಡ್‌ಮೆಂಟ್ ಮೇಲೆ ಮಾತನಾಡಬಹುದು. ಅದಕ್ಕೆ ಎಲ್ಲಾ ಒಪ್ಪಿದ್ದೇವೆ. ಈಗಾಗಲೇ ಅಮೆಂಡ್‌ಮೆಂಟನಲ್ಲಿ ತಾವು ಕೇಳತಕ್ಕದ್ದು ಎಲ್ಲಾ ಇದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಆಮೇಲೆ ಅಮೆಂಡ್‌ಮೆಂಟ್ ಮೇಲೆ ಮಾತನಾಡುತ್ತೇನೆ. ನಾನು ಇಲ್ಲಿ ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ ತಾವು ನಡೆಸುತ್ತಿರುವಂತಹ ಬ್ಯಾಂಕ್‌ಗಳನ್ನು ರೆಕವರಿ ಇಲ್ಲವೆಂದು ಹೇಳಿಬಟ್ಟು ಫರ್ದರ್ ಫೈನಾನ್ಸ್ ಮಾಡದಂತೆ, ನಾನು ಇವತ್ತು ನನ್ನ ಜಮೀನನ್ನು ಒತ್ತೆ ಇಟ್ಟಿರುತ್ತೇನೆ ಯಾರೋ ಸಾಲವನ್ನು ತೀರಿಸಲಿಲ್ಲ ಎಂದರೆ ನನಗೆ ಇವತ್ತು ಸಾಲ ಇಲ್ಲ. ಬೇರೆ ಸದಸ್ಯರಿಗೆ ಅವಕಾಶ ಇಲ್ಲ. ಬೇರೆ ಕಡೆ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. Because my Land is already pledge to the PLD Bank ನೀವು ಕಾಗದವನ್ನು ಏನೆಂದು ನಮಗೆ ಬರೆಯುತ್ತೀರಿ ಎಂದರೆ, ಶಾಸಕರಾಗಿ ಎಲ್ಲರೂ ಸಹ ಸಾಲವನ್ನು ಕಟ್ಟಿ, ಅದರಲ್ಲಿ ಅಮೌಂಟನ್ನು ಸಹ ತಿಳಿಸಿ ಬರೆದಿರುತ್ತೀರಿ. ನನಗೆ ಇಷ್ಟು ಹಣ ಇದೆ ಕಟ್ಟಿ ಎಂದು ಕೇಳಿದರೆ ಸಾಲವನ್ನು ಕಟ್ಟುತ್ತೇನೆ ಆಗ ಕೊಡಿಸಿ ಸಾಲವನ್ನು. ಏಕೆ ಕೊಡುವುದಿಲ್ಲ? when a man facing financial Problem ಅಂಥವನಿಗೆ ಸಾಲ ತೆಗೆದುಕೊಳ್ಳುವುದಕ್ಕೆ ಎಲಿಜಿಬಲ್ ಮಾಡಬೇಕು. ಇಂಥ ಬ್ಯಾಂಕ್‌ಗೆ ಬಾರೋಯಿಂಗ್ ಕೆಪ್ಯಾಸಿಟಿ ಇಲ್ಲ. ಈ ಬ್ಯಾಂಕ್‌ಗೆ ಫರ್ದರ್ ಫೈನಾನ್ಸ್ ಇಲ್ಲ. ಈ ಬ್ಯಾಂಕ್ ನಿಮ್ಮ ಸ್ಟೇಟ್ ಲ್ಯಾಂಡ್ ಬ್ಯಾಂಕ್‌ಗೆ ಓಟು ಹಾಕುವುದಕ್ಕೆ ಅರ್ಹತೆ ಇಲ್ಲ. ಈ ಓಟು ಹಾಕುವಂತಹ ಅರ್ಹತೆಯನ್ನು ದಯಮಾಡಿ ಲೋನ್‌ಗೆ ಲಿಂಕ್ ಮಾಡಬೇಡಿ. ಮತ್ತೆ ಲೋನನ್ನು ಯಾವ ಮೆಂಬರ್ ಕಟ್ಟುತ್ತಾನೆ ಅವನಿಗೆ ಮತ್ತೆ ಲೋನ್ ಕೊಡಿಸುವಂತಹ ವ್ಯವಸ್ಥೆಯನ್ನು ಮಾಡಿ. ಇಲ್ಲದೇ ಇದ್ದರೆ ಬ್ಯಾಂಕ್ ಬೆಳೆಯುವುದಿಲ್ಲ. ನೀವು ಅಗ್ರಿಕಲ್ಚರ್ ಫೈನಾನ್ಸ್ ಸ್ಕೀಂನ್ನು ಮಾಡಿ. ಇಲ್ಲದೇ ಇದ್ದರೆ ಬ್ಯಾಂಕ್ ಬೆಳೆಯುವುದಿಲ್ಲ. ನೀವು ಅಗ್ರಿಕಲ್ಚರ್ ಫೈನಾನ್ಸ್ ಸ್ಕೀಂನ್ನು ತಂದಿರಿ 90 ಪರ್ಸೆಂಟ್ ಫ್ರಾಡ್ 90 ಪರ್ಸೆಂಟ್ ಇವತ್ತು ನಾನ್ ರಿಕವರಬಲ್ ಲೋನ್. ರೈತರಿಗೆ ಆಗಿದ್ದರೆ ಹರಾಜು ಹಾಕುತ್ತೀರಿ, ಅಫಿಷಿಯಲ್ಸ್‌ಗಳಿಗೆ, ಹೆಣ್ಣುಮಕ್ಕಳುಗಳಿಗೆ, ಕಾರ್ ಡ್ರೈವರ್‌ಗಳಿಗೆ ಮತ್ತೊಬ್ಬರಿಗೆ ಇನ್ನೊಬ್ಬರಿಗೆ ಸಾಲವನ್ನು ಕೊಟ್ಟಿರುತ್ತೀರಿ ಅವರುಗಳ ಅಡ್ರೆಸ್‌ಗಳೂ ಸಹ ಇವರಿಗೆ ಗೊತ್ತಿಲ್ಲ.

MR. SPEAKER: You mean Non-farming Sector.

ಶ್ರೀ ಜೆ.ಸಿ.ಮಾಧುಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, Non-forming Sectorಗೆ

ಎಷ್ಟು ಕೊಟ್ಟಿದ್ದೀರಿ. ಹಣವನ್ನು ತಂದಿರಿ ಕೊಟ್ಟಿರಿ. ಸಾಲ ವಸೂಲಿಯಾಗುತ್ತಿಲ್ಲ. ಅದನ್ನು ಬಿಟ್ಟು ಬಿಡಿ. ನಾನು ಮುಂದೆ ನಿಂತುಕೊಂಡು ಅಗ್ರಿಕಲ್ಚರ್‌ಗೆ ಕೊಟ್ಟಿರತಕ್ಕಂತಹ ಸಾಲವನ್ನು ವಸೂಲಿ ಮಾಡಿಸಿಕೊಡುತ್ತೇನೆ. ಯಾವ ಪಿಎಲ್‌ಡಿ ಬ್ಯಾಂಕ್‌ನಲ್ಲೂ ಅಗ್ರಿಕಲ್ಚರ್ ಲೋನ್ 50 ಪರ್ಸೆಂಟ್‌ಗಿಂತಲೂ ಜಾಸ್ತಿ ಇಲ್ಲ. ಇದನ್ನು ಲಿಂಕ್ ಮಾಡಿ 40 ಪರ್ಸೆಂಟ್ ಆಫ್ ಯುವರ್ ಗ್ರಾಸ್ ಲೋನ್ ನಾನ್ ಫಾರ್ಮಿಂಗ್ ಸೆಕ್ಟರ್‌ನಲ್ಲಿ ಇದೆ.

ಅಧ್ಯಕ್ಷರು: ನಿಮ್ಮದು ರೆಕವರಿ ಚಾರ್ಜ್‌ಸ್ ಬಗ್ಗೆ ಏನಾದರೂ ಅಬ್ಜೆಕ್ಷನ್ ಇದೆಯಾ? ಎಷ್ಟು ಇರಬೇಕು ಎಂದು. ಏಕೆಂದರೆ ನನಗೆ ಗೊತ್ತಿಲ್ಲ ಅದನ್ನು ತಿಳಿದುಕೊಳ್ಳೋಣ ಎಂದು.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾನು ಸೆಪ್ಟಂಬರ್ 30ನೇ ತಾರೀಖಿಗಿಂತಲೂ ಮೊದಲೇ ಸಾಲವನ್ನು ಕಟ್ಟಿದರೂ ಅಮೌಂಟ್ ಮೇಲೆ ರೆಕವರಿ ಚಾರ್ಜ್‌ನ್ನು ಇಷ್ಟು ಪರ್ಸೆಂಟ್ ಎಂದು ಕೊಡಬೇಕು. Whether you are default or not ಡಿಫಾಲ್ಟ್ ಆಗದೇ ಹೋದರೆ ರೆಕವರಿ ಚಾರ್ಜ್‌ನ್ನು ಇವರು ಕೇಳುವುದಕ್ಕೆ ಬರುವುದಿಲ್ಲ. ಪೀನಲ್ ಇಂಟರೆಸ್ಟ್ ಹಾಕುವುದಕ್ಕೆ ಬರುವುದಿಲ್ಲ. ಇವರ ಸ್ಟಾಫ್, ಇವರ ಬೋರ್ಡ್‌ನವರು ಓಡಾಡುವ ಎಲ್ಲಾ ಜೀಪ್‌ಗಳ ಖರ್ಚನ್ನು ಸಾಲಗಾರರು ಕೊಡಬೇಕಾಗುತ್ತದೆ. 1,000ಕ್ಕೆ ಇಷ್ಟು ಒಂದು ಪರ್ಸೆಂಟ್, ಅರ್ಧ ಪರ್ಸೆಂಟ್ ಎಂದು ಏನೋ ಫೀ ಲೆಕ್ಕಾಚಾರ ಇದೆ. ಇವುಗಳೆಲ್ಲಾ ನಮ್ಮ ಮೇಲೆ ಏಕೆ ಹಾಕುತ್ತಿದ್ದೀರಿ? ನಿಮ್ಮ ಹತ್ತಿರ ಬಂದು ಸಾಲವನ್ನು ಮಾಡುವುದು ತಪ್ಪಾ? ಇದಕ್ಕೆ ಮೊದಲು ಅಡಮಾನ್ ಬ್ಯಾಂಕ್ ಎಂದು ಇತ್ತು. ಜಮೀನನ್ನು ಅಡಮಾನ ಮಾಡಲಿಕ್ಕೆ ಇಟ್ಟುಕೊಂಡಿದ್ದಂತಹ ಬ್ಯಾಂಕ್ ಇದು.

ಅಧ್ಯಕ್ಷರು: ಎಲ್‌ಎಂಸಿಎನ್.

ಶ್ರೀ ಜೆ.ಸಿ.ಮಾಧುಸ್ವಾಮಿ: ಎಲ್‌ಎಂಸಿಎಸ್ ಇದನ್ನು ತೆಗೆದುಕೊಂಡು ಬಂದು ಇವತ್ತು ಇನ್ನೊಂದು ಮಾಡಿಬಿಟ್ಟಿದ್ದಾರೆ. ಡೆಪಾಸಿಟ್ ರೈಸ್ ಮಾಡಿ, ನಾನ್ ಫಾರ್ಮಿಂಗ್ ಸೆಕ್ಟರ್‌ಗೆ ಲೋನ್ ಕೊಡಿ. ಕೈಗಾರಿಕೆಗಳಿಗೆ ಸಾಲವನ್ನು ಕೊಡಿ, ಮತ್ತೊಂದು ಕಡೆ ಕೊಡಿ. ನಿಮ್ಮ ಬ್ಯಾಂಕಿನ ಪ್ರಿನ್ಸಿಪಲ್ ಏನಿತ್ತು ಅದನ್ನು ಸಂಪೂರ್ಣವಾಗಿ ಡೈವರ್ಟ್ ಮಾಡಿಬಿಟ್ಟಿರುತ್ತೀರಿ. ನೀವು ರಾಷ್ಟ್ರೀಯ ಸಹಕಾರಿ ಬ್ಯಾಂಕ್ ಮಾಡುವ ಆಲೋಚನೆಯ ಕೆಳಗಡೆ ಇದ್ದ ವ್ಯವಸ್ಥೆಯನ್ನು ಕಾಲಿನಿಂದ ಕೆಳಗಡೆಗೆ ಎಳೆದು ಬಿಟ್ಟಿರುತ್ತೀರಿ.

11.50 ಪಿ.ಎಂ

ಇದಕ್ಕೆ ಯಾರು ಕಾರಣ? ತಾವು ಮಂತ್ರಿಗಳು ರೆವ್ಯೂ ಮಾಡುತ್ತೀರಿ, ಸಾಲ ವಸೂಲ್ಮಾಡುವುದಕ್ಕೆ ಕ್ರಮ ಜರುಗಿಸುತ್ತೇವೆ ಅಂದಾಗ ಆಡಳಿತ ಮಂಡಳಿಯನ್ನು ಏತಕ್ಕೆ ನಿಗದಿ ಮಾಡುತ್ತೀರಿ? Why are you not fixing your Staff, Supervisor, Secretary? ಸಾಲ ಕೊಡುವುದಕ್ಕೆ ಆಡಳಿತ ಮಂಡಳಿಯವರ

ಡಿಸ್ಟ್ರೀಷನ್‌ಗೆ ಬಿಟ್ಟಿದ್ದೀರಾ? ಆಡಳಿತ ಮಂಡಳಿಯಲ್ಲಿ ಸಾಲ ಕೊಡಬಾರದೆಂದು ಹೇಳಿದರೆ ನಿಮ್ಮ ಸ್ಟೇಟ್ ಲ್ಯಾಂಡ್ ಬ್ಯಾಂಕಿನವರು ಕೇಳುತ್ತಾರೆಯೇ? It is a routine affair. ಅಲ್ಲಿ ಬಂತು, ಇಲ್ಲಿ ಹೋಯಿತು ಎಂದು ಅಷ್ಟೆ. ಅವರಿಗೆ ಹಣ ಕೊಡಲಿಲ್ಲ.

ಅಧ್ಯಕ್ಷರು: ಡಿ.ಸಿ.ಆರ್.ಡಿ. ಬ್ಯಾಂಕ್ ಸತತವಾಗಿ 4-5 ವರ್ಷಗಳ ಕಾಲ ಶೇಕಡ 20-25ಕ್ಕೆ ಕಡಿಮೆ ಇಲ್ಲದಂತೆ ರಿಕವರಿ ಮಾಡಿದರೆ Should that Bank continue to have the elected body? ಸತತವಾಗಿ 4-5 ವರ್ಷಗಳ ಕಾಲ ಅವರು ರಿಕವರಿ ಮಾಡುವುದಿಲ್ಲ. 15-20 ಪರ್ಸೆಂಟ್ ಇರುತ್ತದೆ.

ಶ್ರೀ ಜಿ.ಸಿ.ಮಾಧುಸ್ವಾಮಿ: ಒಂದು ಕಡೆ ನಾನ್ ರಿಕವರಬಲ್ ಅಡ್ವಾನ್ಸಸ್ ಆಗಿದೆ. ಅದನ್ನು ಟಾರ್ಗೆಟ್ ಗ್ರೂಪ್‌ಗೆ ತಂದಿದ್ದಾರೆ. ಇನ್ನೊಂದು ಕಡೆ ಅರ್ಧ ಪರ್ಸೆಂಟ್, ಮುಕ್ಕಾಲು ಪರ್ಸೆಂಟ್, ಒಂದು ಪರ್ಸೆಂಟ್ ವ್ಯತ್ಯಾಸ ತೋರಿಸಿ You are not eligible ಅನ್ನುತ್ತಾರೆ. ಮಾರ್ಚ್ ಕೊನೆಗೆ, ಜೂನ್ ಕೊನೆಗೆ, ಸೆಪ್ಟಂಬರ್ ಕೊನೆಗೆ ಇವರು ಟಾರ್ಗೆಟ್ ಫಿಕ್ಸ್ ಮಾಡಿರುತ್ತಾರೆ. ಇವರಿಗೆ ಬೇಕಾದುದ್ದಾದರೆ ಬೇರೆ ಯಾವುದೋ ಅಡ್ಜಸ್ಟ್ ಮಾಡಿಕೊಂಡು ತೋರಿಸುತ್ತಾರೆ. ಈ ವಿಎಸ್‌ಎಸ್.ನಲ್ಲಿ ರೈತರಿಗೆ ಸಾಲ ಕೊಡುತ್ತಾರೆಂದರೆ ಸೂಪರ್‌ವೈಸರ್ ಖರ್ಚು ಹಾಕುವುದು ಮೊದಲು ಕ್ಯಾಷ್ ಕ್ರೆಡಿಟ್ ಲೋನ್‌ಗೆ. ಮೊದಲು ಅವನ ಜವಾಬ್ದಾರಿಯನ್ನು ತೀರಿಸಿಕೊಳ್ಳುತ್ತಾನೆ. ಯಾವುದೋ ಮಾರಾಟ ಮಾಡುವುದಕ್ಕೆ ದಿನಸಿ ತೆಗೆದುಕೊಳ್ಳುವುದಕ್ಕೆ ಸಾಲ ತಂದಿರುತ್ತಾನೆ, which is not allowed under law.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನೀವು 20 ಪರ್ಸೆಂಟ ವಸೂಲ್ಮಾಡಿದರೆ ಕೊಡುವುದಕ್ಕೆ ಬರುತ್ತದೆ, 25 ಪರ್ಸೆಂಟ್ ಮಾಡಿದರೆ ಬರುವುದಿಲ್ಲ ಎಂದು, ನೀವು ಕೇಳಿದ್ದೇ ಬೇರೆ, ಅವರು ಹೇಳಿದ್ದೇ ಬೇರೆ.

ಅಧ್ಯಕ್ಷರು: ನಾನು ಕೇಳಿದ್ದು, ಎಲೆಕ್ಟೆಡ್ ಬಾಡಿ ಇದ್ದು, ಮ್ಯಾನೇಜ್‌ಮೆಂಟ್ ಇದ್ದು 4-5 ವರ್ಷ ಆದರೂ ಕೂಡ ಒಂದು ವರ್ಷ ಅವರು 20 ಪರ್ಸೆಂಟ್ ಮೇಲೆ ರಿಕವರಿ ಮಾಡುವುದಕ್ಕಾಗುವುದಿಲ್ಲ ಅಂದರೆ ಅದಕ್ಕೆ ನಾವು ಅಡ್ಮಿನಿಸ್ಟ್ರೇಟರನ್ನು ಹಾಕಬಹುದಲ್ಲಾ, ಎಲೆಕ್ಟೆಡ್ ಬಾಡಿ ಇರಬೇಕೆ? ಅವರು ಜೀಪು ಹಾಕಿಕೊಂಡು ತಿರುಗಾಡುವುದಕ್ಕೆ ಮಾತ್ರ ಇರಬೇಕೇ?

ಶ್ರೀ ಜೆ.ಸಿ.ಮಾಧುಸ್ವಾಮಿ: ರಿಕವರಿ ಬಾಡಿಗೆ ಅವರು ಲಿಂಕ್ ಮಾಡಿರಲಿಲ್ಲ. ಸೂಪರ್‌ವೈಸರ್ ಇರುತ್ತಾರೆ, ರಿಕವರಿ ಮಾಡುತ್ತಾರೆ. If a man comes in the way of recovery, you disqualify him. ಬೋರ್ಡ್ ಆಫ್ ಡೆರೆಕ್ಟರ್ ಕಂತು ಕಟ್ಟಲಿಲ್ಲವೆಂದು ಸಾರಾಸಗಟಾಗಿ ನಮ್ಮ ಚಿಕ್ಕ ನಾಯಕನ ಹಳ್ಳಿಯಲ್ಲಿ ಡಿಸ್‌ಕ್ವಾಲಿಫೈ

ಮಾಡಿದ್ದಾರೆ.

MR. SPEAKER: Body takes the responsibility;

ಶ್ರೀ ಎಸ್.ಎಸ್.ಪಾಟೀಲ್: ಸಾಲ ಹಂಚುವುದಷ್ಟೇ ಬೋರ್ಡಿಗೆ ಬೇಕು; ತಾವು ಹೇಳುತ್ತಿರುವುದು, ಸಾಲ ಕೊಡುವ ಅಧಿಕಾರ ಅಷ್ಟೆ ಬೋರ್ಡಿಗೆ ಇರಬೇಕು, ಅವರಿಗೆ ವಸೂಲಿ ಮಾಡುವುದು ಬೇಕಾಗಿಲ್ಲ. ಅವರು ವಸೂಲ್ಮಾಡದಿದ್ದರೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಜೆ.ಸಿ.ಮಾಧುಸ್ವಾಮಿ: ನಾನು ಅದು ಹೇಳುತ್ತಿಲ್ಲ. ಇಂಥ ಬ್ಯಾಂಕಿಗೆ ಇಷ್ಟು ಅಮೌಂಟ್ ಎಂದು ನಿಗದಿ ಮಾಡಿ, ಸಾಲ ಕೊಡುವ ಅಧಿಕಾರ ಅವರಿಗೆ ಕೊಡಿ. 90 ಪರ್ಸೆಂಟ್ ರಿಕವರಿ ಕೇಳಿ. You ask 90%.

ಶ್ರೀ ಎಸ್.ಎಸ್.ಪಾಟೀಲ್: ತಾವು ಏನು ಹೇಳಿದಿರಲ್ಲಾ, ಬ್ಯಾಂಕುಗಳು ಹಾಳಾಗಿವೆ, ಲುಕ್ಸಾನಾಗಿವೆ ಎಂದು ಹೇಳಿದಿರಲ್ಲಾ ಆ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾರಿಂದ ಹಾಳಾಗಿದೆ ಎಂದು ತಾವು ನೋಡಬೇಕಲ್ಲಾ. ಕೇವಲ ನೌಕರರಿಂದ ಆಗಿಲ್ಲ. ಆ ಬ್ಯಾಂಕು ಹಾಳಾಗಿದ್ದರೆ ಅದು ಬೋರ್ಡ್‌ನಿಂದ ಹಾಳಾಗಿದೆ. ಅಂದಾಗ ಅದರ ಅವಶ್ಯಕತೆ ಏನಿದೆ?

ಶ್ರೀ ಹೆಚ್.ಎನ್.ನಂಜೇಗೌಡ: ಕೆಲವರು ಭಂಡರು ಇರುತ್ತಾರೆ, ಸಾಲ ಕಟ್ಟಿರುವುದಿಲ್ಲ, ಕೆಲವರು ವರ್ಷಂಪ್ರತಿ ಕಟ್ಟುವ ರೈತರು ಇರುತ್ತಾರೆ. ಕಟ್ಟದೇ ಇರುವವರಿಂದ ಕಟ್ಟುವವರಿಗೆ ತೊಂದರೆ. ಅದಕ್ಕೆ ಇಂಡಿವಿಜ್ಯುಯಲ್ ಆಗಿ ಕನ್ಸಿಡರ್ ಮಾಡಿ, ಅದು ಆಗುವುದಿಲ್ಲವೆಂದರೆ ಗ್ರಾಮವನ್ನು ಒಂದು ಯೂನಿಟ್ ಎಂದು ಮಾಡಿಕೊಂಡು ಒಂದು ಕಾರ್ಯಕ್ರಮ ಹಾಕಿ...

ಅಧ್ಯಕ್ಷರು: ಶ್ರೀ ಮಾಧುಸ್ವಾಮಿಯವರು ಬಹಳ ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಪಿ.ಎಲ್.ಡಿ. ಬ್ಯಾಂಕಿನಲ್ಲಿ ಏನಾಗುತ್ತದೆಂದರೆ, ಲೋನ್ ರೆಕಾರ್ಡ್ಸ್‌ನ್ನು ಡೈರೆಕ್ಟರ್ಸ್ ಬಿಲ್ಡ್‌ಅಪ್ ಮಾಡುತ್ತಾರೆ. ಯಾವುದಕ್ಕೆ ಪ್ರಾವಿಷನ್ ಇರುತ್ತದೆಂದು ನೋಡಿ ಬಿಲ್ಡ್ ಅಫ್ ಮಾಡುತ್ತಾರೆ. ಇವರೇ ತೆಗೆದುಕೊಂಡು ಹೋಗುತ್ತಾರೆ. ಡಿಸ್ಟ್ರಿಕ್ಟ್ ಬ್ರ್ಯಾಂಚ್ ಆಫೀಸ್‌ನಲ್ಲಿ ಹೋಗಿ ಲೀಗಲ್ ಅಸಿಸ್ಟೆಂಟ್ ಸಹಾಯ ತೆಗೆದುಕೊಂಡು ಆನ್ಸರ್ ಮಾಡಿಸುತ್ತಾರೆ. ಮೊದಲ ಕಂತನ್ನು ಬಿಡುಗಡೆ ಮಾಡಿಸುತ್ತಾರೆ. ಆಮೇಲೆ ಅಲ್ಲಿಗೆ ನಿಲ್ಲಿಸುತ್ತಾರೆ. ಏಕೆಂದರೆ, ಎರಡನೆಯ ಕಂತನ್ನು ಕೊಡಬೇಕಾದರೆ, ಇನ್ಸ್‌ಪೆಕ್ಷನ್‌ಗೆ ಬರುವ ವೇಳೆಗೆ ಲೀಗಲ್ ಅಸಿಸ್ಟೆಂಟ್ ಕ್ವೆರಿ ಹಾಕುತ್ತಾನೆ; ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾನೆ. ಇವು ಯಾವುವೂ ರಿಕವರಿ ಆಗುವುದಿಲ್ಲ. ಇವರು ರಿಕವರಿ ತೋರಿಸುವುದು ಎಲ್ಲಿ ಅಂದರೆ ಫೇಯಿಲ್ಡ್ ವೆಲ್ಸ್, ಸರ್ಕಾರದಿಂದ ರೆಮಿಷನ್ ಬರುತ್ತದಲ್ಲಾ ಅದು ಒಂದು, ಸಬ್ಸಿಡೀಸ್ ಇನ್ನೊಂದು. ಎರಡನ್ನು

ಇಟ್ಟುಕೊಂಡು ರಿಕವರೀಸ್ ಪರ್ಸೆಂಟೇಜ್ ಬೂಸ್ಟ್ಅಫ್ ಮಾಡುವುದು. ಆ್ಯಕ್ಚುಯಲ್ ರಿಕವರಿ ಮಾಡುವುದಿಲ್ಲ. ರಿಕವರಿ ಎಕ್ಸ್‌ಪೆನ್ಸಸ್ ನೋಡಿ ಎಷ್ಟಾಗುತ್ತದೆ? ಜೀಪಿಗೆ ಎಷ್ಟಾಗುತ್ತದೆ, ಕಾರಿಗೆ ಎಷ್ಟಾಗುತ್ತದೆ, ಟೆಲಿಫೋನ್ ಖರ್ಚು ಎಷ್ಟಾಗುತ್ತದೆ?

ಶ್ರೀ ಜೆ.ಸಿ.ಮಾಧುಸ್ವಾಮಿ: ಇಂಟೆನ್‌ಷನ್ ಡೀಫಾಲ್ಟರ್ಸ್, ತಾವು ಹೇಳಿದಹಾಗೆ 2-3 ವರ್ಷವಾದರೂ ರಿಕವರಿ ಪೊಸಿಷನ್ ಇಂಪ್ರೂವ್ ಆಗುವುದಿಲ್ಲ ಎಂಬುವವರಿಗೆ ನಾನು ಮಾರ್ಜಿನ್ ಕೊಡಿ ಎಂದು ಹೇಳುತ್ತಿಲ್ಲ. ಇವರಿಗೆ ಇರುವ ಮೇಜರ್ ರಿಕವರಿ ಸೆಕ್ಟಾರ್ ಅಂದರೆ ಟ್ರಾಕ್ಟರ್‌ನವರು, ಬೋರ್‌ವೆಲ್‌ನವರು, ಡ್ರಿಪ್ ಇರಿಗೇಷನ್‌ನವರು. ಒಂದು ಕಂತು ಡೀಫಾಲ್ಟರ್ ಆದರೂ ಟ್ರಾಕ್ಟರ್ ತೆಗೆದುಕೊಂಡು ಹೋಗಿ ನಿಲ್ಲಿಸಿಕೊಳ್ಳುತ್ತಾರೆ. ನಾನ್-ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ತಾವು ಅಷ್ಟು ಬಿಗಿ ಮಾಡಲಿಲ್ಲ. ಅಂಥ ರೈತರಿಗೆ ಮತ್ತೆ ಸಾಲ ಕೊಡುವ ವ್ಯವಸ್ಥೆ ಆಗಬೇಕು. ಎರಡನೆಯದಾಗಿ ಸಣ್ಣಪುಟ್ಟ ವಿಚಾರಗಳಿಗೆ ಮಾನ್ಯ ಸಚಿವರು ಎಲ್ಲಾ ಬೋರ್ಡ್ ಆಫ್ ಡೈರೆಕ್ಟರ್ಸ್ ಮೇಲೆ ಗದಾಪ್ರಹಾರ ಮಾಡುತ್ತೀರಿ. ನಾನು ಇದು ತಪ್ಪು ಅನ್ನುವುದಿಲ್ಲ. ಆದರೆ ಒಂದು ಪ್ರಶ್ನೆ ಕೇಳುವುದಕ್ಕೆ ಬಯಸುತ್ತೇನೆ. ಬೆಂಗಳೂರು ಡಿಸಿಸಿ. ಬ್ಯಾಂಕ್ ಏನು ಮಾಡಿದೆ? 58 ಕೋಟಿ ರೂಪಾಯಿ ಹಗರಣ ಇರುವ ಡಿಸಿಸಿ. ಬ್ಯಾಂಕ್ ತಮ್ಮ ಗಮನಕ್ಕೆ ಬಂದಿಲ್ಲವೆ?

ಶ್ರೀ ಎಸ್.ಎಸ್.ಪಾಟೀಲ್: ಬೋರ್ಡ್ ಆಫ್ ಡೈರೆಕ್ಟರ್‌ಗಳದ್ದು ತಪ್ಪಿದೆ, ಅವರೇ ಮಾಡಿದ್ದಾರೆ. ಆದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಡಿ ಎಂದು ಹೇಳುತ್ತೀರಲ್ಲಾ ಬರೀ ಸಾಲ ಹಂಚುವುದಷ್ಟೇ ಜವಾಬ್ದಾರಿ ಅವರಿಗೆ ಕೊಡಿ, ವಸೂಲಿ ಮಾಡುವ ಜವಾಬ್ದಾರಿ ಕೊಡಬೇಡಿ ಎಂದು ತಾವು ಆಗಲೇ ಹೇಳಿದಿರಿ. ಅವರು ಹೇಳಿದ ಹಾಗೆ ನೌಕರರ ಮೇಲೆ ಹಾಕಿ, ಅಲ್ಲಿ ಸಂಪೂರ್ಣ ಬೋರ್ಡ್ ಮಾಡಿದೆ ಎಂದು ಹೇಳಿ ಅದೆಲ್ಲವನ್ನೂ ವಿವರವಾದ ತನಿಖೆಗೆ ಕೊಟ್ಟಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಸೆಕ್ಷನ್ 126-ಎ ಕೆಳಗೆ ಅವರು ಡಿಸ್‌ಕ್ವಾಲಿಫೈ ಆಗಿರುವುದು, ಡೀಫಾಲ್ಟರ್ ಒಂದೇ ಅಲ್ಲ. ನಿಮ್ಮ ಬೋರ್ಡ್‌ನಲ್ಲಿ ಉದ್ದೇಶಪೂರ್ವಕವಾಗಿ ಆ ಸಂಸ್ಥೆಗೆ ನಷ್ಟ ಮಾಡಿದ್ದಾರೆ. ನಿಮ್ಮ ಜಾಯಿಂಟ್ ರಿಜಿಸ್ಟ್ರಾರ್ 40-50 ಪುಟ ಬರೆದಿದ್ದಾರೆ. ಆ ಬೋರ್ಡ್‌ನಲ್ಲಿ ಕುಳಿತುಕೊಂಡು ಏನೇನು ಚರ್ಚೆಯಾಗಿದೆ ಎಂಬ ಮಾಹಿತಿಯನ್ನು ನಾನು ತಮಗೆ ಕೊಡುತ್ತೇನೆ. ಅದು ಯಾವ ಯಾವ ತಾರೀಖಿನಲ್ಲಿ ಅಂದರೆ 16ಮತ್ತು 17ರಂದು. ನಾನು ಅವರ ಹೆಸರು ಬೇಕಾದರೆ ಹೇಳುತ್ತೇನೆ. ನವ ಕರ್ನಾಟಕ ಎಂಬ ಸೊಸೈಟಿ ಮಾರ್ಚ್ 16ಕ್ಕೆ ರಿಜಿಸ್ಟರ್ ಆಗುತ್ತದೆ. 15ನೇ ಏಪ್ರಿಲ್‌ಗೆ 400 ಲಕ್ಷ ರೂಪಾಯಿ ಸಾಲ ತೆಗೆದುಕೊಳ್ಳುತ್ತಾರೆ. ಕೇವಲ 29 ದಿನಗಳಲ್ಲಿ ಸಾಲ ತೆಗೆದುಕೊಳ್ಳುತ್ತಾರೆ. ಅದರ Paid up share ಎಷ್ಟಿತ್ತು? ಅವರ ಕೆಪ್ಯಾಸಿಟಿ ಏನಿತ್ತು? What was that Society doing and for whose sake it was functioning? ಗೊತ್ತಿಲ್ಲ. ಅದೇ

ರೀತಿ ಕೊನಾರ್ಕ್ ಎಂಬ ಇನ್ನೊಂದು ಸೊಸೈಟಿ ಏಪ್ರಿಲ್ 10ಕ್ಕೆ ರಿಜಿಸ್ಟರ್ ಆಗುತ್ತದೆ, 20ನೇ ಏಪ್ರಿಲ್‌ಗೆ ಅಪ್ಲೈ ಮಾಡುತ್ತಾರೆ. 29ನೇ ಏಪ್ರಿಲ್‌ಗೆ 400 ಲಕ್ಷ ರೂಪಾಯಿ ಸಾಲ ತೆಗೆದುಕೊಳ್ಳುತ್ತಾರೆ....

ಶ್ರೀ ಎಸ್.ಎಸ್.ಪಾಟೀಲ್: ತಾವು ಆಗ ಕೇಳಿದರಲ್ಲಾ, ಇದರಲ್ಲಿ ಯಾರನ್ನು ಜವಾಬ್ದಾರಿ ಹಿಡಿಯಬೇಕು ಎಂದು. ನೌಕರರನ್ನು ಹಿಡಿಯಬೇಕೇ, ಬೋರ್ಡ್ ಅನ್ನು ಹಿಡಿಯಬೇಕೇ?...

ಶ್ರೀ ಜೆ.ಸಿ.ಮಾಧುಸ್ವಾಮಿ: ನನ್ನನ್ನು ತಾವು ಕನ್‌ಫ್ಯೂಸ್ ಮಾಡೇಡಿ. ನಾನು ಬೋರ್ಡ್ ಆಫ್ ಡೈರೆಕ್ಟರ್ಸ್‌ಗೆ ಸ್ಕಾಟ್‌ಫ್ರೀ ಆಗಿ ಬಿಡಿ ಎಂದು ಹೇಳಲಿಲ್ಲ. ಆದರೆ ಅವರಿಗೆ ಇಷ್ಟು ಅಧಿಕಾರ ಕೊಡುತ್ತೀರಲ್ಲಾ? 4 ಕೋಟಿ ಕೊಡಿ, 5 ಕೋಟಿ ಕೊಡಿ, 400 ಲಕ್ಷ ಕೋಡಿ, 500 ಲಕ್ಷ ಕೊಡಿ ಎಂದು ಹೇಳುತ್ತೀರಲ್ಲಾ. ಯಾರದ್ದೋ ಡಿಫಾಸಿಟರ್ಸ್ ಹಣ ತೆಗೆದುಕೊಂಡು ಬಂದು ಇವತ್ತು ಡಿಸಿಸಿ ಬ್ಯಾಂಕ್ ನಡೆಸುತ್ತಿರುವ ಕಡೆ ಅಡ್‌ಹಾಕ್ ಕಮಿಟಿ ಎಂದು ಮಾಡಿ, ನಿಮ್ಮ ಅಫಿಶಿಯಲ್ ಡೈರೆಕ್ಟರ್ ಇಲ್ಲದಾಗ ಎಲ್ಲಾ ಕಾರ್ಯಕ್ರಮಗಳನ್ನು ರದ್ದು ಮಾಡಿ 1ರಿಂದ 7ರವರೆಗಿನ ಅಜೆಂಡಾ ನಿಲ್ಲಿಸಿ 7ನೇ ಪಾಯಿಂಟ್ ತೆಗೆದುಕೊಂಡು ತಕ್ಷಣ ಎಷ್ಟು ಸಾಲ ಮಂಜೂರ್ಮಾಡಿದ್ದಾರೆ ಅದನ್ನು ಕ್ಯಾಷ್ ಡ್ರಾ ಮಾಡಿಕೊಂಡು ಹೋಗಲಿ ಅನ್ನುವವರಿಗೆ ತಾವು ಏನು ಕ್ರಮ ತೆಗೆದುಕೊಂಡಿರಿ? ತಾವು ಮೇಲ್ಮನೆಯಲ್ಲಿ ಇದನ್ನು ಸಿಬಿಐ.ಗೆ ವಹಿಸುತ್ತೇವೆಂದು ಹೇಳಿದಿರಿ. ವಹಿಸಿದ್ದೀರಾ? ಎಷ್ಟು ದಿನ ಆಯಿತು? ಮಾನ್ಯ ಜಾಲಪ್ಪನವರು ಸಹಕಾರಿ ಮಂತ್ರಿಗಳಾದಾಗಿನಿಂದ ಚರ್ಚಿಸುತ್ತಿದ್ದೇವೆ. ಇದು ಇವತ್ತಲ್ಲ ಹೇಳುತ್ತಿರುವುದು. ಅಲ್ಲಿರತಕ್ಕ ಬೋರ್ಡ್ ಆಫ್ ಡೈರೆಕ್ಟರ್ಸ್ ಏನೇನು ಮಾಡಿದ್ದಾರೆ ಸ್ವಾಮಿ? ಯಾರು ಯಾರು ಹಣ ಕಟ್ಟಿಲ್ಲ ಅವರ ಹೆಸರು ಹೇಳಲೆ? ಕ್ರಮ ತೆಗೆದುಕೊಳ್ಳುತ್ತೀರಾ? ನಿಮಗೆ ಆ ಶಕ್ತಿ ಇದೆಯೆ? Can you take action against these persons? ಇಲ್ಲಿ ತಿಮಿಂಗಿಲಗಳನ್ನು ಬಿಟ್ಟುಕೊಂಡು ನಮ್ಮ ತಾಲ್ಲೂಕಿನ ಪಿಎಲ್‌ಡಿ. ಬ್ಯಾಂಕಿನಲ್ಲಿ 2 ಸಾವಿರ ರೂಪಾಯಿ ಕಟ್ಟದೆ ಡೀಫಾಲ್ಟರ್ ಆಗಿದ್ದಾರೆಂದು ಬೋರ್ಡ್ ಆಫ್ ಡೈರೆಕ್ಟರ್ಸ್ ಅನ್ನು ಡಿಸ್‌ಕ್ವಾಲಿಫೈ ಮಾಡುತ್ತೀರಿ. ಜಾಯಿಂಟ್ ಡೈರೆಕ್ಟರ್‌ಗೆ ಅಪೀಲು ಹಾಕಿದರೂ ಇಲ್ಲ, ಇಲ್ಲ, ಮೊದಲೇ ಡಿಸ್‌ಕ್ವಾಲಿಫೈ ಆಗಿದ್ದಾರೆಂದು ಆರ್ಡರ್ ಮಾಡುತ್ತೀರಿ. ಅದೇ ಜಾಯಿಂಟ್ ಡೈರೆಕ್ಟರ್‌ತಮ್ಮ 70 ಪುಟಗಳ ವರದಿಯಲ್ಲಿ ಬರೆಯುತ್ತಾರೆ; Seventy pages against that Bank. 58 ಕೋಟಿ ರೂಪಾಯಿ ನಿಮ್ಮ ಅಧ್ಯಕ್ಷರಿಂದಾಗಿ ನಿಮ್ಮ ಬ್ಯಾಂಕಿಗೆ ನಷ್ಟವಾಗಿದೆ ಎಂದು ಬರೆಯುತ್ತಾರೆ. ಕಾವೇರಿ ಡಿಸ್ಟಿಲರಿ ನಡೆಸುತ್ತಿರುವ ಒಬ್ಬ ಮನುಷ್ಯ 3 1/2 ಕೋಟಿ ರೂಪಾಯಿಗೆ ಸುಸ್ತಿಯಾಗಿದ್ದಾನೆ. ತಾವು ಅವನಿಗೆ ಯಾವ ಆಧಾರದ ಮೇಲೆ ಸಾಲ ಕೊಟ್ಟಿದ್ದೀರಿ? Cash credit loans-To what an extent? Cash Credit Loan definition ಗೊತ್ತೇ ತಮಗೆ? Aircraft Engineering Employees Cooperative Society-Cash credit

Loan Rs.150 lakhs, Bangalore Technological Engineering Employees Cooperative Society Cash Credit Loan Rs.340 lakhs, Sumitha Silk twisting Rs.16 lakhs, Rajeshwari Silk twisting Rs.12 lakhs, Venkateshwara Bricks.. ಸೌದೆ ಸುಡುವವನಿಗೆ ಸ್ಮಶಾಣ ನಡೆಸುವವನಿಗೆ ನೀವು ಕ್ಯಾಷ್ ಕ್ರೆಡಿಟ್ ಕೊಡುವುದಿಲ್ಲವೇ? Do you know the definition of Cash Credit Loan?.. .. .. ಇದನ್ನು ಏನೂ ಮಾಡುವುದಕ್ಕಾಗುವುದಿಲ್ಲ. You cannot supercede such an institution? You cannot take actioin against those nine persons who are all involved? ನಿಮ್ಮ ಜಾಯಿಂಟ್ ರಿಜಿಸ್ಟ್ರಾರ್ ಏನು ಹೇಳಿದ್ದಾರೆ ಅದನ್ನು ನೋಡಿದರೆ ನಾಚಿಕೆ ಪಡಬೇಕು. ಸರ್ಕಾರ ರಿಸರ್ವ್ ಬ್ಯಾಂಕಿಗೆ ಡೈರೆಕ್ಷನ್ ಕೊಟ್ಟು ನಬಾರ್ಡ್‌ನಿಂದ ಶ್ರೀನಿವಾಸ್ ಎಂಬ ಅಧಿಕಾರಿಯನ್ನು ಹಾಕಿ You watch the activities of the Bangalore DCC Bank. ಎಂದು ಹೇಳಿದರು. He must be stationed there. He must give all the details of your Board and managemental activities of the D.C.C. Bank ಅಂದರೆ, ನಾವು ಸಹಕಾರಿಗಳು ಎಂದು ತಲೆ ಎತ್ತಿ ಹೇಳುವ ಸ್ಥಿತಿ ಇದೆಯೇ? ತಾವೇಕೆ ಆ ಸ್ಥಿತಿ ತಂದಿರಿ? Why the Reserve Bank has come in the way? Why the NABARD has given adverse report against that Bank? What is your action? ಎನ್‌ಕ್ವೈರಿಯನ್ನು ಸ್ಟಾಪ್ ಮಾಡಬೇಡಿ ಎಂದು ಕೋರ್ಟ್ ಕೂಡ ಹೇಳುತ್ತದೆ. ತಾವು ಕೋರ್ಟಿನಲ್ಲಿದೆ ಎಂದು ಹೇಳುತ್ತೀರಿ. ಆದಕ್ಕೇ ನಾನು ಮೊದಲೇ ಹೇಳುತ್ತಿದ್ದೇನೆ. ಎನ್‌ಕ್ವೈರಿ ಸ್ಟಾಪ್ ಮಾಡಬೇಕೆಂದು ನಾನು ಯಾವತ್ತೂ ಹೇಳಿಲ್ಲ. Conduct a regular enquiry. ಏಕೆ ನಿಲ್ಲಿಸಿದಿರಿ? ತಾವು ಕೌನ್ಸಿಲ್‌ನಲ್ಲಿ, ಸಿಬಿಐಗೆ ಪೂರ್ಣ ಎನ್‌ಕ್ವೈರಿಗೆ ವಹಿಸಿದ್ದೇವೆಂದು ಹೇಳಿದಿರಿ. ಎಷ್ಟು ದಿವಸವಾಯಿತು ತಾವು ಹೇಳಿ. What is the effect of your statement?

ಶ್ರೀ ಎಸ್.ಎಸ್.ಪಾಟೀಲ್: ಹೋಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಮಗೊಂದು ರೆಫರೆನ್ಸ್ ಕೊಡಿ. I possess that authority to ask you. ಈ ಶಾಸನಸಭೆಯ ಸದಸ್ಯರಾಗಿ, ತಾವು ಏನು ಚಾರ್ಜಸ್ ಮೇಲೆ ಸಿಬಿಐ ಎನ್‌ಕ್ವೈರಿ ಕಂಡಕ್ಟ್ ಮಾಡಿ ಎಂದು ರಾಜ್ಯಸರ್ಕಾರವನ್ನು ಕೇಳಿಕೊಂಡಿದ್ದೀರೆಂಬ ಬಗ್ಗೆ ನಮಗೆ ಮಾಹಿತಿ ಕೊಡಿ. ಇದರಲ್ಲಿ, ಪುಣ್ಯಾತ್ಮರು ಒಬ್ಬೊಬ್ಬರ ಹೆಸರು ಹೇಳಲು ನಾನು ಇಷ್ಟಪಡುವುದಿಲ್ಲ. ಒಬ್ಬ ಡೈರೆಕ್ಟರ್ ಡಿಫಾಲ್ಟರ್ ಆದರೆ, ಅವರನ್ನು ಡಿಸ್‌ಕ್ವಾಲಿಫೈ ಮಾಡುತ್ತಾರೆ. ಅವರು ಬೋರ್ಡ್‌ಗೆ ಅಪೆಕ್ಸ್ ಬ್ಯಾಂಕ್‌ನಿಂದ ಮತ್ತೆ ಬರುತ್ತಾರೆ. ನಾಮಿನಿ ಆಫ್ ದಿ ಅಪೆಕ್ಸ್ ಬ್ಯಾಂಕ್. Once he

is disqualified in a Board he again enters that Board as an Apex Bank nominee. Was that person not disqualified? ಇವರಿಗೆಲ್ಲಾ ನೀವು ಬಿಟ್ಟುಕೊಂಡು ಕುಳಿತುಕೊಳ್ಳಬೇಕೇ ಸೆಕ್ಷನ್ 126 (ಎ) ಯನ್ನು ರಿಮೂವ್ ಮಾಡಿ, ಏಕೆ ಇಟ್ಟುಕೊಂಡಿದ್ದೀರಿ Who intentionally comes in the way of the organization, who is responsible for the loss of the organization, ಅವನನ್ನು ಡಿಸ್‌ಕ್ವಾಲಿಫೈ ಮಾಡಲಿಕ್ಕೆ ಇಟ್ಟುಕೊಂಡಿರುವ ಪ್ರಾವಿಷನ್ ಬಿಟ್ಟು, ಒಂದೂವರೆ ಸಾವಿರ, ಎರಡು ಸಾವಿರ, ಐನೂರು ರೂಪಾಯಿ ಸುಸ್ತಿ ಇರುವ ರಾಜ್ಯದಲ್ಲಿರುವವರ ಮೇಲೆಲ್ಲಾ ಗದೆ ಬೀಸಿಕೊಂಡು ತಾವು ಬರುತ್ತಿದ್ದೀರಲ್ಲಾ ಬೆಂಗಳೂರಿನವರನ್ನು ಮಾತ್ರ ಬಿಟ್ಟು ಇದು ಸರಿಎಂಬ ಒಬ್ಬ ಮಾಜಿ ಅಧ್ಯಕ್ಷನಿಂದ ಬೆಂಗಳೂರು ಡಿಸಿಸಿ ಬ್ಯಾಂಕ್‌ಗೆ 78 ಕೋಟಿ ರೂಪಾಯಿ ನಷ್ಟವಾಗಿದೆ. ಪ್ರಿನ್ಸಿಪಲ್ 53 ಕ್ರೋರ್ಸ್, ಇಂಟರೆಸ್ಟ್ 25 ಕ್ರೋರ್ಸ್ ಲಾಸಾಗಿದೆ ಎಂದು ವರದಿ ಬಂದಿದೆ. ಕ್ಯಾಷ್ ಕ್ರೆಡಿಟ್ ಲೋನ್ಸ್ 300 ಲಕ್ಷ, 175 ಲಕ್ಷ, 200 ಲಕ್ಷ, ದಿವಸ ತಂದು ಮಾರಿ 15 ದಿವಸ, ತಿಂಗಳೊಳಗಾಗಿ ವಾಪಸ್ ಕೊಡಲಿಕ್ಕೆ, ಕ್ಯಾಷ್ ಕ್ರೆಡಿಟ್ ಲೋನನ್ನು ತಾವು ಲಕ್ಷಗಟ್ಟಲೆ ಅಲ್ಲ ಕೋಟಿಗಟ್ಟಲೆ ಇಟ್ಟಿಗೆ ಸುಡುವವರಿಗೆ ಕೊಡುವುದಕ್ಕೆ ಶುರು ಮಾಡಿದ್ದೀರಿ. ಬೇರೆ ಸಂಸ್ಥೆಗಳಿಲ್ಲವೇ? ಇದಕ್ಕೆ ಅಪೆಕ್ಸ್ ಬ್ಯಾಂಕ್ ಇಲ್ಲವೇ, ಇಂಡಸ್ಟ್ರೀಸ್‌ಗಳಿಲ್ಲವೇ? I will demand an enquiry, if at all it is not already instituted. ನೀವೇನಾದರೂ ಎನ್‌ಕ್ವೈರಿ ಮಾಡದೇ ಹೋದರೆ, ತಾವು ನಮಗೆ ಹೇಳಿಕೆ ಕೊಡುವಾಗ ಹೇಳದೆ ಹೋದರೆ, ನಾವು ಸಭೆಯ ಮುಂದೆ ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ. ನಾವು ಆಕಸ್ಮಾತ್ ಆಗಿ ಇಲ್ಲಿ ನಿಂತುಕೊಂಡು ಮಾತನಾಡಲು ಏನಾದರೂ ಯೋಗ್ಯತೆ ಅರ್ಹತೆ ಸಂಪಾದನೆ ಮಾಡಿದ್ದರೆ, ಹಾಲು ಹಾಕುವ ಸಹಕಾರ ಸಂಘದಿಂದ ಬಂದವರು ನಾವು. Nothing else, ನನಗೆ ಯಾರಾದರೂ ರೆಕೆಗ್ನೈಸ್ ಮಾಡುತ್ತಾರಾ ಇವತ್ತು, ಇದೊಂದು ಮೂವ್‌ಮೆಂಟ್‌ನಲ್ಲಿ ಬೆಳೆದರೆಂದು. ನಾವೆಲ್ಲಾ ಇಲ್ಲಿ ಕುಳಿತಾಗ ದುರಂತಗಳಾಗಬಾರದು. 100, 200, 300 ಕೋಟಿ ರೂಪಾಯಿಗಳನ್ನು ಸಾರಾಸಗಟಾಗಿ ಯಾರಿಗೆ ಎಷ್ಟು ಬೇಕೋ ಅಷ್ಟನ್ನು ಹಿಡಿದು ತಿರುಗಾಡುತ್ತಾರೆಂದು ಯಾರು ಸ್ವಾಮಿ ಇವರೆಲ್ಲಾ? ಈ ಚೆಕ್‌ಗಳದ್ದು, ಭಾರೀ ಕೇಳಬೇಕು, ನೀವು ಕುಳಿತುಕೊಳ್ಳಿ ಎನ್ನುತ್ತೀರಿ, ನಾವೇನು ಮಾಡುವುದು? ಎನ್‌ಕ್ಯಾಷ್‌ಮೆಂಟ್ ಸಿಸ್ಟಂ ಹಾಗಿದೆ. ಯಾರು ಬೇಕಾದರೂ ಅವರ ಸ್ವಂತ ಚೆಕ್ಕನ್ನು ಡಿಸಿಸಿ ಬ್ಯಾಂಕ್ ಹೆಸರಲ್ಲಿ ಡಿಸ್ಕೌಂಟ್ ಮಾಡಬಹುದು. The Director's private cheque is discounted on behalf of D.C.C. Bank Account. ಕಾವೇರಿ ಡಿಸ್ಟಿಲರಿ ಇಂಡಸ್ಟ್ರೀಸ್‌ನವರು ಅವರ ಸೆಲ್ಫ್ ಚೆಕ್ಕನ್ನು ಬ್ಯಾಂಕ್‌ನಲ್ಲಿ ಡಿಸ್ಕೌಂಟ್ ತೆಗೆದುಕೊಳ್ಳುತ್ತಾರಲ್ಲಾ ಮಾನ್ಯ ಸಹಕಾರ ಸಚಿವರೇ. ಇವತ್ತಿನ ದಿವಸ ಮೂರೂವರೆ ಕೋಟಿ ಸುಸ್ತಿ ನಮಗೆ. ಟೋಟಲ್ ಲಾಸ್ 26 ಕ್ರೋರ್ಸ್‌ಗೆ ಇವರು ಜವಾಬ್ದಾರರಾಗುತ್ತಾರಲ್ಲಾ. ಮತ್ತೆ, ಅವರನ್ನೆಲ್ಲಾ ಬೋರ್ಡ್‌ನೊಳಗೆ ಕರೆಯುವುದಕ್ಕೆ

ಹಾರವನ್ನು ಹಿಡಿದುಕೊಂಡು ಹೊರಟಿದ್ದೀರಲ್ಲಾ. ಹೀಗೆ ಮಾಡಿದರೆ ಆ ಬ್ಯಾಂಕ್ ಉಳಿಯುತ್ತದೆಯೇ? ಇದಕ್ಕೇನು ವಿಮೋಚನೆ ಬೇಡವೇ? ಬೆಂಗಳೂರಿನಲ್ಲಿರುವ ಬ್ಯಾಂಕ್‌ನ್ನು ಹೀಗೆ ನಡೆಸಿಬಿಟ್ಟರೆ ನಾವು, ಧಾರವಾಡ, ತುಮಕೂರು, ಮಂಗಳೂರು, ಮಡಿಕೇರಿ ಬ್ಯಾಂಕ್‌ಗಳ ಬಗ್ಗೆ ಕೇಳಲಿಕ್ಕೆ ಅಧಿಕಾರವೇನಿದೆ? What kind of moral standard you have? ಏನಿದೆ ನಿಮಗೆ? 9ಜನ ಡೈರೆಕ್ಟರ್‌ನ್ನು ಡಿಸ್‌ಕ್ವಾಲಿಫೈ ಮಾಡದೆ, ಪಾಪ ಎಲ್ಲೋ ಯಾರೋ ನಮ್ಮವರು ದನ ಕಾಯ್ದುಕೊಂಡು ಇದ್ದ ಪಿಎಲ್‌ಡಿ ಬ್ಯಾಂಕ್ ಡೈರೆಕ್ಟರ್‌ರಾದವರನ್ನು ನೀವು ಅಪೀಲು ಸ್ವೀಕರಣೆ ಮಾಡದೆ ಡಿಸ್‌ಕ್ವಾಲಿಫೈ ಮಾಡಿ ಮನೆಗೆ ಕಳುಹಿಸುತ್ತೀರಿ ಸಾಲ ತೀರಿಸಲಿಲ್ಲ, ಅದಕ್ಕೇ ಕಳುಹಿಸಿಬಿಟ್ಟೆವೆಂದು ನಿಂತುಕೊಂಡು ಹೇಳುತ್ತೀರಲ್ಲಾ. ಸೆಕ್ಷನ್ 126 (ಎ) ಯನ್ನು ನಾನು ಹಾಕಿದ್ದನೆಯೇ? your own officer, your own Joint Registrar, you have appointed an enquiry into. ತಾವು ಈ ಬಗ್ಗೆ ತೀವ್ರ ಗಮನಹರಿಸಬೇಕು, ಸಹಕಾರಿ ಕ್ಷೇತ್ರವನ್ನು ದಯಮಾಡಿ ಉದ್ಧಾರ ಮಾಡಬೇಕು. ಏಕೆಂದರೆ, ಸರ್ಕಾರ ವಿಫಲವಾದ ದಿವಸ ಸಹಕಾರಿಗಳಿರುತ್ತೇವೆಂದು ಗಾಂಧೀಜಿ ಹೇಳಿದ್ದರು. ''ಸಂಘೆ ಶಕ್ತಿ ಕಲಿಯುಗೇ'' ಎಂದು ನಾನು ಹೇಳಿದೆ. ಸಂಘದ ಶಕ್ತಿಯನ್ನು ಮೊಟಕು ಮಾಡಬಾರದು. ಯಾರೋ ಕುಳಿತುಕೊಂಡು, ಅವರವರ ವ್ಯವಹಾರ ಮಾಡಿಕೊಳ್ಳಲಿಕ್ಕೆ ಒಂದು ವ್ಯವಸ್ಥೆ ಮಾಡಿಕೊಂಡರೆ, ಎಷ್ಟು ಹಿಡಿತ ಮಾಡುತ್ತೀರಿ? ಎಷ್ಟು ಕುತ್ತಗೆ ಹಿಸುಕುತ್ತೀರಿ? These Co-Operative Societies have lost their identity because of the Government's clutch. ಇವರ ಕಂಟ್ರೋಲಿನಿಂದ ಇವತ್ತು ನೀವು ತಿಳಿದುಕೊಂಡ ಮಟ್ಟಿಗೆ ಇಲ್ಲ; ಫುಡ್ ಪ್ರೋಸೆಸಿಂಗ್ ಇಂಡಸ್ಟ್ರೀಸ್ ಇದೆ, ಕೆಎಂಎಫ್ ಎನ್ನುವ ಸಂಸ್ಥೆ ಇದೆ, ಷುಗರ್, ಫ್ಯಾಕ್ಟರಿ ಇದೆ, ಸ್ಪಿನ್ನಿಂಗ್ ಮಿಲ್‌ಗಳಿವೆ. ಇವಕ್ಕೆಲ್ಲಾ ಸ್ವಲ್ಪ ದುಡ್ಡು ವಿಸ್ತರಣೆ ಅಥವಾ ಸ್ಥಿತಿಯಲ್ಲಿ ನೋಡಬಾರದೆ? ಇನ್ನೂ ನಾವು ಪಿಎಲ್‌ಡಿ ಬ್ಯಾಂಕು, ಡಿಸಿಸಿ ಬ್ಯಾಂಕ್ ಲೆವೆಲ್‌ನಲ್ಲೇ ಕುಳಿತುಕೊಂಡು, ಆ ಸಂಸ್ಥೆಯನ್ನು ನಡೆಸುವುದಕ್ಕಾಗುತ್ತದೆಯೇ? ಬೆಳಿಗ್ಗೆ ಒಂದು ರೇಟು ಇದ್ದರೆ ಮಧ್ಯಾಹ್ನ ಒಂದು ರೇಟು ಇರುತ್ತದೆ. ಮಧ್ಯಾಹ್ನ ಒಂದು ರೇಟಿದ್ದರೆ, ಸಾಯಂಕಾಲ ಒಂದು ರೇಟಿರುತ್ತದೆ. ನೀವು ಎಲ್ಲದಕ್ಕೂ ಬೋರ್ಡ್ ಬರೆಯುವುದಕ್ಕಾಗುತ್ತದೆಯೇ? You must see that it moves along with the speed of the world's science and technology. ಆಗ ಮಾತ್ರ ನಿಮಗೆ ಕೋ-ಆಪರೇಷನ್ ಉಳಿಯುತ್ತದೆ, ಬಿಟ್ಟರೆ, ಈ ರೀತಿ ಆರ್ಥೋಡಾಕ್ಸ್ ರೀತಿಯಲ್ಲಿ ನೀವು ಸಹಕಾರ ಸಂಘಗಳನ್ನು ಬೆಳೆಸುತ್ತೇನೆ ಎಂದರೆ ಯಾರೋ ಆಡಳಿತ ಮಂಡಳಿ ಮೆಂಬರ್ಸ್ ಮೇಲೆ ದೃಷ್ಟಿ ಇಟ್ಟರೆ ಆಗುವುದಿಲ್ಲ. ನಿಮ್ಮ ಅಧಿಕಾರಿಗಳನ್ನು ಸ್ಯಾಕ್ ಮಾಡಿ. ನನ್ನ ಕಾನ್‌ಸ್ಟಿಟುಯೆನ್ಸಿಯಲ್ಲಿ ಒಬ್ಬ ಅಕೌಂಟ್ಸ್‌ಕ್ಲರ್ಕ್ ಇದ್ದ. ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಬೇಕಾಗಿತ್ತು. Not even a permanent employee. 10 ಗಂಟೆಗೆ 1 ಲಕ್ಷದ 20 ಸಾವಿರ ರೂಪಾಯಿಗಳನ್ನು ಜಮಾ ತೆಗೆದುಕೊಂಡ, ಆ ಮನುಷ್ಯನನ್ನು

ಕ್ಯಾಂಡಿಡೇಟ್ ಮಾಡುವುದಕ್ಕೆಂದು ಮತ್ತು ಸುಸ್ತಿಯಿಲ್ಲವೆಂದು ಹೇಳುವುದಕ್ಕೆ. ಟು ಹಿಸ್ ಫೇಟ್ ಅವನು ಕ್ಯಾಂಡಿಡೇಟ್ ಆಗುವುದಕ್ಕಾಗಲಿಲ್ಲ. 12 ಗಂಟೆಗೆ ಬರೆದಿದ್ದೇವೆ. ಅವನ ಲೋನನ್ನು ರಿಕವರಿ ಮಾಡಿದ್ದೇನೆ, ರೆಸಿಟ್ ಆಗಿದೆ ಎಂದು ಎಂಟ್ರಿ ತೆಗೆದುಕೊಂಡಿದ್ದಾನೆ. ಅವನು ಕ್ಯಾಂಡಿಟೇಟ್ ಆಗಲಿಲ್ಲವೆಂದರೆ, ರಿಮಾರ್ಕ್ಸ್ ಆಗುತ್ತದೆ. ಬ್ಯಾಂಕ್‌ಗೆ ಬಂದಿದ್ದು ದುಡ್ಡೆ ಇಲ್ಲ. ಏನು ಮಾಡಿದಿರಿ? ನಿಮ್ಮ ಅಸಿಸ್ಟೆಂಟ್, ಡೆಪ್ಯುಟಿ ರಿಜಿಸ್ಟ್ರಾರ್‌ರವರು ಬೋರ್ಡ್ ಆಫ್ ಡೈರೆಕ್ಟರ್ಸ್‌ಗಳನ್ನು ಕಿತ್ತುಹಾಕುತ್ತೀರಲ್ಲಾ; ಕೇಳಿ ಅವರನ್ನು ಒಂದು ಎಕರೆ ಇಪ್ಪತ್ತು ಗುಂಟೆ ಮ್ಯಾಗ್ಸಿಮಂ ಅದಕ್ಕೆ ಕೊಡಬಹುದಾದ ವ್ಯವಸ್ಥೆ, 33 ಸಾವಿರದ 600 ರೂಪಾಯಿಗಳಿಗೆ ಮಾರಾಟವಾಗಿದೆ. 20 ಸಾವಿರ ಸಾಲ ಕೊಟ್ಟಿದೆ. ಅವನು 2 ಎಕರೆ ತೆಂಗು ಇದೆ ಎಂದು ಬರೆಯುತ್ತಾನೆ. ಬೋರ್ಡ್ ಆಫ್ ಡೈರೆಕ್ಟರ್ ಹೋಗಿ, ಬಾರಯ್ಯಾ ತೆಂಗಿನ ಗಿಡವನ್ನು ತೋರಿಸು ಎಂದು ನಿಂತರೆ, ಅಲ್ಲಿ ಜನರನ್ನು ಕರೆತಂದು ಜನರಲ್ ಬಾಡಿ ಮೀಟಿಂಗ್‌ನಲ್ಲಿ ಗಲಾಟೆ ಮಾಡಿಸುತ್ತಾನೆ ಏಕೆ ನಮ್ಮ ಸೂಪರ್‌ವೈಸರ್‌ರನ್ನು ಸಸ್ಪೆಂಡ್ ಮಾಡಿದಿರಿ ಎಂದು. ಇವರನ್ನೆಲ್ಲಾ ಏನೂ ಕೇಳುವುದಿಲ್ಲವೇ? ನಾವೇನಾ ನಿಮ್ಮ ಕಣ್ಣಿಗೆ ಬೀಳುವುದು? ಜನರ ಪ್ರತಿನಿಧಿಗಳು, ನಾವು ಸಾಲ ವಸೂಲಿಗೆ ಬಂದಿದ್ದೇವೆಯೋ ನಾವೇನಾದರೂ ಅಡ್ಡಿ ಮಾಡಿದ್ದೇವೆಯೇ? Why are you taking action only on non-officials? ನಮಗೆ ಸಪೋರ್ಟ್ ಮಾಡಬೇಕಾದುದು ನಿಮ್ಮ ಜವಾಬ್ದಾರಿ. ಪುಷ್ ಮಾಡಬೇಕಾದುದು, ನಿಮ್ಮ ಜೊತೆ ಬೆಳೆಸಬೇಕಾದುದು, ಯಾರ ಜವಾಬ್ದಾರಿ? ಪನಿಷ್ ಮಾಡುವುದೊಂದೇ ಅಲ್ಲ ನಿಮ್ಮ ಜವಾಬ್ದಾರಿ. You must push them also. ಆ ಕಡೆ ಹೆಚ್ಚು ಆಸಕ್ತಿಯನ್ನು ತಾವು ಕೊಡಬೇಕು. ಇವತ್ತೇನು ಸಹಕಾರಿ ಕ್ಷೇತ್ರ ಕೆಳಕ್ಕೆ ಬರುತ್ತದೆ, ಬಹುಶಃ ಇದರಲ್ಲಿ ನಾಯಕತ್ವದ ಕೊರತೆ ಬಹಳ ಎದ್ದು ಕಾಣುತ್ತಿದೆ. ಈ ಸ್ಟೇಟ್ ಕೋ-ಆಪ್‌ರೇಷನ್ ಮೂವ್‌ಮೆಂಟಿಗೆ ನಾಯಕರಾಗಬೇಕು. ತಾವು ಸಚಿವರು, ಕೆಎಂಎಫ್‌ನಲ್ಲಿ 600-700, 800 ಜನರನ್ನು ರಿಕ್ರೂಟ್ ಮಾಡಿಕೊಳ್ಳುತ್ತಾರಲ್ಲಾ, ನಿಮ್ಮ ರಿಜಿಸ್ಟ್ರಾರ್ ಆಫೀಸ್‌ನವರು ಹೇಗೆ ಸ್ಟಾಪ್ ಪ್ಯಾಟರ್ನ್‌ನನ್ನು ಅಪ್ರೂವ್ ಮಾಡಿದರು? ಅಲ್ಲಿ ಒಂದು ಅಪ್ರೈಸಲ್ ರಿಪೋರ್ಟ್, ಎನ್‌ಡಿಡಿಬಿಐನವರದ್ದು ಅಗ್ರಿಮೆಂಟ್‌ನ್ನು ತಾವು ಓದಿದ್ದೀರೋ? Is that on par with the milk procurement of the state? ಹಾಲು ಹಾಕುವ ಆಧಾರದ ಮೇಲೆ, ನೀವು ಕೆಲಸ ಕೊಡಬೇಕೆನ್ನುವ ಸಂಸ್ಥೆಗೆ ಬೇಕಾಬಿಟ್ಟಿ, 15 ದಿವಸ, 1 ತಿಂಗಳು ರಿಕ್ರೂಟ್‌ಮೆಂಟ್ ಮಾಡಲಿಕ್ಕೆ ಸನ್ಮಾನ್ಯ ಸಹಕಾರ ಸಚಿವರು ಅವಕಾಶ ಕೊಟ್ಟು, ಇಲ್ಲಿ ಕುಳಿತರೆ, ಈ ರಾಜ್ಯದ ಉದ್ಯೋಗ ಏನಾಗಬೇಕು? ಮುಖ್ಯಮಂತ್ರಿಗಳು ಹೇಳಿದರು. ಹೆಚ್ಚಿನ ಇಂಡಸ್ಟ್ರೀಸ್‌ಗಳು ಸಿಕ್ ಆಗುತ್ತಿವೆ because of unnecessary employment of personnel. ಇವತ್ತಿನ ದಿವಸ ಒಂದು ಕಡೆ ಯೂನಿಟ್ಸ್‌ಗೆ ಮೆಕನೈಸ್, ಕಂಪ್ಯೂಟರೈಸ್ಡ್ ಮಾಡಿಕೊಂಡು ಹೋಗುತ್ತಾರೆ. ಇನ್ನೊಂದು ಕಡೆ ಬೇಕು ಬೇಕಾದ ಹಾಗೆ ಜನ ತುಂಬಲಿಕ್ಕೆ ಕೋ-ಆಪರೇಷನ್ ಮಿನಿಸ್ಟರ್ ಅವಕಾಶ ಕೊಟ್ಟರೆ, ಉಳಿಯುತ್ತದೆಯೇ? ತುಮಕೂರು ಡೇರಿಗೆ ಎಲೆಕ್ಷನ್ ಆಗಿ 4

ವರ್ಷಗಳಾಯಿತು. ಇವರು ತುಮಕೂರು ಯೂನಿಯನ್‌ಗೆ ಎಲೆಕ್ಷನ್ ಮಾಡದೆ ಅಡ್ಮಿನಿಸ್ಟ್ರೇಟರ್ ಹಾಕಿ 4 ವರ್ಷಗಳಾಗಿದೆ. 3 ವರ್ಷಗಳ ನಂತರ ಹಾಕುವುದಕ್ಕೆ ಕಾನೂನಿನಲ್ಲಿ ಅಧಿಕಾರವಿಲ್ಲ. ಇವರು ರಿಲ್ಯಾಕ್ಸ್ ಮಾಡುತ್ತಾರೆ. ಏನಾಯಿತು ಅಲ್ಲಿ? ಅಲ್ಲಿ ಟೆರರಿಸ್ಟ್ ಇದ್ದಾರೆಯೇ? ತುಮಕೂರಿನಲ್ಲಿ ವಾಲ್ಕನೋ ಎದ್ದಿದೆಯೇ ಅಥವಾ ನಿಮ್ಮ ಮೇಲೆ ಸಮುದ್ರ ನುಗ್ಗಿದೆಯೇ? Why can't you conduct an election in an organization like Tumkur Dairy. ಯಾರ ದೌಲತ್ತಿಗಾಗಿ ಈ ಸರ್ಕಾರ ನಡೆಯುತ್ತಿದೆ? ಯಾರ ತೀಟೆಗೆ ರೈತರ ಸಂಸ್ಥೆಗಳನ್ನು ನಡೆಸುತ್ತಿದ್ದೀರಿ? ಕೊಳ್ಳುತ್ತಿರುವ ಹಾಲಿಗೂ, ಮಾರುತ್ತಿರುವ ಹಾಲಿಗೂ 4 ರೂಪಾಯಿ ವ್ಯತ್ಯಾಸವಿದೆ, ನಿಮಗೆ ಗೊತ್ತೇ? 1. 10ಪೈ, ಎಂದಾಗ ಆ ದಿವಸ ನಾನು ಕಣ್ಣೀರು ಹಾಕಿದೆ. If I cannot reduce it by 50 paise, avendor can do a better business. ಹಾಲು ತೆಗೆದುಕೊಂಡು ಹೋಗುವವರು 50 ಪೈಸೆಗೆ ಲಾಭಕ್ಕೆ ಮಾರುತ್ತಾರೆ, ನಿಮ್ಮ ಹಾಲು ಒಕ್ಕೂಟಗಳು ಇವತ್ತು 4 ರೂಪಾಯಿ ವ್ಯತ್ಯಾಸಕ್ಕೆ ಮಾರುತ್ತಿವೆ. ಈ ಕಡೆ ಬಳಕೆದಾರರು ಸತ್ತರು, ಆ ಕಡೆ ಉತ್ಪಾದಕರು ಸತ್ತರು. ಇದಕ್ಕೆ ನಡೆಸಬೇಕೇ ನಾವು ಈ ವ್ಯವಸ್ಥೆಗಳನ್ನು? ಇದಕ್ಕೋಸ್ಕರ, ಆರ್ಗನೈಜೇಷನಲ್ ನೆಟ್‌ವರ್ಕ್ ಅನ್ನುತ್ತೇವೆಯೇ? ಇದರಮೇಲೆ ಏನೂ ಕ್ರಮ ಜರುಗಿಸುವುದು ಬೇಡವೇ? ಈ ಒಕ್ಕೂಟದಿಂದ ತೆಗೆದುಕೊಳ್ಳುವ ಒಬ್ಬ ರೈತ ಏಕೆ ಹಾಲಿನ ದರ ಇಷ್ಟು ಕೊಡುತ್ತೀರೆಂದು ಕೇಳುವುದು ಬೇಡವೇ? ತಾವು ಆ ಫೀಲ್ಡ್‌ನಲ್ಲೇ ಇದ್ದವರು, ಇದು ತಮಗೆ ಅರ್ಥವಾಗುತ್ತದೆ ಸಾರ್. ಮಿಲ್ಕ್ ಗೂಡ್ಸ್ ಬಗ್ಗೆ ತಮಗೆ ಅರ್ಥವಾಗುತ್ತದೆ ಸಾರ್, ತಾವು ಈ ಫೀಲ್ಡ್‌ನಲ್ಲಿದ್ದವರು. ಮಿಲ್ಕ್ ಗೂಡ್ಸ್ ದಿಢೀರ್ ಸ್ವಾಪ್. ಎಮರ್ಜೆನ್ಸಿ ಟ್ರೀಟ್‌ಮೆಂಟ್ ದಿಢೀರ್ ಸ್ವಾಪ್. 1,40,000 ಪ್ರೋಕ್ಯೂರ್‌ಮೆಂಟ್ 1992-93ನೇ ಸಾಲಿನಲ್ಲಿದ್ದದ್ದು ತುಮಕೂರಿನದ್ದು 60,000ಕ್ಕೆ ಇಳಿದಿದೆ ಇವತ್ತು. ಎಸ್ಟಾಬ್ಲಿಷ್‌ಮೆಂಟ್, ಎಸ್ಕಲೇಷನ್ 25 ಪರ್ಸೆಂಟ್ 12 ಲಕ್ಷ ಇದ್ದುದು ಇವತ್ತು 30 ಲಕ್ಷ ರೂಪಾಯಿ ಆಗಿದೆ ತುಮಕೂರು ಡೈರಿ ಎಸ್ಟಾಬ್ಲಿಷ್‌ಮೆಂಟ್. ತುಮಕೂರಿನ ಡೈರಿಯಲ್ಲಿ ಹೋಗಿ ನೋಡಬೇಕು. ಸಾಲ, ಸಾಲ ಸಾಲ, ಹೀಗಾದರೆ ಹೇಗೆ ಈ ಸಂಸ್ಥೆಗಳು ನಡೆಯುತ್ತವೆ ಸಾರ್? ಇದನ್ನೆನಾದರೂ ಮಾಡಿ ಸಾರ್, ತಾವು ಮಂತ್ರಿಗಳು. ಪಿ.ಎಲ್.ಡಿ. ಬ್ಯಾಂಕಿನಲ್ಲಿ ಒಬ್ಬ 2 ಸಾವಿರ ರೂಪಾಯಿ 3 ಸಾವಿರ ರೂಪಾಯಿಗಳನ್ನು ನಿಧಾನವಾಗಿ ಕಟ್ಟಿದರೂ ನಿಮ್ಮ ದೇಶ ಹಾಳಾಗುವುದಿಲ್ಲ. ಇಲ್ಲಿ ಹಾಳಾಗುತ್ತದೆ; ನಶಿಸಿಹೋಗುತ್ತದೆ 11 ಕೋಟಿ ಲಾಸ್‌ನಲ್ಲಿದೆ ತುಮಕೂರು ಡೈರಿ. 40 ಕೋಟಿ ರೂಪಾಯಿ ಲಾಸ್‌ನಲ್ಲಿದೆ ನಿಮ್ಮ ಕೆ.ಎಂ.ಎಫ್. ಸಂಸ್ಥೆಯೊಂದು ಲಾಭ ಮಾಡುತ್ತಿದ್ದುದು 40 ಕೋಟಿ ಒಳಗೆ ಬಂದಿದೆ. ತಾವು ಎಲ್ಲೂ ಕಾರ್ಯಕ್ರಮ ಜರುಗಿಸಿದ್ದು ನಾನು ಕೇಳಲೇ ಇಲ್ಲ. ತಾವು, ಸಹಕಾರಿ ಸಚಿವರು ಇಂಥ ಕಡೆ ಹೆಚ್ಚು ಗಮನ ಕೊಡಬೇಕು. ಈ ಕಡೆ ತಾವು ಆಸಕ್ತಿ ವಹಿಸಬೇಕು ಎಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರೆ, ಇನ್ನು ಎರಡು ಮಾತು ಬೇರೆ ಇಲಾಖೆ ಬಗ್ಗೆ ತಾವು ಹೂ ಅಂದರೆ ಮಾತನಾಡುತ್ತೇನೆ.

ಅಧ್ಯಕ್ಷರು: ತಮಗೆ ಬೇರೆ ಅವಕಾಶ ಸಿಗುತ್ತದೆ. ಬಹಳ ಚೆನ್ನಾಗಿ ಮಾತನಾಡುತ್ತೀರಿ. ಮುಂದಕ್ಕೆ ಅವಾಗಾವಾಗ ನಿಮ್ಮ ಕೈಯಲ್ಲಿ ಮಾತನಾಡಿಸುತ್ತೇನೆ ನಾನು.

ಶ್ರೀ ಜೆ.ಸಿ.ಮಾಧುಸ್ವಾಮಿ: ಆಯಿತು; ಥ್ಯಾಂಕ್ ಯು ಸಾರ್.

+ ಶ್ರೀ ಸಿ.ಎಸ್.ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೆ, ಸರ್ಕಾರ ಇಟ್ಟಿರತಕ್ಕ 60 ಬೇಡಿಕೆಗಳನ್ನು ಸ್ವಾಗತಿಸುತ್ತಾ ನನಗೆ ತಿಳಿದಂಥ, ನನಗೆ ಗೊತ್ತಿರುವಂಥ ಸಲಹೆ ಸೂಚನೆಗಳನ್ನು ಕೊಡುವುದಕ್ಕೆ ಇಷ್ಟ ಪಡುತ್ತೇನೆ. ನಾನು ಮೊಟ್ಟಮೊದಲನೆಯದಾಗಿ ಭಾರಿ ನೀರಾವರಿ ಇಲಾಖೆ ಬಗ್ಗೆ ಮಾತನಾಡುತ್ತೇನೆ. ಸಚಿವರೂ ಕೂಡ ಸದನದಲ್ಲಿದ್ದಾರೆ. ನನಗೆ ಗೊತ್ತಿದ್ದಮಟ್ಟಿಗೆ ಈ ರಾಜ್ಯ ಸರ್ಕಾರದ ಬೊಕ್ಕಸದಲ್ಲಿ ಖರ್ಚಾಗತಕ್ಕ ಹಣ ಬಹುಶಃ ಮೂರನೇ ಒಂದು ಭಾಗ ಹಣವನ್ನು ಈ ಇಲಾಖೆಯಲ್ಲಿ ಖರ್ಚು ಮಾಡತಕ್ಕ ದೊಡ್ಡ ಇಲಾಖೆ ಇದು.

(ಡಾ: ಎಂ.ಪಿ.ಕರ್ಕಿ ಅವರು ಅಧ್ಯಕ್ಷಪೀಠದಲ್ಲಿದ್ದರು.)

ಇದು ಬಹಳ ವಿಶೇಷವಾದ ಇಲಾಖೆ. ಈ ರಾಷ್ಟ್ರದ ರೈತ ರಾಷ್ಟ್ರದ ಬೆನ್ನೆಲುಬು ಎಂದು ಏನು ಹೇಳುತ್ತಾರೆ ಹಾಗೆ ಈ ರೈತನಿಗೆ ಬೆನ್ನಲುಬಾಗಿರತಕ್ಕ ಇಲಾಖೆ ಕೂಡ, ಹೌದು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಏಕೆಂದರೆ ಇದರ ನೋವು ನಲಿವು ಎರಡನ್ನೂ ಕೂಡ ನಾನು ಕಂಡಂಥ ಜಾಗದಲ್ಲಿ ನಾನು ಶಾಸಕನಾಗಿ ಮತ್ತು ಅಲ್ಲಿ ಜನ್ಮ ತಳೆದವನಾದ್ದರಿಂದ ಈ ಮಾತನ್ನು ಹೇಳುತ್ತೇನೆ. ಯಾಕೆ ನೋವು ನಲಿವು ಅಂದರೆ ಹೇಮಾವತಿ ಪ್ರಾಜೆಕ್ಟ್ ಕೂಡ ನಮ್ಮಲ್ಲಿದೆ. ಆ ಪ್ರಾಜೆಕ್ಟ್ ಹುಟ್ಟಿ ಹರಿಯುವಾಗ ನಗುತ್ತಾ ಇರತಕ್ಕ ಜನರನ್ನೂ ಒಂದು ಕಡೆ ನೋಡುತ್ತಿದ್ದೇವೆ, ಅಳುತ್ತಾ ಇರತಕ್ಕ ಜನರನ್ನೂ ಒಂದನು ಕಡೆ ನೋಡುತ್ತೇವೆ. ಏತಕ್ಕೆ ಅಳುತ್ತಾ ಇರುವವರು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ ಅಂದರೆ ನಮ್ಮಲ್ಲಿ ಬಾಗೂರು ಸುರಂಗ ಎಂದ್ಹು ತುಮಕೂರು ಜಿಲ್ಲೆಗೆ ಮತ್ತು ಮಂಡ್ಯ ಜಿಲ್ಲೆಯ ಕೆಲವು ಭಾಗಗಳಿಗೆ ನೀರು ಕೊಡುವ ಉದ್ದೇಶದಿಂದ ಸುಮಾರು ಒಂಭತ್ತೂವರೆ ಕಿಲೋಮೀಟರ್ ಸುರಂಗವನ್ನು ತೋಡಿ ಬಹಳ ಆಳದಲ್ಲಿ ಅಂದರೆ 300-400 ಅಡಿ ಆಳದಲ್ಲಿ ನೀರನ್ನು ತೆಗೆದುಕೊಂಡು ಹೋಗುವಂಥ ಸಂದರ್ಭದಲ್ಲಿ ಆ ಭಾಗದ ಜನಕ್ಕೆ ಬಹಳ ಕಣ್ಣುಗಿಚ್ಚಾಗುತ್ತದೆ. ಇವತ್ತು ನೀರು ಹರಿಯುತ್ತಿದೆ ಕೆನಾಲ್‌ನಲ್ಲಿ ನಾನು ಹೋದಾಗ. ಆ ಜನಕ್ಕೆ ಹೊಟ್ಟೆ ಉರಿ. ನಮ್ಮ ಮಧ್ಯದಲ್ಲಿ ಇಷ್ಟು ನೀರು ಹಾದುಹೋಗುತ್ತದೆ, ಆದರೆ ನಮಗೆ ಕುಡಿಯಲಿಕ್ಕೆ ಅವಕಾಶ ಇಲ್ಲವಲ್ಲಾ, ನಮಗೆ ಯೋಗ್ಯತೆ ಇಲ್ಲವಲ್ಲಾ ಎಂಬ ವ್ಯಥೆ ಮತ್ತು ಅವರ ಮನಸ್ಸಿನ ನೋವನ್ನು ತೋರಿಸಿಕೊಳ್ಳುತ್ತಾರೆ. ತಮ್ಮ ತೆಂಗಿನಮರವನ್ನು ತೋರಿಸುತ್ತಾರೆ. ನೋಡಿ ಪುಟ್ಟೇಗೌಡರೇ, ಈ ತರಹ ಇಷ್ಟಿಷ್ಟು ದಪ್ಪ ಇದ್ದಂಥ ತೆಂಗಿನಕಾಯಿ ಇವತ್ತು ಸಣ್ಣದಾಗಿ ಇಷ್ಟಿಷ್ಟು ದಪ್ಪ ಆಗಿದೆ. ನಮ್ಮ ತೆಂಗಿನ ಕಾಯಿಯನ್ನು ಕೊಳ್ಳುವವರಿಲ್ಲ. ಯಾರಾದರೂ ಮದುವೆಗೆ ಬಂದವರಿಗೆ ಕೊಡುವುದಕ್ಕೆ ಎಂದು ಸಣ್ಣ ಕಾಯಿ ಹುಡುಕುತ್ತಾರೆ

ಮಾರ್ಕೆಟ್ಟಿನಲ್ಲಿ, ಅವರು ಬಂದು ಹುಡುಕಿಕೊಂಡು ಹೋಗಬೇಕು ನಮ್ಮ ಕಾಯಿಯನ್ನು, ತಿಪಟೂರು ಪೇಟೆಯಲ್ಲಿ ಯಾರೂ ನಮ್ಮ ಕಾಯಿಯನ್ನು ತೆಗೆದುಕೊಳ್ಳುವುದಿಲ್ಲ ಎನ್ನತಕ್ಕಂಥ ವ್ಯಥೆಯನ್ನು, ನೋವನ್ನೂ ಕೂಡ ಹೇಳಿಕೊಳ್ಳುತ್ತಾರೆ. ಇವತ್ತು ಅದರ ಬಹುಭಾಗ ನೀರನ್ನು ಅನುಭವಿಸತಕ್ಕ ತುಮಕೂರು ಜಿಲ್ಲೆಯ ಜನರೂ ಕೂಡ ನಮ್ಮ ಜನ, ಅವರಿಗಾದರೂ, ಆ ಭಾಗದ ಜನರಿಗೆ ಫಲ ಲಭ್ಯವಾಗಿರುವುದು ತುಂಬಾ ಸಂತೋಷ; ಅವರೆಲ್ಲರೂ ಕೂಡ ನಮ್ಮ ರಾಜ್ಯದ ಜನರು ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಆ ಏನು ತಮ್ಮ ಹೃದಯದ ಆಳದಿಂದ ನೀರನ್ನು ತುಮಕೂರು ಮತ್ತು ಮಂಡ್ಯ ಜಿಲ್ಲೆಯ ಜನರಿಗೆ ಕೊಟ್ಟಿದ್ದಾರೆ ನಾಗಮಂಗಲ ಬ್ರಾಂಚಿಗೇ ಆಗಿರಲಿ ತುಮಕೂರು ಟಿ.ಡಿ.ಬಿ. ಬ್ರಾಂಚಿಗೇ ಆಗಲಿ ನೀರು ಕೊಟ್ಟಿದ್ದಾರೆ. ಆ ಭಾಗದ ಜನರಿಗೆ ಅನ್ಯಾಯವಾಗಿರುವುದಕ್ಕೆ ಬಹುಶಃ 1995ನೇ ಇಸವಿಯಲ್ಲಿ ರಾಮಕೃಷ್ಣ ಹೆಗಡೆಯವರ ಸರ್ಕಾರ ಇದ್ದಾಗ, ಮಾನ್ಯ ದೇವೇಗೌಡರು ನೀರಾವರಿ ಸಚಿವರಾಗಿದ್ದಾಗ ಅದನ್ನು ಮನಗಂಡು ಆ ಭಾಗದ ಜನರಿಗೆ ಎರಡು ಲಿಫ್ಟ್ ಇರಿಗೇಷನ್ ಮಾಡಿ ಅದು ತ್ವರಿತಗತಿಯಿಂದ ನಡೆಯುತ್ತಿದೆ. ಹಾಗೆ ನಡೆಯುವಂಥ ಸಂದರ್ಭದಲ್ಲಿ ಸನ್ಮಾನ್ಯ ಸಚಿವರಾದ ನಾಗೇಗೌಡರು ಕೂಡ ಕೆ.ಇ.ಬಿ.ಗೆ ಕೊಡತಕ್ಕ ಕೆಲವು ಭಾಗದ ದುಡ್ಡನ್ನು ಕೊಟ್ಟು ಬಾಗೂರು ಕಡೆ ಲಿಫ್ಟ್ ಇರಗೇಷನ್ ತ್ವರಿತಗತಿಯಲ್ಲಿ ಕೆಲಸ ಪ್ರಾರಂಭವಾಗಿದೆ. ಬಾಗೂರು ನವಿಲೆ ಕೆಲಸ ಕುಂಟುತ್ತಿದೆ. ದಯಮಾಡಿ ಇದನ್ನು ಸ್ಪೀಡಫ್ ಮಾಡಬೇಕು. ಆ ಭಾಗದ ಜನರ ನೋವನ್ನು ತಾವು ಅರ್ಥ ಮಾಡಿಕೊಂಡಿದ್ದೀರಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದಷ್ಟು ಬೇಗ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಕಳೆದಸಲ ತಾವು ಬಂದಾಗ ಹೇಳಿಬಂದಿದ್ದೀರಿ. ಆ ಭಾಗದ ಜನರಿಗೆ ಇನ್ನೂ ಒಂದು ಒಂದೂವರೆ ವರ್ಷದಲ್ಲಿ ಲಿಫ್ಟ್ ಇರಿಗೇಷನ್‌ನಲ್ಲಿ ನೀರು ಕೊಡಿಸುತ್ತೇನೆ ಎಂದು ಹೇಳಿದ್ದೀರಿ. ಆ ಭಾಗದಲ್ಲಿ ಲಿಫ್ಟ್ ಇರಿಗೇಷನ್ ಮಾಡುವಂಥ ಸಂದರ್ಭದಲ್ಲಿ ಇನ್ನೂ 15-20 ಹಳ್ಳಿಗಳನ್ನು ಕೈಬಿಟ್ಟಿದ್ದೀರಿ. ನಿಜವಾಗಿ ಹೊಡೆತ ಬಿದ್ದಂಥ ಹಳ್ಳಿಗಳನ್ನು, ಟನಲ್ ಹೋಗತಕ್ಕ ಭಾಗದ ಹಳ್ಳಿಗಳನ್ನು ಕೈಬಿಟ್ಟಿದ್ದಾರೆ. ಮೊನ್ನೆ ಕೂಡ ನೀರಾವರಿ ಸಚಿವರ ಗಮನಕ್ಕೆ ತಂದಿದ್ದೇನೆ. ಲಿಫ್ಟ್ ಇರಿಗೇಷನ್‌ನಿಂದ ಇನ್ನೂ ಆ ಭಾಗದ ಜನರಿಗೆ ಇನ್ನೂ ಹೆಚ್ಚು ಭಾಗಕ್ಕೆ ನೀರು ಕೊಡುವುದಕ್ಕೆ ಅವಕಾಶ ಇದೆ. ಇನ್ನು ಐದಾರು ಕೋಟಿ ರೂಪಾಯಿ ಖರ್ಚು ಮಾಡುವುದರಿಂದ 15-20 ಹಳ್ಳಿ ನೀರಾವಾರಿಯಾಗುತ್ತದೆ ಎಂಬುದನ್ನೂ ಕೂಡ ನಾನು ತಮಗೆ ಪತ್ರದ ಮೂಲಕ ಮನವಿ ಮಾಡಿದ್ದೇನೆ. ಅದನ್ನು ಈಡೇರಿಸಿಕೊಡಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ನಮ್ಮಲ್ಲಿ ಶ್ರೀರಾಮದೇವರ ನಾಲೆ ಎಂದು ಬಹಳ ಹಳೇ ನಾಲೆ ಇದೆ. ನಾವು ನೀರಾವರಿಗೆ ಒತ್ತು ಕೊಡತಕ್ಕ ಈ ಸಂದರ್ಭದಲ್ಲಿ ಬಹಳ ಹಿಂದೆ ಕಟ್ಟಿರತಕ್ಕ ಶ್ರೀರಾಮದೇವರ ನಾಲೆ, ಒಂದು ಹೊಳೆಗೆ ಅಡ್ಡಲಾಗಿ ಅಣೆಕಟ್ಟನ್ನು ಕಟ್ಟಿ ಬಹಳ ಚೆನ್ನಾಗಿರತಕ್ಕ ನೀರಾವರಿಯಾಗಿದೆ. ಅದನ್ನು ಇವತ್ತು ನೀವು ಸುಧಾರಣೆ ಮಾಡದೇ ಇದ್ದರೆ ನಾವು ಒಂದು ಕಡೆ ಹೊಸದಾಗಿ ಕಾಲುವೆ ತೋಡುವುದಕ್ಕೆ ದುಡ್ಡು ಕೊಡುವುದು ಅನ್ಯಾಯವಾಗುತ್ತದೆ. ಏಕೆಂದರೆ ನಾವು

ಇರುವುದನ್ನು ಹಾಳು ಮಾಡಿಕೊಂಡು ಹೊಸದನ್ನು ಮಾಡುತ್ತೇನೆ ಎಂದು ಹೋಗುವಂಥದ್ದು ಸರಿಯಲ್ಲ. ನೀವು ಹೊಸದನ್ನು ಮಾಡುವುದರ ಜೊತೆಗೆ ಹಳೇ ನಾಲೆಗಳನ್ನು ದುರಸ್ತಿ ಮಾಡಬೇಕು. ಆ ಶ್ರೀರಾಮದೇವರ ನಾಲೆಯನ್ನು ದುರಸ್ತಿ ಮಾಡುವುದರಿಂದ ಕೆ.ಆರ್.ಪೇಟೆ, ಹೊಳೇನರಸೀಪುರ ಮತ್ತು ಚನ್ನರಾಯಪಟ್ಟಣದ ಭಾಗಕ್ಕೆ ಬಹಳ ವಿಶೇಷವಾದ ಅನುಕೂಲವನ್ನು ಕಲ್ಪಿಸಿಕೊಟ್ಟಹಾಗೆ ಆಗುತ್ತದೆ. ಅದನ್ನು ಅತಿ ಶೀಘ್ರದಲ್ಲಿ ಮಾಡಬೇಕು. ಆ ಕೆನಾಲ್ ಮೇಲೆ ನೀವು ಒಂದು ಸಾರಿ ಹೋದರೆ ಜನಗಳಿಗೆ ಎಷ್ಟೋ ಆಸೆ ಇರುತ್ತದೆ. ಏನೋ ನಾಗೇಗೌಡರು ಬಂದಿದ್ದಾರೆ, ನಮ್ಮ ನಾಲೆಯನ್ನು ಸರಿಮಾಡುತ್ತಾರೆ, ಕೊನೇ ಟೇಲ್ ಎಂಡ್‌ನಲ್ಲಿರತಕ್ಕ ನೀರನ್ನು ಬಿಡುತ್ತಾರೆ ಎನ್ನತಕ್ಕ ಭಾವನೆ ಇದೆ. ಅದನ್ನು ಆದಷ್ಟು ಬೇಗ ನೀವು ಪರಿಶೀಲನೆ ಮಾಡಿ ಅದಕ್ಕೆ ಹಣವನ್ನು ಒದಗಿಸಿ ಆ ಕೆಲಸವನ್ನು ಪ್ರಾರಂಭ ಮಾಡಬೇಕು ಎಂಬ ಆಗ್ರಹವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಈ ಒಂದು ಇಲಾಖೆ ಬಹಳ ಮಹತ್ವಪೂರ್ಣವಾದ ಇಲಾಖೆ. ಯಾವುದೇ ಸರ್ಕಾರದಲ್ಲಿ ಬಹುಶಃ ಭಾರೀ ನೀರಾವರಿ ಸಚಿವರು ಎಂದರೆ ಈ ಸರ್ಕಾರದಲ್ಲಿ ಬಹಳ ತೂಕ ಇರತಕ್ಕ ಒಬ್ಬ ಸಚಿವರು. ಬಹಳ ಹಣವನ್ನು ರಾಜ್ಯದ ಬೊಕ್ಕಸದಿಂದ ಖರ್ಚು ಮಾಡತಕ್ಕ ಮಂತ್ರಿ ಎನ್ನತಕ್ಕದ್ದಿದೆ. ಈ ರಾಜ್ಯದಲ್ಲಿ ಖರ್ಚು ಮಾಡುವಂಥ ಸಂದರ್ಭದಲ್ಲಿ ಕೋಟಿಗಟ್ಟಲೆ ದುಡ್ಡನ್ನು ಜನರು ಕೇಳುವಂಥ ಸಂದರ್ಭದಲ್ಲಿ ಏನಪ್ಪ, ಇಷ್ಟೆಲ್ಲಾ ದುಡ್ಡು ಖರ್ಚಾಗಿದೆ, ಎಷ್ಟರಮಟ್ಟಿಗೆ ಅದು ಫಲ ಕೊಡುತ್ತದೋ ಎಂದು ಯೋಚನೆ ಮಾಡುತ್ತಾರೆ. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಬಗ್ಗೆ ಹೇಳಬೇಕಾದರೆ ಈ ಸರ್ಕಾರವನ್ನು ಆ ಭಾಗದ ವಿರೋಧಪಕ್ಷದವರಾಗಲೀ, ನಾವಾಗಲೀ ಖಂಡಿತವಾಗಿ ಅಭಿನಂದಿಸಬೇಕಾಗುತ್ತದೆ. ಮಾನ್ಯ ದೇವೇಗೌಡರು ಮತ್ತು ಜೆ.ಎಚ್.ಪಟೇಲರ ಸರ್ಕಾರ ಬಂದಮೇಲೆ ಅಪ್ಪರ್‌ಕೃಷ್ಣ ಪ್ರಾಜೆಕ್ಟ್‌ಗೆ ಏನು ಅಧಿಕಾರಿಗಳು ಹೋಗುವುದಿಲ್ಲ, ಗುತ್ತಿಗೆದಾರರು ಅಲ್ಲಿ ಹೋಗಿ ಕೆಲಸ ಮಾಡುವುದಿಲ್ಲ ಎನ್ನುವ ನೆಪ ಹೇಳಿ ಅಲ್ಲಿ ಏನು ಕೆಲಸ ಸ್ಥಗಿತವಾಗಿತ್ತು ಅದಕ್ಕೆ ಇವತ್ತು ಬಹಳ ಚಾಲನೆ ಕೊಟ್ಟು ಕೃಷ್ಣಾ ಭಾಗ್ಯ ಜಲ ನಿಗಮ ಎಂದು ಯೋಜನೆ ಮಾಡಿ ಇವತ್ತು ಕೆಲಸ ಪ್ರಾರಂಭವಾಗಿರುವುದರಿಂದ ಆ ಭಾಗದ ಜನರಿಗೆ ತುಂಬಾ ಆಸೆ ಇದೆ ನೀರುನಿಂತಿದೆ; ನೀರನ್ನು ಬಿಡುತ್ತಾರೆ ಎಂದು. ಖಂಡಿತ ಇವತ್ತು ಈ ಹತ್ತು ವರ್ಷ, ಇಪ್ಪತ್ತು ವರ್ಷದಲ್ಲಿ 100 ಕಿಲೋಮೀಟರ್ ಕಾಲುವೆ ತೆಗೆದು ನೀರು ಬಿಡುತ್ತೇವೆ ಎಂದು ಹೇಳಿದರೆ ಯಾರಾದರೂ ಹಿರಿಯರು ಆ ಭಾಗದ ಜನರು ಹೇಳುತ್ತಿದ್ದರು ಅಯ್ಯೋ ಇದೆಲ್ಲಿ ಬರುತ್ತದೆ ನೀರು ಈ ಕಾಲುವೆ ತೋಡಿ ಎಂದು. ಇವತ್ತು ಆ ಪರಿಸ್ಥಿತಿ ಇಲ್ಲ. ಕಾರಣ ಏನೆಂದರೆ ಈ ಮೆಷಿನರಿ ಯುಗ ಬಂದಮೇಲೆ ಸರ್ಕಾರ ಏನಾದರೂ ಒಂದು ಪ್ಲಾನ್ ಇಟ್ಟು ಬಜೆಟ್ಟನ್ನು ಅದಕ್ಕೆ ಇಟ್ಟರೆ ಆ ನೀರಾವರಿ ಯೋಜನೆಯನ್ನು ಕಣ್ಣುಮುಚ್ಚಿ ತೆರೆಯುವುದರೊಳಗೆ ಬೇಕಾದರೆ ನೀರು ಬಿಡತಕ್ಕ ಹಲವಾರು ಸಾಧನಗಳಿರುವಂಥ ಈ ಸಂದರ್ಭದಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಚುರುಕು ಮಾಡಬೇಕು ಎನ್ನುವಂಥ ನಿಮ್ಮ ಭಾವನೆ ಏನಿದೆ ಅದನ್ನು ನಾನು ಮೆಚ್ಚುವುದಾದರೂ ಕೂಡ ಅಲ್ಲಿಗೆ ಐ.ಎ.ಎಸ್.

ಅಧಿಕಾರಿಗಳನ್ನು ಖಂಡಿತ ಹಾಕಬಾರದು. 1993ರಲ್ಲಿ ಜನತಾ ಸರ್ಕಾರ ಬಂದಂಥ ಕಾಲದಲ್ಲಿ ಐ.ಎ.ಎಸ್. ಅಧಿಕಾರಿಗಳು ಇದ್ದಂಥದ್ದನ್ನು ತಪ್ಪಿಸಿ ಟೆಕ್ನಿಕಲ್ಲಾಗಿ ಇಂಜಿನಿಯರಿಂಗ್ ಗ್ರಾಜುಯೇಟ್ ಆಗಿರುವವರನ್ನೇ ಅಲ್ಲಿ ಇಡಬೇಕು ಎನ್ನುವಂಥ ಭಾವನೆ ಇತ್ತು. ಅದು ಖಂಡಿತ ಸರಿಯಾದಂಥ ವಿಚಾರ ಎನ್ನುವಂಥ ಮಾತನ್ನು ಹೇಳುತ್ತೇನೆ. ಮೊನ್ನೆಮೊನ್ನೆ ತಾವು ಅಲ್ಲಿದ್ದಂಥ ಇಂಜಿನಿಯರಿಂಗ್ ಅಧಿಕಾರಿಯನ್ನು ತೆಗೆದು ಐ.ಎ.ಎಸ್. ಅಧಿಕಾರಿಯನ್ನು ಹಾಕಿದ್ದೀರಿ. ಖಂಡಿತ ಅವರನ್ನು ಸುತರಾಂ ಹಾಕಬೇಡಿ. ಏಕೆಂದರೆ ಅವರು ಏನೇ ಆಗಿದ್ದರೂ ಅವರ ಹತ್ತಿರ ಪ್ರಾಕ್ಟಿಕಲ್ ಎಕ್ಸ್‌ಪೀರಿಯನ್ಸ್ ಇರುವುದಿಲ್ಲ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನೀವು ಈ ಇರಿಗೇಷನ್‌ಗೆ ದುಡ್ಡು ಖರ್ಚು ಮಾಡುವಂಥ ವಿಚಾರ ಬಂದಾಗ ಇವತ್ತು ಎಲ್.ಓ.ಸಿ. ಇಲ್ಲ, ನಮ್ಮ ಭಾಗಕ್ಕೆ ದುಡ್ಡು ಕೊಟ್ಟಿಲ್ಲ, ಇಷ್ಟೆಲ್ಲಾ ಕೆಲಸ ಮಾಡಿದ್ದೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ನೀವು ಮಾಡುವಂಥ ಸಂದರ್ಭದಲ್ಲಿ ಅಡ್ವಾನ್ಸಾಗಿ ಮಾಡಬೇಕಾಗುತ್ತದೆ. ಕಡಿತ ಮಾಡಿ ಎಂದು ಹೇಳುವುದಿಲ್ಲ. ಮಾಡುವಾಗ ನೀರು ಹರಿಯುವ ಭಾಗ ಯಾವುದು, ನೀರು ಹರಿಯದೇ ಇರುವ ಭಾಗಯಾವುದು, ಹೊಸ ಕೆಲಸ ಎಲ್ಲಿ ಪ್ರಾರಂಭವಾಗಬೇಕು ಇದನ್ನೆಲ್ಲಾ ಯೋಚನೆ ಮಾಡಿ ಕೆಲವು ಡಿವಿಷನ್‌ಗಳನ್ನು ವೈಂಡಫ್ ಕೂಡ ಮಾಡಬೇಕಾಗುತ್ತದೆ. ಇಲ್ಲ ಅಂದರೆ ಸುಮ್ಮನೆ ಎಲ್.ಓ.ಸಿ. ಅಲ್ಲಿಗೂ 50 ಲಕ್ಷ ಹೊಸದಾಗಿ ಕಾಲುವೆ ತೋಡುವ ಕಡೆಗೂ 50 ಲಕ್ಷ ಯು.ಕೆ.ಪಿ.ನಲ್ಲಿ ಯಾವುದೋ ಡ್ಯಾಮಿಗೂ 50 ಲಕ್ಷ ಅಂದರೆ ಏನಾಗುತ್ತದೆ, ಹಣ ಪೋಲಾಗುತ್ತದೆ. ಇವತ್ತು ಇಂಜಿನಿಯರುಗಳ ಬಗ್ಗೆ ಹೇಳಬೇಕಾದರೆ ತಾವು ನಾಗೇಗೌಡರು ಇಂಜಿನಿಯರ್ ಆದವರು. ತಮಗೆ ಗೊತ್ತಿದೆ. ಎಷ್ಟರಮಟ್ಟಿಗೆ ಇವತ್ತು ಇದೆ ಎಂದರೆ ಯಾರಿಗೂ ಕೂಡ ನಾವು ಸರ್ಕಾರಕ್ಕಾಗಿ ಸೇವೆ ಮಾಡುತ್ತಿದ್ದೇವೆ ಎನ್ನುವ ಭಾವನೆ ಇರುವುದು ಬಹಳ ಕಡಿಮೆ. ಸಾಮಾನ್ಯವಾಗಿ ಇದು ಎಲ್ಲಾ ಇಲಾಖೆಯಲ್ಲೂ ಇರತಕ್ಕಂಥದ್ದು. ಇವತ್ತು ಯಾರಾದರೂ ಒಬ್ಬ ಅಧಿಕಾರಿ ಆಫೀಸಿನಲ್ಲಿ ಕುಳಿತಿದ್ದರೆ ಸಂಜೆಯವರೆಗೂ ಎಷ್ಟಾಯಿತು ಸಂಪಾದನೆ ಎಂಬುದಷ್ಟೇ ಅವರ ತಲೆಯಲ್ಲಿರುತ್ತದೆಯೇ ವಿನಾ 25 ವರ್ಷದ ಹಿಂದೆ ಇದ್ದಹಾಗೆ ಈ ದೇಶಕ್ಕಾಗಿ ಈ ಸಮಾಜಕ್ಕಾಗಿ ಸರ್ಕಾರಿ ಕೆಲಸ ಮಾಡುತ್ತಿದ್ದೇವೆ ಎನ್ನುವ ಭಾವನೆ ಇವತ್ತಿಲ್ಲ.

12.20 ಪಿ.ಎಂ.

10-20 ಪರ್ಸೆಂಟ್ ಇದ್ದರೂ ಕೂಡ ಅವರಿಗೆ ಕೆಲಸ ಮಾಡುವುದಕ್ಕೆ ಅವಕಾಶ ಸಿಕ್ಕಿದೆಯೋ ಇಲ್ಲವೋ ಗೊತ್ತಿಲ್ಲ. ನೀವು ಇದಕ್ಕೆ ಹಣ ಖರ್ಚು ಮಾಡುವಂತಹ ಸಂದರ್ಭದಲ್ಲಿ ಮತ್ತು ಹೊಸದಾಗಿ ಯಾವ ಭಾಗದಲ್ಲಿ ನಾಲೆಗಳನ್ನು ಅಲ್ಲಿ ತೋಡಬೇಕಾಗಿದೆ. ಹಳೆ ಡಿವಿಜನ್‌ಗೆ ಎಷ್ಟು ಕಾಲುವೆಗಳು ಇವೆ ಇವೆಲ್ಲವ್ನೂ ನೋಡಿ ಎಲ್‌ಓಸಿ ಕೊಡುವಂತಹ ವಿಚಾರ ಮಾಡಬೇಕು. ನೀವು ಕೊಡುತ್ತಿದ್ದರೆ ಅವರು ಖರ್ಚು ಮಾಡುತ್ತಾರೆ. ಮತ್ತೆ ಕೆಲವರು ಬಂದು ಮಾನ್ಯ ನಾಗೇಗೌಡರೇ, ನಮಗೆ ಎಲ್‌ಓಸಿ

ಕೊಟ್ಟಿಲ್ಲ ಎಂದು ಮುಖ್ಯಮಂತ್ರಿಗಳ ಹತ್ತಿರ ಅಹವಾಲು ತೆಗೆದುಕೊಂಡು ಹೋಗಿ ಹೇಳುತ್ತಾರೆ. ಹೊಸದಾಗಿ ಕಾಲುವೆಗಳನ್ನು ಎಲ್ಲಿ ತೋಡುತ್ತಿದ್ದೇವೆ ಅದು ಅಗತ್ಯ ಇದೆ. ಮತ್ತು ಹಳೆಯ ಡಿವಿಜನ್‌ಗಳ ಕಡೆಗೆ ಕೂಡ ಗಮನ ಕೊಡಬೇಕು. ಲೈನಿಂಗ್ ಮತ್ತೊಂದು ಮಾಡುವುದಕ್ಕೆ ಒರಿಜಿನಲ್ ವರ್ಕ್ ಮಾಡುವುದಕ್ಕೆ ಆಗಿಂದಾಗ್ಗೆ ಗಮನ ಕೊಡಬೇಕು. ನೀವೇನೇ ಬೆಂಗಳೂರಿನಲ್ಲಿ ಕುಳಿತು ಸಭೆ ಮಾಡಿದರೂ ಕೂಡ ಅವರು ನಮ್ಮ ಕಂಟ್ರೋಲಿಗೆ ಬರುವ ಸ್ಥಿತಿಯಲ್ಲಿ ಇಲ್ಲ. ಒಂದು ದಿನ ಇರಿಗೇಷನ್ ಮಂತ್ರಿಗಳ ಕಾರು 50 ಕಿಲೋ ಮೀಟರ್ ಕೆನಾಲ್‌ನಲ್ಲಿ ಹೋಯಿತು ಎಂದರೆ ನನಗೆ ತಿಳಿದ ಮಟ್ಟಿಗೆ ಈ ರಾಜ್ಯದ ಬೊಕ್ಕಸಕ್ಕೆ 50 ಲಕ್ಷ ರೂ.ಉಳಿಯುತ್ತದೆ. ನಿಮಗೇನು ಚಾಕಚಕ್ಯತೆ ಇದೆ ಅದನ್ನು ಬಳಸುವಂತಹ ಸಂದರ್ಭದಲ್ಲಿ ತಾವು ಇಡೀ ರಾಜ್ಯದಾದ್ಯಂತ ಪ್ರವಾಸ ಮಾಡಿದರೆ ನೀರಾವರಿ ಕಾರ್ಯಕ್ರಮಗಳು ಚೆನ್ನಾಗಿ ನಡೆಯುತ್ತದೆ. ಸೋರತಕ್ಕಂತಹ ಹಣ ನಿಲ್ಲುತ್ತದೆ. ನಮ್ಮ ಭಾಗದಲ್ಲಿರತಕ್ಕಂತಹ ಶ್ರೀರಾಮ ದೇವರ ನಾಲೆ ಇದೆ ಮತ್ತು ಲಿಫ್ಟ್ ಇರಿಗೇಷನ್ ಕಡೆಗೆ ನಿಮ್ಮ ವಿಶೇಷ ಗಮನ ಇರಲಿ. ತುಮಕೂರಿಗೆ ನೀರು ಬಿಡುವ ಜಾಗದಲ್ಲಿ ಸ್ಟಾರ್ಟಿಂಗ್‌ನಲ್ಲಿ ನಮ್ಮದೊಂದು ಕೆರೆ ಒಣಗುತ್ತಿದೆ ಇಷ್ಟು ನೀರು ಹರಿಯುತ್ತಿದೆ ನಮ್ಮ ಕೆರೆಗೆ ನೀರು ಇಲ್ಲವೆಂದು ಕಾರೇ ಹಳ್ಳಿಯಲ್ಲಿ ಜನರು ಬಂದು ಗಲಾಟೆ ಮಾಡಿದರು. ಅದನ್ನು ಎಕ್ಸಿಕ್ಯುಟೀವ್ ಇಂಜಿನಿಯರ್‌ಗೆ ಹೇಳಿದರೆ ನಾವೇನೂ ಮಾಡುವುದಕ್ಕೆ ಆಗುವುದಿಲ್ಲ ಅದು ಅಪ್ರೂವಲ್ ಆಗಿಲ್ಲವೆಂದು ಹೇಳುತ್ತಾರೆ. ಹಸಿದ ಹೊಟ್ಟೆಗೆ ಜನರು ಕಾನೂನು ಕಾಯಿದೆ ಕೇಳುವುದಿಲ್ಲ. ನಾವೇ ತೋಡಿಕೊಳ್ಳುತ್ತೇವೆ ಪುಟ್ಟೇಗೌಡರೇ ದಯವಿಟ್ಟು ನಮ್ಮನ್ನು ಕೆಟ್ಟವರೆಂದು ಹೇಳಬೇಡಿ ನೀವೇನಾದರೂ ಮಾಡಿ ಇಲ್ಲಿ ಕಾಲುವೆ ತೋಡಿಸಿ ಕೆರೆಗೆ ನೀರು ಬಂದಿಲ್ಲವೆಂದು ಹೇಳುತ್ತಾರೆ. ಕೆರೆಗೆ ನೀರು ಕೊಡುವುದಕ್ಕಾಗುವುದಿಲ್ಲ ಹೋಗಲಿ ಕೆರೆಯ ಮೇಲು ಭಾಗದಲ್ಲಿರತಕ್ಕಂತಹ ಭೂಮಿಗಾದರೂ ಕೆಲವು ಭಾಗ ಉಳಿದಿರತಕ್ಕಂತಹ ಅಚ್ಚುಕಟ್ಟು ಜಮೀನಿಗಾದರೂ ಕೊಟ್ಟರೆ ಆ ನೀರಿನಿಂದ ದನಕರುಗಳಿಗೆ ಉಪಯೋಗವಾಗುತ್ತದೆ. ಕುಡಿಯುವುದಕ್ಕೆ ಕೂಡ ಅನುಕೂಲವಾಗುತ್ತದೆ ಅಲ್ಲಿರತಕ್ಕಂತಹ ಉಳಿಕೆ ಭಾಗ ಕೂಡ ಅಚ್ಚುಕಟ್ಟಾಗುತ್ತದೆ. ಇಂತಹವುಗಳು ಎಲ್ಲೆಲ್ಲಿ ಉಳಿದಿದೆ ಅಲ್ಲಿ ಅಚ್ಚುಕಟ್ಟನ್ನು ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಯಗಚಿಯ ಪ್ರಾಜೆಕ್ಟ್ ನಮ್ಮ ಜಿಲ್ಲೆಯಲ್ಲಿ ಏನು ಪ್ರಾರಂಭವಾಗಿದೆ ಆದರಿಂದಾಗಿ ಬೇಲೂರು ಮತ್ತು ಹಾಸನಕ್ಕೆ ನೀರಾವರಿ ಮಾಡಿದಂತಹ ಸಂದರ್ಭದಲ್ಲಿ ಜನರು ಆ ಯಗಚಿ ನೀರು ನಮ್ಮ ಗಂಡಸಿಗೂ ಬರಬೇಕು ಚನ್ನರಾಯಪಟ್ಟಣಕ್ಕೆ ಅರಸೀಕೆರೆಗೂ ಬರಬೇಕೆಂದು ಹೇಳುತ್ತಿದ್ದಾರೆ. ನಾವು ರಾಜಕೀಯವಾಗಿ ಇಲ್ಲಿ ಮಾತನಾಡುವಾಗ ಬಹಳಷ್ಟು ಆಶ್ಚರ್ಯವಾಗುತ್ತದೆ. ಕೆಲವೊಂದು ರಾಜಕೀಯ ಪ್ರಾಜೆಕ್ಟ್ ಕೂಡ ಮಾಡಿ ಚುನಾವಣಾ ಸಂದರ್ಭದಲ್ಲಿ ಎಲ್ಲೋ ಸಲ್ಲದ ಕಡೆ ನೀರನ್ನು ಬಿಡುತ್ತೇವೆಂದು ಭಾಷಣ ಮಾಡುವುದು. ಅದೇ, ಸಿರಾಕ್ಕೆ ನೀರನ್ನು ಬಿಡುತ್ತಾರಂತೆ. ನಮ್ಮ ಚಳ್ಳಕೆರೆಗೆ ನೀರನ್ನು ಬಿಡಿಸಿ ಪುಟ್ಟೇಗೌಡರೇ ಎಂದು ನಮಗೆ ಹೇಳುತ್ತಾರೆ. ಇದನ್ನು ಜನರಿಗೆ ನೀವು ಮನವರಿಕೆ ಮಾಡಬೇಕಾಗುತ್ತದೆ. ಲಿಫ್ಟ್ ಇರಿಗೇಷನ್, ಫ್ಲೋ

ಇರಿಗೇಷನ್ ಅಂದರೇನು ಎಂಬುದನ್ನು ತಿಳಿಸಬೇಕು. ಲಿಫ್ಟ್ ಇರಿಗೇಷನ್‌ನ ಸಾಧಕ ಬಾಧಕಗಳನ್ನು ತಿಳಿಸಬೇಕು. ಇರಿಗೇಷನ್ ಇಲಾಖೆಯವರು ನಮ್ಮನ್ನು ಘಟ ಪ್ರಭಾ ಮಲಪ್ರಭಾ ತೋರಿಸುವುದಕ್ಕೆ ಕರೆದುಕೊಂಡು ಹೋಗಿದ್ದರು. ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಬಹಳಷ್ಟು ಹಣ ಖರ್ಚಾಗಿದೆಯೇ ವಿನಃ ಅಲ್ಲಿ ಕೆಲಸ ನಡೆಯುತ್ತಿಲ್ಲ. ಕಾರ್ಯರೂಪಕ್ಕೆ ಬಂದಿಲ್ಲ. ಆ ಸಮಸ್ಯೆಯನ್ನೂ ಕೂಡ ಹೇಳಬೇಕಾಗುತ್ತದೆ. ಅದನ್ನು ಬಿಟ್ಟು ರಾಜಕೀಯ ಮಾಡುವುದಕ್ಕೋಸ್ಕರ ನೀರಾವರಿ ಪ್ರಾಜೆಕ್ಟ್‌ಗಳನ್ನು ಜನರಿಗೆ ಹೇಳಿ ಜನರಲ್ಲಿ ಆಸೆಯನ್ನು ಹುಟ್ಟಿಸಿ ಅವರು ಬಂದು ನಮ್ಮ ಮನೆಯ ಹತ್ತಿರ ಕೂರುವಂತಹ ಕೆಲಸವಾಗಬಾರದು. ನೀರಾವರಿ ಇಲಾಖೆಯ ಬಗ್ಗೆ ನನಗೆ ತಿಳಿದಂತಹ ಸಲಹೆ ಕೊಟ್ಟಿದ್ದೇನೆ. ತಾವು ಚನ್ನಾರಾಯಪಟ್ಟಣದ ಶ್ರೀರಾಮದೇವರ ನಾಲೆಗೆ ಒಂದು ಸಲ ಭೇಟಿ ಮಾಡಬೇಕು. ಆ ಲಿಫ್ಟ್ ಇರಿಗೇಷನ್‌ನಿಂದ ಇನ್ನು ಒಂದು ವರ್ಷದೊಳಗಾಗಿ ಜನರಿಗೆ ನೀರನ್ನು ಕೊಡಿಸದಿದ್ದರೆ ನಾವು ಜನರಿಗೆ ಉತ್ತರ ಹೇಳುವುದು ಕಷ್ಟವಾಗುತ್ತದೆ. ಆ ಭಾಗದಲ್ಲಿ ಹರಿದು ಹೋಗತಕ್ಕಂತಹ ನೀರನ್ನು ನೋಡಿ ಅವರಿಗೆ ಬಹಳ ಸಂಕಟವಾಗುತ್ತದೆ. ಅಷ್ಟೆಲ್ಲಾ ನೀರು ಹರಿಯುತ್ತಿದ್ದರೂ ನಮಗೆ ಇಲ್ಲಿ ನೀರು ಇಲ್ಲವಲ್ಲಾ ಎಂದು ನೋವು ಇದೆ. ನಮ್ಮ ಭೌಗೋಳಿಕ ಭಾಗ ತಮಗೆ ಗೊತ್ತಿದೆ. ಆ ಕಡೆ ಸಕಲೇಶಪುರ ಬೇಲೂರಿನವರು ಕುಮಾರಸ್ವಾಮಿ ಎಲ್ಲರೂ ಕೂಡ ಮಳೆ ಬಂದು ನಮ್ಮ ರಸ್ತೆ ಎಲ್ಲಾ ಹಾಳಾಗಿದೆ ಎಂದು ಸರಕಾರಕ್ಕೆ ಹೇಳುತ್ತಿದ್ದಾರೆ. ನಮಗೆ ಅರ್ಧ ಮಲೆನಾಡು, ಅರ್ಧ ಬಯಲು ಸೀಮೆ. ಯಾರಿಗಾದರೂ ಇದನ್ನು ಹೇಳಿದರೆ ಹಾಸನದವರು ಎರಡು ರೀತಿಯಲ್ಲಿ ಹೇಳುತ್ತಿದ್ದಾರೆಂದು ಸಂಶಯ ವ್ಯಕ್ತಪಡಿಸುತ್ತಾರೆ. ಚನ್ನರಾಯಪಟ್ಟಣಕ್ಕೆ ಬರುತ್ತಿದ್ದ ಹಾಗೆ, ಅರಸೀಕೆರೆ, ಗಂಡಸಿ ಕ್ಷೇತ್ರದವರಿಗೆ ಮಳೆ ಬಿದ್ದೇ ಇರುವುದಿಲ್ಲ. ನಮ್ಮದು ಅರ್ಧ ಮಲೆನಾಡು ಅರ್ಧ ಬಯಲು ಸೀಮೆ ....

(ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮಾನ್ಯ ಅಧ್ಯಕ್ಷರು: ನಿಮ್ಮನ್ನು ನೋಡಿದರೆ ಬಯಲು ಸೀಮೆ ಎಂದು ಗೊತ್ತಾಗುತ್ತದೆ. ಮಾನ್ಯ ಶಿವಪ್ಪನವರನ್ನು ನೋಡಿದರೆ ಮಲೆನಾಡು ಎಂದು ಗೊತ್ತಾಗುತ್ತದೆ.

ಶ್ರೀ ಸಿ.ಎಸ್.ಪುಟ್ಟೇಗೌಡ: ನಾವು ಅದನ್ನು ಇಲ್ಲಿ ಹೇಳುವಾಗ ಹಾಸನದವರು ಎರಡು ರೀತಿಯಲ್ಲಿ ಹೇಳುತ್ತಾರೆ ಬಹಳ ರಾಜಕೀಯ ಚತುರತೆಯನ್ನು ಉಪಯೋಗಿಸಿ ಈ ದೂರನ್ನು ತರುತ್ತಾರೆ ಎಂಬ ಭಾವನೆ ಬೇಡ. ನೀರಾವರಿ ತಜ್ಞರಾದ ಮಾನ್ಯ ಹೆಚ್.ಎನ್.ನಂಜೇಗೌಡರು ಇಲ್ಲಿ ಇದ್ದಾರೆ. ಅವರು ರಾಜಕೀಯವಾಗಿ ತಮ್ಮ ಶಕ್ತಿಯನ್ನು ಉಪಯೋಗಿಸಿ ಒಂದು ಹೈ ಲೆವೆಲ್ ಕೆನಾಲ್ ಎಂದು ಮಾಡಿಸಬೇಕು. ಅರಕಲಗೂಡು ಭಾಗಕ್ಕೆ ಹೈಲೆವೆಲ್ ಕೆನಾಲ್ ಎಂದು ಮಾಡಿದ್ದರಿಂದ ಅರಕಲಗೂಡು, ಹೊಳೆನರಸೀಪುರಕ್ಕೆ ಅನುಕೂಲವಾಗಿದೆ. ಅಂತಹ ಹೈಲೆವೆಲ್ ಕೆನಾಲ್ ಇಲ್ಲೂ ಕೂಡ

ಮಾಡುವುದಾದರೆ ಚನ್ನರಾಯಪಟ್ಟಣ ಹಾಗೂ ಗಂಡಸಿ ಈ ಭಾಗಕ್ಕೆ ಅನುಕೂಲವಾಗುತ್ತದೆ. ನೀರು ಇಲ್ಲದೇ ಇದ್ದಾಗ ಕೇಳುವುದಿಲ್ಲ. ಹೆಚ್ಚು ಮಳೆ ಬಂದು ಸೋರಿ ಯಾವತ್ತೋ ಹೊಳೆ ಬೀಳುವ ಸಂದರ್ಭದಲ್ಲಿ ಹೈ ಲೆವೆಲ್ ಕೆನಾಲ್ ಮಾಡಿದರೆ ನಮ್ಮ ಕೆರೆಕಟ್ಟೆಗಳಿಗಾದರೂ ನೀರು ಬಿದ್ದು ಆ ಭಾಗದ ಜನರಿಗೆ ಅನುಕೂಲವಾಗುತ್ತದೆ. ತಾವು ಈ ಕಡೆಗೆ ಯೋಚನೆ ಮಾಡಿ ಅದರ ಬಗ್ಗೆ ಒಂದು ಸರ್ವೆ ಮಾಡಿಸಿ . ಅದಕ್ಕೆ ಒಂದು ಧ್ವನಿ ಎತ್ತಿದರೆ ಮುಂದೆ ಅದು ಕಾರ್ಯರೂಪಕ್ಕೆ ಬರಬಹುದು. ಚನ್ನರಾಯಪಟ್ಟಣ, ಗಂಡಸಿ ಹಾಸನ ಈ ಭಾಗಕ್ಕೆ ಅನುಕೂಲವಾಗಬಹುದು ಎಂದು ಹೇಳಬಯಸುತ್ತೇನೆ. ಮಾನ್ಯ ನಾಗೇಗೌಡರೇ ತಾವು ಇದನ್ನು ಪರಿಗಣನೆ ಮಾಡಿದರೆ ಒಂದು ಹೈ ಲೆವೆಲ್ ಕೆನಾಲ್ ಮಾಡಿದರೆ ಜನರು ತಮ್ಮನ್ನು ಯಾವಾಗಲೂ ನೆನೆಸಿಕೊಳ್ಳುತ್ತಾರೆ. ಇದು ನನ್ನ ವಿಶೇಷವಾದ ಅಹವಾಲು ಎಂದು ಹೇಳಬಯಸುತ್ತೇನೆ. ನಮ್ಮ ಮುಖ್ಯಮಂತ್ರಿಗಳು ನಮ್ಮ ಮಾನ್ಯ ನಾಗೇಗೌಡರು ಗಂಭೀರವಾಗಿ ಯೋಚನೆ ಮಾಡುತ್ತಾರೆಂದು ನಾನು ಆಸೆ ಇಟ್ಟುಕೊಂಡು ನೀರಾವರಿ ಬಗ್ಗೆ ನನ್ನ ಮಾತನ್ನು ಮುಗಿಸುತ್ತೇನೆ. ಇಲ್ಲಿ ಮತ್ತೊಂದು ಬೇಡಿಕೆ ಮಂತ್ರಿಗಳು ಮತ್ತು ರಾಜ್ಯಪಾಲರು ಎಂದು ಇದೆ. ರಾಜ್ಯಪಾಲರ ಬಗ್ಗೆ ಮಾತನಾಡುವುದಕ್ಕೆ ನಾನು ಮೊದಲನೆ ಸಲ ಬಂದಿರುವವನು. ಅಷ್ಟೊಂದು ತಿಳುವಳಿಕೆ ಇದೆ ಎಂದು ನನಗೆ ಅನ್ನಿಸಿಲ್ಲ. ನಾನು ಹೊಸದಾಗಿ ಶಾಸಕನಾಗಿ ಇಲ್ಲಿಗೆ ಬಂದಾಗ ಮಂತ್ರಿಗಳ ಬಗ್ಗೆ ವಿಧಾನ ಸೌಧದ ಬಗ್ಗೆ ಅಪಾರ ಗೌರವ ಇತ್ತು. ಮಂತ್ರಿಗಳು ಕೈ ತೋರಿಸಿದರೆ ಅದು ಶಾಸನವಾಗುತ್ತದೆಂದು ತಿಳಿದಿದ್ದೆ. ನಿಜವಾಗಲೂ ಮಂತ್ರಿಗಳು ಬಂದು ಹಳ್ಳಿಗಾಡಿಗೆ ಹೋಗಿ ಅವರು ಕೈ ತೋರಿದರೆ ಅದು ಸರಕಾರೀ ಆದೇಶವೆಂದು ಹೇಳಿ ಪರಿಗಣನೆ ಆಗುತ್ತದೆ ಜನಕ್ಕೆ ಕೊಡಬೇಕಾದ್ದನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ ಸರಕಾರ ಇದರ ಕಡೆಗೆ ವಿಚಾರ ಮಾಡಿದರೆ ದೊಡ್ಡ ಕೆಲಸ ಮಾಡಿದ ಹಾಗಾಗುತ್ತದೆ. ನಮ್ಮಲ್ಲಿ ಬಹಳ ಚರ್ಚೆ ಕಾಮೆಂಟ್ ಕೂಡ ಶುರುವಾಯಿತು. 47ಜನ ಮಂತ್ರಿಗಳು ಇದ್ದಾರೆ ಎಂದು ನಾನು ಆ ಸಂಖ್ಯೆಯ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಚಂದ್ರಶೇಖರ್ ಅವರು ಬಹಳ ಚೆನ್ನಾಗಿ ಪಾರ್ಲಿಮೆಂಟಿನಲ್ಲಿ ಹೇಳಿದರು. ಯಾವಾಗಲೂ ಲಂಚ ಹೊಡೆಯುತ್ತಾರೆ, ಲಂಚ ಹೊಡೆಯುತ್ತಾರೆ 5 ಪರ್ಸೆಂಟ್ ಅಧಿಕಾರಿಗಳು, 5 ಪರ್ಸೆಂಟ್ ರಾಜಕಾರಣಿಗಳು ಎಂದು ಈ ವಿಚಾರಗಳ ಬಗ್ಗೆ ಇಲ್ಲಿ ಚರ್ಚೆಯಾಗುತ್ತದೆ. ಇನ್ನು ಉಳಿದಿರತಕ್ಕಂತಹ 90 ಪರ್ಸೆಂಟ್ ಜನ ನಮಗೆ ವೋಟು ಹಾಕಿದವರು ಈ ಸರಕಾರವನ್ನು ನೋಡುತ್ತಿರತಕ್ಕಂತಹವರ ಬಗ್ಗೆ ನಾವೇನು ಗಂಭೀರವಾಗಿ ಚರ್ಚೆ ಮಾಡುವುದಿಲ್ಲವಲ್ಲಾ ಎಂದು ಹೇಳಿದರು. ನಾವೂ ಕೂಡ ಹಲವಾರು ಸಾರಿ ಈ ಶಾಸನ ಸಭೆಯಲ್ಲಿ ಯಾವುದೋ ಒಂದು ಇಲಾಖೆಯಲ್ಲಿ ಇರುವ ಭ್ರಷ್ಟಾಚಾರವನ್ನು ಹಾಗೇ ಇಟ್ಟುಕೊಂಡರೆ ಅದನ್ನು ಸರಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬೇಕಾಗುತ್ತದೆ. ಸರಕಾರವನ್ನು ಕೇಳಬೇಕಾಗುತ್ತೆದೆ. ಇವತ್ತು ಇರತಕ್ಕಂತಹ 60 ಬೇಡಿಕೆಗಳು ಏನು ಇವೆ ಇವುಗಳು ಜನಸಾಮಾನ್ಯರಿಗೆ ಬೇಕಾದಂತಹ ಎಲ್ಲಾ ಸಮಸ್ಯೆಗಳೂ ಇದರಲ್ಲಿ ಕ್ರೋಢೀಕೃತವಾಗಿವೆ.

ಇದಕ್ಕೆ ನಾವು ಇಲ್ಲಿ ಒಂದೂವರೆ ಎರಡು ದಿವಸ ಬಳಸುತ್ತೇವೆ. ನಮ್ಮ ನಮ್ಮ ಉದ್ವೇಗಕ್ಕೆ ಆ ಭಾಗದ ಈ ಭಾಗದ ಶಾಸಕರು ಉದ್ವೇಗಕ್ಕೆ ಒಳಗಾಗಿ ಸಂಘರ್ಷಕ್ಕೆ 2-3 ದಿವಸ ನಮ್ಮ ಎಲ್ಲಾ ಅವಕಾಶಗಳನ್ನು ಬಳಸಿಕೊಳ್ಳುತ್ತೇವೆ. ಈ ಸರಕಾರಕ್ಕೆ ಇದರ ಬಗ್ಗೆ ಕಾಳಜಿ ಇದ್ದರೆ ಎಲ್ಲಾ ಮಂತ್ರಿಗಳು ಇಲ್ಲಿ ಕುಳಿತು ಏನೇ ಮಾಡಿ ಐ.ಎ.ಎಸ್ ಅಧಿಕಾರಿಗಳನ್ನು ಎಫ್.ಡಿ.ಸಿ. ಗುಮಾಸ್ತರುಗಳನ್ನು ಕೂರಿಸಿದರೆ ಈ ಸರಕಾರದ ಸಾಧನೆ ಸಂಪೂರ್ಣವಾಗುವುದಿಲ್ಲ. ಬೇರೆ ಸರಕಾರವನ್ನು ನಾನು ಟೀಕೆ ಮಾಡುವುದಿಲ್ಲ ಈ ಸರಕಾರವನ್ನು ಮೆಚ್ಚುವಂತಹ ಮಾತನ್ನು ಹೇಳುವುದಿಲ್ಲ. ಜನತಾ ದಳ ಸರಕಾರ ಬಂದಾದ ಮೇಲೆ ಹಳ್ಳಿಗಾಡಿನಲ್ಲಿ ಜನರು ಹೇಳುತ್ತಾರೆ ಒಂದಷ್ಟು ಹಳೆ ಗುಂಡಿಗೆ ಬಿಲ್ ಅನ್ನು ಬರೆಯುವುದಿಲ್ಲ ರಸ್ತೆಗೆ ಒಂದಷ್ಟು ಮಣ್ಣು, ಜಲ್ಲಿಯನ್ನಾದರೂ ಹಾಕಿಸುತ್ತಾರೆ. ಸ್ಕೂಲ್ ಅನ್ನು ಕಟ್ಟಿಸುತ್ತಾರೆ. ಹಳ್ಳಿಗಾಡಿನಲ್ಲಿ ಶಾಲಾ ಕಾಲೇಜುಗಳನ್ನು ಕಟ್ಟಿಸುತ್ತಾರೆಂದು ಹೇಳುತ್ತಾರೆ. ನಾವು ಕೊಟ್ಟಿದ್ದೇವೆಂದು ಇಲ್ಲಿಕಣ್ಣು ಮುಚ್ಚಿಕೊಂಡು ಕುಳಿತುಕೊಂಡು ಯಾರಿಗೋ ಅಧಿಕಾರಿಗಳಿಗೆ ಆದೇಶ ಮಾಡಿದರೆ ಖಂಡಿತ ಆ ಕೆಲಸ ಚೆನ್ನಾಗಿ ನಡೆಯುವುದಿಲ್ಲ. 60,000 ರೂಪಾಯಿ ಕೊಟ್ಟು ಹಳ್ಳಿಯಲ್ಲಿ ಶಾಲೆ ಕಟ್ಟಿಸು ಎಂದರೆ ಅಲ್ಲಿಗೆ ಅಧಿಕಾರ ವಿಕೇಂದ್ರೀಕರಣ ಮಾಡುವುದು ಒಂದು ರೀತಿಯಲ್ಲಿ ಒಳ್ಳೆಯದಾಗಿದ್ದರೆ ಇನ್ನೊಂದು ರೀತಿಯಲ್ಲಿ ಅದು ಹಲವಾರು ಸಮಸ್ಯೆಗಳನ್ನು ಸೃಷ್ಟಿ ಮಾಡಿದೆ. ನಾನೇ ಕಟ್ಟಿಸುತ್ತೇನೆಂದು ಅಲ್ಲಿನ ಪಂಚಾಯತಿ ಸದಸ್ಯ ಬರುತ್ತಾನೆ. 3 ವರ್ಷದಲ್ಲಿ ನಾನು ಓಪನ್ ಮಾಡುವುದಕ್ಕೆ ಹೋಗುವುದರೊಳಗೆ ಜನರು ನಮ್ಮನ್ನು ತೋರಿಸುತ್ತಾರೆ. ನೋಡಿ ಪುಟ್ಟೇಗೌಡರೇ ಇದು ಬಿದ್ದು ಹೋಗುತ್ತಿದೆ ಎಂದು ಹೇಳುತ್ತಾರೆ. ಊಟಕ್ಕೆ ಹಳೆಯ ಕಟ್ಟಡದಲ್ಲಿ ಹಾಕುತ್ತಾರೆ ಹೊಸ ಕಟ್ಟಡದಲ್ಲಿ ನಮ್ಮನ್ನು ಕರೆದುಕೊಂಡು ಹೋಗಿ ಕೂರಿಸಿ ಪುಟ್ಟೇಗೌಡರೇ ಇದು ಬಿದ್ದು ಹೋಗುತ್ತಿದೆ ಎಂದು ಹೇಳುತ್ತಾರೆ. ಮಂತ್ರಿಗಳು ಅವರವರ ಇಲಾಖೆಗೆ ಸಂಬಂಧಪಟ್ಟಂತೆ ಹಳ್ಳಿಗಾಡಿನಲ್ಲಿ ಓಡಾಡಬೇಕು. ಜನರ ಭಾವನೆ ಏನು ಎಲ್ಲಿ ಸಮಸ್ಯೆಗಳು ಆಗುತ್ತಿದೆ; ಸರಕಾರದಿಂದ ಕೊಡತಕ್ಕಂತಹ ಸವಲತ್ತು ಜನರಿಗೆ ತಲುಪುವುದರಲ್ಲಿ ಎಲ್ಲಿ ಲೋಪವಾಗುತ್ತಿದೆ ಎನ್ನುವ ಬಗ್ಗೆ ಅತ್ಯಂತ ವಿಶೇಷವಾದ ಕಾಳಜಿಯನ್ನು ಸರಕಾರ ವಹಿಸಬೇಕು. ಮಂತ್ರಿಗಳು ಹಳ್ಳಿಗಾಡಿನಲ್ಲಿ ಓಡಾಡಬೇಕು. ಯಾರಿಗೂ ಸಮಸ್ಯೆ ಇಲ್ಲ. ನಾನು ಮೊದಲು ಶಾಸನ ಸಭೆಗೆ ಬಂದಾಗ ಮೊದಲು ತಿಳಿದುಕೊಂಡಿದ್ದೆ. ಇಲ್ಲೇನು ನಿಂತುಕೊಂಡು ಮಾತನಾಡುವುದು ಹುಡುಗಾಟಿಕೆ ವಿಚಾರವೇ ಜನರು ನನ್ನನ್ನು ಹೇಗೋ ಕಳುಹಿಸಿ ಬಿಟ್ಟರಲ್ಲಾ ಎಂದು ವಿಚಾರ ಮಾಡಿದ್ದೆ. ಇದಕ್ಕೆ ಒಂದು ಜನರಿಂದ ಅಭಿಪ್ರಾಯ ಬಂದು ನಾವು ಹೇಗೆ ನಡೆದುಕೊಳ್ಳಬೇಕು, ಸರ್ಕಾರದಿಂದ ಬಂದಂಥ ಸವಲತ್ತುಗಳು ಸಾರ್ವಜನಿಕರಿಗೆ ತಲುಪುವುದಕ್ಕೆ ಎಲ್ಲಿ ದೋಷವಾಗುತ್ತಿದೆ ಅದನ್ನು ಸರಿಪಡಿಸತಕ್ಕಂಥದ್ದು ಹೇಗೆಂದು ಗೊತ್ತಾಗುತ್ತದೆ. ಆಯಾ ಭಾಗದ ಮಂತ್ರಿಗಳಾಗಿರಲಿ, ಯಾವುದೇ ಇಲಾಖಾ ಮಂತ್ರಿಗಳಾಗಿರಲಿ, ಇಡೀ ರಾಜ್ಯದ ಮಂತ್ರಿ ಎನ್ನತಕ್ಕಂಥ ಭಾವನೆ ಇರಲಿ. ನಾವು ಒಂದು ಕ್ಷೇತ್ರಕ್ಕೆ ಮಂತ್ರಿಯಾಗಿದ್ದೇವೆ ಅಥವಾ ಒಂದು ಜಿಲ್ಲೆಗೆ ಮಂತ್ರಿಯಾಗಿದ್ದೇವೆ, ಅಥವಾ ಒಂದು ಪಕ್ಷಕ್ಕೆ

ಮಂತ್ರಿಯಾಗಿದ್ದೇವೆ ಎನ್ನುವಂತಹ ಭಾವನೆ ತಮ್ಮಲ್ಲಿ ಖಂಡಿತವಾಗಿ ಯಾರಲ್ಲೂ ಇರಬಾರದು. ತಾವು ಮಂತ್ರಿಯಾಗಿರುವ ಸಂದರ್ಭದಲ್ಲಿ ಇಡೀ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಜಿಲ್ಲೆಗೆ ಉಸ್ತುವಾರಿ ಮಂತ್ರಿಯಾಗಿದ್ದರೆ ತಮ್ಮ ತಮ್ಮ ಜಿಲ್ಲೆಗಳ ಸಮಗ್ರ ಅಭಿವೃದ್ಧಿ ಕಡೆಗೆ ತಮ್ಮ ಗಮನಹರಿಸಿ ಇದರ ಬಗ್ಗೆ ಕಾರ್ಯನಿರ್ವಹಿಸಿದರೆ ಸರ್ಕಾರ ಜನಗಳಿಗೆ ಏನು ಸೌಲಭ್ಯಗಳನ್ನು ಕೊಡುತ್ತಿದೆಯೋ ಅದು ಅವರಿಗೆ ತಲುಪುತ್ತದೆ. ಇದರಿಂದಾಗಿ ಸರ್ಕಾರದ ಕೀರ್ತಿ ಹೆಚ್ಚಾಗುತ್ತಿದೆ ಎನ್ನುವಂಥ ಮಾತನ್ನು ಹೇಳುತ್ತಾರೆ, ಇನ್ನು ಅಬಕಾರಿ ವಿಷಯಕ್ಕೆ ಸಂಬಂಧಪಟ್ಟಹಾಗೆ ನಾಲ್ಕು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ಅಬಕಾರಿ ಮಂತ್ರಿಗಳು ದಯಮಾಡಿ ಇದರ ಬಗ್ಗೆ ಬಹಳ ಗಮನ-ಹರಿಸಬೇಕಾಗಿದೆ. ಏಕೆಂದರೆ ನಾವೂ ಕೂಡ ನಮ್ಮ ಸರ್ಕಾರ ಬಂದ ಮೇಲೆ ಈ ಮಾತನ್ನು ಹೇಳಿದೆವು. ಏನೆಂದರೆ ಎಕ್ಸೈಸ್‌ನ್ನು, ಸಾರಾಯಿಯನ್ನು ತೆಗೆದುಹಾಕಬೇಕೆಂದು ಹೇಳಿದೆವು, ಬಹುಶಃ ಇದನ್ನು ತೆಗೆದುಹಾಕುವುದಕ್ಕೆ ಆ ಬ್ರಹ್ಮನಿಂದ ಕೂಡ ಸಾಧ್ಯವಿಲ್ಲವೇನೋ. ಏಕೆಂದರೆ ಎಲ್ಲಾ ಊರುಗಳಲ್ಲಿ ಸರ್ಕಾರದ ಸಾರಾಯಿಯನ್ನು ಕುಡಿಯುವುದಕ್ಕೆ ಜನ ಯಾರೂ ನಂಬಿಕೊಂಡಿಲ್ಲ. ಕಾರಣ ಸಂಪೂರ್ಣ ಸಾರಾಯಿ ಕಾರ್ಖಾನೆಗಳು ಪ್ರತಿಹಳ್ಳಿಯಲ್ಲಿ ಇವತ್ತು ಕಂಡು ಬರುತ್ತಿವೆ. ಇವತ್ತು ಇಲ್ಲಿ ಏನಾಗಿದೆ ಎಂದರೆ ಅಲ್ಲಿರುವಂತಹ ಕಂಟ್ರಾಕ್ಟರ್ಸ್ ಈ ಭಾಗದಲ್ಲಿರುವವನು ಆ ಭಾಗದಲ್ಲಿ ಮಾರುವುದು, ಹಾಗೂ ಆ ಭಾಗದಲ್ಲಿರುವವನು ಈ ಭಾಗಕ್ಕೆ ಮಾರಿ ಒಂದು ರೀತಿಯ ಪೈಪೋಟಿಯ ಮೂಲಕ ಎಲ್ಲಾ ಸರಾಯಿಯನ್ನು ಅಲ್ಲಲ್ಲಿ ತಯಾರು ಮಾಡಿ, ಏನು ಈ ಬೋಗಸ್ ಸರಾಯಿ, ಬ್ರಾಂದಿ ಇವುಗಳನ್ನು ತಯಾರಿಸಿ.. ಅದರಲ್ಲಿ ಈಜು ಹೊಡೆಯುವಂತಹ ಪರಿಸ್ಥಿತಿ ನಿರ್ಮಾಣವಾಗುವುದರ ಜೊತೆಗೆ ಸರ್ಕಾರ 10 ರೂ.ಗೆ ಮಾರಿದರೆ ನಾವು 5 ರೂ.ಗೆ ಮಾರುತ್ತೇವೆ ಎನ್ನುವಂತಹ ಸ್ಥಿತಿ ಇವತ್ತು ಗ್ರಾಮೀಣ ಭಾಗದಲ್ಲಿ ಉಂಟಾಗಿದೆ. ಅದಲ್ಲದೆ ಇವತ್ತು ಹಳ್ಳಿಗಳಲ್ಲಿ ಕೂಡ ಇಂತಹ ಸಾರಾಯಿ ಕಾರ್ಖಾನೆಗಳು ಪ್ರಾರಂಭವಾಗಿರುವುದರಿಂದ ಸರ್ಕಾರ ಇದರ ಬಗ್ಗೆ ಅತ್ಯಂತ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಕುಡಿಯುವಂತಹ ಜನರನ್ನು ನಾವು ಕುಡಿಯುವುದು ಬೇಡ ಎಂದು ತಪ್ಪಿಸದಿದ್ದರೂ ಸರ್ಕಾರವೇ ಕ್ರಮಬದ್ಧವಾದ, ವ್ಯವಸ್ಥಿತವಾದಂಥ ಸಾರಾಯಿಯನ್ನು ಏನು ತಯಾರು ಮಾಡುತ್ತದೆಯೋ ಇದನ್ನು ಉಪಯೋಗಿಸಲಿಕ್ಕೆ ಒಂದು ಕಂಪನಿಯಿಂದ ಈ ಸರಾಯಿಯನ್ನು ಮಾರಬೇಕು. ಈ ರೀತಿಯನ್ನು ಬಿಟ್ಟು ಕೇವಲ ನಾಲ್ಕು ಕಾಸ್ ಮಾಡಬೇಕೆಂದು ಹಗಲುದರೋಡೆಕಾರರು ಮನೆಯಲ್ಲಿ ಕಾಯಿಸಿರುವ ಭಟ್ಟಿಯನ್ನು ಜನರಿಗೆ ಕುಡಿಸಿದ್ದೇ ಆದರೆ ಜನರು 10 ವರ್ಷ ಬಾಳುವಂತವರು 5 ವರ್ಷ ಆಯುಷ್ಯ ಕಡಿಮೆಯಾಗುತ್ತದೆ. ಇದರ ಬಗ್ಗೆ ಅಬಕಾರಿ ಇಲಾಖೆ ವಿಶೇಷವಾಗಿ ಗಮನ ನೀಡಬೇಕು. ಅಲ್ಲಿರುವ ಎಕ್ಸೈಸ್ ಇನ್ಸ್‌ಪೆಕ್ಟರ್ಸ್ ಯಾರು ಎಕ್ಸೈಸ್ ಇನ್ಸ್‌ಪೆಕ್ಟರ್ಸ್ ಕೆಲಸ ಮಾಡುತ್ತಿಲ್ಲ. ಅವರು ಇರುವುದು ಅವಶ್ಯಕ ಇದೆಯೋ ಇಲ್ಲವೋ ಎನ್ನುವುದು ನನಗೆ ಅನುಮಾನವಾಗಿದೆ. ಏಕೆಂದರೆ ಇಲ್ಲಿ ಏನಾಗಿದೆ ಅಲ್ಲಿ ಯಾರು ಎಕ್ಸೈಸ್ ಇನ್ಸ್‌ಪೆಕ್ಟರ್ ಇರುತ್ತಾನೆಯೋ ಆತ ಅಲ್ಲಿನ ಕಂಟ್ರಾಕ್ಟರ್ ಮನೆಯಲ್ಲಿ

ಇದ್ದು ಇವರ ಹತ್ತಿರ ಏಜೆಂಟ್‌ರಾಗಿ, ಮಾಮೂಲು ತೆಗೆದುಕೊಂಡು ಅವರು ಆರಾಮಾಗಿರುತ್ತಾರೆ. ಇಂಥವರು ಯಾರು ಎಂಎಲ್‌ಎಗಳನ್ನು ನೋಡುವುದಕ್ಕೆ ಬರುವುದಿಲ್ಲ, ಏಕೆಂದರೆ ಅವರ ವರ್ಗಾವಣೆಯನ್ನು ನಾವು ಯಾರೂ ಮಾಡುವುದಕ್ಕಾಗುವುದಿಲ್ಲ. ಇಂತಹ ಎಕ್ಸೈಸ್ ಇನ್ಸ್‌ಪೆಕ್ಟರುಗಳೆಲ್ಲಾ ಬಹಳ ದೊಡ್ಡ ಗುತ್ತಿಗೆದಾರರನ್ನು ಬಲವಾಗಿ ಹಿಡಿದುಕೊಂಡಿರುತ್ತಾರೆ. ಅದಕ್ಕಾಗಿ ಸರ್ಕಾರ ಅವರ ಮೇಲೆ ಸರಿಯಾದಂಥ ಕ್ರಮ ತೆಗೆದುಕೊಂಡು ಬೆದರಿಕೆ ಹಾಕಿ ಅವರು ಸರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಹಳ್ಳಿಗಾಡುಗಳಲ್ಲಿ ಮಾಡತಕ್ಕಂಥ ಖೋಟಾ ಸಾರಾಯಿ, ಬ್ರಾಂದಿ ಇವುಗಳು ನಿಲ್ಲುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ ನಮ್ಮ ಭಾಗದಲ್ಲಿ ಜನರೇ ಸಾಕಷ್ಟು ಜನಗಳು ಈ ರೀತಿಯ ಕೆಲಸವನ್ನು ಮಾಡುವುದರಿಂದ ನಾವು ಯಾರಿಗೆ ಹೇಳಬೇಕು ಎನ್ನುವುದೇ ಗೊತ್ತಾಗುತ್ತಿಲ್ಲ. ಆದ್ದರಿಂದ ದಯಮಾಡಿ ಇದರ ಬಗ್ಗೆ ತುಂಬಾ ನಿಗಾ ಇಡಬೇಕು ಎನ್ನುವ ಮಾತನ್ನು ಹೇಳಿ, ಇನ್ನು ಹಾಸ್ಟೆಲ್‌ಗಳ ಬಗ್ಗೆ ಹೇಳುವುದಾದರೆ, ನೀವು ಕೊಡುತ್ತಿರುವ ಈ ಖಾಸಗಿ ಹಾಸ್ಟೆಲ್‌ಗಳು ಇದು ಒಳ್ಳೆಯದಲ್ಲ. ಏಕೆಂದರೆ ನೀವು ಮಾಡುವುದಾದರೆ ಖಾಸಗಿ ಹಾಸ್ಟೆಲ್‌ಗಳನ್ನು ಯಾರೋ ಕೈಯಲ್ಲಿ ಕೊಡುತ್ತೀರಿ, ಅವನು ನೆಪ ಮಾತ್ರಕ್ಕೆ ಮಾಡಿ ಕೇವಲ ದುಡ್ಡು ದೋಚತಕ್ಕಂಥ ಕೆಲಸ ಮಾಡುವುದಾದರೆ, ಸರ್ಕಾರವೇ ಈ ಖಾಸಗಿ ಹಾಸ್ಟೆಲ್‌ಗಳನ್ನು ನಿರ್ವಹಿಸಬೇಕು ಎನ್ನುವಂತಹ ಮಾತನ್ನು ಹೇಳಿ, ಸಮಯದ ಅಭಾವಿದ್ದರೂ ಕೂಡ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ, ನನ್ನ ಅಭಿಪ್ರಾಯಗಳನ್ನು ತಿಳಿಸಲು ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ, ನನ್ನ ಅಭಿಪ್ರಾಯಗಳನ್ನು ಕೇಳಿ ಏನಾದರೂ ಕಾರ್ಯರೂಪಕ್ಕೆ ತರತಕ್ಕಂಥ ಸರ್ಕಾರದ ಕಾಳಜಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಅಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ಬೇಡಿಕೆ 21ಕ್ಕೆ ಕುರಿತಂತೆ ಕೆಲವು ನನ್ನ ಅಭಿಪ್ರಾಯಗಳನ್ನು, ಸರ್ಕಾರ ತನ್ನ ನೀತಿಯನ್ನು ಸರಿಪಡಿಸಿಕೊಳ್ಳುವ ಹಿನ್ನೆಲೆಯಲ್ಲಿ ನಾನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಾ ಕೆಲವು ಅಭಿಪ್ರಾಯಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಬಹುಶಃ ಸರ್ಕಾರದ ಎಲ್ಲಾ ಇಲಾಖೆಗಳಿಗಿಂತ ಇದು ಬಹಳ ಮಹತ್ವದ ಇಲಾಖೆ ಎಂದು ನಾನು ಭಾವಿಸಿರುತ್ತೇನೆ. ಅನೇಕರು ಈ ಸದನದಲ್ಲಿ ಅರಣ್ಯ ಇಲಾಖೆಯ ಬಗ್ಗೆ ಸ್ವಾರಸ್ಯಕರವಾದ ಮಾತುಗಳನ್ನು, ಚರ್ಚೆಗಳನ್ನು ಅಲ್ಲಿರುವ ಲೋಪದೋಷಗಳನ್ನು, ಅನೇಕ ಸಂಗತಿಗಳನ್ನು ನಾವು ಇಲ್ಲಿ ಚರ್ಚೆ ಮಾಡಿದ್ದೇವೆ. ನಮ್ಮೆಲ್ಲರಿಗೆ ಅರಣ್ಯ ಒಂದು ಪರಿಸರ ನಮ್ಮ ಮನಸ್ಸಿನ ಆಳದಲ್ಲಿ ಹೃದಯದಾಳದಲ್ಲಿ ಒಂದು ರೀತಿಯ ಭಾವನೆಗಳನ್ನು ಹುಟ್ಟಿಸುತ್ತದೆ ಮತ್ತು ಅದು ಜಾಗೃತವಾಗುತ್ತದೆ. ಎನ್ನುವ ಮಾತು ಈ ಸಂದರ್ಭಗಳಲ್ಲಿ ವ್ಯಕ್ತವಾಗುತ್ತದೆ. ಇದು ಎಲ್ಲಾ ಇಲಾಖೆಗಳ ಬಗ್ಗೆ ಈ ಮಾತನ್ನು ಹೇಳುವುದಕ್ಕೆ ಬರುವುದಿಲ್ಲ, ಏಕೆಂದರೆ ನಾವು ಪರಿಸರದ ಮಧ್ಯೆ ಹುಟ್ಟಿ

ಬೆಳೆದು ಅದನ್ನು ನಮಗೆ ಗೊತ್ತಿಲ್ಲದಂತೆ ಒಂದು ಸಂತೋಷವನ್ನು ಕೊಡುವಂತಹ ಇಲಾಖೆಯ ವಿಷಯವನ್ನು ನಾನು ಈಗ ಪ್ರಸ್ತಾಪ ಮಾಡುತ್ತಿದ್ದೇನೆ. ನನಗೆ ಹಿರಿಯರೊಬ್ಬರು ಒಂದು ಮಾತನ್ನು ಹೇಳಿದರು. ಏನೆಂದರೆ ನಾವು ನಮ್ಮ ಸೌಕರ್ಯಗಳಿಗೋಸ್ಕರ, ನಮ್ಮ ವೈಭವಕೋಸ್ಕರ ಅರಣ್ಯವನ್ನು ಹೇಗೆ ದುರ್ಬಳಕೆ ಮಾಡಿಕೊಳ್ಳುತ್ತೇವೆ, ನಮ್ಮ ಆಶೆಗಳಿಗೆ ಕಡಿವಾಣ ಹಾಕಿಕೊಳ್ಳದೆ ಮುಂದಿನ ಜನಾಂಗವನ್ನು ನಾವು ಹೇಗೆ ನಿರ್ಲಕ್ಷಿಸುತ್ತೇವೆ ಎನ್ನುವಂತಹ ಒಂದು ಮಾತನ್ನು ಬಹಳ ಕಳಕಳಿಯಿಂದ ಹೇಳಿದರು. ಇದನ್ನು ನಾವು ಹಿಂದಿನವರಿಂದ ಬಂದ ಬಳುವಳಿ ಎಂದು ತಿಳಿದುಕೊಂಡು ನಾವು ಬಳಸುತ್ತಿದ್ದೇವೆ. ಆದರೆ ನಮ್ಮ ಜವಾಬ್ದಾರಿ ಇದು ಮುಂದಿನ ಪೀಳಿಗೆಯವರಿಂದ ಪಡೆದುಕೊಂಡಂತಹ ಸಾಲ ಎನ್ನುವ ಅರಿವು ನಮಗೆ ಇಲ್ಲದೆ ಇರುವುದರಿಂದ ನಾವು ಈ ರೀತಿ ದುರ್ಬಳಕ್ಕೆ ಮಾಡಿಕೊಳ್ಳುತ್ತಿದ್ದೇವೆಂದು ಈ ಮಾತನ್ನು ಅವರು ಹೇಳಿದರು. ಈ ಒಂದು ಸಂದರ್ಭದಲ್ಲಿ ಅರಣ್ಯ ಇಲಾಖೆಗೆ ಎಷ್ಟು ಮಹತ್ವದ ಜವಾಬ್ದಾರಿ ಇದೆ ಎನ್ನುವುದು ಈ ಮಾತಿನಿಂದ ಅರ್ಥವಾಗಬಹುದು. ನಾನು ಅನೇಕ ವರ್ಷಗಳ ಅರಣ್ಯ ಇಲಾಖೆಯ ವರದಿ ಹಾಗೂ ವಿಷಯ ಸಮಿತಿಗಳ ವರದಿಯನ್ನು ಹಾಗೂ ಅರಣ್ಯ ಇಲಾಖೆಯ ಆಡಳಿತಗಳನ್ನು ಕೇವಲ ಶಾಸಕನಾಗಿ ಹಾಗೂ ಶಾಸಕನಾಗಿರುವುದಕ್ಕಿಂತ ಮೊದಲೇ ಈ ವಿಷಯಗಳನ್ನು ಕುರಿತು ಯೋಚನೆ ಮಾಡುತ್ತಿದ್ದೇನೆ ಮತ್ತು ಇವುಗಳ ಆಗುಹೋಗುಗಳ ಬಗ್ಗೆ ನೋಡುತ್ತಿದ್ದೇನೆ. ಆದರೆ ಇಷ್ಟೊಂದು ಮಹತ್ತರವಾದ ಜವಾಬ್ದಾರಿ, ಹೊಣೆಗಾರಿಕೆ, ತಮ್ಮ ಇಲಾಖೆಯ ಮೇಲೆ ಇದೆ ಎನ್ನುವಂಥದ್ದು ಇಲಾಖೆಯ ಅಧಿಕಾರಿಗಳು ಹಾಗೂ ಸರ್ಕಾರಕ್ಕೂ ಅದರ ಪ್ರಾಮುಖ್ಯತೆಯ ಅರಿವು ಬಗ್ಗೆ ಬೇಕಾದಷ್ಟು ಗಮನವನ್ನು ಕೊಟ್ಟಿಲ್ಲ ಎನ್ನತಕ್ಕಂಥದ್ದು ಇವುಗಳ ಆಡಳಿತ ವ್ಯವಸ್ಥೆಯನ್ನು ನೋಡಿದಾಗ ಇದು ಸ್ಪಷ್ಟವಾಗುತ್ತದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಶೇಕಡ 16ರಷ್ಟು ಅರಣ್ಯ ಆವೃತ್ತವಾಗಿದೆ ಎನ್ನುವ ವರದಿ ಸರ್ಕಾರದಲ್ಲಿ ಇದೆ. ಇದು ಎಷ್ಟು ನಿಜವೋ ಸುಳ್ಳು ಎನ್ನುವುದನ್ನು ನೋಡಬೇಕು. ಏಕೆಂದರೆ ವಿದ್ಯುತ್ ಕೇವಲ 18 ಪರ್ಸೆಂಟ್ ಲಾಸ್ ಇದೆ ಎಂದು ಕೆಇಬಿನವರು ಹೇಳುತ್ತಾರೆ ಆದರೆ ಇದು ನಿಜವಾಗಲೂ 30 ಪರ್ಸೆಂಟ್ ಇದೆ ಎಂದು ಬೇರೆಯವರು ಹೇಳುವ ರೀತಿಯಲ್ಲಿ ಈ ಅರಣ್ಯ ಇಲಾಖೆ ಫಾರೆಸ್ಟ್ ಕವರ್ ಆಗಿದೆ ಎಂದು ಹೇಳುತ್ತಿರುವುದು. ಆದರೆ ನಾವು ಎಲ್ಲಿ ನೋಡಿದರೂ ಫಾರೆಸ್ಟ್ ನಮಗೆ ಕಾಣುತ್ತಿಲ್ಲ. 9ನೇ ಪಂಚವಾರ್ಷಿಕ ಯೋಜನೆಯಂತೆ ಶೇಕಡ 33 ರಷ್ಟು ಅರಣ್ಯ ಇರಬೇಕು ಎಂದು ಇದೆ. ಕನಿಷ್ಠ ಪಕ್ಷ ಇದನ್ನು 20 ಪರ್ಸೆಂಟ್ ಮಾಡಬೇಕು ಎಂದು ಅವರು ಯೋಚನೆ ಮಾಡಿಕೊಂಡಿದ್ದಾರೆ. ಇದು ಯಾವಾಗ ಸಾಧ್ಯವಾಗುತ್ತಿದೆಯೋ ಗೊತ್ತಿಲ್ಲ. ಸುಮಾರು 25 ಲಕ್ಷ ಹೆಕ್ಟೇರ್ ಅರಣ್ಯವನ್ನು ಬೆಳೆಸುವುದಕ್ಕೆ ನಮಗೆ ಅವಕಾಶ ಇದೆ. ಹೀಗಿದ್ದರೂ ಕೂಡ ಅರಣ್ಯ ಇಲಾಖೆಯು ಮಾಡುವುದನ್ನು, ಇದು ನಡೆದುಕೊಳ್ಳುವ ರೀತಿಯನ್ನು ನೋಡಿದಾಗ ನಮಗೆ ಬಹಳ ದುಃಖವಾಗುತ್ತದೆ. ಅಷ್ಟೆ ಅಲ್ಲ ಸರ್ಕಾರದ ಆಡಳಿತದ ಹಿಡಿತವನ್ನು ಸಂಪೂರ್ಣವಾಗಿ ಹೇಗೆ ಕಳೆದುಕೊಂಡಿದೆ ಮತ್ತು ಸಡಿಲವಾಗಿ ಕೆಲವು ಹಿತಾಸಕ್ತಿಗಳ ಕೈಗೊಂಬೆಯಾಗಿದೆ ಎನ್ನುವುದು

ಸ್ಪಷ್ಟವಾಗುತ್ತದೆ. ನಾನು ನಿನ್ನೆ ಬೆಳಿಗ್ಗೆ ಪತ್ರಿಕೆ ಓದುತ್ತಿದ್ದಾಗ ಒಂದು ವಿಚಾರದ ಕಡೆ ನನ್ನ ಗಮನಹರಿಸಿ ಬೆಂಗಳೂರಿನಲ್ಲಿ 22 ಲಕ್ಷ ಗಂಧವನ್ನು ಹಿಡಿದರು ಎನ್ನುವಂತಹ ಸುದ್ದಿಯನ್ನು ಓದಿದೆ. ಈ ಗಂಧ ಬೆಂಗಳೂರಿಗೆ ಹೇಗೆ ಬಂತು? ಇದನ್ನು ಮಧ್ಯದಲ್ಲಿ ಯಾರೂ ಹಿಡಿಯಲ್ಲಿಲ್ಲವೆ? ಅಲ್ಲಿಂದ ಹೇಗೆ ತಪ್ಪಿಸಿಕೊಂಡು ಇಲ್ಲಿಗೆ ಹೇಗೆ ಬಂತು ಮತ್ತು ಇದನ್ನು ಹೇಗೆ ತಂದರು?.. ನಮ್ಮ ಊರಿನಲ್ಲಿ ಕೆಲವು ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಈ ವಿಷಯದ ಬಗ್ಗೆ ನಾನು ಕೇಳಿದೆ, ಏನು ಸ್ವಾಮಿ ದಿನಬೆಳಗಾದರೆ ನೀವು ಅಲ್ಲಿ ಹಿಡಿದಿರಿ, ಇಲ್ಲಿ ಹಿಡಿದಿರಿ, ಎಂದು ಹೇಳುತ್ತೀರಿ, ಇದು ಹೇಗೆ? ಎಂದು ಕೇಳಿದ್ದಕ್ಕೆ ಆ ಅಧಿಕಾರಿ ಏನು ಹೇಳುತ್ತಾನೆಂದರೆ ಸ್ವಾಮಿ ಅಲ್ಲಿ ಅವನು ಬಹಳ ಧಿಮಾಕು ಮಾಡುತ್ತಿದ್ದ ಹೀಗಾಗಿ ಸ್ವಲ್ಪ ತೋರಿಸೋಣವೆಂದು ಹಿಡಿದೆವು. ಅಂದರೆ ಧಿಮಾಕು ಮಾಡಿದರೆ ಮಾತ್ರ ಹಿಡಿಯುತ್ತಾರೆ, ಇವರ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡರೆ ಹಿಡಿಯುವುದಿಲ್ಲ ಎಂದು ಅವರು ಒಪ್ಪಿಕೊಳ್ಳುತ್ತಾರೆ. ಈ ಒಂದು ವ್ಯವಸ್ಥೆ ಯಾವ ರೀತಿ ಇದೆ ಎನ್ನುವುದಕ್ಕೆ ಇದು ಒಂದು ಉದಾಹರಣೆ. ಅವನಿಗೆ ಸೊಕ್ಕು ಇದ್ದರೆ ಹಿಡಿಯುತ್ತಾರೆ, ಇವರ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡರೆ ಹಿಡಿಯುವುದಿಲ್ಲ... ನಮ್ಮ ಶಿವಮೊಗ್ಗ, ಕೊಡಗು, ಮೈಸೂರು, ಕಾರವಾರ, ದಕ್ಷಿಣ ಕನ್ನಡ, ಈ ಜಿಲ್ಲೆಯ ಸ್ಥಳೀಯ ಪತ್ರಿಕೆಗಳನ್ನು ನಾವು ನೋಡಬೇಕು. ಇವುಗಳನ್ನು ನೋಡಿದರೆ ಪ್ರತಿದಿನ ಒಂದಲ್ಲ ಹತ್ತು ರೀತಿಯ ಸುದ್ದಿ ಈ ಅರಣ್ಯ ಇಲಾಖೆಗೆ ಸಂಬಂಧಪಟ್ಟರತಕ್ಕಂಥ ಕಳ್ಳತನದ ಬಂಧನ, ಅವ್ಯವಹಾರ ಈ ಸುದ್ದಿಗಳೇ ಇದರಲ್ಲಿ ಪ್ರಧಾನವಾಗಿರುತ್ತವೆ. ಅಂದರೆ ಈ ಇಲಾಖೆಯಲ್ಲಿ ಹೇಗೆ ಬೇರೆಯವರು ದುರ್ಬಳಕೆ ಮಾಡಿಕೊಳ್ಳುವಂತಹ ಒಂದು ಶಕ್ತಿ ಎಷ್ಟು ಬಲವಾಗಿದೆ ಎನ್ನುವುದು ವ್ಯಕ್ತವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅರಣ್ಯ ಇಲಾಖೆ ಬಗ್ಗೆ ಮಾತನಾಡುತ್ತಿದ್ದಾರೆ. ಇಲ್ಲಿ ಅರಣ್ಯ ಮಂತ್ರಿಗಳೂ ಇದ್ದಾರೆ. ಶಿಕಾರಿಪುರ ತಾಲ್ಲೂಕಿನಲ್ಲಿ ಚಂದ್ರಕಲಾ ಫಾರೆಸ್ಟ್ ಎಂದು ಇತ್ತು. ಜಿಲ್ಲಾಮಂತ್ರಿಗಳು ಬಸವಣ್ಣಪ್ಪನವರಾಗಿದ್ದಾರೆ. ಸುಮಾರು ಒಂದುನೂರು ಕೋಟಿ ರೂಪಾಯಿಗಳ ಶ್ರೀಗಂಧ ಇತ್ತು. ಇವತ್ತು ಒಂದು ಗಿಡ ಇಲ್ಲ. ನಾನು ಈ ಸದನದಲ್ಲಿ ಹತ್ತಾರುಬಾರಿ ಪ್ರಸ್ತಾಪ ಮಾಡಿದೆ, ಏನೂ ಉಪಯೋಗವಾಗಲಿಲ್ಲ. ಹಾಯ್ ಬೆಂಗಳೂರು ಎಂಬ ಪತ್ರಿಕೆಯಲ್ಲಿ ಶಿಕಾರಿಪುರ ತಾಲ್ಲೂಕಿನಲ್ಲಿ ಯಾವರೀತಿ ಕಾಡು ನಾಶವಾಗುತ್ತಿದೆ ಎಂದು ಬರೆದಿದ್ದಾರೆ. ಅದರಲ್ಲಿ ಬರೆದಿರತಕ್ಕ ಒಂದೊಂದು ಶಬ್ದವೂ ಕೂಡ ಸತ್ಯ. ಕನ್‌ಸರ್ವೇಟರ್ ಆಫ್ ಫಾರೆಸ್ಟ್‌ನವರಿಗೆ ಪತ್ರಬರೆದೆ. ಪರ್ಸನಲ್ ಆಗಿ ರಿಕ್ವೆಸ್ಟ್ ಮಾಡಿಕೊಂಡೆ. ಮುಖ್ಯಮಂತ್ರಿಗಳನ್ನು ಕಂಡೆ, ತಮ್ಮನ್ನು ಕಂಡೆ. ಒಬ್ಬ ಪ್ರಾಮಾಣಿಕ ಹಿರಿಯ ಅಧಿಕಾರಿಯನ್ನು ಅಲ್ಲಿಹಾಕಿ ಎಂದು ಕೇಳಿಕೊಂಡೆ. ಅರಣ್ಯ ಸರ್ವನಾಶವಾಗುತ್ತಿದೆ. ಅಲ್ಲಿ ಬೆಳಿಗ್ಗೆ, ರಾತ್ರಿ ಬೇರೆ ಏನೂ ಉದ್ಯೋಗ ಇಲ್ಲ. ಅದು ಶಿವಮೊಗ್ಗ ಜಿಲ್ಲೆ ಇರಬಹುದು, ಚಿಕ್ಕಮಗಳೂರು ಜಿಲ್ಲೆ ಇರಬಹುದು, ಅಥವಾ ಉತ್ತರ

ಕನ್ನಡ ಜಿಲ್ಲೆ ಇರಬಹುದು. ನಾನು ಹೇಳುತ್ತೇನೆ. ನಿಮ್ಮ ಅರಣ್ಯ ಅಧಿಕಾರಿಗಳು ಕಾಡು ನಾಶವಾಗದಂತೆ ನೋಡಿಕೊಳ್ಳುವುದಕ್ಕೆ ಅಲ್ಲಿದ್ದಾರೋ ಅಥವಾ ಕಳ್ಳಸಾಗಾಣಿಕೆದಾರರಿಗೆ ಸಹಕಾರ ಕೊಡುವುದಕ್ಕೆ ಇದ್ದಾರೋ? ನೂರಕ್ಕೆ ಎಂಭತ್ತು ಜನ ಇದೇ ಕೆಲಸ ಮಾಡುತ್ತಿದ್ದಾರೆ. ಇದು ನನ್ನ ಕ್ಷೇತ್ರದ ಕರ್ಮಕಥೆ ನಾನು ಹೇಳುತ್ತಾ ಇದ್ದೇನೆ. ಈ ರೀತಿಯಾದರೆ, ನನ್ನ ಬಗ್ಗೆ ಜನ ಏನು ಅಂದು ಕೊಳ್ಳಬಹುದು. 39 ಜನ ಶಾಸಕರು ಇರುವಂಥ ಒಂದು ಪಕ್ಷದ 2ನೇ ಸ್ಥಾನದ ಮುಖಂಡನಾಗಿ ನಾನಿದ್ದು, ನನ್ನ ತಾಲ್ಲೂಕಿನಲ್ಲಿ ಲೂಟಿ ನಡೆಯುತ್ತಿದೆ ಎನ್ನುವುದಾದರೆ, ನಾನು ಶಾಸಕನಾಗಿ ಮುಖ ತೋರಿಸುವುದು ಹೇಗೆ? ಯಾವುದೇ ಅಧಿಕಾರಿಗಳ ಬಗ್ಗೆ, ಇವನು ಬೇಕು, ಇವನು ಬೇಡ ಎಂದು ನಾನು ಹೇಳಿದ್ದೇನೆಯೇ? ಸರಿಯಾದ ಅಧಿಕಾರಿಯನ್ನು ಹಾಕಿಕೊಡಿ ಎಂದು ಕೇಳಿದೆ, ನೀವು ಹಾಕಿಕೊಟ್ಟಿರಾ? ನೀವು ಒಂದು ದಿನ ಬಂದು ಆ ಕಡೆ ನೋಡಿದಿರಾ. ಕಾಡು ನೆಗೆದುಬಿದ್ದು ಹಾಳಾಗಿ ಹೋಗುತ್ತಿದೆ, ಸರ್ವನಾಶವಾಗುತ್ತಿದೆ, ಇದನ್ನು ನೋಡಲು ಬಿಡುವು ಮಾಡಿಕೊಂಡು ಬಂದಿರಾ. ಬೆಂಗಳೂರಿನಲ್ಲಿ ಕುಳಿತಿರುವ ನಿಮ್ಮ ಅಧಿಕಾರಿ, ಅಲ್ಲಿ ಏನಾಗಿದೆ ಎಂದು ನೋಡುವುದಕ್ಕೆ ಬಂದರಾ? ನಾನೇ ಕನ್‌ಸರ್ವೇಟರ್ ಆಫ್ ಫಾರೆಸ್ಟ್‌ನವರ ಹತ್ತಿರ ಮಾತನಾಡಿ, ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ಆದರೂ ಸಹ ಸುಧಾರಣೆಯಾಗಿಲ್ಲ. ಪ್ರತಿನಿತ್ಯ ಇದೇ ಆಗುತ್ತಿದೆ ಎನ್ನುವುದಾದರೆ, ನಾವು ಕ್ಷೇತ್ರದ ಜನರಿಗೆ ಮುಖ ತೋರಿಸುವುದು ಹೇಗೆ? ಸರ್ಕಾರ ಬದುಕಿದೆಯೊ? ದಯಮಾಡಿ ಅರಣ್ಯ ಮಂತ್ರಿಗಳು ತಪ್ಪು ತಿಳಿದುಕೊಳ್ಳಬೇಡಿ. ನಿಮಗೆ ಬಿಡುವು ಇದ್ದರೆ ಈ ಅಧಿವೇಶನ ಮುಗಿದ ಮೇಲೆ ಆ ಭಾಗದಲ್ಲಿ ಪ್ರವಾಸ ಮಾಡಿ. ಯೋಗ್ಯರನ್ನು, ಪ್ರಾಮಾಣಿಕರನ್ನು ಅರಣ್ಯ ಉಳಿಸುವುದಕ್ಕೆ ಬಿಡಿ. ಭಗವಂತ ಕೊಟ್ಟಂಥ ಸಂಪತ್ತು ಲೂಟಿಯಾಗುತ್ತಾ ಇದೆ. ನಿಮ್ಮ ಅಧಿಕಾರಿಗಳು ಕೈಕಟ್ಟಿಕೊಂಡು ಕುಳಿತಿದ್ದಾರೆ. ಅರಣ್ಯ ಅಧಿಕಾರಿಗಳು ಮಾಡಬಾರದ್ದನ್ನು ಮಾಡಿದರು. ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ. ಪೊಲೀಸ್ ಕಂಪ್ಲೇಂಟ್ ಕೊಟ್ಟು, ಆಮೇಲೆ ಭಯದಿಂದ ಅದನ್ನು ವಿತ್ ಡ್ರಾ ಮಾಡಿಕೊಂಡೆವು. ಅವರಿಗೆ ರಕ್ಷಣೆ ಇದೆಯಾ? ಒಂದುಕಡೆ ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ ಇಲ್ಲ. ಇನ್ನೊಂದು ಕಡೆ ಅವರ ಜೊತೆ ಶಾಮೀಲಾಗಿ ಲೂಟಿ ನಡೆಯುತ್ತಾ ಇದೆ. ನೀವು ಹೊಸದಾಗಿ ಗಿಡ ನೆಡೆಸುತ್ತೇವೆಂದು ಹೇಳುತ್ತೀರಿ, ಎಲ್ಲಿನೀವು ಗಿಡ ನೆಡುತ್ತಿದ್ದೀರಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅವರು ಹೇಳಿದ ಮೇಲೆ ಬದಲಾವಣೆ ಮಾಡಿದ್ದೇನೆ. ನೀವು ಮಾಡಿಲ್ಲವೆಂದು ಹೇಳಿದಿರಿ, ನೀವು ಹೇಳಿದ ಮೇಲೆ ಆ ಅಧಿಕಾರಿಯನ್ನು ತಕ್ಷಣ ಚೇಂಜ್ ಮಾಡಿದ್ದೇನೆ ಆಮೇಲೆ ಡಿ.ಎಫ್.ಓ. ಚೇಂಜ್ ಮಾಡಿ, ಹೊಸಬರನ್ನು ಹಾಕಿದ್ದೇವೆ. ಈಗ ಅವರು ದಿವಸ ಹಿಡಿಯುತ್ತಿದ್ದಾರೆ, ಇಲ್ಲವೆಂದಲ್ಲ. ಬೇಕಾದ ಜನ ಬಂದು ಹೇಳುತ್ತಿದ್ದಾರೆ. ಅವರು ಹಿಡಿಯುತ್ತಿದ್ದಾರೆ ಅವರಿಗೆ ಹೇಳಿ ಎಂದು ನಾವು ಹೇಳುವುದಿಲ್ಲವೆಂದು ಹೇಳಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಿಮ್ಮಲ್ಲಿ ಕೈಜೋಡಿಸಿ ವಿನಂತಿ ಇಷ್ಟೆ. ನಾನು ತಮ್ಮಲ್ಲಿ ಏನು ಹೇಳುತ್ತೇನೆಂದರೆ, ನೀವು ಹೇಳುತ್ತಾ ಇದ್ದೀರಿ, ಹಿಡಿಯುತ್ತಾ ಇದ್ದಾರೆ ಎಂದು. ಇವತ್ತು ಪ್ರತಿನಿತ್ಯ ಇದೇ ಕೆಲಸ ನಡೆಯುತ್ತಿದೆ. ಏಕೆ ನಾವು ಸಹಕಾರ ಕೊಡುತ್ತಿದ್ದೇವೆಯೇ? ಯಾರಾದರೂ ಪುಡಾರಿಗಳ ಬೆಂಬಲ ಇದೆಯೇ? ನೀವು ತಿಳಿದುಕೊಂಡು ರಹಸ್ಯವಾಗಿ ರಿಪೋರ್ಟ್ ತರಿಸಿಕೊಳ್ಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಈಗ ಹೊಸದಾಗಿ ಬಂದಿರುವ ಡಿ.ಎಫ್.ಓ ಹಿಡಿಯುತ್ತಾ ಇದ್ದಾನೆ. ಭದ್ರಾವತಿ ಶಿವಮೊಗ್ಗದ ಕಡೆ ಭಾರಿ ಕಳ್ಳತನವಾಗುತ್ತಾ ಇದೆ, ಅದನ್ನು ನಾನು ಒಪ್ಪುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಅರಣ್ಯದಿಂದ ಒಂದು ತುಂಡೂ ಕೂಡ ಈಚೆಗೆ ಬರದಹಾಗೆ ನೋಡಿಕೊಳ್ಳುವಂಥ ವ್ಯವಸ್ಥೆ ಮಾಡುತ್ತೀರಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಅರಣ್ಯ ಮಂತ್ರಿಗಳೇ, ಏನು ಹಿಡಿಯುತ್ತಾ ಇದ್ದಾರೆ ಎಂಬುದನ್ನು ಹೇಳಬೇಕಲ್ಲಾ. ಹಿಡಿಯುತ್ತಿದ್ದಾನೆ, ಹಿಡಿಯುತ್ತಿದ್ದಾನೆ ಎಂದು ಹೇಳುತ್ತಿದ್ದೀರಿ. ಏನೂ ಹಿಡಿಯುತ್ತಾ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಾನು ಉತ್ತರಹೇಳಿದ ಮೇಲೆ ನೀವು ಹೇಳಿ ಮಾನ್ಯ ಯಡಿಯೂರಪ್ಪನವರು, ಗಂಧದ ಮರಗಳ ಕಳ್ಳತನ ಜಾಸ್ತಿಯಾಗುತ್ತಿದೆ ಎಂದು ಹೇಳಿದರು. ಹೌದು, ಶಿವಮೊಗ್ಗ, ಭದ್ರಾವತಿಯಲ್ಲಿ ಜಾಸ್ತಿ ಕಳ್ಳತನವಾಗುತ್ತಾ ಇದೆ. ಅದು ನಿಜ. ಅದಕ್ಕಾಗಿ ವಿಶೇಷವಾಗಿ ಅಧಿಕಾರಿಗಳನ್ನು ಹಾಕಿದ್ದೇವೆ. ಶಿಕಾರಿಪುರ, ಶಿವಮೊಗ್ಗ ಜಿಲ್ಲೆಯಲ್ಲಿ ಬರುವುದಿಲ್ಲವೇ?

ಅಧ್ಯಕ್ಷರು: ಮರ ಕಡಿಯುತ್ತಾರೆ, ಕಡಿಯುತ್ತಾರೆ ಎಂದು ನೀವು ಗಲಾಟೆ ಮಾಡಿದರೆ, ನಿಮ್ಮಲ್ಲಿದೆ ಕಡಿಯುತ್ತಾರೆ. ನಮ್ಮಲ್ಲಿ ಇಲ್ಲ, ಅದಕ್ಕೋಸ್ಕರ ಬಂದಿಲ್ಲ ಮರ ಕಡಿಯುವವರು, ಗುಲ್ಬರ್ಗಾಕ್ಕೆ ಅಥವಾ ಕೋಲಾರಕ್ಕೆ ಬಂದರೆ ಏನು ಸಿಗುತ್ತದೆ? ನೀವು ಈ ರೀತಿ ತಕರಾರು ಮಾಡಿದರೆ ಹೇಗೆ? ಅಲ್ಲಿದೆ ಕಡಿಯುತ್ತಾರೆ, ನಮ್ಮಲ್ಲಿ ಇಲ್ಲ ಅದಕ್ಕೋಸ್ಕರ ಬಂದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಕೋಲಾರ ಜಿಲ್ಲೆಗೆ ಬಂದರೆ, ಕಡಿಯುವುದಕ್ಕೆ ಮರ ಸಿಕ್ಕುವುದಿಲ್ಲ, ಮಣ್ಣು ಕೂಡಬಿಡುವುದಿಲ್ಲ, ಅದನ್ನೂ ಕದಿಯುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಕಳ್ಳತನ ಆಗುತ್ತಾ ಇದೆ, ಅದನ್ನು ತಡೆಗಟ್ಟುವ ಸಲುವಾಗಿ ಸಾಕಷ್ಟು ಪ್ರಯತ್ನ ಮಾಡುತ್ತಾ ಇದ್ದೇವೆ. ಶಿವಮೊಗ್ಗಕ್ಕೆ ಹೋಗಿದ್ದೆ. ನಾನೇ

ಸ್ವತಃ ಹೋಗಿ ಅಲ್ಲಿ ಸಭೆ ಮಾಡಿ, ಅವರಿಗೆ ಜವಾಬ್ದಾರಿ ಕೊಟ್ಟು ಬಂದಿದ್ದೇನೆ. ಇನ್ನು ನಾನು ಮತ್ತೆ ಬರುತ್ತೇನೆ. ವಿಶೇಷವಾಗಿ ಏನೇನು ವ್ಯವಸ್ಥೆ ಮಾಡಬೇಕೋ ಅದನ್ನು ಸಂಪೂರ್ಣವಾಗಿ ಮಾಡುತ್ತೇವೆ. ಇದರಲ್ಲಿ ಸರ್ಕಾರ ಯಾರಿಗೂ ಪುರಸ್ಕಾರ ಮಾಡುತ್ತಾ ಇಲ್ಲ, ನಿರ್ದಾಕ್ಷಿಣ್ಯವಾಗಿ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಮಾನ್ಯ ಯಡಿಯರಪ್ಪನವರು ಹೇಳಿದ್ದೇನೆಂದರೆ, ಸ್ವಲ್ಪ ಹೆಚ್ಚುಕಡಿಮೆ ನೂರು ಕೋಟಿ ರೂಪಾಯಿಗಳ ಗಂಧ ಎಂದು ಹೇಳುತ್ತಾರೆ. ಸರ್ಕಾರದಲ್ಲಿ ಇಷ್ಟು ದೊಡ್ಡ ವ್ಯವಸ್ಥೆ ಇದ್ದಾಗ, ಹಾಡು ಹಗಲೇ ಮರ ಹೋಗುವುದು ಎಂದರೆ ಹೇಗೆ? ನಿಮ್ಮ ಅಧಿಕಾರಿಗಳು ಅಲ್ಲಿ ಅಲರ್ಟ್ ಆಗಿದ್ದರೆ, ಹೋಗುವುದಕ್ಕೆ ಹೇಗೆ ಸಾಧ್ಯ ಹೇಳಿ? ಯೋಚನೆ ಮಾಡುವುದಕ್ಕೆ ಸಾಧ್ಯವೇ ಹೇಳಿ. ಏನೋ ಗುಂಡುಪಿನ್, ಅದೋ ಇದೋ, ಚಿನ್ನ ಅದರ ಬಿಸ್ಕತ್ ಮಾಡಿ, ಜೇಬಿಗೆ ಹಾಕಿಕೊಂಡು ಹೋಗಬಹುದು. ಮರ ಹೋಗುವುದು ಎಂದರೆ ಹೇಗೆ ಸಾಧ್ಯ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಹೋಗುತ್ತಾ ಇರುವುದು ನಿಜ. ಬೆಂಗಳೂರಿನಲ್ಲಿ ಇದೆ. ಇವತ್ತು ಬೆಳಿಗ್ಗೆಯಿಂದ ಪೊಲೀಸಿನವರು ಹುಡುಕುತ್ತಿದ್ದಾರೆ, ಇನ್ನೂ ಸಿಕ್ಕಿಲ್ಲ. ಅರಣ್ಯ ಅಧಿಕಾರಿಗಳನ್ನೂ ಹೊಡೆದಿದ್ದಾರೆ. ಇವತ್ತು ಕನಿಷ್ಟ 2 ಕೋಟಿ ರೂಪಾಯಿ ಮರ ಹಿಡಿಯತಕ್ಕ ವ್ಯವಸ್ಥೆ ನಡೆಯುತ್ತಾ ಇದೆ. ಇವತ್ತೇ ಬಂದಿದೆ. ಇವತ್ತು ಬೆಳಿಗ್ಗೆ ಮಾಹಿತಿ ಬಂದಿದೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಅರಣ್ಯ ಮಂತ್ರಿಗಳು ಬೆಂಗಳೂರಿನಲ್ಲಿರುತ್ತಾರೆ. ಅವರು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಪ್ರವಾಸ ಮಾಡಬಹುದು. ಅರಣ್ಯ ಇಲಾಖೆ ಕಛೇರಿ ಎದುರಗಡೆ ಇದ್ದಂಥ ನಾಲ್ಕು ಅಡಿ ಗಂಧದ ಮರ ಕದ್ದಿರುವಂಥ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಇದು ಎಲ್ಲಾ ಸ್ಥಳೀಯ ಪತ್ರಿಕೆಗಳಲ್ಲಿ ಮತ್ತು ರಾಜ್ಯಮಟ್ಟದ ಪತ್ರಿಕೆಗಳಲ್ಲೂ ಬಂದಿದೆ. ನಾನು ಹೇಳುವುದೇನೆಂದರೆ, ಪ್ರತಿ ಗ್ರಾಮದಲ್ಲೂ, ಹಳ್ಳಿಯಲ್ಲೂ ಸಹ ಇವರು ಚೆಕ್‌ಪೋಸ್ಟ್ ಮಾಡಿದ್ದಾರೆ. ಅಲ್ಲಿ ಅವರು ವ್ಯವಹಾರ ಮಾಡಿದ ತಕ್ಷಣವೇ, ಗೇಟ್ ತೆಗೆಯುತ್ತಾರೆ, ಆಟೋಮ್ಯಾಟಿಕ್ ಆಗಿ ಗಾಡಿ ಅಲ್ಲಿಗೇ ಹೋಗುತ್ತಿರುತ್ತದೆ. ಇದನ್ನು ನೋಡುವುದಕ್ಕೆ ಸ್ಕ್ವಾಡ್ ಮಾಡಿದ್ದೇನೆಂದು ಇವರು ಹೇಳುತ್ತಾರೆ, ಅವರು ಏನು ಕೆಲಸ ಮಾಡುತ್ತಾರೆ ಎನ್ನುವುದು ಹೇಳಬೇಕಲ್ಲಾ. ಪಾಪದವರ ಮೇಲೆ ಬೇಕಾದರೆ ನೇರ ಕ್ರಮ ಜರುಗಿಸುತ್ತಾರೆ. ಯಾರೋ ನಮ್ಮಂಥವರು, ನಿಮ್ಮಂಥವರು ಕಾರಿನಲ್ಲಿ ಹೋದಾಗ, ಗಂಧ ಇದೆ ಈ ಕಾರಲ್ಲಿ ಎಂದು ಹೇಳುವುದು. ಇಲ್ಲದಿದ್ದರೂ ಸಹ ಪಕ್ಕಕ್ಕೆ ಗಂಧ ತೆಗೆದುಕೊಂಡು ಹಾಕುವುದು. ಅದು ಪತ್ರಿಕೆಯಲ್ಲಿ ಹಿಡಿದಿದ್ದಾರೆಂದು ದೊಡ್ಡ ಅಕ್ಷರಗಳಲ್ಲಿ ಬರುವುದು. ಇಲಾಖೆಗಳಲ್ಲಿ ಯಾರು ನ್ಯಾಯವಾಗಿ ಗಂಧದ ಕಳ್ಳರು ಇದ್ದಾರೆಂಬುದು ಮಾಹಿತಿ ಇದೆ. ಇವತ್ತು ಅವರಿಗೆ ಹಿಡಿಯುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಹೇಳಿದಹಾಗೆ ನೂರು

ಕೋಟಿಯಲ್ಲ, ನನ್ನ ಅಂದಾಜು ಸಾವಿರ ಕೋಟಿ ರೂಪಾಯಿಯ ಗಂಧ ಈ ರಾಜ್ಯದಿಂದ ಹೊರಗಡೆಹೋಗಿದೆ. ಆದರೆ, ಇದನ್ನು ತಡೆಹಿಡಿಯಲಿಕ್ಕೆ ಯಾರ ಕೈಲೂ ಸಾಧ್ಯವಾಗಿಲ್ಲ. ದಯಮಾಡಿ ಮಾನ್ಯ ಮಂತ್ರಿಗಳು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ; ಕ್ರಮ ಜರುಗಿಸಬೇಕಾಗುತ್ತದೆ. ಕೇವಲ ಅಧಿಕಾರಿಗಳನ್ನು ನಂಬಿ, ಗಂಧ ಉಳಿಸುತ್ತೇವೆಂದು ಹೇಳಿದರೆ, ಉಳಿಸುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಾವು ಈ ವಿಚಾರದಲ್ಲಿ ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ. ನೀವು ನಿರ್ದಿಷ್ಟವಾಗಿ ಹೇಳಿದರೆ, ಅಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಅವರು ಸಾವಿರ ಕೋಟಿ ಎಂದು ಹೇಳುತ್ತಾರೆ. ಈ ಸಾವಿರ ಕೋಟಿ ಎಲ್ಲಿ ಆಗಿರುತ್ತದೆ ಎಂಬುದನ್ನು ತೋರಿಸಿ, ನಾವು ಆ ಬಗ್ಗೆ ಕ್ರಮ ಜರುಗಿಸುತ್ತೇವೆ.

ಶ್ರೀ ಬಿ.ಬಿ.ಶಿವಪ್ಪ: ಅವರು ಪಾಪದವರ ಕಾರು ಎಂದು ಹೇಳಿದರು. ಪಾಪದವರ ಕಾರಲ್ಲ. ಸರ್ಕಾರಿ ಕಾರಿನಲ್ಲಿಯೇ ಮೊನ್ನೆ 2 ಲಕ್ಷ ರೂಪಾಯಿ ಗಂಧ ಹಿಡಿದಿದ್ದಾರೆ. ಸಕಲೇಶಪುರ ಬಿ.ಡಿ.ಓ. ಆಫೀಸಿನ ಜೀಪಿನಲ್ಲಿ, ಜೀಪ್ ಸಮೇತ, ಆ ಡ್ರೈವರ್ ಸಮೇತ್ ಹಿಡಿದಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಹೆಚ್ಚಿನ ಪ್ರಮಾಣದಲ್ಲಿ ಕಾರು ಮತ್ತು ಜೀಪಿನಲ್ಲಿ ಸಿಕ್ಕಿರುವುದು. ತುಂಡುಗಳನ್ನು ಮಾಡಿಕೊಂಡು, ಕಾರು, ಜೀಪುಗಳಲ್ಲೇ, ಜಾಸ್ತಿ ತೆಗೆದುಕೊಂಡು ಹೋಗುತ್ತಾರೆ. ಲಾರಿಗಳಲ್ಲಿ ಕಡಿಮೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಸರ್ಕಾರಿ ಕಾರಿನಲ್ಲೇ ಗಂಧವನ್ನು ತೆಗೆದುಕೊಂಡು ಹೋಗಿದ್ದಾರೆಂದು ಶಿವಪ್ಪನವರು ಹೇಳುತ್ತಿದ್ದಾರೆ. ಅಂದರೆ, ಸರ್ಕಾರದವರೇ ಸಾಗಿಸಿದ್ದಾರೆಂದು ಆಪಾದನೆ ಮಾಡುತ್ತಿದ್ದಾರೆ.

ಶ್ರೀ ಶಿವಾನಂದ ನಾಯಕ್: ಮಾನ್ಯ ಮಂತ್ರಿಗಳು, ಹಿಡಿಯುತ್ತೇವೆ, ಮಾಡುತ್ತೇವೆ, ಕ್ರಮ ಕೈಗೊಳ್ಳುತ್ತೇವೆಂದು ಹೇಳುವುದು ಬಿಟ್ಟರೆ, ಇವರು ಯಾವುದೇ ಸರಿಯಾದ ಕ್ರಮ ಕೈಗೊಳ್ಳುವುದಿಲ್ಲ. ಹಗಲು ದರೋಡೆ ಮಾಡುವಂಥ ಒಂದು ಇಲಾಖೆ ಇದು ಎಂದು ನಾನು ಹೇಳುತ್ತಿದ್ದೇನೆ. ನಾನು ಮೂರು ತಿಂಗಳ ಹಿಂದೆ ಇವರಿಗೊಂದು ಪತ್ರಬರೆದಿದ್ದೆ. ನಮ್ಮ ಭಟ್ಕಳ್ ತಾಲ್ಲೂಕಿನ ಉತ್ತರಕೊಪ್ಪ ಎಂಬ ಗ್ರಾಮದಲ್ಲಿ ಹೊಸ ರಾಜ್ಯದವರು ಬಂದು, ಸಾಮಾನ್ಯ ಒಂದು ಸಾವಿರ ಎಕರೆಯಲ್ಲಿರತಕ್ಕ ಮರವನ್ನು ಕಡಿದು, ಹಗಲು ದರೋಡೆ ಮಾಡುತ್ತಿದ್ದಾರೆ. ಅಲ್ಲಿನ ಪ್ರಾಣಿಗಳನ್ನು ಹೊಡೆದು, ಅದರ ಮಾಂಸವನ್ನು ಒಣಗಿಸಿ, ಹೊರ ರಾಜ್ಯಕ್ಕೆ ತೆಗೆದುಕೊಂಡು ಹೋಗುತ್ತಾರೆ. ಅಲ್ಲಿ ಗಾಂಜಾ ಬೆಳೆಯುತ್ತಿದ್ದಾರೆ ಮತ್ತು ಎಣ್ಣೆ ಮಾಡುವಂಥ ಹುಲ್ಲನ್ನು ಬೆಳೆಸುತ್ತಿದ್ದಾರೆ. ಈ ರೀತಿ ಹಗಲು ದರೋಡೆ ಮಾಡುತ್ತಿದ್ದಾರೆ. ಇವರ ಇಲಾಖೆಯ ಅಧಿಕಾರಿಗಳಿಗೆ ನಾವು ಹೇಳಿದರೆ, ಇವರೇನೂ ಕೆಲಸ ಮಾಡಲಿಲ್ಲ. ಆಮೇಲೆ ಪತ್ರಕರ್ತರೊಡಗೂಡಿಕೊಂಡು,

ಅಲ್ಲಿಯ ಜನರು ಪತ್ರಕರ್ತರ ಗಮನಕ್ಕೆ ತಂದಮೇಲೆ, ಪತ್ರಕರ್ತರು ಪ್ರಚಾರ ಮಾಡಿದಮೇಲೆ, ಇವರು ಇಲಾಖೆಯವರು ಹೋಗಿದ್ದಾರೆ. ಅವರು ನಾಮಕಾವಸ್ಥೆಗೆ ಹೋಗಿದ್ದಾರೆಂಬುದನ್ನು ಬಿಟ್ಟರೆ, ಅಲ್ಲಿ ಏನೂ ಕ್ರಮ ಕೈಗೊಳ್ಳಲಿಲ್ಲ. ಮಾನ್ಯ ಅಧ್ಯಕ್ಷರೇ, ಸರ್ವೆ ನಂ.93, 59, 77, 161ರಲ್ಲಿ ಸಾಮಾನ್ಯ ಒಂದು ಸಾವಿರ ಎಕರೆ ಜಾಗದಲ್ಲಿ ಮರಗಳನ್ನು ಕಡಿದಿದ್ದಾರೆ. ಅರಣ್ಯದ ಹಗಲು ದರೋಡೆ ಮಾಡಿದ್ದಾರೆ, ಲೂಟಿ ಮಾಡಿದ್ದಾರೆ. ಮಾನ್ಯ ಮಂತ್ರಿಯವರ ಹತ್ತಿರ ನಾನು ಪ್ರಶ್ನೆ ಕೇಳಿದ್ದೇನೆ. ಪತ್ರ ಬರೆದಿದ್ದೇನೆ. ಇದುವರೆಗೆ ಯಾವ ಒಂದು ಉತ್ತರವನ್ನೂ ಕೊಡಲಿಲ್ಲ. ಯಾವರೀತಿಯ ಕ್ರಮವನ್ನೂ ಕೈಗೊಳ್ಳಲಿಲ್ಲ. ಎಷ್ಟರಮಟ್ಟಿಗೆ ನೀವು ಮತ್ತು ನಿಮ್ಮ ಇಲಾಖೆಯವರು ಕೆಲಸ ಮಾಡುತ್ತಿದ್ದೀರೆಂಬುದನ್ನು ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅವರ ಪತ್ರಕ್ಕೆ ಉತ್ತರವನ್ನೂ ಕೊಟ್ಟಿದ್ದೇನೆ, ಹಾಗೆ ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇನೆ.

ಅಧ್ಯಕ್ಷರು: ಆಮೇಲೆ ಉತ್ತರ ಕೊಡಿ, ಈಗ ಬೇಡ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ: ಉತ್ತರ ಕೊಪ್ಪದ ವಿಚಾರವಾಗಿ ನಮ್ಮ ಶಿವಾನಂದ ನಾಯಕ್‌ರವರು ಹೇಳಿದರು. ಅದೇರೀತಿ, ಹೊರ ರಾಜ್ಯದ ಕೇರಳದಿಂದ, ತಮಿಳುನಾಡಿನಿಂದ ಬೇರೆ ಬೇರೆ ಕಡೆಯಿಂದ ಶಿವಮೊಗ್ಗ ಜಿಲ್ಲೆಯಲ್ಲಿ, ಕೊಡಗು ಜಿಲ್ಲೆಯಲ್ಲಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದೇರೀತಿಯ ಅತಿಕ್ರಮಣ ಆಗುತ್ತಾ ಇದೆ. ನಿಮ್ಮ ಅರಣ್ಯ ಇಲಾಖೆಯವರು ಕಣ್ಣುಮುಚ್ಚಿಕೊಂಡು ಕುಳಿತುಕೊಂಡಿದ್ದಾರೆ. ವಿಜಿಲೆನ್ಸ್ ಸ್ಕ್ವಾಡ್‌ನವರು ನಿದ್ದೆ ಮಾಡುತ್ತಾ ಇದ್ದಾರೆ. ಎಲ್ಲಾ ಕಡೆ ಹಗಲು ದರೋಡೆ ನಡೆಯುತ್ತಾ ಇದ್ದರೂ ನಿಮ್ಮ ವಿಜಿಲೆನ್ಸ್ ಸ್ಕ್ವಾಡ್ ಸ್ಟ್ರಾಂಗ್ ಇಲ್ಲ. ನೀವು ಕಾನೂನಿನಲ್ಲೂ ತಿದ್ದುಪಡಿ ತರಬೇಕಾಗುತ್ತದೆ ಈ ಗಂಧವನ್ನು ಹಿಡಿದರೆ ನಾನ್ ಬೆಲೇಬಲ್ ಅಫೆನ್ಸ್ ಎಂದು ಇದೆ. ಆದರೆ, ಬೀಟೆಯನ್ನೋ, ತೇಗವನ್ನೋ ಅಥವಾ ಸಾಗುವಾನಿಯನ್ನೋ ಹಿಡಿದರೆ, ಅದು ನಾನ್ ಬೇಲೆಬಲ್ ಅಫೆನ್ಸ್ ಎಂದು ಇಲ್ಲ. ಪ್ರಾಣಿಗಳ ಚರ್ಮವನ್ನು ಹಿಡಿದರೆ ನಾನ್ ಬೇಲೆಬಲ್ ಅಫೆನ್ಸ್ ಎಂದು ಇಲ್ಲ. ಹಾಗಾಗಿ ಕಾನೂನಿನಲ್ಲಿಯೂ ತಿದ್ದುಪಡಿ ತನ್ನಿ. ನಾನ್ ಬೇಲೆಬಲ್ ಅಫೆನ್ಸ್ ಎಂದು ಅದನ್ನೂ ಮಾಡಿ. ಏಕೆಂದರೆ, ಇವತ್ತು ಗಂಧಕ್ಕೆ ಮಾತ್ರ ನಾನ್ ಬೇಲೆಬಲ್ ಅಫೆನ್ಸ್ ಎಂದು ಇದೆ. ಇವತ್ತು ವನ್ಯಜೀವಿ ಪ್ರಾಣಿಯನ್ನು ಅಥವಾ ತೇಗವನ್ನೋ, ಬೀಟೆಯನ್ನೋ ತೆಗೆದುಕೊಂಡು ಹೋದರೆ, ನಾಳೆ ಬೆಳಿಗ್ಗೆ ಅವರು ಕೋರ್ಟಿನಲ್ಲಿ ಬಿಡಿಸಿಕೊಂಡು ಬರುತ್ತಾರೆ. ಮತ್ತೆ ನಾಳೆ ಅದನ್ನೇ ಮಾಡುತ್ತಾರೆ. ಇದರಿಂದ ಡಿಪಾರ್ಟ್‌ಮೆಂಟಿನಲ್ಲಿ ಅಧಿಕಾರಿಗಳೂ ಡಿ-ಮಾರಲೈಸ್ ಆಗುತ್ತಾರೆ. ಸಾರ್ವಜನಿಕರಿಗೂ ನಿಮ್ಮ ಇಲಾಖೆ ಬಗ್ಗೆ ವಿಶ್ವಾಸ ಬರುವುದಿಲ್ಲ. ಮತ್ತು ಮಾಡುವಂತಹವರಿಗೆ ಇನ್ನಷ್ಟು ಹೆಚ್ಚು ಪ್ರೋತ್ಸಾಹ ಕೊಟ್ಟಂತಾಗುತ್ತದೆ. ನಾಳೆ ಬೆಳಿಗ್ಗೆ ಬಿಡಿಸಿಕೊಂಡು ಬರಬಹುದು ಎಂದು ಹಾಗಾಗಿ ಇದನ್ನೂ ನಾನ್ ಬೇಲೆಬಲ್ ಎಂದು

ಮಾಡಿ. ಕೆಲವೊಂದು ಅರಣ್ಯವಸ್ತುಗಳನ್ನು, ಮರಗಳನ್ನು ಹಿಡಿದರೆ ಎಂದು ಮಾಡಿದಾಗ, ಸ್ವಲ್ಪ ಬಿಗುವು ಆಗುತ್ತದೆ. ಮತ್ತೆ ನಿಮ್ಮ ವಿಜಿಲೆನ್ಸ್ ಏನಿದೆ, ಇದು ಸಾಕಷ್ಟು ಬಿಗುವಾಗಬೇಕು. ದಿನ ಬೆಳಗಾದರೆ ಅರಣ್ಯ ಇಲಾಖೆಯವರು ಹಿಡಿಯುತ್ತಾ ಇರುವುದನ್ನು ನೋಡಿದಾಗ, ಇದು ಹೊಂದಾಣಿಕೆ ಮಾಡಿಕೊಳ್ಳುತ್ತಾ ಇದೆ ಎಂಬುದೇ ಸಾಕ್ಷಿ. ಈ ರೀತಿ ಹೊರ ರಾಜ್ಯಕ್ಕೆ ಏನು ಕಳ್ಳಸಾಗಾಣಿಕೆ ನಡೆಯುತ್ತಾ ಇದೆ ವಿಶೇಷವಾಗಿ ಕೊಡಗು ಮತ್ತು ಮೈಸೂರು ಭಾಗದಲ್ಲಿ ಗಡಿ ಪ್ರದೇಶದಲ್ಲಿ, ಅದಕ್ಕೆ ಒಂದು ಬಿಗುವಾದಂಥ ವ್ಯವಸ್ಥೆ ಮಾಡಿ.

12.50 ಪಿ.ಎಂ

ದಿನಕ್ಕೆ ಹತ್ತಾರು ಟ್ರಕ್‌ಗಳು ಹೋಗುತ್ತಿದೆ ಎಂದು ಹೇಳಿ ಕೊಡಗು ಮತ್ತು ಮೈಸೂರು ಜಿಲ್ಲೆಯಿಂದ ಬಂದಿರತಕ್ಕಂಥ ಶಾಸಕರು ಪಕ್ಷಾತೀತವಾಗಿ ಹೇಳುತ್ತಿದ್ದಾರೆ. ಹಾಗಾಗಿ ಇದರ ಬಗ್ಗೆ ಬಿಗುವಾದ ಕ್ರಮ ತೆಗೆದುಕೊಳ್ಳಬೇಕು. ಈಗ ಕಳ್ಳ ಸಾಗಾಣಿಕೆಯನ್ನು ತಡೆಯುವುದಕ್ಕೆ ಸಂಪೂರ್ಣ ವಿಫಲವಾಗಿದೆ ಈ ಇಲಾಖೆ. ಹಾಗಾಗಿ ಬಿಗುವಾದ ಕ್ರಮವನ್ನು ತೆಗೆದುಕೊಂಡು ನೀವು ಕಳ್ಳಸಾಗಾಣಿಕೆಯನ್ನು ತಡೆಯುವುದಕ್ಕೆ ಒಂದು ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಅಧ್ಯಕ್ಷರೇ, ನಾವು ಇಷ್ಟೆಲ್ಲಾ ಅರಣ್ಯ ಪ್ರದೇಶವನ್ನು ಹೊಂದಿದ್ದೇವೆ. ಅದರಲ್ಲೂ ವಿಶೇಷವಾಗಿ ನಮ್ಮ ಮಲೆನಾಡು ಪ್ರದೇಶದಲ್ಲಿ ಮತ್ತು ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಅರಣ್ಯ ಇಲಾಖೆಯಿಂದ ಸಾರ್ವಜನಿಕ ಕೆಲಸಗಳನ್ನು ಮಾಡುವುದಕ್ಕೆ ಅಥವಾ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಬಹಳ ತೊಂದರೆ ಆಗುತ್ತಿದೆ. ನಾವು ಯಾರೋ ಒಬ್ಬ ಬಡವರಿಗೆ ಆಶ್ರಯ ಮನೆ ಕೊಡಬೇಕು ಅಂಬೇಡ್ಕರ್ ಮನೆ ಕೊಡಬೇಕು ಅಥವಾ ಇಂದಿರಾ ಅವಾಸ್‌ಮನೆ ಕೊಡಬೇಕು ಅಂದರೆ ಅರಣ್ಯ ಇಲಾಖೆಯ ಒಪ್ಪಿಗೆ ಇರುವುದಿಲ್ಲ. ಅವರು ಬೇಗ ಅದನ್ನು ಬಿಡುಗಡೆ ಮಾಡಿ ಕೊಡುವುದಿಲ್ಲ. ನೀರಿನ ಒಂದು ಟ್ಯಾಂಕ್ ಕಟ್ಟಬೇಕು ಅಂದರೆ ಕೆ.ಇ.ಬಿ ಕಂಬ ಹಾಕಬೇಕು ಅಂದರೆ ಅಥವಾ ಟ್ರಾನ್ಸ್‌ಫಾರ್ಮರ್ ಹಾಕಬೇಕು ಅಂದರೆ, ನಮಗೆ ಇವತ್ತು ಅರಣ್ಯ ಇಲಾಖೆಯಿಂದ ಬೇಗ ಅನುಮತಿ ಸಿಗುವುದಿಲ್ಲ. ಹಾಗಾಗಿ ಅಭಿವೃದ್ಧಿ ಕೆಲಸಗಳು ಕುಂಠಿತವಾಗುತ್ತಿದೆ. ಪರಸ್ಪರ ಇಲಾಖೆಗಳ ಮಧ್ಯೆ ಹೊಂದಾಣಿಕೆ ಇಲ್ಲ. ಕೆ.ಇ.ಬಿಯವರನ್ನು ಕೇಳಿದರೆ ಫಾರೆಸ್ಟ್ ಇಲಾಖೆ ಎಂದು ಹೇಳುತ್ತಾರೆ. ಫಾರೆಸ್ಟ್ ಇಲಾಖೆಯವರನ್ನು ಕೇಳಿದರೆ ಮತ್ತೊಂದು ಇಲಾಖೆ ಎಂದು ಹೇಳುತ್ತಾರೆ. ಹೀಗಾಗಿ ಪರಸ್ಪರ ಇಲಾಖೆಗಳ ಮಧ್ಯೆ ಹೊಂದಾಣಿಕೆ ಇಲ್ಲದೇ ಇರುವುದರಿಂದಾಗಿ ಅಭಿವೃದ್ಧಿ ಕೆಲಸಗಳು ಇವತ್ತು ಕುಂಠಿತವಾಗುತ್ತಿದೆ. ಹಾಗಾಗಿ ಇವತ್ತು ನೀವು ಇಲಾಖೆಗಳ ಮಧ್ಯೆ ಹೊಂದಾಣಿಕೆಯನ್ನು ತಂದು, ಈ ರೀತಿ ಅಭಿವೃದ್ಧಿ ಚಟುವಟಿಕೆಗಳನ್ನು ಹೆಚ್ಚು ಹೆಚ್ಚು ತ್ವರಿತಗತಿಯಲ್ಲಿ ನಡೆಸುವುದಕ್ಕೆ ಅರಣ್ಯ ಭೂಮಿ ಈ ರೀತಿ ಎಲ್ಲೆಲ್ಲಿ ಸಾರ್ವಜನಿಕ ಹಿತಾಸಕ್ತಿಗೆ ಬೇಕಾಗಿರುತ್ತದೆಯೋ ಅಲ್ಲಿ ಆ ಭೂಮಿಯನ್ನು ಬಿಡುಗಡೆ ಮಾಡುವಂತಹ ಕೆಲಸ ಮಾಡಬೇಕು. 5 ಹೆಕ್ಟೇರ್‌ಗಿಂತ ಜಾಸ್ತಿ ಇದ್ದರೆ ಅದನ್ನು ನೀವು ಕೇಂದ್ರ ಸರ್ಕಾರಕ್ಕೆ

ಕಳುಹಿಸಿಕೊಡಬೇಕಾಗುತ್ತದೆ. ಇದರ ಬಗ್ಗೆ ತಾವು ಕೇಂದ್ರ ಸರ್ಕಾರದ ಜೊತೆ ಮಾತನಾಡಿ 15-20 ಹೆಕ್ಟೇರ್‌ವರೆಗೂ ರಾಜ್ಯ ಸರ್ಕಾರಕ್ಕೆ ಅಧಿಕಾರಕೊಡಿ ಎಂದು ಕೇಳಿ. ಫಾರೆಸ್ಟ್ ಕನ್‌ಸರ್ವೇಷನ್ ಆಕ್ಟ್ ಇದೆ ಅದರ ಆಧಾರದ ಹಿನ್ನೆಲೆಯಲ್ಲಿ ತಾವು ಕೇಂದ್ರ ಸರ್ಕಾರದ ಜೊತೆ ಮಾತುಕತೆ ಮಾಡಿ. ಕೇಂದ್ರ ಸರ್ಕಾರದ ಇಲಾಖೆಯಲ್ಲಿ ಇರುವ ಅಧಿಕಾರಿಗಳಿಗೆ ಕೊರತೆ ಇಲ್ಲ. ನಿಮ್ಮಲ್ಲಿ ಇನ್‌ಷಿಯೇಟೀವ್‌ನ ತೊಂದರೆ ಇದೆ. ಕೇವಲ 5 ಹೆಕ್ಟೇರ್ ಇದೆ ಎಂದು ನೀವು ನಮಗೆಲ್ಲಾ ಹೇಳಿಕೊಂಡು 5 ಹೆಕ್ಟೇರ್‌ನಿಂದ 10 ಹೆಕ್ಟೇರ್‌ವರೆಗೂ ಅಥವಾ 20 ಹೆಕ್ಟೇರ್‌ವರೆಗೂ ಹೇಗೆ ನಾವು ಸಾರ್ವಜನಿಕ ಹಿತಾಸಕ್ತಿಗೆ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ ಎನ್ನುವುದನ್ನು ನೀವು ತ್ವರಿತ ಗತಿಯಲ್ಲಿ ಕೇಂದ್ರ ಸರ್ಕಾರದ ಜೊತೆ ಮಾತನಾಡಬೇಕು. ಸಾರ್ವಜನಿಕರಿಗೆ ಅನುಕೂಲವಾಗುವಂತಹ ಜಾಗವನ್ನು ತಕ್ಷಣ ಬಿಡುಗಡೆ ಮಾಡಿಕೊಡಬೇಕು. ಅನೇಕ ಜಿಲ್ಲೆಗಳಲ್ಲಿ ಇವತ್ತು ಶಾಲೆ ಕಟ್ಟಡಗಳನ್ನು ಕಟ್ಟುವುದಕ್ಕೆ ಆಗುತ್ತಿಲ್ಲ ಇವತ್ತು. ಆಸ್ಪತ್ರೆಗಳ ಕಟ್ಟಡ ಕಟ್ಟುವುದಕ್ಕೆ ಆಗುತ್ತಿಲ್ಲ ಇವತ್ತು. ಇವತ್ತು ಐ.ಪಿ.ಪಿ.ಇಂತಹ ಕಾರ್ಯಕ್ರಮಗಳು ಸೌಲಭ್ಯಗಳನ್ನು ಕೊಡುವುದಕ್ಕೆ ಬಂದರೆ ಅರಣ್ಯ ಇಲಾಖೆಯಿಂದ ನಮಗೆ ಭೂಮಿ ಸಿಗುತ್ತಿಲ್ಲ. ಆದ್ದರಿಂದ ತ್ವರಿತಗತಿಯಲ್ಲಿ ಆಟದ ಮೈದಾನಕ್ಕೆ ಇರಲಿ, ಆಶ್ರಯ ಮನೆಗೆ ಇರಲಿ, ಸಾರ್ವಜನಿಕ ಹಿತಾಸಕ್ತಿಗೆ ಒಳಗೊಂಡಂತಹ ಅಥವಾ ಬಡವರಿಗೆ ಅನುಕೂಲವಾಗುವಂಥಾದ್ದಕ್ಕೆ ಕೇಂದ್ರ ಸರ್ಕಾರದ ಜೊತೆ ಮಾತನಾಡಿ ರಾಜ್ಯ ಸರ್ಕಾರ ಸಹ ಬೇಗ ಅರಣ್ಯ ಇಲಾಖೆಯಿಂದ ಭೂಮಿ ಬಿಡುಗಡೆ ಆಗುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರವನ್ನು ಆಗ್ರಹಿಸುತ್ತೇನೆ. ಇನ್ನೊಂದು ವಿಷಯ ಅಂದ್ರೆ ಇದು ಬಹಳ ಸಂದರ್ಭಗಳಲ್ಲಿ ಇಲ್ಲಿ ಚರ್ಚೆ ಆಗಿದೆ, ಅದಕ್ಕೆ ಸರ್ಕಾರದ ಹೇಳಿಕೆಗಳನ್ನು ಸಹ ನಾವು ಕೇಳಿದ್ದೇವೆ. ಅತಿಕ್ರಮವಾಗಿರತಕ್ಕಂಥ ಅರಣ್ಯ ಭೂಮಿಯನ್ನು ನಾವು ಸಕ್ರಮಗೊಳಿಸಿ ಕೊಡುತ್ತೇವೆ ಎಂದು ಬಹುಶಃ ಹೇಳಿದ್ದೆಲ್ಲಾ ಸಕ್ರಮಗೊಳಿಸಿಕೊಟ್ಟಿದ್ದರೆ ಎಷ್ಟೋ ಅನುಕೂಲವಾಗುತ್ತಿತ್ತು. ಆದರೆ ಇದೇ ಮಾತನ್ನು ನಾವು ಹೊಸ ಸರ್ಕಾರದಿಂದಲೂ ಸಹ ಪದೇ ಪದೇ ಕೇಳುತ್ತಿದ್ದೇವೆ. ಇದರ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಪತ್ರ ವ್ಯವಹಾರ ನಡೆಯುತ್ತಿದೆಯೇ ಹೊರತು ಇದುವರೆಗೂ ಅರಣ್ಯ ಭೂಮಿ ಅತಿಕ್ರಮಿಸಿದ್ದು ಸಕ್ರಮವಾಗಿಲ್ಲ. ಇವತ್ತು ಲಕ್ಷಾಂತರ ಎಕರೆ ಜಮೀನು ಸಕ್ರಮವಾಗಬೇಕಾಗಿದೆ ಆದ್ದರಿಂದ ಅವರು ಇವತ್ತು ಆರ್ಥಿಕವಾದ ವೈಯಕ್ತಿಕವಾದ ಸಾಮರ್ಥ್ಯವನ್ನು ಸುಧಾರಿಸಿಕೊಳ್ಳಬೇಕಾಗಿದೆ. ಹಾಗಾಗಿ ಅರಣ್ಯ ಭೂಮಿಯನ್ನು ಯಾರ್ಯಾರು ಅತಿಕ್ರಮ ಮಾಡಿದ್ದಾರೆ ಅದನ್ನು ತಕ್ಷಣ ಸಕ್ರಮ ಮಾಡಿಕೊಡುವುದಕ್ಕೆ ನೀವು ಹೇಳುತ್ತಿದ್ದೀರಿ, ನಾವು ಕೇಂದ್ರ ಸರ್ಕಾರದ ಜೊತೆ ಮಾತನಾಡುತ್ತಿದ್ದೇವೆ ಅದಕ್ಕೆ ಫಾರ್ಮಲ್ ಆಗಿ ಒಂದು ಅನುಮತಿ ಸಿಕ್ಕಿದೆ ಎಂದು ಅಧಿಕೃತವಾಗಿ ನಾವು ಇನ್ನೊಂದು ಅಷ್ಟು ಮಾಹಿತಿಗಳನ್ನು ಕೊಡಬೇಕು. ಆ ಮಾಹಿತಿಗಳನ್ನು ಕೊಟ್ಟ ತಕ್ಷಣ ಸಿಗುತ್ತದೆಂದು ತಾವು ಹೇಳುತ್ತಿದ್ದೀರಿ. ಆದರೆ ಇದುವರೆಗೂ ರೈತರಿಗೆ ಸಿಕ್ಕಿಲ್ಲ ನೀವು ಹೇಳುತ್ತಿದ್ದೀರಿ ಅಷ್ಟೇ. ಎಲ್ಲಿ ಕಾಫಿ ಪ್ಲಾಂಟೇಷನ್ ಇದೆಯೋ ಅಥವಾ ಎಲ್ಲಿ ಯಾರ್ಯಾರು ಒತ್ತುವರಿ

ಮಾಡಿದ್ದಾರೋ ಅದನ್ನು ನೀವು ಸಕ್ರಮಗೊಳಿಸಿಕೊಡುವುದಕ್ಕೆ ಕ್ರಮ ತೆಗೆದುಕೊಳ್ಳಿ. ಇನ್ನೊಂದು ನಮ್ಮ ಕಡೆ ಬೆಟ್ಟ ಹಾಡಿಗಳು ಇತ್ಯಾದಿಗಳು ಇವೆ. ಅದರ ಉತ್ಪನ್ನಗಳನ್ನು ರೈತರು ಅಧಿಕೃತವಾಗಿ ಮಾರಾಟ ಮಾಡುವಂತೆ ಇಲ್ಲ, ಅದರ ಲಾಭವನ್ನು ನಾವು ತೆಗೆದುಕೊಳ್ಳುವಂತೆ ಇಲ್ಲ. ಬೆಟ್ಟ ಭೂಮಿ ಹಾಡಿ ಭೂಮಿ ಇತ್ಯಾದಿಗಳು ಎಂದು ಕರೆಯುವಂತಹ ಭೂಮಿ ಏನು ಇದೆ ಇದರಲ್ಲಿ ರೈತರಿಗೆ ಒಂದು ವಿಶೇಷವಾದ ಹಕ್ಕನ್ನು ಕೊಡಿ. ಅದರಿಂದ ಅವರು ಆ ಬೆಟ್ಟವನ್ನು ಬೆಳೆಸುತ್ತಾರೆ. ಅದನ್ನು ರಕ್ಷಿಸುತ್ತಾರೆ ಅದರಿಂದ ಬರುವಂತಹ ಆದಾಯವನ್ನು ತೆಗೆದುಕೊಳ್ಳುತ್ತಾರೆ. ಅದರಿಂದ ಬರತಕ್ಕಂಥ ಉತ್ಪನ್ನವನ್ನು 10 ಪರ್ಸೆಂಟ್ ಬೇಕಾದರೆ ಸರ್ಕಾರ ತೆಗೆದುಕೊಳ್ಳಲಿ. ಗ್ರಾಮ ಅರಣ್ಯ ಸಮಿತಿಗಳಿಗೆ ಸರ್ಕಾರದ ಆದೇಶ ಏನು ಮಾಡಿದ್ದೀರಿ, ಅದರಲ್ಲಿ ಏನು ಹೇಳಿದ್ದೀರಿ 80 ಪರ್ಸೆಂಟ್ ಗ್ರಾಮ ಅರಣ್ಯ ಸಮಿತಿಯವರು 20 ಪರ್ಸೆಂಟ್ ಲಾಭವನ್ನು ಇಲಾಖೆಯವರು ತೆಗೆದುಕೊಳ್ಳಬಹುದು ಎಂದು ಮಾಡಿದ್ದೀರೋ ಅದೇ ರೀತಿಯಲ್ಲಿ ಈ ಬೆಟ್ಟದ ಉತ್ಪನ್ನಕ್ಕೂ ಮಾಡಿ. ಅದೇ ಸರ್ಕಾರದ ಆದೇಶವನ್ನು ಇದಕ್ಕೂ ಅಷ್ಟೆ ಮಾಡಿ. ಆ ರೀತಿ ಮಾಡುವುದರಿಂದ ಈ ರೀತಿಯ ಬೆಟ್ಟ ಹಾಡಿ ಇತ್ಯಾದಿಗಳಲ್ಲಿ ಅರಣ್ಯ ಉತ್ಪನ್ನಗಳನ್ನು ರೈತರು ಬೆಳೆಸುವುದಕ್ಕೆ ಪ್ರೋತ್ಸಾಹ ಕೊಟ್ಟಂತೆ ಆಗುತ್ತದೆ. ಅಷ್ಟೇ ಅಲ್ಲ ಅದರಿಂದ ಅವರ ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗುತ್ತದೆ ಮತ್ತು ಆ ಬೆಟ್ಟ ಹಾಡಿಗಳು ಅರಣ್ಯಗಳು ಸಂರಕ್ಷಣೆಯಾಗುತ್ತವೆ. ಇದರ ಬಗ್ಗೆ ಸರ್ಕಾರ ಒಂದು ವಿಶೇಷವಾದ ಪ್ರಯತ್ನವನ್ನು ಮಾಡಬೇಕು, ಪ್ರತಿಯೊಬ್ಬ ಅತಿಕ್ರಮಣದಾರನಿಗೂ ಸಹ ಅದು ಅನುಕೂಲವಾಗುತ್ತದೆ. ಬೆಟ್ಟ ಭೂಮಿ ಅತಿಕ್ರಮಣ ಏನು ಆಗಿದೆ ಅದನ್ನು ಸಕ್ರಮಗೊಳಿಸಿಕೊಡುವುದಕ್ಕೆ ಕಂದಾಯ ಸಚಿವರು ತಾವು ಎಲ್ಲರೂ ಇರುವಂತಹ ಒಂದು ಉಪ ಸಮಿತಿಯನ್ನು ಮಾಡಿದ್ದೇವೆಂದು ಹೇಳಿದ್ದೀರಿ. ಆದಷ್ಟು ತ್ವರಿತ ಗತಿಯಲ್ಲಿ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು, ಈ ಬೆಟ್ಟ ಹಾಡಿಗಳಿಗೆ, ರೈತರಿಗೆ ಹಕ್ಕನ್ನು ಕೊಡಬೇಕು ಎನ್ನುವ ಬಗ್ಗೆ ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ನಾನು ಈ ಇಲಾಖೆಯ ಬಗ್ಗೆ ಯೋಚನೆ ಮಾಡಿದರೆ ಒಂದೊಂದು ಸಂದರ್ಭದಲ್ಲಿ ನನಗೆ ಅನ್ನಿಸುತ್ತದೆ, ಇದೊಂದು ಗುಪ್ತ ರೀತಿಯಲ್ಲಿ ಚಟುವಟಿಕೆ ಮಾಡುವಂತಹ ಇಲಾಖೆಯೋ ಏನೋ ಎನ್ನುವಂಥದ್ದು ಏಕೆಂದರೆ ಅಭಿವೃದ್ಧಿ ಕೆಲಸಗಳು ಇವರು ಏನು ಮಾಡಬೇಕೆಂದು ಇದ್ದಾರೋ ಅದಕ್ಕೆ ಅದೆಲ್ಲಾ ಮಾಹಿತಿಗಳೂ ಸಹ ಗುಪ್ತವಾಗಿರುತ್ತದೆ. ನಾನು ಜಿಲ್ಲಾ ಪಂಚಾಯತಿ ಸಭೆಗೆ ಹೋಗಿದ್ದೆ ತಾಲ್ಲೂಕು ಪಂಚಾಯತಿ ಸಭೆಗಳಿಗೆ ಹೋದರೆ ಎಲ್ಲಾ ಸದಸ್ಯರು ಒಟ್ಟಾಗಿ ಹೇಳುತ್ತಾರೆ ಅರಣ್ಯ ಇಲಾಖೆಯಿಂದ ನಮಗೆ ಏನೂ ಮಾಹಿತಿ ಸಿಗುವುದಿಲ್ಲ, ಅರಣ್ಯ ಇಲಾಖೆಯಿಂದ ನಮಗೆ ಏನೂ ತಿಳಿಯುವುದಿಲ್ಲ ಎಂದು ಏಕೆ ಈ ರೀತಿ ಆಗುತ್ತದೆ? ನಿಮ್ಮ ಚಟುವಟಿಕೆಯನ್ನು ದಯವಿಟ್ಟು ಗುಪ್ತವಾಗಿ ನಡೆಸಬೇಡಿ. ಅರಣ್ಯ ಇಲಾಖೆಯ ಚಟುವಟಿಕೆ ಏನೇನು ಇದೆ ಅದನ್ನು ಬಹಿರಂಗಪಡಿಸಿ. ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿಗೆ ಆ ಮಾಹಿತಿಯನ್ನು ಕೊಡಿ. ಈ ಅಧಿಕಾರ ವಿಕೇಂದ್ರೀಕರಣ

ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟು ಅವರಿಗೆ ಆ ಮಾಹಿತಿಯನ್ನು ಕೊಡಿ. ನೀವು ಏಕೆ ಕೊಡುವುದಿಲ್ಲ ಎಷ್ಟು ಹೆಕ್ಟೇರ್ ಭೂಮಿಯಲ್ಲಿ ಎಷ್ಟು ಸಾವಿರ ಸಸಿಗಳನ್ನು ನೀವು ನೆಡುತ್ತೀರಿ? ಸಾರ್ವಜನಿಕರು ಹೇಳುವುದು ಬಿಡಿ. ಅರಣ್ಯ ಗ್ರಾಮ ಸಭೆಗಳನ್ನು ಏನು ಮಾಡುತ್ತಿದ್ದೀರಿ, ಗ್ರಾಮ ಅರಣ್ಯ ಸಮಿತಿಗಳನ್ನು ಏನು ಮಾಡುತ್ತಿದ್ದೀರಿ ಬಹಳ ಕಡಿಮೆ ಸಂಖ್ಯೆಯಲ್ಲಿ ಮಾಡುತ್ತಿದ್ದೀರಿ. 1996-97ರಲ್ಲಿ ನೀವು 22 ಗ್ರಾಮ ಅರಣ್ಯ ಸಮಿತಿಗಳನ್ನು ಮಾಡಿದ್ದೀರಿ. ಇದು ನಿಮಗೆ ಶೋಭೆ ತರುತ್ತಾ, ಇಡೀ ರಾಜ್ಯದಲ್ಲಿ ಒಂದು ವರ್ಷಧಲ್ಲಿ 22 ಗ್ರಾಮ ಅರಣ್ಯ ಸಮಿತಿಗಳನ್ನು ಮಾಡಿದ್ದೇವೆಂದರೆ ಸಾರ್ವಜನಿಕರ ಸಹಭಾಗಿತ್ವದ ಬಗ್ಗೆ ನಿಮಗೆ ತೃಪ್ತಿ ಇದೆಯೇ? ಇದು ಸಾಕಾಗುವುದಿಲ್ಲ. ಬರುವ ವರ್ಷಗಳಲ್ಲಿ ನೀವು ಹೆಚ್ಚು ಹೆಚ್ಚು ಗ್ರಾಮ ಅರಣ್ಯ ಸಮಿತಿಗಳನ್ನು ರಚನೆ ಮಾಡಿ. ಸಾರ್ವಜನಿಕರು ಹೆಚ್ಚು ಭಾಗವಹಿಸುವಂತೆ ಮಾಡಿ, ಜಿಲ್ಲಾ ಪಂಚಾಯತಿಗಳು ತಾಲ್ಲೂಕು ಪಂಚಾಯತಿಗಳು ಗ್ರಾಮ ಪಂಚಾಯತಿಗಳು ಇದರಲ್ಲಿ ಇನ್‌ವಾಲ್ವ್ ಮಾಡಿಸುವಂತೆ ಮಾಡಿ. ಆ ರೀತಿ ಆದರೆ ಮಾತ್ರ ಅರಣ್ಯ ಬೆಳೆಯುತ್ತದೆ ಅರಣ್ಯ ಸಂರಕ್ಷಣೆಯಾಗುತ್ತದೆ. ಅರಣ್ಯ ನಮ್ಮದು ಎನ್ನುವಂತಹ ಭಾವನೆ ಬರುತ್ತದೆ. ಗ್ರಾಮ ಅರಣ್ಯ ಸಮಿತಿಗಳಿಗೆ ನೀವು ಕಳೆದ ವರ್ಷ ಎರಡೂವರೆ ಲಕ್ಷ ಖರ್ಚು ಮಾಡಿದ್ದೀರಿ ಆದರೆ ಈ ವರ್ಷ 5 ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡಿದ್ದೀರಿ ಎಂದು ಕಾಣುತ್ತದೆ. ಅದಕ್ಕೆ ಹೆಚ್ಚಿನ ಹಣವನ್ನು ಇಟ್ಟು ಗ್ರಾಮ ಅರಣ್ಯ ಸಮಿತಿಗಳನ್ನು ಹೆಚ್ಚು ಹೆಚ್ಚು ರಚನೆಮಾಡಿ, ಸ್ವಲ್ಪ ಹೆಚ್ಚು ಅಧಿಕಾರ ಕೊಡಿ ಅವರು ಹೆಚ್ಚು ಭಾಗವಹಿಸುವಂತೆ ಮಾಡಿ, ಆಗ ಹೆಚ್ಚು ಅರಣ್ಯ ಸಂರಕ್ಷಣೆಯಾಗುತ್ತದೆ ಎನ್ನುವ ಸಲಹೆಯನ್ನು ನಾನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಅರಣ್ಯ ಇಲಾಖೆಯವರ ಅಧಿಕೃತ ದಾಖಲೆ ಪ್ರಕಾರವೇ 113 ಕೋಟಿ ರೂಪಾಯಿಗಳ ಆದಾಯ ನಮಗೆ 1996-97ರಲ್ಲಿ ಅರಣ್ಯ ಇಲಾಖೆಯಿಂದ ಬಂದಿದೆ ಎಂದು ಹೇಳುತ್ತಿದ್ದಾರೆ. ಅರಣ್ಯಗಳು ಇರುವುದೆಲ್ಲಾ ಗ್ರಾಮಾಂತರ ರಸ್ತೆಗಳ ಮಧ್ಯದಲ್ಲಿ ಇದೆ. ಅಥವಾ ಅರಣ್ಯ ಮಧ್ಯದಲ್ಲಿ ಈ ಗ್ರಾಮಾಂತರ ರಸ್ತೆಗಳು ಇದೆ. ಆದರೆ ಆ ರಸ್ತೆಗಳ ಪರಿಸ್ಥಿತಿ ಮಾತ್ರ ಇವತ್ತು ಹೇಳತೀರದಾಗಿದೆ. ಇಲಾಖೆಯ ಅಂಕಿಅಂಶಗಳ ಪ್ರಕಾರ ಸುಮಾರು 3 ಸಾವಿರ ಕಿಲೋಮೀಟರ್ ರಸ್ತೆಗಳು ಇವೆ. ಅರಣ್ಯ ಇಲಾಖೆಯ ರಸ್ತೆ ಮಾಡಿ. ಅದರಲ್ಲಿ 500 ಕಿಲೋಮೀಟರ್‌ಗಳಿಗೆ ಅಷ್ಟೇ ಕಡಿ ಹಾಕಿದ್ದಾರೆ. ಇನ್ನು ಎರಡೂವರೆ ಕಿಲೋಮೀಟರ್ ರಸ್ತೆ ಕಚ್ಚಾ ರಸ್ತೆ ಇದೆ. ಅದಕ್ಕೆ ಅವರು ಈ ಸಲದ ಬಜೆಟ್‌ನಲ್ಲಿ 17 ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡಿದ್ದಾರೆ. ಏನು ಸಾಕಾಗುತ್ತದೆ. ಆ ಹಳ್ಳಿಗಳ ಪರಿಸ್ಥಿತಿಯನ್ನು ನೋಡಬೇಕು. ನಮ್ಮಂತಹ ಮಲೆನಾಡು ಪ್ರದೇಶಗಳಲ್ಲಿ ಇರುವಂತಹ ರಸ್ತೆಗಳ ದುರ್‌ವ್ಯವಸ್ಥೆ ಏನಾಗಿದೆ ಎಂದು. ಅದರಿಂದ ಗ್ರಾಮದ ಜನರು ಏನು ತೊಂದರೆ ಪಡುತ್ತಿದ್ದಾರೆ ಎನ್ನುವಂಥಾದ್ದು ತಾವು ನೋಡಬೇಕು ಮಳೆಗಾಲದಲ್ಲಿ ಸೈಕಲ್ ಅಲ್ಲ, ಯಾವುದೂ ವಾಹನಗಳು ಓಡಾಡುವಂತೆ ಇಲ್ಲ. ರಸ್ತೆಗಳಲ್ಲಿ ಪಾದಚಾರಿಗಳೂ ಸಹ ಓಡಾಡುವಂತೆ ಇಲ್ಲ. ರಸ್ತೆಗಳು ಅಷ್ಟು ಹಾಳಾಗಿ ಹೋಗಿವೆ. ಅರಣ್ಯ ಇಲಾಖೆಗೆ ಮಳೆಗಾಲದಲ್ಲಿ ಗಾಡಿ ಹೊಡೆಯಬಾರದು. ಬೇಸಿಗೆಯಲ್ಲಿ ಮಾತ್ರ ಹೊಡೆಯಬೇಕು ಎನ್ನುವಂತಹ ಕಲ್ಪನೆ ಇಲ್ಲ. ಮಳೆಗಾಲದಲ್ಲಿ

ಹೊಡೆಯುತ್ತಾರೆ. ರಸ್ತೆಗಳ ಪರಿಸ್ಥಿತಿ ಹಾಳಾಗಿ ಹೋಗಿದೆ ರಸ್ತೆಗಳ ಸುಧಾರಣೆಗೆ ಹೆಚ್ಚಿನ ಗಮನ ಕೊಡಿ. ಅರಣ್ಯ ಉತ್ಪನ್ನದಲ್ಲಿ ರಸ್ತೆ ಸುಧಾರಣೆಗೆ ಹೆಚ್ಚಿನ ಮಹತ್ವವನ್ನು ತಾವು ಕೊಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಇದೇ ರೀತಿ ಮುಂದುವರೆದರೆ ಜನ ಆಕ್ರೋಶಕ್ಕೆ ಒಳಗಾಗುತ್ತಾರೆ. ಅರಣ್ಯ ಇಲಾಖೆ ಮುಂದೆ ಬಹಳ ಕಷ್ಟಕ್ಕೆ ಒಳಪಡಬೇಕಾಗುತ್ತದೆ. ಏಕೆಂದರೆ ನೀವು ನಮ್ಮ ರಸ್ತೆಯನ್ನು ಬಳಸಿಕೊಂಡು ನೀವು ನಿಮ್ಮ ಉತ್ಪನ್ನಗಳನ್ನು ತೆಗೆದುಕೊಂಡು ಹೋಗಿ ನಿಮಗೆ ಆದಾಯ ಬರುತ್ತದೆ, ನಮ್ಮ ರಸ್ತೆಗಳ ಪರಿಸ್ಥಿತಿ ಏನು ಎನ್ನುವ ಪ್ರಶ್ನೆ ಬರುತ್ತದೆ. ನಾನು ದಯವಿಟ್ಟು ಹೇಳುತ್ತೇನೆ ತಾವು ರಸ್ತೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಿ. ಹೆಚ್ಚಿನ ಅನುದಾನವನ್ನು ಕೊಡಿ ಅದಕ್ಕೆ ಬೇಕಾಗಿರುವಂತಹ ಅವಕಾಶವನ್ನು ಕಲ್ಪಿಸಿಕೊಡಿ. ನೀವು ರಸ್ತೆಗಳ ಸುಧಾರಣೆ ಬಗ್ಗೆ ಹೆಚ್ಚಿನ ಮಹತ್ವವನ್ನು ಕೊಡಬೇಕು. ಈಗ ಕೊಡುತ್ತಿರುವಂಥಾದ್ದು ಏನೂ ಸಾಲದು. ಮಾನ್ಯ ಅಧ್ಯಕ್ಷರೇ, ಇನ್ನೊಂದು ಬಹಳ ಮಹತ್ವದ ಸಂಗತಿಯನ್ನು ಹೇಳುವುದಕ್ಕೆ ಬಯಸುತ್ತೇನೆ, ಅರಣ್ಯ ಇಲಾಖೆ ನಿಶ್ಚಿತವಾಗಿ ಕೆಲವು ಲಾಬಿಗಳ ಮಧ್ಯೆ ಸಿಕ್ಕಿ ಹಾಕಿಕೊಂಡಿದೆ. ಅವರ ಕೈಗೊಂಬೆಯಾಗಿ ವರ್ತಿಸುತ್ತಿದೆ. ಮಾನ್ಯ ಅರಣ್ಯ ಇಲಾಖೆ ಸಚಿವರ ಹತ್ತಿರ, ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಹತ್ತಿರ ಮಾನ್ಯ ಮುಖ್ಯಮಂತ್ರಿಗಳ ಜೊತೆ ನಾನು ಹೇಳಿದೆ. ಉತ್ತರಕನ್ನಡ ಜಿಲ್ಲೆಯಲ್ಲಿ, ಲೇಬರ್ ಸೊಸೈಟಿ ಹೆಸರಿನಲ್ಲಿ, 1991ನೇ ಇಸವಿಯ ಸರ್ಕಾರದ ಒಂದು ಆದೇಶದ ನೆಪವನ್ನು ಒಡ್ಡಿ, ಆ ಒಂದು ದಾಖಲೆಯನ್ನು ಇಟ್ಟುಕೊಂಡು ಹಗಲು ದರೋಡೆ ಮತ್ತು ಲೂಟಿ ನಡೆಯುತ್ತಿದೆ. ಆ ಲೇಬರ್ ಸೊಸೈಟಿಗಳ ಮೇಲೆ ತನಿಖೆ ಆಗಬೇಕು, 1991ನೇ ಇಸವಿಯಿಂದ ಇವತ್ತಿನವರೆಗೆ ತನಿಖೆ ಮಾಡಿಸಿ. ನಾನು ಈ ಲಾಬಿಯ ಅಡಿಯಲ್ಲಿ ಇಲ್ಲ, ಸ್ವತಂತ್ರವಾಗಿ ಇಲಾಖೆಯ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತೇನೆ ಎನ್ನುವ ಧೈರ್ಯ ಇದ್ದರೆ 1991ನೇ ಇಸವಿಯ ಗೌರ್ನಮೆಂಟ್ ಆರ್ಡರ್ ಅಡಿಯಲ್ಲಿ ಕೆಲವು ಸೊಸೈಟಿಗಳು ಅರಣ್ಯ ಇಲಾಖೆಯಲ್ಲಿ ಏನು ಲೂಟಿ ಮಾಡುತ್ತಿವೆ ಅದರ ಬಗ್ಗೆ ತನಿಖೆ ಆಗಲಿ. ಕೆ.ಎಫ್.ಐ.ಸಿ.ಯಿಂದ ಲಾಗಿಂಗ್‌ನ್ನು ಸರ್ಕಾರ ಮಾಡಿಸಬಹುದಾಗಿತ್ತು, ಆದರೆ ಆ ಕೆಲಸವನ್ನು ಕೆಎಫ್‌ಐಸಿ ಮೂಲಕ ಮಾಡಿಸುತ್ತಿಲ್ಲ. ಏಕೆ ಮಾಡಿಸುತ್ತಿಲ್ಲ? ಅವರು ಅಸಮರ್ಥರು ಎಂದು ಅಲ್ಲ. ಅಸಮರ್ಥರೆಂದು ಅಲ್ಲಿ ತೋರಿಸಿಕೊಂಡಿದ್ದಾರೆ, ತೋರಿಸಿಕೊಳ್ಳುವಂಥ ವ್ಯವಸ್ಥೆಯಲ್ಲಿ ಇವರು ಸಿಕ್ಕಿಹಾಕಿಕೊಂಡಿದ್ದಾರೆ. ಈ ಕೆಎಫ್‌ಐಸಿ ಅರಣ್ಯ ಇಲಾಖೆಗೆ ಸೇರಿದ್ದರೂ ಅದರ ಮೂಲಕ ಏಕೆ ಮಾಡಿಸಬಾರದಾಗಿತ್ತು? ಲಾಗಿಂಗ್ ವ್ಯವಸ್ಥೆಯನ್ನು ಓಪನ್ ಟೆಂಡರ್ ಮೂಲಕ ಮಾಡಬಹುದಾಗಿತ್ತು. ಅದುಬಿಟ್ಟು ಕೇವಲ 10-20 ಲೇಬರ್ ಸೊಸೈಟಿ ಎನ್ನುವ ಹೆಸರಿನ ಮಧ್ಯೆ ನೀವು ನೀವೇ ಕುಳಿತುಕೊಂಡು ಹಂಚಿಕೊಳ್ಳುವಂಥ ವ್ಯವಹಾರವನ್ನು ಏಕೆ ಮಾಡುತ್ತೀರಿ? 1991ನೇ ಇಸವಿಯ ಗೌರ್ನಮೆಂಟ್ ಆರ್ಡರನ್ನು ವಿತ್‌ಡ್ರಾ ಮಾಡಿ, ಉಳಿದ ಜಿಲ್ಲೆಗಳಲ್ಲಿ ಹೇಗೆ ಲಾಗಿಂಗ್ ವ್ಯವಸ್ಥೆ ಇದೆಯೋ ಅದೇರೀತಿ ಲಾಗಿಂಗ್ ವ್ಯವಸ್ಥೆಯನ್ನು ತಂದು ಕೆಲವು ಹಿತಾಸಕ್ತಿಗಳ ಕೈಗೊಂಬೆ ನಾವು ಅಲ್ಲ ಎಂಬುದನ್ನು ತೋರಿಸಿಕೊಡಿ. ತಾನು ಯಾವುದೇ

ಲಾಬಿಗೆ ಒಳಪಟ್ಟಿಲ್ಲ ಎನ್ನುವುದಾದರೆ ನಾವು ಹೇಳಿರುವ ಹಾಗೆ ಒಂದೊಂದಾಗಿ ತನಿಖೆಮಾಡುವುದರ ಜೊತೆಗೆ 1991ರಲ್ಲಿ ಹೊರಡಿಸಿರುವ ಗೌರ್ನಮೆಂಟ್ ಆರ್ಡರನ್ನು ಹಿಂತೆಗೆದುಕೊಂಡು ಸಾಬೀತು ಮಾಡಿ ತೋರಿಸಬೇಕು. ಉಳಿದ ಜಿಲ್ಲೆಗಳಲ್ಲಿರುವಂತೆ ಲಾಗಿಂಗ್ ವ್ಯವಸ್ಥೆಯನ್ನು ಮಾಡುವುದಕ್ಕೆ ಇಲ್ಲಸಲ್ಲದ ನೆಪವನ್ನು ನಿಮ್ಮ ಅಧಿಕಾರಿಗಳು ಹೇಳುತ್ತಾರೆ. ಆದರೆ ಆ ನೆಪಗಳೆಲ್ಲವೂ ಸಹಾ artificially created ಅವರ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಂಡಿರುವ ನೆಪಗಳು ಇವಾಗಿವೆ. ಹಾಗಾಗಿ ಇದರ ಬಗ್ಗೆ ಕೂಲಂಕಷವಾಗಿ ತನಿಖೆ ಮಾಡಿಸಿ 1991ನೇ ಇಸವಿಯಿಂದ ಏನಾಗಿದೆ ಎಂದು ಬಯಲಿಗೆ ಬರುವಂತೆ ಮಾಡಬೇಕು. ಇದರ ಬಗ್ಗೆ ಪ್ರಾಮಾಣಿಕ ಅಧಿಕಾರಿಗಳ ಅಭಿಪ್ರಾಯ ಏನಿದೆ ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿದುಕೊಳ್ಳಲಿ. ಆದ್ದರಿಂದ ಇಡೀ ರಾಜ್ಯದಲ್ಲಿ ಏಕರೂಪದ ಲಾಗಿಂಗ್ ವ್ಯವಸ್ಥೆಯನ್ನು ತರಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಆಮೇಲೆ ಅರಣ್ಯ ಇಲಾಖೆಯ ಎಷ್ಟು ಜನ ಅಧಿಕಾರಿಗಳು ವಿದೇಶಕ್ಕೆ ಹೋಗಿಬಂದಿದ್ದಾರೆ ಮತ್ತು ಅದಕ್ಕೆ ಹಣ ಎಷ್ಟು ಖರ್ಚು ಆಯಿತು ಎಂಬುದರ ಬಗ್ಗೆ ಈ ಸದನದಲ್ಲಿ ಚರ್ಚೆ ಆಗಿದೆ. ಹೊರದೇಶಗಳ ಹಣ ಸಹಾಯದಿಂದ ಬೇರೆ ಬೇರೆ ಯೋಜನೆಗಳು ನಮ್ಮ ದೇಶಕ್ಕೆ ಬರುವಾಗ ಆರ್‌ಎಫ್‌ಓಗಳು, ಡಿ.ಎಫ್.ಓಗಳು ಮತ್ತು ಇತರೆ ಮಟ್ಟದ ಅಧಿಕಾರಿಗಳು ಬೇರೆ ಬೇರೆ ದೇಶಗಳಿಗೆ ಹೋಗಿಬರುತ್ತಿದ್ದಾರೆ. ಅರಣ್ಯ ಇಲಾಖೆಯ ಎಷ್ಟು ಜನ ಅಧಿಕಾರಿಗಳು ವಿದೇಶಕ್ಕೆ ಹೋಗಿಬಂದಿದ್ದಾರೆ ಎಂಬುದರ ಬಗ್ಗೆ ಅಂಕಿಅಂಶಗಳನ್ನು ನಮಗೆ ಒದಗಿಸಿಕೊಡಬೇಕು. ಅಷ್ಟೇ ಅಲ್ಲ ಅಧಿಕಾರಿಗಳು ವಿದೇಶಕ್ಕೆ ಹೋಗಿ ಬಂದನಂತರ ಎಷ್ಟು ದಿವಸಗಳ ಕಾಲ. ಆ ಅಧಿಕಾರಿಗಳು ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡಿದ್ದಾರೆ ಎಂಬುದರ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ನಮಗೆ ತಿಳಿಸಬೇಕು. ನನಗೆ ತಿಳಿದಹಾಗೆ ವಿದೇಶಕ್ಕೆ ಹೋಗಿ ಬಂದ ಅಧಿಕಾರಿಗಳು ಒಂದೆರಡುತಿಂಗಳಲ್ಲಿ ಬೇರೆ ಇಲಾಖೆಗಳಿಗೆ ಅಥವಾ ಇನ್ನ್ಯಾವುದೋ ರೇಂಜುಗಳಿಗೆ ವರ್ಗಾಮಾಡಿಸಿಕೊಂಡು ಹೋಗುತ್ತಾರೆ. ಅಂದರೆ ಅಧಿಕಾರಿಗಳು ವಿದೇಶಕ್ಕೆ ಹೋಗುವುದಾಕ್ಕಾಗಿಯೇ ಈ ಅರಣ್ಯ ಇಲಾಖೆಯಲ್ಲಿ ವಿಶೇಷ ಅವಕಾಶಗಳನ್ನು ಕಲ್ಪಿಸಲಾಗಿದೆ. ಇದರಿಂದಾಗಿ ವಿದೇಶಕ್ಕೆ ಹೋಗಬೇಕೆಂದು ಬಯಸುವ ಅಧಿಕಾರಿಗಳು ಈ ಅರಣ್ಯ ಇಲಾಖೆಯಲ್ಲಿರುವ ಓಡಿಎ ಯೋಜನೆ ಬರುವುದಕ್ಕೆ ಯೋಚನೆ ಮಾಡುತ್ತಿದ್ದಾರೆ. ವಿಶೇಷ ತರಬೇತಿಯನ್ನು ಪಡೆಯುವುದಕ್ಕೆ ಅಧಿಕಾರಿಗಳನ್ನು ವಿದೇಶಕ್ಕೆ ಕಳುಹಿಸಿ ಅವರು ಬಂದನಂತರ ಯಾವ ಉದ್ದೇಶಕ್ಕಾಗಿ ತರಬೇತಿಯನ್ನು ಪಡೆಯಲಾಗಿದೆಯೋ ಆ ಉದ್ದೇಶ ಈಡೇರುವುದಕ್ಕಾಗಿ ಕನಿಷ್ಟಪಕ್ಷ 5-6 ವರ್ಷಗಳಾದರೂ ಅದೇ ಇಲಾಖೆಯಲ್ಲಿ ಕೆಲಸಮಾಡುವ ಹಾಗೆ ಒಂದು ನೀತಿಯನ್ನು ಸರ್ಕಾರ ಮಾಡಬೇಕು. ಆ ನೀತಿಯನ್ನು ಮಾಡದೇ ಹೋದರೆ ಅಧಿಕಾರಿಗಳು ವಿದೇಶಕ್ಕೆ ಹೋಗಿ ಬಂದು ಮತ್ತೆ ಇನ್ನ್ಯಾವುದೋ ಇಲಾಖೆಯಲ್ಲಿ ಆರಾಮವಾಗಿ ಕೆಲಸ ಮಾಡಿಕೊಂಡು ಇರುವುದರಿಂದ ಅವರು ಪಡೆದಂತಹ ಅನುಭವದಿಂದ ರಾಜ್ಯಕ್ಕೆ ಯಾವುದೇ ಅನುಕೂಲವಾಗುವುದಿಲ್ಲ, ಹಾಗೂ ಅವರ ಮೇಲೆ ಮಾಡಿದಂತಹ ಹಣದ

ಖರ್ಚಿನ ಪ್ರತಿಫಲ ಜನತೆಗೆ ಸಿಗುವುದಿಲ್ಲವೆಂದು ತಿಳಿಸುವುದಕ್ಕೆ ಬಯಸುತ್ತೇನೆ. ಆಮೇಲಿ ಈ ವರ್ಷದಿಂದ ಜಪಾನ್ ದೇಶದ 600 ಕೋಟಿ ರೂಪಾಯಿಗಳ ನೆರವಿನಿಂದ ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಅರಣ್ಯ ಅಭಿವೃದ್ಧಿ ಯೋಜನೆ ಬರುತ್ತದೆಂದು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಈ ಯೋಜನೆ ಬಗ್ಗೆ ನಿಮ್ಮ ಇಲಾಖೆಯ ವತಿಯಿಂದ ತಯಾರಾಗಿರುವ ಬ್ಲೂ ಪ್ರಿಂಟ್ ನೋಡುವುದರ ಜೊತೆಗೆ ಈ ವಿಷಯದಲ್ಲಿ ತಜ್ಞರಾಗಿರುವವರ ಅಭಿಪ್ರಾಯವನ್ನು ಪಡೆದುಕೊಂಡು ನೀವು ಮಾಡಿರುವ ಬ್ಲೂಪ್ರಿಂಟ್‌ನ ಅಡಿಯಲ್ಲಿ ಅದನ್ನು ಜಾರಿಗೊಳಿಸುತ್ತಾ ಬನ್ನಿ. ಅದು ಇಲ್ಲವೆಂದರೆ ಈ ಯೋಜನೆ ಸಮರ್ಪಕವಾಗಿ ಜಾರಿಯಾಗುವುದರ ಬಗ್ಗೆ ನಮಗೆ ಈಗಾಗಲೇ ಅನುಮಾನ ಶುರುವಾಗಿದೆ. ಏಕೆಂದರೆ, ಓಡಿಎ ಯೋಜನೆಯು ನಮ್ಮ ಜಿಲ್ಲೆಯಲ್ಲಿ ಯಾವ ರೀತಿ ಅನುಷ್ಠಾನ ಆಗಿದೆ ಎಂಬುದನ್ನು ನಾವು ನೋಡಿದ್ದೇವೆ.

ಅಧ್ಯಕ್ಷರು: ರಾಜ್ಯದಲ್ಲಿ ಹೊಸದಾಗಿ ಎಷ್ಟು ಎಕರೆ ಜಮೀನಿನಲ್ಲಿ ಅರಣ್ಯವನ್ನು ಬೆಳೆಸುವುದಕ್ಕೆ ಪ್ರಯತ್ನಮಾಡಿದ್ದಾರೆ? ಆ ಗಿಡಗಳಿಗೆಲ್ಲಾ ಎಷ್ಟು ವಯಸ್ಸಾಗಿದೆ? ಯಾವ್ಯಾವ ಸ್ಪಿಷೀಸ್ ಬೆಳೆಸಿದ್ದಾರೆ? ಬಯಲುಸೀಮೆಯಲ್ಲಿ ಹೇಗೆ ಮಾಡಿದ್ದಾರೆ? ಪಶ್ಚಿಮಘಟ್ಟಗಳಲ್ಲಿ ಹೇಗೆ ಮಾಡಿದ್ದಾರೆ ಎಂಬುದರ ಬಗ್ಗೆ ತಮ್ಮ ಹತ್ತಿರ ಮಾಹಿತಿ ಇದೆಯಾ? ಇನ್ನು 5 ನಿಮಿಷ ಟೈಂ ಕೊಡುತ್ತೇನೆ, ಆ ವಿಷಯಗಳನ್ನು ಹೇಳಿ. ಏಕೆಂದರೆ ಈ ಗಿಡ ನೆಡುವ ವಿಷಯದಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಬಹಳ ಹಣ ಖರ್ಚಾಗುತ್ತಿದೆ, ಅದು ಯಾವುದಕ್ಕೆ ಖರ್ಚಾಗುತ್ತದೆಂದು ನನಗೆ ಅನುಮಾನ, ಅದು ನಿಮಗೆ ಏನಾದರೂ ಗೊತ್ತಿದೆಯೋ ಕೇಳಿದೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಎಷ್ಟು ಎಕರೆಗಳಲ್ಲಿ ಅರಣ್ಯವನ್ನು ಬೆಳೆಸಲಾಗಿದೆ ಎಂದು ಮತ್ತು ತಾವು ಬೆಳೆಸಿರತಕ್ಕಂಥ ಅರಣ್ಯದಲ್ಲಿ ಎಷ್ಟು ಗಿಡಗಳನ್ನು ನೆಡಲಾಗಿತ್ತು ಎಂದು ಕೇಳಿರುವ ನನ್ನ ಪ್ರಶ್ನೆಗೆ, ನಮ್ಮ ತಲೆಯಲ್ಲಿ ಎಷ್ಟು ಕೂದಲುಗಳು ಇವೆ ಎಂದು ಲೆಕ್ಕ ಇಡುವುದಕ್ಕೆ ಆಗುತ್ತದೆಯೋ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ಅದು ಕಡತದಲ್ಲಿಯೂ ಇದೆ. ಈಗ ನಾವು ಯಾವರೀತಿಯಲ್ಲಿ ಲೆಕ್ಕ ಹಾಕಿ ಹೇಳುವುದು?

ಶ್ರೀ ಎಸ್.ಸುರೇಶ್‌ಕುಮಾರ್: ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಪುಣ್ಯಕ್ಕೆ ಮಾನ್ಯ ನಾಣಯ್ಯನವರು ಅರಣ್ಯ ಸಚಿವರಾಗಲಿಲ್ಲ, ಅವರು ಆಗಿದ್ದರೆ ಬಹಳ ಕಷ್ಟವಾಗುತ್ತಿತ್ತು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ನಜೀರ್ ಸಾಹೇಬರು....

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಮಂತ್ರಿಯವರೇ, ನನ್ನನ್ನೂ ನಜೀರ್ ಸಾಹೇಬರು ಮಾಡಿಬಿಟ್ಟಿದ್ದೀರಿ, ನನ್ನ ಹೆಸರು ಸಗೀರ್ ಸಾಬ್

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಾನು ಬಾಯಿ ತಪ್ಪಿ ಹೇಳಿಬಿಟ್ಟೆ, ಅದು

ಭಾವೋದ್ವೇಗದಿಂದ ಬಂದಂಥ ಬಹಳ ದೊಡ್ಡ ಮಾತು....

ಅಧ್ಯಕ್ಷರು: ನೀವು ಪ್ರಯತ್ನ ಪಟ್ಟರೂ ನಜೀರ್ ಆಗುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಇದು ಸರಿಯಾಗಿ ತಿಳಿಯುತ್ತಿಲ್ಲ, ಅರಣ್ಯ ಮಂತ್ರಿಗಳು ಈಗ ಕಾಡಿನಲ್ಲಿ ಇದ್ದೀರಾ ಅಥವಾ ಇಲ್ಲಿ ಇದ್ದೀರಾ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಎರಡು ಕಡೆಯೂ ಇದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಹಾಗಾದರೆ ಸರಿ ಹೋಯಿತು ಬಿಡಿ. ಏಕೆಂದರೆ ಅವರು ನಜೀರ್ ಸಾಬ್ ಎಂದರೆ ನೀವು ಸಗೀರ್ ಸಾಬ್ ಏನೋ ಅಲ್ಲವೋ ಅನುಮಾನ ನನಗೆ ಬಂದಿದೆ, ಅಥವಾ ಅವರು ಭೂತವಾಗಿ, ಪ್ರೇತವಾಗಿ ನೀವೇನಾದರೂ ಬಂದಿದ್ದೀರೇನು? ಹೇಗೆ ಇದು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅಂಥ ದೊಡ್ಡ ಮನುಷ್ಯರ ಹೆಸರನ್ನು ಹೇಳಿರುವುದು ಗೌರವದ ಮಾತು.

ಶ್ರೀ ವಾಟಾಳ್ ನಾಗರಾಜ್: ಅವರಿಗೆ ನಜೀರ್ ಸಾಬ್ ಎನ್ನುವುದು ಗೌರವದ ಮಾತೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಗೀರ್ ಅಹಮದ್‌ರವರು ಹೇಳಿರುವ ವಿಷಯಕ್ಕೆ ನಾನು ಉತ್ತರ ಕೊಡಬೇಕಾಗಿದೆ. ಇಡೀ ರಾಜ್ಯದ ಅರಣ್ಯದಲ್ಲಿ ಎಷ್ಟು ಮರಗಳು ಇವೆ ಎಂದು ಹೇಳುವುದಕ್ಕೆ ಆಗುತ್ತದೆಯೇ? ಅದಕ್ಕೆ ತಲೆಯಲ್ಲಿ ಕೂದಲು ಎಷ್ಟು ಇವೆ ಎಂದು ಹೇಳಲು ಸಾಧ್ಯವೇ ಎಂಬ ಉದಾಹರಣೆಯನ್ನು ಕೊಟ್ಟಿದ್ದು ನಿಜ. ಗಗನದಲ್ಲಿ ಚುಕ್ಕಿ ಎಷ್ಟು ಇವೆ ಎಂದು ಹೇಳುವುದಕ್ಕೆ ಆಗುತ್ತದೆಯೇ?

ಅಧ್ಯಕ್ಷರು: ಈಗ ಮಂತ್ರಿಗಳು ಇನ್‌ಸ್ಟೆಂಟ್ ರಿಪ್ಲೈ ಕೊಡುವುದು ಬೇಡ, ಸದಸ್ಯರು ಭಾಷಣವನ್ನು ಮುಂದುವರಿಸಲಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೆ, ಸರ್ಕಾರದ ಆದೇಶದಂತೆ ಸಾಮಾಜಿಕ ಅರಣ್ಯವನ್ನು ಎಷ್ಟು ಹೆಕ್ಟೇರ್‌ಗಳಲ್ಲಿ ಬೆಳೆಸಲಾಗಿದೆ ಮತ್ತು ಯಾವ್ಯಾವ ಗಿಡಮರಗಳನ್ನು ಹಾಕಲಾಗಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಮಾನ್ಯ ಮಂತ್ರಿಯವರು ಕೊಡಬೇಕಾಗುತ್ತದೆ.

ಅಧ್ಯಕ್ಷರು: ನಾನು ಎಲ್ಲಾ ತಿಳಿದುಕೊಂಡಿದ್ದೇನೆ, ಇದು ನಮಗೆ ಗೊತ್ತಿಲ್ಲದೇ ಇರತಕ್ಕಂಥ ವಿಷಯವೇ?

ಶ್ರೀ ಕೆ.ವಿಶ್ವೇಶ್ವರ ಹೆಗಡೆ: ಮಾನ್ಯ ಅಧ್ಯಕ್ಷರೆ, ಈಗ ಅರಣ್ಯ ಇಲಾಖೆಯವರು ಎಲ್ಲಾ ಕಡೆ ಸಸಿಗಳನ್ನು ನೆಡುತ್ತಿದ್ದಾರೆ. ಕೆಲವು ಕಡೆ ಮಾತ್ರ ಸಸಿಗಳನ್ನು ನೆಡಿಸಿದ್ದಾರೆ ಮತ್ತು ಅನೇಕ ಕಡೆ ಸಸಿಗಳನ್ನು ಪೇಪರ್ ಮೇಲೆ ನೆಟ್ಟು ಮುಗಿಸಿಬಿಟ್ಟಿದ್ದಾರೆಂದು ನೀವೇ ಈ ಸದನದಲ್ಲಿ ಹೇಳಿದ್ದು ಇದೆ. ಅಂದರೆ, ಅಕ್ಷರಶಃ ಏನಾಗುತ್ತಿದೆ ಎಂದರೆ ಮಲೆನಾಡಿನ ಪ್ರದೇಶದಲ್ಲಿ ಎಲ್ಲಿ ಸಸಿಗಳು ಇದೆಯೋ ಅಲ್ಲಿಯೇ ಸಸಿಗಳನ್ನು ನೆಡುತ್ತಿದ್ದಾರೆಯೇ ಹೊರತು ಬೇರೆ ಕಡೆ ಸಸಿಗಳನ್ನು ನೆಡುತ್ತಾ ಇಲ್ಲ. ಇದರ ಬಗ್ಗೆ ತಿಳಿದುಕೊಳ್ಳೋಣ ವೆಂದು ನನ್ನ ಮಿತ್ರರಾದ ಕೆಲವು ಶಾಸಕರಿಗೆ ನಿಮ್ಮ ಕ್ಷೇತ್ರದಲ್ಲಿ ಅರಣ್ಯ ಇಲಾಖೆ ಯಾವರೀತಿ ಕೆಲಸಮಾಡುತ್ತಿದೆ ಎಂದು ಕೇಳಿದೆ. ಅದಕ್ಕೆ ಅವರು ನಮಗೆ ಆ ಅರಣ್ಯ ಇಲಾಖೆಯ ಟಚ್ಚೇ ಇಲ್ಲವೆಂದು ಹೇಳಿದರು. ಏಕೆಂದರೆ, ಈ ಅರಣ್ಯ ಇಲಾಖೆ ಅಲ್ಲಿ ಏನೂ ಮಾಡುತ್ತಿಲ್ಲ. ಅವರು ಎಲ್ಲವನ್ನೂ ಕಾಗದ ಪತ್ರಗಳ ಮೇಲೇ ಮಾಡಿ ಮುಗಿಸುತ್ತಿದ್ದಾರೆ. ಶಾಸಕರುಗಳಿಗೇ ಈ ಸಾಮಾಜಿಕ ಅರಣ್ಯ ಬೆಳೆಸುವ ಬಗ್ಗೆ ಗೊತ್ತಿಲ್ಲದೇ ಇರುವಾಗ ಇನ್ನು ರಾಜ್ಯದ ಉಳಿದ ಕಡೆ ಅವರು ಹೇಗೆ ಕೆಲಸ ಮಾಡಿರಬಹುದು? ಇವರು ನೆಡಿಸುವ ಸಸಿಗಳು ಯಾವುವು? ಉರುವಲು ಕಟ್ಟಿಗೆಗಾಗಿ 'ಅಕೇಶಿಯಾ' 'ಮ್ಯಾಂಜಿಯಂ' ಸಸಿಗಳನ್ನು ನೆಡಿಸುತ್ತಾರೆ. ಈ ಸಸಿಗಳು ದೊಡ್ಡವಾದ ಮೇಲೆ ಇವುಗಳ ನೆರಳಿನ ಅಡಿಯಲ್ಲಿ ಹುಲ್ಲು ಸಹಾ ಹುಟ್ಟುವುದಿಲ್ಲ. ಈ ಅಕೇಶಿಯ ಗಿಡಗಳ ಮೇಲೆ ಕಾಗೇ ಸಹಾ ಕೂರುವುದಿಲ್ಲ. ಈ ಹಿಂದೆ ಹುಣುಸೆ, ಮಾವು, ಹಲಸು ಮುಂತಾದ ಮರಗಳನ್ನು ಬೆಳೆಸುತ್ತಿದ್ದರು, ಈ ಮರಗಳು ಪಶು ಪಕ್ಷಿಗಳಿಗೆ ಆಹಾರ ಕೊಡುವುದರ ಜೊತೆಗೆ ಮನಷ್ಯರಿಗೆ ಬೇಕಾದ ಪ್ರತಿಫಲವನ್ನು ಕೊಡುತ್ತಿದ್ದವು. ಅದರ ಬದಲಿಗೆ ಈಗ ಅಕೇಶಿಯಾ ಮರಗಳನ್ನು ಬೆಳೆಸಿ ಸಾಫ್ಟ್ ವುಡ್ ಫ್ಯಾಕ್ಟರಿಗಳಿಗೆ ಮರಗಳನ್ನು ಕೊಡುತ್ತಿದ್ದಾರೆ. ಫೈರ್ ವುಡ್‌ಗೆ ಯಾವ ಗಿಡಗಳನ್ನು ಹಾಕಬೇಕೋ ಅವುಗಳನ್ನು ಹಾಕಿ ಅದರ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಆದರೆ, ಹತ್ತಾರು ವರ್ಷಗಳಲ್ಲಿ ದೊಡ್ಡ ಮರಗಳು ಆಗುತ್ತವೆ ಎನ್ನುವ ಒಂದೇ ಕಾರಣಕ್ಕೆ ಈ ಅಕೇಶಿಯಾ ಗಿಡಗಳನ್ನು ನೆಡುವ ಬದಲು ಈ ಹಿಂದೆ ನೆಡುತ್ತಿದ್ದ ಹಾಗೆ ವಿವಿಧ ರೀತಿಯ ಜಾತಿ ಗಿಡಗಳನ್ನು ಏಕೆ ನೆಡುತ್ತಿಲ್ಲ ಎಂದು ಕೇಳುತ್ತೇನೆ. ದಾಂಡೇಲಿಯಲ್ಲಿರುವ ಮತ್ತು ಹರಿಹರದಲ್ಲಿರುವ ಫ್ಯಾಕ್ಟರಿಗಳಿಗೆ ಮರಗಳನ್ನು ಸಪ್ಲೈ ಮಾಡುವುದಕ್ಕೋಸ್ಕರ ಅರಣ್ಯ ಇಲಾಖೆಯವರು ಸಸಿಗಳನ್ನು ಬೆಳೆಸುತ್ತಾರಾ? ಅಥವಾ ರೈತರುಗಳಿಗೆ ಉಪಯೋಗವಾಗುವಂಥ ಮತ್ತು ಪರಿಸರದ ಸಮತೋಲನವನ್ನು ಕಾಯ್ದುಕೊಳ್ಳುವಂಥ ಗಿಡ ಮರಗಳನ್ನು ಬೆಳೆಸುವಿರಾ? ಬರೀ ಅಕೇಶಿಯಾ-ಸಸಿಗಳನ್ನು ನೆಡುವುದರಲ್ಲೇ ದೊಡ್ಡ ಸಾಧನೆ ಮಾಡಲಾಗಿದೆಯೆಂಬ ಅಂಕಿ ಸಂಖ್ಯೆಗಳ ಮೂಲಕ ಅರಣ್ಯ ಇಲಾಖೆಯವರು ತೋರಿಸುತ್ತಿದ್ದಾರೆ. ಈ ರೀತಿ ಸಾಧನೆ ಸಾಧನೆಯಾಗುವುದಿಲ್ಲ ಹಾಗೂ ಇದನ್ನು ಸಾಧನೆ ಮಾಡಲಾಗಿದೆ ಎಂದು ಹೇಳುವುದು ಸರ್ಕಾರಕ್ಕೆ ಗೌರವ ತರತಕ್ಕಂಥಾದ್ದಲ್ಲ. ಆಮೇಲೆ, ಈ ಇಲಾಖೆಯಲ್ಲಿ ಸುಮಾರು 20 ಸಾವಿರಕ್ಕಿಂಥ ಹೆಚ್ಚು ಜನ ನೌಕರರು ಕೆಲಸ ಮಾಡುತ್ತಿದ್ದಾರೆ, ಇದರಲ್ಲಿ ಅಧಿಕಾರಿಗಳ ಸಂಖ್ಯೆಯೇ ಜಾಸ್ತಿಯಾಗುತ್ತಿದೆ. ಆದರೆ, ಗಾರ್ಡ್‌ಗಳ ಮತ್ತು ಫಾರೆಸ್ಟರ್‌ಗಳ ಸಂಖ್ಯೆ

ಬಹಳ ಕಡಿಮೆ ಇದೆ. ನಮ್ಮ ಕೆನರಾ ಸರ್ಕಲ್‌ನಲ್ಲೇ 200 ಜನ ಗಾರ್ಡ್‌ಗಳ ಹುದ್ದೆಗಳು ಖಾಲಿ ಇದ್ದು ಇನ್ನೂ ಆ ಜಾಗವನ್ನು ತುಂಬಿಲ್ಲ. ಇಲಾಖೆಯ ಅಭಿವೃದ್ಧಿ ಬಗ್ಗೆ ಕೊಟ್ಟಿರುವ ಚಾರ್ಜ್‌ನಲ್ಲಿ ಅಂಕಿ ಅಂಶಗಳನ್ನು ನೋಡಿದರೆ ಅರಣ್ಯದಲ್ಲಿ ಹೇಗೆ ಸಸಿಗಳು ಬೆಳೆಯುತ್ತಿವೆಯೋ ಅದೇ ವಿರುದ್ಧ ದಿಕ್ಕಿನಲ್ಲಿ ಅಧಿಕಾರಿಗಳ ಸಂಖ್ಯೆ ಬೆಳೆಯುತ್ತಾ ಹೋಗಿದೆ. ಅಂದರೆ ಅರಣ್ಯ ಭವನದಲ್ಲಿ ಅಧಿಕಾರಿ ವರ್ಗ ಹೆಚ್ಚು ತುಂಬಿಕೊಂಡಿದೆ; ಗಾರ್ಡ್‌ಗಳ ಫಾರೆಸ್ಟ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಿದರೆ ಅರಣ್ಯ ಬೆಳೆಯುತ್ತದೆಯಾದ್ದರಿಂದ ಈ ಬಗ್ಗೆ ಸರ್ಕಾರ ಯೋಗ್ಯವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಆಮೇಲೆ ಇನ್ನೊಂದು ಪ್ರಮುಖವಾದ ವಿಷಯವೇನೆಂದರೆ, ಗಣಿಗಾರಿಕೆ ಗುತ್ತಿಗೆಯನ್ನು ಕೊಡುವುದಕ್ಕೆ ಈ ಅರಣ್ಯ ಇಲಾಖೆ ಮುಂದಾಗಿದೆ. ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆಗೆ ಅವಕಾಶ ಕೊಡಬೇಡಿ ಎಂದು ಮತ್ತು ಈಗಾಗಲೇ ಗಣಿಗಾರಿಕೆಗೆ ಇಲ್ಲಿ ಅವಕಾಶ ಕೊಟ್ಟಿರುವುದರಿಂದ ಪರಿಸರಕ್ಕೆ ತುಂಬಲಾರದ ನಷ್ಟವುಂಟಾಗಿದೆಯೆಂದು ಸಾರ್ವಜನಿಕರು ಹೇಳುತ್ತಿದ್ದರೂ ಗಣಿಗಾರಿಕೆ ಮಾಡಲು ಗುತ್ತಿಗೆಯನ್ನು ಕೊಡಲಾಗುತ್ತಿದೆ. ನನ್ನ ಕ್ಷೇತ್ರದ ಯಲ್ಲಾಪುರದಲ್ಲಿ 'ಬಿಸ್ಕೋಡ್' ಎಂದು ಇದೆ, ಇಲ್ಲಿ ಎಂ.ಎಂ.ಎಲ್.ನವರು ಯಾವ ರೀತಿ ಮೈನಿಂಗ್ ಮಾಡಿ ಅರಣ್ಯ ಇಲಾಖೆಯವರು ವಿಧಿಸಿದ್ದ ಕಂಡೀಷನ್ ಅನ್ನು ಯಾವ ರೀತಿ ವಯಲೇಟ್ ಮಾಡಿದ್ದಾರೆಂಬುದನ್ನು ತಾವು ಬಂದು ನೋಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಹೊಸದಾಗಿ ಗಣಿಗಾರಿಕೆ ಮಾಡಲು ನಾವು ಯಾವ ಅಪ್ಲಿಕೇಷನ್ ಕರೆದಿಲ್ಲ ಹಾಗೂ ಗಣಿಗಾರಿಕೆಗೆ ಹೊಸದಾಗಿ ಲೈಸೆನ್ಸ್ ಕೊಡುತ್ತಿಲ್ಲ. ಮೊದಲು ತೆಗೆದುಕೊಂಡಿರುವ ಲೈಸೆನ್ಸ್‌ದಾರರು ಸುಪ್ರೀಂ ಕೋರ್ಟ್‌ನಿಂದ ಆರ್ಡರ್ ತಂದಿರುವುದರಿಂದ ಅವರಿಗೆ ಮಾತ್ರ ಕೊಡಲಾಗಿದೆಯೇ ಹೊರತು ಬೇರೆಯವರಿಗೆ ಹೊಸದಾಗಿ ಕೊಟ್ಟಿಲ್ಲ, ಕೊಡುತ್ತಲೂ ಇಲ್ಲ, ಮುಂದೆ ಕೊಡುವುದೂ ಇಲ್ಲ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ: ಕೇಂದ್ರ ಪರಿಸರ ಇಲಾಖೆಯ ತಜ್ಞರು ಪಶ್ಚಿಮ ಘಟ್ಟಕ್ಕೆ ಭೇಟಿ ಕೊಟ್ಟು ಇನ್ನು ಮುಂದೆ ಇಲ್ಲಿ ಗಣಿಗಾರಿಕೆ ಮಾಡಲು ಅವಕಾಶ ಕೊಡಬಾರದೆಂದು ಹೇಳಿದ್ದರೂ ಕೂಡ ಬಿಸ್ಕೋಡ್ ಮತ್ತು ತಳಕೆಬೈಲಿನಲ್ಲಿ ಗಣಿಗಾರಿಕೆ ಮಾಡಲು ಲೈಸೆನ್ಸನ್ನು ರಿನ್ಯೂ ಮಾಡಲಾಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಹಳೆಯ ಲೈಸೆನ್ಸ್‌ದಾರರಿಗೆ ರಿನ್ಯೂ ಮಾಡಬೇಕೆಂದು ಕೋರ್ಟ್‌ನಿಂದ ಆರ್ಡರ್ ಬಂದರೆ ಅವರಿಗೆ ಕೊಡಲೇಬೇಕಾಗುತ್ತದೆ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ: ಇದು ಕೋರ್ಟ್‌ನಿಂದ ಬಂದಿರುವುದಲ್ಲ, ಇಲಾಖೆಯವರೇ ಇದನ್ನು ಕೊಡುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಯಾವ ಲೈಸೆನ್ಸ್‌ಗೆ ಅವಧಿ ಮುಗಿದುಹೋಗಿದೆಯೋ ಅವರು ಹೇಗೆ ಕೋರ್ಟ್‌ಗೆ ಹೋಗುವುದಕ್ಕೆ ಸಾಧ್ಯವಿದೆ? ಅಕಸ್ಮಾತ್ ಅವರು

ಕೋರ್ಟ್‌ಗೆ ಹೋದರೆ, ಅದರ ಬಗ್ಗೆ ಸರ್ಕಾರದವರು ಏಕೆ ಅಬ್ಜಕ್ಷನ್‌ಅನ್ನು ಹಾಕುವುದಿಲ್ಲ?

ಶ್ರೀ ಕೆ.ವಿಶ್ವೇಶ್ವರ ಹೆಗಡೆ: ಮಾನ್ಯ ಅಧ್ಯಕ್ಷರೆ, ದಕ್ಷಿಣಕನ್ನಡ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಯ ದಟ್ಟವಾದ ಅರಣ್ಯ ಪ್ರದೇಶದಲ್ಲಿ ಚಿನ್ನದ ಅನ್ವೇಷಣೆಯಾಗಿದ್ದರೂ ಅದರ ಗಣಿಗಾರಿಕೆ ಮಾಡಲು ಅವಕಾಶ ಕೊಡಬಾರದೆಂದು ತಜ್ಞರ ಸಮಿತಿಯು ಸರ್ಕಾರಕ್ಕೆ ಶಿಫಾರಸ್ ಮಾಡಿದೆ. ಈ ವರದಿಯನ್ನು ಗಮನದಲ್ಲಿಟ್ಟುಕೊಂಡು ಇನ್ನು ಮುಂದಕ್ಕೆ ಹೊಸದಾಗಿಯೂ ಲೈಸನ್ಸ್ ಕೊಡಬಾರದು ಮತ್ತು ಹಳೆಯ ಲೈಸನ್ಸ್‌ಗಳನ್ನೂ ರಿನ್ಯೂ ಮಾಡಬಾರದೆಂದು ಈ ಮೂಲಕ ನಾನು ಆಗ್ರಹಿಸುತ್ತಿದ್ದೇನೆ. ಆಮೇಲೆ, ಮರಗಳನ್ನು ಹರಾಜು ಮಾಡುವ ಪ್ರಕ್ರಿಯೆಯಲ್ಲಿ ಬಹಳಷ್ಟು ಲೋಪದೋಷಗಳಿಯೆವೆಂದು ವಿಷಯ ಸಮಿತಿಯವರೂ ಸಹಾ ವರದಿಯನ್ನು ಕೊಟ್ಟಿದ್ದಾರೆ. ಆದುದರಿಂದ, ಇನ್ನು ಮುಂದೆ ಮರಗಳನ್ನು ಹರಾಜು ಹಾಕುವ ವಿಷಯದಲ್ಲಿ ಸೂಕ್ತವಾದ ಟೆಂಡರ್‌ಗಳನ್ನು ಕರೆದು ಮಾರಾಟ ಮಾಡುವಂಥ ವ್ಯವಸ್ಥೆ ಮಾಡಬೇಕು ಹಾಗೂ ವರ್ಷಕ್ಕೆ ಒಂದು ಸಾರಿ ಮಾತ್ರ ಟೆಂಡರ್ ಕರೆದು ಹರಾಜು ಹಾಕುವ ಬದಲು ವರ್ಷದಲ್ಲಿ ಮೂರ್‍ನಾಲು ಸಾರಿ ಟೆಂಡರ್‌ಗಳನ್ನು ಕರೆದು ಮಾರಾಟ ಮಾಡುವ ವ್ಯವಸ್ಥೆ ಮಾಡಿದರೆ ಸರ್ಕಾರಕ್ಕೆ ಹೆಚ್ಚಿನ ಲಾಭ ಬರುತ್ತದೆಂದು ತಿಳಿಸುವುದಕ್ಕೆ ಬಯಸುತ್ತೇನೆ. ಇನ್ನೊಂದು ಪ್ರಮುಖವಾದ ವಿಷಯವನ್ನು ಹೇಳುವುದೇನೆಂದರೆ, ಅರಣ್ಯಗಳು ಎಲ್ಲೆಲ್ಲಿ ಹೇಗಿವೆ ಎಂದು ತಿಳಿದುಕೊಳ್ಳಬೇಕಾದರೆ ಟ್ರಾನ್ಸಫರ್ ಟೈಮ್‌ನಲ್ಲಿ ಯಾವ ಯಾವ ಹುದ್ದೆಗೆ ಎಷ್ಟೆಷ್ಟು ರೇಟ್ ಓಡುತ್ತದೆಂದು ತಿಳಿದುಕೊಂಡರೆ ಗೊತ್ತಾಗುತ್ತದೆಂದು ನನ್ನ ಸ್ನೇಹಿತರೊಬ್ಬರು ಹೇಳುತ್ತಿದ್ದರು. ಆರ್.ಎಫ್.ಓ.ಗಳು ಡಿ.ಎಫ್.ಓಗಳು ಮತ್ತು ಇನ್ನಿತರ ಅಧಿಕಾರಿಗಳು ಯಾವ ಯಾವ ರೇಂಜ್‌ಗಳಿಗೆ ಹೋಗಲು ಎಷ್ಟೆಷ್ಟು ಹಣ ಕೊಡುತ್ತಾರೆಂದು ನೋಡಿದರೆ, ಯಾವ ಯಾವ ಜಿಲ್ಲೆಯಲ್ಲಿ ಯಾವ ರೀತಿ ಅರಣ್ಯಪ್ರದೇಶ ಇದೆಯೆಂದು ಗೊತ್ತಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಯಾರು ಯಾರು ಎಷ್ಟೆಷ್ಟು ಕೊಟ್ಟಿದ್ದಾರೆಂದು ನೇರವಾಗಿ ಹೇಳಿಬಿಟ್ಟರೆ, ಅದರ ಬಗ್ಗೆ ನಾವು ಗಮನಹರಿಸುವುದಕ್ಕೆ ಸಾಧ್ಯವಾಗುತ್ತದೆ. ಜನರಲ್ ಆಗಿ ಹೇಳಿದರೆ ನಾವು ಯಾವುದರ ಕಡೆ ಗಮನಹರಿಸುವುದಕ್ಕಾಗುತ್ತದೆ?

ಅಧ್ಯಕ್ಷರು: ಅದಕ್ಕೆ ನೀವೂ ಜನರಲ್ ಆಗಿ ಉತ್ತರ ಕೊಟ್ಟುಬಿಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸೋಷಿಯಲ್ ಫಾರೆಸ್ಟರಿ ಎಂದರೆ ವೈಡ್ ಆಗಿರುತ್ತದೆ, ಟೆರಿಟೋರಿಯಲ್ ಫಾರೆಸ್ಟ್ ಅಂದರೆ ಲಿಮಿಟೆಡ್ ಆಗಿರುತ್ತದೆ. ಈಗ ಅವರು ಜನರಲ್ ಆಗಿ ಹೇಳಿರುವುದರಿಂದ ಅದನ್ನು ತಾವು ಜನರಲ್ ಆಗೇ ನೋಡಿ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ: ಮಾನ್ಯ ಅಧ್ಯಕ್ಷರೆ, ಅದು ಗೊತ್ತಿದ್ದು ನಡೆಯುತ್ತದೆಯೋ

ಗೊತ್ತಾಗದೆ ನಡೆಯುತ್ತದೆಯೋ ಎಂಬ ಬಗ್ಗೆ ನಮಗೆ ಗೊತ್ತಾಗುವುದಿಲ್ಲ. ಆದರೆ, ಹೊರಗಡೆ ಜನ ಏನು ಮಾತನಾಡಿಕೊಳ್ಳುತ್ತಾರೆ ಎಂಬುದನ್ನು ಮಾತ್ರ ನಾನು ಇಲ್ಲಿ ಹೇಳುತ್ತಿದ್ದೇನೆ. ಟ್ರಾನ್ಸ್‌ಫರ್ ಸಮಯದಲ್ಲಿ ಎಷ್ಟೆಷ್ಟು ಹಣವನ್ನು ಕೊಡಬೇಕಾಗುತ್ತದೆ ಮತ್ತು ಯಾವ ಯಾವ ರೀತಿ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆಂದು ಇಲಾಖೆಯ ಅಧಿಕಾರಿಗಳೇ ಹೇಳುವುದು ನನಗೆ ಗೊತ್ತಿದೆ. ಆಮೇಲೆ ದಾಂಡೇಲಿ ಅಭಯಾರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಅನಾದಿಕಾಲದಿಂದಲೂ ವಾಸಿಸಿಕೊಂಡು ಬಂದಿರತಕ್ಕಂಥ ಜನರುಗಳನ್ನು ಅಲ್ಲಿಂದ ಹೊರ ಹಾಕಿ ಬೇರೆ ಕಡೆ ಪುನರ್‌ವಸತಿ ಮಾಡಿಕೊಡುತ್ತಾರೆಂದು ಅಲ್ಲಿನ ಜನರು ಭಯಭೀತರಾಗಿದ್ದಾರೆ. ಅಲ್ಲಿ ವಾಸಿಸುವ ಜನರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ಸರ್ಕಾರ ನೋಡಿಕೊಳ್ಳಬೇಕು. ಅವರುಗಳನ್ನು ಅಭಯಾರಣ್ಯದಿಂದ ಕಳುಹಿಸಿ ಬೇರೆ ಕಡೆ ಪುನರ್‌ವಸತಿ ಮಾಡುವಂಥ ಯೋಜನೆಗೆ ನಮ್ಮ ಜಿಲ್ಲೆಯ ಜನರು ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ, ಈಗಾಗಲೇ ನಮ್ಮ ಜಿಲ್ಲೆಯಲ್ಲಿ ವಿದ್ಯುತ್ ಯೋಜನೆಗೆಂದು ಸ್ಥಳವನ್ನು ಬಿಟ್ಟು ಕೊಟ್ಟ ಜನರಿಗೆ ಪುನರ್‌ವಸತಿ ಸೌಕರ್ಯವನ್ನು ಮಾಡಿಕೊಡದೇ ಇರುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ದಾಂಡೇಲಿ ಅಭಯಾರಣ್ಯದ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗುತ್ತದೆಂದು ಸರ್ಕಾರದ ಸ್ಪಷ್ಟ ನಿಲುವನ್ನು ತಿಳಿಸಬೇಕು. ಅಲ್ಲಿ ವಾಸಿಸುವ ಜನರಿಗೆ ಯಾವುದೇ ತೊಂದರೆಯಾಗದೇ ಇರತಕ್ಕಂಥ ನಿಲುವನ್ನು ತೆಗೆದುಕೊಳ್ಳಬೇಕೆಂದು ನಾನು ಆಗ್ರಹಪಡಿಸುತ್ತೇನೆ. ಆಮೇಲೆ, ಶಿವಮೊಗ್ಗ ಮತ್ತು ದಾಂಡೇಲಿಯಲ್ಲಿ ಕೆ.ಎಫ್.ಐ.ಸಿ.ಯವರೂ ಸಾಮಿಲ್‌ಗಳನ್ನು ನಡೆಸುತ್ತಿದ್ದಾರೆ. ಈ ಸಾಮಿಲ್‌ಗಳು ಇವತ್ತು ಲಾಸ್‌ನಲ್ಲಿ ನಡೆಯುತ್ತಿವೆಯೆಂದು ಗೊತ್ತಾಗಿದೆ. ಕೆ.ಎಫ್.ಐ.ಸಿ.ನವರು ಸರಿಯಾಗಿ ಗಮನಕೊಟ್ಟಿದ್ದಿದ್ದರೆ ಈ ಸಾಮಿಲ್‌ಗಳು ಲಾಸ್ ಆಗುತ್ತಿರಲಿಲ್ಲ. ಬ್ರಿಟೀಷರು ಇದ್ದಂಥ ಕಾಲದಲ್ಲಿ ಸ್ಥಾಪನೆ ಮಾಡಿದಂಥ ಈ ಸಾಮಿಲ್‌ಗಳು ಮೊದಲು ಲಾಭದಲ್ಲಿ ನಡೆಯುತ್ತಿದ್ದವು. ಆದರೆ ಕೆಲವು ವರ್ಷಗಳಿಂದ ಈ ಸಾಮಿಲ್‌ಗಳು ಲುಕ್ಸಾನಿನಲ್ಲಿ ನಡೆಯುವುದಕ್ಕೆ ಸರಿಯಾದ ಲಕ್ಷ್ಯ ಕೊಡದೇ ಇರುವುದೇ ಆಗಿದೆ. ಆಮೇಲೆ, ಸಿರಸಿ ತಾಲ್ಲೂಕು ಮತ್ತು ಭಟ್ಕಳದಲ್ಲಿ ಔಷಧಿ ವನ ಎಂದು ಮಾಡಿದರು. ಇದನ್ನು ಬಹಳ ದೊಡ್ಡ ಯೋಜನೆಗಾಗಿ ಕಾರ್ಯಕ್ರಮವನ್ನು ಸಿದ್ಧಪಡಿಸಿದ್ದರು, ಆದರೆ ಇವತ್ತು ಬಹಳ ದೊಡ್ಡ ಯೋಜನೆಯಾಗಿ ಕಾರ್ಯಕ್ರಮವನ್ನು ಸಿದ್ಧಪಡಿಸಿದ್ದರು, ಆದರೆ, ಇವತ್ತು ಈ ಔಷಧಿ ವನವನ್ನು ಕೇಳುವವರೂ ಇಲ್ಲ, ನೋಡುವವರೂ ಇಲ್ಲದ ರೀತಿಯಾಗಿದೆ. ಈ ಔಷಧಿ ವನವು ಈಗ ಸಂಶೊಧನಾ ವಿಭಾಗದಲ್ಲಿ ಇರುವುದನ್ನು ತೆಗೆದು ರೆಗ್ಯುಲರ್ ಡಿವಿಷನ್‌ಗೆ ಕೊಡಿ. ಸಂಶೋಧನಾ ವಿಭಾಗದಲ್ಲಿ ಹಣ ಇಲ್ಲದೇ ಇರುವುದರಿಂದ ಈ ಔಷಧ ವನವನ್ನು ನೋಡಿಕೊಳ್ಳುವುದಕ್ಕಾಗುವುದಿಲ್ಲ. ಅದನ್ನು ರೆಗ್ಯುಲರ್ ಡೀವಿವಷನ್‌ಗೆ ಸೇರಿಸುವುದರಿಂದ ಸ್ವಲ್ಪ ಸುಧಾರಣೆಯಾಗಬಹುದು. ಇವತ್ತಿನ ದಿವಸಗಳಲ್ಲಿ ಔಷಧಿ ವನಗಳಿಗೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಅಲೋಪತಿ ಔಷಧಿಗಳಿಂದ ಸೈಡ್ ಎಫೆಕ್ಟ್ ಜಾಸ್ತಿಯಾಗುತ್ತದೆಂದು ಎಲ್ಲರೂ ಆಯುರ್ವೇದ

ಔಷಧಿಗಳನ್ನು ಉಪಯೋಗಿಸುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಯಾರು ವಂಶಪಾರಂಪರ್ಯವಾಗಿ ಆಯುರ್ವೇದ ಔಷಧಗಳನ್ನು ತಯಾರು ಮಾಡುತ್ತಿದ್ದಾರೋ ಅವರುಗಳು ಇಂತಹ ಔಷಧಿ ವನಗಳನ್ನು ಬೆಳೆಸುವುದಕ್ಕೆ ಮುಂದಾದರೆ ಅವರಿಗೆ ಸರ್ಕಾರ ಪ್ರೋತ್ಸಾಹ ಕೊಡಬೇಕು.

1.20 ಪಿ.ಎಂ

ಆ ರೀತಿ ಯೋಜನೆ ಮಾಡುತ್ತೀರಾ? ಇವತ್ತು ಔಷಧಿ ವನಗಳಿಗೆ ಎಂದು ಸರ್ಕಾರದಲ್ಲಿ ವಿಶೇಷವಾದಂಥ ಪ್ರಯತ್ನ ಇಲ್ಲ. ಅದು ಯಾವುದೋ ಅಲ್ಲಿ ಇಲ್ಲಿ ಇರುವಂಥ ಹಣವನ್ನೇ ಔಷಧಿವನವನ್ನು ಮಾಡುವುದಕ್ಕೆ ಕೊಡುತ್ತಿದ್ದಾರೆ. ಆದರೆ ಔಷಧಿ ವನವನ್ನೇ ಮಾಡುವುದಕ್ಕೋಸ್ಕರವಾಗಿ ವಿಶೇಷವಾದ ಒಂದು ಯೋಜನೆಯನ್ನು ಹಾಕಿಕೊಂಡು ಒಂದು ಪ್ರಯತ್ನ ಮಾಡಬೇಕು. ಇದರಿಂದಾಗಿ ವ್ಯಕ್ತಿಯ ಆರೋಗ್ಯವನ್ನು ರಕ್ಷಣೆ ಮಾಡುವಂಥ ಒಂದು ಮಹತ್ತರವಾದ ಜವಾಬ್ದಾರಿಯನ್ನೂ ಸಹ ಅರಣ್ಯ ಇಲಾಖೆ ನಿರ್ವಹಿಸಿದ ಹಾಗೆ ಆಗುತ್ತದೆ. ಏಕೆಂದರೆ ಈಗ ಅಲೋಪತಿಯ ದುಷ್ಪರಿಣಾಮವನ್ನು ನಾವು ನೋಡುತ್ತಿದ್ದೇವೆ. ಆಯುರ್ವೇದ ಔಷಧಿಗೆ ಈಗ ಹೆಚ್ಚಿನ ಆದ್ಯತೆ ಬರುತ್ತಾ ಇದೆ. ವಿದೇಶದಲ್ಲೂ ಸಹ ಅದಕ್ಕೆ ಪ್ರಾಮುಖ್ಯತೆ ಸಿಗುತ್ತಿದೆ. ಅದನ್ನು ಬೆಳೆಯುವುದಕ್ಕೆ ನಮ್ಮ ರಾಜ್ಯದಲ್ಲೇ ಸಾಮರ್ಥ್ಯ ಇದೆ. ನಾವು ರಾಜಸ್ತಾನಕ್ಕೆ ಹೋಗಿಕೊಂಡು ಅಲ್ಲಿ ಮರಳು ಭೂಮಿಯಲ್ಲಿ ಅಂತಹ ಸಸಿಗಳನ್ನು ಬೆಳೆಸುವುದಕ್ಕೆ ಆಗುವುದಿಲ್ಲ. ನಮ್ಮಲ್ಲೇ ಆ ಪೊಟೆನ್‌ಶಿಯಾಲಿಟಿ ಇದೆ, ನಮ್ಮ ಭೂಮಿಯಲ್ಲಿ ಆ ಫಲವತ್ತತೆ ಇದೆ, ಶಕ್ತಿ ಇದೆ. ಹಾಗಾಗಿ ಇದನ್ನು ಪ್ರೋತ್ಸಾಹಿಸುವುದಕ್ಕಾಗಿ ಈ ರೀತಿಯ ಒಂದು ಆಯುರ್ವೇದ ಔಷಧಿ ವನಗಳನ್ನು ಮಾಡಿದಂಥವರಿಗೆ ಪ್ರೋತ್ಸಾಹವನ್ನು ಕೊಡಬೇಕೆಂದೂ ಸಹ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಓ.ಡಿ.ಎ.ನಿಂದ ನಮಗೆ ಅನುದಾನ ಬರುತ್ತಿತ್ತು. ಆದರೆ ಈ ವರ್ಷ ಓ.ಡಿ.ಎ. ಯೋಜನೆ ಮುಗಿಯುತ್ತಿರುವುದರಿಂದ ಅದಕ್ಕೆ ಹೆಚ್ಚಿನ ಅನುದಾನವನ್ನು ಬಜೆಟ್‌ನಲ್ಲಿ ಕೆನರಾಸರ್ಕಲ್‌ಗೆ ಏನು ನಿಗದಿ ಮಾಡಿದೆ, ಅದನ್ನು ಮುಂದಿನ ವರ್ಷದಲ್ಲಿ ಬಿಡುಗಡೆ ಮಾಡಬೇಕೆಂದೂ ಸಹ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯದಾಗಿ ಎರಡು ಪಾಯಿಂಟ್‌ಗಳು ಇವೆ. ಒಂದು, ನಿಸರ್ಗ ಪ್ರವಾಸೋದ್ಯಮಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕಾಗಿದೆ. ಈಗ 1996-97ರಲ್ಲಿ 24ಲಕ್ಷ ರೂಪಾಯಿಗಳನ್ನು ನಿಸರ್ಗ ಪ್ರವಾಸೋದ್ಯಮಕ್ಕೆ ಹೆಚ್ಚಿನ ಹಣವನ್ನು ವಿನಿಯೋಗಿಸಿದ್ದರು. ಆದರೆ 1997-98ರಲ್ಲಿ ಇದು ಕಡಿಮೆಯಾಗಿ 20 ಲಕ್ಷ ಬಂದಿದೆ. ನಾವು ಪ್ರವಾಸೋದ್ಯಮವನ್ನು ಎನ್‌ಕರೇಜ್ ಮಾಡಬೇಕು ಎಂದು ಹೇಳುತ್ತಾ ಇರತಕ್ಕಂಥ ಸಂದರ್ಭದಲ್ಲಿ ಮತ್ತು ನಿಸರ್ಗ ಪ್ರವಾಸೋದ್ಯಮದಿಂದ ಯಾವುದೇ ರೀತಿಯ ದುಷ್ಪರಿಣಾಮಗಳು ಪರಿಸರದ ಮೇಲೆ ಆಗುವುದಿಲ್ಲವೆಂದು ಭಾವಿಸಿಕೊಂಡಾಗ ನಾವು ಇದಕ್ಕೆ ಹೆಚ್ಚಿನ ಒಂದು ಮಹತ್ವ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಬದಲಿ ಇಂಧನ ಮೂಲದ ಬಗ್ಗೆ ಅರಣ್ಯ ಇಲಾಖೆಯ ವಿಶೇಷ ಪ್ರಯತ್ನ ಮಾಡಬೇಕಾಗುತ್ತದೆ.

ಅವರ ಇಲಾಖೆಯ ವರದಿಯಂತೆ ಶೇಕಡಾ 80ರಷ್ಟು ಗ್ರಾಮಾಂತರ ಜನ ಉರುವಲು ಕಟ್ಟಿಗೆಯನ್ನು ಬಳಸುತ್ತಿದ್ದಾರೆ ಎಂದು ಇದೆ. ಇದಕ್ಕಾಗಿ ಹಿಂದೆ ಗೋಬರ್‌ಗ್ಯಾಸ್ ಪ್ಲಾಂಟ್‌ಗೆ ಪ್ರೋತ್ಸಾಹ ಕೊಟ್ಟಿದ್ದರು, ಸಬ್ಸಿಡಿಯನ್ನು ಕೊಟ್ಟರು. ಬೇರೆ ಬೇರೆ ಜಿಲ್ಲಾ ಪರಿಷತ್ತಿನ ಇಲಾಖೆಗಳ ಮೂಲಕ, ಅರಣ್ಯ ಇಲಾಖೆಯ ಮೂಲಕ ಗೋಬರ್‌ಗ್ಯಾಸ್ ಪ್ಲಾಂಟ್ ಇರಲಿ, ಸೋಲಾರ್ ಇರಲಿ, ಇನ್ನೊಂದು ಮೂಲ ಇರಲಿ, ಅದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಇಂದು ಕೊಡಬೇಕು. ಇದರಿಂದ ನಮ್ಮ ಅರಣ್ಯ ಸಂರಕ್ಷಣೆ ಆಗುತ್ತದೆ. ಹಾಗಾಗಿ ಬದಲಿ ಇಂಧನಕ್ಕೆ ಆ ಮೂಲಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಿ. ಇನ್ನು, ಮೃಗಾಲಯ ಪ್ರಾಧಿಕಾರ ಇದೆ. ಇದಕ್ಕೆ 1997-98ರಲ್ಲಿ 150 ಲಕ್ಷ ಕೊಡಬೇಕು ಎಂದು ಕೇಳಿದರೆ, 84 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನು 66 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ವಿಷಯ ಸಮಿತಿ ಸಹ ಶಿಫಾರಸ್ಸು ಮಾಡಿದೆ. ಇದನ್ನು ಕೊಡಬೇಕು. ನಾವು ಪೇಟೆಯಲ್ಲಿರುವ ಜನ ಬೇಸರವಾದಾಗ ಅಥವಾ ನಮ್ಮ ಜೀವನದಲ್ಲಿ ಒಂದು ದಿನ ಬೇಸರವಾದಾಗ ನಾವು ಎಲ್ಲಿಗೆ ಹೋಗುತ್ತೇವೆ? ಪ್ರಾಣಿಸಂಗ್ರಹಾಲಯ ಏನಿದೆ, ಅಲ್ಲಿ ನೋಡುವುದಕ್ಕೆ ಹೋಗುತ್ತೇವೆ; ಹೋಗಿ ಪ್ರಾಣಿಗಳನ್ನು ನೋಡಿ ಸಂತೋಷಪಡುತ್ತೇವೆ. ಮೈಸೂರು ಜೂಗೆ ಏಕೆ ಅಷ್ಟು ಜನ ಹೋಗುತ್ತಾರೆ? ಇವತ್ತು ಈ ರೀತಿ ಜೂಗಳಿಗೆ ಅಥವಾ ಪ್ರಾಣಿಸಂಗ್ರಹಾಲಯಗಳಿಗೆ ಜನ ಸಂತೋಷ ಪಡೆಯುವುದಕ್ಕೆ ಹೋಗುತ್ತಾರೆ. ತಮ್ಮ ಕಷ್ಟವನ್ನು ಮರೆಯುವುದಕ್ಕೆ ಹೋಗುತ್ತಾರೆ. ಆದ್ದರಿಂದ ಸರ್ಕಾರ ಇದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಹೇಳುತ್ತ, ಅರಣ್ಯ ಎಷ್ಟು ಫಲವತ್ತಾಗಿದೆ ಎನ್ನುವುದು ವೀರಪ್ಪನ್ ಕೇಸಿನಲ್ಲಿ ನಮಗೆ ಗೊತ್ತಾಗಿದೆ. ಇಂತಹ ವೀರಪ್ಪನ್‌ಗಳು ಊರೂರುಗಳಲ್ಲಿ ಇವರ ಇಲಾಖೆಯ ಅಡಿಯಲ್ಲಿ ಇದ್ದಾರೆ. ಇಲಾಖೆಗೆ ಗೊತ್ತಿದ್ದೂ ವೀರಪ್ಪನ್‌ಗಳಿದ್ದಾರೆ. ಅಷ್ಟು ದೊಡ್ಡವರಲ್ಲದಿದ್ದರೂ ಸಣ್ಣಸಣ್ಣವರು ಇದ್ದಾರೆ. ದಯವಿಟ್ಟು ಅರಣ್ಯ ಇಲಾಖೆಯಲ್ಲಿ ಈರೀತಿ ಹಗಲು ದರೋಡೆ ನಡೆಯುತ್ತಿರುವುದನ್ನು ನಿಲ್ಲಿಸುವುದಕ್ಕೆ ಬೇಕಾಗಿರುವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ವಿಷಯಸಮಿತಿಗಳಲ್ಲಾಗಲೀ, ನಮ್ಮ ಹಿರಿಯ ಸದಸ್ಯರಾಗಲೀ ನಾವು ಯಾರಾದರೂ ಈ ಸಂದರ್ಭದಲ್ಲಿ ಅರಣ್ಯಗಳ ಬಗ್ಗೆ ಮಾತನಾಡುವುದು ಅರಣ್ಯರೋಧನವಾಗದೇ ಇರಲಿ ಎಂಬುದು ನನ್ನ ಅಭಿಪ್ರಾಯ. ಅಥವಾ ಅರಣ್ಯ ನೀತಿಯನ್ನು ಅನುಸರಿಸಿದವರಿಗೆ ಎಲ್ಲಾ ಮಾನ್ಯತೆಯೂ ಸಿಗುತ್ತದೆ ಎನ್ನುವುದು ಆಗದೇ ಇರಲಿ. ಅರಣ್ಯ ರೋಧನವೂ ಆಗಬಾರದು ಅಥವಾ ಅರಣ್ಯ ನೀತಿಯನ್ನು ಅನುಸರಿಸಿದವರಿಗೆ ಎಲ್ಲಾ ಸ್ಥಾನಮಾನಗಳು, ಸರ್ಕಾರದಲ್ಲಿ ಈ ಒಂದು ಮಹತ್ವ ಸಿಗದೇ ಇರುವಂಥಾದ್ದು ಆಗಬೇಕು ಎಂದು ಹೇಳುತ್ತಾ ನಾನು ಮತ್ತೊಮ್ಮೆ ಪ್ರಾರಂಭದಲ್ಲಿ ಹೇಳಿದ ಮಾತನ್ನು ಹೇಳುತ್ತೇನೆ. ಈ ಪರಿಸರ ಎನ್ನುವಂಥಾದ್ದು ಹಸಿರೇ ಉಸಿರು ಎಂದು ಏನು ಹೇಳುತ್ತೇವೆ, ಪರಿಸರ ಎನ್ನುವಂಥಾದ್ದು, ಈ ಅರಣ್ಯ ಎನ್ನುವಂಥಾದ್ದು ಹಿಂದಿನಿಂದ ಬಂದಂಥವರ ಚಳುವಳಿ ಅಲ್ಲ. ಇದು ಮುಂದಿನ ಪೀಳಿಗೆಯಿಂದ ತೆಗೆದುಕೊಂಡಂಥ ಸಾಲ ಎನ್ನುವ ದೃಷ್ಟಿಯಲ್ಲಿ ಇಲಾಖೆಯು ಮತ್ತು ಸರ್ಕಾರ ಇದಕ್ಕೆ ಕೊಡಬೇಕಾದ ಗಮನ ಕೊಟ್ಟರೆ ಅನೇಕ ಸುಧಾರಣೆಗಳನ್ನು

ತರಬಹುದು. ಮುಂದಿನ ಪೀಳಿಗೆಗೆ ಉತ್ತಮವಾದಂಥ ಗಾಳಿ, ನೀರು ಕೊಡುವುದಕ್ಕೆ ಸಾಧ್ಯತೆ ಇದೆ. ಭೂಸವಕಳಿ, ಅಂತರ್‌ಜಲ ಹೆಚ್ಚು ಮಾಡುವುದಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ಹೇಳುತ್ತಾ ಇದುವರೆಗೂ ಮಾತನಾಡಲು ಸಮಯ ಕೊಟ್ಟಿದ್ದಕ್ಕಾಗಿ ತಮಗೆ ಮತ್ತು ಎಲ್ಲರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ರಾಜಣ್ಣ: ನಾವು ಈಗ ಬೆಂಗಳೂರು ಅರ್ಬನ್, ಬೆಂಗಳೂರು ರೂರಲ್, ಕೋಲಾರ, ತುಮಕೂರು ಈ ಕಡೆಯಲ್ಲಿ ಮಳೆಯಿಲ್ಲದೆ ಸಫರ್ ಮಾಡುತ್ತಿದ್ದೇವೆ. ಇದಕ್ಕೆ ಕಾರಣ ಏನೆಂದರೆ, ವೆಸ್ಟರ್ನ್ ಘಾಟ್ಸ್‌ನಲ್ಲಿ ನಾಲ್ಕೈದು ವರ್ಷಗಳಿಂದ ಎಷ್ಟು ನೂರು ಕೋಟಿ ಬಂತು? ಡೆವಲಪ್‌ಮೆಂಟ್ ಏನಾಯಿತು? ಇವತ್ತು ವೆಸ್ಟರ್ನ್ ಘಾಟ್ ಹಾಳಾಗಿರುವುದರಿಂದಲೇ ಯಾರೋ ಮಾಡಿದ ಪಾಪಕ್ಕೆ ನಾವು ಮಳೆಯಿಲ್ಲದೆ ಅಲೆಯುತ್ತಾ ಇದ್ದೇವೆ. ನಮಗೆ ಈಗ ಮಳೆ ಇಲ್ಲ. The South west monsoon starts from Arabian sea. ಅರೇಬಿಯನ್‌ಸೀ ಇಂದ ಬಂದು ವೆಸ್ಟರ್ನ್ ಘಾಟಗೆ ಹೋಗಿ ಅಲ್ಲಿ-it dashes against Western Ghats and then reaches Karnataka ಇವತ್ತು ವೆಸ್ಟರ್ನ್ ಘಾಟನಲ್ಲಿ ಮರಗಳೇ ಇಲ್ಲ. ಡ್ಯಾಮೂ ಇಲ್ಲ, ಮಳೆಯೂ ಇಲ್ಲ. ಯಾರೋ ಮಾಡಿದ ಪಾಪಕ್ಕೆ ನಾವು ಸಫರ್ ಮಾಡುತ್ತಿದ್ದೇವೆ. ಆ ವೆಸ್ಟರ್ನ್ ಘಾಟ್ಸ್‌ನಲ್ಲಿ ಎಷ್ಟು ಕೋಟಿ ಬಂತು? ಎಷ್ಟು ಡೆವಲಪ್ ಮಾಡಿದ್ದೀರಿ? what is the fate of the Western Ghat development ಎನ್ನುವುದು ರಿಪ್ಲೈ ಮಾಡುವಾಗ ಹೇಳಬೇಕಾಗುತ್ತದೆ.

ಅಧ್ಯಕ್ಷರು: ಹೇಳಿಸೋಣ. ಮುದ್ದೇಹನುಮೇಗೌಡರು....ರೇವಾನಾಯಕರೇ ನಿಮಗೆ ಅವಕಾಶ ನಂತರ ಕೊಡುತ್ತೇನೆ.

ಮಾನ್ಯ ಸದಸ್ಯರು: ಅಧ್ಯಕ್ಷರೇ....

ಅಧ್ಯಕ್ಷರು: ಇವರು ಪಕ್ಷದಿಂದ ಮಾತನಾಡುತ್ತಾರೆ. ನಂತರ ಮತ್ತೊಬ್ಬರು ಈ ಕಡೆಯಿಂದ ಇಬ್ಬರೂ ಆದಮೇಲೆ ಬೇರೆಯವರನ್ನು ಕರೆಯಬೇಕಾಗುತ್ತದೆ. ಅದು ಸರದಿಯಲ್ಲಿ ಬರುತ್ತದೆ. ಈಗ ನಿಮ್ಮ ಪಕ್ಷದವರು ಮಾತನಾಡಿದ್ದಾರೆ. ನಿಮಗೆ ಅವಕಾಶ ಕೊಡುತ್ತೇನೆ. ಮುದ್ದಹನುಮೇಗೌಡರೇ, ನೀವು ಒಳ್ಳೆಯ ಜ್ಯೂಡಿಷಿಯಲ್ ಆಫೀಸರ್. ಟೈಮ್ ಬಗ್ಗೆ ನಿಮಗೆ ಹೇಳಿಕೊಡಬೇಕಾಗಿಲ್ಲ. ನೀವೇ ಕೀಪ್‌ಅಪ್ ಮಾಡುತ್ತೀರಿ. ಮಾತನಾಡಿ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ತಾವು ಯಾವಾಗ ಐದು ನಿಮಿಷ ಮುಂಚೆ ಸೂಚನೆ ಕೊಡುತ್ತೀರಿ, ಆವಾಗ ನಿಲ್ಲಿಸುತ್ತೇನೆ. ರೇಷ್ಮೆ ಇಲಾಖೆ ಬಗ್ಗೆ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕು ಎನ್ನುವುದು ನನ್ನ ಉದ್ದೇಶ. ಈಗ ರೇಷ್ಮೆ ಸಚಿವರು ಇಲ್ಲ. ನಿನ್ನೆ ಎಲ್ಲಾ ಇಲ್ಲಿ ಕೂತಿದ್ದರು.

ಶ್ರೀ ಸಿ.ಬೈರೇಗೌಡ: ಕೌನ್ಸಿಲ್‌ಗೆ ಹೋಗಿದ್ದಾರೆ.

ಅಧ್ಯಕ್ಷರು: ಕೌನ್ಸಿಲ್‌ಗೆ ಹೋಗಿದ್ದಾರೋ? ಎಲ್ಲಾದರೂ ಹೋಗಿರಲಿ, ಕೌನ್ಸಿಲ್ ಎಂದು ಹೇಳೋಣ ಬಿಡಿ. ತೊಂದರೆ ಇಲ್ಲ.

+ ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಅವರ ಪರವಾಗಿ ಸರ್ಕಾರದ ಯಾರಾದರೂ ಒಬ್ಬರು ಜವಾಬ್ದಾರಿ ವಹಿಸಿಕೊಳ್ಳುತ್ತಾರೆ ಎಂದು ವಿಶ್ವಾಸಕ್ಕೆ ಬಂದರೆ ನನಗೆ ತಿಳಿದಿರುವ ಒಂದೆರಡು ವಿಷಯಗಳನ್ನು ಅವರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು: ಸನ್ಮಾನ್ಯ ಬೈರೇಗೌಡರು ಇದ್ದಾರೆ. ರೇಷ್ಮೆ ಬಗ್ಗೆ ಕೂಡ ಅವರು ಪರಿಣಿತರು ಇದ್ದಾರೆ. ಅವರು ಉತ್ತರ ಕೊಡುತ್ತಾರೆ. ಅಥವಾ ಮಂತ್ರಿಗಳಿಗೆ ಬ್ರೀಫ್ ಮಾಡುತ್ತಾರೆ. ತಾವು ಮಾತನಾಡಿ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮಾನ್ಯ ಅಧ್ಯಕ್ಷರೇ, ರೇಷ್ಮೆ ಮನುಷ್ಯನ ಅದರಲ್ಲೂ ಹೆಂಗಸರ ಒಂದು ಸೌಂದರ್ಯವನ್ನು ವೃದ್ಧಿಸತಕ್ಕಂಥ ಸಾಧನ. ಆದರೆ ಈ ರೇಷ್ಮೆ ಉತ್ಪಾದನೆಯಲ್ಲಿರತಕ್ಕಂಥ ಜನರ ಕಷ್ಟಗಳನ್ನು ನೋಡಿದಾಗ ಬಹುಶಃ ಆ ಜನತೆಯ ಕಷ್ಟವನ್ನು ನಿವಾರಿಸುವಲ್ಲಿ ಸರ್ಕಾರ ಸಫಲರಾಗಿದ್ದಾರೆಯೇ ಎನ್ನುವ ಪ್ರಶ್ನೆಯನ್ನು ಹಾಕಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಇಡೀ ವಿಶ್ವದಲ್ಲೇ ಈ ರೇಷ್ಮೆ ಉತ್ಪಾದನೆಯಲ್ಲಿ ಚೀನಾದ ನಂತರದ ಸ್ಥಾನವನ್ನು ನಾವು ಭಾರತ ಪಡೆದಿದ್ದೇವೆ. ಭಾರತದ ಉತ್ಪಾದನೆಯಲ್ಲಿ ಶೇಕಡಾ 85ರಷ್ಟು ಕೊಡುಗೆಯನ್ನು ನಾವು, ಕರ್ನಾಟಕದವರು ಕೊಡುತ್ತಿದ್ದೇವೆ. ಕರ್ನಾಟಕದ ಉತ್ಪಾದನೆಯಲ್ಲಿ ಮೈಸೂರು ಬಿತ್ತನೆ ವಲಯದ ಕುಣಿಗಲ್ ತಾಲ್ಲೂಕು, ಮಾಗಡಿ ತಾಲ್ಲೂಕು ಹಾಗೂ ತುಮಕೂರು ತಾಲ್ಲೂಕಿನ ಕೆಲವು ಭಾಗ, ಮೈಸೂರು ಬಿತ್ತನೆ ವಲಯ ಎಂದು ಏನಿದೆ, ಅಲ್ಲಿ ಕರ್ನಾಟಕ ರೇಷ್ಮೆ ಉತ್ಪಾದನೆಯಲ್ಲಿ ತನ್ನ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಿದೆ. ಇವತ್ತು-restricting my argument with regard to Mysore area, with all responsibility at my command, I would like to make a statement on the floor of the House that growth rate of Sericulture in the State and in the country is deteriorating. ಇದರ ಬಗ್ಗೆ ಸರ್ಕಾರದ ಕಾರ್ಯಕ್ರಮಗಳು ಏನು? ಸರ್ಕಾರದ ಚಿಂತನೆ ಏನು ನಡೆದಿದೆ ಎನ್ನುವುದರ ಬಗ್ಗೆ, ಹೇಗೆ ನಾವು ಇಲ್ಲಿ ರೇಷ್ಮೆ ಕೃಷಿಯನ್ನು ಸ್ವಲ್ಪಮಟ್ಟಿಗಾದರೂ ಉತ್ತಮ ಪಡಿಸಬಹುದು ಎನ್ನುವುದರ ಬಗ್ಗೆ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ರೇಷ್ಮೆ ಉತ್ಪಾದನೆಯಲ್ಲಿ ಇವತ್ತು ಚೀನಾದ ನಂತರದ ಸ್ಥಾನವನ್ನು ನಾವು ವಿಶ್ವದಲ್ಲಿ ಪಡೆದಿದ್ದೇವೆ. ಆದರೆ ನಮ್ಮ ದುರಾದೃಷ್ಟ, ಇವತ್ತು ರೇಷ್ಮೆಯನ್ನು ನಾವು ಚೀನಾದಿಂದ ಆಮದು ಮಾಡಿಕೊಳ್ಳುತ್ತೇವೆ. ಕಡಿಮೆ ಬೆಲೆಗೆ ಸಿಗುತ್ತದೆ ಎನ್ನುವ ಒಂದೇ ಒಂದು

ಕಾರಣಕ್ಕೆ ಇವತ್ತು ಬಹಳ ಉದಾರವಾಗಿ ಚೀನಾದಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಇದರ ಪರಿಣಾಮ ಏನು? ಇವತ್ತು ರೇಷ್ಮೆ ಉತ್ಪಾದನೆ ಮಾಡತಕ್ಕಂಥ ರೈತನ ಹಿತಾಸಕ್ತಿಯನ್ನು ಕಾಪಾಡದೇನೆ ಅವನ ಹಿತಕ್ಕೆ ಧಕ್ಕೆ ತರುವಂಥ ಈ ಒಂದು ನಿಮ್ಮ ನೀತಿ ಏನಿದೆ, ಅದರ ಕಾರಣದಿಂದಾಗಿ ಸರ್ಕಾರ ಬಹಳ ಉದಾರವಾಗಿ ಇವತ್ತು ಚೀನಾದಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳುವಂಥ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಇದರಿಂದ ಇವತ್ತು ಬಡರೈತನ ಸಂಸಾರ ಹಾಳಾಗುತ್ತಿದೆ. ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಇವತ್ತು ನಮ್ಮ ರಾಜ್ಯದವರೇ ಜವಳಿ ಮಂತ್ರಿಗಳು ಇದ್ದಾರೆ. ದಯಮಾಡಿ ಕೇಂದ್ರಸರ್ಕಾರದ ಮೇಲೆ ಒತ್ತಾಯ ತಂದು ಇವತ್ತು ಚೀನಾದಿಂದ ರೇಷ್ಮೆಯನ್ನು ರಾಜ್ಯಕ್ಕೆ, ದೇಶಕ್ಕೆ ಆಮದು ಮಾಡಿಕೊಳ್ಳತಕ್ಕಂಥ ದಂಧೆ ಏನು ನಡೆಯುತ್ತಿದೆ, ಅದಕ್ಕೆ ಕಡಿವಾಣ ಹಾಕದೇ ಹೋದರೆ ಇವತ್ತು ರೇಷ್ಮೆ ಕೃಷಿ ಕರ್ನಾಟಕದಲ್ಲಿ ಸಂಪೂರ್ಣವಾಗಿ ನಾಶದ ಅಂಚನ್ನು ತಲುಪುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಮನನೊಂದು ನಾನು ಹೇಳುತ್ತಿದ್ದೇನೆ. ಮಾನ್ಯ ಕೃಷಿ ಸಚಿವರು ತಾವು ಏನು ಇದ್ದೀರಿ, ತಾವು ಬಹಳ ಅನುಭವಿಗಳು ಇದ್ದೀರಿ. ಈ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಇದರ ಬಗ್ಗೆ ಕ್ರಮ ಜರುಗಿಸತಕ್ಕಂಥಾದ್ದು ಮಾಡುತ್ತೀರಿ ಎನ್ನುವ ನಂಬಿಕೆಯನ್ನು ನಾನು ಇಟ್ಟುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೇ, ಇವತ್ತು ಮೈಸೂರು ಬಿತ್ತನೆ ವಲಯ ಏನಿದೆ-it is like heart of sericulture in this State ಇವತ್ತು ಇಡೀ ಒಂದು ರಾಜ್ಯಕ್ಕೆ ಮಿಶ್ರತಳಿ ಏನಿದೆ ಅದಕ್ಕೆ ಬೀಜವನ್ನು, ಬಿತ್ತನೆ ಗೂಡನ್ನು ಉತ್ಪಾದನೆ ಮಾಡತಕ್ಕಂಥ ಜವಾಬ್ದಾರಿಯನ್ನು ಮೈಸೂರು ಬಿತ್ತನೆ ವಲಯದಲ್ಲಿ ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ಮೈಸೂರು ತಳಿವಲಯದ ರೈತರು ಪ್ರತಿವರ್ಷ ಏನು ರೇಷ್ಮೆ ಬೆಳೆಯುತ್ತಾರೆ, ಅವರ ಸಂಖ್ಯೆಯೂ ಕೂಡ ಇವತ್ತು ಕಡಿಮೆಯಾಗುತ್ತಿದೆ. ಅವರ ಕಷ್ಟಗಳಿಗೆ ಸ್ಪಂದಿಸುವ ಒಂದು ಜವಾಬ್ದಾರಿ, ಆ ಜವಾಬ್ದಾರಿ ಕೊಡತಕ್ಕಂಥ ರೇಷ್ಮೆ ಬೆಳೆಯತಕ್ಕಂಥ ಬೆಳೆಗಾರನಿಗೆ ಕಡಿಮೆಯಾಗಿದೆ. ನಾನಾದರೂ ಕೂಡ ಈ ಸಂದರ್ಭದಲ್ಲಿ ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೈಸೂರು ಬಿತ್ತನೆ ವಲಯದಲ್ಲಿ ರೇಷ್ಮೆ ಬೆಳೆಗಾರರ ಬಗ್ಗೆ ಸರ್ಕಾರ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಮೈಸೂರು ಬಿತ್ತನೆ ವಲಯದಲ್ಲಿ ನಾವು ಪ್ರತ್ಯೇಕವಾದ ಹುಳು ಸಾಕಾಣಿಕೆ ಮನೆ ಇಟ್ಟುಕೊಡಿರತಕ್ಕಂಥ ರೈತನನ್ನು ನಾವು ನೋಡುವುದು ಅಪಾರವಾಗಿದೆ. ಎಲ್ಲರೂ ಕೂಡ ಅವರು ವಾಸಮಾಡತಕ್ಕಂಥ ಮನೆಯಲ್ಲಿ ರೇಷ್ಮೆ ಬೆಳೆ ಮತ್ತು ಗೂಡನ್ನು ಸಾಕುತ್ತಿದ್ದಾನೆ. ತಾಂತ್ರಿಕವಾಗಿ ಇದನ್ನು ಅವರ ಅಧಿಕಾರಿಗಳು ಒಪ್ಪುವುದಿಲ್ಲ. ಆದರೂ ಕೂಡ ಏನಾಗಿದೆ ರೇಷ್ಮೆ ಬೆಳೆಯತಕ್ಕಂಥ ರೈತನ ಸ್ಥಿತಿ ಆ ಮಟ್ಟದಲ್ಲಿದೆ. ಪ್ರತ್ಯೇಕವಾಗಿ ತನ್ನದೇ ಆದ ರೇಷ್ಮೆ ಹುಳು ಸಾಕಾಣಿಕೆಗೆ ಮನೆ ಕಟ್ಟತಕ್ಕಂಥ ಶಕ್ತಿ ಅವನ ಕೈಯಲ್ಲಿ ಇಲ್ಲ. ಈ ಬಗ್ಗೆ ನಾವಾದರೂ ಕೂಡ ಮೊದಲಿನಿಂದ ಹೇಳಿಕೊಂಡು ಬರುತ್ತಿದ್ದೇನೆ ದಯಮಾಡಿ ಮೈಸೂರು ಬಿತ್ತನೆ ವಲಯದಲ್ಲಿ ಇರತಕ್ಕಂಥ ಪ್ರತಿಯೊಬ್ಬ ರೈತರು ಕೂಡ ಪ್ರತ್ಯೇಕವಾದ ಒಂದು ಹುಳು ಸಾಕಾಣಿಕೆಯ ಮನೆಯನ್ನು

ಕಟ್ಟತಕ್ಕಂಥ ಶಕ್ತಿಯನ್ನು ಅವನಿಗೆ ಸಹಕಾರವನ್ನು ಸರ್ಕಾರ ಯಾವುದಾದರೊಂದು ಯೋಜನೆ ಮೂಲಕ ಒದಗಿಸಿಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಈ ಬಗ್ಗೆ ನಿಮ್ಮ ಸರ್ಕಾರದ ಕಾರ್ಯಕ್ರಮ ಏನಿದೆ ಎನ್ನುವ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ. ಎರಡನೆಯದಾಗಿ ಏನಾಗಿದೆ ಇವತ್ತು ಅಪಾರವಾದಂಥ ಒಂದು ಉತ್ಕೃಷ್ಟವಾದ ರೇಷ್ಮೆಯನ್ನು ಬೆಳೆಯಬೇಕಾದರೆ, ರೇಷ್ಮೆ ಗೂಡು ಉತ್ಪಾದನೆ ಮಾಡಬೇಕಾದರೆ, ರೈತನಿಗೆ ಇವತ್ತು ಒಂದು ನೀರಿನ ಸೌಲಭ್ಯ ಇರತಕ್ಕಂಥ ಹಿಪ್ಪನೇರಳೆ ತೋಟವನ್ನು ಬೆಳೆಯತಕ್ಕಂಥ ಒಂದು ಶಕ್ತಿಯನ್ನು ನಾವು ಕೊಡಬೇಕಾಗುತ್ತದೆ. ಇವತ್ತು ಏನಾಗಿದೆ ನಾನು ತರಿಸಿರತಕ್ಕಂಥ ಮಾಹಿತಿ ಮೈಸೂರಿನಲ್ಲಿ ಇವತ್ತು ಮೈಸೂರು ಬಿತ್ತನೆ ವಲಯದಲ್ಲಿ ಇರತಕ್ಕಂಥ ಜಮೀನಿನಲ್ಲಿ ಸುಮಾರು 4 ಸಾವಿರ ಚಿಲ್ಲರೆ ಹೆಕ್ಟೇರ್ ಪ್ರದೇಶ ಏನು ಇದೆ ಅಷ್ಟು ಭಾಗದಲ್ಲಿ ಇವತ್ತು 1600 ಹೆಕ್ಟೇರ್ ಪ್ರದೇಶದಲ್ಲಿ ನೀರಿನ ಸೌಲಭ್ಯ ಇಲ್ಲ. ಅಂದರೆ ಇವತ್ತು ಮಳೆ ಏನು ಬೀಳುತ್ತದೆ ಆ ಮಳೆಯ ಆಧಾರದಿಂದ ರೈತ ಹಿಪ್ಪನೇರಳೆ ಬೆಳೆಯನ್ನು ಬೆಳೆದು ಗೂಡನ್ನು ಬೆಳೆಯತಕ್ಕಂಥ, ರೇಷ್ಮೆ ಬೆಳೆಯತಕ್ಕಂಥ ಪ್ರಯತ್ನ ಮಾಡುತ್ತಿದ್ದಾನೆ. ಮೈಸೂರಿನಲ್ಲಿ ಯಾವ ರೀತಿಯಾಗುತ್ತದೆ ಕೃಷಿ ಸಚಿವರಿಗೆ ಇದು ಅವರ ಗಮನದಲ್ಲಿ ಇದೆ. ಮಳೆ ಆಧಾರ ಇಟ್ಟುಕೊಂಡು ರೇಷ್ಮೆ ಸಾಕಾಣಿಕೆ ಮಾಡತಕ್ಕಂಥ ಆ ರೈತನಿಂದ ನೀವು ಯಾವ ಮಟ್ಟದ ಒಂದು ಉತ್ಪಾದನೆ ರೇಷ್ಮೆ ನಿರೀಕ್ಷೆ ಮಾಡಬಹುದು. ನನ್ನ ಉದ್ದೇಶ ಏನೆಂದರೆ ಯಾವ ರೈತ ತನ್ನ ಜಮೀನಿನಲ್ಲಿ ಮಳೆಯ ಆಶ್ರಯದಿಂದ ಹಿಪ್ಪನೇರಳೆಯಿಂದ ರೇಷ್ಮೆ ಬೆಳೆ ಬೆಳೆಯತಕ್ಕಂಥ ಪ್ರಯತ್ನ ಮಾಡುತ್ತಿದ್ದಾನೆ, ಅವನಿಗೆ ನೀರಿನ ಸೌಲಭ್ಯ ಶಾಶ್ವತವಾಗಿ ಒದಗಿಸಿಕೊಡತಕ್ಕಂಥ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಅವನಿಗೆ ಇವತ್ತು ಏನಾಗಿದೆ ಒಂದೆರಡು ತಿಂಗಳಲ್ಲಿ 500 ಅಥವಾ 1000 ಸಂಪಾದನೆ ರೈತನಿಗೆ ಸಿಗುತ್ತದೆ. ಸುಮಾರು 40ರಿಂದ 50 ಸಾವಿರ ರೂಪಾಯಿ ರೈತ ಖರ್ಚು ಮಾಡಿ ಬೋರ್‌ವೆಲ್ ಮೋಟಾರು ಹಾಕಿ ಶಾಶ್ವತವಾದ ನೀರಿನ ಸೌಲಭ್ಯ ಮಾಡತಕ್ಕಂಥ ಪ್ರಯತ್ನ ಮಾಡುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ದಯಮಾಡಿ ಈ ಹುಳು ಸಾಕಾಣಿಕೆ ಮನೆಯನ್ನು ಕಟ್ಟಿಕೊಡಬೇಕೆಂದು, ಮತ್ತು ಎರಡನೆಯದು ಅವನ ಜಮೀನಿನಲ್ಲಿ ಯಾವ ರೈತ ಮಳೆಯನ್ನು ಆಧರಿಸಿಕೊಂಡು ಹಿಪ್ಪನೇರಳೆ ತೋಟವನ್ನು ಇಟ್ಟುಕೊಂಡಿದ್ದಾನೆ ಅವನಿಗೆ ಶಾಶ್ವತವಾಗಿ ನೀರನ್ನು ಒದಗಿಸತಕ್ಕಂಥ ಆ ವ್ಯವಸ್ಥೆ ಮಾಡತಕ್ಕ ಜವಾಬ್ದಾರಿ ಸರ್ಕಾರ ಕೊಡಬೇಕಾಗುತ್ತದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇವತ್ತು ಮೈಸೂರು ಬಿತ್ತನೆ ವಲಯದಲ್ಲಿ ಇರತಕ್ಕಂಥ ರೈತನ ಹಿತವನ್ನು ನೀವು ಕಾಪಾಡದೆ ಹೋದರೆ ಇಡೀ ರೇಷ್ಮೆ ಕೃಷಿ ಏನು ಇದೆ, ರಾಜ್ಯದಲ್ಲಿ ಅದರ ಮೇಲೆ ಬಹಳ ಕೆಟ್ಟ ಪರಿಣಾಮ ಬೀರುತ್ತದೆ. ದಯಮಾಡಿ ತಾವು ಇದನ್ನು ಗಂಭೀರವಾಗಿ ಪರಿಗಣಿಸಿ ರೈತನಿಗೆ ಈ ವ್ಯವಸ್ಥೆ ತಾವು ಮಾಡಬೇಕು. ಇದಕ್ಕೆ ನಾನು ಏನು ಹೇಳಿಕೊಂಡು ಬಂದಿದ್ದೇನೆಂದರೆ, ನಾನು ಅನೇಕ ಸಲ ಹೇಳಿದ್ದೇನೆ. ನಾನು ಹಿಂದಿನ ರೇಷ್ಮೆ ಸಚಿವರಿಗೂ ಹೇಳಿದ್ದೆ. ಇದನ್ನು ಅಸೆಂಬ್ಲಿಯಲ್ಲಿಯೂ ಅನೇಕ ಸಲ ಪ್ರಸ್ತಾಪ ಮಾಡಿದೆ. ನಾನು ಏನು ಹೇಳುತ್ತಿದ್ದೇನೆಂದರೆ ನೀವು ರೇಷ್ಮೆ ಗೂಡನ್ನು ಕಟ್ಟತಕ್ಕಂಥ

ರೈತನಿಗೆ ಒಂದು ಪಾಸ್‌ಬುಕ್ ಕೊಟ್ಟಿರುತ್ತೀರಿ. ಅವನು ಆ ಪಾಸ್‌ಬುಕ್‌ದಲ್ಲಿ ಎಷ್ಟು ಮೊಟ್ಟೆ ತೆಗೆದುಕೊಂಡಿದ್ದಾನೆ, ಎಷ್ಟು ಗೂಡನ್ನು ಅವನು ಮಾರ್ಕೆಟ್ಟಿಗೆ ಹಾಕಿದ್ದಾನೆ, ಎಷ್ಟು ಬಂದಿದೆ ಎನ್ನುವುದರ ಬಗ್ಗೆ ತಮ್ಮ ಇಲಾಖೆಯ ಪ್ರತಿಯೊಬ್ಬ ಅಧಿಕಾರಿಯೂ ಎಂಟ್ರಿ ಮಾಡುತ್ತಾನೆ ಅಂದರೆ ರೇಷ್ಮೆ ಕೃಷಿ ಬಗ್ಗೆ ಸಂಪೂರ್ಣವಾದಂಥ ವಿವರ ಆ ಒಂದು ಪಾಸ್‌ಬುಕ್‌ನಲ್ಲಿ ಇರುತ್ತದೆ. ರೈತನಿಗೆ ಬರತಕ್ಕಂಥ ಆದಾಯದ ಬಗ್ಗೆಯೂ ಕೂಡ ಸಂಪೂರ್ಣವಾದ ಮಾಹಿತಿ ಕೂಡ ಆ ಪಾಸ್‌ಬುಕ್‌ದಲ್ಲಿ ಇರುತ್ತದೆ. ನೀವು ಈ ಪಾಸ್‌ಬುಕ್ಕನ್ನು ಆಧಾರ ಮಾಡಿಕೊಂಡು that can be treated as a credit card. ನೀವು ಅದರ ಆಧಾರ ಇಟ್ಟುಕೊಂಡು ಬ್ಯಾಂಕಿನಲ್ಲಿ ಅವನಿಗೆ ನೆಗೋಷಿಯೇಟ್ ಮಾಡಿ ಲೈಸೆನ್ಸಿಂಗ್ ಮಾಡಿ ಅವನಿಗೆ ಆ ಪಾಸ್‌ಬುಕ್ ಆಧಾರದ ಮೇಲೆ ಸಾಲವನ್ನು ಕೊಡಿಸತಕ್ಕಂಥ ಕೆಲಸವನ್ನು ನೀವು ಮಾಡದೇ ಹೋದರೆ ನೀವು ರೇಷ್ಮೆ ಕೃಷಿಗಾಗಿ ನೀವು ಯಾವುದೇ ಒಂದು ಅಭಿವೃದ್ಧಿ ಕೆಲಸವನ್ನು ಮಾಡಿಸಲಾಗುವುದಿಲ್ಲ. ಆದ್ದರಿಂದ ದಯಮಾಡಿ ಮಾನ್ಯ ಸಚಿವರಲ್ಲಿ ಕಳಕಳಿಯ ಪ್ರಾರ್ಥನೆ, ನೀವು ಇದನ್ನು ಬಹಳ ಗಂಭೀವಾಗಿ ಇದನ್ನು ಪರಿಗಣಿಸಿ ಪಾಸ್‌ಬುಕ್ ಆಧಾರದಮೇಲೆ ರೈತನಿಗೆ ರೇಷ್ಮೆ ಬೆಳೆಯತಕ್ಕಂಥ ರೈತನಿಗೆ ಅದರಲ್ಲಿ ಮೈಸೂರು ಬಿತ್ತನೆ ವಲಯದಲ್ಲಿ ನೀವು ಸಾಲದ ಸೌಲಭ್ಯ ಕೊಟ್ಟು, ಅವನಿಗೆ ತನ್ನದೇ ಆದ ಒಂದು ಪ್ರತ್ಯೇಕವಾದಂಥ ಹುಳು ಸಾಕಾಣಿಕೆ ಮನೆಯನ್ನು ಮತ್ತೆ ಜಮೀನದಲ್ಲಿ ನೀರಿನ ಸೌಲಭ್ಯದ ಕೆಲಸವನ್ನು ಮಾಡದೆ ಹೋದರೆ ಖಂಡಿತವಾಗಿ ರೇಷ್ಮೆ ಕೃಷಿಗೆ ತಮ್ಮದು ಏನೂ ಕೊಡುಗೆ ಇಲ್ಲವೆಂದು ನಾನು ಹೇಳಬೇಕಾಗುತ್ತದೆ. ದಯಮಾಡಿ ಆ ಬಗ್ಗೆ ತಾವು ಚಿಂತನೆ ಮಾಡಬೇಕೆಂದು ಹೇಳುತ್ತಾ, ಇವತ್ತು ಏನಾಗಿದೆ ರೇಷ್ಮೆ ಸಾಕಾಣಿಕೆ ಬಗ್ಗೆ ಅನೇಕ ಸಮಸ್ಯೆಗಳನ್ನು ನಮ್ಮ ರೈತ ಅಲ್ಲಿ ಅನುಭವಿಸುತ್ತಿದ್ದಾನೆ. ಇವತ್ತು ತಮಗೆ ಗೊತ್ತಿರಬಹುದು, ಈ ಗಂಟುರೋಗ ತಮಗೆಲ್ಲಾ ಗೊತ್ತಿದೆ. ಏನಾದರೂ ಕೂಡ ಅದು ಸ್ವಲ್ಪಮಟ್ಟಿಗೆ ಇವತ್ತು ಮೈಸೂರು ಬಿತ್ತನೆ ವಲಯದಲ್ಲಿ ತನ್ನ ಪ್ರಭಾವವನ್ನು ಬೀರಿದರೆ ಇಡೀ ರೇಷ್ಮೆ ಕೃಷಿ ಏನು ಇದೆ, ನಮ್ಮ ರಾಜ್ಯದಲ್ಲಿ ಅದರ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಇನ್ನು ಗಂಟುರೋಗ ನಿಯಂತ್ರಣದ ಬಗ್ಗೆ ತಾವು ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ತಾಂತ್ರಿಕ ಸಲಹಾ ಕೇಂದ್ರಗಳ ಮೂಲಕ ರೈತನಿಗೆ ಆಗಾಗ್ಗೆ ಸಲಹೆಗಳನ್ನು, ತಾಂತ್ರಿಕ ಸಲಹೆಗಳನ್ನು ಕೊಡತಕ್ಕಂಥ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಇವತ್ತು ತಾಂತ್ರಿಕ ಸೇವಾ ಕೇಂದ್ರಗಳನ್ನು ತಾವು ಪ್ರಾರಂಭ ಮಾಡಿರುತ್ತೀರಿ. ಮೈಸೂರು ಬಿತ್ತನೆ ವಲಯದಲ್ಲಿ ಯಾವುದೂ ಸರಿಯಾಗಿ ಕೆಲಸಮಾಡುತ್ತಿಲ್ಲ. ಯಾವ ವಲಯ ಅಧಿಕಾರಿ, ಯಾವ ತಾಂತ್ರಿಕ ಸೇವಾ ಕೇಂದ್ರದಲ್ಲಿ ಕೆಲಸಮಾಡತಕ್ಕಂಥ ಅಧಿಕಾರಿ ಇವತ್ತು ನೇರವಾಗಿ ರೈತನ ಹಿಪ್ಪೇನೇರಳಿನ ತೋಟಕ್ಕೆ ಹೋಗಲಿಲ್ಲ, ರೈತ ಹುಳು ಸಾಕಾಣಿಕೆ ಮಾಡತಕ್ಕಂಥ ಮನೆಗೆ ಹೋಗಲಿಲ್ಲ. ರೈತರ ಹುಳು ಇಟ್ಟಿರತಕ್ಕಂಥದ್ದರ ಬಗ್ಗೆ ಹಂತ ಹಂತವಾಗಿ ಪರೀಕ್ಷೆ ಮಾಡಲಿಲ್ಲ. ಅಥವಾ ಏನು ಮಾಡಿದ್ದಾನೆ ಎನ್ನತಕ್ಕಂಥದ್ದನ್ನು ಆ ಪಾಸ್‌ಬುಕ್‌ದಲ್ಲಿ ಎಂಟ್ರಿ ಮಾಡಲಿಲ್ಲ. ಹೀಗಿದ್ದಾಗ ಏನಾಗುತ್ತದೆ ಅಂತಿಮವಾಗಿ ಯಾವತ್ತಾದರೂ ಒಂದು

ದಿವಸ ಸುಮಾರು 3-4 ವರ್ಷಗಳ ಹಿಂದೆ ಇವತ್ತು ಮೈಸೂರು ಬಿತ್ತನೆ ವಲಯದಲ್ಲಿ ಗಂಟುರೋಗ, ಮಾರಕ ರೋಗ ರೇಷ್ಮೆ ಕೃಷಿಗೆ ಬಂದು. ಹೀಗೆ ರೇಷ್ಮೆ ಬೆಳೆಗಾರನಿಗೆ ಕೊಡತಕ್ಕಂಥ ನೋವು ಏನು ಇದೆ, ನನಗೆ ಗೊತ್ತಿದೆ ಸುಮಾರು 3-4 ವರ್ಷಗಳಿಂದ ಸತತವಾಗಿ ಹೋರಾಟವನ್ನು ಮಾಡಿ ಇವತ್ತು ಒಂದು ರೋಗ ನಿಯಂತ್ರಣ ಮಾಡತಕ್ಕಂಥ ಕೆಲಸವನ್ನು ಆ ಅಧಿಕಾರಿಗಳು ಮಾಡಿದ್ದಾರೆ. ಆದರೆ ಇದು ಒಂದು ಸಾರಿ ಬಂದರೆ, ರೈತನ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಇವತ್ತು ಅನೇಕರು ಆ ಬೆಳೆಯನ್ನು ಬಿಟ್ಟೆ ಬಿಡಬೇಕೆಂದು ಹಂತಕ್ಕೆ ಅವರು ತಲುಪಿದ್ದಾರೆ. ಈ ಗಂಟರೋಗ ನಿವಾರಣೆಗೆ ಬೇಕಾದಂಥ ತಾಂತ್ರಿಕ ಸೌಲಭ್ಯವನ್ನು ತಮ್ಮ ಇಲಾಖೆಗೆ ಮಾಡಲಿಕ್ಕೆ ತಾಂತ್ರಿಕ ಸೇವಾ ಕೇಂದ್ರಗಳ ಮೂಲಕ ವ್ಯವಸ್ಥಿತವಾಗಿ ತಲುಪುತ್ತಿಲ್ಲ ಎನ್ನುವ ಮಾತನ್ನೂ ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ತಾವು ಗಮನಹರಿಸಿ ರೈತನಿಗೆ ಪ್ರತಿಯೊಂದು ಹಂತದಲ್ಲಿ ಕೂಡ ತಾವು ಕೆಲಸಮಾಡಬೇಕು. ಇದರ ಬಗ್ಗೆ ಇದೆ ಸಂದರ್ಭದಲ್ಲಿ ಬಹಳ ಮುಖ್ಯವಾದ ಒಂದು ವಿಷಯವನ್ನು ಹೇಳಬೇಕಾಗುತ್ತದೆ. ಇವತ್ತು ಮಾನ್ಯ ರೇಷ್ಮೆ ಸಚಿವರು ಈಗತಾನೇ ಸಭೆಗೆ ಆಗಮಿಸಿದ್ದಾರೆ. ಬಹಳ ಸಂತೋಷ. ನಾನು ಒಂದು ವಿಷಯವನ್ನು ಅವರ ಗಮನಕ್ಕೆ ತರಬೇಕಾಗುತ್ತದೆ. ನೀವು ಮಾತೆತ್ತಿದರೆ ಮೈಸೂರು ಸಿಟಿಯಲ್ಲಿ ಅದು ಮಾಡಿದ್ದೇವೆ, ಇದು ಮಾಡಿದ್ದೇವೆಂದು ಹೇಳುತ್ತೀರಿ. ನಿಮಗೆ ಒಂದು ಮಾಹಿತಿ ಕೊಡುತ್ತೇನೆ, ಮಾನ್ಯ ಸಚಿವರೇ, ಇವತ್ತು ನಮಗೆ ಬಹಳ ಪ್ರಮುಖವಾದ ಗಂಟುರೋಗ ನಿವಾರಣೆಗೆ ಮಾಡತಕ್ಕಂಥ ಒಂದು ಕೆಲಸ ಏನೆಂದರೆ, ಚಿಟ್ಟೆಗಳ ಪರೀಕ್ಷೆ ಮಾಡತಕ್ಕಂಥ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಈ ಚಿಟ್ಟೆ ಪರೀಕ್ಷಕರು ಎಂದು ಏನು ಇದ್ದಾರೆ ಅವರಿಗೆ ಅದೇ ಒಂದು ಕೆಲಸದಲ್ಲಿ ಬಹಳ ಪರಿಣಿತರಾಗಿ ಬಹಳ ಕೆಲಸವನ್ನು ವ್ಯವಸ್ಥಿತವಾಗಿ ಮಾಡಿಕೊಂಡು ಬರುತ್ತಿದ್ದಾರೆ. ಇವತ್ತು ಈ ಗಂಟುರೋಗ ನಿವಾರಣೆಯಲ್ಲಿ ಆ ಚಿಟ್ಟೆ ಪರೀಕ್ಷಕರ ಪಾತ್ರ ಬಹಳ ಪ್ರಮುಖವಾದಂಥದ್ದು, ಏನು ಮಾಡುತ್ತೀರಿ ನೀವು ಆ ಚಿಟ್ಟೆ ಪರೀಕ್ಷಕರನ್ನು ತೆಗೆದುಕೊಂಡು ಹೋಗಿ ವಿಲೇಜ್ ಅಕೌಂಟೆಂಟ್ ಎಂದು ಟ್ರಾನ್ಸ್‌ಫರ್ ಮಾಡಿರುತ್ತೀರಿ. ಚಿಟ್ಟೆ ಪರೀಕ್ಷಕರೆಂದು ಯಾರು ಮೈಸೂರು ಬಿತ್ತನೆ ವಲಯದಲ್ಲಿ ಕೆಲಸ ಮಾಡುತ್ತಿದ್ದರು, ತಮಗೂ ಕೂಡ ಗೊತ್ತಿದೆ, ಶ್ರೀನಿವಾಸಪುರದ ಬಗ್ಗೆ ತಮಗೂ ಮಾಹಿತಿ ಇದೆ. ಅವರನ್ನು ತೆಗೆದುಕೊಂಡು ಹೋಗಿ, ಸರ್ಕಾರದ ಏನೋ ಆದೇಶ ಇರಬಹುದು ಆ ವ್ಯವಸ್ಥೆ ಬಗ್ಗೆ We have transferred / converted these moth testers as village accountant at the cost of Sericulture Ministery. ಆದ್ದರಿಂದ ದಯಮಾಡಿ ಈ ಆದೇಶವನ್ನು ಗಂಭೀರವಾಗಿ ಪರಿಶೀಲಿಸಬೇಕು ಯಾರು ಚಿಟ್ಟೆ ಪರೀಕ್ಷಕರು ಇದ್ದರು ಅವರನ್ನು ನೀವು ಅಪಾಯಿಂಟ್‌ಮೆಂಟ್ ಮಾಡಿಕೊಂಡಿರುವುದು ರೇಷ್ಮೆ ಇಲಾಖೆಗೆ. ಅವನ ಸೇವೆ ಆಗಬೇಕಾಗಿರತಕ್ಕಂಥದ್ದು ರೇಷ್ಮೆ ಇಲಾಖೆಗೆ ಅವನನ್ನು ತೆಗೆದುಕೊಂಡು ಹೋಗಿ ವಿಲೇಜ್ ಅಕೌಂಟೆಂಟ್ ಎಂದು ಹಾಕಿದರೆ ಅವರು ಖುಷಿಯಾಗಿ ಹೊರಟು ಹೋಗುತ್ತಾರೆ. ಇಲ್ಲಿ ದ್ರಾವಕ ಹಾಕಿ,

ಮಾಥ್ ಟೆಸ್ಟ್ ಮಾಡಿ ಕಷ್ಟ ಅನುಭವಿಸಬೇಕಲ್ಲಾ, ಯಾವಾಗ ವಿಲೇಜ್ ಅಕೌಂಟೆಂಟ್ ಎಂದು ಕೆಲಸ ಸಿಕ್ಕಿತು ಆಗ ರೇಷ್ಮೆ ಇಲಾಖೆಯನ್ನು ಖಾಲಿ ಮಾಡಿ ಹೊರಟು ಹೋಗಿದ್ದಾರೆ. ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಈ ಬಗ್ಗೆ ತಾವು ಕಾರ್ಯಕ್ರಮವನ್ನು ಕೈಗೊಳ್ಳದೆ ಹೋದರೆ, ನಿಮ್ಮ ಕಾಲದಲ್ಲಿ ಈ ರೇಷ್ಮೆ ಕೃಷಿಗೆ ಬಹಳ ದೊಡ್ಡ ಪೆಟ್ಟು ಬಿದ್ದು ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಚಿಟ್ಟೆ ಪರೀಕ್ಷಕರನ್ನು ಯಾವುದೇ ಕಾರಣಕ್ಕೂ ನೀವು ಮೈಸೂರು ಬಿತ್ತನೆ ವಲಯದಿಂದ ವಿಲೇಜ್ ಅಕೌಂಟೆಂಟ್‌ರಾಗಿ ಪರಿವರ್ತನೆ ಮಾಡತಕ್ಕಂಥ ಕೆಲಸಕ್ಕೆ ತಾವು ಸಹಕಾರ ನೀಡಬಾರದು. ಯಾವುದೇ ಆದೇಶ ಇದ್ದರೂ ಅದನ್ನು ರದ್ದು ಪಡಿಸತಕ್ಕಂಥ ಜವಾಬ್ದಾರಿಯನ್ನು ಹೊರಬೇಕೆಂದು ಹೇಳುತ್ತಾ, ಇದರ ಜೊತೆಗೆ ಏನಾಗಿದೆ ನೀವು ಚಿಟ್ಟೆ ಪರೀಕ್ಷಕರ ಜೊತೆಗೆ ಈ ಗಂಟುರೋಗವನ್ನು ನಿವಾರಣೆ ಮಾಡತಕ್ಕಂಥದ್ದು, ತಡೆಗಟ್ಟತಕ್ಕಂಥ ಜವಾಬ್ದಾರಿ ನಿಮ್ಮ ಮೇಲೆ ಇದೆ. ಸೋಂಕು ನಿವಾರಕ ದ್ರಾವಕ ಏನಿದೆ, ಅದನ್ನು ಹೊಡೆಯುವ ಕೆಲಸಕ್ಕೋಸ್ಕರ ಕೆಲವರನ್ನು ನೇಮಕ ಮಾಡಿಕೊಂಡಿದ್ದರು. ದ್ರಾವಕ ಹೊಡೆಯುವ ಗ್ರೂಪ್-ಡಿ ನೌಕರರನ್ನು ಕೆಲಸವೇನೆಂದರೆ ಪ್ರತಿಯೊಂದು ತೋಟಕ್ಕೆ ಅಥವಾ ಹುಳು ಸಾಕಾಣಿಕೆ ಮನೆಗಳಿಗೆ ಹೋಗಿ ಈ ಗಂಟು ರೋಗ ನಿವಾರಣೆಗೋಸ್ಕರ ಔಷಧಿ ಸಿಂಪರಣೆ ಮಾಡುವ ಕೆಲಸವನ್ನು ಇಲಾಖೆ ವತಿಯಿಂದ ಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ಬಹಳ ವ್ಯವಸ್ಥಿತವಾಗಿ ಮಾಡುತ್ತಿದ್ದರು. They were happy to serve in the department. ನೀವು ಏನು ಮಾಡಿದ್ದೀರಿ ಅವರನ್ನು ಪುನಃ ತೆಗೆದುಕೊಂಡು ಹೋಗಿ ವಿವಿಧ ಇಲಾಖೆಗಳಿಗೆ ಹಾಕಿದ್ದೀರಿ. ಅವರು ಬಹಳ ಖುಷಿಯಾಗಿ ಖಾಲಿ ಮಾಡಿಕೊಂಡು ಹೊರಟುಹೋಗಿದ್ದಾರೆ. ಹೀಗಾಗಿ ಮೈಸೂರು ಬಿತ್ತನೆ ವಲಯದಲ್ಲಿ ತಾವೇನು ಮಾಡಿದ್ದೀರಿ, ಮೈಸೂರು ಬಿತ್ತನೆ ವಲಯದಲ್ಲಿ 289 ಜನ ನೌಕರರನ್ನು ಸಿ ಮತ್ತು ಡಿ ವರ್ಗದವರನ್ನು ಚಿಟ್ಟೆ ಪರೀಕ್ಷಕರು ಮತ್ತು ದ್ರಾವಕ ಹೊಡೆಯುವ ಸಿಬ್ಬಂದಿ ಸಿ ಮತ್ತು ಡಿ ನೌಕರರನ್ನು ಬೇರೆ ಇಲಾಖೆಗೆ ವರ್ಗಾವಣೆ ಮಾಡಿದ್ದೀರಿ. ಇನ್ನು ಕೆಲವು ನೌಕರರನ್ನು ವರ್ಗಾವಣೆ ಮಾಡುವ ಪ್ರಯತ್ನವನ್ನು ತಾವು ನಡೆಸುತ್ತಿದ್ದೀರಿ. ಈ ಬಗ್ಗೆ ಸ್ಪಷ್ಟವಾದ ಉತ್ತವನ್ನು ಸರ್ಕಾರದಿಂದ ನಾನು ಬಯುಸುತ್ತೇನೆ. ಸ್ಪಷ್ಟವಾದ ಸರ್ಕಾರದ ನಿಲುವೇನಿದೆ, ನೀವು ಈ ರೇಷ್ಮೆ ಕೃಷಿಯನ್ನು ಮೈಸೂರು ಬಿತ್ತನೆ ವಲಯದ ಮೂಲಕ ಉಳಿಸುವ ಪ್ರಯತ್ನವನ್ನು ಮಾಡುತ್ತೀರಾ ಅಥವಾ ಅಳಿಸತಕ್ಕಂಥ ಪ್ರಯತ್ನವನ್ನು ಮಾಡುತ್ತೀರಾ ಎನ್ನುವ ನಿರ್ದಿಷ್ಟವಾದ ಉತ್ತರವನ್ನು ನಾನು ಈ ದಿನ ಈ ಸಂದರ್ಭದಲ್ಲಿ ಬಯಸುತ್ತಿದ್ದೇನೆ. ಇವತ್ತು ಏನಾಗಿದೆ, ಇದರ ಜೊತೆಗೆ ಇವರು ಇನ್ನೊಂದು ಈ ಮೊಟ್ಟೆ ರೋಗರಹಿತ ರೋಗ ಇಲ್ಲದೆ ಇರುವ ಮೊಟ್ಟೆಗಳನ್ನು ಸರಬರಾಜು ಮಾಡುವ ಕೆಲಸವನ್ನು ಸರಿಯಾಗಿ ವ್ಯವಸ್ಥಿತವಾಗಿ ಮಾಡುತ್ತಿಲ್ಲ. ಇವತ್ತೇನಾಗಿದೆ, ಅಲ್ಲಿ ರೇಂಜ್ ಆಫೀಸರ್ಸ್‌ಗಳನ್ನು ಹಾಕಿದ್ದೀರಿ, ಯಾರಿಗೂ ಜವಾಬ್ದಾರಿ ಇಲ್ಲ. ಪಾಪ, ಅವರಿಗೆ ರೈತರಿಗೆ ಗೊತ್ತಿರುವುದಿಲ್ಲ. ಎಂಥದ್ದೋ ಮೊಟ್ಟೆ ಕೊಟ್ಟುಬಿಡುವುದು, ಮೊಟ್ಟೆ ಏನಾಗುತ್ತದೆ, ಸರಿಯಾಗಿ ಚಾಕಿ ಕಟ್ಟುವುದಕ್ಕಾಗುವುದಿಲ್ಲ.

ಕ್ರಾಪ್ ಫೇಲ್ ಆಗುತ್ತದೆ. ಫೇಲ್ ಆದಾಗ ಕಂಟಿನ್ಯೂಯಸ್ ಆಗಿ ಎರಡು-ಮೂರು ಸಲ ಫೇಲಾದಾಗ ಅವನು ಡಿಸ್‌ಗಸ್ಟ್ ಆಗುತ್ತಾನೆ. ಇದರಿಂದ ಏನಾಗಿದೆ ಎಂದರೆ ಇವತ್ತು ಯಾವ ಮಟ್ಟಕ್ಕೆ ಬಂದಿದ್ದಾರೆಂದರೆ ಮಾನ್ಯ ಸಚಿವರೇ, ತಾವು ದಯವಿಟ್ಟು ಆಲಿಸಬೇಕು, ಇವತ್ತು ನಮ್ಮ ಮೈಸೂರು ಬಿತ್ತನೆ ವಲಯದಲ್ಲಿ ರೇಷ್ಮೆ ಬೆಳೆಯುತ್ತಿರುವ ರೈತ ರೇಷ್ಮೆಗಿಂತ ಬಾಳೆ ಬೆಳೆದರೆ ನಾನು ಸುಖವಾಗಿರಬಹುದು ಎನ್ನುವ ಭಾವನೆ ಅವರಿಗೆ ಬಂದುಬಿಟ್ಟಿದೆ. ಇವತ್ತು ಯಾವ ಬೆಳೆಯನ್ನು ಆರ್ಥಿಕವಾಗಿ ರೈತನಿಗೆ ಅನುಕೂಲವಾಗುವಂಥ ಬೆಳೆ ಎಂದು ನಾವು ಭಾವಿಸಿದ್ದೆವೋ, ಯಾವ ಸಾಂಪ್ರದಾಯಿಕವಾದ ಈ ಬೆಳೆಯನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿಯನ್ನು ಸರ್ಕಾರ ಹೊತ್ತಿತ್ತೋ ಇವತ್ತು ಅಂಥ ರೈತ ಈ ಬೆಳೆಯಿಂದ ನಾನು ನಷ್ಟವನ್ನು ಅನುಭವಿಸಬಹುದು ಎನ್ನುವ ಒಂದು ಭಾವನೆ ಬಂದಿದೆ. ಈ ರೀತಿಯ ಒಂದು ಭಯ ಅವನಿಗೆ ಕಾಡುತ್ತಾ ಇದೆ. ಅದಕ್ಕೆ ನೀವು ಆಸರೆಯಾಗಿ ನಿಲ್ಲದೆ ಹೋದರೆ ಸರ್ಕಾರ ನಿಲ್ಲದೆ ಹೋದರೆ ಮುಂದಿನ ದಿನಗಳು ಬಹಳ ಕ್ರೂರವಾಗುವ ದಿನಗಳನ್ನು ನಾವು ನೋಡಬೇಕಾಗುತ್ತದೆ. ಇದರ ಜೊತೆಗೆ ಏನಾಗಿದೆ, ಈಗ ಇಷ್ಟೆಲ್ಲಾ ಹಂತಗಳನ್ನು ತಲುಪಿದಮೇಲೆ ಮಾರುಕಟ್ಟೆ ವ್ಯವಸ್ಥೆಯಲ್ಲೂ ಕೂಡ ನಮಗೆ ಅನೇಕ ಸಮಸ್ಯೆಗಳಿವೆ. ಇವತ್ತು ಏನಾಗಿದೆ, ನಾವು ಈ ಮೈಸೂರು ಬಿತ್ತನೆ ವಲಯದಲ್ಲಿ ನೀವು ಎರಡು ತರಹದ ಬೆಲೆಯನ್ನು ಕೊಡಬೇಕಾಗುತ್ತದೆ. ಬಿತ್ತನೆಗೆ ಏನು ಗೂಡು ಹೋಗುತ್ತದೆ, ಆ ಬಿತ್ತನೆಗೆ ಹೋಗುವ ಗೂಡಿಗೆ ಒಂದು ರೇಟು. ಸರ್ಕಾರ ನಿಗದಿಪಡಿಸಿರುವುದು ಒಂದು ರೇಟು. ಮತ್ತೆ ಏನು ರೀಲಿಂಗ್‌ಗೆ ಹೋಗುತ್ತದೆ ಚರಕಕ್ಕೆ ಅದಕ್ಕೆ ಬೇರೆ ರೇಟು. ಆ ರೇಟಿನಲ್ಲಿ ಬಹಳ ವ್ಯತ್ಯಾಸ ಇದೆ 120ರಿಂದ 150 ರೂ.ಏನಾದರೂ ನೀವು ಬಿತ್ತನೆ ಗೂಡಿಗೆ ಕೊಟ್ಟರೆ 60-70 ರೂಪಾಯಿ ಏನಾಗಿದೆ, ಆ ರೀಲಿಂಗ್ ಏನು ಇದೆ, ಆ ರೀಲರ್ಸ್ it is under the clutches of the Reelers. ಅವರು ಇಷ್ಟಬಂದಷ್ಟು ರೀತಿ ಮಾಡುತ್ತಾರೆ. 50-60 ರೂಪಾಯಿ ಆಯಿತು ಎಂದು ಗೂಡನ್ನು ತೆಗೆದುಕೊಂಡು ಹೋಗುತ್ತಾರೆ, ಅದೇ ರೈತ ಒಂದು ಭಾಗವನ್ನು ಅಥವಾ ಅವರ ಅಣ್ಣತಮ್ಮ 150 ರೂ. ಒಂದು ಕೆ.ಜಿ.ಗೆ ಗೂಡಿಗೆ ಕೊಟ್ಟರೆ ಇವನು 60 ರೂ. ಕೊಡತಕ್ಕಂಥದ್ದು ಎಷ್ಟು ಕಷ್ಟವಾಗುತ್ತದೆ. ಬೋನಸ್‌ನ್ನು ಕೊಡುತ್ತಿದ್ದೀರಿ, ಸಂತೋಷ. ನೀವು ಬೋನಸ್ ಕೊಟ್ಟರೂ ಕೂಡ that is not compensating the grower, who is selling his silk to the reeler. ಅದರಿಂದ ದಯಮಾಡಿ ಈ ಒಂದು ಮಾರುಕಟ್ಟೆಯಲ್ಲಿರುವ ಬೆಲೆಯ ಅಂತರವೇನಿದೆ, ಇದನ್ನು ನೀವು ಸಮಾನಾಂತರಗೊಳಿಸುವ ಒಂದು ಕೆಲಸವನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಪುನಃ ಈ ಅಂತರದಲ್ಲಿ ಮಾರುಕಟ್ಟೆ ಅಧಿಕಾರಿಗಳು ತಮ್ಮದೇ ಆದ ಕೈವಾಡವನ್ನು ಬೆಳೆಸುತ್ತಾರೆ. ಅವರಿಗೆ ಇಷ್ಟಬಂದವರನ್ನು ಆ ಗೂಡನ್ನು ಬಿತ್ತನೆಗೋಸ್ಕರ ಸೆಲೆಕ್ಟ್ ಮಾಡಿಸುತ್ತಾರೆ. ಅವರಿಗೆ ಯಾರಿಗೆ ಬೇಕೋ ಆ ಒಂದು ಗೂಡನ್ನು ಕೊಡಿಸುತ್ತಾನೆ. ಅವನಿಗೆ ಯಾವುದು ಬೇಡವೋ ಅದನ್ನು ಚರಕಕ್ಕೆ ಹಾಕುತ್ತಾನೆ. ಈ ಒಂದು ಅಂತರವನ್ನು ಏನಾದರೂ ತಾವು

ಕಾಪಾಡಿದರೆ ಬೆಲೆಯಲ್ಲಿರುವ ಅಂತರವನ್ನು ಕಾಪಾಡಿದರೆ ಆಗ ಈ ಒಂದು ಮಾರುಕಟ್ಟೆ ಅಧಿಕಾರಿಗಳ ಕೈಯಲ್ಲಿ ರೈತ ಸಿಕ್ಕಿ ನರಳುವ ಕೆಲಸವಾಗುವುದಿಲ್ಲ. ಆದ್ದರಿಂದ ದಯಮಾಡಿ ಈ ಬಗ್ಗೆ ತಾವು ಚಿಂತನೆಯನ್ನು ನಡೆಸಬೇಕಾಗುತ್ತದೆ. ಈ ಅಂತರವನ್ನು ಆದಷ್ಟು ಸಮಾನಾಂತರಗೊಳಿಸಿದರೆ ಖಂಡಿತವಾಗಿಯೂ ಕೂಡ ಇದು ಬಹಳ ಅನುಕೂಲವಾಗುತ್ತದೆ. ಇನ್ನೊಂದು ಬಹಳ ಪ್ರಮುಖವಾದ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಮಾರುಕಟ್ಟೆಯಲ್ಲಿ ನಡೆಯುವ ಅವ್ಯವಹಾರಗಳ ಬಗ್ಗೆ ತಾವು ದಯಮಾಡಿ ಚಿಂತನೆ ಮಾಡಬೇಕು. ಬಿತ್ತನೆಯಂಥ ಗೂಡಿಗೆ 150 ರೂ.ವರೆಗೂ ರೇಟು ಇರುತ್ತದೆ. ರೀಲಿಂಗ್‌ಗೆ ಹೋದರೆ 50-60 ರೂಪಾಯಿಗೆ ಹೋಗುತ್ತದೆ. ಇವರೇನು ಮಾಡುತ್ತಾರೆ, ಎಲ್.ಎಸ್.ಪಿ.ಯವರಿಗೆ ಅವರಿಗೆ ಯಾವುದು ಗೂಡನ್ನು ರೀಲಿಂಗ್‌ಗೆ ಕೊಟ್ಟಿದ್ದೇವೆ ಎಂದು ಹೇಳಿಯೇ ಆ ಗೂಡನ್ನೇ ಪುನಃ ಅವನಿಗೆ ಕೊಟ್ಟು ಈ ರೇಂಜ್ ಇರುತ್ತದಲ್ಲಾ, ರೈತನಿಗೆ ಹೋಗುವ ದುಡ್ಡನ್ನು ಇವರು ಎಲ್‌ಎಸ್‌ಪಿಗಳು ಮತ್ತು ಮಾರುಕಟ್ಟೆ ಅಧಿಕಾರಿಗಳು ಸೇರಿಕೊಂಡು ನುಂಗುವ ಕೆಲಸವನ್ನು ಮಾಡುತ್ತಾರೆ. ಇದು ವ್ಯವಸ್ಥಿತವಾಗಿ ತಾವೂ ಕೂಡ ಮಾನ್ಯ ಸಚಿವರು ಒಪ್ಪಿಕೊಂಡಿದ್ದೀರಿ, ಅನೇಕ ಸಲ ಮಾರುಕಟ್ಟೆಗೆ ಭೇಟಿ ಕೊಟ್ಟಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ, ನೀವು ಸೂಕ್ತವಾದ ಆದೇಶಗಳನ್ನು ನೀಡಿದ್ದೀರಿ, ಆದರೂ ಕೂಡ ಈ ದಂಧೆ ಏನು ಇದೆ, ಈ ಮಾರುಕಟ್ಟೆ ಅಧಿಕಾರಿಗಳು, ಮಾರುಕಟ್ಟೆಯಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಏನು ಇದ್ದಾರೆ, ಆ ರೀತಿ ಮಾಡುತ್ತಿರುವ ದಂಧೆ ನಿಲ್ಲಲಿಲ್ಲ. ಇವರು ನಿಜವಾಗಿಯೂ ರೈತನಿಗೆ ಸೇರುವ ಹಣವನ್ನು ನುಂಗುವಲ್ಲಿ ಬಹಳ ಯಶಸ್ವಿಯಾಗಿ ತಮ್ಮ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮತ್ತೆ ಕಂಪಲ್‌ಸರಿಯಾಗಿ ಹಬೆಗೆ ಕೊಡುವ ಯಾವ ಗೂಡು ರೀಲಿಂಗ್‌ಗೆ ಹೋಗುತ್ತದೆ, ಅದನ್ನು ಕಂಪಲ್‌ಸರಿಯಾಗಿ ಹಬೆಗೆ ಕೊಡುವ ಕೆಲಸವನ್ನು ಮಾರುಕಟ್ಟೆಯಲ್ಲಿ ನಡೆಸುತ್ತಿಲ್ಲ. ಇದರ ಬಗ್ಗೆ ಮೇಲಧಿಕಾರಿಗಳು ತಪಾಸಣೆ ಮಾಡಬೇಕು, ಅವರು ಮಾಡುತ್ತಿಲ್ಲ. ರೆಗ್ಯುಲರ್ ಚೆಕ್ಕಿಂಗ್ಸ್ ಇಲ್ಲ. ರೈತರ ಕಷ್ಟವನ್ನು ಕೇಳುತ್ತಿಲ್ಲ. ರೀಲಿಂಗ್‌ಗೆ ಹೋದಂಥ ಗೂಡು ಹಬೆಗೆ ಹೋಗುತ್ತಿದೆಯೋ ಇಲ್ಲವೋ ಎಂದು ಹೇಳುತ್ತಿಲ್ಲ. ಹಬೆಗೆ ಕೊಡದೆ, ಅದೇ ಗೂಡನ್ನು ಪುನಃ ಹೆಚ್ಚಿಗೆ ಎಲ್.ಎಸ್.ಪಿ.ಗಳಿಗೆ ಮಾರುವ ವ್ಯವಸ್ಥಿತವಾದ ಒಂದುಜಾಲ ಈ ಮಾರುಕಟ್ಟೆ ಪ್ರದೇಶಗಳಲ್ಲಿ ನಡೆಯುತ್ತಿದೆ. ಇದನ್ನು ತಪ್ಪಿಸದೆ ಹೋದರೆ ಖಂಡಿತವಾಗಿಯೂ ಕೂಡ ರೈತನಿಗೆ ಬಹಳ ಅಪಾರವಾದ ದ್ರೋಹವನ್ನು ತಾವು ಬಗೆದಂತಾಗುತ್ತದೆ. ಇನ್ನೊಂದು ವಿಷಯವನ್ನು ನಾನು ಮಾನ್ಯ ರೇಷ್ಮೆ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ರೇಷ್ಮೆ ಕೃಷಿಯೊಳಗೆ ಈ ಪುರುಷರ ಅವರ ಆಸಕ್ತಿ ಸ್ವಲ್ಪ ದಿನೇದಿನೇ ಕುಂದುತ್ತಾ ಇದೆ. ಏನು ಆಸಕ್ತಿ ಮೊದಲಿತ್ತೋ ಅದು ಇಲ್ಲ. ಅವರಿಗೆ ಬೇರೆ ಬೇರೆ ವ್ಯವಹಾರಗಳ ಬಗ್ಗೆ ಚಿಂತನೆ ಜಾಸ್ತಿಯಾಗಿದೆ. ಅದಕ್ಕೆ ನಾನೇನು ಹೇಳುತ್ತಿದ್ದೇನೆ ಎಂದರೆ ನೀವು ಮಹಿಳೆಯರಿಗೆ ಈ ರೇಷ್ಮೆ ಕೃಷಿಯಲ್ಲಿ ಮಹಿಳೆಯರಿಗೆ ತರಬೇತಿಯನ್ನು ಕೊಡುವ ಕಾರ್ಯಕ್ರಮಗಳನ್ನು ಹೆಚ್ಚಿಗೆ ಹಾಕಿಕೊಳ್ಳಿ. ಮಹಿಳೆಯರಿಗೆ ತರಬೇತಿಯನ್ನು ಕೊಡಿ.

ಹೆಣ್ಣುಮಕ್ಕಳು ಏನು ಮಾಡುತ್ತಾರೆ ಎಂದರೆ ಬಹಳ ಪ್ರಾಮಾಣಿಕವಾಗಿ ಈ ಒಂದು ಕಸುಬನ್ನು ಮಾಡುತ್ತಾ ಬಂದಿದ್ದಾರೆ. ನಾವು ಎಲ್ಲೆಲ್ಲಿ ಹೆಣ್ಣುಮಕ್ಕಳು ಈ ಕಸುಬನ್ನು ಕೈಗೊಂಡಿದ್ದಾರೆ, ಅಲ್ಲಿ ಬಹಳ ವ್ಯವಸ್ಥಿವಾದ ರೀತಿಯಲ್ಲಿ ಅದು ಸಕ್ಸಸ್ ಆಗಿದೆ. ಅದರಿಂದ ದಯಮಾಡಿ ಈ ರೇಷ್ಮೆ ಇಲಾಖೆಯ ಮೂಲಕ ಹೆಣ್ಣು ಮಕ್ಕಳಿಗೆ ಹೆಚ್ಚಿನ ರೀತಿಯಲ್ಲಿ ಈಗ ತರಬೇತನ್ನು ಕೊಡುವ ಕೆಲಸ ನಡೆಯುತ್ತಿದೆ. ನಾನು ಒಪ್ಪಿಕೊಳ್ಳುತ್ತಿದ್ದೇನೆ. ಆದರೆ ನಾವು ಏನು ನಿರೀಕ್ಷೆ ಮಾಡಿದ್ದೇವೆ, ಯಾವ ಮಟ್ಟದಲ್ಲಿ ಆ ಕಾರ್ಯಕ್ರಮವಾಗಬೇಕಾಗಿತ್ತೋ ಆ ಮಟ್ಟದಲ್ಲಿ ಆ ಕಾರ್ಯಕ್ರಮವಾಗುತ್ತಿಲ್ಲ. ಅದರಿಂದ ದಯಮಾಡಿ ತಾವು ಈ ರೇಷ್ಮೆ ಇಲಾಖೆಯ ಮುಖಾಂತರ ಹೆಣ್ಣುಮಕ್ಕಳಿಗೆ ಹೆಚ್ಚಿನ ರೀತಿಯಲ್ಲಿ ವ್ಯವಸ್ಥಿತವಾಗಿ ತರಬೇತಿಯನ್ನು ಕೊಟ್ಟು ಅವರಿಗೆ ತರಬೇತಿ ಕೊಟ್ಟ ನಂತರ ಅವರ ಒಂದು ಕಸುಬನ್ನು ಮುಂದುವರಿಸಿಕೊಂಡು ಹೋಗುವ ಅವರಿಗೆ ಏನೇನು ಸವಲತ್ತುಗಳು ಬೇಕು, ಸಲಕರಣೆಗಳು ಬೇಕು, ಅದನ್ನು ಕೂಡ ಸರ್ಕಾರದ ಮೂಲಕ ಕೊಡಿಸುವ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಎಲ್ಲಿ ನೀವು ಈ ಹೆಣ್ಣುಮಕ್ಕಳನ್ನು ಜಾಸ್ತಿ ಇನ್‌ವಾಲ್ವ್ ಮಾಡುತ್ತೀರಿ, ಅಲ್ಲಿ ಖಂಡಿತವಾಗಲೂ ಕೂಡ ಈ ಒಂದು ಕೃಷಿ ಹೆಚ್ಚಿನ ರೀತಿ ಅಪಾರವಾಗಿ ವೃದ್ಧಿಯಾಗಲಿಕ್ಕೆ ಖಂಡಿತವಾಗಿಯೂ ಸಹಾಯವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ರೇಷ್ಮೆ ಇಲಾಖೆಯಲ್ಲೂ ಕೂಡ ನಮ್ಮ ಅನೇಕ ಸ್ನೇಹಿತರು ಹೇಳಿದ ಹಾಗೆ ಅನೇಕರು ಇವತ್ತು ವಿದೇಶಕ್ಕೆ ಹೋಗಿ ಅವರ ಅನುಭವವನ್ನು ಪಡೆದುಕೊಂಡು ಬಂದಿದ್ದಾರೆ. ನಾನು ಎಲ್ಲಿಯೂ ನೋಡಲಿಲ್ಲ. ನಾನಂತೂ ಮೈಸೂರು ಬಿತ್ತನೆ ವಲಯದಲ್ಲಿ ಯಾವುದೇ ಅಧಿಕಾರಿ ವಿದೇಶದಿಂದ ಅನುಭವವನ್ನು ಪಡೆದುಕೊಂಡು ಬಂದಂಥ ಅಧಿಕಾರಿ ವಿದೇಶದಿಂದ ತಾಂತ್ರಿಕ ಜ್ಞಾನವನ್ನು ವೃದ್ಧಿ ಮಾಡಿಕೊಂಡು ಬಂದಂಥ ಅಧಿಕಾರಿ ತನ್ನ ಅನುಭವವನ್ನು, ತನ್ನ ತಾಂತ್ರಿಕ ಜ್ಞಾನವನ್ನು ರೈತರಿಗೆ ಅದನ್ನು ಸಮಾಲೋಚನೆ ಮಾಡುವ ಕೆಲಸ ಅಥವಾ ಅವನ ಜ್ಞಾನವನ್ನು ಅವರಿಗೆ ತಿಳಿಸುವ ಕೆಲಸವನ್ನು ಖಂಡಿತವಾಗಿಯೂ ಮಾಡಲಿಲ್ಲ. ಇದು ಏನಾಗಿದೆ ಎಂದರೆ ಫಾರೀನ್‌ಗೆ ಹೋಗಿ ಅವರ ಒಂದು ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಅದರಿಂದ ದಯಮಾಡಿ ಮಾನ್ಯ ಸಚಿವರು ನೀವು ಯಾವ ಅಧಿಕಾರಿಯನ್ನು ವಿದೇಶಕ್ಕೆ ಕಳುಹಿಸುತ್ತೀರಿ, ಅಲ್ಲಿಯ ತಾಂತ್ರಿಕ ಜ್ಞಾನವನ್ನು ತಿಳಿದುಕೊಂಡು ಬಂದು ಅದನ್ನು ಇಲ್ಲಿ ಅಳವಡಿಸಿ ರೈತರಿಗೆ ಈ ರೇಷ್ಮೆ ಕೃಷಿಗೆ ಅನುಕೂಲವಾಗುವ ಹಾಗೆ ಯಾವ ಅಧಿಕಾರಿ ಆ ಬಗ್ಗೆ ಚಿಂತನೆಯನ್ನು ಇಟ್ಟಿದ್ದಾರೆ, ಅಂಥವರನ್ನಾದರೂ ಕಳುಹಿಸಿ, ಅನುಕೂಲವಾಗುತ್ತದೆ. ನೀವು ಹೆಚ್ಚಿನ ರೀತಿಯಲ್ಲಿ ಕೆಲವು ರೈತರನ್ನು ಕಳುಹಿಸುವ ಕಾರ್ಯಕ್ರಮವನ್ನು ಮಾಡಬಹುದು. ಇದರಿಂದ ಏನಾಗುತ್ತದೆ ಎಂದರೆ ಈ ಅಧಿಕಾರಿಗಳನ್ನು ಕಳುಹಿಸಿ ಅವನ ಮೂಲಕ ಇದನ್ನು ಮಾಡುವುದರ ಬದಲು ನೀವು ಒಬ್ಬ ಅಧಿಕಾರಿಯನ್ನು ಕಳುಹಿಸುವ ಬದಲು ಹತ್ತು ಜನ ರೈತರನ್ನು ಕಳುಹಿಸಿ. ಪ್ರಗತಿಪರ ರೈತರನ್ನು ಕಳುಹಿಸಿ. ಯಾವ ರೈತ ಈ ಕೃಷಿಯ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಇಟ್ಟುಕೊಂಡಿದ್ದಾನೆ, ಹೆಚ್ಚಿನ ಚಿಂತನೆಯನ್ನು ಮಾಡುತ್ತಾನೆ, ಯಾರಿಗೆ ಜ್ಞಾನವನ್ನು

ತಿಳಿದುಕೊಳ್ಳಬೇಕು ಎನ್ನುವ ಆಸಕ್ತಿ ಇದೆ, ಅಂಥವರನ್ನು ನೀವು ವಿದೇಶಕ್ಕೆ ಕಳುಹಿಸಿ. ನೀವು ಚೈನಾಗೆ ಕಳುಹಿಸಬಹುದು. ಅಥವಾ ಜಪಾನ್‌ಗೆ ಕಳುಹಿಸಬಹುದು. ಆದರೆ ಅದರಿಂದ ರೈತರಿಗೆ ನೇರವಾಗಿ ಅನುಕೂಲವಾಗುವ ಕೆಲಸ ಕೂಡ ಆಗುತ್ತದೆ. ಅದರಿಂದ ದಯಮಾಡಿ ಅಧಿಕಾರಿಗಳನ್ನು ಸುಮ್ಮನೆ ವಿದೇಶಕ್ಕೆ ಕಳುಹಿಸುವುದು ಅವನು ಇಲ್ಲಿ ಬಂದು ಒಂದು ಪೈಸೆ ಕೆಲಸ ಮಾಡದಿದ್ದರೂ ಪ್ರಯೋಜನವಾಗುವುದಿಲ್ಲ.

1.50 ಪಿ.ಎಂ

ಎಂಸಿಆರ್‌ಸಿಗಳು ಎಂದು ನಮ್ಮಲ್ಲಿ ಕಟ್ಟಿದ್ದಾರೆ. Modern Chaki Reeling Centres ಎಂದು ಹೇಳಿ ಅದಕ್ಕೆ ಐದೂ ಆರು ಲಕ್ಷ ಹಣ ಖರ್ಚುಮಾಡಿ ಒಂದೊಂದು ಸೆಂಟರನ್ನು ತಾವು ಮಾಡಿದ್ದೀರಿ. ಯಾವುದಾದರೂ ಒಂದೇ ಒಂದು ಚಾಕಿಸೆಂಟರ್ ಕೆಲಸ ಮಾಡುತ್ತಿದೆಯೇ? ನನ್ನಕ್ಷೇತ್ರದಲ್ಲೇ 15-16 ಸೆಂಟರ್ಸ್ ಇವೆ. ಒಂದೂ ಕೆಲಸ ಮಾಡುತ್ತಿಲ್ಲ, ಒಬ್ಬ ಅಧಿಕಾರಿಯನ್ನೂ ನೀವು ಅಲ್ಲಿ ಹಾಕಲಿಲ್ಲ, ಒಂದು ತೋಟವನ್ನೂ ಬೆಳೆಸಲಿಲ್ಲ ಸುಮ್ಮನೆ ಕಟ್ಟಡಗಳನ್ನು ವಿಶ್ವಬ್ಯಾಂಕಿನಿಂದ ನೆರವು ಬಂತು ಎಂದು ಕಟ್ಟಿದ್ದಾರೆ. ನಾವು ಆ ಭಾಗದಲ್ಲಿ ಹೋದಾಗ ಆ ಕಟ್ಟಡದ ಮುಂದೆ ಹೋದಾಗ ನಿಜವಾಗಿಯೂ ನಮ್ಮ ಮನಸ್ಸಿಗೆ ನೋವಾಗುತ್ತದೆ. ಇಷ್ಟು ಹಣ ಖರ್ಚುಮಾಡಿ ಅದು ರೈತನಿಗೆ ಅನುಕೂಲವಾಗುವಂತಹ ಪರಿಸ್ಥಿತಿ ನಿರ್ಮಾಣ ಮಾಡದೆ ಹೋದರೆ ಪ್ರಯೋಜನ ಏನು ಬಂತು? ನಾನು ಅಧಿಕಾರಿಗಳನ್ನು ಕೇಳಿದೆ, ಏನ್ರೀ ಇದು ಸುಮ್ಮನೆ ಕಟ್ಟಡ ಕಟ್ಟಿದ್ದೀರಿ. ಒಂದು ಪೈಸೆ ಪ್ರಯೋಜನ ಆಗುತ್ತಿಲ್ಲ ರೈತರಿಗೆ ಅಂದರೆ ಅವರು ಯಾವ್ಯಾವುದೋ ಕಾರಣಗಳನ್ನು ಹೇಳುತ್ತಾರೆ ಕೆಇಬಿಯವರು ನಮಗೆ ಕನೆಕ್ಷನ್ ಕೊಡಲಿಲ್ಲ ಎಂದು ಹೇಳುತ್ತಾರೆ. ಒಂದೇ ಒಂದು ಎಂಸಿಆರ್‌ಸಿಗಳೂ ಅಭಿವೃದ್ಧಿಯಾಗಿಲ್ಲ. ಸಚಿವರು ಇದರ ಬಗ್ಗೆ ದಯಮಾಡಿ ಸ್ಪಷ್ಟವಾದ ಚಿತ್ರ ಕೊಡಬೇಕು. ಅವು ಆಕ್ಟೀವಾಗಿ ಕೆಲಸ ಮಾಡದೇಹೋದರೆ ಸರ್ಕಾರದಿಂದ ಈ ಹಣವೆಲ್ಲಾ ಖಂಡಿತವಾಗಿ ದುರುಪಯೋಗವಾಗಿದೆ ಎಂದು ಹೇಳಬೇಕಾಗುತ್ತದೆ. ಯಾವ ಯೋಜನೆ ರೈತನಿಗೆ ಉಪಯೋಗ ತರುವುದಿಲ್ಲ ಅದರಿಂದ ಹಣ ದುರುಪಯೋಗವಾದಂತೆ. You kindly see that this Modern Chaki Reeling Centres are activated and they are useful to the farmers. ಆಮೇಲೆ ರೇಷ್ಮೆ ಕೃಷಿ. ಇದೊಂದು ಬಹಳ ಅಮೂಲ್ಯವಾದ ಕೃಷಿ. ಇದರ ಬಗ್ಗೆ ಮಾನ್ಯ ವರದೇಗೌಡರು ಮತ್ತು ಹಿರಿಯ ಸಚಿವರಾದ ಬೈರೇಗೌಡರು ಹೆಚ್ಚಿನ ಆಸಕ್ತಿ ವಹಿಸಿ ಈ ರಾಜ್ಯದಲ್ಲಿ ರೇಷ್ಮೆಕೃಷಿಯನ್ನು ಉಳಿಸುವಂತಹ ಕೆಲಸ ನೀವು ಮಾಡಬೇಕು. ಉಳಿಸುವಂತಹ ಕೆಲಸ I am telling that word ಏಕೆಂದರೆ ಆ ವಿದ್ಯೆ ನಶಿಸಿಹೋಗುತ್ತಿದೆ ಇದಕ್ಕೆ ವಿದೇಶವನ್ನು ನಂಬಿಕೊಳ್ಳುವಂತಹ ಕೆಲಸವಾಗುತ್ತದೆ. ವಿದೇಶವನ್ನು ನಂಬಿಕೊಳ್ಳುವುದಕ್ಕೆ ನನ್ನದೇನೂ ತಕರಾರಿಲ್ಲ ಆದರೆ, you are depending upon the foreign countries at the cost of the poor farmers here. ಆದ್ದರಿಂದ

ಯಾವ ರೈತ ಆ ಕೃಷಿಯನ್ನು ಅವಲಂಬಿಸಿಕೊಂಡು ಜೀವನ ಮಾಡುತ್ತಿದ್ದಾನೆ ಯಾವ ರೈತನ ಬಾಳು ಹಸನಾಗಬಹುದು ಎಂಬ ನಂಬಿಕೆ ಇಟ್ಟುಕೊಂಡಿದ್ದೇವೆ. ಅದು ಹಾಳಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ತಾವು ಹೊರಬೇಕು. ಇನ್ನು ನೀರಾವರಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ರೇಷ್ಮೆ ಬೆಳೆಯತಕ್ಕಂತಹ ರೈತರಲ್ಲಿ ನಮ್ಮೆಲ್ಲರಿಗೂ ಗೊತ್ತಿರುವಂತೆ ಬಹಳ ಕಾಯಿಲೆ ಬರುತ್ತದೆ. ಕನಿಷ್ಠ ಸರ್ಕಾರ ಮಧ್ಯೆಪ್ರವೇಶ ಮಾಡಿ ವಿಮಾ ಯೋಜನೆಯನ್ನು ಪರಿಚಯಿಸಿದರೆ, ತಾವೂ 50 ಪರ್ಸೆಂಟ್ ಹಣ ಕೊಡುವುದು ಸಬ್ಸಿಡಿ ರೂಪದಲ್ಲಿ ಕೊಟ್ಟರೆ ವಿಮಾ ಯೋಜನೆ ಮಾಡಿಕೊಳ್ಳುತ್ತಾರೆ. ಏಕೆಂದರೆ ಎಷ್ಟೇ ಭಾಷಣ ಮಾಡಿದರೂ ನೀವು ವೈಜ್ಞಾನಿಕ ಬೆಲೆ ಚಿಂತನೆ ಬಗ್ಗೆ ಏನೂ ಮಾತನಾಡುವುದಿಲ್ಲ. ಮಾರ್ಕೆಟ್ ವ್ಯವಸ್ಥೆಯಲ್ಲಾಗುವ ಅನ್ಯಾಯವನ್ನು ಸರಿ ಮಾಡಬೇಕು. ತಾವು ದಯವಿಟ್ಟು ಎಲ್ಲಾ ಕಡೆ ಪ್ರಯಾಣ ಮಾಡಬೇಕು. ಮಾರ್ಕೆಟ್‌ನಲ್ಲಿ ಚೆಕ್ ಕೊಟ್ಟರೆ ನೀವು ಬ್ಯಾಂಕಿನಲ್ಲಿ ಕ್ಯಾಷ್ ಇಲ್ಲದಿದ್ದಂತೆ ಒಂದು ಎರಡು ಪರ್ಸೆಂಟ್ ಚೆಕ್ ಕೊಟ್ಟುಬಿಟ್ಟು ದುಡ್ಡು ತೆಗೆದುಕೊಳ್ಳುವಂತಹ ಪರಿಸ್ಥಿತಿ ಇದೆ. ಇಡೀ ಮಾರ್ಕೆಟ್ ವ್ಯವಸ್ಥೆಯೇ ಅಸ್ತವ್ಯಸ್ತವಾಗಿದೆ. ಇಡೀ ಕೃಷಿಕ್ಷೇತ್ರದಲ್ಲಿ ಅತ್ಯಂತ ಕ್ಲಿಷ್ಟ ಕಷ್ಟವಾದಂಥ ಬೆಳೆ, ರೇಷ್ಮೆಬೆಳೆ. ಅಂತಹ ರೇಷ್ಮೆ ಬೆಳೆಗಾರರ ಆರೋಗ್ಯದ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಂತ್ರಿಗಳು ಅತ್ಯಂತ ಜವಾಬ್ದಾರಿಯಿಂದ ನಿರ್ವಹಣೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ವಿ.ಮುದ್ದಹನುಮೇಗೌಡ: ಹೇಮಾವತಿ ತುಮಕೂರು ವಲಯದಲ್ಲಿ ಇವತ್ತು ಕಾಮಗಾರಿಗಳು ನಡೆಯುತ್ತಿವೆ. ನೀರಾವರಿ ಸಚಿವರು ನಮ್ಮ ಜನತೆಗೆ ಒಂದು ಆಶ್ವಾಸನೆ ನೀಡಿದ್ದಾರೆ. 1998ನೇ ಇಸವಿಗೆ ನಾವು ಕುಣಿಗಲ್ ಕೆರೆಗೆ ನೀರು ಕೊಡುತ್ತೇವೆ ಎಂದು ನೀವೇನು ಮಾತುಕೊಟ್ಟದ್ದೀರಿ ಅದರಂತೆ ನೀವು ನಡೆಯುತ್ತೀರಿ ಎಂಬ ನಂಬಿಕೆಯಿಂದ ಒಂದು ವಿಷಯ ನಾನು ಹೇಳುತ್ತೇನೆ. ಮೂಲ ಯೋಜನೆಯಲ್ಲಿ 240ನೇ ಕಿ.ಮೀವರೆಗೆ ನೀವು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಉದ್ದೇಶ ಇದೆ. ಈಗ 187ನೇ ಕಿ.ಮೀವರೆಗೆ ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದೀರಿ ಅಥವಾ ಅದಕ್ಕೆ ಪ್ರಯತ್ನ ನಡೆಸಿದ್ದೀರಿ. ನಾವು ಅಂತ್ಯದಲ್ಲಿ ಬರುವವರು ಅಲ್ಲಿಗೆ ನೀರು ಕೊಡುತ್ತೇವೆ ಎಂದು ನೀವು ಹೇಳುತ್ತೀರಿ. ಅದೇರೀತಿ ನೀವು ಮೇಲೆ ಏತನೀರಾವರಿಗಳನ್ನು ಮಂಜೂರು ಮಾಡುವುದೇ ಆದರೆ ಯಾವುದೇ ತಾಲ್ಲೂಕಿನಲ್ಲಿ ಇರಬಹುದು ಮೇಲೆ ಯಾರೇ ಕೇಳಿದರೂ ಅವರಿಗೆ ಡೀವಿಯೇಟ್ ಮಾಡಿ ನೀರು ಕೊಡುವ ಪ್ರಯತ್ನ ನಡೆಸಿದರೆ: 240ನೇ ಕಿಮೀವರೆಗೆ ನೀರು ತರಬೇಕೆಂಬ ಮೂಲ ಯೋಜನೆ ಏನು ಹಾಕಿಕೊಂಡಿದ್ದೀರಿ ಅದು it becomes defunct. ಆ ಯೋಜನೆಗೆ ಅರ್ಥಗರ್ಭಿತವೇ ಇಲ್ಲ. ಆದ್ದರಿಂದ ಇದರ ಬಗ್ಗೆ ನೀರಾವರಿ ಸಚಿವರು ಚಿಂತನೆ ಮಾಡಬೇಕು. ಮೂಲ ಯೋಜನೆಯೆಂದು ನೀವು ಹಾಕಿಕೊಳ್ಳುತ್ತೀರಿ, ಎಲ್ಲೆಲ್ಲಿಗೆ ನೀರು

ಕೊಡಬೇಕೆಂದು. ನನ್ನ ಕ್ಷೇತ್ರದಲ್ಲಿ ಅನೇಕ ಭಾಗದಲ್ಲಿ ನೀರು ಬರುವುದಿಲ್ಲ. ಎಲ್ಲಿಗೆ ನೀರು ಕೊಡಬೇಕೆಂದು ನೀವು ಯೋಜನೆಯಲ್ಲಿ ತೋರಿಸಿದ್ದೀರಿ ಅಲ್ಲಿಗೆ ನೀರು ಕೊಡದೇ ಹೋದರೆ, ಏನು ಪ್ರಯೋಜನ? ಹಾಸನ ಜಿಲ್ಲೆಯಲ್ಲಿ ಏತನೀರಾವರಿ ಮೇಲೆ ಏತನೀರಾವರಿಗಳು ಮಂಜೂರಾಗಿ ಬಿಟ್ಟವು. 240ನೇ ಕಿಮೀಗೆ ಯೋಜನೆ ತಯಾರು ಮಾಡಿದ ಮೇಲೆ ಒಂದು ಸಾರಿ ಅದನ್ನು ಅಪ್ರೂವ್ ಮಾಡಿದ ಮೇಲೆ, how can you go on sanctioning the lift irrigation scheme? cannot do so. ನೀವು ಅಲ್ಲಿ ಹೇಳಬೇಕು. ನೀರು ಬರುತ್ತದೆ ಎಂದು ಇಲ್ಲಿ ಆಸೆಯನ್ನು ತೋರಿಸುತ್ತೀರಿ. At the same time, you lift the water from the main canal. ಆದ್ದರಿಂದ ಮೂಲಯೋಜನೆಗೆ ಧಕ್ಕೆ ಬರುವ ಕೆಲಸವನ್ನು ನೀವು ಮಾಡಕೂಡದು. ಯಾವುದೇ ರಾಜಕಾರಣದ ಒತ್ತಡ ಇದ್ದರೂ ನನಗೆ ಗೊತ್ತಿದೆ ಆ ಒತ್ತಡಕ್ಕೆ ಮಣಿಯದೆ ನೀವು 240ನೇ ಕಿ.ಮೀವರೆಗೆ ನೀರು ಕೊಡುವ ಕೆಲಸ ಮಾಡಬೇಕಾಗುತ್ತದೆ. 1998ನೇ ಇಸವಿಗೆ 187ನೇ ಕಿಮೀ ಕಾಮಗಾರಿಗಳನ್ನು ಮುಗಿಸಿ ಕುಣಿಗಲ್ ಕೆರೆಗೆ ನೀರು ಕೊಡುತ್ತೇವೆ ಎಂದು ಹೇಳಿದ್ದೀರಿ. ಅದೇರೀತಿ ನೀವು ಕೊಟ್ಟರೆ ಖಂಡಿತವಾಗಿ ನಾನು ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಈ ದಿಸೆಯಲ್ಲಿ ನೀವೇನಾದರೂ ತಪ್ಪಿದರೆ ಕುಣಿಗಲ್ ನೀರು ಕೊಡದೇಹೋದರೆ ಅದರ ವಿರುದ್ಧ ಉಗ್ರ ಹೋರಾಟ ನಾವು ನಡೆಸಬೇಕಾಗುತ್ತದೆ.

ಅಧ್ಯಕ್ಷರೇ ನೀರಾವರಿ ಸಚಿವರ ಗಮನಕ್ಕೆ ಒಂದು ವಿಷಯ ತರಲಿಚ್ಛಿಸುತ್ತೇನೆ. ಇತ್ತೀಚಿನ ಕೆಲವು ಗೊಂದಲಮಯ ವಾತಾವರಣದಿಂದ, I do not want to specify and mention what are those complications. But, however, the work which was being under progress is not in the same speed. ಸಾಕಷ್ಟು ವಿಷಯಗಳನ್ನು ಸದನದಲ್ಲೂ ನಾವು ಚರ್ಚೆ ಮಾಡಿದ್ದೇವೆ. ಆದರೆ ಕಾಮಗಾರಿಗಳು ಯಾವ ವೇಗದಲ್ಲಿ ನಡೆಯುತ್ತಿದ್ದವು ಅದು ನಡೆಯುತ್ತಾ ಇಲ್ಲ. 124 ಕಿ.ಮೀ. ನಂತರ ಕಾಮಗಾರಿಗಳೇನಿವೆ ಅದೇ ಸ್ಪೀಡ್‌ನಲ್ಲಿ ನಡೆಯುತ್ತಿದೆ ಎನ್ನುವುದನ್ನು ನಾನು ಒಪ್ಪಲು ತಯಾರಿಲ್ಲ. If you want to stick on to your words that you are going to give water to Kunigal tank by the end of 1998, you cannot do so, if you work in the same speed. ಆದ್ದರಿಂದ ಈ ಕಾಮಗಾರಿಗಳನ್ನು ಬಹಳ ತೀವ್ರವಾಗಿ ಶೀಘ್ರವಾಗಿ ಮಾಡತಕ್ಕ ಕೆಲಸ ತಾವು ಮಾಡಬೇಕೆಂದು ಹೇಳುತ್ತಾ 1998ನೇ ಇಸವಿಗೆ ಕುಣಿಗಲ್ ಕೆರೆಗೆ ನೀರು ತಂದುಬಿಡುವಂತಹ ಜವಾಬ್ದಾರಿಯುತ ಹೇಳಿಕೆ ಏನು ಕೊಟ್ಟಿದ್ದೀರಿ ಅದರ ಪ್ರಕಾರ ತಾವು ನಡೆಯಬೇಕೆಂದೂ ಅದಕ್ಕೆ ತಮಗೆ ಯಶಸ್ಸು ಸಿಗಲಿ ಎಂದು ಹೇಳುತ್ತಾ, ಅಧ್ಯಕ್ಷರೇ ನನಗೆ ತಿಳಿದಿರುವ ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕೋಸ್ಕರ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

(ಅಧ್ಯಕ್ಷರು: ಈಗ ಸದನವು ಮುಂದೂಡಿ ಪುನಃ 3 ಗಂಟೆಗೆ ಸಮಾವೇಶಗೊಳಿಸುವುದು.)

(ಸದನವು 1 ಗಂಟೆ 59 ನಿಮಿಷಕ್ಕೆ ಮುಂದೂಡಲ್ಪಟ್ಟಿತು ಮತ್ತೆ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು)

ಸಭಾಧ್ಯಕ್ಷರು (ಶ್ರೀ ರಮೇಶ್ ಕುಮಾರ್)ರವರು ಅಧ್ಯಕ್ಷರ ಪೀಠವನ್ನಲಂಕರಿಸಿದರು.

+ ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ ವಿಧಾನಸಭಾ): ಸನ್ಮಾನ್ಯ ಅಧ್ಯಕ್ಷರೇ, ಇವೊತ್ತು ಸುಮಾರು 46 ಇಲಾಖೆಗಳ ಬೇಡಿಕೆಯನ್ನು ಇಟ್ಟಿದ್ದರೂ ಕೂಡ ನಮ್ಮ ಅನೇಕ ಸ್ನೇಹಿತರು ಮಾಡಿದ ಹಾಗೆ ನಾನೂ ಕೂಡ ಕೇವಲ ಎರಡು ಇಲಾಖೆಗಳ ಬಗ್ಗೆ ಮಾತನಾಡಲು ಇಚ್ಛಿಪಡುತ್ತೇನೆ. ಇವೊತ್ತು ರಾಜ್ಯದ ಆಡಳಿತ ಹೇಗಿದೆಯೆಂದರೆ ಬೆಂಗಳೂರು ನಗರ ನೋಡಿದರೆ ಸಾಕು. ಬೆಂಗಳೂರು ನಗರ ಎಲ್ಲಾ ರೀತಿಯಿಂದ ರಾಜ್ಯದ ಆಡಳಿತಕ್ಕೆ ಒಂದು ಕನ್ನಡಿ ಇದ್ದಹಾಗೆ. ಯಾವ ರೀತಿ ದೀಪದ ಕೆಳಗೆ ಕತ್ತಲು ಎಂದು ಹೇಳುತ್ತೇವೆಯೋ ಅದೇ ರೀತಿ ನಮ್ಮ ರಾಜಧಾನಿ. ಇವೊತ್ತು ಬೆಂಗಳೂರು ರಾಜ್ಯದ ಕೇಂದ್ರ ಸ್ಥಾನವಾಗಿದ್ದರೂ ಕೂಡ ಒಂದು ರೀತಿಯಲ್ಲಿ ಅರಾಜಕತೆ ತಾಂಡವವಾಡುತ್ತಿದೆ ಎಂದರೆ ತಪ್ಪಾಗಲಾರದು. ಸಾಮಾನ್ಯವಾಗಿ ಅನೇಕ ಜನ ಸದಸ್ಯರು ಗ್ರಾಮೀಣ ಭಾಗದಿಂದ ಬಂದವರು ಕೃಷಿ ಬಗ್ಗೆ, ನೀರಾವರಿ ಬಗ್ಗೆ ಮಾತನಾಡುತ್ತಾರೆ. ಅದೇ ಸಮಯದಲ್ಲಿ ಇವೊತ್ತು....

ಅಧ್ಯಕ್ಷರು: ಪತ್ರಿಕೆಯವರಿಗೆ ನಾನು ವಿನಂತಿಸಿಕೊಳ್ಳುವುದೇನೆಂದರೆ ನಿನ್ನೆಯ ದಿವಸ ಸಭೆ ರಾತ್ರಿ ಬಹಳ ಹೊತ್ತು ಚರ್ಚೆ ನಡೆಯಿತು. ಆದರೆ ತಾವೆಲ್ಲರೂ ಹೊರಟುಹೋಗಿದ್ದಿರಿ. ಕೆಲವು ಸದಸ್ಯರು ಬಹಳ ಮಹತ್ವವಾದ ಮತ್ತು ಪ್ರಮುಖವಾದ ವಿಚಾರಗಳನ್ನು ಆ ಸಮಯದಲ್ಲಿ ಪ್ರಸ್ತಾವ ಮಾಡಿದ್ದಾರೆ. ಅದನ್ನೆಲ್ಲಾ ತಮಗೆ ಕಳುಹಿಸಿಕೊಡುತ್ತೇನೆ. ಆ ಸದಸ್ಯರೆಲ್ಲರೂ ಹೊಸಬರಾಗಿದ್ದು ಅವರಿಗೆ ತಾವು ಸ್ವಲ್ಪ ಪ್ರಾದಾನ್ಯತೆಯನ್ನು ಕೊಟ್ಟರೆ ಆ ಸದಸ್ಯರಿಗೆ ಪ್ರೋತ್ಸಾಹ ಕೊಟ್ಟಹಾಗೆ ಆಗುತ್ತದೆ. ಇನ್ನು ಇಂದೂ ಕೂಡ ರಾತ್ರಿ ಹೆಚ್ಚು ಹೊತ್ತು ಕುಳಿತುಕೊಳ್ಳಬೇಕಾಗುತ್ತದೆ. ಊಟದ ವ್ಯವಸ್ಥೆಯನ್ನು ನಮ್ಮ ಜೊತೆ ನಿಮಗೂ ಏರ್ಪಾಡು ಮಾಡಲಾಗಿದೆ. ಆದುದರಿಂದ ಪ್ರಮುಖ ಪತ್ರಿಕೆಗಳವರು ಏನಾದರೂ ಶಿಫ್ಟ್ ವ್ಯವಸ್ಥೆ ಮಾಡಿಕೊಳ್ಳುವುದಿದ್ದರೆ ಅದನ್ನು ಮಾಡಿಕೊಂಡು ನಮ್ಮ ಜೊತೆ ಸಹಕರಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್: ಸನ್ಮಾನ್ಯ ಅಧ್ಯಕ್ಷರೇ, ಈ ನಗರಗಳ ಬಗ್ಗೆ ಒಂದು ಹೇಳಿಕೆಯನ್ನು ಇತ್ತೀಚೆಗೆ ಓದಿದೆ. "Cities - their needs, their future, their financing, these are the great unspoken, overlooked,

underplayed problems of our times" ಎಂದು ಹೇಳಿದ್ದಾರೆ. ನಗರದ ಬಗ್ಗೆ ಸಮಸ್ಯೆಗಳನ್ನು ಬಹಳ ಮೇಲೆ ಸೊಫೆಸ್ಟಿಕೇಟೆಡ್ ಲೆವೆಲ್‌ನಲ್ಲಿ ನಾವು ಮಾತನಾಡಿಬಿಡುತ್ತೇವೆ. ಆದರೆ ನಮ್ಮದೇ ಆದ ಕೃತ್ಯಗಳಿಂದ ಇಷ್ಟೊಂದು ಅರ್ಬನೈಸೇಷನ್ ಆಗುತ್ತಿರುವಾಗ ಈಗ ನಮ್ಮ ರಾಜ್ಯದ ಶೇಕಡ 26ರಿಂದ 28ರಷ್ಟು ಅರ್ಬನ್ ಪಾಪ್ಯುಲೇಷನ್ ಜಾಸ್ತಿಯಾಗಿರುವಾಗ ನಾವು ಇದರ ಬಗ್ಗೆ ಹೆಚ್ಚು ಮಹತ್ವ ಕೊಡಬೇಕಾಗಿದೆ. ಬೆಂಗಳೂರು ನಗರವನ್ನೇ ತೆಗೆದುಕೊಂಡರೆ ಮಹಾನಗರಪಾಲಿಕೆ, ಅಭಿವೃದ್ಧಿ ಪ್ರಾಧಿಕಾರ, ಯೋಜನಾ ಪ್ರಾಧಿಕಾರ, ಜಲಮಂಡಳಿ, ಕೊಳಚೆ ನಿರ್ಮೂಲನಾ ಮಂಡಳಿ ಹೀಗೆ ಹತ್ತಾರು ಇಲಾಖೆಗಳಿವೆ. ಇದನ್ನೆಲ್ಲಾ ಒಟ್ಟುಗೂಡಿಸಿ ಒಂದು ಅಂಬ್ರೆಲ್ಲಾ ಆರ್ಗನೈಸೇಷನ್ ರೀತಿಯಲ್ಲಿ ಇದುವರೆಗೂ ಮಾಡುವುದಕ್ಕೆ ಆಗಲಿಲ್ಲ. ಜನರು ಪ್ರತಿಯೊಂದಕ್ಕೂ ಕೂಡ ಒಂದೊಂದು ಕಡೆ ಒಂದೊಂದು ಸಮಸ್ಯೆಯನ್ನು ತೆಗೆದುಕೊಂಡು ಹೋಗಬೇಕಾಗಿದೆ. ಇವೊತ್ತು ಬೆಂಗಳೂರು ಯಾವ ಪರಿಸ್ಥಿತಿಗೆ ಬಂದಿದೆಯೆಂದರೆ ಯಾವುದೇ ಸಮಸ್ಯೆಗಳಿಗೆ ಪರಿಹಾರ ಇದೆಯೇ ಎಂದು ಭಯ ಆಗುತ್ತಿದೆ. ಅದಕ್ಕೆ ಸಂಬಂಧಪಟ್ಟಂತೆ ನಗರದ ಬಗ್ಗೆ ಮೊನ್ನೆ ನಾನೊಂದು ಹಾಸ್ಯ ಪ್ರಸಂಗವನ್ನು ಕೇಳಿದೆ. ಮೊನ್ನೆ ದೆಹಲಿಯಲ್ಲಿ ಮೇಯರ್ಸ್ ಕಾನ್‌ಫರೆನ್ಸ್ ನಡೆಯಿತು. ಅದರಲ್ಲಿ ಬೆಂಗಳೂರು ಮೇಯರ್, ಮುಂಬೈ ಮೇಯರ್ ಮತ್ತು ಸೂರತ್ ಮೇಯರ್‌ಗಳು ಭಾಗವಹಿಸಿದ್ದರು. ಇವರೆಲ್ಲರೂ ಮಹಿಳೆಯರು. ಇವರೆಲ್ಲರೂ ಕಷ್ಟಸುಖಗಳ ಬಗ್ಗೆ ಮಾತನಾಡಿಕೊಳ್ಳುತ್ತಿದ್ದಾಗ ಒಂದು ನ್ಯೂಸ್ ಬಂತು, ಅದೇನೆಂದರೆ ಹೋಟೆಲ್ ಅಶೋಕಾದಲ್ಲಿ ಕೊಠಡಿ ಸಂಖ್ಯೆ 101ರಲ್ಲಿ ದೇವರು ಬಂದಿದ್ದಾನೆ ಎನ್ನುವ ವಾರ್ತೆ ಬಂತು. ಮೂವರು ಮಹಿಳೆಯರು ಹೋಗಿ ಅಪಾಯಿಂಟ್‌ಮೆಂಟ್ ತೆಗೆದುಕೊಂಡರು. ಮೊದಲು ಸೂರತ್ ಮಹಿಳಾ ಮೇಯರ್ ದೇವರ ಬಳಿ ಹೋಗಿ ತಮ್ಮ ನಗರದಲ್ಲಿ ಒಂದೂವರೆ ವರ್ಷದಿಂದ ಪ್ಲೇಗ್ ಇದೆಯೆಂದು ಅದನ್ನು ನಿವಾರಿಸಲು ತೆಗೆದುಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು, ಆಗ ದೇವರು ಸಮಾಧಾನಗೊಂಡು ಮಾತನಾಡಿ ಇನ್ನು 15ರಿಂದ 20 ವರ್ಷದೊಳಗೆ ಸೂರತ್ ಖೂಬ್‌ಸೂರತ್ ಆಗುತ್ತದೆ ಎಂದು ಹೇಳಿದನಂತೆ, ಆಗ ಆ ಮೇಯರ್ ಬಹಳ ಸಂತೋಷದಿಂದ ಹೊರಕ್ಕೆ ಬಂದರಂತೆ. ಇವರ ನಂತರ ಮುಂಬೈ ಮೇಯರ್ ದೇವರ ಬಳಿ ಹೋಗಿ ಮುಂಬೈ ಸಮಸ್ಯೆಗಳ ಬಗ್ಗೆ ಹೇಳಿದಾಗ ಅದನ್ನು ಕೇಳಿದ ದೇವರು ಮುಂಬೈ ನಿಮ್ಮ ಕಾಲದಲ್ಲಿ ಉದ್ಧಾರವಾಗುವುದಿಲ್ಲವೆಂದಾಗ ಅದನ್ನು ಕೇಳಿ ಗೊಳೋ ಎಂದು ಅಳುತ್ತಾ ಹೊರಗೆ ಬಂದರಂತೆ. ಇವರ ನಂತರ ಬೆಂಗಳೂರಿನ ಮೇಯರ್ ಹೋದ ತಕ್ಷಣ ದೇವರೇ ಗೊಳೋ ಎಂದು ಅಳುವುದಕ್ಕೆ ಪ್ರಾರಂಭ ಮಾಡಿ ಬೆಂಗಳೂರು ನನ್ನ ಲೈಫ್ ಟೈಮ್ ಇರುವವರೆಗೂ ಬೆಂಗಳೂರು ಉದ್ಧಾರವಾಗುವುದಿಲ್ಲ ಎಂದು ಅಳುವುದಕ್ಕೆ ಪ್ರಾರಂಭ ಮಾಡಿದನಂತೆ. ಇವೊತ್ತು ಬೆಂಗಳೂರನ್ನು ನಾವು ಆ ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದೇವೆ. ಯಾವುದೇ ಸಮಸ್ಯೆ ತೆಗೆದುಕೊಂಡರೂ ಕೂಡ ಒಂದಕ್ಕೂ ಪರಿಹಾರ ನಮ್ಮಲ್ಲಿ ಇಲ್ಲ. ಪರಿಹಾರದ ಬದಲು....

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಪರಿಹಾರವೇ ಇಲ್ಲವೆಂದ ಮೇಲೆ ಏತಕ್ಕೆ ಮಾತನಾಡುತ್ತೀರಿ?...

ಶ್ರೀ ಎಸ್.ಸುರೇಶ್‌ಕುಮಾರ್: ಇದು ಹೇಗಾಗಿದೆ ಎಂಬುದನ್ನು ಹೇಳುತ್ತೇನೆ. ತಮಗೇ ಗೊತ್ತಿರುವಂತೆ ಬೆಂಗಳೂರು ಕಾರ್ಪೊರೇಷನ್ ಇಂದು ನಾನಾ ಕಾರಣಗಳಿಗೆ ಸುದ್ಧಿಯಲ್ಲಿದೆ. ಆದರೆ ಅದು ಒಳ್ಳೆಯ ಕಾರಣಗಳಿಗೆ ಸುದ್ಧಿಯಲ್ಲಿಲ್ಲ. ಜನಗಳಿಗೆ ನಿರುತ್ಸಾಹ ಬರುವುದಕ್ಕೆ, ತಿರಸ್ಕಾರ ಬರುವುದಕ್ಕೆ, ಉದಾಸೀನ ಬರುವುದಕ್ಕೆ ಏನೇನು ಬೇಕೋ ಅದೆಲ್ಲಾ ಕಾರಣಗಳು ಇಂದು ಬೆಂಗಳೂರು ಕಾರ್ಪೊರೇಷನ್‌ನಲ್ಲಿದೆ. ಅದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಮೊನ್ನೆ ಬೆಳಿಗ್ಗೆ ಸಿಟಿ ಮಾರ್ಕೆಟ್‌ನ ಒಂದು ಕಾರ್ಯಕ್ರಮ ಆಗಬೇಕಾಗಿತ್ತು. ತಾವೂ ಕೂಡ ಆ ಕಾರ್ಯಕ್ರಮಕ್ಕೆ ಹೋಗಬೇಕಾಗಿತ್ತು. ಆದರ ಹಿನ್ನಲೆ ಬಹಳ ಸ್ವಾರಸ್ಯಕರವಾಗಿದೆ.

ಅಧ್ಯಕ್ಷರು: ನಾನು ತರಕಾರಿ ತರುವುದಕ್ಕೆ ಬರುತ್ತೇನೆ ಎಂದು ಹೇಳಿದ್ದೆ, ಆದರೆ ಅವರು ಕಾರ್ಯಕ್ರಮಕ್ಕೆ ಬರುತ್ತಾರೆ ಎಂದು ಪಾಂಪ್ಲೆಂಟ್‌ನಲ್ಲಿ ಪ್ರಿಂಟ್ ಹಾಕಿಸಿದರೆ ನಾನೇನು ಮಾಡಲಿ ಹೇಳಿ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಈ ಕಟ್ಟಡದ ಶಂಕು ಸ್ಥಾಪನೆ 1985-86ನೇ ಇಸವಿಯಲ್ಲಿ ಆಯಿತು, ಅಂದರೆ ಹತ್ತು ವರ್ಷಗಳ ಹಿಂದೆ ಆಯಿತು. ಅವೊತ್ತು ಆ ಕಾರ್ಯಕ್ರಮಕ್ಕೆ ನಾನೂ ಹೋಗಿದ್ದೆ, ಅಂದು ರಾಮಕೃಷ್ಣಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ಆಗ ಅಲ್ಲಿಯ ಕಾರ್ಪೊರೇಟರ್ ಒಬ್ಬರು ಸ್ವಾಗತ ಭಾಷಣ ಮಾಡಿದರು. ಅವರು ಮಾತನಾಡುತ್ತಾ ಸನ್ಮಾನ್ಯ ಮುಖ್ಯಮಂತ್ರಿಗಳಾದ ರಾಮಕೃಷ್ಣಹೆಗಡೆಯವರಲ್ಲಿ ವಿನಂತಿಸಿಕೊಳ್ಳುತ್ತೇನೆ, ಈ ನೂತನ ಕಟ್ಟಡ ಸಾಧ್ಯವಾದಷ್ಟು ಬೇಗ ನಿರ್ಮಾಮ ಆಗಬೇಕೆಂದು ಹೇಳಿದರು. ಇದನ್ನು 1985-86ರಲ್ಲಿ ಹೇಳಿದ್ದು. ಅಕ್ಷರಶಃ ಕೂಡ ನಗರಪಾಲಿಕೆ ನಿರ್ಮಾಮ ಆ ಸಿಟಿ ಮಾರ್ಕೆಟ್ ಬಿಲ್ಡಿಂಗ್‌ನಲ್ಲಿ ಆಗಿದೆ. ನಾವು ಪ್ರಾಜೆಕ್ಟ್ ಮಾಡಿದ್ದು 6 ಕೋಟಿ ರೂ.ಗಳದ್ದು ಆದರೆ ಖರ್ಚಾಗಿದ್ದು 39 ಕೋಟಿ ರೂ.ಗಳು. 6 ಕೋಟಿ ರೂ.ಗಳೆಲ್ಲಿ 39 ಕೋಟಿ ರೂ.ಗಳೆಲ್ಲಿ, ಇದು ಒಂದು ನಗರಪಾಲಿಕೆಯ ಆಡಳಿತ ವೈಖರಿ. ಇದಕ್ಕಿಂತ ಬಹಳ ಸ್ವಾರಸ್ಯಕರ ಸಂಗತಿಯೆಂದರೆ ಮೊನ್ನೆ ಕಾಪೋರೇಷನ್‌ನವರು ಪೋಡಿಯಂ ಬ್ಲಾಕ್ ಕಟ್ಟಡಕ್ಕೆ ಶಂಕುಸ್ಥಾಪನೆ ಹಾಕಿಸಬೇಕು ಎಂದು ಇದ್ದರು. ಇದು ಒಂದು ಇತಿಹಾಸ. ಈ ಪೋಡಿಯಂ ಬ್ಲಾಕ್‌ನ್ನು ಎರಡು ವರ್ಷದ ಹಿಂದೆ ನಮ್ಮ ಕಾರ್ಪೊರೇಷನ್‌ನಲ್ಲಿ ಈ ಕೆಲಸ ತೆಗೆದುಕೊಳ್ಳಬೇಕು ಎಂದು ಹೇಳಿದರು. ತೆಗೆದುಕೊಳ್ಳಬೇಕು ಎಂದು ಹೇಳಿದ ದಿವಸ ಆ ಕಂಟ್ರಾಕ್ಟರಿಗೆ 1 ಕೋಟಿ 39 ಲಕ್ಷ ರೂಪಾಯಿ ಅಡ್ವಾನ್ಸ್ ಕೊಟ್ಟುಬಿಟ್ಟರು. ಅವನಿಗೆ ವರ್ಕ್ ಆರ್ಡರ್ ಕೊಡಲಿಲ್ಲ. ಸರ್ಕಾರದಿಂದ ಅಪ್ರೂವಲ್ ಆಗಿಲ್ಲ. ಎರಡು ವರ್ಷಗಳ ಹಿಂದೆ 1 ಕೋಟಿ 39 ಲಕ್ಷ ರೂಪಾಯಿಯನ್ನು ಮುಫತ್ತಾಗಿ ಹಣ ಕೊಟ್ಟರು. ಎರಡು ವರ್ಷವಾದಮೇಲೆ

ಈಗ 8-10 ದಿವಸದ ಹಿಂದೆ ನಗರಪಾಲಿಕೆಯಲ್ಲಿ ಆಡಿಟ್‌ನವರು ಒಂದು ಅಬ್ಜೆಕ್ಷನ್ ಹಾಕಿದರು. ಒಂದು ಕೋಟಿ 39 ಲಕ್ಷ ರೂಪಾಯಿ ಕೊಟ್ಟು ಬಿಟ್ಟಿದ್ದಾರೆ, ಹಾಗೆ ಕೊಡುವುದಕ್ಕೆ ಪ್ರಾವಿಷನ್ ಇಲ್ಲ. ಮೇಲಾಗಿ ದುಡ್ಡು ಅವರಿಗೆ ಕೊಟ್ಟಿರುವುದು ಯಾವುದು ಎಂದರೆ ಹುಡ್ಕೋದಿಂದ ನಗರಪಾಲಿಕೆಗೆ ಬಂದ ಲೋನ್. ಯಾವುದೋ ಒಂದು ಬಿಲ್ಡಿಂಗ್ ಕಟ್ಟುವುದಕ್ಕೆ ಬಂದಂತಹ ಹಣ. ಆ ಲೋನ್ ಹಣವನ್ನು ತೆಗೆದುಕೊಂಡು ಇವನಿಗೆ ಒಂದು ಕೋಟಿ 39 ಲಕ್ಷ ರೂಪಾಯಿಗಳನ್ನು ಅಡ್ವಾನ್ಸ್ ಆಗಿ ಕೊಟ್ಟಿದ್ದಾರೆ. ಆಡಿಟ್‌ನವರು ಅಬ್ಜೆಕ್ಷನ್ ಮಾಡಿದಾಗ ಅವನಿಗೆ ಪತ್ರ ಬರೆದು, ದುಡ್ಡು ವಾಪಸ್ಸು ಕೊಡಿ, ನಾವು ಇನ್ನುಮೇಲೆ ಜಾಯಿಂಟ್ ವೆಂಚರ್‌ನಲ್ಲಿ ಮಾಡುತ್ತೇವೆ ಎಂದು ಹೇಳಿದಾಗ, ಇಲ್ಲ ಶಂಕುಸ್ಥಾಪನೆ ಮಾಡಿಸಿಬಿಡುತ್ತೇವೆ ಎಂದು ಹೊರಟಿದ್ದಾರೆ, ಇದು ನಗರಪಾಲಿಕೆಯ ಇನ್ನೊಂದು ಮುಖ. ಹೀಗಿದ್ದಮೇಲೆ ನಗರದ ನಾಗರೀಕರು ಸುಮಾರು 50 ಲಕ್ಷ ಜನ ಇದ್ದಾರೆ. ಅವರಿಗೆ ದೈನಂದಿನ ಸೌಲಭ್ಯಗಳಿಗೆ ಯಾರಾದರೂ ಕೂಡ ಗಮನ ಕೊಡುವುದಕ್ಕೆ ಆಗುತ್ತದೆಯೇ? ನಾನು ಇರುವ ಸೀಮಿತ ಅವಧಿಯಲ್ಲಿ 2-3 ಅಂಶಗಳನ್ನು ಮಾತ್ರ ಹೇಳಬೇಕೆಂದು ಇದ್ದೇನೆ. ಇವತ್ತು ಬೆಂಗಳೂರಿನಲ್ಲಿ ಈ ಅನಧಿಕೃತ ಕಟ್ಟಡಗಳ ಬಗ್ಗೆ ಕೂಡ ತುಂಬಾ ಚರ್ಚೆ ನಡೆಯುತ್ತಿದೆ. ಅನಧಿಕೃತ ಕಟ್ಟಡಗಳನ್ನು ಒಡೆಯಬೇಕು ನನಗೆ ಬಹಳ ಆಶ್ಚರ್ಯ ಎಂದರೆ ಶ್ರೀಮಾನ್ ರೋಷನ್‌ಬೇಗ್‌ರವರು ಕೂಡ ಹಿಂದೆ ನಗರಾಭಿವೃದ್ಧಿ ಉಸ್ತುವಾರಿ ಸಚಿವರಾಗಿದ್ದರು. ಬೆಂಗಳೂರಿನಲ್ಲಿ ಅನಧಿಕೃತ ಕಟ್ಟಡಗಳ ನಿರ್ಮಾಣ ಏಕೆ ಆಗುತ್ತಿದೆ? ಇಂತಹ ಒಂದು ಪ್ರಶ್ನೆ ಇದೆ. ಜನ ಸುಮ್ಮಸುಮ್ಮನೆ ಅನಧಿಕೃತ ಕಟ್ಟಡಗಳನ್ನು ನಿರ್ಮಾಣ ಮಾಡುತ್ತಾರಾ? ನೀವು ಏನು ಬಿಲ್ಡಿಂಗ್ ಬೈಲಾ ಮಾಡಿದ್ದೀರಿ, somewhere it lacks that human touch. ಯಾರನ್ನೂ ಕೇಳಲಿಲ್ಲ, ಬಿಲ್ಡರ್ಸ್‌ನ್ನು ಕೇಳಲಿಲ್ಲ, ಸಿಟಿಜನ್ ಅಸೋಸಿಯೇಷನ್‌ನವರನ್ನು ಕೇಳಲಿಲ್ಲ, ನೀವು ಒಂದು ಬಿಲ್ಡಿಂಗ್ ಬೈಲಾ ಮಾಡಿದ್ದೀರಿ. ನನ್ನ ಮನೆ ಮೇಲುಗಡೆ ಒಂದು ರೂಂ ಕಟ್ಟಿಕೊಳ್ಳುವುದಕ್ಕೆ ನಿಮ್ಮ ಬೈಲಾ ಅಡ್ಡ ಬಂದರೆ ನ್ಯಾಚುರಲಿ ವಯಲೇಷನ್ ಆಗುತ್ತದೆ. ಆ ವಯಲೇಷನ್ ಬೈಲ ನೀವು ಇವತ್ತು ಏನೇನು ಮಾಡುತ್ತಿದ್ದೀರಿ? ನಾನು ಬಹಳ ಮೊದಲಿನಿಂದಲೂ ಒಂದು ಮಾತು ಹೇಳುತ್ತಿದ್ದೇನೆ. ದಯವಿಟ್ಟು ಬಿಲ್ಡಿಂಗ್ ಬೈಲಾನ್ನು ನೀವು ರಿಲ್ಯಾಕ್ಸ್ ಮಾಡಿ. ಹೊಸ ಬಿಲ್ಡಿಂಗ್ ಬೈಲಾ ತೆಗೆದುಕೊಂಡು ಬನ್ನಿ. ಜನರ ಅಗತ್ಯತೆಗೆ ಇವತ್ತು, ಯಾವುದೋ ಒಂದು ಕುಟುಂಬ ಇರುತ್ತದೆ, ಅದು ಸ್ವಲ್ಪ ದೊಡ್ಡದು ಆಗುತ್ತದೆ, ಅವರಿಗೆ ಒಂದು ರೂಂ ಬೇಕಾಗುತ್ತದೆ. ಇನ್ನೊಂದು ಮನೆ ಕೊಡಬೇಕು, ಅದಕ್ಕೆ ಕೂಡ ಕಾನೂನು ಅಡ್ಡಿಯಾದರೆ ನೀವು ವಯಲೇಷನ್ ಎಂದು ಶಿಕ್ಷೆಗೆ ಗುರಿ ಮಾಡುತ್ತೀರಾ? ಇನ್ನಷ್ಟು ಕೇಸುಗಳು ಜಾಸ್ತಿಯಾಗುತ್ತವೆ. ಅದಕ್ಕಿಂತ ಇನ್ನೊಂದು ವಿಚಿತ್ರ ಎಂದರೆ ನೀವು ಕಾಂಪೌಂಡ್‌ಗೆ ಫೀಸ್ ಎಂದು ಹಾಕಿದಿರಿ. ಅದು 25 ಪರ್ಸೆಂಟ್ ಮಾಡಿದ್ದೀರಿ. ನಗರ ಪಾಲಿಕೆಯಲ್ಲಿ ಅನಧಿಕೃತ ಕಟ್ಟಡ ಎಂದು ಯಾರಿಗೆ ಗೊತ್ತಾಗುತ್ತದೆ? ನಾನು ಮತ್ತು ನನ್ನ ಲೋಕಲ್ ಇಂಜಿನಿಯರ್, ಅಡ್ಜೆಸ್ಟ್ ಆಗದೇ ಇದ್ದರೆ ಅವನು ನೋಟೀಸ್ ಕೊಡುತ್ತಾನಲ್ಲಾ ಆಗ

ಅನಧಿಕೃತ ಕಟ್ಟಡ ಎಂದು ಗೊತ್ತಾಗುತ್ತದೆ. ಇಲ್ಲದೇ ಇದ್ದರೆ ನಗರಪಾಲಿಕೆಯವರಿಗೂ ಗೊತ್ತಾಗುವುದಿಲ್ಲ, ಜನರಿಗೂ ಗೊತ್ತಾಗುವುದಿಲ್ಲ. If a good alliance takes place between myself and the Engineer, ಏನೂ ಆಗುವುದಿಲ್ಲ. ಆದರೆ ನೀವು 25 ಪರ್ಸೆಂಟ್‌ವರೆಗೂ ಕಾಂಪೌಂಡ್ ಮಾಡುತ್ತೇವೆಂದು ಹೇಳಿಬಿಟ್ಟು, ನಾನು ಪಕ್ಕದ ಮನೆಯವರಿಗೆ ಗಾಳಿ ಬೆಳಕು ನಿರಾಕರಿಸಿದರೂ ಕೂಡ ನಮಗೆ ಫೈನ್ ಹಾಕಿಬಿಟ್ಟು, ನೀವು ಕಾರ್ಪೊರೇಷನ್ ರೆವಿನ್ಯೂ ಜಾಸ್ತಿ ಮಾಡಿಕೊಳ್ಳಬೇಕೆಂದು ಮಾಡುವುದು, ಯಾವ ಮಟ್ಟಿಗೆ ಇದು ಸಾಧು? ಈ ಸಂದರ್ಭದಲ್ಲಿ ಬೆಂಗಳೂರು ನಗರಪಾಲಿಕೆ ಇರಬಹುದು, ಬೇರೆ ನಗರಪಾಲಿಕೆ ಇರಬಹುದು, ಬಿಲ್ಡಿಂಗ್ ಬೈಲಾಸ್ ಬಗ್ಗೆ ಒಂದು ಪುನರ್ ವಿಮರ್ಶೆ ಮಾಡಬೇಕು. ಮಾನವೀಯತೆ ದೃಷ್ಟಿಯಿಂದ ಮಾಡಬೇಕು. ಆ ರೀತಿ ಒಂದು ಬಿಲ್ಡಿಂಗ್ ಬೈಲಾ ಮಾಡುವಾಗ ನಗರದ ಬಿಲ್ಡರ್ಸ್, ಅಥವಾ ಬೇರೆಬೇರೆ ನಾಗರೀಕರ ವೇದಿಕೆಗಳ ಜೊತೆ ಈ ಒಂದು ಚರ್ಚೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಇವತ್ತು ನಗರಪಾಲಿಕೆ ಬಗ್ಗೆ ಹೇಳುವಾಗ 14- 15 ವರ್ಷಗಳಿಂದ ನಾನು ನೋಡಿದ್ದೇನೆ. 14- 15 ವರ್ಷ ನೋಡಿದಮೇಲೆ ನಾನು ಒಂದು ಸ್ಥಿತಿಗೆ ಬಂದಿದ್ದೇನೆ. Leakage is our national culture. ನಮ್ಮ ಕ್ವೊಶ್ಚನ್ ಪೇಪರ್ ಲೀಕೇಜ್ ಆಗುತ್ತದೆ. ನಿಮ್ಮ ಕ್ಯಾಬಿನೆಟ್ ಸೀಕ್ರೆಟ್ ಲೀಕ್ ಆಗುತ್ತದೆ. ವಾಟರ್ ಪೈಪ್ ಲೀಕ್ ಆಗುತ್ತದೆ. ಭೂಪಾಲ್ ಗ್ಯಾಸ್ ಲೀಕ್ ಆಗುತ್ತದೆ. ಇದು ಒಂದು ತರಹ ಇನ್‌ಬಿಲ್ಟ್ ಆಗಿಬಿಟ್ಟಿದೆ. ಆದರೆ ಇವತ್ತು ಯಾವುದೇ ಸಮಾಜದಲ್ಲಿ ಲೀಕೇಜ್‌ಸ್ ಜಾಸ್ತಿಯಾದಾಗ ಏನಾಗುತ್ತದೆ ಎಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ.

ಶ್ರೀ ಆರ್.ರೋಷನ್‌ಬೇಗ್: ಬಿ.ಜೆ.ಪಿ.ಮೀಟಿಂಗ್ ಕೂಡ ಲೀಕ್ ಆಗಬಹುದು.

ಶ್ರೀ ಎಸ್.ಸುರೇಶ್‌ಕುಮಾರ್: ಆಗಬಹುದು. ಏಕೆ ಈ ವಿಚಾರ ಹೇಳುತ್ತಿದ್ದೇನೆ ಎಂದರೆ ಕೇಂದ್ರದಲ್ಲಿ ವೈ.ಬಿ.ಚವ್ಹಾಣ್ ಹೋಮ್ ಮಿನಿಸ್ಟರ್ ಆಗಿದ್ದರು. ಅವರು ಒಂದು ಬಾರಿ ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗ ಒಬ್ಬರು ಮೇಸ್ಟರು ಬಂದರು. ಅವರು ಬಂದು ಒಂದು ಗಣಿತದ ಲೆಕ್ಕವನ್ನು ಕೊಟ್ಟರು. ಅದೇನೆಂದರೆ ಒಂದು ವಾಟರ್ ಟ್ಯಾಂಕ್, ಆ ಟ್ಯಾಂಕ್ ಕೆಪ್ಯಾಸಿಟಿ 2 ಲಕ್ಷ ಲೀಟರ್ ನೀರು ಹಿಡಿಯುತ್ತದೆ. ಅದಕ್ಕೆ ಒಂದು ಟ್ಯಾಪ್ ಇದೆ. ಆ ಟ್ಯಾಪ್‌ನಿಂದ ಬೀಳುವ ನೀರಿನ ಪ್ರಮಾಣ 1000 ಲೀಟರ್ ಪರ್ ಮಿನಿಟ್. ಆದರೆ ಆ ಟ್ಯಾಂಕ್‌ಗೆ 15 ಕಡೆ ಲೀಕೇಜ್ ಪಾಯಿಂಟ್ ಇದೆ. ಒಂದು ಲೀಕೇಜ್ ಪಾಯಿಂಟ್‌ನಲ್ಲಿ ಇಷ್ಟಿಷ್ಟು ನೀರು ಹೋಗುತ್ತದೆ. ಈ ನೀರಿನ ಟ್ಯಾಂಕ್ ತುಂಬುವುದಕ್ಕೆ ಎಷ್ಟು ಸಮಯ ಬೇಕು ಎಂದು ಕೇಳಿದರು. ಆಗ ಚಿಕ್ಕ ಹುಡುಗ ಯಶವಂತರಾವ ಚವ್ಹಾಣ್ ಎದ್ದು ನಿಂತು, ನನಗೆ ಟ್ಯಾಂಕ್ ಎಷ್ಟು ಗಂಟೆಗೆ ತುಂಬುತ್ತದೆ ಎಂದು ಗೊತ್ತಿಲ್ಲ. ಆದರೆ ಟ್ಯಾಂಕ್ ತುಂಬಿಸಲಿಕ್ಕೆ ಲೀಕೇಜ್ ಪಾಯಿಂಟ್ ಎಲ್ಲಾ ಮುಚ್ಚಬೇಕೆಂದು ನನಗೆ ಗೊತ್ತು ಎಂದು ಹೇಳಿದರು. ನಂತರ ವೈ.ಬಿ.ಚವ್ಹಾಣ್ ಹೇಳುತ್ತಾರೆ, ನಾನು ಮೂರು ಸಾರಿ ಮಹಾರಾಷ್ಟ್ರದ ಮುಖ್ಯಮಂತ್ರಿಯಾದೆ. ಕಳೆದ 10

ವರ್ಷದಿಂದ ಕೇಂದ್ರದಲ್ಲಿ ಸಚಿವನಾಗಿದ್ದೇನೆ. ಈಗ ಹೋಮ್ ಮಿನಿಸ್ಟರ್ ಆಗಿದ್ದೇನೆ. ಆದರೆ ಇಷ್ಟೆಲ್ಲಾ ಇದ್ದರೂ ಕೂಡ ನನಗೆ ಆ ಲೀಕೇಜ್ ಪಾಯಿಂಟ್ ಮುಚ್ಚುವುದಕ್ಕೆ ಆಗಲಿಲ್ಲ. I have failed. But, I have never and I will never interfere with the free flow of the water. ಆದರೆ ಆ ನೀರಿನ ಟ್ಯಾಪ್ ಏನಿದೆ ಅದಕ್ಕೆ ನಾನು ತೊಂದರೆ ಕೊಡುವುದಕ್ಕೆ ಹೋಗುವುದಿಲ್ಲ. ಇವತ್ತು ಕಾರ್ಪೋರೇಷನ್ ಇರಬಹುದು ಎಲ್ಲೇ ಇರಬಹುದು, ಆ ಟ್ಯಾಪ್ ಕಡಿಮೆಯಾಗುತ್ತಿದೆ. ಲೀಕೇಜ್ ಪಾಯಿಂಟ್ ದಿನೇದಿನೇ ಜಾಸ್ತಿಯಾಗುತ್ತಿದೆ. ಆಡಳಿತ ಪಕ್ಷ ಇರಬಹುದು, ನಾವು ಇರಬಹುದು. ನಾವೆಲ್ಲಾ ಯೋಚನೆ ಮಾಡಿಕೊಂಡು, ಈ ನಲ್ಲಿಯ ಸಂಖ್ಯೆ ನೀರು ಬಿಡುವ ಸಂಖ್ಯೆಯನ್ನು ಜಾಸ್ತಿ ಮಾಡುವುದಕ್ಕಾಗುತ್ತದೆಯೇ? ಯೋಚನೆ ಮಾಡಿ. ಇಲ್ಲದೇ ಇದ್ದರೆ ಮುಂಬರುವ ವರ್ಷಗಳಲ್ಲಿ ಇನ್ನೂ ಹದಗೆಡುವ ಪರಿಸ್ಥಿತಿಯಲ್ಲಿ ನಾವು ಬಂದು ತಲುಪುತ್ತೇವೆ. ಇವತ್ತು ನಗರಪಾಲಿಕೆ ಬಗ್ಗೆ ಮಾತನಾಡುತ್ತಾ, ನಗರದ ಆಡಳಿತದ ಬಗ್ಗೆ ಮಾತನಾಡುತ್ತಾ, ಈ ಸಭೆಯಲ್ಲಿ ಅನೇಕ ಸಲ ಬಿ.ಡಿ.ಎ. ಬಗ್ಗೆ ತುಂಬಾ ಮಾತನಾಡಿದ್ದೇನೆ. B.D.A. has become a whipping point. ಬಿ.ಡಿ.ಎ ಅದನ್ನು ಮುಚ್ಚಬೇಕು. ಇದರಿಂದ ಏನೂ ಕೆಲಸವಾಗುತ್ತಾ ಇಲ್ಲ. ಹೀಗೆಲ್ಲಾ ಹೇಳುತ್ತಿದ್ದೇವೆ. ಆದರೆ ಬಿ.ಡಿ.ಎ. ಈ ಸ್ಥಿತಿಗೆ ಬರುವುದಕ್ಕೆ ಕಾರಣರಾರು? ಯಾರು ತಂದು ಈ ಸ್ಥಿತಿಗೆ ತಲುಪಿಸಿದರು. ಒಂದು ವಿಚಾರ ಎಂದರೆ ಯಾವುದೇ ಸರ್ಕಾರ ಏನು ಸಪೋರ್ಟ್ ಮಾಡುತ್ತಿಲ್ಲ. ಅವರು ಏನೋ ಅಕ್ವಿಜಿಷನ್ ಮಾಡಿದ್ದೆಲ್ಲಾ ಡಿ-ನೋಟಿಫೈ ಮಾಡುವುದು. ಅಥವಾ ನಮ್ಮವರಿಗೆ ಸೈಟ್ ಕೊಡಿ ಎಂದು ಹೇಳುವುದು ಇದೆಲ್ಲಾ ಆಗುತ್ತಿದೆ. ನಾವು ಬಿ.ಡಿ.ಎ. ಬಗ್ಗೆ ನಿನ್ನೆ ಮಾತನಾಡಿದೆ. ಬಿ.ಡಿ.ಎ.ಯವರು ಒಂದು ರಿಂಗ್ ರೋಡ್ ತೆಗೆದುಕೊಂಡಿದ್ದಾರೆ, ಆ ಒಂದು ವ್ಯವಸ್ಥೆಗೆ ಪೂರಕವಾಗಿ ಸರ್ಕಾರ ನಿಂತು ಆ ರಿಂಗ್ ರೋಡ್‌ನ್ನು ಕೂಡಲೇ ಮುಗಿಸುವ ದಿಕ್ಕಿನಲ್ಲಿ ನಾವು ಪ್ರಯತ್ನ ಪಡಬೇಕು ಎಂದು ನನ್ನ ಅನಿಸಿಕೆ. ಮಾನ್ಯ ಅಧ್ಯಕ್ಷರೇ, ಈ ಬಿ.ಡಿ.ಎ ನವರು ಲ್ಯಾಂಡ್ ಆಡಿಟಿಂಗ್ ಎನ್ನುವುದನ್ನು ಇದುವರೆಗೂ ಮಾಡಿಲ್ಲ. ಎಷ್ಟು ಲ್ಯಾಂಡ್‌ನ್ನು ಅಕ್ವೈರ್ ಮಾಡಿಕೊಂಡರು, ಎಷ್ಟು ಲೆಔಟ್ ಮಾಡಿದರು. ಅದರಲ್ಲಿ ಎಷ್ಟು ಸೈಟ್ ಆಯಿತು? ಎಷ್ಟು ಜನರಿಗೆ ಸೈಟ್ ಕೊಟ್ಟಿದ್ದಾರೆ? There is no land auditing. ಕೂಡಲೇ ಕಳೆದ 20 ವರ್ಷದ್ದು ಒಂದು ಲ್ಯಾಂಡ್ ಆಡಿಟಿಂಗ್ ಮಾಡಿಸಿದರೆ, ನಮ್ಮ ಅಧಿಕಾರಿಗಳು ಎಷ್ಟು ಜನರಿಗೆ ಅನಧಿಕೃತವಾಗಿ ಕೊಟ್ಟಿದ್ದಾರೆ, ಎಷ್ಟು ನಿಜವಾಗಲೂ ಬಿ.ಡಿ.ಎ.ಗೆ ದಕ್ಕಿದೆ, ಎನ್ನುವ ಒಂದು ಮಾಹಿತಿ ಸಿಗುತ್ತದೆ. ಇದನ್ನು ಕೂಡಲೇ ಮಾಡಿಸಬೇಕು ಎಂದು ಆಗ್ರಹ ಮಾಡುತ್ತಾ, ಬಿ.ಡಿ.ಎನಲ್ಲಾಗಲಿ, ಕಾರ್ಪೋರೇಷನ್‌ನಲ್ಲಾಗಲಿ ನಾವು ಕ್ವಾಲಿಟಿ ಕೊಡುವುದಕ್ಕೆ ಇಂಜಿನಿಯರ್ ಏನೂ ಇವತ್ತು ಕೆಲಸ ಮಾಡುತ್ತಾ ಇಲ್ಲ. ಈ ವರ್ಷ ಜನವರಿಯಲ್ಲಿ ಇವರು ಒಂದು ಗೆಜೆಟ್ ತಂದರು. ಅದು ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಅಮೆಂಡ್‌ಮೆಂಟ್ ರೂಲ್ 1996 ಎಂದು. ಬಹಳ ವಿಚಿತ್ರ ಎಂದರೆ ಅನೇಕರಿಗೆ ಗೊತ್ತಿದೆ ಬೆಂಗಳೂರು ನಗರ ಪಾಲಿಕೆಯಲ್ಲಿ ಅದು ಒಂದು ಸಿಟಿ ಸ್ಟೇಟ್.

ಬಹಳ ದೊಡ್ಡ ಸಂಸ್ಥೆ. 1984-85-86ರವರೆಗೂ ಒಬ್ಬರು ಚೀಫ್ ಇಂಜಿನಿಯರ್ ಇದ್ದರು. ಅವರು ಡೆಪ್ಯುಟೇಷನ್ ಮೇಲೆ ಪಿ.ಡಬ್ಲ್ಯೂ.ಡಿ.ಯಿಂದ ಬರುತ್ತಿದ್ದರು. ಈ ಅಮೆಂಡ್‌ಮೆಂಟ್ ಬರುವುದಕ್ಕಿಂತ ಮೊದಲು ಏನು ಮಾಡಿದರು, ಆ ಕಾರ್ಪೊರೇಷನ್‌ಗೆ ಇಬ್ಬರು ಚೀಫ್ ಇಂಜಿನಿಯರ್ ಎಂದು ಮಾಡಿದರು. ಒಬ್ಬರು ಚೀಫ್ ಇಂಜಿನಿಯರ್, ಇನ್ನೊಬ್ಬರು ಅಡಿಷನಲ್ ಚೀಫ್ ಇಂಜಿನಿಯರ್; ಅಡಿಷನಲ್ ಚೀಫ್ ಇಂಜಿನಿಯರ್ ಎಂದರೆ ನಮ್ಮ ಕಾರ್ಪೋರೇಷನ್ ಕೇಡರ್‌ನಲ್ಲಿ ಪ್ರಮೋಟ್ ಮಾಡಬೇಕೆಂದು ಮಾಡಿದರು. ಸ್ವಲ್ಪ ದಿವಸವಾದಮೇಲೆ ಅಡಿಷನಲ್ ಎನ್ನುವ ಪದವನ್ನು ತೆಗೆದು ಹಾಕಿದರು. There were two Chief Engineers. Now, there are three Chief Engineers. All are from the Corporation. ಬಹಳ ವಿಚಿತ್ರ ಎಂದರೆ ಒಬ್ಬರು ಕಾರ್ಪೊರೇಷನ್‌ನಲ್ಲಿ ಈಗಾಗಲೇ ಆರು ವರ್ಷವಾಯಿತು ಚೀಫ್ ಇಂಜಿನಿಯರ್ ಆಗಿ. ಇನ್ನು ಎಂಟು ವರ್ಷ ಅವರು ಅಲ್ಲಿ ಚೀಫ್ ಇಂಜಿನಿಯರ್ ಆಗಿ ಇರುತ್ತಾರೆ. ಎಂದರೆ 14 ವರ್ಷ ಒಂದೆ ಜಾಗದಲ್ಲಿ ಚೀಫ್ ಇಂಜಿನಿಯರ್ ಆಗಿರುವುದು. ಇದನ್ನು ಅಮೆಂಡ್‌ಮೆಂಟ್ ತಂದುಬಿಟ್ಟು ಇವರು ಈ ಮೂರು ಜನ ಚೀಫ್ ಇಂಜಿನಿಯರ್ ಅನ್ನು ಕಾರ್ಪೊರೇಷನ್‌ನಲ್ಲಿ ಮಾಡುತ್ತೇವೆಂದು ಹೇಳಿದರು. ನಾನು ಆಗಲೇ ಒಂದು ಅಬ್ಜೆಕ್ಷನ್ ಇಟ್ಟೆ. ದಯವಿಟ್ಟು ಹಾಗೆ ಮಾಡಬೇಡಿ. ಏಕೆಂದರೆ ನಗರಪಾಲಿಕೆಯಲ್ಲಿ ಯಾವ ರೀತಿಯಾಗುತ್ತದೆಂಬುದು ಗೊತ್ತಿಲ್ಲ. ಅನೇಕ ಜನ ಇಂಜಿನಿಯರುಗಳಿಗೆ ಎಸ್ಟಿಮೇಟ್ ಮಾಡುವುದಕ್ಕೆ ಬರುವುದಿಲ್ಲ. ಯಾರೋ ಒಬ್ಬರನ್ನು ಇಟ್ಟುಕೊಂಡು ಅವರ ಮುಖಾಂತರ ಎಸ್ಟಿಮೇಟ್ ಮಾಡಿಸುತ್ತಾರೆ. ಒಂದು ಕಡೆ ಒಂದು ಬಿಲ್ಡಿಂಗ್ ಎಸ್ಟಿಮೇಟ್ ಮಾಡಿದರೂ ಆಗ ರೂಫ್ ಬಿಟ್ಟು ಎಸ್ಟಿಮೇಟ್ ಮಾಡಿದರು. ಎಂದರೆ ರೂಫ್ ಆ ಬಿಲ್ಡಿಂಗ್‌ಗೆ ಬೇಡ ಎಂದು. ಆ ಒಂದು ಪರಿಸ್ಥಿತಿಗೆ ಇಂಜಿನಿಯರು ಬಂದಿದ್ದಾರೆ. ನಾನು ಹೇಳಿದೆ ದಯವಿಟ್ಟು ಬೇಡ, ಆಚೆಯಿಂದ ಬರುವರಿಗೆ ನೀವು ದಯವಿಟ್ಟು ಕಂಟಿನ್ಯೂ ಮಾಡಿ. ಸ್ವಲ್ಪನಾದರೂ ಕೂಡ ಫ್ರೆಷ್ ಬ್ಲಡ್ ಬರಲಿ. ಎಕ್ಸ್‌ಪೋಷರ್ ಆಗಲಿ. ಅಥವಾ ಇಂಟರ್ ಮುನ್ಸಿಪಲ್ ಕಾರ್ಪೊರೇಷನ್ ಟ್ರಾನ್ಸ್‌ಫರ್ ಆದರೂ ಮಾಡಿ ಎಂದು. ಅದಕ್ಕಿಂತ ಸೋಜಿಗ ಎಂದರೆ ಯಾವುದೋ ಒಬ್ಬ ವ್ಯಕ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡು, even a Mechanical Engineer can become a Chief Engineer ಎಂದು ಮಾಡಿದರು. ಕಾರ್ಪೊರೇಷನ್‌ನಲ್ಲಿ ಇರುವುದೇ ನಮಗೆ ಸಿವಿಲ್ ವರ್ಕ್ಸ್, ಮೆಕಾನಿಕಲ್ ವರ್ಕ್ಸ್ ಎಂದು ಅಂದರೆ ಆ ಲಾರಿಗಳನ್ನು ನೋಡಿ ಕೊಳ್ಳತಕ್ಕಂಥ ಕೆಲಸ ನಾನು ಆಗ ಪ್ರಿನ್ಸಿಪಲ್ ಸೆಕ್ರೆಟರಿಯವರಿಗೆ ಹೇಳಿದೆ.

MR. SPEAKER: What is wrong? ಮೆಕಾನಿಕಲ್ ಇಂಜಿನಿಯರ್ ಅಂದರೆ ಸಿವಿಲ್ ಇಂಜಿನಿಯರ್ ಕೆಲಸವನ್ನು ಮೆಕಾನಿಕಲ್ ಆಗಿ ಮಾಡುತ್ತಾನೆ.

ಶ್ರೀ ಎಸ್.ಸುರೇಶ್‌ಕುಮಾರ್: ಈಗ ಮಾಡುತ್ತಿರುವುದು ಅದೇ. ಮೆಕಾನಿಕಲ್

ಆಗಿಯೇ ಮಾಡುತ್ತಿರುವಂಥದ್ದು. ಇನ್ನಷ್ಟು ಅದಕ್ಕೆ ಪುಷ್ಟಿ ಸಿಗುತ್ತದೆಂದು. ಅದಕ್ಕೆ ನಾನು ಪ್ರಿನ್ಸಿಪಲ್ ಸೆಕ್ರೆಟರಿಯವರಿಗೆ ಹೇಳಿದೆ, ಒಂದು ಕಾಲ ಬರುತ್ತದೆ Veterinary Doctor can also become the Health Officer, even P.W.D. Person can become the Health Officer of the Corporation. ಒಟ್ಟಿನಲ್ಲಿ ಅದು ನಗರಪಾಲಿಕೆ ಇರಬಹುದು, ಸರ್ಕಾರ ಇರಬಹುದು ನಾವು ಎಷ್ಟು ಕ್ಯಾಷುಯಲ್ ಆಗಿ ತೆಗೆದುಕೊಳ್ಳುತ್ತಿದ್ದೇವೆ, ಇದರ ಬಗ್ಗೆ ಕೊಡಬೇಕಾದ ಗಮನವನ್ನು ಕೊಡದೆಯೇ ಯಾವ ಪರಿಸ್ಥಿತಿಗೆ ಇವೊತ್ತು ತಳ್ಳುತ್ತಿದ್ದೇವೆ ಎಂಬುದಕ್ಕೆ ಒಂದು ತಾಜಾ ಉದಾಹರಣೆ. ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಬಿ.ಡಿ.ಎ. ಬಗ್ಗೆ ಮಾತನಾಡುತ್ತಾ.

ಶ್ರೀ ಎನ್.ರಾಜಣ್ಣ: 81ರಲ್ಲಿ ಕಟ್ಟಿದ ಬಿಲ್ಡಿಂಗ್ 92ರಲ್ಲಿ ಬಿದ್ದು ಹೋಗುತ್ತದೆ. ನಾನು ಸರ್ಕಾರದ ವಿಚಾರದಲ್ಲಿ ಹೇಳುವುದಿಲ್ಲ. ಅಂತಹ ಚೀಫ್ ಇಂಜಿನಿಯರ್ಸ್ ಇರುವಂತದ್ದು. They are building the buildings, rebuilt, rebuilt -- ಬಿಲ್ಲಿಗೆ ಬಿಲ್ಲು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಆ ಇನ್ಸಿಡೆಂಟ್‌ಗಳನ್ನು ಹೇಳಿದಿರಿ ಆ ಇಂಜಿನಿಯರ್ಸ್‌ಗಳನ್ನು ಪೋಸ್ಟ್ ಮಾಡಿಸಿದ್ದು ಯಾರು? ಅಲ್ಲಿಟ್ಟಿದ್ದು ಯಾರು? ಇವರ ವ್ಯವಸ್ಥೆ ಹೇಗೆ?

MR. SPEAKER: You must compliment Mr. Rajanna. ಆಡಳಿತ ಪಕ್ಷದಲ್ಲಿದ್ದು ಅಷ್ಟನ್ನು ಅವರು ಹೇಳಿದರಲ್ಲಾ, ಪಾಪ ಇರಲಿ ಡೆಲಿಕೆಸೀಸ್ ಇರುತ್ತದೆ. You must compliment him.

ಶ್ರೀ ಎನ್.ರಾಜಣ್ಣ: ಮಾನ್ಯ ಅಧ್ಯಕ್ಷರೆ, 1987ರಲ್ಲಿ ಕಟ್ಟಿದ ಬಿಲ್ಡಿಂಗ್ 1997ರಲ್ಲಿ ಬಿದ್ದೇ ಹೋಗುತ್ತದೆ. ಹತ್ತೆ ವರ್ಷ ಲಿಮಿಟ್, ಪುಣ್ಯಾತ್ಮರು ಬ್ರಿಟಿಷರು ಇದ್ದರು ಅವರು ಕಟ್ಟಿದ್ದಂಥ ಬಿಲ್ಡಿಂಗ್‌ಗಳು ನೂರು ವರ್ಷವಾದರೂ ಇವೊತ್ತಿಗೂ ಚೆನ್ನಾಗಿವೆ. ಅದಕ್ಕೇ ಬಿಲ್ ಮಾಡುತ್ತಿರುವುದು.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಆಗಲೇ ನಾನು ರಿಂಗ್ ರೋಡ್ ಬಗ್ಗೆ ಮಾತನಾಡುತ್ತಿದ್ದೆ. ಇವೊತ್ತು ರಿಂಗ್ ರೊಡ್ ಕಂಪ್ಲೀಟ್ ಆಗಬೇಕೆಂದು ಬಹಳ ಜನ ಮಾತನಾಡುತ್ತಾರೆ. ಬಿ.ಡಿ.ಎನವರು ಹುಡ್ಕೋದವರಿಂದ ಸುಮಾರು 180 ಕೋಟಿ ರೂಪಾಯಿ ಸಾಲ ತೆಗೆದುಕೊಳ್ಳಬೇಕೆಂದು ಇದ್ದಾರೆ. ಆದರೆ ಸರ್ಕಾದವರು ಒಂದು ಬಜೆಟರಿ ಸಪೋರ್ಟ್ ಕೊಡದೇ ಇರುವುದರಿಂದ ಆ ಕೆಲಸ ಯಾವ ವೇಗದಲ್ಲಿ ಹೋಗಬೇಕು ಆ ಗತಿಯಲ್ಲಿ ಹೋಗುತ್ತಿಲ್ಲ; ದಯವಿಟ್ಟು ಉತ್ತರವನ್ನು ಕೊಡುವಾಗ ಬಿ.ಡಿ.ಎ.ನವರ ರಿಂಗ್ ರೋಡ್ ಪರ್ಪಸ್ ಏನು ಇದೆ ಅದನ್ನು ಶೀಘ್ರವಾಗಿ ಮುಗಿಸುವುದಕ್ಕೆ ನಾವು 180 ಕೋಟಿ ರೂಪಾಯಿಗೆ ಸರ್ಕಾರದಿಂದ ಬಜೆಟರಿ ಸಪೋರ್ಟ್

ಕೊಡುತ್ತೇವೆ, ಗ್ಯಾರಂಟಿಗೆ ನಿಂತು ಕೊಳ್ಳುತ್ತೇವೆ ಎಂದು ದಯವಿಟ್ಟು ಉತ್ತರ ಕೊಡಬೇಕು. ಸನ್ಮಾನ್ಯ ಸಭಾಧ್ಯಕ್ಷರೆ, ನಗರಪಾಲಿಕೆ ಕುರಿತಂತೆ ಇನ್ನೇನೂ ವಿಶೇಷವಾಗಿ ಹೇಳದೆ, ಇನ್ನು ಒಂದೇ ಒಂದು ವಿಷಯವನ್ನು ಪ್ರಸ್ತಾಪ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಈ ನ್ಯಾಯಾಂಗದ ಬಗ್ಗೆ ಒಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಒಂದು 5-6 ವರ್ಷಗಳ ಹಿಂದೆ ನಾನೊಂದು ಘಟನೆಯನ್ನು ನೋಡಿದ್ದೆ, ಒಬ್ಬರು ಜಡ್ಜ್ ಜಡ್ಜ್‌ಮೆಂಟನ್ನು ಪ್ರನೌನ್ಸ್ ಮಾಡುತ್ತಿದ್ದಾಗ ಎದುರುಗಡೆ ಲಾಯರ್‌ವೊಬ್ಬರು ಪೇಪರ್ ಇಟ್ಟುಕೊಂಡು ನಿಂತಿದ್ದರು. ಜಡ್ಜ್‌ಗೆ ಆಶ್ಚರ್ಯ ಆಯಿತು ಏನು ಅದು ಪೇಪರ್ ಎಂದು. ನಿಮ್ಮ ಜಡ್ಜಮೆಂಟ್‌ದ್ದು ಕಾಪಿ ಎಂದರು ಆ ಲಾಯರ್. ಇವರಿಗೆ ಬಹಳ ಗಾಬರಿಯಾಯಿತು, ತನ್ನ ಸ್ಟೆನೋ ಬಗ್ಗೆ ಕಂಪ್ಲೆಂಟ್ ಕೊಟ್ಟು ಆ ಒಂದು ಪ್ರಕರಣ ಬೇರೆ ಆಯಿತು. ಅದೇ ತರಹ ಉದಾಹರಣೆ ಇವೊತ್ತು ನಮ್ಮ ಮುಂದೆ ಇದೆ. ಮೊನ್ನೆ ಹೈಕೋರ್ಟ್‌ನಲ್ಲಿ ಕೊಜೆಂಟ್ರಿಕ್ಸ್ ಬಗ್ಗೆ ಒಂದು ಪಬ್ಲಿಕ್ ಇಂಟ್ರೆಸ್ಟ್ ಲಿಟಿಗೇಷನ್ ಕೊಜೆಂಟ್ರಿಕ್ಸ್ ವಿರುದ್ಧ ಹಾಕಿದ್ದರು. ಅವೊತ್ತು ಜಡ್ಜಮೆಂಟ್ ಪಿ.ಐ.ಎಲ್ ವಿರುದ್ಧ ಆಯಿತು. ಪಿ.ಐ.ಎಲ್.ವಿರುದ್ಧ ಜಡ್ಜಮೆಂಟ್ ಆದಾಗ ಬಹಳ ಆಶ್ಚರ್ಯ ಎಂದರೆ, What shocked those gathered though, was that within moments of the judgment being delivered, Mr. Ron Somers, MD of Mangalore Power Company was seen distributing Press Releases to journalists within the Court Hall immediately after the judgment was pronounced ಅಂದರೆ ನಾವು ಯಾವ ಪರಿಸ್ಥಿತಿಗೆ ಬಂದಿದ್ದೇವೆ. ಶಾಸಕರಿಗೆ, ಶಾಸಕಾಂಗಕ್ಕೆ, ಎಕ್ಸಿಕ್ಯೂಟಿವ್‌ಗೆ ಬಹಳಷ್ಟು ಬೈಗುಳವನ್ನು, ಕಂಪ್ಲೇಂಟನ್ನು ನಾವು ಕೇಳುತ್ತೇವೆ. ಆದರೆ ** "We have made a presentation to the Chief Justice of India, regarding certain developments in the High Court of Karnataka subsequent to the prouncement of the Judgement ** in the matter relating to the W.P.No.28651/1996 (Janajagrithi Samithi vs. Union of India connected with 790/97 (Maneka Gandhi v. Union of India and eleven others).

We have brought to the notice of the Hon'ble Chief Justice the fact that Mr.Ron Somers, Managing Director of the Mangalore Power Company was able to predict the outcome of the judgment and had in fact come prepared

---

** ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

with a copy of a Press Release wherein a Judicial Order was utilised **

MR. SPEAKER: Was this judgment dictated in the court or was it a written judgment.

SRI S.SURESH KUMAR: It was pronounced in the court.

SRI S.P.MUDDAHANUMEGOWDA: The way in which Mr. Suresh Kumar is explaining I think that was dictated earlier and it was pronounced in open court.

SRI S.SURESH KUMAR: Mr. Speaker, Sir.

MR. SPEAKER: **

SRI S.SURESHKUMAR: **

SRI S.P.MUDDHAHANUMEGOWDA: Mr. Speaker Sir, ** ಅವರು ಯಾರು ಅರ್ಜಿಯನ್ನು ಸಲ್ಲಿಸಿದ್ದರು, ಅವರು ಒಂದು ನೋಟನ್ನು ಜರ್ನಲಿಸ್ಟ್‌ಗೆ ಅಥವಾ ಪ್ರೆಸ್‌ಗೆ ಕೊಡತಕ್ಕಂಥ ಒಂದು ನೋಟನ್ನು ಪ್ರಿಪೇರ್ ಮಾಡಿ ಕೊಟ್ಟಿರಬಹುದೇ ವಿನಃ the copy of the judgment cannot be distributed to the press people. **

SRI S.SURESHKUMAR: **

Immediately following the prouncement of the judgment, Mr. Ron Somers, Managing Director, Mangalore Power Company, along with his advocates, held an impromptu Press Conference within the premises of the Court Hall No.10 and started handing out press releases (encl), **

SRI M.MALLIKARJUNA KHARGE: I want to raise a point of order.

** ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

MR. SPEAKER: You cannot discuss the conduct of judges..

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ, ಏಕೆಂದರೆ ಜಡ್ಜ್‌ಮೆಂಟ್ ಸರಿಯೋ, ತಪ್ಪೋ, ಅಥವಾ ಅವರು ಮಾಡಿದಂತಹ ಕಂಡಕ್ಟ್ ಸರಿಯೋ, ತಪ್ಪೋ ಎಂದು ಚರ್ಚೆಗೆ ಹೋಗುವುದಿಲ್ಲ. ಆದರೆ ನಾವು ನೀವು ಎಲ್ಲರೂ ಇದ್ದಾಗಲೂ ಕೂಡ ಇಂತಹ ಡಿಬೆಟ್‌ಗೆ ಅವಕಾಶ ಮಾಡಿಕೊಟ್ಟೆವಲ್ಲಾ ಎನ್ನತಕ್ಕಂಥ ಅಪವಾದ ನಮ್ಮ ಮೇಲೆ ಬರಬಾರದು. ಆ ದೃಷ್ಟಿಯಿಂದ Page 122 rule 10, rules to be observed while speaking...

10. Reflect upon the conduct of President or any Governor or any court of justice or use the Governor or President's name for the purpose of influencing the debate'...

ಇಲ್ಲಿ ಏನಾಗುತ್ತದೆಂದರೆ Here what happens is, it reflects upon the conduct of court of justice, ಇಲ್ಲಿ ನಾವು ನೀವು ಎಲ್ಲರೂ ಇದ್ದಾಗಲೂ ಅವಕಾಶ ಮಾಡಿಕೊಟ್ಟೆವು ಎನ್ನತಕ್ಕಂಥಾದ್ದು ಬರಬಾರದೆಂಬ ದೃಷ್ಟಿಯಿಂದ ನಾನು ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

MR. SPEAKER: After your subsequent refrences make it very clear what Mr.S.P.Muddhanumegowda has indicated,

3.40 ಪಿ.ಎಂ

There is nothing wrong in one of the contesting parties before the court in anticipating the judgment in his favour.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನನಗೆ ಐದು ನಿಮಿಷಗಳ ಅವಕಾಶವನ್ನು ಕೊಟ್ಟರೆ ಮುಂದೆನಾಯಿತು ಎಂಬುದನ್ನು ಹೇಳುತ್ತೇನೆ.

MR. SPEAKER: What happens is, ...What I would suggest..

(INTERRUPTIONS)

SRI M.MALLIKARJUNA KHARGE: The way in which the debate is going on, can it be allowed?

MR. SPEAKER: I agree with you.

ಶ್ರೀ ಜಿ.ವಿ.ಶ್ರೀರಾಮುರೆಡ್ಡಿ: ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಹಾಗೆ nothing wrong in anticipating the judgment by any party either the petitioner or the defendant but distributing a portion of the judgment, is a different thing.

SRI S.P.MUDDAHANUME GOWDA: Nowhere Mr. Suresh Kumar says that a portion of the judgment was distributed. He says a Press Note was distributed, there is no bar and in between 1.30 to 2.30 there will be no sittings. and probably he might have distributed some Press Notes within the court premises to some of the journalists.

MR. SPEAKER: I have been carefully listening to the whole thing.

ಶ್ರೀ ಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ನಾನು ಅದರ ಬಗ್ಗೆ ವಿಚಾರಣೆ ಮಾಡಿದೆ. it was read out in the open court; subsequently later in the afternoon, it was distributed ಎಂದು ನನಗೆ ತಿಳಿದು ಬಂತು. Therefore let us not discuss about the issue in the House.

MR. SPEAKER: There are two things before us. One is what the Hon. Member Mr. Suresh Kumar has said. Distribution of these pamphlets or press statements or press note, whatever it is that has occurred within the court premises. It is for the concerned Judges to make an observation whether it was right or wrong to have done such a thing within the court premises. To spell out certain things in anticipation about the judgment,

outcome of the judgment I don't think there is anything wrong. I am inclined to uphold the point of order raised by the Hon.Leader of Opposition. It has not been the tradition of this House directly or indirectly to make any references to the conduct of the judges. Here in this case though you are one of our most beloved members, most restraint conduct has been displayed on your part whenever you have stood upon the floor of the House, this particular situation may tantamount to an inference that we are discussing the conduct of judges, Therefore, I would advice the Hon.Member to restrain and that particular portion whatever has gone into records may kindly be deleted and also I appeal to my friends in the Press not to take note of that because we will have to be very careful..

DR. M.P.KARKI: Conduct ಎಂದು ಹೇಳಿದರೆ it is not conducting case, conduct of the judge, conduct ಎಂದು ಹೇಳಿದರೆ ಬಿಹೇವಿಯರ್ ಮೇಲೆ ಚರ್ಚೆಯಾಗಬಾರದೆಂದು ಇದೆಯೇ ಹೊರತಾಗಿ ಅಲ್ಲಿ ಕೋರ್ಟ್‌ನಲ್ಲಿ ಯಾವ ರೀತಿಯಾಯಿತು ಎಂಬ ಬಗ್ಗೆ ಹೇಳುವುದರಲ್ಲಿ ಏನೂ ತೊಂದರೆಯಾಗುವುದಿಲ್ಲ. This conduct has got different meaning altogether.

MR. SPEAKER: Dr.Karki let me explain to you. Conduct of a judge means-conduct of a judge in the court while dealing with the case. We are not worried about the conduct of a judge otherwise. Here in this particular instance, we are discussing about the judgment delivered by a particular judge or two judges who have comprised a Bench which amounts to directly discussing the conduct of judges which is forbidden under our rule which will not be a good tradition. Let us not make a controversy about it.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಇದಾದಮೇಲೆ ಅವರನ್ನು ಕರೆಸಿದರು. ಅವರು ಅಪಾಲಜಿಯನ್ನು ಕೇಳಿಕೊಂಡು ಹೋದರು. ನಾನು ಅದನ್ನು ಹೇಳಬೇಕೆಂದಿರುವುದು. If you allow me five minutes...

MR. SPEAKER: I am willing to allow you. We know you for your credentials. You are not the Member who indulge in such things, we have the highest respect for you. But we have to maintain certain traditions and I am thankful to the Hon. Leader of Opposition who came to my rescue timely. I had also forgotten about it. Anyway, you can go ahead. Now you have your time. You can make out your case but you know the frame work within which we work.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಅದಾದ ಮೇಲೆ ಏನಾಯಿತೆಂದರೆ

SRI M.MALLIKARJUNA KHARGE: It is a statement by the third person not directly his. ಅದಕ್ಕೆ ಏನಾಗುತ್ತದೆಂದರೆ we are believing somebody. So that directly reflects, ಎನ್ನುವಂಥಾದ್ದು ನಾನು ಹೇಳುವುದು. ಮತ್ತೊಂದು ಏನೂ ಇಲ್ಲ. ಏಕೆಂದರೆ ಇಲ್ಲಿ ನಿಮಗೆ ಪ್ರಿವೆಂಟ್ ಮಾಡಬೇಕು ನೀವು ಹೇಳುವಂಥಾದ್ದಕ್ಕೆ ತಡೆಮಾಡಬೇಕೆಂದು ಇಲ್ಲ.

MR. SPEAKER: Let him have his say. I will listen the whole thing and then say which should remain on record.

MR. SPEAKER: No, No, I don't think anyway what I feel is once again coming back to what the Leader of Opposition has raised since all these deliberations have taken place within the Chambers of the Judges, I think the House should not venture to make any comments or references or discussion about that. It is not a good practice.

SRI M.MALLIKARJUNA KHARGE: That also will

be served.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ಇಷ್ಟನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER: You can continue. Did we disturb you Mr. Suresh Kumar by any chance? Are you hurt? We want you to speak. Please don't get offended....

+ ಶ್ರೀ ಎಂ.ಶಿವಾನಂದ (ಚಿಕ್ಕಬಳ್ಳಾಪುರ): ಮಾನ್ಯ ಅಧ್ಯಕ್ಷರೆ, ಮೊದಲನೇ ಬಾರಿಗೆ ಈ ಸದನದಲ್ಲಿ ಹಿಂದುಳಿದ ವರ್ಗದವರ, ಅಲ್ಪಸಂಖ್ಯಾತರ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ಹಾಗೂ ಸಾಮಾನ್ಯ ಆಡಳಿತದ ಬೇಡಿಕೆಗಳ ಮೇಲೆ ಚರ್ಚೆ ಮಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ತಿಳಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಬಗ್ಗೆ ಸರ್ಕಾರ ಕೆಲವಾರು ಯೋಜನೆಗಳನ್ನು ಮಾಡಿದೆ. ಆದರೆ ಅವುಗಳನ್ನು ಕಾರ್ಯಗತಗೊಳಿಸಲು ವಿಫಲವಾಗಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಹಿಂದುಳಿದ ವರ್ಗದವರು ಮೇಲಕ್ಕೆ ಬರಬೇಕು ಎಂದು ಹೇಳುತ್ತಾರೆ. ಎಲ್ಲಿ ಸ್ವಾಮಿ? ಹಿಂದುಳಿದವರ ಕಲ್ಯಾಣ ಮಾಡಬೇಕು ಎಂದು ಸರ್ಕಾರದಿಂದ ಅಷ್ಟು ಕೋಟಿ, ಇಷ್ಟು ಕೋಟಿ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ, ಚೈತನ್ಯ ಯೋಜನೆಯಲ್ಲಿ ಸುಮಾರು ಲಕ್ಷ ದುಡ್ಡು ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಮೂಲಭೂತವಾಗಿ ನೋಡಿದರೆ ಒಬ್ಬರಿಗೂ ಕೂಡ ಸರಿಯಾದ ಸಾಲ ಸೌಲಭ್ಯ ಸಿಗುತ್ತಿಲ್ಲ. ಸ್ವಯಂ ಉದ್ಯೋಗ ಯೋಜನೆಯಲ್ಲಿ ತರಬೇತಿ ಕೊಡುತ್ತೇವೆ ಎಂದು ಹೇಳುತ್ತಾರೆ. ಸ್ವಯಂ ಉದ್ಯೋಗ ಎಲ್ಲಿ ಮಾಡುವುದು? ಈ ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ಮಟ್ಟದಲ್ಲಿ ಆಗುತ್ತಾ ಇರತಕ್ಕಂಥ ಸರ್ಕಾರದ ಮಟ್ಟದಲ್ಲಿ ಬರುತ್ತಿರತಕ್ಕಂಥ ಪರಿಸ್ಥಿತಿ ಏನಾಗಿದೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಅಂದರೆ ನಮ್ಮ ಹಿಂದುಳಿದ ವರ್ಗ ಅಲ್ಪಸಂಖ್ಯಾತರ ಇಲಾಖೆಗೆ ಪ್ಲಾನ್ ಮಾಡುತ್ತಾರೆ ಇಷ್ಟು ಲಕ್ಷ ಮಾಡಬೇಕು, ಇಷ್ಟು ಕೋಟಿ ಹಿಂದುಳಿದ ವರ್ಗದವರಿಗೆ ಕೊಡಬೇಕು ಎಂದು ಮಾಡುತ್ತಾರೆ. ಗಂಗಾಕಲ್ಯಾಣ ಯೋಜನೆಗೆ ಇಷ್ಟು ತರಬೇತಿಗೆ ಇಷ್ಟು, ದಿವಂಗತ ದೇವರಾಜ್ ಅರಸುರವರು ಜನ್ಮ ಶತಾಬ್ದಿಗೆ ಇಷ್ಟು ಎಂದು ದಿವಂಗತ ದೇವರಾಜ್ ಅರಸುರವರ ಜನ್ಮದ ದಿವಸ, ಅವರು ಹುಟ್ಟಿದ ದಿವಸ ಹಾಗೂ ಅವರು ದಿವಂಗತವಾದಂಥ ದಿವಸ ಈ ಎರಡು ದಿನಗಳನ್ನು ಮಾತ್ರ ನಾವು ನೆನಪು ಇಟ್ಟುಕೊಳ್ಳುತ್ತೇವೆ. ಅದು ಬಿಟ್ಟು ಬೇರೆ ಏನು ಮಾಡುತ್ತೇವೆ ಸ್ವಾಮಿ? ಅದನ್ನು ತಾವು ತಿಳಿಸಬೇಕಾಗುತ್ತದೆ. ಈ ವಿವಿಧ ಯೋಜನೆಗಳ ಅಡಿಯಲ್ಲಿ ಹಿಂದುಳಿದ ವರ್ಗದವರಿಗೆ ಆಟೋ ಕೊಡುತ್ತೇವೆ, ಲಾರಿ ಕೊಡುತ್ತೇವೆ, ಕೈಗಾರಿಕೆ ಮಾಡಬೇಕು ಎಂದು ಹೇಳುತ್ತಾರೆ. ಆದರೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಈ ವರ್ಷ

ಒಂದು ಅರ್ಜಿ ಕೂಡ ಸಿಗುತ್ತಿಲ್ಲ. ಹಿಂದುಳಿದ ವರ್ಗದವರಿಗೆ ನಾವು ಕೊಡುತ್ತೇವೆ, ನಾವು ಕೊಡುತ್ತೇವೆ ಎಂದು ಹೇಳುತ್ತಾರೆ. ಹಿಂದುಳಿದ ವರ್ಗದವರ ಅಪ್ಲಿಕೇಷನನ್ನು ಬ್ಯಾಂಕಿಗೆ ಕೊಡುತ್ತಾರೆ. ಆ ಬ್ಯಾಂಕ್ ಮ್ಯಾನೇಜರ್ ಹತ್ತಿರ ಹೋದರೆ ಇಲ್ಲಪ್ಪ ನಮಗೆ ಕ್ರೆಡಿಟ್ ಸ್ಕ್ವೀಜ್ ಆಗಿದೆ ಎಂದು ಹೇಳುತ್ತಾರೆ. ಸರ್ಕಾರದವರು ಏಕೆ ನಾವು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ, ಹಿಂದುಳಿದ ವರ್ಗದವರಿಗೆ ವಿವಿಧ ಯೋಜನೆಗಳಲ್ಲಿ ಸಾಲ ಕೊಡುತ್ತೇವೆ ಎಂದು ಹೇಳುತ್ತಾರೆ, ಅಲ್ಲಿ ಬರೀ ಶೇಕಡ 25 ರಷ್ಟು ಮಾತ್ರ ಮಾರ್ಜಿನ್ ಮನಿಯನ್ನು ಕೊಡುತ್ತಾರೆ. ಆ ಮಾರ್ಜಿನ್ ಮನಿಗೆ ನಾವು ಕಷ್ಟಪಟ್ಟು ಕೋಲಾರಕ್ಕೆ ಹೋಗಿ ಅರ್ಜಿ ಕೊಟ್ಟಾಗ ಒಂದು ಲೆಟರ್ ಬರುತ್ತದೆ. ನಮ್ಮ ಮನೆಗೆ ನಿಮ್ಮ ಅರ್ಜಿಯನ್ನು ಪರಿಶೀಲಿಸಲಾಗಿದೆ, ನಿಮ್ಮ ಅರ್ಜಿಯನ್ನು ಇಂತಹ ಬ್ಯಾಂಕಿಗೆ ಕಳುಹಿಸಿದ್ದೇವೆ ನೀವು ಮ್ಯಾನೇಜರ್‌ವರನ್ನು ಹೋಗಿ ನೋಡಿ ಎಂದು ಹೇಳುತ್ತಾರೆ. ನಾವು ಸರ್ಕಾರಕ್ಕೆ ಅರ್ಜಿಯನ್ನು ಕೊಟ್ಟಿದ್ದು ಮ್ಯಾನೇಜರರನ್ನು ನೋಡುವುದಕ್ಕಾ? ಮ್ಯಾನೇಜರರನ್ನು ಹೋಗಿ ನೋಡಿದರೆ ಇಲ್ಲಾರಿ ನಮಗೆ ಹೆಡ್ ಆಫೀಸ್‌ದಿಂದ ಆರ್ಡರ್ಸ್ ಬರಬೇಕು, ಅದುವರೆಗೆ ನಾವು ಕೊಡುವುದಿಲ್ಲ ಎಂದು ಹೇಳುತ್ತಾರೆ. ಹಿಂದುಳಿದ ವರ್ಗ ಉದ್ಧಾರ ಆಗಬೇಕೆಂದು ಕೆಲವರು ಮಹನೀಯರು ಕೆಲವಾರು ವಿಧದಲ್ಲಿ ತಮ್ಮ ರಿಪೋರ್ಟ್‌ಗಳನ್ನು ಕೊಟ್ಟಿದ್ದಾರೆ. ಮೊದಲನೇಯದಾಗಿ "To establish and develop village and cottage industries" ಎಂದು. ಆದರೆ ಒಂದಾದರು ವಿಲೇಜ್ ಇಂಡಸ್ಟ್ರೀಸ್ ಇದೆಯಾ ಹಿಂದುಳಿದ ವರ್ಗದವರಿಗಾಗಿ ಮಾಡಿರುವುದು? (2) To establish and develop small scale and medium scale industry. ಎಲ್ಲಿ ಸ್ವಾಮಿ ಇದೆ? To purchase and lease on hire purchase basis the vehicles, auto-rikshaws, motor corrs, lorries & trucks and machineries. To advance..

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್: ನಮ್ಮ ಹಿಂದುಳಿದ ವರ್ಗದವರ ಇಲಾಖೆಯಲ್ಲಿ ಲಾರಿಗಳಿಗೆ ಲೋನನ್ನು ಕೊಡುವುದಿಲ್ಲ, ಆದರೆ ಒಂದು ಲಕ್ಷ ರೂಪಾಯಿಗಳವರೆಗೆ ಮಾತ್ರ ಲೋನನ್ನು ಕೊಡಲಾಗುತ್ತದೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ.ಶಿವಾನಂದ: ನೀವು ಏನು ಕೊಡುತ್ತೀರಿ ಎಂಬುದರ ಬಗ್ಗೆ ಸಂಪೂರ್ಣವಾಗಿ ನಂತರ ಹೇಳಿ. ಲಾರಿಗಳಿಗೆ ಕೊಡುವುದಿಲ್ಲ ಎಂದರೆ ಇನ್ನೇನು ಕೊಡುತ್ತೀರಿ? ಬುಲ್ಡೋಜರ್‌ಗೆ ಕೊಡುತ್ತೀರಾ? "To advance money to construct/ purchase houses."

ಅಧ್ಯಕ್ಷರು: ಬುಲ್ಡೋಜರ್ ಸರ್ಕಾರ ಕೊಡುತ್ತದೆಯೋ ಬಿಡುತ್ತದಯೋ? ಅವರಿಗೆ ಬೇಕಾದರೆ ಬೇಕು ಎಂದರೆ ಕೊಡುವ ಪೈಕಿ ಅವರು, ನೀವು ಸ್ವಲ್ಪ ಹುಷಾರಾಗಿರಿ.

ಶ್ರೀ ಎಂ.ಶಿವಾನಂದ್: ಸನ್ಮಾನ್ಯ ಅಧ್ಯಕ್ಷರೆ, "To construct / to acquire houses and sell them on lease basis." ಹಿಂದುಳಿದ ವರ್ಗಗಳಿಗೆ ಎಂದು ಸೆಪರೇಟಾಗಿ ಎಲ್ಲಿ ಮನೆಗಳನ್ನು ಕೊಡುತ್ತಿದ್ದಾರೆ? ಕಾರ್ಪೊರೇಷನ್‌ನಿಂದ ಎಲ್ಲಿ ಕಟ್ಟಿ ಕೊಟ್ಟಿದ್ದಾರೆ? ಜಿಲ್ಲಾ ಪಂಚಾಯತ್‌ನಲ್ಲಿ ಏನೋ ಕೊಡುತ್ತಾರೆ. ವರ್ಷಕ್ಕೆ ಒಂದು ಮುನ್ನೂರು ಮನೆ ಕೊಡುತ್ತಾರೆ. ಎಲ್ಲಾ ಸದಸ್ಯರು ಕಿತ್ತಾಡಿ ಎಂದು ಹೇಳುತ್ತಾರೆ. ಈ ವಿಷಯವನ್ನು ಮನೆಗಳ ಬಗ್ಗೆ ಹೇಳುವಾಗ ಮಾತನಾಡುತ್ತೇನೆ. ನಂತರ ಈ ಮೇನ್ ಆಬ್ಜೆಕ್ಟನ್ನು ಇಟ್ಟುಕೊಂಡು ಹಿಂದುಳಿದವರ ವರ್ಗಕ್ಕಾಗಿ ಒಂದು ಕಾರ್ಪೊರೇಷನನ್ನು ಶುರುಮಾಡಿದ್ದಾರೆ. ಆದರೆ ಇದು ಯಾವ ಮಟ್ಟಕ್ಕೆ ಹೋಗಿದೆ ಸ್ವಾಮಿ? ನಮ್ಮ ಕರ್ನಾಟಕ ರಾಜ್ಯದಲ್ಲಿ ಇರುವ ಹಿಂದುಳಿದ ವರ್ಗದವರ, ಅಲ್ಪಸಂಖ್ಯಾತರ, ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದವರ ಆರ್ಥಿಕ ಮಟ್ಟ ಏನು? ಅವರ ಸಾಮಾಜಿಕ ಮಟ್ಟ ಏನು ಎಂದು ತಿಳಿದುಕೊಳ್ಳುವುದಕ್ಕೋಸ್ಕರ ಮಹಾನುಭಾವರು ಒಂದೊಂದು ಕಮಿಟಿಯನ್ನು ಮಾಡಿದರು. ಆ ಕಮಿಟಿಯವರು ಹಳ್ಳಿ ಹಳ್ಳಿಗೆ ಹೋಗಿ, ಮನೆ ಮನೆಗೆ ಹೋಗಿ ಅವರ ಕಷ್ಟ ಸುಖವನ್ನು ವಿಚಾರಣೆ ಮಾಡುತ್ತಿದ್ದರು. ಈಗ ಬಂದಿರತಕ್ಕಂಥ ಕಮಿಟಿಯವರು ನೇಪಾಳಕ್ಕೆ ಹೋಗುತ್ತಾರೆ, ಖಟ್‌ಮಂಡುಗೆ ಹೋಗುತ್ತಾರೆ, ಫ್ಲೈಟ್‌ನಲ್ಲಿ ಹೋಗುತ್ತಾರೆ ಏನು ಸ್ವಾಮಿ ಇದು?

ಅಧ್ಯಕ್ಷರು: ಯಾವ ಸಮಿತಿ?

ಶ್ರೀ ಎಂ.ಶಿವಾನಂದ್: ಹಿಂದುಳಿದ ವರ್ಗಗಳ ಸಮಿತಿ.

ಅಧ್ಯಕ್ಷರು: ನೋಡಿ ಶಿವಾನಂದ್ ಅದು ಸ್ಥಾಯಿ ಸಮಿತಿ. ಎಲ್ಲಾ ರಾಜ್ಯಗಳಲ್ಲಿ ಇರತಕ್ಕಂಥ ಸ್ಥಾಯಿ ಸಮಿತಿಗಳು ಬೇರೆ ರಾಜ್ಯಗಳಲ್ಲಿರುವ ಸಂಬಂಧಪಟ್ಟ ಇಲಾಖೆಯು ಯಾವ ರೀತಿ ಕೆಲಸ ಮಾಡುತ್ತಿದೆ ಎಂದು ನೋಡಿ ಬರುವುದಕ್ಕೆ ಅವಕಾಶ ಇರುತ್ತದೆ. ಅವರು ಖಟ್‌ಮಂಡೂಗೂ ಹೋಗುತ್ತಾರೆ ಅತವಾ ಕೋಲಂಬೋಗೊ ಹೋಗುತ್ತಾರೆ ಅವರು ಅಲ್ಲಿ ಹೋಗುವುದಕ್ಕೆ ನಾವು ಟೂರ್ಸ್ ವ್ಯವಸ್ಥೆ ಮಾಡುವಾಗ ನಮ್ಮ ಲೆಜಿಸ್ಲೇಚರ್‌ದಿಂದ ದುಡ್ಡ ಕೊಡುವುದಿಲ್ಲ.

ಶ್ರೀ ಎಂ.ಶಿವಾನಂದ: ಗೋವಾಗೆ ಹೋಗುವುದಕ್ಕೆ ಕೊಡುತ್ತೀರಾ ಸ್ವಾಮಿ?

ಅಧ್ಯಕ್ಷರು: ನೀವು ಕೇಳಿ ತಿಳಿದುಕೊಳ್ಳಿ, ಖಟ್‌ಮಂಡು ಬೇರೆ ದೇಶ ಆಗುವುದರಿಂದ ಅಲ್ಲಿ ಹೋಗುವುದಕ್ಕೆ ಬರುವಂಥ ಖರ್ಚನ್ನು ಅವರೇ, ಭರಿಸುತ್ತಾರೆ. ಬಿಹಾರ್‌ದಿಂದಲೋ, ಕಲ್ಕತ್ತದಿಂದಲೋ ಹೋಗುವಾಗ ಆ ಪಾಯಿಂಟ್ನಿಂದ ಆ ದೇಶಕ್ಕೆ ಹೋಗುವುದು ಹಾಗೂ ಬರುವುದು, ಅಲ್ಲಿ ಉಳಿಯುವುದು ಅವರ ಸ್ವಂತ ಖರ್ಚಿನಿಂದ ಭರಿಸುತ್ತಾರೆ. ನೀವೂ ಕೂಡ ಸ್ವಿಟ್ಟರ್‌ಲ್ಯಾಂಡ್‌ಗೆ ಹೋಗಿ ಬನ್ನಿ, ನಿಮಗೆ ಯಾರು ಬೇಡ ಎನ್ನುತ್ತಾರೆ.

ಶ್ರೀ ಎಂ.ಶಿವಾನಂದ: ಆಯಿತು ಮಾನ್ಯ ಅಧ್ಯಕ್ಷರೇ. ಹಿಂದೆ ಇದ್ದಂಥ ಮಹನೀಯರಾದ ಶ್ರೀ ಟಿ.ವೆಂಕಟಸ್ವಾಮಿಯವರ ಕಮಿಷನ್ ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. "The Chairman & Members who visited a house in Belgaum District, found an old woman aged about 70 years rolling woollen thread on the thigh noticed to their dismay that the thigh region had become so hard and stratified as a result of rolling woollen thread for years together." ಎಂತಹ ವ್ಯವಹಾರ ಸ್ವಾಮಿ ಇದು? ಮನೆ ಮನೆಗೆ ಹೋಗಿ ಕಷ್ಟ ಸುಖ ನೋಡಿ ಸರ್ಕಾರಕ್ಕೆ ವರದಿಗಳನ್ನು ಕೊಡಿ ಎಂದು ಹೇಳಿದರೆ ಇವರದ್ದೇ ಆದಂಥ ಒಂದು... ಅಕ್ಷಧ್ಯರೆ, ಇವೊತ್ತು ಕರ್ನಾಟಕ ಸರ್ಕಾರ ಗೈಡನ್ಸ್ ಬ್ಯೂರೋ ಕಮ್ ಎಂಪ್ಲಾಯ್‌ಮೆಂಟ್ ಎನ್‌ಫೋರ್ಸ್‌ಮೆಂಟ್ ಸೆಲ್‌ನ್ನು ಹಿಂದುಳಿದ ವರ್ಗದವರಿಗೆ ಮಾಡಬೇಕು. ಪರಿಶಿಷ್ಟ ಜಾತಿಯವರಿಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಕೊಡುತ್ತಿದ್ದಾರೋ ಇಲ್ಲವೋ ಏನಾಗುತ್ತಿದೆ ಎಂದು ಒಂದು ರಿಪೋರ್ಟ್ ಕೊಡುವುದಕ್ಕೆ ಒಂದು ಎನ್‌ಫೋರ್ಸ್‌ಮೆಂಟ್ ಸೆಲ್‌ನ್ನು ಮಾಡಿದ್ದಾರೆ. ಆ ಆಫೀಸ್ ಎಲ್ಲಿದೆ ಎಂದು ಇದುವರೆಗೂ ನಾನು ನೋಡಿಲ್ಲ. ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಗಂಗಾಕಲ್ಯಾಣ ಯೋಜನೆಯಲ್ಲಿ ಹಿಂದುಳಿದ ವರ್ಗದವರಿಗೆ ಬೋರ್ ಹಾಕುತ್ತೇವೆ ಎಂದು ಹೇಳುತ್ತಾರೆ. ಜಮೀನೇ ಇಲ್ಲ ಎಂದರೆ ಬೋರ್ ಎಲ್ಲಿ ಸ್ವಾಮಿ ಹಾಕುವುದು? ಜಮೀನು ಕೊಟ್ಟರೆ ಅಲ್ಲಿ ಅವರು ಬೋರ್ ಹಾಕಿ ಅವರು ವ್ಯವಸಾಯ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದರೆ ಇಲ್ಲಿ ಏನು ಮಾಡುತ್ತಾರೆ ಎಂದರೆ ಒಂದು ಗಾಡಿ ಕೊಡುತ್ತಾರೆ ಹಸು ಇಲ್ಲ ಎಂದು ಹೇಳುತ್ತಾರೆ, ಹಸು ಕೊಡುತ್ತಾರೆ ಗಾಡಿ ಇಲ್ಲ ಎಂದು ಹೇಳುತ್ತಾರೆ, ಜಮೀನು ಇಲ್ಲ ಎನ್ನುತ್ತಾರೆ ಒಂದು ವುಡನ್ ಪ್ಲೋ ಕೊಡುತ್ತಾರೆ, ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಅಧ್ಯಕ್ಷರೇ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರಿಗೆ ಅಭಿವೃದ್ಧಿ ನಿಗಮಗಳಿಂದ ಶೇಕಡ 10-15 ರಷ್ಟು ಕೆಲಸ ಮಾತ್ರ ಈ ದಿವಸ ಆಗುತ್ತಿದೆ. ಸರ್ಕಾರದ ಪಾಲಿಸಿಯಲ್ಲಿ ಎಷ್ಟೊಂದು ಒಳ್ಳೊಳ್ಳೆಯ ಪ್ರೋಗ್ರಾಮ್ಸ್ ಇವೆ, ಆದರೆ ಅವನ್ನೆಲ್ಲಾ ನೀವು ಎಲ್ಲಿ ಜಾರಿಗೊಳಿಸುತ್ತಿದ್ದೀರಿ? ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಸಣ್ಣ ಕಥೆ ಇದೆ, ತಮ್ಮ ಅಪ್ಪಣೆ ಪಡೆದು ಅದನ್ನು ಇಲ್ಲಿ ಹೇಳಿ ಬಿಡುತ್ತೇನೆ. ಒಂದು ಔಷಧದ ಅಂಗಡಿ ಇತ್ತಂತೆ, ಅದನ್ನು ಒಬ್ಬ ಇಟ್ಟುಕೊಂಡಿದ್ದ. ಅವನು ತನ್ನಲ್ಲಿದ್ದ ಔಷಧಿಯ ಮೇಲೆ ಒಂದು ಸೂಚನೆ ಬರೆದಿದ್ದ. ಈ ಔಷಧಿಯನ್ನು ತಿಂದು ಯಾರಿಗಾದರೂ ಏನಾದರೂ ಫಲಕಾರಿ ಯಾಗಲಿಲ್ಲ ಎಂದರೆ ದುಡ್ಡು ವಾಪಸ್ ಕೊಡುತ್ತೇನೆ ಎಂದು ಆತ ಬರೆದಿದ್ದ. ನನ್ನಂತಹವರು ಯಾರೋ ಒಬ್ಬರು ಆ ಔಷಧಿಯನ್ನು ತೆಗೆದುಕೊಂಡು, ಒಂದೂವರೆ ತಿಂಗಳು ತಿಂದರು. ಒಂದೂವರೆ ತಿಂಗಳು ಔಷಧಿಯನ್ನು ತೆಗೆದುಕೊಂಡರೂ ಆತನಿಗೆ ರೋಗವೂ ಹೋಗಲಿಲ್ಲ, ಏನು ಪರಿಣಾಮವೂ ಕೂಡ ಆಗಲಿಲ್ಲ. ಆತ ಆಗ ತನಗೆ

ಔಷಧ ಮಾರಿದ ಅಂಗಡಿಯವನ ಹತ್ತಿರ ವಾಪಸ್ ಹೋದ. ನಿನ್ನ ಔಷಧಿಯಿಂದ ನನಗೆ ಏನೂ ಗುಣವಾಗಲಿಲ್ಲ, ನೀನು ಹೇಳಿದಂತೆ ನನಗೆ ಔಷಧ ಖರೀದಿಸಿದ ಹಣವನ್ನು ವಾಪಸ್ ಕೊಡು ಎಂದು ಆತ ಅಂಗಡಿಯವನನ್ನು ಕೇಳಿದ. ಆಗ ಅಂಗಡಿಯವನು ಆತನಿಗೆ, ಪ್ಯಾಕೆಟ್ ಮೇಲೆ ಏನು ಬರೆದಿದೆ ಎಂಬುದನ್ನು ನೋಡಿ, ಈ ಔಷಧಿ ಸರಿಯಾಗಿ ಕೆಲಸ ಮಾಡದಿದ್ದರೆ ಹಣವನ್ನು ವಾಪಸ್ ಕೊಡುತ್ತೇನೆಂದು ಅದರ ಮೇಲೆ ಬರೆಯಲಾಗಿದೆ. ನಿನಗಂತೂ ಅದರಿಂದ ಕೆಲಸವಾಗದಿರಬಹುದು, ಆದರೆ ನನಗಂತೂ ಅದರಿಂದ ಬಹಳ ಚೆನ್ನಾಗಿ ಕೆಲಸವಾಗಿದೆ ಎಂದು ಹೇಳುತ್ತಾನೆ. ಸರ್ಕಾರದವರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ದೊಡ್ಡದಾಗಿ ಹೇಳುತ್ತಾರೆ. ಕೊನೆಗೆ ಏನೂ ಇಲ್ಲದ ಹಾಗೆ ಮಾಡುತ್ತಾರೆ. ಕಾಲೇಲ್ಕರ್ ಸಾಹೇಬರು 1953ರಲ್ಲಿ ಒಂದು ರಿಪೋರ್ಟ್ ಕೊಟ್ಟರು. ಆ ರಿಪೋರ್ಟ್ ಎಲ್ಲಿ ಹೋಯಿತು? "In accordance with Article 330 of the Constitution of India, identify social and educational backward classes of the citizens." ಎಂದು ಹೇಳಿದ್ದಾರೆ, ಆದರೆ ಸರ್ಕಾರದವರು ಎಷ್ಟು ಜನರನ್ನು ಐಡೆಂಟಿಫೈ ಮಾಡಿದ್ದಾರೆ? 1960ರಲ್ಲಿ ನಾಗನಗೌಡ ಕಮಿಟಿ ರಚನೆಯಾಯಿತು. Naganagowda Committee recommends to broad socially, educationally backward classes, those who are living in outskirts of the villages. ಇವತ್ತಿನ ಪರಿಸ್ಥಿತಿ ಹೇಗಿದೆ ಎಂಬ ಬಗ್ಗೆ ಮಾನ್ಯ ಅಧ್ಯಕ್ಷರಿಗೆ ಎಲ್ಲವೂ ಗೊತ್ತು. ಈ 10ನೇ ವಿಧಾನ ಸಭೆಗೆ ತಾವು ಒಂದು ನಕ್ಷತ್ರವಿದ್ದಂತೆ. ಇವತ್ತು ತಾವು ಈ ಒಂದು ಸಿಂಹಾಸನದ ಮೇಲೆ ಕುಳಿತಿದ್ದೀರಿ. ಈ ದಿವಸ ಬಡವರಿಗೆ ನಿಮ್ಮ ಹೆಸರು ಹೇಳಿಕೊಂಡು ಜೀವನ ಮಾಡುವಂತೆ ಒಳ್ಳೆಯ ದಾರಿ ತೋರಿಸಿ. "The scheme for training rural artisans".. ಯಾವ ತರಹದ ಟ್ರೈನಿಂಗ್ ಸ್ವಾಮಿ? ಯಾವ ತರಹ ಟ್ರೈನಿಂಗ್ ಕೊಡುತ್ತಾರೆ? "subsidy for rural artisans" ಇಂತಹ ಒಂದು ಇಂಡಸ್ಟ್ರಿಗೆ ಇಷ್ಟು ಲಕ್ಷ ರೂ. ಕೊಟ್ಟಿದ್ದೇವೆ ಎಂದು ಎದೆ ತಟ್ಟಿಕೊಂಡು ಹೇಳುವುದಕ್ಕೆ ಒಂದೂ ಕೂಡ ಇಂಡಸ್ಟ್ರೀ ಇಲ್ಲವಲ್ಲಾ. ತಾವು ಶೇಕಡ 25ರಷ್ಟು ಮಾರ್ಜಿನ್ ಮನಿ ಕೊಡುವುದಕ್ಕೆ ಮಾತ್ರ 'ಸ್ವಾವಲಂಬನ' ಸ್ಕೀಮ್, 'ಚೈತನ್ಯ' ಸ್ಕೀಮ್ ಎಂದು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಹಾಕಿಕೊಂಡರೆ ಹೇಗೆ? ನಮ್ಮನ್ನು ಬ್ಯಾಂಕ್ ಹತ್ತಿರ ಕಳುಹಿಸುತ್ತಾರೆ. ಬೆಂಗಳೂರಿನಲ್ಲಿ ಬಿ.ಡಿ.ಎ.ನವರು ಮನೆ ಕೊಡುವುದಕ್ಕೆ, ಹೌಸಿಂಗ್ ಬೋರ್ಡ್‌ನಲ್ಲಿ ಮನೆ ಅಲಾಟ್ ಮಾಡುವುದಕ್ಕೆ, ಯಾವತ್ತಾದರೂ ಹಿಂದುಳಿದ ವರ್ಗದವರಿಗೆ ಕೊಡಬೇಕು ಎಂದು ಹೇಳಿ ಏನಾದರೂ ನೀತಿ ನಿಯಮಗಳಿವೆಯೇ? Medium Income group, lower income group and higher income group ಎಂದು ಮಾಡುತ್ತಾರೆ. ಇನ್‌ಕಂ ಸರ್ಟಿಫಿಕೇಟ್ ಏನು, ಯಾರು ಬೇಕಾದರೂ ತರಬಹುದು. ಹಾಗೆಯೇ ಕ್ಯಾಸ್ಟ್ ಸರ್ಟಿಫಿಕೇಟ್ ಅನ್ನೂ ಕೂಡ ಯಾರು ಬೇಕಾದರೂ ತರಬಹುದು, ತಹಶೀಲ್ದಾರ್‌ರವರು

ಅದನ್ನು ಬರೆದು ಕೊಡುತ್ತಾರೆ. ನನಗೆ 15 ಸಾವಿರ ಆದಾಯ ಇದೆ ಎಂದರೂ, 3 ಸಾವಿರ ಆದಾಯ ಇದೆ ಎಂದು ಸರ್ಟಿಫಿಕೇಟ್ ಕೊಡತಕ್ಕ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಲ್ಯಾಂಡ್ ರಿಫಾರ್ಮ್ಸ್, ಹಿಂದುಳಿದ ವರ್ಗದವರಿಗೆ ಎಲ್ಲಿ ಕೊಡುತ್ತೀರಿ? ಪರಿಶಿಷ್ಟ ಜಾತಿಯವರಿಗೆ ಎಲ್ಲಿ ಕೊಡುತ್ತೀರಿ? ನೀನು 10 ವರ್ಷದಿಂದ ಸಾಗುವಳಿ ಮಾಡಿಲ್ಲ, 5 ವರ್ಷದಿಂದ ಸಾಗುವಳಿ ಮಾಡಿಲ್ಲ, ನೀನು ಜಮೀನಿನ ಪೊಸಿಷನ್‌ನಲ್ಲಿ ಇಲ್ಲ, ಯಾರೋ ಒಬ್ಬರು ಅದರ ಪೊಸಿಷನ್‌ನಲ್ಲಿ ಇದ್ದಾರೆ, ಅವರಿಗೆ ಜಮೀನು ಮಂಜೂರು ಮಾಡುತ್ತೇವೆ ಎಂದು ಹೇಳುತ್ತಾರೆ. ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾಗದ ಕಡೆಗೆ ತಾವು ಗಮನ ಹರಿಸಬೇಕು. ಈ ರೀತಿಯಾದರೆ ಹಿಂದುಳಿದ ವರ್ಗದ ಪರಿಸ್ಥಿತಿ ಇನ್ನು ಮುಂದಿನ 50- 100 ವರ್ಷಗಳಲ್ಲಿ ಏನಾಗುತ್ತದೆ? ನಾನೂ ಕೂಡ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ ಸದಸ್ಯನಾಗಿದ್ದೆ. ಆಗ ಸಮಿತಿಯು ಹಲವಾರು ಸರ್ಕಾರಿ ಕಛೇರಿಗಳಿಗೆ ವಿಚಾರಣೆಗಾಗಿ ಭೇಟಿ ನೀಡಿತ್ತು. ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಿ ಎಂದು ಸಮಿತಿಯು ಹೇಳಿದರೆ ಅಧಿಕಾರಿಗಳು ನಾವೇನು ಮಾಡಲು ಸಾಧ್ಯ? ಒಬ್ಬರೂ ಅರ್ಹರಾದ ಅಭ್ಯರ್ಥಿಗಳೇ ಸಿಗುವುದಿಲ್ಲ ಎನ್ನುತ್ತಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಹಿಂದುಳಿದ ವರ್ಗ ಕಲ್ಯಾಣಕ್ಕಾಗಿಯೇ ಪ್ರತ್ಯೇಕ ಖಾತೆಯಿದ್ದು ಅದಕ್ಕೊಬ್ಬರು ಪ್ರತ್ಯೇಕ ಮಂತ್ರಿಗಳಿದ್ದಾರೆ. ಹಿಂದುಳಿದ ವರ್ಗಗಳ ನಿಗಮವೂ ಕೂಡ ಇದೆ, ಅದಕ್ಕೊಬ್ಬರು ಎಂ.ಡಿ., ಆ ಎಂ.ಡಿ.ಕೈಕೆಳಗೆ ಹಲವಾರು ಜನ ನೌಕರರು ಇದ್ದಾರೆ. ಈ ಬಗ್ಗೆ ಮಿಕ್ಕಿದ್ದೆಲ್ಲಾ ನಿಮಗೆ ಗೊತ್ತೇ ಇದೆ. ಒಂದು ಸಣ್ಣ ವಿಷಯವನ್ನು ಹೇಳಬೇಕು. ಅದೇನೆಂದರೆ, ಹಿಂದುಳಿ॰ ವರ್ಗಗಳ ಮಕ್ಕಳಿಗೆ ಇವತ್ತು ಸಮವಸ್ತ್ರಗಳನ್ನು ಕೊಡಲಾಗುತ್ತಿದೆ. ನವೆಂಬ॰ ಅಥವಾ ಡಿಸೆಂಬರ್ ತಿಂಗಳಲ್ಲಿ ಸಮವಸ್ತ್ರಗಳನ್ನು ಕೊಡಲಾಗುತ್ತದೆ. ಆ ಸಮವಸ್ತ್ರಗ॰ು ಯಾವ ರೀತಿ ಇರುತ್ತದೆ ಎಂದರೆ, ಹತ್ತು ವರ್ಷದ ಹುಡುಗರಿಗೆ 7 ವರ್ಷದ ಹುಡುಗನ ಸೈಜು, 7 ವರ್ಷದ ಹುಡುಗನಿಗೆ 10 ವರ್ಷದ ಹುಡುಗರ ಸೈಜು ಸಮವಸ್ತ್ರ ಇರುತ್ತದೆ. ಎಲ್ಲೋ ಜನತಾ ಬಜಾರ್‌ನಲ್ಲಿ ಇವುಗಳನ್ನು ಹೊಲಿಸುತ್ತಾರೆ. ಹೊಲಿಸಿ ತೆಗೆದುಕೊಂಡು ಬಂದು ಕೊಡುತ್ತಾರೆ. ಸರ್ಕಾರ ಕೊಟ್ಟಿರುವುದನ್ನು ಇನ್ನೇನು ಮಾಡಲು ಸಾಧ್ಯ ಎಂದು ವಿಧಿಯಿಲ್ಲದೆ ಮನಸ್ಸು ಪೂರ್ತಿಯಾಗಿ ಆ ಸಮವಸ್ತ್ರಗಳನ್ನು ವಿಧ್ಯಾರ್ಥಿಗಳು ಹಾಕಿಕೊಳ್ಳುತ್ತಾರೆ. ಪಠ್ಯಪುಸ್ತಕಗಳಿಗಾಗಿ ಒಬ್ಬರಿಗೆ 65 ರೂ. ಕೊಡುತ್ತಾರೆ. ಇವತ್ತು ಒಂದು ಲೇಖಕ್ ಪುಸ್ತಕಕ್ಕೇ 10 ರೂ. ಆಗುತ್ತದೆ. ಹೀಗಿರುವಾಗ ಆ 65 ರೂ.ನಲ್ಲಿ ಹೇಗೆ ಪಠ್ಯಪುಸ್ತಕಗಳನ್ನು ಕೊಂಡು ವಿದ್ಯಾರ್ಥಿಗಳು ಓದುವುದಕ್ಕಾಗುತ್ತದೆ. ಒಬ್ಬ ವಿದ್ಯಾರ್ಥಿಗೆ 65 ರೂ.ಗಳಿಗಿಂತ ಹೆಚ್ಚಾಗಿ ಕೊಡುವುದಿಲ್ಲ ಅನ್ನುತ್ತಾರೆ. ಹೀಗಾದರೆ ವಿದ್ಯಾರ್ಥಿಗಳು ಓದುವುದು ಹೇಗೆ? ಹೇಗೆ ಉದ್ಧಾರವಾಗುವುದು? ಕುಟುಂಬಕ್ಕೆ ಒಳ್ಳೆಯ ಹೆಸರು ತರುವುದು ಹೇಗೆ? ಊರಿಗೆ ಒಳ್ಳೆಯ ಹೆಸರು ತರುವುದು ಹೇಗೆ ಸಾಧ್ಯವಾಗುತ್ತದೆ? ವಿದ್ಯಾರ್ಥಿಗಳು ಎಲ್ಲರೂ ಸತ್ಪ್ರಜೆಗಳಾಗಬೇಕು, ಕರ್ನಾಟಕ ರಾಜ್ಯದ ಹೆಸರು ಹೇಳಬೇಕು, ನಮ್ಮ ಭಾರತ ದೇಶದ ಪ್ರಜೆಗಳಾಗಬೇಕು, ಎಂದು ನಾವು ಬರೀ ಸ್ಪೀಚ್‌ಗಳನ್ನು ಮಾಡಿದರೆ ಆಗುವುದಿಲ್ಲ. ಈ

ವಿಷಯದಲ್ಲಿ ಸರ್ಕಾರದವರು ಸ್ವಲ್ಪ ತಮ್ಮ ಕಣ್ಣು ಬಿಟ್ಟು ಈ ಕಡೆಗೆ ನೋಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಮನವಿ ಮಾಡುತ್ತಿದ್ದೇನೆ. ಇನ್ನು ಹಾಸ್ಟೆಲ್‌ಗಳ ಬಗ್ಗೆ ಹೇಳುವುದಾದರೆ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರ ವಿದ್ಯಾರ್ಥಿ ನಿಲಯಗಳನ್ನು ಊರಿನಲ್ಲೇ ಕಟ್ಟಿ ಎಂದು ಹೇಳುತ್ತೇನೆ. ಈ ದಿವಸ ಸಮಾಜದಲ್ಲಿ ಎಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ, ಆ ವಿದ್ಯಾರ್ಥಿಗಳು ನಾವೂ ಹಿಂದುಳಿದ ವರ್ಗದವರೆಂದು ಅಂದುಕೊಳ್ಳುತ್ತಾರೆ. ಅವರನ್ನು ತೆಗೆದುಕೊಂಡು ಹೋಗಿ ಊರಿನಿಂದ ಮೂರು ಮೈಲಿ ಆಚೆಗೆ ಹಾಕಿರುತ್ತಾರೆ. ದೊಡ್ಡ ದೊಡ್ಡ ಮಲ್ಟಿಸ್ಟೋರಿಡ್ ಬಿಲ್ಡಿಂಗ್‌ಗಳನ್ನು ಕಟ್ಟಲಿಕ್ಕೆ ಟೌನಿನಲ್ಲಿ ಜಾಗವಿರುತ್ತದೆ; ಆಫೀಸ್‌ಗಳನ್ನು ಕಟ್ಟಲಿಕ್ಕೆ ಜಾಗ ಇರುತ್ತದೆ, ದೊಡ್ಡ ದೊಡ್ಡ ಟಾಕೀಸ್‌ಗಳನ್ನು ಕಟ್ಟಲಿಕ್ಕೆ ಸರ್ಕಾರಕ್ಕೆ ಜಾಗ ಇರುತ್ತದೆ. ಆದರೆ ಹಿಂದುಳಿದ ವರ್ಗ, ಪರಿಶಷ್ಟ ಜಾತಿ/ಪರಿಶಿಷ್ಟ ಪಂಗಡದವರ ಒಂದು ಹಾಸ್ಟೆಲ್ ಕಟ್ಟುವುದಕ್ಕೆ ಸರ್ಕಾರಕ್ಕೆ ಟೌನಿನಲ್ಲಿ ಒಂದು ಜಾಗ ಸಿಗುವುದಿಲ್ಲವೇ? ಹಾಸ್ಟೆಲ್‌ಗಳನ್ನು ಊರಿನಿಂದ 3 ಕಿ.ಮೀ. ಹೊರಗೆ ನಿರ್ಮಿಸಲಾಗಿರುತ್ತದೆ. ಆ ಹಾಸ್ಟೆಲ್‌ಗಳಲ್ಲಿರತಕ್ಕಂತಹ ವಾರ್ಡನ್‌ಗಳ ಬಗ್ಗೆ ನಾವೇನೂ ಮಾತನಾಡುವಂತಿಲ್ಲ, ಹುಡುಗರೇನೂ ಪ್ರಶ್ನೆ ಮಾಡುವಂತಿಲ್ಲ, ಹುಡುಗರೇನಾದರೂ ವಾರ್ಡನ್‌ನನ್ನು ಪ್ರಶ್ನೆ ಮಾಡಿದರೆ, ಮೇಷ್ಟರಿಗೆ ಹೇಳಿ ನಿನ್ನನ್ನು ಫೇಲ್ ಮಾಡಿಸುತ್ತೇನೆ ಎಂದು ಹೇಳುತ್ತಾರೆ. ಟಿಎಪಿಸಿಎಂಎಲ್‌ಎಸ್ ನಲ್ಲಿ ರೇಷನ್ ತರುತ್ತಾರೆ. ಪ್ರತಿ ಹಿಂದುಳಿದ ವರ್ಗ: ಅಲ್ಪಸಂಖ್ಯಾತರ ಹಾಸ್ಟೆಲ್‌ಗಳ ವಾರ್ಡನ್‌ಗಳು ಟಿಎಪಿಸಿಎಂಎಲ್‌ಎಸ್ ನಲ್ಲಿ ಆಹಾರ ಧಾನ್ಯಗಳನ್ನು ತೆಗೆದುಕೊಂಡು ಬಂದು ಪ್ರತಿ ಸರ್ಕಾರಿ ರಜಾ ದಿವಸ, ತಿಂಗಳ ನಾಲ್ಕು ಭಾನುವಾರ, ಅಥವಾ ಇತರೆ 1-2 ರಜಾ ದಿನ ಬಂದರೆ, ಆ ದುಡ್ಡೆಲ್ಲಾ ಅವರು ಡ್ರಾ ಮಾಡುತ್ತಾರೆ. ಹುಡುಗರ ಹೆಸರು ಹೇಳಿ ಮೋಸ ಮಾಡುತ್ತಾರೆ. ಇದರ ಬಗ್ಗೆ ಸಂಬಂಧಪಟ್ಟ ಸರ್ಕಾರದ ಮಂತ್ರಿಗಳು ಕಣ್ಣು ತೆರೆದು ನೋಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಕಟ್ಟಡ ಅಂಕಿ ಅಂಶಗಳ ಬಗ್ಗೆ ಸರ್ಕಾರ ನಮಗೆ ಮಾಹಿತಿ ಕೊಟ್ಟಿದೆ. ಅದರಂತೆ 1997-98ನೇ ಸಾಲಿನಲ್ಲಿ 49 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು, 3 ನವೋದಯ ಮಾದರಿ ಶಾಲೆಗಳು 25 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹೀಗೆ ಒಟ್ಟು 77 ವಿದ್ಯಾರ್ಥಿನಿಲಯಗಳನ್ನು ಕಟ್ಟಬೇಕೆಂದು ಈ ಸಲ ಬಡ್ಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಂಡಿರುತ್ತೀರಿ. ಇಲಾಖಾ ವತಿಯಿಂದ ನಿರ್ಮಿಸಲಾಗುತ್ತಿರುವ ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ಸಂಖ್ಯೆ 424. ಹೀಗ್ಯಾಕೆ ಆಯಿತು? ಒಂದು ಹಾಸ್ಟೆಲ್ ಕಟ್ಟಬೆಕಾದರೆ ಮೂರು-ನಾಲ್ಕು ವರ್ಷಗಳಾಗಬೇಕೇ? ಹಿಂದಿನ ಸರ್ಕಾರದ ಅವಧಿಯಲ್ಲಿ ಕಟ್ಟಲು ಆರಂಭಿಸಿದ ಹಾಸ್ಟೆಲ್‌ಗಳನ್ನು ಈ ಸರ್ಕಾರದ ಅವಧಿಯಲ್ಲಿ ಮುಂದುವರೆಸುತ್ತಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ನಮ್ಮ ಕೆಲವು ನೆಚ್ಚಿನ ಸ್ನೇಹಿತರು ನಮ್ಮ ಸರ್ಕಾರ ಮಾಡಿರತಕ್ಕಂತಹ ಪ್ರಗತಿ ಬೇರ್‍ಯಾರೂ ಮಾಡಿಲ್ಲ ಎಂದು ಹೇಳಿದರು. ಹಾಗಾದರೆ ಹಿಂದಿನವರು ಸರ್ಕಾರ ನಡೆಸಿಯೇ ಇಲ್ಲವೇ? ಜನರಿಗೆ ಒಳ್ಳೆಯದು ಏನೂ

ಮಾಡೇ ಇಲ್ಲವೇ? ಕೆಲವು ಮಾನ್ಯ ಸದಸ್ಯರು ನಾವು ನಡೆಸಿದ ರೀತಿಯಲ್ಲಿ, ನಮ್ಮ ಸ್ಟೈಲ್‌ನಲ್ಲಿ ಯಾರು ಸರ್ಕಾರ ನಡೆಸಿಯೇ ಇಲ್ಲವೆಂದು ಹೇಳುತ್ತಾರೆ. ಈ 424 ವಿದ್ಯಾರ್ಥಿ ನಿಲಯಗಳ ಕಟ್ಟಡಗಳು ಇನ್ನೂ ನಿರ್ಮಾಣಗೊಳ್ಳುತ್ತಿವೆ ಎಂದು ವರದಿಯಲ್ಲಿ ಇದೆ.

4.10 ಪಿ.ಎಂ

ಇದರಿಂದ ತಮ್ಮ ಕರ್ನಾಟಕ ರಾಜ್ಯದ ಲ್ಯಾಂಡ್ ಆರ್ಮಿಯವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂದು ಗೊತ್ತಾಗುತ್ತದೆ. ಅವರು ಕಟ್ಟಿರತಕ್ಕಂಥ ಕಟ್ಟಡಗಳು ಒಂದಾದರೂ ಸರಿ ಇದೆಯೇ? ಲ್ಯಾಂಡ್ ಆರ್ಮಿಯವರು ಕಟ್ಟಿರತಕ್ಕಂಥೆ ಕಟ್ಟಡಗಳ ಗೋಡೆಗಳು 10 ವರ್ಷಗಳಿಗಿಂತ ಮೊದಲೇ ಬಿದ್ದುಹೋಗುತ್ತವೆಂದು ಮಾನ್ಯ ರಾಜಣ್ಣನವರು ಮಾತನಾಡುತ್ತಾ ಹೇಳಿದರು. ಲ್ಯಾಂಡ್ ಆರ್ಮಿಯವರು ಕಟ್ಟಿರತಕ್ಕಂಥ ಕಟ್ಟಡಗಳಿಗೆ ಒಂದಕ್ಕೂ ಸರಿಯಾಗಿ ಲೈಟ್‌ಗಳು ಇಲ್ಲ, ಲೈಟ್ ಇದ್ದರೆ ಸರಿಯಾಗಿ ಪ್ಲಾಸ್ಟರಿಂಗ್ ಇಲ್ಲ, ಪ್ಲಾಸ್ಟರಿಂಗ್ ಇದ್ದರೆ ಮೇಲಿನಿಂದ ನೀರು ಸೋರುತ್ತದೆ, ಇಂಥ ಕಳಪೆ ಕಾಮಗಾರಿಯನ್ನು ನಮ್ಮ ಲ್ಯಾಂಡ್ ಆರ್ಮಿಯವರು ಮಾಡಿ, ಇವತ್ತಿನ ದಿವಸ ನಮ್ಮ ಕರ್ನಾಟಕ ರಾಜ್ಯದಲ್ಲಿ 424 ಹಾಸ್ಟೆಲ್‌ಗಳು ನಿರ್ಮಾಣ ಹಂತದಲ್ಲಿ ಇವೆಯೆಂದು ಹೇಳಿದ್ದಾರೆ. ಇನ್ನು ಆಶ್ರಯ ಶಾಲೆಗಳ ಬಗ್ಗೆ ಹೇಳುವುದಾದರೆ, ಕೋಲಾರ ಜಿಲ್ಲೆ, ಕೊಡಗು ಜಿಲ್ಲೆ ಮತ್ತು ಹಾಸನಜಿಲ್ಲೆ ಈ ಮೂರು ಜಿಲ್ಲೆಗಳಲ್ಲಿ ಆಶ್ರಮ ಶಾಲೆಗಳನ್ನು ಓಪನ್ ಮಾಡುವ ಬಗ್ಗೆ ಪ್ರೋಗ್ರೆಸ್ ನಿಲ್ ಎಂದು ಹೇಳಿದ್ದಾರೆ. ಈ ಜಿಲ್ಲೆಗಳಲ್ಲಿ ಆಶ್ರಯ ಶಾಲೆಗಳನ್ನು ತೆರೆಯುವುದು ಬೇಡವೆಂದು ಯಾರಾದರೂ ಹೇಳಿದ್ದಾರೆಯೇ? ಇದನ್ನು ಪ್ರಾರಂಭಮಾಡಲು ಈ ಜಿಲ್ಲೆಗಳಲ್ಲಿ ಜಾಗವಿಲ್ಲವೇ? ಇಲ್ಲಿ ಆಶ್ರಮ ಶಾಲೆಗಳನ್ನು ಮಾಡುವುದಕ್ಕೆ ಮಕ್ಕಳು ಇಲ್ಲವೆ? ಹಾಗೆಯೇ ಸರ್ಕಾರದ ಪ್ರೋಗ್ರೆಸ್ ಪುಸ್ತಕದಲ್ಲಿ ಅರ್ಬನೈಜೇಷನ್ ಸ್ಕೂಲ್ ನಿಲ್ ಎಂದು ಕೊಟ್ಟಿದ್ದಾರೆ. ಮೈನಾರಿಟೀಸ್ ಹಾಸ್ಟಲ್ ನಿಲ್, ಸ್ಯಾಂಕ್ಷನ್ಡ್ ಸ್ಟ್ರೆಂಗ್ತ್‌ನಿಲ್, ರೆಸಿಡೆನ್ಸಿಯಲ್ ಸ್ಕೂಲ್ ನಿಲ್, ಎಲ್ಲವೂ ನಿಲ್ ಆದರೆ ರಾಜ್ಯದ ಪರಿಸ್ಥಿತಿ ಏನು? ಅದರಲ್ಲೂ ಕೋಲಾರ ಕೊಡಗು ಹಾಸನ....

ಶ್ರೀ ಮಾಲಿಕಯ್ಯ ಗುತ್ತೇದಾರ್ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ ರಾಜ್ಯದಲ್ಲಿ ಬೇಡಿಕೆ ಯಾವ ರೀತಿ ಇರುತ್ತದೆ ಆ ರೀತಿ ಹಾಸ್ಟಲುಗಳನ್ನಾಗಲಿ, ರೆಸಿಡೆನ್ಸಿಯಲ್ ಸ್ಕೂಲ್‌ಗಳನ್ನಾಗಲೀ ಕೊಡುತ್ತೇವೆ. ಕೋಲಾರ ಜಿಲ್ಲೆಯಲ್ಲಿ ಬೇಡಿಕೆ ಇಲ್ಲದೆಯೇ ನಾವು ಆಶ್ರಮ ಶಾಲೆಗಳನ್ನು ಅಥವಾ ಹಾಸ್ಟಲುಗಳನ್ನು ಕೊಡವುದಕ್ಕಾಗುತ್ತದೆಯೇ? ಮಾನ್ಯ ಸದಸ್ಯರು ಸ್ವಲ್ಪ ವಿಷಯ ತಿಳಿದುಕೊಂಡು ಮಾತನಾಡಿದರೆ ಒಳ್ಳೆಯದಾಗುತ್ತದೆ.... ಆಶ್ರಮ ಶಾಲೆಗಳು, ಮುರಾರ್ಜಿದೇಸಾಯಿ ಸ್ಕೂಲ್‌ಗಳು ಇವನ್ನು ಬೇಡಿಕೆ ಇರುವ ಕಡೆ ಕೊಟ್ಟಿದ್ದೇವೆ. ಹಾಸ್ಟೆಲ್‌ಗಳನ್ನು 250 ಇದ್ದುದ್ದನ್ನು 350ಕ್ಕೆ ಹೆಚ್ಚು ಮಾಡಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಸರಿಯಾದ ಅಂಕಿಅಂಶಗಳನ್ನು ಇಟ್ಟುಕೊಂಡು ಹೇಳಿದರೆ ಒಳ್ಳೆಯದು.

ಅಧ್ಯಕ್ಷರು: ಮಾನ್ಯ ಮಂತ್ರಿಗಳೆ, ಮಾನ್ಯ ಸದಸ್ಯರ ಹತ್ತಿರ ಏನು ದಾಖಲೆ ಇದೆಯೋ ಅದನ್ನು ನೋಡಿ ಅವರು ಏನು ಹೇಳುವುದಕ್ಕೆ ಅಪೇಕ್ಷೆ ಪಡುತ್ತಾರೋ ಅದನ್ನು ಹೇಳಲಿ.

ಶ್ರೀ ಮಾಲಿಕಯ್ಯ ವಿ.ಗುತ್ತೇದಾರ್: ಮಾನ್ಯ ಅಧ್ಯಕ್ಷರೆ, ಆ ರೀತಿ ಹೇಳುವುದು ಬೇಡ. ಏಕೆಂದರೆ ಅದು ರೆಕಾರ್ಡ್‌ಗೆ ಹೋಗಿಬಿಡುತ್ತದೆ.

ಅಧ್ಯಕ್ಷರು: ರೆಕಾರ್ಡ್‌ಗೆ ಹೋಗಿಯೇ ಹೋಗುತ್ತದೆ. ರೆಕಾರ್ಡ್‌ಗೆ ಎಲ್ಲವೂ ಹೋಗಬೇಕು. ರೆಕಾರ್ಡ್ ಇರುವುದೇ ಅದಕ್ಕೆ. ಹೇಳಿದ್ದೆಲ್ಲವನ್ನೂ ಸಂಗ್ರಹಿಸಿ ಇಟ್ಟುಕೊಳ್ಳುವುದಕ್ಕೆ ರೆಕಾರ್ಡ್ ಇರುವುದು. ಅವರು ಏನು ಹೇಳುತ್ತಾರೋ ಹೇಳಲಿ. ಆಮೇಲೆ ತಾವು ಉತ್ತರ ಕೊಡುವಾಗ ತಾವು ಹೇಳಿದ್ದೆಲ್ಲ ರೆಕಾರ್ಡ್‌ಗೆ ಹೋಗುತ್ತದೆ. ಅದಕ್ಕೋಸ್ಕರ ಎಲ್ಲವನ್ನೂ ಹಿಡಿದಿಟ್ಟುಕೊಳ್ಳಬೇಕೆಂದು ನಾವು ದೊಡ್ಡ ರೆಕಾರ್ಡ್‌ನ್ನು ಇಟ್ಟಿದ್ದೇವೆ.

ಶ್ರೀ ಕುಂಬಳೆ ಸುಂದರ್‌ರಾವ್: ಮಾನ್ಯ ಅಧ್ಯಕ್ಷರೆ, ಅವರು 'ನಿಲ್' 'ನಿಲ್' ಎಂದು ಹೇಳಿದಾಗ, ಮಾತನಾಡುವುದು ಬೇಡ 'ನಿಲ್ಲು' ಎಂದು ನಾವು ಹೇಳುವುದಕ್ಕೆ ಆಗುವುದಿಲ್ಲ. ಇವರು ಕಡೆಗೆ ಫುಲ್ ಎಂದು ಹೇಳಿದರೆ....

ಶ್ರೀ ಎಂ.ಶಿವಾನಂದ: ಮಾನ್ಯ ಅಧ್ಯಕ್ಷರೆ, ಸತ್ಯ ಹೇಳಿದರೆ ಅದು ಸ್ವಲ್ಪ ಕಹಿ ಎಂದು ನಮ್ಮ ಸ್ನೇಹಿತರು ಹೇಳುತ್ತಿದ್ದಾರೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಹಾಗೆ ಈ ಪುಸ್ತಕವನ್ನು ಯಾರು ಮಾಡಿಸಿದ್ದು ಸ್ವಾಮಿ? ಸರ್ಕಾರವೇ ಕೊಟ್ಟಿರುವಂಥ....

ಅಧ್ಯಕ್ಷರು: ಶಿವಾನಂದ, ಈ 'ನಿಲ್' ಇರುವುದನ್ನೆಲ್ಲಾ ಹೇಳಿದರೆ. 'ಫುಲ್' ಯಾವುದಾದರೂ ಇದ್ದರೆ ಅದನ್ನು ಒಂದೆರಡು ಹೇಳಿ.

ಶ್ರೀ ಎಂ.ಶಿವಾನಂದ: ಮಾನ್ಯ ಅಧ್ಯಕ್ಷರೆ, 'ಬ್ಯಾಕ್‌ವರ್ಡ್ ಕ್ಲಾಸಸ್ 1996-97' ಎಂದು ಈ ಪುಸ್ತಕವನ್ನು ಯಾರು ಮಾಡಿದ್ದು? ಸರ್ಕಾರ ಅಲ್ಲವೇ? ನಾವು ಅಂತೂ ಈ ಪುಸ್ತಕವನ್ನು ಪ್ರಿಂಟ್ ಮಾಡಿಸಿ ಇಲ್ಲಿ ತಂದು ಭಾಷಣ ಮಾಡುತ್ತಿಲ್ಲ. ಈ ವಿಷಯ ಹೋಗಲಿ ಬಿಡಿ. ನಮ್ಮ ಮಾನ್ಯ ಮಂತ್ರಿಗಳು ಸ್ವಲ್ಪ ಕೋಪ ಮಾಡಿಕೊಳ್ಳುತ್ತಿದ್ದಾರೆ. ಏನು ಮಾಡುವುದಕ್ಕಾಗುತ್ತದೆ? ಹಿಂದುಳಿದ ವರ್ಗಗಳ ಹಾಸ್ಟಲುಗಳನ್ನು ಹೆಚ್ಚು ಹೆಚ್ಚು ಪ್ರಾರಂಭ ಮಾಡಬೇಕು. ಹಿಂದುಳಿದ ವರ್ಗಗಳ ಹಾಸ್ಟಲುಗಳು ವರ್ಷಕ್ಕೆ 25 ಎಂದು ಯಾವ ಆಧಾರದಮೇಲೆ ಗುರಿ ಇಟ್ಟುಕೊಂಡಿದ್ದೀರಿ? ಎಂ.ಎಲ್.ಎ.ಗಳು ಅಥವಾ ಎಂ.ಎಲ್.ಸಿ.ಗಳು ಅಥವಾ ಮಂತ್ರಿಗಳು ಹೇಳಿದರು ಎಂದು ಇಷ್ಟು ಗುರಿ ಇಟ್ಟುಕೊಂಡಿದ್ದೀರಾ? ಆಡಳಿತ ಪಕ್ಷದವರು ಮಂತ್ರಿಗಳು ಇವರುಗಳು ಹೇಳಿದ್ದಷ್ಟೇ ನೀವು ಮಾಡಿದರೆ ಈ ಕಡೆ ಕುಳಿತಿರತಕ್ಕಂಥ ಸರ್ವಸದಸ್ಯರ ಗತಿ ಏನಾಗಬೇಕು?

ಆದ್ದರಿಂದ ಎಲ್ಲಾ ಕಡೆಯೂ ಹಿಂದುಳಿದ ವರ್ಗಗಳ ಹಾಸ್ಟಲುಗಳನ್ನು ಪ್ರಾರಂಭ ಮಾಡಬೇಕು. ಇನ್ನು ಆಡಳಿತದ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಹೇಳಿ, ನಮ್ಮ ಜಿಲ್ಲೆಯ ಆಡಳಿತ ಹೇಗಿದೆ? ಮಾನ್ಯ ಬೈರೇಗೌಡರ ಆಡಳಿತ ಹೇಗಿದೆ? ಇವೆಲ್ಲವನ್ನೂ ಹೇಳಿ. ಬಿಡಬೇಡಿ....ಅವರಿಗೆ ಈಗ ಕ್ಲೂ ಕೊಟ್ಟಿದ್ದೇನೆ.

ಶ್ರೀ ಎಂ.ಶಿವಾನಂದ: ಮಾನ್ಯ ಅಧ್ಯಕ್ಷರೆ, ಈ 'ಆಡಳಿತ' ಎನ್ನುವ ಪದ ಎಲ್ಲಿಂದ ಬಂತು ಎಂಬುದನ್ನು ನೋಡೋಣ. ಈ ಪೊಲಿಟಿಕಲ್ ಥಿಂಕರ್ಸ್ ಲೈಕ್ ಅರಿಸ್ಟಾಟಲ್ ಪ್ಲೇಟೋ ಏನು ಹೇಳುತ್ತಾರೆಂದರೆ-ಈ ಅಡ್ಮಿನಿಸ್ಟ್ರೇಷನ್ ಎಂಬ ಪದದ ಅರ್ಥವೇ 'ಆಡಳಿತ' ಲ್ಯಾಟಿನ್ ಭಾಷೆಯಲ್ಲಿ ಅಡ್-ಮಿನಿಸ್ಟರ್ ಎಂಬ ಮೂಲಭೂತ ಪದದಿಂದ ಬಂದಿರತಕ್ಕಂಥ ಆಡಳಿತದ ಕಾರ್ಯತತ್ಪರವೇ ಸೂಚಿಸುತ್ತದೆ. 'ಲೂಟರ್ ಗ್ಯಾರಿಕ್' ಅವರು ಪೊಲಿಟಿಕಲ್ ಫಿಲೋಸಫರ್. ಒಂದು ಸರ್ಕಾರ, ಒಂದು ಆಡಳಿತ, ಒಂದು ರಾಜ್ಯ ಎಂದರೆ ಯಾವ ರೀತಿ ಇರಬೇಕು ಎನ್ನುವುದಕ್ಕೆ 'POSDCORB' ಎಂದು ಎಕ್ಸ್‌ಪ್ಲೇನ್ ಮಾಡಿದ್ದಾರೆ. 'ಪಿ' ಎಂದರೆ-ಪ್ಲಾನಿಂಗ್; 'ಒ' ಎಂದರೆ-ಆರ್ಗನೈಜೇಷನ್; 'ಎಸ್' ಎಂದರೆ ಸ್ಟಾಫ್, 'ಡಿ' ಎಂದರೆ-ಡೈರೆಕ್ಟಿಂಗ್; 'ಸಿ' ಎಂದರೆ- ಕೋಆರ್ಡಿನೇಷನ್; 'ಆರ್' ಎಂದರೆ-ರಿಪೋರ್ಟಿಂಗ್; 'ಬಿ' ಎಂದರೆ-ಬಜೆಟ್. ಈ ಆಧಾರದ ಮೇಲೆ ಸರ್ಕಾರ ಆಡಳಿತ ಮಾಡಬೇಕೆಂದು ಹೇಳುತ್ತಾರೆ. ಯಾವುದೇ ಕ್ಷೇತ್ರವಾಗಲಿ, ಯಾವುದೇ ಅಧಿಕಾರಿಯಾಗಲಿ, ಯಾವುದೇ ನಾಯಕರಾಗಲಿ ಅವರು ಮಾಡತಕ್ಕಂಥ ಆಡಳಿತದ ಮೇಲೆ ಸರ್ಕಾರದ ಭವಿಷ್ಯ ಅವಲಂಬಿಸಿರುತ್ತದೆ. ಮಂತ್ರಿಯಾಗಲಿ, ಅಧಿಕಾರಿಯಾಗಲಿ ಅವರಿಗೆ ವ್ಯಕ್ತಿಗತ ಚೈತನ್ಯ ಮುಖ್ಯವಾಗಿ ಇರಬೇಕು. ಈ ರಾಜ್ಯಕ್ಕೆ ಏನಾದರೂ ಮಾಡಬೇಕು, ನಮ್ಮ ಜಿಲ್ಲೆಗೆ ಏನಾದರೂ ಮಾಡಬೇಕೆಂದು ಸ್ವಪ್ರತಿಷ್ಠೆ ಇಟ್ಟುಕೊಂಡು, ವ್ಯಕ್ತಿಗತ ಚೈತನ್ಯ ಇಟ್ಟುಕೊಂಡು ಕೆಲಸ ಮಾಡಬೇಕೆಂದು 'ಜಾನ್ ಮಿಲ್ಲೆಟ್' ಅವರು ಒಂದು ಹೇಳಿಕೆಯನ್ನು ಕೊಡುತ್ತಾರೆ. ಗುರಿ ಸಾಧಿಸುವ ಆಕಾಂಕ್ಷೆ ಇರಬೇಕು, ಆತ್ಮವಿಶ್ವಾಸ ಇರಬೇಕು, ಸಾರ್ವಜನಿಕ ಕ್ಷೇಮದ ಮೇಲೆ ಆಸಕ್ತಿ, ಜನರ ಮನವೊಲಿಸುವ ಲಕ್ಷಣ, ಸೂರ್ಯನ ಬೆಳಕು ಯಾವರೀತಿ ಎಲ್ಲರಿಗೂ ಅವಶ್ಯವೋ ಅದೇ ರೀತಿ ಮುಖ್ಯ ಕಾರ್ಯದರ್ಶಿಯಿಂದ ಹಿಡಿದು ಗುಮಾಸ್ತನವರೆಗೂ ಆಸಕ್ತಿ ಇರಬೇಕೆಂದು-ಜಾನ್ ಮಿಲ್ಲೆಟ್ ಅವರು ಹೇಳುತ್ತಾರೆ. ಈ ಬ್ಯುರೋಕ್ರಟಿಕ್ ಸಿಸ್ಟಮ್ ಬಗ್ಗೆ ನಮ್ಮ ಸದನದ ಕೆಲವಾರು ಮುಖಂಡರು ಸವಿಸ್ತಾರವಾಗಿ ತಿಳಿಸಿದ್ದಾರೆ. 12, 13 ಮತ್ತು 16ನೇ ಶತಮಾನದ ರಾಜರ ಕಾಲದಲ್ಲಿ ಅಧಿಕಾರಿಗಳು ರಾಜರ ಸೇವೆಗೆ ಮಾತ್ರ ಸೀಮಿತವಾಗಿದ್ದರು. ರಾಜರು ಏನು ಹೇಳುತ್ತಾರೋ ಅದನ್ನೇ ಅಧಿಕಾರಿಗಳು ಕೇಳಬೇಕು, ಬೇರೆ ಯಾರು ಏನೂ ಹೇಳಿದರೂ ಕೇಳುವುದಿಲ್ಲ, ಜನಬಾಯಿ ಬಡಿದುಕೊಂಡರೂ ನಾವು ನೋಡುವುದಿಲ್ಲ, ನೋಡುವುದಕ್ಕೆ ಕಣ್ಣು ಇಲ್ಲ, ಕೇಳುವುದಕ್ಕೆ

ಕಿವಿ ಇಲ್ಲ, ಎಂದು ರಾಜರ ಮಾತೇ ಆ ಅಧಿಕಾರಿಗಳಿಗೆ ವೇದವಾಕ್ಯವಾಗಿತ್ತು. ಅಂಥ ಪರಿಸ್ಥಿತಿ ಇವತ್ತಿನದಿವಸ ನಿರ್ಮಾಣವಾಗುತ್ತಿದೆ. 15ನೇ ಶತಮಾನದಲ್ಲಿ ರೆಡ್‌ಟೇಪಿಸಂ, ಫ್ಯೂಡಲ್ ಸಿಸ್ಟಮ್-ಫ್ಯೂಡಲ್ ಸಿಸ್ಟಮ್ ಎಂದರೆ ತಮಗೆ ಗೊತ್ತಿರಬಹುದು. ಹಿಂದೆ ಕಂದಾಯ ವಸೂಲಿ ಮಾಡಲು ಹೋಗುತ್ತಿದ್ದಂಥ ''ಫ್ಯೂಡಲ್ ಲಾರ್ಡ್ಸ್'' ಈತ ರೈತನ ಹತ್ತಿರ ಹೋಗಿ 'ಏನಯ್ಯಾ, ಸರ್ಕಾರಕ್ಕೆ ಕಂದಾಯ ಕೊಡಬೇಕೆಂದು' ಹೇಳುತ್ತಿದ್ದರು. ಅದಕ್ಕೆ ರೈತ ''ಸ್ವಾಮಿ, ಮಳೆ ಇಲ್ಲ, ಬೆಳೆ ಇಲ್ಲ, ದಯಮಾಡಿ ನಮ್ಮನ್ನು ರಕ್ಷಣೆ ಮಾಡಬೇಕೆಂದು ಹೇಳಿದಾಗ'' ರೈತನ ಹತ್ತಿರ ಆ ಲಾರ್ಡ್ಸ್-''ಆಯಿತು, ನಿಮಗೆ ಏನೋ ಮಾಫಿ ಮಾಡುತ್ತೇನೆ, ನನಗೆ ಏನು ಕೊಡುತ್ತೀಯಾ?'' ಎಂದು ಹೇಳುತ್ತಿದ್ದರು. ಹೀಗೆ ಸುಮಾರು 13-14ನೇ ಶತಮಾನದಲ್ಲಿ ಉದ್ಭವವಾದ ಈ ಲಂಚ ಇದುವರೆಗೆ ಮುಂದುವರೆದಿದೆ. ಇವತ್ತಿನ ದಿವಸ ಯಾರೇ ಒಬ್ಬ ಸಾರ್ವಜನಿಕರು....

ಅಧ್ಯಕ್ಷರು: ಈ ಲಂಚಕ್ಕೆ ಇಷ್ಟೊಂದು ವಯಸ್ಸಾಗಿದೆ ಎಂದು ನನಗಂತೂ ಗೊತ್ತಿರಲಿಲ್ಲ. ಈ ಲಂಚ ಪ್ರಾರಂಭವಾಗಿ ಬಹುಶಃ 20-30 ವರ್ಷ ಆಗಿರಬಹುದೆಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಎಂ.ಶಿವಾನಂದ: ಮಾನ್ಯ ಅಧ್ಯಕ್ಷರೆ, ಈಗ ಪರಿಸ್ಥಿತಿ ಏನಾಗಿದೆಯೆಂದರೆ ಲಂಚ ಕೊಡದಿದ್ದರೆ ನನ್ನ ಕೆಲಸ ಆಗುವುದಿಲ್ಲವೆಂದು ನನ್ನ ಮನಸ್ಸಿಗೆ ಬಂದುಬಿಟ್ಟಿದೆ.

ಅಧ್ಯಕ್ಷರು: ಆಲ್‌ರೈಟ್, ತಾವು ಕನ್‌ಕ್ಲೂಡ್ ಮಾಡಿ.

ಶ್ರೀ ಎಂ.ಶಿವಾನಂದ: ಯಾವುದೋ ಕೆಲಸ ಆಗಬೇಕೆಂದು ಒಂದು ಅರ್ಜಿ ಕೊಟ್ಟರೆ, ಆ ಕೆಲಸ ಆಗಬೇಕಾದರೆ ನಾನು ಏನೂ ಕೊಟ್ಟಿಲ್ಲವೆಂದರೆ ಆಗುವುದಿಲ್ಲ. ಇದು ನನ್ನ ಮನಸ್ಸಿಗೂ ಸಹ ಬಂದುಬಿಟ್ಟಿದೆ. ಏನೋ ಅಷ್ಟಿಷ್ಟು ಆತನ ಕೈಯಲ್ಲಿ ಹಣ ಇಟ್ಟರೆ ಕೆಲಸ ಗ್ಯಾರಂಟಿ ಆಗುತ್ತದೆಂದು ಇವತ್ತಿನ ದಿವಸ ಸಾರ್ವಜನಿಕರ ಮನಸ್ಸಿನಲ್ಲಿ ಬಂದುಬಿಟ್ಟಿದೆ. ಒಬ್ಬ ಮಂತ್ರಿಯವರಿಗೆ ಭಿನ್ನವತ್ತಳೆ ಕೊಟ್ಟರೆ ಅದರಿಂದ ನಮಗೆ ಏನೂ ಉಪಯೋಗವಾಗುವುದಿಲ್ಲ. ಮಂತ್ರಿಗಳ ಕಛೇರಿಯಿಂದ ಒಂದೇ ಒಂದು ಪತ್ರ ನಮಗೆ ಬರುತ್ತದೆ. ಅದರಲ್ಲಿ ಏನು ಬರೆದಿರುತ್ತಾರೆಂದರೆ - ತಾವು ಕಳುಹಿಸಿರುವ ಪತ್ರ ಸೇರಿದೆ. ವಿಷಯದ ಬಗ್ಗೆ ಸೂಕ್ತಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದೇನೆ; ಎಂದು ಪತ್ರ ಬರೆಯುತ್ತಾರೆ. ಸಂಬಂಧಪಟ್ಟವರು ಅಂದರೆ ಯಾರು? ಯಾರಲ್ಲಿಗೆ ನಾವು ಹೋಗಬೇಕು? ಜಂಟಿ ಕಾರ್ಯದರ್ಶಿಯವರನ್ನು ನೋಡಬೇಕೇ? ಉಪಕಾರ್ಯದರ್ಶಿಯವರನ್ನು ನೋಡಬೇಕೇ ಅಥವಾ ಅಧೀನ ಕಾರ್ಯದರ್ಶಿಯವರನ್ನು ಕಾಣಬೇಕೇ? ನಾವು ಯಾರನ್ನು ಭೇಟಿ ಮಾಡಬೇಕು? ಹಾಗೆಯೇ ಶಾಖಾಧಿಕಾರಿ, ಸೀನಿಯರ್ ಅಸಿಸ್ಟೆಂಟ್, ಜೂನಿಯರ್ ಅಸಿಸ್ಟೆಂಟ್, ಅಟೆಂಡರ್ಸ್ ಅಲ್ಲಿಯವರೆಗೆ ನಾವು ಹೋಗಬೇಕು. ನಾವು ಒಳ್ಳೆಯ ಡಿಟೆಕ್ಟೀವ್ ಏಜೆನ್ಸಿ ತರಹ ಕೆಲಸ ಮಾಡಬೇಕಾಗುತ್ತದೆ. ಇದು ಈ ಆಡಳಿತದಲ್ಲಿ ಸುತ್ತುಬಳಸುವ

ವಿಧಾನವಾಗಿದೆ. ಮಂತ್ರಿಗಳು ಏನು ಬೇಕೋ ಅದನ್ನು ಮಾಡಬೇಕು. ಐ.ಎ.ಎಸ್. ಅಧಿಕಾರಿಗಳು ಜೊತೆಯಲ್ಲಿಯೇ ಇರುತ್ತಾರೆ. ಕಾನೂನು ಪ್ರಕಾರ ತಕ್ಷಣ ಆ ಕೆಲಸ ಮಾಡಿ ಎಂದು ಹೇಳಿದರೆ ಆಗುವುದಿಲ್ಲವೇ? ಕಾನೂನಿನ ಪ್ರಕಾರ ಮಾಡಲಿ. ಅದಕ್ಕೆ ಈ ಐ.ಎ.ಎಸ್. ಆಫೀಸರ್ ಎಂದರೆ ಐ ಆಂ ಸಾರಿ ಆಫೀಸರ್‌ಗಳು, ಬೇರೆ ಏನೂ ಅವರ ಜೊತೆ ಮಾತನಾಡಬೇಡಿ ಎಂದು ಟಿ.ಎನ್.ಶೇಷನ್ ಸಾಹೇಬರು ಹೇಳಿದ್ದಾರೆ. ಇಂಥ ಒಂದು ಪರಿಸ್ಥಿತಿಯಲ್ಲಿ ಪೊಸಿಷನ್ ಅಂಡ್ ಕ್ಲಾಸಿಫಿಕೇಷನ್ ಡೆಪ್ಯುಟಿ ಕಮಿಷನರ್ ರವರಿಂದ ಒಬ್ಬ ಗುಮಾಸ್ತನವರೆಗೆ ಯಾವ ರೀತಿ ಅಪಾಯಿಂಟ್‌ಮೆಂಟ್ ಆಗುತ್ತದೆ ಎಂದರೆ- ನಮ್ಮ ರಾಜಕೀಯ ಕೃಪಾಪೋಷಿತ ಮಹಾಮಂಡಳಿಯ ಆಶೀರ್ವಾದದಿಂದ ಪಡೆದಿರತಕ್ಕಂಥವರೇ ಆ ಸ್ಥಾನಗಳಲ್ಲಿ ಇರುವುದಕ್ಕೆ ಸಾಧ್ಯ. ರಾಜ್ಯಕ್ಕೆ ಒಳ್ಳೆಯದಾಗಲಿ, ಸರ್ಕಾರಕ್ಕೆ ಒಳ್ಳೆಯ ಹೆಸರು ಬರಲಿ, ಸರ್ಕಾರದ ಕೆಲಸ ದೇವರ ಕೆಲಸವೆಂದು ಪ್ರಾಮಾಣಿಕ ಪ್ರಯತ್ನ ಮಾಡುವುದಕ್ಕೆ ಯಾವ ಅಧಿಕಾರಿ ಬಂದಿದ್ದಾರೆ?

ಅಧ್ಯಕ್ಷರು: ಶಿವಾನಂದ, ಉಳಿದಿದ್ದೆಲ್ಲಾ ನೆಕ್ಸ್ಟ್ ಮಾತನಾಡೋಣ. ಇವತ್ತು ಇನ್ನು ಹಲವಾರು ಸದಸ್ಯರು ಮಾತನಾಡಬೇಕು. ಅದು ಏನಿದೆ ಅದನ್ನು ಓದಿಬಿಡಿ.

ಶ್ರೀ ಎಂ.ಶಿವಾನಂದ: ನಮ್ಮ ಪಕ್ಕದಲ್ಲಿರುವ ಸಂಗಣ್ಣನವರು ಏನು ಕೋಲಾರ ಜಿಲ್ಲೆಯವರು ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಹೌದಪ್ಪ ನಮಗೆ ಅಭಿಮಾನ ಏನು ಮಾಡುವುದು.

ಶ್ರೀ ಎಂ.ಶಿವಾನಂದ: ನಾನು ಇನ್ನು ನೇರವಾಗಿ ಕೆ.ಪಿ.ಎಸ್.ಸಿ.ಯಬಗ್ಗೆ ಮಾತನಾಡುವುದಾದರೆ. ಕೆ.ಪಿ.ಎಸ್.ಸಿ.ಯಲ್ಲಿ ಅರೆಕಾಲಿಕ ಮತ್ತು ದಿನಗೂಲಿಯ ಆಧಾರದ ಮೇಲೆ ನೇಮಕಗಳನ್ನು ಮಾಡಿದ ಮೇಲೆ ಅವರಿಗೆ ಸಂಬಳವನ್ನು ಕೊಡುವುದು ಬೇಡವೇ? ಯಾವಾಗಲೂ ಮುಷ್ಕರಗಳು ಒಂದು ದಿವಸ ಮಂತ್ರಿಗಳು ಈ ರೀತಿಯಾಗಿ ಹೇಳಿದರು ಎಂದು. ಕೆ.ಪಿ.ಎಸ್.ಸಿ. ಬಗ್ಗೆ ಒಂದು ಸಣ್ಣ ಉದಾಹರಣೆಗಳನ್ನು ಕೊಟ್ಟು ಬಿಡುತ್ತೇನೆ. ಆದುದರಿಂದ ದಯವಿಟ್ಟು ಇನ್ನು 5 ನಿಮಿಷಗಳ ಕಾಲವಕಾಶವನ್ನು ಕೊಟ್ಟುಬಿಟ್ಟರೆ ಎಲ್ಲವನ್ನೂ ಹೇಳಿ ಮುಗಿಸಿ ಬಿಡುತ್ತೇನೆ. ಕೆ.ಪಿ.ಎಸ್.ಸಿ.ಯಲ್ಲಿ ರಿಟರ್ನ್ ಟೆಸ್ಟ್ ಎಲ್ಲವನ್ನೂ ಬರೆದು ಬರುತ್ತಾರೆ. ನಿಮಗೆ ಇಂಟರ್‌ವ್ಯೂ ಕಳುಹಿಸಿದ್ದಾರೆ ಹೋಗಿ ಎಂದು. ಬಹಳ ಇನ್‌ಫ್ಲೂಯೆನ್ಸ್ ಇರತಕ್ಕಂತಹ ಕ್ಯಾಂಡಿಡೇಟ್‌ಗೆ ಏನು ಸ್ವಾಮಿ ಯಾವಾಗ ಬಂದಿರಿ ಎಂದು ಕೇಳುತ್ತಾರೆ. ಏನೂ ಇನ್‌ಫ್ಲೂಯೆನ್ಸ್ ಇಲ್ಲದ ಜನರಲ್ ಮೆರಿಟ್‌ನಲ್ಲಿ ಕಷ್ಟಪಟ್ಟು ಓದಿರುವಂಥವರಿಗೆ ಇವರು ಕೇಳುವುದು ಏನೆಂದರೆ, ವಿಧಾನಸೌಧಕ್ಕೆ ಮೆಟ್ಟಿಲುಗಳು ಎಷ್ಟು? ಕಾವೇರಿ ಜಲಾಶಯವನ್ನು ಕಟ್ಟುವುದಕ್ಕೆ ಎಷ್ಟು ಮೂಟೆ ಸಿಮೆಂಟ್ ಖರ್ಚಾಗಿದೆ? ಬಂಗಾಳಕೊಲ್ಲಿಯು ಯಾವಾ ಕಡೆಯಲ್ಲಿ ಹರಿಯುತ್ತಿದೆ ಎಂದು ಇಂತಹ ಪ್ರಶ್ನೆಗಳನ್ನು ಕೇಳಿದರೆ ಅವನು ಯಾವ ರೀತಿಯಲ್ಲಿ ಉದ್ಧಾರವಾಗುವುದು? ಆಡಳಿತದಲ್ಲಿ ಪ್ರಾಮಾಣಿಕ ವ್ಯವಸ್ಥೆಯ ನಿರ್ಮಾಣವಾಗಬೇಕು.

ನಮ್ಮ ಕೆಂಗಲ್ ಹನುಮಂತಯ್ಯನವರು ಒಂದೇ ಒಂದು ಪ್ರೊವರ್ಬ್ ಹೇಳಿದ್ದಾರೆ ದಯವಿಟ್ಟು ತಾವು ಅಪ್ಪಣೆಯನ್ನು ಕೊಟ್ಟರೆ ಹೇಳಿಬಿಡುತ್ತೇನೆ. ''ವಿಧಾನಸೌಧ ದೇವಾಲಯ, ದೇವಾಲಯದ ಒಂದೊಂದು ಮೆಟ್ಟಿಲುಗಳನ್ನು ಹತ್ತಿದಂತೆಲ್ಲಾ ಭಕ್ತನ ಹೃದಯದ ವೇಗ ಹೆಚ್ಚುತ್ತಾ ಹೋಗುತ್ತದೆ. ಭಕ್ತಿಭಾವ ತುಂಬಿ ಬರುತ್ತಿದೆ. ತನ್ನನ್ನು ತಾನೇ ಮರೆಯುತ್ತಾನೆ. ಸಂಪೂರ್ಣ ಶೀಲಾ ಮೂರ್ತಿಯಲ್ಲಿ ತಲ್ಲೀನನಾಗುತ್ತಾನೆ. ಅದರಂತೆ ನೂರಾರು ಮೈಲಿಗಳಿಂದ ಬಂದು ಸಾಮಾನ್ಯನು ತನ್ನ ಕೋರಿಕೆ ಸರ್ಕಾರದಿಂದ ಈಡೇರುತ್ತದೆ ಎನ್ನುವ ನಂಬಿಕೆ ವಿಶ್ವಾಸದಿಂದ ಬರುತ್ತಾನೆ. ಸರ್ಕಾರದ ಪ್ರತಿನಿಧಿಗಳಿಗೆ ಕೈಮುಗಿದು ಅಡ್ಡಬೀಳುತ್ತಾನೆ. ತನ್ನ ಬೇಡಿಕೆಗಳನ್ನು ಅರ್ಜಿಗಳ ಮೂಲಕ ನಿವೇದಿಸಿಕೊಳ್ಳುತ್ತಾನೆ. ಈ ರೀತಿಯ ಕೋರಿಕೆಯ ಅರ್ಜಿಯನ್ನು ಪರಿಶೀಲಿಸಿ ಅದಕ್ಕೆ ಸೂಕ್ತ ಪರಿಹಾರ ನೀಡಬೇಕಾದುದು ವಿಧಾನಸೌಧದಲ್ಲಿ ಕೆಲಸವನ್ನು ಮಾಡತಕ್ಕಂತಹ ಪ್ರತಿಯೊಬ್ಬರ ಆದ್ಯ ಕರ್ತವ್ಯ. ದೇವರನ್ನೇ ನಂಬಿ ಬಂದ ಭಕ್ತನಂತೆ ಈ ವಿಧಾನಸೌಧದಲ್ಲಿ ಇರುವ ಸರ್ಕಾರವೇ ದೇವರೆಂದು ನಂಬಿ ಬರುವ ಪ್ರತಿಯೊಬ್ಬ ಪ್ರಜೆಯ ಕಷ್ಟಸುಖಗಳನ್ನು ಆಲಿಸಿ ಅವನು ಕೊಟ್ಟ ಕೋರಿಕೆಯ ಅರ್ಜಿಯನ್ನು ಪರಿಶೀಲಿಸಿ ಸರ್ಕಾರ ಮಾಡಿರುವ ಕಾನೂನು ನಿಬಂಧನೆಗಳ ಚೌಕಟ್ಟಿನಲ್ಲಿ ನ್ಯಾಯವನ್ನು ಒದಗಿಸಿಕೊಟ್ಟು ಆರತಿ ತಟ್ಟೆಗೆ ಹಾಕುವ ಕೈಯನ್ನೇ ನೋಡಿ ಪೂಜಾರಿ ತೀರ್ಥ ಪ್ರಸಾದ ನೀಡುವಂತೆ ಆಗಬಾರದು. ಪೂಜಾರಿಯು ಮಾಡುವ ಪಕ್ಷಪಾತ, ಅಪಚಾರ, ಅನಾಚಾರದಿಂದ ಭಕ್ತನಿಗೆ ದೇವಾಲಯಕ್ಕೆ ಹೋಗುವ ಆಸೆಯನ್ನು ತೊರೆಯುತ್ತಾನೆ. ದೇವರಲ್ಲಿ ನಂಬಿಕೆ ಬರುವುದಕ್ಕೆ ಪ್ರಾರಂಭವಾಗುತ್ತಿದೆ. ಅದರಂತೆ ವಿಧಾನಸೌಧಕ್ಕೆ ಬಂದ ಪ್ರತಿಯೊಬ್ಬ ಪ್ರಜೆಯನ್ನು ಒಂದೇ ದೃಷ್ಟಿಯಿದ ಕಾಣಬೇಕು. ''ಲಂಚ ಕೊಟ್ಟರೆ ಕೆಲಸ ಇಲ್ಲದಿದ್ದರೆ ಇಲ್ಲ ಎನ್ನುವಂತಹ ಭಾವನೆಯನ್ನೂ ತಾಳಿದ್ದಾರೆ. ಅಂಥ ನೌಕರನ ಕೆಲಸಕ್ಕೆ ಸಂಚಕಾರ ಬಂದೀತು ಎನ್ನುವಂತಹ ಭಯವಿರಬೇಕು. ಸರ್ಕಾರ ಹಾಗೂ ಅದರ ಪ್ರತಿನಿಧಿಗಳು ಬಗ್ಗೆ ಅಪನಂಬಿಕೆಯೂ ಬರದಂತೆ ನಡೆದುಕೊಳ್ಳಬೇಕು. ಆಗಲೇ ನಿಜವಾದ ಸರ್ಕಾರದ ಕೆಲಸ ದೇವರ ಕೆಲಸವೆಂದು ವಿಧಾನಸೌಧದಲ್ಲಿ ಬರೆದಿರುವುದು ಸಾರ್ಥಕವಾಗುತ್ತದೆ.

ಅಧ್ಯಕ್ಷರು: ಪ್ರಥಮ ಭಾಷಣವನ್ನು ನಿಜವಾಗಿಯೂ ಬಹಳ ಚೆನ್ನಾಗಿ ಮಾಡಿದ್ದೀರಿ ನಿಮಗೆ ಅಭಿನಂದನೆಗಳು. ಇನ್ನೊಂದು ಸಲ ಇನ್ನೂ ಹೆಚ್ಚು ತಯಾರಾಗಿ ಬನ್ನಿ. ನಿಮ್ಮ ಭಾಷಣ ಮುಗಿದಿದೆ. ಸನ್ಮಾನ್ಯ ಕೆ.ಎನ್.ನಾಗೇಗೌಡರೇ ಆ ಹೇಳಿಕೆಯನ್ನು ಮಾಡಿಬಿಡಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಆ ಹೇಳಿಕೆಯನ್ನು ಮಾಡಿಬಿಡಿ ಎಂದು ಹೇಳಿದ್ದೀರಿ. ಅದು ಯಾವ ಹೇಳಿಕೆ?

ಅಧ್ಯಕ್ಷರು: ಕಾವೇರಿಯ ವಿಚಾರದಲ್ಲಿ.

ಶ್ರೀ ವಾಟಾಳ್‌ನಾಗರಾಜ್: ಕಾವೇರಿಯ ಬಗ್ಗೆ ಹೇಳಿಕೆ ಮಾಡುವಂಥದ್ದು ಏನಿದೆ?

ಅಧ್ಯಕ್ಷರು: ಶಿವಾನಂದ್, ತಾವು ದಯಮಾಡಿ ಕುಳಿತುಕೊಳ್ಳಿ. ತಮ್ಮ ಭಾಷಣದ ಅವಕಾಶ ಮುಗಿದಿದೆ. ಹೇಳಿಕೆಯನ್ನು ಮಾಡುವುದಕ್ಕೆ ಮಂತ್ರಿಗಳನ್ನು ಕರೆದಿದ್ದೇನೆ. ದಯಮಾಡಿ ಸಹಕರಿಸಿ. ಅರ್ಧ ಗಂಟೆಯಾಯಿತು. ಮಂತ್ರಿಗಳು ಹೇಳಿಕೆಯನ್ನು ಮಾಡುವುದಕ್ಕೆ ನಿಂತಿದ್ದಾರೆ. ನಾನು ನಿಮಗೆ ಇನ್ನೊಂದು ಸಲ ಅವಕಾಶವನ್ನು ಕೊಡುತ್ತೇನೆ. ಶಿವಾನಂದ್ ದಯವಿಟ್ಟು ಕುಳಿತುಕೊಳ್ಳಿ, ನೀವು ಒಳ್ಳೆಯ ಸದಸ್ಯರು. ದಯವಿಟ್ಟು ನನ್ನ ಜೊತೆಯಲ್ಲಿ ಸಹಕರಿಸಿ. ಇನ್ನೊಂದು ಸಲ ಅವಕಾಶವನ್ನು ಕೊಡುತ್ತೇನೆ. ಬೇಡ.

ಶ್ರೀ ಎಂ.ಶಿವಾನಂದ: ಮಾನ್ಯ ಅಧ್ಯಕ್ಷರೇ, 10ನೇ ವಿಧಾನಸಭೆಯಲ್ಲಿ ಈ ಭೂಮಿಯ ಮೇಲೆ ಏಷಿಯಾ ಖಂಡ ಭಾರತ ದೇಶ, ಕರ್ನಾಟಕ ರಾಜ್ಯದ ವಿಧಾನ ಸಭೆಯಲ್ಲಿ ತಾವು ಹಿಡಿದಿರತಕ್ಕಂತಹ ಮಾನವನ ಮೌಲ್ಯಗಳ ಧರ್ಮವನ್ನು ಕಾಪಾಡುವುದಕ್ಕೆ ತಾವು ಕೆಲಸವನ್ನು ಮಾಡಬೇಕು. ಈ ಸದನದ ಎಲ್ಲಾ ಸದಸ್ಯರು ಕಷ್ಟಸುಖಗಳನ್ನು ಪಾರು ಮಾಡುವುದಕ್ಕೆ ರಾತ್ರಿ ಹಗಲು ಶ್ರಮಿಸಿದ್ದೀರಿ ಅದಕ್ಕೆ ದೇವರು ನಿಮಗೆ ಒಳ್ಳೆಯದನ್ನು ಮಾಡಲಿ ಎಂದು ಕೋರುತ್ತಾ, ನನಗೆ ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೂ ಮತ್ತು ನಮ್ಮ ಹಿರಿಯ ಸದಸ್ಯರುಗಳಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. SPEAKER: Good Maiden speech.

(2) ಸಚಿವರ ಹೇಳಿಕೆ.

ಕಾವೇರಿ ವಿಚಾರದಲ್ಲಿ ಕೇಂದ್ರ ಸರ್ಕಾರವು ನಿರೂಪಿಸಿರುವ ಕರಡು ಯೋಜನೆಗೆ ಕರ್ನಾಟಕ ರಾಜ್ಯ ಸರ್ಕಾರದ ಉಪ ವಾಕ್ಯವಾರು ಅಭಿಪ್ರಾಯ: ಆಕ್ಷೇಪಣೆಗಳು

+ ಶ್ರೀ ಕೆ.ಎನ್.ನಾಗೇಗೌಡ (ಭಾರೀ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರ ನಿರೂಪಿಸಿರುವ ಕರಡು ಯೋಜನೆಗೆ ಕಾವೇರಿ ವಿಚಾರದಲ್ಲಿ ಕರ್ನಾಟಕದ ಕ್ಲಾಸ್ ಬೈ ಕ್ಲಾಸ್ ಕಾಮೆಂಟ್ಸ್ ಕೊಡುವ ವಿಚಾರದಲ್ಲಿ ಕಳೆದ ನಾಲ್ಕು ಐದು ದಿವಸಗಳಿಂದ ನಮ್ಮ ರಾಜ್ಯದ ವಿವಿಧ ರಾಜಕೀಯ ಪಕ್ಷದ ಮುಂಖಂಡರುಗಳು, ವಿರೋಧಪಕ್ಷದ ನಾಯಕರು ಮತ್ತು ನಮ್ಮ ಮುಖ್ಯ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಮತ್ತು ಮಂತ್ರಿಗಳು ಎಲ್ಲರೂ ಸೇರಿ ರಾಜ್ಯದ ಹಿತದೃಷ್ಟಿಯಿಂದ ನಮ್ಮ ರಾಜ್ಯದ ಹಿತವನ್ನು ಕಾಪಾಡತಕ್ಕಂತಹ ದೃಷ್ಟಿಯಿಂದ ಒಂದು ಅಭಿಪ್ರಾಯಕ್ಕೆ ಬಂದಿದ್ದೇವೆ. ನಮ್ಮ ಸುಪ್ರೀಂ ಕೋರ್ಟ್ ಆದೇಶದಂತೆ ನಾವು ಎರಡು ವಾರಗಳಲ್ಲಿ ಕೇಂದ್ರ ಸರ್ಕಾರ ಕಳುಹಿಸಿರತಕ್ಕಂತಹ ಕರಡು ಯೋಜನೆಗೆ ಕ್ಲಾಸ್ ಬೈಕ್ಲಾಸ್ ಕಾಮೆಂಟ್ಸ್ ಕೊಡಬೇಕಾಗಿದೆ. ಅದನ್ನು ಕೊಡತಕ್ಕಂಥದ್ದಕ್ಕೆ ಒಂದು ಅಂತಿಮ ರೂಪ ಬಂದು, ಎಲ್ಲಾ ರಾಜಕೀಯ ಪಕ್ಷಗಳು ಒಟ್ಟಾರೆ ಸೇರಿ ಈ ರೀತಿಯಾದಂತಹ ಅಭಿಪ್ರಾಯಕ್ಕೆ ಬರಲಾಗಿ

ತಮ್ಮ ಅನುಮತಿಯನ್ನು ಕೋರಿ ಇಲ್ಲಿ ಸ್ಟೇಟ್‌ಮೆಂಟ್‌ನ್ನೂ ಮಾಡುತ್ತೇನೆ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಅಧ್ಯಕ್ಷರೇ, ಒಂದು ಈ ಮಧ್ಯೆ ಕರಡು ಯೋಜನೆಯನ್ನು....

ಶ್ರೀ ಕೆ.ಎನ್.ನಾಗೇಗೌಡ: ಸ್ಟೇಟ್‌ಮೆಂಟ್ ಮಾಡುತ್ತೇನೆ....

ಅಧ್ಯಕ್ಷರು: ಸ್ಟೇಟ್‌ಮೆಂಟ್ ಮಾಡಿಬಿಡಲಿ.

ಶ್ರೀ ವಾಟಾಳ್ ನಾಗರಾಜ್: ಒಂದು ನಿಮಿಷ ತಾವು ಈ ರೀತಿಯಾಗಿ ಏಕೆ ಆತುರ ಬೀಳುತ್ತಿದ್ದೀರಿ? ತಮಗೆ ಗೊತ್ತಿರುವಂತೆ ಕರಡು ಯೋಜನೆಯನ್ನು ನಾವು ವಿರೋಧಿಸಿದ್ದೇವೆ. ಕರಡು ಯೋಜನೆಯನ್ನು ಕರ್ನಾಟಕ ರಾಜ್ಯ ಸ್ಪಷ್ಟವಾಗಿ ವಿರೋಧಿಸಿದೆ. ಈ ಸದನ ವಿರೋಧಿಸಿದೆ. ಸರ್ವ ವಿರೋಧ ಪಕ್ಷಗಳು ನಿಯೋಗ ಹೋಗಿ ಪ್ರಧಾನ ಮಂತ್ರಿಗಳ ಹತ್ತಿರ ವಿರೋಧಿಸಿದ್ದಾರೆ. ಮಾನ್ಯ ನೀರವಾರಿ ಸಚಿವರು ಕರಡು ಯೋಜನೆ ನಮ್ಮ ಸಂಬಂಧ ಇಲ್ಲವೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ.... ನೀವು ಏನು ಬೇಕಾದರೂ ಮಾಡಿ ಸಾರ್.

ಶ್ರೀ ಕೆ.ಎನ್.ನಾಗೇಗೌಡ: ಏನು ಬೇಕಾದರೂ ಮಾಡುವುದು ಅಲ್ಲ. ರಾಜ್ಯದ ಹಿತದೃಷ್ಟಿ....

ಶ್ರೀ ವಾಟಾಳ್ ನಾಗರಾಜ್: ಏನು ಬೇಕಾದರೂ ಮಾಡುವುದು ಅಲ್ಲದೇ ಇನ್ನೇನು ಮಾಡುತ್ತಿದ್ದೀರಿ? ನೀವು ಮಾಡುತ್ತಿರುವುದೇ ನಿಮ್ಮ ಇಷ್ಟ ಬಂದಂತೆ ಮಾಡುತ್ತಿರುವುದು.

ಅಧ್ಯಕ್ಷರು: ಆಯಿತು ಅದು ತಮ್ಮ ಅಭಿಪ್ರಾಯ. ಅವರು ನನ್ನ ಅನುಮತಿಯನ್ನು ಪಡದೇ ಮಾಡುತ್ತಿರುವುದು. ನಾನು ಅವರಿಗೆ ಅನುಮತಿಯನ್ನು ಕೊಟ್ಟಿದ್ದೇನೆ. ಅವರ ಹೇಳಿಕೆಯು ಆಗಲಿ ಆಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ.

ಶ್ರೀ ವಾಟಾಳ್ ನಾಗರಾಜ್: ನನ್ನ ಅಭಿಪ್ರಾಯವನ್ನೇ ನಾನು ಹೇಳುತ್ತಿದ್ದೇನೆ. ಕೈ ಮುಗಿದು ತಮ್ಮನ್ನು ಕೇಳುತ್ತಿದ್ದೇನೆ. ಈ ರಾಜ್ಯದ ಜನತೆಯ ಪರವಾಗಿ ತಾವು ತಪ್ಪು ಹೆಜ್ಜೆಯನ್ನು ಇಡುತ್ತಿದ್ದೀರಿ. ತಮ್ಮಲ್ಲಿ ಕಳಕಳಿಯ ಮನವಿಯನ್ನು ತಮ್ಮ ಮೂಲಕ ಮಾಡುತ್ತಿದ್ದೇನೆ. ತಾವು ಏನು ಬೇಕಾದರೂ ಈ ಸಂದರ್ಭದಲ್ಲಿ ತಿಳಿದುಕೊಳ್ಳಿ. ತಮ್ಮ ಮೂಲಕ ಈ ಸಂದರ್ಭದಲ್ಲಿ ಇದು ಯಾವುದು ವೈಯಕ್ತಿಕವಾದಂತಹ ವಿಷಯವೇನೂ ಅಲ್ಲ. ಈ ರಾಜ್ಯದ ಹಿತವನ್ನು ಹೆಜ್ಜೆ ಹೆಜ್ಜೆಗೂ ಈ ಸದನದಲ್ಲಿ ಹೇಳಿದ್ದೇನೆ...

ಶ್ರೀ ಕೆ.ಎನ್.ನಾಗೇಗೌಡ: ನಾವು ಏನು ಹೇಳಿಕೆಯನ್ನು ರಾಜ್ಯ ಸರ್ಕಾರದ ಪರವಾಗಿ ಕೊಡುತ್ತಿದ್ದೇವೆ ಎನ್ನುವುದನ್ನು ತಿಳಿದುಕೊಂಡು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ಸಮಗ್ರವಾಗಿ ಕರಡು ಯೋಜನೆಯನ್ನೇ ವಿರೋಧ ಮಾಡಬೇಕು. ತಾವೂ ಸಹ ಕರಡು ಯೋಜನೆಯನ್ನು ವಿರೋಧ ಮಾಡಿದ್ದೀರಿ.

ಶ್ರೀ ಕೆ.ಎನ್.ನಾಗೇಗೌಡ: ನಾವು ಏನು ಹೇಳಿಕೆಯನ್ನು ರಾಜ್ಯ ಸರ್ಕಾರದ ಪರವಾಗಿ ಕೊಡುತ್ತಿದ್ದೇವೆ ಎಂಬುದನ್ನು ತಿಳಿದುಕೊಳ್ಳದೇ ಮಾತನಾಡಿದರೆ.... ಹೇಗೆ?

ಶ್ರೀ ವಾಟಾಳ್ ನಾಗರಾಜ್: ವೈಯಕ್ತಿಕವಾಗಿ ನಾನು ಹೇಳುತ್ತಿದ್ದೇನೆ. ಮೊದಲಿನಿಂದಲೂ ನಾನು ನ್ಯಾಯ ಮಂಡಳಿಯು ಬೇಡವೆಂದು ಹೇಳಿದ್ದೇನೆ. ಮಧ್ಯಂತರ ಆಜ್ಞೆ ಬೇಡವೆಂದು ಹೇಳಿದ್ದೇವೆ. ಈಗ ಕರಡು ಯೋಜನೆಗೆ ಒಪ್ಪಿಕೊಂಡರೆ ಮಧ್ಯಂತರ ಆದೇಶವನ್ನು ಜಾರಿಗೆ ಕೊಟ್ಟಂತೆ ಆಗುತ್ತದೆ. ಈ ರಾಜ್ಯದ ಜನತೆಗೆ ಅಲ್ಲಿ ಒಂದು ಹೇಳುತ್ತೀರ ಇಲ್ಲಿ ಒಂದು ಹೇಳುತ್ತೀರಿ ಇದು ಒಳ್ಳೆಯದು ಅಲ್ಲ. ಇದಕ್ಕೆ ತಾವು ಅವಕಾಶವನ್ನು ಕೊಡಬೇಡಿ. ಈ ಸದನದಲ್ಲಿ ಇದು ಕಡತಕ್ಕೆ ಹೋಗಬಾರದು, ಇದು ರಾಜ್ಯದ ಜನತೆಗೆ ಬಹಳ ಅಪಾಯಕಾರಿಯಾದಂತಹ ಬೆಳವಣಿಗೆ. ಅತ್ಯಂತ ಕೆಟ್ಟ ಬೆಳವಣಿಗೆಯಾಗುತ್ತಿದೆ. ಈ ರಾಜ್ಯದ ಜನತೆಯು ಕಣ್ಣೀರನ್ನು ಇಡುತ್ತಾರೆ.

(ಈ ಹಂತದಲ್ಲಿ ಸಚಿವರು ಹೇಳಿಕೆಯನ್ನು ಸದನದಲ್ಲಿ ಕೊಡುತ್ತಿದ್ದರು. ಅದನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ವಿರೋಧಿಸುತ್ತಾ ಹೇಳಿಕೆಯ ಪ್ರತಿಗಳನ್ನು ಹರಿದು ಬಾವಿಗೆ ಹಾಕುತ್ತಿದ್ದರು) (ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)

ಕಾವೇರಿಯ ವಿಚಾರದಲ್ಲಿ ರಾಜ್ಯದ ಜನತೆಯು ಕಣ್ಣೀರನ್ನು ಇಡುತ್ತಿದ್ದಾರೆ. ರಾಜ್ಯದ ಜನತೆಯನ್ನು ಕಗ್ಗತ್ತಲಿನಲ್ಲಿಟ್ಟಿರುತ್ತೀರಿ. ಇವತ್ತು ಕೇಂದ್ರ ಸರ್ಕಾರ ನಮಗೆ ಮೋಸ ಮಾಡಿದೆ. ಅದೇ ರೀತಿಯಲ್ಲಿ ಕರ್ನಾಟಕ ಸರ್ಕಾರ ಮೋಸ ಮಾಡುವುದಕ್ಕೆ ಹೊರಟಿದೆ. ಇದು ಒಳ್ಳೆಯದಲ್ಲ. ಈ ದೃಷ್ಟಿಯಿಂದ ಕರ್ನಾಟಕದ ಜನತೆಯ ಪರವಾಗಿ ನಾನು ಇದರ ಬಗ್ಗೆ ನಿರಂತರವಾಗಿ ಪ್ರತಿಭಟನೆ ಮಾಡುತ್ತಿದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ (ಭಾರೀ ನೀರಾವರಿ ಸಚಿವರು): The Supreme Court in its order dated 20th August. 97 has specifically directed the State Government to file Clausewise remarks within a period of two weeks from the date of the order. Three rounds of discussions were held with the floor leaders of both the Houses along with the Chief Minister Clause by Clause remarks were gone through in great detail and a Scheme has been proposed to the Government of India as an alternative to the Scheme circulated by them in their letter dated 30.5.1997. The

main thrust of the Karnataka's response is that there is no need to evolve any schame or mechanism at this stage as the Tribunal is still adjudicating and the final orders are likely to be expected in a year's time. However, to comply with the directions of Supreme Court, clause by clause comments / objections to the Draft Scheme prepared by Government of India have been sent, without prejudice to State Government's basic stand that at this juncture there is no need for any Scheme or Authority under the Scheme as it would be not only redundant but complicate matters in the proceedings before the Tribunal.

To enable discussions at the Union Government level, our views will be circulated to the other States, by Govt. of India in accordance with the directions of the Supreme Court. The alternative suggested by Govt. of Karnataka contemplates constitution of a Co-ordination committee headed by a chairman and two Members to be appointed by the Government of India in consultation with the State concerned. The Chairman and the Members will be from out-side the basin States, with Head Quarters at New Delhi. The role of the Co-ordination Committee will be to advice and give their findings on the issues arsing out of the interpretation and implementation of the interim orders, decision,s directions of the tribunal. The penal clauses proposed in the Draft Scheme have been deleted in the alternative scheme now suggested by the State. The main feature of the suggestions by the Government of Karnatka is in tune with the aspirations of the people of Karnataka and also falls in line with the spirit of co-operative federalism as enshrined in our Constitution.

The Copy of the letter of the State Government, containing alternative proposal of the State Government

along with clause by clause comments/objections to the draft scheme formulated by the Government of India is placed before the House.

ಶ್ರೀ ವಾಟಾಳ್ ನಾಗರಾಜ್: ಹೇಳತಕ್ಕದ್ದು ಒಂದು, ಮಾಡತಕ್ಕದ್ದು ಒಂದು. ಇದು ಒಳ್ಳೆಯ ನೀತಿಯಲ್ಲ. ಆದುದರಿಂದ ನಾನು ಹೆಜ್ಜೆಹೆಜ್ಜೆಗೂ ವಿರೋಧ ಮಾಡುತ್ತಿದ್ದೇನೆ. ನನ್ನ ಬಗ್ಗೆ ಯಾರು ಏನು ಬೇಕಾದರೂ ತಿಳಿದುಕೊಳ್ಳಿ ನಾನಂತೂ ಇದನ್ನು ವಿರೋಧಿಸುತ್ತೇನೆ. ನಾನು ಇದರ ಬಗ್ಗೆ ಯಾರ ಕರುಣೆಯನ್ನು, ಬೆಂಬಲವನ್ನು ಕೇಳತಕ್ಕವನು ಅಲ್ಲ? ನನಗೆ ಗೊತ್ತಿದೆ, ಹಾಸ್ಯವಾಗಿ ಮಾತನಾಡುವುದು ಬೇಡ. ಇಲ್ಲಿ ನಡೆಯತಕ್ಕದ್ದು ಏನು ಹಾಸ್ಯ? ಇಡೀ ರಾಜ್ಯಕ್ಕೆ ಅನ್ಯಾಯ ನಡೆದಿದೆ, ನೀವು ಹಾಸ್ಯ ಮಾಡುತ್ತಿದ್ದೀರಿ. ಇದು ಹಾಸ್ಯ ಮಾಡತಕ್ಕದ್ದಲ್ಲ. ಇದು ಒಳ್ಳೆಯದಲ್ಲ. ಮಾನ್ಯ ನಾಗೇಗೌಡರ ಬಗ್ಗೆ ಬಹಳ ಗೌರವ ಇದೆ. ತಾವು ರಾಜ್ಯದ ಹಿತಚಿಂತನೆ ಮಾಡತಕ್ಕವರು. ಇಲ್ಲಿ ಅನೇಕ ಜನರು ಒಂದು ರೀತಿ ತ್ಯಾಜ್ಯವಾಗಿ ಪರಿಗಣಿಸುತ್ತಿದ್ದಾರೆ, ರಾಜ್ಯದ ನೀತಿಯನ್ನು ಅಪಹಾಸ್ಯ ಮಾಡುತ್ತಿದ್ದಾರೆ. ಇದು ಒಳ್ಳೆಯ ನೀತಿಯಲ್ಲ; ಇದರ ಬಗ್ಗೆ ಒಳ್ಳೆಯ ಅಭಿಪ್ರಾಯ ಇಲ್ಲ ಎಂಬ ಮಾತನ್ನು ಸ್ಪಷ್ಟಪಡಿಸುತ್ತಿದ್ದೇನೆ. ಆದುದರಿಂದ ಮಾನ್ಯ ಅಧ್ಯಕ್ಷರಲ್ಲಿ ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ, ಇದಕ್ಕೆ ನನ್ನ ಒಪ್ಪಿಗೆ ಇಲ್ಲ. ಇದನ್ನು ತೀವ್ರವಾಗಿ ಜನತೆಯ ಪರವಾಗಿ ನಾನು ವಿರೋಧಿಸುತ್ತಿದ್ದೇನೆ. ಅದರ ಬಗ್ಗೆ ಎರಡನೆಯ ಅಭಿಪ್ರಾಯ ಇಲ್ಲ. ಈ ಕರಡು ಶಾಸನ, ಈ ಕರಡು ಯೋಜನೆ ಏನಿದೆ ಇದು ಮರಣ ಶಾಸನ. ಈ ಮರಣ ಶಾಸನವನ್ನು ಮಾಡಿ ಇದೇ ಸದನದಲ್ಲಿ ಕರ್ನಾಟಕದ ಜನರನ್ನು ನೇಣುಗಂಬಕ್ಕೆ ಏರಿಸುತ್ತಿದ್ದೀರಿ. ಇದು ಒಳ್ಳೆಯ ಸೂಚನೆ ಅಲ್ಲವೆಂಬ ಮಾತನ್ನು ಅತ್ಯಂತ ಕಳಕಳಿಯಿಂದ ಈ ಸದನದಲ್ಲಿ ಹೇಳುತ್ತಿದ್ದೇನೆ. ನನ್ನ ಬಗ್ಗೆ ಯಾರು ಏನು ತಿಳಿದುಕೊಂಡರೂ ಚಿಂತೆ ಇಲ್ಲ, ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ, ನೀವು ಮಾಡುತ್ತಿರುವುದು ಏನು? ಹೇಳುವುದು ಒಂದು, ಮಾಡುವುದು ಒಂದು, ನಿರ್ಣಯ ಒಂದು, ಡೆಲ್ಲಿಗೆ ನಿಯೋಗ ಒಂದು, ನಾನು ಇವತ್ತು ಡೆಲ್ಲಿಯ ಕೇಂದ್ರ ಸಚಿವರನ್ನು ಕೈಮುಗಿದು ಪ್ರಾರ್ಥಿಸುತ್ತೇನೆ, ಅವರು ಎಲ್ಲರೂ ರಾಜೀನಾಮೆ ಕೊಡಲಿ. ಈ ನಿರ್ಣಯವನ್ನು, ಕರಡು ಯೋಜನೆಯನ್ನು ತಿರಸ್ಕರಿಸಲಿ. ಆ ದೃಷ್ಟಿಯಿಂದ ಮಾನ್ಯ ಅಧ್ಯಕ್ಷರಲ್ಲಿ ಕೈಮುಗಿದು ಪ್ರಾರ್ಥಿಸುತ್ತಿದ್ದೇನೆ.... ಇದು ಒಳ್ಳೆಯ ಸೂಚನೆ ಅಲ್ಲ, ಇದು ಒಳ್ಳೆಯ ನಿರ್ಧಾರ ಅಲ್ಲ. ಈ ಕರಡು ಯೋಜನೆಯನ್ನು ನಾನು ಹರಿದು ಬಿಸಾಕುತ್ತಿದ್ದೇನೆ. ಈ ಕರಡು ಯೋಜನೆಗೆ ನನ್ನ ತೀವ್ರ ಪ್ರತಿಭಟನೆ ಇದೆ.

(ಶ್ರೀ ವಾಟಾಳ್ ನಾಗರಾಜ್ ಅವರು ಕರಡು ಯೋಜನೆಯ ಪ್ರತಿಯನ್ನು ಹರಿದು ಹರಿದು ಬಿಸಾಕಿದರು)

ಅಧ್ಯಕ್ಷರು: ಇದು ಪ್ರೈಮರಿ ಸ್ಕೂಲು ಅಲ್ಲ, ನಾನು ಹೆಡ್‌ಮೇಷ್ಟ್ರು ಅಲ್ಲ; ಮಕ್ಕಳಿಗೆ

ಅದು ಮಾಡಬೇಕು, ಇದು ಮಾಡಬೇಕು, ಅದು ಮಾಡಬಾರದು, ಇದು ಮಾಡಬಾರದು ಎಂದು ಹೇಳುವುದಕ್ಕೆ ಇಲ್ಲಿ ಬರತಕ್ಕವರು ಎಲ್ಲರೂ ಕೂಡ ಸಾಕಷ್ಟು ವಯಸ್ಸಿಗರಾಗಿದ್ದೀರಿ, ಪ್ರಬುದ್ಧರಾಗಿದ್ದೀರಿ; ಅವರವರ ನಡತೆ ಬಗ್ಗೆ, ನಡವಳಿಕೆ ಬಗ್ಗೆ ಪ್ರತಿಯೊಬ್ಬರಿಗೆ ಸ್ವಂತ ವಿವೇಚನೆ ಇರಬೇಕಾಗುತ್ತದೆ. ಯಾರು ವಿವೇಚನಾರಹಿತವಾಗಿ ವರ್ತಿಸುತ್ತಾರೆ, ಅವರ ಬಗ್ಗೆ ನಾನು ಗಮನ ಕೊಡುವುದಿಲ್ಲ. ನನ್ನ ಪಾಡಿಗೆ ನಾನು ಇಲ್ಲಿ ಕುಳಿತಿರುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ತಾವು ಗೌರವ ಕೊಡದೇ ಇದ್ದರೂ ತಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ. ತಾವು ಅಧ್ಯಕ್ಷರು ಎಂಬ ದೃಷ್ಟಿಯಿಂದ ನಾನು ಅತ್ಯಂತ ಅನನ್ಯ ಭಕ್ತಿಯಿಂದ, ವಿಶ್ವಾಸದಿಂದ ಎರಡೂ ಕೈಜೋಡಿಸಿ ತಮಗೆ ಗೌರವ ಕೊಡುತ್ತಿದ್ದೇನೆ.

ಅಧ್ಯಕ್ಷರು: ನೀವು ಗೌರವ ಕೊಟ್ಟರೆ, ಇದು ನೀವು ಮಾಡುವ ಕೆಲಸ ಅಲ್ಲ.

ಶ್ರೀ ವಾಟಾಳ್ ನಾಗರಾಜ್: ಕೈಮುಗಿದು ನಾನು ಗೌರವ ಕೊಡುತ್ತೇನೆ. ಅದರ ಬಗ್ಗೆ ನನ್ನದೇನೂ ಇಲ್ಲ. ತಮ್ಮ ಪೀಠಕ್ಕೆ ಹಗಲು ರಾತ್ರಿ ಗೌರವ ಕೊಡುತ್ತೇನೆ. ಅದರ ಬಗ್ಗೆ ಚಿಂತೆ ಇಲ್ಲ. ತಾವು ಉದ್ವೇಗದಲ್ಲಿ ಬೇಜಾರು ಮಾಡಿಕೊಳ್ಳಬಾರದೆಂದು ಮನವಿ ಸಲ್ಲಿಸುತ್ತಿದ್ದೇನೆ. ಇದು ನನ್ನ ನಿರ್ಧಾರ, ನನ್ನ ಪಕ್ಷದ ನಿರ್ಧಾರ. ನಾನು ಜನತೆಯ ಪರವಾಗಿ ಹೇಳುತ್ತಿದ್ದೇನೆ, ಅದಕ್ಕೆ ತಾವು ಬೇಜಾರು ಮಾಡಿಕೊಳ್ಳಬೇಕಾಗಿಲ್ಲ. ನಾವು ಪ್ರಾಥಮಿಕ ಶಾಲೆಯ ಹುಡುಗರೂ ಅಲ್ಲ, ತಾವು ಹೆಡ್‌ಮೇಷ್ಟ್ರು ಅಲ್ಲ. ಆ ಬಗ್ಗೆ ನನ್ನ ತಕರಾರು ಇಲ್ಲ....

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ಅವರು ಧರಣಿ ಹೂಡಿದರು)

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈ ಹೇಳಿಕೆ ಬಗ್ಗೆ ನಮ್ಮೆಲ್ಲರ ಒಂದು ಸ್ಪಷ್ಟವಾದ ನಿಲುವನ್ನು ಕೂಡ ನಾವು ಹೇಳಬೇಕಾಗಿದೆ. ಏಕೆಂದರೆ ಎಲ್ಲ ವಿರೋಧ ಪಕ್ಷದ ನಾಯಕರು, ನಾನು ಇರಬಹುದು, ಶ್ರೀ ಯಡಿಯೂರಪ್ಪನವರು ಇರಬಹುದು, ಮಾನ್ಯ ನಂಜೇಗೌಡರು, ಮಾನ್ಯ ಪುಟ್ಟಣ್ಣಯ್ಯನವರು, ಮಾನ್ಯ ಶ್ರೀರಾಮರೆಡ್ಡಿ ಯವರು, ಎಡಿಎಂಕೆ. ಮುಖಂಡರು ಶ್ರೀ ಮುನಿಯಪ್ಪನವರು ಎಲ್ಲರೂ ಸೇರಿದೆವು; ಸೇರಿದ ಮೇಲೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿ ಡ್ರಾಫ್ಟ್ ನೋಟಿಫಿಕೇಷನ್ ಬಗ್ಗೆ ಉತ್ತರ ಕೊಡತಕ್ಕ ಪ್ರಶ್ನೆ ಇತ್ತು. ಉತ್ತರ ಕೊಡತಕ್ಕದ್ದರ ಬಗ್ಗೆ ಹಿಂದೆ ನಾವು ನಮ್ಮ ನಿಲುವನ್ನು ಸ್ಪಷ್ಟವಾಗಿ ತಿಳಿಸಿದ್ದೇವೆ. ಡ್ರಾಫ್ಟ್ ನೋಟಿಫಿಕೇಷನ್ ಏನು ಬಂದಿದೆ ಅದನ್ನು ತಿರಸ್ಕಾರ ಮಾಡಬೇಕೆಂಬುದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಸರ್ಕಾರದವರೂ ಕೂಡ ಹಿಂದೆ ಒಪ್ಪಿದ್ದರು. ಇಲ್ಲಿರತಕ್ಕ ಎಲ್ಲಾ ವಿರೋಧ ಪಕ್ಷದವರ ನಿಲುವು ಅದೇ ಇತ್ತು. ರಾಜ್ಯದ ಜನತೆಯ ನಿಲುವೂ ಕೂಡ ಅದೇ ಇದೆ. ಆದರೆ ಸುಪ್ರೀಂ ಕೋರ್ಟಿನಿಂದ ಬಂದಂಥ ಡೈರೆಕ್ಷನ್ ಆಧಾರದ ಮೇಲೆ ಹೇಗೆ

ನಡೆಯಬೇಕೆಂಬ ಪ್ರಶ್ನೆ ಬಂದಾಗ ನಾವಂತೂ ಇದಕ್ಕೆ ವಿರೋಧ ಮಾಡಿದ್ದೇವೆ. ಇನ್ನೂ ಕೂಡ ವಿರೋಧವಾಗಿದ್ದೇವೆ. ಆದರೆ ಇವತ್ತು ಸರ್ಕಾರದವರು ಯಾವುದೇ ಒಂದು ಉತ್ತರವನ್ನು ಕಳುಹಿಸದೆ ಹೋದರೆ ಅದು ಎಕ್ಸ್‌ಪಾರ್ಟೆ ಆಗುತ್ತದೆಂಬ ಮಾತನ್ನು ಹೇಳಿದಮೇಲೆ ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಮತ್ತು ವಿಶೇಷವಾಗಿ ಕೇಂದ್ರಸರ್ಕಾರದ ಮುಂದೆ ಕರ್ನಾಟಕ ರಾಜ್ಯದಲ್ಲಿರತಕ್ಕ ವಿಧಾನಸಭೆಯಲ್ಲಿ ಭಿನ್ನಾಭಿಪ್ರಾಯ ಇದೆ ಎಂಬ ಭಾವನೆ ಬರಬಾರದೆಂಬ ದೃಷ್ಟಿಯಿಂದ ಮತ್ತು ಹೊರ ರಾಜ್ಯದವರು ಕೂಡ ಈ ಕಾವೇರಿ ವಿಷಯದಲ್ಲಿ ಅವರಲ್ಲಿ ಒಮ್ಮತ ಇಲ್ಲ, ಒಗ್ಗಟ್ಟಾಗಿ ಹೋರಾಟ ಮಾಡುವುದಿಲ್ಲ ಎಂಬ ಒಂದು ಅಭಿಪ್ರಾಯ ಮೂಡಬಾರದೆಂದು ಹೇಳಿ ನಮ್ಮ ಮನಸ್ಸು ಇಲ್ಲದೇ ಇದ್ದರೂ ಕೂಡ ಈ ಕರಡು ಯೋಜನೆಯಲ್ಲಿರತಕ್ಕ ವಿಷಯಗಳೇನಿದ್ದವು ಅದಕ್ಕೆ ಒಪ್ಪದೆ ಇದ್ದರೂ ಸಹ ನಾವು ಸುಪ್ರೀಂ ಕೋರ್ಟ್ ಮುಂದೆ ಅಫಿಡವಿಟ್ ಫೈಲ್ ಮಾಡಬೇಕು; ಇದು ಇನ್‌ವಿಟಬಲ್ ಸರ್ಕಮ್‌ಸ್ಟ್ಯಾನ್ಸಸ್. ಈ ಇನ್‌ವಿಟಬಲ್ ಸರ್ಕಮ್‌ಸ್ಟ್ಯಾನ್ಸಸ್ ತಂದವರು ಯಾರು ಎಂಬ ಬಗ್ಗೆ ನಾನು ಹೇಳಿದ್ದೇನೆ. ಸುಪ್ರೀಂ ಕೋರ್ಟಿನಲ್ಲಿ ಇವರು ಯಾವ ರೀತಿ ವಾದ ಮಾಡಿದರು; ಇವರ ಅಡ್ವೊಕೇಟ್ ಯಾವ ರೀತಿ ಅಲ್ಲಿ ಅಂಡರ್‌ಟೇಕಿಂಗ್ ಕೊಟ್ಟರು, ಆಮೇಲೆ ಅಟಾರ್ನಿಜನರಲ್ ಯಾವ ರೀತಿ ಅಲ್ಲಿ ಹೇಳಿಕೆ ಕೊಟ್ಟರು, ನಮ್ಮ ಕೈಯನ್ನು ಯಾವ ರೀತಿ ಕಟ್ಟಿದರು ಎಂಬುದರ ಬಗ್ಗೆ ನಾವು ಖಂಡಿಸಿದ್ದೇವೆ, ಇವತ್ತೂ ಖಂಡಿಸುತ್ತೇವೆ. ಇವತ್ತು ಏನಾದರೂ ನಮ್ಮನ್ನು ಈ ಸ್ಥಿತಿಗೆ ತಳ್ಳಿದರೆ ಅಥವಾ ನಮಗೆ ನೀವು ಒಂದು ಗೋಡೆಗೆ ತಳ್ಳಿಬಟ್ಟರೆ ಅದಕ್ಕೆ ಸಂಪೂರ್ಣವಾದ ಜವಾಬ್ದಾರಿ ಹಿಂದಿನ ಮುಖ್ಯಮಂತ್ರಿಗಳು, ಇವತ್ತಿನ ಸರ್ಕಾರ ಮತ್ತು ಇವರ ಅಡ್ವೊಕೇಟ್ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂಬ ಮಾತನ್ನು ನಾವು ಕಟ್ಟುನಿಟ್ಟಾಗಿ ಹೇಳಿದ್ದೇವೆ. ಆದರೆ ಅನಿವಾರ್ಯ ಪರಿಸ್ಥಿತಿಯಲ್ಲಿ ಒಂದು ಒಗ್ಗಟ್ಟನ್ನು ತೋರಿಸಬೇಕೆಂಬ ದೃಷ್ಟಿಯಿಂದ ಇವತ್ತು ನಾವು ಅಥಾರಿಟಿಯನ್ನು ತೆಗೆದು ಕೊ-ಆರ್ಡಿನೇಷನ್ ಕಮಿಟಿ ಮಾಡಿ ಎಂದು ಹೇಳಿದ್ದೇವೆ. ಅದನ್ನು ಸರ್ಕಾರ ಮತ್ತು ಎಲ್ಲಾ ವಿರೋಧ ಪಕ್ಷದ ನಾಯಕರು ಒಪ್ಪಿಕೊಂಡಿದ್ದಾರೆ. ನೀವು ಮುಂಚಿನಿಂದ ಒಪ್ಪಿಲ್ಲ; ಇವತ್ತಲ್ಲ. ಎರಡನೆಯದು, ಇಂಡಿಪೆಂಡೆಂಟ್ ಬಾಡಿ ಇರಬೇಕು, ಅಥವಾ ಮಾನಿಟರಿ ಕಮಿಟಿ ಇರಬೇಕು. ಇದಕ್ಕೂ ಕೂಡ ನಾವು ಯಾರೂ ಒಪ್ಪಿಲ್ಲ. ಆ ಮಾತನ್ನು ನಾವು ಸ್ಪಷ್ಟಪಡಿಸಿದ್ದೇವೆ. ಅದೇ ರೀತಿ ಕ್ಲಾಜ್ ಬೈ ಕ್ಲಾಜ್ ರಿಪ್ಲೈ ಕಳುಹಿಸುತ್ತೇವೆಂದು ಹೇಳಿದ್ದೇವೆ. ಏಕೆಂದರೆ ಪೂರ್ತಿ ಕ್ಲಾಜ್ ಬೈ ಕ್ಲಾಜ್ ರಿಪ್ಲೈ ನಮ್ಮಲ್ಲಿ ಇಲ್ಲ, ಬರೀ ಹೇಳಿಕೆ ಇದೆ. ಪ್ರಿಯಾಂಬಲ್‌ನಲ್ಲಿ ಇಂಡಿಪೆಂಡೆನ್ಸ್ ಅಂಡ್ ಅಟಾನಮಸ್ ಬಾಡಿ ಎಂಬ ಶಬ್ದ ಏನಿತ್ತು ಅದನ್ನು ಕೂಡ ನಾವು ತೆಗೆಸಿ ಹಾಕಿದ್ದೇವೆ. ಕೋ-ಆರ್ಡಿನೇಷನ್‌ಗೋಸ್ಕರ 3 ಜನರ ಎಕ್ಸ್‌ಪರ್ಟ್ ಕಮಿಟಿ ಏನು ರಚನೆ ಮಾಡಬೇಕು ಅಥವಾ ಹಿಂದೆ ಅವರು ಏನು ಮಾನಿಟರಿಂಗ್ ಅಥಾರಿಟಿ ಎಂಬ ಶಬ್ದ ಪ್ರಯೋಗ ಮಾಡಿ 3 ಜನರ ಎಕ್ಸ್‌ಪರ್ಟ್ ಕಮಿಟಿಗೆ ಏನು ಒಪ್ಪಿಗೆ ಕೊಟ್ಟಿದ್ದರು ಅದಕ್ಕೆ ನಾವು ಹೇಳಿದ್ದೇವೆ, 4 ಜನ ಮುಖ್ಯ ಮಂತ್ರಿಗಳು ಅಥವಾ ಬೇಸಿನ್ ಸ್ಟೇಟ್‌ನಲ್ಲಿರತಕ್ಕ ಸರ್ಕಾರದ ಕನ್‌ಸೆಂಟ್ ಮೇಲೆ 3 ಜನ

ಎಕ್ಸ್‌ಪರ್ಟ್ ಕಮಿಟಿ ಮಾಡಬೇಕು. ಆ 3 ಜನ ಎಕ್ಸ್‌ಪರ್ಟ್ ಕಮಿಟಿಯವರೂ ಕೂಡ ನಮ್ಮ ಯಾವುದೇ ರಾಜ್ಯಕ್ಕೆ ಸಂಬಂಧಪಟ್ಟವರು ಇರಬಾರದು, ಅಂದರೆ ಬೇಸಿನ್ ಸ್ಟೇಟಿಗೆ ಸಂಬಂಧಪಟ್ಟವರು ಇರಬಾರದು; ಕೇಂದ್ರ ಸರ್ಕಾರದ ನಾಮಿನಿ ಆಗಿರಬಾರದು ಅಥವಾ ಕೇಂದ್ರ ಸರ್ಕಾರದ ಯಾವುದೇ ಇಲಾಖೆಯಲ್ಲಿ ಕೆಲಸ ಮಾಡುತ್ತಾ ಇರಬಾರದು. ನಾನ್ ಬೇಸಿನ್ ಸ್ಟೇಟ್‌ನಿಂದ ಎಕ್ಸ್‌ಪರ್ಟ್ಸ್ ತೆಗೆದುಕೊಳ್ಳಬೇಕು. ಅವರು ಅಗ್ರಿಕಲ್ಚರ್, ಹೆಲ್ತ್ ಇರಿಗೇಷನ್ ಹೀಗೆ ಕೆಲವು ಇನ್‌ಗ್ರೀಡಿಯಂಟ್ಸ್ ಎಲ್ಲಿ ಹಾಕಿದ್ದಾರೆ, ಅದರ ಪ್ರಕಾರ ನಡೆಯಬೇಕೆಂಬ ಕೆಲವು ಮಾತನ್ನು ಸ್ಪಷ್ಟಪಡಿಸಿದ್ದೇವೆ. ಅದರ ರೀತಿಯಲ್ಲಿ ನಾವು ಉತ್ತರ ಕಳುಹಿಸಿದ್ದೇವೆಂಬ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ಇದರಲ್ಲಿ ಯಾರಿಗೂ ತಪ್ಪು ಭಾವನೆ ಆಗತಕ್ಕದ್ದು ಬೇಕಾಗಿಲ್ಲ. ನಾನು ಶ್ರೀವಾಟಾಳ್ ನಾಗರಾಜ್ ಅವರನ್ನು ಕೇಳಿಕೊಳ್ಳುತ್ತೇನೆ, ಇದರಲ್ಲಿ ಯಾರೂ ಕೂಡ ಕರಡು ಯೋಜನೆಗೆ ಒಪ್ಪಿಲ್ಲ. ಆದರೆ ಸುಪ್ರೀಂ ಕೋರ್ಟಿನಲ್ಲಿ ನಾಳೆ ಕಂಟೆಮ್ಪ್ಟ್ ಆಗಬಾರದು, ಅಥವಾ ಕಂಟ್‌ಮ್ಪ್‌ಗಿಂತ ಎಕ್ಸ್‌ಪಾರ್ಟೆ ಆಗಿ, ವರದಿಯಲ್ಲಿ ಏನೇನು ಹೇಳಲಿಲ್ಲವೆಂದು ಆಗಬಾರದೆಂಬ ದೃಷ್ಟಿಯಿಂದ ಇದು ಇನೆವಿಟಬಲ್. ಇವತ್ತಿನ ದಿವಸ ಈ ಮಾತಿಗೆ, ಕೋ-ಆರ್ಡಿನೇಷನ್ ಕಮಿಟಿಗೆ ಎಲ್ಲರೂ ಒಪ್ಪಿಗೆ ಕೊಟ್ಟಿದ್ದೇವೆ. ಇದರಲ್ಲಿ ಯಾವುದೇ ರೀತಿಯ ರಾಜಕೀಯ ತರತಕ್ಕ ಪ್ರಯತ್ನ ಮಾಡಿಲ್ಲ ಮತ್ತು ಬೇಕಾದವರಿಗೆ ಇಕ್ಕಟ್ಟಿಗೆ ಸಿಕ್ಕಿಸಬೇಕೆಂಬ ದೃಷ್ಟಿಯಿಂದ ಕೂಡ ಅಲ್ಲ. ರಾಜ್ಯದ ರೈತರ ಹಿತ ಕಾಪಾಡಬೇಕು ಮತ್ತು ಬೇರೆ ರಾಜ್ಯದಲ್ಲಿ ಒಂದು ಒಳ್ಳೆಯ ಭಾವನೆ ಮೂಡಲಿ ಇವರೆಲ್ಲರೂ ಕೂಡ ಕಾವೇರಿ ನೀರಿನ ಹಿತಾಸಕ್ತಿ ಕಾಪಾಡುವುದರಲ್ಲಿ ಒಗ್ಗಟ್ಟಾಗಿದ್ದಾರೆ, ಇವರಲ್ಲಿ ಡಿವಿಜನ್ ಇಲ್ಲವೆಂಬ ಭಾವನೆ ಬರಬಾರದೆಂಬ ದೃಷ್ಟಿಯಿಂದ ಮಾಡಿದ್ದೇವೆ. ಅದಕ್ಕಾಗಿ ಈ ಸದನದ ಮೂಲಕ, ಮತ್ತು ತಮ್ಮ ಮೂಲಕ ಈ ಒಂದು ಸಂದೇಶ ರಾಜ್ಯದ ಜನತೆಗೆ ಹೋಗಲಿ ಎಂಬ ದೃಷ್ಟಿಯಿಂದ ನಾನು ಎರಡು ಮಾತುಗಳನ್ನು ಪ್ರಸ್ತಾಪ ಮಾಡಿದ್ದೇನೆಯೇ ಹೊರತಾಗಿ ಬೇರೆ ಯಾವುದೇ ದೃಷ್ಟಿಯಿಂದ ಅಲ್ಲವೆಂದು ಸ್ಪಷ್ಟಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ಈ ನಾಡಿನ ಜನ, ಜಲ, ಭಾಷೆ ಪ್ರಶ್ನೆ ಬಂದಾಗ ನಾವು ಒಂದಾಗಿ ಸರ್ಕಾರದ ಜೊತೆ ನಿಂತಿದ್ದೇವೆ. ವಿರೋಧ ಪಕ್ಷ ಬೇರೆ, ಆಡಳಿತ ಪಕ್ಷ ಬೇರೆ ಎಂಬ ವಾತಾವರಣ ಮೂಡುವುದಕ್ಕೆ ನಾವು ಅವಕಾಶ ಕೊಟ್ಟಿಲ್ಲ. ಆದರೆ ಈ ಕಾವೇರಿ ಪ್ರಾಧಿಕಾರ ರಚನೆ ಮಾಡತಕ್ಕ ಕಾಲದಲ್ಲಿ ನಾನು ನನ್ನ ಪಕ್ಷದ ನಿಲುವನ್ನು ಸ್ಪಷ್ಟ ಮಾಡುವುದಕ್ಕೆ ಇಷ್ಟಪಡುತ್ತೇನೆ. ಸುಪ್ರಿಂ ಕೋರ್ಟ್ ಮುಂದೆ ಅಟಾರ್ನಿ ಜನರಲ್ ಮೂಲಕ ಈ ಕಾವೇರಿ ಪ್ರಾಧಿಕಾರ ರಚನೆ ಮಾಡುವ ಪ್ರಸ್ತಾಪ ಬಂದಾಗ ನಮ್ಮ ರಾಜ್ಯದ ಬಗ್ಗೆ ಈ ಸರ್ಕಾರಕ್ಕೆ ಏನಾದರೂ ಕಳಕಳಿ ಇದ್ದಿದ್ದರೆ,

4.40 ಪಿ.ಎಂ

ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಫ್ರೇಮ್ ಮಾಡುವುದಕ್ಕಿಂತ ಮುಂಚೆ ಕಾವೇರಿ ಟ್ರಿಬ್ಯೂನಲ್ ಮುಂದೆ ಇಂಟರೀಮ್ ಆರ್ಡರ್ ಅನ್ನೇ ನಾವು ಪ್ರಶ್ನೆ ಮಾಡಿದ ತೀರ್ಪು ಇನ್ನೂ ಹೊರಬರದ ಕಾಲದಲ್ಲಿ ಕಾವೇರಿ ಪ್ರಾಧಿಕಾರವನ್ನು ರಚನೆ ಮಾಡುವ ಪ್ರಶ್ನೆನೇ ಉದ್ಭವವಾಗುವುದಿಲ್ಲ ಇದಕ್ಕೆ ನಮ್ಮ ವಿರೋಧ ಇದೆ ಎನ್ನುವಂತಹ ಮಾತನ್ನು ನಮ್ಮ ಪರವಾಗಿ ವಾದ ಮಾಡುವಂತಹ ವಕೀಲರು ಹೇಳಿದ್ದಿದ್ದರೆ ಇವತ್ತು ಈ ಉಸಿರುಗಟ್ಟುವ ಪರಿಸ್ಥಿತಿ ನಮ್ಮರಾಜ್ಯದ ಕಾವೇರಿ ರೈತರಿಗೆ ಬರುತ್ತಾ ಇರಲಿಲ್ಲ, ಈ ಸರ್ಕಾರಕ್ಕೂ ಬರುತ್ತಾ ಇರಲಿಲ್ಲ. ವಿಶೇಷವಾದಂತಹ ಕರ್ನಾಟಕ ಭವನದಲ್ಲಿ ನಮಗೆ ಸಲಹೆ ಕೊಡುವುದಕ್ಕೆ ಒಂದು ಕಛೇರಿ ತೆಗೆದಿದ್ದೇವೆ, ನಮ್ಮ ಎಕ್ಸ್‌ಪರ್ಟ್‌ಗಳನ್ನು ಅಲ್ಲಿ ಇಟ್ಟಿದ್ದೇವೆ. ಆದರೆ ಅಲ್ಲಿ ಏನು ನಡೆಯಿತು ಎನ್ನುವುದನ್ನು ನಮಗೆ ಯಾರ ಗಮನಕ್ಕೂ ತರಲಿಲ್ಲ. ಆದ್ದರಿಂದ ಇವತ್ತು ಈ ಪರಿಸ್ಥಿತಿಗೆ ಸಿಕ್ಕಿಹಾಕಿಕೊಂಡಿದ್ದೇವೆ. ನನಗೆ ಇವತ್ತು ಬೆಳಗ್ಗೆಯಿಂದ ಸಮಾಧಾನ ಇಲ್ಲ. ದೊಡ್ಡ ಅಪರಾಧ ಮಾಡುತ್ತಿದ್ದೇವೆ ಎನ್ನುವ ಅರಿವು ನನಗೆ ಇದೆ. ನಾವು ಕ್ಲಾಸ್ ಬಾಯ್ ಕ್ಲಾಸ್ ಏನು ಒಂದು ಅಬ್ಜೆಕ್ಸ್‌ನ್ ಮಾಡಿ ಕಳುಹಿಸಿ ಕೊಟ್ಟರೂ ಸಹ ಅಲ್ಟಿಮೇಟಾಗಿ ಎಫೆಕ್ಟ್ ಇರುವಂತಹ ರಾಜ್ಯಕ್ಕೆ ಇದನ್ನು ಸರ್ಕ್ಯುಲೇಟ್ ಮಾಡುತ್ತಾರೆ. ಅಂತಿಮವಾಗಿ 200 ಟಿಎಮ್‌ಸಿ ನೀರನ್ನು ಬಿಡುವ ಒಂದು ಆದೇಶಕ್ಕೆ ಅನುಗುಣವಾಗಿ ತಮಿಳುನಾಡು ಬಿಗಿ ಪಟ್ಟು ಹಿಡಿಯುತ್ತದೆ, ನಮಗೆ ಅಲ್ಲಿ ಸೋಲು ಕಟ್ಟಿಟ ಬುತ್ತಿ ಎನ್ನುವುದು ಎಲ್ಲರಿಗೂ ಮನವರಿಕೆಯಾದ ಸಂಗತಿ, ಆದರೆ ಆಡಳಿತ ಪಕ್ಷ ಒಂದು ನಿಲುವನ್ನು ತೆಗೆದುಕೊಳ್ಳುವುದು, ಪ್ರತಿಪಕ್ಷದವರು ಒಂದು ನಿಲುವನ್ನು ತೆಗೆದುಕೊಳ್ಳುವುದರಿಂದ ಕಾವೇರಿ ಬೇಸಿನ್‌ನಲ್ಲಿರುವವರಿಗೆ ರಾಂಗ್ ಸಿಗ್ನಲ್ ಹೋಗಬಹುದು, ಕಾನೂನು ಸುವ್ಯವಸ್ಥೆ ಹದಗೆಡಬಹುದು, ಶಾಂತಿಗೆ ಧಕ್ಕೆ ಬರಬಹುದು ಎನ್ನುವ ಒಂದೇ ಒಂದು ಕಾರಣಕೋಸ್ಕರ ನಾವು ಮನಸ್ಸಿಲ್ಲದ ಮನಸ್ಸಿನಿಂದ ಇದಕ್ಕೆ ನಾವು ಒಪ್ಪಿಗೆ ಕೊಟ್ಟಿದ್ದೇವೆ. ಆದರೆ ಒಂದು ಷರತ್ತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ, ತಮಗೆ ಜ್ಞಾಪಕ ಇರಬಹುದು, ಶ್ರೀಮಾನ್ ದೇವೇಗೌಡರು ಮುಖ್ಯಮಂತ್ರಿಗಳು ಆಗಿರತಕ್ಕ ಕಾಲದಲ್ಲಿ 6 ಟಿಎಂಸಿ ನೀರನ್ನು ಅನಿವಾರ್ಯವಾಗಿ ಬಿಡುವಂತಹ ಕಾಲದಲ್ಲಿ ಸರ್ವಾನುಮತದ ನಿರ್ಣಯವನ್ನು ತೆಗೆದುಕೊಂಡು ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಫ್ರೇಮ್ ಮಾಡುವ ವರೆಗೆ ಯಾವುದೇ ಕಾರಣಕ್ಕೆ ನಾವು ಒಪ್ಪಿಗೆ ಕೊಡುವುದಿಲ್ಲ, ಸುಪ್ರಿಮ್ ಕೋರ್ಟ್‌ನ ಮೂಲಕ ಪ್ರಧಾನಿಗಳು ಮಧ್ಯ ಪ್ರವೇಶ ಮಾಡಿ, ಎಕ್ಸ್‌ಪರ್ಟನ್ನು ಕಳುಹಿಸಿ ಈಗ ಅನಿವಾರ್ಯವಾಗಿ ಟಿಎಂಸಿ ನೀರನ್ನು ಬಿಡಲು ನಾವು ಷರತ್ತನ್ನು ಹಾಕಿದ್ದೆವು. ತಾವು ಆಗ ಸರ್ವಾನುಮತದ ನಿರ್ಣಯವನ್ನು ತೆಗೆದುಕೊಂಡು ಒಪ್ಪಿಕೊಂಡಿದ್ದಿರಿ, ಅನೇಕ ಬಾರಿ ಸರ್ವಾನುಮತದ ನಿರ್ಣಯ ತೆಗೆದುಕೊಂಡ ಮೇಲೂ ಸಹ ಖರ್ಚ ಉಳಿವಿಗಾಗಿ ಯಾವುದೋ ಕಾರಣದಿಂದ ಏನೋ ತಪ್ಪುಗಳನ್ನು ಮಾಡಿ ಕಾವೇರಿ ಬೇಸಿನ್‌ನಲ್ಲಿ ಇರುವ ಜನರು ಸಂಕಷ್ಟಕ್ಕೆ ಸಿಕ್ಕಿಕೊಳ್ಳುವಂತಹ ಅನಿವಾರ್ಯ ಸ್ಥಿತಿಗೆ ತಳ್ಳುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಅಕ್ಷಮ್ಯ ಅಪರಾಧವನ್ನು ನಾವು ಮುಂದುವರೆಸುತ್ತಿದ್ದೇವೆ.

ಈಗಲಾದರೂ ನಾಡಿನ ಜನರ ಪರವಾಗಿ ಈ ಸದನದಲ್ಲಿ ನೀರಾವರಿ ಸಚಿವರಿಗೆ ಎಚ್ಚರಿಕೆಯನ್ನು ನಾನು ಕೊಡುತ್ತೇನೆ, ಇವತ್ತು ಈ ಕಾವೇರಿ ಟ್ರಿಬ್ಯೂನಲ್ ಒಪ್ಪಿಕೊಳ್ಳದೇ ಕಾವೇರಿ ನದಿ ಸಮನ್ವಯ ಸಮಿತಿಯನ್ನು ಮಾಡಿ, ವಾಸ್ತವಿಕ ಸ್ಥಿತಿಯನ್ನು ಅರ್ಥಮಾಡಿಕೊಂಡು, ಆ ಜಲಾಶಯದಲ್ಲಿ ಇರುವ ನೀರನ್ನು ಅರ್ಥಮಾಡಿಕೊಂಡು ಆಯಾ ಕಾಲಕ್ಕೆ ಅಗತ್ಯವಿರುವ ನೀರನ್ನು ಬಿಡಲಿಕ್ಕೆ ನಮ್ಮ ಒಪ್ಪಿಗೆ ಇದೆ, ಆದರೆ ಯಾವುದೇ ಕಾರಣಕ್ಕೆ ಕಾವೇರಿ ಪ್ರಾಧಿಕಾರದ ರಚನೆಗೆ ನಮ್ಮ ಒಪ್ಪಿಗೆ ಇಲ್ಲ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಆದರೆ ಯಾವುದೇ ಒಂದು ಸಂದರ್ಭದಲ್ಲಿ ಯಾವುದೇ ಒಂದು ನ್ಯಾಯಾಲಯ, ಒಂದು ಟ್ರಿಬ್ಯೂನಲ್ ಮಧ್ಯ ಪ್ರವೇಶ ಮಾಡಿದಂತಹ ಕಾಲದಲ್ಲಿ ಯಾವ ರಾಜ್ಯಸರ್ಕಾರವು ಅದಕ್ಕೆ ಮೇಲೆ ಇದ್ದೇವೆ ಎಂದು ಹೇಳಲಿಕ್ಕೆ ಬರುವುದಿಲ್ಲ. ಯಾವುದೇ ಒಂದು ಒಡಂಬಡಿಕೆಗೆ ನಾವು ಬರಬೇಕಾಗುತ್ತದೆ. ನೀವು ಮಾಡಿದ ತಪ್ಪಿಗೆ ನಮ್ಮನ್ನೂ ಸಹ ಮತ್ತು ರಾಜ್ಯದ ಜನರನ್ನು ಬಲಿಪಶು ಮಾಡುತ್ತಾ ಇದ್ದೀರಿ, ಶಾಂತಿ ನಿರ್ಮಾಣ ಮಾಡಬೇಕು ಎನ್ನುವಂತಹ ಒಂದೇ ಕಾರಣಕೋಸ್ಕರ ನೀವು ಹೋಗುವ ದಾರಿಗೆ ನಮ್ಮನ್ನು ಎಳೆದುಕೊಂಡು ಹೋಗುತ್ತಿದ್ದೀರಿ. ಅನಿವಾರ್ಯವಾಗಿ ನಾವು ಇವತ್ತು ಈ ಒಂದು ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಒಂದು ಕೊನೆ ಮಾತು ಇನ್ನು ಮುಂದೆ ಪ್ರತಿಪಕ್ಷದ ಸಹಕಾರ ತಮಗೆ ಬೇಕು ಎಂದರೆ ಯಾವ ಷರತ್ತಿನ ಅನ್ವಯ ಕಾವೇರಿ ನದಿ ಸಮನ್ವಯ ಸಮಿತಿ ಆಗಬೇಕು ಅದರ ಮೂಲಕ ಅದರ ಒಂದು ಒಡಂಬಡಿಕೆಯನ್ನು ತಂದು ಈ ಸಮಸ್ಯೆಯನ್ನು ಬಗೆಹರಿಸಬೇಕು. ಅಲ್ಟಿಮೇಟ್ ಆಗಿ ಟ್ರಿಬ್ಯೂನಲ್ ಆರ್ಡರ್ ಬಂದ ಮೇಲೆ ಅದಕ್ಕೆ ಏನು ಮಾಡಬೇಕು ಅದನ್ನು ಮುಂದೆ ನೋಡೋಣ. ಆದರೆ ಈಗ ಈ ತಾತ್ಕಾಲಿಕ ದೃಷ್ಟಿಯಿಂದ ಒಂದು ಒಡಂಬಡಿಕೆಯನ್ನು ತಂದು ಮಾತುಕತೆ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಬೇಕು, ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಿ ಮಾತುಕತೆಗೆ ಒಂದು ಅವಕಾಶ ಕಲ್ಪಿಸಬೇಕು. ಸುಪ್ರೀಮ್ ಕೋರ್ಟ್ ಒಂದು ಅವಕಾಶವನ್ನು ಕೊಟ್ಟಾಗ ಅದನ್ನು ಮೀರಿ ಇವರು ಯಾರಿಗೂ ಗೌರವ ಕೊಡುವುದಿಲ್ಲ ಎನ್ನುವ ಅಪವಾದಕ್ಕೆ ಗುರಿಯಾಗಬಾರದು ಎನ್ನುವ ಒಂದೇ ಒಂದು ಕಾರಣಕೋಸ್ಕರ ಇದನ್ನು ನಾವು ಒಪ್ಪಿಕೊಂಡಿದ್ದೇವೆ. ಈ ಭಾಗದಲ್ಲಿ ಇರುವಂತಹ ಪ್ರತಿಪಕ್ಷಗಳ ಪ್ರಮುಖರು ನಾವು ಕೊಡುವಂತಹ ಸಹಕಾರವನ್ನು ದುರುಪಯೋಗ ಮಾಡಿಕೊಳ್ಳದೆ ಯಾವ ಷರತ್ತಿನ ಅನ್ವಯ ಕಾವೇರಿ ನದಿ ಸಮನ್ವಯ ಸಮಿತಿ ರಚನೆ ಮಾಡಬೇಕೆಂದು ಕೇಂದ್ರಕ್ಕೆ ನಮ್ಮ ಅಭಿಪ್ರಾಯ ಕಳುಹಿಸಿ ಕೊಡುತ್ತಾ ಇದ್ದೇವೋ, ಅದಕ್ಕೆ ತಾವು ಸ್ಟಿಕ್‌ಆನ್ ಆಗಿ ಬೇರೆ ಯಾವ ರೀತಿ ಮಾರ್ಪಾಡಿಗೆ ಅವಕಾಶ ಮಾಡಿಕೊಡದೆ ರಾಜ್ಯದ ರೈತರ ಹಿತವನ್ನು ಕಾಪಾಡುವ ಕಡೆಗೆ ತಮ್ಮ ವಿಶೇಷವಾದ ಗಮನ ಕೊಡಬೇಕು ಎನ್ನುವ ಒಂದು ಆಧಾರದ ಅನ್ವಯ ಇದಕ್ಕೆ ನಾವು ಸಮ್ಮತಿ ಕೊಡುತ್ತಾ ಇದ್ದೇವೆ. ಮತ್ತೆ ಅದೇ ತಪ್ಪನ್ನು ತಾವು ಮಾಡದೇ ದಯಮಾಡಿ ನಾಡಿನ ಹಿತದೃಷ್ಟಿಯಿಂದ ಕೆಲಸ ಮಾಡಬೇಕು ಎನ್ನುವ ವಿನಂತಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER: Because Mr. Srirama Reddy and

Mr. Puttannaiah have participated in the meetings, they will speak for a minute.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ನಾನು ಒಂದೇ ಮಾತನ್ನು ಹೇಳುತ್ತೇನೆ. ಈ ಯೋಜನೆಗೆ ನಾವು ವಿರೋಧ ಇಲ್ಲ. ಆದರೆ ಈ ಯೋಜನೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಧಕ್ಕೆ ಬರುವಂತಹ ಅಂಶ ಇರುವುದನ್ನು ಅಷ್ಟೇ ನಾವು ವ್ಯಕ್ತಪಡಿಸಿರುವುದು, ನಮ್ಮ ಕರ್ನಾಟಕ ರಾಜ್ಯದ ಹಿತಕ್ಕೆ ಧಕ್ಕೆ ಬರದ ರೀತಿಯಲ್ಲಿ ನಾವು ಅದನ್ನು ತಿಳಿಸಬೇಕಾದ ಕರ್ತವ್ಯ ಇದೆ. ನಾವು ಭಾರತ ದೇಶದಲ್ಲಿ ಇದ್ದೇವೆ, ಸಂವಿಧಾನ ಸುಪ್ರಿಮ್ ಕೋರ್ಟ್, ಕೇಂದ್ರ ಸರ್ಕಾರ ಇದೆ ಇವುಗಳನ್ನು ಬಿಟ್ಟು ಹೋಗಲು ಸಾಧ್ಯವಿಲ್ಲ. ಅದು ನಮಗೆ ಒಪ್ಪಿಗೆ ಆಗದೇ ಇರುವ ಸಂದರ್ಭ ಬಂದಾಗ ಬೇರೆ ಮಾರ್ಗದಲ್ಲಿ ಹೋರಾಟಮಾಡಬಹುದು ಎಂದು ಹೇಳುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಅಧ್ಯಕ್ಷರೆ, ನಮ್ಮೆಲ್ಲರ ಪರವಾಗಿ ನಮ್ಮ ಮುಖಂಡರು ಹೇಳಿದ್ದಾರೆ. ಒಂದೇ ಅಂಶವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಈ ಡ್ರಾಫ್ಟ್ ನೋಟಿಫಿಕೇಷನ್‌ಗೆ ನಾವು ಒಂದೊಂದಾಗಿ ಯಾವ ಯಾವ ರೀತಿಯಲ್ಲಿ ಕ್ಲಾಸ್ ಬೈ ಕ್ಲಾಸ್ ವಿರೋಧ ಮಾಡಿ ಈ ರೀತಿಯಾಗಿ ಇರಬೇಕು ಎಂದು ಸಲಹೆ ಮಾಡಿದ್ದೇವೆ. ರಾಜ್ಯ ಸರ್ಕಾರದ ಹೊಣೆಗಾರಿಕೆ; ಕೇಂದ್ರ ಸರ್ಕಾರ ನಿಮ್ಮದೇ ಇರುವುದರಿಂದ ಮಾತುಕತೆಯ ಮೂಲಕ ಬಗೆಹರಿಸಲಿಕ್ಕೆ ಸಾಧ್ಯ ಎನ್ನತಕ್ಕ ಒಂದು ಒತ್ತಾಯ ಏನು ನ್ಯಾಯಾಲಯದ ಮೂಲಕ ಆಗಬೇಕು ಕೇಂದ್ರ ಸರ್ಕಾರದ ಮೂಲಕ ಆಗಬೇಕು. ಆ ಕೆಲಸವನ್ನು ನೀವು ಮಾಡಬೇಕು. ಈ ವಿಷಯವಾಗಿ ರಾಜಕೀಯವಾಗಿ ಪ್ರೆಷರ್ ತಂದು ಈ ವಿಷಯವನ್ನು ಇತ್ಯರ್ಥ ಮಾಡತಕ್ಕ ಒಂದು ಪರಿಸ್ಥಿತಿ ಸೃಷ್ಟಿ ಮಾಡತಕ್ಕ ಪ್ರಯತ್ನವನ್ನು ಮಾತುಕತೆ ಮೂಲಕ ಬಗೆಹರಿಸಬೇಕೆಂದು ಅಧ್ಯಕ್ಷರ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು): ಮಾನ್ಯ ಅಧ್ಯರೆ, ತಮ್ಮ ಅನುಮತಿ ಮೇರೆಗೆ ಈಗಾಗಲೇ ಹೇಳಿಕೆ ಮಾಡಿದ್ದೇನೆ. ಎಲ್ಲಾ ವಿರೋಧ ಪಕ್ಷದ ನಾಯಕರಿಗೆ ಸರ್ಕಾರದ ಪರವಾಗಿ ಧನ್ಯವಾದಗಳನ್ನು ಸಲ್ಲಿಸುತ್ತಾ ಮತ್ತು ಪುಟ್ಟಣ್ಣಯ್ಯನವರು, ಶ್ರೀ ಯಡಿಯೂರಪ್ಪನವರು ಹೇಳಿರತಕ್ಕ ಸೂಚನೆ ಏನು ಇದೆ, ಸುಪ್ರಿಂಕೋರ್ಟ್ ಡೈರೆಕ್ಷನ್ ಮೇಲೆ ಕೇಂದ್ರ ಸರ್ಕಾರವು ರಾಜ್ಯಸರ್ಕಾರವನ್ನು ಡ್ರಾಫ್ಟ್ ಫೈನಲೈಸೇಷನ್ ಮಾಡುವಂತಹ ಸಂದರ್ಭದಲ್ಲಿ ಅಲ್ಲಿಗೆ ಕರೆಯುತ್ತಾರೆ ಆ ಸಂದರ್ಭದಲ್ಲಿ ನಾವು ಏನು ಒಟ್ಟಾರೆ ತೀರ್ಮಾನ ತೆಗೆದುಕೊಂಡಿದ್ದೇವೆ ಅದಕ್ಕೆ ಬದ್ಧರಾಗಿ ನಿಂತುಕೊಂಡು ನಾವು ನೀವು ರಾಜ್ಯದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ರೈತರ ಹಕ್ಕನ್ನು ಕಾಪಾಡೋಣ ಎನ್ನುವಂತಹ ಮಾತನ್ನು ಹೇಳಿ ಸರ್ಕಾರದಿಂದ ತಮ್ಮ ಮೂಲಕ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

(3) ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ (ಮುಂದು)

+ ಶ್ರೀ ವಸಂತ ವಿ.ಸಾಲಿಯಾನ್ (ಕಾಪೂ): ಮಾನ್ಯ ಅಧ್ಯಕ್ಷರೆ, 1997-98ರ ಅನುದಾನ ಬೇಡಿಕೆ ಬಗ್ಗೆ. ಬೇಡಿಕೆ ಸಂಖ್ಯೆ 4 ಮೀನುಗಾರಿಕೆ, ಬೇಡಿಕೆ ಸಂಖ್ಯೆ 33 ಸಣ್ಣ ನೀರಾವರಿ, ಬೇಡಿಕೆ ಸಂಖ್ಯೆ 22 ಅಬಕಾರಿ, ಇವುಗಳಲ್ಲಿಯ ಕೆಲವು ಲೋಪದೋಷಗಳ ಬಗ್ಗೆ ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಮೊದಲನೆಯದಾಗಿ ಮೀನುಗಾರಿಕೆ, ಕರ್ನಾಟಕರಾಜ್ಯದಲ್ಲಿ ಸುಮಾರು 300 ಕಿ.ಮೀ. ಉದ್ದದ ವಿಶಾಲವಾದ ಸಮುದ್ರ ತಳದಲ್ಲಿ, ಅದರಲ್ಲಿ ಉತ್ತರ ಕನ್ನಡ ಜಿಲ್ಲೆ, ಮಂಗಳೂರು, ಉಡುಪಿ ಈ ಮೂರು ಜಿಲ್ಲೆಗಳಲ್ಲಿ ಸೆಪ್ಟೆಂಬರ್ 1ರಿಂದ ಮೇ 1ರ ವರೆಗೆ ಮೀನುಗಾರಿಕೆ ನಡೆಯುತ್ತದೆ, ಅದರಲ್ಲಿ ನಾಡ ದೋಣಿ ಸುಮಾರು 11,533 ಮೀನುಗಾರಿಕೆಯನ್ನು ನಡೆಸುತ್ತವೆ. ಪರ್‌ಸೀನ್ ಬೋಟ್ ಸುಮಾರು 374, ಟ್ರಾಲರ್ ದೋಣಿಗಳು ಸುಮಾರು 2073, ಅದೇ ರೀತಿ ಗಿಲ್‌ನೆಟ್ ಸುಮಾರು 1122 ಈ ವರ್ಷದಲ್ಲಿ ಅಂದರೆ 1996ರ ಉತ್ಪಾದನೆ 2,27,779 ಮೆಟ್ರಿಕ್ ಟನ್, ಅದರಲ್ಲಿ 23,825 ಲಕ್ಷ ರೂ. ಉತ್ಪಾದನೆಯಾಗಿದೆ. ಈ ವರ್ಷದಿಂದ ವಿದೇಶಿ ವಿನಿಮಯ ಎಕ್ಸ್‌ಪೋರ್ಟ್ 9,914 ಮೆಟ್ರಿಕ್ ಟನ್. ಸುಮಾರು 0.925 ಲಕ್ಷ ರೂ.ಗಳ ವಿದೇಶಿ ವಿನಿಮಯವಾಗಿದೆ. ಪ್ರಾಮುಖ್ಯವಾಗಿ 1997-98ರ ಸಾಲಿನ ವಿಷಯ ಸಮಿತಿಯಲ್ಲಿ ಒಂದು ಪ್ರಸ್ತಾವನೆ ಬಂದಿದೆ, ರಾಜ್ಯದಲ್ಲಿ ಮೀನುಗಾರಿಕೆ ಬೇಕಾದಂತಹ ಒಳ್ಳೆಯ ವಾತಾವರಣ ಇದ್ದರೂ ಯೋಗ್ಯವಾದ ರಚನಾತ್ಮಕವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೇ ಇರುವುದು ಸಮಿತಿಯ ಗಮನಕ್ಕೆ ಬಂದಿದೆ. ಇದರ ಅರ್ಥ ಏನು ಎಂದರೆ ಇದಕ್ಕೆ ಬೇಕಾದಂತಹ ಕಾರ್ಯಕ್ರಮಗಳನ್ನು ರೂಪಿಸಬೇಕಾದರೆ ಇವತ್ತು ಕೇವಲ 23 ಕೋಟಿ ರೂ.ಗಳು ಮಾತ್ರ ನಮ್ಮ ರಾಜ್ಯಸರ್ಕಾರದ ಕಾರ್ಯಕ್ರಮದಲ್ಲಿ ಇದೆ. ಬೇರೆ ರಾಜ್ಯಕ್ಕೆ ಹೋಲಿಸಿದಾಗ ಮಹಾರಾಷ್ಟ್ರ, ಗುಜರಾತ್, ಮತ್ತು ಒರಿಸ್ಸಾ, ಕೇರಳಾ, ತಮಿಳುನಾಡು ಪ್ರದೇಶಗಳಿಗೆ ಹೋಲಿಸಿದಾಗ ನಾವು ಕೇವಲ 23 ಕೋಟಿ ರೂ.ಗಳ ಯೋಜನೆಯಲ್ಲಿ ಇದ್ದೇವೆ. ಬೇರೆ ರಾಜ್ಯದಲ್ಲಿ ಕನಿಷ್ಠ ಪಕ್ಷ ಒಂದು ಲಕ್ಷ ಕೋಟಿ ರೂಪಾಯಿಗಳ ಯೋಜನೆಯನ್ನು ಆಯಾ ರಾಜ್ಯ ಸರ್ಕಾರ ಮೀನುಗಾರಿಕೆ ಇಲಾಖೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಆದ್ದರಿಂದ ನಾನು ತಮ್ಮ ಮುಖೇನ ಸರ್ಕಾರಕ್ಕೆ ಬರುವ ಯೋಜನೆಗಳಲ್ಲಿ 100 ಕೋಟಿ ರೂಪಾಯಿ ಯೋಜನೆಗಳನ್ನು ತಯಾರಿಸಿ ಈ ಇಲಾಖೆ ಅಭಿವೃದ್ಧಿ ಕಾರ್ಯಕ್ರಮವನ್ನು ಮಾಡಬೇಕೆಂದು ತಮ್ಮ ಮುಖೇನ ಒತ್ತಾಯಿಸುತ್ತಿದ್ದೇನೆ. ಅದೇ ರೀತಿಯಲ್ಲಿ ಮಲ್ಪೆಯಲ್ಲಿ ಮಂಜೂರಾತಿ ಆಗಿದ್ದಂಥ 118 ಮೀಟರ್ ಉದ್ದದ ಜೆಟ್ಟಿ ಕಾರ್ಯಕ್ರಮಕ್ಕೆ 70 ಲಕ್ಷ 50 ಸಾವಿರ ವೆಚ್ಚದಲ್ಲಿ ಕಾರ್ಯಕ್ರಮ ಆಗಿದ್ದು ಬಹಳ ನಿಧಾನವಾಗಿ ಇವತ್ತು ಕಾರ್ಯಕ್ರಮ ನಡೆಯುತ್ತಿದೆ. ಈ ಕಾರ್ಯಕ್ರಮ 1996ರ ಮಾರ್ಚಿಗೆ ಮುಗಿಯಬೇಕಾಗಿತ್ತು. ಇಷ್ಟರವರೆಗೆ ಬಹಳ ಮಂದಗತಿಯಲ್ಲಿ ಕಾರ್ಯಕ್ರಮ ನಡೆಯುತ್ತಿದೆ. ತಮ್ಮ ಮುಖೇನ ಮಂತ್ರಿಗಳಲ್ಲಿ, ಸರ್ಕಾರದಲ್ಲಿ

ಒತ್ತಾಯಿಸುತ್ತೇನೆ. ಆದಷ್ಟು ಜಾಗ್ರತೆ ಈ ಕಾರ್ಯಕ್ರಮವನ್ನು ಮುಗಿಸಬೇಕು. ಅದೇ ರೀತಿಯಲ್ಲಿ ಮಲ್ಪೆ ಎರಡನೇ ಹಂತದಲ್ಲಿ 15 ಕೋಟಿ ರೂಪಾಯಿ ವೆಚ್ಚದ ಕಾರ್ಯಕ್ರಮ ಇದು ಈಗ ಪ್ರಾರಂಭವಾಗಿದೆ. ಆದಷ್ಟು ಜಾಗ್ರತೆ ಅದನ್ನು ಮುಗಿಸಬೇಕು. ಅದಕ್ಕೆ ಬೇಕಾದ ಅನುದಾನ ಇದೆ. ಈ ಎರಡು ಕಾರ್ಯಕ್ರಮಗಳಿಗೆ ಅನುದಾನ ಇದೆ. ತಾವು ಹೆಚ್ಚಿನ ಅನುದಾನವನ್ನು ಕೊಟ್ಟು ಆದಷ್ಟು ಜಾಗ್ರತೆ ಮುಗಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಅದೇರೀತಿಯಲ್ಲಿ ನನ್ನ ಕ್ಷೇತ್ರದಲ್ಲಿರುವಂಥ ಹೆಜಮಾಡಿ ಕೋಡಿ ಕಿರುಬಂದರು ಕಾರ್ಯಕ್ರಮ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಆಗುವಂಥದ್ದು. ಈಗಾಗಲೇ ನೋಟಿಫಿಕೇಷನ್ ಆಗಿದೆ. ಅದಕ್ಕೆ ಬೇಕಾದ ಜಾಗವನ್ನು ಬಿಟ್ಟುಕೊಟ್ಟಿದ್ದಾರೆ. ಅದರ ಶಂಕುಸ್ಥಾಪನೆಯಾಗಿದೆ. ಈ ಕಾರ್ಯಕ್ರಮವನ್ನು ಆದಷ್ಟು ಬೇಕು ಮುಗಿಸುವುದಕ್ಕೆ ಹಂತಹಂತ ರೂಪದಲ್ಲಿ ಅದಕ್ಕೆ ಬೇಕಾದ ಹಣವನ್ನು ಒದಗಿಸಿಕೊಡಬೇಕಾಗುತ್ತದೆ. ಅದೇರೀತಿಯಲ್ಲಿ ಅಂಗಾರುಕಟ್ಟೆ ಜೆಟ್ಟಿ ಇದೂ ಕೂಡ ಬಹಳ ನಿಧಾನವಾಗಿ ನಡೆಯುತ್ತಿದೆ. ಇದನ್ನು ಸಹ ಆದಷ್ಟು ಬೇಗ ಮುಗಿಸಬೇಕಾಗುತ್ತದೆ. ಏಕೆಂದರೆ ಅದು ನಮ್ಮ ಮೀನುಗಾರಿಕಾ ಸಚಿವರ ಕ್ಷೇತ್ರ. ಆದ್ದರಿಂದ ಅದು ಬೇಗ ಆಗುವಂತೆ ಮಾಡಬೇಕಾಗುತ್ತದೆ. ಮತ್ತು ಲ್ಯಾಂಡಿಂಗ್ ಸೆಂಟರ್ಸ್. ಜೆಟ್‌ಗಳ ನಿರ್ಮಾಣ ಏತಕ್ಕೋಸ್ಕರ ಎಂದರೆ ಕೆಲವು ಸಂದರ್ಭದಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ಮೀನುಗಾರಿಕೆ ಪ್ರಾರಂಭವಾಗುತ್ತದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಮಂಗಳೂರು ಮತ್ತು ಮಲ್ಪೆಯಲ್ಲಿ ಮಾತ್ರ ಲ್ಯಾಂಡಿಂಗ್ ಸೆಂಟರ್ಸ್, ಮೀನುಗಳನ್ನು ಅಲ್ಲಿ ಬೋಟುಗಳಲ್ಲಿ ಸಿಕ್ಕಿದಂಥ ಮೀನುಗಳನ್ನು ವ್ಯಾಪಾರಸ್ಥರಿಗೆ ಮಾರತಕ್ಕ ಮಾರುಕಟ್ಟೆ ಏನಿದೆ ಅಲ್ಲಿ ಮಾತ್ರ ಲ್ಯಾಂಡಿಂಗ್ ಸೆಂಟರ್ ಇದೆ. ಕರ್ನಾಟಕ ರಾಜ್ಯದ ಈ ಮೂರು ಜಿಲ್ಲೆಗಳಲ್ಲಿ ಲ್ಯಾಂಡಿಂಗ್ ಸೆಂಟರ್‌ಗಳನ್ನು ಹೆಚ್ಚಾಗಿ ಮಾಡಬೇಕಾಗುತ್ತದೆ. ಈಗ ಕಾರವಾರ, ಮಂಗಳೂರು ಮತ್ತು ಮಲ್ಪೆಯಲ್ಲಿ ಮಾತ್ರ ಲ್ಯಾಂಡಿಂಗ್ ಸೆಂಟರ್ ಇದೆ. ಅದಕ್ಕಾಗಿ ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರತಿವರ್ಷ 5 ಲ್ಯಾಂಡಿಂಗ್ ಸೆಂಟರ್‌ಗಳನ್ನು ತಾವು ಪ್ರೊಪೋಸ್ ಮಾಡಿ ಮಾಡಬೇಕು. ಇದಕ್ಕೆ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಅನುದಾನ ಇದೆ. ಆದ್ದರಿಂದ ಇದಕ್ಕೆ ಕಾರ್ಯಕ್ರಮವನ್ನು ಹಾಕಬೇಕಾಗುತ್ತದೆ. ಅದೇರೀತಿಯಲ್ಲಿ ರಾಷ್ಟ್ರೀಯ ಕೇಂದ್ರ ಪುರಸ್ಕೃತ ಯೋಜನೆ ಬಡ ಮೀನುಗಾರರಿಗೆ ಮನೆ ಕಟ್ಟಿಸುವ ಕಾರ್ಯಕ್ರಮ ಅದು. 30 ಸಾವಿರ ರೂಪಾಯಿಗಳ ಕಾರ್ಯಕ್ರಮ ಅದು. ಅದರಲ್ಲಿ ಏನಿದೆ ಅಂದರೆ 15 ಸಾವಿರ ರಾಜ್ಯ ಸರ್ಕಾರ ಮತ್ತು 15 ಸಾವಿರ ಕೇಂದ್ರ ಸರ್ಕಾರ ಕೊಡುತ್ತದೆ. ಈ ಯೋಜನೆ 93ನೇ ಇಸವಿಯ ನಂತರ ಹೆಚ್ಚಿನ ಫಲಕಾರಿಯಾಗಲಿಲ್ಲ. ನನ್ನ ಲೆಕ್ಕದ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 5 ಸಾವಿರ ಮನೆಗಳನ್ನು ಮಾಡುವಂಥ ಯೋಜನೆಗಳನ್ನು ತಾವು ಹಾಕಿಕೊಳ್ಳಬೇಕಾಗುತ್ತದೆ. ಇದಕ್ಕೆ ಬೇಕಾದ ಹಣವನ್ನು ಸಹ ಒದಗಿಸಬೇಕಾಗುತ್ತದೆ. ಕೇಂದ್ರ ಸರ್ಕಾರಕ್ಕೆ ತಾವು ಮನವಿ ಮಾಡಬೇಕಾಗುತ್ತದೆ. ಕೇಂದ್ರಸರ್ಕಾರಕ್ಕೆ ತಾವು ಪ್ರೊಪೋಸಲ್ ಕಳುಹಿಸಬೇಕಾಗುತ್ತದೆ. ಈ ಮನೆಯನ್ನು ಗುರುತಿಸುವಾಗ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಇದನ್ನು

ಗುರುತಿಸಬೇಕಾಗುತ್ತದೆ. ಏಕೆಂದರೆ ಯಾರೋ ಒಂದು ಏಜೆನ್ಸಿ ಗುರುತಿಸಿದರೆ ಅದು ಸರಿಯಲ್ಲ. ಗ್ರಾಮಪಂಚಾಯಿತಿಯಲ್ಲಿ ರಾಜ್ಯದ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತವೆ. ಅದೇ ರೀತಿಯಲ್ಲಿ ರಾಜ್ಯದ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತವೆ. ಅದೇ ರೀತಿಯಲ್ಲಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಮನೆಗಳನ್ನು ಗುರುತಿಸಿಕೊಂಡು ತಮ್ಮ ಇಲಾಖೆಯಲ್ಲಿ ಅದಕ್ಕೆ ಬೇಕಾದ ಅನುದಾನವನ್ನು ಒದಗಿಸಿ ಕರ್ನಾಟಕ ರಾಜ್ಯದಲ್ಲಿ ಸುಮಾರು 5 ಸಾವಿರ ಮನೆಗಳನ್ನು ಮಾಡುವ ಯೋಜನೆಯನ್ನು ತಾವು ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿಯಲ್ಲಿ ನಾಡ ದೋಣಿಗಳು ಈ ರಾಜ್ಯದಲ್ಲಿ ಸುಮಾರು 5 ಸಾವಿರ ಇವೆ. ಅದನ್ನು ಗುರುತಿಸಬೇಕಾಗುತ್ತದೆ. ಅದಕ್ಕೆ ಬೇಕಾದಂಥ ಮಾಡ್ರನೈಸೇಷನ್ ಮಾಡಬೇಕಾಗುತ್ತದೆ. ಈ ಇಲಾಖೆಯಲ್ಲಿ ಸುಮಾರು 16,800 ರೂಪಾಯಿ ಸಬ್ಸಿಡಿ ಸಹ ಇದೆ. ಹೆಚ್ಚಿನ ನಾಡದೋಣಿಗಳನ್ನು ಮೆಕಾನೈಸ್ಡ್ ಮಾಡಿ ಅದಕ್ಕೆ ತಗಲುವ ವೆಚ್ಚ 48,000 ರೂಪಾಯಿ ಇರಬಹುದು ಮಾಡ್ರನೈಸೇಷನ್ ಮಾಡುವುದಕ್ಕೆ. ಅದಕ್ಕೆ ಸಬ್ಸಿಡಿ ಸಹ ಇದೆ. ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಅದನ್ನು ಗುರುತಿಸಿಕೊಂಡು ಈ ರಾಜ್ಯದ ಎಲ್ಲಾ ನಾಡದೋಣಿಗಳಿಗೆ ಮಾಡ್ರನೈಸೇಷನ್ ಮಾಡುವಂಥ ಕಾರ್ಯಕ್ರಮವನ್ನು ತಾವು ಮಾಡಬೇಕಾಗುತ್ತದೆ. ಮತ್ತು ಆಳಸಮುದ್ರ ಮೀನುಗಾರಿಕೆ ಬಗ್ಗೆ ಕೆಲಸ ಬಹಳಷ್ಟು ಮಂದಗತಿಯಲ್ಲಿ ನಡೆಯುತ್ತಿದೆ. ಈ ಆಳಸಮುದ್ರ ತರಬೇತಿ ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿ ಹೆಚ್ಚು ಮಾಡಬೇಕಾಗುತ್ತದೆ. ಏಕೆಂದರೆ ಆಳಸಮುದ್ರ ಎಂದರೆ ಮೀನುಗಾರಿಕೆಯಲ್ಲಿ ಅದಕ್ಕೆ ಬೇಕಾದಂಥ ಸಲಕರಣೆಗಳು ಫಿಷ್ ಫೈಂಡರ್, ಎಕೋ ಸೌಂಡರ್ ಮತ್ತು ವಾಕಿಟಾಕಿ. ಇದರ ಉದ್ದೇಶ ಏನೆಂದರೆ ಮೀನು ಸಮುದ್ರದಲ್ಲಿ ಬಹಳ ದೂರದಲ್ಲಿದ್ದರೂ ಅದನ್ನು ಗರುತಿಸಿಕೊಳ್ಳುವಂಥ ಒಂದು ಎಕ್ವಿಪ್‌ಮೆಂಟ್ಸ್ ಸಹ ಇದೆ. ಅದೇರೀತಿಯಲ್ಲಿ ತೊಂದರೆಗೆ ಈಡಾದಾಗ, ಬಿರುಗಾಳಿ ಅಥವಾ ಹೆಚ್ಚು ಮೀನು ಬಂದರೆ ಅದನ್ನು ಸಮುದ್ರ ದಡಕ್ಕೆ ಸಾಗಿಸುವುದಕ್ಕೆ ವಾಕಿ ಟಾಕಿಯ ವ್ಯವಸ್ಥೆ ಮಾಡಬೇಕಾಗುತ್ತದೆ. ಈ ಕಾರ್ಯಕ್ರಮಕ್ಕೆ ಸಬ್ಸಿಡಿ ಸಹ ಇದೆ. ಈ ಸಲಕರಣೆಗಳನ್ನು ತೆಗೆದುಕೊಳ್ಳುವುದಕ್ಕೆ ನನ್ನ ಲೆಕ್ಕದಲ್ಲಿ 1 ಲಕ್ಷದ 38 ಸಾವಿರ ರೂಪಾಯಿ ವೆಚ್ಚವಾಗುತ್ತದೆ. ಆದ್ದರಿಂದ ಈ ಕಾರ್ಯಕ್ರಮ ಬಹಳ ಹೆಚ್ಚಾಗಿ ಇವತ್ತು ನಡೆಯಬೇಕಾಗುತ್ತದೆ. ಅದೇರೀತಿಯಲ್ಲಿ ಮೀನುಗಾರರಿಗೆ ಬೇಕಾದ ಮಾರುಕಟ್ಟೆ ಯೋಜನೆಗಳೇನಿವೆ ಅದನ್ನು ಪ್ರತಿಯೊಂದು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ತಾವು ಈ ಕಾರ್ಯಕ್ರಮವನ್ನು ನಡೆಸಬೇಕಾಗುತ್ತದೆ. ಅದಕ್ಕೆ ತಾವು ಸಬ್ಸಿಡಿ ಸಹ ಇಟ್ಟಿದ್ದೀರಿ. ಅದೇರೀತಿಯಲ್ಲಿ ಮತ್ಸ್ಯಾಲಯ ಏನಿದೆ ಅದು ಮಂಗಳೂರಿನಲ್ಲಿ ಆಗುವಂಥ ಕಾರ್ಯಕ್ರಮ ಇತ್ತು. ಅದೇರೀತಿಯಲ್ಲಿ ತುಮಕೂರಿನಲ್ಲಿ ಸುಮಾರು 25 ಲಕ್ಷ ರೂಪಾಯಿ ವೆಚ್ಚದಲ್ಲಿ ಆಗಬೇಕಾದ ಕಾರ್ಯಕ್ರಮ ಬಾಕಿ ಇದೆ. ಮೈಸೂರಿನಲ್ಲಿ ಕೆ.ಆರ್.ಎಸ್.ನಲ್ಲಿ ಆಗುವಂಥ ಒಂದು ಕಾರ್ಯಕ್ರಮ ಇದೆ. ಶಿವಮೊಗ್ಗದಲ್ಲಿ ಬಾಕಿ ಇದೆ. ಕೋಲಾರದಲ್ಲಿ ಬಾಕಿ ಇದೆ. ಇತ್ತೀಚೆಗೆ ಉಡುಪಿ ಜಿಲ್ಲೆಯಲ್ಲಿ, ಅದು ತಮ್ಮದೇ

ಜಿಲ್ಲೆ. ಅಲ್ಲೂ ಸಹ ಅಕ್ವೇರಿಯಂ ಮಾಡಬೇಕಾಗುತ್ತದೆ. ಈ ಕಾರ್ಯಕ್ರಮ ಬಹಳಷ್ಟು ಬಾಕಿ ಇದೆ. ಆಕ್ವೇರಿಯಂ ಬಗ್ಗೆ ರಾಜ್ಯದಲ್ಲಿ ಹಾಕಿಕೊಂಡಂಥ ಕಾರ್ಯಕ್ರಮ ಏನಿದೆ ಅದನ್ನು ನಾವು ಪೂರ್ಣಗೊಳಿಸಬೇಕಾಗುತ್ತದೆ. ಅದೇರೀತಿ ಸಹಕಾರ ಸಂಘಗಳು. ಮಹಿಳಾ ಸಹಕಾರ ಸಂಘಗಳಿರಬಹುದು, ಬೇರೆ ಸಹಕಾರ ಸಂಘಗಳಿರಬಹುದು. ಸಹಕಾರ ಸಂಘಗಳಿಗೆ ಹೆಚ್ಚಿನ ಉತ್ತೇಜನವನ್ನು ತಾವು ಕೊಡಬೇಕಾಗುತ್ತದೆ. ಅದಕ್ಕೆ ಬೇಕಾದಂಥ ಸಬ್ಸಿಡಿ, ಮೂಲ ಬಂಡವಾಳ ಸಾಲ, ಅದೇರೀತಿಯಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದೇರೀತಿಯಲ್ಲಿ ಇವತ್ತು ಸಮುದ್ರದಲ್ಲಿ ಮೀನು ಕೃಷಿ ಮಾಡುವ ಯೋಜನೆ ಏನಿದೆ ಅದು ಕೇಂದ್ರಸರ್ಕಾರದಲ್ಲಿದೆ. ಇವತ್ತು ಅದಕ್ಕೆ ಆರ್ಟಿಫಿಷಲ್ ರೀಫ್ ಎನ್ನುವ ಕೇಂದ್ರ ಸರ್ಕಾರದ ಒಂದು ಸ್ಕೀಮ್ ಇದೆ. ಅದನ್ನು ನಮ್ಮ ಉತ್ತರಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿ ಕರಾವಳಿ ಪ್ರದೇಶದಲ್ಲಿ ಈ ಸಮುದ್ರದಲ್ಲಿ ಮೀನಿನ ಮರಿಗಳನ್ನು ಸಾಕುವಂಥ ಕೇಂದ್ರಸರ್ಕಾರದ ಯೋಜನೆ ಏನಿದೆ, ಇದನ್ನು ನಮ್ಮ ರಾಜ್ಯದಲ್ಲೂ ಸಹ ತಾವು ಮಾಡಬೇಕಾಗುತ್ತದೆ. ಅದೇ ರೀತಿಯಲ್ಲಿ ಮೀನುಗಾರಿಕೆ ರಸ್ತೆ ಬಗ್ಗೆ ನನಗೆ ಬಹಳಷ್ಟು ಬೇಜಾರಾಗಿದೆ. 1993ರ ನಂತರ ಮಾನ್ಯ ಮೀನುಗಾರಿಕೆ ಸಚಿವರ ಕ್ಷೇತ್ರ ಬಿಟ್ಟು ನಮ್ಮ ಜಿಲ್ಲೆಯಲ್ಲಿ ಅಥವಾ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಕಡೆಯಲ್ಲೂ ಸಹ ಮೀನುಗಾರಿಕೆ ರಸ್ತೆಗಳ ನಿರ್ಮಾಣದ ಕಾರ್ಯಕ್ರಮ ಇವತ್ತು ಹೆಚ್ಚಿಗೆ ನಡೆಯಲಿಲ್ಲ. ಅದಕ್ಕೆ ಬೇಕಾದಂಥ ಕಾರ್ಯಕ್ರಮಗಳು ಇವೆ. ಅದಕ್ಕೆ ಬೇಕಾದಂಥ....

ಶ್ರೀ ಕೆ.ಜಯಪ್ರಕಾಶ ಹೆಗಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯಮಂತ್ರಿ): ಮಾನ್ಯ ಅಧ್ಯಕ್ಷರೇ, ಅವರು ನೇರವಾದ ಆಪಾದನೆಯನ್ನು ಮಾಡಿದ್ದಾರೆ. ಇದರ ಬಗ್ಗೆ ಸ್ವಲ್ಪ ಹೇಳಬೇಕು. ಉಳಿದದ್ದು ಎಲ್ಲಾ ಆಮೇಲೆ ಹೇಳುತ್ತೇನೆ. ಅವರು ಮಂತ್ರಿಯಾಗಿದ್ದಾಗ ಏನೇನು ಮಾಡಿದ್ದಾರೆ ಎಂದು ಸ್ವಲ್ಪ ಆಲೋಚನೆ ಮಾಡಿದರೆ ಬೇರೆಯವರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಮತ್ತೆ ಹೆಚ್ಚಿನ ವಿಷಯ ಅವರು ಇದ್ದುದ್ದನ್ನೇ ಹೇಳಿದ್ದಾರೆ. ಏನೇನು ಆನ್‌ಗೋಯಿಂಗ್ ಪ್ರೋಗ್ರಾಮ್ಸ್ ಇವೆ, ಅದನ್ನು ಹೇಳಿದ್ದಾರೆ. ಮನೆಗಳ ವಿಷಯ ಹೇಳಿದಾಗ ನೀವು 95ವರೆಗೆ ಒಟ್ಟಿಗೆ ಕೊಟ್ಟಿದ್ದಂಥಾದ್ದು 1012 ಮನೆಗಳು. ಇದು ನೀವು ಕೊಟ್ಟಿರುವಂಥಾದ್ದು. ನಾವು 1995-96ರಲ್ಲಿ ಕೇವಲ ಒಂದೇ ವರ್ಷದಲ್ಲಿ 1123 ಮನೆಗಳನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಸ್ವಲ್ಪ ಗಮನದಲ್ಲಿಟ್ಟುಕೊಂಡು ಮುಂದೆ ಮಾತನಾಡಿ.

ಶ್ರೀ ಕೆ.ಜಯರಾಮಶೆಟ್ಟಿ: ಮಾನ್ಯ ವಸಂತ ಸಾಲಿಯಾನ ಅವರು ಮಂತ್ರಿಯಾಗಿದ್ದಾಗ ಏನು ಮಾಡಿದ್ದಾರೆ ಅದನ್ನು ತಾವು ಮುಂದುವರೆಸಬೇಕು ಎಂದಿಲ್ಲ: ಈಗ ಅವರು ಅಧಿಕಾರದಲ್ಲಿ ಇಲ್ಲ. ನೀವು ಅಧಿಕಾರದಲ್ಲಿ ಇದ್ದೀರಿ. ಅವರು ಏನೂ ಮಾಡಿಲ್ಲವೆಂದು ಹೇಳುತ್ತಿದ್ದಾರೆ, ಅದನ್ನು ತಾವೂ ಕೂಡ ಮಾಡಲಿಲ್ಲ.

ಶ್ರೀ ಎಸ್.ಆರ್.ಲಕ್ಷ್ಮಯ್ಯ: ಸದಸ್ಯರು ಕೇಳಿದ್ದಾರೆ ಮತ್ತು ಅದಕ್ಕೆ ಅವರು ಉತ್ತರ ಹೇಳಿದ್ದಾರೆ. ಇದಕ್ಕೆ ವಕಾಲತ್ತು ಬೇಕಾಗಿಲ್ಲ. ಸದಸ್ಯರು ಏನು ಕೇಳಿದ್ದಾರೆ ಅದಕ್ಕೆ ಮಂತ್ರಿಗಳು ಹೇಳಿದ್ದಾರೆ. ಇದಕ್ಕೆ ವಕಾಲತ್ತು ಏಕೆ ಬೇಕು?

ಅಧ್ಯಕ್ಷರು: ನೋಡಿ ಲಕ್ಷ್ಮಯ್ಯನವರೇ, ಅವರಿಗೆ ನೀವು ಬಂದಿದ್ದು ಗೊತ್ತಿಲ್ಲ; ಮಾತನಾಡಿಬಿಟ್ಟರು. ಈಗ ನೀವು ಬಂದಿದ್ದೀರಿ, ಎಲ್ಲಾ ಸರಿಹೋಗುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ನಾವು ಅದನ್ನು ಮುಂದುವರಿಸಿಕೊಂಡು ಹೋಗುತ್ತಿಲ್ಲ. ಅದನ್ನು ಅಭಿವೃದ್ಧಿ ಮಾಡಿಕೊಂಡು ಹೋಗುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು: ನೀವು ಅಪೇಕ್ಷಿಪಡತಕ್ಕಂಥಾದ್ದು ಸಹಜ. ಅವರು ಕೆಲಸ ಮಾಡಲೂ ಬೇಕು. He is an youngster: He should do.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಖಂಡಿತ ಮಾಡಿ ತೋರಿಸುತ್ತೇನೆ.

(ಗೊಂದಲ)

ಶ್ರೀ ಎಚ್.ಎನ್.ನಂಜೇಗೌಡ: ಮೀನಿನವರ ಜಗಳದಲ್ಲಿ ಫಿಲಿಫ್ಸ ಕಂಪನಿಯವರಿಗೆ ಏನು ಕೆಲಸ.

ಅಧ್ಯಕ್ಷರು: ಫಿಲಿಫ್ಸ್‌ನವರು ಯಾರು ಬಂದಿದ್ದಾರೆ?

ಶ್ರೀ ಹೆಚ್.ಎನ್.ನಂಜೇಗೌಡ: ಈಗ ಎದ್ದು ಅವರದ್ದೇ ಅಲ್ವಾ ಗಲಾಟೆ?

ಅಧ್ಯಕ್ಷರು: ಯಾರು ಸಿದ್ಧನಗೌಡರಾ?

ಶ್ರೀ ಪಿ.ಸಿ.ಸಿದ್ಧನಗೌಡರ್: ನಾನು ಏನು ಹೇಳಿದೆ? ಅವರು ಮಾಡಿದ್ದನ್ನು ಅವರು ಎಕ್ಸ್‌ಪ್ರೆಸ್ ಮಾಡಿದ್ದಾರೆ. ಅವರೂ ಮಂತ್ರಿಯಾಗಿ ಕೆಲಸ ಮಾಡಿದ್ದಾರೆ.

ಅಧ್ಯಕ್ಷರು: ಸಿದ್ಧನಗೌಡರು ಆಲ್‌ರೌಂಡರ್.

ಶ್ರೀ ಬಿ.ಎಸ್.ಯಡಿಯೂರಪ್ಪ: ಮೀನುಗಾರರು ಎಂದು ಹೇಳಿದರೆ ದಕ್ಷಿಣ ಕನ್ನಡ ಜಿಲ್ಲೆಯ ಸ್ನೇಹಿತರಿಗೆ, ಅವರು ಮಾತ್ರ ಮೀನುಗಾರರು, ರಾಜ್ಯದಲ್ಲಿ ಬೇರೆ ಕಡೆಯವರೂ ಮೀನುಗಾರರು ಎಂಬುದು ಮರೆತುಹೋಗುತ್ತದೆ. ತಮಗೆ ಜ್ಞಾಪಕ ಇರಬಹುದು, ನಾನು ಪ್ರತಿಪಕ್ಷದ ನಾಯಕನಾಗಿ ಇಲ್ಲಿ ಕುಳಿತಿದ್ದಾಗ, ಕವಾಸಿಪುರ ಎನ್ನುವ ಕಡೆ ಎರಡು ವರ್ಷದಿಂದ ನಿಮ್ಮಲ್ಲಿ ಒಂದು ಐವತ್ತು ಮನೆಗಳನ್ನು ಕೇಳಿದ್ದೆವು. ಲಿಸ್ಟ್ ರೆಡಿಯಿತ್ತು.

ಯಡಿಯೂರಪ್ಪನವರು ಪ್ರಸ್ತಾಪ ಮಾಡಿದರು ಎಂದು, ಅಧಿಕಾರಿಗಳಿಗೆ ಏನಾಯಿತೋ ಗೊತ್ತಿಲ್ಲ, ರೆಡಿ ಇದ್ದ ಲಿಸ್ಟ್‌ನ್ನು ಕ್ಲಿಯರ್ ಮಾಡಲಿಲ್ಲ. ನಾನು ಮಂತ್ರಿಗಳ ಜೊತೆಗೆ ಪ್ರಸ್ತಾಪ ಮಾಡಿದ್ದೆ, ತಾವು ಆವತ್ತೇನೆ ಡೈರೆಕ್ಷನ್ಸ್ ಕೊಟ್ಟರಿ. ಮಂತ್ರಿಗಳೂ ಒಪ್ಪಿಕೊಂಡರು. ಸ್ವಾಮಿ, ಎರಡು ವರ್ಷವಾಯಿತು. ಇವತ್ತಿನವರೆಗೆ ಆ ಕವಾಸಿಪುರ ಊರಿನೊಳಗೆ ನಾನು ಹೋಗಿಲ್ಲ. ನಮ್ಮ ಮೀನುಗಾರರು ಎಂದು ಮಾಡಿದ ಒಂದೆ ಪ್ರಸ್ತಾಪಕ್ಕೋಸ್ಕರ ಈ ನಿಮಿಷದವರೆಗೂ 50 ಮನೆಗಳು ಮಂಜೂರಾದದ್ದು ಕ್ಲಿಯರ್ ಮಾಡಲಿಲ್ಲ. ಅಲ್ಲೇ ಕೊಳೆಯುತ್ತಾ ಇದೆ, ಅದು ದಾಖಲೆಯಲ್ಲಿದೆ.

ಅಧ್ಯಕ್ಷರು: ದುಡ್ಡಿನ ಅಭಾವ ಇರಬಹುದು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: 25 ಮನೆಗಳನ್ನು ಈಗಾಗಲೇ ಕ್ಲಿಯರ್ ಮಾಡಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಏಕೆ ಪ್ರಸ್ತಾಪ ಮಾಡಿದೆ ಎಂದರೆ, ಮೀನುಗಾರರು ಎಲ್ಲೇ ಇರಲಿ ಇವರೆಲ್ಲ ಒಂದೇ ಎನ್ನುವ ಭಾವನೆಯನ್ನು ಇಟ್ಟುಕೊಳ್ಳಿ ಎಂದು.

ಅಧ್ಯಕ್ಷರು: ಅಲ್ಲ. ಯಡಿಯೂರಪ್ಪನವರೇ, ನಿಮ್ಮ ಮೀನುಗಾರರು ಎನ್ನುವ ಕಾರಣಕ್ಕೆ ಮಾಡದೇ ಇರುವ ಶಕ್ತಿ ಇವರಿಗೆ ಇಲ್ಲ. ಅಂತಹ ಸ್ವಭಾವ ಅವರದ್ದಲ್ಲ. ಸ್ವಲ್ಪ ಮೆದು ಸ್ವಭಾವ. 25 ಮಾಡಿದ್ದರೆ, ಉಳಿದದ್ದು ಮಾಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಎರಡು ವರ್ಷ ಆಯಿತು. 25-25 ಎಂದು ಕೊಟ್ಟಿದ್ದರೂ ಇಷ್ಟರೊಳಗೆ 75 ಮನೆಗಳು ಆಗುತ್ತಿತ್ತು.

ಅಧ್ಯಕ್ಷರು: ಕೊಡುವಾಗ ಅವರದ್ದು ನಿಮ್ಮದ್ದು ಎಲ್ಲಾ ನೋಡಿ ಕೊಟ್ಟುಬಿಡಿ.

ಶ್ರೀ ಕುಂಬ್ಳೆ ಸುಂದರರಾವ್: ನಮ್ಮಲ್ಲಿ ಮೀನುಗಾರಿಕೆ ಜನ ಯಾರಿದ್ದಾರೆ, ಅವರು ಸೇರಿದ್ದಲ್ಲಿ ಗುಲ್ಲು, ಮಾತು ಜೋರು. ಅವರು ಮೆತ್ತಗೆ ಮಾತನಾಡುವ ಜನ ಅಲ್ಲ. ಇಲ್ಲಿ ಈ ಖಾತೆಯ ವಿಷಯಬಂದಾಗ ತಣ್ಣಗೆ ಇದೆಯಲ್ಲಾ ಎಂದು ನನಗೆ ಅನ್ನಿಸಿತ್ತು. ಈಗ ಅಡ್ಡಿಯಿಲ್ಲ, ಇದು ಮೀನುಗಾರರ ವಿಷಯ ಹೌದು.

ಶ್ರೀ ಗಂಗಹನುಮಯ್ಯ: ಮಾನ್ಯ ಅಧ್ಯಕ್ಷರೆ, ತುಮಕೂರಿನಲ್ಲಿ ಕೂಡ ಈಗಾಗಲೇ 5-6 ವರ್ಷದಿಂದ ಅಕ್ವೇರಿಯಮ್‌ಗೆ ಮಂಜೂರಾತಿಯನ್ನು ಕೊಟ್ಟು ಆಗಿದೆ. ಆದರೆ ಇನ್ನೂ ಕೂಡ ಪ್ರಾರಂಭ ಮಾಡಿಲ್ಲ. ಜಾಗದ ಅಭಾವದಿಂದ ಈ ಸಮಸ್ಯೆಯನ್ನು ಇದುವರೆಗೂ ಪರಿಹಾರ ಮಾಡುವುದಕ್ಕೆ ಆಗಿಲ್ಲ. ಆದರೆ ಆ ಸ್ಕೀಮ್ ವೇಸ್ಟ್ ಆಗುತ್ತಿದೆ, ಹಣ ಕೂಡ ಇದೆ. ಹಣ ಇದ್ದರೂ ಅಕ್ವೇರಿಯಂ ಕೊಡುವುದಕ್ಕೆ ಯಾರೂ ಕೂಡ ನಮ್ಮ ಅಧಿಕಾರಿಗಳು ಮುಂದೆ ಬರಲಿಲ್ಲ. ದಯಮಾಡಿ ಈಗಲಾದರೂ ಇದಕ್ಕೆ ಅಕ್ವೇರಿಯಂ ಕಟ್ಟುವುದಕ್ಕೆ

ಅವಕಾಶ ಮಾಡಿಕೊಡಬೇಕು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಗಂಗಹನುಮಯ್ಯ ಅವರು ಅಕ್ವೇರಿಯಂ ಬಗ್ಗೆ ಕೇಳಿದ್ದಾರೆ. ಜಾಗ ಏನು ಅಲಾಟ್ ಮಾಡಿದ್ದರು, ಅಕ್ವೇರಿಯಮ್ ಬಗ್ಗೆ, ಅದರ ಬಗ್ಗೆ ಡಿಸ್‌ಪ್ಯೂಟ್ ಇದೆ. ಅದು ಕೋರ್ಟಿನಲ್ಲಿದೆ. ಅದಕ್ಕೋಸ್ಕರ ಇದನ್ನು ಕಟ್ಟಲಿಕ್ಕೆ ಆಗಲಿಲ್ಲ. ಕೋರ್ಟಿನಲ್ಲಿ ತೀರ್ಮಾನವಾದ ತಕ್ಷಣ ಅದರ ಕೆಲಸವನ್ನು ಮುಂದುವರೆಸುತ್ತೇವೆ.

ಶ್ರೀ ಗಂಗಹನುಮಯ್ಯ: ಬೇರೆ ಜಾಗವನ್ನು ತೆಗೆದುಕೊಂಡು ಕಟ್ಟುವುದಕ್ಕೆ ಪ್ರಯತ್ನಮಾಡಿ.

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ: ನಾನು ಹೇಳತಕ್ಕದ್ದು ಏನೆಂದರೆ ಈ ಮೀನುಗಾರಿಕಾ ರಸ್ತೆಗಳು ಇವೆಯಲ್ಲಾ, ಅದಕ್ಕೆ ಮೈನ್‌ಟೆನೆನ್ಸ್ ಬಗ್ಗೆ ಏನಾದರೂ ಹಣ ಕಾದಿರಿಸಿದ್ದೀರೋ? ಏಕೆ ಎಂದು ಹೇಳಿದರೆ, ಇವತ್ತಿನ ವ್ಯವಸ್ಥೆಯಲ್ಲಿ ಯಾವುದೇ ಮೀನುಗಾರಿಕಾ ರಸ್ತೆಗಳಿಗೆ ಮೈನ್‌ಟೇನೆನ್ಸ್ ಬಗ್ಗೆ ಹಣವನ್ನು ಕಾದಿರಿಸಿಲ್ಲ. ಇದರ ಬಗ್ಗೆ ಏನಾದರೂ ಹಣ ಕಾದಿರಿಸುತ್ತೀರೋ?

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಈ ಬಾರಿ ಮಳೆಯಲ್ಲಿ ಎಲ್ಲಾ ಮೀನುಗಾರಿಕೆ ರಸ್ತೆ ಹಾಳಾಗಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಅದಕ್ಕೆ ಹೆಚ್ಚಿಗೆ ಹಣ ಒದಗಿಸಿ ದುರಸ್ತಿ ಮಾಡುವುದಕ್ಕೆ ಈಗಾಗಲೇ ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ಶ್ರೀ ವಸಂತ ವಿ.ಸಾಲಿಯಾನ: ಮಾನ್ಯ ಅಧ್ಯಕ್ಷರೇ, ನಾನು ನೇರವಾಗಿ ಆರೋಪ ಏನೂ ಮಾಡಲಿಲ್ಲ. ನೀವು ಕೆಲಸ ಮಾಡುತ್ತಿಲ್ಲ ಎಂದು ನಾನು ಹೇಳಲಿಲ್ಲ. ನಾನು ಹೇಳಿದ್ದುದು ಇಷ್ಟೇ, ಅದು ಪ್ರಗತಿ ಆಗಬೇಕಾಗಿದೆ ಎಂದು. ನೇರವಾಗಿ ನಿಮ್ಮ ಬಗ್ಗೆ ಆಪಾದನೆ ಮಾಡಿಲ್ಲ. ಒಟ್ಟಾರೆ ಈ ಮೀನುಗಾರಿಕೆ ಇಲಾಖೆಯಲ್ಲಿ ಹೆಚ್ಚಿನ ಅಭಿವೃದ್ಧಿ ಮಾಡುವುದಕ್ಕೆ ನಾವು ಏನೆಲ್ಲಾ ಕಾರ್ಯಕ್ರಮ ಮಾಡಬಹುದು ಎನ್ನುವ ರೀತಿಯಲ್ಲಿ ಹೇಳಿದ್ದೇನೆ, ಅಷ್ಟೆ. ನಿಮ್ಮ ಬಗ್ಗೆ ನಾನು ಆರೋಪ ಮಾಡಲಿಲ್ಲ. ಈಗ ಮೀನುಗಾರಿಕೆ ರಸ್ತೆ ಬಗ್ಗೆ ಬಹಳಷ್ಟು ಕಾರ್ಯಕ್ರಮ ಆಗಲಿಕ್ಕೆ ಬೇಕಾಗುತ್ತದೆ. ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಹೇಳಿದರು, ಏಕೆಂದರೆ ಮೀನುಗಾರಿಕೆ ರಸ್ತೆ ನಾವು ಮಾಡಿದ್ದೇವೆ ಅಥವಾ ಡಾಂಬರೀಕರಣ ಮಾಡಿದ್ದೇವೆ. ಆದರೆ ಅದನ್ನು ಮೈನ್‌ಟೆನೆನ್ಸ್ ಮಾಡುವುದಕ್ಕೆ ಪ್ರತಿವರ್ಷ ನಾವು ಮೀನುಗಾರಿಕೆ ಇಲಾಖೆಯಲ್ಲಿ ಇಂತಿಷ್ಟು ಹಣವನ್ನು ನಾವು ಕೊಡಬೇಕಾಗುತ್ತದೆ. ಏಕೆಂದರೆ, ಒಂದು ಸಲ ಡಾಂಬರೀಕರಣ ಮಾಡಿದಮೇಲೆ ಒಂದೆರಡು ವರ್ಷಗಳ ನಂತರ ಅದು ರಿಪೇರಿಗೆ ಬರುತ್ತದೆ. ರಿಪೇರಿಗೆ ಬೇಕಾದಂಥ ಹಣವನ್ನೂ ಸಹ ತಾವು ಒದಗಿಸಿಕೊಡಬೇಕು. ರಾಜ್ಯದ ಪ್ರತಿಯೊಂದು ಭಾಗದಲ್ಲಿ ಅದು ಕೇವಲ ಉತ್ತರ ಕನ್ನಡ ಅಥವಾ ದಕ್ಷಿಣ ಕನ್ನಡ ಜಿಲ್ಲೆಯಲ್ಲ, ಅಥವಾ ಉಡುಪಿ ಜಿಲ್ಲೆಯಲ್ಲ. ರಾಜ್ಯದ ಎಲ್ಲೆಲ್ಲಿ ಮೀನುಗಾರಿಕೆ ರಸ್ತೆಗಳು ಇವೆ, ಅದನ್ನೆಲ್ಲಾ ರಿಪೇರಿ

ಮಾಡುವುದಕ್ಕೆ ಅದಕ್ಕೆ ಬೇಕಾದಂಥ ಹಣವನ್ನು ಬಜೆಟ್‌ನಲ್ಲಿ ಪ್ರೊವಾಯ್ಡ್ ಮಾಡುವ ಬಗ್ಗೆ ಕಾರ್ಯಕ್ರಮವನ್ನು ಸಹ ತಾವು ಮಾಡಬೇಕಾಗುತ್ತದೆ. ಅದೇರೀತಿಯಲ್ಲಿ ಇವತ್ತು ಬಜೆಟ್ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಮತ್ತೆ...

ಅಧ್ಯಕ್ಷರು: ಇನ್ನು ಎಷ್ಟು ಹೊತ್ತು ಆಗಬಹುದು? 5 ನಿಮಿಷದಲ್ಲಿ ಮುಗಿಸುತ್ತೀರಾ?

ಶ್ರೀ ವಸಂತ ವಿ.ಸಾಲಿಯಾನ: ಇದಾದಮೇಲೆ ಇನ್ನು ಹತ್ತು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು: ಬಹಳ ಹೊತ್ತಾಗುತ್ತದಲ್ಲಾ. ನನಗೆ ಇನ್ನೇನೂ ಇಲ್ಲ, ನಮ್ಮ ಕಷ್ಟ ಏನೆಂದರೆ ನಿಮ್ಮ ಪಾರ್ಟಿಯಿಂದ ಇನ್ನೂ ನಾಲ್ಕು ಜನ ಇದ್ದಾರೆ. ಬಿ.ಜೆ.ಪಿ.ಯಿಂದ ನಾಲ್ಕು ಜನ ಇದ್ದಾರೆ. ಒಟ್ಟು 13 ಜನ ಮಾತನಾಡುವವರು ಇದ್ದಾರೆ.

ಶ್ರೀ ವಸಂತ ವಿ.ಸಾಲಿಯಾನ: ಇನ್ನು ಹತ್ತು ನಿಮಿಷಗಳಲ್ಲಿ ಮುಗಿಸುತ್ತೇನೆ. ಇವತ್ತು ಒಳನಾಡು ಮೀನುಗಾರಿಕೆಯಲ್ಲಿ ಬಹಳಷ್ಟು ಪ್ರಗತಿಯನ್ನು ಮಾಡಬೇಕಾಗುತ್ತದೆ. ಒಳನಾಡು ಮೀನುಗಾರಿಕೆಯಲ್ಲಿ ಇವತ್ತು ತಮಗೆ ತಿಳಿದಹಾಗೆ ಬಹಳಷ್ಟು ಪ್ರೋತ್ಸಾಹವನ್ನೂ ಸಹ ಮಾಡಬೇಕಾಗಿದೆ. ಬೇರೆ ಬೇರೆ ಕಡೆಗಳಲ್ಲಿ ಖಾಸಗಿಯವರಿಗೆ ಮೀನುಗಾರಿಕೆಯಲ್ಲಿ ಆಸಕ್ತಿ ವಹಿಸಲಿಕ್ಕೆ ಬೇರೆ ಕಾರ್ಯಕ್ರಮಗಳನ್ನು ತಾವು ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಈಗ ದಕ್ಷಿಣ ಕನ್ನಡ ಜಿಲ್ಲೆಯ....

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಈ ಮೀನನ್ನು ಮೊಟ್ಟೆ ತಂದು, ಮರಿಮಾಡಿ ದೊಡ್ಡ ಮೀನುಮಾಡಿ ಹಿಡಿದು ಅದನ್ನು ಮಾರಾಟ ಮಾಡುವುದು ಸುಲಭಾನಾ ಅಥವಾ ಇದ್ದ ಮೀನನ್ನು, ಪ್ರಕೃತಿದತ್ತವಾಗಿ ಸಿಗತಕ್ಕಂಥ ಮೀನುಗಳನ್ನು ಹಿಡಿದು ಮಾರಾಟ ಮಾಡತಕ್ಕದ್ದು ಲಾಭದಾಯಕವೇ? ಇದರ ಬಗ್ಗೆ ಏನಾದರೂ ಫಿಗರ್ಸ್ ಇದೆಯೇ?

ಅಧ್ಯಕ್ಷರು: ನಿಮ್ಮಲ್ಲಿ ಎರಡನೆಯದು ಬೆಟರ್. ನಮ್ಮಲ್ಲಿ ಮೊದಲನೆಯದು ಬೆಟರ್. ಇಷ್ಟೇ ಅಲ್ವಾ? ಪ್ರಕೃತಿದತ್ತವಾಗಿ ಹೇರಳವಾಗಿ ಸಿಗುವ ಕಡೆಗೆ ಮೊಟ್ಟೆಯನ್ನು ಏನು ತೆಗೆದುಕೊಂಡು ಹೋಗಬೇಕಾಗಿಲ್ಲ. ನಮ್ಮ ಕಡೆಗೆ ಮೊಟ್ಟೆಯನ್ನು ತಂದು ಬೆಳೆಸಿಕೊಟ್ಟರೆ ನಿಮಗೆ ಪುಣ್ಯ ಬರುತ್ತದೆ.

ಶ್ರೀ ವಸಂತ ವಿ.ಸಾಲಿಯಾನ: ಮಾನ್ಯ ಅಧ್ಯಕ್ಷರೇ, ಇನ್ನು ಸೀಗಡಿ ಕೃಷಿ ಬಗ್ಗೆ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

5.10 ಪಿ.ಎಂ

ಸೀಗಡಿ ಕೃಷಿ ಬಗ್ಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ. ತಮಿಳುನಾಡಿನಲ್ಲಿ ಸ್ವಲ್ಪ ತೊಂದರೆಯಿರಬಹುದು, ಆದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಇವತ್ತಿನ ದಿವಸ

ಯಾವುದೇ ರೀತಿಯ ತೊಂದರೆಯಿಲ್ಲ. ಸೀಗಡಿ ಕೃಷಿಯಿಂದ ಇವತ್ತು ಬಹಳಷ್ಟು ದೊಡ್ಡದೊಡ್ಡ ಇಂಡಸ್ಟ್ರೀಗಳು ಬೆಳೆದಿವೆ. ಇವತ್ತು ಇದರಿಂದ ಬೇರೆ ಬೇರೆ ರೀತಿಯಲ್ಲಿ ಕೋಟ್ಯಾಂತರ ರೂಪಾಯಿ ವಿದೇಶೀ ವಿನಿಮಯ ಬರುತ್ತಿದೆ. ಆದ್ದರಿಂದ ರಾಜ್ಯ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಸೀಗಡಿ ಕೃಷಿ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕಾಗುತ್ತದೆ. ಕಳೆದ ಬಾರಿ ಸುಪ್ರೀಂ ಕೋರ್ಟಿನ ಆಜ್ಞೆಯಿಂದ ಸ್ವಲ್ಪ ತೊಂದರೆಯಾಗಿತ್ತು, ಅದನ್ನು ಸರಿಪಡಿಸಬೇಕಾಗುತ್ತದೆ. ರಾಜ್ಯಸರ್ಕಾರ ಕೇಂದ್ರಸರ್ಕಾರದ ಜೊತೆ ಚರ್ಚೆ ಮಾಡಿ ಅದಕ್ಕೆ ಬೇಕಾದಂತಹ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಇನ್ನೊಂದು ವಿಚಾರವೆಂದರೆ, ಅದು ಮೀನುಗಾರಿಕೆ ಮತ್ತು ಕೆ.ಇ.ಬಿ ಇಲಾಖೆಗೆ ಸಂಬಂಧಪಟ್ಟದ್ದು. ಕರ್ನಾಟಕ ರಾಜ್ಯದಲ್ಲಿ ಈ ಮೀನನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಐಸ್ ಬೇಕಾಗುತ್ತದೆ. ಆ ದೃಷ್ಟಿಯಲ್ಲಿ ಇವತ್ತು ಐಸ್ ಪ್ಲಾಂಟ್‌ಗಳು ಏನಿವೆ, ಅದರ ಎಲೆಕ್ಟ್ರಿಕ್‌ಸಿಟಿ ಟಾರಿಫ್ ಏನಿದೆ ಅದರ ಬಗ್ಗೆ ಸ್ವಲ್ಪ ಕನ್‌ಸೆಷನ್ ಕೊಡಬೇಕಾಗುತ್ತದೆ. It is a food item, ಏಕೆಂದರೆ, ಮೀನು, ಫ್ರೂಟ್ಸ್, ತರಕಾರಿಗಳನ್ನು, ಸ್ಟೋರೇಜ್ ಮಾಡಬೇಕಾಗುತ್ತದೆ ಇದು ನೇರವಾಗಿ ಆಹಾರಕ್ಕೆ ಸಂಬಂಧಪಟ್ಟ ವಿಚಾರವಾದ್ದರಿಂದ ಈ ಐಸ್ ಪ್ಲಾಂಟ್ ಮತ್ತು ಕೋಲ್ಡ್ ಸ್ಟೋರೇಜ್‌ಗೆ ಕೆಇಬಿ ಎಲೆಕ್ಟ್ರಿಸಿಟಿ ಟಾರಿಫ್‌ನಲ್ಲಿ ಸ್ವಲ್ಪ ಬದಲಾವಣೆ ಮಾಡಲಿಕ್ಕೆ ನಾವು ಪ್ರಯತ್ನಿಸಬೇಕಾಗುತ್ತದೆ. ಇವತ್ತಿನ ದಿವಸ ರಾಜ್ಯ ಸರ್ಕಾರಕ್ಕೆ ಅಧಿಕಾರವಿದ್ದರೆ, ಅದನ್ನು ರಾಜ್ಯ ಸರ್ಕಾರವೇ ಮಾಡಬೇಕು, ಇಲ್ಲವೇ ಕೇಂದ್ರಸರ್ಕಾರದ ಜೊತೆಯಲ್ಲಿ ತಾವು ಚರ್ಚಿಸಿ ಸರಿಪಡಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಸಮುದ್ರ ಕಿನಾರೆಯಲ್ಲಿ ಸಿಲಿಕಾನ್ ಸ್ಯಾಂಡ್ ಏನಿದೆ, ಇದು ನಮ್ಮ ಮೀನುಗಾರಿಕೆಗೆ ಸಂಬಂಧಪಟ್ಟಿದ್ದು. ಸಿಲಿಕಾನ್ ಸ್ಯಾಂಡ್‌ನ್ನು ತೆಗೆದು, ಒಂದು ಕಡೆ ಕೃಷಿ ಭೂಮಿ, ಮನೆಗಳು, ಮೀನುಗಾರಿಕಾ ರಸ್ತೆಗಳು ಮತ್ತು ಮೀನುಗಾರಿಕೆಗೆ ಬಹಳಷ್ಟು ತೊಂದರೆಯಾಗುವ ಪರಿಸ್ಥಿತಿ ಇದೆ. ಇವತ್ತು ಪ್ರತಿಯೊಂದು ಕಡೆಗಳಲ್ಲಿ ಅಂದರೆ ದಕ್ಷಿಣಕನ್ನಡ, ಉತ್ತರ ಕನ್ನಡ ಜಿಲ್ಲೆಗಳಿರಬಹುದು ಅಲ್ಲಿನ ಸಮುದ್ರದ ಬದಿಯಲ್ಲಿ ಸಿಲಿಕಾನ್ ಸ್ಯಾಂಡ್‌ನ್ನು ತೆಗೆಯುತ್ತಿದ್ದಾರೆ. 500 ಮೀಟರ್ ಅಂತರದಲ್ಲಿ ಯಾವುದೇ ಒಂದು ಡೆವಲಪ್‌ಮೆಂಟ್ ಮಾಡಬಾರದೆಂದು ಕೇಂದ್ರ ಸರ್ಕಾರದ ಆದೇಶವಿದ್ದರೂ ಸಹ, ಅಲ್ಲಿ ಸಿಲಿಕಾನ್ ಸ್ಯಾಂಡ್‌ನ್ನು ತೆಗೆದು, ಅಲ್ಲಿನ ಸಮುದ್ರ ಕಿನಾರೆಯ ಜನರಿಗೆ ತೊಂದರೆಯಾಗುವ ಪರಿಸ್ಥಿತಿ ಇದೆ. ಅದನ್ನು ತಾವು ಇನ್ನೊಂದು ಇಲಾಖೆಗೆ ನೇರವಾಗಿ, ಅದು ಗಣಿಗಾರಿಕೆ ಇರಬಹುದು, ಮೀನುಗಾರಿಕೆ ಇಲಾಖೆಯವರಾದ ತಮಗೆ ನಾನು ಅಧ್ಯಕ್ಷರ ಮುಖೇನ ಮನವಿ ಮಾಡಿಕೊಳ್ಳುತ್ತಿದ್ದೇನೆ, ಸಿಲಿಕಾನ್ ಸ್ಯಾಂಡ್ ತೆಗೆಯುವುದನ್ನು ಬ್ಯಾನ್ ಮಾಡಬೇಕೆಂದು ಹೇಳಿ, ನೇರವಾಗಿ ಅಬಕಾರಿ ಇಲಾಖೆ ಬಗ್ಗೆ ಮಾತನಾಡಲಿಕ್ಕೆ ಹೋಗುತ್ತಿದ್ದೇನೆ. ನಿಮಗೆ ತಿಳಿದ ಹಾಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1992ನೇ ಇಸವಿಯಲ್ಲಿ ಸೊಸೈಟಿಗಳ ಮುಖೇನ ಸೇಂದಿ ಮಾರಾಟ ಮಾಡಬೇಕೆಂದಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 65 ಸೊಸೈಟಿಗಳಿವೆ. ಅವುಗಳು ಬಹಳಷ್ಟು ಒಳ್ಳೆಯ

ರೀತಿಯಲ್ಲಿ ಕೆಲಸ ಮಾಡುತ್ತಿವೆ. ಮೂರ್ತೆದಾರರು ತಯಾರು ಮಾಡುವಂತಹ ಸೇಂದಿಯನ್ನು ಗ್ರಾಮೀಣ ಪ್ರದೇಶದ ಜನರಿಗೆ ಮಾರಾಟ ಮಾಡುತ್ತಿದ್ದಾರೆ. ಅದರಲ್ಲಿ ಆ ಸೇಂದಿ ತೆಗೆದು ಕಷ್ಟ ಜೀವನ ಮಾಡುವಂತಹ ಜನರಿಗೆ: ಯಾವುದೇ ಒಂದು ಯೋಜನೆಗಳಲಿಲ್ಲ. ಎಕ್ಸೈಸ್ ಡಿಪಾರ್ಟ್‌ನಿಂದ ರಾಜ್ಯ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಆದಾಯ ಇರಬಹುದು, ಆದರೆ, ಸೇಂದಿ ತೆಗೆಯುವ ಬಡ ಮೂರ್ತೆದಾರರಿಗೆ ಯಾವುದೇ ರೀತಿಯಲ್ಲೂ ಸರ್ಕಾರದ ಯೋಜನೆಗಳಿಲ್ಲ. ಮೀನುಗಾರರಿಗೆ, ಅಲ್ಪಸಂಖ್ಯಾತರಿಗೆ, ಹಿಂದುಳಿದ ವರ್ಗದವರಿಗೆ, ಪರಿಶಿಷ್ಟ ವರ್ಗದವರಿಗೆ ಯೋಜನೆಗಳಿರಬಹುದು, ಆದರೆ, ಮೂರ್ತೆದಾರರಿಗೆ ಯಾವೊಂದು ರೀತಿಯಲ್ಲೂ ಸರ್ಕಾರದ ಯೋಜನೆಗಳಿಲ್ಲ. ನಾನು ತಮ್ಮ ಮುಖೇನ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಆ ಮೂರ್ತೆದಾರರ ಮಕ್ಕಳಿಗೆ ಶಿಕ್ಷಣವನ್ನು ಒದಗಿಸಿಕೊಡುವ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ ಮತ್ತು ಆ ಮೂರ್ತೆದಾರರಿಗೆ ಮುಫತ್ತಾಗಿ ಮನೆ ಕಟ್ಟಿಕೊಡುವಂತಹ ಯೋಜನೆಗಳನ್ನು ಸರ್ಕಾರ ಹಾಕಿಕೊಳ್ಳಬೇಕಾಗುತ್ತದೆ. ಆ ಮೂರ್ತೆದಾರರ ಆರೋಗ್ಯದ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಆ ಮೂರ್ತೆದಾರರನ್ನು ಕಷ್ಟದಿಂದ 2-3 ಬಾರಿ ತೆಂಗಿನ ಮರ ಹತ್ತಿ ಕೆಲಸ ಮಾಡುವಾಗ ಒಂದು ವೇಳೆ ಕೆಳಕ್ಕೆ ಬಿದ್ದರೆ, ಸತ್ತರೆ ಅವನಿಗೆ ಯಾವುದೇ ಸೌಲಭ್ಯಗಳಿಲ್ಲ. ಇವತ್ತು ಬೇರೆ ಬೇರೆ ಕೆಲಾಮಿಟಿಗಳಲ್ಲಿ ಯಾರಾದರೂ ಸತ್ತರೆ ಅವರಿಗೆ ರಾಜ್ಯ ಸರ್ಕಾರದಿಂದ ಒಂದು ಲಕ್ಷ ರೂಪಾಯಿ, ಕೇಂದ್ರ ಸರ್ಕಾರದಿಂದ 50 ಸಾವಿರ ರೂಪಾಯಿ ದೊರೆಯುತ್ತದೆ. ಆದ್ದರಿಂದ, ನಾನು ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಬಡ ಮೂರ್ತೆದಾರರು ಒಂದು ವೇಳೆ ಕೆಲಾಮಿಟಿಯಲ್ಲಿ ಸತ್ತರೆ ಅವರಿಗೆ ಕನಿಷ್ಠಪಕ್ಷ ಒಂದು ಲಕ್ಷ ರೂಪಾಯಿ ಪರಿಹಾರವನ್ನು ಸರ್ಕಾರ ಕೊಡಬೇಕಾಗುತ್ತದೆ. ಅದೇ ರೀತಿಯಲ್ಲಿ, ಇವತ್ತು ಅವರಿಗೆ ಬೇಕಾದ ಇನ್‌ಷೂರೆನ್ಸ್ ಮಾಡಬೇಕಾಗುತ್ತದೆ ಮತ್ತು ಸೇಂದಿ ಏನಿದೆ ಅದನ್ನು ಅಬಕಾರಿ ಇಲಾಖೆಯಿಂದ ಹೊರತುಪಡಿಸುವ ಕಾನೂನನ್ನು ಕರ್ನಾಟಕ ರಾಜ್ಯಸರ್ಕಾರ ಜಾರಿಗೆ ತರಬೇಕಾಗುತ್ತದೆ ಹಾಗೂ 1994ನೇ ಇಸವಿಯಲ್ಲಿ 1 ರೂ. ಲಿಕ್ಕರ್ ಫೀಸ್ ಏನಿತ್ತು ಅದನ್ನು ಮನ್ನಾ ಆಗಿತ್ತು. ಆ ಪೀರಿಯಡ್‌ನಲ್ಲಿ ಸುಮಾರು 43 ಲಕ್ಷ ರೂಪಾಯಿ ಲಿಕ್ಕರ್ ಫೀಸ್ ಕಲೆಕ್ಟ್ ಮಾಡದೆ ಬಾಕಿ ಇದ್ದ ಹಣವನ್ನು ಮಾನ್ಯ ಮುಖ್ಯಮಂತ್ರಿಗಳು ಉಡುಪಿ ಜಿಲ್ಲಾ ಉದ್ಘಾಟನಾ ಸಮಾರಂಭದಲ್ಲಿ, ಸಾರ್ವಜನಿಕ ಸಭೆಯಲ್ಲಿ ಮನ್ನಾ ಮಾಡುತ್ತೇನೆಂದು ಹೇಳಿದ್ದರು.

ಅಧ್ಯಕ್ಷರು: ಯಾರು? ಮೊನ್ನೆ, 25ನೇ ತಾರೀಖು.

ಶ್ರೀ ವಸಂತ ವಿ.ಸಾಲಿಯಾನ: ದಿ:25.8.97ರಂದು ಹೇಳಿದ್ದರು. ನಾನು ತಮ್ಮ ಮುಖೇನ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುವುದೇನೆಂದರೆ, ಇವತ್ತಿನ ದಿವಸ 43 ಲಕ್ಷ ರೂಪಾಯಿ ಲಿಕ್ಕರ್ ಫೀಸ್ ಬಾಕಿ ಏನಿದೆ ಅದನ್ನು ಅವರು ಹೇಳಿದ ಪ್ರಕಾರ

ಮನ್ನಾ ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಉಡುಪಿ ಜಿಲ್ಲೆಯಲ್ಲಿ ಮಾತ್ರವೇ?

ಶ್ರೀ ವಸಂತ ವಿ.ಸಾಲಿಯಾನ: ಅಲ್ಲ, ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. 65 ಸೊಸೈಟಿಗಳಲ್ಲಿ ಬಾಕಿ ಉಳಿದಂತಹ..

ಅಧ್ಯಕ್ಷರು: ಶಿವಮೊಗ್ಗ, ಸಾಗರ ಸೊರಬ, ಅಲ್ಲೆಲ್ಲಾ ವಸೂಲು ಮಾಡಿಲ್ಲವೇ? ಒಂದೆರಡು ವಿಷಯಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಕೃಷಿ ಬಹಳ ಪ್ರಧಾನವಾದ ಕಸುಬಾಗಿದೆ. ಮೈನರ್ ಇರಿಗೇಷನ್ ರಿಪೋರ್ಟ್ ಪ್ರಕಾರ, ಕರ್ನಾಟಕದಲ್ಲಿ ಇವತ್ತು 36,661 ನೀರಾವರಿ ಕೆರೆಗಳಿವೆ. ಈ ಕೆರೆಗಳನ್ನು ಅನೇಕ ವರ್ಷಗಳಿಂದ ದುರಸ್ತಿ ಮಾಡದೆ ಅಲ್ಲಿ ಹೂಳು ತುಂಬಿದೆ. ಅದನ್ನು ದುರಸ್ತಿ ಮಾಡಲಿಕ್ಕೆ ಒಂದು ಯೋಜನೆಯನ್ನು ರಾಜ್ಯ ಸರ್ಕಾರ ಹಾಕಿಕೊಳ್ಳಬೇಕಾಗುತ್ತದೆ. ಹೆಚ್ಚಾಗಿ ತಮ್ಮ ಕೋಲಾರ ಜಿಲ್ಲೆ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ತುಮಕೂರು, ಬೆಂಗಳೂರು ರೂರಲ್ ಮತ್ತು ಹಾಸನ ಜಿಲ್ಲೆ ಈ ಕಡೆಗಳಲ್ಲಿ ಸಾವಿರಾರು ಕೆರೆಗಳಲ್ಲಿ ಹೂಳು ತುಂಬಿದ್ದು ಬಹಳ ತೊಂದರೆಯಾಗಿದೆ.

ಶ್ರೀ ಸಿ.ಎಸ್.ಸಗೀರ್ ಅಹಮದ್: ಅವರು ಹೇಳುವುದರಲ್ಲಿ ನನಗೇನಿಲ್ಲ. ಚಿಕ್ಕಮಗಳೂರಲ್ಲಿ ಸಾವಿರಾರು, ಲಕ್ಷಾಂತರ ರೂಪಾಯಿ ಕೆರೆ ಹೊಳೆತ್ತುವುದಕ್ಕೆ ಖರ್ಚು ಮಾಡಿದ್ದಾರೆಂದು ಹೇಳಿದರು. ಒಂದು ಕೆರೆ ಹೂಳನ್ನೂ ಎತ್ತುವುದಕ್ಕೆ ಸಾಧ್ಯವಾಗಿಲ್ಲ.

ಅಧ್ಯಕ್ಷರು: ಅವರು ಹೇಳಿದ್ದನ್ನೇ ನೀವು ಕೇಳಿಸಿಕೊಳ್ಳಲಿಲ್ಲ. ಅವರು ಎಲ್ಲೂ ಹೂಳೆತ್ತಿಲ್ಲವೆಂದು ಹೇಳಿದರು. ಲಕ್ಷ್ಮಯ್ಯನವರು ಮಾತನಾಡಿದರೂ ಒಂದೇ, ವಸಂತ ವಿ.ಸಾಲಿಯಾನರವರು ಮಾತನಾಡಿದರೂ ಒಂದೇ. ಅದಕ್ಕೆ ಲಕ್ಷ್ಮಯ್ಯನವರು ನಿಮ್ಮ ಮೇಲೆ ಬೀಳುವುದು.

ಶ್ರೀ ವಸಂತ ವಿ.ಸಾಲಿಯಾನ: ಅದೇ ರೀತಿಯಾಗಿ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ಜೂನ್, ಜುಲೈ ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಬಹಳಷ್ಟು ಮಳೆ ಬೀಳುತ್ತದೆ. ಈ ಮಳೆಯ ನೀರು ತೋಡಿನ ಮುಖೇನ, ನದಿ ಮುಖೇನ ಹರಿದು ಸಮುದ್ರಕ್ಕೆ ಸೇರುತ್ತಿದೆ. ಆ ತೋಡುಗಳಲ್ಲಿ ಹೂಳು ತುಂಬಿದ್ದು, ಅದನ್ನು ತೆಗೆದು ಅಲ್ಲಲ್ಲಾ ಸಣ್ಣಪುಟ್ಟ ಅಣೆಕಟ್ಟುಗಳನ್ನು ರಚನೆ ಮಾಡಿ, ಇವತ್ತು ಕೃಷಿಕಾರ್ಮಿಕರಿಗೆ ನೀರಾವರಿ ಯೋಜನೆಯ ಸೌಲಭ್ಯವನ್ನು ಕಲ್ಪಿಸಿಕೊಡುವ ದಿಕ್ಕಿನಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಅದೇ ರೀತಿಯಾಗಿ, ಅಣೆಕಟ್ಟುಗಳು. ದಕ್ಷಿಣ ಕನ್ನಡಜಿಲ್ಲೆ ಇರಬಹುದು, ಇಡೀ ಕರ್ನಾಟಕದಲ್ಲಿರಬಹುದು. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಣ್ಣನೀರಾವರಿ ಯೋಜನೆಗಳಿಲ್ಲ. ಆದ್ದರಿಂದ ಅಣೆಕಟ್ಟುಗಳನ್ನು ರಚನೆ ಮಾಡಿ ಮತ್ತು ಅಣೆಕಟ್ಟುಗಳನ್ನು ರಿಪೇರಿ ಮಾಡಿ. ಮಾನ್ಯ ಮಂತ್ರಿಗಳಿಗೆ ನಾನು ಈಗಾಗಲೇ ಹೇಳಿದ್ದೇನೆ. ನನ್ನ ಕ್ಷೇತ್ರದಲ್ಲೊಂದು

ಫಲಿಮಾರು ಅಣೆಕಟ್ಟಿದೆ. ಅಲ್ಲಿ ಸುಮಾರು 7 ಗ್ರಾಮ ಪಂಚಾಯಿತಿಗೆ ಸೇರಿದ, ಸುಮಾರು 4 ತಾಲ್ಲೂಕು ಪಂಚಾಯಿತಿಗೆ ಸೇರಿದ ಅತೀ ದೊಡ್ಡ ಅಣೆಕಟ್ಟಿದೆ. ಅದಕ್ಕೆ ಸುಮಾರು 18 ಲಕ್ಷ ರೂಪಾಯಿ ವೆಚ್ಚದಲ್ಲಿ ರಿಪೇರಿಯಾಗಬೇಕಾಗಿದೆ. ಅದು ಸುಮಾರು 3-4 ವರ್ಷಗಳಿಂದ ರಿಪೇರಿಯಾಗಿಲ್ಲ. ಅದಕ್ಕೆ ಬೇಕಾದ ಹಲಗೆ ಹಾಕುವಂತೆ ತಮ್ಮ ಮೂಲಕ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಅದನ್ನು ತಾವು ರಿಪೇರಿ ಮಾಡಿಸಬೇಕು.

ಅದೇರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲೆಲ್ಲಿ ಅಣೆಕಟ್ಟುಗಳಿವೆ, ಮೈನರ್ ಇರಿಗೇಷನ್‌ಗೆ ಸಂಬಂಧಪಟ್ಟಂಥ, ಇವುಗಳಿಗೆ ಎಲ್ಲೆಲ್ಲಿ ಹಲಗೆ ಇಲ್ಲ, ಹಲಗೆಯನ್ನು ಹಾಕುವಂಥ ಯೋಜನೆಯನ್ನು ತಾವು ರೂಪಿಸಬೇಕು. ತಮ್ಮ ಇಲಾಖೆಯಲ್ಲಿ, ನಾನು ನೋಡಿದೆ. 1996-97ಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ ಎಂದು ಹೇಳುವಾಗ, ನನಗೆ ಬಹಳ ಬೇಸರವಾಗುತ್ತದೆ. ಏಕೆಂದರೆ, ಇವತ್ತು 1995-96ನೇ ಸಾಲಿಗೆ ಕೇವಲ 67 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಇದರಿಂದ, ತಾವು ತಮ್ಮ ಇಲಾಖೆಯನ್ನು ಹೇಗೆ ನಡೆಸಬಹುದು? ಅದರಲ್ಲಿ ವೆಚ್ಚ ಮಾಡಿದ್ದು ಎಷ್ಟು? 55.70 ಕೋಟಿ ಮಾತ್ರ ವೆಚ್ಚ ಮಾಡಿದ್ದಾರೆ, ಉಳಿದ ಹಣವನ್ನು ಬಾಕಿ ಇಟ್ಟಿದ್ದೀರಿ. ಅದೇರೀತಿಯಲ್ಲಿ 1996-97ಕ್ಕೆ ಕೊಟ್ಟಿರುವ ಹಣ ಎಷ್ಟು ಎಂದರೆ, 88.09 ಕೋಟಿ ಮಾತ್ರ. ಇದರಲ್ಲಿ 56.00 ಕೋಟಿ ಮಾತ್ರ ಖರ್ಚು ಮಾಡಿದ್ದೀರಿ. ಹಣ ಕೊಟ್ಟರೂ ಸಹ ತಮ್ಮ ಇಲಾಖೆಯಲ್ಲಿ ಖರ್ಚು ಮಾಡಲಿಲ್ಲ. ನಾನು ಇವತ್ತು ಅಧ್ಯಕ್ಷರ ಮುಖೇನ ಕೇಳುತ್ತಿದ್ದೇನೆ. ಈ ಸಣ್ಣ ನೀರಾವರಿ ಇಲಾಖೆಯಲ್ಲಿ ಇವತ್ತು 200 ಕೋಟಿ ರೂಪಾಯಿಗಳ ಯೋಜನೆಯನ್ನು ತಾವು ಹಾಕಿಕೊಳ್ಳಬೇಕಾಗುತ್ತದೆ. ಈ ಇಲಾಖೆಯಲ್ಲಿ ಅಷ್ಟು ಕೆಲಸ ಇದೆ. ಆದ್ದರಿಂದ ಈ ಇಲಾಖೆಯಲ್ಲಿ ಆದಷ್ಟು ಮುತುವರ್ಜಿ ವಹಿಸಬೇಕೆಂದು ಮಾನ್ಯ ಅಧ್ಯಕ್ಷರ ಮುಖೇನ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಹಣಕಾಸು ಮಂತ್ರಿಗಳಲ್ಲಿ ಭಿನ್ನವಿಸಿಕೊಳ್ಳುತ್ತೇನೆ. ಈ ಇಲಾಖೆಗೆ ಕೊಟ್ಟಂಥ ಹಣ ಏನೂ ಸಾಲದು. ಕನಿಷ್ಟಪಕ್ಷ ಈ ಇಲಾಖೆಗೆ 200 ಕೋಟಿ ರೂಪಾಯಿಗಳನ್ನಾದರೂ ಕೊಡಬೇಕಾಗುತ್ತದೆ. ಈ ಇಲಾಖೆಯಲ್ಲಿ ಬಹಳಷ್ಟು ಯೋಜನೆಗಳಿವೆ. ಮತ್ತು ತಮ್ಮ ಇಲಾಖೆಯಲ್ಲಿ ಗ್ರಾಂಟ್ ಏನಿದೆ, ಅದು ಮೂರನೆಯ ಒಂದು ಭಾಗ ಇರಬೇಕಾಗುತ್ತದೆ. ಒಂದು ಸಾವಿರ ರೂಪಾಯಿ ಅಲ್ಲ. 10 ಲಕ್ಷಕ್ಕೆ ಒಂದು ಸಾವಿರ ಕೊಡುತ್ತೀರಿ. ಇದು ಸಾಲದು. ಏಕೆಂದರೆ, ಮೂರನೇ ಒಂದು ಭಾಗ ಗ್ರಾಂಟ್ ಇದ್ದರೆ ಮಾತ್ರ ನಿಮ್ಮ ಇಲಾಖೆಯ ಇಂಜಿನಿಯರುಗಳು ಕೆಲಸ ತೆಗೆದುಕೊಳ್ಳುತ್ತಾರೆ. ಇಲ್ಲದೇ ಹೋದರೆ, ಕೆಲಸ ತೆಗೆದುಕೊಳ್ಳುವುದಿಲ್ಲ. ಇವತ್ತು 10 ವರ್ಷದಿಂದ ಬಾಕಿ ಇದ್ದಂಥ ಕೆಲಸಗಳು ನಡೆಯುತ್ತಾ ಇವೆ. ಮತ್ತೊಂದು ಪ್ರಾಮುಖ್ಯವಾದ ವಿಚಾರ ಇವತ್ತು ಸಮುದ್ರ ಕೊರತೆ. ತಮಗೆ ಗೊತ್ತಿರುವಹಾಗೆ, ಈ ಸಮುದ್ರ ಕೊರತೆ ಬಗ್ಗೆ ಒಂದು ಶಾಶ್ವತವಾದಂಥ ಮಾಸ್ಟರ್ ಪ್ಲಾನ್ ಕರ್ನಾಟಕ ರಾಜ್ಯಸರ್ಕಾರ ಮಾಡಬೇಕಾಗುತ್ತದೆ. ಅದನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಬೇಕಾಗುತ್ತದೆ. ಕೇರಳ ಮಾದರಿಯ ಒಂದು ಪರ್ಮನೆಂಟ್

ಸ್ಟ್ರಕ್ಚರ್ ಏನಿದೆ, ಇವತ್ತು ಸಮುದ್ರ ಕಿನಾರಿಯಲ್ಲಿ ಉತ್ತರ ಕನ್ನಡದಿಂದ ಉಳ್ಳಾಲದವರೆಗೆ, ಮತ್ತು ಕಾರವಾರದಿಂದ ಉಳ್ಳಾಲದವರೆಗೆ ಹಂತ ಹಂತವಾಗಿ ಮಾಡಬೇಕು. ಏಕೆಂದರೆ ನಮಗೆ ಒಂದೇಸಲ ಮಾಡುವುದಕ್ಕಾಗುವುದಿಲ್ಲ. ಆದರೆ, ಇವತ್ತು ಕೇರಳ ಮಾದರಿಯ 20 ಡಿಗ್ರಿ ಆ್ಯಂಗಲ್‌ನ ಒಂದು ಕನ್‌ಸ್ಟ್ರಕ್ಷನ್ ಏನಿದೆ, ಆ ರೀತಿ ಮಾಡಬೇಕಾಗುತ್ತದೆ. ಆದ್ದರಿಂದ, ಮಾನ್ಯ ಅಧ್ಯಕ್ಷರ ಮುಖೇನ ಮಾನ್ಯ ಮಂತ್ರಿಗಳ ಹತ್ತಿರ ಭಿನ್ನವಿಸಿಕೊಳ್ಳುತ್ತೇನೆ. ಈ ಕಾರ್ಯಕ್ರಮ ಶಾಶ್ವತವಾಗಿ ಮಾಡಬೇಕಾಗುತ್ತದೆ. ಸಮುದ್ರ ಕಿನಾರಿಯಲ್ಲಿ ಮೀನುಗಾರರು, ಲಕ್ಷಾಂತರ ರೂಪಾಯಿಗಳ ಮನೆಗಳನ್ನು ಕಳೆದುಕೊಂಡಿದ್ದಾರೆ. ಕೃಷಿ ಭೂಮಿಯನ್ನು ಕಳೆದುಕೊಂಡಿದ್ದಾರೆ, ಕೃಷಿಯನ್ನು ಕಳೆದುಕೊಂಡಿದ್ದಾರೆ. ಅವರಿಗೆ ಏನು ಕೊಡುತ್ತೀರಿ ಸ್ವಾಮಿ? ಒಂದು ನೂರು ರೂಪಾಯಿ ಮಾತ್ರ. ಇದು ಸಾಲದು. ಏಕೆಂದರೆ, ಇವತ್ತು ಎಕರೆಗಟ್ಟಲೆ ಕೃಷಿ ಭೂಮಿ ಹೋಗುತ್ತದೆ. ತೆಂಗಿನ ಮರಗಳು ಹೋಗುತ್ತಿವೆ, ಲಕ್ಷಗಟ್ಟಲೆ ಮನೆಗಳು ಬಿದ್ದುಹೋಗಿರುತ್ತವೆ. ಆದ್ದರಿಂದ ಇವತ್ತು ತಮ್ಮ ಮುಖೇನ ಬಿನ್ನವಿಸುತ್ತೇನೆ. ಇಂಥಹವರಿಗೆ ಸರ್ಕಾರ ಸರಿಯಾದಂಥ ಪರಿಹಾರ ಕೊಡಬೇಕಾಗುತ್ತದೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಸಮುದ್ರ ಕೊರೆತಕ್ಕೆ ದೊಡ್ಡ ಕಲ್ಲು ಹಾಕಬೇಕೇ ಅಥವಾ ಸಣ್ಣ ಕಲ್ಲು ಹಾಕಬೇಕೇ ಎಂಬ ಗೊಂದಲ ಅವರಿಗೆ ಇನ್ನೂ ಇದೆ. ಇದು ಆ ಇಲಾಖೆಯವರಿಗೆ ಮತ್ತು ಮಂತ್ರಿಯವರಿಗೂ ಇದೆ. ದೊಡ್ಡದು ಹಾಕುವುದು ಬೇಡ ಎಂದು ಹೇಳುತ್ತಾರೆ, ಒಂದು ಕಡೆ ಸಣ್ಣದು ಹಾಕಿದರೆ ಮುಚ್ಚಿ ಹೋಗುತ್ತದೆ. ಯಾವುದು ಹಾಕಬೇಕೆಂದು ಇನ್ನೂ ತೀರ್ಮಾನವಾಗಿರುವುದಿಲ್ಲ.

ಶ್ರೀ ವಸಂತ ವಿ.ಸಾಲಿಯಾನ: ಮತ್ತೊಂದು ವಿಷಯವೆಂದರೆ, ಇವತ್ತು ಬೆಂಗಳೂರಿನಲ್ಲಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಬಹಳ ಕಷ್ಟ ಸ್ಥಿತಿಯಲ್ಲಿದೆ. ಇದು 1945ನೇ ಇಸವಿಯಲ್ಲಿ ಪ್ರಾರಂಭವಾಗಿದೆ. ಸನ್ಮಾನ್ಯ ಎಂ.ಜಿ.ಅಯ್ಯಂಗಾರ‍್ಯರು ಅವತ್ತು ಪ್ರಾರಂಭ ಮಾಡಿದರು. ಅದನ್ನು ಇಂಡಸ್ಟ್ರೀಸ್ ಇಲಾಖೆಯವರು ಈಗ ಖಾಸಗೀಕರಣ ಮಾಡುವಂಥ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಇವತ್ತು ಸುಮಾರು 1300 ಜನರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಅದು ಬಹಳ ಪ್ರಗತಿಯಲ್ಲಿಯೂ ಇದೆ. ಮೊದಲು ಸ್ವಲ್ಪ ತೊಂದರೆಯಲ್ಲಿದ್ದಿರಬಹುದು, ಆದರೆ, ಈಗ ಪ್ರಗತಿಯಲ್ಲಿದೆ. ಇವತ್ತು ತಮ್ಮ ಮುಖೇನ ರಾಜ್ಯಸರ್ಕಾರವನ್ನು ಒತ್ತಾಯಿಸುತ್ತೇನೆ. ಅದನ್ನು ಖಾಸಗೀಕರಣ ಮಾಡಬೇಡಿ. ಇದರ ಬಗ್ಗೆ ಕೇಂದ್ರಸರ್ಕಾರವನ್ನು ಒತ್ತಾಯಿಸುತ್ತೇನೆ. ಅದನ್ನು ಖಾಸಗೀಕರಣ ಮಾಡಬೇಡಿ. ಇದರ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಿ, ಅದನ್ನು ಬಿ.ಹೆಚ್.ಇ.ಎಲ್.ಗೆ. ಹ್ಯಾಂಡ್‌ಓವರ್ ಮಾಡುವುದಕ್ಕೆ ತಮ್ಮ ಮುಖೇನ ನಾನು ಮಾನ್ಯ ಮಂತ್ರಿಗಳನ್ನು ಒತ್ತಾಯಿಸುತ್ತಿದ್ದೇನೆ. ಇಷ್ಟುಹೇಳಿ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ): ಸನ್ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ, ಕಮಲಾಪುರ ನನ್ನ ಮೀಸಲು ಕ್ಷೇತ್ರ. ಅಲ್ಲಿ ಒಂದು ದೊಡ್ಡ ದುರ್ಘಟನೆ ಸಂಭವಿಸಿದೆ. ನಾನು ಶಾಸಕನಾಗಿ ಇಲ್ಲಿಯವರೆಗೆ 2 ವರ್ಷ 9 ತಿಂಗಳಾಯಿತು. ಆದರೆ, ಇಲ್ಲಿಯವರೆಗೆ ನಾನು ಸರ್ಕಾರಕ್ಕೆ ದೋಷ ಎಂದು ಹೇಳಲಿಲ್ಲ. ಇವತ್ತು ನಾನು ನೊಂದು ಬಹಳ ದುಃಖದಿಂದ ಈ ದುರ್ಘಟನೆಗೆ ಸರ್ಕಾರವೇ ಕಾರಣವೆಂದು ಹೇಳಬಯಸುತ್ತೇನೆ. ಕಮಲಾಪುರ ಮತಕ್ಷೇತ್ರದ ನೀರಿನ ಹಾಹಾಕಾರದ ಬಗ್ಗೆ ನಾನು ಬಹಳ ಸಲ ಹೇಳಿಕೊಂಡಿದ್ದೇನೆ. ಆದರೆ, ಪಿ.ಹೆಚ್.ಇ. ಜೂನಿಯರ್ ಇಂಜಿನಿಯರ್ ಸೂಗೂರ್ ಎಂಬುವರಿಗೆ 8 ದಿವಸದಿಂದ ನಾನು ಕರೆದು ಹೇಳಿದ್ದೇನೆ. ನೋಡಿ, ಇಲ್ಲಿ ಅನೇಕ ತಾಂಡಗಳಿಗೆ ಕುಡಿಯಲು ನೀರಿಲ್ಲ. ಅನೇಕ ಹಳ್ಳಿಗಳಿಗೆ ನೀರಿಲ್ಲ, ಈಗ ಅಧಿವೇಶನ ನಡೆಯುತ್ತಾ ಇದೆ. ಅಲ್ಲಿಯ ಜನ ನನ್ನ ಹತ್ತಿರ ಬರುತ್ತಾ ಇದ್ದಾರೆ. ಇದನ್ನು ಸರಿಪಡಿಸಬೇಕೆಂದು ನಾನು ಬಹಳ ರಿಕ್ವೆಸ್ಟ್ ಮಾಡಿ ಹೇಳಿಕೊಂಡಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಾನು ನೊಂದು ಹೇಳುತ್ತಿದ್ದೇನೆ. ಏಕೆಂದರೆ, ನನ್ನ ಕಮಲಾಪುರ ಕ್ಷೇತ್ರ, ಅರ್ಧ ಆಳಂದ ತಾಲ್ಲೂಕಿಗೆ ಬರುತ್ತದೆ, ಅರ್ಧ ಗುಲ್ಬರ್ಗಾ ತಾಲ್ಲೂಕಿಗೆ ಬರುತ್ತದೆ. ಅಧಿಕಾರಿಗಳು, ಯಾರು ಬಲಾಢ್ಯ ಎಂ.ಎಲ್.ಎ. ಇರುತ್ತಾರೆ, ಯಾರು ಹೆಚ್ಚಿನ ಪ್ರಬಲ ಇರುತ್ತಾರೋ ಆ ಕಡೆಗೆ ಕೆಲಸ ಮಾಡುತ್ತಿದ್ದಾರೆ. ನಿಜವಾಗಿಯೂ ಹೇಳಬೇಕಾದರೆ, ನಾನು ಈ ಪರಿಸ್ಥಿತಿಯಲ್ಲಿ ಏಕೆ ಎಂ.ಎಲ್.ಎ ಆದೆ ಎಂದು ನೊಂದು ಹೇಳುತ್ತಿದ್ದೇನೆ. ಮೊನ್ನೆ ದಿವಸ ಆ ತಾಂಡಾ ಜನರು ಬಂದು ರಿಕ್ವೆಸ್ಟ್ ಮಾಡಿಕೊಂಡರು. ಆ ಹುಡುಗರು ಬಂದು ಹೇಳಿದ್ದಾರೆ ಬೋರ್‌ವೆಲ್ ಕೆಟ್ಟುಹೋಗಿದೆ, ಮೋಟಾರು ಸುಟ್ಟುಹೋಗಿದೆ. ಕೊಳವೆ ಬಾವಿಗಳೆಲ್ಲಾ ಕಲುಷಿತವಾಗಿ ಹೋಗಿವೆ. ಇದರಿಂದ ಕಾಲರಾ ಆಗಬಹುದು ಎಂದು ಅವರು ಪದೇ ಪದೇ ಕೇಳಿಕೊಂಡಿದ್ದಾರೆ. ಆ ಸೂಗೂರು ಜೆ.ಇ. ಮತ್ತು ಅಲ್ಲಿನ ಸಿಬ್ಬಂದಿವರ್ಗದವರು ನಿರ್ಲಕ್ಷ್ಯ ಮಾಡಿ, ಬೇರೆ ಕಡೆ ಹೋಗಿದ್ದಾರೆ. ಆ ಭಾಗದವರು ಫೋನ್ ಮಾಡಿ ಹೇಳಿದ್ದಾರೆ, ಅಲ್ಲಿನ ಎ.ಇ.ಇ. ಕೂಡ ಹೇಳುತ್ತಿದ್ದಾರೆ. ಎಂ.ಎಲ್.ಎ. ಸಾಹೇಬರೇ ನನ್ನ ಗಮನಕ್ಕೆ ತರಲಿಲ್ಲ ಎಂದು, ಇದು ಅತ್ಯಂತ ತುರ್ತು ಇದೆ. ನಾವು ಮತ್ತು ಮುಖ್ಯಕಾರ್ಯದರ್ಶಿಗಳು ಹೋಗಿದ್ದೆವು. ನಮ್ಮ ಎಲ್ಲಾ ಅಧಿಕಾರಿಗಳೂ ಹೋಗಿದ್ದೆವು. ನಮ್ಮ ಕಡೆ ಮಳೆಯೇ ಇಲ್ಲ. ಬೆಳೆ ಇಲ್ಲ, ನೀರಿನ ಹಾಹಾಕಾರವಾಗಿದೆ. ಅಲ್ಲಿ ಸಣ್ಣ ಸಣ್ಣ ನೀರಿನ ಟ್ಯಾಂಕುಗಳು ಕೂಡ ಒಣಗಿ ಹೋಗಿದೆ. ಅದರಲ್ಲಿದ್ದ ಸ್ವಲ್ಪ ಸ್ವಲ್ಪ ನೀರನ್ನೇ ಆ ಜನ ಕುಡಿದಿದ್ದಾರೆ. ಆ ನೀರು ಕುಡಿದಿದ್ದಕ್ಕಾಗಿ ಮೂರು ಜನ ಸತ್ತಿದ್ದಾರೆ. 10-20 ಜನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ನಾನು ಬಹಳ ನೊಂದು ಹೇಳುತ್ತಿದ್ದೇನೆ. ನಮ್ಮ ಕ್ಷೇತ್ರದಲ್ಲಿ ಸರ್ಕಾರ ಬಹಳ ನಿರ್ಲಕ್ಷ್ಯ ಮಾಡುತ್ತಿದೆ. ನಾನು ಬಿ.ಜೆ.ಪಿ. ಎಂ.ಎಲ್.ಎ ಆಗಿರುವುದರಿಂದ ಹಾಗೂ ನಾನು ಲಂಬಾಣಿ ಜನಾಂಗದಲ್ಲಿ ಹುಟ್ಟಿ ಶಾಸಕನಾಗಿರುವುದರಿಂದ, ನನಗೆ ತಾಳಲಾರದಂಥ ಪರಿಸ್ಥಿತಿ ಬಂದಿದೆ. ಇವತ್ತು ನಾನು ಬಹಳ ಒತ್ತಾಯವಾಗಿ ಹಾಗೂ ನೊಂದು ಹೇಳುತ್ತಿದ್ದೇನೆ. ಈ ನೀರಿನ ಬಗ್ಗೆ ಸಮಸ್ಯೆ ಬಹಳವಾಗಿದೆ. ಇಲ್ಲಿ ನಮ್ಮ

ನಾಗೇಗೌಡರು ಇದ್ದಾರೆ. ಅವರಿಗೆ ನಾನು ಬಹಳ ವಿನಂತಿ ಮಾಡಿಕೊಂಡಿದ್ದೇನೆ. ಇವತ್ತು ನಮ್ಮ ಮಹಾಶಯರು ಕೇಳುತ್ತಾರೆ. ಹುಮ್ನಾಬಾದಿಗೆ ನಾಗೇಗೌಡರು ಬಂದಿದ್ದರು. ಅವರನ್ನು ಭೇಟಿ ಮಾಡಿದಾಗ, ದಂಡೂರ್ ಅವರೇ ಬನ್ನಿ ಎಂದು ಹೇಳಿದರು. ಆಗ ನಮ್ಮ ಜನ ಅವರ ಹೆಸರನ್ನೂ ನೆನಪಿಟ್ಟುಕೊಂಡಿರುವುದಕ್ಕೆ ತುಂಬಾ ಖುಷಿಪಟ್ಟರು. ಸನ್ಮಾನ್ಯ ಅಧ್ಯಕ್ಷರೇ, ನಾನು ದುಃಖದಿಂದ ಹೇಳುತ್ತೇನೆ. ನಿನ್ನೆ ನಾನು ಮುಖ್ಯ ಇಂಜಿನಿಯರ್ ಹತ್ತಿರ ಮಾತನಾಡಿದ್ದೇನೆ. ಅವರೇನು ಹೇಳುತ್ತಾರೆಂದರೆ, ನಾವು 12 ಕೋಟಿ ಅಡಿಷನಲ್ ಗ್ರ್ಯಾಂಟ್ ಕೇಳಿದ್ದೇವೆ. ಅವರು 20 ಲಕ್ಷ ಕೊಟ್ಟಿದ್ದಾರೆ. ಇವತ್ತು ಕೆಲಸ ಬಂದ್ ಆಗುತ್ತದೆ. ಕಂಟ್ರ್ಯಾಕ್ಟರ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಆ ಪರಿಸ್ಥಿತಿ ಇದೆ. ಅಲ್ಲಿ ಸಾವಿರಾರು ಕೂಲಿಕಾರರು ಕೆಲಸ ಮಾಡುತ್ತಿದ್ದಾರೆ. ಅವರ ಗತಿ ಏನು, ನನ್ನ ಕ್ಷೇತ್ರದಲ್ಲಿ ತುಂಬಾ ಸುಸ್ತಾಗಿದೆ. ಆ ಕೂಲಿಕಾರರು ಜೀವನ ಮಾಡುವ ಗತಿ ಏನು? ನಾನು ಕ್ಷೇತ್ರಕ್ಕೆ ಹೋಗಿ ಮುಖ ಯಾವರೀತಿ ತೋರಿಸಬೇಕು? ಸನ್ಮಾನ್ಯ ಅಧ್ಯಕ್ಷರೇ, ಆ ತಾಂಡದ ಹನುಮಕ್ಕ ಹೇಳುತ್ತಿದ್ದರಂತೆ, ಎಂ.ಎಲ್.ಎ ಸಾಹೇಬರು ನೀರು ಕೊಡುವುದಕ್ಕೆ ಸಾಕಷ್ಟು ಹೇಳಿದರು. ಆದರೂ ನೀರು ಕೊಡಲಿಲ್ಲ. ನಮ್ಮ ಯಜಮಾನರು ತೀರಿಕೊಂಡು ಹೋದರು ಎಂದು ಬಹಳ ದುಃಖದಿಂದ ಹೇಳುತ್ತಿದ್ದರಂತೆ. ನಾಳೆ ನಾನು ಹೋಗಿ ಅಲ್ಲಿ ಯಾವ ರೀತಿ ಮುಖ ತೋರಿಸಬೇಕು. ನಾನು ಯಾವ ಪರಿಸ್ಥಿತಿಯಿಂದ ಹೋಗಬೇಕು. ನಾನು ಸಣ್ಣ ನೀರಾವರಿ ಮಂತ್ರಿಯನ್ನೂ ಭೇಟಿಯಾಗಿದ್ದೇನೆ. 1994-95ನೇ ಸಾಲಿನಲ್ಲಿ ಆಕ್ಷನ್ ಪ್ಲಾನ್‌ನಲ್ಲಿ 50 ಲಕ್ಷ ರೂಪಾಯಿ ಇಟ್ಟಿದ್ದಾರೆ. ತೂರಾವಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್, ಕರಾರಿನಲ್ಲಿ ಪರ್ಕ್ಯುಲೇಷನ್ ಟ್ಯಾಂಕ್ ಎಂದು ಹೇಳಿದ್ದಾರೆ. ಇದನ್ನು ಹೆಚ್.ಕೆ.ಡಿ.ಬಿ.ಯಲ್ಲಿ ಇಟ್ಟಿದ್ದಾರೆ. ಇಲ್ಲಿಯವರೆಗೂ ಕೆಲಸ ಆಗುತ್ತಾ ಇಲ್ಲ. ಅದು ಏಕೆ ಆಗುತ್ತಾ ಇಲ್ಲವೆಂದು ಗೊತ್ತಾಗುತ್ತಿಲ್ಲ. ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಂಡಿದ್ದೇನೆ, ತಮ್ಮ ಕಡೆ ವಿನಂತಿ ಮಾಡಿಕೊಂಡಿದ್ದೇನೆ. ಇವರು ನಮಗೆ ಏನು ರಕ್ಷಣೆ ಕೊಟ್ಟಿದ್ದಾರೆ. ಗೋವಿಂದೇಗೌಡರು ನಮಗೆ ಹೈಸ್ಕೂಲ್ ಕೊಟ್ಟರು, ಅವರಿಗೆ ತುಂಬಾ ಥ್ಯಾಂಕ್ಸ್ ಹೇಳಿದ್ದೇನೆ. ಆದರೆ, ಏಕಾಏಕಿ ಕಿತ್ತುಕೊಂಡು ಬೇರೆ ಕಡೆ ಕೊಟ್ಟರು. ಆದರೆ, ನೀವೇ ರಕ್ಷಣೆ ಕೊಟ್ಟು, ನನ್ನ ಮಾನ ಕಾಪಾಡಿದಿರಿ. ನನ್ನ ಕ್ಷೇತ್ರದ ವಿಚಾರ ಎಷ್ಟು ಹೇಳಿದರೂ ಕಡಿಮೆಯೇ ನೀರಿನ ಹಾಹಾಕಾರ ಇದೆ. ಪೂರಾ ಬರಗಾಲಪೀಡಿತ ಪ್ರದೇಶವಾಗಿದೆ.

ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ತುಂಬಾ ಹದಗೆಟ್ಟಿದೆ. ತುಂಬಾ ಹಾಹಾಕಾರ ಪರಿಸ್ಥಿತಿ ಇದೆ. ನಾನು ನಮ್ಮ ಊರಿಗೆ ಹೋದರೆ ಮನೆಯಲ್ಲಿ ಇರುವುದಿಲ್ಲ. ಪ್ರತಿಯೊಂದು ಹಳ್ಳಿ ಹಳ್ಳಿ ಓಡಾಡುತ್ತೇನೆ. ಹಳ್ಳಿಗಳಿಗೆ ಹೋದಾಗ ಜನ ಬಂದು ನಮ್ಮನ್ನು ಕೇಳುತ್ತಾರೆ. ನಮಗೆ ಕುಡಿಯುವ ನೀರು ಇಲ್ಲ ಎಂದು. ಆಗ ಜನ ಆಕ್ರೋಶಗೊಂಡು ಬಡಿಯಬೇಕು ಅಷ್ಟೇ. ಅವರ ಪರಿಸ್ಥಿತಿ ನೋಡಿದರೆ ತುಂಬಾ ಕನಿಕರವಾಗುತ್ತದೆ. ಆದ್ದರಿಂದ ನಾನು ತಮಗೆ ಬಹಳ ನೊಂದು

ಹೇಳುತ್ತಿದ್ದೇನೆ, ನಾನು ಸರ್ಕಾರಕ್ಕೆ ಸಲಹೆ ಕೊಡುತ್ತಿದ್ದೇನೆ, ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಅಧಿಕಾರಿಗಳು ಪ್ರಬಲ ಎಂ.ಎಲ್.ಎ.ಗಳ ಕೆಲಸ ಮಾಡುತ್ತಿದ್ದಾರೆ. ನಮ್ಮ ಕೆಲಸ ಮಾಡುವಂತೆ ಇಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ನಮ್ಮಲ್ಲಿರುವ ಜೆ.ಇ. ನಿರ್ಲಕ್ಷ ಮಾಡಿದ್ದಾನೆ. ನಮ್ಮಲ್ಲಿರುವ ಕೆಲವು ವಿದ್ಯಾವಂತ ಹುಡುಗರು ಬಂದು ವಿನಂತಿ ಮಾಡಿಕೊಂಡಿದ್ದಾರೆ ನೋಡಿ ನಮ್ಮ ಜನ ಗಲೀಜು ನೀರು ಕುಡಿಯುತ್ತಿದ್ದಾರೆ ನಮಗೆ ಕಾಲರ ಆಗುತ್ತದೆ ಎಂದು ಹೇಳಿದರೂ ಸಹ ಆ ಜೆ.ಇ. ನಿರ್ಲಕ್ಷ ಮಾಡಿದ್ದಾನೆ. ಆದ್ದರಿಂದ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಮತ್ತು ನನಗೆ ನ್ಯಾಯ ಕೊಡಬೇಕೆಂದು ನಾನು ಪದೇ ಪದೇ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಸಣ್ಣ ನೀರಾವರಿ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಂಡಿದ್ದೇನೆ. ಅವರು ಏನು ಹೇಳುತ್ತಾರೆ ಅಂದರೆ ಈ ಸಮಯದಲ್ಲಿ ಯಾವುದಾದರೂ ಒಂದು ಕೆರೆಯನ್ನು ಚಾಲು ಮಾಡಿದರೆ ಕೂಲಿಕಾರರಿಗೆ ಕೆಲಸ ಸಿಗುತ್ತದೆ ನಮ್ಮ ಕೂಲಿ ಕಾರ್ಮಿಕರು ಉಳಿದುಕೊಳ್ಳುತ್ತಾರೆ. ಇಲ್ಲದಿದ್ದರೆ ನಮ್ಮ ಜನ ಮುಂಬೈ ಪೂನಾ, ಹಾಗೂ ಹೊರ ರಾಜ್ಯಗಳಿಗೆ ವಲಸೆ ಹೋಗುತ್ತಾರೆ. ಬೀದಿಪಾಲಾಗುತ್ತಾರೆ.

ಶ್ರೀ ಕೆ.ಎನ್.ನಾಗೇಗೌಡ (ಭಾರೀ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೇ, ಗಂಡೋರಿ ನಾಲೆಯ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದಾರೆ, ನಮ್ಮ ಮಾನ್ಯ ಅಧ್ಯಕ್ಷರಿಗೆ ಆ ವಿಷಯ ಬಹಳ ಚೆನ್ನಾಗಿ ಗೊತ್ತಿದೆ. ಅಲ್ಲಿ ನಡೆದಂತಹ ಎಲ್ಲಾ ವ್ಯವಹಾರವನ್ನು ನಾನು ಅವರ ಗಮನಕ್ಕೆ ತಂದಿದ್ದೇನೆ. ನಾನು ಮತ್ತು ಮಾನ್ಯ ರೇವು ನಾಯಕ್ ಅವರು ಮೂರು ಸಾರಿ ಹೋಗಿ ಬಂದಿದ್ದೇವೆ. ಗಂಡೋರಿ ನಾಲೆ ಸುಮಾರು 4-5 ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು. ಅದನ್ನು ಕೈಗೆತ್ತಿಕೊಂಡಿರಲಿಲ್ಲ. ಮಾನ್ಯ ರೇವು ನಾಯಕ್ ಅವರು ಬಂದ ಮೇಲೆ ನಾವು ಅದಕ್ಕೆ ಏಜನ್ಸಿಯನ್ನು ಫಿಕ್ಸ್ ಮಾಡಿ, ಸರ್ವೆ ಮಾಡಿ ಎಸ್ಟಿಮೇಟ್ ಮಾಡಿ ಮತ್ತೊಂದು ಮಾಡಿ ಸುಮಾರು 3-4 ತಿಂಗಳಿಂದ ಕೆಲಸ ನಡೆಯುತ್ತಿದೆ. ಆ ಕೆಲಸ ಕೊಡತಕ್ಕಂಥ ಕಾಲದಲ್ಲಿ ನಮ್ಮದು ಒಂದು ಅಗ್ರಿಮೆಂಟ್ ಆಗಿದೆ. ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಅವರು ದುಡ್ಡು ಹಾಕಿಕೊಂಡು ಕೆಲಸ ಮಾಡಬೇಕು ಎಂದು ಅಗ್ರಿಮೆಂಟ್ ಆಗಿರುವುದರಿಂದ ನಮ್ಮ ಮಾನ್ಯ ಕೃಷ್ಣಪ್ಪನವರು ಇಲ್ಲೇ ಇದ್ದಾರೆ ನಾನು ಅವರಿಗೆ ಹೇಳುತ್ತೇನೆ ದಯವಿಟ್ಟು ಹಣ ಬಿಡುಗಡೆ ಮಾಡಿ ಎಂದು ಆದರೆ ಕೆಲಸ ಮಾತ್ರ 4-5 ತಿಂಗಳಿಂದ ನಡೆಯುತ್ತಿದೆ. ಅವರು ಕಣ್ಣಾರೆ ನೋಡಿದ್ದಾರೆ. ಎಷ್ಟು ಮೆಷನರಿಗಳು ಕೆಲಸ ಮಾಡುತ್ತಿವೆ ಎಷ್ಟು ಜನ ನಾಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದೂ ಬಹುಶಃ ಗಂಡೋರಿ ನಾಲೆ ಗುಲ್ಬರ್ಗ ಜಿಲ್ಲೆಯಲ್ಲಿ ಆಗುತ್ತದೆ ಎಂದು ಯಾರೂ ನೆನೆಸಿರಲಿಲ್ಲ. ಮಾನ್ಯ ರೇವು ನಾಯಕ್ ಅವರು ಬಂದ ಮೇಲೆ ಅದಕ್ಕೆ ಹೆಚ್ಚು ಪ್ರೋತ್ಸಾಹ ಸಿಕ್ಕಿದೆ. ಮಾನ್ಯ ಸಭಾಧ್ಯಕ್ಷರೂ ಕೂಡ ಹೇಳಿದ್ದರು. ಮಾನ್ಯ ರೇವುನಾಯಕ್ ಅವರು ಹೊಸ ಸದಸ್ಯರು ಇದ್ದಾರೆ. ಅವರ ಕ್ಷೇತ್ರಕ್ಕೆ ಸರ್ಕಾರ ಹೆಚ್ಚುಗಮನ ಕೊಡಬೇಕು. ಹಣ ಬಿಡುಗಡೆ ಮಾಡಬೇಕು ಕೆಲಸ ಪ್ರಾರಂಭ ಮಾಡಬೇಕೆಂದು ಹೇಳಿದ್ದೀರಿ. ಅಲ್ಲಿ ಪುನರ್

ವ್ಯವಸ್ಥೆ ಮಾಡಬೇಕೆಂದು ಹೇಳಿದ್ದೀರಿ ಅಲ್ಲಿ ರೈತರು ಭೂಮಿ ಬಿಡದೇ ಸತ್ಯಾಗ್ರಹ ಮಾಡುವುದಕ್ಕೆ ಕುಳಿತಿದ್ದರು. ರಾತ್ರಿ 11 ಗಂಟೆಯವರೆಗೂ ನಾನು ಮತ್ತು ರೇವು ನಾಯಕ್ ಅವರು ಆ ರೈತರ ಜೊತೆ ಮಾತನಾಡಿ ಅವರನ್ನು ಬೆಂಗಳೂರಿಗೆ ಕರೆದುಕೊಂಡು ಬಂದು ಅವರ ಪುನರ್ ವ್ಯವಸ್ಥೆಗೆ ಎಲ್ಲಾ ವ್ಯವಸ್ಥೆ ಮಾಡಿ ಆ ಕಂಟ್ರಾಕ್ಟರ್ ಜೊತೆ ಮಾತನಾಡಿ ಸ್ಥಳಕ್ಕೆ ಹೋಗಿ ಈಗ ಕೆಲಸ ಶುರು ಮಾಡಿದ್ದೇವೆ. 4 ತಿಂಗಳಿಂದ ಚೆನ್ನಾಗಿ ಕೆಲಸ ಆಗುತ್ತಿದೆ. ಅವರ ಕ್ಷೇತ್ರದಲ್ಲಿ ಹೆಚ್ಚು ಕೆಲಸ ತೆಗೆದುಕೊಳ್ಳುವುದಕ್ಕೆ ನಾನು ಕಾರ್ಯಕ್ರಮ ರೂಪಿಸುತ್ತೇನೆ.

ಅಧ್ಯಕ್ಷರು: ಸರಿ.

ಶ್ರೀಮತಿ ಬಿ.ಟಿ.ಲಲಿತಾನಾಯಕ್ (ದೇವದುರ್ಗ): ಮಾನ್ಯ ಅಧ್ಯಕ್ಷರೇ, ಪತ್ರಿಕೆಯಲ್ಲಿ ಓದಿದ್ದನ್ನು ನೋಡಿದರೆ ಕಣ್ಣೀರು ಬರುತ್ತದೆ. ಇನ್ನು ಅಲ್ಲಿಗೆ ಹೋಗಿ ನೋಡಿದರೆ ಹೇಗೆ ಎಂದು. ಊರು ಹಾಳಾದ ಮೇಲೆ ಊರ ಬಾಗಿಲು ಹಾಕಿದರು ಎನ್ನುವ ಒಂದು ಗಾದೆ ಇದೆ. ಈಗ 3 ಜನ ಸತ್ತಿದ್ದಾರೆ ಬಾಕಿ ಇರುವವರು ಕೆಲವರು ಕರಳು ಬೇನೆಯಿಂದ ಖಾಯಿಲೆ ಬಿದ್ದಿದ್ದಾರೆ. ಕನಿಷ್ಟ ಪಕ್ಷ ಶುದ್ಧವಾದ ಕುಡಿಯುವ ನೀರು ಮತ್ತು ಒಳ್ಳೆಯರಸ್ತೆ ಮಾಡಿಲ್ಲ ಅಂದರೆ ಇದು ನಿಜವಾಗಿಯೂ ನಾಚಿಕೆ ಪಡುವಂಥಾದ್ದು. ನಾವು 21ನೇ ಶತಮಾನದಲ್ಲಿದ್ದೇವೆ. ಅವರು ಹೊರಗಡೆ ಹೋಗುವುದಕ್ಕೆ ಸಾಧ್ಯವಿಲ್ಲದೇ ವಾಹನ ಇಲ್ಲದೇ ಒದ್ದಾಡಿಕೊಂಡು ಸಾಯುತ್ತಿರುವಂತಹ ಪರಿಸ್ಥಿತಿ ಇರುವಾಗ ಅದರ ಭೀಕರ ಎಷ್ಟು ಇದೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ತಾವು ಅವರಿಗೆ ಹೇಳುತ್ತೇವೆ, ಇವರಿಗೆ ಹೇಳುತ್ತೇವೆಂದು ಸರ್ಕಾರ ಹೇಳಬಾರದು. ತುರ್ತಾಗಿ ಈಗಿಂದ ಈಗಲೇ ಅವರನ್ನು ಬದುಕಿಸುವಂತಹ ಕೆಲಸ ಮಾಡಬೇಕು ಆ ತಾಂಡದಲ್ಲಿರುವಂತಹ ಎಲ್ಲಾ ಜನ ಬಹಳ ಚಿಂತಾಜನಕವಾದ ಪರಿಸ್ಥಿತಿಯಲ್ಲಿದ್ದಾರೆ. ಇನ್ನೂ ತಮ್ಮ ಮನಸ್ಸು ಕರಗದೇ ಹೇಗೆ ಸುಮ್ಮನೇ ಇದ್ದೀರಿ ಎಂದು ನನಗೆ ಬಹಳ ವೇದನೆಯಾಗುತ್ತಿದೆ. ಇನ್ನೊಂದು ನಮ್ಮ ಮಾನ್ಯ ಸದಸ್ಯರಾದ ಮಾಮನಿಯವರ ಕ್ಷೇತ್ರದಲ್ಲಿ ಅಲ್ಲಿ ಒಂದು ಎಲ್ಲಮ್ಮನ ಗುಡ್ಡ ಎಂದು ಇದೆ. ಅವರು ನಿನ್ನೆಯ ದಿವಸ ಇಲ್ಲಿಗೆ ಬಂದಿದ್ದರು. ಅವರ ಮನೆ ಮಠ ಅಂಗಡಿ ಎಲ್ಲಾ ಕಿತ್ತಾಕಿ ಅವರನ್ನು ಬೀದಿಪಾಲು ಮಾಡಿದ್ದಾರೆ. ಅವರು ನನ್ನ ಹತ್ತಿರ ಬಂದರು. ಆಗ ನಾನು ಹೇಳಿದೆ ನಾನೇನು ಮಂತ್ರಿಯೇ? ನಾನು ಯಾವ ರೀತಿ ತಮ್ಮನ್ನು ಕಾಪಾಡಲಿ ಅಂದೆ. ನಾನು ಅವರಿಗೆ ಒಂದು ಪತ್ರ ಕೊಟ್ಟು ಕಳುಹಿಸಿದ್ದೇನೆ. ಅವರು ಆ ಪತ್ರ ಹಿಡಿದುಕೊಂಡು ಇಡೀ ಬೆಂಗಳೂರು ಅಲೆಯುತ್ತಿದ್ದಾರೆ. ಇಡೀ ಊರಿಗೆ ಊರು ಜನ ಇಲ್ಲಿಗೆ ಬಂದಿದ್ದಾರೆ. ಅವರ ಗುಡಿಸಲು ಅಂಗಡಿ ಎಲ್ಲಾ ಕಿತ್ತುಹಾಕಿಸಿ ಬಿಟ್ಟಿದ್ದಾರೆ. ಈ ರೀತಿ ಆದರೆ ಅವರು ಯಾವ ರೀತಿ ಜೀವನ ಮಾಡಬೇಕು? ಇದರ ಬಗ್ಗೆ ತಮಗೆ ಕನಿಕರ ಇರಲಿ. ಮತ್ತು ಮಾನ್ಯ ರೇವು ನಾಯಕರ ಕ್ಷೇತ್ರದಲ್ಲಿರುವಂತಹ ಜನರಿಗೆ ಏನಾದರೂ ಸಹಾಯ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನ ಈ ವಿಷಯ ಪ್ರಸ್ತಾಪವಾಗುತ್ತದೆ ಎಂದು ಗೊತ್ತಾದ ತಕ್ಷಣ ನಾನು ಈ ಬಗ್ಗೆ ನಮ್ಮ ಇಲಾಖಾ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ ಮತ್ತು ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿ ಜೊತೆ ಈಗತಾನೇ ದೂರವಾಣಿ ಮೂಲಕ ಮಾತನಾಡಿದ್ದೇನೆ. ಅಲ್ಲಿ ಔಷಧೋಪಚಾರಗಳಿಗೆ ಡಿ.ಎಚ್.ಓ. ಮೂಲಕ ಸಂಪರ್ಕಿಸುವಂತಾದ್ದು, ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಕಂಡುಹಿಡಿಯಿರಿ ಎಂದು ನಾನು ನಮ್ಮ ಅಧಿಕಾರಿಗಳನ್ನು ಈಗಾಗಲೇ ಕಳುಹಿಸಿದ್ದೇನೆ. ವಿಧಾನ ಪರಿಷತ್ತಿನಲ್ಲಿ ಸ್ವಲ್ಪ ಗೊಂದಲವಾಗಿರತಕ್ಕಂಥ ಪರಿಸ್ಥಿತಿ ಏನಿತ್ತು ಅಂದರೆ ಈ ನೀರು ಸ್ಲಮ್ ಏರಿಯಾದಿಂದ ಬಂದ ನೀರು ಎಂದು. ಅದು ಸ್ಲಮ್ ಏರಿಯಾ ಎಂದು ಹೇಳಿ ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೂ ನಾನು ಈ ವಿಷಯ ತಿಳಿಸಿ ಮಾಹಿತಿ ಕಳುಹಿಸಿಕೊಡಬೇಕೆಂದು ಕೇಳಿದ್ದೇನೆ. ನಾನು ತತ್‌ಕ್ಷಣದಲ್ಲಿಯೇ ಕ್ರಮ ಕೈಗೊಂಡಿದ್ದೇನೆ. ಈಗ ಮತ್ತೆ ಸದನದ ನಡುವೆಯೇ ನಾನು ಹೋಗಿ ಅವರ ಜೊತೆ ಮಾತನಾಡಿ ಅವರಿಗೆ ಔಷಧಿ ವ್ಯವಸ್ಥೆ ಮಾಡುವಂಥಾದ್ದು, ಆಸ್ಪತ್ರೆಗೆ ಸೇರಿಸಿ ಕ್ರಮ ಕೈಗೊಳ್ಳುವಂಥಾದ್ದು, ಸತ್ತವರ ಬಗ್ಗೆ ಪರಿಹಾರದ ವಿಚಾರಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡುವಂಥಾದ್ದು, ಕುಡಿಯುವ ನೀರನ್ನು ತತಕ್ಷಣ ಒದಗಿಸಿಕೊಡುವಂಥಾದ್ದು, ಇಷ್ಟು ಕೆಲಸಗಳನ್ನು ನಾನು ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೇ, ಅವರ ಮನಸ್ಸಿನಲ್ಲಿ ಏನಿದೆ, ಅಂದರೆ ತಾವು ಇವತ್ತು ವಿಶೇಷವಾಗಿ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ನಾನು ಮಧ್ಯೆ ಇಂಟರ್ ಫಿಯರ್ ಆಗುವಂತಹ ಅಗತ್ಯ ಇಲ್ಲ. ಕಮಲಾಪುರ ಸುತ್ತಮುತ್ತಲೂ ಭೀಕರವಾದ ಬರಗಾಲ ಪರಿಸ್ಥಿತಿ ಇದೆ ಅವರ ಗೋಳು ಏನೆಂದರೆ ಆ ಭಾಗದಲ್ಲಿ ಬರಗಾಲ ಕಾಮಗಾರಿಗಳನ್ನು ಕೈಗೊಂಡಿಲ್ಲ. ತಾಂಡಗಳಲ್ಲಿ ಕುಡಿಯುವ ನೀರಿನ ಹಾಹಾಕಾರ ಇದೆ. ಮೈನರ್ ಇರಿಗೇಷನ್ ಇಲಾಖೆಯಲ್ಲಿ 2-3 ವರ್ಷಗಳ ಹಿಂದೆ ಮಂಜೂರಾದ ಕೆಲಸವನ್ನು ಏಕೋ ಅವರು ಪರಿಶಿಷ್ಟ ಜಾತಿಯಿಂದ ಬಂದವರು ಅವರನ್ನು ಯಾರೂ ಹೇಳುವವರು ಕೇಳುವವರು ಇಲ್ಲ ಎಂದು ಅಲ್ಲಿರುವಂತಹ ಲೋಕಲ್ ಅಧಿಕಾರಿಗಳು ನಿರ್ಲಕ್ಷ ಮಾಡುತ್ತಿದ್ದಾರೆ ಪ್ರಾಮಾಣಿಕವಾಗಿ ತಾವು ತಮ್ಮ ಕೊಠಡಿಗೆ ಕರೆದು ಬೇಕಾದರೆ ಮಾತನಾಡಿ, ಅಲ್ಲಿನ ಅಧಿಕಾರಿಗಳು ಇಷ್ಟೊಂದು ನಿರ್ಲಕ್ಷ ಮಾಡುತ್ತಿದ್ದಾರೆ. ನಾನು ಏಕೆ ಶಾಸಕನಾಗಿದ್ದೇನೆ ಯಡಿಯೂರಪ್ಪನವರೇ ಸಾಕು ಎಂದು ಬೆಳಗ್ಗೆಯಿಂದ ನನ್ನ ಹತ್ತಿರ ಹೇಳುತ್ತಿದ್ದಾರೆ. ಆದರೆ ಅವರ ರಕ್ಷಣೆಗೆ ತಾವು ಬರುತ್ತಿದ್ದೀರಿ, ಆದರೆ ನಾನು ಏನು ಅಧಿಕಾರಿಗಳ ಮನಸ್ಸಿನಲ್ಲಿ ಪ್ರಾಮಾಣಿಕವಾದ ಒಬ್ಬ ಪರಿಶಿಷ್ಟ ಜಾತಿ ಮತ್ತು ಪಂಗಡದ ವ್ಯಕ್ತಿಗೆ ಇಷ್ಟೊಂದು ಕಿರುಕುಳ. 2-3 ವರ್ಷಗಳ ಹಿಂದೆ ಸಣ್ಣ ನೀರಾವರಿ ಇಲಾಖೆಯಲ್ಲಿ ಮಂಜೂರಾದ ಕೆಲಸಗಳನ್ನು ಮಾಡುತ್ತಿಲ್ಲ. ಹಣ ಬಿಡುಗಡೆ ಮಾಡುತ್ತಿಲ್ಲ. ಮತ್ತು ಅಲ್ಲಿ

ಕುಡಿಯುವ ನೀರಿನ ಹಾಹಾಕಾರಕ್ಕೆ ಸಿಕ್ಕಿಕೊಂಡು 3 ಜನ ಸತ್ತಿದ್ದಾರೆ ಎಂದು ಆದರೆ ಅದರ ಅರ್ಥ ಏನು? ತಾಂಡಗಳು ಉದ್ಧಾರವಾಗುತ್ತವೆಯೇ? ಅಲ್ಲಿರುವ ಜನ ಬದುಕುತ್ತಾರೆಯೇ?

ಅಧ್ಯಕ್ಷರು: ನಾವೆಲ್ಲಾ ಸೇರಿ ಅವರಿಗೆ ರಕ್ಷಣೆ ಕೊಡೋಣ. ಮಾನ್ಯ ಪ್ರಕಾಶ್ ಅವರು ಸಮಾಧಾನಕರವಾದ ಉತ್ತರ ಹೇಳಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಎಲ್ಲಾ ತಾಂಡಗಳಿಗೆ ಕುಡಿಯುವ ನೀರನ್ನು ಒದಗಿಸುವಂತೆ ನಿಮ್ಮ ಇಲಾಖಾಧಿಕಾರಿಗಳಿಗೆ ಸೂಚನೆ ಕೊಡಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಹಿಂದೆ ಅವರು ಏನೇನು ವಿಷಯಗಳನ್ನು ಹೇಳಿದ್ದಾರೆ ಅವೆಲ್ಲವನ್ನೂ ಕೂಡ ನಾವು ಅಟೆಂಡ್ ಮಾಡಿದ್ದೇವೆ. ನಾನು ಅಲ್ಲಿಗೆ ಒಂದು ಸಲ ರಿವ್ಯೂ ಮೀಟಿಂಗ್‌ಗೆ ಹೋದಾಗ ಜಲಾನಯನ ಪ್ರದೇಶದಲ್ಲಿ ಖಾಸಗಿಯವರ ಹೊಲದಲ್ಲಿ ಕೆಲಸ ಮಾಡುತ್ತಿದ್ದಾರೆ ಅದರಿಂದ ನಮಗೆ ತೊಂದರೆ ಆಗುತ್ತಿದೆ ಎಂದು ಹೇಳಿದಾಗ ತತ್‌ಕ್ಷಣ ನಾನು ಆ ಕೆಲಸ ಮಾಡಿಸಿಕೊಟ್ಟಿದ್ದೇನೆ. ಮೊನ್ನೆ ನನ್ನ ಹತ್ತಿರ ಮಾತನಾಡುತ್ತಾ ಕುಡಿಯುವ ನೀರಿನ ವಿಚಾರ ಬರೆದು ಕೊಟ್ಟರು. ಆ ಕೂಡಲೆ ಕ್ರಮ ತೆಗೆದುಕೊಂಡಿದ್ದೇನೆ.

ಶ್ರೀ ಹೆಚ್.ಎನ್.ನಂಜೇಗೌಡ: ಮೈನರ್ ಇರಿಗೇಷನ್ ಮಿನಿಸ್ಟರ್ ಒಂದು ಮಾತು ಹೇಳಿ ನಿಮ್ಮ ಕೆಲಸ ಪ್ರಾರಂಭ ಮಾಡಿಕೊಡುತ್ತೇವೆಂದು ಹೇಳಿದರೆ ಮುಗಿದು ಹೋಯಿತು.

ಶ್ರೀ ರೇವು ನಾಯಕ್: ಮಾನ್ಯ ಅಧ್ಯಕ್ಷರೇ, ಹೋದ ವರ್ಷ ಈ ತಾಂಡಕ್ಕೆ ಈ ರೀತಿಯೇ ಆಯಿತು. ಕಾಲರಾ ಬಂದು ಒಬ್ಬ ಸತ್ತ. ಅಲ್ಲಿ ಎರಡು ಲಕ್ಷ ರೂಪಾಯಿಗಳು ಮಂಜೂರಾಯಿತು ಅಲ್ಲಿ 4 ಲಕ್ಷ ರೂಪಾಯಿಗಳ ಕೆಲಸ ಇತ್ತು. ಅಲ್ಲಿ ರವೀಂದ್ರ ಎನ್ನುವ ಜೆ.ಇ. ಇದ್ದ. ಅವನಿಗೆ ನಾನು ಹೇಳಿದೆ ನೋಡಪ್ಪ ಇದು ಬಹಳ ಸಮಸ್ಯೆ ಇದೆ ಎಂದು ಹೇಳಿದ್ದಕ್ಕೆ 4 ಲಕ್ಷ ರೂಪಾಯಿ ಕೆಲಸ ಮಾಡಿದ್ದಾನೆ. ಅವರಿಗೆ ಸರ್ಕಾರದವರು ನೋಟಿಸ್ ಕೊಟ್ಟಿದ್ದಾರೆ. ನೀನು ಹೇಗೆ ಕೆಲಸ ಮಾಡಿದೆ ಎಂದು. ಪೈಪ್ ಲೈನ್ ಹಾಕಿ ನೀರು ಕೊಡಬೇಕು. ಕುಡಿಯುವ ನೀರು ಇನ್ನೂ ಬಂದಿಲ್ಲ. ಈ ತರಹ ಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರಕ್ಕೆ ತಾವು ಸಲಹೆ ಕೊಟ್ಟು ಸೂಕ್ತ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ನಾಗೇಗೌಡರು ಹೇಳಿದ ಮಾತು ಸತ್ಯ ಇದೆ. ನಾನು ಮತ್ತು ನಾಗೇಗೌಡರು ಹೋಗುವವರೆಗೂ ಆ ಕಂಟ್ರಾಕ್ಟರ್ ಕೆಲಸಮುಟ್ಟಿಲ್ಲ. ಆದರೆ ಕಂಟ್ರಾಕ್ಟರ್‌ಗೆ ಹಣ ಬಿಡುಗಡೆ ಮಾಡದಿದ್ದರೆ ಅವರು ಕೆಲಸ ನಿಲ್ಲಿಸುತ್ತೇವೆಂದು ಹೇಳಿದ್ದಾರೆ. ನಾನು ಮುಖ್ಯ ಇಂಜಿನಿಯರ್ ಅನ್ನು ಭೇಟಿ ಮಾಡಿ ಬಂದಿದ್ದೇನೆ. ಆಗ ಅವರು ಹೇಳಿದರು ನಾನು 17 ಕೋಟಿ ಕೇಳಿದರೆ 20 ಲಕ್ಷ ಕೊಟ್ಟಿದ್ದಾರೆ ಎಂದು ಅವರು

ತಕ್ಷಣ ಕೆಲಸ ನಿಲ್ಲಿಸುತ್ತೇನೆಂದು ಹೇಳುತ್ತಾರೆ. ಅಲ್ಲಿ ಕೂಲಿಕಾರ್ಮಿಕರು ಇದ್ದಾರೆ. ಅವರಿಗೆ ಕೆಲಸ ಇಲ್ಲದಿದ್ದರೆ ನನ್ನ ನೋವು ಯಾರಿಗೆ ಹೇಳಬೇಕು? ಮಾನ್ಯ ಅಧ್ಯಕ್ಷರೇ, ನಾನು ಮೊನ್ನೆ ರಸ್ತೆಯ ಬಗ್ಗೆ ಮಾತನಾಡಿದೆ. ನಮ್ಮ ಊರಿಗೆ ರಸ್ತೆ ಇಲ್ಲ ಎಂದು. ನಮ್ಮ ಮಾನ್ಯ ಲೋಕೋಪಯೋಗಿ ಮಂತ್ರಿಗಳು ನಾನು ರಸ್ತೆ ಮಂಜೂರು ಮಾಡುತ್ತೇನೆಂದು ಹೇಳಿದರು. ಕೆಲಸ ಪ್ರಾರಂಭ ಮಾಡಿದರು. ಆದರೆ ಮತ್ತೆ ನಾನು ಹೋಗುವಷ್ಟರಲ್ಲಿ ಕೆಲಸ ಬಂದ್ ಮಾಡಿದ್ದಾರೆ. ಇದು ನನಗೆ ಹೇಗೆ ಗೊತ್ತಾಗಬೇಕು? ಸರ್ಕಾರ ನಮ್ಮನ್ನು ಯಾವ ರೀತಿ ನೋಡುತ್ತಿದೆ. ಅಲ್ಲಿ ಪ್ರಾರಂಭ ಮಾಡಿದ ಕೆಲಸವನ್ನು ಸೂಪರಿಂಟೆಂಡೆಂಟ್ ಇಂಜಿನಿಯರ್ ಹೋಗಿ ಬಂದ್ ಮಾಡಿದ್ದಾರೆ. ಅದು ನಮ್ಮ ಸ್ವಂತ ಊರಿನ ರಸ್ತೆ ಮತ್ತು ನನ್ನ ಕ್ಷೇತ್ರವನ್ನು ಬರಗಾಲಪೀಡಿತ ಪ್ರದೇಶ ಎಂದು ಘೋಷಣೆ ಮಾಡಬೇಕು. ಸತ್ತವರ ಕುಟುಂಬಕ್ಕೆ ಪರಿಹಾರ ಕೊಡಬೇಕು. ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ತಾವು ಮುಗಿಸಿದ್ದೀರಾ?

ಶ್ರೀ ರೇವು ನಾಯಕ್: ಮೈನರ್ ಇರಿಗೇಷನ್ ಇಲಾಖೆ ವತಿಯಿಂದ ಕೆಲಸ ಪ್ರಾರಂಭ ಮಾಡಬೇಕು.

ಅಧ್ಯಕ್ಷರು: ಮಾಡಿಸಿಕೊಡುತ್ತೇನೆ.

ಶ್ರೀ ರೇವು ನಾಯಕ್: ಕೆಲಸ ಪ್ರಾರಂಭ ಮಾಡದಿದ್ದರೆ ಕೂಲಿಕಾರ್ಮಿಕರು ಸಾಯುವುದಕ್ಕೆ ಹತ್ತಿದ್ದಾರೆ. ಆ ಕೆಲಸ ಮಾಡಿದರೆ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಓಕಳಿಕೆರೆ ಕೆಲಸ ಪ್ರಾರಂಭ ಮಾಡಬೇಕು.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ನಾಳೆ ಬೆಳಿಗ್ಗೆ 5 ನಿಮಿಷ ಬನ್ನಿ ಅದೇನು ಎಂಬುದನ್ನು ನೋಡೋಣ.

ಶ್ರೀ ತಿಪ್ಪೇಸ್ವಾಮಿ: ಆಯಿತು.

5.40 ಪಿಎಂ

+ ಶ್ರೀ ಕಾರ್‌ಜೋಳ್ ಗೋವಿಂದ ಮಕಟಪ್ಪ (ಮುಧೋಳ್): ಅಧ್ಯಕ್ಷರೆ, ಸರ್ಕಾರ ನೀರಾವರಿ ಯೋಜನೆಗಳಿಗೆ ಆದ್ಯತೆ ಕೊಡುತ್ತೇವೆಂದು ಹೇಳಿ ಈಗಾಗಲೇ ಸಾಕಷ್ಟು ಹಣವನ್ನು ಒದಗಿಸಿದ್ದಾರೆ. ಹಾಗೂ ನೀರಾವರಿ ಯೋಜನೆಗಳೂ ಕೂಡ ಪ್ರಗತಿಯ ಹಂತದಲ್ಲಿ ಇವೆ. ಇಲ್ಲಿ ದುರ್ದೈವದ ಸಂಗತಿ ಏನೆಂದರೆ ಕೃಷ್ಣಾ ಕಣಿವೆ ಯೋಜನೆಗಳಲ್ಲಿ ಕೇವಲ ಆಲಮಟ್ಟಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಸರ್ಕಾರದವರು ಕೊಡುತ್ತಿದ್ದಾರೆ.

ಇನ್ನುಳಿದ ಕೃಷ್ಣಾ ಕಣಿವೆ ಯೋಜನೆಗಳಲ್ಲಿ ಬರುವ ದೂದಗಂಗಾ, ಹಿಪ್ಪರಿಗೆ, ಘಟಪ್ರಭಾ, ಮಲಪ್ರಭಾ, ಬೆಣ್ಣೆತ್ತೋರ, ಮಸ್ಕಿನಾಲ, ಕಾರಂಜ, ಅಮರ್ಜವಾಗಿರಬಹುದು ಇವುಗಳಿಗೆ ಸಂಬಂಧಪಟ್ಟ ಹಾಗೆ ಸರ್ಕಾರದವರು ಮುಗಿಸುವುದಕ್ಕೆ ಯಾವುದೇ ಒಂದು ಯೋಜನೆಯನ್ನು ಹಾಕಿಕೊಂಡಂತೆ ಕಂಡು ಬರುವುದಿಲ್ಲ. 2000ನೇ ಇಸವಿಯೊಳಗೆ ನಮ್ಮ ಪಾಲಿನ 729 ಟಿಎಂಸಿ ನೀರನ್ನು ಉಪಯೋಗ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಆಲಮಟ್ಟಿ ಅಣೆಕಟ್ಟನ್ನು ಕಟ್ಟಿಸಿ ಅದರಲ್ಲಿ ಮಾತ್ರ ನೀರನ್ನು ನಿಲ್ಲಿಸಿ 176 ಹಳ್ಳಿಗಳನ್ನು ಮುಳುಗಿಸಿದರೆ ನಾವು ಆ ನೀರನ್ನು ಉಪಯೋಗ ಮಾಡಿಕೊಂಡ ಹಾಗೆ ಆಗುವುದಿಲ್ಲ. ಅದಕ್ಕಾಗಿ ಈ ಕಾರಂಜ ಆಗಬೇಕಾಗುತ್ತದೆ, ಅಮರ್ಜ ಆಗಬೇಕಾಗುತ್ತದೆ, ಘಟಪ್ರಭಾ ರೈಟ್ ಬ್ಯಾಂಕ್ ಕ್ಯಾನಲ್ ಸುಮಾರು 202 ಕಿ.ಮೀ. ಇದೆ. ಇದು ಸುಮಾರು 25-30 ವರ್ಷಗಳಿಂದ ಆಗಿಲ್ಲ. ಹೀಗಿರುವಾಗ 2000 ಇಸವಿಯೊಳಗೆ ಯಾವ ರೀತಿ ಸರ್ಕಾರ ಮುಗಿಸುತ್ತಾರೋ ಗೊತ್ತಿಲ್ಲ. ಇದರಲ್ಲಿ 94 ಕಿ.ಮೀ. ಮಾತ್ರ ಆಗಿದೆ. ಉಳಿದಿದ್ದನ್ನು ಮಾಡುವುದಕ್ಕೆ ಸುಮಾರು ಇನ್ನು 538 ಕೋಟಿ ರೂ. ಬೇಕಾಗಬಹುದು. ಈ 538 ಕೋಟಿ ರೂ.ಗಳನ್ನು ಕೊಡುವುದಕ್ಕೆ ಯಾವ ಯೋಜನೆಯಲ್ಲಿ ಹಾಗೂ ಯಾವ ಸ್ಕೀಮ್‌ನಲ್ಲಿ ಹಣ ಒದಗಿಸಿಕೊಡುತ್ತಾರೋ ಗೊತ್ತಿಲ್ಲ. ಈ ವರ್ಷ ಸರ್ಕಾರದವರು ಈ ಯೋಜನೆಗೆ ಕೇವಲ 34 ಕೋಟಿ ರೂ.ಗಳನ್ನು ಮಾತ್ರ ಆಯವ್ಯಯ ಒದಗಿಸಿದ್ದಾರೆ. ಇನ್ನೂ ಎಲ್‌ಓಸಿ ಕೂಡ ಬಿಡುಗಡೆಯಾಗಿಲ್ಲ. ಎಲ್‌ಓಸಿ ಬಿಡುಗಡೆ ಮಾಡುವುದಕ್ಕೂ ಬಹಳ ತಾರತಮ್ಯವಿದೆ. ಇವತ್ತು ಉತ್ತರ ವಿಭಾಗದ ಬೆಳಗಾಂನ ಮುಖ್ಯ ಅಭಿಯಂತರು (ನೀರಾವರಿ) ಇವರಿಗೆ 20 ಕೋಟಿ ಕೊಟ್ಟರೆ, ಅದೇ ದಕ್ಷಿಣದವರಿಗೆ 70 ಕೋಟಿ ರೂ. ಕೊಡುತ್ತಾರೆ. ಸ್ವತಂತ್ರ ಬಂದು 50 ವರ್ಷ ಆಗಿದ್ದರೂ ಕೂಡ ಉತ್ತರ ಕರ್ನಾಟಕವನ್ನು ನಿರ್ಲಕ್ಷ ಮಾಡುತ್ತಿದ್ದಾರೆಂದು ನಾವು ಪದೇ ಪದೇ ಎಲ್ಲರೂ ಹೇಳುತ್ತಿದ್ದರೂ, ಇದೇ ಸಮಸ್ಯೆಯನ್ನು ಮುಂದಿಟ್ಟುಕೊಂಡು ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕೆಂದು ಬೇಡುತ್ತಿದ್ದಾರೆ. ಇದೇ ರೀತಿಯ ತಾರತಮ್ಯ ಮುಂದುವರಿದಿದ್ದೇಯಾದರೆ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಆದೀತು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸದನದ ಮೂಲಕ ನಾನು ಎಚ್ಚರಿಕೆ ನೀಡುವುದಕ್ಕೆ ಬಯಸುತ್ತೇನೆ. ಈಗ ತಮ್ಮ ಗಮನಕ್ಕೆ ತರುವುದು ಏನೆಂದರೆ ಈ ಕೃಷ್ಣಾ ಯೋಜನೆಯನ್ನು ಬಿಟ್ಟು ಅಂದರೆ ಆಲಮಟ್ಟಿ ಯೋಜನೆಯನ್ನು ಬಿಟ್ಟು ಉಳಿದಿರುವ ಯೋಜನೆಗಳಿಗೆ ಎಷ್ಟು ಹಣ ಬೇಕಾಗುತ್ತದೆ ಮತ್ತು ಈ ಯೋಜನೆಗಳಿಗೆ ಸರ್ಕಾರ ಎಷ್ಟು ಹಣ ಒದಗಿಸಿದೆ ಎಂಬ ಎರಡು ವಿಚಾರಗಳನ್ನೂ ಕೂಡ ತಮ್ಮ ಗಮನಕ್ಕೆ ತರಬಯಸುತ್ತೇನೆ. ಆಲಮಟ್ಟಿ ಯೋಜನೆ ಮುಗಿಯಬೇಕಾದರೆ ಸುಮಾರು 4625 ಕೋಟಿ ರೂ. ಹಣ ಬೇಕಾಗಬಹುದು ಆದರೆ ಸರ್ಕಾರ ಇದಕ್ಕೆ 1249 ಕೋಟಿ ರೂ.ಗಳನ್ನು ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ಬಜೆಟ್‌ನಲ್ಲಿಟ್ಟಿದ್ದು ಮತ್ತು ಬೇರೆ ವ್ಯವಸ್ಥೆ ಮಾಡಿರುವುದು ಎರಡೂ ಸೇರಿದೆ. ಇನ್ನು ದೂದಗಂಗಾಕ್ಕೆ ಸುಮಾರು 34 ಕೋಟಿ ರೂ. ಬೇಕಾದರೆ ಸರ್ಕಾರ ಆಯವ್ಯಯದಲ್ಲಿ ಕೇವಲ 3 ಕೋಟಿ ರೂ.ಗಳನ್ನು ಒದಗಿಸಿದೆ. ಹಿಪ್ಪರಿಗೆ ಪ್ರಾಜೆಕ್ಟ್‌ಗೆ

ನನ್ನ ಅಂದಾಜಿನ ಪ್ರಕಾರ ಸುಮಾರು 480 ಕೋಟಿ ರೂ. ಹಣಬೇಕಾದರೆ ಸರ್ಕಾರ ಇದಕ್ಕೆ ಮೂರೂವರೆ ಕೋಟಿ ರೂ.ಗಳನ್ನು ಕೊಟ್ಟಿದೆ. ಘಟಪ್ರಭಾ ರೈಟ್‌ಬ್ಯಾಂಕ್ ಕ್ಯಾನಲ್‌ಗೆ ಸುಮಾರು 538 ಕೋಟಿ ಬೇಕಾದರೆ ಇದಕ್ಕೆ ಸರ್ಕಾರದವರು 33 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಮಲಪ್ರಭಾ ಯೋಜನೆಗೆ ಸುಮಾರು 180 ಕೋಟಿ ಬೇಕಾದರೆ ಸರ್ಕಾರ ಇದಕ್ಕೆ 33 ಕೋಟಿ ರೂ. ಕೊಟ್ಟಿದೆ. ಬೆಣ್ಣೆತೊರೆ ಯೋಜನೆಗೆ ಸುಮಾರು 85 ಕೋಟಿ ರೂ.ಗಳು ಬೇಕಾದರೆ ಸರ್ಕಾರ ಇದಕ್ಕೆ 33 ಕೋಟಿ ರೂ.ಗಳನ್ನು ಕೊಟ್ಟಿದೆ. ಮುಲ್ಲಾಮರಿ ಮೇಲ್ದಂಡೆ ಯೋಜನೆಗೆ 25 ಲಕ್ಷ ರೂ. ಕೊಟ್ಟಿದ್ದಾರೆ. ಮುಲ್ಲಾಮರಿ ಕೆಳದಂಡೆ ಯೋಜನೆಗೆ ಸುಮಾರು ಎಷ್ಟೋ ಹಣವನ್ನು ಕೊಟ್ಟಿದ್ದಾರೆ. ಮಸ್ಕಿನಾಲೆಗೆ 112 ಕೋಟಿ ರೂ. ಬೇಕಾದರೆ ಸರ್ಕಾರ ಇದಕ್ಕೆ 8 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಕಾರಂಜಿ ಪ್ರಾಜೆಕ್ಟ್‌ಗೆ ಸುಮಾರು 98 ಕೋಟಿ ರೂ.ಗಳು ಬೇಕಾದರೆ ಸರ್ಕಾರ ಇದಕ್ಕೆ 15 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಆಮರ್ಜಾಕ್ಕೆ ಸುಮಾರು 40 ಕೋಟಿ ರೂ.ಗಳು ಬೇಕಾದರೆ ಸರ್ಕಾರ ಇದಕ್ಕೆ 8 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಈ ಯೋಜನೆಗಳೆಲ್ಲಾ 2000 ಇಸವಿಯೊಳಗೆ ಮುಗಿಸುವಂತಹ ಯೋಜನೆಗಳು. ಸರ್ಕಾರ ಇವುಗಳನ್ನು ಯಾವ ರೀತಿ ಮುಗಿಸುತ್ತಾರೆ? ಮುಗಿಸುವುದಕ್ಕೆ ಸಾಧ್ಯವಿದೆಯೇ? ನಾವು ಬಿಜಾಪುರ ಜಿಲ್ಲೆಯವರು, ಬಹಳ ದುರ್ದೈವರು ಏಕೆಂದರೆ ಇವತ್ತು ಸುಮಾರು 176 ಹಳ್ಳಿಗಳು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗುತ್ತಿವೆ. ಇದರಿಂದಾಗಿ ನಮ್ಮ ತಂದೆ-ತಾಯಿ-ಮುತ್ತಜ್ಜ ಗಳಿಸಿರುವ ಆಸ್ತಿಪಾಸ್ತಿಗಳೆಲ್ಲಾ ನೀರಿನ ಪಾಲಾಗುತ್ತದೆ. ನಾವು ಎಲ್ಲಾ ಮನೆ ಮಠಗಳನ್ನು ಕಳೆದುಕೊಂಡು ನಿರ್ಗತಿಕರಾಗುತ್ತೇವೆ. ಹೀಗಾದರೂ ಸರ್ಕಾರ ನಮಗೆ ಕೊಟ್ಟಿದ್ದು ಏನು? ಈ ಅಲ್ಪ ಸ್ವಲ್ಪ ಹಣವನ್ನು ತೆಗೆದುಕೊಂಡು ನಾವು ಏನು ಮಾಡಬೇಕು? ಲಕ್ಷಾಂತರ ದುಡಿಯುವ ಜನಗಳಿಗೆ ಇವತ್ತು ಕೆಲಸವಿಲ್ಲ. ಇದರ ಬಗ್ಗೆ ಸರ್ಕಾರ ಯಾವುದೇ ಚಿಂತನೆ ಮಾಡಲಿಲ್ಲ. ಉಳಿದಂಥ ಅಲ್ಪಸ್ವಲ್ಪ ಭೂಮಿಗೆ ನೀರನ್ನು ಒದಗಿಸುವ ಯೋಜನೆಯನ್ನಾದರೂ ಸರ್ಕಾರ ಹಾಕಿಕೊಳ್ಳಲಿಲ್ಲ. ಇವತ್ತು ನಮ್ಮಲ್ಲಿ ಸುಮಾರು 5 ಲಿಫ್ಟ್ ಇರಿಗೇಷನ್ ಇದ್ದರೂ ಕೂಡ ಯಾವುದೂ ಕಾರ್ಯಗತವಾಗಲಿಲ್ಲ. ಇದನ್ನು ನಾವು ಕೇಳಿದರೆ ಏನು ಹೇಳುತ್ತಾರೆಂದರೆ ನಮಗೆ ಹಂಚಿಕೆಯಾಗಿರುವ ನೀರಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಒಂದನ್ನೇ ಮಾಡಲಿಕ್ಕೆ ಸಾಧ್ಯವಿದೆ, ಉಳಿದ ಯೋಜನೆಗಳಲ್ಲಿ ಮಾಡುತ್ತೇವೆ, ಲಿಫ್ಟ್ ಇರಿಗೇಷನ್ ಎರಡನೆಯ ಹಂತದಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಲಿಫ್ಟ್ ಇರಿಗೇಷನ್ ಎರಡನೇ ಹಂತದಲ್ಲಿ ತೆಗೆದುಕೊಳ್ಳುವವರಿಗೆ ಲಕ್ಷಾಂತರ ದುಡಿಯುವ ಜನರಿಗೆ ಹೊಟ್ಟೆಗೆ ಹಿಟ್ಟಿಲ್ಲದೆ ಅವರು ಬದುಕಿದರೆ ಅವರ ಪರಿಸ್ಥಿತಿ ಏನಾಗಬಹುದು ಎಂಬುದನ್ನು ತಾವು ಸ್ವಲ್ಪ ವಿಚಾರ ಮಾಡಿ. ಲಕ್ಷಾಂತರ ದುಡಿಯುವ ಮಂದಿಗೆ ಕೆಲಸ ಇಲ್ಲದಿದ್ದರೆ, ಹೊಟ್ಟೆಗೆ ಹಿಟ್ಟಿಲ್ಲದಿದ್ದರೆ ಈ ಬಿಜಾಪುರ ಜಿಲ್ಲೆ ಕರ್ನಾಟಕದ ಎರಡನೇ ಪಂಜಾಬ್ ಆಗುತ್ತದೆ. ಇವತ್ತು ಬೇರೆ ಕಡೆ ಕಂಡು ಬರುವಂತಹ ಎಲ್‌ಟಿಟಿಇ ಹಾಗೂ ನಕ್ಸಲೈಟ್ಸ್‌ರವರು ಕರ್ನಾಟಕದಲ್ಲಿ ಕೂಡ ಕಂಡು ಬರುವಂತಹ ಒಂದು ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದಕ್ಕೆ ಏನು

ಮಾಡುವುದಕ್ಕೆ ಸಾಧ್ಯ? ಏಕೆಂದರೆ ಯಾವುದೇ ಒಬ್ಬ ಮನುಷ್ಯ ಉಪವಾಸ ಬಿದ್ದು ಸಾಯುವುದಕ್ಕೆ ಇಷ್ಟಪಡುತ್ತಾನೆಯೇ? ಹೀಗಾಗುವುದಕ್ಕೆ ಸಾಧ್ಯವಿದೆಯೇ? ಇದಕ್ಕಾಗಿ ನಾನು ಸರ್ಕಾರವನ್ನು ವಿನಂತಿ ಮಾಡುವುದೇನೆಂದರೆ ಉಳಿದಿರುವ ಅಲ್ಪ ಸ್ವಲ್ಪ ಭೂಮಿಗೆಯಾದರೂ ನೀರನ್ನು ಒದಗಿಸುವ ವ್ಯವಸ್ಥೆ ಮಾಡಿ. ದುಡಿಯುವ ಕೈಗಳಿಗೆ ಕೆಲಸ ಕೊಡುವಂತಹ ಬಗ್ಗೆ ಯೋಚನೆ ಮಾಡಿ ಹಾಗೂ ಅದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಯಾವುದಾದರೂ ಯೋಜನೆಗಳನ್ನು ಹಾಕಿಕೊಂಡು ಉದ್ದಿಮೆಗಳನ್ನು ಪ್ರಾರಂಭ ಮಾಡಿ ಲಕ್ಷಾಂತರ ಜನಗಳಿಗೆ ಕೆಲಸ ಕೊಡಿ.

ಶ್ರೀ ಹೆಚ್.ಎನ್.ನಂಜೇಗೌಡ: ಅಧ್ಯಕ್ಷರೆ, ಹಿಂದೆ ಸರ್ಕಾರದವರ ಒಂದು ಚಿಂತನೆಯಿತ್ತು. ನೀವು ಸ್ವಲ್ಪ ಗಂಭೀರವಾಗಿ ಯೋಚನೆ ಮಾಡಿ. ಹಳೇ ಮೈಸೂರು ಭಾಗದಲ್ಲಿ ಜಮೀನು ಕಳೆದುಕೊಂಡವರಿಗೆ ಸರ್ಕಾರಿ ಜಮೀನನ್ನು ಅಲ್ಲೊಂದು ಸ್ವಲ್ಪ ಇಲ್ಲೊಂದು ಸ್ವಲ್ಪ ಕೊಟ್ಟಿದ್ದು ಆಯಿತು. ಜಮೀನು ಕಳೆದುಕೊಂಡವರಿಗೆ ನಾವು ಬೆಟರ್‌ಮೆಂಟ್ ಲೆವಿ ಹಾಕಿದ್ದೆವು. ಅದಕ್ಕೆ ಬದಲಾಗಿ ದೊಡ್ಡ ದೊಡ್ಡ ಜಮೀನುದಾರರ ಬಳಿ ನೀರಾವರಿ ಜಮೀನು ಇರುವುದರಲ್ಲಿ ಸ್ವಲ್ಪ ಅವರಿಂದ ಜಮೀನನ್ನು ಬಿಡಿಸಿಕೊಳ್ಳುವುದಕ್ಕೆ ಕಾನೂನು ಮಾಡಿ ಆ ಜಮೀನನ್ನು ಜಮೀನು ಕಳೆದುಕೊಂಡವರಿಗೆ ಹಂಚತಕ್ಕದ್ದು. ಎರಡನೆಯದು ಏನೆಂದರೆ ಈ ಸಭೆಗೆ ಒಂದು ಇನ್‌ಫರ್‌ಮೇಷನ್ ಬೇಕು ಏಕೆಂದರೆ ನನಗೂ ಕೂಡ ಕನಫ್ಯೂಷನ್ ಇದೆ. ಈಗ ನಾವು ಗೋದಾವರಿ ಡೈವರ್ಷನ್ ಸೇರಿ 734 ಪ್ಲಸ್ 22 ಒಟ್ಟು 756 ಟಿಎಂಸಿ ಇದರಲ್ಲಿ ಒಂದೈದು ಟಿಎಂಸಿ ನೀರು ಕುಡಿಯುವುದಕ್ಕೆ ಹೋದರೂ ಈ ಯೋಜನೆಗೆ ಏನೇನು ಮಾಡಿದ್ದೀರಿ ಅದರ ಬಗ್ಗೆ ಬ್ರೇಕ್ ಆಫ್ ಫಿಗರ್ಸ್‌ನ್ನು ನೀವು ಉತ್ತರ ಕೊಡುವಾಗ ಕೊಡಿ ನೀರಿನ ಉಪಯೋಗಕ್ಕೆ ಬೇರೆ ಯಾವ ಯೋಜನೆಗಳು ಇವೆ? ಯೋಜನೆಗಳು ಇದ್ದರೆ ಯಾವುದನ್ನು ಕೈಗೆತ್ತಿಕೊಂಡಿದ್ದೀರಿ? ಕೈಗೆತ್ತಿಕೊಂಡಿರುವ ಯೋಜನೆ 2000ನೇ ಇಸವಿಯೊಳಗೆ ಯಾವ್ಯಾವುದು ಮುಗಿಯುತ್ತದೆ ಎನ್ನುವ ಬಗ್ಗೆ ಮಾಹಿತಿ ಕೊಡಿ.

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು): ಅಧ್ಯಕ್ಷರೆ, ಅವರು 729 ಟಿಎಂಸಿಗೆ ಮಾಸ್ಟರ್ ಪ್ಲಾನರ್ ಮಾಡಿ ಯಾವ ಯಾವ ಯೋಜನೆಗೆ ಎಷ್ಟೆಷ್ಟು ನೀರನ್ನು ಅಲೋಕೇಷನ್ ಮಾಡಿದ್ದೀರಿ, 2000 ಇಸವಿಗೆ ಯಾವ ಯೋಜನೆಯು ಆನ್ ಗೋಯಿಂಗ್ ಪ್ರಾಜೆಕ್ಟ್ ಯಾವುದು, ಕಂಪ್ಲೀಟ್ ಆಗುವ ಯೋಜನೆ ಯಾವುದು? ಫಂಡ್ ಅಲೋಕೇಷನ್ ಎಷ್ಟು ಮಾಡಿದ್ದೀರಿ ಎನ್ನತಕ್ಕಂಥ ಮಾಹಿತಿಗೆ ಎಲ್ಲಾ ಉತ್ತರ ನನ್ನ ಹತ್ತಿರ ಇದೆ, ಇದಕ್ಕೆ ಟೈಮ್ ಬೇಕಾಗುತ್ತದೆ ನಂತರ ನಾನು ಕೊಡುತ್ತೇನೆ. ಇದರಲ್ಲಿ ಎರಡನೆಯ ಮಾತಿಲ್ಲ. ಕಾರಜೋಳ್‌ರವರು ಮಾಡುತ್ತಿರುವ ಭಾಷಣದ ಹಿನ್ನೆಲೆಯಲ್ಲಿ ಒಂದು ಮಾತು ಅವರದು ಸತ್ಯವಿದೆ. ಅದೇನೆಂದರೆ ನಾವು ಇಲ್ಲಿಯವರೆಗೆ ಕಳೆದ ನಾಲ್ಕೈದು ವರ್ಷಗಳಿಂದ ನಾವು ಯುಕೆಪಿ ಮೇಲೆ ಹೆಚ್ಚು ಗಮನವನ್ನು ನೀಡಿರತಕ್ಕಂಥದ್ದು ಸತ್ಯವಿದೆ. ಅದೇ ರೀತಿಯಲ್ಲಿ ಮಲಪ್ರಭಾ ಹಾಗೂ ಘಟಪ್ರಭಾ ಯೋಜನೆಗೆ ಹೆಚ್ಚು

ಗಮನ ನೀಡಿಲ್ಲ ಎಂದು ಅವರು ಏನು ಹೇಳುತ್ತಾರೆ ಇದರಲ್ಲಿ ಎರಡು ಮಾತಿಲ್ಲ. ಅಲ್ಲೂ ಕೂಡ 148 ಟ್ರಿಡ್ ಟಿ.ಎಂ.ಸಿ. ಇದೆ ಇಲ್ಲೂ ಕೂಡ 173 ಟ್ರಿಡ್ ಟಿ.ಎಂ.ಸಿ. ಇದೆ, ಎರಡಕ್ಕೂ ಸಮಾನವಾಗಿ ಕೊಡಬೇಕೆಂದು ಹೇಳುತ್ತಿರುವ ಮಾತಿನಲ್ಲಿ ಎರಡನೇ ಮಾತಿಲ್ಲ, ಅವರು ಹೇಳತಕ್ಕಂಥದ್ದು ಮಾತು ಸರಿಯಿದೆ, ಆದರೆ ಅವರು ಹೇಳತಕ್ಕಂಥ ಒಂದು ಮಾತು ಸರಿಯಿಲ್ಲ ಅದೇನೆಂದರೆ ಮುಳುಗಡೆಯಾಗಿರುವ ಪ್ರದೇಶದ ರೈತರಿಗೆ... ನಾವು ಸುಮಾರು 6 ತಿಂಗಳುಗಳಿಂದ 22 ಬೇಡಿಕೆಗಳನ್ನು ಇಟ್ಟಿದ್ದರು, ಈ ಸಂದರ್ಭದಲ್ಲಿ ಮಾನ್ಯ ಕಾರಜೋಳ್ ಹಾಗೂ ಮಾನ್ಯ ಪ್ರಕಾಶ್‌ರವರಿಗೂ ಕೂಡ ಗೊತ್ತಿದೆ. ಸುಮಾರು 600 ಕೋಟಿ ರೂ.ಗಳು ಆಗತಕ್ಕಂಥ 22 ಬೇಡಿಕೆಗಳಲ್ಲಿ ಸುಮಾರು 200 ಕೋಟಿ ರೂ.ಗಳನ್ನು ಒಂದೇ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಅಪ್ರೂವ್ ಮಾಡಿಕೊಟ್ಟಿದ್ದೇವೆ. ಆ 22 ಬೇಡಿಕೆಗಳಲ್ಲಿ almost all the demands were conceded. This was pending since 8-10 years. Not one or two years. ಕಾರಜೋಳರವರೇ ಬಂದು, ನಮ್ಮ ಜೊತೆಯಲ್ಲಿದ್ದು, ಮಾತನಾಡಿ....

ಶ್ರೀ ಕೆ.ಎನ್.ಪುಟ್ಟಣ್ಣಯ್ಯ: ಅಧ್ಯಕ್ಷರೆ, Rehabilitation norms ಆ ಪ್ರಕಾರ ಸರ್ಕಾರ ಕೆಲಸ ಮಾಡಲೇ ಬೇಕು.

ಶ್ರೀ ಕೆ.ಎನ್.ನಾಗೇಗೌಡ: ಅಧ್ಯಕ್ಷರೆ, ನಾರ್ಮ್ಸ್ ಬಗ್ಗೆ ತಮಗೆ ಹೇಳುವುದಾದರೆ ವರ್ಲ್ಡ್ ಬ್ಯಾಂಕ್‌ನಿಂದ.. ಮಾನ್ಯ ನಂಜೇಗೌಡರನ್ನು ಕೇಳಬೇಕು ಏಕೆಂದರೆ ನಮ್ಮೆಲ್ಲರಿಗಿಂತಲೂ ಅವರಿಗೆ ನೀರಾವರಿಯಲ್ಲಿ ತಿಳುವಳಿಕೆಯಿರುವುದರಿಂದ.. ಸುಮಾರು ಎರಡು ಮೂರು ಸಲ ವರ್ಲ್ಡ್ ಬ್ಯಾಂಕ್ ಲೋನ್ ಸಸ್ಪೆಂಡ್ ಆಗಿದೆ. ಆದರೆ ಮಾನ್ಯ ಪುಟ್ಟಣ್ಣಯ್ಯನವರು ವರ್ಲ್ಡ್ ಬ್ಯಾಂಕ್ ನಾರ್ಮ್ಸ್ ಪ್ರಕಾರ ಕೊಡಬೇಕೆಂದು ಹೇಳುತ್ತಾರೆ. ನಾವು ವರ್ಲ್ಡ್‌ನಾರ್ಮ್ಸ್‌ನ್ನು ಬಿಟ್ಟಿದ್ದೇವೆ. ಅದನ್ನೆಲ್ಲಾ ಬಿಟ್ಟು ಮಾಡಿ. ಮೊನ್ನೆ ನಮ್ಮ ಮುಖ್ಯಮಂತ್ರಿಗಳು ಹೋಗಿದ್ದಾಗ ವರ್ಲ್ಡ್ ಬ್ಯಾಂಕ್‌ನವರು ಎಲ್ಲಾ ಅಪ್ರೊಪ್ರಿಯೇಷನ್ ಮಾಡಿ ಸಸ್‌ಪೆನ್ಸ್‌ನ್ನು ರೀವೊಕ್ ಮಾಡಿ 20 ಮಿಲಿಯನ್ ಡಾಲರ್ಸ್ ಹಣವನ್ನು ಸ್ಯಾಂಕ್ಷನ್ ಮಾಡಿ, ಅವರು ಕೇಳಿರುವಂತಹ ವಯಸ್ಕರಿಗೆ ಬೇಕಾದಂಥ ಸೈಟ್, ಅವರ ವ್ಯಾಲ್ಯೂವೇಷನ್ ಮಾಡುವುದಕ್ಕೆ ಕಮಿಟಿ.. ಇಲ್ಲಿಯವರೆಗೆ ಕೇವಲ ಅಧಿಕಾರಿಗಳೇ ಸೇರಿಕೊಂಡು ವ್ಯಾಲ್ಯೂವೇಷನ್ ಮಾಡುತ್ತಿದ್ದರು. ಶಾಸಕರು ಬೇಕು ಎಂದಮೇಲೆ ಶಾಸಕರ ಒಂದು ಕಮಿಟಿಯನ್ನು ಮಾಡಿ ಕೊಟ್ಟಿವು. ಡಿಪ್ರೇಸಿಯೇಷನ್ ಕೊಡಬೇಕೆಂದು ಹೇಳಿದರು it goes more than Rs.200 crores. We have concerned.

ಶ್ರೀ ಹೆಚ್.ಎನ್.ನಂಜೇಗೌಡ: ಬದಲಿ ಲ್ಯಾಂಡ್ ಕೊಡುವುದಕ್ಕೆ ಏನು ಮಾಡಿದ್ದೀರಿ...

ಶ್ರೀ ಕೆ.ಎನ್.ನಾಗೇಗೌಡ: ಅಧ್ಯಕ್ಷರೆ, ಬದಲಿ ಲ್ಯಾಂಡ್ ಅಲ್ಲಿದ್ದರೆ ಅದೂ ಕೂಡ

ಕೊಡಬಹುದು ಮೀಟಿಂಗ್‌ಗೆ ಮಾನ್ಯ ಕಾರಜೋಳ್‌ರವರು ಎಲ್ಲಾ ಮೀಟಿಂಗ್‌ಗೆ ಬಂದಿದ್ದಾರೆ. ನಮಗೆ ಉಳಿದುಕೊಂಡಿರುವ ಬದಲಿ ಲ್ಯಾಂಡ್, ಹಾಗೂ ಉಳಿದು ಕೊಂಡಿರುವಂಥದ್ದು ನೌಕರಿ ಕೊಡುವುದು. ನೌಕರಿ ಕೊಡುವ ವಿಚಾರದಲ್ಲಿ ಸಂವಿಧಾನದ ಪ್ರಕಾರ ಮಾಡುವುದಕ್ಕೆ ಆಗುತ್ತದಯೋ ಇಲ್ಲವೋ ವೇರಿಯಸ್ ಲೆವಲ್‌ನಲ್ಲಿ ಡಿಸ್‌ಕಸ್ ಮಾಡಿದ್ದೇವೆ. ಇವೆರಡನ್ನು ಬಿಟ್ಟು, ವಾಸಣ್ಣ ದೇಸಾಯಿಯವರು, ಕಾರಜೋಳ್‌ರವರು ಜಿ.ಟಿ.ಪಾಟೀಲರು, ಬಿ.ಬಿ.ಎಸ್.ಪಾಟೀಲರು ಅಲ್ಲಿದ್ದಂಥ ಎಲ್ಲಾ ಮುಖಂಡರು, ತಮಗೆ ಹೇಳುವುದಾದರೆ.. ನೂರಾರು ಜನ ಸಾಮೂಹಿಕವಾಗಿ ಬಂದು ನಿಮ್ಮ ಸರ್ಕಾರದಲ್ಲಿ ಪುನರ್‌ವಸತಿ ಕಾರ್ಯಕ್ರಮಗಳಿಗೆ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅನುಕೂಲ ಕಲ್ಪಿಸಿಕೊಟ್ಟಿದ್ದೀರೆಂದು ಸಂಬಂಧಪಟ್ಟ ಮಂತ್ರಿಯವರಿಗೆ ಹಾಗೂ ಮಾನ್ಯ ಮುಖ್ಯ ಮಂತ್ರಿಯವರಿಗೆ ಧನ್ಯವಾದಗಳನ್ನು ಅರ್ಪಿಸಿರುವುದು ಮಾನ್ಯ ಖರ್ಗೆಯವರಿಗೂ ಗೊತ್ತಿದೆ. ಉಳಿದ ವಿಷಯಗಳಾದ ಜಮೀನು ಇದ್ದರೆ ಕೊಡಿ ಅಥವಾ ಕೆಲಸ ಕೊಡಿ ಎಂದು ಹೇಳಿರುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಅಧ್ಯಕ್ಷರೆ, ನಾನು ಹೇಳಿರುವುದನ್ನು ಮಾನ್ಯ ಮಂತ್ರಿಯವರು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. ಅವರು ನಮ್ಮ ಬೇಡಿಕೆಯನ್ನು ಈಡೇರಿಸಿಲ್ಲವೆಂದು ನಾನು ಹೇಳಲಿಲ್ಲ. ನಾನು ಹೇಳಿದ್ದು ಏನೆಂದರೆ, ನಮ್ಮ ಪೂರ್ವಜರು ಸಂಪಾದನೆ ಮಾಡಿದ್ದ ಆಸ್ತಿ ಏನಿತ್ತು, ಮನೆ, ಮಠ ಇತ್ತೋ ಅವುಗಳನ್ನೆಲ್ಲಾ ಮುಳುಗಡೆ ಪ್ರದೇಶಕ್ಕೆ ಬಿಟ್ಟುಕೊಟ್ಟಾದ ಮೇಲೆ ಆ ಜನರಿಗೆ ಉದ್ಯೋಗ ಇಲ್ಲ ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಪುನರ್ ವಸತಿ ವಿಚಾರದಲ್ಲಿ ಸರ್ಕಾರ ಒಳ್ಳೆಯ ಕೆಲಸ ಮಾಡಿರುವ ಬಗ್ಗೆ ನನ್ನ ಎರಡು ಮಾತಿಲ್ಲ. ಪುನರ್ ವಸತಿ ಕೇಂದ್ರದಲ್ಲಿ ಒಂದು ಸೈಟ್ ಕೊಟ್ಟು ಮನೆಕಟ್ಟಿಸಿ ಕೊಟ್ಟಿದ್ದೇವೆಂದು ಹೇಳಿದರೆ ಅದು ಅಷ್ಟಕ್ಕೆ ಮುಗಿಯಲಿಲ್ಲ, ಅವರುಗಳು ದುಡಿಯಲು ಉದ್ಯೋಗ ಕೊಡಬೇಕೆನ್ನುವ ವಿಷಯದಲ್ಲಿ ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಒಣ ಭೂಮಿಯು ನೀರಾವರಿ ಪ್ರದೇಶವಾದ ಮೇಲೆ ಭೂ ಸುಧಾರಣಾ ಕಾನೂನಿನ ಪ್ರಕಾರ ಹಿಡುವಳಿ ನೀತಿಯನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಸರ್ಕಾರಕ್ಕೆ ಅವಕಾಶ ಇದೆ. ಆದ್ದರಿಂದ, ಯಾವ ಯಾವ ಪ್ರದೇಶದಲ್ಲಿ ಹೆಚ್ಚುವರಿ ಹಿಡುವಳಿ ಇದೆಯೋ ಅದನ್ನು ಗುರುತಿಸಿ ಆ ಜಮೀನನ್ನು ಸರ್ಕಾರ ವಾಪಸ್ ತೆಗೆದುಕೊಂಡು ಹಂಚುವ ವ್ಯವಸ್ಥೆ ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, 1953ನೇ ಇಸವಿಯಲ್ಲಿ ಪ್ರಥಮವಾಗಿ ಕಟ್ಟಿದಂಥ ತುಂಗಭದ್ರ ಅಣೆಕಟ್ಟಿನಿಂದ ಮುಳುಗಡೆಯಾದ ಪ್ರದೇಶದಿಂದ ಬಂದಂಥವರು ನಾವು. ಆಗ, ನಮಗೆ ಒಂದು ಎಕರೆಗೆ 4 ರೂಪಾಯಿ 6 ಅಣೆಯಿಂದ

ಮ್ಯಾಕ್ಸಿಮಮ್ 80 ರೂಪಾಯಿವರೆಗೆ ಕೊಟ್ಟರು. ಯಾವುದೇ ಒಂದು ಪ್ರಗತಿಯಾಗತಕ್ಕಂಥ ಕೆಲಸಗಳು ನಡೆದಾಗ ಯಾರಾದರೂ ಕೆಲವರು ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಇದಕ್ಕೆ ಡೆಪ್ರಿಸಿಯೇಷನ್ ಕೊಡಬಾರದೆಂದು ಇದ್ದರೂ ಕೂಡ 200 ಕೋಟಿ ರೂಪಾಯಿಗಳನ್ನು ಒಂದೇ ಸಲ ಕೊಟ್ಟಿದ್ದೇವೆ. ಆಮೇಲೆ, ಮುಳುಗಡೆಯಾದ ಹಳ್ಳಿಗಳವರಿಗೆ ಜಲಾನಯನದ ಕೆಳಗಡೆ ನೀರಾವರಿ ಭೂಮಿ ಕೊಡುತ್ತೇವೆಂದರೆ ಯಾರೂ ಅಲ್ಲಿ ಬರುವುದಕ್ಕೆ ಸಿದ್ಧರಿರುವುದಿಲ್ಲ. ನಮ್ಮ ಹಳ್ಳಿಗಳು ಮುಳುಗಡೆಯಾದಂಥ ಸಂದರ್ಭದಲ್ಲೂ ನಮ್ಮನ್ನು ತುಂಗಭದ್ರ ಅಣೆಕಟ್ಟಿನ ಕೆಳಗಡೆ ಹೋಗಿ ಎಂದು ಹೇಳಿದರು, ಆಗ ಮುಳುಗಡೆಯಾದ 33 ಹಳ್ಳಿಯವರ ಪೈಕಿ ಎರಡು ಹಳ್ಳಿಯವರನ್ನು ಬಿಟ್ಟರೆ ಉಳಿದವರ್‍ಯಾರೂ ತುಂಗಭದ್ರಾ ಜಲಾನಯನ ಕೆಳಗಡೆ ಭೂಮಿಯನ್ನು ತೆಗೆದುಕೊಳ್ಳಲಿಲ್ಲ. ಮುಳುಗಡೆಯಾದ ಪ್ರದೇಶದಿಂದ ಮೂರು, ನಾಲ್ಕು ಕಿಲೋಮಿಟರ್‌ಗಳ ಎತ್ತರದ ಪ್ರದೇಶಗಳಲ್ಲಿ ತಮ್ಮ ವಸತಿಯನ್ನು ಮಾಡಿಕೊಂಡರು.

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಅಧ್ಯಕ್ಷರೆ, ಸರ್ವೇ ಮಾಡಿರುವ ಪ್ರಕಾರ 176 ಹಳ್ಳಿಗಳು ಇದರಿಂದ ಮುಳುಗಡೆಯಾಗುತ್ತವೆಂದು ಹೇಳಲಾಗಿದೆ. ಆದರೆ, ಇಲ್ಲಿ 200 ಹಳ್ಳಿಗಳಿಗಿಂತ ಹೆಚ್ಚು ಮುಳುಗಡೆಯಾಗುವ ಸಂಭವವಿದೆ. ಇವರು ಮಾಡಿರುವ ಸರ್ವೆಯಲ್ಲಿ ತಪ್ಪು ಇದೆಯೆಂದು ನನಗನ್ನಿಸುತ್ತದೆ. ಈ ಡ್ಯಾಮ್‌ನ ಎತ್ತರವನ್ನು 509 ಮೀಟರ್‌ವರೆಗೆ ಹೆಚ್ಚಿಸಿದ್ದರಿಂದ ಮುಧೋಳ್ ತಾಲ್ಲೂಕಿನಲ್ಲಿ 10 ಹಳ್ಳಿಗಳು ಬ್ಯಾಕ್ ವಾಟರ್‌ನಲ್ಲಿ ಮುಳುಗಿವೆ. ಆದುದರಿಂದ ಘಟಪ್ರಭಾ, ಮಲಪ್ರಭಾ ಮತ್ತು ಕೃಷ್ಣಾ ಎಡ ದಂಡೆ ಹಾಗೂ ಬಲದಂಡೆ ಪ್ರಾಜೆಕ್ಟ್‌ನಿಂದ ಎಷ್ಟು ಹಳ್ಳಿಗಳು ಮುಳುಗಡೆಯಾಗುತ್ತದೆಂಬ ಬಗ್ಗೆ ಇನ್ನೊಮ್ಮೆ ಸರ್ವೇ ಮಾಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯಾವುದೇ ಸಮಸ್ಯೆಗಳಿದ್ದರೂ ಈಗಲೇ ಸರಿ ಮಾಡಿಕೊಡಬೇಕು, ಯೋಜನೆ ಮುಗಿದ ನಂತರ ಯಾರೂ ಆ ಕಡೆ ಬಂದು ಕೆಲಸವನ್ನು ಮಾಡುವುದಿಲ್ಲ. ಆದುದರಿಂದ ಈ ಕೂಡಲೇ ಸರ್ವೆ ಡಿಪಾರ್ಟ್‌ಮೆಂಟಿನ ಒಂದೆರಡು ಡಿವಿಷನ್‌ಗಳನ್ನು ಮಾಡಿ ಪುನರ್ ಸರ್ವೇ ಮಾಡುವ ಕೆಲಸ ಮಾಡಬೇಕು. ಇಲ್ಲದೇ ಇದ್ದರೆ, ಹಿಂದೆ ಸರ್ವೇ ಮಾಡಿರುವ ಪ್ರಕಾರ ಯಾವ ಹಳ್ಳಿಗಳು ಮುಳುಗಡೆಯಾಗುತ್ತವೊ ತಮ್ಮ ಹತ್ತಿರ ಏನು ಮಾಹಿತಿ ಇದೆಯೋ ಆ ಜನರಿಗೆ ಮಾತ್ರ ಕಾಂಪನ್‌ಸೇಷನ್ ಸಿಕ್ಕಿ ಸರ್ವೆಯಲ್ಲಿ ಸಿಗದೇ ಇರತಕ್ಕಂಥ ಮುಳುಗಡೆಯಾಗುವ ಪ್ರದೇಶದ ಜನರಿಗೆ ಏನೂ ಸಿಗದೆ ಅವರು ಸಾಯುವಂಥ ಮತ್ತು ಅವರು ತಮ್ಮ ಇಡೀ ಜೀವನದುದ್ದಕೂ ಕಣ್ಣೀರು ಹಾಕುವಂಥ ಪ್ರಸಂಗ ಬರುತ್ತದೆ. ಆಮೇಲೆ, ಘಟಪ್ರಭಾ ರೈಟ್ ಬ್ಯಾಂಕ್ ಕೆನಾಲ್ ಅನ್ನು 94 ಕಿಲೋಮಿಟರ್‌ವರೆಗೆ ಮಾಡಿರುವ ಹಾಗೆಯೇ ಉಳಿದ 202 ಕಿಲೋಮೀಟರ್‌ವರೆಗೆ ಕೆನಾಲ್ ಮಾಡುವ ಸಲುವಾಗಿ ಪ್ರತಿ ವರ್ಷ 200 ಕೋಟಿ ರೂಪಾಯಿಗಳನ್ನು ಸರ್ಕಾರ ಒದಗಿಸಬೇಕು. ಇಷ್ಟು ಹಣವನ್ನು ಸರ್ಕಾರ ಒದಗಿಸದೇ ಇದ್ದರೆ 2 ಸಾವಿರ ಇಸವಿಯೊಳಗಾಗಿ 202 ಕಿಲೋಮೀಟರ್ ಉದ್ದದ ಕೆನಾಲ್‌ನ್ನು ಮಾಡುವುದಕ್ಕೆ

ಸಾಧ್ಯವಾಗುವುದಿಲ್ಲ; ಮತ್ತು ಆ ಭಾಗದ ಜನರು 20-30 ವರ್ಷಗಳಿಂದ ನೀರು ಬರುತ್ತದೆಂದು ಏನು ಕ್ರಮ ಕಾಣುತ್ತಿದ್ದಾರೋ ಆ ಕನಸನ್ನು ನನಸು ಮಾಡುವುದಕ್ಕಾಗುವುದಿಲ್ಲ. ಇನ್ನು ಮುಳವಾಡ ಏತ ನೀರಾವರಿ ಯೋಜನೆ ಬಗ್ಗೆ ಹೇಳುವುದಾದರೆ, ಈ ಯೋಜನೆಯ ಎರಡನೇ ಹಂತವನ್ನು ನೀರಿನ ಹಂಚಿಕೆ ಕಾರ್ಯ ಮುಗಿದ ಮೇಲೆ ಮಾಡಲಾಗುತ್ತದೆಂದು ಹೇಳಿದ್ದಾರೆ. ಮೊದಲನೇ ಹಂತದ ಯೋಜನೆಯಲ್ಲಿ ಸುಮಾರು 30 ಸಾವಿರ ಎಕರೆಗೆ ಈಗಾಗಲೇ ನೀರಾವರಿಯಾಗುತ್ತಿದ್ದು ಅದರಿಂದ ಕೇವಲ ಏಳೆಂಟು ಹಳ್ಳಿ ಜನರಿಗೆ ಮಾತ್ರ ಉಪಯೋಗವಾಗುತ್ತಿದೆ ಅಷ್ಟೇ. ಆದುದರಿಂದ, ಎರಡನೇ ಹಂತದ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಯಾವುದೇ ತೊಂದರೆ ಇಲ್ಲವೆಂದು ಸರ್ಕಾರಕ್ಕೆ ಹೇಳುತ್ತೇನೆ. ಆಮೇಲೆ, ಕೃಷ್ಣಾ ಪ್ರಾಜೆಕ್ಟ್ ಬೇಸಿನ್‌ನಲ್ಲಿ ಬರತಕ್ಕಂಥ ಸಣ್ಣ ನೀರಾವರಿ ಕೆರೆಗಳನ್ನು ನೂರಾರು ವರ್ಷಗಳ ಹಿಂದೆಯೇ ಕಟ್ಟಿದ್ದು ಅವುಗಳಲ್ಲಿ ಹೂಳು ತುಂಬಿಕೊಂಡು ನೀರಿನ ಸ್ಟೋರೇಜ್ ಕೆಪ್ಯಾಸಿಟಿ ಇಲ್ಲದ ಹಾಗೆ ಆಗಿದೆ. ಇಂಥ ಸ್ಟೋರೇಜ್ ಕೆಪಾಸಿಟಿ ಇಲ್ಲದೆ ಕೆರೆಗಳನ್ನು ನೀರಿನ ಹಂಚಿಕೆಯಲ್ಲಿ ಲೆಕ್ಕಕ್ಕೆ ತೆಗೆದುಕೊಂಡು ನಮ್ಮ ಪಾಲಿಗೆ ನೀರು ಇಲ್ಲವೆಂದು ಹೇಳುವುದರ ಬದಲಾಗಿ ಅವುಗಳ ಬಗ್ಗೆ ಮತ್ತೊಮ್ಮೆ ಸರ್ವೇ ಮಾಡಿಸಿ ಮುಳವಾಡ ಏತ ನೀರಾವರಿ ಯೋಜನೆ, ರಾಮಪುರ ಏತ ನೀರಾವರಿ ಯೋಜನೆ, ಇಂಡಿ ಏತ ನೀರಾವರಿ ಯೋಜನೆಗಳನ್ನು ಮೊದಲನೇ ಹಂತದ ಕೆಲಸದಲ್ಲೇ ಮುಗಿಸಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಜೊತೆಯಲ್ಲಿ ಸಣ್ಣ ನೀರಾವರಿಯಲ್ಲಿ ಬರುವ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಪೈಪ್ ಲೈನ್‌ಗಳನ್ನು ಹಾಕಿ, ಎಲೆಕ್ಟ್ರಿಕ್ ಮೋಟರ್‌ಗಳನ್ನು ಅಳವಡಿಸಿ ಮೇಂಟೇನ್ ಮಾಡುವುದು ಬಹಳ ಕಷ್ಟವಾಗುತ್ತದೆ. ಆದುದರಿಂದ ಭೀಮಾ ನದಿ, ಘಟಪ್ರಭಾ ನದಿ ಮತ್ತು ಮಲಪ್ರಭಾ ನದಿಗಳಿಗೆ ಅಡ್ಡಲಾಗಿ ಎಲ್ಲೆಲ್ಲಿ ಬ್ಯಾರೇಜ್‌ಗಳನ್ನು ಕಟ್ಟುವುದಕ್ಕೆ ಅವಕಾಶವಿದೆಯೋ ಅಲ್ಲೆಲ್ಲಾ ಮಾಡಿದರೆ, ಪೈಪ್ ಲೈನ್‌ಗಳನ್ನು ಹಾಕಿಕೊಳ್ಳದೆ, ಎಲೆಕ್ಟ್ರಿಕ್ ಮೋಟರ್‌ಗಳನ್ನು ಹಾಕಿಸದೆ, ಮತ್ತು ಯಾವುದೇ ಮೇನ್‌ಟೇನೆನ್ಸ್ ಇಲ್ಲದೆ ಸುಲಭವಾಗಿ ನೀರಾವರಿಯಾಗುತ್ತದೆ. ಬ್ಯಾರೇಜ್‌ಗಳಲ್ಲಿ ನೀರನ್ನು ನಿಲ್ಲಿಸಿದ್ದೇ ಆದರೆ, ರೈತರುಗಳು ತಮ್ಮ ಖರ್ಚಿನಲ್ಲೇ ನೀರನ್ನು ಬಳಸಿಕೊಳ್ಳುವುದಕ್ಕೆ ಏರ್ಪಾಡು ಮಾಡಿಕೊಳ್ಳುತ್ತಾರೆ. ಮತ್ತು ಇದರಿಂದ ಹೆಚ್ಚಿನ ಖರ್ಚು ಆಗುವುದಿಲ್ಲ ಹಾಗೂ ಸರ್ಕಾರಕ್ಕೆ ಭಾರ ಕೂಡ ಆಗುವುದಿಲ್ಲ. ಇದನ್ನು ಸರ್ಕಾರ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆಮೇಲೆ, ನೀರಾವರಿ ಮೇನ್‌ಟೆನೆನ್ಸ್‌ಗಾಗಿ ಅಂದರೆ, ಹೂಳು ತೆಗೆಸುವುದಕ್ಕಾಗಿ, ಕಾಲುವೆ ದುರಸ್ತಿ ಮಾಡುವುದಕ್ಕಾಗಿ ಹೀಗೆ ಮುಂತಾದ ಕೆಲಸಗಳನ್ನು ಮಾಡಿಸುವುದಕ್ಕೆ ಒಂದು ಎಕರೆಗೆ 130 ರೂಪಾಯಿಗಳಂತೆ ಮೇನ್‌ಟೆನೆನ್ಸ್ ಹಣವನ್ನು ಕೊಡಲಾಗುತ್ತಿದೆ. ಇಷ್ಟು ಕಡಿಮೆ ಹಣದಿಂದ ಸರಿಯಾಗಿ ಮೇನ್‌ಟೆನೆನ್ಸ್ ಮಾಡುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ ಕನಿಷ್ಟಪಕ್ಷ ಅದರ ಮೊತ್ತವನ್ನು 250 ರೂಪಾಯಿಗಳವರೆಗಾದರೂ ಏರಿಸಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಷಯವೇನೆಂದರೆ,

ಬಡವರುಗಳಿಗೆ ಅನುಕೂಲ ಮಾಡಬೇಕೆನ್ನುವ ದೃಷ್ಟಿಯಿಂದ ವಿವಿಧ ಯೋಜನೆಗಳನ್ನು ಮಾಡಿ ಸ್ಪೆಷಲ್ ಕಾಂಪೊನೆಂಟ್‌ನಿಂದ 18 ಪರ್-ಸೆಂಟ್ ಹಣವನ್ನು ಎಲ್ಲಾ ಇಲಾಖೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ಈ ಸ್ಪೆಷಲ್ ಕಾಂಪೊನೆಂಟ್ ಹಣವನ್ನು ತೋಟಗಾರಿಕೆ, ಮೀನುಗಾರಿಕೆ ಇಲಾಖೆ ಅಂಥ ಎಲ್ಲಾ ಇಲಾಖೆಗಳಿಗೂ ಹಂಚಲಾಗುತ್ತದೆ. ರೀತಿ ಎಲ್ಲಾ ಇಲಾಖೆಗಳಿಗೂ ಹಣವನ್ನು ಕೊಡುವ ಬದಲು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್ ಇಲಾಖೆ ಮುಖಾಂತರ ಮಾತ್ರವೇ ಈ ಹಣವನ್ನು ಖರ್ಚು ಮಾಡುವಂಥ ವ್ಯವಸ್ಥೆಯನ್ನು ಜಾರಿಗೆ ತಂದರೆ ಆಗ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಅನುಕೂಲ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲಾ ಇಲಾಖೆಗಳಿಗೂ ಹಣವನ್ನು ಹಂಚಿದರೆ ಏನಾಗುತ್ತದೆಂದು ಒಂದು ಉದಾಹರಣೆಯನ್ನು ತಮಗೆ ಕೊಡುತ್ತೇನೆ. ಸ್ಪೆಷಲ್ ಕಾಂಪೊನೆಂಟ್ ಹಣವನ್ನು ತೋಟಗಾರಿಕೆ ಇಲಾಖೆಗೆ ಕೊಡುತ್ತಾರೆಂದು ಇಟ್ಟುಕೊಳ್ಳಿ, ಈ ಹಣದಿಂದ ನರ್ಸರಿಯಲ್ಲಿ ಸರಿಯಾಗಿ ನೀರು ಹಾಕಿ ಬೆಳೆಸಿದ ಸಸಿಗಳನ್ನು ತರುತ್ತಾರೆ, ಆ ಸಸಿಗಳನ್ನು ತೋಟಗಾರಿಕೆ ಕಛೇರಿಯ ಹತ್ತಿರ ತಂದಿಟ್ಟು ತಿಂಗಳಾನುಗಟ್ಟಲೆ ಅವುಗಳಿಗೆ ನೀರು ಕೊಡದೆ ಗೊಬ್ಬರ ಕೊಡದೆ ಮತ್ತು ವಿತರಣೆ ಮಾಡದೆ ಹಾಗೇ ಇಟ್ಟಿರುತ್ತಾರೆ. ವಿತರಣೆ ಮಾಡುವ ಹೊತ್ತಿಗೆ ಆ ಸಸಿಗಳ ಬೇರುಗಳೆಲ್ಲಾ ಒಣಗಿ ಹೋಗಿರುವುದರಿಂದ ಅವುಗಳು ಮತ್ತೆ ಬರುವುದಿಲ್ಲ. ಆದ್ದರಿಂದ, ಈ ರೀತಿಯಾಗಿ ಸ್ಪೆಷಲ್ ಕಾಂಪೊನೆಂಟ್‌ನಲ್ಲಿ ಒದಗಿಸಿರುವ ಹಣ ಅಪವ್ಯಯವಾಗುತ್ತಿದೆ. ಪರಿಶಿಷ್ಟ ಜಾತಿ ಜನಾಂಗದವರು ಹೇಗಾದರೂ ಕೂಲಿ ನಾಲಿ ಮಾಡಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಆದರೆ ಅವರಿಗೆ ವಾಸಿಸಲಿಕ್ಕೆ ಮನೆ ಮಾತ್ರ ಇಲ್ಲದಂತಾಗಿದೆ ಇದು ಬಹಳ ಮುಖ್ಯವಾದದ್ದು. ಆ ಜನಾಂಗ ಮನೆ ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ಎಲ್ಲ ಹಣವನ್ನು ತೆಗೆದು ಪರಿಶಿಷ್ಟ ಜಾತಿ ಜನಾಂಗದವರಿಗೆ ಮನೆ ಕಟ್ಟುವುದಕ್ಕೆ ಮತ್ತು ಅವರಿಗೆ ಶಿಕ್ಷಣ ಕೊಡಿಸಲಿಕ್ಕೆ ಹೆಚ್ಚು ಖರ್ಚನ್ನು ಮಾಡಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ. ತಾವು ನನಗೆ ನಿಗದಿ ಮಾಡಿದಂತಹ ಅವಧಿಯೊಳಗೆ ಮುಗಿಸಬೇಕೆಂದು ನಾನು ವಿಚಾರ ಮಾಡಿದ್ದೆ. ಆದರೆ ನಡುವೆ ನನ್ನ ಮಿತ್ರರು ಮಧ್ಯ ಪ್ರವೇಶ ಮಾಡಿದ್ದರಿಂದ ಸ್ವಲ್ಪ ತೊಂದರೆಯಾಯಿತು. ಇನ್ನು ಬಹಳ ಮಹತ್ವವಾದ ಕೆ.ಇ.ಬಿ. ಬಗ್ಗೆ ಕೆಲವು ಮಾತನ್ನು ಹೇಳುತ್ತೇನೆ. ರೈತರು ಪಂಪ್‌ಸೆಟ್ ಹಾಕಿಕೊಂಡರೆ 10 ಹೆಚ್.ಪಿ.ವರೆಗೆ 300 ರೂಪಾಯಿ ಚಾರ್ಜ್ ಮಾಡುತ್ತಾರೆ. ಹತ್ತು ಹೆಚ್.ಪಿ.ಗಿಂತ ಹೆಚ್ಚಿನದಾದರೆ ಪ್ರತಿ ಯೂನಿಟ್‌ಗೇ ಇಂತಿಷ್ಟು ಎಂದು ಚಾರ್ಜ್ ಮಾಡುತ್ತಾರೆ. ಎರಡು ಮೂರು ಎಕರೆ ಜಮೀನು ಇಟ್ಟುಕೊಂಡಿರುವ ಸಣ್ಣ ಸಣ್ಣ ರೈತರು ಸಾಮೂಹಿಕ ಲಿಫ್ಟ್ ಇರಿಗೇಷನ್ ಏತ ನೀರಾವರಿ ಮಾಡಿಕೊಂಡವರಿಗೆ ಕೂಡ ಹತ್ತು ಹೆಚ್.ಪಿ. ಇರುವ ರೈತರಿಗೇನು ಚಾರ್ಜ್ 300 ರೂಪಾಯಿ ಮಾಡುತ್ತೀರಿ ಅದೇ ರೀತಿ ಅವರಿಗೂ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇವೆ. ನನ್ನ ಕ್ಷೇತ್ರದಲ್ಲಿ ಗಣಿ ಇಲಾಖೆಯವರ ಕಾಟ ಬಹಳ ಜಾಸ್ತಿಯಾಗಿದೆ. ಸುಮಾರು 20 ವರ್ಷಗಳ ಹಿಂದೆ ಎಂ.ಎಂ.ಎಲ್ ಲೈಮ್ ಸ್ಟೋನ್ ಇರುವಂತಹ ರೈತರ ಜಮೀನು ಏನು ಇರುತ್ತದೆ ಆ ಜಮೀನಿಗೆ ರಿಸರ್ವ್ ಏರಿಯಾ ಎಂದು ಮಾಡಿಕೊಂಡಿದ್ದಾರೆ. ಪ್ರತಿಯೊಬ್ಬ ರೈತರ

ರೆಕಾರ್ಡ್ಸ್ ಆಫ್ ರೈಟ್ಸ್‌ನಲ್ಲಿ ಎಂ.ಎಂ.ಎಲ್ ಎಂದು ಹೆಸರು ಬರೆದಿರುತ್ತಾರೆ. ಅವರು ಅದನ್ನು ಮಾರಾಟ ಮಾಡುವ ಹಾಗಿಲ್ಲ ಸುಣ್ಣದ ಕಲ್ಲನ್ನು ತೆಗೆದು ವ್ಯವಹಾರ ಮಾಡುವ ಹಾಗಿಲ್ಲ ಮತ್ತೆ ಏನನ್ನೂ ಬೆಳೆಯುವ ಹಾಗಿಲ್ಲ. ಸರಕಾರದ ಹೆಸರಿನಿಂದ ರಿಸರ್ವ್ ಮಾಡಿಟ್ಟುಕೊಂಡಿದ್ದಾರೆ. ರೈತರು ಯಾರಾದರೂ ನಾವು ಸ್ವಂತ ಮಾಡುತ್ತೇವೆಂದು ಹೇಳಿದರೆ ನೀವು ಮಾಡುವುದಕ್ಕಾಗುವುದಿಲ್ಲ ಅದನ್ನು ತೆಗೆದು ನಮಗೇ ಕೊಡಬೇಕು ಎಂದು ಹೇಳುತ್ತಾರೆ. ಅವರು ಕೊಡುವ ಹಣದಿಂದ ಅಲ್ಲಿ ಅದನ್ನು ತೆಗೆದುಕೊಡುವುದಕ್ಕೆ ಸಾಧ್ಯವಿಲ್ಲ. ನಿಮಗೆ ಎಷ್ಟು ಏರಿಯಾ ಬೇಕಾಗಿದೆ ಅದಕ್ಕೆಲ್ಲಾ ಹಣವನ್ನು ಕೊಟ್ಟು ಪರ್ಚೇಸ್ ಮಾಡಬೇಕು. ಇಲ್ಲದೇ ಹೋದರೆ ಆ ರೈತರ ಜಮೀನನ್ನು ಅವರಿಗೇ ಬಿಟ್ಟು ಕೊಡಬೇಕು. ಇಷ್ಟು ಹೇಳಿ ನನಗೆ ಅವಕಾಶ ಕೊಟ್ಟದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ರಾಮಸ್ವಾಮಿಯವರೇ, ತಾವು 6-20ಕ್ಕೆ ಮುಗಿಸಿ ಇನ್ನು 11 ಜನ ಸದಸ್ಯರು ಮಾತನಾಡುವವರಿದ್ದಾರೆ. 2-3 ಜನರು ಸದನದಲ್ಲಿ ಮಾತನಾಡಿಲ್ಲ. ಅವರು ಹೊಸಬರಿದ್ದಾರೆ. 6-25ಕ್ಕೆ ಮುಗಿಸಿ.

+ ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು): ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಸರಕಾರ ಮಂಡಿಸಿರತಕ್ಕಂತಹ ಬೇಡಿಕೆಗಳನ್ನು ನಾನು ವಿರೋಧಿಸಿ 3-4 ವಿಚಾರಗಳ ಬಗ್ಗೆ ಸಂಕ್ಷಿಪ್ತವಾಗಿ ಸರಕಾರದ ಗಮನ ಸೆಳೆಯುತ್ತೇನೆ. ನಾನು 6-25ಕ್ಕೆ ನನ್ನ ಭಾಷಣವನ್ನು ಮುಗಿಸುತ್ತೇನೆ. ಈ 3-4 ವಿಚಾರಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತೇನೆ ಸರಕಾರ ಕೂಡ ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ವಿನಂತಿಸುತ್ತೇನೆ. ಪ್ರತಿ ವರ್ಷ ಸರಕಾರ ವರ್ಗಾವಣಾ ಪಾಲಿಸಿಯನ್ನು ಮಾಡುತ್ತದೆ. ಈ ವರ್ಗಾವಣೆ ಬಹುತೇಕ ಭ್ರಷ್ಟಾಚಾರಕ್ಕೆ ಶೋಷಣೆಗೆ ಕೂಡ ಮೂಲ ಕಾರಣವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲವೆಂದು ನನ್ನ ಅನಿಸಿಕೆ. ಇದು ಬರೀ ಈ ಕಾಲದಲ್ಲಿ ಮಾತ್ರ ಆಗುತ್ತಿದೆ ಎಂದು ನಾನು ಹೇಳುತ್ತಿಲ್ಲ. ಇದು ಹಿಂದಿನಿಂದಲೂ ಬೆಳೆದುಕೊಂಡು ಬಂದಿದೆ. ಮತ್ತು ದಿನೇ ದಿನೇ ಬೃಹದಾಕಾರವಾಗಿ ಬೆಳೆಯುತ್ತಿದೆ. ವರ್ಗಾವಣೆಯೇ ಸರಕಾರದ ಮುಖ್ಯ ಕೆಲಸವಾಗಬಾರದು ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇದನ್ನು ನಾವು ಕೂಡ ನೋಡುತ್ತಿದ್ದೇವೆ ಮತ್ತು ತಮಗೆ ಕೂಡ ಗೊತ್ತಿದೆ. ಸುಮಾರು 4-5 ತಿಂಗಳ ಕಾಲ ಬಹುತೇಕ ಮಂತ್ರಿಗಳಿಗೆ ಇನ್ನೇನು ಅಭಿವೃದ್ಧಿ ಕೆಲಸದ ಕಡೆಗೆ ಸಾರ್ವಜನಿಕರ ಕೆಲಸದ ಕಡೆಗೆ ಗಮನಹರಿಸುವುದಕ್ಕಾಗುವುದಿಲ್ಲ. ಬರೇ ವರ್ಗಾವಣೆ ಪತ್ರದ ಮೇಲೆ ಬರೆದುಕೊಂಡು ಆದೇಶ ಮಾಡಿಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ಸ್ಪಷ್ಟವಾದಂತಹ ವರ್ಗಾವಣಾ ನೀತಿಯನ್ನು ಜಾರಿಗೆ ತರಲಿಕ್ಕೆ ಈ ಸರಕಾರಕ್ಕೆ ರಾಜಕೀಯ ಇಚ್ಛಾ ಶಕ್ತಿ ಇದೆಯೇ? ಇವರು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದರು. ಈ ವರ್ಗಾವಣೆ ನೀತಿಯನ್ನು ನಾವು ಕಟ್ಟುನಿಟ್ಟಾಗಿ ಮಾಡುತ್ತೇವೆ. ಐ.ಎ.ಎಸ್ ಕೆ.ಎ.ಎಸ್ ಅಧಿಕಾರಿಗಳನ್ನು ಮಾತ್ರ ವಿಧಾನಸೌಧದಿಂದ

ಮಾಡುತ್ತೇವೆ ಬೇರೆ ಹಂತದ ನೌಕರರ ವರ್ಗಾವಣೆಯನ್ನು ಆಯಾಯ ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲೆಯ ಇಲಾಖೆಯ ಮುಖ್ಯಾಧಿಕಾರಿಗಳು ಮಾಡುತ್ತಾರೆ ಎಂದು ಹೇಳಿದರು. ಆದರೆ ಇವತ್ತು ಆಗುತ್ತಿರತಕ್ಕಂಥಾದ್ದು ಏನು ಅನೇಕ ಹುದ್ದೆಗಳಿಗೆ ಇವತ್ತು 1-2-3-4-5 ಲಕ್ಷವೆಂದು ರೇಟ್‌ಗಳನ್ನು ಫಿಕ್ಸ್ ಮಾಡಿದ್ದು ಅದರಂತೆ ವರ್ಗಾವಣೆಯಾಗುತ್ತಿರತಕ್ಕಂಥಾದ್ದು ಸರಕಾರಕ್ಕೆ ಗೊತ್ತಿಲ್ಲವೇ?

ಮಾನ್ಯ ಸದಸ್ಯರು: ಈ ವರ್ಷ ವರ್ಗಾವಣೆ ಇಲ್ಲವೆಂದು ಬೋರ್ಡ್ ಹಾಕಿದ್ದಾರೆ ಎಷ್ಟು ವರ್ಗಾವನ್ನು ಮಾಡಿದ್ದಾರೆಂಬುದನ್ನು ತಾವು ಹೇಳಬೇಕು. ಆ ಬೋರ್ಡ್ ಅನ್ನಾದರೂ ತೆಗೆಯಬೇಕು.

ಶ್ರೀ ಎ.ಟಿ.ರಾಮಸ್ವಾಮಿ: ಬೋರ್ಡ್ ಹಾಕಿದ್ದಾರಾ? ಸರಕಾರಕ್ಕೆ ಇದು ಗೊತ್ತಿದ್ದರೂ ಕಣ್ಣು ಮುಚ್ಚಿಕೊಂಡು ಏಕೆ ಕುಳಿತಿದೆ? ನೀವೇನಾದರೂ ಇದರಲ್ಲಿ ಶರೀಕ್ ಆಗಿದ್ದೀರಾ? ನಾವೆಲ್ಲರೂ ಇದರಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕು. ನೀವೇನಾದರೂ ಇದರಲ್ಲಿ ಶಾಮೀಲು ಆಗಿದ್ದೀರಾ ಶರೀಕ್ ಆಗಿದ್ದೀರಾ ಎಂದು ಕೇಳಬೇಕಾಗುತ್ತದೆ. ಆ ದಿಕ್ಕಿನಲ್ಲಿ ಈ ವರ್ಗಾವಣಾ ನೀತಿಯನ್ನು ಎಲ್ಲಿಯವರೆಗೆ ನೀವು ಕಟ್ಟುನಿಟ್ಟಾಗಿ ಮಾಡಿ ನೌಕರರು ವರ್ಗಾವಣೆಗೆಂದು ನಮ್ಮ ನಿಮ್ಮ ಹಿಂದೆ ವಿಧಾನಸೌಧದ ಮೆಟ್ಟಿಲನ್ನು ಹತ್ತುವುದನ್ನು ತಪ್ಪಿಸುವುದಿಲ್ಲ ಅಲ್ಲಿಯವರೆಗೆ ನೀವು ಶೋಷಣೆಯನ್ನೂ ಕೂಡ ತಪ್ಪಿಸುವುದಕ್ಕಾಗುವುದಿಲ್ಲ. ವರ್ಗಾವಣೆ ಕೆಲಸದಿಂದಾಗಿ ಸರಿಯಾಗಿ ಸಮರ್ಪಕವಾಗಿ 5-6 ತಿಂಗಳು ಕೆಲಸವಾಗುವುದಿಲ್ಲ. ವರ್ಗಾವಣೆಗಾಗಿ ಸುತ್ತಾಡುತ್ತಿರುತ್ತಾರೆ. ಆ ದಿಕ್ಕಿನಲ್ಲಿ ಕಟ್ಟುನಿಟ್ಟಾಗಿ ಒಂದು ವರ್ಗಾವಣಾ ನೀತಿಯನ್ನು ಜಾರಿಗೆ ತನ್ನಿ ಎನ್ನುವ ಮಾತನ್ನು ಸರಕಾರದ ಗಮನಕ್ಕೆ ತಮ್ಮ ಮೂಲಕ ಸರಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಅದರ ಜೊತೆಗೆ ನಾವೆಲ್ಲರೂ ಇಂದು ಅನೇಕ ಪತ್ರಿಕೆಗಳನ್ನು ಓದುತ್ತಿರುತ್ತೇವೆ. ರಾಜಕಾರಣಿಗಳು ಅಂದರೆ ಭ್ರಷ್ಟರೂ ವಂಚಕರು, ಮೋಸಗಾರರು ಎನ್ನುವಂತೆ ಬರೆಯುತ್ತಾರೆ. ನಾನು ಅವರಲ್ಲಿ ಕೈ ಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದರಲ್ಲಿ ಒಳ್ಳೆಯವರೂ ಕೂಡ ಇದ್ದಾರೆ ಆದುದರಿಂದ ಎಲ್ಲರೂ ಭ್ರಷ್ಟರು ಎಂದು ತಾವು ಬರೆಯಬೇಡಿ. ಯಾರು ಭ್ರಷ್ಟರು ಇದ್ದಾರೆ ಅವರ ಮೇಲೆ ಬೇಕಾದರೆ ಭ್ರಷ್ಟರು ಎಂದು ಬರೆಯಿರಿ. ಹೀಗೆ ಬರೆಯುತ್ತಾ ಹೋದರೆ ಒಳ್ಳೆಯವರು ಸಾರ್ವಜನಿಕ ಕ್ಷೇತ್ರಕ್ಕೆ ಬರುವುದಕ್ಕಾಗುವುದಿಲ್ಲ ಅವರು ಮನೆಯಲ್ಲಿ ಉಳಿದುಕೊಳ್ಳುತ್ತಾರೆ.

ಅಧ್ಯಕ್ಷರು: ಅವರು ಹೇಳತಕ್ಕಂಥಾದ್ದು ಏನೆಂದರೆ ನಾವು ಇವತ್ತು ಒಳ್ಳೆಯವರೆಂದು ಬರೆಯುತ್ತೇವೆ. ನಾಳೆ ನೀವು ಕೆಟ್ಟು ಹೋಗಬಹುದು. ನಾವು ಬರೆಯುವುದನ್ನು ಬರೆಯುತ್ತೇವೆ ನೀವು ಡಿನ್ನೈಯಲ್ ಕೊಡುತ್ತಾ ಹೋಗಿ ಎಂದು ಹೇಳುತ್ತಾರೆ.

ಶ್ರೀ ಎ.ಟಿ.ರಾಮಸ್ವಾಮಿ: ಕೆಟ್ಟವರಾದರೆ ಕೆಟ್ಟವರೆಂದು ಬರೆಯಲಿ. ಎಲ್ಲರನ್ನೂ

ಸೇರಿಸಿ ಬರೆಯುವುದು ಬೇಡ. ಆ ದಿಕ್ಕಿನಲ್ಲಿ ವಿಚಾರ ಮಾಡಬೇಕು. ಈ ಭ್ರಷ್ಟತೆಯಿಂದ ಸಾಮಾನ್ಯ ಜನರು ಏನು ಇದ್ದಾರೆ ಕಡು ಬಡವ ನೆಲ ಹಂತದಲ್ಲಿ ಆಗುವಂತಹ ಅವರ ಶೋಷಣೆಯನ್ನು ತಪ್ಪಿಸುವುದಕ್ಕೆ ಆಗಿಲ್ಲ. ಎಲ್ಲರೂ ಬೊಗಳೆ ಮಾತನ್ನು ಹೇಳಿಕೊಳ್ಳಬಹುದು. ನಮ್ಮದು ನುಡಿದಂತೆ ನಡೆಯುವ ಸರಕಾರವೆಂದು ಹೇಳಿಕೊಳ್ಳಬಹುದು. ನಮ್ಮ ಸರಕಾರ ಅಧಿಕಾರಕ್ಕೆ ಬಂದರೆ ಲೋಕಾಯುಕ್ತದ ಉಗುರು, ಹಲ್ಲನ್ನು ಚೂಪು ಮಾಡುತ್ತೇವೆ ಈ ಭ್ರಷ್ಟತೆಯನ್ನು ಬುಡ ಸಹಿತ ಬೇರು ಸಹಿತ ಕಿತ್ತು ಎಸೆಯುತ್ತೇವೆ ಎಂದು ಹೇಳಬಹುದು. ಆದರೆ ನೀವೇ ನಿಮ್ಮ ಆತ್ಮವನ್ನು ಮುಟ್ಟಿಕೊಂಡು ಹೇಳಿ ಭ್ರಷ್ಟಾಚಾರ ನಿಂತಿದೆಯೇ? ಮಾನ್ಯ ನಾಗೇಗೌಡರೇ ಅವರ ಆತ್ಮವನ್ನು ಮುಟ್ಟಿಕೊಂಡು ಹೇಳಲಿ. ಅವರ ಇಲಾಖೆಯಲ್ಲಿನ ವಿಚಾರಗಳು ಅವರಿಗೇ ತಿಳಿದಿದೆ. ನೂರಕ್ಕೆ 32 ರೂಪಾಯಿ ನೂರು ಕೋಟಿಗೆ 32 ಕೋಟಿ, 1000 ಕೋಟಿಗೆ 320 ಕೋಟಿ ಹಗಲು ದರೋಡೆಯಾಗುತ್ತಿದೆ. ನಮ್ಮ ಕಡೆ ಅವರು ಇದ್ದಾಗ ಬಹಳ ಚೆನ್ನಾಗಿ ಇದ್ದರು ಒಳ್ಳೆಯ ಹೆಸರು ಮಾಡಿದ್ದರು. ಅದರಲ್ಲೂ ಅವರು ಅನಿಮಲ್ ಹಸ್ಬೆಂಡರಿ ಇಲಾಖೆಯಲ್ಲಿ ರಾಜ್ಯ ಮಂತ್ರಿಯಾಗಿ ತಮ್ಮ ಎದೆ ಮುಟ್ಟಿಕೊಂಡು ನಾನು ಚೆನ್ನಾಗಿ ಕೆಲಸ ಮಾಡಿದ್ದೇನೆಂದು ಇವತ್ತೂ ಕೂಡ ಹೇಳುತ್ತಾರೆ.

6. 10 ಪಿ.ಎಂ

ಇವತ್ತು ಅವರು ಭಾರೀ ನೀರಾವರಿ ಮಂತ್ರಿ ಮತ್ತು ಕ್ಯಾಬಿನೆಟ್ ದರ್ಜೆ ಮಂತ್ರಿಯಾಗಿದ್ದಾರೆ, ಆತ್ಮ ಶೋಧನೆ ಮಾಡಿಕೊಂಡು ಆ ಹೆಸರು ನನಗೆ ಇದೆಯೋ, ಇಲ್ಲವೋ ಎಂದು ಅವರೇ ಹೇಳಲಿ. ಅದಕ್ಕೆಲ್ಲಾ ನಾವೆಲ್ಲಾ ವ್ಯವಸ್ಥೆ ಮೇಲೆ ಹಾಕಿದ್ದೇವೆಂದು ಹೇಳುತ್ತೇವೆ. ವ್ಯವಸ್ಥೆಯ ಮೇಲೆ ಹಾಕಿ ನಾವು ನಮ್ಮ ಜವಾಬ್ದಾರಿಯಿಂದ ನುಣುಚಿಕೊಂಡು ಹೋಗತಕ್ಕಂಥ ಕೆಲಸವನ್ನು ಯಾರೂ ಕೂಡ ಮಾಡಲಿಕ್ಕೆ ಹೋಗಬಾರದು ಎನ್ನತಕ್ಕಂಥ ಮಾತನ್ನು ಹೇಳಿ ಮತ್ತು ಆ ದಿಕ್ಕಿನಲ್ಲಿ ಯಾರು ಕಟ್ಟ ಕಡೆಯ ಮನುಷ್ಯನಿದ್ದಾನೆ, ಅವನು ನಮ್ಮೆಲ್ಲರಿಗೂ ಕೂಡ ಶಾಪವನ್ನು ಹಾಕುತ್ತಿದ್ದಾನೆ. ಆ ಶಾಪದಿಂದ ತಪ್ಪಿಸಿಕೊಳ್ಳಲು ನಾವು ನೀವು ಎಲ್ಲರೂ ಕೂಡ ರಾಜಕೀಯ ಇಚ್ಛಾಶಕ್ತಿಯನ್ನು ಇಟ್ಟುಕೊಂಡು, ಈ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡದೆ ಹೋದರೆ ಮಾನವಂತರು ಈ ಒಂದು ಸಾರ್ವಜನಿಕ ಕ್ಷೇತ್ರದಲ್ಲಿ, ರಾಜಕಾರಣದಲ್ಲಿ ಕೆಲಸ ಮಾಡಲಿಕ್ಕೆ ತುಂಬ ಕಷ್ಟ ಆಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರದ ಆಡಳಿತದಲ್ಲಿ ದಕ್ಷತೆ, ದಿನೇದಿನೇ ಕುಗ್ಗುತ್ತಿದೆ. ಕಾರಣ ಅಧಿಕಾರಿಗಳು ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನುವಂತಹ ಮನೋಭಾವನೆ ಇವತ್ತು ಸರ್ಕಾರಕ್ಕೆ ಇಲ್ಲ. ಅಧಿಕಾರಿಗಳು ಏನೂ ತಪ್ಪು ಮಾಡಿಲ್ಲವೆಂದು ಅವರನ್ನು ವಹಿಸಿಕೊಂಡು ಬಿಡುತ್ತಾರೆ. ಹಾಗಾಗಿ ಅಧಿಕಾರಿಗಳು ನಿರ್ಲಜ್ಜೆಯಿಂದ ಅದೇ ತಪ್ಪನ್ನು ಮಾಡಿಕೊಂಡು ಅದಕ್ಷತೆಯಿಂದ ಕೆಲಸವನ್ನು ಮಾಡಿಕೊಂಡು ಹೋಗುವುದಕ್ಕೆ ಅವಕಾಶ

ಆಗುತ್ತದೆ ಎನ್ನತಕ್ಕಂಥ ಮಾತನ್ನೂ ಕೂಡ ನಾನು ಈ ಸಂದರ್ಭದಲ್ಲಿ ತಮ್ಮಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. ಉದಾಹರಣೆಗೆ ಹೇಳುವುದಾದರೆ, ನಾನು ನಿಮಗೊಂದು ಹಕ್ಕುಚ್ಯುತಿ ನಿರ್ಣಯವನ್ನು ಕಳುಹಿಸಿಕೊಟ್ಟಿದ್ದೆನು, ಅಂದರೆ, ಸಹಕಾರ ಇಲಾಖೆಯ ಮೇಲೆ ಮಾತನಾಡುವಾಗ ಸಹಕಾರ ಮಂತ್ರಿಗಳು ಉತ್ತರ ಕೊಟ್ಟಿರುವ ಬಗ್ಗೆ ಒಂದು ಹಕ್ಕುಚ್ಯುತಿ ನಿರ್ಣಯ, ಅದು ತಮ್ಮ ಪರಿಶೀಲನೆಯಲ್ಲಿಯೇ ಇದೆ. ನಾನು ಕಳೆದ 15 ದಿವಸದ ಹಿಂದೆ ಸಹಕಾರ ಇಲಾಖೆಯ ಮೇಲೆ ಮಾತನಾಡುತ್ತಾ ಇದ್ದಾಗ ಸಹಕಾರ ಸಚಿವರು ತಪ್ಪು ಮಾಹಿತಿಯನ್ನು ಸದನಕ್ಕೆ ಕೊಟ್ಟರು, ಆ ಹಕ್ಕುಚ್ಯುತಿ ನಿರ್ಣಯವನ್ನು ನಾನು ತಮಗೆ ಕಳುಹಿಸಿಕೊಟ್ಟೆ, ಅದು ಇನ್ನೂ ಕೂಡ ಪರಿಶೀಲನೆ ಮಾಡುತ್ತಿದ್ದೇವೆ ಎಂದು ತಾವು ಹೇಳಿದ್ದೀರಿ, ಈ ರೀತಿಯ ತಪ್ಪು ಮಾಹಿತಿಯನ್ನು ಅಧಿಕಾರಿಗಳ ಮಾತನ್ನು ಕೇಳಿಕೊಂಡು ಸದನಕ್ಕೆ ಕೊಡುತ್ತಾರೆ. ದಾಖಲೆ ಸಹಿತ ಅವರನ್ನು ಕಟ್ಟಿಕೊಂಡು ಹೋದರೆ, ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಇವರಿಗೆ ತಾಕತ್ ಇಲ್ಲವೆಂದು ಹೇಳೋಣವೇ? ಅಥವಾ ಮನಸ್ಸು ಇಲ್ಲವೆಂದು ಹೇಳಬೇಕೇ? ಇವರಿಗೆ ಕೆಪಾಸಿಟಿ ಇಲ್ಲವೆಂದು ಹೇಳಬೇಕೇ? ಈಗ ತಪ್ಪುಮಾಡಿದವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಂಡರೆ ಆ ರೀತಿಯ ತಪ್ಪುಗಳು ಮುಂದೆ ಆಗಲಿಕ್ಕೆ ಸಾಧ್ಯತೆ ಇರುವುದಿಲ್ಲ. ಮತ್ತೊಂದು ಉದಾಹರಣೆ, ನಮ್ಮ ತಾಲ್ಲೂಕಿನಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್‌ರವರ ಕಛೇರಿಯಲ್ಲಿ ಕಳೆದ ವರ್ಷ ಧ್ವಜಾರೋಹಣವನ್ನೇ ಮಾಡಲಿಲ್ಲ, ಸ್ವಾತಂತ್ರ್ಯ ದಿನಾಚರಣೆಯ ದಿವಸವೇ ರಾಷ್ಟ್ರಧ್ವಜವನ್ನು ಧ್ವಜಾರೋಹಣ ಮಾಡಿಲ್ಲ ಸನ್ಮಾನ್ಯ ಅಧ್ಯಕ್ಷರೆ, ಅದನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ, ಅನ್‌ಸ್ಟಾರ್ಡ್ ಆಯಿತು, ಉತ್ತರವನ್ನೂ ಸಹ ಕೊಟ್ಟಿದ್ದಾರೆ, ಏನೆಂದರೆ ಧ್ವಜಾರೋಹಣ ಮಾಡಲಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಕಾರಣ ಏನೆಂದರೆ ಬಂದೋಬಸ್ತ್ ಡ್ಯೂಟಿಗೆ ಹೋಗಿರುವುದರಿಂದ ಧ್ವಜಾರೋಹಣ ಮಾಡಲಿಲ್ಲವೆಂದು ಹೇಳಿದ್ದಾರೆ. ಸರ್ಕಾರದವರು ಕೊಡತಕ್ಕಂಥ ಬೇಜವಾಬ್ದಾರಿಕೆಗೆ, ಹೊಣೆಗಾರಿಕೆ ಇಲ್ಲದೆ ಇರತಕ್ಕಂಥ ಈ ಉತ್ತರ, ಆ ಸರ್ಕಲ್ ಇನ್ಸ್‌ಪೆಕ್ಟರ್‌ರವರು ನನಗೆ ಸರ್ಕಾರದವರು ಧ್ವಜ ಕೊಟ್ಟಿರಲಿಲ್ಲ ಅದಕ್ಕೋಸ್ಕರ ಧ್ವಜವನ್ನು ಹಾರಿಸಲಿಲ್ಲವೆಂದು ಪೇಪರ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಇಂಥದ್ದರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರ ಮುಂದೆ ಬರಲಿಲ್ಲ ಎಂದರೆ...

ಅಧ್ಯಕ್ಷರು: ಅವರು ತಮ್ಮ ಸ್ವಂತದ್ದು ತಂದು ನನ್ನದೇ ಹಾರಿಸುತ್ತೇನೆಂದು ಹಾರಿಸಲಿಲ್ಲ ತಾನೇ; ಏನು ಹಾಸನದಲ್ಲಿ...

ಶ್ರೀ ಎ.ಟಿ.ರಾಮಸ್ವಾಮಿ: ಇಂಥದ್ದರ ಬಗ್ಗೆಯೂ ಸರ್ಕಾರ ಗಮನ ಹರಿಸಲಿಲ್ಲವೆಂದರೆ, ಏನು ಸರ್ಕಾರ ಇದೆಯೋ ಅಥವಾ ಸತ್ತಿದೆಯೋ ಎಂದು ಕೇಳಬೇಕಾಗುತ್ತದೆ.

ಶ್ರೀ ಹೆಚ್.ಎನ್.ನಂಜೇಗೌಡ: ಈ ಸರ್ಕಲ್ ಇನ್ಸ್‌ಪೆಕ್ಟರ್ ಬಗ್ಗೆ ಜಿಲ್ಲಾ

ಅಧಿಕಾರಿಗಳು ವರದಿಯನ್ನು ಕಳುಹಿಸಿದ್ದಾರೆ, ಮತ್ತು ಎಸ್‌ಪಿ ವರದಿಯನ್ನು ಕಳುಹಿಸಿದ್ದಾರೆ, ಕೊನೇಪಕ್ಷ ಇನ್ನೇನು ಸಸ್ಪೆಂಡ್ ಮಾಡುವುದು ಬೇಡ, ಅವರನ್ನು ಚೇಂಜ್ ಮಾಡುವುದಕ್ಕೆ ಮನಸ್ಸು ಮಾಡಲಿಲ್ಲ. ಇದು ಆಡಳಿತದ ಬಿಗಿ, ಏಕೆ ಹೆದರುತ್ತಾರೆ ಅಧಿಕಾರಿಗಳು, ಅವರು ಹೆದರಬೇಕಾದರೆ, ಅವರನ್ನು ಟ್ರಾನ್ಸ್‌ಫರ್ ಸಹ ಮಾಡುವುದಿಲ್ಲ, ಡಿ.ಸಿ.ರಿಪೋರ್ಟ್‌ಗೆ ಬೆಲೆ ಇಲ್ಲ, ಎಸ್‌ಪಿ ರಿಪೋರ್ಟ್‌ಗೆ ಬೆಲೆ ಇಲ್ಲ ಆದ್ದರಿಂದ ಅವನು ಅಲ್ಲೇ ಉಳಿದುಕೊಂಡಿದ್ದಾನೆ.

ಶ್ರೀ ಎ.ಟಿ.ರಾಮಸ್ವಾಮಿ: ಮಾನ್ಯ ಅಧ್ಯಕ್ಷರೆ, ಈ ವಿಷಯ ಮಾನ್ಯ ನಂಜೇಗೌಡರಿಗೆ ಗೊತ್ತಿರಬೇಕು. ಮತ್ತೆ ಇನ್ನೊಂದು ಅದೇ ಒಬ್ಬ ಅಧಿಕಾರಿ ಮರ ಸಾಗಾಣಿಕೆಯಲ್ಲಿ ಶಾಮೀಲಾಗಿದ್ದರಿಂದ, ಈಗ ಸರ್ಕಾರ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಿಸುತ್ತಿದೆ, ಒಂದು ಸಾರ್ವಜನಿಕ ಸಭೆಯಲ್ಲಿ ನಾನು ರಾಜಕೀಯಕ್ಕೆ ಇಳಿಯುತ್ತೇನೆ, ನಾನು ಕೂಡ ಮುಂದೆ ರಾಜಕೀಯ ಅಧಿಕಾರಕ್ಕೆ ಬರುತ್ತೇನೆಂದು ಆತ ಹೇಳುತ್ತಾನೆ. ಅದು ಕೂಡ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಆಗುತ್ತಿದೆ. ಇಲ್ಲಿ ಯಾರದೋ ಬೆಂಬಲ ಇದೆ ಎನ್ನತಕ್ಕಂಥ ಮಾತಲ್ಲ, ಆದರೆ ಇಲ್ಲಿನ ವ್ಯವಸ್ಥೆ ಏನಾಗುತ್ತಿದೆ? ಯಾವ ದಿಕ್ಕಿನಲ್ಲಿ ನಾವು ಹೋಗುತ್ತಿದ್ದೇವೆ? ಏನು ಈ ಸರ್ಕಾರಕ್ಕೆ ಮಂಕು ಬಡಿದಿದೆಯಾ?...

ಶ್ರೀ ಹೆಚ್.ಎನ್.ನಂಜೇಗೌಡ: ರಾಜಕೀಯಕ್ಕೆ ಬರಬೇಕೆಂಬ ತೀರ್ಮಾನ ಮಾಡಿ ಅವನು ಮರ ಮಾರುವುದಕ್ಕೆ ತೀರ್ಮಾನ ಮಾಡಿದ್ದಾನೆ.

ಅಧ್ಯಕ್ಷರು: ಅದು ಸರಿ, ರಾಮಸ್ವಾಮಿರವರು ಯಾರದ್ದು ಬೆಂಬಲ ಇದೆ ಎಂದು ಮಾತುಮಾತಿಗೆ ನಂಜೇಗೌಡರ ಕಡೆ ಕೈ ತೋರಿಸುತ್ತೀರಾ, ಅವರೇನು ಅಧಿಕಾರದಲ್ಲಿ ಇದ್ದಾರೆಯೇ? ಅವರ ಕಡೆ ಏಕೆ ಕೈ ತೋರಿಸುತ್ತೀರಿ.

ಶ್ರೀ ಹೆಚ್.ಎನ್.ನಂಜೇಗೌಡ: ನನ್ನ ಬೆಂಬಲ ಎಂದು ಅವರು ಹೇಳುತ್ತಿಲ್ಲ, ಶಾಸಕರ ಬೆಂಬಲವೂ ಅಲ್ಲ, ಪಕ್ಷದ ಒತ್ತಡ ಇದೆ ಎಂದು ಅದನ್ನು ಬಾಯಿಬಿಟ್ಟು ಹೇಳುವುದಕ್ಕೆ ಹೋಗುವುದಿಲ್ಲ, ಪಕ್ಷದ ಕಾರ್ಯಕರ್ತರು, ಅಲ್ಲಿ ಅರಕಲಗೂಡು ಕಾಂಗ್ರೆಸ್ ಎಂಎಲ್‌ಎ ಎಂದರೆ ಅವರು ಪ್ರಾಮುಖ್ಯ ಅಲ್ಲ, ಅಲ್ಲಿ ದಳದ ಕಾರ್ಯಕರ್ತರು ಯಾರು ಇರುತ್ತಾರೆ, ಇಲ್ಲಿ ಏನಾಗಿದೆ ಎಂದರೆ ಪುಟ್ಟೇಗೌಡರು ಬೆಳಿಗ್ಗೆ ಒಂದು ಮಾತು ಹೇಳಿದರು, ಅದನ್ನು ನಿಮ್ಮ ರೂಮಿನಲ್ಲಿ ಕುಳಿತುಕೊಂಡು ಕೇಳುತ್ತಿದ್ದೆ, ಅದು ಏನೆಂದರೆ ಮಂತ್ರಿಯಾದವರು ತಾಲ್ಲೂಕಿಗೆ ಮಂತ್ರಿಯಾಗಬಾರದು, ಜಿಲ್ಲೆಗೆ ಆಗಬಾರದು, ತನ್ನ ಪಕ್ಷಕ್ಕೆ ಮಾತ್ರ ಮಂತ್ರಿಯಾಗಬಾರದು, ಈ ರಾಜ್ಯಕ್ಕೆ ಮಂತ್ರಿಯಾಗಬೇಕೆಂಬ ಮಾತನ್ನು ಅವರು ಹೇಳಿದರು. ಅದು ನಡೆಯುತ್ತಿಲ್ಲವೆಂದು ದುಃಖ, ಅದು ಈ ಅವ್ಯವಸ್ಥೆಗೆ, ಈ ಸಿಸ್ಟೆಮ್ ಕೊಲ್ಯಾಪ್ಸ್ ಆಗುವುದಕ್ಕೆ ಕಾರಣ.

ಶ್ರೀ ಎ.ಟಿ.ರಾಮಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, ಏಕೆ ಮಾತು ಹೇಳುತ್ತಿದ್ದೇನೆಂದರೆ, ತಪ್ಪು

ಮಾಡಿದಂತಹ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳದಿದ್ದರೆ....

ಶ್ರೀ ಸಿ.ಎಸ್.ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದುದು, ಇಡೀ ರಾಜ್ಯದಲ್ಲಿ ಅಂದರೆ ಎಲ್ಲಾ ಜಿಲ್ಲೆಯಲ್ಲಿ ಈ ವ್ಯವಸ್ಥೆ ಇರಬಾರದು ಎಂದು, ಇದು ಹಾಸನ ಜಿಲ್ಲೆಯಲ್ಲಿ ಇದು ನಡೆದುಕೊಂಡು ಬಂದಿಲ್ಲ, ಯಾವಾಗಲೂ ನಾವು ನಮ್ಮ ಪಕ್ಷದವರು ಇದ್ದೇವೆ ಮತ್ತು ಮಂತ್ರಿಗಳು ಇದ್ದೇವೆ ಎಂದು ಖಂಡಿತ ಹೇಳಿಲ್ಲ, ಅದು ನಮ್ಮ ಹಿರಿಯ ಮುಖಂಡರು ಆದ ಮಾನ್ಯ ನಂಜೇಗೌಡರು ಹೇಳಿದ ಮಾತು ಎಂದರೆ ನಾವು ಎಲ್ಲರೂ ಕೂಡ ಅಂದರೆ ಯಾವ ಪಕ್ಷದಲ್ಲಿ ಇದ್ದರೂ ಕೇಳುವವರು ನಾವು, ಅವರು ಬಹಳ ಮುತ್ಸದ್ದಿಗಳು, ರಾಜಕೀಯವಾಗಿ ಶಕ್ತಿ ಇರುವವರು, ಆದರೆ ನಮ್ಮ ಜಿಲ್ಲೆಯಲ್ಲಿ ಮಾತ್ರ ಆ ರೀತಿಯ ಕುಮ್ಮಕ್ಕುಗಳು ಇವೆ ಎಂದು ಖಂಡಿತವಾಗಿಯೂ ಅದು ಆಗಬಾರದು, ನಾನು ಹೇಳಿರತಕ್ಕಂಥದ್ದು ಇಡೀ ರಾಜ್ಯದಲ್ಲಿ ಆಯಾಯ ಜಿಲ್ಲಾ ಮಂತ್ರಿಗಳು ಅವರ ಜಿಲ್ಲೆಯನ್ನು ಬಿಗಿಯಾಗಿ ಸಮಗ್ರವಾಗಿ ನೋಡಬೇಕು ಎನ್ನತಕ್ಕಂಥದ್ದು.

ಶ್ರೀ ಎ.ಟಿ.ರಾಮಸ್ವಾಮಿ: ಮಾನ್ಯ ಅಧ್ಯಕ್ಷರೆ, ಹಾಸನದ ಅನುಭವದ ಮೇಲೆ ಮಾನ್ಯ ಪುಟ್ಟೇಗೌಡರು ಆ ಮಾತನ್ನು ಹೇಳಿದ್ದಾರೆ.

ಅಧ್ಯಕ್ಷರು: ಭಗ್ವದ್ಗೀತೆಯಲ್ಲಿ ಒಂದು ಶ್ಲೋಕ ಬರುತ್ತದೆ, ಅದು ಏನೆಂದರೆ

''ಆಕಾಶಾತ್ ಪತಿತ್ತೋಯಂ
ಯಥಾಗಚ್ಛತಿ ಸಾಗರಂ
ಸರ್ವದೇವ ನಮಸ್ಕಾರಂ
ಕೇಶವಂ ಪ್ರತಿಗಚ್ಛತಿ''

ಎಂದು ಆಕಾಶದಿಂದ ಬೀಳತಕ್ಕಂಥ ಮಳೆ ಎಲ್ಲವೂ ಹೇಗೆ ಆಖೈರಾಗಿ ಸಾಗರಕ್ಕೆ ಸೇರುತ್ತದೆಯೋ ಹಾಗೆ ಯಾರು ಯಾರಿಗೆ ಮಾಡತಕ್ಕಂಥ ನಮಸ್ಕಾರ ಕೂಡ ಕೇಶವನಿಗೆ ಸೇರುತ್ತದೆ. ಹಾಗೆಯೇ ಇಡೀ ಹಾಸನದಲ್ಲಿ ಎಲ್ಲಿ ಏನಾದರೂ ಎಲ್ಲಾ ಬಂದು ನಿಮಗೆ ಸೇರುತ್ತದೆ. ''ಸರ್ವೋದಯ ನಮಸ್ಕಾರ ಕೇಶವಂ ಪ್ರತಿಗಚ್ಛತಿ'' ಏನು ಮಾಡುವುದು ನಿಮ್ಮ ಅಕೌಂಟ್‌ನಲ್ಲಿ ಇಟ್ಟುಕೊಳ್ಳಬೇಕು.

ಶ್ರೀ ಎ.ಟಿ.ರಾಮಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಹೇಳತಕ್ಕಂಥ ವಿಷಯ, ಯಾರು ತಪ್ಪು ಮಾಡತಕ್ಕಂಥ ಅಧಿಕಾರಿ, ಯಾರೇ ಆಗಿರಲಿ ಅವರು, ಸರ್ಕಾರ ಅಂಥ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡರೆ ಆಡಳಿತದಲ್ಲಿ ಬಿಗಿ ಬರುತ್ತದೆ ಮತ್ತು ದಕ್ಷತೆ ಬರುತ್ತದೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಾ, ಇವತ್ತು ಸಹಕಾರ ಇಲಾಖೆಯವರು ಈ ಸಂಘಗಳನ್ನು ಸೂಪರ್‌ಸೀಡ್ ಮಾಡುತ್ತಾರೆ. ಇದು ಸಹಕಾರಿ ಕಾಯಿದೆ 30ರಲ್ಲಿ ಇದೆ, ಬಹುತೇಕ ಅದು ದುರ್ಬಳಕೆಯೇ ಆಗುತ್ತಿದೆ. ರಾಜ್ಯಮಟ್ಟದ ದೊಡ್ಡ ದೊಡ್ಡ

ಮತ್ತು ಜಿಲ್ಲಾ ಮಟ್ಟದ ಸಹಕಾರ ಸಂಘಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅದನ್ನು ಉಪಯೋಗ ಮಾಡುತ್ತಿಲ್ಲ. ಗ್ರಾಮಾಂತರ ಮಟ್ಟದಲ್ಲಿ ಇರತಕ್ಕಂಥ ಸಣ್ಣ ಸಣ್ಣ ಸಹಕಾರ ಸಂಘಗಳನ್ನು ಸೂಪರ್‌ಸೀಡ್ ಮಾಡುವುದಕ್ಕೆ ಕಲಂ 30ನ್ನು ಉಪಯೋಗ ಮಾಡುತ್ತಿದ್ದಾರೆ, ಅದು ಬಹುತೇಕ ಕಡೆ ದುರ್ಬಳಿಕೆ ಆಗುತ್ತಿದೆ. ಆ ಕಲಂನ್ನು ರದ್ದು ಮಾಡತಕ್ಕಂಥದ್ದು ಬಹಳ ಸೂಕ್ತವಾದದ್ದು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇವತ್ತು ಯಾವುದೇ ಒಂದು ಸಹಕಾರ ಸಂಘದಲ್ಲಿ ದುರುಪಯೋಗ ಆಗಬೇಕಾದರೆ, ಅಲ್ಲಿ ಅಧಿಕಾರಿಗಳು ಶಾಮೀಲಾಗದೆ ದುರುಪಯೋಗ ಆಗುವುದಕ್ಕೆ ಸಾಧ್ಯವೇ ಇಲ್ಲ, ಈಗ ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ಹಣ ದುರುಪಯೋಗ ಆಗಿದೆ ಎಂದರೆ, ಸಾಲ ಕೊಡುವುದರಲ್ಲಿ ದುರುಪಯೋಗವಾಗಿದೆ ಎಂದರೆ, ಅನರ್ಹರಿಗೆ ಸಾಲ ಕೊಟ್ಟಿದ್ದಾರೆಂದರೆ ಅಲ್ಲಿಯ ಅಧಿಕಾರಿಗಳು ಶಾಮೀಲು ಇಲ್ಲದೆ ಅಲ್ಲಿ ದುರುಪಯೋಗ ಆಗುವುದಕ್ಕೆ ಮತ್ತು ಅನರ್ಹರಿಗೆ ಸಾಲ ವಿತರಣೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಬರೀ ಬ್ಯಾಂಕನ್ನು, ಚುನಾಯಿತ ಮಂಡಳಿಯನ್ನು ಸೂಪರ್‌ಸೀಡ್ ಮಾಡುತ್ತೀರಿ, ಅಧಿಕಾರಿಗಳ ಮೇಲೆ ಏಕೆ ಕ್ರಮ ತೆಗೆದುಕೊಳ್ಳುವುದಿಲ್ಲ? ಅಂಥ ಕಡೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಮುಂದಾಗಬೇಕೆಂಬ ಮಾತನ್ನು ಹೇಳುತ್ತೇನೆ. ಇವತ್ತು ನಮ್ಮ ಜಿಲ್ಲೆಯಲ್ಲೂ ಕೂಡ 3 ಅಂದರೆ ನನ್ನ ತಾಲ್ಲೂಕಿನಲ್ಲಿ ಚೆನ್ನಾಗಿ ನಡೆಯುತ್ತಿದ್ದ 3 ವ್ಯವಸಾಯ ಸಹಕಾರ ಸಂಘಗಳನ್ನು ಸೂಪರ್‌ಸೀಡ್ ಮಾಡಿದ್ದೀರಿ, 100ಕ್ಕೆ 100 ರಿಕವರಿ ಆಗುತ್ತಿತ್ತು, ಚೆನ್ನಾಗಿ ನಡೆಯುತ್ತಿತ್ತು ಅಂಥವನ್ನು ಮಾಡಿದ್ದೀರಿ, ಬೇಲೂರಿನಲ್ಲಿ ಒಂದು ಪಿ.ಎಲ್.ಡಿ. ಬ್ಯಾಂಕ್‌ನ್ನು ಅಂದರೆ, ಈ ಬ್ಯಾಂಕಿಗೆ ಇಡೀ ರಾಜ್ಯದಲ್ಲಿಯೇ ಅತ್ಯುತ್ತಮ ಬ್ಯಾಂಕ್ ಎಂದು ಪ್ರಶಸ್ತಿ ಬಂದಿದೆ, ಹಾಗೆ ಪ್ರಶಸ್ತಿ ಬಂದ ಒಂದು ವಾರದಲ್ಲಿಯೇ ಆ ಬ್ಯಾಂಕ್‌ನ್ನು ಸೂಪರ್‌ಸೀಡ್ ಮಾಡಿದ್ದೀರಿ. ಇಂಥ ಒಂದು ಕಲಂ ಏನು ಇದೆ, ಆ ಕಲಂನ್ನು ರದ್ದುಗೊಳಿಸುವುದಕ್ಕೆ ಸರ್ಕಾರ ಮುಂದು ಆಗಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ತಮ್ಮಗಳ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ಪಶುಸಂಗೋಪನೆ ಮತ್ತು ಪಶುವೈದ್ಯ ಇಲಾಖೆಯ ಬಗ್ಗೆ ಕೆಲವು ವಿಷಯಗಳನ್ನು ಮಾತನಾಡುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ ನಿಂಗಯ್ಯರವರೇ, ತಾವು ಈಗ ಮಂತ್ರಿಯಾಗಿದ್ದೀರಿ, ತಾವು ಯುವಕರು, ನೀವು ಚಳುವಳಿಯಿಂದ ಬಂದವರು, ಆಂದೋಲನ ಮಾಡಿ ಬಂದವರು, ಹಿಂದೆಯೂ ಎರಡು ಸಲ ಮಂತ್ರಿಯಾಗಿದ್ದೀರಿ, ನಿಮ್ಮ ಇಲಾಖೆಯ ವ್ಯಾಪ್ತಿಗೆ 4 ಕೋಟಿ ಪ್ರಾಣಿಗಳು, ಸುಮಾರು ಎರಡೂವರೆ ಕೋಟಿ ಹಸು, ಎಮ್ಮೆ ಮತ್ತು ಕುರಿ... ಆ ಇಲಾಖೆಯ ಜವಾಬ್ದಾರಿಕೆಯನ್ನು ಮಾನ್ಯ ನಿಂಗಯ್ಯನವರು ಹೊತ್ತಿದ್ದಾರೆ. ಅದರಲ್ಲಿ ಜಾನುವಾರು ಅಭಿವೃದ್ಧಿ ಯೋಜನೆ ಬರುತ್ತದೆ. ಉಣ್ಣೆ ಅಭಿವೃದ್ಧಿ ಯೋಜನೆ ಬರುತ್ತದೆ. ಕುಕ್ಕುಟ ಅಭಿವೃದ್ಧಿ ಯೋಜನೆ ಬರುತ್ತದೆ. ಹಂದಿ ಮೊಲಗಳ ಸಾಕಣೆ ಅಭಿವೃದ್ಧಿ ಯೋಜನೆಗಳು ಬರುತ್ತವೆ. ಆಹಾರ ಮತ್ತು ಮೇವು ಅಭಿವೃದ್ಧಿ ಯೋಜನೆ ಬರುತ್ತದೆ. ಅದರ ಜೊತೆಗೆ ಇತರ ಕೆಲವು ಸಂಘಸಂಸ್ಥೆಗಳು ತಮ್ಮ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಕಳೆದ ವರ್ಷ ತಮ್ಮ ಇಲಾಖೆಗೆ

88.15 ಕೋಟಿ ಯೋಜನೆ ಮತ್ತು ಯೋಜನೇತರ ಬಾಬ್ತಿಗೆ ಒದಗಿಸಲಾಗಿತ್ತು. ಆದರೆ ನಿಮ್ಮ ಇಲಾಖೆ ಖರ್ಚು ಮಾಡಿರುವುದು ಕೇವಲ 27.93 ಕೋಟಿ ಮಾತ್ರ. ಏಕೆ? ನಾವು ನಿಮ್ಮ ಬಗ್ಗೆ ಹೆಚ್ಚು ಆಸೆ ಇಟ್ಟುಕೊಂಡಿದ್ದೆವು. ಚಳುವಳಿಯಿಂದ ಬಂದಿರುವವರು, ಶೋಷಿತವರ್ಗದಿಂದ ಬಂದಿರುವವರು, ಯುವಕರು, ಸಕ್ರೀಯವಾಗಿ ಕೊಟ್ಟಿರುವ ಹಣದ ಜೊತೆಗೆ ಇನ್ನೂ ಕೂಡ ಖರ್ಚು ಮಾಡುತ್ತೀರಿ ಇಲಾಖೆಯನ್ನು ಬಲಪಡಿಸುತ್ತೀರಿ ಎನ್ನುವ ಆಶಯ ಏನಿತ್ತು ಆ ಕನಸು ನನಸಾಗಲಿಲ್ಲ ಎಂಬ ವೇದನೆ ಕೂಡ ನನಗಿದೆ. ಅಧ್ಯಕ್ಷರೇ, ಇವರ ಅಧೀನಕ್ಕೆ ಬರತಕ್ಕ ಹೈನು ಅಭಿವೃದ್ಧಿ ನಿಯಮಿತ ಇದೆ. ನೀವೂ ಕೂಡ ಅದಕ್ಕೆ ಅನುದಾನವನ್ನು ಕೊಡುತ್ತೀರಿ. ಎಷ್ಟು ದಿವಸ ಆ ನಿಗಮಕ್ಕೆ ನೀವು ಭೇಟಿ ಕೊಟ್ಟಿದ್ದೀರಿ? ತಪಾಸಣೆ ಮಾಡಿದ್ದೀರಿ ಹೇಳಿ. ಇಲ್ಲ, ನಿಮ್ಮ ಇಲಾಖೆಯ ಅಧಿಕಾರಿಗಳು ಡೈರೆಕ್ಟರೇಟ್‌ನವರು ಎಷ್ಟು ದಿವಸ ಹೋಗಿ ತನಿಖೆ ಮಾಡಿದ್ದಾರೆ, ಯಾಕೆ ಮಾಡುತ್ತಾ ಇಲ್ಲ? ಏನು ಕಾರಣ, ತಾವು ಇಲ್ಲಿ ಸದನಕ್ಕೆ ತಿಳಿಸಬೇಕಾಗುತ್ತದೆ. ನಮಗೆ ಕೇಳುವ ಹಕ್ಕಿದೆ. ಇವತ್ತು ಕರ್ನಾಟಕ ಹೈನುಗಾರಿಕೆ ಅಭಿವೃದ್ಧಿ ನಿಗಮದಲ್ಲಿ ದಿವಸಕ್ಕೆ ಕನಿಷ್ಟ ಒಂದು ಕೋಟಿ ರೂ. ವ್ಯವಹಾರವಾಗುತ್ತದೆ. ನಾನು ಒಂದು ಹೇಳಿದೆ. ಇವತ್ತು ಈ ಲಿಕ್ಕರ್ ಲಾಬಿ ಎಷ್ಟು ಪ್ರಭಾವಿತ ಆಗಿದೆ ಅಷ್ಟೇ ಪ್ರಭಾವಯುತವಾಗಿದೆ ಈ ಮಿಲ್ಕ್ ಲಾಬಿ ಕೂಡ. ಲಿಕ್ಕರ್ ಲಾಬಿ ವ್ಯವಹಾರ ಹೆಚ್ಚು ನಡೆಯುವುದು ಹೊತ್ತು ಮುಳುಗಿದ ಮೇಲೆ. ಆದರೆ ಮಿಲ್ಕ್‌ಲಾಬಿ ಸೂರ್ಯ ಮೂಡುವುದಕ್ಕೆ ಮುಂಚಿತವಾಗಿಯೇ ಶುರುವಾಗುತ್ತದೆ. ಒಂದು ದಿನಕ್ಕೆ ಒಂದು ಕೋಟಿಗಿಂತಲೂ ಹೆಚ್ಚು ವ್ಯವಹಾರ ಮಾಡುವ ಕರ್ನಾಟಕ ಹೈನುಗಾರಿಕೆ ಅಭಿವೃದ್ಧಿ ನಿಗಮಕ್ಕೆ ಇದು ನಿಮ್ಮ ಅಧೀನಕ್ಕೂ ಬರುತ್ತದೆ, ಸಹಕಾರ ಸಚಿವರ ಅಧೀನಕ್ಕೂ ಬರುತ್ತದೆ. ಈ ಇಲಾಖೆಯಲ್ಲಿ ಬಹಳ ಅಕ್ರಮ ಅವ್ಯವಹಾರಗಳು ನಡೆಯುತ್ತಿದೆ ಎಂದು ನನ್ನ ಗಮನಕ್ಕೆ ಬಂದಿದೆ. ನಾನು ಹಿಂದಿನ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಅಧ್ಯಕ್ಷರೇ, ಡೈರಿಗಳವರು ಸಾರಾಸಗಟು ಮೂರು ಪರ್ಸೆಂಟ್ ವೇಸ್ಟೇಜು ಎಂದು ತೆಗೆಯುತ್ತಾರೆ. 12, 13, 14 ಲಕ್ಷ ಲೀಟರ್ ಹಾಲು ಸಂಗ್ರಹಣೆ ಮಾಡಿ ವಿತರಣೆ ಮಾಡುವುದರಲ್ಲಿ ಮೂರು ಪರ್ಸೆಂಟೆಂದರೆ ಎಷ್ಟಾಯಿತು? ಮೂರು ಪರ್ಸೆಂಟ್ ಎಂದು ಏನಾದರೂ ನಿಗದಿಯಾಗಿದೆಯಾ? ಒಂದು ಕಡೆ ಅರ್ಧ ಪರ್ಸೆಂಟಾಗಬಹುದು, ಆಗದೇ ಇರಬಹುದು, ಮೂರು ಪರ್ಸೆಂಟಾಗಬಹುದು, ಮೂರೂವರೆ ಪರ್ಸೆಂಟಾಗಬಹುದು. ಮೂರು ಪರ್ಸೆಂಟ್ ವೇಸ್ಟೇಜು ಎಂದು ತೆಗೆದುಕೊಂಡು ದುರುಪಯೋಗ ಮಾಡುತ್ತಿದ್ದಾರಲ್ಲಾ ನೀವ್ಯಾಕೆ ಸುಮ್ಮನಿದ್ದೀರಿ? ಕಣ್ಣಿದ್ದೂ ಕುರುಡರಾಗಿದ್ದೀರಲ್ಲಾ ಏಕೆ ಎಂದು ತಮ್ಮನ್ನು ಈ ಸಂದರ್ಭದಲ್ಲಿ ಕೇಳಲಿಕ್ಕೆ ಇಚ್ಛೆಸುತ್ತೇನೆ. ಮತ್ತೊಂದು, ನಿಗಮಕ್ಕೆ ಸೇರಿದ ಹಾಗೆ ಹದಿಮೂರು ಹಾಲಿನ ಒಕ್ಕೂಟಗಳಿವೆ. 13 ಒಕ್ಕೂಟಗಳು ಏನು ಹಾಲಿನ ಉತ್ಪನ್ನಗಳನ್ನು ಉತ್ಪಾದಿಸುತ್ತಾರೆ ಇವರೇ ಮಾರಾಟ ಮಾಡಬೇಕು, ಅಲ್ಲಿಂದ ತರಿಸಿಕೊಂಡು. ಯಾಕೆ ಅವರು ಮಾರಾಟ ಮಾಡಿದರೆ ಏನಾಗುತ್ತದೆ? ಅದರ ಜೊತೆಗೆ ಪ್ಲಾಸ್ಟಿಕ್ ಕವರನ್ನೂ ಕೂಡ ಇವರೇ ಕೊಂಡು ಅವರಿಗೆ ಸರಬರಾಜು ಮಾಡಬೇಕು. ಯಾಕೆ ಅವರೇ ಕೊಂಡುಕೊಂಡರೆ ಏನಾಗುತ್ತದೆ? ಇದರಲ್ಲೇನಾದರೂ ವ್ಯವಹಾರ

ನಡೆದಿದೆಯಾ? ಇಲ್ಲಿ ಯಾರಾದರೂ ವ್ಯವಹಾರ ನಡೆಸುತ್ತಿದ್ದಾರೋ? ತುಪ್ಪ ಬೆಣ್ಣೆ ಮತ್ತು ಹಾಲಿನ ಪುಡಿ ಏನು ಎಲ್ಲಾ ಒಕ್ಕೂಟಗಳಿಂದ ಬರುತ್ತದೆ ಅದನ್ನು ಇವರು ಮಾರಾಟ ಮಾಡುತ್ತಾರೆ. ಸಚಿವರು ಉತ್ತರ ಕೊಡುವಾಗ ಹೇಳಬೇಕು. ಇವನ್ನು ಯಾರ್‍ಯಾರಿಗೆ ನೀವೇನು ಮಾರಾಟ ಮಾಡಿದ್ದೀರಲ್ಲಾ, ಟೆಂಡರ್ ಕರೆದು ಮಾರಾಟ ಮಾಡಿದ್ದೀರಾ? ಹಾಲಿನ ಪುಡಿ ಒಂದು ಕೆಜಿಗೆ 60 ರೂ. ಇದ್ದರೆ ಇವರು ಬರೀ 24-25 ರೂ.ಗೆ ಮಾರಾಟ ಮಾಡಿದ್ದಾರೆ. ಅವತ್ತು ಮಾರ್ಕೆಟ್‌ನಲ್ಲಿ ಎಷ್ಟಿತ್ತು ನೋಡಿ ತುಪ್ಪವನ್ನು ನಿಮ್ಮ ಆಡಿಟ್ ವರದಿಯಲ್ಲೇ ಬಂದಿರಬಹುದು, ನಾನೂ ಕೂಡ ಸಂಗ್ರಹಣೆ ಮಾಡಿದ್ದೇನೆ. ಕರ್ನಾಟಕ ರಾಜ್ಯದೊಳಗೇ ಮಾರಾಟ ಮಾಡಿದ್ದರೆ ''ಸಿ'' ಫಾರಂ ತೆಗೆದುಕೊಂಡು 4 ಪರ್ಸೆಂಟ್ ಟ್ಯಾಕ್ಸೇನೋ ಇದೆ ಅದೇ ರಾಜ್ಯದ ಹೊರಗೆ ಮಾರಿದರೆ ಖರೀದಿದಾರ 13, 14 ಪರ್ಸೆಂಟ್ ಟ್ಯಾಕ್ಸ್ ಕೊಡಬೇಕು. ಆದರೆ ಟ್ಯಾಕ್ಸನ್ನು ಕದಿಯುವ ಸಲುವಾಗಿ ನಿಮ್ಮ ಕೆಎಂಎಫ್ ಅಧಿಕಾರಿಗಳು ಅವರ ಜೊತೆ ಶಾಮೀಲಾಗಿ ಈ ರಾಜ್ಯದೊಳಗೆ ಮಾರಾಟ ಮಾಡಿದ್ದೇವೆ ಎಂದು ಹೊರಗಡೆಯವರಿಗೆ ಕೊಟ್ಟಿದ್ದಾರೆ. ಅದೀಗಾಗಲೇ ಪತ್ತೆಯಾಗಿದೆ. ಅವರು ಪತ್ತೆ ಮಾಡಿರುವ ಪ್ರಕಾರ ಸುಮಾರು 1.60 ಕೋಟಿ ರೂ. ಟ್ಯಾಕ್ಸ್ ರಿಕವರಿ ಆಗಬೇಕೆಂದು ವರದಿ ಬಂದಿದೆ. ತಾವು ಅಂತಹ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ? ಇಂತಹ ಕೆಎಂಎಫ್ ಅನ್ನು ಸೂಪರ್‌ಸೀಡ್ ಮಾಡಲಿಕ್ಕೆ ನಿಮಗೆ ತಾಕತ್ತಿಲ್ಲ. ಏಕೆ ಕಂಡರೂ ಕಾಣದಂತಿದ್ದೀರಿ, ಅಘೋಷಿತ ತುರ್ತುಪರಿಸ್ಥಿತಿ ಅಲ್ಲಿದೆ. ನಿಮಗೆ ಅಧಿಕಾರ ಮುಖ್ಯವಲ್ಲವೇ ಅಧಿಕಾರ ಉಳಿಸಿಕೊಳ್ಳುವ ಸಲುವಾಗಿ, ಎಂದರೆ ಅಲ್ಲಿ ಯಾರೋ ಇದ್ದಾರೆ ಅದರ ಸಲುವಾಗಿ ನೀವು ಮಾಡಬೇಕಾದ್ದು. ಅಧ್ಯಕ್ಷರೇ, ಮತ್ತೊಂದು ನೀತಿಯ ಪ್ರಶ್ನೆಯನ್ನು ನಾನು ಪ್ರಸ್ತಾಪ ಮಾಡಬೇಕಾಗಿದೆ. ಇವತ್ತು ಬಿ.ಬಿ.ನಿಂಗಯ್ಯನವರು ಆ ಇಲಾಖೆಯ ಸಚಿವರು ಅವರ ಅಧೀನದಲ್ಲಿ ಕೆಎಂಎಫ್ ನಡೆಯುತ್ತಿದೆ. ಕೆಎಂಎಫ್‌ನ ಅಧ್ಯಕ್ಷರು ನಮ್ಮ ಜಿಲ್ಲೆಯವರೇ, ವಸತಿ ಸಚಿವರು, ಸಂಪುಟದಲ್ಲಿ ನಿಂಗಯ್ಯನವರು ಅವರಿಗಿಂತ ಮೇಲ್ದರ್ಜೆಯಲ್ಲಿಲ್ಲ. ಆದರೆ ಕೆಎಂಎಫ್ ಅಧ್ಯಕ್ಷರು ಇವರ ಕೈಕೆಳಗೆ. ಇದು ಎಷ್ಟರಮಟ್ಟಿಗೆ ನ್ಯಾಯ? ಯಾವ ತತ್ವ ಯಾವ ನೀತಿ? ನಮ್ಮ ಜಿಲ್ಲೆಗೇ ಅವಮಾನ ಇದು. ಹಾಸನ ಜಿಲ್ಲೆಯವರು ಅಧಿಕಾರ ಅಂದರೆ ಯಾವ ಪೋಸ್ಟ್‌ಗೆ ಬೇಕಾದರೂ ಒಪ್ಪಿಕೊಳ್ಳುತ್ತಾರೆ ಎನ್ನುವ ಮರ್ಯಾದೆ ಹೋಗುತ್ತದೆ. ಈ ಸದನದ ಮೂಲಕ ನಿಂಗಯ್ಯನವರ ಪೋಸ್ಟನ್ನಾದರೂ ಅಪ್‌ಗ್ರೇಡ್ ಮಾಡಿಬಿಡಲಿ ಎಂದು ಕೇಳುತ್ತೇನೆ. ಅವರನ್ನು ಕ್ಯಾಬಿನೆಟ್ ಮಂತ್ರಿಯನ್ನಾಗಿ ಮಾಡಿಬಿಡಲಿ. ಇಲ್ಲ ಅವರಾದರೂ ಕೂಡ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಲಿ. ಕೊಡಲಿಲ್ಲವೆಂದರೆ ಸರ್ಕಾರದವರು ಕಿತ್ತಾದರೂ ಹಾಕಲಿ. ಏನು ಒಂದು ನೀತಿ ಬೇಡವೇ? ಬಚ್ಚೇಗೌಡರೇ, ಒಂದು ನಿಯಮ ಬೇಡವೇ? ಇವರಿಗೆ ಅವರು ಉತ್ತರ ಹೇಳುವುದಕ್ಕೆ ಸಾಧ್ಯವಿದೆಯಾ? ಅದಕ್ಕೇ ನಾನು ಕೇಳಿದ್ದು ಇವರು ಹೋಗಿ ಅಲ್ಲಿ ಎಷ್ಟು ದಿವಸ ವಿಸಿಟ್ ಮಾಡಿದ್ದಾರೆ, ಏನು ಕ್ರಮ ತೆಗೆದುಕೊಂಡಿದ್ದಾರೆ, ಇವತ್ತು ಎನ್‌ಡಿಡಿಬಿಯವರು ಅಲ್ಲಿರುವ ಸ್ಟಾಫನ್ನು ರೆಡ್ಯೂಸ್ ಮಾಡಬೇಕೆಂದು ಹೇಳಿದ್ದಾರೆ.

ಓವರ್‌ಹೆಡ್ ಚಾರ್ಜಸ್ ಜಾಸ್ತಿ ಬರ್ತಾ ಇದೆ ಎಂದು ಹೇಳಿ. ಆದರೆ ನೀವೀಗ ಒಂದು ಒಂದೂವರೆ ತಿಂಗಳಿನಿಂದ ಸುಮಾರು 600-700 ಜನರನ್ನು ತೆಗೆದುಕೊಳ್ಳುವುದಕ್ಕೆ ಸಂದರ್ಶನ ನಡೆಯುತ್ತಿದೆ. ಎಷ್ಟು ಜನರನ್ನು ಸಂದರ್ಶನಕ್ಕೆ ಕರೆಯಬೇಕು ನೀವು? 1:5 ಅಥವಾ 1:10 ಇಂಟರ್‌ವ್ಯೂ ಕರೆಯಿರಿ. ಆದರೆ ಎನ್‌ಡಿಡಿಬಿಯವರು ಈಗಿರುವ ಸ್ಟಾಫನ್ನೇ ಕಡಿಮೆ ಮಾಡಿ ಎಂದು ಹೇಳಿದ್ದಾರೆ, ಓವರ್‌ಹೆಡ್ ಚಾರ್ಜಸ್ ಜಾಸ್ತಿ ಆಗಿದೆ ಎಂದು. ನೀವದನ್ನು ಬಿಟ್ಟು ಅವರ ಮಾರ್ಗದರ್ಶನವನ್ನು ಧಿಕ್ಕರಿಸಿ ಸುಮಾರು 600-800 ಜನರನ್ನು ನೇಮಿಸಿಕೊಳ್ಳಲು ಹೊರಟಿದ್ದೀರಲ್ಲಾ ಏಕೆ? ಸಹಕಾರ ಸಚಿವರು ಇಲ್ಲಿರಬೇಕಾಗಿತ್ತು. ನಾನು ಆವತ್ತು ಹೇಳಿದ್ದೆ, ನನಗೂ ಇನ್ನೂ ನೆನಪಾಗುತ್ತಿದೆ, ಅವರು ಟೋಪಿ ಹಾಕಿಕೊಂಡಿದ್ದಾರೆ, ಗಾಂಧಿ ಆದರ್ಶದ ಸೋಂಕು ಇನ್ನೂ ತಗುಲಿಕೊಂಡಿದೆಯೇನೋ ಎನ್ನುವ ಭಾಸ ಇತ್ತು ನನಗೆ. ಈಗ ಅದು ಮಾಯವಾಯಿತು. ಸಹಕಾರ ಇಲಾಖೆಯವರು ಕಣ್ಮುಚ್ಚಿಕೊಂಡು ಕುಳಿತಿದ್ದಾರೆ? ಇವರು ಒಪ್ಪಿಗೆ ಕೊಟ್ಟಿಲ್ಲವೇ? ಹೀಗಾಗಿಯೇ ಸರ್ಕಾರಿ ಸ್ವಾಮ್ಯದ ಎಲ್ಲಾ ಉದ್ದಿಮೆಗಳು ನಷ್ಟಕ್ಕೊಳಗಾಗಿ ನಿಮ್ಮ ಸ್ವಾರ್ಥಸಾಧನೆಗಾಗಿ ಹಾಳುಮಾಡುತ್ತಿದ್ದೀರಿ. ಅದಕ್ಕೆ ಈ ರಾಜ್ಯದ ಜನರ ಶಾಪದ ಕಣ್ಣೀರು ನಿಮಗೆ ಒಂದಲ್ಲ ಒಂದು ದಿನ ತಟ್ಟುತ್ತದೆ ಅನ್ನುವುದು ಮರೆಯಬಾರದು. ಯಾವುದೇ ಇಲಾಖೆಯಲ್ಲಿ ಬೇಕಾದರೆ ನಷ್ಟವಾಗಲಿ. ಈ ಹಾಲಿನ ಇಲಾಖೆಯಲ್ಲಿ ನಷ್ಟವಾಗಬಾರದು. ಕಾರಣ, ರೈತರು ಕೊಡುತ್ತಿರುವುದು ಹಾಲಲ್ಲ, ಅದು ರಕ್ತ ಪಾಪ, ಬಡವರು ಎಷ್ಟೋ ಜನ ಅವರ ಮಕ್ಕಳ ಬಾಯಿಗೆ ಕುಕ್ಕೆ ಕಟ್ಟಿ, ನಾನು ನೋಡಿದ್ದೇನೆ ನಾನೂ ಕೂಡ ಬಹಳ ಚಿಕ್ಕಹಳ್ಳಿಯಿಂದ ಬಂದಿರುವವನು, ನಂಜೇಗೌಡರಿಗೆ ಗೊತ್ತು. 50 ಮನೆಗಳೇ ನಮ್ಮ ಊರಲ್ಲಿರುವುದು. 200, 300 ಎಂಎಲ್ ಹಾಲು ತಂದು ಹಾಕುತ್ತಾರೆ. ಮಕ್ಕಳಿಗೆ ಕೊಡುವುದಿಲ್ಲ ಕುಡಿಯಲಿಕ್ಕೆ. ಅವರು ಕುಡಿದಿದ್ದರೆ ಹಾಲನ್ನು ರಕ್ತವಾಗಿ ಪರಿವರ್ತನೆಯಾಗುತ್ತಿತ್ತು. ಅಂತಹ ರಕ್ತಕ್ಕೆ ಸರಿಸಮವಾದ ಹಾಲನ್ನು ಹಣಕ್ಕೋಸ್ಕರ ಏನೋ ವಾರದ ಉಪ್ಪುಸೊಪ್ಪಿಗೆ, ಆಗುತ್ತದೆ ಎಂದು ಹೇಳಿ ಮಾರಾಟ ಮಾಡುತ್ತಾರೆ. ಅದರಲ್ಲಾಗುವ ದುರುಪಯೋಗ ನಿಮ್ಮ ಕೈಲಿ ತಡೆಯುವುದಕ್ಕೆ ಆಗಲಿಲ್ಲವೆಂದರೆ....

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಕುರಿಯನ್‌ರವರು ಇರುವಂತಹ ಜಾಗದಲ್ಲಿ ಒಂದು ಲೀಟರ್ ಹಾಲಿಗೆ ಎಷ್ಟು ಕೊಡುತ್ತಿದ್ದಾರೆ? ಇಲ್ಲಿ ಒಂದು ಲೀಟರ್ ಹಾಲಿಗೆ ತಾವು ಕೊಡುತ್ತೀರಿ?

ಶ್ರೀ ಬಿ.ಬಿ.ನಿಂಗಯ್ಯ: ಆ ವಿವರಗಳನ್ನು ಉತ್ತರದಲ್ಲಿ ಕೊಡುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ: ಅದಕ್ಕೇ ನಾನು ಹೇಳಿದ್ದು ಇದು ನೀತಿಯ ಪ್ರಶ್ನೆ ಎಂದು ಯಾರು ಯಾರಿಗೆ ಉತ್ತರವನ್ನು ಕೊಡುತ್ತಾರೆ. ಅದಕ್ಕೇ ಹೇಳಿದ್ದು ನಮ್ಮ ಹಾಸನ ಜಿಲ್ಲೆಯ ಗೌರವ ಇದರಿಂದ ಕಡಿಮೆಯಾಗುತ್ತದೆ. ಹಾಸನ ಜಿಲ್ಲೆಯವರು ಯಾವ

ಅಧಿಕಾರಕ್ಕಾದರೂ ಅಂಟಿಕೊಂಡು ಕೂತುಕೊಳ್ಳುತ್ತಾರೆ ಅನ್ನುವ ಮನೋಭಾವನೆ ಬರುತ್ತದೆ. ಆ ದಿಕ್ಕಿನಲ್ಲಿ ನಮ್ಮನ್ನಾದರೂ ಮುಖ್ಯಮಂತ್ರಿಗಳು ಮೇಲ್ದರ್ಜೆಗೇರಿಸಲಿ. ಇಲ್ಲ ನಮ್ಮ ಸಚಿವರಾದರೂ ನೈತಿಕ ಹೊಣೆಹೊತ್ತು ರಾಜೀನಾಮೆ ಕೊಡಲಿ ಕೆಎಂಎಫ್‌ಗೆ. ಇಷ್ಟು ದಿವಸ ಕೆಎಂಎಫ್‌ಗೆ ಮ್ಯಾನೇಜಿಂಗ್ ಡೈರೆಕ್ಟರಾಗಿ ಹಿರಿಯ ಐಎಎಸ್ ಅಧಿಕಾರಿಗಳನ್ನು ಹಾಕುತ್ತಿದ್ದರು. ಐಎಎಸ್ ಅಧಿಕಾರಿಗಳೇ ಇರಬೇಕೆಂಬ ದೃಷ್ಟಿಯಿಂದ ಈ ಮಾತು ಹೇಳುತ್ತಿದ್ದೇನೆ. ಇವತ್ತು ಅದೇ ಸಂಸ್ಥೆಯಲ್ಲಿ ಕೆಲಸಮಾಡುತ್ತಿದ್ದವರನ್ನು ಒಬ್ಬರನ್ನು ಅವರು ಅನುಭವಿಗಳು ಎಂದು ಹೇಳಿ ಸೂಪರ್‌ಸ್ಕೇಲ್‌ಗೆ ಅವರನ್ನು ಎತ್ತರಿಸಿ ಅಲ್ಲಿ ಎಂಡಿಯನ್ನಾಗಿ ಮಾಡಿದ್ದಾರೆ. ಮದರ್‌ಡೈರಿಗೊಬ್ಬರನ್ನು ಮಾಡಿದ್ದಾರೆ. ಮತ್ತೆ ನಮ್ಮ ಕೆಎಂಎಫ್ ಚೇರ್ಮನರಿದ್ದಾರೆ. ಏನಾಗಿದೆ, ಕಾಕತಾಳೀಯ ನ್ಯಾಯವೋ ಏನೋ, ಅಧ್ಯಕ್ಷರೇ, ಒಂದು ಕೋಮಿನವರು, ಕೆಎಂಎಫ್ ಅಧ್ಯಕ್ಷರು ಒಕ್ಕಲಿಗ ಜನಾಂಗದವರು, ಎಂ.ಡಿ.ಅವರೂ ಒಕ್ಕಲಿಗ ಜನಾಂಗದವರು ಮದರ್ ಡೈರಿಯವರೂ ಒಕ್ಕಲಿಗ ಜನಾಂಗದವರು ಹೀಗಾಗಿ ಏನಾಗಿದೆ ನೋಡುವವರಿಗೆ ಅನುಮಾನಕ್ಕೆ ಆಸ್ಪದ ಮಾಡಿಕೊಟ್ಟಂತಾಗುತ್ತದೆ. ಇಲ್ಲೇನೋ ಸ್ವಜನಪಕ್ಷಪಾತ ನಡೆಯುತ್ತಿದೆಯೇನೋ ಎಂಬ ಅನುಮಾನಕ್ಕೂ ಕಾರಣವಾಗುತ್ತಿದೆ.

(ಗೊಂದಲ)

ಶ್ರೀ ಸಿ.ಎಸ್.ಪುಟ್ಟೇಗೌಡ: ನೀವೂ ಒಕ್ಕಲಿಗರು ಎಂದು ತಿಳಿದುಕೊಂಡಿದ್ದೇನೆ, ಏಕೆಂದರೆ ರಾಮಸ್ವಾಮಿಯವರು ಬಹಳ ಸುದೀರ್ಘವಾಗಿ ಭಾಷಣ ಮಾಡಿದ್ದಾರೆ, ಅದನ್ನು ಈ ವರ್ಷವೆಲ್ಲಾ ಕೇಳುತ್ತೇವೆ. ನಮ್ಮ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಜಗಳ ಇರುತ್ತದೆ. ಒಂದು ಸಲ ಹೊಳೆನರಸೀಪುರ ಚನ್ನರಾಯಪಟ್ಟಣಕ್ಕೆ ಇರುತ್ತಿತ್ತು, ಚನ್ನರಾಯಪಟ್ಟಣ ಹಾಸನಕ್ಕೆ ಹಬ್ಬಿಸುವುದು, ಇಲ್ಲಿ ಮಾತುಮಾತಿಗೆ ಹೊಳೆನರಸೀಪುರ ಅರಕಲಗೂಡಿಗೆ ಸಂಘರ್ಷ ಕಾಣುತ್ತದೆ ತಮಗೆಲ್ಲರಿಗೂ ಗೊತ್ತಿರುವುದು. ಹಾಲಿನ ಡೈರಿ ಅಧ್ಯಕ್ಷರಾಗಿದ್ದಾರೆ ರೇವಣ್ಣನವರು ಸಚಿವ ಸಂಪುಟದಲ್ಲಿ, ನಿಂಗಯ್ಯನವರಿದ್ದಾರೆ, ಅವರು ರಾಜೀನಾಮೆ ಕೊಡಬೇಕು ಅಧ್ಯಕ್ಷತೆಗೆ ಎಂದು. ರಾಮಸ್ವಾಮಿಯವರು ಶಾಸಕರಾಗಿದ್ದರೆ ಇವರೂರ ಹಾಲಿನ ಡೈರಿಗೆ ಸದಸ್ಯರಾಗಿ ಬಿಟ್ಟರೆ ಬಹಳ ಮರ್ಯಾದೆ ಹೋಗಿಬಿಡುತ್ತದೆಯೇ? ರೇವಣ್ಣನವರು ಮಂತ್ರಿಯಾಗಿಬಿಟ್ಟರೆ ಪಡುವಲಹಿಪ್ಪೆ ಡೈರಿಯನ್ನು ಅವರು ನೋಡಬಾರದಾ? ಅಲ್ಲಿ ಸದಸ್ಯನಾಗಬಾರದು ಎಂದು ಹೇಳಿದೆಯಾ? ಇದು ಏನಾಗುತ್ತದೆ ಅಂದರೆ ಮಾತುಮಾತಿಗೂ ಹಾಸನ ಜಿಲ್ಲೆ ಮರ್ಯಾದೆಯ ಪ್ರಶ್ನೆ ಇದೆ ಎಂದು ಹೇಗೆ ಸ್ವಾಮಿ ಸಹಕಾರ ಸಂಘ ದಿವಾಳಿಯಾಗಿದೆ, ಏನಾಗಿತ್ತು ಸ್ವಾಮಿ ಡಿಸಿಸಿ ಬ್ಯಾಂಕ್ ನಿಮ್ಮ ಕಾಲದಲ್ಲಿ? ಈಗ ಹೇಳುತ್ತಿದ್ದೀರಿ ಒಕ್ಕಲಿಗ ಮಂತ್ರಿ ಇದ್ದಾರೆ. ಒಕ್ಕಲಿಗ ಅಧಿಕಾರಿ ಇದ್ದಾರೆ ಎಂದು ತಾವೂ ಒಕ್ಕಲಿಗರೇ ಅಲ್ಲವೇ, ತಾವ್ಯಾಕೆ ಬಿಟ್ಟುಕೊಡಬಾರದು. ಪಾಪ, ಲಿಂಗಾಯಿತರಿರಲಿಲ್ಲವೇ ಅರಕಲಗೂಡಿನಲ್ಲಿ? ಕುರುಬ ಜನಾಂಗದವರಿರಲಿಲ್ಲವೇ? ನಾವೂ ನೀವೂ ಯಾಕೆ ಬರಬೇಕಾಗಿತ್ತು ಮತ್ತೆ?

ನಾವೆಲ್ಲಾ ಸಾರಾಸಗಟಾಗಿ ಬಿಟ್ಟು ಬೇರೆಯವರಿಗೇಕೆ ಅವಕಾಶ ಕೊಡಬಾರದಾಗಿತ್ತು? ನೀವು ಮಾತನಾಡಿ, ಬೇಡ ಎನ್ನುವುದಿಲ್ಲ. ರಾಮಸ್ವಾಮಿಯವರ ಬಗ್ಗೆ ನಮಗೆ ಅಪಾರ ಗೌರವವಿದೆ. ಆದರೆ ಮಾತುಮಾತಿಗೂ ಎಲ್ಲಾ ಒಕ್ಕಲಿಗ ಜನಾಂಗದವರನ್ನೇ ಇಟ್ಟಿದ್ದಾರೆ ಎಂದು ಏತಕ್ಕೆ ಹೇಳುತ್ತೀರಿ ಅಧಿಕಾರಿ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಏಕೆ ಜಾತಿ ಆಧಾರ ಇಟ್ಟುಕೊಳ್ಳುತ್ತೀರಿ?

ಶ್ರೀ ಎ.ಟಿ.ರಾಮಸ್ವಾಮಿ: ಅಧ್ಯಕ್ಷರೇ, ಪುಟ್ಟೇಗೌಡರು ನಾನು ಏನು ಮಾತನಾಡುತ್ತಿದ್ದೇನೆ ಅದನ್ನು ತಿರುಗಿಸಲಿಕ್ಕೆ ಪ್ರಯತ್ನಿಸುವುದು ಬೇಡ. ರಾಜಕೀಯ ಭಾಷಣ ಮಾಡುವುದಾದರೆ ಇಲ್ಲಿ ಕಟುವಾಗಿ ನಾನು ಮಾತನಾಡಬೇಕಾಗುತ್ತದೆ. ಅದೇ ಧಾಟಿಯಲ್ಲಿ ಉತ್ತರ ಕೊಡಬೇಕಾಗುತ್ತದೆ. ನಾನು ಹೇಳುತ್ತಿದ್ದೇನೆ, ಒಂದು ನೀತಿಯ ಪ್ರಶ್ನೆ. ಸಾಮಾಜಿಕ ನ್ಯಾಯದ ಪ್ರಶ್ನೆ ಎಂದು ಮಾತನಾಡಿಕೊಂಡು ಹೋಗುತ್ತಿದ್ದೇನೆ. ಅಧ್ಯಕ್ಷರೇ, ಜಿಲ್ಲಾ ತಾಲ್ಲೂಕಾ ಪಂಚಾಯಿತಿಗೆ ಮೀಸಲಾತಿ ಮಾಡಿದರು ಅಧ್ಯಕ್ಷರ ಅವಧಿ 20 ತಿಂಗಳು ಎಂದು. ನನ್ನ ಅಭಿಪ್ರಾಯ ಸದನದಲ್ಲಿ ಹೇಳಲು ನನಗೆ ಹಕ್ಕಿದೆ. ಅದು ಹೇಳುತ್ತಿರುವುದು ತಪ್ಪು ಅಂದರೆ ಅವರು ಉತ್ತರ ಕೊಡಲಿ ಬಿಡಿ ನಿಮಗ್ಯಾಕೆ? ಕುಂಬಳಕಾಯಿಕಳ್ಳ ಅಂದರೆ ಹೆಗಲು ಮುಟ್ಟಿನೋಡಿಕೊಳ್ಳುವುದು. ಅದರ ಅವಶ್ಯಕತೆ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರ ಉದ್ದೇಶವೇನೆಂದರೆ ಆಡಳಿತದಲ್ಲಿ ಎಲ್ಲರಿಗೂ ಅವಕಾಶ ಕೊಡಬೇಕೆಂಬುದೇ ಹೊರತಾಗಿ ಯಾವುದೇ ಒಂದು ಕೋಮಿಗೆ ಕೊಡಬಾರದು ಎಂಬ ದೃಷ್ಟಿಯಿಂದಲ್ಲ. ರಾಜಕೀಯಶಕ್ತಿಯನ್ನು ಎಲ್ಲರೂ ಶೇರ್ ಮಾಡಿಕೊಳ್ಳಬೇಕು. ಆಡಳಿತದಲ್ಲೂ ಎಲ್ಲರಿಗೆ ಅವಕಾಶ ಮಾಡಿಕೊಡಬೇಕು ಎಂಬ ದೃಷ್ಟಿಯಿಂದ ವಾದ ಮಂಡಿಸಿದ್ದಾರೆ ನೀವು ಅದಕ್ಕೆ ತಪ್ಪು ಅರ್ಥ ಮಾಡಿಕೊಂಡರೆ, ಹೇಗೆ? ನೀವು ಎಂಎಲ್ಎ ಅಲ್ಲವೇನು? ಅವರು ಬಿಡಬೇಕು ಅಂದರೆ ಏನು ಅರ್ಥ; ಈ ವಾದ ಮಂಡಿಸಿದರೆ ಸರಿಯಲ್ಲ. ಆಡಳಿತದ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಸಿ.ಎಸ್.ಪುಟ್ಟೇಗೌಡ: ಹಾಸನದ ಎಲ್ಲಾ ಜಾತಿಯವರಿಗೂ ಪ್ರಾತಿನಿಧ್ಯ ಸಿಕ್ಕಿದೆ. ರಾಮಸ್ವಾಮಿಯವರ ಅರಕಲಗೂಡಿನಲ್ಲಿ ಒಬ್ಬ ಕುಂಬಾರರವನು ಜಿಲ್ಲಾ ಪಂಚಾಯಿತಿ ಸದಸ್ಯನಾಗಿದ್ದಾನೆ. ಅಥವಾ ಇನ್ಯಾರೋ ಮಡಿವಾಳಶೆಟ್ಟರ ಪೈಕಿಯವನು ಅಥವಾ ಅತ್ಯಂತ ನಿಕೃಷ್ಟ ಸಮಾಜದಿಂದ ಜಿಲ್ಲಾ ತಾಲ್ಲೂಕು ಪಂಚಾಯಿತಿಗೆ ಬಂದಿದ್ದರೆ ಅದು ಶ್ರೀಮಾನ್ ದೇವೇಗೌಡರ ಸರ್ಕಾರ ಅವರಿಗೆಲ್ಲಾ ಅವಕಾಶ ಕೊಟ್ಟಿದೆ ಎನ್ನುವುದನ್ನು ರಾಮಸ್ವಾಮಿಯವರಾಗಲಿ ಖರ್ಗೆಯವರಾಗಲಿ ಮರೆಯಬಾರದು.

ಶ್ರೀ ಎ.ಟಿ.ರಾಮಸ್ವಾಮಿ: ಆ ಸಾಮಾಜಿಕ ನ್ಯಾಯವನ್ನು ಎಷ್ಟರಮಟ್ಟಿಗೆ ನಾನು ಒದಗಿಸಿದ್ದೇನೆ ಎಂದು ಹೇಳಿದೆ ಅದು ನಮ್ಮೂರಿನಲ್ಲಿನ ಹಿರಿಯರಾದ ನಂಜೇಗೌಡರಿಗೆ ಗೊತ್ತು ಅಲ್ಲಿ ಬಹುತೇಕ ಒಕ್ಕಲಿಗರೇ ಇದ್ದಾರೆ. ನಾಲ್ಕು ವಿಶ್ವಕರ್ಮ ಕುಟುಂಬ

ಜನಾಂಗದವರಿದ್ದಾರೆ. ಗ್ರಾಮಪಂಚಾಯಿತಿಯಲ್ಲಿ ವಿಶ್ವಕರ್ಮ ಜನಾಂಗದವರನ್ನು ನಿಲ್ಲಿಸಿ ಗೆಲ್ಲಿಸಿದ್ದೇವೆ. ವಿರೋಧ ಪಕ್ಷದ ನಾಯಕರು ನಿನ್ನೆ ಮಾತನಾಡುತ್ತಾ ಹೇಳಿದರು ಒಂದು ಜಿಲ್ಲೆಯಲ್ಲಿ ಎಸ್.ಟಿ, ಡಿಸಿ, ಸಿಇಒ ಎಲ್ಲಾ ಒಂದೇ ಜನಾಂಗದವರಿರಬಾರದು, ವಿವಿಧ ಜನಾಂಗದ ಪ್ರಾತಿನಿಧ್ಯ ಇರಬೇಕು ಎಂದು ಹೇಳಿದರು. ಅದು ತಪ್ಪು, ಎಲ್ಲಾ ಒಂದೇ ಜನಾಂಗದವರು ಇರಬೇಕೆಂದು ಹೇಳುತ್ತೀರೋ? ಆ ದಿಕ್ಕಿನಲ್ಲಿ ನಾನು ಮಾತನಾಡಿದೆನೇ ವಿನಾಃ ಬೇರೆ ದಿಕ್ಕಿನಲ್ಲಲ್ಲ.

ಶ್ರೀ ಬಿ.ಬಿ.ನಿಂಗಯ್ಯ: ಕೆಎಂಎಫ್ ಅಧ್ಯಕ್ಷರು ನಾಮಿನೇಟ್ ಆಗಿರುವವರಲ್ಲ; ಚುನಾಯಿತ ಅಧ್ಯಕ್ಷರು, ಅಲ್ಲಿ ಎಂಡಿ ಆಗಿರುವವರು ಚನ್ನೇಗೌಡರು ಎಂದು, ಒಕ್ಕಲಿಗರಾಗಿರುವುದು ಅವರ ತಪ್ಪಲ್ಲ, ರೇವಣ್ಣನವರು ಅಧ್ಯಕ್ಷರಾಗುವ ಮೊದಲೇ ಅವರು ಎಂಡಿ ಆಗಿದ್ದರು.

ಶ್ರೀ ಎ.ಟಿ.ರಾಮಸ್ವಾಮಿ: ಕಾಕತಾಳೀಯ ನ್ಯಾಯ ಎನ್ನುವಂತೆ ಆಗಿರಬಹುದು. ಆದರೆ ಜನರ ಮನಸ್ಸಿನಲ್ಲಿ ಅನುಮಾನ ಶಂಕೆ ಮೂಡಲು ಅವಕಾಶವಾಗುತ್ತದೆ. ಅದನ್ನು ನಿವಾರಣೆ ಮಾಡಿಕೊಳ್ಳಿ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಸಾಮಾಜಿಕ ನ್ಯಾಯದ ಬಗ್ಗೆ ಬಹಳವಾಗಿ ಮಾತನಾಡಿದವರು ನೀವು. 20 ತಿಂಗಳು ಮೀಸಲಾತಿಯನ್ನು ಜಿಲ್ಲಾ ತಾಲ್ಲೂಕು ಪಂಚಾಯಿತಿಯಲ್ಲಿ ತಂದವರು ನೀವು ಎಂದು ಹೇಳಿಕೊಳ್ಳುತ್ತೀರಿ. ಮೀಸಲಾತಿ ತಂದದ್ದು ವ್ಯಕ್ತಿಗಲ್ಲ, ಒಂದು ವರ್ಗಕ್ಕೆ

6.40 ಪಿ.ಎಂ

ವ್ಯಕ್ತಿಗೋ, ವರ್ಗಕ್ಕೋ ತಂದಿದ್ದು? ಹಾಸನ ಜಿಲ್ಲೆ ಮಾಜಿ ಪ್ರಧಾನಮಂತ್ರಿಗಳ ಜಿಲ್ಲೆಯಾಗಿದೆ. ಏನಾಗಿದೆ? ಆ ವರ್ಗಕ್ಕೆ ಮೀಸಲಾತಿ ಇದ್ದುದನ್ನು ಕೋರ್ಟಿಗೆ ಹೋಗಿ ಏಕೆ ಸಾಮಾಜಿಕ ನ್ಯಾಯ ಒದಗಿಸಲಿಲ್ಲ? ಪುಟ್ಟೇಗೌಡರೇ, ಕೋರ್ಟಿನ, ಕಾನೂನಿನ ನೆಪ ತೆಗೆದುಕೊಂಡು ಹಿಂದುಳಿದ ವರ್ಗಕ್ಕೆ ಸಿಗಬೇಕಾದಂಥ ಜಿಲ್ಲಾ ಪಂಚಾಯಿತಿ ಅಧ್ಯಕ್ಷರ ಹುದ್ದೆಯನ್ನು.... ಅದಕ್ಕೋಸ್ಕರ ನೀವು ಇದನ್ನು ರಾಜಕೀಯ ವೇದಿಕೆ ಮಾಡಲು ಹೋಗಬೇಡಿ, ನಾನು ರಾಜಕೀಯ ವೇದಿಕೆ ಮಾಡುತ್ತಿಲ್ಲ.

(ಗೊಂದಲ)

ಶ್ರೀ ಎ.ಟಿ.ರಾಮಸ್ವಾಮಿ: ಅಲ್ಲಿಂದ ಉತ್ಪನ್ನಗಳನ್ನು ಇಲ್ಲಿಗೆ ತಂದು ಇಲ್ಲಿನ ಕೆಎಂಎಫ್‌ನಿಂದ ಏಕೆ ಮಾರಾಟ ಮಾಡಬೇಕು? ಇಲ್ಲಿಂದಲೇ ಏಕೆ ಎಲ್ಲಾ ಸಾಮಗ್ರಿಗಳನ್ನು ಕೊಂಡು ಅವರಿಗೆ ವಿತರಿಸುವುದಕ್ಕೆ, ಅವರಿಗೆ ಬೇಕಾದಂಥ ಸಾಮಗ್ರಿಗಳನ್ನು ಇಲ್ಲಿ ಏಕೆ ಕೊಳ್ಳಬೇಕು? ತುಪ್ಪ, ಬೆಣ್ಣೆ, ಮಿಲ್ಕ್ ಪೌಡರನ್ನು ಯಾವ ರೇಟಿಗೆ, ಯಾವ ವರ್ಷ ಮಾರಾಟ ಮಾಡಿದ್ದಾರೆ? ಈ ರೀತಿ ಟ್ಯಾಕ್ಸ್‌ನ್ನು ಕದ್ದು 1.6

ಕೋಟಿ ರೂಪಾಯಿಗಳಷ್ಟು ಹಣ ಏನು ರಿಕವರಿಯಾಗಿದೆ, ಇದು ಏಕಾಯಿತು? ಅದರಲ್ಲಿ ಯಾರು ಶಾಮೀಲಾಗಿದ್ದಾರೆ? ಏನು ಕ್ರಮ ತೆಗೆದುಕೊಂಡಿದ್ದೀರಿ? ಇದೆಲ್ಲದರ ಬಗ್ಗೆಯೂ ಸ್ಪಷ್ಟವಾದ ಮಾಹಿತಿಯನ್ನು ಒದಗಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತಾ ನಾನು ಅದಕ್ಕಾಗಿಯೇ ಹೇಳಿದ್ದು: ಒಂದು ತತ್ವ, ನೀತಿ ಆಧಾರದ ಮೇಲೆ ನೀವು ಒಪ್ಪಿಕೊಳ್ಳುತ್ತೀರಾ? ಒಬ್ಬರು ಸ್ಟೇಟ್ ಮಿನಿಸ್ಟರ್ ಕೈಕೆಳಗೆ ಒಬ್ಬರು ಕ್ಯಾಬಿನೆಟ್ ಮಿನಿಸ್ಟರ್ ಉತ್ತರ ಹೇಳುವುದಕ್ಕಾಗುತ್ತದೆಯೇ? ಇವರು ಕೇಳುವುದಕ್ಕಾಗುತ್ತದೆಯೇ? ಇದು ಸರಿಯೆಂದು ಹೇಳುತ್ತೀರಾ? ಮಾಡುತ್ತಿರುವುದು ಸರಿ ಎಂದು ಹೇಳಿದರೆ ನಾನು ಕುಳಿತುಕೊಂಡು ಬಿಡುತ್ತೇನೆ. ನಾನು ಹೇಳಿದ್ದು ಏನೆಂದರೆ, ಇದೊಂದು ನೀತಿಯ ಪ್ರಶ್ನೆ, ಇದೊಂದು ತತ್ವದ ಪ್ರಶ್ನೆ, ನಾವು ಒಂದು ಸಂಪ್ರದಾಯವನ್ನು ಎತ್ತಿ ಹಿಡಿದುಕೊಂಡು ಹೋಗಬೇಕು. ಇಷ್ಟನ್ನು ಹೇಳುತ್ತಾ ಮತ್ತೊಂದು ಪ್ರಮುಖವಾದ ಒಂದೇ ಒಂದು ವಿಷಯವನ್ನು ಪ್ರಸ್ತಾಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, 1988ರಲ್ಲಿ ಇವರದೇ ಸರ್ಕಾರವಿತ್ತು. ಆಗ ಮೈಸೂರಿನ ಸಿ.ಐ.ಟಿ.ಬಿ.ನಲ್ಲಿ ಸೈಟ್‌ಗಳ ವಿತರಣೆಯಲ್ಲಿ ಅಕ್ರಮವಾಗಿದೆ, ಅನ್ಯಾಯವಾಗಿದೆ, ದುರುಪಯೋಗಿದೆಯೆಂದು ಸಿ.ಓ.ಡಿ. ತನಿಖೆಗೆ ಆದೇಶ ಮಾಡಿದ್ದರು. ಸಿ.ಓ.ಡಿ.ಯಿಂದ ತನಿಖೆಯಾಯಿತು, ನಂತರ ತನಿಖಾ ವರದಿಯನ್ನು ಸರ್ಕಾರಕ್ಕೆ 1988ರಲ್ಲಿ ಸಲ್ಲಿಸಿದ್ದಾರೆ. (ಗೊಂದಲ) ನನ್ನನ್ನು ಹೇಳುವುದಕ್ಕೆ ಬಿಡಿ, ಹಾಗಾದರೆ, ನೀವು ಹದಿನೈದು ವರ್ಷಗಳದ್ದು ಚರ್ಚೆ ಮಾಡಿಲ್ಲವೇ? ಇಲ್ಲವೇ, ಒಂದು ನಿಗದಿ ಮಾಡಿ, ಏನೆಂದರೆ, ಇಂತಹ ದಿವಸದಿಂದ ಮುಂದಕ್ಕೆ ನಾವು ಚರ್ಚೆ ಮಾಡಬೇಕೆಂದು... ನಮಗೆ ನಿಮಗಿಂತಲೂ ಚೆನ್ನಾಗಿ ಗೊತ್ತಿದೆ. ಅದನ್ನು ಗೊತ್ತು ಮಾಡಿಕೊಂಡೇ ನಾವು ಇಲ್ಲಿಗೆ ಬಂದಿರುವುದು.

ಶ್ರೀ ಬಿ.ಶಿವರಾಮು: ಅಧ್ಯಕ್ಷರೆ, ಆ ಸದಸ್ಯರು ಅದಕ್ಕೆ ಮಾತ್ರ ಎದ್ದು ನಿಂತರು. ಹಿಂದೆ ಈ ಸದನದಲ್ಲಿ ಚರ್ಚೆ ಮಾಡಿ ಕೂಡಲೇ ತನಿಖೆಗಾಗಿ ಸಿ.ಬಿ.ಐ.ಗೆ ರೆಫರ್ ಮಾಡಿರುವ ಬಗ್ಗೆ ದಾಖಲೆಯಿದೆ. ಯಾವಾಗಲೋ ಎಸ್ಟಿಮೇಟ್ ಕಮಿಟಿಯಲ್ಲಿ ನಡೆದ ವಿಚಾರದ ಬಗ್ಗೆ ಶೂನ್ಯ ವೇಳೆಯಲ್ಲಿ ಸದನದಲ್ಲಿ ಪ್ರಸ್ತಾಪಿಸಿದ ಎರಡನೇ ನಿಮಿಷಗಳಲ್ಲಿ ಸಿ.ಬಿ.ಐ.ಗೆ ತನಿಖೆಗಾಗಿ ರೆಫರ್ ಮಾಡಿದ್ದು. ಅವರು ಏನು ಹೇಳುತ್ತಾರೆಂಬುದನ್ನು ಪೂರ್ತಿಯಾಗಿ ಕೇಳುವುದಕ್ಕಿಂತ ಮುಂಚೆಯೇ ಎದ್ದು ಹೇಳುತ್ತಾರಲ್ಲಾ, ಆವಾಗ ಎಲ್ಲಿ ಹೋಗಿದ್ದಿರಿ?

ಅಧ್ಯಕ್ಷರು: ಈಗ ಸಮಯ ಬಹಳವಾಯಿತು, ಇನ್ನು 10 ಜನರು ಮಾತನಾಡುವವರಿದ್ದಾರೆ. ದಯಮಾಡಿ ಬೇಗ ಮುಗಿಸಬೇಕು.

ಶ್ರೀ ಎ.ಟಿ.ರಾಮಸ್ವಾಮಿ: ನಾನು ಇನ್ನು ಐದು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ನೀವು ಮಾತನಾಡಲು ಇಪ್ಪತ್ತು ನಿಮಿಷಗಳ ಕಾಲಾವಕಾಶ ತೆಗೆದುಕೊಂಡು

ತದನಂತರ ನಲವತ್ತೈದು ನಿಮಿಷಗಳಷ್ಟು ಕಾಲ ಮಾತನಾಡಿದರೆ ಹೇಗೆ? 5- 10 ನಿಮಿಷಗಳು ಹೆಚ್ಚಾದರೆ ಅಡ್ಜೆಸ್ಟ್ ಮಾಡಿಕೊಳ್ಳಬಹುದು.

ಶ್ರೀ ಎ.ಟಿ.ರಾಮಸ್ವಾಮಿ: ಸಿ.ಓ.ಡಿ. ಎನ್‌ಕ್ವೈರಿಗೆ ಏನು ಆದೇಶವಾಗಿತ್ತು, ತನಿಖೆಯಾಗಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರು. ಈಗ ಆ ಸಿ.ಓ.ಡಿ. ವರದಿ ಏನಾಯಿತು? ವರದಿ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆಯೇ? ಇಲ್ಲವೇ? ಕ್ರಮ ಕೈಗೊಂಡಿಲ್ಲವೆಂದರೆ ಏಕೆ ಕೈಗೊಳ್ಳಲಿಲ್ಲ? ಇಷ್ಟೇ ಬೇಕಾಗಿರತಕ್ಕಂಥಾದ್ದು. ನನಗೆ ಗೊತ್ತಿರುವ ರೀತಿಯಲ್ಲಿ, ಆ ಸಿಓಡಿ ಎನ್‌ಕ್ವೈರಿಯಲ್ಲಿ ಈಗ ನಿಮ್ಮ ಮಂತ್ರಿಮಂಡಲದಲ್ಲಿ ಸಚಿವರಾಗಿರುವ ಒಬ್ಬರ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. ಇದು ನನ್ನದಲ್ಲ, ನಾನು ಆರೋಪ ಮಾಡುತ್ತಿಲ್ಲ, ಸಿಓಡಿ ಎನ್‌ಕ್ವೈರಿಯಲ್ಲಿರುವಂತಾದ್ದನ್ನು ಪ್ರಸ್ತಾಪಿಸುತ್ತಿದ್ದೇನೆ.

"About 48 sites were got allotted to Sri H.D.Revenna S/o H.D.Devegowda in benami and to ineligible persons. Sri Revanna paid for the sites for himself." It has been proved.. ಇದು ಸಿ.ಓ.ಡಿ ರಿಪೋರ್ಟ್‌ನಲ್ಲಿರುವಂಥಾದ್ದು. ನಾನು ಅದಕ್ಕೋಸ್ಕರ ಕೇಳುತ್ತಿದ್ದೇನೆ. ಇವೊತ್ತು ಅವರು ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಾಗಿದ್ದಾರೆ. ಇವೊತ್ತು ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಏನಾದರೂ ತೀರ್ಮಾನ ತೆಗೆದುಕೊಂಡಿದ್ದೀರೋ?

ಅಧ್ಯಕ್ಷರು: ನಾನು ಮತ್ತೆ ಮತ್ತೆ ನಿಮಗೆ ರೂಲ್ಸನ್ನು ನೆನಪು ಮಾಡಿಸಬೇಕಾಗಿದೆ. ಅವರು ಒಬ್ಬರು ಮಂತ್ರಿಯಾಗಿದ್ದು, ಖರ್ಗೆಯವರೇ, ತಮಗೂ ಗೊತ್ತಿದೆ, He is a Minister and if you have to make a charge, you have to give notice.

ಶ್ರೀ ಎ.ಟಿ.ರಾಮಸ್ವಾಮಿ: ನಾನು ಸಿ.ಓ.ಡಿ. ರಿಪೋರ್ಟನ್ನು ರೆಫರ್ ಮಾಡುತ್ತಿದ್ದೇನಷ್ಟೆ.

MR. SPEAKER: Mr. Yediyurappa the Hon'be Member sitting in this House when he was the leader of the opposition, ಅವರು ಆಪಾದನೆ ಮಾಡುವ ಕಾಲಕ್ಕೆ ನಾನು ಇಲ್ಲಿದ್ದುಕೊಂಡು ವಿರೋಧ ಪಕ್ಷದ ನಾಯಕರು ಇದ್ದಾಗಲೇ ಅವರಿಗೆ ಗೈಡ್ ಮಾಡಿದ್ದೇನೆ. ತಾವು ನೋಟೀಸ್ ಕೊಡದೆ ಹಾಗೇ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದೇನೆ. ನಾನು ಒಬ್ಬೊಬ್ಬರಿಗೂ ಒಂದೊಂದು ರೂಲ್ಸನ್ನು ಅಪ್ಲೈ ಮಾಡುವುದೇ?

ಶ್ರೀ ಎ.ಟಿ.ರಾಮಸ್ವಾಮಿ: ಸಿ.ಓ.ಡಿ. ರಿಪೋರ್ಟ್ ಬಗ್ಗೆ ಏನು ಕ್ರಮ ಕೈಗೊಂಡಿದ್ದೀ

ಎಂಬುದನ್ನಷ್ಟೇ ಕೇಳುತ್ತಿರುವುದು.

ಮಾನ್ಯ ಸದಸ್ಯರು: ವರದಿ ಏನಾಯಿತೆಂದು ಕೇಳಿ.

MR. SPEAKER: I am not against your making allegations, but there is a way. Supposing, ಈಗ ಯಡಿಯೂರಪ್ಪನವರು ಎದ್ದು ನಿಂತು ನನಗೊಂದು ನೀತಿ, ರಾಮಸ್ವಾಮಿಯವರಿಗೊಂದು ನೀತಿಯೇ ಎಂದು ಕೇಳಿದರೆ. ನಾನು ಏನು ಉತ್ತರ ಹೇಳಬೇಕು?

ಶ್ರೀ ಎ.ಟಿ.ರಾಮಸ್ವಾಮಿ:= ನಾನು ಆರೋಪ ಹೊಡುತ್ತಿಲ್ಲ, ಸಿ.ಓ.ಡಿ. ವರದಿ ಏನಾಯಿತು? ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎನ್ನುವ ವಿಚಾರವನ್ನು ಮಾತ್ರ ನಾನು ಪ್ರಸ್ತಾಪಿಸುತ್ತಿದ್ದೇನೆ. ಇದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳದಿದ್ದರೆ, ಇವೊತ್ತು ಅವರು ಸಚಿವಸಂಪುಟ ದರ್ಜೆಯ ಸಚಿವರಾಗಿದ್ದಾರೆ. ಅವರೇ ತೀರ್ಪುಗಾರರಾಗಿ ಈ ಒಂದು ವರದಿ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ? ಈ ವರದಿ ಈಗ ಸಂಪುಟದ ಮುಂದಿದ್ದಾಗ ಅವರೇ ತೀರ್ಪುಗಾರರಾಗಿ ಈ ಒಂದು ವರದಿ ಮೇಲೆ ಕ್ರಮ ಕೈಗೊಳ್ಳುವುದಕ್ಕಾಗುತ್ತದೆಯೇ? ಆ ದೃಷ್ಟಿಯಿಂದ ಇದರ ಬಗ್ಗೆ ತೀರ್ಮಾನ ಕೈಗೊಳ್ಳುವವರೆಗೂ, ಇಲ್ಲವೇ ಅವರು ನಿರ್ದೋಷಿ ಎಂದು ತೀರ್ಮಾನ ಮಾಡಲಿ, ಅಲ್ಲವೆಂತಾದರೂ ತೀರ್ಮಾನ ಮಾಡಿ. ತೀರ್ಮಾನ ಕೈಗೊಳ್ಳುವವರೆಗೂ ಸಚಿವರಾದರೂ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು. ಇಲ್ಲವೇ ಮುಖ್ಯಮಂತ್ರಿಗಳಾದರೂ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕೆಂಬ ಬಗ್ಗೆ ಸರ್ಕಾರವನ್ನು ಒತ್ತಾಯ ಮಾಡುತ್ತಾ ಇಷ್ಟು ಹೊತ್ತು ಕೆಲವು ವಿಷಯಗಳನ್ನು ಪ್ರಸ್ತಾಪಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು: ಕೆ.ಜಯರಾಮಶೆಟ್ಟರು ಯಾವುದೋ ಒಂದು ಕಾರ್ಯಕ್ರಮಕ್ಕೆ ಹೋಗಬೇಕು ನನಗೆ ಮೊದಲು ಅವಕಾಶ ಕೊಡಿ ಆ ಮೇಲೆ ಅವರಿಗೆ ಕೊಡಿ ಎಂದು ಕೇಳಿದ್ದಾರೆ. ಹೇಗೆ ಮಾಡುತ್ತೀರಿ? ಜಯರಾಮಶೆಟ್ಟರಿಗೆ ಅವಕಾಶ ಕೊಟ್ಟು ಆಮೇಲೆ ತಮಗೆ ಕೊಡಲೇ?

+ ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಸನ್ಮಾನ್ಯ ಅಧ್ಯಕ್ಷರೆ, ಮೀನುಗಾರಿಕೆ ಇಲಾಖೆಯ ಬೇಡಿಕೆಗಳನ್ನು ವಿರೋಧಿಸುತ್ತಾ ರಾಜ್ಯ ಸರ್ಕಾರದ ಕೈಗಾರಿಕೆ ಇಲಾಖೆ ಮತ್ತು ಸಣ್ಣ ಕೈಗಾರಿಕಾ ಇಲಾಖೆ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಜನತಾದಳ ಸರ್ಕಾರ ರಾಜ್ಯದಲ್ಲಿ ರಾಜ್ಯಭಾರ ಮಾಡಿಕೊಂಡು ಎರಡು ವರ್ಷ 8 ತಿಂಗಳಾಯಿತು. ಈ 2 ವರ್ಷ 8 ತಿಂಗಳಲ್ಲಿ ಈ ಇಲಾಖೆಯಲ್ಲಿ ಆದ ಅಭಿವೃದ್ಧಿಯ ಬಗ್ಗೆ ಸರ್ಕಾರ ಪುನರ್ ಪರಿಶೀಲನೆ ಮಾಡಿದೆ ಖಂಡಿತ ಫಲಿತಾಂಶ ಶೂನ್ಯ ಎಂದು

ಹೇಳುವುದಕ್ಕೆ ಬರುತ್ತದೆ. ಅಮವಾಸ್ಯೆಯ ರಾತ್ರಿ ದೋಣಿ ನಡೆಸಲು ಒಂದು ನದಿಯಿಂದ ಈ ಕಡೆಯಿಂದ ಆ ಕಡೆಗೆ ಹೋಗಲಿಕ್ಕೆ ನಾಲ್ಕು ಮಿತ್ರರು ಒಟ್ಟಾಗಿ ಹೋಗುತ್ತಾರೆ. ದೋಣಿಯನ್ನು ನಡೆಸಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಮಧ್ಯರಾತ್ರಿಯಿಂದ ಬೆಳಗಿನವರೆಗೆ ಹುಟ್ಟು ಹಾಕುತ್ತಿದ್ದರೂ ಕೂಡ ದೋಣಿ ಆ ದಡವನ್ನು ಸೇರುತ್ತಾ ಇಲ್ಲ. ಬೆಳಗಾದ ತಕ್ಷಣ ನೋಡುತ್ತಾರೆ ಅವರು ಎಲ್ಲಿದ್ದಾರೆ ಅಲ್ಲಿ ಇದ್ದಾರೆ. ಮತ್ತೆ ಅದನ್ನು ನೋಡುತ್ತಿರುವಾಗ ದೋಣಿಗೆ ಹಗ್ಗವನ್ನು ಕಟ್ಟಿದ್ದು ಅದು ಅಲ್ಲಿಯೇ ಮರಕ್ಕೆ ಕಟ್ಟಿದ ಹಾಗೆಯೇ ಇತ್ತು ಉದ್ದ ಎಷ್ಟು ಇತ್ತು ಅಷ್ಟೇ ಮುಂದಕ್ಕೆ ಹಿಂದಕ್ಕೆ ಹೋಗುತ್ತಿತ್ತು. ನಿಮ್ಮ ಸರ್ಕಾರದ 45 ಮಂತ್ರಿಗಳು ಹುಟ್ಟು ಹಾಕುತ್ತಿದ್ದೀರಾ? 2 ವರ್ಷ 8 ತಿಂಗಳ ಹಿಂದುಗಡೆ ನೀವು ಎಲ್ಲಿದ್ದಾರೆ ಹಾಗೆಯೇ ನೀವು ಅಲ್ಲಿಯೇ ಇದ್ದೀರೆಂದು ನಾನು ವಿಷಾದದಿಂದ ಹೇಳುತ್ತಿದ್ದೇನೆ. ಮೀನುಗಾರಿಕೆ ಒಂದು ಪೌಷ್ಟಿಕ ಆಹಾರವು ಹೌದು ಹೆಚ್ಚಾಗಿ ವಿದೇಶಿ ವಿನಿಮಯವನ್ನು ಗಳಿಸಿಕೊಟ್ಟಿದೆ, ವಿಫಲ ಉದ್ಯೋಗಾವಕಾಶವನ್ನು ಮಾಡಿಕೊಟ್ಟಿದೆ. ರಾಜ್ಯ ಸರ್ಕಾರಕ್ಕೆ ಹೆಚ್ಚು ಕಡಿಮೆ ಒಂದು ವರ್ಷಕ್ಕೆ 600 ಕೋಟಿ ರೂಪಾಯಿ ಆದಾಯವನ್ನು ಗಳಿಸಿಕೊಡುತ್ತಿದೆ. ದೇಶದ ಆರ್ಥಿಕ ಪ್ರಗತಿಯಲ್ಲಿ ಮೀನುಗಾರಿಕೆ ಒಂದು ದೊಡ್ಡ ಮೈಲುಗಲ್ಲೂ ಕೂಡ ಆಗಿದೆ. ನಮ್ಮ ಭಾರತದೇಶದಲ್ಲಿ ಕನಿಷ್ಟ 1500 ಕಿ.ಮೀ. ಕರಾವಳಿ ಪ್ರದೇಶ ಉಂಟು. ಕರ್ನಾಟಕ ರಾಜ್ಯಕ್ಕೆ 300 ಕಿ.ಮೀ. ಉದ್ದದ ಕರಾವಳಿ ಪ್ರದೇಶ ಉಂಟು. ಅದು ಅಲ್ಲದೆ ಒಳನಾಡಿನ ಮೀನುಗಾರಿಕೆ ಬಗ್ಗೆ ಕೆರೆ ಮತ್ತು ಕೊಳಗಳ ಬಗ್ಗೆ 414 ಲಕ್ಷ ಹೆಕ್ಟೇರ್ ಪ್ರದೇಶ, 2.2 ಲಕ್ಷ ಹೆಕ್ಟೇರ್ ಒಟ್ಟು 6 1/2 ಒಳನಾಡು ಮೀನುಗಾರಿಕೆ ನಮ್ಮ ರಾಜ್ಯ ಸರ್ಕಾರ ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡಿದೆ. ಸುಮಾರು 4 1/2 ಲಕ್ಷ ಮೀನುಗಾರು ಇದನ್ನೇ ನಂಬಿಕೊಂಡು ಜೀವನೋಪಾಯವನ್ನು ಮಾಡುತ್ತಿದ್ದಾರೆ. ಕಡಲ ಮೀನುಗಾರಿಕೆಯಲ್ಲಿ 1995-96ನೇ ಇಸ್ವಿಯಲ್ಲಿ 2,17,511 ಮೆಟ್ರಿಕ್ ಟನ್ ಮೀನು ಉತ್ಪಾದನೆಯಾಗಿದೆ. 278.91 ಕೋಟಿ ರೂಪಾಯಿ ಆದಾಯ ಬಂದಿದೆ. 1996-97ರಲ್ಲಿ 2.3 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಮೀನು ಉತ್ಪಾದನೆಯಾಗಿ ಮುನ್ನೂರು ಕೋಟಿ ರೂಪಾಯಿಗಳಷ್ಟು ಆದಾಯ ಬಂದಿದೆ. ಜೊತೆಗೆ ಸೀಗಡಿ ಉತ್ಪಾದನೆ 'ಚಿನ್ನದ ಉತ್ಪಾದನೆ'ಯಾಗಿದ್ದು 1995-96ನೇ ಸಾಲಿನಲ್ಲಿ ನಮ್ಮ ರಾಜ್ಯದ ಕರಾವಳಿ ಪ್ರದೇಶದಲ್ಲಿ 8,241 ಮೆಟ್ರಿಕ್ ಟನ್‌ಗಳಷ್ಟು ಉತ್ಪಾದನೆಯಾಗಿದ್ದು, 118 ಕೋಟಿ ರೂಪಾಯಿಗಳ ವಿದೇಶಿ ವಿನಿಮಯ ಗಳಿಸಿದ್ದರೆ, 1996-97ನೇ ಸಾಲಿನಲ್ಲಿ ಎಂಟೂವರೆ ಸಾವಿರ ಮೆಟ್ರಿಕ್ ಟನ್‌ಗಳಷ್ಟು ಉತ್ಪಾದನೆಯಾಗಿ 250 ಕೋಟಿ ರೂಪಾಯಿಗಳ ವಿದೇಶಿ ವಿನಿಮಯ ಗಳಿಸಲಾಗಿದೆ. ಕಡಲ ಮೀನುಗಾರಿಕೆಯಲ್ಲಿ 350 ಪರ್ಸಿನ್ ಬೋಟುಗಳು, 2000 ಬೀಳು ಬಲೆ ದೋಣಿಗಳು, 2,500 ಸೀಗಡಿ ಟ್ರಾಲರ್‌ಗಳು, 1,200 ಇತರ ಯಾಂತ್ರಿಕ ದೋಣಿಗಳು, 15,000 ನಾಡ ದೋಣಿಗಳು ಕೆಲಸ ಮಾಡುತ್ತಿದ್ದು ಒಟ್ಟು 400 ಜನರಿಗೆ ಉದ್ಯೋಗವಕಾಶ ಕಲ್ಪಿಸಿದೆ. ಶೇಕಡಾ 85ಕ್ಕೂ ಮಿಕ್ಕಿ ಯಾಂತ್ರಿಕ ದೋಣಿಗಳು ಯಾಂತ್ರಿಕ ವ್ಯವಸ್ಥೆಯಲ್ಲಿ ಮೀನುಗಾರಿಕೆ ಕೃಷಿಯಲ್ಲಿ ನೇರವಾಗಿ ತೊಡಗಿಕೊಂಡಿವೆ. ಆದರೆ, ಮೀನುಗಾರರ ಜೀವನ ಕ್ರಮ

ಹೇಗಿದೆಯೆಂದರೆ, ಮುಂಜಾನೆ ಮೂರು ಗಂಟೆಗೆ ಎದ್ದು ಪರ್ಸಿನ್ ಬೋಟುಗಳಲ್ಲಿ ಸಾಂಪ್ರದಾಯಿಕ ಮೀನುಗಾರರು ಕಡಲಿಗೆ ಹೋದರೆ ಸುಮಾರು 5-6 ದಿವಸಗಳ ತನಕ ಮೀನುಗಾರಿಕೆಯಲ್ಲಿ ತೊಡಗಿಕೊಂಡಿರುತ್ತಾರೆ. ಇವರುಗಳ ಕುಟುಂಬ ಒಂದೆಡೆಯಾದರೆ ಇವರ ಕೆಲಸ ಇನ್ನೊಂದು ಕಡೆ. ಪ್ರಕೃತಿ ವಿಕೋಪಕ್ಕೆದುರಾಗಿ ಬಹಳಷ್ಟು ಧೈರ್ಯದಿಂದ ಗಟ್ಟಿ ಮನಸ್ಸಿಟ್ಟುಕೊಂಡು ತನ್ನ ಕೆಲಸ ಮಾಡಿ ಬಳಿಕ ಸಂಪಾದನೆಯಿಂದ ಬಂದ ಹಣದಿಂದ ತನ್ನ ಕುಟುಂಬ ಪೋಷಣೆ ಮಾಡುತ್ತಿದ್ದರೂ ಕೂಡ, ಮೀನುಗಾರಿಕೆಯನ್ನೇ ಮುಖ್ಯ ಕಸುಬಾಗಿ ನಂಬಿಕೊಂಡಿರುವ ಇವರಿಗೆ ವರ್ಷದ ಜೂನ್ ತಿಂಗಳಿನಿಂದ ಆಗಸ್ಟ್ ತಿಂಗಳಿನವರೆಗೆ ಮೀನುಗಾರಿಕೆ ಕೃಷಿ ನಿಷೇಧಿಸಿದೆ. ಈ ಸಂದರ್ಭದಲ್ಲಿ ಅವರಿಗೆ ಯಾವುದೇ ಉದ್ಯೋಗಾವಕಾಶವಿಲ್ಲ. ಉಳಿದ ಒಂಭತ್ತು ತಿಂಗಳುಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿದವರಿಗೆ ಆ ಸಂದರ್ಭದಲ್ಲಿ ಬರುವ ಆದಾಯದ ಲಾಭದಾಯಕ ಪ್ರಶ್ನೆಯಲ್ಲ. ಮೊನ್ನೆ ಕೃಷಿ ಬಗ್ಗೆ ಮಾತನಾಡುತ್ತಾ ಹೇಳಿದರು: ಯಾರು ಬಹಳಷ್ಟು ಗೇಯ್ದು ದುಡಿಯುತ್ತಾ ಇದ್ದಾನೆ ಆತ ಯಾವತ್ತೂ ಬಡವನಾಗುತ್ತಾನೆ ಮತ್ತು ಸಾಲ ಮಾಡುತ್ತಿರುವವನು ಇನ್ನಷ್ಟು ಸಾಲಗಾರನಾಗುತ್ತಾನೆಂದು. ಇದೇ ರೀತಿಯ ಪರಿಸ್ಥಿತಿ ಇವೊತ್ತು ಮೀನುಗಾರರಿಗಿದೆ. ಆದುದರಿಂದ, ನಾನು ರಾಜ್ಯ ಸರ್ಕಾರದಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಮೂರು ತಿಂಗಳ ಬರಗಾಲದ ಪರಿಸ್ಥಿತಿಯಲ್ಲಿ ಪ್ರತಿ ಮೀನುಗಾರರ ಕುಟುಂಬಕ್ಕೆ 200ರಿಂದ 250 ರೂಪಾಯಿಗಳನ್ನು ಕೊಡುವಂಥ ಏನು ವ್ಯವಸ್ಥೆ ಮಾಡುತ್ತಿದ್ದೀರಿ, ಇದು ಏನೇನೂ ಸಾಲದಾಗಿರುವುದರಿಂದ ಕನಿಷ್ಠ ಒಂದು ಸಾವಿರ ರೂಪಾಯಿಗಳನ್ನು ಕೊಡುವ ಬಗ್ಗೆ ತಾವು ಪರಿಶೀಲಿಸಬೇಕು. ಇದರ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಇನ್ನು ಇದರ ಜೊತೆಗೆ ಮಂಗಳೂರಿನಲ್ಲಿ ಮೀನುಗಾರಿಕೆ ಕಾಲೇಜು ಇದ್ದು, ಸದರಿ ಕಾಲೇಜಿನಲ್ಲಿ ನಮ್ಮ ಕರಾವಳಿ ಪ್ರದೇಶದ ಸಾಂಪ್ರದಾಯಿಕ ಮೀನುಗಾರರ ಕುಟುಂಬದ ಮಕ್ಕಳಿಗೆ ಎಷ್ಟು ಸೀಟುಗಳನ್ನು ದೊರಕಿಸಿಕೊಟ್ಟಿದ್ದೀರಿ? ಮೀನುಗಾರಿಕೆಯನ್ನೇ ನಂಬಿರುವಂಥ ಕುಟುಂಬಗಳ ಮಕ್ಕಳು ಆ ಕಾಲೇಜಿನಲ್ಲಿ ವಿದ್ಯಾಭ್ಯಾಸ ಪಡೆಯುವುದಕ್ಕೆ ಅರ್ಹತೆ ಹೊಂದಿಲ್ಲ ಬೇರೆ ರಾಜ್ಯ, ಜಿಲ್ಲೆಗಳಿಂದ ಹೆಚ್ಚು ಅಂಕಗಳನ್ನು ಪಡೆದುಕೊಂಡು ಬಂದು ಆ ಕಾಲೇಜಿನಲ್ಲಿ ಸೀಟುಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಮೀನುಗಾರಿಕೆ ಕೃಷಿ ಬಗ್ಗೆ ಕಾಲೇಜಿನಲ್ಲಿ ಹೆಚ್ಚು ಪರಿಣಿತಿ ಪಡೆಯುವುದಕ್ಕೆ ಸಾಧ್ಯತೆಯಿರುವುದರಿಂದ ಮೀನುಗಾರಿಕೆಯನ್ನೇ ಅವಲಂಬಿಸಿಕೊಂಡಿರುವ ಕುಟುಂಬಗಳ ಮಕ್ಕಳಿಗೆ ಆ ಕಾಲೇಜಿನಲ್ಲಿ ಕನಿಷ್ಠ ಶೇಕಡಾ 30-40ರಷ್ಟು ಅಂಕಗಳು ಸಿಕ್ಕಿ ವಿದ್ಯಾಭ್ಯಾಸ ಪಡೆದುಕೊಳ್ಳುವಂಥ ವ್ಯವಸ್ಥೆ ಇಲ್ಲ. ದಯವಿಟ್ಟು ಮಂಗಳೂರು ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ ಮೀನುಗಾರರ ಕುಟುಂಬಗಳ ಮಕ್ಕಳಿಗೆ ಶೇಕಡಾ 10-15ರಷ್ಟು ಮೀಸಲಾತಿ ಸೀಟುಗಳನ್ನಿಟ್ಟರೆ ಅವರುಗಳು ಮೀನುಗಾರಿಕೆಯಲ್ಲಿ ಹೆಚ್ಚು ಪರಿಣಿತಿಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಲು ಇಷ್ಟಪಡುತ್ತೇನೆ. ಆನಂತರ, ಮೀನುಗಾರಿಕೆ ವಸತಿ ಬಗ್ಗೆ ಸರ್ಕಾರ ಕಳೆದ ವರ್ಷ ಒಂದು ಘೋಷಣೆ ಹೊರಡಿಸಿತು.

1996-97ನೇ ಸಾಲಿನಲ್ಲಿ ಮೀನುಗಾರರ ವಸತಿಗಳಿಗೆಂದು ಒಂದು ಸಾವಿರ ಮನೆಗಳನ್ನು ನಿಗದಿಪಡಿಸಿದ್ದು ಎಲ್ಲರಿಗೂ ಕೊಡುತ್ತೇವೆಂದು ಹೇಳಿದ್ದರು. ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಕರಾವಳಿ ಪ್ರದೇಶವಿದ್ದು, ಒಳನಾಡು ಮೀನುಗಾರಿಕೆ ಇರುವುದರಿಂದ ಮನೆಗಳನ್ನು ಎಲ್ಲೆಲ್ಲಿ ಹಂಚಲಾಗಿದೆ? ವಸತಿ ಪ್ರದೇಶಗಳಲ್ಲಿ ಮನೆಗಳನ್ನು ಎಲ್ಲೆಲ್ಲಿ ಕೊಟ್ಟಿದ್ದೀರಿ? ಮೈಸೂರು ಜಿಲ್ಲೆಗೆ 100 ಮನೆಗಳನ್ನು ಕೊಟ್ಟರೆ, ಮಂಡ್ಯ ಜಿಲ್ಲೆಗೆ 100, ಕೋಲಾರಕ್ಕೆ 50, ಶಿವಮೊಗ್ಗಕ್ಕೆ 100, ಗುಲ್ಬರ್ಗಕ್ಕೆ 100 ಉತ್ತರ ಕನ್ನಡಕ್ಕೆ 99 ಮತ್ತು ದಕ್ಷಿಣ ಕನ್ನಡಕ್ಕೆ 109 ಕೊಟ್ಟಿದ್ದೀರಿ. ದಕ್ಷಿಣ ಕನ್ನಡದಲ್ಲಿ 109 ಮನೆಗಳನ್ನು ಎಲ್ಲೆಲ್ಲಿ ಹಂಚಿದ್ದೀರಿ? ಬ್ರಹ್ಮಾವರದಲ್ಲಿ ಜಾಸ್ತಿ ಮನೆಗಳನ್ನು ಕೊಟ್ಟಿದ್ದೀರಿ, ಉಡುಪಿಯಲ್ಲಿ ಮತ್ತು ಬೈಂದೂರಿನಲ್ಲಿ ಸ್ವಲ್ಪ ಮನೆಗಳನ್ನು ಕೊಟ್ಟಿದ್ದೀರಿ. ಮಂಗಳೂರು ತಾಲ್ಲೂಕು ಪೂರ್ತಿಯಾಗಿ ಕರಾವಳಿ ಪ್ರದೇಶವಾಗಿರುವುದರಿಂದ ಅಲ್ಲಿಯ ಮೀನುಗಾರರ ವಸತಿ ಕುರಿತು ಏನು ಚಿಂತಿಸಿದ್ದೀರಿ? ತಾವು ಏನು ತಾರತಮ್ಯ ಮಾಡುತ್ತಿದ್ದೀರಿ, ಮೀನುಗಾರಿಕೆ ಮಂತ್ರಿಗಳಿರುವಂಥ ಬ್ರಹ್ಮಾವರ ಕ್ಷೇತ್ರಕ್ಕೆ ಮನೆಗಳನ್ನು ಹೆಚ್ಚು ಮೀಸಲಾಗಿಟ್ಟಿದ್ದರೆ, ...ಮನೆಗಳನ್ನು ಹಂಚುವಾಗ ಇಡೀ ಕ್ಷೇತ್ರ, ರಾಜ್ಯವನ್ನು ತೆಗೆದುಕೊಂಡಾಗ ನಿಷ್ಪಕ್ಷಪಾತವಾಗಿ ತಾವು ಏನು ಮನೆಗಳನ್ನು ಹಂಚಬೇಕಾಗಿತ್ತು, ಆ ರೀತಿ ಮಾಡಲಿಲ್ಲ. ಆದುದರಿಂದ, ಈ ವರ್ಷದಲ್ಲಿ ಕನಿಷ್ಠ 5,000 ಮನೆಗಳನ್ನು ಕೊಡುವಂಥ ಗುರಿ ಇಟ್ಟುಕೊಳ್ಳಬೇಕು. ಒಳನಾಡು ಮೀನುಗಾರಿಕೆ ಮತ್ತು ಕರಾವಳಿ ಮೀನುಗಾರಿಕೆ ಎರಡನ್ನೂ ಪೂರ್ಣವಾಗಿ ತೆಗೆದುಕೊಂಡು ಆ ಕುರಿತು ವ್ಯವಸ್ಥಿತವಾದ ಅಂಕಿ-ಅಂಶ ಪಡೆದುಕೊಂಡು ಬಡವರಿಗೆ ಕನಿಷ್ಠ 30,000 ರೂಪಾಯಿಗಳನ್ನು ಒಂದು ಮನೆಗೆ ಕೊಡುವಂತೆ, ಆಶ್ರಯ ಯೋಜನೆಯಡಿ 20,000 ರೂಪಾಯಿಗಳನ್ನು ಕೊಡುತ್ತಿದ್ದು, ಒಟ್ಟಾರೆ ಅವರಿಗೆ 36,000 ರೂಪಾಯಿಗಳನ್ನು ಸಬ್ಸಿಡಿ ಸಮೇತ ಕೊಡಬೇಕೆಂದು ನಾನು ರಾಜ್ಯ ಸರ್ಕಾರವನ್ನು ಈ ಮೂಲಕ ವಿನಂತಿಸಿಕೊಳ್ಳುತ್ತಿದ್ದೇನೆ. ರಾಜ್ಯದಲ್ಲಿ ಮಂಗಳೂರಿನಲ್ಲಿ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮವಿದ್ದು, ಈ ನಿಗಮ ಅರಬ್ಬಿ ಸಮುದ್ರದಲ್ಲಿ ಮುಳುಗುತ್ತಿರುವ ಹಡಗಿನಂತಾಗಿದೆ. ಇದು ಸರ್ಕಾರಿ ಸ್ವಾಯತ್ತ ಸಂಸ್ಥೆಯಾಗಿದ್ದು, ಇದರ ಕೇಂದ್ರ ಕಛೇರಿ ಮಂಗಳೂರಿನಲ್ಲಿದೆ. ಇಲ್ಲಿ ಮೂರು ಘನೀಕೃತ ಯಂತ್ರಗಳಿದ್ದು, ಮೂರು ಶೀತಲೀಕರಣ ಕೊಠಡಿಗಳು, ಒಣ, ಹಸಿ ಮೀನು, ಹೂ ಮತ್ತು ಹಾಲು ಶೇಖರಣೆಗೆ ಎಲ್ಲಾ ವ್ಯವಸ್ಥೆಗಳಿವೆ. 1971ರಲ್ಲಿ ಪ್ರಾರಂಭಗೊಂಡಂಥ ಈ ಸಂಸ್ಥೆ ಬಗ್ಗೆ ನಾನು ಮೊನ್ನೆ ಸದನದಲ್ಲಿ ಪ್ರಶ್ನೆ ಕೇಳಿದಾಗ ಉತ್ತರಿಸಿದರು. ಒಂದು ವರ್ಷದಲ್ಲಿ 725 ಲಕ್ಷ ರೂಪಾಯಿಗಳ ಟರ್ನ್ ಓವರ್ ಮಾಡಿದ ಈ ಸಂಸ್ಥೆ ಈಗ ನಾಲ್ಕೂವರೆ ಲಕ್ಷ ರೂಪಾಯಿಗಳ ನಷ್ಟ ಅನುಭವಿಸುತ್ತಿದೆ. ಅಲ್ಲಿನ ನೌಕರರುಗಳ ಬೇಡಿಕೆಗಳನ್ನು ಈಡೇರಿಸಲಿಲ್ಲ, ಅವರ ಪ್ರಾವಿಡೆಂಟ್ ಫಂಡ್ ಹಣವನ್ನು ಕಟ್ಟಲಿಲ್ಲ, ಅವರ ಒಳಿತಿಗೆ ಪೂರ್ಣ ಪ್ರಮಾಣದಲ್ಲಿ ವ್ಯವಸ್ಥೆ ಮಾಡಲಿಲ್ಲ. ಹಾಗಾಗಿ ಸಂಸ್ಥೆ ಪೂರ್ಣ ಪ್ರಮಾಣದಲ್ಲಿ ಯಶಸ್ಸಿನಿಂದ ಕಾರ್ಯನಿರ್ವಹಿಸುತ್ತಿಲ್ಲ. ಖಾಸಗಿಯವರೊಂದಿಗೆ ಹೆಚ್ಚು ವ್ಯವಹಾರ ಮಾಡುವಂಥ ದೃಷ್ಟಿಯಲ್ಲಿ, ಅವರಿಗೆ ಗುತ್ತಿಗೆ ಕೊಡುವ ದೃಷ್ಟಿಯಲ್ಲಿ ಇದನ್ನು

ಪರಿಗಣಿಸಲಾಗಿದೆ. ಮೀನುಗಾರಿಕೆ ಇಲಾಖೆ ಖಾಸಗಿ ಸಂಸ್ಥೆಗಳೊಂದಿಗೆ ಶಾಮೀಲಾಗಿರುವ ಹಿನ್ನೆಲೆಯಲ್ಲಿ ಇದು ಪೂರ್ಣ ಪ್ರಮಾಣದಲ್ಲಿ ನಷ್ಟ ಅನುಭವಿಸುವಂತೆ ತಾವು ಮಾಡಿಕೊಂಡಿದ್ದೀರಿ. ಉಳ್ಳಾಲ ಹಾಗೂ ಕುಳಾಯಿಯಲ್ಲಿರುವ ಶೀತಲೀಕರಣಗಳಲ್ಲಿ ಕಾರ್ಯನಿರ್ವಹಿಸುವ ನೌಕರರುಗಳ ಸಂಘಟನೆಯುಂಟು. ಇದನ್ನು ಗುತ್ತಿಗೆದಾರರಿಗೆ ಕೊಡಲು ಟೆಂಡರ್ ಕರೆದಿದ್ದರೂ ಯಾರೂ ಬಂದಿಲ್ಲ. ಆದುದರಿಂದ, ಅದು ಅದರಷ್ಟಕ್ಕೆ ಇದೆ. ಹಳೆಯ ಕಾಲದ ಯಂತ್ರಗಳಿರುವುದರಿಂದ ಲಾಭ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವ ಉತ್ತರ ಹೇಳುತ್ತಿದ್ದೀರಿ. ನಾನು ಮಂತ್ರಿಗಳನ್ನು ಕೇಳುತ್ತಿದ್ದೇನೆ: ಇಷ್ಟೊಂದು ವ್ಯಾಪಕವಾಗಿ ಬೆಳೆದಿದ್ದ ಈ ಸಂಸ್ಥೆಯ ಬೆಳವಣಿಗೆಗೋಸ್ಕರ ಹೊಸ ಯಂತ್ರಗಳನ್ನು ಅಳವಡಿಸಲು ತಾವು ಏನು ವ್ಯವಸ್ಥೆ ಮಾಡಿದ್ದೀರಿ? ಏನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೀರಿ? ನೌಕರರುಗಳ ಬೇಡಿಕೆಗಳ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ? ನಿಗಮದ ನೌಕರರುಗಳಿಗೆ ಸಂದಾಯವಾಗಿರುವ ತುಟ್ಟಿಭತ್ಯೆಯನ್ನು 1988ನೇ ಇಸವಿಯಿಂದ ಪಾವತಿಸದಿರುವುದಿಂದ ಸುಮಾರು 50 ಲಕ್ಷ ರೂಪಾಯಿಗಳವರೆವಿಗೂ ಬಾಕಿ ಉಂಟು, ಅದೇ ರೀತಿ ಪ್ರಾವಿಡೆಂಟ್ ಫಂಡ್ ಆರು ಲಕ್ಷ ರೂಪಾಯಿಗಳವರೆಗೆ ಪಾವತಿಸುವುದಕ್ಕೆ ಬಾಕಿ ಉಂಟು. ನಿಗಮದ ಅಧಿಕಾರಿಯೊಬ್ಬರು ತಮ್ಮ ಸಂಬಂಧಿಕರೊಬ್ಬರನ್ನು ಬೆಂಗಳೂರು ನಗರದ ಅತಿಥಿ ಗೃಹದಲ್ಲಿ ನೇಮಕ ಮಾಡಿಕೊಂಡು ಅವರಿಗೆ ಒಂದು ಸಾವಿರ ರೂಪಾಯಿಗಳ ಸಂಬಳ ಕೊಟ್ಟು ಕೆಲಸಕ್ಕಿಟ್ಟುಕೊಂಡಿದ್ದಾರೆ. ನೌಕರರುಗಳ ಪೆನ್‌ಶನ್ ಇತರ ವಿಚಾರಗಳಿಗೆ ಸಂಬಂಧಿಸಿದಂತೆ ಅವರುಗಳೇ ನೇರವಾಗಿ ಆರೋಪ ಮಾಡಿದ್ದಲ್ಲ. ಸರ್ಕಾರ ಈ ವಿಚಾರಗಳ ಬಗ್ಗೆ ಪರಿಶೀಲನೆ ಮಾಡುತ್ತದೆಯೇ? ನಿಗಮ ಲಾಭದತ್ತ ನಡೆಯಲು ಏನು ಕಾಯಕಲ್ಪ ಮಾಡುತ್ತೀರಿ? ದಯವಿಟ್ಟು ಈ ಬಗ್ಗೆ ಚಿಂತನೆ ಮಾಡಿ. ಇದನ್ನು ಖಾಸಗೀಕರಣ ಮಾಡುವ ದೃಷ್ಟಿಯಿಟ್ಟುಕೊಳ್ಳದೆ ಸಂಸ್ಥೆಯಲ್ಲಿ ದಕ್ಷ, ಪ್ರಾಮಾಣಿಕ ಅಧಿಕಾರಿಗಳನ್ನಿಟ್ಟುಕೊಂಡು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ತಾವು ನಿರ್ಧಾರ ತೆಗೆದುಕೊಳ್ಳಬೇಕೆಂದು ರಾಜ್ಯ ಸರ್ಕಾರವನ್ನು ವಿನಂತಿಸಿಕೊಳ್ಳುತ್ತಿದ್ದೇನೆ. ಇತ್ತೀಚಿನ ಜೂನ್ ತಿಂಗಳಿನಲ್ಲಿ ಕರಾವಳಿ ಪ್ರದೇಶಗಳಲ್ಲಿ ಭೀಕರ ಮೀನು ಕ್ಷಾಮ ಉಂಟಾದ್ದರಿಂದ ಬಹಳಷ್ಟು ಮೀನುಗಾರರು ದೊಡ್ಡ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಅವರು ಸಾಂಪ್ರದಾಯಿಕ ಮೀನುಗಾರರಿರಬಹುದು. ಮಳೆಗಾಲದಲ್ಲಿ ಮೀನುಗಾರಿಕೆಗೆ ಯಾವತ್ತೂ ತೊಂದರೆಯಾಗದ ರೀತಿಯಲ್ಲಿ ಭೀಕರ ಮೀನಿನ ಕ್ಷಾಮ ಉಂಟಾಗಿದೆ. ಇದರಿಂದಾಗಿ ಸುಮಾರು 12,000 ಮೀನುಗಾರರು ತೊಂದರೆಗೆ ಸಿಲುಕಿಕೊಂಡಿದ್ದಾರೆ. ಬ್ಯಾಂಕಿನಿಂದ ಸಾಲ ಪಡೆದುಕೊಂಡು ಅದರ ಬಡ್ಡಿಯನ್ನೂ ಸಹ ಕಟ್ಟಲಾರದ ಸ್ಥಿತಿಯಲ್ಲಿ ಅವರುಗಳು ಬಹಳಷ್ಟು ದುಗುಡದಿಂದ ಜೀವನ ನಿರ್ವಹಿಸುತ್ತಿರುವಂಥ ಸಂದರ್ಭದಲ್ಲಿ ಮೀನು ಕ್ಷಾಮದ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಶೀಲಿಸಿ ಮೀನುಗಾರ ಬಂಧುಗಳು ಬ್ಯಾಂಕಿನಿಂದ ಏನು ಸಾಲ ಪಡೆದುಕೊಂಡಿದ್ದಾರೆ, ಅದರ ಬಡ್ಡಿಯನ್ನು ಮನ್ನಾ ಮಾಡಿ ಅವರಿಗೆ ಬೇರಾವುದೋ ರೀತಿಯಲ್ಲಿ ಸಬ್ಸಿಡಿ ಕೊಡುವ ಬಗ್ಗೆ ರಾಜ್ಯ ಸರ್ಕಾರ ವಿಶೇಷ

ಗಮನಹರಿಸಬೇಕು. ಇದರ ಜೊತೆಗೆ ತಾವು ಮತ್ಸ್ಯ ಕ್ಷಾಮ ಪರಿಸ್ಥಿತಿಯನ್ನು ಘೋಷಿಸಿ ಸಂತ್ರಸ್ಥ ಮೀನುಗಾರರ ಕುಟುಂಬದವರಿಗೆ ಉದ್ಯೋಗವಕಾಶ ಅಥವಾ ಬೇರಾವುದೇ ರೀತಿಯಲ್ಲಿ ಅವರು ಜೀವನ ನಿರ್ವಹಿಸಲು ಸಬ್ಸಿಡಿ ಕೊಟ್ಟು ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ವಿಚಾರದ ಬಗ್ಗೆ ತಾವು ಗಂಭೀರವಾಗಿ ಪರಿಶೀಲಿಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ. ಇವೊತ್ತು ಮೀನು ಕ್ಷಾಮದ ಬಗ್ಗೆ ತಮ್ಮ ಇಲಾಖಾ ವತಿಯಿಂದ ಬಹಳಷ್ಟು ಹೇಳಿಕೆಗಳನ್ನು ಮಾಡಿದ್ದೀರಿ. ಒಳನಾಡು ಮೀನುಗಾರಿಕೆಯಲ್ಲಿ ಮೀನುಗಳು ಸತ್ತುಹೋಗಿರುವ ಬಗ್ಗೆ ಸರ್ಕಾರ ಹೇಳಿಕೆ ನೀಡಿದೆ. ಚರಂಡಿಯ ಕಲುಷಿತ ನೀರು ಕೊಳಗಳಿಗೆ ನುಗ್ಗಿ ಮೀನುಗಳು ಸಾಯುತ್ತಿದ್ದು, ಕರಾವಳಿಯಲ್ಲಿ ಇವೊತ್ತು ಮೀನು ಕ್ಷಾಮವುಂಟಾಗಲು ಇದೊಂದು ಕಾರಣವಾದರೆ ಮಂಗಳೂರಿನ ಬೃಹತ್ ಸಂಸ್ಥೆಗಳಾದ ಎಂ.ಆರ್.ಪಿ.ಎಲ್ ಮತ್ತು ಎಂ.ಸಿ.ಎಫ್. ಕಾರ್ಖಾನೆಗಳು ಮಳೆಗಾಲದಲ್ಲಿ ದೋಷಪೂರಿತವಾದ ನೀರನ್ನು ಸದ್ದುಗದ್ದಲವಿಲ್ಲದೆ ಸಮುದ್ರಕ್ಕೆ ಬಿಡುವುದರಿಂದ ಕರಾವಳಿ ತೀರದಲ್ಲಿ ಮೀನುಗಳಿಲ್ಲ. ಮೀನು ಕ್ಷಾಮಕ್ಕೆ ಇದೂ ಸಹ ಮತ್ತೊಂದು ಕಾರಣವಾಗಿರುವುದರಿಂದ ತಾವು ಈ ಬಗ್ಗೆ ಗಂಭೀರವಾಗಿ ಪರಿಶೀಲಿಸಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ. ಜೊತೆಗೆ ಮೀನುಗಾರಿಕಾ ಕೆಲಸಕ್ಕೆ ಹೋದಂತಹ ಮೀನುಗಾರರಿಗೆ ರಕ್ಷಣೆ ಕೊಡುವ ಬಗ್ಗೆ ನಾನು ರಾಜ್ಯ ಸರ್ಕಾರವನ್ನು ಮತ್ತು ಮೀನುಗಾರಿಕಾ ಇಲಾಖೆಯ ಗಮನವನ್ನು ಸೆಳೆಯುತ್ತಿದ್ದೇನೆ. ನಾನು ಈ ಬಗ್ಗೆ ಮಾನ್ಯ ಮೀನುಗಾರಿಕಾ ಮಂತ್ರಿಗಳಲ್ಲಿ ಪ್ರಶ್ನೆಯನ್ನು ಕೇಳಿದಾಗ ಮೀನುಗಾರಿಕೆಯಲ್ಲಿ ಮೀನುಗಾರರಿಗೆ ಆಪತ್ತು ಬಂದಾಗ ಯಾವ ತರಹದ ರಕ್ಷಣೆಯನ್ನು ತಾವು ಕೈಗೊಳ್ಳುತ್ತೀರಿ ಎಂದು ಕೇಳಿದಾಗ ಇಂತಹ ಪ್ರಕರಣಗಳಲ್ಲಿ ಪೊಲೀಸ್ ಮತ್ತು ಕರಾವಳಿ ಕಾವಲು ಪಡೆ, ಬಂದರು ಇಲಾಖೆಗಳ ಮತ್ತು ನೌಕಾದಳದವರ ಸಹಾಯವನ್ನು ಪಡೆಯಲಾಗುತ್ತದೆಂದು ಉತ್ತರಕೊಟ್ಟಿದ್ದಾರೆ. ಕರಾವಳಿ ಪ್ರದೇಶದಲ್ಲಿ ಪರ್ಸಿನ್ ಬೋಟ್ಸ್ ಇಟ್ಟುಕೊಂಡು 3-4 ದಿವಸ ಸಮುದ್ರದಲ್ಲಿ ಮೀನುಗಾರಿಕೆಯಲ್ಲಿ ತೊಡಗಿದವರು ಯಾಂತ್ರಿಕ ತೊಂದರೆಗಳಿಂದ ಯಾವುದೇ ತರಹದ ಸ್ತಬ್ಧವಾಗಿ ಕಡಲಿನ ಮಧ್ಯೆದಲ್ಲಿ ಮೀನುಗಾರಿಕಾ ದೋಣಿ ನಿಂತುಕೊಂಡಾಗ ಬಹುಶಃ ಈ ಇಲಾಖೆಯಿಂದ ರಾಜ್ಯ ಸರ್ಕಾರದಿಂದ ಯಾವುದೇ ವ್ಯವಸ್ಥೆ ಇಲ್ಲ. ಕಳೆದ ಮೇ ತಿಂಗಳಲ್ಲಿ ನನ್ನ ಕ್ಷೇತ್ರದಿಂದ ಸಮುದ್ರದಲ್ಲಿ ಮೀನುಗಾರಿಕೆ ಮಾಡಲು ದೋಣಿ ಹಿಡಿದುಕೊಂಡು ಹೋದವರು ಕಡಲೂರಿನ ತೀರದಲ್ಲಿ ಆ ಬೋಟ್ ತಾಂತ್ರಿಕ ತೊಂದರೆಯಿಂದಾಗಿ ಅಲ್ಲಿಯೇ ಮಧ್ಯದಲ್ಲಿ ನಿಂತುಕೊಂಡಿತ್ತು. ಆಗ ಸ್ವಾಭಾವಿಕವಾಗಿ ಮೀನುಗಾರಿಕೆಗೆ ಹೋಗಿದ್ದವರು ಬಂದು ನನ್ನ ಗಮನವನ್ನು ಸೆಳೆದರು. ಈ ಬಗ್ಗೆ ನಮ್ಮ ಮಾನ್ಯ ಮಂತ್ರಿಗಳು ನನಗೆ ಒಂದು ಉತ್ತರವನ್ನು ಕೊಟ್ಟಿದ್ದಾರೆ. ಕೋಸ್ಟಲ್ ಗಾರ್ಡ್‌ನವರು ಅದಕ್ಕೆ ಬೇಕಾಗಿರತಕ್ಕಂಥ ವ್ಯವಸ್ಥೆಯನ್ನು ಮಾಡುತ್ತಾ ಇದ್ದಾರೆ ಎಂದು ಹೇಳಿ ನಾನು ಅವರನ್ನು ಸಂಪರ್ಕ ಮಾಡಿದೆ. ನನಗೆ ನೇರವಾದ ಒಂದು ಉತ್ತರವನ್ನು ಕೊಟ್ಟರು. ಕೋಸ್ಟಲ್ ಪ್ರದೇಶದಲ್ಲಿ ಮೂರು ತರಹದ ಯಾಂತ್ರಿಕತಾ ದೋಣಿಗಳು ಮತ್ತು ಅದಕ್ಕೆ

ಬೇಕಾಗುವ ವ್ಯವಸ್ಥಿತ ಉಂಟು ಆದರೆ ನಾವು ಮೀನುಗಾರರಿಗೆ ಯಾವುದೇ ಸಹಾಯ ಮಾಡುವಂತಹ ಪರಿಸ್ಥಿತಿಯಲ್ಲಿ ಇಲ್ಲ ಅದು ಒಂದು ಗೋವಾದಲ್ಲಿ ಇದೆ. ಒಂದು ರಿಪೇರಿಯಲ್ಲಿ ಉಂಟು. ಒಂದು ಗುಜರಾತಿನಲ್ಲಿ ಉಂಟು ಎಂಬ ಹೇಳಿಕೆಯನ್ನು ಕೊಟ್ಟರು. ನಾನು ಜಿಲ್ಲಾಧಿಕಾರಿಗಳನ್ನು ಸಂಪರ್ಕ ಮಾಡಿದರೆ ಅವರು ಅಸಹಾಯಕತೆಯನ್ನು ತೋರಿಸುತ್ತಿದ್ದಾರೆ. ಸುಮಾರು 10 ದಿವಸ 15 ದಿವಸ ಕಡಲಿನ ಮಧ್ಯೆ ಮೀನುಗಾರಿಕಾ ದೋಣಿ ನಿಂತುಕೊಂಡಾಗ ಅವರ ಜೀವನ ಕ್ರಮ ಅವರು ಮೀನನ್ನು ತರುವುದು ಹೇಗೆ? ಇದರ ಬಗ್ಗೆ ರಾಜ್ಯ ಸರ್ಕಾರದಿಂದ ಇದುವರೆಗೂ ಯಾವುದೇ ಒಂದು ಕ್ರಮವನ್ನು ತೆಗೆದುಕೊಂಡಿಲ್ಲ. ಈ ಒಂದು ದೊಡ್ಡ ಮೀನುಗಾರಿಕೆಯಲ್ಲಿ ನಮ್ಮ ಮೀನುಗಾರರಿಗೆ ಯಾವುದೇ ತೊಂದರೆ ಬಂದಾಗ ಅವರ ರಕ್ಷಣೆಗೆ ಬೇಕಾಗುವಂತಹ ಎಲ್ಲಾ ರಕ್ಷಣೆಯನ್ನು ಸರ್ಕಾರ ಮಾಡಿ ಕೊಡಬೇಕು. ಅದಕ್ಕೆ ಬೇಕಾಗುವಂತಹ ಬೋಟಿನ ವ್ಯವಸ್ಥೆ, ಅದಕ್ಕೆ ಬೇಕಾಗುವಂತಹ ಸಿಬ್ಬಂದಿಗಳನ್ನು ತಾವು ನೇಮಕ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಅದರ ಜೊತೆಗೆ ಉಲ್ಲಾಳವನ್ನು ಸರ್ಕಾರ ಪ್ರವಾಸೋದ್ಯಮ ಕೇಂದ್ರವನ್ನಾಗಿ ಘೋಷಣೆ ಮಾಡಿದೆ. ಉಲ್ಲಾಳದಲ್ಲಿ ಪ್ರವಾಸೋದ್ಯಮ ಕೇಂದ್ರವಾದ ನಂತರ ಶನಿವಾರ, ಭಾನುವಾರದ ರಜಾದಿನಗಳಲ್ಲಿ ಬಹಳಷ್ಟು ಜನ ಕರಾವಳಿ ಪ್ರದೇಶವನ್ನು ವೀಕ್ಷಣೆ ಮಾಡಲು ಬರುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕೆಲವರು ಈಜಾಡುವುದಕ್ಕೆ ಹೋಗುವವರು ಇದ್ದಾರೆ. ಒಂದು ವರ್ಷಕ್ಕೆ ಸುಮಾರು 500ರಿಂದ 2 ಸಾವಿರದವರೆಗೂ ಅಲ್ಲಿ ಈಜಾಡಲು ಬರುತ್ತಾರೆ. ಕನಿಷ್ಟ ನೂರು ಜನ ಈಜಾಡಲು ಹೋದಾಗ ಆಪತ್ತಿಗೆ ಸಿಕ್ಕಿಹಾಕಿಕೊಳ್ಳುವಂತಹ ಪರಿಸ್ಥಿತಿ ಅಲ್ಲಿ ನಿರ್ಮಾಣ ಆಗಿದೆ. ಈ ಕರಾವಳಿ ತೀರದಲ್ಲಿರುವ ಮೀನುಗಾರರು ಅಂತಹ ಸಂದರ್ಭದಲ್ಲಿ ಅವರ ರಕ್ಷಣೆಗೆ ಹೋಗಿ ಪ್ರತಿ ವರ್ಷ ನೂರಾರು ಜನರ ಜೀವ ರಕ್ಷಣೆಯನ್ನು ಮಾಡುತ್ತಿದ್ದಾರೆ. ಅಂತಹ ಸಂದರ್ಭದಲ್ಲಿ ಯಾರು ರಕ್ಷಣೆಗೆ ಹೋಗುತ್ತಿದ್ದಾರೆ ಅವರಿಗೂ ತೊಂದರೆಗಳು ಆಗಿರುವಂತಹ ಸಂಭವಗಳು ಇವೆ. ಉಲ್ಲಾಳ ಕ್ಷೇತ್ರದಲ್ಲಿ ಇಂತಹ ಆಪತ್ತಿಗೆ ಸಿಕ್ಕಿದವರನ್ನು ಬದುಕಿಸಿರುವ 6-7 ಜನ ಇದ್ದಾರೆ. ನಾನು ರಾಜ್ಯ ಸರ್ಕಾರಕ್ಕೆ ಅವರ ಹೆಸರುಗಳ ಪಟ್ಟಿಯನ್ನೂ ಸಹ ಕೊಟ್ಟಿದ್ದೇನೆ. ಜೀವ ರಕ್ಷಣೆ ಮಾಡಿದವರಿಗೆ ರಾಜ್ಯ ಸರ್ಕಾರ ಏನು ಪ್ರಶಸ್ತಿಯನ್ನು ಕೊಟ್ಟು ಅಥವಾ ಅವರನ್ನು ಗೌರವಿಸುವುದು ಅಥವಾ ಅವರಿಗೆ ಏನಾದರೂ ಬೇರೆಯ ತರಹ ಈ ಕರಾವಳಿಗೆ ಸಂಬಂಧಪಟ್ಟ ಹಾಗೆ ಒಂದು ಉದ್ಯೋಗವನ್ನು ಕೊಡುವ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಇದರ ಜೊತೆಗೆ ಆಳಸಮುದ್ರದ ಮೀನುಗಾರಿಕೆ. ನಮ್ಮ ಕರಾವಳಿ ಪ್ರದೇಶದಲ್ಲಿ ಸುಮಾರು 50 ಕಿಲೋಮೀಟರ್‌ವರೆಗೂ ಮೀನುಗಾರರು ಮೀನುಗಾರಿಕೆಯಲ್ಲಿ ತೊಡಗಿರುತ್ತಾರೆ. ಆದರೆ ಹೆಚ್ಚು ಮೀನುಗಾರಿಕೆ ತಂತ್ರಜ್ಞತೆ ಇರುವ ವ್ಯವಸ್ಥೆಯನ್ನು ತಾವು ತಮ್ಮ ಮೀನುಗಾರಿಕಾ ವ್ಯವಸ್ಥೆಯಲ್ಲಿ ಮಾಡಿಕೊಳ್ಳಲಿಲ್ಲ. ವಿದೇಶಿ ಮೀನುಗಾರಿಕಾ ತಂತ್ರಜ್ಞತೆಯನ್ನು ನಾವು ಆಮದು ಮಾಡಿಕೊಂಡಿದ್ದೇವೆಯೇ ಹೊರತು ನಮ್ಮ

ಮೀನುಗಾರರಿಗೆ ಆಳಸಮುದ್ರದ ಬಗ್ಗೆ ಮೀನುಗಾರಿಕಾ ತಂತ್ರಜ್ಞಾನವನ್ನು ಕೊಡುವ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ಇನ್ನೂ ಮಾಡಿಕೊಂಡಿಲ್ಲ. ಇಡೀ ದೇಶದಲ್ಲಿ ಕರಾವಳಿ ಪ್ರದೇಶದಲ್ಲಿ ಬರುವಂತಹ 6-7 ರಾಜ್ಯಗಳಲ್ಲಿ ಒಟ್ಟು ಒಮ್ಮತವಾಗಿ ತೆಗೆದುಕೊಂಡು ನಮ್ಮ ಈ ಕರಾವಳಿ ಪ್ರದೇಶದಲ್ಲಿ ನಾವು ಆಳಸಮುದ್ರ ಮೀನುಗಾರಿಕೆ ಬಗ್ಗೆ ಹೆಚ್ಚು ತಂತ್ರಜ್ಞಾನವನ್ನು ಹೇಗೆ ನಾವು ಪಡೆದುಕೊಳ್ಳಬಹುದು ಎನ್ನುವ ಬಗ್ಗೆ ನಮ್ಮ ಮೀನುಗಾರರಿಗೆ ಅದರ ಬಗ್ಗೆ ಮಾಹಿತಿಯನ್ನು ದೊರಕಿಸಿಕೊಡುವುದರಲ್ಲಿ ಆಗಲಿ ಅಥವಾ ಅವರಿಗೆ ಬೇಕಾದಂತಹ ಸೌಲಭ್ಯಗಳನ್ನು ಮಾಡಿಕೊಡುವುದಾದರೆ ಖಂಡಿತವಾಗಿ ನಾವು ಇದರಲ್ಲಿ ಸ್ವಾವಲಂಬನೆಯನ್ನು ಸಾಧಿಸಬಹುದು. ಈ ದೃಷ್ಟಿಯಲ್ಲಿ ನಾವು ಹೆಚ್ಚು ಮೀನು ಸಂಪಾದನೆ ಮಾಡಿಕೊಳ್ಳಬಹುದು. ಅದರ ಜೊತೆಗೆ ಇನ್ನೂ ಲಭ್ಯವಾಗದ ಕಡಲ ಮೀನುಗಳು, ಶಾರ್ಕ್‌ಗಳು, ಊಣ ಅಥವಾ ರಿಬ್ಬನ್ ಮೀನುಗಳು ಇಂತಹ ದೊಡ್ಡ ಮೀನುಗಳ ಸಮೂಹದ ಬಗ್ಗೆ ಸಂಶೋಧನೆ ಮಾಡಿ ಹೆಚ್ಚು ಸಾರ್ವಜನಿಕವಾಗಿ ಇರತಕ್ಕಂಥ ಹೆಚ್ಚು ವಿದೇಶಿ ವಿನಿಮಯ ಗಳಿಸುವಂತಹ ವ್ಯವಸ್ಥೆಯಲ್ಲಿ ಸರ್ಕಾರ ಮುಂದುವರಿಯುವುದಾದರೆ ಖಂಡಿತವಾಗಿ ನಾವು ಮೀನುಗಾರಿಕೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಬಹುದು ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಜೊತೆಗೆ ಮೀನುಗಾರಿಕಾ ರಸ್ತೆಗಳು. ಇದರ ಬಗ್ಗೆ ಈಗಾಗಲೇ ಮಾನ್ಯ ವಸಂತ ಸಾಲಿಯಾನರು ಇದರ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ತಮ್ಮ ಗಮನಕ್ಕೆ ಇಷ್ಟೇ ತರುತ್ತಿದ್ದೇನೆ, 1993ರ ನಂತರ ಕರಾವಳಿಯಲ್ಲಿ ಮೀನುಗಾರಿಕಾ ರಸ್ತೆಗಳ ಬಗ್ಗೆ ಯಾವುದೇ ವ್ಯವಸ್ಥೆಯನ್ನು ಮಾಡಿಕೊಂಡಿಲ್ಲ. ಅದರ ನಿರ್ವಹಣಾ ಬಗ್ಗೆ ಆಗಲಿ ಅಥವಾ ಹೊಸ ರಸ್ತೆಗಳ ಬಗ್ಗೆ ಆಗಲಿ ಸರ್ಕಾರ ಗಮನ ಕೊಟ್ಟಿದ್ದು ಇಲ್ಲ. ಒಂದು ಪಕ್ಷ ಕೊಟ್ಟಿದ್ದೇ ಆದರೆ ತಮ್ಮ ಹಿತಾಸಕ್ತಿಗೆ ಅನುಗುಣವಾಗಿ ಮಾಡಿಕೊಂಡಿರಬಹುದು. ಆ ದೃಷ್ಟಿಯಲ್ಲಿ ಕರಾವಳಿ ಪ್ರದೇಶದಲ್ಲಿ ಮೀನುಗಾರಿಕಾ ರಸ್ತೆಗಳನ್ನು ಅವಶ್ಯಕವಾಗಿ ತಾವು ಮಾಡಿಕೊಳ್ಳಬೇಕಾಗುತ್ತದೆ. ಮೀನನ್ನು ತೆಗೆದುಕೊಂಡು ಹೋಗುವಂತಹ ಬೋಟ್‌ಗಳು. ನಗರ ಪ್ರದೇಶ ಅಥವ ಆ ದೊಡ್ಡ ರಸ್ತೆಗಳನ್ನು ಜೋಡಿಸುವ ದೃಷ್ಟಿಯಲ್ಲಿ ಈ ಮೀನುಗಾರಿಕಾ ರಸ್ತೆಗಳು ಅತ್ಯಂತ ಅವಶ್ಯಕ ಎಂದು ತಾವು ಇದರ ಬಗ್ಗೆ ಒಂದು ಯೋಜನೆಯನ್ನು ರೂಪಿಸಿ ಇದಕ್ಕೋಸ್ಕರವೇ ಹಣ ತೆಗೆದು ಇಡಬೇಕೆಂದು ನಾನು ರಾಜ್ಯ ಸರ್ಕಾರವನ್ನು ವಿನಂತಿ ಮಾಡುತ್ತಿದ್ದೇನೆ. ಅದರ ಜೊತೆಗೆ ಸಾಂಪ್ರದಾಯಿಕ ಮೀನುಗಾರರು ಇದ್ದಾರೆ. ಗಿಲ್ಲಟ್ ಮೀನುಗಾರರು ಅಂತ. ಈ ಗಿಲ್ಲಟ್ ಮೀನುಗಾರರು ಸುಮಾರು 50ರಿಂದ 70 ಸಾವಿರದಷ್ಟು ಮೌಲ್ಯದ ಬೋಟ್‌ಗಳನ್ನು ನಡೆಸುತ್ತಿದ್ದಾರೆ. ರಾಜ್ಯ ಸರ್ಕಾರ ಇವರಿಗೆ ವ್ಯವಸ್ಥೆಯನ್ನು ಮಾಡಿ ಕೊಡಲಿಲ್ಲ. ಕೇರಳದಲ್ಲಿ ಈ ಗಿಲ್ಲಟ್ ಮೀನುಗಾರರಿಗೆ ಒಂದು ತಿಂಗಳಿಗೆ 400 ಲೀಟರ್‌ನಷ್ಟು ಸೀಮೆ ಎಣ್ಣೆಯನ್ನು ಪಡಿತರ ವ್ಯವಸ್ಥೆಯಲ್ಲಿ ಒದಗಿಸಿಕೊಡುತ್ತಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇನ್ನು ಆ ವ್ಯವಸ್ಥೆಯನ್ನು ಮಾಡಿಲ್ಲ. ಒಂದು ಗಿಲ್ಲಟ್ ಬೋಟ್‌ಗೆ ಒಂದು ದಿವಸಕ್ಕೆ ಸುಮಾರು 30ರಿಂದ 40 ಲೀಟರ್‌ನಷ್ಟು ಸೀಮೆಎಣ್ಣೆ ಬೇಕಾಗುತ್ತದೆ. ಆದರೆ ಇವತ್ತು ಈ ಗಿಲ್ಲಟ್

ಮೀನುಗಾರರಿಗೆ ಒಂದು ದಿವಸಕ್ಕೆ ಎರಡು ಲೀಟರ್‌ನಷ್ಟು ಸೀಮೆಎಣ್ಣೆಯನ್ನು ಒದಗಿಸುವ ವ್ಯವಸ್ಥೆ ಇಲ್ಲ. ಅದರ ಬದಲಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಪಡಿತರ ವ್ಯವಸ್ಥೆಯಲ್ಲಿ ಸೀಮೆ ಎಣ್ಣೆ ಬಂದಿದೆ ಅದರಲ್ಲಿ ಒಂದಷ್ಟು ಸೀಮೆ ಎಣ್ಣೆಯನ್ನು ಪ್ರೊಪೋರ್ಶನೇಟ್ ಆಗಿ ಮೀನುಗಾರರಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ನಾನು ಮಾನ್ಯ ಮೀನುಗಾರಿಕಾ ಮಂತ್ರಿಗಳ ಹತ್ತಿರ ಮತ್ತು ಆಹಾರ ಮಂತ್ರಿಗಳ ಹತ್ತಿರ ವಿನಂತಿ ಮಾಡುತ್ತಿದ್ದೇನೆ ಸಾಂಪ್ರದಾಯಿಕವಾದ ಈ ಗಿಲ್ಲಟ್ ಮೀನುಗಾರರಿಗೆ ಕನಿಷ್ಟ ಒಂದು ಬೋಟ್‌ಗೆ ಒಂದು ದಿವಸಕ್ಕೆ 40 ಲೀಟರ್ ಸೀಮೆ ಎಣ್ಣೆಯನ್ನು ಪಡಿತರದಲ್ಲಿ ತಾವು ಒದಗಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕು. ಹಾಗಾದರೆ ಮಾತ್ರ ಸಾಂಪ್ರದಾಯಿಕವಾಗಿ ಕೆಳಹಂತದ ಮೀನುಗಾರರು ಯಶಸ್ವಿಯಾಗಿ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಇದರ ಜೊತೆಗೆ ಉಲ್ಲಾಳ ಬಹಳಷ್ಟು ಪುರಾಣ ಪ್ರಸಿದ್ಧವಾಗಿರುವಂತಹ ಕ್ಷೇತ್ರ. ರಾಣಿ ಅಬ್ಬಕ್ಕ ಆಳಿದ ಊರು. ಆ ಕಾಲದಲ್ಲಿ ಉಲ್ಲಾಳದ ರೇವು ಬಹಳಷ್ಟು ಪ್ರಸಿದ್ಧವಾಗಿತ್ತು. ಮಂಗಳೂರಿಗಿಂತ ದೊಡ್ಡ ಪ್ರಮಾಣದ ಬೋಟ್‌ಗಳು ಅಲ್ಲಿ ಬರುತ್ತಿದ್ದವು. ಇಂತಹ ಸಂದರ್ಭದಲ್ಲಿ ನಮ್ಮ ಉಲ್ಲಾಳ ಇವತ್ತೂ ಕೂಡ ಒಂದು ಜಟ್ಟಿಯನ್ನು ಹೊಂದಿಕೊಂಡಿಲ್ಲ. ಮಾನ್ಯ ವಸಂತ ಸಾಲಿಯಾನ ಅವರು ಮಂತ್ರಿಗಳಾಗಿದ್ದಾಗ ಒಂದು ಪ್ರಸ್ತಾವನೆ ಮಾಡಿದರಂತೆ. ನಾನು ಮಾನ್ಯ ಮಂತ್ರಿಗಳ ಹತ್ತಿರ ವಿನಂತಿ ಮಾಡುತ್ತಿದ್ದೇನೆ ತಾವು ನಮಗೆ ಪೂರ್ಣ ಪ್ರಮಾಣದ ಮೀನುಗಾರಿಕಾ ಜಟ್ಟಿಯನ್ನು ಒದಗಿಸಿಕೊಡಬೇಕು. ಅದರ ಜೊತೆಗೆ ಬಾರ್ಜ್ ಮೌಂಟೆಡ್ ನಾನು ಅದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಕರಾವಳಿಯಲ್ಲಿ ಈ ಬಾರ್ಜ್ ಮೌಂಟೆಡ್‌ನಿಂದಾಗಿ ಮೀನುಗಾರಿಕೆಗೆ ತೊಂದರೆ ಆಗಿದೆ. ವಿಶೇಷವಾಗಿ ಮೀನುಗಾರರಿಗೆ ತೊಂದರೆ ಆಗಿದೆ. ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ನನ್ನ ಉಲ್ಲಾಳ ವಿಧಾನಸಭಾ ಕ್ಷೇತ್ರದ ಒಂದೂವರೆ ಕಿಲೋಮೀಟರ್‌ನ ಅಂತರದಲ್ಲಿ ಎರಡು ಬಾರ್ಜ್ ಮೌಂಟೆಡ್ ಮಾಡುವಂತಹ ಯೋಜನೆ ಸರ್ಕಾರದಲ್ಲಿ ಉಂಟು. ಪ್ರಾರಂಭದಲ್ಲಿ ಇಡೀ ಕರಾವಳಿಯಲ್ಲಿ 4 ಕಡೆ ಮಾತ್ರ ಬಾರ್ಜ್‌ಮೌಂಟೆಡ್ ಸ್ಥಾಪನೆ ಮಾಡುತ್ತಿದ್ದೇವೆಂದು ತಾವು ಹೇಳಿದಿರಿ. ಈಗ ಒಂದೇ ಕಡೆಯಲ್ಲಿ ಎರಡು ಬಾರ್ಜ್ ಮೌಂಟೆಡ್‌ಗಳನ್ನು ಮಾಡಿಕೊಂಡಿದ್ದರೆ ಮೀನುಗಾರಿಕೆಗೆ ಪೂರ್ಣ ಪ್ರಮಾಣದ ಹೊಡೆತ ಬೀಳುತ್ತಾ ಉಂಟು.

7. 10 ಪಿ.ಎಂ

ಅದರಿಂದ ಬಿಡುಗಡೆಯಾಗುವಂಥ ನ್ಯಾಫ್ತಾ ನೀರು ಮತ್ತು ಗಾಳಿಯಲ್ಲಿ ತೇಲಾಡುತ್ತಿದೆ. ಶಬ್ಧ ಮಾಲಿನ್ಯವಾಗುತ್ತಿದೆ. ಸಾಮಾನ್ಯವಾಗಿ ಒಬ್ಬ ಮನುಷ್ಯನ ಶ್ರವಣ ಶಕ್ತಿ 60ರಿಂದ 70 ಡೆಸಿಬಲ್ ಇದ್ದರೆ ನೀರಿನಲ್ಲಿ ಇದರ ವೇಗ ಸುಮಾರು ನೂರು ಪಟ್ಟು ಜಾಸ್ತಿ. ಈ ಎರಡು ಬಾರ್ಜ್ ಮೌಟೆಂಡ್‌ಗಳು ಒಂದೇ ಸ್ಥಳದಲ್ಲಿದ್ದರೆ ಖಂಡಿತ

ಮೀನುಗಾರಿಕೆಗೆ ತೊಂದರೆಯಾಗುತ್ತದೆ. ಅದರಿಂದ ಕರಾವಳಿ ಪ್ರದೇಶದಲ್ಲಿರುವ ಮೀನುಗಾರಿಕೆ ಇರುವಂಥ ಸಾಧ್ಯತೆ ಕಡಿಮೆಯಾಗಿರುವುದರಿಂದ ತಾವು ಇದರ ಬಗ್ಗೆ ಪರಿಶೀಲನೆ ಮಾಡಿ. ನಾನು ಬಾರ್ಜ್ ಮೌಂಟೆಡ್ ಮಾಡುವುದು ಬೇಡ ಎಂದು ಹೇಳುವುದಿಲ್ಲ. ಎಲ್ಲಿ ಮೀನುಗಾರಿಕೆಗೆ ತೊಂದರೆಯಾಗುತ್ತಿದೆ, ಎಲ್ಲಿ ಜನವಸತಿ ಇಲ್ಲದಂಥ ಕರಾವಳಿ ಪ್ರದೇಶ ಇದೆ ಅಂಥ ಕರಾವಳಿ ಪ್ರದೇಶವನ್ನು ಇದಕ್ಕೆ ಆಯ್ಕೆ ಮಾಡಿಕೊಳ್ಳಿ ಎಂದು ನಾನು ತಮ್ಮನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಜೊತೆಗೆ ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇತ್ತೀಚೆಗೆ ಮೀನುಗಾರರ ಸಮಾಜವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲು ಶಿಫಾರಸ್ಸು ಮಾಡಿ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಮೀನುಗಾರರ ಸಮುದಾಯ ಬಹಳಷ್ಟು ವರ್ಷಗಳಿಂದ ಕೆಳಹಂತದಲ್ಲಿದೆ. ಇವೊತ್ತು ದುಡಿದದ್ದು ಇವತ್ತಿಗೆ ಸಾಕಾಗುತ್ತದೆ ಎಂಬ ಪರಿಸ್ಥಿತಿ ಇಲ್ಲ. ಆದ್ದರಿಂದ ಇದನ್ನು ಕೇವಲ ಪತ್ರಿಕಾ ಹೇಳಿಕೆಗೆ ಸೀಮಿತಗೊಳಿಸದೆ ಇದಕ್ಕೆ ಪೂರ್ಣ ಪ್ರಮಾಣದ ಒತ್ತಾಯವನ್ನು ತಂದು ಮೀನುಗಾರರ ಸಮಾಜವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಿ ಅದರ ಪೂರ್ಣ ಪ್ರಮಾಣದ ಫಲವನ್ನು ಮೀನುಗಾರ ಬಂಧುಗಳಿಗೆ ಕೊಡುವ ದೃಷ್ಟಿಯಲ್ಲಿ ರಾಜ್ಯಸರ್ಕಾರ ವ್ಯವಸ್ಥಿತ ಕೆಲಸವನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದರ ಜೊತೆಗೆ ನಮ್ಮ ಮೀನುಗಾರಿಕಾ ಮಂತ್ರಿಗಳ ಗಮನಕ್ಕೆ ಮತ್ತೊಂದು ವಿಚಾರವನ್ನು ತರುತ್ತಿದ್ದೇನೆ. ತಮ್ಮ ಹೇಳಿಕೆ ಪ್ರಕಾರ ಇತ್ತೀಚಿನ ದಿನಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ವಿಶ್ವಬ್ಯಾಂಕ್ ಸಾಲ ನೀಡುತ್ತಿದ್ದರೂ ರಾಜ್ಯ ಸರ್ಕಾರಗಳು ಇದನ್ನು ಸಮರ್ಪಕವಾಗಿ ಬಳಸಿಕೊಂಡಿಲ್ಲ ಎಂದು ಕೇಂದ್ರ ಕೃಷಿ ಸಚಿವ ಶ್ರೀ ಚತುರಾನನ ಮಿಶ್ರ ಅವರು ಬೆಂಗಳೂರಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿರಬಹುದು. ವಿಶ್ವ ಬ್ಯಾಂಕ್ ನೀಡುವ ಸಾಲದಲ್ಲಿ ಮೀನುಗಾರರಿಗೋಸ್ಕರ ತೆಗೆದುಕೊಟ್ಟಿರುವುದನ್ನು ರಾಜ್ಯ ಸರ್ಕಾರಗಳು ಪೂರ್ಣ ಪ್ರಮಾಣದಲ್ಲಿ ಉಪಯೋಗ ಮಾಡಿಕೊಳ್ಳಲಿಲ್ಲ. ಅದರಲ್ಲಿ ಕರ್ನಾಟಕದ ಬಗ್ಗೆ ಉಲ್ಲೇಖ ಇಲ್ಲದಿದ್ದರೂ ಕೂಡ ವಿಶ್ವಬ್ಯಾಂಕ್‌ನಿಂದ ಕೇಂದ್ರ ಸರ್ಕಾರ ತೆಗೆದುಕೊಂಡ ಸಾಲದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಸಾಲವನ್ನು ತೆಗೆದುಕೊಂಡು ತಾವು ಇಲ್ಲಿ ವ್ಯವಸ್ಥಿತವಾಗಿ ಎಷ್ಟು ಕೆಲಸವನ್ನು ಮಾಡಿಕೊಂಡಿದ್ದೀರಿ ಅಥವಾ ಇಲ್ಲಿ ಉಪಯೋಗವಾಗದಂಥ ಸಾಲದ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳುವಲ್ಲಿ ಕರ್ನಾಟಕ ರಾಜ್ಯಸರ್ಕಾರದವರು ಯಶಸ್ವಿಯಾಗಿದ್ದೀರಾ? ಆ ಬಗ್ಗೆ ತಾವು ಚಿಂತನೆ ಮಾಡಬೇಕು. ತಮಗಿನ್ನೂ ಪೂರ್ಣ ಪ್ರಮಾಣದ ಕಾಲಾವಕಾಶ ಉಂಟು. ತಾವು ಮಂತ್ರಿಗಳಾಗಿರುವ ಕಾಲದಲ್ಲಿ ಆ ಜವಾಬ್ದಾರಿಯಲ್ಲಿ ಕರ್ನಾಟಕ ಮೀನುಗಾರಿಕೆಗೆ ಒಳ್ಳೆಯ ಸ್ಪಂದನ ಕೊಡುವ ದೃಷ್ಟಿಯಲ್ಲಿ ತಾವು ಹೆಚ್ಚಿನ ಕೆಲಸ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಾ ಸಮುದ್ರ ಕೊರೆತದ ಬಗ್ಗೆ ಸಣ್ಣ ನೀರಾವರಿ ಮಂತ್ರಿಗಳ ಗಮನವನ್ನು ಇನ್ನೊಂದು ಸಲ ಸೆಳೆಯುತ್ತಿದ್ದೇನೆ. ನಮ್ಮ ಉಳ್ಳಾಲ ಆಗಲಿ, ಕರಾವಳಿ ಪ್ರದೇಶದಲ್ಲಿನ ಕೇರಳ ನಮಗಿಂತ ಬಹಳಷ್ಟು ಮುಂಚೂಣಿಯಲ್ಲಿವೆ.

ಕೇರಳದಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಸುಮಾರು 195 ಕಿಲೋಮೀಟರ್ ಉದ್ದದ ಕರಾವಳಿ ಇದ್ದರೂ ಕೂಡ ಶೇಕಡ 60ಕ್ಕಿಂತ ಜಾಸ್ತಿ ಖಾಯಂ ಆಗಿ ಸಮುದ್ರ ಕೊರೆತದ ಬಗ್ಗೆ ತಡೆಗೋಡೆಗಳನ್ನು ಯಶಸ್ವಿಯಾಗಿ ನಿರ್ಮಿಸಿದ್ದಾರೆ. ತಾವು ಇನ್ನೂ ಮೊನ್ನೆ ಮೊನ್ನೆ 500 ಕೋಟಿ ರೂಪಾಯಿ ವ್ಯವಸ್ಥೆ ಮಾಡಿಕೊಡುತ್ತೇವೆ ಎಂದು ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ಆದುದರಿಂದ ದಯವಿಟ್ಟು ಪೂರ್ಣ ಪ್ರಮಾಣದಲ್ಲಿ ತಾವು ಸಮುದ್ರ ಕೊರೆತಕ್ಕೆ ತಡೆಗೋಡೆಗಳನ್ನು ನಿರ್ಮಿಸಿ ಕೊಡಬೇಕೆಂದು ಹೇಳಿ ಕಡೆಯದಾಗಿ ನನ್ನ ಕ್ಷೇತ್ರದ ಬಗ್ಗೆ ಸಣ್ಣ ನೀರಾವರಿ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಮಾನ್ಯ ಮಂತ್ರಿಗಳೇ ಸಣ್ಣ ನೀರಾವರಿ ಇಲಾಖೆಯಲ್ಲಿ ನನ್ನ ಕ್ಷೇತ್ರದ ಸುಮಾರು 4 ಗ್ರಾಮಗಳಲ್ಲಿ ಹಾದು ಹೋಗುವ ಒಂದು ತೋಡು ಪ್ರದೇಶ ಇದೆ. ಅದಕ್ಕೆ ಬೆಳ್ಮಾ ತೋಡು ಎಂದು ಕರೆಯುತ್ತಾರೆ. ನಾನು ಅದರ ಬಗ್ಗೆ ಬಹಳಷ್ಟು ಸಲ ಪ್ರಶ್ನೆಗಳನ್ನು ಕಳುಹಿಸಿದ್ದೇನೆ, ಮತ್ತು ಸದನದಲ್ಲೂ ಕೂಡ ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಆ ಬೆಳ್ಮಾ ತೋಡಿಗೆ ಮಳೆಗಾಲದಲ್ಲಿ ಸುಮಾರು 50ರಿಂದ 100 ಚದರ ಕಿಲೊಮೀಟರ್ ವಿಸ್ತೀರ್ಣದಲ್ಲಿ ನೀರು ಬಂದು ಸಾಗುವಳಿ ಪ್ರದೇಶ ಅಥವಾ ಕೃಷಿ ಪ್ರದೇಶದ ಭೂಮಿಯನ್ನು ಹೊರತುಪಡಿಸಿ ಸುಮಾರು 40 ಅಡಿ ಅಗಲ, 15ರಿಂದ 20 ಅಡಿ ಆಳದಷ್ಟು ಇರುವ ಈ ತೋಡು ಮಳೆಗಾಲದಲ್ಲಿ ಬಹಳಷ್ಟು ತೀವ್ರ ಪ್ರಮಾಣದಲ್ಲಿ ಬಂದಂಥ ನೀರು ನೇರವಾಗಿ ನೇತ್ರಾವತಿ ನದಿಯ ಮುಖಾಂತರ ಸಮುದ್ರವನ್ನು ಸೇರುತ್ತಿದೆ. ಈ ತೋಡು ಸುಮಾರು 25-30-40 ವರ್ಷಗಳಿಂದ ಈಚೆಗೆ ಪೂರ್ಣ ಪ್ರಮಾಣದಲ್ಲಿ ಹಾಳಾಗಿದೆ. ಮಾಜಿ ಮುಖ್ಯಮಂತ್ರಿ ದಿವಂಗತ ಶ್ರೀ ದೇವರಾಜ ಅರಸು ಅವರು ಇದ್ದಾಗ ಆ ಕ್ಷೇತ್ರಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ 'ನಾನು ಈ ತೋಡಿನ ಕೆಲಸವನ್ನು ಪ್ರಾಮಾಣಿಕವಾಗಿ ಕೈಗೊಳ್ಳುತ್ತೇನೆ ಎಂದು ಹೇಳಿದ್ದರು. ಆ ಕಾಲಕ್ಕೆ ಇದಕ್ಕಾಗಿ ಸುಮಾರು 4 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದರು. ಇವೊತ್ತು ಆ ತೋಡಿನ ಕಾಮಗಾರಿಯ ಬಗ್ಗೆ ನಾನು ರಾಜ್ಯ ಸರ್ಕಾರವನ್ನು ಪದೇ ಪದೆ ವಿನಂತಿ ಮಾಡುತ್ತಿದ್ದರೂ ಕೂಡ ಯಾವುದೇ ವ್ಯವಸ್ಥೆಯನ್ನು ಮಾಡಿಲ್ಲ. ಈಗ ಸುಮಾರು 85 ಲಕ್ಷ ರೂಪಾಯಿಗಳ ಎಸ್ಟಿಮೇಟನ್ನು ತಯಾರು ಮಾಡಿದ್ದಾರೆ. ಇಲಾಖೆಯ ಅಧಿಕಾರಿಗಳೂ ಸಹ ಅಲ್ಲಿಗೆ ಹೋದಾಗ ಬೇರೆ ಬೇರೆ ಉತ್ತರಗಳನ್ನು ಕೊಡುತ್ತಿದ್ದಾರೆ. ತಟ್ಟೆ ತನ್ನಿ, ಚಮಚ ತನ್ನಿ ಆನೆ ತನ್ನಿ ಎಂದು ಹೇಳುತ್ತಿದ್ದಾರೆ. ತಟ್ಟೆಯ ಮೇಲೆ ಆನೆಯನ್ನು ಕೂರಿಸಿ ಎಂದು ಹೇಳುತ್ತಿದ್ದಾರೆ. ಈ ರೀತಿ ಬೇರೆ ಬೇರೆ ಕಾರಣಗಳನ್ನು ಹೇಳುತ್ತಾ ನಮ್ಮಿಂದ ಅಥವಾ ಇಲಾಖೆಯಿಂದ ಸಾಧ್ಯವಾಗದ ರೀತಿಯಲ್ಲಿ ಕೆಲಸವನ್ನು ಬೇರೆ ಬೇರೆ ಹೊಂದಾಣಿಕೆಗಳನ್ನು ಮಾಡುತ್ತಿದ್ದಾರೆ. ಅಂಗಡಿ ಸಮಿತಿಗೆ ಎಂದು ಕೊಟ್ಟರು, ಕೆಇಆರ್‌ಎಸ್‌ನಿಂದ ರಿಪೋರ್ಟ್ ತರಿಸಿ ಎಂದು ಹೇಳುತ್ತಿದ್ದಾರೆ. ಈಗ ಅದು ಅದೇ ಸ್ಟೇಜ್‌ನಲ್ಲಿದೆ. ನಾನು ತಮ್ಮಲ್ಲಿ ಕಳಕಳಿಯ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಸುಮಾರು ಐದು ಸಾವಿರ ಎಕರೆ ಕೃಷಿಗೆ ಮಳೆಗಾಲದಲ್ಲಿ ತೊಂದರೆಯಾಗುತ್ತಿದೆ, ಬೇಸಿಗೆ ಕಾಲದಲ್ಲಿ ನೀರನ್ನು ಒದಗಿಸದಿರುವಂತಹ ಪರಿಸ್ಥಿತಿ ಇರುವಾಗ ತಾವು ದಯಮಾಡಿ ಇದರ ಬಗ್ಗೆ ಗಮನವನ್ನು ಕೊಟ್ಟಿಲ್ಲ. ಕಳೆದ ವರ್ಷ

ನೀವು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಅನ್ಯಾಯ ಮಾಡಿದ್ದೀರಿ. ಸಣ್ಣ ನೀರಾವರಿ ಇಲಾಖೆಯಲ್ಲಿ ಒಂದು ಕೋಟಿ 50 ಲಕ್ಷ ರೂಪಾಯಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ನಿಗದಿಯಾಗಿತ್ತು. ಆ ಹಣವನ್ನು ಯಾವುದೇ ತೊಂದರೆ ಇಲ್ಲದೆ ಉತ್ತರ ಕನ್ನಡಕ್ಕೆ ತೆಗೆದುಕೊಂಡು ಹೋಗಿದ್ದೀರಿ. ಇದರಲ್ಲಿ ಬಹಳಷ್ಟು ಕಾಮಗಾರಿಗಳು ರೆಫರ್ ಆಗಿದ್ದವು. ಆದರೂ ತಾವು ಮಾಡಲಿಲ್ಲ. ದಯವಿಟ್ಟು ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣ ನೀರಾವರಿಗೆ ಸಂಬಂಧಪಟ್ಟ ಎಲ್ಲ ಕಾಮಗಾರಿಗಳಿಗೆ ನಿರ್ಧಾರ ಮಾಡಿದ ಪ್ರಮಾಣದಲ್ಲಿ ತಾವು ಹಣವನ್ನು ಬಿಡುಗಡೆ ಮಾಡಬೇಕೆಂದು ವಿನಂತಿಸುತ್ತಾ ಮಾನ್ಯ ಅಧ್ಯಕ್ಷರು ನನಗೆ ಕೊಟ್ಟ ಸಮಯಾವಕಾಶದಲ್ಲಿ ನನ್ನ ಇತಿಮಿತಿಯಲ್ಲಿ ನಾನು ಮಾತನಾಡಲಿಕ್ಕೆ ತಾವು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ನಂಜಾಮರಿ (ತಿಪಟೂರು): ಸನ್ಮಾನ್ಯ ಅಧ್ಯಕ್ಷರೆ, ಇವೊತ್ತು ನೀರಾವರಿ ಬಗ್ಗೆ ಉತ್ತರ ಕೊಡಬೇಕೆಂದು ನೀರಾವರಿ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ. ಇವೊತ್ತು ನೀರಾವರಿ ಬಗ್ಗೆ ಅವರು ವಾಗ್ದಾನ ಕೊಟ್ಟು ಸುಮಾರು ಮೂರು ನಾಲ್ಕು ತಿಂಗಳುಗಳು ಸರಿದವು. ಆದರೆ ತುಮಕೂರು ಜಿಲ್ಲೆಯ ಆ ಭಾಗದ ರೈತರ ಜಮೀನುಗಳನ್ನು ಅಕ್ವೈರ್ ಮಾಡಿಕೊಂಡು ಮೂರು ನಾಲ್ಕು ವರ್ಷವಾಗಿವೆ. ಆ ಭಾಗದಲ್ಲಿರುವಂಥ ರೈತರಿಗೆ ಬೆಳೆ ಪರಿಹಾರವಾಗಲಿ, ಭೂಮಿ ಪರಿಹಾರವಾಗಲಿ ಇದುವರೆಗೂ ಪೂರ್ತಿಯಾಗಿ ಕೊಟ್ಟಿಲ್ಲ. ಆ ಭಾಗದ ಜನರು ಸಂಬಂಧಪಟ್ಟ ಆಫೀಸಿಗೆ ಪ್ರತಿದಿನ ತಿರುಗಿ ತಿರುಗಿ ಸುಸ್ತಾಗಿದ್ದಾರೆ. ಅಲ್ಲದೆ ಇವೊತ್ತು ಹೇಮಾವತಿ ನಾಲೆ ಹೋಗಿರತಕ್ಕಂಥ ಜಾಗದಲ್ಲೂ ಕೂಡ ನೀರನ್ನು ಕೊಟ್ಟಿಲ್ಲ. ನಾಲೆ ಹೋಗುವಂಥ ಜಾಗದಲ್ಲಾದರೂ ಕೂಡ ನೀರನ್ನು ಕೊಟ್ಟರೆ ಆ ಭಾಗದ ರೈತರು ಸಂತೋಷಗೊಂಡು ಅಲ್ಪಸ್ವಲ್ಪ ಬೆಳೆ ಬೆಳೆಯುತ್ತಾರೆ. ನಮ್ಮ ತುಮಕೂರು ಜಿಲ್ಲೆಯಲ್ಲಿ 20 ವರ್ಷದಿಂದಲೂ ಮಳೆ ಕಾಣದಂಥ ಕೆಲವು ಭಾಗಗಳಿವೆ. ಕೆರೆಗಳು ತುಂಬಿಲ್ಲ. ಈಗ ಹೇಮಾವತಿ ನಾಲೆಯ ಸ್ವಲ್ಪ ಭಾಗದಲ್ಲಿ ಮಾತ್ರ ನೀರನ್ನು ನೋಡಿಯಾದರೂ ಸಂತೋಷ ಪಡಬೇಕಾಗಿದೆ. ಆದುದರಿಂದ ದಯಮಾಡಿ ನಮ್ಮ ರೈತರಿಗೆ ಬರಬೇಕಾಗಿರುವ ಬೆಳೆ ಪರಿಹಾರ ಮತ್ತು ಅಕ್ವೇರ್ ಮಾಡಿಕೊಂಡಿರುವ ಪ್ರದೇಶಗಳ ರೈತರಿಗೆ ಭೂ ಪರಿಹಾರವನ್ನು ಕೊಡಿಸಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲದೆ ತಕ್ಷಣವೆ ಆ ಭಾಗದ ರೈತರ ಜಮೀನಿಗೆ ನೀರನ್ನು ಕೊಡಿಸಬೇಕು. ನಮ್ಮ ತಿಪಟೂರು ಮತ್ತು ತುಮಕೂರಿನ ಕೆಲವು ಭಾಗಗಳಲ್ಲಿ 18-19-20 ಕಿಲೊಮೀಟರ್‌ನಲ್ಲಿ ನಾಲೆ 80 ಅಡಿ ಆಳದವರೆಗೂ ಹೋಗಿರುವುದರಿಂದ ಆ ಭಾಗದಲ್ಲಿ ಸುಮಾರು ಸಾವಿರಾರು ಗಿಡಗಳು ಮಳೆ ಇಲ್ಲದೆ ಇರತಕ್ಕಂಥ ದಿವಸಗಳಲ್ಲಿ ಒಣಗಿ ಹೋಗಿವೆ. ಆ ಭಾಗದಲ್ಲಿ ನನ್ನ ತೆಂಗಿನ ಮರದಲ್ಲಿ ನೋಡುವುದಕ್ಕೆ ಒಂದು ಕಾಯಿ ಸಹ ಸಿಗುವುದಿಲ್ಲ. ಆ ಜಾಗವನ್ನು ಸನ್ಮಾನ್ಯ ಸಚಿವರು ಬಂದು ನೋಡಬೇಕೆಂದು

ಕೇಳಿಕೊಂಡಾಗ ಅವರು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದುಕೊಂಡು ಬಂದು ಒಂದು ವರ್ಷದ ಹಿಂದೆ ಆ ಜಾಗವನ್ನು ಪರಿಶೀಲನೆ ಮಾಡಿದ್ದಾರೆ. ಆ ಜಾಗದಲ್ಲಿ ಲಿಫ್ಟ್ ಇರಿಗೇಷನ್ ಮಾಡಿ ಆ ಭಾಗದಲ್ಲಿ ಬರುವ ಸಾವಿರಾರು ಎಕರೆ ಜಮೀನಿಗೆ, ಸುಮಾರು ಐದಾರು ಹಳ್ಳಿಗಳಿಗೆ ನೀರನ್ನು ಕೊಡಬೇಕೆಂದು ಸಚಿವರನ್ನು ಕೇಳಿಕೊಂಡಿದ್ದೇವೆ. ಸಚಿವರು ಬಂದು ಜಾಗವನ್ನು ಪರಿಶೀಲನೆ ಮಾಡಿದ್ದಾರೆ. ಆ ಜಾಗದಲ್ಲಿ ಲಿಫ್ಟ್ ಇರಿಗೇಷನ್ ಮಾಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅದೂ ಅಲ್ಲದೆ ಹೇಮಾವತಿ ನಾಲೆ ಬರುವಂಥ ನಮ್ಮ ಕ್ಷೇತ್ರ ಹೊನ್ನವಳ್ಳಿ ಹೋಬಳಿ, ಅರಸೀಕೆರೆ ತಾಲ್ಲೂಕಿನ ಕಲಗಟ್ಟೆ ಹೋಬಳಿ, ಕಡೂರು ತಾಲ್ಲೂಕಿನಲ್ಲಿರತಕ್ಕಂಥ ಸೀಡರಿಗೆ ಹೋಬಳಿಗಳಿಗೆ ಸನ್ಮಾನ್ಯ ಸಚಿವರು ಹಾಗು ಅರಸಿಕೆರೆ ತಾಲ್ಲೂಕಿನ ಶಾಸಕರಾದಂಥ ಪರಮೇಶ್ವರಪ್ಪನವರು, ಕಡೂರು ತಾಲ್ಲೂಕಿನ ಶಾಸಕರಾದ ಶ್ರೀ ಕೃಷ್ಣಮೂರ್ತಿಯವರು ಮತ್ತು ತಮ್ಮ ಪಕ್ಷದ ಅಧ್ಯಕ್ಷರಾದ ಬಿ.ಎಲ್.ಶಂಕರ್‌ರವರು ಮತ್ತು ಶ್ರೀ ಕೆ.ಬಿ.ಮಲ್ಲಿಕಾರ್ಜುನ ಅವರು ಅಂದು ಅವರ ಜೊತೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದುಕೊಂಡು ಜಾಗವನ್ನು ವೀಕ್ಷಣೆ ಮಾಡುವುದಕ್ಕೆ ಬಂದಿದ್ದರು. ಹಾಗೆ ಬಂದಂಥ ಸಂದರ್ಭದಲ್ಲಿ ಸುತ್ತಮುತ್ತಲಿನ ಜನ ಅವರಿಗೆ ಸ್ವಾಗತ ನೀಡಿದರು. ಆ ಏರಿಯಾ ಹೇಗಿದೆ ಎಂದರೆ ಅಲ್ಲಿನ ಮೂರು ತಾಲ್ಲೂಕು ಹೋಬಳಿಗಳಿಗೂ ಯಾವುದೇ ಒಂದು ರಸ್ತೆ ಇಲ್ಲ, ಅದು ಬಹಳ ಇಂಟೀರಿಯರ್ ಏರಿಯಾ. ಸಚಿವರು ಅದನ್ನೆಲ್ಲಾ ನೋಡಿಕೊಂಡು ಬಂದಿದ್ದಾರೆ. ಹಾಗೆ ನೋಡಿಕೊಂಡು ಬಂದಾಗ ಆ ಭಾಗದ ಜನರು ಇವರು ದೇವರ ಸ್ವರೂಪದಲ್ಲಿ ಬರುತ್ತಿದ್ದಾರೆ, ನಮಗೆ ಹೇಮಾವತಿ ನೀರನ್ನು ಕೊಡುತ್ತಾರೆ ಎಂಬ ಆಸೆಯಿಂದ ರಸ್ತೆಯುದ್ದಕ್ಕೂ ಸ್ವಾಗತ ಕೊಟ್ಟರು; ಮೂರು ನಾಲ್ಕು ಕಡೆ ಸಮಾರಂಭವನ್ನು ಮಾಡಿದ್ದಾರೆ. ಇವತ್ತೂ ಕೂಡ ಸನ್ಮಾನ್ಯ ಸಚಿವರು ನೀರು ಕೊಡುತ್ತಾರೆಂದು ಬಹಳ ಕಾತುರದಿಂದ ಇದ್ದಾರೆ. ಆದರೆ ಒಂದು ವರ್ಷದ ಮೇಲಾಗಿದೆ, ಪಂಚನಹಳ್ಳಿಯಲ್ಲಿ ಸಮಾರಂಭವನ್ನು ನಡೆಸಿ ಜನ ಬಹಳ ಆಸೆ ಇಟ್ಟುಕೊಂಡಿದ್ದಾರೆ. ಅದೇ ರೀತಿ ಹೊನ್ನವಳ್ಳಿಯಲ್ಲಿ ಮಾಡಿದರು. ಅರಸೀಕೆರೆಯಲ್ಲಿ ದಾರಿಯುದ್ದಕ್ಕೂ ಅವರಿಗೆ ಸ್ವಾಗತ ಕೊಟ್ಟರು. ಆದರೆ ಇವೊತ್ತು ಆ ಹೇಮಾವತಿ ನಾಲೆ ಬರುವಂಥ ಜಾಗವನ್ನು ಸರ್ವೆ ಮಾಡಿಸಿದ್ದಾರೆ. ಸರ್ವೆ ಮಾಡಿಸಿ 94 ಕೋಟಿ ರೂಪಾಯಿಯ ಒಂದು ಎಸ್ಟಿಮೇಟನ್ನೂ ಸಹ ತಯಾರಿಸಿ ಇಂಜನಿಯರ್‌ರವರು ಸಚಿವರಿಗೆ ಮತ್ತು ಆ ಇಲಾಖೆಯ ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಆ ರೀತಿ ಸರ್ವೆ ಮಾಡಿ 94 ಕೋಟಿ ರೂಪಾಯಿ ಎಸ್ಟಿಮೇಟ್ ಕೊಟ್ಟಿರುವುದನ್ನು ಸನ್ಮಾನ್ಯ ಸಚಿವರು ಏನು ಮಾಡಿದ್ದಾರೆ ಎಂಬ ಬಗ್ಗೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಆ ಭಾಗದಲ್ಲಿ ಸುಮಾರು 20 ವರ್ಷಗಳಿಂದ ಮಳೆ ಆಗಿಲ್ಲ.

ಅಧ್ಯಕ್ಷರು: ಚೀಫ್ ವಿಪ್ ಅವರು ಈ ಕಡೆಯ ಸದಸ್ಯರಿಗೆ, ಆ ಕಡೆಯ ಸದಸ್ಯರಿಗೆ ಇರುವಂತೆ ಹೇಳಬೇಕು. ಯಾರು ಮೊಗಸಾಲೆಯಲ್ಲಿದ್ದಾರೆ, ಅವರು ಅಲ್ಲಿ ಬೇಕಾದರೆ

ಒಂದು ಹತ್ತು ನಿಮಿಷ ಕುಳಿತಿರಲಿ. ಇವತ್ತು ಯಾರೂ ಹೋಗದಂತೆ ಮಾಡುವುದು ನಿಮ್ಮ ಜವಾಬ್ದಾರಿ. ಎಲ್ಲಾ ಸದಸ್ಯರೂ ಇರುವುದಕ್ಕೆ ಹೇಳಬೇಕು. ಇವತ್ತು ಎಷ್ಟು ಹೊತ್ತು ಆದರೂ ಆಗಲಿ, ಯಾರ್‍ಯಾರು ಅವಕಾಶ ಕೇಳಿದ್ದಾರೆ, ಅವರಿಗೆಲ್ಲಾ ಅವಕಾಶ ಕೊಟ್ಟು ಸಾಧ್ಯವಾದರೆ, ನಾಳೆ ಉತ್ತರ ಕೊಡುವಂತೆ ನಾನು ಸಭಾನಾಯಕರನ್ನು ಮತ್ತು ಬೇರೆಯವರನ್ನು ವಿನಂತಿಸುತ್ತೇನೆ. ಸದಸ್ಯರಿಗಳಂತೂ ಯಾರೂ ಹೋಗಬಾರದು. ಎಲ್ಲಾ ಸದಸ್ಯರೂ ಹಾಜರಿರುವಂತೆ ನೋಡಿಕೊಳ್ಳಿ.

ಶ್ರೀ ಹೆಚ್.ಎನ್.ನಂಜೇಗೌಡ: ಸಾಧ್ಯವಾದರೆ ಎಂದು ಬೇಡ. ಉತ್ತರವನ್ನು ನಾಳೆಯೇ ಕೊಡಿಸಿ. ನಾಳೆ ಬೆಳಿಗ್ಗೆ ಬೇಕಾದರೆ 9 ಗಂಟೆಗೇ ಸೇರೋಣ. ನೀವು ಕೊಡುವ ರಿಪ್ಲೈ ಮೆಸೇಜ್ ಹೋಗಬೇಕಲ್ಲಾ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹೀಗಾಗಬಾರದು. ದೊಡ್ಡಾಟದಲ್ಲಿ ಕಂಬಳಿ ಸಿಕ್ಕಿಬಿದ್ದ ಹಾಗೆ ಆಗಬಾರದು. ದೊಡ್ಡಾಟದಲ್ಲಿ ಕಂಬಳಿ ಸಿಕ್ಕಿಬಿದ್ದರೆ ಪಾಪ ಅವನೊಬ್ಬನೇ ಕೂರಬೇಕಾಗ್ತುತ್ತದೆ. ಕೊನೆಗೆ ಮಾತನಾಡದವರು ಹೋದರೆ ನಮ್ಮ ಗತಿ ಏನು? ಆಗ ನೀವು ನಾವೇ ಇಲ್ಲಿ ಕುಳಿತಿರಬೇಕಾಗುತ್ತದೆ.

ಅಧ್ಯಕ್ಷರು: ನನ್ನ ಕಂಬಳಿಯಂತೂ ಸಿಕ್ಕಿಹಾಕಿಕೊಂಡಿದೆ. ಯಾರದ್ದು ಏನು ಎಂದು ಗೊತ್ತಿಲ್ಲ. ಉಪಾಧ್ಯಕ್ಷರೂ ಇಲ್ಲ, ನನಗೆ ಬಹಳ ಸುಖವಾಗಿದೆ. I am determined. I will provide opportunity to all my young friends.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಅಧ್ಯಕ್ಷರೇ, ನಮ್ಮ ಊರಿನಲ್ಲಿ ಒಂದು ನಾಟಕ ಆಡಿದ್ದರು. ಆಗ ಎಲ್ಲಾ ಹೊರಟು ಹೋಗಿ ಕೊನೆಗೆ ಎಂಟು ಜನ ಮಾತ್ರ ಉಳಿದುಕೊಂಡಿದ್ದರು. ನಾನು ಪಾತ್ರ ಮಾಡಿ ಕೊನೆಯಲ್ಲಿ ಹೋಗಿ ಕೇಳಿದೆ, ಪರವಾಗಿಲ್ಲವಾ, ನಮ್ಮ ನಾಟಕ ಹಿಡಿಸಿತಾ, ನಿಮಗಾದರೂ ಹಿಡಿಸಿತೇ ಎಂದು ಕೇಳಿದೆ. ಅದಕ್ಕೆ ಅವರು ಹೇಳಿದರು, ನಾವು ನಾಟಕಕ್ಕೋಸ್ಕರ ಕುಳಿತಿಲ್ಲವಪ್ಪಾ, ಸೀನ್ಸ್‌ನವರಿಗೆ ಎರಡು ಹಾರೆ ಕೊಟ್ಟಿದ್ದೇವೆ, ಅದಕ್ಕೆ ಹಗ್ಗ ಕಟ್ಟುಬಿಟ್ಟಿದ್ದಾರೆ, ಅದಕ್ಕೇ ಕಾಯ್ದುಕೊಂಡು ಕುಳಿತಿದ್ದೇವೆ ಎಂದು ಹೇಳಿದರು. ಹಾಗೆ ಇಲ್ಲಿ ದಯವಿಟ್ಟು ಆಗಬಾರದು.

ಶ್ರೀ ಬಿ.ನಂಜಾಮರಿ: ಸನ್ಮಾನ್ಯ ಅಧ್ಯಕ್ಷರೆ, ಆ ಭಾಗದಲ್ಲಿ ಯಾವುದೇ ಒಂದು ಸಣ್ಣ ಕೆರೆ ಆಗಬಹುದು, ಒಂದು ಸಣ್ಣ ಕಟ್ಟೆ ಆಗಬಹುದು, 20 ವರ್ಷಗಳಿಂದ ಮಳೆ ಇಲ್ಲದೆ ಇವು ಯಾವುದೂ ತುಂಬಿಲ್ಲ. ಅಂಥ ಪ್ರದೇಶ ಅದು. ಸಚಿವರೂ ನೋಡಿದ್ದಾರೆ, ಆ ಪ್ರದೇಶದಲ್ಲಿ ಯಾವುದೇ ಒಂದು ಸುಂದರವಾದ ಹಳ್ಳಿಯೂ ಕಾಣುತ್ತಿಲ್ಲ, ಆ ರೀತಿ ಇರತಕ್ಕಂಥ ಇಂಟೀರಿಯರ್ ಏರಿಯಾ ಅದು. ಇವತ್ತು ಸರ್ಕಾರ ವತಿಯಿಂದ ಸಚಿವರು ನೀರನ್ನು ಕೊಡುತ್ತೇವೆ ಎಂದು ಏನು ಆಶ್ವಾಸನೆ ಕೊಟ್ಟು ಬಂದಿದ್ದಾರೆ, ಇದನ್ನು

ಅವರೊಬ್ಬರೇ ಕೊಡಲಿಲ್ಲ, ಬಿ.ಎಲ್.ಶಂಕರ್‌ರವರೂ ಸಹ ಕೇಂದ್ರದಲ್ಲಿ ನಮ್ಮ ಪ್ರಧಾನಮಂತ್ರಿಗಳಾಗಿದ್ದಾರೆ. ಅವರಿಗೆ ಒತ್ತಡ ತಂದು ನಾನು ಮಾಡಿಸಿ ಕೊಡುತ್ತೇನೆ ಎಂದು ಒಂದು ದೊಡ್ಡ ಆಶ್ವಾಸನೆ ಕೊಟ್ಟರು. ಸಚಿವರೂ ಅದೇ ರೀತಿ ಕೊಟ್ಟರು. ಅಲ್ಲಿರತಕ್ಕಂಥ ಸಚಿವರು ಎಂ.ಎಲ್.ಎ ಗಳು, ಎಂ.ಎಲ್.ಸಿ.ಗಳು ಎಲ್ಲರೂ ಇದನ್ನು ಭಾಷಣದ ಮುಖಾಂತರ ಹೇಳಿದಾಗ, ಸಹಸ್ರಾರು ಜನ ಕಾತರದಿಂದ ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ಪ್ರಾರಂಭವಾಗಿ ಸಂಜೆ 7 ಗಂಟೆಯಾದರೂ ಒಬ್ಬರೂ ಕದಲದಂತೆ ಇದ್ದರು. ಆದ್ದರಿಂದ ದಯವಿಟ್ಟು ಆ ಭಾಗಕ್ಕೆ ಈ ವರ್ಷವಾದರೂ, ಎಸ್ಟಿಮೇಟ್ ಏನು ಮಾಡಿಕೊಟ್ಟಿದ್ದಾರೆ, ಅಷ್ಟು ಹಣವನ್ನು ಬಜೆಟ್ಟಿಗೆ ಸೇರಿಸಿ ಆ ಕೆಲಸವನ್ನು ಪ್ರಾರಂಭ ಮಾಡಬೇಕು ಎಂದು ತಮ್ಮ ಮುಖಾಂತರ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ. ದಯವಿಟ್ಟು ಆ ಉತ್ತರವನ್ನು ಹೇಳಬೇಕು ಎಂದು ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಷಯ, ಸಣ್ಣ ನೀರಾವರಿ ಬಗ್ಗೆ ಹೇಳುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೇ, ಒಂದೇ ಒಂದು ವಿಷಯ ಅವರಿಗೆ ಹೇಳುತ್ತೇನೆ, ಒಂದು ವರ್ಷದಲ್ಲಿ ಸುಮಾರು 99 ಕೋಟಿ ರೂಪಾಯಿ ಯೋಜನೆಯನ್ನು ಸರ್ವೆ ಮಾಡಿಸಿ, ಎಸ್ಟಿಮೇಟ್ ಮಾಡಿ, ಪ್ರತಿಯೊಂದು ಕಾರ್ಯಕ್ರಮವನ್ನೂ ಮುಗಿಸಿಯಾದ ಆಮೇಲೆ ವರದಿ ಟೆಕ್ನಿಕಲ್ ಕಮಿಟಿ ಮುಂದೆ ಹೋಗುತ್ತದೆ. ಟೆಕ್ನಿಕಲ್ ಕಮಿಟಿಯವರು ಒಪ್ಪಿಕೊಂಡರೆ ಆ ಯೋಜನೆಯನ್ನು ಮಾಡುತ್ತೇನೆ. ಒಂದು ವರ್ಷದಲ್ಲಿ, ಒಂದು ವರ್ಷವೂ ಅಲ್ಲ, ಸುಮಾರು 7-8 ತಿಂಗಳಲ್ಲಿ ಕಂಪ್ಲೀಟ್ ಸರ್ವೆ ಮಾಡಿ, ಎಸ್ಟಿಮೇಟ್ ಮಾಡಿ, ಡೀಟೇಲ್ ಎಸ್ಟಿಮೇಟ್ ಮಾಡಿ, ಪ್ರಾಜೆಕ್ಟ್ ರಿಪೋರ್ಟನ್ನು ಅಕ್ಸೆಪ್ಟ್ ಮಾಡಿ, ಸಿ.ಇ. ಬೋರ್ಡನ್ನು ಒಪ್ಪಿಸಿ, ಈಗ ಟೆಕ್ನಿಕಲ್ ಬೋರ್ಡಿಗೆ ಬಂದಿದೆ. ಅದರಲ್ಲಿರುವ ಒಂದೇ ಒಂದು ಟೆಕ್ನಿಕಲ್ ಕಾರಣ ಏನೆಂದರೆ, ಕಾವೇರಿ ಬೇಸಿನ್‌ನಿಂದ ಕೃಷ್ಣಾ ಬೇಸಿನ್‌ಗೆ ನೀರು ಸ್ವಲ್ಪ ಬೀಳುತ್ತದೆ. ಅದನ್ನು ಯಾವ ರೀತಿ ಓವರ್‌ಕಂ ಮಾಡಬೇಕು ಎಂದು ನಾನು ಕೆ.ಸಿ.ರೆಡ್ಡಿಯವರಿಗೆ ಹೇಳಿದ್ದೇನೆ. ಎಕ್ಸಾಮಿನ್ ಆದ ಕೂಡಲೇ, ಟೆಕ್ನಿಕಲ್ ಕಮಿಟಿ ಒಪ್ಪಿಕೊಂಡ ಕೂಡಲೇ ಎಂ.ಐ.ಟಿ.ಸಿ ಬೋರ್ಡಿನಲ್ಲಿಟ್ಟು, ಎಂ.ಐ.ಟಿ.ಸಿ ಬೊರ್ಡಿನಿಂದ ಕ್ಯಾಬಿನೆಟ್‌ಗೆ ಇಡುತ್ತೇವೆ. ಇದು ಈ ವರ್ಷ ಆಗುವುದಿಲ್ಲ. ಬರುವ ವರ್ಷದ ಬಜೆಟ್‌ನಲ್ಲಿ ಅದನ್ನು ಖಂಡಿತವಾಗಿ ಸೇರಿಸಿಕೊಂಡು ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ನಂಜಾಮರಿ: ಮಾನ್ಯ ಸಚಿವರು ಸರ್ವೆ ಮಾಡಿಸಿದ್ದಕ್ಕಾಗಿ ಧನ್ಯವಾದಗಳು. ಆದರೆ ಈ ವರ್ಷದ ಬಜೆಟ್‌ನಲ್ಲಿ ಇಡುವುದಿಲ್ಲ ಎಂದು ಹೇಳುತ್ತಿದ್ದಾರೆ, ಜನ ಮಾತನಾಡುವ ಹಾಗೆ ನನಗೆ ಅನುಮಾನವಾಗುತ್ತಿದೆ, ನಮ್ಮ ಸರ್ಕಾರ ಯಾವಾಗ ಹೋಗುತ್ತದೋ, ನಾವೂ ಮನೆಗೆ ಹೋಗುತ್ತೇವೆ, ಎನ್ನುವ ಒಂದು ಅನುಮಾನದಿಂದ ಜನಗಳು ಮಾತನಾಡುತ್ತಿರುವುದನ್ನು ನಾನು ಕೇಳುತ್ತಿದ್ದೇನೆ. ಇವರು ಈ ವರ್ಷ ಬಿಟ್ಟು ಮುಂದಿನ ವರ್ಷದ ಬಜೆಟ್ ಇಡುವುದರೊಳಗೆ, ಕೇಂದ್ರದಲ್ಲಿ ಲೋಕಸಭೆಗೆ

ಚುನಾವಣೆಯಾಗಿ ಅಥವಾ ಮತ್ತೊಂದು ಆಗಿ, ಸರ್ಕಾರವೇ ಹೋಗಿಬಿಟ್ಟರೆ ನಾವು ಯಾರನ್ನು ಕೇಳುವುದು? ನಾವು ಗೆಲ್ಲುತ್ತೀವೋ ಅಥವಾ ನಾವು ಸೋತು ಹೋಗುತ್ತೀವೋ ಗೊತ್ತಿಲ್ಲ.

ಅಧ್ಯಕ್ಷರು: ನಂಜಾಮರಿಯವರೇ, ಯಾವುದೇ ಸರ್ಕಾರ ಬಂದರೂ ನಾಗೇಗೌಡರು ನೀರಾವರಿ ಮಂತ್ರಿಗಳಾಗಿರುವ ಹಾಗೆ ಮಾಡುತ್ತೇವೆ. ನಿಮಗೆ ಅದರ ಯೋಚನೆ ಬೇಡ.

ಮಾನ್ಯ ಸದಸ್ಯರು: ಆ ಕಡೆ ಇಲ್ಲದೇ ಇದ್ದರೆ ಈ ಕಡೆಯಂತೂ ಇದ್ದೇ ಇರುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ನಾನು ಹೇಳುವ ಅಗತ್ಯವಿಲ್ಲ. ಏನೋ ಒಂದು ಭಾವನೆ ಇದೆ. ನಾವು ಮಂಡ್ಯ ಜಿಲ್ಲೆಗೆ, ಹಾಸನ ಜಿಲ್ಲೆಗೆ, ಅಥವಾ ಬೇರೆ ಜಿಲ್ಲೆಗಳಿಗೆ ಕೊಡುವಂಥ ಆದ್ಯತೆಯನ್ನು ಒಂದಲ್ಲ ಒಂದು ಕಾರಣಕ್ಕೆ ತಿಪಟೂರು, ತುಮಕೂರು ಆ ಭಾಗಗಳಿಗೆ ಕೊಡುತ್ತಿಲ್ಲ ಎನ್ನುವ ಭಾವನೆ ಇದೆ. ಈಗ ನೀವು ಸರ್ವೆ ಮಾಡಿಸಿ ಎಲ್ಲಾ ಮಾಡಿದ್ದೀರಿ. ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ಅವರ ಅಪೇಕ್ಷೆ ಏನು ಎಂದರೆ ಇಲ್ಲಿ ಯಾರೂ ಶಾಶ್ವತವಲ್ಲ. ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೀರಿ. ಈಗ ಅದಕ್ಕೆ ಏನು ಬೇಕೋ ಅದನ್ನು ಮಂಜೂರು ಮಾಡಿಸಿ ಟೋಕನ್ ಆಗಿ 5-6 ಕೋಟಿ ತೆಗೆದಿಟ್ಟು ಕೆಲಸ ಶುರು ಮಾಡಿಸಿ. ಮುಗಿಯುವುದಕ್ಕೆ ಇನ್ನೂ ಒಂದು ವರ್ಷ ಬೇಕು. ಅದು ನನಗೆ ಗೊತ್ತಿದೆ. ಆದರೆ ಕೆಲಸ ಮಾಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಿ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೆ, ಯಡಿಯೂರಪ್ಪನವರು ಒಂದು ನಿಮಿಷ ಕುಳಿತುಕೊಂಡರೆ ಹೇಳುತ್ತೇನೆ. ಹಣ ಇಡತಕ್ಕಂಥಾದ್ದಕ್ಕಿಂತ ಮುಖ್ಯವಾಗಿ ನಾನು ಇಡೀ ಪ್ರದೇಶದಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ನಾಲ್ಕೈದು ಶಾಸಕರು, ಸಂಸತ್ ಸದಸ್ಯರು ಮತ್ತು ನಂಜಾಮರಿಯವರು ಎಲ್ಲರೂ ಎಲ್ಲಾ ಕಡೆ ಹೋಗಿ, ನಮ್ಮ ಚೀಫ್ ಇಂಜಿನಿಯರ್, ಡಬ್ಲ್ಯು.ಆರ್.ಡಿ ಚೀಫ್ ಇಂಜಿನಿಯರ್, ಇನ್‌ವೆಸ್ಟಿಗೇಟಿಂಗ್ ಚೀಫ್ ಇಂಜಿನಿಯರುಗಳನ್ನೆಲ್ಲಾ ಕರೆದುಕೊಂಡು ಹೋಗಿ, ಸುಮಾರು 15-20 ದಿವಸಗಳ ಕಾಲ ಡೀಟೈಲ್ ಸ್ಟಡಿ ಮಾಡಿ ಈಗ ಟೆಕ್ನಿಕಲ್ ಕಮಿಟಿ ಮಾಡಬೇಕಾಗಿ ಬಂದಿದೆ. ಅಲ್ಲಿಂದ ಎಂ.ಐ.ಟಿ.ಸಿ ಬೋರ್ಡಿಗೆ ಬರಬೇಕಾದರೆ 3 ತಿಂಗಳು ಆಗುತ್ತದೆ. ನಂತರ ಹಣಕಾಸು ಇಲಾಖೆಗೆ ಹೋಗುವುದು ಆಗಬೇಕಾಗಿದೆ. ಇದನ್ನು ಸದನದಲ್ಲಿ ಮಾಡುತ್ತೇವೆ ಎಂದು ಹೇಳುವುದು, you are an important leader of the national party, ನಿಮ್ಮ ಹತ್ತಿರ ಈ ವರ್ಷ ಆಗುತ್ತದೆ ಎಂದು ಹೇಳುವುದಕ್ಕಿಂತ ಎಲ್ಲಾ ಪೇಪರ್ ವರ್ಕ್‌ಗಳನ್ನು ಕ್ಲಿಯರ್ ಮಾಡಿಕೊಂಡು ಸಿದ್ಧರಾಮಯ್ಯನವರಿಗೆ ಹೇಳಿ ಮುಂದಿನ ವರ್ಷ ಮಾರ್ಚ್ 31 ಮುಗಿದ ಮೇಲೆ ಏಪ್ರಿಲ್‌ನಲ್ಲಿ ಬಜೆಟ್‌ನಲ್ಲಿ ಮಾಡುತ್ತೇವೆ. ಕೃಷ್ಣಮೂರ್ತಿಯವರೇ ಮಾಡಿದ್ದು, ಅವರು ಒಂದು ದೊಡ್ಡ ಸಭೆ ಮಾಡಿದ್ದಾರೆ. ಮಾರ್ಚ್ ಒಳಗಡೆ ಅವರನ್ನು ವಿನಂತಿ ಮಾಡಿಕೊಂಡು, ಏಪ್ರಿಲ್ 1ರಿಂದ ಈ

ಕಾರ್ಯಕ್ರಮಕ್ಕೆ ಹೊಸ ಬಜೆಟ್ ಬರುವ ಹಾಗೆ ಮಾಡಿ ಎಂದರೆ ಅವರು ಒಪ್ಪಿಕೊಳ್ಳುತ್ತಾರೆ. ರೀಅಲೋಕೇಷನ್ ಮಾಡುವುದು ಹೇಗೆ? ಇದ್ದಕ್ಕಿದ್ದ ಹಾಗೆ ಈ ಯೋಜನೆಯಿಂದ ಆ ಯೋಜನೆಗೆ ಹಣ ಹಾಕಲು ಅವರು ಒಪ್ಪಬೇಕಲ್ಲಾ? ಅವರು ಒಪ್ಪುವುದಿಲ್ಲ. ಯಾವ್ಯಾವ ಪ್ರಾಜೆಕ್ಟ್‌ಗೆ ಎಷ್ಟೆಷ್ಟು ಇರಬೇಕು ಎಂದು ನೀವೇ ಅನುಮತಿ ಕೊಟ್ಟುಬಿಟ್ಟಿದ್ದೀರಿ. ಸದನ ಅನುಮತಿ ಕೊಟ್ಟಿರುವುದನ್ನು ಎಲ್ಲಾ ಬದಲಾವಣೆ ಮಾಡಿಕೊಂಡು ಮಾಡುವುದು ಬೇಡ. 100 ಕೋಟಿ ಇರುವಂಥಾದ್ದಕ್ಕೆ 5 ಕೋಟಿ, 3 ಕೋಟಿ ಕೊಟ್ಟು ಏನು ಪ್ರಯೋಜನ? ಯಡಿಯೂರಪ್ಪನವರೇ, ದಯವಿಟ್ಟು ಅವರಿಗೆ ಹೇಳಿ, 1998-99ರ ಬಜೆಟ್‌ನಲ್ಲಿ ಇದು ಇದ್ದೇ ಇರುತ್ತದೆ. ಅದನ್ನು ಮಂಜೂರು ಮಾಡಿಸುತ್ತೇವೆ.

ಶ್ರೀ ಬಿ.ನಂಜಾಮರಿ: ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆ, ಅದು ಸರಿ. ಆದರೆ ಮುಂದಿನ 99ನೇ ವರ್ಷದ ಬಜೆಟ್ಟಿಗೆ ನಾವು ಇಲ್ಲಿ ಇರುತ್ತೇವೆಯೇ ಎನ್ನುವ ಅನುಮಾನ ನಮಗೆ ಇದೆ. 98ನೇ ವರ್ಷದ ಬಜೆಟ್‌ನಲ್ಲಿ ಇಡುವುದಾದರೆ, ನಮ್ಮ ಯಡಿಯೂರಪ್ಪನವರು ಹೇಳಿದ ಹಾಗೆ 2-3 ಕೋಟಿ ರೂಪಾಯಿಗಳನ್ನು ಇಟ್ಟು ಕೆಲಸ ಪ್ರಾರಂಭ ಮಾಡಿದರೆ ಸಾಕು. ಅಷ್ಟು ಮಾಡಿದರೆ ಅದು ಯಾವತ್ತಿದ್ದರೂ ಕಾರ್ಯಗತವಾಗುತ್ತದೆ ಎನ್ನುವುದನ್ನು ತಮ್ಮ ಮುಖಾಂತರ ಸಚಿವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಈ ಹಂತದಲ್ಲಿ ಡಾ:ಎಂ.ಪಿ.ಕರ್ಕಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಹೇಮಾವತಿ ನಾಲೆ ತುಮಕೂರಿಗೆ ಯಾವಾಗ ಬರುತ್ತದೆ ಎಂದು ನೋಡಿ. ಇದು 65ನೇ ಇಸವಿಯಲ್ಲಿ ಸರ್ವೆ ಆದಂಥ ತುಮಕೂರು ನಾಲೆಗೆ 1995-96ನೇ ಇಸವಿಯಲ್ಲಿ ನೀರು ಬಂತು. ಅದೇ ರೀತಿ ಇವತ್ತು ಕೆಲಸ ಪ್ರಾರಂಭ ಮಾಡಿ, 98ನೇ ಇಸವಿಯಲ್ಲಿ ಕೊಡದಿದ್ದರೆ, 99ನೇ ಇಸವಿಯಲ್ಲೂ ಕೊಡದಿದ್ದರೂ ಪರವಾಗಿಲ್ಲ, 2003ನೇ ಇಸವಿಗೆ ಕೊಡಲಿ. ಆದರೆ ಕೆಲಸ ಪ್ರಾರಂಭವಾಗಬೇಕು ಎನ್ನುವ ನನ್ನ ಒತ್ತಡವನ್ನು ತಮ್ಮ ಮುಖಾಂತರ ಸಚಿವರಿಗೆ ನಾನು ಹೇಳುತ್ತಿದ್ದೇನೆ. 98ನೇ ಇಸವಿಯ ಬಜೆಟ್‌ನಲ್ಲಿಟ್ಟು ಕೆಲಸ ಪ್ರಾರಂಭ ಮಾಡಬೇಕು ಎನ್ನುವುದನ್ನು ನಾನು ಸಚಿವರಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇನೆ. ಏಕೆಂದರೆ, ಅಲ್ಲಿ 25 ವರ್ಷದಿಂದ ಒಂದು ಸಣ್ಣ ಕೆರೆ ತುಂಬಿರುವುದನ್ನು ರೈತ ನೋಡಿಲ್ಲ. ಅದನ್ನು ನಂಬುವ ಹಾಗೇ ಇಲ್ಲ. ನಿಮ್ಮ ಅಧ್ಯಕ್ಷರಾದಂಥ ಬಿ.ಎಲ್.ಶಂಕರ್‌ರವರು, ಕೇಂದ್ರದಲ್ಲಿ ನಮ್ಮ ಪ್ರಧಾನಿಯವರೇ ಇದ್ದಾರೆ. ನಿಮ್ಮ ಜಾಗಕ್ಕೆ ಯಾವುದೇ ಕಾರಣದಿಂದಲಾದರೂ ಸರಿ 2 ವರ್ಷಗಳಲ್ಲಿ ನಾನು ನೀರು ಕೊಡಿಸುತ್ತೇನೆ ಎನ್ನುವ ಒಂದು ಘೋಷಣೆಯನ್ನು ಪಂಚನಹಳ್ಳಿಯಲ್ಲಿ, ಅವರ ಎಲ್ಲಾ ಸಚಿವರುಗಳು, ಎಂ.ಎಲ್.ಎ.ಗಳು ಸೇರಿಕೊಂಡು ಘೋಷಣೆ ಮಾಡಿದರು. ಅದಕ್ಕೋಸ್ಕರ ಘೋಷಣೆ ಮಾಡಿರತಕ್ಕಂಥ ಮಾತನ್ನು ಉಳಿಸಿಕೊಳ್ಳಬೇಕು ಎಂದು

ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಅದನ್ನು ದಯವಿಟ್ಟು ಮಾಡುತ್ತಾರೆ ಎನ್ನುವ ನಂಬಿಕೆಯೂ ಇದೆ. ಮಾಡಲೇ ಬೇಕು ಎಂದು ಕೇಳಿಕೊಳ್ಳುತ್ತೇನೆ. ಮತ್ತು ಅದೇ ಜಾಗದಲ್ಲಿ ಏನು 18, 19, 20 ಕಿ.ಮೀ. ಬರುತ್ತದೆ ಎಂದು ಹೇಳಿದ್ದೇನೆ. ಆ ಜಾಗಕ್ಕೂ ಸಚಿವರು ಬಂದಿದ್ದರು. ಸಂಬಂಧಪಟ್ಟ ಅಧಿಕಾರಿಗಳನ್ನೆಲ್ಲಾ ಕರೆದುಕೊಂಡು ಬಂದು ತೋರಿಸಿದ್ದಾರೆ. 80 ಅಡಿ ಆಳದಲ್ಲಿರುವಂಥ ಜಾಗದಲ್ಲಿ ತೆಂಗಿನ ಮರಗಳು ಹೇಗೆ ಬದುಕುತ್ತವೆ? ಇಲ್ಲಿರತಕ್ಕಂಥವರಲ್ಲಿ ಶೇ.90ರಷ್ಟು ರೈತರೇ ಸಚಿವರು ಶಾಸಕರಾಗಿ ಬಂದಿದ್ದಾರೆ ಎಂದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ದಯವಿಟ್ಟು ಆ ಭಾಗದ್ದನ್ನು ಪ್ಲಾನ್ ಮಾಡಿಸಿ, ಎಸ್ಟಿಮೇಟ್ ಮಾಡಿಸಿ ಯಾವತ್ತಾದರೂ ಲಿಫ್ಟ್ ಇರಿಗೇಷನ್ ಹಾಕಬಹುದು. ಸಾವಿರಾರು ಎಕರೆಗೆ ನೀರು ಕೊಡಲೇಬೇಕು. ಏಕೆಂದರೆ 80 ಅಡಿ ಅಂದರೆ ಬರೀ 3 ಕಿ.ಮೀ.ನಲ್ಲಿ ಮಾತ್ರ ಬರುತ್ತಿಲ್ಲ. 3 ಕಿ.ಮೀ.ಗೆ 80 ಅಡಿ ಹೋದರೆ ಉದ್ದಕ್ಕೂ 40-50 ಅಡಿ ಆಳವಾಗಿ ಹೋಗಿದೆ. ನಮ್ಮ ತಿಪಟೂರು ತಾಲ್ಲೂಕಿನಲ್ಲಿರುವಂಥ ಜಮೀನುಗಳಲ್ಲಿ ಹೋಗಿವೆ. ನನ್ನ ಜಮೀನಿನಲ್ಲೇ ಹೋಗಿದೆ. ಅಲ್ಲಿರುವಂಥ ಜಾಗವನ್ನು ಬಿಟ್ಟು ಕೊಡುತ್ತೀರಾ ಎಂದು ಸನ್ಮಾನ್ಯ ಸಚಿವರು ಕೇಳಿದಾಗ ಹತ್ತಾರು ಹಳ್ಳಿಗಳಿಗೆ ಒಳ್ಳೆಯದು ಆಗುವ ಹಾಗಿದ್ದರೆ ನನ್ನ ಜಾಗವನ್ನೇ ಬಿಟ್ಟುಕೊಡುತ್ತೇನೆ ಎನ್ನುವುದನ್ನು ನಾನು ಸಚಿವರಿಗೆ ಅಲ್ಲೇ ಸ್ಥಳದಲ್ಲೇ ಹೇಳಿದ್ದೇನೆ. ಅವರು ಮಣ್ಣುತೆಗೆದು ಹಾಕಿರುವಂಥಾದ್ದು ಒಂದು ದೊಡ್ಡ ಗುಡ್ಡ ಆಗಿದೆ. ಆ ಗುಡ್ಡದ ಮೇಲೆ ನಿಂತುಕೊಂಡು ವೀಕ್ಷಣೆ ಮಾಡಿದರು. ಆದ್ದರಿಂದ ಅಲ್ಲಿಗೂ ಸಹ ಒಂದು ಏತ ನೀರಾವರಿಯನ್ನು ಮಾಡಿ ಕೊಡಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ತಿಪಟೂರಿನ ಭಾಗದಲ್ಲಿ ಬರತಕ್ಕಂಥ ಕೆಲಸಗಳಿಗೆ ಅಲ್ಲಿರತಕ್ಕಂಥ ರೈತರು ಏನು ಜಮೀನನ್ನು ಕಳೆದು ಕೊಂಡಿದ್ದಾರೆ, ಆ ಹಣ ಅವರಿಗೆ ಬಂದಿಲ್ಲ. ಹಣ ಕೊಟ್ಟಿಲ್ಲ. ಅದಕ್ಕೋಸ್ಕರ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಅಲ್ಲಿಂದ ತುರುವೇಕೆರೆ ಬ್ರ್ಯಾಂಚ್‌ಗೆ 40 ಕಿ.ಮೀ. ಆಗುತ್ತದೆ. ಆದ್ದರಿಂದ ನಮ್ಮ ತಿಪಟೂರಿನಲ್ಲಿರತಕ್ಕಂಥ ಬ್ರ್ಯಾಂಚ್‌ನಲ್ಲಿ ಇರತಕ್ಕಂಥ 5 ಕೋಟಿ ಕೆಲಸವನ್ನು ತುರುವೇಕೆರೆ ಬ್ರ್ಯಾಂಚ್‌ಗೆ ಡೈವರ್ಟ್ ಮಾಡಬಾರದು ಎಂದು ರೈತರು ಕೊಟ್ಟಿರುವ ಮನವಿಯನ್ನು ಸಚಿವರಿಗೆ ಕೊಟ್ಟಿದ್ದೇನೆ. ಯಾವುದೇ ಕಾರಣದಿಂದ ತುರುವೇಕೆರೆ ಬ್ರ್ಯಾಂಚ್‌ಗೆ ಕೊಡಬಾರದು. ನಮ್ಮಲ್ಲಿರತಕ್ಕಂಥ ತಿಪಟೂರಿನಿದಲೇ ಕೊಡಿಸಬೇಕು. ರೈತರು 40 ಕಿ.ಮೀ. ಹೋಗಿ ಬರಲು ಆಗುತ್ತದೆಯೇ? ಒಂದು ದಿವಸ ಬೆಳಿಗ್ಗೆ ಹೋದರೆ ಸಾಯಂಕಾಲ ಆಗುತ್ತದೆ ಅವರ ಹತ್ತಿರ ಹೋಗಿ ಬರಬೇಕಾದರೆ. ಒಂದು ಸಲಕ್ಕೇ ಆ ಹಣ ಸಿಗುವುದಿಲ್ಲ, ಒಂದು ಸಲ ಹೋದರೆ ಕೆಲಸ ಆಗುವುದಿಲ್ಲ. ತಿಂಗಳಾನುಗಟ್ಟಳೆ ತಿರುಗಬೇಕಾಗುತ್ತದೆ. ಆದ್ದರಿಂದ, ಡೈವರ್ಟ್ ಮಾಡಿರತಕ್ಕಂಥ ಕೆಲಸವನ್ನು ದಯವಿಟ್ಟು ತಿಪಟೂರಿನಲ್ಲೇ ಕೊಡಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಮತ್ತೊಂದು, ಸಣ್ಣ ನೀರಾವರಿ ಬಗ್ಗೆ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಇರಬಹುದು, ನಮ್ಮ ತಾಲ್ಲೂಕಿನಲ್ಲಿ ಇರಬಹುದು, ಯಾವುದರಲ್ಲೇ ಆಗಬಹುದು, ಯಾವ ಸಣ್ಣ ಕೆರೆಯೂ ತುಂಬಿಲ್ಲ. ಇವತ್ತು ಹೂಳು ಎತ್ತುವುದಕ್ಕೆ ಹಣ ಕೊಟ್ಟಿಲ್ಲ,

ಸನ್ಮಾನ್ಯ ಭೈರೇಗೌಡರು ಮೊನ್ನೆ ಬಯಲು ಸೀಮೆ ಅಭಿವೃದ್ಧಿ ಮಂಡಳಿಯಲ್ಲಿ ನೀವು ಕೆರೆಯಿಂದ ಮಣ್ಣು ತೆಗೆಯಿರಿ ನಾವು ಸಾಕಷ್ಟು ಹಣ ಕೊಡುತ್ತೇವೆಂದು ಹೇಳಿದರು. ಆದರೆ ಕೆರೆಯ ಹೂಳು ಎತ್ತುವುದಕ್ಕೋಸ್ಕರವಾಗಿ ಅಥವಾ ಚಿಕ್ಕ ಡ್ಯಾಮ್‌ಗಳನ್ನು ಮಾಡುವುದಕ್ಕೋಸ್ಕರವಾಗಲೀ 95-96, 96-97, ಈಗ 97-98 ಈ ಮೂರು ವರ್ಷಗಳಲ್ಲಿ ಕೆರೆ ಹೂಳು ತೆಗೆಯುವುದಕ್ಕಾಗಿ ಹಣ ಅಪ್ರೂವ್ ಆಗಿ ಬಂದಿತ್ತು. ಆದರೆ ಅದರಲ್ಲಿ ಇಲ್ಲಿಯವರೆಗೆ ಒಂದು ಪೈಸೆನೂ ಬಿಡುಗಡೆ ಮಾಡಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಶ್ರೀ ಭೈರೇಗೌಡರೆ ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿದ್ದರೂ ಇದುವರೆಗೆ ಬಿಡುಗಡೆ ಮಾಡಿಲ್ಲ. ಬೇರೆ ಕ್ಷೇತ್ರಗಳಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಬರುವಂತಹ 75 ಎಂ.ಎಲ್.ಎ ಗಳಲ್ಲಿ ನಮ್ಮ ಕ್ಷೇತ್ರದಲ್ಲಿ ರೋಡ್ ಮಾಡಲು ಕೊಟ್ಟ 2 ಲಕ್ಷ 70 ಸಾವಿರ ಬಿಟ್ಟರೆ ಬೇರೆ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ ಬೇರೆ ಕ್ಷೇತ್ರಗಳಿಗೆ ಬೇರೆ ಕಡೆ 10 ಲಕ್ಷ ಕೊಟ್ಟಿದ್ದಾರೆ. ಏಕೆ ಈ ಭೇದ ಭಾವನೆ ಎಂದು ನಾನು ಕೇಳುತ್ತೇನೆ. ದಯವಿಟ್ಟು ಈ ವರ್ಷವಾದರೂ ಹಣವನ್ನು ಕೊಡಿಸಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇನ್ನೊಂದು ವಿಷಯ ಏನೆಂದರೆ ನಮ್ಮಲ್ಲಿ ಈಗ ಒಂದು ತೋಟಗಾರಿಕೆ ಘಟಕವನ್ನು ಸ್ಥಾಪನೆ ಮಾಡಿದ್ದೇವೆ. ತೆಂಗಿನ ಮರಕ್ಕೆ ರೋಗ ಬರುವುದನ್ನು ತಪ್ಪಿಸಲು ಇದನ್ನು ಸ್ಥಾಪನೆ ಮಾಡಿದ್ದೇವೆ. ಕಪ್ಪುತಲೆ ಹುಳುವಿನ ಹತೋಟಿ ಯೋಜನೆಯಲ್ಲಿ ಹೊಸದುರ್ಗ, ಉಡುಪಿ, ತಿಪಟೂರು, ಕನಕಪುರದಲ್ಲಿ ಸಂರಕ್ಷಣಾ ಪ್ರಯೋಗ ಶಾಲೆಗಳನ್ನು ಸ್ಥಾಪಿಸಿದ್ದೇವೆ ಎಂದು ತೋಟಗಾರಿಕಾ ಸಚಿವರು ಹೇಳಿದ್ದಾರೆ. ಆದರೆ ನಮ್ಮ ತಿಪಟೂರು, ಚಿಕ್ಕನಾಯಕನಹಳ್ಳಿ, ಅರಸೀಕೆರೆ ಈ ಭಾಗದಲ್ಲಿ ಮಳೆ ಆಗದ್ದರಿಂದ ಕಪ್ಪುತಲೆ ಹುಳುವಿನ ಹಾವಳಿ ಜಾಸ್ತಿಯಾಗಿದೆ. ಅದು ಜಾಸ್ತಿಯಾಗಿ ಬೇಸಿಗೆ ಕಾಲದಲ್ಲಿ ಎಲ್ಲಾ ಗಿಡವನ್ನು ನಾಶ ಮಾಡಿ ಬರಿ ಬಂಜೆಮರವನ್ನು ಉಳಿಸುತ್ತದೆ. ಅದನ್ನು ನಿರ್ಮೂಲನೆ ಮಾಡಲು ಇನ್ನುವರೆಗೆ ಸಾಧ್ಯವೇ ಆಗಿಲ್ಲ. ಇದೂ ಅಲ್ಲದೆ ಈಗ ಹೊಸದಾಗಿ ಒಂದು ರೋಗ ಬಂದಿದೆ, ಈ ಹುಳಿವಿನ ಬಾಧೆ 4 ವರ್ಷದಿಂದ ಪೀಡಿಸುತ್ತಾ ಇದೆ. ಆ ಹುಳು ಯಾವ ರೀತಿಯ ಗಿಡಗಳನ್ನು ತಿನ್ನುತ್ತದೆ ಎಂದರೆ ತೆಂಗಿನ ಸಸಿ ಹಾಕಿ ಅದು ಬೆಳೆದು ಇನ್ನೇನು ಫಸಲು ಕೊಡಬೇಕು ಎನ್ನುವ ಸಮಯಕ್ಕೆ ಆ ಗುಳಿ ಬರತಕ್ಕ ಗಿಣ್ಣಕ್ಕೆ ಸೇರಿಕೊಂಡು ಪುಂಗಿ ಹುಳತರಹದ್ದು 3 ತಿಂಗಳಲ್ಲಿ ಅದನ್ನು ತಿಂದು ಹಾಕಿ ಬಿಡುತ್ತದೆ, ಆ ಮರ ಬಿದ್ದು ಹೋದ ಮೇಲೆ ನಮಗೆ ಗೊತ್ತಾಗುತ್ತದೆ, ಆಗ ಆ ಗಿಡದಲ್ಲಿ ಹುಳುಗಳು ಎಷ್ಟು ಇರುತ್ತವೆ ಎಂದರೆ ಲಕ್ಷಗಟ್ಟಲೆ ಇರುತ್ತವೆ, ಒಂದು ಗಿಡದ ಹುಳ ತಕ್ಷಣ ಇನ್ನೊಂದು ಗಿಡಕ್ಕೆ ಅಂಟಿಕೊಳ್ಳುತ್ತವೆ. ಸಾವಿರಾರು ಗಿಡಗಳು 8- 10 ವರ್ಷ ಬೆಳೆಸಿ ಫಸಲು ಕೊಡುವಂತಹ ಸಮಯದಲ್ಲಿ ನಾಶವಾಗುತ್ತಿದೆ. ಎಷ್ಟು ಗಿಡಗಳು ಹೀಗೆ ನಾಶವಾಗಿವೆ ಎಂದು ಮಾಹಿತಿಯನ್ನು ತರಿಸಿಕೊಂಡು ಅದನ್ನು ನಿರ್ಮೂಲ ಮಾಡಲು ಕ್ರಮವನ್ನು ತೆಗೆದುಕೊಳ್ಳಬೇಕು ಏಕೆಂದರೆ ಗಿಡ ಹಾಕಿದಾಗ ತಿಂದರೆ ಯಾವ ಯೋಚನೆ ಇರಲಿಲ್ಲ, ಅಥವಾ ಬಿದ್ದು ಹೋಗುವಾಗ ತಿಂದರೆ ಯೋಚನೆ ಇರುವುದಿಲ್ಲ. ಫಸಲು ಕೊಡುವ

ಸಮಯದಲ್ಲಿ ತಿಂದು ಹಾಳುಮಾಡುವುದರಿಂದ ಆ ಹುಳುವಿನ ನಿರ್ಮೂಲನ ಔಷಧಿಯನ್ನು ಕಂಡುಹಿಡಿದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡಬೇಕೆಂದು ತಮ್ಮ ಮುಖಾಂತರ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯ ನಮ್ಮ ತುಮಕೂರು ಜಿಲ್ಲೆಯಲ್ಲಿ ಮಳೆ ಇಲ್ಲದೆ ಬೋರ್‌ವೆಲ್ ನೀರಿನಿಂದಲೇ ತೆಂಗಿನ ಮರಗಳನ್ನು ಬೆಳೆಸುವಂತಹ ಸಂದರ್ಭ ಇದೆ. ಇಲ್ಲಿ ಬೋರ್ ಇದ್ದರೇನೆ ಬೆಳೆ ಬೆಳೆದು ಎರಡು ಕಾಯಿ ಸಿಗಬಹುದು. ತಮ್ಮ ತಾಲ್ಲೂಕಿನಲ್ಲಿ ತೆಂಗಿನ ಮರ ಬೆಳೆಯುವುದನ್ನು ಬಿಟ್ಟರೆ ಬೇರೆ ಯಾವ ಬೆಳೆ ಬೆಳೆಯುವುದಿಲ್ಲ, ತರಕಾರಿ ಬೆಳೆಯಲು ನೀರು ಸಿಗುವುದಿಲ್ಲ, ದಿನಸಿ ಬೆಳೆ ಇಲ್ಲ, ಯಾವುದೂ ಇಲ್ಲ. ಅಲ್ಲಿ ರೈತರು ತೋಟ ಮಾರಿ ಅಥವಾ ತನ್ನ ಮನೆಯಲ್ಲಿ ಇರುವ ಒಡವೆಗಳನ್ನು ಮಾರಿ ಬೋರ್‌ವೆಲ್ ತೆಗೆಸಿರುತ್ತಾರೆ. ಆದರೆ ಆ ರೈತನಿಗೆ ಇದುವರೆಗೆ 3-4 ವರ್ಷದಿಂದ ಸರ್ವೀಸ್ ಕೊಟ್ಟಿಲ್ಲ. ಏಕೆ ಈ ತರಹ ವ್ಯತ್ಯಾಸ ಮಾಡುತ್ತಾರೆ. ಈ ಕರೆಂಟ್ ಕೊಡದೆ ಇವತ್ತು ಬಡ್ಡಿ ಕಟ್ಟಲು ಇನ್ನೊಂದು ತೋಟ ಅಥವಾ ಮನೆಯನ್ನು ಮಾರಬೇಕಾಗಿದೆ. ಒಂದೊಂದು ಊರುಗಳಲ್ಲಿ ಸರ್ವೀಸಾಗದೆ ಇರುವಂತಹ ಬೋರ್‌ವೆಲ್‌ಗಳು ಎಷ್ಟು ಸಾವಿರ ಇವೆ ಎಂಬುದು ಮಂತ್ರಿಗಳಿಗೆ ಗೊತ್ತಿಲ್ಲ ಎಂದು ಕಾಣುತ್ತದೆ. ಆದ್ದರಿಂದ ಈ ಬೋರ್‌ವೆಲ್‌ಗಳಿಗೆ ಸರ್ವೀಸ್ ಕೊಡಬೇಕೆಂದು ಕೆಇಬಿ ಮಂತ್ರಿಗಳಲ್ಲಿ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ಬೇರೆ ಬೆಳೆಗಳಾದರೆ ಹಿಂಗಾರು ಇಲ್ಲ ಎಂದರೆ ಮುಂಗಾರು ಬರುತ್ತದೆ; ಆದರೆ ತೆಂಗಿನ ಮರಗಳು 10 ವರ್ಷ 20 ವರ್ಷಗಳಾದರೂ ಬರುವುದಿಲ್ಲ 100 ವರ್ಷಗಳ ತಲೆಮಾರಿನ ಈ ತೆಂಗಿನ ಮರಗಳು, ಒಂದು ಫಸಲು ಮಾಡಬೇಕಾದರೆ ಸುಮಾರು 10 ವರ್ಷಗಳಾದ ಮೇಲೆ ಬೆಳೆ ಕೊಡತಕ್ಕಂತಹ ತೆಂಗಿನ ಮರವನ್ನು ಕಳೆದುಕೊಂಡರೆ ನಮ್ಮ ರೈತರ ಗತಿ ಏನು ಹೇಳಿ? ಅದಕ್ಕಾಗಿ ಎಷ್ಟು ಬೋರ್‌ವೆಲ್ ತೆಗೆದಿದ್ದಾರೆ ಯಾವುದು ಪೆಂಡಿಗ್ ಇವೆ ಅವುಗಳಿಗೆ ಸರ್ವೀಸ್ ಕೊಡಬೇಕು ಎಂದು ತಮ್ಮ ಮುಖಾಂತರ ಮಂತ್ರಿಗಳನ್ನು ಒತ್ತಾಯಿಸುತ್ತೇನೆ. ಅದೂ ಅಲ್ಲದೆ ಕರೆಂಟನ್ನು 24 ಗಂಟೆಗಳಲ್ಲಿ 6 ಗಂಟೆಗಳ ಕಾಲ ಕೊಡುತ್ತೇವೆ ಎಂದು ಹೇಳುತ್ತಾರೆ, ಆದರೆ ಅದರಲ್ಲಿ 3 ಗಂಟೆನೂ ಕೊಡುವುದೇ ಇಲ್ಲ. ಯಾವಾಗ ಬೇಕು ಆವಾಗ ಕರೆಂಟ್ ಇರುವುದೇ ಇಲ್ಲ. ಆದ್ದರಿಂದ ಇರುವ ಮರಗಳು ಸಾಯುತ್ತಿವೆ. ಹೀಗಾಗಿ ಮನೆಗಳಲ್ಲಿ ನೀರು ಇಲ್ಲದೆ ಮಕ್ಕಳು ಸ್ನಾನ ಮಾಡಿ ಸ್ಕೂಲ್‌ಗೆ ಹೋಗಬೇಕಾದರೆ ನನ್ನನ್ನು ಬೈಯುತ್ತವೆ ಎಂ.ಎಲ್.ಎ. ಆಗಿ ನೀರು ಕೊಡಿಸಲು ಆಗುತ್ತಿಲ್ಲ ಎಂದು. ನಮಗೆ ಶನಿವಾರದಿಂದ ಕರೆಂಟ್ ಇಲ್ಲ ನಾನು ಸೋಮವಾರ ಬೆಳಿಗ್ಗೆ ಎದ್ದು ಬೆಂಗಳೂರಿಗೆ ಸೆಷನ್‌ಗೆ ಹೋಗಬೇಕೆಂದು ಸ್ನಾನ ಮಾಡಲು ನೀರು ಕಾಯಿಸಿಲ್ಲವೇ ಎಂದು ನಮ್ಮ ಮನೆ ಹೆಂಗಸರನ್ನು ಕೇಳಿದರೆ ನೀನು ಕರೆಂಟ್ ಕೊಡಿಸಿದೆಯಾ ನೀರು ಬರಲು ಎಂದು ನನ್ನ ಮಗಳು ಮತ್ತು ಶ್ರೀಮತಿಯವರು ಕೇಳಿದರು. ಇವರಿಗೆ ಏನು ಉತ್ತರವನ್ನು ಹೇಳಬೇಕು ಹೇಳಿ. ಅವತ್ತು ಸ್ನಾನ ಮಾಡಲೇ ಇಲ್ಲ ಆವತ್ತು ನಮ್ಮ ಪುಣ್ಯಕ್ಕೆ ನಮ್ಮ ಗುರುಗಳಾದಂತಹ, ನಮ್ಮ ಪಕ್ಷಕ್ಕೆ ನಮ್ಮ ಜಿಲ್ಲೆಗೆ ದುಡಿದಂತಹ, ಗಂಡುಗಲಿ ನಮ್ಮ ಪಕ್ಷದ ಅಧ್ಯಕ್ಷರಾಗಿ ನಮ್ಮ ರಾಜ್ಯ ಯುವ ಮೋರ್ಚಾದ ಅಧ್ಯಕ್ಷರಾದಂತಹ

ಕಾಗೋರಪ್ಪನವರು ಹೃದಯಾಘಾತದಿಂದ ತೀರಿಕೊಂಡರು ಆದ್ದರಿಂದ ಅಲ್ಲಿಗೆ ಹೋಗಿ ನಾಲ್ಕು ಗಂಟೆಗೆ ಬಂದು ಗಲಾಟೆ ಮಾಡಿ ಎಕ್ಸಿಕ್ಯೂಟಿವ್ ಇಂಜೀನಿಯರ್ ತುಮಕೂರಿಗೆ ಫೋನ್ ಮಾಡಿದ ಮೇಲೆ ಕರೆಂಟ್ ಬಂತು. ಆಗ ನಾವು ನೀರು ತುಂಬಿಸಿಕೊಂಡು ಸಾಯಂಕಾಲ ಸ್ನಾನ ಮಾಡಬೇಕಾಯಿತು. ಇವತ್ತು ಯಾವುದೇ ಬೋರ್‌ವೆಲ್‌ನಲ್ಲಿ ನೀರು ಇಲ್ಲ. ಇವತ್ತು ಸರಿಯಾಗಿ ಕರೆಂಟ್ ಕೊಟ್ಟರೆ ಕುಡಿಯಲು ನೀರು ಸಿಗುತ್ತದೆ ಇಲ್ಲದಿದ್ದರೆ ಇಲ್ಲ. ಹೀಗಾದರೆ ನಾವು ಏನು ಮಾಡಬೇಕು ಹೇಳಿ. ಒಂದು ಗಂಟೆ ಕೊಟ್ಟರೂ ಕುಡಿಯುವ ನೀರಿನ ಬೋರ್‌ವೆಲ್‌ಗೆ ಕೊಡುವುದಿಲ್ಲ, ಹಾಗೆ ನೀರು ತೆಗೆದುಕೊಳ್ಳಲು ಕರೆಂಟ್ ಬೇಕು, ಕರೆಂಟ್ ಸಿಂಗಲ್ ಫೇಸ್ ಮಾಡಿಬಿಡುತ್ತಾರೆ, ಇಲ್ಲದಿದ್ದರೆ 10 ನಿಮಿಷಕ್ಕೆ ಬಂದ್ ಮಾಡಿಬಿಡುತ್ತಾರೆ. ಇವತ್ತು ಬೇರೆ ಹಳ್ಳಿಗಳಿಗೆ ಹೋಗಿ ಮಾತನಾಡುವಷ್ಟು ಶಕ್ತಿ ಇಲ್ಲದ ಹಾಗೆ ಆಗಿ ಬಿಟ್ಟಿದೆ ಈ ಕರೆಂಟ್‌ನ ಸಲುವಾಗಿ. ಆದ್ದರಿಂದ ನಾನು ಬಹಳ ಸಾರಿ ಮಂತ್ರಿಗಳ ಹತ್ತಿರ ಹೋಗಿ ಕೇಳುತ್ತೇನೆ ಎಲ್‌ಎಚ್‌ನಲ್ಲಿ ಅವರ ರೂಮಿಗೆ ಹೋಗಿ ಕೇಳುತ್ತಿರುತ್ತೇನೆ ಸ್ವಾಮಿ ನನ್ನ ವಿಚಾರ ಏನು ಮಾಡಿದ್ದಿರಿ ಎಂದು ಅವರು ಏನೇನೂ ತೊಡಕು ಇದೆ ಎಂದು ಹೇಳುತ್ತಾರೆ. ಆದರೆ ನಮ್ಮ ತೊಡಕನ್ನು ನಮ್ಮ ಮನೆಯ ಮಕ್ಕಳಿಗೆ ಹೇಳಲು ಆಗುತ್ತಿಲ್ಲ ಕುಡಿಯುವ ನೀರಿನ ಬಗ್ಗೆ ಅದೂ ಅಲ್ಲದೆ ನಮ್ಮ ಹೊನ್ನವಳ್ಳಿಯಿಂದ 30 ಕಿ.ಮೀ. ದೂರದಲ್ಲಿ ಇವೆ ಒಂದು ಓಬಳ್ಳಿ, ಅಲ್ಲಿ ಸುಮಾರು 94ನೇ ಸಾಲಿನಿಂದ ಸ್ಟೇಶನ್ ಕೊಡಬೇಕೆಂದು ನಾನು ನೇರವಾಗಿ ಕೇಳಿದ್ದೇನೆ, ಪತ್ರ ಬರೆದಿದ್ದೇನೆ ಇದುವರೆಗೆ ಯಾವುದೇ ಕಾರ್ಯವನ್ನೂ ಮಾಡುತ್ತಿಲ್ಲ. ಈಗ ಮಾಡಿಸುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದಾರೆ. ಅಲ್ಲಿ ಮಕ್ಕಳಿಗೆ ಓದಲು ಆಗುತ್ತಿಲ್ಲ, ಆ 30 ಕಿ.ಮೀ. ತಿಪಟೂರಿನಿಂದ ಹೋಗುವ ಕರೆಂಟ್‌ನಿಂದ ಸಾಯಂಕಾಲ ಮಕ್ಕಳು ಓದಲು ತೊಂದರೆಯಾಗುತ್ತಿದೆ. ಸುಮಾರು ಜನ ಬಂದು ನಮಗೆ ಒತ್ತಾಯ ತಂದಿದ್ದಾರೆ. ದಯವಿಟ್ಟು ಆ ಯುನಿಯನ್ ಸ್ಟೇಶನ್‌ನ್ನು ಮಾಡಿಕೊಡಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು: ನಂಜಾಮರಿಯವರೆ ನಿಮಗೆ ಮಾತನಾಡಲು ಇನ್ನು ಎಷ್ಟು ಸಮಯ ಬೇಕಾಗುತ್ತದೆ.

ಶ್ರೀ ಬಿ.ನಂಜಾಮರಿ: ಮಾನ್ಯ ಉಪಾಧ್ಯಕ್ಷರೆ, ನಾವು ಅಪರೂಪಕ್ಕೆ ಮಾತನಾಡವವರು 10 ನಿಮಿಷವಾದರೂ ಸಾಕು, 25 ನಿಮಿಷವಾದರೂ ಸಾಕು, ಇಲ್ಲದಿದ್ದರೆ ಮಾತನಾಡಬೇಡಿ ಎಂದರೆ ಕುಳಿತುಬಿಡುತ್ತೇನೆ.

7.40 ಪಿ.ಎಂ

ನಾನು ಕೇಳಿರುವಂತಹ ಎಲ್ಲಾ ಪ್ರಶ್ನೆಗಳಿಗೂ ಸಚಿವರಿಂದ ಉತ್ತರವನ್ನು ಕೊಡಿಸಬೇಕು. ಸನ್ಮಾನ್ಯ ಅಧ್ಯಕ್ಷರೆ, ಇದು ಬರೀ ಉತ್ತರದಲ್ಲೇ ಮುಗಿಯಬಾರದು, ಇದನ್ನು ಕಾರ್ಯಗತ ಮಾಡಿಕೊಡಬೇಕೆಂದು ಹೇಳುತ್ತಾ, ನಮ್ಮ ಹಿರಿಯರಾದಂತಹ

ಸಚಿವರಿಗೆ ಬಹಳ ದೊಡ್ಡ ಗೌರವವನ್ನು ಕೊಡಬೇಕೆಂದು ಅಲ್ಲಿ ಸುತ್ತಮುತ್ತಲಲ್ಲಿರುವ ಹೋಬಳಿಯ ಜನ ಬಹಳ ಆಸೆ ಇಟ್ಟುಕೊಂಡಿದ್ದಾರೆ, ತಕ್ಷಣ ಈ ವರ್ಷದಲ್ಲೇ ಬಜೆಟ್ ಇಡುತ್ತಾರೆ ಎಂದು ನಾನು ನಂಬಿದ್ದೇನೆ, ಆ ಜನತೆಗೆ ನಾನು ಹೋಗಿ ಮೊದಲೇ ಹೇಳಿಬಿಡುತ್ತೇನೆ, ಸಚಿವರು ಹೇಳಿದ್ದಾರೆ. ಈ ವರ್ಷದಲ್ಲಿ ಬಜೆಟ್ ಇಟ್ಟು ಕೆಲಸವನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದಾರೆ ಎಂದು ನಾನು ಆ ಭಾಗದ ಜನರಿಗೆ ಹೇಳುತ್ತೇನೆ. ಆ ಭಾಗದಲ್ಲಿ ಬರುವ ಅವರ ಶಾಸಕರುಗಳು, ಅಧ್ಯಕ್ಷರು ಇದ್ದಂತಹ ಭಾಗ, ಆದುದರಿಂದ ಆ ಕೆಲಸವನ್ನು ಮಾಡಿ ಕೊಡುತ್ತಾರೆ ಎಂದು ಜನರಿಗೆ ಹೇಳುತ್ತೇನೆ. ಇವತ್ತು ಇಷ್ಟು ಸಮಯವನ್ನು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಸನ್ಮಾನ್ಯ ಸಭಾಪತಿಯವರೇ, ನಿಮಗೆ ಮಾತನಾಡಲು ಎಷ್ಟು ನಿಮಿಷ ಬೇಕು?

+ ಶ್ರೀ ಯು.ಆರ್.ಸಭಾಪತಿ (ಉಡುಪಿ): ನೀವು ಎಷ್ಟು ನಿಮಿಷ ಕೊಡುತ್ತೀರೋ ಅಷ್ಟು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು: ಎಲ್ಲರಿಗೂ 10-20 ಕೊಟ್ಟಿದ್ದೇನೆ.

ಶ್ರೀ ಯು.ಆರ್.ಸಭಾಪತಿ: ಸನ್ಮಾನ್ಯ ಸಭಾಧ್ಯಕ್ಷರೆ, ಸುಮಾರು 47 ಬೇಡಿಕೆಗಳ ಮೇಲೆ ಇವತ್ತು ಚರ್ಚೆ ಮಾಡುವುದಕ್ಕೆ ಅವಕಾಶ ಇದ್ದರೂ, ಇಪ್ಪತ್ತು ನಿಮಿಷಗಳಲ್ಲಿ ಇಷ್ಟೊಂದು ಇಲಾಖೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ಎಲ್ಲಾ ಇಲಾಖೆಗಳ ಮೇಲೆ ಮಾಡಬೇಕು ಎಂದು ಇಲ್ಲ, ಒಂದೆರಡು ಇಲಾಖೆಗಳ ಮೇಲೆ....

ಶ್ರೀ ಯು.ಆರ್.ಸಭಾಪತಿ: ಆದುದರಿಂದ ನಾನು ಪ್ರಮುಖ ಇಲಾಖೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಇದರಲ್ಲಿ ಮುಖ್ಯವಾಗಿ ಭಾರೀ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆ, ಪರಿಸರ ಇಲಾಖೆ, ಮೀನುಗಾರಿಕಾ ಇಲಾಖೆ, ಅಬಕಾರಿ ಇಲಾಖೆ, ಕಾರ್ಮಿಕ ಇಲಾಖೆಗಳ ಬಗ್ಗೆ ಆದಷ್ಟು ಚಿಕ್ಕದಾಗಿ, ಸೂಕ್ಷ್ಮವಾಗಿ ವಿವರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಾನು ಈ ಸದನದಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆ ಬಗ್ಗೆ ಸಾಕಷ್ಟು ಸಲ ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಆರ್ಥಿಕ ಉದಾರೀಕರಣದ ಯಾವ ಒಂದು ತತ್ವದ ಆಧಾರದ ಮೇಲೆ ಇವತ್ತು ಸರ್ಕಾರ ಬಹು ರಾಷ್ಟ್ರೀಯ ಕಂಪನಿಗಳನ್ನು ಎಲ್ಲಾ ರಾಜ್ಯಕ್ಕೆ ಆಹ್ವಾನಿಸಿ, ಆ ಮೂಲಕ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವಲ್ಲಿ, ಉದ್ಯೋಗ ಭರವಸೆ ಕೊಡುವಂತಹದ್ದು, ಆರ್ಥಿಕ ಚೈತನ್ಯ ಕೊಡುವಂತಹದ್ದು, ಹಾಗೂ ಇನ್ನು ಅನೇಕ, ಅನೇಕ ಅವಕಾಶಗಳು ಇವೆ ಎಂಬ ಆಶ್ವಾಸನೆಗಳನ್ನು ಇತ್ತು, ಇವತ್ತು ಅನೇಕ ಬೃಹತ್ ಕೈಗಾರಿಕೆಗಳು ನಮ್ಮಲ್ಲಿ ಬರುತ್ತಾ ಇದೆ. ಬೃಹತ್ ಕೈಗಾರಿಕೆಗಳ

ಸ್ಥಾಪನೆಯನ್ನು ನಾನು ಖಂಡಿತವಾಗಿ ವಿರೋಧಿಸುವುದಿಲ್ಲ. ಆದರೆ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವಾಗ ಈಗ ಇರತಕ್ಕಂತಹ ಕೈಗಾರಿಕೆಗಳು ಏನು ಇದೆ ಅವುಗಳನ್ನು ನಿರ್ಮಾಣ ಮಾಡಿಕೊಂಡು, ಈಗ ಇರತಕ್ಕಂತಹ ಪ್ರಕೃತಿಯ ನಿಯಮಾವಳಿಯಲ್ಲಿ ಸರಿಯಾಗಿ ಭೂಮಿಯಲ್ಲಿ ಇರತಕ್ಕಂತಹ ಜನರು ಏನು ಇದ್ದಾರೆ, ಅವರಿಗೆ ತೊಂದರೆ ಆಗುವಂತಹ ರೀತಿಯಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಬಾರದು ಎಂದು, ಈ ವಿಚಾರವನ್ನು ಕಳೆದ ಎರಡೂವರೆ ವರ್ಷದಿಂದ ಪ್ರತಿಪಾದಿಸುತ್ತಾ ಬಂದಿದ್ದೇನೆ. ಆದರೆ ದುರಾದೃಷ್ಟವಶಾತ್ ಬೃಹತ್ ಕೈಗಾರಿಕೆಗಳ ಸ್ಥಾಪನೆ ಈಗಾಗಲೇ ಆಗಿದೆ. ಇನ್ನು ಮುಂದೆ ಕೂಡ ಬರುತ್ತವೆ. ಆದರೆ ಪರಿಸರ ಇಲಾಖೆಯಲ್ಲಿ ಜನರ ಕಾಳಜಿ ಬಗ್ಗೆ ಗಮನ ಕೊಟ್ಟ ಹಾಗೆ ಇಲ್ಲ. ಬೃಹತ್ ಕೈಗಾರಿಕೆಗಳ ಸ್ಥಾಪನೆ ಆಗುವಾಗ ಸಾರ್ವಜನಿಕರಿಗೆ ಈ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಒದಗಿಸಬೇಕು, ಚುನಾಯಿತ ಪ್ರತಿನಿಧಿಗಳಿಗೆ ಸಾಕಷ್ಟು ಮಾಹಿತಿಗಳನ್ನು ಒದಗಿಸಬೇಕು ಎನ್ನುವ ಯಾವ ನಿಯಮಾವಳಿ ಇದೆ, ಅದನ್ನೆಲ್ಲಾ ಸರ್ಕಾರ ಗಾಳಿಗೆ ತೂರಿದೆ ಎಂದರೆ ತಪ್ಪಲ್ಲ. ನಾನು ಕಳೆದ ಎರಡೂವರೆ ವರ್ಷಗಳಲ್ಲಿ ಇದೇ ಸದನದಲ್ಲಿ ಪ್ರತಿ ಅಧಿವೇಶನ ನಡೆಯುವಾಗ ಬೃಹತ್ ಕೈಗಾರಿಕೆಗೆ ಸಂಬಂಧಪಟ್ಟ ಅನೇಕ ಪ್ರಶ್ನೆಗಳನ್ನು ಕೇಳಿದ್ದೇನೆ. ಪ್ರತಿಯೊಂದು ಪ್ರಶ್ನೆಗಳಿಗೂ ಕೂಡ ಒಂದು ಚುಕ್ಕೆ ಗುರುತಿನ ಪ್ರಶ್ನೆಗಳು ಆಗಲಿಲ್ಲ. ಅದೇನೋ ಬಿಡಿ, ಅನ್‌ಸ್ಟಾರ್ಡ್ ಕ್ವೊಶ್ಚನ್ ಆಗಿ ಬಂದರೂ ಕೂಡ, ಅದಕ್ಕೆ ಉತ್ತರ ಅಧಿವೇಶನ ಮುಗಿದು 15 ದಿವಸದ ನಂತರ ನಮಗೆ ಸಿಗುತ್ತದೆ, ಆಮೇಲೆ ಮತ್ತೆ ಸದನ ಸೇರುವುದು 6 ತಿಂಗಳು ಆದಮೇಲೆ. ಹೀಗಾದರೆ ನಾವು ಹೇಗೆ ಅದರ ಮೇಲೆ ಚರ್ಚೆ ಮಾಡಲು ಸಾಧ್ಯವಾಗುತ್ತದೆ? ಆದರೆ ಚುನಾಯಿತ ಪ್ರತಿನಿಧಿಗಳನ್ನು ಸರ್ಕಾರ ಬೃಹತ್ ಕೈಗಾರಿಕೆಗಳ ಸ್ಥಾಪನೆ ಬಗ್ಗೆ ಹೇಳುವಾಗ ಏಕೆ ಅಂಧಕಾರದಲ್ಲಿ ಇಡುತ್ತಾರೆ ಎನ್ನುವುದೇ ನನ್ನ ಪ್ರಶ್ನೆ. ಮತ್ತು ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವಾಗ ಅದರಿಂದ ಆಗುವಂತಹ ಅನಾಹುತಗಳು, ಇನ್ನು 50 ವರ್ಷಗಳ ನಂತರ, 100 ವರ್ಷಗಳ ನಂತರ ಪರಿಸರಕ್ಕೆ ಆಗುವಂತಹ ಹಾನಿಗಳ ಬಗ್ಗೆ ಸ್ಪಷ್ಟವಾದ ವಿಚಾರವನ್ನು ಪರಿಸರ ಇಲಾಖೆ ಮಾಡಬೇಕು. ಪರಿಸರ ಇಲಾಖೆಯವರಿಗೆ ಇದರ ಬಗ್ಗೆ ಗಂಧದ ಗಾಳಿಯೇ ಇಲ್ಲ. ಪರಿಸರ ಇಲಾಖೆಯವರು ಬೃಹತ್ ಉದ್ದಿಮೆದಾರರು ಯಾರು ಇದ್ದಾರೆ, ಅವರೊಂದಿಗೆ ಶಾಮೀಲು ಆಗಿ, ಅವರಿಗೆ ಬೇಕು, ಬೇಕಾದ ರೀತಿಯಲ್ಲಿ ವರದಿಯನ್ನು ಕೊಡುವಂತಹ ಕೆಟ್ಟ ಸಂಪ್ರದಾಯ ಬೆಳೆದು ಬಂದಿದೆ. ಈ ಮೂಲಕ ರಾಜ್ಯದ ಜನತೆಯನ್ನು, ರಾಜ್ಯದ ಚುನಾಯಿತ ಪ್ರತಿನಿಧಿಗಳನ್ನು ಅಂಧಕಾರದಲ್ಲಿ ಇಟ್ಟು ಆ ಮೂಲಕ ಯಾವ ಕೈಗಾರಿಕೆಗಳು ಬರುತ್ತಾ ಇದೆ, ಆ ಪ್ರದೇಶಗಳ ಜನ ಕಷ್ಟ ನಷ್ಟಗಳಿಗೆ ಒಳಗಾದಂತಹ ಸಂದರ್ಭದಲ್ಲಿ ಅವರಿಗೆ ಸರಿಯಾದಂತಹ ಪುನರ್ ವಸತಿ ವ್ಯವಸ್ಥೆ ಕಲ್ಪಿಸುವಂಥ ಕೆಲಸ ಕೂಡ ಇವತ್ತು ಆಗಿಲ್ಲ. ಇದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈಗಾಗಲೇ ನಾನು ದಕ್ಷಿಣ ಕನ್ನಡ ಉಡುಪಿ ಜಿಲ್ಲೆ, ಉತ್ತರ ಕನ್ನಡದಲ್ಲಿ ಬರುವಂತಹ ಕೆಲವೊಂದು ಬೃಹತ್ ಕೈಗಾರಿಕೆಗಳು ಹಾಗು ಇನ್ನು ಬರತಕ್ಕಂತಹ ಕೈಗಾರಿಕೆಗಳ ಬಗ್ಗೆ ಸೂಕ್ಷ್ಮವಾಗಿ ಎರಡು ಮಾತುಗಳನ್ನು ಹೇಳಬಯಸುತ್ತೇನೆ ನನಗೆ ಮತ್ತೆ

ಮತ್ತೆ ಕೆದಕಿ ಇದನ್ನು ಗುಣಗಾನ ಮಾಡಬೇಕೆಂದು ಇಲ್ಲ. ಆದರೆ ಜನ ಭಯಭೀತರಾಗಿದ್ದಾರೆ, ಜನರು ಗೊಂದಲದಲ್ಲಿ ಸಿಲುಕಿದ್ದಾರೆ, ಈ ಬಗ್ಗೆ ಸಾಕಷ್ಟು ಜಿಲ್ಲೆಯಲ್ಲಿ ಅಂದರೆ, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಉಡುಪಿಯಲ್ಲಿ ಸಾಕಷ್ಟು ಗೊಂದಲ ಉಂಟಾಗಿದೆ. ಇದರ ಬಗ್ಗೆ ಜನರ ಒಂದು ಹೋರಾಟಗಳೂ ಸಹ ನಡೆದಿದೆ. ಇಷ್ಟೊಂದು ದೊಡ್ಡ ಹೋರಾಟ ನಡೆದರೂ ಕೂಡ ಸರ್ಕಾರ ಈ ಬಗ್ಗೆ ಸರ್ಕಾರಿ ಆದೇಶ ಹೊರಡಿಸಿದ್ದರೂ ಕೂಡ ಆ ಆದೇಶವನ್ನು ಅನುಷ್ಠಾನಕ್ಕೆ ತರುವಲ್ಲಿ ಸರ್ಕಾರ ವಿಫಲವಾಗಿದೆ. ಆ ಬೃಹತ್ ಕೈಗಾರಿಕೆಗಳು ಅದನ್ನು ಕೇವಲ ಯಕಶ್ಚಿತ್ ಎಂದು ಹೇಳಿ ತಿರಸ್ಕಾರ ಮಾಡಿಕೊಂಡು ಹೋಗುತ್ತಿದ್ದಾರೆ. ನಮಗೆ ಇದಕ್ಕೆ ಸರಿಯಾದ ಉತ್ತರ ಸಿಗಲಿಲ್ಲ. ನಾನು ಇದಕ್ಕೆ ಒಂದು ಉದಾಹರಣೆಯನ್ನು ಎಂಆರ್‌ಪಿಎಲ್ ಸಂಸ್ಥೆ ಬಗ್ಗೆ ಹೇಳಬೇಕಾಗಿದೆ. ಇವತ್ತು ಎಂಆರ್‌ಪಿಎಲ್ ಸಂಸ್ಥೆ ವಿರುದ್ಧ ಕೊಳವೆ ಹಾಕುವಾಗ ಅದರ ತ್ಯಾಜ್ಯ ವಸ್ತುಗಳನ್ನು ಸಮುದ್ರಕ್ಕೆ ಬಿಡುವಾಗ, ಕೊಳವೆ ಹಾಕುವಾಗ ಕಾರ್ಯಾಚರಣೆ ನಡೆಯಿತು, ಆ ಸಮಯದಲ್ಲಿ ಇಡೀ ಜಿಲ್ಲೆಯ ಜನ ಅದರಲ್ಲೂ ಮುಖ್ಯವಾಗಿ ಮೀನುಗಾರರು ಒಂದು ಹೋರಾಟ ಮಾಡಿದಾಗ ಎರಡು ದಿವಸ ಆ ಜಿಲ್ಲೆ ಬಂದ್ ಆಯಿತು. ಅನೇಕ ದುರ್ಘಟನೆಗಳು ನಡೆದವು. ಆದರೂ ಕೂಡ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ದೇವೇಗೌಡರು ಈ ಬೃಹತ್ ಕೈಗಾರಿಕೆಯಾದ ಎಂಆರ್‌ಪಿಎಲ್‌ನಿಂದ ಆಗುವಂತಹ, ಆಗಿರುವಂತಹ ಅನಾಹುತಗಳ ಬಗ್ಗೆ ಸಾಕಷ್ಟು ವಿಚಾರಗಳನ್ನು ನಮ್ಮಲ್ಲಿ ತಿಳಿದುಕೊಂಡು 29ನೇ ತಾರೀಖು 1995ನೇ ಇಸವಿಯಲ್ಲಿ ಸರ್ಕಾರಿ ಆದೇಶವನ್ನು ಹೊರಡಿಸಿತು. ಆದರೆ ಸರ್ಕಾರಿ ನಿಯಮಗಳನ್ನು ಆ ಸಂಸ್ಥೆ ಗಾಳಿಗೆ ತೂರಿದೆ. ಆದರೆ ನಾನು ಇದರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಆದರೆ ಒಂದೇ ಒಂದು ನಿಯಮಾವಳಿಯನ್ನು ಇವತ್ತು ಎಂಆರ್‌ಪಿಎಲ್ ಸಂಸ್ಥೆ ಸಮುದ್ರಕ್ಕೆ ಬಿಡುವಂತಹ ತ್ಯಾಜ್ಯ ವಸ್ತುಗಳು ಏನಿದೆ ಅವುಗಳನ್ನು ಸಂಸ್ಕರಣ ಮಾಡಿ ಅದನ್ನು ಬಿಡಬೇಕು. ಅದಕ್ಕೋಸ್ಕರ ರೀಸೈಕ್ಲಿಂಗ್ ಯೂನಿಟ್ಟನ್ನು ಸಂಸ್ಕರಣಾ ಘಟಕವನ್ನು ಸ್ಥಾಪಿಸಬೇಕು. ಅದಕ್ಕೆ 1997ನೇ ಡಿಸೆಂಬರ್ ತಿಂಗಳವರೆವಿಗೆ ಅದಕ್ಕೆ ಕಾಲಾವಧಿಯನ್ನು ಕೊಡಲಾಗಿದೆ. ಆದರೆ ದುರಾದೃಷ್ಟವಶಾತ್ ಆ ಎಂಆರ್‌ಪಿಎಲ್ ಸಂಸ್ಥೆ ಇದರ ಬಗ್ಗೆ ಗಮನ ಹರಿಸಿಲ್ಲ. ಇವತ್ತಿನವರೆಗೂ ರೀಸೈಕ್ಲಿಂಗ್ ಯೂನಿಟ್ ಪ್ರಾರಂಭ ಕೂಡ ಮಾಡಿಲ್ಲ. ಪ್ರತಿ ಮಳೆಗಾಲ ಬರುವಾಗ ತ್ಯಾಜ್ಯ ವಸ್ತುಗಳನ್ನು ಸಮುದ್ರಕ್ಕೆ ಬಿಟ್ಟು ಆದಂತಹ ಹಾನಿಗಳು, ಹಿಂದಿನ ವರ್ಷ ಇದೇ ಎಂಆರ್‌ಪಿಎಲ್ ಸಂಸ್ಥೆ 106 ಎಕರೆ ಫಲವತ್ತಾದ ಪ್ರದೇಶ ಭೂಮಿಗೆ ಡಾಂಬರೀಕರಣದ ತ್ಯಾಜ್ಯ ವಸ್ತುಗಳನ್ನು ಬಿಟ್ಟಿದ್ದರಿಂದ ಅದರಿಂದ ಅನೇಕ ಅನಾಹುತಗಳು ಆಗಿದೆ. ಇದರ ಬಗ್ಗೆ ನಾವು ಸಾಕಷ್ಟು ಅಧ್ಯಯನ ಮಾಡಿದ್ದೇವೆ, ಚರ್ಚಿಸಿದ್ದೇವೆ, ಇದರ ಬಗ್ಗೆ ಸರ್ಕಾರದ ಗಮನವನ್ನೂ ಸಹ ಸೆಳೆದಿದ್ದೇವೆ. ಆದರೆ ಕಳೆದ ಜೂನ್ ತಿಂಗಳ ಒಂದನೇ ತಾರೀಖಿನಂದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಹಾಗೂ ಉಡುಪಿ ಜಿಲ್ಲೆಯ, ಈ ಎರಡೂ ಜಿಲ್ಲೆಗೆ ಸೀಮಿತವಾಗಿ 114 ಕಿ.ಮೀ. ಉದ್ದಕ್ಕೂ ಜೂನ್ ಒಂದರಲ್ಲಿ ಒಂದು ಟೂರ್‌ಬಾಲ್ ಡಾಂಬರಿನ ಅಂಶದ ಪದಾರ್ಥ ಇಡೀ ಸಮುದ್ರ, ಕಿನಾರೆಯನ್ನೆಲ್ಲಾ

ಪಸರಿಸಿತು. ಸಮುದ್ರದಲ್ಲಿ ಒಂದು ಕಾಲ ಇತ್ತು, ಸಮುದ್ರದ ಬದಿಯಲ್ಲಿ ಮುತ್ತಿನಂಥ ಚಿಪ್ಪುಗಳು ಶಂಖ ಚಕ್ರಗಳು, ಈ ರೀತಿಯ ಅನೇಕ ಚಿಪ್ಪುಗಳನ್ನು ಸಂಗ್ರಹ ಮಾಡುವುದಕ್ಕೆ ವಿದ್ಯಾರ್ಥಿಗಳು ಬರುವ ಕಾಲ ಇತ್ತು. ಆದರೆ ಇವತ್ತು ನಮಗೆ ಅವ್ಯಾವೂ ಸಮುದ್ರ ಕಿನಾರೆಯಲ್ಲಿ ಸಿಗುತ್ತಾ ಇಲ್ಲ. ಏಕೆ ಸಿಗುತ್ತಾ ಇಲ್ಲ? ಯಾವ ಮೀನುಗಳೂ ಕೂಡ ಈ ಸಮುದ್ರ ಕಿನಾರೆಗೆ ಬರದಿದ್ದಂತಹ ಪರಿಸ್ಥಿತಿಯು ಉದ್ಭವವಾಗಿದೆ.

(ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್‌ರವರು) ಪೀಠವನ್ನು ಅಲಂಕರಿಸಿದರು)

ಟಾರ್‌ಬಾಲ್ ಏನು ಇದೆ ಅದು ಜೂನ್ ಒಂದರಿಂದ ಉಳ್ಳಾಳದಿಂದ ಹಿಡಿದು ಬೈಂದೂರಿನವರೆಗೆ ಇರತಕ್ಕಂತಹ ಕರಾವಳಿಯಲ್ಲಿ ಈ ಡಾಂಬರಿನ ಅಂಶ ಕಂಡು ಬಂತು. ಇದರ ವಿಶ್ಲೇಷಣೆ ಮಾಡಬೇಕು ಎನ್ನುವ ದೃಷ್ಟಿಯಿಂದ ನಾವು ಸರ್ಕಾರದ ಗಮನಕ್ಕೆ ತಂದೆವು. ಇದು ಎಲ್ಲಿಂದ ಬಂತು, ಹೇಗೆ ಬಂತು ಎನ್ನುವುದರ ಬಗ್ಗೆ ವಿಶ್ಲೇಷಣೆ ಮಾಡಿ ಎಂದು ಸರ್ಕಾರದ ಗಮನಕ್ಕೆ ತಂದೆವು. ಆದರೆ ಇದರ ಬಗ್ಗೆ ಪರಿಸರ ಇಲಾಖೆ ಇನ್ನೂ ಸಂಪೂರ್ಣವಾದ ಮಾಹಿತಿಯನ್ನು ನೀಡಿಲ್ಲ. ಪರಿಸರ ಇಲಾಖೆಯವರು ಎಷ್ಟೊಂದು ಬುದ್ಧಿವಂತರಾಗಿದ್ದಾರೆ ಎಂದರೆ, ಇದರ ಟಾರ್‌ಬಾಲಿನ ವಿಶ್ಲೇಷಣೆ ಮಾಡುವುದಕ್ಕೆ ಯಾವ ಎಂಆರ್‌ಪಿಎಲ್ ಸಂಸ್ಥೆ ಮೇಲೆ ನಾವು ಸಂಶಯದೃಷ್ಟಿ ಇಟ್ಟುಕೊಂಡಿದ್ದೆವು, ಅದೇ ಎಂಆರ್‌ಪಿಎಲ್ ಅವರ ಹತ್ತಿರ ವಿಶ್ಲೇಷಣೆ ಮಾಡುವುದಕ್ಕೆ ಕೊಡುತ್ತಾರೆ ಎಂದರೆ ಇದಕ್ಕಿಂತ ದೊಡ್ಡ ಹಾಸ್ಯಾಸ್ಪದ ಏನಿದೆ? ಇವತ್ತು ಜುಲೈ ಒಂದರಿಂದ ಆಗಸ್ಟ್ ತಿಂಗಳ ಕೊನೆಯವರೆಗೆ ನಾಡದೋಣಿಗಳು ಮೀನುಗಾರಿಕೆಗೆ ಹೋಗಬೇಕು. ನಾಡದೋಣಿಗಳು ಮೀನುಗಾರಿಕೆಗೆ ಕನ್‌ಟ್ರಿ ಬೋಟ್ಸ್, 5 ಹಾರ್ಸ್ ಪವರ್ ಕಡಿಮೆ ಇರತಕ್ಕಂತಹ ನಾಡದೋಣಿಗಳು ಮೀನುಗಾರಿಕೆ ಹೋಗದಿರುವುದರಿಂದ ಮೂರು ತಿಂಗಳ ಅವಧಿಯಲ್ಲಿ ಯಾವುದೇ ಮೀನುಗಾರಿಕೆ ಉತ್ಪನ್ನ ಅವರಿಗೆ ಸಿಗದೆ ಇರುವುದರಿಂದ ಮೀನುಗಾರರು ಬಹಳಷ್ಟು ನೊಂದಿದ್ದಾರೆ. ಇದರ ಬಗ್ಗೆ ಮೀನುಗಾರಿಕಾ ಇಲಾಖೆ, ಪರಿಸರ ಇಲಾಖೆ, ಬೃಹತ್ ಕೈಗಾರಿಕಾ ಇಲಾಖೆ ಈ ಮೂರು ಇಲಾಖೆಗಳು ಹೊಂದಾಣಿಕೆ ಮಾಡಿಕೊಂಡು ಇದರ ಬಗ್ಗೆ ವಿಶ್ಲೇಷಣೆ ಮಾಡಿ, ಈ ಟಾರ್‌ಬಾಲ್ ಹೇಗೆ ಬಂತು, ಇವತ್ತು ನಮ್ಮ ಪಶ್ಚಿಮ ಕರಾವಳಿಯ ಉದ್ದಕ್ಕೂ ಇರತಕ್ಕಂತಹ ಸಮುದ್ರ ಕಿನಾರೆಯಲ್ಲಿ ಮೀನಿನ ಉತ್ಪಾದನೆ ಏಕೆ ಬರಲಿಲ್ಲ ಎನ್ನುವುದರ ಬಗೆ ಅಧ್ಯಯನ ಮಾಡಬೇಕು ಎಂಬುದು ನನ್ನ ಕೋರಿಕೆ. ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಮೀನುಗಾರಿಕೆ ವಿಷಯದಲ್ಲಿ ಸಾಕಷ್ಟು ವಿಚಾರಗಳನ್ನು ಸನ್ಮಾನ್ಯ ಶ್ರೀ ವಸಂತ ಸಾಲಿಯಾನ ಮತ್ತು ಸನ್ಮಾನ್ಯ ಶ್ರೀ ಜಯರಾಮ್ ಶೆಟ್ಟರು ಹೇಳಿದ್ದಾರೆ. ಆದರೆ ನಾನು ಹೇಳುವುದು ಇಷ್ಟೆ. ಇವತ್ತು ಮೀನುಗಾರರು ಬಹಳಷ್ಟು ಸಂಕಟದಲ್ಲಿ ಇದ್ದಾರೆ, ಮೀನುಗಾರಿಕೆ ಉತ್ಪನ್ನ ಇಲ್ಲ, ಕಾರವಾರ ಜಿಲ್ಲೆಯಲ್ಲಿ ಜನರು ನೌಕಾನೆಲೆಗೋಸ್ಕರ, ತಮ್ಮ ಇಡೀ ಹಳ್ಳಿಯನ್ನು ಬಿಟ್ಟುಕೊಟ್ಟು ದೇಶಕ್ಕೋಸ್ಕರ ತ್ಯಾಗ ಮಾಡಿದರು. ಈಗ ಅದು ಸಾಲದು ಎಂದು, ಪುನಃ ತಾಜ್ ರಿಸಾರ್ಟ್ ಅವರಿಗೆ ನೀವು ಮುನ್ನೂರು ಎಕರೆ ಕರಾವಳಿ ಪ್ರದೇಶವನ್ನು

ಟೂರಿಸಮ್ ಸೆಂಟರ್‌ನ ಡೆವಲಪ್ ಮಾಡುವುದಕ್ಕೋಸ್ಕರ ಕೊಡುತ್ತೇನೆ ಎಂದು ಹೇಳಿದರೆ ಹೇಗೆ? ಅದರಿಂದ ನಿರ್ವಸತಿಗಾರರು ಆಗುವಂತಹ ಮೀನುಗಾರರು ಎಷ್ಟು? ಅಲ್ಲಿ ಆಗುವಂತಹ ನಿರ್ವಸತಿ ಮೀನುಗಾರರಿಗೆ ನೀವು ಕೊಡುವ ಕೆಲಸ ಏನು? ಇವತ್ತು ಉದ್ಯೋಗ ಕೊಡುತ್ತೇನೆ, ಕೊಡುತ್ತೇನೆ ಎಂದು ಹೇಳುತ್ತಿದ್ದೀರಿ. ಆದರೆ ಕರಾವಳಿ ಉದ್ದಕ್ಕೂ ಪಶ್ಚಿಮ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಉಡುಪಿ ಜಿಲ್ಲೆ ಮತ್ತು ಮಧ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಸಹ ಬಡ ಮೀನುಗಾರರು ವಾಸ ಮಾಡುತ್ತಿರುವರು, ಅವರನ್ನು ನಿರ್ವಸತಿಗರನ್ನಾಗಿ ಮಾಡಿ ನೀವು ಉದ್ಯೋಗ ಕೊಡುವುದಾದರೆ ಅವರಿಗೆ ಯಾವ ಉದ್ಯೋಗ ಕೊಡುವುದಕ್ಕೆ ಸಾಧ್ಯ ಇದೆ? ಆ ಮೀನುಗಾರರೆಲ್ಲಾ ಅವಿದ್ಯಾವಂತರು. ಆ ಅವಿದ್ಯಾವಂತರಿಗೆ ಯಾವ ರೀತಿಯ ಉದ್ಯೋಗವನ್ನು ಕೊಡುವುದಕ್ಕಾಗುತ್ತದೆ? ಈ ಮಾತನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ನನ್ನ ಬೇಡಿಕೆಯೇನೆಂದರೆ ಈ ಮೂರು ಇಲಾಖೆಗಳು ತಮ್ಮ ಕಾರ್ಯಕ್ರಮದಲ್ಲಿ ಹೊಂದಾಣಿಕೆಯನ್ನು ಮಾಡಿಕೊಂಡು ಬರಬೇಕು. ಕೈಗಾರಿಕೆ ಇಲಾಖೆಯು ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಆ ಬೃಹತ್ ಕೈಗಾರಿಕೆಗಳು ಬರುವಾಗ ಎಲ್ಲೆಲ್ಲಿ ಗುರುತಿಸಲ್ಪಟ್ಟ ಪ್ರದೇಶಗಳಲ್ಲಿ ಯಾವ್ಯಾವ ಜನರು ನಿರ್ವಸಿತರಾಗುತ್ತಾರೋ ಅಂಥ ಜನರಿಗೆ ಪುನರ್ವಸತಿಯ ಕಾಯಕಲ್ಪವನ್ನು ಸರಿಯಾಗಿ ಮಾಡಬೇಕೆಂಬುದು ನನ್ನ ಬೇಡಿಕೆಯಾಗಿದೆ. ಅದನ್ನು ಪ್ರಥಮತಃವಾಗಿ ಆ ಜನರಿಗೆ ಪುನರ್ವಸತಿಯನ್ನು ಮಾಡಿಕೊಡಬೇಕು. ಈ ಜನರಿಗೆ ನೀವು ಬೇರೆ ಯಾವ ರೀತಿಯ ಉದ್ಯೋಗವನ್ನು ಕೊಡುವುದಕ್ಕೆ ಸಾಧ್ಯವಿಲ್ಲ, ಏಕೆಂದರೆ ಅವರು ಮೀನುಗಾರಿಕೆ ಮೇಲೆ ಜೀವನವನ್ನು ಹೊಂದಿರುತ್ತಾರೆ. ಅವರಿಗೆ ಸಾಕಷ್ಟು ರೀತಿಯ ಬಲ, ಚೈತನ್ಯವನ್ನು ಕೊಡುವುದಕ್ಕೋಸ್ಕರ ಬೇರೆ ಬೇರೆ ಸಹಾಯಧನದ ರೂಪದಲ್ಲಿಯೋ, ಬೇರೆ ಬೇರೆ ತರಬೇತಿಗಳನ್ನು ಕೊಡುವುದರ ಮೂಲಕವಾಗಿಯೋ ಇವರುಗಳಿಗೆ ಉದ್ಯೋಗವನ್ನು ಕೊಡುವ ನಿಟ್ಟಿನಲ್ಲಿ ಬೃಹತ್ ಕೈಗಾರಿಕೆ ಇಲಾಖೆಯವರು ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ಪರಿಸರ ಇಲಾಖೆ ಬಗ್ಗೆ ಹೇಳಬೇಕೆಂದು ಈ ಇಲಾಖೆ ಬೃಹತ್ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ತಮ್ಮದೇ ಆದ ಕಟ್ಟುನಿಟ್ಟಿನ ಹಲವಾರು ನಿಬಂಧನೆಗಳನ್ನು ಹಾಕುತ್ತದೆ. ಈ ನಿಬಂಧನೆಗಳಿಗೆ ಒಳಪಟ್ಟಂತೆ ಬೃಹತ್ ಕೈಗಾರಿಕೆಗಳ ಬಗ್ಗೆ ನಿರ್ದಾಕ್ಷಿಣ್ಯವಾಗಿ ತನ್ನ ವರದಿಯನ್ನು ಕೊಡಬೇಕು. ಪರಿಸರ ಇಲಾಖೆ ಉದ್ಯೋಗಸ್ಥರ ಕೈಗೊಂಬೆಯಾಗಿರಬಾರದು. ಪರಿಸರ ಇಲಾಖೆ ತನ್ನ ಸ್ವಂತಿಕೆಯಲ್ಲಿ ಬರಬೇಕು. ಈ ಇಲಾಖೆ ಕೊಡುವ ವರದಿ ನಿಷ್ಕಪಟವಾಗಿರಬೇಕು. ನಿಷ್ಪಕ್ಷಪಾತವುಳ್ಳದ್ದಾಗಿರಬೇಕು ಮತ್ತು ನಿರ್ದಾಕ್ಷಿಣ್ಯದಿಂದ ಕೂಡಿದ್ದಾಗಿರಬೇಕು. ಈ ರೀತಿ ಇದ್ದರೆ ಮಾತ್ರ ಅಂಥ ವರದಿಗಳಿಗೆ ಒಂದು ಬೆಲೆ ಸಿಕ್ಕುತ್ತದೆ. ಇವೊತ್ತು ಈ ಇಲಾಖೆ ಉದ್ಯೋಗಪತಿಗಳಿಗೆ ಬೇಕಾದಂತೆ ಅಥವಾ ಸರ್ಕಾರಕ್ಕೆ ಬೇಕಾದಂತೆ ವರ್ತಿಸುವುದಾದರೆ ಅದರಿಂದ ಸಾಮಾನ್ಯ ಜನಕ್ಕೆ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಪರಿಸರ ಇಲಾಖೆಯು ತನ್ನ ಕಟ್ಟುನಿಟ್ಟಿನ ನಿಯಮಗಳನ್ನು ಬೃಹತ್ ಕೈಗಾರಿಕೆಗಳು ಒಂದು ವೇಳೆ

ಅಳವಡಿಸದೇ ಇದ್ದರೆ ಅಂಥ ಕೈಗಾರಿಕೆಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಬೇಕಾದ ವರದಿಯನ್ನು ಕೊಡುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕು. ಇದೇ ಸಂದರ್ಭದಲ್ಲಿ ಮೀನುಗಾರಿಕೆ ಇಲಾಖೆ ಕೂಡ ತಮ್ಮ ಇಲಾಖಾ ವರದಿಯಲ್ಲಿ ಈ ಬೃಹತ್ ಕೈಗಾರಿಕೆಗಳು ಬಂದದ್ದರಿಂದ ಮೀನುಗಾರರಿಗೆ ಆಗಿರುವ ಸಂಕಷ್ಟಗಳ ಬಗ್ಗೆ ನಿಷ್ಪಕ್ಷಪಾತವಾದ ವರದಿಯನ್ನು ಕೊಡಬೇಕು. ಅಲ್ಲಿಯ ಮೀನುಗಾರರಿಗೆ ಮೀನು ಉತ್ಪನ್ನದಲ್ಲಿ ಆಗತಕ್ಕಂಥ ನಷ್ಟವೇನಿದೆ ಅದರ ಬಗ್ಗೆ ಪ್ರಾಮಾಣಿಕವಾದ ವರದಿಯನ್ನು ಬೃಹತ್ ಕೈಗಾರಿಕಾ ಇಲಾಖೆಗೆ ಮತ್ತು ಪರಿಸರ ಇಲಾಖೆಗೆ ಕೊಟ್ಟು ಆ ಮೂಲಕ ಈ ಮೂರು ಇಲಾಖೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡಿದರೆ ಯಾವುದೇ ರೀತಿಯಾದ ತೊಂದರೆಯೂ ಈ ಜನ ಸಾಮಾನ್ಯರಿಗೆ ಬರುವುದಿಲ್ಲವೆನ್ನುವ ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈಗ ಇಲ್ಲಿದ್ದಾರೆ. ಈಗಾಗಲೇ ಈ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದೇನೆ. ಈ ಸದನದ ಮೂಲಕ ಮತ್ತೊಮ್ಮೆ ಅವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನೀವು ಈಗ ಅಧಿಕಾರದಲ್ಲಿದ್ದೀರಿ ಎನ್ನುವುದು ಮುಖ್ಯವಲ್ಲ, ನೀವು ಅಧಿಕಾರದಲ್ಲಿದ್ದಾಗ ಏನೇನು ಒಳ್ಳೆಯ ಕೆಲಸಗಳನ್ನು ಮಾಡುತ್ತೀರಿ. ಅದು ಇತಿಹಾಸವಾಗಿ ಉಳಿಯುತ್ತದೆ. ಇವೊತ್ತು ನೀವು ಜಿಲ್ಲೆಯ ಘೋಷಣೆಯನ್ನು ಮಾಡಿದಿರಿ, ಇದಕ್ಕೆ ನಾನು ಪ್ರಪ್ರಥಮವಾಗಿ ಅಭಿನಂದನೆಯನ್ನು ಸಲ್ಲಿಸಲೇಬೇಕು. ನಾವು ಎಷ್ಟೋ ಬಾರಿ ಈ ಸದನದಲ್ಲಿ ಜಿಲ್ಲೆಗಳ ರಚನೆಯನ್ನು ನೀವು ಮಾಡಬೇಕೆಂದು ಹೇಳಿ ಮತ್ತು ಅದನ್ನು ಮಾಡಿ ಕರ್ನಾಟಕ ರಾಜ್ಯದಲ್ಲಿ ನಿಮ್ಮ ಹೆಸರು ಸ್ವರ್ಣಾಕ್ಷರದಲ್ಲಿ ಸೇರಬೇಕೆನ್ನುವ ಮಾತನ್ನು ಹೇಳಿದ್ದೇವೆ. ಅದನ್ನು ನೀವು ಸಾಧಿಸಿದಿರಿ. ಅದು ಇತಿಹಾಸದಲ್ಲಿ ಮುಂದೆ ನಿಲ್ಲುತ್ತದೆ. ಆದರೆ ಈ ಮೀನುಗಾರರ ವಿಚಾರದಲ್ಲಿ ನಿಮ್ಮ ಕಾಲದಲ್ಲಿ ಅನೇಕ ಬೃಹತ್ ಕೈಗಾರಿಕೆಗಳು ಬಂದು ಲಕ್ಷಾಂತರ ಮೀನುಗಾರರು ಬೀದಿಪಾಲಾದರು ಎನ್ನುವಂಥ ಮಾತು ನಿಮ್ಮ ಕಾಲದಲ್ಲಿ ಬರಬಾರದು. ಅದರ ಬದಲು ಈ ರೀತಿ ನೀವು ಹೇಳಬೇಕು, ಹೌದು ನಾವು ಬೃಹತ್ ಕೈಗಾರಿಕೆಗಳನ್ನು ತೆರೆದಿದ್ದೇವೆ, ಅದರ ಜೊತೆಗೆ ನಿರ್ವಸಿತರಾದ ಜನಗಳಿಗೆ ಪುನರ್ವಸತಿಯನ್ನು ನಾವು ಕಲ್ಪಿಸಿದ್ದೇವೆ, ಇದರ ಜೊತೆಗೆ ಪರಿಸರ ಇಲಾಖೆಯ ಕಟ್ಟುನಿಟ್ಟಿನ ನಿಬಂಧನೆಗಳನ್ನು ನಾವು ಅಳವಡಿಸಿಕೊಂಡು ಆ ಬೃಹತ್ ಕೈಗಾರಿಕೆಗಳನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದೇವೆ ಎನ್ನುವಂತೆ ನೀವು ಅದನ್ನು ಸಾಧನೆ ಮಾಡಿದ್ದೇ ಆದರೆ ಅದರ ಬಗ್ಗೆ ನಾನು ಎಷ್ಟು ಬೇಕಾದರೂ ಹೊಗಳುವುದಕ್ಕೆ ನಾನು ಸಿದ್ಧನಿದ್ದೇನೆ. ಇನ್ನು ಸಮುದ್ರ ಕೊರೆತ ವಿಷಯದ ಬಗ್ಗೆ ನಮ್ಮ ಹಲವಾರು ಸದಸ್ಯರುಗಳು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಈ ಸಮುದ್ರ ಕೊರೆತದಿಂದ ಕೂಡ ಮೀನುಗಾರರಿಗೆ ಹಾನಿಯಾಗುತ್ತಿದೆ. ಕರಾವಳಿ ಪ್ರದೇಶದ ಕರಾವಳಿಯುದ್ದಕ್ಕೂ ಮೀನುಗಾರ ಸಮಾಜದ ಬಂಧುಗಳು ಮೀನುಗಾರಿಕೆಗೆ ಹೋಗಬಹುದು. ಅವರ ಮನೆಗಳೆಲ್ಲಾ ಸಮುದ್ರ ಕೊರೆತದಿಂದ ಕೊರೆದುಕೊಂಡು ಹೋಗಿ ಇನ್ನು ಸ್ವಲ್ಪ ಮುಂದೆ ಗುಡಿಸಲನ್ನು ಹಾಕಿಕೊಳ್ಳುತ್ತಾರೆ. ಮತ್ತೆ ಸಮುದ್ರ ಕೊರೆತವಾದಾಗ ಮತ್ತಷ್ಟು ದೂರದಲ್ಲಿ ಗುಡಿಸಲು ಹಾಕಿಕೊಳ್ಳುತ್ತಾರೆ. ಈ ರೀತಿಯಲ್ಲಿ

ಸುಮಾರು 1 1/2 ಕಿ.ಮೀ.ನಷ್ಟು ದೂರ ಸಮುದ್ರ ಕೊರೆತ ಒಳಗೊಳಗೇ ಬರುತ್ತಾ ಹೋಗಿದೆ. ಇದನ್ನು ತಾವು ಇನ್‌ಸ್ಯಾಟ್ ಫೋಟೋದಿಂದ ಗಮನಿಸಿದಾಗ ಗೊತ್ತಾಗುತ್ತದೆ, ಒಂದು ಸಾವಿರ ವರ್ಷದ ಹಿಂದೆ ಸಮುದ್ರದ ವ್ಯಾಪ್ತಿ ಎಷ್ಟಿತ್ತು, ಈಗ ಎಲ್ಲಿಯವರೆಗೆ ಸಮುದ್ರ ಕೊರೆತವಾಗಿದೆ ಎಂಬ ಬಗ್ಗೆ ಗೊತ್ತಾಗುತ್ತದೆ. ಆದರೆ ಈ ಸಮುದ್ರಕೊರೆತವನ್ನು ಸಂಪೂರ್ಣವಾಗಿ ತಡೆಯುವುದಕ್ಕೆ ನಮಗೆ ಸಾಧ್ಯವಿಲ್ಲ. ಆದರೆ ಇವೊತ್ತು ಕೇಂದ್ರ ಸರ್ಕಾರದ ಯಾವುದೇ ಆರ್ಥಿಕ ಸಂಸ್ಥೆಗಳ ಮೂಲಕ ಕೇರಳ ಸರ್ಕಾರದವರು ಮಾಡಿದ ಹಾಗೆ ನಮ್ಮಲ್ಲೂ ಕೂಡ ತಡೆಗೋಡೆಗಳನ್ನು ಹಾಕುವುದಕ್ಕೆ ಒಂದು ಪೂರ್ತಿಯಾದ ಯೋಜನೆಯನ್ನು ಮಾಡಲೇಬೇಕು. ಮಾಡಿದ್ದೀರಿ, ಏನೆಂದರೆ 400 ಕೋಟಿ ರೂ.ಗಳ ಯೋಜನೆಯೊಂದನ್ನು ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೀರಿ. ಈ ರೀತಿಯ ಉತ್ತರ ನಮಗೆ ಎರಡೂವರೆ ವರ್ಷಗಳ ನಂತರ ಬಂದಿದೆ, ಆದರೆ ಇದು ಪ್ರಗತಿಯಲ್ಲಿಲ್ಲ. ಅದರಿಂದಾಗಿ ಮಾನ್ಯ ಮುಖ್ಯಮಂತ್ರಿಗಳು ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ನಮ್ಮ ರಾಜ್ಯದಲ್ಲಿರುವ 314 ಕಿ.ಮೀ.ಗಳ ಕರಾವಳಿಯಲ್ಲಿ ಕೇವಲ 19 ಕಿ.ಮೀ.ನಷ್ಟು ಮಾತ್ರ ತಡೆಗೋಡೆಯನ್ನು ನಿರ್ಮಾಣ ಮಾಡಲಾಗಿದೆ. ಉಳಿದುದ್ದಕ್ಕೆ ತಡೆಗೋಡೆ ನಿರ್ಮಾಣ ಮಾಡುವುದಕ್ಕೆ ಆಗಿಲ್ಲ. ಪ್ರತಿ ವರ್ಷ ಮಳೆ ಬಂದಾಗ ಪ್ರಕೃತಿ ವಿಕೋಪವಾದಾಗ ಸಮುದ್ರ ಕೊರೆತ ಬಂದಾಗ ಯಾರ್‍ಯಾರೋ ಕಂಟ್ರಾಕ್ಟರ್ ಕರೆಸಿ ಅಲ್ಲೊಂದು ಸ್ವಲ್ಪ, ಇಲ್ಲೊಂದು ಸ್ವಲ್ಪ ಕಲ್ಲನ್ನು ಹಾಕಿ ಎಂದು ಹೇಳಿಕೊಂಡು ಇವೊತ್ತು ನಾವು ಪ್ರಕೃತಿ ವಿಕೋಪದ ನೆಲೆಯಲ್ಲಿ ನಾವು ಅಲ್ಲಿ ಕಲ್ಲು ಹಾಕುವುದಕ್ಕೆ ಗುತ್ತಿಗೆದಾರರನ್ನು ಕರೆದರೆ ಅಲ್ಲಿ ಒಂದು ಕಡೆ ಕಲ್ಲು ಹಾಕಿದರೆ ಇನ್ನೊಂದು ಕಡೆ ಸಮುದ್ರ ಕೊರೆತ ಪ್ರಾರಂಭವಾಗುತ್ತದೆ. ಈ ರೀತಿಯ ಅವ್ಯವಸ್ಥೆ ಇದೆ. ಇದಲ್ಲದೇ ಪ್ರಕೃತಿ ವಿಕೋಪದ ರೂಪದಲ್ಲಿ ನಾವು ಬಿಡುಗಡೆಗೊಳಿಸುವಂಥ ಹಣ ಸರಿಯಾಗಿ ಬರುತ್ತಿಲ್ಲ. ಇವೊತ್ತು ಸುಮಾರು 5 ಕೋಟಿ ರೂ.ಗಳನ್ನು ಪ್ರಕೃತಿ ವಿಕೋಪದಿಂದ ನೆರೆಹಾವಳಿಯಾಗಿರುವ ಬಗ್ಗೆ ತಿಳಿಸಿ ಇದಕ್ಕೆ ಹಣವನ್ನು ಬಿಡುಗಡೆ ಮಾಡಬೇಕೆಂದು ಅಂದಾಜು ಪಟ್ಟಿ ಮಾಡಿ ತಿಳಿಸಿ ಮಾನ್ಯ ವಿತ್ತ ಸಚಿವರಿಗೆ ಕಳುಹಿಸಲಾಗಿದೆ. ಅವರ ಬಳಿ ಆ ಫೈಲ್ ಇದೆ. ಇವೊತ್ತಿಗೆ ಸುಮಾರು ಒಂದು ತಿಂಗಳಾದರೂ ಅದನ್ನು ಹಣಕಾಸಿನ ಮಂತ್ರಿಗಳು ಇನ್ನೂ ನೋಡಿಲ್ಲವೇನೋ ಎನಿಸುತ್ತದೆ. ದಯವಿಟ್ಟು ಮಾನ್ಯ ಹಣಕಾಸಿನ ಸಚಿವರು ಈ ಹಣವನ್ನು ಬಿಡುಗಡೆ ಮಾಡಬೇಕೆಂದು ಕೋರಿಕೊಳ್ಳುತ್ತೇನೆ. ಸಚಿವರು ಈ ಫೈಲನ್ನು ನಾಳೆಯಾದರೂ ನೋಡಿ 5 ಕೋಟಿ ಅಂದಾಜು ಹೇಗೆ ಹಾಕಿದ್ದಾರೆ, ಇದರಲ್ಲೇನಾದರೂ ಸುಳ್ಳು ಸಂಗತಿ ಇದೆಯೇ, ಶಾಸಕರು ಇದರ ಬಗ್ಗೆ ಏನಾದರೂ ಇನ್‌ಫ್ಲೂಯೆನ್ಸ್ ಉಪಯೋಗಿಸಿದ್ದಾರೆಯೇ, ಮಂತ್ರಿಗಳೇನಾದರೂ ಇದನ್ನು ಮಾಡಿ ಕೊಟ್ಟಿದ್ದಾರೆಯೇ ಎಂಬುದನ್ನು ಬೇಕಾದರೆ ಪರಿಶೀಲಿಸಲಿ, ಆ ರೀತಿಯೇನೂ ಇದರಲ್ಲಿ ಆಗಿಲ್ಲ, ಇದು ನೈಜವಾದ ಪರಿಸ್ಥಿತಿ. ಈ ಪ್ರಕೃತಿ ವಿಕೋಪದ ಹಣ ಬಿಡುಗಡೆ ಮಾಡುವಲ್ಲಿ ಸರ್ಕಾರ ಒಂದು ನಿಮಿಷ ಕೂಡ ತಡ ಮಾಡಬಾರದು. ಈ ವಿಚಾರದಲ್ಲಿ ಆ ಫೈಲನ್ನು ಇಷ್ಟು ದಿನ ಇಟ್ಟುಕೊಳ್ಳುವ ಪ್ರಶ್ನೆಯೇ

ಬರುವುದಿಲ್ಲ. ಆದರಿಂದಾಗಿ ನಾನು ಮತ್ತೆ ಮತ್ತೆ ಅರ್ಥ ಸಚಿವರಲ್ಲಿ ಬೇಡಿಕೊಳ್ಳುವುದೇನೆಂದರೆ 5 ಕೋಟಿ ರೂ.ಗಳಲ್ಲಿ ಕನಿಷ್ಠ 2 ಕೋಟಿ ರೂ.ಗಳನ್ನಾದರೂ ನಾಳೆಯೇ ಬಿಡುಗಡೆ ಮಾಡುತ್ತೀರಿ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇನ್ನು ಅಬಕಾರಿ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗಾಗಲೇ ಈ ಇಲಾಖೆ ಬಗ್ಗೆ ಬಹಳಷ್ಟು ಹಿರಿಯ ಸದಸ್ಯರು ಮಾತನಾಡಿದ್ದಾರೆ. ಆದರೆ ಈ ಇಲಾಖೆಯಲ್ಲಿ 'ನಾರ್ಕೋಟಿಕ್' ವಿಭಾಗವೆಂದು ಇದೆ. ಇದಕ್ಕೆ ಒಬ್ಬರು ಆಯುಕ್ತರು ಮತ್ತು ಇವರ ಸಿಬ್ಬಂಧಿ ವರ್ಗವಿದೆ. ಇವರ ಕೆಲಸವೇನೆಂದರೆ ಮಾದಕ ವಸ್ತುಗಳು ರಾಜ್ಯದೊಳಕ್ಕೆ ಎಲ್ಲೆಲ್ಲಿಂದ ಬರುತ್ತವೆ ಅದನ್ನು ಹಿಡಿದುಕೊಡುವುದೇ ಇದರ ಕೆಲಸವಾಗಿರುತ್ತದೆ. ಕಳೆದ ಎರಡು ವರ್ಷಗಳಲ್ಲಿ ಮಾದಕ ವಸ್ತುಗಳನ್ನು ಪತ್ತೆ ಹಚ್ಚಿದ್ದಾರೆಂದು ನೋಡಿದರೆ ಆ ನಿಟ್ಟಿನಲ್ಲಿ ನಾನು ಕೆಲವು ಪ್ರಶ್ನೆಗಳನ್ನು ಕೇಳಿ ಎಷ್ಟು ಮಾದಕ ವಸ್ತುಗಳನ್ನು ಪತ್ತೆ ಹಚ್ಚಿದ್ದೀರಿ, ಎಷ್ಟು ಅಪರಾಧಿಗಳಿಗೆ ನೀವು ಕ್ರಮ ಕೈಗೊಂಡಿದ್ದೀರಿ, ಎಷ್ಟು ವಾಹನಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದೀರಿ, ಎಷ್ಟು ಆರೋಪಿಗಳ ಬಗ್ಗೆ ಕೋರ್ಟ್‌ನಲ್ಲಿ ಅಪರಾಧಿಗಳು ಎಂದು ಸಾಬೀತಾಗಿದೆ ಎನ್ನುವ ಬಗ್ಗೆ ಪ್ರಶ್ನೆ ಕೇಳಿರುವುದಕ್ಕೆ ಸರ್ಕಾರ ತನ್ನ ಉತ್ತರದಲ್ಲಿ 1996-97ನೇ ಸಾಲಿನಲ್ಲಿ ಕೇವಲ ಎರಡು ಅಪರಾಧಿಗಳನ್ನು ನಾವು ಪತ್ತೆ ಹಚ್ಚಿದ್ದೇವೆ, 1997-98ರಲ್ಲಿ ಯಾವುದೇ ಅಪರಾಧಿಗಳನ್ನು ಪತ್ತೆಹಚ್ಚಲಾಗಿಲ್ಲ ಎಂದರೆ ಈ ನಾರ್ಕೋಟಿಕ್ ವಿಭಾಗದವರು ಮಾದಕದ್ರವ್ಯ ವ್ಯಾಪಾರಿಗಳೊಂದಿಗೆ ಶಾಮೀಲಾಗಿದ್ದಾರೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಈ ಇಲಾಖೆಗೆ ಬೇಕಾದಂಥ ಸವಲತ್ತುಗಳನ್ನು ನೀವು ಕೊಟ್ಟರೂ ಕೂಡ ಸರಿಯಾಗಿ ಇವರು ಕೆಲಸ ಮಾಡುತ್ತಿಲ್ಲ. ಇವೊತ್ತು 18ರಿಂದ 20 ವರ್ಷದ ಪ್ರಾಯದ ಎಂ.ಬಿ.ಬಿ.ಎಸ್, ಬಿ.ಇ. ವಿದ್ಯಾರ್ಥಿಗಳು ಈ ಮಾದಕ ವಸ್ತುಗಳಿಗೆ ಬಲಿಯಾಗುತ್ತಿದ್ದಾರೆ. ರಾಜ್ಯದಲ್ಲಿ ಹೆರಾಯಿನ್, ಗಾಂಜಾ ಮತ್ತಿತರ ಮಾದಕ ವಸ್ತುಗಳು ಮಾರಾಟವಾಗುತ್ತಿವೆ. ಹೀಗಿರುವಾಗ ಈ ಇಲಾಖೆಯವರಿಗೆ ಇಂಥ ಅಪರಾಧಗಳನ್ನು ಪತ್ತೆ ಹಚ್ಚಲಿಕ್ಕೆ ಆಗಿಲ್ಲ, ಅಪರಾಧವನ್ನು ಸಾಬೀತುಪಡಿಸಲಿಕ್ಕೂ ಇವರಿಗೆ ಆಗಿಲ್ಲ, ಅಪರಾಧಿಗಳಿಗೆ ಶಿಕ್ಷೆ ಕೊಡಿಸಲಿಕ್ಕೆ ಇವರಿಗಾಗದಿದ್ದರೆ ಇಂಥ ಇಲಾಖೆಯನ್ನು ನೀವ್ಯಾಕೆ ಇಟ್ಟಿದ್ದೀರಿ, ಬಿಟ್ಟು ಬಿಡಿ, ಎಲ್ಲರೂ ಅದರಲ್ಲಿ ಹಾಳಾಗಿ ಹೋಗಲಿ, ಏಕೆಂದರೆ ಮುಂದಿನ ನಮ್ಮ ಯುವ ಪೀಳಿಗೆ ಇದರಿಂದ ಬಲಿಯಾಗುತ್ತಿದ್ದಾರೆ. ಪಾಪ, ತಂದೆ ತಾಯಿಗಳು ಬಹಳ ಕಷ್ಟಪಟ್ಟು ನನ್ನ ಮಗ ಡಾಕ್ಟರ್ ಆಗಲಿ, ಇಂಜಿನಿಯರ್ ಆಗಲಿ ಎನ್ನುವ ದೃಷ್ಟಿಯಿಂದ ಬೇರೆ ಕಡೆಗೆ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿಕೊಡುತ್ತಾರೆ. ಇವೊತ್ತು ಬೆಂಗಳೂರು, ಮಂಗಳೂರು, ಸೂರತ್ಕಲ್ ಮತ್ತು ಮಣಿಪಾಲ್‌ಗಳಲ್ಲಿ ಬೇಕಾದಷ್ಟು ಮಾದಕದ್ರವ್ಯಗಳ ಪತ್ತೆ ಮಾಡಬಹುದು. ಮಾಡುವುದಕ್ಕೆ ಆಗುವುದಿಲ್ಲವೆಂದೇನಲ್ಲ. ಒಂದು ಈ ಪೇಪರ್‌ನಲ್ಲಿರತಕ್ಕಂಥ ಅಕ್ಷರ ಏನಿದೆ ಈ ಅಕ್ಷರದೊಳಗೆ ಮಾದಕ ದ್ರವ್ಯವನ್ನು ಅಡಗಿಸಿ ತರುವುದಕ್ಕೆ ಆಗುವಂಥ ವಿಶೇಷವಾದಂಥ ಚಾಕಚಕ್ಯತೆ ಅದರಲ್ಲಿದೆ.

8. 10 ಪಿ.ಎಂ

ಕೋಟ್ಯಾಂತರ ರೂಪಾಯಿ ಬೆಲೆ ಬಾಳುವಂತಹ ಮಾದಕ ದ್ರವ್ಯಗಳನ್ನು ಒಂದು ಆಟೋರಿಕ್ಷಾದೊಳಗೆ ಇಡುವುದಕ್ಕೆ ಸಾಧ್ಯವಿದೆ. ಅದನ್ನು ಇವತ್ತು ಪತ್ತೆ ಹಚ್ಚುವುದಕ್ಕೆ ಆಗುವುದಿಲ್ಲವೆಂದರೆ ಈ ಮಾದಕ ದ್ರವ್ಯದಿಂದ ಇವತ್ತು ಸಾವಿರಾರು ಜನ ವಿದ್ಯಾರ್ಥಿಗಳು ಸತ್ತು ಹೋದವರು ಎಷ್ಟೊಂದು ಜನ. ವಿದ್ಯಾಭ್ಯಾಸವನ್ನು ಬಿಟ್ಟು ಹೋದವರು ಎಷ್ಟೋ ಜನ, ಸಾಕಷ್ಟು ತಂದೆತಾಯಿಗಳು ಸಫರ್ ಆಗಿರುವುದು ಎಷ್ಟು ಜನ. ಆದುದರಿಂದ ಈ ಮಾದಕ ದ್ರವ್ಯವನ್ನು ಪತ್ತೆ ಹಚ್ಚುವಂತಹ ಕಾರ್ಯವನ್ನು, ಅಬಕಾರಿ ನೀತಿ ಏನೇ ಇರಲಿ, ಅದರ ಬಗ್ಗೆ ಬೇಕಾದಷ್ಟು ಸದಸ್ಯರು ಮಾತನಾಡಿದ್ದಾರೆ. ಈ ಮಾದಕ ದ್ರವ್ಯವನ್ನು ಪತ್ತೆ ಹಚ್ಚುವಂತಹ ಕೆಲಸವನ್ನು ನೀವು ಬಹಳಷ್ಟು ಕಠಿಣವಾಗಿ ತೆಗೆದುಕೊಳ್ಳಬೇಕು. ನಾರ್ಕೋಟಿಕ್ ವಿಭಾಗಕ್ಕೆ ಯಾರನ್ನಾದರೂ ಹೊಸ ಆಫೀಸರುಗಳನ್ನು ಹಾಕಿ ಈಗ ಇರುವಂತ ಆಫೀಸರ್‌ಗಳನ್ನು ತೆಗೆದು ಬಿಡಿ. ಯಾರಾದರೂ ಹೊಸ ಎಂಥ್ಯೂಜಿಯಾಸ್ಟ್, ಎನ್‌ರ್ಜಟಿಕ್ ಆಗಿ ಇದ್ದು, ಅದರ ಬಗ್ಗೆ ಹೋರಾಟ ಮಾಡಬೇಕು, ವಿದ್ಯಾರ್ಥಿಗಳ ಜೀವನವನ್ನು ಒಳ್ಳೆಯದು ಮಾಡಬೇಕೆಂದು ಮನಸ್ಸು ಇರುವಂತಹ ಅಧಿಕಾರಿಗಳನ್ನು ಅಲ್ಲಿ ಪೋಸ್ಟಿಂಗ್ ಮಾಡಿ. ಮತ್ತು ಹೆತ್ತ ತಂದೆತಾಯಿಗಳಿಗೆ ನೀವು ಋಣಿಯಾಗಿರಿ. ನನ್ನ ಮಗ ಮಾದಕ ದ್ರವ್ಯ ತೆಗೆದುಕೊಂಡು ಸತ್ತ ಎನ್ನುವಂಥ ಭಾವನೆ ಬರಬಾರದು. ಹಾಗೆ ಮಾಡಿ ಈ ಸರ್ಕಾರ ಏನೂ ಮಾಡಿಲ್ಲ ಎನ್ನುವ ಭಾವನೆ ಬರಬಾರದು ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತೇನೆ. ನಾನು ಇವತ್ತು ಇನ್ನೊಂದು ವಿಶೇಷವಾದಂತಹ ವಿಚಾರವನ್ನು ಇಲ್ಲಿ ಹೇಳುತ್ತೇನೆ. ವಿದೇಶದಲ್ಲಿ ಮಾದಕ ದ್ರವ್ಯ ವ್ಯಾಪಾರ ಮಾಡಿದವರಿಗೆ ಗಲ್ಲು ಶಿಕ್ಷೆ ಕೊಡುತ್ತಾರೆ. ಆದರೆ ನಮ್ಮಲ್ಲಿ ಏನು ಕೊಡುತ್ತಾರೆ? ವಿದೇಶದಲ್ಲಿ ಗಲ್ಲು ಶಿಕ್ಷೆ ಕೊಡುವಂತಹ ಒಂದು ಕಾಯಿದೆ ಇದೆ: ನಮ್ಮಲ್ಲಿ ಅದು ಇಲ್ಲ. ಆ ಕಾಯಿದೆ ತರಬೇಕು ಎಂದು ನಾನು ಹೇಳುವುದಿಲ್ಲ. ಆದರೆ ಅದನ್ನು ಪರಿಣಾಮಕಾರಿಯಾಗಿ ಏಕೆ ಅದನ್ನು ಉಪಯೋಗಿಸುತ್ತಿಲ್ಲ ಎನ್ನುವ ಮಾತನ್ನು ಕೇಳುತ್ತೇನೆ. ಇನ್ನು ಕಾರ್ಮಿಕ ಇಲಾಖೆ ಎನ್ನುವುದು ಕಾರ್ಮಿಕ ಹಿತಾಸಕ್ತಿಯನ್ನು ಕಾಪಾಡುವುದಕ್ಕಿಂತಲೂ ಯಾರು ಉದ್ಯೋಗಪತಿಗಳು ಇದ್ದಾರೆ ಅವರಿಗೆ ರಕ್ಷಣೆ ಕೊಡುವುದರಲ್ಲಿ ಅವರು ಬಹಳಷ್ಟು ಮುಂದೆ ಹೋಗಿದ್ದಾರೆ. ನಾನು ಇದರ ಬಗ್ಗೆ ಹೆಚ್ಚು ವಿವರಿಸುವುದಕ್ಕೆ ಹೋಗುವುದಿಲ್ಲ. ರಾಜ್ಯದಲ್ಲಿ ಇರತಕ್ಕಂಥ ವಿವಿಧ ವಾಣಿಜ್ಯ ಸಂಸ್ಥೆಗಳು ಇರಲಿ, ಇವತ್ತು ಕಾರ್ಮಿಕ ಇಲಾಖೆ ನಿಬಂಧನೆಗಳನ್ನು, ನಿಯಮಗಳನ್ನು ಅಳವಡಿಸಿಕೊಂಡಿವೆ. 5 ಸ್ಟಾರ್ 3 ಸ್ಟಾರ್ ಹೋಟೇಲ್ ಬಿಟ್ಟು ಯಾವುದೇ ಹೋಟೆಲ್‌ಗೆ ಹೋದರೆ 15 ವರ್ಷ 20 ವರ್ಷದಿಂದ ದುಡಿದಂತಹ ಕಾರ್ಮಿಕರಿಗೆ ಇವತ್ತಿಗೂ ಖಾಯಂ ಮಾಡಿಲ್ಲ. ಕಾರ್ಮಿಕ ಇಲಾಖೆ ಆಯುಕ್ತರು ಏನು ಮಾತುತ್ತಿದ್ದಾರೆ. ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದ್ದಾರಾ ಅಥವಾ ಆಯುಕ್ತರ ಕೆಳಗೆ ಇರತಕ್ಕಂಥ ಉಪ ಆಯುಕ್ತರು, ಮತ್ತೊಬ್ಬರು, ಇನ್ನೊಬ್ಬರು ಎಷ್ಟು ಜನರಿದ್ದಾರೆ ಅವರೆಲ್ಲರೂ ಏನು

ಮಾಡುತ್ತಿದ್ದಾರೆ? ಬೆಂಗಳೂರು ನಗರದೊಳಗೆ ಸಾವಿರಾರು ಹೋಟೆಲ್‌ಗಳಲ್ಲಿ ಲಕ್ಷಾಂತರ ಜನ ಕಾರ್ಮಿಕರು ದುಡಿಯುತ್ತಿದ್ದಾರೆ. ಅಲ್ಲಿ ಅವರಿಗೆ ಒಂದು ಕಾರ್ಮಿಕ ಇಲಾಖೆ ನಿಯಮಾವಳಿ ಪ್ರಕಾರ ಖಾಯಂ ಆದದ್ದನ್ನು ತೋರಿಸಲಿ. ಯಾವುದಾದರೂ ಒಂದು ಪ್ರಕರಣ ಇದ್ದರೆ ಹೇಳಿ. 5 ಸ್ಟಾರ್ 3 ಸ್ಟಾರ್ ಹೊಟೇಲ್‌ಗಳದ್ದು ನಾನು ಹೇಳುತ್ತಿಲ್ಲ. ಆದರಿಂದ ನಾನು ಕೇಳುತ್ತಿರುವುದು ಇಷ್ಟೇ, ಕಾರ್ಮಿಕ ಇಲಾಖೆ ನಿಯಮಾವಳಿಗನುಸಾರವಾಗಿ ಈ ಹೊಟೇಲ್‌ಗಳಲ್ಲಿ ದುಡಿಯುತ್ತಿರುವಂತಹ ಆ ಕಾರ್ಮಿಕ ಹುಡುಗರು ಯಾರಿದ್ದಾರೆ ಅವರಿಗೆ ಇವತ್ತಿಗೂ 15-20 ವರ್ಷಗಳಿಂದ ಖಾಯಂ ಮಾಡಿಲ್ಲ. ಅವರಿಗೆ ಕಾರ್ಮಿಕ ಕಲ್ಯಾಣ ಯೋಜನೆಯನ್ನೇ ನೀವು ಅನುಸರಿಸುತ್ತಿದ್ದೀರಾ? ಯಾವ ಇಲಾಖೆ ಆಯುಕ್ತರು ಕಾರ್ಮಿಕ ಇಲಾಖೆ ಯೋಜನೆಯನ್ನು ತರುತ್ತಿದ್ದಾರೆ ಅಥವಾ ಕಾರ್ಮಿಕರಿಗೆ ಶಿಕ್ಷಣ ಯೋಜನೆ ಎಂದು ಇಟ್ಟುಕೊಂಡಿದ್ದಾರೆ ಇದನ್ನು ಎಲ್ಲಿ ತರುತ್ತೀರಿ? ಅದರಿಂದಾಗಿ ಯಾವರೀತಿ ನಿಮ್ಮ ಅಬಕಾರಿ ಇಲಾಖೆ ನಾರ್ಕೋಟಿಕ್ ವಿಭಾಗ ನಿಷ್ಕ್ರೀಯವಾಗಿದೆ, ಅದೇರೀತಿ ಕಾರ್ಮಿಕ ಇಲಾಖೆ ಕೂಡ ನಿಷ್ಕ್ರೀಯವಾಗಿದೆಯೆಂದು ಹೇಳುವುದಕ್ಕೆ ಬಯಸುತ್ತೇನೆ. ಆ ಕಾರ್ಮಿಕರು ಬೆಳಿಗ್ಗೆಯಿಂದ ಸಂಜೆಯವರೆಗೂ ದುಡಿಯುವಂತಹ ವರ್ಗ, ಅವರಿಗೆ ಸಿಗುವಂತಹ ಸಂಬಳ ಎಷ್ಟು ಕೇವಲ 300, 400, 500 ರೂಪಾಯಿಗಳು; 10 ವರ್ಷ ಸೇವೆ ಮಾಡಿದರೆ ಜಾಸ್ತಿ ಎಂದರೆ 700 ರೂಪಾಯಿ ಸಿಗುತ್ತದೆ. ಅವರನ್ನು ಟೆಂಪೊರ್‍ವರಿಯಾಗಿ ಇಟ್ಟುಕೊಂಡಿದ್ದಾರೆ. ಅವನಿಗೆ ಯಾವುದೇ ರೀತಿಯಲ್ಲಿ ಪಿ.ಎಫ್ ಆಗಲಿ, ವೈದ್ಯಕೀಯ ನೆರವಾಗಲಿ, ಅವರಿಗೆ ಬೇಕಾದಂತಹ ಸಾಲದ ನೆರವಾಗಲಿ ಸಿಗುತ್ತಿಲ್ಲ. ಅವ ಆಸ್ಪತ್ರೆಗೆ ಹೋದರೆ ಅವ ಸತ್ತ. ಅವನಿಗೆ ಖಾಯಿಲೆಯಾಗಿ ಆಸ್ಪತ್ರೆಗೆ ಹೋಗಿ ಬಂದರೆ ಕೆಲಸಕ್ಕೆ ಬೇಡ ಎಂದು ಹೇಳುತ್ತಾರೆ. ಆಸ್ಪತ್ರೆಯಲ್ಲಿ ಸೇರಿ ಮತ್ತೆ ಹೊರಗೆ ಬಂದರೆ ಅವನ್ನು ಇನ್ನೊಂದು ಹೊಟೇಲ್‌ನ್ನು ಹುಡುಕಿಕೊಂಡು ಹೋಗಬೇಕು. ಇಂತಹ ದೀನರಾಗಿರತಕ್ಕಂತ ಹೊಟೇಲ್ ಕಾರ್ಮಿಕರು ಯಾರಿದ್ದಾರೆ ಆ ಕಾರ್ಮಿಕರಿಗೆ ರಕ್ಷಣೆ ಕೊಡುವಂತಹ ಕೆಲಸ ನಿಮ್ಮ ಕಾಲದಲ್ಲಿ ಆಗಬೇಕೆಂದು ಹೇಳುತ್ತೇನೆ. ಇನ್ನು ನನ್ನ ಬೇಡಿಕೆ ಬಾಲ ಕಾರ್ಮಿಕರ ಬಗ್ಗೆ ಸಾಕಷ್ಟು ಯೋಜನೆಗಳನ್ನು ರೂಪಿಸಿದ್ದೀರಿ ಎನ್ನುವಂತಹ ಮಾತನ್ನು ಮಾನ್ಯ ಕಾರ್ಮಿಕ ಇಲಾಖೆ ಮಂತ್ರಿಗಳು ಎರಡೂವರೆ ವರ್ಷಗಳಿಂದ ಹೇಳಿಕೊಂಡು ಬಂದಿದ್ದಾರೆ. ಬಾಲ ಕಾರ್ಮಿಕರು ಮಾಡತಕ್ಕಂಥ ಕೆಲಸವನ್ನು ನಿಷೇಧಿಸಬೇಕು ಎನ್ನುವ ಸುಪ್ರೀಂ ಕೋರ್ಟ್‌ನ ಆದೇಶವನ್ನು ಸರ್ಕಾರ ಎಲ್ಲಿಯ ತನಕ ಪ್ರಾಮಾಣಿಕವಾಗಿ ಗಮನ ಹರಿಸಿದೆ ಎನ್ನುವುದನ್ನು ಹೇಳಿ ನೋಡೋಣ. ಆ ಬಾಲ ಕಾರ್ಮಿಕರ ಅವಸ್ಥೆ, ಅವರಿಗೆ ಒಂದು ಪ್ರತ್ಯೇಕವಾದ ವ್ಯವಸ್ಥೆಯನ್ನಾದರೂ ನೀವು [illegible]. ನಾನು ಎರಡೂವರೆ ವರ್ಷದಲ್ಲಿ ಕೇಳಿದಂತಹ ಪ್ರಶ್ನೆಗೆ ಬಾಲ ಕಾರ್ಮಿ[illegible]ನ್ನು ಇಂತಿಷ್ಟು ಜನರನ್ನು ಗುರುತಿಸಲಾಗಿದೆ. ಇದರ ಬಗ್ಗೆ ಕ್ರಮ ಕೈಗೊಳ್ಳುತ್ತಾ ಇದ್ದೇವೆ ಎಂದು ಹೇಳಿದ್ದೀರಿ. ಆದರೆ ಕೈಗೊಳ್ಳಲಿಲ್ಲ. ಇವತ್ತಿನವರೆಗೂ ಅದೇ ಉತ್ತರ ಬರುತ್ತದೆ. ಮೊನ್ನೆ ಸಹ ಇದರ ಬಗ್ಗೆ ಪ್ರಶ್ನೆ ಕೇಳಿದಾಗ ಇಹೇ ಉತ್ತರ ಬಂತು. ಆದರಲ್ಲಿ ಇಷ್ಟು ಜನ ಬಾಲ

ಕಾರ್ಮಿಕರನ್ನು ಐಡೆಂಟಿಫೈ ಮಾಡಿದ್ದಾರೆ, ಅದು 60 ಸಾವಿರ ಜನ ಇದ್ದಾರೆ. ಆದರೆ ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ? ಏನೂ ಇಲ್ಲ. ಕೈಗೊಳ್ಳುತ್ತಿದ್ದೇವೆ. ಇದಕ್ಕೆ ಪರಿಣಾಮಕಾರಿಯಾದಂತಹ ಯೋಜನೆಯನ್ನು ರೂಪಿಸುತ್ತಿದ್ದೇವೆ ಪಾಪ ಸಣ್ಣ ಸಣ್ಣ ಮಕ್ಕಳು ನಮ್ಮ ಶಾಸಕರ ಭವನದಲ್ಲಿ ಕ್ಯಾಂಟೀನ್‌ನಲ್ಲಿ ಇದ್ದಾರೆ. ಹೊಟ್ಟೆ ಉರಿ ಬರುತ್ತದೆ. ಆದರೆ ನಾವು ಏನು ಮಾಡಲಿ? ಅವರನ್ನು ಬೆಳಿಗ್ಗೆ ನಾಲ್ಕು ಗಂಟೆಗೆ ಎಬ್ಬಿಸುತ್ತಾರೆ. ಕಸ ಗುಡಿಸಬೇಕು, ಎಲ್ಲಾ ಕೆಲಸ ಮಾಡಬೇಕು. ಸ್ವಲ್ಪ ಹೆಚ್ಚುಕಡಿಮೆ ಆದರೆ ಆತನಿಗೆ ಪೆಟ್ಟು ಬಿತ್ತು. ಅವನಿಗೆ ಒಂದು ಊಟ ಹಾಕುತ್ತಾರೆ. ಅಷ್ಟೇ, ಸಂಬಳ ಎಷ್ಟು? 100-200 ರೂಪಾಯಿ ಕೊಡುತ್ತಾರೆ. ಅವನಿಗೆ ಕಾಲಿಗೆ ಏನಾದರೂ ಬೆಂಕಿ ಅಥವಾ ಬಿಸಿನೀರು ಬಿತ್ತೆಂದರೆ ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವವರು ಇಲ್ಲ. ಅವನು ಬೇಕೆಂತಲೇ ಕಾಲ ಮೇಲೆ ಹಾಕಿಕೊಂಡಿದ್ದಾನೆ ಎಂದು ಪುನಃ ಅವನಿಗೆ ಪೆಟ್ಟು ಕೊಟ್ಟು ಕಳುಹಿಸಿಬಿಡುತ್ತಾರೆ. ನಾನು ಈ ಸಮಸ್ತ ಬಾಲ ಕಾರ್ಮಿಕರ ಪರವಾಗಿ ಹೇಳುತ್ತಿದ್ದೇನೆ,

ಅಧ್ಯಕ್ಷರು: ಶಾಸಕರ ಭವನದ ಕ್ಯಾಂಟೀನ್‌ನಲ್ಲಿ ಯಾರು ಬಾಲ ಕಾರ್ಮಿಕರನ್ನು ತೆಗೆದುಕೊಂಡಿರುತ್ತಾರೆ, ಅದರ ಬಗ್ಗೆ ನಮ್ಮ ಕಮಿಟಿಯವರು ಹೋಗಿ ಇನ್ಸ್‌ಪೆಕ್ಷನ್ ಮಾಡಿ ಕಂಪ್ಲೇಂಟ್ ಕೊಟ್ಟು ಬಂದರು. ಅದಕ್ಕೆ ಮೊದಲು ನಾನೇ ಒಂದು ಬಾರಿ ಇನ್ಸ್‌ಪೆಕ್ಷನ್‌ಗೆ ಹೋದಾಗ ಅಲ್ಲಿ ನೋಡಿ ಬಂದು ನಮ್ಮ ಕಮಿಟಿಯವರಿಗೆ ಹೇಳಿದೆ. ಅಲ್ಲಿಗೆ ಹೋಗಿ, ಅವರ ಹತ್ತಿರ ಮಾತನಾಡಿ, ಆ ಮಕ್ಕಳಿಗೆ ಎಷ್ಟು ಕೊಡುತ್ತಾರೆ ಎಂದು ಹೇಳಿ, ಅವರನ್ನೆಲ್ಲಾ ಅಲ್ಲಿಂದ ತಕ್ಷಣ ಬಿಡುಗಡೆ ಮಾಡಬೇಕೆಂದು ಹೇಳಿದೆ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೇ, ನಮ್ಮ ಮನೆಯಲ್ಲಿ ಮಕ್ಕಳು ಇದ್ದಾರೆ. ಅವರು ಸ್ಕೂಲಿಗೆ ಹೋಗುವಾಗ ನಾವು ಎಷ್ಟು ಭವ್ಯವಾಗಿ ಡ್ರೆಸ್ ಹಾಕುತ್ತೇವೆ. ಸೂಟು ಬೂಟು ಹಾಕುತ್ತೇವೆ. ಅವರು ನಡೆದುಕೊಂಡು ಹೋಗಬಾರದು ಎಂದು ರಿಕ್ಷಾದಲ್ಲಿ ಕಳುಹಿಸುತ್ತೇವೆ. ಆ ಮಕ್ಕಳನ್ನು ಅಲ್ಲಿ ನೋಡುವಾಗ ಆ ಮಕ್ಕಳಿಗೂ ಕೂಡ ಬಹಳ ದುಡ್ಡು ಇರುವಂತಹ ತಂದೆತಾಯಿಗಳು ಇದ್ದಿದ್ದರೆ ಅವರ ಪರಿಸ್ಥಿತಿ ಏನಾಗಿರುತ್ತಿತ್ತು? ಅವರಿಗೆ ವಿದ್ಯಾಭ್ಯಾಸ ಸಿಗುವುದಿಲ್ಲ. ಮತ್ತು ಅವರು ಪೆಟ್ಟು ತಿನ್ನುವುದು. ತಂದೆತಾಯಿಗಳು ಕೂಡ ಪೆಟ್ಟು ಕೊಟ್ಟು ಓಡಿಸಿಬಿಟ್ಟಿದ್ದಾರೆ. ಅವರು ಇಲ್ಲಿ ಅನಾಥರಾಗಿ ಇದ್ದಾರೆ. ಆಯಿತು ಸ್ವಲ್ಪ ಸಮಯಾವಕಾಶ ಸಿಕ್ಕಿತು ಎಂದರೆ ಅವರು ಏನಾದರೂ ಕೆಟ್ಟ ಚಟಗಳಿಗೆ ಬಲೆ ಬೀಳುತ್ತಾರೆ. ಬೀಡಿ ಸಿಗರೇಟು ಸೇದುವುದನ್ನು ಕಲಿತುಕೊಳ್ಳುತ್ತಾರೆ, ಕೊನೆಗೆ ಕದ್ದುಕೊಂಡು ಹೋಗಿ ಸಿನಿಮಾ ನೋಡುವುದಕ್ಕೆ ಹೊರಟು, ಅಲ್ಲಿ ಸಿನಿಮಾದಲ್ಲಿ ಇರತಕ್ಕಂಥ ಬೋಧನೆಯನ್ನು ಪಡೆದುಕೊಂಡು ರೌಡಿಗಳಾಗಿ ಸಮಾಜಘಾತುಕ ವ್ಯಕ್ತಿಗಳಾಗಿ ಪರಿವರ್ತನೆಯಾಗುತ್ತಾರೆ. ಈ ರೀತಿ ಯುವಶಕ್ತಿಯನ್ನು ಸಮಾಜಘಾತುಕ ಶಕ್ತಿಯನ್ನಾಗಿ ಪರಿವರ್ತನೆ ಮಾಡಿ ನಾವು ಹೊಣೆಗಾರರಾಗುತ್ತೇವೆ. ಒಂದು ಬಾರಿ ಎಂ.ಆರ್.ಪಿ.ಎಲ್ ವಿಚಾರದಲ್ಲಿ ನಾನು ಜೈಲಿಗೆ ಹೋಗಿದ್ದೆ. ಮಂಗಳೂರು ಜೈಲಿಗೆ ಕಳುಹಿಸಿದ್ದರು. ಆಗ ಮಾನ್ಯ ಸಿಂಧ್ಯಾ ಸಾಹೇಬರು ಗೃಹಮಂತ್ರಿಗಳಾಗಿದ್ದರು. ಸನ್ಮಾನ್ಯ

ಅಧ್ಯಕ್ಷರೇ, ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅಲ್ಲಿ ನಾನು ಹೋದಾಗ 180 ಜನ ಖೈದಿಗಳಲ್ಲಿ 160 ಖೈದಿಗಳು ಬುದ್ಧಿವಂತ ಹುಡುಗರು, 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರು. ಈ ವಿದ್ಯಾವಂತ ಯುವಕರು ನಿರುದ್ಯೋಗಿಗಳಾಗಿದ್ದುಕೊಂಡು ಸಮಾಜಘಾತುಕ ಶಕ್ತಿಗಳಾಗಿ ಪರಿವರ್ತನೆ ಆಗಿದ್ದು, ನಾನು ಅವರನ್ನು ಕೇಳಿದೆ. ಏಕೆ ನೀವೆಲ್ಲಾ ಇಲ್ಲಿ ಬಂದಿದ್ದೀರಿ ಎಂದು. ಅದಕ್ಕೆ ಅವರು ಕೊಲೆ ಆರೋಪದ ಮೇಲೆ ಬಂದಿದ್ದೇವೆ ಎಂದು ಹೇಳಿದರು.

ಅಧ್ಯಕ್ಷರು: ವಿದ್ಯಾವಂತರೋ, ಅಕ್ಷರಸ್ಥರೋ?

ಶ್ರೀ ಯು.ಆರ್.ಸಭಾಪತಿ: ವಿದ್ಯಾವಂತ ಬಿ.ಇ. ಗ್ರಾಜ್ಯುಯೇಟ್ಸ್

ಅಧ್ಯಕ್ಷರು: ವಿದ್ಯಾವಂತರಿಗೆ ಅಕ್ಷರ ಜ್ಞಾನ ಇರಬೇಕಾಗಿಲ್ಲ, ಅಕ್ಷರಸ್ಥರು ಎಲ್ಲಾ ವಿದ್ಯಾವಂತರು ಆಗಿರಬೇಕಾಗಿಲ್ಲ.

ಶ್ರೀ ಯು.ಆರ್.ಸಭಾಪತಿ: ನನ್ನ ದೃಷ್ಟಿಯಲ್ಲಿ ವಿದ್ಯಾವಂತ ಎಂದರೆ ವಿದ್ಯೆಯನ್ನು ಪಡೆದುಕೊಂಡು ಎಂದು ಹೇಳಿದೆ. ಗ್ರಾಜ್ಯುಯೇಷನ್ ಆಗಿದ್ದವನಿಗೆ ವಿದ್ಯಾವಂತ ಎಂದು ಹೇಳಿದೆ ಅಷ್ಟೇ. ಆದರೆ ನಾನು ಇಷ್ಟೇ ಹೇಳುವುದು, ಇವತ್ತು ಆ ವಿದ್ಯಾವಂತ ಅಕ್ಷರಸ್ಥರು ಹುಡುಗರು ಗ್ರಾಜ್ಯುಯೇಷನ್ ಆಗಿ ಅಷ್ಟೊಂದು ಸಂಖ್ಯೆಯಲ್ಲಿ ಕೊಲೆ ಸುಲಿಗೆ ಇಂತಾಹದ್ದಕ್ಕೆ ಹೋಗಬೇಕಾದರೆ ಇದರ ಹೊಣೆಗಾರಿಕೆ ಯಾರು? ನಾವೇ ಅಲ್ಲವೇ? ನಾವು ರಾಜಕೀಯದಲ್ಲಿ ಇದ್ದುಕೊಂಡು ಆ ಯುವಕನನ್ನು ಎಲಕ್ಷನ್‌ಗೆ ಎಳೆದುಕೊಂಡು ನಿನಗೆ ಇದು ಮಾಡಿಕೊಡುತ್ತೇನೆ, ಎಂದು ಏನೇನೋ ಆಸೆ ಆಕಾಂಕ್ಷೆಗಳನ್ನು ಕೊಟ್ಟು ಅದಕ್ಕೆ ಪ್ರೋತ್ಸಾಹಿಸುತ್ತೇವೆ. ಅದಕ್ಕೆ ಸರಿಯಾಗಿ ಕೆಲವು ಲೇಖನಗಳನ್ನು ಇರತಕ್ಕಂಥ ಪಠ್ಯ ಪುಸ್ತಕಗಳು. ಆ ಪಠ್ಯಪುಸ್ತಕಗಳನ್ನು, ತಾವು ಹೇಳಿದಿರಿ, ನನಗೆ ಸಾಹಿತ್ಯದ ಬಗ್ಗೆ ಹೇಳಿದೆ, ಬರಗೂರು ರಾಮಚಂದ್ರ ಅವರ ಸಾಹಿತ್ಯದ ಬಗ್ಗೆ ನಾನು ಹೇಳುತ್ತಿಲ್ಲ. ಅವರು ಬರೆಯುವಂತಹ ಏನು ಕೆಲವು ಶಬ್ದಗಳು ಇದೆ ಇವತ್ತೂ ಆ ಹುಡುಗರಿಗೆ ಹೇಳುವಂತಹ ಶಬ್ದಗಳು ಅಲ್ಲ. ಆ ಅನಂತ ಮೂರ್ತಿಯವರು ಹೇಳಿದರು. ಆ ಪಠ್ಯಪುಸ್ತಕಗಳು ಯಾವರೀತಿ ಇರಬೇಕು? ಅವು ಇರತಕ್ಕಂಥ ರೀತಿಯಲ್ಲಿ ಇದ್ದರೆ ಪಠ್ಯಪುಸ್ತಕಗಳು ಆಗುತ್ತವೆ. ಅವರು ಸಾಹಿತಿಗಳು, ಅವರ ಸಾಹಿತ್ಯದ ಬಗ್ಗೆ ನಾನೇನೂ ವಿರೋಧ ಮಾಡಲಿಲ್ಲ. ಆದರೆ ಇವತ್ತು ನಾವು ಕೊಡುವಂತಹ ವಿದ್ಯೆ ಕೇವಲ ಪುಸ್ತಕದ ವಿದ್ಯೆ ಅಲ್ಲ. ಅವರಿಗೆ ಹೊರ ಪ್ರಪಂಚದಲ್ಲಿ ಏನು ನಡೆಯುತ್ತಿದೆ ಅವರು ಸ್ವಂತಿಕೆಯಲ್ಲಿ ಬಾಳಬೇಕು, ಹೊರಗೆ ಬರುವಾಗ ಅವನು ಸ್ವಂತಿಕೆಯಲ್ಲಿ ಬೆಳೆಸುವಂತಹ ಒಂದು ಮನೋಜ್ಞಾನವನ್ನು ಕೊಡತಕ್ಕಂಥ ವಿದ್ಯೆಯನ್ನು ನಾವು ಕೊಟ್ಟರೆ ಅಲ್ಲಿ ನಾವು ಆ ಯುವಕರಲ್ಲಿ ಒಂದು ಒಳ್ಳೆಯ ಪ್ರಜೆಗಳನ್ನು ತರುವುದಕ್ಕಾಗುತ್ತದೆ. ಆದರೆ ಈ ರೀತಿಯಾಗಿ ಸಮಾಜಘಾತುಕ ಶಕ್ತಿಗಳಾಗಿ ಪರಿವರ್ತನೆ ಹೊಂದಿದರೆ ಮತ್ತೆ ಅವರನ್ನು ಸರಿದಾರಿಗೆ ತರುವುದಕ್ಕೆ ಸಾಧ್ಯವಿಲ್ಲ. ಮುಂಬೈ ಅಂಡರ್‌ಗ್ರೌಂಡ್ ವರ್ಲ್ಡ್‌ನಲ್ಲಿ ಈ ರೀತಿಯಾಗಿ 15-20 ವರ್ಷದ

ಯುವಕರನ್ನು ಸಾಕಿ ಅವರಿಗೆ ದುಡ್ಡು ಕೊಟ್ಟು ಇಂತಹವರನ್ನು ಹೋಗಿ ಗುಂಡು ಹಾಕಿಕೊಂಡು ಬಾ ಎಂದು ಹೇಳುತ್ತಾರೆ. ಅವನಿಗೆ ಯಾರು ಎಂದು ಗೊತ್ತಿರುವುದಿಲ್ಲ. ಅವನು ಹೋದ ಗುಂಡು ಹಾಕಿಕೊಂಡು ಬಂದ. ಈ ರೀತಿಯಾಗಿ ಅಂಡರ್‌ಗ್ರೌಂಡ್ ವರ್ಲ್ಡ್‌ನಲ್ಲಿ ಯಾರಿದ್ದಾರೆ ಅವರ ಜೊತೆಯಲ್ಲಿ ಇರತಕ್ಕಂಥ ಯುವಕರಲ್ಲಿ ಕೂಡ ಅನೇಕ ಮಂದಿ ವಿದ್ಯಾವಂತರು ಇದ್ದಾರೆ. ಅಕ್ಷರಸ್ಥರು ಇದ್ದಾರೆ. ಅಧ್ಯಕ್ಷರೆ, ಆ ಹೆಸರಿನಲ್ಲಿ ಕರೆಯದಿದ್ದರೆ ಅವರು ಅಕ್ಷರಸ್ಥರು, ವಿದ್ಯಾವಂತರಲ್ಲ. ಆದ್ದರಿಂದ ನಾನು ಬೇರೆ ಏನೂ ಹೇಳುವುದಿಲ್ಲ. ಈ ಬಾಲ ಕಾರ್ಮಿಕರು, ಇದರ ಜೊತೆಗೆ ಕಾರ್ಮಿಕರ ನ್ಯಾಯಾಲಯದಲ್ಲಿ ಬಾಕಿ ಇರುವ ವಿವಾದಗಳ ಬಗ್ಗೆ ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಸಭಾಧ್ಯಕ್ಷರೆ, 31.12.96ರವರೆಗೆ ಬಾಕಿ ಇರುವ ವಿವಾದಗಳು 15,341 ಹಾಗಾದರೆ ಅದರಲ್ಲಿ ಇಷ್ಟು ಬಾಕಿ ಆಗಿದೆ ಎಂದು ಕೇಳಿದರೆ, ಕಾರ್ಮಿಕ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ನೇಮಕಾತಿ ವಿಳಂಬವಾದುದ್ದರಿಂದ ಈ ರೀತಿಯಾಗಿದೆ ಎಂದರೆ ಇದಕ್ಕೆ ಯಾರು ಕಾರಣರು? ಅದರಿಂದಾಗಿ ಬಾಕಿ ಇದೆ ಎಂದು ಆದರೆ ಕಾರ್ಮಿಕರಿಗೆ ನಾವು ಕೊಡತಕ್ಕಂಥ ನ್ಯಾಯ ಯಾವರೀತಿ ಇದೆ? ಇದರ ಬಗ್ಗೆ ಕೂಲಂಕುಷವಾಗಿ ಅಧ್ಯಯನ ಮಾಡಬೇಕು ಮತ್ತೆ ಅವರಿಗೆ ನ್ಯಾಯವನ್ನು ಒದಗಿಸಬೇಕು ಎಂದು ಹೇಳುವುದರ ಜೊತೆಗೆ ಮತ್ತೊಮ್ಮೆ ಹೊಸ ಜಿಲ್ಲೆಯಾಗಿ ಉಡುಪಿ ರಚನೆಯಾಗಿದೆ. ಅದಕ್ಕಾಗಿ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಇದರಿಂದ ನಮಗೆ ಇನ್ನೂ ತೃಪ್ತಿ ಕಾಣುತ್ತಿಲ್ಲ. ಏಕೆಂದರೆ ಅಷ್ಟೇ ತ್ವರಿತವಾಗಿ ಈ ಜಿಲ್ಲೆಯ ರಚನೆ ಆಗಬೇಕಾಗಿದೆ. ಕೇವಲ ಜಿಲ್ಲಾಧಿಕಾರಿಗಳ ನೇಮಕ, ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರ ನೇಮಕ ಈ ಎರಡು ಮಾತ್ರ ಇಲ್ಲಿಯವರೆಗೆ ಆಗಿದೆ. ವಿವಿಧ ಇಲಾಖೆಗಳು, ಪಿ.ಡಬ್ಲ್ಯೂ.ಡಿ. ಇರಲಿ ಅಥವಾ ಆರ್.ಡಿ.ಪಿ.ಆರ್ ಇರಲಿ, ಬೃಹತ್ ಕೈಗಾರಿಕೆ ಇರಲಿ, ಡಿ.ಡಿ.ಪಿ.ಐ. ಅವರನ್ನು ಪೋಸ್ಟಿಂಗ್ ಮಾಡುವುದು ಇರಲಿ. ಕೃಷಿ ಇಲಾಖೆಯಲ್ಲಿ ಪೋಸ್ಟಿಂಗ್ ಮಾಡುವುದು ಇದ್ದರೂ ಕೂಡ ಆದಷ್ಟುಬೇಗನೆ ಆಯಾ ಇಲಾಖೆಗಳ ಮುಖ್ಯಸ್ಥರನ್ನು ತಾವು ನೇಮಕ ಮಾಡಬೇಕೆಂದು ಕೇಳುತ್ತಿದ್ದೇನೆ. ಏಕೆಂದರೆ ಈಗಾಗಲೇ ಜಿಲ್ಲಾ ವಿಂಗಡಣೆ ಆದಮೇಲೆ ಇವೊತ್ತು ಜನ ಸ್ವಲ್ಪ ಕಸಿವಿಸಿಗೊಳ್ಳುವುದು ಸ್ವಾಭಾವಿಕ. ಆದರೆ ತಾವು ಜವಾಬ್ದಾರಿಯಿಂದ ಕೂಡಲೇ ಅದಕ್ಕೆ ಕಾರ್ಯಪ್ರವೃತ್ತರಾದರೆ ಕೂಡಲೇ ಅದರ ಪರಿಣಾಮಗಳ ಮೂಲಕ ಬಹಳ ಸ್ವಲ್ಪ ಸಮಯದಲ್ಲೆ ಲಾಭ ಪಡೆಯಬಹುದೇನೋ ಎಂದು ಹೇಳುವುದರೊಂದಿಗೆ ನಾನು ಹೊಸ ತಾಲ್ಲೂಕುಗಳ ರಚನೆ ಕುರಿತು ಹೇಳುವುದಾದರೆ, ಈಗ ಜಿಲ್ಲೆ ರಚನೆಯಾಗಿದೆ, ಇನ್ನು ಮುಂದಿನ ವರ್ಷದ ಹಾದಿಯಲ್ಲಿ ಮಾನ್ಯ ಜಿಗಜಿಣಗಿಯವರು ಮೊನ್ನೆ ಬಂದಿದ್ದಾಗ ನಮಗೆ ವಚನವನ್ನು ಕೊಟ್ಟಿದ್ದಾರೆ. ವರ್ಷದ ಅಂತ್ಯದಲ್ಲಿ ಹೊಸ ತಾಲ್ಲೂಕುಗಳು ರಚನೆ ಕೂಡ ಮಾಡುತ್ತೇವೆ ಎಂದು ಹೇಳಿದ್ದಾರೆ. ನೀವು ಪ್ರಪ್ರಥಮವಾಗಿ ಹೊಸತಾಲ್ಲೂಕುಗಳನ್ನು ರಚನೆ ಮಾಡಿ ಆಮೇಲೆ ಜಿಲ್ಲಾ ರಚನೆಯನ್ನು ಮಾಡಬೇಕಾಗಿತ್ತು. ಆದರೆ ಇವೊತ್ತು ಅದು ತಿರುಗು-ಮುರುಗಾಗಿದೆ. ಜಿಲ್ಲಾ ರಚನೆ ಪ್ರಥಮ ಆಗಿದೆ, ತಾಲ್ಲೂಕು ರಚನೆ ಮತ್ತೆ ಆಗಬೇಕಾಗಿದೆ. ಆದುದರಿಂದಾಗಿ ತಾವು

ದಯವಿಟ್ಟು ಜಿಲ್ಲಾ ರಚನೆಯ ಹಿನ್ನೆಲೆಯನ್ನು ಇಟ್ಟುಕೊಂಡು ಕೂಡಲೇ ನಮ್ಮಲ್ಲಿ ಬ್ರಹ್ಮಾವರ ತಾಲ್ಲೂಕು ಆಗಬೇಕಾಗಿದೆ, ಹಾಗೆ ಬೈಂದೂರು ತಾಲ್ಲೂಕು ಆಗಬೇಕಾಗಿದೆ, ಕಾರ್ಕಳದಲ್ಲಿ ಹೆಬ್ಬರಿ ತಾಲ್ಲೂಕು ಆಗಬೇಕೆನ್ನುವ ವಾದ ಕೂಡ ಇದೆ. ಇದನ್ನು ಸಾಕಷ್ಟು ಕ್ಷಿಪ್ರಗತಿಯಲ್ಲಿ ತಾವು ಮಾಡುತ್ತೀರಿ ಎಂದು ತಿಳಿದುಕೊಂಡು ಮಾನ್ಯ ಸಭಾಧ್ಯಕ್ಷರೆ, ಇವೊತ್ತು ಬೇಡಿಕೆ ಮೇಲೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ.ಶಿವರಾಜ್ (ಯಲಹಂಕ): ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಪ್ರಥಮವಾಗಿ ತಮಗೆ ವಂದನೆಯನ್ನು ಸಲ್ಲಿಸುತ್ತಾ, ನನ್ನ ಯಲಹಂಕ ಕ್ಷೇತ್ರದಲ್ಲಿ ಸುಮಾರು ಆರು ಲಕ್ಷದ ಐವತ್ತು ಸಾವಿರ ಮತದಾರರಿದ್ದಾರೆ ಮತ್ತು ಎಂಟು ಲಕ್ಷದ ಐವತ್ತು ಸಾವಿರ ಜನಸಂಖ್ಯೆ ಉಳ್ಳಂಥದ್ದಾಗಿದೆ. ಆದರೆ ಅದು ಬಹಳ ಹಿಂದುಳಿದ ಪ್ರದೇಶ. ಎಲ್ಲಿ ನೋಡಿದರೂ ಕೂಡ ನೀರಿಲ್ಲ, ರಸ್ತೆಗಳು ಸರಿ ಇಲ್ಲ. ಇಂತಹ ಒಂದು ಕೊಳಚೆಗೇರಿಗಳು ಜಾಸ್ತಿ ಇದೆ. ಆದ್ದರಿಂದ ಸರ್ಕಾರ ಇಂತಹ ಕೊಳಚೆಪ್ರದೇಶಗಳಿಗೆ ಹೆಚ್ಚಿನ ಗಮನವನ್ನು ಕೊಟ್ಟು ಹೆಚ್ಚಿನ ಹಣವನ್ನು ಒದಗಿಸಬೇಕೆಂದು ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ. ಮತ್ತು ಯಲಹಂಕ ನಗರಕ್ಕೆ ಹೋಗುವಾಗ ದಾರಿಯಲ್ಲಿ ಬೈಪಾಸ್ ಎಂದು ಹೇಳಿ ಒಂದು ವ್ಯವಸ್ಥೆ ಮಾಡಿದರು. ಅದಕ್ಕಾಗಿ ಐ.ಎ.ಎಫ್‌ನವರು ಸುಮಾರು 186 ಕೋಟಿ ರೂಪಾಯಿಗಳನ್ನು ಒದಗಿಸಿದರು. ಇದುವರೆಗೂ ಕೂಡ ಪಿ.ಡಬ್ಲ್ಯೂ.ಡಿ.ಯವರು ಈ ಕೆಲಸವನ್ನು ಶುರು ಮಾಡಿಲ್ಲ. ಬೇಕಾದಂಥ ಜಮೀನುಗಳನ್ನೆಲ್ಲಾ ವಶಪಡಿಸಿಕೊಂಡಿದ್ದರೂ ಕೂಡ ಯಾವುದೇ ಕೆಲಸವನ್ನು ತೆಗೆದುಕೊಂಡಿಲ್ಲ. ಮತ್ತು ಅದು ಬಹಳ ಪ್ರಾಮುಖ್ಯವಾದ ರಸ್ತೆಯಾಗಿದ್ದು ಹೈದರಾಬಾದ್‌ಗೆ, ಶಿಡ್ಲಘಟ್ಟ, ಕೋಲಾರ ಮತ್ತು ದೇವನಹಳ್ಳಿ ಇಂತಹ ಸ್ಥಳಗಳಿಗೆ ಹೋಗುವ ದಾರಿಯಾಗಿರುವುದರಿಂದ ಕೂಡಲೇ ಪಿ.ಡಬ್ಲ್ಯೂ.ಡಿ.ಯವರು ಅದರ ಬಗ್ಗೆ ಆಸಕ್ತಿ ತೋರಿಸಿ ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಯಲಹಂಕನಗರದಲ್ಲಿ ರುದ್ರಭೂಮಿಗಂತೂ ಬಹಳ ಕೊರತೆ ಇದೆ. ಈಗ ನಮ್ಮ ನಗರಸಭೆ ವ್ಯಾಪ್ತಿಯಲ್ಲಿ ಬರತಕ್ಕಂಥ ಪ್ರದೇಶಗಳಿಗೆ ರುದ್ರಭೂಮಿಯೇ ಇಲ್ಲ. ಈಗ ಸುಮಾರು ಸುಮಾರು ಒಂದು ಸಾವಿರ ಮನೆಗಳನ್ನು ನಮ್ಮ ಹೌಸಿಂಗ್ ಬೋರ್ಡ್‌ನವರು ಕಟ್ಟಿದ್ದಾರೆ. ಅಲ್ಲಿ ಒಂದು ಊರೇ ನಿರ್ಮಾಣವಾಗಿದೆ. ಆದರೆ ಅಲ್ಲಿ ಜನರಿಗೆ ಪಾರ್ಕ್ ಇಲ್ಲ, ಆಟದ ಮೈದಾನ ಇಲ್ಲ, ದೇವಸ್ಥಾನಕ್ಕೆ ಸ್ಥಳ ಕೂಡ ಬಿಟ್ಟಿಲ್ಲ. ಎರಡನೆಯದಾಗಿ ಅವರು ರುದ್ರಭೂಮಿಯ ಬಗ್ಗೆ ಚಿಂತನೆ ಮಾಡಲಿಲ್ಲ. ನಾನು ಅಲ್ಲಿಗೆ ಹೋದಂಥ ಸಂದರ್ಭಧಲ್ಲಿ ರುದ್ರಭೂಮಿಯ ಬಗ್ಗೆ ಕೇಳುತ್ತಾರೆ. ಆದ್ದರಿಂದ ಪಕ್ಕದಲ್ಲಿ ಇರತಕ್ಕಂಥ ಸರ್ಕಾರ ಜಮೀನಿನಲ್ಲಿ ಎರಡು ಅಥವಾ ಮೂರು ಎಕರೆಯನ್ನು ರುದ್ರಭೂಮಿಗಾಗಿ ಕೊಟ್ಟರೆ ಅದನ್ನು ಅಲ್ಲಿ ಮಾಡಬಹುದು. ಮತ್ತು ನನ್ನ ವ್ಯಾಪ್ತಿಯಲ್ಲಿನ ದೊಡ್ಡ ಕೊಳಚೆಪ್ರದೇಶ ಎಂದರೆ ಟಿ.ಜಿ.ಹಳ್ಳಿ ಎಂದು ಹೇಳಬಹುದು. ಜೊತೆಗೆ ಇಡೀ

ಏಷ್ಯಾದಲ್ಲಿಯೇ ದೊಡ್ಡದಾದ ಸ್ಲಂ ಎಂದೂ ಕೂಡ ಹೇಳಬಹುದು. ಅಲ್ಲಿ ಪರಿಸ್ಥಿತಿ ಹೇಗಿದೆ ಎಂದರೆ ಕುಡಿಯುವ ನೀರಿಲ್ಲ, ಸರಿಯಾದ ಅಗಲವಾದ ರಸ್ತೆಗಳಿಲ್ಲ, ಅಲ್ಲಿ ಸುಮಾರು ಒಂದುವರೆ ಲಕ್ಷ ಜನ ಹೆಚ್ಚಿನ ಸಂಖ್ಯೆಯಲ್ಲಿ ವಾಸಮಾಡುತ್ತಿದ್ದಾರೆ. ಆದರೂ ಕೂಡ ಸಾಮಾನ್ಯವಾದ ಯಾವುದೇ ಸೌಲಭ್ಯಗಳಿಲ್ಲದೆ ಜನ ನರಳುತ್ತಿದ್ದಾರೆ. ಮುಖ್ಯವಾಗಿ ಅಲ್ಲಿ ಕುಡಿಯುವ ನೀರಿಲ್ಲ; ವಿನಾಯಕ ಟಾಕೀಸ್ ಎಂದು ಒಂದುಕಡೆ ಇದೆ, ಮತ್ತೆ ದೇವರಾಜ ಅರಸು ಕಾಲೋನಿ ಎಂದು ಇನ್ನೊಂದು ಕಡೆ ಇದೆ. ಅಲ್ಲಿ ಒಂದು ಬಿಂದಿಗೆಗೆ ಮೂರು ರೂಪಾಯಿಯಂತೆ ನೀರು ಕೊಡುತ್ತಾರೆ. ಅದನ್ನು ಜನ ದುಡ್ಡು ಕೊಟ್ಟು ಕೊಂಡುಕೊಳ್ಳುತ್ತಾರೆ. ನಿಜವಾಗಿಯೂ ಅಲ್ಲಿ ಸ್ವಲ್ಪವೂ ನೀರಿಲ್ಲ. ಬೋರ್‌ವೆಲ್‌ಗಳಲ್ಲಾದರೂ ನೀರು ಸಿಗುತ್ತದೆ ಎಂದು ಹೇಳಿದರೆ ಈ ಬೇಸಿಗೆ ಕಾಲದಲ್ಲಿ ಬೋರ್‌ವೆಲ್‌ಗಳೆಲ್ಲಾ ಒಣಗಿ ಹೋಗಿರುವುದರಿಂದ ಅದರಲ್ಲಿ ನೀರು ಸಿಗುವುದಕ್ಕೆ ಅವಕಾಶ ಇಲ್ಲದೆ ಪಾಪ ಒಂದು ಬಿಂದಿಗೆಗೆ ಮೂರು ರೂಪಾಯಿ ಕೊಡುವಂಥ ಪರಿಸ್ಥಿತಿ ಇದೆ. ಮತ್ತು ಅಲ್ಲಿ ಒಳಚರಂಡಿ ಮಂಡಳಿಗೆ ಸಂಬಂಧಪಟ್ಟಂತೆ ಏನೂ ಸೌಲಭ್ಯಗಳಿಲ್ಲ. ಏನಾಗಿದೆ ಎಂದರೆ ಅಲ್ಲಿ ಎಲ್ಲರೂ ಪಿಟ್ ಮಾಡಿಕೊಂಡಿದ್ದಾರೆ. ಅದು ತುಂಬಿದ ತಕ್ಷಣ ಮೋರಿಯಲ್ಲಿ ಹರಿದು ಹೋಗುತ್ತದೆ. ಇದರಿಂದ ಜನ ಅಲ್ಲಿ ವಾಸಮಾಡದೆ ಇರತಕ್ಕಂಥ ಪರಿಸ್ಥಿತಿ ಇದೆ. ಏಕೆಂದರೆ ಅಷ್ಟೊಂದು ದುರ್ವಾಸನೆ ಅಲ್ಲಿ ಕಂಡುಬರುತ್ತದೆ. ಎಲ್ಲಾ ವಿಧವಾದ ಚರ್ಮದ ಕೆಲಸ ಅಲ್ಲಿ ಮಾಡುತ್ತಾರೆ, ಮತ್ತು ದನಗಳನ್ನು ಕುಯ್ಯುವುದೂ ಕೂಡ ಅಲ್ಲಿ ಮಾಡುತ್ತಿದ್ದಾರೆ. ಅವೆಲ್ಲವನ್ನು ತೆಗೆದುಕೊಂಡು ಬಂದು ಮೋರಿಯಲ್ಲಿ ಬಿಟ್ಟ ತಕ್ಷಣ ಮೋರಿಯಲ್ಲಿ ಏನಾದರೂ ಅಡಚಣೆ ಆದರೆ ಅಲ್ಲಿ ನಿಂತುಕೊಂಡು ಮಾತನಾಡುವುದಕ್ಕೆ ಕೂಡ ಆಗುವುದಿಲ್ಲ. ಈಗ ಅದು ಹೊಸದಾಗಿ ಕಾರ್ಪೋರೇಷನ್‌ಗೆ ಸೇರಿಸಿದ್ದಾರೆ. ಆದರೂ ಕೂಡ ಬೇರೆ ಕಡೆ 60-70 ಲಕ್ಷ ಎಂದು ಕೊಟ್ಟಿರುತ್ತಾರೆ. ಆದರೆ ಟಿ.ಜಿ.ಹಳ್ಳಿಗೆ ನಗರಪಾಲಿಕೆ ವತಿಯಿಂದ ಒದಗಿಸಿರುವಂಥದ್ದು ಬರೀ 32 ಲಕ್ಷ ರೂಪಾಯಿ. ಈ ಕಡಿಮೆ ಹಣದಿಂದ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಹೆಚ್ಚಿಗೆ ಹಣವನ್ನು ಒದಗಿಸಬೇಕು. ಮತ್ತು ಟಿ.ಜಿ.ಹಳ್ಳಿಯಲ್ಲಿ ಒಂದೇ ಒಂದು ಸರ್ಕಾರಿ ಪ್ರೌಢಶಾಲೆ ಇದೆ. ಒಂದುವರೆ ಲಕ್ಷ ಜನ ವಾಸ ಮಾಡತಕ್ಕಂಥ ಒಂದು ಸ್ಥಳದಲ್ಲಿ ಒಂದೇ ಒಂದು ಪ್ರೌಢಶಾಲೆ ಅದರಲ್ಲಿ 2,834 ಮಕ್ಕಳು ಓದುತ್ತಿದ್ದಾರೆ. ಅವರು ಹೇಗೆ ಓದುತ್ತಾರೆ ಎಂದರೆ ಬೆಳಿಗ್ಗೆ ಒಂದು ಶಿಫ್ಟ್, ಸಾಯಂಕಾಲ ಒಂದು ಶಿಫ್ಟ್ ಈ ತರಹ ಮಾಡಿಕೊಂಡು ಓದುತ್ತಿದ್ದಾರೆ. 7ನೇ ಕ್ಲಾಸಿನವರೆಗೆ ಒಂದು ಶಿಫ್ಟ್ ಆಮೇಲೆ ಇನ್ನೊಂದು ಶಿಫ್ಟ್ ಎಂದು ಮಾಡಿಕೊಂಡು ಓದುತ್ತಿದ್ದಾರೆ. ಆ ಶಾಲೆಯ ಪರಿಸ್ಥಿತಿ ನೋಡಿದರೆ ನಾವು ಹುಟ್ಟುವುದಕ್ಕೆ ಮೊದಲು ಆ ಶಾಲೆ ಪ್ರಾರಂಭವಾಗಿದೆ. ಯಾವಾಗ ಎಂದರೆ 1942ನೇ ಇಸವಿಯಲ್ಲಿ ಸ್ಥಾಪನೆಯಾಗಿರತಕ್ಕಂಥ ಶಾಲೆ ಅದು. ಇವೊತ್ತು ಆ ಪರಿಸ್ಥಿತಿ ನೋಡಿದರೆ ಯಾವಾಗ ಬಿದ್ದುಹೋಗುತ್ತದೆ ಎಂದು ಹೇಳುವಂಥ ಪರಿಸ್ಥಿತಿ ಇದೆ. ಅದಕ್ಕಾಗಿ ಸರ್ಕಾರಕ್ಕೆ ನಾನು ತಮ್ಮ ಮುಖಾಂತರ ಕೇಳಿ ಕೊಳ್ಳುತ್ತೇನೆ. ಕೂಡಲೇ ಅದರ ಬಗ್ಗೆ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಡಬೇಕು. ಮತ್ತು ಅಲ್ಲಿಯ ಮಾಲಿನ್ಯದ ಬಗ್ಗೆ

ಹೇಳಬೇಕೆಂದರೆ ನಿಜವಾಗಿ ಬಹಳ ಕೆಟ್ಟದಾಗಿದೆ. ಈ ಮಾಲಿನ್ಯ ನಿಯಂತ್ರಣ ಮಂಡಳಿಯವರು ಏನು ಮಾಡುತ್ತಾರೋ ಎಂಬುದು ನಮಗೆ ಗೊತ್ತಿಲ್ಲ. ಅಲ್ಲಿ ಟ್ಯಾನರಿ ರೋಡ್ ಎಂದು ಇದೆ. ಅಲ್ಲಿ ಯಾರಾದರೂ ವಾಹನದಲ್ಲಿ ಹೋದರೆ ಎಂತಹ ಒಂದು ಕೆಟ್ಟ ವಾಸನೆ ಬರುತ್ತದೆ ಎಂದು ಗೊತ್ತಾಗುತ್ತದೆ. ಆದರೆ ಅದರ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿಯವರು ಇದುವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಮತ್ತು ನಮ್ಮ ವ್ಯಾಪ್ತಿಯಲ್ಲಿ ಎರಡು ಸಿ.ಎಂ.ಸಿ.ಗಳು ಬರುತ್ತವೆ. ಸಿ.ಎಂ.ಸಿ.ಗಳ ಕೆಲಸ ಏನೆಂದರೆ ದುಡ್ಡು ಕಲೆಕ್ಟ್ ಮಾಡಿದರೆ ಕೆಲಸ ಮಾಡಬೇಕು ಎಂದು ಹೇಳುತ್ತಾರೆ. ಅಲ್ಲಿ ಏನಾಗಿದೆ ನೋಟಿಫೈಡ್ ಏರಿಯಾಗಳು ಇತ್ತು. ನೋಟಿಫೈಡ್ ಏರಿಯಾದಲ್ಲಿ ಎಷ್ಟು ಜನ ಇದ್ದರೋ ಆ ಎರಡು ನೋಟಿಫೈಡ್ ಏರಿಯಾ ಜನರನ್ನು ತೆಗೆದುಕೊಂಡು ಬಂದು ಒಂದು ಸಿ.ಎಂ.ಸಿ.ಯಲ್ಲಿ ತುಂಬಿಬಿಟ್ಟಿದ್ದಾರೆ. ಅವರಿಗೆ ಸಂಬಳ ಕೊಡಬೇಕೆಂದರೆ ಏಳು ಲಕ್ಷ ರೂಪಾಯಿ ಬೇಕು. ಹತ್ತು ಲಕ್ಷ ರೂಪಾಯಿ ಕೆಲಸವಾಗುತ್ತದೆ. ಏಳು ಲಕ್ಷ ರೂಪಾಯಿ ಅವರಿಗೆ ಸಂಬಳ ಕೊಡಬೇಕು ಅದರಿಂದ ಏನು ಕಾರ್ಯಕ್ರಮವಾಗುತ್ತದೆ, ಏನು ಕೆಲಸವಾಗುತ್ತದೆ ಎಂದು ತಾವು ಯೋಚನೆ ಮಾಡಬೇಕಾಗುತ್ತದೆ. ಆ ಸಿ.ಎಂ.ಸಿ.ಗಳಲ್ಲಿ ಹೆಚ್ಚಿಗೆ ಇರತಕ್ಕಂಥ ಜನಗಳನ್ನು ಬೇರೆ ಬೇರೆ ಇಲಾಖೆಗೆ ಕಳುಹಿಸಿದರೆ ನಿಜವಾಗಿಯೂ ಸ್ವಲ್ಪ ಉಳಿತಾಯವಾಗುತ್ತದೆ. ಮತ್ತು ಒಂದು ಕಾಮಗಾರಿ ಕೆಲಸವಾಗುತ್ತದೆ. ಆಮೇಲೆ ಸಿ.ಎಂ.ಸಿ. ವ್ಯಾಪ್ತಿಯಲ್ಲಿ ಅಪಾರ್ಟ್‌ಮೆಂಟ್ಸ್ ಬರುತ್ತದೆ. ಅಪಾರ್ಟ್‌ಮೆಂಟ್ಸ್ ಮಾಡುವಾಗ ಅವರು ಏನು ಮಾಡುತ್ತಾರೆ ಎಂದರೆ ಬಿ.ಡಿ.ಎ. ಹತ್ತಿರ ಹೋಗಿ ಪ್ಲಾನ್ ಮಾಡಿಕೊಂಡು ಬರುತ್ತಾರೆ. ಸಿ.ಎಂ.ಸಿ. ವತಿಯಿಂದ ಏಕೆ ಮಾಡಬಾರದು? ಸಿ.ಎಂ.ಸಿ.ಯಲ್ಲಿ ಎ.ಇ.ಇ. ಇದ್ದಾರೆ, ಅವರಿಗೆ ಪವರ್ ಇಲ್ಲ ಎಂದು ಹೇಳಿ ಬಿ.ಡಿ.ಎ.ಯಿಂದ ಮಾಡಿಕೊಂಡು ಬರುತ್ತಾರೆ. ಇಲ್ಲಿ ಬರತಕ್ಕಂಥ ಹಣ ಕೂಡ ಹೋಗುತ್ತದೆ. ಆದುದರಿಂದ ಸಿ.ಎಂ.ಸಿ.ನಲ್ಲಿ ಎಲ್ಲಾ ಇಂಜಿನಿಯರ್‌ಗಳಿದ್ದಾರೆ, ಸಂಬಂಧಪಟ್ಟ ಅಧಿಕಾರಿಗಳಿದ್ದಾರೆ ಅವರಿಗೆ ಆ ಒಂದು ಪವರನ್ನು ಕೊಟ್ಟರೆ ನಿಜವಾಗಿಯೂ ಅವರು ಕೆಲಸ ಮಾಡುತ್ತಾರೆ. ನಗರಸಭೆ ಇರುವಾಗ ಡಿ.ಸಿ. ಫಂಡ್‌ನಿಂದ ಸ್ವಲ್ಪ ಹಣ ಬರುತ್ತಾ ಇತ್ತು. ಈಗ ಈ ಡಿ.ಸಿ. ಫಂಡ್‌ನಿಂದ ಏನು ಬರಲಿಲ್ಲವೆಂದು ಕಾಣುತ್ತದೆ. ಅವರು ಏನು ಕೆಲಸ ಮಾಡಬೇಕೆಂದರೂ ಕೂಡ ಅವರ ಕೈಯಲ್ಲಿ ಆಗುತ್ತಾ ಇರಲಿಲ್ಲ. ಇನ್ನು ನಮ್ಮ ಗ್ರಾಮಪಂಚಾಯತ್‌ನ ಬಗ್ಗೆ ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಒಂದು ಬೇಡಿಕೆ ಏನೆಂದರೆ ಹೆಸರುಘಟ್ಟ ಮತ್ತು ಯಲಹಂಕ ವ್ಯಾಪ್ತಿಯಲ್ಲಿ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾಪರಿಷತ್ತು ಇದೆ. ಈಗ ಅಲ್ಲಿ ತಾವು ಸ್ಟ್ಯಾಂಪ್ ಡ್ಯೂಟಿಯನ್ನು ಕಡಿಮೆ ಮಾಡಿದ್ದೀರಿ. ಇಲ್ಲಿ ಫೂಲ್‌ಗಳನ್ನು ಮಾಡಿ ಎಲ್ಲಾ ಕಡೆಗೂ ವಿತರಣೆ ಮಾಡಬೇಕೆಂದು ತಾವು ಹೊರಟಿದ್ದೀರಿ. ಇಲ್ಲಿ ನಿಜವಾಗಿಯೂ ಯಾವ ಕೆಲಸಗಳು ನಮಗೆ ಆಗುವುದಿಲ್ಲ. ಮೊದಲು ಮಾಡಿರುವಂತಹ ಕೆಲಸಗಳಿಗೆ ಹಣವನ್ನು ಪಾವತಿ ಮಾಡುವುದಕ್ಕೆ ಆಗುತ್ತಾ ಇಲ್ಲ. ಇದರಿಂದ ಎಲ್ಲಾ ಕಂಟ್ರಾಕ್ಟರ್ಸ್‌ಗಳು ಕಂಗಾಲಾಗಿದ್ದಾರೆ. ಆದುದರಿಂದ ಹೋದ ವರ್ಷ ಕೊಟ್ಟ ರೀತಿಯಲ್ಲೇ ಈ ವರ್ಷವೂ ಸ್ಟ್ಯಾಂಪ್ ಡ್ಯೂಟಿಯನ್ನು ಕೊಟ್ಟು ಅದನ್ನು

ಸರಿಪಡಿಸಿಬೇಕು. ಇನ್ನು ನಮ್ಮಲ್ಲಿ ಸುಮಾರು ಸರ್ಕಾರಿ ಜಮೀನುಗಳು ಇದೆ. ಅಲ್ಲಿ ಸುಮಾರು ಒಂದು ಸಾವಿರ ಎಕರೆ ಸರ್ಕಾರಿ ಜಮೀನುಗಳು ಇರಬಹುದು. ಯಲಹಂಕದಲ್ಲಿ ನನಗೆ ತಿಳಿದಮಟ್ಟಿಗೆ ಸುಮಾರು 800 ಎಕರೆ ಜಮೀನು ಇರಬಹುದು. ಆದರೆ ಯಾವ ರೀತಿಯಲ್ಲಿ ಸರ್ಕಾರ ಕಡಿವಾಣವನ್ನು ಹಾಕುತ್ತದೆಯೋ ಗೊತ್ತಿಲ್ಲ. ಯಾರೋ ಬರುತ್ತಾರೆ, ಅಲ್ಲಿ ಯಾವುದೇ ಸರ್ವೆ ನಂಬರ್ ಅನ್ನು ತೋರಿಸಿ ಅದು ನಮ್ಮದೇ ಎಂದು ಹೇಳಿ ಹೈಕೋರ್ಟ್‌ಗೆ ಹೋಗಿ ಸ್ಟೇ ತಂದು ಅಲ್ಲಿ ಮನೆಯನ್ನು ಮಾಡುವುದಕ್ಕೆ ಹೊರಟಿದ್ದಾರೆ. ಕೆಲವರು ರೆವಿನ್ಯೂ ಸೈಟ್‌ಗಳಲ್ಲೂ ಕೂಡ ರೋಡುಗಳನ್ನು ಮಾಡಿ ಮನೆಗಳನ್ನು ಕಟ್ಟುವುದಕ್ಕೆ ಹೊರಟಿದ್ದಾರೆ. ಎರಡನೆಯದಾಗಿ ವಿಲೇಜ್ ಅಕೌಂಟೆಂಟ್‌ಗಳು ಅವರು ಏನು ಮಾಡುತ್ತಾರೋ ಗೊತ್ತಿಲ್ಲ. ಅವರು ಎಲ್ಲವನ್ನೂ ಸರಿಪಡಿಸಿ ಕಾಗದವನ್ನು ಟ್ರಾನ್ಸ್‌ಫರ್ ಕೊಡುವಂತಹ ಮಟ್ಟದಲ್ಲಿದ್ದಾರೆ. ಇಲ್ಲಿ ಡಿ.ಸಿಯವರಿಗೂ ಆ ಪವರ್ ಇಲ್ಲ, ಆದರೆ ಇಲ್ಲಿ ವಿ.ಎ.ಗಳಿಗೆ ಆ ಪವರ್ ಇದೆ. ಇನ್ನು ಪ್ರೈವೇಟ್ ಲೇಔಟ್‌ಗಳು. ಅವರು ಯಾವ ರೀತಿಯಲ್ಲಿ ಮಾಡುತ್ತಾರೆಂದರೆ ಅಲ್ಲಿ ಚರಂಡಿಗಳ ಬಗ್ಗೆ ಯೋಚನೆಯನ್ನೇ ಮಾಡುವುದಿಲ್ಲ, ಸೈಟ್‌ಗಳನ್ನು ಮಾಡಿ ಮಾರಿಬಿಡುತ್ತಾರೆ. ನಾವು ಚುನಾವಣೆಯ ಸಮಯದಲ್ಲಿ ಹೋದಾಗ ಅಲ್ಲಿ ಅವರು ಚರಂಡಿ ಬೇಕು, ನೀರು ಬೇಕೆಂದು ಕೇಳುತ್ತಾರೆ. ಕೆಂಪಾಪುರದಲ್ಲಿ ಲೇಔಟ್‌ಗಳನ್ನು ಮಾಡಿದ್ದಾರೆ. ಅಲ್ಲಿ ಹೋದರೆ ರೋಡ್‌ಗಳು ಇಲ್ಲ, ಬೋರ್‌ವೆಲ್‌ಗಳು ಇಲ್ಲ, ಸೈಟುಗಳನ್ನು ಮಾಡಿ ಕಳುಹಿಸಿದ್ದಾರೆ. ನನಗೆ ಸರ್ಕಾರ ಏನು ಮಾಡುತ್ತಿದೆ ಎನ್ನುವುದು ಅರ್ಥವಾಗುತ್ತಿಲ್ಲ. ಇದಕ್ಕೆ ಸರ್ಕಾರ ಕಡಿವಾಣವನ್ನು ಹಾಕಬೇಕು. ಇನ್ನು ಹೆಸರುಘಟ್ಟದ ಬಗ್ಗೆ ಸಣ್ಣ ನೀರಾವರಿ ಸಚಿವರಲ್ಲಿ ಒಂದು ಮನವಿ ಏನೆಂದರೆ ಅಲ್ಲಿ ಕೆರೆ ಇದೆ. ಇವತ್ತು ಹೆಸರುಘಟ್ಟವೆಂದೆ ಅದು ಒಂದು ಒಳ್ಳೆಯ ಪ್ರದೇಶವಾಗಿದೆ. ಇದು ಒಂದು ಕಾಲದಲ್ಲಿ ಇಡೀ ಬೆಂಗಳೂರಿಗೆ ನೀರು ಸರಬರಾಜು ಮಾಡಿದಂತಹ ಊರಾಗಿತ್ತು. ಇವತ್ತು ಆ ಕೆರೆಯಲ್ಲಿ ನೀರು ಇಲ್ಲ. ನಾನು ಚಿಕ್ಕ ಹುಡುಗನಾಗಿದ್ದಾಗ 1962ರಲ್ಲಿ 'ಯಾಚ್' ಎನ್ನುವ ಹಡಗಿನಲ್ಲಿ ಜನರು ಓಡಾಡುತ್ತಿದ್ದರು, ಆಗ ನಾನು ನೋಡಿದ್ದೇನೆ. ಆದರೆ ಇವತ್ತು ಹೋಗಿ ನೋಡಿದರೆ ಅಲ್ಲಿ ನೀರೇ ಇಲ್ಲ, ಕಾರಣವೇನೆಂದರೆ ಅಲ್ಲಿ ಹೂಳು ತುಂಬಿ ಕೊಂಡಿದೆ, ಅದನ್ನು ಎತ್ತುವಂತಹ ಕೆಲಸವಾಗಬೇಕು. ಅಲ್ಲಿ ಡ್ಯಾನಿಷ್ ಫಾರಂ ಎಂದು ಇತ್ತು, ಅದನ್ನು ನೋಡುವುದಕ್ಕೆ ತುಂಬಾ ಸುಂದರವಾಗಿತ್ತು. ವಾತಾವರಣವೂ ತುಂಬಾ ಚೆನ್ನಾಗಿತ್ತು. ಆದರೆ ಇವತ್ತು ಅಲ್ಲಿ ಏನು ಇಲ್ಲ. ಈಗ ಅಲ್ಲಿ ನೀರೂ ಸಹ ಇಲ್ಲ. ಅಲ್ಲಿ 1906ರಲ್ಲಿ ಕಟ್ಟಿರುವಂತಹ ನಾಲೆಗಳು ಇದೆ, ಆದರೆ ನೀರು ಇಲ್ಲ. ನೀರು ಎಲ್ಲಿಗೆ ಹೋಗುತ್ತದೆಂದರೆ ಬರೀ ಐ.ಇ.ಎಫ್‌ಗೆ ಒಂದು ಪೈಪ್‌ನಲ್ಲಿ ಅದು ಐದಾರು ಬೋರ್‌ವೆಲ್‌ಗಳನ್ನು ಮಾಡಿಸಿ ಅಲ್ಲಿಂದ ನೀರನ್ನು ತೆಗೆಸಿದರೆ ಬಹಳ ಅನುಕೂಲವಾಗುತ್ತದೆ. ಇನ್ನು ಬಿ.ಡಿ.ಎ. ಬಗ್ಗೆ ಹೇಳುವುದಾದರೆ ನೀವು ಅಕ್ರಮ ಮತ್ತು ಸಕ್ರಮವೆಂದು ಹೇಳಿ ಏನು ಕೆಲಸ ಮಾಡಿಲ್ಲ. ಎರಡನೆಯದಾಗಿ ಸಂಜಯನಗರವೆಂದು ಒಂದು ಊರು, ಇದು ನಮ್ಮ ವ್ಯಾಪ್ತಿಯಲ್ಲಿ ಬರುತ್ತದೆ. ಅಲ್ಲಿ ಬಿ.ಡಿ.ಎ. ಪಾರ್ಕ್ ಎಂದು

ಕ್ಲಿಯರ್ ಆಗಿ ಹೇಳಿದ್ದಾರೆ. ಅಲ್ಲಿ ಒಂದೇ ಸಮಯದಲ್ಲಿ ನಾಲ್ಕು ಮನೆಗಳನ್ನು ಕಟ್ಟುತ್ತಿದ್ದು ಅದು ಮೇಲ್ಪಟ್ಟದವರೆಗೂ ಬಂದಿದೆ. ಇದರ ಬಗ್ಗೆ ಬಿ.ಡಿ.ಎ ಇಂಜಿನಿಯರ್‌ರವರು ಗಮನಿಸಿಲ್ಲ, ಪೊಲೀಸ್‌ನವರೂ ಸಹ ಗಮನಿಸಿಲ್ಲ. ಅಲ್ಲಿ ಆಕ್ರಮವಾಗಿ ಮನೆಗಳನ್ನು ಕಟ್ಟಿ ಮಾರುವುದಕ್ಕೆ ಹೊರಟಿದ್ದಾರೆ. ಸಂಜಯ್‌ನಗರದಲ್ಲಿ ಕಾರ್ನರ್ ಸೈಟುಗಳು ಒಂದು ಕೂಡ ನಿಮಗೆ ಸಿಗುವುದಿಲ್ಲ. ಕಾರಣವೇನೆಂದರೆ ಯಾವುದೋ ಒಂದು ಸರ್ವೆ ನಂಬರ್ ಅಥವಾ ಹಕ್ಕು ಪತ್ರಗಳನ್ನು ಇಟ್ಟುಕೊಂಡು ಮಾಡುತ್ತಿದ್ದಾರೆ. ಇನ್ನು ಬೆಂಗಳೂರು ನಗರದ ಬಗ್ಗೆ ಹೇಳುವುದಾದರೆ ವಾತಾವರಣ ತುಂಬಾ ಕೆಟ್ಟು ಹೋಗಿದೆ. ಎಲ್ಲಿ ನೋಡಿದರೂ ಪರಿಸರ ಮಾಲಿನ್ಯ ಮತ್ತು ವಾಹನಗಳ ಸಂಖ್ಯೆ ಕೂಡ ಜಾಸ್ತಿಯಾಗಿದೆ. ಇವತ್ತು ಪ್ರತಿನಿತ್ಯ ಒಂದು ಸಾವಿರ ವಾಹನಗಳ ರಿಜಿಸ್ಟ್ರೇಷನ್‌ಗಳು ಆಗುತ್ತಿವೆ. ಈಗ ಇದರಿಂದ ಪರಿಸ್ಥಿತಿ ಏನಾಗಿದೆ ಎಂದರೆ ನಾವು ಐದು ನಿಮಿಷಕ್ಕೆ ಹೋಗಬೇಕಾದಂಥಾದ್ದು ಅರ್ಧ ಗಂಟೆಗಳ ಕಾಲ ವ್ಯಯವಾಗುತ್ತದೆ, ಇದನ್ನು ಸರಿಪಡಿಸಬೇಕಾಗುತ್ತದೆ. ಇನ್ನು ಫ್ಲೈಓವರ್ಸ್‌ಗಳ ಬಗ್ಗೆ ಹೇಳುವುದಾದರೆ ಮೇಕ್ರಿ ಸರ್ಕಲ್‌ನಲ್ಲಿ ಕ್ರಾಸ್ ಮಾಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ನಾವು ಟ್ರಾಫಿಕ್‌ನಲ್ಲಿ ಸಿಕ್ಕಿ ಬಿದ್ದರೆ ಒಂದೂವರೆ ಗಂಟೆಗಳ ಕಾಲ ನಮಗೆ ಬೇಕಾಗುತ್ತದೆ. ಇದನ್ನು ಸರಿಪಡಿಸಬೇಕು. ಇನ್ನು ಬೆಂಗಳೂರಿನಲ್ಲಿ ರೋಡ್ ಕಟಿಂಗ್ಸ್ ಮಾಡುವಂಥಾದ್ದನ್ನು ನೋಡಿದರೆ ಅದನ್ನು ಸಾಮಾನ್ಯ ರೀತಿಯಲ್ಲಿ ಮಾಡುತ್ತಾರೆ. ಆದರೆ ಬಾಂಬೆಯಲ್ಲಿ ಈ ರೀತಿಯಾಗಿ ಇಲ್ಲ. ಅಲ್ಲಿ ಕಲ್ಲುಗಳನ್ನು ಹಾಕಿರುತ್ತಾರೆ, ಅವರು ಅದನ್ನು ಕಟ್ ಮಾಡಿಕೊಂಡು ಬರಬೇಕಾಗುತ್ತದೆ. ನಮ್ಮಲ್ಲಿ ಯಾರು ಯಾವ ರೀತಿ ಮನಸ್ಸು ಬರುತ್ತದೋ ಆ ರೀತಿಯಲ್ಲಿ ಕಟ್ ಮಾಡಿಕೊಂಡು ಹೋಗಬಹುದು. ಇಲ್ಲಿ ಟೆಲಿಫೋನ್‌ನವರು ಕಟ್ ಮಾಡುತ್ತಾರೆ, ಕೆ.ಇ.ಬಿಯವರು ಮಾಡುತ್ತಾರೆ. ಬಿ.ಡಬ್ಲ್ಯೂ.ಎಸ್.ಎಸ್.ಬಿಯವರು ಕಟ್ ಮಾಡುತ್ತಾರೆ. ಅವರ ಕೆಲಸವಾದ ನಂತರ ಅದಕ್ಕೆ ಟಾರ್ ಹಾಕದೇ ಹಾಗೆ ಬಿಟ್ಟು ಹೋಗುತ್ತಾರೆ. ಇದರಿಂದ ಟ್ರಾಫಿಕ್‌ಗೆ ತುಂಬಾ ತೊಂದರೆಯಾಗುತ್ತಿದೆ. ಇವರು ಪರ್ಮಿಷನ್ ಅನ್ನು ತೆಗೆದುಕೊಂಡು ಮಾಡುವುದಿಲ್ಲ. ಅದರಲ್ಲೂ ಟೆಲಿಫೋನ್ ಡಿಪಾರ್ಟ್‌ಮೆಂಟಿನವರು ಎಲ್ಲಿ ನೋಡಿದರೂ ರೋಡ್‌ಗಳನ್ನು ಕಟ್ ಮಾಡಿದ್ದಾರೆ. ಅಲ್ಲಿ ಮಣ್ಣು ಅನ್ನೂ ಸಹಿತ ಹಾಗೆ ಬಿಟ್ಟು ಹೋಗುತ್ತಾರೆ. ಬೆಂಗಳೂರನ್ನು ಗಾರ್ಡನ್ ಸಿಟಿ ಎಂದು ಹೇಳುತ್ತೇವೆ, ಆದರೆ ನಾವು ಮರಗಳ ಬಗ್ಗೆ ಯಾರೂ ಚಿಂತನೆಯನ್ನು ಮಾಡಿಲ್ಲ. ದಯಮಾಡಿ ಅದರ ಬಗ್ಗೆ ಚಿಂತನೆ ಮಾಡಬೇಕೆಂದು ಹೇಳುತ್ತೇನೆ. ನಾನು ಇಷ್ಟನ್ನು ಹೇಳಿ, ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಜಶೇಖರ ವಿ.ಶೀಲವಂತ (ಗುಳೇದಗುಡ್ಡ): ಮಾನ್ಯ ಅಧ್ಯಕ್ಷರೆ, ಈ ಬೇಡಿಕೆಯ ಮೇಲಿನ ಚರ್ಚೆಯ ಕುರಿತಂತೆ ಸಾಮಾನ್ಯ ಆಡಳಿತ ಇತರೆ ವಿಷಯಗಳ

ಮೇಲೆ ಕುರಿತು ನನ್ನ ಭಾಷಣವನ್ನು ಮಾಡುತ್ತಿದ್ದೇನೆ.

ಅಧ್ಯಕ್ಷರು: ತಾವು ವಿರೋಧಪಕ್ಷದ ಸದಸ್ಯರಾಗಿ ಮತನಾಡುವಾಗ ಹೇಗೆ ಪ್ರಾರಂಭ ಮಾಡಬೇಕೆಂದರೆ ನಾನು ಈ ಬೇಡಿಕೆಗಳನ್ನು ವಿರೋಧ ಮಾಡುವುದಕ್ಕೆ ನಿಂತಿದ್ದೇನೆ ಎಂದು ಪ್ರಾರಂಭ ಮಾಡಬೇಕು.

ಶ್ರೀ ರಾಜಶೇಖರ ವಿ.ಶೀಲವಂತ: ಮಾನ್ಯ ಅಧ್ಯಕ್ಷರೆ, ನಾನು ಹೊಸದಾಗಿ ಬಂದ ಶಾಸಕನಾಗಿರುವುದರಿಂದ ಈ ರೀತಿಯಾಯಿತು.

ಅಧ್ಯಕ್ಷರು: ನೀವು ಸಪೋರ್ಟ್ ಮಾಡಬೇಕೆಂದರೆ ನನ್ನದು ಏನೂ ತಕರಾರು ಇಲ್ಲ. ನಾನು ನಿಮ್ಮ ಡ್ಯೂಟಿಯನ್ನು ಹೇಳಿದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಸದಸ್ಯರು ಸ್ವಾಗತ ಮಾಡುವುದಕ್ಕೆ ಎಂದು ನಿಂತಿದ್ದರು, ತಾವು ತಿದ್ದುಪಡಿಯನ್ನು ಮಾಡಿದ್ದೀರಿ.

ಅಧ್ಯಕ್ಷರು: ಅವರು ಮೊದಲ ಬಾರಿ ಮಾತನಾಡುತ್ತಿದ್ದಾರೆ, ಮಾತನಾಡಲಿ,

ಶ್ರೀ ರಾಜಶೇಖರ ವಿ.ಶೀಲವಂತ: ಮಾನ್ಯ ಅಧ್ಯಕ್ಷರೆ, ಸಾಮಾನ್ಯ ಆಡಳಿತದ ಬಗ್ಗೆ ಏನೇನು ಬದಲಾವಣೆ ಆಗಬೇಕಾಗಿದೆ, ನಮ್ಮ ಸರ್ಕಾರದ ಆಡಳಿತ ಯಾವ ಮಟ್ಟದಲ್ಲಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತಮ್ಮ ಮೂಲಕ ತರುತ್ತೇನೆ. ಸರ್ಕಾರದ ಆಡಳಿತ ಅತ್ಯಂತ ಯಶಸ್ವಿಯಾದಂತಹ ರೀತಿಯಲ್ಲಿ ನಡೆಯಬೇಕೆನ್ನುವ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ. ರಾಜ್ಯ ಸರ್ಕಾರ ಆಡಳಿತವನ್ನು ನಡೆಸುತ್ತಿದೆ. ನಮ್ಮ ಮುಂಬೈ ಕರ್ನಾಟಕದ ಭಾಗದಲ್ಲಿ ಒಂದು ಸಣ್ಣ ಗಾದೆ ಅದು ''ಚಲ್ತಿಕನಾಮ್‌ಗಾಡಿ'' ಎಂದು ಹೇಳುವಂತಹ ರೀತಿಯಲ್ಲಿ ಇವತ್ತು ಈ ಆಡಳಿತ ನಡೆಯುತ್ತಿದೆ. ಅದು ಒಂದು ಗಾಡಿ ಮುಂದೆ ನಡೆಯುತ್ತಿದೆ ಎಂದು ಹೇಳಬೇಕಾಗಿದೆ. ನಾವು ಸ್ವಾತಂತ್ರ್ಯವನ್ನು ಪಡೆದ 50ನೇ ವರ್ಷದ ಆಚರಣೆಯನ್ನು ಮೊನ್ನೆ ಮೊನ್ನೆ ಆಚರಣೆ ಮಾಡಿದ್ದೇವೆ. ಆದರೆ ನಮ್ಮ ಆಡಳಿತ ವ್ಯವಸ್ಥೆ ಯಾವ ರೀತಿಯಲ್ಲಿ ಹೋಗುತ್ತಿದೆ ಎಂದು ಹೇಳುವುದಕ್ಕೆ ಯಾರಿಗೂ ಕೂಡ ಆಗುತ್ತಾ ಇಲ್ಲ. ಅದಕ್ಕೆ ನಾನು ಒಂದು ಸಣ್ಣ ಉದಾಹರಣೆಯನ್ನು ತಮ್ಮ ಅಪ್ಪಣೆ ಪಡೆದು ಹೇಳುವುದಕ್ಕಿಚ್ಛಿಸುತ್ತೇನೆ. ಒಂದು ಮದುವೆಯ ದಿಬ್ಬಣ ನದಿಯ ದಂಡೆಯಿಂದ ಮತ್ತೊಂದು ನದಿಯ ದಂಡೆಯಲ್ಲಿರುವಂತಹ ಬೀಗರ ಊರಿಗೆ ಹೋಗಬೇಕಾಗಿರುತ್ತದೆ. ಆ ಸಂದರ್ಭಧಲ್ಲಿ ಮದುವೆಯ ದಿಬ್ಬಣಕ್ಕೆ ಬಂದಿರುವಂಥ ಬೀಗರುಗಳನ್ನೊಳಗೊಂಡು, ಸಂಪೂರ್ಣ ಸರಂಜಾಮುಗಳನ್ನು ತುಂಬಿಕೊಂಡು ಇಡೀ ರಾತ್ರಿ ಪ್ರವಾಸ ಮಾಡಬೇಕೆಂದು ತಯಾರಾಗುತ್ತಾರೆ. ಅಲ್ಲಿ ವಾದ್ಯಗಳನ್ನು ಬಾರಿಸುವವರು, ಹಾಡುವವರು, ಸಂಪೂರ್ಣವಾದ ಸೆಟ್ಟು ಮದುವೆಗಾಗಿ ಹೊರಟಿದೆ. ರಾತ್ರಿ ಎಲ್ಲಾ ಹೊರಡಬೇಕೆಂದು ಹುಟ್ಟು ಹಾಕುವುದಕ್ಕೆ ಶುರು ಮಾಡುತ್ತಾರೆ. ಹುಟ್ಟು ಹಾಕುತ್ತಾರೆ, ಹಾಡುವವರು

ಹಾಡುತ್ತಾರೆ, ಗೆಜ್ಜೆ ಬಾರಿಸುವವರು ಗೆಜ್ಜೆಯನ್ನು ಬಾರಿಸುತ್ತಾರೆ. ಸಂಪೂರ್ಣ ಮನರಂಜನೆಯನ್ನು ಮಾಡಿಕೊಂಡು ಹೋಗಬೇಕೆಂದಾಗ ಮುಂಜಾನೆಯ ಬೆಳಕು ಹರಿದು ಬೆಳ್ಳಿ ಚುಕ್ಕಿಯ ಬೆಳಕು ಮೂಡಿದಾಗ ಅವರು ಯಾವ ಜಾಗದಲ್ಲಿ ಇದ್ದರೋ ಅದೇ ಜಾಗದಲ್ಲಿರುತ್ತಾರೆ. ಅವರು ಸ್ವಲ್ಪವೂ ಮುಂದಕ್ಕೆ ಹೋಗಿರುವುದಿಲ್ಲ. ಆ ದಂಡೆಯಲ್ಲಿರುವಂತಹ ಗಿಡಮರಗಳು ಯಾವುವು ಇತ್ತೋ ಅದೇ ಕಾಣುತ್ತಿರುತ್ತದೆ. ಆ ಸಂದರ್ಭದಲ್ಲಿ ಅಲ್ಲಿ ಕುಳಿತಿರುವಂತಹ ಒಬ್ಬ ಯಜಮಾನನು ನೀವು ಹುಟ್ಟನ್ನು ಹಾಕಿದ್ದೀರಿ, ಗೆಜ್ಜೆಯನ್ನು ಬಾರಿಸಿದಿರಿ, ಹಾಡನ್ನು ಹಾಡಿದ್ದೀರಿ, ನಾವು ಮಾತ್ರ ಏತಕ್ಕೆ ಮುಂದೆ ಹೋಗಲಿಲ್ಲವೆಂದು ಕೇಳಿದರು. ಆಗ ಏನು ಎಂದಾಗ ಆ ನಾವೆ ನದಿಯ ರಭಸಕ್ಕೆ ಹೋಗದಿರುವಂತಹ ಹಗ್ಗವನ್ನು ಕಟ್ಟಿರುತ್ತಾರೆ, ಆ ಹಗ್ಗವನ್ನು ಬಿಚ್ಚದೆ ಹುಟ್ಟನ್ನು ಹಾಕಿರುತ್ತಾರೆ, ಹಾಡನ್ನು ಹಾಡಿರುತ್ತಾರೆ. ಎಲ್ಲರೂ ದಣಿದದ್ದು ಉಂಟು, ಹಾಡು ಹೇಳಿದವರ ಧ್ವನಿಯು ಬಿದ್ದು ಹೋಯಿತು, ಕುಣಿದವರ ಕಾಲೂ ಸಹ ಕುಸಿದು ಹೋಯಿತು. ಆದರೆ ಇವರು ಎಲ್ಲಿ ಸೇರಬೇಕಾಗಿತ್ತೋ ಅಲ್ಲಿಗೆ ಸೇರಲಿಲ್ಲ. ಇದರ ತಾತ್ಪರ್ಯ ಇಷ್ಟೆ, ನಾವು ಸ್ವಾತಂತ್ರ್ಯ ಪಡೆದು 50 ವರ್ಷಗಳನ್ನು ಕಳೆದಿದ್ದೇವೆ, ಅಧಿಕಾರವನ್ನು ಮಾಡಿದ್ದೇವೆ. ಬೇರೆ ಬೇರೆ ಪಕ್ಷಗಳು ಈ ಕಡೆಯೂ ಆ ಕಡೆಯೂ ಎರಡು ರೀತಿಯಲ್ಲಿ ಆಡಳಿತವನ್ನು ಮಾಡಿದರು. ಆದರೂ ಈ 50 ವರ್ಷಗಳು ಕಳೆದರೂ ನಮ್ಮದೇ ಅಧಿಕಾರ ನಡೆಯಬೇಕು. ಮತ್ತೆ ನಾವು ರಾಜಕೀಯವೆಂಬ ಹಗ್ಗವನ್ನು ಬಿಚ್ಚದೇ ಹುಟ್ಟು ಹಾಕಿದ್ದು ನಿಜವಾಯಿತು, ನಾವು ಉಳಿದದ್ದು ಖರೆಯಾಯಿತು, ಆದರೆ ನಾವು ಮಾತ್ರ ನದಿಯ ದಂಡೆಯನ್ನು ಸೇರಲಿಲ್ಲ. ಈ ದೃಷ್ಟಿಯಲ್ಲಿ ನಮ್ಮ ಸಾಮಾನ್ಯ ಆಡಳಿತ ಎಷ್ಟರಮಟ್ಟಿಗೆ ಕುಸಿದಿದೆ ಎಂದರೆ ಈ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ನಾವು ಕೆಲಸದ ಮೇಲೆ ಆಫೀಸ್‌ಗಳಿಗೆ ಹೋಗುತ್ತಿದ್ದೆವು. ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಅಲ್ಲಿನ ಅಧಿಕಾರಿಗಳು ಅವರು ಸೆಷನ್‌ಗೆ ಹೋಗಿದ್ದಾರೆ, ಕೌನ್ಸಿಲ್‌ಗೆ ಹೋಗಿದ್ದಾರೆ, ಅಲ್ಲಿ ಇಲ್ಲಿ ಹೋಗಿದ್ದಾರೆಂದು ಹೇಳುತ್ತಿದ್ದರು. ನಾವು ಏನಾದರೂ ಜಾಸ್ತಿ ಕೆಲಸವನ್ನು ಹೇಳಿದರೂ ಅವರು ಏನ್ರಿ ವಿಧಾನಸಭೆಯ ಪ್ರಶ್ನೆಗಳು, ವಿಧಾನಪರಿಷತ್ತಿನ ಪ್ರಶ್ನೆಗಳು, ಇವುಗಳ ಕೆಲಸವೇ ನಮಗೆ ಸಾಕಾಗುತ್ತಿದೆ. ನಿಮ್ಮ ಕೆಲಸವನ್ನು ಹೇಗೆ ಮಾಡುವುದು, ಅಧಿವೇಶನ ಮುಗಿಯಲಿ ಮಾಡಿಕೊಡುತ್ತೇವೆಂಬ ಉತ್ತರವನ್ನು ಕೊಡುತ್ತಾರೆ. ಈ ರೀತಿಯಲ್ಲಿ ನಾವು ಯಾವ ರೀತಿಯಲ್ಲಿ ಕೆಲಸ ಮಾಡಬೇಕು ಎನ್ನುವಂತಹ ಸಮಸ್ಯೆಯಾಗಿದೆ. ಏಕೆಂದರೆ ನಾವು ಒಂದು ತಿಂಗಳು ಪೂರ್ಣ ಬೆಂಗಳೂರಿನಲ್ಲಿದ್ದರೆ ನಮ್ಮ ಕ್ಷೇತ್ರದ ಬಹಳಷ್ಟು ಜನರು ಇಲ್ಲಿಗೆ ಬರುತ್ತಾರೆ. ಅವರು ಬರುವುದು ನಮ್ಮ ಭಾಷಣಗಳನ್ನು ಕೇಳುವುದಕ್ಕೆ ಅಷ್ಟೇ ಬರುವುದಿಲ್ಲ. ಅವರು ಬರುವಾಗ ನಮ್ಮ ಕ್ಷೇತ್ರದ ಮತ್ತು ಅವರ ವೈಯಕ್ತಿಕ ಕೆಲಸಗಳನ್ನೂ ಸಹ ಇಟ್ಟುಕೊಂಡು ಬಂದಿರುತ್ತಾರೆ. ಆ ಸಂದರ್ಭದಲ್ಲಿ ಅವರ ಜೊತೆಯಲ್ಲಿ ಹೋಗಿ ಅವರ ಕೆಲಸವನ್ನು ಮಾಡಿಕೊಡದೇ ಹೋದರೆ, ನಾವು ನಮ್ಮ ಕ್ಷೇತ್ರಕ್ಕೆ ಹೋದಾಗ ಅವರು ಯಾವ ರೀತಿಯಲ್ಲಿ ರೆಸ್ಪಾನ್ಸ್ ಕೊಡಬಹುದೆಂದು ಸರ್ಕಾರದವರು ಬಹಳ ವಿವೇಚನೆಯಿಂದ

ವಿಚಾರ ಮಾಡಬೇಕಾಗಿದೆ. ನಾವು ಅಧಿಕಾರಿಗಳಿಗೆ ಒಳ್ಳೆಯ ಸೌಕರ್ಯಗಳನ್ನು ಕೊಟ್ಟಿದ್ದೇವೆ ಅವರಿಗೆ ನಾವು ಯಾವ ರೀತಿಯಲ್ಲಿಯೂ ಸಹ ತೊಂದರೆಗಳನ್ನು ಕೊಟ್ಟಿಲ್ಲ. ಅವರಿಗೆ ಬೇಕಾದಂತಹ ವಾಹನದ ಸೌಕರ್ಯವನ್ನು ಕೊಟ್ಟಿದ್ದೇವೆ, ಅದರ ಜೊತೆಗೆ ಪೆಟ್ರೋಲ್ ವ್ಯವಸ್ಥೆಯನ್ನೂ ಕೂಡ ಮಾಡಿಕೊಟ್ಟಿದ್ದೇವೆ. ಮನೆಗಳು, ಟೆಲಿಫೋನ್ ಎಲ್ಲಾ ರೀತಿಯ ವ್ಯವಸ್ಥೆಯನ್ನು ಕೊಟ್ಟಿದ್ದರೂ ಕೂಡ ಇನ್ನು ಕೆಲಸ ಕಾರ್ಯಗಳನ್ನು ಮಾಡುವುದರಲ್ಲಿ ಕಡಿಮೆಯಾಗಿದೆ. ನಾವು ಯಾವುದೇ ರೀತಿಯ ಫೈಲ್ ನಂಬರ್‌ನ್ನು ಹುಡುಕಿಕೊಂಡು ಹೋದಾಗ ನಾವು ಆ ಆಫೀಸ್‌ಗೆ ಹೋದಾಗಲೇ ಆ ಆಫೀಸ್‌ನಲ್ಲಿ ಫೈಲ್ ಎಲ್ಲಿದೆ ಎಂದು ಗೊತ್ತಾಗುವುದು. ಅದಕ್ಕಿಂತಲೂ ಮೊದಲು ಆ ಫೈಲ್‌ನ್ನು ಹುಡುಕುವುದಕ್ಕೆ ಒಂದೆರಡು ದಿವಸ ಹೋಗಿರುತ್ತದೆಯೇ ಹೊರತಾಗಿ, ಅವರು ಯಾವ ರೀತಿಯಲ್ಲಿ ಹೇಳಿದರು ಸಹಿತ ಕೆಲಸವನ್ನು ಮಾಡುವುದಿಲ್ಲ. ಸ್ವತಃ ಶಾಸಕರು ಆ ಆಫೀಸ್‌ಗೆ ಹೋಗಿ ನಿಂತು ಆ ಫೈಲ್ ಎಲ್ಲಿ ಎಂದು ತೆಗೆದಾಗ ಅಲ್ಲಿಂದ ಫೈಲ್ ಮುಂದೆ ಹೋಗುವುದಕ್ಕೆ ಶುರುವಾಗುತ್ತದೆ. ಈ ರೀತಿಯಾಗಿ ಆಡಳಿತದ ವ್ಯವಸ್ಥೆಯು ಕುಸಿಯುತ್ತಾ ಹೋದರೆ, ಆಡಳಿತ ನಡೆಸುವುದಾದರೂ ಹೇಗೆ? ರಾಜ್ಯಭಾರವನ್ನು ಮಾಡುವಂಥವರು, ರಾಜ್ಯದ ಸುವ್ಯವಸ್ಥೆಯನ್ನು ಕಾಪಾಡುವಂಥವರು ತಾವು ಯಾವ ರೀತಿಯಲ್ಲಿ ಆಡಳಿತವನ್ನು ಮಾಡಬೇಕು ಎನ್ನುವುದರಲ್ಲಿ ಬಹಳಷ್ಟು ಸಮಸ್ಯೆಗಳಿವೆ. ಅದರ ಜೊತೆಗೆ ಇವತ್ತು ರಾಜ್ಯದಲ್ಲಿ 175 ತಾಲ್ಲೂಕುಗಳ ಪೈಕಿ 223 ಮತ ಕ್ಷೇತ್ರಗಳಿವೆ. 223 ಮತಕ್ಷೇತ್ರಗಳಲ್ಲಿ 175 ತಾಲ್ಲೂಕು ಎಂದರೆ ಅಂದಾಜು 58 ಮತ ಕ್ಷೇತ್ರಗಳು ಒಂದಕ್ಕಿಂತ ಜಾಸ್ತಿ ತಾಲ್ಲೂಕು ವ್ಯಾಪ್ತಿಯನ್ನು ಹೊಂದಿದೆ. ಇದರಲ್ಲಿ ಮುಖ್ಯವಾಗಿ ಹೇಳಬೇಕು ಎಂದರೆ, ಒಂದು ತಾಲ್ಲೂಕಿಗಿಂತಲೂ ಜಾಸ್ತಿ ತಾಲ್ಲೂಕುಗಳಲ್ಲಿ ಸದಸ್ಯರುಗಳು ಇದ್ದೇವೆ. ಅವರ ಸಮಸ್ಯೆಯು ಎಲ್ಲಾ ಸದಸ್ಯರಿಗಿಂತಲೂ ಜಾಸ್ತಿ ಸಮಸ್ಯೆ ಇದೆ. ಇದರಲ್ಲಿ ಆಡಳಿತ ಪಕ್ಷದ ಸದಸ್ಯರು ಇರಬಹುದು, ವಿರೋಧ ಪಕ್ಷದ ಇರಬಹುದು. ಇದು ದೊಡ್ಡ ಆಘಾತದ ವ್ಯವಸ್ಥೆಯಾಗಿದೆಂದು ಆದುದರಿಂದ ಇಲ್ಲಿ ಉಲ್ಲೇಖವನ್ನು ಮಾಡಬೇಕಾಗಿದೆ. ಅದರಲ್ಲಿಯೂ ಸಹ ಎರಡು ತಾಲ್ಲೂಕುಗಿಂತಲೂ ಹೆಚ್ಚು ತಾಲ್ಲೂಕುಗಳನ್ನು ಹೊಂದಿರುವಂತಹ ಕೆಲವೇ ಕೆಲವು ಶಾಸಕರುಗಳು ಇದ್ದೇವೆ, ಅದರಲ್ಲಿ ನಾನೂ ಸಹ ಒಬ್ಬನಾಗಿದ್ದೇನೆ. ಬಹಳಷ್ಟು ತೊಂದರೆಯನ್ನು ನಾವುಗಳು ಅನುಭವಿಸುತ್ತಿದ್ದೇವೆ. ಏಕೆಂದರೆ ನಮಗೆ ಮುಖ್ಯವಾಗಿರುವಂಥದ್ದು ಎಂದರೆ ಕೆಡಿಪಿ ಮೀಟಿಂಗ್ ಅದರ ಬಗ್ಗೆ ಹೇಳಬೇಕೆಂದರೆ, ನಾನು ಶಾಸಕನಾದ ಮೇಲೆ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಪತ್ರವನ್ನು ಬರೆದು ಕೆಡಿಪಿ ಮೀಂಟಿಂಗ್ ಸಲುವಾಗಿ ಒಂದು ಸಪ್‌ರೇಟ್ ಪರ್ಮಿಷನ್ ಕೊಟ್ಟು ಬೇರೆ ಕೆಡಿಪಿ ಮೀಟಿಂಗ್ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು. ಆದರೆ ಇಲ್ಲಿಯವರಿಗೂ ಸಹಿತ ಸನ್ಮಾನ್ಯ ಮಂತ್ರಿಗಳಿಂದ ಉತ್ತರ ಬಂದಿಲ್ಲ. ಆದುದರಿಂದ ದಯವಿಟ್ಟು ಎರಡು ತಾಲ್ಲೂಕಿಗಿಂತಲೂ ಹೆಚ್ಚು ತಾಲ್ಲೂಕುಗಳನ್ನು ಹೊಂದಿರುವಂತಹ ಶಾಸಕರು ಇದ್ದೇವೆ ಅವರಿಗೆ ಒಂದು ಸಪರೇಟ್ ಕೆಡಿಪಿ ಮೀಟಿಂಗನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಏಕೆಂದರೆ ಮುಂದೇ ಬೇರೆ ಬೇರೆ

ತಾಲ್ಲೂಕುಗಳಲ್ಲಿ ನಮ್ಮ ಕ್ಷೇತ್ರಗಳು ಹೊಂದಾಣಿಕೆಯಾಗಬಹುದು ಆದರೆ ಮುಖ್ಯವಾಗಿ ಮುಂದಿನ ಆಡಳಿತ ವ್ಯವಸ್ಥೆಯಲ್ಲಿ ನಮ್ಮ ರೆವಿನ್ಯೂ ಮಿನಿಸ್ಟರ್ ಈ ಸಾರಿ ಜಿಲ್ಲೆಗಳನ್ನು ಬೇರೆ ವಿಂಗಡಿಕೆಯನ್ನು ಮಾಡಿದ್ದೀರಿ ಅದರ ಬಗ್ಗೆ ಈಗಾಗಲೇ ನಮ್ಮ ಸಭಾಪತಿಯವರು ಹೇಳಿದಂತೆ ತಾಲ್ಲೂಕುಗಳನ್ನು ಮೊದಲು ಮಾಡಬೇಕಾಗಿತ್ತು. ಮತಕ್ಷೇತ್ರವಾರು ತಾಲ್ಲೂಕುಗಳನ್ನು ಮೊದಲು ಮಾಡಿದ್ದರೆ ಆಡಳಿತದ ದೃಷ್ಟಿಯಿಂದ ಇನ್ನಷ್ಟು ಬಿಗಿಯಾಗಬಹುದು, ಶಾಸಕರು ತಮ್ಮ ಕ್ಷೇತ್ರದಲ್ಲಿ ಒಂದೇ ಕಡೆಯಲ್ಲಿ ಕುಳಿತುಕೊಂಡು ಕೆಲಸವನ್ನು ಮಾಡಬಹುದು. ಮುಖ್ಯವಾಗಿ ಮೂರು ತಾಲ್ಲೂಕುಗಳು ನನ್ನ ಕ್ಷೇತ್ರದಲ್ಲಿ ಬರುವುದರಿಂದ ಹುನಗುಂದ ತಾಲ್ಲೂಕು, ಬಾದಾಮಿ ತಾಲ್ಲೂಕು, ಹಾಗೂ ಬಾಗಿಲಕೋಟೆಯ ತಾಲ್ಲೂಕು. ಈ ತಾಲ್ಲೂಕುಗಳಲ್ಲಿ ನನ್ನ ಕ್ಷೇತ್ರವು ಬರುತ್ತಿರುವುದರಿಂದ ನಾನು ಕೆಡಿಪಿ ಮೀಟಿಂಗ್‌ಗಳಿಗೆ ಹಾಜರಾಗಬೇಕಾಗಿದೆ. ಮೂರು ಕೆಡಿಪಿ ಮೀಟಿಂಗ್‌ಗಳಲ್ಲಿ ಒಂದು ಸಮಸ್ಯೆ ಏನೆಂದರೆ, ಬಾಗಿಲಕೋಟೆಯಲ್ಲಿ ನಮ್ಮ ಸರ್‌ನಾಯಕ್‌ರವರು ಮಿನಿಸ್ಟರ್ ಆಗಿರುವುದರಿಂದ ಅತಿ ಹೆಚ್ಚಿನ ಭಾಗವು ಅವರಿಗೆ ಹೋಗುವುದರಿಂದ ಅವರು ಅಲ್ಲಿ ಅಧ್ಯಕ್ಷರಾಗಿರುತ್ತಾರೆ, ಅವರು ಯಾವ ದಿನಾಂಕವನ್ನು ಫಿಕ್ಸ್ ಮಾಡುತ್ತಾರೆ, ಅವರು ಅವರ ಬಿಡುವಿನ ದಿನಾಂಕವನ್ನು ಫಿಕ್ಸ್ ಮಾಡುವುದು ಆವತ್ತಿನ ದಿವಸ ನಾವು ಮೀಟಿಂಗ್‌ಗೆ ಹೋಗಬೇಕಾಗಿದೆ. ಇನ್ನೊಂದು ಹುನಗುಂದ ತಾಲ್ಲೂಕು ಅಲ್ಲಿಯೂ ಸಹಿತ ಹೆಚ್ಚಿಗೆ ಕ್ಷೇತ್ರವನ್ನು ಹೊಂದಿರುವಂತಹ ಶಾಸಕರು ಅಧ್ಯಕ್ಷರಾಗಿರುತ್ತಾರೆ ಅಲ್ಲಿಯೂ ಸಹ ಅದೇ ರೀತಿಯಲ್ಲಿ ಸಮಸ್ಯೆ ಇದೆ. ಅದರ ಜೊತೆಗೆ ಬಾದಾಮಿಯಲ್ಲಿಯೂ ಸಹಿತ ಹೆಚ್ಚು ಕ್ಷೇತ್ರವನ್ನು ಹೊಂದಿರತಕ್ಕಂತಹ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಅವರ ಮನಸ್ಸಿಗೆ ಬಂದಾಗ ಕೆಡಿಪಿ ಮೀಟಿಂಗನ್ನು ಮಾಡಿದಾಗ ನಾವು ಹೋಗಿ ಹಾಜರಾಗಬೇಕು ಇದು ಬಹಳಷ್ಟು ದುಸ್ತರವಾಗಿದೆ. ಮೂರು ತಾಲ್ಲೂಕುಗಳಲ್ಲಿ ಎಲ್ಲಾ ಶಾಸಕರು ಸಹಿತ ಒಂದೇ ಸಾರಿ ಕೆಡಿಪಿ ಮೀಟಿಂಗ್‌ನ್ನು ಮಾಡಿದರೆ ಮೂರು ದಿವಸ ಕೆಡಿಪಿ ಮೀಟಿಂಗ್‌ನಲ್ಲಿ ಕಾಲವನ್ನು ಕಳೆಯಬೇಕಾಗಿದೆ. ಅದೇ ರೀತಿಯಲ್ಲಿ ತಾಲ್ಲೂಕು ಪಂಚಾಯ್ತಿಯ ಮೀಟಿಂಗ್‌ಗೂ ಕೂಡ ಹೋಗುವುದಕ್ಕೆ ಆಗುವುದಿಲ್ಲ. ತಾಲ್ಲೂಕು ಹೆಡ್ ಕ್ವಾಟರ್ ಕೂಡ ನನ್ನ ಕ್ಷೇತ್ರದ ಹೆಡ್ ಕ್ವಾಟರ್ ಅಲ್ಲ. ಆ ದೃಷ್ಟಿಯಲ್ಲಿ ಹೆಡ್ ಕ್ವಾಟರ್‌ಗೆ ಹೋಗಬೇಕಾದರೆ, ಅಲ್ಲಿಯ ಅಧಿಕಾರಿಗಳನ್ನು ಸಂಪರ್ಕ ಮಾಡಬೇಕಾದರೆ ನನಗೆ ಬರುವಂತಹ ಸಮಸ್ಯೆ ಯಾರಿಗೂ ಸಹಿತ ಬರುವುದಿಲ್ಲ. ನಾನು ಬಹಳಷ್ಟು ಉತ್ಸಾಹಿಯಾಗಿ ಸಾಕಷ್ಟು ಕೆಲಸವನ್ನು ಮಾಡಬೇಕು, ಯುವಕರಾಗಿ ಮಾಡಬಹುದು ಎನ್ನುವಂತಹ ಧ್ಯೇಯದೃಷ್ಟಿಯನ್ನು ಇಟ್ಟುಕೊಂಡು ಚುನಾವಣೆಗೆ ನಿಂತು ಇಲ್ಲಿ ಬಂದಿರತಕ್ಕಂಥದ್ದು. ಆದರೆ ನಾವು ಏನು ಮನಸ್ಸಿನಲ್ಲಿಟ್ಟುಕೊಂಡು ಚುನಾವಣೆಯಲ್ಲಿ ನಿಂತು ಗೆದ್ದು ಬಂದಿದ್ದೇವೆ. ಆ ಕೆಲಸವನ್ನು ಮಾಡುವುದಕ್ಕೆ ನಮ್ಮಿಂದ ಆಗುತ್ತಿಲ್ಲ. ನಾವು ಏನು ಜನತೆಗೆ ಮಾತನ್ನು ಕೊಟ್ಟಿದ್ದೇವೆ ಅದನ್ನು ನಡೆಸುವುದಕ್ಕೆ ನಮ್ಮಿಂದ ಆಗುತ್ತದೆಯೋ ಇಲ್ಲವೋ ಎನ್ನುವಂಥ ದುಗುಡ ಇವತ್ತಿನ ದಿವಸ ನಮ್ಮಲ್ಲಿ ಹುಟ್ಟಿದೆ. ಅದಕ್ಕೆ ಮುಖ್ಯವಾಗಿ ಕೆಡಿಪಿ ಮೀಟಿಂಗ್ ಬಗ್ಗೆ

ಒಂದು ತಾಲ್ಲೂಕಿಗಿಂತಲೂ ಹೆಚ್ಚು ತಾಲ್ಲೂಕನ್ನು ಹೊಂದಿರುವಂತಹ ಶಾಸಕರು ಇದ್ದೇವೆ. ನಾವೇನೂ ಜಾಸ್ತಿ ಇಲ್ಲ. 48 ಕ್ಷೇತ್ರಗಳು ಮಾತ್ರ ಬರಬಹುದು. ಇದಕ್ಕೆ ಸರ್ಕಾರ ಇದರ ಬಗ್ಗೆ ಸಾಕಷ್ಟು ಯೋಚನೆಯನ್ನು ಮಾಡಬೇಕಾಗಿಲ್ಲ. ಆ ದೃಷ್ಟಿಯೊಳಗೆ ಕೆಡಿಪಿ ಮೀಟಿಂಗ್ ಬಗ್ಗೆ ಹೆಚ್ಚು ಒತ್ತನ್ನು ಕೊಟ್ಟು ನಮಗೆ ಅನುಕೂಲವನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಯನ್ನು ಪಡುತ್ತಿದ್ದೇನೆ. ಆಮೇಲೆ ಜಿಲ್ಲಾಧಿಕಾರಣದ ಬಗ್ಗೆ ಹೇಳುವುದಾದರೆ, ಜಿಲ್ಲೆಯಲ್ಲಿ ಶಾಸಕರು ಯಾವುದೋ ಒಂದು ಕೆಲಸಕ್ಕಾಗಿ ಅಧಿಕಾರಿ ಬಳಿ ಹೋದಾಗ ಅವರಿಗೆ ಪತ್ರಗಳನ್ನು ಕೊಡುತ್ತೇವೆ. ಅದಕ್ಕೆ ಸರಿಯಾದ ರೀತಿಯಲ್ಲಿ ಪತ್ರಗಳಿಗೆ ಉತ್ತರಗಳು ಸಿಗುತ್ತಿಲ್ಲ. ಆಮೇಲೆ ಫೋನ್ ಮಾಡಿದಾಗ ಆ ಅಧಿಕಾರಿಗಳ ಪಿ.ಎ.ಗಳು ಜಿಲ್ಲಾಧಿಕಾಗಳ ಜೊತೆಯಲ್ಲಿ ಹೋಗಿದ್ದಾರೆಂದು ಹೇಳುತ್ತಾರೆ. ನಿರ್ದಿಷ್ಟವಾಗಿ ಅವರು ಒಂದು ಟೈಮ್‌ನ್ನು ಫಿಕ್ಸ್ ಮಾಡಿಕೊಳ್ಳಬೇಕು. ಇಂತಹ ದಿನಾಂಕಗಳನ್ನು ಬೇರೆ ಅಧಿಕಾರಿಗಳನ್ನು ಭೇಟಿಯಾಗುವಂಥದ್ದು ಅಥವಾ ಅಧಿವೇಶಕ್ಕೆ ಬೆಂಗಳೂರಿಗೆ ಬರುವಾಗ ಇಂತಹ ಅಧಿಕಾರಿಯೇ ಅಧಿವೇಶನಕ್ಕೆ ಹೋಗುತ್ತಾರೆಂದು ಮೊದಲೇ ಒಂದು ಆಫೀಸ್‌ನಲ್ಲಿ ಒಂದು ಬೋರ್ಡ್‌ನ್ನು ಹಾಕಬೇಕು. ಈ ರೀತಿಯಾಗಿ ತಿಳಿಸದೇ ಹೋದರೆ ನಾವು ಯಾವಾಗ ಅವರನ್ನು ಭೇಟಿ ಮಾಡಬೇಕು? ನಾವು ಜಿಲ್ಲೆಯಿಂದ 110 ಕಿಲೋ ಮೀಟರ್ ದೂರದಲ್ಲಿದ್ದೇವೆ. ನಾವು ಜಿಲ್ಲಾ ಹೆಡ್ ಕ್ವಾಟರ್‌ಗೆ ಹೋದಾಗ ನನಗೆ ಅಧಿಕಾರಿಗಳು ಸಿಗದೇ ಹೋದರೆ ಅತ್ಯಂತ ತೊಂದರೆಯಾಗುತ್ತದೆ. ಮತ್ತು ನಾವು ಫೋನ್ ಮಾಡಿದಾಗ ಅಧಿಕಾರಿಗಳು ನಮಗೆ ಫೋನ್‌ನಲ್ಲಿ ಸಿಗದೇ ಹೋದರೆ ನಮ್ಮ ಕೆಲಸಕಾರ್ಯಗಳು ಸಂಪೂರ್ಣವಾಗಿಯೂ ನಿಂತುಹೋಗುತ್ತದೆ. ಆ ದೃಷ್ಟಿಯಿಂದ ಜಿಲ್ಲೆಯಲ್ಲಿ ಅಧಿಕಾರಿಗಳು ಹೆಡ್ ಕ್ವಾಟರ್‌ನಲ್ಲಿರಬೇಕು, ಯಾವಾಗ ಅವರು ಬೇರೆ ಕಡೆ ಚರ್ಚೆಗೋಸ್ಕರವಾಗಿ ಹೋಗುತ್ತಾರೆಂದು ಒಂದು ನಿಗಧಿತವಾದಂತಹ ವೇಳಾ ಪಟ್ಟಿಯನ್ನು ಮಾಡಿದರೆ, ಅತ್ಯಂತ ಯಶಸ್ವಿಯಾಗಿ ಆಡಳಿತ ವ್ಯವಸ್ಥೆ ಸರಿ ಹೋಗಬಹುದು. ಅದರ ಜೊತೆಗೆ ಶಾಸಕರಿಗೆ ತಾಲ್ಲೂಕು ಹೆಡ್ ಕ್ವಾಟರ್‌ನಲ್ಲಿ ಒಂದೊಂದು ಆಫೀಸ್‌ನ್ನು ಕೊಟ್ಟಿರುತ್ತೀರಿ ಇದು ಬಹಳಷ್ಟು ಶ್ಲಾಘನೀಯವಾದುದು. ನಾನು ಸರ್ಕಾರವನ್ನು ಈ ಒಂದು ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದರ ಜೊತೆಗೆ ಕಟ್ಟಡವನ್ನು ಕೊಡುವುದಕ್ಕೆ ಮಾಡಿದ್ದೀರಿ ಎರಡು ಅಥವಾ ಮೂರು ಶಾಸಕರು ಇದ್ದಾಗ ಒಂದೇ ಕಟ್ಟಡದಲ್ಲಿ ಎರಡು ಮೂರು ಟೇಬಲ್‌ನ್ನು ಹಾಕಿಕೊಂಡು ಏನು ಕ್ಲಾರ್ಕ್‌ಗಳು ಕುಳಿತು ಕೊಂಡಿರುತ್ತಾರೆ, ಆ ದಿಸೆಯಲ್ಲಿ ನಾವುಗಳು ಕುಳಿತುಕೊಳ್ಳುವಂತಹ ಪರಿಸ್ಥಿತಿಯು ಬಂದಿದೆ. ಅದಕ್ಕಾಗಿ ನಮಗೆ ಬೇರೆ ಬೇರೆ ಕಟ್ಟಡಗಳನ್ನು ಕೊಡಬೇಕು. ಏಕೆಂದರೆ ಶಾಸಕರುಗಳು ಬೇರೆ ಬೇರೆ ಪಕ್ಷದವರಿರುತ್ತೇವೆ. ನಮ್ಮ ಕಡೆ ಬರುವಂತಹ ಜನರು ಬೇರೆ ಇರುತ್ತಾರೆ, ಅವರ ಕಡೆ ಹೋಗುವಂತಹ ಜನರು ಬೇರೆ ಇರುತಾ ರೆ [illegible] ಪ್ರತ್ಯೇಕವಾಗಿ ಕುಳಿತುಕೊಳ್ಳುವಂತಹ ವ್ಯವಸ್ಥೆಯನ್ನು [illegible] ನಮ್ಮ ವಿಷಯವನ್ನು ಅವರ ಜೊತೆಯಲ್ಲಿ

ಮಾತನಾಡಬಾರದೆಂದು ಕೆಲವು ಜನರು ಇರುತ್ತಾರೆ. ಅವರ ವಿಷಯವನ್ನು ನಮ್ಮ ಮುಂದೆ ಮಾತನಾಡಬಾರದೆಂದು ಕೆಲವು ಜನರು ಇರುತ್ತಾರೆ. ನಮ್ಮನ್ನು ಹೊರಗಡೆಗೆ ಒಳಗಡೆ ಕರೆದು, ನಮ್ಮ ಪರಿಸ್ಥಿತಿಯೂ ಏನಾಗಿದೆ ಎಂದರೆ ಅವರು ಕರೆದಕಡೆ ಹೋಗುವಂತಹ ಪರಿಸ್ಥಿತಿಯೂ ಬಂದಿದೆ. ಆ ದೃಷ್ಟಿಯಲ್ಲಿ ಪ್ರತ್ಯೇಕವಾಗಿ ಬಿಡಿಒ ಆಫೀಸ್‌ಗೆ ಹೊಂದಿಕೊಂಡಂತೆ ಮಾಡಿ ಹಾಗು ಒಂದು ಟೆಲಿಫೋನ್ ಇಟ್ಟರೆ ನಾವು ಬಂದು ಅಲ್ಲಿ ಕುಳಿತುಕೊಂಡಾಗಲಾದರೂ ಫೋನ್ ತಂದು ಇಟ್ಟರೆ ಅಲ್ಲಿ ಕುಳಿತುಕೊಂಡು ಲೋಕಲ್ ಫೋನ್ ಮಾಡುವುದಕ್ಕಾದರೂ ಅನುಕೂಲವಾಗುತ್ತದೆ. ಆ ದೃಷ್ಟಿಯಲ್ಲಿ ವ್ಯವಸ್ಥೆಯನ್ನು ಮಾಡಬೇಕು. ನಾನು ಬಾದಾಮಿಯಲ್ಲೂ ನನ್ನ ಆಫೀಸ್‌ನ್ನು ಶುರು ಮಾಡಬೇಕೆಂದು ಹೇಳಿದಾಗ ಅಲ್ಲಿರುವವರು ನನಗೆ ಏನು ಹೇಳಿದರು ಎಂದರೆ ಸಾಹೇಬರೇ, ನಿಮಗೆ ಕುಳಿತುಕೊಳ್ಳುವುದಕ್ಕೆ ಚೇರ್ ಮುಂತಾದವುಗಳನ್ನು ಕೊಡುವುದಕ್ಕೆ ನಮಗೆ ಪ್ರಾವಿಷನ್ ಇಲ್ಲ ನೋಡುತ್ತೇವೆ ಇದ್ದರೆ ಕೊಡುತ್ತೇವೆಂದರು. ಆಯಿತು ನಾನು ಒಂದು ತಟ್ಟನ್ನಾದರೂ ಹಾಸಿಕೊಂಡು ಕುಳಿತುಕೊಳ್ಳುತ್ತೇನೆ ನೀವು ಕೊಡುವುದು ಬೇಡ ಎಂದು ಹೇಳಿದೆ. ಈ ರೀತಿಯಾಗಿ ಶಾಸಕರಿಗೆ ಕುಳಿತುಕೊಳ್ಳುವುದಕ್ಕೆ ಸರಿಯಾದಂತಹ ಪೀಠೋಪಕರಣದ ವ್ಯವಸ್ಥೆಯೂ ಸಹ ಇಲ್ಲ. ಆ ದೃಷ್ಟಿಯಲ್ಲಿ ಸರಿಯಾದಂತಹ ಆಡಳಿತ ನಡೆಯಬೇಕು ಎಂದರೆ ಅತ್ಯಂತ ಅಚ್ಚುಕಟ್ಟಾಗಿ ನಮ್ಮ ಆಡಳಿತವನ್ನು ಕೂಡಿಸಿ ಕೊಳ್ಳಬೇಕಾಗುತ್ತದೆ. ಅಲ್ಲಿದಂತಹ ಶಾಸಕರು ಆ ಹೆಡ್ ಕ್ವಾಟರ್ಸ್‌ನಲ್ಲಿ ಎರಡು ಮೂರು ತಾಸು ಅಲ್ಲಿ ಕುಳಿತುಕೊಂಡರೆ ಆ ಸಮಯದಲ್ಲಿಯಾದರೂ ತಮ್ಮ ತಮ್ಮ ಕ್ಷೇತ್ರದ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಶಾಸಕರು ಏನೋ ಬರುತ್ತಾರೆ ಹೋಗುತ್ತಾರೆ, ಬರೀ ವರ್ಗಾವಣೆಯನ್ನು ಮಾಡಿಸುವವರು ಅಷ್ಟಾಗಿ, ಬೇರೆ ಏನನ್ನೂ ಮಾಡುವವರು ಅಲ್ಲ ಎನ್ನುವಂತಹ ಭಾವನೆಯು ಜನರಲ್ಲಿ ಮುಡುತ್ತಿದೆ. ಇಂತಹ ಒಂದು ವ್ಯವಸ್ಥೆಯಲ್ಲಿ ನಮಗೆ ಸರಿಯಾದಂತಹ ಆಫೀಸ್‌ನ್ನು ನಮಗೆ ಕೊಟ್ಟು ಒಂದು ಟೈಪ್‌ರೈಟರ್‌ನ್ನು ಕೊಡಬೇಕು. ನಮಗೆ ಒಬ್ಬ ಪಿ.ಎ.ಯನ್ನು ಕೊಟ್ಟಿರುತ್ತೀರಿ. ಆದರೆ ಅವನು ಟೈಪ್ ಮಾಡಬೇಕಾದರೆ ಅವನಿಗೆ ಟೈಪ್‌ರೈಟರ್ ಇಲ್ಲ. ಈ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಟ್ಟರೆ, ಈ ವ್ಯವಸ್ಥೆ ಹಾಳಾಗುವುದಿಲ್ಲ. ಆದಷ್ಟು ಸುಧಾರಣೆಯನ್ನು ಮಾಡುವುದಕ್ಕೋಸ್ಕರವಾಗಿ ಕೊಡುತ್ತಿದ್ದೇವೆ ಎಂದು ತಿಳಿದುಕೊಳ್ಳಬೇಕೆ ಹೊರತು, ಆರ್ಥಿಕ ಹೊರೆಯು ಸರ್ಕಾರಕ್ಕೆ ಆಗುತ್ತದೆಂದು ಭಾವಿಸಬಾರದೆಂದು ತಮ್ಮ ಮೂಲಕ ಹೇಳುತ್ತಿದ್ದೇನೆ. ಅದರ ಜೊತೆಗೆ ನಮ್ಮ ರಾಮಸ್ವಾಮಿಯವರು ಹೇಳಿದಂತೆ ಈ ವರ್ಷ ವರ್ಗಾವಣೆಯನ್ನು ಸ್ವಲ್ಪ ಜನರಿಗೆ ಮಾತ್ರ ಮಾಡುತ್ತೇವೆಂದು ಸರ್ಕಾರದವರು ಹೇಳಿದರು ಆದರೂ ಕೂಡ ವರ್ಗಾವಣೆಯೂ ಅತಿರೇಕವಾಯಿತು. ವರ್ಗಾವಣೆಯನ್ನು ಮಾಡಬೇಕು, ಬೇಡ ಎನ್ನುವುದರ ಬಗ್ಗೆ ನಾನು ಇಲ್ಲಿ ಒತ್ತಿ ಕೊಟ್ಟು ಹೇಳಬೇಕಾಗಿಲ್ಲ. ಮುಖ್ಯವಾಗಿ ನಮಗೆ ಬಂದಂತಹ ಸಮಸ್ಯೆ ಎಂದರೆ, ಹೊಸದಾಗಿ ಆಯ್ಕೆಯಾಗಿ ಬಂದಂತಹ ಶಾಸಕರು ನಮಗೆ ಬೇರೆಯವರಿಗಿಂತಲೂ ಜಾಸ್ತಿ ಹೊರೆಯೇ ನಮ್ಮ ಮೇಲೆ ಇರುತ್ತದೆ. ಏಕೆಂದರೆ ಹೊಸದಾಗಿ ಆಯ್ಕೆಯಾಗಿ ಬಂದಮೇಲೆ ಎಲ್ಲರೂ ನಮ್ಮ ಹತ್ತಿರ

ಊರುವವರು, ನಾವು ಕೂಡ ಅತಿ ಹೆಚ್ಚು ವಿಶ್ವಾಸಕ್ಕೆ ಅವರುಗಳನ್ನೆಲ್ಲಾ ತೆಗೆದುಕೊಳ್ಳಬೇಕೆಂಬ ಭಾವನೆಯೂ ಸಹ ನಮ್ಮಲ್ಲಿ ಇರುವುದರಿಂದ ಬಂದವರಿಗೆ ನಮ್ಮ ಕೈಯಲ್ಲಿ ಆಗುವುದಿಲ್ಲವೆಂದು ಎಂದೂ ಸಹಿತ ಹೇಳುವುದಕ್ಕೆ ಆಗುವುದಿಲ್ಲ. ಯಾವುದೇ ಒಂದು ಕೆಲಸಕ್ಕೆ ನಮ್ಮ ಹತ್ತಿರ ಬಂದಾಗ ಅವರಿಗೆ ಒಂದು ಲೆಟರ್‌ನ್ನು ಕೊಡಬೇಕು, ಬೆಂಗಳೂರಿಗೆ ನಾವು ಇದ್ದಾಗ ನಮ್ಮ ಹತ್ತಿರ ಬಂದಾಗ ಸಂಬಂಧಪಟ್ಟವರಿಗೆ ಹೇಳುವುದಕ್ಕೆ ಹೋಗಬೇಕು. ಈ ರೀತಿಯಾಗಿ ನಮ್ಮ ಅಭಿವೃದ್ಧಿ ಕೆಲಸಗಳನ್ನು ಬಿಟ್ಟು ನಾವು ಇವತ್ತಿನ ದಿವಸ ಅವರಿಗೆ ವರ್ಗಾವಣೆಯನ್ನು ಮಾಡಿಸುವಂತಹ ಕೆಲಸವನ್ನು ಅನಿವಾರ್ಯವಾಗಿ ಮಾಡಬೇಕಾಗಿದೆ. ನಾವು ಟ್ರಾನ್ಸ್‌ಫರ್ ಮಾಡುವುದಕ್ಕೆ ಬರುವುದಿಲ್ಲ ಎಂದು ಅವರಿಗೆ ಹೇಳುವಂತಿಲ್ಲ. ಅಲ್ಲಿ ನಮ್ಮ ಕ್ಷೇತ್ರದಲ್ಲಿ ಯಾರೋ ಒಬ್ಬರು ಲೀಡರ್ ನಮಗೆ ಹೇಳಿ ಕಳುಹಿಸಿರುತ್ತಾರೆ ಅಥವಾ ಒಂದು ಚೀಟಿ ಕೊಟ್ಟು ಕಳುಹಿಸಿರುತ್ತಾರೆ ಅಥವಾ ಅಲ್ಲಿ ಯಾರೋ ಒಬ್ಬರು ದೊಡ್ಡ ಫ್ರಂಟ್ ಲೀಡರ್ ಆಗಿರುವವರು ನಮಗೆ ಹೇಳಿ ಕಳುಹಿಸಿರುತ್ತಾರೆ, ಅಂತಹವರಿಗೆ ನಾವು ಟ್ರಾನ್ಸ್‌ಫರ್ ಆಗುವುದಿಲ್ಲ ಎಂದರೆ ಅಸಮಾಧಾನವಾಗುತ್ತದೆ. ಆದುದರಿಂದ ಈ ದೃಷ್ಟಿಯಿಂದ ಇಂತಿಷ್ಟೇ ದಿವಸಗಳಲ್ಲಿ ಟ್ರಾನ್ಸ್‌ಫರ್ ಮಾಡಬೇಕು, ಆ ದಿನದ ನಂತರ ಟ್ರಾನ್ಸ್‌ಫರ್ ಮಾಡಲು ಸಾಧ್ಯವಿಲ್ಲ ಎಂದು ತಾವೇನಾದರೂ ಒಂದು ನಿರ್ದಿಷ್ಟವಾದಂತಹ ಕಾಯ್ದೆಯನ್ನು ಮಾಡಿದರೆ ನಾವು ಆರಾಮಾಗಿ ನಮ್ಮ ಕ್ಷೇತ್ರದಲ್ಲಿ ಇನ್ನಷ್ಟು ಪ್ರಭಾವಿಯಾಗಿ ನಮ್ಮ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ, ಎನ್ನುವಂತಹ ವಿಚಾರವನ್ನು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇದಕ್ಕಿಂತ ಜಾಸ್ತಿ ನಾನು ಹೇಳುವಂಥದ್ದು ಏನೂ ಇಲ್ಲ. ತೀಕ್ಷ್ಣವಾಗಿ ನನ್ನ ಮುಖ್ಯವಾದ ಸಮಸ್ಯೆ ಏನೆಂದರೆ ಆಡಳಿತದಲ್ಲಿ ತೊಂದರೆ ಬಾರದಂತೆ ನನಗೆ ಕೆ.ಡಿ.ಬಿ. ಮೀಟಿಂಗ್ ಅನ್ನು ಸರಿಯಾದ ರೀತಿಯಲ್ಲಿ ನಡೆಸುವ ಸಲುವಾಗಿ ಒಂದು ಸಪರೇಟ್ ಸ್ಥಳಾವಕಾಶವನ್ನು ಮಾಡಿ ಕೊಡಬೇಕು. ಅದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ತಾಲ್ಲೂಕು ಪುನರ್‌ವಿಂಗಡಣೆಯನ್ನೂ ಕೂಡ ಆದಷ್ಟು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಧೈರ್ಯವಾಗಿ ಉತ್ತಮವಾಗಿ ಜಿಲ್ಲಾ ಪುನರ್ವಿಂಗಡಣೆ ಮಾಡಿ ತಮ್ಮ ಆಸಕ್ತಿಯನ್ನು ಆಡಳಿತದ ಬಗ್ಗೆ ತೋರಿಸಿದ್ದೀರಿ. ಈ ತಮ್ಮ ಕೆಲಸ ಸಾಕಷ್ಟು ಶ್ಲಾಘನೀಯವಾಗಿದೆ. ರಾಜ್ಯದ ತುಂಬಾ ನಿಮ್ಮ ಹೆಸರು ಅಜರಾಮರವಾಗಿ ಉಳಿಯುವಂಥದ್ದು ಆಗಿದೆ. ಅದರ ಜೊತೆಗೆ ತಾವು ತಾಲ್ಲೂಕು ಪುನರ್ವಿಂಗಡಣೆಯನ್ನೂ ಸಹ ಮಾಡಿದರೆ ತಮ್ಮ ಹೆಸರು ಇನ್ನೂ ಅಜರಾಮರವಾಗಿ ಉಳಿಯುತ್ತದೆ ಎಂದು ನಾನು ಭಾವಿಸುತ್ತೇನೆ. ಈ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯಿಂದ ವಿನಂತಿಸುತ್ತೇನೆ. ಮಾನ್ಯ ಅಧ್ಯಕ್ಷರು ಇಲ್ಲಿಯವರೆಗೂ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸುತ್ತೇನೆ. ನನಗೆ ಇನ್ನೂ ಐದು ನಿಮಿಷ ಹೆಚ್ಚಿಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು

ಮುಗಿಸುತ್ತೇನೆ.

8.40 ಪಿ.ಎಂ

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಇವತ್ತು ಸದನ ಎಷ್ಟು ಗಂಟೆಯವರೆಗೆ ನಡೆಯಬಹುದು?

ಅಧ್ಯಕ್ಷರು: ರಾತ್ರಿ ಒಂದು ಗಂಟೆಯವರೆಗೆ ನಡೆಯಬಹುದು. ಎಲ್ಲರಿಗೂ ಊಟದ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವೇನೋ ರಾತ್ರಿ ಒಂದು ಗಂಟೆಯವರೆಗೆ ಕುಳಿತುಕೊಳ್ಳಲು ಸಿದ್ಧರಿದ್ದೇವೆ. ಆ ಕಡೆಗೆ ಆಡಳಿತ ಪಕ್ಷದ ಕೆಲವು ಮಾನ್ಯ ಸದಸ್ಯರು ಬಾಯಿ ಆಡಿಸುತ್ತಿದ್ದಾರೆ, ಕೆಲವರು ಬಾಯಿ ಒರೆಸಿಕೊಂಡು ಬರುತ್ತಿದ್ದಾರೆ. ಆದರೆ ನಮಗೆ ಕುಡಿಯಲು ನೀರು ಸಿಗುತ್ತದೆ ಏನೋ ಎಂದು ಹೊರಟರೆ ಅದೂ ಕೂಡ ಸಿಗುತ್ತಿಲ್ಲ. ನಮಗ್ಯಾಕೆ ಈ ರೀತಿಯ ಪನಿಷ್‌ಮೆಂಟ್ ಎಂದು ನನಗೆ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು: ನಿಮಗೂ ಏನಾದರೂ ತರಿಸೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ: ನನಗೇನೂ ಬೇಡ ಸಾರ್. ಹೊರಗೆ ಹೋದರೆ ಕುಡಿಯಲಿಕ್ಕೆ ನೀರೂ ಸಿಗುತ್ತಿಲ್ಲ, ಟೀ ಕೂಡ ಸಿಗುತ್ತಿಲ್ಲ. ಆದರೆ ಆ ಕಡೆಯವರಿಗೆ ಏನೋ ವ್ಯವಸ್ಥೆ ಮಾಡಿದಂತೆ ಕಾಣುತ್ತಿದೆ. ಮಾನ್ಯ ಸೋಮಣ್ಣನವರು ಬಾಯಿ ಏನೋ ಆಡಿಸುತ್ತಿದ್ದಾರೆ.

ಅಧ್ಯಕ್ಷರು: ಅಡಿಕೆ ತಿನ್ನುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಆಡಳಿತ ಪಕ್ಷಕ್ಕೆ ಮಾತ್ರ ಏನಾದರೂ ವ್ಯವಸ್ಥೆ ಮಾಡಿ, ನಮಗೇನೂ ಇಲ್ಲದಂತೆ ಮಾಡಲಾಗಿದೆಯೇ?

ಅಧ್ಯಕ್ಷರು: ಗುತ್ತೇದಾರ್‌ರವರ ಕಡೆಗೆ ನೋಡಿಕೊಂಡು ನೀವು ನೀರು ಇಲ್ಲ ಎಂದರೆ, ಅವರು ನಿಮಗೆ ಬೇರೇನಾದರೂ ಕುಡಿಯಲಿಕ್ಕೆ ತಂದು ಕೊಟ್ಟಾರು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ತಾವು ಶಾಸಕರಿಗೆ, ಪತ್ರಕರ್ತರಿಗೆ ಹಾಗೂ ಅಧಿಕಾರಿಗಳಿಗೆ ಏನೇನು ವ್ಯವಸ್ಥೆ ಮಾಡಿಸಿದ್ದೀರಿ?

ಅಧ್ಯಕ್ಷರು: ಎಲ್ಲರಿಗೂ ಊಟದ ವ್ಯವಸ್ಥೆ ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಬರೀ ನಾವು ಊಟವಷ್ಟೇ ಮಾಡುತ್ತೇವೆಂದು ತಾವು ತಿಳಿದುಕೊಂಡಿದ್ದೀರಾ? ಇದರ ಬಗ್ಗೆ ನಾವು ಪ್ರಾಮಾಣಿಕವಾಗಿ ಮಾತನಾಡೋಣ.

ಅಧ್ಯಕ್ಷರು: ಎಲ್ಲಾ ವ್ಯವಸ್ಥೆ ಮಾಡೋಣ. ಸಭೆಯೆಲ್ಲಾ ಮುಗಿದು ಹೋಗಿ ಎಲ್ಲಾ ಮನೆಗಳಿಗೆ ಹೋಗುತ್ತೀವಲ್ಲಾ, ಆಗ ಉಳಿದ ವ್ಯವಸ್ಥೆಯನ್ನೂ ಕೂಡ ಅವರವರಿಗೆ, ಒಬ್ಬೊಬ್ಬರಿಗೆ ಕರೆದು ಸಪರೇಟ್ ಆಗಿ ಮಾಡೋಣ.

ಶ್ರೀ ವಾಟಾಳ್ ನಾಗರಾಜ್: ಅಷ್ಟೊತ್ತಿಗೆ ನಮ್ಮ ತ್ರಾಣ ಬಿದ್ದುಹೋಗಿರುತ್ತದೆ.

ಅಧ್ಯಕ್ಷರು: ಎಲ್ಲರಿಗೂ ಸೇರಿ ಸಾಮೂಹಿಕವಾಗಿ ಊಟದ ವ್ಯವಸ್ಥೆ...

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಯಡಿಯೂರಪ್ಪನವರು ಹೇಳುವುದು ನಿಜ, ನಾವು ಆ ಕಡೆ, ಈ ಕಡೆ ಎರಡೂ ಕಡೆ ಹೋದರೆ ನಮಗೆ ಕುಡಿಯುವ ನೀರೂ ಕೂಡ ಸಿಗುತ್ತಿಲ್ಲ. ನಮಗೆ ಯಾವತ್ತೂ ಇಂತಹ ದುರ್ಗತಿ ಬರಬಾರದು.

ಅಧ್ಯಕ್ಷರು: ತರಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಿಜವಾಗಿಯೂ ಇಲ್ಲಿ ಕುಡಿಯುವ ನೀರು ಇಲ್ಲ, ಕಾಫಿ ಇಲ್ಲ, ಹಾಲು ಇಲ್ಲ, ಬ್ರೆಡ್ ಇಲ್ಲ.

ಅಧ್ಯಕ್ಷರು: ನಾನು ಎಲ್ಲವನ್ನೂ ತರಿಸಿಕೊಡುತ್ತೇನೆ. ಈಗ ಮಾನ್ಯ ಅಲ್ಲಂ ವೀರಭದ್ರಪ್ಪನವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್: ಅವರ ಭಾಷಣ ಕೇಳುವುದಕ್ಕಾದರೂ ನಮಗೆ ತ್ರಾಣ ಬೇಕಲ್ಲಾ. ಅವರ ಭಾಷಣ ಕೇಳುವುದಕ್ಕೆ ಶಕ್ತಿ ಬೇಕಲ್ಲಾ. ಅವರ ಭಾಷಣ ಕೇಳಿ ಅದನ್ನು ಮನಸಾರೆ ಮೆಚ್ಚಿ, ಯಾವ್ಯಾವ ಭಾಷಣ ಹೇಗಿದೆ ಎಂದು ವಿಶ್ಲೇಷಣೆ ಮಾಡುವುದಕ್ಕೆ ತ್ರಾಣ ಬೇಕಲ್ಲವೇ?

ಅಧ್ಯಕ್ಷರು: ಮಾನ್ಯ ಅಲ್ಲಂ ವೀರಭದ್ರಪ್ಪನವರೇ, ತಾವು ಮಾತನಾಡುತ್ತೀರಾ?

+ ಶ್ರೀ ಅಲ್ಲಂ ವೀಭದ್ರಪ್ಪ (ಕುರುಗೋಡು ಕ್ಷೇತ್ರ): ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗಳನ್ನು ವಿರೋಧಿಸುತ್ತಾ ನಾನು ನೀರಾವರಿ ಮತ್ತು ವಿದ್ಯುಚ್ಛಕ್ತಿ ಬಗ್ಗೆ ಮಾತನಾಡುತ್ತಿದ್ದೇನೆ. ಭಾರಿ ನೀರಾವರಿ ಮತ್ತು ಸಣ್ಣ ನೀರಾವರಿ ಬಗ್ಗೆ ಕೂಡ ಮಾತನಾಡುತ್ತೇನೆ. ಈ ಸದನದಲ್ಲಿ ಸುಮಾರು ಅರ್ಧ ಸಮಯ ನೀರಾವರಿ ಅಂದರೆ ಕೃಷ್ಣಾ ಮತ್ತು ಕಾವೇರಿ ನದಿಗಳ ಯೋಜನೆಗಳ ಮಾತ್ರ ನಾವು ಮಾತನಾಡುತ್ತಿದ್ದೇವೆ. ಇವತ್ತು ನೀರಾವರಿ ಇಲಾಖೆಯ ಬಡ್ಜೆಟ್‌ನ ಶೇಕಡ 90ರಷ್ಟು ಹಣವನ್ನು ಈ ಕೃಷ್ಣಾ ಮತ್ತು ಕಾವೇರಿ ಯೋಜನೆಗಳಿಗೆ ಮಾತ್ರ ಬಿಡುಗಡೆ ಮಾಡುತ್ತಿದ್ದಾರೆ. ಈಗಾಗಲೇ ನಮ್ಮ ಮಿತ್ರರೊಬ್ಬರು ಹಾಗೂ ಸಹ ಶಾಸಕರು ಹೇಳಿದಂತೆ ಬಹಳಷ್ಟು ಇತರ ನೀರಾವರಿ ಯೋಜನೆಗಳಿವೆ. ಘಟಪ್ರಭಾ, ಮಲಪ್ರಭಾ ಯೋಜನೆ, ಹಾಗೆಯೇ ತುಂಗಭದ್ರಾ ಯೋಜನೆ ಕೂಡ ಇದೆ ಎಂದು ಹೇಳಿ ನೀರಾವರಿ ಮಂತ್ರಿಗಳು ಗಮನಿಸಬೇಕಾಗಿದೆ.

ಇಲ್ಲಿ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯ ಭವಿಷ್ಯ ಹಾಗೂ ಉದ್ಯೋಗ ಕೊಡುವಂತಹ ರೈತರಿಗೆ ಇದು ಬಹಳ ಮುಖ್ಯವಾದ ಜಲಾಶಯವಾಗಿದೆ. ಈ ಜಲಾಶಯದಿಂದ ಬಹಳಷ್ಟು ಜನರು ಲಾಭ ಪಡೆಯುತ್ತಾರೆಂದು ನಾವು ನಿರೀಕ್ಷಣೆ ಮಾಡಿದ್ದೇವೆ. ಆದರೆ ಇವತ್ತು ನೀರಿನ ಕೊರತೆಯಿಂದ ಇವತ್ತು ಬಳ್ಳಾರಿ ಜಿಲ್ಲೆಯ ರೈತರಿಗೆ ಕಷ್ಟವಾಗಿದೆ. ಈ ವರ್ಷ ನಮ್ಮ ಬಳ್ಳಾರಿ ಜಿಲ್ಲೆ ಬರಗಾಲದಿಂದ ಪೀಡಿತವಾಗಿದೆ. ರೈಟ್ ಬ್ಯಾಂಕ್ ಹಾಗೂ ಲೆಫ್ಟ್ ಬ್ಯಾಂಕ್ ಕೆನಾಲ್‌ಗಳು 7-8 ಸಲ ರೀಚ್ ಆಗಿ ಇವತ್ತಿನವರೆಗೆ ಕೊನೆಯ ರೈತರಿಗೆ ನೀರು ಮುಟ್ಟದಂತಾಗಿದೆ. ಆದಾದ ಮೇಲೆ ಇಲ್ಲಿ ಈಗ ಕೃಷಿ ವ್ಯವಸ್ಥೆಯ ಪ್ರಕಾರ ನಮ್ಮ ರೈತರಿಗೆ ಹೆಚ್ಚಿನ ಏನು ಹತ್ತಿ ಬೆಳೆಯಾಗಲೀ, ನೆಲ್ಲಿನ ಬೆಳೆಯಾಗಲೀ ಮೆಣಸಿದ ಬೆಳೆಯಾಗಲೀ ಬೆಳೆಯತಕ್ಕಂತಹ ಕೃಷಿಗೆ ಹೆಚ್ಚಿನ ನೀರು ಬೇಕಾಗುತ್ತದೆ. ಜನವರಿ, ಫೆಬ್ರವರಿ ತಿಂಗಳುವರೆಗೆ ನೀರು ಬೇಕಾಗುತ್ತದೆ. ಈ ಜಲಾಶಯದಿಂದ ನಮಗೆ ಡಿಸೆಂಬರ್‌ತನಕ ಮಾತ್ರ ನೀರು ಪೂರೈಕೆಯಾಗುತ್ತಿದೆ. ಈಗಾಗಲೇ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಬಹಳಷ್ಟು ಮಳೆ ಬಂದು, ನಮ್ಮ ಜಲಾಶಯದಲ್ಲಿ ತುಂಬಿ ಈಗಾಗಲೇ 30-35 ಟಿ.ಎಂ.ಸಿ. ನೀರು ಆಂಧ್ರಪ್ರದೇಶಕ್ಕೆ ನದಿ ಮೂಲಕ ಹೋಗಿದೆ. ನಾವು ಸತತವಾಗಿ ಈ ಸಭೆಯ ಒಳಗಡೆ, ಹೊರಗಡೆ ಏನು ಬ್ಯಾಲೆನ್ಸಿಂಗ್ ರಿಸರ್ವ್‌ವಾಯರ್ ಮಾಡಬೇಕೆಂದು ಸರ್ಕಾರದವರಿಗೆ ಕೇಳುತ್ತಿದ್ದೇವೆ, ಅದರ ಬಗ್ಗೆ ಸರ್ಕಾರದವರು ಗಮನವನ್ನೇ ಕೊಡುತ್ತಿಲ್ಲ. ಇವತ್ತು 30-40 ಟಿ.ಎಂ.ಸಿ. ಹೆಚ್ಚಾಗಿ ಹರಿದು ಹೋಗುವ ನೀರನ್ನು ನಾವು ಹಿಡಿದಿಟ್ಟುಕೊಳ್ಳಲು ಏನಾದರೂ ಒಂದು ಜಲಾಶಯ ಮಾಡಿದರೆ ನಮ್ಮ ರೈತರಿಗೆ ಸಾಕಷ್ಟು ನೀರು ಸಿಗುತ್ತದೆ. ನಮ್ಮ ರೈತರಿಗೆ ಬೇಕಾಗಿರುವಂತದ್ದು ಕೇವಲ 2-3 ಟಿ.ಎಂ.ಸಿ. ನೀರು. ಈ ಜಲಾಶಯದಲ್ಲಿ ಬಹಳಷ್ಟು ಸಿಲ್ಟ್ ಇರುವುದರಿಂದ ಇದರ ಸ್ಟೋರಿಂಗ್ ಕೆಪ್ಯಾಸಿಟಿ ಸುಮಾರು 20-25 ಟಿ.ಎಂ.ಸಿ ಕಡಿಮೆಯಾಗಿದೆ. ಈ ಸಿಲ್ಟ್ ತೆಗೆಯಲಿಕ್ಕೆ ಏನಾದರೂ ಒಂದು ತಾಂತ್ರಿಕ ನೆರವು ಬಳಸಬೇಕೆಂದು ನಾವು ಬಹಳ ದಿವಸಗಳಿಂದಲೂ ಕೇಳುತ್ತಿದ್ದೇವೆ. ಇಂಜಿನಿಯರ್‌ಗಳ ಮೂಲಕ ಹೈಟ್ ಮಾಡಬೇಕೆಂದೂ ನಾವು ಬಹಳ ದಿವಸಗಳಿಂದ ಕೇಳುತ್ತಿದ್ದೇವೆ. ಇದರ ಬಗ್ಗೆ ಸರ್ಕಾರದವರು ಯಾವುದೇ ರೀತಿಯ ಆಲೋಚನೆಯನ್ನೂ ಮಾಡಿಲ್ಲ. ಆ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಯವರು ಬಳ್ಳಾರಿಗೆ ಬಂದಾಗ, ರಿವ್ಯೂ ಮಾಡುವ ಕಾಲಕ್ಕೆ ಈ ವಿಷಯದ ಬಗ್ಗೆ ಚರ್ಚಿಸಿದ್ದೇವೆ. ನಾನು ಇದನ್ನು ಖಂಡಿತವಾಗಿಯೂ ಮಾಡುತ್ತೇನೆ ಎಂದು ಅವರು ಭರವಸೆ ಕೊಟ್ಟಿದ್ದಾರೆ. ಇವತ್ತು ಬಳ್ಳಾರಿ ಜಿಲ್ಲೆಯೂ ಈಗಾಗಲೇ ಬರಗಾಲ ಪೀಡಿತವಾಗಿರುವುದರಿಂದ, ಇಲ್ಲಿ ಬಹಳ ವರ್ಷಗಳಿಂದ ನಾವು ಒಂದು ಲಿಫ್ಟ್ ಇರಿಗೇಷನ್ ಸ್ಕೀಮ್ ಅನ್ನು ಕೇಳುತ್ತಿದ್ದೇವೆ. ಇದರಿಂದ ಸುಮಾರು 7-8 ಸಾವಿರ ಎಕರೆ ನೀರಾವರಿಯಾಗುತ್ತದೆ. ಇಲ್ಲಿರತಕ್ಕಂತಹ ಹಳ್ಳಿಗಳು ಬರಗಾಲದಿಂದ ಪೀಡಿತವಾಗಿವೆ. ಇಲ್ಲಿ ನಾವು ನೀರು ಕೊಟ್ಟರೆ ಜನರಿಗೆ ಉದ್ಯೋಗ ಮತ್ತು ಒಂದು ಭವಿಷ್ಯವನ್ನು ಕೊಟ್ಟಂತಾಗುತ್ತದೆ. ಇದರ ಖರ್ಚು ಸುಮಾರು ಎಕರೆಗೆ 10-12 ಸಾವಿರ ರೂ. ಮಾತ್ರ ಆಗುತ್ತದೆ. ಈ ಸದನದಲ್ಲಿ ನಾವು ಏತ ನೀರಾವರಿ ಬಗ್ಗೆಯಾಗಲೀ, ಬೇರೆ

ತರಹವಾದಂತಹ ಇತರ ನೀರಾವರಿ ಯೋಜನೆಗಳನ್ನು ನೋಡಿದಾಗ ಒಂದೊಂದು ಎಕರೆಗೆ ಸುಮಾರು 80 ಸಾವಿರದಿಂದ ಒಂದು ಲಕ್ಷದವರೆಗೆ ಹಣ ಖರ್ಚು ಮಾಡಲು ಸರ್ಕಾರ ಸಿದ್ಧವಾಗಿದೆ. ನಾನು ಇಷ್ಟೇ ಕೇಳುವುದು, ಬ್ಯಾಕ್‌ವರ್ಡ್ ಏರಿಯಾ ಆಗಿರುವಂತಹ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಕೇವಲ 10- 12 ಸಾವಿರ ರೂ.ಗಳಿಗೆ ಒಂದು ಎಕರೆ ನೀರಾವರಿಯಾಗುತ್ತದೆ, ಇದರಿಂದ ರೈತರಿಗೆ ಒಳ್ಳೆಯ ಭವಿಷ್ಯವಾಗುತ್ತದೆ ಎಂದು ಕೇಳುತ್ತಿದ್ದೇನೆ, ದಯವಿಟ್ಟು ಇದರ ಬಗ್ಗೆ ಮಾನ್ಯ ನೀರಾವರಿ ಮಂತ್ರಿಗಳು ಗಮನ ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಹಣದ ವ್ಯವಸ್ಥೆ ಮಾಡಿಕೊಡುತ್ತೀರಿ ಎಂದು ನಾನು ನಂಬಿದ್ದೇನೆ. ಇನ್ನು ಸಣ್ಣ ನೀರಾವರಿ ಬಗ್ಗೆ ಮಾತನಾಡುವುದಾದರೆ, ನಮ್ಮ ಬಳ್ಳಾರ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆ ಸರಿಯಾಗಿ ತನ್ನ ಕೆಲಸ ಮಾಡುತ್ತಿಲ್ಲ. ಇವತ್ತು ಕೆರೆಗಳ ಹೂಳು ತೆಗೆಯುವುದಾಗಲೀ ಅಥವಾ ಇನ್ನಿತರ ಕೆಲಸಗಳಾಗಲೀ ಇಲಾಖೆ ಮಾಡುತ್ತಿಲ್ಲ. ಇವತ್ತು ಕೇವಲ ಕೆರೆಗಳಿಂದ ಹೂಳು ಮಾತ್ರ ತೆಗೆಯುವ ಯೋಜನೆಗಳನ್ನು ಹಮ್ಮಿಕೊಳ್ಳಬಾರದು....

ಶ್ರೀ ಎಸ್.ಎಂ.ನಾಗರಾಜ್: ಮಾನ್ಯ ವೀರಭದ್ರಪ್ಪನವರೇ, ಒಂದು ನಿಮಿಷ. ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾಗಿರತಕ್ಕ ವೀರಭದ್ರಪ್ಪನವರು ಏನು ಹೇಳಿದರು, ಸಣ್ಣ ನೀರಾವರಿ ಇಲಾಖೆ ಕೆಲಸ ಮಾಡುತ್ತಿಲ್ಲ ಎಂದು, ಇದು ಕೇವಲ ಬಳ್ಳಾರಿ ಜಿಲ್ಲೆಗೆ ಮಾತ್ರ ಸೀಮಿತವಾಗಿರತಕ್ಕದ್ದಲ್ಲ. ರಾಜ್ಯ ಎಲ್ಲೆಡೆಯೂ ಈ ರೀತಿ ಇದೆ. ಅದಕ್ಕೋಸ್ಕರ ನಾವೆಲ್ಲರೂ ಸೇರಿ ಸರ್ಕಾರವನ್ನು ಒತ್ತಾಯ ಮಾಡೋಣ, ಈ ಸಣ್ಣ ನೀರಾವರಿ ಇಲಾಖೆಗೂ ಸಹ ಸರ್ಕಾರದವರು ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ: ಹಾಗೇಯೇ ಕೆರೆಗಳನ್ನೂ ಕೂಡ ಹೊಸದಾಗಿ ನಿರ್ಮಾಣ ಮಾಡುವುದಕ್ಕೆ ಅವಕಾಶ ಇದೆ. ನಮ್ಮ ಸುತ್ತಮುತ್ತ ಅನೇಕ ಕಾಡು ಗುಡ್ಡಗಳಿವೆ, ನೀವೇನು ಈಗ ಹೊಸ ಸ್ಕೀಮ್ ತಂದಿದ್ದೀರಿ, ತಡೆ ಅಣೆಕಟ್ಟುಗಳನ್ನು ಕಟ್ಟಬೇಕೆಂದು ಆ ತಡೆ ಅಣೆಕಟ್ಟುಗಳನ್ನು ತಾವು ನಿರ್ಮಿಸಿದಲ್ಲಿ ಬಹಳಷ್ಟು ಕೆರೆಗಳು ಆಗುವುದಕ್ಕೆ ಕೂಡ ಅವಕಾಶ ಇದೆ. ಅಲ್ಲಿ ಕುಡಿಯುವ ನೀರಿನ ಕೊರತೆಯೂ ಕೂಡ ಇದೆ. ಇಂತಹದ್ದು ಮಾಡುವುದರಿಂದ ಗ್ರೌಂಡ್ ಲೆವೆಲ್ ಕೂಡ ರೈಸ್ ಆಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಸಣ್ಣ ನೀರಾವರಿ ಇಲಾಖೆಯವರು ತಡೆ ಅಣೆಕಟ್ಟುಗಳನ್ನು ನಿರ್ಮಿಸಬೇಕೆಂದು ಹೇಳುತ್ತೇನೆ. ಇವತ್ತು ಕರೆಂಟ್ ಬಗ್ಗೆ ಮಾತನಾಡುವ ಕಾಲಕ್ಕೆ, ಯಾವುದಾದರೂ ಪ್ರಗತಿ ಪರದೇಶನ್ನು ನಾವು ಹೋಲಿಸಿದಾಗ, ಡೆವಲಪ್ಡ್ ಕಂಟ್ರಿಯಲ್ಲಿ ಇಂಡಸ್ಟ್ರಿಲೈಸೇಷನ್ ಕಂಪೇರ್ ಮಾಡಿದಾಗ, ಇಂಡಸ್ಟ್ರೀಸ್ ಅಲ್ಲಿ ಡೆವಲಪ್ ಆಗಿದೆ ಎಂಬುದನ್ನು ಹಾಗೆ ಹೇಳುತ್ತಾರೆ ಎಂದರೆ ಆ ದೇಶದಲ್ಲಿ ಎಷ್ಟು ಎಲೆಕ್ಟ್ರಿಸಿಟಿ ಪ್ರೊಡ್ಯೂಸ್ ಮಾಡುತ್ತಾರೆ, ಎಷ್ಟು ಎಲೆಕ್ಟ್ರಿಸಿಟಿ ಕನ್‌ಸ್ಯೂಮ್ ಮಾಡುತ್ತಾರೆ ಎಂಬುದನ್ನು ನೋಡಿಕೊಂಡು ಇದು ಇಂಡಸ್ಟ್ರಿಲೈಸ್ಡ್ ಕಂಟ್ರಿ ಎಂದು ಹೇಳುತ್ತಿದ್ದಾರೆ. ಆ ದೃಷ್ಟಿಯಿಂದ

ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ಆ ಪ್ರಗತಿ ಪರ ದೇಶಗಳನ್ನು ಹೋಲಿಸಿದಾಗ ನಾವು ಬಹಳಷ್ಟು ಕೆಳಮಟ್ಟದಲ್ಲಿ ಇವತ್ತು ಇದ್ದೇವೆ. ಇವತ್ತು ನಾವು ಬಹಳ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬೇಕಾಗಿದೆ. ಇದರ ಬಗ್ಗೆ ನಾನು ಹೇಳಬೇಕು ಅಂತಂದರೆ, ಕೆ.ಪಿ.ಸಿ.ಯವರು ಸ್ವಲ್ಪ ಮಟ್ಟಿಗೆ ರಾಯಚೂರಿನಲ್ಲಿ ಕೆಲವು ಮಟ್ಟದಲ್ಲಿ ಚೆನ್ನಾಗಿ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದಾರೆ. ಇನ್ನು ಕೆ.ಇ.ಬಿ. ಬಗ್ಗೆ ಹೇಳುವುದಾದರೆ, ನಮ್ಮ ಬಳ್ಳಾರಿ ಜಿಲ್ಲೆಯ ಮೋಕಾ ಗ್ರಾಮದಲ್ಲಿ 110 ಕೆ.ವಿ. ಸಬ್‌ಸ್ಟೇಷನ್‌ಗಳನ್ನು ಮಾಡಬೇಕೆಂದು ಬಹಳ ದಿವಸದ ಬೇಡಿಕೆಯಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಬಳ್ಳಾರಿ ಜಿಲ್ಲೆಗೆ ಬಂದಿದ್ದಾಗ ಈ ಸಬ್‌ಸ್ಟೇಷನ್ ಮಾಡಲು ಮಂಜೂರು ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಅದನ್ನು ಈ ಬಜೆಟ್‌ನಲ್ಲಿ ಸೇರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಇನ್ನು 'ಭಾಗ್ಯಜ್ಯೋತಿ ಸ್ಕೀಂ' ಎಂದು ಮಾಡಿದ್ದಾರೆ. ಬಹಳ ವರ್ಷಗಳಿಂದ ಒಂದು ಹಳ್ಳಿಗೆ ಕೇವಲ 100 ಫಲಾನುಭವಿಗಳನ್ನು ಗುರುತಿಸುತ್ತಾರೆ. ಆ ಹಳ್ಳಿಯ ಜನಸಂಖ್ಯೆ 500 ಇರಬಹುದು, 1000 ಇರಬಹುದು, 2000 ಇರಬಹುದು ಇನ್ನು ಕೆಲವು ದೊಡ್ಡ ಹಳ್ಳಿಗಳಲ್ಲಿ 5ರಿಂದ 10 ಸಾವಿರ ಜನಸಂಖ್ಯೆ ಇದ್ದರೂ ಸಹ 100ಕ್ಕಿಂತ ಹೆಚ್ಚಿಗೆ ಫಲಾನುಭವಿಗಳನ್ನು ಗುರುತಿಸುವುದಕ್ಕೆ ಆಗುತ್ತಿಲ್ಲ. 100ಕ್ಕಿಂತ ಹೆಚ್ಚಿಗೆ ಫಲಾನುಭವಿಗಳನ್ನು ಗುರುತಿಸುವುದಕ್ಕೆ ಏಕೆ ಸಾಧ್ಯವಿಲ್ಲವೆಂದು ಕೇಳಿದರೆ, ಇದಕ್ಕಿಂತ ಹೆಚ್ಚಿಗೆ ಗುರುತಿಸಬಾರದೆಂದು ಸರ್ಕಾರದ ಆದೇಶವಿದೆಯೆಂದು ಹೇಳುತ್ತಾರೆ. ಈ ಫಲಾನುಭವಿಗಳನ್ನು ಜನಸಂಖ್ಯೆಯ ಆಧಾರದ ಮೇಲೆ ಗುರುತಿಸುತ್ತೀರಾ ಅಥವಾ ಊರಿನ ಆಧಾರದ ಮೇಲೆ ಗುರುತಿಸುತ್ತೀರಾ ಎಂದು ಈ ಸದನದಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ಆದರೆ ಅದಕ್ಕೆ ದುರಾದೃಷ್ಟವಶಾತ್ ಉತ್ತರ ಬಂದಿಲ್ಲ. ಆದಕಾರಣ ಈಗ ಮಾನ್ಯ ಇಂಧನ ಮಂತ್ರಿಗಳನ್ನು ಕೇಳುವುದೇನೆಂದರೆ- ಜನಸಂಖ್ಯೆ ಆಧಾರದ ಮೇಲೆ ಫಲಾನುಭವಿಗಳನ್ನು ಗುರುತಿಸಬೇಕು ಮತ್ತು 100 ಫಲಾನುಭವಿಗಳಿಗೆ ಏನು ಸೀಮಿತಗೊಳಿಸಿದ್ದೀರಿ ಅದುಬಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಫಲಾನುಭವಿಗಳನ್ನು ಗುರುತಿಸಬೇಕೆಂದು ಈ ಮೂಲಕ ತಿಳಿಸುತ್ತಿದ್ದೇನೆ. ನಮ್ಮ ಬಳ್ಳಾರಿಯ ಬಾರ್ಡರ್‌ನಲ್ಲಿ ಸುಮಾರು 60 ಹಳ್ಳಿಗಳು ಇವೆ. ಆ 60 ಹಳ್ಳಿಗಳು ಆಂಧ್ರಪ್ರದೇಶದ 2 ಜಿಲ್ಲೆ ಮತ್ತು 8 ತಾಲ್ಲೂಕುಗಳ ಪಕ್ಕದಲ್ಲಿರತಕ್ಕಂಥ ಪ್ರದೇಶವಾಗಿರುವುದರಿಂದ ಇಲ್ಲಿಗೆ ಹೆಚ್ಚಿನ ಮಹತ್ವ ಕೊಟ್ಟು, ಇಲ್ಲಿಗೆ ಏನಾದರೂ ಯೋಜನೆಗಳು ಇದ್ದರೆ ಅದಕ್ಕೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಅನ್‌ಲಾಫುಲ್ ಆಕ್ಟಿವಿಟೀಸ್‌ಗೆ ಅವಕಾಶ ಕೊಡದಂತೆ ಇಲ್ಲಿನ ಜನರಿಗೆ ಉದ್ಯೋಗ ಕೊಟ್ಟು ಒಳ್ಳೆಯ ಕೆಲಸ ಮಾಡಬೇಕೆಂದು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇನ್ನು ಮಾನ್ಯ ಯುವಜನ ಮತ್ತು ಕ್ರೀಡಾ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ತಾವು ಯುವಕರು ತಾವು ಮಂತ್ರಿಗಳಾದ ಮೇಲೆ ಕರ್ನಾಟಕ ರಾಜ್ಯದ ಯುವಕರಿಗೆ ಮಾದರಿ ಸಲಹೆಗಳನ್ನು, ಒಂದು ಗೈಡ್‌ಲೈನ್ಸ್‌ನ್ನು ಕೊಡುತ್ತೀರೆಂದು ತಿಳಿದಿದ್ದೆ. ಆದರೆ ಇವತ್ತಿನವರೆಗೂ ಅಂಥ ಗೈಡ್‌ಲೈನ್ಸ್ ಬಂದಿಲ್ಲ. ಇನ್ನು ಮುಂದಾದರೂ ರಾಜ್ಯದ ಯುವಕರಿಗೆ ಒಳ್ಳೆಯ ಕ್ರೀಡಾ ಗೈಡ್‌ಲೈನ್ಸ್‌ನ್ನು ಕೊಡಬೇಕೆಂದು

ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ನಾನು ಏನು ಮಾಡಿದ್ದೇನೆಂದರೆ - ಇಂಟರ್ ಗ್ರಾಮ ಪಂಚಾಯತ್ ಕ್ರಿಕೆಟ್ ಆಗಲಿ, ಫುಟ್‌ಬಾಲ್ ಆಗಲಿ ಈ ತರಹದ ಮ್ಯಾಚ್‌ಗಳನ್ನು ಆಡುವ ಅವಕಾಶವನ್ನು ನಮ್ಮ ಯುವಕರಿಗೆ ಮಾಡಿಕೊಟ್ಟಿದ್ದೇನೆ. ಇದನ್ನು ಜಿಲ್ಲಾಪರಿಷತ್ತಿನ ಮೂಲಕ ನಾನು ಮಾಡಿದ್ದೇನೆ. ನಂತರ ಹೆಣ್ಣುಮಕ್ಕಳಿಗೆ ರಂಗೋಲಿ ಸ್ಪರ್ಧೆ, ಕೊಕ್ಕೋ ಸ್ಪರ್ಧೆ ಇತ್ಯಾದಿ ಆಟಗಳನ್ನೂ ಕೂಡ ನಾನು ಕಂಡಕ್ಟ್ ಮಾಡಿದ್ದೇನೆ. ಇಂಥ ಆಟಗಳಿಗೆ ಅಲ್ಲಿರತಕ್ಕಂಥ ಯುವಜನರನ್ನು ಏನು ಇನ್‌ವಾಲ್ವ್‌ಮೆಂಟ್ ಮಾಡಿದ್ದೇನೆ, ಇದರಿಂದ ಅವರಿಗೂ ಕೂಡ ಸಂತೋಷವಾಗಿದೆ. ಇದೇ ರೀತಿ ಪ್ರತಿಯೊಂದು ಶಾಸಕರ ಕ್ಷೇತದಲ್ಲೂ ಜಿಲ್ಲಾಪಂಚಾಯತ್ ಮೂಲಕ ಕ್ರೀಡೆಗಳನ್ನು ಮಾಡಿದರೆ ಏನು ಯುವಶಕ್ತಿ ಇದ್ದಾರೆ ಅವರನ್ನೆಲ್ಲಾ ಒಳ್ಳೆಯ ದಾರಿಗೆ ತರಲಿಕ್ಕೆ ಸಾಧ್ಯವಾಗುತ್ತದೆ. ಮತ್ತು ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಆಡುವ ಒಳ್ಳೆ ಅವಕಾಶವನ್ನು ಮಾಡಿ ಕೊಟ್ಟ ಹಾಗೆ ಆಗುತ್ತದೆ. ನನ್ನ ಕ್ಷೇತ್ರದಲ್ಲಿ ಕ್ರಿಕೆಟ್ ಮ್ಯಾಚ್ ಆದಾಗ 33 ಗ್ರಾಮ ಪಂಚಾಯತಿಯಲ್ಲಿ 5 ಜನ ಎಸ್‌ಸಿಯವರು ಕ್ಯಾಪ್ಟನ್ ಆಗಿದ್ದರು. ಸಣ್ಣ ವಯಸ್ಸಿನಲ್ಲಿಯೇ ಅವರಲ್ಲಿ ಒಳ್ಳೆಯ ಭಾವನೆ ಮೂಡುವುದಕ್ಕೆ ಅವಕಾಶ ಬರುತ್ತದೆ ಮತ್ತು ಸಮಾಜದಲ್ಲಿ ಕೂಡ ಒಳ್ಳೆಯ ಭಾವನೆ ಯುವಜನತೆಯಲ್ಲಿ ಮೂಡುತ್ತದೆ. ಅದಕ್ಕೆ ಸರ್ಕಾರ ಮಹತ್ವವನ್ನು ಕೊಡುತ್ತದೆಂದು ನಾನು ಭಾವಿಸುತ್ತೇನೆ. ಇನ್ನು ಗಂಗಾ ಕಲ್ಯಾಣ ಯೋಜನೆ ನಿಜವಾಗಿಯೂ ಕೂಡ ಬಹಳ ಒಳ್ಳೆಯ ಯೋಜನೆಯಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಬಹಳಷ್ಟು ಬಡವರಿಗೆ ಏನಾದರೂ ಸಹಾಯ ಮಾಡಬೇಕೆಂದಾದರೆ ಈ ಗಂಗಾಕಲ್ಯಾಣ ಯೋಜನೆಗೆ ಹೆಚ್ಚು ಮಹತ್ವ ಕೊಡಬೇಕಾಗಿದೆ. ಆದರೆ ಈ 100 ಮಿಲಿಯನ್ ವೆಲ್ ಎನ್ನುವಂಥ ಯೋಜನೆ ಕೇವಲ ಸ್ಕೀಂನಲ್ಲಿ ಆಗಿದೆ, ಆದರೆ ಕಾರ್ಯರೂಪಕ್ಕೆ ಬಂದಿಲ್ಲ. ಇದಕ್ಕೆ ಹೆಚ್ಚಿನ ಹಣ ಬಿಡುಗಡೆ ಮಾಡಬೇಕು. ಗಂಗಾಕಲ್ಯಾಣ ಯೋಜನೆಗೋಸ್ಕರ ವಿದ್ಯುಚ್ಛಕ್ತಿ ಕನೆಕ್ಷನ್ ಕೊಡಲು ಕೆ.ಇ.ಬಿ.ಯವರು ಸ್ಪೆಶಿಯಲ್ ಅಲೋಕೇಶನ್ ಮಾಡಬೇಕಾಗಿದೆ. ಈ ಅಲೋಕೇಶನ್ ಮಾಡುತ್ತಿದ್ದಾರೆ. ಆದರೆ ಸರಿಯಾಗಿ ಮಾಡುತ್ತಿಲ್ಲ. ನಿಜವಾಗಿ ಬಡವರಿಗೆ ಸಹಾಯ ಮಾಡಬೇಕು ಎಂದಾದರೆ ಗ್ರಾಮೀಣ ಪ್ರದೇಶದಲ್ಲಿ ಗಂಗಾಕಲ್ಯಾಣ ಯೋಜನೆಯನ್ನು ಯಶಸ್ವಿಯಾಗಿ ಮಾಡಬೇಕು. ಮತ್ತು ಇದಕ್ಕೆ ಸೆಪರೇಟ್ ಆಗಿ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಏರ್ಪಾಟು ಮಾಡಬೇಕು. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಟಿ.ಹೆಚ್.ಬಸವರಾಜು (ಹೊಸದುರ್ಗ): ಮಾನ್ಯ ಅಧ್ಯಕ್ಷರೆ, ಸರ್ಕಾರದ ಬೇಡಿಕೆಗಳನ್ನು ಬೆಂಬಲಿಸುತ್ತಾ, ನಾವು ಕೆಲವು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಗಂಡುಮೆಟ್ಟಿನ ನಾಡು, ಮಧಕರಿ ನಾಯಕರು ಆಳಿದ ಬೀಡು, ರಾಷ್ಟ್ರನಾಯಕರಾದ ಶ್ರೀ ನಿಜಲಿಂಗಪ್ಪನವರು ಜನಿಸಿದ ಜಿಲ್ಲೆ ಈ ಚಿತ್ರದುರ್ಗ. ಆದರೆ ಚಿತ್ರದುರ್ಗ ಜಿಲ್ಲೆ ಇವತ್ತು ಬಹಳಷ್ಟು ಸೊರಗಿರುವುದನ್ನು ನಾವು ಕಾಣುತ್ತೇವೆ. ಇವತ್ತು

ಬಹಳಷ್ಟು ಭಾಗದ ಜನತೆಯ ಕನಸು ಭದ್ರಾ ಮೇಲ್ದಂಡೆ ಯೋಜನೆ ಆಗಿದೆ. ಚಿತ್ರದುರ್ಗ ಜಿಲ್ಲೆಯ ಜೊತೆಗೆ ಇವತ್ತು ದಾವಣಗೆರೆ ಕೂಡ ಒಂದು ಜಿಲ್ಲೆಯಾಗಿ ಮಾರ್ಪಟ್ಟಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಬರತಕ್ಕಂಥ ಎಲ್ಲಾ ತಾಲ್ಲೂಕುಗಳು ಕೂಡ 'ಬರದ' ಛಾಯೆಯಲ್ಲಿ ಬರತಕ್ಕಂಥ ಪ್ರದೇಶಗಳಾಗಿವೆ. ಅದರಲ್ಲೂ ಕೂಡ ಹೊಸದುರ್ಗ ತಾಲ್ಲೂಕಿನಲ್ಲಿ ವೇದಾವತಿ ನದಿ ಹರಿಯುತ್ತಿದೆ. ಆದರೆ ಒಂದು ತಿಂಗಳಿನಿಂದ ಆ ನದಿಯಲ್ಲಿ ನೀರಿಲ್ಲದೆ ಬತ್ತಿಹೋಗಿದೆ. ಇತ್ತೀಚಿನ ದಿನಗಳಲ್ಲಿ ನಮ್ಮ ನೀರಾವರಿ ಮಂತ್ರಿಗಳು ಲೋಕಸಭಾ ಚುನಾವಣೆಯಲ್ಲಿ ಕೂಡ ಭರವಸೆ ಕೊಟ್ಟಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆ ಪರಿಸರ ದೃಷ್ಟಿಯಿಂದ ಅಸಾಧ್ಯವಾಗಿರುವುದನ್ನು ಕಂಡು 'ತುಂಗಾ ತಿರುವು' ಎಂದು ಅದನ್ನು ಮಾರ್ಪಾಡು ಮಾಡಲಾಗಿದೆ. ಈ ತುಂಗಾ ತಿರುವಿಗೆ ನಮ್ಮ ಮಾನ್ಯ ಮಂತ್ರಿಗಳ ಭರವಸೆ ಮೇರೆಗೆ ಈಗಾಗಲೇ ಸರ್ವೆ ನಡೆಯತಕ್ಕಂಥ ಕಾರ್ಯವನ್ನು ಕೂಡ ಹಮ್ಮಿಕೊಂಡಿರತಕ್ಕಂಥದ್ದನ್ನು ನಾವು ಕೇಳಿದ್ದೇವೆ. ನಮ್ಮ ರಾಷ್ಟನಾಯಕರಾದ ನಿಜಲಿಂಗಪ್ಪನವರು 'ನನ್ನ ಕೊನೆಯ ಉಸರು ಇರುವುದರೊಳಗಾಗಿ ಆ ನೀರು ಹರಿಯುವುದನ್ನು ನೋಡಬೇಕು' ಎಂಬ ದೊಡ್ಡ ಆಕಾಂಕ್ಷೆಯನ್ನು ಹೊಂದಿದ್ದಾರೆ. ಆ ದೃಷ್ಟಿಯಿಂದ ಈ ಯೋಜನೆಯನ್ನು ಆದಷ್ಟು ಬೇಗ ನಮ್ಮ ಮಾನ್ಯ ನೀರಾವರಿ ಮಂತ್ರಿಗಳು ಕೈಗೆತ್ತಿಕೊಂಡು ಮಾನ್ಯ ನಿಜಲಿಂಗಪ್ಪನವರ ಕನಸನ್ನು ನೆನಸು ಮಾಡುತ್ತಾರೆಂದು ನಂಬಿದ್ದೇನೆ ಮತ್ತು ಆದಷ್ಟು ಬೇಗ ಇದನ್ನು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಅಮೇರಿಕಾ ದೇಶದಲ್ಲಿ ಕೆಲವಾರು ಪ್ರದೇಶಗಳಲ್ಲಿ ಒಂದು ವರ್ಷದಲ್ಲಿ 2 ರಿಂದ 3 ಇಂಚು ಮಳೆ ಬರತಕ್ಕಂಥದ್ದನ್ನು ನಾವು ಕೇಳಿದ್ದೇವೆ. ಆದರೂ ಕೂಡ ಎಲ್ಲಿ ಹೆಚ್ಚು ಮಳೆ ಬೀಳುತ್ತದೆ ಅಲ್ಲಿಂದ ನೀರನ್ನು ಸಂಗ್ರಹಿಸಿ ಕಡಿಮೆ ಮಳೆ ಬೀಳುವ ಪ್ರದೇಶಕ್ಕೆ ನೀರನ್ನು ತರುವುದನ್ನು ನಾವು ನೋಡುತ್ತಿದ್ದೇವೆ. ಹಾಗೆಯೇ ನಮ್ಮ ರಾಜ್ಯದಲ್ಲಿಯೂ ಮಾಡಬೇಕು. ನಮ್ಮ ಕರ್ನಾಟಕ ರಾಜ್ಯದಲ್ಲಿ ನೇತ್ರಾವತಿ ನದಿ ಹರಿಯುತ್ತಿದ್ದು ಅದರಲ್ಲಿ ನೂರಾರು ಟಿ.ಎಂ.ಸಿ.ಯಷ್ಟು ನೀರು ಹರಿದು ಸಮುದ್ರಕ್ಕೆ ಸೇರುವುದನ್ನು ನಾವು ನೋಡುತ್ತಿದ್ದೇವೆ. ಈ ಯಾಂತ್ರಿಕ ಯುಗದಲ್ಲಿ ಆ ನೀರನ್ನು ನಾವು ಏನಾದರೂ ತಿರುಗಿಸಿದ್ದೇ ಆದರೆ ಸುಮಾರು 70 ಟಿಎಂಸಿ ಅಷ್ಟು ನೀರು ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಈ ಜಿಲ್ಲೆಗಳಿಗೆ ನಾವು ನೀರನ್ನು ಕೊಡಬಹುದಾಗಿದೆ. ನಾವು ಈಗಾಗಲೇ ಮಂಗಳ, ಶುಕ್ರ, ಗ್ರಹ ಮುಂತಾದ ಗ್ರಹಗಳಿಗೆ ಹೋಗುತ್ತಿದ್ದೇವೆ. ಆದರೆ ಈ ಯಾಂತ್ರಿಕ ಯುಗದಲ್ಲಿ ನೀರನ್ನು ತರುವಂಥ ವ್ಯವಸ್ಥೆಗೆ ನಾವು ಹೆಚ್ಚಿನ ಗಮನವನ್ನು ಹರಿಸಿಲ್ಲ. ಹಾಗಾಗಿ ಸರ್ಕಾರದವರು ಇಂಥ ಯೋಜನೆಗಳನ್ನು ಕೈಗೆತ್ತಿಕೊಂಡರೆ ಪದೇ ಪದೇ ಬರಗಾಲಕ್ಕೆ ತುತ್ತಾಗುವಂಥ ಅನೇಕ ಪ್ರದೇಶಗಳಿಗೆ ನೀರನ್ನು ಕೊಡಬಹುದಾಗಿದೆ. ನಮ್ಮ ಚಿತ್ರದುರ್ಗ ಜಿಲ್ಲೆಯ ಜನರು ಆಗಾಗ್ಗೆ ಅನಾವೃಷ್ಟಿಗೆ ತುತ್ತಾಗುತ್ತಿದ್ದಾರೆ. ಅದರಲ್ಲೂ ಕೂಡ ಮಳೆ ಬಾರದೆ ಕಳೆದ ಮೂರು ವರ್ಷದಿಂದ ಜನ ವಲಸೆ ಹೋಗುವುದನ್ನು ಕೂಡ ನೋಡಿದ್ದೇವೆ. ಹಾಗಾಗಿ ಈ ಯೋಜನೆಯನ್ನು ಆದಷ್ಟು ಬೇಗ ಕೈಗೆತ್ತಿಕೊಂಡು ಅಲ್ಲಿಯ ಜನಸಾಮಾನ್ಯರಿಗೆ

ಅನುಕೂಲ ಮಾಡಿಕೊಡುತ್ತೀರೆಂದು ನಾನು ಭಾವಿಸುತ್ತೇನೆ. ಇನ್ನು ಬಯಲು ಸೀಮೆ ಅಭಿವೃದ್ಧಿ ಮಂಡಳಿ ಎಂದು ಸರ್ಕಾರ ಮಾಡಿದೆ. ಅದಕ್ಕೆ ಸುಮಾರು 56 ತಾಲ್ಲೂಕಿನ ಶಾಸಕರು ಬರುತ್ತಿದ್ದಾರೆ. ಅದಕ್ಕೆ ಕೊಟ್ಟಂಥ ಹಣ ಸುಮಾರು 10 ಕೋಟಿ ರೂಪಾಯಿ ಎಂದು ನಾನು ಭಾವಿಸಿದ್ದೇನೆ. ಆ ಹಣ ಯಾವುದೇ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಸಾಕಾಗುವುದಿಲ್ಲ. ಆದ್ದರಿಂದ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಒಂದೊಂದು ಕ್ಷೇತ್ರಕ್ಕೆ ಸುಮಾರು 30 ಲಕ್ಷ ರೂಪಾಯಿಗಳನ್ನು ಕೊಡುವುದರ ಜೊತೆಗೆ ಹಣವನ್ನು ಬೇಗ ಬಿಡುಗಡೆ ಮಾಡಿ ಆ ಕ್ಷೇತ್ರದ ಅಭಿವೃದ್ಧಿಗೆ ಅನುಕೂಲ ಮಾಡಿಕೊಡುತ್ತಾರೆಂದು ಭಾವಿಸಿದ್ದೇನೆ. ಏಕೆಂದರೆ ಬಯಲು ಸೀಮೆಯಲ್ಲಿನ ಬಹಳಷ್ಟು ಕ್ಷೇತ್ರಗಳು ಬರದ ಛಾಯೆಯಲ್ಲಿ ಇವೆ. ಈ 2-3 ವಿಷಯಗಳ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರು ಹಸಿವು ಜಾಸ್ತಿಯಾಗಿ ಪೇಪರ್ ತಿನ್ನುವಂತಹ ಪ್ರದರ್ಶನವನ್ನು ಮಾಡುತ್ತಿದ್ದಾರೆ.

ಶ್ರೀ ಜಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೇ, ಇನ್ನು ಒಂದು ಗಂಟೆಗಳ ಕಾಲ ಸದನ ನಡೆದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಪೇಪರ್‌ನ್ನು ತಿನ್ನುತ್ತಾರಂತೆ, ಎರಡು ಗಂಟೆಗಳ ಕಾಲ ಸದನ ನಡೆದರೆ ಮಾನ್ಯ ಕೆ.ಹೆಚ್.ಪುಟ್ಟಣ್ಣಯ್ಯನವರು ಶಾಲ್ ತಿನ್ನುತ್ತಾರಂತೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ನಾನು ತಮಗೆ ಹೇಳುವುದು ಇಷ್ಟೇ. ಇದನ್ನು ಹಾಸ್ಯವೆಂದು ತಿಳಿದುಕೊಳ್ಳಬೇಡಿ. ಇನ್ನು ಒಂದು ಗಂಟೆ ಸದನ ನಡೆದರೆ ನಾವು ಏನು ಸಿಗುತ್ತದೆ ಅದನ್ನು ತಿನ್ನಬೇಕಾಗುತ್ತದೆ. ಅದರಲ್ಲಿ ಎರಡನೇ ಮಾತು ಇಲ್ಲವೇ ಇಲ್ಲ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ರೆಡಿ ಮಾಡಿರುವಂತಹ ಊಟ ರೆಡಿಯಾಗಿ ಬಂದಿದೆ. ಈಗ ಯೋಗೀಶ್‌ಭಟ್‌ರವರು ಮಾತನಾಡಿದ ನಂತರ ಊಟವನ್ನು ಮಾಡಿ ವಾಪಸ್ಸು ಬರೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಇವರು ಮಾತನಾಡಿದ ನಂತರ ಸಭೆಯನ್ನು ಮುಂದೂಡಿ ನಂತರ ನಾಳೆ ಬೆಳಿಗ್ಗೆ ಸೇರೋಣ.

ಅಧ್ಯಕ್ಷರು: ಇನ್ನು ಬಹಳ ಜನರಿಗೆ ಅವಕಾಶವನ್ನು ಮಾಡಿಕೊಡಬೇಕಾಗಿದೆ.

ಶ್ರೀ ವಾಟಾಳ್‌ನಾಗರಾಜ್: ಇಲ್ಲ ಚರ್ಚೆಯು ಮುಂದುವರೆಯಲಿ. ನಾನು ಏಕೆ ಹೇಳಿದೆ ಎಂದರೆ, ಸ್ವಲ್ಪ ಹಾಸ್ಯ ಇರಲಿ ಎನ್ನುವಂತಹ ದೃಷ್ಟಿಯಿಂದ ಹೇಳಿದೆ ಅಷ್ಟೇ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೇ, ಸದನ ಪ್ರಾರಂಭವಾದಾಗಿನಿಂದಲೂ ಸಹ ನಮ್ಮ ಜೊತೆಯಲ್ಲಿ ಅವರು ಊಟವನ್ನು ಮಾಡಿರುವಂಥದ್ದನ್ನು ನಾವುಗಳು ನೋಡಿಲ್ಲ. ಇದು ಅಲ್ಲದೇ ಒಂದು ಗ್ಲಾಸ್ ಹಾಲನ್ನು ಸಹ ಕುಡಿಯುತ್ತಿರುವುದನ್ನು ನಾವು ನೋಡಿಲ್ಲ. ಏಕೆ ಹೊಟ್ಟೆ ಹಸಿಯುತ್ತಿದೆ ಎಂದು ಹೇಳುತ್ತಿದ್ದಾರೋ ಗೊತ್ತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆಯಿಲ್ ಕಾರ್ಪೊರೇಷನ್ನಿನವರು ಒಂದು ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ. ಇದರಲ್ಲಿ ಏನು ಹೇಳಿದ್ದಾರೆ ಅದನ್ನು ತಾವು ನೋಡಿರಬಹುದು. "Consequent to the increase of Excise duty and Sales Tax over and above the basic increase of Rs.1 and State surcharge announced by the Central Government." ಹೀಗೆ Rs.2.43 State Government Surcharge, Sales Tax, Entry Tax ಇವೆಲ್ಲ ಸೇರಿದೆ ಎಂದು ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕ ಸಚಿವರು): ಮಾನ್ಯ ಅಧ್ಯಕ್ಷರೇ, ಪ್ರತಿಯೊಂದು ಸ್ಟೇಟ್‌ಗೂ ಬೇರೆ ಬೇರೆ ರೇಟ್ಸ್ ಇದೆ. ಇವತ್ತು ನಮ್ಮ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡುತ್ತಿದ್ದೇನೆ. We will have to take it up with the Government of India. ಇದು ಸರಿಯಾದುದು ಅಲ್ಲ. ಏಕೆಂದರೆ ಒಂದು ರೂಪಾಯಿ ಜಾಸ್ತಿ ಎಂದು ಹೇಳಿ, ಮೂರು ರೂಪಾಯಿ ಚಿಲ್ಲರೆ ಹೆಚ್ಚಾಗಿ ಸಾಕಷ್ಟು ತೊಂದರೆಯಾಗಿದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗಾಗಿ ಕೇಂದ್ರ ಸರ್ಕಾರದ ಹತ್ತಿರ ಹೋಗಬೇಕಾಗುತ್ತದೆ. ಇದರ ಬಗ್ಗೆ ಕಲ್ಪನೆ ಇಲ್ಲ. ನಾಳೆ ಬೇಕಾದರೆ ಹೇಳಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏಕೆಂದರೆ ಅಡಿಗೆ ಅನಿಲದಲ್ಲಿ 60 ರೂಪಾಯಿಗಳು, ಡಿಸೇಲ್‌ನಲ್ಲಿ ಮೂರು ರೂಪಾಯಿಗಳು, ಪೆಟ್ರೋಲ್‌ನಲ್ಲಿ ಒಂದು ರೂಪಾಯಿ ಇದ್ದರೂ ಕೂಡ 2.40 ಪೈಸೆಯಾಗಿದೆ. ಅದಕ್ಕೆ ಅವರು ಹೇಳುವುದೇನೆಂದರೆ ಸ್ಟೇಟ್ ಸೇಲ್ಸ್ ಟ್ಯಾಕ್ಸ್, ಎಂಟ್ರಿ ಟ್ಯಾಕ್ಸ್, ಸರ್ಚ್ ಚಾರ್ಜ್ ಇದು ಎಲ್ಲಾ ಸೇರಿದೆ. It is left to the State Government ಎನ್ನುವುದು ಒಂದು ಕ್ಲಾರಿಫಿಕೇಷನ್‌ನ್ನು ಆಯಿಲ್ ಕಾರ್ಪೊರೇಷನ್ನಿನವರು ಕೊಟ್ಟಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇನ್ನು ಎಷ್ಟು ಜನರು ಮಾತನಾಡುವವರು ಇದ್ದಾರೆ.

ಅಧ್ಯಕ್ಷರು: ಹೆಚ್ಚಿಗೆ ಏನೂ ಇಲ್ಲ, ಒಂದು ಡಜನ್ ಇದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈಗ ಸಭೆಯನ್ನು ಮುಂದೂಡಿ ಮತ್ತೆ ಬೆಳಿಗ್ಗೆ 9.30

ಗಂಟೆಗೆ ಸೇರೋಣ. ಏಕೆಂದರೆ ಕೆಲವರಿಗೆ ತೊಂದರೆಯಾಗುತ್ತದೆ. ಕೆಲವರಿಗೆ ಡಯಾಬಿಟೀಸ್ ಅದು ಇದು ಇರುತ್ತದೆ.

ಅಧ್ಯಕ್ಷರು: ಆಯಿತು ಡಯಬಿಟೀಸ್ ಎಲ್ಲಾ ಇರುತ್ತದೆ. ಕೆಲವರಿಗೆ ತೊಂದರೆಯಾಗುತ್ತದೆ.

ಶ್ರೀ ವಸಂತಬಂಗೇರ: ಸದನವನ್ನು ಈಗ ಮುಂದೂಡಿದರೆ ಮತ್ತೆ ಕಷ್ಟವಾಗುತ್ತದೆ.

ಅಧ್ಯಕ್ಷರು: ವಿಪ್ ಅವರ ಕಷ್ಟವನ್ನು ಅವರು ಹೇಳುತ್ತಿದ್ದಾರೆ. ಮತ್ತೆ ಸಭೆ ಸೇರುವುದಕ್ಕೆ ನಾನು ಎಲ್ಲಿಂದ ಕರೆದುಕೊಂಡು ಬರಲಿ ಎಂದು ಅವರವರು ಅವರವರ ಕಷ್ಟವನ್ನು ಹೇಳಿಕೊಳ್ಳುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಮಾತನಾಡುತ್ತಿರಲಿ. ಊಟಕ್ಕೆ ಸ್ವಲ್ಪ ಸ್ವಲ್ಪ ಸದಸ್ಯರುಗಳು ಹೋಗಿ ಬರುವಂತಹ ವ್ಯವಸ್ಥೆಯನ್ನಾದರೂ ಮಾಡೋಣ.

ಅಧ್ಯಕ್ಷರು: ಯೋಗೀಶ್ ಭಟ್‌ರವರು ಮಾತನಾಡುತ್ತಿರಲಿ, ಅವರ ಭಾಷಣ ಮುಗಿಯುವ ಹೊತ್ತಿಗೆ ಅರೇಂಜ್‌ಮೆಂಟ್ ಮಾಡೋಣ.

ಶ್ರೀ ಎಸ್.ರಾಜಣ್ಣ: ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು: ಹಸಿವನ್ನು ಮರೆಯುವುದಕೋಸ್ಕರವಾಗಿ ರಾಜಣ್ಣನವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡೋಣ. ತಮ್ಮನ್ನು ಆಮೇಲಿ ಕರೆಯುತ್ತೇನೆ. ಶ್ರೀ ಯೋಗೀಶ್‌ಭಟ್‌ರವರು ಬಹಳ ಹೊತ್ತಿನಿಂದ ಕಾಯುತ್ತಿದ್ದಾರೆ. ಅವರಿಗೆ ಅವಕಾಶನನ್ನು ಕೋಡೋಣ. ಯೋಗೀಶ್‌ಭಟ್‌ರವರೇ, ತಾವು ಮಾತನಾಡಿ ಮುಗಿಸಿಬಿಡಿ.

+ ಶ್ರೀ ಎಸ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿರುವುದಕ್ಕಾಗಿ ತಮಗೆ ವಂದಿಸಿ ನನ್ನ ಅನಿಸಿಕೆಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಒಂದು ಸನ್ನಿವೇಶವನ್ನು ನಾವು ಕಲ್ಪಿಸಿದರೆ ಒಬ್ಬ ತಾಯಿಗೆ ತುರ್ತು ಚಿಕಿತ್ಸೆ ಬೇಕಾಗಿದೆ ಎಂದು ಹೇಳಿ ಆಸ್ಪತ್ರೆಯಲ್ಲಿ ದಾಖಲೆ ಮಾಡುವಂತಹ ಒಂದು ಸನ್ನಿವೇಶ. ಇಪ್ಪತ್ತು ಮಕ್ಕಳು ಆ ತಾಯಿಯ ಜೊತೆಯಲ್ಲಿರುತ್ತಾರೆ. ಈ ಸಂದರ್ಭದಲ್ಲಿ ಡಾಕ್ಟರ್ ಆ ತಾಯಿಗೆ ತುರ್ತಾಗಿ 10 ಬಾಟಲ್ ರಕ್ತವನ್ನು ಕೊಡಬೇಕೆಂದು. ಆ ಸಂದರ್ಭದಲ್ಲಿ ಸಣ್ಣ ಮಗ ರಕ್ತದಾನಕ್ಕೆ ಮುಂದಾಗುತ್ತಾನೆ. ಇನ್ನೇನು ರಕ್ತವನ್ನು ತೆಗೆದುಕೊಳ್ಳಬೇಕೆಂದಾಗ ಹಿರಿಯ ಅಣ್ಣ ಹೇಳುತ್ತಾನೆ ಅಲ್ಲಿ ಯಾರು ರಕ್ತವನ್ನು ಕೊಡುವುದಕ್ಕೆ ಸಣ್ಣ ಮಗ ಮಲಗಿದ್ದಾನೆ ಅವನಿಂದಲೇ 10 ಬಾಟಲ್ ರಕ್ತವನ್ನು ಕೊಡಿಸಬೇಕೆಂದು ಈಗ ಡಾಕ್ಟರ್ ಹೇಳುತ್ತಾರೆ

ಬಹುಶಃ ಎರಡು ಬಾಟಲ್‌ಗಿಂತಲೂ ಹೆಚ್ಚು ರಕ್ತವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಎಷ್ಟು ಹೇಳಿದರೂ ಕೂಡ ಹಿರಿಯ ಅಣ್ಣ ಒಪ್ಪುವುದಿಲ್ಲ. ಅಂತಹ ಸನ್ನಿವೇಶ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದೆ. ಏಕೆಂದರೆ ಇಂತಹ ಒಂದು ತುರ್ತುಪರಿಸ್ಥಿತಿಯು ದಕ್ಷಿಣ ಕನ್ನಡಕ್ಕೆ ಬಂದಿದೆ. ನಮ್ಮ ರಾಜ್ಯದ ವಿದ್ಯುತ್ ಬೇಡಿಕೆಯು 5,000 ಮೆಗಾವ್ಯಾಟ್ ಇದೆ. ಆದರೆ ನಿಜವಾಗಿಯೂ ಉತ್ಪಾದನೆಯಾಗುತ್ತಿರುವುದು 3,000 ಮೆಗಾವ್ಯಾಟ್. 2,500 ಮೆಗಾವ್ಯಾಟ್ ವಿದ್ಯುತನ್ನು ಕೇವಲ ದಕ್ಷಿಣಕನ್ನಡ ಜಿಲ್ಲೆಯಿಂದ ಪಡೆಯುವಂತಹ ಪರಿಸ್ಥಿತಿಯು ಇವತ್ತು ಬಂದಿದೆ. ನನ್ನ ನನಗೆ ಒಂದು ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ಮಂಗಳೂರು ಪವರ್ ಕಂಪನಿಯು 1,000 ಮೆಗಾವ್ಯಾಟ್, ನಾಗಾರ್ಜುನ ಪವರ್ ಕಾರ್ಪೊರೇಷನ್ 1,000 ಮೆಗಾವ್ಯಾಟ್ ತನ್ನೀರ್ ಬಾವಿ 170 ಮೆಗಾವ್ಯಾಟ್, ಬಾರ್ಜ್‌ಮೌಂಟೆಡ್ 170 ಮೆಗಾವ್ಯಾಟ್, ಸ್ಮಿತ್ ಕೋ ಜನರೇಷನ್ ಕಂಪೆನಿ 170 ಮೆಗಾವ್ಯಾಟ್, Uro Capital 156 MW, Bhoruka Powers, Mittal Steels, Global Capital Investments, Dorsangi, Lind Blow, Atriya, Power Corporatiion, Sagar Power Corporation, Thrinitta Energy. ಹೀಗೆ ಸುಮಾರು 13 ಪವರ್ ಪ್ರಾಜೆಕ್ಟ್‌ನಿಂದ 2,500 ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಈ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಒಂದು ದಾರಣ ಶಕ್ತಿಯ ಅಧ್ಯಯನ ಮಾಡದೇ ಯಾವುದೇ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು ಬೇಡ. ಹೊಸ ಮೇಗಾ ಇಂಡಿಸ್ಟ್ರೀಸ್‌ಗೆ ಕೊಡುವುದು ಬೇಡವೆಂದು ಏನು ಹೋರಾಟಗಳು ನಡೆಯುತ್ತಿದೆ, ಈ ಸಂದರ್ಭದಲ್ಲಿ ನಮ್ಮ ಬೃಹತ್ ಉದ್ಯಮಗಳ ಸಚಿವರ ಇನ್ನೊಂದು ಉತ್ತರ ಬಂತು ಅದು ಏನೆಂದರೆ 25.2. 1997 ಸರ್ಕಾರ ಒಂದು ಆದೇಶನ್ನು ಹೊರಡಿಸಿದೆ. ಡಾ: ಮಾಧವ್‌ಗಾಡ್ಗೀಲ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯಾಗಿದೆ. ಪ್ರೊಫೆಸರ್ ಡಿ.ಕೆ.ಸುಬ್ರಮಣ್ಯರವರ ಅಧ್ಯಕ್ಷತೆಯಲ್ಲಿ ಉಪ ಸಮಿತಿಯನ್ನು ಮಾಡಿಕೊಂಡು ಎರಡು ವರ್ಷಗಳಲ್ಲಿ ಅಧ್ಯಯನಗೊಳಿಸಿಕೊಂಡು ಅದರ ತನಿಖಾ ವರದಿಯು ಬರುತ್ತದೆ. ಈ ತನಿಖಾ ವರದಿಯು ಬರುವವರೆಗೆ ಯಾವುದೇ ನಿದರ್ಶನಗಳನ್ನು ಕೊಡುವುದು ಬೇಡ ಎಂದು ಹೇಳುವಂತಹ ಒತ್ತಾಯವನ್ನೂ ಕೂಡ ಕೊಡಲಿಕ್ಕೆ ಬಯಸುತ್ತೇನೆ. ಇದೇ ಸಂದರ್ಭದಲ್ಲಿ ಇನ್ನೊಂದು ಪ್ರಶ್ನೆಯನ್ನೂ ಸಹ ನಾನು ಕೇಳಿದ್ದೆ ಬಾರ್ಜ್ ಮೌಂಟೆಡ್‌ಗೆ ಸಂಬಂಧಪಟ್ಟ ಹಾಗೆ 5.12.1995ರಲ್ಲಿ ಎಷ್ಟು ಟೆಂಡರ್‌ಗಳು ಬಂದಿತ್ತು ಎಂದು ಹೇಳಿ. ಸುಮಾರು 35 ಟೆಂಡರ್ ಫಾರ್ಮ್‌ಗಳಿಂದ ಟೆಂಡರ್ ಬಂದಿತ್ತು ಎನ್ನುವುದು ಉಲ್ಲೇಖವಾಗಿತ್ತು. Bids for setting up Barge Mounted Power projects were invited by the Government and the tenders were opened. Ony 3-4 had been Passed at the time of opening of the bids, as the bids were invited on competitive basis and only 3 firms

had bid against the Tender. ನನ್ನ ಪ್ರಶ್ನೆ ಏನೆಂದು ಹೇಳಿದರೆ, ಮಂಗಳೂರಿನಲ್ಲಿ ಎರಡು, ಕುಮಟದಲ್ಲಿ ಒಂದು ಎಂದು ಹೇಳಿಕೊಂಡು ಮಂಗಳೂರಿನಲ್ಲಿ 150 ಮೆಗಾವ್ಯಾಟ್ ಒಂದು ಯೂನಿಟ್ ಎಂದು ಹೇಳಿದರು ಕೂಡ ನಾಲ್ಕು ಕಂಪನಿಗಳಿಗೆ ಹೇಗೆ ಕೊಟ್ಟಿದ್ದೀರಿ? ಇಲ್ಲಿ ಸ್ಮಿತ್ ಕೋ ಜನರೇಷನ್, ಚಿಕಾಗೋ ಪವರ್ ಕಂಪನಿ, ಯೂನಿವರ್ಸಲ್ ವಾಟರ್ ಪವರ್ ಅಂಡ ಯುರೋ ಕ್ಯಾಪಿಟಲ್ ಈ ನಾಲ್ಕು ಕಂಪನಿಗಳಿಗೆ ಟೆಂಡರ್‌ನ್ನು ಹೇಗೆ ಕೊಟ್ಟಿದ್ದೀರಿ? ಈ ನಾಲ್ಕು ಕಂಪನಿಗಳಿಗೆ ಟೆಂಡರ್ ಇಲ್ಲದೇ ಯಾವ ಆಧಾರದ ಕೊಟ್ಟಿದೆ ಎನ್ನುವಂತಹ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇಎಂಡಿ ಹಣವನ್ನು ಕಟ್ಟದೇ ಟೆಂಡರ್ ಹೇಗೆ ಪಾಸ್ ಆಯಿತು? ಇದರ ಬಗ್ಗೆ ತನಿಖೆ ಮಾಡಿಸಬೇಕೆಂದು, ಸನ್ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ಒತ್ತಾಯವನ್ನು ಮಾಡುವುದಕ್ಕೆ ಇಚ್ಛಿಸುತ್ತೇನೆ. ಎರಡನೆಯದಾಗಿ ನಾಲ್ಕು ಕಂಪನಿಗಳ ಪಿಪಿಎಗಳು ದೆಹಲಿಯಲ್ಲಿರುವ ವಕೀಲರ ಒಂದು ಕಛೇರಿಯಲ್ಲಿ ಡ್ರಾಫ್ಟ್ ಆಯಿತು. ಸುಮಾರು 70 ಲಕ್ಷ ರೂಪಾಯಿಗಳಷ್ಟು ಖರ್ಚಾಗಿದೆಂದು ನನಗೆ ವರದಿಯು ಸಿಕ್ಕಿದೆ. ಈ ವಕೀಲರು ನಮ್ಮ ಕೆ.ಇ.ಬಿ. ಇಲಾಖೆಯ ಮುಖ್ಯ ಅಧಿಕಾರಿಗಳ ಸಂಬಂಧಿಕರು ಎನ್ನುವ ಬಗ್ಗೆ ಮಾಹಿತಿಯೂ ಕೂಡ ಇದರ ಬಗ್ಗೆ ತನಿಖೆಯನ್ನು ನಡೆಸಬೇಕು. Technical know-how ಇರುವಂತಹ ಇಂಜನಿಯರ್‌ರವರು ಪರಿಶೀಲಿಸಬೇಕಾದಂತಹ ಸಂದರ್ಭದಲ್ಲಿ ಸನ್ನಿವೇಶದಲ್ಲಿ, ಈ ವಕೀಲರ ವೇದಿಕೆಯು ಇದಕ್ಕೆ ಹೇಗೆ ಸಹಿ ಮಾಡಿತು? ಹೇಗೆ ಒಪ್ಪಂದಕ್ಕೆ ವ್ಯವಸ್ಥೆಯನ್ನು ಮಾಡಿತ್ತು ಎನ್ನುವುದನ್ನೂ ಸಹ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸ್ತೇನೆ.

9.10 ಪಿ.ಎಂ

ನಾಲ್ಕು ಜನ ವಿದ್ಯುತ್ ಇಲಾಖೆಯ ಅಧಿಕಾರಿಗಳು ಬಾರ್ಜ್ ಮೌಂಟೆಡ್ ವಿದ್ಯುತ್ ಯೋಜನೆಗಳ ಕಾರ್ಯವೈಖರಿಯ ಬಗ್ಗೆ ಡೊಮಿನಿಕ್ ಗಣರಾಜ್ಯಗಳಲ್ಲಿ ಅಧ್ಯಯನ ನಡೆಸಲು ಹೊಸ ಪಿಪಿಎ ಸಹಿ ಮಾಡಿದರು. ಇದು ಭಾರತದಲ್ಲಿ ಹೊಸ ಪ್ರಯೋಗವಾಗಿದ್ದರೂ ಕೂಡ ಯಾವುದೇ ತಾಂತ್ರಿಕ ಅನುಭವಗಳು ಇಲ್ಲದಿದ್ದರೂ ಕೂಡ ಈ ಅಗ್ರಿಮೆಂಟ್‌ಗೆ ಹೇಗೆ ಸಹಿ ಮಾಡಿದರು ಎಂಬ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ 4 ಕಂಪನಿಗಳು ಸಹಿ ಮಾಡಿದ್ದರಲ್ಲಿ ಒಂದು ಕಂಪನಿ ಮೆಸರ್ಸ್ ಸ್ಮಿತ್ ಕೋ ಜನರೇಷನ್ ಮಾತ್ರ ಡೋಮಿನಿಕ್ ಗಣರಾಜ್ಯಗಳಲ್ಲಿ ವಿದ್ಯುತ್ ತಯಾರಿಸಿದ ಹಿನ್ನಲೆ ಇದೆ. ಇನ್ನಿತರ 3 ಕಂಪನಿಗಳು ಯೂನಿವರ್ಸಲ್ ವಾಟರ್ ಪವರ್ ಕಂಪನಿ, ಚಿಕಾಗೋ ಪವರ್ ಕಂಪನಿ ಮತ್ತು ಮೆಸರ್ಸ್ ಯೂರೋ ಕಾಪಿಟಲ್ ಇವು ಜಗತ್ತಿನಲ್ಲಿ ಇದುವರೆಗೆ ಯಾವುದೇ ವಿದ್ಯುತ್ ತಯಾರಿಸಿಲ್ಲ. ಇವು ಕೇವಲ ಬೋಗಸ್ ಕಂಪನಿಗಳು. ಇದರ ಬಗ್ಗೆ ತನಿಖೆ ನಡೆಸದೆ ಹೇಗೆ ಪಿಪಿಎ.ಗೆ ಸಹಿ ಮಾಡಿದಿರಿ ಎಂಬ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟ ಪಡುತ್ತೇನೆ. ಪ್ರತಿ ಯೂನಿಟ್‌ಗೆ ದರ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರತಿ ಯೂನಿಟ್‌ಗೆ ದರ ಕೊಡುವ ಬಗ್ಗೆ ಕಂಪನಿ ಕೇಳಿದಷ್ಟು ಕೊಡಲು ಒಪ್ಪಿದ್ದೀರಾ ಎಂಬ

ಪ್ರಶ್ನೆಯನ್ನು ಕೇಳಿದ್ದೆ. ನನಗೆ ಉತ್ತರ ಈ ರೀತಿ ಸಿಕ್ಕಿತು. ಮೆಸರ್ಸ್ ಸ್ಮಿತ್ ಕೋ-ಜನರೇಷನ್ 2.60 ಪೈಸೆಗೆ ಒಪ್ಪಿಗೆ ಕೊಟ್ಟಿತ್ತು. ಮೆಸರ್ಸ್ ಯೂನಿವರ್ಸಲ್ ಅಂಡ್ ಪವರ್ ಕಂಪನಿ 2.60 ಪೈಸೆ ಪರ್ ಯೂನಿಟ್‌ಗೆ ತಮ್ಮ ರೇಟನ್ನು ಕೇಳಿತ್ತು. ಮೆಸರ್ಸ್ ಯೂರೋ ಕ್ಯಾಪಿಟಲ್ 2.20 ಪೈಸೆಗೆ ಕೇಳಿತ್ತು. ನನಗೆ ಮುಂದೆ ಬಂದ ಉತ್ತರ ಹೀಗಿದೆ: ಸಾಕಷ್ಟು ಚರ್ಚೆಗಳ ನಂತರ ಒಪ್ಪಿಗೆ ಸಿಕ್ಕಿದೆ ಎಂದು. ಅವರು ಕೇಳಿದ ರೇಟನ್ನು ನಾವು ಕೊಡಲು ಒಪ್ಪಿಕೊಂಡಿದ್ದೇವೆಂದು ಹೇಳಿದರೂ ಕೂಡ ನನಗೆ ಸಿಕ್ಕಿದ ಉತ್ತರದಮೇಲೆ ಕೇಳುತ್ತಿದ್ದೇನೆ. ಈ ಯೂರೋ ಕ್ಯಾಪಿಟಲ್ ಯಾವುದು ಇದೆ ಇದಕ್ಕೆ 2.20 ಪೈಸೆ ಅವರು ಕೇಳಿದ್ದರೂ ಕೂಡ ಉತ್ತರ ಸಿಕ್ಕಿದ್ದು 2.50 ಪೈಸೆ ಎಂದು. 30 ಪೈಸೆಯನ್ನು ಹೇಗೆ ಅವರು ಕೇಳಿದ್ದಕ್ಕಿಂತ ಜಾಸ್ತಿ ಕೊಟ್ಟಿರಿ? ಇದು ಯಾವ ನ್ಯಾಯ ಸ್ವಾಮಿ? ಇದರ ಬಗ್ಗೆ ಕೂಡ ತನಿಖೆ ನಡೆಸಬೇಕೆಂದು ಒತ್ತಾಯಿಸುತ್ತೇನೆ. ಬಾರ್ಜ್ ಮೌಂಟೆಡ್ ವರದಿಯನ್ನು ಸ್ವಲ್ಪ ಅಧ್ಯಯನ ಮಾಡಿದಾಗ ಸಿಕ್ಕಿದ ಮಾಹಿತಿ 10 ಕಿಲೋಮೀಟರ್ ದೂರದಲ್ಲಿ ಜನ ಸಾಂದ್ರತೆ ಇಲ್ಲ, ಕಾಡು ಇಲ್ಲ ಎಂದು ಎಲ್ಲಾ ಊಹಿಸಿಕೊಂಡು ಕೊಟ್ಟಿದ್ದರೂ ಕೂಡ ಕೇವಲ ಒಂದು ಕಿಲೋಮೀಟರ್ ದೂರದಲ್ಲಿ, 200 ಮೀಟರ್ ದೂರದಲ್ಲಿ ಜನಸಾಂದ್ರತೆ ಇದೆ. ಒಂದು ಕಿಲೋಮೀಟರ್ ದೂರದಲ್ಲಿ ಪಟ್ಟಣ ಪ್ರದೇಶ ಇರುವುದು ದಾಖಲಾಗಿದೆ. ಕೋಸ್ಟಲ್ ರೆಗ್ಯುಲರ್ ಜೋನ್ ಏನಿದೆ ಅದರ ನಿಯಮಾವಳಿ ಪ್ರಕಾರ ಸಮುದ್ರ ತೀರದಿಂದ 500 ಮೀಟರ್ ದೂರದವರೆಗೆ ಯಾವುದೇ ಚಟುವಟಿಕೆ ನಡೆಸುವ ಹಾಗೆ ಇಲ್ಲ. ಆದುದರಿಂದ ಕರಾವಳಿ ಜನರ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ದಯವಿಟ್ಟು ಬಾರ್ಜ್ಡ್ ಮೌಂಟೆಡ್ ವಿದ್ಯುತ್ ಘಟಕಗಳು ನಮಗೆ ಬೇಡ. ಇನ್ನು ನಮ್ಮ ಪವರ್ ಪಾಲಿಸಿ ಬಗ್ಗೆ, ಎನರ್ಜಿ ಯೂನಿಟ್ ಬಗ್ಗೆ ರೆವ್ಯೂ ಮಾಡಬೇಕಾಗಿದೆ. ಇಷ್ಟು ಮಾತ್ರವಲ್ಲ, ಇಂಟರ್ ನ್ಯಾಷನಲ್ ಇನಿಷಿಯೇಟೀವ್ ಸಂಸ್ಥೆಯ ಅಧ್ಯಯನದ ಪ್ರಕಾರ ಕೇವಲ 42 ಪರ್ಸೆಂಟ್ ಎಲೆಕ್ಟ್ರಿಕ್ ಎನರ್ಜಿ ಮಾತ್ರ ಮೀಟರ್ ಆಗಿದೆ. 52 ಪರ್ಸೆಂಟ್ ಎನರ್ಜಿ ನಾನ್ ಮೀಟರ್ ಆಗಿದೆ. ಅದೇ ರೀತಿ ಬೆಂಗಳೂರು ಇಂಡಿಯನ್ ಇನ್‌ಸ್ಟಿಟ್ಯೂಟ್‌ನವರು ಯಾವ ರೀತಿ ಅಧ್ಯಯನ ಮಾಡಿ ಸಲಹೆ ಕೊಟ್ಟಿದ್ದಾರೆ ಆ ಸಲಹೆ ಪ್ರಕಾರ ಇಸ್ರೇಲ್‌ನಂತೆ ನಮ್ಮ ರಾಜ್ಯದಲ್ಲಿ ಹೊಸ ಮನೆಗಳನ್ನು ಕಟ್ಟುವಾಗ ಕಡ್ಡಾಯವಾಗಿ ಸೋಲಾರ್ ವಾಟರ್ ಹೀಟರ್ ಅಳವಡಿಸಿದರೆ ಬಹುಶಃ 200 ಮೆಗಾವ್ಯಾಟ್ ವಿದ್ಯುತ್ ಅನ್ನು ಉಳಿಸುವುದಕ್ಕೆ ಸಾಧ್ಯತೆ ಇದೆ. ಅದೇ ರೀತಿ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ಲಾಸ್ ಅನ್ನು 23ರಿಂದ 13 ಪರ್ಸೆಂಟ್‌ಗೆ ಇಳಿಸುವುದಕ್ಕೆ ಸಾಧ್ಯತೆ ಇದೆ. ಅದರ ಮೂಲಕ 340 ಮೆಗಾವ್ಯಾಟ್ ವಿದ್ಯುತ್ ಅನ್ನು ಉಳಿಸಬಹುದು. 340 ಮೆಗಾವ್ಯಾಟ್ ವಿದ್ಯುತ್ ಉಳಿಸುವುದಕ್ಕೋಸ್ಕರ ವಿಶ್ವ ಬ್ಯಾಂಕ್ 100 ಮಿಲಿಯನ್ ಅಮೆರಿಕನ್ ಡಾಲರ್ ನೆರವನ್ನು ಕೊಡುವುದಕ್ಕೆ ಮುಂದೆ ಬಂದಿದೆ. ಆದರೆ ನಮ್ಮ ಸರ್ಕಾರ ಅದರ ಉಪಯೋಗ ಮಾಡಿಕೊಂಡಿಲ್ಲವೆಂಬುದು ನಮ್ಮ ಗಮನಕ್ಕೆ ಬಂದಿದೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುವಾಗ ಉತ್ತರಿಸಬೇಕೆಂದು ನೆನಪಿಸುತ್ತೇನೆ. ರಾಜ್ಯದ ವಿದ್ಯುತ್ ಬೇಡಿಕೆಯಲ್ಲಿ ಅವರ ಅಭಿಪ್ರಾಯಗಳು ಏನೆಂದು

ಹೇಳುವುದಕ್ಕೆ ಇಷ್ಟಪಡುತ್ತೇನೆ. ತಜ್ಞರ ಅಭಿಪ್ರಾಯದಂತೆ ಚಿಕ್ಕಚಿಕ್ಕ ಹೈಡ್ರೋ ಪವರ್ ಪ್ಲಾಂಟ್ ಸ್ಥಾಪನೆಯಿಂದ ರಾಜ್ಯದಲ್ಲಿ 500ರಿಂದ 600 ಮೆಗಾವ್ಯಾಟ್ ವಿದ್ಯುತ್ ಪ್ರೊಡ್ಯೂಸ್ ಮಾಡಬಹುದು. ಈಗಿರುವ ಥರ್ಮಲ್ ಪ್ಲಾಂಟ್ ಆಧುನೀಕರಣದಿಂದ 100ರಿಂದ 150 ಮೆಗಾವ್ಯಾಟ್ ವಿದ್ಯುತ್ ಉಳಿತಾಯ ಮಾಡುವುದಕ್ಕೆ ಸಾಧ್ಯತೆ ಇದೆ. ಸಕ್ಕರೆ ಕಾರ್ಖಾನೆಗಳ ಕೋಜನರೇಷನ್‌ನಿಂದ 100-150 ಮೆಗಾವ್ಯಾಟ್, ಆಧುನಿಕ ಲೈಟಿಂಗ್ ಸಿಸ್ಟಂ ಅಳವಡಿಸುವುದರಿಂದ 200ರಿಂದ 300 ಮೆಗಾವ್ಯಾಟ್, ಸೋಲಾರ್ ಹೀಟರ್ ಬಳಕೆಯಿಂದ 200 ಮೆಗಾವ್ಯಾಟ್, ಕೆಎನ್‌ಡಿ.ಯಿಂದ 340 ಮೆಗಾವ್ಯಾಟ್ ಹೀಗೆ ಒಟ್ಟು 1450 ಮೆಗಾವ್ಯಾಟ್ ವಿದ್ಯುತ್ ಉಳಿಸುವ ಯೋಜನೆಗಳನ್ನು ತಜ್ಞರು ಕೊಟ್ಟಿದ್ದಾರೆ. ಅದನ್ನು ಅಳವಡಿಸುವ ಬಗ್ಗೆ ತಾವು ದಯವಿಟ್ಟು ಯೋಚಿಸಬೇಕೆಂದು ತಮ್ಮ ಮೂಲಕ ಸಚಿವರನ್ನು ವಿನಂತಿಸುತ್ತಿದ್ದೇನೆ. ಕೊಜೆಂಟ್ರಿಕ್ಸ್ ಬಗ್ಗೆ ಹೈಕೋರ್ಟ್ ತೀರ್ಪು ಬಂದಿದೆ. ಆ ತೀರ್ಪಿನ ಬಗ್ಗೆ ಇರುವಂಥ ಮಾಹಿತಿಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದರಲ್ಲಿ ಒಂದು ಉಲ್ಲೇಖ ಇದೆ. ಮೇರಿ ಮತ್ತು ಸಾಗರದಾರ ವರದಿ ಏನಿದೆ ಅದನ್ನು 3 ತಿಂಗಳಲ್ಲಿ ಅನುಷ್ಠಾನಕ್ಕೆ ತರಬೇಕೆಂಬ ಉಲ್ಲೇಖ ಮಾಡಿದ್ದಾರೆ. ಮೇರಿ ಮತ್ತು ಸಾಗರದಾರ ವರದಿಯ ಅಂಶಗಳು ಈ ರೀತಿ ಇವೆ: ದಕ್ಷಿಣ ಕನ್ನಡ ಜಿಲ್ಲೆ ಜಗತ್ತಿನ ಅತ್ಯಂತ ಸಂವೇದಿ ಸ್ಥಳ ಎಂದು ಗುರುತಿಸಲ್ಪಟ್ಟಿದೆ. ರಾಜ್ಯದ ಜೀವನದಿಗಳಾಗಿರುವ ಕಾವೇರಿ, ತುಂಗಭದ್ರಗಳಂಥ ಅನೇಕ ನದಿಗಳು ಪಶ್ಚಿಮ ಘಟ್ಟಗಳಲ್ಲಿ ಉಗಮವಾಗುವುದರಿಂದ ಕೊಜೆಂಟ್ರಿಕ್ಸ್ ಹೊರ ಹಾಕುವಂಥ 1000 ಟನ್ ಸಲ್ಫೇಟ್ ಡೈ ಆಕ್ಸೈಡ್‌ನಿಂದ ಈ ನದಿಯ ಮೂಲಗಳಿಗೆ ಧಕ್ಕೆ ಬರುವ ಸಾಧ್ಯತೆ ಇದೆ. ಆದುದರಿಂದ ದಯವಿಟ್ಟು ಈ ಪ್ರಾಜೆಕ್ಟನ್ನು ಕೈ ಬಿಡಬೇಕೆಂದು ವರದಿಯ ಅಂಶಗಳು ಇದ್ದ ಸಂದರ್ಭದಲ್ಲಿ ಈ ಹೈಕೋರ್ಟ್ ತೀರ್ಪು ಯಾವುದು ಇದೆ ಅದನ್ನು 3 ತಿಂಗಳಲ್ಲಿ ಅನುಷ್ಠಾನಕ್ಕೆ ತರಬೇಕೆಂಬ ಅಂಶಗಳನ್ನು ಗಮನಿಸಿದಾಗ ಅದನ್ನು ಹೇಗೆ ಅಳವಡಿಸಬೇಕಾಗುತ್ತದೆಂಬ ಅಂಶಗಳನ್ನು ಗಮನಿಸಬೇಕಾಗಿದೆ. ಅಷ್ಟು ಮಾತ್ರವಲ್ಲ, ದಕ್ಷಿಣಕನ್ನಡದಲ್ಲಿ ಕೊಜೆಂಟ್ರಿಕ್ಸ್ ಬೇಡ ಎಂದು ಅಲ್ಲಿನ ಶಾಸಕರು ಜಿಲ್ಲಾ ಪಂಚಾಯಿತಿ ಸದಸ್ಯರು, ತಾಲ್ಲೂಕು ಪಂಚಾಯಿತಿ ಸದಸ್ಯರು ಒಮ್ಮತದಿಂದ ಅವಿರೋಧವಾಗಿ ಮಾಡಿದ ನಿರ್ಣಯ ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆ. ಈ ಎಲ್ಲಾ ಕಾರಣಗಳಿಗೋಸ್ಕರ ಕೊಜೆಂಟ್ರಿಕ್ಸ್ ಬೇಡ ಎಂದು ಹೇಳುವ ಒಂದು ಬೇಡಿಕೆಯನ್ನು ನಾನು ಇಡಲಿಕ್ಕೆ ಇಚ್ಛಿಸುತ್ತೇನೆ. ಅಷ್ಟು ಮಾತ್ರವಲ್ಲ, ಹೆಚ್ಚಿನ ವಿದ್ಯುತ್ ನಮಗೆ ಬೇಕಾಗಿರುವುದು, 65 ಪರ್ಸೆಂಟ್ ವಿದ್ಯುತ್ ಕೇವಲ ಬೆಂಗಳೂರಿಗೆ ಬೇಕಾಗಿರುವುದರಿಂದ ಟ್ರಾನ್ಸ್‌ಮಿಷನ್ ಲಾಸ್ ಬರುವುದು 30 ಪರ್ಸೆಂಟ್ ಬರುವುದರಿಂದ ನಂದಿಕೂರಿನಿಂದ ಬೆಂಗಳೂರಿಗೆ ಬರುವಾಗ 300 ಮೆಗಾವ್ಯಾಟ್ ಮೈನಸ್ ಆಗಿ 700 ಮೆಗಾವ್ಯಾಟ್ ಮಾತ್ರ ಬರುವ ಸಾಧ್ಯತೆ ಇರುವುದರಿಂದ ಕೊಜೆಂಟ್ರಿಕ್ಸ್ ನಿಮಗೆ ಬೇಕೆಂದಿದ್ದರೆ ದಯವಿಟ್ಟು ಬೆಂಗಳೂರಿನ ಹತ್ತಿರ ಹಾಕಿ ಎಂದು ಹೇಳುವ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಚ್ಛಿಸುತ್ತೇನೆ. ಬೃಹತ್

ಯೋಜನೆಗಳಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಎಂ.ಆರ್.ಪಿ.ಎಲ್. ಮತ್ತು ಹೆಚ್.ಪಿ.ಸಿ.ಎಲ್. ನಮ್ಮ ಮಂಗಳೂರು ನಗರಾಭಿವೃದ್ಧಿಗೆ ಹಾಕಿರುವಂಥ 15,16,78,802 ರೂಪಾಯಿಗಳಲ್ಲಿ ಹಾಗೂ ಕೆ.ಎಸ್.ಎಫ್.ಗೆ ಕಟ್ಟಲು ಬಾಕಿ ಇರುವ 2,50,39,788 ರೂಪಾಯಿಗಳನ್ನು ಕಳೆದು ಎರಡು ವರ್ಷಗಳಿಂದ ಕಟ್ಟಿಲ್ಲ. ಈ ಬಗ್ಗೆ ವಿಧಾನಸಭೆಯಲ್ಲಿ ಸುಮಾರು 7-8 ಸಾರಿ ಮಾನ್ಯ ಸಚಿವರಿಗೆ ಕೇಳಿದ್ದೇನೆ. ಇದನ್ನು ವಸೂಲಾತಿ ಮಾಡಿಕೊಂಡು ಕುಡಿಯುವ ನೀರಿಗೆ ಕೊಡಿ ಎಂಬ ಒತ್ತಾಯವನ್ನು ಮಾಡಿದ್ದರೂ ಕೂಡ ಮಾನ್ಯ ಸಚಿವರು ಯಾವುದೇ ರೀತಿಯಲ್ಲಿ ಸ್ಪಂದಿಸದೆ ಇರುವುದು ತುಂಬಾ ನೋವು ತಂದ ಸಂಗತಿಯಾಗಿದೆ. ಮಾನ್ಯ ಸಚಿವರು ಉತ್ತರಿಸುವಾಗ ಹೇಳಬೇಕು. ಯಾವ ರೀತಿ ಇದನ್ನು ವಸೂಲ್ಮಾಡಿಕೊಂಡು ಮಂಗಳೂರು ನಗರಾಭಿವೃದ್ಧಿಗೆ ಯಾವ ರೀತಿ ಕೊಡುತ್ತೀರೆಂಬ ವಿಷಯವನ್ನು ತಿಳಿಸಬೇಕು ಅದರ ಜೊತೆಯಲ್ಲಿ ಬೃಹತ್ ಉದ್ಯಮಿಗಳಿಗೆ ಬೆಟರ್‌ಮೆಂಟ್ ಸೆಸ್ 2 ಪರ್ಸೆಂಟ್ ಹಾಕುವುದರ ಬಗ್ಗೆ ಒತ್ತಾಯ ಮಾಡುತ್ತಿದ್ದೇನೆ. ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ದೃಷ್ಟಿಯಿಂದ ಅದು ಅನಿವಾರ್ಯ ಹೌದು. ಕೊಚ್ಚಿನ್ ಹಾಗೂ ಬಾಂಬೆಯಲ್ಲಿ ಇರುವ ಹಾಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಯೂರೋ ಟ್ರಾನ್ಸ್‌ಪೋರ್ಟೇಷನ್‌ಗೆ ಇರುವಂಥ ಕನ್‌ಸೆಷನ್ ಯಾವುದು ಇದೆ ಅದು ಗ್ರಾಹಕರಿಗೆ ಸಿಗುವ ರೀತಿಯಲ್ಲಿ ತಾವು ವ್ಯವಸ್ಥೆ ಮಾಡಿಕೊಳ್ಳಬೇಕು. ಆದುದರಿಂದ ಅದರಲ್ಲಿ ಕನ್‌ಸೆಷನಲ್ ರೇಟ್ ಬರುವ ರೀತಿಯಲ್ಲಿ ಕೇಂದ್ರ ಸರ್ಕಾರದ ಜೊತೆ ಮಾತುಕತೆ ಆಡಿ ರೇಟ್ ಕನ್‌ಸೆಷನ್ ಮಾಡಬೇಕು ಈ ಪೆಟ್ರೋಲ್ ಮತ್ತು ಡೀಸಲ್‌ಗೆ ಸಂಬಂಧಪಟ್ಟ ಹಾಗೆ ಎಂಬ ಒತ್ತಾಯವನ್ನು ಮಾಡುತ್ತಾ, ನ್ಯೂ ಮಂಗಳೂರು ಪೋರ್ಟ್‌ನವರು ಮಹಾನಗರ ಪಾಲಿಕೆಗೆ ಕೊಡಬೇಕಾದ ಸೆಸ್ ಅನ್ನು ಯಾವ ರೀತಿ ವಿಶಾಖಪಟ್ಟಣದಲ್ಲಿ ಮಹಾನಗರ ಪಾಲಿಕೆಗೆ ಕೊಡುತ್ತಿದ್ದಾರೆ ಹಾಗೆ ಕೊಡುವ ರೀತಿಯಲ್ಲಿ ತಾವು ಪ್ರಯತ್ನ ಮಾಡಬೇಕೆಂಬ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡಿ, ಕೊನೆಯದಾಗಿ ಸಾಮಾನ್ಯ ಆಡಳಿತದ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಈ ಜನವರಿ ಮತ್ತು ಫೆಬ್ರವರಿ ಅಧಿವೇಶನದಲ್ಲಿ ಕೇಳಿದ 175 ಪ್ರಶ್ನೆಗಳಿಗೆ ಇನ್ನೂ ಉತ್ತರ ಬಂದಿಲ್ಲ. ಈ ಅಧಿವೇಶನದಲ್ಲಿ ಕೇಳಿದ 300 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಸುಮಾರು 475 ಪ್ರಶ್ನೆಗಳಿಗೆ ಅಧಿಕಾರಿಗಳು ಉತ್ತರ ಕೊಟ್ಟಿಲ್ಲ. ಮಂತ್ರಿಗಳನ್ನು ಕೇಳಿದರೆ ಉತ್ತರ ಕೊಡುತ್ತಾರೆ, ಆದರೆ ಅಧಿಕಾರಿಗಳ ಹತ್ತಿರ ಕೇಳಿದರೆ ಉತ್ತರ ಸಿಗುವುದಿಲ್ಲ. ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ರೀತಿಯಲ್ಲಿ ಮಾನ್ಯ ಅಧ್ಯಕ್ಷರ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಇನ್ನು ಆರೋಗ್ಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಕೋಟಿ ರೂಪಾಯಿ ಕಳೆದ ಎರಡು ವರ್ಷಗಳಿಂದ ರಿಲೀಸ್ ಆಗಿ ಹಾಗೇ ಇದೆ; ಅದನ್ನು ಹೇಗೆ ಖರ್ಚು ಮಾಡಬೇಕೆಂಬ ನಿರ್ದೇಶನ ಕೊಡಲು ಸರ್ಕಾರ ವಿಫಲವಾಗಿದೆ. ಇವತ್ತು ಅದನ್ನು ಯಾವ ರೀತಿಯಲ್ಲಿ ಉಪಯೋಗಿಸಬೇಕೆಂದು ಆದೇಶ ಕೊಡಲು ಸರ್ಕಾರ ವಿಫಲವಾದ ಬಗ್ಗೆ ನನ್ನ ಬೇಸರವನ್ನು ದಾಖಲಿಸುತ್ತೇನೆ; ಮತ್ತು ಈ ಬಗ್ಗೆ ತಕ್ಷಣ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಪ್ರತಿ ತಿಂಗಳಿಗೆ 150

ರೂಪಾಯಿ ಹಣ ಬರುತ್ತಿದ್ದರೂ ಅಲ್ಲಿನ ಒಂದು ವ್ಯವಸ್ಥೆ ಹಾಳಾಗಿ ಕಳೆದ 6 ತಿಂಗಳುಗಳಿಂದ ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ಪದೇ ಪದೇ ತಂದರೂ ಇವತ್ತಿಗೂ ದುರಸ್ತಿ ಆಗಿಲ್ಲ. ಇಷ್ಟು ಮಾತ್ರವಲ್ಲ, ಮಲೇರಿಯಾ ರೋಗದಿಂದ ಸಾವಿರಾರು ಜನರು ನರಳುತ್ತಿದ್ದರೂ, ಅನೇಕ ಸಾವುನೋವುಗಳು ಆಗಿದ್ದರೂ ಆ ಕಡೆ ಗಮನ ಹರಿಸಿಲ್ಲ. ಈ ಬಗ್ಗೆ ನಾನು ಪದೇ ಪದೇ ಒತ್ತಾಯ ಮಾಡುತ್ತಿದ್ದೇನೆ. ಅಲ್ಲಿ ಒಂದು ಮಲೇರಿಯ ಕಂಟ್ರೋಲ್ ಯೂನಿಟ್ ಅನ್ನು ಮಂಜೂರ್ಮಾಡಿ ಎಂದು ಕೇಳಿದ್ದರೂ ಸರ್ಕಾರದ ಕಡೆಯಿಂದ ಆ ಕೆಲಸ ಆಗಿಲ್ಲ. ಈ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುವಾಗ ಉತ್ತರಿಸಬೇಕು; ಮಲೇರಿಯಾ ಕಂಟ್ರೋಲ್ ಯೂನಿಟ್ ಅನ್ನು ತಾವು ಮಂಜೂರ್ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇನ್ನು ಮಲೆನಾಡು ಪ್ರದೇಶಾಭಿವೃದ್ಧಿಗೆ 50 ಲಕ್ಷ ರೂ.ಗಳನ್ನು ಪ್ರತಿ ಶಾಸಕರಿಗೆ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇದಲ್ಲದೇ 10 ಹೈಟೆಕ್ ಬಸ್‌ಗಳನ್ನು ಮಂಗಳೂರು ಕ್ಷೇತ್ರಕ್ಕೆ ಕೊಡಬೇಕೆಂದು ಸಾರಿಗೆ ಸಚಿವರಲ್ಲಿ ಪುನಃ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಕೆ.ಇ.ಬಿ.ಯಲ್ಲಿ 1976ರಲ್ಲಿ ಏನು ಸಿಬ್ಬಂಧಿ ಮಂಗಳೂರು ಡಿವಿಷನ್‌ನಲ್ಲಿ ಇದ್ದರೋ ಅಷ್ಟೇ ಸಿಬ್ಬಂಧಿ ಇಂದಿಗೂ ಇದ್ದಾರೆ, ಆದುದರಿಂದ 1997ಕ್ಕೆ ಎಷ್ಟು ಹೆಚ್ಚು ಸಿಬ್ಬಂಧಿ ಬೇಕೋ ಅಷ್ಟನ್ನೂ ನೇಮಕಾತಿ ಮಾಡಬೇಕು. 24 ಗಂಟೆಗಳ ಕಾಲ ಸುಸಜ್ಜಿತ ಸೇವೆಯನ್ನು ಕೊಡಬಲ್ಲ ಸೆಂಟ್ರಲ್ ಕಂಪ್ಲೇಂಟ್ ಸೆಲ್‌ನ್ನು ಕೊಡಬೇಕು, ಹತ್ತು ಸಾವಿರ ಕನೆಕ್ಷನ್‌ಗಳಿಗೆ ಒಂದರಂತೆ ಕಂದಾಯ ಶಾಖೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತೇನೆ. ಸನ್ಮಾನ್ಯ ಉಸ್ತುವಾರಿ ಸಚಿವರಿಗೆ ನಮ್ಮ ಗೃಹ ಸಚಿವರು ಯಾವ ರೀತಿ ಸಹಕಾರವನ್ನು ಕೊಡುತ್ತಿದ್ದಾರೋ ಅದೇ ರೀತಿ ಸಹಕಾರವನ್ನು ಇನ್ನಿತರ ಮಂತ್ರಿಗಳು ಕೊಟ್ಟಲ್ಲಿ ಬಹುಶಃ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿಜವಾದ ಅರ್ಥದಲ್ಲಿ ನಾವು ಅಭಿವೃದ್ಧಿಯನ್ನು ಕಾಣುವುದಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ತಾವೂ ಕೂಡ ಶ್ರಮಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ಅಧ್ಯಕ್ಷರಿಗೆ ವಿಶೇಷವಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಶಿವರಾಮ್ (ಗಂಡಸಿ): ಮಾನ್ಯ ಅಧ್ಯಕ್ಷರೇ, ಬೇಡಿಕೆ 24 ಮತ್ತು 47ರ ಬಗ್ಗೆ ಮಾತನಾಡುತ್ತಾ ವಿಶೇಷವಾಗಿ ರೈತರಿಗೆ ಬೇಕಾಗಿರತಕ್ಕಂಥ ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಾತನಾಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಈಗಾಗಲೇ ವಿರೋಧ ಪಕ್ಷದ ನಾಯಕರು ಮತ್ತು ಹಲವಾರು ಸದಸ್ಯರುಗಳು ಈ ಬಗ್ಗೆ ಮಾತನಾಡಿದ್ದಾರೆ. ಈ ರಾಜ್ಯದಲ್ಲಿ 55 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯನ್ನು ಕ್ರಿಯೇಟ್ ಮಾಡಬೇಕೆನ್ನುವ ದೃಷ್ಟಿಯಿಂದ ಸರ್ಕಾರ ಇದನ್ನು ಆದ್ಯತೆಯ ರಂಗದಲ್ಲಿಟ್ಟುಕೊಂಡು ಹಣವನ್ನು ಒದಗಿಸುವ ಕೆಲಸವನ್ನು ಮಾಡುತ್ತಿದೆ. 1997-98ನೇ ಸಾಲಿಗೆ ಕೃಷ್ಣಾಗೆ 1249 ಕೋಟಿ ರೂ.ಗಳನ್ನು ಒದಗಿಸತಕ್ಕಂಥದ್ದು, ಕಾವೇರಿಗೆ 318 ಕೋಟಿ ರೂ.ಗಳನ್ನು

ಒದಗಿಸತಕ್ಕಂಥದ್ದು, ಗೋದಾವರಿಗೆ 28 ಕೋಟಿ ರೂ.ಗಳನ್ನು ಒದಗಿಸುವ ಕೆಲಸವನ್ನು ಸರ್ಕಾರ ಮಾಡಿದೆ. ಆದರೂ ಇಲ್ಲಿಯವರೆಗೆ ನೀರಾವರಿ ಆಗಿರತಕ್ಕಂಥ ಪ್ರದೇಶ ಕೇವಲ 34.51 ಲಕ್ಷ ಹೆಕ್ಟೇರ್ ಪ್ರದೇಶ ಮಾತ್ರ. ಇನ್ನು ಸಾಕಷ್ಟು ಕೆಲಸವನ್ನು ಈ ಇಲಾಖೆಯಲ್ಲಿ ಮಾಡಬೇಕಾಗಿದೆ. ಬಹುಶಃ 2000 ಇಸವಿಯೊಳಗೆ ಸುಮಾರು 12,500 ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾಗುತ್ತದೆಂದು ನಾನಾದರೂ ಭಾವಿಸಿದ್ದೇನೆ. ವಿಶೇಷವಾಗಿ ಕಾವೇರಿ ಬಗ್ಗೆ 15 ಕೋಟಿ ರೂ.ಗಳನ್ನು ಹೋದವರ್ಷಕ್ಕಿಂತ ಈ ವರ್ಷ ಕಡಿಮೆ ಒದಗಿಸಿದ್ದಾರೆ. ನೀರಾವರಿ ಸಚಿವರಿಗೆ ರೈತರ ಬಗ್ಗೆ ಬಹಳ ಕಾಳಜಿ ಇದೆ. ಏಕೆಂದರೆ ಎರಡ್ಮೂರು ಸಾರಿ ಅವರ ಜೊತೆಯಲ್ಲಿ ಗೊರೂರಿನಲ್ಲಿ ಈ ಬಗ್ಗೆ ಚರ್ಚೆ ಮಾಡಿದ್ದೇನೆ. ಇದರ ಜೊತೆಗೆ ಆ ಪ್ರದೇಶದಿಂದಲೇ ಉಪ ಮುಖ್ಯಮಂತ್ರಿಗಳು ಬಂದವರಾಗಿದ್ದಾರೆ. ಹಣವನ್ನು ಏಕೆ ಕಡಿಮೆ ಒದಗಿಸಲಾಯಿತು ಎನ್ನುವ ಪ್ರಶ್ನೆಯನ್ನು ಅವರ ಮುಂದೆ ಇಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಯೋಜನೆಯಲ್ಲಿ ಫೈನಾನ್‌ಶಿಯಲ್ ಕಮಿಟ್‌ಮೆಂಟ್ ಇದರಲ್ಲಿ ಇಲ್ಲ, ಯೋಜನೇತರದರಲ್ಲಿ ಮಾತ್ರ ಹಣವನ್ನು ಒದಗಿಸತಕ್ಕಂಥದ್ದಾಗಿದೆ. ಇಷ್ಟೊಂದು ಕಾಳಜಿ ಇರುವ ನೀರಾವರಿ ಸಚಿವರಿಗೆ ಬೇರೆ ಮಾರ್ಗದ ಹಣದ ವ್ಯವಸ್ಥೆಯನ್ನು ಮಾಡಿ ಈಗ ಏನು ಎಂಟೂವರೆ ಎಕರೆ ಪ್ರದೇಶದ ನೀರಾವರಿಯನ್ನು ಏನು ಮಾಡಿದ್ದಾರೆ ಅದೇ ರೀತಿ ಇನ್ನುಳಿದ ಸುಮಾರು ಹೆಕ್ಟೇರ್ 3 1/2ಯಿಂದ 4 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಬೇಕಾಗಿರತಕ್ಕಂಥ 2500 ಸಾವಿರ ಕೋಟಿ ರೂ.ಗಳನ್ನು ಯಾವಾಗ ತಂದು ಈ ಕೆಲಸವನ್ನು ಮುಗಿಸುತ್ತಾರೆ ಎಂಬ ಪ್ರಶ್ನೆಯನ್ನು ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ಕೇಳಬಯಸುತ್ತೇನೆ. ಹೊರ ರಾಜ್ಯದ ನೀರಾವರಿ ಪ್ರದೇಶಗಳಿಗೆ ಹೋಲಿಸಿ ನೋಡಿದರೆ ಬಹುಶಃ ನಮ್ಮ ರಾಜ್ಯದ ನೀರಾವರಿ ಪ್ರದೇಶದ ಪ್ರಮಾಣ ಬಹಳ ಕಡಿಮೆ. ಮಹಾರಾಷ್ಟ್ರದಲ್ಲಿ 44 ಪರ್ಸೆಂಟ್, ಆಂಧ್ರಪ್ರದೇಶದಲ್ಲಿ 42 ಪರ್ಸೆಂಟ್ ಬಂದಿರತಕ್ಕಂಥ ಕಾಲದಲ್ಲಿ ನಮ್ಮ ಪೊಟೆನ್‌ಶಿಯಲ್ ಕ್ರಿಯೇಟೆಡ್ ಕೇವಲ 32.26 ಪರ್ಸೆಂಟ್ ಮಾತ್ರವಾಗಿದೆ. This amount to Regional Imbalance. ಆದುದರಿಂದ ಈ ಬಗ್ಗೆ ಹೆಚ್ಚು ಆದ್ಯತೆಯನ್ನು ಮಂತ್ರಿಗಳು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ವಿಶೇಷವಾಗಿ ಬಹಳ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಬರಗಾಲದ ಬಗ್ಗೆ ಹೆಚ್ಚು ಒತ್ತನ್ನು ಕೊಡಬೇಕೆಂದು ಹೇಳಿದ್ದಾರೆ. ನನ್ನ ಕ್ಷೇತ್ರ ಒಳಗೊಂಡಂತೆ ಹಾಸನದ ಚನ್ನರಾಯಪಟ್ಟಣದ ಸ್ವಲ್ಪ ಭಾಗ, ಗಂಡಸೀಕ್ಷೇತ್ರ, ಅರಸೀಕೆರೆ ಕ್ಷೇತ್ರ, ತುಮಕೂರಿನ ಬಹುಪಾಲು ಭಾಗ, ಚಿತ್ರದುರ್ಗ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಮತ್ತು ಕಾರವಾರದ ಸ್ವಲ್ಪ ಭಾಗ. ಬಹುಶಃ ಹತ್ತು ವರ್ಷಗಳಲ್ಲಿ 6 ವರ್ಷಗಳ ಕಾಲ ಸತತವಾಗಿ ಬರಗಾಲವನ್ನು ಎದುರಿಸತಕ್ಕಂಥ ವ್ಯವಸ್ಥೆ ಇಲ್ಲಿದೆ. ಇಲ್ಲಿ ರೈತರ ಪರಿಸ್ಥಿತಿ ಬಹಳ ಸಂಕಷ್ಟದಲ್ಲಿದೆ. ಕುಡಿಯುವ ನೀರಿಗೂ ಕೂಡ ಈಗಾಗಲೇ ಹೆಚ್ಚು ಬವಣೆಯನ್ನು ಪಡತಕ್ಕಂಥ ವ್ಯವಸ್ಥೆ ಅಲ್ಲಾಗಿದೆ ಎನ್ನುವ ವಿಚಾರವನ್ನು ಈ ಸಂದರ್ಭಧಲ್ಲಿ ಮಂತ್ರಿಗಳಿಗೆ ಜ್ಞಾಪಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ರೀಜನಲ್ ಇಂಬ್ಯಾಲೆನ್ಸ್ ಎಂದು ನಾನು ಈಗಾಗಲೇ ಏನು

ಹೇಳಿದ್ದೇನೆ ಅದರ ಬಗ್ಗೆ ಹೇಳಬೇಕೆಂದರೆ ಹೆಚ್ಚು ನೀರು ಸಿಗುವ ಮೂಲ ಯಾವುದಿದೆಯೋ ಹುಡುಕಿ ಆ ಭಾಗದಿಂದ ಈ ಭಾಗಕ್ಕೆ ನೀರನ್ನು ಒದಗಿಸತಕ್ಕಂಥ ಕೆಲಸವನ್ನು ಕಾಳಜಿ ಹೊಂದಿರುವ ನಮ್ಮ ನೀರಾವರಿ ಸಚಿವರು ಮಾಡುತ್ತಾರೆಯೇ ಎನ್ನುವ ಪ್ರಶ್ನೆಯನ್ನು ನಾನು ಕೇಳುತ್ತೇನೆ. ಅದಕ್ಕೆ ವೆಸ್ಟ್ ಫ್ಲೋಯಿಂಗ್ ರಿವರ್ಸ್‌ಗಳಾದ ನೇತ್ರಾವತಿ ಮತ್ತು ಅದರ ಉಪನದಿಗಳು ಇವೆ. ಬಹುಶಃ ಈಗಾಗಲೇ 1972-73ನೇ ಇಸವಿಯಲ್ಲಿ ಇದರ ಬಗ್ಗೆ ಸರ್ವೆ ಕೂಡ ಆಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಕನಿಷ್ಟ 100 ಟಿ.ಎಂ.ಸಿ. ನೀರನ್ನು ಕಡಿಮೆ ವೆಚ್ಚದಲ್ಲಿ, ಕಡಿಮೆ ಪ್ರಮಾಣದಲ್ಲಿ ಪರಿಸರ ನಾಶವನ್ನು ಮಾಡುವ ಮುಖಾಂತರ, ಹೆಚ್ಚು ಪ್ರದೇಶ ಮುಳುಗಡೆ ಆಗದೇ ಇರುವ ಸನ್ನಿವೇಶದ ಮೂಲಕ ಆ 100 ಟಿ.ಎಂ.ಸಿ. ನೀರನ್ನು ಉಪಯೋಗಿಸುವ ಅವಕಾಶವಿದೆ ಎನ್ನುವ ಹಿನ್ನೆಲೆಯಲ್ಲಿ ಈ ನೇತ್ರಾವತಿ ನೀರಿಗೆ ಒತ್ತು ಕೊಡತಕ್ಕಂಥ ಕೆಲಸವನ್ನು ಮಾಡಬೇಕೆಂದು ಈ ಸದನದ ಮೂಲಕ ಮಾನ್ಯ ನೀರಾವರಿ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ. ನಾನು ನಿರೀಕ್ಷೆ ಮಾಡಿದ್ದೆ, ನಮ್ಮ ಜಿಲ್ಲೆಯವರೇ ಪ್ರಧಾನಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ನೀರಾವರಿ ಬಗ್ಗೆ ಹೆಚ್ಚು ಪಾಂಡಿತ್ಯವನ್ನು ಪಡೆದಂಥ ಮುತ್ಸದ್ಧಿ ರಾಜಕಾರಣಿಗಳಾಗಿದ್ದ ದೇವೇಗೌಡರು ಬಹುಶಃ ಇದರ ಬಗ್ಗೆ ಚಿಂತನೆಯನ್ನು ಮಾಡಿ ಈ ರಾಜ್ಯಕ್ಕೆ ಆ ನೀರಿನ ಕೊಡುಗೆಯನ್ನು ಕೊಡಬಹುದು ಎಂದು ತಿಳಿದು ಆ ಭಾವನೆಯಲ್ಲಿ ಬಹಳಷ್ಟು ಪತ್ರಿಕಾ ಹೇಳಿಕೆಗಳನ್ನು ಕೊಡತಕ್ಕಂಥದ್ದು, ಪ್ರತಿಭಟನೆಯನ್ನು ಮಾಡತಕ್ಕಂಥದ್ದು, ಆ ರೀತಿಯಲ್ಲಿ ಒತ್ತಾಯ ಮಾಡುವ ಕೆಲಸವನ್ನು ಜಿಲ್ಲೆಯಲ್ಲಿ ನಾವು ಪ್ರಾರಂಭ ಮಾಡಿದೆವು. ಆದರೆ ಅದಕ್ಕೆ ಯಾವ ಪುರಸ್ಕಾರವೂ ಸಿಗಲಿಲ್ಲ, ಇದರ ಬಗ್ಗೆ ಚಿಂತನೆ ಕೂಡ ಆಗಲಿಲ್ಲ, ಇಲ್ಲಿಯವರೆವಿಗೆ ಅದರ ಬಗ್ಗೆ ಒಂದು ಹೇಳಿಕೆ ಕೂಡ ಇಲ್ಲ, ಯಾರಿಂದಲೂ ಅದರ ಬಗ್ಗೆ ಚಿಂತನೆ ಪ್ರಾರಂಭವಾದ ಹಾಗೆ ನಮಗೆ ಕಾಣುತ್ತಿಲ್ಲ. ಆದುದರಿಂದ ಆ ಭಾಗದ ಶಾಸಕರು ಯಾರ್‍ಯಾರು ಇದ್ದಾರೆ ಬಹುಶಃ ಇದನ್ನು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಆದುದರಿಂದ ಇದರ ಬಗ್ಗೆ ಬಹುಶಃ ಬಹಳ ಬೇಗ ಸರ್ವೇ ಮಾಡಿಸತಕ್ಕಂಥ ಕೆಲಸ, ಅದಕ್ಕೆ ಒಂದು ಎಕ್ಸ್‌ಪರ್ಟ್ಸ್‌ಗಳ ಕಮಿಟಿಯನ್ನು ನೇಮಕಾತಿ ಮಾಡುವ ಮೂಲಕ ಕೂಡಲೇ ಅದು ಎಷ್ಟರಮಟ್ಟಿಗೆ ಟೆಕ್ನಿಕಲಿ ಫೀಸಬಲ್ ಎನ್ನತಕ್ಕಂಥ ವರದಿಯನ್ನು ತರಿಸಿ ಒಂದು ಟೈಮ್‌ಬೌಂಡ್ ಪ್ರೋಗ್ರಾಂ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ಅದನ್ನು ಬೇಗಲೇ ಮಾಡುತ್ತೇವೆ ಎಂದು ಹೇಳುವುದಕ್ಕಿಂತ ಒಂದು ನಿಗಧಿಯಾದ ಟೈಮ್‌ಬೌಂಡ್ ಪ್ರೋಗ್ರಾಂ ಹಾಕಬೇಕು. ಟೆಕ್ನಿಕಲ್ ಫೀಸಿಬಲ್ ವರದಿಯನ್ನು ಮುಖ್ಯವಾಗಿ ತಯಾರಿಸಲಾಗಿದೆ. ಈಗಾಗಲೇ ಒಂದು ಪ್ರಿಲಿಮನರಿ ಸರ್ವೆಯಾಗಿದೆ. ಎಷ್ಟು ನೀರನ್ನು ಯಾವ ಯಾವ ಪ್ರದೇಶಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆ, ಕಾಂಟೂರ್ ಎಲ್ಲೆಲ್ಲಿ ಪರ್ಮಿಟ್ ಮಾಡುತ್ತದೆ ಎನ್ನತಕ್ಕಂಥವುಗಳ ಬಗ್ಗೆ ಒಂದು ಟೈಮ್‌ಬೌಂಡ್ ಪ್ರೋಗ್ರಾಂ ಹಾಕಿದರೆ ಒಳ್ಳೆಯದು, ತಾವು ಮನಸ್ಸು ಮಾಡಿದರೆ ಮೂರು ತಿಂಗಳಲ್ಲಿ ಇದನ್ನು ಮಾಡಬಹುದು. ಭದ್ರಾ ಮೇಲ್ದಂಡೆ ಬಗ್ಗೆ ತಾವು ಬಹಳಷ್ಟು ಕಾಳಜಿ ವಹಿಸಿ ಕೆಲಸ ಮಾಡಿದ್ದೀರಿ ಎನ್ನತಕ್ಕಂಥ

ಮಾತನ್ನು ಹೇಳಿ ನಾನೇ ಪ್ರಸ್ತಾಪ ಮಾಡಿದೆ, ಎಲ್ಲಾ ಶಾಸಕರನ್ನು ಜೊತೆಯಲ್ಲಿ ಕರೆದುಕೊಂಡು ಹೋದೆ, ಈ ವರ್ಷದಲ್ಲೇ ಅದನ್ನು ಎಲ್ಲಾ ಪ್ರಾಜೆಕ್ಟನ್ನು ತಯಾರು ಮಾಡಿ ಮುಂದಿನ ವರ್ಷದ ಆಯವ್ಯಯದಲ್ಲಿ ಹಣವನ್ನು ಒದಗಿಸುತ್ತೇನೆ ಎನ್ನತಕ್ಕಂಥ ಆಶ್ವಾಸನೆಯನ್ನು ತಾವು ಈ ಸದನದಲ್ಲಿ ಏನು ಕೊಟ್ಟಿರೋ ಅದೇ ಒಂದು ಹುಮ್ಮಸ್ಸಿನಲ್ಲಿ ಈ ಕೆಲಸವನ್ನು ಮಾಡುವುದರ ಮೂಲಕ ಬಹಳಷ್ಟು ಪ್ರದೇಶದ ರೈತರು ಈ ಬರಗಾಲದ ಬವಣೆಯಲ್ಲಿ ಬೇಯುತ್ತಿದ್ದಾರೆ ಅದನ್ನು ತಪ್ಪಿಸತಕ್ಕಂಥ ಕೆಲಸವನ್ನು ರೈತ ಕುಟುಂಬದಲ್ಲಿ ಬಂದಿರತಕ್ಕಂಥ ತಾವುಗಳು ಇಂಜಿನಿಯರ್ ಪದವೀಧರರೂ ಆಗಿದ್ದೀರಿ. ಆದುದರಿಂದ ನೀವು ಇದರ ಬಗ್ಗೆ ಆಸಕ್ತಿಯಿಂದ ಕೆಲಸವನ್ನು ಮಾಡುತ್ತೀರಾ ಎಂದು ಒತ್ತಾಯವನ್ನು ಮಾಡುತ್ತಿದ್ದೇನೆ ಜೊತೆಗೆ ಕಾವೇರಿ ಬೇಸಿನ್‌ನಲ್ಲಿ ವಿಶೇಷವಾಗಿ ಹಾಸನ ಜಿಲ್ಲೆ ಬಗ್ಗೆ ಬಹಳಷ್ಟು ಜನರ ಮನಸ್ಸಿನಲ್ಲಿದೆ. ಎಲ್ಲಾ ಕೇಳುತ್ತಾರೆ ನಿಮ್ಮ ಜಿಲ್ಲೆಗೆ ಬಹಳ ಕೆಲಸವಾಗಿದೆ ಎಂದು. ಏನು ಏರೋಡ್ರೋಮ್ ಬಂತು, ಇಂಡಸ್ಟ್ರೀಯಲ್ ಏರಿಯಾ ಬಂತು, ನೀರಾವರಿ ಬಂತು ಎಂದು. 9 ತಿಂಗಳಲ್ಲಿ ಪ್ರಧಾನಮಂತ್ರಿಗಳಾಗಿದ್ದಂಥ ಮಾನ್ಯ ದೇವೇಗೌಡರು 10 ಸಾರಿ ಹಾಸನಕ್ಕೆ ಭೇಟಿಯಾಗಿ ಕಲ್ಲು ಹಾಕಿದ್ದೇ ಹಾಕಿದ್ದು. ಆದರೆ ಅಲ್ಲಿ ಏನಾಗಿದೆ ಎಂಬುದು ನಮಗೆ ಗೊತ್ತಿದೆ. ಪ್ರಚಾರ ಬಹಳಷ್ಟು ಸಿಕ್ಕಿದೆ. ಏನೋ ಬಹಳ ಸಾಧನೆಯಾಗಿದೆ ಎಂಬ ಭಾವನೆ ಮಾಡಿದೆ. ಆದರೆ ಒಟ್ಟಾರೆ....

ಶ್ರೀ ಪಿ.ಜಿ.ಆರ್.ಸಿಂಧ್ಯಾ: ತಾವೇನು ಅಸೆಂಬ್ಲಿಯಲ್ಲಿ ಮಾತನಾಡುತ್ತಿದ್ದೀರೋ ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಿದ್ದೀರೋ ಎಂಬುದು ಗೊತ್ತಾಗುತ್ತಿಲ್ಲ. ಬೇಡಿಕೆಗಳನ್ನು ಮಂಡಿಸಿರುವವರು ಮಂತ್ರಿಗಳು, ಮುಖ್ಯಮಂತ್ರಿಗಳು. ಇದಕ್ಕೆ ಸಂಬಂಧಪಟ್ಟಹಾಗೆ ಮಾತನಾಡಿ. ಹಾಸನ ಜಿಲ್ಲೆ ರಾಜಕಾರಣವನ್ನು ಈ ಸಮಯದಲ್ಲಿ ಏತಕ್ಕೆ ಮಾತನಾಡುತ್ತಿದ್ದೀರಿ?

ಶ್ರೀ ಬಿ.ಶಿವರಾಮು: ನೋಡಿ, ನೀವು ಈಗ ನಮ್ಮನ್ನು ದಾರಿ ತಪ್ಪಿಸುತ್ತಿದ್ದೀರಿ. ನಾನು ಆರೋಪ ಮಾಡುತ್ತಿಲ್ಲ ಅಧ್ಯಕ್ಷರೇ, ಪ್ರಗತಿ....

ಶ್ರೀ ಸಿ.ಬೈರೇಗೌಡ: ಅವರು ಹಾಸನದ ಫುಟ್‌ಪಾತ್ ಮೇಲೆ ಮಾತನಾಡುತ್ತಿದ್ದಾರೆ. ಅಸೆಂಬ್ಲಿಯಲ್ಲಿ ಮಾತನಾಡುತ್ತಿಲ್ಲ. ಫುಟ್‌ಪಾತ್‌ನಲ್ಲಿ ಮಾತನಾಡುವ ಭಾಷಣವನ್ನು ಇಲ್ಲಿ ಮಾಡುತ್ತಿದ್ದಾರೆ.

ಶ್ರೀ ಬಿ.ಶಿವರಾಮು: ನಾನು ವ್ಯಕ್ತಿ ಹಿಡಿದು ಆರೋಪ ಮಾಡಲಿಲ್ಲ. ಪ್ರಗತಿಯಾಗಿದೆ ಎನ್ನತಕ್ಕ ಭಾವನೆ ಬಂದಿದೆ. ಆದರೆ ಏನಾಗಿದೆ ಎಂದು ಹೇಳುವುದಕ್ಕೂ ಅವಕಾಶ ಇಲ್ಲ ಎಂದರೆ ನಾವಿನ್ನೇನು ಮಾತನಾಡಬಹುದು ನೀವೇ ಹೇಳಿ. ಇದರಲ್ಲಿ ಆರೋಪ ಇದೆಯಾ? ವ್ಯಕ್ತಿನಿಂದನೆ ಇದೆಯಾ? ಆದರೆ ಆ ಭಾವನೆ ಏನು ಬಂದಿದೆ....

ಶ್ರೀ ಹೆಚ್.ಎಸ್.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಪ್ರಧಾನಮಂತ್ರಿಗಳಾದ ಸನ್ಮಾನ್ಯ

ದೇವೇಗೌಡರು ಹಾಸನ ಜಿಲ್ಲೆಗೆ ಹತ್ತುಸಾರಿ ಬಂದರು ಎಂದು ಹೇಳಿದರು. ಸ್ವಂತ ತಾಯಿ ತೀರಿಹೋದಾಗ ಬರಬಾರದೇ? ಅವರ ಕಾರ್ಯಕ್ಕೆ ಬರಬಾರದೆ? ಆಗಸ್ಟ್ 15ನೇ ತಾರೀಖು ಫ್ಲಾಗ್ ಹಾಯಿಸ್ಟ್ ಮಾಡಿದಂಥ ವ್ಯಕ್ತಿ ಸ್ವಂತ ತಾಯಿ ಕಾರ್ಯಕ್ಕೆ ಬರಬಾರದೆ? 7 ಸಾರಿ ಬಂದರು, 10 ಸಾರಿ ಬಂದರು ಎಂದು ಟೀಕೆ ಮಾಡುತ್ತಾರೆ. ಅದರಿಂದ ಏನಾಯಿತು ನಿಮಗೆ ಲಾಸ್? ಇವತ್ತು ಹೇಳುತ್ತೇನೆ ನಾನು ಈ ಜಿಲ್ಲೆಯಲ್ಲಿ, ರಾಜ್ಯದಲ್ಲಿ ನಮ್ಮಿಂದ ಹೋದ ವ್ಯಕ್ತಿಯೊಬ್ಬ ದೇಶಕ್ಕೆ ಪ್ರಧಾನಮಂತ್ರಿಯಾಗಿ ಬಂದಂಥ ನಮ್ಮ ರಾಜ್ಯಕ್ಕೆ ನೀವು ಅವಹೇಳನ ಮಾಡುತ್ತೀರಾ? ನಿಮ್ಮ ಪದ ಬಳಕೆ ಇದೆಯಲ್ಲಾ, ದಯಮಾಡಿ ಸನ್ಮಾನ್ಯ ಅಧ್ಯಕ್ಷರೇ ಅವರಿಗೆ ಹೇಳುತ್ತೇನೆ, ನಮ್ಮ ಜಿಲ್ಲೆಯಲ್ಲಿ ಸಾಮಾನ್ಯ ಬಡಕುಟುಂಬದಲ್ಲಿ ಹುಟ್ಟಿದಂಥ ವ್ಯಕ್ತಿ ಈ ರಾಷ್ಟ್ರದ ಪ್ರಧಾನಿಯಾದಾಗ ಅವರಿಗೆ ಗೌರವ ತೋರಿಸಬೇಕಾದ್ದು ನಮ್ಮ ಕರ್ತವ್ಯ. ನಾನು ಸ್ಪಷ್ಟವಾಗಿ ಹೇಳುತ್ತೇನೆ ಅವರ ಕುಟುಂಬ ಎಂಥಾದ್ದು? ಅವರು ತುಂಬಾ ಹಳ್ಳಿಗಾಡಿನಿಂದ ಬಂದವರು. ಇವತ್ತು ಎಂ.ಎಲ್.ಎ. ಆಗಿ ಕೂತಿದ್ದಾರೆ. ಗೌರವ ಕೊಡುತ್ತೇವೆ ನಾವು. ಅವರ ತಾಯಿ ತೀರಿಹೋದಾಗ ಬಂದಿದ್ದರು. ಸುಮಾರು ಹನ್ನೆರಡೂವರೆ ಗಂಟೆ ರಾತ್ರಿಯಲ್ಲಿ ಮಣ್ಣು ಮಾಡುವ ಟೈಮಿನಲ್ಲಿ ಬಂದಾಗ ಇವರೆಲ್ಲಾ ಆ ದೃಶ್ಯ ನೋಡಿರಬೇಕಲ್ಲಾ. ಬಂದಿದ್ದಾರೆ. ಸ್ವಂತ ತಾಯಿ ತೀರಿಹೋದಾಗ ಬರಬಾರದೇ ಊರಿಗೆ? ತಾಯಿ ತಿಥಿ ಮಾಡುವುದಕ್ಕೆ ಬರಬಾರದೇ? ಅದನ್ನೇ ಇವರು ಟೂರ್ ಎಂದು ಹೇಳಿ 7 ಸಾರಿ 10 ಸಾರಿ ಎಂದು ಹೇಳುತ್ತಾರಲ್ಲಾ ಹೇಳಲಿ 10 ಸಾರಿ ಯಾವಾಗ ಬಂದರು ಎಂದು. ಏನಾಯಿತು ನಿಮಗೆ ಅನಾನುಕೂಲ? ಸನ್ಮಾನ್ಯ ಅಧ್ಯಕ್ಷರೆ, ಜಿಲ್ಲೆಯ ಪ್ರಗತಿ ಆಗಿಲ್ಲವೇ? ಆಗಿಲ್ಲದಿದ್ದರೆ ಹೇಳಿ.

ಶ್ರೀ ಬಿ.ಶಿವರಾಮು: ಅಧ್ಯಕ್ಷರೇ, ಅವರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಿ. ನಾನೇನೂ ವ್ಯಕ್ತಿ ಆರೋಪ ಮಾಡುತ್ತಿಲ್ಲ; ಯಾಕೆ ಬಂದರು ಎಂದು ಹೇಳುತ್ತಿಲ್ಲ. ಅದರ ಮೂಲಕ ಈ ರಾಜ್ಯದಲ್ಲಿ ಬಹಳಷ್ಟು ಜನರಿಗೆ ಏನು ಭಾವನೆ ಬಂದಿದೆ ಎಂದರೆ ಬಹಳ ಪ್ರಗತಿಯಾಗಿದೆ ಎನ್ನತಕ್ಕದ್ದು ಬಂದಿದೆ ಆದರೆ ಏನೂ ಆಗಿಲ್ಲ ಎಂದು ನೀರಾವರಿ ಬೇಡಿಕೆಗೆ ಸಂಬಂಧಪಟ್ಟಹಾಗೆ ಅಲ್ಲಿಗೆ ಬರುತ್ತಿದ್ದೇನೆ ನಾನು. ಬೇರೆ ಏನೂ ಟೀಕೆ ಮಾಡುತ್ತಿಲ್ಲ. ಒಂದೇ ಒಂದು ಬೇರೆ ರೀತಿಯ ಪದ ಕೂಡ ನಾನು ಬಳಸಿಲ್ಲ. ಇಷ್ಟನ್ನೂ ಮಾತನಾಡುವುದು ಬೇಡ ಸದನದಲ್ಲಿ ಅಂದರೆ ಏನು ಮಾತನಾಡಬಹುದು ನಾನು?

ಶ್ರೀ ಎಚ್.ಎಸ್.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ನನ್ನ ತಾಯಿ 94ರ ಫೆಬ್ರವರಿಯಲ್ಲಿ ತೀರಿಹೋದರು. ತೀರಿಹೋದಂಥ ದಿವಸದಲ್ಲಿ ನನ್ನ ಮನಸ್ಸಿಗೆ ಶಾಂತಿ ಇದೆ. ನಮ್ಮ ತಾಯಿ ತೀರಿಹೋದ ಸಂದರ್ಭದಲ್ಲಿ ಅವರ ಬಾಯಿಗೆ ನೀರು ಬಿಟ್ಟಂಥ ವ್ಯಕ್ತಿ ನಾನು. ತಾಯಿ ತೀರಿಹೋದ ಹೊತ್ತಿನಲ್ಲಿ ಪ್ರಧಾನಮಂತ್ರಿಯಾಗಿ ಬೇರೆ ಹೋರಾಟದ ಸಂದರ್ಭದಲ್ಲಿ ಅವರದ್ದೇ ರಾಜಕೀಯ ಗೊಂದಲ ಇದ್ದಾಗ ಬಂದರು. ನಾನು ಸನ್ಮಾನ್ಯ ಸ್ನೇಹಿತರಿಗೆ ಹೇಳುತ್ತೇನೆ ಅವರ ತಂದೆ ತಾಯಿ ಎಲ್ಲರೂ ನನಗೆ ಆತ್ಮೀಯರೇ ಅವರೂ

ನನ್ನ ತಂದೆತಾಯಿಗೆ ಸಮಾನ. ಅವರು ಹೇಳಲಿ, ಅವರ ತಾಯಿ ತೀರಿಹೋದಾಗ, ತಂದೆ ತೀರಿಹೋದಾಗ ನಾನು ಭಾಗಿಯಾಗಿದ್ದೇನೆ. ಇಲ್ಲ ಎಂದು ಹೇಳಲಿ ಅವರು. ಸನ್ಮಾನ್ಯ ಗೌರವಯುತ ಸದಸ್ಯರಿದ್ದಾರೆ ಹೇಳಲಿ ನನ್ನ ಮಿತ್ರರಾದ ಶಿವರಾಮು ಅವರು. ತಂದೆ ತಾಯಿ ಇದ್ದಾಗ ಅವರ ಕರ್ತವ್ಯ ಏನು, ಅವರು ತೀರಿಹೋದ ಸಂದರ್ಭದಲ್ಲಿ ನನ್ನ ಕರ್ತವ್ಯವೇನು, ಅವರ ಕರ್ತವ್ಯವೇನು ಎಂಬುದನ್ನು ಈಗಲೂ ಈ ಸಂದರ್ಭದಲ್ಲಿ ಹೇಳಲಿ. ಸನ್ಮಾನ್ಯ ಗೌರವಯುತ ಸದಸ್ಯರ ತಂದೆ ತೀರಿಹೋದಾಗ.... ನಾನು ಏತಕ್ಕೆ ಹೇಳುತ್ತೇನೆ ತಂದೆತಾಯಿ ಎಂದರೆ ನಮಗೆಲ್ಲರಿಗೂ ಒಂದೆ ಅಲ್ಲವೆ? ಎಂಥೆಂಥ ಸಂದರ್ಭಧಲ್ಲಿ ನಾವೆಲ್ಲಾ ಭಾಗಿಯಾಗುತ್ತೇವೆ.

ಶ್ರೀ ಬಿ.ಶಿವರಾಮು: ನೀವು ಹೇಳುವುದು ನೋಡಿದರೆ ನಾವೇನೂ ಮಾತನಾಡುವಹಾಗೇ ಇಲ್ಲ. ಸುಮ್ಮನೆ ವಿಚಾರ ಎಲ್ಲೆಲ್ಲಿಗೋ ತಿರುಗುತ್ತಿದೆ. ನಾನು ಶಂಕುಸ್ಥಾಪನೆಗೆ ಸರ್ಕಾರಿ ಕಾರ್ಯಕ್ರಮಕ್ಕೆ ಬಂದಿದ್ದು ಅಷ್ಟೇ ಸೀಮಿತವಾಗಿ ಮಾತನಾಡಿದ್ದೇನೆ. ದಯವಿಟ್ಟು ಅರ್ಥ ಮಾಡಿಕೊಳ್ಳಿ, ಸರ್ಕಾರಿ ಕಾರ್ಯಕ್ರಮ ಅಲ್ಲದೆ ವೈಯಕ್ತಿಕವಾಗಿ ಬಂದಿರುವುದರ ಬಗ್ಗೆ ನಾನು ಒಂದು ಸಣ್ಣ ಮಾತನ್ನೂ ಆಡಿಲ್ಲ ಅಧ್ಯಕ್ಷರೇ.

ಅಧ್ಯಕ್ಷರು: ತಾವು ಹಾಗೆಲ್ಲಾ ಮಾತನಾಡುವುದಿಲ್ಲ, ತಮಗೆ ಮಾತನಾಡುವ ವಿಧಾನ ಗೊತ್ತಿದೆ.

ಶ್ರೀ ಬಿ.ಶಿವರಾಮು: ಮಾತನಾಡಿದ್ದರೆ ಹೇಳಿ ನಾನು ಒಪ್ಪಿಕೊಳ್ಳುತ್ತೇನೆ. ಕ್ಷಮಾಪಣೆಯನ್ನೂ ಕೂಡ ಕೇಳುತ್ತೇನೆ. ನಾನು ಆ ಮಾತನ್ನು ಒಂದೂ ಆಡಿಲ್ಲ. ಆದಕ್ಕೂ ಇದಕ್ಕೂ ಯಾಕೆ ಲಿಂಕ್ ಮಾಡುತ್ತೀರಿ?

ಅಧ್ಯಕ್ಷರು: ಸನ್ಮಾನ್ಯ ಮಂತ್ರಿಗಳಾದ ಸಿಂಧ್ಯಾರವರು ಒಂದು ಮಾತು ಹೇಳಿದರು.

ಶ್ರೀ ಬಿ.ಶಿವರಾಮು: ಇದು ನಮಗೇನಾಗಿದೆ ನಮ್ಮ ದುರ್ದೈವವೋ ಏನೋ ನಾವು ಆ ಜಿಲ್ಲೆಯಲ್ಲಿ ಎಂ.ಎಲ್.ಎಗಳಾಗಿದ್ದೇ ಕಷ್ಟ ಎನ್ನುವಹಾಗೆ ಆಗಿದೆ. ನಾವು ಏನು ಮಾತನಾಡಿದ್ದೇವೆ ಹೇಳಿ ನೋಡೋಣ ಹಾಗಿದ್ದರೆ. ನಾನು ಯಾವುದೇ ಅಂತಹ ಮಾತುಗಳನ್ನು ಆಡಿಲ್ಲ.

ಶ್ರೀ ಬಿ.ಎ.ಮೊಯ್ದೀನ್: ನಿಮ್ಮ ಹಾಸನದ ರಾಜಕೀಯ ಇಲ್ಲಿ ತರಬೇಡಿ. ಗಂಭೀರದಿಂದ ಇಲ್ಲಿ ಪ್ರಶ್ನೆ ಮಾಡುತ್ತಿದ್ದೀರಲ್ಲಾ ನೇತ್ರಾವತಿಯಿಂದ ಸಾವಿರಾರು ಟಿ.ಎಂ.ಸಿ. ನೀರು ಹೋಗುತ್ತಿದೆ. 100-200 ಅಲ್ಲ. ಅದರ ಗಾಂಭೀರ್ಯ ಹೋಗುತ್ತದೆ ಹಾಸನಕ್ಕೆ ಬಂದರೆ ಎಂದು ಅಷ್ಟೇ ಸಿಂಧ್ಯಾರವರು ಹೇಳಿದ್ದು.

ಶ್ರೀ ಬಿ.ಶಿವರಾಮು: ನಾನೂ ಹಾಸನದವನೇ. ಮಾತನಾಡಿದ ಕೂಡಲೇ ಹಾಸನದ

ರಾಜಕಾರಣ, ಮುಂದೆ ನೀವು ಇನ್ನೂ ಒಂದು ಸೇರಿಸಿದಿರಿ ಗೌಡರ ಗದ್ದಲ ಎಂದು. ಇದು ಅನಿವಾರ್ಯ. ನಾವೇನೂ ಮಾಡುವುದಕ್ಕಾಗುವುದಿಲ್ಲ; ನಾವಂತೂ ರಾಜಕಾರಣದಲ್ಲಿ ಇರುವವರೆಗೆ ಇದನ್ನು ಅನುಭವಿಸಬೇಕು ಎನ್ನುವ ತೀರ್ಮಾನಕ್ಕೆ ಬಂದುಬಿಟ್ಟಿದ್ದೇವೆ. ಒಂದು ತೊಂದರೆಯಾಗಬಹುದು ಅಥವಾ ಒಳ್ಳೆಯದೂ ಆಗಬಹುದು. ಅದು ಬೇರೆ ವಿಚಾರ. ಆದರೆ ನಾನು ಯಾವುದೇ ರೀತಿಯ ಆರೋಪಗಳನ್ನು ಮಾಡಿಲ್ಲ. ಕಡತದಲ್ಲಿ ತೆಗೆಸಿ ನೋಡಬಹುದು.

ಶ್ರೀ ಡಿ.ಟಿ.ಜಯಕುಮಾರ್: ಪ್ರಧಾನಮಂತ್ರಿ ದೇವೇಗೌಡರಾಗಿದ್ದಾಗ ಹಾಸನ ಜಿಲ್ಲೆಗೆ ಏನೂ ಲಾಭವೇ ಆಗಿಲ್ಲವೇ? ದೇವೇಗೌಡರು ಏನೂ ಮಾಡೇ ಇಲ್ಲವೇ?

ಶ್ರೀ ಬಿ.ಶಿವರಾಮು: ದೇವೇಗೌಡರು ಅಂತಲೂ ಹೇಳಲಿಲ್ಲ. ನಾನು ಪ್ರಧಾನಿಯವರು ಎಂದು ಹೇಳಿದೆ. ಆ ಸಂದರ್ಭದಲ್ಲಿ ನೇತ್ರಾವತಿ ಬಗ್ಗೆ ಆದ್ಯತೆ ಕೊಡಬಹುದಿತ್ತೇನೋ ಎಂಬ ಮಾತನ್ನು ಹೇಳಿದೆ ನನ್ನ ಅನಿಸಿಕೆಯನ್ನು. ಆದರೆ 9-10 ಕಾಯಕ್ರಮಗಳನ್ನು ಮಾಡಿದಾಗ ಎಷ್ಟರಮಟ್ಟಿಗೆ ನೀರಾವರಿ ಬೇಡಿಕೆ ಬಗ್ಗೆ ಏನಾಗಿದೆ ಎಂಬುದನ್ನು ತಮ್ಮ ಮುಂದೆ ಇಡಲಿಕ್ಕೆ ನಾನು ಪ್ರಯತ್ನಪಟ್ಟೆ. ಬೇರೆ ವಿಚಾರ ಇಲ್ಲ.

ಅಧ್ಯಕ್ಷರು: ಶಿವರಾಮು ಅವರೇ, ಈಗ ಸಮಯ ಹೋಗುತ್ತದೆ. ನೋಡಿ ಪಾಪ ಇಷ್ಟೊಂದು ಜನ ಮೆಂಬರ್ಸ್ ಎಲ್ಲಾ ಮಾತನಾಡಿದರು. ಅವರಿಗೆ ಕೊಟ್ಟ ಟೈಮಿಗಿಂತ ಬೇಗ ಮುಗಿಸಿಬಿಟ್ಟರು.

ಶ್ರೀ ಬಿ.ಶಿವರಾಮು: ಬೇರೆಯವರೆಲ್ಲಾ ಮಾತನಾಡುವುದಕ್ಕೆ ನೀವೇ ಅವಕಾಶ ಮಾಡಿಕೊಟ್ಟು ನೀವೇ ಟೈಮ್ ಹೋಗುತ್ತದೆ ಅಂದರೆ....

ಅಧ್ಯಕ್ಷರು: ಮಾನ್ಯ ಮಂತ್ರಿಗಳಾದ ಸಿಂಧ್ಯಾರವರು ಒಂದು ಮಾತು ಹೇಳಿದರು. ಯಾವ ವಿಚಾರವನ್ನು ನಾವು ಬೇಡಿಕೆಯ ಮೇಲೆ ಚರ್ಚೆ ಮಾಡುತ್ತಿದ್ದೇವೋ ದಯಮಾಡಿ ಅದಕ್ಕೆ ಸೀಮಿತವಾಗಿ ಮಾತನಾಡಿ. ದೇವೇಗೌಡರು ಬಂದರು ಹೋದರು, ಅದು ಪಾರ್ಲಿಮೆಂಟಿಗೆ ಸಂಬಂಧಿಸಿದ್ದು, ಅದು ಏಕೆ ಬೇಕು, ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಮಾತನಾಡಿ, ವಿಷಯಾಂತರ ಆಗುವುದು ಬೇಡ ಎಂದು ಹೇಳಿದರು.

ಶ್ರೀ ಬಿ.ಶಿವರಾಮು: ನನಗೆ ಮುಂದಕ್ಕೆ ಮಾತನಾಡುವುದಕ್ಕೆ ಬಿಟ್ಟಿದ್ದರೆ ಯಾರೂ ಮಾತನಾಡುತ್ತಿರಲಿಲ್ಲ. ಮಾತನಾಡಲಿಕ್ಕೇ ಬಿಡಲಿಲ್ಲವಲ್ಲಾ.

ಅಧ್ಯಕ್ಷರು: ಇಲ್ಲ, ನೀವು ಮಾತನಾಡಿ. ನಿಮ್ಮ ಉದ್ದೇಶ ಒಳ್ಳೆಯದು, ನನಗೆ ಗೊತ್ತಿದೆ.

ಶ್ರೀ ಬಿ.ಶಿವರಾಮು: ಇಷ್ಟೆಲ್ಲಾ ಶಂಕುಸ್ಥಾಪನೆ ಮಾಡಿ ಜಿಲ್ಲೆಯಲ್ಲಿ ನೀರಾವರಿ ಬಗ್ಗೆ

ಏನಾಗಿದೆ ಎನ್ನತಕ್ಕಂಥ ವಿಚಾರಕ್ಕೆ ನಾನು ಬರುತ್ತಿದ್ದೇನೆ ಅಷ್ಟೆ. ಎಷ್ಟು ಏತ ನೀರಾವರಿಗಳು ನಿಂತುಹೋಗಿವೆ? ನೀರಾವರಿ ಸಚಿವರ ಜೊತೆ ನಾವು ಚರ್ಚೆ ಮಾಡಿದ್ದೇವೆ. ಗೊರೂರಿನಲ್ಲಿ ಮೀಟಿಂಗ್ ಕರೆದಾಗ ನಾವು ಮಾತನಾಡಿದ್ದೇವೆ. ಸಾಧಾರಣ 90 ಸಾವಿರ ಎಕರೆ ನೀರಾವಾರಿ ಆಗಬೇಕಾಗಿರತಕ್ಕಂಥ ಪ್ರದೇಶ ಎರಡೂವರೆ ವರ್ಷದಿಂದ ಯಾವ ಹಂತದಲ್ಲಿದೆ ಎಂಬ ಪ್ರಶ್ನೆ ನನಗೆ ಬಂದಿರುತ್ತದಷ್ಟೆ. ಬಹಳ ಪ್ರಗತಿಯಾಗಿದೆ ಎಂಬ ಭಾವನೆ ಏನು ಸೃಷ್ಟಿಯಾಗಿದೆ ಹೊರಗಡೆ ಅದನ್ನು ನೆನೆಸಿಕೊಳ್ಳುತ್ತಾ ಈ ಸಂದರ್ಭದಲ್ಲಿ ಸಾಧಾರಣ ಜಾಗ ಅಲ್ಲ, 90 ಸಾವಿರ ಎಕರೆ ನೀರಾವರಿ ಪ್ರದೇಶವನ್ನು ಮುಗಿಸಬಹುದಾಗಿತ್ತು. ಆದರೆ ಅದು ಪ್ರಗತಿಯಾಗಿಲ್ಲ. ಏತನೀರಾವರಿ ಯೋಜನೆಗಳು ಇವತ್ತು ಸಾಕಷ್ಟು ಸ್ಥಗಿತಗೊಂಡಿದೆ. ಪೂರ್ಣ ಪ್ರಮಾಣದಲ್ಲಿ ಸ್ಥಗಿತಗೊಂಡಿದೆ. ಯಗಚಿ ನೀರಾವರಿ ಯೋಜನೆ ಏನಿದೆ ಅದು ಮಂದಗತಿಯಲ್ಲಿ ಸಾಗುತ್ತಿದೆ. ಇದನ್ನು ನಾನು ಹೇಳುವುದಕ್ಕೆ ಬಂದಿದ್ದೆ ಅಷ್ಟೇ ವಿನಾಃ ಈ ಬೇಡಿಕೆಗೆ ಸೀಮಿತವಾಗಿ ಬೇರೆ ಯಾವುದೇ ವಿಚಾರ ಇಲ್ಲ. ಇದನ್ನು ಈಗಾಗಲೇ ಅವರ ಗಮನಕ್ಕೆ ತಂದಿದ್ದೇನೆ.

ಶ್ರೀ ಎಚ್.ಕೆ.ಕುಮಾರಸ್ವಾಮಿ: ಅಧ್ಯಕ್ಷರೇ....

ಶ್ರೀ ಬಿ.ಶಿವರಾಮು: ನೋಡಿ ಹೀಗಾದರೆ ನಾನು ಹೇಗೆ ಮಾತನಾಡುವುದು?

ಶ್ರೀ ಎಚ್.ಕೆ.ಕುಮಾರ ಸ್ವಾಮಿ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಬರುವುದು ಒಂದೇ ಕ್ಲಾರಿಫಿಕೇಷನ್. ಮಾನ್ಯ ಶಿವರಾಮು ಅವರೇ....

ಅಧ್ಯಕ್ಷರು: ಕ್ಲಾರಿಫಿಕೇಷನ್ ಮಂತ್ರಿಗಳು ಕೊಡುತ್ತಾರೆ. ಅವರು ಏತಕ್ಕೆ ಕೊಡುತ್ತಾರೆ?

ಶ್ರೀ ಎಚ್.ಕೆ.ಕುಮಾರ ಸ್ವಾಮಿ: ಅದು ನನಗೆ ಬರುತ್ತದೆ.

ಶ್ರೀ ಕೆ.ಎನ್.ನಾಗೇಗೌಡ: ಹಾಸನ ಜಿಲ್ಲೆಗೆ ಕಳೆದ ಮೂರು ನಾಲ್ಕು ವರ್ಷಗಳಿಂದ ನೀರಾವರಿ ಇಲಾಖೆಗೆ ಮಾನ್ಯ ದೇವೇಗೌಡರು ಏನು ಮಾಡಿದರು ಎಂದು ಅಂಕಿಅಂಶ ಇಟ್ಟು ಹೇಳುತ್ತೇನೆ. ಅವರು ಹೇಳಲಿ ಬಿಡಿ. ಅವರು ಏನು ಬೇಕಾದರೂ ಆಪಾದನೆ ಮಾಡಲಿ. ಆದರಲ್ಲಿ ಓಡಿಹೋಗುವುದೇನಿದೆ?

ಶ್ರೀ ಬಿ.ಶಿವರಾಮು: ಕಾಚೇನಹಳ್ಳಿ ಏತ ನೀರಾವರಿ ಯೋಜನೆ ಮಂಜೂರಾತಿಯಾಗಿತ್ತು ಸರ್ಕಾರದಲ್ಲಿ ಅಧಿಕೃತವಾಗಿ. ಏನಾಗುತ್ತಿದೆ ಇವತ್ತು ಮಾನ್ಯ ಅಧ್ಯಕ್ಷರೆ? ಕಾಚೇನಹಳ್ಳಿ ಏತ ನೀರಾವರಿ ಯೋಜನೆಯಲ್ಲಿ ಎರಡೂವರೆ ಕೋಟಿ ರೂಪಾಯಿ ಹಣ ಖರ್ಚಾಯಿತು. ಕೆಲಸ ನಿಂತು ಎಷ್ಟು ದಿವಸ ಆಯಿತು? ಏತಕ್ಕೆ ನಿಂತಿತು? ಸಾಧಾರಣ 10 ಸಾವಿರ ಎಕರೆ ಪ್ರದೇಶ ನೀರಾವರಿ ಆಗಬೇಕಾದಂಥ ಒಂದು

ಏತನೀರಾವರಿ ಬಗ್ಗೆ ಸಿ.ಓ.ಡಿ.ಗೆ ಹೋಯಿತು ಎಂದು ಹೇಳಿದರು. ಏನು ಹೋಯಿತು ಎಂದು ಗೊತ್ತಿಲ್ಲ. ವರದಿ ಕೇಳಿದರೆ ವರದಿ ಇಲ್ಲ. ಸರ್ಕಾರದಲ್ಲಿ ಅಧಿಕೃತವಾಗಿ ಮಂಜೂರಾತಿಯನ್ನು ಪಡೆದು ಆಡಳಿತಾತ್ಮಕ, ತಾಂತ್ರಿಕ ಮಂಜೂರಾತಿಗಳನ್ನು ಪಡೆದು ಕೆಲಸ ಪ್ರಾರಂಭವಾಗಿ ಎರಡೂವರೆ ಕೋಟಿ ರೂಪಾಯಿ ಹಣ ಖರ್ಚಾಗಿ ಇವತ್ತು ಕಾಲುವೆಗಳನ್ನು ತೆಗೆಯುವುದರ ಮೂಲಕ ರೈತ ಭೂಮಿ ಕಳೆದುಕೊಂಡರೂ ಅವರಿಗೆ ಪರಿಹಾರ ಕೊಟ್ಟಿಲ್ಲ. ಭೂಮಿ ಹಾಳಾಯಿತು. ಮೆಷಿನರಿ ಪರ್ಚೇಸ್ ಮಾಡಿದರು. ಅದು ಎಲ್ಲೋ ಬಿದ್ದಿದೆ. ಏತಕ್ಕೆ ನಿಲ್ಲಿತು? ಏನು ಕಾರಣ? ಆಂಜನೇಯಪುರ ಲಿಫ್ಟ್ ಇರಿಗೇಷನ್. ಇದನ್ನು ಏತಕ್ಕೆ ನಾನು ಹೇಳುತ್ತಿದ್ದೇನೆ ಅಂದರೆ ನಮ್ಮ ಸ್ನೇಹಿತರಾದ ಪುಟ್ಟೇಗೌಡರು ಮಾತನಾಡುವ ಕಾಲದಲ್ಲಿ ಯಗಚಿ ನೀರಾವರಿ ಬರುತ್ತದೆಯೇ, ಯಗಚಿ ಕೆಳಗೆ ಬರುತ್ತದೆಯೇ, ಯಗಚಿ ಈ ಭಾಗಕ್ಕೆ ಬರುತ್ತದೆಯೇ ಎಂದು ಹೇಳಿದರು. ಕೆಲವರು ಸುಳ್ಳು ಆಶ್ವಾಸನೆಗಳನ್ನು ಕೊಟ್ಟು ಹಿಂದೆ ಕೆಲವು ನೀರಾವರಿ ಯೋಜನೆಗಳನ್ನು ಮಂಜೂರಾತಿ ಮಾಡಿದ್ದಾರೆ ಎಲೆಕ್ಷನ್ ಸಂದರ್ಭದಲ್ಲಿ ಇದನ್ನು ಸ್ಪಷ್ಟಪಡಿಸಬೇಕೆಂಬ ಮಾತನ್ನು ತಮಗೆ ಮನವರಿಕೆ ಮಾಡಿದ್ದೇನೆ ನೀರಾವರಿ ಸಚಿವರೇ. ಅದಕ್ಕೇ ನಾನು ಹೇಳಿರತಕ್ಕದ್ದು.

9.40 ಪಿ.ಎಂ

ಇವತ್ತು ಕಾಚನಹಳ್ಳಿಯಲ್ಲಿ ಆ ಪರಿಸ್ಥಿತಿ. ಆಂಜನೇಯಪುರ ಏತ ನೀರಾವರಿಗೆ 14,960 ಎಕರೆ ಪ್ರದೇಶಕ್ಕೆ ಮಂಜೂರಾತಿಯನ್ನು ಹಿಂದಿನ ಸರ್ಕಾರ ಕೊಟ್ಟು ಖರ್ಚು ಮಾಡಿರತಕ್ಕಂಥ, ಹಣ ಒಂದು ಕೋಟಿ 15 ಲಕ್ಷ ರೂಪಾಯಿ. ಆಯವ್ಯಯದಲ್ಲಿ ಮುಂದೆ ಹಣಾನು ಬಂತು. ಈ ಕೆಲಸ ಪೂರ್ತಿ ನಿಂತುಹೋಯಿತು. ಕಾಲುವೆಗಳನ್ನು ತೆಗೆದಿದ್ದಾರೆ. ಪರಿಹಾರ ಕೊಟ್ಟಿಲ್ಲ. ಆ ರೈತರು ಎಲ್ಲಾ ಬಂದಿದ್ದರು, ನೀರಾವರಿ ಸಚಿವರನ್ನು ಭೇಟಿಯಾಗಿದ್ದರು. ನಾವು ಇನ್ನೂ ಪರಿಶೀಲನೆ ಮಾಡುತ್ತೇವೆ. ಯಗಚಿ ಹನಿ ನೀರಾವರಿ ಮಾಡಬೇಕೇ ಫ್ಲೋ ಇರಿಗೇಷನ್ ಮಾಡಬೇಕೇ ಲಿಫ್ಟ್ ಇರಗೇಷನ್ ಮಾಡಬೇಕೇ ಅಥವಾ ಫ್ಲೋ ಇರಿಗೇಷನ್ ಮಾಡಬೇಕಾದರೆ ಅದೇ ಕಾಂಟೂರ್‌ನಲ್ಲಿ ಮತ್ತೆ ತೆಗೆದುಕೊಂಡು ಹೋಗುತ್ತೇವೆ. Whether it permits or not ಎಂದು ಕೇಳಿದಾಗ that has to be examined, ಈ ರೀತಿ ಉತ್ತರಗಳಿಂದಲೇ ನಾವು ಎರಡೂವರೆ ವರ್ಷದಿಂದ ಕಳೆದಿದ್ದೇವೆ ಎನ್ನತಕ್ಕಂಥಾದ್ದು ಆದರೆ, ಇದು ನಿಜವಾಗಿಯೂ ಪ್ರಗತಿಯನ್ನೂ ಸಾಧಿಸಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಸಾಧ್ಯತೆ ಇದೆಯಾ? ಇದೇರೀತಿ ಕಾಮಸಮುದ್ರ, ಮೂರನೇ ಹಂತದ ಮಂಜೂರಾತಿ. ಸರ್ಕಾರದ ಆದೇಶ ಸ್ಪಷ್ಟವಾಗಿದೆ. ಆಡಳಿತಾತ್ಮಕ, ತಾಂತ್ರಿಕ ಮಂಜೂರಾತಿಯನ್ನು ಕೂಡ ಕೊಟ್ಟಾಗಿದೆ. That is exclusively sanctioned to my constituency. ರಾಮಸಮುದ್ರದ್ದು ಒಂದು - ಎರಡು ಹಂತ ಆದ ಕೂಡಲೇ ಮೂರನೇ ಹಂತ. 3900 ಎಕರೆ. ಕೆಲಸ ಪ್ರಾರಂಭ ಮಾಡುವಂಥ ಎಲ್ಲಾ ಹಂತ ಆದಮೇಲೆ ಕೆಲಸ ಏಕೆ

ನಿಂತುಹೋಯಿತು? ಅದಕ್ಕೆ ಒಂದು ರೀಪೋರ್ಟು ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಕಂಟ್ರೋಲ್ ಬೋರ್ಡ್‌ನಿಂದ ತರಿಸಿ ಮತ್ತೆ ಕ್ಲಿಯರ್ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ನಾವು ಪದೆಪದೇ ಒತ್ತಾಯ ಮಾಡಿದಾಗ ಟೆಕ್ನಿಕಲ್ ಅಡ್ವೈಸರಿ ಕಮಿಟಿ ಮೂಲಕ ಇಡಿಸುತ್ತೇವೆ ಎಂದು ಹೇಳಿದರು. ಕೆ.ಸಿ.ರೆಡ್ಡಿಯವರದ್ದು ಒಂದು ವರದಿ ಬಂದಿದೆ. ಹಿಂದಿನ ಮುಖ್ಯಮಂತ್ರಿಗಳು ಇದ್ದಾಗ ಎನ್ನತಕ್ಕಂಥಾದ್ದು . Until the water Planning of yagachi and Hemavathi sub-basin is revised, it is not advisable to make any commitment on the third state." ರಾಮಸಮುದ್ರದ ಮೂರನೇ ಸ್ಟೇಜ್‌ಗೆ ಈ ಲೈನು ಈ ಕೆ.ಸಿ. ರೆಡ್ಡಿಯವರಿಂದ ಬಂದುಬಿಡುತ್ತದೆ. ಗಂಡಸಿ ಕ್ಷೇತ್ರಕ್ಕೆ ನೀರು ಬರಬೇಕಾದರೆ ಕೆ.ಸಿ.ರೆಡ್ಡಿ ರಿಪೋರ್ಟ್ ಬರಬೇಕು. ಅಂದರೆ ಹಿಂದೆ ಕೊಟ್ಟಂಥ ವರದಿಗಳು, ಆಗಿದ್ದಂಥ ಇಂಜನಿಯರುಗಳು ಅವ್ವರು ಸರಿ ಇರಲಿಲ್ಲ ಎನ್ನತಕ್ಕಂಥ ಭಾವನೆಯಾ? ಈ ಮಂಜೂರಾತಿಗೆ, ಎಲ್ಲಾ ತಾಂತ್ರಿಕ ಮಂಜೂರಾತಿಗಳನ್ನು ಟೆಕ್ನಿಕಲ್ ಅಡ್ವೈಸರಿ ಕಮಿಟಿಯಲ್ಲಿ ಕೊಟ್ಟಂಥ ಇಂಜನಿಯರುಗಳು, ಹಾಗಾದರೆ ಅವರೆಲ್ಲಾ ಅನ್‌ಫಿಟ್ಟಾ? ಆ ಇಂಜನಿಯರುಗಳು ಇವತ್ತು ಇಲ್ಲವೇ? ಅವರನ್ನೆಲ್ಲಾ ಸಸ್ಪೆಂಡ್ ಮಾಡುತ್ತೀರಾ? If they are really unfit, they all should be suspended or dismissed from service under one or two cases that I am mentioning here. ಯಾವುದಾದರೂ ಕಾನ್ಸಿಟ್ಯೂಯೆನ್ಸಿ ಈ ರೀತಿ ರಿಪೋರ್ಟು. ಲಿಫ್ಟ್ ಇರಿಗೇಷನ್‌ಗಳಿಗೆ ಈ ತರಹ. ಇನ್ನು ಲಿಫ್ಟ್ ಇರಗೇಷನ್‌ನಲ್ಲಿ ಅರಕಲಗೂಡು, ಗಂಜಲಗೂಡು, ಹೆಬ್ಬಾಲೆ, ಗಂಗೆನಾಲು, ರಂಗೇನಹಳ್ಳಿ ಇಲ್ಲಿ ಏನು ಪ್ರಗತಿಯಾಗಿದೆ? ಅವರು ಕರೆದ ಮೀಟಿಂಗ್‌ನಲ್ಲಿ ನಾವು ಎಲ್ಲಾ ಸೇರಿ ಹೋಗಿದ್ದೇವೆ, ಮಾತನಾಡಿದ್ದೇವೆ. ಬಾಗೂರು ಟನಲ್ ಬಗ್ಗೆ ಮಾನ್ಯ ಪುಟ್ಟೇಗೌಡರು ಮಾತನಾಡಿದ್ದಾರೆ, ಅವರ ನೋವನ್ನು ಕೂಡ ಪಾಪ ಹೇಳಿಕೊಂಡರು. ಹುಚ್ಚನಕೊಪ್ಪಲು ಲಿಫ್ಟ್ ಇರಿಗೇಷನ್‌ನ್ನು. ಇದೆಲ್ಲಾ ರೈತರ ಬಗ್ಗೆ ಕಳಕಳಿ ಇರತಕ್ಕಂಥವರು, ರೈತರು ಗುರುತಿಸತಕ್ಕಂಥ ಜನಪ್ರತಿನಿಧಿಗಳು ನಾವು. ಇವೆಲ್ಲಾ ರೈತರ ಮೇಲೆ ಪ್ರಭಾವ ಬೀರತಕ್ಕಂಥ ಯೋಜನೆಗಳು. ಇದರ ಬಗ್ಗೆ ಸದನ ಸಮಿತಿ ಮಾಡಬೇಕು. ನಾವು ಏನಾದರೂ ತಪ್ಪು ಮಾಡಿದ್ದರೆ ಪಕ್ಷಬೇಧ ಬಿಡಿದ್ದರೆ ಈ ಸದನ ಸಮಿತಿ ಮೂಲಕ ಪರೀಕ್ಷೆ ಆಗಬೇಕು ಎಂದು ಹೇಳಿದಾಗ ಅದಕ್ಕೆ ಅವಕಾಶ ಸಿಗಲಿಲ್ಲ. ಸದನ ಸಮಿತಿಯನ್ನು ಮಾಡಿ. ಇವತ್ತು ಯಾವ್ಯಾವ ಪ್ರದೇಶಕ್ಕೆ ಅನ್ಯಾಯವಾಗಿದೆ, ಯಾವ್ಯಾವ ಕಾರಣಕ್ಕೆ ಆಗಿದೆ. ಆ ಭಾಗದ ರೈತರು ಒಂದೇ, ಈ ಭಾಗದ ರೈತರೂ ಒಂದೇ. ನಾವು ಎಲ್ಲಾ ಮಣ್ಣಿನ ಮಕ್ಕಳು. ಯಾರಿಗೆ ಹೇಳಬೇಕು? ಇದನ್ನು ನಾವು ಪೀಠಿಕೆಯಾಗಿ ಹೇಳಿದನೇ ಹೊರತು ಯಾರದ್ದೇ ವ್ಯಕ್ತಿನಿಂದನೆ ಮಾಡತಕ್ಕದ್ದು ಅಲ್ಲ. ನಾನೂ ರೈತನಮಗನೇ. ರೈತರಿಗೆ ಕಷ್ಟ ಏನು ಎನ್ನುವಂಥ ಭಾವನೆ ನನಗೂ ಇದೆ. ನನಗಂತೂ ತಾಲ್ಲೂಕು ಕೇಂದ್ರ ಇಲ್ಲ. ನನ್ನ ಕ್ಷೇತ್ರ ಬರೇ 410 ಹಳ್ಳಿಗಳನ್ನು ಹೊಂದಿರತಕ್ಕಂಥಾದ್ದು, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ 80

ಕಿಲೋಮೀಟರ್ ಇರತಕ್ಕಂಥ-the most unwieldy constituency-I am representing. ಸತತವಾದಂಥ ಬರಗಾಲ, ಹತ್ತು ವರ್ಷಗಳಲ್ಲಿ ಆರು ವರ್ಷ ಬರಗಾಲ ಬರುತ್ತದೆ ನನ್ನ ಕ್ಷೇತ್ರಕ್ಕೆ. ಕುಡಿಯುವ ನೀರು ಹೆಚ್ಚಾಗಿದ್ದರೆ ಅದೆಲ್ಲಾ ಅಲ್ಲಿಗೇ ಏತಕ್ಕೆ ಹೆಚ್ಚಾಯಿತು ಎನ್ನತಕ್ಕಂಥ ಮಾತು ಬಂದಿರತಕ್ಕಂಥಾದ್ದು ಹಿರಿಯ ಮಂತ್ರಿಗಳಾದ ಮಾನ್ಯ ಪ್ರಕಾಶ್ ಅವರು ಇದ್ದಾರೆ, ಅವರಿಗೆ ಕೂಡ ಗೊತ್ತಾಗಿದೆ. ಇದನ್ನು ನಾನು ಎಕ್ಸಾಕ್ಟ್ ಆಗಿ ಮೆನ್‌ಷನ್ ಮಾಡಿದ್ದು ಬಿಟ್ಟರೆ ಬೇರೆ ವಿಚಾರಗಳನ್ನು ನಾನು ಮೆನ್‌ಷನ್ ಮಾಡಿಲ್ಲ.

(ಗೊಂದಲ)

ಮಾನ್ಯ ಸದಸ್ಯರು: ಅಧ್ಯಕ್ಷರೇ....

ಶ್ರೀ ಬಿ.ಶಿವರಾಮು: ಅಧ್ಯಕ್ಷರೇ, ನನಗೆ ದಯವಿಟ್ಟು ಪೂರ್ತಿ ಮಾಡ್ಲಬೇಕು. ನನ್ನ ಚಿಂತನೆಯನ್ನು ಹೇಳತಕ್ಕದ್ದು ಯಾವುದೋ ಒಂದು ಧಾಟಿಯಲ್ಲಿ ಹೋಗ್ತುತ್ತಿದೆ. ಬೇಗ ಮುಗಿಸಬೇಕೆಂದ್ಲು ಹೇಳಿ ನಾನು ಮಾತನಾಡುತ್ತಿದ್ದೇನೆ. ಆಮೇಲೆ ಅವರು ಕೌಂಟರ್ ಮಾಡಲಿ. ಮಂತ್ರಿಗಳಿಗೆ ಹೇಳುವುದಕ್ಕೆ ಶಕ್ತಿ ಇಲ್ಲದೇ ಹೋದರೆ ಅವರೇ ಹೇಳಲಿ.

MR. SPEAKER: You have another three minutes.

ಶ್ರೀ ಬಿ.ಶಿವರಾಮು: 20 ನಿಮಿಷವಾದರೂ ಕೊಡಿ.

MR. SPEAKER: I am keeping an account. You were supposed to close at 9.45 P.M.

ಶ್ರೀ ಬಿ.ಶಿವರಾಮು: ಹತ್ತು ನಿಮಿಷ ಕೊಡಿ ಸಾರ್. ಬೆಳಿಗ್ಗೆಯಿಂದ ಕಾದಿದ್ದೇವೆ. ಊಟಾನೂ ಇಲ್ಲ.

ಅಧ್ಯಕ್ಷರು: ಪರ್ವಾಗಿಲ್ಲಪ್ಪ. ನೀವು ಯಾವಾಗಲೂ ಮಾತನಾಡುತ್ತೀರಿ. ಕೆಲವು ಸದಸ್ಯರಿಗೆ ಅವಕಾಶವೇ ಸಿಕ್ಕಿಲ್ಲ; ಒಂದು ಸಲ ಕೂಡ ಅವರು ಮಾತನಾಡಿಲ್ಲ.

ಶ್ರೀ ಬಿ.ಶಿವರಾಮು: ಆದ್ದರಿಂದ ಈ ಪ್ರದೇಶಗಳಿಗೆ ಏನು ಅನ್ಯಾಯವಾಗಿದೆ ಎನ್ನತಕ್ಕಂಥಾದ್ದನ್ನು ಸರಿಪಡಿಸಬೇಕು ಎಂದು ಒತ್ತಾಯದ ಜೊತೆಗೆ ಯಗಚಿ, ಇವತ್ತು ಲಿಫ್ಟ್ ಇರಿಗೇಷನ್ ಮಾಡುವುದರ ಮೂಲಕ ಸಾಧಾರಣ 34,600 ಎಕರೆ ಆ ಫ್ಲೋ ಇರಿಗೇಷನ್‌ನಲ್ಲಿ ಏನು ಬರುತ್ತದೆ, ಯಗಚಿದ್ದು ಅದೇ ಪ್ರದೇಶಕ್ಕೆ ಲಿಫ್ಟ್ ಇರಿಗೇಷನ್‌ಗಳನ್ನು ಮಾಡುವುದರ ಮೂಲಕ ಓವರ್‌ಲ್ಯಾಪಿಂಗ್ ಆಗಿದೆ. ಇದಕ್ಕೆ ನಾವು ಹಿಂದೆ ಸರ್ಕಾರವನ್ನು ಒತ್ತಾಯ ಮಾಡಿದ್ದೆವು. ಈ ಓವರ್‌ಲ್ಯಾಪ್ಡ್ ಏರಿಯಾ ಏನಿದೆ, ಇದನ್ನು ಪರಿಗಣಿಸಿ ಇಲ್ಲಿ ಬರಪೀಡಿತ ಪ್ರದೇಶಗಳಿಗೆ ಕೊಡತಕ್ಕಂಥ ಕೆಲಸ ಆಗಬೇಕು

ಎಂದು ಹೇಳಿ ಹಿಂದಿನ ಸರ್ಕಾರದಲ್ಲಿ ಸಾಕಷ್ಟು ಹೋರಾಟವನ್ನು ಮಾಡಿ ತಾಂತ್ರಿಕ ವರದಿಯನ್ನು ಕೂಡ ತರಿಸಿಕೊಂಡಿದ್ದರ ಮೂಲಕ ಹಿಂದಿನ ಇಟಿಸಿಸಿ-ಯವರು ಕಾವೇರಿ ಬೇಸಿನ್‌ನಲ್ಲಿ ಇದ್ದವರೂ ಕೂಡ ಇದರ ಬಗ್ಗೆ ಪೂರ್ಣ ಒಂದು ಟೆಕ್ನಿಕಲ್ ರಿಪೋರ್ಟನ್ನು ಕೊಡುವುದರ ಮೂಲಕ ಅಂತಿಮ ಘಟ್ಟವನ್ನು ತಲುಪುತ್ತಿದ್ದಾಂಥದ್ದಕ್ಕೆ ಎಲ್ಲಾ ವರದಿಗಳು ಕೂಡ ಬಂದು ಸರ್ಕಾರದ ಮುಂದಿದ್ದು ಮಂಜೂರಾತಿ ಆಗದೇನೆ ಇವತ್ತು ಹಳೇಬಿಡು, ಮಾದೇನಹಳ್ಳಿ ಹೋಬಳಿ, ಜಾವಗಲ್, ಗಂಡಸಿ ಪ್ರದೇಶ, ಅರಸೀಕೆರೆ-ಫೇಸಿಂಗ್ ಚೇಂಜ್ ಅನ್ನತಕ್ಕಂಥಾದ್ದು ಒಂದೊಂದು ಸಲ ಮಾತನ್ನು ಹೇಳುತ್ತೀರಿ. ಕೆಲವು ಕಡೆ ಅದು ಇಲ್ಲ. ಈಗ ಯಗಚಿ ನೀರನ್ನು ಚಿಕ್ಕಮಗಳೂರು ಜಿಲ್ಲೆಗೆ ಮಂಜೂರಾತಿ ಮಾಡಿದ್ದೀರಿ. ನಾವು ಏಕೆ ಮಾಡಿದ್ದೀರಿ ಎಂದು ಕೇಳುವುದಿಲ್ಲ. ಯಾವ ಭಾಗದ ರೈತರಿಗಾದರೂ ಕೊಡಿ. ಆ ಆದೇಶ ತಮ್ಮ ಹತ್ತಿರ ಇದೆ. ಹಳೇಬೀಡು-ಮಾದೇನಹಳ್ಳಿ ಆ ಭಾಗದ ಜನ ಏನು ಭೂಮಿಯನ್ನು ಕಳೆದುಕೊಂಡಿದ್ದಾರೆ, ಅವರಿಗೆ ನೀರು ಇಲ್ಲ. ಕನಿಷ್ಟ ಹರಿಸಲಿಕ್ಕೆ ಅಷ್ಟೊಂದು ನೀರು ಇಲ್ಲದಿದ್ದರೆ ಕೆರೆ ನೀರು ಕೊಡಿ. ನಿಮ್ಮ ಎಕ್ಸ್‌ಪೆಂಡಿಚರ್ R.C. ratio is most feasible ಎನ್ನತಕ್ಕಂಥ ಒತ್ತಾಯ ಮಾಡಿ ಇಷ್ಟೆಲ್ಲಾ ವರದಿಗಳು ಇದ್ದರೂ ಎರಡೂವರೆ ವರ್ಷಗಳಿಂದ ಕನಿಷ್ಟ ಎಕ್ಸಾಮಿನ್ ಮಾಡತಕ್ಕಂಥ ಕೆಲಸ ಮಾಡಲಿಲ್ಲ. I am not bothered about the sanction. ನೀವು ಸ್ಯಾಂಕ್ಷನ್ ಮಾಡುತ್ತೀರೋ, ಬಿಡುತ್ತೀರೋ ಗೊತ್ತಿಲ್ಲ. ನೀವು ರಿಜೆಕ್ಟ್ ಮಾಡಿ. ಕೊನೆಯಪಕ್ಷ ಕರ್ಟಸಿಗೆ ಒಬ್ಬ ರೆಪ್ರಸಂಟೇಟಿವ್ ಆಗಿ ಹೋಗಿ ಅಪ್ರೋಚ್ ಮಾಡಿದಮೇಲೆ ಸಂಬಂಧಪಟ್ಟ ಇಲಾಖೆಯವರು ಕನಿಷ್ಟ ಅದನ್ನು ಎಕ್ಸಾಮಿನ್ ಕೂಡ ಮಾಡಲಿಲ್ಲ ಎನ್ನತಕ್ಕಂಥಾದ್ದು ಆದರೆ ಇಷ್ಟು ಸರ್ಕಾರದ ವರದಿಗಳನ್ನು ಏನು ಮಾಡಬೇಕು? ತಾವು ನಮ್ಮ ರಕ್ಷಣೆಗೆ ಬರಬೇಕು ಎಂದು ಸಾಕಷ್ಟು ಸಲ ತಮ್ಮನ್ನು ಕೇಳಿಕೊಂಡಿದ್ದೇವೆ. ಎಲ್ಲಾ ಮಾಹಿತಿಗಳನ್ನು ನಾವು ಕೊಟ್ಟಿದ್ದೇವೆ. ಕನಿಷ್ಟ ಸೌಜನ್ಯಕ್ಕೆ ಒಂದು ಮೀಟಿಂಗ್ ಮಾಡಿ ಆಗುತ್ತದೆ, ಇಲ್ಲ ಎನ್ನತಕ್ಕದ್ದು ಹೇಳಿ. If it is not totally feasible, reject it, I am not bothered. Atleast I can face my people saying that this is the position. ಇದನ್ನು ನಾನು ಒತ್ತಾಯ ಮಾಡಿದ್ದೇನೆ. ಅದಕ್ಕೋಸ್ಕರ ಈ ಯಗಚಿದ್ದು ಇವತ್ತು ಹಳೆಬೀಡು-ಮಾದೀಹಳ್ಳಿ ಈ ಭಾಗದ ಜನ ನಾವು ನೀರು ಸಿಗದೇನೇ ಬಹಳ ನೋವು ಅನುಭವಿಸುತ್ತಿದ್ದೇವೆ. ಕನಿಷ್ಟ ಸ್ವಲ್ಪ ಒಂದು ಅರ್ಧ ಟಿ.ಎಂ.ಸಿ.-if available one T.M.C., for tanks feeding if it is feasible. ಇದನ್ನು ನಾನು ಒತ್ತಾಯ ಮಾಡುತ್ತಾ, ಕಾಲಾವಕಾಶದ ಮಿತಿ ಇದೆ. ಸಾಕಷ್ಟು ಮಾತನಾಡಬೇಕೆಂದು ಇದ್ದರೂ ಆಗುತ್ತಿಲ್ಲ. ಇನ್ನು ನಾನು ಸ್ವಲ್ಪ ವಿದ್ಯುಚ್ಛಕ್ತಿ ಬಗ್ಗೆ ಮಾತನಾಡಬೇಕು ಎನ್ನತಕ್ಕದ್ದು. ಎರಡು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ನಾನು ಆಗಲೇ ಮೆನಷನ್ ಮಾಡಿದ್ದೇನೆ. ಈ ಇಲಾಖೆಯಲ್ಲಿ ನಾನು ಆಗಲೇ ಪ್ರಾಮುಖ್ಯವಾಗಿ ಹೇಳಿದೆ. ರಾಜ್ಯದಲ್ಲಿ ರೈತನಿಗೆ ಬೇಕಾಗಿರತಕ್ಕಂಥಾದ್ದು ನೀರು ಮತ್ತು ನೀರಾವರಿ ವಿಚಾರದಲ್ಲಿ

ವಿದ್ಯುಚ್ಛಕ್ತಿ. ಒಂದೊಂದು ಸಲ ಹೇಳುತ್ತಾರೆ, 30 ಭಾಗ 40 ಭಾಗ ವಿದ್ಯುಚ್ಛಕ್ತಿಯನ್ನು ರೈತರು ಉಪಯೋಗಿಸುತ್ತಿದ್ದಾರೆ ಎಂದು. ಏನೋ ಪುಗಸಟ್ಟೆ ಕೊಟ್ಟ ಹಾಗೆ ಇಲಾಖೆಯವರು ಬಹಳ ಮಾತನಾಡುತ್ತಾರೆ. ಇವತ್ತು ಟ್ರಾನ್ಸಮಿಷನ್ ಲಾಸ್ ಎಷ್ಟು ಇದೆ? 12 ಪರ್ಸೆಂಟ್. ಈ 3500-3700 ಮೆಗಾವ್ಯಾಟ್‌ನಲ್ಲಿ ಲಾಸ್‌ನ್ನು ಲೆಕ್ಕಹಾಕಿದರೆ ಹಿಂದಿನ ಮುಖ್ಯಮಂತ್ರಿಗಳೇ ಹೇಳಿದಹಾಗೆ ಸಾಧರಣ 500 ಕೋಟಿಯನ್ನೇ ಕದಿಯುತ್ತಿದ್ದಾರೆ. ಅಂಥಾದ್ದನ್ನು ನೆನಸಿಕೊಂಡರೆ ರೈತರಿಗೆ ನೀವು ವಿದ್ಯುಚ್ಛಕ್ತಿ ಕೊಡುವುದರಲ್ಲಿ ಯಾವುದೇ ಅನ್ಯಾಯ ಇಲ್ಲ. ಬೇಡಿಕೆ ನಮಗೆ ಸಾಕಷ್ಟು ಇರಬಹುದು, 7 ಸಾವಿರ ಮೆಗಾವ್ಯಾಟ್ ಇರಬಹುದು. ಉತ್ಪಾದನೆ 3700-4000 ಮೆಗಾವ್ಯಾಟ್ ದಾಟಿಲ್ಲ. ಈ ಮಧ್ಯದ ಅಂತರ ಇಟ್ಟುಕೊಂಡಿದ್ದರೂ ಬಹುಶಃ ರೈತನಿಂದ ಎಷ್ಟು ಉತ್ಪಾದನೆ ಆಗುತ್ತದೆ, ಅದನ್ನು ಗಮನದಲ್ಲಿಟ್ಟುಕೊಂಡಾಗ ಈ ಬರಪೀಡಿತ ರೈತನಿಗೆ ಇವತ್ತು ವಿದ್ಯುಚ್ಛಕ್ತಿಯನ್ನು ಒದಗಿಸದೇ ಹೋದರೆ ಅವನ ಪರಿಸ್ಥಿತಿ ಏನಾಗುತ್ತದೆ? ವಿಶೇಷವಾಗಿ ಬರಪೀಡಿತ ಪ್ರದೇಶದಲ್ಲಿ ಇವತ್ತು ಏನು ಹೇಳಿದ್ದಾರೆ? ಇದು ಸಾಧಾರಣ 21 ತಾಲ್ಲೂಕುಗಳನ್ನು ಕಪ್ಪು ಪ್ರದೇಶಗಳೆಂದು ಘೋಷಣೆ ಮಾಡಿದ್ದಾರೆ. ಇನ್ನು 22 ತಾಲ್ಲೂಕುಗಳನ್ನು ಬೂದಿಪ್ರದೇಶವೆಂದು-ಬ್ಯಾಕ್ ಅಂಡ್ ಗ್ರೇ ಪ್ರದೇಶ; ಅಂದರೆ 22 ಮತ್ತು 21 - ಒಟ್ಟು 43 ತಾಲ್ಲೂಕುಗಳಿಗೆ ವಿದ್ಯುಚ್ಛಕ್ತಿಯನ್ನು ಇನ್ನುಮುಂದೆ ಕೊಡುವುದಿಲ್ಲ ಎನ್ನತಕ್ಕಂಥಾದ್ದು ಸರ್ಕಾರದ ಘೋಷಣೆ. ಆ ಪ್ರದೇಶಗಳ ರೈತರು ಏನು ಮಾಡಬೇಕು? ಇವತ್ತು ಸಾಧಾರಣ 36 ಸಾವಿರ ರಿಜಿಸ್ಟ್ರೇಷನ್ ಆದಂಥ ಬಾವಿಗಳು ಅಲ್ಲಿ ಇವೆ. ಏನೂ ಮಾಡುವುದಿಲ್ಲ ಎಂದು ಹೇಳುತ್ತೀರಿ. ನೀವು ಬ್ಲಾಕ್ ಅಂಡ್ ಗ್ರೇ ಎಂದು ಡಿಕ್ಲೇರ್ ಮಾಡಿ ವಿದ್ಯುಚ್ಛಕ್ತಿಯನ್ನು ಕೊಡುವುದಿಲ್ಲ, ರಿಜಿಸ್ಟ್ರೇಷನ್ ಮಾಡಿದ್ದಾರೆ. ಸರ್ಕಾರ ಸ್ವಲ್ಪ ಗಮನಹರಿಸಬೇಕು. ಯಾರು ಅವನೇ ಸ್ವಂತ ಪಾಪ, ರಿಜಿಸ್ಟ್ರೇಷನ್ ಮಾಡಿ, ಮಾಡದೇಯೇ ರೈತ ಸಾಲ ಮಾಡಿದ್ದಕ್ಕೋಸ್ಕರ, ಕಂಬವನ್ನು ದುಡ್ಡುಕೊಟ್ಟು, ವೈರ್‌ನ್ನು ತಂದುಕೊಟ್ಟು ಹಾಕಿಕೊಂಡರೆ, ಅವನು ಸರ್ವೀಸ್ ತೆಗೆದುಕೊಂಡಿದ್ದು ದಂಡ ಕಟ್ಟುತ್ತೇನೆ, ಕಡಿಮೆ ಪ್ರಮಾಣದಲ್ಲಿ ಮಾಡಿ ಎಂದು ಹೇಳಿದರೆ ಇಲಾಖೆಯ ಅಧಿಕಾರಿಗಳು ಮಾತನಾಡುತ್ತಾರೆ He is not a good Citizen what do you mean by this? ರೈತನ ಬಗ್ಗೆ ಈ ತರಹ ಹೇಳುತ್ತಿದ್ದರೆ, ಆತ ತನ್ನ ಕಷ್ಟಕ್ಕೆ ಕೇಳಿಕೊಳ್ಳುತ್ತಾನೆ. ಇಲ್ಲದಿದ್ದರೆ ರೈತನೂ ಹೊಟ್ಟೆಗಿಲ್ಲದಿದ್ದರೆ ಕಳ್ಳತನ ಮಾಡುತ್ತಾನೆ. ಇದು ಎಲ್ಲರೂ ಮಾತನಾಡುತ್ತಾರೆ. "He is not a good citizen" ಇದು ಕೆ.ಇ.ಬಿ.ಯಲ್ಲಿ ಅಧಿಕಾರಿಗಳು ಬಳಸತಕ್ಕಂಥ ಪದ. ನಾವು ದಿವಸ ರೈತರ ಬಗ್ಗೆ ಏನು ಮಾತನಾಡುತ್ತೇವೆ ಅದು. ಅವನು ಕಳ್ಳ ಎನ್ನುವಂತಹ ಮಾತನ್ನು ಹೇಳುತ್ತಾರೆ. ಹಿಂದಿನ ಮುಖ್ಯ ಮಂತ್ರಿಗಳು 500 ಮೆಗಾವ್ಯಾಟ್ ವಿದ್ಯುತ್ ಕದ್ದಿದ್ದಾರೆಂದು ಎಂದಾಗ ಸೌಜನ್ಯಕ್ಕಾದರೂ ಎಷ್ಟು ಜನರನ್ನು ಹಿಡಿದಿದ್ದೇವೆಂದು ಹೇಳುವುದಕ್ಕೆ ಆಗಲಿಲ್ಲ. ಟ್ರಾನ್ಸ್‌ಮಿಷನ್ ಲಾಸ್ ಎಷ್ಟು ಇದೆ ಎನ್ನುವುದನ್ನು ಕಂಡುಹಿಡಿಯುವುದಕ್ಕೆ ಆಗುತ್ತಿಲ್ಲ. ಅಡ್ಮಿನಿಸ್ಟ್ರೇಷನ್ ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿಲ್ಲ. ರೈತರು ರಿಯಾಯ್ತಿಯನ್ನು

ಕೊಡಿ ಎಂದರೆ, ಸಾಧಾರಣವಾಗಿ 22,000 ಬಾವಿಗಳಿರಬಹುದು. ಏನು ನಾವು ವಿದ್ಯುಚ್ಛಕ್ತಿಯನ್ನು ಕೊಡುವುದಿಲ್ಲವೆಂದು ಬ್ಲಾಕ್ ಅಂಡ್ ಗ್ರೇ ಎಂದು ಡಿಕ್ಲೇರ್ಡ್ ಮಾಡಿದ್ದೇವೆ ಆ ಪ್ರದೇಶದಲ್ಲಿರತಕ್ಕಂತಹ ರೈತರಿಗೆ ಕಂಬ ಅವನು 10-15 ಸಾವಿರ ಖರ್ಚು ಮಾಡಿದ್ದಕ್ಕೆ ಈಗ ಇವರು ನಿಗಧಿ ಮಾಡಿರತಕ್ಕಂತಹ ದರ 10-15 ಸಾವಿರ ಜೊತೆಗೆ ಈಗ ಮತ್ತೆ ಬ್ಯಾಕ್ ಬಿಲ್ಲಿಂಗ್ ಪ್ಲಸ್ 5,000 ಫೆನಾಲ್ಟಿ. ಇದು ರೈತ ಉತ್ಪಾದನೆಯನ್ನು ಮಾಡಿದ್ದಕ್ಕೆ, ಬೆವರು ಸುರಿಸಿದ್ದಕ್ಕೆ ಇಲಾಖೆಯವರು ಸರ್ಕಾರದ ಮೂಲಕ ಕೊಟ್ಟಿರತಕ್ಕಂತಹ ಕಾಣಿಕೆ. ಇದನ್ನು ಕೇಳಿದರೆ ಅಧಿಕಾರಿಗಳು ಮಿಸ್‌ಲೀಡ್ ಮಾಡುತ್ತಾರೆ. ಸರ್ಕಾರ ಯಾವತ್ತಾದರೂ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಏನು ಹೇಳುತ್ತಾರೆಂದರೆ ಹಿಂದೆ ಕಟ್ಟಿದ್ದರಂತೆ ಆ ರೈತ ಬಂದು ವಾಪಸ್ಸು ಕೇಳುತ್ತಾನೆ. ಸ್ವಾಮಿ, ಇನ್‌ಟ್ರೆಸ್ಟ್ ಮಾಡಿದ್ದವು, ಮೊದಲು ಕಟ್ಟಿರುವವರಿಗೆ ಇನ್‌ಟ್ರೆಸ್ಟ್ ವಾಪಸ್ಸು ಕೊಟ್ಟಿದ್ದಿರಾ? ಮಾನ್ಯ ಕಾಗೋಡು ತಿಮ್ಮಪ್ಪನವರು ಗೇಣಿದಾರರ ಬಗ್ಗೆ ಹೇಳಿದರು, ದುಡ್ಡನ್ನು ಕಟ್ಟಿದ್ದವರು ಇದ್ದರು, ಇನ್ನೂ ಕೆಲವರು ಕಟ್ಟಿರಲಿಲ್ಲ. ಎಷ್ಟು ವರ್ಷದ ಮೇಲೆ ಮಾಡಿದ್ದೀರಿ? ಅಂದರೆ ಅವರೆಲ್ಲರೂ ವಾಪಸ್ಸು ಕೊಡಿ ಎಂದು ಕೇಳುತ್ತಾರಾ? ಬಗರ್ ಹುಕುಂ ಮಂಜೂರಾತಿಯನ್ನು ಮಾಡಿದ್ದೇವೆ 500 ರೂಪಾಯಿಗಳು ಇವತ್ತು 50 ರೂಪಾಯಿಗಳಿಗೆ ಇಳಿಸಿದಾಗ 50 ರೂಪಾಯಿಗಳನ್ನು ತೆಗೆದುಕೊಂಡು 450 ರೂಪಾಯಿಗಳನ್ನು ವಾಪಸ್ಸು ಕೊಡಿ ಎಂದು ಬಂದಿದ್ದಾರಾ? Is it the justified reason? ನಾವು ಏನು ಪ್ರತಿನಿಧಿಗಳಿದ್ದೇವೆ ಪ್ರಾಕ್ಟಿಕಲ್ ಆಗಿ ರೈತರ ಹತ್ತಿರ ಹೋಗಿ ನಿಂತು ಅರ್ಥ ಮಾಡಿಕೊಂಡಿದ್ದೇವೆ ನಮ್ಮನ್ನು ಸ್ಪಂದಿಸಿ ಮಾತನಾಡತಕ್ಕಂತಹ ಸೌಜನ್ಯ ಕೂಡ ಕೆ.ಇ.ಬಿ. ಅಧಿಕಾರಿಗಳಲ್ಲಿ ಇಲ್ಲ. "Bad citizen" ಎನ್ನತಕ್ಕಂತಹ ಮಾತನ್ನು ಯೂಸ್ ಮಾಡುತ್ತಾರೆ, ಅವನು ಕಳ್ಳ ಎನ್ನತಕ್ಕಂತಹ ಮಾತನ್ನು ಹೇಳುತ್ತಾರೆ. Can we tolerate such things? Really it is an insult to hear such words as a representative. ಅಂಥ ಅಧಿಕಾರಿಗಳು ಆ ರೈತನ ಬಗ್ಗೆ ಆ ಪದವನ್ನು ಬಳಸಿದ್ದರೆ ಸರಿಯಾಗಿ ಕ್ರಮವನ್ನು ತೆಗೆದುಕೊಳ್ಳುವಂಥದ್ದು ಆಗಬೇಕು. ಇದನ್ನು ರೈತನ ದೃಷ್ಟಿಯಿಂದ ಹೇಳತಕ್ಕಂತಹ ಮಾತು. ಇದನ್ನು ನನ್ನ ವೈಯಕ್ತಿಕವಾಗಿ ಹೇಳತಕ್ಕಂತಹ ಮಾತು ಅಲ್ಲ. ಮಂತ್ರಿಗಳ ಹತ್ತಿರಗಳ ನಾಲ್ಕು ಸಾರಿ ಹೇಳಿದೆ. ಈ ಕಾರಣವನ್ನು ಅಧ್ಯಕ್ಷರು ಹೇಳಿದರು, ಇವರು ಹೇಳಿದರು ಎಂದು ಹೇಳುತ್ತಾರಲ್ಲಾ, ನಿಜವಾದ್ದಂತಹ ಸಮಸ್ಯೆ ಏನು ಎಂದು ಹೇಳಿದರೆ ಅಧಿಕಾರಿಗಳು ನನಗೂ ಸಹ ಫೀಲ್ಡ್ ಗೊತ್ತಿದೆ ಎನ್ನುವಂತಹ ಮಾತನ್ನು ಹೇಳುತ್ತಾರೆ. ಇವರ ಕೈಗಳು ಜೋಡಣೆ ಇಲ್ಲದೇ ಇದ್ದರೆ ರೈತ ಲೈನ್ ಹಾಕಿಕೊಳ್ಳುವುದಕ್ಕೆ ಹೋಗುತ್ತಿರಲಿಲ್ಲ. ರೈತರಿಗೆ ಕಂಬಗಳು ಎಲ್ಲಿ ಸಿಕ್ಕಿತ್ತು, ಇದನ್ನು ಅವರೇ ಒಪ್ಪಿಕೊಳ್ಳುತ್ತಾರೆ. ಅಧಿಕಾರಿಗಳು ಎಷ್ಟು ಜನ ರೈತರಿಗೆ ಕೊಟ್ಟಿದ್ದಾರೆ ಅಂತಹ ಅಧಿಕಾರಿಗಳ ಮೇಲೆ ಡಿಸಿಪ್ಲಿನರಿ ಆ್ಯಕ್ಷನ್ ತೆಗೆದುಕೊಂಡಿದ್ದಾರೆ? ಸಸ್ಪೆಂಡ್ ಮಾಡಿದ್ದಾರೆ? ರಿಕವರಿಯನ್ನು ಮಾಡಿದ್ದಾರೆ? No action for this. ರೈತರ ಬಗ್ಗೆ ನೀವು ಸ್ವಲ್ಪ ನೀವು ಮಾಡಿರತಕ್ಕಂತಹ ಫೆನಾಲ್ಟಿ ಕ್ಲಾಸ್‌ನ್ನು ಪ್ರವರ್ಗ- 1, 2, 3

ಎನ್ನುವುದರಲ್ಲಿ ಅರ್ಧ ರಿಯಾಯ್ತಿಯನ್ನು ಕೊಡಿ ಎಂದು ಮನವಿಯನ್ನು ಮಾಡಿಕೊಂಡರೆ, ಆಶ್ವಾಸನೆಯನ್ನು ಕೊಟ್ಟರೆ ಅದಕ್ಕೆ ಒಂದು ಸರಿಯಾದ ಪುರಸ್ಕಾರ ಇಲ್ಲ, ಸರಿಯಾದಂತಹ ಮಾತುಗಳು ಇಲ್ಲ. ಈ ರೀತಿಯಾದಂತಹ ಅಧಿಕಾರಿಗಳನ್ನು ಇಟ್ಟುಕೊಂಡರೆ ರೈತ ಈ ರಾಜ್ಯದಲ್ಲಿ ಉದ್ಧಾರವಾಗುವುದಿಲ್ಲ. ಅದಕ್ಕೆ ಮಂತ್ರಿಗಳು ದಯವಿಟ್ಟು ಗಮನವನ್ನು ಹರಿಸಬೇಕು ಇದರ ಬಗ್ಗೆ ಏನಾದರೂ ತೀರ್ಮಾನವನ್ನು ಮಾಡದೇ ಹೋದರೆ ಖಂಡಿತ ನಾನು ಧರಣಿಯನ್ನು ಮಾಡುತ್ತೇನೆಂದು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಹೇಳುತ್ತಿದ್ದೇನೆ. ರೈತರ ಪರವಾಗಿ ನಾನು ಹೇಳಲೇ ಬೇಕಾಗಿತ್ತು ಹೇಳಿದ್ದೇನೆ. ನೀವು ಕಾಲಾವಕಾಶವನ್ನು ಸಹ 10 ನಿಮಿಷ ಹೆಚ್ಚಾಗಿ ಕೊಟ್ಟಿರುತ್ತೀರಿ. ಇದರಿಂದ ಇದರ ಬಗ್ಗೆ ಸರ್ಕಾರ ಗಮನವನ್ನು ಸೆಳೆಯತಕ್ಕಂಥದ್ದು ಆಗಬೇಕು. ಆ ಜಿಲ್ಲೆಗೆ ನೀರಾವರಿಯ ಬಗ್ಗೆ ಅನ್ಯಾಯವಾಗಿರುವ ಬಗ್ಗೆ ಮಂತ್ರಿಗಳು ಪರಿಹಾರವನ್ನು ಒದಗಿಸುವಂತಹ ಕೆಲಸವಾಗಬೇಕು. ಬರಪೀಡಿತ ಪ್ರದೇಶಕ್ಕೆ ವಿಶೇಷವಾಗಿ ನೇತ್ರಾವತಿ ನೀರಿನ ಯೋಜನೆಯನ್ನು ಆದಷ್ಟು ಬೇಗ ಟೈಮ್ ಬಾಂಡ್ ಪ್ರೋಗ್ರಾಮ್‌ನ್ನು ಹಾಕಿಕೊಳ್ಳುವುದರ ಮೂಲಕ ಭದ್ರ ಮೇಲ್ದಂಡೆ ಯೋಜನೆಗೆ ಏನು ತಾವು ವಿಶೇಷವಾದಂತಹ ಹುಮ್ಮಸ್ಸಿನಿಂದ ಕಾರ್ಯಕ್ರಮವನ್ನು ಹಮ್ಮಿಕೊಂಡಿರಿ, ಅದೇ ಧಾಟಿಯಲ್ಲಿ ಈ ಕೆಲಸವನ್ನು ಮಾಡುತ್ತೀರಿ ಎನ್ನುವಂತಹ ಅಭಿಮಾನವನ್ನು ಇಟ್ಟುಕೊಂಡಿದ್ದೇನೆ. ಏಕೆಂದರೆ ನಾವು ಒಟ್ಟಿಗೆ ಇದ್ದವರು. ಅದನ್ನು ನೆನಪಿಸುತ್ತಾ, ದಯವಿಟ್ಟು ರೈತರಿಗೆ ಅನುಕೂಲವಾಗುವಂತಹ ದೃಷ್ಟಿಯಿಂದ, ನನ್ನ ದೃಷ್ಟಿಯಿಂದ ಅಲ್ಲ. ಆ ಕೆಲಸವನ್ನು ತಾವು ಮಾಡಬೇಕೆಂದು ಹೇಳಿ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟ ಅಧ್ಯಕ್ಷರಿಗೆ ಮತ್ತು ಎಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ (ಬೀದರ್): ಸನ್ಮಾನ್ಯ ಸಭಾಧ್ಯಕ್ಷರೆ, ನಾನು 1997-98ನೇ ಸಾಲಿನ ಬೇಡಿಕೆಗಳನ್ನು ವಿರೋಧಿಸುತ್ತಾ ಮಾತನಾಡುತ್ತಿದ್ದೇನೆ. ಮೊದಲು ನಾನು ಐದು ನಿಮಿಷಗಳ ಕಾಲ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಬೇಡಿಕೆಗಳ ಮೇಲೆ ಮಾತನಾಡುತ್ತೇನೆ. ಸರ್ಕಾರದವರಲ್ಲಿ ನನ್ನ ಒಂದು ಪ್ರಶ್ನೆ ಇದೆ, ತಾವು ಸಾಮಾಜಿಕ ನ್ಯಾಯವನ್ನು ಮಾತನಾಡುತ್ತೀರಿ, ತಾವು ಬಂದು ಎರಡೂವರೆ ವರ್ಷವಾಗಿದೆ ಆದರೆ ತಾವು ಬಂದಮೇಲೆ ಹಿಂದುಳಿದ ವರ್ಗದವರ ಬಗ್ಗೆ ಹಾಗೂ ಅಲ್ಪಸಂಖ್ಯಾತರ ಬಗ್ಗೆ ಏನು ಮಾಡಿದ್ದೀರಿ ಎಂಬುದನ್ನು ಹೇಳಿ? ಇವೊತ್ತು ದೇಶ ಸ್ವಾತಂತ್ರ್ಯವಾಗಿದೆ, ದೇಶ ಸ್ವಾತಂತ್ರ್ಯವಾಗಿ ಸುಮಾರು 50 ವರ್ಷಗಳಾದರೂ ಈ ರಾಜ್ಯದ ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು ಇನ್ನೂ ಗುಲಾಮರಿದ್ದೇವೆ. ನಾನು ಬಹಳ ಸೀರಿಯಸ್ಸಾಗಿ ಹೇಳುತ್ತಿದ್ದೇನೆ. ಇದರ ಬಗ್ಗೆ ಎಲಕ್ಷನ್ ಬರಲಿ ಜನರು ನಿಮ್ಮನ್ನು ಕೇಳುವವರಿದ್ದಾರೆ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಸನ್ಮಾನ್ಯ ಅಧ್ಯಕ್ಷರೆ, ದೇಶ ಸ್ವತಂತ್ರವಾಗಿದೆ

ಎಂದ ಮೇಲೆ ನಮ್ಮ ದೇಶದಲ್ಲಿರುವ ಎಲ್ಲರೂ ಸ್ವಾತಂತ್ರ್ಯವಾಗಿದ್ದೇವೆ ಎಂದು ಅರ್ಥ ಗುಲಾಮರು ಎನ್ನುವ ಪ್ರಶ್ನೆಯೇ ಬರುವುದಿಲ್ಲವಲ್ಲ.

ಅಧ್ಯಕ್ಷರು: ನೀವು ಆ ಸಂದರ್ಭ ತಿಳಿದುಕೊಳ್ಳಬೇಕು, ನಾವು ಅಲ್ಪಸಂಖ್ಯಾತರು, ಹಿಂದುಳಿದವರು ನಮಗೆ ಸರಿಯಾದ ನ್ಯಾಯ ಸಿಕ್ಕಿಲ್ಲ. ನಾವು ಇನ್ನೂ ಅದೇ ಸ್ಥಿತಿಯಲ್ಲಿ ಇದ್ದೇವೆ. ಅದೇ ಅವರ ತಕರಾರು. ಸ್ವಾತಂತ್ರ್ಯ ಸಿಕ್ಕಿದೆ ನಿಜ ಆದರೆ ಅದನ್ನು ಕೆಲವರು ಮಾತ್ರ ಇಟ್ಟುಕೊಂಡಿದ್ದಾರೆ, ನಮಗೆ ಮಾತ್ರ ಕೊಟ್ಟಿಲ್ಲ ಎಂದು ಹೇಳುತ್ತಿದ್ದಾರೆ ಅದೇ ಅವರ ಕಂಪ್ಲೇಂಟ್. ನಮಗೂ ಕೊಡಿ ಆಗ ಸ್ವಾತಂತ್ರ್ಯ ಬಂದಿದೆ ಎಂದು ಹೇಳುತ್ತೇವೆ. ಈಗ ಬಂದಿಲ್ಲ ಎಂದೇ ಹೇಳುವುದು ಎಂದು ಹೇಳುವುದು ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಕೆ.ಎನ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಮಾತನಾಡುವವರಿಗೆ ಆಸಕ್ತಿ ಕೇಳುವವರಿಗೆ ಆಸಕ್ತಿ ಇದ್ದರೆ ಬಹಳ ಚೆನ್ನಾಗಿ ಇರುತ್ತದೆ. ಬಹಳ ಜನ ಹಿಂಸೆಗೆ ಕೂತಿರುತ್ತಾರೆ. ನಾವು ಬೆಳಿಗ್ಗೆಯವರೆಗೆ ಕುಳಿತುಕೊಳ್ಳುತ್ತೇವೆ ನಮ್ಮದೇನೂ ಅಭ್ಯಂತರವಿಲ್ಲ. ಏಕೆಂದರೆ ನಾವು ಪೌರಾಣಿಕ ನಾಟಕ ನೋಡಿದವರು ಬೆಳಿಗ್ಗೆಯವರೆಗೆ ಕುಳಿತುಕೊಳ್ಳುತ್ತೇವೆ. ಈಗ ಆ ಕಡೆ ಈ ಕಡೆಯವರು ಸೇರಿ ಐದಾರು ಜನ ಮಾತನಾಡುವವರು ಇದ್ದಾರೆ. ಬೆಳಿಗ್ಗೆ ಎಂಟು ಗಂಟೆಗೆ ಪ್ರಾರಂಭ ಮಾಡಿದರೆ ಹತ್ತೂವರೆ ಹನ್ನೊಂದು ಗಂಟೆಯ ಒಳಗೆ ಕ್ಲೋಸ್ ಮಾಡಿಕೊಡುತ್ತೇವೆ. ಹನ್ನೊಂದರಿಂದ ಸುಮಾರು ಎರಡೂವರೆ ಗಂಟೆ ತಾವು ರಿಪ್ಲೈ ಕೊಡಬಹುದು. ಆಮೇಲೆ ಮಧ್ಯಾಹ್ನ ವಿಧಾನ ಪರಿಷತ್ತಿಗೆ ಹೋಗಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾಳೆ ಮಾತನಾಡುವರಿಗೂ ಟೈಮ್ ಲಿಮಿಟ್ ಮಾಡಿ ಮಾತನಾಡಲು ಹೇಳಿದರೆ ಸರಿ ಹೋಗುತ್ತದೆ. ಯಾರೂ ಮೂಡ್‌ನಲ್ಲಿಲ್ಲ. ಎಲ್ಲರೂ ಸುಸ್ತಾಗಿದ್ದಾರೆ.

ಅಧ್ಯಕ್ಷರು: ನಾಳೆ ಬೆಳಿಗ್ಗೆಯ ಅಜೆಂಡಾ ಹೆವಿ ಆಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಯಾರೂ ಮೂಡ್‌ನಲ್ಲಿ ಇಲ್ಲ. ಬರೆದು ಕೊಳ್ಳುವವರು, ಓದುವವರು ಎಲ್ಲರೂ ಸುಸ್ತಾಗಿದ್ದಾರೆ.

ಅಧ್ಯಕ್ಷರು: ನಾನು ಇಲ್ಲಿಯವರೆಗೂ ನಿಮ್ಮೆಲ್ಲರ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಎಷ್ಟು ದೂರ ಎಳೆದುಕೊಂಡು ಹೋಗಲು ಸಾಧ್ಯವೋ ಅಲ್ಲಿಯವರೆಗೆ ಎಳೆದುಕೊಂಡು ಹೋಗಿದ್ದೇನೆ. ಬೆಳಿಗ್ಗೆ ಎಷ್ಟೊತ್ತಾದರೂ ನಾವು ಒಂಭತ್ತು ಗಂಟೆಗೆ ಸೇರಲೇಬೇಕು. ಮುಖ್ಯಮಂತ್ರಿಗಳ ಹಾಗೂ ಇತರ ಮಂತ್ರಿಗಳ ರಿಪ್ಲೈ ಆಗಲೇಬೇಕು. ವೋಟ್ ಆಗಬೇಕು, ಅಪ್ರೋಪ್ರಿಯೇಷನ್ ಬಿಲ್ ಇಂಟ್ರಡ್ಯೂಸ್

ಆಗಬೇಕು, ಅಪ್ರೊಪ್ರೀಯೇಷನ್ ಬಿಲ್ ಮೇಲ್ಮನೆಗೆ ಹೋಗಿ ಬರುವವರೆಗೂ ನಾವು ಸದನವನ್ನು ನಡೆಸಬೇಕು. ಕಷ್ಟ ಆಗುತ್ತದೆ. ಬೆಳಿಗ್ಗೆಗೆ ಭಾಷಣ ಇಲ್ಲ, ಬೆಳಿಗ್ಗೆ ರಿಪ್ಲೈ ಮಾತ್ರ. ತಾವು ಕ್ಲೋಸ್ ಮಾಡೋಣ ಎಂದರೆ ನನಗೇನೂ ತೊಂದರೆ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅನೇಕ ಹೊಸ ಹೊಸ ಸದಸ್ಯರುಗಳು ಮಾತನಾಡುತ್ತಿದ್ದಾರೆ, ಅನೇಕ ಹೊಸ ಹೊಸ ವಿಷಯಗಳು ಬರುತ್ತಿವೆ.

ಅಧ್ಯಕ್ಷರು: ಹೌದು ಏನು ಇಷ್ಟೊತ್ತು ಕೂತಿದ್ದೀರಿ. ಇನ್ನೂ ಸ್ವಲ್ಪ ಹೊತ್ತು ಕುಳಿತುಕೊಂಡರೆ ಹತ್ತೂವರೆಯ ಒಳಗೆ ಮುಗಿಸಿಬಿಡಬಹುದು. ಹಶ್ಮಿಯವರು ಆದಮೇಲೆ ಪುಟ್ಟಣ್ಣಯ್ಯನವರದ್ದು ಹಾಗೂ ಸಗೀರ್‌ರದ್ದು ಇಬ್ಬರದ್ದು ಉಳಿದುಬಿಡುತ್ತದೆ. ಎಲ್ಲಾ ಲಿಸ್ಟ್ ಕಂಪ್ಲೀಟ್ ಆಗಿದೆ. ಆ ಕಡೆಯವರು ನಾವು ಯಾರ ಮಾತನಾಡುವುದಿಲ್ಲ ಎಂದು ಬರೆದು ಕೊಟ್ಟಿದ್ದಾರೆ. ರಾಮದಾಸ್ ಅವರದೊಂದು ಸೇರಿಸಿದರೆ ಹನ್ನೊಂದು ಗಂಟೆಯಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬೆಳಿಗ್ಗೆ ಎಂಟೂವರೆಯಿಂದ ಒಂಭತ್ತೂವರೆಯವರೆಗೆ ಮಾತನಾಡಲಿ ನಂತರ ರಿಪ್ಲೈ ಪ್ರಾರಂಭ ಮಾಡಲಿ.

ಅಧ್ಯಕ್ಷರು: ಹಾಗಾದರೆ ನನ್ನದೇನೂ ಅಭ್ಯಂತರವಿಲ್ಲ. ಹಶ್ಮಿಯವರದ್ದು ಮುಗಿದು ಹೋಗಲಿ. ಅವರದ್ದು ಕೊನೆಯ ಸ್ಪೀಚ್.

10. 10 ಪಿ.ಎಂ

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ಮಾನ್ಯ ಅಧ್ಯಕ್ಷರೇ, ನಮ್ಮ ರಾಷ್ಟ್ರ ಸ್ವತಂತ್ರ್ಯವಾದ ಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ 18 ಪರ್ಸೆಂಟ್ ಮೀಸಲಾತಿಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದರಲ್ಲಿ ಎಷ್ಟು ಮೀಸಲಾತಿಯನ್ನು ತಾವು ಇಂಪ್ಲಿಮೆಂಟ್ ಮಾಡಿದ್ದೀರಿ? ಅದರಲ್ಲಿ 7 ಪರ್ಸೆಂಟ್ ಮೀಸಲಾತಿ ಇಂಪ್ಲಿಮೆಂಟ್ ಆಗಿಲ್ಲ. ಅದರಲ್ಲಿ ಬ್ಯಾಕ್‌ಲಾಗ್ ಹಾಗೆಯೇ ಇದೆ. ನಿಮ್ಮ ಸರ್ಕಾರ ಬಂದ ಮೇಲೆ ದಲಿತರ ಮೇಲೆ ಅನ್ಯಾಯ ಜಾಸ್ತಿ ಆಗಿದೆ. ತಾವು ಬೇಕಾದರೆ ಸಿ.ಆರ್.ಇ. ಸೆಲ್ ವರದಿ ನೋಡಿ. 25 ಪರ್ಸೆಂಟ್ ಜಾಸ್ತಿ ಆಗಿದೆ. ವಿಶೇಷವಾಗಿ ಹಾಸನ, ಮೈಸೂರು ಶಿವಮೊಗ್ಗದಲ್ಲಿ, ಮಂಡ್ಯದಲ್ಲಿ ಹಿಂದೆಗಿಂತ 25 ಪರ್ಸೆಂಟ್ ಜಾಸ್ತಿ ಆಗಿದೆ. ಸುಮ್ಮನೆ ತಾವು ಸಾಮಾಜಿಕ ನ್ಯಾಯ ಕೊಡುತ್ತೇವೆಂದು ಹೇಳುತ್ತೀರಿ. ಅದಕ್ಕಿಂತ ಕೆಟ್ಟುಹೋಗಿದೆ ಹಿಂದುಳಿದ ವರ್ಗಗಳ ಪರಿಸ್ಥಿತಿ. ತಾವು ಈ ವರ್ಗಗಳ ಬಗ್ಗೆ ಕಿರುಪರಿಚಯ ಮಾಡಲು 8 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಪುಸ್ತಕಗಳನ್ನು ಪ್ರಿಂಟ್ ಮಾಡಿದ್ದೀರಿ. ಈ ರಾಜ್ಯದಲ್ಲಿ ನಿಮ್ಮ ಸರ್ಕಾರ ಬಂದ ಮೇಲೆ ಏನೇನು ಅನ್ಯಾಯವಾಗುತ್ತಿದೆ ನಮ್ಮ ಸಮಾಜದ ಮೇಲೆ ಎನ್ನುವ ಎಲ್ಲಾ ಅಂಕಿಅಂಶಗಳನ್ನು ಈ ವರದಿಯಲ್ಲಿ ಇದೆ. ಈ

ಪುಸ್ತಕಗಳು ಎಲ್ಲಾ ಜಿಲ್ಲೆಗಳಲ್ಲಿ ಹಂಚಿಕೆ ಮಾಡಿದ್ದೀರಿ. ನಮ್ಮ ವತಿಯಿಂದ ನಾವು 50 ಜೀಪ್‌ಗಳನ್ನು ತೆಗೆದುಕೊಂಡು ಎಲ್ಲಾ ಜಿಲ್ಲೆಗಳಿಗೂ ಹೋಗಿ ನಿಮ್ಮ ಸರ್ಕಾರ ಮಾಡಿರುವ ಅನ್ಯಾಯಗಳ ಬಗ್ಗೆ ಎಲ್ಲಾ ಕಡೆ ಪ್ರಚಾರ ಮಾಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೇ, ಈ ದೇಶದಲ್ಲಿ ಈ ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ಏನು ಸಿಕ್ಕಿದೆ ಎಂಬುದನ್ನು ತಾವೇ ಹೇಳಿ 4 ಪರ್ಸೆಂಟ್ ಮೀಸಲಾತಿ ಉದ್ಯೋಗದಲ್ಲಿ ಈ ವರ್ಗದವರಿಗೆ ಸಿಕ್ಕಿಲ್ಲ. ಎಜ್ಯುಕೇಷನ್‌ನಲ್ಲಿ ಸಿಕ್ಕಿಲ್ಲ. ಮತ್ತು ಅದಕ್ಕಿಂತ ಭಿನ್ನವಾದ ಪರಿಸ್ಥಿತಿ ಅಲ್ಪಸಂಖ್ಯಾತರದ್ದು ಇದೆ. ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆ ನಾವು 37 ಪರ್ಸೆಂಟ್ ಇದ್ದೆವು. ಈಗ ತಾವು ಮಂಡಲ್ ಕಮಿಷನ್ ವರದಿ ಪ್ರಕಾರ ಸರ್ವೆ ಮಾಡಿ ನೋಡಿ, 1.5 ಪರ್ಸೆಂಟ್ ಇದ್ದೇವೆ. ಏನು ಮಾಡಿದ್ದೀರಿ ನೀವು? ಏಟು ಸಲುವಾಗಿ ನೀವು ಹೇಳಿದಿರಿ. ಅವರ ಬಗ್ಗೆ ನೀವು ಸ್ವಲ್ಪ ಸೀರಿಯಸ್ ಆಗಿ ನೋಡಬೇಕಾಗಿತ್ತು. ಮಾನ್ಯ ಸಾರಿಗೆ ಸಚಿವರು ಇಲ್ಲೇ ಇದ್ದಾರೆ. ಕೆ.ಎಸ್.ಆರ್.ಟಿ.ಸಿ.ಯಲ್ಲಿ 4 ಪರ್ಸೆಂಟ್ ಮೀಸಲಾತಿಯನ್ನು ಹಿಂದಿನ ಸರ್ಕಾರ ಕೊಟ್ಟಿದ್ದರು. ಅದನ್ನು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಇಂಪ್ಲಿಮೆಂಟ್ ಮಾಡಿಲ್ಲ. ನಾನು ಈ ವಿಚಾರವನ್ನು 10 ಸಾರಿ ತಮ್ಮ ಗಮನಕ್ಕೆ ತಂದಿದ್ದೇವೆ. ನಾವು ಕಂಡಕ್ಟರ್ ಡ್ರೈವರ್ ಆಗುವುದು ಬೇಡವೇನು? ಇಂಪ್ಲಿಮೆಂಟ್ ಆಗಲಿಲ್ಲ. ನಾವು ಯಾರಿಗೆ ಹೇಳಬೇಕು? ನಾನು 10 ಸಾರಿ ಹೇಳಿದ್ದೇನೆ. ಸ್ವತಃ ವಿನಂತಿ ಮಾಡಿದ್ದೇನೆ. ಅಲ್ಪಸಂಖ್ಯಾತರ ಮತ್ತು ಹಿಂದುಳಿದವರ ಪರಿಸ್ಥಿತಿ ಈ ರೀತಿ ಇದೆ ಎಂದು. ಅದರ ಬಗ್ಗೆಯಾದರೂ ನೋಡುವವರು ಇಲ್ಲ. ಮಾನ್ಯ ಅಧ್ಯಕ್ಷರೇ ಸುಮಾರು 16 ಸಾರಿ ನಾವು ದೊಡ್ಡ ಸಮ್ಮೇಳನವನ್ನು ಮಾಡಿದ್ದೇವೆ ಬೀದರ್‌ನಲ್ಲಿ. ನಮ್ಮ ಗುರುಪಾದಪ್ಪ ನಾಗಮಾರಪಲ್ಲಿ ಸಾಹೇಬರು ಇದ್ದರು. ನಮ್ಮ ಮಾಲೀಕಯ್ಯ ಗುತ್ತೇದಾರ್ ಸಾಹೇಬರು ಇದ್ದರು. ಹೈದ್ರಾಬಾದ್ ಕರ್ನಾಟಕದ ಎಷ್ಟು ಜನ ಮಂತ್ರಿಗಳು ಇದ್ದರೋ ಅವರೆಲ್ಲರೂ ಇದ್ದರು ಆ ಸಮ್ಮೇಳನದಲ್ಲಿ. ಅವರೆಲ್ಲರೂ ನಿಮ್ಮಲ್ಲಿ ಬಂದಿದ್ದರು. ಕೃಷ್ಣಾದಲ್ಲಿ ಸಹ ಒಂದು ಮೀಟಿಂಗ್ ಆಯಿತು. ನಾವು ಸುಮಾರು 19 ಸಾರಿ ಆ ಮನವಿಯನ್ನು ರಿಪೀಟ್ ಮಾಡಿದ್ದೇವೆ. ಆ ಮನವಿಯಲ್ಲಿ ಏನು ಕೊಟ್ಟಿದ್ದಾರೆ ಅಲ್ಪಸಂಖ್ಯಾತರು ಆ ಮನವಿಯ ಪ್ರತಿ ಮುಖ್ಯಮಂತ್ರಿಗಳ ಕಛೇರಿಯಲ್ಲಿ ಇಲ್ಲ. ನಿಮ್ಮಲ್ಲಿ ಸೀರಿಯಸ್‌ನೆಸ್ ಇಲ್ಲ ಎಂದು ನಾನು ಹೇಳಬೇಕಾಗುತ್ತದೆ. ಒಂದು ಸಾರಿ ಮಾತ್ರ ಅಲ್ಪಸಂಖ್ಯಾತ ಶಾಸಕರ ಸಭೆಯನ್ನು ಕರೆದಿರಿ ನೀವು. ನಾವು ನಮ್ಮ ಸಮಸ್ಯೆಗಳ ಬಗ್ಗೆ ಗಮನ ಹರಿಸಿ ಎಂದು ಹತ್ತು ಸಾರಿ ಹೇಳಿದ್ದೇನೆ. ಆದರೂ ಏನೂ ಪ್ರಯೋಜನವಾಗಲಿಲ್ಲ. ಆದ್ದರಿಂದ ಈಗ ಅಲ್ಪಸಂಖ್ಯಾತರಲ್ಲಿ ಏನು ಭಾವನೆ ಬಂದಿದೆ ಅಂದರೆ ಈ ರಾಜ್ಯದಲ್ಲಿ ನಮ್ಮ ಸಮಸ್ಯೆಗಳನ್ನು ಯಾರೂ ಕೇಳುವವರು ಇಲ್ಲ ಎನ್ನುವ ಭಾವನೆ ಬಂದಿದೆ. ತಾವು ಈಗ ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಮಾಡಿದ್ದೀರಿ. ಅದರ ಹೆಸರು ಬದಲಾವಣೆ ಮಾಡಿ ಮೈನಾರಿಟೀಸ್ ಹೆರ್‍ಯಾಸ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಮಾಡಿ. ಎರಡು ವರ್ಷ ಆಗಿದೆ ಜನ ಅರ್ಜಿ ಕೊಟ್ಟು. ಇದುವರೆಗೂ ಸಾಲ ಸಿಕ್ಕಿಲ್ಲ. ಸುಮ್ಮನೆ ತಾವು ಹಿಂದುಳಿದ ವರ್ಗದವರಿಗೆ ಮತ್ತು ಅಲ್ಪಸಂಖ್ಯಾತರಿಗೆ ಎಂದು ಒಂದು

ಖಾತೆ ಮಾಡಿದ್ದೀರಿ. ಅವರಿಗೆ ಏನೂ ಬಜೆಟ್ ಇಲ್ಲ. ಏನು ಬಜೆಟ್ ಇದೆ ನೋಡಿ ಸಾರ್.

ಅಧ್ಯಕ್ಷರು: ಅವರ ಸ್ವಂತ ಬಜೆಟ್ ದೊಡ್ಡದಾಗಿದೆ ಎಂದು ಇಲ್ಲಿ ಕಡಿಮೆ ಕೊಟ್ಟಿದ್ದಾರೆ.

ಶ್ರೀ ಸಯ್ಯದ್ ಜುಲ್ಫಿಕರ್ ಹಶ್ಮಿ: ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳುತ್ತಿದ್ದೇನೆ ಆ ಬಗ್ಗೆ ಸರ್ಕಾರ ಬಹಳ ಸೀರಿಯಸ್ ಆಗಿ ಗಮನ ಹರಿಸಬೇಕು. ನಮಗೆ ಈ ವರ್ಗದ ಜನರ ಬಗ್ಗೆ ಕಾಳಜಿ ಇದೆ. ಸರ್ಕಾರಕ್ಕೆ ಚಿಂತೆ ಇಲ್ಲ. ಮತ್ತೆ ಚುನಾವಣೆ ಬಂದರೆ ತಾವು ಜನರ ಮುಂದೆ ಹೇಗೆ ಹೋಗುತ್ತೀರಿ. ತಾವು ಸರ್ವೆ ಮಾಡಿ ನೋಡಿ. ತಾವು ಆ ಸಮ್ಮೇಳನದಲ್ಲಿ ಇದ್ದೀರಿ. ಆಗ ತಾವು ಏನೇನು ಭರವಸೆಗಳನ್ನು ಕೊಟ್ಟಿರಿ. ಮೋಸ್ಟ್ ಬ್ಯಾಕ್‌ವರ್ಡ್ ಅಲ್ಪಸಂಖ್ಯಾತರ ಜಿಲ್ಲೆಯಿಂದ ತಾವು ಗೆದ್ದು ಬರುತ್ತೀರಿ. ಜನ ತಮಗೆ ಓಟು ಕೊಟ್ಟಿದ್ದಾರೆ. ಅವರ ಸಮಸ್ಯೆಗಳ ಬಗ್ಗೆ ತಾವು ಒಂದು ಸಾರಿಯಾದರೂ ಗಮನ ಹರಿಸಲಿಲ್ಲ ಅಂದರೆ ಹೇಗೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಿಮ್ಮದೇ ಸಮಸ್ಯೆಯನ್ನು ಬಗೆಹರಿಸಿದ್ದೇವೆ ನಾವು.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ನಮ್ಮದು ಏನೂ ಸಮಸ್ಯೆ ಇಲ್ಲ. ನೀವು ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಜನರ ಕೆಲಸ ಮಾಡಿ ಕೊಡುವುದಿಲ್ಲ. ಸುಮ್ಮನೇ ನಡೆಯುತ್ತಿದೆ. ಚಲ್ತಿ ಕಾ ನಾಮ್ ಗಾಡಿ ಚಲ್ ರಹಾಹ್ಯೆ....

ಅಧ್ಯಕ್ಷರು: ನಿಜವಾಗಿಯೂ ನಿನ್ನ ಸಮಸ್ಯೆಯನ್ನು ಯಾರು ಬಗೆಹರಿಸಿ ಕೊಡುತ್ತಿದ್ದಾರೆ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ತಾವು ಒಬ್ಬರು ಇದ್ದೀರಿ,

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಚಲ್ತಿಕಿ ಹೈ ಗಾಡಿ ಅಂದರೆ ಏನು?

ಶ್ರೀ ಸಿ.ಆರ್.ಸಗೀರ್ ಅಹ್ಮದ್: ಮಾನ್ಯ ಅಧ್ಯಕ್ಷರೇ, ನಾನು ಇವರಿಬ್ಬರ ಮಾತುಕತೆಯನ್ನು ಆಲೋಚನೆ ಮಾಡಿದಾಗ ಒಂದು ನಿಮಿಷ ಇಬ್ಬರದ್ದು ಕತೆ ಹೇಳುತ್ತಿದ್ದೇನೆ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ನಮ್ಮದು ಏನೂ ಕತೆ ಇಲ್ಲ ಸ್ವಾಮಿ ಸರ್ಕಾರದ್ದು ನಮ್ಮದು.

ಶ್ರೀ ಸಿ.ಆರ್.ಸಗೀರ್ ಅಹ್ಮದ್: ಮಾನ್ಯ ಅಧ್ಯಕ್ಷರೇ, ರಾಜ್ಯಸಭೆ ಚುನಾವಣೆ ನಡೆಯಿತಲ್ಲಾ ಹೋದ ವರ್ಷ ಆಗ ಮಾನ್ಯ ಹಶ್ಮಿಯವರು ಮತ್ತು ಮಾನ್ಯ ಮಂತ್ರಿಗಳಾದ ಗುರುಪಾದಪ್ಪ ನಾಗಮಾರಪಲ್ಲಿ ಅವರ ಛೇಂಬರ್‌ನಲ್ಲಿ ಮತ್ತು ಮನೆಯಲ್ಲಿ ನಾನು

ಅವರನ್ನು ನೋಡುತ್ತಿದ್ದೆ. ಅವರಿಗೆ ಶಹಭಾಶ್‌ಗಿರಿ ಕೊಟ್ಟು ಅಲ್ಪಸಂಖ್ಯಾತರ ಬಗ್ಗೆ ಒಳ್ಳೆಯ ಕೆಲಸ ಮಾಡಿಕೊಂಡು ಬರುತ್ತಿದ್ದಾರೆಂದು ಹಶ್ಮಿಯವರು ಇದೇ ಸದನದಲ್ಲಿ ಹೇಳಿದ್ದಾರೆ. ಈಗ ಯಾವ ಕಾರಣಕೋಸ್ಕರ ಅವರು ಈಗ ವಿರೋಧವಾಗಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ನಾನು ಯಾವಾಗಲೂ ಶಹಭಾಶ್‌ಗಿರಿ ಹೇಳಿಲ್ಲ. ಅವರು ಅಂತಹ ಶಹಭಾಶ್‌ಗಿರಿ ಕೊಡುವ ಕೆಲಸ ಏನೂ ಮಾಡುತ್ತಿಲ್ಲ. ಮಾನ್ಯ ಅಧ್ಯಕ್ಷರೇ, 1992-93ರಲ್ಲಿ ಕಾಂಗ್ರೆಸ್ ಸರ್ಕಾರ ಇತ್ತೋ ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೋಸ್ಕರ 7 ಕೋಟಿ, 8 ಕೋಟಿ ಹಣ ಇಟ್ಟಿದ್ದರು. ಹೋದ ವರ್ಷ ನೀವು 4 ಕೋಟಿ ಇಟ್ಟಿದ್ದೀರಿ. ಈ ವರ್ಷ 2 ಕೋಟಿ ರೂಪಾಯಿ ಇಟ್ಟಿದ್ದೀರಿ. ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಡೈರೆಕ್ಟ್ ಆಗಿ ಲೋನ್ ಕೊಡುವ ವ್ಯವಸ್ಥೆ ಮಾಡಿ ಸಾರ್ ನೀವು. ಫ್ರೀ ಆಗಿ ಸಾಲ ಕೊಡಬೇಡಿ ನೀವು. ಅದಕ್ಕೆ ಸಬ್ಸಿಡಿ ಕೊಡಿ. ಇನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದ ಕಲ್ಯಾಣಕ್ಕೋಸ್ಕರ ನಿಗಮ ಇದೆ. ಅಲ್ಲಿ ಎಷ್ಟು ಹಣ ಇಟ್ಟಿದ್ದೀರಿ ಹೇಳಿ. ಕೇಂದ್ರ ಸರ್ಕಾರದ ಹಣ ಬಿಟ್ಟು.

ಶ್ರೀ ಮಾಲೀಕಯ್ಯ ಗುತ್ತೇದಾರ್: ಸಬ್ಸಿಡಿ ಕೊಟ್ಟಿದ್ದು ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಮಾತ್ರ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ಆಂಧ್ರಪ್ರದೇಶದಲ್ಲಿ ಚಂದ್ರಬಾಬು ನಾಯಿಡು ಅವರ ಸರ್ಕಾರ ಮಾಡಿದೆ. ಅವರು ಸಬ್ಸಿಡಿ ಕೊಡುತ್ತಿದ್ದಾರೆ. ಡೈರೆಕ್ಟ್ ಆಗಿ ಲೋನ್ ಕೊಡುತ್ತಿದ್ದಾರೆ ಇದಕ್ಕೆ ಕೇಂದ್ರ ಸರ್ಕಾರ ಹಣ ಕೊಡುತ್ತದೆ. ನಿಮ್ಮ ಸಮಸ್ಯೆ ನಮಗೆ ಗೊತ್ತಿದೆ. ನಾನು ಯಾವಾಗಬಂದು ಕೇಳಿದರೂ ನಾನು ಏನು ಮಾಡಲಿ ನಮ್ಮಲ್ಲಿ ದುಡ್ಡು ಇಲ್ಲ ಎಂದು ಹೇಳುತ್ತೀರಿ ಇದು ಒಂದು ಖಾತೆ. ಎಲ್ಲರ ಸಮಸ್ಯೆ ನನಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರೇ, ಹಿಂದುಳಿದ ವರ್ಗಗಳ ಒಂದು ಕಛೇರಿ ಇದೆ. ಅಲ್ಲಿ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಆಫೀಸರ್ ಇಲ್ಲ. ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಆಫೀಸರ್ಸ್ ಇಲ್ಲ. ಎಫ್.ಡಿ.ಸಿ, ಎಸ್.ಡಿ.ಸಿ ಇಲ್ಲ. ನಿಮ್ಮಲ್ಲಿ ಸಿಬ್ಬಂದಿ ಇಲ್ಲ ಕೆಲಸ ಹೇಗೆ ಮಾಡುತ್ತೀರಿ? ಎಲ್ಲಿ ಸಿಬ್ಬಂದಿ ಇದೆ ಅಲ್ಲಿಂದ ಡೆಪ್ಯುಟೇಷನ್ ಕೊಡಿ, ಯಾರಿಗಾದರೂ ಪೋಸ್ಟ್ ಮಾಡಿ, ಯಾರೂ ಕೊಡುವವರು ಇಲ್ಲ. ಈಗ 450 ಬಿಸಿ.ಎಂ. ಹಾಸ್ಟಲ್‌ಗಳು ಇವೆ. ಬಿಲ್ಡಿಂಗ್ಸ್ ಇಲ್ಲ. ನೀವು ಟೈಮ್ ಸರಿಯಾಗಿ ರೆಂಟ್ ಕೊಡುತ್ತಿಲ್ಲ ಎಂದು ನಿಮಗೆ ಯಾರೂ ಬಿಲ್ಡಿಂಗ್‌ಗಳು ಬಾಡಿಗೆಗೆ ಕೊಡುತ್ತಿಲ್ಲ. ಬೀದರ್‌ನಲ್ಲಿ ಆ ಪರಿಸ್ಥಿತಿ ಆಗಿದೆ. ಒಂದೊಂದು ವರ್ಷ ಬಾಡಿಗೆ ಕೊಡದಿದ್ದರೆ ನಿಮಗೆ ಬಿಲ್ಡಿಂಗ್ ಯಾರು ಕೊಡುತ್ತಾರೆ? ನಾನು ಉದಾಹರಣೆಗೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ನಿಗಮವನ್ನು ಕೊಡುತ್ತೇನೆ. ಎಸ್.ಸಿ/ಎಸ್.ಟಿ ಕಾರ್ಪೊರೇಷನ್‌ನವರು ಎಷ್ಟು ಜನರಿಗೆ ತೊಂದರೆ ಕೊಡುತ್ತಿದ್ದಾರೆಂದು ನಾನು ಹೇಳುತ್ತೇನೆ. 93 ಮ್ಯಾಕ್ಸಿಕ್ಯಾಬ್ ಮಂಜೂರಾಗಿದೆ. ಅವರು

ಒಟ್ಟು 5 ಲಕ್ಷ ರೂಪಾಯಿ ತುಂಬಿದ್ದಾರೆ. ಕೇವಲ 35 ಸಾವಿರ ಸಲುವಾಗಿ ನೀವು ಅವರಿಗೆ ಲೋನ್ ಕೊಡುತ್ತಿಲ್ಲ, ಮ್ಯಾಕ್ಸಿಕ್ಯಾಬ್ ಕೊಡುತ್ತಿಲ್ಲ ಎರಡು ವರ್ಷ ಆಗುತ್ತಿದೆ. ಮಾನ್ಯ ಮಹದೇವಪ್ಪನವರೇ, ತಮ್ಮ ಗಮನಕ್ಕೂ ಈ ವಿಷಯ ಬಂದಿದೆ. ತಾವೂ ಸಹ ಅದೇ ಮೀಸಲಾತಿ ಮೇಲೆ ಬಂದಿದ್ದೀರಿ. ತಾವು ಮಾತನಾಡಬೇಕು ಸ್ವಾಮಿ ಬಾಬಾಸಾಹೇಬ್ ಅಂಬೇಡ್ಕರ್ ಯಾವ ಮೀಸಲಾತಿಯನ್ನು ಕೊಟ್ಟಿದ್ದಾರೆ ಆ ಮೀಸಲಾತಿ ಮೇಲೆ ತಾವು ಬಂದಿದ್ದೀರಿ. ಅದನ್ನು ತಾವು ಸ್ವಲ್ಪ ಸೀರಿಯಸ್ ಆಗಿನೋಡಬೇಕು. ಚಲೋ ಚಲೋ ಕೈಸಾ ಬೋಲೋ ಮಲಮಾನಿ, ಚಲನೇ ವಾಲಾ ಹೈ. ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ತಮ್ಮ ಮೂಲಕ ಸರ್ಕಾರಕ್ಕೆ ನನ್ನ ವಿನಂತಿ ಇದೆ. ಒಂದು ಸಾರಿ ಅಲ್ಪಸಂಖ್ಯಾತರದ್ದು ಮತ್ತು ಹಿಂದುಳಿದ ವರ್ಗದವರದ್ದು ಏನು ಸಮಸ್ಯೆ ಇದೆ ಎನ್ನುವುದನ್ನು ಚರ್ಚೆ ಮಾಡಲು ಒಂದು ಗಂಟೆ ಸಮಯ ತೆಗೆದುಕೊಂಡು ಚರ್ಚೆ ಮಾಡಿ. ನಾವು ಮಾಡಿ ಮಾಡಿ ಸಾಕಾಗಿದೆ. ಅವರ ಪರಿಸ್ಥಿತಿ ಏನು? ಅವರ ಮನಸ್ಸಿನಲ್ಲಿ ಇವತ್ತು ಒಂದು ಭಾವನೆ ಬಂದಿದೆ. ನಾವು ಈ ರಾಜ್ಯದಲ್ಲಿ ಯಾರ ಸಲುವಾಗಿ ಮಾಡಬೇಕು ಎಂದು. ಅಂತಹ ಭಾವನೆ ಆ ಜನರಲ್ಲಿ ಬರುತ್ತಿದೆ. ಆ ಭಾವನೆ ಬರಬಾರದು ಎಂದು ನಾನು ಹೇಳುತ್ತಿದ್ದೇನೆ. ನಮ್ಮದು ಅಡ್ಮಿನಿಸ್ಟ್ರೇಷನ್‌ನಲ್ಲಿ ಜಗಳ ಏನು ಇದೆ ಸಾರ್. ಒಂದು 5 ಸಾವಿರ ರೂಪಾಯಿಗಳ ಲೋನ್ ಸಲುವಾಗಿ ಎರಡು ವರ್ಷ ಸುತ್ತಾಡಿಸುತ್ತಾರೆ. ಒಂದು ಸಾರಿ ತಾವು ಬ್ಯಾಂಕರ್ಸ್ ಮೀಟಿಂಗ್ ಮಾಡಿದಿರಿ. ಕೇಳಿದಿರಿ ಏನು ಇದೆ ನಿಮ್ಮ ಸಮಸ್ಯೆ ಎಂದು ಆಮೇಲೆ 15 ಅಂಶಗಳ ಕಾರ್ಯಕ್ರಮ ಇತ್ತು. ನಾನು ಚಾಲೇಂಜ್ ಮಾಡಿ ಹೇಳುತ್ತೇನೆ ತಾವೆಲ್ಲಾ ಡಿಸ್ಟ್ರಿಕ್ಟ್ ಮಿನಿಸ್ಟರ್ಸ್ ಇದ್ದೀರಿ. 15 ಅಂಶಗಳ ಕಾರ್ಯಕ್ರಮದ ಒಂದು ಮೀಟಿಂಗ್ ಏನಾದರೂ ತಾವು ಮಾಡಿದ್ದೀರಾ? ಮಾಡಿಲ್ಲ. ಏತಕ್ಕೆ ನೀವು ಸರ್ಕಾರ ನಡೆಸುತ್ತಿದ್ದೀರಿ? 15 ಅಂಶಗಳ ಕಾರ್ಯಕ್ರಮ ನಿಮಗೆ ಗೊತ್ತೇ ಇಲ್ಲ. 15 ಅಂಶಗಳ ಕಾರ್ಯಕ್ರಮದ ಬಗ್ಗೆ ತಿಂಗಳಿಗೆ ಒಂದು ಮೀಟಿಂಗ್ ಮಾಡಬೇಕು. 3 ವರ್ಷದಿಂದ ಆಗುತ್ತಿಲ್ಲ. ಮಾನ್ಯ ಅಧ್ಯಕ್ಷರೇ, ಲೋಕಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಎಷ್ಟು ಸಮಸ್ಯೆ ಇದೆ ಎಂದು ನಾನು ಹೇಳುತ್ತೇನೆ. ಕ್ಯಾಸ್ಟ್ ಸರ್ಟಿಫಿಕೇಟ್ ಸಲುವಾಗಿ ಎರಡು ಎರಡು ತಿಂಗಳು ತಿರುಗಬೇಕು ಜನ. ನಾನು ಮೊನ್ನೆ ಒಂದು ವ್ಯಾಲಿಡ್ ಸರ್ಟಿಫಿಕೇಟ್ ಸಲುವಾಗಿ ಬೀದರ್‌ಗೆ ಹೋಗಿ ಬಂದಿದ್ದೇನೆ. ತಹಶೀಲ್ದಾರ್‌ಗೆ ಯಾವ ಗ್ರೂಪ್‌ನಲ್ಲಿ ಯಾರು ಬರುತ್ತಾರೆ ಎನ್ನುವುದು ಗೊತ್ತಿಲ್ಲ. ಫೈಲ್ ಹಿಡಿದುಕೊಂಡು ಹೋಗಿ ಎಲ್ಲೋ ಕುಳಿತಿದ್ದಾನೆ. ಅಸಿಸ್ಟೆಂಟ್ ಕಮೀಷನರ್ ಲ್ಯಾಂಡ್ ಟ್ರಿಬ್ಯೂನಲ್ ಫೈಲ್ ಹಿಡಿದುಕೊಂಡು ಹೋಗಿ ಎಲ್ಲೋ ಕುಳಿತಿರುತ್ತಾರೆ. ಬೀದರ್‌ನಲ್ಲಿರುವ ಪರಿಸ್ಥಿತಿಯನ್ನು ನಾನು ಹೇಗೆ ಹೇಳಲಿ ಸಾರ್. ಅಲ್ಲಿ ಸರ್ಕಾರ ಇದೆಯೋ ಇಲ್ಲವೋ ಎನ್ನುವುದು ಗೊತ್ತಾಗುತ್ತಿಲ್ಲ. ನನ್ನ ಕೆಲಸ ಏನೂ ಇಲ್ಲ. ಅಲ್ಲಿ. ಬರೀ ಕ್ಯಾಸ್ಟ್ ಸರ್ಟಿಫಿಕೇಟ್, ಮೈನಾರಿಟಿ ಡೆವಲಪ್‌ಮೆಂಟ್ ಲೋನ್, ಬ್ಯಾಕ್‌ವರ್ಡ್ ಕ್ಯಾಸ್ಟ್ ಡೆವಲಪ್‌ಮೆಂಟ್ ಲೋನ್, ಎಸ್.ಸಿ. ಎಸ್.ಟಿ. ಕಾರ್ಪೊರೇಷನ್ ಲೋನ್, ಎಷ್ಟು ಸಾರಿ ತಿರುಗಬೇಕು ನಾವು? ಕ್ಯಾಸ್ಟ್ ಸರ್ಟಿಫಿಕೇಟ್‌ಗೋಸ್ಕರ ನಾನು ತಹಶೀಲ್ದಾರ್ ಆಫೀಸ್‌ಗೆ ಹೋಗುತ್ತೇನೆ ಸಾರ್.

ತಹಶೀಲ್ದಾರ್ ಸಿಗುವುದಿಲ್ಲ. ನಾನು ಜಿಲ್ಲಾಧಿಕಾರಿಗೆ ಹೇಳಿದರೆ ನಾನೇನು ಮಾಡಲಿ. ತಹಶೀಲ್ದಾರ್ ಬಂದಿಲ್ಲ. ನಿಮ್ಮ ಮಿನಿಸ್ಟರ್‌ಗೆ ಹೇಳಿ ಎಂದು ಹೇಳುತ್ತಾರೆ. ಯಾರಿಗೆ ಹೇಳಬೇಕು ನಾವು? ಅಷ್ಟು ಸುಲಭವಾಗಿ ಕ್ಯಾಸ್ಟ್ ಸರ್ಟಿಫಿಕೇಟ್ ಸಿಗುವುದಿಲ್ಲ. ಏಳು ತಿಂಗಳಾಯಿತು ಇನ್ನೂ ಸಿಕ್ಕಿಲ್ಲ ನನ್ನಲ್ಲಿ ಪ್ರೂಫ್ ಇದೆ. ಬೇಕಾದರೆ ನಾನು ತೋರಿಸುತ್ತೇನೆ. ಮಾನ್ಯ ಕಂದಾಯ ಮಂತ್ರಿಗಳು ಬೀದರ್‌ಗೆ ಬಂದಾಗ ನಾನು ತೋರಿಸಿದ್ದೇನೆ.

ಅಧ್ಯಕ್ಷರು: ಮೊನ್ನೇ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಸಿಂಧ್ಯಾರವರ ಮೇಲೆ ಏನೋ ಕಂಪ್ಲೇಂಟ್ ಹೇಳುತ್ತಿದ್ದರಲ್ಲಾ, ಅದನ್ನೂ ಹೇಳಿ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ಮಾನ್ಯ ಅಧ್ಯಕ್ಷರೇ, ಚಾಲೇಂಜ್ ಮಾಡುತ್ತೇನೆ, 4 ಪರ್ಸೆಂಟ್ ಮೀಸಲಾತಿ ನಿಮ್ಮ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಕೊಟ್ಟಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೇ, ಸಾರಿಗೆ ಸಂಸ್ಥೆಯಲ್ಲಿ ಸುಮಾರು 7 ಸಾವಿರ ಜನರನ್ನು ಕಂಡೆಕ್ಟರ್ಸ್, ಡ್ರೈವರ್ಸ್, ಹೆಲ್ಪರ್ಸ್ ತೆಗೆದುಕೊಂಡಿದ್ದೇವೆ. 120 ಜನ ಆಫೀಸರ್ಸ್‌ನ್ನು ತೆಗೆದುಕೊಂಡಿದ್ದೇವೆ. ಅದರಲ್ಲೂ ಸಹ ನಾನು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಏಕೆಂದರೆ ನಾವು ಗ್ರೂಪ್‌ವೈಸ್ ಮಾಡಿದ್ದೇವೆ. ಮೀಸಲಾತಿಯಲ್ಲಿ ನೂರಕ್ಕೆ ನೂರರಷ್ಟು ಇಂಪ್ಲಿಮೆಂಟ್ ಮಾಡಿದ್ದೇವೆ. ಮೊದಲನೇ ಬಾರಿಗೆ. ಎರಡನೇಯದು ಮಾನ್ಯ ಖರ್ಗೆಯವರಿಗೆ ನೆನಪು ಇರಬಹುದು. ನಿಮ್ಮ ಸರ್ಕಾರ ಇದ್ದಾಗ 1992-93ರಲ್ಲಿ ಸುಮಾರು 2 ಸಾವಿರ ಜನರನ್ನು ಎಸ್.ಸಿ.ಎಸ್.ಟಿ ಸಲುವಾಗಿ ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಿದರು. ಅವರನ್ನೆಲ್ಲಾ ಟೆಂಪರ್ವರಿಯಾಗಿಯೇ ಇಟ್ಟಿದ್ದರು. ಅವರನ್ನೆಲ್ಲಾ ಪರ್ಮನೆಂಟ್ ಮಾಡಿದ್ದೇನೆ. not only minorities, backward classes and Schedule castes even ಉತ್ತರ ಕರ್ನಾಟಕದಲ್ಲಿ 130 ಜನ ಆಫೀಸರ್ಸ್‌ಗೆ 65 ಜನ 8 ಜಿಲ್ಲೆಗಳಿಂದ ಮುಂಬೈ ಕರ್ನಾಟಕ ಹೈದ್ರಾಬಾದ್ ಕರ್ನಾಟಕದಿಂದ ಬಂದಿರುವವರೂ ಸಹ ಇದ್ದಾರೆ. ಅಂದರೆ ನಾವು ಅವರಿಗೆ ಫೇವರ್ ಮಾಡಿರತಕ್ಕಂಥಾದ್ದು ಅಲ್ಲ. ಕಾನೂನಿನ ಪ್ರಕಾರವಾಗಿ, ಮೀಸಲಾತಿ ಪ್ರಕಾರವಾಗಿ ಮೆರೀಟ್ ಮೇಲೆ ಸೆಲೆಕ್ಟ್ ಮಾಡಿರುವುದರಿಂದ ಆಟೋಮ್ಯಾಟಿಕಲಿ ಆಗಿದೆ. ಇದು ಅವರಿಗೆ ಗೊತ್ತಿಲ್ಲ.

ಅಧ್ಯಕ್ಷರು: ಹೌಸ್ ಡಲ್ ಡಲ್ ಆಗಿತ್ತಲ್ಲಾ ಅದಕ್ಕೆ ಕ್ಯಾಷ್ಯುಯಲ್ ಆಗಿ ನಾನು ಹೇಳಿದೆ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ಮಾನ್ಯ ಅಧ್ಯಕ್ಷರೇ, 107 ಜನ ಕಂಡೆಕ್ಟರ್ಸ್ ಬೀದರ್‌ನಲ್ಲಿ ಅಪಾಯಿಂಟ್‌ಮೆಂಟ್ ಆಗಿದೆ. 2 (ಬಿ)ನಲ್ಲಿ 5 ಜನ ಕಂಡ್‌ಕ್ಟರ್ಸ್ ಅಲ್ಪಸಂಖ್ಯಾತರಿಗೆ ಬರಬೇಕು. ನೀವು ಎರಡು ಜನರಿಗೆ ಸೆಲೆಕ್ಷನ್ ಮಾಡಿದ್ದೀರಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಏಕೆ ಆಗಿಲ್ಲ ಎಂದು ನಾನು ಹೇಳುತ್ತೇನೆ. ಒಂದು ಮಾತ್ರ ನಾನು ಬಹಳ ಸ್ಟ್ರಿಕ್ಟ್ ಆಗಿ ಇಂಪ್ಲಿಮೆಂಟ್ ಮಾಡಿಸಿದ್ದೇನೆ. ಅದು ಡ್ರೈವರ್ ಇರಲಿ, ಕಂಡೆಕ್ಟರ್ ಇರಲಿ, ಯಾರೇ ಇರಲಿ, ಅವರಿಗೆ ಕನ್ನಡ ಬರಬೇಕು. ಕನ್ನಡ ಬಾರದೇ ಇದ್ದರೆ ಯಾರನ್ನೂ ಯಾವುದೇ ಕಾರಣದಿಂದ ಸೆಲೆಕ್ಟ್ ಮಾಡಬಾರದು ಎಂದು ನಾನು ಹೇಳಿದ್ದೇನೆ. ಅವರು ಹೇಳುವುದು ಸರಿಯಾಗಿದೆ. ಅದಕೋಸ್ಕರ ನಾನು ಒಂದು ದಾರಿ ಕಂಡು ಹಿಡಿದಿದ್ದೇನೆ. ಕನ್ನಡ ಬಾರದೇ ಇರುವವರಿಗೆ ನಮ್ಮವರೇ ಕೆಲವರು ಸೆಲೆಕ್ಟ್ ಆಗಿರತಕ್ಕಂಥವರಿಗೆ ರಿಕ್ರೂಟ್‌ಮೆಂಟ್ ಆಗಿರತಕ್ಕಂಥವರಿಗೆ ಕನ್ನಡದ ತರಬೇತಿ ಕೊಡಬೇಕೆಂದು ಹೇಳಿದ್ದೇನೆ. ಅದು ಬಳ್ಳಾರಿಯಲ್ಲಿ ವಿಶೇಷವಾಗಿ ಆಗುತ್ತಿದೆ.

ಅಧ್ಯಕ್ಷರು: ನಮ್ಮ ಊರಿನವನಿಗೆ ಕನ್ನಡ ಬರುವುದಿಲ್ಲ ಎಂದು ಕೊಟ್ಟಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಏನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಸಿ.ಆರ್.ಸಗೀರ್ ಅಹ್ಮದ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಮಾತನಾಡತಕ್ಕಂಥ ಸಂದರ್ಭದಲ್ಲಿ ರಾಜಕೀಯ ಉದ್ದೇಶಗಳನ್ನು ಇಟ್ಟುಕೊಂಡೇ ಮಾತನಾಡುತ್ತಾರೆ ಎನ್ನುವ ಅರಿವು ನನಗೆ ಇದೆ. ನಾನು ಒಂದು ವಿಚಾರವನ್ನು ಕೇಳುತ್ತೇನೆ. ಈ ಸದನದಲ್ಲಿ ಊರ್ದು ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಶಿಕ್ಷಕರನ್ನು ನೇಮಿಸುವ ಬಗ್ಗೆ ಹತ್ತು ಸಾರಿ ಪ್ರಸ್ತಾಪ ಆಗಿದೆ. ಆದರೆ ಸರ್ಕಾರ ತೆಗೆದುಕೊಂಡಿರತಕ್ಕಂಥ ನಿರ್ಣಯ ಏನು ಕರ್ನಾಟಕ ಸರ್ಕಾರದ ಮೀಸಲಾತಿ ಕಾಯ್ದೆ ಪ್ರಕಾರ 4 ಜನರಿಗೆ ತಾವು ಉದ್ಯೋಗ ಒದಗಿಸಿಕೊಡುವಂತಹ ಸಂದರ್ಭದಲ್ಲಿ ಕನ್ನಡ ಕಲಿಯುವುದಕ್ಕೆ 5-6 ತಿಂಗಳು ಸಮಯ ಕೊಡಿ ಅವರಿಗೆ. ನೀವು ಕೆಲಸವೇ ಕೊಡುವುದಿಲ್ಲ ಎಂದು ಹೇಳಿದರೆ, ಹೇಗೆ? ನೀವು ಒಂದು ಕಡೆ ತರಬೇತಿ ಕೇಂದ್ರ ಪ್ರಾರಂಭ ಮಾಡಿದ್ದೀರಿ. ಬಳ್ಳಾರಿಯಲ್ಲಿ ಮಾಡಿದ್ದೀರಿ. ಆದರೆ ಬೇರೆ ಕೇಂದ್ರಗಳಲ್ಲಿ ಎಲ್ಲಿದೆ? ನಮ್ಮ ಮೈಸೂರು ವಿಭಾಗದಲ್ಲಿ ಮಾನ್ಯ ಅಧ್ಯಕ್ಷರೇ, 2 (ಬಿ) ಪ್ರಕಾರ 4 ಜನರಿಗೆ ಏನು ಕೆಲಸ ಸಿಗಬೇಕಾಗಿತ್ತೋ ಅದರಲ್ಲಿ ಪಡೆಯುವುದಕ್ಕೆ ಸಾಧ್ಯವಾಗಿಲ್ಲ.

ಅಧ್ಯಕ್ಷರು: ತಾವು ಮಾತನಾಡುವುದನ್ನು ನೋಡಿದರೆ 25 ವರ್ಷಗಳಿಂದ ಖಾಯಂ ಆಗಿ ವಿರೋಧಪಕ್ಷದಲ್ಲಿ ಇದ್ದಂತೆ ಮಾತನಾಡುತ್ತೀರಲ್ಲಾ ನೀವು.

ಶ್ರೀ ಸಿ.ಆರ್.ಸಗೀರ್ ಅಹ್ಮದ್: ಮಾನ್ಯ ಅಧ್ಯಕ್ಷರೇ, ನಾನು ಏಕೆ ಮಾತನಾಡುತ್ತಿದ್ದೇನೆ ಅಂದರೆ ಅವರು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ. ಖಾಯಂ ಆಗಿ ವಿರೋಧಪಕ್ಷದಲ್ಲಿ ಇರಲು ಅವರೂ ತಯಾರಾಗಿಲ್ಲ. ನಾವೂ ತಯಾರಾಗಿಲ್ಲ. ಹಿಂದೆ ದೇಶಪಾಂಡೆಯವರು ಇಲ್ಲಿ ವಿರೋಧಪಕ್ಷದ ನಾಯಕರಾಗಿದ್ದರು. ಇವರು ಇದೇ ರೀತಿ ನಡೆದುಕೊಂಡರೆ. ನಾವು ಅಲ್ಲಿಗೆ ಹೋಗುತ್ತೇವೆ. ಅದರಲ್ಲಿ ಏನೂ ಅನುಮಾನ ಇಲ್ಲ. ಅದರ ಬಗ್ಗೆ ತಾವು ರಿಲ್ಯಾಕ್ಸೇಷನ್ ಕೊಡಬೇಕಾಗುತ್ತದೆ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ಮಾನ್ಯ ಅಧ್ಯಕ್ಷರೇ, ಬೀದರ್‌ನಲ್ಲಿ ಯಾವುದೇ ಇಲಾಖೆಯಿಂದ ಇಂಟರ್‌ವ್ಯೂ ಬರಲಿ ನಾನು ಸ್ವತಃ ಕನ್ನಡ ಕೋಚಿಂಗ್ ಕ್ಲಾಸ್ ನಡೆಸುತ್ತಿದ್ದೇನೆ. ಯಾವ ಹುಡುಗರಿಗೆ ಕನ್ನಡ ಬರುವುದಿಲ್ಲ ಎಂದು ನೀವು ರಿಜೆಕ್ಟ್ ಮಾಡಿದಿರಿ ಅವರ ಲಿಸ್ಟ್ ತರುತ್ತೇನೆ. ಅವರಿಗೆ ಕನ್ನಡ ಓದುವುದಕ್ಕೆ ಬರುತ್ತದೆ. ಬರುವುದಿಲ್ಲ ಅಂದರೆ ತಾವು ಏನು ಶಿಕ್ಷೆ ಕೊಡುತ್ತೀರೋ ಅದನ್ನು ಸ್ವೀಕಾರ ಮಾಡುವುದಕ್ಕೆ ನಾನು ತಯಾರಾಗಿದ್ದೇನೆ. ತಾವು ಸುಮ್ಮನೆ ಮಾತನಾಡಬೇಡಿ. ಮತ್ತೆ ಪರ್ಸನಲಿ ಏನೂ ಚಾರ್ಜಸ್ ಇಲ್ಲ. ತಾವೂ ಸಹ ಒಬ್ಬ ಚುನಾಯಿತ ಪ್ರತಿನಿಧಿ. ನಾನೂ ಸಹ ಒಬ್ಬ ಚುನಾಯಿತ ಪ್ರತಿನಿಧಿ. ಆಫೀಸ್‌ನಲ್ಲಿ ಏನು ಆಗುತ್ತಿದೆ ಎಂದು ತಾವು ಸ್ವಲ್ಪ ಸೀರಿಯಸ್ ಆಗಿ ನೋಡಬೇಕು. ಕನ್ನಡ ಏಕೆ ಬರುವುದಿಲ್ಲ. ನನ್ನ ವಿದ್ಯಾಭ್ಯಾಸ ಹೈದ್ರಾಬಾದ್‌ನಲ್ಲಿ ಆಗಿದೆ. ನಾನು 6 ತಿಂಗಳಲ್ಲಿ ಕನ್ನಡ ಕಲಿತಿದ್ದೇನೆ. ನಮ್ಮಲ್ಲಿ ಉದ್ಯೋಗದ ಸಲುವಾಗಿ ಎಲ್ಲರೂ ಕನ್ನಡ ಕಲಿಯುತ್ತಿದ್ದಾರೆ. ತಾವು ಒಂದು ಸಾರಿ ಬೀದರ್‌ಗೆ ಬನ್ನಿ. ಏನಾದರೂ ಹೇಳುತ್ತೇನೆಂದರೆ, ಅದು ನಡೆಯುವುದಿಲ್ಲ. ತಾವು ಸೀರಿಯಸ್ ಆಗಿ ತೆಗೆದುಕೊಳ್ಳಬೇಕು. ಸುಮ್ಮನೆ ಕನ್ನಡ ಬರುವುದಿಲ್ಲವೆಂದರೆ ಹೇಗೆ, ಇದು ನಡೆಯುವುದಿಲ್ಲ. ಕನ್ನಡ ಬರುವುದಿಲ್ಲವೆಂದರೆ, ಸುಮ್ಮನೆ ಕೂರಬೇಕು ನಾವು. ಆ ರೀತಿ ನಮ್ಮ ಪರಿಸ್ಥಿತಿಯನ್ನು ಮಾಡಿಬಿಟ್ಟರು. ಏನಾದರೂ ಆಗಲಿ ಕನ್ನಡ ಕಲಿತಿದ್ದೇನೆ ನಾನು. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು: ಈಗ ಮಾತನಾಡಿದ್ದು ಸಾಕಾಗಲಿಲ್ಲವೇ?

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ನಾವು ಕರೆಕ್ಟ್ ಆಗಿ ಮಾತನಾಡಿದರೂ, ಎಲ್ಲರಿಗೂ ತಪ್ಪು ಕಾಣಿಸುತ್ತಿದೆ.

(Hon'ble Member spoke in urdu)

ಅಧ್ಯಕ್ಷರು: ಕನ್ನಡದಲ್ಲಿ ಮಾತನಾಡಿ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ನನಗೆ ಪರ್ಸನಲ್ ಆಗಿ ಬಹಳ ಪ್ರಾಬ್ಲಂಗಳಿವೆ. ನನ್ನ ಪರ್ಸನಲ್ ಸಲುವಾಗಿ ನಾನು ಯಾವಾಗಲೂ ಹೇಳಿಲ್ಲ. ಏನಾದರೂ ಪರ್ಸನಲ್ ಇದ್ದರೆ ನಾನು ತಮ್ಮ ಹತ್ತಿರ ಬಂದು ಹೇಳುತ್ತೇನೆ. ನಾನು ಯಾರ ಮೇಲಾದರೂ ಕಂಪ್ಲೇಂಟ್ ಮಾಡಿದರೆ, ಡೈರೆಕ್ಟಾಗಿ ಅದೇ ಆಫೀಸರ್‌ಗೆ ಫೋನ್ ಮಾಡುತ್ತಾರೆ. ಮತ್ತೆ ಅವರು ಪ್ರಾಬ್ಲಂ ಕ್ರಿಯೇಟ್ ಮಾಡುತ್ತಾರೆ. ಅದರ ಸಲುವಾಗಿ ನಾನು ಯಾರಿಗೂ ಹೇಳಿಲ್ಲ. ಯಾರು ಕೆಲಸ ಮಾಡಿದ್ದಾರೆ, ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ನಮ್ಮ ಶ್ರೀ ಆರ್.ವಿ.ದೇಶಪಾಂಡೆ ಸಾಹೇಬರು ಒಳ್ಳೆಯ ಕೆಲಸ ಮಾಡಿದ್ದಾರೆ. 2 ಲಕ್ಷ ರೂಪಾಯಿವರೆಗೆ ಬೆಲೆಯಿದ್ದ ಒಂದು ಜಮೀನನ್ನು 2 ಸಾವಿರ ರೂಪಾಯಿಗೆ ನಮ್ಮ ಶ್ರೀ ದೇಶಪಾಂಡೆ ಸಾಹೇಬರು ನಮಗೆ, ಬಡ ಜನರು ಅದರಲ್ಲೂ ವಿಶೇಷವಾಗಿ

ಮೈನಾರಿಟಿ ಜನರಿಗೆ ಮಾಡಿಕೊಟ್ಟಿದ್ದಾರೆ. ಅವರಿಗೆ ನನ್ನ ಅಭಿನಂದನೆ ಇದೆ. ಅದಕ್ಕೆ ಪಾರ್ಟಿ ಎಂದು ಅಲ್ಲ. ಬೇರೆ ಪ್ರಾಬ್ಲಂಗಳಿವೆ. ಈಗ ಎಪಿಎಂಸಿ..

(Hon'ble Member spoke in urdu)

ಶ್ರೀ ಎಂ.ವಿ.ಗುತ್ತೇದಾರ್: ಎಲ್ಲಾ ಕೆಲಸವನ್ನೂ ಮಾಡಿಸಿಕೊಳ್ಳುತ್ತಾರೆ....

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ಒಳ್ಳೆಯ ಆಫೀಸರ್ ಕೊಡಿ. ನಿಮಗೇ ಹೆಸರು ಬರುತ್ತದೆ. ನಿಮ್ಮ ಡಿಪಾರ್ಟ್‌ಮೆಂಟ್ ಸಲುವಾಗಿ ಹೇಳಿದೆ. ಲೋಕಲ್ ಅಡ್ಮಿನಿಸ್ಟ್ರೇಷನ್‌ನ ಬಗ್ಗೆ 5 ನಿಮಿಷ ಮಾತನಾಡುತ್ತೇನೆ. ಲೋಕಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಏನಾಗುತ್ತಿದೆ ಎಂಬುದಕ್ಕೊಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮಲ್ಲಿ ಎ.ಪಿ.ಎಂ.ಸಿ ಹಮಾಲರ ಸಲುವಾಗಿ 2 ವರ್ಷಗಳಿಂದಲೂ ಒಂದು ಕಾಲೋನಿಯನ್ನು ಕೊಡಬೇಕೆಂದು ಇತ್ತು. ಆದರೆ, ಲ್ಯಾಂಡ್ ಅಕ್ವಿಸಿಷನ್ ಆಗುತ್ತಿಲ್ಲ. ಲೋಕಲ್‌ನಲ್ಲಿ ಸಹಕಾರ ಮಾಡುತ್ತಿಲ್ಲ. ಸುಮ್ಮಸುಮ್ಮನೆ ಅಬ್ಜೆಕ್ಷನ್ ಮಾಡುತ್ತಿದ್ದಾರೆ. ಯಾರು ಮಾಡುತ್ತಿದ್ದಾರೆ, ಯಾರಿಲ್ಲ ಎನ್ನುವುದು ಅವರಿಗೆ ಗೊತ್ತು. ಸನ್ಮಾನ್ಯ ಮಂತ್ರಿಯವರು ಸಹಕಾರ ಮಾಡಿದ್ದಾರೆ. ಲೋಕಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ನಮಗೆ ಸಹಕಾರವಿಲ್ಲ. ನಾನು 3 ವರ್ಷಗಳಿಂದ ಆಶ್ರಯ ಯೋಜನೆಯಲ್ಲಿ ಮನೆ ಕಟ್ಟಿಲ್ಲ.

ಅಧ್ಯಕ್ಷರು: ಬೆಳಿಗ್ಗೆ 8.30ಕ್ಕೆ ಮತ್ತೆ ಬರಬೇಕು.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: 'ಸಿ' ಫಾರಂ ಕೊಡಬೇಕೆಂದು ನಾವು ಲ್ಯಾಂಡ್ ಗ್ರಾಂಟ್‌ನಲ್ಲಿ ಡಿಸಿಷನ್ ತೆಗೆದುಕೊಂಡಿದ್ದೇವೆ. ನಿಮ್ಮ ಡಿಪಾರ್ಟ್‌ಮೆಂಟಿನಲ್ಲಿ ಸರ್ವೇಯರ್‌ಗಳಿಲ್ಲ. ಸರ್ವೆ ಮಾಡಲಿಕ್ಕೆ ಸಿದ್ಧರಿಲ್ಲ. ಏಕೆಂದರೆ ಕೇಳಿದರೆ, ನಮ್ಮ ಮಾತು ಕೇಳುವುದಿಲ್ಲ ತಮ್ಮ ಮೂಲಕ ಸರ್ಕಾರಕ್ಕೆ ಕೇಳುವುದೇನೆಂದರೆ, ಕರಫ್ಯೂಗಿಂತ ಕಮ್ಯೂನಲ್ ಮೈಂಡ್ ಇರುತ್ತದಲ್ಲಾ, ಅದು ಡೇಂಜರಸ್, ಸಮಾಜಕ್ಕೆ ಡೇಂಜರ್ ಆಗುತ್ತದೆ. ಅದು ಪಾಯಿಸನ್ ಏಕಾಗುತ್ತಿದೆಯೆಂದರೆ, ಏನೇ ಆಗಲಿ ವಿಶೇಷವಾಗಿ ನಮ್ಮ ಸಮಾಜದ ಮೇಲೆ... ಬಹಳ ಛೇಂಜ್ ಆಗಬೇಕು. ಇಂಥ ಮೈಂಡ್ ನಮ್ಮ ಜೀವ ತೆಗೆದುಕೊಳ್ಳುತ್ತಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಕಮ್ಯೂನಲ್ ಯಾರು ಮಾಡುತ್ತಿದ್ದಾರೆ?....

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ಬಿಫೋರ್ ಇಂಡಿಪೆಂಡೆನ್ಸ್ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ನಮ್ಮ ಕೆಲಸ ಏಕೆ ಆಗಲ್ಲ? ದುಡ್ಡು ಬಂದು ಎಲ್ಲಿಗೆ ಹೋಗುತ್ತದೆಂದರೆ ಹುಮ್ನಾಬಾದ್, ಔರಾದ್‌ಗೆ...ಓಪನ್ ಆಗಿ ಹೇಳುತ್ತೇನೆ ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ದುಡ್ಡು ನನ್ನ ಕ್ಷೇತ್ರಕ್ಕೆ ಬದಲು ನಿಮ್ಮ ಕ್ಷೇತ್ರಕ್ಕೆ ಹೋಗಿದೆ. ನಾನು ಪ್ರೂಫ್ ಮಾಡುತ್ತೇನೆ. ತಾವು ಪರ್ಸನಲ್ ಆಗಿ ತೆಗೆದುಕೊಳ್ಳಬೇಡಿ. ನೀವು

ಡೈವರ್ಷನ್ ಮಾಡಿಲ್ಲವೇ?.... ಆರ್‌ಡಿಪಿಆರ್ ಮಿನಿಸ್ಟರ್ ಇಲ್ಲೇ ಇದ್ದಾರೆ. ಅವರ ಗಮನಕ್ಕೆ ನಾವು ತಂದಿದ್ದೇವೆ. ನಾವು ಸರ್ಕಾರದ ಗಮನಕ್ಕೆ ತಂದಿಲ್ಲವೇ? ಬೀವರ್‌ನಲ್ಲಿ ದುಡ್ಡು ಡೈವರ್ಷನ್ ಆಗಿದೆ. ಕುಡಿಯುವ ನೀರಿನ ದುಡ್ಡು ಡೈವರ್ಷನ್ ಆಗಿದೆ. ನಾವು ಹೇಳುತ್ತಿಲ್ಲ. ಅದನ್ನು ಬಿಡಿ. ಪರ್ಸ್ನಲ್ ಆಗಿ ನನಗೆ ಭಗವಾನ್ ಶಕ್ತಿ ಕೊಟ್ಟಿದ್ದಾನೆ. ನಾವು ಸಂಘರ್ಷ ಮಾಡುತ್ತಿದ್ದೇವೆ. ಸಂಘರ್ಷ ಮಾಡಿದ್ದೇವೆ. ನಾವು ಈ ಅಸೆಂಬ್ಲೀಯಲ್ಲಿ ಬಂದಿದ್ದೇವೆ. ಕಾನೂನು ಪ್ರಕಾರವಾಗಿ ನಾನು ಮಾತನಾಡುತ್ತಿದ್ದೇನೆ. ನಾವು 17 ವರ್ಷಗಳಿಂದ ರೋಡ್ ಮೇಲೆ ಸಂಘರ್ಷ ಮಾಡಿದ್ದೇವೆ. ನಿಮ್ಮ ಪಕ್ಷದಲ್ಲಿದ್ದಾಗ ನಾಲ್ಕು ಕೇಸ್ ನನ್ನ ಮೇಲಿದೆ. ಜನತಾ ಪಕ್ಷದವರು ಭಾರತ್‌ಬಂದ್‌ಗೆ ಕರೆಕೊಟ್ಟಾಗ 165 ಕಾರ್ಯಕರ್ತರು ಭಾಗವಹಿಸಿದ್ದಕ್ಕಾಗಿ ನಮ್ಮ ಮೇಲೆ ಕೇಸ್ ಹಾಕಿದ್ದಾರೆ. ಅದನ್ನು ನಾವು ಹೇಳಿಲ್ಲ. ನಮ್ಮ ಮೇಲೆಲ್ಲಾ ಫಾಲ್ಸ್ ಕೇಸಸ್ ಇವೆ. ಇನ್ನೂ 10 ಆಗಲೀ ಅದು ಏನಾಗುವುದಿಲ್ಲ. ನಾವು ಯಾವಾಗಲೂ ಸಂಘರ್ಷ ಮಾಡುತ್ತಿದ್ದೇವೆ. ಒಂದು ಪುಸ್ತಕವನ್ನು ನಿಮ್ಮ ಹತ್ತಿರ ಕಳುಹಿಸುತ್ತೇನೆ, ತಾವು ಸೀರಿಯಸ್ ಆಗಿ ನೋಡಿ. ನಾನು ಒಂದು ತಿಂಗಳಿನಿಂದ ಕರೆಕ್ಟಾಗಿ ಸೆಷನ್‌ಗೆ ಬಂದಿಲ್ಲ. ನಾವು ಜನರಿಗೆ ವಿಥ್ ಪ್ರೂಫ್‌ನಿಂದ ಪ್ರಚಾರ ಮಾಡುತ್ತಿದ್ದೇವೆ. ತಾವು ಮುಂದೆ ನಿಂತು ಏನಾದರೂ ಮಾಡಿ. ನಿಮಗೆ ಮುಂದೆ ಬರುವ ಕಾಲ ಡೇಂಜರ್ ಇದೆ. ಸನ್ಮಾನ್ಯ ಅಧ್ಯಕ್ಷರೇ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಎಲ್ಲಾ ಸದಸ್ಯರಿಗೆ ಧನ್ಯವಾದಗಳು. ಈಗ ಸಭೆಯನ್ನು ಮುಂದೂಡುವ ಮೊದಲು ಒಂದು ಮಾತು, ಊಟದ ವ್ಯವಸ್ಥೆ ಮಾಡಲಾಗಿದ್ದು, ಅಧಿಕಾರಿ ಬಂಧುಗಳು ಎಲ್ಲಾ ಸದಸ್ಯರೂ ದಯಮಾಡಿ ಊಟ ಮಾಡಿಕೊಂಡು ಹೋಗಬೇಕು. ಈಗ ಸದನವನ್ನು ಮುಂದೂಡಲಾಗಿದೆ. ಸದನವು ನಾಳೆ ಬೆಳಿಗ್ಗೆ 8.30 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ರಾತ್ರಿ 10.25ಕ್ಕೆ ಮುಂದೂಡಲ್ಪಟ್ಟು ಪುನಃ ದಿ:4.9.97ರ ಗುರುವಾರದಂದು ಬೆಳಿಗ್ಗೆ 8.30 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನ ಸಭೆ

ಗುರುವಾರ 4ನೇ ಸೆಪ್ಟೆಂಬರ್ 1997ರಂದು ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ 9-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ರಮೇಶ್‌ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

(ಅ) 1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಸರ್ಕಾರದ ಉತ್ತರ.

ಅಧ್ಯಕ್ಷರು: ಮಾನ್ಯ ಹೆಚ್.ಕೆ.ಕುಮಾರಸ್ವಾಮಿಯವರು 20 ನಿಮಿಷಗಳಲ್ಲಿ ಮಾತನಾಡಿ ಮುಗಿಸಬೇಕು. ಏಕೆಂದರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮತ್ತು ಇತರ ಮಂತ್ರಿಗಳು ಉತ್ತರವನ್ನು ಕೊಡಬೇಕು. ಆ ನಂತರ ಅಪ್ರೋಪ್ರಿಯೇಷನ್ ಬಿಲ್ಲನ್ನು ಕೌನ್ಸಿಲ್‌ಗೆ ಕಳುಹಿಸಬೇಕು. ಕೌನ್ಸಿಲ್‌ನಲ್ಲಿ ಬೇರೆ ಬಿಸಿನೆಸ್ ಇಲ್ಲ. ಇವತ್ತು ರಾತ್ರಿ 1.00 ಗಂಟೆವರೆಗೆ ಸದನವನ್ನು ನಡೆಸಿದರೆ ನನ್ನದು ಏನೂ ಅಬ್ಜೆಕ್ಷನ್ ಇಲ್ಲ. ದಯವಿಟ್ಟು ನನಗೆ ತಾವು ಸಹಕಾರವನ್ನು ಕೊಡಬೇಕು.

+ ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಬೇಲೂರು): ಮಾನ್ಯ ಸಭಾಧ್ಯಕ್ಷರೇ, ಸರ್ಕಾರ ಮಂಡಿಸಿರತಕ್ಕಂತಹ ಅನುದಾನ ಬೇಡಿಕೆಯನ್ನು ಬೆಂಬಲಿಸಿ ಕೆಲವು ಇಲಾಖೆಗಳ ಬಗ್ಗೆ ನನ್ನ ಸಲಹೆ ಸೂಚನೆಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಬಯಸುತ್ತಿದ್ದೇನೆ. ಸಮಾಜ ಕಲ್ಯಾಣ ಇಲಾಖೆಯು ಸರ್ಕಾರದಲ್ಲಿ ಬಹು ಮುಖ್ಯವಾದಂತಹ ಇಲಾಖೆಯಾಗಿದೆ. ಸಮಾಜದಲ್ಲಿರತಕ್ಕಂತಹ ಅತ್ಯಂತ ದುರ್ಬಲ ವರ್ಗದವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಮೇಲೆ ತರುವಂತಹ ದೃಷ್ಟಿಯಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಆದರೆ ಈ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಜಾರಿಯಾಗುತ್ತಿವೆ ಎನ್ನುವುದು ಬಹಳ ಮುಖ್ಯವಾದುದು. ಆದರೆ ಯಾವುದೇ ಸರ್ಕಾರದ ಭಾವನೆ ಅನಿಸಿಕೆ, ನಾವು ಕಾರ್ಯಕ್ರಮಗಳಿಗೆ ಎಷ್ಟು ಹಣವನ್ನು ಖರ್ಚು ಮಾಡುತ್ತೇವೆ, ಎಷ್ಟು ಹಣವನ್ನು ನಿಗದಿ ಮಾಡುತ್ತೇವೆ ಎನ್ನುವುದರ ಮೇಲೆಯೇ ಮುನ್ನಡೆಯನ್ನು ಅಳೆಯುವುದಕ್ಕೆ ಸರ್ಕಾರಗಳು ನೋಡುತ್ತಿರುತ್ತವೆ. ಆದರೆ ಸರಿಯಾದುದು ಅಲ್ಲ. ಈಗ ಪರಿಶಿಷ್ಟ ಜಾತಿ ಮತ್ತು ವರ್ಗಗಳವರ ಸಲುವಾಗಿ ವಿಶೇಷ ಘಟಕ ಯೋಜನೆಯನ್ನು ರೂಪಿಸಿದ್ದೇವೆ. ಇದರಲ್ಲಿ ಪ್ರತಿವರ್ಷವು ಸಹ ಹಣ ನಿಗದಿಯಾಗುತ್ತದೆ. ಹಣ ನಿಗದಿಯಾಗುವುದು ಮುಖ್ಯವಲ್ಲ, ಜೊತೆಗೆ ಹಣವನ್ನು ಎಷ್ಟು ಬಿಡುಗಡೆ ಮಾಡುತ್ತೇವೆ ಎನ್ನುವುದು ಮುಖ್ಯವಾದುದು. ಹಣ ಬಿಡುಗಡೆಯಾದುದರಲ್ಲಿ ಎಷ್ಟು ಹಣ ಸದುಪಯೋಗವಾಗಿದೆ ಎನ್ನುವಂಥದ್ದು ಸಹ

ಬಹಳ ಮುಖ್ಯ. ಈಗ ನಾವು ಈ ವರ್ಷದ ವಾರ್ಷಿಕ ಬಜೆಟ್‌ನಲ್ಲಿ ಸುಮಾರು 600 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಇವತ್ತು ನಮ್ಮ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಸರ್ಕಾರ ನಿಗದಿ ಮಾಡಿದೆ. ಕಳೆದ ವರ್ಷ ಕೂಡ ವಿಶೇಷ ಘಟಕ ಯೋಜನೆಗೆ ಸುಮಾರು 415 ಕೋಟಿ ರೂಪಾಯಿಗಳನ್ನು ಇಟ್ಟಿತ್ತು. ಅದು ಸರಿಯಾದಂತಹ ರೀತಿಯಲ್ಲಿ ಖರ್ಚು ಆಗದೇ ಇರುವುದಕ್ಕೆ ಹಲವಾರು ಕಾರಣಗಳಿವೆ. ನಾವು ಯಾವಾಗ ಕ್ರಿಯಾ ಯೋಜನೆಯನ್ನು ಮಾಡುತ್ತೇವೆ, ಯಾವಾಗ ಅದನ್ನು ಜಾರಿ ಮಾಡುತ್ತೇವೆ ಎನ್ನುವುದು ಸಹ ಮುಖ್ಯ. ಕ್ರಿಯಾ ಯೋಜನೆಯನ್ನು ತಯಾರಿಸುವುದು ತಡವಾದರೆ, ಅದರ ಜಾರಿ ಕೂಡ ತಡವಾಗುತ್ತದೆ. ಇವತ್ತು ಕೆಲವು ವಿಷಯಗಳನ್ನು ಫಿಜಿಕಲ್ ಟಾರ್ಗೆಟ್ ಎಷ್ಟು? ಫೈನಾನ್ಷಿಯಲ್ ಟಾರ್ಗೆಟ್ ಎಷ್ಟು ಎನ್ನುವುದರ ಮೇಲೆಯೂ ಸಹ ನಿರ್ಧಾರವನ್ನು ಮಾಡುತ್ತಿದ್ದೇವೆ. ಇದರಲ್ಲಿ ಕಳೆದ ಸಾರಿ ಬಿಡುಗಡೆ ಮಾಡಿದಂತಹ ಹಣದಲ್ಲಿ 70 ಪರ್ಸೆಂಟ್ ಹಣವನ್ನು ಖರ್ಚು ಮಾಡಿದ್ದೇವೆ. ಶೇಕಡ 30ರಷ್ಟು ಹಣ ಹಾಗೆ ಉಳಿದಿದೆ. ಇದಕ್ಕೆ ಕಾರಣ ನಾವು ಬಹಳ ತಡವಾಗಿ ಆ್ಯಕ್ಷನ್ ಪ್ಲಾನ್‌ನ್ನು ತಯಾರು ಮಾಡತಕ್ಕಂಥದ್ದು, ಅದರ ಕಡೆ ಹೆಚ್ಚು ಗಮನವನ್ನು ಕೊಡದೇ ಇರುವುದು ಕೂಡ ಕಾರಣವಾಗಿರಬಹುದು. ಆದರೆ ಹಿಂದಿನ ಸರ್ಕಾರಗಳಿಗೆ ಹೋಲಿಸಿಕೊಂಡರೆ ನಾವು ಹೆಚ್ಚು ಹಣವನ್ನು ಖರ್ಚು ಮಾಡಿದ್ದೇವೆ ಎನ್ನುವುದನ್ನು ನಮ್ಮ ವಿರೋಧಿ ಪಕ್ಷದ ಸದಸ್ಯರು ಮರೆಯಬಾರದೆಂದು ಹೇಳುತ್ತಾ, ಎಸ್‌ಸಿಪಿ ಯೋಜನೆಯನ್ನು ಜಾರಿಗೆ ತರುವಾಗ ಅನೇಕ ಇಲಾಖೆಗಳಲ್ಲಿ ಸರಿಯಾಗಿ ಜಾರಿಗೆ ತರದೇ ಇರುವಂಥದ್ದನ್ನು ನೋಡಿದ್ದೇವೆ. ಉದಾಹರಣೆಗೆ ಮೀನುಗಾರಿಕೆ ಇಲಾಖೆಯಲ್ಲಿ ಫಲಾನುಭವಿಗಳಿಗೆ ಕೊಡುವಾಗ ಏನು ಮಾಡುತ್ತೇವೆಂದರೆ ಆ ಫಲಾನುಭವಿಗಳಿಗೆ ಒಂದು ಬಲೆಯನ್ನು ಕೊಡತಕ್ಕಂಥದ್ದು ಒಂದು ಸೈಕಲ್‌ನ್ನು ತೆಗೆದುಕೊಡುವಂಥದ್ದನ್ನು ಮಾಡಿದ್ದೇವೆ. ನಮ್ಮ ಯೋಜನೆಯ ಮೂಲ ಉದ್ದೇಶ ಏನು? ಸೋಮಾರಿ ಜನರನ್ನು ನಾವು ಇನ್ನೂ ಸೋಮಾರಿ ಜನಗಳನ್ನಾಗಿ ಮಾಡುತ್ತಿದ್ದೇವೆ ಎನ್ನುವಂತಹ ಭಯ ನನ್ನನ್ನು ಕಾಡುತ್ತಿದೆ. ಈಗ ಬಲೆ, ಸೈಕಲ್‌ನ್ನು ಕೊಡುವುದರ ಬದಲಿಗೆ ಅವನ ಜಮೀನಿನಲ್ಲಿ ಒಂದು ಹೊಂಡವನ್ನು ತೋಡಿ ಮೀನಿನ ಮರಿಗಳನ್ನು ಕೊಟ್ಟರೆ ಅವನೇ ಹೊಂಡದಲ್ಲಿ ಮೀನಿನ ಮರಿಗಳನ್ನು ಸಾಕಿ ಅವುಗಳನ್ನು ಮಾರಾಟ ಮಾಡಿ ಅವನ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳಬಲ್ಲ. ಅನಂತರ ಸೈಕಲ್‌ನ್ನು ಅವನೇ ತೆಗೆದುಕೊಳ್ಳಬಲ್ಲ. ಆದರೆ ಮೊದಲೇ ಇವುಗಳನ್ನೆಲ್ಲಾ ಕೊಟ್ಟು ಸೋಮಾರಿ ಮಾಡಿ ಅವನ ಸ್ವಾಭಿಮಾನವನ್ನು ಕೆಣಕತಕ್ಕಂತಹ ಕೆಲಸವನ್ನು ಮಾಡತಕ್ಕಂಥದ್ದು ಸರಿಯಾದುದು ಅಲ್ಲ. ಈ ಮಟ್ಟದಲ್ಲಿ ಇಲಾಖೆ ಪುನರ್ ವಿಚಾರವನ್ನು ಮಾಡಿ ಅವನ ಆರ್ಥಿಕ ಮಟ್ಟವನ್ನು ಯಾವರೀತಿ ಹೆಚ್ಚಿಸಬೇಕೆಂದು ಯೋಚನೆಯನ್ನು ಮಾಡಬೇಕು.

ಇನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಗ್ಗೆ ಹೇಳುವುದಾದರೆ ಅದಕ್ಕೂ ಕೂಡ ನಾವು ವಿಶೇಷ ಘಟಕ ಯೋಜನೆಯಲ್ಲಿ ಹಣವನ್ನು ಕೊಡುತ್ತಿದ್ದೇವೆ. ಆದರೆ ಇಲ್ಲಿ

ಏನಾಗಿದೆ ಎಂದರೆ ಪ್ರತಿಯೊಂದು ಮಗುವಿಗೆ ಇಲಾಖೆಯಿಂದ ಒಂದು ರೂಪಾಯಿಯಂತೆ ಕೊಡುತ್ತಿದ್ದೇವೆ. ವಿಶೇಷ ಘಟಕ ಯೋಜನೆಯಿಂದಲೂ ಕೂಡ ಪ್ರತ್ಯೇಕವಾಗಿ ಹಣವನ್ನು ಕೊಡುತ್ತಿದ್ದೇವೆ. ಆದರೆ ಅಧಿಕಾರಿಗಳನ್ನು ವಿಚಾರಣೆ ಮಾಡಿದಾಗ ವಿಶೇಷ ಘಟಕ ಯೋಜನೆಯಿಂದ ಹೋದಂತಹ ಹಣದ ಬಗ್ಗೆ ಲೆಕ್ಕವನ್ನೇ ಕೊಡದೇ ಯಾವರೀತಿ ಖರ್ಚು ಆಗುತ್ತಿದೆ ಎನ್ನುವ ಪರಿವು ಸಹ ಇಲ್ಲದೇ ಹಣ ಖರ್ಚಾಗುತ್ತದೆ. ಅದರ ಬಗ್ಗೆ ಕೂಡ ಸರ್ಕಾರ ಎಚ್ಚರಿಕೆಯನ್ನು ವಹಿಸಬೇಕೆಂದು ಹೇಳುತ್ತಾ, ಇವತ್ತು ವಿಶೇಷ ಘಟಕ ಯೋಜನೆಯ ಹಣ ಸರಿಯಾಗಿ ಖರ್ಚಾಗಬೇಕು. ಇವತ್ತು ವಸತಿಗಾಗಿ, ಶಿಕ್ಷಣಕ್ಕಾಗಿ, ನೀರಾವರಿಗಾಗಿ ಹಣವನ್ನು ಕ್ರೋಢೀಕರಿಸಿ ಖರ್ಚು ಮಾಡತಕ್ಕಂತಹ ಕೆಲಸವಾಗಿದೆ. 1992ರಲ್ಲಿ ಒಂದು ಹೊಸ ವಸತಿ ಯೋಜನೆಯನ್ನು ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಮಾಡಿದ್ದರು. ಅದು ಅಂಬೇಡ್ಕರ್ ವಸತಿ ಯೋಜನೆ ಎಂದು. ದುರದೃಷ್ಟವಶಾತ್ ಆ ಯೋಜನೆಗೆ ಯಾವುದೇ ನಿರ್ದಿಷ್ಟವಾದಂತಹ ಹೆಡ್ ಆಫ್ ಅಕೌಂಟ್ಸ್ ಇಲ್ಲ. ಅದು ಎಸ್‌ಸಿಪಿ ಯೋಜನೆಯಲ್ಲಿ ಕ್ರೋಢೀಕರಿಸಿದಂತಹ ಹಣದಲ್ಲಿ ಮಾಡಬೇಕು ಎನ್ನುವುದು ಇತ್ತು. ಎಸ್.ಸಿ.ಪಿ ಹಣವನ್ನು ನಾವು ಈ ವರ್ಷ ಪೂರ್ಣ ಖರ್ಚು ಮಾಡುವುದಿಲ್ಲ ಎನ್ನುವಂತಹ ಭಾವನೆಯು ಬರತಕ್ಕಂಥದ್ದು ಸಹಜ. ಈ ಯೋಜನೆಯಲ್ಲಿ ಖರ್ಚು ಮಾಡತಕ್ಕಂತಹ ಹಣ ಏನಿದೆ ಅದು ಪ್ರತ್ಯೇಕವಾಗಿ ನಿಗದಿಯಾದಂತಹ ಹಣ ಇಡಬೇಕು. ಇದೇ ಯೋಜನೆಯ ಹಣದಲ್ಲಿ ಖರ್ಚು ಮಾಡತಕ್ಕಂಥದ್ದು ಸರಿಯಾದುದು ಅಲ್ಲ. ದುರದೃಷ್ಟವಶಾತ್ 1992ರಲ್ಲಿ ಏನು ಯೋಜನೆಯನ್ನು ಹಿಂದಿನ ಸರ್ಕಾರ ಘೋಷಣೆ ಮಾಡಿತ್ತೋ ಆಗ 1,00,000 ಮನೆಗಳನ್ನು ಅಂಬೇಡ್ಕರ್ ವಸತಿ ಯೋಜನೆಯಲ್ಲಿ ಕೊಡಬೇಕೆಂದು ಮಾಡಿದರು. ಆದರೆ ಇಲ್ಲಿಯವರೆಗೆ ಅಂಕಿ ಅಂಶಗಳ ಪ್ರಕಾರ ಆಗಿರತಕ್ಕಂಥದ್ದು ಕೇವಲ 35,000ಕ್ಕಿಂತಲೂ ಹೆಚ್ಚು ಮನೆಗಳು ಆಗಿಲ್ಲ. ಸುಮಾರು 5 ವರ್ಷಗಳು ಕಳೆದಿವೆ. 1992-93, 1993-94ರಲ್ಲಿ ಆದಂತಹ ಮನೆಗಳ ಸಂಖ್ಯೆ 15,000 ಕೂಡ ಮೀರಿಲ್ಲ. ಆದರೆ ಪ್ರಚಾರಕ್ಕಾಗಿ ಘೋಷಣೆ ಮಾಡತಕ್ಕಂಥದ್ದು ಅದು ಬೇರೆ. ಹಾಗಾಗಿ ಆ ಕೆಲಸ ಕೂಡ ಆಗಲಿಲ್ಲ. ನಾವು ಸುಮಾರು ಅಂಬೇಡ್ಕರ್ ವಸತಿ ಯೋಜನೆಯನ್ನು ಜಾರಿ ಮಾಡುವುದಕ್ಕೆ ನಮ್ಮ ಸರ್ಕಾರ ಸುಮಾರು 15 ಕೋಟಿ ರೂಪಾಯಿಗಳನ್ನು ಹೌಸಿಂಗ್ ಬೋರ್ಡ್‌ಗೆ ಪಾವತಿ ಮಾಡಿದೇವೆ. ಅದು ಕೂಡ ಸರಿಯಾಗಿ ವಿತರಣೆ ಆಗದೇ ಇರುವುದು ಕೂಡ ಕಂಡು ಬಂದಿದೆ. ಅದರ ಕಡೆ ಕೂಡ ಗಮನವನ್ನು ಕೊಡಬೇಕು. ನಮ್ಮ ಸರ್ಕಾರ ಸುಮಾರು 120 ತಾಲ್ಲೂಕುಗಳಲ್ಲಿ ಅಂಬೇಡ್ಕರ್ ಭವನಗಳನ್ನು ಕಟ್ಟಿಸಬೇಕೆಂದು ತೀರ್ಮಾನಿಸಿ ಒಂದು ಅಂಬೇಡ್ಕರ್ ಭವನಕ್ಕೆ ಮೂರು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಯೋಜನೆ ಹಾಕಿಕೊಂಡಿದೆ. ಅದು ಅತ್ಯುತ್ತಮವಾದಂತಹ ಯೋಜನೆ ಎಂದು ನಾನು ಭಾವಿಸಿಕೊಂಡಿದ್ದೇವೆ. ಆದರೆ ಕೊಡುವ ಹಣ ಬಹಳ ಕಡಿಮೆಯಾಗುತ್ತದೆ, ಅದಕ್ಕಾಗಿ ಕೊನೆಯ ಪಕ್ಷ ತಾಲ್ಲೂಕು ಹೆಡ್ ಕ್ವಾರ್ಟರ್‌ನಲ್ಲಿ 10 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಬೇಕು, ಜಿಲ್ಲಾ ಹೆಡ್

ಕ್ವಾರ್ಟರ್‌ನಲ್ಲಿ ಕನಿಷ್ಟ 50 ಲಕ್ಷ ರೂಪಾಯಿಗಳನ್ನು ಅಂಬೇಡ್ಕರ್ ಭವನ ಕಟ್ಟಲಿಕ್ಕೆ ಖರ್ಚು ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ನಮ್ಮ ನಾಯಕರು ಮಾಜಿ ಪ್ರಧಾನ ಮಂತ್ರಿಗಳು ಹಿಂದೆ ಅವರು ಮುಖ್ಯ ಮಂತ್ರಿಯಾಗಿದ್ದಾಗ ಹಾಸನಕ್ಕೆ ಬಂದು ಒಂದು ಅಂಬೇಡ್ಕರ್ ಭವನ ಕಟ್ಟಲಿಕ್ಕೆ ಶಂಕುಸ್ಥಾಪನೆಯನ್ನು ಮಾಡಿದ್ದರು. ಕಟ್ಟಡಕ್ಕಾಗಿ 20 ಲಕ್ಷ ರೂಪಾಯಿಗಳನ್ನು ಸಹ ಬಿಡುಗಡೆ ಮಾಡಿದ್ದರು. ನಾವು ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಒತ್ತಾಯ ಮಾಡಿದಾಗ ಅವರು ಒಪ್ಪಿಕೊಂಡಿದ್ದರು. ಇವತ್ತು ನಮ್ಮ ಸರ್ಕಾರ ಒಂದು ಕೋಟಿ ರೂಪಾಯಿಗಳನ್ನು ಕೊಡತಕ್ಕಂತಹ ಸಂಕಲ್ಪವನ್ನು ಮಾಡಬೇಕು. ಆ ಭವನವನ್ನು ಕಟ್ಟತಕ್ಕಂತಹ ಸಂಕಲ್ಪವನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಅಂಬೇಡ್ಕರ್ ಪ್ರತಿಮೆಗಳಿಗೆ ಸಂಬಂಧಪಟ್ಟಂತಹ ವಿಚಾರವಾಗಿ ನಾನು ಮಾತನಾಡಲಿಕ್ಕೆ ಇಷ್ಟಪಡುತ್ತಿದ್ದೇನೆ. ತಾಲ್ಲೂಕು ಮಟ್ಟದಲ್ಲಿಯೂ ಕೂಡ ಅಂಬೇಡ್ಕರ್ ಪ್ರತಿಮೆಗಳನ್ನು ಮಾಡತಕ್ಕಂತಹ ಕಾರ್ಯಕ್ರಮಗಳನ್ನು ಕೂಡ ಸರ್ಕಾರ ಹಮ್ಮಿಕೊಳ್ಳಬೇಕು. ಇವತ್ತು ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಭವನವನ್ನು ಕಟ್ಟತಕ್ಕಂಥದ್ದು ಆಗಲಿ, ಪ್ರತಿಮೆಗಳನ್ನು ಮಾಡತಕ್ಕಂಥದ್ದು ಆಗಲಿ ಇತ್ತೀಚೆಗೆ ನಡೆಯುತ್ತಿರುವಂತಹ ಘಟನೆಗಳನ್ನು ಅವಲೋಕನ ಮಾಡಿದಾಗ ಈ ಪ್ರತಿಮೆಗಳನ್ನು, ಭವನಗಳನ್ನು ಯಾವುದೇ ಮಹಾತ್ಮರ ಹೆಸರಿನಲ್ಲಿ ಮಾಡತಕ್ಕಂಥದ್ದೇ ತಪ್ಪು ಎನ್ನುವಂತಹ ಭಾವನೆಗಳು ಮೂಡುತ್ತಿದೆ. ಇದು ಬಹಳ ದುರಾದೃಷ್ಟ. ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಮಹಾತ್ಮ ಗಾಂಧೀಜಿಯವರ ಹೆಸರಿನಲ್ಲಿ ಇರಬಹುದು, ಅಂಬೇಡ್ಕರ್‌ರವರ ಹೆಸರಿನಲ್ಲಿ ಇರಬಹುದು, ಬಸವಣ್ಣನವರ ಹೆಸರಿನಲ್ಲಿ ಇರಬಹುದು. ಮಹಾವೀರರ ಹೆಸರಿನಲ್ಲಿ ಇರಬಹುದು, ಬುದ್ಧನ ಹೆಸರಿನಲ್ಲಿ ಇರಬಹುದು ಇಂತಹವರ ಹೆಸರಿನಲ್ಲಿ ನಾವು ಮಾಡತಕ್ಕಂತಹ ಕೆಲಸ ಸಾಂಕೇತಿಕವಾಗಿ ಮತ್ತು ಆ ವ್ಯಕ್ತಿಯ ತತ್ವದ ಬೋಧನೆಗಳು ಏನು ಇತ್ತು ಅವುಗಳನ್ನು ಪ್ರಚಾರ ಮಾಡತಕ್ಕಂತಹ ದೃಷ್ಟಿಯಿಂದ ಮಾಡಿದ್ದೇ ಹೊರತು, ಯಾರೂ ಕೂಡ ಯಾವುದೇ ವ್ಯಕ್ತಿಯ ಬೊಂಬೆ ಮಾಡಿ ಕೂಡಿಸಬೇಕು ಎನ್ನುವುದು ಯಾವುದೇ ನಾಗರೀಕ ಸರ್ಕಾರದ ಉದ್ದೇಶವಲ್ಲ. ಶಾಸಕರಭವನದ ಮುಂದೆ ಬಸವೇಶ್ವರ ವೃತ್ತದಲ್ಲಿ ಬಸವೇಶ್ವರರ ವಿಗ್ರಹವನ್ನು ಮಾಡಿ ನಿಲ್ಲಿಸಿದ್ದೇವೆ. ಆ ಮಹಾತ್ಮರ ವಿಗ್ರಹಕ್ಕೆ ಅಪಚಾರವನ್ನು ಮಾಡಿದರೆ ಬಹುಶಃ ನಮ್ಮ ಸಮಾಜಕ್ಕೆ ನಾವೇ ಅಪಚಾರ ಮಾಡಿದಂತಾಗುತ್ತದೆ. ಒಂದು ಮಾನವೀಯತೆಗೆ ಅಪಚಾರ ಮಾಡಿಕೊಂಡ ಹಾಗೆ ಆಗುತ್ತದೆ ಎನ್ನುವುದನ್ನು ನಾವು ಮರೆಯಬಾರದು. ನನ್ನ ವೈಯಕ್ತಿಕ ಅಭಿಪ್ರಾಯ ಏನೆಂದರೆ ಮೊನ್ನೆ ಚಿಂತಾಮಣಿಯಲ್ಲಿ ಆದಂತಹ ಘಟನೆಗಳು ನಡೆದಿರಬಹುದು. ಉದ್ಬೂರಿನಲ್ಲಿ ಆದಂತಹ ಘಟನೆಗಳು ಇರಬಹುದು, ಉತ್ತರ ಕರ್ನಾಟಕದಲ್ಲಿ ಆಗುತ್ತಿರತಕ್ಕಂತಹ ಘಟನೆಗಳು ಇರಬಹುದು, ಯಾವ ಸರ್ಕಾರ ಇದ್ದಾಗ ಯಾವ ಘಟನೆಗಳು ನಡೆದವು, ಎಂತಹ ಘಟನೆಗಳು ನಡೆದವು, ಎಷ್ಟು ಘಟನೆಗಳು ನಡೆದವು ಎನ್ನುವುದು ಮುಖ್ಯವಲ್ಲ. ಯಾವುದೇ ಸರ್ಕಾರ ಇದ್ದಾಗಲೂ ಇಂತಹ ಘಟನೆಗಳು, ಸಾಮಾಜಿಕ ಅನಿಷ್ಟಗಳು ನಡೆಯುತ್ತಿವೆ. ಇದರ ಬಗ್ಗೆ ನಾವೆಲ್ಲಾ ರಾಜಕಾರಣಿಗಳು

ಪಕ್ಷಭೇದವನ್ನು ಮರೆತು ಎಲ್ಲಾ ಜನರನ್ನು ಸೇರಿಸಿ ಸಾಮರಸ್ಯವನ್ನು ಮೂಡಿಸುವಂತಹ ಕೆಲಸವನ್ನು ಮೊಟ್ಟಮೊದಲು ಮಾಡಬೇಕಾಗಿದೆ. ಈ ಸಾಮರಸ್ಯವನ್ನೇ ಮೂಡಿಸದೇ ಇವತ್ತು ನಾವು ಒಂದು ಅನೌನ್ಸ್‌ಮೆಂಟ್ ಅನ್ನು ಮಾಡುತ್ತೇವೆ. ಪರಿಶಿಷ್ಟ ಜಾತಿಯವರಿಗೆ ಸರ್ಕಾರ ಏಳು ನೂರು ಕೋಟಿ ರೂಪಾಯಿಗಳನ್ನು ತೆಗೆದಿರಿಸಿದೆ; ಇದನ್ನು ನಾವು ಖರ್ಚು ಮಾಡುತ್ತಿದ್ದೇವೆ. ಮತ್ತೊಬ್ಬರಿಗೆ ಈ ವಿಷಯ ಗೊತ್ತಾಗುತ್ತಿದ್ದಂತೆಯೇ ಪರಿಶಿಷ್ಟ ಜಾತಿಯವರಿಗೆ ಮೀಸಲಾತಿ ಇದೆ, ಇತರೆ ಸೌಲಭ್ಯಗಳು ಇದೆ. ನಮಗೆ ಏನೂ ಕೊಡುತ್ತಿಲ್ಲವೆಂಬ ಭಾವನೆ ಸಹಜವಾಗಿ ಮೂಡುತ್ತದೆ. ಈ ವಿಚಾರದ ಬಗ್ಗೆ ಜನರಲ್ಲಿ ನಾವು ಸಾಮರಸ್ಯ ಭಾವನೆಯನ್ನು ಮೂಡಿಸಬೇಕಾಗಿದೆ. ಇವತ್ತು ಯಾವುದೇ ಆರ್ಥಿಕ ಶಕ್ತಿಯನ್ನು, ಸಾಮಾಜಿಕ ಶಕ್ತಿಯನ್ನು ಪಡೆಯತಕ್ಕಂಥಾದ್ದು, ರಾಜಕೀಯ ಶಕ್ತಿಯನ್ನು ಪಡೆಯತಕ್ಕಂಥಾದ್ದು ಎಲ್ಲರ ಹಕ್ಕು ಎನ್ನುವುದನ್ನು ನಾವು ಮರೆಯಬಾರದು. ಇವತ್ತಿಗೆ ನಾವು ಸ್ವಾತಂತ್ರ್ಯವನ್ನು ಪಡೆದು ಐವತ್ತು ವರ್ಷಗಳು ಕಳೆದವು. ನಾವು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ನಡೆದಿರುವುದನ್ನು ಅವಲೋಕಿಸಿ ನೋಡಿದಾಗ ನಾವು ಕಾಣತಕ್ಕಂಥ ವ್ಯತ್ಯಾಸವೇನು? We are finding untochability is in practice. We are seeing many atrocities on Scheduled Castes and Scheduled Tribes and other Backward Classes, ಇವತ್ತು ವ್ಯತ್ಯಾಸವೇನು ಆಗಿದೆ, ಸ್ವಾತಂತ್ರ್ಯ ಪೂರ್ವದಲ್ಲಿ untouchability was both in touch and in mind. After 50 years the untouchability is partially in touch and partially in mind. ನಾವು ಇದನ್ನು ಇವತ್ತು ನೋಡುತ್ತಿದ್ದೇವೆ, ಅನ್‌ಟಚ್‌ಬಲ್ ಪ್ರಾಕ್ಟೀಸ್‌ನಿಂದ ರಾಜ್ಯದ ದೇಶದ ಮುನ್ನಡೆಗೆ ಎಷ್ಟು ಕೆಡಕುಗಳು ಆಗುತ್ತಿವೆ, ಎಷ್ಟು ಅನಾಹುತಗಳು ಆಗುತ್ತಿವೆ, ಎನ್ನುವುದನ್ನು ಕೂಡ ನಾವು ತಾತ್ವಿಕವಾಗಿ ಚರ್ಚೆ ಮಾಡಬೇಕಾಗಿದೆ. ನಾವು ಇವತ್ತು ಸಮಾನತೆಯನ್ನು ಕಾಣಬೇಕಾಗಿದೆ, ಅದನ್ನು ಹೇಗೆ ಕಾಣಬೇಕಾಗಿದೆ ಎಂದರೆ ಇವತ್ತು ಮೀಸಲಾತಿಯ ಅಗತ್ಯವಿದೆ. ಇವತ್ತು ಪರಿಶಿಷ್ಟ ಜಾತಿಯವರಿಗೆ, ವರ್ಗದವರಿಗೆ ಮತ್ತು ಹಿಂದುಳಿದವರಿಗೆ ಮಾತ್ರ ಮೀಸಲಾತಿ ಇದೆ ಎನ್ನುವಂಥ ಭಾವನೆ ಬಂದಿದ್ದೆ, ಈ ಭಾವನೆ ತಪ್ಪು. ಇವತ್ತು ನಾವು ಶೇಕಡ 100ಕ್ಕೆ 100ರಷ್ಟು ಮೀಸಲಾತಿಯ ಅಡಿಯಲ್ಲಿದ್ದೇವೆ. ಇಲ್ಲಿ ಪರಿಶಿಷ್ಟ ಜಾತಿಯವರಿಗೆ ಮತ್ತು ಹಿಂದುಳಿದವರಿಗೆ ಶೇಕಡ 50ರಷ್ಟು ಮೀಸಲಾತಿ ಇದ್ದರೆ ಉಳಿದ ಶೇಕಡ 50ರಷ್ಟು ಬೇರೆಯವರು ಇದ್ದಾರೆಂಬುದನ್ನು ಮರೆಯಬಾರದು. ಈ ಮೀಸಲಾತಿಯನ್ನು ತಂದಂತಹ ಉದ್ದೇಶವೇನು? ಇದು ಮೇಲ್ನೋಟಕ್ಕೆ ಅಸಮಾನತೆಯ ಪ್ರಕ್ರಿಯೆ, ಪ್ರತೀಕವೆಂದು ಕಂಡರೂ ಕೂಡ ನಾವು ಅಸಮಾನತೆಯಲ್ಲಿ ಸಮಾನತೆಯನ್ನು ಕಾಣುವಂಥ ಕೆಲಸವನ್ನು ಮಾಡಬೇಕಾಗಿದೆ. ಈ ರೀತಿ ಅಸಮಾನತೆಯಲ್ಲಿ ಸಮಾನತೆಯನ್ನು ಹೇಗೆ ಕಾಣುವುದು? ಅವನಿಗೆ ಏಕೆ ಮೀಸಲಾತಿಯನ್ನು ಕೊಡಬೇಕು ಎಂದು ಬೇರೆಯವರು ಕೇಳುವುದು ನಿಜ. ಆದರೆ ಮೇಲ್ನೋಟಕ್ಕೆ ಅದು ನಿಜವಾಗಿ ಕಂಡರೂ ಕೂಡ ಒಳನೋಟದಲ್ಲಿ ಇವತ್ತಿನ

ಸಮಾಜದಲ್ಲಿ ಅನೇಕ ರೀತಿಯ ವ್ಯತ್ಯಾಸಗಳು ಇರುವುದರಿಂದ ಇವತ್ತು ಮೀಸಲಾತಿಯನ್ನು ತರಬೇಕಾಗುತ್ತದೆ. ಈಗ ಅಸಮಾನತೆಯಲ್ಲಿ ಸಮಾನತೆಯನ್ನು ಕಾಣಬೇಕಾಗುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ ಹದಿನೈದು ಮಕ್ಕಳನ್ನು ಊಟಕ್ಕೆ ಕೂರಿಸಿದ್ದೇವೆ. ತಾವು ನೂರು ಗ್ರಾಂನಂತೆ ರೈಸ್ ಕೊಡಲು ಹೇಳುತ್ತೀರಿ, ಅದರಂತೆ ಎಲ್ಲರಿಗೂ ನೂರು ಗ್ರಾಂನಂತೆ ರೈಸ್ ಕೊಟ್ಟಮೇಲೆ ಅಲ್ಲಿ ಇದ್ದ ಮೂವರು ನಮಗೆ ತುಂಬಾ ಹೊಟ್ಟೆ ಹಸಿವಾಗುತ್ತಿದೆ, ನಮಗೆ ಇನ್ನು ಐವತ್ತು ಗ್ರಾಂ ಹೆಚ್ಚಿಗೆ ಕೊಡಿ ಎಂದು ಕೇಳುತ್ತಾರೆ. ಆಗ ಅನಿವಾರ್ಯವಾಗಿ ಅವರಿಗೆ ಕೊಡಲೇಬೇಕಾಗುತ್ತದೆ. ಇದನ್ನೇ ನಾವು ಅಸಮಾನತೆಯಲ್ಲಿ ಸಮಾನತೆ ಎನ್ನುವಂಥಾದ್ದು. ಈ ಕೆಲಸವನ್ನು ಮಾಡಬೇಕಾದರೆ ವಿಲ್ ಪವರ್ ಬೇಕಾಗುತ್ತದೆ. ಈ ವಿಲ್ ಪವರ್ ಇಲ್ಲದೆ ಯಾರೂ ಮಾಡುವುದಿಲ್ಲ. ನಾನು ತಮ್ಮ ಆದೇಶದಂತೆ ಎರಡು ಬಾರಿ ಪರಿಶಿಷ್ಟ ಜಾತಿ ಪರಿಶಿಷ್ಟವರ್ಗಗಳ ಸಮಿತಿಯ ಅಧ್ಯಕ್ಷನಾಗಿದ್ದೆ. ಆ ಸಮಯದಲ್ಲಿ ನನಗೆ ಬರುತ್ತಿದ್ದಂತಹ ಅರ್ಜಿಗಳನ್ನು ನೋಡಿದಾಗ, ಅದರಲ್ಲಿ ನಮಗೆ ಪ್ರಮೋಷನ್ ಕೊಟ್ಟಿಲ್ಲ. ನಮಗೆ ಮೀಸಲಾತಿಯಲ್ಲಿ ನೇಮಕಾತಿಯನ್ನು ಮಾಡಿಲ್ಲ. ನಮಗೆ ತುಂಬಾ ಅನ್ಯಾಯವಾಗಿದೆ ಎಂದು ಹೇಳಿರುತ್ತಾರೆ. ಈ ಪ್ರಕ್ರಿಯೆಯಲ್ಲಿ ನಮ್ಮ ಅಧಿಕಾರಿಗಳು ಒಂದು ಹೆಜ್ಜೆ ಮುಂದೆ ಹೋಗಿ ಸಹಾಯ ಮಾಡಿದರೆ ಯಾರೂ ಏನೂ ಮಾಡುವುದಿಲ್ಲ. ಇವತ್ತು ಸಿಂಗಲ್ ಪೋಸ್ಟ್ ಬಗ್ಗೆ ಇಲ್ಲದ ವಾದಗಳು ಎಲ್ಲಾ ನಡೆದಿದೆ. ಈ ಸಿಂಗಲ್ ಪೋಸ್ಟ್ ಅನ್ನು ಇವತ್ತು ಅನೇಕ ರೀತಿಯಲ್ಲಿ ತಪ್ಪಾಗಿ ಇಂಟರ್‌ಪ್ರಿಟ್ ಮಾಡುತ್ತಿದ್ದಾರೆ. ಈ ರೀತಿಯ ತಪ್ಪುಗಳನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಮೂಲಭೂತವಾಗಿ ಇದೆಲ್ಲ ಸರಿಪಡಿಸಿದರೆ ಅವು ಸರಿಯಾಗುತ್ತವೆನ್ನುವುದನ್ನು ಹೇಳುತ್ತೇನೆ. ಅಂಬೇಡ್ಕರ್‌ರವರು ಹೇಳುತ್ತಿದ್ದಂತೆ ಸಮಾನತೆ ಎನ್ನುವುದು ಏನಿದೆ, ಅದರ ಬಗ್ಗೆ ಇವತ್ತು ಇಂಡಿಯಾ ದೇಶಕ್ಕೆ ಡೆಮಾಕ್ರಸಿ ಕೊಟ್ಟಿರುವಂಥ ಉದ್ದೇಶವೇ ಇದಾಗಿದೆ. ಡೆಮಾಕ್ರಸಿ ಎಂಬುದು ಜನರಿಗಾಗಿ, ಜನರಿಂದ ಎಂಬುದು ಮಾಮೂಲಿ. ಆದರೆ democratice type of Government is for equality. It is a Government for social justice, political justice and other economic eaquality. ಅದರ ಮೂಲ ಉದ್ದೇಶವಾಗಿದೆ. ಇವತ್ತು ಜಾತೀಯತೆ ಎನ್ನುವಂಥಾದ್ದು ಇನ್ನು ಬದುಕಿದೆ. ನಾವು ಮೂಲಭೂತವಾದ ಸಮಸ್ಯೆಗಳನ್ನೇ ಹೋಗಲಾಡಿಸದಿದ್ದರೆ, ಈ ಮೂಲಭೂತ ಸಮಸ್ಯೆಗಳು ಹೋಗದಿದ್ದರೆ ನಾವು ಏನು, ಈ ಆಲ್‌ರೌಂಡ್ ಡೆವಲಪ್‌ಮೆಂಟ್ ಎಂದು ಹೇಳುತ್ತೇವೆ, ಅದನ್ನು ನಾವು ತಲುಪುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತಿಗೂ ಜಾತೀಯತೆ ಎನ್ನುವುದು ಬದುಕಿದೆ. ಅದಕ್ಕೆ ಡಾ: ಅಂಬೇಡ್ಕರ್‌ರವರು ಜಾತೀಯತೆ ಎಂಬುದನ್ನು ಹೊಡೆದು ಓಡಿಸದಿದ್ದರೆ ಈ ದೇಶ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮೇಲೆ ಬರಲು ಸಾಧ್ಯವಿರಲಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಮಹಾತ್ಮಗಾಂಧೀಯವರು ಮತ್ತಿತರರು ಇದನ್ನೇ ಹೇಳುತ್ತಾರೆ. ಅನ್‌ಟಚಬಿಲಿಟಿ ಎನ್ನುವಂಥಾದ್ದು ಪಾಪ ಎಂದು ಹೇಳಿದ್ದಾರೆ. ಆದರೂ ಇದನ್ನು ನಾವು

ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಆದುದರಿಂದ ನಾನು ಎಲ್ಲಾ ಪಕ್ಷದವರಿಗೂ ಮತ್ತು ರಾಜಕಾರಣಿಗಳಲ್ಲೂ ಮನವಿ ಮಾಡುತ್ತಿದ್ದೇನೆ. ಇವತ್ತು ಈ ರೀತಿಯಾಗಿ ಅನೇಕ ಗ್ರಾಮಗಳಲ್ಲಿ ನಡೆಯುತ್ತಿವೆ. ಇದನ್ನು ಯಾವ ಮಠಾಧೀಶರು ಅಲ್ಲಿಗೆ ಹೋಗಿ ನೋಡಿಲ್ಲ. ಇವೆಲ್ಲಾ ತಪ್ಪಾಗುತ್ತಿವೆ. ಇದು ಆಗಬಾರದು, ಇದೆಲ್ಲವನ್ನು ನಿಲ್ಲಿಸಿದರೆ ನಾವೆಲ್ಲಾ ಒಂದಾಗಿ ಹೋಗಬಹುದೆಂದು ಹೇಳುವುದನ್ನು, ಇವತ್ತಿಗೂ ನಾವು ಯಾರು ಅದನ್ನು ನೋಡಿಲ್ಲ. ಇದನ್ನು ಎಲ್ಲಾ ಮಠಾಧೀಶರುಗಳು ಮತ್ತಿತರು ಮಾಡಬೇಕೆಂದು ಹೇಳುತ್ತೇನೆ. ನಾವು ಎಸ್.ಸಿ.ಪಿಯಲ್ಲಿ ಅನೇಕ ಯೋಜನೆಗಳನ್ನು ಮಾಡಿದ್ದೇವೆ. ಆದರೆ ಆ ಯೋಜನೆಗಳು ಕಾರ್ಯಗತವಾಗದೇ ಇರುವುದಕ್ಕೆ ಕಾರಣವೇನು? ಎಂದರೆ we have no monitoring cell, ಆ ಸ್ಕೀಂ ಏನಾಗಿದೆ, ಏಕೆ ಆಗುತ್ತಿಲ್ಲವೆಂಬುದನ್ನು ನೋಡುವಂಥಾದ್ದಕ್ಕೆ ಸದಸ್ಯರುಗಳ ಕಮಿಟಿ ಇಲ್ಲ. ಅದಕ್ಕಾಗಿ ಸರ್ಕಾರ ತಾಲ್ಲೂಕು ಮಟ್ಟದಿಂದ ಜಿಲ್ಲಾಮಟ್ಟದವರೆಗೂ ಪ್ರಾಥಮಿಕ ಹಂತದಿಂದ ಮೇಲ್ಮಟ್ಟದ ಹಂತದವರೆಗೂ ನಮ್ಮ ಅನೇಕ ಜನಪ್ರತಿನಿಧಿಗಳು ಇದ್ದಾರೆ, ಅವರು ಇರುವುದರಿಂದ ಒಂದು ಸಮಿತಿಯನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನ ಫಲಾನುಭವಿಗಳಿಗೆ ಕೂಡ ನಮ್ಮ ಯೋಜನೆಗಳ ಬಗ್ಗೆ ಪ್ರಜ್ಞೆ ಇಲ್ಲ. ಇವರಲ್ಲಿ ಪ್ರಜ್ಞೆ ಇರುವವರು ಕೂಡ ಸರ್ಕಾರ ಕೊಡುವಂತಹ ಸವಲತ್ತುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುತ್ತಾ ಇಲ್ಲ. ಇದನ್ನು ಇವರು ಮಿಸ್‌ಯೂಸ್ ಮಾಡುತ್ತಿದ್ದಾರೆ, ಅಧಿಕಾರಿಗಳು ಸಹ ಮಿಸ್‌ಯೂಸ್ ಮಾಡುತ್ತಿದ್ದಾರೆ. ಅದಕ್ಕಾಗಿ ನಾವು ಕಾನೂನಿನಲ್ಲಿ ತಿದ್ದುಪಡಿಯನ್ನು ತರಬೇಕಾಗಿದೆ. ಯಾವ ಫಲಾನುಭವಿಗಳು ಈ ಯೋಜನೆಯನ್ನು ಮಿಸ್‌ಯೂಸ್ ಮಾಡಿಕೊಳ್ಳುತ್ತಾರೆ, ಅವರಿಗೆ ಶಿಕ್ಷೆಯನ್ನು ಕೊಡುವಂತಹ ಕೆಲಸವನ್ನು ಮಾಡಬೇಕು. ಇನ್ನು ಹಣವನ್ನು ಬಿಡುಗಡೆ ಮಾಡುವಂತಹ ವಿಚಾರದಲ್ಲಿ ಮಾರ್ಚಿ ತಿಂಗಳ ಕೊನೆಯಲ್ಲಿ ಅಥವಾ ಏಪ್ರಿಲ್ ತಿಂಗಳಲ್ಲಿ ಫುಲ್ ಅಮೌಂಟ್ ಎಂದು ಇಟ್ಟುಕೊಳ್ಳುವಂಥಾದ್ದು, ನಮಗೆ ಮೂರು ತಿಂಗಳು ಸರ್ಕಾರ ಅವಕಾಶವನ್ನು ಕೊಟ್ಟಿದೆ, ಎಂದು ಹೇಳುವುದು. ಮೂರು ತಿಂಗಳ ಕೊನೆಯಲ್ಲಿ ಮಾಡುತ್ತೇವೆನ್ನುವಂಥ ಭಾವನೆ ಸರಿಯಲ್ಲ. ಇವತ್ತು ಪಿ.ಡಿ. ಅಕೌಂಟ್‌ನಲ್ಲಿರುವಂತಹ ಹಣವನ್ನು ತೆಗೆದುಕೊಳ್ಳಬೇಕಾದರೂ ಸಹಿತ ಅಥವ ರಿಸರ್ವ್‌ಫಂಡ್‌ನಲ್ಲಿಟ್ಟಿರುವಂತಹ ಹಣವನ್ನು ತೆಗೆದುಕೊಳ್ಳಬೇಕಾದರೂ ಸಹಿತ ಇವತ್ತು ನಾವು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಹೋಗಬೇಕು. ಇದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್ ಕನ್‌ಕರನ್ಸ್ ಕೊಡಬೇಕು ಇಲ್ಲದಿದ್ದರೆ ಹಣವನ್ನು ಬಿಡುಗಡೆ ಮಾಡುವುದಿಲ್ಲ. ಇಂತಹ ಪರಿಸ್ಥಿತಿ ಇದೆ. ಇದ್ದರ ಬಗ್ಗೆ ಸರ್ಕಾರ ಕಟ್ಟುನಿಟ್ಟಾಗಿ ಅವರಿಗೆ ನಿರ್ದೇಶನವನ್ನು ಕೊಡಬೇಕು. ಮೂರು ತಿಂಗಳಿಗೆ ಹಣವನ್ನು ಕೊಡುವಂತೆ ಮತ್ತು ಸರಿಯಾದ ರೀತಿಯಲ್ಲಿ ಹಣವನ್ನು ಉಪಯೋಗ ಮಾಡಬೇಕು. ಅದು ಯಾವುದೇ ಕಾರಣಕ್ಕೂ ಅದನ್ನು ಮುಂದುವರೆಸಬಾರದೆಂದು ಕೇಳಿಕೊಳ್ಳುತ್ತೇನೆ. ಇನ್ನು ಕೇಂದ್ರ ಸರ್ಕಾರದಿಂದ ಅನೇಕ ಸ್ಕೀಂಗಳಿಗೆ ಹಣ ಬರುವುದು ತಡವಾಗಿದೆ. ಇವತ್ತು ಅಂತರ್‌ಜಾತಿ ವಿವಾಹದ ವಿಷಯದಲ್ಲಿ ಎರಡು ಮೂರು

ವರ್ಷಗಳಾದರೂ ಹಣ ಬಿಡುಗಡೆಯಾಗಿಲ್ಲ. ಮಾನ್ಯ ಸಂಬಂಧಪಟ್ಟ ಸಚಿವರು ಸದನದಲ್ಲಿದ್ದಾರೆ ಎಂದು ಭಾವಿಸಿದ್ದೇನೆ. ಕೇಂದ್ರ ಸರ್ಕಾರಕ್ಕೆ ಅಧಿಕಾರಿಗಳೆಲ್ಲರೂ ಹೋಗಿ ಬರುವಂತಹ ಕೆಲಸವನ್ನು ಸ್ವಲ್ಪ ಮಾಡಬೆಕಾಗಿದೆ. ನಾನು ಮೈಸೂರಿಗೆ ಹೋಗಿದ್ದಾಗ ಒಬ್ಬ ಮಹಿಳೆಗೆ ಅಂತರ ಜಾತಿ ವಿವಾಹವಾಗಿ ಎರಡು ಮೂರು ವರ್ಷಗಳಾಗಿತ್ತು. ಅವರಿಗೆ ನಾನು ಹಕ್ಕು ಪತ್ರವನ್ನು ಕೊಟ್ಟೆ, ಅವರಿಗೆ ನಾನು ಮದುವೆಯಾಗಿ ಎಷ್ಟು ವರ್ಷವಾಯಿತು ಎಂದಾಗ ಸರ್ ಮೂರು ವರ್ಷವಾಯಿತು ಅಂದರು. ನಾನು ನನ್ನ ಗಂಡ ಈ ಹಣಕ್ಕಾಗಿ ಶ್ರಮವನ್ನು ಪಟ್ಟಿರುವುದನ್ನು ನೋಡಿದರೆ ಇದಕ್ಕೆ ಅರ್ಜಿಯನ್ನು ಹಾಕಿದ್ದು ತಪ್ಪು ಎನ್ನುವಂತಹ ಭಾವನೆ ನಮಗೆ ಬಂದಿದೆ ಅಂದರು. ಶೇಕಡ 60ಕ್ಕಿಂತ ಹೆಚ್ಚು ಕೇಸ್‌ಗಳಲ್ಲಿ ಹಣವನ್ನು ಕೊಟ್ಟಿಲ್ಲ. ಮಾನ್ಯ ಸಚಿವರು ಫಲಾನುಭವಿಗಳಿಗೆ ಹಣವನ್ನು ಕೊಡಿಸಿದರೆ ಅನುಕೂಲವಾಗುತ್ತದೆ. ಮಾನ್ಯ ಸಚಿವರು ಪತ್ರವನ್ನು ಬರೆಯುತ್ತೇವೆ, ಹಣ ತರಿಸುತ್ತೇವೆಂದು ದಯಮಾಡಿ ಉತ್ತರವನ್ನು ಹೇಳಬೇಡಿ. ಕೊನೆಯ ಪಕ್ಷ ಒಂದು ಕಾಲಮಿತಿ ಹಾಕಿಕೊಂಡು ಅದನ್ನು ವಿತರಿಸುವಂತಹ ಕೆಲಸವನ್ನು ಮಾಡಬೇಕೆಂದು ಹೇಳುತ್ತಾ, ದಯವಿಟ್ಟು ಅಂತರ್ ಜಾತಿ ವಿವಾಹವಾದಂತಹವರಿಗೆ ಸರ್ಕಾರದಲ್ಲಿ ಗಂಡನಿಗೆ ಅಥವಾ ಹೆಂಡತಿಗೆ ಇಬ್ಬರಲ್ಲಿ ಒಬ್ಬರಿಗೆ ಕೆಲಸವನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕು. ಅಂತರ್ ಜಾತಿ ವಿವಾಹವಾಗಿ ವಾಸಮಾಡತಕ್ಕಂಥದ್ದು ಸುಲಭದ ಕೆಲಸವಲ್ಲ, ಇವತ್ತು ನಮ್ಮ ಸಮಾಜ ಅವರಿಗೆ ಬೆಂಬಲಿಸುವಂತಹ ಮೇಲ್ಮಟ್ಟದ ಆಲೋಚನೆಯನ್ನು ಮಾಡತಕ್ಕಂಥದ್ದಕ್ಕೆ ಆ ತತ್ವದ ಬಗ್ಗೆ ಇನ್ನು ಹೋಗಿಯೇ ಇಲ್ಲ. ಆದುದರಿಂದ ಅವರಿಗೆ ಸರ್ಕಾರದಲ್ಲಿ ಕಡ್ಡಾಯವಾಗಿ ಮೀಸಲಾತಿಯನ್ನು ಕೊಟ್ಟು ಕೆಲಸವನ್ನು ಕೊಡಬೇಕೆಂದು ಹೇಳಿ ನಮ್ಮ ಸರ್ಕಾರ ಮಾಡಿರತಕ್ಕಂತಹ ಅತ್ಯುತ್ತಮವಾದಂತಹ ಕೆಲಸವೆಂದರೆ ಶಿಕ್ಷಣಕ್ಕೆ ಕೊಟ್ಟಿರತಕ್ಕಂತಹ ಒತ್ತು ಸುಮಾರು 159 ಹಾಸ್ಟಲ್‌ಗಳನ್ನು ಕಳೆದ ಒಂದು ವರ್ಷದಲ್ಲಿ 1995-96ರಲ್ಲಿ ಮಂಜೂರು ಮಾಡಿದೆ. 1993-94ರಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರ 80 ಹಾಸ್ಟಲ್‌ಗಳನ್ನು ಕೊಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದರು. 1994-95 ಆದರೂ ಪತ್ತೆನೇ ಇಲ್ಲ, ಅದರ ಬಗ್ಗೆ ಉಸಿರೇ ಇಲ್ಲ. ನಮ್ಮ ಸರ್ಕಾರ ಬಂದ ಮೇಲೆ ಆ 80ರ ಜೊತೆಗೆ ನಮ್ಮ ಸರ್ಕಾರ 79 ಸೇರಿಸಿ ಒಟ್ಟು 159 ಹಾಸ್ಟೆಲ್ ಮಾಡಿದ್ದೇವೆ. ಆಮೇಲೆ ಇವತ್ತು ಯಾವ ಊರಿನಲ್ಲೂ ಕೂಡ ಕಟ್ಟಡ ಇಲ್ಲದೆ ಇಲ್ಲ, ಸುಮಾರು 1,200 ಕಟ್ಟಡಗಳನ್ನು ಕಟ್ಟಿಸತಕ್ಕಂಥ ಕೆಲಸ ಮಾಡಿದ್ದೇವೆ. ಇವತ್ತು ಹಾಸ್ಟೆಲ್‌ನಲ್ಲಿ ಕೂಡ 250 ಇದ್ದದ್ದನ್ನು 350ರವರೆಗೆ ಹೆಚ್ಚು ಮಾಡಿ ಮಕ್ಕಳ ಶಿಕ್ಷಣಕ್ಕೆ ಅನುಕೂಲ ಮಾಡಿದ್ದೇವೆಂದು ಹೇಳುತ್ತೇನೆ. ಜೊತೆಗೆ ಮುರಾರ್ಜಿ ಶಾಲೆಗಳ ಬಗ್ಗೆ ಹೇಳುವುದಾದರೆ, ಉದಾಹರಣೆಗೆ ನನ್ನ ಜಿಲ್ಲೆಗೆ, ನನ್ನ ಕ್ಷೇತ್ರಕ್ಕೆ ಇಷ್ಟು ಆಗಬೇಕೆಂದು ಇರಬೇಕು. ಆದರೆ ಇಷ್ಟೊಂದು ಅಂತರ ಮಾಡಿದರೆ ಹೇಗೆ ಸ್ವಾಮಿ? ಕೊಟ್ಟಿರುವ ನಲವತ್ತು ಶಾಲೆಗಳಲ್ಲಿ ಹಾಸನ ಜಿಲ್ಲೆಗೆ ಕೊಟ್ಟೇ ಇಲ್ಲ. ಅದು ಏತಕ್ಕೋ ಗೊತ್ತಿಲ್ಲ? ಹಾಸನ ಜಿಲ್ಲೆಯಲ್ಲಿ ಎಲ್ಲಾ ಆಗಿದೆ. ಇಲ್ಲದಿರುವುದು ಒಂದೇ ಒಂದು ಈ ಮುರಾರ್ಜಿ ಶಾಲೆ. ಮಂತ್ರಿಗಳು ನೀಡಿರುವ

ಉತ್ತರವನ್ನು ಆಧರಿಸಿಯೇ ಹೇಳುತ್ತಿದ್ದೇನೆ. ಸ್ವಾಮಿ, ಹಿಂದುಳಿದ ವರ್ಗದ್ದೇ ಬೇರೆ, ಸಮಾಜ ಕಲ್ಯಾಣ ಇಲಾಖೆಯದ್ದೇ ಬೇರೆ, ಸಮಾಜ ಕಲ್ಯಾಣ ಇಲಾಖೆಯಿಂದ 1996-97ರಲ್ಲಿ ನಲವತ್ತು ಶಾಲೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಹಾಸನ ಜಿಲ್ಲೆಗೆ ಕೊಟ್ಟಿಲ್ಲ. ಬಿಜಾಪುರ ಜಿಲ್ಲೆಗೆ ಆರು ಶಾಲೆಗಳನ್ನು ಕೊಟ್ಟಿದ್ದಾರೆ. ನಮ್ಮ ಧಾರವಾಡ ಜಿಲ್ಲೆಗೆ ಐದು ಕೊಟ್ಟಿದ್ದಾರೆ. ಮಾನ್ಯ ನಮ್ಮ ಎಸ್.ಎಸ್.ಪಾಟೀಲರ ಕ್ಷೇತ್ರಕ್ಕೆ ಮೂರು ಶಾಲೆಗಳನ್ನು ಕೊಟ್ಟಿದ್ದಾರೆ. ನಮ್ಮ ಮಾನ್ಯ ಮಂತ್ರಿಗಳಾದ ಜಿಗಜಿಣಗಿ ಸಾಹೇಬರ ಜಿಲ್ಲೆಗೆ ಆರು ಶಾಲೆಗಳನ್ನು ಕೊಟ್ಟಿದ್ದಾರೆ. ನಾನು ಈ ತಾರತಮ್ಯ ಏತಕ್ಕೆ ಎಂದು ಕೇಳುತ್ತಿದ್ದೇನೆ. ಆಸೆ ಇರುವುದು ಸರಿ. ನೀವು ಮೂರು, ಮೂರು ಶಾಲೆಗಳನ್ನು ಇಟ್ಟುಕೊಂಡು ನೀವು ಮಾತ್ರ ಗೆದ್ದುಬರಬೇಕು. ದಯವಿಟ್ಟು ಈ ಅಂತರ ಬೇಡ. ಇದು ಸರಿಯಿಲ್ಲ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಅಧ್ಯಕ್ಷರೆ, ಎಸ್.ಎಸ್.ಪಾಟೀಲರ ಕ್ಷೇತ್ರಕ್ಕೆ ಒಂದು ಕೊಟ್ಟಿದ್ದೇವೆ.

ಅಧ್ಯಕ್ಷರು: ಮುಖ್ಯಮಂತ್ರಿಗಳು ಹಾಗೂ ಇತರೆ ಎಲ್ಲಾ ಮಂತ್ರಿಗಳು ಉತ್ತರ ಕೊಡಬೇಕು. ನಾನು ಅದಕ್ಕೆ ರಾತ್ರಿಯೇ ಸೂಚನೆಯನ್ನು ಕೊಟ್ಟು, ಪಟ್ಟಿ ಕಡಿಮೆ ಮಾಡಿ ಎಂದು ನಮ್ಮ ಕಾರ್ಯದರ್ಶಿಗಳಿಗೆ ಕಳುಹಿಸಿ ನಿಮಗೆಲ್ಲಾ ಹೇಳಿದ್ದೇವೆ. ನೀವು ಸಹಕರಿಸದೆ ಹೋದರೆ ನಾನು ಬೇರೆ ಸದಸ್ಯರನ್ನು ಮಾತನಾಡಲು ಕರೆಯಬೇಕಾಗುತ್ತದೆ. ನಾನು ಇಷ್ಟು ಸಮಯಕೊಟ್ಟರೂ, ನೀವು ನಾನು ಹೇಳಿದ ಸಮಯಕ್ಕೆ ಮುಗಿಸದೇ ಹೋದರೆ ನನಗೆ ಕಷ್ಟವಾಗುತ್ತದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ನಾನು ಎಲ್ಲವನ್ನು ಬಿಟ್ಟು ನನ್ನ ಕ್ಷೇತ್ರದ ವಿಷಯಕ್ಕೆ ಬರುತ್ತೇನೆ.

ಅಧ್ಯಕ್ಷರು: ಕುಮಾರ ಸ್ವಾಮಿಯವರೆ, ಈಗ ಬೇಡ, ಸಮಯವಿಲ್ಲ, ಉತ್ತರ ಕೊಡಲು ಬಹಳ ಜನ ಮಂತ್ರಿಗಳು ಕಾಯುತ್ತಿದ್ದಾರೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ನಾನು ಭಾಷಣ ಮಾಡುವುದಿಲ್ಲ. ಎರಡು ನಿಮಿಷ ಅವಕಾಶ ಕೊಡಿ. ಸುಮಾರು 1994-ರಲ್ಲಿ ಮಂಜೂರಾದ ಯೋಜನೆಗೆ, ಸುಮಾರು 53 ಸಾವಿರ ಎಕರೆ ಜಮೀನು ಹೊಸ ಅಚ್ಚುಕಟ್ಟಿಗೆ ಕೊಟ್ಟಿದ್ದು, ಅದರಲ್ಲಿ ನನ್ನ ಕ್ಷೇತ್ರಕ್ಕೆ ಬರುವುದು 6 ಸಾವಿರ ಎಕರೆ ಮಾತ್ರ. ಉಳಿದದ್ದು ಬೇರೆ ತಾಲ್ಲೂಕುಗಳಿಗೆ ಹೋಗುತ್ತದೆ. ಅಂದಿನಿಂದ ನಾವು ಬೇಲೂರು ತಾಲ್ಲೂಕಿನಲ್ಲಿ ಬರಗಾಲಕ್ಕೆ ಒಳಗಾಗಿರತಕ್ಕಂಥ ಹಳೇಬೀಡು ಮತ್ತು ಮಾದಿಹಳ್ಳಿ, ಈ ಎರಡು ಹೋಬಳಿಗಳಿಗೆ ಸುಮಾರು 15ರಿಂದ 20 ಸಾವಿರ ಎಕರೆ ಅಚ್ಚುಕಟ್ಟಿಗೆ ನೀವು ನೀರು ಕೊಡಬೇಕೆಂದು ರೈತರು, ನಾವೆಲ್ಲರೂ ಸೇರಿ ಹೋರಾಟ ಮಾಡುತ್ತಿದ್ದೇವೆ. ಆದರೆ ಅದು ಇನ್ನೂ ಕೈಗೂಡಿಲ್ಲ. ಹಿಂದೆ ಅದು ಅನೇಕ ಕಾರಣಗಳಿಂದ ಕಾವೇರಿ, ಬೇಸಿನ್, ಕೃಷ್ಣಾ ಬೇಸಿನ್‌ಗಾಗಿ ಎಂದು ಅದು ಇನ್ನು ಕೂಡ

ನೆನೆಗುದಿಗೆ ಬಿದ್ದು, ಇವತ್ತು ಮುಂದೆ ಬಂದಿದೆ. ಜನರು ಇವತ್ತು ನಮ್ಮ ಸರ್ಕಾರದ ಮೇಲೆ ವಿಶ್ವಾಸ ಇಟ್ಟಿದ್ದಾರೆ. ಯಾವ ಪಕ್ಷ ಸರ್ಕಾರ ಮಾಡುತ್ತದೆಂದು ಅವರಿಗೂ ಕೂಡ ಚೆನ್ನಾಗಿ ಗೊತ್ತಿದೆ. ಮಾನ್ಯ ಶಿವರಾಂರವರು ಈಗ ಸಭೆಯಲ್ಲಿ ಇಲ್ಲ. ನಿನ್ನೆ, ಅವರು ಮಾತನಾಡುವಾಗ ನಾವು ಹಾಗೆ ಮಾಡಿದೆವು ಹೀಗೆ ಮಾಡಿದೆವು, ಬಂಗಾರಪ್ಪನವರು ಇದ್ದಾಗ ಏನು ಮಾಡಿದ್ದೂ ಎಂದು ಹೇಳುತ್ತಿದ್ದರು. ಮಾನ್ಯ ಬಂಗಾರಪ್ಪನವರು ನಯವಾಗಿ ಮಾತನಾಡಿ ಆದೇಶ ಕೊಡುತ್ತೇವೆಂದು ಹೇಳಿದ ತಕ್ಷಣ ಆ ರೈತರು ಜೈ ಎಂದರು. ಎರಡು ತಿಂಗಳಾದ ಮೇಲೆ ಜೈ ಇಲ್ಲ, ಏನೂ ಇಲ್ಲ. ಕೊನೆಗೆ ರೈತರಿಗೆ ಕೊಡುವಾಗ ಅನೇಕ ತಾಂತ್ರಿಕ ಕಾರಣಗಳನ್ನು ನೀಡಿ ಅವರಿಗೆ ಸಿಗಬೇಕಾದ್ದನ್ನು ನಿಲ್ಲಿಸಿದರು. ದಯಮಾಡಿ, ನಮ್ಮ ಸರ್ಕಾರ ಯಾವುದೇ ತಾಂತ್ರಿಕ ಕಾರಣವನ್ನು ಕೊಡದೆ, ಕಾನೂನು ಚೌಕಟ್ಟಿನಲ್ಲೇ ರೈತರಿಗಾಗಿ ತಾವು ಕಡ್ಡಾಯವಾಗಿ ನೀರನ್ನು ಕೊಡುವ ವ್ಯವಸ್ಥೆಯನ್ನು ನಮ್ಮ ಮಾನ್ಯ ನಾಗೇಗೌಡರು, ಮತ್ತು ಸರ್ಕಾರ ಮಾಡಬೇಕೆಂದು ಹೇಳುತ್ತೇನೆ. ನಾನು ಅನುದಾನ ಬೇಡಿಕೆಗಳ ಮೇಲೆ ಏನು ಮಾತನಾಡಿದ್ದೇನೆ ಅದರಲ್ಲಿ ಅನೇಕ ವಿಷಯಗಳಿವೆ.

ಇನ್ನು ಸಾರಿಗೆ ವಿಷಯದ ಬಗ್ಗೆ ಮಾನ್ಯ ಸಚಿವರಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಹಾಸನದಿಂದ, ಬೇಲೂರಿನಿಂದ ಅರ್ಧ ಗಂಟೆಯಲ್ಲಿ ಎಂಟು ಒಂಭತ್ತು ಬಸ್‌ಗಳು ಬೆಂಗಳೂರಿಗೆ ಹೊರಡುತ್ತವೆ. ಈಗ ಅವನ್ನೆಲ್ಲಾ ತೆಗೆದು ಹಾಕಿ ಬೆಂಗಳೂರಿಗೆ ಖಾಸಗಿ ಬಸ್‌ಗಳೇ ಜಾಸ್ತಿಯಾಗಿವೆ. ದಯವಿಟ್ಟು ಹಳ್ಳಿಗಳಿಗೆ ಹೆಚ್ಚು ಬಸ್ ಕೊಡಿ. ನಾವು ನಿಮಗೆ ಯಾವುದೇ ರೀತಿಯಲ್ಲಿ ರೆವಿನ್ಯೂವನ್ನು ಕಡಿಮೆ ಮಾಡುವುದಿಲ್ಲ. ದಯವಿಟ್ಟು ಲಾಂಗ್ ರೂಟ್‌ನಲ್ಲಿರುವ ಬಸ್‌ಗಳನ್ನು ತೆಗೆದು ಹಳ್ಳಿಗಳಿಗೆ ಕೊಡಿ. ಎರಡನೆಯದಾಗಿ ಬಸ್‌ಸ್ಟ್ಯಾಂಡ್ ಬಗ್ಗೆ ಹೇಳುವುದಾದರೆ ಬೇಲೂರಿನಲ್ಲಿ ಇನ್ನೂ ಕೂಡ ಬಸ್ ಸ್ಟ್ಯಾಂಡ್ ಪ್ರಾರಂಭವಾಗದೆ ಇರುವುದರಿಂದ ದಯವಿಟ್ಟು ಅದನ್ನು ಬೇಗ ಪ್ರಾರಂಭ ಮಾಡಿಕೊಡಿ ಎಂದು ಹೇಳುತ್ತಾ, ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು 2 ಗಂಟೆ ಸಮಯ ಮಾತನಾಡಲು ತಯಾರಾಗಿದ್ದೆ.

ಅಧ್ಯಕ್ಷರು:- ನೀವು ನಿನ್ನೇ ರಾತ್ರಿಯಿಂದ ಬೆಳಗಿನ ಜಾವದವರೆಗೆ ಮಾತನಾಡಿದ್ದರೂ ನಾನು ತಯಾರಾಗಿದ್ದೆ. ಬೇಡವೆಂದು ತಾವೇ ಹೇಳಿದಿರಿ. ನಾನು ಊಟದ ವ್ಯವಸ್ಥೆ ಮಾಡಿಸಿ ಕಾದು ಕುಳಿತುಕೊಂಡಿದ್ದೆ. ಕ್ಲೋಸ್ ಮಾಡೋಣ ಎಂದು ಹೇಳಿದಿರಿ. ಅದಕ್ಕೆ ಕ್ಲೋಸ್ ಮಾಡಿದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ತಾವು ಹಿರಿಯ ನಾಯಕರಿಗೆ ಎರಡು, ಮೂರು ಗಂಟೆ ಕಾಲ ಮಾತನಾಡಲು ಅವಕಾಶವನ್ನು ಕೊಡುತ್ತೀರಿ.

ಅಧ್ಯಕ್ಷರು: ಸರ್ಕಾರದ ಅನುಕೂಲಕ್ಕೋಸ್ಕರ ನಾನು ಹೇಳುತ್ತಿರುವುದು. ಈಗಲೂ

ನನಗೇನೂ ತೊಂದರೆ ಇಲ್ಲ. ನಿಮ್ಮ ಹಣಕಾಸು ಮಂತ್ರಿಗಳಿಗೆ ಹೇಳಿ. ಅವರು ಅಪ್ರೋಪ್ರಿಯೇಷನ್ ಬಿಲ್ ನಿಧಾನಕ್ಕೆ ತೆಗೆದುಕೊಳ್ಳೋಣವೆಂದರೆ ಇವತ್ತು ಮತ್ತೆ ಚರ್ಚೆ ಮುಂದುವರಿಸೋಣ. ನಾನು ಸಿದ್ಧವಾಗಿದ್ದೇನೆ. ನಮ್ಮದೇನೂ ಇಲ್ಲ:

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ವಂದನೆಗಳು.

ಅಧ್ಯಕ್ಷರು: ತುಂಬಾ ಧನ್ಯವಾದಗಳು ಮಾನ್ಯ ಬಿ.ಮುನಿಯಪ್ಪನವರು ಮಾತನಾಡಿ.

+ ಶ್ರೀ ಬಿ.ಮುನಿಯಪ್ಪ (ಗಾಂಧೀನಗರ ಕ್ಷೇತ್ರ): ಮಾನ್ಯ ಅಧ್ಯಕ್ಷರೆ, ಸುಮಾರು 46 ಬೇಡಿಕೆಗಳು ಇವತ್ತು ನಮ್ಮ ಮುಂದೆ ಇವೆ. ಎಲ್ಲ ಬೇಡಿಕೆಗಳ ಬಗ್ಗೆ ಮಾತನಾಡುವುದಕ್ಕೆ ಅವಕಾಶವಿಲ್ಲ. ನಾನು ಬೆಂಗಳೂರು ಹೃದಯಭಾಗದಿಂದ ಗೆದ್ದಿರುವ ಶಾಸಕನಾಗಿರುವ ಕಾರಣ, ನಾನು ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದಂತೆ ಮೊದಲು ಎರಡು ಬೇಡಿಕೆಗಳ ಬಗ್ಗೆ ಮಾತನಾಡಿ ನೀವು ಬೆಲ್ಲು ಹೊಡೆಯುವುದಕ್ಕಿಂತ ಮುಂಚೆ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ. ಬೆಂಗಳೂರು ಅಭಿವೃದ್ಧಿಯ ಬಗ್ಗೆ ಮಾತನಾಡಬೇಕೆಂದಾಗ ನಮ್ಮ ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್ ಮುಂತಾದವರು ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ಮೊದಲನೆಯದಾಗಿ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಸಭೆಯಲ್ಲಿಲ್ಲ. ಮಾನ್ಯ ಮೀನುಗಾರಿಕೆ ಮಂತ್ರಿಗಳು ನೋಟ್ ಮಾಡಿಕೊಳ್ಳುತ್ತಿದ್ದಾರೆ. ಮೊದಲನೆಯದಾಗಿ ಬೆಂಗಳೂರು ಅಭಿವೃದ್ಧಿಯಾಗಬೇಕಾದರೆ ಬೆಂಗಳೂರು ಮೇಯರ್ ಮತ್ತು ಕಮೀಷನರ್ ನಡುವೆ ಇರುವ ಜಗಳವನ್ನು ಬೇಗ ಬಗೆಹರಿಸಿದರೆ, ಆಗ ಬೆಂಗಳೂರು ಅಭಿವೃದ್ಧಿಯಾಗುತ್ತದೆ. ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದಾಗ ಕಾನೂನು ಬದ್ಧವಾಗಿ ಒಬ್ಬ ಕಮೀಷನರ್ ಅನ್ನು ನಗರಪಾಲಿಕೆಗೆ ನೇಮಿಸಬೇಕಾದರೆ ಮೇಯರ್ ಆಗಿ ಬರುವವರ ಹತ್ತಿರ ಇಂಥವರನ್ನು ನಾವು ಕಳುಹಿಸುತ್ತಿದ್ದೇವೆಂದು ಒಂದೆರಡು ಹೆಸರುಗಳನ್ನು ಕಳುಹಿಸಿ ಇವರಲ್ಲಿ ಯಾರನ್ನು ನೀವು ಆಯ್ಕೆ ಮಾಡಿಕೊಳ್ಳುತ್ತೀರಿ ಎಂದು ಕೇಳುವ ಒಂದ ಪದ್ಧತಿ ಇದೆ. ಆದರೆ ಇತ್ತೀಚಿನ ದಿನಗಳಲ್ಲಿ ಆ ಪದ್ಧತಿ ಕಣ್ಮರೆಯಾಗಿದೆ. ಇವತ್ತು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮೇಯರ್‌ರವರು ಕಮೀಷನರ್‌ರವರ ಮೇಲೆ ಆಪಾದನೆಯನ್ನು ಹೊರಿಸಿ, ನಾನು ರಾಜೀನಾಮೆಯನ್ನು ಕೊಟ್ಟಿದ್ದೇನೆ, ನಾನು ಮಹಾನಗರಪಾಲಿಕೆಗೆ ಬರುವುದಿಲ್ಲವೆಂದು ಹೇಳಿ ಕಳೆದ ನಾಲ್ಕೈದು ದಿವಸಗಳಿಂದ ಅಲ್ಲಿ ಯುದ್ಧ ನಡೆಯುತ್ತಿದೆ. ಅಲ್ಲಿರುವ ಬಹುಪಾಲು ಎಲ್ಲಾಪಕ್ಷದ ಮಹಾನಗರಪಾಲಿಕೆಯ ಸದಸ್ಯರುಗಳು ಈಗಿರುವ ಕಮೀಷನರ್‌ರವರ ಬಗ್ಗೆ ದೂರನ್ನು ಹೇಳಿ ಅವರನ್ನು ಬದಲಾವಣೆ ಮಾಡಬೇಕೆಂದು ಮುಖ್ಯಮಂತ್ರಿಗಳಿಗೂ ಕೂಡ ಆ ವಿಷಯವನ್ನು ಗಮನಕ್ಕೆ ತಂದಿದ್ದಾರೆ.

ಶ್ರೀ ಹೆಚ್.ಎನ್.ನಂಜೇಗೌಡ: ಅಧ್ಯಕ್ಷರೆ, ಸಂದರ್ಭ ಏನೆಂದು ಗೊತ್ತು ಅದಕ್ಕೆ ಹೇಳುತ್ತೇನೆ. ಮಾನ್ಯ ಸಿಂಧ್ಯಾರವರು ಸೇರಿದಂತೆ ಇತರೆ ಮಂತ್ರಿಗಳು ಈ ಕಡೆ ಗಮನ ಹರಿಸಬೇಕು. ನಾವು ಅಸೆಂಬ್ಲಿಯಲ್ಲಿ ಒಂದು ರೆಸಲ್ಯೂಷನ್ ಮಾಡುತ್ತೇವೆ. ಮುಖ್ಯ

ಕಾರ್ಯದರ್ಶಿ ಅದನ್ನು ಬಿಸಾಡಿದರೆ? ಕಮಿಟಿಗಳು, ಕಾರ್ಪೊರೇಷನ್ ಮಾಡಿದಂಥ ರೆಸಲ್ಯೂಷನ್‌ಗೆ ಕಮಿಷನರ್ ಸಹಿ ಹಾಕುವುದಿಲ್ಲವೆಂದರೆ ಏತಕ್ಕೆ ಇರಬೇಕು ಚುನಾಯಿತ ಬಾಡಿ? Why should there be an elected body at all? ನೀವು ಮೂಲಭೂತವಾಗಿ ಆ ಆಕ್ಟ್ ಅನ್ನು ಬದಲಾವಣೆ ಮಾಡಿ. ಎಲ್ಲದಕ್ಕೂ ಕಮಿಷನರ್‌ರವರ ಸಹಿಯಾಗಬೇಕು. ಕಾರ್ಪೊರೇಷನ್ ರೆಸುಲ್ಯೂಷನ್ ಆದರೂ ಆಗಬೇಕು. ಸ್ಥಾಯಿ ಸಮಿತಿಯದಾದರೂ ಆಗಬೇಕು. ನನ್ನ ಕ್ಷೇತ್ರದಲ್ಲಿ ನಲ್ಲಿ ನೀರಿಗೆ 16 ಸಾವಿರ ರೂಪಾಯಿಗಳನ್ನು ಕಟ್ಟಬೇಕು, ಕಟ್ಟಿದರೂ ಕುಡಿಯುವುದಕ್ಕೆ ನೀರಿಲ್ಲ. ಸ್ಟ್ಯಾಂಡಿಂಗ್ ಕಮಿಟಿಯಿಂದ ಒಪ್ಪಿಗೆಯಾಗಿ ಹೋದರೂ ಕಮೀಷನರ್ ಸಹಿ ಹಾಕುವುದಿಲ್ಲ. ಈ ಪರಿಸ್ಥಿತಿಯಾದರೆ, Can an officer hold the entire Corporation to ransom? ಇದನ್ನು ಸ್ವಲ್ಪ ನೀವು ರೆಕ್ಟಿಫೈ ಮಾಡಿ. ನೀವು ಸುಮ್ಮನೆ ಮೂಲಭೂತವಾಗಿ ಈ ತಪ್ಪನ್ನು ತಿದ್ದುಪಡಿ ಮಾಡಿ. ಇಲ್ಲವೆಂದರೆ ಅಲ್ಲಿ ಹೊಂದಾಣಿಕೆ ಮಾಡಿಕೊಂಡು ಹೋಗುವ ಮನುಷ್ಯನನ್ನು ಅಲ್ಲಿ ಹಾಕಬೇಕು. ಈಗ ಹಾನೆಸ್ಟಿ ಎಂದು ಹೇಳುತ್ತಾರೆ. Honesty is not the only criterion ಸ್ವಲ್ಪ ಪ್ರಾಯೋಗಿಕ ಜ್ಞಾನವನ್ನು ಇಟ್ಟುಕೊಂಡು he should see what are the priorities? ಸಿವರೇಜ್ ತೆಗೆಯುವುದು ಪ್ರಯಾರಿಟಿ, ಕಸ ತೆಗೆಸುವುದು ಪ್ರಯಾರಿಟಿ, ಅಲ್ಲಿ ಎಲ್ಲಿಯಾದರೂ ಚರಂಡಿ ಹಾಳಾಗಿದ್ದರೆ, ರಿಪೇರಿ ಮಾಡಿಸುವುದು ಪ್ರಯಾರಿಟಿ. ಆಮೇಲೆ ಈ ಕಮೀಷನರ್‌ಗೆ ಈ ಕಟ್ಟಡಗಳನ್ನು ಒಡೆಯುವುದು ಪ್ರಯಾರಿಟಿ. ಅದು ಯಾವ ಕಟ್ಟಡಗಳು ಎಂದರೆ, ಮಧ್ಯಮ ಹಾಗೂ ಸಾಮಾನ್ಯ ಜನರು ಕಟ್ಟಿಕೊಂಡಿರುವ ಕಟ್ಟಡಗಳನ್ನು ಒಡೆಸುವುದು. ಶೇಕಡ 25ರಷ್ಟು ಡಿವಿಯೇಷನ್ ಇದ್ದರೂ ಕೂಡ ರೆಗ್ಯುಲರೈಸ್ ಮಾಡಿ ಎಂದು 19ನೇ ಜೂನ್ 1996ನೇ ಇಸವಿಯಲ್ಲಿ ಆದೇಶ ಹೋಯಿತು. ಅಲ್ಲಿಯವರೆಗೆ ಒಂದು ಕಟ್ಟಡವನ್ನು ರೈಗ್ಯುಲರೈಸ್ ಮಾಡುವುದಕ್ಕೆ ಕ್ರಮತೆಗೆದುಕೊಂಡಿಲ್ಲ. "ಒಡೆಯುವುದು ಎಂಥವು? ಯಾರು ಬಿಲ್ಡರ್ಸ್ ಕಟ್ಟಿಕೊಂಡಿದ್ದಾರೆ, ಈಗ ಉದಾಹರಣೆಗೆ ನಮ್ಮ ಜೆಪಿನಗರದ ಎಂಟ್ರೆನ್ಸ್‌ನಲ್ಲೇ ಎಂಬತ್ತು ಫ್ಲಾಟ್‌ಗಳನ್ನು ರೂಲ್ಸ್ ವಯಲೇಷನ್ ಮಾಡಿ ಕಟ್ಟಿಕೊಂಡಿದ್ದಾರೆ, 200 ಪರ್ಸೆಂಟ್ ಮೇಲೆ ಇದ್ದರೂ ಡಿವಿಯೇಷನ್, ಅವೆನ್ಯೂ ರೋಡ್‌ಗೆ ಯಾರೂ ಹೋಗುವುದಿಲ್ಲ. ಮೂನ್ನೂರು ಪರ್ಸೆಂಟ್ ಮೇಲೆ ಡಿವಿಯೇಷನ್ ಇದ್ದರೂ ಚಿಕ್ಕಪೇಟೆಗೆ ಹೋಗುವುದಿಲ್ಲ. ಶಿವಾಜಿನಗರಕ್ಕೆ ಹೋಗುವುದಿಲ್ಲ. ಬಸವನಗುಡಿ, ಜಯನಗರಕ್ಕೆ ಹೋಗುತ್ತಾರೆ. ಅಲ್ಲೇನು ಬಿ.ಜೆ.ಪಿ.ಯವರು ಇದ್ದಾರೆಂದು ಹೋಗುವುದಾ? ಇಲ್ಲಿ ಕಮೀಷನರ್‌ಗೆ ಇನ್ನೇನು ಕಸುಬಿಲ್ಲವೇ? ಎಲ್ಲೂ ಒಂದು ಇನ್‌ಸ್ಪೆಕ್ಟ್ ಮಾಡಿಲ್ಲ. ಎಲ್ಲಿ ಕುಡಿಯುವ ನೀರಿಲ್ಲ ಇವರು ಹೋಗಿ ನೋಡಿದ್ದಾರಾ? ಯಾವ್ಯಾವ ಕಡೆ ಹೋಗಿದ್ದಾರೆ? ಇದು ಸರಿಯಲ್ಲ ನೀವು ಆ್ಯಕ್ಟನ್ನು ತಿದ್ದುಪಡಿ ಮಾಡಿ He should be at the beg and call of the Corporation ಕಾರ್ಪೊರೇಷನ್‌ನ ಎಂಟೈರ್ ಬಾಡಿ ಒಂದು ತೀರ್ಮಾನ ಮಾಡಿದರೂ ಕೂಡ ಅದಕ್ಕೆ ನಾನು ಸಹಿ

ಹಾಕುವುದಿಲ್ಲವೆಂದರೆ, ಅಂಥ ಕಮೀಷನರ್ ಏತಕ್ಕೆ ಬೇಕು? ಅಂಥ ಆ್ಯಕ್ಟ್ ಏತಕ್ಕೆ ಬೇಕು? ಇದು ಪ್ರಜಾಪ್ರಭುತ್ವಕ್ಕೆ ತದ್ವಿರುದ್ಧವಾದಂಥ ಆ್ಯಕ್ಟ್, ದಯಮಾಡಿ ಅದನ್ನು ತಿದ್ದುಪಡಿ ಮಾಡಿ.

ಶ್ರೀ ಬಿ.ಮುನಿಯಪ್ಪ: ಸನ್ಮಾನ್ಯ ಅಧ್ಯಕ್ಷರೆ, ನಾವು ಬೆಂಗಳೂರು ನಗರದ ಶಾಸಕರೆಲ್ಲಾ ಮಹಾನಗರಪಾಲಿಕೆಯಲ್ಲಿ ಓಟನ್ನು ಚಲಾಯಿಸುವ ಹಕ್ಕನ್ನು ಪಡೆದಿದ್ದೇವೆ. ಈ ಹಕ್ಕನ್ನು ಕೊಡುವುದು ಸರಿಯಲ್ಲ. ಇದನ್ನು ನಾನು ಮಹಾನಗರಪಾಲಿಕೆಯ ಸದಸ್ಯನಾಗಿದ್ದಾಗಲೂ ಹೇಳಿದ್ದೆ. ಈಗ ನಾನು ಶಾಸಕನಾಗಿರುವಾಗಲೂ ಕೂಡ ಹೇಳುತ್ತೇನೆ. ಏಕೆಂದರೆ, ಮಹಾನಗರಪಾಲಿಕೆ ಎಂದರೆ, ಅಲ್ಲಿನ ಸದಸ್ಯರಿಗೆ ಹೆಚ್ಚಿನ ಸ್ಥಾನಮಾನವಿರಬೇಕು. ಈಗ ಶಾಸಕರಿಗೆ ಹೆಚ್ಚಿನ ಸ್ಥಾನಮಾನವಿದೆ. ನಾವು ಮಹಾನಗರಪಾಲಿಕೆಯ ಸಭೆಗೆ ಹೋದಾಗ ಪೂಜ್ಯ ಮೇಯರ್‌ರವರೆ ಎಂದು ಕರೆಯುವ ಒಂದು ಪದ್ಧತಿ ಇದೆ. ನಾವು ಈ ದೇಶದ ಪ್ರಧಾನಮಂತ್ರಿಯವರನ್ನು ಪೂಜ್ಯ ಪ್ರಧಾನಮಂತ್ರಿ ಎಂದು ಕರೆಯುವುದಿಲ್ಲ, ಮುಖ್ಯಮಂತ್ರಿಯವರಿಗೆ ಹಾಗೆ ಕರೆಯುವುದಿಲ್ಲ, ಆ ಪೂಜ್ಯ ಮೇಯರ್‌ರವರ ಸ್ಥಾನದಲ್ಲಿ ಕುಳಿತಿರುವ ಮೇಯರ್‌ರವರು ಒಂದು ಆದೇಶವನ್ನು ಕೊಟ್ಟರೆ, ಪಕ್ಕದಲ್ಲಿರುವ ಆಯುಕ್ತರು ಅದನ್ನು ಪಾಲನೆ ಮಾಡುವುದಿಲ್ಲ. ಮಹಾನಗರಪಾಲಿಕೆಯಲ್ಲಿ ಸಣ್ಣ ಮಕ್ಕಳು ಮೈದಾನದಲ್ಲಿ ಹೊಡೆದಾಟ ಮಾಡಿಕೊಳ್ಳುವ ರೀತಿ ಇವತ್ತು ಅಲ್ಲಿ ನಡೆಯುತ್ತಿದೆ.

9.30 ಎ.ಎಂ

ಸರ್ಕಾರ ಅದರ ಬಗ್ಗೆ ತೀವ್ರವಾದಂತಹ ಗಮನ ಹರಿಸಬೇಕು. ಅಲ್ಲಿರತಕ್ಕ ಬಹುಪಾಲು ನಗರಪಾಲಿಕೆ ಸದಸ್ಯರುಗಳು ನಗರಪಾಲಿಕೆ ಆಯುಕ್ತರ ಮೇಲೆ ನಂಬಿಕೆಯನ್ನು ಕಳೆದುಕೊಂಡಿದ್ದಾರೆ. ಆದುದರಿಂದ ಬೆಂಗಳೂರಿನ ಅಭಿವೃದ್ಧಿ ಕೆಲಸಗಳು ಕುಂಠಿತವಾಗಿವೆ. ಜನರಿಗೆ ಬಹಳ ತೊಂದರೆಯಾಗುತ್ತಿದೆ. ಹಿರಿಯ ಸದಸ್ಯರಾದ ಮಾನ್ಯ ನಂಜೇಗೌಡರು ಹೇಳಿದ ರೀತಿಯಲ್ಲಿ ಇವತ್ತು ಬೆಂಗಳೂರು ನಗರದಲ್ಲಿ ಕಟ್ಟಡಗಳನ್ನು ಒಡೆಯುವುದು ಒಂದು ದೊಡ್ಡ ಫ್ಯಾಷನ್ ಆಗಿದೆ. ಟಾಸ್ಕ್ ಫೋರ್ಸ್ ಎಂದು ಒಂದು ಇಟ್ಟಿದ್ದಾರೆ. ಅದನ್ನು ಇಟ್ಟಿರುವುದು ತಪ್ಪು ಎಂದು ನಾನು ಹೇಳುವುದಿಲ್ಲ. ನಗರಪಾಲಿಕೆ ಸದಸ್ಯರು ಮನೆಗಳನ್ನು ಒಡೆಯಲು ಬಂದವರ ಎದುರಿಗೆ ಅಡ್ಡ ನಿಂತುಕೊಳ್ಳುವುದು, ಈ ಟಾಸ್ಕ್ ಫೋರ್ಸ್ ಮತ್ತು ಆಯುಕ್ತರವರ ಗುಂಪು ಹೋಗಿ ಮನೆಗಳನ್ನು ಒಡೆಯುವುದು, ಈ ರೀತಿ ಇವತ್ತು ನಡೆಯುತ್ತಿದೆ. ಇವತ್ತು ಏನಾಗಿದೆ ಅಂದರೆ, ರಾಜಾಜಿನಗರ ಏರಿಯಾದಲ್ಲಿನ ಇಬ್ಬರು ಬಿ.ಜೆ.ಪಿ. ಕಾರ್ಪೊರೇಟರುಗಳ ಮೇಲೆ ಒಬ್ಬರು ದೂರು ಕೊಟ್ಟು ಅದನ್ನು ಪೊಲೀಸರು ದಾಖಲಿಸಿಕೊಂಡು ಕೇಸ್ ಬುಕ್ ಮಾಡಿದ್ದಾರೆ. ನಾನು ತಮ್ಮ ಮುಖಾಂತರ ಕೇಳುತ್ತೇನೆ, ಮನೆಗಳನ್ನು ಕಟ್ಟುವಂತಹದ್ದನ್ನು ನೋಡಿಕೊಳ್ಳುವ ಜವಾಬ್ದಾರಿ ಯಾರದು? ಅದು ಇಂಜಿನಿಯರ್‌ಗಳ ಜವಾಬ್ದಾರಿಯಾಗಿದೆ. ಆ ಜವಾಬ್ದಾರಿಯನ್ನು ಇಂಜನಿಯರ್‌ಗಳು ಸರಿಯಾಗಿ ನಿರ್ವಹಿಸದೇ, ಯಾರೋ ಒಬ್ಬ

ಮಧ್ಯಮ ವರ್ಗದವರು, ಕಡಿಮೆ ಆದಾಯವುಳ್ಳವರು ಮನೆಗಳನ್ನು ಕಟ್ಟಿಕೊಂಡಿರುವುದನ್ನು ಒಡೆದು ಹಾಕುವುದು ಇವತ್ತು ನಡೆಯುತ್ತಿದೆ. ಬೆಂಗಳೂರಿನಂತಹ ಒಂದು ನಗರದಲ್ಲಿ ಒಬ್ಬ ಸಾಧಾರಣವಾಗಿ 10X 10 ಅಡಿ ಮನೆ ಕಟ್ಟಿಕೊಳ್ಳುವುದು ಬಹಳ ಕಷ್ಟವಾದಂತಹ ಪರಿಸ್ಥಿತಿಯಲ್ಲಿ, ಹಾಗೆ ಕಟ್ಟಿರುವ ಮನೆಗಳನ್ನು ಹೋಗಿ ಪ್ರತಿ ದಿವಸ ಒಡೆಯುವಂತಹ ಕೆಲಸ, ಅನಾಗರೀಕವಾದುದು. ಆ ರೀತಿ ಮನೆಗಳನ್ನು ಕಟ್ಟಲು ಕಾರಣಕರ್ತರಾಗಿದ್ದವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮನೆ ಕಟ್ಟಿಯಾದಮೇಲೆ ಅದನ್ನು ಒಡೆಯುವಂಥಾದ್ದು ಬಹಳ ಅನಾಗರೀಕವಾದಂತಹ ಕೆಲಸ. ಆ ರೀತಿ ಮನೆ ಒಡೆಯುವುದನ್ನು ದಯವಿಟ್ಟು ನಿಲ್ಲಿಸಿ ಆದಷ್ಟು ಬೇಗನೆ ಅದಕ್ಕೆ ಇತಿಶ್ರೀ ಹಾಡಬೇಕು. ಸರ್ಕಾರ ಇದರ ಬಗ್ಗೆ ತೀವ್ರವಾದಂತಹ ಗಮನ ಹರಿಸಿ ಮನೆಗಳನ್ನು ಒಡೆಯುವುದನ್ನು ಬೆಂಗಳೂರಿನಲ್ಲಿ ತಡೆಯದೇ ಹೋದರೆ, ಬೆಂಗಳೂರಿನ ಶಾಸಕರೆಲ್ಲಾ ಪಕ್ಷಬೇಧ ಮರೆತು ನಾವು ಒಂದು ದೊಡ್ಡ ಚಳುವಳಿಯನ್ನೇ, ಇವತ್ತು ಮಾಡಬೇಕಾಗುತ್ತದೆ. ಆ ಪರಿಸ್ಥಿತಿ ಇವತ್ತು ಬೆಂಗಳೂರಿನಲ್ಲಿದೆ. ಇವತ್ತು ಬೆಂಗಳೂರಿನಲ್ಲಿ ಏನಾಗಿದೆ ಎಂದರೆ, ಕಳೆದ ವರ್ಷ ನಾನು ಇಲ್ಲಿ ಮಾತನಾಡುವಾಗ ಬೆಂಗಳೂರು ಅಭಿವೃದ್ಧಿ ಮಂತ್ರಿಗಳ ಗಮನ ಇದರ ಬಗ್ಗೆ ಸೆಳೆದಿದ್ದೆ, ಇದು ಮೂರನೇ ಬಾರಿಗೆ ಈ ವಿಚಾರದ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ. ಮಿನರ್ವ ಎಂದು ಒಂದು ಮಿಲ್ ಇದೆ. ರಾಜಾಜಿನಗರಕ್ಕೆ ಮತ್ತು ಬಸವೇಶ್ವರ ನಗರಕ್ಕೆ ಹೋಗಬೇಕಾಗಿರುವಂತಹ ಜನರೆಲ್ಲಾ ಸುಜಾತ ಚಿತ್ರಮಂದಿರದ ಮುಂದೆ ಹೋಗಬೇಕು. ಆ ರೋಡ್ ಅನ್ನು ವೈಡನ್ ಮಾಡಬೇಕೆಂದು ನಾವು ಹಲವಾರು ಬಾರಿ ಪ್ರಯತ್ನ ಪಟ್ಟು ಅದಕ್ಕೆ ಯೋಜನೆ ರೂಪಿಸಿದರೂ ಕೂಡ, ಆ ಮಿನರ್ವ ಮಿಲ್‌ನವರ ಹತ್ತಿರ ಯಾವುದೇ ದಾಖಲಾತಿ ಇಲ್ಲದಿದ್ದರೂ ಕೂಡ, ಅವರು ಕೋರ್ಟಿನಲ್ಲಿ ಹೋಗಿ ಸ್ಟೇ, ತೆಗೆದುಕೊಂಡಿದ್ದಾರೆ. ಅದನ್ನು ವೆಕೇಟ್ ಮಾಡಿಸುತ್ತೇವೆ ಎಂದು ಮಾನ್ಯ ಮಂತ್ರಿಗಳು ಒಮ್ಮೆ ಇಲ್ಲಿ ಒಂದು ವಾರ ಎಂದು ಹೇಳಿದರು, ಇನ್ನೊಮ್ಮೆ ಒಂದು ತಿಂಗಳು ಎಂದು ಹೇಳಿದರು, ಈಗಾಗಲೇ ಒಂದು ವರ್ಷವಾಗಿ ಎರಡನೇ ವರ್ಷದಲ್ಲಿ ನಾನಿಲ್ಲಿ ಮಾತನಾಡುತ್ತಿದ್ದೇನೆ, ಅವರ ಹತ್ತಿರ ಯಾವುದೇ ದಾಖಲಾತಿಗಳಿಲ್ಲದಿದ್ದರೂ ಅವರು ಕೋರ್ಟಿನಲ್ಲಿ ಸ್ಟೇ ತೆಗೆದುಕೊಂಡಿದ್ದಾರೆ. ಆ ಮಿನರ್ವ ಮಿಲ್‌ನವರು ಅಲ್ಲಿಯ ಜಾಗದ ಬಗ್ಗೆ ತೆಗೆದುಕೊಂಡಿರುವ ಸ್ಟೇ ಅನ್ನು ಇವತ್ತಿನವರೆಗೂ ಸರ್ಕಾರದವರು ವೆಕೇಟ್ ಮಾಡಿಸಿಲ್ಲ. ಇವತ್ತು ಬೆಂಗಳೂರು ನಗರದಲ್ಲಿ ಈ ಮನೆ ಕಂದಾಯ ಹಾಕುವಂತಹ ಒಂದು ಪರಿಸ್ಥಿತಿ ಏನಿದೆ ಅದು ವೈಜ್ಞಾನಿಕವಾಗಿ ಇಲ್ಲ. ರೆವಿನ್ಯೂ ಇಲಾಖೆಯವರೇ ಒಂದು ಪ್ಯಾರಲಲ್ ಕಾರ್ಪೊರೇಷನ್ ನಡೆಸುತ್ತಿದ್ದಾರೆ. ಯಾವುದೇ ಒಂದು ಮನೆಗೆ ಕಂದಾಯ ಫಿಕ್ಸ್ ಮಾಡಬೇಕಾದರೆ ವೈಜ್ಞಾನಿಕ ಪದ್ಧತಿ ಇರಬೇಕು. ಅದು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅದು ಇಲ್ಲ. ಯಾರಿಗೆ ಯಾವಾಗ ಹಣ ಬೇಕೆಂದು ಬಯಸುತ್ತಾರೋ ಆ ಟೈಮ್‌ನಲ್ಲಿ ಹೋಗಿ ರಿವೈಸ್ ಮಾಡುತ್ತೇವೆ ಎಂದು ಮನೆ ಮಾಲೀಕರಿಗೆ, ಅಲ್ಲಿರತಕ್ಕಂತಹ ಬಾಡಿಗೆದಾರರ ಹತ್ತಿರ ಟೆನೆಂಟ್ ಡಿಕ್ಲರೇಷನ್

ತೆಗೆದುಕೊಂಡು ಅವರಿಗೆ ಹೆರಾಸ್‌ಮೆಂಟ್ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಾನು ಸರ್ಕಾರದ ಗಮನಕ್ಕೆ ಇದನ್ನು ತರುತ್ತಿದ್ದೇನೆ. ರಾತ್ರಿ ವೇಳೆ ಹನ್ನೆರಡು ಗಂಟೆಗೆ ಒಬ್ಬ ಬೆಂಗಳೂರಿನಲ್ಲಿ ಮನೆ ಕಟ್ಟಿರುವವನಿಗೆ, ನೀನು ಮನೆಯ ಟ್ಯಾಕ್ಸ್ ಎಷ್ಟು ಕಟ್ಟುತ್ತೀಯಾ? ನಿನ್ನ ಮನೆ ವಿಸ್ತಾರವೆಷ್ಟು? ಎಂದು ಕಮೀಷನರ್‌ರವರು ಅಥವಾ ಮೇಯರ್‌ರವರು ಹೋಗಿ ಚೆಕ್ ಮಾಡಿದರೂ ಕೂಡ ಅವನ ಮನೆ ಎಷ್ಟು ಚದುರ ಇದೆ ಯಾರು ಬಾಡಿಗೆದಾರರು ಇದ್ದಾರೆ, ಎನ್ನುವಂತಹ ಎಲ್ಲಾ ಮಾಹಿತಿಗಳಿರುವ ಒಂದು ಪಾಸ್‌ಬುಕ್ ಕೊಡುವಂತಹ ಒಂದು ಪದ್ಧತಿಯನ್ನು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮಾಡಿದರೆ, ಅಲ್ಲಿ ಪ್ಯಾರಲಲ್ ಕಾರ್ಪೊರೇಷನ್ ನಡೆಯುವುದು, ಹಲವಾರು ಕೋಟಿ ರೂಪಾಯಿಗಳ ಹಣ ಸೋರಿ ಹೋಗುವುದನ್ನು ನಾವು ತಡೆಯಬಹುದು ಎಂದು ನಾನು ಅಚಲವಾಗಿ ನಂಬಿದ್ದೇನೆ. ಇವತ್ತು ಬೆಂಗಳೂರು ನಗರ ಏನು ವೇಗವಾಗಿ ಬೆಳೆಯುತ್ತಿದೆ, ಈ ರೀತಿ ನಗರ ಬೆಳೆಯುತ್ತಿರತಕ್ಕಂತಹ ದಿನಗಳಲ್ಲಿ ಅಲ್ಲಿರತಕ್ಕಂತಹ ಸೌಲಭ್ಯಗಳು ಬಹಳ ಕಡಿಮೆಯಾಗಿದೆ. 1990ರಲ್ಲಿ ನಾವೆಲ್ಲಾ ನಗರಪಾಲಿಕೆ ಸದಸ್ಯರಾಗಿದ್ದಾಗ 1,200 ಜನ ಪೌರ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಅರ್ಜಿಗಳನ್ನು ಕರೆಯಲಾಯಿತು. 40 ಸಾವಿರ ಜನ ನಿರುದ್ಯೋಗಿಗಳು, ಅವರಲ್ಲಿ ಪದವೀಧರರೂ ಕೂಡ ಪೌರ ಕಾರ್ಮಿಕರ ಕೆಲಸ ಮಾಡುತ್ತೇವೆ ಎಂದು ಅರ್ಜಿ ಹಾಕಿದರು. ಈ ವರ್ಷದ ಡಿಸೆಂಬರ್ ಬಂದರೆ ನಾವು ಎಂ.ಎಲ್.ಎ.ಗಳಾಗಿ ಮೂರು ವರ್ಷಗಳಾಗುತ್ತವೆ. ಅರ್ಜಿಗಳನ್ನು ಕರೆದು ಎಂಟು ವರ್ಷಗಳಾದರೂ ಸಹ 1200 ನಗರ ಜನ ಪಾಲಿಕೆ ಪೌರ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡಿಲ್ಲ. ಅಲ್ಲಿರತಕ್ಕಂತಹ ಆಡಳಿತ ಯಾವ ರೀತಿ ಇದೆ ಎಂಬುದಕ್ಕೆ ಇದೇ ಒಂದು ನಿದರ್ಶನ. ಎಂಟು ವರ್ಷದಲ್ಲಿ 40 ಸಾವಿರ ಜನರನ್ನು ಇಂಟರ್‌ವ್ಯೂ ಮಾಡಿ, ಬೆಂಗಳೂರು ಗುಡಿಸುವುದಕ್ಕೆ ಪೌರ ಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಆಗದಿರುವಂತಹ ನಗರಪಾಲಿಕೆ ಮತ್ತು ಸರ್ಕಾರ, ಇವತ್ತು ಬೆಂಗಳೂರು ಸುತ್ತಮುತ್ತಲೂ ಇರತಕ್ಕಂತಹ ರೆವಿನ್ಯೂಪ್ರದೇಶಗಳು, ಬಿ.ಡಿ.ಎ. ಪ್ರದೇಶಗಳನ್ನು ಸೇರಿಸಿ ಇವತ್ತು 100 ವಾರ್ಡ್‌ಗಳನ್ನು ರಚಿಸಿದೆ. ಇದಕ್ಕನುಗುಣವಾಗಿ ಮಹಾ ನಗರಪಾಲಿಕೆಯ ಚುನಾವಣೆಯೂ ಸಹಾ ನಡೆಯಿತು. ಚುನಾವಣೆ ನಡೆದು ಹೊಸ ಮಹಾನಗರಪಾಲಿಕೆ ಸದಸ್ಯರು ಬಂದು ಒಂದು ವರ್ಷವಾಗುತ್ತಾ ಇದೆ. ಯಾವುದೇ ರೀತಿಯಾಗಿ ನಗರಪಾಲಿಕೆ ಸದಸ್ಯರುಗಳು, ಅಲ್ಲಿ ಹೊರಗಡೆ ಬಂದಿರತಕ್ಕಂತಹ ಹೊಸ ಬಡಾವಣೆಗಳಲ್ಲಿ, ಬೀದಿಗೆ ಟಾರ್ ಹಾಕುವುದು, ರಸ್ತೆ ಮಾಡುವುದು, ಒಳಚರಂಡಿ, ದೀಪ, ನೀರು ಮುಂತಾದ ವ್ಯವಸ್ಥೆಗಳನ್ನು ಮಾಡಲು ಅವರಿಗೆ ಸಾಧ್ಯವಾಗುತ್ತಿಲ್ಲ. ಅವರ ಅಧಿಕಾರ ಅವಧಿ ಐದು ವರ್ಷಗಳ ಕಾಲ ಇದ್ದರೂ ಕೂಡ, ಅಲ್ಲಿ ಒಂದೊಂದು ವಾರ್ಡ್‌ಗೆ ಅಭಿವೃದ್ಧಿ ಕಾರ್ಯಗಳಾಗಾಗಿ 5-10 ಕೋಟಿ ರೂಪಾಯಿಗಳ ಹಣ ಬೇಕಾಗಿದೆ. ಅದನ್ನು ದೊರಕಿಸಿಕೊಂಡು ಆ ಕಾರ್ಯಗಳನ್ನು ಮಾಡಲು ಅವರಿಗೆ ಆಗುತ್ತಿಲ್ಲ. ಅಲ್ಲಿ ಗುಡಿಸುವುದಕ್ಕೆ ಕೆಲಸಗಾರರನ್ನು ಕಳುಹಿಸುವುದಕ್ಕೆ ಆಗುತ್ತಿಲ್ಲ. ಸರ್ಕಾರ ಇದರ ಬಗ್ಗೆ

ತೀವ್ರವಾದ ಗಮನವನ್ನು ಹರಿಸಬೇಕು. ಇವತ್ತು ನಗರದ ಒಳಚರಂಡಿ ವ್ಯವಸ್ಥೆಯನ್ನು ಬೆಂಗಳೂರು ನೀರು ಸರಬರಾಜು ಮಂಡಳಿ ನೋಡಿಕೊಳ್ಳುತ್ತಿದೆ. ಅದಕ್ಕೆ ಒಬ್ಬರು ಅಧ್ಯಕ್ಷರು ಇದ್ದಾರೆ. ಅದಕ್ಕೊಂದು ದೊಡ್ಡ ಇಲಾಖೆಯೇ ಇದೆ. ಇವತ್ತು ಬೆಂಗಳೂರಿನಲ್ಲಿ ಹಳೆಯ ಕಾಲದ ಒಳಚರಂಡಿ ಮತ್ತು ನೀರಿನ ಕೊಳವೆಗಳಿವೆ. ನಾನು ಕಳೆದ ಸಾರಿ ಕೂಡ ಹೇಳಿದ್ದೆ, ಇವತ್ತೂ ಹೇಳುತ್ತೇನೆ. ಐ.ಎ.ಎಸ್. ಅಧಿಕಾರಿಗಳನ್ನು ನೀವು ನೀರುಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಅಧ್ಯಕ್ಷರಾಗಿ ನೇಮಿಸುತ್ತೀರಿ. ಅವರು ಬರುತ್ತಾರೆ, ಬಂದು ಆರು ತಿಂಗಳೋ, ಎರಡು ವರ್ಷವೋ ಇರುತ್ತಾರೆ. ಅವರಿಗೆ ಇಲ್ಲಿಯ ಸಮಸ್ಯೆ ಅರ್ಥವಾಗುವುದಿಲ್ಲ. ಅಲ್ಲಿ ಯಾರಾದರೂ ಇಲಾಖೆಯಲ್ಲಿ ಕೆಲಸ ಮಾಡಿ, ಜ್ಯೂನಿಯರ್ ಇಂಜಿನಿಯರ್‌ರಿಂದ ಚೀಫ್ ಇಂಜಿನಿಯರ್‌ರವರೆಗೆ ಬಡ್ತಿ ಹೊಂದಿ ಕೆಲಸ ಮಾಡಿ ನಿವೃತ್ತಿಯಾದಂತಹವರು ಇರುತ್ತಾರೆ, ಅಂತಹವರನ್ನು ಮಂಡಳಿಯ ಅಧ್ಯಕ್ಷರಾಗಿ ನೇಮಿಸಬೇಕು. ಈ ಹಿಂದೆ ಪುಟ್ಟಕೆಂಪಣ್ಣ ಎಂದು ಒಬ್ಬರು, ತ್ಯಾಗರಾಜ್ ಎಂದು ಒಬ್ಬರು ಇದ್ದರು. ಇವರೆಲ್ಲಾ ಬಂದು ಮಂಡಳಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಇಂತಹವರು ಅಧ್ಯಕ್ಷರಾಗಿದ್ದರೆ ಅವರಿಗೆ ಎಲ್ಲಾ ಸಮಸ್ಯೆಯೂ ಚೆನ್ನಾಗಿ ಅರ್ಥವಾಗುತ್ತದೆ. ಅಂತಹವರನ್ನು ನೀರು ಸರಬರಾಜು ಮಂಡಳಿಗೆ ಅಧ್ಯಕ್ಷರನ್ನಾಗಿ ಮಾಡಬೇಕು. ಐ.ಎ.ಎಸ್. ಅಧಿಕಾರಿಗಳಿಂದ ಖಂಡಿತವಾಗಿಯೂ ಈ ಬೆಂಗಳೂರಿನ ನೀರಿನ ಸಮಸ್ಯೆ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಇದನ್ನು ತೀವ್ರವಾಗಿ ಗಮನಿಸಬೇಕೆಂದು ಹೇಳುತ್ತೇನೆ. ಇವತ್ತು ಬೆಂಗಳೂರು ನಗರ ಏನಾಗಿದೆ ಎಂದರೆ ಈ ದೇಶದ ಎಲ್ಲಾ ರಾಜ್ಯದ ಜನರೂ ಕೂಡ ಬೆಂಗಳೂರು ಕಡೆಯೇ ತಮ್ಮ ಗಮನ ಹರಿಸುತ್ತಿದ್ದಾರೆ. ಇಲ್ಲಿ ಮನೆ ತೆಗೆದುಕೊಳಬೇಕು, ಇಲ್ಲಿ ತೋಟ ಮಾಡಬೇಕು ಎಂದು ಆಸೆ ಪಡುತ್ತಾರೆ. ಅದು ತಪ್ಪಲ್ಲ. ಆದರೆ ಇವತ್ತು ಬೆಂಗಳೂರು ಬೆಳೆಯುವುದನ್ನು ತಡೆಯದೇ ಹೋದರೆ ಬಹಳ ಕಷ್ಟವಾಗುತ್ತದೆ. ನಿನ್ನೆ ದಿವಸ ನಾನು ಇಲ್ಲಿ ಎರಡು ಗಂಟೆಗೆ ಸಭೆ ಮುಗಿಸಿಕೊಂಡು ಮದುವೆಯೊಂದಕ್ಕೆ ಹೋಗಲು ಸಿಟಿ ಮಾರ್ಕೆಟ್‌ನಲ್ಲಿ ಒಂದೂವರೆ ಗಂಟೆ ರೋಡ್ ಜಾಮ್ ಆಗಿ ನಿಲ್ಲಬೇಕಾಯಿತು. ಮೂರೂವರೆ ಗಂಟೆಗೆ ನಾನು ಮದುವೆಗೆ ಹೋಗುವಷ್ಟರಲ್ಲಿ, ಮದುವೆಯವರು ಛತ್ರವನ್ನೇ ಖಾಲಿ ಮಾಡಿಕೊಂಡು ಹೊರಟು ಹೋಗಿದ್ದರು. ಬೆಂಗಳೂರಿನಲ್ಲಿ ಯಾವ ಬೀದಿಗೆ ಹೋದರೂ ಕೂಡ ಒಂದು ಒಂದೂವರೇ ಗಂಟೆಗಳವರೆಗೆ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಆಗುತ್ತದೆ. ಬೆಂಗಳೂರು ಬೆಳೆಯುವುದನ್ನು ತಡೆಯಬೇಕು. ಯಾರು ಪರ್ಮಿಷನ್ ಕೊಡುತ್ತಾರೆ? ಎಲ್ಲಿ ಕಟ್ಟಡಗಳು ಆಗುತ್ತಿವೆ ಎನ್ನುವುದನ್ನು ಯಾರೂ ಇವತ್ತು ಹೇಳುವುದಕ್ಕಾಗುತ್ತಿಲ್ಲ. ದಿನನಿತ್ಯ ಹೊಸ ಹೊಸ ಕಟ್ಟಡಗಳಾಗುತ್ತವೆ. ಒಂದು ಬಡಾವಣೆಗೆ ಒಮ್ಮೆ ಹೋಗಿ, ಮೂರು ತಿಂಗಳಲ್ಲಿ ಹಿಂದುರುಗಿ ಬಂದು ಅಲ್ಲಿ ನೋಡಿದರೆ ಅಲ್ಲೊಂದು ಮನೆ ಕಟ್ಟಲಾಗುತ್ತಿರುತ್ತದೆ. ಇವತ್ತು ಬೆಂಗಳೂರು ಬೆಳೆಯುವುದನ್ನು ತಡೆಯಲಿಲ್ಲ ಎಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ನಿನ್ನೆ ಮಾನ್ಯ ಶಿವರಾಜ್‌ರವರು ಬೆಂಗಳೂರು ನಗರ

ದೇವರ ಜೀವನಹಳ್ಳಿಯಲ್ಲಿ ಒಂದು ಕೊಡ ನೀರಿಗೆ 3 ರೂಪಾಯಿ ಬೆಲೆ ಎಂದು ಹೇಳಿದರು. ಬೆಂಗಳೂರು ನಗರದ ಎಲ್ಲಾಕಡೆಗೆ ಬರುವ ವರ್ಷದಲ್ಲಿ ಒಂದು ಕೊಡ ನೀರಿಗೆ 5 ರೂಪಾಯಿ ಕೊಡುವಂತಹ ಪರಿಸ್ಥಿತಿ ಬಂದು ಬಿಡುತ್ತದೆ. ಬೆಂಗಳೂರು ವೇಗವಾಗಿ ಬೆಳೆಯುವುದನ್ನು ತಡೆಯಬೇಕು. ಇಲ್ಲಿ ಎಷ್ಟು ಕಾರ್ಖಾನೆಗಳಾಗುತ್ತಿವೆ? ಪರಿಸ್ಥಿತಿ ಹೇಗಾಗುತ್ತಿದೆ ಎಂಬುದನ್ನು ಯೋಚಿಸಬೇಕು. ಬೆಂಗಳೂರು ನಗರದಲ್ಲಿ ಸುರಂಗ ಮಾರ್ಗಗಳು ಮತ್ತು ಮೇಲ್ ಸೇತುವೆಗಳನ್ನು ನಿರ್ಮಿಸಬೇಕೆಂದು ನಾವು ಎಷ್ಟೇ ಒತ್ತಾಯ ಮಾಡಿದರೂ ಕೂಡ, ಅದು ಆಗುತ್ತಿಲ್ಲ. ತಾವು ಕೂಡ ಕಳೆದ ಒಂದು ವಾರದ ಮುಂಚೆ ಹೇಳಿದಿರಿ; ಹೈದರಾಬಾದ್ ನಗರದಲ್ಲಿ ಸರ್ಕಾರವೇ ಪ್ರಮುಖ ಪಾತ್ರ ವಹಿಸಿ ಐದಾರು ಸಬ್ ವೇಗಳನ್ನು ಮತ್ತು ಫ್ಲೈ ಓವರ್‌ಗಳನ್ನು ಮಾಡುತ್ತಿದ್ದಾರೆಂದು. ಇವತ್ತು ಎಲ್ಲರೂ ಕೂಡ ಬೆಂಗಳೂರು ನಗರವನ್ನು ಭೋಗವಸ್ತುವಾಗಿ ಅನುಭವಿಸುತ್ತಿದ್ದಾರೆ. ಆದರೆ ಬೆಂಗಳೂರನ್ನು ಪ್ರೀತಿಸುವಂತಹ ಜನ ಇವತ್ತು ಕಡಿಮೆಯಾಗಿರುವ ಕಾರಣ, ಬೆಂಗಳೂರು ನಗರ ಇವತ್ತು ಬಹಳ ಕಷ್ಟಕರವಾದಂತಹ ಪರಿಸ್ಥಿತಿಯಲ್ಲಿದೆ. ಸರ್ಕಾರ ಈ ಕಡೆ ತೀವ್ರವಾದಂತಹ ಗಮನ ಹರಿಸಿ ಇವತ್ತು ಬೆಂಗಳೂರಿಗೆ ಫ್ಲೈಓವರ್‌ಗಳನ್ನು ಮತ್ತು ಸಬ್-ವೇಗಳನ್ನು ಆದಷ್ಟು ಬೇಗ ಮಾಡಲಿಲ್ಲ ಎಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಇವತ್ತು ಬೆಂಗಳೂರು ನಗರದಲ್ಲಿ ಇರತಕ್ಕಂತಹ ಶಾಸಕರುಗಳ ಒಂದು ಸಮಸ್ಯೆ ಇದೆ. ಇವತ್ತು ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂತಹ ಶಾಸಕರುಗಳಿಗೆ ಅವರಿಗೇ ಆದಂತಹ ಯೋಜನೆಗಳು ಮತ್ತು ಸರ್ಕಾರದಿಂದ ಹಲವಾರು ಕೋಟಿ ರೂಪಾಯಿಗಳು ಹಣವನ್ನು ಒದಗಿಸುವಂತಹ ಪದ್ಧತಿ ಇದೆ. ಆದರೆ ಬೆಂಗಳೂರು ನಗರದ ಶಾಸಕರುಗಳಿಗೆ ಆ ರೀತಿಯ ಯಾವುದೇ ಸೌಲಭ್ಯ ಇಲ್ಲ. ಜನರು ಈ ಕೆಲಸ ಆಗಬೇಕು, ಆ ಕೆಲಸ ಆಗಬೇಕು ಎಂದು ನಮ್ಮನ್ನು ಕೇಳುತ್ತಾರೆ. ನಾವು ಯಾವುದೇ ಒಂದು ಕೆಲಸವನ್ನು ಮಾಡಬೇಕಾದರೂ ಮಹಾನಗರ ಪಾಲಿಕೆಯ ಮೂಲಕವೇ ಹೋಗಬೇಕು. ಮಹಾ ನಗರಪಾಲಿಕೆಯಲ್ಲಿ ಕಾರ್ಪೊರೇಟರ್‌ಗಳಿದ್ದಾರೆ. ನಮಗೆ ಒಂದು ರೂಪಾಯಿ ಹಣ ಕೂಡ ಇಲ್ಲ, ಒಂದು ಗುಂಡು ಪಿನ್ ಕೂಡ ಜನರು ಕೇಳಿದರೆ ನಾವು ಕೊಡುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಬೆಂಗಳೂರು ನಗರದ ಶಾಸಕರೆಲ್ಲಾ ಹಿಂದೆ ಒಂದು ಸಲ ಮಾನ್ಯ ಮುಖ್ಯಮಂತ್ರಿಗಳ ಬಳಿ ನಿಯೋಗ ಹೋಗಿ, ಏನು ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಹಣ ಇದೆ, ಆ ಹಣದಲ್ಲಿ ನಗರಪಾಲಿಕೆ ಸದಸ್ಯರು ಹೇಳುವ ಕೆಲಸದ ಜೊತೆಗೆ, ಶಾಸಕರು ಹೇಳುವ ಕೆಲಸವನ್ನೂ ಕೂಡ ಮಾಡಬೇಕೆಂದು ಕೋರುವ ಒಂದು ಮನವಿಯನ್ನು ಕೊಟ್ಟಿದ್ದೆವು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಒಪ್ಪಿದ್ದರು. ಅದನ್ನು ಈ ವರ್ಷದಿಂದ ಜಾರಿಗೆ ತಂದರೆ, ನಗರದಲ್ಲಿ ನಾವು ಶಾಸಕರುಗಳು ಹೋಗುವಾಗ ಇಂಥಿಂಥ ಕೆಲಸವಾಗಬೇಕು ಎಂದು ಜನರು ಶಾಸಕರುಗಳಿಗೆ ಹೇಳುತ್ತಾರೆ. ಆದರೆ ಯಾವ ಹಣವನ್ನು ನಾವು ಆ ಕೆಲಸ ಮಾಡುವುದಕ್ಕೆ ಖರ್ಚು ಮಾಡಬೇಕು? ಆ ಕೆಲಸ ಯಾವ ರೀತಿ ಮಾಡಬೇಕು? ಎಂಬ ಬಗ್ಗೆ ಒಂದು ವ್ಯವಸ್ಥೆ ಈಗಿಲ್ಲ. ಇದರ ಕಡೆಗೆ ಮಾನ್ಯ ಮುಖ್ಯಮಂತ್ರಿಗಳು ತೀವ್ರವಾದಂತಹ

ಗಮನವನ್ನು ಹರಿಸಿ, ಬೆಂಗಳೂರು ನಗರದ ಶಾಸಕರುಗಳಿಗೆ ಸ್ವಲ್ಪ ಹಣ ಕೊಡಿಸಬೇಕು. ನೀವು ಹೊಸದಾಗಿ ಏನಾದರೂ ಎಂ.ಪಿ.ಗಳಿಗೆ ಕೊಡುವ ರೀತಿಯಲ್ಲಿ ಒಂದು ಕೋಟಿ ರೂಪಾಯಿಗಳು ಕೊಡಿ ಎಂದು ನಾವು ಕೇಳಿದರೆ, ಮಾನ್ಯ ಮುಖ್ಯಮಂತ್ರಿಗಳು ಖಂಡಿತವಾಗಿಯೂ ಅದಕ್ಕೆ ಒಪ್ಪುವುದಿಲ್ಲ ಎಂದು ನನಗೆ ಗೊತ್ತು. ಇರುವ ಹಣದಲ್ಲೇ ನಮಗೂ ಸ್ವಲ್ಪ ಏನಾದರೂ ಕೆಲಸ ಮಾಡುವುದಕ್ಕೆ, ನಾವು ಹೇಳುವ ಕೆಲಸವನ್ನು ನಗರಪಾಲಿಕೆ ಮಾಡುವ ರೀತಿಯಲ್ಲಿ ಒಂದು ವ್ಯವಸ್ಥೆಯನ್ನು ದಯವಿಟ್ಟು ಮಾಡಬೇಕು ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಬೆಂಗಳೂರು ನಗರದ ವಿಜಯ ಕಾಲೇಜ್ ಪಕ್ಕದಲ್ಲಿ ಒಂದು ದೊಡ್ಡ ಕೊಳಚೆ ಪ್ರದೇಶ ಇತ್ತು. ಸುಪ್ರಿಂ ಕೋರ್ಟ್‌ಗೆ ಹೋಗಿ ಆ ಕೊಳಚೆ ಪ್ರದೇಶವನ್ನು ಖಾಲಿ ಮಾಡಿಸಲಾಯಿತು. ಖಾಲಿ ಮಾಡಿಸಿಯಾದ ಮೇಲೆ ಆ ಜಾಗ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದೆ. ಅದು 50-60 ಕೋಟಿ ರೂಪಾಯಿ ಬೆಲೆ ಬಾಳುವ ದೊಡ್ಡ ಆಸ್ತಿಯಾಗಿದೆ. ಆ ಆಸ್ತಿ ಒಡೆತನದ ಬಗ್ಗೆ ಕೆಲವು ನಗರಪಾಲಿಕೆ ಸದಸ್ಯರುಗಳೂ ಕೂಡ ನ್ಯಾಯಾಲಯಕ್ಕೆ ಹೋಗಿದ್ದರು. ನ್ಯಾಯಾಲಯ ಒಂದು ಆದೇಶವನ್ನು ಕೊಟ್ಟು, ಹೆಚ್.ಯು.ಡಿ. ಕಾರ್ಯದರ್ಶಿಗಳು ಇದನ್ನು ಇತ್ಯರ್ಥ ಮಾಡಬೇಕೆಂದು ಹೇಳಿತು. ಆನಂತರ ಹೆಚ್.ಯು.ಡಿ. ಕಾರ್ಯದರ್ಶಿಗಳು ಆ ಜಾಗವನ್ನು ಒಂದು ಪ್ರೈವೇಟ್ ಪ್ರಾಪರ್ಟಿ ಎಂದು ಹೇಳಿದ್ದಾರೆ. 50-60 ಕೋಟಿ ರೂಪಾಯಿಗಳು ಬೆಲೆ ಬಾಳುವ, ನಗರಪಾಲಿಕೆಯ ಸೊತ್ತು ಆಗಿರತಕ್ಕಂತಹ ಆ ಜಾಗವನ್ನು ಸರ್ಕಾರ ಕಾಪಾಡಿಕೊಳ್ಳಬೇಕು. ಯಾರೋ ಒಬ್ಬ ಅಧಿಕಾರಿ ಅದು ಖಾಸಗಿ ಸೊತ್ತು ಎಂದು ಬರೆದ ತಕ್ಷಣ ಅದು ಅವರ ಸೊತ್ತಾಗುವುದಿಲ್ಲ. ಸಿಟಿ ಸರ್ವೆಯಲ್ಲಿ ಕೂಡ ಆ ಜಾಗವನ್ನು ನಗರಪಾಲಿಕೆ ಆಸ್ತಿ ಎಂದೇ ಘೋಷಣೆ ಮಾಡಿದ್ದಾರೆ. ಆದುದರಿಂದ, ಸರ್ಕಾರ ಆ ಸೊತ್ತನ್ನು ಕಾಪಾಡಬೇಕು. ಅದು ಖಾಸಗಿ ಆಸ್ತಿ ಎಂಬ ತಪ್ಪಾದ ಮಾಹಿತಿಯನ್ನು ಕೊಟ್ಟು ಆ ಸೊತ್ತನ್ನು ಪರಭಾರೆ ಮಾಡುವಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯವನ್ನು ಮಾಡುತ್ತೇನೆ. ಇನ್ನು ಪೊಲೀಸ್ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಮಾತ್ರ ನಾನು ಮಾತನಾಡಲಿಕ್ಕೆ ಇಷ್ಟ ಪಡುತ್ತೇನೆ. ನಾನು ಕಳೆದ ಬಾರಿ ಮಾತನಾಡುವಾಗ ಮಾನ್ಯ ಗೃಹ ಸಚಿವರ ಹತ್ತಿರ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೇ, ನಾನು ನಿನ್ನೆಯಿಂದ ಅಬ್ಸರ್ವ್ ಮಾಡುತ್ತಿದ್ದೇನೆ. ಬೆಂಗಳೂರು ಮಹಾನಗರ ಪಾಲಿಕೆ, ಬಿ.ಡಿ.ಎ., ಬಿ.ಎಂ.ಆರ್.ಡಿ.ಎ ಮುಂತಾದವುಗಳಿಗೆ ಸಂಬಂಧಿಸಿದ ಚರ್ಚೆಗಳಾಗುತ್ತಿವೆ. ಆದರೆ ಇದಕ್ಕೆ ಸಂಬಂಧಪಟ್ಟಂತಹ ಸರ್ಕಾರದ ಮಾನ್ಯ ಮಂತ್ರಿಗಳೇ ಸದನದಲ್ಲಿ ಇಲ್ಲ. ಮಹಾನಗರ ಪಾಲಿಕೆ, ಬಿ.ಡಿ.ಎ. ಅಥವಾ ಬಿ.ಎಂ.ಆರ್.ಡಿ.ಎ.ಗೆ ಸಂಬಂಧಪಟ್ಟಂತಹ ಒಬ್ಬ ಅಧಿಕಾರಿಗಳೂ ಕೂಡ ಇಲ್ಲ. ನಾವು ನೀವು ಬರುವುದಕ್ಕೆ ಮುಂಚೆ ಏನೇನೋ

ವಿಚಾರಗಳನ್ನು ಮಾತನಾಡಿದೆವು. ಅದನ್ನು ಗುರುತು ಮಾಡಿಕೊಳ್ಳುವವರು ಯಾರೂ ಇಲ್ಲ. ನಾವು ಸುಮ್ಮನೆ ಗಂಟಲು ನೋಯಿಸಿಕೊಂಡು ಹೇಳಿದೆವು, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು: ನಿನ್ನೆ ಮಾನ್ಯ ಮಂತ್ರಿಗಳೂ ಇದ್ದರು ಇವತ್ತು ಕಾರ್ಪೊರೇಷನ್ ಕಮಿಷನರ್‌ರವರೂ ಕೂಡ ಸದನದಲ್ಲಿದ್ದರು. ಈಗಲೂ ಹೆಚ್.ಯು.ಡಿ ಕಾರ್ಯದರ್ಶಿಗಳು ಅಧಿಕಾರಿಗಳ ಗ್ಯಾಲರಿಯಲ್ಲಿದ್ದಾರೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ್ದೆಲ್ಲವನ್ನೂ ನಾನು ನೋಟ್ ಮಾಡಿಕೊಂಡಿರುತ್ತೇನೆ. ಅದನ್ನು ನಾನು ಸಂಬಂಧಿಸಿದ ಮಾನ್ಯ ಮಂತ್ರಿಗಳಿಗೆ ಕೊಡುತ್ತೇನೆ.

ಶ್ರೀ ಬಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೇ, ನಾನು ಮಹಾನಗರಪಾಲಿಕೆಯ ಮೇಯರ್ ಮತ್ತು ಕಮೀಷನರ್‌ರವರ ಜಗಳದ ಬಗ್ಗೆ ಹೇಳಿದಾಗ ಮಾನ್ಯ ಮಂತ್ರಿಗಳು ಇರಲಿಲ್ಲ. ಅಲ್ಲಿ ನಗರಸಭೆಯು ನಡೆಯುತ್ತಿಲ್ಲ, ಹೊಡೆದಾಟಗಳು ನಡೆಯುತ್ತವೆ ತಾವು ದಯವಿಟ್ಟು ಆ ಸಮಸ್ಯೆಯನ್ನು ಬಗೆಹರಿಸಬೇಕು ಇಲ್ಲ ಎಂದರೆ, ಬೆಂಗಳೂರು ಜನರು ನರಳುತ್ತಾರೆ. ಮೇಯರ್‌ರವರು ಮಾಡುವಂತಹ ಆದೇಶವನ್ನು ಕಮೀಷನರ್ ಕೇಳುತ್ತಿಲ್ಲ. ಬಹು ಪಾಲು ನಗರ ಪಾಲಿಕೆ ಸದಸ್ಯರು ಆ ಕಮೀಷನರ್ ಮೇಲೆ ನಂಬಿಕೆಯನ್ನು ಕಳೆದುಕೊಂಡಿದ್ದಾರೆ. ಯಾವುದೇ ಸರ್ಕಾರ ಅಲ್ಲಿ ಕಮೀಷನರ್‌ನ್ನು ಹಾಕಬೇಕಾದರೆ ಅದು ಆ್ಯಕ್ಟ್‌ನಲ್ಲಿಯೂ ಕೂಡ ಇದೆ. ಅಲ್ಲಿ ಬರತಕ್ಕಂತಹ ಮೇಯರ್‌ರವರು ನಾಲ್ಕೂ ಐದು ಜನ ಕಮೀಷನರ್ ಹೆಸರನ್ನು ಕೊಟ್ಟು ಯಾರನ್ನು ಹಾಕಬೇಕೆಂದು ಕೇಳುವಂಥದ್ದು ಆ್ಯಕ್ಟ್‌ನಲ್ಲಿಯೂ ಇದೆ. ದಯವಿಟ್ಟು ಮಹಾನಗರಪಾಲಿಕೆ ಸಮಸ್ಯೆಯನ್ನು ಬಗೆಹರಿಸಬೇಕು. ಇಲ್ಲ ಎಂದರೆ ಬೆಂಗಳೂರಿನಲ್ಲಿರತಕ್ಕಂತಹ 60-70 ಲಕ್ಷ ಜನರ ಸಮಸ್ಯೆಗಳು ಬಹಳ ಇದೆ. ಅಲ್ಲಿ ಕೆಲಸವಾಗುತ್ತಿಲ್ಲ. ದಯವಿಟ್ಟು ಆ ಸಮಸ್ಯೆಯನ್ನು ಬಗೆಹರಿಸಿ ಅಲ್ಲಿ ಮಹಾ ನಗರಪಾಲಿಕೆಯ ಚುನಾಯಿತ ಪ್ರತಿನಿಧಿಗಳು ಎಲ್ಲಾ ಜನರ ಕೆಲಸವನ್ನು ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿ ಪೋಲೀಸ್ ಇಲಾಖೆಯ ಬಗ್ಗೆ ನಾನು ಕಳೆದ ಸಾರಿ ಮಾತನಾಡುವಾಗ ಮಾನ್ಯ ಸಚಿವರಿಗೆ ಒಂದು ಸಲಹೆಯನ್ನು ಕೊಟ್ಟಿದ್ದೆ. ಬೆಂಗಳೂರು ನಗರದಲ್ಲಿ ಯಾರಿಗೆ ಬೇಕಾದರೂ ಯಾರೂ ಬೇಕಾದರೂ ಮನೆಗಳನ್ನು ಬಾಡಿಗೆಗೆ ಕೊಡುತ್ತಾರೆ. 500 ರೂಪಾಯಿ ಬಾಡಿಗೆ ಇರತಕ್ಕಂತಹ ಮನೆಗೆ 5,000 ಬಾಡಿಗೆಯನ್ನು ಕೊಟ್ಟರೆ ಯಾರಿಗೆ ಬೇಕಾದರೂ ಮನೆಯನ್ನು ಬಾಡಿಗೆಗೆ ಕೊಡುತ್ತಾರೆ. ಆದರೆ ಹೈದ್ರಾಬಾದ್‌ನಲ್ಲಿಯೋ, ಬೊಂಬಾಯಿಯಲ್ಲಿಯೋ ಮದ್ರಾಸ್‌ನಲ್ಲಿ ಬೇರೆ ರಾಜ್ಯದಿಂದ ಹೋಗಿ ಒಂದು ಮನೆಯನ್ನು ಬಾಡಿಗಗೆ ಪಡೆಯುವುದಕ್ಕೆ ಆಗಲ್ಲ. ಆ ರೀತಿಯಾದಂತಹ ಪರಿಸ್ಥಿತಿಯೂ ಇದೆ. ಈ ದೇಶದಲ್ಲಿ ಯಾವ್ಯಾವ ಸಂಘಟನೆಗಳನ್ನು ಬ್ಯಾನ್ ಮಾಡಿದೆಯೋ ಆ

ಸಂಘಟನೆಗಳೆಲ್ಲ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದೆ ಎಂದು ನಾನು ಹಿಂದೆ ಮಾತನಾಡುವಾಗ ಹೇಳಿದ್ದೆ. ನಾವು ಯಾರಿಗೆ ಬೇಕಾದರೂ ಬಾಡಿಗೆಗೆ ಕೊಡುತ್ತೇವೆ ಎನ್ನುವಂತಹ ವಾದ ಇವತ್ತು ಆಗಿದೆ. ಜಯಪೂರಿಯ ಎನ್ನುವಂತಹ ವ್ಯಾಪಾರಿಯನ್ನು ಕಿಡ್‌ನ್ಯಾಪ್ ಮಾಡಿ ಅವರು ಯಾರು ಎಂದರೆ ಬೆಂಗಳೂರಿನ ಹೊರ ವಲಯದಲ್ಲಿ ಮನೆಯನ್ನು ಬಾಡಿಗೆ ಕೊಟ್ಟಂತಹ ವಿಚಾರ ನಿಜವಾಗಿದೆ. ಅದೇ ರೀತಿಯಲ್ಲಿ ಇನ್ನೊಂದು ವಿಚಾರವನ್ನು ಗೃಹ ಸಚಿವರ ಗಮನಕ್ಕೆ ತಂದಿದ್ದೆ. ಯಾವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹೊರ ರಾಜ್ಯಗಳಿಂದ ಬರತಕ್ಕಂತಹ ವಾಹನಗಳನ್ನು ಅಲ್ಲಿ ಸ್ಟೇಟ್ ಕಂಟ್ರೋಲ್ ಇರತಕ್ಕಂತಹ ವೈರ್‌ಲೆಸ್ ಇಟ್ಟು ಅಲ್ಲಿ 24 ಗಂಟೆ ಕೆಲಸ ಮಾಡಬೇಕು. ಹೊರ ರಾಜ್ಯಗಳಿಂದ ಬರತಕ್ಕಂತಹ ವಾಹನಗಳನ್ನು ತಪಾಸಣೆ ಮಾಡಬೇಕೆಂದು ಸಚಿವರಿಗೆ ಸಹ ಹೇಳಿದ್ದೆ. ಸಚಿವರು ನಾಕಾಬಂದಿಯನ್ನು ಮಾಡುತ್ತೇವೆ ಸಾಕು ಎಂದು ಹೇಳಿದರು. ನೆನ್ನೆಯ ದಿವಸ ಕೂಡ ಒಂದು ಮಗುವನ್ನು ಬೆಂಗಳೂರಿನಲ್ಲಿ ಅಪಹರಣ ಮಾಡಿದ್ದಾರೆ. ಆ ಜೈಪೂರಿಯ ಎನ್ನುವಂತಹ ಏನು ಘಟನೆ ನಡೆಯಿತು ಅವರು ಉತ್ತರ ಪ್ರದೇಶ, ಬಿಹಾರ, ಪಂಜಾಬ್‌ನಿಂದ ಬರತಕ್ಕಂತಹ ಜನರು. ಇವತ್ತು ಬೆಂಗಳೂರಿನಲ್ಲಿ ರಾತ್ರಿ 10 ಗಂಟೆಗೆ ಓಡಾಡಿದರೆ ಗೊತ್ತಾಗುತ್ತದೆ. ಆ ಜನರು ಯಾರು? ಅಂಥ ಮುಖಗಳನ್ನು ನಾವು ಬೆಂಗಳೂರಿನಲ್ಲಿ ನೋಡಿಯೇ ಇಲ್ಲ. ಆ ರೀತಿಯಾದಂತಹ ಭಯಾನಕ ಪರಿಸ್ಥಿತಿಯು ಬೆಂಗಳೂರಿನಲ್ಲಿ ಇದೆ. ಪೊಲೀಸ್ ಇಲಾಖೆಯಲ್ಲಿ ಆ ಜೈಪೂರಿಯ ಕೇಸ್‌ನಲ್ಲಿ ಪೊಲೀಸ್‌ನವರು ರಾತ್ರಿ ಹಗಲು ಎಲ್ಲರೂ ಸಹ ಕೆಲಸ ಮಾಡಿ ಎಲ್ಲರೂ ಅಭಿನಂದಿಸುವಂತಹ ಒಳ್ಳೆಯ ಕೆಲಸವನ್ನು ಮಾಡಿ, ಪೊಲೀಸ್ ವ್ಯವಸ್ಥೆಯ ಮೇಲೆ ನಂಬಿಕೆ ಹಾಳಾಗದಂತಹ ರೀತಿಯಲ್ಲಿ ಒಳ್ಳೆಯ ಕೆಲಸವನ್ನು ಮಾಡಿ ಹಿಡಿದಿದ್ದಾರೆ. ಈ ರೀತಿಯಾದಂತಹ ಮಾಫಿಯ ಗ್ಯಾಂಗ್‌ಗಳು ಬೆಂಗಳೂರಿನಲ್ಲಿ ದಿನನಿತ್ಯ ಜಾಸ್ತಿಯಾಗುತ್ತಿದೆ. ಆದುದರಿಂದ ಹೈವೇಗಳಲ್ಲಿ ಸ್ಟೇಟ್ ವೈರ್‌ಲೆಸ್ ಕಂಟ್ರೋಲ್‌ಗಳು ಇರತಕ್ಕಂತಹ ವಾಹನಗಳನ್ನು ನಿಲ್ಲಿಸಿ, ಹೊರ ರಾಜ್ಯಗಳಿಂದ ಬರತಕ್ಕಂತಹ ವಾಹನಗಳನ್ನು ತಪಾಸಣೆಯನ್ನು ಮಾಡಿದರೆ ಸಾಕು ಅವರುಗಳು ಇಲ್ಲಿಗೆ ಬರತಕ್ಕಂಥದ್ದು ಕಡಿಮೆಯಾಗುತ್ತದೆ. ಆ ಕೆಲಸವನ್ನು ಇವತ್ತು ಗೃಹ ಸಚಿವರು ಮಾಡಬೇಕಾಗಿದೆ. ನಾನು ಪೋಲೀಸರ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಸನ್ಮಾನ್ಯ ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ನಾನು ಅವರಿಗೆ ಒಂದು ಪತ್ರವನ್ನು ಬರೆದಿದ್ದೆ. ನನ್ನ ಕ್ಷೇತ್ರದಲ್ಲಿ ಪೊಲೀಸ್ ಕ್ವಾಟರ್ಸ್‌ಗಳಿವೆ ಅವುಗಳು ಕೊಳಚೆ ಪ್ರದೇಶಕ್ಕಿಂತಲೂ ಬಹಳ ಕಡಿಮೆಯಾಗಿದೆಂದು ಬರೆದಿದ್ದೆ. ಆದರೆ ಅವರು ಮಾನ್ಯ ಸಿಂಧ್ಯರವರಿಗೆ ಪತ್ರವನ್ನು ಬರೆದು ಅದನ್ನು ಇನ್ಸ್‌ಪೆಕ್ಷನ್ ಮಾಡಿ ಎಂದು ಹೇಳಿದ್ದರು. ಸಿಂಧ್ಯರವರು ಸಹ ಹಲವಾರು ಬಾರಿ ತಪಾಸಣೆಗಾಗಿ ಹೋಗೋಣವೆಂದರು. ಆದರೆ ಅಷ್ಟರಲ್ಲಿ ಅವರಿಗೆ ಇಲಾಖೆಯು ಬದಲಾವಣೆಯಾಯಿತು. ಇವತ್ತು ನಮ್ಮ ಆನಂದರಾವ್ ಸರ್ಕಲ್‌ನಲ್ಲಿ ಪೋಲೀಸ್ ಕ್ವಾಟರ್ಸ್‌ನಲ್ಲಿ 300 ಮನೆಗಳಿವೆ. ಅಲ್ಲಿ ಇಪ್ಪತ್ತು ವರ್ಷಗಳಿಂದ ಆ ಮುನ್ನೂರು ಮನೆಗಳಲ್ಲಿ ಮನುಷ್ಯರು ಮಲಮಾಡಲಿಕ್ಕೆ ಮನೆಯಿಂದ

ಹೊರಗಡೆ ಹೋಗಿಯೇ ಇಲ್ಲ. ಅವನು ಅಲ್ಲಿಯೇ ಗುಂಡಿಯನ್ನು ತೋಡಿಕೊಂಡು ಅಲ್ಲಿ ಮಾಡುತ್ತಾರೆ. ಅಲ್ಲಿ ವಾಸನೆ ತುಂಬಾ ಇದೆ. ಮನುಷ್ಯ ವಾಸ ಮಾಡುವುದಕ್ಕೆ ಆಗುವುದಿಲ್ಲ. ನಾನು ರಾಜಾಜಿನಗರ ಶಾಸಕರು ಗೃಹ ಸಚಿವರು ಅವರ ಕ್ಷೇತ್ರದಲ್ಲಿರತಕ್ಕಂತಹ ಪೋಲೀಸ್ ಕ್ವಾಟ್ರರ್ಸ್‌ಗಳನ್ನು ನೋಡುವುದಕ್ಕೆ ಕರೆದುಕೊಂಡು ಹೋದಾಗ ಏನಾದರೂ ಕೆಲಸವಾಗುತ್ತದೆಂದು ನಾನು ಸಹ ನನ್ನ ಕ್ಷೇತ್ರಕ್ಕೆ ಕರೆದುಕೊಂಡು ಹೋಗಬೇಕೆಂದು ತಿಳಿದುಕೊಂಡಿದ್ದೆ. ಆದರೆ ಸುರೇಶ್ ಕುಮಾರ್ ಹೇಳಿದರು ಜನರಿಂದ ಹಣವನ್ನು ವಸೂಲು ಮಾಡಿ ಕ್ವಾಟರ್ಸ್‌ನ್ನು ರಿಪೇರಿ ಮಾಡಿಸಿ ಸೌಕರ್ಯವನ್ನು ಮಾಡಿಕೊಡಿ ಎಂದು ಮಂತ್ರಿಗಳು ಹೇಳಿದರು ಎಂದು. ಆಗ ನಾವು ಅವರನ್ನು ಕರೆದುಕೊಂಡು ಹೋಗುವಂತಹ ಆಸೆಯನ್ನು ಬಿಟ್ಟು ಬಿಟ್ಟೆ. ಪೋಲೀಸ್ ಇಲಾಖೆಯಲ್ಲಿ ಇವತ್ತು ಏನು ಅವರು ಕೆಲಸವನ್ನು ನಮ್ಮ ರಾಜ್ಯದಲ್ಲಿ 45,000 ಜನ ಪೊಲೀಸರನ್ನು ಇಟ್ಟುಕೊಂಡು 5 ಕೋಟಿ ಜನರನ್ನು ನಾವು ಕಾಪಾಡುತ್ತೇವೆನ್ನುವುದು ಬಹಳ ಕಷ್ಟದ ಕೆಲಸ. ಇವತ್ತು ಉನ್ನತ ಅಧಿಕಾರಿಗಳ ಸಂಖ್ಯೆ ಹೆಚ್ಚು ಆಗುತ್ತಿದೆ. ಅಧಿಕಾರಿಗಳ ಸಂಖ್ಯೆಯು ಹೆಚ್ಚಾದಂತೆ ಪೋಲೀಸ್ ಪೇದೆಗಳನ್ನು ಪೋಲೀಸ್ ಸ್ಟೇಷನ್‌ಗಳನ್ನು ಹೆಚ್ಚು ಮಾಡಿದರೆ ಮಾತ್ರ ಜನರ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಜನರಿಗೆ ರಕ್ಷಣೆಯನ್ನು ಕೊಡುವುದಕ್ಕೆ ಮಾತ್ರ ಸಾಧ್ಯ ಎನ್ನುವುದನ್ನು ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇನೆ. ಪೋಲೀಸ್ ವಸತಿ ಗೃಹಗಳನ್ನು ಹೊಸದಾಗಿ ಕಟ್ಟುವಂತಹ ಯೋಜನೆ ಇದೆ ಎಂದು ಹೇಳಿದರು. ಇದು ಬಹಳ ಸಂತೋಷ. ಈಗಾಗಲೇ ಇರತಕ್ಕಂತಹ ಮನೆಗಳನ್ನು ಮನುಷ್ಯರು ವಾಸ ಮಾಡುವಂತೆಯಾದರೂ ಸಹ ಮಾಡಿಕೊಡಿ. ಗುಡಿಸಲುಗಳಿಗಿಂತಲೂ ಕಡೆಯಾಗಿದೆ. ಅಲ್ಲಿರತಕ್ಕಂತಹವರಿಗೆ ಯಾವುದೇ ವಿಧವಾದ ಮೂಲಭೂತ ಸೌಕರ್ಯಗಳಿಲ್ಲ. ಅದನ್ನು ಮಾಡಿಕೊಟ್ಟಾಗ ಮಾತ್ರ ಅವರು ಅಲ್ಲಿ ನೆಮ್ಮದಿಯಾದಂತಹ ಜೀವನವನ್ನು ಮಾಡುವುದಕ್ಕೆ ಸಾಧ್ಯ ಎನ್ನುವಂತಹ ಮಾತನ್ನು ಹೇಳಿ ಪೊಲೀಸರಿಗೆ ಬೆಳಗ್ಗೆಯಿಂದ ಹಿಡಿದು ರಾತ್ರಿಯವರೆಗೆ ಇರುವಂತಹ ಕೆಲಸವನ್ನು ಬದಲಾವಣೆ ಮಾಡಿ ಯಾವ ರೀತಿಯಲ್ಲಿ ಕಾರ್ಖಾನೆಗಳಲ್ಲಿ ಮತ್ತು ಕಛೇರಿಗಳಲ್ಲಿ 8 ಗಂಟೆಗಳ ಕಾಲ ಕೆಲಸ ಮಾಡುವಂಥದ್ದು ಇದೆ. ಆ ರೀತಿಯಲ್ಲಿ ಪೊಲೀಸರಿಗೆ ಕೆಲಸವನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಅವರು ಸಾರ್ವಜನಿಕರ ಹತ್ತಿರ ಶಿಸ್ತಿನಿಂದ, ಒಳ್ಳೆಯ ಸಂಸ್ಕೃತಿಯಿಂದ ನಡೆದುಕೊಳ್ಳುವಂತಹ ಅವಕಾಶವು ಬರುತ್ತದೆ. ಅವರಿಗೆ 16 ಗಂಟೆ 20 ಗಂಟೆ ಕೆಲಸವನ್ನು ಮಾಡಿದರೆ, ಆ ಕೋಪವನ್ನಲ್ಲ ಜನರ ಮೇಲೆ ತೋರಿಸುತ್ತಾರೆ. ಆದುದರಿಂದ, ಪೊಲೀಸ್ ಇಲಾಖೆಯನ್ನು ಸುಧಾರಣೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಂಡು, ಇನ್ನು ಹಲವಾರು ವಿಚಾರಗಳನ್ನು ಮಾತನಾಡಬೇಕೆಂದು ಬರೆದು ಇಟ್ಟುಕೊಂಡರೂ ಸಹಿತ ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದಕಾರಣ ಇಷ್ಟು ಅವಕಾಶವನ್ನು ಮಾಡಿಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

+ ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೇ, ಇವತ್ತು 44 ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿರುವಂತಹ ಸಂದರ್ಭದಲ್ಲಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರತಕ್ಕಂತಹ ಮತ್ತು ರಾಜ್ಯಕ್ಕೆ ಸಂಬಂಧಪಟ್ಟಿರತಕ್ಕಂತಹ ತಮ್ಮ ಗಮನಕ್ಕೆ ತರುವುದರ ಜೊತೆಗೆ ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಸಣ್ಣ ನೀರಾವರಿ ಇಲಾಖೆಯಲ್ಲಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಎರಡು ಮುಕ್ಕಾಲು ವರ್ಷದ ಒಂದು ಆಡಳಿತದ ವ್ಯವಸ್ಥೆಯಲ್ಲಿ ನನಗೆ ತಿಳಿದಮಟ್ಟಿಗೆ ಅನೇಕ ಸಾರಿಯೂ ಸಹ ಜಿಲ್ಲಾ ಪಂಚಾಯ್ತಿಯ ಮುಖಾಂತರ ಆಗಿರಬಹುದು ಅಥವಾ ಸಣ್ಣ ನೀರಾವರಿ ಇಲಾಖೆಯ ಮುಖಾಂತರವಾಗಿರಬಹುದು. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೆರೆ ಕಟ್ಟೆಗಳ ದುರಸ್ತಿಗಾಗಿ ಬೇಡಿಕೆಯನ್ನು ಇಟ್ಟರೂ ಸಹ ಇಲ್ಲಿಯವರೆಗೆ ಈ ಸರ್ಕಾರ ನನ್ನ ಕಾಗದ ಪತ್ರಗಳಿಗೆ ಮನ್ನಣೆಯನ್ನು ನೀಡದೇ ಇರುವಂಥದ್ದು ವಿಷಾದನೀಯವಾದಂತಹ ಸಂಗತಿಯಾಗಿದೆ. ಇವತ್ತು ಉದಾಹರಣೆಗೆ ಹೇಳುವುದಾದರೆ ಪ್ರಾಯಶಃ ರಾಜ್ಯದ ಭೂಪಟದಲ್ಲಿ ಚಿಕ್ಕಮಗಳೂರು ಕ್ಷೇತ್ರವೇ ಇಲ್ಲವೆಂದು ಅನ್ನಿಸುತ್ತದೆ. ಕಾರಣ ಏನೆಂದರೆ ಅನೇಕ ಇಲಾಖೆಗಳಲ್ಲಿ ಇದರ ಬಗ್ಗೆ ಯಾವುದೇ ರೀತಿಯ ಮಾಹಿತಿಯಾಗಲಿ, ನನ್ನ ಪತ್ರಕ್ಕೆ ಉತ್ತರವನ್ನು ಕೊಡುವಂತಹ ಸೌಜನ್ಯವಾಗಲಿ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳಾಗಲಿ, ಮಂತ್ರಿಗಳಾಗಲಿ ತೋರಿಸದೇ ಇರುವಂತಹ ವಿಚಾರ ಬಹಳ ಮನಸ್ಸಿಗೆ ನೋವು ಆಗುತ್ತದೆ. ಇವತ್ತು ತಮ್ಮ ಮುಖಾಂತರವಾಗಿ ಮಾನ್ಯ ಸಣ್ಣ ನೀರಾವರಿ ಇಲಾಖೆಗಳ ಮಂತ್ರಿಗಳಿಗೆ ಕೇಳುವಂತಹ ವಿಚಾರ ಎಂದರೆ, ಚಿಕ್ಕಮಗಳೂರು ಕ್ಷೇತ್ರದ ಕೆಲವು ಪಟ್ಟಣದ ಮಧ್ಯ ಭಾಗದಲ್ಲಿ ಹಾದುಹೋಗುವಂತಹ ಕಾಲುವೆಗಳ ದುರಸ್ತಿಗಾಗಿ ನನ್ನ ಬೇಡಿಕೆ, ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳ ಮುಖಾಂತರ ಒದಗಿಸಿದ್ದಾಗಿಯೂ ಸಹ ಇಲ್ಲಿಯವರೆಗೆ ಆ ವಿಚಾರ ಏನು ಆಯಿತು ಎನ್ನುವಂಥದ್ದು ಗೊತ್ತಿಲ್ಲ. ನನಗೆ ತಿಳಿದ ಹಾಗೆ 49 ಲಕ್ಷ ರೂಪಾಯಿಗಳ ಒಂದು ಅಂದಾಜು ಪಟ್ಟಿಯನ್ನು ತಯಾರುಪಡಿಸಿ ರಾಜ್ಯ ಸರ್ಕಾರಕ್ಕೆ ನೀಡಿದ್ದರೂ ಸಹ ಅದರ ಬಗ್ಗೆ ಇಲ್ಲಿಯವರೆಗೆ ಯಾವುದೇ ಚಕಾರವನ್ನು ಎತ್ತಿಲ್ಲ. ಇದರ ಜೊತೆಗೆ ಇವತ್ತು ನಾವು ರಾಜಕೀಯವಾಗಿ ಇರಬಹುದು, ಈ ರಾಜ್ಯದ ಹಿತವನ್ನು ಕಾಪಾಡುವಂತಹ ಅಭಿವೃದ್ಧಿ ಕೆಲಸದ ಬಗ್ಗೆ ಬಹಳಷ್ಟು ವಿಚಾರಗಳನ್ನು ನಾವು ಮಾತನಾಡುತ್ತೇವೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಮಳಲೂರು ಏತ ನೀರಾವರಿ ಯೋಜನೆಯನ್ನು ಹಮ್ಮಿಕೊಳ್ಳುವಂತೆ 1992-93ನೇ ಸಾಲಿನಲ್ಲಿ ಸರ್ಕಾರ ಅನುಮತಿಯನ್ನು ನೀಡಿದ್ದರೂ ಸಹ ನಾವು ಇವತ್ತು 1997ನೇ ಸಾಲಿನಲ್ಲಿದ್ದರೂ ಸಹ ಆ ಯೋಜನೆಯು ಏನಾಯಿತು, ಆ ಬಗ್ಗೆ ಇದ್ದ ಕಡತ ಎಲ್ಲಿದೆ ಅದರ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದರ ಬಗ್ಗೆ ನನಗೆ ಇವತ್ತಿನವರೆಗೂ ಸಹ ಮಾಹಿತಿ ಇಲ್ಲ. ಈ ಮಳಲೂರು ಏತ ನೀರಾವರಿ ಯೋಜನೆಯಿಂದ 1200 ಎಕರೆ ಜಮೀನಿಗೆ ನೀರಾವರಿಯಾಗುತ್ತದೆಂದು ಅಧಿಕಾರಿಗಳು ಮಾಹಿತಿಯನ್ನು ಕೊಟ್ಟಿದ್ದಾರೆ. ಇದು ನಮ್ಮ ಕಾಲದಲ್ಲಿ ಇದರ ಅಂದಾಜು ವೆಚ್ಚ 169 ಲಕ್ಷ ರೂಪಾಯಿ ಆಗುತ್ತದೆ ಎನ್ನುವಂತಹ

ಪ್ರಸ್ತಾವನೆಯು ಸರ್ಕಾರದ ಮುಂದೆ ಇತ್ತು. ಬಜೆಟ್‌ನಲ್ಲಿ ಅನುಮತಿಯನ್ನು ಕೊಟ್ಟು, ಸರ್ಕಾರಿ ಆದೇಶವನ್ನು ಹೊರಡಿಸಿರುವಂತಹ ವಿಚಾರವನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಯನ್ನು ಪಡುತ್ತೇನೆ. ಆದರೆ, ಈ ಯೋಜನೆಗೆ ಅಂದಾಜು ವೆಚ್ಚ ಇವತ್ತು ಜಾಸ್ತಿಯಾಗಿ 230 ಲಕ್ಷ ರೂಪಾಯಿಗಳ ಒಂದು ಅಂದಾಜು ಪಟ್ಟಿಯನ್ನು ತಯಾರಿಸಿದ್ದಾರೆ. ಆದರೂ ಸಹ ಈ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇದ್ದಲ್ಲಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರತಕ್ಕಂತಹ ಕಿರು ಏತ ನೀರಾವರಿ ಬಗ್ಗೆ ಈ ಸರ್ಕಾರ ಅನುಮತಿಯನ್ನು ಕೊಡುತ್ತದೆಯೇ ಎನ್ನುವುದರ ಬಗ್ಗೆ ದಯಮಾಡಿ ಸಣ್ಣ ನೀರಾವರಿ ಸಚಿವರು ಈ ಸದನದಲ್ಲಿ ಹೇಳಬೇಕೆಂದು ತಮ್ಮ ಮುಖಾಂತರ ಸಣ್ಣ ನೀರಾವರಿ ಇಲಾಖೆಯ ಮಂತ್ರಿಗಳಿಗೆ ಒತ್ತಾಯವನ್ನು ಮಾಡುತ್ತಿದ್ದೇನೆ. ಇನ್ನು ಕೆಲವು ಕೆರೆಕಟ್ಟೆಗಳು, ಕಾಲುವೆಗಳ ದುರಸ್ಥಿಯ ಬಗ್ಗೆ ಅನೇಕ ವಿಚಾರಗಳು ಇಲ್ಲಿ ನನಗಂತೂ ಅರ್ಥವಾಗುವುದಿಲ್ಲ, ಕರಗಡ ಎಂದು ಒಂದು ಕಾಲುವೆ ಈ ಕಾಲುವೆಯ ದುರಸ್ಥಿಗಾಗಿ ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದಂತಹ ಹಾಗೂ ಮಾಜಿ ಪ್ರಧಾನ ಮಂತ್ರಿಗಳಾದಂತಹ ಶ್ರೀ ಹೆಚ್.ಡಿ.ದೇವೇಗೌಡರು ನಮ್ಮ ಜಿಲ್ಲೆಗೆ ರೈಲ್ವೆ ಶಂಕುಸ್ಥಾಪನೆಗೆ ಬಂದಂತಹ ಸಂದರ್ಭದಲ್ಲಿ ಕರಗಡ ನಾಲೆಯನ್ನು ದುರಸ್ಥಿ ಬಗ್ಗೆ ಸರ್ಕಾರ ಅನುಮತಿಯನ್ನು ನೀಡುತ್ತದೆ, ಇದರಿಂದ ಹಾದು ಹೋಗುವಂತಹ ನೀರು ಕಳಸಾಪುರ, ಮತ್ತು ಲಕ್ಯಾ ಹೋಬಳಿಗಳ ಕೆರೆಗಳು ತುಂಬುವಂತೆ ಈ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ ಎನ್ನುವಂತಹ ಮಾತನ್ನು ಹೇಳುತ್ತಾರೆ. ಆದರೆ ಹಾಸನ ಜಿಲ್ಲೆ ಕೆಲವು ಶಾಸಕರು, ಲೋಕಸಭಾ ಸದಸ್ಯರು ಹೇಳುತ್ತಾರೆ, ನಾವು ಯಾವುದೇ ಕಾರಣಕ್ಕೆ ಈ ನೀರನ್ನು ಬಿಡುವುದಿಲ್ಲ. ಕರಗಡ ನಾಲೆ ದುರಸ್ಥಿಗಾಗಿ ಯಾವುದೇ ಯೋಜನೆಗೆ ಪ್ರೋತ್ಸಾಹ ನೀಡುವುದಿಲ್ಲ ಎನ್ನುವಂತಹ ಸಂದರ್ಭದಲ್ಲಿ ನನಗೆ ಪ್ರಾಯಶಃ ಅನ್ನಿಸುತ್ತದೆ. ರೈತರ ಬಗ್ಗೆ ಅವರು ಹಾಸನ ಜಿಲ್ಲೆಯ ರೈತರು ಇರಬಹುದು, ಚಿಕ್ಕಮಗಳೂರು ಜಿಲ್ಲೆಯ ರೈತರು ಇರಬಹುದು, ರೈತರ ಅಭಿವೃದ್ಧಿ ಮಾಡುವಂಥದ್ದರಲ್ಲಿ ಮಾಜಿ ಪ್ರಧಾನ ಮಂತ್ರಿಗಳು, ಮಾಜಿ ಮುಖ್ಯ ಮಂತ್ರಿಗಳು ಹೇಳಿರುವಂತೆ ತಾವು ಸರ್ಕಾರಕ್ಕೆ ಸೂಚನೆಯನ್ನು ಕೊಟ್ಟು ರೈತರ ಕಾಳಜಿ ಇದ್ದಂತಹ ಎಲ್ಲಾ ಚುನಾಯಿತ ಪ್ರತಿನಿಧಿಗಳು ಅವರ ಅನುಕೂಲಕ್ಕಾಗಿ ನೀರನ್ನು ಒದಗಿಸಿಕೊಡುವುದಕ್ಕೆ ಆಸಕ್ತಿಯನ್ನು ತೋರಿಸಬೇಕು. ಇದರ ಜೊತೆಗೆ ಆ ಕರಗಡ ನಾಲೆಯ ದುರಸ್ಥಿ ಬಗ್ಗೆ, ಅಭಿವೃದ್ಧಿಯ ಬಗ್ಗೆ ದಯಮಾಡಿ ತಾವು ದಯಮಾಡಿ ಚಿಂತನೆಯನ್ನು ಮಾಡಬೇಕು. ಮಳಲೂರು ಏತ ನೀರಾವರಿ ಬಗ್ಗೆ ತಾವು ಇವತ್ತು ಈ ಸದನದಲ್ಲಿ ಉತ್ತರ ನೀಡುವಂತಹ ಸಂದರ್ಭದಲ್ಲಿ ವಾಗ್ದಾನ ಮಾಡಬೇಕು. ಏಕೆಂದರೆ ತಾವು ಒಂದು ಮಾಡುತ್ತಿದ್ದೀರಿ ಎಂದು ನನಗನಿಸುತ್ತದೆ. ಏಕೆ ಎಂದು ಹೇಳಿದರೆ ನಾನು ಅನೇಕ ವಿಚಾರಗಳನ್ನು ಹೇಳುವಂಥಾದ್ದರ ಬಗ್ಗೆ ನನಗೆ ಸಮಯ ಇಲ್ಲ. ಆದರೆ ತಾವು ದಯಮಾಡಿ, ಯಾರೇ ಚುನಾಯಿತ ಪ್ರತಿನಿಧಿಗಳಾಗಲಿ, ತಾವು ಸರ್ಕಾರ ನಡೆಸಿ, ನಡೆಸಬೇಡಿ ಎಂದು ನಾವು ಹೇಳುವುದಕ್ಕೂ ಆಗುವುದಿಲ್ಲ, ಕನ್ನಡಿಗರು ತಮಗೆ ಈ ಅವಕಾಶ ಕೊಟ್ಟಿದ್ದಾರೆ. ಆದರೆ ಪಕ್ಷಪಾತ, ಭೇದಭಾವ

ದಯವಿಟ್ಟು ಮಾಡಬೇಡಿ. ಕಾರಣ ಏನು ಎಂದು ಹೇಳಿದರೆ ಇವತ್ತು ನನ್ನ ಜಿಲ್ಲೆಯಲ್ಲಿ ಜನ ಮಾತನಾಡುವಂತಾದ್ದು ಏನೆಂದರೆ, ಕೇವಲ ನನ್ನ ಬಗ್ಗೆ ಮಾತ್ರ ಜನ ಮಾತನಾಡುತ್ತಿಲ್ಲ, ನಿಮ್ಮ ಬಗ್ಗೆಯೂ ಕೂಡ ಮಾತನಾಡುತ್ತಿದ್ದಾರೆ. ಜನ ಇವತ್ತು ಅಲ್ಲಿ ಏನು ಹೇಳುತ್ತಿದ್ದಾರೆ ಎಂದು ಹೇಳಿದರೆ, ಜನತಾದಳ ಸರ್ಕಾರ ಬಂದ ನಂತರ ನಮ್ಮ ಜಿಲ್ಲೆಗಾಗಲೀ, ನಮ್ಮ ಕ್ಷೇತ್ರಕ್ಕಾಗಲೀ ಯಾವುದೇ ರೀತಿಯ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ ಆಸಕ್ತಿ ತೋರಿಸುತ್ತಿಲ್ಲವೆಂದು ಇವತ್ತು ಜನ ಮಾತನಾಡುತ್ತಿದ್ದಾರೆ. ಕೇವಲ ನಾನು ಟೀಕೆ ಟಿಪ್ಪಣಿ ಮಾಡುವುದರಿಂದ ನಿಮ್ಮ ಸರ್ಕಾರಕ್ಕೆ ಧಕ್ಕೆ ಬರುತ್ತದೆ ಎಂಬ ಭಾವನೆ ನನ್ನದಲ್ಲ. ಆದರೆ ಜನ ಟೀಕೆ ಟಿಪ್ಪಣಿ ಮಾಡಿದಾಗ ಪ್ರಾಯಶಃ ನಿಮ್ಮ ಸರ್ಕಾರಕ್ಕೆ ಧಕ್ಕೆ ಬರುತ್ತದೆ ಎಂದು ನಾನಂತೂ ನಂಬಿದ್ದೇನೆ. ಆ ದೃಷ್ಟಿಯಿಂದ ಮಾನ್ಯ ನೀರಾವರಿ ಸಚಿವರು ದಯಮಾಡಿ ಇವತ್ತು ಈ ಸದನದಲ್ಲಿ ಉತ್ತರ ಕೊಡುವಂತಹ ಸಂದರ್ಭದಲ್ಲಿ ಮಳಲೂರು ಏತ ನೀರಾವರಿ ಬಗ್ಗೆ ನಿರ್ದಿಷ್ಟವಾದಂತಹ ನಿಲುವನ್ನು ತಾವು ಪ್ರಕಟ ಪಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರವಾಗಿ ನಾನು ನಿಮ್ಮನ್ನು ಒತ್ತಾಯ ಮಾಡುತ್ತಿದ್ದೇನೆ. ಇನ್ನೊಂದು ಮುಖ್ಯವಾದ ವಿಚಾರ ಏನು ಎಂದು ಹೇಳಿದರೆ, ನಾವು ಈ ಸದನದಲ್ಲಿ ಅನೇಕ ಬಾರಿ ಅನೇಕ ವಿಚಾರಗಳನ್ನು ಮಾತನಾಡಿದ್ದೇವೆ. ಅರಣ್ಯ ಇಲಾಖೆ ಬಗ್ಗೆ ನಾವು ಇವತ್ತು ಹೇಳಬೇಕಾಗುತ್ತದೆ. ಅರಣ್ಯ ನಾಶವಾಗುತ್ತಿರುವುದು ಒಂದೇ ಅಲ್ಲ, ಕೋಟ್ಯಾಂತರ ರೂಪಾಯಿ ಸರ್ಕಾರಕ್ಕೆ ಆದಾಯ ಬರುವಂತಹ ಮರಗಳನ್ನು ಕಾಡಿನಿಂದ ಸಾಗಿಸುತ್ತಿರುವಂತಹದ್ದು ಇವತ್ತು ಎಲ್ಲರಿಗೂ ತಿಳಿದಿರುವ ವಿಚಾರ. ಇವತ್ತು ಯಡಿಯೂರಪ್ಪನವರು ಮಾತನಾಡಿರಬಹುದು ಅಥವಾ ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಮಲ್ಲಿಕಾರ್ಜುನ್ ಖರ್ಗೆಯವರು ಮಾತನಾಡಿರಬಹುದು. ಆದರೆ ಇದನ್ನು ತಡೆಹಿಡಿಯುವಂತಹ ಪ್ರಯತ್ನಗಳನ್ನು ಏನು ಮಾಡಿದ್ದಾರೆ ಎಂದು ಹೇಳಿದರೆ, ನಿಮ್ಮ ಅರಣ್ಯ ಇಲಾಖೆಯ ವಾರ್ಷಿಕ ವರದಿಯಲ್ಲಿ ಏನು ಹೇಳಿದ್ದಾರೆ, ಎಂದರೆ, ಗುಪ್ತ ದಳವನ್ನು ನಾವು ರಚನೆ ಮಾಡಿದ್ದೇವೆ, ಎಂಟು ವಾಹನಗಳನ್ನು ಒದಗಿಸಿ ಕೊಟ್ಟಿದ್ದೇವೆ, ಕೋವಿಗಳನ್ನು ಒದಗಿಸಿಕೊಟ್ಟಿದ್ದೇವೆ, ಅದಕ್ಕೆ ಬೇಕಾದಂತಹ ಸಾಮಗ್ರಿಗಳನ್ನು ಒದಗಿಸಿಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಕೇವಲ ಇಷ್ಟನ್ನು ಒದಗಿಸಿಕೊಟ್ಟರೆ ಮಾತ್ರ ಇದು ಸಾಧ್ಯವಿಲ್ಲ. ಆದರೆ ಪರಿಸರವನ್ನೂ ಸಹ ಉಳಿಸುವಂತಹ ಪ್ರಯತ್ನಗಳಲ್ಲಿ ನಾನು ತಿಳಿದ ಹಾಗೆ ಪ್ರಾಯಶಃ ಅರಣ್ಯ ಇಲಾಖೆಯವರು ಬಹಳ ಹಿಂದುಳಿದಿದ್ದಾರೆ ಎಂಬ ಬಗ್ಗೆ ನಾನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ. ಇನ್ನೊಂದು ಮುಖ್ಯವಾದಂತಹ ವಿಚಾರವನ್ನು ಮಾನ್ಯ ಭಾರೀ ನೀರಾವರಿ ಮಂತ್ರಿಗಳು ಗಮನಿಸಬೇಕು. 2-3 ಬಾರಿ ಈ ಭದ್ರಾ ಮೇಲ್ದಂಡೆ ಯೋಜನೆ ಹಮ್ಮಿಕೊಳ್ಳುವಂತೆ, ಎಲ್ಲಾ ಆ ಭಾಗದ ಶಾಸಕರ ಜೊತೆ ಮತ್ತು ಮಂತ್ರಿಗಳ ಜೊತೆ ಚರ್ಚೆ ನಡೆಸಿದ್ದಾರೆ. ಆದರೆ ಶೇಕಡ ನೂರಕ್ಕೆ ನೂರರಷ್ಟು ಸಹ ಸರ್ಕಾರದಲ್ಲಿದ್ದಂತಹ ಶಾಸಕರು, ಮಂತ್ರಿಗಳು ಮತ್ತು ವಿರೋಧ ಪಕ್ಷದಲ್ಲಿರುವಂತಹ ಶಾಸಕರು, ಸಂಪೂರ್ಣವಾಗಿ, ಮನಸ್ಸು ಪೂರ್ವಕವಾಗಿ ಆ ಒಂದು ಯೋಜನೆಗೆ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಕಾರಣವೇನು ಎಂದು ಹೇಳಿದರೆ, ನಾವು

ಬೇರೆ ಬೇರೆ ಜಿಲ್ಲೆಗಳಿಗೆ ನೀರು ಒದಗಿಸಿಕೊಡುವಂತಹದ್ದರ ಬಗ್ಗೆ ನಮಗೆ ಆಸಕ್ತಿ ಇಲ್ಲವೆಂದೇನೂ ಅಲ್ಲ. ಆದರೆ ಮಲೆನಾಡು ಎಂದು ಇರುವಂತಹ ಒಂದು ಹೆಸರನ್ನು ಉಳಿಸಬೇಕಾದಂತಹ ಸಂದರ್ಭದಲ್ಲಿ ಈ ಯೋಜನೆ ಆಗಬಾರದು ಎಂಬುದೇ ನಮ್ಮ ಅಭಿಲಾಷೆ. ಕಾರಣವೇನು ಎಂದು ಹೇಳಿದರೆ ಇದರಿಂದ ಸಾವಿರಾರು ಎಕರೆಗಳಷ್ಟು ಅರಣ್ಯ ನಾಶವಾಗುವಂತಹ ಸ್ಥಿತಿಯಲ್ಲಿ ನಾವಿದ್ದೇವೆ. ಇವತ್ತು ಉದಾಹರಣೆಗೆ ಹೇಳುವುದಾದರೆ, ಕುದುರೆಮುಖ ಕಬ್ಬಿಣದ ಕಾರ್ಖಾನೆಗೆ ಇವತ್ತು ನಾವು ಹೆಚ್ಚು ಕಡಿಮೆ 10 ಸಾವಿರ ಎಕರೆಗಳಿಗಿಂತ ಹೆಚ್ಚಿನ ಪ್ರದೇಶವನ್ನು ಈ ಕಬ್ಬಿಣ ತೆಗೆಯುವುದಕ್ಕಾಗಿ ಬಿಟ್ಟು ಕೊಟ್ಟಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ, ತಾವೂ ಸಹ ಆ ಭಾಗಕ್ಕೆ ಭೇಟಿ ನೀಡಿದ್ದೀರಿ. ಹಾಗೂ ಅನೇಕ ಮಂತ್ರಿಗಳು ಹಾಗೂ ಶಾಸಕರುಗಳು ಆ ಭಾಗಕ್ಕೆ ಭೇಟಿ ಕೊಟ್ಟಿದ್ದಾರೆ. ಅಲ್ಲಿ ಎಷ್ಟು ಎಕರೆಗಳಲ್ಲಿ ಇವತ್ತು ಅರಣ್ಯ ನಾಶವಾಗಿದೆ ಎನ್ನುವುದರ ಬಗ್ಗೆ ಪ್ರಾಯಶಃ ನಮ್ಮ ಅರಣ್ಯ ಮಂತ್ರಿಗಳ ಹತ್ರಿ ದಾಖಲಾತಿ ಇಲ್ಲವೆಂದು ಕಾಣುತ್ತದೆ. ಜೊತೆಗೆ ಪರಿಸರ ಇಲಾಖೆಯ ಕಾರ್ಯದರ್ಶಿಗಳು ಮತ್ತು ನಿರ್ದೇಶಕರು ಚಿಕ್ಕಮಗಳೂರಿಗೆ ಭೇಟಿ ಕೊಟ್ಟಿದ್ದಂತಹ ಸಂದರ್ಭದಲ್ಲಿ ನಾವು ಈ ವಿಚಾರವನ್ನು ಅವರಲ್ಲಿ ಪ್ರಸ್ತಾಪ ಮಾಡಿದ್ದೇವೆ. ಇವತ್ತು ಸ್ಥಿತಿ ಹೇಗಾಗಿದೆ ಎಂದು ಹೇಳಿದರೆ, ಭಾರೀ ಮಳೆಯಾಗುವಂತಹ ಪ್ರದೇಶದಲ್ಲಿ, ಮಣ್ಣು ಮಳೆಯ ಸಮೇತ ಬಂದು ಇವತ್ತು ಭದ್ರಾ ನದಿಗೆ ಸೇರುವಂತಹ ವಿಚಾರ, ಆಗಲೇ ಅನೇಕ ಜನ ವೈಜ್ಞಾನಿಕವಾಗಿ ಹೇಳಿರುವಂತಹ ವಿಚಾರ. ಇವತ್ತು ಭದ್ರಾ ನದಿಯಲ್ಲಿ ಆ ಮಣ್ಣು ಸೇರುತ್ತಿದೆ ಎನ್ನುವುದರ ಬಗ್ಗೆ ಈಗಾಗಲೇ ಸಾಕಷ್ಟು ಮಾಹಿತಿಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಆದರೆ ಸನ್ಮಾನ್ಯ ಅಧ್ಯಕ್ಷರೇ, ಅರಣ್ಯ ಇಲಾಖೆ ಈ ರೀತಿಯ ಒಂದು ಮಲತಾಯಿ ಧೋರಣೆ ಏಕೆ ಮಾಡುತ್ತದೆ ಎಂದು ನನಗೆ ಗೊತ್ತಿಲ್ಲ. ಇವತ್ತು ಗಂಗಡಿಕಲ್ಲು ಮತ್ತು ಇನ್ನೂ ಅನೇಕ ಭಾಗಗಳು ಇವತ್ತು ಕುದುರೆಮುಖ ಕಬ್ಬಿಣ ಕಾರ್ಖಾನೆಗೆ ವಹಿಸಿಕೊಡುವಂತೆ ಕೇಂದ್ರ ಸರ್ಕಾರಕ್ಕೆ ತಾವು ಒಪ್ಪಿಗೆ ನೀಡಿದ್ದೀರಲ್ಲಾ, ಹಾಗಾದರೆ ಈ ರಾಜ್ಯದಲ್ಲಿ ಶೇಕಡ 33ರಷ್ಟು ಅರಣ್ಯ ಉಳಿಸುವಂತಹ ಪ್ರಯತ್ನಗಳು ತಾವು ಏನಾದರೂ ಮಾಡಿದ್ದೀರಾ? ಆ ಭಾಗದಲ್ಲಿ ಇಡೀ ರಾಷ್ಟ್ರದ ಪರಿಸರವಾದಿಗಳು ಬಂದು ವಾದ ಮಾಡಿದ್ದಾರೆ. ಯಾವುದೇ ಕಾರಣಕ್ಕೂ ಗಂಗಡಿಕಲ್ಲಿನ ಅರಣ್ಯ ಪ್ರದೇಶವು ಕುದುರೆಮುಖ ಕಬ್ಬಿಣದ ಕಾರ್ಖಾನೆಗೆ ಸೇರಬಾರದು. ಕಾರಣ ಏನು ಎಂದು ಹೇಳಿದರೆ, ಇದು ದಟ್ಟವಾದಂತಹ ಅರಣ್ಯವಾಗಿರುವುದರಿಂದ, ಸಂಪೂರ್ಣವಾಗಿ 10 ಸಾವಿರ ಎಕರೆಯಲ್ಲಿರುವಂತಹ ಅರಣ್ಯ ನಾಶವಾಗುತ್ತದೆ ಎಂಬ ಮಾಹಿತಿಗಳು ಬಂದಿವೆ. ಆದರೆ ಇವತ್ತು ಕರ್ನಾಟಕ ರಾಜ್ಯ ಸರ್ಕಾರ ಇದರ ಬಗ್ಗೆ ಯಾವ ರೀತಿಯಲ್ಲಿ ಚಿಂತನೆ ಮಾಡಿದೆ? ಏಕೆ ಎಂದು ಹೇಳಿದರೆ, ನಾವು ಇವತ್ತು ಕೋಟ್ಯಾಂತರ ರೂಪಾಯಿಗಳ ವ್ಯಯಿಸಿ ಅರಣ್ಯ ಬೆಳೆಸುವುದರ ಬಗ್ಗೆ ಮಾತನಾಡುತ್ತಿದ್ದೇವೆ. ಸಾಮಾಜಿಕ ಅರಣ್ಯ ಇರಬಹುದು, ಇರುವ ಅರಣ್ಯವನ್ನು ಉಳಿಸುವಂತಾದ್ದರ ಬಗ್ಗೆ ಆಗಬಹುದು ಆದರೆ ಅರಣ್ಯ ಇಲಾಖೆಯವರು ಇದರ ಬಗ್ಗೆ ಏಕೆ ಇವತ್ತಿನವರೆಗೆ ಯಾವುದೇ ಚಕಾರ ಎತ್ತಿಲ್ಲ ಎನ್ನುವುದರ ಬಗ್ಗೆ ನನಗಂತೂ ತಿಳಿಯದು. ಈ ಬಗ್ಗೆ ನಮ್ಮ ಗಾಂಧೀವಾದಿಗಳು

ಮತ್ತು ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾದಂತಹ ಮಾನ್ಯ ಗೋವಿಂದಗೌಡರಾದಿಯಾಗಿ ಎಲ್ಲರಿಗೂ ಗೊತ್ತಿದೆ. ಇವತ್ತು ಬೆಟ್ಟದ ಮೇಲೆ 80 ಅಡಿ ನಾವು ಕೊಳವೆ ಬಾವಿಯನ್ನು ಕೊರೆಯುವಂತಹ ಸಂದರ್ಭದಲ್ಲಿ, ನೀರು ಆ ಬಾವಿಗಳಿದ ಉಕ್ಕುತ್ತಾ ಇದೆ. ಆದರೆ ಇಲ್ಲಿ ಅನೇಕ ಜನ ನನ್ನ ಮಿತ್ರ ಸದಸ್ಯರುಗಳು ಮಾತನಾಡುವಾಗ ಕೋಲಾರ ಜಿಲ್ಲೆಯಲ್ಲಿ 300 ಅಡಿ ಕೊರೆದರೂ ಸಹಾ ನೀರು ಸಿಗುವುದಿಲ್ಲ, ಚಿತ್ರದುರ್ಗ ಜಿಲ್ಲೆಯಲ್ಲಿ 400 ಅಡಿ ಕೊರೆದರೂ ಸಹಾ ನೀರು ಸಿಗುವುದಿಲ್ಲ ಎಂದು ಹೇಳುತ್ತಿರುವಂತಹ ವಿಚಾರ ಏನು ಅಂತ ಹೇಳಿ ತಾವು ಅರಿತುಕೊಂಡು ಇವತ್ತು 80 ಅಡಿ ನಾವು ಕೊಳವೆ ಬಾವಿ ಕೊರೆದಾಗ ನೀರು ಉಕ್ಕಿ ಆ ಕೊಳವೆ ಬಾವಿಗಳಲ್ಲಿ ಬರುತ್ತದೆ ಎಂದು ಹೇಳಿದರೆ, ಅಂತಹ ಕಾಡನ್ನು ನೀವು ನಾಶ ಮಾಡಲಿಕ್ಕೆ ಹೊರಟಿದ್ದೀರಿ? ಇದರ ಬಗ್ಗೆ ತಮಗೆ ಇರತಕ್ಕ ಮಾಹಿತಿಗಳೇನು? ಕೇಂದ್ರ ಸರ್ಕಾರಕ್ಕೆ ಯಾವ್ಯಾವ ರೀತಿಯಲ್ಲಿ ತಾವು ಪ್ರಸ್ತಾವನೆಗಳನ್ನು ಕಳುಹಿಸಿದ್ದೀರಿ? 10 ಸಾವಿರ ಎಕರೆಗಳಷ್ಟು ಈ ಅರಣ್ಯ ಪ್ರದೇಶ ಮತ್ತೆ ಬೆಳೆಸಬೇಕಾದರೆ ಪ್ರಾಯಶಃ ನಾನೂ ಮತ್ತು ನೀವು, ಯಾರೂ ಕೂಡ ಬದುಕಿರುವುದಿಲ್ಲ ಎಂದು ಕಾಣುತ್ತದೆ. ತಾವು ಎಷ್ಟೇ ಕೋಟ್ಯಾಂತರ ರೂಪಾಯಿಗಳನ್ನು ಹಾಕಿದರೂ ಸಹಾ 10 ಸಾವಿರ ಎಕರೆ ಪ್ರದೇಶದಲ್ಲಿ ಇಷ್ಟು ದಟ್ಟವಾದಂತಹ ಅರಣ್ಯವನ್ನು ಬೆಳೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಇಡೀ ಜಿಲ್ಲೆಯ ಜನರ ಜೊತೆಗೆ ಎಲ್ಲಾ ಪರಿಸರವಾದಿಗಳು ಹಾಗೂ ಸರ್ಕಾರದಲ್ಲಿ ಪ್ರತಿನಿಧಿಸುತ್ತಿರುವಂತಹ ನಾವುಗಳು ಈ ದೃಷ್ಟಿಯಲ್ಲಿ ನೀವು ಈ 10 ಸಾವಿರ ಎಕರೆಗಳಷ್ಟು ಅರಣ್ಯ ಪ್ರದೇಶವನ್ನು ಹೊಂದಿರುವ ಗಂಗಡಿಕಲ್ಲು ಅನ್ನು ಕಬ್ಬಿಣ ಕಾರ್ಖಾನೆಗೆ ಕೊಡುವಂತದ್ದರ ಬಗ್ಗೆ ಏನು ನಿರ್ಣಯ ಮಾಡಿದ್ದೀರಿ ಅಥವಾ ಕೇಂದ್ರ ಸರ್ಕಾರದವರು ಇದರ ಬಗ್ಗೆ ನಿರ್ಣಯ ಏನು ಮಾಡಿದ್ದಾರೆ? ಇದಕ್ಕೆ ಈ ಸದನ ವಿರೋಧ ವ್ಯಕ್ತಪಡಿಸಬೇಕಾಗುತ್ತದೆ. ಇಲ್ಲದೇ ಹೋದಲ್ಲಿ ಪ್ರಾಯಶಃ ಮಲೆನಾಡು ಪ್ರದೇಶದಲ್ಲಿ ವಾಸಿಸುತ್ತಿರುವಂತಹ ನಮಗೂ ಸಹಾ ನೀರು ಮುಂದಿನ ದಿನಗಳಲ್ಲಿ ಸಿಗುತ್ತದೋ ಇಲ್ಲವೋ ಎಂದು ವಾದ ಮಾಡುವಂತಹ ಸಮಯ ಸದ್ಯದಲ್ಲೇ ಬರುತ್ತದೆಂದು ನಾನಂತೂ ನಂಬಿದ್ದೇನೆ. ಆ ದೃಷ್ಟಿಯಿಂದ ಮಾನ್ಯ ಅರಣ್ಯ ಸಚಿವರಲ್ಲಿ ನನ್ನ ವಿನಂತಿ ಏನು ಎಂದು ಹೇಳಿದರೆ, ತಾವು ಸ್ಪಷ್ಟವಾಗಿ ಇವತ್ತು ತಮ್ಮ ಉತ್ತರ ನೀಡುವಂತಹ ಸಂದರ್ಭದಲ್ಲಿ ಈ ಭೂಮಿಯನ್ನು ಅಂದರೆ ಅರಣ್ಯ ಇಲಾಖೆಗೆ ಸಂಬಂಧಪಟ್ಟಿರುವಂತಹ, ಅರಣ್ಯ ಬೆಳೆದಿರುವಂತಹ 10 ಸಾವಿರ ಎಕರೆ ಜಮೀನನ್ನು ಈ ಕುದುರೆಮುಖ ಕಬ್ಬಿಣ ಕಾರ್ಖಾನೆಗೆ ಕೊಡುವಂಥಾದ್ದರ ಬಗ್ಗೆ ತಾವು ಏನು ಚಿಂತನೆ ಮಾಡುತ್ತೀರಿ? ಕೊಡುತ್ತೀರೋ, ಇಲ್ಲವೋ ಎಂದು ತಾವು ಅದಕ್ಕೆ ವಿರೋಧವನ್ನು ವ್ಯಕ್ತಪಡಿಸುವುದಾದರೆ, ಈ ಸದನದಲ್ಲಿ ತಾವು ದಯಮಾಡಿ ವಿರೋಧವನ್ನು ವ್ಯಕ್ತಪಡಿಸಬೇಕು. ಕಾರಣ ಏನು ಎಂದು ನಾನು ಹೇಳುತ್ತೇನೆ. ನಮ್ಮ ಕಡೆ 100-150 ಅಡಿಗಳಿಗೆ ಕೊಳವೆ ಬಾವಿಯಲ್ಲಿ ನೀರು ಬಂದರೂ ಸಹಾ, ಇನ್ನೂ ಅನೇಕ ಹಳ್ಳಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ, ನಿಮ್ಮ ಈ ಕುದುರೆಮುಖ ಐರನ್ ಓರಿನ ಈ ಮಣ್ಣು ಏನಿದೆ, ಅದು ಕೆಲವು ಕಡೆ ಅಂತರ್ಜಲದಲ್ಲಿ ಬಂದು ಇವತ್ತು ಕೆಲವು

ಕೊಳವೆ ಬಾವಿಗಳಲ್ಲಿ ಕೆಂಪು ನೀರು ಬರುವಂಥಾದ್ದು ಸಹ ನಾವು ಮಲೆನಾಡು ಭಾಗಗಳಲ್ಲಿ ನೋಡಿದ್ದೇವೆ. ಇದರ ಬಗ್ಗೆ ಅನೇಕ ಸಾರಿ ಜಿಲ್ಲಾ ಪಂಚಾಯಿತಿಯ ಸಭೆಗಳಲ್ಲಿ ನಾವು ಚರ್ಚೆ ಮಾಡಿದ್ದೇವೆ. ಆ ದೃಷ್ಟಿಯಿಂದ ದಯಮಾಡಿ ತಾವು ಈ ಗಂಗಡಿಕಲ್ಲಿನ ವಿಚಾರ, ಇವತ್ತು ಖುದ್ದಾಗಿ ತಾವು ಎಲ್ಲಾ ಕಡತಗಳನ್ನೂ ಪರಿಶೀಲಿಸಿ ಈ ಸಭೆಯಲ್ಲಿ ಸರಿಯಾದಂತಹ ಉತ್ತರವನ್ನು ನೀಡಬೇಕು ಎಂದು ಹೇಳುತ್ತೇನೆ. ಆದರೆ ನಾನು ಮತ್ತೊಮ್ಮೆ ಹೇಳುತ್ತೇನೆ, ಇದಕ್ಕೆ ನಮ್ಮ ಸಂಪೂರ್ಣ ವಿರೋಧ ಇದೆ. ಗಂಗಡಿಕಲ್ಲನ್ನು ಯಾವುದೇ ಕಾರಣಕ್ಕೂ ಸಹಾ, ಪರಿಸರ ಹಾಗೂ ಜೊತೆಗೆ ಅರಣ್ಯ ನಾಶವಾಗುವ ದೃಷ್ಟಿಯಿಂದ ತಾವು ಕಬ್ಬಿಣ ಕಾರ್ಖಾನೆ ಕೊಡಕೂಡದು ಅಂತ ಹೇಳಿ ಮಾನ್ಯ ಅಧ್ಯಕ್ಷರ ಮೂಲಕವಾಗಿ ನಾನು ಮತ್ತೊಮ್ಮೆ ನಿಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇನ್ನೊಂದು ಮುಖ್ಯವಾದ ವಿಚಾರ ಏನು ಎಂದು ಹೇಳಿದರೆ, ಅರಣ್ಯ ಇಲಾಖೆಯವರು ಬೇರೆ ಬೇರೆ ರೀತಿಯಲ್ಲಿ 1996-97ನೇ ಸಾಲಿನ ವಾರ್ಷಿಕ ವರದಿಯಲ್ಲಿ ಅನೇಕ ವಿಚಾರಗಳ ಬಗ್ಗೆ ತಿಳುವಳಿಕೆ ನೀಡಿದ್ದಾರೆ. ನಾನು ಈ ಬಗ್ಗೆ ಅನೇಕ ಜಿಲ್ಲಾ ಪಂಚಾಯಿತಿಗಳ ಸಭೆಗಳಲ್ಲಿ ನಾನು ಹೇಳಿದ್ದೇನೆ. ಸಾಮಾಜಿಕ ಅರಣ್ಯ ಯೋಜನೆಗೆ ಸರ್ಕಾರ ಒದಗಿಸುತ್ತಿರುವಂತಹ ಹಣ ಎಲ್ಲಿ ಹೋಗುತ್ತದೆ ಎಂಬ ಬಗ್ಗೆ ಅಧ್ಯಕ್ಷರಾದಿಯಾಗಿ ಎಲ್ಲಾ ಮಾನ್ಯ ಸದಸ್ಯರುಗಳವರೆಗೆ ವಾದ ವಿವಾದ ಮಾತುಕತೆಗಳು ನಡೆದಿರುವಂತಹದ್ದನ್ನು ನಾನಂತೂ ನೋಡಿದ್ದೇನೆ. ಆದರೆ ಸಾಮಾಜಿಕ ಅರಣ್ಯವನ್ನು ಎಲ್ಲಿ ನೀವು ಬೆಳೆಸಿದ್ದೀರಿ ಎಂದು ನಮಗೆ ನಿರ್ದಿಷ್ಟವಾಗಿ ಮಾನ್ಯ ಮಂತ್ರಿಗಳು ಹೇಳಬೇಕು. ಕಾರಣ ಏನು ಎಂದು ಹೇಳಿದರೆ, ಗಿಡಮರಗಳು ಇಲ್ಲದಿರುವ ಕಡೆ ತಾವೇನಾದರೂ ಗಿಡ ನೆಡಿಸುತ್ತಿದ್ದೀರೋ ಅಥವಾ ಗಿಡಮರಗಳು ಇರುವ ಜಾಗದಲ್ಲಿಯೇ ನೀವು ಗಿಡಗಳನ್ನು ನೆಡುತ್ತಿದ್ದೀರೋ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಮಾಹಿತಿ ಕೊಡಬೇಕು. ಏಕೆ ಎಂದು ಹೇಳಿದರೆ, ನನಗೆ ತಿಳುವಳಿಕೆ ಇದ್ದ ರೀತಿಯಲ್ಲಿ ನಾವು ಅಕ್ರಮ ಸಕ್ರಮ ಸಮಿತಿಯಲ್ಲಿ ಜಮೀನನ್ನು ಬೇರೆ ಬೇರೆ ರೈತರಿಗೆ ಕೊಡುತ್ತಿದ್ದೇವೆ. ಸರ್ಕಾರದಲ್ಲಿ ಉಳಿದಿರುವಂತಹ ಜಮೀನು ಎಷ್ಟು? ಎನ್ನುವುದರ ಬಗ್ಗೆ ಇವತ್ತು ತಮ್ಮ ಹತ್ತಿರ ಮಾಹಿತಿ ಇಲ್ಲ. ಹಿಂದಿನ ಮಾಹಿತಿ ಪ್ರಕಾರ ಇಷ್ಟು ಲಕ್ಷ ಹೆಕ್ಟೇರ್‌ಗಳಲ್ಲಿ ನಾವು ಅರಣ್ಯ ಬೆಳೆಸಿದ್ದೇವೆ ಎಂದು ನೀವು ಹೇಳಿದಿರಿ. ನಾವು ಜಿಲ್ಲಾ ಪಂಚಾಯಿತಿ ಮತ್ತು ಕೆ.ಡಿ.ಬಿ. ಸಭೆಗಳಲ್ಲಿ ಹೇಳಿದ್ದೇವೆ, ಯಾವುದೇ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಾಡತೋಪು ಇರಬಹುದು.

ಅಧ್ಯಕ್ಷರು: ಈಗಾಗಲೇ ಸಮಯವಾಯಿತು, ತಾವು ಸರಿಯಾಗಿ 10 ಗಂಟೆಗೆ ಅಂದರೆ ಇನ್ನೆರಡು ನಿಮಿಷಗಳೊಳಗಾಗಿ ತಮ್ಮ ಭಾಷಣವನ್ನು ಮುಗಿಸಬೇಕು. ದಯವಿಟ್ಟು ಸಹಕರಿಸಿ. ನಿಮ್ಮ ಕ್ಷೇತ್ರದಲ್ಲಿ ನಿಮಗೆ ಶಿಸ್ತಿನ ಮನುಷ್ಯ ಎಂದು ಎಷ್ಟು ಗೌರವ ಇದೆ, ಆದರೆ ತಾವು ಇಲ್ಲಿ ಹೀಗೆ ಮಾಡಿದರೆ ಹೇಗೆ?

ಶ್ರೀ ಸಿ.ಆರ್.ಸಗೀರ್ ಅಹಮದ್: ಆದಷ್ಟು ಬೇಗನೆ ಮುಗಿಸಲಿಕ್ಕೆ ಪ್ರಯತ್ನ

ಪಡುತ್ತೇನೆ. ಆದುದರಿಂದ ದಯಮಾಡಿ ಗ್ರಾಮ ಪಂಚಾಯಿತಿ ಮಡಿಲಲ್ಲಿ ಯಾವ ಯಾವ ಭಾಗಗಳಲ್ಲಿ ತಾವು ಈ ಮರಗಳನ್ನು ಈ ಸಾಮಾಜಿಕ ಅರಣ್ಯ ಯೋಜನೆಯಲ್ಲಿ ತಾವು ಬೆಳೆಸುತ್ತೀರೋ ಅದರ ಬಗ್ಗೆ ಅವರಿಂದ ಮಾಹಿತಿಯನ್ನು ತೆಗೆದುಕೊಂಡು ತಾವು ಇದೊಂದು ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಇಲ್ಲದೇ ಹೋದರೆ, ಎಲ್ಲಾ ದುಡ್ಡು ನುಂಗಿ ಹಾಕುತ್ತಾರೆ ಎಂಬ ಬಗ್ಗೆ ಯಾವುದೇ ಅನುಮಾನ ಇಲ್ಲ. ನಾನು ತಮ್ಮ ಗಮನಕ್ಕೆ ತರಬಯಸುವ ಇನ್ನೊಂದು ವಿಚಾರವೇನೆಂದರೆ, ಭದ್ರಾ ಅಭಯಾರಣ್ಯ ಚಿಕ್ಕಮಗಳೂರು ಜಿಲ್ಲೆಗಷ್ಟೇ ಏಕೆ ಇಡೀ ರಾಷ್ಟ್ರದಲ್ಲಿ ಹೆಸರುವಾಸಿಯಾದಂತಹ ಒಂದು ಅಭಯಾರಣ್ಯವಾಗಿದೆ.

10.00 ಎ.ಎಂ

ತಾವೇ ತಮ್ಮ ಪುಸ್ತಕದಲ್ಲಿ ಹೇಳಿದ್ದೀರಿ, ಇಡೀ ರಾಜ್ಯದಲ್ಲಿ 492 ಚದರ ಕಿಲೋಮೀಟರ್ ಉದ್ದ, ಅಗಲ ಇರತಕ್ಕದ್ದು ವನ್ಯಜೀವಿಗಳ ಅಭಯಾರಣ್ಯ ಎಂದು. ಆದರೆ ತಾವು ಮಾಡಿರುವುದು ಏನು? ಅಲ್ಲಿ ವಾಸಿಸುತ್ತಿರುವ 735 ಕುಟುಂಬದ ಸದಸ್ಯರನ್ನು ಸ್ಥಳಾಂತರಿಸುವ ಬಗ್ಗೆ ತಮಗೆ ಪ್ರಸ್ತಾವನೆ ಕಳುಹಿಸಿದ್ದೇವೆ; ಮತ್ತು ಇದಕ್ಕೆ 12 1/2 ಕೋಟಿ ರೂಪಾಯಿ ಹಣ ಬೇಕಾಗುತ್ತದೆಂದು ಹೇಳಿದ್ದೇವೆ. ಆದರೆ ತಾವು ಏನು ಮಾಡಿದ್ದೀರಿ? ಇದುವರೆಗೆ ಯಾವುದೇ ವಿಚಾರದಲ್ಲಿ ಆಸಕ್ತಿ ತೋರಿಸಿಲ್ಲ. ಹಾಗಾದರೆ ಅಭಯಾರಣ್ಯದಲ್ಲಿ ವನ್ಯಜೀವಿಗಳು ಯಾವ ರೀತಿ ವಾಸಿಸಬೇಕೆಂದು ಕೇಳುತ್ತೇನೆ. ಏಕೆಂದರೆ, ಮಾನ್ಯ ಅಧ್ಯಕ್ಷರು ಒಂದು ಸಾರಿ ಆ ಸ್ಥಳಕ್ಕೆ ಭೇಟಿ ಕೊಟ್ಟಾಗ ನೆನಪಿದೆ. ಅವರು ಹೇಳಿದರು, ಇದು ಎಂತಹ ಅರಣ್ಯ ನೀವು ಏನು ಮಾಡುತ್ತಿದ್ದೀರೆಂದು ಗೊತ್ತಿಲ್ಲವೆಂದು ಹೇಳಿದರು. ಆದರೂ ಸಹ ಮನಸ್ಸಿಗೆ ನೋವಾಗುವ ವಿಚಾರವನ್ನು ನನ್ನ ಎದುರಿಗೆ ವ್ಯಕ್ತಪಡಿಸಿದ್ದಾರೆ. ಆದುದರಿಂದ ಮಾನ್ಯ ಅರಣ್ಯ ಮಂತ್ರಿಗಳು ಇದರ ಬಗ್ಗೆ ತೀವ್ರ ಗಮನ ಹರಿಸಬೇಕೆಂದು ಹೇಳುತ್ತೇನೆ. ಕೇಂದ್ರ ಸರ್ಕಾರದಿಂದ ಈಗಾಗಲೇ ಒಂದೂವರೆ ಕೋಟಿ ರೂಪಾಯಿ ಹಣ ಬಂದಿದೆ ಎಂದು ನನಗೆ ಗೊತ್ತಿದೆ. ಉಳಿದ ಹಣವನ್ನು ರಾಜ್ಯ ಸರ್ಕಾರ ಕೊಡಬೇಕಾಗುತ್ತದೆ. ಇದರ ಬಗ್ಗೆ ತುರ್ತಾಗಿ ತಾವು ಕ್ರಮ ಜರುಗಿಸಬೇಕಾಗುತ್ತದೆ. ಇಲ್ಲದಿದ್ದರೆ ಪ್ರಾಯಶಃ ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುವ ಜನರಿಗೆ ಅನುಕೂಲವಾಗುವುದಿಲ್ಲ. ನೀವು ಎಷ್ಟು ವಿಳಂಬ ಮಾಡುತ್ತೀರಿ ಅಷ್ಟೇ ತೊಂದರೆ ತಾಪತ್ರಯಗಳು ಸರ್ಕಾರಕ್ಕೆ ಬರುತ್ತವೆ, ಅಥವಾ ತಾವು ಏನೂ ಮಾಡುವುದಿಲ್ಲ ಅನ್ನುವುದಾದರೆ ಅಲ್ಲಿ ವಾಸಿಸುತ್ತಿರುವ ನಾಗರೀಕರಿಗೆ ಕನಿಷ್ಟ ನಾಗರೀಕ ಸೌಲಭ್ಯವನ್ನು ಒದಗಿಸುವ ಪ್ರಯತ್ನವನ್ನು ತಾವು ಮಾಡಬೇಕಾಗುತ್ತದೆ. ಈ ವಿಚಾರವಾಗಿ ಸದನದಲ್ಲಿ ಹೇಳಬೇಕಾಗುತ್ತದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಬಗ್ಗೆ ಎರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ರಾಜ್ಯ ಸರ್ಕಾರ ಹಿಂದಿನ ಎರಡು ವರ್ಷಗಳಲ್ಲಿ ಭಾಗ್ಯಜ್ಯೋತಿ ಕಾರ್ಯಕ್ರಮ ಅಸ್ತಿತ್ವದಲ್ಲಿದೆಯೇ ಎಂಬುದರ ಬಗ್ಗೆ ಸರ್ಕಾರದಲ್ಲಿ ಯಾರೂ ಮಾಹಿತಿ ಕೊಡುವ ಹಂತದಲ್ಲಿ ಇಲ್ಲವೆಂದು ನಾನು ಭಾವಿಸುತ್ತೇನೆ. ಕಾರಣವೇನೆಂದರೆ,

ಭಾಗ್ಯಜ್ಯೋತಿ ಕಾರ್ಯಕ್ರಮ ಪೂರ್ಣವಾಗಿ ಮುಗಿದುಹೋಗಿದೆ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ ವಿದ್ಯುಚ್ಛಕ್ತಿ ಮಂಡಳಿಯ ಎಕ್ಸಿಕ್ಯೂಟೀವ್ ಇಂಜಿನಿಯರ್ ಅವರ ಕಛೇರಿಯಲ್ಲಿ ಕೇಳಿದಾಗ ನಮಗೆ ಟಾರ್ಗೆಟ್ ನಿಗದಿ ಮಾಡಿಲ್ಲವೆಂದು ಹೇಳುತ್ತಾರೆ. ಹರಿಜನ ಬಸ್ತಿಗಳ ಬಗ್ಗೆ ಯಾವುದೇ ಟಾರ್ಗೆಟ್ ನಿಗದಿ ಮಾಡಿಲ್ಲ. ಹ್ಯಾಮ್ಲೆಟ್‌ಗಳ ಬಗ್ಗೆ ಹೇಳುವುದಾದರೆ ಯಾವ ಯಾವ ಹ್ಯಾಮ್ಲೆಟ್‌ಗಳನ್ನು ಗುರುತಿಸಬೇಕೆಂಬ ಬಗ್ಗೆ ಕ್ರಮ ಕೈಗೊಂಡಿಲ್ಲ. ಆದುದರಿಂದ ವಿದ್ಯುಚ್ಛಕ್ತಿ ಮಂತ್ರಿಗಳು ಇದರ ಬಗ್ಗೆ ತುರ್ತು ಗಮನಹರಿಸಬೇಕಾಗುತ್ತದೆ. ಕಾರಣವೇನೆಂದರೆ, ಕೇವಲ ರಾಜಕೀಯ ಭಾಷಣಗಳಾಗದೆ ಪ್ರಗತಿಪರ ಕಾರ್ಯಕ್ರಮಗಳನ್ನು ಮಾಡುವುದರ ಬಗ್ಗೆ ಆಸಕ್ತಿ ವಹಿಸಬೇಕೆಂದು ತಮ್ಮ ಮೂಲಕ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳಲ್ಲಿ ವಿನಂತಿಸುತ್ತೇನೆ. ಮುಖ್ಯವಾದ ವಿಚಾರವೆಂದರೆ, ಚಿಕ್ಕಮಗಳೂರು ಪಟ್ಟಣದಲ್ಲಿ ಇರುವಷ್ಟು ವಿದ್ಯುತ್ ನಿಲುಗಡೆ ಇಡೀ ರಾಜ್ಯದಲ್ಲಿ ಎಲ್ಲಿಯೂ ಇಲ್ಲ. ಚಿಕ್ಕಮಗಳೂರಿನಲ್ಲಿ ಪ್ರತಿ ಅರ್ಧ ಗಂಟೆಗ ಒಂದು ಸಾರಿ ವಿದ್ಯುತ್ ನಿಲುಗಡೆಯಾಗುತ್ತದೆ. ಕಾರಣವೇನೆಂದರೆ, ಒಂದು ಸಬ್‌ಸ್ಟೇಷನ್ ಅಪ್‌ಗ್ರೇಡ್ ಮಾಡಬೇಕೆಂಬುದರ ಬಗ್ಗೆ 1992-93ರಿಂದ ಸರ್ಕಾರದ ಮುಂದೆ ಪ್ರಸ್ತಾವನೆ ಇದ್ದರೂ ಸಹ ಇವತ್ತಿನವರೆಗೆ ಏನೂ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ಬಗ್ಗೆ ವಿವರವಾಗಿ ಮಾತನಾಡುವುದಕ್ಕೆ ಈಗ ಸಮಯ ಇಲ್ಲ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿ ಹಾಜರಿರುವುದರಿಂದ ಅವರ ಗಮನಕ್ಕೆ ತರುತ್ತಿದ್ದೇನೆ. ಇಡೀ ರಾಜ್ಯದಲ್ಲಿ ಚಿಕ್ಕಮಗಳೂರು ಬಿಟ್ಟರೆ ಬೇರೆ ಯಾವುದೇ ಜಿಲ್ಲೆಗಳಲ್ಲಿ ಯಾವುದೇ ಪಟ್ಟಣಗಳಲ್ಲಿ ಈ ಸಮಸ್ಯೆ ಇಲ್ಲ. ಆದರೆ ನಮ್ಮ ಪಟ್ಟಣದ ಟ್ರಾನ್ಸ್‌ಫಾರ್ಮರ್ಸ್ ಸಮರ್ಥನೆ ಕಡಿಮೆಯಾಗಿರುವುದರಿಂದ ದೊಡ್ಡ ಟ್ರಾನ್ಸ್‌ಫಾರ್ಮರ್ ಅಳವಡಿಸುವಂತ ಅಂದಾಜು ಪಟ್ಟಿ ಮತ್ತು ಅದಕ್ಕೆ ಬೇಕಾದ ಎಲ್ಲ ವಿಚಾರಗಳು ಸರ್ಕಾರದ ಮುಂದಿರುವುದರಿಂದ ದಯಮಾಡಿ ತಾವು ಇದಕ್ಕೆ ಅನುಮತಿ ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ ಇದು ಬಹಳ ನೋವಾಗುತ್ತದೆ. ತಮ್ಮ ಜಿಲ್ಲೆಯಲ್ಲೂ ಈ ವಿಚಾರ ಹೀಗೇ ಇದೆಯೇ ಎಂದು. ಅಂತರ್ಜಾತೀಯ ವಿವಾಹ ಆಗಿರುವ ದಂಪತಿಗಳಿಗೆ ಸಹಾಯಧನ ಕೊಡುತ್ತೇವೆಂದು ಸರ್ಕಾರ ಹೇಳುತ್ತದೆ. ಆದರೆ ಸರ್ಕಾರದಲ್ಲಿ ಹಣ ಇದೆಯೇ ಇಲ್ಲವೇ ಎಂದು ಅರ್ಥವಾಗುತ್ತಿಲ್ಲ. ನಾನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ. ನಮ್ಮ ಜಿಲ್ಲೆಗೆ ಸಂಬಂಧಪಟ್ಟ 26 ಪ್ರಕರಣಗಳು ಎರಡು ವರ್ಷಗಳಿಂದ ಬಾಕಿ ಇವೆ. ನೀವು ಸಹಾಯಧನ ಕೊಡುತ್ತೀರೆಂಬ ಆಸೆಯಿಂದ ಅವರಿಗೆ ಈಗ ಮಕ್ಕಳಾಗಿದ್ದಾರೆ. ಇನ್ನು 6 ತಿಂಗಳು ವರ್ಷ ಹೋದರೆ ಡೈವರ್ಸ್ ಪೇಪರ್ಸ್ ಮೂವ್ ಆಗುತ್ತವೇನೋ ಎಂದು ಅನುಮಾನ ಇದೆ. ದಯವಿಟ್ಟು ತಾವು ಆ ವಿಚಾರದಲ್ಲಿ ಗಮನ ಕೊಡಬೇಕು. ಎಲ್ಲಾ ಜಿಲ್ಲೆಗಳಲ್ಲೂ ಈ ಸಮಸ್ಯೆ ಇದೆಯೇ ಎಂಬ ಬಗ್ಗೆ ತಾವು ಗಮನಹರಿಸಿ ತುರ್ತಾಗಿ ತಾವು ಹಣ ಬಿಡುಗಡೆ ಮಾಡಬೇಕು. ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತನ್ನಿ; ವಿಳಂಬ ಏತಕ್ಕೆ ಮಾಡುತ್ತೀರಿ?

ಅಧ್ಯಕ್ಷರು: ತಾವು ತಕ್ಷಣ ಭಾಷಣ ನಿಲ್ಲಿಸಿ ಊರಿಗೆ ಹೋಗಿ ಆ ದಂಪತಿಗಳಿಗೆ ಸಮಾಧಾನ ಹೇಳಿ ಡೈವರ್ಸ್ ಆಗದಂತೆ ಮಾಡಿ. ನಾನು ಹಣದ ವ್ಯವಸ್ಥೆ ಮಾಡಿಸುತ್ತೇನೆ. ಆ ಕುಟುಂಬಗಳ ಹಿತದೃಷ್ಟಿಯಿಂದ ತಕ್ಷಣ ಭಾಷಣ ನಿಲ್ಲಿಸಿ ಅಲ್ಲಿಗೆ ಹೋಗಬೇಕು. ಆ ಕುಟುಂಬಗಳ ಹಿತದೃಷ್ಟಿ ಮುಖ್ಯ. ತಾವು ತುರ್ತಾಗಿ ಹೋಗಬೇಕು.

ಶ್ರೀ ಸಿ.ಆರ್.ಸಗೀರ್ ಅಹಮದ್: ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಬಗ್ಗೆ ಸಾಕಷ್ಟು ಜನ ಮಿತ್ರರು ಮಾತನಾಡಿದ್ದಾರೆ. ಈಗ ಶ್ರೀ ಕುಮಾರಸ್ವಾಮಿಯವರು ಮಾತನಾಡಿದ್ದಾರೆ. ತಾವು ಪತ್ರಿಕೆಗಳಲ್ಲೂ ಓದಿರಬಹುದು, ನಿನ್ನೆ ಪತ್ರಿಕೆಗಳಲ್ಲಿ ಬಂದಿರುವ ವಿಚಾರ ಈ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕಛೇರಿಯಲ್ಲಿ ಎಷ್ಟೋ ಅರ್ಜಿಗಳು ಹಾಗೇ ಟೇಬಲ್ ಮೇಲೆ ಬಿದ್ದಿದ್ದು ಅಧಿಕಾರಿ ಅಥವಾ ಕ್ಲರ್ಕ್ ಏನು ಕೆಲಸ ಮಾಡಿದ್ದಾರೆಂದು ಲೋಕಾಯುಕ್ತದವರು ಒಂದು ಉತ್ತಮ ಪ್ರದರ್ಶನ ಮಾಡಿದ್ದಾರೆ. ಆದರೆ ಸರ್ಕಾರಕ್ಕೆ ಆಸಕ್ತಿ ಇಲ್ಲವೇ ಎಂದು ನಾನು ಕೇಳುವುದು. ಒಂದು ಸಾವಿರ ಅರ್ಜಿಗಳು ಒಂದು ಟೇಬಲ್ ಮೇಲೆ ಉಳಿಯುತ್ತವೆಂದರೆ ಆಸಕ್ತಿ ಇದೆಯೇ ಇಲ್ಲವೇ ಎಂದು ಕೇಳುತ್ತೇನೆ. ಬ್ಯಾಂಕುಗಳ ವಿಚಾರ ಬಿಡಿ. ಎಸ್.ಸಿ.ಎಸ್.ಟಿ. ಕಾರ್ಪೊರೇಷನ್ ಆಗಲಿ, ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಗಲಿ ಯಾವ ಕಾರ್ಪೊರೇಷನ್ನಿಗೆ ಹೋದರೂ ಹಣ ಸಿಗುವುದಿಲ್ಲವೆಂದು ಮೊನ್ನೆ ನಮ್ಮ ಸ್ನೇಹಿತರು ಮಾತನಾಡುವಾಗ ಹೇಳಿದರು. ನೀವು ಹಣ ಮರುಪಾವತಿ ಮಾಡುವುದಿಲ್ಲ, ನಿಮಗೆ ಏತಕ್ಕೆ ಕೊಡಬೇಕೆಂದು ಕೇಳುತ್ತಾರೆ. ಹಾಗಾದರೆ ನೀವು ಏನೇನು ಹಣ ಮೀಸಲಿಟ್ಟಿದ್ದೀರಿ ಆ ಹಣವನ್ನೆಲ್ಲ ಕ್ಲೋಸ್ ಮಾಡಿ, ಅದರ ಅಗತ್ಯವಿಲ್ಲ. ಬ್ಯಾಂಕಿನಲ್ಲಿ ಕೊಡುವುದಿಲ್ಲವೆಂದರೆ ನೀವು ಏತಕ್ಕೆ ಕೊಡುವುದಕ್ಕೆ ಹೋಗುತ್ತೀರಿ? ಅವರು ಹೇಳಿದ ಹಾಗೆ ಕೆಲವು ಸದಸ್ಯರು ಅಭಿಪ್ರಾಯ ಕೊಟ್ಟಿದ್ದಾರೆ. ಆದುದರಿಂದ ಮಾನ್ಯ ಸದಸ್ಯರ ಜೊತೆ ಸಮಾಲೋಚನೆ ಮಾಡಿ ಬಡವರಿಗೆ ಅನುಕೂಲವಾಗುವಂತ ರೀತಿಯಲ್ಲಿ, ಬ್ಯಾಂಕ್ ಮ್ಯಾನೇಜರ್ಸ್ ಇರಬಹುದು, ಬ್ಯಾಂಕಿನ ಇತರೆ ಅಧಿಕಾರಿಗಳು ಇರಬಹುದು, ಅವರ ಜೊತೆ ಸಮಾಲೋಚನೆ ಮಾಡಿ ದಯಮಾಡಿ ಅವರನ್ನು ಕರೆದು ಸಮಾಲೋಚನೆ ಮಾಡಿ; ಅವರಿಗೆ ಸಹಕಾರ ನೀಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಾ, ಕೊನೆಯದಾಗಿ ಮುಜರಾಯಿ ಇಲಾಖೆ ಬಗ್ಗೆ ಯಾರೂ ಮಾತನಾಡಿಲ್ಲ. ಮುಜರಾಯಿ ಇಲಾಖೆ ಎಂದರೆ ನಮ್ಮ ಮುದ್ದಪ್ಪ ಮುನಿಯಪ್ಪನವರ ಇಲಾಖೆ; ಏತಕ್ಕೆ ಇದರ ಮೇಲೆ ಯಾರೂ ಮಾತನಾಡಿಲ್ಲವೆಂದು ಗೊತ್ತಿಲ್ಲ. ಆರಾಧನಾ ಯೋಜನೆ ಅಸ್ತಿತ್ವದಲ್ಲಿದ್ದು ಆ ದೃಷ್ಟಿಯಿಂದ ಇವತ್ತು ಆರಾಧನಾ ಸಮಿತಿಗಳು ಅನೇಕ ಕಡೆ ರಚನೆ ಆಗಿಲ್ಲ. ಬಿಡುಗಡೆಯಾದ ಹಣ ಎಷ್ಟಾಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ. ನನಗೆ ತಿಳಿವಳಿಕೆ ಇದ್ದಹಾಗೆ ನನ್ನ ಕ್ಷೇತ್ರಕ್ಕೆ ಎರಡು ವರ್ಷ ಎಂಟು ತಿಂಗಳ ಅವಧಿಯಲ್ಲಿ 7 ಲಕ್ಷ ರೂಪಾಯಿ ಹಣ ಮಾತ್ರ ಬಿಡುಗಡೆಯಾಗಿದೆ. ಇವೆಲ್ಲ ನಮಗೆ ನೋವು ಉಂಟುಮಾಡುವ ವಿಚಾರಗಳು. ತಮ್ಮ ಮೂಲಕ ನಾನು ಹೇಳದಿದ್ದರೆ ಇನ್ನು ಯಾರಿಗೆ

ಹೇಳಲಿ ಅಧ್ಯಕ್ಷರೆ? ಈ ಸದನದಲ್ಲಿ ಮಾನ್ಯ ಸದಾನಂದಗೌಡರು ಒಂದು ಮಾತು ಹೇಳಿದರು, ವಕ್ಫ್ ಮಂಡಳಿಗೆ ಮಸೀದಿಯ ಜೀರ್ಣೋದ್ಧಾರಕ್ಕಾಗಿ ನಾನು ಅರ್ಜಿಗಳನ್ನು ಕೊಟ್ಟರೆ ಅದಕ್ಕೆ ಯಾವುದೇ ರೀತಿಯ ಸಹಕಾರವನ್ನು ಮಾನ್ಯ ವಕ್ಫ್ ಮಂತ್ರಿಗಳು ಕೊಡಲಿಲ್ಲವೆಂದು ಹೇಳಿದರು. ನಾನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಕೆಲವು ದೇವಾಲಯಗಳ ಜೀರ್ಣೋದ್ದಾರಕ್ಕಾಗಿ ಅರ್ಜಿ ಕೊಟ್ಟರೆ, ಇಡೀ ಜಿಲ್ಲೆಯ ಎಲ್ಲ ಶಾಸಕರ ಪಟ್ಟಿ ಬೆಳೆಯುತ್ತದೆ. ಈ ಸದನದಲ್ಲಿ ಆ ಮಾತು ನಾವು ಹೇಳಬಾರದು. ನಾನು ಅಲ್ಪಸಂಖ್ಯಾತ ಇರಬಹುದು ಅಥವಾ ಬಹುಸಂಖ್ಯಾತ ಇರಬಹುದು, ಆದರೆ ಒಂದು ಮಾತು ಹೇಳುತ್ತೇನೆ, ನನ್ನ ಕ್ಷೇತ್ರದಲ್ಲಿ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಬೇಕಾದ ಹಣ ಕೊಡಿ ಎಂದು ಅರ್ಜಿ ಕೊಟ್ಟರೆ ತಾರತಮ್ಯ ಮಾಡಿದ್ದಾರೆ. ಆ ದೃಷ್ಟಿಯಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ನೇರವಾಗಿ ಒಂದು ವಿಚಾರ ಹೇಳುತ್ತೇನೆ, ಮಾನ್ಯ ಮಂತ್ರಿಗಳು ಉಪಸ್ಥಿತರಿದ್ದೀರಿ. ನನ್ನ ಅರ್ಜಿಗಳು ಅವರ ಕಛೇರಿಗೆ ಹೋಗಿವೆಯೆ? ಹೋಗಿವೆ. ಅವರು ಹಣ ಕೊಟ್ಟಿದ್ದೇವೆಂದು ಹೇಳುವುದಾದರೆ, ನಾನು ಈ ಸದನದಲ್ಲಿ ಸುಳ್ಳು ಹೇಳುತ್ತೇವೆಂದಾದರೆ ನಾನು ನನ್ನ ಸದಸ್ಯಗಿರಿಗೆ ರಾಜೀನಾಮೆ ಕೊಟ್ಟು ಹೋಗುತ್ತೇನೆ. ಆದರೆ ಈ ರೀತಿ ತಾರತಮ್ಯ ಮಾಡಬಹುದೆ? ಹಾಗಾದರೆ ಸರ್ಕಾರ ನಡೆಸುವವರು ಸೌಹಾರ್ದತೆ ಬಗ್ಗೆಯಾಗಲಿ, ಸಮಾನತೆಯ ಬಗ್ಗೆಯಾಗಲಿ ಮಾತನಾಡುವವರು ಇಡೀ ಜಿಲ್ಲೆಯ ಪಟ್ಟಿಯಲ್ಲಿ ಸಗೀರ್ ಆಹಮದ್ ಕ್ಷೇತ್ರದ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಅನುದಾನ ಬಿಡುಗಡೆ ಮಾಡುವುದಿಲ್ಲವೆಂದು ಹೇಳಿದರೆ ಮಾನ್ಯ ಮಂತ್ರಿಗಳು ತಾರತಮ್ಯ ಮಾಡುತ್ತಿದ್ದಾರೋ ಇಲ್ಲವೋ ಎಂಬುದರ ಬಗ್ಗೆ ತಾವು ದಯಮಾಡಿ ಅವರಿಗೆ ಸೂಚನೆ ಕೊಡಬೇಕು. ಕೊನೆಯದಾಗಿ, ನಾನು ವಕ್ಫ್ ಮಂಡಲಿಯ ವಿಚಾರವನ್ನು ಮಾತನಾಡದಿದ್ದರೆ ತಪ್ಪಾಗುತ್ತದೆ. ಪ್ರಾಯಶಃ ತಾವು ನನಗೆ ಅವಕಾಶ ಕೊಡುತ್ತೀರಿ, ತಮಗೆ ಅನಂತ ಧನ್ಯವಾದಗಳು; ನಾನು ತಮ್ಮನ್ನು ಮರೆಯುವುದಕ್ಕಾಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿರುವಂತಹ ಸಂದರ್ಭದಲ್ಲಿ, ಈ ವಕ್ಫ್ ಮಂಡಳಿಯ ವಿಚಾರವನ್ನು ತಮ್ಮ ಮೂಲಕ ನಾನು ಅವರ ಗಮನಕ್ಕೆ ತರುತ್ತಿದ್ದೇನೆ. ನಾನು ಮಾನ್ಯ ಮುಖ್ಯ ಮಂತ್ರಿಗಳ ಬಗ್ಗೆ ಅಪಾರವಾದ ಗೌರವ, ಪ್ರೀತಿ, ವಿಶ್ವಾಸ ಹೊಂದಿರುವವನು. ಏಕೆಂದರೆ, ಈ ರಾಜ್ಯದ ಪ್ರಥಮ ಪ್ರಜೆಯಾಗಿ ಈ ತಾರತಮ್ಯವನ್ನು ತಾವು ದಯವಿಟ್ಟು ಮಾಡಬಾರದೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ನಾಗರಾಜ್ ಒಬ್ಬರಿಗೇ ಅಪಾರವಾದ ಗೌರವ ಎಂದು ತಿಳಿದುಕೊಂಡಿದ್ದೆ. ಈಗ ಇನ್ನೊಬ್ಬರು ಸೇರಿ ಇಬ್ಬರಾದರು.

ಅಧ್ಯಕ್ಷರು: ಅವರಿಗೆ ಸಮಗ್ರವಾದ ಅಪಾರವಾದ ಗೌರವ, ಇವರಿಗೆ ಬರೀ ಅಪಾರವಾದ ಗೌರವ.

ಶ್ರೀ ವಾಟಾಳ್ ನಾಗರಾಜ್: ಅವರು ತಾರತಮ್ಯ ಎಂದು ಏನಾದರೂ ಹೇಳಿಕೊಳ್ಳಲಿ. ಆದರೆ, ಅವರು ಚೆನ್ನಾಗಿ ಮಾತನಾಡುತ್ತಾರೆ. ಅವರು ಮಂತ್ರಿಯಾಗಿದ್ದಾಗಲೂ ಕೂಡ ಚೆನ್ನಾಗಿ ಕೆಲಸ ಮಾಡಿದ್ದಾರೆ. ಅವರ ಬಗ್ಗೆ ನನಗೆ ಬಹಳ ಗೌರವವಿದೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಶ್ರೀ ವಾಟಾಳ್ ನಾಗರಾಜ್ ಸಾಹೇಬರಿಗೆ ತಮ್ಮ ಪರವಾಗಿ ನನ್ನ ವಂದನೆಗಳು. ವಕ್ಫ್ ಮಂಡಳಿಗೆ 1994-95ನೇ ಸಾಲಿನಲ್ಲಿ ಸಹಾಯಧನವಾಗಿ ಸರ್ಕಾರದಿಂದ ನೀಡುತ್ತಿದ್ದುದು ಹೆಚ್ಚೂಕಡಿಮೆ 4 1/2 ಕೋಟಿ ರೂಪಾಯಿ. ಏಕೋ ನಮ್ಮ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕಡೆ ಆಸಕ್ತಿ ತೋರಿಸುತ್ತಿಲ್ಲವೋ? ಅಥವಾ ನಾವೇ ಮುಖ್ಯಮಂತ್ರಿಗಳ ಮೇಲೆ ಒತ್ತಡ ತರುತ್ತಿಲ್ಲವೋ ಗೊತ್ತಿಲ್ಲ. ಆದರೆ, 1997-98ನೇ ಸಾಲಿಗೆ ಇವತ್ತಿನವರೆಗೆ ಹಣ ಬಿಡುಗಡೆಯಾಗಿಲ್ಲ. ಏಕೆಂದರೆ, ಕೆಲವೊಮ್ಮೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಎಂದು ನಾನು ಅನೇಕ ಸಂದರ್ಭಗಳಲ್ಲಿ ನಾನು ವಕ್ಫ್ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡಾಗ, ಅವರು ಮುಖ್ಯಮಂತ್ರಿಗಳಿಗೆ ಹೇಳುತ್ತೇನೆಂದು ಹೇಳಿದ್ದರು. ಈಗ ತಾವು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಮುಖ್ಯಮಂತ್ರಿಗಳು ದಯಮಾಡಿ ನಾಲ್ಕೂವರೆ ಕೋಟಿ ರೂಪಾಯಿ ಇರುವಂಥದ್ದರ ಬಗ್ಗೆ ಐದೂವರೆ ಕೋಟಿಯಾದರೂ ತಾವು ಈ ಸಾರಿ ಮಾಡಿಕೊಡಬೇಕು. ಅಲ್ಪಸಂಖ್ಯಾತ ಕೋಮಿಗೆ ಸೇರಿರುವ ಮಸೀದಿ ಇರಬಹುದು, ಕಬ್ರಸ್ತಾನ್ ಮತ್ತು ಇತರೆ ವಿಚಾರಗಳಲ್ಲಿ ಅನುಕೂಲವಾಗುತ್ತದೆಂದು ಹೇಳಿ, ನಾನು ಅಧ್ಯಕ್ಷರ ಮುಖಾಂತರವಾಗಿ ವಿನಯಪೂರ್ವಕವಾಗಿ ಪ್ರಾರ್ಥಿಸುತ್ತಾ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ.ರಾಮದಾಸ್: ಸನ್ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ, ತಾವು ನನಗೆ ಅವಕಾಶ ಕೊಟ್ಟಿದ್ದಕ್ಕೋಸ್ಕರ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಆರೋಗ್ಯ ಇಲಾಖೆಯ ಬಗ್ಗೆ ಯಾರೂ ಚರ್ಚೆ ಮಾಡದಿರುವ ದೃಷ್ಟಿಯಿಂದ ನಾನು ಕೆಲವು ವಿಚಾರಗಳನ್ನು ತಮ್ಮ ಮುಂದಿಡುತ್ತಿದ್ದೇನೆ. When wealth is lost nothing is lost, when health is lost something is lost, when character is lost everything is lost ಎಂದು ತರಗತಿಯಲ್ಲಿ ಹೇಳುತ್ತಿದ್ದುದು ಈಗ ನಮ್ಮ ನೆನಪಿಗೆ ಬರುತ್ತಿದೆ. ದೇಶದಲ್ಲಿರತಕ್ಕ, ರಾಜ್ಯದಲ್ಲಿರತಕ್ಕ ಆರೋಗ್ಯದ ಪರಿಸ್ಥಿತಿ ಹಾಳಾಗಿರುವುದು ಮೊದಲನೆಯದಾದರೆ, ಭಾರತ ದೇಶ ಯಾವ ಸ್ಥಾನದಲ್ಲಿದೆಯೆಂದು ಒಂದು ಸಲ ಯೋಚನೆ ಮಾಡಿದಾಗ, ಪ್ರತಿನಿಧಿಗಳಾಗಿ ನಮ್ಮ ಕರ್ತವ್ಯವೇನು? ಎನ್ನುವ ನೋವೂ ಕೂಡ ನಮ್ಮ ಮನಸ್ಸಿಗೆ ಆಗುತ್ತದೆ. ಕಾರಣವೆಂದರೆ, ಭಾರತ ಕ್ಷಯರೋಗದಲ್ಲಿ ಮೊದಲ ಸ್ಥಾನದಲ್ಲಿದೆ, ಅರ್ಬುದ ರೋಗದಲ್ಲಿ ಮೊದಲನೆ ಸ್ಥಾನದಲ್ಲಿದೆ, ಕುಷ್ಠರೋಗದಲ್ಲಿ ಮೊದಲ ಸ್ಥಾನದಲ್ಲಿದೆ, ಹೆಚ್ಚು ಕುರುಡರು ಸಾಯುವುದು ಭಾರತದಲ್ಲೇ, ಮಕ್ಕಳು ಸಾವು ಹೆಚ್ಚಿಗಿರುವುದೂ ಭಾರತದಲ್ಲೇ, ಏಡ್ಸ್ ಇಡೀ ಪ್ರಪಂಚದಲ್ಲಿ ಏಡ್ಸ್‌ಗೆ ಭಾರತ 2ನೇ ಸ್ಥಾನಕ್ಕೆ ಬರುತ್ತಿದೆ, ಹಾಗೆಯೇ

ಗರ್ಭಿಣಿಯರು ಸಾಯುವುದರಲ್ಲೂ ಭಾರತ 2ನೇ ಸ್ಥಾನಕ್ಕೆ ಬರುತ್ತಿದೆ. ಈ ಪರಿಸ್ಥಿತಿ ಇರುವಾಗ ನಾವು ಯಾವ ರೀತಿಯಾಗಿ ನಮ್ಮ ಕಾರ್ಯವನ್ನು ನಿಭಾಯಿಸಬೇಕಾಗಿದೆ? ಈ ರಾಜ್ಯದಲ್ಲಿ ಒಳ್ಳೆಯ ಆರೋಗ್ಯ ಮಂತ್ರಿಗಳಿದ್ದಾರೆ. ನಾವು ಪ್ರಗತಿಯನ್ನು ಹೇಗೆ ಸಾಧನೆ ಮಾಡಬೇಕೆನ್ನುವುದರ ಬಗ್ಗೆ ಎರಡು ವಿಚಾರಗಳನ್ನು ತಮ್ಮ ಮುಂದಿಡುತ್ತಿದ್ದೇನೆ. ಈಗ ವಿಶ್ವಯೋಜನೆಯಲ್ಲಿ ಈಗಾಗಲೇ 546 ಕೋಟಿ ರೂಪಾಯಿಗಳ ಬೃಹತ್ ಯೋಜನೆಗೆ ಕೇಂದ್ರಸರ್ಕಾರದಿಂದ ಹಾಗೂ ವಿಶ್ವಬ್ಯಾಂಕ್‌ನಿಂದ ಕೆಲಸ ಮಾಡಲಿಕ್ಕೆ ಗ್ರೀನ್ ಸಿಗ್ನಲ್ ದೊರೆತಿದೆ ಎನ್ನುವ ಹರ್ಷದ ವಿಚಾರ ನಮಗೆ ಗೊತ್ತಾಗಿದೆ. ಪ್ರಾರಂಭವಾಗಿದ್ದರೂ, ಕಳೆದ 2 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ವಿಚಾರವನ್ನು ನಾವಿಲ್ಲಿ ಹೇಳುತ್ತಿದ್ದೇವೆ. Health for all by 2000 A.D ಎಂದು ಹೇಳಿ. ಆ ಒಂದು ಕಾರ್ಯಕ್ರಮ ನಿಜವಾಗಿಯೂ ಕಾರ್ಯರೂಪಕ್ಕೆ ಬರಬೇಕಾದರೆ ಕೇವಲ ಘೋಷಣೆಯಾಗಿ ಉಳಿಯದೆ ಇರಬೇಕಾದರೆ, ನಮ್ಮಲ್ಲಿ ಈಗ ಹಾಕಿಕೊಂಡಿರುವ ವಿಚಾರವೇನೆಂದರೆ, ಸೆಕೆಂಡರಿ ಹೆಲ್ತ್‌ಕೇರ್ ಫೆಸಿಲಿಟಿ ಏನಿದೆ, ಅದನ್ನು ಜಾಸ್ತಿ ಮಾಡಬೇಕೆಂಬುದು ಬಹಳ ಶ್ಲಾಘನೀಯವಾದ ವಿಚಾರವಾದರೂ ಕೂಡ, ಇರುವ ಆಸ್ಪತ್ರೆಗಳನ್ನು ಮಾಡಲ್ ಆಸ್ಪತ್ರೆಗಳನ್ನಾಗಿ ಮಾಡಬೇಕೆನ್ನುವ ವಿಚಾರ ಇವತ್ತು ಯೋಜನೆಯಲ್ಲಿದ್ದರೂ ಕೂಡ, ಮೊದಲನೆಯದಾಗಿ ನಾವು ಮಾಡಬೇಕಾಗಿರತಕ್ಕದ್ದು ಪ್ರೈಮರಿ ಹೆಲ್ತ್ ಕೇರ್ ಫೆಸಿಲಿಟಿ ಏನಿದೆ, ವಿಶೇಷವಾಗಿ ಗ್ರಾಮಾಂತರ ಪ್ರದೇಶಕ್ಕೆ, ಅದರ ಬಗ್ಗೆ ಹೆಚ್ಚು ಒತ್ತನ್ನು ಕೊಡಬೇಕಾದ ಅವಶ್ಯಕತೆಯಿದೆ ಎನ್ನುವುದನ್ನು ನಾನು ತಮ್ಮ ಮೂಲಕ ಹೇಳುತ್ತಿದ್ದೇನೆ. ಜೊತೆಗೆ, ಈಗಾಗಲೇ ಹೇಳಿದ ರೀತಿಯಲ್ಲಿ, ಟೆರಿಷಯರಿ ಹೆಲ್ತ್ ಕೇರ್ ಫೆಸಿಲಿಟಿಗೂ ಕೂಡ ಹೆಚ್ಚಿನ ಮಹತ್ವವನ್ನು ನಾವು ಕೊಡುತ್ತಿದ್ದೇವೆ. ಆದರೆ, ಬರುತ್ತಿರುವ ಹಣವೆಲ್ಲಾ ಕ್ಯುರೇಟೀವ್ ಹೆಲ್ತ್ ಕೇರ್‌ಗೆ ಮಾತ್ರ ಉಪಯೋಗವಾಗದೆ ಅದು ಪಿಎಚ್‌ಸಿಗಳಿಗೆ ಹೆಚ್ಚು ಉಪಯೋಗವಾಗಬೇಕೆನ್ನುವ ಮಾತನ್ನು ಹೇಳುತ್ತೇನೆ. ಈಗಿರುವ 1,253 ಪಿಎಚ್‌ಸಿಗಳು ಮತ್ತು 773 ಸಬ್-ಸೆಂಟರ್‌ಗಳೇನಿವೆ, ಅದರಲ್ಲೂ ವಿಶೇಷವಾಗಿ ಗುಡ್ಡಗಾಡು ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವಿಶೇಷವಾಗಿ ಗಿರಿಜನ ತಾಣಗಳಿರುವ ಸಬ್-ಸೆಂಟರ್‌ಗಳು ನಿಜವಾಗಿಯೂ ಕೆಲಸ ಮಾಡುತ್ತಿಲ್ಲ. ಕಾರಣ, ಅಲ್ಲಿರುವ ವೈದ್ಯರೇನಿದ್ದಾರೆ, ಅವರು ಅದರ ಸಮಸ್ಯೆಗಳನ್ನೆದುರಿಸುತ್ತಿದ್ದಾರೆ. ಇದರ ಬಗ್ಗೆ ಕೂಡ ನೇರವಾದ ವಿಚಾರವಾಗಬೇಕೆನ್ನುವಂಥಾದ್ದನ್ನು ತಮ್ಮ ಮೂಲಕ ಹೇಳಲು ಇಚ್ಛಿಸುತ್ತೇನೆ. ಜೊತೆಗೆ, ಇಲ್ಲಿ ಕರ್ನಾಟಕ ಹೆಲ್ತ್ ಸಿಸ್ಟಂ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಎನ್ನುವಂಥ ಪ್ರಾಜೆಕ್ಟನ್ನು ದಿ:26.7.96ರಲ್ಲಿ ಪ್ರಾರಂಭ ಮಾಡಿದರು. ಆದರೆ, ಏಕೋ ಗೊತ್ತಾಗುತ್ತಿಲ್ಲ, ಅದಕ್ಕೆ ಅನಾರೋಗ್ಯವಾಗಿದೆ. ಟೇಕ್-ಆಫ್ ಸ್ಟೇಜ್‌ನಲ್ಲಿ ಅದು ಇಲ್ಲ. ಈ ಪರಿಸ್ಥಿತಿ ಏತಕ್ಕೋಸ್ಕರ ಬಂದಿದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಈ ದೃಷ್ಟಿಯಲ್ಲಿ ಮುಖ್ಯಮಂತ್ರಿಗಳು, ಆರೋಗ್ಯ ಮಂತ್ರಿಗಳು ಕೊಟ್ಟ ಅರ್ಧ ಪೇಜಿನ ಜಾಹೀರಾತನ್ನು ನೋಡಿದೆ. ಅದರಲ್ಲಿ 1,332 ಜನಸಂಖ್ಯೆಗೆ ಒಂದು ಬೆಡ್ಡಿನ ರೂಪದಲ್ಲಿದೆ ಎಂದು ಹೇಳಿದರು. ಆದರೆ, ನನ್ನಲ್ಲಿರುವ ಮಾಹಿತಿ ಪ್ರಕಾರ, ಸುಮಾರು

2,326 ಜನರಿಗೆ ಒಂದು ಬೆಡ್ ಇರುವ ಫೆಸಿಲಿಟೀಸ್ ನಮ್ಮಲ್ಲಿದೆ. ಆದರೆ, ಅದನ್ನು ಇಂಪ್ರೂವ್ ಮಾಡುವ ಅವಶ್ಯಕತೆ ಇದೆ ಎನ್ನುವುದನ್ನು ಹೇಳುತ್ತೇನೆ. ಕಳೆದ ಬಾರಿ ತಾವು ಆರೋಗ್ಯ ಮಂತ್ರಿಗಳು ಕೊಟ್ಟಂಥ ಉತ್ತರದಲ್ಲಿ, ಬಹಳ ದೊಡ್ಡ ದೊಡ್ಡ ಆಶ್ವಾಸನೆಗಳನ್ನು ನಾವು ನೋಡಿದ್ದೇವೆ. 300 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ನಾವು ಕೇಂದ್ರಸರ್ಕಾರದ ರಾಷ್ಟ್ರೀಯ ಕೌನ್ಸಿಲ್‌ನಡಿಯಲ್ಲಿ ಆ ಯೋಜನೆಯನ್ನು ತರುತ್ತಿದ್ದೇವೆ. ಹಾಗೂ ವಿಶೇಷವಾಗಿ ಗುಲ್ಬರ್ಗಾ ಪ್ರದೇಶದಲ್ಲಿ, ಜರ್ಮನಿಯ ಸಹಾಯದಿಂದ 47 ತಾಲ್ಲೂಕುಗಳಲ್ಲಿ ಗುಣಮಟ್ಟದ ಆಸ್ಪತ್ರೆ ಮಾಡುವಂಥಾದ್ದು ಹಾಗೂ 122 ಕೋಟಿ ರೂಪಾಯಿಗಳಿಂದ 13 ಜಿಲ್ಲೆಗಳಲ್ಲಿ ಆಸ್ಪತ್ರೆಗಳನ್ನು ತೆರೆಯುವಂಥಾದ್ದು, ಇಂಥ ಒಳ್ಳೆಯ ವಿಚಾರಗಳನ್ನು ಹೇಳಿದರು. ಆದರೆ, ಅದರ ಸ್ಥಿತಿ ಏನಾಗಿದೆಯೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಜೊತೆಗೆ, ಪ್ರಮುಖವಾಗಿ ಇರುವಂಥದ್ದೆಂದರೆ, ಮೊದಲನೆಯದಾಗಿ ಬೇಕಾಗಿರುವಂಥಾದ್ದು More than augmenting the secondary health care unit ಮೊದಲನೇ ಕೆಲಸ ಪ್ರೈಮರಿ ಹೆಲ್ತ್ ಯೂನಿಟ್ ಏನಿವೆ, ಅದರ ಫೆಸಿಲಿಟೀಸ್‌ಗಳನ್ನು ಜಾಸ್ತಿ ಮಾಡುವ ಅವಶ್ಯಕತೆ ಇದೆ. ಎರಡನೆಯದು, ಮುಖ್ಯವಾದುದೆಂದರೆ, ನ್ಯಾಷನಲ್ ಏಡ್ಸ್ ಕಂಟ್ರೋಲ್‌ಗೆ ಪ್ರೋಗ್ರಾಂ ಏನಿದೆ ಮತ್ತು ಬ್ಲಡ್ ಬ್ಯಾಂಕ್‌ಗಳ ವಿಚಾರದಲ್ಲಿ ಹೇಳಬೇಕಾದರೆ, ಏತಕ್ಕೆಂದು ನನಗೆ ಅರ್ಥವಾಗುತ್ತಿಲ್ಲ. ನ್ಯಾಷನಲ್ ಏಡ್ಸ್ ಕಂಟ್ರೋಲ್ ಪ್ರೋಗ್ರಾಂನಲ್ಲಿ, ಕೇಂದ್ರಸರ್ಕಾರದಿಂದ ಬೇಕಾದ ಇನ್‌ಫ್ರಾಸ್ಟ್ರಕ್ಚರ್‌ಗಳನ್ನು ಕೊಡುತ್ತಿದ್ದಾರೆ. ಜೊತೆಗೆ ಬೇಕಾದ ಬೇಸಿಕ್ ಫೆಸಿಲಿಟೀಸ್‌ಗಳನ್ನು ಕೊಟ್ಟಿದ್ದರು ಕೂಡ, ಏತಕ್ಕ ಕಳೆದ 2 ವರ್ಷಗಳಿಂದ ನಾವು ಉಪಯೋಗ ಮಾಡಿಕೊಂಡಿಲ್ಲವೆನ್ನುವ ನೋವಿನ ವಿಚಾರವನ್ನು ಅಧ್ಯಕ್ಷರ ಮುಖಾಂತರ ನಾನು ಹೇಳಲು ಬಯಸುತ್ತೇನೆ. 1996-97ನೇ ಸಾಲಿನಲ್ಲಿ 2.3 ಕೋಟಿ ರೂಪಾಯಿಗಳು ಕೇಂದ್ರಸರ್ಕಾರದಿಂದ ಬಂದಿರುವಂಥಾದ್ದು ಲ್ಯಾಪ್ಸ್ ಆಗಿದೆ. ಆ ಒಂದು ಏಡ್ಸ್ ಕಂಟ್ರೋಲ್ ಪ್ರೋಗ್ರಾಂನ್ನು ಏತಕ್ಕೆ ಉಪಯೋಗ ಮಾಡಿಕೊಳ್ಳುವ ಕೆಲಸವನ್ನು ನಾವು ಮಾಡಿಲ್ಲವೆನ್ನುವಂಥಾದ್ದು ಬಹಳ ಶೋಚನೀಯ ವಿಚಾರ. ರಾಜ್ಯದಲ್ಲಿ ಈಗಿನ ಮಾಹಿತಿಯ ಪ್ರಕಾರದಲ್ಲಿ ಸುಮಾರು 5 ಲಕ್ಷ ಜನರಲ್ಲಿ ಎಚ್‌ಐವಿ ಪಾಸಿಟೀವ್ ಬಂದಿದೆ. ಸಾವಿರಾರು ಜನರಲ್ಲಿ ಏಡ್ಸ್ ಇದೆ ಎನ್ನುವ ವಿಚಾರ ಈಗಾಗಲೇ ಪತ್ತೆಯಾಗಿದೆ. ಆ ದೃಷ್ಟಿಯಲ್ಲಿ ಪ್ರಮುಖವಾಗಿ ಮಂತ್ರಿಗಳು ಬೆಂಗಳೂರು ನಗರ ಮತ್ತು ಬೆಳಗಾಂನಲ್ಲಿ ಈ ಏಡ್ಸ್ ಪತ್ತೆಯಾಗಿರುವ ಪ್ರದೇಶಗಳಲ್ಲಿ ಇದರ ಬಗ್ಗೆ ಒಂದು ಕಾಳಜಿ ವಹಿಸಬೇಕಾಗಿದೆ. ಇದಕ್ಕೆ ಸಂಬಂಧಪಟ್ಟಹಾಗೆ, ಸಾರ್ವಜನಿಕರಿಗೆ ತಿಳುವಳಿಕೆ ಕೊಡುವಂಥ ಪ್ರೋಗ್ರಾಂಗಳು ಹಾಗೂ ಪ್ರಚಾರಾಂದೋಲನ ಮಾಡುವುದು ಹಾಗೂ ಎಫೆಕ್ಟೀವ್ ಆಗಿ ಮಾದಕ ವ್ಯಸನಿಗಳನ್ನು ಕಂಟ್ರೋಲ್ ಮಾಡುವ ಸಿಸ್ಟಂ ಏನಿದೆ ಅದು ಈಗಲೂ ಕಾರ್ಯರೂಪಕ್ಕೆ ಬರುತ್ತಿಲ್ಲ, ಒಂದು ಅದರ ಹೆಡ್‌ನಲ್ಲಿ ಹಣ ತೆಗೆದಿದ್ದೀರಿ. ಇದು ತುಂಬಾ ಅವಶ್ಯಕವಾದ ವಿಚಾರ. ಈ ಸಾಲಿನಲ್ಲಿ ಇದಾಗಬೇಕಾಗಿದೆ ಎನ್ನುವ ವಿಚಾರವನ್ನು ಹೇಳುತ್ತೇನೆ. ಮಂತ್ರಿಗಳು ಒಂದು ವಿಚಾರವನ್ನು ಇಲ್ಲಿ ಹೇಳಿದರು. ರಾಜ್ಯದಲ್ಲಿ ಸುಪ್ರೀಂಕೋರ್ಟ್

ಆರ್ಡರ್ ಬಂದ ನಂತರದಲ್ಲಿ ಎಲ್ಲಾ ಬ್ಲಡ್ ಬ್ಯಾಂಕ್‌ಗಳನ್ನು ಯಾರು ಪ್ರೊಫೆಷನಲ್ ಡೋನರ್ಸ್ ಇದ್ದಾರೆ, ಅದನ್ನು ನಾವು ಇವತ್ತು ಕಡಿಮೆ ಮಾಡಿದ್ದೇವೆ, ಎಲ್ಲಾ ನಿಯಂತ್ರಣ ಮಾಡುತ್ತೇವೆ ಎಂದು ಹೇಳಿದರು. ಆದರೆ, ಪ್ರೊಫೆಷನಲ್ ಬ್ಲಡ್ ಡೋನರ್ಸ್ ಮತ್ತು ಕಮರ್ಷಿಯಲ್ ಆಗಿ ಇವತ್ತು ಬ್ಲಡ್ ಬ್ಯಾಂಕ್‌ಗಳನ್ನು ನಡೆಸುತ್ತಿರುವುದು ಇದೆ. ಅದನ್ನು ಹೇಳಿದಾಗ, ಇಲ್ಲ ಎನ್ನುವ ವಿಚಾರವನ್ನು ಅವರು ಹೇಳಿದರು. ಇದಕ್ಕೋಸ್ಕರ ಅಂಥ ಒಂದು ಬ್ಲಡ್ ಬ್ಯಾಂಕ್ ಯಾವುದು ನಡೆಯುತ್ತಿದೆ ಎಂದು ಹೇಳುತ್ತೇನೆ, ಗ್ರೇಸ್ ಬ್ಲಡ್ ಬ್ಯಾಂಕ್ ಅನ್ನುವಂಥದ್ದೊಂದಿದೆ. ಅದರಲ್ಲಿ ಡಾ: ಮಹಾದೇವಪ್ಪ ಎನ್ನುವವರ ಹೆಸರಿನಲ್ಲಿದೆ, ಬ್ಲಡ್ ತರಸಿದ್ದೇವೆ. ಅದರಲ್ಲಿ ಪ್ರಮುಖವಾಗಿ ಕಮರ್ಷಿಯಲ್ ರೇಟಿನಲ್ಲಿ 400 ರೂಪಾಯಿಗೆ ಬ್ಲಡ್ ಕೊಟ್ಟಿದ್ದಾರೆ. ಅದನ್ನು ಅವರಿಗೆ ಕಳುಹಿಸಿಕೊಡುತ್ತಿದ್ದೇವೆ. ಈ ರೀತಿಯಲ್ಲಿ ಎಷ್ಟು ಬ್ಲಡ್‌ಬ್ಯಾಂಕ್‌ಗಳು ರಾಜ್ಯದಲ್ಲಿ ನಡೆಯುತ್ತಿವೆ, ಇದರಿಂದ ರೋಗಗಳು ಹರಡುವ ಸಾಧ್ಯತೆ ಇದೆ ಎನ್ನುವ ವಿಚಾರವನ್ನು ನಾನು ತಮ್ಮ ಮೂಲಕ ಹೇಳಲಿಕ್ಕೆ ಬಯಸುತ್ತೇನೆ.

ಡಾ: ಎಂ.ಪಿ.ಕರ್ಕಿ: ನಮ್ಮಲ್ಲಿ ನೂರು, ಇನ್ನೂರು ಕಿ.ಮೀ.ಗೆ ಒಂದು ಬ್ಲಡ್ ಬ್ಯಾಂಕ್ ಇವೆ. ಕೇಳಿದರೆ, ಸುಪ್ರೀಂಕೋರ್ಟ್ ಆರ್ಡರ್ ಆಧಾರದ ಮೇಲೆ ಸ್ಥಾಪನೆಯಾಗಬೇಕಾಗಿದೆ, ಅದಕ್ಕಾಗಿ ಅನುಮತಿ ಕೊಡುತ್ತಿಲ್ಲವೆನ್ನುತ್ತಾರೆ. ನಮ್ಮ ನ್ಯಾಷನಲ್ ಹೈ-ವೇಯಲ್ಲಿ ಆಕ್ಸಿಡೆಂಟ್‌ಗಳಾಗಿ ಅನೇಕ ಜನ ಬ್ಲಡ್ ಇಲ್ಲದೆ ಸಾಯುತ್ತಾರೆ. ಅದಕ್ಕಾಗಿ, ಸರ್ಕಾರ ಮುಂದೆ ಬಂದು ಎಲ್ಲೆಲ್ಲಿ ಬ್ಲಡ್ ಬ್ಯಾಂಕ್ ಸ್ಥಾಪನೆ ಮಾಡಬೇಕು ಅಥವಾ ಇದರಲ್ಲಿ ರಿಲ್ಯಾಕ್ಸೇಷನ್ ಮಾಡಬೇಕು. ಬ್ಲಡ್ ತೆಗೆದುಕೊಂಡು ಕೂಡಲೇ ಕಲೆಕ್ಟ್ ಅಂಡ್ ಟ್ರಾನ್ಸ್‌ಫ್ಯೂಷನ್ ರೀತಿ ಮಾಡಲಿಕ್ಕೆ ಅನುಕೂಲತೆ ಮಾಡಿಕೊಡಬೇಕು. ಇಲ್ಲದೇ ಹೋದರೆ, ಆಕ್ಸಿಡೆಂಟ್ ಆಗಿ ಜನ ಸಾಯುತ್ತಾರೆ, ಹ್ಯಾಮರೇಜ್ ಆಗಿ ಸಾಯುತ್ತಾರೆ, ಬಾಣಂತಿಯರು ಪೋಸ್ಟ್-ಪಾರ್ಟ ಹ್ಯಾಮರೇಜ್ ಆಗಿ ಸಾಯುತ್ತಾರೆ. ಅದಕ್ಕಾಗಿ ಆ ವ್ಯವಸ್ಥೆ ಮಾಡಬೇಕೆಂದು ನಾನು ಆರೋಗ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎ.ರಾಮದಾಸ್: ಸನ್ಮಾನ್ಯ ಅಧ್ಯಕ್ಷರೇ, ನ್ಯಾಷನಲ್ ಹೆಲ್ತ್ ಪ್ರೋಗ್ರಾಂನಲ್ಲಿ ಪ್ರಮುಖವಾಗಿ ಕೇಂದ್ರಸರ್ಕಾರದಿಂದ ಸಂಪೂರ್ಣವಾಗಿ 100 ಪರ್ಸೆಂಟ್ ಹಣ ಬರುತ್ತಿದೆ. ಅದಕ್ಕೆ ಸಂಬಂಧಪಟ್ಟಹಾಗೆ ಮಲೇರಿಯಾ ಫ್ಯಾಲ್ಸಿಫಾರ್ಮ್ ಬಗ್ಗೆ ಹೇಳಬೇಕಾದರೆ ರಾಜ್ಯದಲ್ಲಿ ಇರುವಂಥದ್ದು ಇನ್ಸಿಡೆಂಟ್ ರೇಟ್ ಸಿಕ್ಕಾಪಟ್ಟೆ ಜಾಸ್ತಿಯಾಗಿದೆ. ಒಂದು ಬಹಳ ನೋವಿನ ವಿಚಾರ ಇವತ್ತು ಆರೋಗ್ಯ ಇಲಾಖೆಯ ವರದಿಯ ಪ್ರಕಾರವೇ ಆನ್ಯುಯಲ್ ಪ್ಯಾರಸೈಟ್ ಇನ್‌ಡೆಕ್ಸ್ ಯಾವುದೇ ಕಾರಣಕ್ಕೂ ಎರಡಕ್ಕಿಂತ ಜಾಸ್ತಿ ಆಗಬಾರದು. ಆದರೆ ರಾಜ್ಯದಲ್ಲಿ ಎರಡಕ್ಕಿಂತ ದಾಟಿರುವುದು ಈ ವರ್ಷದಲ್ಲಿ ನೋವಿನ ವಿಚಾರ. ಅದು ಎಪಿಡೆಮಿಕ್ ರೋಗವಾಗಿ ಹರಡುವುದನ್ನು ನಾವು ನಿಯಂತ್ರಣ ಮಾಡಲೇಬೇಕಾಗಿದೆ. ಈ ದೃಷ್ಟಿಯಿಂದ ಜೈವಿಕ ಪರಿಸರ

ನಿಯಂತ್ರಣ ಮತ್ತು ಕೀಟನಾಶಕಗಳ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕಾದಂಥ ಅವಶ್ಯಕತೆ ಇದೆ. ಜೊತೆಗೆ ಮಸ್ಕಿಟೋ ಪಾಪ್ಯುಲೇಷನ್ ಎಲ್ಲಿ ಜಾಸ್ತಿಯಾಗುತ್ತಿದೆ ಅದರ ಬಗ್ಗೆ ಸರ್ವೆ ಆಗುತ್ತಿಲ್ಲ. ಸನ್ಮಾನ್ಯ ಅಧ್ಯಕ್ಷರೆ. ಏತಕ್ಕೆ ಈ ಸಮಸ್ಯೆ ಆಗುತ್ತಿದೆ ಎನ್ನುವುದನ್ನೂ ಕೂಡ ಇವತ್ತು ನಾವು ಯೋಚನೆ ಮಾಡಬೇಕಾಗಿದೆ. ಮಸ್ಕಿಟೋ ಎರಾಡಿಕೇಷನ್ ಪ್ರೋಗ್ರಾಂ ಟೋಟಲ್ ಫೈಲ್ಯೂರ್ ಆಗಿರುವುದನ್ನು ಇವತ್ತು ನಾವು ಕಾಣುತ್ತಿದ್ದೇವೆ. ಜೊತೆಗೆ ಇದರ ಬಗ್ಗೆ ಒಂದು ರಿಸರ್ಚ್ ವರ್ಕ್ ಅವಶ್ಯಕತೆ ಇದೆ. ಬೇರೆ ಬೇರೆ ದೇಶಗಳಿಗೆ ಕಳುಹಿಸಿಕೊಟ್ಟು ಎಂಟಮೂಲಜಿಯಲ್ಲಿ ಎಕ್ಸ್‌ಪರ್ಟ್ ಆಗಿ ಬಂದಂಥವರನ್ನು ಉಪಯೋಗ ಮಾಡುವಂಥ ಕೆಲಸ ಇವತ್ತು ನಮ್ಮಲ್ಲಿ ಆಗುತ್ತಿಲ್ಲ. ಕೇವಲ ಕೆಲವೇ ಜನ ಇಲ್ಲಿದ್ದಾರೆ ಎನ್ನುವಂಥದ್ದು ತಿಳಿದು ಬಂದಿದೆ. ಸನ್ಮಾನ್ಯ ಅಧ್ಯಕ್ಷರೆ, ತಾವು ಪತ್ರಿಕೆಯಲ್ಲಿ ಓದಿದ್ದೀರಿ. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಯಲ್ಲೋ ಫೀವರ್ ಬಂದಂಥ ಸಮಯದಲ್ಲಿ ಸುಮಾರು 26 ಜನರನ್ನು ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದರು. ಎಲ್ಲಾ ಪಿ.ಜಿ.ಸ್ಟೂಡೆಂಟ್ಸ್. ಆ ರೋಗ ಏನು ಎಂದು ಕಂಡುಹಿಡಿಯುವುದಕ್ಕಾಗದೇ ಸುಮಾರು ಒಂದು ವಾರಗಳ ಕಾಲ ಶ್ರಮವನ್ನು ಪಡಬೇಕಾದ ಅವಶ್ಯಕತೆ ಇತ್ತು. ಕಾರಣ ಓವರ್‌ಹೆಡ್ ಟ್ಯಾಂಕ್‌ಗಳನ್ನು ಇವತ್ತು ಕ್ಲೀನ್ ಮಾಡದೇ ಇರುವಂಥ ಪರಿಸ್ಥಿತಿ ನಗರ ಪ್ರದೇಶಗಳಲ್ಲಿ ಕಾಣುತ್ತಿದ್ದೇವೆ. ಅದರ ಬಗ್ಗೆಯೂ ಆರೋಗ್ಯ ಆಲಾಖೆಯವರು ಗಮನ ಕೊಡಬೇಕೆಂದು ಹೇಳುತ್ತಾ ಮಾನ್ಯ ಅಧ್ಯಕ್ಷರೇ ಕಳೆದ ಸಾರಿ ಕೇಂದ್ರ ಸರ್ಕಾರದಿಂದ ಈ ಯೋಜನೆಯಲ್ಲಿ ಬಂದಂಥ ಹಣ 12 ಕೋಟಿ ರೂಪಾಯಿಗಳು. ಮಲೇರಿಯಾ ದೂರ ಮಾಡುವುದಕ್ಕೋಸ್ಕರವಾಗಿ ಯಾವ ಕೆಮಿಕಲ್ಸ್ ಉಪಯೋಗ ಮಾಡಬೇಕಾಗಿದೆಯೋ ಅದನ್ನು ಬಿಟ್ಟು ಆ ಹಣವನ್ನು ಯಾವ ರೀತಿಯಲ್ಲಿ ಉಪಯೋಗಿಸಿದ್ದಾರೆ ಎಂಬುದನ್ನು ಆರೋಗ್ಯ ಸಚಿವರು ಗಮನಿಸಬೇಕು. ಬೆಂಗಳೂರು ನಗರದಲ್ಲಿರುವ ವೃಷಭಾವತಿ ನದಿಗೋಸ್ಕರವಾಗಿ 7 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹಾಗೂ ಹೆಬ್ಬಾಳ ಕೆರೆಯನ್ನು ಕ್ಲೀನ್ ಮಾಡುವುದಕ್ಕೋಸ್ಕರ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ವರದಿಯಲ್ಲಿ ಕೊಟ್ಟಿದ್ದಾರೆ. ಬಂದಂಥ ಹಣದಲ್ಲಿ ಕೇವಲ ಎರಡು ಕೆರೆಗಳನ್ನು ಕ್ಲೀನ್ ಮಾಡಿದ್ದೇವೆ ಎಂದು ಯಾವುದೇ ಕೆಲಸ ಆಗದೇ ಹೋದರೂ ಕೂಡ 12 ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ. ಇದರ ಬಗ್ಗೆ ದಯವಿಟ್ಟು ಸದನ ಸಮಿತಿ ಅಥವಾ ಯಾವುದಾದರೂ ಅಧ್ಯಕ್ಷರಿಗೆ ಯಾವುದು ಸರಿ ಎನ್ನಿಸುತ್ತದೋ ಹಾಗೆ ಈ ಅವ್ಯವಹಾರ ಏನಾಗಿದೆ ಅದರ ಬಗ್ಗೆ ತನಿಖೆ ಆಗುವುದಕ್ಕೋಸ್ಕರವಾಗಿ ಅಧ್ಯಕ್ಷರು ಒಂದು ಆದೇಶವನ್ನು ಮಾಡಬೇಕೆಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತಿದ್ದೇನೆ. ಜೊತೆಗೆ ಕುಷ್ಠ ರೋಗದ ಬಗ್ಗೆ ಹೆಚ್ಚಿನ ಒಂದು ಸಮಸ್ಯೆ ಇದೆ. ವಿಶೇಷವಾಗಿ ಮೈಸೂರಿನಲ್ಲಿರುವಂಥ ಪಿ.ಕೆ.ಸ್ಯಾನಿಟೋರಿಯಂನಲ್ಲಿ ಕೇಂದ್ರ ಸರ್ಕಾರದಿಂದ 6 ತಿಂಗಳಿಗೆ ಬೇಕಾದಂಥ ಒಂದು ಕಿಟ್ ಬರುತ್ತಿದೆ. ಅಲ್ಲಿರುವಂಥ ಒಬ್ಬ ಡಾಕ್ಟರ್ ಅವರ ಹೆಂಡತಿ ಹೆಸರಿನಲ್ಲಿ ಡ್ರಗ್ ಹೌಸ್ ನಡೆಸುತ್ತಿದ್ದಾರೆ. ಅಲ್ಲಿ ಅದನ್ನು ಇವತ್ತೂ ಕೂಡ ಮಾರಾಟ ಮಾಡುತ್ತಿದ್ದಾರೆ. ಈ ಬಗ್ಗೆ ನಾನು ಪತ್ರವನ್ನೂ ಬರೆದೆ. ಈ ರೀತಿಯ ವಿಚಾರವನ್ನು

ಗಮನದಲ್ಲಿಡಬೇಕು. ಇದರ ಬಗ್ಗೆ ಒಂದು ಎನ್‌ಕ್ವೈರಿ ಮಾಡಬೇಕು ಎಂದು ಹೇಳುತ್ತಾ ಕೊನೆಯದಾಗಿ ಒಂದು ವಿಚಾರ ಹೇಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಇವತ್ತು ಶೇಕಡ 70 ಭಾಗ ಜನ ಇದ್ದಾರೆ. ನಾನು ನಗರ ಪ್ರದೇಶದಲ್ಲಿ ಆಯ್ಕೆಯಾಗಿದ್ದರೂ ಕೂಡ ಗ್ರಾಮಾಂತರ ಪ್ರದೇಶದಲ್ಲಿ ಹುಟ್ಟಿರುವುದರಿಂದ ಅರ್ಥವಾಗಿದೆ. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಆರೋಗ್ಯವನ್ನು ತಾವು ಕೊಡಬೇಕಾದರೆ ರಾಜ್ಯದಲ್ಲಿ ಒಂದು ಪ್ರತ್ಯೇಕವಾದ ರೂರಲ್ ಹೆಲ್ತ್ ಸರ್ವೀಸ್ ಡಿಪಾರ್ಟ್‌ಮೆಂಟನ್ನು ಪ್ರಾರಂಭ ಮಾಡಿ. ಕೇವಲ ಗ್ರಾಮಾಂತರ ಪ್ರದೇಶದಲ್ಲಿ ಆ ಸೇವೆ ಕೊಡುವುದಕ್ಕೋಸ್ಕರವಾಗಿ ಅಂಥ ಡಿಪಾರ್ಟ್‌ಮೆಂಟನ್ನು ಮಾಡಿದರೆ ಅದರ ಉಪಯೋಗ ಸರಿಯಾಗಿ ಆಗುತ್ತದೆ. ವೈದ್ಯರುಗಳನ್ನು ನೇಮಕ ಮಾಡುವಾಗ ಕೂಡ ಐದು ವರ್ಷಗಳ ಕಾಲ ಒಂದು ಜಾಗದಲ್ಲಿ ಕೆಲಸ ಮಾಡುತ್ತೇನೆ ಎಂದು ಒಪ್ಪಂದವನ್ನು ತೆಗೆದುಕೊಂಡು ನೇಮಕ ಮಾಡಬೇಕು ಎಂದು ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಕೇಂದ್ರಸರ್ಕಾರದ ಸಹಾಯದಿಂದ ನಡೆಯುತ್ತಿರುವ ನ್ಯೂರೋ ಸೆಂಟರ್ ಏನಿದೆ ಅಲ್ಲಿ ಕೆಲವೇ ಬೆಡ್ಸ್ ಇದ್ದು ರಾಜ್ಯದಲ್ಲಿ ಬೇರೆಬೇರೆ ಕಡೆಯಿಂದ ಆಕ್ಸಿಡೆಂಟ್ಸ್ ಮತ್ತು ಹೆಡ್ ಇಂಜ್ಯುರೀಸ್ ಆದವರನ್ನು ತರಲಿಕ್ಕೆ ತುಂಬಾ ಸಮಸ್ಯೆಯಾಗುತ್ತಿದೆ. ದಯವಿಟ್ಟು ಎರಡು ಪ್ರದೇಶದಲ್ಲಿ ಅದನ್ನು ಮಾಡಬೇಕು. ಉತ್ತರದಲ್ಲಿ ಈಗಾಗಲೇ ಪ್ರಾರಂಭ ಮಾಡುತ್ತೇನೆ ಎಂದು ಹೇಳಿದ್ದೀರಿ. ಮೈಸೂರು ನಗರದಲ್ಲಿ ಕೂಡ ಅಂಥ ಒಂದು ಆಸ್ಪತ್ರೆ ಮಾಡಬೇಕು. ಒಳ್ಳೆಯ ಬಿಲ್ಡಿಂಗ್ ಇದೆ ಅಲ್ಲಿ. ಒಂದು ಡಿಪಾರ್ಟ್‌ಮೆಂಟ್‌ಗೆ ಬೇಕಾದಂಥ ಎಕ್ವಿಪ್‌ಮೆಂಟ್ಸ್ ಮತ್ತು ಡಾಕ್ಟರನ್ನು ಕೊಟ್ಟರೆ ಸಾಕು ಅದನ್ನು ಪ್ರಾರಂಭ ಮಾಡಬೇಕು. ಇಲ್ಲದೇಹೋದರೆ ಪ್ರತಿದಿವಸ ನಾಲ್ಕು ಐದು ಪೇಷೆಂಟ್‌ಗಳು ಅಲ್ಲಿಂದ ತರುವಾಗಲೇ ಮಾರ್ಗದಲ್ಲೇ ಸಾಯುವಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಆದ್ದರಿಂದ ದಯವಿಟ್ಟು ಆದಾಗಬೇಕು ಎನ್ನುವ ವಿಚಾರವನ್ನು ಹೇಳುತ್ತಾ ಸನ್ಮಾನ್ಯ ಅಧ್ಯಕ್ಷರೇ ಯಾವಾಗಲೂ ಆರೋಗ್ಯ ಮಂತ್ರಿಗಳು ಒಂದು ಪಿ.ಹೆಚ್.ಸಿ. ಕೊಡಿ ಎಂದರೆ ಹೇಳುತ್ತಾರೆ ಆಯುರ್ವೇದ ಆಸ್ಪತ್ರೆಗಳನ್ನು ಪ್ರಾರಂಭ ಮಾಡಿ ಎಂದು. ಆದರೆ ಒಂದು ನೋವಿನ ವಿಚಾರ ನನಗೆ ಕಾಣುತ್ತಿದೆ, ಕೇಂದ್ರಸರ್ಕಾರದಿಂದ ಸೆಂಟ್ರಲ್ ಪ್ರೋಗ್ರಾಂ ಒಂದಿದೆ. ಆಯುರ್ವೇದ ಮತ್ತು ಸಿದ್ಧ ಮೆಡಿಸನ್ ರಿಸರ್ಚ್‌ಗೋಸ್ಕರವಾಗಿ ನೂರಕ್ಕೆ ನೂರು ಭಾಗ ಹಣವನ್ನು ಕೇಂದ್ರಸರ್ಕಾರ ಕೊಡುತ್ತದೆ. ಈಗಾಗಲೇ ಹೈದರಾಬಾದ್‌ನಲ್ಲಿ ಕೊಯಮತ್ತೂರಿನಲ್ಲಿ ಮತ್ತು ಕೇರಳದಲ್ಲಿ ಎಲ್ಲಾ ಕಡೆ ಒಂದೊಂದು ಸೆಂಟರ್‌ಗಳನ್ನು ತೆಗೆದಿದೆ. 100 ಭಾಗ ಹಣವನ್ನು ಕೇಂದ್ರಸರ್ಕಾರ ಕೊಡುತ್ತಿದ್ದರೂ ರಾಜ್ಯದಲ್ಲಿ ಏತಕ್ಕೆ ಅದನ್ನು ಉಪಯೋಗಿಸಿಕೊಂಡಿಲ್ಲ? ಏತಕ್ಕೆ ಅದರ ಬಗ್ಗೆ ಪ್ರೊಪೋಸಲ್ ಕೊಟ್ಟು ಮಾಡುವಂಥ ಅವಶ್ಯಕತೆ ಇಲ್ಲ? ಮಾನ್ಯ ಮುಖ್ಯಮಂತ್ರಿಗಳಿಗೆ ಆಸೆ ಇದೆ ಸರ್ಕಾರಿ ಆಸ್ಪತ್ರೆಯಲ್ಲಿ ಇರಬೇಕು ಎಂದು. ಆದರೂ ಕೂಡ ಅವರು ಜಿಂದಾಲ್‌ಗೆ ಹೋಗುತ್ತಾರೆ. ಅಂಥ ಒಂದು ಆಸ್ಪತ್ರೆ ರಾಜ್ಯಸರ್ಕಾರದಿಂದ ಇವತ್ತು ಆಗಿ ಹೊರದೇಶದಿಂದ ಬರುವಂಥ ಎಷ್ಟೋ ಪೇಷೆಂಟ್‌ಗಳು ಅದಕ್ಕೆ ಅವಶ್ಯಕತೆ ಇರುವಂಥವರಿದ್ದಾರೆ. ಅಂಥವರಿಗೆ ಒಂದು

ಅವಕಾಶವನ್ನು ಮಾಡಿಕೊಡಬೇಕು ಎಂದು ಕೇಳುತ್ತಾ ಅದಕ್ಕೆ ಬೇಕಾದಂಥ ಚಾಮುಂಡಿ ಬೆಟ್ಟದ ಕೆಳಭಾಗದಲ್ಲಿರುವಂಥ ಒಳ್ಳೆಯ ಪರಿಸರ ಇರುವಂಥ ಒಂದು ಜಾಗ ಸರ್ಕಾರಿ ಜಾಗ ಇದೆ. ಅಂಥ ಜಾಗದಲ್ಲಿ ಓಪನ್ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಂಡು ಮುಖ್ಯಮಂತ್ರಿಗಳು ಅದಕ್ಕೆ ಮನಸ್ಸು ಮಾಡಬೇಕೆಂದು ಹೇಳುತ್ತೇನೆ. ಯೂನಿವರ್ಸಿಟಿ ಗ್ರ್ಯಾಂಟ್ ಕಮಿಷನ್‌ನಲ್ಲಿ ಆಯುರ್ವೇದ ಇಲಾಖೆಗೆ ಸಂಬಂಧಪಟ್ಟಂಥ ಹಣ ದೊರಕುತ್ತದೆ. ರಿಸರ್ಚ್‌ಗೋಸ್ಕರವಾಗಿ 100ಕ್ಕೆ 100 ಭಾಗ ಹಣವನ್ನು ಕೇಂದ್ರಸರ್ಕಾರ ಕೊಡುತ್ತದೆ. ಏತಕ್ಕೆ ಇವತ್ತಿನವರೆಗೂ ಅದನ್ನು ಉಪಯೋಗಿಸಿಕೊಂಡಿಲ್ಲ. ಇವತ್ತಿನವರೆಗೂ ರಾಜ್ಯದಲ್ಲಿ ಎಲ್ಲೂ ಇಲ್ಲ. ಆ ಒಂದು ಯು.ಜಿ.ಸಿ. ಸ್ಕೀಮಿನಲ್ಲಿ ಬರುವಂಥ ಹಣವನ್ನು, ನ್ಯಾಚುರೋಪತಿ ಮತ್ತು ಯೋಗಕ್ಕೆ ಏನು ಹಣ ಕೊಡುತ್ತಾರೆ ಅದನ್ನು ಉಪಯೋಗಿಸಿಕೊಳ್ಳುವಂಥ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು. ಜೊತೆಗೆ ಆಯುರ್ವೇದದಲ್ಲಿ ರಿಸರ್ಚನ್ನು ಮಾಡುತ್ತಾರೆ. ತಾವು 30-40 ಸಾವಿರ ರೂಪಾಯಿ ಹಣವನ್ನು ಖರ್ಚು ಮಾಡುತ್ತೀರಿ ಆ ವ್ಯಕ್ತಿಯ ಮೇಲೆ. ರೀಸರ್ಚ್ ಥೀಸಿಸ್ ಬರುತ್ತದಲ್ಲ ಅದನ್ನು ಏತಕ್ಕೋಸ್ಕರ ಪಬ್ಲಿಷ್ ಮಾಡಬಾರದು? ಅದನ್ನು ಪಬ್ಲಿಷ್ ಮಾಡಿದಾಗ ಎಲ್ಲರಿಗೂ ಕೂಡ ಸಹಕಾರ ಆಗುತ್ತದೆ. ಅದರಿಂದ ಸಮಾಜಕ್ಕೆ ಉಪಯೋಗವಾಗುತ್ತದೆ. ಆ ಕೆಲಸವನ್ನು ತಾವು ಮಾಡಬೇಕು ಎನ್ನುವಂಥ ಮಾತನ್ನು ಹೇಳುತ್ತಾ ಕೊನೇ ಎರಡು ಸಲಹೆಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ದಯವಿಟ್ಟು ಪಾರ್ಕ್‌ಗಳಲ್ಲಿ ನೀವು ತೋಟಗಾರಿಕೆ ಇಲಾಖೆಯಿಂದ ಗಿಡಗಳನ್ನು ಬೆಳೆಸಿ ದಯವಿಟ್ಟು ಆಯುರ್ವೇದಕ್ಕೆ ಬೇಕಾದ ಗಿಡಮೂಲಿಕೆಗಳನ್ನು ಗಿಡಗಳನ್ನು ಮತ್ತು ಮರಗಳನ್ನು ಬೆಳೆಸುವಂಥ ಒಂದು ಯೋಜನೆಯನ್ನು ಕೋ-ಆರ್ಡಿನೇಷನ್‌ನಿಂದ ಮಾಡಿದರೆ ಬಹಳ ಉಪಯೋಗವಾಗುತ್ತದೆ. ಜೊತೆಗೆ ಹೈವೇಗಳಲ್ಲಿ ಅವೆನ್ಯೂ ಟ್ರೀಗಳನ್ನು ಹಾಕುತ್ತಿದ್ದೀರಿ. ಅದರಲ್ಲೂ ಕೂಡ ನಿಜವಾಗಿಯೂ ಗಿಡಮೂಲಿಕೆಗಳಿಗೆ ಬೇಕಾದಂಥ, ಆಯುರ್ವೇದ ಪದ್ಧತಿಗೆ ಬೇಕಾದ ಔಷಧಿಗೆ ಬೇಕಾದಂಥದ್ದನ್ನು ಹಾಕಬಹುದು ಎನ್ನುವಂಥ ಮಾತನ್ನು ಹೇಳುತ್ತೇನೆ. ಆಸ್ಪತ್ರೆಗಳಲ್ಲಿ ಮತ್ತು ಟೀಚಿಂಗ್ ಆಸ್ಪತ್ರೆಗಳಲ್ಲಿ ಮೊದಲು ಔಷಧಿಗಳನ್ನು ಮಾಡುತ್ತಿದ್ದರು. ಈಗ ತಾವು ನಿಲ್ಲಿಸಿಬಿಟ್ಟಿದ್ದೀರಿ. ವಿದ್ಯಾರ್ಥಿಗಳು ಕಲಿತ ಹಾಗಾಗುತ್ತದೆ. ಔಷಧಿಗಳನ್ನು ವಿಶೇಷವಾಗಿ ರೋಗಿಗಳಿಗೆ ಕಡಿಮೆ ಬೆಲೆಯಲ್ಲಿ ಕೊಟ್ಟ ಹಾಗಾಗುತ್ತದೆ. ಆದ್ದರಿಂದ ಆ ಪದ್ಧತಿಯನ್ನು ಮತ್ತೆ ಜಾರಿಗೆ ತರಬೇಕು ಎನ್ನುವ ವಿಚಾರವನ್ನು ತಮ್ಮ ಮುಂದೆ ಇಡುತ್ತಾ ಇವತ್ತು ಟೀಚಿಂಗ್ ಹಾಸ್ಪಿಟಲ್‌ಗಳ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಮಂತ್ರಿಗಳು ಮೈಸೂರಿಗೆ ಬಂದಿದ್ದರು ಅಧ್ಯಕ್ಷರೆ. ಲೇಡೀಸ್ ಹಾಸ್ಟೆಲ್‌ನಲ್ಲಿ ಒಂದು ಸಾರಿ ಬಂದು ನೋಡಿದಾಗ ಅಲ್ಲಿದ್ದಂಥ 9 ಬಾತ್‌ರೂಮ್‌ಗಳಲ್ಲಿ 5 ಬಾತ್‌ರೂಮ್‌ಗಳಿಗೆ ಬಾಗಿಲೇ ಇರಲಿಲ್ಲ. ಅಲ್ಲಿರುವಂಥ ಅಡಿಗೆ ಮನೆಯಲ್ಲಿ ಯು.ಜಿ.ಡಿ. ಹೊರಗಡೆ ಬಂದು ಆ ಸಿಸ್ಟಮನ್ನು ನೋಡಿಕೊಂಡು ಬಂದರು. ಆ ತರಹದಲ್ಲಿ ಇವತ್ತು ಮೈಸೂರು ಒಂದಲ್ಲ, ಎಲ್ಲಾ ವೈದ್ಯಕೀಯ ಆಸ್ಪತ್ರೆಗಳಲ್ಲಿ ಮತ್ತು ಅಲ್ಲಿರುವಂಥ ಹಾಸ್ಟೆಲ್‌ಗಳ ಸಮಸ್ಯೆಗಳೂ

ಕೂಡ ಇದೇ ತರಹ ಇದೆ. ಅದರ ಬಗ್ಗೆ ಏತಕ್ಕೆ ನಮ್ಮ ವೈದ್ಯಕೀಯ ಶಿಕ್ಷಣ ಸಚಿವರು ಗಮನವನ್ನು ಕೊಟ್ಟಿಲ್ಲವೋ ನನಗೆ ಅರ್ಥವಾಗುತ್ತಿಲ್ಲ. ಹಾಸ್ಪಿಟಲ್‌ಗಳ ಬಗ್ಗೆ ಹೇಳುವುದಕ್ಕೆ ಸಮಯ ಇಲ್ಲದೇ ಇರುವುದರಿಂದ ನಾನು ಆ ವಿಚಾರವನ್ನು ಹೇಳದೆ ಪ್ರಮುಖವಾಗಿ ಒಂದು ವಿಚಾರವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೊನೆಗೆ ಸಂಜಯ್‌ಗಾಂಧಿ ಆಸ್ಪತ್ರೆ ಬಗ್ಗೆ ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ. ಅಧ್ಯಕ್ಷರೇ, ಸಂಜಯ್‌ಗಾಂಧಿ ಆಸ್ಪತ್ರೆಯಲ್ಲಿ ಬೈಪಾರ್ಟಿ ಸಿಸ್ಟಂ ಇದೆ. ನಮ್ಮಲ್ಲಿ ಮಲ್ಟಿಪಾರ್ಟಿ ಸಿಸ್ಟಂ ಇದೆ. ಆದರೆ ಅಲ್ಲಿ ಬೈಪಾರ್ಟಿ ಸಿಸ್ಟಂ ಇದೆ. ಎರಡು ಪಾರ್ಟಿಗಳಿವೆ ಅಲ್ಲಿ. ಒಂದು ಪಕ್ಷದಲ್ಲಿ ಯಾರೋ ಒಬ್ಬರು ನಿರ್ದೇಶಕರಾಗಿ ಬಂದ ತಕ್ಷಣವೇ ಇನ್ನೊಂದು ಗುಂಪಿನವರು ಸಸ್ಪೆಂಡ್ ಆಗಿ ಅಥವಾ ರಜಾ ಹಾಕಿ ಹೋಗುತ್ತಾರೆ. ಇನ್ನೊಬ್ಬರು ಯಾರು ಬರುತ್ತಾರೆ ಆಗ ಮಾತ್ರ ಅವರು ಬರುವುದು. ಈಗ ಶೇಗಡ 40 ಭಾಗ ಡಾಕ್ಟರುಗಳು ಸಸ್ಪೆಂಡ್ ಆಗಿದ್ದಾರೆ. ಒಂದೂವರೆ ಎರಡು ವರ್ಷಗಳಿಂದ ಸಂಬಳ ತೆಗೆದುಕೊಳ್ಳುತ್ತಿದ್ದಾರ. ಹೊರಗಡೆ ಪ್ರಾಕ್ಟೀಸ್ ಮಾಡುತ್ತಾ ಇದ್ದಾರೆ. ಈ ರೀತಿಯಾದಂಥ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿರುವಂಥ ಸಮಯದಲ್ಲೂ ಕೂಡ ಆರೋಗ್ಯ ಸಚಿವರು ಏತಕ್ಕೆ ಅದರ ಬಗ್ಗೆ ಗಮನವನ್ನು ಕೊಟ್ಟಿಲ್ಲ ಯಾವ ವೈದ್ಯರು ಸುಮಾರು ಒಂದು ಒಂದೂವರೆ ವರ್ಷಗಳ ಕಾಲದಿಂದ ರಾಜಕೀಯವನ್ನು ಮಾಡಿಕೊಂಡಿದ್ದಾರೆ ಅಂಥದ್ದನ್ನು ತಪ್ಪಿಸಿ ಇವತ್ತು ನಿಜವಾದ ಸೇವೆ ಆರೋಗ್ಯ ಇಲಾಖೆಯಲ್ಲಿ ಸಿಗುವಂತೆ ಮಾಡಬೇಕು ಎನ್ನುವಂಥ ಮಾತನ್ನು ಹೇಳುತ್ತೇನೆ.

ಶ್ರೀ ಯು.ಆರ್.ಸಭಾಪತಿ: ಸಂಜಯ್‌ಗಾಂಧಿ ಅಪಘಾತ ಆಸ್ಪತ್ರೆ ಬಗ್ಗೆ ಎರಡೂವರೆ ವರ್ಷದಿಂದ ತಮ್ಮಲ್ಲಿ ಬೇಡಿಕೊಂಡೆ. ಇದರ ಬಗ್ಗೆ ಏಕೆ ನೀವು ಸ್ಪಷ್ಟ ನಿಲುವನ್ನು ತೆಗೆದುಕೊಳ್ಳುತ್ತಿಲ್ಲ ಎಂದು ನನಗೆ ಅರ್ಥವಾಗುತ್ತಿಲ್ಲ. ಅದು ಯಥಾಸ್ಥಿತಿ ಇದೇರೀತಿ ಮುಂದುವರೆಯುತ್ತಾ ಹೋಗುತ್ತಿದೆ. ದಯವಿಟ್ಟು ಇದರ ಬಗ್ಗೆ ಸೀರಿಯಸ್ಸಾಗಿ ಆಕ್ಷನ್ ತೆಗೆದುಕೊಳ್ಳಬೇಕು.

ಶ್ರೀ ಎ.ರಾಮದಾಸ್: ಕಳೆದ ಬಾರಿ ಇದೇ ಸದನದಲ್ಲಿ ನಾನು ಆರೋಗ್ಯ ಇಲಾಖೆ ಬಗ್ಗೆ ಮಾತನಾಡುವಾಗ ಒಂದು ವಿಚಾರವನ್ನು ತಮಗೆ ಕೊಟ್ಟಿದ್ದೆ. ಒಂದು ಖಾಸಗಿ ನರ್ಸಿಂಗ್ ಹೋಮ್ ಬಗ್ಗೆ ನಿಯಂತ್ರಣ ಇಲ್ಲ. ಒಂದು ಬೀಡಿ ಷಾಪ್‌ಗೆ ಲೈಸೆನ್ಸ್ ಇಟ್ಟಿರುತ್ತೀರಿ. ಆದರೆ ಇದಕ್ಕೆ ಇಲ್ಲ. ಖಾಸಗಿ ನರ್ಸಿಂಗ್ ಹೋಮ್‌ಗೋಸ್ಕರವಾಗಿ ಒಂದು ಕಾಯಿದೆಯನ್ನು ತನ್ನಿ ಎಂದು ಹೇಳಿದ್ದೆ. ಎರಡನೆಯದಾಗಿ ಗೌರ್ನಮೆಂಟ್ ಡಾಕ್ಟರುಗಳು ಪ್ರೈವೇಟ್ ಪ್ರಾಕ್ಟೀಸ್ ಮಾಡುವುದನ್ನು ತಾವು ಅವಾಯ್ಡ್ ಮಾಡಬೇಕು. ಅವರಿಗೆ ಸ್ಪೆಷಲ್ ಅಲೋಯೆನ್ಸ್ ಕೊಡಬೇಕೆಂದು ಹೇಳಿದ್ದೆ. ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡುವವರಿಗೆ ಗ್ರಾಮೀಣ ಅಲೋಯೆನ್ಸನ್ನು ಕೊಡುವಂಥ ಕೆಲಸವನ್ನು ತಾವು ಮಾಡಬೇಕು. ಹಾಗಾದಾಗ ಮಾತ್ರ ಗ್ರಾಮೀಣ ಪ್ರದೇಶಕ್ಕೆ ಹೋಗಲಿಕ್ಕೆ ಸಹಾಯ ಆಗುತ್ತದೆ ಎನ್ನುವಂಥ ಮಾತನ್ನು ಹೇಳುತ್ತಾ ಮುಜರಾಯಿ ಬಗ್ಗೆ

ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ಇವತ್ತು ದೇವಸ್ಥಾನಗಳಿಗೆ ಸಂಬಂಧಪಟ್ಟಹಾಗೆ ಎಲ್ಲಾಕಡೆ ಕೂಡ ಹಣ ಕೇವಲ ಪ್ರತಿಸಲ ಒಂದು ಕ್ಷೇತ್ರದಲ್ಲಿ ಒಂದು ಲಕ್ಷ ಒಂದೂವರೆ ಲಕ್ಷ ರೂಪಾಯಿ ಬಿಡುಗಡೆ ಆಗುತ್ತಿರುವಂತದ್ದು ಇದೆ. ದಯವಿಟ್ಟು ದೇವಸ್ಥಾನಗಳಿಗೆ ವಿಶೇಷವಾಗಿ ಹೆಚ್ಚಿನ ಅನುದಾನವನ್ನು ಕೊಡುವಂಥದ್ದಾಗಬೇಕು. ಒಂದು ವಿಚಾರವನ್ನು ಈಗಾಗಲೇ ನಾನು ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಅದೊಂದು ಮಾತನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತಿದ್ದೇನೆ. ದೇವಸ್ಥಾನಗಳಿಗೆ ಸಂಬಂಧಪಟ್ಟಹಾಗೆ ಸಿಂಗಲ್ ಪೂಲ್ಡ್ ಅಕೌಂಟ್ ಇರಬೇಕು. ಯಾವುದೋ ಒಂದು ದೇವಸ್ಥಾನದಲ್ಲಿ ಹೆಚ್ಚು ಆದಾಯ ಬರುತ್ತದೆ. ಇನ್ನೊಂದು ದೇವಸ್ಥಾನದಲ್ಲಿ ಆದಾಯವೇ ಇರುವುದಿಲ್ಲ. ಹೀಗಿರುವಂಥ ಸಮಯದಲ್ಲಿ ಸಿಂಗಲ್ ಪೂಲ್ಡ್ ಅಕೌಂಟ್ ಇರಬೇಕು ರಾಜ್ಯದಲ್ಲಿ. ಆಗ ನಿಜವಾದಂಥ ದೇವಸ್ಥಾನಗಳ ಅಭಿವೃದ್ಧಿಯಾಗುತ್ತದೆ. ಅದಕ್ಕೋಸ್ಕರ ಹೆಚ್ಚಿನ ಅನುದಾನವನ್ನು ಮುಜರಾಯಿ ಮಂತ್ರಿಗಳು ಬಿಡುಗಡೆ ಮಾಡಬೇಕು ಎನ್ನುವಂಥ ವಿಚಾರವನ್ನು ತಮ್ಮ ಮೂಲಕ ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ. ಅಧ್ಯಕ್ಷರೇ, ಧನ್ಯವಾದಗಳು.

10.30 ಎ.ಎಂ

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಅಧ್ಯಕ್ಷರೇ, ಬೇಡಿಕೆ ಮೇಲೆ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲು ನಾನು ತಮಗೆ ವಂದನೆಗಳನ್ನು ಸಲ್ಲಿಸುತ್ತಾ ಈ ಬೇಡಿಕೆಗಳನ್ನು ನಾನು ವಿರೋಧ ಮಾಡುವುದಿಲ್ಲ. ಸನ್ಮಾನ್ಯ ಉಪಮುಖ್ಯಮಂತ್ರಿಗಳೇ ಇವತ್ತು ಪತ್ರಿಕೆಯಲ್ಲಿ ಹೇಳಿದ್ದಾರೆ ಒಟ್ಟು ಹಣದಲ್ಲಿ 50 ಪರ್ಸೆಂಟ್ ಭ್ರಷ್ಟಾಚಾರ ಆಗುತ್ತಿದೆ ಎಂದು. ಅಂದರೆ ಅವರ ಆಡಳಿತ ವೈಖರಿ ಬಗ್ಗೆ ಅವರೇ ಹೇಳಿರಬೇಕಾದರೆ, ಈ ಭ್ರಷ್ಟಾಚಾರ ತಡೆಯುವುದರ ಬಗ್ಗೆ ಯಾವರೀತಿ ಚಿಂತನೆ ಮಾಡಬೇಕೆಂದು ಯೋಚನೆಯನ್ನು ಮಾಡಬೇಕಾಗಿದೆ. ಬರೇ 'ಭ್ರಷ್ಟಾಚಾರ ಮಾಮೂಲು' 'ಭ್ರಷ್ಟಾಚಾರ ನಿಲ್ಲಿಸುವುದಕ್ಕೆ ಆಗುವುದಿಲ್ಲ' ಈ ಶಬ್ದಗಳನ್ನು ನಿಲ್ಲಿಸಬೇಕು. ಇಲ್ಲದಿದ್ದರೆ 'ಭ್ರಷ್ಟಾಚಾರ ಮಾಡುವವನಿಗೆ ಇನ್ನೂ ಸುಲಭವಾಯಿತು. ಭ್ರಷ್ಟಾಚಾರದ ಬಗ್ಗೆ ಇನ್ನೂ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಸನ್ಮಾನ್ಯ ಅಧ್ಯಕ್ಷರೇ, ತಾವು ಬೆಲ್ ಹೊಡೆಯುತ್ತಿದ್ದಾಗ ನನಗೆ ಒಂದು ಕತೆ ಜ್ಞಾಪಕಕ್ಕೆ ಬಂತು.

ಯಾವುದೋ ಒಂದು ಊರಿಗೆ ಒಬ್ಬ ಭಾಷಣಕಾರರನ್ನು ಕರೆದುಕೊಂಡುಹೋದರಂತೆ. ಆತನು ಒಂದು ಗಂಟೆ ಭಾಷಣ ಮಾಡಿದ. ಜನರು ಕ್ಲಾಪ್ಸ್ ಹೊಡೆದರು, ಸಿಳ್ಳೆ ಹೊಡೆದರಂತೆ. ತಾನು ಬಹಳ ಚೆನ್ನಾಗಿ ಮಾತನಾಡುತ್ತಿದ್ದೇನೆ ಎಂದು ತಿಳಿದು, ಇನ್ನೂ ಉತ್ಸೇಕ್ಷೆಯಿಂದ ಅರ್ಧಗಂಟೆ ಜಾಸ್ತಿ ಮಾತನಾಡಿದನಂತೆ. ಇನ್ನೊಂದು ಸಲ ವಿಸಿಲ್ ಹೊಡೆದು, ಚಪ್ಪಾಳೆ ಹೊಡೆದರಂತೆ. ಅವನಿಗೆ ಇನ್ನೂ ಹೆಚ್ಚಿನ

ಉತ್ತೇಜನ ಸಿಕ್ಕಿದಂತಾಯಿತು. ಸರಿ, ಇನ್ನೂ ಐದು ನಿಮಿಷ ಮಾತನಾಡುತ್ತಿದ್ದಾಗ ಒಬ್ಬ ಯಜಮಾನ ದೊಣ್ಣೆ ತೆಗೆದುಕೊಂಡು ನಿಂತುಕೊಂಡನಂತೆ. ಭಾಷಣಕಾರ 'ಏನು ಸ್ವಾಮಿ' ಎಂದು ಕೇಳಿದ. 'ನಿಮ್ಮನ್ನು ಕರೆದುಕೊಂಡು ಬಂದವರು ಯಾರು? ಏಕೆಂದರೆ ಅವನ ತಲೆಯೊಡೆದು ಹಾಕಬೇಕು' ಎಂದು ಅವರು ಹೇಳಿದರಂತೆ. ಹಾಗೆ ತಮ್ಮ ಬೆಲ್ಲು, ನೀವು ಕುಳಿತುಕೊಳ್ಳದೇ ಹೋದರೆ ಬಿಡೋದಿಲ್ಲ ಅನ್ನುವಹಾಗೆ ನಿಮ್ಮ ಬೆಲ್ ಆಗುತ್ತ ಇದೆ.

ಒಬ್ಬ ಸದಸ್ಯರು: ಅರ್ಥವಾಗಲಿಲ್ಲ....

(ಗೊಂದಲ)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಅಧ್ಯಕ್ಷರೇ, ತಮ್ಮ ತಲೆಯಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮತದಾರರದ್ದು. ಅವರನ್ನು ಗೆಲ್ಲಿಸಿಕೊಟ್ರಲ್ಲ ಆ ಜನರಿಗೆ

(ನಗು)

(ಗೊಂದಲ)

ಅಧ್ಯಕ್ಷರು: ಯಾರ್‍ಯಾರ ದೊಣ್ಣೆಗೆ ಯಾರ್‍ಯಾರ ತಲೆಮೇಲೆ ಕಣ್ಣಿದೆ ಎನ್ನುವುದು ನನಗೆ ಗೊತ್ತಿದೆ. ನನ್ನ ಕಡೆಗೆ ಯಾರಿಗೂ ಗಮನ ಇಲ್ಲ. ಅಷ್ಟು ಧೈರ್ಯ ನನಗೆ ಇದೆ. ನೀವು ಮುಂದುವರೆಸಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ವ್ಯವಸಾಯ, ತೋಟಗಾರಿಕೆ, ಪಶುಸಂಗೋಪನೆ, ಯುವಜನಸೇವೆ ಹಾಗೂ ಸಕ್ಕರೆ, ಸಣ್ಣ ನೀರಾವರಿ, ದೊಡ್ಡ ನೀರಾವರಿ. ತಮ್ಮ ಟೈಮ್‌ನೊಳಗೆ ನಾನು ಮುಗಿಸಿಬಿಡುತ್ತೇನೆ.

ಅಧ್ಯಕ್ಷರು: 10-45ಕ್ಕೆ ಮುಗಿಸಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಸನ್ಮಾನ್ಯ ಅಧ್ಯಕ್ಷರೇ, ಬಹಳ ಗಂಭೀರವಾಗಿ ವಿರೋಧ ಪಕ್ಷದ ನಾಯಕರು ದೊಡ್ಡ ನೀರಾವರಿ ಯೋಜನೆ ಬಗ್ಗೆ ಮಾತನಾಡಿದರು. ಅವರು ಏನು ಹೇಳಿದರು? 1,262 ಟಿ.ಎಂ.ಸಿ.ಯನ್ನು ಇಡೀ ಕರ್ನಾಟಕ ರಾಜ್ಯದಲ್ಲಿ ದೊಡ್ಡ ನೀರಾವರಿ ಯೋಜನೆಗಳ ಮೂಲಕ ಎರಡು ಬೆಳೆ, ಒಂದು ಬೆಳೆ, ಸೆಮಿಡ್ರೈ ಕ್ರಾಪ್ಸ್‌ಗೆ ಮೂರು ಭಾಗವಾಗಿ ನೀರು ಉಣಿಕೆಯನ್ನು ಮಾಡುತ್ತೇವೆ ಎಂದು. ಆದರೆ ನಾನು ಪ್ರಾಕ್ಟಿಕಲ್ ಆಗಿ ನೋಡಿದ್ದೇನೆ. ನೀರಾವರಿ ಇಲಾಖೆಗೆ ಕೇವಲ ಡ್ಯಾಮ್ ಕಟ್ಟುವುದು, ಕಾಲುವೆ ಮಾಡುವುದು ಅಷ್ಟೇ ಅಲ್ಲ ಮುಖ್ಯ. ಕೃಷಿ ಇಲಾಖೆ ಮತ್ತು ನೀರಾವರಿ ಇಲಾಖೆ

ಜಾಯಿಂಟ್ ಆಗಿ ಈ ನೀರಿನ ಬಳಕೆ ಬಗ್ಗೆ ತಾವು ಚಿಂತನೆ ಮಾಡಬೇಕು. ನೀರಿನ ಬಳಕೆ ಬಗ್ಗೆ ಚಿಂತನೆ ಮಾಡುವುದಿದ್ದರೆ ತಾವು ಅಕೌಂಟೆಬಿಲಿಟಿಯನ್ನು ಫಿಕ್ಸ್ ಮಾಡಬೇಕು. 1,262 ಟಿ.ಎಂ.ಸಿ.ಗೆ ಸೆಮಿಡ್ರೈ ಕ್ರಾಪ್ಸ್ ಎಂದರೆ ಎಷ್ಟು ಎಕರೆ ನೀರಾವರಿಯಾಗಬೇಕು? ಒಂದು ಕ್ರಾಪ್‌ಗೆ ಎಷ್ಟು ಎಕರೆ ಆಗಲೇಬೇಕು, ಎರಡು ಕ್ರಾಪ್‌ಗೆ ಎಷ್ಟು ಆಗಬೇಕು ಎಂದು ಯೋಚನೆ ಮಾಡಬೇಕು. ಸುಮಾರು 75ರಿಂದ 80 ಲಕ್ಷ ಎಕರೆ ಮಾಡಬೇಕು. ವಾಟರ್ ಯುಟಿಲೈಸೇಶನ್ ಬಗ್ಗೆ ನಾವು ಯೋಚನೆ ಮಾಡದಿದ್ದರೆ ಭೂಮಿಯನ್ನು ಹಾಳು ಮಾಡುತ್ತೇವೆ, ಮತ್ತು ಬೆಳೆ ವಿಧಾನವನ್ನು ಹಾಳು ಮಾಡತಕ್ಕಂಥ ಒಂದು ಪರಿಸ್ಥಿತಿಗೆ ನಾವು ಬಂದಿದ್ದೇವೆ. ಮಾನ್ಯ ಅಧ್ಯಕ್ಷರೇ, ಈಗಾಗಲೇ ಸಾವಯವ ಕೃಷಿ ಬಗ್ಗೆ ಚಿಂತನೆ ಮಾಡತಕ್ಕಂಥ ಒಂದು ಪರಿಸ್ಥಿತಿ ಸೃಷ್ಟಿಯಾಗಿದೆ. ಸಾವಯವ ಕೃಷಿಯಲ್ಲಿ ನೀರಿನ ಬಳಕೆ ಎಂಬುದು ಅತ್ಯಂತ ಮುಖ್ಯವಾದ ವಿಧಾನ ಅದು. ಅದನ್ನು ಸರಿ ಮಾಡದೇ ಇದ್ದರೆ ಸಾಧ್ಯವಿಲ್ಲ. ಆದ್ದರಿಂದ ತಾವು ಅತ್ಯಂತ ಗಂಭೀರವಾಗಿ ಯೋಚನೆ ಮಾಡಬೇಕು. ತಾವು ಬಿ.ಇ. ಪದವೀಧರರಾಗಿದ್ದೀರಿ. ನೀರಿನ ಬಳಕೆ ಬಗ್ಗೆ ತಾವು ಅತ್ಯಂತ ಗಂಭೀರವಾಗಿ ಚಿಂತನೆ ಮಾಡಬೇಕು. ತಮ್ಮ ಇಲಾಖೆಯವರು ಇದನ್ನು ಸರಿಮಾಡದೇ ಇದ್ದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಒಂದು ಡ್ಯಾಮ್‌ನಿಂದ 40 ಟಿ.ಎಂ.ಸಿ.ಯಲ್ಲಿ 16 ಟಿ.ಎಂ.ಸಿ. ನೀರು ಸೋರಿಹೋಗುತ್ತದೆ ಎಂದರೆ, 56 ಸಾವಿರ ಎಕರೆಗೆ ನೀರಿಲ್ಲ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಕೇಳಿ. 50 ಸಾವಿರ ಎಸ್ಟಿಮೇಶನ್ ಸ್ಯಾಂಕ್ಷನ್ ಮಾಡಬೇಕಾದರೆ ಜ್ಯೂನಿಯರ್ ಇಂಜಿನಿಯರ್‌ಗೆ ಒಂದು ಸಾವಿರ ರೂಪಾಯಿಗಳು. ಎ.ಇ.ಇ.ಗೆ ಐದುನೂರು ರೂಪಾಯಿಗಳು. ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ 500 ರೂಪಾಯಿ ಮತ್ತು ಸಂಬಂಧಪಟ್ಟ ಒಟ್ಟು ಗುಮಾಸ್ತರಿಗೆ ಐದುನೂರು ರೂಪಾಯಿ. ಆಮೇಲೆ ಅದು ಬಿಲ್ ಆಗುವಾಗ ಜ್ಯೂನಿಯರ್ ಇಂಜಿನಿಯರ್‌ಗೆ 5 ಪರ್ಸೆಂಟ್, ಎ.ಇ.ಇ.ಗೆ 5 ಪರ್ಸೆಂಟ್, ಇ.ಇ.ಗೆ 2 ಪರ್ಸೆಂಟ್ ಮತ್ತು ಗುಮಾಸ್ತರಿಗೆ ನೂರು ರೂಪಾಯಿ. ಆಮೇಲೆ ಅಕೌಂಟೆಂಟ್‌ಗೆ ಒಂದು ಪರ್ಸೆಂಟ್. ಇದು ಕಡ್ಡಾಯ. ಇಷ್ಟರಮಟ್ಟಿಗೆ ಹಣವನ್ನು ಹಂಚಿಕೊಂಡರೆ 50 ಸಾವಿರಕ್ಕೆ ಇಷ್ಟು ಪರ್ಸೆಂಟ್ ಹೋದರೆ, 15ರಿಂದ 20 ಸಾವಿರ ರೂಪಾಯಿ ಹಣ ಹೋದರೆ, ಇನ್ನು 30 ಸಾವಿರದಲ್ಲಿ ಕಂಟ್ರಾಕ್ಟರ್ ತನ್ನ ಲಾಭ ಇಟ್ಟುಕೊಂಡು ಯಾವ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯ? ತಾವು ವೀರಪ್ಪನ್‌ನ್ನು ಕರೆದು ಮಾತನಾಡುತ್ತಿದ್ದೀರಿ; ನಿನ್ನ 12 ಬೇಡಿಕೆಗಳಲ್ಲಿ 5 ಬೇಡಿಕೆಗಳನ್ನು ನೆರವೇರಿಸುತ್ತೇವೆ, ಬಾರಪ್ಪ ಎಂದು. ವೀರಪ್ಪನ್‌ನನ್ನು ಕರೆದು ಮಾತನಾಡಬೇಕಾದರೆ ಇವರನ್ನು ಕರೆದು ಮಾತನಾಡಿ. ಅಕೌಂಟೆಬಿಲಿಟಿ ಇರಬೇಕು, ಹಾನೆಸ್ಟಿ ಇರಬೇಕು. ನಾವು ಮೂರು ಕೋಟಿ ರೂಪಾಯಿ ಖರ್ಚು ಮಾಡಿ ಕನ್ನಂಬಾಡಿ ಕಟ್ಟೆಯನ್ನು ಶ್ರೀ ವಿಶ್ವೇಶ್ವರಯ್ಯ ಅವರ ಕಾಲದಲ್ಲಿ ಕಟ್ಟಿದ್ದೇವೆ. ಇದು ಎಲ್ಲರಿಗೂ ಗೊತ್ತಿರುವಂಥಾದ್ದು. ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು ನನ್ನವರೆಗೆ ಎಲ್ಲರಿಗೂ ಗೊತ್ತು. ಇದನ್ನು ಸರಿ ಮಾಡುವುದು ಯಾವರೀತಿ ಎಂದು ತಾವು ದಯವಿಟ್ಟು ಯೋಚನೆ ಮಾಡಬೇಕು. ಇಡೀ ಬೊಕ್ಕಸದಲ್ಲಿ ನಿಮ್ಮ ಇಲಾಖೆಗೇ ಹೆಚ್ಚು ಕೊಡುವುದು

ನಾವು. ಆ ಹಣಕ್ಕೆ ಅಕೌಂಟಿಬಿಲಿಟಿ ಇಲ್ಲದಿದ್ದರೆ ಯಾವರೀತಿ ಮಾಡುವುದಕ್ಕೆ ಸಾಧ್ಯ? ಇದನ್ನು ನಿಲ್ಲಿಸಿದರೆ ಮಹತ್ತರವಾದ ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಏನೂ ಮಾಡಿದ ಹಾಗೆ ಆಗುವುದಿಲ್ಲ. ಆಮೇಲೆ ಸೆಮಿಡ್ರೈ ಕ್ರಾಪ್ಸ್ ಬಗ್ಗೆ ತಾವು ಹೇಮಾವತಿ ಪ್ರಾಜೆಕ್ಟ್‌ನ್ನು 7 ಲಕ್ಷ 20 ಸಾವಿರ ಎಕರೆ ಮೂಲಕ ಸೆಮಿಡ್ರೈ ಕ್ರಾಪ್ಸ್ ರಾಗಿ, ಜೋಳ, ಕಾಳುಗಳನ್ನು ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳಿದ್ದೀರಿ. ಈಗ 35 ಪರ್ಸೆಂಟ್ ಮಾತ್ರ ಆಯಿತು. ಆಮೇಲೆ ಇದಕ್ಕೆ ಸಂಬಂಧಪಟ್ಟಂತೆ ಕೆರೆ ಯಾವುದೂ ಅಭಿವೃದ್ಧಿ ಆಗುತ್ತಿಲ್ಲ. ಆದ್ದರಿಂದ ತಾವು ಹೇಮಾವತಿ ಪ್ರಾಜೆಕ್ಟ್ ಬಗ್ಗೆ ರೀಪ್ಯಾಟರ್ನ್ ಮಾಡಬೇಕು. ರಬಿ ಅಂಡ್ ಕಾರಿಫ್ ಎಂದು ಹೇಳಿ ಎರಡು ಬೆಳೆಗೆ ನೀರು ಕೊಡುತ್ತೇವೆ ಎಂದು ಹೇಳಿದ್ದೀರಿ. ಇದು ಎಷ್ಟು ಅವೈಜ್ಞಾನಿಕ. ಒಂದೇ ಬೆಳೆಗೆ ಕೊಡಿ. ಒಂದೇ ಬೆಳೆಗೆ ಎಂದು ರಿಪ್ಯಾಟರ್ನ್ ಮಾಡಬೇಕು ಮತ್ತು ಚಾನಲ್‌ಸಿಸ್ಟಮ್‌ನ್ನೇ ಬದಲಾವಣೆ ಮಾಡಬೇಕು. ಈಗ 30 ಪರ್ಸೆಂಟ್‌ಗೆ ಮಾತ್ರ ನೀರಾವರಿ ಆಗುತ್ತಿರುವುದು. 65 ಪರ್ಸೆಂಟ್ ನೀರಾವರಿ ಆಗುತ್ತಿಲ್ಲ. ಆದ್ದರಿಂದ ಯಾರೂ ಅಲ್ಲಿ ಪ್ರಯತ್ನ ಪಟ್ಟರೂ ಸಾಧ್ಯವಿಲ್ಲ. ಈ ಕಾರಣದಿಂದ ಹೇಮಾವತಿ ಬಗ್ಗೆ ಬಹಳ ಗಂಭೀರವಾಗಿ ಚರ್ಚೆಮಾಡಿ ಒಂದು ನಿಲುವಿಗೆ ಬರದೇ ಇದ್ದರೆ ಬಹಳ ಅನಾನುಕೂಲವಾಗುತ್ತದೆ. ಜೊತೆಗೆ ಕೆರೆ ಬಗ್ಗೆ ತಾವು ಚಿಂತನೆ ಮಾಡಬೇಕು. ಕೆರೆಗಳ ಬಗ್ಗೆ ಮ್ಯೆಂಟೆನೆನ್ಸ್ ಬಹಳ ಬರುತ್ತದೆ. ಅದಕ್ಕೆ ಯಾವುದಾದರೂ ಹೆಡ್ ಆಫ್ ಅಕೌಂಟ್ ಓಪನ್ ಮಾಡಿ ಅದರ ಬಗ್ಗೆ ತಾವು ಯೋಚನೆ ಮಾಡಬೇಕು. ಇನ್ನೊಂದು 1986ರಲ್ಲಿ ತಾವು ಇರಿಗೇಶನ್ ಟ್ರ್ಯಾಕ್ ರೋಡ್ಸ್ ಎಂದು ಹೇಳಿ ಕರ್ನಾಟಕದಲ್ಲಿ 20 ಸಾವಿರ ಕಿಲೋಮಿಟರ್ ರೋಡನ್ನು ಜಿಲ್ಲಾ ಪಂಚಾಯತ್‌ಗೆ ಕೊಟ್ಟಿದ್ದೀರಿ. 1986ನೇ ಇಸವಿಯಿಂದ ಇಲ್ಲಿಯವರೆಗೆ ಒಂದು ರೂಪಾಯಿ ಬಜೆಟ್‌ನಲ್ಲಿ ಹಣ ಇಲ್ಲ. ಇರಿಗೇಶನ್ ಟ್ರ್ಯಾಕ್ಸ್ ರೋಡ್ ಎಂದರೆ ವ್ಯವಸಾಯಕ್ಕೆ ಸಂಬಂಧಪಟ್ಟ ಎಲ್ಲಾ ಪದಾರ್ಥಗಳನ್ನು ಗಾಡಿಯ ಮೂಲಕ, ವಾಹನಗಳ ಮೂಲಕ ಹೇರತಕ್ಕಂಥ ಒಂದು ಜಾಗದಲ್ಲಿ 20 ಸಾವಿರ ಕಿಲೋಮೀಟರ್ಸ್‌ಗೆ ಸುಮಾರು ಹತ್ತು ವರ್ಷದಿಂದ ಏನೂ ಕೆಲಸ ಮಾಡಲಿಲ್ಲ. ಅವರು ಪಡೆದುಕೊಂಡು ಸುಮ್ಮನೆ ಇಟ್ಟುಕೊಂಡಿದ್ದಾರೆ. ಯಾವುದೇ ಒಂದು ಪೈಸೆ ಖರ್ಚು ಮಾಡಿಲ್ಲ. ತಮಗೆ ಸಂಬಂಧಪಟ್ಟಿರುವಷ್ಟು ಅವರಿಗೆ ಕೊಟ್ಟಿದ್ದೀರಿ. ಕೊಟ್ಟಿರುವುದೇ ತಪ್ಪು. ತಾವು ಅದನ್ನು ವಾಪಸ್ಸು ತೆಗೆದುಕೊಳ್ಳಿ. ಮಾನ್ಯ ಹಣಕಾಸಿನ ಮಂತ್ರಿಗಳು ದಯವಿಟ್ಟು ಈ ಇರಿಗೇಶನ್ ಟ್ರಾಕ್ ರೋಡ್ಸ್ ಬಗ್ಗೆ ಕ್ಯಾಬಿನೆಟ್ ಡಿಸಿಶನ್ ತೆಗೆದುಕೊಂಡು ಅದನ್ನು ವಾಪಸ್ಸು ಪಡೆದು ಅದರ ಬಗ್ಗೆ ಹಣ ಮಂಜೂರು ಮಾಡತಕ್ಕಂಥ ಕೆಲಸವನ್ನು ತಾವು ಮಾಡಬೇಕು. ಆದ್ದರಿಂದ ಸಭಾಧ್ಯಕ್ಷರೇ, ಭ್ರಷ್ಟಾಚಾರದ ಬಗ್ಗೆ ಒಂದು ಮಾತು ನಾನು ಹೇಳುತ್ತೇನೆ. 1982ನೇ ಇಸವಿಯಲ್ಲಿ ನಾವು ಏಶಿಯನ್ ಗೇಮ್ಸ್ ನೋಡೋಣ ಎಂದು ಹೋಗಿದ್ವಿ. ಇದನ್ನು ಈಗಾಗಲೇ ನಾನು ಸದನದಲ್ಲಿ ಹೇಳಿರಬೇಕು. ಆದರೆ ನಾನು ಹಾಗೆ ನೋಡುವುದಕ್ಕೆ ಹೋಗಿದ್ದಾಗ ನೆನಪು ಮಾಡಿಕೊಳ್ಳುತ್ತಿದ್ದೇನೆ. ವೇಷ್ಯಾವಾಟಿಕೆ ಜೀವನಚರಿತ್ರೆ, ಯಾವರೀತಿ ಇರುತ್ತದೆ ಎಂದು

ಹೇಳಿ, ನಾವು 14 ಜನ ಟೂರ್‌ಗಾಗಿ ಹೋಗಿದ್ದೆವು. ನಾವು ಅಲ್ಲಿಗೆ ಹೋದ್ವಿ, ಎಲ್ಲ ಕಡೆ ನೋಡಿದ್ವಿ, ಬಡತನ, ಬರಗಾಲದ ನೋವು ತಡೆಯಲಾರದೇನೆ ಅಲ್ಲಿರತಕ್ಕಂಥ, ಸತ್ಯ ಹೇಳಬೇಕೆಂದರೆ, ಕರ್ನಾಟಕದ ಅರ್ಧಜನ ಅಲ್ಲಿದ್ದರು. ಇದು ಬಹಳ ದು:ಖಕರವಾದ ಸಂಗತಿ. ಯಾವುದೇ ಕೆಟ್ಟಭಾವನೆ ಇರಲಿಲ್ಲ. ನಾವು ವಾಪಸ್ಸು ಹೋಗಿ ಬರಬೇಕಾದರೆ ಒಬ್ಬ ಹೆಣ್ಣುಮಗಳಿಗೆ ಸ್ವಲ್ಪ ಹರಕಲು ಮುರುಕಲು ಹಿಂದಿಬರುತ್ತಿತ್ತು. ನನಗೂ ಪೂರ್ತಿ ಅಂತ ಹಿಂದಿ ಬರುತ್ತಿರಲಿಲ್ಲ. ಬೆಹನ್‌ಜಿ, ಇದರ್ ಆವ್. ಬೀಸ್ ರೂಪಯಾ ರಖಿದೀಯಾ ಹೈ. ಕಾಫಿ ಪೀವೋ'' ಎಂದೆ. ಆಗ ಆ ಹೆಣ್ಣುಮಗಳು ಏನು ಹೇಳಿದಳು? ''ಆಪ್ ಹಮಾರಾ ಪಾಸ್ ಸೋಯಾ ನಹೀಂ. ಹಮ್ ಬೀಸ್ ರೂಪಯಾ ಮಾಂಗ್ತಾನಹೀಂ. ಹೇ, ಹಮಾರಾ ದಂಧಾ ನಹೀಂ ಹೋಗಾ. ಇಸಲಿಯೇ, ವಾಪಾಸ್ ಲೇಕೇ ಜಾವೋ'' ಎಂದು ಆಕೆ ಹೇಳಿದಳು. ಇದು ನಾವು ಗಂಭೀರವಾಗಿ ಚಿಂತನೆ ಮಾಡತಕ್ಕಂಥ ವಿಷಯ. 20 ರೂಪಾಯಿಯನ್ನು 'ನೀವು ನನ್ನ ಹತ್ತಿರ ಮಲಗಲಿಲ್ಲ, ವಾಪಸ್ಸು ತೆಗೆದುಕೊಂಡುಹೋಗಿ ಎಂದು ಅವಳು ವಾಪಸ್ಸು ಕೊಟ್ಟಳು. ತನ್ನ ವೃತ್ತಿ ಕೆಟ್ಟದ್ದು ಇರಬಹುದು, ಆದರೆ ಅವಳು ಅಷ್ಟು ಜವಾಬ್ದಾರಿಯಿಂದ ಮಾತನಾಡಿದಳು. ನಾನು ಒಂದು ಲೇಖನ ಓದಿದ್ದೆ. ಒಬ್ಬಳು ಹೇಳುತ್ತಾಳೆ ''ನಾನು ವೇಶ್ಯೆಯಾಗಿರಬಹುದು. ಆದರೆ ನನ್ನ ಜೀವನವನ್ನು ಹಾಳು ಮಾಡಿಕೊಳ್ಳಬಹುದು. ನನ್ನ ಜೀವನವನ್ನು ಹಾಳುಮಾಡಿಕೊಂಡು, ನನ್ನ ಆರೋಗ್ಯವನ್ನು ಹಾಳುಮಾಡಿಕೊಂಡಿದ್ದೇನೆ; ದುಡ್ಡು ಸಂಪಾದನೆ ಮಾಡುತ್ತಿದ್ದೇನೆ. ಬೇರೆ ಇರತಕ್ಕಂಥ ಮರ್ಯಾದಸ್ಥ ಹೆಣ್ಣುಮಕ್ಕಳ ಜೀವನ ಸುಂದರವಾಗಿರಲಿ ಎಂದು ಆಸೆಯನ್ನು ನಾನು ಇಟ್ಟುಕೊಂಡಿದ್ದೇನೆ. ಇಲ್ಲದೇ ಇದ್ದರೆ ಗಂಡಸರ ಆಕ್ರೋಶಕ್ಕೆ ಬೀದಿಯಲ್ಲಿ ರಂಪವಾಗುತ್ತಿತ್ತು, ಈ ರಂಪವನ್ನು ತಡೆದು ನಾವು ನಮ್ಮ ದೇಹವನ್ನು ಮಾರಿಕೊಂಡು ಜೀವನ ಮಾಡುವುದರ ಮೂಲಕ ಬೇರೆ ಹೆಣ್ಣುಮಕ್ಕಳು ಗೌರವದಿಂದ ಬಾಳುವೆ ಮಾಡಲಿ ಎನ್ನುವ ಮಹದಾಶಯನ್ನು ಇಟ್ಟುಕೊಂಡಿದ್ದೇವೆ, ಎಂದಳು. ಆದ್ದರಿಂದ ನಾವು ಅವರುಗಳ ಬಗ್ಗೆ ಅಷ್ಟೇ ಚಿಂತನೆ ಮಾಡಬೇಕಾಗಿದೆ. ಕನಿಷ್ಟ ಗುಣಗಳು ಮನುಷ್ಯನಿಗೆ ಇಲ್ಲದೆ ಹೋದರೆ, ಕನಿಷ್ಟ ಜವಾಬ್ದಾರಿ ನಮಗೆ ಯಾರಿಗೂ ಇಲ್ಲದೆ ಇದ್ದರೆ ಏನನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ಕೇವಲ ಭ್ರಷ್ಟಾಚಾರ ನಿಲ್ಲಿಸುವುದಕ್ಕಾಗುವುದಿಲ್ಲ, ಭ್ರಷ್ಟಾಚಾರ ನಿಲ್ಲಿಸುವುದಕ್ಕಾಗುವುದಿಲ್ಲ ಎಂದರೆ ಈ ಸದನದಲ್ಲಿ ಆ ಶಬ್ದವನ್ನು ಹೇಳಬಹುದು ಆದರೆ ಆ ಶಬ್ದವನ್ನು ಹೇಳುವುದಕ್ಕಾಗುವುದಿಲ್ಲವೆಂದು ನನಗೆ ಗೊತ್ತು. ಆದರೆ ಅತ್ಯಂತ ಗಂಭೀರವಾಗಿ ಚಿಂತನೆ ಮಾಡದೆ ಇದ್ದರೆ ನಾವು ಎಲ್ಲರೂ ನಮ್ಮ ಮನಸ್ಸನ್ನು ಯೋಜನೆ ಮಾಡಿ ಒಂದು ನಿಲುವು ತೆಗೆದುಕೊಳ್ಳದೆ ಇದರ ಬಗ್ಗೆ ಚರ್ಚೆ ಮಾಡದೆ ಇದ್ದರೆ ಬಹಳ ಅನಾನುಕೂಲದ ಪರಿಸ್ಥಿತಿ ಸೃಷ್ಟಿಯಾಗುತ್ತದೆಂದು ಹೇಳುತ್ತಾ, ದಯಮಾಡಿ ಸಣ್ಣ ನೀರಾವರಿ ಸಚಿವರು ತಾವು ಹೇಳಿದ ಹಾಗೆ ಕರ್ನಾಟಕದಲ್ಲಿ ಒಟ್ಟು ವಿಸ್ತೀರ್ಣ 19.18 ಮಿಲಿಯನ್ ಹೆಕ್ಟೇರ್ ಇದರಲ್ಲಿ 12.55 ಮಿಲಿಯನ್ ಹೆಕ್ಟೇರ್ ಕೃಷಿಗೆ ಯೋಗ್ಯವಾಗಿದೆ. ಕರಾವಳಿ ಮತ್ತು ಮಲೆನಾಡು ತೀರ ಪ್ರದೇಶಗಳಲ್ಲಿ ಹಲವು ಭಾಗಗಳನ್ನು ಹೊರತುಪಡಿಸಿ ಉಳಿದ ಭಾಗಗಳಲ್ಲಿ

ಸಕಾಲದಲ್ಲಿ ಮಳೆ ಬಾರದೆ ಬರಗಾಲಕ್ಕೆ ತುತ್ತಾಗಿರುವುದರಿಂದ ರಾಜ್ಯದಲ್ಲಿ ಬಹಳಷ್ಟು ಕುಟುಂಬಗಳು ವ್ಯವಸಾಯವನ್ನು ಅವಲಂಬಿಸಿರುತ್ತವೆ, ಸಣ್ಣ ನೀರಾವರಿಯಿಂದ ರಾಜ್ಯದಲ್ಲಿ ಬಹುತೇಕ ನೀರನ್ನು ಕೃಷಿಗೆ ಒದಗಿಸಲಾಗುತ್ತಿದೆ, ಇದಕ್ಕೆ ಪ್ರಾಮುಖ್ಯತೆ ಕೊಡುತ್ತೇವೆಂದು ಹೇಳಿದಿರಿ. ಇದಕ್ಕೆ ತಾವು ಆಯವ್ಯಯದಲ್ಲಿ ಎಷ್ಟು ಹಣವನ್ನು ಒದಗಿಸಿಕೊಂಡಿದ್ದೀರಿ? ಕರ್ನಾಟಕದಲ್ಲಿ ಎಷ್ಟು ಕೆರೆಗಳಿವೆ? 36 ಸಾವಿರ ಕೆರೆಗಳಿವೆ, 50 ಸಾವಿರ ಕೆರೆಗಳಿದ್ದರೆ ಇವರ ಜೊತೆಗೆ ನಾವು ಪೈಪೋಟಿ ಮಾಡಬಹುದಾಗಿತ್ತು. 50 ಸಾವಿರ ಕೆರೆ ಇದ್ದರೆ 25 ಕೆರೆಗೆ ಒಂದು ಟಿಎಂಸಿ ನೀರು ಇದ್ದರೆ ಎಷ್ಟಾಗುತ್ತಿತ್ತು? ಇವತ್ತು ನಾವು 2,000 ಟಿಎಂಸಿ ನೀರನ್ನು ಸ್ಟಾಕ್ ಮಾಡಬೇಕಾಗಿತ್ತು. ಅಂತರ್‌ಜಲವನ್ನು ಅಭಿವೃದ್ಧಿ ಮಾಡಬೇಕಾಗಿತ್ತು, ಏಕೆಂದರೆ ನಿಮ್ಮ ಜೊತೆಯಲ್ಲಿ ಅರಣ್ಯ ಇಲಾಖೆಯವರು ಕೆಲಸ ಮಾಡಬೇಕು. ಈ ಎರಡು ಇಲಾಖೆ ಬಹಳ ಅತ್ಯಂತ ಮುಖ್ಯವಾದುದು. ಕೆರೆಯ ಅಭಿವೃದ್ಧಿಗೆ ಹಣವಿಲ್ಲ, ಅದರಲ್ಲೂ ಬರಗಾಲ, ಬಡತನದ ನೋವು. ಮಳೆಯ ಆಧಾರದ ಪ್ರದೇಶಗಳ ರೈತರಿಗೆ ತಾವು 2,200 ಹೆಕ್ಟೇರ್‌ಗೆ ಒಳಪಡುವಂತಹ ಎಲ್ಲಾ ಕೆರೆಗಳು ನಮ್ಮದು ಎಂದು ಹೇಳಿದರು. ಜಿಲ್ಲಾ ಪಂಚಾಯಿತಿಗೆ ಕೆರೆಗಳನ್ನು ಏಕೆ ಕೊಟ್ಟಿದ್ದೀರಿ? ಇವರು ಮಾಡುವುದಕ್ಕೆ ಸಾಧ್ಯವಿಲ್ಲ, 50,000 ಸಾವಿರ ರೂಪಾಯಿಗಳನ್ನು ಒಂದೊಂದು ಕೆರೆಗೆ ಹಾಕದರೆ 25 ವರ್ಷವಾದರೂ ಒಂದು ಕೆರೆಯನ್ನು ಸರಿಪಡಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಪೂರ್ಣ ಕೆರೆಯನ್ನು ನೀವೇ ಪಡೆಸಕೊಳ್ಳಬೇಕು. ಸಣ್ಣ ನೀರಾವರಿ ಯೋಜನೆಗೆ ಈ ಕೆರೆಗಳ ಕಾನ್ಸೆಪ್ಟ್ ಎಷ್ಟು ಇದೆ, ಹಾಗೂ ಐಡಿಯಾಲಾಜಿ ಇರುತ್ತದೆ, ಇದರಿಂದಾಗಿ ತಾವು ಇವುಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯ. ಜಿಲ್ಲಾ ಪಂಚಾಯಿತಿಯಲ್ಲಿ ಕೆಲಸ ಜಾಸ್ತಿ ಇರುವುದರಿಂದ ಅತ್ಯಂತ ಗೊಂದಲವಾಗುತ್ತದೆ. ನನ್ನ ಕ್ಷೇತ್ರದಲ್ಲಿ ಸುಮಾರು 8 ಕೆರೆಗಳಿವೆ. 15 ವರ್ಷದಿಂದ ಯಾವುದೇ ಕೆರೆಗಳು ಪೂರ್ಣ ಮುಕ್ತಿಯಾಗಿಲ್ಲ. ನಂತರ ನೀವು ಕೆರೆಯಲ್ಲಿ ಕೋಡಿ ಇಟ್ಟಿದ್ದೀರಿ, ಒಂದು ಕೋಡಿಯಾದರೂ ಉಳಿದುಕೊಂಡಿದೆಯೇ? ಮಳೆ ಬಂದರೆ ಕೋಡಿ ಬೀಳುತ್ತದೆ. ಕೋಡಿ ಎಂದರ ಏನು? ಆ ಅಚ್ಚುಕಟ್ಟು ಪ್ರದೇಶಕ್ಕೆ ಎಷ್ಟು ನೀರು ಶೇಖರಣೆಯಾಗಬೇಕೋ ಅಷ್ಟು ನೀರು ಶೇಖರಣೆಯಾಗಿ ಕೋಡಿ ಬೀಳುವುದಕ್ಕೆ ಕೋಡಿ ಎಂದೆನ್ನುತ್ತಾರೆ. ಮಳೆ ಬರುತ್ತಿದ್ದ ಹಾಗೆ ನೀರು ಹೋಗುತ್ತದೆಂದರೆ ಅದು ಕೋಡಿ ಆಗದೆ ಮೋಡಿ ಎಂದು ಕಾಣಿಸುತ್ತದೆ. ಆದ್ದರಿಂದ ಗಂಭೀರವಾದ ಚಿಂತನೆ ಮಾಡಬೇಕು. ಅರಣ್ಯ ಇಲಾಖೆಯವರು ಎಲ್ಲಾ ಕೆರೆಗಳಿಗೆ ಗುಬಳಿ ಮರ ಏಕೆ ನೆಡುತ್ತೀರಿ? ಇದನ್ನು ತಾವು ಹೇಳಬೇಕು, ಗುಬಳಿ ಮರವನ್ನು ನೆಡುವುದರಿಂದ ಮುಳ್ಳುಗಳೇ ತುಂಬಿಕೊಂಡಿದೆ, ಯಾವರೀತಿ ಕೆರೆಗಳು ಆಬಾದು ಮಾಡುತ್ತೀರಿ, ಈ ಮರಗಳನ್ನು ನೆಡತಕ್ಕಂಥ ಐಡಿಯಾಲಾಜಿ ಕೊಟ್ಟವರು ಯಾರು? ಎಲ್ಲಾ ಕೆರೆಗಳಿಗೆ ಗುಬಳಿ ಮರ ನೆಟ್ಟು ಕೆರೆಗಳನ್ನು ಆಬಾದು ಮಾಡದಿದ್ದರೆ ಹೇಗೆ ಆದ್ದರಿಂದ ದಯಮಾಡಿ ಎಲ್ಲಾ ಕೆರೆಗಳಿಗೆ ಒಂದೊಂದು ಸಮಿತಿ ಮಾಡಬೇಕು, ಒಂದೊಂದು ಕೆರೆಗೆ ಒಂದೊಂದು ಸಮಿತಿ ಮಾಡಿ ಆ ಕೆರೆಗಳ ಅಭಿವೃದ್ಧಿ ಬಗ್ಗೆ ಒಂದು ನಿಗದಿತ ವೇಳೆ ಫಿಕ್ಸ್ ಮಾಡಿ ಅದರ ಮೂಲಕ

ತಾವು ಕೆಲಸ ಮಾಡಬೇಕು, ಇಲ್ಲದಿದ್ದರೆ ಏನು ಪ್ರಯೋಜನ ಆಗುವುದಿಲ್ಲ. ಆದ್ದರಿಂದ ದಯಮಾಡಿ ಸಣ್ಣ ನೀರಾವರಿ ಮಂತ್ರಿಗಳು ದೊಡ್ಡ ಕೆರೆಗಳನ್ನು ಮಾಡುವಂತಹ ಒಂದು ಕೆಲಸ ಮಾಡಬೇಕು. ಇಲ್ಲದಿದ್ದರೆ ಬಹಳ ಅನಾನುಕೂಲವಾಗುತ್ತದೆ. ಮಾನ್ಯ ಸಿದ್ಧರಾಮಯ್ಯನವರು ದಯಮಾಡಿ ದೊಡ್ಡ ನೀರಾವರಿ ಯೋಜನೆಗಳ ಬಗ್ಗೆ ನೀರನ್ನು ತಡೆದು ಹಿಡಿದುಕೊಳ್ಳುವುದಕ್ಕೆ ಎಷ್ಟು ಯೋಜನೆ ಮಾಡುತ್ತೀರೋ ಅಷ್ಟೇ ಸಣ್ಣ ನೀರಾವರಿ ಬಗ್ಗೆ ಕೂಡ ಆದ್ಯತೆ ಕೊಡಬೇಕು. ಇಷ್ಟು ಹೊತ್ತಿಗೆ ಸುಮಾರು 50 ಸಾವಿರ ಕೆರೆಗಳು ಆಗಬೇಕಾಗಿತ್ತು. ಈಗ ಕರ್ನಾಟಕದಲ್ಲಿ ಉಳಿದುಕೊಂಡಿರುವ ಕೆರೆಗಳ ಸಂಖ್ಯೆ ಕೇವಲ 13,000 ಮಾತ್ರ. ಇದಕ್ಕೆ ನಾವು ನೀವು ಎಲ್ಲರೂ ಕೂಡ ಹೊಣೆಗಾರರು. ಈ ಒಂದು ಪಾಪದ ಕೆಲಸವನ್ನು ನಾವು ಮಾಡಿದ್ದೇವೆ. ಕೆರೆಗಳ ಕಾನ್ಸೆಪ್ಟ್ ಬಗ್ಗೆ, ಬೋರವೆಲ್‌ಗಳಲ್ಲಿ ನೀರಿಲ್ಲ ಎಂದು ತಾವು ಹೇಳುತ್ತೀರಿ? ಅಂತರ್ ಜಲ ಎಂದರೇನು? ನೀರನ್ನು ತಡೆದು ನಿಲ್ಲಿಸುವ ಕೆಲಸವನ್ನು ಮಾಡಿದ್ದ ಆದರೆ ತನ್ನಷ್ಟಕ್ಕೆ ತಾನೇ ಅಂತರ್ ಜಲ ಅಭಿವೃದ್ಧಿಯಾಗುತ್ತದೆ. ಅಂತರ್ ಜಲವನ್ನು ಉಳಿಸುವ ಕೆಲಸ ಮಾಡದಿದ್ದರೆ ಯಾವ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯ? ಆದ್ದರಿಂದ ಆಯವ್ಯಯದಲ್ಲಿ ಸ್ವಲ್ಪ ಹೆಚ್ಚಿನ ಹಣವನ್ನು ಇದಕ್ಕಾಗಿ ಕೊಡಿ. ಕೆರೆಗಳ ಬಗ್ಗೆ ತಾವು ಯೋಚನೆ ಮಾಡಿದರೆ ಒಳ್ಳೆಯದು.

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು): ಅಧ್ಯಕ್ಷರೆ, ವರ್ಷದಿಂದಲೇ ನಮ್ಮ ಮಾನ್ಯ ಮಂತ್ರಿಗಳು ಒಂದು ಹೊಸ ತರಹ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ನೂರು ರೂಪಾಯಿ ಖರ್ಚಾಗುವ ಕಡೆ ಕೇವಲ 15ರಿಂದ 20 ರೂಪಾಯಿಗಳಲ್ಲಿ ಕೆರೆಗಳ ಜೀರ್ಣೋದ್ಧಾರ ಮಾಡುವುದು, ಅಂದರೆ ಹೂಳು ಎತ್ತುವುದು ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇದಕ್ಕೆ ರೈತರು ಸಂಪೂರ್ಣ ಸಹಕಾರ ಎಲ್ಲಾ ಕಡೆ ನೀಡುತ್ತಿದ್ದಾರೆ. ಮಾನ್ಯ ಸದಸ್ಯರಿಗೆ ಈ ವಿಷಯ ಗೊತ್ತಿದೆ. ರಾಜ್ಯದಲ್ಲಿ ಈಗ ಇದರ ಬಗ್ಗೆ ಒಂದು ಹೊಸ ಚೈತನ್ಯ ಕೊಡುವಂತಹ ಒಂದು ಕೆಲಸ ಪ್ರಾರಂಭವಾಗಿದೆ.

MR. SPEAKER: We will make it as a peoples movement. We will take it up. It is a good move. ಸರ್ಕಾರದ ಕೆಲಸ ಎಂದು ಮಾಡುವುದು ಬೇಡ ಜನರ ಮೂಮೆಂಟ್ ಎಂದು ಮಾಡೋಣ.

ಶ್ರೀ ಸಿ. ಭೈರೇಗೌಡ: ಮಾಡಬೇಕು ಸಾರ್, ನಾನು ಅದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅಧ್ಯಕ್ಷರೆ, ಮಾನ್ಯ ಭೈರೇಗೌಡರು ಹೇಳಿದ ಹಾಗೆ ಹೂಳು ಎತ್ತುವ ಕಾರ್ಯಕ್ರಮ ಬಹಳ ಉತ್ತಮವಾದ ಕಾರ್ಯಕ್ರಮ. ಇದು ಯಶಸ್ವಿಯಾಗುವ ಲಕ್ಷಣಗಳು ಕಾಣುತ್ತಿವೆ, ಈ ಕೆರೆಗಳನ್ನು, ಕಾಲುವೆ, ಕಟ್ಟೆ, ತೂಬು ಇವುಗಳನ್ನು ದುರಸ್ತಿ ಮಾಡುವುದು ಆಗಬೇಕು. ಡೀಸಿಲ್ಟ್ ತೆಗೆಯುತಕ್ಕಂಥದ್ದು ಒಂದು ಉತ್ತಮವಾದ

ಕಾರ್ಯಕ್ರಮ. ಮತ್ತು ಅದಕ್ಕಿಂತ ಮುಖ್ಯವಾದುದು ಎಂದರೆ ಈ ತೂಬು, ಕಾಲುವೆ, ಕಟ್ಟೆ ರೀಪೇರಿ ಮಾಡದೆ ಹೋದರೆ ಬಂದ ನೀರು ಕೂಡ ಉಳಿಯುವುದಿಲ್ಲ. ಏಕೆಂದರೆ ನೀವು ಹೂಳು ಎತ್ತಿದರೂ ನೀರು ನಿಲ್ಲಬೇಕಲ್ಲ, ಮತ್ತು ಕೆರೆಗಳಲ್ಲಿ ನೀರು ನಿಲ್ಲಬೇಕಲ್ಲ, ಹೀಗಾಗಿ ತೂಬು ಕಾಲುವೆ, ಕಟ್ಟೆ ಇಲ್ಲದಿದ್ದರೆ ಹೇಗ ನೀರು ನಿಲ್ಲುತ್ತವೆ? ಇದರಿಂದಾಗಿ ನೀವು ಹೂಳು ಎತ್ತುವುದರಿಂದ ಏನು ಪ್ರಯೋಜನ?

ಅಧ್ಯಕ್ಷರು: ಪುಟ್ಟಣ್ಣಯ್ಯನವರೆ ನೀವು ಮುಗಿಸಿ ಇಲ್ಲದಿದ್ದರೆ ನಮ್ಮ ಕಾಲುವೆಯಲ್ಲಿ ತೂಂದರೆಗಳು ಬರುತ್ತವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಅಧ್ಯಕ್ಷರೆ, ಎಷ್ಟು ಕೆರೆಗಳನ್ನು ಕೈಗೆತ್ತಿಕೊಂಡಿದ್ದೀರಿ? ತಾವು ಈಗಾಗಲೇ ಎಷ್ಟು ಕೆರೆಗಳನ್ನು ಮುಗಿಸಿದ್ದೀರಿ? ಇವು ಯಾವ ಯಾವ ಹಂತದಲ್ಲಿ ಇದೆ, ಅದರ ಕಾರ್ಯಕ್ರಮ ಏನು ಎನ್ನುವುದನ್ನು ತಾವು ಹೇಳಬೇಕು, ಜೊತೆಗೆ ಹಣಕಾಸಿನ ಮಂತ್ರಿಗಳು ಕೂಡ ಹೇಳಬೇಕು.

ಅಧ್ಯಕ್ಷರು: ಪುಟ್ಟಣ್ಣಯ್ಯನವರೆ ತಮ್ಮದು ಇನ್ನು ಒಂದು ಐದು ನಿಮಿಷ ಆಗಬಹುದಾ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಒಂದು ಹತ್ತು ನಿಮಿಷದಲ್ಲಿ ಮುಗಿಸುತ್ತೇನೆ, ಏಕೆಂದರೆ ಒಂದು ಮುಖ್ಯವಾದ ವಿಷಯ ಮಾತನಾಡಬೇಕಾಗಿದೆ. ಅದು ಏನೆಂದರೆ ಈ ಸಾವಯವ ಕೃಷಿಗೆ ಸಂಬಂಧಪಟ್ಟ ಹಾಗೆ ನಾಲ್ಕು ಮಾತನ್ನು ಹೇಳಬೇಕಾಗಿದೆ.

ಅಧ್ಯಕ್ಷರು: ನನಗೆ ಗೊತ್ತಿದೆ ತಾವು ತುಂಬಾ ಶಿಸ್ತಿನ ಮನುಷ್ಯರು, ಹತ್ತು ನಿಮಿಷ ಅಂದರೆ ಹತ್ತು ನಿಮಿಷದಲ್ಲಿ ಮುಗಿಸುತ್ತೀರಿ.

ಶ್ರೀ ಹೆಚ್.ಎನ್.ನಂಜೇಗೌಡ: ನಿಮ್ಮ ದೃಷ್ಟಿಯಲ್ಲಿ ಅಶಿಸ್ತಿನ ಜನ ಯಾರು ಇಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು: ಯಾರು ನಾನೇ ಅಶಿಸ್ತಿನವನು.

ಶ್ರೀ ಕೆ.ಸಿ.ಪುಟಣ್ಣಯ್ಯ: ಅಧ್ಯಕ್ಷರೆ, ಲಿಫ್ಟ್ ಇರೀಗೇಷನ್ ಬಗ್ಗೆ ಹೇಳುವುದಾದರೆ ನಮ್ಮಲ್ಲಿರುವ ಲಿಫ್ಟ್ ಇರೀಗೇಷನ್ ಆಲ್‌ರಡಿ ಲಿಫ್ಟ್ ಇರಿಗೇಷನ್ ಆಗಿದೆ. ಲಿಫ್ಟ್ ಹೋಗಿ ಲೆಫ್ಟ್ ಆಗುತ್ತಿದೆ. ಆದುದರಿಂದ ಲಿಫ್ಟ್ ಇರೀಗೇಷನ್ ಬಗ್ಗೆ ತಾವು ಕೃಷ್ಣಾ ಬೇಸಿನ್ ಕಾವೇರಿ ಬೇಸಿನ್ ಎಂದು ಲಿಫ್ಟ್ ಇರೀಗೇಷನ್ ಕಾರ್ಪೊರೇಷನ್ ಇದೆ. ಇದನ್ನು ಬ್ಯಾನ್ ಮಾಡಿ ಮೈನರ್ ಇರೀಗೇಷನ್ನಿಗೆ ಎಲ್ಲಾ ಕೊಟ್ಟಿದ್ದಾರೆ. ಆದರೆ ಲಿಫ್ಟ್ ಇರೀಗೇಷನ್ ಕಾನ್ಸೆಪ್ಟ್ ಬಹಳ ದೊಡ್ಡದು. ಆದುದರಿಂದ ಕರ್ನಾಟಕ ಪವರ್ ಕಾರ್ಪೊರೇಷನ್ನವರು ತಾವು ಇಬ್ಬರು ಜೊತೆಯಲ್ಲಿ ಮಾಡುವುದು ಬಹಳ ಅನುಕೂಲ.

ಲಿಫ್ಟ್ ಇರಿಗೇಷನ್ ಆಯಾಯ ಎರಡು ಭಾಗಗಳಲ್ಲಿ ಕನಿಷ್ಟ 1 ಮೆಗಾವೇಟ್, 2 ಮೇಗಾವ್ಯಾಟ್ ಉತ್ಪಾದನೆ ಮಾಡತಕ್ಕಂಥ ಸ್ಮಾಲ್ ಯೂನಿಟ್ ಹಾಕಿಕೊಳ್ಳುವುದರ ಮೂಲಕ ಲಿಫ್ಟ್ ಇರೀಗೇಷನ್ ಕೆಲಸಗಳನ್ನು ನೀವು ಮಾಡಿದರೆ ಪ್ರಯೋಜನವಾಗುತ್ತದೆ. ಇಲ್ಲವಾದರೆ ಈ ರೀತಿ ವಿದ್ಯುತ್ ಲಿಫ್ಟ್ ಇರೀಗೇಷನ್‌ಗೆ ಸಾಧ್ಯವಿಲ್ಲ. ಲಿಫ್ಟ್ ಇರಿಗೇಷನ್ ಜೊತೆಗೆ, ಡ್ರಿಪ್ ಇರೀಗೇಷನ್, ಸ್ಪಿಂಕಲರ್ ಎರಡು ಇಂಟರ್‌ಡ್ಯೂಸ್ ಮಾಡಬೇಕು. ಬೇರೆ ರೀತಿಯ ಬೆಳೆಯನ್ನು ಇನವಾಲ್‌ಮೆಂಟ್ ಮಾಡತಕ್ಕಂಥದ್ದು ತಾವು ತೋಟಗಾರಿಕೆ ಇಲಾಖೆಯವರು, ಹಾಗೂ ಕೃಷಿ ಇಲಾಖೆಯವರು ಮಾಡಬೇಕು. ಕೆಲವು ಪವರ್ ಕೊಟ್ಟಿದ್ದೀರಿ. ಕೆಲವು ಕಡೆ ಡೀಸೆಲ್ ಜನರೇಟರ್ ಕೂಡ ಉಪಯೋಗ ಮಾಡಬಹುದು. ಈ ಯುವಜನ ಇಲಾಖೆ ಎಂದರೆ ಏನು ಪ್ರಯೋಜನ ಇಲ್ಲದ ಇಲಾಖೆ ಎಂದು ತಿಳಿದುಕೊಂಡಿದ್ದಿರೋ ಏನೋ ನನಗೆ ಗೊತ್ತಿಲ್ಲ. ದೈಹಿಕ ಶಿಕ್ಷಣ ಇಲ್ಲದೆ ಇದ್ದರೆ ಆ ದೇಶ ಏನು ಪ್ರಯೋಜನ ಇಲ್ಲ. ದೈಹಿಕ ಶಿಕ್ಷಣ ಯಾರು ಮಾಡುವುದಿಲ್ಲವೋ ಅವರನ್ನು ಡೆವಿಲ್ಸ್ ಎನ್ನುತ್ತಾರೆ. ಎಂಎಲ್‌ಎಗಳು ಆರೋಗ್ಯವಾಗಿರಲಿ ಎಂದು ಶಾಸಕರ ಭವನದಲ್ಲಿ ಒಂದು ವ್ಯಾಯಾಮ ಶಾಲೆಯನ್ನು ಕಟ್ಟಿದ್ದೀರಿ. ಮಾನ್ಯ ಪಾಟಾಳ್‌ರವರು ಬೆಳಗಿನ ಜಾವ ವಾಕಿಂಗ್ ಮಾಡುತ್ತಿರುತ್ತಾರೆ, ಇದರ ಉದ್ದೇಶ ಏನೆಂದರೆ ದೈಹಿಕ ಶಿಕ್ಷಣ, ದೈಹಿಕವಾಗಿ ಆರೋಗ್ಯವಾಗಿದ್ದಂತಹ ವ್ಯಕ್ತಿ, ತನ್ನ ಜೀವನದ ಪ್ರತಿ ಒಂದು ದಿನವನ್ನು ಉತ್ತಮ ಕೆಲಸವನ್ನು ಮಾಡಬೇಕೆನ್ನುವ ಒಂದು ಮಹತ್ತರವಾದ ವಿಚಾರವಿರುತ್ತದೆ. ಆದರೆ ತಾವು ಏನು ಮಾಡುತ್ತಿದ್ದೀರಿ? ಯಾವ ರೀತಿಯ ತರಬೇತಿ ಕೊಡುತ್ತಿದ್ದೀರಿ? ಕ್ರೀಡಾಪ್ರಾಧಿಕಾರ ಮಾಡಿದಿರಿ, ಯುವಜನರಿಗೆ ಎಂದು ಯುವಜನ ಇಲಾಖೆ ಮಾಡಿ ಯುವಜನ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಮಾಡಿದ್ದೀರಿ, ಆದರೆ ಅವರು ಎಲ್ಲರೂ ಬೆಂಗಳೂರಿನಲ್ಲಿ ಇದ್ದಾರೆ. ಒಂದು ಉದಾಹರಣೆ ಹೇಳುವುದಾದರೆ ಮೊನ್ನೆ ಬೆಣಸನಹಳ್ಳಿಯ ಚೆನ್ನಪಟ್ಟಣ ತಾಲ್ಲೂಕು, ಬೆಂಗಳೂರು ಜಿಲ್ಲೆಗೆ ಸೇರಿದಂತಹ ಒಂದು 13 ವರ್ಷದ ಹುಡುಗಿ ಕು:ಎಂ.ರಾಧ 101 ಡಿಗ್ರಿ ಜ್ವರದೊಂದಿಗೆ ಸುಮಾರು ಮೂರು ದಿವಸ ನನ್ನ ರೂಮಲ್ಲಿ ಮಲಗಿದ್ದಳು, ಈ ಹುಡುಗಿ ಓಟದ ಸ್ಪರ್ಧೆಯಲ್ಲಿ 100 ಮೀ. 200 ಮೀ. 300 ಮೀ. 400 ಮೀ. 3000 ಮೀಟರ್ ಹೀಗೆ ರನ್ನಿಂಗ್‌ನಲ್ಲಿ ಓಡಿ ಸುಮಾರು 11 ಪದಕಗಳನ್ನು ಪಡೆದುಕೊಂಡಿದ್ದಾಳೆ. ಸಾಮಾನ್ಯವಾಗಿ ನೀವು ಯಾರಾದರೂ ಆ ಹುಡುಗಿಯನ್ನು ಗಮನಿಸಿದರೆ ಸುಳ್ಳು ಪದಕಗಳನ್ನು ಹಾಗೂ ಸುಳ್ಳು ಪ್ರಮಾಣ ಪತ್ರ ತೆಗೆದುಕೊಂಡಿದ್ದೀಯ ಎಂದು ಅನುಮಾನಿಸಬಹುದು. 13 ವರ್ಷದ ಹುಡುಗಿ 101 ಡಿಗ್ರಿ ಜ್ವರ ಬಂದರೆ, ನಿಮ್ಮ ರಾಷ್ಟ್ರ, ರಾಜ್ಯ ಮಟ್ಟದಲ್ಲಿ 16 ವರ್ಷದ ಕೆಳಗಿನ ರನ್ನಿಂಗ್ ಸ್ಪರ್ಧೆಯಲ್ಲಿ 3,000 ಮೀಟರ್ ರನ್ನಿಂಗ್ ಚಾಂಪಿಯನ್ನಾಗಿದ್ದಾಳೆ, 16 ವರ್ಷದ ಮೇಲಿನ ರನ್ನಿಂಗ್ ಸ್ಪರ್ಧೆಯಲ್ಲಿ ಓಪನ್ ಕಾಂಪಿಟೇಷನಲ್ಲೂ ಚಾಂಪಿಯನ್, ಈ ಎಲ್ಲಾ ಚಾಂಪಿಯಿನ್ ಕೇವಲ 13 ವರ್ಷದ ಕುಮಾರಿ ರಾಧ ಸಾಧನೆ ಮಾಡಿದ್ದಾಳೆ. ಹೀಗಿದ್ದರೂ ಕೂಡ ಅವಳಿಗೆ ಕ್ರೀಡಾ ಹಾಸ್ಟೆಲ್‌ನಲ್ಲಿ ಸೀಟು ಕೊಟ್ಟಿಲ್ಲ ಕಾರಣವೇನೆಂದರೆ ಆ ಹುಡುಗಿ ಒಂದು ಅಂಗುಲ ಎತ್ತರ ಕಡಿಮೆ ಇದ್ದಾಳೆ ಎಂಬ ಕಾರಣಕ್ಕಾಗಿ ಅವಳಿಗೆ

ಸೀಟು ಕೊಟ್ಟಿಲ್ಲ. 11, 12, ಪದಕಗಳನ್ನು ಗಳಿಸಿರುವ ಆ ಹುಡುಗಿಗೆ ಸೀಟು ಇಲ್ಲ ಎಂದರೆ ಏನರ್ಥ? ನಾನು ಹೇಳುವುದು ಏನೆಂದರೆ ಕರ್ನಾಟಕ ಸರ್ಕಾರ ಆ ಹುಡುಗಿಯನ್ನು ದತ್ತು ತೆಗೆದುಕೊಳ್ಳುವ ಕೆಲಸ ಮಾಡಿದರೆ ಬಹಳ ಒಳ್ಳೆಯದು. ನಿಜವಾಗಲೂ ಆ ಹುಡುಗಿಯ ಪರಿಸ್ಥಿತಿ ನೋಡಿದರೆ ಬಹಳ ಹೊಟ್ಟೆಯುರಿಯುತ್ತದೆ, ಏಕೆಂದರೆ ಅವಳ ತಂದೆ ಒಬ್ಬ ಪೈಲ್ವಾನ್, ನಾವು 500 ರೂಪಾಯಿಗಳನ್ನು ಕೊಟ್ಟು ಊಟ ತಿಂಡಿ ಕೊಡಿಸಿ ಕಳಿಸಿದೆವು. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಹೆಣ್ಣುಮಕ್ಕಳ ಕ್ರೀಡಾಪಟುಗಳ ಬಗ್ಗೆ ತಾವು ಯಾವ ರೀತಿ ಚಿಂತನೆ ಮಾಡುತ್ತೀರಿ ಎನ್ನುವುದು ತಾವು ಹೇಳಬೇಕು. ತಾವು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಹೇಳಿ ಏಕೆಂದರೆ ಇಷ್ಟೊಂದು ಕ್ರೀಡಾ ಹಾಸ್ಟೆಲ್ ಓಪನ್ ಮಾಡಿ, ಕ್ರೀಡಾ ಪಟುಗಳನ್ನು ತಯಾರು ಮಾಡಿದ್ದಾರೆ ಇದಕ್ಕೆಲ್ಲಾ ಅಕೌಂಟಬಿಲಿಟಿ ಏನು ಎನ್ನುವುದನ್ನು ತಾವು ಕೇಳಬೇಕು. ಆದ್ದರಿಂದ ಸನ್ಮಾನ್ಯ ಗೋವಿಂದೇಗೌಡರು ಶಾಲೆಗಳಲ್ಲಿ ಕಡ್ಡಾಯ ವ್ಯಾಯಾಮವನ್ನು ತರಬೇಕು. ಈ ರೀತಿ ಕಡ್ಡಾಯ ವ್ಯಾಯಾಮ ಮಾಡದೇ ಹೋದರೆ ಮುಂದಿನ ಪೀಳಿಗೆ ನಾಶವಾಗಿ ಹೋಗುತ್ತದೆ. ಅದು ಎಲ್ಲಾ ಲಿಲಿಪುಟ್ಸ್ ಆಗಿಹೋಗುತ್ತದೆ. ಕೈ ಕಾಲು ಎಲ್ಲಾ ಚೋಟ್ಟ ಆಗಿಹೋಗುತ್ತಿದೆ. ಉದಾಹರಣೆಗೆ ತಾವು ಈಜು ಕಲಿಸುತ್ತೀರಿ, ಎಲ್ಲಿ ಕಲಿಸುತ್ತೀರಿ? ಈಜುಕೊಳದಲ್ಲಿ ಕಲಿಸುತ್ತೀರಿ. ನೀರು ಜೋರಾಗಿ ಹರಿಯತಕ್ಕ ಸ್ಥಳದಲ್ಲಿ ವಿರುದ್ಧವಾಗಿ ಈಜತಕ್ಕ ತರಬೇತಿ ಕೊಡಬೇಕು. ಆಗ ವರ್ಲ್ಡ್ ಚಾಂಪಿಯನ್ ಬಹಳ ಸುಲಭವಾಗಿ ಆಗುತ್ತಾನೆ. ಆ ದಿಕ್ಕಿನಲ್ಲಿ ತಾವು ಏನಾದರೂ ಯೋಚನೆ ಮಾಡಿ. 100 ಮೀಟರ್ಸ್ 200 ಮೀಟರ್ಸ್ ಓಟಕ್ಕಾಗಿ ಪ್ರಾಕ್ಟೀಸ್ ಮಾಡಿಸುತ್ತಾರೆ. ಬದಿ ಗದ್ದೆಯಲ್ಲಿ ಓಡಿಸಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಜುವುದು ಮುಖ್ಯಮಂತ್ರಿಗಳಿಗೆ ಚೆನ್ನಾಗಿ ಗೊತ್ತಿದೆ. ಏಕೆಂದರೆ, ನಾನು ನಿನ್ನೆ ಅವರ ಬಯೋಡೇಟಾದಲ್ಲಿ ನೋಡಿದೆ. ಅವರ ಹವ್ಯಾಸಗಳೇನು ಎಂಬ ಬಗ್ಗೆ ಎರಡೇ ಬರೆದಿದ್ದಾರೆ. ಒಂದು ಈಜಾಡುವುದು, ಇನ್ನೊಂದು ಓದುವುದು. ಬಹುಶಃ ಮುಖ್ಯಮಂತ್ರಿಗಳ ಹತ್ತಿರ ತರಬೇತಿ ತೆಗೆದುಕೊಂಡರೆ, ಚೆನ್ನಾಗಿ ಈಜುವುದು ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್: ಅವರು ಮೊದಲು ಚೆನ್ನಾಗಿ ಈಜಾಡುತ್ತಿದ್ದರು. ಈಗ ಅವರಿಗೆ ಕಷ್ಟವಾಗಿದೆ.

ಶ್ರೀ ಜೆ.ಹೆಚ್.ಪಟೇಲ್: ನಾನು ಈಜು ಕಲಿತದ್ದು ಈಜುಕೊಳದಲ್ಲಿ ಅಲ್ಲ. ನಮ್ಮ ಊರ ಹತ್ತಿರ ಎರಡೂ ಕಡೆ ಹಳ್ಳ ಇತ್ತು. ಪ್ರತಿವರ್ಷ ಎರಡು ಮೂರು ತಿಂಗಳು ಆ ಹಳ್ಳ ಹರಿದಾಗ, ನಾವು ಈಜಾಡಲೇಬೇಕು. ಮಾನ್ಯ ವಿರೋಧಪಕ್ಷದ ನಾಯಕರು ಇಲ್ಲಿ ಕೇಳಿರುವುದರಿಂದ ಹೇಳುತ್ತೇನೆ. 1963ನೇ ಇಸವಿ ಮೇ ತಿಂಗಳಲ್ಲಿ ಗಂಗಾ ನದಿಯ ಈ ದಂಡೆಯಿಂದ ಆ ದಂಡೆಯವರೆಗೆ ನಾನು ಈಜಾಡಿದ್ದೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ನಿಮಗೆ ಅದೊಂದೇ ಕ್ರೀಡೆಯೇ, ಬೇರೆ ಯಾವ ಕ್ರೀಡೆಗಳೂ ಇಲ್ಲವೇ...

ಅಧ್ಯಕ್ಷರು: ಅವರಿಗೆ ಅದೊಂದಕ್ಕೇ ಟೈಮ್ ಸಾಕಾಗುತ್ತಾ ಇಲ್ಲ. ಇನ್ನು ಬೇರೆ ಯಾವುದನ್ನು ಮಾಡುತ್ತಾರೆ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಆಮೇಲೆ ರಜಾ ದಿನಗಳಲ್ಲಿ ಯಾರು ಯಾರು ಸ್ಪೋರ್ಟ್ಸ್ ಮಾಡುತ್ತಾರೆ, ಅವರೆಲ್ಲರಿಗೂ ತಾಲ್ಲೂಕು ಮಟ್ಟದಲ್ಲಿ ಅಧ್ಯಯನ ಶಿಬಿರಗಳನ್ನು ಮಾಡಿಸಬೇಕು; ಕ್ರೀಡಾ ಶಿಬಿರಗಳನ್ನು ಮಾಡಿಸಬೇಕು. ಬೆಳಿಗ್ಗೆ ಎಲ್ಲಾ ಆಟದ ತರಬೇತಿ ಕೊಡಬೇಕು. ಸಾಯಂಕಾಲ 6ರಿಂದ 7 ಗಂಟೆಯವರೆಗೂ ಪ್ರಪಂಚದ ಇತಿಹಾಸದಲ್ಲಿ ಯಾರು ಯಾರು ಕ್ರೀಡಾರಂಗವನ್ನು ಬೆಳೆಸಿದರು ಅವರಿಂದ ಮಾರ್ಗದರ್ಶನ ಪಡೆಯಬೇಕು. ಒಂದೇ ಒಂದು ಕತೆ ಹೇಳುತ್ತೇನೆ. ಕ್ರೀಡೆ ಎಂದರೆ, ಜಾತಿ, ಧರ್ಮ, ಅಸ್ಪೃಶ್ಯತೆ, ಅಸಮಾನತೆ ಇವೆಲ್ಲವನ್ನೂ ನಾಶ ಮಾಡತಕ್ಕ ಶಕ್ತಿ ಇದೆ. ಉದಾಹರಣೆಗೆ ಒಮ್ಮೆ ಹಿಟ್ಲರ್ ಬರ್ಲಿಂಗ್ ಒಲಿಂಪಿಕ್ಸ್‌ನಲ್ಲಿ ಕುಳಿತಿರುತ್ತಾನೆ. ಜಸ್ಸಿ ಓವನ್ಸ್ ಮೂರು ಚಿನ್ನದ ಪದಕಗಳನ್ನು ಗಳಿಸಿರುತ್ತಾನೆ. ಲಾಂಗ್ ಜಂಪ್‌ನಲ್ಲಿ 4ನೇ ಚಿನ್ನದ ಪದಕಕ್ಕಾಗಿ ಪ್ರಯತ್ನಪಡುತ್ತಿರುತ್ತಾನೆ. ಎರಡುಸಾರಿ ಫೌಲ್ ಮಾಡುತ್ತಾನೆ. ಅದೇ ಜರ್ಮನಿಯ ಅಥ್ಲೆಟ್ ಉಜಲಾಂಗ್ ಎಂದು ಇರುತ್ತಾನೆ. ಅವನು ಮೊದಲನೇ ಬಹುಮಾನ ಡಿಕ್ಲೇರ್ ಆಗತಕ್ಕ ಜಂಪ್ ಮಾಡಿರುತ್ತಾನೆ. ಆಗಲೇ ಮೂರು ಜಂಪ್‌ನಲ್ಲೂ ಹೈಯೆಸ್ಟ್ ಬಂದಿರುತ್ತಾನೆ. ಜಸ್ಸಿ ಓವನ್ಸ್ ಕರೆದು ಹೇಳುತ್ತಾನೆ. ನೀನು ನನಗಿಂತ ಚೆನ್ನಾಗಿ ಜಂಪ್ ಮಾಡುತ್ತಾ ಇದ್ದೀಯಾ. ಆದರೆ, ಎರಡುಸಾರಿ, ಫೌಲ್ ಮಾಡಿದ್ದೀಯಾ. ಇನ್ನು ಎರಡು ಇಂಚು ಹಿಂದಕ್ಕೆ ಸ್ಟೆಪ್ಸ್ ತೆಗೆದುಕೊಂಡು ನೆಗೆ ಎಂದು ಹೇಳಿ, ಅವನನ್ನು ತಬ್ಬಿಕೊಂಡು ಕಳುಹಿಸಿಕೊಟ್ಟ. ಅದನ್ನು ಹಿಟ್ಲರ್ ನೋಡಿ ಕೈ, ಕೈ ಹಿಸುಕಿಕೊಂಡ. ಕೊನೆಗೆ ಅವನು ಜಂಪ್ ಮಾಡುತ್ತಾನೆ. ಜಂಪ್ ಮಾಡಿದ ಕೂಡಲೇ ಫಸ್ಟ್ ಬಂದುಬಿಡುತ್ತಾನೆ, ಹೋಗಿ ತಬ್ಬಿಕೊಳ್ಳುತ್ತಾನೆ. ಹಿಟ್ಲರ್ ಆ ಸಭೆಯಿಂದ ಎದ್ದು ಹೊರಟುಹೋಗುತ್ತಾನೆ. ಈ ಕಪ್ಪಾಗಿರುವವನ ಕೈ ಮುಟ್ಟಬೇಕಲ್ಲ, ಥ್ಯಾಂಕ್ಸ್ ಕೊಡುವುದಕ್ಕಾಗಿ ಎಂದು, ಆ ಬ್ಲಾಕ್ಸ್‌ನ ವಿರೋಧ ಮಾಡಿ ಹೊರಗಡೆ ಹೊರಟುಹೋಗುತ್ತಾನೆ. ಆದರೆ, ಇಡೀ ಬರ್ಲಿನ್ ಜನ, ಇಡೀ ಪ್ರಪಂಚದ 125 ವರ್ಷಗಳ ಇತಿಹಾಸದಲ್ಲಿ ಅಥ್ಲೆಟಿಕ್ಸ್‌ನಲ್ಲಿ 4 ಚಿನ್ನದ ಪದಕವನ್ನು ಗಳಿಸಿದ ಜರ್ಸಿ ಓವನ್ಸ್‌ನನ್ನು ಬಹಿರಂಗವಾಗಿ ಕಾರಿನಲ್ಲಿ ಕುಳ್ಳಿರಿಸಿ, ಹೂವಿನ ಹಾರವನ್ನು ಹಾಕಿ, ಲಕ್ಷಾಂತರ ಜನರು ಮೆರವಣಿಗೆ ಮಾಡಿಸುತ್ತಾರೆ. ಇಡೀ ಜಾತಿಯನ್ನು ನಾಶ ಮಾಡಿಸಿತು. ಇಡೀ ಧರ್ಮಗಳ ದ್ವೇಶವನ್ನು ನಾಶ ಮಾಡಿಸಿತು. ಇದು ಇವತ್ತು ಪ್ರಪಂಚದಲ್ಲಿ ನೀಗ್ರೋಗಳ ಗುಲಾಮಗಿರಿಯನ್ನು ನಾಶ ಮಾಡಿದಂಥ ಏಕಮಾತ್ರ ಸಾಂಸ್ಕೃತಿಕ ಚಟುವಟಿಕೆ ಕ್ರೀಡೆ. ಇದನ್ನು ತಾವು ಒಪ್ಪಿಕೊಳ್ಳಬೇಕು. ಅಲ್ಲಿ ಸಿ.ಇ.ಟಿ.ಗೆ ಹೋದರೆ, ನೀವು ಕ್ರೀಡೆಯೊ ಅಥವಾ ಮೆರಿಟ್ಟೋ ಎಂದು ಹೇಳುತ್ತಾರೆ. ಇದಕ್ಕೆ ತಾವೇ ಉತ್ತರಕೊಡಬೇಕು. ಸಿ.ಇ.ಟಿ.ಗೆ ಹೋದರೆ ಪ್ರಾಕ್ಟಿಕಲ್ ನಾಲೆಡ್ಜ್ ಇಲ್ಲ. ಇರಬಹುದು

ಒಳ್ಳೆಯವರು, ನಾನು ಎಲ್ಲರೂ ಕೆಟ್ಟವರು ಎಂದು ಹೇಳುವುದಿಲ್ಲ. ಅವರು ಯಾವುದಕ್ಕೆ ಆದ್ಯತೆ ಕೊಡುತ್ತಾರೆಂದರೆ, ಸಿ.ಇ.ಟಿ.ನಲ್ಲಿ ರ್‍ಯಾಂಕ್ ತೆಗೆದುಕೊಂಡಿರುವವನು ಏಷ್ಯನ್ ಗೋಲ್ಡ್ ಮೆಡಲ್ ತೆಗೆದುಕೊಂಡಿರುವವನು ಸಿ.ಇ.ಟಿ.ನಲ್ಲಿ 8 ಸಾವಿರ ತೆಗೆದುಕೊಳ್ಳಬಹುದು. ನ್ಯಾಷನಲ್‌ನಲ್ಲಿ ಗೋಲ್ಡ್ ಮೆಡಲ್ ತೆಗೆದುಕೊಂಡಿರುವವನು, ಸಿ.ಇ.ಟಿ.ನಲ್ಲಿ 7 ಸಾವಿರ ತೆಗೆದುಕೊಂಡರೆ ಅವನಿಗೆ ಸಿ.ಇ.ಟಿ.ನಲ್ಲಿ ಸೀಟು ಕೊಡುವುದು ಬೇಡವೇ ತಾವು ಹೇಳಬೇಕು. ಕ್ರೀಡಾ ಪ್ರತಿಭೆಗೆ ಎಂದು ಮೀಸಲಿಟ್ಟ ಮೇಲೆ, ಯಾವುದಕ್ಕೆ ಕೊಡಬೇಕು. ಸ್ಪೋರ್ಟ್ಸ್ ಮೆರಿಟ್ ಡಿಕ್ಲೇರ್ ಮಾಡಬೇಕು. ಅದರಿಂದ ರೂಲ್ಸ್ ತಪ್ಪಾಗಿದೆ.

ಶ್ರೀ ಜೆ.ಹೆಚ್.ಪಟೇಲ್: ರೂಲ್ಸ್ ತಪ್ಪಾಗಿದೆ, ಅದನ್ನು ಸರಿಪಡಿಸುತ್ತೇವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಇನ್ನೊಂದು ಮನವಿ. ಬಹಳ ಜನ ಶಾಸಕರು ವ್ಯಾಯಾಮ ಶಾಲೆಗೆ ಬರುತ್ತಾ ಇಲ್ಲ. ಮಾನ್ಯ ತಿಮ್ಮಪ್ಪನವರು ಒಳ್ಳೆಯ ದಾರಾಸಿಂಗ್ ಇದ್ದಹಾಗೆ ಇದ್ದಾರೆ. ದಯವಿಟ್ಟು ನೀವೂ ಬರಬೇಕು. ಖರ್ಗೆಯವರು ಒಳ್ಳೆಯ ಪೈಲ್ವಾನ್ ಕಂಡ ಹಾಗೆಯೇ ಕಾಣುತ್ತಾರೆ. ಎಲ್ಲರೂ ದಯವಿಟ್ಟು ವ್ಯಾಯಾಮ ಶಾಲೆಗೆ ಬನ್ನಿ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೇ, ಈ ಸಂದರ್ಭದಲ್ಲಿ ಎಲ್ಲವೂ ಸರಿ. ನಾನು ಬೆಳಿಗ್ಗೆ ಎದ್ದು, ಬಂದಮೇಲೆ ನಮ್ಮ ಶ್ರೀರಾಮರೆಡ್ಡಿಯವರು ಏಲಕ್ಕಿ ತಿನ್ನಿ ಎಂದು ತಂದುಕೊಟ್ಟರು. ನನಗೆ ಅದು ಆಗುವುದಿಲ್ಲ, ನಾನು ಲವಂಗ ತಿನ್ನುವವನು, ನೀವು ಏಲಕ್ಕಿ ತಿನ್ನುವವರು ಅದು ನಿಮಗೇ ಸರಿ ಎಂದು ನಾನು ಹೇಳಿದೆ. ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಎಲ್ಲಾ ಶಾಸಕರು ವ್ಯಾಯಾಮಕ್ಕೆ ಬನ್ನಿ ಎಂದು ಹೇಳುತ್ತೀರಿ. ಇವರ ಪರಿಸ್ಥಿತಿ ಈ ರೀತಿಯಾಗಿದೆ. ನೋಡಿ ತಮಗೆ ತೋರಿಸುತ್ತಿದ್ದೇನೆ. ಏಲಕ್ಕಿ ಕೊಟ್ಟಿದ್ದಾರೆ. ನಾವೆಲ್ಲಾ ಏಲಕ್ಕಿ ತಿನ್ನುವ ಜನ ಅಲ್ಲ. ಮುಖ್ಯಮಂತ್ರಿಗಳೂ ಏಲಕ್ಕಿ ತಿನ್ನುವುದಿಲ್ಲ. ನೀವು ಬಾದಾಮಿ, ಗೇರುಬೀಜ ತಾನೆ ತಿನ್ನುವುದು. ನೀವು ಖಂಡಿತ ಏಲಕ್ಕಿ ತಿನ್ನುವುದಿಲ್ಲ ಮತ್ತು ನಾನು ಏಲಕ್ಕಿ ತಿನ್ನುವುದನ್ನು ನೋಡಿಲ್ಲ ನೀವು ತಿನ್ನುವುದಕ್ಕಾಗುವುದೇ ಇಲ್ಲ.

ಶ್ರೀ ಜೆ.ಹೆಚ್.ಪಟೇಲ್: ಯಾರು ಬಹಳ ಲಕ್ಕಿನೋ ಅವರು ಏಲಕ್ಕಿ ತಿನ್ನುವುದಿಲ್ಲ.

ಅಧ್ಯಕ್ಷರು: ಶ್ರೀರಾಮರೆಡ್ಡಿಯವರೂ ಲವಂಗ ತಿನ್ನುತ್ತಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನನ್ನಂಥ ದುರಾದೃಷ್ಟ ಮನುಷ್ಯ ಈ ಜಗತ್ತಿನಲ್ಲಿ ಯಾರೂ ಇರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಅದರಿಂದ ತಾವು ಕ್ರೀಡೆ ಬಗ್ಗೆ ಹೆಚ್ಚು ಒತ್ತು ಕೊಡಬೇಕು. ಹೆಣ್ಣುಮಕ್ಕಳೂ ವ್ಯಾಯಾಮ ಮಾಡಬೇಕು. ನಿಜವಾಗಿಯೂ ಹೇಳಬೇಕೆಂದರೆ,

ಕೃಷ್ಣದೇವರಾಯನ ಕಾಲದಲ್ಲಿ ಗಂಡಸರು 1,000 ಬೈಸಿಗೆ ಹೊಡೆದರೆ, ಹೆಂಗಸರೂ 1,000 ಬೈಸಿಗೆ ಹೊಡೆಯಬೇಕು.

ಶ್ರೀ ವಾಟಾಳ್ ನಾಗರಾಜ್: ಅವರು ಹೊಡೆದುಬಿಟ್ಟರೆ ಗತಿ ಏನಾಗಬೇಕು? ಗುರುಪಾದಪ್ಪನವರ ಬಗ್ಗೆ ನನಗೆ ಗೌರವ ಇದೆ. ಅವರು ಬೈಸಿಗೆ ಹೊಡೆಯುವುದಕ್ಕೆ ಹೋದರೆ, ಕೈ ಕಾಲುಗಳ ಗತಿ ಏನಾಗಬೇಕು.

ಅಧ್ಯಕ್ಷರು: ಅವರೇನೂ ಹೊಡೆಯಬೇಕಾಗಿಲ್ಲ, ಅವರನ್ನು ನೋಡಿ ಬೇರೆಯವರೇ ಹೊಡೆಯುತ್ತಾರೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಕುಸ್ತಿಯಲ್ಲಿ ಎಷ್ಟೋ ಜನ ಹೆಂಗಸರು ಗಂಡಸರನ್ನು ಸೋಲಿಸುವ ಮಟ್ಟಕ್ಕೆ ಬಂದಿದ್ದರು. ಆಗ ಗಂಡಸರು ಯೋಚನೆ ಮಾಡಿದರು, ಈ ರೀತಿ ಕುಸ್ತಿ ಮಾಡುವ ಮೂಲಕ ನಮಗೆ ಅವಮಾನವಾಗುತ್ತದೆಯೆಂದು, ಹೇಳಿ ಆವತ್ತಿನಿಂದ ಕುಸ್ತಿ ಬಿಡಿಸಿದರು. ಸನ್ಮಾನ್ಯ ಅಧ್ಯಕ್ಷರೇ, ಸುಮಾರು 9 ತಿಂಗಳ ಒಬ್ಬ ಗರ್ಭಿಣಿ ಹೆಂಗಸು, ಅವರಿಗೆ ಚಿಕ್ಕಂದಿನಿಂದಲೂ ಮೆರಥಾನ್ ರೇಸ್ ಓಡತಕ್ಕ ಕಲೆ ಇತ್ತು. ಆಗ, ಅವರ ಗಂಡ ಹೇಳಿದ್ದ. ನಾಡ ಹಬ್ಬಕ್ಕೆ ನೀನು ರೇಸನ್ನು ಕಾಂಪೀಟ್ ಮಾಡಬೇಡ ಎಂದು. ಅವಳು ನೈಟಿ ಹಾಕಿಕೊಂಡು, ಗಂಡನಿಗೂ ಗೊತ್ತಿಲ್ಲದ ಹಾಗೆ, 1,000, 1,500ರ ಮಧ್ಯೆ ಹೋಗಿ ಸೇರಿಕೊಂಡುಬಿಟ್ಟಳು. 25 ಮೈಲಿ ಮೆರೆಥಾನ್ ರೇಸ್ ಓಡತಕ್ಕ ಕಲೆಯಲ್ಲಿ ಭಾಗವಹಿಸಿ, 14 ಕಿಲೋಮೀಟರ್ ಓಡಿದ್ದಾಳೆ. ಕಡೆಗೆ ಹೊಟ್ಟೆ ನೋವು ಬಂದು ಕೆಳಗೆ ಬಿದ್ದುಹೋಗಿದ್ದಾಳೆ. ಒಂದು ಮಗು ಹೆರಿಗೆಯಾಯಿತು. ತಕ್ಷಣ ಆ ಮಗುವನ್ನು ಎತ್ತಿ ಬೇರೆಯವರ ಕೈಗೆ ಕೊಟ್ಟು, ನಂತರ ಓಡಿಯೇ ಬಿಟ್ಟಳು! ಆನಂತರ ಆಕೆ ಮೂರನೇ ಸ್ಥಾನದಲ್ಲಿ ಬಂದಿದ್ದಾಳೆ ಆದ್ದರಿಂದ ಕ್ರೀಡೆಯ ಇತಿಹಾಸ ಬಹಳ ದೊಡ್ಡದು. ಅದರ ಬಗ್ಗೆ ಹೇಳುವುದಕ್ಕೆ ಈಗ ಅವಕಾಶ ಇಲ್ಲ. ಇನ್ನೂ ಜಾಸ್ತಿ ಮಾತನಾಡಬಹುದಿತ್ತು. ಅದರ ಕಾನ್‌ಸೆಪ್ಟ್ ಬಹಳ ದೊಡ್ಡದು. ದಯವಿಟ್ಟು ಇದನ್ನು ರಾಜ್ಯದಾದ್ಯಂತ ಬಹಳ ಗಂಭೀರವಾಗಿ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ನನಗೆ ಚಿಕ್ಕಂದಿನಿಂದಲೂ ಗೊತ್ತಿದೆ. ಏಕೆಂದರೆ, ವ್ಯಾಯಾಮವನ್ನೂ ಮಾಡಿದ್ದೇನೆ. ಚಿಕ್ಕಂದಿನಿಂದ ನಾನು ಜಮೀನಿನಲ್ಲಿ ಕೆಲಸ ಮಾಡಿರುವುದರಿಂದ ದೇಹ ಬಹಳ ಸುಂದರವಾಗಿಡಬೇಕೆಂದು ಆಸೆ. ಆದ್ದರಿಂದ, ದಯವಿಟ್ಟು ಕ್ರೀಡೆ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಸಾವಯವ ಕೃಷಿ ಬಗ್ಗೆ ಒಂದು ಮಾತುಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಬಹಳ ಗಂಭೀರವಾಗಿ ವ್ಯವಸಾಯ ಕ್ಷೇತ್ರದ ಬಗ್ಗೆ ಬಹಳ ಜನ ಹಿರಿಯರು ಮತ್ತು ಕಿರಿಯರೂ ಮಾತನಾಡಿದ್ದಾರೆ. ನಾವು ಸಾವಯವ ಕೃಷಿ, ಸಾವಯವಕೃಷಿ ಎಂದು ಮಾತನಾಡುತ್ತೇವೆ. ಈಗಾಗಲೇ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಿ, ಸಹಕಾರ ಸಂಘದ ಮೂಲಕ ನೀವು ಸಾಲವನ್ನು ಪಡೆಯಿರಿ. ಈ ದೇಶದಲ್ಲಿ ಆಹಾರವಿಲ್ಲದೆ, ಕುದುರೆ ಜೋಳವನ್ನು ತೆಗೆದುಕೊಂಡು ಬಂದು ತಿನ್ನುತ್ತಿದ್ದರು ಎಂದು ನಾವೆಲ್ಲಾ ಭಾಷಣ ಮಾಡಿದ್ದೇವೆ.

ರಾಸಾಯನಿಕ ಗೊಬ್ಬರದ ಉಪಯೋಗವನ್ನು, ಬಳಕೆಯನ್ನು ಮಾಡಿಬಿಟ್ಟಿದ್ದೇವೆ. ಆದರೆ, ಸಾವಯವ ಕೃಷಿಯನ್ನು ಪರಿಚಯ ಮಾಡುವುದರಲ್ಲಿ ಸರ್ಕಾರ ಪ್ರಯತ್ನಪಟ್ಟಿಲ್ಲ. ಸನ್ಮಾನ್ಯ ಭೈರೇಗೌಡರು ಇದನ್ನು ಗಂಭೀರವಾಗಿ ಚಿಂತನೆ ಮಾಡಬೇಕು. ಸಾವಯವ ಕೃಷಿ ಅಭಿವೃದ್ಧಿಯಾಗಬೇಕು. ನಿಜ, ಅದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಪ್ರತ್ಯೇಕವಾದ ಷಾಪಿಂಗ್ಸ್ ಇರಬೇಕು. ರಾಸಾಯನಿಕ ಗೊಬ್ಬರ ಉಪಯೋಗಿಸದೇ, ಉತ್ಪಾದನೆ ಮಾಡತಕ್ಕ ಆಹಾರಪದಾರ್ಥಗಳ ಪ್ರತ್ಯೇಕ ಷಾಪಿಂಗ್ಸ್ ಇರಬೇಕು. ರೇಟ್ ಫಿಕ್ಸ್ ಇರಬೇಕು. ಆಗ ಏನಾಗುತ್ತದೆ ಎಂದರೆ, ಕಾಂಪಿಟೀಷನ್ ಕ್ರಿಯೇಟ್ ಆಗುತ್ತದೆ. ಯಾವಾಗ ಕಾಂಪಿಟೀಷನ್

11.00 ಎ.ಎಂ

ಕ್ರಿಯೇಟ್ ಆಗುತ್ತದೆ ಆಗ ಸಾವಯುವ ಕೃಷಿಯು ಬೆಳೆಯುತ್ತದೆ. ಉತ್ತಮವಾದಂತಹ ಆಹಾರವನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಸಾವಯವ ಕೃಷಿ ಬೆಳೆಯಿರಿ ಅಂದರೆ, ಎಲ್ಲಿದೇ ಬಿತ್ತನೆ? ನಾನೇ ಹೇಳಿದ್ದೇನೆ. ಸಮಿತಿಯಲ್ಲಿ ಇದ್ದಾಗ. ಯೂನಿವರ್ಸಿಟಿಗಳಲ್ಲಿ ಬೆಂಗಳೂರು ಯೂನಿವರ್ಸಿಟಿ ಮತ್ತು ಧಾರವಾಡ ಯೂನಿವರ್ಸಿಟಿಗಳಿಗೆ 50 ಲಕ್ಷ ರೂಪಾಯಿಗಳನ್ನು ಕೊಡಿ ಯಾವ ಯಾವ ಹಳೆಯ ತಳಿಗಳು ಇವೆ ಅವುಗಳನ್ನು ಶೇಖರಣೆ ಮಾಡಿ ಇಡಲಿ ಎಂದು. ಆದರೆ ಇದುವರೆಗೂ ಅದಕ್ಕೆ ಯಾವುದೇ ರೀತಿಯ ಹಣ ಕೊಟ್ಟಿಲ್ಲ. ಈಗ ರತನ್‌ಚೂರಿ ಇಲ್ಲ, ಬಂಗಾರಕಪಿ ಇಲ್ಲ, ಬಂಗಾರ ಸಣ್ಣ ಅಕ್ಕಿ ಇಲ್ಲ ಬೆಡಗಾರ್ ಇಲ್ಲ, ಒಂದೂವರೆ ಭತ್ತ ಇಲ್ಲ ಯಾವುದೂ ಇಲ್ಲ. ಎಲ್ಲಾ ನಾಶವಾಗುತ್ತಿದೆ. ಸಾವಯುವ ಕೃಷಿ ಮೂಲಕ ಉತ್ಪಾದನೆ ಮಾಡತಕ್ಕಂಥ ಬಿತ್ತನೆ ಬೀಜಗಳನ್ನು ನಾಶ ಮಾಡಿ ಸಾವಯುವಕೃಷಿ ಮಾಡಿ ಅಂದರೆ ಹೇಗೆ ಸಾಧ್ಯ? ಮಾನ್ಯ ಅಧ್ಯಕ್ಷರೇ ತಾವು ಅವರಿಗೆ ಹೇಳಬೇಕು ಸಾವಯುವ ಕೃಷಿಗೆ ಬೇರೆ ಮಾರ್ಕೆಟ್ ಮಾಡಬೇಕು. ಇದರ ಬಗ್ಗೆ ತಾವು ದಯವಿಟ್ಟು ಗಮನ ಹರಿಸಬೇಕು. ಅದಕ್ಕೆ ಬೇರೆ ಶಾಪ್ಸ್ ಮಾಡಿ. ಅದಕ್ಕೆ ಬೆಲೆ ನಿಗದಿ ಮಾಡಿ. ಬೆಂಗಳೂರು ನಗರದಲ್ಲಿ ಯಾವುದೇ ರಾಸಾಯನಿಕ ಗೊಬ್ಬರ ಇಲ್ಲದೇ ಪೆಸ್ಟಿಸೈಡ್ಸ್ ಇಲ್ಲದೇ ಬೆಳೆದಂತಹ ಆಹಾರ ಪದಾರ್ಥಗಳು ಎಂದು ಮಡಗಿದರೆ ಆರೋಗ್ಯದ ದೃಷ್ಟಿಯಿಂದ ಜನ ಕೊಂಡುಕೊಂಡು ಊಟ ಮಾಡುತ್ತಾರೆ. ಅದಕ್ಕೆ ಹೆಚ್ಚ ದರ ಸಿಗುತ್ತದೆ ಅಂದ್ರೆ ಅನುಕೂಲ ಸಾಧ್ಯ. ಆದ್ದರಿಂದ, ದಯವಿಟ್ಟು ತಾವು ಈ ದಿಕ್ಕಿನಲ್ಲಿ ಚಿಂತನೆ ಮಾಡಬೇಕು. ಮಾನ್ಯ ಭೈರೇಗೌಡರು ಇನ್ನಿತರೆ ವೈಜ್ಞಾನಿಕ ಬೆಲೆ ಬಗ್ಗೆ ಇನ್ನಿತರೇ ದ್ವಿದಳಧಾನ್ಯಗಳು, ಉತ್ಪಾದನೆಗಳ ಬಗ್ಗೆ ತಾವು ದಯವಿಟ್ಟು ಹೇಳುತ್ತಿದ್ದರು. ಮಾನ್ಯ ಭೈರೇಗೌಡರು ಇಲ್ಲಿ ಇದ್ದಾಗ ಬಹಳ ಭೈರವೇಶ್ವರನ ಅವತಾರ ತಾಳುತ್ತಿದ್ದರು ಎಂದು.

ಶ್ರೀ ವಾಟಾಳ್ ನಾಗರಾಜ್: ಅವರಲ್ಲ ಈಗ ಅಲ್ಲಿ ಇರುವವರು. ಆ ಭೈರೇಗೌಡರು ಅಲ್ಲ.

ಶ್ರೀ ಕೆ.ಎನ್.ಪುಟ್ಟಣ್ಣಯ್ಯ: ಅವರು ಈಗ ಭೈರಾಗಿಗಳು ಆಗಿದ್ದಾರೆ. ನಮಗೆ ಸ್ವಾತಂತ್ರ್ಯ ಬಂದು 50 ವರ್ಷ ಆಯಿತು. ಬ್ರಿಟೀಷ್‌ನವರ ಕಾಲದಲ್ಲಿ ಇದ್ದ ಗುಲಾಮಗಿರಿ ಮಾರ್ಕೆಟ್, ಬ್ರಿಟಿಷ್‌ನವರ ಕಾಲದಲ್ಲಿ ನೀಲಿ ವಿರುದ್ಧ 20 ಎಕರೆ ಜಮೀನು ಇದ್ದರೆ 3 ಎಕರೆಯಲ್ಲಿ ನೀಲಿ ಬೆಳೆಯಬೇಕೆಂದು ಅವರು ಕಡ್ಡಾಯ ಮಾಡಿದ್ದರು, ಬಿಹಾರ್ ಮತ್ತು ಅಸ್ಸಾಂನಲ್ಲಿ ಅದರ ವಿರುದ್ಧ ರೈತರು ಚಳುವಳಿ ಮಾಡಿದರು. ಚಳುವಳಿ ಮಾಡಿ ಕೊನೆಗೆ ಬ್ರಿಟೀಷ್ ಸರ್ಕಾರ ಬೆಂಡಾಗಿ ಮಾತುಕತೆಯ ಮೂಲಕ ಅವರಿಗೆ ಒಂದು ಬೆಲೆ ನೀತಿಯನ್ನು ಮಾಡತಕ್ಕಂಥ ಪರಿಹಾರ ಗಳಿಸಿದರು. ಆದ್ದರಿಂದ ನಾವು ಈ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿ 50 ವರ್ಷಗಳು ಆದವು, ಇನ್ನೂ ಆ ಗುಲಾಮಗಿರಿ ಪದ್ಧತಿಯಲ್ಲಿ ನಾವು ಇದ್ದೇವೆ. ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದರೆ ಸ್ವಿಜರ್‌ಲ್ಯಾಂಡ್‌ನಲ್ಲಿ ಆಗಿದೆ ಅಮೇರಿಕಾದಲ್ಲಿ ಆಗಿದೆ ಎಂದು ಹೇಳಿದರೆ ನಮಗೇನು ಗೊತ್ತಾಗುತ್ತದೆ. ನಾವು ಸಹ ಹುಡುಗರು ಇದ್ದಾಗ ಇಂಗ್ಲೀಷ್ ಫಿಲಂ ನೋಡಲು ಹೋಗುತ್ತಿದ್ದೆವು. ಒಂದೊಂದು ಸಾರಿ. ಇಂಗ್ಲೀಷ್ ಫಿಲಂ ನೋಡಿದೆಯಲ್ಲ ಏನೂ ಸಮಾಚಾರ ಎಂದು ಹುಡುಗರು ಕೇಳುತ್ತಿದ್ದರು. ಆಗ ನಾನು ಬಹಳ ಚೆನ್ನಾಗಿದೆ ಎಂದು ಹೇಳುತ್ತಿದ್ದೆ. ಫೋಟೋಗ್ರಫಿ ಎಲ್ಲಾ, ಯಾರ‍್ಯಾರು ಸಿನಿಮಾ ಆಕ್ಟರ್ಸ್ ಹೆಸರು ಹೇಳು ಅಂದಾಗ ನನಗೆ ಸಿನಿಮಾ ಆ್ಯಕ್ಟರ್ಸ್ ಹೆಸರು ಗೊತ್ತಿಲ್ಲ. ಹೆನ್ರಿಸ್ಕಾಂಏಜ್‌ಕಮಿ, ಫೇವರ್‌ಲೂಬಾ ಅಂತ ವಾಚ್‌ಗಳ ಹೆಸರುಗಳು ಗೊತ್ತಿತ್ತು ಅವೆಲ್ಲಾ ಹೇಳಿಬಿಡುತ್ತಿದ್ದೆ. ಅವರಿಗೆ ಅದೂ ಗೊತ್ತಿರಲಿಲ್ಲ. ನಂಬಿಕೊಳ್ಳುತ್ತಿದ್ದರು. ಈಗ ಆ ರೀತಿ ಆಗಿದೆ. ನಮಗೆ ಸ್ವಿಜರ್‌ಲ್ಯಾಂಡ್, ಸುದ್ದಿಯು ಬೇಡ, ನಮಗೆ ಅಮೇರಿಕಾ ಸುದ್ದಿಯು ಬೇಡ. ಸಮಾಜವಾದಿ ಹಿನ್ನಲೆಯಲ್ಲಿ ಹೋರಾಟ ಮಾಡಿರತಕ್ಕಂಥವರು ಕನಿಷ್ಟ ರೈತರಿಗೆ ಯಾವ ತರಹದ ಸೌಕರ್ಯಗಳನ್ನು ಸೌಲಭ್ಯಗಳನ್ನು ದೊರಕಿಸಿಕೊಡಬಹುದು ಎನ್ನುವ ಬಗ್ಗೆ ಯೋಚನೆ ಮಾಡಬೇಕು. ನಮ್ಮ ಸಕ್ಕರೆ ಮಂತ್ರಿಗಳು ಸಕ್ಕರೆ ತಿಂದುಕೊಂಡು ಬಹಳ ಚೆನ್ನಾಗಿ ಕಾಣುತ್ತಿದ್ದಾರೆ. ಅವರ ಹೆಸರು ಸಹ ಕತ್ತಿ ಎಂದು ಇಟ್ಟುಕೊಂಡಿದ್ದಾರೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ತಮ್ಮದೇ ಸರ್ಕಾರದಲ್ಲಿ ಟ್ರಾನ್ಸ್‌ಪೋರ್ಟೇಶನ್‌ಗೆ ಸಬ್ಸಿಡಿ ಕೊಡುತ್ತೇವೆಂದು ತಾವು ಹೇಳಿದ್ದೀರಿ. ಎರಡೂವರೆ ಕೋಟಿ ಬಾಕಿಕೊಡಬೇಕು. ಅದರ ಬಗ್ಗೆ ದಯವಿಟ್ಟು ಒಂದು ತೀರ್ಮಾನ ತೆಗೆದುಕೊಳ್ಳಿ. ಕನಿಷ್ಟ ಅವರ ಬಾಕಿಕೊಡಿಸತಕ್ಕಂಥ ಕೆಲಸವನ್ನು ಮಾಡಿ. ಖಾಸಗಿ ಕಾರ್ಖಾನೆಯವರು ಬೇರೆಯವರ ಬಾಕಿಕೊಡಬೇಕು. ಸರ್ಕಾರದವರೇ ಎರಡು ವರ್ಷಗಳಿಂದ ಟ್ರಾನ್ಸ್‌ಪೋರ್ಟೇಶನ್ ಸಬ್ಸಿಡಿ ಕೊಡಲಿಲ್ಲ ಅಂದರೆ ಅದು ಎಷ್ಟು ಅಪರಾಧ? ಮತ್ತು ಮೊನ್ನೆ ಸುಪ್ರೀಂ ಕೋರ್ಟ್‌ನಿಂದ ಒಂದು ತೀರ್ಪು ಬಂದಿತ್ತು. ಒಂದು ರಾಜ್ಯ ಸರ್ಕಾರಕ್ಕೆ ನ್ಯಾಯಾಲಯಕ್ಕೆ ಏನು ಇದೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಬಗ್ಗೆ ಮಾನ್ಯ ನಂಜೇಗೌಡರು ಹೇಳಬೇಕು. ಎಲ್ಲದ್ದಕ್ಕೂ ನ್ಯಾಯಾಲಯ ಪ್ರವೇಶ ಮಾಡುತ್ತಿದೆ, ಅದು ಯಾವ ಉದ್ದೇಶಕ್ಕೆ ಪ್ರವೇಶ ಮಾಡುತ್ತಿದೆಯೋ ನನಗೆ ಗೊತ್ತಿಲ್ಲ. ಕಬ್ಬಿನ ವಿಷಯದಲ್ಲಿ ನಮ್ಮ ರಾಜ್ಯದಲ್ಲಿ 30 ಕಾರ್ಖಾನೆಗಳು ಇತ್ತು. ಈ 30 ಕಾರ್ಖಾನೆಗಳ ಬೆಲೆ ನಿಗದಿ ಮಾಡತಕ್ಕಂಥ ವಿಷಯದಲ್ಲಿ

ರಾಜ್ಯಸರ್ಕಾರ ಮಧ್ಯೆ ಪ್ರವೇಶ ಮಾಡಬಾರದು ಎನ್ನತಕ್ಕಂಥ ಒಂದು ತೀರ್ಪು ಬಂದರೆ ಅದು ಯಾವ ರೀತಿ ಕೋರ್ಟಿಗೆ ಜ್ಞಾನ ಇದೆಯೋ ನನಗೆ ಗೊತ್ತಾಗುತ್ತಿಲ್ಲ. ಆದ್ದರಿಂದ ಕನಿಷ್ಠ ಸಹಕಾರಿ ಕ್ಷೇತ್ರದವರು ಜಂಟಿ ಕ್ಷೇತ್ರ, ಸರ್ಕಾರಿ ಕ್ಷೇತ್ರದಲ್ಲಿ ಒಂದು ಮೀಟಿಂಗ್ ಮಾಡಿ ಬೆಲೆ ನಿಗದಿ ಮಾಡಬೇಕು. ತಾವು ಹೇಳಿದಿರಿ, ರೈತರನ್ನು ಕರೆದು ಮಾತನಾಡಿ ಎಂದು ಮಂಡ್ಯದಲ್ಲಿ 750 ರೂಪಾಯಿಗಳನ್ನು ಹೇಗೆ ಫಿಕ್ಸ್ ಮಾಡಿದಿರಿ. ಯಾವ ರೈತರನ್ನು ಕರೆದಿದ್ದೀರಿ? ಯಾವ ಶಾಸಕರನ್ನು ಕರೆದಿದ್ದೀರಿ. ಯಾವ ವೈಜ್ಞಾನಿಕ ತಳಹದಿಯ ಮೇಲೆ ತಾವು ರೇಟ್ ಫಿಕ್ಸ್ ಮಾಡಿದಿರಿ. ಏನು ಶುಗರ್ ಡೈರೆಕ್ಟರ್ ನೀವು ಸೇರಿಕೊಂಡು ಬೆಲೆ ನಿಗದಿ ಮಾಡಿ ಕಳುಹಿಸಿಬಿಡುವುದು.

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಅಧ್ಯಕ್ಷರೇ, ನಾವು ಒಂದು ದಿನ ನಿಗದಿ ಮಾಡಿ ಎಲ್ಲಾ ರೈತ ಮುಖಂಡರಿಗೂ ತಿಳಿಸಬೇಕೆಂದು ಇದ್ದೆವು. ನಮ್ಮಲ್ಲಿ 3 ಡಿವಿಜನ್‌ಗಳು ಇವೆ. ಬೆಳಗಾಂ ಏರಿಯಾ ಒಂದು ಶಿವಮೊಗ್ಗ ಭದ್ರಾವತಿ ಹರಿಹರ ಈ ಭಾಗ ಒಂದು. ಮಂಡ್ಯ ಜಿಲ್ಲೆಯಲ್ಲಿರತಕ್ಕಂಥಾದ್ದು ಒಂದು. ಅದು ಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತಂದಿದ್ದಾರೆ. ಯಾರು ಅಂದರೆ ಕಾರ್ಖಾನೆಗಳ ಮಾಲೀಕರುಗಳು ಹೋಗಿ ರಿಟ್ ಹಾಕಿದ್ದಾರೆ. ಈಗ ದೇಶದಲ್ಲಿ ಎರಡು ಪದ್ಧತಿ ಇದೆ. ಅದು ತಮಗೆ ಗೊತ್ತಿದೆ. ಕೇಂದ್ರ ಸರ್ಕಾರದವರು ಒಂದು ಮಿನಿಮಮ್ ಬೆಲೆಯನ್ನು ನಿಗದಿ ಮಾಡುತ್ತಾರೆ. ನಾವು ಏನು ಮಾಡುತ್ತಿದ್ದೆವು ನಮ್ಮ ಬೇರೆ ಬೇರೆ ಪ್ರದೇಶಗಳಲ್ಲಿ ಇರುವ ಸಕ್ಕರೆ ಕಾರ್ಖಾನೆಗಳ ಆದಾಯ ಮತ್ತು ಅವುಗಳ ಪ್ರಾಫಿಟಬಿಲಿಟಿ, ಲೆಕ್ಕ ಇಟ್ಟುಕೊಂಡು ಕೆಲವು ಕಡೆ ನಾವು ಮಿನಿಮಮ್ ಸ್ಟೇಟ್ ಅಡ್ವೈಜ್ ಬೆಲೆ ಎಂದು ಕೊಡುತ್ತಿದ್ದೆವು. 8.5 ರಿಕವರಿಗೆ ಇಷ್ಟು ಎಂದು ಈಗ ಅದೂ ಮಾಡಬಾರದು ಎಂದು ಬಂದರೆ ನಾವು ಏನು ಮಾಡಬೇಕು?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಪ್ರೈವೇಟ್ ಕಾರ್ಖಾನೆಗಳಿಗೆ ಬೇಡ. ಸಹಕಾರಿ ಕ್ಷೇತ್ರ ಸರ್ಕಾರಿ ಕ್ಷೇತ್ರದಲ್ಲಿ ನಾವು ಕುಳಿತುಕೊಂಡು ಮಾತನಾಡುವುದಕ್ಕೆ ಏನು ತೊಂದರೆ ಸ್ವಾಮಿ. ಖಾಸಗಿ ಕಾರ್ಖಾನೆಯವರು ಸ್ಟೇ ತಂದಿರುವುದು, ಸಿಸ್ಮಾದವರು. ಅದಕ್ಕೆ ತಾವು ಒಂದು ಸಭೆ ಮಾಡಿ. ಆ ಕನಿಷ್ಠ ಆ ಬೆಲೆ ಬಗ್ಗೆ ಒಂದು ಯೋಚನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಉಮೇಶ್ ಎಸ್.ಕತ್ತಿ: ಮಾನ್ಯ ಅಧ್ಯಕ್ಷರೇ, ಹೈಕೋರ್ಟ್ ಸ್ಟೇ ಬಂದಿರುವ ಕಾರಣ ಎಸ್.ಇ.ಪಿ. ಮೀಟಿಂಗ್ ಕರೆಯುವುದಕ್ಕೆ ಆಗುವುದಿಲ್ಲ. ಈಗಾಗಲೇ ಬೆಳಗಾಂ ಕಡೆ ಆಗಲಿ ಭದ್ರಾವತಿ ಕಡೆ ಆಗಲಿ ಸಹಕಾರಿ ಕ್ಷೇತ್ರದಲ್ಲಿ ಬರುವ ಸಕ್ಕರೆ ಕಾರ್ಖಾನೆಗಳು ರೈತರು ಆ ಕಾರ್ಖಾನೆಯ ಆಡಳಿತ ಮಂಡಲಿ ಮೀಟಿಂಗ್‌ಗಳನ್ನು ಮಾಡಿ ಅವರು ರೇಟುಗಳನ್ನು ಫಿಕ್ಸ್ ಮಾಡುವ ಹಂತದಲ್ಲಿ ಮುಟ್ಟಿದ್ದಾರೆ. ಆದರೆ, ಖಾಸಗಿ ಕಾರ್ಖಾನೆಗಳು ಬರುವ ಕಡೆಗಳಲ್ಲಿ ರೈತರು ಮತ್ತು ಕಾರ್ಖಾನೆಗಳ ಮಾಲೀಕರು ಕುಳಿತುಕೊಂಡು ಮಾತನಾಡಬೇಕಾಗುತ್ತದೆ. ಇದರಲ್ಲಿ ಸರ್ಕಾರಕ್ಕೆ ಅಧಿಕಾರ ಇಲ್ಲ ಎಂದು

ಹೈಕೋರ್ಟ್ ಸ್ಟೇ ಮಾಡಿದ ಕಾರಣ ನಾವು ಇಂಟರ್‌ಫಿಯರ್ ಆಗುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರು ಕೋರ್ಟ್ ಆದೇಶ ಇದೆ ಎಂದು ತಿಳಿದುಕೊಂಡಿದ್ದಾರೆ. ಸಹಕಾರಿ ಕ್ಷೇತ್ರದಲ್ಲಿ ರೈತರು ಮತ್ತು ಮಾಲೀಕರು ಕುಳಿತುಕೊಂಡು ರೇಟ್ ಫಿಕ್ಸ್ ಮಾಡುವ ಹಂತದಲ್ಲಿದ್ದಾರೆ. ಸಹಕಾರಿ ರಂಗದಲ್ಲಿ ಬರುವಂತಹ ಎಲ್ಲಾ ಕಾರ್ಖಾನೆಗಳು ಮಾಡುತ್ತಿವೆ.

ಶ್ರೀ ಕೆ.ಎನ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೇ, ತೋಟಗಾರಿಕಾ ಇಲಾಖೆಯವರು ಗ್ರಾಫ್ಟಿಂಗ್ ಬಗ್ಗೆ ಒಂದು ಕೋಟಿ ಮಾವಿನ ಸಸಿಗಳನ್ನು ಉತ್ಪಾದನೆ ಮಾಡುವುದಕ್ಕೆ ಆಗುವುದಿಲ್ಲ, ಇದು ಒಂದು ಸರ್ಕಾರದ ಇಲಾಖೆ. ಒಂದು ಕೋಟಿ ಮಾವಿನ ಸಸಿಗೆ 5 ಲಕ್ಷ ಎಕರೆಯಲ್ಲಿ ಸಸಿ ನೆಡಬಹುದು. ಆದ್ದರಿಂದ ಗ್ರಾಫ್ಟಿಂಗ್ ಬಗ್ಗೆ ತಾವು ಚಿಂತನೆ ಮಾಡಬೇಕೆಂದು ಹೇಳುತ್ತಾ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಆರ್.ಲಕ್ಷ್ಮಯ್ಯ: ಮಾನ್ಯ ಅಧ್ಯಕ್ಷರೇ, 1983, 1984 ಮತ್ತು 1989ರಲ್ಲಿ ನಾನು ಶಾಸಕನಾಗಿ ಆಯ್ಕೆಯಾಗಿ ನಾನು 1989ರಲ್ಲಿ ಸೋತೆ. ಮತ್ತೆ ಪುನಃ 1994ರಲ್ಲಿ ಶಾಸಕನಾಗಿ ಆಯ್ಕೆಯಾಗಿ ಬಂದೆ. ಆ ಕಾಲದಲ್ಲ ಕಪ್ಪಲಿ, ಗುಂಡಸಾಗರ ಟಿಬಿ ಕಾವಲು, ಮಾಚೇನಹಳ್ಳಿ, ಬಾಣೂರು ದೇವನೂರು, ಅರಸೀಕೆರೆ ಬೆಳವಾಡಿ ಕೆರೆ ನೀರಿನ ಶಂಕುಸ್ಥಾಪನೆ. ಸ್ವಾಮಿ ಆ ಕಾಲದಲ್ಲಿ 7 ಕಡೆ ನೀರಾವರಿ ಶಂಕುಸ್ಥಾಪನೆ ಆಯಿತು. ಈ ಶಂಕುಸ್ಥಾಪನೆ ಹೇಗೆ ಆಯಿತು ಗೊತ್ತಾಸ್ವಾಮಿ. ಬರೀ ಡೋಲು ಬಾರಿಸಿಕೊಂಡು ಆಯಿತು. ಅವರು ಮಂತ್ರಿಗಳಾಗಿದ್ದರು ಇವರು ಮಂತ್ರಿಗಳಾಗಿದ್ದರು, ಆ ಬೀರೂರು ಕ್ಷೇತ್ರದಲ್ಲಿ ನಾನು ಸೋತಂತಹ ಕಾಲದಲ್ಲಿ, ಅವರ ಸರ್ಕಾರ ಇತ್ತು, ಅವರು ಡೋಲು ಬಡಿದುಕೊಂಡು ಕುಡಿದು ಕುಪ್ಪಳಿಸಿ ಹಾರ ಹಾಕಿಸಿಕೊಂಡು ಎಲ್ಲಾ ಕಡೆ ಶಂಕುಸ್ಥಾಪನೆ ಮಾಡಿಕೊಂಡು ಬಂದರು. ಆದರೆ ಅವುಗಳಲ್ಲಿ ಒಂದೂ ಕಾರ್ಯಗತವಾಗಲಿಲ್ಲ. ಆವತ್ತು ಅಲ್ಲಿ ಶಂಕುಸ್ಥಾಪನೆ ಮಾಡಿ ಹಾರ ಹಾಕಿಸಿಕೊಂಡು ಉಂಡು ಉಪ್ಪಿಟ್ಟು ತಿಂದು ಮಜಾ ಮಾಡಿಕೊಂಡು ಬಂದರು. ಕರಗಡ ನೀರಿನ ಸುದ್ದಿ ಮಾತನಾಡುತ್ತಾರೆ, ನಾನು ನಮ್ಮ ಮಾನ್ಯ ಮಂತ್ರಿಗಳಾದ ನಾಗೇಗೌಡರಿಗೆ ಹೇಳಿದೆ ಅಂದಿನ ಪ್ರಧಾನ ಮಂತ್ರಿಗಳಾಗಿದ್ದವರಿಗೆ ನಾನು ಹೇಳಿದೆ ಸ್ವಾಮಿ ನಾನು 3 ಸಲ ಅಲ್ಲಿ ಶಾಸಕನಾಗಿ ಆಯ್ಕೆಯಾಗಿದ್ದೇನೆ, ದಯಮಾಡಿ ನಿಮ್ಮ ಕಾಲದಲ್ಲಿ ಬೆಳವಾಡಿ ಕೆರೆಗೆ ನೀರು ತಂದರೆ ಬೆಳವಾಡಿ ಕೆರೆ ತುಂಬಿ ಕಳಸಾಪುರ ಕೆರೆ ತುಂಬಿ ಅಲ್ಲಿಂದ ಅರಸೀಕೆರೆ ಕೆರೆ ತುಂಬಿ ಕೃಷ್ಣ ಸಮುದ್ರ ತುಂಬಿ ಉಳಿದ ಸರ್‌ಪ್ಲೆಸ್ ನೀರು ಮಾರಿ ಕೆರೆಗೆ ಹೋಗುತ್ತದೆ ಇದು ಒಂದು ದೊಡ್ಡ ಯೋಜನೆ ಆಗುತ್ತದೆ ದಯಮಾಡಿ ಆ ಬಡವರಿಗೆ ಸಹಾಯ ಮಾಡಬೇಕೆಂದು ನಾನು ಹೋಗಿ ವಿನಂತಿಸಿಕೊಂಡಾಗ ಆಗಿನ ಪ್ರಧಾನಮಂತ್ರಿಗಳು ಒಪ್ಪಿಕೊಂಡರು ಮಾನ್ಯ ನಾಗೇಗೌಡರು ಒಪ್ಪಿಕೊಂಡು ಬಂದು ಶಂಕುಸ್ಥಾಪನೆ ಮಾಡಿದರು. 97 ಲಕ್ಷ ರೂಪಾಯಿಗಳು ಮಂಜೂರಾಗಿದೆ. ಬಜೆಟ್‌ನಲ್ಲಿ ಆ ಯೋಜನೆ ಸೇರಿದೆ. ನಮ್ಮ

ಕ್ಷೇತ್ರದಲ್ಲಿ ನಾನು 3 ಸಾರಿ ಶಾಸಕನಾಗಿ ಬಂದಿದ್ದೇನೆ, ನನ್ನ ಕ್ಷೇತ್ರದಲ್ಲಿ ಶಂಕುಸ್ಥಾಪನೆಯನ್ನು ಮಂತ್ರಿಗಳು, ಮುಖ್ಯಮಂತ್ರಿಗಳು ಮತ್ತು ಪಿ.ಡಬ್ಲ್ಯೂ.ಡಿ. ಇಲಾಖೆಯವರು ಮತ್ತು ಮಾನ್ಯ ಸಿಂಧ್ಯಾರವರು ಶಂಕುಸ್ಥಾಪನೆಯನ್ನು ಮಾಡಿದ್ದಾರೆ. ಯಾವುದೇ ಶಂಕುಸ್ಥಾಪನೆ ಮಾಡಿರತಕ್ಕಂಥ ನಮ್ಮ ಮಂತ್ರಿಮಂಡಲ, ಮೂರು ರಿಸ್ಯೂಮ್‌ನಲ್ಲಿಯೂ ಕೂಡ ಒಂದು ಕೆಲಸವನ್ನು ಅನುಷ್ಠಾನಕ್ಕೆ ತಂದುಬಿಟ್ಟಿಲ್ಲ, ಎಲ್ಲಾ ಕೆಲಸವನ್ನು ಕಾರ್ಯಗತ ಮಾಡಿದೆ. ಇವರ ಹಾಗೆ ಸುಳ್ಳು ಹೇಳಿಕೊಂಡು ರಾಜಕೀಯ ಮಾಡಿಕೊಂಡು ಬರಲಿಲ್ಲ, 7 ಶಂಕುಸ್ಥಾಪನೆಯನ್ನು ಮುಗಿಸಿದ್ದಾರೆ. ಇವರೆಲ್ಲರೂ ಸುಳ್ಳಿನ ಸರದಾರರೆಂದು ನಾನು ಹೇಳುವುದಿಲ್ಲ ಆದರೂ ಆ ಕೆಲಸವನ್ನು ಮಾನ್ಯ ನಾಗೇಗೌಡರು ಮಾಡಿಯೇ ಮಾಡುತ್ತಾರೆ ಎಂಬ ಭರವಸೆ ನನಗೆ ಇದೆ ಮತ್ತು ಅವರ ಉತ್ತರವನ್ನು ಕೇಳಬಯಸುತ್ತೇನೆ. ಇಷ್ಟು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೆ, ಇನ್ನುಳಿದ ಒಂದು ವರ್ಷ 8 ತಿಂಗಳಲ್ಲಿ ಪೂರ ಎಲ್ಲಾ ಕೆಲಸವನ್ನು ಮಾಡುತ್ತಾರೆ ಎಂಬ ನಂಬಿಕೆ ನನಗಿದೆ.

ಅಧ್ಯಕ್ಷರು: ಈಗ ಮೂರು ದಿನಗಳಿಂದ ಬೇಡಿಕೆಯ ಮೇಲೆ ಚರ್ಚೆಯಾಗಿದೆ. ಇದರಲ್ಲಿ ಒಟ್ಟು 31 ಸದಸ್ಯರು ಭಾಗವಹಿಸಿದ್ದಾರೆ. ಬೇಡಿಕೆ ಮೇಲೆ 19 ಗಂಟೆ ಕಾಲ ಚರ್ಚೆ ಮಾಡಿದ್ದೇವೆ. ಈಗ ಚರ್ಚೆ ಮುಕ್ತಾಯವಾಗಿದೆ. ಉತ್ತರ ಪ್ರಾರಂಭ ಮಾಡುವ ಮೊದಲು ಸಚಿವರಾದ ಶ್ರೀಮಾನ್ ರೇವಣ್ಣರವರು ಕೆಲವು ವಿವರಣೆಗಳನ್ನು ಕೊಡಬೇಕೆಂದು ನನ್ನಲ್ಲಿ ಸಮಯವನ್ನು ಕೇಳಿದ್ದಾರೆ ಅವರಿಗೆ ಅವಕಾಶ ಕೊಡುತ್ತೇನೆ, ನಂತರ ಭಾರೀ ನೀರಾವರಿ ಸಚಿವರ ಉತ್ತರ ಆದಮೇಲೆ ನಂತರ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ಬೆಂಗಳೂರು ನಗರದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೇಳುತ್ತಿದ್ದೇವೆ ತಾವು ಅವಕಾಶವನ್ನು ಕೊಟ್ಟಿಲ್ಲ.

ಅಧ್ಯಕ್ಷರು: ನಾನು ಏನು ಮಾಡಲಿ, ರಾತ್ರಿ 1 ಗಂಟೆಯವರೆಗೆ ಕುಳಿತು ಮಾತನಾಡೋಣ ಎಂದರೆ ಯಾರು ಒಪ್ಪಿಕೊಳ್ಳಲಿಲ್ಲ. ನಾನು ರಾತ್ರಿ ಒಂದು ಗಂಟೆಯವರೆಗೆ ನಾನು ತಯಾರಾಗಿದ್ದೆ;

ಶ್ರೀ ಎನ್.ರಾಜಣ್ಣ: ಮಾನ್ಯ ಅಧ್ಯಕ್ಷರೆ, ನೀವು ಹೆಚ್ಚು ಮುಂದೆ ಕುಳಿತಿರುವ ಸದಸ್ಯರಿಗೆ ಮಾತ್ರ ಅವಕಾಶ ಕೊಡುತ್ತಿದ್ದೀರಿ. ಈಗ ಹಿಂದೆ ಇರುವ ಸದಸ್ಯರಿಗೆ ಹೆಚ್ಚು ಅವಕಾಶ ಸಿಗುತ್ತಿಲ್ಲ....

ಅಧ್ಯಕ್ಷರು: ಸಮಯ ಸಿಕ್ಕಾಗ ಎಲ್ಲರಿಗೂ ಅವಕಾಶ ಕೊಡುತ್ತಿದ್ದೇನೆ.

ಶ್ರೀ ಎನ್.ರಾಜಣ್ಣ: ಮಾನ್ಯ ಅಧ್ಯಕ್ಷರೆ, ಇನ್ನು ಮುಂದೆ ಕೊನೆಯ ಪಕ್ಷ ಹಿಂದೆ ಇರುವ

ಸದಸ್ಯರಿಗೆ ಇದೇ ರೀತಿಯಲ್ಲಿ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಯಾರ್ಯಾರ ತಲೆಯಲ್ಲಿ ಏನೇನು ವಿಚಾರ ಇದೆಯೆಂದು ತಾವು ಕೇಳುತ್ತಿದ್ದೀರಿ, ಇಷ್ಟು ವರ್ಷ ತಾವು ಮುಂದೆ ಇರುವ ಸದಸ್ಯರಿಗೆ ಹೆಚ್ಚಿನ ಅವಕಾಶ ಕೊಡುತ್ತಿದ್ದೀರಿ, ಈ ಸಾರಿ ಹಿಂದೆ ಇರತಕ್ಕಂಥ ಸದಸ್ಯರಿಗೂ ಕೊಟ್ಟಿದ್ದೀರಿ, ಇನ್ನು ಮುಂದೆ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಹಿಂದೆ ಇರತಕ್ಕಂಥ ಸದಸ್ಯರಿಗೆ ಹೆಚ್ಚಿಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು. ರಾತ್ರಿ ಇನ್ನು ಒಂದು ಗಂಟೆಯವರಿಗೆ ಕುಳಿತುಕೊಂಡಿದ್ದರೆ ಎಲ್ಲರ ಸಮಸ್ಯೆ ಪರಿಹಾರ ಆಗುತ್ತಿತ್ತು. ಏಕೋ ಇದ್ದಕ್ಕಿದ್ದಂತೆ ಬೇಡ ಬೇಡವೆಂದು ನೀವೇ ಹೇಳಿದ್ದೀರಿ. ರಾತ್ರಿ ಇನ್ನು ಒಂದು ಗಂಟೆ ಮುಂದುವರಿಸಿದ್ದರೆ ಎಲ್ಲಾ ಮುಗಿಸಬಹುದಿತ್ತು. It is true ಆಡಳಿತ ಪಕ್ಷದ ಆ ಕಡೆಯಿಂದ ಮೂರು ಜನ ಮಾತ್ರ ಮಾತನಾಡುವುದಕ್ಕೆ ಆಗಿದ್ದು, ಹೆಚ್ಚಿನ ಅವಕಾಶವನ್ನು ವಿರೋಧ ಪಕ್ಷದ ಕಡೆಗೆ ಕೊಟ್ಟಿದ್ದೇವೆ. It is alright. I will request them to co-operate.

(2) ಸಚಿವರಿಂದ ಹೇಳಿಕೆ

ವಿಷಯ: ಕರ್ನಾಟಕ ಹಾಲು ಮಹಾ ಮಂಡಳಿ ಬಗ್ಗೆ

+ ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಪಶುಸಂಗೋಪನೆ ಇಲಾಖೆ, ಹಾಗೂ ಇತರೆ ಇಲಾಖೆ ಬಗ್ಗೆ ಮಾತನಾಡಿದಂಥ ಸಂದರ್ಭದಲ್ಲಿ, ಈ ಸದನದ ಹಿರಿಯ ಸದಸ್ಯರಾದ ಮಾನ್ಯ ಜೆ.ಸಿ.ಮಾಧುಸ್ವಾಮಿರವರು ಮತ್ತು ಅರಕಲಗೂಡು ಶಾಸಕರಾದಂಥ ಮಾನ್ಯ ಎ.ಟಿ.ರಾಮಸ್ವಾಮಿಯವರು, ಕರ್ನಾಟಕ ಹಾಲು ಮಹಾ ಮಂಡಳಿ ಬಗ್ಗೆ ಹಲವಾರು ಆಪಾದನೆಗಳನ್ನು ಮಾಡಿದ್ದಾರೆ, ಅದರ ಜೊತೆಗೆ ಮೈಸೂರಿನ ಸಿ.ಐ.ಟಿ.ಬಿನಲ್ಲಿ ನಿವೇಶನದ ವಿತರಣೆ ವಿಚಾರದಲ್ಲಿ ಸಿ.ಓ.ಡಿ. ವಿಚಾರಣೆ ಬಗ್ಗೆ ನಾನು ತಪ್ಪಿತಸ್ಥನೆಂದು ಮಾನ್ಯ ರಾಮಸ್ವಾಮಿಯವರು ಆಪಾದನೆ ಮಾಡಿರುತ್ತಾರೆ, ಮಾನ್ಯ ಸದಸ್ಯರು ನನ್ನ ಬಗ್ಗೆ ವೈಯಕ್ತಿಕವಾಗಿ ಯಾವುದೇ ವಿಚಾರ ವಿನಿಮಯ ಮಾಡತಕ್ಕಂಥ ಸಂದರ್ಭದಲ್ಲಿ....

ಅಧ್ಯಕ್ಷರು: ನಾನೇ ಹೇಳುತ್ತೇನೆ. ದಯಮಾಡಿ ತಾವು ಕುಳಿತುಕೊಳ್ಳಿ ರಾಮಸ್ವಾಮಿಯವರು ಆಪಾದನೆ ಮಾಡಿಲ್ಲ, ಒಂದು ವರದಿಯನ್ನು ಉಲ್ಲೇಖ ಮಾಡಿ ವರದಿಯಲ್ಲಿ ಈ ರೀತಿ ಇದೆ ಎಂದು ಹೇಳಿದ್ದಾರೆ.

ಶ್ರೀ ಎ.ಟಿ.ರಾಮಸ್ವಾಮಿ: ಪಾಯಿಂಟ್ ಆಫ್ ಆರ್ಡರ್. ಈಗ ಕೆ.ಎಂ.ಎಫ್. ಪಶುಸಂಗೋಪನ ಇಲಾಖೆಯ ವ್ಯಾಪ್ತಿಗೆ ಬರುತ್ತದೆ, ಅದರ ಬೇಡಿಕೆಯನ್ನು ಮಂತ್ರಿಗಳು ಮಂಡಿಸಿದ್ದಾರೆ. ನಾನು ಆ ಬೇಡಿಕೆಯಮೇಲೆ ಮಾತನಾಡುತ್ತಾ ಮಾತನಾಡಿದ್ದೇನೆ. ಈಗ

ಕೆ.ಎಂ.ಎಫ್ ಛೇರ್ಮನ್‌ರವರೆ ಉತ್ತರ ಕೊಡುವುದಾದರೆ, ಹಾಗಾದರೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಮೇಲೆ ಆರೋಪ ಮಾಡಿದರೆ ಇದಕ್ಕೆ ಸಂಬಂಧಪಟ್ಟಂಥ ಛೇರ್ಮನ್‌ರವರು ಉತ್ತರ ಕೊಡಲಿಕ್ಕೆ ಈ ಕೆಟ್ಟ ಸಂಪ್ರದಾಯವನ್ನು ಸದನದಲ್ಲಿ ಹಾಕುವುದಕ್ಕೆ ಆಗುತ್ತದೆಯೇ ಅಥವಾ ಲ್ಯಾಂಡ್ ಆರ್ಮಿ ಬಗ್ಗೆ ಆರೋಪ ಮಾಡಿದರೆ ಲ್ಯಾಂಡ್ ಆರ್ಮಿ ಛೇರ್ಮನ್ನರಿಗೆ ಮಾತನಾಡಲು ಅವಕಾಶ ಕೊಡುತ್ತೀರಾ? ಆ ಬೇಡಿಕೆಯನ್ನು ಮಂಡಿಸಿದ್ದಾರೆ, ಅದರ ಮೇಲೆ ಮಾತನಾಡಿದ್ದೇನೆ. ಇದಕ್ಕೆ ಸಂಬಂಧಪಟ್ಟ ಪಶುಸಂಗೋಪನ ಮಂತ್ರಿಗಳು ಉತ್ತರ ಕೊಡಲಿ. ಇಲ್ಲದಿದ್ದರೆ ಅವರನ್ನೇ ಅನಿಮಲ್ ಹಸ್ಬೆಂಡರಿ ಸಚಿವರನ್ನಾಗಿ ಮಾಡಲಿ, ಆಗ ಅವರೇ ಉತ್ತರ ಕೊಡಲಿ. ಇದು ಎಷ್ಟರಮಟ್ಟಿಗೆ ಸಮಂಜಸ, ಈ ಒಂದು ಸದನದ ಸಂಪ್ರದಾಯವನ್ನು....

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ರೇವಣ್ಣನವರ ಮೇಲೆ ಮಾಡಿರುವ ಆಪಾದನೆ ಬಗ್ಗೆ ಉತ್ತರ ಹೇಳಿ....

ಶ್ರೀ ಎ.ಟಿ.ರಾಮಸ್ವಾಮಿ: ನಾನು ಪಾಯಿಂಟ್ ಆಫ್ ಆರ್ಡರ್ ಹೇಳಿದ್ದೇನೆ, ನೀವು ಕೈಯನ್ನು ತಿರುಗಿಸಬೇಡಿ, ನೀವು ರೆಟ್ಟೆ ತಿರುಗಿಸಿದರೆ ಅದನ್ನು ಮಾಡುವುದು ನನಗೂ ಗೊತ್ತಿದೆ, ನೀವು ರಟ್ಟೆ ತಿರುಗಿಸಿದರೆ, ಅದನ್ನು ನೋಡಿಕೊಂಡು ಹೆದರಿಕೊಂಡು ಹೋಗುವುದಕ್ಕೆ ನಾನು ಬಂದಿಲ್ಲ, ರಾಜಕೀಯದ ಎಲ್ಲಾ ಚದುರಂಗ ಆಟವನ್ನು ನಾವು ಆಡಿಕೊಂಡು ಬಂದಿದ್ದೇವೆ, ಸನ್ಮಾನ್ಯ ಅಧ್ಯಕ್ಷರೆ, ಅವರು ರಟ್ಟೆ ತಿರುಗಿಸಿ ಮಾತನಾಡುವುದು ಏನು? ನಾನು ಪಾಯಿಂಟ್ ಆಫ್ ಆರ್ಡರ್ ಹಾಕಿದಮೇಲೆ, ಮತ್ತೆ ಈ ಸದನದಲ್ಲಿ ಆ ರೀತಿಯ ಸಂಪ್ರದಾಯ ಇದ್ದರೆ ತಾವು ನಮಗೆ ಅವಕಾಶ ಕೊಡಿ.

ಅಧ್ಯಕ್ಷರು: ತಾವು ಏನು ವಿಷಯ ಪ್ರಸ್ತಾಪ ಮಾಡಿದ್ದೀರಿ, I have taken note of it. The Food & Civil Supplies Corporation Chairman or the Land Army Corporation Chairman or the Construction Corporation Chairman They are appointed by the Government. Here the KMF Chairman is elected. Therefore, he has to reply. He is incidentally the Hon. Member of this House besides being the elected Chairman of the K.M.F. Certain references have been made to him. ಏಕೆ ಬೆಂಚ್ ತಟ್ಟುತ್ತೀರಿ ಏನಾಯಿತು? ಕೆಲವು ರೆಫರೆನ್ಸ್ ಮಾಡಿರುವುದರಿಂದ, ಅವರು ಈ ಸದನದ ಸದಸ್ಯರಾಗಿರುವ ಕಾರಣದಿಂದ ಅವಕಾಶ ಕೊಡುತ್ತಿದ್ದೇನೆ. He will be brief in making reply only to those references. ಉಳಿದ ಜವಾಬ್ದಾರಿ ಆ ಇಲಾಖೆಗೆ ಸಂಬಂಧಪಟ್ಟಂತ ಮಾನ್ಯ ಮಂತ್ರಿಯವರಿಗೆ ಇರುತ್ತದೆ, ಅವರೇ ಉತ್ತರ ಕೊಡುತ್ತಾರೆ. ಯಾವ ಕನ್‌ಫ್ಯೂಜನ್

ಯಾರು ಇಟ್ಟುಕೊಳ್ಳಬಾರದು.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಅಕಸ್ಮಾತ್ ಕೆ.ಎಂ.ಎಫ್. ಅಧ್ಯಕ್ಷರು, ಈ ಕಡೆ ಕುಳಿತುಕೊಂಡಿದ್ದರೆ ಅವರಿಗೆ ಮಾತನಾಡಲು ಅವಕಾಶ ಕೊಡುತ್ತಿದ್ದೀರೋ?

MR. SPEAKER: Definitely.

SRI J.C.MADHUSWAMY: I was sitting here.

MR. SPEAKER: But then I was not sitting here.

SRI J.C.MADHUSWAMY: But I was never allowed. ನಾವು ಡಿಮ್ಯಾಂಡ್ ಬಗ್ಗೆ ಮಾತನಾಡುವಾಗ, ಡಿಮ್ಯಾಂಡ್ಸ್ ಮೇಲೆ ಯಾವ ಮಂತ್ರಿ ಈ ಸದನಕ್ಕೆ ಜವಾಬ್ದಾರಿ ಇರುತ್ತಾರೆ ಅವರು ಕೊಡಬೇಕು ಅಥವಾ ಅವರ ಪರವಾಗಿ ಏನಾದರು ಆಥರೈಸ್ ಮಾಡಿ ಸರ್ಕಾರ ಇಂಥವರು ಉತ್ತರ ಹೇಳುತ್ತಾರೆಂದರೆ ಕೊಡಬೇಕು.

MR. SPEAKER: I do not like the hon. Members interpreting anything to their own advantage. Please understand me. Mr. Revanna besides being the Chairman of the KMF, he is an hon. Member of this House. Certain references have been made. He is entitled. He is being allowed to make reply only to those references. The reply on behalf of the Government will be given only by the Minister concerned.

SRI J.C.MADHUSWAMY: Sir, He has taken my name. I never referred the name of the KMF Chairman.

MR. SPEAKER: You have not made.

SRI J.C.MADHUSWAMY: Sir I just questioned the authority of the Hon. Minister for Co-operation in giving notices to recruitment..

MR. SPEAKER: That is why the Chair will be alert, vigilant and cautious while allowing even the

Hon. Minister to make this reply. Everyone will have to work within the framework of the rules. Nobody will be allowed or permitted to go beyond the framework of the rules. Let not there be an attempt to see that something is attributed to the Chair. The Chair is very sensitive about these matters.

SRI J.C.MADHUSWAMY: We are also sensitive.

MR. SPEAKER: That is why I want everyone of you to be sensitive. ತಾವು ಈ ಸದನದ ಸದಸ್ಯರು ಮತ್ತು ಮಿಲ್ಕ್ ಫೆಡರೇಶನ್ ಅಧ್ಯಕ್ಷರು ಕೂಡ ಆಗಿದ್ದೀರಿ, ಮಿಲ್ಕ್ ಫೆಡರೇಶನ್ ಅಧ್ಯಕ್ಷರಾಗಿ ಈ ಸದನದಲ್ಲಿ ತಮ್ಮ ಮೇಲೆ ಮಾಡಿರತಕ್ಕಂಥ ಆಪಾದನೆಗಳಿಗೆ ಉತ್ತರ ಕೊಡತಕ್ಕಂಥ ಅವಕಾಶ ಇರುವುದಿಲ್ಲ. ಏಕೆಂದರೆ ಅದು ಮಾನ್ಯ ಮಂತ್ರಿಯವರ ಇಲಾಖೆಗೆ ಬರುತ್ತದೆ, ಅದು ಅವರ ಜವಾಬ್ದಾರಿಯಾಗಿರುತ್ತದೆ. ಅದೇ ಸಮಯದಲ್ಲಿ ತಾವು ಈ ಸದನದ ಸದಸ್ಯರಾಗಿರುವುದರಿಂದ ತಮ್ಮ ಮೇಲೆ ಮಾಡಿರುವಂಥ ಕೆಲವು ವಿಚಾರಗಳ ಪ್ರಸ್ತಾಪಕ್ಕೆ ಉತ್ತರ ಕೊಡತಕ್ಕಂಥ ಹಕ್ಕು ಈ ಸದನದ ಸದಸ್ಯರಾಗಿ ತಮಗೆ ಇರುತ್ತದೆ. ಅದಕ್ಕೆ ಸೀಮಿತವಾಗಿ ತಾವು ಏನು ಉತ್ತರ ಕೊಡುತ್ತೀರಿ, ದಯಮಾಡಿ ಅಷ್ಟನ್ನು ಮಾತ್ರ ಉತ್ತರ ಕೊಡಿ. ಉಳಿದ ಇಲಾಖೆಗೆ ಸಂಬಂಧಪಟ್ಟಂತಹ ವಿಚಾರಗಳನ್ನು ಮಾನ್ಯ ಪಶುಸಂಗೋಪನ ಸಚಿವರು ಇದ್ದಾರೆ ಅವರು ಮಂತ್ರಿಮಂಡಲದ ಪರವಾಗಿ ಉತ್ತರವನ್ನು ಕೊಡುತ್ತಾರೆ. ಆನಂತರ ತಾವು ಇನ್ನೊಂದು ಏನು ಹೇಳಿದ್ದೀರಿ, ಅಂದರೆ ಮಾನ್ಯ ರಾಮಸ್ವಾಮಿಯವರು ತಮ್ಮ ಮೇಲೆ ಆಪಾದನೆ ಮಾಡಿರತಕ್ಕಂಥದ್ದು, ಮಾನ್ಯ ಸದಸ್ಯರಾದ ರಾಮಸ್ವಾಮಿಯವರು ನೇರ ಆಪಾದನೆಯನ್ನು ನಿನ್ನೆ ದಿವಸ ತಮ್ಮ ಮೇಲೆ ಮಾಡಲಿಲ್ಲ. ಒಂದು ವರದಿಯ ಉಲ್ಲೇಖವನ್ನು ಮಾಡುತ್ತಾ ಈ ರೀತಿ ಹೇಳಿದೆ ಎಂದು ಹೇಳಿದರು, ಆ ಸಂದರ್ಭದಲ್ಲಿ ತಾವು ನೇರ ಆಪಾದನೆ ಮಾಡಬೇಕಾದರೆ ನನಗೆ ನೋಟಿಸ್ ಕೊಡಬೇಕೆಂದು ಹೇಳಿದ್ದೇನೆ, ಅದನ್ನು ಅವರು ಅಲ್ಲಿಗೆ ನಿಲ್ಲಿಸಿದ್ದಾರೆ. ಏಕೆಂದರೆ ತಾವು ಸದನದಲ್ಲಿ ಇರಲಿಲ್ಲ, ನಾನು ಏನು ನಡೆದಿರುತ್ತದೆ ಆ ವಿಷಯವನ್ನು ಸರಿಯಾಗಿ ತಮಗೆ ತಿಳಿಸಬೇಕಾದದ್ದು ನನ್ನ ಕರ್ತವ್ಯ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಒಂದು ಮನವಿ, ತಾವು ಸಿಟ್ಟುಕೊಳ್ಳಬಾರದು, ನಿಮ್ಮಲ್ಲಿ ಬಹಳ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ, ಮಾನ್ಯ ಮಾಧುಸ್ವಾಮಿಯವರು ಹಿಂದೆ ಇದ್ದಂಥ ಸ್ಪೀಕರ್‌ರವರು ಈ ರೀತಿ ಕೊಟ್ಟಿದ್ದರು ಎಂದು ಹೇಳಿದರು, ಅಲ್ಲಿ ಸ್ಪೀಕರ್ ವ್ಯಕ್ತಿಯಾಗಿ ಬರುವುದಿಲ್ಲ, ಅದು ಸ್ಪೀಕರ್ ಸ್ಥಾನ ಎಂದು ಬರುತ್ತದೆ. ಆ ನಡವಳಿಕೆಯನ್ನು ಅವರು ಹೇಳಿದರೇ ಹೊರತು,

ತಮ್ಮ ಮೇಲೆ ಆಪಾದನೆ ಮಾಡಬೇಕು ಎನ್ನುವ ಭಾವನೆಯಿಂದ ಹೇಳುತ್ತಿಲ್ಲ. ತಾವು ತಕ್ಷಣ ಸಿಟ್ಟುಗೊಂಡಿರಿ.

ಅಧ್ಯಕ್ಷರು: ಸಿಟ್ಟು ಏನೂ ಇಲ್ಲ, ಒಂದೊಂದುಸಲ ಸ್ವಲ್ಪ ಗಟ್ಟಿಯಾಗಿ ಮಾತನಾಡುವ ಅಭ್ಯಾಸ, ನಿಮ್ಮ ಹಾಗೆ ನಾನು....

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು: ತಾವು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಸ್ವಾಮಿಯವರು ನನ್ನ ಮೇಲೆ ವೈಯಕ್ತಿಕವಾಗಿ ಯಾವುದೇ ಆಪಾದನೆ ಮಾಡುವಂಥ ಸಂದರ್ಭದಲ್ಲಿ ನಾನು ಈ ಸದನದ ಸಾಮಾನ್ಯ ಸದಸ್ಯನಾಗಿರಬಹುದು ಅಥವಾ ಮಂತ್ರಿಯಾಗಿರಬಹುದು. ನನ್ನ ಮೇಲೆ ಆಪಾದನೆ ಮಾಡುವಂಥ ಸಂದರ್ಭದಲ್ಲಿ ಈ ಸದನದ ನಿಯಮದ ಪ್ರಕಾರ ಸಭಾಧ್ಯಕ್ಷರ ಮುಖೇನ ನೋಟೀಸ್ ಕೊಡಬೇಕಾಗುತ್ತದೆ, ಪ್ರತಿ ಹಂತದಲ್ಲಿ, ಅದು ಪ್ರಶ್ನೆ ಕೇಳುವಂಥದೇ ಇರಬಹುದು, ನಿಯಮಾವಳಿ ಇರಬಹುದು, ಅಥವಾ ಯಾವುದೇ ಒಂದು ವೈಯಕ್ತಿಕ ಆಪಾದನೆ ಮಾಡತಕ್ಕಂಥ ಸಂದರ್ಭದಲ್ಲಿ ತಮ್ಮ ಅನುಮತಿ ಪಡೆದುಕೊಂಡು ನನ್ನ ಗೈರು ಹಾಜರಿನಲ್ಲಿ ಕೆಲವು ಆಪಾದನೆಗಳನ್ನು ದಿನಬೆಳಗಾದರೆ ಸಾಕು, ಯಾವುದಾದರೂ ಒಂದು ವೈಯಕ್ತಿಕವಾದಂಥ ಭಾಷಣ ಮಾಡುವಂಥ ಸಂದರ್ಭದಲ್ಲಿ, ಉದಾಹರಣೆಗೆ ಹೇಳುವುದಾದರೆ, ಪ್ರಶ್ನಾವಳಿಯಲ್ಲಿರಬಹುದು ಅಥವಾ ಗಮನ ಸೆಳೆಯುವ ಸೂಚನೆಯಲ್ಲಿ ಇರಬಹುದು ಅಥವಾ ಯಾವುದಾದರೂ ನಿಲುವಳಿ ಸೂಚನೆ ಇರಬಹುದು. ಈ ಎಲ್ಲಾ ಸಂದರ್ಭಗಳಲ್ಲೂ ನನ್ನ ಮೇಲೆ ವೈಯಕ್ತಿಕ ಆಪಾದನೆಗಳನ್ನು ಮಾಡುವಂಥ ಕಾರ್ಯಕ್ರಮವನ್ನು ಕಳೆದ ವಿಧಾನ ಸಭೆಯಿಂದಲೂ ಹಾಕಿಕೊಂಡು ಈ ಸದನದ ಮೂಲಕ ಸಾರ್ವಜನಿಕರಲ್ಲಿ ತಪ್ಪು ಕಲ್ಪನೆ ಮೂಡಿಸುತ್ತಿದ್ದಾರೆ. ನನ್ನ ಬಗ್ಗೆ ಯಾವುದಾದರೂ ಗುರುತರವಾದ ಆಪಾದನೆಗಳಿದ್ದರೆ ಅದಕ್ಕೆ ಸಂಬಂಧಪಟ್ಟಂಥ ದಾಖಲಾತಿಗಳನ್ನು ಸದನದ ಮುಂದೆ ಇಟ್ಟರೆ ಅದಕ್ಕೆ ಬೇಕಾದರೆ ನಾನು ತಲೆ ಬಾಗುತ್ತೇನೆ. ಅದು ಬಿಟ್ಟು ಯಾವಾಗಲೂ ನನ್ನನ್ನು ಉದ್ದೇಶಿಸಿ, ಇವರು ವಂಶಪಾರಂಪರ್ಯವಾಗಿ ಅಧಿಕಾರ ನಡೆಸುತ್ತಿದ್ದಾರೆ, ಸರ್ವಾಧಿಕಾರಿಗಳಾಗಿದ್ದಾರೆ ಎಂದು ಸುಮ್ಮಸುಮ್ಮನೆ ಪ್ರತಿಹಂತದಲ್ಲೂ ಹೇಳುತ್ತಾ ಯಾವ ಉದ್ದೇಶಕ್ಕೆ ಈ ಸದನವನ್ನು ಬಳಸುತ್ತಿದ್ದಾರೋ ನನಗೆ ಗೊತ್ತಿಲ್ಲ. ನಾನು ಸದನದ ನಿಯಮಾವಳಿಗಳ ಪ್ರಕಾರವೇ ಮಾತನಾಡುತ್ತಿದ್ದೇನೆ, ನಾನು ಕೆ.ಎಂ.ಎಫ್, ಅಧ್ಯಕ್ಷನಾಗಿದ್ದೇನೆ, ಮಂತ್ರಿಯಾಗಿದ್ದೇನೆಂದರೆ, ಕಳೆದ ಸದನದಲ್ಲೂ ಹೇಳಿದ್ದರೂ, ಒಂದು ವರ್ಷದ ಹಿಂದೆಯೂ ಇದನ್ನೇ ಹೇಳಿದ್ದರು. ಮಧ್ಯಪ್ರದೇಶದಲ್ಲಿ ಅವರ ಪಕ್ಷದ ಸರ್ಕಾರವೇ ಇದೆ, ಅಲ್ಲಿನ ಶಿಕ್ಷಣ ಮಂತ್ರಿಯವರು ಅಲ್ಲಿನ ಕೆ.ಎಂ.ಎಫ್, ಅಧ್ಯಕ್ಷರಾಗಿಲ್ಲವೇ ಸ್ವಾಮಿ?

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಸ್ವಾಮಿಯವರು ಭಾಷಣ ಮಾಡುವಂಥ ಸಂದರ್ಭದಲ್ಲಿ, ಮೈಸೂರು ಸಿ.ಐ.ಟಿ.ಬಿ.ಯಲ್ಲಿ ಈ ಹಿಂದೆ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಸಿ.ಓ.ಡಿ.ಯವರು ತನಿಖೆ ಮಾಡಿದ ವಿಚಾರದ ಬಗ್ಗೆ ಪ್ರಸ್ತಾಪಿಸಿ, ಆ ವರದಿ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ? ಹಾಗೂ ಮಾನ್ಯ ರೇವಣ್ಣನವರು ಕ್ಯಾಬಿನೆಟ್ ದರ್ಜೆ ಸಚಿವರಿದ್ದು, ಈ ಸಿ.ಓ.ಡಿ., ವರದಿಯಲ್ಲಿ ಇವರ ಮೇಲೂ ಆರೋಪವಿರುವುದರಿಂದ, ಅವರು ಇನ್ನೂ ಸಚಿವ ಸಂಪುಟದಲ್ಲಿ ಮುಂದುವರಿದರೆ ನ್ಯಾಯ ಸಿಗುವುದಿಲ್ಲವಾದ್ದರಿಂದ ಅವರು ರಾಜೀನಾಮೆ ಕೊಡಬೇಕು ಅಥವಾ ಮುಖ್ಯಮಂತ್ರಿಗಳೇ ಅವರನ್ನೆ ಸಂಪುಟದಿಂದ ಕೈಬಿಡಬೇಕೆಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ, ಈ ಸಂಬಂಧದಲ್ಲಿ ಸಿ.ಓ.ಡಿ. ತನಿಖೆಯಾಗಿ ಆ ವರದಿಯಲ್ಲಿ ಏನೂ ಹುರುಳು ಇಲ್ಲವೆಂದು ಬಂದು, ನಂತರ ಅದು ಹೈಕೋರ್ಟ್‌ಗೆ ಹೋಗಿ 1993ನೇ ಇಸವಿಯಲ್ಲೇ ಇದರಲ್ಲಿ ಏನೂ ಹುರುಳು ಇಲ್ಲವೆಂದು ಕೋರ್ಟ್ ತೀರ್ಮಾನ ಮಾಡಿದ ಮೇಲೆ ಮತ್ತೆ ಮಾನ್ಯ ರಾಮಸ್ವಾಮಿಯವರು ಇದನ್ನು ಏಕೆ ಎತ್ತಿಕೊಂಡು ಬಂದಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. There is absolutely no basis for such allegation.

MR. SPEAKER: The matter is closed here. ಮಾನ್ಯ ನಾಯಕರೇ ಇದರ ಬಗ್ಗೆ ಹೇಳಿದ ಮೇಲೆ ಇನ್ನೇನು ಹೇಳುತ್ತೀರಿ?

ಶ್ರೀ ಎ.ಟಿ.ರಾಮಸ್ವಾಮಿ: ಸಿ.ಓ.ಡಿ. ವರದಿಯಲ್ಲಿ ಏನೂ ಸತ್ಯಾಂಶವಿಲ್ಲವೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇವರು ಹೇಳಿದ ಮೇಲೆ, ಅವರು ಏನು ಹೇಳುತ್ತಾರೆಂದು ಕೇಳಿ.

ಅಧ್ಯಕ್ಷರು: ಮಾನ್ಯ ರೇವಣ್ಣನವರ ಪರವಾಗಿ, ಸರ್ಕಾರದ ನಿಲುವನ್ನು ಸಭಾ ನಾಯಕರು ಹೇಳಿದ್ದಾರೆ. ಒಂದು ವೇಳೆ ಅವರು ಏನಾದರೂ ಹೇಳಿದರೆ ಅದಕ್ಕೆ ಉತ್ತರ ಹೇಳುವುದಕ್ಕೆ ಸಭಾನಾಯಕರು ಇಲ್ಲಿ ಇದ್ದಾರೆ. ಆದ್ದರಿಂದ, ತಾವೆಲ್ಲರೂ ಎದ್ದು ನಿಲ್ಲುವ ಅಗತ್ಯ ಇಲ್ಲ. ಇಷ್ಟೆಲ್ಲಾ ಎದ್ದು ನಿಂತು ಹೇಳತಕ್ಕಂಥವರು ನಿನ್ನೆ ಒಬ್ಬರೂ ಇರಲಿಲ್ಲವಲ್ಲಾ? ಎಲ್ಲಿ ಹೋಗಿದ್ದಿರಿ? ಏಕೆ ಹೀಗೆ ಮಾಡುತ್ತೀರಿ? ಇದೆಲ್ಲಾ ಮಾಡಬಾರದು, ಚೆನ್ನಾಗಿರುವುದಿಲ್ಲ. ಸಾಕಷ್ಟು ಪ್ರಭುದ್ಧರಾಗಿದ್ದೀರಿ ನೀವೆಲ್ಲಾ. ಇದೆಲ್ಲಾ ಗೌರವ ತರುವುದಿಲ್ಲ ನಿಮಗೆ.

ಶ್ರೀ ಎ.ಟಿ.ರಾಮಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿ ಪಡೆದೆ ನಾನು

ಮಾತನಾಡುತ್ತಿದ್ದೇನೆ. ನಾನು ಸರಿಯಾದ ನೈತಿಕ ನೆಲೆಗಟ್ಟಿನಿಂದ ಬಂದಿದ್ದೇನೆ. ಇದಕ್ಕೆಲ್ಲಾ ಅಂಜಿಕೊಂಡು ಓಡಿ ಹೋಗುವುದಕ್ಕೆ ನಾನು ಬಂದಿಲ್ಲ.

MR. SPEAKER: Now the point is, the Hon'ble Chief Minister has clarified with regard to what you have referred.

ಶ್ರೀ ಎ.ಟಿ.ರಾಮಸ್ವಾಮಿ: ತನಿಖಾ ವರದಿಯಲ್ಲಿ ಸತ್ಯಾಂಶವಿಲ್ಲವೆಂದು ಅವರು ಹೇಳಿದ್ದಾರೆ. ಆ ವರದಿಯನ್ನು ಇಲ್ಲಿ ಮಂಡನೆ ಮಾಡಲಿ, ಅದರ ಬಗ್ಗೆ ಪ್ರಸ್ತಾಪ ಮಾಡೋಣ ಆಗ ಸತ್ಯ ಇದೆಯೋ? ಅಸತ್ಯ ಇದೆಯೋ ಎಂದು ಗೊತ್ತಾಗುತ್ತದೆ. ಹೈಕೋರ್ಟ್ ಯಾವ ಅಂಶವನ್ನು ರಿಜೆಕ್ಟ್ ಮಾಡಿದೆಯೋ ಇಲ್ಲವೋ ಎಂದು ಗೊತ್ತಾಗುತ್ತದೆ.

ಶ್ರೀ ಜೆ.ಹೆಚ್.ಪಟೇಲ್: ಅದರ ಬಗ್ಗೆ ಬಗ್ಗೆ 1993ನೇ ಇಸವಿಯಲ್ಲೇ ತೀರ್ಮಾನವಾಗಿದೆ.

ಶ್ರೀ ಎ.ಟಿ.ರಾಮಸ್ವಾಮಿ: ದಯಮಾಡಿ ಆ ತನಿಖಾ ವರದಿಯನ್ನು ಸದನದಲ್ಲಿ ಮಂಡಿಸಿ.

ಶ್ರೀ ಜೆ.ಹೆಚ್.ಪಟೇಲ್: ಹೈಕೋರ್ಟ್ ಅದನ್ನು ಡ್ರಾಪ್ ಮಾಡಿದ ಮೇಲೆ ಅದನ್ನು ಇಟ್ಟು ಏನು ಪ್ರಯೋಜನ?

ಶ್ರೀ ಎ.ಟಿ.ರಾಮಸ್ವಾಮಿ: ಆ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ ಆಧಾರದ ಮೇಲೆ ತನಿಖೆಗೆ ಆದೇಶವಾಯಿತು, ಆದ್ದರಿಂದ ಆ ತನಿಖಾ ವರದಿಯನ್ನು ಸದನದಲ್ಲಿ ಮಂಡಿಸಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೇ, ನನ್ನ ಮೇಲೆ ನೇರವಾದ ಆಪಾದನೆಗಳಿದ್ದರೆ, ಅದನ್ನು ದಯಮಾಡಿ ಸಭೆಯ ಮುಂದೆ ಇಡಲಿ. ನಮ್ಮ ಸರ್ಕಾರ ಬಂದು ಎರಡೂವರೆ ವರ್ಷಗಳಾದವು, ಅದಕ್ಕೂ ಮೊದಲು ಅವರದೇ ಪಕ್ಷದ ಸರ್ಕಾರ 5 ವರ್ಷಗಳಿತ್ತಲ್ಲಾ, ಆಗ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಡಿ ಎಂದು ಹೇಳಿದ್ದೆವಾ?

ಅಧ್ಯಕ್ಷರು: ಮುಖ್ಯ ಮಂತ್ರಿಗಳು ಹೇಳಿರುವ ಪ್ರಕಾರ, ಅದರ ವರದಿ ಬಂದೂ ಆಗಿದೆ, ಹೈಕೋರ್ಟ್‌ನಲ್ಲಿ ಅದು ರಿಜೆಕ್ಟ್ ಕೂಡಾ ಆಗಿದೆ. It has gone up to the Division Bench in the High Court and final decision has been given. The Hon'ble Chief Minister has also made it very clear. That is not the subjet matter before

this House. I now call upon the Major Irrigation Minister to reply.

(3) ಬೇಡಿಕೆಗಳ ಮೇಲಿನ ಚರ್ಚೆಗೆ ಭಾರಿ ನೀರಾವರಿ ಸಚಿವರಿಂದ ಉತ್ತರ.

+ ಶ್ರೀ ಕೆ.ಎನ್.ನಾಗೇಗೌಡ (ಭಾರೀ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೇ, 1997-98ನೇ ಆರ್ಥಿಕ ವರ್ಷದ ಡಿಮ್ಯಾಂಡ್‌ಗಳನ್ನು ಚರ್ಚೆಗಾಗಿ ಸದನದಲ್ಲಿ ಮಂಡಿಸಲಾಗಿದೆ. ಈ ಡಿಮ್ಯಾಂಡ್‌ಗಳ ಬಗ್ಗೆ ಸುಮಾರು 30 ಜನ ಸದಸ್ಯರುಗಳು ಮಾತನಾಡಿದ್ದಾರೆ, ನನ್ನ ಇಲಾಖೆಯ ಮೇಲೆಯೇ 14 ಜನ ಸದಸ್ಯರುಗಳು ಮಾತನಾಡಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸದಸ್ಯರುಗಳಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ಬಿ.ಜೆ.ಪಿ. ಪಕ್ಷದ ಸದಸ್ಯರುಗಳು ಮತ್ತು ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಮಾತನಾಡಿದ್ದಾರೆ. ಇದು ಮಹತ್ತರವಾದ ಇಲಾಖೆ ಎನ್ನತಕ್ಕಂಥಾದ್ದನ್ನು ಇಡೀ ಸದನ ಹಾಗೂ ಈ ರಾಜ್ಯದ ಜನರು ನಂಬಿದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ. ಈ ನೀರಾವರಿ ಇಲಾಖೆ ಮೇಲೆ ರಾಜ್ಯದಲ್ಲಿ ಸುಮಾರು ಒಂದು ಕೋಟಿ ಜನರು ಅವಲಂಬಿಸಿಕೊಂಡಿದ್ದಾರೆ. ಕರ್ನಾಟಕ ರಾಜ್ಯದ 22 ಪರ್‌ಸೆಂಟ್ ಭೂಮಿಗೆ ಈ ಮೇಜರ್ ಮತ್ತು ಮೀಡಿಯಂ ಇರಿಗೇಷನ್ ಇಲಾಖೆ ಮೂಲಕ ನೀರನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ನಮ್ಮ ರಾಜ್ಯದ ಒಟ್ಟು ಭೂಮಿಯಲ್ಲಿ 55 ಲಕ್ಷ ಹೆಕ್ಟೇರ್ ಭೂಮಿಗೆ ನೀರು ಕೊಡುವುದಕ್ಕೆ ಅವಕಾಶವಿದೆ. ಇದರಲ್ಲಿ 35 ಲಕ್ಷ ಹೆಕ್ಟೇರ್ ಭೂಮಿಗೆ ಮೇಜರ್ ಮತ್ತು ಮೀಡಿಯಂ ಹಾಗೂ ಸಣ್ಣ ನೀರಾವರಿ, ಗ್ರೌಂಡ್ ವಾಟರ್ ಸರಬರಾಜು ಇಲಾಖೆಯಿಂದ ನೀರನ್ನು ಈಗಾಗಲೇ ಕೊಡಲಾಗಿದೆ. ಒಂಬತ್ತೂವರೆ ಲಕ್ಷ ಹೆಕ್ಟೇರ್ ಭೂಮಿಗೆ ಸಣ್ಣ ನೀವರಾರಿ ಇಲಾಖೆಯಿಂದ ನೀರು ಕೊಡಲಾಗಿದೆ, ಅದರ ಬಗ್ಗೆ ಸಂಬಂಧಪಟ್ಟ ಸಚಿವರು ಉತ್ತರ ಕೊಡುತ್ತಾರೆ. ಇನ್ನೂ 18 ಪರ್‌ಸೆಂಟ್ ನೀರಾವರಿ ಮಾಡತಕ್ಕಂಥ ಅವಕಾಶ ನಮ್ಮ ರಾಜ್ಯದಲ್ಲಿ ಇದೆ. ಈ ವಿಷಯವನ್ನು ಮನಗಂಡೇ ಕಳೆದ ಎರಡೂವರೆ ವರ್ಷಗಳಿಂದ ಈ ಇಲಾಖೆಗೆ ಹೆಚ್ಚು ಮಹತ್ವವನ್ನು ಕೊಟ್ಟು ಜೊತೆಗೆ ಅವಶ್ಯವಿರುವಷ್ಟು ಹಣವನ್ನು ಬಿಡುಗಡೆ ಮಾಡಿ ನೀರಿನ ಸಾಮರ್ಥ್ಯವನ್ನು ಹೆಚ್ಚು ಬಳಕೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ಅದರಲ್ಲೂ ಮಾನ್ಯ ಜೆ.ಹೆಚ್.ಪಟೇಲರ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಹೋದ ವರ್ಷ 1300 ಕೋಟಿ ರೂಪಾಯಿಗಳನ್ನು ನೀಡಿ ಎಲ್ಲಾ ಹಣವನ್ನು ಅನೇಕ ನೀರಾವರಿ ಯೋಜನೆಗಳನ್ನು ಮಾಡಲು ಪ್ರಯತ್ನ ಮಾಡಿದ್ದೇವೆ. ಈ ವರ್ಷವೂ ಸಹಾ 1,400 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಇದಕ್ಕೆ ನಿಗದಿ ಮಾಡಲಾಗಿದೆ. ಮಾನ್ಯ ಸದಸ್ಯರು ಇದಕ್ಕೆ ಒಪ್ಪಿಗೆ ಕೊಡಬೇಕಾಗಿದೆ. ಆಮೇಲೆ ಕಾವೇರಿ ಬೇಸಿನ್‌ನಲ್ಲಿ ಸುಮಾರು 11 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸಾಮರ್ಥ್ಯವನ್ನು ಸೃಷ್ಟಿಸುವುದಕ್ಕೆ ಸಾಧ್ಯತೆ ಇದೆ. At present we have created 8.16 lakh hectares. ಅಷ್ಟೇ, ಇನ್ನೂ 3 ಲಕ್ಷ ಹೆಕ್ಟೇರ್ ಭೂಮಿಗೆ, ಕಾವೇರಿ ಬೇಸಿನ್‌ನಲ್ಲಿ ನೀರಿನ ಸಾಮಾರ್ಥ್ಯ ಹೆಚ್ಚಿಸಲಿಕ್ಕೆ ಸಾಧ್ಯತೆ ಇದೆ.

ಹಾಗೆಯೇ ಕೃಷ್ಣಾ ಬೇಸಿನ್‌ನಲ್ಲಿ ಇದುವರೆಗೆ 16 ಲಕ್ಷ ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸಿದ್ದೇವೆ. ಸುಮಾರು 26 ಲಕ್ಷ ಹೆಕ್ಟೇರ್ ಭೂಮಿಗೆ ನೀರು ಒದಗಿಸತಕ್ಕಂಥ ಪ್ಲಾನ್‌ನನ್ನು ನಾವು ಮಾಡಿಕೊಂಡಿದ್ದೇವೆ. ಅಂದರೆ, ಕೃಷ್ಣ ಬೇಸಿನ್‌ನಲ್ಲಿ ಕೂಡ 10 ಲಕ್ಷ ಹೆಕ್ಟೇರ್ ಭೂಮಿಗೆ ನೀರು ಕೊಡತಕ್ಕಂಥ ಅವಕಾಶ ಇನ್ನೂ ಇದೆ ಎನ್ನತಕ್ಕಂಥಾದ್ದನ್ನು ತಮ್ಮ ಮೂಲಕ ಸದನದ ಗಮನಕ್ಕೆ ತರಬಯಸುತ್ತೇನೆ. ಆಮೇಲೆ, ಗೋದಾವರಿ ಬೇಸಿನ್‌ನಲ್ಲಿ ಸುಮಾರು 68 ಸಾವಿರ ಹೆಕ್ಟೇರ್ ಭೂಮಿಗೆ ನೀರನ್ನು ಕೊಡುವ ಅವಕಾಶವಿದೆ, ಅದರಲ್ಲಿ 38 ಸಾವಿರ ಹೆಕ್ಟೇರ್ ಭೂಮಿಗೆ ಈಗಾಗಲೇ ನೀರನ್ನು ಕೊಡಲಾಗಿದೆ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಒಂದು ಕ್ಲಾರಿಫಿಕೇಷನ್, ಏಕೆಂದರೆ, ರೆಕಾರ್ಡ್ಸ್ ಸ್ಟ್ರೈಟ್ ಆಗಿರಬೇಕು, ಕಾವೇರಿ ಜಲಾನಯನದಲ್ಲಿ ಎಷ್ಟು ಎಕರೆಗೆ ನೀರಾವರಿಯಾಗಿದೆಯೆಂದು ಟ್ರಿಬ್ಯುನಲ್ ಮತ್ತು ಸುಪ್ರೀಂ ಕೋರ್ಟ್ ಮುಂದೆ ನಾವು ಹೇಳಿಕೆ ಕೊಟ್ಟಿದ್ದೇವೆ. 10 ಲಕ್ಷ 40 ಸಾವಿರ ಎಕರೆ ಆ್ಯಕ್ಚುಯಲ್ ಅಚ್ಚುಕಟ್ಟು, 80 ಸಾವಿರ ಎಕರೆ ಸೆಕೆಂಡ್ ಕ್ರಾಪ್ ಎಂದು ಹೇಳಿದ್ದೇವೆ, ತಾವು ಹೇಳುವ ಹಾಗೆ ಹೆಕ್ಟೇರ್ ಎಂದರೆ ಎಷ್ಟಾಗುತ್ತದೆ?

ಶ್ರೀ ಕೆ.ಎಸ್.ನಾಗೇಗೌಡ: ಇದನ್ನು ಸ್ಪಷ್ಟವಾಗಿ ನಿರೂಪಣೆ ಮಾಡಲಾಗಿದೆ. 11 ಲಕ್ಷ ಎಕರೆಗೆ ಅವರು ರಿಸ್ಟ್ರಿಕ್ಟ್ ಮಾಡಿದ್ದಾರೆ. ಟ್ರಿಬ್ಯುನಲ್ ಮುಂದೆ ಏನು ಕೊಟ್ಟಿದ್ದೇವೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಆಮೇಲೆ ಗೋದಾವರಿ ಬೇಸಿನ್‌ನಲ್ಲಿ 30 ಸಾವಿರ ಹೆಕ್ಟೇರ್‌ಗೆ ನೀರು ಕೊಡಲಾಗಿದೆ ಹಾಗೂ ಬೇರೆ ಬೇಸಿನ್‌ಗಳಲ್ಲಿ 80 ಸಾವಿರ ಹೆಕ್ಟೇರ್ ಭೂಮಿಗೆ ನೀರು ಕೊಡತಕ್ಕಂಥ ಅವಕಾಶ ಮಾಡಿದ್ದೇವೆ. ಕಾವೇರಿ ಬೇಸಿನ್‌ಗೆ ಇಲ್ಲಿಯವರೆಗೆ 2,500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಎಲ್ಲಾ ಕಾಮಗಾರಿ

(ಈ ಸಂದರ್ಭದಲ್ಲಿ ಉಪಾಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಗಳನ್ನು ಮುಗಿಸಬೇಕಾದರೆ ಇನ್ನೂ 2,700 ಕೋಟಿ ರೂಪಾಯಿ ಹಣ ಬೇಕು. ಅದೇ ರೀತಿ ಇಲ್ಲಿಯವರೆಗೆ ಕೃಷ್ಣಾ ಬೇಸಿನ್‌ನಲ್ಲಿ 4,500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಇನ್ನೂ ಉಳಿದ ಎಲ್ಲಾ ಕಾಮಗಾರಿಗಳನ್ನು ಮುಗಿಸಿ 729 ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕಾದರೆ ನಾವು ಖರ್ಚು ಮಾಡಬೇಕಾದ ಹಣ ಸುಮಾರು 7,200 ಕೋಟಿ ರೂಪಾಯಿಗಳು.

11.30 ಎ.ಎಂ

ಅಂದರೆ ಕೃಷ್ಣಾಬೇಸಿನ್‌ಗೆ 11700 ಕೋಟಿ ರೂಪಾಯಿ ಹಣ ಬೇಕು.

ಕೃಷ್ಣಾಬೇಸಿನ್‌ಗೆ ನಾವು ಮಾಸ್ಟರ್‌ಪ್ಲಾನ್ ಮಾಡಿದಾಗ, 4,000 ಕೋಟಿ ರೂಪಾಯಿಗಳಿಗೆ ಮುಗಿಸಬಹುದಾಗಿತ್ತು. ಹಿಂದಿನ ಸರಕಾರಗಳು ಎಲ್ಲ ಹಣವನ್ನು ಯಾವ್ಯಾವ ರೀತಿಯಲ್ಲಿ ಇಯರ್‌ಮಾರ್ಕ್ ಮಾಡಿ, ಆಯಾಯ ವರ್ಷಗಳಲ್ಲಿ ಹಣವನ್ನು ಒದಗಿಸಿ ಕಾಮಗಾರಿಗಳನ್ನು ಮುಗಿಸಿದ್ದರೆ, 4,000 ಕೋಟಿ ರೂಪಾಯಿಗಳಿಗೇ 729 ಟಿಎಂಸಿ ನೀರನ್ನು ಮುಗಿಸಿಕೊಳ್ಳಬಹುದಾಗಿತ್ತು. ಇನ್ನು ಗೋದಾವರಿ ಬೇಸಿನ್‌ನಲ್ಲಿ 48 ಕೋಟಿ ರೂಪಾಯಿಗೆ ಎಲ್ಲಾ ಕೆಲಸ ಮುಗಿಸಬಹುದಾಗಿತ್ತು. ಅಲ್ಲಿಯೂ ಕೂಡ ಎಕ್ಸ್‌ಕಲೇಶನ್ ಆಗಿ ಸುಮಾರು 213 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನೂ 127 ಕೋಟಿ ರೂಪಾಯಿಗಳು ನಮಗೆ ಬೇಕಾಗಿದೆ. ಅಂದರೆ ನಮ್ಮ ಈ ಒಂದು ಯೋಜನೆಗಳಿಗೆ ಕನಿಷ್ಟಪಕ್ಷ 11 ಸಾವಿರ ಕೋಟಿ ರೂಪಾಯಿಗಳಷ್ಟು ಹಣ ನಮ್ಮ ಕಾವೇರಿ, ಕೃಷ್ಣ, ಗೋದಾವರಿ ಬೇಸಿನ್‌ಗಳಲ್ಲಿ, ಹಾಕಿಕೊಂಡಿರತಕ್ಕಂಥ ಆನ್‌ಗೋಯಿಂಗ್ ಪ್ರಾಜೆಕ್ಟ್‌ಗಳನ್ನು ಮುಗಿಸಬೇಕಾದರೆ 11 ಸಾವಿರ ಕೋಟಿ ರೂಪಾಯಿಗಳು ಬೇಕಾಗಬಹುದು ಎಂದು ನಾನು ಅಂದುಕೊಂಡಿದ್ದೇನೆ. ಇವೊತ್ತು ನಮ್ಮ ರಾಜ್ಯದಲ್ಲಿನ ಬೃಹತ್ ನೀರಾವರಿಯಲ್ಲಿ 40 ಪ್ರಾಜೆಕ್ಟ್‌ಗಳು ಕಂಪ್ಲೀಟ್ ಆಗಿದ್ದಾವೆ. 40 ಆನ್‌ಗೋಯಿಂಗ್ ಪ್ರಾಜೆಕ್ಟ್‌ಗಳು ಇದ್ದಾವೆ, 22 ಹೊಸ ಪ್ರಾಜೆಕ್ಟ್ ಇದ್ದಾವೆ. ಅಂದರೆ ಸುಮಾರು 102 ಪ್ರಾಜೆಕ್ಟನ್ನು ನಾವು ಮಾಡಿಕೊಂಡಿದ್ದೇವೆ. ಇದರಲ್ಲಿ ನಮ್ಮ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡಿರತಕ್ಕಂಥ ವಿಚಾರದಲ್ಲಿ ಉಳಿದಿರತಕ್ಕಂಥ 44 ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಲು ಯಾವರೀತಿಯಾದ ಪ್ಲಾನ್‌ಗಳನ್ನು ಹಾಕಿಲ್ಲ ಎಂದು ಹೇಳಿದರು. ನಮಗೆ ಇರತಕ್ಕಂಥಾದ್ದು 729 ಟಿಎಂಸಿ. ಅದರಲ್ಲಿ ಐದು ಟಿಎಂಸಿಯನ್ನು ನಾವು ಕುಡಿಯುವ ನೀರಿಗಾಗಿ ಕೊಟ್ಟಿದ್ದೇವೆ. ಇಲ್ಲಿಯವರೆಗೆ ನಾವು ಯುಟಿಲೈಸ್ ಮಾಡಿಕೊಂಡಿರತಕ್ಕಂಥಾದ್ದು 503 ಟಿಎಂಸಿ. 226 ಟಿಎಂಸಿಯನ್ನು ನಾವು ಆನ್‌ಗೋಯಿಂಗ್ ಪ್ರಾಜೆಕ್ಟ್‌ಗಳಲ್ಲಿ ವೇರಿಯಸ್ ಪ್ರಾಜೆಕ್ಟ್‌ನ್ನು ಮಾಡಿ ನಾವು ಖರ್ಚು ಮಾಡಿ ಕೆಲಸ ಮಾಡುತ್ತಾ ಇದ್ದೇವೆ. ಅಲ್ಲಿಗೆ 729 ಆದರೆ, ಗೋದಾವರಿ ಡೈವರ್ಶನ್‌ನಿಂದ ನಮಗೆ 23 ಟಿಎಂಸಿ ಬರುತ್ತದೆ. ಆ 23 ಟಿಎಂಸಿಯಲ್ಲಿ ನಾವು ಈಗಾಗಲೇ ಹಿಪ್ಪರಿಗಿ ಬ್ಯಾರೇಜ್‌ಗೆ 12 ಟಿಎಂಸಿ, ಹಾಗೆಯೇ ಅಪ್ಪರ್ ಭದ್ರಾ, ಅಪ್ಪರ್ ತುಂಗಾ ಎಂದು ಏನು ಕರೆಯುತ್ತೇವೆ, ಅದಕ್ಕೆ 8 ಟಿಎಂಸಿ ಭೀಮಾ ಫ್ಲೋಗೆ 9 ಟಿ.ಎಂ.ಸಿ. ಕೊಟ್ಟಿದ್ದೇವೆ. ಆದ್ದರಿಂದ ನಾವು ಕಂಪ್ಲೀಟ್ ಆಗಿ 226 ಮತ್ತು 23 ಅಂದರೆ 729 ಮತ್ತು ಗೋದಾವರಿ ಡೈವರ್ಷನ್ 23 ಟಿ.ಎಂ.ಸಿ. ಕೂಡ ಸೇರಿ ಪ್ರತಿ ಪ್ರಾಜೆಕ್ಟ್‌ಗಳಿಗೆ ನಾವು ಏನೇನು ಮಾಡಿದ್ದೇನೆ ಎಂಬುದನ್ನು ನನ್ನಲ್ಲಿ ಒಂದು ನೋಟ್ಸ್ ಇದೆ, ನನಗೆ ಇಲ್ಲಿ ಹೇಳಲು ಸಮಯವಿಲ್ಲದ ಕಾರಣ ಅದನ್ನು ಕೊಡುತ್ತೇನೆ. ಅದರಲ್ಲಿ ಯಾವ್ಯಾವ ಪ್ರಾಜೆಕ್ಟ್‌ಗಳಿಗೆ ಎಷ್ಟೆಷ್ಟು ಟಿಎಂಸಿ ನೀರನ್ನು ಹಾಕಿದ್ದೇವೆ, ಎಷ್ಟೆಷ್ಟು ನಾವು ಉಪಯೋಗಿಸಿ ಕೊಂಡಿದ್ದೇವೆ, ಎಂದು ಹೇಳಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ಕೊಟ್ಟಂಥ ಪುಸ್ತಕದಲ್ಲಿ ಇದ್ದ ಅಂಕಿ

ಅಂಶಗಳನ್ನು ನಾನು ಇಲ್ಲಿ ಹೇಳಿದ್ದುದು. 44.95 ಟಿಎಂಸಿ ನೀರು ಅನ್‌ಯುಟಿಲೈಸ್ ಎಂದು ಅದರಲ್ಲಿ ಹೇಳಿದ್ದೀರಿ. ಅದಕ್ಕೆ ಯಾವುದೇ ಸ್ಕೀಂಗಳನ್ನು ಯೋಜನೆಗಳನ್ನು ಹಾಕಿಕೊಂಡಿಲ್ಲ ಎಂದು ನೀವು ಬರೆದುಕೊಟ್ಟಿದ್ದೀರಿ. ಅದು ನೀವು ಕೊಟ್ಟ ಪುಸ್ತಕದಲ್ಲಿಯೇ ಇದೆ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನನ್ನ ಹತ್ತಿರ ಇರುವ ನೋಟ್ಸ್‌ನ್ನು ಕಳುಹಿಸಿಕೊಡುತ್ತೇನೆ. ಅದರಲ್ಲಿ ಬಹುಶಃ ಮಾರ್ಕಂಡೇಯ, ಅರಿನಾಲಾ, ಮುಂತಾಗಿ ಹೊಸ ನಾಲ್ಕು ಪ್ರಾಜೆಕ್ಟ್ ಸ್ಯಾಂಕ್ಷನ್ ಮಾಡಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವೇ ಒದಗಿಸಿದ ಪುಸ್ತಕದಲ್ಲಿನ ವಿವರಗಳನ್ನು ನೋಡಿ ನಾನು ಕೇಳುತ್ತಿರುವುದು.

ಶ್ರೀ ಕೆ.ಎನ್.ನಾಗೇಗೌಡ: ಆಯಿತು, ನಾನು ನನ್ನ ಬಳಿ ಇರುವ ವಿವರಗಳನ್ನು ಕಳುಹಿಸಿಕೊಡುತ್ತೇನೆ. ತಾವುಗಳು ಅದನ್ನು ಟ್ಯಾಲಿ ಮಾಡಿ ನೋಡಿ. ನಾನು ಇರತಕ್ಕಂಥ ಎಲ್ಲಾ ಮಾಹಿತಿಗಳನ್ನು ತರಿಸಿಕೊಂಡು ನೋಡಿದ್ದೇನೆ. 729 ಟಿಎಂಸಿಗೆ ನಾವು ಸಂಪೂರ್ಣವಾಗಿ ಮಾಸ್ಟರ್‌ಪ್ಲಾನ್ ಮಾಡಿದ್ದೇವೆ. ಮಾರ್ಕಂಡೇಯ ಡ್ಯಾಂಗೆ ನಾವು ಇವೊತ್ತಿನ ದಿವಸ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಟ್ಟಿದ್ದೇವೆ. ಸಿಡಬ್ಲ್ಯೂಎಸ್‌ನವರ ಅಪ್ರೂವಲ್ ಬಂದಿಲ್ಲ. ಒಂದಕ್ಕೆ ಮಾತ್ರ ರಾಮಟಾಳಾಕ್ಕೆ ಇನ್ನೂ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಟ್ಟಿಲ್ಲ. ಅರಿನಾಲಾಕ್ಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಟ್ಟಿದ್ದೇವೆ. ಎಲ್ಲಾ ಪ್ರಾಜೆಕ್ಟ್‌ಗಳಲ್ಲಿ ಎಷ್ಟೆಷ್ಟು ಅಲೋಕೇಶನ್ ಇದೆ, ಎಷ್ಟು ನೀರನ್ನು ನಾವು ಯುಟಿಲೈಸ್ ಮಾಡಿಕೊಂಡಿದ್ದೇವೆ, ಯಾವಾಗ ಯುಟಿಲೈಸ್ ಮಾಡಿಕೊಳ್ಳುತ್ತೇವೆ, ಅದಕ್ಕೆ ಕಾಸ್ಟ್ ಎಷ್ಟು? ಪ್ರಾಜೆಕ್ಟ್ ಯಾವಾಗ ಮುಗಿಯುತ್ತದೆ ಎನ್ನುವ ಡೀಟೈಲ್ಸ್‌ನ್ನು ಈಗ ಹೇಳಬೇಕೆಂದಿದ್ದೆ. ಆದರೆ, ಮಾನ್ಯ ಅಧ್ಯಕ್ಷರು ಸಮಯಾವಕಾಶವನ್ನು ಹೆಚ್ಚು ಕೊಡದಿದ್ದ ಕಾರಣ ವಿವರಗಳನ್ನು ಹೇಳಲು ಆಗುವುದಿಲ್ಲ. ಒಟ್ಟಾರೆ ಈ 729 ಟಿಎಂಸಿ ನೀರು ನಮ್ಮಲ್ಲಿ ಇವೊತ್ತು 8 ನೇ ಸ್ಕೀಂನ ಒಳಗಡೆ ಅಪ್ಪರ್‌ಕೃಷ್ಣಾಕ್ಕೆ ಅಲೋಕೇಶನ್ ಆಗಿದೆ, ಅಷ್ಟು ನೀರನ್ನು ಮತ್ತು 23 ಟಿಎಂಸಿಗೆ ಡೈವರ್ಶನ್‌ನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಂಪೂರ್ಣವಾದಂಥ ಪ್ಲಾನ್‌ನ್ನು ನಾವು ಮಾಡಿಕೊಂಡಿದ್ದೇವೆ. 7 ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದರೆ, 2,000ನೇ ವರ್ಷದೊಳಗೆ ಇದನ್ನು ಮಾಡಿ ಮುಗಿಸುವುದಕ್ಕೆ ಎಲ್ಲಾ ಸಾಧ್ಯತೆಗಳೂ ಆಗುತ್ತವೆ ಎಂದು ಹೇಳಿ, ಮುಂದಕ್ಕೆ ನಾವು ಯಾವರೀತಿಯಲ್ಲಿ ಅಲೋಕೇಶನ್ ಮಾಡಿ ಮುಗಿಸಬೇಕೆನ್ನುವುದಕ್ಕೆ ನಾವು ಇವೊತ್ತು ಆಲೋಚನೆ ಮಾಡಿದ್ದೇವೆ. ಕೃಷ್ಣಾ ಜಲಭಾಗ್ಯ ನಿಗಮದಲ್ಲಿ ಸುಮಾರು 4 ಸಾವಿರ ಕೋಟಿ ಹಣವನ್ನು ನಾವು ಕಲೆಕ್ಟ್ ಮಾಡಬೇಕೆಂದು ಆಲೋಚನೆ ಮಾಡಿ ಈವರೆವಿಗೆ ಸಾವಿರದ ಎಂಭತ್ತು ಕೋಟಿ ಹಣವನ್ನು ನಾವು ಕಲೆಕ್ಟ್ ಮಾಡಿದ್ದೇವೆ. ಈ ವರ್ಷವೂ ಕೂಡ

1,200ಕ್ಕಿಂತ ಹೆಚ್ಚು 1,249 ಕೋಟಿ ರೂಪಾಯಿಗಳನ್ನು ನಾವು ಯುಕೆಪಿ ಒಂದಕ್ಕೇನೆ ಹಣವನ್ನು ಇಟ್ಟಿದ್ದೇವೆ. 1,249 ಕೋಟಿ ರೂಪಾಯಿಗಳಲ್ಲಿ ಯುಕೆಪಿಯಲ್ಲಿ ಆರ್‌ಆರ್‌ಗೆ ನಮ್ಮ ರಿ-ಹೆಬಿಲಿಟೇಶನ್‌ಗೆ 572 ಕೋಟಿ ರೂಪಾಯಿ ಹಣವನ್ನು ಈ ವರ್ಷ ಇಯರ್ ಮಾರ್ಕ್ ಮಾಡಿದ್ದೇವೆ. ಮತ್ತು ಆಲಮಟ್ಟಿ ಡ್ಯಾಂ ಕನ್‌ಸ್ಟ್ರಕ್ಷನ್‌ಗೆ 80 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಕೆನಾಲ್‌ವರ್ಕ್ಸ್‌ಗೆ 300 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಹಾಗೆಯೇ ಓಎಂಡಿ ಬಗ್ಗೆ ಹೇಳಿದ್ದಾರೆ, ಅದಕ್ಕೆ 58 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಒಟ್ಟು ಎಲ್ಲವನ್ನೂ ನಾವು ಲೆಕ್ಕ ಹಾಕಿ 1249 ಕೋಟಿ ರೂಪಾಯಿಗಳನ್ನು ಯುಕೆಪಿಗೆ ಖರ್ಚು ಮಾಡಬೇಕೆಂಬ ಆಲೋಚನೆಯಲ್ಲಿದ್ದೇವೆ. ಮಾನ್ಯ ಸದಸ್ಯರು ಹೇಳುತ್ತಾ ಉತ್ತರ ಕರ್ನಾಟಕವನ್ನು ಬಹಳಷ್ಟು ನೆಗ್ಲೆಕ್ಟ್ ಮಾಡಿದ್ದೀರಿ, ಉತ್ತರ ಕರ್ನಾಟಕಕ್ಕೆ ಹಣವನ್ನು ಖರ್ಚು ಮಾಡಿಲ್ಲ, ಯೋಜನೆಗಳನ್ನು ಹಾಕಿಕೊಂಡಿಲ್ಲ ಎಂದು ನಮ್ಮ ಅನೇಕ ಸ್ನೇಹಿತರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನು ಹೋದ ವರ್ಷದ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಲು ಹೋಗುವುದಿಲ್ಲ. ನನ್ನ ಹತ್ತಿರ ಎಲ್ಲಾ ಮಾಹಿತಿಗಳು ಇವೆ. 1990ರಿಂದ ಇಲ್ಲಿಯವರೆಗೆ ಯಾವರೀತಿಯಾಗಿ ಖರ್ಚು ಮಾಡಿದ್ದೇವೆ ಎನ್ನುವುದನ್ನು ಅನೇಕಸಾರಿ ಹೇಳಿದ್ದೇನೆ. ಅದನ್ನೇ ನಮ್ಮ ವಿರೋಧಪಕ್ಷದ ನಾಯಕರು ಪತ್ರಿಕೆ ಹೇಳಿಕೆಗಳಲ್ಲಿ ಹೇಳುವುದಲ್ಲ ಅಂಕಿಅಂಶಗಳು ಬೇಕು, ಪೊಟೆನ್‌ಶಿಯಲ್ ಬೇಕು ಎಂದು ಹೇಳಿದ್ದಾರೆ. 1994ನೇ ಡಿಸೆಂಬರ್‌ನಲ್ಲಿ ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾದ ಮೇಲೆ, ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಯಾಗುವವರೆಗೆ ಹಾಗು ಇಲ್ಲಿಯವರೆಗೆ ನಾವು 2,200 ಕೋಟಿ ರೂಪಾಯಿಗಳನ್ನು ಕೃಷ್ಣಾ ಬೇಸಿನ್‌ಗಾಗಿ ಖರ್ಚು ಮಾಡಿದ್ದೇವೆ. ಕಳೆದ ನಾಲ್ಕು ವರ್ಷಗಳಲ್ಲಿ 1,400 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅವರು ಹೇಳಿದರು, ನೀವು ಹಣ ಖರ್ಚು ಮಾಡಿದ್ದೀರಿ ಆದರೆ ಪೊಟೆನ್‌ಶಿಯಲ್ ಕ್ರಿಯೇಟ್ ಮಾಡಬೇಕು ಎಂದು. ಮಾನ್ಯ ಅಧ್ಯಕ್ಷರೆ, ಮೊದಲು ಡ್ಯಾಂ ಆಗಬೇಕು, ಆಮೇಲೆ ಮೈನ್ ಕೆನಾಲ್ ಆಗಬೇಕು, ಆ ಮೇಲೆ ಡಿಸ್ಟ್ರಿಬ್ಯೂಟರಿ ಕೆನಾಲ್ಸ್ ಆಗಬೇಕು, ಆ ಮೇಲೆ ಫೀಲ್ಡ್ ಕೆನಾಲ್‌ಗಳು ಆಗಬೇಕು, ಒಂದು ಪ್ರಾಜೆಕ್ಟ್ ಅಂದರೆ, ಇವೊತ್ತು ನಾವು ನಾರಾಯಣಪುರ ರೈಟ್‌ಬ್ಯಾಂಕ್‌ಗೆ ಸುಮಾರು 400-500 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ, ನಾರಾಯಣಪುರ, ಜೇವರ್ಗಿ, ಇಂಡಿ ಬ್ರ್ಯಾಂಚ್ ಇರಲಿ, ಅಲ್ಲಿ ನಾವು ಕೆನಾಲ್ ತೆಗೆಯುತ್ತಾ ಇದ್ದೇವೆ. ಈಗ ಪೊಟೆನ್‌ಶಿಯಲ್ ಕ್ರಿಯೇಟ್ ಆಗುವುದಿಲ್ಲ. ಪೊಟೆನ್‌ಶಿಯಲ್ ಕ್ರಿಯೇಟ್ ಆಗುವುದು ಡಿಸ್ಟ್ರಿಬ್ಯೂಟರಿ ಮಾಡಿದಾಗ, ಫೀಲ್ಡ್‌ಕೆನಾಲ್ ಮಾಡಿದಾಗ. ಆದ್ದರಿಂದ 300 ಕೋಟಿ ರೂಪಾಯಿಗಳನ್ನು ನಾವು ಜೇವರ್ಗಿ, ನಾರಾಯಣಪುರ ಮತ್ತು ಇಂಡಿಬ್ರ್ಯಾಂಚ್ ಕೆನಾಲ್‌ಗಳಿಗೆ ಇಟ್ಟುಕೊಂಡಿದ್ದೇವೆ. ಹಾಗೆಯೇ ಇನ್ನೂ ಕೆಲವು ಕೆಲಸಗಳು ನಿಂತು ಹೋಗಿಬಿಟ್ಟಿದೆ ಎಂದು ಹೇಳಿದರು. 367 ಕಿ.ಮೀ.ಗಳು ಈ ಮೂರು ಮೈನ್‌ಕೆನಾಲ್ ಇರುವುದು. ಒಂದು ವರ್ಷದ ಹಿಂದೆಯೇ ನಮ್ಮ ಸರಕಾರ ಈಗಾಗಲೇ ಕೆನಾಲ್‌ನ್ನು 300 ಕಿ.ಮೀ.ಗಳಿಗೆ ಕಾಂಟ್ರಾಕ್ಟ್‌ನ್ನು

ಕೊಟ್ಟುಬಿಟ್ಟಿದ್ದೇವೆ. ಇನ್ನು ಉಳಿದಿರತಕ್ಕಂಥಾದ್ದು 67 ಕಿ.ಮೀ.ಗಳು. ಮೂರು ಡಿಸ್ಟ್ರಿಬ್ಯೂಟರಿಗಳಿಂದ ಈ 67-68 ಕಿ.ಮೀ.ಗಳಲ್ಲಿ ಈ 300 ಕಿ.ಮೀ ಕೆನಾಲ್ ಏನು ತೆಗೆಯುತ್ತಾ ಇದ್ದಾರೆ, ಅದಕ್ಕೆ ಸಿ.ಡಿ. ವರ್ಕ್‌ಗಳು ಆಗಬೇಕು. ಆ ಸಿ.ಡಿ. ವರ್ಕ್‌ಗಳಲ್ಲಿ ಇರುವವುಗಳು ಎಲ್ಲಾ ಸ್ಟೇಜ್‌ಗಳಲ್ಲಿ ಇದ್ದಾವೆ. ಅದಕ್ಕೋಸ್ಕರವಾಗಿ ನಾವು ಇನ್ನೂ ಪೊಟೆನ್‌ಶಿಯಲ್ ಕ್ರಿಯೇಟ್ ಮಾಡಿಲ್ಲ. ಅದಕ್ಕಾಗಿ ನಾವು 1ನೇ ಸೆಪ್ಟಂಬರ್ 30ರೊಳಗಡೆ, ಸಿ.ಡಿ. ವರ್ಕ್ಸ್ ಟೆಂಡರ್ ಮುಗಿಯಬೇಕು, ಹಾಗೂ ಅಕ್ಟೋಬರ್ ಡಿಸೆಂಬರ್‌ನಲ್ಲಿ ಏಜೆನ್ಸಿ ಫೈನಲೈಸ್ ಆಗಬೇಕು, ಇನ್ನು ಉಳಿದಂಥ 6-7 ತಿಂಗಳುಗಳ ಒಳಗಡೆ ನಮ್ಮಲ್ಲಿರತಕ್ಕಂಥ ಎಲ್ಲಾ ಕಾಂಟ್ರಾಕ್ಟ್ ಏಜನ್ಸಿಗಳು ಟನಲ್ ಇರಲಿ, ಬ್ರಿಡ್ಜ್‌ಸ್ ಮುಂತಾಗಿ ಯಾವ ವರ್ಕ್ಸ್ ಇರಲಿ ಆ ಸಿ.ಡಿ. ವರ್ಕ್ಸ್‌ನ್ನು ಕಂಪ್ಲೀಟ್ ಮಾಡಬೇಕೆಂದು ಹೇಳಿ ಯುಕೆಪಿ ಅಧ್ಯಕ್ಷರಾಗಿರತಕ್ಕಂಥ ಮಾನ್ಯ ಮುಖ್ಯಮಂತ್ರಿಗಳು ಮೀಟಿಂಗ್ ಕರೆದು ಈ ರೀತಿಯಾಗಿ ಪ್ರೋಗ್ರಾಂ ಆಗಬೇಕೆಂದು ಹೇಳಿ ಪ್ರೋಗ್ರಾಂ ಮಾಡಿ ಅದರ ಪ್ರಕಾರ ಪ್ರತಿಯೊಂದನ್ನು ನಾವು ಈಗ ಕೊಟ್ಟಿದ್ದೇವೆ. ಟೆಂಡರ್ಸ್ ಕರೆಯುತ್ತಾ ಇದ್ದೇವೆ. ಕೃಷ್ಣಾ ಜಲಭಾಗ್ಯ ನಿಗಮದಲ್ಲಿ ಯಾವುದಕ್ಕೂ ಹಣದ ತೊಂದರೆ ಇಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಹಣದ ತೊಂದರೆಯ ವಿಚಾರ ಹೇಳಿದರು. ನಮಗೆ ಯುಕೆಪಿಗೆ ಯಾವುದೇ ರೀತಿಯ ಹಣದ ತೊಂದರೆ ಇಲ್ಲ. ಹಣ ಸಾಕಷ್ಟು ಇದೆ. ಯೋಜನೆಗಳನ್ನು ಹಾಕಿಕೊಂಡು ವಾಟರ್‌ಫ್ಲೋಯಿಂಗ್‌ಗೆ ನಾವು ಪ್ಲಾನ್ ಮಾಡಬೇಕು. ಅದಕ್ಕೆ ನಾವು ಪ್ಲಾನ್ ಮಾಡಿದ್ದುದು ಇದೆ. ಮೂರು ಕಡೆ ಡಿಸ್ಟ್ರಿಬ್ಯೂಟರಿಗಳಲ್ಲಿ ಕೆಲಸ ಮಾಡಲು ಎಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ ಎಂಬ ಮಾತನ್ನು ಹೇಳಿ, 2,200 ಕೋಟಿ ರೂಪಾಯಿಗಳನ್ನು ನಾವು ಕಳೆದ ಎರಡುವರೆ ವರ್ಷಗಳಲ್ಲಿ ಯುಕೆಪಿ ಮತ್ತು ಕೃಷ್ಣಾಗೆ ಖರ್ಚು ಮಾಡಿದ್ದೇವೆ. ಉತ್ತರ ಕರ್ನಾಟಕದ ವಿಚಾರವನ್ನು ವಿಶೇಷವಾಗಿ ಹೇಳುವುದಾದರೆ, ನಬಾರ್ಡ್‌ನಲ್ಲಿ 6 ಯೋಜನೆಗಳನ್ನು ಮಾಡಿದ್ದೇವೆ. ಮಾನ್ಯ ದೇವೇಗೌಡರು ಇದ್ದಾಗ ಆರು ಯೋಜನೆಗಳನ್ನು ಕೈಗೆ ಎತ್ತಿಕೊಂಡರು. ಆ 6 ಯೋಜನೆಗಳಲ್ಲಿ 4 ಯೋಜನೆಗಳು-ಬೆಣ್ಣೆತೊರೆ, ಮೂಲ್ಕಿ ಅಪ್ಪರ್‌ಮುಲ್ಲಾಮರಿ ಮತ್ತು ಚುಲ್ಕಿ-ಹೀಗೆ ನಾಲ್ಕು. ಅದು ಆ ಭಾಗದಲ್ಲಿ ಈ ಭಾಗದಲ್ಲಿ ಮಂಚಿನಬೆಲೆ ಮತ್ತು ವಾಟೆಹೊಳೆ. ಸುಮಾರು 106 ಕೋಟಿ ರೂಪಾಯಿಗಳಿಂದ ದೇವೇಗೌಡರ ಕಾಲದಲ್ಲಿ ಈ ಯೋಜನೆಗಳನ್ನು ಕೈಗೆತ್ತಿಕೊಂಡರು. ಮಾನ್ಯ ದೇವರಾಜ್ ಅರಸ್‌ರವರು ಬೆಣ್ಣೆತೊರೆ ಯೋಜನೆಯನ್ನು ಕೈಗೆತ್ತಿಕೊಂಡರು. ಅದು ನಮ್ಮ ವಿರೋಧಪಕ್ಷದ ನಾಯಕರು ಇರುವಂಥ ಜಿಲ್ಲೆಯಲ್ಲಿ. ಬೆಣ್ಣೆತೊರೆ ಚುಲ್ಕಿನಾಲೆ ಹೀಗೆ ಇವುಗಳಲ್ಲಿ ಲೋಯರ್‌ಮುಲ್ಲಾಮರಿ ಸೇರಿದಂತೆ ಕಳೆದ 15-20 ವರ್ಷಗಳಿಂದ ಜನರು ನೀರು ಬರುತ್ತದೆ ಎಂದು ಎಣಿಸಿದರೆ ವಿನಹ ನೀರು ಬರಲಿಲ್ಲ. ಪ್ರಾರಂಭ ಮಾಡಿದಾಗಲೇ ಬೆಣ್ಣೆತೊರೆ ಯೋಜನೆಯು ಆಗುತ್ತದೆ ಎಂದು ಯಾವ ರೈತರೂ ಹೇಳುತ್ತಾ ಇರಲಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಇದನ್ನು ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ಏಕೆಂದರೆ, ಅವರಿಗೆ ಸಾಕಷ್ಟು ಅನುಭವ

ಇರುವುದರಿಂದ ಇರತಕ್ಕಂಥ ವಾಸ್ತವಾಂಶ ಗೊತ್ತಿದೆ. ಈ ನಾಲ್ಕು ಯೋಜನೆಗಳನ್ನು ಮಾನ್ಯ ದೇವೇಗೌಡರು ಇದ್ದಾಗ ನಬಾರ್ಡ್‌ಗೆ ಸೇರಿಸಿ, ಇವುಗಳನ್ನು ಡಿಸೆಂಬರ್, ಜನವರಿ, ಫೆಬ್ರವರಿ ಒಳಗಡೆ 30 ಸಾವಿರ ಹೆಕ್ಟೇರ್‌ಗೆ 6 ಯೋಜನೆಗಳನ್ನು ಕಂಪ್ಲೀಟ್ ಮಾಡಿ ಎಲ್ಲವೂ ಒಂದು ಹಂತಕ್ಕೆ ಬಂದಿದೆ. ಮಂಚಿನಬೆಲೆ ಡಿಸೆಂಬರ್‌ನಲ್ಲಿ ಮುಗಿಯುತ್ತದೆ, ಚುಲ್ಕಿನಾಲ ಡಿಸೆಂಬರ್‌ಗೆ ಮುಗಿಯುತ್ತದೆ, ಲೋಯರ್‌ಮುಲ್ಲಾ ಬಹುತೇಕ ಫೈನಲೈಸ್ ಆಗಿದೆ, ಬೆಣ್ಣೆತೊರೆದಲ್ಲಿ ಮಾತ್ರ ಒಂದು ಒಂದೂವರೆ ವರ್ಷ ಜಾಸ್ತಿಯಾಗುತ್ತದೆ. ಈ ವರ್ಷವೂ ಕೂಡ 50 ಕೋಟಿ ರೂಪಾಯಿಗಳನ್ನು ನಬಾರ್ಡ್‌ನವರು ಕೊಟ್ಟಿದ್ದರು ಅದನ್ನು ನಾವು ಬೆಣ್ಣೆತೊರೆ ಕೊಟ್ಟಿದ್ದೇವೆ. 30 ಸಾವಿರ ಎಕರೆಯನ್ನು ಈ 6 ಯೋಜನೆಗಳಿಂದ ಕಂಪ್ಲೀಟ್ ಮಾಡಬೇಕೆಂದು ಯೋಜನೆ ಹಾಕಿದ್ದೇವೆ. ಅದರ ಹೆಚ್ಚು ಭಾಗ ನಾವು ಉತ್ತರ ಕರ್ನಾಟಕಕ್ಕೆ ಹೆಚ್ಚಿನ ಹಣವನ್ನು ಕೊಟ್ಟಿದ್ದೇವೆ. ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾದ ತಕ್ಷಣ ಎಲ್ಲಿ ನೀರಾವರಿ ಯೋಜನೆಗಳು ತ್ವರಿತವಾಗಿ ಸಾಗಬೇಕು ಎನ್ನುವ ಹಿನ್ನಲೆಯಲ್ಲಿ ಅವರು ಒಂದು ವರ್ಷದಲ್ಲಿ 122 ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯ ಸರ್ಕಾರಕ್ಕೆ ಕೊಟ್ಟರು. ಅದರಂತೆ ಬೇರೆ ಸರ್ಕಾರಕ್ಕೂ ಕೊಟ್ಟರು. 122 ಕೋಟಿ ರೂಪಾಯಿಗಳಲ್ಲಿ ನಾವು 61 ಕೋಟಿ ರೂಪಾಯಿಗಳನ್ನು ಹೋದ ವರ್ಷ ನಾವು ಈ ಭಾಗಕ್ಕೆ ಖರ್ಚು ಮಾಡಿದ್ದೇವೆ. ಈ ವರ್ಷ ಸುಮಾರು 144 ಕೋಟಿ ರೂಪಾಯಿಗಳಲ್ಲಿ ಮಂಜೂರಾಗಿ ಬಂದಿದೆ ಕೇಂದ್ರ ಸರ್ಕಾರದಿಂದ. ಈ 144 ಕೋಟಿ ರೂಪಾಯಿಗಳಲ್ಲಿ 100 ಕೋಟಿ ರೂಪಾಯಿಗಳನ್ನು ನಾವು ಕೃಷ್ಣಾ ಮೇಲ್ದಂಡೆ ಯೋಜನೆಗೆ ಖರ್ಚು ಮಾಡುತ್ತಿದ್ದೇವೆ. ಸುಮಾರು 24 ಕೋಟಿ ರೂಪಾಯಿಗಳನ್ನು ಮಲಪ್ರಭಾಗೆ ಖರ್ಚು ಮಾಡುತ್ತಿದ್ದೇವೆ. ಸುಮಾರು 6 ಕೋಟಿ ರೂಪಾಯಿಗಳನ್ನು ಹಿರೇಹಳ್ಳಕ್ಕೆ ಖರ್ಚು ಮಾಡುತ್ತಿದ್ದೇವೆ. 8 ಕೋಟಿ ರೂಪಾಯಿಗಳನ್ನು ಘಟಪ್ರಭಾಕ್ಕೆ ಖರ್ಚು ಮಾಡುತ್ತಿದ್ದೇವೆ. ಆಲ್‌ಮೋಸ್ಟ್ ಆಲ್ ನಾವು 144 ಕೋಟಿ ರೂಪಾಯಿಗಳನ್ನು ಉತ್ತರ ಕರ್ನಾಟಕಕ್ಕೆ ಖರ್ಚು ಮಾಡುತ್ತಿದ್ದೇವೆ. ಆ ಭಾಗದಲ್ಲಿ ಬಹಳ ವರ್ಷಗಳಿಂದ ನೀರಾವರಿ ಯೋಜನೆಗಳು ಆಗಿಲ್ಲ, ಬಹಳ ವರ್ಷಗಳಿಂದ ಕುಂಠಿತವಾಗಿರುವುದರಿಂದ ನಾವು ಯುಕೆಪಿಯಲ್ಲಿ ಹೆಚ್ಚು ಹಣ ಮಾಡಿಕೊಟ್ಟಿದ್ದೇವೆ, ಮತ್ತು ಐ.ಪಿ.ಪಿ.ಯಿಂದ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಎಲ್ಲ ಹಣವನ್ನು ಉತ್ತರ ಕರ್ನಾಟಕಕ್ಕೆ ನಾವು ಕೊಟ್ಟಿದ್ದೇವೆ. ನಬಾರ್ಡದಿಂದ ಬರತಕ್ಕಂಥ 80 ಭಾಗ ಹಣವನ್ನು ಉತ್ತರ ಕರ್ನಾಟಕಕ್ಕೆ ಕೊಟ್ಟಿದ್ದೇವೆ. ಇಷ್ಟು ಹಣವನ್ನು ಕೊಟ್ಟು ಯೋಜನೆಗಳನ್ನು ತ್ವರಿತಗತಿಯಲ್ಲಿ ಮುಗಿಸಬೇಕೆನ್ನುವ ದೃಷ್ಟಿಯಿಂದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಬಹುಶಃ ಈ ಕಾರ್ಯಕ್ರಮದಲ್ಲಿ ಯಾವುದೇ ರೀತಿಯ ಹಣದ ತೊಂದರೆಯಾಗುವುದಿಲ್ಲ. ಇಷ್ಟು ಮುಗಿಸಬೇಕೆಂದು ಆಲೋಚನೆ ಮಾಡಿ ಕಾರ್ಯಕ್ರಮವನ್ನು ಈಗಾಗಲೇ ಹಾಕಿಕೊಂಡು ಕಾರ್ಯಕ್ರಮ ನಡೆಯುತ್ತಿದೆ. ಮತ್ತೊಂದು ಮಾತು ನಮ್ಮ ಗೋವಿಂದ ಕಾರಜೋಳರವರು ಮಾತನಾಡುವ ಸಂದರ್ಭದಲ್ಲಿ ಯುಕೆಪಿಯಲ್ಲಿರತಕ್ಕಂಥ ಆಲಮಟ್ಟಿ ಪ್ರದೇಶದಲ್ಲಿರುವ ರೈತರು

ಲಕ್ಷಾಂತರ ಎಕರೆ ಭೂಮಿಯನ್ನು ಕಳೆದುಕೊಂಡಿದ್ದಾರೆ. ಅವರಿಗೆ ಏತನೀರಾವರಿ ಯೋಜನೆಗಳು ಬಹಳ ವರ್ಷಗಳಿಂದ ಆಗಿಲ್ಲ, ಅದನ್ನು ಮಾಡಬೇಕು ಎನ್ನುವ ಮಾತನ್ನು ಹೇಳಿದರು, ಮಾನ್ಯ ದೇವೇಗೌಡರು ಇದ್ದಂಥ ಕಾಲದಲ್ಲಿ ಅಲ್ಲಿ 5 ಏತನೀರಾವರಿ ಯೋಜನೆಗಳಲ್ಲಿ 4 ಯೋಜನೆಗಳನ್ನು ಅವರು ಪ್ರಾರಂಭ ಮಾಡಿದರು. ಇವತ್ತು ಮುಳವಾಡ ಏತನೀರಾವರಿ ಯೋಜನೆಯಲ್ಲಿ 30 ಸಹಸ್ರ ಏಕರೆಯಲ್ಲಿ ಆಲಮಟ್ಟಿ ಲಿಫ್ಟ್ ಅಂಡ್ ರೈಟ್‌ನಲ್ಲಿ 46 ಸಾವಿರ ಮತ್ತು ಗ್ರಾಮಠಾಣದಲ್ಲಿ 20 ಸಾವಿರ ಎಕರೆಗೆ ನೀರು ಕೊಡಬೇಕೆನ್ನುವ ದೃಷ್ಟಿಯಿಂದ ಅವರು ಇದ್ದಾಗ 4 ಯೋಜನೆಗಳನ್ನು ಮಂಜೂರು ಮಾಡಿ ಇವತ್ತು ಹೆಡ್‌ವರ್ಕ್‌ಗಳು ಕಂಪ್ಲೀಟ್ ಆಗುವ ಸ್ಥಿತಿಯಲ್ಲಿವೆ. ಬಹುಶಃ ನಮ್ಮ ಅನೇಕ ಸ್ನೇಹಿತರು ಆ ಭಾಗದಿಂದ ಬರತಕ್ಕಂಥ ಎಲ್ಲ ಸ್ನೇಹಿತರಿಗೆ ನಾನು 3-4 ಸಾರಿ ಪ್ರವಾಸ ಮಾಡಿದ್ದೇನೆ, ನಮ್ಮ ಎಲ್ಲ ಶಾಸಕರು ಕೂಡ ಪ್ರಾಜೆಕ್ಟ್‌ಗಳನ್ನು ವಿಜಿಟ್ ಮಾಡಿ ನೋಡಿದ್ದಾರೆ. ಆವಾಗ ದೇವೇಗೌಡರು ಏನು ಕೆಲಸವನ್ನು ಪ್ರಾರಂಭ ಮಾಡಿ ಹೋಗಿದ್ದರು ಇವತ್ತು ನಾವು ಜೆ.ಹೆಚ್.ಪಟೇಲರ ಕಾಲದಲ್ಲಿ ತ್ವರಿತ ಗತಿಯಲ್ಲಿ 4 ಆ ಯೋಜನೆಗಳ ಕೆಲಸವನ್ನು ತ್ವರಿತಗತಿಯಲ್ಲಿ ಮಾಡುತ್ತಿರುವುದನ್ನು ತಾವು ಕೂಡ ನೋಡಿದ್ದೀರಿ ಎಂದು ನಾನು ಅಂದುಕೊಳ್ಳುತ್ತೇನೆ, ತ್ವರಿತ ಗತಿಯಲ್ಲಿ ಹೆಡ್‌ವರ್ಕ್ಸ್‌ಗಳು ಕೆಲಸ ಮಾಡಿದ್ದೇವೆ. ಆಲಮಟ್ಟಿಗೂ ಕೂಡ ನಾವು 1999ರ ಮಾನ್‌ಸೂನ್‌ಗೆ ಫುಲ್ ಸ್ಟೋರೆಜ್ ಮಾಡುತ್ತೇವೆ. ಈ ಮಾತನ್ನು ನಾನು ಅನೇಕ ಸಾರಿ ಹೇಳಿದ್ದೇನೆ. ಯುಕೆಪಿಯಲ್ಲಿ ನಾವು ಪ್ಲಾನ್ ಇಟ್ಟುಕೊಂಡಿದ್ದೇನೆ. ಇನ್ನು ಆಲಮಟ್ಟಿ ಡ್ಯಾಮ್‌ಗೆ 80 ಕೋಟಿ ರೂಪಾಯಿಗಳು ಖರ್ಚು ಆಗಬೇಕಾಗಿದೆ. ಹಣವನ್ನು ನಾವು ತ್ವರಿತಗತಿಯಲ್ಲಿ ಮಾಡಿದ್ದೇವೆ. ಕ್ವಾಲಿಟಿ ವರ್ಕ್ಸ್‌ಗಳನ್ನು ಸಹ ಗ್ಯಾಮನ್ ಇಂಡಿಯಾದವರು ಮಾಡಿದ ಕೆಲಸವನ್ನು ಎಲ್ಲರೂ ನೋಡಿದ್ದಾರೆ ಎಷ್ಟರ ಮಟ್ಟಿಗೆ ಆಲಮಟ್ಟಿಯಲ್ಲಿ ಕೆಲಸವಾಗಿದೆ ಎಂದು. 1999ಕ್ಕೆ ನಮ್ಮ 524 ಮೀಟರ್‌ಗೆ ನಮ್ಮ ಸ್ಟೋರೇಜ್‌ಗೆ 173 ಎಂದು ಅಲೋಕೇಷನ್ ಏನು ಇದೆ ಆ ಫುಲ್ ಸ್ಟೋರೇಜನ್ನು 1999ರ ಮಾನ್‌ಸೂನ್‌ಗೆ ಮಾಡುವುದಕ್ಕೆ ಎಲ್ಲ ಕ್ರಮವನ್ನು ಹಾಕಿಕೊಂಡಿದ್ದೇವೆ, ಕಾಂಕ್ರೀಟ್ ಕೆಲಸ ಮುಗಿದಿದೆ. ಇನ್ನು ಇರತಕ್ಕಂಥದ್ದು ಗೇಟ್ ವರ್ಕ್ಸ್ ಗೇಟ್‌ಗಳು ಕೂಡ ಬಂದಿದ್ದಾವೆ, ಅದಕ್ಕೂ ಸಹ ನಾವು ಎಲ್ಲ ರೀತಿಯ ಕ್ರಮವನ್ನು ತೆಗೆದುಕೊಂಡಿದ್ದೇವೆ. 1999ಕ್ಕೆ ಎಲ್ಲ ಕೆಲಸವನ್ನು ಮುಗಿಸಿ ಮಾನ್‌ಸೂನ್‌ಗೆ ಆಲಮಟ್ಟಿಯಲ್ಲಿ ನೀರನ್ನು ನಿಲ್ಲಿಸುತ್ತೇವೆ. ಅದಕ್ಕೆ ಅವರು ಏನು ಹೇಳಿದರು ಸ್ಟೋರೇಜ್ ಮಾಡಿಕೊಳ್ಳಲು ಆಗುವುದಿಲ್ಲವೆಂದು ಹೇಳಿದರು. ನಾನು ಅಲೋಕೇಷನ್ ಅವರು ಕೊಟ್ಟಿದ್ದರ ಬಗ್ಗೆ ಟೈಮ್ ಇದ್ದರೆ ಇನ್ನೊಮ್ಮೆ ಚರ್ಚೆ ಮಾಡುತ್ತೇನೆ. 729 ಟಿಎಂಸಿ ನೀರನ್ನು ನಾವು ಎಲ್ಲ ಉಪಯೋಗಿಸಿಕೊಳ್ಳುವುದಕ್ಕೆ ಎಲ್ಲ ಕ್ರಮವನ್ನು ತೆಗೆದುಕೊಂಡು, ಇವತ್ತಿನ ದಿವಸ ನಮ್ಮ ಕೆಲಸ 1999ರ ಮಾನ್‌ಸೂನ್‌ಗೆ ಸ್ಟೋರೇಜ್‌ನ ಎಲ್ಲ ಕೆಲಸ ಮುಗಿಯುತ್ತದೆ. ಉಳಿದಿರತಕ್ಕಂಥ ಒಂದು ವರ್ಷದಲ್ಲಿ ನಾವು ಎಲ್ಲೆಲ್ಲಿ ಸ್ಪೀಡ್ ಕೆನಾಲ್ ಮಾಡಬೇಕು, ಡಿಸ್ಟ್ರಿಬ್ಯೂಟ್ ಮಾಡಬೇಕು 360 ಕಿ.ಮೀ. ನಾವು ಮಾಡಿದರೆ ಆಗುತ್ತದೆ ಎನ್ನುವ ದೃಷ್ಟಿಯಿಂದ ನಮ್ಮ ಯುಕೆಪಿ ಅಧ್ಯಕ್ಷರಾಗಿರತಕ್ಕಂಥ

ನಮ್ಮ ಮಂತ್ರಿಯವರೆ ಪ್ಲಾನ್ ಎಲ್ಲಾ ಮಾಡಿ, ಮುಖ್ಯಮಂತ್ರಿಯವರು ಗಮನವನ್ನು ಹರಿಸಬೇಕೆಂದು ಹೇಳಿದರು, ಅವರ ಗಮನಕ್ಕೆ ಪ್ರತಿ 15 ದಿವಸಕ್ಕೆ ಒಂದು ಸಲ ನಮ್ಮ ಕೆ.ಪಿ.ಸಿ. ಮತ್ತು ಈ ಮೀಟಿಂಗನ್ನು, ಕಂಟಿನ್ಯುಯೆಸ್ ಆಗಿ ಅವರು ಎಲ್ಲೇ ಇದ್ದರೂ ಯುಕೆಪಿ ಮೀಟಿಂಗ್‌ಗೆ ಬಂದು ಎಲ್ಲ ನಮ್ಮ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆಯ ಆಯುಕ್ತರು ಬಂದು ಹಾಗೂ ಉಳಿದ ಅಧಿಕಾರಿಗಳು ಸಹ ನಾವು ಆ ಮೀಟಿಂಗ್‌ನಲ್ಲಿ ನಾವು ಗಂಟೆಗಟ್ಟಲೆ ಚರ್ಚಿಸಿ ಇವತ್ತು ನಾವು ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಹಣಕ್ಕೂ ತೊಂದರೆ ಇಲ್ಲ, ಕಾರ್ಯಕ್ರಮಕ್ಕೂ ತೊಂದರೆ ಇಲ್ಲ ಕೆಲಸ ಎಲ್ಲೂ ನಿಂತಿಲ್ಲ, ಅವರು ಹೇಳುವಂತೆ ಕಾಂಟ್ರಾಕ್ಟರ್ ಬಿಲ್ಲು ಕೊಟ್ಟಿಲ್ಲ. ಅವರು ಹೇಳಿದಂತೆ ಒಂದು ಮಾತಿನ ಸಂದರ್ಭದಲ್ಲಿ ಹೋದಸಲ ನಾವು ಕಾಂಟ್ರಾಕ್ಟ್ ಕೊಡುವ ಕಾಲದಲ್ಲಿ ಮೂರು ನಾಲೆಗಳನ್ನು ಸಹ ನಾವು ರಾತ್ರೋರಾತ್ರಿ ಅವರು ಕಾಂಟ್ರಾಕ್ಟ್ ಕೊಟ್ಟರು ಎಂದು ಹೇಳಿ ನಾನು 1990ರಿಂದ ಏನು ಮಾಡಿದ್ದಾರೆಂದು ಹೇಳುವುದಕ್ಕೆ ಹೋಗುವುದಿಲ್ಲ. 1991, 92 ಮತ್ತು 93ರಲ್ಲಿ ಪೀಸ್ ವರ್ಕ್‌ಗಳನ್ನು ಎಷ್ಟು ಕೊಟ್ಟಿದ್ದಾರೆಂದು ನನ್ನ ಹತ್ತಿರ ಮಾಹಿತಿ ಇದೆ. ಅದರ ಅವಶ್ಯಕತೆ ಇಲ್ಲ, ಈಗ ಅವಶ್ಯಕತೆ ಇರತಕ್ಕಂಥದ್ದು ಅಂದರೆ 1994ನೇ ಇಸ್ವಿಯಲ್ಲಿ ಬಹಳಷ್ಟು ಹಣವನ್ನು ನಾವು ಸಾರ್ವಜನಿಕರಿಗೆ 18 ಪರ್ಸೆಂಟು ಬಡ್ಡಿ ಕೊಟ್ಟು ಹಣವನ್ನು ತೆಗೆದುಕೊಂಡು ಬಂದು ಇವತ್ತು ತ್ವರಿತಗತಿಯಲ್ಲಿ ಉಪಯೋಗಿಸದೆ ಹೋದರೆ, ಇವತ್ತು ಎಲ್ಲವೂ ಹಾಳಾಗುತ್ತದೆಂದು ಹೇಳಿ ಈ ಫಾರ್ಮಾಲಿಟಿ ಮಾಡಬೇಕೆಂದು ಹೇಳಿ, ರೀಕ್ವಾಲಿಫೈ ಮಾಡುವುದಕ್ಕೋಸ್ಕರ ಒಂದು ತಿಂಗಳ ಮುಂಚೆ ಎಲ್ಲಾ ನ್ಯೂಸ್ ಪತ್ರಿಕೆಗಳಲ್ಲಿ ಜಾಹಿರಾತು ಮಾಡಿ ರೀಕ್ವಾಲಿಫೈ ಮಾಡಿ ಟೆಕ್ನಿಕಲ್ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿ ಆ ಟೆಕ್ನಿಕಲ್ ಕಮಿಟಿ ಮುಂದೆ ಆ ಎಸ್ಟಿಮೇಟ್‌ಗಳು ಬಂತು, ಅವುಗಳನ್ನ ಅಲ್ಲಿ ಅಪ್ರೂವಲ್ ಮಾಡಿ ತದನಂತರ ಬೋರ್ಡಿಗೆ ಬಂದು ಬೋರ್ಡ್ ಅಪ್ರೂವ್ ಮಾಡಿ ಆದರಂತೆ ಕ್ಯಾಬಿನೆಟ್ ಅಪ್ರೂವಲ್ ತೆಗೆದುಕೊಂಡು ಈ ಕೆಲಸವನ್ನು ಮಾಡಿದ್ದೇವೆ. ಅಲ್ಲಿರತಕ್ಕಂಥ ಲೋಪದೋಷಗಳು ಏನು ಎಂದು ಹೇಳಿದರೆ 2 1/2 ಕೋಟಿ ರೂಪಾಯಿಗಳಲ್ಲಿ ಆಗಬೇಕಾಗಿರತಕ್ಕಂಥ ಕೆಲಸ 3, 4, 5 ಕೋಟಿ ರೂಪಾಯಿಗಳು ಆಗಿರಬಹುದು. ಎಸ್ಟಿಮೇಟನ್ನು ಕ್ರಾಸ್ ಮಾಡಿದ್ದಾರೆ ಎನ್ನುವುದು ಅವರ ಅಭಿಪ್ರಾಯ. ಇರಿಗೇಷನ್ ಪ್ರಾಜೆಕ್ಟ್‌ನಲ್ಲಿ ಎಲ್ಲ ಕಡೆ ಎಸ್ಟಿಮೇಟ್ ಕ್ರಾಸ್ ಆಗುತ್ತದೆ ಅದು ಎಲ್ಲಾ ನಂಜೇಗೌಡರಿಗೆ ಗೊತ್ತಿದೆ. ಅದನ್ನು ನಾನು ಇವತ್ತು ಹೇಳುತ್ತೇನೆ, 5 ಲಕ್ಷ ರೂಪಾಯಿದಲ್ಲಿ ಮನೆ ಕಂಪ್ಲೀಟ್ ಮಾಡಬೇಕೆಂದರೆ ಅದು 8ರಿಂದ 9 ಲಕ್ಷ ರೂಪಾಯಿಗಳಲ್ಲಿ ಮನೆ ಕಂಪ್ಲೀಟ್ ಆಗುತ್ತದೆ. ಆದರೂ ಸಹ ಅದನ್ನು ಹೋದಸಾರಿ ನಮ್ಮ ಗಮನಕ್ಕೆ ತಂದರು, ಇದನ್ನು ಗಮನಕ್ಕೆ ತಂದ ಕೂಡಲೇ ಮುಖ್ಯ ಮಂತ್ರಿಗಳ ಸಭೆ ಕರೆದು ನಾವೆಲ್ಲರೂ ಕುಳಿತುಕೊಂಡು ಟೆಕ್ನಿಕಲ್ ಕಮಿಟಿಯವರು ಕುಳಿತುಕೊಂಡು ಪ್ರತಿ ಒಂದು ದಿವಸ ಎಲ್ಲವನ್ನು ಸ್ಟಡಿ ಮಾಡಿ ಎಲ್ಲೆಲ್ಲಿ ಎಸ್ಟಿಮೇಟ್ ಓವರ್ ಎಸ್ಟಿಮೇಟ್ ಆಗಿದೆ ಎಲ್ಲೆಲ್ಲಿ ಎಸ್ಟಿಮೇಟ್ ಆಗಿದ್ದರೂ ಸಹ ಆ ಓವರ್ ಎಸ್ಟಿಮೇಟ್ ಎಂದು ನಾವು ಏನು ಹೇಳುತ್ತೇವೆ, ಅಂಡರ್ ಎಸ್ಟಿಮೇಟ್

ಎಂದು ಏನು ಹೇಳುತ್ತೇವೆ ಅದು ಕೆಲಸವಾಗಿದೆಯೇ ನೋಡಿ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಅದರ ಪ್ರಕಾರ ಒಂದು ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿ ಟೆಕ್ನಿಕಲ್ ಕಮಿಟಿಯವರು ಪ್ರತಿಯೊಂದು ಕಡೆ, ಆ ವರ್ಕ್ ಆಗಿದೆಯಾ? ಆ ವರ್ಕ್‌ಗೆ ಮತ್ತು ಆಗಿರತಕ್ಕಂಥ ಎಸ್ಟಿಮೇಟಿಗೆ ವೇರಿಯೇಷನ್ ಆಗಿದೆಯಾ ಎಂದು ಹೇಳಿ 110 ಕಾಂಟ್ರಾಕ್ಟ್‌ರುಗಳಿದ್ದದ್ದನ್ನು ಸಹ ಇವತ್ತು ವೆರಿಫೈ ಮಾಡಿಸುತ್ತಿದ್ದೇವೆ. ಆವಾಗ ನಾವು ಅದರಲ್ಲಿ 100 ಪರ್ಸೆಂಟು ಪೇಮೆಂಟ್ ಕೊಡಬೇಕೆನ್ನುವುದರ ಬಗ್ಗೆ ಸ್ವಲ್ಪ ಡಿಲೇಯಾಗಿದೆ. ಈ ಸೆಪ್ಟಂಬರ್ 30ಕ್ಕೆ ನಾವು ಒಂದು ಪ್ರಾಜೆಕ್ಟ್‌ನ್ನು ಕೊಟ್ಟಿದ್ದೇವೆ ಎಲ್ಲ ಎಸ್ಟಿಮೇಟ್‌ಗಳು, ಎಲ್ಲ ವರ್ಕ್‌ಗಳು, ಸರಿಯಾಗಿ ಎಷ್ಟು ಕೆಲಸ ನಡೆದಿದ ಎನ್ನತಕ್ಕಂಥದ್ದನ್ನು ವೆರಿಫಿಕೇಷನ್ ಮಾಡಿ ಅವರಿಗೆ ಪೇಮೆಂಟ್‌ನ್ನು ಫೈನಲ್ ಮಾಡಬೇಕೆಂದು ನಾವು ಸ್ಪಷ್ಟವಾಗಿ ಯುಕೆಪಿ ಬೋರ್ಡ್ ಮೀಟಿಂಗ್‌ದಲ್ಲಿ ನಾವು ತಿಳಿಸಿದ್ದೇವೆ. ಅದೇರೀತಿಯಲ್ಲಿ ಲಕ್ಷ್ಮಣರಾವ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆ. ಆ ಕಮಿಟಿಯಲ್ಲಿ ಪ್ರತಿಯೊಂದನ್ನು ನೋಡುತ್ತಿದ್ದಾರೆ. ಏಕೆಂದರೆ ನಾವು ಹೋದ ಸಲ ಹೇಳಿದಾಗ ಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದರು. ವಿರೋಧಪಕ್ಷದ ನಾಯಕರು ಹೋದ ಸಲ ಇಲ್ಲಿ ಹೇಳಿದ್ದರಿಂದಲೇ ಅದನ್ನು ಮುಖ್ಯಮಂತ್ರಿಗಳು ಗಮನದಲ್ಲಿ ಇಟ್ಟುಕೊಂಡು ಹೌದು ಇದನ್ನು ನೋಡಬೇಕೆಂದು ಅವರು ಹೇಳಿದ್ದನ್ನು ನಾವು ಜವಾಬ್ದಾರಿಯಿಂದ ನೋಡಬೇಕು. ಏಕೆಂದರೆ ಅವರು ವಿರೋಧ ಪಕ್ಷದ ನಾಯಕರಿದ್ದಾರೆ, ಈ ರಾಜ್ಯದಲ್ಲಿ ವಿರೋಧ ಪಕ್ಷವು ಕೂಡ ಅತ್ಯಂತ ಪ್ರಬಲವಾಗಿ ಕೆಲಸ ಮಾಡಿದಾಗ ಸಹ ಜನರ ಕೆಲಸವಾಗುತ್ತದೆ. ಆ ದೃಷ್ಟಿಯನ್ನು ನಾವು ಇಟ್ಟುಕೊಂಡು ಪ್ರತಿಯೊಂದನ್ನು ಡೀಟೈಲ್ ಆಗಿ ಸ್ಟಡಿ ಮಾಡಿ ಸೆಪ್ಟೆಂಬರ್ 30ರೊಳಗಡೆ ನಿಖರವಾಗಿ ಕೆಲಸ ಎಷ್ಟೆಷ್ಟಿದೆ ಎಂಬುದರ ಬಗ್ಗೆ ಆ ಕಮಿಟಿಯವರು ಫೈನಲೈಸ್ ಮಾಡಬೇಕೆಂದು ಹೇಳಿ ಆಥರೈಸ್ ಮಾಡಿದ್ದೇವೆ. ಬಹುಶಃ ಅದನ್ನು ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಮತ್ತು ನಮ್ಮ ರಿಹ್ಯಾಬಿಲಿಟೇಷನ್ ವರ್ಕ್ ಬಗ್ಗೆ ಪ್ರಸ್ತಾಪ ಮಾಡಿದರು. ನಮ್ಮ ಪ್ರಕಾಶ್‌ರವರು ನಿನ್ನೆ ಹೇಳಿದರು. ನಾವು ಯಾವ ರೀತಿಯಲ್ಲಿ ರಿಹ್ಯಾಬಿಲಿಟೇಷನ್‌ದಲ್ಲಿ ಸಹಾಯ ಮಾಡಿದ್ದೇವೆ ರೈತರಿಗೆ. 154ರಿಂದ 155 ಹಳ್ಳಿಗಳು ಯುಕೆಪಿಯಲ್ಲಿ ಮುಳುಗಡೆಯಾಗುತ್ತವೆ. ಮಾನ್ಯ ಕಾರಜೋಳರವರು ಹೇಳಿದ್ದಾರೆ ಸರ್ವೆ ಸರಿಯಾಗಿ ಮಾಡಿಲ್ಲ ಇನ್ನೊಮ್ಮೆ ಸರ್ವೆ ಮಾಡಿಸಬೇಕೆಂದು, ನಾವು ಜಾಮದಾರವರಿಗೆ ಹೇಳಿ ಇನ್ನೊಮ್ಮೆ ರೀಸರ್ವೆ ಮಾಡುವುದಕ್ಕೆ ಹೇಳಿದ್ದೇವೆ. ಎಲ್ಲೆಲ್ಲಿ 509ಕ್ಕೆ ಯಾವ ಯಾವ ಹಳ್ಳಿಗಳು ಬರುತ್ತವೆ, 512ಕ್ಕೆ ಯಾವ ಹಳ್ಳಿಗಳು ಬರುತ್ತವೆ, 524ಕ್ಕೆ ಯಾವ ಹಳ್ಳಿಗಳು ಬರುತ್ತವೆ, ಎಷ್ಟು ಹಳ್ಳಿಗಳು ಮುಳುಗಡೆಯಾಗುತ್ತವೆ ಅದನ್ನು ಮಾಡಬೇಕೆಂದು ಅವರಿಗೆ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಅವರು ರೀಸರ್ವೆ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ, ಅವರು ಮಾಡಿಯೇ ಮಾಡುತ್ತಾರೆ. ಈಗ 22 ಬೇಡಿಕೆಗಳನ್ನು ಇಟ್ಟರು. ಕಳೆದ 4-5 ವರ್ಷಗಳಿಂದ ಹೋದವರೆಲ್ಲರಿಗೂ ಜನರು ಅರ್ಜಿಗಳನ್ನು ಕೊಟ್ಟಿದ್ದಾರೆ. ಕಳೆದ ಹತ್ತಾರು ವರ್ಷಗಳಿಂದ ರೈತರು ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿದ್ದೇವೆ ನೋಡಿಲ್ಲವೆಂದು ಬೀದಿ

ಭಿಕಾರಿಗಳಾಗಿದ್ದೇವೆಂದು ಕೂಗಾಡಿದ್ದಾರೆ. ನಾವುಗಳು ಹೋದಾಗ ಘೇರಾವ್ ಮಾಡಿದ್ದಾರೆ, ಅವರು ಮುಖ್ಯಮಂತ್ರಿಗಳು ಹೋದಾಗ ಗಲಾಟೆಯನ್ನು ಮಾಡಿದ್ದಾರೆ. ನಾನು ಮತ್ತು ಪ್ರಕಾಶ್‌ರವರು ಹೋದಾಗ ಗಲಾಟೆಯನ್ನು ಮಾಡಿದ್ದಾರೆ. ಇದೆಲ್ಲವನ್ನು ಮನಗಂಡು ಎಷ್ಟೇ ಕೋಟಿಯಾಗಲಿ, ಲಕ್ಷಾಂತರ ಕುಟುಂಬಗಳಿಗೆ ನಾವು ಸಹಾಯ ಮಾಡಬೇಕು, ಈ ಯೋಜನೆಯಲ್ಲಿ ಹಣ ಮುಖ್ಯವಲ್ಲ ಅವರು ಬೀದಿಪಾಲಾಗಬಾರದು ಎನ್ನುವ ದೃಷ್ಟಿಯಿಂದ ಅವರ ಹೋರಾಟ ಸಮಿತಿಯವರು ಯಾರಿದ್ದರು ಆ ಸಮಿತಿಯವರನ್ನು ಕರೆದು ಆ ಎಲ್ಲ 22 ಬೇಡಿಕೆಗಳನ್ನು ಸುಮಾರು ಎಲ್ಲ ಪಕ್ಷದ ಶಾಸಕರನ್ನು ಮುಖಂಡರನ್ನು ಕರೆಸಿ ಒಂದಲ್ಲ ಎರಡಲ್ಲ ಅನೇಕ ಮೀಟಿಂಗ್‌ಗಳನ್ನು ಮಾಡಿದಾಗ 21-22 ರಲ್ಲಿ ಒಂದು ಡಿಮ್ಯಾಂಡ್ ಮಾತ್ರ ಉಳಿದುಕೊಂಡಿತ್ತು. ಡಿಪ್ರಿಸಿಯೇಷನ್, ಸುಮಾರು 200 ಕೋಟಿ ರೂಪಾಯಿ ಆಗುತ್ತದೆ. ಆ 200 ಕೋಟಿ ರೂಪಾಯಿಗಳನ್ನು ನಮ್ಮ ಮುಖ್ಯಮಂತ್ರಿಗಳು ಮಂತ್ರಿ ಮಂಡಲದಲ್ಲಿಟ್ಟು ರೈತರಿಗೆ ಸಹಾಯವಾಗಬೇಕೆಂದು ಹೇಳಿ ಅದನ್ನು ಎಲ್ಲ ಕಾಂಗ್ರೆಸ್ ಪಕ್ಷದ ಶಾಸಕರು, ಬಿಜೆಪಿ ಪಕ್ಷದ ಶಾಸಕರು ಜನತಾದಳದ ಶಾಸಕರು ಎಲ್ಲರೂ ಬಂದು ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಅಲ್ಲಿ ಜನ ಕಾಯುತ್ತಿದ್ದಾರೆ. ನಮ್ಮ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಬನ್ನಿ ಈ 10-15 ವರ್ಷಗಳಲ್ಲಿ ನಮ್ಮ ರೀಹ್ಯಾಬಿಲಿಟೇಷನ್‌ನಲ್ಲಿ ಇಷ್ಟು ಸಹಾಯ ಮಾಡಿದಂಥ ಸರ್ಕಾರ ಬೇರೆ ಇರಲಿಲ್ಲ ಎನ್ನತಕ್ಕಂಥ ಮಾತನ್ನು ನಾವು ಹೇಳಿದ್ದಲ್ಲ ಕಾಂಗ್ರೆಸ್ ಎಂ.ಎಲ್.ಎ.ಗಳು ಹೇಳಿದ್ದಾರೆ ಕೇಳಿ ಬೇಕಾದರೆ ಕಾಂಗ್ರೆಸ್ ಶಾಸಕರು ಇಲ್ಲೇ ಇದ್ದಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಸರ್ಕಾರ ಒಳ್ಳೆಯ ಕೆಲಸ ಮಾಡಿದಾಗ ಒಳ್ಳೆಯದನ್ನು ಹೇಳಬೇಕು. ನಾನು ವಿರೋಧ ಪಕ್ಷದಲ್ಲಿಯೂ ಕೆಲಸವನ್ನು ಮಾಡಿದ್ದೇನೆ. ನಾನು ಇದೇ ಜೆ.ಹೆಚ್.ಪಟೇಲ್‌ರ ಮೇಲೆ, ಸಿಂಧ್ಯಾರವರ ಮೇಲೆ ಸಿಟ್ಟು ಮಾಡಿದ್ದೇನೆ. ನಾನು ಒಳ್ಳೆಯ ಕೆಲಸ ಮಾಡಿದಾಗ ಹಾರ ತೆಗೆದುಕೊಂಡು ಹೋಗಿ ಹಾಸನದಲ್ಲಿ ಹಾಕಬೇಕೆಂದು ಹೋಗಿದ್ದೆ. ಕೆಲಸವನ್ನು ಮಾಡಿದಾಗ ನೀವು ಒಂದು ಒಳ್ಳೆಯ ಮಾತನ್ನು ಹೇಳಬೇಕು. ಆ ಭಾಗಕ್ಕೆ ಸಹಸ್ರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇಷ್ಟು ತ್ವರಿತಗತಿಯಲ್ಲಿ, ಒಂದು ವರ್ಷದಲ್ಲಿ ನಾವು ರೀಹ್ಯಾಬಿಲಿಟೇಷನ್ ಕಾರ್ಯಕ್ಕೆ ಒಬ್ಬ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಯನ್ನು ಹಾಕಿ ಅವರ ನೋವಿಗೆ ಸ್ಪಂದಿಸಿ ಹಣವನ್ನು ಖರ್ಚುಮಾಡಿದಾಗ ಆ ಭಾಗದಲ್ಲಿ ಬರತಕ್ಕಂಥ ಅತ್ಯಂತ ಪ್ರಬಲವಾದಂಥ ನಾಯಕರು ಒಂದು ಮಾತು ಹೇಳದೆ ಹೋದರೆ ನಮ್ಮ ಮನಸ್ಸಿಗೆ ಎಷ್ಟು ನೋವಾಗುತ್ತದೆ. ನಾನು ಅಂದುಕೊಂಡಿದ್ದೇನೆ, ಖರ್ಗೆಯವರು ನೀವು ರೀಹ್ಯಾಬಿಲಿಟೇಷನ್‌ನಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ಆಲಮಟ್ಟಿ ಡ್ಯಾಂದಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ನಾರಾಯಣಪುರದಲ್ಲಿ ನಾಲೆ ಕಟ್ಟಿಸಿದ್ದೀರಿ ಅಷ್ಟೆ ವಿನಃ ಇನ್ನೂ ಸಿ.ಡಿ. ವರ್ಕ್ಸ್ ಮಾಡಿಲ್ಲ, ಇನ್ನ ಫೀಲ್ಡ್ ವರ್ಕ್ಸ್ ಮಾಡಿಲ್ಲ ಡಿಸ್ಟ್ರಿಬ್ಯೂಟ್‌ನಲ್ಲಿ ಕಳಪೆ ಕೆಲಸಗಳು ಆಗುತ್ತವೆ., ನಮ್ಮ ವ್ಯವಸ್ಥೆಯೊಳಗಡೆ ಎಲ್ಲ ಇರಿಗೇಷನ್‌ದಲ್ಲಿ ಎಲ್ಲರೂ ಸತ್ಯ ಹರಿಶ್ಚಂದ್ರರಿದ್ದಾರೆ ಎಲ್ಲಾ

ಕೆಲಸ ಚೆನ್ನಾಗಿ ಆಗುತ್ತದೆ ಎಲ್ಲೂ ಕೂಡ ಸಬ್‌ಸ್ಟ್ಯಾಂಡರ್ಡ್ ವರ್ಕ್ ಆಗಿಲ್ಲವೆಂದು ಸಹ ನಾನು ಹೇಳಿದರೆ ಯಾರೂ ಒಪ್ಪುವುದಿಲ್ಲ. ಅವರು ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ ಅದು ಯಾವ ರೀತಿ ಇರುತ್ತದೆ ಎಂಬುದು ಅವರಿಗೂ ಸಹ ಗೊತ್ತಿದೆ. ನಾನು ಏಕೆ ಪದೇ ಪದೇ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ 2-3 ಸಾರಿ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಕೂಡ ನಮಗೆ ಅನಿಸಿದೆ, ಏನೆಂದರೆ 1999 ರೊಳಗಡೆ ಎಲ್ಲ ರೀಹ್ಯಾಬಿಲಿಟೇಷನ್ ವರ್ಕ್ ಮಾಡಬೇಕೆಂದು ಆದೇಶವನ್ನು ಕೊಟ್ಟಿದ್ದೇನೆ. ಬಾಗಲಕೋಟೆಗೆ ನೂರು ಕೋಟಿ ಹಣ ಇಟ್ಟಿದ್ದು ಅದಕ್ಕೆ ಬರೀ 3 ಕೋಟಿ ಖರ್ಚು ಮಾಡಿದ್ದೀರಿ ಎಂದು ಮಾನ್ಯ ವಿರೋಧ ಪಕ್ಷದನಾಯಕರು ಹೇಳಿದರು. ನಾನು ಮಾನ್ಯ ಖರ್ಗೆಯವರಿಗೆ ಹೇಳುವುದಾದರೆ, ನೂರು ಕೋಟಿಯ ಪ್ಲಾನ್ ಅಲೋಕೇಷನ್ ಹೇಗೆ ಇದೆ ಎಂದರೆ 70 ಕೋಟಿ ರೂಪಾಯಿಗಳ ಲ್ಯಾಂಡ್ ಅಕ್ವಿಸಿಷನ್ ಸ್ಟ್ರಕ್ಚರ್‌ಗೆ ಇನ್ನು 30 ಕೋಟಿ ರೂಪಾಯಿ ಅಲ್ಲಿರತಕ್ಕಟ್ಟಂತಹ ಸಿವಿಲ್ ವರ್ಕ್ಸ್‌ಗೆ. ಈಗ ಸ್ಟ್ರಕ್ಚರ್ ವ್ಯಾಲ್ಯುಯೇಷನ್‌ಗಳೆಲ್ಲ ಪ್ರಾರಂಭವಾಗಿದೆ. ಅನೇಕರು ಚೆನ್ನಾಗಿ ಇದ್ದಾರೆ. ನಾವು ಪ್ರಾರಂಭ ಮಾಡಿದಾಗ ನಾನು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿಗೆ ಹೋದಾಗ ರಸ್ತೆ ಬಿಡಲಿಲ್ಲ. ಒಂದು ದಿವಸ ಬಾಗಲಕೋಟೆ ಡೆವಲಪ್‌ಮೆಂಟ್ ಅಭಿವೃದ್ಧಿ ಮಂಡಲಿಯಲ್ಲಿ ರೈತರು ಕೂಡಿ ಹಾಕಿದ್ದರು. ಅದು ಅವರಿಗೆ ಗೊತ್ತಿದೆ. 3 ವರ್ಷದಿಂದ ಸತ್ಯಾಗ್ರಹ ಮಾಡಿದ್ದಾರೆ. ಆ ಮರ್ಚೆಂಟ್ಸ್‌ಗಳು ಎಲ್ಲ ಸರಕಾರ ಹೇಳಿದೆ ಆದರೆ ಯಾವುದೇ ಕೆಲಸವನ್ನು ಮಾಡಿಲ್ಲವೆಂದು ಹೇಳಿದರು. ನಾವು ಹೋಗಿ ಮಾನ್ಯ ಅಜಯಕುಮಾರ ಸರನಾಯಕ್ ಇನ್ನು ಅನೇಕ ಜನರು ಸೇರಿಕೊಂಡು ಇವತ್ತು ನೂರು ಕೋಟಿ ರೂಪಾಯಿ ಹಣ ಕೊಟ್ಟು ಸಾವಿರಾರು ಎಕರೆ ಲ್ಯಾಂಡ್ ಅಕ್ವಿಸಿಷನ್ ಮಾಡಿ ಆ ಲ್ಯಾಂಡ್‌ಗಳನ್ನು ಹೌಸಿಂಗ್‌ಗೆ ಕೊಡತಕ್ಕಂಥಾದ್ದು ಅದಕ್ಕೆ ಪರಿಹಾರ ಕೊಡತಕ್ಕಂತಹ ಕೆಲಸವನ್ನು ಮಾಡಿದ್ದೇವೆ. ಈ ವರ್ಷ ಬಾಗಲಕೋಟೆಗೆ ನೂರು ಕೋಟಿ ರೂಪಾಯಿ ಹಣ ಖರ್ಚು ಮಾಡುತ್ತಿದ್ದೇವೆ. ಆ ಒಂದು ವ್ಯಾಲ್ಯುಯೇಶನ್ ಅನ್ನು ಕೂಡ ಬರೀ ಅಧಿಕಾರಿಗಳೇ ಮಾಡುತ್ತಿದ್ದಾರೆಂದು ದೊಡ್ಡ ಕೂಗು ಇತ್ತು. ಇದರಲ್ಲಿ ನಮ್ಮ ಜನತಾ ಪ್ರತಿನಿಧಿಗಳು ಇಲ್ಲ ಬರೀ ಅಧಿಕಾರಿಗಳೇ ಇದ್ದು ಅವರೇ ಮಾಡುತ್ತಾರೆ ಅವರು ಸರಿಯಾಗಿ ವ್ಯಾಲ್ಯುಯೇಷನ್ ಮಾಡುವುದಿಲ್ಲವೆಂಬ ಕೂಗು ಇತ್ತು. ಮಾನ್ಯ ಜಿ.ಟಿ.ಪಾಟೀಲ್ ಅವರು ಮಾನ್ಯ ಬಿ.ಎಸ್.ಪಾಟೀಲ್ ಜಮಖಂಡಿಯಲ್ಲಿ ನಮ್ಮ ಕಲ್ಲೂತಿಯವರು ಬಂದು ಶಾಸಕರನ್ನು ಸಮಿತಿಯಲ್ಲಿ ಹಾಕಬೇಕೆಂದು ಹೇಳಿದರು. ನಮ್ಮ ಎಲ್ಲ ಅಧಿಕಾರಿಗಳೂ ಕೂಡ ವಿರೋಧ ಮಾಡಿದರು. ಆಯಾಯ ಕ್ಷೇತ್ರದ ಶಾಸಕರು ಅಲ್ಲಿ ಇರಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಅವರು ವ್ಯಾಲ್ಯುಯೇಷನ್ ಮಾಡಲಿ ಇಲ್ಲವೇ ವ್ಯಾಲ್ಯುಯೇಷನ್ ಅನ್ನು ಒಪ್ಪಿಕೊಳ್ಳಲಿ ಇಲ್ಲವೇ ಜಾಸ್ತಿ ಇದ್ದರೆ ರಿಜಕ್ಟ್ ಮಾಡಲಿ ಸರಕಾರವೇ ಮಾಡೋಣವೆಂದು ಹೇಳಿದರು. ಅದನ್ನು ಸಹ ನಾವು ಮಾಡಿದ್ದೇವೆ. ಈ ನಮ್ಮ ಭಾಗದಲ್ಲಿ ಬಹುಶಃ ಅಷ್ಟು ಒಳ್ಳೆಯ ಕಾರ್ಯಕ್ರಮಗಳು, ಅಷ್ಟು ಒಳ್ಳೆಯ ರಿಹ್ಯಾಬಿಲಿಟೇಷನ್ ಕಾರ್ಯಕ್ರಮಗಳು ನಡೆದಿದೆ ಅಷ್ಟು

ಹಣ ಖರ್ಚು ಮಾಡಿದ್ದೇವೆಂದು ನಾನು ಅಂದುಕೊಂಡಿದ್ದೇನೆ. ನನ್ನ ರಾಜಕೀಯ ಅನುಭವದಲ್ಲಿ ನೋಡಿದರೆ ಅತ್ಯುತ್ತಮವಾದ ರಿಹ್ಯಾಬಿಲಿಟೇಷನ್ ಕಾರ್ಯಕ್ರಮವನ್ನು ಮಾಡಿದ್ದೇವೆಂದು ನನಗೆ ಅನ್ನಿಸುತ್ತದೆ. ಆ ಭಾಗದ ವಿಷಯ ಹೆಚ್ಚು ಹೊತ್ತು ಪ್ರಸ್ತಾಪ ಮಾಡುವುದಕ್ಕೆ ಹೋದರೆ ಅದು ಹಂಬ್ ಆಗುತ್ತದೆ. ನೀವು ಹಣವೆಲ್ಲವನ್ನೂ ಯುಕೆಪಿಗೆ ಹಾಕುತ್ತೀರಿ ನಮ್ಮ ಘಟಪ್ರಭಾ ಮಲಪ್ರಭಾಗೆ ಹಾಕುವುದಿಲ್ಲವೆಂದು ದೊಡ್ಡ ಕೂಗು ಇದೆ. ಮಲಪ್ರಭಾ ಮುಗಿಯಬೇಕಾದರೆ ಇನ್ನು 180 ಕೋಟಿ ರೂಪಾಯಿಗಳು ಬೇಕು. ಆ ಜಿಲ್ಲೆಯ ಎಲ್ಲಾ ಶಾಸಕರೂ ಇದ್ದಾಗ ನಾವು ಚರ್ಚೆ ಮಾಡಿದ್ದೇವೆ. 32 ಕೋಟಿ ರೂಪಾಯಿ ಹಣವನ್ನು ನಮ್ಮ ಮಾನ್ಯ ಸಿದ್ಧರಾಮಯ್ಯನವರು ಮಾಡಿದ್ದಾರೆ ಆ 32 ಕೋಟಿರೂಪಾಯಿ ಅಲೋಕೇಷನ್‌ಗೆ ಕೇಂದ್ರದಿಂದ ಬರತಕ್ಕಂತಹ ಹಣ ಹಾಕುತ್ತೇವೆಂದು ಹೇಳಿದ್ದೆವು. ಕೇಂದ್ರದಿಂದ 24 ಕೋಟಿ ರೂಪಾಯಿ ಬಂದಿದೆ 24 ಪ್ಲಸ್ 32 ಸೇರಿಸಿ ಮಲಪ್ರಭದಲ್ಲಿ ನಾವು ರೋಣದವರೆಗೆ ಕೆಲಸ ಮಾಡುತ್ತಿದ್ದೇವೆ ಉಳಿದಿರತಕ್ಕಂತಹ ಎಲ್ಲ ಕೆಲಸವನ್ನು ಮುಗಿಸುತ್ತೇವೆ. ಘಟಪ್ರಭದಲ್ಲಿ ಬೆಳಗಾಂ ಜೋನ್‌ನಲ್ಲಿ ಕೂಡ ಕೆಲಸವಾಗಿಲ್ಲವೆಂದು ಹೇಳಿದರು. ಬೆಳಗಾಂ ಜೋನ್‌ಗೆ 32 ಕೋಟಿ ರೂಪಾಯಿ ಹಣವನ್ನು ಬಡ್ಜೆಟ್‌ನಲ್ಲಿ ಇಟ್ಟಿದ್ದು ಕೇಂದ್ರದವರು 8 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಈ ಅಪ್ರೋಪ್ರಿಯೇಷನ್ ಬಿಲ್ ಪಾಸಾದ ಮೇಲೆ ಇನ್ನು ಬರುವ 6 ತಿಂಗಳಲ್ಲಿ ನಾನು ಹಣಕಾಸು ಮಂತ್ರಿಗಳ ಹತ್ತಿರ ವಿಶೇಷವಾಗಿ ಪ್ರಾರ್ಥನೆ ಮಾಡಿ ಘಟಪ್ರಭಾ ಯೋಜನೆಗೆ ಸ್ವಲ್ಪ ಹಣವನ್ನು ರೀ ಅಪ್ರೋಪ್ರಿಯೇಟ್ ಮಾಡಿ ಕೊಡಬೇಕೆಂಬ ಪ್ರಸ್ತಾವನೆಯನ್ನು ಅವರ ಅನುಮತಿ ಕೇಳಿ ಕೊಡಬೇಕೆಂಬ ಆಲೋಚನೆ ಇಟ್ಟುಕೊಂಡಿದ್ದೇನೆ. ಮಕ್ಕಳಗೇರಿ ಸಭೆಗೆ ಹೋದಾಗ ಮಾನ್ಯ ಕೌಜಲಗಿಯವರು ಕೂಡ ಅಲ್ಲಿದ್ದರು. ಅಕ್ವಿಡೇಟ್ ಇನಾಗ್ಯುರೇಷನ್‌ಗೆ ಹೋದಾಗ ಅಲ್ಲಿ ಇದ್ದರು. ಅಲ್ಲಿ ಕೂಡ ಅವರು ತೀವ್ರವಾಗಿ ನೀವು ಘಟಪ್ರಭಾವನ್ನು ನೆಗ್ಲೆಕ್ಟ್ ಮಾಡಿದ್ದೀರಿ ಇನ್ನು ಟನಲ್‌ಗಳು ಮುಗಿದಿಲ್ಲ ಅಕ್ವಿಡೇಟ್‌ಗಳು ಮುಗಿದಿಲ್ಲ ಹಣ ಕೊಡುತ್ತಿಲ್ಲ ಪೇಮೆಂಟ್ ಆಗಿಲ್ಲವೆಂದು ಹೇಳಿದರು. ಈ ವರ್ಷ 70-80 ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡುತ್ತೇವೆಂದು ಆ ಬಹಿರಂಗ ಸಭೆಯಲ್ಲಿ ಹೇಳಿದ್ದರು. ಅದರ ಪ್ರಕಾರ ಇವತ್ತು 32 ಕೋಟಿ ಮತ್ತು 8 ಕೋಟಿ ಒಟ್ಟು 40 ಕೋಟಿ ಇಟ್ಟುಕೊಂಡಿದ್ದೇವೆ. ಸ್ವಲ್ಪ ಪೆಂಡಿಂಗ್ ಬಿಲ್ಸ್ ಇದೆ. ರೀ ಅಪ್ರೋಪ್ರಿಯೇಟ್ ಮಾಡುವ ಕಾಲದಲ್ಲಿ ಆ ಕೆಲಸ ಮಾಡಿಕೊಡುತ್ತೇವೆಂದು ಹೇಳಬಯಸುತ್ತೇನೆ. ಗೋದಾವರಿ ಒಳಗೆ ನಮಗೆ 21 ಟಿ.ಎಂ.ಸಿ. ನೀರು ಇದೆ. ಬಹಳ ವರ್ಷದಿಂದ ಕಾರಂಜ ಇತ್ತು. ಅಪ್ಪರ್ ಹೌಸ್‌ಗೆ ಹೋಗಿ ಮಾನ್ಯ ಭೀಮಣ್ಣ ಖಂಡ್ರೆಯವರನ್ನು ಕೇಳಿದರೆ ತಿಳಿಯುತ್ತದೆ. . ಬಹಳ ವರ್ಷದಿಂದ ಕಾರಂಜ ಯೋಜನೆ ಆಗಿರಲಿಲ್ಲ. ಎರಡು ಬ್ರಿಡ್ಜ್ ಅನ್ನುಪೂರ್ತಿ ಮಾಡಿ 3 ನೇ ಬ್ರಿಡ್ಜ್‌ಗೆ ಶಂಕುಸ್ಥಾಪನೆ ಮಾಡಿದ್ದು ಅದೂ ಕೂಡ ಒಂದು ಲೆವೆಲ್‌ಗೆ ಬಂದಿದೆ. ಅಲ್ಲಿ ಕೂಡ 4 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಕೇಣಿ ಬ್ರಿಡ್ಜ್ ಅನ್ನು ಪೂರ್ತಿ ಮಾಡಿ ಇನಾಗ್ಯುರೇಟ್ ಮಾಡಿದ್ದೇವೆ. ಬೀದರ್ ಜಿಲ್ಲೆ

ಮಾನ್ಯ ಖರ್ಗೆಯವರ ಸ್ವಂತ ಜಿಲ್ಲೆ. ಆ ಕಾರಂಜದಲ್ಲಿ ಕಳೆದ ಎರಡು ವರ್ಷದಿಂದ ಯಾವ ರೀತಿ ಕೆಲಸಗಳು ನಿಂತು ಹೋಗಿದೆ ಎಂದು ವಿಚಾರ ಮಾಡಬೇಕು. ಕಳೆದ ಒಂದು ವರ್ಷದಿಂದ ಅಲ್ಲಿ ಯಾವ ರೀತಿ ಕೆಲಸವಾಗಿದೆ ಅದರ ಬಗ್ಗೆ ಒಂದು ಒಳ್ಳೆಯ ಮಾತು ಆಡಬೇಕಾಗಿತ್ತು. ಆ ಖೇಣಿ ಬ್ರಿಡ್ಜ್ ಮತ್ತು ಪಕ್ಕದ ಎರಡು ಬ್ರಿಡ್ಜ್‌ಗಳಲ್ಲಿ ಎಷ್ಟು ವರ್ಷಗಳಿಂದ ಅಲ್ಲಿ ನೀರು ನಿಲ್ಲಿಸುವುದಕ್ಕೆ ಆಗಿರಲಿಲ್ಲ. ಈಗ ಕಾರಂಜದಲ್ಲಿ ಕೆಲಸ ತೆಗೆದುಕೊಂಡಿದ್ದೇವೆ. ಗುರುಪಾದಪ್ಪ ಅವರ ಕ್ಷೇತ್ರದಲ್ಲಿ ಮಾಂಜ್ರದಲ್ಲಿ ನೀರನ್ನು ಉಪಯೋಗಿಸಿಕೊಳ್ಳಬೇಕೆಂಬ ಉದ್ದೇಶದಿಂದ ಇನ್‌ವೆಸ್ಟಿಗೇಷನ್ ಶುರು ಮಾಡಿದ್ದೇವೆ. ಮಾಂಜ್ರದಲ್ಲಿ ಕೂಡ ಅದನ್ನು ಉಪಯೋಗಿಸಿಕೊಳ್ಳುತ್ತೇವೆ. ಬೀದರ್ ಜಿಲ್ಲೆಯಲ್ಲಿ ಚುರಕಿನಾಳ ಇದೆ. ಈ ಸದನ ಮುಗಿದ ತಕ್ಷಣವೇ ನಾನು ಮತ್ತು ಮಾನ್ಯ ಮುಖ್ಯಮಂತ್ರಿಯವರು ಚುರಕಿನಾಳ ಇನಾಗ್ಯುರೇಷನ್‌ಗೆ ಹೋಗುತ್ತಿದ್ದೇವೆ. ಬೀದರ್ ಜಿಲ್ಲೆಯ ಸಹಸ್ರಾರು ಎಕರೆಗೆ ಇದರಿಂದ ಅನುಕೂಲವಾಗುತ್ತದೆ. ಅದು ಕೂಡ ಬಹಳ ಹಳೆಯ ಕಾಲದ್ದು. ಈಗ ಪೂರ್ತಿಯಾಗಿದೆ. ಗುಲ್ಬರ್ಗಾ, ರಾಯಚೂರು, ಬೆಳಗಾಂ, ಧಾರವಾಡ ಈ 5 ಭಾಗಕ್ಕೆ ನಾವು ಹೆಚ್ಚು ಮಹತ್ವವನ್ನು ಕೊಟ್ಟಿದ್ದೇವೆ. ಹೆಚ್ಚು ಮಹತ್ವ ಹೆಚ್ಚು ಹಣ ಕೊಟ್ಟು ಈ ವರ್ಷ, ಮುಂದಿನ ವರ್ಷದಲ್ಲಿ ಹೆಚ್ಚು ಕೆಲಸ ಮಾಡಬೇಕೆಂದು ಇದ್ದೇವೆ. ಮಾನ್ಯ ಅಲ್ಲಂ ವೀರಭದ್ರಪ್ಪ ನವರು ತುಂಗಭದ್ರ ಲೆಫ್ಟ್ ಬ್ಯಾಂಕ್ ಕೆನಾಲ್ ಬಗ್ಗೆ ಮಾತನಾಡಿದರು. ನಾವು ತ್ವರಿತಗತಿಯಲ್ಲಿ ಅಲ್ಲಿದ್ದಂತಹ ಕಾಮಗಾರಿಯನ್ನು ಮುಗಿಸಿ ಲೆಫ್ಟ್ ಬ್ಯಾಂಕ್ ಕೆನಾಲ್‌ನಲ್ಲಿ ಇನ್ ಟೈಂನಲ್ಲಿ ನೀರು ಕೊಟ್ಟಿದ್ದೇವೆ. ರೈಟ್ ಬ್ಯಾಂಕ್ ಕೆನಾಲ್‌ನಲ್ಲಿ ಅವರೇ ಹೇಳಿದ ಹಾಗೆ 10ನೇ ತಾರೀಖಿಗೆ ಕೆಲಸ ಮಾಡಿದ್ದೇವೆ. ಕಗ್ಗಲ್ಲ ಲಿಫ್ಟ್ ಇರಿಗೇಷನ್ ಅನ್ನು ಸುಮಾರು 6-7 ವರ್ಷದಿಂದ ಕೇಳುತ್ತಿದ್ದರು. ಈಗ ಟೆಕ್ನಿಕಲ್ ಸಮಿತಿಯ ಅಪ್ರೂವಲ್ ಆಗಿದೆ. ನೀವೂ ಕೂಡ ಟೆಕ್ನಿಕಲ್ ಸಮಿತಿ ಅಪ್ರೂವಲ್ ಆಗಿದೆ ಎಂದು ಒಂದು ಒಳ್ಳೆಯ ಮಾತನ್ನು ಹೇಳಲಿಲ್ಲ. ಈ ಸದನದಲ್ಲಿ ಒಳ್ಳೆಯ ಮಾತು ಬಹಳ ಮುಖ್ಯ. ಆ ಸಂಪ್ರದಾಯ ಬೆಳೆಯಬೇಕು. ಮಾನ್ಯ ಅಲ್ಲಂ ವೀರಭದ್ರಪ್ಪನವರು ಬಹಳ ವರ್ಷದಿಂದ ಕೇಳಿದಂತಹ ಆ ಲಿಫ್ಟ್ ಇರೀಗೇಷನ್‌ಗೆ ಟೆಕ್ನಿಕಲ್ ಸಮಿತಿಯ ಅಪ್ರೂವಲ್ ಆಗಿ ಎಂ.ಐ.ಪಿ.ಸಿ ಬೋರ್ಡ್ ಅಪ್ರೂವಲ್ ಆಗಿ ಸಚಿವರ ಸಂಪುಟಕ್ಕೆ ಹೋಗುತ್ತಿದೆ. ಮಾನ್ಯ ಪ್ರಕಾಶ್‌ಅವರು ಅಲ್ಲಿ ಬ್ಯಾಲೆನ್ಸಿಂಗ್ ರಿಸರ್ವಾಯರ್ ಮಾಡಬೇಕೆಂದು ಹಾಗೂ ಸಿಂಗಟಲೂರು ಲಿಫ್ಟ್ ಇರೀಗೇಷನ್ ಕಾರ್ಯಾಕ್ರಮವೆಂದು ಹಾಕಿದ್ದಾರೆ. ಮೊನ್ನೆ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ತುಂಗಭದ್ರ ರೈಟ್ ಕೆನಾಲ್‌ಗೆ ಬ್ಯಾಲೆನ್ಸಿಂಗ್ ರಿಸರ್ವಾಯರ್ ಅನ್ನು ಮತ್ತು ಆ ಲಿಫ್ಟ್ ಇರೀಗೇಷನ್ ಕಾರ್ಯಕ್ರಮಕ್ಕೆಲ್ಲ, ನಮ್ಮ ಮಾನ್ಯ ಎಸ್.ಎಸ್.ಪಾಟೀಲರ ಕ್ಷೇತ್ರವೂ ಸೇರಿ ಅಲ್ಲಿಗೆ ನಾವು ಖಾಸಗೀಯವರಿಗೆ ಕೊಟ್ಟು ಇನ್‌ವೆಸ್ಟಿಗೇಷನ್ ಎಸ್ಟಿಮೇಟ್ ಮಾಡಿಸಬೇಕೆಂಬ ನಿರ್ಣಯ ತೆಗೆದುಕೊಂಡಿದ್ದೇವೆ. ಅದು ಬಂದ ತಕ್ಷಣವೇ ಅತ್ಯಂತ ಜರೂರಾಗಿ ಕೆಲಸ ಮಾಡುತ್ತೇವೆ. ಲೆಫ್ಟ್ ಬ್ಯಾಂಕ್ ಕೆನಾಲ್‌ಗೆ ನಮ್ಮ ಮಾನ್ಯ ಮುನಿಯಪ್ಪ ಹಾಗೂ ಮಾನ್ಯ ಮುದ್ದಪ್ಪನವರ ಕ್ಷೇತ್ರದಲ್ಲಿ ನಾವು ಈಗಾಗಲೇ ಬ್ಯಾಲೆನ್ಸಿಂಗ್ ರಿಸರ್ವಾಯರ್

ಮಾಡಿದ್ದೇವೆ. 150 ಕಿಲೋಮೀಟರ್ ವರೆಗೆ ನೀರು ಹೋಗುವುದಕ್ಕೆ ಇನ್ನು 2 ತಿಂಗಳಲ್ಲಿ ಆ ಬ್ಯಾಲೆನ್ಸಿಂಗ್ ರಿಸರ್ವಾಯರ್ ಕೆಲಸ ಮುಗಿಯುತ್ತದೆ. 22 ಟಿ.ಎಂ.ಸಿ ಸಿಲ್ಟ್ ತುಂಗಭದ್ರದಲ್ಲಿ ಇದೆ ಅದಕ್ಕೇನು ಕ್ರಮ ತೆಗೆದುಕೊಂಡಿಲ್ಲವೆಂದು ಅವರು ಹೇಳಿದರು. ಅದನ್ನು ರಿಮೂವ್ ಮಾಡಬೇಕಾದರೆ 250ಕೋಟಿ ರೂಪಾಯಿ ಬೇಕಾಗುತ್ತದೆಂದು ತಾಂತ್ರಿಕ ಸಮಿತಿಯವರು ಹೇಳಿದ್ದಾರೆ. ಡ್ಯಾಂ ಹೈಟ್ ಇನ್‌ಕ್ರೀಸ್ ಮಾಡಿ ಎಂದು ಹೇಳಿದರು. ಡ್ಯಾಮ್ ಹೈಟ್ ಇನ್‌ಕ್ರೀಸ್ ಮಾಡುವ ಬಗ್ಗೆ ಅಮೆರಿಕನ್ ಎಕ್ಸ್‌ಪರ್ಟ್ಸ್‌ಗಳು ಸ್ಟಡಿ ಮಾಡಿದ್ದು ಇಟ್ ಈಸ್ ನಾಟ್ ಅಡ್ವೈಸೆಬಲ್ ಎಂದು ಹೇಳಿದ್ದಾರೆ. ಇವೆಲ್ಲವನ್ನೂ ನಾವು ಆಲೋಚನೆ ಮಾಡಿದ್ದೇವೆ. ಸೀರೀಸ್ ಆಫ್ ಮೀಟಿಂಗ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ಬಳ್ಳಾರಿಯಲ್ಲಿ ತೆಗೆದುಕೊಂಡಿದ್ದಾರೆ ಮಾನ್ಯ ಪ್ರಕಾಶ್ ಅವರು ತೆಗೆದುಕೊಂಡಿದ್ದಾರೆ ಆಗ ಮಾನ್ಯ ಅಲ್ಲಂ ವೀರಭದ್ರಪ್ಪನವರು ಕೂಡ ಬಂದಿದ್ದರು. ಬೇಕಾದಷ್ಟು ಪಿಕಪ್‌ಗಳ ತೊಂದರೆ ಇತ್ತು. ಸಿರಗುಪ್ಪ ಕಡೆಗಳಲ್ಲಿ ಎಲ್ಲ ಪಿಕಪ್‌ಗಳು ಕೆಟ್ಟು ಹೋಗಿವೆ ಅವರ ಕ್ಷೇತ್ರದಲ್ಲಿ ಮತ್ತು ಮುಂದೆ ಇರತಕ್ಕಂತಹ ಮಾನ್ಯ ಚಂದ್ರಶೇಖರ್ ಅವರ ಕ್ಷೇತ್ರದಲ್ಲಿ ಎಲ್ಲ ಪಿಕಪ್‌ಗಳ ಕೆಲಸವನ್ನು ನಾವು ಮುಗಿಸಿದ್ದೇವೆ. ತುಂಗಭದ್ರ ಎಲ್ಲ ಆಗಿದೆ. ಇನ್ನು ಭದ್ರಾ ಬಗ್ಗೆ ಉಳಿದಿದೆ. ನಾವು ಇಲ್ಲಿಯವರೆಗೆ ಅಪ್ಪರ್ ಭದ್ರವೆಂದು ಏನು ಕರೆಯುತ್ತಿದ್ದೆವು ಆ ಅಪ್ಪರ್ ಭದ್ರವನ್ನು ಮಾನ್ಯ ಬಸವರಾಜ್ ಅವರು ಹೇಳಿದ ರೀತಿ ಅದನ್ನು ತುಂಗಾ ಡೈವರ್ಷನ್ ಎಂದು ಮಾಡಿ 8 ಟಿ.ಎಂ.ಸಿ ನೀರು ಇಟ್ಟು, ಮಾನ್ಯ ನಿಜಲಿಂಗಪ್ಪನವರ ಹತ್ತಿರ ನಾವು ಮತ್ತು ನಮ್ಮ ತಾಂತ್ರಿಕ ಸಮಿತಿಯವರೆಲ್ಲಾ ಹೋಗಿ ಚರ್ಚೆ ಮಾಡಿದ್ದೇವೆ. ಇನ್ನು ಒಂದು ತಿಂಗಳಲ್ಲಿ ಪೂರ್ತಿ ಎಸ್ಟಿಮೇಟ್ಸ್ ಆಗುತ್ತದೆ. ಅಪ್ಪರ್ ಭದ್ರಾ ಬಗ್ಗೆ ತುಂಗಾ ಡೈವರ್ಷನ್ ಆಗುವ ಬಗ್ಗೆ ಮಾನ್ಯ ನಿಜಲಿಂಗಪ್ಪನವರ ಆಸೆಯಾಗಿದೆ ಅದನ್ನು ಮಾಡಬೇಕೆಂದು ಮಾನ್ಯ ಬಸವರಾಜ್ ಅವರು ಹೇಳಿದರು. ಇನ್ನು 1 ತಿಂಗಳಲ್ಲಿ ಅಂದಾಜಾಗುತ್ತದೆ ಅದು ಮುಗಿದ ನಂತರ ಇರತಕ್ಕಂತಹ ಫಾರ್ಮಾಲಿಟೀಸ್ ಮಾಡಿ ಮುಂದಿನ ವರ್ಷ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ. ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಾ ಲಿಫ್ಟ್ ಇರಿಗೇಷನ್ ಬಹಳ ವರ್ಷಗಳಿಂದ ಪೆಂಡಿಂಗ್ ಇತ್ತು. ಮಾನ್ಯ ಯಡಿಯೂರಪ್ಪನವರು ಆ ಸಭೆಗೆ ಬಂದಿದ್ದರು ಮಾನ್ಯ ಆಯನೂರು ಮಂಜುನಾಥ್ ಅವರು ಇಲ್ಲಿಯೇ ಇದ್ದಾರೆ. ಅಲ್ಲಿ ಫೌಂಡೇಷನ್ ಸ್ಟೋನ್ ಹಾಕಿದ್ದಾರೆ ಗುದ್ದಲಿ ಪೂಜೆ ಆಗಿದೆ ಅದೆಲ್ಲಾ ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ನೂರಾರು ಜನ ಬಂದು ಮೆರವಣಿಗೆ ಮಾಡಿ ಒಂದು ಮನವಿ ಪತ್ರ ಕೊಟ್ಟರು. ತದನಂತರ ಆ ತುಂಗಾ ಲಿಫ್ಟ್ ಇರಿಗೇಷನ್‌ಗೆ ಎಲ್ಲ ಕ್ರಮ ತೆಗೆದುಕೊಂಡು ಎಂ.ಐ.ಪಿ.ಸಿ. ಬೋರ್ಡಿನಲ್ಲಿ ಅಪ್ರೂವ್ ಮಾಡಿ ಪೇಪರ್ ವರ್ಕ್ಸ್ ಎಲ್ಲ ಮುಗಿಸಿದ್ದೇವೆ. ಇನ್ನು ಮುಂದೆ ಹಣವನ್ನು ಅಲೋಕೇಷನ್ ಮಾಡಿ ತುಂಗಾ ಲಿಫ್ಟ್ ಇರಿಗೇಷನ್ ಅನ್ನು ಪ್ರಾರಂಭ ಮಾಡಬೇಕೆಂದು ಇದ್ದೇವೆ. ಮಾನ್ಯ ಮಂಜುನಾಥ ಕುನ್ನೂರ್ ಅವರು ತುಂಗಾ ಮೇಲ್ದಂಡೆ ಬಗ್ಗೆ ಪ್ರಸ್ತಾಪ ಮಾಡಿದರು. ತುಂಗಾ ಮೇಲ್ದಂಡೆ ಯೋಜನೆ ನಮಗೆ ಅತ್ಯಂತ ಪ್ರಾಮುಖ್ಯವಾದಂತಹ ಯೋಜನೆಯಾಗಿದೆ. ತುಂಗಾ

ಮೇಲ್ದಂಡೆಗೆ 220 ಕೋಟಿಗೆ ಪ್ರಾರಂಭವಾಗಬೇಕಾಗಿತ್ತು. ಆದರೆ ಇವತ್ತು 680 ಕೋಟಿಯವರೆಗೆ ತುಂಗಾ ಮೇಲ್ದಂಡೆಗೆ ಖರ್ಚಾಗುತ್ತಿದೆ. 3-4 ತಾಂತ್ರಿಕ ಸಮಿತಿಯವರು ಮತ್ತು ಮಾನ್ಯ ಕೆ.ಸಿ.ರೆಡ್ಡಿ ಸಮಿತಿ ಆಲೋಚನೆ ಮಾಡಿ ಆ ಡ್ಯಾಮ್ ಮೇಲೆ ಗೇಟ್ ಹಾಕುವುದು ಸೂಕ್ತವಲ್ಲ ಡ್ಯಾಮ್ ನಿಂದ ನೂರು ಮೀಟರ್ ಕೆಳಗೆ ಹೊಸ ಪ್ಯಾರಲಲ್ ಡ್ಯಾಂ ಕಟ್ಟುವುದರಿಂದ ಅನುಕೂಲವಾಗುತ್ತದೆಂದು ಸಲಹೆ ಕೊಟ್ಟಿದ್ದಾರೆ. ಅದನ್ನು ಪ್ರಾರಂಭ ಮಾಡಿದ್ದೇವೆ. ಆ ಭಾಗದ ಎಲ್ಲ ರೈತರು ಮಾನ್ಯ ಬನ್ನಿ ಕೋಡ್ ಅವರ ನಾಯಕತ್ವದಲ್ಲಿ ಬಂದು ಮಾನ್ಯ ಮುಖ್ಯಮಂತ್ರಿಯವರನ್ನು ನೋಡಿದ್ದರು. 600 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡುವುದಕ್ಕೆ ನಿಮ್ಮಲ್ಲಿ ಬೇಕಾದ ಹಣ ಇಲ್ಲ. ಇಲ್ಲಿ 8 ಕೋಟಿ ರೂಪಾಯಿಗಳು ಇದೆ ಅದು ರಾಣಿಬೆನ್ನೂರಿಗೆ ಹೋಗಬೇಕೆಂದು ಪ್ರಸ್ತಾಪ ಮಾಡಿದ್ದೀರಿ ಈಗಾಗಲೇ ಅದು ಎಸ್ಟಿಮೇಟ್ ಆಗಿ ಫೈನಲೈಸ್ ಆಗಿದೆ.

12.00 ಪಿ.ಎಂ

0.8 ಕಿಲೋಮೀಟರ್ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಅದಕ್ಕೆ ಈಗಾಗಲೇ ತಮಗೆ ಅದು ತಿಳಿದಿರುವಂತೆ ಯಾವ ರೀತಿ ನಾವು ಯು.ಕೆ.ಪಿಗೆ ಹಣವನ್ನು ಸಂಗ್ರಹಣೆ ಮಾಡಿದ್ದೇವೆ, ಆ ರೀತಿಯೇ ತುಂಗಾ ಮೇಲ್ದಂಡೆ ಯೋಜನೆಗೂ ಸಹ ನಾವು ಹಣ ತರಬೇಕು, ಹಣವನ್ನು ಸಂಗ್ರಹಣೆ ಮಾಡಬೇಕು, ಸಂಪನ್ಮೂಲವನ್ನು ಯಾವ ರೀತಿ ಕೂಡಿಸಿಕೊಳ್ಳಬೇಕು ಎಂತಲೇ ಒಂದು ಹೈಪವರ್ ಕಮಿಟಿಯನ್ನು ಕಾನ್ಸ್‌ಟಿಟ್ಯೂಟ್ ಮಾಡಿದ್ದಾರೆ ನಮ್ಮ ಮುಖ್ಯಮಂತ್ರಿಗಳು. ನಮ್ಮ ಅಡಿಷನಲ್ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಫೈನಾನ್ಸ್ ಕಮೀಷನರ್ ಮತ್ತು ಇರಿಗೇಷನ್ ಸೆಕ್ರೆಟರಿ ಎನ್‌ವಿರೋನ್‌ಮೆಂಟ್ ಸೆಕ್ರೆಟರಿ ಈ ರೀತಿ ಉನ್ನತ ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿ ರಿಪೋರ್ಟ್ ಬಂದತಕ್ಷಣವೇ ಆ ಯೋಜನೆಗೆ ನಾವು ಯಾವ ರೀತಿ ಹಣವನ್ನು, ಸಂಪನ್ಮೂಲವನ್ನು ಕ್ರೋಢೀಕರಿಸಬೇಕು ಎನ್ನುವ ಯೋಜನೆಯನ್ನು ಹಾಕಿಕೊಂಡು ತುಂಗಾ ಮೇಲ್ದಂಡೆ ಯೋಜನೆಯನ್ನು ಎರಡು ಸಾವಿರ ವರ್ಷದ ಒಳಗಡೆ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಮ್ಮ ಯಡಿಯೂರಪ್ಪನವರ ಕ್ಷೇತ್ರದಲ್ಲಿ ಅವರು ಎರಡು-ಮೂರು ವಿಷಯಗಳನ್ನು ಬಹಳ ಪ್ರಬಲವಾಗಿ ಕೇಳಿದರು. ಅಂಜನಾಪುರ ಏನಾದರೂ ಇದ್ದುಕೊಂಡು ಹೋಗಲಿ, ಅದನ್ನೆಲ್ಲಾ ಆಲ್‌ಮೋಸ್ಟ್ ಆಲ್ ಮಾಡಿಕೊಂಡಿದ್ದಾರೆ. ಮತ್ತು ಕಲ್ಲೊಡ್ಡು ಅಂಬಲಿಗೋಳ ಎರಡರ ಬಗ್ಗೆ ಕೇಳಿದ್ದೀರಿ. ಕಲ್ಲೊಡ್ಡು ಇವತ್ತು ಎಂ.ಐ.ಪಿ.ಸಿ ಬೋರ್ಡ್‌ನಲ್ಲಿ ಕ್ಲಿಯರ್ ಆಗಿದೆ. ಅದಕ್ಕೆ ನಮ್ಮ ಸನ್ಯಾಸಿಕೊಪ್ಪಕ್ಕೆ ನಮಗೆ ಪವರ್ಸ್ ಇರುವುದರಿಂದ ನಮ್ಮ ಸಣ್ಣನೀರಾವರಿ ಮಂತ್ರಿಗಳು ನಮಗೆ ಕೊಟ್ಟಿದ್ದಾರೆ. ಮತ್ತು ಅಂಬಲಿಗೋಳದ್ದು ನೀರಿನ ವ್ಯವಸ್ಥೆ ಬಗ್ಗೆ ಪ್ರಾಬ್ಲಮ್ ಇತ್ತು ಎಂದು ಹೇಳಿದರು. ಅದನ್ನು ಟೆಕ್ನಿಕಲ್ ಕಮಿಟಿಯಲ್ಲಿ ಕ್ಲಿಯರ್ ಮಾಡಿಸಿದ್ದೇವೆ. ಇನ್ನು ಎರಡು-ಮೂರು ತಿಂಗಳಲ್ಲಿ ಕಲ್ಲೊಡ್ಡಿಗೆ ಮತ್ತೆ ಸನ್ಯಾಸಿಕೊಪ್ಪಕ್ಕೆ ನಾವು ಪ್ರಾರಂಭ ಮಾಡುತ್ತೇವೆ ಎನ್ನುವ ಮಾತನ್ನು ಯಡಿಯೂರಪ್ಪನವರಿಗೆ ಹೇಳುತ್ತೇನೆ. ಇನ್ನು ಭದ್ರಾ

ಮಾಡ್ರನೈಜೇಷನ್ ಬಗ್ಗೆ ನಾವು ಆಲೋಚನೆ ಮಾಡಿದ್ದೇವೆ. ಭದ್ರಾ ಮಾಡ್ರನೈಜೇಷನ್ ಅಪ್‌ಟು ದಾವಣಗೆರೆ, ಭದ್ರಾವತಿ ಆ ಭಾಗದ ಜನರಿಗೆ ನೀರಿಗೆ ಬಹಳ ತೊಂದರೆ ಇದ್ದುದರಿಂದ ಅನೇಕ ಕಡೆ ಕೆನಾಲ್ ಆದ್ದರಿಂದ ಭದ್ರಾ ಮಾಡ್ರನೈಜೇಷನ್ ಮಾಡಬೇಕು ಎಂದು ಹೇಳಿ 144 ಕೋಟಿ ರೂಪಾಯಿ ಯೋಜನೆ ಮೂರು ಸಾರಿ ಟೆಕ್ನಿಕಲ್ ಕಮಿಟಿಗೆ ಬಂದಿದೆ. ಕೆಲವು ತಾಂತ್ರಿಕ ವಿಚಾರಗಳ ಬಗ್ಗೆ ಸಮಸ್ಯೆ ಇದ್ದುದರಿಂದ ನೆಕ್ಸ್ಟ್ ಟೆಕ್ನಿಕಲ್ ಕಮಿಟಿಯಲ್ಲಿ ಅದನ್ನು ಕ್ಲಿಯರ್ ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಅದು 144 ಕೋಟಿ ರೂಪಾಯಿಗ ಯೋಜನೆಯನ್ನು ಭದ್ರಾ ಮಾಡ್ರನೈಜೇಷನ್‌ಗೆ ಹಾಕಿಕೊಂಡಿದ್ದೇವೆ. ಇಷ್ಟು ನಮ್ಮ ಕೃಷ್ಣ ಯೋಜನೆಯಲ್ಲಿರುವ ಮಹತ್ತರವಾದ ಕೆಲವು ಕೆಲಸಗಳನ್ನು ಮಾಡುತ್ತಾ ಇವತ್ತು ಏತನೀರಾವರಿಗೂ ಸಹಾ ಆ ಭಾಗದಲ್ಲಿ ಬಸಾಪುರ ಏತನೀರಾವರಿ ಇರಲಿ, ಯಾವುದೇ ಏತನೀರಾವರಿ ಇರಲಿ, ಆ ಏತನೀರಾವರಿಗಳಿಗೂ ಸಹ ನಾವು ಹೆಚ್ಚು ಹಣವನ್ನು ಆ ಭಾಗದಲ್ಲಿ ಬರುವ ಕೆರೆಗಳಿಗೆ ಮತ್ತು ಏತನೀರಾವರಿಗೆ ಹೆಚ್ಚು ಗಮನವನ್ನು ಕೊಟ್ಟಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಕಾವೇರಿ ಬೇಸಿನ್‌ಗೆ ಬರುವುದಾದರೆ, ಜೆ.ಹೆಚ್.ಪಟೇಲರು, ಮುಖ್ಯಮಂತ್ರಿಗಳು ನಾವೆಲ್ಲ ಹೋದಾಗ ತುಮಕೂರಿಗೆ ನೀರೇ ಬರುವುದಿಲ್ಲ ಎಂದು ಹೇಳಿದರು. ಕೆನಾಲ್ ಇಲ್ಲ, ಒಡೆದು ಹೋಗುತ್ತದೆ ಎಂದು ಹೇಳಿದರು. ನೀವು ತುಮಕೂರಿಗೆ ನೀರು ತಂದುಕೊಟ್ಟರೆ ಬಹಳ ದೊಡ್ಡ ಸಾಧನೆ ಎನ್ನುವ ಮಾತನ್ನು ಅನೇಕ ಜನ ಸ್ನೇಹಿತರು ಹೇಳಿದರು. ನಮ್ಮ ಉಪನಾಯಕರಾದ ಜಯಚಂದ್ರ ಇದ್ದಾರೆ, ನಮ್ಮ ಶಿವಣ್ಣನವರು, ಮುದ್ದ ಹನುಮೇಗೌಡರು ಇದ್ದಾರೆ, ಎಲ್ಲರೂ ಇದ್ದಾರೆ ಇಲ್ಲಿ. ಇವತ್ತು ನಾವು 122 ಕಿ.ಮೀ.ಗೆ ಬುಡುಗನಹಳ್ಳಿಗೆ ನೀರನ್ನು ಮುಟ್ಟಿಸಿ 800 ಕ್ಯೂಸೆಕ್ಸ್ ತೆಗೆದುಕೊಂಡು ಬಂದು ತುಮಕೂರಿಗೆ ನಾವು ನೀರನ್ನು ಕೊಟ್ಟಿದ್ದೇವೆ. ನಮ್ಮ ಶಿವನಂಜಪ್ಪನವರು ಇಲ್ಲೇ ಇದ್ದಾರೆ. ಬಹಳ ಜನರು ಹೇಳಿದ್ದರು, ಇದು ಆಗುವುದೇ ಇಲ್ಲ ಎಂದು. ಈಗ ಮುದ್ದಹನುಮೇಗೌಡರ ಆಸೆ 187 ಕಿ.ಮೀ.ಗೆ ಹೋಗಬೇಕು ಎಂದು. ನಾವು ಡಿಸೆಂಬರ್‌ಗೆ ಮಾಡುತ್ತೇವೆ ಎಂದು ಹೇಳಿದ್ದೆ. ಇನ್ನು ಒಂದು ತಿಂಗಳು ಅಥವಾ ಎರಡು ತಿಂಗಳು ಲೇಟ್ ಆಗಬಹುದು. ಮಾರ್ಚ್‌ಯೊಳಗಡೆ ನಾವು 187 ಕಿ.ಮೀ. ಕಾರ್ಯ ಮುಗಿಸುತ್ತೇವೆ. ತುಮಕೂರಿನಲ್ಲಿ ಇವತ್ತು 150 ಕೆರೆಗಳಲ್ಲಿ 140 ಕೆರೆಗಳಿಗೆ ನೀರು ಹೋಗಿದೆ. ಇಡೀ ನಮ್ಮ ತುಮಕೂರು ಶಾಸಕರು, ಯಾವುದೇ ಪಕ್ಷ ಇರಲಿ, ಏನೇ ಇರಲಿ, ಇಡೀ ತುಮಕೂರು ಜಿಲ್ಲೆಗೆ ನಮ್ಮ ಸರ್ಕಾರ ಕಳೆದ ಎರಡೂವರೆ ವರ್ಷದಲ್ಲಿ ಮಾಡಿರುವ ಸಾಧನೆಯನ್ನು ಅವರು ಮೆಚ್ಚುತ್ತಾರೆ ಎಂದು ಹೇಳಿ ನಾನಂದುಕೊಂಡಿದ್ದೇನೆ. ಹಾಗೆಯೇ ಮಾನ್ಯ ಸಿದ್ಧರಾಮಯ್ಯನವರ ಕ್ಷೇತ್ರದಲ್ಲಿ ನಮ್ಮ ಮಂಡ್ಯಾಕ್ಕೂ ಮತ್ತೆ ಅವರಿಗೆ ವರುಣಾ ನಾಲೆ, ಹಿಂದೆಯೂ ನಮ್ಮ ಗುರುಗಳಾದ ಕೃಷ್ಣರವರೇ ನೀರಾವರಿ ಮಂತ್ರಿ ಇದ್ದರು. ರಾಜಶೇಖರ್ ಮೂರ್ತಿ ಹಣಕಾಸಿನ ಮಂತ್ರಿಯಾಗಿಯೂ ಇದ್ದರು. ಸ್ವಾಮಿ, ಇಪ್ಪತ್ತು ವರ್ಷಗಳಿಂದ ವರುಣಾ ಬಗ್ಗೆ ಇತ್ಯರ್ಥವಾಗಿರಲಿಲ್ಲ. ಖರ್ಗೆಯವರು ಕೇಳಬೇಕು, ಅವರಿಗೆ ಈ ವಿಚಾರ ಗೊತ್ತಿದೆ. 20 ವರ್ಷದಿಂದ ಇವರು ಇತ್ಯರ್ಥ

ಮಾಡುವುದಕ್ಕಾಗಲಿಲ್ಲ. ನಾನು ಸಿದ್ಧರಾಮಣ್ಣ ಕುಳಿತು ವರುಣಾ ನಾಲೆಯನ್ನು ಎರಡು ಜಿಲ್ಲೆಯ ಶಾಸಕರೆಲ್ಲಾ ಕುಳಿತು ಇವತ್ತು ಹೆಡ್‌ವರ್ಕ್ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಎರಡು ಜಿಲ್ಲೆಗಳಿಗೆ ಬಹುಶಃ ಯಾವುದೇ ರೀತಿಯಾದಂಥ ಜಿಜ್ಞಾಸೆ ಇಲ್ಲದೆ ಇರುವ ರೀತಿಯಲ್ಲಿ ಪೂಜೆ ಮಾಡುವುದು ಒಂದೇ ಅಲ್ಲ, ಕೆಲಸ ಪ್ರಾರಂಭ ಮಾಡಿದ್ದನ್ನು ಮುಖ್ಯಮಂತ್ರಿಯವರು ನೋಡಿದ್ದಾರೆ, ನಮ್ಮ ಉಪಮುಖ್ಯಮಂತ್ರಿಯವರು ಕೂಡ ನೋಡಿದ್ದಾರೆ. ಇನ್ನು ತಾರಕ, ತಮಗೆ ಹೇಳುವುದಾದರೆ ತಾರಕ ಎಂದು ಹೇಳಿ ಬಹಳ ಜನ ಅದರ ವಿಚಾರದಲ್ಲಿ ಓಟು ತೆಗೆದುಕೊಂಡಿದ್ದಾರೆ. ಅದರ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಕೆಲಸ ಶುರುಮಾಡಿದ್ದೇವೆ 19 ಕೋಟಿ ರೂಪಾಯಿ ಯೋಜನೆಯಲ್ಲಿ ಕೆಲಸವನ್ನು ಶುರು ಮಾಡಿದ್ದೇವೆ. ಇನ್ನು ನಮ್ಮ ಈ ಭಾಗದಲ್ಲಿ ಉಳಿದಿರುವ ಸಣ್ಣಪುಟ್ಟ ಕೆಲಸಗಳು ಏನು ಇವೆ, ಅವುಗಳನ್ನು ಮಾಡಬೇಕೆನ್ನುವುದು ಅದು ಮಂಚನಬೆಲೆ ಇರಲಿ, ಅಥವಾ ವಾಟೆಹೊಳೆ ಇರಲಿ, ಅವುಗಳನ್ನು ಮುಗಿಸುವ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಕೊನೆಯದಾಗಿ ನಮ್ಮ ವಿ.ಸಿ. ಮಾಡ್ರನೈಜೇಷನ್ ಬಗ್ಗೆ ನಮ್ಮ ಸ್ನೇಹಿತರು ಪ್ರಸ್ತಾಪಮಾಡಿದರು. ನಾನು ಅವರಿಗೆ ಕೇಳುತ್ತೇನೆ, ಅವರು ಹೋಗಿ ನೋಡಿದ್ದಾರೆ, ನಮ್ಮ ನಂಜೇಗೌಡರು ಹೋಗಿ ನೋಡಿದ್ದಾರೆ, ಬೇಕಾದಷ್ಟು ನಮ್ಮ ಲೀಡರ್‌ಗಳೆಲ್ಲಾ ನೋಡಿದ್ದಾರೆ. ಒಂದನ್ನು ಅವರು ಅರ್ಥಮಾಡಿಕೊಳ್ಳಬೇಕು ನೀರಾವರಿ ಇಲಾಖೆಯ ಇತಿಹಾಸದಲ್ಲಿ 500-600 ಕೋಟಿ ರೂಪಾಯಿ ಬೆಳೆಯನ್ನು ಕಳೆದುಕೊಂಡ ರೈತರು ಕೆಲಸ ಮಾಡಿಸಿಕೊಂಡು ಸಮಾಧಾನವಾಗಿ ನೀರನ್ನು ಪಡೆದುಕೊಂಡಿದ್ದಾರಲ್ಲ, ಅದಕ್ಕೊಂದಕ್ಕೆ. ಅವರು ಮೆಚ್ಚಬೇಕಾಗಿತ್ತು ಎಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಅಲ್ಲಿ ಎಷ್ಟು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ, ಯಾವರೀತಿ ಮೂರು ವರ್ಷಗಳಲ್ಲಿ ಆಗುವ ಕೆಲಸವನ್ನು ಆರು ತಿಂಗಳಲ್ಲಿ ಮಾಡಿದ್ದಾರೆ. ಆರು ತಿಂಗಳಲ್ಲಿ ನೀರು ಕೊಟ್ಟಿಲ್ಲ ಎಂದು ಹೇಳಿದರು. ಇವತ್ತು ಎಲ್ಲ ಕಡೆ ನೀರು ಕೊಟ್ಟು ಕೆಲವು ಕೆರೆಗಳಲ್ಲಿ ಮಳೆ ಬರದೆ ಇರುವುದರಿಂದ ಸಮಸ್ಯೆ ಇದೆ. ಅದ್ದರಿಂದ ಈ ವಿ.ಸಿ. ವಿಚಾರವಾಗಿರಲಿ ಅಥವಾ ಯುಕೆಪಿ ವಿಚಾರ ಇರಲಿ, ಎರಡನ್ನೂ ಅವರು ಮೊದಲು ಪ್ರಸ್ತಾಪ ಮಾಡಿದ್ದರು. ಒಟ್ಟಾರೆ ಈ ವರ್ಷ ನಾವು 1,400 ಕೋಟಿ ರೂಪಾಯಿಗಳ ಹೆಚ್ಚು ಹಣವನ್ನು ಖರ್ಚು ಮಾಡಿ 1,50,000 ಹೆಕ್ಟೇರ್‌ಗೆ ನೀರನ್ನು ಕೊಡಬೇಕೆಂದು ಆಲೋಚನೆ ಮಾಡಿಕೊಂಡಿದ್ದೇವೆ. ಅದನ್ನು ನಾವು ಕೊಟ್ಟೇ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿ ಇವತ್ತು ನನಗೆ ಉತ್ತರವನ್ನು ಕೊಡುವುದಕ್ಕೆ ಇಷ್ಟೊಂದು ಅವಕಾಶ ಕೊಟ್ಟಿದ್ದಕ್ಕೆ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಉಪಾಧ್ಯಕ್ಷರು: ಮುಖ್ಯಮಂತ್ರಿಗಳು ರಿಪ್ಲೈ ಮಾಡಲಿ. ಅನಂತರ ತಾವು ಕೇಳಿ. ಈಗ ತಾವು ಕೇಳಿದ ಮೇಲೆ ಎಲ್ಲರೂ ಕೇಳುತ್ತಾರೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೇ, ಸಚಿವರು ಕೆಲವೊಂದು ವಿಚಾರಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ಸಮಯದ ಅಭಾವದಿಂದ ಸವಿಸ್ತಾರವಾಗಿ ಕೊಡಲಿಕ್ಕಾಗಲಿಲ್ಲ. ಆದರೂ ಅವರು ತಿದ್ದಿಕೊಳ್ಳುತ್ತಾರೆ ಎಂದು ಪುನಃ ನಾನು ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಏಕೆಂದರೆ 1997-98ರ ಪುಸ್ತಕವನ್ನು ನಮಗೆ ಕೊಟ್ಟಿದ್ದೀರಿ. ಅದರಲ್ಲಿ ಸ್ಟೇಟ್‌ಮೆಂಟ್ ನಂ.2 ರಲ್ಲಿ ಸ್ಪಷ್ಟವಾಗಿ ತಾವು ಹೇಳಿದ್ದೀರಿ ಅಲೋಕೇಷನ್ ಆದಂಥ ಎಷ್ಟು ಟಿಎಂಸಿ ನೀರು ಎಂದರೆ ಇಲ್ಲಿಯವರೆಗೆ 637ಕ್ಕೆ ಅಲೋಕೇಷನ್ ಆಗಿ ಸೆಂಟ್ರಲ್ ಗೌರ್ನಮೆಂಟ್‌ನಿಂದ ಅಪ್ರೂವಲ್ ಸಿಕ್ಕಂಥ ಕೆಲಸಗಳು, ಅದರಲ್ಲಿ ಈಗ ಆನ್‌ಗೋಯಿಂಗ್ ಪ್ರಾಜೆಕ್ಟ್ 484, ಕಂಪ್ಲೀಟೆಡ್ 108. ಅಂದರೆ ಇನ್ನು 44.94 ಯುಟಿಲೈಜೇಷನ್ ಟು ಬಿ ಕಮಿಟೆಡ್. ಹೌದಾ? ಇದನ್ನು ನೀವು ಕೊಟ್ಟಿದ್ದೇ? ಅದಕ್ಕೆ ಸಂಪೂರ್ಣ ಮಾಡಿದ್ದೇವೆ ಎನ್ನುವ ಮಾತನ್ನು ನಾನು ಏತಕ್ಕ ತಳ್ಳಿ ಹಾಕುತ್ತಿದ್ದೇನೆಂದರೆ ರೈಟಿಂಗ್‌ನಲ್ಲಿ ಕೊಟ್ಟು ಪುಸ್ತಕದಲ್ಲಿ ಹೇಳಿ ಪುನಃ ನೀವು ಪ್ರತಿಪಾದನೆ ಮಾಡುತ್ತೀರಿ, ಇದು ಸರಿಯಲ್ಲ. ಏಕೆ ಇದೇ ರಾಂಗ್ ಮೆಸೇಜ್ ಹೋಗುವುದು. ನಾವು ಸುಳ್ಳಾಡುತ್ತೇವೆ ಎನ್ನುವ ಹಾಗೆ. ಇದು ಒಂದು. ಎರಡನೆಯದು ತಮ್ಮ ಸ್ಟೇಟ್‌ಮೆಂಟ್ ನಂ.3 ತಾವು ಕೊಟ್ಟಂಥ ಪುಸ್ತಕದಲ್ಲಿ ಏಕೆಂದರೆ ಹೀಗೆ ಹೇಳಿದಿರಿ, ಪದೇ ಪದೇ ತಾವು ಯಾವಾಗಲೂ ಕೋಟಿಗಟ್ಟಲೆ ಮಾತನಾಡುತ್ತೀರಿ, ಸಾವಿರ ಕೋಟಿ, ಎರಡು ಸಾವಿರ ಕೋಟಿ, ಮೂರು ಸಾವಿರ ಕೋಟಿ, ತಮ್ಮ ಸಾವಿರ ಕೋಟಿಗೆ 1996-97ರಲ್ಲಿ 1,304 ಕೋಟಿ ರೂಪಾಯಿಗಳು ಮೇಜರ್ ಅಂಡ್ ಮೀಡಿಯಂ ಇರೀಗೇಷನ್‌ಗೆ ತಾವು ಖರ್ಚು ಮಾಡಿದ್ದೀರಿ. ಆಮೇಲೆ ತಮ್ಮ ಪೊಟೆನ್‌ಷಿಯಾಲಿಟಿ ಕ್ರಿಯೇಟೆಡ್ ಇನ್ ಹೆಕ್ಟೇರ್ ಒಂದು ವರ್ಷದಲ್ಲಿ 36 ಲಕ್ಷ ಹೆಕ್ಟೇರ್ 1995-96ರಲ್ಲಿ ತಾವು 847 ಕೋಟಿ ರೂಪಾಯಿ ಖರ್ಚು ಮಾಡಿದಿರಿ. ಏಕೆಂದರೆ ಪದೇ ಪದೇ ದೇವೇಗೌಡರ ಹೆಸರು, ನಿಮ್ಮ ಹೆಸರು ತೆಗೆದುಕೊಂಡು ಹೇಳುತ್ತಿದ್ದರಲ್ಲ, ಅದು ಕ್ರಿಯೇಟ್ ಆಗಿದ್ದು ಎಷ್ಟು 49 ಸಾವಿರ ಹೆಕ್ಟೇರ್. ಹೌದಾ? ಅನಂತರ 1993-94ರಲ್ಲಿ ಕೇವಲ 600 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 70 ಸಾವಿರ ಹೆಕ್ಟೇರ್‌ಗೆ ಮತ್ತು ಅದೇರೀತಿಯಾಗಿ Don't talk in terms of money, interms of physical target if you take 10 years figures....

(MR. SPEAKER) in the Chair,

ಅದಕ್ಕೆ ದಯಮಾಡಿ ತಾವು ಪದೇ ಪದೇ ನಾನು ಹೆಚ್ಚಿಗೆ ದುಡ್ಡು ಖರ್ಚು ಮಾಡಿದೆ ಎಂದು ಹೇಳಬೇಡಿ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಯಾವ ಕೆಲಸದ ಮೇಲೆ ಅಲ್ಲಿ ಪೊಟೆನ್‌ಷಿಯಲ್ ಕ್ರಿಯೇಟ್ ಆಗಿ ಅದಕ್ಕೆ ಹಣ ಖರ್ಚಾಗಿದೆಯೋ ಅಥವಾ

ಬೇರೆಯದಕ್ಕೆ ಹಣ ಖರ್ಚು ಮಾಡಿದ್ದಾರೆಯೋ ಎಂಬುದನ್ನು ಹಾಗೆ ಕಂಪೇರ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಇಲ್ಲಿ ಕೊಟ್ಟಂಥ ಫಿಗರ್ಸ್‌ಗಳನ್ನು ಅಳಿಸುವುದಕ್ಕಾಗುವುದಿಲ್ಲವಲ್ಲ. ಹಿಂದೆ ಕೇವಲ 200 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ 70-80 ಸಾವಿರ ಹೆಕ್ಟೇರ್ ಕ್ರಿಯೇಟ್ ಮಾಡಿದ್ದರು ಎಂದರೆ in terms of physical achievemnt is also more. ಸುಮ್ಮನೆ ನಾವು ದುಡ್ಡು ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾ ಹೋಗುವುದು ಸರಿಯಲ್ಲ.

ಶ್ರೀ ಕೆ.ಎನ್.ನಾಗೇಗೌಡ: ನನ್ನ ಅಭಿಪ್ರಾಯವೇನಮೆಂದರೆ ಹಣ ಖರ್ಚು ಮಾಡಿದ ವರ್ಷದಲ್ಲಿ ಪೊಟೆನ್‌ಷಿಯಲ್ ಕ್ರಿಯೇಟ್ ಮಾಡುವಲ್ಲಿ ನೀವು ಕಡಿಮೆ (ಹಿಂದೆ) ಇದ್ದೀರಿ ಎಂಬ ಮಾತನ್ನು ಅವರು ಹೇಳಿದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಎರಡು-ಮೂರು ವರ್ಷ ಹಿಂದಿನದನ್ನು ತೆಗೆದುಕೊಳ್ಳಿ, ಹೋದ ವರ್ಷದ್ದು ತೆಗೆದುಕೊಂಡು ನೋಡಿ.

ಶ್ರೀ ಕೆ.ಎನ್.ನಾಗೇಗೌಡ: ಕೆಲವು ಫೀಲ್ಡ್ ವರ್ಕ್ಸ್, ಫೀಲ್ಡ್ ಕೆನಾಲ್ಸ್ ಮತ್ತು ಸಿ.ಡಿ. ವರ್ಕ್ಸ್‌ಗಳಾಗದೇ ಇರುವ ಸಂದರ್ಭದಲ್ಲಿ ಸಹಜವಾಗಿ ಈ ರೀತಿ ಆಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಂತರ ನಾನು ಮತ್ತೊಂದು ಹೇಳುವುದೇನೆಂದರೆ ಈ ವರ್ಷವೂ, 1,240 ಕೋಟಿ ರೂಪಾಯಿ ಏನು ಇಟ್ಟಿದ್ದಾರೆ ಇದರಲ್ಲಿ 6 ತಿಂಗಳಲ್ಲಿ ಇಲ್ಲಿಯವರೆಗೆ ಖರ್ಚಾಗಿರುವುದು ಕೇವಲ 380 ಕೋಟಿ ರೂಪಾಯಿಗಳು ಮಾತ್ರ. ಇದು ನೀವು ಫರ್ನಿಶ್ ಮಾಡಿದಂಥ ಫಿಗರ್ಸ್. ಇವೊತ್ತು ಅವರು ಇದರ ಬಗ್ಗೆ ಏನೂ ಹೇಳಿಲ್ಲ. ರಿಹೆಬಿಲಿಟೇಶನ್‌ನಲ್ಲಿ ಇನ್ನೂ ಅಕ್ವಿಜಿಷನ್‌ಗೆ ಇಟ್ಟಿದ್ದೇವೆ ಎನ್ನುತ್ತಾರೆ. ನಾನು ಏತಕ್ಕೆ ಹೇಳುತ್ತೇನೆ ಎಂದರೆ ನೀವು ಅದರ ಬಗ್ಗೆ ತಿಳಿದುಕೊಂಡು ಆಗಿಲ್ಲದಿದ್ದರೆ ಆಗಿಲ್ಲ ಎಂದು ಹೇಳಿ; ಆದರೆ ಪದೇ ಪದೇ ಅದನ್ನೇ ಹೇಳಿಕೊಂಡು ನಾನು ಇಷ್ಟು ಖರ್ಚು ಮಾಡಿದೆ, ಅಷ್ಟು ಖರ್ಚು ಮಾಡಿದೆ ಎಂದು ಹೇಳಿದರೆ ಅದು ಅಷ್ಟೇನೂ ಸಮಂಜಸವಾಗುವುದಿಲ್ಲ. ಆನಂತರ ನಾನು ಸ್ಪಷ್ಟವಾಗಿ ಹೇಳಿದೆ ವಿಸಿ ನಾಲೆಯ ಬಗ್ಗೆ ಮತ್ತು ತುಂಡು ಗುತ್ತಿಗೆದಾರರ ಬಗ್ಗೆ ನೀವು ಒಂದು ಎನ್‌ಕ್ವಯರಿ ಇನಿಷಿಯೇಟ್ ಮಾಡಿ ಲೋಕಾಯುಕ್ತಕ್ಕೆ ರೆಫರ್ ಮಾಡಿ ಎಂದು. ಏಕೆಂದರೆ ರಾತ್ರೋರಾತ್ರಿ ಎರಡೇ ದಿವಸಗಳಲ್ಲಿ ಅದು ಆಗಿದೆ. ಅದಕ್ಕೆ ನೀವು ಇದನ್ನೇ ಮಾಡದೇ ಹೋದರೆ ರಾಂಗ್ ಮೆಸೇಜ್ ಹೋಗುತ್ತದೆ ಎಂದು ಹೇಳಿದೆ.

+ ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಅಂದರೆ ಏನು, ಕಾನ್ವರ್ಜೆಶನ್ ಮಾಡಿಕೊಳ್ಳುತ್ತಾ ಹೋಗುವುದೋ ಅಥವಾ ಸುಮ್ಮನೆ ಹಾಗೆಯೇ

ಹೇಳುವುದೊ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಮಗೆ ಇದರಲ್ಲಿ ಇಂಟರೆಸ್ಟ್ ಇಲ್ಲ ಎಂದಾಯಿತು ಅಥವಾ ನೀವು ಹೇಳುತ್ತೇನೆ ಎಂದರೆ ನಾನು ಕೇಳುತ್ತೇನೆ.

ಶ್ರೀ ಜೆ.ಹೆಚ್.ಪಟೇಲ್: ಅವರು ಸರ್ಕಾರ ಎಂದರೆ ಏನು ತಿಳಿದುಕೊಂಡಿದ್ದಾರೆ. ಸರ್ಕಾರ ಎಂದರೆ ಮನೆಯಲ್ಲಿ ಯಜಮಾನಿಕೆ ಮಾಡತಕ್ಕಂಥ ಒಂದು ವ್ಯವಸ್ಥೆ ಎನ್ನಬಹುದು. ಮನೆಯ ಪರಿಸ್ಥಿತಿ ಯಾವ ರೀತಿ ಇದೆ, ಅದರ ಹಣಕಾಸಿನ ಪರಿಸ್ಥಿತಿಯ ಹೊಂದಾಣಿಕೆ ಪರಸ್ಪರ ಸ್ನೇಹ, ಸಹಕಾರ ಇವೆಲ್ಲಾ ಇರಬೇಕಾಗುತ್ತದೆ. ಒಂದು ಮನೆ ಚೆನ್ನಾಗಿದೆ ಎಂದರೆ ಏನು? ಅದಕ್ಕೆ ಒಂದು ಕವಿತೆ ಇದೆ. ''ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನದೊಳಗೆ ವಿಷಯ ತುಂಬಿ, ತನುವಿನೊಳು ವಿಷಯ ತುಂಬಿ ಮನೆಯೊಳಗೆ ಮನೆಯೊಡೆಯನಿದ್ದಾನೋ, ಇಲ್ಲವೊ.'' ಇವೊತ್ತು ನಾವು ಸರ್ಕಾರವನ್ನು ಹೇಗೆ ನಡೆಸಬೇಕೆಂದು ಹೇಳಿ. ನಮ್ಮ ಹೊಸ್ತಿಲಲ್ಲಿ ಹುಲ್ಲು ಹುಟ್ಟಿದ್ದರೆ ನೀವು ಸರಿಯಾಗಿ ಕಸ ತೆಗೆದಿಲ್ಲ ಎಂದು ಅರ್ಥ. ನಮ್ಮ ಮನೆಯಲ್ಲಿ ಅಂದರೆ ರಾಜ್ಯದಲ್ಲಿ ಶಾಂತಿ ಇಲ್ಲ ಎಂದರೆ ಕಾನೂನು ಮತ್ತು ಸುವ್ಯವಸ್ಥೆ, ಶಿಕ್ಷಣ, ಆರೋಗ್ಯ, ನೀರಾವರಿ, ವಿದ್ಯುಚ್ಛಕ್ತಿ ಇವುಗಳ ಬಗ್ಗೆ ಏನು ಮಾಡಿದ್ದೇವೆ ಎಂಬುದನ್ನು ಕೇಳಿ. ಅವರು ಇಷ್ಟು ಹೊತ್ತಿನವರೆಗೆ ಇದನ್ನು ಮಾಡಿದ್ದೇವೆ ಎಂದು ಹೇಳಿದರು. ನೀವು ಹುಡುಕುವುದೆಲ್ಲಿ ಎಂದರೆ ಹಣ ಇಷ್ಟು ಖರ್ಚು ಮಾಡಿದ್ದೀರಿ ಪೊಟೆನ್‌ಷಿಯಲ್ ಆಗಿಲ್ಲ ಎಂದರೆ ಇದು ಮತ್ತು ಅದು ಪೊಟೆನ್‌ಷಿಯಲ್ ಸೇರಿ ಇನ್ನೂ ಒಂದು ವರ್ಷವಾಗಬಹುದು. ಇದು ನೀರಾವರಿ ಸಚಿವರಿಗೆ ಗೊತ್ತಿದೆ. ಅದಕ್ಕೆ ಪ್ರತಿಯೊಂದು ಹಂತದಲ್ಲಿ ತಾವು ಪ್ರಶ್ನೆ ಕೇಳಬೇಕಾದುದು ಅಥವಾ ನಮ್ಮಲ್ಲಿ ತಪ್ಪಿದ್ದರೆ ತಿದ್ದಬೇಕಾದುದು ತಮ್ಮ ಕರ್ತವ್ಯ. ಅದನ್ನು ಒಪ್ಪಿಕೊಳ್ಳಬೇಕಾದುದು ನಮ್ಮ ಕರ್ತವ್ಯ. ಒಂದು ವೇಳೆ ಈಗ ರಾಜ್ಯದ ಹಿತದೃಷ್ಟಿಯಿಂದ ಶ್ರೀ ಯಡಿಯೂರಪ್ಪನವರು ಯಾವುದಾದರೂ ಮಾತನ್ನು ಹೇಳಿದರೆ ಅವರು ಬಿಜೆಪಿಯವರು, ಅವರ ಮಾತನ್ನು ನಾವು ಏತಕ್ಕೆ ಕೇಳಬೇಕು ಎಂದೇನೂ ಅಲ್ಲ. We welcome such suggestions. ಅದಕ್ಕೆ ನಾನು ಮೊದಲನೆಯದಾಗಿ ಅವರು ಹೇಳಿರತಕ್ಕಂಥ ಎಲ್ಲಾ ಮಾತುಗಳನ್ನೂ ಕೇಳಿದ್ದೇನೆ. ಇವೊತ್ತು ಗೃಹ ಇಲಾಖೆಯ ಬಗ್ಗೆ, ಅಬಕಾರಿ ಖಾತೆಯ ಬಗ್ಗೆ, ಕೆಇಬಿ ಬಗ್ಗೆ, ಕೆಪಿಸಿ ಬಗ್ಗೆ ನಾನು ಓದಿ ಹೇಳುವುದು ಬೇಕಾಗಿಲ್ಲ, ಹಾಗೆಯೇ ಹೇಳುತ್ತೇನೆ. ನಾವು ಆರೋಗ್ಯ ಮತ್ತು ಶಿಕ್ಷಣ ಖಾತೆಯಲ್ಲಿ ಈ ವರ್ಷ ಮಾಡಿರುವ ಸಾಧನೆ ಇಡೀ ಪ್ರಪಂಚಕ್ಕೆ ಕಾಣಿಸುತ್ತದೆ ಆದರೆ ಇವರಿಗೆ ಕಾಣುವುದಿಲ್ಲ. ಅದಕ್ಕೆ ನಾನು ಹೇಳುವುದು ಏನೆಂದರೆ ತಾವು ಟೀಕೆ ಮಾಡಬೇಕು ನಿಜ ಟೀಕೆ ಮಾಡಬೇಕು ಎಂದರೆ ಬೇಸಿಕಲಿ ನಮ್ಮ ಪಾಲಿಸಿಯಲ್ಲಿ ಏನಾದರೂ ತಪ್ಪಿದೆಯೆ. ಈಗ ಈ ಬಗ್ಗೆ ನಾನು ಫೈನಾನ್ಸ್ ಮಿನಿಸ್ಟರ್ ಅವರನ್ನು ಕೇಳಿದೆ, ಅವರು ನಾವು 9ನೇ ಯೋಜನೆಯ ಮೊದಲ ವರ್ಷದಲ್ಲಿ 4,455 ಕೋಟಿ ರೂಪಾಯಿಯ ಯೋಜನೆ ತಯಾರಿಸಿದ್ದು 9ನೇ ಯೋಜನೆಗೆ ಒಟ್ಟು 23,400 ಕೋಟಿ ರೂಪಾಯಿಗಳೆಂದು ನಿಗದಿ ಮಾಡಿದ್ದೇವೆ. ಆದರೆ ಯಾವುದೇ ಒಂದು

ಎಕನಾಮಿಕಲ್ ಹೆಲ್ತನ್ನು ನೋಡಬೇಕಾದರೆ ನಾವು ಏನು ಪ್ಲ್ಯಾನ್ ಮಾಡಿದ್ದೇವೆ, ಏನು ಅಚೀವ್ ಮಾಡಿದ್ದೇವೆ ಅಥವಾ ನಾವು ಏನು ಸಾಲ ತಂದಿದ್ದೇವೆ, ಸಾಲ ತೀರಿಸುವುದಕ್ಕೆ ಏನು ಕೊಡುತ್ತಿದ್ದೇವೆ ಎಂಬುದನ್ನು ಗಮನಿಸಬೇಕು. ಈಗ ನಾನು ಭಾರತ ಸರ್ಕಾರದ ಬಗ್ಗೆ ಅಥವಾ ಪಕ್ಷದ ರಾಜ್ಯದ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಹೇಳುವುದಕ್ಕೆ ಹೋದರೆ ಅದು ಬಹಳ ದೊಡ್ಡ ಕಥೆಯಾಗುತ್ತದೆ. ನಾವು ಇವೊತ್ತು ಎಲ್ಲೂ ಸಾಲ ಮಾಡದೆ, ಯಾರಿಗೂ ಬಡ್ಡಿ ತೆರದೆ ಬಹಳ ಚೆನ್ನಾಗಿದ್ದೇವೆ ಎಂದು ಅಲ್ಲ. ನಾವು ನಮ್ಮಷ್ಟಕ್ಕೆ ನಮ್ಮ ಕಾಲಮೇಲೆ ನಾವು ನಿಂತಿದ್ದೇವೆ. ನಾವು ಸಾಲ ಮಾಡಿ ಹೋಗಲಿಲ್ಲ. ಸಾಲ ಮಾಡಿ ಬಡ್ಡಿ ತೆರತಕ್ಕಂಥ ಜವಾಬ್ದಾರಿ ನಮಗೆ ಕೊಟ್ಟು ಹೋದವರು ಬೇರೆ. ಇವೊತ್ತು ನಾವು ಏನು ಮಾಡುತ್ತಿದ್ದೇವೆ ಎಂದರೆ ಸಾಲ ಮಾಡುತ್ತಿಲ್ಲ, ಏನೂ ಮಾಡುತ್ತಿಲ್ಲ, ನನ್ನಷ್ಟಕ್ಕೆ ನಾನು ನೌಕರರಿಗೆ ಸಂಬಳ ಕೊಡುವಷ್ಟಾದರೂ ನನಗೆ ಶಕ್ತಿ ಇದೆ. ಕೇವಲ ನೌಕರರಿಗೆ ಸಂಬಳ ಕೊಡುವುದಷ್ಟೇ ಸರ್ಕಾರದ ಕೆಲಸವಲ್ಲ, ಇನ್ನೂ ಬೇರೆ ಬೇರೆ ಕೆಲಸಗಳೂ ಸರ್ಕಾರಕ್ಕಿರುತ್ತವೆ. ಸಮಾಜದಲ್ಲಿ ಏನು ಕೆಲಸ ಮಾಡಬೇಕು, ದೀನದಲಿತರಿಗಾಗಿ ಏನು ಕೆಲಸ ಮಾಡಿದ್ದೇವೆ, ಶೆಡ್ಯೂಲ್ ಕ್ಯಾಸ್ಟ್/ಶೆಡ್ಯೂಲ್ ಟ್ರೈಬ್ಸ್ ಗಳಿಗಾಗಿ ಏನು ಮಾಡಿದ್ದೇವೆ ಅದನ್ನಾದರೂ ನೀವು ತೆರೆದ ಮನಸ್ಸಿನಿಂದ ನೋಡಿ. ನೀವು ನಮ್ಮನ್ನು ಹೊಗಳುವುದು ಬೇಡ, ಹೌದು ಮಾಡಿದ್ದೀರಿ ಎಂದು ಹೇಳುವುದೂ ಬೇಡ. ಸುಮ್ಮನೆ ಮಾಡಿದ್ದರೂ ಮಾಡಲಿಲ್ಲ ಎಂದು ಹೇಳುವುದು ಬೇಡ. ಅದಕ್ಕಾಗಿ ನಾನು ಮಾನ್ಯ ವಿರೋಧ ಪಕ್ಷದನಾಯಕರಿಗೆ ಮತ್ತು ಎಲ್ಲಾ ಮಾನ್ಯ ಸ್ನೇಹಿತರಿಗೂ ಹೇಳುವುದಿಷ್ಟೆ. ನಾನು ಮಾನ್ಯ ನಂಜೇಗೌಡರು ಮಾತನಾಡುತ್ತಾರೆ ಎಂದು ತಿಳಿದಿದ್ದೆ. ಆದರೆ ಅವರು ಏತಕ್ಕೊ ಈ ಸಲ ಬೇಜಾರು ಮಾಡಿಕೊಂಡು ಮಾತನಾಡಲಿಲ್ಲ. ನಾನು ಈಗ ಫಂಕ್ಷನಲ್ ಆಗಿ ರಿಪ್ಲೆ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ನಂಜೇಗೌಡರಿಗೆ ಮಾತನಾಡಿ ಎಂದು ಹೇಳಿದೆ. ಅದಕ್ಕೆ ಅವರು ಏನೂ ಸಾಧನೆ ಇಲ್ಲ, ಸುಮ್ಮನೆ ಪಟೇಲರ ಸರ್ಕಾರಕ್ಕೆ ಬಯ್ಯಬೇಕು, ಅದಕ್ಕೆ ಮಾತನಾಡಲಿಲ್ಲ ಎಂದರು.

ಶ್ರೀ ಜೆ.ಹೆಚ್.ಪಟೇಲ್: ಹಾಗಲ್ಲ, ಅವರು ಓಪನ್ ಆಗಿ ಮಾತನಾಡಿ ಇಂತಿಂಥದ್ದು ಒಳ್ಳೆಯದನ್ನು ಮಾಡಿದ್ದೀರಿ ಎಂದು ಹೇಳುತ್ತಿದ್ದರು. ಅವರಲ್ಲಿ ಅಷ್ಟಾದರೂ ದೊಡ್ಡಸ್ತಿಕೆ ಇದೆ. ನೀವಿಬ್ಬರೂ ಇದ್ದೀರಲ್ಲಾ ಮಾನ್ಯ ಖರ್ಗೆಯವರು ಮತ್ತು ಯಡಿಯೂರಪ್ಪನವರು ಯಾವ ರೀತಿ ಎಂದರೆ ಹಿಂದೆ ಕುಸ್ತಿ ಆಗಬೇಕಾದರೆ ಕಚ್ಚೆ ಹಿಡಿಯಬೇಡ ಎಂದು ನಿಯಮವಿತ್ತು. ನಿಜವಾಗಿ ಕುಸ್ತಿ ಆಡಬೇಕಾದರೆ ಕಚ್ಚೆ ಹಿಡಿಯದೆ ಹೊಡೆಯಬೇಕು. ಆದರೆ ನೀವು ಕಚ್ಚೆ ಹಿಡಿದೇ ಕುಸ್ತಿ ಹೊಡೆಯುವುದಕ್ಕೆ ಹೋಗುತ್ತೀರಿ. ಅದಕ್ಕಾಗಿ ನೀರಾವರಿ ಬಗ್ಗೆ ಮಂತ್ರಿಗಳು ಹೇಳಿದ್ದಾರೆ, ಹಣಕಾಸಿನ ಬಗ್ಗೆ ಹಣಕಾಸು ಮಂತ್ರಿಗಳು ಆಗಲೇ ಮಾತನಾಡಿದ್ದಾರೆ. We are surplus ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಸ್ವಸಾಮರ್ಥ್ಯದಿಂದ ಸ್ವಂತ ಕಾಲ ಮೇಲೆ ನಿಲ್ಲುವಷ್ಟರಮಟ್ಟಿಗೆ

ಹಣಕಾಸನ್ನು ಹೊಂದಿಸಿಕೊಂಡಿದ್ದೇವೆ. ಅನಂತರ ಪ್ಲ್ಯಾನ್‌ನಲ್ಲಿ ಎಷ್ಟು ಇಂಪ್ಲಿಮೆಂಟ್ ಮಾಡಿದ್ದೇವೆ, ಏನು ಕೆಲಸ ಆಗಿದೆ ಎಂಬುದನ್ನು ನೋಡಿ. ನಾನು ಅಲ್ಲಿ ಕೊಲೆ ಆಗಿಲ್ಲ, ಇಲ್ಲಿ ದರೋಡೆ ಆಗಿಲ್ಲ ಎಲ್ಲಾ ಶಾಂತವಾಗಿದೆ ಎಂದು ಹೇಳುವುದಿಲ್ಲ. ಸಮಾಜದಲ್ಲಿ ಅಶಾಂತಿ ಇದೆ, ದೇಶದಲ್ಲಿ ಅಶಾಂತಿ ಇದೆ, ಬಡತನ, ನಿರುದ್ಯೋಗ ಎಲ್ಲಿಯವರೆಗೆ ಹೆಚ್ಚುತ್ತಾ ಹೋಗುತ್ತದೆ ಅಲ್ಲಿಯವರೆಗೆ ಈ ಕ್ರೈಂ ರೇಟ್ ಇನ್‌ಕ್ರೀಸ್ ಆಗುತ್ತದೆ. ಇದು ಸತ್ಯಾಂಶ. ಇದನ್ನು ನಾವು ಯಾರೂ ತಡೆಹಿಡಿಯುವುದಕ್ಕಾಗುವುದಿಲ್ಲ. ಆದರೆ ಎಷ್ಟರಮಟ್ಟಿಗೆ ಸಮಾಜದ ರಕ್ಷಣೆಯನ್ನು ಮಾಡುವುದರಲ್ಲಿ ಸರ್ಕಾರದಿಂದ ಕರ್ತವ್ಯ ಲೋಪವಾಗಿದೆಯೆ. ಅಥವಾ ರಕ್ಷಣೆ ಮಾಡಿಯೂ ಕೂಡ ಕೆಲವು ಪೀಪಲ್ಸ್ ವಾರಗ್ರೂಪ್‌ನವರು ಬಂದು ಪಾವಗಡದಲ್ಲಿ ಗುಂಡುಹಾರಿಸಿ ಹೋಗುತ್ತಾರೆ, ಆಂಧ್ರ ಪ್ರದೇಶದಲ್ಲಿರತಕ್ಕಂಥ ರೌಡಿಗಳು ತಮಿಳುನಾಡು, ಮಹಾರಾಷ್ಟ್ರದ ಬೊಂಬಾಯಿಯಿಂದ ಬಂದಿರತಕ್ಕಂಥ ರೌಡಿಗಳು ಕರ್ನಾಟಕದ ಜನ ಬಹಳ ಸಂಪನ್ನರು, ಯೋಗ್ಯರು, ಇವರಿಗೆ ತಕ್ಷಣ ಸಿಟ್ಟು ಬರುವುದಿಲ್ಲ ಎಂದು ತಿಳಿದುಕೊಂಡು ಇಲ್ಲಿಗೆ ಬರುತ್ತಾರೆ. ಹಿಂದೆ ಹಾಗಿತ್ತು ಎಂದು ಇವೊತ್ತು ನಾನು ಹೇಳಬಹುದು. ನಾನು ಮಾನ್ಯ ಖರ್ಗೆಯವರಿಗೆ ಬೇಕಾದರೆ ಕ್ರೈಂ ರೇಟ್ ಪಟ್ಟಿಯನ್ನೇ ಕೊಡುತ್ತೇನೆ. 1991-92, 1993-94, 1994-95ರಲ್ಲಿ ನಿಮ್ಮ ಸರ್ಕಾರ ಇದ್ದಾಗ ಹೇಗಿತ್ತು ಎಂದು ಹೇಳಿಬಿಟ್ಟರೆ ನನಗೆ ಸಮಾಧಾನ ಎಂದು ಅಲ್ಲ. ನಿಮ್ಮ ಕಾಲದಲ್ಲೂ ಕ್ರೈಂ ಇತ್ತು, ಮರ್ಡರ್ ಇತ್ತು. ಸಮಾಜದಲ್ಲಿ ಬಂದಿರುವ ಈ ವಿಷ ಹಲವಾರು ಕಾರಣದಿಂದ ಹೊರಬರುತ್ತದೆ. ಅದನ್ನು ನಾವು ಎಷ್ಟರಮಟ್ಟಿಗೆ ತಡೆಯುತ್ತೇವೆ ಎಂಬುದನ್ನು ನೋಡಬೇಕೇ ಹೊರತು ನಾವು ಕಂಪ್ಲೀಟ್ ಆಗಿ ಪ್ರಿವೆಂಟ್ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಹೇಳಬಹುದು ರಾಮರಾಜ್ಯ ಮಾಡುತ್ತೇವೆ ಎಂದು. ಈಗಿರತಕ್ಕಂಥ ದೇಶದ ಆಂತರಿಕ ಪರಿಸ್ಥಿತಿಯಲ್ಲಿ ಆ ರೀತಿ ಪೋಲೀಸ್ ಸ್ಟೇಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸುಖೀರಾಜ್ಯವೂ ಇಲ್ಲ, ಪೋಲೀಸ್ ಸ್ಟೇಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸುಖೀರಾಜ್ಯವೂ ಇಲ್ಲ, ಪೋಲೀಸ್ ಸ್ಟೇಟ್ ಮಾಡುವುದಕ್ಕೂ ಆಗುವುದಿಲ್ಲ. ಅಂಥ ಸ್ಥಿತಿಯಲ್ಲಿ ನಾವಿದ್ದೇವೆ. ಕೆಲವು ಭಾವನೆಗಳಿಂದ ಇವೊತ್ತು ವಿನಾಕಾರಣ ಅಂಬೇಡ್ಕರ್ ಅವರ ಪ್ರತಿಮೆಗೆ ಮಹಾರಾಷ್ಟ್ರದಲ್ಲಿ ಅವಮಾನವಾದಂಥದ್ದು, ಬೀದರ್‌ನಲ್ಲಿ ಹೊಡೆದಾಟವಾದರೆ ಜಗಳವಾದರೆ, ಮೈಸೂರಿನಲ್ಲಿ ಜಗಳವಾದರೆ ಅಂಬೇಡ್ಕರ್‌ರವರಿಗೆ ಶಾಂತಿಯಾಗುತ್ತದೆಯೆ? ಬಸವೇಶ್ವರರ ಪ್ರತಿಮೆಗೆ ಅವಮಾನವಾಯಿತು ಎಂದು ಅದಕ್ಕೆ ಒಂದು ದಂಗೆ ಏಳುತ್ತದೆ. ಮೂರ್ತಿಪೂಜೆ ಮಾಡಬಾರದು ಎಂಬುದೇ ಅಂಬೇಡ್ಕರ್‌ರವರ ತತ್ವ. ಬುದ್ಧಿಸಂನ ಬೇಸಿಕ್ ಪ್ರಿನ್ಸಿಪಲ್ ನೀವು ಐಡಲ್ ವರ್ಶಿಪರ್ಸ್ ಆಗಬಾರದು ಎಂದು. ಅದೇ ರೀತಿ ಅಂಬೇಡ್ಕರ್, ಬಸವೇಶ್ವರರ ಹೆಸರನ್ನು ಹೇಳಿಕೊಂಡು ಐಡಲ್ ವರ್ಶಿಪ್ ಮಾಡುತ್ತಾರೆ. ಆತ ಯಾವ ತತ್ವಕ್ಕೋಸ್ಕರ ಹೋರಾಡಿದ, ಆತ ಹೇಳಿದ್ದೇನು. ಮೊದಲನೆಯದಾಗಿ ಬುದ್ಧ ಏನು ಹೇಳಿದ್ದಾನೆ ಎಂದರೆ ಬುದ್ಧಂ ಶರಣಂ ಗಚ್ಛಾಮಿ, ಎರಡನೆಯದಾಗಿ ಸಂಗಂ ಶರಣಂ ಗಚ್ಛಾಮಿ, ಕೊನೆಯದಾಗಿ ಧರ್ಮಂ ಶರಣಂ ಗಚ್ಛಾಮಿ ಎಂಬುದು. ಆ

ಮಹಾತ್ಮನ ಹೆಸರನ್ನು ಹೇಳಿಕೊಂಡು ಈ ರೀತಿ ಅಪಚಾರ ಮಾಡುತ್ತಾರೆ. ಅದನ್ನು ನಾವು ಇವತ್ತು ಹೆಲ್ಪ್‌ಲೆಸ್ಸಾಗಿ ನೋಡುತ್ತಿದ್ದೇವೆ. ಆ ಭಾವನೆಗಳು ಆ ಹುಡುಗರಲ್ಲಿ ಕೆರಳದಂತಹ ವಿದ್ಯಾಭ್ಯಾಸ ಕೊಟ್ಟು, ಅಂಬೇಡ್ಕರ್ ಅವರದೇ ಒಂದು ಘಟನೆ ನನಗೆ ಓದಿದ ನೆನಪು. ಬ್ರಿಟೀಷರ ರೂಲ್ ಇದ್ದಾಗ ಲಾಲಾ ಲಜಪತರಾಯರನ್ನು ಗಡೀಪಾರೋ ಏನೋ ಮಾಡಿರುತ್ತಾರೆ, ಆಗ ಅವರು ಲಂಡನ್‌ನಲ್ಲಿ ಇರುತ್ತಾರೆ. ದಿವಸವೆಲ್ಲ ಒಬ್ಬ ಇಂಡಿಯನ್ ಹುಡುಗ ಲೈಬ್ರರಿಯಲ್ಲಿ ಓದುತ್ತಿರುತ್ತಾನೆ, ಆಗ ಇವರೇ ಹೋಗಿ ಕೇಳುತ್ತಾರೆ: ಏನಪ್ಪ ನಿನ್ನ ಹೆಸರು? ನನ್ನ ಹೆಸರು ಅಂಬೇಡ್ಕರ್. ಎಲಾ ಇಷ್ಟೊಂದು ಆಸಕ್ತಿಯಿಂದ ನೀನು ಬಂದು ಓದುತ್ತಿದ್ದೆಯಲ್ಲ, ದೇಶದ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡು. ನಿಮ್ಮಂಥವರು ಮಾಡಬೇಕು. ಆಗ ಅಂಬೇಡ್ಕರ್ ಹೇಳುತ್ತಾರೆ: ನಾನೀಗ ವಿದ್ಯಾರ್ಥಿ, ವಿದ್ಯಾರ್ಜನೆ ನನ್ನ ಮುಂದಿರತಕ್ಕದ್ದು, ಈ ಹೊತ್ತು ನಾನು ದೇಶದ್ದು ಅದೂ ಇದೂ ಎಂದು ಹೋಗೋಲ್ಲ ಆದರೆ ನಾನು ದೇಶಕ್ಕೋಸ್ಕರ ಹೋರಾಟ ಮಾಡುತ್ತೇನೆ. ನನ್ನ ದೇಶದ ರಕ್ಷಣೆ ನಾನು ಮಾಡುತ್ತೇನೆ. ಆದರೆ ಈಗ ನಾನು ಏನು ಓದಬೇಕೆಂದು ಇದ್ದೇನೆಯೋ ಅದನ್ನು ಕಂಪ್ಲೀಟ್ ಮಾಡುತ್ತೇನೆ ಎಂದು ಲಾಲಾ ಲಜಪತರಾಯ್‌ಗೆ ಅಂಬೇಡ್ಕರ್ ಲಂಡನ್‌ನಲ್ಲಿ ಹೇಳುತ್ತಿರುತ್ತಾರೆ. ಈಗಿರುವ ಹುಡುಗರು ತಮ್ಮ ಮುಂದಿರುವುದೇನು, ತಮ್ಮ ಗಮನ ಏನು, ಎತಕ್ಕೆ ಹೋಗಬೇಕು, ದೇಶ ಕಟ್ಟಲಿಕ್ಕೆ ಅಥವಾ ಸಮಾಜವನ್ನು ಕಟ್ಟಲಿಕ್ಕೆ, ದಲಿತರ ಬಗ್ಗೆ ಆಗಲಿ, ಹಿಂದುಳಿದವರ ಬಗ್ಗೆ ಆಗಲಿ, ಮೇಲ್ಜಾತಿಯವರೇ ಆಗಲಿ ಆ ಘರ್ಷಣೆಗಳನ್ನು ಮಾಡದಂತೆ ಇವತ್ತು ನಾವು ಹೇಗೆ ಹೋಗಬೇಕು ಎನ್ನುವ ಬಗ್ಗೆ ನಾವೂ ನೀವೂ ಎಲ್ಲ ಸೇರಿ ಇದಕ್ಕೊಂದು ರೂಪ ಕೊಡದಿದ್ದರೆ ಕಷ್ಟ. ಇಲ್ಲದೇ ಹೋದರೆ, ತಾವೆಲ್ಲ ಒಪ್ಪುವುದಾದರೆ ಒಂದು, ಈ ಪ್ರತಿಮೆಗಳನ್ನು ಎಲ್ಲೂ ಬಹಿರಂಗವಾಗಿ ಇಡುವುದು ಬೇಡ. ಅವರಿಗೆ ಅವಮಾನವಾಗುವುದೂ ಬೇಡ, ಸಮಾಜಕ್ಕೆ ಧಕ್ಕೆ ಆಗವುದೂ ಬೇಡ. ಬಸವೇಶ್ವರರದು ಬೇಡ, ಅಂಬೇಡ್ಕರದೂ ಬೇಡ, ಮಹಾತ್ಮ ಗಾಂಧೀದೂ ಬೇಡ. ಬಯಲಿಟ್ಟು ಬಿಡೋಣ. ಅದನ್ನಾದ್ರೂ ಮಾಡೋಣ. ಯಾರೋ ಕಿಡಿಗೇಡಿಗಳು, ಸುಮ್ಮನೆ, ಅವನಿಗೇನೂ ಊರಲ್ಲಿ ಕೆಲಸ ಇರುವಂಗಿಲ್ಲ, ಎಲ್ಲೋ ಯಾವನೋ ಸಾಲ ಕೊಟ್ಟಿರುವುದಿಲ್ಲ ಅವನ ಮೇಲೆ ಸಿಟ್ಟಿರುತ್ತದೆ. ಅದಕೊಂದು ಅಂಬೇಡ್ಕರ್ ಹೇಳುವುದು, ಅದಕ್ಕೊಂದು ಬಸವೇಶ್ವರ ಹೇಳೋದು. ಇದೇನು, ಎಂಥಾ ಸ್ಥಿತಿಗೆ ನಾವು ಬಂದಿದ್ದೇವೆ. ನೋಡುತ್ತಾ ಅಸಹಾಯಕರಾಗಿ ಕುಳಿತಿದ್ದೇವೆ. ಆದ್ದರಿಂದ ಇದನ್ನು ಹೆಚ್ಚು ಹರಡುವುದಕ್ಕೆ ಬಿಡಬಾರದು. ಅಧ್ಯಕ್ಷರೇ ತಾವು ಒಪ್ತೀರಿ. ಹರಡುವುದಕ್ಕೆ ಬಿಡದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ ಇವತ್ತು. ಬರೀ ಪೊಲೀಸ್ ಹಾಕಿ ಹೋಗಿ ಹೊಡೆದುಬಂದುಬಿಡ್ರೋ ಎಂದು ಹೇಳೋದಲ್ಲ. ಅದರಿಂದ ಏನೂ ಆಗೋದಿಲ್ಲ. ಮತ್ತಷ್ಟು ರಕ್ತಪಾತ ಆದ ಹಾಗೆಲ್ಲ ಅದರಿಂದ ವಿಕಾರ ಭಾವನೆಗಳು ಹುಟ್ಟುತ್ತವೆ. ಇನ್ನು ವಾಸ್ತವಿಕವಾಗಿ ನಾವು ಎಂತಹ ಕಡೆ ಅವರನ್ನು ರಕ್ಷಣೆ ಮಾಡಬೇಕು. ಮೊನ್ನೆ ಕೋಲಾರ ಜಿಲ್ಲೆಯಲ್ಲಿ ಆಯಿತು. ಅವತ್ತು ನಾನು

ವಸ್ತುಸ್ಥಿತಿಯನ್ನು ಕೇಳಿದೆ. ಅಲ್ಲಿ ಪೊಲೀಸರು ಮೂರು ಜನ ಸತ್ತರು. ಪೊಲೀಸೇನಾದರೂ ಗೋಲಿಬಾರ್ ಮಾಡಿದ್ದರೆ ಹತ್ತಾರು ಜನ ಸಾಯುತ್ತಿದ್ದರು. ಮತ್ತು ಯಾವ ವರ್ಗದವರ ಮೇಲೆ ಆಕ್ರಮಣ ನಡೆಯಬೇಕೂಂತಿತ್ತೋ ಅದು ನಡೆಯುತ್ತಿತ್ತು. ಇದು ವಸ್ತುಸ್ಥಿತಿ. ಅದನ್ನು ತಡೆಯುವುದಕ್ಕೋಸ್ಕರ ಪೊಲೀಸರು ಎಂಥಾ ತ್ಯಾಗ ಮಾಡಿದ್ದಾರೆ. ಅದರ ಬಗ್ಗೆ ಒಂದು ಒಳ್ಳೆಯ ಮಾತಿಲ್ಲ. ಒಳ್ಳೆಯ ಮಾತಿದ್ದರೆ ಅದನ್ನು ಕೇಳಿ ಸಂತೋಷಪಡುತ್ತೇನೆ ಎಂದು ಅಲ್ಲ. ಆಮೇಲೆ ಕೆಲವು ಮರ್ಡರ್‌ಗಳ ಬಗ್ಗೆ ಹೇಳಿದರು. ಕೊಲೆಗಳು ಏಕೆ ಆಗುತ್ತವೆ? ಯಾರೋ ಹುಚ್ಚರು ಮೇನಿಯೇರ್ಸ್ ಸುಮ್ಮನೆ ಕೊಲ್ಲೋದು. ಅವನ್ಯಾರೋ ದಿಲ್ಲಿಯಲ್ಲಿದ್ದನಲ್ಲ ಮೇನಿಯೇಕ್ ಅಂತ. ವೈಯಕ್ತಿಕ ಕಾರಣಗಳಿಗೋಸ್ಕರ ಇರಬಹುದು. ನಮ್ಮಲ್ಲಿ ಮೊದಲಿಂದ ಗಾದೆ ಇದೆ. ಹೆಣ್ಣು, ಹೊನ್ನು, ಮಣ್ಣಿಗೋಸ್ಕರ ಈ ದ್ವೇಷಗಳು ಹುಟ್ಟುತ್ತವೆ. ಯಾವ್ಯಾವ ಊರಿನಲ್ಲಿ ಯಾವ್ಯಾವ ಕಾರಣಕ್ಕಾಗಿ ದ್ವೇಷ ಇದೆ ಎಂದು ಪೊಲೀಸರು ಹುಡುಕಿಕೊಂಡು ಹೋಗುವುದಕ್ಕೆ ಆಗುತ್ತದೆಯೇ? ನಾನು ಹೇಳುವುದು, ಅಸಹಾಯಕರ ಮೇಲೆ ಯಾರಾದರೂ ದರೋಡೆಕೋರರು ಬಂದು ಕೊಂದರೆ ಆಗ ಸರ್ಕಾರಕ್ಕೆ ಅವರನ್ನು ರಕ್ಷಣೆ ಮಾಡುವ ಹೊಣೆ. ಯಾವುದೋ ಕಾರಣಕ್ಕೋಸ್ಕರ ಕೊಲೆ ಸುಲಿಗೆಗಳಾದರೆ ಪರ್ಸನಲ್ ದ್ವೇಷಗಳಿಗೋಸ್ಕರ ಆದರೆ, ಅದನ್ನು ಹೇಗೆ ತಡೆಯೋದು? ಅದು ಕಡಿಮೆಯಾಗಬೇಕಾದರೆ ಒಂದು ವಾತಾವರಣವೇ ಬೇರೆ ರೀತಿ ಇರಬೇಕು ರಮೇಶ್‌ಕುಮಾರ್. ಕೊಲಂಬಿಯಾದಂತಹ ದೇಶಗಳು ಕೊಲೆಗಾರರನ್ನೇ ಸೃಷ್ಟಿಮಾಡುತ್ತವೆ. ಮರ್ಸಿ ನರೀಸ್. ಯಾರನ್ನಾದರೂ ನೀವು ತೆಗೆಸಬೇಕೂಂದರೆ ಅದಕ್ಕೋಸ್ಕರವೇ ಅವರದು ಕಸುಬು. ಆದ್ದರಿಂದ ಕಸುಬುದಾರಿ ಕೇಡಿಗಳಾರು, ರೌಡಿಗಳಾರು, ವೈಯಕ್ತಿಕ ಕಾರಣಗಳಿಗಾಗಿ ಆಗುವ ಕ್ರೈಮ್‌ಗಳು ಯಾವುವು, ಅವನ್ನು ತಡೆಯೋದು ಹೇಗೆ? ಸಮಾಜದಲ್ಲಿ ಶಾಂತಿ ಸ್ಥಾಪನೆ ಮಾಡುವುದಕ್ಕೆ ಸರ್ಕಾರ ಏನು ಮಾಡಬೇಕು? ಇಡೀ ಸಮಾಜದಲ್ಲಿ ಅಶಾಂತಿ ಇದ್ದು ಎಲ್ಲರೂ ಅಗ್ನಿಪರ್ವತದಂತೆ ಇದ್ದರೆ ಪೊಲೀಸರು ಅದರ ಮೇಲೆ ಕುಳಿತುಕೊಂಡು ಇರುವುದಕ್ಕಾಗುತ್ತದೆಯೇ? ಬಹಳ ಉತ್ತಮವಾದ ಮಾರ್ಕ್ಸ್‌ನ ತತ್ವ ಇದೆ That Government is best which governs least. ಏಕೆಂದರೆ ಮಾರ್ಕ್ಸ್‌ವಾದದಲ್ಲಿ ಕೊನೆಗೆ ಅವನು ಟಿಲ್ಲಿಗೆ ಬರುತ್ತಾನೆ ಅಂದರೆ ಪ್ರತಿಯೊಬ್ಬ ವ್ಯಕ್ತಿಯೂ ತಾನೇ ಸರ್ಕಾರವಾಗಬೇಕು. ಸರ್ಕಾರ ಹೋಗಿಬಿಡಬೇಕು. Withering of the State, ತಾನೇ ಸರ್ಕಾರವಾಗಬೇಕು ತಾನೇ ತನ್ನನ್ನು ನಿಯಂತ್ರಿಸಿಕೊಳ್ಳಬೇಕು. ಆದರೆ, ಈಗ? ಅಧ್ಯಕ್ಷರೇ ತಾವು ಒಪ್ಪೀರಿ ಇವತ್ತು ಪ್ರತಿಯೊಂದಕ್ಕೂ ವ್ಯಕ್ತಿಗತವಾದ, ಅಥವಾ ಜಾತಿ ಹೆಸರು ಅಥವಾ ಸಣ್ಣ ಆಸ್ತಿ ಹೆಸರು ಇದರಲ್ಲಿ ದ್ವೇಷ ಎಷ್ಟು ಹೆಚ್ಚುತ್ತಾ ಇದೆ ಅಂದರೆ ಬಸವಣ್ಣನವರು ದೇವರನ್ನು ಏನು ಕೇಳಿಕೊಳ್ಳುತ್ತಾರೆ? ನನಗೆ ಆಸ್ತಿಕೊಡು, ಪಾಸ್ತಿ ಕೊಡು ಎಂದು ಕೇಳೋಲ್ಲ ಆಸೆ, ಆಮಿಷ, ತಾಮಸ, ಹುಸಿ ವಿಷಯ, ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ ಇವನೆನ್ನ ನಾಲಿಗೆಯ ಮೇಲಿಂದತ್ತ ತೆಗೆದು ಕಳೆಯಯ್ಯ, ಅದೇಕೆಂದೊಡೆ ನಿಮ್ಮತ್ತ ಬರಲೆನ್ನ ಅವು

ಬಿಡವು. ದೇವರನ್ನ ಕೇಳೋದೆ ಈ ಕೆಟ್ಟ ಗುಣಗಳನ್ನು ನನ್ನಿಂದ ತೆಗೆದುಬಿಡು. ಈಗ ಇವನ್ನೇ ಬೇಕೆಂದು ಕೇಳುವ ಪರಿಸ್ಥಿತಿ ಇದೆ. ಬೇರೆ ಏನೂ ಬೇಡ, ಬರೀ ಇವನ್ನೇ ಕೊಟ್ಟುಬಿಡಪ್ಪ ನನಗೆ ಎನ್ನುವಂಥ ಈ ಸ್ಥಿತಿ ಇದೆ. ಅದಕ್ಕೆ ನಾವು ಇವತ್ತು ಯಾವುದೇ ಹೆಸರಿನಲ್ಲಿ ಧರ್ಮದ ಹೆಸರಿನಲ್ಲಾಗಲಿ ದಲಿತರ ಹೆಸರಿನಲ್ಲಾಗಲಿ ಅಥವಾ ಯಾವುದೇ ಸಣ್ಣ ಸಣ್ಣ ಭೇದಗಳನ್ನು, ಒಂದು ಸಾಮಾಜಿಕವಾಗಿ ಜವಾಬ್ದಾರಿ ಇರುವವರು ಕೆಲಸ ಮಾಡುವುದು ಸರ್ಕಾರದ ಮಟ್ಟದಲ್ಲಿ, ಸಾಮಾನ್ಯ ಮನುಷ್ಯರು ತಡೆಯೋಕೆ ಆಗದೇ ಇರುವಂತಹ ರೌಡಿ ಎಲಿಮೆಂಟ್ಸ್ ಏನಿದ್ದಾರೆ ಅವನ್ನು ಸರ್ಕಾರ ನಿಭಾಯಿಸಬೇಕಾಗುತ್ತದೆ. ಅಂತೂ ಒಳ್ಳೆಯ ವಾತಾವರಣಕ್ಕಾಗಿ ನಾವೆಲ್ಲ ಶ್ರಮಿಸಿದರೆ ಏನಾದರೂ ಮಾಡುವುದಕ್ಕೆ ಸಾಧ್ಯವೇ ಹೊರತು ಸರ್ಕಾರವೇ ಎಲ್ಲ ಮಾಡುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಈಗ ಜಪಾನ್‌ನವರ ಹತ್ತಿರ ಆಟಂಬಾಂಬ್ ಇಲ್ಲ, ವಾಟಾಳ್‌ರವರೇ. ಆದರೂ ಅವರು ಹೆದರುವುದಿಲ್ಲ. ನಾವು ಸುಕಾಸುಮ್ಮನೆ ಹೆದರಿಕೊಂಡು ಪಾಕಿಸ್ತಾನ ಎಲ್ಲಿ ನಮ್ಮ ಮೇಲೆ ಬಂದುಬಿಡುತ್ತದೆಯೋ ಎಂದು ಹೆದರಿಕೊಂಡು ಇವತ್ತು 27 ಪರ್ಸೆಂಟ್ ರಕ್ಷಣೆಗಾಗಿ ಖರ್ಚುಮಾಡುತ್ತಿದ್ದೇವೆ; ಸುಮಾರು 7 ಲಕ್ಷ ಕೋಟಿಯಲ್ಲಿ. ಜಪಾನ್‌ನವರು ಯಾವ ಬಾಂಬ್‌ಗೂ ಹೆದರುವುದಿಲ್ಲ ಯಾವ ಸೈನ್ಯಕ್ಕೂ ಹೆದರುವುದಿಲ್ಲ. ಪಾಪ ನೋಡೋಕೆ ಸಣ್ಣ ದೇಶ ಅವರ ಆತ್ಮವಿಶ್ವಾಸ ಏನೂಂದರೆ ಈ ಹಿಂಸೆ ಬಾಂಬ್‌ಗಳಿಂದ ಜಗತ್ತು ಏನೂ ಆಗುವುದಿಲ್ಲ, ಪಾಕಿಸ್ತಾನದಲ್ಲಿರುವ ಸರ್ಕಾರ ಏನು ಮಾಡುತ್ತದೆ ಅಂದರೆ ಅಲ್ಲಿನ ಜನರನ್ನು ಕೆರಳಿಸುವುದಕ್ಕೆ ಏನು ಬೇಕು, ನೋಡು ಇಂಡಿಯಾದಿಂದ ಮಿಸ್ಸೈಲ್ ಬಿಟ್ಟಿದ್ದಾನೆ, ಆಟಂಬಾಂಬ್ ರೆಡಿ ಇದೆ ಎಂದು ಆ ಸರ್ಕಾರ ಆ ದೇಶದ ಜನರಿಗೆ ತಪ್ಪುದಾರಿಗೆ ಎಳೆಯುತ್ತಿಲ್ಲವೇ ಹಣ ಖರ್ಚು ಮಾಡುವುದಕ್ಕೆ ಯಾವರೀತಿ ದುರುಪಯೋಗ ಮಾಡಬೇಕೋ ಆ ರೀತಿ ಪಾಕಿಸ್ತಾನ ಸರ್ಕಾರ ಮಾಡುತ್ತದೆ. ಪಾಕಿಸ್ತಾನ ಸರ್ಕಾರ ಹೀಗೆ ಮಾಡಿತು, ಅಂದ ತಕ್ಷಣ ನಮ್ಮ ಸರ್ಕಾರಗಳು ಅರೆ ನಾವು ರೆಡಿಯಾಗಿರಬೇಕು ಸದಾ ಸಿದ್ಧರಾಗಿರಬೇಕು ಆಟಂಬಾಂಬ್ ರೆಡಿಯಾಗಿರಬೇಕು ಹಿಂಗಾಗಿ ವಿನಾಕಾರಣ ಭೀತಿ ಆಕ್ರಮಣದ ಮಾತಿನಲ್ಲೇ ನಾವು ಬಡತನದಲ್ಲಿದ್ದೇವೆ.

12.30 ಪಿ.ಎಂ

ನಮಗೆ ಯಾವುದೇ ಬಾಂಬ್ ಬೇಡ, ಹಾಗೆಯೇ ಸಾಯುವಂತಿದ್ದೇವೆ. ಇವೊತ್ತು ದೇಶವನ್ನು ಸಮೃದ್ಧಿಗೊಳಿಸುವ ದಿಶೆಯಲ್ಲಿ ಚಿಂತನೆ ನಡೆಯಬೇಕು. ಇವೊತ್ತು ಈ ರಾಷ್ಟ್ರದ ಎಲ್ಲಾ ವಿಚಾರವನ್ನು ಹೇಳುವುದಕ್ಕೆ ಹೋಗಬಾರದೆಂದು ಹೇಳುತ್ತೀರಿ, ಆಯಿತು, ಬೇಡ. ಈ ರಾಜ್ಯದ ಲಾ ಅಂಡ್ ಆರ್ಡರ್ ಕುರಿತು ಹೇಳುವುದಾದರೆ ಅಲ್ಲಿ ಇಲ್ಲಿ ಆಗತಕ್ಕಂಥ ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿದರೆ ರೈತರದಾಗಲಿ, ಹಿಂದು-ಮುಸ್ಲಿಮರದಾಗಲಿ, ದಲಿತರು, ಸವರ್ಣೀಯರದಾಗಲಿ ರಾಜ್ಯ ಸರ್ಕಾರ ತಡೆಹಿಡಿಯುವುದಕ್ಕೆ ಆಗದಿರುವಂಥ ಘಟನೆ ಏನೂ ನಡೆದಿಲ್ಲ. ಅಲ್ಲಲ್ಲಿ ಸಣ್ಣಪುಟ್ಟ

ಗಲಾಟೆಗಳಾಗಿವೆ. ಬೆಂಗಳೂರು ನಗರದಲ್ಲಿರುವ ಚೈನ್ ಸ್ನ್ಯಾಚರ್ಸ್, ಪಾಕೆಟ್ ಪಿಕ್ಕರ್ಸ್, ಇವರುಗಳನ್ನೆಲ್ಲಾ ಒಂದೇ ಸಾರಿ ಜನತಾ ದಳ ಸರ್ಕಾರ ಬಂದ ತಕ್ಷಣ ಮಹಾರಾಷ್ಟ್ರಕ್ಕೆ ತೆಗೆದುಕೊಂಡು ಹೋಗಿ ಬಿಟ್ಟು ಬರುವುದಕ್ಕೆ ಸಾಧ್ಯವಿದೆಯೇ? ಅವರುಗಳು ಇಲ್ಲಿ ಸಿಕ್ಕಿದಂತೆ ಅವರುಗಳನ್ನೆಲ್ಲಾ ಬೋನಿನಲ್ಲಿ ಹಿಡಿದುಕೊಂಡು ಹೋಗಿ ಮುಂಬಯಿಯಲ್ಲಿ ಬಿಟ್ಟು ಬರುತ್ತಿದ್ದೆವು. ಅದು ಆಗುವುದಿಲ್ಲ. ಅವರು ಎಲ್ಲಿಯೋ ಬದುಕಿಕೊಂಡಿರುತ್ತಾರೆ, ಸಮಾಜದ ಕವಚದಲ್ಲಿ ಎಲ್ಲಿಯೋ ಒಂದೆಡೆ ಇರುತ್ತಾರೆ. ನಾವು ದಿನನಿತ್ಯ ಸಮಾಜದಲ್ಲಿ ಸ್ವಲ್ಪವಾದರೂ ಅವೇರ್‌ನೆಸ್ ತರಬೇಕು. ಇದಕ್ಕೆ ತಾವು ಸಹಕಾರ ಕೊಡಬೇಕು. ಏನೂ ಆಗಿಲ್ಲವೆಂದರೆ, ಕರ್ನಾಟಕದಲ್ಲಿ ಏನೇ ಅರಾಜಕತೆ ಮಾಡಿದರೂ ನಡೆಯುತ್ತದೆ ಎನ್ನುವ ರೀತಿಯಲ್ಲಿ ಮಾತನಾಡಬೇಡಿ. ನಾವು ತಮಿಳುನಾಡಿಗಿಂತ, ಆಂಧ್ರಪ್ರದೇಶಕ್ಕಿಂತ ಬಹಳ ಉತ್ತಮ ಸ್ಥಿತಿಯಲ್ಲಿದ್ದೇವೆ. ಕಾಡುಗಳ್ಳ ವೀರಪ್ಪನ್ ಇವೊತ್ತು ಸರಿಯಾದ ಮಾರ್ಗಕ್ಕೆ ಬರಲಿ ಎನ್ನುವ ಉದ್ದೇಶದಿಂದ ಸೂಕ್ತ ಕ್ರಮ ಕೈಗೊಂಡಿದ್ದೇವೆ. ನಮ್ಮ ಮನಸ್ಸು ಶುದ್ಧವಾಗಿದೆ ಬುದ್ಧಿ ಪ್ರಾಮಾಣಿಕವಾಗಿದ್ದೇವೆ. ವೀರಪ್ಪನ್‌ಗೆ ಶರಣಾಗಿ ಎಂದರೆ ಆತನಿಗೆ ಯಾರು ಶರಣಾಗುತ್ತಾರೆ? ನಮ್ಮ ರಾಜ್ಯಕ್ಕೆ ಅವನ ನೆರಳು ಬೀಳುವುದು ಬೇಡ, ಆತ ತಮಿಳುನಾಡಿದಲ್ಲೇ ಸುಖವಾಗಿ ಸಂಸಾರ ಮಾಡಿಕೊಂಡು ಅಲ್ಲಿಯೇ ಇದ್ದುಬಿಡಲಿ. ನಮ್ಮ ರಾಜ್ಯದ ಎಂಟು ಅರಣ್ಯ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳ ಜೀವ ಹೋಗಬಾರದೆಂಬ ಒಂದೇ ಕಾರಣಕ್ಕೋಸ್ಕರ ಆ ಕಾರ್ಯ ಸಾಧಿಸಿದ್ದೇವೆ. ಅದಕ್ಕೂ ಮಲ್ಲಿಕಾರ್ಜುನ ಖರ್ಗೆಯವರು ಸಭಾತ್ಯಾಗ ಮಾಡಿದರು.

ಅಧ್ಯಕ್ಷರು: ಸಭಾತ್ಯಾಗ ಮಾಡಿದವರು ವಾಟಾಳ್ ನಾಗರಾಜ್‌ರವರು, ಈ ಆಪಾದನೆಯನ್ನು ನೀವು ಮಲ್ಲಿಕಾರ್ಜುನ ಖರ್ಗೆಯವರ ಮೇಲೆ ಹಾಕಿದರೆ I will have to come to the rescue of the Hon'ble Leader of Opposition.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾನು ಸೌಮ್ಯವಾಗಿ ಕುಳಿತಿದ್ದೇವೆ. ನಮಗೂ ನಿಮಗೂ ಎತ್ತಿ ಕಟ್ಟುತ್ತಿದ್ದಾರೆ ನೋಡಿ.

ಶ್ರೀ ಜೆ.ಹೆಚ್.ಪಟೇಲ್: ಅವರೂ ನಾವೂ ಬಹಳ ಹತ್ತಿರ, ನಮಗೇನೂ ಅವರು ದೂರವಿಲ್ಲ. ತಾವು ಅಬ್ಜೆಕ್ಟೀವ್ ಆಗಿ ನೋಡಿ, ನಾವು ಯಾವ ಉದ್ದೇಶದಿಂದ ಮಾಡಿದ್ದೇವೆಂಬುದನ್ನು ನೋಡಿ. ನಾನು ಈಗ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಮಾತ್ರ ಹೇಳುತ್ತೇನೆ. ಏಕೆಂದರೆ ಈ ಇಲಾಖೆ ನಮಗೆ ಬಹಳ ಮುಖ್ಯವಾಗಿದ್ದು ಸರ್ಕಾರದಿಂದ ಸಮಾಜ ಕಲ್ಯಾಣದಲ್ಲಿ ಆರೋಗ್ಯ ಸುಧಾರಣೆ, ಶಿಕ್ಷಣದ ಬಗ್ಗೆ ಏನು ಮಾಡಿದ್ದೇವೆಂದು ಹೇಳುತ್ತೇನೆ. ನಾವು ಕಳೆದ ವರ್ಷ ನೀರಾವರಿಗೆ 1,340 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ, ಈ ವರ್ಷ 1,400 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಇದಕ್ಕಿಂತಲೂ ಪ್ರಾಮುಖ್ಯವಾಗಿ

ನಮ್ಮಲ್ಲಿರತಕ್ಕಂಥ ಅನಕ್ಷರತೆ, ಅನಾರೋಗ್ಯ ಪರಿಹರಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಹಮ್ಮಿಕೊಂಡರೆ ಸಮಾಜದಲ್ಲಿ ಸ್ವಯಂ ಶಕ್ತಿ ಬಂದು ಅವರೇ ತಮ್ಮ ಶಕ್ತಿಯನ್ನು ಉತ್ಪಾದಿಸಿಕೊಳ್ಳುತ್ತಾರೆ. ವಸ್ತುತಃ ಆತ ಆರೋಗ್ಯ ಹೇಗೆ ಕಾಪಾಡಿಕೊಳ್ಳಬೇಕು, ಆತನನ್ನು ಆರೋಗ್ಯವಂತನನ್ನಾಗಿ, ಬುದ್ಧಿವಂತನನ್ನಾಗಿ ಹೇಗೆ ಮಾಡಬೇಕೆನ್ನುವ ಬಗ್ಗೆ ವಿಚಾರ ಮಾಡಬೇಕು. ಆತ ಹಾಗೆಯೇ ಇರಬೇಕು, ನಾವು ಯಾವಾಗಲೋ ಒಂದು ಚೂರು ಎಸೆದು ಬಿಟ್ಟರೆ ಆತ ಅದನ್ನು ತೆಗೆದುಕೊಂಡು ಸಂತೋಷ ಪಡುತ್ತಾನೆಂದರೆ ಒಬ್ಬ ಫ್ರೆಂಚ್ ಅರ್ಥ ಶಾಸ್ತ್ರಜ್ಞ ಏನು ಹೇಳುತ್ತಾನೆ ಎಂದರೆ, ಮೊದಲು ಜನರಿಗೆ ಸಮುದ್ರದಲ್ಲಿ ಮೀನು ಹಿಡಿಯುವುದನ್ನು ಕಲಿಸು, ಆನಂತರ ಅವರೇ ತಮ್ಮ ಜೀವನದ ಮಾರ್ಗ ಕಂಡುಕೊಳ್ಳುತ್ತಾರೆಂದು. ಮೀನು ಹಿಡಿದುಕೊಂಡು ಅವರ ಮನೆ ಬಾಗಿಲಿಗೆ ಹೋಗಿ 'ಗರೀಬಿ ಹಠಾವೋ' ಎಂದು ಕರೆದು ಒಂದು ಮೀನು ಎಸೆದರೆ ಬಡತನ ಹೋಗುತ್ತದೆಯೇ? ಇಪ್ಪತ್ತು ಅಂಶಗಳ ಕಾರ್ಯಕ್ರಮದ ಒಂದು ಮೀನನ್ನು ಎಸೆದುಬಿಟ್ಟರೆ ಜನ ಉದ್ಧಾರವಾಗುವುದಿಲ್ಲ. ಅವರಿಗೆ ಸಮುದ್ರದಲ್ಲಿ ಮೀನು ಹಿಡಿಯುವ ಕಲೆ ಕಲಿಸಬೇಕು. ಇವೊತ್ತು ಸಮಾಜ ಕಲ್ಯಾಣ ಇಲಾಖೆಯಿಂದ ಕುರಿ ಕೊಡುತ್ತೇವೆ, ಕೋಳಿ ಕೊಡುತ್ತೇವೆಂದರೆ, ಒಂದೇ ಹಸುವನ್ನು ನಾಲ್ಕು ಜನರು ತೋರಿಸಿ ಸಾಲ ತೆಗೆದುಕೊಂಡು ಮತ್ತೆ ಆ ಹಸು ಯಾರ ಮನೆಗೆ ಹೋಗಬೇಕೋ ಅವರ ಮನೆಗೆ ಹೋಗುತ್ತದೆ. ಈ ರೀತಿ ಇವರು ಸಾಲ ಮೇಳ ಮಾಡಿದ್ದು, ಜನರನ್ನು ಉದ್ಧಾರ ಮಾಡಿದ್ದುದು. ಇಲಾಖೆಯಲ್ಲಿ ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್ ಇದ್ದು, ತೆಂಗಿನ ಸಸಿಗಳನ್ನು ವಿತರಿಸುವ ಕೆಲಸಕ್ಕೆ ಬಾರದ ಕಾರ್ಯಕ್ರಮವಿದ್ದು, ಇದರಲ್ಲಿ ದುಡ್ಡೆಲ್ಲವನ್ನೂ ಹಾಳು ಮಾಡಿದರೂ ತೆಂಗಿನ ಸಸಿಗಳು ಫಲಾನುಭವಿಗಳಿಗೆ ತಲುಪಿಲ್ಲ. ಅದರ ಕಡೆಗೆ ಯಾರೂ ನೋಡಿಲ್ಲ. ಇದರಲ್ಲಿ ಒಂದಿಬ್ಬರು ಪುಡಾರಿಗಳು ಸೇರಿಕೊಂಡು ತಿಂದುಬಿಟ್ಟರು. ಇದಕೋಸ್ಕರ ಕಳೆದ ವರ್ಷ 415 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ನೀವು ಕುರಿ, ಕೋಳಿಯನ್ನು ಕೊಡಬೇಡಿ, ನೀವು ಕೊಟ್ಟ ತೆಂಗಿನ ಗಿಡಗಳು ಒಂದೂ ಇಲ್ಲ, ಎಲ್ಲಾ ಹಾಳಾಗಿವೆ. ಈ ಹಣದಲ್ಲಿ ವಿದ್ಯಾಭ್ಯಾಸ, ಎರಡನೆಯದಾಗಿ ಆತನ ಜಮೀನಿಗೆ ಸ್ವಲ್ಪ ನೀರು, ಮೂರನೆಯದಾಗಿ ಆತನಿಗೆ ವಾಸಿಸಲು ಒಂದು ಮನೆ, ಇಷ್ಟಕ್ಕೆ ಮಾತ್ರ ಒದಗಿಸಿಕೊಡಿ. ಸ್ವಾತಂತ್ರ್ಯ ಬಂದು ಐವತ್ತು ವರ್ಷವಾದ ನಂತರವೂ ನಾವು ಇನ್ನೂ ಕುರಿ, ಕೋಳಿ ಕೊಡುತ್ತೇವೆಂದರೆ ಮರ್ಯಾದಸ್ತರಿಗೆ ಮುಖ ತೋರಿಸುವುದಕ್ಕಾಗುತ್ತದೆಯೇ? ಸಿಂಗಾಪುರ್‌ಗೆ, ಮಲೇಷಿಯಾಗೆ ಹೋಗಿ ಹೇಳುವುದಕ್ಕಾಗುತ್ತದೆಯೇ? ನಮ್ಮ ಮುಂದೆ ಜನ್ಮ ತಾಳಿದ ಶಿಶು ರಾಷ್ಟ್ರಗಳು ಅವು. 10-14 ವರ್ಷಗಳ ಹಿಂದೆ ಅವು ಹಳ್ಳಿಗಳಂತಿದ್ದವು. ಇವೊತ್ತು ನಮಗೆ ಸಾಲ ಕೊಡುತ್ತಿವೆ, ತಂತ್ರಜ್ಞಾನ ಕೊಡುತ್ತಿವೆ. ಹಾಗಾದರೆ, ನಾವು ಎಲ್ಲಿ ಸೋತಿದ್ದೇವೆ? ಎಲ್ಲಿ ದಾರಿ ತಪ್ಪಿದ್ದೇವೆ? ಈ ಕುರಿತು ನಾವು ಯಾವುದೇ ಆವೇಶ, ಕೋಪ ಮಾಡಿಕೊಳ್ಳದೆ ವಿಚಾರ ಮಾಡಬೇಕು. ಐವತ್ತನೇ ಸುವರ್ಣ ಮಹೋತ್ಸವದ ಪ್ರಯುಕ್ತ ಶ್ರೀಮಾನ್ ಎಸ್.ನಿಜಲಿಂಗಪ್ಪನವರು ಮಾತನಾಡುತ್ತಾ 'ಯಾವನಿಗೆ ಸುವರ್ಣ ಸಿಗುತ್ತದೆಯೋ ಬಿಡುತ್ತದೆಯೋ? ಎಂದು ಹೇಳುತ್ತಾರೆ. ನಿಜಲಿಂಗಪ್ಪನವರಂಥ

ಸ್ವಾತಂತ್ರ್ಯ ಹೋರಾಟಗಾರರೇ ಇಂತಹ ಮಾತನ್ನಾಡಬೇಕಾದರೆ, ಈ ದೇಶದಲ್ಲಿ ಕಳೆದ ಐವತ್ತು ವರ್ಷಗಳಲ್ಲಿ ಏನಾಗಿದೆ ಎನ್ನುವುದರ ಬಗ್ಗೆ ಒಂದು ಸಿನಿಕತೆ ಇದೆ, ಏನೂ ಆಗಿಲ್ಲ ಎನ್ನುವ ಭಾವನೆಯೂ ಸಹ ಇದೆ, ಆದರೆ, ಎಲ್ಲವೂ ಕೆಲವು ಕಡೆ ಆಗಿದೆ. ನಾವು ಸಿಂಗಾಪುರ ಟೆಕ್ನಾಲಜಿ ಪಾರ್ಕ್ ಮಾಡಿದ್ದೇವೆ, 9 ಸ್ಟಾರ್ ಹೋಟೆಲ್ ಕಟ್ಟುತ್ತಿದ್ದೇವೆ, ಅದು ಆಗಲಿ, ಒಂದೆಡೆ ಅದನ್ನು ನಾವು ಅಲ್ಲಗಳೆಯುವುದಕ್ಕಾಗುವುದಿಲ್ಲ, ಕೆಲವು ಕಡೆ ಆಗಿವೆ. ಇನ್ನು ಕೆಲವು ಕಡೆ ಭಯಾನಕ ಚಿತ್ರವೇನಿದೆಯೆಂದರೆ, ವಾಟಾಳ್ ನಾಗರಾಜ್‌ರವರೆ, ನೂರು ಕೋಟಿ ಜನರಲ್ಲಿ 36 ಕೋಟಿ ಜನರು ಇನ್ನೂ ಹೆಬ್ಬೆಟ್ಟು ಒತ್ತುತ್ತಿದ್ದಾರೆಂದರೆ, ಇಡೀ ಯರೋಪ್, ಅಮೇರಿಕಾ ಸೇರಿ ಅಷ್ಟು ಜನಸಂಖ್ಯೆ ಇದೆ. ಐವತ್ತು ವರ್ಷಗಳನ್ನು ಕಳೆದು ಇಂತಹ ಮೂಲತಃ ರೋಗಗಳ ಕಡೆ ನಾವು ಗಮನಹರಿಸದೆ ಇದ್ದರೆ ಹೇಗೆ? ಈಗ ಅವರು ನಮ್ಮ ತಪ್ಪನ್ನು ತಿದ್ದಲಿ, ಅವರಲ್ಲಿ ತಪ್ಪಿದ್ದರೆ ನಾವು ತಿದ್ದೋಣ. ಆದರೆ, ಜನರಿಗೆ ಅನುಕೂಲವಾಗಬೇಕು. ಇವೊತ್ತು ಏನಾಗುತ್ತಿದೆ ಎಂದರೆ, ನಾವುಗಳು ಪರಸ್ಪರ ಕೆಸರು ಎರಚಾಡುತ್ತಿದ್ದೇವೆ. ಅವನ ಮುಖಕ್ಕೆ ಮಸಿ ಬೇಗ ಬಳಿಯ ಬೇಕೆಂದು ಇವನು ತನ್ನ ಕೈಗೆ ಮಸಿ ಹಚ್ಚಿಕೊಳ್ಳುವುದು, ಇವನ ಮುಖಕ್ಕೆ ಬೇಗ ಮಸಿ ಬಳಿಯಬೇಕೆಂದು ಅವನು ತನ್ನ ಕೈಗೆ ಮಸಿ ಹಚ್ಚಿಕೊಳ್ಳುವುದು, ಹೀಗಾಗಿ ಇಬ್ಬರ ಕೈಗಳೂ ಕೆಸರು, ಇಬ್ಬರ ಕೈಯಲ್ಲೂ ಸೆಗಣಿ. ಗಂಧವಿಲ್ಲ, ಗಂಧ ಇದ್ದಿದ್ದರೆ ಏನಾದರು ಮಾಡಬಹುದು. ಆದರೆ, ಕೈಯಲ್ಲಿ ಇಬ್ಬರೂ ಸೆಗಣಿ ಹೆಚ್ಚಿಕೊಂಡು ಕುಳಿತಿದ್ದಾರೆ. ಆತನಿಗೆ ಎಷ್ಟು ಬೇಗ ಸೆಗಣಿ ಬಳಿದೆ ಎಂದು ಖುಷಿ. ಈ ರೀತಿ ದೆಹಲಿಯಲ್ಲೂ ಆಗಿದೆ, ಇಲ್ಲಿಯೂ ಆಗಿದೆ, ಇನ್ನು ಆಗಬಾರದು. ಕೆಸರು ಎರಚುವುದೇ ಕೆಲಸ, ಹಣವಂತೂ ಪೋಲಾಗಿದೆ. ಇಂತಹ ಕೈಗಾರಿಕೆಯಲ್ಲಿ ಅಥವಾ ಇಂತಹ ಇಲಾಖೆಯಲ್ಲಿ ಇಷ್ಟು ದುಡ್ಡು ಇದೆ, ಇಷ್ಟು ಕೆಲಸವಾಗಿದೆ, ಇಷ್ಟು ಕೆಲಸಕ್ಕೆ ಇಷ್ಟು ದುಡ್ಡು ಬೇಕೇ? ಅಥವಾ ಹೋಗಿದ್ದರೆ ಎಷ್ಟು ಹಣ ಹೋಗಿದೆ? ಬಹಳಷ್ಟು ಹಣ ಸೋರಿ ಹೋಗಿದೆ. ಸೋರಿ ಹೋದ ಹಣದಲ್ಲಿ ಇಂತಹ ಇನ್ನೊಂದು ರಾಷ್ಟ್ರವನ್ನು ಕಟ್ಟಬಹುದಿತ್ತು. ಅಷ್ಟು ಹಣ ಸೋರಿ ಹೋಯಿತು. ಕಾಶ್ಮೀರಕ್ಕೆ ಕೊಟ್ಟಂಥ ಹಣದಲ್ಲಿ ಒಂದು ರೂಪಾಯಿ ಕೂಡ ವಾಪಸ್ಸು ಬರಲಿಲ್ಲ. ಅಸ್ಸಾಂನಲ್ಲಿ ಖರ್ಚು ಮಾಡಿದ ಹಣಕ್ಕೆ ಕಾಸಿನ ಬೆಲೆಯೂ ಬರಲಿಲ್ಲ. ಇವೊತ್ತು ನಾವು ಕರ್ನಾಟಕಕ್ಕೆ ಅದೂ ಮೊನ್ನೆ ದೇವೇಗೌಡರು ಪ್ರಧಾನಮಂತ್ರಿಗಳಾದ ನಂತರ ಕೆಲವು ಸೀಕ್ರೆಟ್‌ಗಳಿವೆಯೆಂದು ಗೊತ್ತಾಯಿತು. ನಂಜೇಗೌಡರಿಗೆ ಇದರ ಬಗ್ಗೆ ಚೆನ್ನಾಗಿ ಗೊತ್ತಿದೆ. ಕೆಲವು ರಾಜ್ಯಗಳವರು ಅವರದೇ ಆದಂಥ ಒಂದು ಮಾರ್ಗ ಹಿಡಿದುಕೊಂಡಿದ್ದಾರೆ. ಅವರು ಸೀದಾ ಅಡುಗೆ ಮನೆಗೆ ಹೋಗುವುದು, ನಾವೆಲ್ಲಾ ಹೊರಗಡೆ ಕುಳಿತುಕೊಂಡು ಏನೋ ತರುತ್ತಾರೆ, ಏನೋ ಹಾಕುತ್ತಾರೆ, ಚಪಾತಿ, ಇನ್ನೇನೋ ಕೊಡುತ್ತಾರೆ, ನೋಡ್ತೋಣವೆಂದು ಕಾಯುತ್ತಿದ್ದರೆ ಅವರು ಸೀದಾ ಅಡುಗೆ ಮನೆಗೆ ಹೋಗಿ ತುಪ್ಪ, ಸಕ್ಕರೆ ಇನ್ನು ಏನೇನು ಬೇಕೋ ಅದನ್ನೆಲ್ಲವನ್ನೂ ತೆಗೆದುಕೊಂಡು ಹಾಗೇ ಲಕ್ನೋಗೋ, ಪಟ್ನಾಗೋ ಹೋಗಿಬಿಡುವುದು. ನಾವು ಹೊರಗಡೆ ಕುಳಿತುಕೊಂಡು ಕಾಯುತ್ತಿರುವುದು. ಮೊನ್ನೆ ನಮ್ಮ ಮುದ್ದೇಗೌಡರು

ಹೋದಾಗ ಇದರಲ್ಲಿ ಏನೋ ದೊಡ್ಡ ರಹಸ್ಯವಿದೆಯೆಂದು ನನಗೆ ಗೊತ್ತಾಯಿತು. ನಾವು ಜಿಲ್ಲೆಗಳನ್ನು ಏಕೆ ಹೆಚ್ಚು ಮಾಡಿದ್ದೇವೆಂದರೆ ಕೆಲವು ಸಾರಿ ಜಿಲ್ಲೆಗಳ ಆಧಾರದ ಮೇಲೆ ಈಗ ಜಿಲ್ಲೆಗೊಂದರಂತೆ ಕೇಂದ್ರ ಸರ್ಕಾರ ನವೋದಯ ಶಾಲೆ ಕೊಡುತ್ತದೆ. ನಮ್ಮದು ದೊಡ್ಡ ರಾಜ್ಯವಾಗಿದ್ದು ನಮಗಿಂತಲೂ ಸಣ್ಣ ರಾಜ್ಯಗಳಲ್ಲಿ 30-40 ನವೋದಯ ಶಾಲೆಗಳಿವೆ. ನಮ್ಮ ರಾಜ್ಯದ ಓಲ್ಡ್ ಏಜ್ ಪೆನ್‌ಶನ್‌ಗೆ ಇಟ್ಟಂಥ 47.9 ಕೋಟಿ ರೂಪಾಯಿಗಳು ಉಪಯೋಗವಾಗಿಲ್ಲ, ಯಾರೂ ತೆಗೆದುಕೊಂಡಿಲ್ಲ. ಇದು ನಮ್ಮ ಒಳ್ಳೆಯತನ. ಆಗ ಆ ಪಕ್ಷದ ಸರ್ಕಾರವಿತ್ತು, ಈ ಪಕ್ಷದ ಸರ್ಕಾರವಿತ್ತು ಎಂದು ಹೇಳುವುದಿಲ್ಲ. ನಾವು ನಮ್ಮ ರಾಜ್ಯದ ಹಿತವನ್ನು ಹೇಗೆ ಕಾಪಾಡಬೇಕು ಎನ್ನುವುದರಲ್ಲಿ ನಮ್ಮಲ್ಲಿ ಭಿನ್ನಾಭಿಪ್ರಾಯ ಇರಬಾರದು. ರಾಜ್ಯದ ಆಡಳಿತ ನಡೆಸುವುದು, ಚುನಾವಣೆಯಲ್ಲಿ ನಾವು ನಿಮ್ಮ ಪಾರ್ಟಿ ತೆಗಳುವುದು, ಈ ರೀತಿ.... ಈಗ ನಡೆಯುತ್ತಾ ಇದ್ದೇವೆ ಎಂದು ಇಟ್ಟುಕೊಳ್ಳಿ. ನಡೆಯುವವರು ಎಡವುತ್ತಾರಲ್ಲ, ''ನಡೆವರ್ ಎಡವುವವರಲ್ಲದೆ ಕುಳಿತವರ್ ಎಡವುವರೆ, ಅಥವಾ ಮಲಗಿರುವವರ್ ಎಡವುವರೆ?'' ನಡೆವರ್ ಎಡವವರ್.

(ನಗು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಂತವರು ಆ ಕಡೆ ಕೂಡ ಕುಳಿತಿದ್ದಾರೆ.

ಶ್ರೀ ಜೆ.ಹೆಚ್.ಪಟೇಲ್: ಎಡವಿದ್ದರೆ ತಪ್ಪನ್ನು ತಿದ್ದುಕೊಳ್ಳೋಣ, ಮುಂದೆ ಏನು ಮಾಡಬೇಕು ಎಂದು ಹೇಳೋಣ ಅದಕ್ಕೆ ಸಮಾಜ ಕಲ್ಯಾಣ ಇಲಾಖೆ ಇದೆ. ಸನ್ಮಾನ್ಯ ಅಧ್ಯಕ್ಷರೆ, ಈ ಎರಡು ವರ್ಷಗಳಲ್ಲಿ 150 ಮೆಟ್ರಿಕ್ ಪೂರ್ವ ಹಾಸ್ಟೆಲ್ 60 ಮೆಟ್ರಿಕ್ ನಂತರದ ಹಾಸ್ಟೆಲ್‌ಗಳು ಆಗಿದೆ ಎಂದರೆ ಎಷ್ಟರ ಮಟ್ಟಿಗೆ ಸಮಾಜ ಕಲ್ಯಾಣದ ಚಿಂತನೆ ಸರ್ಕಾರಕ್ಕೆ ಇತ್ತು ಎಂದು ತಾವೇ ಲೆಕ್ಕ ಹಾಕಿ. 131 ಹಾಸ್ಟೆಲ್‌ಗಳ ಕಟ್ಟಡ ಪೂರ್ಣಗೊಳಿಸಲಾಗಿದೆ. 1996-97ರಲ್ಲಿ ಒಂದು ಲಕ್ಷದ ಮುವತ್ತೆರೆಡು ಸಾವಿರದ ಇನ್ನೂರ ನಲವತ್ತೊಂದು ಮಂದಿ ಮೆಟ್ರಿಕ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವಾಗಿ ಇಪ್ಪತ್ತನಾಲ್ಕು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮೆಟ್ರಿಕ್ ಪೂರ್ವದ ನಾಲ್ಕು ಲಕ್ಷದ ಅರವತ್ನಾಲಕ್ಕು ಸಾವಿರದ ಆರುನೂರ ಒಂದು ವಿದ್ಯಾರ್ಥಿಗಳಿಗೆ, ಮೆಟ್ರಿಕ್ ನಂತರದ ನಾಲ್ಕು ಕೋಟಿ ನಲವತ್ತನಾಲ್ಕು ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಇರಲಿಲ್ಲ. ಸಮವಸ್ತ್ರದ ಬಗ್ಗೆ ಹೇಳುವುದಾದರೆ, ನಾಲ್ಕು ಕೋಟಿ ನಲವತ್ತಮೂರು ಲಕ್ಷ ರೂಪಾಯಿ ಖರ್ಚಿನಲ್ಲಿ ಒಂದು ಲಕ್ಷದ ಐವತ್ತನಾಲ್ಕು ಸಾವಿರ ವಿದ್ಯಾರ್ಥಿಗಳಿಗೆ ಸಮವಸ್ತ್ರ ಕೊಟ್ಟಿದೆ. ಈ ರೀತಿ ನಾವು ಸಮಾಜ ಕಲ್ಯಾಣ ಇಲಾಖೆ ಎಂದರೆ ನಿಜವಾಗಿ ಇದು ಪ್ರಿಯಾರಿಟಿ ನಂ.ಒನ್. ಏಕೆಂದರೆ, ಇದು ಒಂದು ವರ್ಗಕ್ಕೆ ಸಂಬಂಧಿಸಿದ್ದು. ಚಿಂತನೆ, ಕೆಲಸ, ಹಣ, ಹೆಸರು ಒಬ್ಬರದು, ಇನ್ನೊಬ್ಬರು ತಿನ್ನುವುದು. ಹೀಗಾಗಿ ಅದು ಸರಿ ಆಗಬೇಕು. ಅದೇ ರೀತಿ ಶಿಕ್ಷಣದ್ದು

ನಾನು ಕೇವಲ ಅಚೀವ್‌ಮೆಂಟ್ ಮಾಡಿರುವುದು ಹೇಳುತ್ತೇನೆ. ಮಾಡಬೇಕೆಂದು ಯೋಚನೆ ಮಾಡಿದ್ದೆವು, ಅದರೊಳಗೆ ಈ ರೀತಿ ಆಲೋಚನೆ ಮಾಡಿದ್ದೇವೆ ಎಂದು ಅಲ್ಲ, ಶಿಕ್ಷಣದ ಬಗ್ಗೆ ಹೇಳಬೇಕು ಎಂದರೆ 1996-97ನೇ ಸಾಲಿನಲ್ಲಿ ಒಂಭೈನೂರು ಹೊಸ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲಾಗಿದೆ. 1997-98ರಲ್ಲಿ ಎರಡು ಸಾವಿರ ಹೊಸ ಶಾಲೆಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗಿದೆ. 1996-97ರಲ್ಲಿ ಒಂಭೈನೂರ ಎಪ್ಪತ್ತೆಂಟು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತೆರೆಯಲಾಗಿದೆ. ಒಂದುನೂರ ಎಂಭತ್ತಾರು ಖಾಸಗಿ ಶಾಲೆಗಳನ್ನು ತೆರೆಯಲು ಅನುಮತಿ ನೀಡಲಾಗಿದೆ. 1997-98ರಲ್ಲಿ ಎರಡು ಸಾವಿರ ಹೊಸ ಹಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗುವುದು. 1993-94 ರಿಂದ 1996-97ರ ನಡುವೆ ಹದಿನೆಂಟು ಸಾವಿರದ ಏಳುನೂರ ಎಪ್ಪತ್ತೆರೆಡು ಪ್ರಾಥಮಿಕ ಶಾಲಾ ಕೊಠಡಿಗಳನ್ನು ನಿರ್ಮಿಸಲಾಗಿದೆ. ಈ 1995-96ರಲ್ಲಿ ನಾನೂರು ಪ್ರಾಥಮಿಕ ಶಾಲೆಗಳಿಗೆ ನೀರು ಮತ್ತು ಶೌಚಾಲಯದ ಸೌಲಭ್ಯವನ್ನು ಒದಗಿಸಿದ್ದೇವೆ. 1996-97ರಲ್ಲಿ ನೂರು ಶಾಲೆಗಳಿಗೆ ಮತ್ತು 1997-98ಕ್ಕೆ ಎರಡು ನೂರು ಶಾಲೆಗಳಿಗೆ ನೀರು ಮತ್ತು ಶೌಚಾಲಯದ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದೇವೆ. 1996-97ರಲ್ಲಿ ಹದಿನೇಳು ಸಾವಿರದ ಒಂಭೈನೂರ ತೊಂಭತ್ತೇಳು ಪ್ರಾರ್ಥಮಿಕ ಶಿಕ್ಷಕರ ನೇಮಕ ಮಾಡಿದ್ದೇವೆ. ಒಟ್ಟು ಇಪ್ಪತ್ತೇಳು ಸಾವಿರದ ಶಿಕ್ಷಕರ ಕೊರತೆ ಇತ್ತು, ಈಗ ಅದನ್ನೆಲ್ಲಾ ಸರಿಪಡಿಸಿದ್ದೇವೆ. ಆದ್ದರಿಂದ, 1996-97ರಲ್ಲಿ ಯಾವುದೇ ಒಂದು ದೂರು ಸಹ ಬರಲಿಲ್ಲ. ಈಗ ನಾವು ಶಿಕ್ಷಣಕ್ಕೆ ಬಹಳ ಮಹತ್ವ ಕೊಟ್ಟಿದ್ದೇವೆ. ಇವತ್ತು ನಾನು ಮಾನ್ಯ ಶ್ರೀಗೋವಿಂದೇ ಗೌಡರನ್ನು ಮೆಚ್ಚುತ್ತೇನೆ. ಏಕೆಂದರೆ ಅವರು ಒಂದು ಕೆಲಸ ಮಾಡಬೇಕು ಎಂದು ತೀರ್ಮಾನ ಮಾಡಿ ಅದೇ ರೀತಿ ಒಂದು ಸಾಧನೆ ಮಾಡಿದ್ದಾರೆ. ಈ ರೀತಿ ಮಾಡಿರುವುದು ಗೋವಿಂದೇಗೌಡರು ಮಾಡಿದಂತಹ ಸಾಧನೆ ಅಲ್ಲವಾ? ಕೆ.ಎಸ್.ಆರ್.ಟಿ.ಸಿ.ಯನ್ನು ಸರಿಪಡಿಸಿದಂತಹ ಪಿ.ಜಿ.ಆರ್.ಸಿಂಧ್ಯಾ ಅವರ ಸಾಧನೆ ಅಲ್ಲವಾ? ಹಣಕಾಸಿನ ವ್ಯವಸ್ಥೆಯಲ್ಲಿ ಒಳ್ಳೆಯ ಸುಬಧ್ರ ಸ್ಥಿತಿಗೆ ತಂದಂತಹ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮಾಡಿರುವಂತಹದ್ದು ಸಾಧನೆ ಅಲ್ಲವಾ? ಇಷ್ಟೊಂದು ದೊಡ್ಡ ಇಂಡಸ್ಟ್ರಿಗಳು ಎಂದರೆ ಬರೀ ಮಾತು ಕತೆ ಅಲ್ಲ. ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ನಾನು ಧಾರವಾಡದಲ್ಲಿ ಒಂದು ಕಾರ್ಖಾನೆಯನ್ನು ಪ್ರಾರಂಭ ಮಾಡಿ ಬಂದೆ. ಈಗ ತಕ್ಷಣ ಆರುನೂರು ಕೋಟಿ ರೂಪಾಯಿ ಇನ್‌ವೆಸ್ಟ್ ಮಾಡುತ್ತಾರೆ. ದೊಡ್ಡ ದೊಡ್ಡ ಟ್ರಕ್‌ಗಳು, ವ್ಯಾನ್‌ಗಳು, ಟೆಲ್‌ಕೋದವರಿಗೆ ಅಲ್ಲಿ ಸುಮಾರು ಆರುನೂರು ಎಕರೆ ಭೂಮಿ ಕೊಟ್ಟಿದ್ದೇವೆ More 5,000 to 6,000 crores will be invested in another two years. ಇದು ಸಾಧನೆ ಅಲ್ಲವಾ? ಇವತ್ತು ವಿದ್ಯುಚ್ಛಕ್ತಿ, ಕೆ.ಇ.ಬಿ ತೊಂದರೆಗಳನ್ನು ಹೇಳಿದರೆ, ಹೊರತು, ಅಂದರೆ ಅಲ್ಲಿ ಟ್ರಾನ್ಸ್‌ಫರಿಂಗ್ ಮಾಡಿರುವುದರಿಂದ ಆಗಿದೆ, ಅಲ್ಲಿ ಟ್ರಿಪ್ ಆಯಿತು; ಅಲ್ಲಿ ಹೀಗಾಯಿತು ಎಂದು. ನಮ್ಮ ಜನರೇಶನ್ ಕಳೆದ ಆರೇಳು ವರ್ಷದಿಂದ ಒಂದು ಮೆ.ವ್ಯಾ. ಇಂಪ್ರೂವ್ ಆಗಿಲ್ಲ. ಈ ವರ್ಷ ನಾವು ಆರು ನೂರು ಮೆ.ವ್ಯಾ. ಎಲೆಕ್ಟ್ರಿಸಿಟಿ ಆ್ಯಡ್ ಮಾಡುತ್ತೇವೆ. ನಮ್ಮ

ಸರ್ಕಾರದ ಪ್ರಾಜೆಕ್ಟ್‌ನಿಂದ ಬೇರೆ ನಾವು ಇವತ್ತು ಖಾಸಗಿ ಅವರಿಗೆ ಕೊಟ್ಟಿರತಕ್ಕಂತಹ ಸಣ್ಣ ಸಣ್ಣದು, 25, 50, 70, ಮೆ.ವ್ಯಾ. ಇದು ಎಲ್ಲಾ ಸೇರಿದರೆ ಒಂದು ಸಾವಿರ ಮೆ.ವ್ಯಾ. ಈ ವರ್ಷ 1997-98ರಲ್ಲಿ ಆ್ಯಡ್ ಮಾಡಿದರೆ, ಒಂದು ಸಾವಿರ ಮೆ.ವ್ಯಾ ಆ್ಯಡ್ ಮಾಡಿದರೆ, ಈಗ ಇರತಕ್ಕಂತಹ ಫ್ಲಕ್ಚುಏಷನ್, ವೋಲ್ಟೇಜ್ ಫ್ಲಕ್ಚುಏಷನ್ ಆಗಲಿ, ರಾಮಗುಂಡಂನಲ್ಲಿ ಪವರ್ ಬರಲಿಲ್ಲ ಎಂದರೆ ಟ್ರಿಪ್ ಆಗುವುದು, ಆಗ ಬೆಂಗಳೂರು ಜನ ನಮ್ಮನ್ನು ಬೈಯುವುದು. ಏಕೆಂದರೆ ನಮ್ಮಲ್ಲಿ ಇದ್ದಂತಹ ಅಸ್ತ್ರನೇ ಅಂತಹದ್ದು. ಆಗಾಗ ನಾನು ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಅದೇನೆಂದರೆ, ಚಳಿಗಾಲದಲ್ಲಿ ಒಬ್ಬ ತಾಯಿ ನಾಲ್ಕು ಮಕ್ಕಳನ್ನು ಮಲಗಿಸಿ ಒಂದೇ ಕಂಬಳಿ ಹೊದಿಸಿದರೆ, ಬೆಳಗಿನ ಜಾವದ ಹೊತ್ತಿಗೆ ಯಾರು ಬೇಕೋ ಅವರು ಹೊದ್ದುಕೊಂಡಿರುವುದು, ಬೇರೆಯವರು ಹಾಗೆಯೇ ಮಲಗಿರುವುದು, ಆ ರೀತಿ ಆಗುತ್ತಿತ್ತು ನಮ್ಮ ಎಲೆಕ್ಟ್ರಿಸಿಟಿ. ಯಾರು ಎಳೆದುಕೊಳ್ಳುತ್ತಾರೋ ಅವರಿಗೆ ಹೋಗುತ್ತಿತ್ತು, ಬೇರೆಯವರಿಗೆ ಹೋಗುತ್ತಿರಲಿಲ್ಲ. ಅದನ್ನು ಸರಿಪಡಿಸಬೇಕಾದರೆ ಡಿಸ್ಟ್ರಿಬ್ಯೂಷನ್ ಸರಿ ಇರಬೇಕು, ಜನರೇಷನ್ ಸಾಕಷ್ಟು ಇರಬೇಕು.

ಅಧ್ಯಕ್ಷರು: ಅಲ್ಲ, ನೀವು ಕಂಬಳಿ ವಿಷಯ ಹೇಳಿದಿರಿ.

(ನಗು)

ಶ್ರೀ ಜೆ.ಹೆಚ್.ಪಟೇಲ್: ಅದಕ್ಕೆ ವ್ಯವಸ್ಥೆ.

ಶ್ರೀ ಹೆಚ್.ಎನ್.ನಂಜೇಗೌಡ: ಕಂಬಳಿ ವಿಷಯದಲ್ಲಿ ಇನ್ನೂ ಹೆಚ್ಚು ಮಾಹಿತಿ ಇದೆ.

(ನಗು)

ಅಧ್ಯಕ್ಷರು: ಅವರಿಗೆ ಏನು ಮಾಹಿತಿ ಇದ್ದರೂ, ಮೊದಲು ನಿಮಗೆ ಹೇಳಿ ಆಮೇಲೆ ಮೂರನೆಯವರು ನಮಗೆ ಹೇಳಿದರೆ ನಗುವುದು ಗೊತ್ತಾಗುವುದು, ಇಲ್ಲಾ ಅಂದರೆ ನಮಗೆ ಗೊತ್ತಾಗುವುದಿಲ್ಲ. ನಿಮ್ಮ ಕಂಬಳಿ ವಿಚಾರ ಅವರಿಗೆ ಗೊತ್ತು, ಅವರ ಕಂಬಳಿ ವಿಚಾರ ನಿಮಗೆ ಗೊತ್ತು.

ಶ್ರೀ ಜೆ.ಹೆಚ್.ಪಟೇಲ್: ಈಗ ನಾವು ಯಾವ ಸ್ಥಿತಿಯಲ್ಲಿ ಇದ್ದೇವೆ ಎಂದರೆ, ಎಲ್ಲಾ ಸಾಧನೆ ಮಾಡಿದ್ದೇವೆ ಎಂದು ಹೇಳುವುದಿಲ್ಲ. ಶಿಕ್ಷಣದ ವಿಷಯ ಆಯಿತು. ಇನ್ನು ಆರೋಗ್ಯದ ವಿಷಯದ ಬಗ್ಗೆ ಒಂದು ಮಾತು ಹೇಳುತ್ತೇನೆ. ನಾವು ಹೊಸದಾಗಿ ಎಂಟುನೂರು ಜನ ಡಾಕ್ಟರ್ಸ್‌ನ ಅಪಾಯಿಂಟ್ ಮಾಡಿದ್ದೇವೆ. ಅದರ ಜೊತೆಗೆ ಆರುನೂರು ಜನ ಅಪಾಯಿಂಟ್ ಮಾಡಿದ್ದೇವೆ, ಇನ್ನೂರು ಜನ ಇಎಸ್ಐ ನಲ್ಲಿ ಇದ್ದಾರೆ. ಅವರು 1996-97ನೇ ಸಾಲಿನಲ್ಲಿ ಹನ್ನೆರೆಡು ಲಕ್ಷ ಮಕ್ಕಳಿಗೆ ಡಿಪಿಟಿ, ಪೋಲೀಯೋ ಕೊಟ್ಟಿದ್ದಾರೆ. Karnataka Health System Improvement and

Development ಎಂದು ಐನೂರು ನಲವತ್ತು ಕೋಟಿ ರೂಪಾಯಿಗಳನ್ನು ವಿಶ್ವಬ್ಯಾಂಕಿನ ನೆರವಿನಿದ ಇನ್ನೂರ ಒಂದು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಕೆಲಸ ನಡೆದಿದೆ. ಎಲ್ಲೋ ಒಂದುಕಡೆ ಡಾಕ್ಟರ್ಸ್ ಇರಲಿಲ್ಲ, ಅಥವಾ ಇನ್ನೆಲ್ಲೋ ಔಷಧಿ ಕೊಡಲಿಲ್ಲ ಅಂದರೆ ಇರಬಹುದು, ಅದು ಇಲ್ಲಾ ಎಂದು ಅಲ್ಲ, ಎಲ್ಲಾ ಆಸ್ಪತ್ರೆಗಳು ಬಹಳ ಚೆನ್ನಾಗಿದೆ ಎಂದು ಹೇಳಲಿಲ್ಲ. ಆದರೆ ಈ ರೀತಿ ಸರಿಪಡಿಸುವಂತಹ ಕೆಲಸ ನಡೆದಿದೆ. ಆಮೇಲೆ ರಾಯಚೂರಿನಲ್ಲಿ ಒಂದು Opaque country-oil producing Arab countries ಅವರು, ನಾವು ಆರೋಗ್ಯದ ದೃಷ್ಟಿಯಿಂದ ಏನಾದರೂ ಒಂದು ದಾನ ಕೊಡಬೇಕು ಎಂದಾಗ, ರಾಯಚೂರಿನಲ್ಲಿ ಮುವತ್ತು ಕೋಟಿ ರೂಪಾಯಿ ವೆಚ್ಚದಲ್ಲಿ ಒಂದು ಹೈ ಟೆಕ್ ಆಸ್ಪತ್ರೆ ಬರುತ್ತಾ ಇದೆ. ಈಗ ನಾವು ಪರಿಶಿಷ್ಟ ಜಾತಿ ಜನಾಂಗದವರಿಗೆ ಹಳದಿ ಕಾರ್ಡ್ ಇಂಟರ್‌ಡ್ಯೂಸ್ ಮಾಡಿದ್ದೇವೆ, ನಾಲ್ಕೈದು ಡಿಸ್ಟ್ರಿಕ್ಟ್‌ನಲ್ಲಿ ಅಂದರೆ ನಾವು ಅವರಿಗೆ ಹಳದಿ ಕಾರ್ಡ್ ಕೊಟ್ಟ ತಕ್ಷಣ ಆರೋಗ್ಯ ಸರಿ ಹೋಯಿತು ಎನ್ನುವ ಭ್ರಮೆ ನನಗೆ ಇಲ್ಲ, ಆ ಹಳದಿ ಕಾರ್ಡ್ ತೆಗೆದುಕೊಂಡರೂ, ಅವನಿಗೆ ಹಳದಿ ಮಾಡುವವರು ಇದ್ದರೂ ಇರಬಹುದು. ಆದರೆ ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾತ್ರ ನಡೆಯುತ್ತಿದೆ. ಒಂದು ಗಾಡಿ ಸರಿಯಾದ ಗುರಿ ಮುಟ್ಟಲು ಯಾವ ದಿಕ್ಕಿನಲ್ಲಿ ಹೋದರೆ ಗುರಿ ಮುಟ್ಟುತ್ತದೆ ಎಂದು ನೋಡಬೇಕು. ಎರಡನೆಯದು ನಾವು ಎಷ್ಟು ವೇಗದಲ್ಲಿ ಹೋಗುತ್ತೇವೆ ಎನ್ನುವುದು ನೋಡಬೇಕು. ಪುಟ್ಟಣ್ಣಯ್ಯನವರೆ, ನಾವು ಬಹಳ ವೇಗದಲ್ಲಿ ಹೋಗುವುದು ಸರಿ ಅಲ್ಲ. ಏಕೆಂದರೆ ಬಹಳ ವೇಗದಲ್ಲಿ ಹೋದರೆ, ಅಪಘಾತಗಳು ಸಂಭವಿಸುತ್ತವೆ. ನಾನು ಹೇಳುವುದು ಫಿಸಿಕಲಿ ಸ್ಪೀಡ್ ಅಲ್ಲ, ಮೆನ್‌ಟಲಿ ಸ್ಪೀಡ್. ಅದಕೋಸ್ಕರ ನಾವು ರಾಜ್ಯದ ಐದು ಕೋಟಿ ಜನರ ಹಿತರಕ್ಷಣೆ ಹೇಗೆ ಮಾಡಬೇಕು ಎಂಬುದರ ಬಗ್ಗೆ ನಮ್ಮಲ್ಲಿ ಭಿನ್ನಾಭಿಪ್ರಾಯ ಬೇಡ. ಎಲೆಕ್ಟ್ರಿಸಿಟಿ ಜನರೇಟ್ ಮಾಡಬೇಕು, ಮಾಡುತ್ತಾ ಇದ್ದೇವೆ. ಇರಿಗೇಶನ್ ಇಂಪ್ರೂವ್ ಮಾಡಬೇಕು, ಮಾಡುತ್ತಾ ಇದ್ದೇವೆ. ಇಷ್ಟೊತ್ತು ಹೇಳುತ್ತಾ ಇದ್ದೇನೆ, ಕೊಂಟ್ರಾಕ್ಟ್ ಕ್ಲಿಯರ್ ಆಗುತ್ತಾ ಬಂತು ಅಂದರೆ ಕೊಂಟ್ರಾಕ್ಟ್ ಏಕೆ ಇನ್ನು ಕ್ಲಿಯರ್ ಆಗಿಲ್ಲ ಅಂದರೆ, ಅರೆ, ಇಷ್ಟು ವರ್ಷ ಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತ್ತಿದ್ದರು, ಈಗ ಮೊನ್ನೆ ನಾವು ಬಂದಮೇಲೆ ಅವನನ್ನು ಟ್ರಿಕ್ಸ್ ಮಾಡಿದ್ದೇವೆ. ಕೊಂಟ್ರಾಕ್ಟ್‌ಗೆ ನಾವು ಹೇಳಿದ್ದರಿಂದ ಅವರು ವಿಶ್ವಾಸದಿಂದ ಬಂದಿದ್ದಾರೆ. ಅದಕ್ಕೂ ಹುಡುಕುವುದು, ಎರಡು ಸಾವಿರ ಕೋಟಿ ಪ್ರಾಜೆಕ್ಟ್‌ಗೆ ಹತ್ತು ಸಾವಿರ ಕೋಟಿ ರೂಪಾಯಿ ಲಂಚ ಕೊಟ್ಟಿದ್ದಾನೆ. ಎರಡು ಸಾವಿರ ಕೋಟಿ ಪ್ರಾಜೆಕ್ಟ್‌ಗೆ ಯಾವ ದಡ್ಡ ಹತ್ತುಸಾವಿರ ಕೋಟಿ ರೂಪಾಯಿ ಲಂಚವನ್ನು ಕೊಡುತ್ತಾನೆ? ಅಂದರೆ ಅವಕ್ಕೆ ಕೋಟಿಗಳು ಏನು ಲೆಕ್ಕ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಮ್ಮ ಸ್ನೇಹಿತರಾದಂತಹ ಜಾರ್ಜ್ ಫರ್ನಾಂಡಿಸ್‌ರವರು ಒಂದು ಮಾತನ್ನು ಹೇಳಿದರು.

ಶ್ರೀ ಜೆ.ಹೆಚ್.ಪಟೇಲ್: ಅವರಿಗೆ ಈಗ ಆರೋಗ್ಯ ಸರಿಯಿಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಎರಡು ಸಾವಿರ ಕೋಟಿ ಪ್ರಾಜೆಕ್ಟ್‌ಗೆ, ಹತ್ತು ಸಾವಿರ ಕೋಟಿ ಮಾಡಿಕೊಳ್ಳುವುದಕ್ಕೆ ಹೊರಟು ಮಧ್ಯದಲ್ಲಿ ಏನೋ ನಡೆದಿದೆ ಎಂದು ನಮ್ಮ ಛಾರ್ಜ್ ಹೊರತು, ನಾವು ಸಹ ಮಾತನಾಡುವಾಗ ಜವಾಬ್ದಾರಿಯಿಂದ ಮಾತನಾಡುತ್ತೇವೆ. ಎರಡು ಸಾವಿರ ಕೋಟಿ ಪ್ರಾಜೆಕ್ಟ್ ಎಂದು ಹೇಳಿ ಅವರು ಹತ್ತು ಸಾವಿರ ಕೋಟಿ ಮಾಡಿಕೊಳ್ಳುವುದಕ್ಕೆ ಹೊರಟ್ಟಿದ್ದಾರೆ, ಇದರಲ್ಲಿ ಪಾರದರ್ಶಕತೆ ಇಲ್ಲ, ಎಲ್ಲಾವನ್ನು ಒಂದು ಟೇಬಲ್ ಮಾಡಿ ಎಂದು ಹೇಳಿದ್ದೇವೆ. ನಿಮಗೆ ನಾವು ತೋರಿಸುತ್ತೇವೆ. ನಾನು ವಿರೋಧ ಪಕ್ಷದ ನಾಯಕನಾದ ಮೊದಲನೇ ದಿವಸ ಕೋರಮಂಗಲದ ಕ್ರೀಡಾನಗರದ ಬಗ್ಗೆ ಎತ್ತಿದಾಗ ದೇವೇಗೌಡರು ಸಿಟ್ಟು ಮಾಡಿಕೊಂಡರು. ಇವತ್ತು ಹುಡ್ಕೋದಿಂದ 250 ಕೋಟಿ ಸಾಲ ತಂದು ಮಾಡಿದರು ಅದು ಯಾರಿಗೂ ಸೇರದ ಹಾಗೆ ಆಗಿದೆ.

ಶ್ರೀ ಜೆ.ಹೆಚ್.ಪಟೇಲ್: ಅದು ಹಾಳಾಗದ ಹಾಗೆ ನೋಡಿಕೊಳ್ಳಬೇಕು, ಅದು ಮಾಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ದೇವರಲ್ಲಿ ಪ್ರಾರ್ಥನೆ ಮಾಡುವುದು ಏನೆಂದರೆ ನೀವು ಕೆಡಬಾರದು, ನಮ್ಮ ಕರ್ನಾಟಕದ ಜನರು ಕೆಡಬಾರದು ಅಷ್ಟೆ.

ಶ್ರೀ ವಾಟಾಳ್ ನಾಗರಾಜ್: ಜಾರ್ಜ್ ಅವರ ಆರೋಗ್ಯ ಸರಿಯಿಲ್ಲ ಎಂದು ಹೇಳಿದರಲ್ಲ, ತಾವು ಎಲ್ಲ ಒಟ್ಟಿಗೆ ಇದ್ದೀರಿ ಹೇಗೆ ಅಂತ?

ಶ್ರೀ ಬಿ.ಎಸ್.ಯಡಿಯೂರಪ್ಪ: ಜಾರ್ಜ್‌ರವರು ಆರೋಗ್ಯ ಸರಿಯಿಲ್ಲದವರ ಗುಂಪಿನಿಂದ ಸರಿಯಿರುವವರ ಜೊತೆ ಬಂದು ಸೇರಿಕೊಂಡಿದ್ದಾರೆ, ದೇಶದ ಆರೋಗ್ಯದ ದೃಷ್ಟಿಯಿಂದ.

ಶ್ರೀ ಜೆ.ಹೆಚ್.ಪಟೇಲ್: ಕೆಲವು ಸ್ನೇಹದಲ್ಲಿ ಎಕ್ಸ್‌ಚೇಂಜ್ ಮಾಡಬಹುದು, ಕೆಲವನ್ನು ಮಾಡುವುದಕ್ಕೆ ಆಗುವುದಿಲ್ಲ. ಹಾಗೆ ಆರೋಗ್ಯ ಎಕ್ಸ್‌ಚೇಂಜ್ ಮಾಡುವುದಕ್ಕೆ ಬರುವುದಿಲ್ಲ, ಅವರ ಆರೋಗ್ಯ ಅವರಿಗೆ, ನನ್ನ ಆರೋಗ್ಯ ನನಗೆ. ಇನ್ನು ಬೇರೆನಾದರೂ ಎಕ್ಸ್‌ಚೇಂಜ್ ಮಾಡಬಹುದು ಎಂದು ವಾಟಾಳ್‌ರವರಿಗೆ ಗೊತ್ತಿದೆ. ವಿರೋಧ ಪಕ್ಷದ ನಾಯಕರು ಯಡಿಯೂರಪ್ಪನವರು ಇಲಾಖೆಗಳಲ್ಲಿ ಇರತಕ್ಕ ದೋಷಗಳನ್ನು ಇವತ್ತು ಹೇಳಿದ್ದಾರೆ. ಅವು ಎಲ್ಲಾ ಇಲ್ಲ ಎಂದು ನಾನು ಹೇಳುವುದಿಲ್ಲ. ನೀವು ಹೇಳಿರತಕ್ಕಂಥ ಲೋಪದೋಷಗಳು ಅಧಿಕಾರಿಗಳ ಕಾರಣಕ್ಕೆ ಇರಬಹುದು, ಅಥವಾ ಇನ್ಯಾವುದೋ ರಾಜಕೀಯ ಪ್ರಭಾವಕ್ಕೆ ಇರಬಹುದು, ನಾನು ಎಲ್ಲಾ ಶುದ್ಧ ಪರಿಶುದ್ಧ ಎಂದು ಹೇಳುವುದಿಲ್ಲ. ಇವತ್ತು ನಾವು ಬಳಸುತ್ತಿರುವ ವ್ಯವಸ್ಥೆ ಅಷ್ಟು ಕಲುಷಿತ ವಾಗಿಲ್ಲ. ಹಿಂದೆ

ಒಂದು ಸಲ ನೀವು ಹೇಳಿದ್ದನ್ನು ನಾನು ಪ್ರಕಾಶ್‌ರವರಿಗೆ ಹೇಳಿದ್ದೆ ಪಟೇಲರ ಸಾಧನೆ ಶೂನ್ಯ. ಶೂನ್ಯ ಸಾಧನೆ ಅಂದರೆ ಅಧ್ಯಕ್ಷರೆ ಅದಕ್ಕಿಂತ ಎತ್ತರದ ಸಾಧನೆಯೇ ಇಲ್ಲ. ಅವರು ವೀರಶೈವ ಸಿದ್ಧಾಂತ ಹೇಳಿದರೋ, ಏನು ಹೇಳಿದರೋ ನನಗೆ ಗೊತ್ತಾಗಲಿಲ್ಲ. ಅದು ಶಂಕರಚಾರ್ಯರು ಹೇಳಿರತಕ್ಕಂಥದ್ದು,

''ಪೂರ್ಣಂ ಅದು ಪೂರ್ಣಂ ಇದು ಪೂರ್ಣದಿಂ ಪೂರ್ಣವೈತಂದು,
ಪೂರ್ಣದಲ್ಲಿ ಪೂರ್ಣವ ಕಳೆದೊಡೆ, ಉಳಿವುದೆ ಪೂರ್ಣವೆಂದರಿತ
ನೀವೇ ಪರಿಪೂರ್ಣ''

ಎಂದು ಅವರು ದೇವರನ್ನು ಪ್ರಾರ್ಥಿಸುತ್ತಾರೆ. ಆ ತರಹ ಇವರು ನನಗೆ ಶೂನ್ಯ ಅಂದುಬಿಟ್ಟರಲ್ಲಾ, ಅದು ಯಾವ ರೀತಿಯ ಶೂನ್ಯ, ಆದಿಶೂನ್ಯವೋ, ಅಂತ್ಯ ಶೂನ್ಯವೋ? ಗೊತ್ತಾಗಲಿಲ್ಲ. ಒಟ್ಟಿನಲ್ಲಿ ಆ ಶೂನ್ಯದ ಎತ್ತರಕ್ಕೆ ಹೋದರೆ ಈ ಮುಖ್ಯಮಂತ್ರಿ ಗಿರಿನೂ ಬೇಡ, ಈ ಸರ್ಕಾರವು ಬೇಡ, ಯಾವುದು ಸಹಿತ ಬೇಡ.

ಶ್ರೀ ವಾಟಾಳ್ ನಾಗರಾಜ್: ತಾವು ದಯವಿಟ್ಟು ಈಗ ಶೂನ್ಯ ಸಂಪಾದನೆಗೆ ಹೋಗಬೇಡಿ.

ಶ್ರೀ ಜೆ.ಹೆಚ್.ಪಟೇಲ್: ಸನ್ಮಾನ್ಯ ಅಧ್ಯಕ್ಷರೆ, ಈ ಹೊಸ ಜಿಲ್ಲೆಗಳನ್ನು ಸ್ಥಾಪನೆ ಮಾಡಬೇಕೆಂದು ಸುಮಾರು ಎರಡು ವರ್ಷದಿಂದಲೇ ನನ್ನ ಮನಸ್ಸಿನಲ್ಲಿ ಇತ್ತು. ನಾನು ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗಲೂ ಪ್ರಸ್ತಾಪ ಮಾಡಿದ್ದೆ; ಯಾವುದ್ಯಾವುದೋ ಕಾರಣಕ್ಕೆ ಈಗ ಅದನ್ನು ಎತ್ತಿಕೊಳ್ಳುವುದು ಬೇಡ ಎಂದು ಅವರು ಹೇಳಿದ್ದರು. ಮೊನ್ನೆ ಮತ್ತೆ ನಾನು ನನ್ನ ಸೀನಿಯರ್ ಕೊಲಿಗ್ಸ್‌ನೆಲ್ಲಾ ಕೇಳಿ, ತೀರ್ಮಾನ ತೆಗೆದುಕೊಂಡು ಇವತ್ತು ಏಳು ಜಿಲ್ಲೆಗಳು ಸ್ಥಾಪನೆ ಆಗಿದ್ದಾವೆ. ಆದರೆ ಉಳಿದ ಜಿಲ್ಲೆಗಳಲ್ಲಿ ಇವತ್ತು ವಿನಾಕಾರಣ ಚಳುವಳಿ ಬಸ್ಸಿಗೆ ಹಚ್ಚುವುದು ಎಲ್ಲಾ ಮಾಡುತ್ತಿದ್ದಾರೆ ಅವರಿಗೆ ನಾನು ಈ ಸದನದ ಮೂಲಕ ಹಾಗೆಲ್ಲ ಮಾಡಬೇಡಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಜಮಖಂಡಿ ಬಗ್ಗೆ ಕಲೂತಿ ಎಂಎಲ್‌ಎ ಎಲ್ಲಾ ಅಮರಣಾಂತ ಸತ್ಯಾಗ್ರಹ ಮಾಡುತ್ತಿದ್ದಾರೆ, ಅದರಲ್ಲಿ ಎಲ್ಲಾ ಪಾರ್ಟಿಯವರು ಇದ್ದಾರೆ. ದಯವಿಟ್ಟು ಇದರ ಬಗ್ಗೆ ಏನಾದರೂ ಮಾಡಿ.

ಶ್ರೀ ಜೆ.ಹೆಚ್.ಪಟೇಲ್: ಅವರು ಇಲ್ಲಿ ಬಂದಿದ್ದಾಗ ಅವರ ಎದುರಿಗೆ, ಅವರ ಊರಿನವರ ಎದುರಿಗೆ ಜಮಖಂಡಿಯನ್ನು ಜಿಲ್ಲೆ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಜಮಖಂಡಿ ಒಂದೇ ಅಲ್ಲ, ಬೆಳಗಾವಿಯ ಬಗ್ಗೆಯೂ

ನೀವು ಸ್ವಲ್ಪ ಎಚ್ಚರಿಕೆಯನ್ನು ವಹಿಸಬೇಕು.

ಶ್ರೀ ಜೆ.ಹೆಚ್.ಪಟೇಲ್: ಬೆಳಗಾವಿ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ಆಗಿದೆ. ಆದರೆ ಇನ್ನು ಅದಕ್ಕೆ ಬೆಳಗಾಮ್ ಮತ್ತು ಗುಲ್ಬರ್ಗಾ ಬಗ್ಗೆ ಇದುವರವಿಗೂ ಯಾವುದೇ ರೀತಿಯ ಸರ್ಕಾರಿ ಆದೇಶವನ್ನು ಹೊರಡಿಸಿಲ್ಲ, ಯಾವುದೇ ನೋಟಿಫಿಕೇಶನ್ ಸಹ ಹೊರಡಿಸಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಗುಲ್ಬರ್ಗಾಕ್ಕೂ ಬೆಳಗಾಮ್‌ಗೂ ಏನು ಸಂಬಂಧ?

ಶ್ರೀ ಜೆ.ಹೆಚ್.ಪಟೇಲ್: ಎರಡೂ ಇರುವುದು ಕರ್ನಾಟಕದಲ್ಲೇ,

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್: ಗುಲ್ಬರ್ಗಾದ ಪ್ರಶ್ನೆ ಬರುವುದಿಲ್ಲ. ಬೆಳಗಾವಿಯಂತೂ ಸ್ಪಷ್ಟ. ಬೆಳಗಾವಿ ಬಗ್ಗೆ ಸದ್ಯದಲ್ಲಿ ನೀವು ನಿರ್ಧಾರ ತೆಗೆದುಕೊಳ್ಳುವುದು ಏನು ಬೇಡ.

ಶ್ರೀ ಜೆ.ಹೆಚ್.ಪಟೇಲ್: ನಾನು ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಈ ರೀತಿಯ ಚಳುವಳಿಗಳನ್ನು ಮುಂದುವರೆಸಬಾರದೆಂದು ನಾನು ಸದನದ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಮತ್ತು ಇಂಥ ವಿಷಯಗಳಿಂದ ಏನಾದರೂ ಮಾಡಿ ಸಮಸ್ಯೆ ಉದ್ಭವ ಮಾಡಬೇಕೆನ್ನುವವರ ಬಗ್ಗೆ ಎಚ್ಚರಿಕೆಯನ್ನು ವಹಿಸುತ್ತೇವೆ. ಇಷ್ಟಾದ ಮೇಲೆ ನಮ್ಮ ಸರ್ಕಾರದ ಸಾಧನೆಗಳು, ಮಾನ್ಯ ವಿರೋಧ ಪಕ್ಷದ ನಾಯಕರ ಟೀಕೆಗಳು, ಮತ್ತು ಈ ಸಲದ ಸದನದಲ್ಲಿ ತಾವೆಲ್ಲರೂ ತುಂಬಾ ಕಷ್ಟಪಟ್ಟು ಕೆಲಸವನ್ನು ಮಾಡಿದ್ದೀರಿ, ತಾವು ಬಹಳ ಶ್ರಮವನ್ನು ಪಟ್ಟಿದ್ದೀರಿ, ಇವತ್ತು ಅಪ್ರೋಪ್ರಿಯೇಷನ್ ಬಿಲ್ ಬೇರೆ ಆಗಬೇಕು. ಈ ತರಹದ ಒಂದು ವಿಚಾರವನ್ನು ಸತ್‌ಸಂಪ್ರದಾಯವನ್ನು ನಾವು ಪರಸ್ಪರ ಒಬ್ಬರಿಗೊಬ್ಬರು ಅರ್ಥ ಮಾಡಿಕೊಳ್ಳದಿದ್ದರೆ ನಾವು ಯಾರ ಹತ್ತಿರ ಹೋಗಬೇಕು? ಪಂಜಾಬ್‌ನವರ ಹತ್ತಿರ ಹೋಗಲಿಕ್ಕೆ ಆಗುತ್ತಾದಾ? ನಿಮಗೆ ಹೋಗಳಲಿಕ್ಕೆ ಮನಸ್ಸು ಇಲ್ಲ ಅಂದರೆ ಸುಮ್ಮನೆ ಕೂರಿ. ಸುಮ್ಮನೆ ಇರಿ ಎಕ್ಸೈಜ್ ಬಗ್ಗೆ ಮೂರು ವಿಷಯಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಸ್ಟೇಟ್ ಎಕ್ಸೈಜ್ ರೆವಿನ್ಯೂ ಕಡಿಮೆ ಆಗುತ್ತಿದೆ. ಎಂಎನ್‌ಐಎಲ್‌ಗೆ ಏನು ಮೊನಾಪಲಿ ಲೈಸೆನ್ಸ್ ಕೊಟ್ಟಿದ್ದನ್ನು ತಿದ್ದುಪಡಿ ಮಾಡಿದ್ದೀರಿ ಅದು ಸರಿಯಲ್ಲ. ಆಮೇಲೆ ನಿಮ್ಮ ಎಕ್ಸೈಜ್ ಪಾಲಿಸಿ ಏನು? ಎಂದು ತಿಳಿಸಬೇಕೆಂದು ಹೇಳಿದರು. ಅದರ ತಿಳುವಳಿಕೆಗೆ ಬಂದಿದೆಯೋ ಗೊತ್ತಿಲ್ಲ 1991 ರಿಂದ 97ರವರೆಗೆ ರೆವಿನ್ಯೂ 510 ಕೋಟಿಯಿಂದ 846 ಕೋಟಿಗೆ ಏರುತ್ತಲೇ ಬಂದಿದೆ. ಯಾವಾಗಲೂ ಕಡಿಮೆ ಆಗಿಲ್ಲ. 3 ಪರ್ಸೆಂಟ್ ಆಗಿರಬಹುದು, 14 ಪರ್ಸೆಂಟ್ ಆಗಿರಬಹುದು, ಆದರೆ ಪ್ರತಿವರ್ಷ ರೆವಿನ್ಯೂ ಹೆಚ್ಚಾಗುತ್ತಲೇ ಬಂದಿದೆ. ನಾವು ಯಾವಾಗಲೂ ಸಂಪೂರ್ಣ ಪಾನನಿಷೇಧ ಎಂದು ಯಾವಾಗಲೂ ಹೇಳಿಲ್ಲ. ಇದನ್ನು

ನಾನೂ ಹೇಳಿಲ್ಲ, ನಮ್ಮ ಫೈನಾನ್ಸ್ ಮಿನಿಸ್ಟರ್ ಹೇಳಿಲ್ಲ, ನಮ್ಮ ಕ್ಯಾಬಿನೆಟ್ ಹೇಳಿಲ್ಲ. ಈ ಸಾರಾಯಿ, ಗುತ್ತಿಗೆದಾರರ ಮುಖಾಂತರ ಹೋಗಿ ಹಳ್ಳಿಗರ ಆರೋಗ್ಯವನ್ನು ಕೆಡಿಸುತ್ತಿರುವಾಗ, ಎಲ್ಲಾ ರೀತಿಯ ವಿಷಯಗಳನ್ನು ಅದರಲ್ಲಿ ಸೇರಿಸಿ, ಅದನ್ನು ಜೇಬಿನಲ್ಲಿ ಇಟ್ಟುಕೊಂಡು ಹೋಗುವ ಹಾಗೆ ಸಣ್ಣ ಸ್ಯಾಚೆಟ್‌ಗಳನ್ನು ಮಾಡಿ ಕೊಂಡು ಹಳ್ಳಿಗರ ಆರೋಗ್ಯ ಮತ್ತು ಶಾಂತಿಯನ್ನು ಕದಡುತ್ತಿದೆ ಆದುದರಿಂದ, ಈ ಸಾರಾಯಿಯನ್ನು ನಿಷೇಧ ಮಾಡಬೇಕೆಂದು ನಮ್ಮ ಒಂದು ಜನರಲ್ ಐಡಿಯಾ. ಆಮೇಲೆ ಒಂದು ಸಬ್ ಕಮಿಟಿಯನ್ನು ಮಾಡಿ, ಸಾರಾಯಿಯನ್ನು ಸಂಪೂರ್ಣ ನಿಷೇಧ ಮಾಡಿದಂತಹ ರಾಜ್ಯಗಳಿಗೆ ಹೋಗಿ ನೋಡಿದಾಗ ಅಲ್ಲಿನ ಅನುಭವ ಏನಾಯಿತು ಎಂದರೆ, ಸಾರಾಯಿ, ನಿಷೇಧ ಮಾಡಿ, ಕಳ್ಳಬಟ್ಟಿಸಾರಾಯಿ ಮಾತ್ರವಲ್ಲದೆ ಅದಕ್ಕೆ ಸಂಬಂಧಪಟ್ಟ ಹಾಗೆ ಕ್ರಿಮಿನಲ್ ಗ್ಯಾಂಗ್ಸ್ ಅದೊಂದು ಪ್ಯಾರಲಲ್ ಗೌರ್ನಮೆಂಟ್ ತರಹ ನಡೆಯುತ್ತಿದೆ. ಅದಕ್ಕೆ ನಮ್ಮ ಹಿರಿಯ ಸಹದ್ಯೋಗಿಗಳೇ ಹೋಗಿದ್ದರು. ಅವರ ಸಲಹೆ ಏನು ಬಂತು ಅಂದರೆ, ಸಾರಾಯಿ ಸಂಪೂರ್ಣ ನಿಷೇಧ ಮಾಡುವುದು ಬೇಡ. ಸರ್ಕಾರದ ಮುಖಾಂತರ ಬೇಕಾದರೆ ಅದನ್ನು ನಿಯಂತ್ರಿಸಿ, ಈಗ ಯಾವ ಕುಲ್ಲಾ ಆಗಿದೆ ಆ ತರಹ ಕುಲ್ಲಾ ಆಗದ ಹಾಗೆ ನೋಡಿಕೊಂಡು, ಈ ಗುತ್ತಿಗೆದಾರರ ಕೈಯಲ್ಲಿ ಇದನ್ನು ಕೊಡುವುದನ್ನು ಬಿಟ್ಟು, ಸರ್ಕಾರವೇ ಅದನ್ನು ನಿಯಂತ್ರಿಸಬೇಕೆಂದು ನಾವು ನವೆಂಬರ್ 1 ರಿಂದ ಒಂದು ಪಾಲಿಸಿಯನ್ನು ಜಾರಿಗೆ ತರುತ್ತಿದ್ದೇವೆ.

1.00 ಪಿ.ಎಂ

ಶ್ರೀ ವಾಟಾಳ್ ನಾಗರಾಜ್: ಅಂದರೆ ಸರ್ಕಾರವೇ ಸಾರಾಯಿ ಅಂಗಡಿ ತೆರೆಯುವುದು ಎಂದೇ?

ಶ್ರೀ ಜೆ.ಹೆಚ್.ಪಟೇಲ್: ಸಾರಾಯಿ ಯಾರು ಮಾರುತ್ತಾರೋ, ಅವರಿಗೆ ನಾವು ಲೈಸೆನ್ಸ್ ಕೊಡುತ್ತೇವೆ. ಈಗ ಏನಾಗಿದೆ ಎಂದರೆ, ಯಾರು, ಎಲ್ಲಿ, ಏನು ತೆಗೆದರೂ ಯಾರೂ ಬೇಡ ಎನ್ನುವ ಹಾಗಿಲ್ಲ. ಆ ರೀತಿ ವ್ಯವಸ್ಥೆ ಬಹಳ ಕೆಟ್ಟು ಹೋಗಿದೆ. ಅದನ್ನು ನಿಯಂತ್ರಿಸಬೇಕು. ನವೆಂಬರ್‌ನಿಂದ ಮಾನ್ಯ ಹಣಕಾಸು ಮಂತ್ರಿಗಳು ಅದಕ್ಕೆ ಒಂದು ಪಾಲಿಸಿಯನ್ನು ಮಾಡುತ್ತಾರೆ. ಏಕೆಂದರೆ ಸುಮಾರು 20 ಸಾವಿರ ಅಥವಾ ಅದಕ್ಕಿಂತಲೂ ಜಾಸ್ತಿ ಅಂಗಡಿಗಳು ಇವೆ. ಅದರ ನಾಲ್ಕನೇ ಒಂದು ಭಾಗಕ್ಕೆ ಇಳಿಸಬೇಕು. ಮೊದಲಿಗೆ ಸ್ಲಂಗಳು, ಲಂಬಾಣಿ ತಾಂಡ, ಒಡ್ಡರ ಹಟ್ಟಿ ಇಂಥ ಕಡೆಗಳಲ್ಲಿ....

ಶ್ರೀ ವಾಟಾಳ್ ನಾಗರಾಜ್: ನವೆಂಬರ್ 1ರಂದು ಏನು ವಿಶೇಷ?

ಶ್ರೀ ಜೆ.ಹೆಚ್.ಪಟೇಲ್: ಅಂದರೆ ಅಲ್ಲಿಯವರೆಗೆ ಟೈಂ ಎಕ್ಸ್‌ಟೆಂಡ್ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ನವೆಂಬರ್ ಒಂದನೇ ತಾರೀಖು ಪ್ರಮುಖವಾದ ದಿನ

ಎಂದು ಮಾಡಿದ್ದೀರೇನು?

ಶ್ರೀ ಜೆ.ಹೆಚ್.ಪಟೇಲ್: ಏನೂ ಇಲ್ಲದಿದ್ದರೂ ಅದು ಪ್ರಾಮುಖ್ಯವೇ.

ಶ್ರೀ ವಾಟಾಳ್ ನಾಗರಾಜ್: ಯಾವತ್ತು ಬೇಕಾದರೂ ಅದನ್ನು ಮಾಡಿಕೊಳ್ಳಬಹುದಿತ್ತಲ್ಲವೇ? ನವೆಂಬರ್ ಒಂದನೇ ತಾರೀಖೇ ಏಕೆ?

ಶ್ರೀ ಎಂ.ಪಿ.ಪ್ರಕಾಶ್: ನವೆಂಬರ್ 1ರಂದು ರಾಜ್ಯೋತ್ಸವ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಜೆ.ಹೆಚ್.ಪಟೇಲ್: ಹಾಗೇನಿಲ್ಲ. ಆಮೇಲೆ ಇಲ್ಲಿ ಓದುತ್ತಾ ಹೇಳಿದರು, ತಮಿಳುನಾಡಿನಲ್ಲಿ ಇಷ್ಟು ಲಕ್ಷ ಕೇಸುಗಳಿವೆ. ಇದ್ದಕ್ಕಿದ್ದ ಹಾಗೆ ಕರ್ನಾಟಕದಲ್ಲಿ ಕಡಿಮೆಯಾಗಿ ಬಿಟ್ಟಿವೆಯಲ್ಲಾ ಹೇಗೆ? ಎಂದು ಕೇಳಿದರು. ಇದೆಲ್ಲಾ ಸೆಕೆಂಡ್ಸ್ ಸೆಕೆಂಡ್ಸ್ ಎಂದು ಹೇಳಿದರು. ಕೊನೆಗೆ ಥರ್ಡ್ಸ್ ಸಹಾ ಬಂತು. ಇವೆಲ್ಲಾ ಇಲ್ಲಿ ಬಂದುಬಟ್ಟಿವೆ, ಮಾಡಿಬಿಟ್ಟಿದ್ದಾರೆ, ಸರ್ಕಾರವೇ ಇದಕ್ಕೆಲ್ಲಾ ಕಾರಣ, ಅದರಲ್ಲೂ ನಾನೇ, ಜೆ.ಹೆಚ್.ಪಟೇಲರೇ ಕಾರಣ ಎಂದು ಹೇಳಿದರು. ಸ್ವಾಮಿ ಸೆಕೆಂಡ್ಸೂ ಇಲ್ಲ, ಥರ್ಡ್ಸೂ ಇಲ್ಲ. ಈಗ 5 ಕೋಟಿ ಲೀಟರ್ ಸಾರಾಯಿ ಬಳಕೆಯಾಗುತ್ತಿದೆ. ಅದರಲ್ಲಿ ಎಂ.ಎಸ್.ಐ.ಎಲ್, ಐಎಂ.ಎಲ್.ಸಿ. ಮಾಡಿದ ವ್ಯಾಪಾರ ಶೇ.25ರಷ್ಟು ವೆಂಕಟಸುಬ್ಬಯ್ಯನವರು ಎನ್ನುವ ಒಬ್ಬ ಮಹಾನುಭಾವರು ಇಲ್ಲಿ ರಾಜ್ಯಪಾಲರಾಗಿದ್ದರು. ಅವರು ಏನು ಕಾರಣಕ್ಕೋ ಏನೋ, ಇದ್ದಕ್ಕಿದ್ದಹಾಗೆ ಎಂ.ಎಸ್ಐ.ಎಲ್.ಗೆ ಮೊನಾಪಲಿ ಮಾಡಿದರು. ಅವರಿಗೆ ಮೊನಾಪಲಿ ಅಥಾರಿಟಿ ಕೊಟ್ಟಮೇಲೆ, ಹೋಲ್‌ಸೇಲರ್ಸ್ ಏನು ಮಾಡಿದರು ಎಂದರೆ, ಅವರು ರಿಟ್ ಹೋದರು, ಸ್ಟೇ ತಂದರು. ಸ್ಟೇ ತಂದು ಆದಮೇಲೆ 1996ರವರೆಗೆ ಹೋಲ್‌ಸೇಲೂ ನಡೆಯುತ್ತಿತ್ತು ಎಂ.ಎಸ್.ಐ.ಎಲ್.ದೂ ನಡೆಯುತ್ತಿತ್ತು. ಎರಡೂ ಜೊತೆಜೊತೆಗೇ ಸೇರಿ ಸಂತೆಯಾಗುತ್ತಿತ್ತು. ಕೊನೆಗೆ ನಮ್ಮ ಲಾ ಮಿನಿಸ್ಟರ್ ಏನು ಹೇಳಿದರು ಎಂದರೆ ಇದನ್ನು ಈ ರೀತಿ ಮಾಡುವುದು ಬೇಡ, ಫ್ರೀ ಮಾರ್ಕೆಟ್ ಮಾಡಿಬಿಡೋಣ. ಈಗ ಎಲ್ಲವೂ ಹೆಚ್ಚು ಕಡಿಮೆ ಫ್ರೀ ಮಾರ್ಕೆಟ್ಟೇ ಕಾಣುತ್ತವಲ್ಲಾ. ಲಿಬರಲೈಸೇಷನ್ ಎಂದು ಆಯಿತು, ಗ್ಲೋಬಲೈಸೇಷನ್ ಎಂದು ಆಯಿತು. ಇದನ್ನು ಮಾತ್ರ ಏಕೆ ಮನೋಪಲಿ ಎಂದು ಹೇಳಿ ನಾವು ಇದನ್ನು ಕಳೆದ ವರ್ಷ ಮಾಡಿದೆವು. Supreme court had supported our Government. ಅದರಲ್ಲೇನೂ ಭಿನ್ನಾಭಿಪ್ರಾಯವಿಲ್ಲ. ಅದನ್ನು ಮನಾಪಲಿ ಎನ್‌ಫೋರ್ಸ್ ಮಾಡಲಿಲ್ಲ. ಮನಾಪಲಿ ಇದ್ದು ಅದನ್ನು ಎನ್‌ಫೋರ್ಸ್ ಮಾಡಿ ಕಾನೂನಿನ ಪ್ರಕಾರ ಬೇರೆ ಯಾರೂ ಮಾರಾಟ ಮಾಡಲು ಆಗದೇ ಇದ್ದರೆ ಅದನ್ನು ಒಪ್ಪತ್ತೇನೆ ನಾನು. ಇದಕ್ಕೆ ಒಂದು ಮನಾಪಲಿ ಎಂದು ಕೊಡುವುದು ಮತ್ತು ಪಕ್ಕದಲ್ಲಿ ಹೋಲ್‌ಸೇಲ್‌ನವನೂ ಇರುವುದು. ಈ ಅವ್ಯವಸ್ಥೆ ಬೇಡ ಎಂದು ಅದನ್ನು ತೆಗೆದು ಹಾಕಿದ್ದೇವೆ. ಅದರಲ್ಲಿ ಯಾವ ಲಾಬಿಯೂ ಇಲ್ಲ. ಈ ಕಡೆ ಲಾಬಿಯೂ ಇಲ್ಲ, ಆ ಕಡೆಯ ಲಾಬಿಯೂ ಇಲ್ಲ. ನ್ಯೂ ಅರ್‍ಯಾಕ್

ಪಾಲಿಸಿ ಬಗ್ಗೆ ಕೇಳಿದ್ದಾರೆ. That will be announced by the Finance Minister before noon. This is about excise.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೇ, ಬಹಳ ಸವಿಸ್ತಾರವಾಗಿ ಅಲ್ಲದೇ ಇದ್ದರೂ ಕೂಡ ಕೆಲವೊಂದು ವಿಷಯಗಳಲ್ಲಿ ಬಹಳ ಸವಿಸ್ತಾರವಾಗಿ ಹೇಳಿದ್ದಾರೆ. ಫಿಲಾಸಫಿಕಲಿ, ಸಾಕಷ್ಟು ಒಳ್ಳೆಯ ಭಾಷಣವನ್ನು ಮಾಡಿದರು. ಬಸವಣ್ಣನವರ ವಚನವನ್ನು ಕೂಡ ಹೇಳಿದರು. ಆಧುನಿಕ ಬಸವಣ್ಣನವರ ಹಾಗೆ ನಮಗೆ ಕೆಲವು ತತ್ವಜ್ಞಾನಗಳನ್ನು ಕೂಡ ಹೇಳಿದರು. ನಾವು ಬಹಳ ಶಾಂತಿ ರೀತಿಯಿಂದ ಕೇಳಿದ್ದೇವೆ. ಎಲ್ಲರೂ ಕೂಡ ಬಹಳ ಶಾಂತ ರೀತಿಯಿಂದ ಕೇಳಿದ್ದಾರೆ. ಆಮೇಲೆ ಕುಸ್ತಿ ಆಡುವುದಕ್ಕೆ ಬರುವವನ ಕಚ್ಚೆಯನ್ನು ಹಿಡಿಯಬಾರದಂತೆ. ಕುಸ್ತಿ ಆಡುವವರು ಕಚ್ಚೆ ಹಾಕಿಕೊಂಡು ಹೋಗುವುದಿಲ್ಲ, ಅವರು ಚೆನ್ನಾಗಿ ಚೆಡ್ಡಿ ಹಾಕಿಕೊಂಡು ಹೋಗಬೇಕು. ಅದಕ್ಕಾಗಿ ನೀವು ಎಲ್ಲಾದರೂ ಕುಸ್ತಿ ಆಡಲು ಹೋಗುವಾಗ ಕಚ್ಚೆಗಿಚ್ಚೆ ಹಾಕಿಕೊಂಡು ಹೋದೀರಿ. ಕಾಚಾ ಹಾಕಿಕೊಂಡೇ ಹೋಗಿ. ಈ ದಡದಿಂದ ಆ ದಡಕ್ಕೆ 63ನೇ ಇಸವಿಯಲ್ಲೇ ಈಜಾಡಿದರು ಎಂದರೆ ಲೆಕ್ಕಹಾಕಿ, ಇವತ್ತು ನಮ್ಮ ಸುದೈವ ಅವರು ಉಳಿದಿದ್ದಾರೆ. ಗಂಗಾನದಿಯಲ್ಲಿ ಈಜಾಡುವಾಗ ತಪ್ಪೇನಾದರೂ ಆಗಿದ್ದರೆ ಅರೇಬಿಯನ್ ಸಮುದ್ರಕ್ಕೆ ಹೋಗುತ್ತಿದ್ದರು. ನಾನು ಪ್ರಮುಖವಾಗಿ ಅವರು ಇದ್ದಾಗಲೂ ಕೆಲವು ಮಾತುಗಳನ್ನು ಎತ್ತಿದ್ದೆ, ನಾಗೇಗೌಡರೂ ಇದ್ದಾಗಲೂ ಎತ್ತಿದ್ದೆ, ಸದನದಲ್ಲಿ ಅನೇಕ ಮಂತ್ರಿಗಳು ಇಲ್ಲಿ ಪ್ರಸ್ತುತವಿದ್ದಾಗ, ಹಾಜರಿದ್ದಾಗ ನೇರವಾಗಿ ನಾನು ಮೂರ್ನಾಲ್ಕು ವಿಷಯಗಳ ಬಗ್ಗೆ ವಿಚಾರಣೆಗಾಗಿ ಕೇಳಿದ್ದೆ. ಏಕೆಂದರೆ, ಅದನ್ನೇ ಪದೇ ಪದೇ ಕೇಳುತ್ತಾರೆ ಎಂದು ನಿಮಗೆ ಸಿಟ್ಟು ಬರಬಹುದು. ಅದರಲ್ಲಿ ಅರ್ಥ ಇದೆ. ಏಕೆಂದರೆ ಒಂದೆರಡು ದಿವಸಗಳಲ್ಲಿ 200-300 ಕೋಟಿ ರೂಪಾಯಿಗಳ ಗುತ್ತಿಗೆಯನ್ನು ಕೊಡಬೇಕು ಎಂದರೆ, there is something, ನೀವು ಇಲ್ಲ ಎಂದು ಹೇಳುವುದಕ್ಕೆ ಹೋಗಬೇಡಿ. ಅದರ ಹಿನ್ನಲೆ ಏನಿದೆ? ಆಗ ನೀವಂತೂ ಇರಲಿಲ್ಲ. ನೀವು ಇರಲಿಲ್ಲ ಎಂದಾಗ ಅದರ ವಿಚಾರಣೆ ಮಾಡಿಸಲು ಏನು ತೊಂದರೆಯಾಗುತ್ತದೆ? ಅದು 10-20 ಜನ ಅಲ್ಲ, 200-300 ಜನರನ್ನು ಕರೆದು ಒಂದು ಕಡೆ ಮೀಟಿಂಗ್ ಮಾಡಿ, ಆ ಮೀಟಿಂಗ್ ಇಲ್ಲೇ ನಡೆದು ತರಾತುರಿಯಲ್ಲಿ ಅದನ್ನು ಮಾಡಿದಿರಿ. ಅದಕ್ಕಾಗಿ ನೀವು ಅದನ್ನು ಲೋಕಾಯುಕ್ತಕ್ಕಾದರೂ ಕಳುಹಿಸಿ ಎಂದು ನಾವು ಕೇಳಿದ್ದೆವು. ನಾವು ಸಿ.ಬಿ.ಐ. ಎನ್‌ಕ್ವೈರಿ ಕೇಳಲಿಲ್ಲ ಅಥವಾ ಮತ್ತ್ಯಾವುದನ್ನೂ ಕೇಳಲಿಲ್ಲ. ಲೋಕಾಯುಕ್ತಕ್ಕೆ ಅದನ್ನು ಕಳುಹಿಸಿ. ಹೇಗೆ ಅದನ್ನು ಅಲಾಟ್‌ಮೆಂಟ್ ಮಾಡಿದಿರಿ? ಏಕೆ ಈ ರೀತಿಯಾಗಿ ಮಾಡಿದರು? ಅದರ ಬಗ್ಗೆ ಕೂಡ ತಾವು ಉತ್ತರ ಹೇಳಲಿಲ್ಲ. ಎರಡನೆಯದು ವಿ.ಸಿ.ನಾಲೆಯ ಬಗ್ಗೆ. ನಾನು ಅವರನ್ನೂ ಕೇಳಿಕೊಳ್ಳುತ್ತಿದ್ದೇನೆ, ಏಕೆ ಅವರು ಇದರ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ.

ಶ್ರೀ ಕೆ.ಎನ್.ನಾಗೇಗೌಡ: ಒಂದು ನಿಮಿಷ ಖರ್ಗೆಯವರೇ. ನೀವು ಹೇಳಿದ ಮೇಲೆ

ಹೈ ಪವರ್ ಕಮಿಟಿ ಕಾನ್ಸ್ಟಿಟ್ಯೂಟ್ ಮಾಡಿ ಅದಕ್ಕೆ 5 ಜನ ಚೀಫ್ ಇಂಜನಿಯರುಗಳನ್ನು ಹಾಕಿ, ಫೈನಾನ್ಸ್ ಸೆಕ್ರೆಟರಿಯವರನ್ನು ಹಾಕಿ, ಇರಿಗೇಷನ್ ಸೆಕ್ರೆಟರಿಯವರನ್ನು ಛೇರ್ಮನ್ ಮಾಡಿ ಲ್ಯಾಪ್ಸಸ್ ಇದ್ದರೆ ಕಂಡು ಹಿಡಿಯಿರಿ ಎಂದು ನಾನೇ ಹೇಳಿದ್ದೇನೆ. ತಾವು ಇದನ್ನು ಒಪ್ಪಿಕೊಳ್ಳುವುದಿಲ್ಲ, ಸಮಾಧಾನವಾಗುವುದಿಲ್ಲ ಎಂದರೆ, ಅಷ್ಟೂ ಸಮಾಧಾನವಾಗುವುದಿಲ್ಲ ಎಂದರೆ ಇನ್ನೇನು ಸಮಾಧಾನವಾಗಬೇಕು ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆಫೀಸರ್‌ಗಳು ಏಕೆ ಬೇಡ ಎಂದರೆ, ತಮಗೆ ಗೊತ್ತಿದೆ, ಅಫೀಷಿಯಲ್ ಲೆವೆಲ್‌ನಲ್ಲಿ ಅನೇಕ ಸಾರಿ ಏನಾಗುತ್ತದೆ ಎಂದರೆ ನಾವು ಮಾಡಿದ್ದನ್ನು, ನಾವು ಅಲಾಟ್‌ಮೆಂಟ್ ಮಾಡಿದ್ದು, ನಾವು ಇನ್ಸ್‌ಟ್ರಕ್ಷನ್ಸ್ ಕೊಟ್ಟಿದ್ದು, ನಾವು ಅದನ್ನು ಮುಚ್ಚಿಡಲು ಆಗುವುದಿಲ್ಲ ಎಂದು ಆಗ ಅಲ್ಲಿ ಅವರಿಗೆ ಸ್ವಲ್ಪ ಮುಜುಗರವಾಗುತ್ತದೆ. ನಾನು ಅವರಿಗೆ ಇದನ್ನೂ ಕೇಳಿದ್ದೆ, ಸುಮಾರು 6,19,907 ಚೀಲ ಸಿಮೆಂಟ, 641 ಟನ್ ಸ್ಟೀಲ್ ಇದರಲ್ಲಿ ಡೈವರ್ಷನ್ ಆಗಿತ್ತಾ? ಬೇರೆ ಪ್ರಾಜೆಕ್ಟ್‌ನಿಂದೇನಾದರೂ ಈ ಕಡೆಗೆ ತಂದು ಹಾಕಿದ್ದಾರಾ? 55 ಕೋಟಿಯಲ್ಲಿ ಇನ್ನೂ ಸುಮಾರು 20 ಕೋಟಿ ಅವರಿಗೆ ಕೊಡಬೇಕು. ಇಷ್ಟೊಂದು ಹಣ ಖರ್ಚು ಮಾಡಿದಿರಿ. ಆ 55 ಕೋಟಿ ರೂಪಾಯಿಗಳ ಅಲೋಕೇಷನ್‌ನಲ್ಲೇ ಇದು ಆಯಿತೇ ಅಥವಾ ಬೇರೆ ಯಾವುದಾದರೂ ಪ್ರಾಜೆಕ್ಟ್‌ನಿಂದ ಇದಕ್ಕೆ ಡೈವರ್ಷನ್ ಆಯಿತೇ, ಯಂತ್ರೋಪಕರಣಗಳೂ ಸೇರಿದಂತೆ, ಎನ್ನತಕ್ಕಂಥಾದ್ದರ ಬಗ್ಗೆಯೂ ಕೇಳಿದ್ದೆ. ಮತ್ತೆ ಸುಮಾರು 721 ಕಾಂಟ್ರಾಕ್ಟರುಗಳನ್ನು 6 ತಿಂಗಳಲ್ಲಿ ತಾವು ಸೃಷ್ಟಿ ಮಾಡಿ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ವತಿಯಿಂದ ಅವರಿಗೆ ಅಲೋಕೇಷನ್ ಮಾಡಿಕೊಟ್ಟು ಐದೂವರೆ ತಿಂಗಳಲ್ಲಿ ಮುಗಿಸತಕ್ಕಂಥ ವ್ಯವಸ್ಥೆ ಮಾಡಿದಿರಲ್ಲ, ನಿಮ್ಮ ಉದ್ದೇಶ ಒಳ್ಳೆಯದು ಇರಬಹುದು. ರೈತರಿಗೆ ನೀರು ಕೊಡೆತಕ್ಕಂಥಾದ್ದು, ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ತರಾತುರಿಯಲ್ಲಿ ಮಾಡಿ, ಯಾವ ಕ್ವಾಲಿಟಿಯನ್ನು ತಾವು ಅಲ್ಲಿ ಮೈನ್‌ಟೈನ್ ಮಾಡಿದಿರಿ, ಅದರ ಬಗ್ಗೆ ನಾನು ದೂಷಿಸುತ್ತಿದ್ದೇನೆ. ಅದನ್ನೂ ಲೋಕಾಯುಕ್ತಕ್ಕೆ ಕೊಡಿ ಎಂದರೆ ಅದನ್ನೂ ಕೂಡ ತಾವು ಹೇಳಲಿಲ್ಲ, ಅದಕ್ಕೂ ತಾವು ಉತ್ತರ ಕೊಡಲಿಲ್ಲ. ಮೂರನೆಯದು ಏನೆಂದರೆ, ಗ್ರಾನೈಟ್ಸ್ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಯಿತು. ಬಿಜಾಪುರದ ಡೆಪ್ಯುಟಿ ಕಮೀಷನರ್ ಆರ್ಡರ್ ಜೆಮ್ ಗ್ರಾನೈಟ್‌ಗೆ ಕೊಟ್ಟಿದ್ದಂಥ ಜಮೀನು ಏನಿತ್ತು, ಅದು ಸರ್ಕಾರೀ ಜಮೀನು. ಅದು ಯಾವುದೇ ಒಂದು ಸಂಸ್ಥೆಗೆ ಸೇರಿದ್ದಲ್ಲ. ಅದಕ್ಕಾಗಿ ಹೋರಾಟ ನಡೆಯಿತು. ಕೊನೆಗೆ ಹೈಕೋರ್ಟು ಅಪ್‌ಹೆಲ್ಡ್ ಮಾಡಿತು, ಸುಪ್ರೀಂ ಕೋರ್ಟ್ ಅಪ್‌ಹೆಲ್ಡ್ ಮಾಡಿತು. ಇಷ್ಟೆಲ್ಲಾ ಅಪ್‌ಹೆಲ್ಡ್ ಮಾಡಿದ ಮೇಲೂ ಕೂಡ ಪುನಃ ಅದರಲ್ಲಿ ತಿದ್ದುಪಡಿ ತಂದು ಸರ್ಕಾರದ ಆದೇಶವನ್ನು ಮಾಡಿಪ್ಪೆ ಮಾಡಿ, ಪುನಃ ಜೆಮ್‌ನವರಿಗೆ ಕೊಡತಕ್ಕಂಥ ಅವಶ್ಯಕತೆ ಏನಿತ್ತು? ಅದಕ್ಕಾಗಿಯೇ ನಾವು ಹೇಳಿದ್ದು, ಅದರಲ್ಲಿ ವ್ಯವಹಾರವಾಗಿದೆ, ಕೆಲವು ಜನರ ಹೇಳಿಕೆಯ

ಮೇರೆಗೆ ತಾವು ಕೊಟ್ಟಿದ್ದೀರಿ. ಕೇಂದ್ರಸರ್ಕಾರದಿಂದ ಪತ್ರವೂ ಬಂದಿದೆ ಎನ್ನತಕ್ಕಂಥ ಮಾತನ್ನೂ ನಾನು ಹೇಳಿದೆ. ಅದಕ್ಕೆ ಎನ್‌ಕ್ವೈರಿ ಮಾಡಿ ಎಂದರೆ ಅದಕ್ಕೂ ಕೂಡ ತಾವು ಸ್ಪಂದಿಸಲಿಲ್ಲ. ನಾಲ್ಕನೆಯದು, ನ್ಯಾಷನಲ್ ಗೇಮ್ಸ್ ಬಗ್ಗೆ ಈಗಾಗಲೇ ಅವರು ಪ್ರಸ್ತಾಪ ಮಾಡಿದ್ದಾರೆ. ಇಷ್ಟೊಂದು ನಾಲ್ಕೈದು ಹಗರಣಗಳು ಇವೆ. ತಾವು ಯಾವುದಿದೆ, ಯಾವುದಿದೆ ಎಂದು ಕೇಳುತ್ತೀರಿ. ಎಕ್ಸೈಜ್ ಬಗ್ಗೆಯೂ ಅಷ್ಟೆ, ತಾವು ಹೇಳತಕ್ಕಂಥದ್ದು, ಈ ಇಲಾಖೆಯಲ್ಲಿ ಇರಬಹುದು, ಯಾವುದು, ಲಿಬರ್‌ಲೈಸ್ ಪಾಲಿಸಿ, ಸ್ವಾಮಿ ಲಿಬರ್‌ಲೈಸ್ ಪಾಲಿಸಿ ಇದನ್ನು ಎಲ್ಲಿ ಅಪ್ಲೈ ಮಾಡಬೇಕು ಅಲ್ಲಿ ಮಾಡಿ. ಇಲ್ಲಿ ನಿಮ್ಮ ರೆವಿನ್ಯೂ ಎಲ್ಲಾ ಸೋರಿ ಹೋಗುವಾಗ, ಸುಮಾರು 300-400 ಕೋಟಿ ರೂಪಾಯಿಗಳು ಸೋರಿ ಹೋಗುವಾಗ, ಅಂಥ ಕಡೆ ನೀವು ರೂಲನ್ನು ಬದಲಾವಣೆ ಮಾಡಿ. ಮಾಡಿಫೈ ಮಾಡಿ ಪ್ರೈವೇಟ್ ಕಾಂಟ್ರಾಕ್ಟ್‌ಗಳಿಗೆ ಇದನ್ನು ವಹಿಸಿದರೆ ನಮ್ಮ ಬೊಕ್ಕಸಕ್ಕೆ ಬರತಕ್ಕ ಹಣ ಬರುವುದಿಲ್ಲ, ಮತ್ತು ಸುಪ್ರೀಂ ಕೋರ್ಟ್ ಮುಂದೆ ನೀವು ಅಫಿಡೆವಿಟ್ ಹಾಕಿದ್ದೀರಿ, ಏನೆಂದು ಎಂದರೆ ನಾವು ಇದನ್ನು ಎಂಎಸ್‌ಐಎಲ್‌ಗೆ ಏಕೆ ಕೊಡುತ್ತಿದ್ದೇವೆ, government owned or government controlled institutions, ಏಕೆ ಕೊಡುತ್ತಿದ್ದೇವೆ ಅಂದರೆ, ಇಲ್ಲಿ ಸೆಕೆಂಡ್ಸ್ ಹಾವಳಿ ಜಾಸ್ತಿ ಇದೆ, ಅದನ್ನು ತಡೆಯಬೇಕು ಎನ್ನುವ ದೃಷ್ಟಿಯಿಂದ ನಾವು ಕೊಡುತ್ತಿದ್ದೇವೆ ಎಂದು ನೀವು ಅಫಿಡೆವಿಟ್‌ನಲ್ಲಿ ಕೊಟ್ಟಿದ್ದೀರಿ, ಪುನಃ ಅಫಿಡೆವಿಟ್‌ಗೆ ತಿದ್ದುಪಡಿ ತಂದು, private contract ಆ ದೃಷ್ಟಿಯಿಂದ ನಾನು ಹೇಳಿದೆ, excise lobbyಗೆ ಮಣಿದು ಇದು modify ಆಗಿದೆ ಎನ್ನತಕ್ಕಂಥದ್ದು ಹೇಳಿದೆ, ಅದಕ್ಕೆ ನಿಮಗೆ ಸಿಟ್ಟು ಬಂತು. ನಿಮಗೆ ಎಲ್ಲಿ ಅನುಕೂಲ ಆಗುತ್ತದೆ ಅಲ್ಲಿ ಮಾಡಿಫೈ ಮಾಡುತ್ತೇವೆ ಎಂದರೆ ಹೇಗೆ? ಜೆಮ್ ಗ್ರಾನೈಟ್ ಆರ್ಡರ್ ಮಾಡಿಫೈ ಮಾಡಿದಿರಿ, ಎಕ್ಸೈಜ್‌ದು ಆರ್ಡರ್ ಮಾಡಿಫೈ ಮಾಡಿದಿರಿ. ಇಲ್ಲಿ ಅನೇಕ ಕೋಟ್ಯಾಂತರ ರೂಪಾಯಿ ಇರತಕ್ಕಂಥ ಪ್ರಾಜೆಕ್ಟ್‌ಗಳನ್ನು ಎನ್‌ಕ್ವೈಯರಿ ಮಾಡಿ ಎಂದರೆ ಆಗುವುದಿಲ್ಲ ನಾವು ಏನು ಬೇರೆಯದು ಹೇಳಲಿಲ್ಲ. ಪವರ್ ಬಗ್ಗೆ ನಮಗೆ ಮಾಹಿತಿ ಸಿಕ್ಕಿಲ್ಲ ನಾವು ಮಾತನಾಡಲಿಲ್ಲ, ಕೆ.ಎಸ್.ಆರ್.ಟಿ.ಸಿ ಬಗ್ಗೆ ಹೇಳಿದ್ದೇವೆಯೇ? ಇಂಡಸ್ಟ್ರಿ ಬಗ್ಗೆ ಹೇಳಿದ್ದೇವೆಯೇ? ಅಗ್ರಿ ಕಲ್ಚರ್ ಬಗ್ಗೆ ಹೇಳಿದ್ದೇವೆಯೇ? ರೂರಲ್ ಡೆವಲಪ್‌ಮೆಂಟ್ ಬಗ್ಗೆ ಹೇಳಿದ್ದೇವೆಯೇ? ಫೈನಾನ್ಸ್ ಎಲ್ಲಿ ನಮಗೆ ಇವತ್ತು ಗೊತ್ತಾಗಿದೆ, ಆ ರೂಲ್ಸ ನೀವು ಸಡಿಲಗೊಳಿಸುವುದರಿಂದ ಕೋಟ್ಯಾಂತರ ರೂಪಾಯಿ ಇವತ್ತು ಏನು ಲುಕ್‌ಸಾನ್ ಆಗುತ್ತಿದೆ ಆ ಒಂದು ಹಣವನ್ನು ತಡೆಗಟ್ಟಬೇಕು ಎನ್ನತಕ್ಕಂಥ ದೃಷ್ಟಿಯಿಂದ ಇವತ್ತಿನ ದಿವಸ ನಾವು ಈ ಮಾತನ್ನು ಹೇಳಿದ್ದೇವೆ. ಆದರೆ ನಮ್ಮ ಈ ಮಾತಿಗೆ ಏನು ಬೆಲೆ ಇಲ್ಲ. ಲೋಕಯುಕ್ತಕ್ಕೆ ರೆಫರ್ ಮಾಡಿ ಅಂದರೂ ಇಲ್ಲ. ಸಿ.ಬಿ.ಐ ಬೇಡ. ನಿಮ್ಮಕಾಲದಲ್ಲಿ ಮತ್ತು ಈ 2-3 ವರ್ಷಗಳಲ್ಲಿ ನಡೆದಂತಹ ಸ್ಕ್ಯಾಂಡಲ್ಸ್ ಅದರ ಬಗ್ಗೆ ಸಂಪೂರ್ಣವಾದ ತನಿಖೆ ಆಗಬೇಕೆಂದು ನಿಮಗೆ ಮನಸ್ಸಿದ್ದರೆ ಅದನ್ನು ನೇರವಾಗಿ ಲೋಕಾಯುಕ್ತಕ್ಕೆ ರೆಫರ್ ಮಾಡಿ. ಇಲ್ಲ ನಿಮಗೆ ಸಿ.ಬಿ.ಐ ಬೇಕು ಅಂದರೆ ಅದಕ್ಕೆ ರೆಫರ್ ಮಾಡಿ, ನಮಗೆ

ಅದರಲ್ಲಿ ಇಂಥದೇ ಎಜೇನ್ಸಿ ಬೇಕು ಎಂದು ಏನೂ ಇಲ್ಲ. ಆದರೆ ನೀವು ಇದನ್ನು ಮಾಡುವುದಿಲ್ಲ ಎಂದು ಹೇಳಿ ಹಠ ಹಿಡಿದರೆ ನೀವು ಇದಕ್ಕೆ ಅಪ್ರತ್ಯಕ್ಷವಾಗಿ ಪ್ರೋತ್ಸಾಹ ನೀಡುತ್ತಿದ್ದೀರಿ ಎಂದು ನಾನು ಹೇಳಬೇಕಾಗುತ್ತದೆ, then you have no moral right to continue as chief minister. ಯಾವಾಗ ನೀವು ಇಷ್ಟೊಂದು ಹಠ ಹಿಡಿದು ಕುಳಿತರೆ ಹಠ ಏನಿದೆ ಇದರಲ್ಲಿ,

ಶ್ರೀ ಜೆ.ಹೆಚ್.ಪಟೇಲ್: ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಎಂ.ಎಸ್.ಐ.ಎಲ್.ಗೆ ಮೊನಾಪಲಿ ಲೈಸೆನ್ಸ್ ಕೊಟ್ಟಾದ ಮೇಲೂ ಎರಡು ಜೊತೆ ಜೊತೆ ನಡೆದವು. ಇವರದೆ ಸರ್ಕಾರ ಇತ್ತು. ಇವರು ಯಾರ ಇನ್‌ಪ್ಲೂಯೆನ್ಸ್ ಮೇಲೆ ಇದ್ದಾರೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಮ್ಮ ಸರ್ಕಾರ ತಿದ್ದುಪಡಿ ತಂದು ಎಂ.ಎಸ್.ಐ.ಎಲ್.ಗೆ ಕೊಟ್ಟಿತ್ತು. On 13th September amendment from Governor? ಬಂದರೂ ಕೂಡ ಮುಂದೆ, ವೀರೇಂದ್ರ ಪಾಟೀಲ್ ಮತ್ತು ರಾಜಶೇಖರ ಮೂರ್ತಿಯವರು ಮುಂದುವರೆಸಿ, ಕೋಟ್ಯಾಂತರ ರೂಪಾಯಿಯ ಲಾಭ ಆಗಿದ್ದನ್ನು ತಾವು ನೋಡಿದ್ದೀರಿ.

ಶ್ರೀ ಜೆ.ಹೆಚ್.ಪಟೇಲ್: ಅಧ್ಯಕ್ಷರೇ 25% of the total trade was from M.S.I.L.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಎಷ್ಟು ಕೊಡುತ್ತೀರಿ ಅಷ್ಟು ಅವರು ತೆಗೆದುಕೊಳ್ಳುತ್ತಾರೆ. ಇವತ್ತು ಪೂರ್ಣ ಕೊಟ್ಟರೆ ಪೂರ್ಣ ತೆಗೆದುಕೊಳ್ಳುತ್ತಾರೆ. ಬೇರೆ ಎಜೆನ್ಸಿ ಕ್ರಿಯೇಟ್ ಮಾಡಿ, ಕೇರಳದಲ್ಲಿ ಮಾಡಿದ್ದಾರೆ ಮತ್ತು ಬೇರೆ ಕಡೆ ಮಾಡಿದ್ದಾರೆ.

ಶ್ರೀ ಜೆ.ಹೆಚ್.ಪಟೇಲ್: ಎಂ.ಎಸ್.ಐ.ಎಲ್.ಮೊನಾಪಲಿ ಕೊಡುವುದಕ್ಕೆ ಯಾರು ಮಾಡಿದ್ದರು? ಯಾರು ದುಡ್ಡು ಕೊಟ್ಟರು?

SRI M.MALLIKARJUNA KHARGE: that is government owned. That is government loan. You create different government agency...

ಶ್ರೀ ಜೆ.ಹೆಚ್.ಪಟೇಲ್: ಯಾವ ಉದ್ದೇಶದಿಂದ ಆ ಎಜೆನ್ಸಿಯನ್ನು ಕ್ರಿಯೇಟ್ ಮಾಡಿದೆವು ಆ ಉದ್ದೇಶ ಸಫಲವಾಗಲಿಲ್ಲ. ಅದಕ್ಕೋಸ್ಕರ ಬದಲಾವಣೆ ಮಾಡಲಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಎರಡು ತಿಂಗಳಿಗೆ ನೀವು ಬದಲಾವಣೆ ಮಾಡಿದ್ದೀರಿ, ಒಂದು ವರ್ಷ ಕೂಡ ನಡೆಸಲಿಲ್ಲ. ಒಂದು ವರ್ಷ ಆದರೂ ಮಾಡಿದ್ದರೆ, ನಾನು ಒಪ್ಪಿಕೊಳ್ಳುತ್ತಿದ್ದೆ. ಇದಕ್ಕೆ ತಾವು ಮನಸ್ಸು ಮಾಡುತ್ತಿಲ್ಲ, ಇದನ್ನು ರೆಫರ್

ಮಾಡುತ್ತಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ಇದು ಏಕೆ ಅವಶ್ಯಕತೆ ಇಲ್ಲ, ಇಷ್ಟೊಂದು ಲುಕ್ಸಾನ್ ಆಗಿರುವುದರಿಂದ ಎಂ.ಎಸ್.ಐ.ಎಲ್.ಅನ್ನು ಖಾಸಗಿಯವರಿಗೆ ಕೊಡುವುದರಿಂದ ಮತ್ತು ಡಿಸ್ಟಲರೀಸ್‌ಗೆ ಲೈಸೆನ್ಸ್ ಕೊಡುವುದರಿಂದ ಸೆಕೆಂಡ್ಸ್ ಮಾರಾಟ ಆಗುತ್ತದೆ, ಥರ್ಡ್ಸ್ ಮಾರಾಟ ಮಾಡಲಿಕ್ಕೆ ಅವಕಾಶ ಕೊಟ್ಟ ಹಾಗೆ ಆಗುತ್ತದೆ, ಈಗಾಗಲೇ ಸಾಕಷ್ಟು ಸೋರಿಕೆ ಆಗುತ್ತಿದೆ.

ಶ್ರೀ ಜೆ.ಹೆಚ್.ಪಟೇಲ್: 1992-93ರಲ್ಲಿ 44 ಡಿಸ್ಟಿಲರೀಸ್‌ಗೆ ಲೈಸೆನ್ಸ್ ಕೊಟ್ಟರಲ್ಲಾ ಏಕೆ ಕೊಟ್ಟಿರಿ? ನಮ್ಮ ಕಾಲದಲ್ಲಿ ಒಂದು ಕೊಟ್ಟಿಲ್ಲ ನಾವು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಮ್ಮ ಕಾಲದಲ್ಲಿ 10 ಮೆಡಿಕಲ್ ಕಾಲೇಜ್ ಕೊಟ್ಟಿರಿ ಎಂದು ಆ ಮೆಡಿಕಲ್ ಕಾಲೇಜ್‌ಗಳ ಅಡ್ಮಿಷನ್ ರೆಗ್ಯುಲರೈಸ್ ಮಾಡಬಾರದೇನು? ನಾನು ಇವತ್ತು ರೂಲ್ಸ್ ಅಮೆಂಡ್‌ಮೆಂಟ್ ಮಾಡಿ ಅಂತ ಅಂದಿರಿ ಅದಕ್ಕೆ ಕಾರಣರು ಎಂದು ಹೇಳುತ್ತಿದ್ದೇನೆ. ಇದರಿಂದ ರೆವಿನ್ಯೂ ಸೋರಿ ಹೋಗುತ್ತಿದೆ. ನೀವು ಇದನ್ನು ರೆಫರ್ ಮಾಡಿ, ನೀವು ರೆಫರ್ ಮಾಡಲಿಲ್ಲ ಅಂದರೆ ನಿಮ್ಮ ನೀತಿ ವಿರುದ್ಧ ನಾವು ವಾಕ್‌ಔಟ್ ಮಾಡುತ್ತೇವೆ.

ಶ್ರೀ ಜೆ.ಹೆಚ್.ಪಟೇಲ್: ಅಷ್ಟು ಮಾತು ತಾವು ಮೊದಲೇ ಹೇಳಬಾರದಿತ್ತೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಈಗ ಒಪ್ಪಿಕೊಂಡರು ನಾನು ಕೂರುತ್ತೇನೆ.

(ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆಯವರು ಸಭಾತ್ಯಾಗವನ್ನು ಮಾಡಿದರು)

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಗ್ರಾನೈಟ್‌ನಲ್ಲಿ ಇವರ ಕಾಲದಲ್ಲಿ 35 ಕೋಟಿ ರೂಪಾಯಿಗಳು ಬಂದಿತ್ತು. ಇವತ್ತು 125 ಕೋಟಿ ರೂಪಾಯಿಗಳು ಬರುತ್ತಿದೆ ಇದಕ್ಕೆ ಉತ್ತರ ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೆ, ಈ ಸ್ವರ್ಣ ಜಯಂತಿ ಸಂದರ್ಭದಲ್ಲಿ ವಿಶೇಷ ಅಧಿವೇಶನ ಲೋಕಸಭೆಯಲ್ಲಿ ಆಯಿತು. ಆ ರೀತಿ ಇಲ್ಲಿ ಏನಾದರೂ ಚರ್ಚೆ ಮಾಡಲಿಕ್ಕೆ ಪ್ರಾರಂಭ ಮಾಡಿ ಆ ದಿಕ್ಕಿನಲ್ಲಿ ಮುಖ್ಯಮಂತ್ರಿಗಳು ಒಳ್ಳೆಯ ಭಾಷಣವನ್ನು ಪ್ರಾರಂಭ ಮಾಡಿದರು. ಅದಕ್ಕೆ ವಿಶೇಷ ಅಧಿವೇಶನ ಕರೆದು ಚರ್ಚೆ ಮಾಡೋಣ ಎಂದರೆ ಮಾಡೋಣ. ಆದರೆ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ನಾವು ಏನೇ ಒಳ್ಳೆಯ ಕೆಲಸವನ್ನು ಮಾಡಿದರೂ ಸಹಿತ ನಮ್ಮ ಬೆನ್ನು ತಟ್ಟಲ್ಲ, ಒಳ್ಳೆಯ ಮಾತು ಆಡಲ್ಲ ಎಂದು, ಆದರೆ ನಾವು ನಿಮ್ಮ ಡ್ಯೂಟಿ ನೀವು ಮಾಡುವಾಗ ಎಲ್ಲಿ ತಪ್ಪಾಗಿದೆ, ಎಲ್ಲಿ ಕೊರತೆ ಆಗಿದೆ ಅದನ್ನು ಎತ್ತಿ ಹೇಳುವುದಕ್ಕೋಸ್ಕರ ನಾವು ವಿರೋಧಪಕ್ಷದಲ್ಲಿ ಕುಳಿತಿರುವುದು, ಆ ಕರ್ತವ್ಯವನ್ನು ನಾವು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ. ನಾವು ನಿರೀಕ್ಷೆ ಮಾಡಿದಂತೆ ಆಡಳಿತ ಸುಧಾರಣೆ ಬಗ್ಗೆ ನಿಮ್ಮ

ಬಾಯಿಂದ ಒಂದು ಮಾತು ಬರಲಿಲ್ಲ. ಎರಡನೆಯದು ಕೆ.ಇ.ಬಿ. ವಿಚಾರ ಬಂದಾಗ ಬೇರೆ ಯಾವುದೇ ಕಾರಣಕ್ಕೆ ಸದನದ ಕಾರ್ಯಕಲಾಪ ನಡೆಯಬಾರದು ಎಂದು ಅಡ್ಡಿ ಮಾಡಲಿಲ್ಲ ಆದರೆ ಒಂದು ದಿವಸ ಹಗಲುರಾತ್ರಿ ಧರಣಿ ಮಾಡಿದೆವು. ಏಕೆಂದರೆ ಹೆಚ್ಚಿರುವಂತಹ ವಿದ್ಯುತ್ ದರವನ್ನು ರೈತನಿಗೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳಿಗೆ ಗೃಹಬಳಕೆ ಉಪಯೋಗಿಸತಕ್ಕವರಿಗೆ ತಾವು ಒಂದು ಕನ್‌ಸೇಶನ್ ಅನ್ನು ತಮ್ಮ ಉತ್ತರದಲ್ಲಿ ಘೋಷಣೆ ಮಾಡುತ್ತೀರೆಂದು ನಾವು ನೀರಿಕ್ಷೆ ಮಾಡಿದ್ದೆವು. ಮತ್ತೊಂದು ಈ ಎಸ್.ಸಿ. ಮತ್ತು ಎಸ್.ಟಿ ಜನಾಂಗದ ಬಗ್ಗೆ, ನೀವು ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟಿದ್ದೀರಿ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಈ ವರ್ಷ ಕೇಂದ್ರ ಸರ್ಕಾರ ಏನು ಹಣ ಕೊಟ್ಟಿತ್ತು, ನಾವು ಏನು ಮ್ಯಾಚಿಂಗ್ ಗ್ರ್ಯಾಂಟ್ ಹಣ ಖರ್ಚು ಮಾಡಬೇಕಾಗಿತ್ತು ಅವರ ಅಭಿವೃದ್ಧಿಗೋಸ್ಕರ ಅದರಲ್ಲಿ 1996-97ನೇ ಸಾಲಿನಲ್ಲಿ 50 ಪರ್ಸೆಂಟ್ ಸಹಿತ ಹಣ ಖರ್ಚು ಮಾಡಿಲ್ಲ. ಇದಕ್ಕೆ ನಿಮ್ಮಲ್ಲಿ ಉತ್ತರ ಇಲ್ಲ. ಗಂಗಾಕಲ್ಯಾಣ ಯೋಜನೆಯಲ್ಲಿ 5,000 ಕೊಳವೆ ಬಾವಿಗಳನ್ನು ತೆರೆದಿರಿ, ಮೋಟಾರ್ ಖರೀದಿ ಮಾಡಿದಿರಿ, ಆದರೂ ಇನ್ನೂ ಸಹ ಅವಕ್ಕೆ ವಿದ್ಯುತ್ ಸಂಪರ್ಕ ಕೊಡಲಿಲ್ಲ. ಅದಕ್ಕೆ ತಾವು ಉತ್ತರವನ್ನು ಕೊಡುತ್ತೀರಾ ಎಂದು ನಾನು ನಂಬಿದ್ದೇನೆ. ತಾವು ಜನತಾದಳ ಪ್ರಗತಿ ಪಥದಲ್ಲಿ ಎಂದು ಒಂದು ಪುಸ್ತಕವನ್ನು ಪಬ್ಲಿಷ್ ಮಾಡಿದಿರಿ

1.30 ಪಿ.ಎಂ

ಅದರಲ್ಲಿ ಏನು ಹೇಳಿದ್ದೀರೆಂದರೆ ರಾಜ್ಯದಾಯಕ್ಕೆ ಧಕ್ಕೆ ಬಂದರೂ ಪರವಾಗಿಲ್ಲ, ರಾಜ್ಯದಲ್ಲಿ ಸಾರಾಯಿ ಮಾರಾಟವನ್ನು ನಿಷೇಧಗೊಳಿಸಲು ಜನತಾದಳ ಸರ್ಕಾರ ಮುಂದಾಗಿದೆ, ಹೀಗೆ ಬಡವರ ಬದುಕನ್ನು ಹಸನಾಗಿಸುವ ಗುರಿಯೊಂದಿಗೆ ವಿವಿಧೋದ್ದೇಶ ಕಾರ್ಯಕ್ರಮಗಳನ್ನು ಅಕ್ಷರಶಃ ಅನುಷ್ಠಾನಗೊಳಿಸುತ್ತಿದೆಯೆಂದು ತಾವು ಹೇಳಿದಿರಿ. ನಾವೂ ಕೂಡ ಚರ್ಚೆ ಮಾಡಿದೆವು, ಸರ್ಕಾರದ ಪ್ರತಿನಿಧಿಗಳು ಅಲ್ಲಿಗೆ ಬಂದಿದ್ದರು, ಆಗ ಅಲ್ಲಿಗೆ ಜಗದ್ಗುರುಗಳೂ ಕೂಡ ಬಂದಿದ್ದರು. ಇದೇನೂ ಮ್ಯಾನಿಫೆಸ್ಟೋ ಅಲ್ಲ, ನಿಮ್ಮ ಸಾಧನೆ ಬಗ್ಗೆ ಹೇಳುತ್ತಿದ್ದ ರೀತಿ. ಆ ಸಮಯದಲ್ಲಿ ಸನ್ಮಾನ್ಯ ಪ್ರಕಾಶ್‌ರವರು...

ಶ್ರೀ ಜೆ.ಹೆಚ್.ಪಟೇಲ್: ನಮಗೆ ಮನಸ್ಸಿತ್ತು, ಆದರೆ ಮಾಡುವುದಕ್ಕೆ ಆಗಲಿಲ್ಲವೆಂಬ ಕಾರಣಕ್ಕೆ ನನಗೇನೂ ಸಂತೋಷವಿಲ್ಲ, ಮಾಡುವುದಕ್ಕೆ ಆಗಲಿಲ್ಲ, ಮಾಡುವುದಕ್ಕೆ ಆಗುವುದೂ ಇಲ್ಲ. ಹಣಕಾಸಿನ ಪರಿಸ್ಥಿತಿಯ ವಿಚಾರ ಬಂದಾಗ ಪಕ್ಕದ ರಾಜ್ಯಗಳ ಅನುಭವ ತಿಳಿದುಕೊಂಡಮೇಲೆ ಅರ್ಥವಾಗುತ್ತದೆ. ಈಗ ನೀವು ಏನು ಹೇಳಿದರೋ ಆ ಭಾವನೆ ನಮಗೆ ಅರ್ಥವಾಗುತ್ತದೆ. ಸಾರಾಯಿಯನ್ನು ನಿಲ್ಲಿಸಬೇಕೆಂದೆ ನಾವೆಲ್ಲರೂ ಮೊದಲು ಪ್ರಾರಂಭ ಮಾಡಿದೆವು. ಇದೇನೂ ಮ್ಯಾನಿಫೆಸ್ಟೋ ಅಲ್ಲ. ಆದರೆ ಇದರ ಬಗ್ಗೆ ವಿಚಾರ ಮಾಡಿದ ಮೇಲೆ ಸಮಾಜದಲ್ಲಿ ಮತ್ತಷ್ಟು ವಿಷಪೂರಿತವಾದ

ಹಾನೀಯಗಳು ಬಂದು ಕ್ರೈಮ್ಸ್ ಇನ್‌ಕ್ರೀಸಾಗಿ ಆಂಧ್ರದಲ್ಲಿ ಅವರ ಅನುಭವ ನೋಡಿ ನಂತರ ರಾಜಾಸ್ಥಾನ ಮತ್ತು ತಮಿಳುನಾಡು, ಇಲ್ಲಗೆಲ್ಲಾ ಹೋಗಿ ನೋಡಿಕೊಂಡು ಬಂದಮೇಲೆ, ಗುಜರಾತ್‌ಗೂ ಹೋಗಿ ನೋಡಿಕೊಂಡು ಬಂದಮೇಲೆ ಈ ಸಾರಾಯಿ ನಿಷೇಧವನ್ನು ಮಾಡುವುದಕ್ಕೆ ಆಗಲಿಲ್ಲವೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನನ್ನ ಪ್ರಶ್ನೆಯೆಂದರೆ ಈಗಾಗಲೇ ತಮಗೇ ತಿಳಿದಿರುವಂತೆ ಎಕ್ಸೈಸ್‌ನಲ್ಲಿ ಸರ್ಕಾರಕ್ಕೆ ಆದಾಯ ಸೋರಿಹೋಗುತ್ತಿರುವುದನ್ನು ತಡೆಯುವುದಕ್ಕೆ ಪ್ರಾಮಾಣಿಕ ಪ್ರಯತ್ನ ಸರ್ಕಾರದಿಂದ ಆಗಲಿಲ್ಲ. ನಾನು ಥರ್ಡ್ಸ್ ಸೇಲ್ಸ್ ಆಗುತ್ತಿರುವ ಬಗ್ಗೆ ಪ್ರಿಂಟೆಡ್ ಡೂಪ್ಲಿಕೇಟ್ ಲೇಬಲ್ಸ್‌ಗಳನ್ನು ನಾನು ಸದನದಲ್ಲಿಯೇ ತಂದು ಪ್ರದರ್ಶನ ಮಾಡಿದೆ. ಆಗ ಸರ್ಕಾರ ಒಪ್ಪಿಕೊಂಡು ಇಂಥವುಗಳು ಕೆಲವಿವೆ, ಅವುಗಳನ್ನು ಸರಿಮಾಡುತ್ತೇವೆಂದಿರಿ. ಇವೊತ್ತು ಕೂಡ ತಾವು ಬನ್ನಿ ನಾನು ತೋರಿಸುತ್ತೇನೆ, ಕರ್ನಾಟಕ ರಾಜ್ಯದ ಬಹುತೇಕ ಎಲ್ಲಾ ತಾಲ್ಲೂಕುಗಳಲ್ಲಿ ಸೆಕೆಂಡ್ಸ್, ಥರ್ಡ್ಸ್ ಹಾವಳಿ ಹೆಚ್ಚಾಗಿರುವುದನ್ನು ತೋರಿಸುತ್ತೇನೆ. ಎಕ್ಸೈಸ್, ಕಂಟ್ರಾಕ್ಟರ್ ಸೇರಿಕೊಂಡೇ ಪ್ರತಿ ತಾಲ್ಲೂಕಿನಲ್ಲಿ ಮಾರಾಟ ಮಾಡುತ್ತಿದ್ದಾರೆ. ಈ ರೀತಿಯಲ್ಲಿ ನಡೆಯುವುದನ್ನು ಸುಮಾರು 50 ಕಡೆಗಳಲ್ಲಿ ನಿಮಗೆ ನಾನು ತೋರಿಸುತ್ತೇನೆ. ಈ ಹಾವಳಿಯನ್ನು ತಪ್ಪಿಸಿದರೆ ಸುಮಾರು 1 ಸಾವಿರ ಕೋಟಿಗಿಂತ ಹೆಚ್ಚಿನ ಆದಾಯ ಸರ್ಕಾರಕ್ಕೆ ಬರಬಹುದು ಎಂಬುದು ನಮ್ಮ ನಿರೀಕ್ಷೆ. ಅದನ್ನೂ ಕೂಡ ನೀವು ಮಾಡಲಿಲ್ಲ. ಇನ್ನು ತಾವೇ ಈ ರಾಜ್ಯದ ಜನರಿಗೆ ಭರವಸೆ ಕೊಟ್ಟಂತೆ ಇವೊತ್ತು ಸ್ವಾಮಿಗಳ ಸಮಕ್ಷಮದಲ್ಲಿ ಚರ್ಚೆಯಾದಾಗ ತಾವು ಭರವಸೆ ಕೊಟ್ಟಂತೆ ಈ ಸಾರಾಯಿ ನಿಷೇಧ ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಲಿಲ್ಲ. ನಾವೇನೋ ಇದರ ಬಗ್ಗೆ ವಾಕ್‌ಔಟ್ ಮಾಡಬಹುದು ನಂತರ ಮತ್ತೆ ಬಂದು ಕಾರ್ಯಕಲಾಪ ನಡೆಸಬಹುದು. ಆದರೆ ಇನ್ನೊಂದು ವಿಚಾರವಾದ ವೀರಪ್ಪನ್ ಬಗ್ಗೆ ತಾವು ಹೆಗ್ಗಳಿಕೆಯ ಮಾತುಗಳನ್ನಾಡಿದಿರಿ. ನಾನು ಏನು ಹೇಳುತ್ತೇನೆಂದರೆ ಈಗೇನು 9 ಜನ ಒತ್ತೆಯಾಳುಗಳನ್ನು ತಾವು ಬಿಡುಗಡೆ ಮಾಡಿಸಿದಿರಿ ಅದರ ಬಗ್ಗೆ ನನಗೆ ಬಂದಿರುವ ಮಾಹಿತಿ ಪ್ರಕಾರ, ಸುದ್ದಿಯ ಪ್ರಕಾರ, ಆ ಭಾಗದ ಜನಗಳು ಮಾತನಾಡಿಕೊಳ್ಳುತ್ತಿರುವ ಪ್ರಕಾರ ಒಂದು ರೀತಿಯಲ್ಲಿ ಅಂಡರ್‌ಸ್ಟ್ಯಾಂಡಿಂಗ್‌ನಲ್ಲಿಯೇ ಅವರು ಹೋಗಿದ್ದರು ಎನ್ನುವ ಸುದ್ದಿಯಿದೆ. ನೀವು ಬೇಕಾದರೆ ಇದರ ಬಗ್ಗೆ ವಿಚಾರಣೆ ಮಾಡಿ. ನಾನು ಈ ಜಾಗದಲ್ಲಿ ನಿಂತು ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದೇನೆ. ತಾವು ವಿಚಾರಣೆ ಮಾಡಿಸಿ. ತಾವೇನೋ ಅವರನ್ನು ಬಿಡಿಸಿಕೊಂಡು ಬಂದಿರಿ. ಮೂರು ಕೋಟಿ ರೂಪಾಯಿಗಳನ್ನೇನೋ ಕೊಟ್ಟಿದ್ದಾರೆ ಎನ್ನುವ ಬಗ್ಗೆ ಹೇಳಿದಾಗ ನನಗೆ ಗೊತ್ತಿಲ್ಲ ಎಂದು ಹೇಳಿದಿರಿ ಹೊರತು ನಾನು ಕೊಟ್ಟಿಲ್ಲ ಎಂದು ನೀವು ಹೇಳಲಿಲ್ಲ. ನಮ್ಮ ಪ್ರಕಾರ 3 ಕೋಟಿ ರೂಪಾಯಿಗಳನ್ನು ಕೊಟ್ಟು ಅವರನ್ನು ಬಿಡಿಸಿಕೊಂಡು ಬಂದಿರಿ ಎಂಬುದಾಗಿದೆ. ಈಗ ಏನಾಯಿತು ಎಂದರೆ ಆ ನರಹಂತಕ ಕಾಡಲ್ಲೇ ಉಳಿದು ಇದೇ ರೀತಿ ಜನರನ್ನು

ಕರೆದುಕೊಂಡು ಹೋಗಿ ಹಿಂಸೆ ಮಾಡುವುದು ಮುಂದುವರಿಯುತ್ತದೆ. ಆ ಫೋರ್ಸ್‌ನ್ನು ಎಲ್ಲಾ ವಾಪಸ್ಸು ತೆಗೆದುಕೊಳ್ಳುತ್ತೀರಾ, ಇದನ್ನೇ ಒಂದು ದೊಡ್ಡ ಸಾಧನೆ ಎಂದು ಹೇಳಿಕೊಳ್ಳುತ್ತೀರಾ. ಇನ್ನು ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ಹೈವೇ ಬಗ್ಗೆ ಹೇಳಬೇಕೆಂದರೆ ಇದನ್ನು ಮಾಡುವುದಕ್ಕೆ ನಮ್ಮ ವಿರೋಧವೇನಿಲ್ಲ. ಆದರೆ, ನೀವು 5 ಸ್ಯಾಟಿಲೈಟ್ ಟೌನ್‌ಗಳನ್ನು 2,000 ಕೋಟಿ ಪ್ರಾಜೆಕ್ಟ್‌ನಲ್ಲಿ ಮಾಡುವುದಕ್ಕೆ 22,000 ಎಕರೆ ಜಮೀನನ್ನು ತೆಗೆದುಕೊಳ್ಳುವುದಕ್ಕೆ ಹೊರಟ್ಟಿದ್ದೀರಿ. ಆದರೆ ಅಂದು ಟೆಂಡರ್ ಕರೆದಂತಹ ಸಮಯದಲ್ಲಿ 5 ಸ್ಯಾಟ್‌ಲೈಟ್ ಟೌನ್‌ಗಳ ಬಗ್ಗೆ ನಮೂದಿಸಿರಲಿಲ್ಲ.

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ. ಮತ್ತು ಯಾರು ಯಾರಿಗೂ ಮೋಸ ಮಾಡುವುದಿಲ್ಲ. ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ ಅವಶ್ಯಕತೆ ಇದೆ ಎಂದು 10 ವರ್ಷಗಳ ಹಿಂದೆಯೇ ಮಾತಾಗಿತ್ತು. ಯಾರು ಮಾಡಬೇಕು ಎಂಬುದರಲ್ಲಿ ನಿಂತಿತ್ತು. ಇದಾದ ಮೇಲೆ ಟೆಂಡರ್ ಕರೆದೆವು. ಟೆಂಡರ್ ಕರೆದ ಮೇಲೆ ಕಲ್ಯಾಣಿ ಕಂಪನಿಯವರು ತೆಗೆದುಕೊಂಡು ಅವರು ಎರಡು ಅಮೇರಿಕನ್ ಕಂಪನಿಗಳ ಸಹಭಾಗಿತ್ವದೊಂದಿಗೆ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಆಮೇಲೆ ಅವರು ಡೀಟೈಲ್ಸ್ ವರ್ಕ್‌ಔಟ್ ಮಾಡಿದಾಗ ಇದರ ಮೇಲೆ ಹಾಕಿದ ದುಡ್ಡು 50 ವರ್ಷಗಳಾದರೂ ಬರುವುದಿಲ್ಲವೆಂದು ತಿಳಿದುಕೊಂಡು ಅವರು ಏನು ಹೇಳಿದರೆಂದರೆ ಮಾನ್ಯ ಅಧ್ಯಕ್ಷರೆ, ತಾವು ಅಮೇರಿಕಾದಲ್ಲಿ ನೋಡಿರಬಹುದು. ಯಾವುದೇ ಹೈವೆ ಇದ್ದರೆ ಪಕ್ಕದ ಪ್ರೈವೇಟ್ ರೋಡ್ಸ್ ಏನಿವೆ ಅವುಗಳು ರಿಕ್ರಿಯೇಷನ್ಸ್ ಸೆಂಟರ್ಸ್‌ಗೆ ಹೋಗುತ್ತವೆ. ಆ ರಿಕ್ರಿಯೇಷನ್ಸ್ ಸೆಂಟರ್‌ನಲ್ಲಿ ಪೆಟ್ರೋಲ್ ಹಾಕಿಸಿಕೊಳ್ಳುವುದು ಇರಬಹುದು ಅಥವಾ ಅವನೇ ಪೆಟ್ರೋಲ್ ಹಾಕಿಕೊಳ್ಳುವುದು ಇರಬಹುದು; ಏನೋ ಮಾಡಿಕೊಂಡು ಮತ್ತೆ ರೋಡಿಗೆ ಬರುತ್ತಾನೆ. ಈಗ ನಡೆಯುತ್ತಿರುವುದನ್ನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಅವನಿಗೆ ಯಾವ ಪೆಟ್ರೋಲ್? ವಾಹನಕ್ಕೆ ಯಾವ ಪೆಟ್ರೋಲ್?

ಶ್ರೀ ಜೆ.ಹೆಚ್.ಪಟೇಲ್: ಅವೆಲ್ಲಾ ನಿಮಗೆ ಗೊತ್ತಾಗುವುದಿಲ್ಲ ಸುಮ್ಮನಿರಿ. ಯಡಿಯೂರಪ್ಪನವರೇ, ತಾವು ದಯವಿಟ್ಟು ತಿಳಿದುಕೊಳ್ಳಿ. ಆ ರೀತಿ ನಾವು 5 ಟೌನ್‌ಶಿಪ್ ಕಟ್ಟಿಕೊಳ್ಳುವುದಕ್ಕೆ ನಾವು ಅವಕಾಶ ಕೊಡದಿದ್ದರೆ ಈ ಒಪ್ಪಂದವೇ ಆಗುತ್ತಿರಲಿಲ್ಲ; ಏಕೆಂದರೆ ಪ್ರಾಜೆಕ್ಟ್ ವಯಾಬಲ್ ಆಗುವುದಿಲ್ಲ; ಯಾರು ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಬೇಕಾದರೆ ರೆಫರ್ ಮಾಡಿ ಇದರ ಬಗ್ಗೆ ತಿಳಿದುಕೊಳ್ಳಿ. ಆ ಟೌನ್‌ಶಿಪ್‌ನಿಂದಲೇ ಅವರಿಗೆ ದುಡ್ಡು ಬರುವುದು. ಅದಕ್ಕೋಸ್ಕರವೇ ನಾನು ಒಪ್ಪಿಕೊಂಡೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಪ್ರಾರಂಭದಲ್ಲೇ ಹೇಳಿದ್ದೇನೆ. ಜನರ

ದೃಷ್ಟಿಯಿಂದ ಈ ಎಕ್ಸ್‌ಪ್ರೆಸ್ ಹೈವೇ ಮಾಡುವುದಕ್ಕೆ ಬಿ.ಜೆ.ಪಿ.ಯವರ ವಿರೋಧ ಖಂಡಿತವಾಗಿಯೂ ಇಲ್ಲ. ಒಳ್ಳೆಯ ಕೆಲಸಗಳು ಆಗಲೇಬೇಕು. ನಾನು ಏನು ಹೇಳುತ್ತಿದ್ದೇನೆಂದರೆ ನೀವು ಏನು 22,00 ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಂಡು ಅವನಿಗೆ ಕೊಡುವುದಕ್ಕೆ ಹೊರಟ್ಟಿದ್ದೀರಲ್ಲಾ ತಾವು ಅವನು ಹೇಳಿದ ಅಂಕಿಅಂಶಗಳ ಆಧಾರದ ಮೇಲೆ ತಾವು ಒಪ್ಪಿಕೊಳ್ಳುತ್ತಿದ್ದೀರಿ. ಈಗ ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ ಮೊದಲು ನೀವು ರೋಡ್ ಮಾಡುವುದಕ್ಕಾಗಿ ಟೆಂಡರ್ ಕರೆದಿರಿ. ಯಾರೂ ಮುಂದೆ ಬರಲಿಲ್ಲ. ಆದರೆ ಕೆಲವರು ಇದನ್ನು ಒಪ್ಪಿಕೊಳ್ಳುವುದಕ್ಕೆ ಕೆಲವು ಷರತ್ತುಗಳನ್ನು ಹಾಕಿದ್ದರು. ಯಾರೋ ಒಬ್ಬ ಇದು ವರ್ಕ್‌ಔಟ್ ಆಗುವುದಿಲ್ಲ ಎಂದು ಹೇಳಿ ಒಂದು ಸ್ಯಾಟ್‌ಲೈಟ್ ಟೌನ್ ಪ್ರೊಪೋಸಲ್ ಕೊಟ್ಟ. ಆಗ ನನ್ನ ಸಲಹೆ ಏನಾಗಿತ್ತೆಂದರೆ ಸ್ಯಾಟಿಲೈಟ್ ಟೌನ್‌ನ್ನು ಮಾಡುವುದಕ್ಕೆ ನಾವು ಒಪ್ಪುತ್ತೇವೆ. ಆ ಹಿನ್ನೆಲೆಯಲ್ಲಿ 5,000 ಎಕರೆ ಕೊಡಬೇಕು, 10,000 ಎಕರೆ ಕೊಡಬೇಕು ಒಂದು ಸ್ಯಾಟ್‌ಲೈಟ್ ಟೌನ್ ಮಾಡಬೇಕು, ಎರಡು ಸ್ಯಾಟ್‌ಲೈಟ್ ಟೌನ್ ಮಾಡಬೇಕು ಎನ್ನುವ ಆಧಾರದ ಮೇಲೆ ಗ್ಲೋಬಲ್ ಟೆಂಡರ್ ಕರೆದು ಯಾರ ಬಗ್ಗೆ ತಮಗೆ ಕನ್‌ವಿನ್ಸ್ ಆಗತ್ತದೋ, 5 ವರ್ಷದಲ್ಲೋ ಅಥವಾ 10 ವರ್ಷದಲ್ಲೋ ಕೆಲಸ ಪೂರ್ಣ ಮಾಡುತ್ತಾರೆ. ಅಂತದ್ದಕ್ಕೆ ತಾವು ಒಪ್ಪಿಕೊಂಡಿದ್ದರೆ ಆಗ ನಾವು ನಿಮ್ಮ ಸರ್ಕಾರ ಪಾರದರ್ಶಕವಾದದ್ದು, ಪ್ರಾಮಾಣಿಕವಾದದ್ದು ಎಂದು ಹೇಳುತ್ತಿದ್ದೆವು. ಆ ರೀತಿ ಮಾಡುವುದನ್ನು ಬಿಟ್ಟು ಒನ್ ಟು ಒನ್ ಎಂ.ಒ.ಯು ಏನಿದೆ ಇದರ ಬಗ್ಗೆ ಎಲ್ಲವನ್ನು ಪಂಚತಾರಾ ಹೊಟೇಲ್‌ನಲ್ಲಿ ಕುಳಿತು ನಿಮಗೆ ವರ್ಕ್‌ಔಟ್ ಆಗಲಿಲ್ಲವೇ, ಹಾಗಾದರೆ 22,000 ಎಕರೆಯನ್ನು ದಾನಕೊಡುವುದು ಏನಿದೆ 5 ಸೆಟ್‌ಲೈಟ್ ಟೌನ್‌ಗೆ ಇದು ನಿಶ್ಚಿತವಾಗಿಯೂ ಇದೊಂದು ದೊಡ್ಡ ಹಗರಣ. ಮೂರು ಕಾರಣಗಳಲ್ಲಿ ಇವರು ತಪ್ಪು ಮಾಡಿದ್ದಾರೆ. ಮೊದಲನೆಯದಾಗಿ ಎಸ್.ಸಿ./ಎಸ್.ಟಿ ಜನಾಂಗದ ಬಗ್ಗೆ ಶಿಕ್ಷಣದ ಬಗ್ಗೆ ನೀವು ಹೇಳಿದರೂ ಸಹ, ಬಂದಿರುವಂಥ ಹಣದಲ್ಲಿ ಅರ್ಧ ಭಾಗ ನಿಮ್ಮ ಹತ್ತಿರ ಮ್ಯಾಚಿಂಗ್‌ಗ್ರ್ಯಾಂಟ್ ಸೇರಿ ಖರ್ಚು ಮಾಡಲಿಲ್ಲ. ಬಹುಶಃ ನಿಮ್ಮ ಕಾಲದಲ್ಲಿ ಎಸ್‌ಸಿ/ಎಸ್‌ಟಿಯವರಿಗೆ ಆಗಿರುವಷ್ಟು ಅನ್ಯಾಯ ಬೇರೆ ಯಾರ ಕಾಲದಲ್ಲಿಯೂ ಆಗಿಲ್ಲವೆಂಬುದು ಅಂಕಿಅಂಶಗಳು ಮೂಲಕ ಹೇಳಿದ್ದೇವೆ. ಅದನ್ನು ರೆಫರ್ ಮಾಡಲಿಲ್ಲ. ಎಲ್ಲಕ್ಕೂ ಉತ್ತರ ನೀವು ಕೊಟ್ಟಿಲ್ಲ. ಆದರೂ ತಾವು ಕೆಲವೊಂದು ವಿಚಾರವನ್ನು ಮಾತ್ರ ಮಹತ್ವವೆಂದು ಪರಿಗಣಿಸಿದಿರೋ ಅದಕ್ಕೆ ಉತ್ತರ ಕೊಟ್ಟಿರಬಹುದು. ಇದರ ಬಗ್ಗೆ ನಾವು ವಿವರಗಳನ್ನು ಅಂಕಿಅಂಶಗಳ ಜೊತೆಗೆ ರಾತ್ರಿ 11 ಗಂಟೆಯವರೆಗೆ ಕುಳಿತುಕೊಂಡು ಅಧ್ಯಕ್ಷರ ಸಮಕ್ಷಮದಲ್ಲಿ ಕೊಟ್ಟಿದ್ದೇವೆ. ಇನ್ನು ಎರಡನೆಯದಾಗಿ ದೇವರ ದಯದಿಂದ ಇಂದು ಒಳ್ಳೆಯ ಮಳೆಯಾಗಿ ಜಲಾಶಯ ತುಂಬಿದೆ. ಇದನ್ನುನೋಡಿ ತುಂಬಾ ಸಂತೋಷವಾಗಿದೆ. ಆದರೆ ನಿಮಗೆ ದೇವರು ಏನು ಸದ್ಬುದ್ಧಿ ಕೊಡಬೇಕಾಗಿತ್ತೆಂದರೆ ಜಲಾಶಯ ತುಂಬಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಜಲ ವಿದ್ಯುತ್ತನ್ನು ಉತ್ಪಾದನೆ ಮಾಡುವುದಕ್ಕೆ ಅವಕಾಶ ಸಿಕ್ಕಿರುವಂಥ ಸಮಯದಲ್ಲಿ ನೀವೇನು ಮೊನ್ನೆ

ವಿದ್ಯುತ್‌ದರವನ್ನು ಏರಿಕೆ ಮಾಡಿದ್ದೀರಿ ಅದನ್ನು ಸಂಪೂರ್ಣವಾಗಿ ವಾಪಸ್ಸು ತೆಗೆದುಕೊಂಡಿದ್ದರೆ ನಾವು ನಿಮ್ಮ ಬಗ್ಗೆ ಹೊಗಳಿಕೊಂಡು ಹಾಡುತ್ತಿದ್ದವು. ಜನರೂ ಕೂಡ ನಿಮ್ಮನ್ನು ಮೆಚ್ಚುತ್ತಿದ್ದರು. ಇನ್ನು ಮೂರನೆಯದಾಗಿ, ವೀರಪ್ಪನ್ ಬಗ್ಗೆ ಮಾಡಿರುವ ಕಾರ್ಯಾಚರಣೆ ಬಗ್ಗೆ ನೀವೇನೂ ದಯಮಾಡಿ ಸಮಾಧಾನ ಮಾಡಿಕೊಳ್ಳಬೇಡಿ. ಇದು ಒಂದು ರೀತಿಯಲ್ಲಿ ನೀವು ನರಹಂತಕ ವೀರಪ್ಪನ್‌ಗೆ ಶರಣಾದ ಹಾಗೆ, ಜನರು ಇದರ ಬಗ್ಗೆ ತುಂಬಾ ನಗುತ್ತಿದ್ದಾರೆ. ನನ್ನ ಮಾತಿನಲ್ಲಿ ನಿಮಗೆ ನಂಬಿಕೆ ಬರದಿರಬಹುದು. ನನ್ನ ಮಾತಿನ ಬಗ್ಗೆ ನಿಮಗೆ ನಂಬಿಕೆ ಇಲ್ಲದಿರಬಹುದು. ಆದರೆ ರಾಜ್ಯದ ಜನರು ಈ ಸರ್ಕಾರ ಎಂಥ ಅಪರಾಧ ಮಾಡಿದೆ ಎಂದು ಹೇಳುತ್ತಿದ್ದಾರೆ. ಆದರೆ ನೀವು ಅದನ್ನು ಸಾಧನೆ ಎಂದು ಹೇಳಿಕೊಳ್ಳಬಹುದು. ಆ ರೀತಿ ತಿಳಿದುಕೊಂಡಿದ್ದರೆ ಅದೊಂದು ದೊಡ್ಡ ಅಪರಾಧ. ಇನ್ನು ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇಗೆ ಸಂಬಂಧಪಟ್ಟಂತೆ 5 ಸೆಟ್‌ಲೈಟ್ ಟೌನ್ ಮಾಡುವುದರ ಬಗ್ಗೆ ಮಾತ್ರ ಯಾವ ಕಾರಣಕ್ಕೂ ಸಹ ನೀವು ಗ್ಲೋಬಲ್ ಟೆಂಡರ್ ಕರೆಯದೆ ಎಲ್ಲಾ ಮಾಹಿತಿಯನ್ನು ಕೊಡದೇ ಕೇವಲ ಯಾರನ್ನೋ ಒಬ್ಬನನ್ನು ಉಳಿಸುವುದಕ್ಕೋಸ್ಕರ 10 ಸಾವಿರ ಕೋಟಿಯಲ್ಲಿ ಮಾಡುವುದಕ್ಕೆ ಹೊರಟಿರುವುದನ್ನು ನೋಡಿದರೆ ಇದೊಂದು ದೊಡ್ಡ ಹಗರಣ, ನಮ್ಮ ದೇಶದ ಇತಿಹಾಸದಲ್ಲಿಯೇ ಈ ರೀತಿಯ ಹಗರಣ ಹಿಂದೆಂದೂ ಸಹ ಇಂಥ ದೊಡ್ಡ ಹಗರಣವಾಗಿಲ್ಲ, ಅಂಥ ಹಗರಣ ಇಲ್ಲಿ ಈಗ ಆಗುತ್ತಿದೆ. ನೀವು ಕಣ್ಣು ಮುಚ್ಚಿಕೊಂಡಿದ್ದೀರಿ. ಮುಖ್ಯಮಂತ್ರಿಗಳೇನೋ ಈಗ ಕೆಲವು ಜಿಲ್ಲೆಗಳನ್ನು ಮಾಡಿದರು. ಯಾರು ಏನೇ ಮಾಡಿದರೂ ಅಬ್ಜೆಕ್ಷನ್ಸ್ ಇದ್ದೇ ಇರುತ್ತದೆ, ಆದರೆ ಪ್ರಾಮಾಣಿಕವಾಗಿ ಚಿಂತನೆ ಮಾಡಿ ಕೆಲವೊಂದು ಕೆಲಸಗಳನ್ನು ಮಾಡಲೇಬೇಕಾಗುತ್ತದೆ. ಅದರ ಬಗ್ಗೆ ನಾನು ಮಾತನಾಡಿರಬಹುದು. ಆದರೆ ನಾನು ಕೇಳಿದ ಮಿಕ್ಕ ವಿಚಾರಗಳ ಬಗ್ಗೆ ಒಂದಕ್ಕೂ ತಾವು ಉತ್ತರ ಕೊಡಲಿಲ್ಲ. ನಿಮ್ಮದು ವಿಶೇಷತೆ ಏನೆಂದರೆ ಏನೋ ಒಂದು ರೀತಿಯಲ್ಲಿ ರಂಜನೆ ಮಾಡಿಕೊಂಡು ಹೇಳುತ್ತೀರಿ. ದೇಶದ ಬಗ್ಗೆ ಅಧಿಕಾರವಿಲ್ಲದೇ ಇರುವವರು ಕಲ್ಪನೆ ಇಟ್ಟುಕೊಂಡಿರುತ್ತಾರೆ. ಇವೊತ್ತು ಯಾವ ರೀತಿಯಲ್ಲಿ 50 ವರ್ಷಗಳಿಂದ ಸಾಧನೆಯಾಗಲಿಲ್ಲವೋ ಅದರ ಬಗ್ಗೆ ನಾವೇನು ಮಾಡಬೇಕಾಗಿದೆ ಅದರ ಬಗ್ಗೆ ಚರ್ಚೆ ಮಾಡೋಣ. ಅದನ್ನು ನೀವು ಬೇಕಾದರೆ ಸಲಹೆ ಕೊಡಿ. ಆದರೆ ನೀವೇ ನೋಡಿಕೊಳ್ಳುತ್ತಿರುವ ಕೆ.ಇ.ಬಿ. ಬಗ್ಗೆ, ಬಿ.ಡಿ.ಎ.ಬಗ್ಗೆ ಅನೇಕ ವಿಷಯಗಳನ್ನು ಹೇಳಿದರೂ ಕೂಡ ಒಂದನ್ನೂ ಸರಿಪಡಿಸುವಂಥ ಕಳಕಳಿ ನಿಮ್ಮಲ್ಲಿ ವ್ಯಕ್ತವಾಗಲಿಲ್ಲ.

ಶ್ರೀ ಜೆ.ಹೆಚ್.ಪಟೇಲ್: ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಯಾರೂ ಉತ್ತರ ಕೊಟ್ಟಿಲ್ಲ. ನ್ಯಾಯವಾಗಿ ಅಧ್ಯಕ್ಷರು ನಿಮ್ಮನ್ನು ಉತ್ತರ ಕೊಡುವುದಕ್ಕೆ ಕೊನೆಯಲ್ಲಿ ಕರೆಯಬೇಕಾಗಿತ್ತು. ನಾನು ಹೇಳುವುದೇನೆಂದರೆ ನೀವೇ ಭರವಸೆ ಕೊಟ್ಟಂತೆ ಸಾರಾಯಿ ನಿಷೇಧವನ್ನು

ಸಂಪೂರ್ಣವಾಗಿ ಜಾರಿಗೆ ತರಬೇಕು. ಎರಡನೆಯದಾಗಿ ಈಗ ಏನು ವಿದ್ಯುತ್ ದರವನ್ನು ಜಾಸ್ತಿ ಮಾಡಿದ್ದಾರೆ ಅದನ್ನು ಸಂಪೂರ್ಣವಾಗಿ ವಾಪಸ್ಸು ತೆಗೆದುಕೊಳ್ಳಬೇಕು. ಮೂರನೆಯದಾಗಿ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇ ಬಗ್ಗೆ ಗ್ಲೋಬಲ್ ಟೆಂಡರ್ ಕರೆಯಬೇಕು. ಈ ವಿಚಾರಗಳಲ್ಲಿ ನಿಮ್ಮದು ಏನೂ ಸಾಧನೆಯಾಗದಿದ್ದ ಕಾರಣ ನಾವು ಸಭಾತ್ಯಾಗ ಮಾಡುವ ಮುಖಾಂತರ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತೇವೆ.

(ಬಿ.ಜೆ.ಪಿ. ಸದಸ್ಯರುಗಳು ಸಭಾತ್ಯಾಗವನ್ನು ಮಾಡಿದರು)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂಥ ಉತ್ತರವನ್ನು ಕೇಳಿದೆ. ಅವರಿಗೆ ಶಕ್ತಿ ಇಲ್ಲದೇ ಉತ್ತರ ಕೊಟ್ಟಿದ್ದಾರೆ ಎನ್ನುವುದಕ್ಕಿಂತ ಅವರಿಗೆ ಆರೋಗ್ಯದ ಕೊರತೆ ಇರಬಹುದೇನೋ ಎಂದೆನಿಸುತ್ತದೆ. ಏಕೆಂದರೆ, ಹಿಂದೆಲ್ಲಾ ಅವರು ಬಹಳ ಪಾಂಡಿತ್ಯಪೂರ್ಣವಾಗಿ ಉತ್ತರ ಕೊಟ್ಟಿರುವುದನ್ನು ನಾನು ನೋಡಿದ್ದೇನೆ. ಆದರೆ ಇವೊತ್ತಿನ ಉತ್ತರವಂತೂ ಆರೋಗ್ಯಕರವಾಗಿ ಇಲ್ಲ. ಇದು ನನ್ನ ಅಭಿಪ್ರಾಯ. ಏಕೆಂದರೆ ಅವರ ಉತ್ತರವನ್ನು ಹಿಂದೆ ಹಲವಾರು ಬಾರಿ ಮೆಚ್ಚಿರುವುದೂ ಉಂಟು, ಏಕೆಂದರೆ ಅವರಿಗೆ ಇಲ್ಲಿ ನಿಂತು ಉತ್ತರ ಕೊಡತಕ್ಕಂಥ ಸಮರ್ಥತೆ ಅವರಿಗೆ ಇದೆ. ಆ ಸಾಮಾರ್ಥ್ಯವನ್ನು ಇಂದು ಅವರು ಪ್ರದರ್ಶನ ಮಾಡಲಿಲ್ಲ. ಈ ಬೆಳಗಾವಿ ಜಿಲ್ಲೆ ಬಗ್ಗೆ ಹಿಂದೆ ಅವರು ಮತ್ತು ನಾವೆಲ್ಲಾ ಕುಳಿತು ಮಾತನಾಡಿದ್ದೇವೆ. ಇನ್ನು ಮಹಾಜನ್ ವರದಿ ಬಗ್ಗೆ ಇತ್ಯರ್ಥವಾಗದೇ ಇರುವಾಗ ತಾವು ಈಗ ಅದನ್ನು ಮೂರು ಜಿಲ್ಲೆಗಳನ್ನಾಗಿ ಮಾಡುವುದು ಸರಿಯಲ್ಲ. ಅದರಲ್ಲೂ ಅದರಲ್ಲಿ ಒಂದು ಜಿಲ್ಲೆಯಂತೂ ನೇರವಾಗಿ ಮರಾಠಿಗಳ ಕೈಗೇ ಹೋಗತಕ್ಕಂಥದ್ದಾಗಿರುತ್ತದೆ. ಈಗಾಗಲೇ ಮಹಾನಗರಪಾಲಿಕೆ ಅವರ ಕೈಯಲ್ಲೇ ಇದೆ, ಇನ್ನು ಜಿಲ್ಲಾ ಪರಿಷತ್ತು ಕೂಡ ಅವರ ಕೈಗೇ ಹೋಗುವ ಪರಿಸ್ಥಿತಿ ಇರುವಾಗ ಇದರ ಬಗ್ಗೆ ಬಹಳ ಎಚ್ಚರವಹಿಸಿ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಈಗಾಗಲೇ ಬೈಲಹೊಂಗಲದಿಂದ ಬಂದಿದ್ದಾರೆ ಮತ್ತು ಜಿಲ್ಲೆಯ ಅನೇಕ ಕಡೆಗಳಿಂದ ಕೇಳುತ್ತಿದ್ದೇವೆ. ಈ ಬಗ್ಗೆ ಸರ್ಕಾರ ತನ್ನ ಸ್ಪಷ್ಟ ನಿಲುವನ್ನು ಈ ಸಂದರ್ಭದಲ್ಲಿ ಹೇಳಬೇಕು. ಅದನ್ನು ಹೇಳಿದರೆ ಮಾತ್ರ ಅಲ್ಲಿ ಶಾಂತವಾತಾವರಣ ನಿರ್ಮಾಣವಾಗುತ್ತದೆ. ಇನ್ನು ಎರಡನೆಯದಾಗಿ ಪೋಲೀಸರ ಹಿತದ ಬಗ್ಗೆ ನಾನು ಮಾತನಾಡಬೇಕೆಂದಿದ್ದೇನೆ. ಆ ಇಲಾಖೆಯನ್ನು ಮತ್ತೆ ಹೊಸ ಚೈತನ್ಯ ಪೂರ್ಣವಾಗಿ ಮಾಡಬೇಕು. ಇದಲ್ಲದೇ ಪೊಲೀಸರ ಅನೇಕ ಬೇಡಿಕೆಗಳು ಇವೆ. ನಾನು ಹಿಂದೆ ಒಂದು ಬಾರಿ ಮಾತನಾಡುವಾಗ ಹೇಳಿದ್ದೆ, ಬೇರೆ ಇಲಾಖೆಗಳವರು ತಮ್ಮ ಬೇಡಿಕೆಗಳ ಬಗ್ಗೆ ಪ್ರತಿಭಟನೆ ಮಾಡುವ, ಚಳುವಳಿ ಮಾಡುವ ಹಕ್ಕು ಹೊಂದಿರುತ್ತಾರೆ. ಆದರೆ ಪೊಲೀಸ್ ಇಲಾಖೆಗೆ ಅದು ಇಲ್ಲ. ಆದುದರಿಂದ ಇವರ ಮನಸ್ಸಿನಲ್ಲಿ ಆ ನೋವನ್ನು ಪಡುತ್ತಿರುವ ಬಗ್ಗೆ ಅದನ್ನು ಸರಿಪಡಿಸುವುದಕ್ಕೆ ಹೊಸ ವಿಧಾನದಲ್ಲಿ ತಾವೇನು ಮಾಡುತ್ತೀರಿ ಎಂಬುದನ್ನು ಹೇಳಬೇಕು. ಇನ್ನು ವೀರಪ್ಪನ್ ಬಗ್ಗೆ ಮುಖ್ಯಮಂತ್ರಿಗಳು ಏನು ಹೇಳಿದರು

ಅದು ನಿಜವಾಗಿಯೂ ನನಗಂತೂ ಸರಿತೋರಲಿಲ್ಲ. ಏಕೆಂದರೆ ಆ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವುದೇ ನಮ್ಮ ಸರ್ಕಾರದ ಚಿಂತನೆ ಎಂಬುದನ್ನು ಹೆಜ್ಜೆಹೆಜ್ಜೆಗೂ ಹೇಳಿಕೊಂಡು ಬಂದಿರಿ. ನಾನು ಕೇಳುವುದೇನೆಂದರೆ ವೀರಪ್ಪನ್ ಇಷ್ಟು ಸುಲಭವಾಗಿ ಆ ಒತ್ತೆಯಾಳುಗಳನ್ನು ಬಿಡುಗಡೆ ಮಾಡತಕ್ಕಂಥ ತಂತ್ರಗಾರಿಕೆ ಏನು? ಆವೊತ್ತು ಒತ್ತೆಯಾಳುಗಳನ್ನು ಬಿಡುವುದಿಲ್ಲ ಎಂದು ಹೇಳಿದವನು ತಕ್ಷಣ ಬಿಡುಗಡೆ ಮಾಡತಕ್ಕಂಥ ನೀತಿಗೆ ಒಪ್ಪಿಕೊಂಡ ಬಗ್ಗೆ ವಿಚಾರವೇನು? ಇದು ಬಹಳ ಪ್ರಾಮುಖ್ಯವಾದ ವಿಚಾರ. ಇದಕ್ಕೆ ಸರ್ಕಾರ ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಇದರ ಹಿಂದೆ ಏನು ನಡೆದಿದೆ? ಇದರಲ್ಲೇನೂ ಮುಚ್ಚಿಡುವ ಸಂಗತಿ ಯಾವುದೂ ಇಲ್ಲ, ಯಾವ ಮುಚ್ಚುಮರೆಯೂ ಇಲ್ಲ. ನೇರವಾಗಿ ಇದರ ಬಗ್ಗೆ ತಾವು ಹೇಳಬೇಕು. ಇನ್ನು ಬಸವಣ್ಣನವರ ಬಗ್ಗೆ ತಾವೂ ಹೇಳಿದ್ದೀರಿ, ನಾನೂ ಕೂಡ ಅನೇಕ ವಿಚಾರಗಳನ್ನು ಹೇಳಬೇಕೆಂದು ಪುಸ್ತಕಗಳನ್ನು ಕೂಡ ತಂದಿದ್ದೆ, ತಾವು ಒಂದು ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಹೇಳಿದ್ದಿರಿ. ಊಟವಾದ ಅನಂತರ ಮಾತನಾಡಿ ಎಂದೂ ಹೇಳಿದ್ದಿರಿ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ ಎಂದು ಕುಳಿತಿದ್ದೆ. ಆದರೆ ಅವಕಾಶ ಕೊಡಲಿಲ್ಲ. ಅದರ ಬಗ್ಗೆ ನನ್ನ ಅತೃಪ್ತಿ ಏನಿಲ್ಲ. ಇಲ್ಲೊಬ್ಬ ಜಾನಪದ ಕವಿ ಒಂದು ಮಾತನ್ನು ಹೇಳುತ್ತಾನೆ. ಕುಡಿದು ಹೇಳುವವರಲ್ಲ, ಕುಡಿದು ಹೇಳುವವರಲ್ಲ, ಕುಡಿದವರು ದಾರಿ ಬಿಡುವುದಿಲ್ಲ, ಮನಸ್ಸಿನ ನೆಮ್ಮದಿಗೋಸ್ಕರ ಕುಡಿದು ಶಾಂತಿಯನ್ನು ಪಡೆಯುವವರಲ್ಲ' 'ರಮ್ ಕುಡಿದರೆ ರಾಮನ ಮಗನು, ಬೀರು ಕುಡಿದರೆ ಭೀಮನ ಮಗನು, ಹೆಂಡ ಕುಡಿದರೆ ಹನುಮನ ಮಗನು, ಸಾರಾಯಿ ಕುಡಿದರೆ ಶರಣನ ಮಗನು, ಬ್ರಾಂದಿ ಕುಡಿದರೆ ಬ್ರಹ್ಮನ ಮಗನು, ವಿಸ್ಕಿ ಕುಡಿದರೆ ವಿಠಲನ ಮಗನು, ಜಿನ್ ಕುಡಿದರೆ ಜನಾರ್ಧನನ ಮಗನು, ಇವುಗಳಲ್ಲಿ ಯಾವುದನ್ನೂ ಕುಡಿಯದೇ ಇರುವವನು ಗಾಂಧಿಯ ಮಗನು, ಅಂದರೆ ಅಧ್ಯಕ್ಷರೇ, ನಾನು ಮತ್ತು ನೀವು ಇದ್ದ ಹಾಗೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಇವಿಷ್ಟರಲ್ಲಿ ಯಾವ ಕ್ಯಾಟಗರಿಯವರಾಗಿರುತ್ತಾರೆ? ಬ್ರಹ್ಮನ ಮಗನೆ? ವಿಠಲನ ಮಗನೆ? ಇಲ್ಲಿ ಕುಳಿತಿರುವ ನಿಮ್ಮ ಶಾಸಕರು, ಮಂತ್ರಿಗಳ ಪರವಾಗಿ ಹೇಳಬೇಕು.

ಶ್ರೀ ಜೆ.ಹೆಚ್.ಪಟೇಲ್: ನಾವು ಸಂಕುಚಿತವಾಗಿ ಯಾವುದೇ ಒಂದು ದೇವರನ್ನು ನಂಬಿದವರಲ್ಲ. ನಾವು ಎಲ್ಲಾ ದೇವರುಗಳನ್ನೂ ನಂಬುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಕೊನೆಗೆ ನನ್ನದೊಂದು ಪ್ರಶ್ನೆ. ಜೆ.ಹೆಚ್.ಪಟೇಲರು ಯಾರ ಕಡೆ? ನೀವು ದೇವೇಗೌರ ಪರವೇ? ಅಥವಾ ಹೆಗಡೆಯವರ ಪರವೇ? ಒಂದು ರೀತಿಯಲ್ಲಿ ನೀವು ಕೃಷ್ಣ. ಮಹಾಭಾರತದಲ್ಲಿ ಹೇಗೆ ಕೃಷ್ಣ ಇದ್ದನೋ ಅದೇ ರೀತಿಯಲ್ಲಿ ಕರ್ನಾಟಕದಲ್ಲಿ ತಾವು ಕೃಷ್ಣನ ಹೋಲಿಕೆಗೆ ಹೋಗುತ್ತೀರೋ ಎನ್ನುವುದು ಪ್ರಶ್ನೆ. ಏಕೆಂದರೆ ನೀವು ಇಂದು ಜನತಾದಳ, ಲೋಕಶಕ್ತಿ ಎನ್ನುವ ಪಕ್ಷಗಳ ಹೆಸರು ಬಂದಿದೆ. ಏಕೆಂದರೆ ರಾಮಕೃಷ್ಣ ಹೆಗಡೆಯವರ ಹುಟ್ಟುಹಬ್ಬಕ್ಕೆ ಎಲ್ಲಾ ಮಂತ್ರಿಗಳು ಹೋಗಿರಲಿಲ್ಲವೇ?

ಶ್ರೀ ಸಿ.ಭೈರೇಗೌಡ: ನಿಮ್ಮ ಮಗಳ ಮದುವೆಗೆ ಬಂದಿರಲಿಲ್ಲವೇ? ಅಯ್ಯೋ ಇದನ್ನೇ ದೊಡ್ಡ ವಿಚಾರ ಮಾಡುವುದೇ?

ಶ್ರೀ ವಾಟಾಳ್ ನಾಗರಾಜ್: ಹಾಸ್ಯವಾಗಿ ತೆಗೆದುಕೊಳ್ಳಿ. ಈಗ ಅಯ್ಯೋ ಎಂದು ಹೇಳುತ್ತಾರೆ. ಆದರೆ ಅವರೇ ಇಲ್ಲಿ ಕುಳಿತಿದ್ದಾಗ ಬಾಯಿ ಬಡಿದುಕೊಳ್ಳುತ್ತಿದ್ದರು. ಈಗೇನೋ ಅಯ್ಯಯ್ಯೋ ಎಂದು ಹೇಳುತ್ತಾರೆ.

ಶ್ರೀ ಸಿ.ಬೈರೇಗೌಡ: ಬಾಯಿ ಬಡಿದುಕೊಳ್ಳುತ್ತಿದ್ದರು ಎನ್ನುವ ಪದವನ್ನು ಅವರು ಆಡಬಾರದು. ಅದನ್ನು ಕಡತದಿಂದ ತೆಗೆಸಬೇಕು.

ಶ್ರೀ ವಾಟಾಳ್ ನಾಗರಾಜ್: ಬಾಯನ್ನು ಬಡಿಯುತ್ತಿದ್ದರು ಎಂಬುದು ಸಂಸದೀಯವೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಬಾಯಿ ಬಡಿದುಕೊಳ್ಳುವ ಕೆಲಸವನ್ನು ವಾಟಾಳ್‌ರವರು ಬಹಳ ಯಶಸ್ವಿಯಾಗಿ ಮಾಡುತ್ತಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ರಾಮಕೃಷ್ಣಹೆಗಡೆಯವರೇ ಹೇಳಿದ್ದಾರೆ. ಜೆ.ಹೆಚ್.ಪಟೇಲರನ್ನು ಯಾವುದೇ ಕಾರಣದಿಂದ ನನಗೆ ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ಒಪ್ಪಿಕೊಂಡು ಬಿಟ್ಟಿದ್ದಾರೆ. ಹಾಗೆಂದ ಮೇಲೆ ಮುಗಿದುಹೋಯಿತಲ್ಲಾ ಕಥೆ. ಮತ್ತೆ ಏಕೆ ತಾವು ಮಾತನಾಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್: ನಾನು ಮಾತನಾಡುತ್ತಿಲ್ಲ. ನಾನು ಅದನ್ನೇ ಅವರಿಗೆ ಹೇಳುತ್ತಿದ್ದೇನೆ. ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಏಕೆಂದರೆ ಪಟೇಲರು ಯಾರ ಕೈಗೂ ಸಿಗುತ್ತಿಲ್ಲವಲ್ಲ ಏಕೆ ಎಂಬುದನ್ನೇ ನಾನು ಕೇಳುತ್ತಿರುವುದು. ಬೇರೆ ಮಾತೇನೂ ಇಲ್ಲ.

ಶ್ರೀ ಜೆ.ಹೆಚ್.ಪಟೇಲ್: ಮೊದಲನೆಯದಾಗಿ ನಾನು ದಳದ ಕಡೆ. ಯಾರ್‍ಯಾರು ದಳದ ಕಡೆ ಇದ್ದಾರೋ ಅವರೆಲ್ಲರೂ ನಮ್ಮ ಕಡೆ. ದಳದ ಕಡೆ ಇಲ್ಲದಿದ್ದರೆ ನನಗೂ ಮತ್ತು ಅವರಿಗೂ ಸಂಬಂಧವಿಲ್ಲ. ಆದುದರಿಂದ ಈಗ ದಳದಲ್ಲಿ ಯಾರ್‍ಯಾರು ನಾಯಕರಿದ್ದಾರೋ ಅವರ ಕಡೆ ನಾವು ಇರುತ್ತೇವೆ. ಅವರ್‍ಯಾರಾದರೂ ನಮ್ಮ ಕಡೆ ಬರುವ ಹಾಗಿದ್ದರೆ ಬರಲಿ, ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ವಾಟಾಳ್ ನಾಗರಾಜ್: ಸಂತೋಷ. ಬೆಳಗಾವಿ ಬಗ್ಗೆ ಹೇಳಿ.

ಶ್ರೀ ಜೆ.ಹೆಚ್.ಪಟೇಲ್: ಬೆಳಗಾವಿ ಬಗ್ಗೆ ತಕ್ಷಣದಲ್ಲಿ ಅವಸರದ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನಾನು ಸಾಧ್ಯವಾದರೆ ಈ ಬಗ್ಗೆ ಹಿರಿಯ ಸಹೋದ್ಯೋಗಿಗಳೊಡನೆ ಚರ್ಚೆ ಮಾಡುತ್ತೇನೆ. ಇನ್ನೊಂದು ವಿಷಯ ಹೇಳುತ್ತೇನೆ.

ಕಲೂತಿಯವರು ಜಮಖಂಡಿಯಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರಂತೆ, ತಮ್ಮ ಮೂಲಕ ಅವರಿಗೆ ಹೇಳಬಯಸುವುದೇನೆಂದರೆ, ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರು ಈ ರೀತಿಯಲ್ಲಿ ಹಠ ಮಾಡುವುದು ಸರಿಯಲ್ಲ, ದಯವಿಟ್ಟು ಅವರು ಉಪವಾಸವನ್ನು ನಿಲ್ಲಿಸಬೇಕು.

ಅಧ್ಯಕ್ಷರು: ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ;

> ''ದಿನಾಂಕ 31-03-1998ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 10, 12, 15ರಿಂದ 19, 21ರಿಂದ 25, 28, 29, 32ರಿಂದ 38, 40ರಿಂದ 42, 46, 47, 50 ರಿಂದ 53, 56ರಿಂದ 62, ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು''

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೧- ವ್ಯವಸಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,35,73,23,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,35,39,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨-ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ತೋಟಗಾರಿಕೆ''ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ; ರಾಜಸ್ವ ಖಾತೆಯಲ್ಲಿ 41,53,05,000 ರೂ.ಗಳಿಗಿಂತ ಮೀರದ

ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 75,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩-ಪಶುಸಂಗೋಪನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಪಶುಸಂಗೋಪನೆಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 62,05,33,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪-ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಮೀನುಗಾರಿಕೆಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 12,33,32,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,79,50,000 ರೂ.ಗಳಿಗಿಂತ ಮೀರದ ಮೊತ್ತವನ್ನು, ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 5-ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಶ್ಮೆ ವ್ಯವಸಾಯದ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಉದ್ಯಮಗಳು (ಜವಳಿ, ಸಕ್ಕರೆ ಮತ್ತು ರೇಶ್ಮೆ ವ್ಯವಸಾಯದ ಹೊರತು)'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 17,51,56,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 34,05,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೬-ಗಣಿ ಮತು ಭೂ ವಿಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಗಣಿಗಳು ಮತ್ತು ಭೂ ವಿಜ್ಞಾನ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 7,75,75,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೭-ಚಿಕ್ಕಪುಟ್ಟ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಚಿಕ್ಕಪುಟ್ಟ ಉದ್ಯಮಗಳಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 42,77,47,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,87,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೮-ರೇಷ್ಮೆ ವ್ಯವಸಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ರೇಷ್ಮೆ ವ್ಯವಸಾಯಕ್ಕೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವಖಾತೆಯಲ್ಲಿ 64,42,39,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೯-ಸಕ್ಕರೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಸಕ್ಕರೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 5,12,60,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,25,00,000 ರೂ.ಗಳಿಗಿಂತ ಮೀರದ ವೆಚ್ಚವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೦-ಲೇಖನ ಸಾಮಗ್ರಿ ಮತ್ತು ಮುದ್ರಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಲೇಖನ ಸಾಮಗ್ರಿ ಮತ್ತು ಮುದ್ರಣ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 13,15,22,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೨-ಯುವಜನ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಯುವಜನ ಸೇವೆಗಳಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 21,65,90,000 ರೂ.ಗಳಿಗಿಂತ ಮೀರದ

ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೫ ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ವರಮಾನ ವೃತ್ತಿಗಳು ಮಾರಾಟ ಮತ್ತು ಇತರ ಸೇವೆಗಳ''ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 33,10,17,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ -೧೬ - ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ವಿಶ್ರಾಂತಿವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 4,36,52,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೧೭ - ಸರಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು

ರಾಜ್ಯಪಾಲರ ಶಿಫಾರಸ್ಸು ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 6,72,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,91,25,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೧೮ - ಸಣ್ಣ ಉಳಿತಾಯಗಳು ಮತ್ತು ರಾಜ್ಯ ಲಾಟರಿಗಳು, ವಿಮೆ, ಖಜಾನೆ ಮತ್ತು ಲೆಕ್ಕ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಸಣ್ಣ ಉಳಿತಾಯಗಳು ರಾಜ್ಯ ಲಾಟರಿ, ವಿಮೆ ಮತ್ತು ಲೆಕ್ಕ ಆಡಳಿತ''ಗಳಿಗೆ

ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 96,15,43,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7,88,000 ರೂ.ಗಳಿಗೆ ಮೀರದ ಮೊತ್ತವನ್ನು ಲೇಖನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೧೯ - ಇತರೇ ವಿವಿಧ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಇತರೇ ವಿವಿಧ ಸೇವೆಗಳಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಖಾತೆಯಲ್ಲಿ 21,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,42,50,000 ರೂ.ಗಳಿಗೆ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೨೦ - ಅರಣ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಅರಣ್ಯ''ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 99,54,19,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೨೨ - ರಾಜ್ಯದ ಅಬಕಾರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ರಾಜ್ಯದ ಅಬಕಾರಿ''ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,37,47,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೨೩ - ಸಾರಿಗೆ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಸಾರಿಗೆ ಸೇವೆ''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 36,49,60,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೨೪ - ಆರಕ್ಷಕ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಆರಕ್ಷಕ ಸೇವೆಗಳಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ರಾಜಸ್ವ ಖಾತೆಯಲ್ಲಿ 2,56,66,07,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೨೫ - ಬಂದೀಖಾನೆಗಳು, ಅಗ್ನಿ ಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಬಂದೀಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 25,45,86,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೨೮ - ವೈದ್ಯಕೀಯ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ವೈದ್ಯಕೀಯ ಶಿಕ್ಷಣ''ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 84,16,82,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೨೯ - ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,97,32,46,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

• ಅಭಿಯಾಚನೆ ಕ್ರಮಾಂಕ - ೩೨ - ಬೆಂಗಳೂರು ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ

ವರ್ಷದಲ್ಲಿ "ಬೆಂಗಳೂರು ಅಭಿವೃದ್ಧಿ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 60, 10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 27, 15,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೩೩ - ಸಣ್ಣ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಣ್ಣ ನೀರಾವರಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 26,56,57,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 41,55,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೩೪ - ಭಾರೀ ಮತ್ತು ಮಧ್ಯಮ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭಾರಿ ಮತ್ತು ಮಧ್ಯಮ ನೀರಾವರಿ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 3,25,68,73,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,04,21,66,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೩೫ - ರಾಜ್ಯ ವಿಧಾನಮಂಡಲ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯ ವಿಧಾನಮಂಡಲ"ಕ್ಕೆ ಸಂದಾಯ ಮಾಡುವುಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 8,93,45,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೩೬ - ನ್ಯಾಯ ಪರಿಪಾಲನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನ್ಯಾಯ ಪರಿಪಾಲನೆ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 40,10,41,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೩೭ - ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ರಾಜ್ಯಾಪಾಲರು, ಮಂತ್ರಿಗಳು, ಮತ್ತು ಲೋಕ ಸೇವಾ ಆಯೋಗಗಳಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 3,26,33,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ - ೩೮ - ಸಚಿವಾಲಯ

ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಸಚಿವಾಲಯಕ್ಕೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 21,49,16,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೪೦ - ಸಾಮಾನ್ಯ ಆಡಳಿತ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಸಾಮಾನ್ಯ ಆಡಳಿತ ಇತ್ಯಾದಿ''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,37,23,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 41 - ಯೋಜನೆ ಮತ್ತು ಸಾಂಖ್ಯಿಕ ಹಣಕಾಸು (ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗಳನ್ನು ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಯೋಜನೆ ಮತ್ತು ಸಾಂಖ್ಯಿಕ ಹಣಕಾಸು (''ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗಳನ್ನು ಹೊರತುಪಡಿಸಿ'') ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 14,10,29,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 17,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೪೭ - ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಇತ್ಯಾದಿ''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 46,99,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೪೮ - ರೇವು ಮತ್ತು ಜಲಸಾರಿಗೆ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ರೇವು ಮತ್ತು ಜಲಸಾರಿಗೆ ಸೇವೆಗಳಿಗಾಗಿ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,97,32,000 ರೂ.ಗಳಿಗಿಂತ ಮೀರದ ಮೊತ್ತವನ್ನು ಬಂಡವಾಳ ಖಾತೆಯಲ್ಲಿ 2,66,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೪೯ - ವಿದ್ಯುಚ್ಛಕ್ತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ವಿದ್ಯುಚ್ಛಕ್ತಿ ಯೋಜನೆಗಳಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಗಲ್ಲಿ 1,12,38,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೫೦ - ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 6,18,38,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೫೧ - ವಕ್ಫ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ವಕ್ಫ್''ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,28,88,000 ರೂ.ಗಳಿಗಿಂತ ಮೀರದ ಮೊತ್ತವನ್ನು

ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೫೨ - ಸಹಕಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಸಹಕಾರ''ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 23,95,21,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,72,75,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೫೩ - ಕ್ರಮಪಡಿಸಿದ ಮಾರುಕಟ್ಟೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಕ್ರಮಪಡಿಸಿದ ಮಾರುಕಟ್ಟೆಗಳಿಗಾಗಿ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 11,96,79,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೫೬ - ಕಾರ್ಮಿಕ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಕಾರ್ಮಿಕ ಮತ್ತು ಉದ್ಯೋಗ''ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 39,28,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಚನೆ ಕ್ರಮಾಂಕ - ೫೭ - ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರ ಕಲ್ಯಾಣ''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,26,68,62,000 ರೂ.ಗಳಿಗಿಂತ ಮೀರದ ಮೊತ್ತವನ್ನು ಬಂಡವಾಳ ಖಾತೆಯಲ್ಲಿ 9,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೫೮ - ಮಹಿಳಾ ಮತ್ತು ಮಕ್ಕಳ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ

ವರ್ಷದಲ್ಲಿ ''ಮಹಿಳಾ ಮತ್ತು ಮಕ್ಕಳ ಕಲ್ಯಾಣ''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,65,61,78,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೫೯ - ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ''ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾಕ್ಕೆ ರಾಜಸ್ವ ಖಾತೆಯಲ್ಲಿ 4,66,72,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೬೦ - ಮಲೆನಾಡು ಪ್ರದೇಶ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಮಲೆನಾಡು ಪ್ರದೇಶ ಅಭಿವೃದ್ಧಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೬೧ - ಜವಳಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಜವಳಿ''ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,66,62,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,31,35,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - ೬೨ - ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಹಿಂದುಳಿದ ವರ್ಗದವರು ಮತ್ತು ಅಲ್ಪ ಸಂಖ್ಯಾತರು''ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ

42,39,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

3) (ಅ) ಪೂರಕ ಅಂದಾಜುಗಳು 1997-98 (ಸಾಮಾನ್ಯ ಚರ್ಚೆ)

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, 1997-98ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತಿನ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಮಂಡಿಸಲಾಗಿದೆ.

+ ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಇದರಲ್ಲಿ 842 ಕೋಟಿ ರೂಪಾಯಿಗಳ ಪೂರಕ ಅಂದಾಜುಗಳಿಗೆ ಒಪ್ಪಿಗೆ ಕೊಡಬೇಕೆಂದು ನಾವು ಕೇಳಿದ್ದೇವೆ. ಇದರಲ್ಲಿ ಸುಮಾರು 312 ಕೋಟಿ ರೂಪಾಯಿಗಳು ಅಡ್ಜೆಸ್ಟ್‌ಮೆಂಟ್ ಮುಖಾಂತರ ಆಗುವಂಥದ್ದು. ಇನ್ನು ಉಳಿದ 530 ಕೋಟಿ ರೂಪಾಯಿಗಳು ಕ್ಯಾಶ್ ಔಟ್‌ಗೋಯಿಂಗ್ ಇರತಕ್ಕಂಥದ್ದು ಇದರಲ್ಲಿ ಬಹುತೇಕವಾಗಿ ಕೆ.ಇ.ಬಿ.ಗೆ ಸಂಬಂಧಪಟ್ಟಂತೆ ಸುಮಾರು 311 ಕೋಟಿ ರೂಪಾಯಿಗಳು ಹೆಚ್ಚುವರಿಯಾಗಿ ಬೇಕು ಎಂದು ಹೇಳಿ ಕೇಳಿದ್ದೇವೆ. ಇದನ್ನು ನಮ್ಮ ಬಜೆಟ್‌ನಲ್ಲಿ ಇಟ್ಟುಕೊಂಡಿರಲಿಲ್ಲ. ಅದಕ್ಕಾಗಿ, ಇದಕ್ಕೆ ಒಪ್ಪಿಗೆಯನ್ನು ಕೊಡಬೇಕು. ಇದಲ್ಲದೇ ನ್ಯಾಶನಲ್ ಗೇಮ್ಸ್‌ಗೆ ಸಂಬಂಧಪಟ್ಟಂತೆ ನಾವು ಇನ್ನೂ ಬಾಕಿ ಕೊಡಬೇಕಾಗಿದೆ. ಇದಕ್ಕೂ ಕೂಡ ನಾವು ಬಜೆಟ್‌ನಲ್ಲಿ ಹಣವನ್ನು ತೊಡಗಿಸಿಕೊಂಡಿರಲಿಲ್ಲ. ಇದಕ್ಕೆ 50 ಕೋಟಿ ರೂಪಾಯಿಗಳನ್ನು ತೋರಿಸಿದ್ದೇವೆ. ಅದರಲ್ಲಿ ಕ್ಯಾಶ್ ಔಟ್‌ಗೋಯಿಂಗ್ ಮಾತ್ರ 530 ಕೋಟಿ ರೂಪಾಯಿಗಳು, ಆದರೆ 311 ಕೋಟಿ ರೂಪಾಯಿಗಳನ್ನು ಕೆ.ಇ.ಬಿ.ಗೋಸ್ಕರ ಇಟ್ಟುಕೊಂಡಿದ್ದೇವೆ. ಏಕೆಂದರೆ ಗ್ರಾಮೀಣ ವಿದ್ಯುದ್ದೀಕರಣಕ್ಕೆ ಕಳೆದ ವರ್ಷ 169 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಇದನ್ನು 1996-97ನೇ ಸಾಲಿನಲ್ಲಿ ಕೊಡಬೇಕಾಗಿತ್ತು. ಈ ವರ್ಷ ಕೂಡ ಸ್ವಲ್ಪ ಹೆಚ್ಚಿಗೆ ಕೊಡಬೇಕಾಗುತ್ತದೆ. ಆದರೆ ಬಜೆಟ್‌ನಲ್ಲಿಟ್ಟುಕೊಂಡಿರತಕ್ಕಂಥದ್ದು ಕೇವಲ 211 ಕೋಟಿ ರೂಪಾಯಿಗಳನ್ನು ಮಾತ್ರ. ಆ ಕಾರಣಕ್ಕಾಗಿಯೇ ಅದನ್ನು ಪೂರಕ ಅಂದಾಜುಗಳಲ್ಲಿಟ್ಟು ಅದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿದ್ದೇವೆ. ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಮಾನ್ಯ ಸದಸ್ಯರುಗಳನ್ನು ಕೇಳಿಕೊಳ್ಳುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಇದರಲ್ಲಿ ನಾನು ಹೇಳತಕ್ಕಂಥದ್ದು ಏನೆಂದರೆ ಈಗ ನಮ್ಮ ಮುಂದೆ ಸುಮಾರು 800 ಕೋಟಿ ರೂಪಾಯಿಗಳ ಪೂರಕ ಅಂದಾಜುಗಳನ್ನು ಇಟ್ಟಿದ್ದಾರೆ. ಇದರಲ್ಲಿ

ವಿಶೇಷವಾಗಿ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಸುಮಾರು 9 ಕೋಟಿ ರೂಪಾಯಿಗಳು ಎಕ್ಸೆಸ್ ಎಕ್ಸ್‌ಪೆಂಡಿಚರ್ ಆಗಿದೆ. The drastics in agriculture are with the total estimated expenditure of Rs.21,49,00,000/- during 1996-97, since the budget provision is only Rs.12,33,00,000/- ಅಂದರೆ ಇದರಲ್ಲಿ 9 ಕೋಟಿ ರೂಪಾಯಿಗಳು ಎಕ್ಸ್‌ಸ್ ಎಕ್ಸ್‌ಪೆಂಡಿಚರ್ ಆಗಿದೆ. ಹಾರ್ಟಿಕಲ್ಚರ್ ಇಲಾಖೆಯಲ್ಲಿ ಏನು ನಡೆದಿದೆ ಎನ್ನತಕ್ಕಂಥದ್ದು ತಮಗೆ ಗೊತ್ತಿದೆ. ಮಂತ್ರಿಗಳೇ ಹೇಳಿದಂತೆ ಗುಲ್ಬರ್ಗಾದಲ್ಲಿ ಕೆಲವು ಡಿವಿಶನ್‌ನಲ್ಲಿ ಜಾಯಿಂಟ್ ಡೈರೆಕ್ಟರ್ ಕೋಟ್ಯಾಂತರ ರೂಪಾಯಿಗಳನ್ನು ಟ್ರೆಜರಿಯಿಂದ ಓವರ್‌ಡ್ರಾ ಮಾಡಿದ್ದಾರೆ. ಈ ರೀತಿ ಇರುವಾಗ ನೀವು ಅವರಿಗೆ 9 ಕೋಟಿಯಲ್ಲ, ಇನ್ನೂ ಹತ್ತು ಕೋಟಿ ರೂಪಾಯಿಗಳನ್ನು ಕೊಟ್ಟರೂ ಕೂಡ ಟ್ರೆಜರಿಯಲ್ಲಿ ಅಡ್ಜೆಸ್ಟ್ ಮಾಡಿಕೊಂಡು ತೆಗೆದುಕೊಳ್ಳತಕ್ಕಂಥದ್ದು ಆಗುತ್ತದೆ.

ಶ್ರೀ ಡಿ.ಟಿ.ಜಯಕುಮಾರ್: (ತೋಟಗಾರಿಕೆ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಆ ಲೆಕ್ಕ ಇಲಾಖೆಗೆ ಸೇರಿರುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಗ್ರಿಕಲ್ಚರ್ ಮತ್ತು ಹಾರ್ಟಿಕಲ್ಚ್‌ರಿಗೆ ಇಲಾಖೆಯ ದುಡ್ಡನ್ನೇ ಖರ್ಚು ಮಾಡಬೇಕಲ್ಲ. ಅದನ್ನು ಯಾರು ಖರ್ಚು ಮಾಡುತ್ತಾರೋ, ಯಾರು ಡ್ರಾ ಮಾಡಿದ್ದಾರೋ ಏನೋ. ಹೀಗೆ ದೊಡ್ಡ ಮೊತ್ತ ದುರುಪಯೋಗವಾದಾಗ, ಮತ್ತೆ ಇಲ್ಲಿ ಸಪ್ಲಿಮೆಂಟರಿ ಬಜೆಟ್ಟಿಗೆ ದುಡ್ಡ ಕೊಡಿ ಎಂದು ಬರುತ್ತಾರೆ. ಹಣಕಾಸಿನ ಮಂತ್ರಿಗಳ ಹತ್ತಿರ ಬರುವುದು ಬೇಡಿ ಕಾಡಿ ದುಡ್ಡು ತೆಗೆದುಕೊಂಡು ಹೋಗುವುದು. ಆ ದುಡ್ಡು ನಿಯತ್ತಾಗಿ ಖರ್ಚು ಆಗಿದೆಯೋ ಇಲ್ಲವೇ ಎಂದು ಸರಿಯಾಗಿ ನೋಡಿಕೊಳ್ಳುವ ಅಧಿಕಾರಿಗಳು ಇಲ್ಲದಾಗ ನಾವು ಎಷ್ಟು ದುಡ್ಡು ಕೊಟ್ಟರು ಇದೇ ರೀತಿ ಪೋಲಾಗುತ್ತಾ ಹೋಗುತ್ತದೆ. ಇದರಲ್ಲಿ ನೀವು ಸುಮಾರು 9 ಕೋಟಿ ರೂಪಾಯಿ ಎಕ್ಸೆಸ್ಸನ್ನು ಕೇಳುತ್ತಾ ಇದ್ದೀರಿ. 12 ಕೋಟಿ ರೂಪಾಯಿ ಪ್ರಾವಿಜನ್ ಇರತಕ್ಕಂತಹ ಇಲಾಖೆಯಲ್ಲಿ ಸುಮಾರು 9 ಕೋಟಿ ರೂಪಾಯಿ ಎಂದರೆ ಸಾಧಾರಣವಾಗಿ ಆಲ್‌ಮೋಸ್ಟ್ ನಿಯರ್‌ರ್ ಟು ಡಬ್ಬಲ್. ಇನ್ನು 4 ಕೋಟಿ ರೂಪಾಯಿ ಬೇರೆ ರೀತಿಯಿಂದ ಹೊಂದಿಸಿಕೊಳ್ಳಿ. ಇನ್ನೊಂದು Export Promotional Industries Park ಇದಕ್ಕೆ ಪ್ರಾವಿಜನ್ ಇಲ್ಲ ಆದರೂ ಇದಕ್ಕೆ 5 ಕೋಟಿ. ಇಲ್ಲಿ ಏನು ಆಗಿದೆ ಎಂದರೆ ಪ್ರಾವಿಜನ್ ಮಾಡದೆ, foresightedness ಇಲ್ಲದೆ ಯಾವುದೇ ಒಂದು ಇಲಾಖೆಯವರು ನೇರವಾಗಿ ನಿಮಲ್ಲಿ ಬಂದರೆ, ಅದಕ್ಕೆ ನೀವು ಮಂಜೂರಾತಿಯನ್ನು ಕೊಡುತ್ತೀರಿ. ಆದರೆ ಬಾಕಿ ಕೆಲಸಗಳಿಗೆ ಇಲ್ಲಿ ಇರುವ ಅನೇಕ ಸದಸ್ಯರು ಕುಡಿಯುವ ನೀರಿಗಾಗಿ, ಸಣ್ಣ ಶಾಲೆಗಳಿಗಾಗಿ, ಬೇರೆ ಬೇರೆ ಕೆಲಸಗಳಿಗೆ ಹಣ ಕೇಳಿದಾಗ, ಅದು ಕೆರೆ ರಿಪೇರಿ ಇರಬಹುದು, ಅಥವಾ ಹೊಸ ಕೆರೆ ನಿರ್ಮಾಣ ಮಾಡುವುದು ಇರಬಹುದು ಇಂಥ ಕೆಲಸಗಳಿಗಾಗಿ ಮಾತ್ರ ಬಜೆಟ್ ಪ್ರಾವಿಜನ್ ಇಲ್ಲ

ಎಂದು ತಳ್ಳಿ ಹಾಕತಕ್ಕಂತಹ ರೂಢಿ ಹಣಕಾಸು ಇಲಾಖೆಗೆ ಇದೆ. ಆದರೆ ಇಲ್ಲಿ ಮಾತ್ರ ಪ್ರಾವಿಜನ್ ಇಲ್ಲದೆ, ಅವರಿಗೆ ಕನಿಷ್ಠ ಎಕ್ಸ್‌ಪೋರ್ಟ್ ಪ್ರೊಮೋಷನ್ ಇಂಡಸ್ಟ್ರೀಸ್ ಪಾರ್ಕ್‌ನ್ನು ಮಾಡುತ್ತೇವೆಂದು ಅವರಿಗೆ ಗೊತ್ತಿರುವುದಿಲ್ಲ. ಏಕೆ ಅವರು ಪ್ರಾವಿಜನ್ ಮಾಡಿಕೊಳ್ಳಬಾರದು? ಏಕೆ ಅವರು ಹಣಕಾಸು ಇಲಾಖೆಗೆ ಕಳುಹಿಸಬಾರದು? ನಾವು ಏನು ಕೇಳಿದರು ಕೊಡುತ್ತಾರೆ ಸಿದ್ಧರಾಮಯ್ಯನವರು ಎಂದು ಅವರು ಬಜೆಟ್ಟಿಗೆ ಕಳುಹಿಸುವುದೇ ಇಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಕೆಲವರಿಗೆ ದೆಹಲಿಯಲ್ಲಿ ತವರು ಮನೆ ಇತ್ತು ಎಂದು ಆಗ ನಮಗೆ ಗೊತ್ತಾಯಿತು ಎಲ್ಲೆಲ್ಲಿ ಹಣ ಸಿಗುತ್ತದೆ ಎಂದು. ಹಾಗೆ ಕೆಲವು ಮಂತ್ರಿಗಳಿಗೆ ಗೊತ್ತು ಎಲ್ಲಿ ಹಣ ಸಿಗುತ್ತದೆ, ಯಾವಾಗ ಸಿಗುತ್ತದೆ, ಯಾರಿಗೆ ಹಿಡಿದರೆ ಸಿಗುತ್ತದೆ ಎಂದು. ಅವರು ನೇರವಾಗಿ ಬಂದು ಈ ರೀತಿಯ ಪ್ರಾವಿಜನ್ ಮಾಡಿಕೊಂಡು ಹಣವನ್ನು ಪಡೆದುಕೊಳ್ಳುತ್ತಾರೆ. ಉಳಿದ ಸಣ್ಣ-ಪುಟ್ಟ ಜನರಿಗೆ ಸಂಬಂಧಪಟ್ಟ ಇಲಾಖೆಗಳಿಗೆ ನೀವು ಅನೇಕ ಸಾರಿ ಪ್ರಾವಿಜನ್ ಇಲ್ಲ ಎಂದು ಫೈಲ್‌ನ್ನು ತಿರಸ್ಕಾರ ಮಾಡಿ ಕಳುಹಿಸಿಕೊಡುತ್ತೀರಿ. ದಯವಿಟ್ಟು ಯಾವುದೇ ಇಲಾಖೆಯಾಗಲಿ ಅಲ್ಲಿಂದ ನವಂಬರ್ ಡಿಸೆಂಬರ್‌ದಲ್ಲಿಯೇ ತರಿಸಿಕೊಳ್ಳಿ, ಒಂದು ಸಾರಿ ಚರ್ಚೆ ಮಾಡಿ ಅವರಿಗೆ ಹಣ ಎಷ್ಟು ಬೇಕು ಎಂದು ಕೇಳಿಕೊಂಡು ಏನು ಶೇ. 10 ಅಥವಾ 20 ಹೆಚ್ಚು ಕಡಿಮೆ ಯಾದರೆ ಅಡ್ಡಿಯಿಲ್ಲ ಹೊಸ ಸರ್ವೀಸ್‌ಸ್ ಕ್ರಿಯೇಟ್ ಮಾಡುವುದು, ಬಜೆಟ್ಟಿಗಿಂತ ಹೆಚ್ಚು ಹಣ ತೆಗೆದುಕೊಳ್ಳುವುದು ಇದು ಅಷ್ಟೊಂದು ಸರಿಯಾಗುವುದಿಲ್ಲ. ಆ ಬಜೆಟ್ಟಿಗೆ ಏನು ಮಹತ್ವವು ಉಳಿಯುವುದಿಲ್ಲ, ಬಜೆಟ್ಟಿನಲ್ಲಿ ಎರಡು ಸಾವಿರ ಮೂರು ಸಾವಿರ ಡೆವಲಪ್‌ಮೆಂಟ್‌ಗೆ ಇಡುವುದು, ಸಪ್ಲಿಮೆಂಟ್‌ರಿಯಲ್ಲಿ 8 ನೂರು ಕೋಟಿ ತರುವುದು. ಇದು ಮ್ಯಾನೇಜ್‌ಮೆಂಟ್‌ನಲ್ಲಿ ಅಷ್ಟೊಂದು ಸರಿ ಹೋಗುವುದಿಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಎಂ.ಎಸ್.ಐ.ಎಲ್. ಮೇಲೆ ಬಹಳ ಸಿಟ್ಟು ಇತ್ತು ಆದರೂ ಇದಕ್ಕೂ 10 ಕೋಟಿ ಕೊಟ್ಟಿದ್ದಾರೆ. ಅವರು ಕೆಲಸವೇ ಮಾಡುವುದಿಲ್ಲ, ಅವರಿಂದ ಏನು ಆಗುವುದಿಲ್ಲ ಎಂದು ಹೇಳಿದ್ದೀರಿ ಮತ್ತೆ ಯಾವ ಕೆಲಸಕ್ಕೆ ಇವರಿಗೆ ಹಣವನ್ನು ಕೊಟ್ಟಿದ್ದೀರಿ. ಎಕ್ಸೈಜ್ ಇಲಾಖೆಯಲ್ಲಿ ಹೋಲ್‌ಸೇಲ್ ಏಜೆನ್ಸಿ ಮಾಡಬೇಕೆಂದಾಗ ಈ 10 ಕೋಟಿ ರೂಪಾಯಿ ಎಂ.ಎಸ್.ಐ.ಎಲ್.ಗೆ ಯಾವ ಬಾಬತ್ತಿಗೆ ಕೊಟ್ಟಿರಿ, ಇದರಿಂದ ಏನು ಲಾಭವಾಯಿತು, ಬಡ್ಡಿಯಿಂದ ಕೊಟ್ಟರೋ ಅಥವಾ ಫ್ರಿಯಾಗಿ ಕೊಟ್ಟರೋ ಎನ್ನುವುದನ್ನು ತಿಳಿಸಬೇಕು. ಇನ್ನೊಂದು ವಿಶೇಷ ಎಂದರೆ ನ್ಯಾಷನಲ್ ಗೇಮ್ಸ್ ಬಗ್ಗೆ ನಾವು ಪದೇ ಪದೇ ಹೇಳಿದರು ಕೇಳಲಿಲ್ಲ. O.D. ತೆಗೆದುಕೊಂಡು 50 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಇನ್ನು 40 ಕೋಟಿ ರೂಪಾಯಿ ಕೊಡಬೇಕು ಎನ್ನತಕ್ಕ ಮಾತನ್ನು ಸರಿದೂಗಿಸಬಹುದು. ಆದರೆ ಹೋದ ಸಾರಿಯು ನೀವು ಸಪ್ಲಿಮೆಂಟರಿ ಬಜೆಟ್ಟನ್ನು ಮಂಡನೆ ಮಾಡುವಾಗ 10 ಕೋಟಿ ರೂಪಾಯಿ ಎಕ್ಸೆಸ್ ಇದಕ್ಕೆ ತೆಗೆದುಕೊಂಡಿದ್ದೀರಿ. ನಿಮಗೆ ಮುಂದಿನ ವರ್ಷ ಇಷ್ಟು ಖರ್ಚು ಮಾಡಬೇಕೆಂದು ಗೊತ್ತು ಇರುವಾಗ ಬಜೆಟ್ ಪ್ರಾವಿಜನ್ ಏಕೆ ಮಾಡಿಕೊಂಡಿಲ್ಲ. 1 ಕೋಟಿ, ಅಥವಾ 50 ಲಕ್ಷ ತುರ್ತು ಪರಿಸ್ಥಿತಿಗೆ ಎನ್ನುವ ಹಾಗೆ ಇಲ್ಲ ಅದು 50 ಕೋಟಿ.

ಈ ರೀತಿಯಾದರೆ ನಿಮ್ಮ ಬಜೆಟ್ ಮೇಲೆ ಏನು ಪರಿಣಾಮ ಬೀರುತ್ತದೆ? ಅದಕ್ಕಾಗಿ ನಿಯರ್‌ಲಿ ಡೆವಲಪ್‌ಮೆಂಟ್‌ನ ಒನ್‌ಫೋರ್ತ್ ಅಮೌಂಟನ್ನು ಸಪ್ಲಿಮೆಂಟರಿಯಲ್ಲಿ ನೀವು ಖರ್ಚು ಮಾಡುತ್ತಿದ್ದೀರಿ. ಇದು ವ್ಯವಸ್ಥಿತವಾಗಿ ಬಜೆಟ್ ಪ್ರಾವಿಜನ್ ಮಾಡಿ ಖರ್ಚು ಮಾಡಿದಂತಹ ಹಣ ಏನು ಅಲ್ಲ. ಎಕ್ಸೆಸ್ ಏಕೆ ಬರುತ್ತವೆ ಸಪ್ಲಿಮೆಂಟರಿ ಎಂದರೆ ಕ್ಲೈಮ್ಸ್, ಅವರು ಬಂದು ಹಾಕುವುದು, ಸಾಫ್ಟ್‌ಗೆ ಹಾರ್ಡ್ ಮಾಡುವುದು, ಹಾರ್ಡ್‌ಗೆ ಸಾಫ್ಟ್ ಅಂತೂ ಆಗುವುದೆ ಇಲ್ಲ, ಅವರಿಗೆ ಬೇಕಾದಂತೆ ಕ್ಲೈಮ್ ಮಾಡಿಕೊಂಡು, ಏನೇನು ಪ್ರಾವಿಜನ್ ಈ ಕಂಟ್ರಾಕ್ಟ್ ರೂಲ್ಸ್‌ನಲ್ಲಿ ಇರುತ್ತವೆ ಅವನ್ನು ಉಪಯೋಗ ಮಾಡಿಕೊಂಡು ಅವರು ಈ ಹಣವನ್ನು ಪಡೆದುಕೊಳ್ಳುತ್ತಾರೆ. ಅದಕ್ಕೆ ನೇರವಾಗಿ ಕಣ್ಣುಮುಚ್ಚಿ ನೀವು ಇವತ್ತು ಕೊಟ್ಯಾಂತರ ರೂಪಾಯಿ ಕೊಟ್ಟರೆ ಖಂಡಿತವಾಗಿ ನಾಳೆ ನೀವು ಇಂಥ ಪ್ರಾಜೆಕ್ಟ್‌ಗಳಿಗೆ 100 ಕೋಟಿ ಕೊಟ್ಟರು ಸಾಕಾಗುವುದಿಲ್ಲ. ಆದ್ದರಿಂದ, ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ ಈ ಕೋಟ್ಯಾಂತರ ರೂಪಾಯಿ ಹಣವನ್ನು ಏನು ಖರ್ಚು ಮಾಡುತ್ತಿದ್ದೇವೆ ಅದು ಸದುಪಯೋಗವಾಗಿಲ್ಲ ಇದರ ತನಿಖೆಯಾಗಲಿ ಎಂದು ಎಸ್ಟಿಮೆಟ್ ಕಮಿಟಿಯವರು ಒಂದು ವರದಿಯನ್ನು ಕೊಟ್ಟರೂ ಕೂಡ ಅದನ್ನು ತಿರಸ್ಕಾರ ಮಾಡಿದ್ದೀರಿ. ಪದೇ ಪದೇ ಕೇಳಿದರೂ ಅದರಲ್ಲಿ ಅರ್ಥ ಇಲ್ಲ ಎಂದು ಗೇಲಿ ಮಾಡಿದ್ದೀರಿ. ಈಗ ಪುನಃ ನಮ್ಮ ಮುಂದೆ 50 ಕೋಟಿ ಅವರಿಗೆ ಕೊಡಬೇಕಾಗುತ್ತದೆ ಎಂದು ಮಂಜೂರಾತಿಯನ್ನು ತೆಗೆದುಕೊಳ್ಳುತ್ತಾ ಇದ್ದೀರಿ. ಹೋದ ಸಾರಿಯು 10 ಕೋಟಿ ಎಕ್ಸೆಸ್ ತೆಗೆದುಕೊಂಡಿದ್ದೀರಿ. ಈ ರೀತಿಯಾಗಿ 60 ಕೋಟಿ ರೂಪಾಯಿ ನಾನು ಹೆಚ್ಚು ಕಡಿಮೆ ಹೇಳಬೇಕಾಗುತ್ತದೆ. Over and above ಏನು ಎಸ್ಟಿಮೇಟ್ ಆಗಿತ್ತು ಅದರ ಮೇಲೆ ಕೊಟ್ಟ ಹಾಗೆ ಆಯಿತು. ಅದಕ್ಕೆ ದಯವಿಟ್ಟು ಇಂಥ ಅನೇಕ ವಿಷಯಗಳು ಇವೆ. ನಾನು ಇನ್ನೊಂದು ಪ್ರಸ್ತಾಪ ಮಾಡುವುದು ಈ ಕೃಷ್ಣಾ ಜಲ ಭಾಗ್ಯ ನಿಗಮ ಇದರಲ್ಲಿ ಕೂಡ ತಾವು 150 ಕೋಟಿ ರೂಪಾಯಿ ಏನು ಅವರಿಗೆ ನೀವು ಕೊಡುತ್ತಾ ಇದ್ದೀರಿ, ಅದು ಏನು ಅಡ್ಜೆಸ್ಟ್‌ಮೆಂಟಾ? ಏಕೆಂದರೆ ಅದನ್ನು ಈ ಕಡೆ ಖರ್ಚು ಮಾಡಿ ಅದು ನಾಗೇಗೌಡರ ಇರಿಗೇಷನ್‌ದಲ್ಲಿಯೇ ಬರಬಾರದು 1,420 ಕೋಟಿ.

ಅಧ್ಯಕ್ಷರು: ತಮ್ಮಲ್ಲಿ ಒಂದು ವಿನಂತಿ ಕೌನ್ಸಿಲ್‌ನಲ್ಲಿ ಬಿಸ್‌ನೆಸ್ ಎಲ್ಲ ಮುಗಿದಿದೆ, ಅವರು ಅಪ್ರೋಪ್ರಿಯೇಷನ್ ಬಿಲ್‌ಗೆ ವ್ಹೇಟ್ ಮಾಡುತ್ತಾ ಕುಳಿತ್ತಿದ್ದಾರೆ. ಆದ್ದರಿಂದ, ದಯವಿಟ್ಟು ಮುಗಿಸಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಮಾತನಾಡಲು ಹೋಗುವುದಿಲ್ಲ. ಯಾರಾದರೂ 800 ಕೋಟಿ ಎಂದರೆ ಏನು 10 ಕೋಟಿ 20 ಕೋಟಿ ಎಂದರೆ ಅಡ್ಡಿ ಇಲ್ಲ. ಆದರೆ 800 ಕೋಟಿ ರೂಪಾಯಿ ಒಂದು ಸಪ್ಲಿಮೆಂಟರಿ ಬಜೆಟ್ ಎಂದರೆ, it is as good as 1/4 of your developmental work. ಇಲ್ಲಿ ಏನು ಆಗುತ್ತದೆ ಎಂದರೆ ಯಾರೂ ಅವರು ನೇರವಾಗಿ ಕಾರ್ಯಕ್ರಮವನ್ನು ಕೊಟ್ಟರೆ ಅದು ಅನುಷ್ಠಾನಕ್ಕೆ ಬರುವುದಿಲ್ಲ. ಮಧ್ಯದಲ್ಲಿ ಯಾರು ಸೇರಿಸಿಕೊಳ್ಳುತ್ತಾರೋ

ಅವರ ಕಾರ್ಯಕ್ರಮ ಮಾತ್ರ ಅನುಷ್ಠಾನಕ್ಕೆ ಬರುತ್ತವೆ ಎನ್ನುವ ಅರ್ಥ ಬರುತ್ತದೆ. ಆದ್ದರಿಂದ ಈ ವರ್ಷದಲ್ಲಿ ಕೂಡ ಸಿಸ್ಟಮ್ಯಾಟಿಕ್ಕಾಗಿ ಇಷ್ಟೊಂದು 850 ಕೋಟಿ ರೂಪಾಯಿ ಸಪ್ಲಿಮೆಂಟರಿ ಬಜೆಟ್ಟನ್ನು ತಾವು ಏನು ಕೇಳುತ್ತಿದ್ದೀರಿ ಅದನ್ನು ಕೇಳದೆ ರೀತಿಯಲ್ಲಿ ಏನೋ ಶೇ.5 ಅಥವಾ 10 ಹಾಕಿದರೆ ಅಡ್ಡಿಯಿಲ್ಲ. ಇನ್ನೊಂದು ಈಗಾಗಲೇ ಸಮಾಜ ಕಲ್ಯಾಣ ಇಲಾಖೆಯದನ್ನು ಸಾಕಷ್ಟು ರಿಕ್ಯಾಸ್ಟ್ ಮಾಡಿ ಈ ಹಣವನ್ನು ಅನೇಕ ಇಲಾಖೆಯಿಂದ ಕಡಿತಗೊಳಿಸಿ ಕೆಲವು ಕಾರ್ಯಕ್ರಮಗಳಿಗೆ ಮಾತ್ರ ಕೊಟ್ಟಿದ್ದೀರಿ. ಅದರಲ್ಲಿ ಇರತಕ್ಕ 9 ಕಾರ್ಯಕ್ರಮಗಳಿಗೆ ತಾವು ಹಣವನ್ನು ವರ್ಗಾವಣೆ ಮಾಡಿದ್ದೀರಿ. 32 ಇಲಾಖೆಯಿಂದ ಹಣವನ್ನು ಕಟ್ ಮಾಡಿ ಆ ಹಣವನ್ನು ಕಳೆದು ಆ ಹಣವನ್ನು ಇಲ್ಲಿ ಹಾಕಿದ್ದೀರಿ. ಆ 9 ಕಾರ್ಯಕ್ರಮಗಳಲ್ಲಿ, construction of Ambedkar Bhavan in Bangalore. ಟ್ಯಾಗೋರ ಭವನ ಇದೆ, ಟೌನ್ ಹಾಲ್ ಇದೆ, ಇವೆಲ್ಲ ಸಾರ್ವಜನಿಕರಿಗೆ ಹಿತ ಆಗತಕ್ಕವು ಈ ಷೆಡ್ಯೂಲ್ ಕ್ಯಾಸ್ಟ್ ಹಣವನ್ನು 4 ಕೋಟಿ ರೂಪಾಯಿ ಅದಕ್ಕೆ ಖರ್ಚು ಮಾಡುತ್ತೇವೆ ಎಂದರೆ ಎಷ್ಟರ ಮಟ್ಟಿಗೆ ಇದು ಸಮಂಜಸ ಎನ್ನತಕ್ಕ ಮಾತು ಹೇಳಿ. ಹೆಸರು ಇಡುವುದರಿಂದ ಇವರು ಈ ಹಣವನ್ನು ಅದಕ್ಕೆ ಖರ್ಚು ಮಾಡುವುದು ಇದು ಸರಿ ಎನ್ನಿಸಿದರೆ ನೀವು ಅದನ್ನು ಮಾಡಿ. ಏಕೆ ಕೊಡಬೇಕು? ಬೇರೆ ಹಣ ಕೊಡಿ ಎಸ್.ಸಿ.ಪಿ ಹಣವನ್ನು ಏಕೆ ಕೊಡುತ್ತೀರಿ? ಗಂಗಾಕಲ್ಯಾಣ ಯೋಜನೆಗೆ ಪರವಾಗಿಲ್ಲ, ಅವರು ಸ್ಕೂಲ್ ಕಟ್ಟಲು ಪರವಾಗಿಲ್ಲ, ಮುರಾರ್ಜಿ ಸ್ಕೂಲ್ ಕಟ್ಟಲು ಪರವಾಗಿಲ್ಲ ಏಕೆಂದರೆ ಇವು ಎಲ್ಲ ಅವರ ಕಲ್ಯಾಣ ಕಾರ್ಯಕ್ರಮಗಳು. ಆದರೆ ಒಂದು ಭವನವನ್ನು ಕಟ್ಟಿಸುವುದು ಕೇವಲ ಅವರ ಸಲುವಾಗಿ ಇರುವುದಿಲ್ಲ. ಅಥವಾ ಆ ಭವನವನ್ನು ಅವರು ಮಾತ್ರ ಉಪಯೋಗ ಮಾಡಬೇಕೆಂದು ಇಲ್ಲ. ಅದಕ್ಕೆ ನೀವು ಸುಮಾರು ಒಂದುವರೆ ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೀರಿ. ಅಷ್ಟೇ ಎಂದರೆ ಏನು? ಅನಂತರ ಇನ್ನೊಂದು ಯೋಜನೆ ಈ ಆಶ್ರಯ ಹೌಸಿಂಗ್ ಸ್ಕೀಮ್ ಇದೆಯಲ್ಲ, ಅಂಬೇಡ್ಕರ್ ಹೌಸ್‌ಗೆ ;ತಾವು ದುಡ್ಡು ಕೊಡಿ. ಅಡ್ಡಿ ಇಲ್ಲ. ಈ ಆಶ್ರಯ ಸ್ಕೀಮ್ ಇದು ಎಲ್ಲರಿಗೂ ಅನ್ವಯವಾಗುವಂತಹ ಸ್ಕೀಮ್, ಅದಕ್ಕಾಗಿ ನಾವು ಆಶ್ರಯ ಯೋಜನೆಯಲ್ಲಿ ಆ ಒಂದು ಇಲಾಖೆಗೆ ಪುಶ್ ಕೊಡಬೇಕೆಂದು ಹೇಳಿ ಈ ಒಂದು ಹಣವನ್ನು ಅವರ ಕೈಗೆ ಕೊಟ್ಟು ಅವರ ವತಿಯಿಂದ ಇದಕ್ಕೆ 5 ಕೋಟಿ 25 ಲಕ್ಷ ರೂಪಾಯಿಗಳಾಗುತ್ತದೆ. ಇದು ಸಪ್ಲಿಮೆಂಟರಿ ಎಸ್ಟಿಮೇಟ್ ಫಸ್ಟ್ ಇನ್‌ಸ್ಟಾಲ್‌ಮೆಂಟ್. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಯಾವುದು ನೇರವಾಗಿ ಅವರಿಗೆ ಬೆನಿಫಿಟ್ ಆಗುತ್ತದೆಯೋ ಆ ಸ್ಕೀಮನ್ನು ನೀವು ಇಂಪ್ಲಿಮೆಂಟ್ ಮಾಡಿ. ಹಣ ಪೂಲ್ ಮಾಡಿ, ಅಡ್ಡಿ ಇಲ್ಲ, ಆದರೆ ಯಾವುದು ನೀವು ಅಸೆಟ್ ಕ್ರಿಯೇಟ್ ಮಾಡಿಕೊಳ್ಳುತ್ತೀರೋ ಇದು ಸಾರ್ವಜನಿಕರಿಗೆ ಎಲ್ಲಾರಿಗೂ ಕೂಡ ಅದರಿಂದ ಲಾಭವಾಗುತ್ತದೆ. ಅದನ್ನು ತಂದು ಈ ಹಣವನ್ನು ಒಯ್ದು ಅಲ್ಲಿ ಹಾಕುತ್ತೀರಿ, ಅಂತಹ ಒಂದು ಆಶ್ರಯ ಯೋಜನೆ ಸರ್ವೇಸಾಮಾನ್ಯ ಇದೆಲ್ಲಾ ಶಾಸಕರಿಗೆ ಕೊಡತಕ್ಕಂಥ ಹಂಚತಕ್ಕಂಥ ಒಂದು ಸ್ಕೀಮ್ ಇದೆ. ಆದರೆ ನೀವು ಇಲ್ಲಿಂದ ಹಣ ಒಯ್ಯುವುದು, ಅವರಿಗೆ ಕೊಟ್ಟು ಅಲ್ಲಿಂದ ಥ್ರೂ ಆಶ್ರಯ ಸ್ಕೀಮ್‌ಗೆ

ನಾವು ಬೆನಿಫಿಟ್ ಕೊಡುತ್ತೇವೆ ಎಂದರೆ ನಿಜವಾಗಲೂ ಇದು ಅಷ್ಟೊಂದು ಸರಿಯಾಗುವುದಿಲ್ಲ. ನೀವು ಪುನಃ ಒಂದನ್ನು ತೆಗೆದು ಇನ್ನೊಂದಕ್ಕೆ ಹಣ ಕೊಟ್ಟಹಾಗೆ ಆಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇರೀತಿ ಟ್ರೈಬಲ್ ಸಬ್ ಪ್ಲಾನ್‌ನಲ್ಲೂ ಕೂಡ ತಾವು ಈ ಕೆಲಸ ಮಾಡಿದ್ದೀರಿ. ಅದರಲ್ಲಿ ಸುಮಾರು 14 ಕೋಟಿ ರೂಪಾಯಿ ತಾವು ರೀಅಪ್ರೊಪ್ರಿಯೇಟ್ ಮಾಡುತ್ತಿದ್ದೀರಿ. ಇದರಲ್ಲಿ 70 ಕೋಟಿ ರೂಪಾಯಿ ಮಾಡಿದರೆ ಅದರಲ್ಲಿ 14 ಕೋಟಿ ರೂಪಾಯಿ ಮಾಡುತ್ತಿದ್ದೀರಿ. ಆದುದರಿಂದ ಇದರಿಂದ ಏನಾಗುತ್ತದೆ ಎಂದರೆ ನಿಜವಾಗಿ ನಾವು ಒಂದು ಜೇಬಿನಿಂದ ತೆಗೆದು ಇನ್ನೊಂದು ಜೇಬಿಗೆ ಹಾಕಿದ ಹಾಗೆ ಆಗುತ್ತದೆ. ಅವರಿಗೆ ಇದರಿಂದ ನೇರವಾಗಿ ಬೆನಿಫಿಟ್ ಮುಟ್ಟುವುದಿಲ್ಲ. ಆದುದರಿಂದ ಇನ್ನೊಮ್ಮೆ ತಮ್ಮನ್ನು ನಾನು ಕೇಳಿಕೊಳ್ಳುತ್ತೇನೆ ಇಂತಹ ಯಾವುದೇ ಯೋಜನೆ ಮಾಡುವಾಗ ಸ್ವಲ್ಪ ಕೂಲಂಕಷವಾಗಿ ಪರಿಶೀಲನೆ ಮಾಡಿ. ಅವರಿಗೆ, ಅವರ ಅಭಿವೃದ್ಧಿಗೆ ಅವರ ಎಕಾನಾಮಿಕ್ ಡೆವಲಪ್‌ಮೆಂಟ್‌ಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಇದನ್ನು ರೂಪಿಸಬೇಕೆನ್ನುವ ಮಾತನ್ನು ನಾನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ತುಂಬಾ ಅವಸರ ಅವಸರವಾಗಿ ಇವತ್ತು 1997-98ನೇ ಸಾಲಿನ ಪೂರಕ ಬೇಡಿಕೆಯನ್ನು ನಾವು ಇಲ್ಲಿ ಪಾಸ್ ಮಾಡಿ ಅಲ್ಲಿ ವಿಧಾನಪರಿಷತ್ತಿನಲ್ಲಿ ಅನುಮೋದನೆ ಪಡೆದುಕೊಂಡು ವಾಪಸ್ಸು ಬರಬೇಕಾಗಿದೆ. ಅದರ ಅವಸರ ನನಗೆ ಗೊತ್ತಿದೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು ಇಬ್ಬರೂ ಇರುವುದರಿಂದ ಒಂದು ಮಾತನ್ನು ಹೇಳುತ್ತೇನೆ. ದಯಮಾಡಿ ಮುಂದಿನ ವರ್ಷದಿಂದ ಆದರೂ ಸಹ ಈ ಲೇಖಾನುದಾನವನ್ನು ಆರು ತಿಂಗಳಿಗೆ ಪಡೆಯುವಂತಹ ಕೆಟ್ಟ ಪದ್ಧತಿಯನ್ನು ಅವಾಯ್ಡ್ ಮಾಡಿ. ಇದರಿಂದ ಏನಾದರು ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯದ ಕಡೆ ಗಮನ ಕೊಡುವುದಕ್ಕೆ ಅನುಕೂಲವಾಗುತ್ತದೆ. ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಇವತ್ತು ಯದ್ವಾತದ್ವಾ ಇದೇ ಕಾರಣಕ್ಕೋಸ್ಕರ ಜಾಸ್ತಿಯಾಗುತ್ತಿದೆ. ಆದರೆ ಪ್ಲಾನ್ ಎಕ್ಸ್‌ಪೆಂಡಿಚರ್ ಕಡಿಮೆಯಾಗುತ್ತಿದೆ. ಆ ಕಡೆ ತಾವು ವಿಶೇಷವಾದಂತಹ ಗಮನವನ್ನು ಕೊಡಲಿಲ್ಲ. 1995-96ಕ್ಕೆ ಪೂರಕ ಅಂದಾಜು ಒದಗಿಸಿರುವಂಥಾದ್ದರ ಬಗ್ಗೆ ಬೇಡಿಕೆ 842.48 ಕೋಟಿ ರೂಪಾಯಿ. ಅದರಲ್ಲಿ 311.76 ಕೋಟಿ ರೂಪಾಯಿ ಲೆಕ್ಕ ಹೊಂದಾಣಿಕೆಯಾದರೆ ಉಳಿದಂತಾದ್ದು 730 ಕೋಟಿ 72 ಲಕ್ಷ ರೂಪಾಯಿ ನೀವು ಕೊಡುತ್ತಿದ್ದೀರಿ. ಮತ್ತು ಇದರಲ್ಲಿ ಕೇಂದ್ರಸರ್ಕಾರದ ಸಹಾಯಧನ 67.13 ಕೋಟಿ ರೂಪಾಯಿ ಸೇರಿದೆ. ಇವತ್ತು ಆಶ್ರಯ ಯೋಜನೆಯಲ್ಲಿ ನೀವು ಯಾವುದಕ್ಕೆ ಈ ರೀತಿ ಖರ್ಚು ಮಾಡಬೇಕಾಗಿತ್ತು 1995-96ನೇ ಸಾಲಿನಲ್ಲಿ ಇವತ್ತಿನವರೆಗೂ ಸಹ ಪೂರ್ಣ ಮನೆ ಕಟ್ಟಿಕೊಂಡವರಿಗೆ ಸುಮಾರು 45-50 ಕೋಟಿ ರೂಪಾಯಿಗಳು ಬಾಕಿ ಇದೆ. 1997-98ನೇ ಸಾಲಿನ ಹಣ ಬಿಡುಗಡೆ ಮಾಡಿದ್ದೀರಾ? ಇದುವರೆಗೂ ಕೂಡ ಹಣ

ಬಿಡುಗಡೆ ಮಾಡಿಲ್ಲ. ಈ ನಿಮಿಷದವರೆಗೂ ಪೇಮೆಂಟ್ ಆಗಿಲ್ಲ.

ಶ್ರೀ ಸಿದ್ಧರಾಮಯ್ಯ: 66 ಕೋಟಿ ರೂಪಾಯಿಗಳು ಏನು ಈ ಬಾರಿ ಇಟ್ಟಿದ್ದೇವೆ, ಹೌಸಿಂಗ್‌ಗೆ ಅದರಲ್ಲಿ 33 ಕೋಟಿ ರೂಪಾಯಿ ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಅದು ಹುಡ್ಕೋದಿಂದ ಸಾಲ ಬರಬೇಕು, ಅದು ಇನ್ನೂ ಬಂದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ತಾವು ಅಂಕಿ ಅಂಶ ತರಿಸಿಕೊಳ್ಳಿ. ನಾಲ್ಕು ದಿವಸಗಳ ಹಿಂದೆ ಶಿಕಾರಿಪುರ ತಾಲ್ಲೂಕಿನಲ್ಲಿ ಹೋಗಿ ಅಧಿಕಾರಿಗಳ ಜೊತೆ ಮಾತನಾಡಿ, ಜಿಲ್ಲಾದಿಕಾರಿಗಳ ಸಂಪರ್ಕ ಮಾಡಿ ಸಂಬಂಧಪಟ್ಟ ಇಲಾಖೆಗೆ ಆರೂವರೆ ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೀರಿ. 1995-96ನೇ ಸಾಲಿನಲ್ಲಿ ಶಿಕಾರಿಪುರ ತಾಲ್ಲೂಕು ಒಂದರಲ್ಲೇ 20 ಲಕ್ಷ ರೂಪಾಯಿ ಬಾಕಿ ಇದೆ. ಇಡೀ ರಾಜ್ಯದಲ್ಲಿ ಈ ದುಡ್ಡು ಬಾಕಿ ಇದೆ. ಅದರ ಪೇಮೆಂಟ್ ಮಾಡಿಲ್ಲ. ಅವನು ಬೀದಿ ಪಾಲು ಆಗಿದ್ದಾನೆ. ಇನ್ನು ಎರಡನೆಯದಾಗಿ ಯಾವುದೋ ಒಂದು ಸಾರ್ವಜನಿಕ ಹಿತಾಸಕ್ತಿ ಸೇವೆಗಳು ಇದೆ. ಇದರ ಬಗ್ಗೆ ಬಜೆಟ್‌ನಲ್ಲಿ ಅಂದಾಜು ಮಾಡಿದ್ದರೂ ಸಹ ನಾವು ಹಣವನ್ನು ಖರ್ಚು ಮಾಡುತ್ತಿಲ್ಲ. ಸಿ.ಐ.ಜಿ. ವರದಿ ಪ್ರಕಾರ 1993-94ರಲ್ಲಿ 1165.85 ಕೋಟಿ ರೂಪಾಯಿ ಖರ್ಚಾಗಲಿಲ್ಲ. 1994-95ರಲ್ಲಿ 2076 ಕೋಟಿ 83 ಲಕ್ಷ ರೂಪಾಯಿ ಖರ್ಚಾಗಲಿಲ್ಲ. 1995-96ರಲ್ಲಿ 2,919.11 ಕೋಟಿ ರೂಪಾಯಿ ಬಜೆಟ್ ಅಲೋಕೇಷನ್ ಮಾಡಿ ಈ ರೀತಿ ಹಣ ಖರ್ಚಾಗಲಿಲ್ಲ ಎನ್ನುವುದು ಸಿ.ಐ.ಜಿ.ವರದಿ ಪ್ರಕಾರ ಇದೆ, ಡಿಟೈಲ್ಸ್ ಕೊಡುತ್ತೇನೆ. ಹಳೆಯದು ಬೇಡ. 1995-96ನೇ ಸಾಲಿನಲ್ಲಿ ನಾವು ಗ್ರಾಮೀಣಾಭಿವೃದ್ಧಿಗೆ ನಿಗದಿ ಮಾಡಿರುವಂತಹ ಹಣದಲ್ಲಿ 306.ಕೋಟಿ 39 ಲಕ್ಷ ರೂಪಾಯಿ ಖರ್ಚಾಗಲಿಲ್ಲ. ಅದು ನೀವು ಬಜೆಟ್ ಅಲೋಕೇಟ್ ಮಾಡಿದ್ದರಲ್ಲಿ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದರು. 1995-96ನೇ ಸಾಲಿನಲ್ಲಿ ನಿಮ್ಮ ಕಾಲದಲ್ಲೇ ನಿಗದಿ ಮಾಡಿದ ಬಜೆಟ್ ಹಣದಲ್ಲಿ 68.58 ಲಕ್ಷ ರೂಪಾಯಿ ಖರ್ಚಾಗಲಿಲ್ಲ. ವ್ಯವಸಾಯ ಮತ್ತು ಪಶುಸಂಗೋಪನೆಗೆ ತೆಗೆದಿಟ್ಟ ಹಣದಲ್ಲಿ 67 ಕೋಟಿ 84 ಲಕ್ಷ ರೂಪಾಯಿ ಖರ್ಚಾಗಲಿಲ್ಲ. ವಸತಿಯಲ್ಲಿ 51 ಕೋಟಿ 35 ಲಕ್ಷ ರೂಪಾಯಿ ಖರ್ಚಾಗಲಿಲ್ಲ. ನಾನು ಹೇಳುತ್ತಿದ್ದೇನೆ, 1995-96ನೇ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿಗೆ ಬಜೆಟ್‌ನಲ್ಲಿ 306 ಕೋಟಿ 39 ಲಕ್ಷ ರೂಪಾಯಿ ಖರ್ಚಾಗಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: 1996-97ನೇ ಸಾಲಿನಲ್ಲಿ ನಾವು 98 ಪರ್ಸೆಂಟ್ ಸಾಧನೆ ಮಾಡಿದ್ದೇವೆಂದು ಹೇಳಿ ತಮಗೆ ದಾಖಲೆ ಕೂಡ ತಂದುಕೊಟ್ಟಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಹೇಳುತ್ತಿರುವುದು ಸಿ.ಐ.ಜಿ. ವರದಿ ಪ್ರಕಾರ.

ಶ್ರೀ ಸಿದ್ಧರಾಮಯ್ಯ: ಇಲ್ಲಿ ಇರುವುದೇ 300 ಚಿಲ್ಲರೆ ಕೋಟಿ ರೂಪಾಯಿ. ಅದರಲ್ಲಿ

306 ಕೋಟಿ ರೂಪಾಯಿ ಖರ್ಚಾಗಲಿಲ್ಲ ಎಂದರೆ ಏನು ಹೇಳುವುದು ನಾವು?

ಶ್ರೀ ಬಿ.ಎಸ್.ಯಡಿಯೂರಪ್ಪ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆಗೆ ಖರ್ಚು ಮಾಡದೇ ಇರುವುದು ನಿಜ ತಾನೆ?

ಶ್ರೀ ಸಿದ್ಧರಾಮಯ್ಯ: ಇಲ್ಲ ನೀವು ಲಕ್ಷ ರೂಪಾಯಿ ಹೇಳಿದ್ದುದು.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆ ಎಂದರೆ ಅಂಕಿಅಂಶ ತಪ್ಪಾಗಿದ್ದರೆ, ಒಂದೇ ಕಡೆ ಇಲ್ಲಿ ತಾವು ಅಂದಾಜು ಮಾಡಿದ್ದೀರಿ. ಅದಕ್ಕಿಂತ ಹೆಚ್ಚು ಹಣವನ್ನು ನೀವು ಖರ್ಚು ಮಾಡುತ್ತೀರಿ. ಅದನ್ನು ಪಾಸ್ ಮಾಡಿಕೊಡುತ್ತೇವೆ, ಆದರೆ ಇನ್ನೊಂದು ಕಡೆ ಬಜೆಟ್ ಅಲೋಕೇಷನ್ ಆಗಿರುವ ಹಣವನ್ನು ನೀವು ಖರ್ಚು ಮಾಡುತ್ತಿಲ್ಲ. ಈ ಪರಿಸ್ಥಿತಿ ಇವತ್ತು ಇದೆ. ವಿವರವಾಗಿ ಯಾವುದಕ್ಕೆ ಈ ಒಂದು ಹಣವನ್ನು ಕೇಳುತ್ತಿದ್ದೀರಿ, ಯಾವುದು ಖರ್ಚಾಗಿದೆ ಎನ್ನುವುದನ್ನು ನೋಡಿ ಚರ್ಚೆ ಮಾಡೋಣ ಎಂದರೆ ಇದರ ಬಗ್ಗೆ ಅವಸರ ಅವಸರವಾಗಿ ಪಾಸ್ ಮಾಡುವಂತಹ ಪರಿಸ್ಥಿತಿ ಬಂದಿದೆ. ಇನ್ನು ಮುಂದೆ ಯಾವುದು ಅಗತ್ಯ ಇದೆ, ಯಾವುದಕ್ಕೆ ಇಲ್ಲ ಎನ್ನುವ ಬಗ್ಗೆ ಪೂರ್ವಾಪರ ಯೋಚನೆ ಮಾಡಿ ಹಣವನ್ನು ಖರ್ಚು ಮಾಡುವಂತಹ ಒಂದು ವ್ಯವಸ್ಥೆಯನ್ನಾದರೂ ತಾವು ಮಾಡಬೇಕು. ನಾನು ಈ ಮೊದಲು ಹೇಳಿದಂತಹ ಅಂಕಿಅಂಶಗಳನ್ನು ಸರಿಪಡಿಸುವಂತಹ ಪ್ರಯತ್ನವನ್ನು ಮಾಡುತ್ತೇನೆ. ಲಕ್ಷ ಇರಬಹುದು, ಬಹುಶಃ ನಾನು ಕೋಟ್ ಮಾಡಬೇಕಾದರೆ ತಪ್ಪಾಗಿರಬಹುದು. ಇದನ್ನು ಸರಿ ಮಾಡುವಂತಹ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ.

+ ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ತೋಟಗಾರಿಕೆ ಇಲಾಖೆಯಲ್ಲಿ ಅದು ಒಂದು ಸೆಂಟ್ರಲ್ ಸ್ಪಾನ್ಸರ್ಡ್‌ಸ್ಕೀಮ್ ಸುಮಾರು 21 ಕೋಟಿ ರೂಪಾಯಿ project cost ಇದೆ. 12 ಕೋಟಿ ರೂಪಾಯಿಯಷ್ಟು ನಾವು ಬಜೆಟ್‌ನಲ್ಲಿ ಉಳಿಸಿಕೊಂಡಿದ್ದೆವು. ಈಗಾಗಲೇ 4 ಕೋಟಿ 80 ಲಕ್ಷ ರೂಪಾಯಿ ಕನ್ಸಾಲಿಡೇಟೆಡ್ ಫಂಡ್‌ನಿಂದ ಖರ್ಚಾಗಿದೆ. ಅದನ್ನು ಸರಿದೂಗಿಸುವುದಕ್ಕೆ ನಾವು 4 ಕೋಟಿ 84 ಲಕ್ಷ ರೂಪಾಯಿಗೆ ನಾವು ಒಪ್ಪಿಗೆ ಕೊಡಬೇಕೆಂದು ಕೇಳಿರತಕ್ಕಂಥಾದ್ದು. ಮತ್ತು ಬೇರೆಬೇರೆ ಮಿಸ್ ಅಪ್ರೋಪ್ರಿಯೇಷನ್ ಆಗಿರತಕ್ಕಂಥಾದ್ದು ತೋಟಗಾರಿಕೆ ಇಲಾಖೆ ಇದ್ದರೆ ಅದರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಸಂಬಂಧಪಟ್ಟ ಅಧಿಕಾರಿಗಳು ಯಾರು ತಪ್ಪು ಮಾಡಿದ್ದಾರೆ ಅವರ ವಿರುದ್ಧ ಕಟ್ಟುನಿಟ್ಟಿನ ಕ್ರಮವನ್ನು ಕಾನೂನಿನ ಪ್ರಕಾರ ಅವರನ್ನು ಸಸ್ಪೆಂಡ್ ಮಾಡಿ ಮುಂದೆ ಎನ್‌ಕ್ವೈಯರಿ ಆದಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಇದರಲ್ಲಿ ನ್ಯಾಷನಲ್ ಗೇಮ್ಸ್ ಏನಾಯಿತು ನಮಗೆ ಸ್ಪಾನ್ಸರ್ಡ್ ಶಿಫ್‌ನಿಂದ ದುಡ್ಡು 50 ಕೋಟಿ ರೂಪಾಯಿ ಬರುತ್ತದೆಂದು ಲೆಕ್ಕ ಇತ್ತು. ಆದರೆ ಆ ದುಡ್ಡು ಬರಲಿಲ್ಲ. ಬರೀ 6 ಕೋಟಿ ರೂಪಾಯಿ ಮಾತ್ರ ಬಂತು. ಉಳಿದ ಹಣವನ್ನು ನಾವು ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಅದನ್ನು ಪೂರ್ಣ ತ್ವರಿತವಾಗಿ ಮಾಡಬೇಕಾಗಿತ್ತು. ಹಾಗಾಗಿ ಸರ್ಕಾರ

ಅದಕ್ಕೆ ಗ್ಯಾರಂಟಿಯಾಗಿದೆ. ಅದಕ್ಕೆ ಬಡ್ಡಿ ಕೊಡುತ್ತಿದ್ದೇವೆ. ಅದಕ್ಕೋಸ್ಕರ ಅದಕ್ಕೆ ನಾವು ಬಜೆಟ್‌ನಲ್ಲಿ ಇಟ್ಟುಕೊಂಡಿಲ್ಲ. ಆ ಕಾರಣಕ್ಕೋಸ್ಕರ 50 ಕೋಟಿ ರೂಪಾಯಿ ಈ ಬಜೆಟ್‌ನಲ್ಲಿ ಸೇರಿಸಿಕೊಳ್ಳಬೇಕಾಗಿದೆ ದುಡ್ಡು ಕೊಡಬೇಕಾಗಿದೆ. ಅದಕ್ಕೋಸ್ಕರ ಅದನ್ನು ಅಳವಡಿಸಿಕೊಂಡಿರತಕ್ಕಂಥಾದ್ದು. ಅದಕ್ಕೆ ಒಪ್ಪಿಗೆ ಕೊಡಬೇಕು ಎಂದು ಕೇಳಿರುವುದು. ಇನ್ನೊಂದು ಈ ಸಾರಿ ಮೊದಲೆ ಪೂಲ್ ಮಾಡಿದ್ದೇವೆ. 19 ಕೋಟಿ ರೂಪಾಯಿ ಎಸ್.ಸಿ.ಟಿ, ಎಸ್.ಟಿಸಿ. ಮೊದಲು ಏನಾಗುತ್ತಿತ್ತು, ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ಕುರಿಗಳಿಗೆ ಕೊಡುವುದು, ದನಗಳಿಗೆ ಕೊಡುವುದು, ಎತ್ತಿಗೆ ಕೊಡುವುದು, ನೇಗಿಲಿಗೆ ಕೊಡುವುದು, ಗುದ್ದಲಿಗೆ ಕೊಡುವುದು ಈ ರೀತಿ ಮಾಡಿ ಅಲ್ಲಿ ಅಗ್ರಿಕಲ್ಚರ್‌ನಲ್ಲಿ ಜಮೀನು ಇಲ್ಲದೆ ಇರುವವರಿಗೆ ಕೊಡುವುದು, ಅವರು ಮಾರಿಕೊಳ್ಳುವುದು, ಈ ರೀತಿಯಾಗುತ್ತಿತ್ತು. ಅದಕ್ಕೋಸ್ಕರ ಈ ಹಣವನ್ನು ಮೊದಲೇ ಕ್ರೋಢೀಕರಿಸಿ ಎಲ್ಲಾ ಇಲಾಖೆಗಳಲ್ಲಿ ಸುಮಾರು ಡಿವಿಜಿಬಲ್ ಪೂಲ್ಸ್ ಎಲ್ಲೆಲ್ಲಿ ಇದೆ ಡಿವಿಜಬಲ್ ಸೆಕ್ಟರ್‌ನಲ್ಲಿ ಅದನ್ನೆಲ್ಲಾ ತೆಗೆಯುತ್ತೇವೆ. ನಾನ್ ಡಿವಿಜಿಬಲ್ ಸೆಕ್ಟರ್ಸ್ ಬೇರೆ ಇರುತ್ತದೆ. ಇದರಲ್ಲಿ ನೀರಾವರಿ ವಿದ್ಯುತ್ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲೆಲ್ಲಿ ಖರ್ಚಾಗುತ್ತದೆ ಈ ಹಣವನ್ನು ಕ್ರೋಢೀಕರಿಸಿ ಸುಮಾರು 500 ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ಈ ವರ್ಷ ಎಸ್.ಸಿ/ಎಸ್.ಟಿ ವರ್ಗದ ಜನರಿಗೆ, ಅವರ ಮನೆ ಕಟ್ಟಿಕೊಡುವುದು ಅವರಿಗೆ ಜಮೀನುಗಳನ್ನು ನೀರು ಕೊಡುವುದಕ್ಕೆ, ವಿದ್ಯುತ್ ಕೊಡುವುದಕ್ಕೆ ಮೇಜರ್ ಆಗಿ ಖರ್ಚು ಮಾಡುತ್ತೇವೆ. ಒಂದೂವರೆ ಕೋಟಿ ರೂಪಾಯಿ ಏಕೆಂದರೆ ಅಂಬೇಡ್ಕರ್ ಭವನ, ಅದು ಕೂಡ ಅಸೆಟ್ ಕ್ರಿಯೇಟ್ ಮಾಡತಕ್ಕಂಥಾದ್ದು. ಅದಕ್ಕೆ ಏಕೆ ಈ ದುಡ್ಡು ಎಂದರೆ ಗುದ್ದಲಿ, ಗುಳ ಇದಕ್ಕೆಲ್ಲಾ ದುಡ್ಡುವೇಸ್ಟ್ ಆಗಿ ಹೋಗುತ್ತಿತ್ತು. ಇಲ್ಲಿಯವರೆಗೆ ಜಮೀನು ಇಲ್ಲದವರಿಗೆ ನೇಗಿಲು ಕೊಡುತ್ತಿದ್ದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಹೇಳುವುದು ವೆಲ್ ಫೇರ್ ಸ್ಕೀಮ್ ಎಕಾನಾಮಿಕ್ ಡೆವಲಪ್‌ಮೆಂಟ್‌ಗೆ ಖರ್ಚು ಮಾಡುವುದು ಬೇರೆ. ಬಿಲ್ಡಿಂಗ್‌ಗೆ ಖರ್ಚು ಮಾಡುವುದು ಬೇರೆ.

ಶ್ರೀ ಸಿದ್ಧರಾಮಯ್ಯ: ಅವರಿಗೆ ಅನುಪಯುಕ್ತವಾಗಿ ಅನುಕೂಲ ಆಗದೇ ಇರತಕ್ಕಂಥಾದ್ದು ಅಲ್ಲ. ಅವರಿಗೆ ಅನುಕೂಲ ಆಗತಕ್ಕಂಥಾದ್ದು. ಅವರಿಗೆ ಬದುಕಲು ಅನುಕೂಲವಾಗತಕ್ಕಂಥ ರೀತಿಯಲ್ಲಿ ಇವತ್ತು ಕಾರ್ಯಕ್ರಮವನ್ನು ಮಾಡಿಕೊಂಡಿದ್ದು, ಅದಕ್ಕೋಸ್ಕರ ಖರ್ಚು ಮಾಡುವುದಕ್ಕೋಸ್ಕರ ಇಲ್ಲಿ ಮಾಡಿಕೊಂಡಿದ್ದೇವೆ.

2.00 ಪಿ.ಎಂ

ಇನ್ನೊಂದು ಅವರು ಏನು ಹೇಳಿದರು ಅಂದರೆ, ಆ 150 ಕೋಟಿ ರೂಪಾಯಿ ಕೃಷ್ಣಜಲಭಾಗ್ಯ ನಿಗಮದಲ್ಲಿ ಅನುದಾನ ಇಟ್ಟಿದೆ, ಷೇರ್ ಕ್ಯಾಪಿಟಲ್ ಆಗಿ ಮಾಡಿರತಕ್ಕಂಥದ್ದು, ಅದು ಔಟ್ ಗೋಯಿಂಗ್ ಕ್ಯಾಷ್ ಏನಲ್ಲ ಅಡ್ಜಸ್ಟ್‌ಮೆಂಟ್ ಅದು.

ಹಾಗಾಗಿ ಇವರು ಏನು ಹೇಳಿದ್ದಾರೆ 832 ಕೋಟಿಯಲ್ಲಿ 312 ಕೋಟಿ ರೂಪಾಯಿ ಅಡ್ಜಸ್ಟ್‌ಮೆಂಟ್ಸ್. ಇನ್ನು 530 ಕೋಟಿ ರೂಪಾಯಿಗಳಲ್ಲಿ ಸುಮಾರು 67 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬರತಕ್ಕಂಥದ್ದು. ಇನ್ನು ಉಳಿದದ್ದರಲ್ಲಿ ನಾವು ಕೆ.ಇ.ಬಿ.ಗೋಸ್ಕರ ಹೆಚ್ಚು ಮಾಡಿಕೊಂಡಿದ್ದೇವೆ. ಆದ್ದರಿಂದ ಕಡಿಮೆ ಖರ್ಚಾಗತಕ್ಕಂಥಾದ್ದು ಈ ತರಹದ್ದು. ಆದ್ದರಿಂದ ಬಹಳ ಆಗಿಬಿಟ್ಟಿದೆ ಎಂದಲ್ಲ. ಇಡೀ 13,455 ಕೋಟಿ ಬಜೆಟ್‌ನಲ್ಲಿ 6 ಪರ್ಸೆಂಟ್, ಔಟ್ ಗೋಯಿಂಗ್ ಕ್ಯಾಷ್ ಫ್ಲೋ ಎಷ್ಟೆಂದರೆ 4 ಪರ್ಸೆಂಟ್. ಅದಕ್ಕೋಸ್ಕರವೇ ರಾಜ್ಯಾಂಗದಲ್ಲಿ 205ನೇ ವಿದಿ ಮಾಡಿಕೊಂಡಿರತಕ್ಕಂಥದ್ದು, ಈ ತರಹದ ಸೇವೆಗಳು ಬರುತ್ತವೆ, ಖರ್ಚುಗಳು ಬರುತ್ತವೆ ಅದನ್ನು ಮಾಡಬೇಕು ಎನ್ನುವ ಕಾರಣಕ್ಕೋಸ್ಕರವೇ ಇದನ್ನು ಮಾಡಿಕೊಂಡಿರತಕ್ಕಂಥದ್ದು. ಅದನ್ನು ನಾವು ಮಾಡಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಮ್ಮ ಬಜೆಟ್‌ಗಿಂತಲೂ ಸಪ್ಲಿಮೆಂಟರಿ ಬಜೆಟ್ ದೊಡ್ಡದಾಗಬಾರದು ಎಂದು.

ಶ್ರೀ ಸಿದ್ಧರಾಮಯ್ಯ: ಈಗ ನಾನು ಹೇಳಿದೆನಲ್ಲ. 832 ಕೋಟಿ ರೂಪಾಯಿಗಳಲ್ಲಿ 312 ಕೋಟಿ ಅಡ್ಜೆಸ್ಟ್‌ಮೆಂಟ್ಸ್, ಕ್ಯಾಷ್ ಔಟ್ ಗೋಯಿಂಗ್ ಇಲ್ಲ. ಉಳಿದ 530 ಕೋಟಿಯಲ್ಲಿ ಸುಮಾರು 311 ಕೋಟಿ ರೂಪಾಯಿ ಕೆ.ಇ.ಬಿ.ಗೆ ಸಬ್ಸಿಡಿ ಕೊಡುವುದಕ್ಕೋಸ್ಕರ ಇಟ್ಟುಕೊಳ್ಳತಕ್ಕಂಥ ಹಣ, ಇದನ್ನು ನಾವು 211 ಕೋಟಿ ಇಟ್ಟುಕೊಂಡಿದ್ದೇವೆ, ಅದು ಸಾಕಾಗುವುದಿಲ್ಲ. ಆ ಕಾರಣದಿಂದ ಇದರಲ್ಲಿ 169 ಕೋಟಿಯೂ ಕೂಡ ಹೋದವರ್ಷದ ಲೆಕ್ಕದ ಅಡ್ಜೆಸ್ಟ್‌ಮೆಂಟ್‌ಗಳಾಗುತ್ತವೆ. ಯಡಿಯೂರಪ್ಪನವರು ಏನು ಹೇಳಿದ್ದಾರೆ, ಅವರು ಹೌಸಿಂಗ್ ಮೇಲೆ ದುರುಪಯೋಗವಾಗುತ್ತದೆ, ದುರುಪಯೋಗ ಆಗತಕ್ಕಂಥದ್ದನ್ನು ತಡೆಯತಕ್ಕ ಪ್ರಯತ್ನಗಳನ್ನು ಮಾಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇಷ್ಟೊಂದು ಬೇರೆ ಬೇರೆ ಬಾಬುಗಳಲ್ಲಿ ಖರ್ಚು ಮಾಡುತ್ತೇವೆ, ನಾವು ಕೊಟ್ಟಿದ್ದನ್ನು ಇಲ್ಲಿ ಖರ್ಚು ಮಾಡಿ ಮಂಜೂರಾತಿಯನ್ನು ತೆಗೆದುಕೊಳ್ಳುತ್ತೀರಾ, ನಾನು ಸ್ಪಷ್ಟವಾದ ಅಂಕಿಅಂಶವನ್ನು ಕೊಟ್ಟಿನಲ್ಲ, 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಆಶ್ರಯ ಯೋಜನೆಯಲ್ಲಿ ಸುಮಾರು 45-50 ಕೋಟಿ ಪೇಮೆಂಟ್ ಆಗಲಿಲ್ಲ. ಅವನು ಮನೆ ಕಟ್ಟಿಕೊಂಡಿದ್ದಾನೆ, ಬಿಲ್ ಸಿಗದೆ ಎಂ.ಎಲ್.ಎ.ಗಳ ಮನೆಯನ್ನು ಸುತ್ತುತ್ತಿದ್ದಾನೆ ಎಂದು ನಾನು ತಮಗೆ ಹೇಳಿದೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, 64 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿಟ್ಟಿದ್ದೇವೆ. ಈಗಾಗಲೇ ಎರಡು ಕಂತುಗಳನ್ನು ನಾವು ಬಿಡುಗಡೆ ಮಾಡಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಹೌಸಿಂಗ್ ಬೋರ್ಡ್ ಮುಖಾಂತರ ಕೊಟ್ಟಿದೆಯಲ್ಲ ಮುಖ್ಯವಾಗಿ ಟೌನ್ಸ್‌ನಲ್ಲಿ ಅಲ್ಲಿನಾಗಿದೆಯೆಂದರೆ ನಿಮ್ಮ ಹುಡ್ಕೋ ಲೋನ್ ಬಂದಿಲ್ಲ ಎಂದು ಹೇಳಿ ನೀವೇನು ಮೊದಲ ಕಂತನ್ನು ಕೊಟ್ಟರಿ ಅಷ್ಟಕ್ಕೆ ನಿಲ್ಲಿಸಿದ್ದಾರೆ, ಮುಂದಕ್ಕೆ ಕೊಡುತ್ತಾ ಇಲ್ಲ. ಅದಕ್ಕೆ ಬರಾಬರಿ ಎರಡು ವರ್ಷವಾಯಿತು, ನೀವು ಸಧ್ಯಕ್ಕೆ ಕೊಟ್ಟು ಆಮೇಲೆ ಅಡ್ಜಸ್ಟ್ ಮಾಡಿಕೊಳ್ಳಿ. ನೀವು ಅಡ್ವಾನ್ಸ್ ಮಾಡಿ ಇಲ್ಲದಿದ್ದರೆ ಏನಾಗುತ್ತದೆ ಅದಿಷ್ಟು ಹಾಳಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈಗ ತಾವು ದಯಮಾಡಿ ಹಣಕಾಸಿನ ಸಚಿವರಾಗಿ ಇದನ್ನು ಗಂಭೀರವಾಗಿ ಗಮನಕ್ಕೆ ತೆಗೆದುಕೊಳ್ಳಿ. ಉದಾಹರಣೆಗೆ ನಾವು ಆಶ್ರಯ ಯೋಜನೆಯಲ್ಲಿ ಇಪ್ಪತ್ತು ಸಾವಿರ ರೂಪಾಯಿಗೆ ಮನೆಯನ್ನು ಕಟ್ಟುತ್ತೇವೆ. ತಮ್ಮ ಪಾಲು ಹತ್ತು ಸಾವಿರ ರೂಪಾಯಿಯನ್ನು ಕೊಟ್ಟಿದ್ದೀರಾ. ಅವನು ನಿಮ್ಮ ಹತ್ತು ಸಾವಿರ ತೆಗೆದುಕೊಂಡು ಇನ್ನು ಹತ್ತು ಸಾವಿರ ಸಾಲಗೀಲ ಮಾಡಿ ಅವನ ಮನೆಯನ್ನು ಪೂರ್ತಿ ಮಾಡಿಕೊಂಡಿದ್ದಾನೆ. ಯಾವಾಗ? 1995-96ನೇ ಸಾಲಿನಲ್ಲಿ. ನಿಮಗೆ ಆ ದುಡ್ಡು ಬರಲಿಲ್ಲ ಎಂಬ ಕಾರಣಕ್ಕೋಸ್ಕರ ಮನೆ ಕಟ್ಟಿ ಮೂರು ವರ್ಷವಾದರೂ ಇವೊತ್ತಿಗೂ ಉಳಿದ ದುಡ್ಡು ಬರದೆಯೇ ಅವನು ತಾಲ್ಲೂಕು ಪಂಚಾಯಿತಿ ಕಛೇರಿಗೆ ತಿರುಗಿಕೊಂಡು, ನಮ್ಮ ಶಾಸಕರ ಮನೆ ಬಾಗಿಲುಗಳನ್ನು ತಿರುಗುತ್ತಿದ್ದಾನೆ. ಆ ಬಡವ ಬದುಕುವುದಕ್ಕೆ ಸಾಧ್ಯವೆ? ಅದಕ್ಕೆ ನಾನು ಹೇಳುವುದು, ಖರ್ಗೆಯವರು ಸಲಹೆ ಮಾಡಿದಂತೆ ಬೇರೆ ಯಾವುದಾದರೂ ಅಡ್ಜಸ್ಟ್ ಮಾಡಿ ಅವನ ಬಿಲ್ ಕೊಡಿ, ಆಮೇಲೆ ಹುಡ್ಕೋದಿಂದ ಬಂದಮೇಲೆ ನೀವು ಅಡ್ಜಸ್ಟ್ ಮಾಡಿಕೊಳ್ಳಿ. ಆ ಬಡವ ಬದುಕುವುದು ಹೇಗೆ?

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಹುಡ್ಕೋದಿಂದ ಮುಂದಿನ ತಿಂಗಳು ಬರುವ ಸಾಧ್ಯತೆ ಇದೆ. ಬರದೇ ಇದ್ದರೆ ಅವರು ಹೇಳಿರತಕ್ಕಂಥ ಅಭಿಪ್ರಾಯವನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಆದರಿಂದ ಇದಕ್ಕೆ ಮಂಜೂರಾತಿಯನ್ನು ಕೊಡಬೇಕೆಂದು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: 1997-98ನೇ ಸಾಲಿನ ಪೂರಕ ಅಂದಾಜುಗಳ ಮೇಲಿನ (ಮೊದಲನೆಯ ಕಂತು) ಬೇಡಿಕೆಗಳ ಮೇಲೆ ಚರ್ಚೆ ಮುಕ್ತಾಯವಾಯಿತು. ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ, ಪ್ರಸ್ತಾವನೆ ಏನೆಂದರೆ;

"ದಿನಾಂಕ 31.03.1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ 1, 2, 3, 4, 5, 6, 7, 8, 9, 10, 11, 12, 13, 14, 15, 20, 21, 22, 31, 32, 34, 36, 38, 39, 40, 41, 44, 45, 47, 48, 50, 52, 55, 57, 61 ಹಾಗೂ 62 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ

ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

3) (ಇ) ಹೆಚ್ಚುವರಿ ಅನುದಾನ ಬೇಡಿಕೆಗಳು 1997-98

ಚರ್ಚೆ ಹಾಗೂ ಮತಕ್ಕೆ ಹಾಕುವುದು

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಇದು ಹೊಸದಾಗಿ ಮಂಡಲ ಪಂಚಾಯಿತಿ, ಜಿಲ್ಲಾಪಂಚಾಯಿತಿಗಳ ಚುನಾವಣೆಯಾಗಿ ಅಸ್ತಿತ್ವಕ್ಕೆ ಬಂತಲ್ಲ ಅದರ ಲೆಕ್ಕಗಳು ಈ ಕಡೆಯಿಂದ ಆಕಡೆಗೆ ಸ್ವಲ್ಪ ವ್ಯತ್ಯಾಸವಾಗಿತ್ತು ಅದನ್ನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯವರು....

ಶ್ರೀ ಬಿ.ಎಸ್.ಯಡಿಯೂರಪ್ಪ: ಗೊತ್ತಾಯಿತು ಬಿಡಿ ಸಾರ್ ಆಕಡೆ ಯಿಂದ ಈ ಕಡೆ ಆಗಿರುವಂತಹದ್ದು, ಆಯಿತು....

ಶ್ರೀ ಸಿದ್ಧರಾಮಯ್ಯ: ಪಾಪ ಅವರು ಇಷ್ಟೊಂದು ಖುಷಿಯಿಂದ ಒಪ್ಪಿಕೊಳ್ಳುತ್ತಿರುವಾಗ, ಮಾನ್ಯ ಅಧ್ಯಕ್ಷರೆ ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: 1997-98ನೇ ಸಾಲಿನ ಆರ್ಥಿಕ ವರ್ಷಗಳಿಗೆ ಸಂಬಂಧಪಟ್ಟ ಹೆಚ್ಚುವರಿ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು. ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ;

''ದಿನಾಂಕ 31.03.1998ರಂದು ಕೊನೆಗೊಗಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ 1, 10, 11, 14, 17, 22, 31, 33, 35, 26, 44, 46, 49, 54, 56, 58, 60, 61 ಹಾಗೂ 62 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಹೆಚ್ಚುವರಿ ಅನುದಾನ ಬೇಡಿಕೆಗಳು 1988-89

ಚರ್ಚೆ ಹಾಗೂ ಮತಕ್ಕೆ ಹಾಕುವುದು

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲಾ ಇಲಾಖೆಗಳದ್ದು ಚರ್ಚೆಯಾಗಿದ್ದು ಇದಕ್ಕೂ ಕೂಡ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: 1988-89 ಸಾಲಿನ ಆರ್ಥಿಕ ವರ್ಷಗಳಿಗೆ ಸಂಬಂಧಪಟ್ಟ ಹೆಚ್ಚುವರಿ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು. ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ

''ದಿನಾಂಕ 31.03.1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1, 2, 7, 10, 16, 19, 23, 35, 37, 45, 46, 47, 52, 53 ಹಾಗೂ 61 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಶ್ರೀ ವಾಟಾಳ್ ನಾಗರಾಜ್: ಬೇರೆ ಮಂತ್ರಿಗಳು ಉತ್ತರವನ್ನೇ ಕೊಡಲಿಲ್ಲ ಏಕೆ?

ಅಧ್ಯಕ್ಷರು: ಮುಖ್ಯಮಂತ್ರಿಗಳು ಎಲ್ಲರ ಪರವಾಗಿ ಕೊಟ್ಟುಬಿಟ್ಟರು.

ಶ್ರೀ.ವಾಟಾಳ್ ನಾಗರಾಜ್: ಎಲ್ಲರ ಪರವಾಗಿಲ್ಲ ಅಲ್ಲ, ಅವರ ಇಲಾಖೆ ಪರವಾಗಿ ಕೊಟ್ಟದ್ದು, ಈ ತರಹ ಏಕೆ?

ಅಧ್ಯಕ್ಷರು: ಡಿಮ್ಯಾಂಡ್ ಎಲ್ಲಾ ಪಾಸಾದಮೇಲೆ ಈಗ ಕೇಳಿದರೆ ನಾನು ಏನು ಹೇಳಲಿ. ಅಪ್ರೋಪ್ರಿಯೇಷನ್ ಬಿಲ್ ಆಗಲೀ, ಕೌನ್ಸಿಲ್‌ನಲ್ಲಿ ಕಾಯುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ನಮಗೆ ಅದರ ತಕರಾರೇನು ಇಲ್ಲ. ಈ ಪದ್ಧತಿ ಇದೆಯಲ್ಲ ಇದು ಬಹಳ ಕೆಟ್ಟ ಪದ್ಧತಿ. ಇದು ಪ್ರಜಾತಂತ್ರಕ್ಕೆ ಅಪಾಯಕಾರಿ ಬೆಳವಣಿಗೆ ಈ ಸದನದಲ್ಲಿ ಆ ರೀತಿ ಆಗಬಾರದು ಎಂದು ತಮಗೆ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಎಲ್ಲಾ ಮಂತ್ರಿಗಳು ಬಾಯಿಮುಚ್ಚಿಕೊಂಡು ಕುಳಿತ್ತಿದ್ದಾರಲ್ಲ, ಅದರ ಉದ್ದೇಶವೇನು? ಹಣೆಬರಹ ಏನು? ಇದು ಈ ತರಹ ಕರ್ಮ, ಈ ಹಣೆಬರಹ, ಈ ಕೆಟ್ಟ ಪರಿಸ್ಥಿತಿ ನಿಮಗೆ ಎಂದೂ ಬಾರದೆ ಇರಲಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಎಲ್ಲರೂ ಉತ್ತರವನ್ನು ಕೊಡುವುದಕ್ಕೆ ತಯಾರಾಗಿದ್ದೇವೆ.

(ಗೊಂದಲ)

ಅಧ್ಯಕ್ಷರು: ಶಾಸನ ರಚನೆ ವಿಧೇಯಕಗಳನ್ನು ಮಂಡಿಸುವುದು.

ಶ್ರೀ ವಾಟಾಳ್ ನಾಗರಾಜ್: ಈ ತರಹದ ಪರಿಸ್ಥಿತಿ ನಿಮಗೆ ಎಂದೆಂದಿಗೂ ಬರದೇ ಇರಲಿ. ಯಾವುದೋ ಒಂದು ಶಾಪ ಇದೆ.

ಅಧ್ಯಕ್ಷರು: ಸಮಯದ ಅಭಾವ ಇದೆ.

(ಗೊಂದಲ)

(4) ಶಾಸನ ರಚನೆ

ವಿಧೇಯಕಗಳನ್ನು ಮಂಡಿಸುವುದು

(ಅ) ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕ, 1997 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) (ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ರ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: *ವಿಧೇಯಕವನ್ನು ಮಂಡಿಸಲಾಗಿದೆ*

---

* ಅನುಬಂಧ I

(ಆ) ಕರ್ನಾಟಕ ಧನ ವಿನಿಯೋಗ (ನಂ.4) ವಿಧೇಯಕ, 1997 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಧನ ವಿನಿಯೋಗ (ನಂ.4) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ರ ಕರ್ನಾಟಕ ಧನ ವಿನಿಯೋಗ (ನಂ.4) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಧನ ವಿನಿಯೋಗ (ನಂ.4) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: * ವಿಧೇಯಕವನ್ನು ಮಂಡಿಸಲಾಗಿದೆ *

(ಇ) ಕರ್ನಾಟಕ ಧನ ವಿನಿಯೋಗ (ನಂ.5) ವಿಧೇಯಕ, 1997 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಧನ ವಿನಿಯೋಗ (ನಂ.5) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ರ ಕರ್ನಾಟಕ ಧನವಿನಿಯೋಗ (ನಂ.5) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಧನ ವಿನಿಯೋಗ (ನಂ.5) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

---

* ಅನುಬಂಧ II

ಅಧ್ಯಕ್ಷರು: * ವಿಧೇಯಕವನ್ನು ಮಂಡಿಸಲಾಗಿದೆ. *

ಈ) ಕರ್ನಾಟಕ ಧನ ವಿನಿಯೋಗ (ನಂ.6) ವಿಧೇಯಕ, 1997. ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಧನ ವಿನಿಯೋಗ (ನಂ.6) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ರ ಕರ್ನಾಟಕ ಧನ ವಿನಿಯೋಗ (ನಂ.6) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಧನ ವಿನಿಯೋಗ (ನಂ.6) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: *ವಿಧೇಯಕವನ್ನು ಮಂಡಿಸಲಾಗಿದೆ. *

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(ಅ) ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕ 1997 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕವನ್ನು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾಲ್ಕು ವಿಧೇಯಕಗಳಲ್ಲಿ ಒಂದು ಪೂರಕ ಅಂದಾಜುಗಳಿಗೆ ಸಂಬಂಧಿಸಿದ್ದು, ಇನ್ನೊಂದು 1997-98ರ ಆಯವ್ಯಯಕ್ಕೆ ಸಂಬಂಧಿಸಿದ್ದು ಸುಮಾರು ಹದಿನೈದು ಸಾವಿರದ ನೂರ ಎಪ್ಪತ್ತೆರಡು

* ಅನುಬಂಧ III & IV

ಕೋಟಿ ಮೂವತ್ತೆರಡು ಲಕ್ಷ ರೂಪಾಯಿಗಳಿಗೆ ಮಂಜೂರಾತಿಯನ್ನು ಕೊಡಬೇಕೆಂದಿದೆ. ಇನ್ನು ಎರಡು ವಿಧೇಯಕಗಳು 1987-88ರಲ್ಲಿ ನೂರ ಮೂವತ್ತು ಕೋಟಿ ರೂಪಾಯಿಗಳ ಎಕ್ಸೆಸ್ ಅಮೌಂಟ್ ಖರ್ಚು ಆಗಿರತಕ್ಕಂಥದ್ದು, 1988-89ರಲ್ಲಿ ಮೂವತ್ತಾರು ಕೋಟಿ ರೂಪಾಯಿಗಳು ಖರ್ಚು ಆಗಿರುವಂಥಾದ್ದರ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ನಾನು ಆರು ತಿಂಗಳು ಖರ್ಚು ಮಾಡುವುದಕ್ಕೆ ಓಟ್ ಆನ್ ಅಕೌಂಟ್ ತೆಗೆದುಕೊಂಡಿದ್ದೆ. ಇನ್ನು ಉಳಿದದ್ದು ಇಡೀ ವರ್ಷಕ್ಕೆ ಮಂಜೂರಾತಿಯನ್ನು ಕೊಡಬೇಕೆಂದು ಸಭೆಯನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ರ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕವನ್ನು ಪರ್ಯಾಲೋಚಿಸುವುದು''

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು: ''ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕವನ್ನು ಅಂಗೀಕರಿಸಬೇಕೆಂದು

ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"1997ರ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಆ) ಕರ್ನಾಟಕ ಧನ ವಿನಿಯೋಗ (ನಂ.4) ವಿಧೇಯಕ, 1997 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಧನ ವಿನಿಯೋಗ (ನಂ.4) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಇದನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ

"1997ರ ಕರ್ನಾಟಕ ಧನ ವಿನಿಯೋಗ (ನಂ.4) ವಿಧೇಯಕವನ್ನು ಪರ್ಯಾಲೋಚಿಸುವದು"

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು: "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ಮತ್ತು 3 ಎರಡನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ, ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಧನ ವಿನಿಯೋಗ (ನಂ.4) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾಪ ಏನೆಂದರೆ,

''1997ರ ಕರ್ನಾಟಕ ಧನ ವಿನಿಯೋಗ (ನಂ.4) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಇ) ಕರ್ನಾಟಕ ಧನ ವಿನಿಯೋಗ (ನಂ.5) ವಿಧೇಯಕ, 1997 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ಧನ ವಿನಿಯೋಗ (ನಂ.5) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ರ ಕರ್ನಾಟಕ ಧನ ವಿನಿಯೋಗ (ನಂ.5) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2, 3 ಮತ್ತು ಅನುಸೂಚಿ

ಅಧ್ಯಕ್ಷರು: ''ಖಂಡ 2,3 ಮತ್ತು ಅನುಸೂಚಿಗಳು ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2, 3 ಮತ್ತು ಅನುಸೂಚಿಗಳು ವಿಧೇಯಕದ ಅಂಗವಾದವು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ಧನ ವಿನಿಯೋಗ (ನಂ.5) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ರ ಕರ್ನಾಟಕ ಧನ ವಿನಿಯೋಗ (ನಂ.5) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

(ಈ) ಕರ್ನಾಟಕ ಧನ ವಿನಿಯೋಗ (ನಂ.6) ವಿಧೇಯಕ, 1997 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ಧನವಿನಿಯೋಗ (ನಂ.6) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು

ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"1997ರ ಕರ್ನಾಟಕ ಧನ ವಿನಿಯೋಗ (ನಂ.6) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2, 3 ಮತ್ತು ಅನುಸೂಚಿ

ಅಧ್ಯಕ್ಷರು: "ಖಂಡ 2, 3 ಮತ್ತು ಅನುಸೂಚಿಗಳು ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2, 3 ಮತ್ತು ಅನುಸೂಚಿಗಳು ವಿಧೇಯಕದ ಅಂಗವಾದವು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ಧನ ವಿನಿಯೋಗ (ನಂ.6) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ರ ಕರ್ನಾಟಕ ಧನ ವಿನಿಯೋಗ (ನಂ.6) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

(5) ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ ಸಮಿತಿಗಳನ್ನು ತೆಗೆದು ಹಾಕಿ ಬೇಡಿಕೆಗಳ ಮೇಲೆ ಹೆಚ್ಚು ದಿವಸಗಳಕಾಲ ಚರ್ಚೆ ಮಾಡಲು ಅನುಕೂಲ ಮಾಡಿಕೊಡುವುದು.

+ ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಅಧ್ಯಕ್ಷರೇ, ತಾವು ಮತ್ತೊಂದು ವಿಧೇಯಕ ತೆಗೆದುಕೊಳ್ಳುವುದಕ್ಕೆ ಮುಂಚೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮಾತು ವಿನಂತಿಸಿಕೊಳ್ಳುತ್ತೇನೆ. ಇದು ನನ್ನ ಅನುಭವದಲ್ಲಿ ಹೊಸ ಬೆಳವಣಿಗೆ. ಇದು ಒಳ್ಳೆಯ ಆರೋಗ್ಯಕರ ಬೆಳೆವಣಿಗೆ ಅಲ್ಲ. ಈಗ ಅನೇಕ ಬೇಡಿಕೆಗಳ ಮೇಲೆ ಚರ್ಚೆಯಾಗಿದೆ. ಕೆಲವರು ಆಪಾದನೆಗಳನ್ನು ಮಾಡಿದ್ದಾರೆ, ಅವೆಲ್ಲಾ ಕಡತಕ್ಕೆ ಹೋಗಿರುತ್ತವೆ. ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೂ ಅವಕಾಶವಾಗಲಿಲ್ಲ. ನಾನೇನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ, ಬಹುಶಃ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲೂ ಕೂಡ ಇದರ ಬಗ್ಗೆ ಚರ್ಚಿಸಬೇಕಾಗುತ್ತದೆ, ಎರಡೂ ಕಡೆಯ ಶಾಸಕ ಮಿತ್ರರು ನಮಗೆ ಚರ್ಚೆ ನಡೆಸಲು ಕಾಲಕಾವಕಾಶ ಸಾಕಾಗಲಿಲ್ಲ ಎಂದು ಹೇಳಿದ್ದಾರೆ. ಮೊದಲು ಒಂದು ಇಲಾಖೆ ಬೇಡಿಕೆ ತೆಗೆದುಕೊಂಡು ಅದರ ಮೇಲೆ 2-3 ದಿನಗಳವರೆಗೆ ಚರ್ಚೆ ನಡೆಯುತ್ತಿತ್ತು, ಹಾಗೆ ನಡೆದಂತಹ ಚರ್ಚೆಗೆ ಸಂಬಂಧಪಟ್ಟ ಇಲಾಖಾ ಮಂತ್ರಿಗಳು ನಿರ್ದಿಷ್ಟವಾದ ಉತ್ತರ ಕೊಡುತ್ತಿದ್ದರು. ಆದರೆ ಈಗೇನಾಗಿದೆ ಎಂದರೆ ನಾವು ಕೆಲವಾರು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇವೆ, ಅದು ರೆಕಾರ್ಡ್‌ಗೆ ಹೋಗುತ್ತದೆ. ಉತ್ತರ ಹೇಳುವುದಕ್ಕೆ ಮಂತ್ರಿಗಳಿಗೆ ಅವಕಾಶವೇ ಇರುವುದಿಲ್ಲ. ಬೇಡಿಕೆಗಳ ಮೇಲಿನ ಚರ್ಚೆಯು ಒಂದು ಹುಡುಗಾಟದ ಪ್ರಹಸನವಾಗಿ ಬಿಟ್ಟಿದೆ. ಇದಕ್ಕೆ ಏನೇನು ಗಾಂಭೀರ್ಯತೆ ಇರಬೇಕೋ, ಏನು ತೀಕ್ಷ್ಣತೆ ಇರಬೇಕೋ, ಏನೊಂದು ಪಾವಿತ್ರತೆ ಇರಬೇಕೋ, ಅದು ಇಲ್ಲದಂತಹ ವಾತಾವರಣ ಸೃಷ್ಟಿಯಾಗಿದೆ. ನಾನು ಯಾವುದೋ ಲೋಕದಲ್ಲಿದ್ದೆ ಎನ್ನುವಂತಹ ಅಭಿಪ್ರಾಯ ನನಗೆ ಮೂಡಿ ಬಂತು. ಒಬ್ಬ ಮಂತ್ರಿಗೂ ಉತ್ತರ ಹೇಳಲು ಸಾಧ್ಯವಾಗುತ್ತಾ ಇಲ್ಲ. ಅದಕ್ಕಾಗಿ ನಾನು ಮಾನ್ಯ ಸಭಾ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬೇಕಾದರೆ ನೀವು ಈ ಸಬ್ಜೆಕ್ಟ್ ಕಮಿಟೀಸ್ ತೆಗೆದು ಹಾಕಿ; ಇಲ್ಲೇ ಚರ್ಚೆ ಮಾಡೋಣ. ಎರಡು ತಿಂಗಳಿಗೆ ನೀವು ವೋಟ್ ಆನ್ ಅಕೌಂಟ್ ತೆಗೆದುಕೊಳ್ಳಿ, ಡಿಮ್ಯಾಂಡ್‌ಗಳನ್ನು ಇಂತಿಷ್ಟು ಕಾಲದಲ್ಲಿ ವಿವರವಾಗಿ ಚರ್ಚೆ ಮಾಡಿ ಸಂಬಂಧಿಸಿದ ಪ್ರತಿಯೊಬ್ಬ ಮಂತ್ರಿಯೂ ಉತ್ತರ ಕೊಡುವಂತಾಗಬೇಕು.

ಈಗೇನಾಗಿದೆ ಎಂದರೆ, ನೀವು ಆಯಾರ್ಜಿತವಾಗಿ ಐದಾರು ಮಂತ್ರಿಗಳ ಹೆಸರು ಹೇಳಿದಿರಿ. ನಾನು ಯಾರಿಗೋ ತಮಾಷೆಗೆ ಹೇಳುತ್ತಿದ್ದೆ, ಕೆಲವರು ಫುಲ್ ಟೈಮ್ ಮಿನಿಸ್ಟರ್ಸ್ ಇದ್ದಾರೆ, ಕೆಲವರು ಪಾರ್ಟ್ ಟೈಮ್ ಇದ್ದಾರೆ, ಕೆಲವರು ನೋ ಟೈಮ್ ಮಿನಿಸ್ಟರ್ ಇದ್ದಾರೆ ಎಂದು ಏಕೆಂದರೆ ನೀವು ಬೆಲೆ ಕೊಟ್ಟರೆ ಉಳಿದವರಿಗೂ ಬೆಲೆ ಬರುತ್ತದೆ. ಇಲ್ಲಿ ಕೆಲವರು ಪ್ರಮುಖರು ಬಿಟ್ಟರೆ ಉಳಿದ ಮಂತ್ರಿಗಳಿಗೆ ಉತ್ತರ ಹೇಳುವಂತಹ ಅವಕಾಶವೇ ಇಲ್ಲ. ಈ ರೀತಿ ಆಗಬಾರದು. ಇದು ಆರೋಗ್ಯಕರ ಬೆಳವಣಿಗೆ ಅಲ್ಲ. ಇದನ್ನು ನಾವು ಬದಲಾವಣೆ ಮಾಡಲೇಬೇಕು. ದಯವಿಟ್ಟು ಇದರ ಬಗ್ಗೆ ಮಾನ್ಯ ಅಧ್ಯಕ್ಷರೇ ಲೀಡ್ ತೆಗೆದುಕೊಂಡು, ಇದರ ಬಗ್ಗೆ ಎಂದು ಸಭೆ ಕರೆದು ಇದಕ್ಕೊಂದು ಅಂತಿಮವಾಗಿ ತೆರೆ ಎಳೆದು, ಮಾಮೂಲಿಯಾಗಿ ಅದಕ್ಕೆ ನಾವು ಏನೊಂದು ಪಾವಿತ್ರತೆ ಇಟ್ಟುಕೊಂಡು ಈ ಹಿಂದೆ ಚರ್ಚೆ ಮಾಡುತ್ತಿದ್ದವೋ ಆ ರೀತಿ ಆಗಬೇಕೆಂದು ನಾನು ನಿರೀಕ್ಷಣೆ ಮಾಡುತ್ತೇನೆ.

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಅಧ್ಯಕ್ಷರೇ, ನಾನು ಬಹಳ ಹಿಂದೆಯೇ ಈ ಸಲಹೆ ಕೊಟ್ಟಿದ್ದೆ. ಸಬ್ಜೆಕ್ಟ್ ಕಮಿಟಿ ಬೇಡ ಒಂದೊಂದು ಡಿಮ್ಯಾಂಡ್ಸ್ ಬೇಕಾದರೆ ಒಂದೊಂದು ದಿನ ಚರ್ಚೆಯಾಗಲಿ. ಅದು ಥರೋಲಿ ಡಿಸ್ಕಸ್ ಆಗಬೇಕು, ಅವತ್ತೇ ಅದು ವೋಟ್ ಆಗಬೇಕು, ಆವತ್ತೇ ಚರ್ಚೆಗೆ ಉತ್ತರವನ್ನೂ ಕೊಡಬೇಕು. ಮೊದಲು ನಾವು ಯಾವ ರೀತಿ ಮಾಡುತ್ತಿದ್ದವೋ ಆ ರೀತಿಯೇ ಆಗಬೇಕು. ಈ ಸಬ್ಜೆಕ್ಟ್ ಕಮಿಟಿಗಳಿಂದ ಸಾಕಷ್ಟು ಸಮಯ, ಆಫೀಸರ್‌ಗಳ ಸಮಯ, ಎಂ.ಎಲ್.ಎಗಳ ಸಮಯ, ಹಾಳಾಗುತ್ತಿದೆ. ನ್ಯಾಯವಾಗಿ ಸಬ್ಜೆಕ್ಟ್ ಕಮಿಟಿ ಸಂಪ್ರದಾಯ ಹೇಗಿರಬೇಕು ಅಂದರೆ ಅದು ಹೆಚ್ಚು ಚರ್ಚೆಯಾಗಬಾರದು. ಅಮೆರಿಕನ್ ಸೆನೆಟ್ ಸಿಸ್ಟಮ್ ಏನಿದೆ, ಆಕ್ಚುಯಲೀ ಸಬ್ಜೆಕ್ಟ್ ಕಮಿಟಿ ಕೋರ್ಟ್ ಕಂಡಕ್ಟ್ ಮಾಡುವ ಹಾಗೆ ಮಾಡುತ್ತಾರೆ. ಸಬ್ಜೆಕ್ಟ್ ಕಮಿಟಿಯೊಳಗೂ ಅದೇ ಹೇಳುತ್ತಾರೆ, ಅದನ್ನೇ ಇಲ್ಲಿಯೂ ಹೇಳುತ್ತಾರೆ, ಇದರಿಂದ ಕೊನೆಗೆ ಆ ವಿಷಯದ ಗಂಭೀರತೆಯೇ ಹೋಗಿ ಬಿಡುತ್ತಿದೆ. ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ತಾವೆಲ್ಲರೂ ಒಪ್ಪುವುದಾದರೆ ಮಾನ್ಯ ಅಧ್ಯಕ್ಷರಿಗೆ ನಾನೂ ವಿನಂತಿ ಮಾಡಿಕೊಳ್ಳುತ್ತೇನೆ, ನಾವು ಮೊದಲಿನ ಪದ್ಧತಿಯನ್ನೇ ಜಾರಿಗೆ ತರೋಣ. ಮಂತ್ರಿಗಳಿಗೆ ಸಂಬಂಧಪಟ್ಟ ಡಿಮ್ಯಾಂಡ್‌ಗಳು ಒಂದೊಂದಾಗಿ ಸಾಕಷ್ಟು ಚರ್ಚೆಯಾಗಲಿ. ನನಗೆ ಅದರೊಳಗೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಸಬ್ಜೆಕ್ಟ್ ಕಮಿಟಿ ತಂದು ಒಂದು ಹೊಸ ಪ್ರಯೋಗ ಮಾಡಿ ನೋಡಿದೆವು. ಅದರ ಉಪಯುಕ್ತತೆ ಏನು ಎಂದು ನಾವು ನೋಡಿದ್ದೇವೆ. ಈಗ ಮೊದಲಿದ್ದಂತಹ ಸಿಸ್ಟಮ್ಮೇ ಒಳ್ಳೆಯದು ಎಂಬ ಅಭಿಪ್ರಾಯಕ್ಕೆ ನಾವೆಲ್ಲಾ ಶಾಸಕರೂ ಬಂದಿದ್ದೇವೆ. ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಕುಳಿತು ಚರ್ಚೆ ಮಾಡಿ ಆ ಬಗ್ಗೆ ತೀರ್ಮಾನಕ್ಕೆ ಬಂದು ಮುಂದಿನ ವರ್ಷದಿಂದಲಾದರೂ ಹಳೆಯ ಪದ್ಧತಿಯನ್ನೇ ಮುಂದುವರೆಸಿಕೊಂಡು ಹೋಗುವುದು

ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಈ ವಿಷಯ ಸಮಿತಿಗಳನ್ನು ತರಬೇಕಾದರೆ ಬಹಳ ಪ್ರಾಮಾಣಿಕವಾಗಿ ಚಿಂತನೆ ಮಾಡಿ ಹಿಂದಿನ ಅಧ್ಯಕ್ಷರು ಮತ್ತು ಮಾಜಿ ಅಧ್ಯಕ್ಷರುಗಳು, ಬೇರೆ ಬೇರೆ ರಾಜ್ಯಗಳಿಗೆ ಭೇಟಿ ಕೊಟ್ಟು, ಯೋಚನೆ ಮಾಡಿ, ಅದರ ಬಗ್ಗೆ ಬಹಳ ಉದಾತ್ತವಾದಂತಹ ಚಿಂತನೆ ಮಾಡಿ ವಿಷಯ ಸಮಿತಿ ಪದ್ಧತಿ ಜಾರಿಗೆ ತಂದಿದ್ದಾರೆ. ಈ ವಿಷಯ ಸಮಿತಿಗಳು ಅಧಿಕಾರಿಗಳಿಗೆ ಬೇಕಾಗಿಲ್ಲ. ಶಾಸಕರುಗಳಿಗಿಂತ ಹೆಚ್ಚಾಗಿ ಈ ಸಮಿತಿಗಳು ಅಧಿಕಾರಿಗಳಿಗೆ ಬೇಕಾಗಿಲ್ಲ. ವಿಷಯ ಸಮಿತಿಗಳು ಬೇಡ ಎಂದು ಹೇಳತಕ್ಕಂಥದ್ದರಲ್ಲಿ ಅಧಿಕಾರಿಗಳ ಪಿತೂರಿಯೂ ಸಹಾ ಇದೆ. ಆದರೆ ವಿಷಯ ಸಮಿತಿಗಳ ಸಭೆಗಳಲ್ಲಿ ಅನೇಕ ಸದಸ್ಯರುಗಳು ಭಾಗವಹಿಸಿ ಅಲ್ಲಿ ತಮ್ಮ ಪ್ರೌಢಿಮೆಯ ಪ್ರದರ್ಶನ ಮಾಡಿದ್ದಾರೆ. ವಿಷಯ ಸಮಿತಿಗಳ ಸಭೆಗಳಲ್ಲಿ ಭಾಗವಹಿಸಿದಂತಹ ಅನೇಕ ಸದಸ್ಯರುಗಳು ಸರ್ಕಾರದಲ್ಲಿ ಮಂತ್ರಿಗಳಾಗತಕ್ಕಂತಹ ಯೋಗ್ಯತೆಯನ್ನು ಪಡೆಯತಕ್ಕಂಥವರಾಗಿದ್ದಾರೆ, ಜವಾಬ್ದಾರಿಯನ್ನು ಹೊರಬಲ್ಲವರಾಗಿದ್ದಾರೆ. ಸಾರಾಸಗಟಾಗಿ ಆ ವಿಷಯ ಸಮಿತಿಗಳನ್ನೆಲ್ಲಾ ಮೂಲೆಗೆ ಹಾಕಿ ಎನ್ನತಕ್ಕಂಥ ಚಿಂತನೆ ಏನಿದೆ, ನಾನು ಅದಕ್ಕೆ ಒಪ್ಪುವುದಿಲ್ಲ. ನಾನು ವಿಷಯ ಸಮಿತಿಗಳಲ್ಲಿ ಸದಸ್ಯನಾಗಿಲ್ಲದೇ ಇರಬಹುದು, ನನಗೇನು ಅದು ಬೇಕಾಗಿಯೂ ಇಲ್ಲ. ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ನನ್ನನ್ನು ನೀವು ಯಾವ ಸಮಿತಿಯಲ್ಲಿಯೂ ಕೂಡ ಸದಸ್ಯನನ್ನಾಗಿ ನೇಮಿಸಬೇಡಿ. ಆ ಸಮಿತಿಗಳ ಉದ್ದೇಶ ಏನಿದೆ ಎಂಬ ಬಗ್ಗೆ, ನಾವು ಲೋಕಸಭೆಗೆ ಹೋದಾಗ, ಹಿಂದಿನ ಲೋಕಸಭಾ ಅಧ್ಯಕ್ಷರು ಅದರ ಪಾವಿತ್ರತೆ ಬಗ್ಗೆ, ಆ ಸಮಿತಿಗಳ ಚಿಂತನೆಗಳ ಬಗ್ಗೆ ಬಹಳ ಪ್ರಾಮಾಣಿಕವಾಗಿ ಹೇಳಿದ್ದಾರೆ. ಕೇರಳದಲ್ಲೂ ಈಗಾಗಲೇ ಇದೇ ಪದ್ಧತಿ ಇದೆ. ನಮ್ಮ ರಾಜ್ಯದಲ್ಲಿರುವಂತೆ ವಿಷಯ ಸಮಿತಿಗಳನ್ನು ಬೇರೆ ರಾಜ್ಯಗಳಲ್ಲೂ ಮಾಡಬೇಕೆಂಬ ಒಂದು ಹೊಸ ಚಿಂತನೆ ಇರುವಾಗ ನಾವು ಆ ಸಮಿತಿಗಳನ್ನು ರದ್ದು ಮಾಡತಕ್ಕ ಸಂಪ್ರದಾಯ ಒಳ್ಳೆಯದಲ್ಲ. ಆ ಸಮಿತಿಗಳನ್ನು ರದ್ದು ಮಾಡುವುದು ಅಥವಾ ಇಟ್ಟುಕೊಳ್ಳುವುದು ನಿಮಗೆ ಸೇರಿದ್ದು. ಈ ಸದನದ ಎಲ್ಲಾ ಸದಸ್ಯರೂ ಭಾಗವಹಿಸತಕ್ಕ ಒಂದು ಹೊಸ ಅಧ್ಯಾಯ ಪ್ರಾರಂಭವಾಗಿದೆ, ಇದರ ಬಗ್ಗೆ ನಾವು ಚಿಂತನೆ ಮಾಡೋಣ. ಆದರೆ ಒಂದು ಮಾತು ನಾನು ತಮಗೆ ಹೇಳುತ್ತಿದ್ದೇನೆ, ಅನೇಕ ಸದಸ್ಯರು ನಿನ್ನೆ ಹಾಗೂ ಮೊನ್ನೆ ಮಾತನಾಡಿದಾಗ ನಾವು ನೋಡಿದೆವು....

ಶ್ರೀ ಜೆ.ಹೆಚ್.ಪಟೇಲ್: ವಿಷಯದ ಬಗ್ಗೆ ಸಾಕಷ್ಟು ಚಿಂತನೆ, ಯೋಗ್ಯತೆ ಇರುವವರು, ಹಾಗೂ ಅಧ್ಯಯನ ಮಾಡಿರುವವರು ಅದರ ಬಗ್ಗೆ ಈ ಸದನದಲ್ಲೇ ಹೇಳಬಹುದಲ್ಲ. ಅವರ ಎಲ್ಲಾ ವಿದ್ವತ್ ಅನ್ನು ಇಲ್ಲೇ ಪ್ರದರ್ಶಿಸಬಹುದಲ್ಲ. ಈಗ ತಮಗೇ ಗೊತ್ತಿರುವ ಹಾಗೆ, ಮಾನ್ಯ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ನಾವು ವಿರೋಧ ಪಕ್ಷದಲ್ಲಿದ್ದೆವು. ನಾವು ಯಾವುದೇ

ವಿಷಯದ ಮೇಲಿನ ಬೇಡಿಕೆಗಳ ಮೇಲೆ ಮಾತನಾಡಬೇಕಾಗಿದ್ದರೆ ಸಾಕಷ್ಟು ತಯಾರಿ ಮಾಡಿಕೊಂಡು ಬಂದು ಮಾತನಾಡುತ್ತಿದ್ದೆವು. ಮಂತ್ರಿಗಳು ಚರ್ಚೆ ಮುಗಿದ ತಕ್ಷಣ ಆಗಿಂದಾಗಲೇ ಉತ್ತರ ಕೊಡುತ್ತಿದ್ದರು. ಮಾನ್ಯ ನಂಜೇಗೌಡರು ಆಗಲೇ ಹೇಳಿದಂತೆ ಅದಕ್ಕೊಂದು ಗಂಭೀರತೆ ಇತ್ತು. ಈಗ ವಿಷಯ ಸಮಿತಿ ಏನು ಚರ್ಚೆ ಮಾಡುತ್ತದೆಯೋ, ಅದರ ಫೈಂಡಿಂಗ್ ಏನೋ ಗೊತ್ತಿಲ್ಲ, ಅದು ಏನು ರೆಕ್ಮಂಡ್ ಮಾಡುತ್ತೋ ಏನೋ? ಹಾಗಾಗಿ ಮಾನ್ಯ ವಾಟಾಳ್ ನಾಗರಾಜ್‌ರವರೇ ಇಲ್ಲೇ ಚರ್ಚೆ ಮಾಡಲು ಪ್ರತಿಯೊಬ್ಬರಿಗೂ ಅವಕಾಶ ಸಿಗಲಿ ಎಂಬುದು ನನ್ನ ಉದ್ದೇಶ. ಮಾನ್ಯ ಸದಸ್ಯರುಗಳೆಲ್ಲಾ ಅಧ್ಯಯನ ಮಾಡಿಕೊಂಡು ಬಂದು ಇಲ್ಲಿ ಚರ್ಚೆ ಮಾಡಲಿ. ಬೇಕಾದರೆ ಇನ್ನೂ 50 ದಿವಸ ನಾವು ಸದನವನ್ನು ಹೆಚ್ಚಿಗೆ ನಡೆಸೋಣ. ಒಂದು ವರ್ಷದಲ್ಲಿ ಬೇಕಾದರೆ ನಾವು 100-150 ದಿನ ಕುಳಿತುಕೊಳ್ಳೋಣ. ನನಗೆ ಅದಕ್ಕೇನು ಅಭ್ಯಂತರ ಇಲ್ಲ.

2.30 ಪಿ.ಎಂ

ಆದರೆ ಸದನದ ಸಮಯ ಸಾರ್ಥಕವಾಗುವ ಹಾಗೆ ನಾವು ಉಪಯೋಗಿಸಿಕೊಳ್ಳಬೇಕು. ಮಾನ್ಯ ನಂಜೇಗೌಡರು, ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಏನು ಹೇಳಿದರು ಅದಕ್ಕೆ ನಾನು ಒಪ್ಪುತ್ತೇನೆ.

+ ಶ್ರೀ ಸಿ.ಭೈರೇಗೌಡ (ಕೃಷಿ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನಾನು ಕೃಷಿ ಮಂತ್ರಿಯಾಗಿ ಎರಡೂವರೆ ವರ್ಷ ಕಳೆಯಿತು. ಕಳೆದ ಎರಡೂವರೆ ವರ್ಷದಲ್ಲಿ ಈ ರಾಜ್ಯದಲ್ಲಿ ನಾವು ಸಾಕಷ್ಟು ಕೆಲಸ ಮಾಡಿದ್ದೇವೆ. ಹೊಸ ಕೃಷಿ ನೀತಿಯನ್ನು ತಂದಿದ್ದೇವೆ. ಕೃಷಿ ಅಭಿವೃದ್ಧಿಗಾಗಿ ಹೊಸ ಹೊಸ ಕಾರ್ಯಕ್ರಮಗಳನ್ನು ಅಳವಡಿಸಿದ್ದೇವೆ. ಈ ಸದನದಲ್ಲಿ ಕೆಲವು ಸದಸ್ಯರು ಕೃಷಿ ಬಗ್ಗೆ ಮಾತನಾಡಿರುವುದನ್ನು ಬಿಟ್ಟರೆ ಇದರ ಬಗ್ಗೆ ಇನ್ನು ಏನೂ ಸಹ ಚರ್ಚೆ ಆಗಲಿಲ್ಲ. ನಾನು ಕೂಡ ಕೃಷಿ ಮಂತ್ರಿಯಾಗಿ ರಾಜ್ಯಕ್ಕೆ ಏನು ಮಾಡಿದ್ದೇನೆ,? ಏನು ಮಾಡುತ್ತಿದ್ದೇನೆ? ಹೇಗೆ ಕೆಲಸ ಮಾಡಿರತಕ್ಕಂಥದ್ದು ಇದೆ ಮತ್ತು ಮಾಡತಕ್ಕಂಥದ್ದರ ಬಗ್ಗೆ ಜನಗಳ ಗಮನಕ್ಕೆ ತರತಕ್ಕಂಥದ್ದು ಕೂಡ ಅವಶ್ಯಕತೆ ಇದೆ. ನಾವು ಹೊರಗಡೆ ಪತ್ರಿಕೆಗೆ ಮಾತನಾಡುವುದಕ್ಕೆ ಮತ್ತು ಈ ಸದನದಲ್ಲಿ ಇದ್ದು ಏನು ಮಾತನಾಡಿದ್ದೇವೆ ಅದು ಕಡತದಲ್ಲಿ ಹೋಗುವುದಕ್ಕೂ ತುಂಬಾ ವ್ಯತ್ಯಾಸ ಇದೆ. ಆದರೆ ಇವತ್ತಿನ ದಿವಸ ಸದನದಲ್ಲಿ ಉತ್ತರ ಕೊಡುವುದಕ್ಕೆ ನನಗೆ ಅವಕಾಶವಿಲ್ಲ. ನಾವು ಕೃಷಿ ಅಭಿವೃದ್ಧಿಗಾಗಿ ಏನು ಮಾಡಿದ್ದೇವೆ ಎನ್ನುವುದನ್ನು ಹೊರಗಡೆ ಹೇಳಿದಾಗ ಅದು ಪತ್ರಿಕೆಯಲ್ಲಿ ಬಂದು ಅದನ್ನು ಕೆಲವು ಮಾನ್ಯ ಸದಸ್ಯರು ಓದಬಹುದು ಇನ್ನು ಕೆಲವು ಸದಸ್ಯರು ಓದದೇ ಇರಬಹುದು. ಆದರೆ ಈ ಸದನದಲ್ಲಿ ಎಲ್ಲಾ ಸದಸ್ಯರಿಗೆ ಕೃಷಿ ಬಗ್ಗೆ ತಿಳಿಸತಕ್ಕಂಥ ಅವಶ್ಯಕತೆ ಇತ್ತು ಮತ್ತು ಇದರ ಮೂಲಕ ರಾಜ್ಯದ ಜನತೆಗೆ ಕೂಡ

ತಿಳಿಸಬೇಕಾಗಿರತಕ್ಕಂಥ ಅವಶ್ಯಕತೆ ಕೂಡ ಇದೆ. ಆದರೆ ಇದು ಇವತ್ತಿನ ದಿವಸ ಆಗುತ್ತಿಲ್ಲ. ನಾನು ಈ ದಿನ ಸದನದಲ್ಲಿ ಕೃಷಿ ಇಲಾಖೆಯ ಬಗ್ಗೆ, ಅದರ ಅಭಿವೃದ್ಧಿ ಬಗ್ಗೆ ಮಾತನಾಡಬೇಕೆಂದು ತಯಾರಾಗಿ ಬಂದು ಕುಳಿತಿದ್ದೆ. ಆದರೆ ಇಲ್ಲಿ ಮಾತನಾಡುವುದಕ್ಕೆ ಇವತ್ತಿನ ದಿವಸ ನನಗೆ ಅವಕಾಶವೇ ಸಿಗಲಿಲ್ಲ. ಆದ್ದರಿಂದ ಬೇಡಿಕೆ ಮೇಲೆ ಎಲ್ಲಾ ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಅವಕಾಶ ಸಿಗಬೇಕು ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಕೂಡ ಒಪ್ಪಿದ್ದಾರೆ. ಹಾಗೆಯೇ ವಿಷಯಸಮಿತಿಗಳನ್ನು ತೆಗೆದು ಎಲ್ಲವೂ ಸದನದಲ್ಲಿಯೇ ಸುದೀರ್ಘವಾಗಿ ಚರ್ಚೆ ಆಗಬೇಕೆಂಬುದಕ್ಕೆ ಮಾನ್ಯ ವಿರೋಧಪಕ್ಷದ ನಾಯಕರಾದ ಎಂ.ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಯಡಿಯೂರಪ್ಪನವರು ಒಪ್ಪಿದ್ದಾರೆ. ಈ ವಿಷಯ ಸಮಿತಿಗಳು ಇರಬೇಕೆಂದು ಪ್ರತಿಪಾದನೆ ಮಾಡಿರತಕ್ಕಂಥದ್ದರಲ್ಲಿ ನಾನೂ ಕೂಡ ಒಬ್ಬ ಆಗಿದ್ದೆ. ನಾನು ಸಹ ಈ ಸಮಿತಿಯ ಸದಸ್ಯನಾಗಿದ್ದೆ. ಆದರೆ ಈ ವಿಷಯ ಸಮಿತಿಗಳನ್ನು ಯಾವ ಉದ್ದೇಶದಿಂದ ಮಾಡಿದ್ದೇವೆಯೋ ಅದು ಈಡೇರುತ್ತಾ ಇಲ್ಲ. ಆ ಕಾರಣದಿಂದ ಈ ವಿಷಯ ಸಮಿತಿಗಳನ್ನು ಸಮಾಪ್ತಿಗೊಳಿಸತಕ್ಕಂಥದ್ದು ಸೂಕ್ತ ಎಂದು ನನ್ನ ಭಾವನೆ. ಇದನ್ನು ವಾಟಾಳ್ ನಾಗರಾಜ್‌ರವರು ಒಪ್ಪಿಕೊಳ್ಳಬೇಕೆಂದು ಅವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಈ ವಿಷಯ ಸಮಿತಿಗಳ ಬಗ್ಗೆ ಇಲ್ಲಿ ಈಗ ಚರ್ಚೆ ಬೇಡ. ಇವು ಬೇಕೇ ಅಥವಾ ಬೇಡವೇ ಎನ್ನುವುದರ ಬಗ್ಗೆ ಚಿಂತನೆ ಮಾಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಈ ವಿಷಯ ಸಮಿತಿಗಳ ಅಗತ್ಯ ಇದೆಯೋ ಅಥವಾ ಇಲ್ಲವೇ ಎನ್ನುವುದರ ಬಗ್ಗೆ ಚರ್ಚೆ ಮಾಡಲು ತಾವು ತಮ್ಮ ಕೊಠಡಿಯಲ್ಲಿ ಒಂದು ದಿವಸ ಮೀಟಿಂಗ್ ಇಟ್ಟು ನಮ್ಮನ್ನೆಲ್ಲ ಕರೆಸಿದರೆ ಆಗ ಚರ್ಚೆ ಮಾಡಬಹುದು. ಈಗ ತಾವು ತೆಗೆದುಕೊಂಡಿರುವ ಸಬ್ಜೆಕ್ಟ್‌ನ್ನು ಮುಂದುವರಿಸಿದರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತೇನೆ ಎಂದರೆ ತಾವು ತಮ್ಮ ಪೀಠದಲ್ಲಿ ಕುಳಿತುಕೊಂಡು ಶಾಸನ ರಚನೆಗಳ ಬಗ್ಗೆ ನಾಗಾಲೋಟದಿಂದ ಓದಿಕೊಂಡು ಹೋಗುತ್ತಿದ್ದೀರಿ. ನಾವು ಅಷ್ಟು ಹೊತ್ತಿನಿಂದ ಸುಮ್ಮನೆ ಕುಳಿತು ಕೇಳುತ್ತಿದ್ದೇವೆ. ಒಂದೇ ಸಮನೆ ನಾಗಾಲೋಟದಿಂದ ಓದುತ್ತಿರುವುದಕ್ಕೆ ನಾನು ತಮ್ಮ ಬಗ್ಗೆ ಆಕ್ಷೇಪಣೆ ಮಾಡುತ್ತಿಲ್ಲ. ಎಂಥಹ ಪರಿಸ್ಥಿತಿ ಬಂದಿದೆ? ನಾವು ಯಾವ ಮಟ್ಟಕ್ಕೆ ತಲುಪಿದ್ದೇವೆ ಎನ್ನುವುದನ್ನು ಯೋಚಿಸಬೇಕಾಗಿದೆ. ತಾವು ಗಮನಿಸಿದ ಹಾಗೆ ನಿನ್ನೆಯಿಂದ ಅನೇಕ ಮಾನ್ಯ ಸದಸ್ಯರುಗಳು ಮುಖ್ಯವಾದಂಥ ವಿಷಯಗಳನ್ನು ಬಹಳ ಸುಂದರವಾಗಿ ಪ್ರಸ್ತಾಪ ಮಾಡಿದ್ದಾರೆ. ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿರುವಾಗ,

ಸಂಬಂಧಪಟ್ಟ ಮಂತ್ರಿಗಳು ಯಾರೂ ಸಹ ಉತ್ತರ ಕೊಡಲಿಕ್ಕೆ ಆಗಲಿಲ್ಲವೆಂದರೆ ಅದು ನಮ್ಮ ಮನಸ್ಸಿಗೂ ಕೂಡ ಬಹಳ ನೋವು ಆಗುತ್ತದೆ. ವಿರೋಧ ಪಕ್ಷದ ಸಾಲಿನಲ್ಲಿ ಕುಳಿತಿರತಕ್ಕಂಥ ಎಲ್ಲಾ ಮಾನ್ಯ ಸದಸ್ಯರುಗಳು ಕೂಡ ಸಂಬಂಧ ಪಟ್ಟಂಥ ಎಲ್ಲಾ ಸಚಿವರುಗಳ ಉತ್ತರದ ನಿರೀಕ್ಷೆಯಲ್ಲಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ಉತ್ತರ ನೀಡಿಲ್ಲವೆಂದು ಬೇಕಾಷ್ಟು ಆಪಾದನೆಗಳನ್ನು ಮಾಡಿದ್ದಾರೆ. ನಮಗೆ ಉತ್ತರವನ್ನು ಹೇಳಲಿಕ್ಕೆ ಅವಕಾಶ ಸಿಗಲಿಲ್ಲವಲ್ಲ ಎಂದು ಈ ವಿಷಯ ಸಮಿತಿ ಇದ್ದುದರಿಂದ ನಮಗೆ ಮಾತನಾಡಲು ಅವಕಾಶ ಸಿಕ್ಕಿಲ್ಲ. ಆದ್ದರಿಂದ ಈ ವಿಷಯ ಸಮಿತಿ ಹೋಗಬೇಕೆಂದು ಹೇಳಿದರು.

ಅಧ್ಯಕ್ಷರು: ಆಯಿತು, ಮಾನ್ಯ ನಾಗಮಾರಪಲ್ಲಿಯವರೆ ತಾವು ಸ್ವಲ್ಪ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಯಾವ ವಿಷಯಕ್ಕೂ ಸರಿಯಾದ ಚರ್ಚೆ ನಡೆಯದೇ ಇದೇ ರೀತಿ ಮುಂದುವರೆದರೆ ಪ್ರಜಾತಂತ್ರ ವ್ಯವಸ್ಥೆಗೆ ಅಪಾಯ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇದೇ ರೀತಿ ಚರ್ಚೆ ಇಲ್ಲದೆ ಮುಂದುವರಿಯಬಾರದು.

ಅಧ್ಯಕ್ಷರು: ಈಗ ಸಮಯ ವ್ಯರ್ಥವಾಗುತ್ತದೆ. ತಾವು ಹೇಳಿದ್ದೀರಿ ಅಲ್ಲವೇ?

ಶ್ರೀ ವಾಟಾಳ್ ನಾಗರಾಜ್: ತಾವು, ಸಮಯ ಹಾಳಾಗುತ್ತದೆ ಎಂದು ಹೇಳುತ್ತಿದ್ದರೆ ನಾವು ಏನು ಮಾಡೋಣ ಹೇಳಿ.

ಅಧ್ಯಕ್ಷರು: ಸಮಯ ವ್ಯಯವಾಗುತ್ತದೆಂದು ಹೇಳದೆ ಇನ್ನು ಏನು ಮಾಡೋಣ ಹೇಳಿ.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ನನಗೆ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು: ಬೇಡ, ಟೈಮ್ ಆಗುತ್ತದೆ.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ನಾನು ಹೇಳುವಂಥದ್ದನ್ನು ದಯಮಾಡಿ ಕೇಳಬೇಕು.

ಅಧ್ಯಕ್ಷರು: ಈಗ ನಾನು ಏನೋ ಹೇಳಬೇಕಾಗಿದೆ.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ಬೇರೆ ಬೇರೆ ವಿಷಯಗಳ ಬಗ್ಗೆ

ಆಪಾದನೆಗಳು, ಸಂಶಯಗಳು, ಕೆಲವು ವಿಷಯಗಳ ಬಗ್ಗೆ ಏನು ಪ್ರಶ್ನೆ ಮಾಡಿದ್ದೇವೆ, ಪ್ರತಿಪಾದನೆ ಮಾಡಿದ್ದೇವೆ ಒಂದಕ್ಕೂ ಸಹ ಉತ್ತರ ಕೊಟ್ಟಿಲ್ಲ. ಎಲ್ಲಾ ಮಂತ್ರಿಗಳಿಗೂ ಸಹ ಉತ್ತರ ಕೊಡುವುದಕ್ಕೆ ಅವಕಾಶ ಕೊಡಬೇಕಾಗಿತ್ತು. ಯಾವ ವಿಷಯಕ್ಕೂ ಉತ್ತರ ಕೊಟ್ಟಿಲ್ಲ. ವಿಷಯ ಸಮಿತಿಗೂ ಇದಕ್ಕೂ ಏನೂ ಸಂಬಂಧ ಇಲ್ಲ.

ಅಧ್ಯಕ್ಷರು: ಆಯಿತು, ಅದಕ್ಕೆ ಉತ್ತರ ಹೇಳುತ್ತೇನೆ. ನಮ್ಮ ಕಷ್ಟ ಏನು ಎನ್ನುವುದನ್ನು ಎಲ್ಲರೂ ತಿಳಿದುಕೊಳ್ಳಬೇಕಲ್ಲವೇ? ಎಲ್ಲರೂ ಅದನ್ನೇ ಹೇಳುತ್ತೀರಿ. ಆಯಿತು, ನೀವೆಲ್ಲಾ ಬುದ್ಧಿವಂತರಿದ್ದೀರಿ, ಇಲ್ಲಿ ಹಗಲು ರಾತ್ರಿ ಬಂದು ಕೆಲಸ ಮಾಡಿ. ಎಲ್ಲಾ ಮಂತ್ರಿಗಳ ಕಡೆಯಿಂದಲೂ ನಾನು ಉತ್ತರ ಕೊಡಿಸುತ್ತೇನೆ. 4ನೇ ತಾರೀಕಿನೊಳಗೆ ಧನವಿನಿಯೋಗ ಬಿಲ್‌ನ್ನು ಸದನ ಅಂಗೀಕರಿಸಿ ಕೊಡಬೇಕೆಂದು ಸರ್ಕಾರದವರು ಹೇಳುತ್ತಾರೆ. ಬೇಡಿಕೆ ಚರ್ಚೆ ಮೇಲೆ ಉತ್ತರ ಕೊಡುವುದಕ್ಕೆ ಅವಕಾಶ ಸಿಗಬೇಕು ಮಂತ್ರಿಗಳು ಹೇಳುತ್ತಾರೆ. ವಿಧಾನಪರಿಷತ್ತಿನಲ್ಲಿ ಬೇರೆ ಬಿಸಿನೆಸ್‌ನ್ನು ನಿಲ್ಲಿಸಿಬಿಟ್ಟು ಅಪ್ರೋಪ್ರಿಯೇಷನ್ ಬಿಲ್‌ಗೋಸ್ಕರ ಕಾಯುತ್ತಿದ್ದೇವೆಂದು ಅಲ್ಲಿ ಹೇಳುತ್ತಿದ್ದಾರೆ. ಬೃಹತ್ ನೀರಾವರಿ ಸಚಿವರು ಮಾತನಾಡಿ ಆದನಂತರ ನಾನು ಮಾತನಾಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಯಾವ ರೀತಿ ಟೈಮ್ ಅಡ್ಜಸ್ಟ್ ಮಾಡಬೇಕು, ಹೇಳಿ. ನನ್ನ ಬಗ್ಗೆ ಪ್ರಶ್ನೆ ಅಲ್ಲ. ಮಾನ್ಯ ಯಡಿಯೂರಪ್ಪನವರೆ, ನಾನು ಏನು ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ ವಿಷಯಸಮಿತಿಗಳ ಅಗತ್ಯ ಇದೆಯೇ ಅಥವಾ ಇಲ್ಲವೇ, ಅವು ಬೇಕೇ ಅಥವಾ ಬೇಡವೇ ಎನ್ನುವುದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡೋಣ. ಇವತ್ತಿನ ಸಬ್ಜೆಕ್ಟ್‌ಗೆ ಸಂಬಂಧಪಟ್ಟಹಾಗೆ ಪ್ರಾರಂಭದಲ್ಲಿಯೇ ಮಂತ್ರಿಗಳ ಕಡೆಯಿಂದ ಚರ್ಚೆಗೆ ಉತ್ತರ ಸಿಕ್ಕಿಲ್ಲ ಎಂದು ಮಾನ್ಯ ವಾಟಾಳ್ ನಾಗರಾಜ್ ರವರು ಪ್ರಸ್ತಾಪ ಮಾಡಿದರು. 'ನಾವು ಬಾಯಿ ಚಪಲಕ್ಕೆ ರಾತ್ರಿ ಅಷ್ಟು ಹೊತ್ತು ವ್ಯಾಸಂಗ ಮಾಡಿಕೊಂಡು ಬಂದು ಇಲ್ಲಿ ಮಾತನಾಡಬೇಕಾಗಿತ್ತೇ' ಎಂದು ಮಾನ್ಯ ಯು.ಆರ್.ಸಭಾಪತಿಯವರು ಹೇಳಿದರು. ಇದನ್ನು ಯಾರೂ ಗಮನಿಸಲಿಲ್ಲ. ಆ ಮಾತನ್ನು ಕೂಡ ಬಹಳ ಗಂಭೀರವಾಗಿಯೇ ನಾನು ಪರಿಗಣನೆಗೆ ತೆಗೆದುಕೊಂಡಿದ್ದೇನೆ. ನನ್ನ ಸಮಸ್ಯೆ ಏನು ಎಂದರೆ-ವಿಷಯ ಸಮಿತಿಗಳ ವ್ಯವಸ್ಥೆ ಇರುವಾಗ ನಾವು ಇಲ್ಲಿ ಬೇಡಿಕೆಗಳನ್ನು ಇಟ್ಟಹಾಗೆ ಮಂಜೂರು ಮಾಡಿಕೊಳ್ಳತಕ್ಕಂಥದ್ದು ಹೊರತು ಚರ್ಚೆಗೆ ತೆಗೆದುಕೊಳ್ಳತಕ್ಕಂಥ ಅಗತ್ಯ ಇಲ್ಲ. ನಾನು ಒತ್ತಾಯ ಮಾಡಿ, ತಮ್ಮನ್ನು, ಅವರನ್ನು ಎಲ್ಲರನ್ನೂ ಕೂಡ ಮನವೊಲಿಸಿ ಚರ್ಚೆಯನ್ನು ಕೂಡ ಮಾಡೋಣವೆಂದು ಹೆಚ್ಚಿಗೆ ಸಬ್ಜೆಕ್ಟ್ಸ್ ತೆಗೆದುಕೊಂಡು ಚರ್ಚೆಯನ್ನು ಮಾಡತಕ್ಕಂಥ ಒಂದು ವಿಧಾನವನ್ನು, ಅದಕ್ಕೆ ಅವಕಾಶ ಇಲ್ಲದಿದ್ದರೂ ಕೂಡ ಪ್ರಾರಂಭ ಮಾಡಿದೆವು. ಮತ್ತು ಈ ಚರ್ಚೆಯಲ್ಲಿ ಹೆಚ್ಚಿಗೆ ಜನರು ಪಾಲ್ಗೊಳ್ಳಬೇಕೆಂಬ ಉದ್ದೇಶದಿಂದ ನಿನ್ನೆ ರಾತ್ರಿಯೆಲ್ಲಾ ನಾವು ಮಾಡಿರತಕ್ಕಂಥ ಕಸರತ್ತನ್ನು ತಾವೆಲ್ಲರೂ ಕೂಡ ನೋಡಿದ್ದೀರಿ. ವಿಧಾನ ಪರಿಷತ್ತಿನಲ್ಲಿ ಈಗ ಏನೂ ಕಾರ್ಯಕ್ರಮ ಇಲ್ಲದಿದ್ದರೂ ಕೂಡ ಇಲ್ಲಿಂದ ಧನವಿನಿಯೋಗ ಮಸೂದೆ

ಹೋಗುವುದಕ್ಕೋಸ್ಕರ ಅಲ್ಲಿ ಅವರು ಕಾದು ಕುಳಿತಿದ್ದಾರೆ. ಆದ್ದರಿಂದ ನಾನು ತಮಗೆ ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನ್ನು ಕೂಡ ಆದಷ್ಟು ಬೇಗ ಮುಗಿಸಿ ಕೊಡಿ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಂಡೆ. ವಿಷಯ ಸಮಿತಿಗಳ ವಿಚಾರವನ್ನು ಆನಂತರ ತೆಗೆದುಕೊಳ್ಳಿ. ಮಾನ್ಯ ಕೃಷಿ ಮಂತ್ರಿಗಳಾದ ಬೈರೇಗೌಡರು- 'ಉತ್ತರ ಕೊಡುವುದಕ್ಕೆ ತಯಾರಾಗಿ ಬಂದಿದ್ದೆ' ಎಂದು ಹೇಳಿದರು. ನಿಜವಾಗಿಯೂ ನಿಮಗೆಲ್ಲರಿಗೂ ಡಿಮ್ಯಾಂಡ್ ಬಗ್ಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡಬೇಕೆಂದು ಇತ್ತು. ಸಮಯ ಇಲ್ಲದೇ ಇರುವ ಕಾರಣ ತಮಗೆಲ್ಲಾ ಅವಕಾಶ ಕೊಡಲಿಕ್ಕೆ ಆಗಲಿಲ್ಲ. ನಿಮಗೆ ಅನುಕೂಲ ಮಾಡಿಕೊಡುವುದಕ್ಕೆ ನಾನು ಮುಗಿಸಿದ್ದು ಅಷ್ಟೆ. ನಾವು ನಿಮಗೆಲ್ಲ ಅವಕಾಶ ಕೊಡಬಾರದೆಂದು ಬೇಗ ಬೇಗ ಮುಗಿಸಿದ್ದು ಅಲ್ಲ. ಸರ್ಕಾರದ ಕೆಲಸ ಮಾಡಿಕೊಡಬೇಕೆಂದು ನಿಮಗೆಲ್ಲ ಅವಕಾಶ ಕೊಡಲಿಕ್ಕೆ ಆಗಲಿಲ್ಲ. ಸರ್ಕಾರ ಧನವಿನಿಯೋಗ ಮಸೂದೆಯನ್ನು ನಿಧಾನವಾಗಿ ಚರ್ಚೆಗೆ ತೆಗೆದುಕೊಳ್ಳಬಹುದೆಂದು ಹೇಳಿದ್ದರೆ, ನಾನು ಎಲ್ಲಾ ಮಂತ್ರಿಗಳಿಂದ ರಿಪ್ಲೈ ಮಾಡಿಸುತ್ತಿದ್ದೆ. ಆದ್ದರಿಂದ ಮಂತ್ರಿಗಳು ಸಹ ಅವರ ಹಾಗೆ ಮಾತನಾಡಿದರೆ ನಾನು ಎಲ್ಲಿಗೆ ಹೋಗಬೇಕು? ಹೇಳಿ. ಮಾನ್ಯ ಬೈರೇಗೌಡರಿಗೆ ಸದನದಲ್ಲಿ ಮಾತನಾಡಲಿಕ್ಕೆ ಅಧ್ಯಕ್ಷರು ಅವಕಾಶ ಕೊಡಲಿಲ್ಲವೆಂದು ಜನರು ತಿಳಿದುಕೊಂಡು, ವೇಮಗಲ್ಲಿನಲ್ಲಿ ಯಾರಾದರೂ ನನಗೆ ಕೇಳಿದರೆ, ನಾನು ಅವರಿಗೆ ಏನು ಹೇಳಬೇಕು? ಆದ್ದರಿಂದ ನಾನು ನಿಮಗೆಲ್ಲರಿಗೂ ಬೇಡಿಕೆ ಮೇಲಿನ ಚರ್ಚೆಗೆ ರಿಪ್ಲೈ ಮಾಡಲು ಅವಕಾಶ ಕೊಡಬೇಕೆಂತಲೇ ನಾನು ಬಂದೆ. ಸರ್ಕಾರದ ಕೆಲಸವನ್ನು ಮಾಡಿಕೊಡುವ ದೃಷ್ಟಿಯಿಂದ ನಾನು ತರಾತುರಿಯಿಂದ ಹೋಗಬೇಕಾಯಿತು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ತಾವು ಎಲ್ಲಾ ರೀತಿಯಲ್ಲೂ ನಮಗೆ ಸಹಕಾರವನ್ನು ಕೊಡುತ್ತಿದ್ದೀರಿ. ಅದೇ ರೀತಿ ನಾವು ಸಹ ಎಲ್ಲಾ ರೀತಿಯಿಂದಲೂ ನಿಮಗೆ ಸಹಕಾರವನ್ನು ಕೊಡುತ್ತಿದ್ದೇವೆ.

ಅಧ್ಯಕ್ಷರು: ಡೆಫನೆಟ್ಲಿ,

ಶ್ರೀ ಬಿ.ಎಸ್ ಯಡಿಯೂರಪ್ಪ: ಒಳ್ಳೆಯ ರೀತಿಯಿಂದ ಸದನ ನಡೆದಿದೆ. ಈ ಸರ್ಕಾರದ ಕಡೆಯಿಂದ ಆದಂಥ ಕೊರತೆ ಏನೆಂದರೆ ಧನವಿನಿಯೋಗ ಬಿಲ್‌ನ್ನು ಪಾಸ್ ಮಾಡಿಸಿ ಕೊಳ್ಳುವುದಕ್ಕೆ ಈ ತಿಂಗಳ ಕೊನೆಯವರೆಗೆ ಅವಕಾಶ ಇದೆ. ಮಾನ್ಯ ಹಣಕಾಸಿನ ಸಚಿವರು ಏಕೆ ಅವಸರ ಮಾಡುತ್ತಿದ್ದಾರೋ ಗೊತ್ತಿಲ್ಲ. ಇಲ್ಲದಿದ್ದರೆ ವಿಷಯ ಸಮಿತಿಯಲ್ಲೂ ಚರ್ಚೆಯಾಗಿ ಅವರದೇ ಆದಂಥ ಎಕ್ಸ್‌ಪೀರಿಯೆನ್ಸ್ ಇತ್ತು. ಇಲ್ಲೂ ಸಹ ಪ್ರತಿಯೊಬ್ಬ ಮಂತ್ರಿಗಳು ಉತ್ತರ ಕೊಟ್ಟು ಇನ್ನು 3-4 ದಿವಸ ಆದಮೇಲೆ ಬಿಲ್ ಪಾಸ್ ಮಾಡಿಕೊಳ್ಳಲಿಕ್ಕೆ ಸಮಯ ಇತ್ತು.

ಅಧ್ಯಕ್ಷರು: ಸಭೆಯ ಅಧಿವೇಶನ ಸೇರಿದಂಥ ದಿವಸ ಇದಕ್ಕಿಂತ ಮೊದಲೇ

ಆಗಬೇಕಿತ್ತು.

ಶ್ರೀ ಬಿ.ಎಸ್.ಯಡಿಯೂರಪ್ಪ: ಹೌದು, ಈ ಅಧಿವೇಶನವನ್ನು ಪ್ರಾರಂಭ ಮಾಡಿದ ದಿನಾಂಕಕ್ಕಿಂತಲೂ ಮೊದಲೇ ಪ್ರಾರಂಭ ಮಾಡಬಹುದಾಗಿತ್ತು.

ಅಧ್ಯಕ್ಷರು: ಇನ್ನೂ ಹೆಚ್ಚಿಗೆ ದಿವಸ ಅಧಿವೇಶನ ಸೇರೋಣ ಎಂದು ಮಾನ್ಯ ಮುಖ್ಯಮಂತ್ರಿಗಳು ಇವತ್ತಿನ ದಿವಸ ಒಂದು ಮಾತನ್ನು ಹೇಳಿದ್ದಾರೆ. ಅನಂತರ ಮಾನ್ಯ ನಂಜೇಗೌಡರು ಏನು ಆಕ್ಷೇಪಣೆ ಮಾಡಿದ್ದಾರೆ ಅದು ಬಹಳ ವ್ಯಾಲಿಡ್ ಆಕ್ಷೇಪವಾಗಿದೆ. ಅದನ್ನು ನಾನು ಒಪ್ಪಿದ್ದೇನೆ. ನಿಜವಾಗಲೂ ಕೂಡ ಚರ್ಚೆ ಇಲ್ಲದೆ ಪಾಸ್ ಮಾಡತಕ್ಕಂಥದ್ದು ಸದನಕ್ಕೆ ಗೌರವ ಅಲ್ಲ. ಆದರೆ ಅನಿವಾರ್ಯ ಕಾರಣಗಳಿಂದ ಹೀಗೆ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿ ಮುಂದೆ ನಾವು ಹೇಗೆ ಈ ವಿಷಯದಲ್ಲಿ ನಿರ್ಣಯ ತೆಗೆದುಕೊಳ್ಳುವಂಥದಕ್ಕೆ ಎಲ್ಲರೂ ಸೇರಿ ಪ್ರತ್ಯೇಕವಾಗಿ ಒಂದು ತೀರ್ಮಾನಕ್ಕೆ ಬರೋಣ. ಮಾನ್ಯ ಯಾವಗಲ್ ರವರು ಏನೋ ಹೇಳುವುದಕ್ಕೆ ಎದ್ದು ನಿಂತಿದ್ದರು. ತಾವು ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ಬಿ.ಆರ್.ಯಾವಗಲ್: ಮಾನ್ಯ ಅಧ್ಯಕ್ಷರೆ, ತಾವು ವಿಷಯ ಸಮಿತಿಗಳ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದಿರಿ. ಕೊನೆಗೆ ಎಲ್ಲರೂ ಸೇರಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳೋಣ ಎಂದು ಹೇಳಿದಿರಿ. ಆದರೆ ಬಜೆಟ್ ಅಲೋಕೇಷನ್ ಎಷ್ಟು ಇದೆ? ಇಲಾಖೆಗಳ ಚಟುವಟಿಕೆ ಏನು ಇರುತ್ತವೆ? ಮುಂತಾದವುಗಳ ಬಗ್ಗೆ ಚರ್ಚೆ ಮಾಡಬೇಕು ಎನ್ನುವ ಉದ್ದೇಶದಿಂದ ಈ ವಿಷಯ ಸಮಿತಿಗಳನ್ನು ಮಾಡಿರುವಂಥದ್ದಾಗಿದೆ. ಅದಕ್ಕಾಗಿ ಪ್ರತ್ಯೇಕವಾಗಿ ಶಾಸಕರ ಅಭಿಪ್ರಾಯ ವ್ಯಕ್ತಪಡಿಸುವಂಥದ್ದು, ಇದನ್ನು ಬಿಟ್ಟರೆ ಯಾವುದೇ ಸಂದರ್ಭದಲ್ಲಿಯೂ ಅಧಿಕಾರಿಗಳೊಂದಿಗೆ ಆಗಲಿ, ಇಲಾಖೆಯೊಂದಿಗೆ ಆಗಲಿ ಸಂಪರ್ಕ ಮಾಡುವುದಕ್ಕೆ ಶಾಸಕರಿಗೆ ಅವಕಾಶ ಇರುವುದಿಲ್ಲ. ಆದ್ದರಿಂದ ಈ ವಿಷಯ ಸಮಿತಿಯನ್ನು ಮುಂದುವರಿಸಬೇಕು ಎನ್ನುವುದು ನನ್ನ ಅಭಿಪ್ರಾಯವಾಗಿದೆ.

ಅಧ್ಯಕ್ಷರು: ಯಾರು ಸದಸ್ಯರಾಗಿ, ಸಕ್ರೀಯವಾಗಿ ಈ ಸಮಿತಿಗಳಲ್ಲಿ ಭಾಗವಹಿಸಿದ್ದಾರೆ ಅವರು ನನ್ನ ಹತ್ತಿರ ಬಂದು ಮಾತನಾಡಿರುವುದನ್ನು ಗಣನೆಗೆ ತೆಗೆದುಕೊಂಡರೆ ಅವರ ಅಭಿಪ್ರಾಯ ಬೇರೆ ಇದೆ. ಮತ್ತು ಕೆಲವು ಮುಖಂಡರುಗಳ ಅಭಿಪ್ರಾಯ ಬೇರೆ ಇದೆ. ಆತುರಪಟ್ಟು ನಾವು ಯಾವುದೇ ನಿರ್ಣಯಕ್ಕೆ ಬರುವುದಿಲ್ಲ. ತಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಎಲ್ಲರ ಜೊತೆಗೆ ಚರ್ಚೆ ಮಾಡಿ ಅಂತಿಮ ತೀರ್ಮಾನಕ್ಕೆ ಬರುತ್ತೇವೆಂದು ನಾನು ಎಲ್ಲಾ ಸದಸ್ಯರಿಗೆ ಭರವಸೆಯನ್ನು ಕೊಡುತ್ತಿದ್ದೇನೆ.

(6) ಶಾಸನ ರಚನಾ ಕಾರ್ಯಕಲಾಪಗಳು

ವಿಷಯ: ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(ಅ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (2ನೇ ತಿದ್ದುಪಡಿ) ವಿಧೇಯಕ 1997.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997-98ನೇ ಸಾಲಿನಲ್ಲಿ ಮೋಟಾರು ವಾಹನ ತೆರಿಗೆಗೆ ಸಂಬಂಧಪಟ್ಟ ಹಾಗೆ ಲೈಫ್ ಟೈಮ್ ಟ್ಯಾಕ್ಸನ್ನು ಏನು ಹಾಕಿದ್ದೇವೆ ಅದನ್ನು ಮಾನ್ಯ ಹಣಕಾಸಿನ ಸಚಿವರು ಬಜೆಟ್‌ನಲ್ಲಿ ಮಂಡನೆ ಮಾಡಿದಾಗ ಒಂದು ರೇಟ್‌ನ್ನು ಫಿಕ್ಸ್ ಮಾಡಿದ್ದರು. ಅದರಲ್ಲಿ ಸೆಂಟ್ರಲ್ ಗೌರ್ನ್‌ಮೆಂಟ್ ಎಂಪ್ಲಾಯೀಸ್ ಮತ್ತು ಡಿಫೆನ್ಸ್ ಎಂಪ್ಲಾಯೀಸ್ ಏನು ಮಾಡುತ್ತಾರೆಂದರೆ ವೆಹಿಕಲ್ಸ್‌ನ್ನು ಬೇರೆ ರಾಜ್ಯಗಳಿಗೆ ಟೆಂಪರರಿಯಾಗಿ ಟ್ರಾನ್ಸ್‌ಫರ್ ಮಾಡುತ್ತಾರೆ. ಆದರಿಂದ, ಅವರಿಗೆ ಎಕ್ಸಂಪ್‌ಷನ್ ಕೊಡಬೇಕು ಎನ್ನುವ ದೃಷ್ಟಿಯಿಂದ ಒಂದು ಆರ್ಡಿನೆನ್ಸ್‌ನ್ನು ಮಾಡಿದ್ದೇವೆ. ಆ ಆರ್ಡಿನೆನ್ಸ್‌ನ್ನು ರಿಪ್ಲೇಸ್ ಮಾಡತಕ್ಕಂಥ ಬಿಲ್ ಇದು ಆಗಿರುತ್ತದೆ. ದಯಮಾಡಿ ಸರ್ವಾನುಮತದಿಂದ ಎಲ್ಲರೂ ಇದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರವರೆಗೆ

ಅಧ್ಯಕ್ಷರು: ''ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

''1997ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು: ಈಗ ಸಭೆಯನ್ನು ಮುಂದೂಡಿ ಪುನಃ ಸಾಯಂಕಾಲ 4 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲಿದ್ದೇವೆ.

(ಸದನವು 2-40 ಗಂಟೆಗೆ ಮುಂದೂಡಿ ಪುನಃ ಸಾಯಂಕಾಲ 4-30 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸಭೆ 4-40ಕ್ಕೆ ಸಮಾವೇಶಗೊಂಡಿತು ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು: ಮಾನ್ಯ ವಸಂತ ಬಂಗೇರ ಅವರೇ ಪೆಟ್ರೋಲಿಯಂ ಬಗ್ಗೆ ಸರಕಾರ ಹೇಳಿಕೆ

ಮಾಡಬೇಕಾಗಿತ್ತು. ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕರೆಸಿ ಬಂದು ಮಾಡಲಿ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಕಳೆದ 20 ದಿವಸಗಳಿಂದ ತುಮಕೂರು ಜಿಲ್ಲೆಯಲ್ಲಿ ಅದರಲ್ಲೂ ನಮ್ಮ ಕ್ಷೇತ್ರದಲ್ಲಿ ಅನುಭವಿಸುತ್ತಿರುವ ಕಷ್ಟದ ಬಗ್ಗೆ ನಿವೇದನೆ ಮಾಡಿಕೊಳ್ಳುವುದಕ್ಕೆ ತಮ್ಮ ಅನುಮತಿಯನ್ನು ಕೋರುತ್ತಾ ಬಂದಿದ್ದೇವೆ. ಅಂತಿಮವಾಗಿ ನಮ್ಮ ಬ್ರಹ್ಮಾಸ್ತ್ರವಾಗಿ ನಿಲುವಳಿ ಸೂಚನೆಯನ್ನು ಕೂಡ ಕೊಟ್ಟಿದ್ದೇವೆ ನಮ್ಮ ಉದ್ದೇಶ ಅದು ಇರಲಿಲ್ಲ. ಹೇಗಾದರೂ ಮಾಡಿ ಸದನದಲ್ಲಿ ತಮ್ಮ ಗಮನಕ್ಕೆ ತಂದು ಸರಕಾರದಿಂದ ನಮ್ಮ ಸಮಸ್ಯೆ ಪರಿಹಾರವಾದರೆ ಸಾಕು.

ಅಧ್ಯಕ್ಷರು: ನಿಮ್ಮ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಇಂದು ಆಗುವುದಿಲ್ಲವೆಂದು ಕಾಣುತ್ತದೆ. 8 ನೇ ತಾರೀಖು ಅವಕಾಶ ಕೊಡುತ್ತೇನೆ. ಬೇಕಾದಷ್ಟು ಸಮಯ ಇದೆ.

ಶ್ರೀ ಹೆಚ್.ಎನ್.ಪ್ರಕಾಶ್: ನಮ್ಮಲ್ಲಿ 50 ಕೆ.ಜಿ. ಆಲೂಗಡ್ಡೆ 30 ರೂಪಾಯಿಯಾಗಿ ರೈತರು ಕಂಗಾಲಾಗಿದ್ದಾರೆ. ಮತ್ತು ಎ.ಪಿ.ಎಂ.ಸಿ.ಯವರಿಗೆ ಹಾಗೂ ವರ್ತಕರಿಗೆ ಗಲಾಟೆಯಾಗಿ ಬಹಳ ಗೊಂದಲವಾಗಿದೆ. 400 ಲೋಡ್ ಆಲೂಗೆಡ್ಡೆ ಎ.ಪಿ.ಎಂ.ಸಿ.ಯಲ್ಲಿ ಇದೆ. ಆಲೂಗೆಡ್ಡೆ ಬಗ್ಗೆ ಸರಕಾರವೇನು ಕಳೆದ ವರ್ಷ ಕ್ರಮ ತೆಗೆದುಕೊಂಡರು ಅದೇ ರೀತಿ ಈ ವರ್ಷವೂ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು: ಮಾನ್ಯ ನಾರಾಯಣ್ ಅವರೇ ಆಲೂಗೆಡ್ಡೆಗೆ ಇಂತಹ ತೊಂದರೆ ಬಂದಿದೆಯಲ್ಲ ಏನು ಮಾಡೋಣ. ಅವರು ನನ್ನ ಸ್ನೇಹಿತರು ನನಗೇನಾದರೂ ಸಲಹೆ ಕೊಡುತ್ತಾರೆಂದು ಕೇಳುತ್ತಿದ್ದೇನೆ.

ಶ್ರೀ ಹೆಚ್.ಎಸ್.ಪ್ರಕಾಶ್: ಇಡೀ ರೈತರು ಬೆಳೆದಂತಹ ಹಾಸನ ಜಿಲ್ಲೆಯ ಎಲ್ಲಾ ಆಲೂಗೆಡ್ಡೆಯನ್ನು ಕೊಳ್ಳುವುದಕ್ಕೆ ಆಗದೇ ಇದ್ದರೂ ಕೂಡ ಮಾರುಕಟ್ಟೆಯಲ್ಲಿ ಸರಕಾರ ಅದನ್ನು ಕೊಳ್ಳುವಂತಹ ವ್ಯವಸ್ಥೆ ಮಾಡಿದರೆ ಅನುಕೂಲ.

ಅಧ್ಯಕ್ಷರು: ಕೃಷಿ ಸಚಿವರಿಗೆ ಹೇಳಿ ಕಳಿಸುತ್ತೇನೆ. ಗಮನ ಸೆಳೆಯುವ ಸೂಚನೆ ನೀಡಿದಂತಹ ಸದಸ್ಯರು ನಾವು ಬರುವುದಕ್ಕಾಗುವುದಿಲ್ಲ ತೊಂದರೆ ಇದೆ ಎಂದು ಇನ್ನೊಂದು ದಿವಸ ತೆಗೆದುಕೊಳ್ಳೋಣವೆಂದರು ನಾನು ಆಗಲಿ ಎಂದು ಹೇಳಿದೆ.

ಶ್ರೀ ಬಿ.ಬಿ.ಶಿವಕುಮಾರ್: ಮಾನ್ಯ ಪ್ರಕಾಶ್ ಅವರು ಆಲೂಗೆಡ್ಡೆ ಬೆಲೆ ಬಗ್ಗೆ ಪ್ರಸ್ತಾಪ ಮಾಡಿದರು. ಹಿಂದೆ ನಾನು ಶಾಸಕಾಂಗ ಪಕ್ಷದ ಸಭೆಯಲ್ಲಿ ಸರಕಾರಕ್ಕೆ ಸಲಹೆ ಕೊಟ್ಟಿದ್ದೆ ಸುಮಾರು 50-100 ಕೋಟಿಯನ್ನು ಸರಕಾರ ಸಹಕಾರ ಇಲಾಖೆಯಲ್ಲಿ ಇಟ್ಟು ಈ ಟಮೊಟೋ ಆಲೂಗಡ್ಡೆ ಮತ್ತೊಂದು ಇರಬಹುದು ಅದರಲ್ಲಿ ಬೆಲೆಗಳೇನು

ಏರುಪೇರಾಗುತ್ತವೆ ಅಲ್ಲಿ ಮಾರುಕಟ್ಟೆಯಲ್ಲಿ ಒಂದು ಬೆಲೆಯನ್ನು ಸ್ಥಿರತೆ ಇಡಲಿಕ್ಕೋಸ್ಕರ ಅದಕ್ಕೆ ಈ ಹಣ ಕೊಡುವಂತಹ ವ್ಯವಸ್ಥೆ ಮಾಡಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: ಇವೆಲ್ಲಾ ಬಹಳ ಸೋಬರ್ ಮೆತೆಡ್ಸ್ ಆಯಿತು ಸರಕಾರ ಮಾಡಬೇಕಾಗಿರುವ ಕೆಲಸ ಮಾಡಿದರೆ ರೇಟ್ ತನ್ನಷ್ಟಕ್ಕೆ ತಾನೇ ಇಳಿಯುತ್ತದೆ. ವ್ಯಾಪಾರಸ್ಥರಿಗೆ ಒಂದೇ ಸಲ ಬೆಳೆ ಬಂದಿದೆ ಎಂದು ತಿಳಿದಿರುತ್ತದೆ ಬೆಳೆ ಬಂದಿದೆ ಸ್ಟಾಕ್ ಇಟ್ಟುಕೊಳ್ಳಲಾಗುವುದಿಲ್ಲವೆಂದು ಅವರಿಗೆ ಗೊತ್ತು. ಅವರು ಕಡಿಮೆ ಜನತಾನೆ ಮಾತನಾಡಿಕೊಂಡು ಇದಕ್ಕಿಂತ ಜಾಸ್ತಿ ಕೊಡುವುದು ಬೇಡ ಕಂಗಾಲಾಗಿ ನಮಗೇ ತಂದು ಕೊಡುತ್ತಾರೆಂದು ಲೆಕ್ಕ ಹಾಕಿರುತ್ತಾರೆ. ಮಾನ್ಯ ಅಶ್ವತ್ ನಾರಾಯಣ ರೆಡ್ಡಿಯವರು ಎ.ಪಿ.ಎಂ.ಸಿ. ಅಧ್ಯಕ್ಷರಾಗಿ ಕೆಲಸ ಮಾಡಿದ್ದರು ಅವರನ್ನು ಕೇಳಿ. ವ್ಯಾಪಾರಸ್ಥರ ಕೆಲಸವೇ ಅದು. ಸರಕಾರ ಅದಕ್ಕೆ ಬೇರೆ ರೀತಿಯಲ್ಲಿ ಅಧಿಕಾರವನ್ನು ಚಲಾಯಿಸಬೇಕು. ಬೇರೆ ವಿಧಾನಗಳು ಇರುತ್ತವೆ ಅವುಗಳನ್ನು ಅವರಿಗೆ ಪರಿಚಯ ಮಾಡಿಸಿದರೆ ತಕ್ಷಣ ತನ್ನಷ್ಟಕ್ಕೆ ತಾನೇ ರೇಟುಗಳು ಮೇಲಕ್ಕೇರುತ್ತವೆ. ಸರಕಾರದ ಕೈಯ್ಯಲ್ಲಿ ಆ ಕೆಲಸ ಮಾಡಿಸಿ. ಅವರೇ ಬೆಲೆ ಜಾಸ್ತಿ ಮಾಡುತ್ತೇವೆಂದು ನಿಮ್ಮ ಹತ್ತಿರಕ್ಕೆ ಓಡಿ ಬರಬೇಕು.

ಶ್ರೀ ಬಿ.ಬಿ.ಶಿವಕುಮಾರ್: ಸರಕಾರವೇ ಕನಿಷ್ಠ ಬೆಲೆ ಇಷ್ಟು ಎಂದು ಕೊಂಡುಕೊಳ್ಳುವ ವ್ಯವಸ್ಥೆ ಮಾಡಿದಾಗ ಮಾರುಕಟ್ಟೆಯಲ್ಲಿ ಬೆಲೆಗಳು ಏರುತ್ತವೆ.

MR. SPEAKER: They have to handle them. The merchants think it is a joke. They can explit ಎಂದು ತಿಳಿದಿದ್ದಾರೆ. ಅವರು ಹೇಳುವ ಪ್ರಕಾರ 50 ಕೆ.ಜಿ ಮೂಟೆಗೆ 30 ರೂಪಾಯಿ ಎಂದು ಹೇಳಿದರೆ ಇನ್ನು ಇದಕ್ಕಿಂತ ಲೋಯೆಸ್ಟ್ ಪ್ರೊಫೆಷನ್ ಇನ್ನು ಯಾವುದೂ ಇರುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಇಂಧನ ಸಚಿವರು ಈಗ ಒಂದು ಸ್ಟೇಟ್‌ಮೆಂಟನ್ನು ಮಾಡಲಿ. We have to give them time for discussion.

(7) ಮಂತ್ರಿಗಳ ಹೇಳಿಕೆ

ವಿದ್ಯುತ್ ದರದ ಪಟ್ಟಿಗೆ ಸಂಬಂಧಿಸಿದಂತೆ ಕುರಿತು

ಶ್ರೀ ಶರಣಬಸಪ್ಪ ದರ್ಶನಾಪುರ (ಮಾನ್ಯ ಇಂಧನ ಸಚಿವರು): ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ದಿನಾಂಕ 1-7-97ರಿಂದ ಜಾರಿಗೆ ಬರುವಂತೆ ವಿದ್ಯುತ್ ದರವನ್ನು ಪರಿಷ್ಕರಿಸಿತ್ತು. ಈ ಏರಿಕೆಯಿಂದ ಕೆಲವು ರಿಯಾಯಿತಿಗಳನ್ನು ಗ್ರಾಹಕರಿಗೆ ಅದರಲ್ಲೂ ದುರ್ಬಲ ವರ್ಗಕ್ಕೆ ಹಾಗೂ ಗೃಹ ಬಳಕೆದಾರರಿಗೆ ನೀಡಿ ಅನುಕೂಲ ಮಾಡಿ ಕೊಡುವಂತೆ ಅನೇಕ ಗೌರವಾನ್ವಿತ ಸದಸ್ಯರುಗಳು ಸದನದಲ್ಲಿ ಪ್ರಸ್ತಾಪಿಸಿದ್ದಾರೆ. ಅದರಂತೆಯೇ ಅನೇಕ ಕೈಗಾರಿಕಾ, ಸಂಘ ಸಂಸ್ಥೆಗಳೂ ಸಹ ಈ

ವಿದ್ಯುತ್ ದರಗಳ ಏರಿಕೆಯಲ್ಲಿ ಕೆಲ ರಿಯಾಯ್ತಿಗಳನ್ನು ನೀಡುವಂತೆ ನನ್ನನ್ನು ಕೋರಿರುತ್ತಾರೆ.

ನಾನು ವಿದ್ಯುತ್ ದರಗಳ ರಚನೆ ಹಾಗೂ ನೀಡಬಹುದಾದ ರಿಯಾಯ್ತಿಗಳ ಬಗ್ಗೆ ಪರಿಶೀಲಿಸಲು ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೆ.

ಸಮಿತಿಯ ವರದಿಯನ್ನು ಪರಿಶೀಲಿಸಿ ಈ ಕೆಳಕಂಡ ರಿಯಾಯ್ತಿಗಳನ್ನು ಘೋಷಿಸಲು ಹರ್ಷಿಸುತ್ತೇನೆ. ಮತ್ತು ಇದರಿಂದಾಗಿ ರಾಜ್ಯದಲ್ಲಿನ ಬಹಳಷ್ಟು ಗ್ರಾಹಕರಿಗೆ ಅನುಕೂಲವಾಗುವುದು ಖಂಡಿತ ಎಂದು ನನಗನಿಸುತ್ತದೆ.

1. ಭಾಗ್ಯಜ್ಯೋತಿ ಸ್ಥಾವರಗಳಿಗೆ ರೂ.2.50 ಯಿಂದ 3.50ಕ್ಕೆ ಪರಿಷ್ಕರಿಸಿದ್ದ ದರವನ್ನು ಪುನಃ ಈ ಹಿಂದೆ ಇದ್ದಂತೆ ಅಂದರೆ ರೂ.2.50ಕ್ಕೆ ಇಳಿಸಲಾಗಿದೆ. ಈ ಕ್ರಮದಿಂದ 12.3 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಅನುಕೂಲವಾಗಲಿದೆ.

2. ಪ್ರತಿ ಎರಡು ತಿಂಗಳಿಗೆ 200ಕ್ಕೂ ಹೆಚ್ಚು ಯುನಿಟ್‌ಗಳನ್ನು ಬಳಸುವ ಸ್ಥಾವರಗಳನ್ನು ಸರ್ವವಿದ್ಯುತ್ ಗೃಹಗಳೆಂದು ಪರಿಗಣಿಸಲು ಈ ಹಿಂದೆ ಪ್ರಸ್ತಾಪಿಸಲಾಗಿತ್ತು. ಈಗ ಸದರಿ ಸಮಿತಿಯನ್ನು 200 ರಿಂದ 300 ಯೂನಿಟ್‌ಗಳಿಗೆ (ಪ್ರತಿ 2 ತಿಂಗಳಿಗೆ) ಹೆಚ್ಚಿಸಿರುವುದನ್ನು ತಿಳಿಸಲು ಹರ್ಷಿಸುತ್ತೇನೆ. ಇದರಿಂದಾಗಿ ಸುಮಾರು 43.2 ಲಕ್ಷ ಕುಟುಂಬಗಳು ಅನುಕೂಲ ಪಡೆಯುತ್ತವೆ. ಎರಡು ತಿಂಗಳಲ್ಲಿ 300 ಕ್ಕೂ ಹೆಚ್ಚು ಯೂನಿಟ್‌ಗಳನ್ನು ಬಳಸುವ ಸ್ಥಾವರಗಳು ಮಾತ್ರ ಸರ್ವ ವಿದ್ಯುತ್ ಗೃಹಗಳಾಗಿ ಪರಿಗಣಿತವಾಗಿ, ಅದರ ಪ್ರಕಾರ ಅವರಿಗೆ ಬಿಲ್ ಮಾಡಲಾಗುತ್ತದೆ.

3. ಸರ್ವವಿದ್ಯುತ್ ಗೃಹಗಳಲ್ಲಿ ಒಂದನೇ ಮತ್ತು 2ನೇ ಹಂತದ ಜಕಾತಿಯನ್ನು ಕಡಿಮೆ ಮಾಡಲಾಗಿದೆ. ಅಂದರೆ 200 ಯೂನಿಟ್‌ವರೆವಿಗೂ ಪ್ರತಿ ಯೂನಿಟ್‌ನ ದರವನ್ನು ರೂ.1.55 ರಿಂದ 1.45ಕ್ಕೆ ಇಳಿಸಲಾಗಿದೆ. ಮತ್ತು 201ರಿಂದ 300 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ನ ದರವನ್ನು ರೂ. 2.15ರಿಂದ ರೂ. 2.10ಕ್ಕೆ ಇಳಿಸಲಾಗಿದೆ. ಇದರಿಂದ 11 ಲಕ್ಷಕ್ಕೂ ಹೆಚ್ಚು ಇರುವ ಸರ್ವ ವಿದ್ಯುತ್ ಗೃಹ ಸ್ಥಾವರಗಳ ಬಳಕೆದಾರರಿಗೆ ಸಾಕಷ್ಟು ರಿಯಾಯ್ತಿ ದೊರಕುತ್ತದೆ.

4. ಅನೇಕ ಕೈಗಾರಿಕಾ ಸಂಸ್ಥೆಗಳ ಕೋರಿಕೆಯನ್ನು ಪರಿಗಣಿಸಿ ಈ ಕೆಳಕಂಡ ರಿಯಾಯ್ತಿಗಳನ್ನು ನೀಡ ಬಯಸುತ್ತೇನೆ.

ಅ) 67 ಅ.ಶ.ಯಿಂದ 99 ಅಶ್ವ ಶಕ್ತಿವರೆಗಿನ ಕೈಗಾರಿಕೆಗಳಿಗೆ ಸಂಬಂಧಿಸಿದ ದರಪಟ್ಟಿಯು ಒಂದು ಪ್ರತ್ಯೇಕವಾದ ದರಪಟ್ಟಿಯಾಗಿ ಉಳಿಯಲಿದೆ.

ಆ) ಆದರೆ, ಸಣ್ಣ ಕೈಗಾರಿಕಾ ಸಂಸ್ಥೆಗಳ ಸಂಘದವರ ಕೋರಿಕೆಯಂತೆ ನಿಗದಿತ ಶುಲ್ಕವನ್ನು (ಫಿಕ್ಸೆಡ್ ಚಾರ್ಜ್) ಪ್ರತಿ ಅಶ್ವ ಶಕ್ತಿಗೆ ರೂ.57ರಿಂದ ರೂ.40ಕ್ಕೆ ಇಳಿಸಲಾಗಿದೆ.

ಇ) ವಿದ್ಯುತ್ ಶುಲ್ಕವು ಈಗಾಗಲೇ ಹೊರಡಿಸಿರುವ ಅಧಿಸೂಚನೆಯಂತೆ ಪ್ರತಿ ಯೂನಿಟ್‌ಗೆ ರೂ.2.25ರಂತೆ ಮುಂದುವರಿಯುವುದು. ಈ ದರವು ಅಕ್ಕಪಕ್ಕದ ರಾಜ್ಯಗಳಾದ ಆಂಧ್ರ ಪ್ರದೇಶ, ತಮಿಳುನಾಡು, ಮಹಾರಾಷ್ಟ್ರಗಳಲ್ಲಿ ವಿದ್ಯುತ್ ದರಕ್ಕಿಂತ ಗಣನೀಯವಾಗಿ ಕಡಿಮೆಯಿದೆಯೆಂಬುದನ್ನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಈ) ಪ್ರಸ್ತುತ 67 ಅಶ್ವ ಶಕ್ತಿ ಮತ್ತು ಅದಕ್ಕಿಂತ ಹೆಚ್ಚಿನ ಅಶ್ವ ಶಕ್ತಿಯ ಸಂಪರ್ಕಿತ ಲೋಡ್ ಇರುವ ಎಲ್ಲಾ ಎಲ್.ಟಿ.ಕೈಗಾರಿಕಾ ಸ್ಥಾವರಗಳೂ ಮುಂದಿನ 3 ವರ್ಷಗಳೊಳಗಾಗಿ ಹೆಚ್.ಟಿ.ಕೈಗಾರಿಕಾ ಸ್ಥಾವರಗಳಾಗಿ ಪರಿವರ್ತನೆಗೊಳ್ಳುವುದನ್ನು ಕಡ್ಡಾಯ ಮಾಡಲಾಗಿದೆ.

ಉ) ಎಲ್.ಟಿ ಯಿಂದ ಹೆಚ್.ಟಿಗೆ ಸುಗಮವಾಗಿ ಬದಲಾವಣೆ ಮಾಡಿಕೊಳ್ಳಲು ಅನುಕೂಲವಾಗುವಂತೆ, ಇಂತಹ ಸ್ಥಾವರಗಳಿಗೆ ಈ ಕೆಳಕಂಡ ಕೆಲ ಪ್ರೋತ್ಸಾಹಕರ ಸವಲತ್ತುಗಳನ್ನು ಒದಗಿಸಲಾಗುವುದು.

1) ಕೈಗಾರಿಕೋದ್ಯಮಿಗಳು: ಗ್ರಾಹಕರಿಂದ ಮಂಡಳಿಯು ವಸೂಲಿ ಮಾಡುವ ಶೇ.20 ಉಸ್ತುವಾರಿ (ಮೇಲ್ವಿಚಾರಣಾ) ಶುಲ್ಕವನ್ನು ಮನ್ನಾ ಮಾಡಲಾಗುವುದು.

2) ಎಲ್.ಟಿ.ಯಿಂದ ಹೆಚ್.ಟಿಗೆ ಮಾರ್ಪಾಟು ಮಾಡಿದ ದಿನಾಂಕದಿಂದ 3 ವರ್ಷಗಳವರೆಗೆ ಅಂತಹ ಸ್ಥಾವರಗಳ ಮಾಸಿಕ ಬಿಲ್‌ಗಳಲ್ಲಿ ಪ್ರೋತ್ಸಾಹಕರ ಸವಲತ್ತನ್ನು (ಇನ್ಸೆಂಟಿವ್‌ವನ್ನು) ನೀಡಲಾಗುವುದು. ಮೊದಲ ವರ್ಷದಲ್ಲಿ, ಆ ವರ್ಷದಲ್ಲಿ ಚಾಲ್ತಿಯಲ್ಲಿರುವ ಹೆಚ್.ಟಿ.ವಿದ್ಯುತ್‌ದರಗಳ ಅನುಸಾರ ಲೆಕ್ಕಾಚಾರ ಮಾಡಿರುವ ಮಾಸಿಕ ಬಿಲ್‌ಗಳಲ್ಲಿ ಶೇ.30ರಷ್ಟು ರಿಯಾಯ್ತಿ ನೀಡಲಾಗುತ್ತದೆ. ಎರಡನೇ ವರ್ಷದಲ್ಲಿ ಈ ರಿಯಾಯ್ತಿಯು ಶೇ. 20ರಷ್ಟು ಹಾಗೂ 3ನೇ ವರ್ಷದಲ್ಲಿ ಶೇ.10ರಷ್ಟು ಆಗಿರುತ್ತದೆ. ನಾಲ್ಕನೇ ವರ್ಷದಿಂದ ಇಂತಹ ಸ್ಥಾವರವು ಮಾಮೂಲಿ ಹೆಚ್.ಟಿ ಸ್ಥಾವರವೆಂದು ಪರಿಗಣಿಸಲ್ಪಡುತ್ತದೆ. ವಿದ್ಯುತ್ ತೆರಿಗೆ ಹಾಗೂ ಎಫ್.ಇ.ಸಿ. ಶುಲ್ಕದಲ್ಲಿ ಯಾವ ರಿಯಾಯ್ತಿಯನ್ನು ನೀಡಲಾಗುವುದಿಲ್ಲ.

3) ಎಲ್.ಟಿ.ಯಿಂದ ಹೆಚ್.ಟಿ.ಗೆ ಮಾರ್ಪಾಡು ಮಾಡುವಾಗ ಕೈಗಾರಿಕೋದ್ಯಮಿಗಳಿಗೆ ಪ್ರಾರಂಭಿಕ ಬಂಡವಾಳದಲ್ಲಿ ಹೊರೆಯಾಗುವುದನ್ನು ತಪ್ಪಿಸಲು, ಟ್ರಾನ್ಸ್‌ಫಾರ್ಮರ್ ಹಾಗೂ 500 ಮೀಟರ್‌ಗಳ ವರೆಗಿನ ವಿದ್ಯುತ್ ಮಾರ್ಗದ ಖರ್ಚನ್ನು ಮಾತ್ರ ಗ್ರಾಹಕರು ಭರಿಸತಕ್ಕದ್ದು. 500 ಮೀಟರ್‌ಗಳ ನಂತರ ವಿದ್ಯುತ್ ಮಾರ್ಗಕ್ಕೆ

ಖರ್ಚು ಮಾಡಿದ ವೆಚ್ಚವನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಗ್ರಾಹಕರಿಗೆ ಸೂಕ್ತ ರೀತಿಯಲ್ಲಿ ಹಿಂಪಾವತಿ ಮಾಡುತ್ತದೆ.

4) ಹೆಚ್ಚುವರಿ ಭದ್ರತಾ ಠೇವಣಿ ಅಥವಾ 3 ತಿಂಗಳ ಮಾಸಿಕ ಕನಿಷ್ಠ ಠೇವಣಿ (3 ಎಂ.ಎಂ.ಡಿ) ಯನ್ನು 24 ಮಾಸಿಕ ಕಂತುಗಳಲ್ಲಿ ವಸೂಲಿ ಮಾಡಲಾಗುವುದು.

ಮೇಲೆ ನೀಡಲಾದ ರಿಯಾಯ್ತಿಗಳನ್ನು ಎಲ್ಲರೂ ಸ್ವಾಗತಿಸುವರೆಂಬ ಆಶಯ ನನಗಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಪಂಪ್‌ಸೆಟ್ಟಿಗೆ ಇದರಲ್ಲಿ ಯಾವುದೇ ರಿಯಾಯಿತಿಯನ್ನು ತೋರಿಲ್ಲ. ನಾವು ಸರ್ಕಾರದ ಮೇಲೆ ಒತ್ತಾಯ ತಂದು ಇಷ್ಟೆಲ್ಲಾ ಹೋರಾಟ ಮಾಡಿದಾಗ ಐಪಿ ಸೆಟ್‌ಗಳಿಗೂ ಕೂಡ ಕಡಿಮೆ ಮಾಡಬೇಕು ನಿಗದಿ ಮಾಡಿರುವ ಬಗ್ಗೆ ಎಂದು ಹೇಳಿದಿರಿ. ಅದರ ಬಗ್ಗೆ ಏನೂ ಚಕಾರವನ್ನೇ ಎತ್ತಿಲ್ಲ ಈ ಸ್ಟೇಟ್‌ಮೆಂಟ್‌ನಿಂದ ಕಡಿಮೆ ಮಾಡುವುದಿಲ್ಲ ಎಂದು ಅರ್ಥವಾಗುತ್ತದೆ. ಅದರ ಬಗ್ಗೆ ಸರ್ಕಾರದ ನಿಲುವು ಏನು ಎಂದು ತಿಳಿಸಬೇಕೆಂದು ಹೇಳುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಅವರು ಏರಿಸಿದಂಥ ವಿದ್ಯುತ್ ಸಮರ್ಪಕ ಇಲ್ಲ. ಇದು ಲಕ್ಷಾಂತರ ಕುಟುಂಬಗಳಿಗೆ, ಈಗ ಅವರು ಹೇಳಿದ ಹಾಗೆ ಸುಮಾರು 12 ಲಕ್ಷ ಭಾಗ್ಯಜ್ಯೋತಿ ಕುಟುಂಬಗಳಿಗೆ ಅನುಕೂಲವಾಗುತ್ತದೆಂದು ಹೇಳಿದ್ದಾರೆ ಮತ್ತು ಪ್ರತಿ ಎರಡು ತಿಂಗಳಿಗೆ 200 ರಿಂದ 300 ಯೂನಿಟ್‌ಗಳಿಗೆ ಪ್ರತಿ ಎರಡು ತಿಂಗಳಿಗೆ ಹೆಚ್ಚಿಸುತ್ತೇವೆ ಎನ್ನುವುದನ್ನು ತಿಳಿಸಲು ಹರ್ಷಿಸುತ್ತೇನೆ ಎಂದು ಹೇಳಿದ್ದಾರೆ ಅಂದರೆ ನೂರು ಯೂನಿಟ್ ಜಾಸ್ತಿ ಮಾಡಿ ಅದನ್ನು ಸುಮಾರು 43 ಲಕ್ಷ ಕುಟುಂಬಗಳಿಗೆ ಅನುಕೂಲವಾಗುತ್ತದೆಂದು ಹೇಳಿದ್ದಾರೆ. ಅಂದರೆ ಸುಮಾರು 55 ಲಕ್ಷ ಕುಟುಂಬಗಳಿಗೆ ಹಿಂದೆ ತೊಂದರೆಯಾಗುತ್ತಿತ್ತು ಎಂದು ತಾವೇ ಇದರಿಂದ ಒಪ್ಪಿಕೊಂಡಂತೆ ಆಯಿತು. ಅದರ ಜೊತೆಯಲ್ಲಿ ಪಂಪ್‌ಸೆಟ್ ಇರುವವರು ಸುಮಾರು ಹತ್ತು ಲಕ್ಷ ಚಿಲ್ಲರೆ ಇರಬಹುದು. ಇಷ್ಟೊಂದು ಜನ ಇದ್ದಾರೆ. ಅವರಿಗಂತೂ ಇದರಲ್ಲಿ ಏನೇನು ರೈತರಿಗೆ ರಿಯಾಯಿತಿ ಇಲ್ಲ ಉಳಿದ ಸಣ್ಣಪುಟ್ಟದ್ದು, ಭಾಗ್ಯಜ್ಯೋತಿಯಂತೂ ಫ್ರೀ ಕೊಟ್ಟರೂ ಕೂಡ ಇದರಲ್ಲೇನೂ ದೊಡ್ಡ ಲುಕ್ಸಾನು ಇರಲಿಲ್ಲ. ರೆವಿನ್ಯೂ ಇಲ್ಲ. ಆದರೂ ನೀವು 2.50 ರೂಪಾಯಿಗಳಿಗೆ ಸ್ಟಿಕ್ ಆನ್ ಇದ್ದೀರಿ ಲಾಸ್ಟ್‌ಟೈಮ್ ಅದಕ್ಕೆ ಏನು ಮಾಡಿದ್ದಿರಿ, ಎರಡನೆಯದು ಏನೆಂದರೆ ಮೊನ್ನೆ ಇಲ್ಲಿ ಮಾತುಕತೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳೇ ಹೇಳಿದರು, ಒಂದು ಬಲ್ಬನ್ನು ತೆಗೆದುಕೊಳ್ಳುತ್ತಾರೆ, ಅವರು ಎರಡು-ಮೂರು ಹಚ್ಚಿಕೊಳ್ಳುತ್ತಾರೆ, ಅದಕ್ಕಾಗಿ ನಾವು ಇದನ್ನು ಮಾಡಿದ್ದು ಎಂದು ಸಮರ್ಥನೆಯನ್ನೂ ಮಾಡಿಕೊಂಡರು. ಅದಕ್ಕೆ ನಾವೆಲ್ಲರೂ ಕೂಡ ಇಲ್ಲಿ ಧರಣಿ ಮಾಡಿದ್ದೇವೆ, ಹಠ ಹಿಡಿದಿದ್ದೇವೆ, ತಾವು ಕೂಡ ನಮಗೆಲ್ಲಾ ಊಟ ತಿಂಡಿ ತರಿಸಿಕೊಟ್ಟಿರಿ, ಇದು ನಡೆಯಲಿ ಎಂದು ಹೇಳಿ ಪ್ರೋತ್ಸಾಹ ನೀಡಿದಿರಿ.

MR. SPEAKER: You are making me an abettor:

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ಬೇಕಾದಂಥ ವಿಷಯ. ಏಕೆಂದರೆ ಸಾರ್ವಜನಿಕರಿಗೆ ಅನುಕೂಲವಾಗುವಂಥ ವಿಷಯವಿದ್ದರೆ ತಾವು ಸ್ವಲ್ಪ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಿ ಅಷ್ಟೆ. ಆ ದೃಷ್ಟಿಯಿಂದ ನಾನು ಹೇಳಿದ್ದು. ಅದಕ್ಕಾಗಿ ನಾನು ಹೇಳುವುದಿಷ್ಟೆ, ನಾವು ಇಷ್ಟೊಂದು ಹಟ ಹಿಡಿದು ಹೋರಾಟ ಮಾಡಿ ಒಗ್ಗಟ್ಟಾಗಿ ಪ್ರದರ್ಶನ ಮಾಡಿದರೂ ಕೂಡ ಸರ್ಕಾರ ಆಗಲೂ ಸಹ ಇದನ್ನು ಒಪ್ಪಿಲ್ಲ. ಏಕೆಂದರೆ ಇದು ಪ್ರತಿಷ್ಠೆ ಪ್ರಶ್ನೆ ಎಂದು ಹೇಳಿ ಒಪ್ಪಿಲ್ಲ. ನಾವು ಹೇಳಿದೆವು, ಕೆಲವು ಸವಲತ್ತುಗಳನ್ನು ಕೊಡಿ, ಸುಮ್ಮನೆ ಅಳುವವರ ಕಣ್ಣೀರು ಒರೆಸಿದಂತೆ ಆಗುತ್ತಿದೆ, ಅಷ್ಟೇ ಹೊರತಾಗಿ ಅವರಿಗೆ ಅವರ ಕಷ್ಟ ನಿವಾರಣೆ ಮಾಡಬೇಕು ಎಂಬುದೇನೂ ಇಲ್ಲ. ಸುಮ್ಮನೆ ಏನೋ ಒಂದು ಕನ್ಸೆಶನ್ ಕೊಡಬೇಕು, ನೀವು ಕೇಳಿದಾಗಲೇ ಏತಕ್ಕೆ ಕೊಡಬೇಕು? ನಮಗೆ ಕೊಡಬೇಕು ಅನಿಸಿದಾಗ ಕೊಡೋಣ ಎಂದು ನೀವು ಅದರ ಆಧಾರದ ಮೇಲೆ ಒಪ್ಪಿಕೊಂಡಿರಿ. ಎಲ್ಲ ಶಾಸಕರೂ ಹೇಳಿದರು, ಬೇರೆಯವರೂ ಕೂಡ ರೆಪ್ರೆಸೆಂಟೇಷನ್ ಮಾಡಿದರು. ಅದಕ್ಕಾಗಿ ಇವೊತ್ತಿನ ದಿವಸ ಸರ್ಕಾರದವರು ಈ ಹೇಳಿಕೆಯನ್ನು ಕೊಡುತ್ತಿದ್ದಾರೆ ಎಂದು ನಾನು ಹೇಳುತ್ತಿದ್ದೇನೆ. ಇದರಿಂದ ಯಾವ ಪ್ರಯೋಜನವೂ ಕೂಡ ರೈತರಿಗೆ ಮತ್ತು ಆಲ್ ಎಲೆಕ್ಟ್ರಿಕ್ ಹೋಂಗಳಿಗೆ ಆಗಿಲ್ಲ. ಎಕ್ಸೆಪ್ಟ್ ದರ 100 ಯೂನಿಟ್ ಇರುವವರನ್ನು ಬಿಟ್ಟರೆ ಅಂದರೆ ಹೆಚ್ಚೂಕಡಿಮೆ ತಿಂಗಳಿಗೆ 50 ಯೂನಿಟ್ ಉಪಯೋಗಿಸುವವರನ್ನು ಬಿಟ್ಟರೆ ಬೇರೆ ಯಾವ ಪ್ರೊಪೊಸಿಷನ್ ಕೂಡ ಇಲ್ಲ. ಆದರೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕೂಡ ಇವತ್ತು ತಾವು ಗಗನಕ್ಕೇರುವ ರೀತಿಯಲ್ಲಿ ಏನು ದರವನ್ನು ಏರಿಸಿದ್ದೀರಿ ಅದರಲ್ಲಿಯೂ ಕೂಡ ತಾವು ಅವುಗಳಿಗೆ ಯಾವ ಕನ್ಸೇಷನ್ ತೋರಿಸಿಲ್ಲ. ಇದಲ್ಲದೆ ಹೆವಿ ಇಂಡಸ್ಟ್ರೀಸ್ ಹಾಕುವುದನ್ನು ಬಿಡಿ, ಈ ದರವನ್ನು ನೋಡಿಕೊಂಡರೆ ಯಾವ ಇಂಡಸ್ಟ್ರೀಸ್‌ನವರೂ ಬರುವುದಿಲ್ಲ ಮತ್ತು ನಿಮ್ಮನ್ನು ಅಪ್ರಿಷಿಯೇಟ್ ಮಾಡುತ್ತಿಲ್ಲ. ಏಕೆಂದರೆ ನೀವು ಯಾವುದೇ ಒಂದು ಸ್ಕೀಮನ್ನು ಜಾರಿಗೆ ತರಬೇಕಾದರೂ ನಿಧಾನವಾಗಿ, ಹಂತಹಂತವಾಗಿ ತಂದರೆ ಅದಕ್ಕೆ ಪ್ರತಿಭಟನೆಯೂ ಕಡಿಮೆ ಇರುತ್ತದೆ ಹಾಗೂ ರಿಯಲೈಜೇಷನ್ ಬರುತ್ತದೆ. ನಾವು ಸುಧಾರಣೆ ಮಾಡಿಕೊಳ್ಳುವುದಕ್ಕೂ ಅನುಕೂಲವಾಗುತ್ತದೆ. ಅದನ್ನೆಲ್ಲಾ ಬಿಟ್ಟು ಇವೊತ್ತು ರೈತರಿಗೆ ಅದರಲ್ಲೂ ವಿಶೇಷವಾಗಿ ಯಾವ ರೈತ ಈ ದೇಶಕ್ಕೆ ಅನ್ನ ಕೊಡುತ್ತಾನೆ ಅವನ ಬಗ್ಗೆ ನೀವು ಚಿಂತನೆಯನ್ನೇ ಮಾಡಿಲ್ಲ. ನೀವು ಪದೇಪದೇ ಹೇಳುತ್ತೀರಿ ನಾವು ರೈತರ ಮಕ್ಕಳು, ರೈತರ ಮಕ್ಕಳು ಎಂದು. ಆದರೆ ತಾವು ಏರಿಸಿದ ಬೆಲೆಯಲ್ಲಿ ಒಂದು ಪೈಸೆಯನ್ನೂ ಕೂಡ ಇಳಿಸಿಲ್ಲ. ಇದರ ಅರ್ಥ ಏನು ಎಂದರೆ ಅವರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ. ನಾವು ಹಾಗೆಂದ ಕೂಡಲೆ 'ನಾವೇನು ಮಾರವಾಡಿಯ ಮಕ್ಕಳೆ' ಎಂದು ಕೇಳುತ್ತಾರೆ. ಅದಕ್ಕಾಗಿ ನಾನು ಹೇಳುವುದು ಇವರು ಮಾರವಾಡಿಯ ಮಕ್ಕಳಲ್ಲ, ಮಾರವಾಡಿಯ ಹತ್ತಿರ ಗಿರವಿ ಇದ್ದಾರೆ ಎಂದು. Mortgaged to rich people. ಅವರಿಗೆ ಮಾತ್ರ ಏನು

ಬೇಕು ಅದನ್ನೆಲ್ಲಾ ಮಾಡುವುದಕ್ಕೆ ತಯಾರಿದ್ದಾರೆ. ಎಕ್ಸೈಜ್ ಗೂಡ್ಸ್, ಜುಮ್ಸ್ ಗ್ರಾನೈಟ್‌ನಲ್ಲಿ ರೂಲ್ಸ್ ಏನಿದೆ ಅದನ್ನು ರಿಲ್ಯಾಕ್ಸ್ ಮಾಡುವುದು ಮತ್ತು ನಮ್ಮ ಎ.ಟಿ.ರಾಮಸ್ವಾಮಿಯವರು ಹೇಳುವಂತೆ ಸಿ.ಓ.ಡಿ. ರಿಪೋರ್ಟ್ ಇದ್ದರೂ ನಡೆದುಕೊಂಡು ಹೋಗುತ್ತದೆ. ಇಂಥದ್ದಕ್ಕೆಲ್ಲಾ ಆಸ್ಪದವಿದೆ. ಆದರೆ ರೈತರಿಗೇನಾದರೂ ಕನ್ಸೇಶನ್ ಕೊಡುವಂಥದ್ದನ್ನು ಕೇಳಿದರೆ ಅವರ ಬಾಯಿಯಲ್ಲಿ ರೈತರಿಗೆ ಕನ್ಸೇಶನ್ ಕೊಡುವಂಥ ಒಂದು ಮಾತು ಬರುವುದಿಲ್ಲ. ಆದುದರಿಂದ ಆಶ್ಚರ್ಯಕರವಾಗಿ ಇವೊತ್ತು ಏನೋ ಒಂದು ಹೇಳಿಕೆಯನ್ನು ಕೊನೆಯಲ್ಲಿ ತಂದಿದ್ದಾರೆ; ಇದರಲ್ಲಿ ಯಾವ ಅರ್ಥವೂ ಕೂಡ ಇಲ್ಲ. ನಾನು ಪುನಃ ತಮ್ಮ ಮುಖಾಂತರ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಬೇಕಾದರೆ ಇನ್ನೂ ಒಂದು ಸಲ ತಮ್ಮ ಮುಖಾಂತರ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಬೇಕಾದರೆ ಇನ್ನೂ ಒಂದು ಸಲ ಜಂಟಿ ಸದನ ಸಮಿತಿಯನ್ನು ಮಾಡಿ ಇದರ ಬಗ್ಗೆ ಯಾವ ರೀತಿಯಾಗಿ ರೈತರಿಗೆ ನಾವು ಕನ್ಸೇಶನ್ ಕೊಡಬೇಕು ಮತ್ತು ಮೂಲತಃ ಅದು ಎಇಹೆಚ್ ಇರಬಹುದು ಅಥವಾ ಸಣ್ಣಪುಟ್ಟ ಉದ್ದಿಮೆದಾರರಿರಬಹುದು ಬೇರೆಯವರಿಗೂ ಕೂಡ ನೀವು ಎಷ್ಟರಮಟ್ಟಿಗೆ ಸಹಾಯ ಮಾಡಬಹುದು ಎಂಬುದರ ಬಗ್ಗೆ ನೀವು ಆಲೋಚನೆ ಮಾಡಬಹುದು. ದಯಮಾಡಿ ಆ ಸದನ ಸಮಿತಿ ರಚಿಸಲು ಒಪ್ಪಿಕೊಳ್ಳಿ ಮತ್ತು ತಾವು ಈಗ ಏನು ಕನ್ಸೇಶನ್ ಕೊಟ್ಟಿದ್ದೀರಿ ಇದರಲ್ಲಿ ಯಾವ ಪುರುಷಾರ್ಥವೂ ಇಲ್ಲ; ಅಂಥ ದೊಡ್ಡ ಸಹಾಯವನ್ನೇನೂ ಮಾಡಿಲ್ಲ. ಆದುದರಿಂದ, ದಯಮಾಡಿ ಇದನ್ನು ವಾಪಸ್ ತೆಗೆದುಕೊಂಡು ತಕ್ಷಣ ಹಳೆಯ ಆರ್ಡರನ್ನೇ ಸ್ಟೇ ಮಾಡಿ ಒಂದು ಸಣ್ಣ ಕಮಿಟಿ ಮಾಡಿ. ಅದರಲ್ಲಿ ಬೇಕಾದರೆ ನಿಮಗೆ ಬೇಕಾದವರನ್ನೇ ಹಾಕಿಕೊಳ್ಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಕೋಲಾರ): ಯಾರು ಬೇಕೋ ಅವರನ್ನೇ ಎಂದರೆ ಏನರ್ಥ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾರು ಬೇಕೋ ಅವರನ್ನು ಎಂದರೆ ಈ ಸದಸ್ಯೆಯನ್ನು ಅರಿತುಕೊಂಡಿರುವಂಥವರಲ್ಲಿ ತಮಗೆ ಯಾರು ಬೇಕೋ ಅವರನ್ನು ಹಾಕಿಕೊಳ್ಳಿ ಎಂದು ನಾನು ಹೇಳುವುದು. ಹಿಂದೆಯೂ ಕೂಡ ಇದರ ಬಗ್ಗೆ ಚರ್ಚೆ ಮಾಡಿದಂಥ ಸದಸ್ಯರಿದ್ದಾರೆ, ಸಮಸ್ಯೆಯನ್ನು ಅರ್ಥ ಮಾಡಿಕೊಂಡಂಥವರಿದ್ದಾರೆ. ಅವರನ್ನು ಆಯ್ಕೆ ಮಾಡಿಕೊಂಡು ನೀವು ಬೇಕಾದರೆ ಒಂದು ಸದನ ಸಮಿತಿ ರಚಿಸಿ ಆದಷ್ಟು ಬೇಗನೇ ಹೊಸ ರೇಟನ್ನು ಫಿಕ್ಸ್ ಮಾಡಿ. ಅದರಿಂದ ರೈತರಿಗೂ ಅನುಕೂಲವಾಗುತ್ತದೆ, ನಿಮ್ಮ ಸಮಸ್ಯೆಯೂ ಬಗೆಹರಿಯುತ್ತದೆ; ಮತ್ತು ಲಾಸ್‌ನಲ್ಲಿರುವ ನಮ್ಮ ಕೆ.ಇ.ಬಿ ಕೂಡ ಮುಂದೆ ಬರುತ್ತದೆ, ಅದಕ್ಕೆ ಒಳ್ಳೆಯದಾಗಬೇಕು. ಶ್ರಾವಣ ಮಾಸದಲ್ಲಿ ಸೋಮವಾರದಂದು ಒಂದು ತಿಂಗಳು ಉಪವಾಸ ಇದ್ದೇನೆ ಎಂದು ಹೇಳಿ ಒಂದೇ ದಿವಸ ಎಲ್ಲವನ್ನೂ ಊಟ ಮಾಡಿದರೆ ಹೇಗೆ? ಹಂತಹಂತವಾಗಿ ಮಾಡಿದರೆ ನಮ್ಮ ಆರೋಗ್ಯವೂ ಚೆನ್ನಾಗಿರುತ್ತದೆ, ನಾವು ಮಾಡಿದ ಪುಣ್ಯದ ಕಾರ್ಯವೂ ಉಳಿಯುತ್ತದೆ. ಇಲ್ಲದಿದ್ದರೆ ಒಂದೇ ಸಲ ಊಟ ಮಾಡಿ ನಾವು ಹೋಗುತ್ತೇವೆ, ನಮ್ಮ ಪುಣ್ಯದ ಕಾರ್ಯವೂ

ಉಳಿಯುವುದಿಲ್ಲ. ಆದುದರಿಂದ ದಯಮಾಡಿ ಈಗಲೂ ಕಾಲ ಮಿಂಚಿಲ್ಲ, ನಾವು ಇನ್ನೂ 8 ರಿಂದ 12ನೇ ತಾರೀಖಿನವರೆಗೆ ಸೇರುವವರಿದ್ದೇವೆ. ಆದುದರಿಂದ ಆ ನಾಲ್ಕು ದಿವಸಗಳಲ್ಲಿ ಬೇಕಾದರೆ ಒಂದು ವರದಿಯನ್ನು ಕೊಟ್ಟು ಹೊಸ ರೇಟ್ ಫಿಕ್ಸ್ ಮಾಡಿ ಅನೌನ್ಸ್ ಮಾಡಬೇಕು. ಇದನ್ನು ತಾವು ವಾಪಸ್ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೆ, ಶ್ರೀ ಖರ್ಗೆ ಸಾಹೇಬರು ಒಂದು ವಿಚಾರವನ್ನು ಹೇಳಿದರು, ಈ ಸರ್ಕಾರ ಮಾರವಾಡಿಯ ಹತ್ತಿರ ಗಿರವಿ ಇದೆ, ಮಾಲೀಕರ ಹತ್ತಿರ ಗಿರವಿ ಇಟ್ಟಿದೆ ಎಂದು. ಗಿರವಿ ಇಡುವುದು ನಿಜ, ಜನರು ಗಿರವಿ ಇಡುತ್ತಾರೆ. ಆದರೆ ಸರ್ಕಾರ ಮಾರವಾಡಿಯ ಗಿರವಿ ಹೇಗಾಗುತ್ತದೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ರೈತರ ಮಕ್ಕಳಿರಬಹುದು, ಆದರೆ ದುರ್ದೈವದಿಂದ ಮಾರವಾಡಿಗಳ ಹತ್ತಿರ ಗಿರವಿ ಇದ್ದೀರಿ ಎಂದು ನಾನು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ನೀವು ಯಾರ ಬಳಿಯಾದರೂ ಗಿರವಿಗಳಾಗಿ, ನಮಗೇನಾಗಬೇಕು? ಮಾನ್ಯ ಅಧ್ಯಕ್ಷರೆ, ಈ ಭಾಗ್ಯಜ್ಯೋತಿ ಯೋಜನೆಯು ಒಂದು ಚರಿತ್ರಾರ್ಹ ನಿರ್ಧಾರ. ಹಿಂದೆ ಶ್ರೀ ದೇವರಾಜ ಅರಸು ಅವರು ಈ ನಿರ್ಧಾರವನ್ನು ಕೈಗೊಂಡರು. ಈ ರಾಜ್ಯದ ಪ್ರತಿಯೊಬ್ಬರೂ ಮೆಚ್ಚಿದಂಥ ಉನ್ನತವಾದ ಕಾರ್ಯಕ್ರಮ ಇದು. ಆಗ ವಿದ್ಯುತ್ತನ್ನು ಉಚಿತವಾಗಿ ಕೊಡುವುದರ ಮೂಲಕ ಬಡವರ ಗುಡಿಸಲುಗಳಿಗೆ ಒಂದೊಂದು ಬಲ್ಬನ್ನು ಉಚಿತವಾಗಿ ಕೊಡಬೇಕು ಎಂಬ ಉದ್ದೇಶದಿಂದ ಇದು ಪ್ರಾರಂಭವಾಯಿತು. ಆದಾದನಂತರ ವಿದ್ಯುತ್ ದರ ಒಂದು ರೂಪಾಯಿ, ಎರಡೂವರೆ ರೂಪಾಯಿ, ಮೂರು ರೂಪಾಯಿಯವರೆಗೆ ಆಯಿತು. ಇದು ಒಳ್ಳೆಯ ಕೆಲಸವೇನಲ್ಲ, ಇದು ಬಹಳ ಪಾಪದ ಕೆಲಸ. ಇದರಿಂದ ಸರ್ಕಾರಕ್ಕೆ ಎಷ್ಟೇ ದುಡ್ಡು ಬಂದರೂ, ಲಾಭ ಬಂದರೂ ಕೂಡ ಇದು ಸರಿಯಲ್ಲ. ಅದೇರೀತಿ ಶ್ರೀ ಗುಂಡೂರಾಯರ ಕಾಲದಲ್ಲಿ ಕೂಡ ಇದು ಮುಂದುವರೆಯಿತು. ಅದರ ಬಗ್ಗೆ ನೀವು ವಾದ ಮಾಡುತ್ತೀರೋ ಅಥವಾ ಅದು ಏನೇ ಇರಲಿ, ಅದನ್ನು ರಾಜಕೀಯ ಕಾರಣಕ್ಕೆ ಮಾಡಿದರು ಎಂದು ತಿಳಿದುಕೊಳ್ಳುತ್ತೀರೋ ಅಥವಾ ಏನಾದರೂ ತಿಳಿದುಕೊಳ್ಳಿ, ರೈತರ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ಕೊಡುವ ದಿಟ್ಟ ನಿರ್ಧಾರವನ್ನು ಕೈಗೊಂಡರು. ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಯಾರು ಏನೇ ಹೇಳಿದರೂ ಕೂಡ ಚಿಂತೆ ಇಲ್ಲ. ಈ ಸಂದರ್ಭದಲ್ಲಿ ಅದನ್ನು ನೆನೆದುಕೊಳ್ಳಬೇಕು. ನಮ್ಮ ಸರ್ಕಾರಕ್ಕೆ ಬಹಳ ಜಾಸ್ತಿ ಹೊರೆಯಾಯಿತು ಎಂದು ನೀವು ಹೇಳಬಹುದು. ಆದರೆ ಅವರ ಸರ್ಕಾರದಲ್ಲಿ ತೊಂದರೆ ಇರಲಿಲ್ಲವೇನು? ಅವರಿಗೂ ಕೂಡ ತೊಂದರೆ ಇತ್ತು. ಆದರೆ ಅದನ್ನು ನಿಭಾಯಿಸಿ ದಕ್ಷತೆಯಿಂದ ರೈತರಿಗೆ ಉಚಿತವಾಗಿ ವಿದ್ಯುತ್ತನ್ನು ಕೊಟ್ಟಿದ್ದೇವೆ ಎಂದು ಹೇಳತಕ್ಕಂಥ ಒಂದು ದಿಟ್ಟತನವನ್ನು ಅವರು ಪ್ರದರ್ಶನ ಮಾಡಿದರು. ಅದನ್ನು ನಾವು

ಮೆಚ್ಚಬೇಕು. ದರವನ್ನು ಯಾರು ಬೇಕಾದರೂ ಏರಿಸಬಹುದು, ಅದಕ್ಕೆ ಮಂತ್ರಿಗಳೇ ಆಗಬೇಕಾಗಿಲ್ಲ. ದರವನ್ನು ಕಡಿಮೆ ಮಾಡಿದರಲ್ಲಾ ಅದು ಮುಖ್ಯ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸರ್ಕಾರದ ಆ ಆದೇಶ ಒಂದು ವರ್ಷ, ಎರಡು ವರ್ಷ ಅಲ್ಲ ಸುಮಾರು 15-16 ವರ್ಷ ಅಸ್ತಿತ್ವದಲ್ಲಿತ್ತು.

ಶ್ರೀ ವಾಟಾಳ್ ನಾಗರಾಜ್: ಈ ರೀತಿ 15 ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದುದನ್ನು ಕಿತ್ತುಹಾಕಿ ನೀವು ಜನರಿಗೆ ಬಹಳ ಸಮರ್ಪಕವಾಗಿ ವಿದ್ಯುತ್ತನ್ನು ಹಂಚಿಕೆ ಮಾಡುತ್ತಿದ್ದೇವೆ, ರೈತರು ನಮಗೆ ಹಣ ಕೊಡುವುದಕ್ಕೆ ತಯಾರಿದ್ದಾರೆ ಎಂದು ನೀವೇ ಹೇಳಿಕೊಂಡು, ನೀವೇ ದರವನ್ನು ಹೆಚ್ಚು ಮಾಡಿ ಮೀಟರ್‌ಗಳನ್ನು ಅಳವಡಿಸಿದ್ದೀರಿ. ಅದರ ವ್ಯವಸ್ಥೆಯನ್ನು ಚೆಕ್ ಮಾಡುವವರು ಯಾರು? ಇದಂತೂ ಅತ್ಯಂತ ಶೋಚನೀಯ ಪರಿಸ್ಥಿತಿಯಾಗಿರುವುದರಿಂದ ನಾನು ತಮಗೆ ಹೇಳುತ್ತಿದ್ದೇನೆ. ಇನ್ನು ರೈತರು ನಿಮ್ಮ ಜೊತೆಯಲ್ಲಿರುವುದಿಲ್ಲ. ನೀವು ತಿಳಿದುಕೊಂಡಿರಬಹುದು, ರೈತರು ನಮ್ಮ ಜೊತೆ ಇರುತ್ತಾರೆ, ಅದರಲ್ಲೇನೂ ಅನುಮಾನ ಇಲ್ಲ ಎಂದು. ಇನ್ನೇನು ನಮ್ಮದೂ ಕೊನೆಯ ರಾಜ್ಯ (ಆಡಳಿತ), ಆದ ಹಾಗೆ ಆಗಲಿ, ಮಾಡುವುದೇ ಸರಿ ಎಂದು ನೀವು ಏನು ತೀರ್ಮಾನ ಮಾಡಿಕೊಂಡಿದ್ದೀರಿ ಇದು ಒಳ್ಳೆಯ ನೀತಿಯಲ್ಲ, ಅಪಾಯಕರವಾದುದು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಶ್ರೀ ವಾಟಾಳ್ ನಾಗರಾಜ್‌ರವರಿಗೆ ರೈತರ ಬಗ್ಗೆ ಬಹಳಷ್ಟು ಕಳಕಳಿ ಇದೆ. ನಾವೆಲ್ಲರೂ ರೈತರೆ, ನಮ್ಮದೂ ನಾಲ್ಕೈದು ಪಂಪ್‌ಸೆಟ್‌ಗಳಿವೆ. ಆದರೆ ಯಾವ ರೈತರೂ ಸಹ ತಾವು ಹೇಳಿದಂತೆ ಮಾತನಾಡುತ್ತಿರಲಿಲ್ಲ. ಅಸೆಂಬ್ಲಿಯಲ್ಲಷ್ಟೇ ಈ ರೀತಿ ಮಾತನಾಡುವುದು. ಹೊರಗೆ ರೈತರು ಏನು ಹೇಳುತ್ತಾರೆ ಎಂದರೆ ನಮಗೆ 24 ತಾಸು ಕರೆಂಟ್ ಕೊಟ್ಟುಬಿಡಿ. ಪುಕ್ಕಟೆಯಾಗಿ ಕೊಟ್ಟು ಅದು ನಿಲ್ಲದಂಥ ಪರಿಸ್ಥಿತಿಗೆ ಹಿಂದಿನ ಸರ್ಕಾರದವರು ತಂದಿದ್ದಾರೆ ಎಂದು ರೈತರಿಗೆ ಗೊತ್ತಿದೆ. ಆ ಕಾರಣದಿಂದ ಇವತ್ತು ರೈತರೆಲ್ಲರೂ ಒಪ್ಪಿದ್ದಾರೆ. ಯಾವ ರೈತರೂ ಅದಕ್ಕೆ ವಿರುದ್ಧವಾಗಿ ಚಳುವಳಿ ಮಾಡಿಲ್ಲ. ಇದು ಅಸೆಂಬ್ಲಿಯಲ್ಲಿ ಮಾತ್ರ ನಡೆದಿದೆ ಅಷ್ಟೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಹೋದ ಕಡೆ ಕಲ್ಲು ಹೊಡೆದು ನಿಲ್ಲಿಸಿದರೆ ಮಾತ್ರ ಅದು ಚಳುವಳಿಯೇನು? ಆ ರೀತಿ ಯಾರಾದರೂ ಚಳುವಳಿ ಎಬ್ಬಿಸಬೇಕೆ?

ಶ್ರೀ ಎಸ್.ಎಸ್.ಪಾಟೀಲ್: ಪುಕ್ಕಟೆ ವಿದ್ಯುತ್ ಕೊಡುತ್ತೇವೆ ಎಂದು ಹೇಳಿ 15 ದಿವಸಕ್ಕೆ ಒಂದು ಪಂಪ್‌ಸೆಟ್ ಸುಡುತ್ತಿದ್ದಾರೆ. ಪರಿಸ್ಥಿತಿ ಇದು, ಮಳೆ ಇಲ್ಲದೆ ಹೆಚ್ಚು ಕರೆಂಟ್ ಉತ್ಪಾದನೆ ಮಾಡುವುದಕ್ಕಾಗುವುದಿಲ್ಲ. ಪುಕ್ಕಟೆ ಕೊಡುವುದು, ಒಂದು ಪಂಪ್‌ಸೆಟ್ ಸುಟ್ಟರೆ 800 ರಿಂದ 1000 ರೂಪಾಯಿಯವರೆಗೆ ಕೊಡಬೇಕು. ಆ ಕಾರಣದಿಂದ ವರ್ಷಕ್ಕೆ ಸುಮಾರು 300 ರೂಪಾಯಿ ಕೊಡುವುದಕ್ಕೆ ರೈತರಿಗೇನೂ

ಕಷ್ಟವಿಲ್ಲ. ಆದರ ಮೇಲೆ ಟ್ಯಾಕ್ಸ್ ಹಾಕಿ, ಮತ್ತೆ ಕರೆಂಟ್ ಕೊಡದೆ ಹೋದರೆ ರೈತ ಸಿಟ್ಟಿಗೇಳುತ್ತಾನೆ.

ಶ್ರೀ ವಾಟಾಳ್ ನಾಗರಾಜ್: ದರವನ್ನು ಜಾಸ್ತಿ ಮಾಡಿಕೊಳ್ಳಿ.

ಶ್ರೀ ಶ್ರೀನಿವಾಸ್ ಆರ್: ಸನ್ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಒಂದು ವಿನಂತಿ. ಈಗ ಚಾಮರಾಜ ನಗರದಲ್ಲಿ ಕೇವಲ ಕೆಲವೇ ಪಂಪ್‌ಸೆಟ್‌ಗಳಿರಬಹುದು. ಏಕೆಂದರೆ ಅದೆಲ್ಲವೂ ಕೂಡ ಕಾವೇರಿ ಬೇಸಿನ್ ಪ್ರಾಜೆಕ್ಟ್ ಏರಿಯಾದಲ್ಲಿದೆ. ಇದು ಬಹಳ ಪ್ರಮುಖವಾದ ವಿಚಾರ. ತಮಗೆಲ್ಲಾ ಗೊತ್ತಿರುವ ಹಾಗೆ ಕೋಲಾರ ಜಿಲ್ಲೆಯಲ್ಲಿ ಒಂದು ಲಕ್ಷದ 65 ಸಾವಿರ ಪಂಪ್‌ಸೆಟ್‌ಗಳಿವೆ. ನಮ್ಮ ಕ್ಷೇತ್ರದಲ್ಲೇ 10 ಸಾವಿರಕ್ಕಿಂತಲೂ ಹೆಚ್ಚಿವೆ. ಆದರೆ ಒಬ್ಬ ರೈತರೂ ಕೂಡ ಇದುವರೆಗೆ ಪ್ರತಿಭಟನೆ ಮಾಡಿಲ್ಲ. ಅವರೆಲ್ಲಾ ಹೇಳುವುದೇನೆಂದರೆ ನಮಗೆ ಉನ್ನತವಾದಂಥ ಕರೆಂಟ್ ಕೊಡಿ, ನಮಗಷ್ಟೇ ಸಾಕು ಎನ್ನುತ್ತಾರೆಯೆ ಹೊರತು 200 ಅಥವಾ 300 ರೂಪಾಯಿ ದರವನ್ನು ಹಾಕಿದರೂ ಸಹ ಅವರು ಕಟ್ಟುವುದಕ್ಕೆ ಸಿದ್ಧರಿದ್ದಾರೆಯೇ ವಿನಃ ಇದುವರೆಗೆ ಅಲ್ಲಿ ಒಂದು ಪ್ರತಿಭಟನೆ ನಡೆದಿಲ್ಲ. ಸರ್ಕಾರ ರೈತರಿಗೆ 300 ರೂಪಾಯಿ ದರ ನಿಗದಿಗೊಳಿಸಿ ಘೋಷಣೆ ಮಾಡಿದ ನಂತರ ಸಾರ್ವಜನಿಕರಿಂದ ಒಂದು ಪ್ರತಿಭಟನೆಯೂ ನಡೆದಿಲ್ಲ. ಇಲ್ಲಿ ಕೆಲವು ಜನ ಪೇಟೆಯಲ್ಲಿ ಪ್ರತಿಭಟನೆ ಮಾಡಿದ್ದಾರೆಯೇ ಹೊರತು ಹಳ್ಳಿಯ ಜನ ಒಬ್ಬರೂ ಬಂದಿಲ್ಲ. ಈ ಸದನದಲ್ಲಿ ಮಾತ್ರ ಹಿರಿಯರಾದ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಶ್ರೀ ಶ್ರೀನಿವಾಸ್‌ರವರೆ ಹಳ್ಳಿಗಾಡಿನಿಂದ ಆಯ್ಕೆಯಾಗಿ ಬಂದಿರುವವರು ನೀವೊಬ್ಬರೆ ಎಂದು ದಯವಿಟ್ಟು ತಿಳಿದುಕೊಳ್ಳಬೇಡಿ. ನೀವು ಹೇಗೆ ಕೋಲಾರ ಜಿಲ್ಲೆಯಿಂದ ಬಂದಿದ್ದೀರಿ ಹಾಗೆ ನಾನೂ ಅದೇ ಜಿಲ್ಲೆಯಿಂದ ಬಂದಿರುವುದು. ನೀವು ವ್ಯವಸಾಯದ ಬಗ್ಗೆ ಏನೂ ಮಾತನಾಡಬೇಡಿ. ಈ ದೇಶದಲ್ಲಿ ಪ್ರತಿಭಟನೆ ಆಗಿಲ್ಲ ಎನ್ನುತ್ತೀರಿ.

5. 10 ಪಿ.ಎಂ

ಸಕ್ಕರೆ ಹಗರಣದಲ್ಲಿ ನೂರಾರು ಕೋಟಿ ತಿಂದರೂ ಪ್ರತಿಭಟನೆ ಆಗಲಿಲ್ಲ. ಹವಾಲಾದಲ್ಲಿ ತಿಂದರು ಪ್ರತಿಭಟನೆ ಆಗಲಿಲ್ಲ. ಕಬ್ಬಿಣ ತಿಂದರೂ ಪ್ರತಿಭಟನೆ ಆಗಲಿಲ್ಲ. ಕಡೆಗೆ ಹುಲ್ಲು ತಿಂದರೂ ಪ್ರತಿಭಟನೆ ಆಗಲಿಲ್ಲ. ಪ್ರತಿಭಟನೆ ಮಾಡುವುದು ಯಾವಾಗ ಎಂದು ಜನರಿಗೆ ಗೊತ್ತಿದೆ. ಐದು ವರ್ಷಕ್ಕೊಂದು ಸಲ ಕರೆಕ್ಟಾಗಿ ಪ್ರತಿಭಟನೆ ಮಾಡಿ ತೋರಿಸುತ್ತಾರೆ ಅವರು. ಪ್ರಾಮಾಣಿಕವಾಗಿ ಹೇಳಿ, ರೈತರ ಪಂಪ್‌ಸೆಟ್‌ಗಳಿಗೆ ಫ್ರೀಯಾಗಿ ಕೊಡಿ ಎಂದು ನಾನು ವಾದ ಮಾಡುತ್ತಿಲ್ಲ. ರೈತರೂ ಕೇಳುತ್ತಿಲ್ಲ, ನಿಜ. ಆದರೆ ನೀವು ಏರಿಸಿರುವ ದರ ಜಾಸ್ತಿಯಾಗಿದೆ. ಖರ್ಗೆಯವರು ಹೇಳಿದ್ದು ಸರಿ. ಇಷ್ಟು

ವರ್ಷ ಉಚಿತವಾಗಿ ವಿದ್ಯುತ್ ಕೊಟ್ಟು ಏಕಾ ಏಕಿ ಈಗ ದರ ಏರಿಸುವುದು ಏನಿದೆ ಅದು ಸರಿಯಲ್ಲ. ಈಗ ಏನು ಏರಿಸಿದೆ ಅದನ್ನು ಕಡಿಮೆ ಮಾಡಿ ಹಂತಹಂತವಾಗಿ ನೀವು ಏರಿಸಿದರೆ ತೊಂದರೆಯಾಗುತ್ತಿರಲಿಲ್ಲ. ಆದ್ದರಿಂದ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ: ರೈತರ ಪಂಪ್‌ಸೆಟ್‌ಗಳ ಮೇಲೆ ಹಾಕಿರುವ ದರವನ್ನೂ ನೀವು ಪರಿಷ್ಕರಿಸಬೇಕು. ಕಡಿಮೆ ಮಾಡಬೇಕು. ರೈತರ ಬಗ್ಗೆ ನೀವು ಆಲೋಚನೆ ಮಾಡಲಿಲ್ಲವೆಂದರೆ ರೈತರ ಸರ್ಕಾರ ನಿಮ್ಮದು ಎಂದು ಹೇಗೆ ಹೇಳುತ್ತೀರಿ? ರೈತರ ವಿದ್ಯುಚ್ಛಕ್ತಿ ಬಗ್ಗೆನೂ ಆಲೋಚನೆ ಮಾಡಲಿಲ್ಲ. ಇಲ್ಲಿ ಇಂಡಸ್ಟ್ರಿಗಳ ಬಗ್ಗೆಯೆಲ್ಲಾ ಹೇಳಿದ್ದೀರಿ. ರೈತರ ಬಗ್ಗೆ ಏಕೆ ಹೇಳಿಲ್ಲ?

ಶ್ರೀ ಎಸ್.ಎಸ್.ಪಾಟೀಲ್: ನಿಜವಾಗಿಯೂ ರೈತರಿಗೆ ಕರೆಂಟಿನ ಬಗ್ಗೆ ತೊಂದರೆ ಇಲ್ಲ. ರೈತರು ಹೇಳುತ್ತಿರುವುದು ಏನೆಂದರೆ ಅವನು ಬೆಳೆದಂತಹ ಮಾಲಿಗೆ ಯೋಗ್ಯ ಧಾರಣೆ ಕೊಡಬೇಕು ಅವನು ಬೆಳೆಯುವಾಗ ಎಲ್ಲಾ ಸವಲತ್ತು ನಾವು ಕೊಡಬೇಕು ಬೆಳೆಬರದಿದ್ದರೆ ಸರಿಯಾದ ಇನ್‌ಶೂರೆನ್ಸ್ ಕೊಡಬೇಕು. ಅದು ಆಗಿಲ್ಲ ಈ ದೇಶದೊಳಗೆ. ಅದನ್ನು ಮಾಡಿಬಿಟ್ಟರೆ ಖಂಡಿತವಾಗಿ ನೀವು 300 ಅಲ್ಲ 500 ಕೊಡುತ್ತಾನೆ ರೈತ. ಅದೂ ಮಾಡುವುದಿಲ್ಲ, ಸುಮ್ಮನೆ ಕರೆಂಟ್ ಫ್ರೀ ಕೊಡುತ್ತೇವೆ ಅನ್ನುವುದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಬೆಲೆ ಪ್ರಶ್ನೆ ಬಂದಾಗ, ಟಮೊಟೊ ಬೆಲೆ ಹೋಯಿತು, ಸರ್ಕಾರ ಏನು ಮಾಡುವುದಕ್ಕಾಗುತ್ತದೆ ಅಂದಿರಿ, ಆಲೂಗಡ್ಡೆ ಬಂದರೆ ಹಂಗೆ ಹೇಳುತ್ತೀರಿ, ಈ ಪ್ರಶ್ನೆ ಬಂದಾಗ ಬೆಲೆಪ್ರಶ್ನೆ ಅಂತೀರಿ. ಏನಿದರರ್ಥ? ಸರಿಯಾದ ಧೋರಣೆ ಇರಬೇಕು. ಇದೇನು ಸರ್ಕಾರದ ನೀತಿ ಧೋರಣೇನಾ? ರೈತರು ಬೆಳೆದ ಬೆಳೆಗೆ ಲಾಭದಾಯಕ ನಿಗದಿಯಾದ ಬೆಲೆ ನಿಗದಿ ಮಾಡುವ ಧೋರಣೆ ಸರ್ಕಾರಕ್ಕೆ ಇರಬೇಕು.

ಶ್ರೀ ವಾಟಾಳ್ ನಾಗರಾಜ್: ಸ್ವಾಮಿ ದರ ಏರಿಸಬೇಕಾದರೆ ವೈಜ್ಞಾನಿಕವಾದ ಒಂದು ಚರ್ಚೆ ಆಗಬೇಕು. ದರ ಏರಿಸಲು ನಿಮ್ಮಲ್ಲೇನಾದರೂ ಸಮಿತಿ ಇದೆಯಾ? ಕಾಲಕಾಲಕ್ಕೆ ಯಾವರೀತಿ ದರ ಏರಿಸಬೇಕು, ದರ ಏರಿಸಲು ರೀತಿನೀತಿಗಳೇನು, ಸೂತ್ರಗಳೇನು? ಇವ್ಯಾವೂ ನೀವು ಅಳವಡಿಸದೆ ತಕ್ಷಣ ದರ ಏರಿಸೋಕೆ ಹೊರಟುಬಿಟ್ಟರೆ ಪರಿಸ್ಥಿತಿ ಏನು? ಇದಕ್ಕಾಗಿ ಹಿಂದೆ ಒಂದು ಸಮಿತಿ ಆಗಿತ್ತು ಶ್ರೀ ಎ.ನಾಗರಾಜು ಅನ್ನುವವರ ಅಧ್ಯಕ್ಷತೆಯಲ್ಲಿ. ಆಮೇಲೆ ನಮ್ಮ ಶಿವಕುಮಾರ್ ಅಧ್ಯಕ್ಷತೆಯಲ್ಲಿ ಸಮಿತಿ ಆಯಿತು. ದರ ಏರಿಕೆ ಮುಂಚೆ ನೀವು ಆ ಸಮಿತಿಗಳನ್ನೂ ಕಡೆಗಾಣಿಸಿದ್ದೀರಿ ಸಮಿತಿ ಕೊಟ್ಟ ವರದೀನೆ ಬೇರೆ, ಜಂಟಿ ಸಲಹಾಸಮಿತಿ ಕೊಟ್ಟ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿ ನಿಮ್ಮಿಚ್ಛೆ ಬಂದಂತೆ ದರ ಏರಿಸಿಕೊಂಡು ಬಂದಿರಿ. ಅದಾದಮೇಲೆ ಮತ್ತೆ ಮೊನ್ನೆ ಮಾಡಿದ್ದೇನು? ಮತ್ತೊಂದು ಸಮಿತಿ ಮಾಡಿ ಆ ಸಮಿತಿಯ ಸಲಹೆ ಪಡೆದು ದರ ಏರಿಸಿ ಎಂದು

ಮಾಡಿದೆವು. ಎಲ್ಲವನ್ನೂ ಬಿಟ್ಟು ಈರೀತಿ ದರ ಏರಿಸೋಕೆ ಹೋದರೆ? ನೀವು ಹೇಳಬಹುದು ಯಾರು ರೈತರು? ಪಾಟೀಲರು ಹೇಳುತ್ತಾರೆ ಎಲ್ಲಿ ಪಂಪ್‌ಸೆಟ್ ಇದೆ? ನನಗೇ ಪಂಪ್‌ಸೆಟ್ ಇರೋದು ಎಂದು. ನಾವೆಲ್ಲಾ ಪಂಪ್‌ಸೆಟ್ಟಿನವರೇ. ಅದನ್ನೇನು ತಪ್ಪು ತಿಳಿದುಕೊಳ್ಳಬೇಕಾಗಿಲ್ಲ. ನಿಮಗೇನು ತೊಂದರೆ ಇಲ್ಲವೇನೋ? ಪ್ರತಿಭಟನೆ ಅಂದರೆ ರಾಜ್ಯದ ಜನ ನಿಮ್ಮ ಮೇಲೆ ತೀವ್ರವಾಗಿ, ರಸ್ತೆಗೆ ಬರುವುದಿಲ್ಲ ಮೌನ ಪ್ರತಿಭಟನೆ ಮಾಡತಕ್ಕದ್ದು.

ಅಧ್ಯಕ್ಷರು: ತಮ್ಮದು ಎಷ್ಟು ಹೆಚ್‌ಪಿ?

ಶ್ರೀ ವಾಟಾಳ್ ನಾಗರಾಜ್: ನನ್ನದು 8 ಪಂಪ್‌ಸೆಟ್ ಇವೆ.

ಅಧ್ಯಕ್ಷರು: ಅಲ್ಲಲ್ಲ ನಾನು ಕೇಳಿದ್ದು ತಮ್ಮ ಪಂಪ್‌ಸೆಟ್ ಎಷ್ಟು ಹಾರ್ಸ್‌ಪವರ್:

ಶ್ರೀ ವಾಟಾಳ್ ನಾಗರಾಜ್: ನನ್ನ ಸ್ವಂತದ್ದಾ?

ಶ್ರೀ ಎಲ್.ಆರ್.ಶಿವರಾಮೇಗೌಡ: ಇವರಿಗೆ ಗೊತ್ತಾಗೋಲ್ಲ ಅದು ಅವರ ಹಾರ್ಸ್‌ಪವರ್ ಹೇಳೋಕೆ ಇವರು ಯಾರು? ಬೇರೆಯವರಿಗೆ ಗೊತ್ತಾಗುವುದು?

ಶ್ರೀ ವಾಟಾಳ್ ನಾಗರಾಜ್: ನನ್ನ ಸ್ವಂತ ಅಶ್ವಶಕ್ತಿ ಕೇಳುತ್ತೀರಾ ಅಥವಾ ನನ್ನ ಜಮೀನದು ಕೇಳುತ್ತೀರಾ?

ಅಧ್ಯಕ್ಷರು: ನಿಮ್ಮ ಸ್ವಂತದ್ದು ನನಗೆ ಬೇಡ, ಜಮೀನದು ಹೇಳಿ ಸ್ವಾಮಿ?

ಶ್ರೀ ವಾಟಾಳ್‌ನಾಗರಾಜ್: ಹೆಚ್ಚುಕಡಿಮೆ 45 ಅಶ್ವಶಕ್ತಿ. ನನ್ನದು 8 ಕೊಳವೆಬಾವಿ ಇದೆ. ಒಂದೊಂದಕ್ಕೂ ಐದೈದು ಅಶ್ವಶಕ್ತಿಯಂತೆ.

ಅಧ್ಯಕ್ಷರು: ಹಾಗಾದರೆ 40 ಆಯಿತು, 45 ಆಗಲ್ಲ, 9 ಮಾಡಿಕೊಳ್ಳಿ, ಆಗ 45 ಆಗುತ್ತದೆ. ನ್ಯಾಯವಾಗಿ ಲೆಕ್ಕಾಚಾರವಾಗಿ ನನಗೆ ಎರಡು ಪಂಪ್‌ಸೆಟ್ ಇದೆ, ಅದರ ಮುಖ ನೋಡೀನೆ ಸುಮಾರು 8-9 ತಿಂಗಳು ಆಗಿರಬೇಕು. ಬಿಡುವುದಿಲ್ಲ ಜನ.

ಶ್ರೀ ವಾಟಾಳ್ ನಾಗರಾಜ್: ಕರೆಕ್ಟ್, ನನ್ನದೂ ಅದೇ ಪರಿಸ್ಥಿತಿಯಾಗಿದೆ. ನಾವೂ ಹೋಗ್ತಾ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: 45ರಲ್ಲಿ 5 ನಿಮ್ಮದು 40 ಬೇರೆಯವರದಾ?

ಅಧ್ಯಕ್ಷರು: ನಿಮಗೆ ಗೊತ್ತಾಗೋಲ್ಲ, ಒಟ್ಟು 45 ಎಚ್‌ಪಿ, 8 ಪಂಪ್‌ಸೆಟ್ 5 ಎಚ್‌ಪಿದು ಅಲ್ಲಿವೆ, ಇನ್ನೈದು ಸಿಟಿಲಿ ಓಡಾಡೋಕೆ, ಇಲ್ಲ ಗಲಾಟೆ ಜಾಸ್ತಿ ಇರುತ್ತದಲ್ಲ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೇ, ತಮಗೆ ಹೇಳುತ್ತೇನೆ: ನನ್ನ ಅಶ್ವಶಕ್ತಿ 100.

ಅಧ್ಯಕ್ಷರು: ನಿಮ್ಮದೇ ನೂರು ಆದರೆ ನಂಜೇಗೌಡರದು ಎಷ್ಟು ಹಾಗಾದರೆ?

ಶ್ರೀ ವಾಟಾಳ್ ನಾಗರಾಜ್: ಅವರದೆಲ್ಲ ವೀಕಾಗಿಹೋಗಿದೆ. ಶಿವರಾಮೇಗೌಡರೇ ನೀವು ಬಂದುಬಿಡಿ ಬೆಳಿಗ್ಗೆ ಒಂದು ಸಲ ಸಭೆಗೆ, ಮತ್ತೆ ಬರೋದೆ ಬೇಡ. ಅಲ್ಲೇನೋ ಹೌಸಿಂಗ್‌ಬೋರ್ಡಿನಲ್ಲಿ ಕೂತುಕೊಂಡು ಪ್ರತಿಯೊಬ್ಬರಿಗೂ ಕಾಗದ ಬರೆಯುತ್ತಾರೆ ನಿಮ್ಮ ಜಿಲ್ಲೆಯವರನ್ನು ಕರೆದುಬಿಟ್ಟಿದ್ದೇವೆ ಎಂದು. ಒಂದು ಮನೆ ಕೊಡುವಹಂಗಿಲ್ಲ ಒಂದು ಜಮೀನು ಕೊಡೋಹಂಗಿಲ್ಲ. ಜಿಲ್ಲೆಯವರನ್ನು ಕರೆದುಕರೆದು ಈ ವೇಳೆಗಾಗಲೇ 4 ಮೀಟಿಂಗ್ ಮಾಡಿದ್ದೀರಿ ಒಂದು ಇಂಚು ಮನೆ ಕೊಡೋಕಾಗಿಲ್ಲ, ಇಲ್ಲಿ ಹೌಸಿಂಗ್‌ಬೋರ್ಡ್ ಬಗ್ಗೆ ಮಾತಾನಾಡೋಕೆ ಬಂದಿದ್ದಾರೆ? ನಾನು ನೋಡಿದ್ದೇನೆ ಚೇರ್ಮನಾದಾಗಿನಿಂದ, ನಮಗೆ ಮೂಗಿನತುದಿಗೆ ತುಪ್ಪಹಚ್ಚಿಬಿಟ್ಟು ತಗೊಳ್ಳಿ ನಿಮಗೆ ಮೂರು ಸಾವಿರ ಮನೆ ಕೊಡುತ್ತೀವಿ ಎಂದು ನಾನು ಊರ ಜನರಿಗೆಲ್ಲಾ ಹೇಳಿ ಬಂದಿದ್ದೇನೆ. ನಮಗೆ ಎರಡೆರಡು ಕಾಗದ ಬರೆದು ಮಧ್ಯಾಹ್ನ ನಿಮಗೆ ಊಟಕ್ಕೆ ಇಕ್ಕುತ್ತೇವೆ ಎಂದು ಅದೇನಾ ಇವರು ಮಾಡಬೇಕಾದ ಕೆಲಸ? ಇವರು ಚೇರ್ಮನಾದ ಮೇಲೆ ಬಂದಿರುವ ಗತಿ? ಇಲ್ಲಿ ಬಂದು ನಮ್ಮ ಮಧ್ಯೆ ಮಾತನಾಡುತ್ತಾರೆ?

ಶ್ರೀ ಎಲ್.ಆರ್.ಶಿವರಾಮೇಗೌಡ: ಅಧ್ಯಕ್ಷರೇ, ನನ್ನದು ಕ್ರಿಯಾಲೋಪ. ಒಂದೂ ಮನೆ ಕೊಟ್ಟಿಲ್ಲ ಎಂದು ಹೇಳಿದರು. ನಾನು ಅವರನ್ನು ಕೇಳಬೇಕಾಗುತ್ತದೆ? ಸಭೆ ಕರೆದಾಗ ಒಂದು ಪತ್ರಾನೂ ಕಳಿಸಲಿಲ್ಲ ಎಲ್ಲಿಗೆ ಕೊಡಬೇಕು ಎಂದು ಹೇಳಲಿಲ್ಲ. ನಾನು ಹೇಗೆ ಮಾಡುವುದಕ್ಕೆ ಆಗುತ್ತದೆ ದಯವಿಟ್ಟು ಹೇಳಬೇಕು ಸ್ವಾಮಿ?

ಅಧ್ಯಕ್ಷರು: ನಾವು ಹೌಸಿಂಗ್‌ಬೋರ್ಡ್ ವಿಚಾರ ಚರ್ಚೆಗೆ ತೆಗೆದುಕೊಂಡಿಲ್ಲ ಪರಸ್ಪರ ನೀವು ಏನು ಮಾತನಾಡಿಕೊಂಡಿರೋ ನಮಗದು ಸಂಬಂಧ ಇಲ್ಲ.

ಶ್ರೀ ಎಲ್.ಆರ್.ಶಿವರಾಮೇಗೌಡ: ಇವರಿಗೇನಾದರೂ ಸೈತ ಅಶ್ವಶಕ್ತಿ ಪವರ್ ಇದ್ದರೆ ಮಹಾಲಕ್ಷ್ಮಿ ಬಡಾವಣೇಲಿ ಅವರ ಮನೇಲಿರಬಹುದೆ ಹೊರತು ತೋಟದಲ್ಲಂತೂ ಇಲ್ಲ. ಹಾಗೆ ನಾನು ಹೇಳೋಕೆ ಹೋದಾಗ ಮೇಲೆ ಬಿದ್ದುಬಿಟ್ಟರೆ ನಾನು ಏನು ಮಾಡಲಿಕ್ಕಾಗುತ್ತದೆ ಹೇಳಿ.

ಅಧ್ಯಕ್ಷರು: ಮೇಲೆ ಇಟ್ಟುಕೊಂಡಿರುವುದು ಉತ್ತಮ ಅಲ್ಲವೆ? ಎಷ್ಟೋ ಗೌರವ ಅಲ್ಲವೆ? ಸುಮ್ಮನೆ ಹತ್ತಾರು ಕಡೆ ಇಟ್ಟುಕೊಳ್ಳುವ ಬದಲು ಒಂದುಕಡೆ ಇಟ್ಟುಕೊಳ್ಳೋದು ಬೆಟರ್ ಅಲ್ಲವೆ?

ಶ್ರೀ ವಾಟಾಳ್ ನಾಗರಾಜ್: ನಾನು ಈ ಶಿವರಾಮೇಗೌಡರ ಮಾತನ್ನು ಗಣನೆಗೆ ತೆಗೆದುಕೊಳ್ಳೋಕೆ ಹೋಗೋಲ್ಲ. ಆಮೇಲೆ ಮಾತನಾಡೋಣ. ಅವರು ಮಾತೆತ್ತಿದರೆ

ನಿಮ್ಮದು ಸರಿ ಇಲ್ಲ ಅಂದರೆ ನೀವೊಬ್ಬರೆ ರೈತರಾ ಅನ್ನುತ್ತಾರೆ. ಬೆಳಿಗ್ಗೆಯಿಂದ ಸಭೆಗೆ ಬರೋಲ್ಲ ಯಾವಾಗಲೋ ಒಂದು ಸಲ ಸಭೆಗೆ ಬಂದು ನಮಗೆ ಮುಖ ತೋರಿಸಿ ಸಭೆ ಬಿಟ್ಟು ಹೋಗುತ್ತಾರೆ. ರೈತರ ಜನರ ಪರವಾಗಿ ಇವರು ಹೌಸಿಂಗ್‌ಬೋರ್ಡಿನಲ್ಲಿ ಕೂತುಕೊಂಡರೆ ಆಗಿಹೋಯ್ತು ಎಂದು ತಿಳಿದುಕೊಂಡಿದ್ದಾರೇನು? ಇಲ್ಲಿ ನಿನ್ನೆ, ಇವತ್ತು ಬೆಳಿಗ್ಗೆಯಿಂದ ಇಲ್ಲ. ಎಷ್ಟೆಷ್ಟು ಬೇಡಿಕೆಗಳ ಬಗ್ಗೆ ಚರ್ಚೆಯಾಗಿದೆ. ಒಂದು ಬೇಡಿಕೆ ಬಗ್ಗೆ ಮಾತನಾಡುವ ನೀತಿ ನಿಮಗಿಲ್ಲ. ಇಲ್ಲಿ ಬಂದು ಹೇಳುತ್ತಿದ್ದೀರಾ?

ಅಧ್ಯಕ್ಷರು: ನಿಮ್ಮ ವಾದ ಒಪ್ಪಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಭಾಗ್ಯ ಜ್ಯೋತಿ ಬಗ್ಗೆ. ಹೊರಗೆ ಸುಮ್ಮನೆ ತಾವು ದೇವರಾಜ ಅರಸರ ಪ್ರತಿಮೆಗೆ ಹಾರ ಹಾಕಿದರೆ ಆಗುವುದಿಲ್ಲ. ಅವರ ನೀತಿ ಬಗ್ಗೆ ನಿಮಗೆ ಪ್ರಾಮಾಣಿಕತೆ ಇದ್ದರೆ ಚಿಂತನೆ ಇದ್ದರೆ ಈ ಕ್ಷಣದಿಂದ ಭಾಗ್ಯಜ್ಯೋತಿಗೆ ಉಚಿತವಾಗಿ ಮಾಡಿದ್ದೇವೆ ಎಂಬ ಮಾತು ಹೇಳಿ ಎಂದು ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಪರಿಸ್ಥಿತಿ ಹೇಗಿದೆಯೆಂದರೆ, ಇದು ಬಹಳ ಗಂಭೀರವಾದ ವಿಚಾರ. ಈ ವಿಚಾರದಲ್ಲಿ ಧರಣಿಯಾಯಿತು. ವಿರೋಧ ಪಕ್ಷಗಳ ಎಲ್ಲಾ ಸದಸ್ಯರು ಸೇರಿಕೊಂಡು ಬಹಳ ಗಂಭೀರವಾಗಿ ಇದನ್ನು ಪರಿಗಣಿಸಿ ವ್ಯವಹರಿಸಿದ್ದಾರೆ. ಈ ಕುರಿತು ಇವೊತ್ತು ಸದನದಲ್ಲಿ ಚರ್ಚೆಗೆ ಬಂದರೆ ತಮಾಷೆಯಾಗಿ ವ್ಯವಹರಿಸಿದರೆ? ಇದು ತಮಾಷೆ ಪಡುವುದಲ್ಲ. 'ರೈತರು ಇದರ ಬಗ್ಗೆ ಚಕಾರ ಎತ್ತುವುದಿಲ್ಲ'ವೆಂದು ಪಟೇಲರು ಹೇಳಿದರು. ಬೈರೇಗೌಡರು ಇರಲಿಲ್ಲ. ನಿಮ್ಮ ಪಕ್ಷದವರೇ ಎತ್ತಿದ್ದರು. ಈಗ ಎ.ಪಿ.ಎಂ.ಸಿ ಗಲಾಟೆಯಾಗಿದೆ, ಐವತ್ತು ಕೆ.ಜಿ.ಗೆ ಮೂವತ್ತು ರೂಪಾಯಿಗಳು. ಬೆಂಗಳೂರಿನ ಹಜಾಮನ ಶಾಪಿನಲ್ಲಿ ಕ್ರಾಪ್ ಕಟ್ ಮಾಡಿಸುವುದಕ್ಕೆ ಹೋದರೆ ಐವತ್ತು ರೂಪಾಯಿ ಕೇಳುತ್ತಾನೆ. ರೈತರಿಗೆ ಏನು ಹಣ ಸಿಗುತ್ತದೆ, ಅವರು ತಮ್ಮ ಸರಕು ತರುವ ಲಾರಿ ಬಾಡಿಗೆಗೆ ಅದು ಸಾಕಾಗುವುದಿಲ್ಲ, ಇನ್ನು ಕರೆಂಟ್ ಚಾರ್ಜ್‌ನ್ನು ಎಲ್ಲಿಂದ ಕಟ್ಟಬೇಕು ಇಂತಹ ಪರಿಸ್ಥಿತಿಯಿರುವಾಗ ರೈತರು ಸಂತೋಷವಾಗಿ ವ್ಯವಹರಿಸಬೇಕಾದರೆ, ರೈತರ ಬೆಂಬಲಕ್ಕೆ ಸರ್ಕಾರ ನಿಂತುಕೊಳ್ಳಬೇಕಲ್ಲ. ಪ್ರಕಾಶ್‌ರವರೆ, ಕಳೆದ ವರ್ಷ ಒಂದು ಮೂಟೆಗೆ ಎಷ್ಟು ಬೆಲೆ ಇತ್ತು? 350-450 ರೂಪಾಯಿಗಳವರೆಗೆ ಸರ್ಕಾರ ತೆಗೆದುಕೊಳ್ಳುತ್ತಿತ್ತು, ಇವೊತ್ತು ಮೂವತ್ತು ರೂಪಾಯಿಗಳಿಗೆ ಇಳಿದಿದೆ. ಇದು ನಗೆಪಾಟಲಿನ ವ್ಯವಹಾರವಲ್ಲ. ಆನಂತರ, ನೀವು ಏನು ಅನೌನ್ಸ್ ಮಾಡಿದ್ದೀರಿ, ಅದರ ಬಗ್ಗೆ ದಯಮಾಡಿ ಮಾಹಿತಿ ಕೊಡಿ. 400 ಕೋಟಿ ರೂಪಾಯಿಗಳನ್ನು ಏರಿಸಿದ್ದೀರಿ, 18-20 ಕೋಟಿ ರೂಪಾಯಿಗಳಷ್ಟು ಕನ್‌ಸೇಶನ್ ಕೊಟ್ಟಿದ್ದಾರೆಯೇ? ಈ ಎಲ್ಲಾ ಲಿಸ್ಟ್ ಬೇಡ. ಇಷ್ಟು ದುಡ್ಡು ಕನ್‌ಸೇಷನ್ ಕೊಟ್ಟಿದ್ದೇವೆ, ಇಷ್ಟು ನಾವು ಹಾಕಿದ್ದೆವು, ಟೋಟಲ್ ಆಗಿ 400 ಕೋಟಿ ರೂಪಾಯಿಗಳ ಪ್ರಪೋಸಲ್ ಹಾಕಿದ್ದೀರಿ, ನೀವು ಅದನ್ನು

ಬಿಟ್ಟಿದ್ದೀರಾ? 400 ಕೋಟಿ ರೂಪಾಯಿಗಳಲ್ಲಿ ಎಷ್ಟು ಕಡಿಮೆ ಮಾಡಿದ್ದೀರಿ? 200 ಕೋಟಿ, 250 ಕೋಟಿ, 100 ಕೋಟಿ, 20 ಕೋಟಿ ಕಡಿಮೆ ಮಾಡಿದ್ದೀರಾ? ಎಷ್ಟು ಕಡಿಮೆ ಮಾಡಿದ್ದೀರೆನ್ನುವ ಬಗ್ಗೆ ಅಂಕಿಅಂಶ ಇಲ್ಲದಿದ್ದರೆ ತರಿಸಿಕೊಡಿ. ಛೇರ್ಮನ್‌ರವರಿಂದ ಆ ಮಾಹಿತಿಯನ್ನು ತರಿಸಿ ಒದಗಿಸಿಕೊಡಿ. ಏಕೆಂದರೆ, ಬೆಟ್ಟ ಅಗೆದು ಇಲಿ ಹಿಡಿದಂತಾಗಬಾರದು. ವಿರೋಧ ಪಕ್ಷದವರಾದ ನಾವುಗಳೆಲ್ಲರೂ ವಾದಕ್ಕೋಸ್ಕರ ವಾದಿಸಲಿಲ್ಲ, ಸಮಸ್ಯೆ ಗಂಭೀರವಾಗಿತ್ತು, ಜನರಿಗೆ ತೊಂದರೆಯಾಗುತ್ತದೆಂದು ನಾವು ಅವರ ಸಂಕಷ್ಟ ಅರ್ಥೈಸಿಕೊಂಡು ಅವರ ಸಮಸ್ಯೆಗಳಿಗೆ ಇಲ್ಲಿ ಸ್ಪಂದಿಸಿದೆವು ಅಷ್ಟೆ. ಅಷ್ಟೊಂದು ಗಂಭೀರವಾಗಿ ನಾವು ಇದನ್ನು ಪರಿಗಣಿಸಿರುವಾಗ ನೀವೇನೋ ಈಗ ಒಂದು ಷಾಕ್ ಕೊಟ್ಟಿದ್ದೀರಿ, ಸುಮ್ಮನೆ 12 ಲಕ್ಷ 13, ಲಕ್ಷದಷ್ಟು ಸಂಖ್ಯೆಯ ಭಾಗ್ಯಜ್ಯೋತಿ ಯೋಜನಾ ಸೌಲಭ್ಯ ಪಡೆದ ಕುಟುಂಬಗಳು ಎಂದರೆ ಇವೊತ್ತು ಭಾಗ್ಯಜ್ಯೋತಿ ಯೋಜನೆಯಲ್ಲಿ ಒಂದೂವರೆ ಕೋಟಿ ಆಗುತ್ತದೆಯೇ? ಈಗ ನೀವು 400 ಕೋಟಿ ರೂಪಾಯಿಗಳನ್ನು ಏರಿಸಿದ್ದೀರಿ. ಇದರಲ್ಲಿ ಕೊಟ್ಟಿರುವ ಕನ್‌ಸೇಶನ್‌ನಿಂದ ಇಷ್ಟು ಕೋಟಿ ರೂಪಾಯಿಗಳು ಕಡಿಮೆಯಾಯಿತೆಂದು ಅಷ್ಟು ಹೇಳಿ ಸಾಕು.

+ ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ವಿದ್ಯುತ್ ದರವನ್ನು ಏರಿಕೆ ಮಾಡಿದಂಥ ಸಂದರ್ಭದಲ್ಲಿ ನಾವು ಸರ್ಕಾರದ ಮನವೊಲಿಸುವುದಕ್ಕೋಸ್ಕರ ಅನೇಕ ರೀತಿಯ ಪ್ರಯೋಗಗಳನ್ನು ಕೂಡ ವಿಧಾನಸಭೆಯಲ್ಲಿ ಮಾಡಿದ್ದೇವೆ. ಬಹುಶಃ ವಿರೋಧ ಪಕ್ಷದವರು ಹಾಕಿಕೊಂಡಿರತಕ್ಕ ನಾನಾ ರೀತಿಯ ಹೋರಾಟಗಳಿಂದಾಗಿ ಸರ್ಕಾರ ಒಂದು ಹೇಳಿಕೆ ಕೊಟ್ಟಿತು. ನಾವು ವಿದ್ಯುಚ್ಛಕ್ತಿದರ ಏರಿಸಿರುವ ಬಗ್ಗೆ ಒಂದು ಹೇಳಿಕೆ ಕೊಡುತ್ತೇವೆ ಮತ್ತು ಆ ಕುರಿತ ಚರ್ಚೆಗೂ ಕೂಡ ಅವಕಾಶ ಕೊಡುತ್ತೇವೆಂದು ಹೇಳಿದಿರಿ. ಒಂದು ಕಡೆ ವಿದ್ಯುತ್ ದರವನ್ನು ನೀವು ಏಕಾಏಕಿ ಏರಿಸಿ ಒಂದು ತರಹದ ಷಾಕ್ ಕೊಟ್ಟರೆ ಹೇಳಿಕೆ ಕೊಡುವ ಮುಖಾಂತರ ನೀವು ನಮ್ಮೆಲ್ಲರನ್ನೂ ಡಿಸಪಾಯಿಂಟ್ ಮಾಡಿದ್ದೀರಿ. ವಿರೋಧಪಕ್ಷದ ನಾಯಕರು ಮತ್ತು ಶ್ರೀಮಾನ್ ನಂಜೇಗೌಡರು ಆಡಿರತಕ್ಕ ಮಾತನ್ನು ನಾನು ಪುನರುಚ್ಚರಿಸುತ್ತಾ ಬಹುಶಃ ಇಂತಹ ಕನ್‌ಸೇಶನ್ ಕೊಡುವುದರ ಬಗ್ಗೆ ಯಾವುದೇ ತರಹದ ಲಾಭ ಆಗುವುದಿಲ್ಲ, ಯಾರನ್ನೂ ಕೂಡ ಸಮಾಧಾನಪಡಿಸುವುದಕ್ಕಾಗುವುದಿಲ್ಲ. ತಮ್ಮ ಹೇಳಿಕೆಯಲ್ಲಿ ಮುಖ್ಯವಾಗಿ ಏನು ಹೇಳಿದ್ದೀರಿ ಎಂದರೆ 200ರಿಂದ 300 ಯೂನಿಟ್‌ಗಳವರೆಗೆ ಹೆಚ್ಚಿಸಿರುವುದನ್ನು ತಿಳಿಸಲು ಹರ್ಷವಾಗುತ್ತದೆ, ಇದರಿಂದ 43 ಲಕ್ಷ ಕುಟುಂಬಗಳಿಗೆ ಸಹಾಯವಾಗುತ್ತದೆಂಬ ಮಾತನ್ನು ಹೇಳಿದ್ದೀರಿ. ಇದು ಸಹಾಯವೇ? 200ರಿಂದ 300 ಯೂನಿಟ್‌ಗಳಿಗೆ ಹೆಚ್ಚಿಸಿದ ಕ್ಷಣಕ್ಕೆ 43 ಲಕ್ಷ ಕುಟುಂಬಗಳಿಗೆ ಸಹಾಯವಾಯಿತೇ? ಎರಡನೆಯದಾಗಿ, 200ರಿಂದ 300 ಯೂನಿಟ್‌ಗಳಿಗೆ ಹೆಚ್ಚು ಮಾಡಿದಂಥ ಸಂದರ್ಭದಲ್ಲಿ ಅದಕ್ಕೊಂದು ಪ್ರತ್ಯೇಕ ದರ ನಿಗದಿಪಡಿಸಿದ್ದೀರಿ. ಮತ್ತೆ ಅಲ್ಲಿ ಹೇಳುತ್ತೀರಿ: 11 ಲಕ್ಷ ಕುಟುಂಬಗಳಿಗೆ

ಮಾತ್ರ ಲಾಭವಾಗುತ್ತದೆಂದು. ಇಲ್ಲಿ ದರ ಏರಿಸಿ ಕನ್‌ಸೇಶನ್ ಕೊಟ್ಟಿದ್ದೇವೆಂದು ರೈತನಿಗೆ ಹೇಳುತ್ತೀರಿ. ಮತ್ತೊಂದು ಕಡೆ 11 ಲಕ್ಷ ಕುಟುಂಬಗಳಿಗೆ ಸಹಾಯವಾಗುತ್ತದೆಂದು ಹೇಳುತ್ತೀರಿ. ದರ ಏರಿಸಿ ಅದ್ಹೇಗೆ ಸಹಾಯವಾಗುತ್ತದೆಂದು ನನಗರ್ಥವಾಗುವುದಿಲ್ಲ. ಮತ್ತೊಂದು ವಿಚಾರವೇನೆಂದರೆ, ಸಣ್ಣ ಕೈಗಾರಿಕೆಗಳಿಗೆ 67 ಹೆಚ್.ಪಿ.ಯಿಂದ 90 ಹೆಚ್.ಪಿ.ವರೆಗೆ ಎಲ್.ಟಿ.ಯಲ್ಲೇ ಮುಂದುವರೆಯಬೇಕೆಂದು ನಾವು ಏನು ಆಗ್ರಹಿಸಿದ್ದೆವು; ಅದಕ್ಕೆ 67 ಹೆಚ್.ಪಿ.ಯಿಂದ 99 ಹೆಚ್.ಪಿ.ವರೆವಿಗೂ ಒಂದ ಪ್ರತ್ಯೇಕ ಟ್ಯಾರಿಫ್ ಅನ್ನು ಮಾಡಿದ್ದೀರಿ. ಹೀಗೆ ಮಾಡುವಂಥ ಸಂದರ್ಭದಲ್ಲಿ ನೀವು ಏನು ಕನ್‌ಸೇಶನ್ ಕೊಟ್ಟಿದ್ದೀರಿ, ಸಣ್ಣ ಕೈಗಾರಿಕೆಗಳವರು ಎಲ್.ಟಿ.ಯಿಂದ ಹೆಚ್.ಟಿ.ಗೆ ಕನ್ವರ್ಟ್ ಮಾಡುವಂಥ ಸಂದರ್ಭದಲ್ಲಿ ಭಾರಿ ಹೊರೆಯಾಗುತ್ತದೆಂಬ ಒತ್ತಾಯ ಬಂದಂಥ ಸಂದರ್ಭದಲ್ಲಿ ತಾವು ಇವೊತ್ತು ಇಂಡಸ್ಟ್ರೀಸ್ ಅಸೋಸಿಯೇಶನ್ ಹತ್ತಿರ ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದಿದ್ದೀರಿ. ಏನೆಂದರೆ ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಶೇಕಡಾ 20ರಷ್ಟು ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ. That is a negligable amount ಅದೇನೂ ಕನ್ಸಿಡರ್ ಮಾಡುವಂಥಾದ್ದಲ್ಲ. ಎಲ್‌ಟಿಯನ್ನು ಹೆಚ್.ಟಿ.ಗೆ ಮಾರ್ಪಾಟು ಮಾಡಬೇಕಾದರೆ ಮೂರು ವರ್ಷಗಳಲ್ಲಿ ಅದರ ಪ್ರೋತ್ಸಾಹ ಬೆಲೆಯನ್ನು ಡಿವೈಡ್ ಮಾಡುತ್ತೀರಿ, ಮಾಸಿಕ ಬೆಲೆಯಲ್ಲಿ ಶೇಕಡಾ 30 ರಷ್ಟು ರಿಯಾಯಿತಿಯನ್ನು ಮೊದಲ ವರ್ಷ ಕೊಡುತ್ತೀರಿ, ಎರಡನೇ ವರ್ಷದಿಂದ ಶೇಕಡಾ 20ರಷ್ಟು ಕೊಡುತ್ತೀರಿ, ಮೂರನೇ ವರ್ಷ ಶೇಕಡಾ 10ರಷ್ಟು ಕೊಡುತ್ತೀರಿ, ನಂತರ ಹೆಚ್‌ಟಿಗೆ ಫುಲ್ ಕನ್ವರ್ಶನ್ ಆಗಬೇಕೆಂಬ ಮಾತನ್ನು ಹೇಳುತ್ತೀರಿ. ಬಹುಶಃ ನನಗನಿಸುತ್ತದೆ: ಇದನ್ನು ಯಾರೂ ಕೂಡ ಲೆಕ್ಕ ಇಡುವುದಕ್ಕೆ ಸಾಧ್ಯವೇ? ಸಾಧ್ಯವಿಲ್ಲ, ಬೋರ್ಡ್‌ನವರೂ ಇಡುವುದಿಲ್ಲ, ಕ್ಲೇಮ್ ಮಾಡತಕ್ಕಂಥ ಇಂಡಸ್ಟ್ರೀಸ್‌ನವರೂ ಕೂಡ ಇಡುವುದಕ್ಕಾಗುವುದಿಲ್ಲ. ಇದು ಕೇವಲ ಕಾಗದದಲ್ಲಿ ಉಳಿಯುತ್ತದೆಯೇ ವಿನಾಃ ನಿಜ ರೂಪದಲ್ಲಿ ಇವೊತ್ತು ಕೈಗಾರಿಕೆಗಳಿಗೆ ಸಹಾಯವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನೊಂದು ಏನೆಂದರೆ, ಟ್ರಾನ್ಸ್‌ಫಾರ್ಮರ್ಸ್ ಹೊರೆಯಾಗತಕ್ಕಂಥಾದ್ದು ಏನು? ಮುಖ್ಯವಾಗಿ ಟ್ರಾನ್ಸ್‌ಫಾರ್ಮರ್ಸ್ ಏನಿದೆ, ಅದೇ ಕಾಸ್ಟ್. ಕಾಸ್ಟ್ ಆಫ್ ದಿ ಟ್ರಾನ್ಸ್‌ಫಾರ್ಮರ್ ಈಸ್ 65,000ರಿಂದ ಒಂದು ಲಕ್ಷ, ಒಂದು ಲಕ್ಷ ಇಪ್ಪತ್ತು ಸಾವಿರದವರೆಗೆ ಇರುತ್ತದೆ. ಮತ್ತು ಅದಕ್ಕೆ ಬೇಕಾದಂಥ ಟಿ.ಸಿ. ಸೆಟ್ಸ್ ಇರಬಹುದು, ವೈರ್ಸ್ ಇರಬಹುದು, ಇವೆಲ್ಲವನ್ನೂ ಲೆಕ್ಕ ಹಾಕಿಕೊಂಡರೆ ಸುಮಾರು ಎರಡು ಲಕ್ಷ ರೂಪಾಯಿಗಳವರೆವಿಗೂ ಎಕ್ಸ್‌ಪೆಂಡಿಚರ್ ಬರುತ್ತದೆ. 500 ಮೀಟರ್‌ವರೆಗೆ ಮಾತ್ರ ನೀವು ಬೇರೆ ಮಾಡಿ ಅದಕ್ಕಿಂತ ಹೆಚ್ಚಾದರೆ ನಿಮಗೆ ಕನ್‌ಸೇಶನ್ ಕೊಡುತ್ತೇವೆಂದರೆ ಇದು ಕನ್‌ಸೇಶನ್ ಅಲ್ಲವೇ ಅಲ್ಲ. ಇವೊತ್ತಿನ ಸಂದರ್ಭದಲ್ಲಿ ಸಾಕಷ್ಟು ವಿಷಯಗಳನ್ನು ಕೂಡ ಪ್ರಸ್ತಾಪಿಸಿದ್ದೆವು. ನಾವು ನಮ್ಮ ಒಂದೇ ಜಿಲ್ಲೆಗೆ ಸೀಮಿತವಾಗಿ ಆವೊತ್ತು ಸದನದಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿ ಹೇಳಿದ್ದೆವು. ಏನೆಂದರೆ, ತುಮಕೂರು ಜಿಲ್ಲೆಗೆ ಇಲ್ಲಿಯವರೆಗೆ ಕೊಟ್ಟಿರುವ ಟಾರ್ಗೆಟ್ ಅನ್ನು ಫಿಕ್ಸ್ ಮಾಡಿಲ್ಲ, ಈ ವರ್ಷವೂ ಸಹ ಫಿಕ್ಸ್

ಮಾಡಿಲ್ಲ. ಕಳೆದ ನಾಲ್ಕೈದು ದಿವಸಗಳಲ್ಲಿ ಟಾರ್ಗೆಟ್ ಫಿಕ್ಸ್ ಮಾಡಿ ರಾಜ್ಯಾದ್ಯಂತ ಹಣ ಬಿಡುಗಡೆ ಮಾಡಿದ್ದರೂ 35,000 ಪಂಪುಸೆಟ್ಟುಗಳಿಗೆ ಎನರ್ಜೈಸ್ ಮಾಡುವುದಕ್ಕೋಸ್ಕರ ಟಾರ್ಗೆಟ್ ಕೊಟ್ಟಿದ್ದರೂ ತುಮಕೂರು ಜಿಲ್ಲೆಗೆ ಫಿಕ್ಸ್ ಮಾಡಲಿಲ್ಲ. ಈ ವಿಷಯವನ್ನು ನಾವು ಶೂನ್ಯ ವೇಳೆಯಲ್ಲೂ ಕೂಡ ಪ್ರಸ್ತಾಪಿಸಿದ್ದೆವು. ಕಾರಣವೇನೆಂದರೆ, ಕಪ್ಪು ಮತ್ತು ಬೂದಿ ಪ್ರದೇಶವೆಂದು ಗುರ್ತಿಸಿರುವುದರಿಂದ ತೊಂದರೆಯಾಗುತ್ತದೆಂಬ ದೃಷ್ಟಿಯಿಂದ ಪ್ರಸ್ತಾಪಿಸಿದ್ದೆವು. ಆಗ ಇದು ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಡುತ್ತದೆಂದು ಹೇಳಿ ತಾವು ಜಾರಿಕೊಂಡಿರಿ. ಇವೊತ್ತು ನೀವು ನಿಮಗೆ ವಿದ್ಯುತ್ ಕಡಿತ ಮಾಡಿರುವಂತಾದ್ದು, ಟಾರ್ಗೆಟ್ ಅನ್ನು ಕಟ್ ಮಾಡಿರುವವರು ನೀವು ಆಗಿರುವುದರಿಂದ ಇದರ ಬಗ್ಗೆ ಹೇಳಿಕೆ ಕೊಡಬೇಕಾಗುತ್ತದೆ, ಅದನ್ನು ಲಿಫ್ಟ್ ಮಾಡಬೇಕಾಗುತ್ತದೆ. ಏನು ಸಕಾರಣ ಕೊಟ್ಟಿದ್ದೇವೆ, ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್ ಕೊಟ್ಟಿರುವ ರೆಕಮೆಂಡೇಶನ್ ಸರಿ, ಸಮರ್ಪಕವಲ್ಲ, ಅದು ಯಾವುದೇ ಒಂದು ಮಾಹಿತಿ, ಆಧಾರವಿಲ್ಲದ್ದು ಎಂದು ಕಾಣುತ್ತದೆ. ಏಕೆಂದರೆ, ಈಗ ಹೇಮಾವತಿ ನದಿ ನೀರು ಬರುತ್ತಿರುವಂಥ ಸಂದರ್ಭದಲ್ಲಿ ನಮ್ಮ ಐದು ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಜಾಸ್ತಿಯಾಗಿದೆ, ಇವೊತ್ತು ನೀರಿಗೆ ಏನೂ ತೊಂದರೆಯಿಲ್ಲ. ಇಂತಹ ಸಂದರ್ಭದಲ್ಲಿ ಇವೊತ್ತು ಕಪ್ಪು ಮತ್ತು ಬಿಳುಪು, ಕಪ್ಪು ಮತ್ತು ಬೂದು ಬಣ್ಣ ಪ್ರದೇಶವೆಂದು ಗುರ್ತಿಸಿ ಟಾರ್ಗೆಟ್ ಕೊಡದಿರುವುದು ತಪ್ಪಾಗುತ್ತದೆ. ನಾವು ಇದರ ಬಗ್ಗೆ ನಿಲುವಳಿ ಸೂಚನೆ ಮೂಲಕ ಅಧ್ಯಕ್ಷರ ಗಮನ ಸೆಳೆದಿದ್ದರೂ ಇವೊತ್ತು ನೀವು ಕೊಡುವ ಕನ್‌ಸೇಶನ್ ಇಟ್ ಈಸ್ ಎ ಮೋಸ್ಟ್ ಡಿಸಪಾಯಿಂಟಿಂಗ್. ಇದರಿಂದ ಯಾರಿಗೂ ಕೂಡ ಲಾಭವಾಗುವುದಿಲ್ಲ, ಪ್ರಯೋಜನವಾಗುವುದಿಲ್ಲವೆನ್ನುವ ಮಾತನ್ನು ಹೇಳಿ ಇದನ್ನು ವಿತ್‌ಡ್ರಾ ಮಾಡುವುದು ಸೂಕ್ತ. ಈ ರೀತಿ ಕನ್‌ಸೇಶನ್ ಕೊಡುವುದರಲ್ಲಿ ಯಾವುದೇ ಅರ್ಥವಿಲ್ಲ ಮುಖ್ಯವಾಗಿ ಇವೊತ್ತು ರೈತರ ಪಂಪುಸೆಟ್ಟುಗಳಿಗೆ ಪೀನಲ್ ಇಂಟ್ರೆಸ್ಟ್ ಕಡಿಮೆ ಮಾಡುವುದರ ಬಗ್ಗೆ ಸದಸ್ಯರಾದ ಶಿವರಾಂರವರು ಬಹಳವಾಗಿ ಪ್ರಸ್ತಾಪಿಸಿದರು. ಈ ಕುರಿತು ತಾವು ಉತ್ತರ ಕೊಡುತ್ತೀರೆಂದು ನಿರೀಕ್ಷಿಸುತ್ತಿದ್ದೆವು, ಅದರ ಬಗ್ಗೆ ಕೂಡ ಇನ್ನೂ ಪ್ರಸ್ತಾಪಿಸಿಲ್ಲ. ಅಲ್ಲದೆ, ಇದು ಯಾವತ್ತಿನಿಂದ ಜಾರಿಗೆ ಬರುತ್ತದೆನ್ನುವ, ಪ್ರಸ್ತಾಪ ಕೂಡ ಇಲ್ಲದಿರುವುದರಿಂದ ನಿಮ್ಮ ಹೇಳಿಕೆ ಸರಿಯಿಲ್ಲವೆಂದು ಹೇಳಿ ಈ ರೀತಿ ಕನ್‌ಸೇಶನ್ ಕೊಡುವುದಕ್ಕಿಂತ ಅದನ್ನು ವಾಪಸ್ ತೆಗೆದುಕೊಂಡರೆ ಬಹಳ ಸಲೀಸಾಗುತ್ತದೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕಲ್ಪಿಸಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮಾನ್ಯ ಅಧ್ಯಕ್ಷರು, ಏನಾದರೊಂದು ರಿಯಾಯಿತಿಯನ್ನು ಇಂತಹ ಸದನದಲ್ಲಿ ಅನೌನ್ಸ್ ಮಾಡಿದರೆ ಅದು ಬಳಕೆದಾರರಿಗೆ ಬಹಳ ಪರಿಣಾಮಕಾರಿಯಾಗಿ ತಲುಪುವಂತಾದ್ದಾಗಿರಬೇಕು. ಬಹುಶಃ ಈ ತರಹದ ರಿಯಾಯಿತಿಯೇನಾದರೂ ಪ್ರಕಟಣೆಯಾದರೆ ಯಾರ ಮೇಲೂ ಕೂಡ

ಪರಿಣಾಮವಾಗುವುದಿಲ್ಲ. ಕಳೆದ ಮೂವತ್ತು ವರ್ಷಗಳ ವಿಧಾನಸಭೆಯ ಇತಿಹಾಸದಲ್ಲಿ ವಿರೋಧ ಪಕ್ಷದವರಾದ ನಾವು ತಮ್ಮ ಸಂಪೂರ್ಣ ಸಹಕಾರದಿಂದ ಒಂದು ಉಗ್ರವಾದ ಪ್ರತಿಭಟನೆಯನ್ನು ವಿದ್ಯುಚ್ಛಕ್ತಿ ದರ ಏರಿಕೆ ಬಗ್ಗೆ ಸದನದಲ್ಲಿ ನಡೆಸಿದೆವು. ಅದರ ಪರಿಣಾಮವಾಗಿ ಇವೊತ್ತು ಸರ್ಕಾರದವರು ಈ ಒಂದು ಪ್ರಕಟಣೆ ಮಾಡಿದ್ದಾರೆ. ಇದು ಬಹಳ ನಿರಾಶೆ ತರತಕ್ಕಂಥ ಪ್ರಕಟಣೆಯಾಗಿದೆಯಲ್ಲದೆ ಕೊಟ್ಟಿರುವ ರಿಯಾಯಿತಿ ನೋಡಿದರೆ ರೈತರ ಬಗ್ಗೆ ಒಂದೇ ಒಂದು ಸಣ್ಣ ರಿಯಾಯಿತಿ ಕೂಡ ಇಲ್ಲ. ಇವೊತ್ತು ಈ ದೇಶಕ್ಕೆ ಅನ್ನ ನೀಡುತ್ತಿರುವಂಥ ರೈತನಿಗೆ ಒಂದು ಸಣ್ಣ ರಿಯಾಯಿತಿ ತೋರಿಸಲಿಲ್ಲವೆಂದರೆ ಯಾವ ರೀತಿ ಇವರು ರೈತರುಗಳ ಬಗ್ಗೆ ಕಾಳಜಿ ಇಟ್ಟುಕೊಂಡಿದ್ದಾರೆಂಬುದನ್ನು ತಾವು ಗಮನಿಸಬೇಕು. ಇದರ ಬಗ್ಗೆ ಯಾವುದೇ ರೈತರು ಕೂಡ ಪ್ರತಿಭಟನೆ ಮಾಡುತ್ತಿಲ್ಲವೆಂದು ಮಾನ್ಯ ಸಹಕಾರ ಸಚಿವರು ಹೇಳುತ್ತಾರೆ. ಇವೊತ್ತಿನ ಪರಿಸ್ಥಿತಿ ಏನಾಗಿದೆಯೆಂದರೆ, ರೈತ ಪ್ರತಿಭಟನೆ ಮಾಡುವಂಥ ಶಕ್ತಿಯನ್ನೇ ಕಳೆದುಕೊಂಡಿದ್ದಾನೆ. ಇವೊತ್ತು ಅವರಿಗೆ ಸರಿಯಾದ ರೀತಿಯಲ್ಲಿ ವಿದ್ಯುತ್ ಸೌಕರ್ಯ ಕೊಟ್ಟು ಸರಿಯಾಗಿ ನೋಡಿಕೊಂಡರೆ ಅವರಿಗೆ ಪ್ರತಿಭಟನೆ ಮಾಡುವ ಶಕ್ತಿ ಬರುತ್ತದೆ. ಆದರೆ, ಇವರ ಮೇಲೆ ಬೀಳುತ್ತಿರತಕ್ಕಂಥ ಹೊರೆಯಿಂದಾಗಿ ಆತ ನಿಶ್ಯಕ್ತನಾಗಿ ಪ್ರತಿಭಟಿಸದಿರತಕ್ಕ ಸ್ಥಿತಿ ತಲುಪಿದ್ದಾನೆ. ಇವೊತ್ತು ಸರಿಯಾದ ವೋಲ್ಟೇಜಿನಲ್ಲಿ ಕರೆಂಟ್ ಕೊಟ್ಟರೆ ರೈತ ತೃಪ್ತನಾಗುತ್ತಾನೆಂದು ಸಹಕಾರ ಸಚಿವರು ಹೇಳಿದರು. ಅದನ್ನು ನೀವು ಮಾಡುತ್ತಿಲ್ಲ. ದಯಮಾಡಿ ನೀವು ನನ್ನ ಕ್ಷೇತ್ರವಾದ ಕುಣಿಗಲ್‌ಗೆ ಹೋಗಿ ನೋಡಿ, ಇವೊತ್ತು ಹಳ್ಳಿಗಳಿಗೆ ಹೋಗುವುದಕ್ಕಾಗುತ್ತಿಲ್ಲ, ಬಹಳ ತೊಂದರೆಯಾಗಿದೆ. ದಿನದ 24 ಗಂಟೆಗಳಲ್ಲಿ 18 ಗಂಟೆಗಳ ಕಾಲ ವಿದ್ಯುತ್ ಇರುವುದಿಲ್ಲ, ವಿದ್ಯುತ್ ಕೊಡುವ ಆರು ಗಂಟೆಗಳಲ್ಲೂ ವೋಲ್ಟೇಜ್ ಇರುವುದಿಲ್ಲ, ರೈತರುಗಳ ಜಮೀನೆಲ್ಲವೂ ಒಣಗಿ ಹೋಗಿವೆ, ನಾವು ಹೋಗುವುದಕ್ಕಾಗುತ್ತಿಲ್ಲ. ಅಂತಾದ್ದರಲ್ಲಿ ನೀವು ಕನ್‌ಸೇಶನ್ ಕೊಡುವುದಿಲ್ಲ, ಕರೆಂಟ್ ಸಹ ಕೊಡುವುದಿಲ್ಲ. I cannot understand the logic of the Government.

+ಶ್ರೀ ಶರಣಪ್ಪ ದರ್ಶನಾಪುರ್ (ವಿದ್ಯುತ್ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ರಿಯಾಯಿತಿ ಬಗ್ಗೆ ಈಗಾಗಲೇ ಸ್ಟೇಟ್‌ಮೆಂಟ್ ಮಾಡಿದ್ದೇನೆ. ಅದರ ಬಗ್ಗೆ ವಿರೋಧ ಪಕ್ಷದ ನಾಯಕರು ಮತ್ತು ಇತರ ಹಿರಿಯ ಸದಸ್ಯರುಗಳು ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಸರ್ಕಾರ ಇದರ ಬಗ್ಗೆ ಯಾವುದೇ ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಂಡಿಲ್ಲ. ಈಗಾಗಲೇ ಅಧ್ಯಕ್ಷರೆ ತಮ್ಮ ಕೊಠಡಿಯಲ್ಲಿ ವಿರೋಧಪಕ್ಷದ ನಾಯಕರು ಹೇಳಿದಂತೆ ಮುಖ್ಯಮಂತ್ರಿಯವರ ಸಮ್ಮುಖದಲ್ಲೇ ಅವರು ಹೇಳಿದಂಥ ಎಲ್ಲಾ ಹೇಳಿಕೆಗಳನ್ನು, ಸಲಹೆಗಳನ್ನು ಒಪ್ಪಿಕೊಂಡು ಯಾವ್ಯಾವುದರಲ್ಲಿ ಕಡಿಮೆ ಮಾಡಲು ಸಾಧ್ಯ ಎನ್ನುವ ಬಗ್ಗೆ ನನ್ನ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದ್ದೇನೆ. 1- 1- 1997ರಿಂದ ಒಂಭತ್ತು ತಿಂಗಳವರೆಗೆ ನಾವು ನೀಡಿರುವ ರಿಯಾಯಿತಿಯಿಂದ ಸುಮಾರು 26 ಕೋಟಿ ರೂಪಾಯಿ

ಕಡಿಮೆಯಾಗುತ್ತದೆ. ಹಿರಿಯ ಸದಸ್ಯರಾದ ಮಾನ್ಯ ನಂಜೇಗೌಡರು ಯಾವ್ಯಾವುದಕ್ಕೆ ಎಷ್ಟು ರಿಯಾಯಿತಿ ಕೊಟ್ಟಿದ್ದೀರೆಂದು ಕೇಳಿದ್ದಾರೆ. ನಾವು ಸುಮಾರು 26-30 ಕೋಟಿ ರೂಪಾಯಿಗಳವರೆಗೆ ರಿಯಾಯಿತಿ ಒಟ್ಟಾರೆ ಕೊಟ್ಟಿದ್ದೇವೆ. ಸೆಕ್ಟಾರ್‌ವೈಸ್ ಎಷ್ಟು ರಿಯಾಯಿತಿ ಕೊಟ್ಟಿದ್ದೇವೆಂದು ನನ್ನ ಹತ್ತಿರ ಮಾಹಿತಿ ಇಲ್ಲ. ಅಂದಾಜು ಒಟ್ಟಾರೆ 30 ಕೋಟಿ ರೂಪಾಯಿವರೆಗೆ ರಿಯಾಯಿತಿ ಬರುತ್ತದೆ. 1-1-1997ರಿಂದ ನಾವೇನು ಟ್ಯಾರಿಫ್ ಹೆಚ್ಚು ಮಾಡಿದ್ದೇವೆ ಅದರಲ್ಲಿ ರಿಯಾಯಿತಿಯನ್ನು ಕೊಟ್ಟರೆ ಈ ಒಂಭತ್ತು ತಿಂಗಳಿನಲ್ಲಿ ಸುಮಾರು 30 ಕೋಟಿ ರೂಪಾಯಿ ಕಡಿಮೆ ಯಾಗುತ್ತದೆ. ನಮಗೆ ಈ ಒಂಭತ್ತು ತಿಂಗಳಿನಲ್ಲಿ ಟ್ಯಾರಿಫ್ ಹೆಚ್ಚು ಮಾಡಿದ್ದರಿಂದ 260270 ಕೋಟಿ ರೂಪಾಯಿ ರಿಯಲೈಜೇಷನ್ ಆಗುತ್ತದೆ. ಗೃಯೋಪಯೋಗಿ ವಿದ್ಯುತ್ ಬಳಕೆದಾರರಿಗೆ ಬಹಳಷ್ಟು ಅನುಕೂಲತೆಯನ್ನು ಈಗಾಗಲೇ ಕೊಟ್ಟಿದ್ದೇವೆ. ಮೊದಲು 101 ಯೂನಿಟ್‌ವರೆಗೆ 1 ರೂ.25 ಪೈಸೆ ಇತ್ತು ಅದನ್ನು 200 ಯೂನಿಟ್‌ವರೆಗೆ ವಿಸ್ತರಣೆ ಮಾಡಿದ್ದೇವೆ. ಎ.ಇ.ಹೆಚ್.ನವರಿಗೆ ಇದ್ದ 200 ಯೂನಿಟ್‌ಗಳನ್ನು 300 ಯೂನಿಟ್‌ವರೆಗೆ ಹೆಚ್ಚು ಮಾಡಿದ್ದೇವೆ. ಕಮರ್ಶಿಯಲ್ ಉದ್ದೇಶಿತ ವಿದ್ಯುತ್‌ಗೆ ಒಂದು ಯೂನಿಟ್‌ಗೆ 1 ರೂ. 50 ಪೈಸೆ ಇದ್ದದ್ದನ್ನು 1 ರೂ. 45 ಪೈಸೆಗೆ ಇಳಿಸಿದ್ದೇವೆ. ವಿರೋಧ ಪಕ್ಷದ ಉಪನಾಯಕರು ಎಲ್.ಟಿ. ಕೈಗಾರಿಕೆಗಳಿಗೆ ಏನು ರಿಯಾಯಿತಿ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಆದರೆ ಈಗೇನು ಟ್ಯಾರಿಫ್ ಇದೆ ಅದಕ್ಕೆ ಮೊದಲ ವರ್ಷ 30 ಪರ್‌ಸೆಂಟ್, ಎರಡನೆ ವರ್ಷ 20 ಪರ್‌ಸೆಂಟ್, ಮೂರನೇ ವರ್ಷ 10 ಪರ್‌ಸೆಂಟ್ ರಿಯಾಯಿತಿ ಇದೆ. ಅವರು ಎಲ್.ಟಿ.ಯಿಂದ ಹೆಚ್.ಟಿಗೆ ಪರಿವರ್ತನೆ ಮಾಡಲು ಮೂರು ವರ್ಷ ಸಮಯವಿದೆ. ಅದಕ್ಕೆ ಮೇಲೆ ತಿಳಿಸಿರುವಂತೆ ವರ್ಷಾವಾರು ರಿಯಾಯಿತಿ ಇದೆ. ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆಂದು ಭಾವಿಸಿದ್ದೇನೆ. ಯಾವ್ಯಾವ ಸೆಕ್ಟಾರ್‌ಗಳಲ್ಲಿ ಎಷ್ಟು ಹೆಚ್ಚು ಹಣ ಬರುತ್ತದೆ ಎಂಬ ಬಗ್ಗೆ ತಮಗೆ ನಾಳೆ ಮಾಹತಿಯನ್ನು ಒದಗಿಸುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಅವರೇನು ಬೆಲೆ ಜಾಸ್ತಿ ಮಾಡಿದ್ದಾರೆ ಅದರಿಂದ ಒಂದು ವರ್ಷಕ್ಕೆ ಸುಮಾರು 380-400 ಕೋಟಿ ಬರುತ್ತದೆ. ಅವರು ಒಂಭತ್ತು ತಿಂಗಳಿಗೆ ಸುಮಾರು 200 ಕೋಟಿ ಬರುವುದಾಗಿ ಹೇಳಿದ್ದಾರೆ. ಇವರು ಕಡಿಮೆ ಮಾಡಿದ್ದು 26 ಕೊಟಿ ರೂಪಾಯಿಗಳು. ನಾಲ್ಕುನೂರು ಕೋಟಿಯಲ್ಲಿ ಕೇವಲ 26 ಕೋಟಿ ರಿಯಾಯಿತಿ ಏಕೆ ಬೇಕಾಗಿತ್ತು? ಕೊಡದಿದ್ದರೂ ಸಹ ಆಗಿತ್ತು. ನಮ್ಮ ಕಡೆ ''ಪಾಡ್ ಕೊಲ್‌ಕೆ ಚೂವ್ವಾ ನಿಕಾಲೆ'' ಎಂದು ಹೇಳುತ್ತಾರೆ. ''ಬೆಟ್ಟವನ್ನು ಬಗೆದು ಇಲಿಯನ್ನು ಹಿಡಿದಂತೆ'' ಎಂದು ಹೇಳುತ್ತಾರೆ. ಹಾಗೆ ಇಡೀ ಗುಡ್ಡವನ್ನು ಬಗೆದು ಇಲಿಯೂ ಇಲ್ಲ ಇರುವೆಯನ್ನು ಹಿಡಿದಂತಾಯಿತು, ಆ ರೀತಿ ರಿಯಾಯಿತಿಯನ್ನು ಕೊಟ್ಟು 45 ಲಕ್ಷ ರೈತರಿಗೆ ರಿಯಾಯಿತಿ ಕೊಟ್ಟಿದ್ದೇವೆ, ಇದನ್ನು ಪ್ರಕಟಣೆ ಮಾಡಲು ನಮಗೆ ಹರ್ಷವಾಗುತ್ತದೆ ಎಂದು ಮುಖ್ಯಮಂತ್ರಿಯವರ ಪರವಾಗಿ ಸ್ಟೇಟ್‌ಮೆಂಟ್ ಕೊಡುತ್ತಾರೆಂದರೆ ಇವರಿಗೆ ರಾಜ್ಯದ ರೈತರ, ಬಡವರ ಬಗ್ಗೆ

ಎಷ್ಟರಮಟ್ಟಿಗೆ ಅನುಕಂಪವಿದೆ ಎಂಬುದು ತಮಗೇ ಗೊತ್ತಾಗುತ್ತದೆ. ರಿಯಾಯಿತಿಯನ್ನು ಈ ರೀತಿ ಕೊಡದಿದ್ದರೆಯೇ ಒಳ್ಳೆಯದಿತ್ತು. ನಾವು ನಿಮ್ಮನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಬಿಟ್ಟುಬಿಟ್ಟಿದ್ದೇವೆ. ನಾವು ಸರ್ಕಾರದ ಮೇಲೆ ಚಾರ್ಜ್‌ನ್ನು ಮಾಡಿದರೆ ಅದಕ್ಕೆ ಅವರು ಉತ್ತರ ಕೊಡತಕ್ಕ ಶಕ್ತಿಯನ್ನು ಇಟ್ಟುಕೊಂಡಿಲ್ಲ, ಅವರೇನೂ ಉತ್ತರ ಕೊಡುವುದಿಲ್ಲವೆಂದು ನಾವು ಅವರನ್ನು ಬಿಟ್ಟುಬಿಟ್ಟಿದ್ದೇವೆ. ರೈತರ ಪಂಪುಸೆಟ್ಟಿನ ಮೇಲೆ ರಿಯಾಯಿತಿ ಕೇಳಿದ್ದೇವೆ, ಹಿಂದೆ ಅದರ ಬಗ್ಗೆ ಸದನದಲ್ಲಿ ಧರಣಿ ಮಾಡಿದ್ದೇವೆ, ಮರುದಿನ ಹೊರಗಡೆ ಇವರ ಮನಸ್ಸನ್ನು ಯಾವುದಾದರೂ ದೃಷ್ಟಿಯಿಂದ ಮನವೊಲಿಸಬೇಕೆಂದು ಧರಣಿ ಮಾಡಿದ್ದೇವೆ, ಅವರು ತಮ್ಮ ಮಾತಿಗೂ ಅಷ್ಟೊಂದು ಬೆಲೆ ಕೊಡಲಿಲ್ಲ. ತಾವು ನಿಮ್ಮ ನಿಮ್ಮ ಪಾಡಿಗೆ ಏನಾದರೂ ಮಾಡಿಕೊಳ್ಳಿ ಎಂದು ಆ ಸಂದರ್ಭದಲ್ಲಿ ನಮಗೂ ಕೈಬಿಟ್ಟರಿ. ನಂಜೇಗೌಡರು ಸಹ ಸ್ವಲ್ಪ ಕೈಬಿಟ್ಟರು. ಹೀಗಾಗಿ ನಮ್ಮ ಪರಿಸ್ಥಿತಿ ಆಗ ಬಹಳ ಗಂಭೀರವಾಯಿತು. ಈ ಇಶ್ಯೂನಲ್ಲಿ ಎಲ್ಲರ ಅಭಿಮತವೂ ಒಂದೇ ಅದೂ ನಾವು ಪ್ರತಿಭಟನೆ ಮಾಡಿದ ಮೇಲೆ 26 ಕೋಟಿ ರೂಪಾಯಿ ರಿಯಾಯಿತಿ ಕೊಟ್ಟಿದ್ದಾರೆ. ಇಡೀ ರಾಜ್ಯದಲ್ಲಿ ಪ್ರತಿಯೊಬ್ಬರು ಇದರ ಬಗ್ಗೆ ರೊಚ್ಚಿಗೆದ್ದಿದ್ದಾರೆ. ತಾವು ಯಾರೂ ನಮ್ಮನ್ನು ಕೇಳುವುದಿಲ್ಲ, ಕೆಣಕುವುದಿಲ್ಲವೆಂದು ತಿಳಿದುಕೊಂಡಿರಬೇಕು. ಅದು ಸರಿಯಲ್ಲ. ಕೆಲವು ಸಲ ಜನರು ಪ್ರತಿಭಟನೆ ಮಾಡುವುದಿಲ್ಲ ಮುಗ್ಧವಾಗಿರುತ್ತಾರೆ ಸಮಯ ಬಂದಾಗ ಪ್ರತಿಭಟನೆ ಮಾಡುತ್ತಾರೆ. ನವಲ್‌ಗುಂದ್ ನರ್‌ಗುಂದದಲ್ಲಿ ಯಾವುದೇ ಆರ್ಗನೈಜೇಷನ್ ಮಾಡಿಲ್ಲದಿದ್ದರು ಒಂದೇ ಸಲ ಪ್ರತಿಭಟನೆ ಎದ್ದುಬಿಟ್ಟಿತು ಇದು ತಮಗೆಲ್ಲ ಗೊತ್ತಿರಬೇಕು. ಆ ರೀತಿ ಒಂದೇ ಸಲ ರೈತರೆಲ್ಲರು, ಜನರೆಲ್ಲರು ಎಮೋಷನಲ್ ಆಗಿ ತೆಗೆದುಕೊಂಡರೆ ನಾವೆಲ್ಲರೂ ರಸ್ತೆಯಲ್ಲಿ ಓಡಾಡಲು ಕಷ್ಟವಾಗುತ್ತದೆ. ತಾವು ಯಾವುದೇ ರಿಯಾಯಿತಿ ಕೊಡದೆ ಸುಮ್ಮನೆ ಸ್ಟೇಟ್‌ಮೆಂಟ್ ಓದಬೇಕೆಂದು ಓದಿದ್ದೀರಿ, ಇದರಲ್ಲಿ ಯಾವುದೇ ಸತ್ವವಿಲ್ಲ. ಆದ್ದರಿಂದ ತಾವು ರಿಯಾಯಿತಿ ಕೊಡುವ ಮೊದಲು ಯೋಚನೆ ಮಾಡಿ, ಹಿಂದಿನ ಆರ್ಡರ್‌ನ್ನು ರದ್ದು ಮಾಡಿ ಎಂದು ಇಲ್ಲಿ ಹೋರಾಟ ಮಾಡಿದರೆ ಅದಕ್ಕೂ ಸಹ ತಾವು ಬೆಲೆ ಕೊಡಲಿಲ್ಲ. ಆದ್ದರಿಂದ ಇದನ್ನು ನಾವು ಯಾವಾಗಲೂ ಒಪ್ಪಲು ಸಾಧ್ಯವಿಲ್ಲ. ನಾವೆಲ್ಲ ವಿರೋಧ ಪಕ್ಷದವರು ಇದರ ಬಗ್ಗೆ ಪ್ರತಿಭಟಿಸುತ್ತೇವೆ. ಪ್ರಜಾಪ್ರಭುತ್ವದಲ್ಲಿ ತಮ್ಮ ಕತ್ತನ್ನು ಹಿಡಿದು ಕೇಳಲು ಅವಕಾಶವಿಲ್ಲ. ಆದ್ದರಿಂದ ಮತ್ತೆ ಇದರಲ್ಲಿ ಏನಾದರೂ ರಿಯಾಯಿತಿ ಕೊಡಲು ಸಾಧ್ಯವೆ ಎಂಬ ಬಗ್ಗೆ ಅವರು ಯೋಚನೆ ಮಾಡಬೇಕಾಗಿ ವಿನಂತಿಸುವೆ. ಮುಂದೆ ಚುನಾವಣೆ ಬರುತ್ತಿದೆ ತಾವು ಹೆಚ್ಚು ರಿಯಾಯಿತಿ ಕೊಟ್ಟಿದ್ದಲ್ಲಿ ಅವರಿಗೇ ಅನುಕೂಲವಾಗುತ್ತದೆ. ಅದನ್ನು ತಿಳಿದುಕೊಂಡು ಸಹಾಯ ಮಾಡುತ್ತಾರೆಂದು ನಾನು ಭಾವಿಸಿದ್ದೇನೆ. ನಾವೆಲ್ಲರೂ ಇದನ್ನು ಪ್ರತಿಭಟಿಸುತ್ತೇವೆ. ಇವರೇನು 400 ಕೋಟಿ ರೂಪಾಯಿಗಳಲ್ಲಿ ರಿಯಾಯಿತಿ ಕೊಟ್ಟಿದ್ದಾರೆ ಅದು ಕಡಿಮೆಯಾದಂತಾಗುವುದಿಲ್ಲ. ಬಡವರಿಗೆ ಇದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ರೈತರಿಗೆ ಆಗುವುದಿಲ್ಲ. ಮೂವತ್ತು ನಲವತ್ತು ಸಾವಿರ

ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಡುತ್ತೇವೆಂದು ಹೇಳಿದ್ದರು ಅದರ ಬಗ್ಗೆ ಸಹ ಮಾಹಿತಿ ಇಲ್ಲ. ಆದ್ದರಿಂದ ಇವೆಲ್ಲವನ್ನೂ ಪ್ರತಿಭಟಿಸಿ ನಾವು ಸದನದಿಂದ ಹೊರಕ್ಕೆ ಹೋಗುತ್ತಿದ್ದೇವೆ. ಜನರೇ ಈ ಸರ್ಕಾರಕ್ಕೆ ಬುದ್ಧಿಕಲಿಸುತ್ತಾರೆ. ಅವರು ಸ್ಟೇಟ್‌ಮೆಂಟ್ ಮಾಡುವವರೆಗೆ ಕುಳಿತುಕೊಳ್ಳುತ್ತೇವೆ.

+ ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಕೊಟ್ಟಂತೆಯೂ ಇರಬಾರದು ಕೊಡದಿದ್ದಂತೆಯೂ ಇರಬಾರದು ಆ ರೀತಿ ನಮಗಿಲ್ಲಿ ರಿಯಾಯಿತಿಯನ್ನು ಅವರ ಸ್ಟೇಟ್‌ಮೆಂಟ್‌ನಲ್ಲಿ ತೋರಿಸಿದ್ದಾರೆ. ಇವತ್ತು ಕೆ.ಇ.ಬಿ., ಕೆ.ಎಸ್.ಆರ್.ಟಿ.ಸಿ.ಯಾವುದೇ ಸಂಸ್ಥೆಯ ಬಗ್ಗೆ ರಾಜ್ಯದ ಜನರಿಗೆ ವಿಶ್ವಾಸವಿಲ್ಲ. ಇವರ ಭ್ರಷ್ಟಾಚಾರದಿಂದ, ಸೋರುವಿಕೆಯಿಂದಾಗಿ ನಮ್ಮ ಹತ್ತಿರ ಹಣವನ್ನು ತೆಗೆದುಕೊಳ್ಳುತ್ತಾರೆಂದು ಜನರಿಗೆ ಗೊತ್ತಾಗಿ ಬಿಟ್ಟಿದೆ. ರಾಜ್ಯದ ಜನರು ಇಷ್ಟೆಲ್ಲಾ ಪ್ರತಿಭಟನೆ ಮಾಡಿ, ಎಲ್ಲಾ ವಿರೋಧ ಪಕ್ಷಗಳು ಒಗ್ಗಟ್ಟಾಗಿ ತಮ್ಮ ಪ್ರತಿಭಟನೆಯನ್ನು ಜನತೆಯ ಅಳಲನ್ನು ತಿಳಿಸಿದ ಮೇಲೂ ಸಹ ಯಾವುದೇ ರೀತಿಯಲ್ಲಿ ಸಹಾಯವಾಗುವ ನಿಟ್ಟಿನಲ್ಲಿ ಬೆಲೆಯನ್ನು ಇಳಿಸಿಲ್ಲ. ಕಣ್ಣೊರೆಸುವ ತಂತ್ರವನ್ನು ಇಂದು ಅನುಸರಿಸಿದ್ದೀರಿ. ಸದನ ಸೇರುವುದಕ್ಕೆ ಮೊದಲು ಬೆಲೆ ಜಾಸ್ತಿ ಮಾಡೋಣ, ಸ್ವಲ್ಪ ಪ್ರತಿಭಟನೆ ಮಾಡುತ್ತಾರೆ ಆನಂತರ ಸ್ವಲ್ಪ ಬೆಲೆ ಇಳಿಸೋಣವೆಂದು ತಮಗೆ ಮೊದಲೇ ಗೊತ್ತಿತ್ತು ಎಂದು ಕಾಣುತ್ತದೆ. 5 ರೂಪಾಯಿ ಇದ್ದದನ್ನು 12 ರೂಪಾಯಿಗೆ ಏರಿಸುವುದು ಆನಂತರ 11 ರೂಪಾಯಿಗೆ ಇಳಿಸುವುದು, ಹೋ, ಹೋ, ಒಂದು ರೂಪಾಯಿ ಕಡಿಮೆಯಾಯಿತು ಎಂದು ಎಲ್ಲರೂ ಸಮಾಧಾನವಾಗುತ್ತಾರೆ. ಈ ತಂತ್ರವನ್ನು ತಾವು ಅನುಸರಿಸಿದ್ದೀರಿ. ತಾವು ನಿಜವಾಗಿ ಸರಿಯಾಗಿ ವಿದ್ಯುಚ್ಛಕ್ತಿ, ಒಳ್ಳೆಯ ಓಲ್ಟೇಜ್ ಕೊಡುತ್ತಿಲ್ಲ ಅದರ ಜೊತೆಗೆ ಬೆಲೆ ಏರಿಸಿ ಜನರಿಗೆ ಬರೆ ಹಾಕಿದ್ದೀರಿ. ಆದ್ದರಿಂದ ವಿರೋಧ ಪಕ್ಷದ ಎಲ್ಲರೂ ಏನು ಕೇಳಿದ್ದೇವೆ ಅದರಂತೆ ಈ ಸ್ಟೇಟ್‌ಮೆಂಟ್‌ನ್ನು ವಾಪಸ್ ತೆಗೆದುಕೊಳ್ಳಿ. ಒಂದು ಸದನದ ಸಮಿತಿ ಮಾಡಿ ಜನತೆಗೆ ನಿಜವಾದ ರೀತಿಯಲ್ಲಿ ಅವರಿಗೆ ಬೆಲೆ ಏರಿಕೆಯ ತೊಂದರೆಯನ್ನು ತಪ್ಪಿಸುವ ಬಗ್ಗೆ ಮರುಪರಿಶೀಲನೆ ಮಾಡಿ. ಉತ್ತಮವಾದ ದರವನ್ನು ನಿಗದಿ ಮಾಡಿ. ಆ ರೀತಿ ಮಾಡದಿದ್ದರೆ ತಮ್ಮ ಸ್ಟೇಟ್‌ಮೆಂಟ್‌ನ್ನು ಪ್ರಬಲವಾಗಿ ಪ್ರತಿಭಟಿಸುತ್ತೇವೆಂದು ಹೇಳಬಯಸುತ್ತೇನೆ.

5.40 ಪಿ.ಎಂ

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ ವಿಧಾನ ಸಭಾ ಕ್ಷೇತ್ರ): ಮಾನ್ಯ ಅಧ್ಯಕ್ಷರೇ, ಸರ್ಕಾರ ಜನರ ಮೇಲೆ ಇವತ್ತು ಒಂದಲ್ಲಾ ಒಂದು ರೀತಿಯಲ್ಲಿ ಬರೆ ಎಳೆಯುತ್ತಾ ಇದೆ. ನೀರಿನ ದರ ಜಾಸ್ತಿ ಮಾಡಿದರು, ಸಾರಿಗೆ ದರ ಜಾಸ್ತಿ ಮಾಡಿದರು, ಇನ್ನು ವಿದ್ಯುಚ್ಛಕ್ತಿ ದರವನ್ನಂತೂ ತಮ್ಮ ಮನಸ್ಸಿಗೆ ಬಂದಂತೆ ಜಾಸ್ತಿ ಮಾಡತ್ತಾ ಇದ್ದೀರಿ. ನಿಜವಾಗಿ ನಿಮಗೆ ಹೃದಯ ಇದೆಯಾ, ಜನಗಳ ಬಗ್ಗೆ ತಮಗೆ ಪ್ರೀತಿ ಇದೆಯಾ ಏನು

ಮೌನವಾಗಿ ಇದ್ದೀರಿ ಏನು ಇದು. ಭೈರೇಗೌಡರ ಲೆಕ್ಕಚಾರದಂತೆ ನೀವು ರಾಜೀನಾಮೆಯನ್ನು ಕೊಡುತ್ತೀರಿ ಎಂದು ತಿಳಿದುಕೊಂಡಿದ್ದೆ ನಾನು. ಆದರೆ ನೀವು ಕೊಡಬಾರದು. ಏಕೆಂದರೆ ನೀವು ಒಬ್ಬರು ದಕ್ಷ ಮಂತ್ರಿಗಳು ಅದಕ್ಕೆ ನಾನು ಸಂತೋಷಪಡುತ್ತೇನೆ. ಇವತ್ತು ಪರಿಸ್ಥಿತಿ ಏನು ಆಗಿದೆ ಎಂದರೆ, ಈ ವಿದ್ಯುಚ್ಛಕ್ತಿ ಬಗ್ಗೆ ಈ ಸದನದಲ್ಲಿ ಈ ಭಾಗದಲ್ಲಿ ಕುಳಿತುಕೊಂಡು ಮಾಡಿದ ಹೋರಾಟವನ್ನು ತಾವು ಮರೆತಿದ್ದೀರಾ. ಹೆಜ್ಜೆ, ಹೆಜ್ಜೆಗೆ ನೀವು ವಿದ್ಯುಚ್ಛಕ್ತಿ ಬಗ್ಗೆ ಮಾಡಿದ ಹೋರಾಟದ ಆ ದಿನಗಳನ್ನು ನೆನಸಿಕೊಳ್ಳಿ ನಿಮ್ಮ ಮನಸ್ಸು ಮುಟ್ಟಿಕೊಂಡು ವಿಚಾರ ಮಾಡಿ. ಈ ಪರಿಸ್ಥಿತಿಯಲ್ಲಿ ಜನರಿಗೆ ಕೈಗಾರಿಕೆಗಳ ಅನುಕೂಲವಾಗಿಲ್ಲ, ರೈತರಿಗೆ ಅನುಕೂಲವಾಗಿಲ್ಲ, ಗೃಹಬಳಕೆಗೆ ಅನುಕೂಲವಾಗಿಲ್ಲ ಯಾರ ಹಿತಕೋಸ್ಕರ ಇದನ್ನು ಮಾಡುತ್ತಿದ್ದೀರಿ? ಯಾರು ನಿಮ್ಮನ್ನು ಕೇಳಿರಲಿಲ್ಲ, ಈ ಕದ ತಿನ್ನುವವನಿಗೆ ಹಪ್ಪಳ ಹಿಡಿದ ಹಾಗೆ, ನೀವು ಇದನ್ನು ಸ್ವಲ್ಪ ಕೊಟ್ಟು ಮಾಡುತ್ತಿದ್ದೀರಲ್ಲ ಇದು ಯಾರಿಗೂ ಶೋಭೆ ತರತಕ್ಕದ್ದು ಅಲ್ಲ. ಸರ್ಕಾರ ನಡೆಸುತ್ತಿರುವ ನೀವು ಸ್ವಲ್ಪ ಗೌರವ ಪ್ರಾಮಾಣಿಕವಾಗಿ ರಾಜ್ಯದ ಜನತೆಗೆ ಏನು ಮಾಡುತ್ತಿದ್ದೇವೆ ಎನ್ನತಕ್ಕ ಚಿಂತನೆ ಇಲ್ಲ ಎಂದರೆ ಹೇಗೆ? ಈ ಕಡೆಗೆ ಕುಳಿತುಕೊಂಡಾಗ ಒಂದು ತರಹ ಚಿಂತನೆ ಮಾಡುತ್ತೀರಿ. ಅಲ್ಲಿ ಹೋದ ಮೇಲೆ ಮೌನವಾಗಿದ್ದೀರಿ, ಏಕೆ ಮೌನ? ಕಾರಣವೇನು? ನೀವು ಅನ್ಯಾಯ ನಡೆದಿದೆ ಎಂದು ತೀರ್ಮಾನವನ್ನು ಹೇಳಬೇಕು ಆಗ, ನಾವು ಸಂತೋಷಪಡುತ್ತೇವೆ. ಯಾವುದೇ ತೀರ್ಮಾನ ಇಲ್ಲದೆ ತಾವು ಮೌನವಾಗಿರತಕ್ಕ ಪರಿಸ್ಥಿತಿ ಸರಿಯಲ್ಲ, ಇದು ಶೋಭೆತರತಕ್ಕಂಥದ್ದು ಅಲ್ಲ. ಇವತ್ತು ನಿಮ್ಮ ಸಚಿವರ ಹಣೆಬರಹವನ್ನು ದೇವರೇ ಕಾಪಾಡಬೇಕು. ನಿಮ್ಮ ಸಚಿವರ ಗತಿ ಹೀಗಾದರೆ ಈ ರಾಜ್ಯದ ಸಚಿವರೇ ಅಲ್ಲ ಇವರು ಎಂದು ಇವತ್ತು ತೀರ್ಮಾನವಾಗಿ ಹೋಯಿತು. ನೀವು ಯಾರು ಸಚಿವರಾಗಿ ಉಳಿದಿಲ್ಲ. ನನ್ನ ಲೆಕ್ಕಾಚಾರದ ಪ್ರಕಾರ ಐದಾರು ಜನ ರಾಜೀನಾಮೆ ಕೊಡುತ್ತೀರಿ ಎಂದು ತಿಳಿದಿದ್ದೆ ನೀವು ಕೊಡಲಿಲ್ಲ. ನೀವು ರಾಜೀನಾಮೆ ಕೊಡಲು ನೀವು ಏನು ಪಿ.ಸಿದ್ದಲಿಂಗಯ್ಯನವರು ಕೆಟ್ಟೋದ್ರ ಎಂ.ವಿ.ರಾಮರಾಯ್ ಕೆಟ್ಟೋದ್ರ ಏನು ಅದನ್ನು ನಿಮಗೆ ಹೋಲಿಸಲು ಆಗುವುದಿಲ್ಲ. ಆ ರಾಜೀನಾಮೆ ಪ್ರಶ್ನೆ ನಿಮಗೆ ಜ್ಞಾಪಕ ಇಲ್ಲ ಎಂದು ಕಾಣುತ್ತದೆ.

ಅಧ್ಯಕ್ಷರು: ನಾನು ಮಧ್ಯಾಹ್ನ ಅವರನ್ನು ಕೇಳಿದೆ, ಸಿದ್ದಲಿಂಗಯ್ಯನವರದು, ರಾಮರಾಯ್‌ರವರದು ಎಲ್ಲಾ ಹೇಳಿದಿರಿ. ಓಹೋ ಆ ಕಡೆ ಏನು ಸಾಹುಕಾರ ಚನ್ನಬಸಪ್ಪನವರು, ಚನ್ನಯ್ಯನವರು ಕುಳಿತಿದ್ದಾರಾ ವಾಟಾಳ್ ನಾಗರಾಜ್ ಕುಳಿತಿರೋದು ಎಂದು ಇವರೆ ಹೇಳಿದರು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಿಜ ನಾನು ಒಪ್ಪುತ್ತೇನೆ. ನಾನು ಮತ್ತು ನಂಜೇಗೌಡರು ಸಾಹುಕಾರ ಚನ್ನಯ್ಯನವರ ಜೊತೆ ಇರುವುದರಿಂದಲೇ ಈಗ ಇಲ್ಲಿ ಮಾತನಾಡುತ್ತಿರಲು ಕಾರಣ, ಅವರದೇ ಇದು ಶಕ್ತಿ. ಭೈರೇಗೌಡರು ಇದ್ದರು ಕೇಳಿ ಭೈರೇಗೌಡರೆ, ಗುಲ್ಬರ್ಗಾಕ್ಕೆ ಹೋದಾಗ ತಾವು ಬಂದಿರಲಿಲ್ಲವೆ, ಅಲ್ಲಿಯ ಜನರ

ಪರವಾಗಿ ಎಷ್ಟು ಹೋರಾಟ ಮಾಡಿದ್ದೀರಿ, ಅದಕ್ಕೆ ಎಷ್ಟೊಂದು ದೊಡ್ಡ ವರದಿಯನ್ನು ಕೊಟ್ಟಿರಿ ಮತ್ತು ಆರ್ಮುಗಂ ಇದ್ದರು ಅವರು ಎಂತಹ ವರದಿಯನ್ನು ಕೊಟ್ಟರು. ಇವತ್ತು ನಿಜವಾಗಿ ಅವರನ್ನು ನಾನು ನೆನಸಿಕೊಳ್ಳಬೇಕು. ನಾನು ಹೇಳುತ್ತೇನೆ ನಿಮಗೆ ರೈತರ ಬಗ್ಗೆ, ಬಡವರ ಬಗ್ಗೆ ಕಾಳಜಿ ಇಲ್ಲ. ನಿಮ್ಮದು ಒಂದು ರೀತಿಯ ಮೊಸಳೆ ಕಣ್ಣೀರು, ಇದು ಯಾರಿಗೂ ಬೇಕಾಗಿಲ್ಲ ಎನ್ನತಕ್ಕ ಮಾತನ್ನು ಹೇಳಿ ನಾವು ನಿಜವಾಗಿ ನಿಮ್ಮ ಸರ್ಕಾರದ ನಿರ್ಧಾರವನ್ನು ತಿರಸ್ಕರಿಸುತ್ತೇವೆ. ನಮಗೇನೂ ನಿಮ್ಮ ಸರ್ಕಾರಕ್ಕೆ ಅಡ್ಡಿ ಪಡಿಸಬೇಕೆಂದು ಇಲ್ಲ. ಒಂದು ಸದನ ಸಮಿತಿಯನ್ನು ನೇಮಕ ಮಾಡಿ. ಇದೊಂದು ತಂತ್ರ ಇದು ಮೋಸಗಾರಿಕೆ ಇದು. 400 ಕೋಟಿ ರೂಪಾಯಿ ಏರಿಸುವುದು 20 ಕೋಟಿ ರೂಪಾಯಿ ಇಳಿಸುವುದು ಇದು ಜನರಿಗೆ ಮಾಡತಕ್ಕಂತಹ ಮೋಸ ಎಂದು ಹೇಳುತ್ತೇನೆ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ರೈತರ ಐಪಿ ಸೆಟ್ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದೆವು. ನೀವು ಅದಕ್ಕೆ ಉತ್ತರವನ್ನು ಕೊಡುವಾಗ ಅದನ್ನು ಮಾಡುತ್ತೇವೆ, ಮಾಡುವುದಿಲ್ಲ ಎನ್ನುವ ಬಗ್ಗೆ ಏನೂ ಹೇಳಲಿಲ್ಲ. ಆದ್ದರಿಂದ ಈ ದರವನ್ನು ನೀವು ಏನು ಪರಿಷ್ಕರಿಸಿ ನಮ್ಮ ಮುಂದೆ ಇಟ್ಟಿದ್ದೀರಿ ಇದರಿಂದ ಯಾವ ಪುರುಷಾರ್ಥದ ಸಾಧನ ಇಲ್ಲ. ಇದು ಯಾವುದೇ ವಿಭಾಗಕ್ಕೆ ಉಪಯೋಗವಾಗುವುದಿಲ್ಲ. ಭಾಗ್ಯ ಜ್ಯೋತಿಯಲ್ಲಿ ಇರುವವರು ಪಾಪ ಬಡವರು ಅವರ ಬಗ್ಗೆಯೂ ನೀವು ಹೆಚ್ಚಳವನ್ನು ಮಾಡಿದ್ದೀರಿ, ಆದ್ದರಿಂದ ಈ ನೀತಿಯನ್ನು ಪ್ರತಿಭಟನೆ ಮಾಡಿ ನಾವೆಲ್ಲರೂ ಸಭಾತ್ಯಾಗ ಮಾಡುತ್ತೇವೆ.

(ಶ್ರೀ ಬಿ.ಜೆ.ಪಿಗೆ ಸೇರಿದ ಸದಸ್ಯರು, ಕಾಂಗ್ರೆಸ್‌ಗೆ ಸೇರಿದ ಸದಸ್ಯರು, ಶ್ರೀ ವಾಟಾಳ್ ನಾಗರಾಜ್ ಮತ್ತು ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಸಭಾತ್ಯಾಗವನ್ನು ಮಾಡಿದರು)

ಅಧ್ಯಕ್ಷರು: ಪ್ರಕಾಶ್‌ರವರೆ ಈಗ ಭೈರೇಗೌಡರು ಬಂದಿದ್ದಾರೆ. ಆಲೂಗಡ್ಡೆ ವಿಚಾರ ಮಾತನಾಡಿ.

+ ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದನಾಯಕರು, ಮತ್ತು ವಿರೋಧ ಪಕ್ಷದ ಸದಸ್ಯರು ನಮ್ಮ ಮಾನ್ಯ ಮಂತ್ರಿಗಳು ವಿದ್ಯುಚ್ಛಕ್ತಿಯಲ್ಲಿ ಮಾಡಿರುವ ದರದ ಬಗ್ಗೆ ಮಾತನಾಡಿದ್ದಾರೆ. ನಾನು ವಿರೋಧ ಪಕ್ಷದಲ್ಲಿದಾಗ ವಿದ್ಯುಚ್ಛಕ್ತಿ ಬಗ್ಗೆ ಬಹಳಷ್ಟು ಮಾತನಾಡಿದ್ದೇನೆ, ಬಹಳ ಪ್ರತಿಭಟನೆ ಮಾಡಿದ್ದೇನೆ ಎಂದು ಶ್ರೀ ವಾಟಾಳ್ ನಾಗರಾಜರವರು ಹೇಳಿದರು. ನನ್ನ ಸಮಸ್ಯೆಯನ್ನು ತಮ್ಮ ಮುಖಾಂತರ ಈ ಸಭೆಯಲ್ಲಿ ಇಡಲು ಇಚ್ಛೆಪಡುತ್ತೇನೆ. ಇವತ್ತು ನನ್ನ 10 ಎಕರೆ ಭೂಮಿಯಲ್ಲಿ ಬೆಳೆ ಇದೆ, ಪೂರ್ತಿ ಮಳೆ ಹೋಗಿ ಬಿಟ್ಟಿದೆ, ಆದರು ಬಹಳ ಚನ್ನಾಗಿ ಬೆಳೆ ಬಂದಿದೆ. ಎರಡು ಕೊಳವೆ ಬಾವಿಗಳು ಇವೆ. ಆದರೆ ಮೊನ್ನೆ ನಾನು ತೋಟದ ಹತ್ತಿರ ಹೋದರೆ ಎರಡು ಕೊಳವೆ ಬಾವಿಗಳು ಕೆಲಸ ಮಾಡುತ್ತಾ ಇಲ್ಲ. ಒಂದು ಸುಟ್ಟು ಹೋಗಿದೆ, ಇನ್ನೊಂದು ಕೆಟ್ಟು ಹೋಗಿದೆ. ಇದು ಏಕೆ ಆಯಿತು ಎಂದರೆ ಅಲ್ಲಿ

ಸರಿಯಾಗಿ ಎಷ್ಟು ಓಲ್ಟೇಜ್ ಬೇಕೋ ಅಷ್ಟೆ ಬರತ್ತಾ ಇಲ್ಲ ಅಲ್ಲಿ. ಆದ್ದರಿಂದ ವಿದ್ಯುತ್ ಮೋಟಾರ್ ಸುಟ್ಟು ಹೋಗಿದೆ ಆದ್ದರಿಂದ ಇವತ್ತು ನನ್ನ ತೋಟದಲ್ಲಿಯ ಬೆಳೆ ಹಾಳು ಆಗಿದೆ. ನನ್ನದೆ ಏಕೆ ಉದಾಹರಣೆ ಕೊಡುತ್ತೇನೆ ಎಂದರೆ, ಇಡೀ ರಾಜ್ಯದಲ್ಲಿ ಇವತ್ತು ಈ ಪರಿಸ್ಥಿತಿ ಇದೆ. ಏಕೆ ಈ ಪರಿಸ್ಥಿತಿ ಉಂಟಾಗಿದೆ ಎಂದರೆ ಕೆಲವು ಕಡೆ ನಾವು ಹೋದಾಗ ರೈತರು ನಮ್ಮನ್ನು ಕೇಳುತ್ತಾರೆ, ಏನಪ್ಪಾ ಬೇಸಿಗೆಯಲ್ಲಿ ನೀರು ಇಲ್ಲ ಎನ್ನುತ್ತಿದ್ದೀರಿ, ಇವತ್ತು ನೀರು ಇದೆ, ನೀವೇ ಪತ್ರಿಕೆಯಲ್ಲಿ ಓದುತ್ತೀರಿ ಶರಾವತಿಯಲ್ಲಿ ಒಂದೇ ಅಡಿ ಬಾಕಿ ಇದೆ, ಶೇ.50ಕ್ಕಿಂತ ಹೆಚ್ಚು ನೀರು ಸೂಪದಲ್ಲಿ ಬಂದಿದೆ ಇಷ್ಟೆಲ್ಲಾ ಇದ್ದರು ವಿದ್ಯುತ್ ಉತ್ಪಾದಿಸಲು ನಿಮಗೆ ಏನು ತೊಂದರೆ ಎಂದು ಕೇಳುತ್ತಾರೆ. ನಾನು ಉತ್ತರ ಕೊಡಲು ಕಷ್ಟವಾಯಿತು ಅದನ್ನು ನಾನು ಒಪ್ಪುತ್ತೇನೆ. ಆದರೆ ವಾಸ್ತವಿಕ ಅಂಶಗಳನ್ನು ಗಮನಿಸಬೇಕಾದ್ದು ಅತಿ ಅವಶ್ಯಕವಾಗಿದೆ. ಇವತ್ತು ವಿದ್ಯುತ್ ಉತ್ಪಾದನೆ ಮಾಡತಕ್ಕ ಶಕ್ತಿ ನಮ್ಮ ರಾಜ್ಯದಲ್ಲಿ ಬೇಸಿಗೆಯಲ್ಲಿ ಒಂದು ದಿವಸಕ್ಕೆ ಬಳಕೆಯಾಗುತ್ತಾ ಇರತಕ್ಕದ್ದು ಸುಮಾರು 50ರಿಂದ 52 ದಶಲಕ್ಷ. ನಾನು ನೆನ್ನೆ ದಿವಸ ಅಧಿಕಾರಿಗಳನ್ನು ಕೇಳಿದೆ ಇವತ್ತು ಎಷ್ಟು ವಿದ್ಯುತ್ ಬಳಕೆಯಾಗಿದೆ ಎಂದು ಅವರು ಹೇಳಿದರು ಸುಮಾರು 69 ದಶಲಕ್ಷ ಬಳಕೆಯಾಗುತ್ತಿದೆ ಎಂದು. ವಿದ್ಯುತ್ ಎಲ್ಲಾ ಉತ್ಪಾದನೆಯಾಗುತ್ತದೆ ಅಲ್ಲಿಂದ ರೈತ ಬಳಸತಕ್ಕ ಜಾಗಕ್ಕೆ, ಕಾರ್ಖಾನೆಗಾಗಲಿ ಒಂದು ಕಡೆ ಟ್ರಾನ್ಸ್‌ಮಿಶನ್ ಇನ್ನೊಂದು ಕಡೆ ಡಿಸ್ಟ್ರಿಬ್ಯೂಶನ್ ಇದೆಲ್ಲಾ ಕೂಡ ಆಗಬೇಕಾಗುತ್ತದೆ. ಇವತ್ತು 52 ದಶಲಕ್ಷ ವಿದ್ಯುತ್‌ನ್ನು ಸರಬರಾಜು ಮಾಡುವ ಸಂದರ್ಭದಲ್ಲಿ ಅದು 69 ದಶಲಕ್ಷ ಯೂನಿಟ್ ಗಳಿಗೆ ಹೋದರೆ ಈ ಸಿಸ್ಟಂ ಎನ್ನುವುದು ಏನು ಇದೆ ಇದನ್ನು ಇವತ್ತು ತಡೆಯಲು ಸಾಧ್ಯವಿಲ್ಲ. ಇವತ್ತು ವಾಟಾಳ್ ನಾಗರಾಜ್‌ರವರು ಹೇಳಿದರು ನೀವು ಆಗ ವಿದ್ಯುತ್ ಬಗ್ಗೆ ವಿರೋಧ ಮಾಡಿದ್ದೀರಿ ಎಂದು ಹೌದು ನಾನು ವಿರೋಧ ಮಾಡಿದ್ದೆ ನಿಜ. ಆದರೆ ಅವತ್ತಿನ ಪರಿಸ್ಥಿತಿ ಹೇಗೆ ಇತ್ತು ಎಂದರೆ 140- 150- 170 ಯೂನಿಟ್‌ಗಳಿಗಿಂತ ಹೆಚ್ಚು ಹೋಗುತ್ತಾ ಇರಲಿಲ್ಲ ನಮ್ಮ ಪಂಪ್ ಸೆಟ್‌ಗಳಿಗೆ. ಇಷ್ಟೊಂದು ಕೆಟ್ಟ ಪರಿಸ್ಥಿತಿಯಲ್ಲಿ ಇದ್ದೆವು. ಆಮೇಲೆ ಕೆಲವು ಸುಧಾರಣೆ ಆದವು. ಈ ವಿದ್ಯುತ್ ಉತ್ಪಾದನೆ ಮತ್ತು ವಿತರಣೆಗೆ ಸಾಕಷ್ಟು ಹಣ ಖರ್ಚಾಗುತ್ತದೆ. ಒಂದು ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡಬೇಕಾದರೆ 4 ಕೋಟಿ ರೂಪಾಯಿ ಬೇಕಾಗುತ್ತದೆ. ಹಾಗೆ ಸುಮಾರು 1,000 ಮೆಗಾವ್ಯಾಟ್ ಉತ್ಪಾದನೆ ಮಾಡಬೇಕಾದರೆ 4000ಕೋಟಿ ರೂಪಾಯಿ ಬೇಕಾಗುತ್ತದೆ. ಅಷ್ಟೇ ಹಣ ಟ್ರಾನ್ಸ್‌ಮಿಶನ್ ಮತ್ತು ಡಿಸ್ಟ್ರಿಬ್ಯೂಷನ್ ಕೂಡ ಬೇಕಾಗುತ್ತದೆ. ಇಲ್ಲಿ ಬಹಳ ಅಧಿಕವಾದಂತಹ ಹಣವನ್ನು ತೊಡಗಿಸುವ ಅವಶ್ಯಕತೆ ಇದೆ. ಇವತ್ತಿನ ದಿವಸ ಆಫೀಸ್‌ಮೆಂಟ್ ಪಾಲಿಸಿ ಇವತ್ತು ಆಗತ್ತಾ ಇದೆ. ಒಂದು ಕಡೆ ಬಳಕೆದಾರರ ಸಂಖ್ಯೆ ಜಾಸ್ತಿಯಾಯಿತು, ಬಳಕೆ ಕೂಡ ಜಾಸ್ತಿಯಾಗುತ್ತಾ ಇದೆ. ಅದಕ್ಕೆ ತಕ್ಕಂತೆ ಈ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಬೇಕಾಗಿತ್ತು. ಅದು ಆಗಲಿಲ್ಲ. ಒಂದು ಕಡೆ ಉತ್ಪಾದನೆಯೂ ಹೆಚ್ಚಾಗಲಿಲ್ಲ. ವಿತರಣೆ ಪರಿಸ್ಥಿತಿ ಸುಧಾರಣೆಯಾಗುವಂಥ ಕೆಲಸವೂ ಆಗಲಿಲ್ಲ. ಅದಕ್ಕೆಲ್ಲಾ ಹಣ ಬೇಕಾಗುತ್ತದೆ. ಹಣ ಬೇಕಾಗಿದ್ದರೆ ಅದನ್ನು ಯಾರು

ಕೊಡಬೇಕಾಗುತ್ತದೆ ಎಂದರೆ, ಯಾರು ಬಳಕೆದಾರರಿರುತ್ತಾರೆ ಅವರು ಕೊಡಬೇಕಾಗುತ್ತದೆ. ನಾನು ವಿರೋಧ ಪಕ್ಷದಲ್ಲಿ ಇದ್ದಂಥ ಕಾಲದಲ್ಲಿ ವಿದ್ಯುತ್ ದರವನ್ನು ಹೆಚ್ಚು ಮಾಡಬೇಡಿ ಎಂದು ಹೇಳಲಿಲ್ಲ. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ, ಅವರು ರೈತರಿಗೆ ಉಚಿತವಾಗಿ ವಿದ್ಯುತ್ತನ್ನು ನೀಡುತ್ತೇನೆ ಎಂದು ಹೇಳಿದಂಥ ಮಾತನ್ನು ನಾನು ವಿರೋಧ ಮಾಡಿದ್ದೇನೆ. ಅವರು ಬಜೆಟ್ ಭಾಷಣವನ್ನು ಓದುತ್ತಾ ಇರತಕ್ಕಂಥ ಸಂದರ್ಭದಲ್ಲೇ ನಾನು ಅದನ್ನು ವಿರೋಧ ಮಾಡಿದ್ದೇನೆ. ರೈತರು ಯಾರೂ ಕೂಡ ಉಚಿತವಾಗಿ ವಿದ್ಯುತ್ತನ್ನು ನೀಡಿ ಎಂದು ಕೇಳುತ್ತಿಲ್ಲ. ಅದಕ್ಕೆ ಬದಲಾಗಿ ಗುಣಪಟ್ಟದ ವಿದ್ಯುತ್ತನ್ನು ನೀಡಿ ಎನ್ನತಕ್ಕಂಥಾದ್ದು ರೈತರ ಬೇಡಿಕೆಯಾಗಿರತಕ್ಕಂಥಾದ್ದು. ನೀವು ರೈತರನ್ನು ಹಾಳು ಮಾಡುತ್ತೀರಿ ಎನ್ನತಕ್ಕಂಥ ಮಾತನ್ನು ನಾನು ಆವತ್ತೇ ಹೇಳಿದ್ದೇನೆ. ಇವತ್ತೂ ಕೂಡ ನಾನು ಆ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆವತ್ತು ಈ ತಪ್ಪು ಹೆಜ್ಜೆ ಇಟ್ಟಂಥ ಕಾರಣದಿಂದ ಈ ಪರಿಸ್ಥಿತಿ ಉಂಟಾಗಿದೆ. ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಇವತ್ತಿನ ದಿವಸ ನಾವು ಮಾಡುತ್ತಿದ್ದೇವೆ ಮತ್ತು ಇದಕ್ಕೆ ಒಂದು ಸಮತಿಯನ್ನು ರಚನೆ ಮಾಡಬೇಕಾಗಿದ್ದರೆ, ಹಿಂದೆ ಎರಡೂ ಸದನದ ಒಂದು ಸಮಿತಿಯನ್ನು ರಚನೆ ಮಾಡಬೇಕಾಗಿದ್ದರೆ, ಹಿಂದೆ ಎರಡೂ ಸದನದ ಒಂದು ಸಮಿತಿಯಾಗಿದೆ. ಆ ಸಮಿತಿಯಲ್ಲಿ, ಸುಮಾರು ನಾಲ್ಕು ವರ್ಷಗಳ ಹಿಂದೆಯೇ, ರೈತರು ಉಪಯೋಗಿಸತಕ್ಕಂಥ ನೀರಾವರಿಗೆ ಒಂದು ಹೆಚ್.ಪಿ.ಗೆ ಒಂದು ನೂರು ರೂಪಾಯಿಯನ್ನಾದರೂ ಹಾಕಲೇ ಬೇಕು ಎಂದು ಆ ಸಮಿತಿಯಲ್ಲಿ ಶಿಫಾರಸ್ಸು ಆಗಿದೆ. ಆವತ್ತಿನ ದಿವಸ ಎರಡೂ ಸದನಗಳ ಸದಸ್ಯರು ಇರತಕ್ಕಂಥ ಸಮಿತಿಯಲ್ಲಿ ನಾನೂ ಸಹ ಸದಸ್ಯನಾಗಿದ್ದೆ. ಆವತ್ತು ನೂರು ರೂಪಾಯಿ ಇದ್ದದ್ದನ್ನು ಇವತ್ತಿನ ದಿವಸ ನಾವು ಅದರ ಜೊತೆಗೆ ಇನ್ನೂರು ರೂಪಾಯಿಯನ್ನು ಮಾತ್ರ ಜಾಸ್ತಿ ಮಾಡಿರತಕ್ಕಂಥಾದ್ದು. ಆವತ್ತಿನಿಂದ ಇವತ್ತಿನವರೆಗೆ ಯಾವಯಾವುದರ ಬೆಲೆ, ಎಷ್ಟೆಷ್ಟು ಹೆಚ್ಚಾಗಿದೆ ಎನ್ನುವುದನ್ನು ಸಹ ನಾವು ಗಮನಿಸಬೇಕಾಗಿರತಕ್ಕಂಥಾದ್ದು ಅತಿ ಅವಶ್ಯಕವಾಗಿದೆ. ಇದನ್ನು ಯಾರ ದೃಷ್ಟಿಯಿಂದ ಮಾಡಿರತಕ್ಕಂಥಾದ್ದು ಎಂದರೆ, ರೈತರಿಗೆ ಗುಣಮಟ್ಟದ ವಿದ್ಯುತ್ತನ್ನು ನೀಡಬೇಕು, ರೈತರಿಗೆ ಇರತಕ್ಕಂಥ ತೊಂದರೆಯನ್ನು ನಿವಾರಣೆ ಮಾಡಬೇಕು ಎಂದು. ನಿವಾರಣೆ ಮಾಡಬೇಕಾಗಿದ್ದರೆ ಅದಕ್ಕೆ ಸಾಕಷ್ಟು ಹಣ ಬೇಕಾಗುತ್ತದೆ.

ಶ್ರೀ ಹೆಚ್.ಎನ್.ನಂಜೇಗೌಡ: ಆಲೂಗೆಡ್ಡೆ ಬೆಲೆ ಹೆಚ್ಚಾಗಿದೆಯಾ? ಭತ್ತದ ಬೆಲೆ ಹೆಚ್ಚಾಗಿದೆಯಾ? ರಾಗಿ ಬೆಲೆ ಹೆಚ್ಚಾಗಿದೆಯಾ? ಅದನ್ನು ಹೇಳಿ.

ಶ್ರೀ ಸಿ.ಬೈರೇಗೌಡ: ಅದನ್ನೂ ಹೇಳುತ್ತೇನೆ. ಅದನ್ನು ಸರಪಡಿಸಬೇಕಾಗಿದ್ದರೆ ಹಣದ ಅವಶ್ಯಕತೆ ಇದೆ. ರೈತರಿಗೆ ಗುಣಮಟ್ಟದ ವಿದ್ಯುತ್ತನ್ನು ಒದಗಿಸಬೇಕಾಗಿರತಕ್ಕಂಥಾದ್ದು ಮುಖ್ಯ. ನಾನು ರಾಜ್ಯದ ಮೂಲೆಮೂಲೆಯಲ್ಲಿ ಓಡಾಡಿದ್ದೇನೆ. ರೈತರನ್ನು ಕೂಡ ಕೇಳಿದ್ದೇನೆ. ನಿಮಗೆ ಗುಣಮಟ್ಟದ ವಿದ್ಯುತ್

ಬೇಕೋ? ಅಥವಾ ಕಡಿಮೆ ದರದಲ್ಲಿ ಪುಕ್ಕಸಟ್ಟೆ ವಿದ್ಯುತ್ ಬೇಕೋ? ಎಂದು ಕೇಳಿದಾಗ, ರೈತರು ನಮಗೆ ಗುಣಮಟ್ಟದ ವಿದ್ಯುತ್ ಬೇಕು ಎನ್ನುವಂಥ ಮಾತನ್ನು ಹೇಳಿದ್ದಾರೆ. ಇವತ್ತು ಶ್ರೀಮಾನ್ ನಂಜೇಗೌಡರು ನನ್ನ ಜೊತೆ ಬರಲಿ, ಬೇಕಾದರೆ ರೈತರ ಹತ್ತಿರ ಹೋಗೋಣ. ರೈತರು ಏನು ಕೇಳುತ್ತಾರೆ ಎಂದರೆ, ಗುಣಮಟ್ಟದ ವಿದ್ಯುತ್ತನ್ನು ಕೊಡಿ, ದಿನದಲ್ಲಿ ಇಷ್ಟು ಗಂಟೆ ಎಂದು ನಿಗದಿಪಡಿಸಿ, ನಮಗೆ 10 ಗಂಟೆಯೋ, 12 ಗಂಟೆಯೋ, 15 ಗಂಟೆಯೋ ಗುಣಮಟ್ಟದ ವಿದ್ಯುತ್ತನ್ನು ನಿಗದಿಯಾದಂಥ ವೇಳೆಗೆ ಕೊಡಿ ಎನ್ನುವಂಥ ಮಾತನ್ನು ರೈತರು ಹೇಳುತ್ತಿದ್ದಾರೆಯೇ ವಿನಃ ನಮಗೆ ಪುಕ್ಕಸಟ್ಟೆ ಕೊಡಿ ಅಥವಾ ಕಡಿಮೆ ದರದಲ್ಲಿ ಕೊಡಿ ಎನ್ನುವಂಥ ಮಾತನ್ನು ನಾನು ಒಬ್ಬ ರೈತರಿಂದಲೂ ಕೇಳಿಲ್ಲ. ಇದನ್ನು ಈ ಸಭೆಯಲ್ಲಿ ನಿಂತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಬ್ಬ ರೈತನಿಂದಲೂ ಕೂಡ ನಾನು ಆ ರೀತಿ ಕೇಳಿಲ್ಲ. ನಾನು ಅದೇ ಪ್ರಶ್ನೆಯನ್ನು, ಈ ರಾಜ್ಯದ ಮೂಲೆಮೂಲೆಗೆ ಹೋದಾಗ ರೈತರನ್ನು ಕೇಳಿದ್ದೇನೆ. ಸರಿಯಾದಂಥ ವಿದ್ಯುತ್ತನ್ನು ನೀಡಿ ಎಂದು ಹೇಳುತ್ತಿದ್ದಾರೆಯೇ ವಿನಃ ನಮಗೆ ಕಡಿಮೆ ದರದಲ್ಲಿ ಕೊಡಿ ಎನ್ನುವ ಮಾತನ್ನು ಹೇಳಿಲ್ಲ. ಇವತ್ತು ಅಖಿಲ ಭಾರತ ಮಟ್ಟದಲ್ಲಿ ರೈತರಿಗೆ ಒಂದು ಯೂನಿಟ್ಟಿಗೆ 50 ಪೈಸೆಗೆ ಕೊಡಬೇಕು ಎಂದು ಕೇಂದ್ರ ಸರ್ಕಾರದ ಒಂದು ಸೂಚನೆ ಕೂಡ ಇದೆ. ಇವತ್ತು ಲೆಕ್ಕ ಹಾಕಿದರೆ, ಮೊದಲು 100 ರೂಪಾಯಿಗೆ ಕೊಡುತ್ತಿದ್ದಂಥ ಸಂದರ್ಭದಲ್ಲಿ ಒಂದು ಯೂನಿಟ್ಟಿಗೆ ಐದೂವರೆಯಿಂದ ಆರು ಪೈಸೆ ಬೀಳುತ್ತಿತ್ತು. ಇವತ್ತು ನಾವು 303 ರೂಪಾಯಿ ಮಾಡಿರುವುದರಿಂದ ಒಂದು ಯೂನಿಟ್ಟಿಗೆ 20 ಪೈಸೆಯೋ, 22 ಪೈಸೆಯೋ ಬೀಳುತ್ತಿದೆ. ಹೀಗೆ ನಾವು 50 ಪೈಸೆಯನ್ನೂ ಮಾಡಲು ಹೋಗಿಲ್ಲ. ಇದನ್ನು ಯಾರ ದೃಷ್ಟಿಯಿಂದ ಮಾಡಿದ್ದೇವೆ ಎಂದರೆ ರೈತರ ದೃಷ್ಟಿಯಿಂದ ಇದನ್ನು ಮಾಡಿರತಕ್ಕಂಥಾದ್ದು, ರೈತರಿಗೋಸ್ಕರ ಮಾಡಿರತಕ್ಕಂಥಾದ್ದು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತೂ ಕೂಡ ಹೇಳುತ್ತೇನೆ, ಇವತ್ತು ನಮ್ಮ ಜಲಾಶಯಗಳಲ್ಲಿ ನೀರು ತುಂಬಿದ್ದರೂ ಸಹ ಸಮರ್ಪಕವಾಗಿ ವಿದ್ಯುತ್ತನ್ನು ಸರಬರಾಜು ಮಾಡಲು ಆಗುತ್ತಿಲ್ಲ. ಇದಕ್ಕೆ ಇರತಕ್ಕಂಥ ಕಾರಣವನ್ನು ನಾನು ಆಗಲೇ ಹೇಳಿದ್ದೇನೆ. ಆದ್ದರಿಂದ ರೈತರು ಈಗಲೂ, ಇಂಥ ಕಷ್ಟ ಪರಿಸ್ಥಿತಿಯಲ್ಲೂ ಕೇಳತಕ್ಕಂಥಾದ್ದು ಏನೆಂದರೆ, ಕೆಲವು ಕಡೆ ವೋಲ್ಟೇಜ್ ಕಡಿಮೆಯಾಗಿದೆ, ಅದನ್ನು ಸರಿಪಡಿಸಿ ಎಂದು ಕೇಳುತ್ತಾರೆ, ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗಿದೆ, ಅದನ್ನು ಬೇಗನೆ ಹಾಕಿಸಿ ಎಂದು ಹೇಳುತ್ತಾರೆ, ಹೈಯ್ಯರ್ ಟ್ರಾನ್ಸ್‌ಫಾರ್ಮರ್ಸ್ ಕೆಲವು ಕಡೆ ಹಾಕಬೇಕಾಗಿದೆ, ಅದನ್ನು ಹಾಕಿ ಎಂದು ಹೇಳುತ್ತಿದ್ದಾರೆಯೇ ವಿನಃ ನಮಗೆ ಕಡಿಮೆ ದರದಲ್ಲಿ ವಿದ್ಯುತ್ತನ್ನು ಕೊಡಿ ಎನ್ನತಕ್ಕಂಥ ಮಾತು ಇಲ್ಲಿಯವರೆಗೂ ರಾಜ್ಯದಲ್ಲಿರುವ ಒಬ್ಬ ರೈತನ ಬಾಯಿಂದಲೂ ಬಂದಿಲ್ಲ. ಈ ಮಾತನ್ನು ನಾನು ಖಡಾಖಂಡಿತವಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ 300 ರೂಪಾಯಿಗಳನ್ನು ಹಾಕಿರತಕ್ಕಂಥಾದ್ದು ರೈತರ ಪರವಾಗಿ, ರೈತರಿಗೆ ಗುಣಮಟ್ಟದ ವಿದ್ಯುತ್ತನ್ನು ಒದಗಿಸಬೇಕು ಎನ್ನುವ ಕಾರಣದಿಂದ, ಆದ್ದರಿಂದ ಇದನ್ನು

ನಾವು ಏರಿಸಿರತಕ್ಕಂಥ ಕಾರಣ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಅಲ್ಲಿ ಕುಳಿತಾಗ ಏನು ಮಾತನಾಡುತ್ತಿದ್ದೆನೋ, ಇಲ್ಲಿ ಕುಳಿತಾಗಲೂ ಕೂಡ ಅದನ್ನೇ ಮಾತನಾಡುತ್ತಿದ್ದೇನೆ. ಅಲ್ಲಿ ಕುಳಿತಾಗಲೂ ಕೂಡ ರೈತರಿಗೆ ಪುಕ್ಕಸಟ್ಟೆ ವಿದ್ಯುತ್ತನ್ನು ಕೊಡಿ ಎಂದು ನಾನು ಹೇಳಿಲ್ಲ. ಇವತ್ತೂ ಕೂಡ ನಾನು ಅದೇ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಕುಳಿತಾಗ ಬೇರೆ, ಇಲ್ಲಿ ಕುಳಿತಾಗ ಬೇರೆ ಮಾತನ್ನು ಆಡುವುದಕ್ಕೆ ನಾನು ತಯಾರಿಲ್ಲ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಈಗ ಪ್ರಕಾಶ್‌ರವರು. ಆಲೂಗಡ್ಡೆಯ ವಿಷಯ ಏನೋ ಹೇಳಬೇಕೆಂದು ಇದ್ದರಲ್ಲ ಅದನ್ನು ಹೇಳಿ.

(8) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

ಈ) ಆಲೂಗೆಡ್ಡೆ ದರ ಬಹಳ ಇಳಿದಿರುವ ಬಗ್ಗೆ

+ ಶ್ರೀ ಹೆಚ್.ಎಸ್.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಹಾಸನ ಜಿಲ್ಲೆಯಲ್ಲಿ ಪ್ರಮುಖವಾದಂಥ ಬೆಳೆ ಆಲೂಗೆಡ್ಡೆ ಬೆಳೆ. 1995-96ನೇ ಸಾಲಿನಲ್ಲಿ ಸುಮಾರು 24 ಸಾವಿರ ಹೆಕ್ಟೇರ್‌ನಲ್ಲಿ ಆಲೂಗೆಡ್ಡೆಯನ್ನು ಬಿತ್ತನೆ ಮಾಡಲಾಗಿದೆ. ಆವತ್ತಿನ ಮಾರುಕಟ್ಟೆಯಲ್ಲಿ ಅದಕ್ಕೆ ಸುಮಾರು 200 ರಿಂದ 250 ರೂಪಾಯಿ ಬೆಲೆ ನಿಗದಿಯಾಗಿತ್ತು. ಆದಾದ ನಂತರ ಸರ್ಕಾರ ನೇರವಾಗಿ ರೈತರಿಂದ ಆಲೂಗೆಡ್ಡೆಯನ್ನು ಕೊಂಡಿದ್ದರಿಂದ 350ರಿಂದ 400 ರೂಪಾಯಿ ಬೆಂಬಲ ಬೆಲೆಯನ್ನು ಘೋಷಿಸಿ ಸರ್ಕಾರ ನೇರವಾಗಿ ರೈತರಿಂದ ಕೊಂಡಿದ್ದರಿಂದ ಸುಮಾರು 500 ರೂಪಾಯಿಗೆ ಮೇಲ್ಪಟ್ಟು ಒಂದು ಕ್ವಿಂಟಾಲಿಗೆ ಬೆಲೆ ನಿಗದಿಯಾಯಿತು ಕಳೆದ ವರ್ಷ. ಆದ್ದರಿಂದ ರೈತರ ಜೀವನ ಉತ್ತರವಾಗುವಂಥ, ಅವನಿಗೆ ಅನುಕೂಲವಾಗುವಂಥ ಪರಿಸ್ಥಿತಿ ಬಂತು. ಸರ್ಕಾರ ಮುಂದೆ ಬರದಿದ್ದರೆ ಅವರು ಬಹಳಷ್ಟು ಕಂಗಾಲಾಗುತ್ತಿದ್ದರು. ಅವತ್ತು ನಿರ್ಧಾರವನ್ನು ಕೈಗೊಳ್ಳುವಂಥ ಸಂದರ್ಭದಲ್ಲಿ ಅಂದಿನ ಪ್ರಧಾನ ಮಂತ್ರಿಗಳಾದಂಥ ಸನ್ಮಾನ್ಯ ದೇವೇಗೌಡರು, ಮುಖ್ಯ ಮಂತ್ರಿಯಾದ ಜೆ.ಹೆಚ್.ಪಟೇಲರು ಹಾಗೂ....

ಶ್ರೀ ಎಸ್.ಎಸ್.ಪಾಟೀಲ್: ಈ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆದುಬಿಡಿ ಸಾಕು.

ಶ್ರೀ ಹೆಚ್.ಎಸ್.ಪ್ರಕಾಶ್: ಸರ್ಕಾರದ ಗಮನ ಸೆಳೆಯಬೇಕು ಎನ್ನುವ ಭಾವನೆಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಆಲೂಗೆಡ್ಡೆಯ ಬಗ್ಗೆ ನಿಮ್ಮ ರೆಗ್ಯುಲರ್ ಗಮನ ಸೆಳೆಯುವ ಸೂಚನೆ ಇತ್ತಲ್ಲ. ಇದು ಅದಲ್ಲ. ಆ ಗಮನ ಸೆಳೆಯುವ ಸೂಚನೆಯನ್ನು ಕೈಬಿಟ್ಟಿದ್ದೇವೆ.

ಏಕೆಂದರೆ ಅದರ ಸೂಚಕರು, ಇವತ್ತು ತೊಂದರೆಯಿರುವ ಕಾರಣ ನಾವು ಹೋಗಬೇಕು ಎಂದು ಹೇಳಿದರು. ಅದನ್ನು ಸೋಮವಾರ ತೆಗೆದುಕೊಳ್ಳುತ್ತಿದ್ದೇವೆ. ಈಗ ಸಮಯ ಇತ್ತು ಎಂದು ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಹೇಳುತ್ತಿರತಕ್ಕಂಥಾದ್ದು ಏನೆಂದರೆ, ಹೇರಳವಾಗಿ ಬೆಳೆದಿರತಕ್ಕಂಥ ಆಲೂಗೆಡ್ಡೆ ಮಾರುಕಟ್ಟೆಗೆ ಬಂದಿದೆ. ಯಶವಂತಪುರದ ರೆಗ್ಯುಲೇಟೆಡ್ ಮಾರ್ಕೆಟ್ ಯಾರ್ಡ್‌ನಲ್ಲಿ 50 ಕೆ.ಜಿ. ಆಲೂಗೆಡ್ಡೆ ಇರತಕ್ಕಂಥ ಮೂಟೆಯನ್ನು 30 ರೂಪಾಯಿಗೆ ಮಾರುತ್ತಿದ್ದಾರೆ. ವರ್ತಕರೆಲ್ಲರೂ ಸೇರಿ ನಮ್ಮನ್ನು ಸುಲಿಗೆ ಮಾಡಲು ಹೊರಟಿದ್ದಾರೆ ಎಂದು ಹೇಳುತ್ತಿದ್ದಾರೆ. ಆ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಹೆಚ್.ಎಸ್.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಸುಮಾರು 11 ಗಂಟೆ ಸಮಯದಲ್ಲಿ ಬೆಂಗಳೂರಿನಲ್ಲಿ ಎ.ಪಿ.ಎಂ.ಸಿ. ಮಾರುಕಟ್ಟೆಯಲ್ಲಿ 50 ಕೆ.ಜಿಯನ್ನು 30 ರೂಪಾಯಿಗೆ ರೈತರು ತಂದಂಥ ಬೆಳೆಯನ್ನು ಕೇಳಿದಾಗ, ರೈತರು ಆಕ್ರೋಶಕ್ಕೆದ್ದು ಮಾರುಕಟ್ಟೆಯಲ್ಲಿ ಬಹಳಷ್ಟು ಗಲಾಟೆಯಾಗಿದೆ. ಕಾರಣವೆಂದರೆ, ಕಳೆದ ಸಾರಿ ಸರ್ಕಾರ ಇದಕ್ಕೆ 350 ರಿಂದ 400 ರೂಪಾಯಿಗಳಿಗೆ ಬೆಲೆಯನ್ನು ಯಾವಾಗ ಏರಿಸಿತು, ಆಗ ಉತ್ತಮವಾದಂಥ ಬೆಲೆ ಬಂತು. ಆದ್ದರಿಂದ ಸರ್ಕಾರ ಈಗ ರೈತರು ಬೆಳೆದಂಥ ಎಲ್ಲ ಆಲೂಗೆಡ್ಡೆಯನ್ನು ಕೊಳ್ಳದಿದ್ದರೂ ಪರವಾಗಿಲ್ಲ, ಸರ್ಕಾರ ನೇರವಾಗಿ ಮುಂದೆ ಬಂದು ನಾವು ಆಲೂಗೆಡ್ಡೆಯನ್ನು ಕೊಳ್ಳುತ್ತೇನೆ ಎಂದು ಹೇಳಿದರೆ, ಮಾರುಕಟ್ಟೆಯಲ್ಲಿ ಉತ್ತಮವಾದ ಬೆಲೆ ಬರುವುದೇನೋ ಎನ್ನುವ ಉದ್ದೇಶದಿಂದ ಅಂದಿನ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ದೇವೇಗೌಡರು, ಮುಖ್ಯ ಮಂತ್ರಿಗಳಾದಂಥ ಜೆ.ಹೆಚ್.ಪಟೇಲರು, ಬೈರೇಗೌಡರು ಮತ್ತು ಡಿ.ಟಿ.ಜಯಕುಮಾರ್‌ರವರು ಬಹಳಷ್ಟು ಸಹಾಯ ಮಾಡಿ ಆಲೂಗೆಡ್ಡೆ ಬೆಳೆಗಾರರ ಸಹಾಯಕ್ಕೆ ಬಂದಿದ್ದರು. ಆದರೆ, ಈ ಸಾರಿ 1997-98ನೇ ಸಾಲಿನಲ್ಲಿ ಸುಮಾರು 25 ಸಾವಿರ ಹೆಕ್ಟೇರ್‌ನಲ್ಲಿ ಸುಮಾರು 4 ಲಕ್ಷ ಟನ್ ಆಲೂಗೆಡ್ಡೆ ಉತ್ಪಾದನೆಯಾಗಿದೆ. ಆದರೆ ಇವತ್ತಿನ ಬೆಲೆ ಒಂದು ಕ್ವಿಂಟಾಲ್‌ಗೆ 60 ರೂಪಾಯಿ, 50 ಕೆ.ಜಿ.ಗೆ 30 ರೂಪಾಯಿ ಯಿಂದ 35 ರೂಪಾಯಿಗೆ ನಿಂತಿದೆ.

ಅಧ್ಯಕ್ಷರು: ನಿಮ್ಮ ಸಮಸ್ಯೆ ಅರ್ಥವಾಯಿತು.

ಶ್ರೀ ಹೆಚ್.ಎಸ್.ಸುರೇಶ್: ಆದ್ದರಿಂದ, ನಾನು ದಯಮಾಡಿ ಕೇಳಿಕೊಳ್ಳುವುದೇನೆಂದರೆ, ಸರ್ಕಾರ ಈ ಕೂಡಲೇ ಆಲೂಗೆಡ್ಡೆಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕು. ಮತ್ತು ನೇರವಾಗಿ ರೈತರಿಂದ ಆಲೂಗೆಡ್ಡೆಯನ್ನು ಕೊಳ್ಳುವಂಥ ಕ್ರಮವನ್ನು ಜರುಗಿಸಬೇಕು. ಅದನ್ನು ಹಾಪ್‌ಕಾಮ್ಸ್, ಆಗ್ರೋ ಮತ್ತು ಮಾರ್ಕೆಟಿಂಗ್ ಫೆಡರೇಷನ್ನಿನ ಮುಖಾಂತರ ನೇರವಾಗಿ ಸರ್ಕಾರ ಈ ಆಲೂಗೆಡ್ಡೆಯನ್ನು ಕೊಳ್ಳಲು ಮುಂದಾಗಬೇಕು. ಸರ್ಕಾರ ಹಣವನ್ನು ಕೂಡಲೇ ಬಿಡುಗಡೆ ಮಾಡಿ, ಆಲೂಗೆಡ್ಡೆಯನ್ನು ತಕ್ಷಣವೇ ಕೊಳ್ಳುವಂಥ ಒಂದು ಏರ್ಪಾಡನ್ನು ಮಾಡಿದರೆ ರೈತ

ಬದುಕುತ್ತಾನೆ. ರೈತನ ಮನೆಯಲ್ಲಿದ್ದಂಥ ಚಿನ್ನ ಒಂದೂ ಅವನ ಮನೆಯಲ್ಲಿ ಉಳಿದಿಲ್ಲ. ಆಲೂಗೆಡ್ಡೆಯ ಬೆಲೆ ಏನಾಗಿದೆ ಎಂದರೆ, ಬಿತ್ತನೆ ಮಾಡುವಾಗ ಕ್ವಿಂಟಾಲ್‌ಗೆ 1,100 ರೂಪಾಯಿ; ಅವರು ಶ್ರಮವನ್ನು ಹಾಕಿ, ಗೊಬ್ಬರವನ್ನು ಹಾಕಿ ಬೆಳೆದಂಥ ಬೆಳೆಗೆ ಒಂದು ಕ್ವಿಂಟಾಲ್‌ಗೆ 60 ರೂಪಾಯಿ ಎಂದರೆ, ರೈತ ಅದನ್ನು ಇವತ್ತು ಏನು ಮಾರಿದ್ದಾನೆ, ಅವನು ನಿಜವಾಗಲೂ ನಾಳೆ ಹಬ್ಬ ಮಾಡಲು ಆಗುವುದಿಲ್ಲ. ಆದ್ದರಿಂದ ಸರ್ಕಾರ ದಯಮಾಡಿ ಇದಕ್ಕೆ ಬೆಂಬಲ ಬೆಲೆಯನ್ನು ಕೊಡಬೇಕು.

ಅಧ್ಯಕ್ಷರು: ಮಂತ್ರಿಗಳು ಏನು ಹೇಳುತ್ತಾರೆ ಎಂದು ಕೇಳೋಣ, ಸ್ವಲ್ಪ ಇರಿ.

ಶ್ರೀ ಹೆಚ್.ಎನ್.ನಂಜೇಗೌಡ: ಸನ್ಮಾನ್ಯ ಅಧ್ಯಕ್ಷರೇ, ಈಗ ಇದರ ಗಾಂಭೀರ್ಯತೆ ಎಷ್ಟಿದೆ, ಎಷ್ಟು ಕೆಟ್ಟ ಪರಿಸ್ಥಿತಿ ಇದೆ ಎಂದರೆ, ನಾವು ವಿಧಾನಸಭೆಯ ಮೊಗಸಾಲೆಯಲ್ಲಿ ನಾವು ಕೆಟ್ಟ ಕಾಫಿಯನ್ನು ಕುಡಿಯುತ್ತೇವಲ್ಲ, ಆ ಒಂದು ಕಾಫಿಯನ್ನು ಕುಡಿಯಬೇಕಾದರೆ ಈಗ 10 ಕೆ.ಜಿ. ಆಲೂಗೆಡ್ಡೆಯನ್ನು ಕೊಡಬೇಕು. ಬೈರೇಗೌಡರು ನೆನೆಸಿಕೊಳ್ಳಬೇಕು. 10 ಕೆ.ಜಿ. ಆಲೂಗೆಡ್ಡೆಗೆ 3 ರೂಪಾಯಿ. ಇದು ಇವತ್ತು ಇರುವ ಬೆಲೆ. ಇವತ್ತು ಒಂದು ಕೆ.ಜಿ. ಆಲೂಗೆಡ್ಡೆ 30 ಪೈಸೆಯಾಗಿದೆ. ಇವತ್ತು ಎ.ಪಿ.ಎಂ.ಸಿ.ಯಲ್ಲಿ ಗಲಾಟೆಯಾಗಿರುವುದೇ ಇದಕ್ಕೆ. ಅಲ್ಲವೇ ಪ್ರಕಾಶ್?

ಶ್ರೀ ಡಿ.ಟಿ.ಜಯಕುಮಾರ್: ಅಷ್ಟು ಕಡಿಮೆ ಬೆಲೆಗೆ ಮಾರಾಟವಾಗಿಲ್ಲ.

ಅಧ್ಯಕ್ಷರು: ತಾವು ಮಂತ್ರಿಗಳಿದ್ದೀರಿ. ತಮಗೆ ಆ ಮಾಹಿತಿಯನ್ನು ಯಾರು ಕೊಟ್ಟರು?

ಶ್ರೀ ಡಿ.ಟಿ.ಜಯಕುಮಾರ್: ಎ.ಪಿ.ಎಂ.ಸಿ.ಗೆ ಫೋನ್ ಮಾಡಿ ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು: ರೈತರು ಮಾರಾಟ ಮಾಡಲು ಆಗದೇ 50 ಕೆ.ಜಿ.ಆಲೂಗೆಡ್ಡೆಯನ್ನು 30 ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ.

ಶ್ರೀ ಡಿ.ಟಿ.ಜಯಕುಮಾರ್: ನಾನು ಫೋನ್ ಮಾಡಿ ತಿಳಿದುಕೊಂಡಂತೆ, ಇವತ್ತು ಮಧ್ಯಾಹ್ನ ಒಂದೂವರೆ ಗಂಟೆಯಲ್ಲಿ 50 ಕೆ.ಜಿಯ ಆಲೂಗೆಡ್ಡೆಯ ಬ್ಯಾಗ್ 120 ರೂಪಾಯಿಗಳಿಗೆ ಹೋಗಿದೆ. ಅವರು ಹೇಳುತ್ತಿರುವಂತೆ ಮಾರಾಟವಾಗಿರುವುದು ಕೆಳದರ್ಜೆಯದು ಮತ್ತು ಒಣಗಿಹೋಗಿರುವಂಥಾದ್ದು.

ಶ್ರೀ ಕೆ.ಶ್ರೀನಿವಾಸಗೌಡ: ಮಾರುಕಟ್ಟೆಯಲ್ಲಿ ವರ್ತಕರು 50 ಕೆ.ಜಿ.ಯನ್ನು 30 ರೂಪಾಯಿಗೆ ಕೇಳಿದರಂತೆ. ರೈತರಿಗೆ ಕೋಪ ಬಂದು, ವರ್ತಕರಿಗೆ ಹೊಡೆದು ಗಲಾಟೆಯಾಗಿದೆ. ಡಿ.ಸಿ.ಪಿಯವರೂ ಅಲ್ಲಿಗೆ ಹೋಗಿದ್ದರಂತೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕಾಗುತ್ತದೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್, ಮತ್ತು ಶ್ರೀ ಶ್ರೀನಿವಾಸಗೌಡರು ಇವತ್ತು ಯಶವಂತಪುರದ ಮಾರ್ಕೆಟ್‌ನಲ್ಲಿ ನಡೆದ ಘಟನೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಿವಾಗಲೂ ಏನು ನಡೆದಿದೆ ಮತ್ತು ಯಾವ ಬೆಲೆಗೆ ಮಾರಾಟವಾಗುತ್ತಿದೆ ಎನ್ನತಕ್ಕ ನಿಖರವಾದ ಮಾಹಿತಿ ಸರ್ಕಾರಕ್ಕೆ ಬಂದಿಲ್ಲ. ನಾವು ರೈತರನ್ನು ಕೈ ಬಿಡುವ ಪ್ರಶ್ನೆಯೇ ಇಲ್ಲ. ಹೋದ ಸಲ ಕೂಡ ಇಂತಹ ಸಂದರ್ಭದಲ್ಲಿ ನಾವು ರೈತರ ನೆರವಿಗೆ ಬಂದಿದ್ದೆವು. ಆ ರೀತಿಯ ಕಷ್ಟದ ಪರಿಸ್ಥಿತಿ ಇದ್ದರೆ, ಅವರು ಹೇಳಿದಹಾಗೆ, ಗುಣಮಟ್ಟದ 50 ಕೆ.ಜಿ.ಆಲೂಗೆಡ್ಡೆ 30 ರೂಪಾಯಿಗೆ ಮಾರಾಟವಾಗ ತಕ್ಕದ್ದು ನಿಜವಾಗಿದ್ದರೆ ಹೇಳಲಿ. ನನಗೇನೂ ಈ ಬೆಳೆ ಹೊಸದೇನೂ ಅಲ್ಲ. ಆಲೂಗೆಡ್ಡೆಯನ್ನು ಬೆಳೆಯಬೇಕಾದರೆ ಯಾವ ರೀತಿ ಬೆಳೆಯಬೇಕು, ಹೇಗೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ. ಆಲೂಗೆಡ್ಡೆ 30 ರೂಪಾಯಿ ಮಾರಾಟವಾಗುತ್ತಿದ್ದರೆ, ಖಂಡಿತವಾಗಿಯೂ ಸಹ ಸರ್ಕಾರ ಅದರ ಕಡೆ ಗಮನಹರಿಸುತ್ತದೆ. ರೈತರನ್ನು ಯಾವುದೇ ಪರಿಸ್ಥಿತಿಯಲ್ಲಿಯೂ ಸಹ ಕೈ ಬಿಡತಕ್ಕ ಪ್ರಶ್ನೆಯೇ ಇಲ್ಲವೆನ್ನುವುದನ್ನು ನಾವು ಸ್ಪಷ್ಟಪಡಿಸುತ್ತೇವೆ. ಇವತ್ತು ನಡೆದಿರತಕ್ಕ ಘಟನೆಯ ಪೂರ್ತಿಯಾದ ಮಾಹಿತಿಯನ್ನು ನಾವು ತರಿಸುತ್ತೇವೆ. ನಾಳೆ ಹಬ್ಬವಿರುವುದರಿಂದ, ಮಾರ್ಕೆಟ್ ತೆರೆದಿರುತ್ತದೆಯೊ, ಇಲ್ಲವೋ ಗೊತ್ತಿಲ್ಲ. ಸಾಧ್ಯವಾದರೆ ನಾನೇ ಮಾರ್ಕೆಟ್‌ಗೆ ಹೋಗಿ ಮಾರ್ಕೆಟ್‌ನಲ್ಲಿ ಏನು ಬೆಲೆ ಇದೆ ಎನ್ನತಕ್ಕದ್ದನ್ನು ಪರಿಶೀಲನೆ ಮಾಡುತ್ತೇನೆ. ರೈತರನ್ನು ಕೈ ಬಿಡುವ ಪ್ರಶ್ನೆ ಇಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಈ ವರ್ಷ ನಮ್ಮ ಬಜೆಟ್‌ನಲ್ಲಿ ನಾವೀಗಾಗಲೇ ಮುಂಜಾಗ್ರತೆಯನ್ನು ತೆಗೆದುಕೊಂಡಿದ್ದೇವೆ. ಸುಮಾರು 2 ಕೋಟಿ ರೂಪಾಯಿಗಳಷ್ಟು ಹಣವನ್ನು ಮಾರ್ಕೆಟ್ ಇಂಟರ್‌ವೆನ್‌ಷನ್ ಸ್ಕೀಂ ಏನಿದೆ ಅದಕ್ಕಾಗಿ ನಾವು ಬಜೆಟ್‌ನಲ್ಲಿ ಕೂಡ ಹಣವನ್ನಿಟ್ಟಿದ್ದೇವೆ. ಹೊಸದಾಗಿ ಈ ರಾಜ್ಯದಲ್ಲಿ ಬಜೆಟ್‌ನಲ್ಲಿ ಏನಾದರೂ ಕೂಡ, ರೈತರ ಪರವಾಗಿ 2 ಕೋಟಿ ರೂಪಾಯಿಗಳಷ್ಟು ಭಾರೀ ಹಣವನ್ನಿಟ್ಟಿದ್ದೇವೆ, ರೈತರ ತಲೆ ಮೇಲೆ ಕಿರೀಟವನ್ನಿಟ್ಟಿದ್ದೇವೆ ಎನ್ನತಕ್ಕ ಭಾವನೆಯಲ್ಲಿಲ್ಲ. ಆದರೆ, ನಮ್ಮ ಆಲೋಚನೆ ಆ ದಿಕ್ಕಿನಲ್ಲಿದೆ, ಆ ಪ್ರಯತ್ನದಲ್ಲಿ ನಾವಿದ್ದೇವೆಂದು ಹೇಳಲು ಈ ಸಂದರ್ಭದಲ್ಲಿ ಇಚ್ಛೆಪಡುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ: ಸರ್ಕಾರದಿಂದ ಬೆಂಬಲ ಬೆಲೆಯನ್ನು ಡಿಕ್ಲೇರ್ ಮಾಡಿ.

ಅಧ್ಯಕ್ಷರು: ಮಾನ್ಯ ನಂಜೇಗಡೌರೆ, ಅವರು ಬಹಳ ಸ್ಪಷ್ಟವಾಗಿ, ಈಗಲೇ ಮಾಹಿತಿಯನ್ನು ತರಿಸಿಕೊಳ್ಳುತ್ತೇವೆ, ಅಗತ್ಯ ಬಿದ್ದರೆ ನಾವೇ ಯಾರಾದರೂ ಹೋಗಿ ಬರುತ್ತೇವೆ, ನಾಳೆ ರಜೆ ಇದ್ದರೂ ಕೂಡ, ಚಿಂತೆ ಇಲ್ಲ, ಅದಕ್ಕಾಗಿ ಹಣವಿದೆ, ಆಲೋಚನೆ ನಮಗಿದೆ, ಆ ರೈತರಿಗೆ ತೊಂದರೆ ಇದ್ದರೆ ಖಂಡಿತವಾಗಿಯೂ ರೈತರ ನೆರವಿಗೆ ನಾವು ಬರುತ್ತೇವೆ ಎನ್ನತಕ್ಕ ಮಾತನ್ನು ಹೇಳಿದರು. He has made a positive statement.

ಶ್ರೀ ಎ.ಟಿ.ರಾಮಸ್ವಾಮಿ: ರೈತರ ನೆರವಿಗೆ ಹೋಗುತ್ತೇವೆಂದು ಹೇಳಿದರು. ಕಳೆದ ವರ್ಷ ಸರ್ಕಾರ 350 ರೂಪಾಯಿ ಬೆಂಬಲ ಬೆಲೆಗೆ ಕೊಂಡುಕೊಂಡತಿತ್ತು. ಸ್ಥಿರವಾದ ಬೆಲೆ ಉಳಿಯಲಿಕ್ಕೆ, ಸ್ಥಿರವಾದ ಬೆಲೆ ರೈತನಿಗೆ ದೊರೆಯಲಿಕ್ಕೆ ಅವಕಾಶವಾಯಿತು. ಈಗ ಇವರ ಸರ್ಕಾರದ ಏಜೆನ್ಸಿಗಳು ಕೊಂಡುಕೊಳ್ಳದೇ ಹೋದರೆ, ನಿಧಾನಿಸಿದರೆ, ಮತ್ತೆ ರೈತರ ಶೋಷಣೆಯಾಗುತ್ತದೆ.

MR. SPEAKER: That is what he has said- 'immediately'. ಇಮ್ಮೀಡಿಯಟ್ಲಿ ಮಾಡುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀಎ.ಟಿ.ರಾಮಸ್ವಾಮಿ: ತತ್‌ಕ್ಷಣದಲ್ಲಿ ಮಾಡಬೇಕು. ಸುಮಾರು 3 ಕೋಟಿ ರೂಪಾಯಿಯ ಆಲೂಗೆಡ್ಡೆಯನ್ನು ನಮ್ಮ ಜಿಲ್ಲೆಯಲ್ಲಿ ಬೆಳೆಯುತ್ತಾರೆ.

ಅಧ್ಯಕ್ಷರು: ನಾನು ಹೇಳುತ್ತೇನೆ ಕೇಳಿ, I must compliment the Minister for Agriculture. ಇನ್‌ಫರ್ಮೇಶನ್ ತರಿಸುತ್ತೇವೆ, ಅಗತ್ಯ ಬಿದ್ದರೆ ಸ್ವತಃ ನಾವೇ ಮಾರ್ಕೆಟ್‌ಗೆ ಹೋಗುತ್ತೇನೆಂದು ಹೇಳಿದ್ದಾರೆ. It is fair enough. ಈಗ ಪ್ರಕಟಣೆ.

(9) ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ದಿನಾಂಕ 4ನೇ ಸೆಪ್ಟೆಂಬರ್, 1997ರಂದು ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳಿಗೆ ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1. ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕ, 1997

2. ಕರ್ನಾಟಕ ಧನ ವಿನಿಯೋಗ (ನಂ.4) ವಿಧೇಯಕ, 1997

3. ಕರ್ನಾಟಕ ಧನ ವಿನಿಯೋಗ (ನಂ.5) ವಿಧೇಯಕ, 1997

4. ಕರ್ನಾಟಕ ಧನ ವಿನಿಯೋಗ (ನಂ.6) ವಿಧೇಯಕ, 1997

5. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 1997

ಅಧ್ಯಕ್ಷರು: ನಾಗರಾಜಯ್ಯನವರೇ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆಂದು ಹೇಳಿದಿರಿ,

(10) ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು

(ಅ) ಹೇಮಾವತಿ ನದಿ ನೀರನ್ನು ಮಾರ್ಕೋನಹಳ್ಳಿ ಜಲಾಶಯಕ್ಕೆ ಬಿಡುವ ವಿಚಾರ.

ಶ್ರೀ ಡಿ.ನಾಗರಾಜಯ್ಯ: ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಮಾರ್ಕೋನ ಹಳ್ಳಿ ಜಲಾಶಯದಲ್ಲಿ ಸುಮಾರು 35 ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶವಿದೆ. ಮಳೆ ಇಲ್ಲದೆ, ಜನರೆಲ್ಲಾ ಬೀದಿಗಿಳಿದು ಸ್ಟ್ರೈಕ್ ಮಾಡತಕ್ಕ ಪರಿಸ್ಥಿತಿ ಉದ್ಭವಿಸಿದೆ. ಬೆಳೆ ಬೆಳೆದು 2 ತಿಂಗಳಾಗಿದೆ, ಮಳೆ ಬರಲಿಲ್ಲ. ನೀರೆಲ್ಲಾ ಖಾಲಿಯಾಗಿದೆ. ಹಿಂದೆ ಖಾಲಿಯಾಗಿರತಕ್ಕ ಸಂದರ್ಭದಲ್ಲಿ ಎರಡು ಬಾರಿ ಹೇಮಾವತಿ ನದಿ ನೀರನ್ನು ಮಾರ್ಕೋನಹಳ್ಳಿ ಜಲಾಶಯಕ್ಕೆ ಕೊಡಿಸಿದ್ದರು. ಅದೇ ರೀತಿಯಲ್ಲಿ ಈ ಸಾರಿ ಕೂಡ ನೀರನ್ನು ಕೊಡಬೇಕೆನ್ನತಕ್ಕ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಸಚಿವರಾದ ಶ್ರೀ ಕೆ.ಎನ್.ನಾಗೇಗೌಡರ ಜೊತೆಯಲ್ಲಿ ಮಾತನಾಡಿದ ಸಂದರ್ಭದಲ್ಲಿ, ಅವರು ಅನೇಕ ಸಾರಿ ನಾನು ಪ್ರಯತ್ನಪಟ್ಟರೂ ಸಹ ಅದಕ್ಕೆ ಒಪ್ಪಲಿಲ್ಲ. ಇವತ್ತು ರಾಜ್ಯದಲ್ಲಿ ಜನ ಬೀದಿಗಿಳಿದಿದ್ದಾರೆ. ಅದಕ್ಕೆ ಎನ್‌ಬಿಸಿ ಮತ್ತು ಇಬಿಸಿ ಬಿಡಗಂಡಿಯಿಂದ 800 ಕ್ಯೂಸೆಕ್ಸ್ ಒಂದು ವರ್ಷಕ್ಕೆ ಕೊಟ್ಟರೆ, ಸುಮಾರು ಒಂದು ವಾರದೊಳಗೆ ನೀರು ತಲುಪುವಂತಹ ವ್ಯವಸ್ಥೆ ಮಾಡಿಕೊಂಡಿದ್ದೆ ಆದರೆ, ಸುಮಾರು 25 ಸಾವಿರ ಎಕರೆಯಲ್ಲಿ ರೈತರು ಬೆಳೆದಿರುವ ಬೆಳೆಗೆ ನೀರು ಕೊಡತಕ್ಕ ವ್ಯವಸ್ಥೆಯನ್ನು ಮಾಡುವುದರ ಮುಖಾಂತರ ಆ ಬೆಳೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಸುಮಾರು 5-6 ಕೋಟಿ ರೂಪಾಯಿ ಖರ್ಚಾಗುತ್ತದೆ. ರೈತರು ಸ್ಟ್ರೈಕ್ ಮಾಡುತ್ತಿದ್ದಾರೆ. ಅದಕ್ಕೋಸ್ಕರ, ನಾನು ತಮ್ಮ ಮುಖಾಂತರ ಮಾನ್ಯ ಶ್ರೀ ನಾಗೇಗೌಡರಿಗೆ ನೀರನ್ನೊದಗಿಸಬೇಕೆಂದು ಕೇಳುವುದರ ಜೊತೆಗೆ, 800 ಕ್ಯೂಸೆಕ್ಸ್ ನೀರನ್ನು ಸುಮಾರು 5-6 ದಿವಸ ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಕುಣಿಗಲ್ ತಾಲ್ಲೂಕಿಗೆ ಅನುಕೂಲವಾಗಿರತಕ್ಕದ್ದು ಮಾರ್ಕೋನಹಳ್ಳಿ ಜಲಾಶಯ. ಕಳೆದ 4 ವರ್ಷಗಳಿಂದ ಸತತವಾಗಿ ಆ ಭಾಗದಲ್ಲಿ ಮಳೆಯಾಗುತ್ತಿದೆ, ತುಮಕೂರಿನಲ್ಲಿ ಮಳೆಯಾಗುತ್ತಿಲ್ಲ. ಆದ್ದರಿಂದ ಏನಾಯಿತೆಂದರೆ, ಸನ್ಮಾನ್ಯ ಶ್ರೀ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ, ಶಿಂಷಾ ನದಿಯಿಂದ ನೀರು ಬಿಡುವ ಮುಖಾಂತರ ಮಾರ್ಕೋನಹಳ್ಳಿ ಡ್ಯಾಮ್‌ನ್ನು ತುಂಬಿಸಿದರು. ಅದೇ ರೀತಿ, ಶ್ರೀ ದೇವೇಗೌಡರು ಮುಖ್ಯಮಂತ್ರಿಗಳಿದ್ದಾಗ, ನಮ್ಮ ಕೋರಿಕೆಯ ಮೇಲೆ ಅವರು ಕೂಡ ದಯಪಾಲಿಸಿ ಕೆರೆ ತುಂಬಿಸಿದರು. ಈಗ ಏನಾಗಿದೆಯೆಂದರೆ, ತಾವು ಸನ್ಮಾನ್ಯ ಶ್ರೀ ಸಿ.ಬೈರೇಗೌಡರು ಒಂದು ಒಳ್ಳೆಯ ಕೆಲಸ ಮಾಡಿ, ಕಾಂಪ್ಲಿಮೆಂಟ್

ಮಾಡುತ್ತೇವೆಂದು ಹೇಳಿದಿರಿ. ನಾನು ಕುಣಿಗಲ್ ಜನತೆಯ ಪರವಾಗಿ ಶ್ರೀ ಕೆ.ಎನ್.ನಾಗೇಗೌಡರಿಗೆ ಕಾಂಪ್ಲಿಮೆಂಟ್ ಮಾಡುತ್ತೇನೆ. provided he agrees to allow water to Markonahalli Dam ದಯಮಾಡಿ ಸುಮಾರು 3 ವರ್ಷಗಳಿಂದ ಆ ಕೆರೆಗೆ ನೀರು ತುಂಬಿಸಿ, ಆ ರೈತರಿಗೆ ಸಹಾಯ ಮಾಡಿರುವುದರಿಂದ ನಮ್ಮ ತಾಲ್ಲೂಕು ನಮ್ಮ ಜಿಲ್ಲೆಯಲ್ಲಿ ಮಳೆಯಾಗಲಿಲ್ಲ. ಆದುದರಿಂದ, ದಯಮಾಡಿ ಸನ್ಮಾನ್ಯ ಶ್ರೀ ಕೆ.ಎನ್.ನಾಗೇಗೌಡರು ದೊಡ್ಡ ಮನಸ್ಸು ಮಾಡಬೇಕು. ಏಕೆಂದರೆ, ಸಾಕಷ್ಟು ನೀರು ಆ ಕಡೆಯಿಂದ ಬರುತ್ತಿದೆ. ನಿಮಗೇನೂ ತೊಂದರೆಯಾಗುವುದಿಲ್ಲ. ದಯಮಾಡಿ ಈ ಒಂದು ಕೆಲಸವನ್ನು ಮಾಡಬೇಕೆಂದು ತಮ್ಮನ್ನು ನಿಮ್ಮ ಮುಖೇನ ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

(ಈ ಹಂತದಲ್ಲಿ ಶ್ರೀ ಬಿ.ಆರ್.ಯಾವಗಲ್‌ರವರು ಪೀಠವನ್ನು ಅಲಂಕರಿಸಿದರು)

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು): ಸನ್ಮಾನ್ಯ ಛೇರ್ಮನವರೆ, ಶ್ರೀ ಡಿ.ನಾಗರಾಯ್ಯ, ಶ್ರೀ ಎಸ್.ಪಿ.ಮುದ್ದಹನುಮೇಗೌಡರವರು ಮಾರ್ಕೋನಹಳ್ಳಿ ಕೆರೆಗೆ ನೀರು ಬರಬೇಕೆನ್ನುವ ಮಾತನ್ನು ಹೇಳಿದ್ದಾರೆ. ಅದು ಕಷ್ಟ. ಆಗುವುದಿಲ್ಲ ಅದು. ಎರಡು ಕಾರಣಗಳಿಂದ ಅದು ಆಗುವುದಿಲ್ಲವೆಂದು ನನಗನ್ನಿಸುತ್ತದೆ. ಮೊದಲನೆ ಕಾರಣ, ನಾವು ನಾಗಮಂಗಲ ಬ್ರಾಂಚ್ ಹಾಗೂ ತುಮಕೂರು ಬ್ರಾಂಚ್‌ನಲ್ಲಿ ಈಗಾಗಲೇ ಅವರಿಗೆ ನೀರು ಕೊಟ್ಟಿದ್ದೇವೆ. ಅವರು ಕೆರೆಯನ್ನು ತುಂಬಿಸಿಕೊಳ್ಳುತ್ತಿದ್ದಾರೆ. 800 ಕ್ಯೂಸೆಕ್ಸ್ ನೀರನ್ನು ತೆಗೆದುಕೊಂಡು ಬರಬೇಕೆಂದರೆ ಬಹಳ ಕಷ್ಟವಿದೆ. ಆದ್ದರಿಂದ, ಪರಿಶೀಲನೆ ಮಾಡಿ, ಯಾವ ರೀತಿ ಮಾಡಬಹುದು, ಎಂಬುದಕ್ಕೆ ಅಧಿಕಾರಿಗಳ ಜೊತೆ ಮಾತನಾಡಿ, ಆಲೋಚನೆ ಮಾಡುತ್ತೇನೆ ಎನ್ನತಕ್ಕ ಮಾತನ್ನು ತಮಗೆ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಇವತ್ತು ಹೇಮಾವತಿ ನದಿ ತುಂಬಿ ಹರಿಯುತ್ತಿದೆ. ನೀರೆಲ್ಲಾ ತಮಿಳುನಾಡಿಗೆ ಹೋಗುವ ಸಂದರ್ಭದಲ್ಲಿ ಮಾರ್ಕೋನಹಳ್ಳಿಗೆ ನೀರು ಬಿಡುವುದಿಲ್ಲವೆಂದರೆ ಹೇಗೆ? 800 ಕ್ಯೂಸೆಕ್ಸ್ ನೀರಿದೆ, ಇದನ್ನು ಜಾಸ್ತಿ ಮಾಡಿ, ನೀವು ಎಸ್ಕೇಪ್ ಚಾನಲ್ ಮುಖಾಂತರ, ಹಿಂದೆ ಕೊಟ್ಟಿರಲಿಲ್ಲವೇ? ಹಿಂದೆ ನಾವು ಮಾರ್ಕೋನಹಳ್ಳಿಗೆ ಕೊಡುವಂತಹ ಸಂದರ್ಭದಲ್ಲಿ ಆ ಡ್ಯಾಮ್‌ನಲ್ಲಿ ನೀರೇ ಇರಲಿಲ್ಲ. ಆದರೂ ಕೂಡ, ಕೊಟ್ಟಿದ್ದಾರೆ. ಶ್ರೀ ದೇವೇಗೌಡರು ಕೊಡುವಂತಹ ಸಂದರ್ಭದಲ್ಲಿ ನೀರೇ ಇರಲಿಲ್ಲ. ಆದರೂ ಅವರು ಕೊಟ್ಟರು.

ಶ್ರೀ ಕೆ.ಎನ್.ನಾಗೇಗೌಡ: ಶ್ರೀ ಟಿ.ಬಿ.ಜಯಚಂದ್ರ ರವರು, ಶ್ರೀ ಎಸ್.ಪಿ.ಮುದ್ದ ಹನುಮೇಗೌಡರವರು, ಶ್ರೀ ಡಿ.ನಾಗರಾಯ್ಯನವರಿಗೂ ಚೆನ್ನಾಗಿ ಗೊತ್ತಿದೆ. ಒಂದು ಕಡೆ ಮಳೆ ಬಿದ್ದಾಗ, ಇನ್ನೊಂದು ಕಡೆ ಕೆನಾಲ್‌ನಲ್ಲಿ ಮಳೆ ಬಿದ್ದಿದ್ದನ್ನು ಕ್ಲೋಸ್ ಮಾಡಿ ಮತ್ತೆ ಇನ್ನೊಂದು ಕೆನಾಲ್‌ನಲ್ಲಿ ನೀರು ಕೊಡುತ್ತಿದ್ದೆವು. ಆ ಕಡೆ ಮಳೆ ಬಿದ್ದು, ವಾಟರ್ ಮ್ಯಾನೇಜ್‌ಮೆಂಟ್ ನವರು ಬ್ಯಾಲೆನ್ಸ್ ಮಾಡುತ್ತಿದ್ದರು. ಈಗ ಬ್ಯಾಲೆನ್ಸ್

ಬಿಡುವುದಕ್ಕಾಗುವುದಿಲ್ಲ. ತುಮಕೂರಿನಲ್ಲಿ ಮಳೆ ಇಲ್ಲ, ಮಂಡ್ಯದಲ್ಲಿಲ್ಲ, ಮೈಸೂರು ಭಾಗದಲ್ಲಿ ಮಳೆ ಇಲ್ಲ, ನಮ್ಮ ಕಮಾಂಡ್ ಏರಿಯಾದಲ್ಲಿ ಮಳೆ ಇಲ್ಲದೆ ಕಾವೇರಿ ಬೇಸಿನ್‌ನಲ್ಲಿ ಹಾಸನವನ್ನು ಹೊರತುಪಡಿಸಿ ಕಂಪ್ಲೀಟಾಗಿ 9 ತಿಂಗಳು ಮಳೆ ಇಲ್ಲ. ಆ ಸಂದರ್ಭದಲ್ಲಿ ಈ ಸದನದಲ್ಲಿ ಅಂತೂ ನಾನು ಖಂಡಿತವಾಗಿ ಅಧಿಕಾರಿಗಳ ಜೊತೆ ಮಾತನಾಡಿದೆ. ಅವರ ಮೇರೆಗೆ, 2,200 ಕ್ಯೂಸೆಕ್ಸ್ ನೀರನ್ನು ಡ್ರಾ ಮಾಡಬಹುದು. ಅದಕ್ಕಿಂತಲೂ ಹೆಚ್ಚು ನೀರನ್ನು ಡ್ರಾ ಮಾಡುವುದಕ್ಕಾಗುವುದಿಲ್ಲ. ಹೇಮಾವತಿ ಮೇಲುಗಡೆ ಇರುವ ಎಲ್ಲಾ ರೈತರಿಗೂ ತೊಂದರೆಯಾಗುತ್ತದೆ. ತುಮಕೂರಿನಲ್ಲೂ ತೊಂದರೆಯಾಗುತ್ತದೆ. ಈಗ ಎಸ್ಕೇಪ್ ಮಾಡಿಕೊಡಬೇಕು. ಡಿಸ್ಚಾರ್ಜ್ ಇನ್‌ಕ್ರೀಸ್ ಮಾಡಿ, ಎಸ್ಕೇಪ್‌ಗೆ ತೆಗೆದುಕೊಂಡು ಬಂದು ಮಾರ್ಕೋನಹಳ್ಳಿ ಜಲಾಶಯವನ್ನು ತುಂಬಿಸಬೇಕು. 25 ಸಾವಿರ ಎಕರೆ ಎಂದರೆ ಬಹಳ ದೊಡ್ಡ ಕೆರೆ. ಸದನದಲ್ಲಿ ಹೇಳುವಾಗ ಬಹಳ ಕಷ್ಟವಾಗುತ್ತದೆ.

6.10 ಪಿ.ಎಂ

ಈಗಾಗಲೇ ನಾವು ಆಲೋಚನೆ ಮಾಡಿ ನೋಡಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ: ಇವೊತ್ತು ಅಚ್ಚುಕಟ್ಟು ಡೆವಲಪ್ ಆದರೆ ಹೇಗಾದರೂ ನೀವು ನೀರು ಕೊಡಬೇಕಾಗಿತ್ತಲ್ಲ. ಆದಕಾರಣ ತುಮಕೂರು ಜಿಲ್ಲೆಗೆ ಎಷ್ಟು ನೀರನ್ನು ಕೊಡಬೇಕೋ ಅಷ್ಟನ್ನು ಕೊಡಿ.

ಶ್ರೀ ಎನ್.ಪಿ.ಮುದ್ದಹನುಮೇಗೌಡ: ಈಗ ನೀವು ತುರುವೇಕೆರೆ ತಾಲ್ಲೂಕಿಗೆ ನೀರು ಬಿಡುತ್ತಿದ್ದೀರಿ. ತಾವು ಸ್ವಲ್ಪ ಹೆಚ್ಚಾಗಿ ಬಿಟ್ಟರೆ ಶಿಂಷದಲ್ಲಿ ನೀರು ಬರುತ್ತದೆ. ಈಗಾಗಲೇ ನೀವು ಎರಡು-ಮೂರು ಸಾರಿ ಪ್ರಯೋಗ ಮಾಡಿ ಕುಣಿಗಲ್ ಜನತೆಗೆ ಮಾರ್ಕೋನಹಳ್ಳಿ ಕೆರೆಯಿಂದ ನೀರು ಅನುಕೂಲವಾಗಿದೆ. ಆದಕಾರಣ ತುರುವೇಕೆರೆ ತಾಲ್ಲೂಕಿಗೆ ನೀವು ಏನು ನೀರು ಬಿಡುತ್ತಿದ್ದೀರಿ ಅದನ್ನು ಸ್ವಲ್ಪ ಕಂಟಿನ್ಯೂ ಮಾಡಿದರೆ ನಮಗೆ ಅಂದರೆ ಶಿಂಷಾ ವ್ಯಾಲಿಗೆ ನೀರು ಬರುತ್ತದೆ. ಇಷ್ಟೇಕೆ ನೀವು ಮೊಂಡಾಟ ಮಾಡುತ್ತಿದ್ದೀರಿ. ಇದುವರೆಗೆ ನೀವು ಬಹಳ ಜನರಸ್ಸಾಗಿ ನಾವು ಹೇಳಿದ್ದಕ್ಕೆ ಒಪ್ಪಿಕೊಳ್ಳುತ್ತಿದ್ದಿರಿ ಮೊದಲು ನೀವು ಈ ತರಹ ಮೊಂಡಾಟ ಮಾಡುತ್ತಿದ್ದೀರಲ್ಲ ಈಗ.

ಶ್ರೀ ಡಿ.ನಾಗರಾಜಯ್ಯ: ಈಗ ಏನು ನಾಗಮಂಗಲ ಕೆರೆಗೆ, ತುಮಕೂರು ಚಾನಲ್‌ಗೆ ನೀರು ಬಿಟ್ಟಿರತಕ್ಕಂಥದ್ದು ಇದೆ ಕೇವಲ ಬೆಳೆ ಇಲ್ಲದೇ ಇರತಕ್ಕಂಥ ಪ್ರದೇಶದಲ್ಲಿ ಕೆರೆಗೆ ನೀರು ತುಂಬಿಸ್ತಾ ಇರತಕ್ಕಂಥದ್ದು. ನಾನು ಕೇಳುತ್ತಾ ಇರತಕ್ಕಂಥದ್ದು ಕೇವಲ 25 ಸಾವಿರ ಎಕರೆಯಲ್ಲಿ ಹಾಲಿ ರೈತರು ನಾಟಿ ಮಾಡಿ ಗರ್ಭದ ಸ್ಟೇಜ್‌ಗೆ ಬಂದಿರತಕ್ಕಂಥದ್ದರಿಂದ ಇವೊತ್ತು ಅವರಿಗೆ ನೀರನ್ನು ಕೊಡಲಿಕ್ಕೆ ಆಗುವುದಿಲ್ಲ ಎಂದರೆ ಸುಮಾರು 25 ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆದಿರತಕ್ಕಂಥ ರೈತರ ಬೆಳೆ ಹಾಳಾಗುತ್ತದೆ. ಇವೊತ್ತು

ನೀರನ್ನು ಕೊಡಲಿಕ್ಕೆ ಆಗುವುದಿಲ್ಲ ಅಥವಾ ಅದರ ಬಗ್ಗೆ ನಾಗೇಗೌಡರು ಪರಿಶೀಲನೆ ಮಾಡುತ್ತೇವೆ ಎಂದು ಏನು ಹೇಳುತ್ತಿದ್ದಾರೆ, ಅವರು ಕೂಡ ರೈತರಾಗಿರತಕ್ಕಂಥವರು, ರೈತರ ಕಷ್ಟ ಸುಖ ಗೊತ್ತಿರ ತಕ್ಕಂಥವರು, ಇವೊತ್ತು ಎರಡು ಮೂರು ತಿಂಗಳು ಬೆಳೆದ ಬೆಳೆಗೆ ನೀರು ಕೊಡಲಿಲ್ಲ ಎಂದರೆ ನಾವು ಧರಣಿಯನ್ನು ಮಾಡಬೇಕಾಗುತ್ತದೆ. ಮತ್ತೆ ನಾವು ಹೋರಾಟಕ್ಕೆ ಇಳಿಯಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ತಾವು ಇಲ್ಲಿ ಒಳಗೆ ಬನ್ನಿ ನಾವು ಕೂಡ ನಿಮ್ಮ ಜೊತೆಗೆ ಬರುತ್ತೇವೆ.

ಶ್ರೀ ಎನ್.ಪಿ.ಮುದ್ದಹನುಮೇಗೌಡ: ನಾನೂ ಕೂಡ ಧರಣಿ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಾನು ನಿಮಗೆ ಬೆಂಬಲ ಕೊಡುತ್ತೇನೆ.

(ಗೊಂದಲ)

ಶ್ರೀ ಕೆ.ಎನ್.ನಾಗೇಗೌಡ: ಇದು ಸರಿಯಾದುದಲ್ಲ, ಅದು ಹೇಮಾವತಿ ಅಚ್ಚುಕಟ್ಟು ಅಲ್ಲ, ಅದು ತುಮಕೂರು ಭಾಗದ ಅಚ್ಚುಕಟ್ಟು ಅಲ್ಲ. ಆದರೆ ಅದು ಬಹಳಷ್ಟು ವರ್ಷದ ಬೇಡಿಕೆ ಇದೆ.

(ಗೊಂದಲ)

ಛೇರ್ಮನ್: ಎಲ್ಲರೂ ಕೂತುಕೊಳ್ಳಿ. ಒಬ್ಬೊಬ್ಬರಾಗಿ ಮಾತನಾಡಿ. ಅವರು ಮೊದಲು ಅದಕ್ಕೆ ಉತ್ತರ ಹೇಳಲಿ.

(ಶ್ರೀ ಡಿ.ನಾಗರಾಜಯ್ಯ ಹಾಗೂ ಶ್ರೀ ಎಸ್.ಪಿ.ಮುದ್ದಹನುಮೇಗೌಡರು ಧರಣಿ ಮಾಡಲು ಬಾವಿಯಲ್ಲಿ ಬಂದು ನಿಂತರು)

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕ ಮಿತ್ರರಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ ಕಾವೇರಿ ಡಿಸ್‌ಪ್ಯೂಟಿನ ವಿಚಾರ ಸುಪ್ರೀಮ್ ಕೋರ್ಟಿನಲ್ಲಿ ಇದೆ. ನಾಡಿದ್ದು ಬೆಳಿಗ್ಗೆ ನಾವು ಒಂದು ಸಭೆ ಮಾಡೋಣ ಆ ಸಭೆಯಲ್ಲಿ ನೀರಾವರಿ ಸಚಿವರು, ನಾವು ನೀವು ಅಧಿಕಾರಿಗಳು ಸೇರೋಣ. ಸೇರಿಕೊಂಡು ಅದರ ಬಗ್ಗೆ ಇತ್ಯರ್ಥ ಮಾಡೋಣ.

ಶ್ರೀ ಟಿ.ಬಿ.ಜಯಚಂದ್ರ: ಅದು ಡೈವರ್ಶನ್ ಆಗುವುದಿಲ್ಲ. ಕಾವೇರಿ ಬೇಸಿನ್‌ನಲ್ಲಿ ಅದು ಬರುತ್ತದೆ ಆದರೆ ಕಮಾಂಡ್ ಏರಿಯಾದಲ್ಲಿ ಅದು ಸೇರುವುದಿಲ್ಲ ಎಂದು ಇದೆ. ಆದ್ದರಿಂದ ಅದು ಡೈವರ್ಶನ್ ಆಗುವುದಿಲ್ಲ.

(ಗೊಂದಲ)

ಶ್ರೀ ಸಿ.ಭೈರೇಗೌಡ: ನನಗೆ ಸ್ಥಳೀಯವಾಗಿ ಪರಿಸ್ಥಿತಿ ಗೊತ್ತಿದೆ.

ಛೇರ್ಮನ್: ಭೈರೇಗೌಡರೆ ಅವರ ಜೊತೆ ಸಂವಾದಕ್ಕೆ ಇಳಿದರೆ ಹೇಗೆ,? ನಾಗರಾಜಯ್ಯನವರೇ ನೀವು ಅಲ್ಲಿಂದ ಸಂವಾದ ಮಾಡಿದರೆ ಹೇಗೆ ಸಭೆಯನ್ನು ನಡೆಸಬೇಕು? ದಯವಿಟ್ಟು ತಾವು ಕುಳಿತುಕೊಳ್ಳಿ ಇಲ್ಲದಿದ್ದರೆ ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ.

ಶ್ರೀ ಸಿ.ಭೈರೇಗೌಡ: ಮಾನ್ಯ ಸಚಿವರು ಟೆಕ್ನಿಕಲ್ ಆಗಿ ಸಾಧ್ಯತೆ ಇಲ್ಲ ಎನ್ನತಕ್ಕಂಥ ಮ್ಮಾತನ್ನು ಹೇಳುತ್ತಿದ್ದಾರೆ. ಅದರ ಬಗ್ಗೆ ನಾವು ಪರಿಶೀಲನೆ ಮಾಡಬೇಕಾಗುತ್ತದೆ. ನೀರು ಬಿಡುವುದಕ್ಕೆ ಸಾಧ್ಯತೆ ಇದ್ದರೆ ಬಿಡುತ್ತೇವೆ. ಯಾರೋ ಹೇಳುತ್ತಿದ್ದರು ತಮಿಳುನಾಡಿಗೆ ನೀರು ಹೋಗುವಾಗ ನಮಗೆ ಏಕೆ ಬರಬಾರದು ಎಂದು? ಅದರಲ್ಲಿ ಅರ್ಥ ಇದೆ. ಅದನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ನಮ್ಮ ರಾಜ್ಯದ ರೈತರ ಹಿತವನ್ನು ಕಾಪಾಡತಕ್ಕಂಥದ್ದು ನಮ್ಮ ಕರ್ತವ್ಯ ಇದೆ. ಅವರಿಗೆ ನೀರು ಕಳುಹಿಸಬೇಕೆನ್ನುವ ಇಚ್ಛೆ ಸರ್ಕಾರಕ್ಕೆ ಇಲ್ಲ. ಆದರೆ ಇಲ್ಲಿ ವಾಸ್ತವಿಕವಾದ ಅಂಶವನ್ನು ಮಾತ್ರ ಮಂತ್ರಿಗಳು ಹೇಳುತ್ತಿದ್ದಾರೆ. ಇಲ್ಲಿ ನೀರು ತರಬೇಕಾದರೆ ಮೇಲೆ ಇರತಕ್ಕಂಥ ಅಚ್ಚುಕಟ್ಟಿನ ನೀರನ್ನು ಕಡಿಮೆ ಮಾಡಬೇಕಾಗುತ್ತದೆ. ಅಥವಾ ಅದನ್ನು ಕೆಲವು ಕಾಲ ನಿಲ್ಲಿಸಬೇಕಾಗುತ್ತದೆ, ಎನ್ನತಕ್ಕಂಥ ಮಾತನ್ನು ಮಂತ್ರಿಗಳು ಹೇಳುತ್ತಿದ್ದಾರೆ. ಅದು ಟೆಕ್ನಿಕಲ್ಲಾಗಿ ಸಾಧ್ಯತೆ ಇದ್ದರೆ ಖಂಡಿತವಾಗಿ ಸರ್ಕಾರ ನೀರನ್ನು ಒದಗಿಸತಕ್ಕಂಥದ್ದಕ್ಕೆ ಹಿಂದೆ ಹೋಗುವುದಿಲ್ಲ.

(ಗೊಂದಲ)

(ಈ ಹಂತದಲ್ಲಿ ಶ್ರೀ ಡಿ.ನಾಗರಾಜಯ್ಯನವರು ತಮ್ಮ ಸ್ಥಾನಕ್ಕೆ ಮರಳಿದರು)

ಛೇರ್ಮನ್: ಮಾನ್ಯ ನಂಜೇಗೌಡರು ಏನೋ ಹೇಳುತ್ತಿದ್ದಾರೆ. ನಂಜೇಗೌಡರೆ ತಾವು ಹೇಳಿ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ,

ಶ್ರೀ ಡಿ.ನಾಗರಾಜಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಬೈರೇಗೌಡರು ತಾಂತ್ರಿಕವಾಗಿ ವಿಮರ್ಶೆ ಮಾಡಬೇಕಾಗುತ್ತದೆ. ಎಂದು ಅವರು ಏನು ಹೇಳುತ್ತಿದ್ದಾರೆ ಅದು ಸತ್ಯಕ್ಕೆ ದೂರವಾದ ಮಾತು. ಈಗ ಹಾಲಿ ನೂರು ಕ್ಯೂಸೆಕ್ಸ್ ನೀರು ಬಿಟ್ಟಿದ್ದಾರೆ, ನೀರು ಬರುತ್ತಿದೆ. ಹಾಗೆ ಬರುತ್ತಾ ಇರತಕ್ಕಂಥ ನೀರು ಅಲ್ಲಿ ಡ್ಯಾಂನಲ್ಲಿ ಖಾಲಿಯಾಗಿ ಹೋಗಿರುವುದರಿಂದ ಬೆಳೆ ಒಣಗಿ ಹೋಗುತ್ತಿದೆ. ಈಗ ಏನು ನೂರು ಕ್ಯೂಸೆಕ್ಸ್ ನೀರನ್ನು ಬಿಟ್ಟಿದ್ದಾರೆ ಅದನ್ನು ಎಂಟುನೂರು ಕ್ಯೂಸೆಕ್ಸ್‌ಗೆ ಬಿಟ್ಟು ಕೇವಲ ನಾಲ್ಕೈದು ದಿವಸ

ನೀರು ಹರಿಸಿದರೆ ನಮ್ಮ ರೈತರ ಬೆಳೆ ಉಳಿದುಕೊಳ್ಳುತ್ತದೆ. ಡ್ಯಾಂಗೆ ನೀರು ಬರುತ್ತದೆ. ನೀವು ಏನೂ ಹೊಸದಾಗಿ ಚಾನಲ್ ಮಾಡಬೇಕಾಗಿಲ್ಲ. ಬಿಡುದಂಡಿ ಮಾಡಬೇಕಾಗಿಲ್ಲ. ಮತ್ತು ಯಾವುದೇ ತರಹವಾದ ನೀರನ್ನು ನಾವು ಇದು ಮಾಡಬೇಕಾಗಿಲ್ಲ. ಡ್ಯಾಮನಲ್ಲಿ ನೀರನ್ನು ಇನ್‌ಕ್ರೀಸ್ ಮಾಡುವ ಮುಖಾಂತರ ಎನ್.ಬಿ.ಸಿ ಮತ್ತು ಡಿ.ಬಿ.ಸಿ.ನಲ್ಲಿ ಹೋಗುತ್ತಿರುವ ನೀರನ್ನು ಈ ಕಡೆಗೆ ಡೈವರ್ಶನ್ ಮಾಡಿ ನಮಗೆ ನೀರು ಕೊಡಬೇಕಾಗುತ್ತದೆಯೇ ಹೊರತು ಯಾವುದೇ ತರಹ ಸರ್ಕಾರದ ಹಣ ಖರ್ಚು ಮಾಡತಕ್ಕಂಥ ವ್ಯವಸ್ಥೆ ಇಲ್ಲ. ಅಥವಾ ತಾಂತ್ರಿಕವಾಗಿ ಆ ವಿಭಾಗಕ್ಕೆ ಬರುತ್ತದೆ ಎಂದು ಹೇಳುವಂಥದ್ದಿಲ್ಲ. ಮಾರ್ಕೋನಹಳ್ಳಿ ಡ್ಯಾಂಗೆ ಬರತಕ್ಕಂಥದ್ದು ಸಹ ನಾಲೆ ಹೇಮಾವತಿ ಅಚ್ಚುಕಟ್ಟಿನಲ್ಲಿ ಬರುತ್ತದೆ. ಈಗ ಆ ಡ್ಯಾಂ ನಮ್ಮ ಕಂಟ್ರೋಲ್‌ಗೆ ಕೊಡಿ ಎಂದು ಇಲಾಖೆಯವರು ತಮ್ಮ ಕಂಟ್ರೋಲ್‌ಗೆ ತೆಗೆದುಕೊಳ್ಳುತ್ತಿದ್ದಾರೆ. ಆ ಕಾರಣಕ್ಕಾಗಿ ಇವೊತ್ತು ನೂರು ಕ್ಯೂಸೆಕ್ಸ್ ನೀರನ್ನು ಬಿಡುವುದಕ್ಕೆ ಬದಲಾಗಿ ಎಂಟುನೂರು ಕ್ಯೂಸೆಕ್ಸ್ ನೀರನ್ನು ಕೊಡದೇ ಇದ್ದ ಪಕ್ಷದಲ್ಲಿ ರೈತರ ಬೆಳೆ ಹಾಳಾಗುತ್ತದೆ. ಆದಕಾರಣ ನಾಗೇಗೌಡರು ಆ ತರಹ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡರು: ಎಲ್ಲ ವಿಚಾರವನ್ನು ಇಲ್ಲಿ ಚರ್ಚೆ ಮಾಡುವುದು ಬೇಡ. ನೀವು ಎಕ್ಸಾಮಿನ್ ಮಾಡಿ. ಎಲ್ಲ ಸಾಧಕ ಬಾಧಕಗಳು ನಮಗೆ ಗೊತ್ತಿರುವುದೇ ಇದೆ. ಅವುಗಳನ್ನೆಲ್ಲ ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಎಲ್ಲ ವಿಚಾರಗಳನ್ನು ಇಲ್ಲೇ ಚರ್ಚೆ ಮಾಡುವುದು ಬೇಡ. ಎಲ್ಲರ ಹಿತದೃಷ್ಟಿಯಿಂದ ಆ್ಯಕ್ಟ್ ಮಾಡಿದರೆ ಆಯಿತು. ಇಲ್ಲಿ ಚರ್ಚೆ ಬೇಕಿಲ್ಲ. ಭರವಸೆ ಬೇಕಿಲ್ಲ. ನೀವು, ನಾಗರಾಜಯ್ಯನವರು, ಮುದ್ದಹನುಮೇಗೌಡರು ನಿಮ್ಮ ಚೇಂಬರ್‌ನಲ್ಲಿ ಕುಳಿತು ಸಮಸ್ಯೆಯನ್ನು ಬಗೆಹರಿಸಿಕೊಳ್ಳಿ. ಅದು ಕಷ್ಟದ ವ್ಯವಹಾರ ವೇನು ಅಲ್ಲ. ಪಬ್ಲಿಕ್ಕಾಗಿ ನಾವು ಚರ್ಚೆ ಮಾಡುವುದ ಬೇಡ. ಇಷ್ಟನ್ನೇ ನಾನು ಹೇಳುವುದು.

ಶ್ರೀ ವಾಟಾಳ್ ನಾಗರಾಜ್: ಈಗ ಮಂತ್ರಿಗಳು ಅವರಿಬ್ಬರನ್ನು ಕರೆದುಬಿಡಲಿ. ಅವರ ಸಮಸ್ಯೆ ಏನು ಎಂದು ಕೇಳಿ ಬಗೆಹರಿಸಲಿ, ಆ ವಿಷಯದಲ್ಲಿ ಮಂತ್ರಿಗಳು ಭರವಸೆ ನೀಡಲಿ.

ಅಧ್ಯಕ್ಷರು: ಆಯಿತು ಹೇಳುತ್ತಾರೆ ಬಿಡಿ.

ಶ್ರೀ ಕೆ.ಎನ್.ನಾಗೇಗೌಡ: ಆಯಿತು ಅವರು ಅಲ್ಲಿ ಹೋಗಲಿ.

(ಶ್ರೀ ಎಸ್.ಪಿ.ಮುದ್ದಹನುಮೇಗೌಡರವರು ತಮ್ಮ ಸ್ಥಾನಕ್ಕೆ ಮರಳಿದರು)

ಶ್ರೀ ಡಿ.ನಾಗರಾಜಯ್ಯ: ಒಳಗಡೆ ಕುಳಿತುಕೊಂಡು ಮಾತನಾಡುವ ಅವಶ್ಯಕತೆ ಇಲ್ಲ. ಈಗಾಗಲೇ ಅಲ್ಲಿ ನೂರು ಕ್ಯೂಸೆಕ್ಸ್ ನೀರನ್ನು ಬಿಟ್ಟಿದ್ದಾರೆ. ನೀರನ್ನು ಹೆಚ್ಚು ಬಿಡುವುದಕ್ಕೆ

ನಾವು ಕೇಳುತ್ತಿದ್ದೇವೆ ವಿನಹ ಹೊಸದಾಗಿ ಮಾಡುವಂಥದ್ದು, ಕಾನೂನನ್ನು ಮಾಡತಕ್ಕಂಥದ್ದು ಏನೂ ಇಲ್ಲ. ಆದಕಾರಣ ಮಂತ್ರಿಗಳು ಆ ಕೆಲಸವನ್ನು ಮಾಡಬೇಕು. ಅದನ್ನು ಮಾಡದಿದ್ದರೆ ನಾವು ಸ್ಟ್ರೈಕ್ ಮಾಡುವಂಥದ್ದಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಮಾರ್ಕೋನಹಳ್ಳಿಗೆ ನೀರನ್ನು ಬಿಡುವುದರಲ್ಲಿ ಯಾರದೂ ತಕರಾರು ಇಲ್ಲ. ತಮಿಳುನಾಡಿಗೆ ನೀರು ಕೊಡುವಾಗ ಇಲ್ಲಿ ಏಕೆ ನೀರು ಬಿಡಬಾರದು. ನೀರು ಬಿಡಲೇಬೇಕು ಅದರಲ್ಲಿ ಬೇರೆ ಮಾತಿಲ್ಲ. ಮಾನ್ಯ ಮಂತ್ರಿಗಳಿಗೆ ನಾನೇನು ಹೇಳುವುದು ಎಂದರೆ ಅಲ್ಲಿಯವರೆಗೆ ತೆಗೆದುಯೊಂಡು ಹೋಗುವ ಬದಲು ನಾಳೆ ಒಂದು ಸಭೆಯನ್ನು ಕರೆದು ತೀರ್ಮಾನ ಮಾಡಿ. ಅದಕ್ಕೇಕೆ ನೀವು ಹಿಂದೆಮುಂದೆ ನೋಡುತ್ತಿದ್ದೀರಿ?

ಛೇರ್ಮನ್: ತಾವು ಸಲಹೆ ಮಾಡಿದ್ದೀರಿ. ಅವರು ಉತ್ತರ ಹೇಳುತ್ತಾರೆ ಬಿಡಿ.

(ಗೊಂದಲ)

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ನಮ್ಮ ಕೋರಿಕೆ ಮೇರೆಗೆ ಇದೇ ಸದನದಲ್ಲಿ ಮಾರ್ಕೋನಹಳ್ಳಿ ವ್ಯಾಲಿಗೆ ನೀರು ಬಿಟ್ಟಿರತಕ್ಕಂಥ ತಿರ್ಮಾನ ಆಗಿದೆ. ಇದು ಹೊಸದೇನಲ್ಲ. ಈಗಾಗಲೇ ತೀರ್ಮಾನ ಆಗಿರುವುದು ಕಡತದಲ್ಲಿದೆ.

ಶ್ರೀ ಬಿ.ಸತ್ಯನಾರಾಯಣ: ಮಾನ್ಯ ಶಾಸಕರು ಹೇಳಿದ ಹಾಗೆ ಬಹಳಷ್ಟು ಬೆಳೆ ಎರಡು ಮೂರು ತಿಂಗಳು ಆಗಿರುವುದರಿಂದ ಈಗ ನೀರು ಕೊಡದೇ ಇದ್ದರೆ ಬೆಳೆ ಹಾಳಾಗುತ್ತದೆ. ಈಗಾಗಲೇ ಕೊಡತಕ್ಕಂಥ ನೀರನ್ನು ಈಗ ಹೆಚ್ಚಿಗೆ ಮಾಡಿದರೆ ಸಾಕಾಗಬಹುದು. ಈಗ 800 ಕ್ಯೂಸೆಕ್ಸ್ ಕೇಳುತ್ತಿದ್ದಾರೆ ಸ್ವಲ್ಪ ಹೆಚ್ಚು ಕಮ್ಮಿ ನೋಡಿ ನಾಗೇಗೌಡರು ನೀರು ಬಿಡಿಸಿಕೊಟ್ಟರೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ರೈತರಿಗೆ ತೊಂದರೆಯಾಗುತ್ತದೆ. Precedent is there. Hon'ble Minister should readily agree.

ಛೇರ್ಮನ್: ಸ್ವಲ್ಪ ಕುಳಿತುಕೊಳ್ಳಿ ಮಾನ್ಯ ಸಚಿವರು ಉತ್ತರ ಹೇಳುತ್ತಿದ್ದಾರೆ.

ಶ್ರೀ ಕೆ.ಎನ್.ನಾಗೇಗೌಡ: ಹಿರಿಯ ಸದಸ್ಯರಾದ ನಂಜೇಗೌಡರು, ವಾಟಾಳ್ ನಾಗರಾಜ್‌ರವರು ಪರಿಶೀಲನೆ ಮಾಡಿ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಕಳೆದ ಮೂರು ದಿವಸದಿಂದ ನಾವು ಪರಿಶೀಲನೆ ಮಾಡುತ್ತಿದ್ದೇವೆ. 25 ಸಾವಿರ ಎಕರೆಗೆ ನೀರು ಬಿಡಬೇಕಾದರೆ ಮಾರ್ಕೋನಹಳ್ಳಿ ಡ್ಯಾಂ ಬಗ್ಗೆ ನನಗೆ ಗೊತ್ತಿದೆ. ಶಿಂಷಾದಿಂದ ಬರಬೇಕಾದರೆ ಶಿಂಷಾದ 16-17-18 ಡಿಸ್ಟ್ರಿಬ್ಯೂಟರಿನಲ್ಲಿ ವೋಟ್‌ಲ್ಯಾಕ್ ಇಲ್ಲ, ನಾನು ಪರ್ಸನಲೀ ನೋಡಿದ್ದೇನೆ. ಅದು ಕಷ್ಟವಾಗುತ್ತದೆ ಆದರೂ ಅವರಿಗೆ ತಾತ್ಕಾಲಿಕವಾಗಿ ನೀರು ಬಿಡಿಸಿಕೊಡುತ್ತೇನೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಭಾರೀ ನೀರಾವರಿ ಸಚಿವರಿಗೆ ನಮ್ಮ ಕುಣಿಗಲ್ ತಾಲ್ಲೂಕಿನ ಜನತೆಯ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀರು ಬಿಟ್ಟಮೇಲೆ ಅಭಿನಂದನೆಗಳನ್ನು ಸಲ್ಲಿಸಿ.

ಛೇರ್ಮನ್: ಅಜೆಂಡಾ ಪ್ರಕಾರ ಇರುವ ಅಲ್ಪಕಾಲಾವಧಿ ಚರ್ಚೆಯನ್ನು ಸೋಮವಾರಕ್ಕೆ ಮುಂದಕ್ಕೆ ಹಾಕುತ್ತೇನೆ.

(ಆ) ಪೆಟ್ರೋಲ್, ಡೀಸಲ್ ಹಾಗೂ ಗ್ಯಾಸ್ ಬೆಲೆ ಏರಿಕೆ ಕುರಿತು

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ): ಸನ್ಮಾನ್ಯ ಅಧ್ಯಕ್ಷರೇ, ನೆನ್ನೆ ಸದನದಲ್ಲಿ ಪೆಟ್ರೋಲ್ ಬೆಲೆ ಏರಿಕೆಯಿಂದ ಕರ್ನಾಟಕದಲ್ಲಿ ಬೆಂಗಳೂರು ನಗರದಲ್ಲಿ ಬಹಳ ಗೊಂದಲ ಉಂಟಾಗಿದೆ. ದರ ಒಂದು ರೂಪಾಯಿ ಜಾಸ್ತಿ ಆದರೆ 3.80 ಪೈಸೆ ಜಾಸ್ತಿ ಮಾಡಿದ್ದಾರೆ. ಅದರ ಬಗ್ಗೆ ಈ ಸಭೆಯಲ್ಲಿ ಒಂದು ಹೇಳಿಕೆ ಕೊಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಬೆಲೆ ಏರಿಕೆ ಮಾಡುತ್ತಾರೆ ಮತ್ತೆ ಸಾರಿಗೆ ಸಚಿವರು ಬಸ್ ದರವನ್ನು ಏರಿಸತಕ್ಕಂಥದ್ದಾಗುತ್ತದೆ. ಈ ರೀತಿ ಒಂದಕ್ಕೊಂದು ಶುರುವಾಗುತ್ತದೆ. ಇದು ಅಪಾಯಕಾರಿಯಾದ ಬೆಳವಣಿಗೆ. ಒಂದು ಕಡೆ ಡೀಸೆಲ್ ಬೆಲೆ ಏರಿತು ಎಂದರೆ ಅವರು ಏರಿಸಿದ ಆಧಾರದ ಮೇಲೆ ಬಸ್ ದರವನ್ನು ಏರಿಸುತ್ತಾರೆ. ಆಟೋ ದರ ಕೂಡ ಜಾಸ್ತಿಯಾಗುತ್ತದೆ. ಇದರಿಂದ ಜನರಿಗೆ ತೊಂದರೆಯಾಗುತ್ತದೆ. ಆದಕಾರಣ ಸರ್ಕಾರದವರು ನಾವು ಬಸ್ ದರವನ್ನು ಏರಿಸುವುದಿಲ್ಲ ಎಂದು ಹೇಳಬೇಕು. ಸರ್ಕಾರದ ಸ್ಪಷ್ಟ ನಿಲುವು ಏನು ಎಂದು ಹೇಳಬೇಕು.

ಛೇರ್ಮನ್: ತಾವು ಅದರ ಬಗ್ಗೆ ನೋಟೀಸ್ ಕೊಟ್ಟಿದ್ದರಾ? ಯಾವ ನಿಯಮದ ಕೆಳಗಡೆ ನೋಟೀಸ್ ಕೊಟ್ಟಿದ್ದೀರಿ? ಅದಕ್ಕೆ ಅನುಮತಿ ಇದೆಯಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪೆಟ್ರೋಲ್ ಡೀಸೆಲ್ ಮತ್ತು ಗ್ಯಾಸ್ ಬೆಲೆ ಜಾಸ್ತಿಯಾಗಿದ್ದರ ಬಗ್ಗೆ ಆಹಾರ ಮತ್ತು ನಾಗರೀಕ ಪೂರೈಕೆಯ ಸಚಿವರು ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದರು.

ಛೇರ್ಮನ್: ಸೋಮವಾರ ಮಾಡಬಹುದಲ್ಲ.

ಶ್ರೀ ವಾಟಾಳ್ ನಾಗರಾಜ್: ಇದು ಬಹಳ ಪ್ರಾಮುಖ್ಯವಾದುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ರೆಡಿ ಇದ್ದಾರೆ. ಸೋಮಾವರ ಅವರು ಬಸ್ ದರ ಏರಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಏಕೆಂದರೆ ಈಗಾಗಲೇ ಅವರು

ಎಲೆಕ್ಟ್ರಿಸಿಟಿ ದರವನ್ನು ಏರಿಸಿದ್ದಾರೆ. ಅದು ಇಳಿಯಲಿಲ್ಲ. ನೀವು ಎನಹಾನ್ಸ್ ಮಾಡುವುದರಲ್ಲಿ ಫರ್ಮ್ ಇದ್ದೀರಿ ಏಕೆಂದರೆ ಲಾಸ್ ಇದೆ ಎಂದು ಹೇಳುತ್ತಾರೆ. ಅವರು ತಮ್ಮ ಲಾಸ್ ತಾಳುವುದಿಲ್ಲ. ಸೋಮವಾರ ರೇಟ್ ಹೆಚ್ಚಿಗೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಬಸ್ ದರ ಏರಿಸುವುದಕ್ಕೆ ನಮ್ಮದು ಬಹಳ ವಿರೋಧ ಇದೆ.

ಛೇರ್ಮನ್: ಒಂದಕ್ಕೊಂದು ತಾಳೆ ಹಾಕುವುದಕ್ಕಿಂತ ಈಗ ತಮಗೆ ಬೇಕಾದಂಥ ಉತ್ತರವನ್ನು ಕೊಡುವುದಕ್ಕೆ ಮಂತ್ರಿಗಳು ಇಲ್ಲಿ ಇಲ್ಲ. ಆವಾಗ ಇದ್ದರು ಈಗ ಇಲ್ಲ.

ಶ್ರೀ ಅರಗ ಜ್ಞಾನೇಂದ್ರ: ಪೆಟ್ರೋಲ್, ಡೀಸೆಲ್ ರೇಟ್ ನೆನ್ನೆಯಿಂದಲೇ ಜಾಸ್ತಿ ಯಾಗಿದೆ. ಪೆಟ್ರೋಲ್‌ಗೆ ನಿಗದಿತ ಬೆಲೆ ಎಷ್ಟು ಎಂದು ಯಾರೂ ಹೇಳುವಂಥವರಿಲ್ಲ ಇಂತಹ ಕಷ್ಟದ ಪರಿಸ್ಥಿತಿ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಂತ್ರಿಯವರನ್ನು ಮನೆಗೆ ಹೋಗಿ ಕರೆದು ತರುವುದಕ್ಕೆ ಆಗುತ್ತದೆ. He should be present here to make the statement. ಅವರು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಪ್ರಾಮಿಸ್ ಮಾಡಿದ್ದಾರೆ.

SRI P.G.R.SINDHIA: I will reply on behalf of the Government

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಸ್ಟೇಟ್‌ಮೆಂಟ್ ಮಾಡುವಾಗ ಅಧ್ಯಕ್ಷರು ಆಮೇಲೆ ಮಾಡಿ ಎಂದು ಹೇಳಿದರು. ಈಗ ಅವರನ್ನು ಹುಡುಕಿಕೊಂಡು ಬರುವುದಕ್ಕೆ ಆಗುತ್ತದೆಯೇ?

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದವರು ಪೆಟ್ರೋಲ್, ಡೀಸೆಲ್ ಹಾಗೂ ಗ್ಯಾಸ್ ಬೆಲೆಯನ್ನು ಏರಿಸಿರತಕ್ಕಂಥ ಹಿನ್ನೆಲೆಯಲ್ಲಿ ಆಹಾರ ಮತ್ತು ನಾಗರೀಕ ಪೂರೈಕೆಯ ಸಚಿವರು ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದು ನಿಜ. ಆದರೆ ಅವರು ಸದನದಲ್ಲಿ ಇಲ್ಲ. ಈಗ ತಕ್ಷಣ ಅವರನ್ನು ಕರೆಯಿಸಿ ಹೇಳಿಕೆಯನ್ನು ಕೊಡತಕ್ಕಂಥ ಪ್ರಯತ್ನವನ್ನು ಮಾಡುತ್ತೇನೆ. ನಮ್ಮ ಚೀಫ್ ವಿಪ್‌ರವರಿಗೂ ಹೇಳುತ್ತೇನೆ. ಅವರು ಬಂದರೆ, ಸಿಗುವುದಾದರೆ ಹೇಳಿಕೆಯನ್ನು ಕೊಡಿಸುತ್ತೇನೆ. ಇಲ್ಲದಿದ್ದರೆ ಸೋಮವಾರ ಅವರ ಕಡೆಯಿಂದ ಹೇಳಿಕೆ ಕೊಡಿಸುತ್ತೇನೆ. ನೆನ್ನೆ ಕೆಲವು ಮಾನ್ಯ ಸದಸ್ಯರು ರಾಜ್ಯ ಸರ್ಕಾರದಿಂದ ಟ್ಯಾಕ್ಸ್ ಹಾಕಿದ್ದೀರಾ ಎಂದು ಕೇಳಿದರು. ಮುಖ್ಯಮಂತ್ರಿಗಳ ಜೊತೆಯಲ್ಲಿ, ಹಣಕಾಸಿನ ಸಚಿವರಲ್ಲಿ ಹಾಗೂ ಅಧಿಕಾರಿಗಳ ಜೊತೆಯಲ್ಲಿ ನಾವು ಚರ್ಚೆ ಮಾಡಿದ್ದೇವೆ. ರಾಜ್ಯ ಸರ್ಕಾರದಿಂದ ಇವುಗಳ ಮೇಲೆ ಯಾವುದೇ ರೀತಿಯ ಹೊಸ ಟ್ಯಾಕ್ಸ್‌ಗಳನ್ನು ಹಾಕಿಲ್ಲ ಎಂದು ಸ್ಪಷ್ಟಮಾಡುತ್ತೇನೆ.

ಇನ್ನು ಎರಡನೇಯದಾಗಿ ಆಟೋರಿಕ್ಷ ದರವನ್ನು ಹೆಚ್ಚಿಗೆ ಮಾಡತಕ್ಕಂಥ ವಿಚಾರದಲ್ಲಿ ಹೇಳಬೇಕಾದರೆ ಈ ಹಿಂದೆ ಆಟೋರಿಕ್ಷ ಬೆಲೆಯನ್ನು ನಿಗದಿ ಮಾಡತಕ್ಕಂಥ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನಾವು ಸರ್ಕಾರದವರು ಕೊಟ್ಟಿದ್ದೇವೆ. ನಮ್ಮ ಹತ್ತಿರವಾಗಲೀ, ಮಂತ್ರಿಗಳ ಹತ್ತಿರವಾಗಲೀ ಅಥವಾ ಸಾರಿಗೆ ಆಯುಕ್ತರ ಹತ್ತಿರವಾಗಲೀ, ನಾವು ಅಧಿಕಾರವನ್ನು ಇಟ್ಟುಕೊಂಡಿಲ್ಲ. ಈಗ 26 ಜಿಲ್ಲೆಗಳಲ್ಲಿ ಇರತಕ್ಕಂಥ ಜಿಲ್ಲಾಧಿಕಾರಿಗಳಲ್ಲಿ ನಾವು ಆರ್.ಟಿ. ಅಥಾರಿಟಿ ಸಹಿತ ಮಾಡಿದ್ದೇವೆ. ಅವರಿಗೆ ಅಧಿಕಾರ ಇದೆ. ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳು ಆಟೋರಿಕ್ಷ ಸಂಘದವರ ಪ್ರತಿನಿಧಿಗಳನ್ನು ಕರೆದು ಎಣ್ಣೆ ಬೆಲೆ ಎಷ್ಟು ಪ್ರಮಾಣದಲ್ಲಿ ನಿಗದಿಯಾಗಿದೆ, ಯಾವ ಪ್ರಮಾಣದಲ್ಲಿ ಹೆಚ್ಚು ಮಾಡಬೇಕು ಎಂದು ವಿಚಾರ ಮಾಡುತ್ತಿದ್ದಾರೆ. ಆದರಿಂದ ಪ್ರಯಾಣಿಕರಿಗೆ ಸ್ವಲ್ಪ ತೊಂದರೆಯಾಗುತ್ತದೆ. ನಾನು ವೈಯಕ್ತಿಕವಾಗಿ ಮಾತನಾಡಬೇಕು ಎಂದರೆ ಕೇಂದ್ರ ಸರ್ಕಾರ ಡೀಸೆಲ್ ಬೆಲೆಯನ್ನು ಪೆಟ್ರೋಲ್ ಬೆಲೆಯನ್ನು ಹೆಚ್ಚು ಮಾಡಿರತಕ್ಕಂಥದ್ದು ಸಾಮಾನ್ಯವಾಗಿ ಜನಗಳ ಮೇಲೆ ಬಹಳ ದೊಡ್ಡ ಹೊರೆ ಎಂದು ನನ್ನ ಅಭಿಪ್ರಾಯ. ಇದರಿಂದ ತೊಂದರೆ ಆಗೇ ಆಗುತ್ತದೆ. ಆಟೋ ಬೆಲೆಗಳನ್ನು ಸಂಬಂಧಪಟ್ಟ ಆರ್.ಟಿ.ಅಥಾರಿಟೀಸ್ ಅಥವಾ ಜಿಲ್ಲಾಧಿಕಾರಿಗಳು ಆಯಾ ಜಿಲ್ಲೆನಲ್ಲಿ 2-3 ದಿವಸದಲ್ಲಿ ನಿಗದಿ ಮಾಡುತ್ತಾರೆ. ನಾಳೆ ನಾಡಿದ್ದು ರಜ ಇರುವುದರಿಂದ ಸೋಮವಾರ ಮಂಗಳವಾರದಲ್ಲಿ ಈ ಕೆಲಸಗಳು ಆಗುತ್ತವೆ. ಇದರಿಂದ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ ಆದಕಾರಣ ಕ್ಷಮೆ ಕೇಳುತ್ತೇವೆ.

ಇನ್ನು ಮೂರನೆಯದಾಗಿ ಬಸ್ ದರಗಳನ್ನು ಹೆಚ್ಚು ಮಾಡುತ್ತೀರಿ ಎನ್ನತಕ್ಕಂಥ ಮಾತನ್ನು ಮಾನ್ಯ ಖರ್ಗೆಯವರು, ವಾಟಾಳ್ ನಾಗರಾಜ್‌ರವರು ಹಾಗೂ ಇತರ ಸದಸ್ಯರು ಹೇಳಿದ್ದಾರೆ. ಈಗ ಅಧಿಶೇಶನ ನಡೆಯುತ್ತಿರತಕ್ಕಂಥ ಸಂದರ್ಭ ಇರುವುದರಿಂದ ನಾನು ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಯಾವುದೇ ವಿಚಾರವಾಗಲೀ ತೀರ್ಮಾನವಾಗಲೀ ತೆಗೆದುಕೊಳ್ಳಲು ಬರುವುದಿಲ್ಲ. ಇನ್ನು ನನಗೆ ಬಂದಿರುವ ತಾತ್ಕಾಲಿಕ ಮಾಹಿತಿಯ ಪ್ರಕಾರ ಡೀಸೆಲ್ ಬೆಲೆಗಳನ್ನು ಹೆಚ್ಚು ಮಾಡಿರುವುದರಿಂದ ಸಾರಿಗೆ ಸಂಸ್ಥೆಯ ಮೇಲೆ ಸುಮಾರು 75 ಕೋಟಿ ರೂಪಾಯಿಯ ಹೊರೆ ಜಾಸ್ತಿಯಾಗುತ್ತದೆ. ಇದು ಇರತಕ್ಕಂಥ ವಾಸ್ತವಿಕ ಅಂಶ. ರಾಜ್ಯದಲ್ಲಿ ಏನೇ ಮಾಡಿದರೂ ಸಹಿತ ಮಂತ್ರಿಮಂಡಲದ ಸಭೆಯಲ್ಲಿ ಚರ್ಚೆ ಮಾಡಬೇಕು. ನಾವು ಇದರ ಬಗ್ಗೆ ಇನ್ನೂ ಮಂತ್ರಿಮಂಡಲದಲ್ಲಿ ಚರ್ಚೆ ಮಾಡಲಿಲ್ಲ. ಆದಕಾರಣ ಈಗ ನಾವು ಏನಾದರು ಹೇಳಿಕೆಗಳನ್ನು ಕೊಡತಕ್ಕಂಥದ್ದು ಅಪಕೃತವಾಗುತ್ತದೆ. ಹೇಗೂ ಅಧಿವೇಶನ 12ನೇ ತಾರೀಖಿನವರೆಗೆ ಕಾರ್ಯಕಲಾಪಗಳನ್ನು ಇಟ್ಟುಕೊಂಡಿದ್ದೇವೆ. ವಿಶೇಷವಾಗಿ ನಾನು ಮತ್ತೊಂದು ಬಳುವಳಿಯನ್ನು ಕೊಟ್ಟು ನಾಳೆ ಹಬ್ಬವನ್ನು ಆಚರಣೆ ಮಾಡತಕ್ಕಂಥ ಜನಗಳಿಗೆ ನಾನು ತೊಂದರೆಯನ್ನು ಮಾಡುವುದಕ್ಕೆ ತಯಾರಿಲ್ಲ. ಆದರ ಬಗ್ಗೆ ನಾವು

ಚರ್ಚೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಅಧಿವೇಶನ ಮುಗಿದ ನಂತರ 12 ಗಂಟೆಗೆ ಬಸ್ ದರ ಹೆಚ್ಚಿಗೆ ಮಾಡಿರುವ ಪ್ರಕಟಣೆಯ ನಿದರ್ಶನ ಇರುವುದರಿಂದ ನಮಗೆ ಭಯ ಭೀತಿ ಇದೆ. ಅಧಿವೇಶನ ಮುಗಿದನಂತರ ಹೋದ ಸಾರಿ ಮಾಡಿದ್ದೇನು ಸ್ವಾಮಿ?

ಶ್ರೀ ಪಿ.ಜಿ.ಆರ್.ಸಿಂಧ್ಯಾ: ತಾವು ಹೇಳತಕ್ಕಂಥದ್ದು ಒಪ್ಪುತ್ತೇನೆ. ನಾನು ಇಲ್ಲ ಎಂದು ಹೇಳುತ್ತಿಲ್ಲ. ಇದರಲ್ಲಿ ಕದ್ದು ಮುಚ್ಚಿ ಮಾಡತಕ್ಕಂಥದ್ದು ಏನೂ ಸಹ ಇಲ್ಲ. ಆ ರೀತಿ ನಾವು ಮಾಡುವುದಕ್ಕೆ ಬರುವುದಿಲ್ಲ. ರಾತ್ರೋರಾತ್ರಿ ತರಾತುರಿಯಲ್ಲಿ ಬಸ್ ಟಿಕೆಟ್ ಪ್ರಿಂಟ್ ಮಾಡಿ ಆ ರೇಟಿನಲ್ಲಿ ನೀವು ಹಣವನ್ನು ಕೊಡಿ ಎಂದು ಹೇಳುವುದಕ್ಕೆ ಬರುವುದಿಲ್ಲ. ನಾವು ಈಗಾಗಲೇ ಮೊನ್ನೆ 22-23 ಪರ್ಸೆಂಟ್ ಹೆಚ್ಚಳವನ್ನು ಮಾಡಿದ್ದೇವೆ. ಅದನ್ನು ಗಮನದಲ್ಲಿಟ್ಟುಕೊಂಡು ಸಾರಿಗೆ ಸಂಸ್ಥೆಯಲ್ಲಿ ಹೇಗೆ ಮಾಡಬೇಕು, ಖಾಸಗೀ ಕ್ಷೇತ್ರದಲ್ಲಿ ಮತ್ತು ಸರ್ಕಾರಿ ಕ್ಷೇತ್ರದಲ್ಲಿರತಕ್ಕಂಥ ಎಲ್ಲರನ್ನು ನಮ್ಮ ಸರ್ಕಾರ, ಕರೆಯಿಸಿ ಅದರ ಬಗ್ಗೆ ಸಮಗ್ರವಾಗಿ ಎಲ್ಲರನ್ನು ನಮ್ಮ ಸರ್ಕಾರ ನಮ್ಮ ಮುಖ್ಯಮಂತ್ರಿಗಳು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಾರೆ. ಯಾವುದನ್ನು ನಾವು ತರಾತುರಿಯಲ್ಲಿ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ನೀವು ಕರ್ನಾಟಕ ರಾಜ್ಯದಲ್ಲಿ ತೆರಿಗೆಗಳನ್ನು ಹಾಕಲಿಲ್ಲ ಎಂದು ಹೇಳಿದ್ದೀರಿ. ನೀವು ತೆರಿಗೆಗಳನ್ನು ಹಾಕಲಿಲ್ಲ ಎಂದರೆ 25 ರೂಪಾಯಿ ಇರುವ ಪೆಟ್ರೋಲ್ 26 ಆಗಬೇಕು. 3.40 ಪೈಸೆ ಹೇಗಾಯಿತು? ನೀವು ಸರ್ಕಾರದವರು ಆಯಿಲ್ ಕಂಪನಿಯವರನ್ನು ಕರೆಸಿ ಯಾವ ರೀತಿ ಇದು ಆಯಿತು ಏಕೆ ಇಷ್ಟು ರೇಟ್ ಜಾಸ್ತಿಯಾಯಿತು ಎಂದು ಕೇಳಿ. ಏನಾದರೊಂದು ಮಾಡಬೇಕಲ್ಲ ನೀವು?

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಕೇಂದ್ರ ಸರ್ಕಾರದಿಂದ ಏನು ಪೆಟ್ರೋಲ್ ಬೆಲೆಗಳನ್ನು ಜಾಸ್ತಿ ಮಾಡಿದ್ದಾರೆ ಆ ಪ್ರಮಾಣದಲ್ಲಿ ಇಲ್ಲಿ ರಾಜ್ಯಸರ್ಕಾರದವರು ಕರವನ್ನು ಹೆಚ್ಚು ಮಾಡಬೇಕಾಗುತ್ತದೆ. ಅವರು ಶೇಕಡಾವಾರು ಎಷ್ಟು ಮಾಡಿರುತ್ತಾರೆ ಅಷ್ಟೇ ಇಲ್ಲೂ ಸಹಿತ ಮಾಡಬೇಕಾಗುತ್ತದ. ನಾಳೆ ರಜೆ ಇದೆ. ಆದರೂ ಸಹಿತ ನಾನು, ಹಣಕಾಸಿನ ಸಚಿವರು, ಮುಖ್ಯಮಂತ್ರಿಗಳು ಮಾತನಾಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಯಾರ ಯಾರ ಹತ್ತಿರ ಸ್ಟಾಕ್ ಇದೆಯಲ್ಲ ಅವರೆಲ್ಲ ಇದೇ ರೇಟಿನಲ್ಲಿ ಮಾರುತ್ತಾರೆ. ಮೂರು ನಾಲ್ಕು ದಿವಸದಲ್ಲಿ ಅವರದೆಲ್ಲ ಸ್ಟಾಕ್ ಮುಗಿದೇ ಹೋಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾನು ಅದನ್ನೇ ಹೇಳುತ್ತಿದ್ದೇನೆ. ಬಳಕೆದಾರರು ಒಂದು ಸಾರಿ ಅವರಿಂದ ತೆಗೆದುಕೊಂಡ ಮೇಲೆ, ಪೆಟ್ರೋಲ್ ಮಾರಾಟ ಮಾಡಿದ ಮೇಲೆ ಮತ್ತೆ

ಅದನ್ನು ವಸೂಲಿ ಮಾಡುವುದಕ್ಕೆ ಆಗುವುದಿಲ್ಲ. ನಾನು ಇವೊತ್ತಿನ ಸಭೆ ಮುಗಿದ ತಕ್ಷಣ ಹಣಕಾಸು ಮಂತ್ರಿಗಳು, ಮುಖ್ಯಮಂತ್ರಿಗಳು ಅಥವಾ ಮುಖ್ಯಕಾರ್ಯದರ್ಶಿಗಳ ಒಂದು ಗಮನಕ್ಕೆ ಇದನ್ನು ತಂದು ಸಾರ್ವಜನಿಕರಿಗೆ ಇದರಿಂದ ಅನ್ಯಾಯ ಆಗದೇ ಇರುವ ಹಾಗೆ ಮಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಒಂದು ಪ್ರೆಸ್ ನೋಟನ್ನು ಕೊಟ್ಟು ಟಿ.ವಿ. ಹಾಗೂ ರೇಡಿಯೋ ಮುಖಾಂತರ ತಿಳಿಸಿ ಜನರಿಗೆ ಗೊತ್ತಾಗಲಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಈ ಸಭೆ ಮುಗಿದ ತಕ್ಷಣ ಮಾಡಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಒಂದು ರೂಪಾಯಿ ಜಾಸ್ತಿಯಾಗಿದ್ದು ಅವರು ಸಡನ್ಲಿ ಹೆಚ್ಚಿಗೆ ಮಾಡಿದ್ದಾರೆ. ಅವರು ಹೇಳುವುದು ಏನೆಂದರೆ ನಿಮ್ಮ ಕಾರ್ಪೊರೇಷನ್, ಬೆಂಗಳೂರು ಡೆವಲಪ್‌ಮೆಂಟ್ ಅವರದೆಲ್ಲ ಟ್ಯಾಕ್ಸಸ್ ಆ್ಯಡ್ ಆಗಿ ಅದು ಅಷ್ಟು ಆಗುತ್ತದೆ ಎಂದು ಅವರು ಹೇಳುತ್ತಾರೆ. ಮೆಟ್ರೊಪಾಲಿಟನ್ ಸಿಟಿ, ಕಾರ್ಪೊರೇಶನ್‌ದು ಪಿ.ಎಂ.ಆರ್.ಡಿ.ಎ ಇವರದೆಲ್ಲ ಟ್ಯಾಕ್ಸಸ್ ಸೇರಿಕೊಂಡು ಮೂರು ರೂಪಾಯಿ ಆಗುತ್ತದೆಂದು ಹೇಳುತ್ತಾರೆ. ಈಗ ದುಬಾರಿ ಆಗಿರುವುದರಿಂದ ಪುನಃ ಆ ಟ್ಯಾಕ್ಸ್ ಅದರೊಳಗೆ ಸೇರಿಸತಕ್ಕಂಥದ್ದು ಸಧ್ಯಕ್ಕೆ ಬೇಡ ಎನ್ನತಕ್ಕಂಥದ್ದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಇವೆಲ್ಲಾ ಟ್ಯಾಕ್ಸ್‌ಗಳು ಹಿಂದೆ ಇದ್ದಂಥವುದೇ ಹೊರತು ನಾವು ರಾಜ್ಯ ಸರ್ಕಾರದವರು ಯಾವುದೇ ರೀತಿಯ ಟ್ಯಾಕ್ಸಗಳನ್ನು ಹಾಕಿಲ್ಲ. ಅದು ಪಿ.ಎಂ.ಆರ್.ಡಿ.ಎ ಇರಬಹುದು, ಈ.ಎಲ್.ಆರ್.ಡಿ.ಎ ಇರಬಹುದು ಇವೆಲ್ಲಾ ಹಿಂದೆ ಇದ್ದಂಥ ಟ್ಯಾಕ್ಸ್‌ಗಳೆ ನಾವು ಹೊಸದಾಗಿ ಯಾವುದನ್ನು ಸೇರಿಸಿಲ್ಲ ಎನ್ನತಕ್ಕಂಥದ್ದನ್ನು ನಾನು ಸ್ಪಷ್ಟ ಮಾಡುತ್ತಿದ್ದೇನೆ. ಯಾವ ಪ್ರಮಾಣದಲ್ಲಿ ಮೋಸ ಆಗುತ್ತಿದೆ ಎನ್ನತಕ್ಕಂಥದ್ದನ್ನು ಇವೊತ್ತೆ ನಾನು ಸಭೆ ಮುಗಿದ ತಕ್ಷಣ ಅಧಿಕಾರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನೆನ್ನೆಯಿಂದಲೇ ಈ ಸುಲಿಗೆ ಶುರುವಾಗಿದೆ. ಈಗಾಗಲೇ ಕೋಟ್ಯಾಂತರ ರೂಪಾಯಿ ವಸೂಲಿ ಮಾಡಿದ್ದಾರೆ. ಅದನ್ನು ಹೇಗೆ ನೀವು ಹಿಂತೆಗೆದುಕೊಳ್ಳುತ್ತೀರಿ? ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಹೆಚ್.ಎನ್.ನಂಜೇಗೌಡ: ಈಗ ಒಂದು ವಾರದಿಂದ ಯಾರ್‍ಯಾರು ಈ ರೀತಿಯಲ್ಲಿ ಅನರೀಸನಬಲ್ ರೇಟ್ಸ್ ತೆಗೆದುಕೊಂಡಿದ್ದಾರೆ ಅಂತಹ ಪೆಟ್ರೋಲ್ ಬಂಕ್ ಮಾಲೀಕರ ಮೇಲೆ ಚೀಟಿಂಗ್ ಕೇಸ್ ಹಾಕುತ್ತೇವೆಂದು ಹೇಳಿಕೆ ಕೊಡಿ. ಇದಕ್ಕೆ ಏನಾದರೊಂದು ಮಾಡಬೇಕಲ್ಲ.

ಛೇರ್ಮನ್: ಈಗ ಸಂಬಂಧಪಟ್ಟಂತ ಸಚಿವರು ಇಲ್ಲದೆ ಇರುವುದರಿಂದ, ಅಲ್ಲಿ ಆಗುವವರಿಗೆ ತಾವು ಏನು ವಿವರಣೆ ಕೊಟ್ಟಿದ್ದಾರೆ, ಅದಕ್ಕೆ ತಮ್ಮ ನಿಯಂತ್ರಣದಲ್ಲಿರುವವರ ಮೇಲೆ ಅವರು ಕ್ರಮ ತೆಗೆದುಕೊಳ್ಳುತ್ತಾರೆ.

(ಗೊಂದಲ)

SRI P.G.R.SINDHIA: Definitely Government will not hesitate in taking action against them.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: Nobody knows it. ತಮಗೆ ಸಮಸ್ಯೆ ಗೊತ್ತಿಲ್ಲ ಅಂದರೆ ಹೇಗೆ?

(ಗೊಂದಲ)

SRI P.G.R.SINDHIA: From the available machinery we will find out.

ಶ್ರೀ ವಾಟಾಳ್ ನಾಗರಾಜ್: ಒಂದು ದಿನದಿಂದ ಇದೇ ನಡೆಯುತ್ತಿದೆ, ಇದು ಒಂದು ದಂಧೆಯಾಗುತ್ತಿದೆ. ಅದನ್ನು ತಾವು ಪರಿಶೀಲಿಸಬೇಕು ಈ ವಸೂಲಿ ನಿನ್ನೆ ಬೆಳಗಿನಿಂದ ಪ್ರಾರಂಭವಾಗಿದೆ.

ಛೇರ್ಮನ್: ದಯಮಾಡಿ ಕ್ರಮ ತೆಗೆದುಕೊಳ್ಳಿ, ನಿಯಮ 69ರ ಪ್ರಕಾರ ಸ್ವಲ್ಪ ಸಣ್ಣ ಕನಫ್ಯೂಶನ್ ಇತ್ತು ಮುಂದೆ ಹಾಕಿದ್ದೇನೆ ಎಂದು ಹೇಳಿದ್ದೆ, ಈಗ ಅವರು ಇಚ್ಛೆಪಟ್ಟರೆ ತೆಗೆದುಕೊಳ್ಳಬಹುದು, ಆದಷ್ಟು ಬೇಗ ಮುಗಿಸಿಬಿಡಿ.

(ಇ) ದಕ್ಷಿನ ಕನ್ನಡ ಜಿಲ್ಲೆಯ ಬೃಹತ್ ಕೈಗಾರಿಕೆಯ ಸ್ಥಾಪನೆಯಿಂದ ಉಂಟಾಗತಕ್ಕ ಅನಾಹುತಗಳ ಕುರಿತು.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಛೇರ್ಮನ್‌ರೆ, ಈ ಅಧಿವೇಶನದ ಉದ್ದಕ್ಕೂ ನಾನು ಹಾಗೂ ದಕ್ಷಿಣಕನ್ನಡ ಜಿಲ್ಲೆಯ ಸಹ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಯ ಸ್ಥಾಪನೆಯಿಂದ ಉಂಟಾಗತಕ್ಕ ಅನಾಹುತಗಳ ಬಗ್ಗೆ ಮೀನುಗಾರಿಕೆ ಸಚಿವರು, ಬೃಹತ್ ಉದ್ದಿಮೆ ಸಚಿವರಲ್ಲಿ ನಾನು ಪ್ರಸ್ತಾವನೆಯನ್ನು ಕೇಳಬಯಸುತ್ತೇನೆ. ನಿಯಮ 69ರ ಪ್ರಕಾರ ಇದು ಒಂದು ಬಹಳ ಮಹತ್ವದ ವಿಷಯದ ಬಗ್ಗೆ ಚರ್ಚೆ ಮಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದೀರಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಸ್ಥಾಪಿಸಲ್ಪಟ್ಟಿರುವ ಕುದುರೆಮುಖ ಪ್ಯಾಲಟೈಸೇಷನ್ ಪ್ಲಾಂಟ್, ಎಂ.ಸಿ.ಎಫ್, ಎಂ.ಆರ್.ಪಿ.ಎಲ್. ಈ ಮೊದಲಾದ ಬೃಹತ್ ಕೈಗಾರಿಕೆಗಳಿಂದಾಗಿ ಆಗುವ ಅನಾಹುತಗಳನ್ನು ಬಹಳ ಗಂಭೀರವಾಗಿ ನಾವೆಲ್ಲಾ ಪರಿಗಣಿಸಬೇಕಾಗಿದೆ. ಇದರಲ್ಲಿ

ಮುಖ್ಯವಾಗಿ ಯಾವರೀತಿ ಸುಮಾರು ನಾಲ್ಕು ಲಕ್ಷ ಮೀನುಗಾರರಿಗೆ ಉಂಟಾಗುವ ತೊಂದರೆಗಳು, ಜೊತೆಗೆ ಮೀನನ್ನು ತಿನ್ನುವವರಿಗೆ ಕೂಡ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಹೇಳಿಕೆಯನ್ನು ಮಾಡುವುದಕ್ಕೆ ಬೃಹತ್ ಕೈಗಾರಿಕೆ ಸಚಿವರು ಇಲ್ಲ, ನಾವು ಮತ್ತು ಪರಿಸರ ಸಚಿವರು ಇಬ್ಬರು ಇದ್ದೇವೆ. ಏಕೆಂದರೆ ಮಾನ್ಯ ಸದಸ್ಯರು ಬೃಹತ್ ಸಚಿವರಿಗೆ ಸಂಬಂಧಪಟ್ಟಿದ್ದನ್ನು ಹೇಳುತ್ತಿರುವುದರಿಂದ ಸಚಿವರಿಲ್ಲದ ಕಾರಣ ಇದನ್ನು ಸೋಮವಾರಕ್ಕೆ ತೆಗೆದುಕೊಂಡು ಬಿಟ್ಟರೆ ನಾವು ಮೂರು ಜನ ಸೇರಿ ಇದಕ್ಕೆ ಒಂದು ಉತ್ತರವನ್ನು ಕೊಡುತ್ತೇವೆ.

ಶ್ರೀ ಯು.ಆರ್.ಸಭಾಪತಿ: ಛೇರ್ಮನ್‌ರೆ, ನನಗೆ ಸೋಮವಾರಕ್ಕೆ ಅನುಮತಿ ಕೊಡುವುದಾದರೆ ನಾನು ಸೋಮವಾರವೇ ಈ ವಿಷಯವನ್ನು ಪ್ರಸ್ತಾಪ ಮಾಡಬಯಸುತ್ತೇನೆ.

ಛೇರ್ಮನ್: ಉತ್ತರ ತಾವು ಏನಾದರೂ ಇವತ್ತು ಕೊಡುತ್ತೀರಾ? ಉತ್ತರ ಇವತ್ತು ಕೊಡುವುದಿಲ್ಲ ಅಂದರೆ ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಎಂ.ಸಿ.ನಾಣಯ್ಯ: ಛೇರ್ಮನ್‌ರೆ, ಈಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರ ಮೀನುಗಾರಿಕೆ, ಪರಿಸರ, ಹಾಗೂ ಬೃಹತ್ ಕೈಗಾರಿಕೆಗೆ ಸಂಬಂಧಪಟ್ಟಿದ್ದು ಇದೆ. ಬೃಹತ್ ಕೈಗಾರಿಕೆ ಸಂಬಂಧಪಟ್ಟಹಾಗೆ ಮಾನ್ಯ ದೇಶಪಾಂಡೆಯವರು ಉತ್ತರ ಹೇಳಬೇಕಾಗುತ್ತದೆ, ಪರಿಸರಕ್ಕೆ ಸಂಬಂಧಪಟ್ಟಹಾಗೆ ಮಾನ್ಯ ಶಿವಣ್ಣನವರು ಉತ್ತರ ಹೇಳಬೇಕಾಗುತ್ತದೆ, ಹಾಗೂ ಮೀನುಗಾರಿಕೆಗೆ ಸಂಬಂಧಪಟ್ಟಹಾಗೆ ಮಾನ್ಯ ಜಯಪ್ರಕಾಶ್ ಹೆಗಡೆಯವರು ಉತ್ತರ ನೀಡಬೇಕಾಗುತ್ತದೆ. ಈ ಮೂರು ಜನ ಸೇರಿ ಒಟ್ಟಾರೆಯಾಗಿ ಇದಕ್ಕೆ ಒಂದು ಉತ್ತರ ಕೊಡಬೇಕಾಗುತ್ತದೆ. ಇದಕ್ಕೆ ನಾವು ಅನುಕೂಲ ಮಾಡಿಕೊಡುತ್ತೇವೆ, ತಾವು ಹೇಳುವ ಆಗಿದ್ದರೆ ಹೇಳಿ, ನಾವು ಸೋಮವಾರಕ್ಕೆ ಮಂಗಳವಾರಕ್ಕೆ ಇದಕ್ಕೆ ಉತ್ತರವನ್ನು ರೆಡಿ ಮಾಡಿ ಕೊಡುತ್ತೇವೆ. ಸಂಪೂರ್ಣವಾದ ಉತ್ತರವನ್ನು ಕೊಡುತ್ತೇವೆ. ಅಧ್ಯಕ್ಷರೇ, ನೀವು ಬೇಕಾದರೆ ಮಂಗಳವಾರ ತೆಗೆದುಕೊಳ್ಳಿ, ನಾವು ಆ ಸಂದರ್ಭದಲ್ಲಿ ಉತ್ತರವನ್ನು ರೆಡಿ ಮಾಡಿ, ಸದನದಲ್ಲಿ ಮಂಡಿಸುತ್ತೇವೆ.

ಛೇರ್ಮನ್: ಆ ದಿನದ ವಿಷಯ ಪಟ್ಟಿ ಹಾಗೂ ಅಜೆಂಡ ನೋಡಿಕೊಂಡು ಸೋಮವಾರ ಅಥವಾ ಮಂಗಳವಾರ ಮಾಡಬಹುದು.

ಶ್ರೀ ಎಂ.ಸಿ.ನಾಣಯ್ಯ: ನಮಗೆ ಈಗ ಅವರು ಕೊಟ್ಟಿರುವ ವಿಷಯಕ್ಕೆ ಸರ್ಕಾರದ ವತಿಯಿಂದ ಸೋಮವಾರ ಉತ್ತರವನ್ನು ರೆಡಿ ಮಾಡುತ್ತೇವೆ. ಏಕೆಂದರೆ ಬಹಳ ಸಲ ಈ ವಿಚಾರ ಚರ್ಚೆಗೆ ಬಂದಿದೆ. ಆದ್ದರಿಂದ ಈ ವಿಷಯವನ್ನು ಮಾನ್ಯ ಸದಸ್ಯರು ಸೋಮವಾರ ಅಥವಾ ಮಂಗಳವಾರ ಪ್ರಸ್ತಾಪ ಮಾಡಲಿ.

ಛೇರ್ಮನ್: ಮಂಗಳವಾರ ತೆಗೆದುಕೊಳ್ಳೋಣ It will be taken up.

ಶ್ರೀ ಯು.ಆರ್.ಸಭಾಪತಿ: ಬಹಳ ಗಹನವಾದ ಚರ್ಚೆಯಾಗಿರುವುದರಿಂದ ಇದನ್ನು ಕೂಲಂಕಷವಾಗಿ ಚರ್ಚೆ ಮಾಡಬೇಕು ಎಂದು ನಿಯಮ 69ರ ಅಡಿಯಲ್ಲಿ ನನಗೆ ಅವಕಾಶ ಕೊಟ್ಟಿದ್ದಾರೆ, ನೀವು ಸೋಮವಾರಕ್ಕೆ ಉತ್ತರ ಕೊಡುತ್ತೀರಿ ಎನ್ನುವುದಾದರೆ ಸೋಮವಾರಕ್ಕೆ ನನಗೆ 69ರ ನಿಯಮಾವಳಿಯಲ್ಲಿ ಚರ್ಚೆ ಮಾಡಲು ಅವಕಾಶ ಕೊಡಬೇಕು.

MR. CHAIRMAN: There is no dispute. ತಮಗೆ option ಬಿಡುತ್ತೇನೆ. ಮಂತ್ರಿಗಳಿಂದ ಸಂಬಂಧಪಟ್ಟಹಾಗೆ ಎಲ್ಲ ಆಮೂಲಾಗ್ರವಾಗಿ ಉತ್ತರಗಳು ಬೇಕು ಎನ್ನುವುದಾದರೆ ಮಂಗಳವಾರ ಆಗುತ್ತದೆ.

ಶ್ರೀ ಯು.ಆರ್.ಸಭಾಪತಿ: ನನಗೆ ಮಂಗಳವಾರ ನಿಯಮ 69ರಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಛೇರ್ಮನ್: ಇದು ನಿಮಯ 69ರ ಕೆಳಗೆ ಹೇಗೆ ತೆಗೆದುಕೊಳ್ಳುತ್ತಾರೋ ಹಾಗೆ ಆಗುತ್ತದೆ. ಈಗಿರುವ ಪದ್ಧತಿ, ಪ್ರಕಾರ ತಮಗೆ ಅವಕಾಶ ಕೊಡುತ್ತೇವೆ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಸಭಾಧ್ಯಕ್ಷರು, ನಮಗೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಸಹ ಸದಸ್ಯರಿಗೂ ಕೂಡ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದ್ದಾರೆ. ಆದ್ದರಿಂದ ನೀವು ನಮಗೆ ನಿಯಮ 69ರ ಅಡಿಯಲ್ಲಿ ಮಂಗಳವಾರ ಅವಕಾಶ ಕೊಡಿ.

ಛೇರ್ಮನ್: ಆಯಿತು ಬಿಡಿ, ನಿಯಮ 69ರ ಪ್ರಕಾರ ಕೆಳಗಡೆ ಆ ವಿಚಾರ ಇದ್ದೇ ಇರುತ್ತದೆ. ಇವತ್ತಿನ ಕಾರ್ಯಕಲಾಪಗಳು ಮುಕ್ತಾಯವಾದವು, ಸದನವು ಪುನಃ ಸೋಮವಾರ 11-00 ಗಂಟೆಗೆ ಮತ್ತೆ ಸಭೆ ಸೇರೋಣ.

(ಸದನವು ಸಂಜೆ: 6 ಗಂಟೆ 35 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 8ನೇ ಸೆಪ್ಟೆಂಬರ್ ಮಾಹೆ 1997ರ ಸೋಮವಾರದಂದು ಬೆಳಿಗ್ಗೆ 11-00 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಅನುಬಂಧ-I

ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನ ಸಭೆ
(ಆರನೇ ಅಧಿವೇಶನ)
(ಮುಂದುವರಿದ ಉಪವೇಶನಗಳು)

ಕರ್ನಾಟಕ ಧನವಿನಿಯೋಗ (ನಂ.3) ವಿಧೇಯಕ 1997

(1997ರ ವಿಧಾನಸಭಾ ವಿಧೇಯಕ ಸಂಖ್ಯೆ 31)

1997-98ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

1997-98ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,-

1. ಸಂಕ್ಷಿಪ್ತ ಹೆಸರು: ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ನಂ.3) ಅಧಿನಿಯಮ, 1997 ಎಂದು ಕರೆಯತಕ್ಕದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 1997-98ನೇ ಹಣಕಾಸು ವರ್ಷಕ್ಕಾಗಿ 151,72,32,00,000 ರೂಪಾಯಿಗಳ ನೀಡಿಕೆ: ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 1997-98ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಹದಿನೈದು ಸಾವಿರದ ಒಂದು ನೂರ ಎಪ್ಪತ್ತೆರಡು ಕೋಟಿ ಮೂವತ್ತೆರಡು ಲಕ್ಷ ರೂಪಾಯಿಗಳನ್ನು ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕುದು ಮತ್ತು ಉಪಯೋಗಿಸತಕ್ಕುದು.

3. ಧನವಿನಿಯೋಗ: ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ

ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು, ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		
			ವಿಧಾನ ಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	ಒಟ್ಟು
1	2		3	4	5
1	ವ್ಯವಸಾಯ	ರಾಜಸ್ವ	271,46,46,000	2218,000	271,68,64,000
		ಬಂಡವಾಳ	8,70,77,000	...	8,70,77,000
2	ತೋಟಗಾರಿಕೆ	ರಾಜಸ್ವ	83,06,09,000	1103,000	83,17,12,000
		ಬಂಡವಾಳ	1,50,00,000	...	1,50,00,000
3	ಪಶುಸಂಗೋಪನೆ	ರಾಜಸ್ವ	124,10,66,000	614,000	124,16,80,000
4	ಮೀನುಗಾರಿಕೆ	ರಾಜಸ್ವ	24,66,63,000	...	24,66,63,000
		ಬಂಡವಾಳ	5,59,00,000	...	5,59,00,000
5	ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು	ರಾಜಸ್ವ	35,03,11,000	...	35,03,11,000
	(ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯದ ಹೊರತು)	ಬಂಡವಾಳ	68,10,00,000	...	68,10,00,000
6	ಗಣಿಗಳು ಮತ್ತು ಭೂ ವಿಜ್ಞಾನ	ರಾಜಸ್ವ	15,51,50,000	...	15,51,50,000
7	ಚಿಕ್ಕ ಪುಟ್ಟ ಉದ್ಯಮಗಳು	ರಾಜಸ್ವ	85,54,93,000	...	85,54,93,000
		ಬಂಡವಾಳ	11,75,00,000	...	11,75,00,000

1	2		3	4	5
8	ರೇಷ್ಮೆ ವ್ಯವಸಾಯ	ರಾಜಸ್ವ	1,28,84,78,000	5,000	1,28,84,83,000
		ಬಂಡವಾಳ	3,00,00,000	...	3,00,00,000
9	ಸಕ್ಕರೆ	ರಾಜಸ್ವ	10,25,19,000	...	10,25,19,000
		ಬಂಡವಾಳ	4,50,00,000	...	4,50,00,000
10	ಲೇಖನ, ಸಾಮಗ್ರಿ ಮತ್ತು ಮುದ್ರಣ	ರಾಜಸ್ವ	26,30,43,000	...	26,30,43,000
11	ಉನ್ನತ ಶಿಕ್ಷಣ	ರಾಜಸ್ವ	3,27,47,04,000	...	3,27,47,04,000
		ಬಂಡವಾಳ	15,00,000	...	15,00,000
12	ಯುವಜನ ಸೇವೆ	ರಾಜಸ್ವ	43,31,79,000	...	43,31,79,000
13	ಕಲೆ, ಸಂಸ್ಕೃತಿ ಮತ್ತು ಕನ್ನಡ ಅಭಿವೃದ್ಧಿ	ರಾಜಸ್ವ	18,42,40,000	38,000	18,42,78,000
14	ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ	ರಾಜಸ್ವ	18,35,45,96,000	...	18,35,45,96,000
15	ವರಮಾನ ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳ ಮೇಲಿನ ತೆರಿಗೆಗಳು	ರಾಜಸ್ವ	66,20,33,000	10,000	66,20,43,000
16	ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು	ರಾಜಸ್ವ	8,73,04,00,000	2,19,00,000	8,75,23,00,000
17	ಸರ್ಕಾರಿ ನೌಕರನಿಗೆ ಸಹಾಯ ಮತ್ತು ವಿವಿಧ ಸಾಲಗಳು	ರಾಜಸ್ವ	13,45,00,000	...	13,45,00,000
		ಬಂಡವಾಳ	7,82,50,000	...	7,82,50,000
18	ಸಣ್ಣ ಉಳಿತಾಯಗಳು ಮತ್ತು ರಾಜ್ಯ ಲಾಟರಿಗಳು ವಿಮೆ ಮತ್ತು ಖಜಾನೆ ಮತ್ತು ಲೆಕ್ಕಾಡಳಿತ	ರಾಜಸ್ವ	1,92,30,86,000	5,000	1,92,30,91,000
		ಬಂಡವಾಳ	15,75,000	...	15,75,000

1	2		3	4	5
19	ಇತರೇ ವಿವಿಧ ಸೇವೆಗಳು	ರಾಜಸ್ವ	43,00,000	...	43,00,000
		ಬಂಡವಾಳ	2,85,00,000	...	2,85,00,000
20	ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು	ರಾಜಸ್ವ	1,76,53,03,000	...	1,76,53,03,000
		ಬಂಡವಾಳ	20,00,000	...	20,00,000
21	ಅರಣ್ಯ	ರಾಜಸ್ವ	1,99,08,38,000	12,20,53,000	2,11,28,91,000
		ಬಂಡವಾಳ	5,00,000	...	5,00,000
22	ರಾಜ್ಯದ ಅಬಕಾರಿ	ರಾಜಸ್ವ	30,74,94,000	...	30,74,94,000
23	ಸಾರಿಗೆ ಸೇವೆಗಳು	ರಾಜಸ್ವ	72,99,20,000	...	72,99,20,000
		ಬಂಡವಾಳ	15,00,000	...	15,00,000
24	ಆರಕ್ಷಕ ಸೇವೆಗಳು	ರಾಜಸ್ವ	5,13,32,13,000	...	5,13,32,13,000
		ಬಂಡವಾಳ	10,00,000	...	10,00,000
25	ಬಂದೀಖಾನೆಗಳು, ಅಗ್ನಿಶಾಮಕ, ಮತ್ತು	ರಾಜಸ್ವ	50,91,73,000	...	50,91,73,000
	ಸೈನಿಕರ ಕಲ್ಯಾಣ ಇತ್ಯಾದಿ	ಬಂಡವಾಳ	50,00,000	...	50,00,000
26	ವಾರ್ತಾ ಮತ್ತು ಪ್ರಚಾರ	ರಾಜಸ್ವ	16,16,90,000	...	16,16,90,000
27	ಪ್ರವಾಸೋದ್ಯಮ	ರಾಜಸ್ವ	23,42,42,000	...	23,42,42,000
28	ವೈದ್ಯಕೀಯ ಶಿಕ್ಷಣ	ರಾಜಸ್ವ	168,33,63,000	3,000	168,33,66,000
29	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	594,64,92,000	...	594,64,92,000
30	ಗೃಹನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)	ರಾಜಸ್ವ	1,76,80,08,000	...	1,76,80,08,000
		ಬಂಡವಾಳ	8,26,68,000	...	8,26,68,000

1	2		3	4	5
31	ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮ ಹೊರತುಪಡಿಸಿ)	ರಾಜಸ್ವ	406,37,40,000	...	406,37,40,000
		ಬಂಡವಾಳ	138,91,00,000	...	138,91,00,000
32	ಬೆಂಗಳೂರು ಅಭಿವೃದ್ಧಿ	ರಾಜಸ್ವ	120,20,00,000	...	120,20,00,000
		ಬಂಡವಾಳ	54,30,00,000	...	54,30,00,000
33	ಸಣ್ಣ ನೀರಾವರಿ	ರಾಜಸ್ವ	53,13,13,000	...	53,13,13,000
		ಬಂಡವಾಳ	83,10,00,000	10,00,000	83,20,00,000
34	ಭಾರಿ ಮತ್ತು ಮಧ್ಯಮ ನೀರಾವರಿ	ರಾಜಸ್ವ	651,37,45,000	...	651,37,45,000
		ಬಂಡವಾಳ	808,43,31,000	8,50,00,000	816,93,31,000
35	ರಾಜ್ಯ ವಿಧಾನ ಮಂಡಲ	ರಾಜಸ್ವ	17,86,90,000	39,50,000	18,26,40,000
36	ನ್ಯಾಯ ಪರಿಪಾಲನೆ	ರಾಜಸ್ವ	80,20,82,000	...	80,20,82,000
37	ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ	ರಾಜಸ್ವ	6,52,66,000	7,57,80,000	14,10,46,000
38	ಸಚಿವಾಲಯ	ರಾಜಸ್ವ	42,98,32,000	15,000	42,98,47,000
39	ಜಿಲ್ಲಾಡಳಿತ	ರಾಜಸ್ವ	1,16,17,01,000	14,000	1,16,17,15,000
		ಬಂಡವಾಳ	2,00,00,000		2,00,00,000
40	ಸಾಮಾನ್ಯ ಆಡಳಿತ ಇತ್ಯಾದಿ	ರಾಜಸ್ವ	30,74,46,000	17,81,84,000	48,56,30,000
41	ಯೋಜನೆ ಮತ್ತು ಸಾಂಖ್ಯಿಕ ಹಣಕಾಸು-(ಹೈದರಾಬಾದು ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಹೊರತು)	ರಾಜಸ್ವ	28,20,58,000	...	28,20,58,000
		ಬಂಡವಾಳ	34,00,000	...	34,00,000

1	2		3	4	5
42	ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಇತ್ಯಾದಿ	ರಾಜಸ್ವ	93,98,00,000	...	93,98,00,000
43	ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)	ರಾಜಸ್ವ	222,04,04,000	15,02,000	222,19,06,000
		ಬಂಡವಾಳ	1,00,00,000		1,00,00,000
44	ಕಟ್ಟಡಗಳು	ರಾಜಸ್ವ	21,22,99,000	2,00,000	21,24,99,000
		ಬಂಡವಾಳ	98,68,50,000	2,00,000	98,70,50,000
45	ರಸ್ತೆಗಳು ಮತ್ತು ಸೇತುವೆಗಳು	ರಾಜಸ್ವ	213,30,61,000	...	213,30,61,000
		ಬಂಡವಾಳ	93,90,00,000	...	93,90,00,000
46	ರೇವು ಮತ್ತು ಜಲಸಾರಿಗೆ ಸೇವೆಗಳು	ರಾಜಸ್ವ	3,94,64,000	...	3,94,64,000
		ಬಂಡವಾಳ	5,32,00,000	...	5,32,00,000
47	ವಿದ್ಯುಚ್ಛಕ್ತಿ ಯೋಜನೆಗಳು	ರಾಜಸ್ವ	224,75,99,000	...	224,75,99,000
48	ಭೂ ಕಂದಾಯ ಇತ್ಯಾದಿ	ರಾಜಸ್ವ	89,55,47,000	78,00,000	90,33,47,000
		ಬಂಡವಾಳ	6,01,75,000	...	6,01,75,000
49	ಮುದ್ರಾಂಕಗಳು ಮತ್ತು ನೋಂದಣಿ	ರಾಜಸ್ವ	14,86,54,000	...	14,86,54,000
50	ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ	ರಾಜಸ್ವ	13,62,76,000	...	13,62,76,000
51	ವಕ್ಫ್	ರಾಜಸ್ವ	4,57,75,000	...	4,57,75,000
52	ಸಹಕಾರ	ರಾಜಸ್ವ	47,90,41,000	25,000	47,90,66,000
		ಬಂಡವಾಳ	19,45,50,000	...	19,45,50,000
53	ಕ್ರಮಪಡಿಸಿದ ಮಾರುಕಟ್ಟೆಗಳು	ರಾಜಸ್ವ	23,93,57,000	...	23,93,57,000
54	ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ	ರಾಜಸ್ವ	379,93,58,000	...	379,93,58,000

1	2		3	4	5
55	ಗ್ರಾಮೀಣ ಅಭಿವೃದ್ಧಿ	ರಾಜಸ್ವ	628,85,11,000	...	628,85,11,000
56	ಕಾರ್ಮಿಕ ಮತ್ತು ಉದ್ಯೋಗ	ರಾಜಸ್ವ	78,56,99,000	10,000	78,57,09,000
57	ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರ ಕಲ್ಯಾಣ	ರಾಜಸ್ವ	253,37,24,000	...	253,37,24,000
		ಬಂಡವಾಳ	19,00,00,000	...	19,00,00,000
58	ಮಹಿಳಾ ಮತ್ತು ಮಕ್ಕಳ ಕಲ್ಯಾಣ	ರಾಜಸ್ವ	331,23,55,000	...	331,23,55,000
		ಬಂಡವಾಳ	1,00,00,000	...	1,00,00,000
59	ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿ ಪರಿಸ್ಥಿತಿ ಮತ್ತು ಪರಿಸರ	ರಾಜಸ್ವ	9,33,44,000	...	9,33,44,000
60	ಮಲೆನಾಡು ಪ್ರದೇಶ ಅಭಿವೃದ್ಧಿ	ರಾಜಸ್ವ	30,00,00,000	...	30,00,00,000
61	ಜವಳಿ	ರಾಜಸ್ವ	21,33,23,000	...	21,33,23,000
		ಬಂಡವಾಳ	4,62,70,000	...	4,62,70,000
62	ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು	ರಾಜಸ್ವ	84,77,99,000	...	84,77,99,000
70	ಹಣವನ್ನು ಇಳಿಸುವ ಅಥವಾ ಋಣ ಪರಿಹರಿಸುವ ಬಗ್ಗೆ ಧನವಿನಿಯೋಗ	ರಾಜಸ್ವ		1,49,67,67,000	1,49,67,67,000
71	ಬಡ್ಡಿ ಸಂದಾಯ	ರಾಜಸ್ವ		14,49,57,69,000	14,49,57,69,000

1	2		3	4	5
72	ಆಂತರಿಕ ಋಣ, ಸಾಲ ಮತ್ತು ಕೇಂದ್ರ ಸರ್ಕಾರದಿಂದ ಮುಂಗಡ ಮತ್ತು ಅಂತರ ರಾಜ್ಯ ತೀರಿಕೆ	ಬಂಡವಾಳ		15,20,61,74,000	15,20,61,74,000
		ಒಟ್ಟು ಜುಮ್ಲಾ	120,02,28,61,000	31,70,03,39,000	151,72,32,00,000

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

1997-98ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 204ನೇ ಅನುಚ್ಛೇದದ ಉಪ-ಬಂಧಗಳನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಸಿದ್ಧರಾಮಯ್ಯ
ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು,
ಯೋಜನಾ ಹಾಗೂ ಕಾರ್ಮಿಕ ಸಚಿವರು,

ಯಾಕೂಬ್ ಷರೀಫ್
ಕಾರ್ಯದರ್ಶಿ

ಅನುಬಂಧ-II

ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನಸಭೆ
(ಆರನೇ ಅಧಿವೇಶನ)
(ಮುಂದುವರಿದ ಉಪವೇಶನಗಳು)

ಕರ್ನಾಟಕ ಧನ ವಿನಿಯೋಗ (ಸಂಖ್ಯೆ-4) ವಿಧೇಯಕ 1997

(1997ರ ವಿಧಾನಸಭಾ ವಿಧೇಯಕ ಸಂಖ್ಯೆ 32)

1987-88ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸಲು ಅಧಿಕಾರ ನೀಡಲು ಒಂದು ವಿಧೇಯಕ.

1987-88ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ.

ಇದು ಭಾರತ ಗಣರಾಜ್ಯದ ನಲವತ್ತೆಂಟನೆಯ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ:

1. ಸಂಕ್ಷಿಪ್ತ ಹೆಸರು: ಈ ಅಧಿನಿಯಮವನ್ನು ಕರ್ನಾಟಕ ಧನ ವಿನಿಯೋಗ (ನಂ.4) ಅಧಿನಿಯಮ 1997 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯೊಳಗಿಂದ 1987-88ನೇ ಹಣಕಾಸು ವರ್ಷದಲ್ಲಿ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ತುಂಬುವುದಕ್ಕಾಗಿ 130,66,98,084 ರೂಪಾಯಿಗಳ ನೀಡಿಕೆ: ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 1987-88ನೇ ಹಣಕಾಸು ವರ್ಷದಲ್ಲಿ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ನೂರ ಮೂವತ್ತು ಕೋಟಿ ಅರವತ್ತಾರು ಲಕ್ಷ ತೊಂಬತ್ತೆಂಟು ಸಾವಿರದ ಎಂಬತ್ತನಾಲ್ಕು ರೂಪಾಯಿಗಳ ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ

ಸಂದಾಯವಾಗಿ ಉಪಯೋಗಿಸಲಾಗಿದೆ ಎಂದು ಭಾವಿಸತಕ್ಕುದು.

3. ಧನ ವಿನಿಯೋಗ: ಈ ಅಧಿನಿಯಮದ ಮೂಲಕ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು 1987-88ನೇ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸಿದೆ ಎಂದು ಭಾವಿಸತಕ್ಕುದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ) 1987-88

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		
			ವಿಧಾನ ಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	ಒಟ್ಟು
1	2		3	4	5
1	ಭೂಸಾರ ಮತ್ತು ಜಲ ಸಂರಕ್ಷಣೆ ಮತ್ತು ಕೃಷಿ (ತೋಟಗಾರಿಕೆ ಹೊರತುಪಡಿಸಿ)	-ರಾಜಸ್ವ	4,67,35,332	-	4,67,35,332
10	ಉನ್ನತ ಶಿಕ್ಷಣ	-ರಾಜಸ್ವ	4,48,75,775	-	4,48,75,775
11	ಯುವಜನ ಸೇವೆಗಳು	-ಬಂಡವಾಳ	23,620	-	23,620
14	ಪ್ರೌಢ ಶಿಕ್ಷಣ	-ರಾಜಸ್ವ	15,43,09,380	-	15,43,09,380
-	ಆಂತರಿಕೆ ಋಣ, ಕೇಂದ್ರ ಸರ್ಕಾರದಿಂದ ಸಾಲ ಮತ್ತು ಅಂತರ ರಾಜ್ಯ ತೀರಿಕೆ	-ಬಂಡವಾಳ	-	41,65,51,004	41,65,51,004
17	ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು	-ರಾಜಸ್ವ	53,51,989	-	53,51,989

1	2		3	4	5
22	ಅರಣ್ಯ	-ಬಂಡವಾಳ	56,22.629	-	56,22.629
31	ವಸತಿ (ಸರ್ಕಾರಿ ವಸತಿ ಗೃಹಗಳನ್ನು ಹೊರತುಪಡಿಸಿ)	-ರಾಜಸ್ವ	58,453	-	58,453
33	ನಗರಪಾಲಿಕೆಗಳು ಮತ್ತು ಪುರಸಭೆಗಳಿಗೆ ಅನುದಾನ ಮತ್ತು ಪರಿಹಾರ	-ರಾಜಸ್ವ	21,74,726	-	21,74,726
35	ನೀರಾವರಿ, ಜಲಸಂಚಾರಿ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು	-ಬಂಡವಾಳ	-	1,86,72,019	1,86,72,019
36	ರಾಜ್ಯದ ವಿಧಾನ ಮಂಡಲ	-ರಾಜಸ್ವ	-	69,957	69,957
44	ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತುಪಡಿಸಿ)	-ರಾಜಸ್ವ	-	2,46,582	2,46,582
46	ರಸ್ತೆಗಳು ಮತ್ತು ಸೇತುವೆಗಳು	-ರಾಜಸ್ವ	3,30,53,053	-	3,30,53,053
49	ಭೂ ಕಂದಾಯ	-ರಾಜಸ್ವ	-	20,77,275	20,77,275
54	ವಕ್ಫ್	-ರಾಜಸ್ವ	34,000	-	34,000

1	2		3	4	5
56	ನಿಯಂತ್ರಿತ ಮಾರುಕಟ್ಟೆಗಳು	-ರಾಜಸ್ವ	6,08,499	-	6,08,499
58	ಸಮುಯದಾಯ ಅಭಿವೃದ್ಧಿ	-ರಾಜಸ್ವ	206,80,011	-	2,06,80,011
		-ಬಂಡವಾಳ	54,000	-	54,000
60	ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳು	-ರಾಜಸ್ವ	164327367	-	164327367
61	ಕಾರ್ಮಿಕ ಮತ್ತು ಉದ್ಯೋಗ	-ರಾಜಸ್ವ	5694748	-	5694748
62	ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ	-ರಾಜಸ್ವ	385477665	-	385477665
		ಒಟ್ಟು ಜುಮ್ಲಾ	869081247	437616837	1306698084

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1987-88ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಲಾದ ಮೊಬಲಗಿಗಿಂತ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸಲು ಭಾರತ ಸಂವಿಧಾನದ 205(1)(ಬಿ) ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಸಿದ್ಧರಾಮಯ್ಯ
ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು,
ಯೋಜನೆ ಮತ್ತು ಕಾರ್ಮಿಕ ಸಚಿವರು,

ಯಾಕೂಬ್ ಷರೀಫ್
ಕಾರ್ಯದರ್ಶಿ

ಅನುಬಂಧ-III

ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನ ಸಭೆ
(ಆರನೇ ಅಧಿವೇಶನ)
(ಮುಂದುವರಿದ ಉಪವೇಶನಗಳು)

ಕರ್ನಾಟಕ ಧನ ವಿನಿಯೋಗ (ಸಂಖ್ಯೆ 5) ವಿಧೇಯಕ 1997

(1997ರ ವಿಧಾನಸಭಾ ವಿಧೇಯಕ ಸಂಖ್ಯೆ- 33)

1988-89ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸಲು ಅಧಿಕಾರ ನೀಡಲು ಒಂದು ವಿಧೇಯಕ.

1988-89ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ.

ಇದು ಭಾರತ ಗಣರಾಜ್ಯದ ನಲವತ್ತೆಂಟನೆಯ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ:

1. **ಸಂಕ್ಷಿಪ್ತ ಹೆಸರು:** ಈ ಅಧಿನಿಯಮವನ್ನು ಕರ್ನಾಟಕ ಧನ ವಿನಿಯೋಗ (ನಂ.5) ಅಧಿನಿಯಮ 1997 ಎಂದು ಕರೆಯತಕ್ಕದ್ದು.

2. **ಕರ್ನಾಟಕ ರಾಜ್ಯದ ಸಂಚಿತ ನಿಧಿಯೊಳಗಿಂದ 1988-89ನೇ ಹಣಕಾಸು ವರ್ಷದಲ್ಲಿ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ತುಂಬುವುದಕ್ಕಾಗಿ 36,85,89,485 ರೂಪಾಯಿಗಳ ನೀಡಿಕೆ:** ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 1988-89ನೇ ಹಣಕಾಸು ವರ್ಷದಲ್ಲಿ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೂವತ್ತಾರು ಕೋಟಿ ಎಂಭತ್ತೈದು ಲಕ್ಷ ಎಂಭತ್ತೊಂಬತ್ತು ಸಾವಿರದ ನಾಲ್ಕನೂರ ಎಂಭತ್ತೈದು ರೂಪಾಯಿಗಳ ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ

ಸಂದಾಯವಾಗಿ ಉಪಯೋಗಿಸಲಾಗಿದೆ ಎಂದು ಭಾವಿಸತಕ್ಕುದು.

3. **ಧನ ವಿನಿಯೋಗ:** ಈ ಅಧಿನಿಯಮದ ಮೂಲಕ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು 1988-89ನೇ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸಿದೆ ಎಂದು ಭಾವಿಸತಕ್ಕುದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು ವಿಧಾನ ಸಭೆಯಿಂದ ಪುರಸ್ಕೃತವಾದುದನ್ನು	ಮೀರದ ಮೊಬಲಗು ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	ಒಟ್ಟು
1	2		3	4	5
1	ಭೂಸಾರ ಮತ್ತು ಜಲ ಸಂರಕ್ಷಣೆ ಮತ್ತು ಕೃಷಿ (ತೋಟಗಾರಿಕೆ ಹೊರತುಪಡಿಸಿ)	-ರಾಜಸ್ವ	3,21,17,991	-	3,21,17,991
		- ಬಂಡವಾಳ	48,500	-	48,500
2	ಒಣ ಭೂ ಅಭಿವೃದ್ಧಿ	- ರಾಜಸ್ವ	13,69,819	-	13,69,819
7	ಗಣಿ ಮತ್ತು ಭೂಗರ್ಭ	- ರಾಜಸ್ವ	5,85,06,140	-	5,85,06,140
10	ರೇಷ್ಮೆ	- ಬಂಡವಾಳ	1,44,452	-	1,44,452
16	ಪ್ರೌಢ ಶಿಕ್ಷಣ	- ರಾಜಸ್ವ	2,04,62,450	-	2,04,62,450
...	ಬಡ್ಡಿ ಸಂದಾಯ	- ರಾಜಸ್ವ	-	1915,615	19,15,615

1	2		3	4	5
19	ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು	-ರಾಜಸ್ವ	6,58,18,585	-	6,58,18,585
23	ಆಹಾರ ಮತ್ತು ನಾಗರೀಕ ಸರಬರಾಜು	- ಬಂಡವಾಳ	1,80,661	-	1,80,661
35	ಸಣ್ಣ ನೀರಾವರಿ	- ಬಂಡವಾಳ	3,35,61,431	-	3,35,61,431
37	ರಾಜ್ಯದ ವಿಧಾನ ಮಂಡಲ	- ರಾಜಸ್ವ	-	62,153	62,153
45	ಲೋಕೋಪಯೋಗಿ ಕಾಮಗಾರಿಗಳು (ನಿರ್ಮಾಣ ಹೊರತುಪಡಿಸಿ)	- ರಾಜಸ್ವ	-	2,99,766	2,99,766
46	ಕಟ್ಟಡಗಳು	- ರಾಜಸ್ವ	18,67,911	-	18,67,911
47	ರಸ್ತೆಗಳು ಮತ್ತು ಸೇತುವೆಗಳು	- ರಾಜಸ್ವ	3,33,40,607	-	3,33,40,607
52	ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ	- ರಾಜಸ್ವ	-	92,55,630	92,55,630
53	ಪುನರುಜ್ಜೀವನ ಕಾರ್ಯಗಳು	- ರಾಜಸ್ವ	60,597	-	60,597
61	ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳು	- ರಾಜಸ್ವ	10,95,77,177	-	10,95,77,177
		ಒಟ್ಟು ಜುಮ್ಲಾ	36,63,11,951	22,77,534	36,85,89,485

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1988-89ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಲಾದ ಮೊಬಲಗಿಗಿಂತ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸಲು ಭಾರತ ಸಂವಿಧಾನದ 205 (1) (ಬಿ) ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಸಿದ್ಧರಾಮಯ್ಯ
ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು,
ಯೋಜನೆ ಮತ್ತು ಕಾರ್ಮಿಕ ಸಚಿವರು,

ಯಾಕೂಬ್ ಷರೀಫ್
ಕಾರ್ಯದರ್ಶಿ

ಅನುಬಂಧ-IV

ಕರ್ನಾಟಕ ವಿಧಾನ ಸಭೆ

ಹತ್ತನೆ ವಿಧಾನಸಭೆ
(ಆರನೇ ಅಧಿವೇಶನ)
(ಮುಂದುವರಿದ ಉಪವೇಶನಗಳು)

ಕರ್ನಾಟಕ ಧನವಿನಿಯೋಗ (ನಂ.6) ವಿಧೇಯಕ, 1997

(1997ರ ವಿಧಾನ ಸಭಾ ವಿಧೇಯಕ ಸಂಖ್ಯೆ 34)

1997-98ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

1997-98ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗಲಿ,

1. **ಸಂಕ್ಷಿಪ್ತ ಹೆಸರು:** ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ನಂ.6). ಅಧಿನಿಯಮ, 1997 ಎಂದು ಕರೆಯತಕ್ಕದು.

2. **ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 1997-98ನೇ ಹಣಕಾಸು ವರ್ಷಕ್ಕಾಗಿ 842,47,93,000 ರೂಪಾಯಿಗಳ ನೀಡಿಕೆ:** ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 1997-98ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೊತ್ತದಲ್ಲಿ ಎಂಟು ನೂರ ನಲವತ್ತೆರಡು ಕೋಟಿ ನಲವತ್ತೇಳು ಲಕ್ಷ, ತೊಂಬತ್ತ ಮೂರು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕುದು ಮತ್ತು ಉಪಯೋಗಿಸತಕ್ಕುದು.

3. **ಧನವಿನಿಯೋಗ:** ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ

ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು, ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		
			ವಿಧಾನ ಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	ಒಟ್ಟು
1	2		3	4	5
1.	ಕೃಷಿ	ರಾಜಸ್ವ	53,00,000	-	53,00,000
2.	ತೋಟಗಾರಿಕೆ	ರಾಜಸ್ವ	4,84,00,000	-	4,84,00,000
3.	ಪಶು ಸಂಗೋಪನೆ	ರಾಜಸ್ವ	1,000	-	1,000
4.	ಮೀನುಗಾರಿಕೆ	ರಾಜಸ್ವ	1,05,00,000	-	1,05,00,000
5.	ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯ ಹೊರತು)	ರಾಜಸ್ವ	5,00,00,000	-	5,00,00,000
		ಬಂಡವಾಳ	8,00,00,000	-	8,00,00,000
6.	ಗಣಿಗಳು ಮತ್ತು ಭೂ ವಿಜ್ಞಾನ	ರಾಜಸ್ವ	3,50,00,000	2,25,000	3,52,25,000
7.	ಚಿಕ್ಕಪುಟ್ಟ ಉದ್ಯಮಗಳು	ರಾಜಸ್ವ	50,00,000	-	50,00,000

1	2		3	4	5
8.	ರೇಷ್ಮೆ ವ್ಯವಸಾಯ	ಬಂಡವಾಳ	4,04,47,000	-	4,04,47,000
9.	ಸಕ್ಕರೆ	ರಾಜಸ್ವ	2,45,36,000	-	2,45,36,000
10.	ಲೇಖನ, ಸಾಮಗ್ರಿ ಮತ್ತು ಮುದ್ರಣ	ರಾಜಸ್ವ	-	5,86,000	5,86,000
11.	ಉನ್ನತ ಶಿಕ್ಷಣ	ರಾಜಸ್ವ	10,00,000	-	10,00,000
12.	ಯುವಜನ ಸೇವೆಗಳು	ರಾಜಸ್ವ	8,50,00,000	-	8,50,00,000
		ಬಂಡವಾಳ	50,00,00,000	-	50,00,00,000
13.	ಕಲೆ, ಸಂಸ್ಕೃತಿ ಮತ್ತು ಕನ್ನಡ ಅಭಿವೃದ್ಧಿ	ರಾಜಸ್ವ	3,64,000	-	3,64,000
14.	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ	ರಾಜಸ್ವ	12,01,56,000	-	12,01,56,000
15.	ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು ಮೇಲಿನ ತೆರಿಗೆಗಳು	ರಾಜಸ್ವ	10,50,00,000	-	10,50,00,000
20.	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	1,08,81,000	-	1,08,81,000
21.	ಅರಣ್ಯ	ರಾಜಸ್ವ	15,00,000	-	15,00,000
22.	ರಾಜ್ಯದ ಅಬಕಾರಿ	ಬಂಡವಾಳ	2,00,00,000	-	2,00,00,000

1	2		3	4	5
31.	ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ಹೊರತುಪಡಿಸಿ)	ರಾಜಸ್ವ	94,80,000	-	94,80,000
		ಬಂಡವಾಳ	2,21,20,000	-	2,21,20,000
32.	ಬೆಂಗಳೂರು ಅಭಿವೃದ್ಧಿ	ಬಂಡವಾಳ	3,00,00,000	-	3,00,00,000
34.	ಭಾರಿ ಮತ್ತು ಮಧ್ಯಮ ನೀರಾವರಿ	ಬಂಡವಾಳ	1,50,00,00,000	-	1,50,00,00,000
36.	ನ್ಯಾಯ ಪರಿಪಾಲನೆ	ರಾಜಸ್ವ	15,00,000	-	15,00,000
38.	ಸಚಿವಾಲಯ	ರಾಜಸ್ವ	30,00,000	-	30,00,000
39.	ಜಿಲ್ಲಾ ಆಡಳಿತ	ರಾಜಸ್ವ	1,22,25,000	-	1,22,25,000
40.	ಸಾಮಾನ್ಯ ಆಡಳಿತ ಇತ್ಯಾದಿ	ರಾಜಸ್ವ	5,53,00,000	-	5,53,00,000
41.	ಯೋಜನೆ ಮತ್ತು ಸಾಂಖ್ಯಿಕ ಹಣಕಾಸು (ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮತ್ತು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಗಳ ಹೊರತು)	ರಾಜಸ್ವ	13,00,000	-	13,00,000
44.	ಕಟ್ಟಡಗಳು	ರಾಜಸ್ವ	-	47,88,000	47,88,000
		ಬಂಡವಾಳ	100,96,00,000	46,85,000	101,42,85,000

1	2		3	4	5
45.	ರಸ್ತೆಗಳು ಮತ್ತು ಸೇತುವೆಗಳು	ಬಂಡವಾಳ	49,25,00,000	-	49,25,00,000
47.	ವಿದ್ಯುಚ್ಛಕ್ತಿ ಯೋಜನೆಗಳು	ರಾಜಸ್ವ	320,00,00,000	-	320,00,00,000
48.	ಭೂ ಕಂದಾಯ ಇತ್ಯಾದಿಗಳು	ರಾಜಸ್ವ	5,23,00,000	3741,000	5,60,41,000
50.	ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು	ರಾಜಸ್ವ	10,00,000	-	10,00,000
52.	ಸಹಕಾರ	ಬಂಡವಾಳ	52,72,000	-	52,72,000
55.	ಗ್ರಾಮೀಣ ಅಭಿವೃದ್ಧಿ	ರಾಜಸ್ವ	1,00,00,000	-	1,00,00,000
57.	ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕಲ್ಯಾಣ	ರಾಜಸ್ವ	82,94,27,000	-	82,94,27,000
61.	ವಸ್ತ್ರೋದ್ಯಮಗಳು	ಬಂಡವಾಳ	3,26,58,000	-	3,26,58,000
62.	ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು	ರಾಜಸ್ವ	1,000	-	1,000
	ಒಟ್ಟು {	ರಾಜಸ್ವ	467,81,71,000	93,40,000	468,75,11,000
		ಬಂಡವಾಳ	373,25,97,000	46,85,000	373,72,82,000
		ಒಟ್ಟು ಜುಮ್ಲಾ	841,07,68,000	1,40,25,000	842,47,93,000

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

1997-98ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 204ನೇ ಅನುಚ್ಛೇದದ ಉಪ- ಬಂಧಗಳನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಸಿದ್ದರಾಮಯ್ಯ
ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು,
ಯೋಜನಾ ಹಾಗೂ ಕಾರ್ಮಿಕ ಸಚಿವರು,

ಯಾಕೂಬ್ ಷರೀಫ್
ಕಾರ್ಯದರ್ಶಿ

ಕರ್ನಾಟಕ ವಿಧಾನ ಸಭೆ

ಸೋಮವಾರ 8ನೇ ಸೆಪ್ಟೆಂಬರ್ 1997ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.30 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್‌ರವರು) ಪೀಠವನ್ನು ಅಲಂಕರಿಸಿದ್ದರು.

(1) ಸಂತಾಪ ಸೂಚನೆ

ಅಧ್ಯಕ್ಷರು: 1997ರ ಸೆಪ್ಟೆಂಬರ್ 5ನೇ ದಿನಾಂಕದಂದು ಮದರ್ ಥೆರೆಸಾರವರು ನಿಧನವಾದರೆಂದು ಸದನಕ್ಕೆ ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ. ಶಾಂತಿ ಪ್ರೇಮದ ಸಂಕೇತರಾಗಿದ್ದ ಮತ್ತು ವಿಶ್ವದ ಅನೇಕ ಮುಗ್ಧ ಮಕ್ಕಳಿಗೆ ತಾಯಿಯಾಗಿದ್ದ ಮದರ್ ಥೆರೇಸಾರವರ 1910ರ ಆಗಸ್ಟ್ 27ನೇ ದಿನಾಂಕದಂದು ಯುಗೋಸ್ಲೇವಿಯಾದ ಸ್ಕೋಪೆಜ್‌ನಲ್ಲಿ ಜನಿಸಿದರು. ಅವರು ಕಲ್ಕತ್ತಾಗೆ 1946ರಲ್ಲಿ ಬಂದ ಮಿಷಿನರೀಸ್ ಆಫ್ ಚಾರಿಟಿಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ಮುಖಾಂತರ ಭಾರತದ ಅಸಂಖ್ಯಾತ ಬಡವರಲ್ಲಿ ಕಡು ಬಡವರಾದ ಮಕ್ಕಳಿಗೆ, ರೋಗಿಗಳಿಗೆ ಮತ್ತು ಅನಾಥರಿಗೆ ಸ್ಫೂರ್ತಿಯ ನೆಲೆಯಾದರು. ಮನುಕುಲಕ್ಕೆ ಸಲ್ಲಿಸಿದ ಸೇವೆಗಾಗಿ ವಿಶ್ವದ ಉತ್ತುಂಗ ಪ್ರಶಸ್ತಿಯಾದ 'ನೋಬಲ್ ಶಾಂತಿ ಪ್ರಶಸ್ತಿಯನ್ನು ಮತ್ತು 'ಭಾರತ ರತ್ನ' ಪ್ರಶಸ್ತಿಯನ್ನು ಸಹ ನೀಡಿ ಅವರನ್ನು ಗೌರವಿಸಲಾಯಿತು. ತಾಯಿಯ ವಾತ್ಸಲ್ಯದಿಂದ ವಂಚಿತರಾದ ಅನಾಥರಿಗೆ ಆ ಸ್ಥಾನವನ್ನು ತುಂಬುವಲ್ಲಿ ಅತ್ಯಂತ ಯಶಸ್ವಿಯಾಗಿದ್ದು, ಜಾತಿ ಧರ್ಮಗಳ ಸಂಕೋಲೆಗಳನ್ನು ಮುರಿದು ಮನುಕುಲಕ್ಕೆ ಮಾದರಿಯಾಗಿ ಬದುಕಿ ಬಾಳಿದರು. ಮದರ್ ಥೆರೆಸಾರವರ ಸಾವಿನಿಂದಾಗಿ ತಾಯ್ನಾಡಿನ ಜನನಿ ಮತ್ತು ವಿಶ್ವದ ಅನಾಥರ ಜನನಿಯಾಗಿದ್ದ ಒಂದು ಅಮೂಲ್ಯ ಜೀವವೊಂದನ್ನು ಕಳೆದುಕೊಂಡಂತಾಗಿ ಇದರಿಂದ ವಿಶೇಷವಾಗಿ ಭಾರತಕ್ಕೆ ತುಂಬಲಾರದ ನಷ್ಟವುಂಟಾಗಿದೆ. ಇವರ ಗೌರವಾರ್ಥವಾಗಿ ನಾವು ಎದ್ದುನಿಂತು ನಮ್ಮ ಗೌರವವನ್ನು ಸೂಚಿಸುವ ಮೊದಲು ಸಭಾನಾಯಕರು ಹಾಗೂ ಕೆಲವು ಮುಖಂಡರುಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

+ ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಮದರ್ ಥೆರೆಸಾರವರ ನಿಧನದಿಂದ ಇಡೀ ಮಾನವ ಕುಟುಂಬಕ್ಕೆ ಹಾನಿಯಾಗಿದೆ. ಅವರು ಬಡವರ ಬಂಧು, ರೋಗಿಗಳ ರಕ್ಷಣೆ ಕುರಿತು ಅವರು ಶ್ರಮಿಸಿದರು. ಬೇರೆ ಯಾವುದೋ ದೇಶವಾದ ಅಲ್ಬೆನಿಯಾದಲ್ಲಿ ಹುಟ್ಟಿ ಶುಶ್ರೂಷೆಯ ವೃತ್ತಿಯನ್ನು ಅನುಸರಿಸಿ 1928ನೇ ಇಸವಿಯಲ್ಲಿ ಭಾರತಕ್ಕೆ ಬಂದು ಇಲ್ಲಿ ನೆಲೆಸಿದರು. ಮತ್ತೆ ಇಲ್ಲೇ

ನಿಧರಾಗಿದ್ದಾರೆ. ಪ್ರಪಂಚದಾದ್ಯಂತ ಎಲ್ಲಿ ನೋವು ಇದೆ, ಎಲ್ಲಿ ಸಾವು ಇದೆ, ಎಲ್ಲಿ ದುಃಖವಿದೆ, ಅದನ್ನು ನಿವಾರಿಸಬೇಕೆಂಬುದೇ ಅವರ ಜೀವನದ ಪರಮ ಗುರಿಯಾಗಿತ್ತು. ಇಂತಹ ಎತ್ತರದ ಮಾನವ ಜೀವಿಗಳನ್ನು ನಮ್ಮ ವೇದಾಂತಗಳಲ್ಲಿ ಹೀಗೆ ವರ್ಣಿಸುತ್ತಾರೆ. ಕೆಲವರು ಶಿಲೆಯಂತೆ ಬದಲಾಗದೆ, ಸ್ಥಳ ಬದಲು ಮಾಡದೆ ಸುತ್ತಮುತ್ತಲಿನ ವಾತಾವರಣದ ಪರಿವೆ ಇಲ್ಲದೆ ಸುತ್ತಮುತ್ತಲಿನ ವಾತಾವರಣದ ಪರಿಣಾಮವಿಲ್ಲದೇ ಶಿಲೆಯಂತೆ ಇರುತ್ತಾರೆ, ಅವರಿಗೆ ಬೇರೆ ಯಾರ ಬಗ್ಗೆಯೂ ಪರಿವೇ ಇರುವುದಿಲ್ಲ. ಅಂಥವರನ್ನು ಶಿಲಾಮಾನವರು ಎನ್ನುತ್ತೇವೆ. ಇನ್ನು ಕೆಲವರು ಸಸ್ಯಗಳಂತೆ ತನಗೆ ಬೇಕಾದ ಆಹಾರವನ್ನು ಭೂಮಿಯಿಂದ ಪಡೆದು ತನ್ನ ಎಲೆಗಳನ್ನು ಭೂಮಿಗೆ ಕೊಟ್ಟು, ಅವು ಸಹ ಚಲನೆ ಇಲ್ಲದೆ, ಇದ್ದಕಡೆಯೇ ಇದ್ದು ಪ್ರಕೃತಿಯಿಂದ ಪಡೆಯುತ್ತಾರೆ, ಪ್ರಕೃತಿಗೆ ಕೊಡುತ್ತಾರೆ. ಅಂಥವರನ್ನು ಸಸ್ಯ ಮಾನವರು ಎನ್ನುತ್ತಾರೆ. ಇನ್ನು ಪ್ರಾಣಿ ಮಾನವರು ಎಂದರೆ ಪ್ರಾಣಿಗಳ ತರಹ ಹಸಿವು, ತೃಷೆ, ಸುಖ ದುಃಖ, ಸಾವು-ನೋವು ಇವುಗಳನ್ನು ಅನುಭವಿಸುವುದಾದರೂ ಅವುಗಳ ದೈಹಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕೆ ಅವು ಚಲಿಸುತ್ತವೆ. ಕೆಲವು ಕಾಡು ಮೃಗಗಳಿರುತ್ತವೆ, ಕೆಲವು ಸಾಧು ಮೃಗಗಳು ಇರುತ್ತವೆ. ಕೆಲವು ಮೃಗಗಳು ಮೃಗಗಳ ಮೇಲೇನೆ ಹಾರಿ ತಿನ್ನುತ್ತವೆ. ಆ ತರಹ ಮನುಷ್ಯರು ಇದ್ದಾರೆ, ಅವರಿಗೆ ಪ್ರಾಣಿ ಮಾನವರು ಎನ್ನುತ್ತಾರೆ. ಇನ್ನು ದೇವಮಾನವರು ಅವರು ತಮಗೋಸ್ಕರ ತಾವು ಎಷ್ಟು ಬದುಕಿಗೆ ಆಹಾರದ ಅವಶ್ಯಕತೆ ಇದೆಯೇ ಅಷ್ಟನ್ನು ಮಾತ್ರ ಪ್ರಕೃತಿಯಿಂದ ಪಡೆದು, ಇನ್ನು ಉಳಿದ ಎಲ್ಲವನ್ನೂ ಅವರ ಆಸೆ ಆಕಾಂಕ್ಷೆಗಳನ್ನೆಲ್ಲಾ, ತನ್ನ ಬಗ್ಗೆ ತನ್ನನ್ನೇ ಮರೆತು ಜಗತ್ತಿನ ಬಗ್ಗೆ ಜಗತ್ತಿನಲ್ಲಿರುವಂತಹ ಸಾವು ನೋವಿನ ಬಗ್ಗೆ, ರೋಗಗಳ ಬಗ್ಗೆ, ಅಪಘಾತಗಳ ಬಗ್ಗೆ, ಎಲ್ಲೋ ಒಂದು ಕಡೆ ಅಪಘಾತವಾದರೆ ಆದರೆ ತನಗೆ ಆಗಿದೆಯೋ ಏನೋ ಎನ್ನತಕ್ಕಂಥ ಭಾವನೆಗೆ ಬರುತ್ತಾರೆ. ಒಮ್ಮೆ ಮಾನ್ಯ ಕೆ.ವಿ.ಪುಟ್ಟಪ್ಪನವರ ಹತ್ತಿರ ನಾನು ಏತಕ್ಕೋ ಮಾತನಾಡುವುದಕ್ಕೆಂದು ಹೋದಾಗ ಪಂಜಾಬ್‌ನಲ್ಲಿ ತುಂಬಾ ಕೊಲೆಗಳು ಸುಲಿಗಳು ಆಗುತ್ತಿದ್ದವು. ಅವರು ಇದೇನು ನಮ್ಮ ದೇಶ, ಎಲ್ಲೋ ಒಂದು ಕಡೆ ಇಷ್ಟೊಂದು ಹಾನಿ, ಸಂಕಟ ಇದರ ನಮಗೆ ಏನು ಅನಿಸುವುದಿಲ್ಲವೆ?'' ಎಂದರು. ಇದನ್ನು ಏನಾದರೂ ಮಾಡಿ ಬಗೆಹರಿಸಬೇಕೆಂಬ ಪ್ರಯತ್ನವನ್ನು ಮಾಡುವ ಮನಸ್ಸು ಇಲ್ಲದೇ ಇರತಕ್ಕಂಥ ಮನುಷ್ಯರು ಇದ್ದಾರಲ್ಲವೆಂದರು. ಆಗ ಅವರು ಕೋಟ್‌ಮಾಡಿದರು. ರೊಮಾಯಿರೋ ಲ್ಯಾಂಡ್‌ಗೆ ಒಮ್ಮೆ ಗಾಂಧೀಜಿಯವರು ಪತ್ರ ಬರೆಯುತ್ತಾರೆ. ಅವರು ಬಂಗಾಳದಲ್ಲಿ ಆಗಿರುವಂತಹ ಬರಗಾಲದ ಬಗ್ಗೆ ಏನು ಆಗಿದೆ, ಜನರನ್ನು ಹೇಗೆ ನೋಡಿಕೊಂಡಿದ್ದೀರಿ ಎಂದು ಸ್ವತಃ ಅವರ ಮನೆಯಲ್ಲಿ ಆಗಿರುವಂತೆ ಅನುಭವಿಸಿಕೊಂಡು ಅವರು ಪತ್ರವನ್ನು ಗಾಂಧೀಜಿಗೆ ಬರೆಯುತ್ತಾರೆ. ಮಹಾತ್ಮ ಗಾಂಧೀಯವರು ವಿಶ್ವ ಮಾನವ. ಪ್ರಪಂಚದಲ್ಲಿ ಎಲ್ಲೆ ಏನು ನೋವು ಆದರೂ ಅದು ತನಗೆ ಆಯಿತು ಎನ್ನುವ ಹಾಗೆ ಈಗ ದೇಹ ಒಂದು ಇಡೀ ಮಾನವ ಕೋಟಿ ಒಂದು ಇದೆ. ಈಗ ಒಂದು ಕಿರು ಬೆರಳು ಕತ್ತರಿಸಿದರೆ ಅದು ದೇಹಕ್ಕೆ ಹೇಗೆ ಪರಿಣಾಮವಾಗುತ್ತದೋ, ಅಥವಾ ಚರ್ಮ ಕಿತ್ತರೆ ಹೇಗೆ ದೇಹಕ್ಕೆ

ನೋವಾಗುತ್ತದೆಯೋ, ಹಾಗೆ ನಾವು ಇಡೀ ಮಾನವ ಕೋಟಿಯ ಬಗ್ಗೆ ಆಲೋಚನೆ ಮಾಡುವುದಿರಲಿ, ನಮ್ಮ ದೇಶದ ಬಗ್ಗೆ ಆಲೋಚನೆ ಮಾಡುವುದಿರಲಿ, ನಮ್ಮ ರಾಜ್ಯದ ಬಗ್ಗೆ ಆಲೋಚನೆ ಮಾಡುವುದಿರಲಿ, ನಾವು ಸಸ್ಯ ಮಾನವರ ರೀತಿ, ಶಿಲಾಮಾನವರ ರೀತಿ, ಅಥವಾ ಪ್ರಾಣಿ ಮಾನವ ರೀತಿಯಲ್ಲಿ ಇರುತ್ತೇವೆಯೆ ಎನ್ನುವ ಮಾತನ್ನು ವೇದಾಂತದಲ್ಲಿರುವುದನ್ನು ಮಾನ್ಯ ಪುಟ್ಟಪ್ಪನವರು ಸ್ವತಃ ಅನುಭವದಿಂದ ಹೇಳಿದಂಥಾದ್ದು, ಆದುದರಿಂದ ಅವರನ್ನು ವಿಶ್ವಮಾನವ, ವಿಶ್ವ ಸಂದೇಶವೆಂದು ಹೇಳುತ್ತೇವೆ. ''ಪಟೇಲರೇ ನಾವು ಏನಾದರೂ ಇದಕ್ಕೆ ಮಾಡಬೇಕು'' ಎಂದು ಅವರು ನನಗೆ ಹೇಳಿದರು. ನಾವು ಈಗ ಏನೂ ಕೂಡ ಮಾಡುವ ಸ್ಥಿತಿಯಲ್ಲಿ ಇಲ್ಲ. ಇವತ್ತು ದೇಶದಲ್ಲಿ ಮದರ್ ಥೆರೇಸಾ ಅಂತಹವರು ನಮ್ಮನ್ನು ಅಗಲಿದ್ದಾರೆ. 'ಮದರ್' ಅಂದರೆ ಅವರು ನಿಜವಾಗಿಯೂ ಎಲ್ಲರಿಗೂ ತಾಯಿಯೇ ಆಗಿದ್ದರು. ಅವರಿಗೆ ಸ್ವತಃ ಮಕ್ಕಳಿಲ್ಲದಿದ್ದರೂ, ಅವರು ಮದುವೆಯಾಗದಿದ್ದರೂ, ತಾಯಿತನದ ಸ್ವಯಂ ಅನುಭವ ಅವರಿಗೆ ಗೊತ್ತಿಲ್ಲದಿದ್ದರೂ, ಅವರು ಎಲ್ಲರಿಗೂ ತಾಯಿ ಆಗಿದ್ದರು. ಅವರು ಮಕ್ಕಳನ್ನು ಹಡೆಯದೇ ಇದ್ದರೂ, ಇಡೀ ಮಾನವ ಕೋಟಿ ತನ್ನ ಮಕ್ಕಳು ಎಂದುಕೊಂಡಿದ್ದರು. ಕೆಲವು ಮುಟ್ಟಬಾರದಂತಹ ಕುಷ್ಟ ರೋಗಿಗಳನ್ನೂ ಸಹಾ ಮುಟ್ಟಿ, ಅವರಿಗೆ ಔಷಧ ಕೊಡುತ್ತಿದ್ದರು. ಈ ಕೆಲಸವನ್ನು ಗಾಂಧೀಜಿಯವರೂ ಮಾಡುತ್ತಿದ್ದರು. ಈ ತರಹ, ಕೆಲವರು ಬಹಳ ಡಿವೈಸ್ ಪರ್ಸನ್ಸ್ ಎಂದೇನು ಹೇಳುತ್ತೇವೆಯೋ ಆ ತರಹದ ಒಬ್ಬ ವ್ಯಕ್ತಿಯಾಗಿದ್ದರು. ಮದರ್ ಥೆರೇಸಾ ಅವರಿಗೆ ಸಾವು ಇಲ್ಲ, ಅವರು ಸಾವಿರದ ವ್ಯಕ್ತಿ. ನೂರು ಸಾವಿರ ಅಲ್ಲ ಸಾವು ಇರದ ಸಾವಿರದ ವ್ಯಕ್ತಿಗಳು. ಅಂತಹವರ ಬಗ್ಗೆ ನಾವು ಇವತ್ತು ಅವರ ದಾರಿಯಲ್ಲಿ ಹೋಗಬೇಕು, ಹಾಗೆ ಹೀಗೆ ಅಂತ ನನಗೆ ಬರೆದು ಕೊಟ್ಟಿದ್ದಾರೆ. ಅಂತಹವರ ದಾರಿಯಲ್ಲಿ ಹೋಗುವ ಆತ್ಮಶಕ್ತಿಯಾಗಲೀ, ಬುದ್ಧಿಯ ತೀಕ್ಷ್ಣತೆಯಾಗಲೀ, ಮನಸ್ಸಿನ ಪ್ರಾಮಾಣಿಕತೆ ಆಗಲೀ ಜಗತ್ತಿನಲ್ಲಿ ಇಲ್ಲವೆಂದು ಕಾಣುತ್ತದೆ. ಅದಕ್ಕೋಸ್ಕರ ನಾನು ಅವರಿಗೆ ಭಕ್ತಿಪೂರ್ವಕವಾದ ಪ್ರಣಾಮಗಳನ್ನು ಅರ್ಪಿಸುತ್ತೇನೆ. ಅವರ ಶಕ್ತಿ ಕೆಲವು ಸಾರಿ ಈ ಮೆಟಾ ಫಿಸಿಕ್ಸ್‌ನಲ್ಲಿ ಬರುತ್ತದೆ, ಇಂತಹ ಶಕ್ತಿಗಳು ಮರೆಯಾಗುವುದಿಲ್ಲ ಅಂತ ಮತ್ತೆ ಎಲ್ಲೋ ಒಂದು ಕಡೆ ಇರುತ್ತಾರೆ. ಅದಕ್ಕೊಂದು ಉದಾಹರಣೆ ಕೊಡುತ್ತಾರೆ. ಈ ಬೆಟ್ಟಗಳು ಇವೆಯಲ್ಲಾ, ಈ ಬೆಟ್ಟಗಳು ಲಕ್ಷಾಂತರ ವರ್ಷಗಳ ಹಿಂದೆ ಮುಳುಗಿದ್ದಂತೆ. ಈ ಬೆಟ್ಟಗಳು ಮುಳುಗಿ ಇನ್ನೊಂದು ಕಡೆ ಏಳುತ್ತವೆಯಂತೆ. ಆ ತರಹ ಒಂದು ಮೇರು ಪರ್ವತದ ವ್ಯಕ್ತಿತ್ವ ಅವರದಾಗಿತ್ತು. ಅವರು ಇವತ್ತು ಮುಳುಗಿರಬಹುದು ಮತ್ತೆ ಯಾವ ರೂಪದಲ್ಲೋ ಆ ಶಕ್ತಿ ಪುನರ್ ಆವಿರ್ಭವಿಸಿ ಈ ಜಗತ್ತಿನಲ್ಲಿರತಕ್ಕಂತಹ ಕ್ಷುದ್ರತೆ, ಕ್ರೋಧ, ಸಣ್ಣತನ ಇವುಗಳಿಗೆ ಏನಾದರೂ ಒಂದು ಮಾರ್ಗ ತೋರಿಸುವಂತಹ ಶಕ್ತಿ ಆಗಲೆಂದು ಆಶಿಸುತ್ತೇನೆ. ನಮ್ಮಲ್ಲಿ ಬಹಳ ಜನ ಪ್ರಿಡಿಕ್ಷನ್ ಮಾಡಿದ್ದರು, 1996ನೇ ಇಸವಿಗೆ ಪ್ರಳಯವಾಗುತ್ತದೆ, ಯಾರೋ ಒಬ್ಬ ಅತಿ ಮಾನವ ಬರುತ್ತಾನೆ, ಆ ಅತಿಮಾನವ ಈ ಅರಬ್ ದೇಶದಿಂದ ಬರುತ್ತಾನೆ, ಅವನಿಗೆ ಸೋವಿಯತ್ ಯೂನಿಯನ್‌ನವರು ಬೆಂಬಲ ಕೊಡುತ್ತಾರೆ, ಅವನು ಈ

ವೆಸ್ಟರ್ನ್ ವರ್ಲ್ಡ್‌ನ್ನೆಲ್ಲಾ ಡೆಸ್ಟ್ರಾಯ್ ಮಾಡುತ್ತೇನೆ ಅಂತ ಕೆಲವೆಲ್ಲಾ ಕಥೆಗಳನ್ನು ಕಟ್ಟಿದ್ದರು. ನಾನು ಆ ತರಹ ಹೇಳಿದೆ. ಈ ಒಂದು ಮಹಾನ್ ವ್ಯಕ್ತಿ, ಮಹಾಶಕ್ತಿ ಮತ್ತೊಮ್ಮೆ ಮಾನವ ಕೋಟಿಯ ಉದ್ಧಾರಕ್ಕೋಸ್ಕರ ಹುಟ್ಟಿ ಬರಲಿ. ನಮ್ಮಲ್ಲೂ ಕೂಡ 'ಯದಾ ಯದಾಯ ಧರ್ಮಸ್ಯಂ, ಗ್ಲಾನಿರ್ಭವತು' ಎಂದು ಹೇಳುತ್ತೇವೆ. ದೇವರೇ ಬಾ.. ಎಂದಾಗ ನಾನೇ ಬರುತ್ತೇನೆ ಎಂದು ದೇವರೇ ಹೇಳುತ್ತಾನೆ. ಬಹಳ ಧರ್ಮ ಗ್ಲಾನಿಯಾದಾಗ, ಸಾಧು ಸಂತರಿಗೆ ರಕ್ಷಣೆ ಇಲ್ಲದಿದ್ದಾಗ, ಕಳ್ಳ-ಕಾಕರಿಗೆ ಪೋಷಣೆ ಇದ್ದಾಗ ನಾನು ಬರುತ್ತೇನೆ ಅಂತ ಅವನು ಹೇಳಿದ್ದು. ಆ ರೀತಿ ನಾವು ನಂಬಿರುವಂತೆ, ಧರ್ಮಗ್ಲಾನಿ ಇದೆ, ಪ್ರಪಂಚದಲ್ಲಿ ಹಿಂಸೆ ಇದೆ, ಮಾನವರಲ್ಲಿ ಕ್ರೌರ್ಯ ಇದೆ, ಇವುಗಳನ್ನು ತೊಡೆದು ಹಾಕುವುದಕ್ಕಾಗಿ ಆ ಮಹಾ ಶಕ್ತಿ ಮತ್ತೆ ಹುಟ್ಟಿ ಬಂದು ನಮ್ಮನ್ನು ಉಳಿಸಲಿ ಎಂದು ಇಷ್ಟು ಮಾತ್ರ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ತಾವು ಪ್ರಸ್ತಾಪ ಮಾಡಿದಂತಹ ಸಂತಾಪ ಸೂಚಕ ನಿರ್ಣಯಕ್ಕೆ ಸಂಪೂರ್ಣವಾಗಿ ನನ್ನ ಬೆಂಬಲ ಕೊಡುತ್ತಾ ಮತ್ತು ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಗೆ ಸಂಪೂರ್ಣವಾಗಿ ಬೆಂಬಲವನ್ನು ಸೂಚಿಸುತ್ತಾ ಕೆಲವೇ ಮಾತುಗಳನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. 87 ವರ್ಷದ ಮದರ್ ಥೆರೇಸಾರವರು ಬಹುಶಃ ಮಾನವ ಕುಲಕ್ಕೆ ಒಂದು ವಿಶೇಷವಾದಂತಹ ಸೇವೆಯನ್ನು ಸಲ್ಲಿಸಿದ್ದಾರೆ ಎಂದರೆ, ಅದೇನು ಅತಿಶಯೋಕಿ ಅಲ್ಲ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ ಹಾಗೆ ಕೆಲವೊಂದು ವ್ಯಕ್ತಿಗಳು ಇಂತಹ ಸೇವೆಯಲ್ಲಿ ತೊಡಗಿರುತ್ತಾರೆ. ಬಹುಶಃ ಪ್ರಪಂಚದ ಇಡೀ ನಮ್ಮ ಕೋಟ್ಯಾಂತರ ಜನಸಂಖ್ಯೆಯಲ್ಲಿ ಕೆಲವೇ ಕೆಲವು ಜನ ಇಂತಹ ಒಂದು ತತ್ವಕ್ಕೆ ಅಂಟಿಕೊಂಡು ತಮ್ಮ ಇಡೀ ಜೀವನವನ್ನು ಸಮರ್ಪಣೆ ಮಾಡತಕ್ಕಂತಹ, ಅರ್ಪಣೆ ಮಾಡತಕ್ಕಂಥ ಕೆಲಸವನ್ನು ಮಾಡುತ್ತಾರೆ. ಅತ್ಯಂತ ಚಿಕ್ಕ ವಯಸ್ಸಿನಲ್ಲೇ, ಯಾವಾಗ ಅವರು 18 ವರ್ಷದ ಹುಡುಗಿಯಾಗಿದ್ದರು, ಆವಾಗ ಅವರು ಈ ಶಿಕ್ಷಕ ಸನ್ಯಾಸಿನಿಯಾಗಿ ಶಿಕ್ಷಕ ವೃತ್ತಿಯನ್ನು ಕಾನ್ವೆಂಟ್ ಸ್ಕೂಲ್‌ನಲ್ಲಿ ತೆಗೆದುಕೊಂಡು, ಅದೇ ಒಂದು ಆಧಾರದ ಮೇಲೆ ಅವರು 1928ರಲ್ಲಿ ಕಲ್ಕತ್ತಾಗೆ ಬಂದು ಪ್ರಥಮವಾಗಿ ಸ್ಲಮ್‌ನಲ್ಲಿ ಆರಂಭವಾದಂತಹ ಸ್ಕೂಲ್‌ನಲ್ಲಿ ಅವರು ಶಿಕ್ಷಕರಾಗಿ ಕೆಲಸ ಮಾಡಿ, ಅವರ ಗೋಳನ್ನು ನೋಡಿಕೊಂಡು ಇಂತಹ ಸೇವೆಯಲ್ಲೇ ನಾನು ತೊಡಗಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ಕಲ್ಕತ್ತಾದಲ್ಲಿ ಇರತಕ್ಕಂತಹ ಅನೇಕ ಸ್ಲಮ್‌ಗಳಲ್ಲಿ ಕ್ರಿಶ್ಚಿಯನ್ ಮಿಷನರೀಸ್‌ನಿಂದ ವಿಶೇಷವಾಗಿ ತಮ್ಮ ಶಾಲೆಗಳನ್ನು ಸ್ಥಾಪನೆ ಮಾಡಿದಂತಹ ವ್ಯಕ್ತಿ ಇವರು. ಚಾರಿಟಿ ಮಿಷನ್ ಆಫ್ ಟ್ರಸ್ಟ್ ವತಿಯಿಂದ ಸ್ಕೂಲ್‌ಗಳನ್ನು ತೆರೆದು ನೊಂದಂತಹ ಅನಾಥ ಮಕ್ಕಳಿಗೆ ವಿಶೇಷವಾದಂತಹ ಪ್ರೀತಿ ಮತ್ತು ವಿಶ್ವಾಸವನ್ನು ಕೊಟ್ಟು, ನೀವು ಈ ದೇಶದ ನಾಗರೀಕರಾಗಿದ್ದೀರಿ, ನಿಮಗೆ ಒಳ್ಳೆಯ ಶಿಕ್ಷಣ ಬೇಕು, ಒಳ್ಳೆಯ ರೀತಿಯಿಂದ ನೀವೂ ಕೂಡ ಈ ಜಗತ್ತಿನಲ್ಲಿ ಬಾಳಿ ಬದುಕಬಹುದು ಎನ್ನತಕ್ಕಂಥ ಮಾತುಗಳನ್ನು ಹೇಳಿ,

ಅವರೆಲ್ಲರ ಪ್ರೀತಿಗೆ ಪಾತ್ರರಾಗಿ ಇಡೀ ಜಗತ್ತೇ ಮೆಚ್ಚತಕ್ಕಂತಹ ರೀತಿಯಲ್ಲಿ ಅವರು ಕೆಲಸವನ್ನು ಮಾಡಿದರು. ಬಹುಶಃ ಸ್ವಾತಂತ್ರ್ಯ ಸಿಕ್ಕ ಮೇಲೆ ಅವರು ಸ್ಥಾಪನೆ ಮಾಡಿದಂತಹ ಈ ಟ್ರಸ್ಟಿನ ವತಿಯಿಂದ ಸುಮಾರು 128 ರಾಷ್ಟ್ರಗಳಲ್ಲಿ ಅವರ ಈ ಸೇವಾ ಇಲಾಖೆಗಳು ನಡೆಯುತ್ತಿವೆ. ಅದು ಲೆಪ್ರಸಿ ಇನ್ಸ್‌ಟಿಟ್ಯೂಟ್ ಇರಬಹುದು, ಅನಾಥ ಮಕ್ಕಳಿಗೆ ಶಾಲೆ ಇರಬಹುದು, ಅಥವಾ ಈ ನನ್ಸ್‌ಗಳಿಗೆ ಟ್ರೈನಿಂಗ್ ಕೊಡತಕ್ಕಂತಹ ಅಥವಾ ಇದರ ಬಗ್ಗೆ ಒಂದು ಹೆಚ್ಚಿನ ಅನುಕಂಪ ಮತ್ತು ಅವರ ಬಗ್ಗೆ ಕರುಣೆ ಮತ್ತು ಯಾವ ರೀತಿಯಾಗಿ ಸೇವೆಯನ್ನು ಸಲ್ಲಿಸಬೇಕು ಎನ್ನತಕ್ಕಂಥದ್ದರ ಬಗ್ಗೆ ಹೇಳಿ ಕೊಡತಕ್ಕಂತಹ ಶಾಖೆಯೇ ಇರಬಹುದು, ಇಂತಹವು ಸುಮಾರು 128 ರಾಷ್ಟ್ರಗಳಲ್ಲಿ ಅವರು ಅನೇಕ ರೀತಿಯಿಂದ ತೆರೆದು ಆ ಅನಾಥ ಮಕ್ಕಳಿಗೆ ತಾಯಿಯಂತೆ ಅವರು ಇವತ್ತು ನಡೆದುಕೊಂಡು ನಿಜವಾಗಿಯೂ 'ಮದರ್' ಅಂದರೆ 'ಮದರ್ ಥೆರೇಸಾ' ಎಂದು ಹೆಸರಾಗಿದ್ದರು. ಅವರು ಆ ಮಕ್ಕಳಿಗಷ್ಟೇ ತಾಯಿಯಾಗಿರಲಿಲ್ಲ, ಇಡೀ ಜಗತ್ತಿಗೇ ಅವರು ತಾಯಿಯಾಗಿದ್ದರು. ಹಾಗೆಂದೇ ಜನ ಒಪ್ಪಿಕೊಂಡು ಬಹುಶಃ ಇವತ್ತು ಇಡೀ ಪ್ರಪಂಚ ಶೋಕಗ್ರಸ್ಥ ಆಗಿದೆ. ಇವತ್ತು ಮದರ್ ಥೆರೇಸಾ ಬಗ್ಗೆ ಇವತ್ತು ಸಾಕಷ್ಟು ರಾಷ್ಟ್ರಗಳು ತಮ್ಮ ಶೋಕವನ್ನು ವ್ಯಕ್ತಮಾಡಿವೆ. ಅಂತಹ ಒಬ್ಬ ಮಹಾ ತಾಯಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ನಮ್ಮ ಸುದೈವ, ಅವರು ತಮ್ಮ ಇಡೀ ಜೀವನವನ್ನು ನಮ್ಮ ಭಾರತ ದೇಶದಲ್ಲಿ ಕಳೆದು ತಮ್ಮ ಸೇವೆಯನ್ನು ಸಲ್ಲಿಸಿದರು. ನಮ್ಮ ರಾಷ್ಟ್ರದ ಅತ್ಯಂತ ಉತ್ಕೃಷ್ಟ ಪ್ರಶಸ್ತಿಯಾದ 'ಭಾರತ ರತ್ನ'ವನ್ನೂ ಕೂಡ ಅವರಿಗೆ ಗೌರವಾರ್ಥವಾಗಿ 1980ರಲ್ಲಿ ನೀಡಿದ್ದು ನಿಜವಾಗಿಯೂ ಅವರು ಸಲ್ಲಿಸಿದ ಸೇವೆಗೆ ಸಿಕ್ಕ ಪ್ರತಿಫಲವಾಗಿತ್ತು. ಅವರು ಅದಕ್ಕೆ ಅರ್ಹರಾಗಿದ್ದಾರೆಂದು ಹೇಳಿ, ಆ ಉನ್ನತವಾದಂತಹ ಪದವಿಯನ್ನೂ ಕೂಡ ನಮ್ಮ ರಾಷ್ಟ್ರದಲ್ಲಿ ಅವರಿಗೆ ದಯಪಾಲಿಸಲಾಗಿದೆ. ಅಂತಹ ಒಬ್ಬ ಮಹಾ ತಾಯಿಯನ್ನು ನಾವು ಕಳೆದುಕೊಂಡಿದ್ದೇವೆ. ವಿಶೇಷವಾಗಿ ಅನಾಥ ಮಕ್ಕಳು, ಲೆಪ್ರಸಿಯಿಂದ ಬಳಲುತ್ತಿರುವ ಈ ನಮ್ಮ ಅನೇಕ ರೋಗಿಗಳು, ಇವತ್ತು ನಿಜವಾಗಿಯೂ ಅನಾಥರಾಗಿದ್ದಾರೆ. ಅವರ ಬಗ್ಗೆ ನಿಜವಾಗಿಯೂ ಕೂಡ ಒಂದು ವಿಶೇಷವಾದಂತಹ ಚಿಂತನೆ ಮಾಡತಕ್ಕಂತಹ ಅವಶ್ಯಕತೆ ಏಕೆ ಇದೆ ಎಂದರೆ, ಇಂತಹ ಸಂಸ್ಥೆಗಳು ಪ್ರಾಮಾಣಿಕವಾಗಿ ಮತ್ತು ಸೆಲ್ಫ್‌ಲೆಸ್, ಇಡೀ ತನ್ನ ಜೀವನವನ್ನೇ ಮುಡಿಪಾಗಿಟ್ಟು ಬರೀ ಇದೊಂದೇ ಕೆಲಸಕ್ಕಾಗಿ ಏನು ತೊಡಗಿಸಿಕೊಂಡಿದ್ದಾರೆ ಅಂತಹ ಜನ ಸಿಗತಕ್ಕಂತಹದ್ದು ಬಹಳ ವಿರಳ. ಅದಕ್ಕೆ ಇವತ್ತು ಆ ದಾರಿಯಲ್ಲಿ ನಮಗೆ ಹೋಗುವುದಕ್ಕೆ ಆಗದಿದ್ದರೂ ಕೂಡ, ಅಂತಹ ಒಂದು ದಾರಿಯಲ್ಲಿ ಹೋಗತಕ್ಕಂಥ ಜನರಿಗೆ ಪ್ರೋತ್ಸಾಹ ನೀಡತಕ್ಕಂಥ, ಬೆಂಬಲ ಸೂಚಿಸತಕ್ಕಂಥಾದ್ದು ಅಗತ್ಯ. ಯಾವುದೇ ರೂಪದಲ್ಲಿಯಾಗಲೀ, ಅದು ಸರ್ಕಾರದ ವತಿಯಿಂದ ಸಹಾಯವಾಗಲಿ, ಅಥವಾ ಅಂತಹ ಕೆಲಸಕ್ಕೆ ಒಂದು ಬೆಂಬಲವನ್ನು ಸೂಚಿಸತಕ್ಕಂಥದ್ದು ಮಾಡಿದರೆ ಬಹುಶಃ ನಾನು ತಿಳಿದುಕೊಂಡಿದ್ದೇನೆ, ಅದೇ ಒಂದು ದೊಡ್ಡ ಕೆಲಸ ನಾವು ಮಾಡಿದಂತಾಗುತ್ತದೆ ಮತ್ತು ಅಂತಹ ಒಬ್ಬ ಮಹಾತ್ಮರಿಗೆ ನಾವು ಒಂದು ರೀತಿಯ ಎನ್‌ಕ್ರೇಜ್‌ಮೆಂಟ್ ಅನ್ನು ಕೊಟ್ಟರೆ

ನಿಜವಾಗಿಯೂ ಅವರು ಸರ್ಕಾರಕ್ಕಿಂತಲೂ ಮತ್ತು ನಮ್ಮ ಸಾಮಾಜಿಕ ಕಾರ್ಯಕರ್ತರಾಗಲೀ ಅಥವಾ ರಾಜಕಾರಣಿಗಳಾಗಲೀ ಮಾಡತಕ್ಕಂಥ ಕೆಲಸಕ್ಕಿಂತಲೂ ಸಾವಿರಾರು ಪಟ್ಟು ಹೆಚ್ಚಿನ ಕೆಲಸವನ್ನು ಅವರು ಮಾಡಬಹುದು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರ ಅಂತ್ಯಕ್ರಿಯೇ 13ನೇ ತಾರೀಕು ಕಲ್ಕತ್ತದಲ್ಲಿ ನೆರವೇರುತ್ತಿದೆ. ಅದಕ್ಕೆ ಬಹುಶಃ ನಮ್ಮ ರಾಜ್ಯಸರ್ಕಾರದ ವತಿಯಿಂದ ಯಾರಾದರೂ ಒಬ್ಬರು ಅಲ್ಲಿಗೆ ಹೋದರೆ ಅದು ಒಳ್ಳೆಯ ಸಂಕೇತವೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಪ್ರಪಂಚದ ಅನೇಕ ಮೂಲೆ ಮೂಲೆಗಳಿಂದ ಜನ ಆ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಹೋಗುತ್ತಿದ್ದಾರೆ. ಅದಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ಕೂಡ ಒಬ್ಬರನ್ನು ಅಲ್ಲಿಗೆ ಕಳುಹಿಸಿಕೊಟ್ಟರೆ ಒಳ್ಳೆಯದು.

ಶ್ರೀ ಜೆ.ಹೆಚ್‌ಪಟೇಲ್: ಮಾನ್ಯ ಅಧ್ಯಕ್ಷರೆ, ತಾವು ನೆನಪು ಮಾಡಿದ್ದು ಒಳ್ಳೆಯದಾಯಿತು. ನಮ್ಮ ರಾಜ್ಯಸರ್ಕಾರದ ವತಿಯಿಂದ ನಮ್ಮ ಜಯಪ್ರಕಾಶ್ ಹೆಗಡೆಯವರನ್ನು ಮದರ್ ಥೆರೇಸಾ ಅವರಿಗೆ ಕೊನೆಯ ಗೌರವವನ್ನು ಅರ್ಪಿಸುವುದಕ್ಕೆ ಕಳುಹಿಸುತ್ತಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಧನ್ಯವಾದಗಳು. ತಾವು ಕೂಡ ಮೊದಲೇ ಯೋಚನೆ ಮಾಡಿದ್ದೀರೆಂದು ಹೇಳಿದಿರಿ. ಏಕೆಂದರೆ ಸಾಂಕೇತಿಕ ದೃಷ್ಟಿಯಿಂದ ಅಲ್ಲಿಗೆ ಹೋಗಬೇಕು ಎನ್ನುವುದು ಅಲ್ಲ, ನಮ್ಮ ಇಡೀ ಭಾರತದೇಶಕ್ಕೆ ಇದು ಒಂದು ಮಾದರಿಯಾದಂಥ ಒಂದು ಸಂಸ್ಥೆಯನ್ನು ಕಟ್ಟಿದಂಥ ಒಬ್ಬ ಮಹಾತಾಯಿ ಅವರು ಆಗಿದ್ದಾರೆ. ಅದಕ್ಕೆ ನಾವೆಲ್ಲರೂ ಕೂಡ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡರೆ ನಮಗೆ ನಾವು ಗೌರವವನ್ನು ಕೊಟ್ಟ ಹಾಗೆ ಆಗುತ್ತದೆ. ನಾವು ನಮ್ಮ ನಮ್ಮಲ್ಲಿಯೇ ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನಿಗೆ ಮುಟ್ಟಿಸಿಕೊಳ್ಳಬೇಕೆಂದರೆ, ಇನ್ನೂ ಕೂಡ ನಾವು ಅವನಿಗೆ ಪಾಠ ಹೇಳಬೇಕಾಗುತ್ತದೆ. ಇನ್ನೂ ಅವನಿಗೆ ಕಾನೂನಿನ ಬೆಂಬಲ ಕೊಡಬೇಕಾಗುತ್ತದೆ. ಇನ್ನೂ ಅವನಿಗೆ ತಿಳುವಳಿಕೆ ಕೊಡಬೇಕಾಗುತ್ತದೆ. ಅಂದರೆ ಇನ್ನೂ ಕೂಡ ಇಂಥ ಕೆಟ್ಟ ಪದ್ಧತಿ ಇದೆ. ಆದರೆ ಬೇರೆ ದೇಶದಿಂದ ಬಂದಂಥ ಒಬ್ಬ 18 ವರ್ಷದ ಹೆಣ್ಣುಮಗಳು ನಮ್ಮ ದೇಶಕ್ಕೆ ಬಂದು ಆ ಕೆಲಸವನ್ನು ಮಾಡಬೇಕೆಂದರೆ, ಲಕ್ಷಾಂತರ ಜನರನ್ನು ತಮ್ಮ ಮಕ್ಕಳ ಹಾಗೆ ನೋಡಿಕೊಂಡರು. ಅದರಲ್ಲಿ ನಾವು ಕುಷ್ಟರೋಗದವರನ್ನು ಯಾವ ರೀತಿಯಾಗಿ ನೋಡುತ್ತೇವೆಂದರೆ, ಅವರ ಹತ್ತಿರ ಕುಳಿತುಕೊಳ್ಳುವುದಕ್ಕೆ ಕೂಡ ಅನೇಕ ಜನರು ತಯಾರಿರುವುದಿಲ್ಲ. ಅಂಥಹದರಲ್ಲಿ ಮದರ್ ಥೆರೇಸ ಅವರು-ಕುಷ್ಟರೋಗದವರನ್ನು ಮುಟ್ಟಿ, ಅವರನ್ನು ಮಲಗಿಸಿ, ಅವರ ಯೋಗಕ್ಷೇಮವನ್ನು ನೋಡಿಕೊಂಡು ಅವರಿಗೆ ಎಲ್ಲಾ ರೀತಿಯಿಂದ ಸಹಾಯ ಮಾಡತಕ್ಕಂಥ ಕೆಲಸವನ್ನು ಈ ಮಿಶನರಿಯಿಂದ ಮಾಡಿದಕ್ಕಾಗಿ, ಇವರನ್ನು ವಿಶ್ವಮಾನವ ಎಂದು ಮಾನ್ಯ ಜೆ.ಹೆಚ್.ಪಟೇಲರು ಏನು ಹೇಳಿದರು ಅದೇ ರೀತಿ ವಿಶ್ವಮಾನವರಾಗಿ ಇಂಥ ಕೆಲವೇ ಜನರು ಇರುತ್ತಾರೆ. ಅದಕ್ಕೆ ನಾನು ಸಂಪೂರ್ಣವಾಗಿ ಈ ಸಂತಾಪ

ಸೂಚನೆಗೆ ಬೆಂಬಲ ಸೂಚಿಸುತ್ತ ಅಂಥ ಒಂದು ದಾರಿಯಲ್ಲಿ ನಮ್ಮಿಂದ ನಡೆಯುವುದಕ್ಕೆ ಆಗದಿದ್ದರೂ ಕೂಡ ಅವರು ಹಾಕಿಕೊಟ್ಟಂಥ ಮಾರ್ಗ ಮತ್ತು ಆದರ್ಶಗಳನ್ನು ನೆನಪಿನಲ್ಲಿಟ್ಟುಕೊಂಡು ನಡೆಯತಕ್ಕಂಥ ಕೆಲಸವನ್ನು ಮಾಡೋಣವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ತಾವು ತಂದಿರುವಂಥ ಸಂತಾಪಸೂಚಕ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸುತ್ತಾ, ಸಭಾನಾಯಕರು ಮತ್ತು ಪ್ರತಿಪಕ್ಷದ ನಾಯಕರು ಹೇಳಿದ ಮಾತಿಗೆ ನಾನು ಧ್ವನಿಗೂಡಿಸುತ್ತಾ, ಜಗತ್ತಿನಲ್ಲಿಯೇ ಅತ್ಯಂತ ಅಪರೂಪವಾದ ಕರುಣಾಮಯಿ ಮದರ್ ಥೆರೇಸ ಅವರನ್ನು ನಾವು ಕಳೆದುಕೊಂಡಿದ್ದು ಮಾತ್ರ ಅಲ್ಲ, ಪ್ರಪಂಚದ ಎಲ್ಲಾ ಜನತೆಯು ಒಂದು ರೀತಿ ಅವರನ್ನು ಕಳೆದುಕೊಂಡು ತಬ್ಬಲಿ ಆಗಿದ್ದಾರೆ. 50 ವರ್ಷಗಳ ಹಿಂದೆ ಭಾರತಕ್ಕೆ ಬಂದು ಕ್ಯಾಥೋಲಿಕ್ ಸನ್ಯಾಸಿನಿ ಮದರ್ ಥೆರೇಸಾ ಅವರು ತಮ್ಮ ಕೊನೆಯ ಉಸಿರು ಇರುವವರೆಗೆ ಅವರು ನಿರಂತರವಾಗಿ ತಮ್ಮನ್ನೇ ತಾವು ತೊಡಗಿಸಿಕೊಂಡು ಬಡವರ, ದರಿದ್ರರ, ರೋಗಿಷ್ಠರ, ಯಾರಿಗೂ ಬೇಡವಾದವರ ಬದುಕನ್ನು ಹಸನುಗೊಳಿಸುವಂಥ ಕಾರ್ಯದಲ್ಲಿ, ದಿಕ್ಕಿಲ್ಲದಂಥ ಜನತೆಗೆ ಒಬ್ಬ ಕರುಣಾಮಯಿ ತಾಯಿಯಾಗಿ ಅವರು ನಿರಂತರ ಸೇವೆಯನ್ನು ಮಾಡಿದ್ದಾರೆ. ಅನುಕಂಪ ಹಾಗೂ ಸೇವಾ ಮನೋಭಾವನೆಯನ್ನು ಬಿತ್ತಿರುವುದೇ ಮದರ್ ಥೆರೇಸಾ ಅವರು, ಮಾನವ ಸಮುದಾಯಕ್ಕೆ ನೀಡಿದಂಥ ಅನನ್ಯ ಕೊಡುಗೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಭಾರತದಲ್ಲಿ ಅವರ ಕಾರ್ಯಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು 50 ವರ್ಷಗಳ ಹಿಂದೆ ಭಾರತಕ್ಕೆ ಬಂದಂಥವರು, ಕೊನೆಯ ಉಸಿರು ಇರುವ ವರೆಗೆ ಇಲ್ಲಿಯೇ ಇದ್ದು ಅವರು ಸೇವೆಯನ್ನು ಮಾಡಿರುವಂಥದ್ದು ನಿಜಕ್ಕೂ ಸಹ ನಮ್ಮ ದೇಶದ ಜನ ಪುಣ್ಯಶಾಲಿಗಳೆಂದು ನಾನು ತಿಳಿದುಕೊಂಡಿದ್ದೇನೆ. ಭಾರತದಲ್ಲಿ ಅವರು ಈ ಅನಾಥರಿಗಾಗಿ ಕಟ್ಟಿದಂಥ ಸಂಸ್ಥೆಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವಂಥ ಕಾರ್ಯವನ್ನು ನಾವು ಮಾಡಿದರೆ ಅದು ನಾವು ಅವರಿಗೆ ನಿಜವಾಗಿ ಶ್ರದ್ಧಾಂಜಲಿ ಅರ್ಪಿಸಿದಂತಾಗುತ್ತದೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಅನೇಕ ಜನ ಮಹಾಪುರುಷರು ನಮ್ಮ ಕಣ್ಣಮುಂದೆಯೇ ಹುಟ್ಟುತ್ತಾರೆ, ಗಂಧದ ಕೊರಡಿನಂತೆ ತಮ್ಮ ಜೀವನವನ್ನು ಸವೆದು ಸೇವೆಯನ್ನು ಮಾಡುತ್ತಾರೆ. ಆದರೆ ಆ ದಿಕ್ಕಿನಲ್ಲಿ ಪ್ರಾಮಾಣಿಕ ಹೆಜ್ಜೆಯನ್ನು ಇಡಬೇಕಾದಂಥ ನಾವುಗಳು ಅಂದರೆ ಅದು ಸರ್ಕಾರ ಇರಬಹುದು ಅಥವಾ ಚುನಾಯಿತ ಪ್ರತಿನಿಧಿಗಳು ಇರಬಹುದು, ಅದು ಒಂದು ಪ್ರತಿಮೆ ಮಾಡಿ ಅವರಿಗೆ ಧೂಪ ಹಚ್ಚಿ ಮಂಗಳಾರತಿ ಮಾಡಿ, ಗಂಧದ ಕಡ್ಡಿ ಹಚ್ಚಿ ನಾವು ನಮ್ಮ ಕರ್ತವ್ಯವನ್ನು ಮುಗಿಸಿದ್ದೇವೆ. ಏಕೆಂದರೆ ಅದು ಕಷ್ಟದ ಕಾರ್ಯವೆಂದು ಹೇಳಿ ಅದರಿಂದ ಹಿಂದೆ ಸರಿಯುವಂಥ ಪ್ರಯತ್ನವನ್ನು ಅನೇಕ ಸಲ ಮಾಡಿದ್ದೇವೆ. ಆದರೆ ನಿಜವಾಗಿ ಇಂಥ ಮಹಾತಾಯಿ ಮಾಡಿದಂಥ ಸೇವೆ ಏನು ಇದೆ, ನಮಗೆ ನಾವು

ವಂಚಿಸಿಕೊಳ್ಳದೆಯೇ ಆ ದಿಕ್ಕಿನಲ್ಲಿ ಹೆಜ್ಜೆಯನ್ನು ಇಡುವಂಥ ಒಂದು ಪ್ರಾಮಾಣಿಕ ಪ್ರಯತ್ನ ಮಾಡಿದರೆ, ಅದೇ ನಿಜವಾಗಿಯೂ ನಾವು ಅವರಿಗೆ ಅರ್ಪಿಸುವ ಶ್ರದ್ಧಾಂಜಲಿ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಮದರ್ ಥೆರೇಸಾ ಅವರ ಅಂತ್ಯಕ್ರಿಯೆ ದಿವಸ ನಮ್ಮ ರಾಜ್ಯದಿಂದ ಒಬ್ಬ ಪ್ರತಿನಿಧಿಯನ್ನು ನಮ್ಮ ರಾಜ್ಯದ ಜನರ ಪರವಾಗಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವುದಕ್ಕೆ ಕಳುಹಿಸಿಕೊಡಲು ಸರ್ಕಾರ ಈಗಾಗಲೇ ಒಪ್ಪಿಕೊಂಡಿದೆ. ಅದು ತುಂಬಾ ಒಳ್ಳೆಯ ಕೆಲಸ, ಅದನ್ನು ತಾವು ಮಾಡಬೇಕೆಂದು ಹೇಳಿ, ಅವರ ಆತ್ಮಕ್ಕೆ ಶಾಂತಿ ಕೋರುವ ಅಗತ್ಯ ಇಲ್ಲ. ಆ ಮಾತನ್ನು ನಾನು ಹೇಳಿದರೆ ಬಹಳ ಅಲ್ಪನಾಗುತ್ತೇನೆ. ಇಡೀ ಜಗತ್ತಿಗೆ ಬಹಳ ದೊಡ್ಡ ಆದರ್ಶ ವ್ಯಕ್ತಿಯಾಗಿ ತನ್ನ ಜೀವನ ಸಾಗಿಸಿದಂಥವರು, ಅವರು ಹೋದಂಥ ದಾರಿಯಲ್ಲಿ ನಾವು 10 ಹೆಜ್ಜೆ ಇಟ್ಟು ನಡೆದರೆ ಅದು ನಿಜವಾದಂಥ ಶ್ರದ್ಧಾಂಜಲಿ ಎಂದು ಭಾವಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ): ಮಾನ್ಯ ಅಧ್ಯಕ್ಷರೆ, ಮದರ್ ಥೆರೇಸಾ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲು ತಂದಿರತಕ್ಕಂಥ ನಿರ್ಣಯವನ್ನು ನಾನು ಬೆಂಬಲಿಸುತ್ತೇನೆ. ಈ ಮಹಾತ್ಮರ ಸಾಲಿಗೆ ಅನೇಕರು ಬಂದುಹೋಗಿದ್ದಾರೆ. ಮದರ್ ಥೆರೇಸಾ ಅವರು ಮಾಡಿದಂಥ ಕೆಲಸಕಾರ್ಯ ಆ ಮಹಾತ್ಮರ ಪಂಕ್ತಿಗೆ ಸೇರತಕ್ಕಂಥ, ಮಹತ್ತರ ವ್ಯಕ್ತಿತ್ವವನ್ನು ಪಡೆದಿರತಕ್ಕಂಥವರು ಆಗಿದ್ದಾರೆ. ಮಹಾಪುರುಷರು, ಮಹಾತ್ಮರು ಮತ್ತು ದೈವತ್ವ, ನಾವು ಮದರ್ ಥೆರೇಸಾ ಅವರನ್ನು ಮಾನವರಾಗಿ ಕಂಡರೂ, ಅವರು ಮಾಡಿರತಕ್ಕಂಥ ತ್ಯಾಗ, ಅವರು ಮಾಡಿರತಕ್ಕಂಥ ಸೇವೆಯನ್ನು ನೋಡಿದಾಗ ಅವರನ್ನು ದೈವಸಂಭೂತರಾಗಿ ನಾವು ಕಾಣಬಹುದು. ಅವರು ಮನುಷ್ಯ ಸ್ವರೂಪಿಯಾಗಿದ್ದರೂ ಸಹ ಅವರು ಅನಾಥರಿಗೆ ದೈವ ಸಮಾನವರು. ಆ ದೃಷ್ಟಿಯಲ್ಲಿ ನೋಡಿದಾಗ ಅವರು ಬಹಳ ಎತ್ತರಕ್ಕೆ ಬೆಳೆದಂಥವರಾಗಿದ್ದಾರೆ. ಈ ಯುಗದಲ್ಲಿ ಅನೇಕ ಜನ ಯುಗಪುರುಷರು ಬರುತ್ತಾರೆ, ಅಂಥವರಲ್ಲಿ ಮದರ್ ಥೆರೇಸಾ ಅವರು ಕೂಡ ಈ ಸಾಲಿಗೆ ಸೇರತಕ್ಕಂಥ ವ್ಯಕ್ತಿ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕುಷ್ಠರೋಗ ಎನ್ನುವ ಪದವನ್ನು ಕೇಳಿದರೆಯೇ ನಾವು ಬಹಳ ಹಿಂದೆ ಸರಿಯುತ್ತೇವೆ. ಆ ಜನರನ್ನು ತಬ್ಬಿ, ಅವರ ಜೊತೆಯಲ್ಲಿ ಸೇರಿ, ಅವರ ಪರಿಸ್ಥಿತಿಯನ್ನು ಅರಿವು ಮಾಡಿಕೊಂಡು ನಿರಂತರವಾಗಿ ಹೋರಾಟ ಮಾಡಿದಂಥ ಆ ತ್ಯಾಗಮಯಿ ಬಗ್ಗೆ ಹೇಳುವುದಾದರೆ, ಅವರ ನಿಧನ ನಮಗೆ ತುಂಬಲಾರದ ನಷ್ಟ ಎಂದು ನನಗನ್ನಿಸುತ್ತದೆ. ಮತ್ತು ಅವರ ಸ್ಥಾನಕ್ಕೆ ಮತ್ತೊಬ್ಬರು ಇಲ್ಲ ಎನ್ನತಕ್ಕಂಥ ಪರಿಸ್ಥಿತಿ, ಆ ಭಾವನೆ ನನಗೆ ಬರುತ್ತಿದೆ. ಆ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ರೀತಿಯಲ್ಲಿ ಪರ್ವತಗಳು ಹುಟ್ಟುತ್ತವೆ, ಮತ್ತೊಂದು ಕಡೆ ಪರ್ವತಗಳು ಬೆಳೆಯುತ್ತವೆ ಅಂತ ನಿಜ. ಹುಟ್ಟು ಮತ್ತು ಸಾವು ಇದು ಇದ್ದೇ ಇರುತ್ತದೆ. ಆದ್ದರಿಂದ ನಾವು ಅದನ್ನು ನಂಬುತ್ತೇವೋ ಅಥವಾ ಇಲ್ಲವೋ ಅದು ಗೊತ್ತಿಲ್ಲ. ಅಥವಾ ಸತ್ತ ನಂತರ ಬೇರೆ ಯಾವುದೋ ಜನ್ಮದಲ್ಲಿ ಹುಟ್ಟುತ್ತಾರೆ ಎನ್ನುವಂಥ ಮಾತನ್ನು ಅನೇಕರು ಹೇಳುತ್ತಾರೆ.

ಅದು ಮದರ್ ಥೆರೇಸಾ ಅವರಿಗೆ ಅನ್ವಯಿಸುತ್ತದೆ ಎನ್ನುವಂಥದ್ದನ್ನು ಅವರ ಮಾತಿನಲ್ಲಿ ಗಮನಿಸುತ್ತೇನೆ. ನಮ್ಮ ದೇಶದಲ್ಲಿ ಮತ್ತೊಮ್ಮೆ ಮದರ್ ಥೆರೇಸಾ ಅವರು ಹುಟ್ಟಲಿ ಮತ್ತೊಮ್ಮೆ ಅವರ ಸೇವೆ ಈ ನಾಡಿನ ಜನರಿಗೆ ದೊರೆಯಲಿ ಎಂದು ಹೇಳಿ ತಮ್ಮ ಶ್ರದ್ಧಾಂಜಲಿಯನ್ನು ನಾನು ಬೆಂಬಲ ವ್ಯಕ್ತಪಡಿಸುತ್ತೇನೆ.

+ ಶ್ರೀ ಬಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಇವತ್ತು ಈ ದೇಶದ ಹಾಗೂ ಜಗತ್ತಿನ ಅನಾಥರ ತಾಯಿ ಇಲ್ಲದಂತಾಗಿದೆ. ಯಾವುದೇ ರೀತಿಯಾದಂಥ ಸ್ವಾರ್ಥದ ವಾಸನೆಯು ಇಲ್ಲದೇ ಇರತಕ್ಕಂಥ ರೀತಿಯಲ್ಲಿ ಸೇವೆಯನ್ನು ಮಾಡಿರತಕ್ಕಂಥವರು ಆಗಿದ್ದಾರೆ. ಇಡೀ ಜಗತ್ತೇ ಇವತ್ತು ಅವರಿಗೆ ಕಂಬನಿ ಸುರಿಸುತ್ತಿದೆ. ಮದರ್ ಥೆರೇಸಾ ಅವರ ವ್ಯಕ್ತಿತ್ವದ ಬಗ್ಗೆ ಒಂದು ನಿದರ್ಶನವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರಿಗೆ ಹಲವಾರು ಪ್ರಶಸ್ತಿ ಬಂದಿದೆ. 1980ರಲ್ಲಿ ನೊಬೆಲ್ ಪ್ರಶಸ್ತಿಯನ್ನು ಅನೌನ್ಸ್ ಮಾಡಿದಾಗ ಆ ಕಮಿಟಿಗೆ ಅವರು ಒಂದು ಪತ್ರ ಬರೆಯುತ್ತಾರೆ. ಅದೇನೆಂದರೆ-'ನಾನು ಅನಾಥರ ಪರವಾಗಿ, ಬಡವರ ಪರವಾಗಿ ಈ ಪ್ರಶಸ್ತಿಯನ್ನು ಸ್ವೀಕಾರ ಮಾಡುತ್ತೇನೆ, ನನ್ನ ಪರವಾಗಿ ನಾನು ಈ ಪ್ರಶಸ್ತಿಯನ್ನು ಸ್ವೀಕಾರ ಮಾಡುವುದಿಲ್ಲ, ಅದಕ್ಕೆ ತಾವು ಒಪ್ಪಿದರೆ ಮಾತ್ರ ನಾನು ಪ್ರಶಸ್ತಿಯನ್ನು ತೆಗೆದುಕೊಳ್ಳುತ್ತೇನೆ. ಎಂದು ಮದರ್ ಥೆರೇಸಾ ಅವರು ಪತ್ರವನ್ನು ಬರೆಯುತ್ತಾರೆ. ಅದು ಅವರ ಇಡೀ ವ್ಯಕ್ತಿತ್ವ ಹೇಗಿತ್ತು ಎನ್ನುವಂಥದ್ದನ್ನು ಸ್ಪಷ್ಟಪಡಿಸುತ್ತದೆ. ಅಂಥ ಒಬ್ಬ ಮಹಾನ್ ವ್ಯಕ್ತಿಗೆ ಜಗತ್ತಿನ ಮೂಲೆ ಮೂಲೆಗಳಲ್ಲಿ ಕಂಬನಿ ಸುರಿಸತಕ್ಕಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಅಂಥ ವ್ಯಕ್ತಿಗಳು ಮಾನವ ಜೀವನದಲ್ಲಿ ಹುಟ್ಟುವುದೇ ಬಹಳ ಅಪರೂಪವಾಗಿದೆ. ಅಂಥ ಅನಾಥರ ತಾಯಿಗೆ ಶ್ರದ್ಧಾಂಜಲಿ ಅರ್ಪಿಸತಕ್ಕಂಥದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಆದ್ದರಿಂದ ತಾವು ತಂದಿರತಕ್ಕಂಥ ಈ ನಿರ್ಣಯವನ್ನು ಸಂಪೂರ್ಣವಾಗಿ ಬೆಂಬಲಿಸಿ ಮದರ್ ಥೆರೇಸಾ ಅವರಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

12.00 ಪಿ.ಎಂ

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ ಕ್ಷೇತ್ರ): ಸನ್ಮಾನ್ಯ ಸಭಾಧ್ಯಕ್ಷರೇ, ತಾವು ತಂದಿರತಕ್ಕಂತಹ ಶೋಕ ಸಂದೇಶವನ್ನು ಗೌರವಿಸುತ್ತಾ, ಅವರನ್ನು ನೆನಪು ಮಾಡಿಕೊಳ್ಳುವುದರ ಮೂಲಕ ಅವರ ಕನಿಷ್ಟ ಗುಣಗಳು ನಮ್ಮಲ್ಲಿ ಬೆಳೆಯಬೇಕೆಂದು ಎಂಬ ಯೋಚನೆಯನ್ನು ಮಾಡಿಕೊಂಡು, 18ನೇ ವಯಸ್ಸಿನಲ್ಲಿ ತಂದೆ ತಾಯಿಗಳು ಹೊರಗಡೆ ಹೋಗುವುದಕ್ಕೆ ತಡೆದರೂ ಸಹ ಮೂರು ಸೀರೆಯನ್ನು ಮನೆಯಿಂದ ತೆಗೆದುಕೊಂಡು ಕಲ್ಕತ್ತಾದ ಶೆಡ್‌ಗೆ ಬಂದು, ನಾವು ಯಾರನ್ನು ಕಂಡರೆ ದೂರ ಹೋಗುತ್ತೇವೆ, ಉದಾಹರಣೆಗೆ ಯಾವುದಾದರೂ ಕುಷ್ಟ ರೋಗಿಗಳು ಬೀದಿಯಲ್ಲಿ ಭಿಕ್ಷೆಯನ್ನು ಬೇಡುತ್ತಿದ್ದರೆ ನಾವೇ ಅಸಹ್ಯ ಪಡುತ್ತೇವೆ. ಯಾರನ್ನು ಕಂಡರೆ ಮನುಷ್ಯರು

ಅಸಹ್ಯ ಪಡುತ್ತೇವೆ ಅಂತಹ ಕೀವು, ರಕ್ತ ಸ್ರಾವ ಆಗುತ್ತಿರತಕ್ಕಂತಹ, ಏಕೆಂದರೆ ನಾನು ಒಂದೆರಡು ಆಸ್ಪತ್ರೆಗಳಲ್ಲಿ ನೋಡಿದ್ದೇನೆ. ಕುಷ್ಟ ರೋಗಿಗಳು ಎಷ್ಟು ಮಾನಸಿಕ ರೋಗಿಗಳಾಗಿರುತ್ತಾರೆಂದರೆ, ನಾವು ಈ ಪ್ರಪಂಚದಲ್ಲಿ ಅತ್ಯಂತ ಕೀಳುಮಟ್ಟಕ್ಕೆ ಸೇರಿರತಕ್ಕಂತಹ ಜನ ಎನ್ನುವಂತಹ ಭಾವನೆ ಇರತಕ್ಕಂತಹ ಜನರ ಸೇವೆಯನ್ನು ಮಾಡಿ, ಆಕೆ ಒಂದು ಮಾತನ್ನು ಹೇಳುತ್ತಾರೆ. ''ಸೇವೆಯೇ ನನ್ನ ಧರ್ಮ, ಸೇವೆಯೇ ನನ್ನ ದೇವರು, ಸೇವೆಯೇ ನನ್ನ ಬದುಕು'' ಸೇವೆಯ ಮೂಲಕ ಇಡೀ ವಿಶ್ವದ ಎಲ್ಲಾ ಮಾನವರ ಮನಸ್ಸನ್ನೂ ಸೆಳೆದಂತಹ ಒಂದು ವಿಚಾರ ಸೇವೆಯಲ್ಲಿ ಏನಿದೆ ಎಂದು ಅವರು ತಿಳಿಸಿದರು. ಆಕೆಯು ಸಹ ಇದ್ದಂತಹ ಕಲ್ಕತ್ತಾದಲ್ಲಿ ಧರ್ಮದ ದೇವತೆ ಎಂದು ಭಾವಿಸಿದ್ದರು. ಇಡೀ ವಿಶ್ವಕ್ಕೆ ಮಾರ್ಗದರ್ಶನ ಮಾಡಿದಂತಹ ಧೀಮಂತ ಮಹಿಳೆ. ಕನಿಷ್ಟ ಇದರ ಮೂಲಕ ನಾವು ಏನು ಕಲಿತುಕೊಳ್ಳಬಹುದೆಂದರೆ, ಏನ್ನನ್ನು ನಮ್ಮ ಕೈಯಲ್ಲಿ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಆಗದೇ ಇದ್ದರೂ ಕನಿಷ್ಟ ಕೆಟ್ಟ ಕೆಲಸವನ್ನು ಮಾಡದೇ ಇರತಕ್ಕಂತಹ ಮನಸ್ಸನ್ನಾದರೂ ಬೆಳೆಸಿಕೊಳ್ಳುವಂತಹ ಒಂದು ತೀರ್ಮಾನಕ್ಕೆ ಬಂದರೆ ಏನು ಅವರನ್ನು ನೆನಪು ಮಾಡಿಕೊಂಡಿದ್ದಕ್ಕೂ ಅವರ ಆತ್ಮಕ್ಕೆ ಶಾಂತಿಯನ್ನು ಕೋರತಕ್ಕಂತಹ, ಅವರ ಆತ್ಮ, ಯಾವಾಗಲೂ ಅವರ ಗುಣಗಳು ಸದಾ ಸಮಾಜದಲ್ಲಿ ನಮಗೆ ಮಾರ್ಗದರ್ಶನವನ್ನು ಮಾಡತಕ್ಕಂತಹ ಜೀವಂತವಾಗಿ ಉಳಿದುಕೊಳ್ಳುವಂತಹ ವಿಚಾರವಾಗುತ್ತದೆಂದು ಹೇಳುತ್ತಾ, ಆ ಶೋಕ ಸಂದೇಶವನ್ನು ಗೌರವಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಮುನಿಯಪ್ಪ (ಗಾಂಧಿ ನಗರ): ಮಾನ್ಯ ಅಧ್ಯಕ್ಷರೇ, ಮದರ್ ಥೆರೇಸಾರವರ ಬಗ್ಗೆ ತಾವು ತಂದಿರತಕ್ಕಂತಹ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ ಮದರ್‌ರವರು ಅವರ ಜೀವನದಲ್ಲಿ ಪ್ರಪ್ರಥಮ ಬಾರಿಗೆ ಕಲ್ಕತ್ತಾ ನಗರಕ್ಕೆ ಬಂದಂತಹ ಸಂದರ್ಭದಲ್ಲಿ ಸ್ಥಳೀಯವಾಗಿ ಅಲ್ಲಿಯ ಜನರು ಎಷ್ಟೇ ತೊಂದರೆಯನ್ನು ಕೊಟ್ಟರೂ ಸಹಿತ ಆ ತೊಂದರೆಗಳನ್ನೆಲ್ಲ ಅನುಭವಿಸಿ, ಅವರು ಪ್ರಮುಖವಾಗಿ ಈ ಕುಷ್ಟರೋಗದ ಬಗ್ಗೆ ಆಸಕ್ತಿಯನ್ನು ವಹಿಸಿದ್ದರು. ನಮ್ಮ ಸಮಾಜದಲ್ಲಿ ಮನೆಯಲ್ಲಿರುವವರಿಗೆ ಯಾರಿಗಾದರೂ ಕುಷ್ಟರೋಗ ಬಂದರೆ ನಾವು ಅಸಹ್ಯವನ್ನು ಪಟ್ಟುಕೊಂಡು ಅವರನ್ನು ಆಸ್ಪತ್ರೆಗೆ ಸೇರಿಸಿ ಅವರಿಗೆ ಹಣವನ್ನು ಖರ್ಚು ಮಾಡುವುದಕ್ಕೆ ಪ್ರೀತಿಯನ್ನು ತೋರಿಸುತ್ತೇಯೇ ವಿನಃ ನಮ್ಮ ಕುಟುಂಬದಲ್ಲಿ ಈ ರೋಗ ಬಂದವರನ್ನು ಸಹ ದೂರ ಇರಿಸುತ್ತೇವೆ. ಮದರ್ ಥೆರೇಸಾರವರು ನೊಂದು ಬೆಂದವರ ಹೃದಯದ ನೋವನ್ನು ತಮ್ಮ ಹೃದಯದ ದೇಗುಲಕ್ಕೆ ತುಂಬಿಕೊಂಡು ಅಳುತ್ತಾ ಬರುವವರನ್ನು, ಅವರ ನೋವನ್ನು ಹೃದಯದಲ್ಲಿರತಕ್ಕಂತಹ ಸಂತೋಷವನ್ನು ಅವರ ಹೃದಯಕ್ಕೆ ತುಂಬಿ, ಅಳುತ್ತಾ ಬರುವವರನ್ನು ನಗು ನಗಿಸಿ ಕಳುಹಿಸುತ್ತಿದ್ದರು. ಪ್ರಪಂಚದ ಇತಿಹಾಸದ ಪುಟಗಳಲ್ಲಿ ಅನುಕಂಪ, ತ್ಯಾಗ, ನಿಸ್ವಾರ್ಥ ಮತ್ತು ಪ್ರೀತಿಯ ಮಮತೆಯನ್ನು ಬೇರೊಬ್ಬರು ತೋರಿಸುವುದಕ್ಕೆ ಸಾಧ್ಯವಿಲ್ಲ. ಆದರೂ ಸಹ ಅವರು ಅಷ್ಟೊಂದು

ತೋರಿಸಿ ನಮ್ಮಿಂದ ಕಣ್ಮರೆಯಾಗಿದ್ದಾರೆ. ನಾವು ಅವರಿಗೆ ಸಲ್ಲಿಸುವಂತಹ ಶ್ರದ್ಧಾಂಜಲಿ ಅವರು ಬಿಟ್ಟು ಹೋಗಿರತಕ್ಕಂತಹ ಕೆಲಸದಲ್ಲಿ ಲಕ್ಷದಲ್ಲಿ ಒಂದು ಪಾಲಾದರೂ ನಾವು ಮಾಡಿದರೆ ನಾವು ಸಲ್ಲಿಸುವಂತಹ ಶ್ರದ್ಧಾಂಜಲಿಯಾಗುತ್ತದೆ ಎನ್ನುವುದನ್ನು ವ್ಯಕ್ತಪಡಿಸಿ ತಾವು ತಂದಿರತಕ್ಕಂತಹ ಸಂತಾಪ ಸೂಚಕ ನಿರ್ಣಯಕ್ಕೆ ನಾನು ಕೂಡ ಬೆಂಬಲವನ್ನು ಸೂಚಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ SRI J.A.FERNANDES (Nominated): Hon'ble Speaker Sir, the passing away of Mother Teressa removes from our midst one of the most colorful personality the world has ever known. It is a loss not only for our country but for the entire world and it is significant that she attained a high degree of reputation and appreciation by the service she rendered to the least fortunate among the people in this country of her adoption. For the last 40 years, she has spent her life, more or less, as she was described as the "Princess of Gutters", she was royalty in a true sense of the word. A Queen of compassion, a Queen of understanding and a Queen who reached out to the millions of the slum-dwellers, the weights and strains, the marginal lives, the downtrodden, the aged, the leppers and the depressed. There was no community that she did not touch. To her, it made no difference whether one was a Dalit or one from higher branches of our society. She treated everbody alike. The Awards which she received, the Bharat Ratna and the Nobel Prize while being no doubt the country and the world's recognition of her services is hardly enough to describe the warmth of her personality and the dedication that marked her services to humanity. I think she will be remembered by all of us for many years to come and I can only add to what other speakers have said that this is how she will be wel-comed in heaven with these words-"Come thy good and faithfull servant enter into the Kingdom of Heaven". As she

leaved behind a legacy, one can only hope and pray that the Sisters of Charity which she established will be able to perform some of the duties that she did with as much dedication and concern for the less fortunate among our people. I wish and also add, if I may, that there is a memorial service being conducted tomorrow evening at 5 O'clock at the St.Josephs Indian High School ground by His Grace the Archbishop of Bangalore and I thank you for being able to distribute this among our hon. Members with a request to all of you to please attend the service and pay our tributes and remember the Mother, who has been a Mother to everyone of us. May Her soul rest in peace.

+ ಶ್ರೀಮತಿ ಜಿ.ಟಿ.ಲಲಿತಾ ನಾಯಕ್ (ದೇವದುರ್ಗ): ಮಾನ್ಯ ಅಧ್ಯಕ್ಷರೇ, ಮದರ್ ಥೆರೇಸಾ ಅವರ ಸಂತಾಪ ಸೂಚಕ ನಿರ್ಣಯವನ್ನು ನಾನೂ ಕೂಡ ಬೆಂಬಲಿಸುತ್ತಾ ಇವತ್ತಿನ ದಿವಸ ಅವರ ಒಂದು ಶ್ರದ್ಧಾಂಜಲಿಯನ್ನು ಈ ಮೂಲಕ ಅರ್ಪಿಸುತ್ತಿದ್ದೇನೆ. ಇಡೀ ಜಗತ್ತಿನ ಜನ ಕೊಂಡಾಡುವಂತಹ ಮಹಿಳೆ ಬಹುಶಃ ಇವರೇ ಪ್ರಥಮವೆಂದು ನಾನು ಭಾವಿಸುತ್ತಿದ್ದೇನೆ. ಏಕೆಂದರೆ ಒಂದು ಊರು, ಒಂದು ನಾಡು, ಒಂದು ದೇಶ, ಒಂದು ರಾಷ್ಟ್ರ ಇದಕ್ಕಿಂತಲೂ ಮಿಗಿಲಾದಂತಹ ಒಬ್ಬ ವ್ಯಕ್ತಿಯನ್ನು ನೆನಪಿಸಿಕೊಳ್ಳುವಂತಹ ಒಂದು ವ್ಯಕ್ತಿತ್ವವನ್ನು ಬೆಳೆಸಿಕೊಂಡಂತಹ ಯುಗ ಮಹಿಳೆ ಈ ಮದರ್ ಥೆರೇಸಾ ರವರೇ ಹೊರತು ಬೇರೆ ಯಾರೂ ಇಲ್ಲ. ಏಕೆಂದರೆ ಕಾಮ, ಕ್ರೋಧ, ಮೋಹ, ಮದಮಾತ್ಸರ್ಯದಿಂದ ತುಂಬಿದಂತಹ ಮಾನವ ಸಮುದಾಯದಲ್ಲಿ ಇವತ್ತು ಇದೆಲ್ಲವನ್ನು ತ್ಯಾಗ ಮಾಡಿ, ಯಾರಿಗೂ ಅಸೂಯೆಯನ್ನು ಪಟ್ಟುಕೊಳ್ಳಲಾರದೇ ತನ್ನನ್ನು ತಾನೇ ಅರ್ಪಣೆಯನ್ನು ಮಾಡಿಕೊಳ್ಳುವಂತಹ ಮದರ್ ಥೆರೇಸಾರವರನ್ನು ಬೇರೆ ಯಾವುದೇ ವ್ಯಕ್ತಿಗಿಂತಲೂ ಮಿಗಿಲು ಎಂದು ನಾವು ಭಾವಿಸಬಹುದಾಗಿದೆ. ಬಹುಶಃ ಹಿಂದೆ ಬಹಳಷ್ಟು ಮಹಿಳೆಯರು ಭಕ್ತ ಮೀರಾ ಇರಬಹುದು, ಬೇರೆ ಬೇರೆ ಮಹಿಳೆಯರು ಬಹಳಷ್ಟು ಜನರು ದೈವದ ಕಡೆಗೆ ಹೋದಂಥವರು ಅವರ ದೈವತ್ವವನ್ನು ಬಿತ್ತಿದಂಥವರು ಎನ್ನುವಂತಹ ಮಾತನ್ನು ನಾವು ಹೇಳುತ್ತಾ ಇರುತ್ತೇವೆ. ಆದರೆ ಯಾವುದೇ ಪವಾಡವೂ ಇಲ್ಲದೇ, ಯಾವ ರೀತಿಯ ಆಡಂಭರವೂ ಇಲ್ಲದೇ, ಯಾವ ಪ್ರಚಾರಕ್ಕೂ ತನ್ನನ್ನು ತಾನು ಒಡ್ಡಿಕೊಳ್ಳದೇ ಕೇವಲ ಮಾನವ ಸಮುದಾಯಕ್ಕಾಗಿ, ಅನಾಥರಿಗಾಗಿ, ದುರ್ಬಲರಿಗಾಗಿ, ರೋಗಿಗಳಿಗಾಗಿ, ಅರ್ಪಣೆಯನ್ನು ಮಾಡಿಕೊಂಡಂತಹ ಇಂತಹ ಈ ಯುಗ ಮಹಿಳೆಯನ್ನು ಯಾವ ರೀತಿಯಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸಬೇಕು, ಯಾವ

ರೀತಿಯಿಂದ ಅಶುತರ್ಪಣ ಕೊಡಬೇಕು ಎನ್ನುವಂಥಾದ್ದು ತಿಳಿಯಲಾರದ ಕೆಳಮಟ್ಟದಲ್ಲಿ ನಾವು ಇದ್ದೇವೆ. ಅವರಲ್ಲಿರುವಂತಹ ಕೆಲವೇ ಕೆಲವು ಆದರ್ಶಗಳಲ್ಲಿ ಕೇವಲ ಒಂದು ಅಂಶವನ್ನು ನಾವು ಮೈಗೂಡಿಸಿಕೊಂಡಿದ್ದೇ ಆದರೆ ಇದೆರಲ್ಲಿ ಪುರಷ, ಸ್ತ್ರೀ ಎನ್ನುವ ಭೇದವೇ ಇಲ್ಲ. ಇವತ್ತು ತಾಯಿ ಥೆರೇಸಾ ಅವರು ಒಬ್ಬ ಹೆಣ್ಣು ಎಂದು ಯಾರಿಗೂ ಸಹ ಅನ್ನಿಸುವುದಿಲ್ಲ. ಅವರು ನಮ್ಮ ರಾಷ್ಟ್ರದವರು, ನಮ್ಮ ದೇಶದವರು ಎನ್ನುವಂತಹ ಒಂದು ಸಣ್ಣ ಸೀಮೆಯನ್ನು ಕೂಡ ಮೀರಿ, ಅಂತಹ ಸಣ್ಣಸಣ್ಣತನದ ಭಾವನೆಯಿಂದ ಕೂಡ ನೋಡಲಾದಂತಹ ಇಡೀ ಜಗತ್ತಿಗೆ ಅವರು ತಾಯಿ ಆಗಿದ್ದಾರೆ ಎನ್ನುವಂತಹ ಮಾತನ್ನು ಇಡೀ ಜಗತ್ತಿನ ಜನ ತಿಳಿಸಿ ಶೋಕ ಸಂತಾಪವನ್ನು ಸೂಚಿಸುತ್ತಿರುವಂತಹ ಒಂದು ದಿವ್ಯ ಅದಮ್ಯ ಚೇತನಕ್ಕೆ ನಾವು ನಮೋ ನಮಃ ಎನ್ನಬೇಕಾಗಿದೆ. ನಾನೂ ಕೂಡ ಈ ನಿರ್ಣಯದಲ್ಲಿ ಭಾಗವಹಿಸಿ ಅವರಿಗೆ ನನ್ನ ಹಾರ್ಧಿಕವಾದಂತಹ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ. ಮತ್ತು ಈ ಸಂದರ್ಭದಲ್ಲಿ ಅವರಲ್ಲಿರತಕ್ಕಂತಹ ಆದರ್ಶ ತತ್ವಗಳಲ್ಲಿ ಕೆಲಸವನ್ನಾದರೂ ನಾವು ಮೈಗೂಡಿಸಿಕೊಳ್ಳಬೇಕು ಎನ್ನುವಂತಹ ಆಶಯವನ್ನು ನಾನು ವ್ಯಕ್ತಪಡಿಸುತ್ತೇನೆ. ನಮಸ್ಕಾರಗಳು.

+ ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಪ್ರಪಂಚದಲ್ಲಿ ಎಲ್ಲವನ್ನು ದೊರಕಿಸಬಹುದೆಂದು ಹೇಳತಕ್ಕದ್ದು ಕೇಳಿದ್ದೇವೆ. ಆದರೆ ಮಾತೃವಾತ್ಸಲ್ಯ ಹೃದಯ, ತಾಯಿತನ ದೊರಕಿಸತಕ್ಕದ್ದು ಬಹಳ ವಿರಳವೆಂದು ಹೇಳಿದ ಹಾಗೆ ಸಹಸ್ರ ಸಹಸ್ರ ಅನಾಥ ಮಕ್ಕಳಿಗೆ ಮಾತೃವಾತ್ಸಲ್ಯದ ಅಮೃತಬಿಂದುವನ್ನು ಕರುಣಿಸಿರತಕ್ಕ ಪ್ರಪಂಚದ ಏಕೈಕ ಮಹಾಮಾತೆ ಮದರ್ ಥೆರೇಸಾ ಅಂದರೆ ತಪ್ಪಾಗಲಾರದು. ಬಹುಶಃ ಪರದೇಶದ ಒಬ್ಬ ಹೆಣ್ಣುಮಗಳು ಭಾರತ ದೇಶಕ್ಕೆ ಬಂದು, ಯಾವ ರೋಗಿಗಳನ್ನು ಮನೆಯಲ್ಲಿಡತಕ್ಕಂಥ ರಕ್ತ ಸಂಬಂಧಿಕರು ಹೊರಗಿಡತಕ್ಕ ಒಂದು ಪ್ರಸಂಗದಲ್ಲಿ ದೈವತ್ವವನ್ನು ರೋಗಿಗಳಲ್ಲಿ ಕಂಡಿರತಕ್ಕ ಮಹಾಶಕ್ತಿ, ಮಹಾಚೇತನ ಮದರ್ ಥೆರೇಸಾ ಅವರು. ಕುಷ್ಟ ರೋಗಿಗಳನ್ನು ಮನೆಯಲ್ಲಿ ಮುಚ್ಚಿಡತಕ್ಕದ್ದು, ಹಾಗು ಅವರನ್ನು ನಮ್ಮ ಸಂಬಂಧಿಕರು ಅಲ್ಲವೆಂದು ಹೇಳತಕ್ಕ ಒಂದು ಹೀನ ಮನೋಭಾವನೆ ಭಾರತೀಯರಲ್ಲಿ ಇರತಕ್ಕ ಸಂದರ್ಭದಲ್ಲಿ ಮದರ್ ಥೆರೇಸಾ ಅವರು ಅಂಥ ರೋಗಿಗಳನ್ನು ದೇವರಾಗಿ ಕಂಡು ಅವರ ಸೇವೆ ಮಾಡಿರತಕ್ಕದ್ದು ನಿಜವಾಗಿ ಎಲ್ಲರಿಗೂ ಕಣ್ಣು ತೆರೆಸತಕ್ಕ ಮಹಾಚೇತನ ಅಂದರೆ ತಪ್ಪಾಗಲಾರದು. ಮಾತೃತ್ವವನ್ನು ಪಡೆಯತಕ್ಕ ಶಕ್ತಿ ಎಲ್ಲರಿಗೂ ಬರುವುದಿಲ್ಲ. ಕೆಲವರಿಗೆ ಅದರಲ್ಲೂ ವಿಶೇಷವಾಗಿ ಅನಾಥ ಮಕ್ಕಳಿಗೆ ಮಾತೃ ಹೃದಯವನ್ನು ಕೊಟ್ಟಿರತಕ್ಕ ಪ್ರಪಂಚದ ಏಕೈಕ ಮಹಿಳೆ ಇಂದು ಕಣ್ಮರೆಯಾಗಿದ್ದಾರೆ. ಬಸವಣ್ಣನವರು ಹೇಳಿದ್ದಾರೆ, ಇಲ್ಲಿ ಸಲುವವರು ಅಲ್ಲಿಯೂ ಸಲ್ಲುವರು ಎಂದು. ಈ ಮಾತು ಮದರ್ ಥೆರೇಸಾ ಅವರಿಗೆ ಮಾತ್ರ ಅನ್ವಯವಾಗುತ್ತದೆ. ಅವರು ಅಲ್ಲಿ ಸಲ್ಲಿದ್ದಾರೆ; ಎಲ್ಲೆಲ್ಲಿಯೂ ಸಲ್ಲಿದ್ದಾರೆ. ಅವರ ಹೃದಯ ವಾತ್ಸಲ್ಯ, ಅವರ ತ್ಯಾಗ, ಪ್ರೀತಿ ನಮಗೆಲ್ಲರಿಗೂ ಚೇತನವಾಗಲಿ ಎಂದು ಹೇಳಿ,

ನಾನು ಕೂಡ ಈ ಒಂದು ಸಂತಾಪ ಸೂಚನೆಯಲ್ಲಿ ತಮ್ಮ ಜೊತೆ ಭಾಗಿಯಾಗಿದ್ದೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ,

ಅಧ್ಯಕ್ಷರು: ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನ ಆಚರಿಸಬೇಕೆಂದು ಮಾನ್ಯ ಸದಸ್ಯರಲ್ಲಿ ವಿನಂತಿಸಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಿದರು)

ಈ ಸದನ ಅಂಗೀಕರಿಸಿದ ಸಂಚಾಪ ಸೂಚಕ ನಿರ್ಣಯವನ್ನು ಅವರ ಉತ್ತರಾಧಿಕಾರಿಯಾದ ಸಿಸ್ಟರ್ ನಿರ್ಮಲಾ ಅವರಿಗೆ ಕಳುಹಿಸಿಕೊಡಲಾಗುವುದು.

(2) ವರದಿಯನ್ನೊಪ್ಪಿಸುವುದು

ಶ್ರೀಮತಿ ಎನ್. ಜ್ಯೋತಿರೆಡ್ಡಿ (ಅಧ್ಯಕ್ಷರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ): ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ, ಹಾಗು ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಂದಿಗೋಡು ಸಿಂಡ್ರೋಮ್ ಕಾಯಿಲೆಯಿಂದ ಬಳಲುತ್ತಿರುವ ಹಾಗು ಅವರ ಪುನರ್ ವಸತಿಯ ಬಗೆಗಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 11ನೇ ವಿಶೇಷ ವರದಿಯನ್ನು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ 230ನೇ ನಿಯಮದ ಮೇರೆಗೆ ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನು ಒಪ್ಪಿಸಲಾಯಿತು.

(3) ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ) ಪೆಟ್ರೋಲ್ ಬೆಲೆ ಏರಿಕೆಗೆ ಸಂಬಂಧಪಟ್ಟ ವಿಚಾರ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಪೆಟ್ರೋಲ್ ಬೆಲೆ ಏರಿಕೆಗೆ ಸಂಬಂಧಪಟ್ಟ ಹಾಗೆ ಕೇಂದ್ರ ಸರ್ಕಾರದ ಕಾರ್ಯದರ್ಶಿಗಳ ಮಟ್ಟದಲ್ಲಿ ನಾಳೆ ಒಂದು ಸಭೆ ನಡೆಯುತ್ತಿದೆ. ನಮ್ಮ ಮುಖ್ಯ ಕಾರ್ಯ ದರ್ಶಿಗಳು ಕೂಡ ಕೇಂದ್ರ ಸರ್ಕಾರದ ಕಾರ್ಯದರ್ಶಿಗಳ ಜೊತೆ ಚರ್ಚೆಯಲ್ಲಿ ಭಾಗವಹಿಸಲಿದ್ದಾರೆ. ಈಗ ಇವರು ಬೆಲೆ ಹೆಚ್ಚಳ ಏತಕ್ಕೆ ಎಂದು ನಮ್ಮ ಗಮನಕ್ಕೆ ತಂದಿದ್ದಾರೆ. ನಾಳೆ ಅಲ್ಲಿ ಸಭೆ ನಡೆಯುತ್ತಿದೆ. ಆ ಸಭೆ ನಡೆದಾದ ಮೇಲೆ ನಾವು ನಾಡಿದ್ದು ನಿಮಗೆ ಒಂದು ಹೇಳಿಕೆಯನ್ನು ಮಾಡುವುದಕ್ಕೆ ಇಷ್ಟಪಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಕೇಳಿದ್ದೇನೆಂದರೆ, ಈಗಾಗಲೇ ನಮ್ಮಲ್ಲಿದ್ದ ಸ್ಟಾಕ್ ಹೋಯಿತು; 3 ರೂಪಾಯಿ ಹೆಚ್ಚಿಗೆ ಮಾಡಿಕೊಂಡು. ಏತಕ್ಕೆ ನೀವು 4-5 ದಿವಸ

ಬೇಕೆಂದು ಹೇಳಿದಿರಿ? 3 ದಿನ ರಜೆ ಇತ್ತು. ಅದಕ್ಕೆ 3 ದಿನ ಮುಂಚೆಯೇ ಇಲ್ಲಿ ವಿಷಯವನ್ನು ಪ್ರಸ್ತಾಪ ಮಾಡಲಾಗಿತ್ತು. ಅಂದರೆ ಇಲ್ಲಿಗೆ ಒಂದು ವಾರ ಆಯಿತು. ಇದುವರೆಗೆ ನಿಮಗೆ ಮಾಹಿತಿ ಇಲ್ಲವೆಂದರೆ ಆಶ್ಚರ್ಯವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಅಂಕಿಅಂಶ ತರಿಸಿದ್ದೇನೆ. ಇಡೀ ದೇಶದಲ್ಲಿ ಅತ್ಯಂತ ಹೆಚ್ಚು ದುಬಾರಿ ಬೆಲೆಗೆ ಪೆಟ್ರೋಲ್ ಮಾರತಕ್ಕ ಯಾವುದಾದರೂ ನಗರ ಇದ್ದರೆ ಅದು ಬೆಂಗಳೂರು ಮಹಾನಗರ. ಅವರು ಏರಿಸಿರುವುದಲ್ಲ, ನೀವು ಏನು ಹೆಚ್ಚಿನ ತೆರಿಗೆ ಹಾಕಿದ್ದೀರಿ ಅದು. ಅದಕ್ಕೋಸ್ಕರ ಒಂದು ಕ್ಷಣ ತಡ ಮಾಡಿದರೂ ಸಾಮಾನ್ಯ ಗ್ರಾಹಕ ಅದರ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಬೆಲೆ ಏರಿಕೆ ಆಗಿರುವುದು ದೊಡ್ಡ ಅಪರಾಧ. ಅದಕ್ಕೆ ಏನು ಹೋರಾಟ ಮಾಡಬೇಕು ಅದನ್ನು ಇಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಅದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದಾದ್ದರಿಂದ ಹೊರಗಡೆ ಮಾಡೋಣ. ಆದರೆ ನೀವು ಈಗಾಗಲೇ ಬರೆ ಎಳೆದಿರುವುದರ ಮೇಲೆ ಮತ್ತೊಂದು ಬರೆ ಎಳೆದಿದ್ದೀರಿ. ತಾವು ಅಂಕಿಅಂಶಗಳನ್ನು ತರಿಸಿಕೊಳ್ಳಿ. ಇಡೀ ದೇಶದಲ್ಲಿ ಬೆಂಗಳೂರು ಮಹಾನಗರದಲ್ಲಿ ಹೆಚ್ಚು ಪೆಟ್ರೋಲ್ ದರವನ್ನು ವಸೂಲ್ಮಾಡುತ್ತಿದ್ದಾರೆ, ಈ ಸರ್ಕಾರ ಹೆಚ್ಚು ತೆರಿಗೆ ಹಾಕಿರುವುದರಿಂದ ದಯಮಾಡಿ ಅದನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕು; ಒಂದು ಕ್ಷಣ ಕೂಡ ತಡ ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್: ಇದಕ್ಕೆ ಲಂಗುಲಗಾಮು ಏನೂ ಇಲ್ಲ. ಆ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಏಕೆ ಇಷ್ಟು ನಿಧಾನ ಮಾಡುತ್ತಿದೆ ಎಂದು ಗೊತ್ತಾಗಿಲ್ಲ. ಬಹಳ ಬೇಗ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿ ಏಕೆ ಇಷ್ಟು ತಡ ಮಾಡುತ್ತಿದೆ? ಈಗಾಗಲೇ ಒಂದೊಂದು ಗಂಟೆ ಕಳೆದರೆ ಎಷ್ಟು ನಷ್ಟವಾಗುತ್ತದೆ, ಜನ ಎಷ್ಟು ತೊಂದರೆ ಅನುಭವಿಸುತ್ತಾರೆಂಬುದು ಸರ್ಕಾರದ ಗಮನಕ್ಕೆ ಬರಬೇಕಲ್ಲವೆ?

ಶ್ರೀ ಎಂ.ಸಿ.ನಾಣಯ್ಯ: ಇದನ್ನು ಇಲ್ಲಿ ಮೊನ್ನೆ ಚರ್ಚೆ ಮಾಡಿ ಆದಮೇಲೆ ಕೇಂದ್ರ ಸರ್ಕಾರದ ಪೆಟ್ರೋಲಿಯಂ ಇಲಾಖೆಯ ಕಾರ್ಯದರ್ಶಿಗಳ ಜೊತೆ ಕೂಡ ಚರ್ಚೆ ಮಾಡಿ ನಮ್ಮಲ್ಲಿರತಕ್ಕ ಬೆಲೆ ಏರಿಕೆಗೂ, ಪಕ್ಕದಲ್ಲಿರತಕ್ಕ ಬೆಲೆ ಏರಿಕೆಗೂ ಹೋಲಿಸಿ ಏತಕ್ಕೋಸ್ಕರ ಈ ರೀತಿ ಆಯಿತು ಎಂಬುದರ ಬಗ್ಗೆ ಈಗಾಗಲೇ ಅವರ ಗಮನಕ್ಕೆ ತಂದು ನಾಳೆ 11 ಗಂಟೆಗೆ ದೆಹಲಿಯಲ್ಲಿ ಇದರ ಬಗ್ಗೆ ಒಂದು ಸಭೆ ನಡೆಯುತ್ತಿದೆ. ನಾನು ಅದಕ್ಕೆ ಹೇಳಿದೆ, ಆ ಚರ್ಚೆ ಆದಮೇಲೆ ನಾಡಿದ್ದು ಹೇಳಿಕೆ ಕೊಡುವುದಕ್ಕೆ ಸರ್ಕಾರ ಸನ್ನದ್ಧವಾಗಿದೆ. ಈಗ ಒಂದು ಹೇಳಿಕೆ ಇದೆ, ಅದನ್ನು ಕೊಟ್ಟಮೇಲೆ ನಿಮಗೆ ಸಮಾಧಾನವಾಗುವುದಿಲ್ಲ. ಏತಕ್ಕೋಸ್ಕರ ಈ ರೀತಿ ಆಗಿದೆ ಎಂಬುದರ ಬಗ್ಗೆ ನಾಳೆ ಚರ್ಚೆ ಆದಮೇಲೆ ನಾಡಿದ್ದು ಸದನದಲ್ಲಿ ಸಂಪೂರ್ಣವಾದ ಹೇಳಿಕೆ ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಈಗಾಗಲೇ ಜಾಸ್ತಿ ವಸೂಲ್ಮಾಡಿದ್ದೀರಿ. ನಾಳೆ ಕಡಿಮೆ ಮಾಡಿದಾಗ ಆ ದುಡ್ಡನ್ನು ಹಿಂದಿರುಗಿಸುತ್ತೀರಾ? ಯಾರ್‍ಯಾರು ಈಗಾಗಲೇ ಹೆಚ್ಚು ಬೆಲೆ

ಕೊಟ್ಟು ಪೆಟ್ರೋಲ್ ಕೊಂಡುಕೊಂಡಿದ್ದಾರೆ ಅವರಿಗೆ ಆ ಹಣವನ್ನು ಹಿಂದಿರುಗಿಸುವುದಕ್ಕೆ ಸಾಧ್ಯವೆ? ಇದು ಬಹಳ ಗಹನವಾದ ವಿಚಾರ. ಇದರ ಬಗ್ಗೆ ಗಂಭೀರವಾಗಿ ಯೋಚಿಸಬೇಡವೇ ಮಾನ್ಯ ಸಂಸದೀಯ ಸಚಿವರು.

ಶ್ರೀ ಎಂ.ಸಿ.ನಾಣಯ್ಯ: ನಾವು 3.43 ರೂಪಾಯಿಗೆ ಕೊಡುತ್ತಿದ್ದೇವೆ, ಈ ರಾಜ್ಯದಲ್ಲಿರತಕ್ಕ ಎಲ್ಲರೂ ಕೊಡುತ್ತಿದ್ದಾರೆ. ಯಾವ ಬೆಲೆ ಹೆಚ್ಚಳ ಮಾಡಿದ್ದೇವೆ ಅದು ಕಾನೂನಿಗನುಗುಣವಾಗಿ ಇಲ್ಲದಿದ್ದರೆ, ಅವರು ಮಾಡಿರತಕ್ಕ ಮಾರ್ಗಸೂಚಿಗನುಗುಣವಾಗಿ ಇಲ್ಲದಿದ್ದರೆ ಅವರ ಲೈಸೆನ್ಸ್ ಕ್ಯಾನ್ಸಲ್ ಮಾಡುವುದಕ್ಕೆ ಅಧಿಕಾರ ಇದೆ. ನಾಳೆ ಒಂದು ಸಭೆ ಕೇಂದ್ರದಲ್ಲಿ ನಡೆಯುತ್ತಿದೆ. ಆ ಸಭೆಯಲ್ಲಿ ಮೂಡಿ ಬರತಕ್ಕ ಅಭಿಪ್ರಾಯವನ್ನು ತಿಳಿದುಕೊಂಡು ನಾಡಿದ್ದು ಈ ಸಭೆಯಲ್ಲಿ ಒಂದು ಹೇಳಿಕೆ ಕೊಡುತ್ತೇವೆ. ಅದು ನಮಗೂ ಸಮಾಧಾನವಾಗಬೇಕಾಗುತ್ತದೆ, ನಿಮಗೂ ಸಮಾಧಾನವಾಗಬೇಕಾಗುತ್ತದೆ. ಆ ಒಂದು ಹಿನ್ನೆಲೆಯಲ್ಲಿ ನಾನು ಹೇಳುತ್ತಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಇಡೀ ರಾಜ್ಯದಲ್ಲಿರತಕ್ಕ ಪೆಟ್ರೋಲ್ ಬಂಕ್‌ಗಳ ಲೈಸೆನ್ಸ್ ಅನ್ನು ರದ್ದು ಮಾಡಬೇಕಾಗುತ್ತದೆ.

ಶ್ರೀ ಎಂ.ಸಿ.ನಾಣಯ್ಯ: ಪೆಟ್ರೋಲ್ ಬಂಕ್‌ಗಳ ಲೈಸೆನ್ಸ್ ರದ್ದು ಮಾಡುವ ಅಧಿಕಾರ ನಮ್ಮ ಕೈಯಲ್ಲಿ ಇಲ್ಲ.

ಶ್ರೀ ವಸಂತ ವಿ.ಸಾಲಿಯಾನ: ಈಗಾಗಲೇ ಅವರು ಹೆಚ್ಚು ಬೆಲೆ ವಸೂಲ್ಮಾಡಿದ್ದಾರೆ. ಆದ್ದರಿಂದ ಲೈಸೆನ್ಸ್ ರದ್ದು ಮಾಡುವ ಕೆಲಸ ನಂತರದ್ದು.

ಶ್ರೀ ಎಸ್.ಸುರೇಶ್ ಕುಮಾರ್: ಹೋದ ಸೋಮವಾರ ಈ ಪ್ರಕಟಣೆ ಬಂತು. ನಾನು ಮಂಗಳವಾರ ಸದನದಲ್ಲಿ ಪ್ರಸ್ತಾಪ ಮಾಡಿದೆ. ಆ ದಿನ ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಹಾಜರಿದ್ದರು. ಮತ್ತೆ ನಾನು ಗುರುವಾರ ಪ್ರಸ್ತಾಪ ಮಾಡಿದೆ. ಮಾನ್ಯ ಸಿಂಧ್ಯರವರು ಇದರ ಬಗ್ಗೆ ನಾವು ಹೇಳಿಕೆ ಕೊಡುತ್ತೇವೆಂದು ಹೇಳಿದರು. ಈ ಸಭೆ ಮುಗಿದ ತಕ್ಷಣ ನಾವು ಇದರ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಇವತ್ತು ಸೋಮವಾರ ಒಂದು ವಾರವಾದರೂ ಈ ಸದನದಲ್ಲಿ ಮಾಡಿದ ಪ್ರಸ್ತಾಪಕ್ಕೆ ಉತ್ತರ ಕೊಡದಿದ್ದರೆ ಈ ಸರ್ಕಾರ ಎಷ್ಟು ಗಂಭೀರವಾಗಿ ಇದನ್ನು ತೆಗೆದುಕೊಳ್ಳುತ್ತದೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ಇದನ್ನು ಅವರು ಸ್ಪಷ್ಟ ಮಾಡಬೇಕು. ಕೇಂದ್ರದವರು ಏನು ಪೆಟ್ರೋಲ್ ದರ ಜಾಸ್ತಿ ಮಾಡಿದ್ದಾರೆ ಅದರ ಮೇಲೆ ನಮ್ಮ ರಾಜ್ಯ ಸರ್ಕಾರದವರು ಹೆಚ್ಚಿನ ತೆರಿಗೆ ಹಾಕಿಲ್ಲವೆಂದು ಹೇಳುತ್ತೀರಾ? ಇದನ್ನು ಅವರು ಸ್ಪಷ್ಟ ಮಾಡಲಿ. ನಾನು ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಹೇಳುತ್ತಿದ್ದೇನೆ, ಇಡೀ ನಮ್ಮ ದೇಶದಲ್ಲಿ ಬೇರೆ ಎಲ್ಲಿಯೂ ಇಷ್ಟೊಂದು ದುಬಾರಿ ಬೆಲೆಗೆ ಪೆಟ್ರೋಲ್ ಮಾರಾಟ

ವಾಗುತ್ತಿಲ್ಲ. ಇಲ್ಲಿಗೆ ಒಂದು ವಾರ ಆಯಿತು. ಪೆಟ್ರೋಲ್ ಬಂಕ್‌ನವರ ಮೇಲೆ ಕ್ರಮ ತೆಗೆದುಕೊಳ್ಳುವುದು ಆಮೇಲೆ. ಈಗ ಇದಕ್ಕೆ ನಿಮ್ಮ ಸೂಚನೆಏನು? ಸರ್ಕಾರದಿಂದ ತೆರಿಗೆ ಜಾಸ್ತಿ ಮಾಡಿಲ್ಲವೆ? ನೀವು ಏನೂ ಅದರ ಮೇಲೆ ಸೂಚನೆ ಕೊಟ್ಟಿಲ್ಲವೆ? ಅದನ್ನು ಮೊದಲು ಸ್ಪಷ್ಟ ಮಾಡಿ.

ಶ್ರೀ ಎಂ.ಸಿ.ನಾಣಯ್ಯ: ನಾನು ಆಗಲೇ ಹೇಳಿದೆ, ಇದಕ್ಕೆ ಸಂಬಂಧಪಟ್ಟ ಸಭೆ ನಾಳೆ ದೆಹಲಿಯಲ್ಲಿ ನಡೆಯುತ್ತದೆ. ನಾವು ಬುಧವಾರ ಇದರ ಬಗ್ಗೆ ಸಂಪೂರ್ಣವಾದ ಹೇಳಿಕೆಯನ್ನು ಈ ಸದನಕ್ಕೆ ಕೊಡುತ್ತೇವೆ.

ಶ್ರೀ ಬಿ.ಎಸ್.ಯಡಿಯರೂಪ್ಪ: ಸಭೆಯಲ್ಲಿ ಏನಾದರೂ ತೀರ್ಮಾನ ತೆಗೆದುಕೊಳ್ಳಲಿ. ನಮಗೆ ಸ್ಪಷ್ಟೀಕರಣ ಬೇಕು. ರಾಜ್ಯ ಸರ್ಕಾರದಿಂದ ತಾವು ಏನಾದರೂ ಇದರ ಮೇಲೆ ತೆರಿಗೆ ಹಾಕಿದ್ದೀರಾ? ಅದು ಯಾವುದೇ ರೀತಿಯಲ್ಲಿರಬಹುದು. ಹಾಕಿದ್ದರೆ ಹಾಕಿದ್ದೇವೆಂದು ಹೇಳಿ, ಇಲ್ಲದಿದ್ದರೆ ಇಲ್ಲವೆಂದು ಹೇಳಿ. ಆಮೇಲೆ ನೀವು ನಾಳೆ ಮೀಟಿಂಗ್‌ನಲ್ಲಿ ಚರ್ಚೆ ಮಾಡಿ, ಅದಕ್ಕೆ ನಾವು ಬೇಡವೆಂದು ಹೇಳುವುದಿಲ್ಲ.

ಶ್ರೀ ಎಂ.ಸಿ.ನಾಣಯ್ಯ: ನಮ್ಮಲ್ಲಿ ಎರಡು ತೆರಿಗೆಗಳು ಇವೆ. ಒಂದು ಪ್ರವೇಶ ತೆರಿಗೆ, ಇನ್ನೊಂದು ಮಾರಾಟ ತೆರಿಗೆ. ಈ ಎರಡಕ್ಕೆ ಮಾತ್ರ...

ಶ್ರೀ ಬಿ.ಎಸ್.ಯಡಿಯೂರಪ್ಪ: ಎರಡನ್ನೂ ಹಾಕಿದ್ದೀರಿ ತಾನೆ?

ಶ್ರೀ ಎಂ.ಸಿ.ನಾಣಯ್ಯ: ಈ ಹಿಂದೆಯೇ ಇತ್ತು. ಒಂದು ಮಾರಾಟ ತೆರಿಗೆ, ಇನ್ನೊಂದು ಪ್ರವೇಶ ತೆರಿಗೆ. ಈಗ ಯಾವುದು ಹೆಚ್ಚಳ ಆಯಿತು? ಹೆಚ್ಚಳಕ್ಕೆ ನಾವು ಸೇಲ್ಸ್ ಟ್ಯಾಕ್ಸ್ ಎಂದು ಹೇಳತಕ್ಕ ಒಂದು ಕಾಂಪೋನೆಂಟ್ ಇದೆ. ಸೇಲ್ಸ್ ಟ್ಯಾಕ್ಸ್ ಕಾಂಪೋನೆಂಟ್ ಹೆಚ್ಚಳವಾಗಿರತಕ್ಕದ್ದು ಒಂದು ಲೀಟರ್‌ಗೆ ಎಷ್ಟು ಹೆಚ್ಚಳವಾಗುತ್ತದೆಂದರೆ....

ಶ್ರೀ ಬಿ.ಮುನಿಯಪ್ಪ: ಮೊದಲು ಒಂದು ಲೀಟರ್ ಪೆಟ್ರೋಲಿಗೆ 25 ರೂಪಾಯಿ ಕೊಡುತ್ತಿದ್ದೆವು, ಈಗ 28-40 ಪೈಸೆ ಆಗಿದೆ.

ಶ್ರೀ ಎಂ.ಸಿ.ನಾಣಯ್ಯ: ಸರ್‌ಚಾರ್ಜ್ ಯಾವುದು ಇದೆ ಅದು ಈ ಹಿಂದೆ ಒಂದು ಕಿಲೋ ಲೀಟರ್‌ಗೆ 233 ರೂಪಾಯಿ ಇದ್ದದ್ದು, ಈಗ ವಿಧಿಸಿರತಕ್ಕದ್ದು 1500 ರೂಪಾಯಿ. ಕೇಂದ್ರ ಸರ್ಕಾರದವರು ಸರ್‌ಚಾರ್ಜ್ ಒಂದು ಕಿಲೋ ಲೀಟರ್‌ಗೆ 233 ರೂಪಾಯಿ ಇದ್ದುದನ್ನು 1500 ರೂಪಾಯಿಗಳಿಗೆ ಏರಿಸಿದ್ದಾರೆ. ಇದರ ಪರಿಣಾಮ ಏನಾಯಿತೆಂದರೆ ಒಂದು ಲೀಟರ್ ಸರ್‌ಚಾರ್ಜ್ 1.30 ಪೈಸೆ ಆಗಿರತಕ್ಕದ್ದು. ಅದಕ್ಕೆ ನಾನು ಹೇಳಿದೆ, ನಾಳೆ ಸಂಪೂರ್ಣವಾಗಿ ಚರ್ಚೆ ಮಾಡಿ ಆದ ಮೇಲೆ ಯಾವ ಯಾವ ಲೆಕ್ಕದಲ್ಲಿ ಎಷ್ಟೆಷ್ಟಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ದಾಖಲೆಗಳನ್ನು ತೆಗೆಸಿ ನೋಡಿ. ತಾವು ಕಮರ್ಷಿಯಲ್, ಎಂಟ್ರಿ ಟ್ಯಾಕ್ಸ್‌ಗಳನ್ನು ಎಷ್ಟು ಪ್ರಮಾಣದಲ್ಲಿ ಹಾಕಿದ್ದೀರೆಂದು ಮೊನ್ನೆ ಕೇಳಿದಾಗ, ಮಾನ್ಯ ಮುಖ್ಯಮಂತ್ರಿಗಳು ಒಂದು ಪೈಸೆಯನ್ನೂ ನಮ್ಮ ಸರ್ಕಾರದಿಂದ ಹಾಕಿಲ್ಲವೆಂದು ಉತ್ತರ ಕೊಟ್ಟರು. ಈಗ ನನಗೆ ಬಂದಿರುವ ಮಾಹಿತಿಯ ಪ್ರಕಾರ, ದೇಶದ ಬೇರೆಲ್ಲೂ ಹಾಕದಷ್ಟು ಹೆಚ್ಚು ತೆರಿಗೆಯನ್ನು ನೀವು ಹಾಕಿದ್ದೀರಿ.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ದಯವಿಟ್ಟು ಸಮಾಧಾನದಿಂದ ಕೇಳಿ. ಸರ್‌ಚಾರ್ಜ್ ಅಂತ ಯಾವ ಚಾರ್ಜು.. ಸ್ಟೋರೇಜ್ ರೇಟ್ 16,055 ಇದ್ದು, ಅದನ್ನು 1,000ಕ್ಕೆ ಹೆಚ್ಚಿಸಿದ್ದು, 17,000 ಆಗಿದೆ. ಸ್ಟೇಟ್ ಸರ್‌ಚಾರ್ಜ್ 203 ರಿಂದ, 1,500ಕ್ಕೆ ಕೇಂದ್ರಸರ್ಕಾರದವರು ಹೆಚ್ಚಿಸಿದ್ದಾರೆ. ಕರ್ನಾಟಕದ ಮೇಲೆ ಏಕೆ ಅವರಿಗೆ ಇಷ್ಟೊಂದು ಪ್ರೀತಿ ಎಂದು ನಾನು ಕೇಳಿದೆ. It is Absolutely unacceptable 203ನ್ನು 1,500ಕ್ಕೆ ಏರಿಸಿರುತ್ತಾರೆಂದರೆ, ಅವರ ಬುದ್ಧಿ, ವಿಚಾರವೇನು ಎಂಬುದನ್ನು ಕೇಳಬೇಕಾಗುತ್ತದೆ. ಇದೇ ತರಹ ಅವರು ಆಂಧ್ರಪ್ರದೇಶದಲ್ಲಿ 94 ಇದ್ದುದನ್ನು 114ಕ್ಕೆ ಏರಿಸಿದ್ದಾರೆ. ಕರ್ನಾಟಕದಲ್ಲಿ 203 ಇದ್ದುದನ್ನು 1,500ಕ್ಕೆ ಏರಿಸಿದ್ದಾರೆ. ಕೇರಳದಲ್ಲಿ 983 ಇದ್ದುದನ್ನು 2,171ಕ್ಕೆ ಏರಿಸಿದ್ದಾರೆ. Kerala and Karnataka are victims. We want to know under what wisdom the Government of India has done this. ಇದು ನಾವು ಹಾಕಿಲ್ಲ.

ಶ್ರೀ ವಾಟಾಳ್ ನಾಗರಾಜ್: ಅವರ ಸೂತ್ರಗಳೇನು? ಒಂದೊಂದು ರಾಜ್ಯಕ್ಕೆ ಒಂದೊಂದು ರೀತಿಯಾಗಿ ಯದ್ವಾತದ್ವಾ ಮಾಡುವುದಾದರೆ ಅದಕ್ಕೆ ಬೆಲೆ ಇಲ್ಲವೆ? ಈ ದೇಶದಲ್ಲಿ ಕರ್ನಾಟಕವೇ ಬೇರೆ, ಕೇರಳವೇ ಬೇರೆ ಇದೆಯೇ? ಈ ತರಹ ಹೋದರೆ, ಇದು ಬಹಳ ಅಪಾಯದ ಸಂಕೇತವಾಗುತ್ತದೆ.

ಶ್ರೀ ಜೆ.ಹೆಚ್.ಪಟೇಲ್: ಅದನ್ನೇ ತಿಳಿದುಕೊಳ್ಳುತ್ತೇನೆಂದು ಮಾನ್ಯ ಸಚಿವರು ಹೇಳಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಂಡಿಯನ್ ಆಯಿಲ್ ಕಾರ್ಪೊರೇಷನ್‌ದವರು ಒಂದು ಕ್ಲಾರಿಫಿಕೇಶನ್ ಕೊಟ್ಟಿದ್ದರು. ಅಪಾರ್ಟ್ ಫ್ರಂ ದಿಸ್, ಲೋಕಲ್ ಸರ್‌ಚಾರ್ಜಸ್, ಎಂಟ್ರಿ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್, ಮೆಟ್ರೋಪಾಲಿಟನ್ ಟ್ಯಾಕ್ಸ್ ಇವೆಲ್ಲಾ ಸೇರಿದರೂ ಕೂಡ ಹೆಚ್ಚಿಗೆಯಾಗುತ್ತದೆ, ಅದಕ್ಕೆ ನಮ್ಮದೆಲ್ಲಾ ಕೂಡ ಇಷ್ಟೊಂದು ಇದರ ಮೇಲೆ ಭಾರ ಇಲ್ಲವೆಂದು ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನವರು ಒಂದು ಕ್ಲಾರಿಫಿಕೇಷನ್ ಇತ್ತೀಚೆಗೆ ಕೊಟ್ಟಿದ್ದಾರೆ. ಅದಕ್ಕೆ ಪದೇ ಪದೇ ಈ ವಿಷಯವನ್ನು ಇಲ್ಲಿ ಪ್ರಸ್ತಾಪವಾಗುತ್ತಿದೆ ಎಂದು ಗೊತ್ತಿದ್ದರೂ ಕೂಡ ಕ್ಲಾರಿಫಿಕೇಷನ್ ತರುವುದಕ್ಕೆ ಒಂದು ವಾರ ಬೇಕೇ? Atleast by Fax you could have got from Petroleum Secretary or Ministry. ಅಥವಾ ಕರ್ನಾಟಕ ಭವನದಲ್ಲಿ

ನಮ್ಮ ಕಮಿಷನರ್‌ರವರಿದ್ದಾರೆ. ಅವರು ಹೋಗಿ, ಈ ರೀತಿ ಅಸೆಂಬ್ಲಿಯಲ್ಲಿ ಈ ವಿಷಯದ ಬಗ್ಗೆ ಗಲಾಟೆಯಾಗಿದೆ, ನಾವು ಸ್ಟೇಟ್‌ಮೆಂಟ್ ಕೊಡಬೇಕು, ಏನಿದೆ ಎಂದು ನೀವು ತಿಳಿದುಕೊಳ್ಳಬೇಕು....

ಶ್ರೀ ಜೆ.ಹೆಚ್.ಪಟೇಲ್: ಪೆಟ್ರೋಲಿಯಂ ಮಿನಿಸ್ಟ್ರಿ, ಪೆಟ್ರೋಲಿಯಂ ಕಂಪನಿಗಳು ಮತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್ ಇವರೆಲ್ಲಾ ಸೇರಿ.. ಈಗ ನನಗೂ ಅಷ್ಟೇ ಕುತೂಹಲವಿದೆ. 203 ರಿಂದ 1,500 ಆಗುವುದಕ್ಕೆ ಯಾವ ಲಾಜಿಕ್ ಇರಬೇಕು? ಏನು ಕಾರಣವಿರಬಹುದು? ಅದೇ ತರಹ ಮಹಾರಾಷ್ಟ್ರದಲ್ಲಿ 211 ಇದ್ದುದನ್ನು 420 ಮಾಡಿದ್ದಾರೆ ಬರೇಡಬಲ್ ಅದರೆ ಇದು ಡಬಲ್ ಅಲ್ಲ. 8 ಟೈಮ್ಸ್....ಅದಕ್ಕೆ I want to know the logic behind this. ಸುಮ್ಮನೆ ನಾನು....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಪದೇ ಪದೇ ವಿಷಯ ಪ್ರಸ್ತಾಪವಾಗಿದೆ. ಸುಮ್ಮನೆ ಅಲ್ಲ. ಆ ದಿವಸ ಶ್ರೀ ಬಸವಣ್ಣಪ್ಪ, ಶ್ರೀ ಸಿಂಧ್ಯಾರವರೂ ಇದ್ದರು. They could have taken note of this..

ಶ್ರೀ ಜೆ.ಹೆಚ್.ಪಟೇಲ್: ಸುಮ್ಮನೆ ಹೇಳಿಕೆ ಕೊಟ್ಟರೆ ಪ್ರಯೋಜನವಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಂಗಳವಾರದಿಂದ ಶನಿವಾರದವರೆಗೆ ಸಮಯ ವಿತ್ತಲ್ಲಾ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾಹಿತಿ ತಂದು ಹೇಳುವುದಕ್ಕಾಗಿಯೇ ಅವರು ಹೇಳಿದರು. ತಾವು ಕೇಳಿದ್ದಕ್ಕೆ ಸುಮ್ಮನೆಂದು ಹೇಳಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ವಿಷಯವನ್ನು ಪ್ರಸ್ತಾಪಿಸಿದ ಮೇಲೆ ಫುಡ್ ಮಿನಿಸ್ಟರ್‌ರವರು ಕಾಂಟಾಕ್ಟ್ ಮಾಡಿ ಅವರಾದರೂ ತಿಳಿದುಕೊಳ್ಳಬಹುದಿತ್ತಲ್ಲಾ?

ಶ್ರೀ ಎಂ.ಪಿ.ಪ್ರಕಾಶ್: ಅವರು ಸುಮ್ಮನೆ ಹೇಳಬಾರದೆಂದಿದ್ದದರ ಅರ್ಥ, ತಾವು ಪ್ರಶ್ನೆ ಎತ್ತಬಾರದೆಂದಲ್ಲ. ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಪಡೆಯದೆ ಹೇಳುವುದು ಸರಿಯಾಗುವುದಿಲ್ಲವೆನ್ನುವುದಕ್ಕಾಗಿ ಅವರು ಈ ವಿಷಯವನ್ನು ಹೇಳಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಿಮಗೆ ನಿಮ್ಮ ಸರ್ಕಾರಕ್ಕೆ ಮಾಹಿತಿ ಇಲ್ಲವೆಂದಾದರೆ, ನಿಮ್ಮ ಅಧಿಕಾರಿಗಳಿಗೂ ಮಾಹಿತಿ ಇಲ್ಲವೇ? ತಾವು ಇದರ ಬೇಲೆ ಬೆಂಗಳೂರು ಅರ್ಬನ್ ಟ್ಯಾಕ್ಸ್ ಜಾಸ್ತಿ ಮಾಡಿಲ್ಲವೇ? ದೇಶದಲ್ಲೆಲ್ಲೂ ಇಲ್ಲದೆ, ಬೆಂಗಳೂರು ನಗರದಲ್ಲಿರುವವರಿಗೆ ಬೆಂಗಳೂರು ಅರ್ಬನ್ ಟ್ಯಾಕ್ಸ್ ಜಾಸ್ತಿ ಹಾಕಿಲ್ಲವೇ? ಅಂದರೆ, ನಿಮ್ಮ ಅಧಿಕಾರಿಗಳಿಗೆ ಅಲ್ಲಿ ಬರುತ್ತಿದ್ದ ಹಾಗೆ ಟ್ಯಾಕ್ಸ್ ಜಾಸ್ತಿ ಹಾಕುವುದಕ್ಕೆ ಬರುತ್ತದೆ.

ನಿಮ್ಮನ್ನು ಕನ್ಸಲ್ಟ್ ಮಾಡುವುದಿಲ್ಲ, ನೀವು ಅದರ ಮಾಹಿತಿಯನ್ನೂ ತಿಳಿದುಕೊಳ್ಳುವುದಿಲ್ಲ. ಒಂದು ವಾರ ನೀವು ಬರೆ ಎಳೆದಾಯಿತೇ? ವಾಪಸ್ ಅಂತೂ ಕೊಡುವುದಕ್ಕೆ ಬರುವುದಿಲ್ಲ. Is it not a fact that you have imposed Bangalore Urban tax? ಅದಕ್ಕಾಗಿ ನಾನು ನಿಮಗೆ ಏನು ಹೇಳುತ್ತಿರುವುದೇನೆಂದರೆ, ನಮ್ಮ ದೇಶದಲ್ಲೆಲ್ಲೂ ಇಲ್ಲದಿರುವ ಹೆಚ್ಚು ಬೆಲೆಗೆ ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಬೆಂಗಳೂರು ನಗರದಲ್ಲಿ ಜನರು ಕೊಂಡುಕೊಳ್ಳುತ್ತಿದ್ದಾರೆ.

ಶ್ರೀ ಎಸ್.ಸುರೇಶ್‌ಕುಮಾರ್: ಮುಖ್ಯಮಂತ್ರಿಗಳು ನನಗೂ ಕೂಡ ಆಶ್ಚರ್ಯವಾಗುತ್ತದೆ ಎಂದು ಹೇಳಿದರು. ಒಂದು ವಾರದಿಂದ ರಾಜ್ಯದಲ್ಲಿ ವ್ಯವಸ್ಥೆ ಎನ್ನುವುದು ಇಲ್ಲವೇ? ನಾವು ಮಂಗಳವಾರದಿಂದ ರೈಸ್ ಮಾಡಿದ ತಕ್ಷಣ ಅದು ಗೊತ್ತಾಗುತ್ತಿಲ್ಲವೇ? ಪ್ರಾಯಶಃ ನಮ್ಮ ಅಧಿಕಾರಿಗಳೂ ಕೂಡ ತಮ್ಮ ಜೋಬಿನಿಂದ ಹಣ ಕೊಡುತ್ತಿಲ್ಲ. ಅದಕ್ಕೋಸ್ಕರ, they are not bothered. ಜೋಬಿನಿಂದ ಹಣ ಕೊಡುತ್ತಿರುವ ನಾಗರಿಕರು ಅವರು ಇವತ್ತಿನ ದಿವಸ ಕಂಗಾಲಾಗಿದ್ದಾರೆ, 1 ಲೀಟರ್‌ಗೆ 3 ರೂ 40 ಪೈಸೆ ಜಾಸ್ತಿ ಕೊಟ್ಟುಕೊಂಡು ಈ ಏರಿಕೆ ಆಗುವುದಕ್ಕೆ ಮುಂಚೆ ಆಂಧ್ರ ಪ್ರದೇಶದಲ್ಲಿ ನಮಗಿಂತ ಜಾಸ್ತಿ ಇತ್ತು ಏರಿಕೆಯಾದ ನಂತರ now we are leading the team. ಮಾನ್ಯ ಮುಖ್ಯಮಂತ್ರಿಗಳಿಗೆ ಆಶ್ಚರ್ಯವಾಗಿರಬಹುದು. ಆದರೆ, ಒಂದು ವಾರದಿಂದ ಅಧಿಕಾರಿಗಳೇನು ಮಾಡುತ್ತಿದ್ದಾರೆ? ನಾವು ಮಂಗಳವಾರ ಇಲ್ಲಿ ಪ್ರಸ್ತಾಪ ಮಾಡಿದಮೇಲೂ ಏಕೆ, why they did not come out with a statement?

ಶ್ರೀ ಎಂ.ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಎರಡು ಭಾಗಗಳಿವೆ. ತಾವು ಹೇಳಿದ ಪ್ರಕಾರ, ಸರ್‌ಚಾರ್ಜ್ ಇಂಪೋಸ್ ಮಾಡುವಾಗ ಅನಾಮಲೀಸ್ ಒಂದೊಂದು ರಾಜ್ಯಕ್ಕೆ ಒಂದೊಂದು ವಿಧಾನ ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ನನ್ನ ಸೂಚನೆಯೇನೆಂದರೆ, ಏನು ಅವರೇಜ್ ಇನ್‌ಕ್ರೀಸ್ ಮಾಡಿದ್ದಾರೆ, ತಾವು ಯಾವುದು ಮೀಟಿಂಗ್ ಮಾಡುತ್ತೀರೋ, ನಾಳೆ ಮೀಟಿಂಗ್ ಮಾಡಿ, ಅಧಿಕಾರಿಗಳ ಮೀಟಿಂಗ್ ಅಲ್ಲೇ ಎಂಡ್ ಆಗುವುದಿಲ್ಲ, ಮತ್ತೆ, ಅದು ಮಂತ್ರಿಗಳ ಮಟ್ಟದಲ್ಲಿ ಆಗಬೇಕಾಗುತ್ತದೆ. ಇವತ್ತು, ನಾಳೆ ಅದು ತೀರ್ಮಾನವಾಗುವುದಿಲ್ಲ. ನಾಳೆಯ ಮೀಟಿಂಗ್‌ನಲ್ಲಿ ತೀರ್ಮಾನವಾಗುವವರೆಗೆ ಏನು ಮಿನಿಮಂ ಯಾವ ರಾಜ್ಯಕ್ಕೆ ಹಾಕಿದ್ದಾರೆ, ಅದೇ ರೇಟ್‌ನಲ್ಲಿ ಇಲ್ಲಿ ಕಲೆಕ್ಟ್ ಮಾಡಬೇಕೆಂದು ಹೇಳಿ ತಾವು, you can talk to the petroleum Minister ಅಥವಾ ತಾವೇ ಒಬ್ಬ ಮುಖ್ಯಮಂತ್ರಿಗಳು ಮಾತನಾಡಬಹುದು. ಅಲ್ಲಿಯವರೆಗೆ ನೀವು ಮಾಡಬಹುದು. ಏಕೆಂದರೆ, ಎಲ್ಲ you could also issue an order tentatively. ಏನು ಎಂದು ಹೇಳಿದರೆ ಯಾವುದು ಅವರೇಜ್ ಇದೆ ಅಷ್ಟು ಮಾತ್ರ ಕಲೆಕ್ಟ್ ಮಾಡಬೇಕು, ಉಳಿದದ್ದನ್ನು ಕಲೆಕ್ಟ್ ಮಾಡಬಾರದು, till final decision

is taken ಅಂತ ಹೇಳಿ ನೀವು ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನವರನ್ನು ಕರೆದು ಮಾತನಾಡಿ. you can always intervene in these matters ಏಕೆಂದರೆ, ಗೌರ್ನಮೆಂಟ್ ಆಫ್ ಇಂಡಿಯಾ ಬಗ್ಗ ನಿಮಗೂ, ನಮಗೂ ಗೊತ್ತಿದೆ. ನಾಳೆ ಮೀಟಿಂಗ್ ಮಾಡುತ್ತಾರೆ, ಇನ್ನೊಂದು, ಮತ್ತೊಂದು ಮೀಟಿಂಗ್ ಆಗುತ್ತದೆ. ಏಕೆಂದರೆ, ದಿನನಿತ್ಯ ಅಲ್ಲಿ ನಿಮಿಷ ನಿಮಿಷ ಕೂಡ, ಇವತ್ತು ಗ್ರಾಹಕರಿಗೆ ತೊಂದರೆಯಾಗುತ್ತಿದೆ. ದಯಮಾಡಿ, ನನ್ನ ಸೂಚನೆ ಏನೆಂದರೆ, ತಾವು you talk to the Petroleum Minister. ಫೈನಲ್ ಡಿಸಿಷನ್ ತೆಗೆದುಕೊಳ್ಳುವವರೆಗೆ, ಮಿನಿಮಂ ಯಾವ ರಾಜ್ಯಕ್ಕೆ ಹಾಕಿದ್ದೀರಿ ಆ ಅವರೇಜ್‌ನಲ್ಲಿ ಈಗ ಸರ್‌ಚಾರ್ಜ್‌ನ್ನು ತೆಗೆದುಕೊಳ್ಳಿ. ಉಳಿದ ಡಿಫರೆನ್ಸ್‌ನ್ನು ಇವತ್ತು ನೀವು ಕಲೆಕ್ಟ್ ಮಾಡಬಾರದೆಂದು ಹೇಳಿ, you must take initiative. Either calling Indian Oil officers or the others. Rest they can collect it. ಅದನ್ನು ಆಮೇಲೆ ನೋಡೋಣ. 2ನೇ ಭಾಗ ಏನಿದೆ ಎಂದರೆ ಇದು ಹೆಚ್ಚಳವಾದ ಕೂಡಲೇ ಏನಾಗುತ್ತದೆಂದರೆ, ಸೇಲ್ಸ್‌ಟ್ಯಾಕ್ಸ್‌ನಲ್ಲಿ ಪರ್ಸೆಂಟೇಜ್‌ವೈಸ್ ಮತ್ತು ಎಂಟ್ರಿ ಟ್ಯಾಕ್ಸ್‌ನಲ್ಲಿ ಮತ್ತೆ ತಾವು ಬೆಂಗಳೂರು ನಗರಕ್ಕೆ Urban tax ಎಂದು ಹೇಳಿ ಏನು ಟ್ಯಾಕ್ಸ್ ಹಾಕಿದ್ದೀರಿ, ಆ ದಾಮಾಷಾ ಜಾಸ್ತಿಯಾಗುತ್ತದೆ. ನೀವು ದಯಮಾಡಿ ಆ ಅರ್ಬನ್ ಟ್ಯಾಕ್ಸ್‌ನ್ನು ತೆಗೆದುಹಾಕಿ. ಮತ್ತೆ, to the extent of increase, you can take a decision. ಆದ್ದರಿಂದ ಈ 2 ಭಾಗಗಳಲ್ಲಿ ಮಾಡಿದರೆ ಸಧ್ಯ ತಾವೊಂದು ನಿವೃತ್ತಿ ಕೊಟ್ಟಹಾಗೆ ಆಗುತ್ತದೆ. ಆಮೇಲೆ ಬೇಕಾದರೆ ಗೌರ್ನಮೆಂಟ್ ಆಫ್ ಇಂಡಿಯಾ, ಮತ್ತೊಂದು ಇಲ್ಲಿ ಕೂಡ ಸೇಲ್ಸ್‌ಟ್ಯಾಕ್ಸ್ ರೇಟನ್ನು ನೀವು ಪುನಃ ಕಡಿಮೆ ಮಾಡುವ ಪ್ರಯತ್ನ ಮಾಡಿ ಅಥವಾ that increase is highest ಈಗ ಏಕೆಂದರೆ ನಿಮ್ಮ ಟ್ಯಾಕ್ಸ್, ಸರ್‌ಚಾರ್ಜ್ ಎಲ್ಲಾ ಸೇರಿ ಅದು ಆಗಿದೆ. 2 ಭಾಗಗಳಲ್ಲಿ ತಾವು ದಯಮಾಡಿ ತಕ್ಷಣ ನಿಮ್ಮ ಅಧಿಕಾರಿಗಳ ಸಭೆ ಕರೆದು ಮತ್ತು ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನವರನ್ನು ಕರೆದು, you can establish contact with the Indian Oil Corporation. Till such time we are asking depots not to collect increased rate ಅಂತ ಹೇಳಿ I think this compromise can be done. ಆಮೇಲೆ, ನಾಳೆ ಏನು ಬೇಕೋ ಅಲ್ಲಿ ತೀರ್ಮಾನ ಮಾಡಿಕೊಳ್ಳಿ.

ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆಗಳು. ಶ್ರೀ ಅಪ್ಪಚ್ಚುರಂಜನ್.

ಶ್ರೀ ವಾಟಾಳ್ ನಾಗರಾಜ್: ಕೇಂದ್ರಸರ್ಕಾರದವರ ಜೊತೆಯಲ್ಲಿ ಯಾವಾಗ ತಾವು ಮಾತುಕತೆ ಮಾಡುತ್ತೀರಿ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಡ್ಜರ್ನ್‌ಮೆಂಟ್ ಮೋಷನ್ಸ್ ಒಂದು

ಕೊಟ್ಟಿದ್ದರು. ಅನಾವೃಷ್ಟಿ ಮತ್ತು ಅತೀವೃಷ್ಟಿ ಬಗ್ಗೆ ಇಲ್ಲೊಂದು ಸ್ಟೇಟ್‌ಮೆಂಟ್ ಮೊದಲು ಮಾಡುತ್ತೇನೆಂದು ಹೇಳಿದ್ದರು, ಅದು ಆಗಲಿಲ್ಲ. ಅದಕ್ಕಾಗಿ ಈಗ ಅನೇಕ ಜಿಲ್ಲೆಗಳಲ್ಲಿ ಸಾಕಷ್ಟು ಸಮಸ್ಯೆಗಳಿವೆ ಮತ್ತು 77 ತಾಲ್ಲೂಕುಗಳಲ್ಲಿ ಮಳೆ ಇಲ್ಲದೆ ಇವತ್ತು ಅಲ್ಲಿ ಕಾಮಗಾರಿ ಕೆಲಸಗಳನ್ನು ಕೂಡ ತೆಗೆದುಕೊಳ್ಳುವುದಕ್ಕೆ..

ಅಧ್ಯಕ್ಷರು: ಒಂದು ಕೆಲಸ ಮಾಡೋಣ. ಅಡ್ಜರ್ನ್‌ಮೆಂಟ್ ಮೋಷನ್ ಪರವಾಗಿಲ್ಲ We can take it up under 69 ನಾನು ಅದನ್ನು ನೋಟೀಸ್ ಮಾಡಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾಳೆಗೆ ಬೇರೆ ವಿಷಯವಿದೆ. ಇವತ್ತು ಬೇಕಾದರೆ ಕಾಲಿಂಗ್ ಅಟೆನ್‌ಷನ್ ಆದಮೇಲೆ ಕೊಡುತ್ತೇವೆಂದರೆ ಪರವಾಗಿಲ್ಲ.

ಅಧ್ಯಕ್ಷರು: ಬೇಡ. ಕಾಲಿಂಗ್ ಅಟೆನ್‌ಷನ್‌ನಲ್ಲಿ ಏನು ಚರ್ಚೆಯಾಗುತ್ತದೆ? ನಿಯಮವನ್ನು ಉಲ್ಲಂಘನೆ ಮಾಡಿದ ಹಾಗಾಗುತ್ತದೆ. We will take it up for a detailed discussion.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ಇವತ್ತೇ ಕನ್ಸರ್ಟ್ ಮಾಡಿ. ಬೇಕಾದರೆ ಕಾಲಿಂಗ್ ಅಟೆನ್‌ಷನ್ ಮುಗಿದಮೇಲೆ ತೆಗೆದುಕೊಳ್ಳಿ. ಏಕೆಂದರೆ, ಇದು ಬಹಳ ಮುಖ್ಯವಾದುದು.

ಅಧ್ಯಕ್ಷರು: ಇಲ್ಲಿ ಇದು It will be within half an hour's time. ಬಹಳ ದಿವಸಗಳಿಂದ ನೋಟೀಸ್ ಕೊಟ್ಟಿದ್ದಾರೆ. ಅದನ್ನು....

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ನಿನ್ನೆ ವಿಚಾರಿಸಿದೆ. ಇಲ್ಲಿ ಸನ್ಮಾನ್ಯ ರೆವಿನ್ಯೂ ಮಿನಿಸ್ಟರ್ ಘೋಷಣೆ ಮಾಡಿದರು. ಏನೆಂದರೆ, ಒಂದೊಂದು ಜಿಲ್ಲೆಗೆ ಅತೀವೃಷ್ಟಿ ಯಾಗಿರುವಲ್ಲಿ ಒಂದೊಂದು ಕೋಟಿ ರೂಪಾಯಿ ರಿಲೀಸ್ ಮಾಡಿದ್ದೇವೆಂದು. ಉದಾಹರಣೆಗೆ ಶಿವಮೊಗ್ಗ ಜಿಲ್ಲೆ. ನಾನು ಡಿಸಿಯವರ ಹತ್ತಿರ ಮಾತನಾಡಿದೆ. ಅವರು ಏನು ಹೇಳುತ್ತಾರೆಂದರೆ, ಒಂದು ವರ್ಷ ಪೂರ್ತಿಗೆ ಒಂದು ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿ ಅಂತ ಹೇಳಿದ್ದಾರೆ. ಆದರೆ, ರಿಲೀಸ್ ಮಾಡುವುದು ಕೇವಲ 50 ಲಕ್ಷವೆಂದು ಹೇಳಿದರು. 50 ಲಕ್ಷದಲ್ಲಿ ಪ್ರತಿ ತಾಲ್ಲೂಕಿಗೂ ಅವರವರ ನೀರಾವರಿ ಇಲಾಖೆಗೆ, ಜಿಲ್ಲಾಪರಿಷತ್‌ಗೆ, ಪಿಡಬ್ಲ್ಯೂಡಿಗೆ, ಪುರಸಭೆಗೆ ಅಂತಹೇಳಿ. 4-5 ಲಕ್ಷ ಒಂದೊಂದು ತಾಲ್ಲೂಕಿಗೂ ಬರುವುದಿಲ್ಲ. 10 ಲಕ್ಷವನ್ನು ರಿಸರ್ವ್ ಆಗಿ ಇಟ್ಟುಕೊಂಡಿದ್ದಾರಂತೆ. ಇನ್ನು 40 ಲಕ್ಷ ಉಳಿಯುತ್ತದೆಂದು ಹೇಳಿದ್ದಾರೆ. ಹೀಗಾದರೆ, ಒಂದು ತಾಲ್ಲೂಕಿನಲ್ಲಿ 2 ಕೆಲಸಗಳನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಪರಿಹಾರ ಕೊಡುವುದಿರಲಿ ಏನೂ ಆಗಲ್ಲ. ಹೌಸ್‌ನಲ್ಲಿ ಒಂದು ಕೋಟಿ ರೂಪಾಯಿ ರಿಲೀಸ್ ಮಾಡುತ್ತೇವೆಂದು ಹೇಳಿ, ಜಿಲ್ಲಾಧಿಕಾರಿಗಳಿಗೆ ಕೇವಲ 50 ಲಕ್ಷ ರೂಪಾಯಿಗಳನ್ನು

ರಿಲೀಸ್ ಮಾಡಿ....

MR. SPEAKER: What I say is ಈಗ ಗಮನ ಸೆಳೆಯುವ ಸೂಚನೆಗಳು ಎರಡು ಇವೆ. ಇದನ್ನು ಅರ್ಧ ಗಂಟೆಯಲ್ಲಿ ಮುಗಿಸುತ್ತೇನೆ. ಕೂಡಲೇ we will take up this matter. ಎಲ್ಲರೂ ಪಾರ್ಟಿಸಿಪೇಟ್ ಮಾಡಬಹುದು.

12.30 ಪಿ.ಎಂ

ಶ್ರೀ ಹೆಚ್.ಎನ್.ನಂಜೇಗೌಡ: ಈಗ ಅಡ್ಜರ್ನ್‌ಮೆಂಟ್ ಮೋಷನ್ ಪ್ರಸ್ತಾಪದ ಮೂಲಕ ತೆಗೆದುಕೊಳ್ಳುವುದಾದರೂ ಗಮನ ಸೆಳೆಯುವ ಸೂಚನೆ ಆದಮೇಲೆ....

MR. SPEAKER: I will take it up under 69

ಶ್ರೀ ಹೆಚ್.ಎನ್.ನಂಜೇಗೌಡ: ನಿಯಮ 69 ಪ್ರಕಾರ ತೆಗೆದುಕೊಳ್ಳುತ್ತೇನೆ ಎಂದು ಹೇಳಿದರೆ ಸರಿ. ಅಡ್ಜರ್ನ್‌ಮೆಂಟ್ ಮೋಷನ್ ಪ್ರಸ್ತಾಪ ಅಂದರೆ ಅದು ಈಗಲೇ ಆಗಬೇಕಾಗುತ್ತದೆ.

ಅಧ್ಯಕ್ಷರು: ಇಲ್ಲ ಇಲ್ಲ. the moment I took up calling attention it is understood.... it is not coming up as an and adjournment Motion.

(ಆ) ಮೈಸೂರಿನಲ್ಲಿ ವಕೀಲರ ಚಳುವಳಿ ಸತ್ಯಾಗ್ರಹ ನಡೆಯುತ್ತಿರುವ ವಿಚಾರ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ): ಈಗ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಮೈಸೂರಿನಲ್ಲಿ ವಕೀಲರ ಚಳುವಳಿ, ಸತ್ಯಾಗ್ರಹ ನಡೆಯುತ್ತಾ ಇದೆ. ಅದು ಆಗಲೇ 7 ದಿವಸ ಆಯಿತು. ನಾನೇನು ಹೇಳುತ್ತೇನೆ ಅಂದರೆ ಸರ್ಕಾರ ಮಧ್ಯಪ್ರವೇಶ ಮಾಡಿ... ಸ್ವಾಮಿಯವರೇ, ಮೈಸೂರಿನಲ್ಲಿ ವಕೀಲರು ಮತ್ತು ಪೊಲೀಸ್‌ನವರದು ಚಳುವಳಿ ನಡೆಯುತ್ತಾ ಇದೆ. ಯಾರದು ತಪ್ಪು ಎಂಬುದನ್ನು ಆಮೇಲೆ ಚರ್ಚೆ ಮಾಡೋಣ. ಒಂದು ವಾರದಿಂದ ಅಲ್ಲಿ ಸಂಪೂರ್ಣವಾಗಿ ನ್ಯಾಯಾಲಯಗಳು ಮುಚ್ಚಿವೆ. ಹೊರಗಡೆ ಚಳುವಳಿ ಶುರುವಾಗಿದೆ. ಅದರ ಮಧ್ಯೆ ಸರ್ಕಾರ ಏನಾದರೂ ಪ್ರವೇಶ ಮಾಡತಕ್ಕದ್ದು ಅತಿ ಮುಖ್ಯ. ಜೊತೆಗೆ ತಾವು ಗೃಹ ಇಲಾಖೆ ಕಾರ್ಯದರ್ಶಿಯವರನ್ನು ಅಲ್ಲಿಗೆ ಕಳುಹಿಸಿದ್ದಿರಿ. ಅವರಿಂದ ಏನು ವರದಿ ಬಂದಿದೆ? ಏನಾಗಿದೆ? ಅಧ್ಯಕ್ಷರೇ, ಒಂದು ವಾರದಿಂದ ಅನೇಕ ಕೇಸುಗಳು ನಡೆಯದೆ ಜನರು ಕಂಗಾಲಾಗಿದ್ದಾರೆ. ಆದ್ದರಿಂದ ಸರ್ಕಾರ ಕೂಡಲೇ ಮಧ್ಯಪ್ರವೇಶ ಮಾಡಿ ಅವರಿಬ್ಬರನ್ನು ಒಂದು ಹಂತಕ್ಕೆ ತಂದು ಯಾವುದಾದರು ರೀತಿಯಲ್ಲಿ ಸರಿಪಡಿಸಲಿಲ್ಲ ಅಂದರೆ ಇದು ಬಹಳ ದೂರ ಹೋಗುತ್ತದೆ. ಇದು ಸರಿಯಾದ ನೀತಿಯಲ್ಲ ಎಂಬ

ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಬಹಳ ಅತ್ಯಂತ ಕಳಕಳಿಯಿಂದ ತರುತ್ತಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ (ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರು, ಗೃಹ ಕಾರ್ಯದರ್ಶಿಗಳು ಮೈಸೂರಿಗೆ ಹೋಗಿದ್ದಾರೆ. ಅಲ್ಲಿ ಸಂಬಂಧಪಟ್ಟವರ ಜೊತೆಯಲ್ಲಿ ವಿಚಾರ ವಿನಿಮಯ ಮಾಡಿದ್ದಾರೆ. ಮತ್ತು ವರದಿಯನ್ನು ಅವರು ಸರ್ಕಾರಕ್ಕೆ ಇವತ್ತು ಕೊಡುವವರಿದ್ದಾರೆ. ನಾಳೆ ಇದರ ಬಗ್ಗೆ ಒಂದು ಹೇಳಿಕೆಯನ್ನು ಮಾಡುತ್ತೇನೆ ಅಧ್ಯಕ್ಷರೆ.

ಶ್ರೀ ಎ.ರಾಮದಾಸ್: ಅಧ್ಯಕ್ಷರೆ, ರಾಜ್ಯದ್ಯಂತ ಇವತ್ತು ಎಲ್ಲಾ ನ್ಯಾಯಾಲಯಗಳನ್ನು ಬಹಿಷ್ಕಾರ ಮಾಡುವಂಥ ನಿರ್ಧಾರಕ್ಕೆ ರಾಜ್ಯದ ಬಾರ್ ಅಸೋಸಿಯೇಷನ್‌ನವರು ಬಂದಿದ್ದಾರೆ. ಜೊತೆಗೆ ಇನ್ನೊಂದು ಸಮಸ್ಯೆ ಏನೆಂದರೆ ಅಲ್ಲಿ ಭಯ ಬಂದು ನಮ್ಮ ಉಪಮುಖ್ಯಮಂತ್ರಿಗಳ ಸಮೇತವಾಗಿ 1300 ಜನ ಬೇಲ್ ತೆಗೆದುಕೊಂಡಿದ್ದಾರೆ. ನಮ್ಮ ಉಪಮುಖ್ಯಮಂತ್ರಿಗಳೂ ಕೂಡ ಬೇಲ್ ತೆಗೆದುಕೊಂಡಿದ್ದಾರೆ ಇವತ್ತು. ಪೋಲೀಸಿನವರ ವಿರುದ್ಧವಾಗಿ ಹೆದರಿಕೆಯಿಂದ ಆ ಒಂದು ವಾತಾವರಣ ಅಲ್ಲಿ ನಿರ್ಮಾಣವಾಗಿದೆ. ದಯವಿಟ್ಟು ಸರ್ಕಾರದವರು ಈ ವಿಚಾರದಲ್ಲಿ ಸ್ಪಷ್ಟಪಡಿಸಬೇಕು. ಜೊತೆಗೆ ಈಗಾಗಲೇ ಅಲ್ಲಿ ಕೇಸ್ ಹಾಕಿದ್ದಾರೆ. 100 ಜನ ಇತರರ ಮೇಲೆ ಕೇಸ್ ಹಾಕಿದ್ದಾರೆ. ಅದರಲ್ಲಿ ಉಪಮುಖ್ಯಮಂತ್ರಿಗಳೂ ಕೂಡ ಬೇಲ್ ತೆಗೆದುಕೊಂಡಿರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ಅಧ್ಯಕ್ಷರೆ. ಇದರ ಬಗ್ಗೆ ದಯವಿಟ್ಟು ಸ್ಪಷ್ಟವಾಗಿ ಹೇಳಬೇಕು.

ಅಧ್ಯಕ್ಷರು: ನಾಳೆ ಹೇಳಿಕೆ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಡಿ.ಕೆ.ಶಿವಕುಮಾರ್: ಇದೇನಿದು? ಡೆಪ್ಯುಟಿ ಮಿನಿಸ್ಟರ್ ಬೇಲ್ ತೆಗೆದುಕೊಂಡಿದ್ದಾರೆ ಅಂದರೆ? ಎಲ್ಲಾದರೂ ಉಂಟೆ?

ಅಧ್ಯಕ್ಷರು: ಯಾರು ತೆಗೆದುಕೊಳ್ಳುತ್ತಾರಪ್ಪ, ಸುಮ್ಮನೆ...

ಶ್ರೀ ಡಿ.ಕೆ.ಶಿವಕುಮಾರ್: ಈಗ ಒಬ್ಬ ಸದಸ್ಯರು ರಾಜ್ಯದ ಉಪಮುಖ್ಯಮಂತ್ರಿಗಳ ಬಗ್ಗೆ ಬೇಲ್ ತೆಗೆದುಕೊಂಡಿದ್ದಾರೆ ಪೋಲೀಸಿನವರ ವಿರುದ್ಧ ಎಂದು ಸದನದಲ್ಲಿ ಹೇಳಿಕೆ ಮಾಡಿದರೆ ಇದರ ಬಗ್ಗೆ ಸರ್ಕಾರ ಮಾತನಾಡದಿದ್ದರೆ ಹೇಗೆ ಅಧ್ಯಕ್ಷರೆ?

ಶ್ರೀ ವಾಟಾಳ್ ನಾಗರಾಜ್: 1500 ಜನ ಲಾಯರ್‌ಗಳ ಪೈಕಿ ಅವರೂ ಒಬ್ಬರೂ ಲಾಯರ್ ಆಗಿದ್ದಾರೆ. ಆದ್ದರಿಂದ ನಾನು ಏನು ತಮಗೆ ಹೇಳುತ್ತಿದ್ದೇನೆ ಅಂದರೆ ಅಧ್ಯಕ್ಷರೆ, ಒಂದು ಕಳಕಳಿಯ ಮನವಿ ಏನು ಅಂದರೆ ಆರೇಳು ದಿವಸ ಆಗಿದೆ. ಮಧ್ಯಪ್ರವೇಶ ಮಾಡಿ ತಕ್ಷಣ ಹೋಗಿ ಮಾತುಕತೆ ಆಡಿದರೆ ಸಮಸ್ಯೆ ಬಗೆಹರಿಸಬಹುದು ಅಂತ.

ಅಧ್ಯಕ್ಷರು: ನಾಳೆ ಹೇಳಿಕೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಈಗ ಗಮನ ಸೆಳೆಯುವ ಸೂಚನೆಗಳು.

ಶ್ರೀ ಹೆಚ್.ಎನ್.ನಂಜೇಗೌಡ: ಅಧ್ಯಕ್ಷರೆ, ಇಡೀ ರಾಷ್ಟ್ರದ ಯಾವುದೇ ರಾಜ್ಯದಲ್ಲಿ ಇಂಥ ಪರಿಸ್ಥಿತಿ ನಿರ್ಮಾಣ ಆಗಿಲ್ಲ. 1700 ಜನ ಒಟ್ಟಿಗೆ ಬೇಲ್ ಕೇಳತಕ್ಕದ್ದು, ಅದೂ ಲಾಯರ್‌ಗಳು. ಇದು ಸ್ವಲ್ಪ ಗಂಭೀರವಾದ ಪರಿಸ್ಥಿತಿ ಅನ್ನಿಸುತ್ತದೆ. ಏಕೆಂದರೆ ಇದರಲ್ಲಿ ತಪ್ಪು ಒಪ್ಪು ಬೇರೆ ಪ್ರಶ್ನೆ. Why such a situation has arisen? ಹುಡುಗಾಟದ ವ್ಯವಹಾರವೇ ಇದು? ಎಲ್ಲಾ ಲಾಯರ್‌ಗಳೂ ಬೇಲ್‌ಗೆ ಅಪ್ಲಿಕೇಷನ್ ಕೇಳುತ್ತಾರೆ ಅಂದರೆ There must be something serious. ಇದನ್ನು ಸ್ವಲ್ಪ ಸೀರಿಯಸ್ಸಾಗಿ ಪರಿಗಣಿಸಬೇಕು. ಸುಮ್ಮನೆ ಇದು ಲಘುವಾಗಿ ತೆಗೆದುಕೊಳ್ಳತಕ್ಕಂಥದ್ದಲ್ಲ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸಭಾಧ್ಯಕ್ಷರೆ, ಬಾರ್ ಅಸೋಸಿಯೇಷನ್‌ನಲ್ಲಿ ಮೈಸೂರಿನಲ್ಲಿರತಕ್ಕವರು ಎಷ್ಟು ಜನ ಅಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ ಅವರದೊಂದು ಪಟ್ಟಿ ಇದೆ. ಒಂದು ಮೊಕದ್ದಮೆಗೆ ಸಂಬಂಧಪಟ್ಟಹಾಗೆ ಕೆಲವು ಜನರ ಮೇಲೆ ಒಂದು ಎಫ್.ಐ.ಆರ್. ಫೈಲ್ ಆಗಿದೆ. ಫೈಲ್ ಆಗಿರುವುದರಲ್ಲಿ ಬಾರ್ ಅಸೋಸಿಯೇಷನ್‌ನವರು ಎಲ್ಲರ ಪರವಾಗಿ ಒಬ್ಬರು ಹಾಕಿದ್ದಾರೆ ಎಂದು ಹೇಳುತ್ತಾ ಇರತಕ್ಕಂಥದ್ದು. ಒಂದು ಅಂಟಿಸಿಪೇಟರಿ ಬೇಲನ್ನು ತೆಗೆಯಬೇಕಾದರೆ ಮಾನ್ಯ ಸಭಾಧ್ಯಕ್ಷರೆ ನಮಗೆಲ್ಲರಿಗೂ ಗೊತ್ತಿರತಕ್ಕದ್ದು, ಯಾರಿಗೆ ಆಂಟಿಸಿಪೇಟರಿ ಬೇಲ್ ಬೇಕಾಗುತ್ತದೋ ಅವರೇ ಹೋಗಿ ಆಂಟಿಸಿಪಲೇಟರಿ ಬೇಲ್ ಅಪ್ಲಿಕೇಷನ್ ಹಾಕಬೇಕಾಗುತ್ತದೆ, ವಿಚಾರ ಮಾಡಬೇಕಾಗುತ್ತದೆ. ಆಂಟಿಸಿಪೇಟರಿ ಬೇಲ್ ಕೊಡಬೇಕಾಗುತ್ತದೆ. ರೆಪ್ರಸೆಂಟಿಟೀವ್ ಪಿಟಿಷನ್ ಯಾರಿಂದಲೂ ಫೈಲ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ 1300 ಜನ ಫೈಲ್ ಮಾಡಿಬಿಟ್ಟಿದ್ದಾರೆ 1300 ಜನರಿಗೆ ಬೇಲ್ ಕೊಟ್ಟುಬಿಟ್ಟಿದ್ದಾರೆ ಎನ್ನತಕ್ಕ ವಿಚಾರವನ್ನು ಅವರು ಹೇಳಿದ್ದಾರೆ. ಅದರಲ್ಲಿ ಸಿದ್ದರಾಮಯ್ಯನವರೂ ಆ ಬಾರ್‌ನಲ್ಲಿ ಮೆಂಬರ್. ಆದ್ದರಿಂದ ಸಿದ್ಧರಾಮಯ್ಯನವರೂ ತೆಗೆದುಕೊಂಡಹಾಗೆ ಅಂತ. ಮಾನ್ಯ ಸಿದ್ಧರಾಮಯ್ಯನವರು ಬೇಲ್ ಅಪ್ಲಿಕೇಷನ್ ಹಾಕಲೂ ಇಲ್ಲ, ಮತ್ತೆ ನಿರೀಕ್ಷಣಾ ಜಾಮೀನು ಕೊಡಬೇಕಾಗಿರತಕ್ಕಂಥ ಅರ್ಜಿಯನ್ನು ಅಲ್ಲಿ ಸಲ್ಲಿಸಲಿಲ್ಲ. ಮೇಲ್ಮನೆಯಲ್ಲೂ ಕೂಡ ನಾನು ಇದೇ ವಿಚಾರವನ್ನು ಎತ್ತಿದಾಗ ಹೇಳಿದ್ದೇನೆ. ಏನೋ ಅವರು ಅಸೋಸಿಯೇಷನ್ ಮೂಲಕ ಮೂವ್ ಮಾಡಿದ್ದಾರೆ ಎನ್ನುವ ವಿಚಾರವನ್ನು ಎತ್ತಿದ್ದಾರೆ. ಆದ್ದರಿಂದ ಮಾನ್ಯ ಸಭಾಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಹಾಗೆ ಮಾನ್ಯ ನಂಜೇಗೌಡರು ಎತ್ತಿರತಕ್ಕ ವಿಚಾರಕ್ಕೆ ಸಂಬಂಧಪಟ್ಟಹಾಗೆ ಗೃಹ ಕಾರ್ಯದರ್ಶಿಗಳು ಈಗಾಗಲೇ ಅಲ್ಲಿಗೆ ಹೋಗಿದ್ದಾರೆ. ಎಲ್ಲರ ಜೊತೆಯಲ್ಲಿ ವಿಚಾರ ವಿನಿಮಯ ಮಾಡಿದ್ದಾರೆ. ಅವರು ಕೊಡುತ್ತಾ ಇರತಕ್ಕ ವರದಿ....

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೇ....

ಶ್ರೀ ಎಂ.ಸಿ.ನಾಣಯ್ಯ: ನಾಳೆ ಕೊಡುತ್ತೇವೆ. ಅವರು ವರದಿ ಕೊಡಬೇಕಲ್ಲ. ನಿಮಗೆ ಸಮಾಧಾನ ಆಗಲಿಕ್ಕೆ ಇರತಕ್ಕಂಥದ್ದು ಶಮನ ಆಗಲಿಕ್ಕೆ ಇರತಕ್ಕಂಥದ್ದು ಒಟ್ಟಾರೆ ಸೇರಿ ಒಂದು ವರದಿಯನ್ನು ಅಕ್ಚುಯಲ್ಲಾಗಿ ಏನು ನಡೆದಿದೆ ಎಂಬುದನ್ನು ಸದನದಲ್ಲಿ ನಾಳೆ ನಾವು ಕೊಡುತ್ತೇವೆ.

ಶ್ರೀ ಎ.ರಾಮದಾಸ್: 172 ಜನರ ಮೇಲೆ ಪೊಲೀಸರು ಕೇಸ್ ಹಾಕಿದಾಗ 72 ಜನಗಳ ಹೆಸರನ್ನು ಹಾಕಲಾಯಿತು. 100 ಜನ ಇತರರು ಎಂದು ಹೇಳಿದ ದಿವಸವೇ ಸಿದ್ಧರಾಮಯ್ಯನವರ ಹೆಸರನ್ನೂ ಸೇರಿಸಿ ಬಾರ್ ಅಸೋಸಿಯೇಷನ್‌ನಲ್ಲಿ ರಿಜಿಸ್ಟರ್ ಆಗಿರತಕ್ಕ 1300 ಜನರ ಪರವಾಗಿ ಬೇಲನ್ನು ಪಡೆಯಲಾಗಿದೆ.

ಅಧ್ಯಕ್ಷರು: ಸಿದ್ಧರಾಮಯ್ಯ ಅಂತ ಹೆಸರಿಟ್ಟುಕೊಂಡಿರುವವರು ಮೂರು ಲಕ್ಷ ಜನ ಇದ್ದಾರೆ ಕರ್ನಾಟಕದಲ್ಲಿ. ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ. ಅಪ್ಪಚ್ಚುರಂಜನ್ ಅವರೇ ಹೇಳಿ. ಇವರೊಬ್ಬರೇನಾ ಸಿದ್ಧರಾಮಯ್ಯ? ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳಿ, ಅಪ್ಪಚ್ಚು ರಂಜನ್, ಗಮನ ಸೆಳೆಯಿರಿ.

ಶ್ರೀ ವಾಟಾಳ್ ನಾಗರಾಜ್: ಸಾರ್, ಆ ಸಂಬಂಧ ಅಲ್ಲ ಸಾರ್.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ಗಮನ ಸೆಳೆಯುವ ಸೂಚನೆಗೆ ಹೋಗೋಣ. ಅವರು ಗಮನ ಸೆಳೆಯುತ್ತಿದ್ದಾರೆ.

(4) ಗಮನ ಸೆಳೆಯುವ ಸೂಚನೆ.

1) ಖೋಟಾ ದಾಖಲೆ ಸೃಷ್ಟಿಸಿ ಸೋಮವಾರಪೇಟೆ ತಾಲ್ಲೋಕಿನ ಕುಮಾರಧಾರ ತಪ್ಪಲಿನಲ್ಲಿ ಒಂದು ಕೋಟಿ ರೂಪಾಯಿಯ ಬೆಲೆ ಬಾಳುವ ಹೊನ್ನೆ ಮರ ಅರಣ್ಯ ಇಲಾಖೆಯವರಿಂದ ಲೂಟಿ

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ (ಸೋಮವಾರಪೇಟೆ): ಅಧ್ಯಕ್ಷರೆ, ಕುಮಾರಧಾರಾ ತಪ್ಪಲಿನಲ್ಲಿ ಸುಮಾರು ಒಂದು ಕೋಟಿ ರೂಪಾಯಿ ಬೆಲೆ ಬಾಳುವ ಮರವನ್ನು ಲೂಟಿ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಅರಣ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು): ಸೋಮವಾರ ಪೇಟೆ ತಾಲ್ಲೂಕು ಕುಮಾರ ಹಳ್ಳಿಗ್ರಾಮದ ಶ್ರೀ ಹೆಚ್.ಕೆ.ಸುಬ್ಬಯ್ಯನವರ ಮಗ ಹೆಚ್.ಸಿ.ಬಾಬುರಾಜೇಂದ್ರ, ರವರು, ಅವರಿಗೆ ಸೇರಿದ ಕುಮಾರ ಹಳ್ಳಿ ಗ್ರಾಮದ ರಿಡೀಮ್ಡ್ ಜಾಗ ಸರ್ವೆ ನಂಬರ್ 1:348 ಎ=5.30 ಎಕರೆ ಮತ್ತು 1:348 ಬಿ=56.30 ಒಟ್ಟು 10.60 ಎಕರೆಯ ಅವರ ಸ್ಥಳದಲ್ಲಿ ಕೃಷಿ ಅಭಿವೃದ್ಧಿ ಪಡಿಸಲು ಸದರಿ ಸರ್ವೆ

ನಂಬರುಗಳಲ್ಲಿರುವ ಮರಗಳನ್ನು ಕಡಿಯಲು ದಿನಾಂಕ 21-7-98ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅರ್ಜಿಯ ಜೊತೆ ಕೊಡಗು ಜಿಲ್ಲಾಧಿಕಾರಿಗಳಿಂದ ಪಡೆದ ಅಭಿಪ್ರಾಯ ಮತ್ತು ಜಂಟಿ ಮೋಜಣಿ ನಕ್ಷೆಯೊಂದಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಗೆ ಒಪ್ಪಿಸಿರುತ್ತಾರೆ. ಜಿಲ್ಲಾಧಿಕಾರಿಗಳ ಅಭಿಪ್ರಾಯ ಪತ್ರದ ಸಂಖ್ಯೆ ವನ: 107: 94-95 ದಿನಾಂಕ 18-7-1994ರ ಪತ್ರದಲ್ಲಿ ಅರ್ಜಿದಾರರಿಗೆ ಮತ್ತು ಅನುಭವದಾರರಿಗೆ ಜಾಗದ ಹಾಗೂ ಮರಗಳ ಮೇಲೆ ಸದರಿ ಸರ್ವೆ ನಂಬರುಗಳಿಗೆ ಹಕ್ಕಿರುವುದಾಗಿ ತಿಳಿಸಿರುತ್ತಾರೆ.

ಸದರಿ ಸರ್ವೆ ನಂಬರುಗಳನ್ನು ಜಂಟಿ ಮೋಜಣಿ ನಡೆಸಿ ನಕ್ಷೆಯನ್ನು ತಯಾರಿಸಿ ಅರಣ್ಯ ಮ್ಯಾನ್ಯುಯಲ್ ಕಾಯ್ದೆ 119ರ ಪ್ರಕಾರ ದಿನಾಂಕ 24-1-95ರಂದು ಎ.ಡಿ.ಎಲ್.ಆರ್.ರವರು ದೃಢೀಕರಿಸಿರುತ್ತಾರೆ. ಹಾಗೂ ಅರಣ್ಯ ಇಲಾಖೆಯ ಮೋಜಣಿ ವಲಯ ಅರಣ್ಯಾಧಿಕಾರಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸೋಮವಾರಪೇಟೆ ಉಪ ವಿಭಾಗ ಮತ್ತು ಸೋಮವಾರ ಪೇಟೆ ಅರಣ್ಯ ವಲಯಾಧಿಕಾರಿಗಳು ಸರ್ಕಾರಕ್ಕೆ ಸಹಿ ಮಾಡಿರುತ್ತಾರೆ.

ಕಂದಾಯ ಇಲಾಖೆಯ ಅಭಿಪ್ರಾಯ ಹಾಗೂ ಭೂದಾಖಲೆಗಳ ಜಂಟಿ ಮೋಜಣಿ ನಕ್ಷೆಪಡೆದ ನಂತರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಆದೇಶ ಸಂಖ್ಯೆ ಎಲ್.ಎನ್.ಡಿ.ಆರ್.ಡಿ. 248-3324: 94-95 ದಿನಾಂಕ 18-4-1994ರಂದು ಸದರಿ ಸ್ಥಳದಲ್ಲಿ ಎಕರೆಗೆ 3 ಮರಗಳಂತೆ ಒಟ್ಟು ವಿಸ್ತೀರ್ಣದ 10.60ರ ಪೈಕಿ 8.70 ಎಕರೆ ಮರ ಇರುವ ಜಾಗವೆಂದು ನಕ್ಷೆಯಲ್ಲಿ ಕಾಣಿಸಿರುವಂತೆ 8.70 ಎಕರೆಯಲ್ಲಿ, ಎಕರೆಗೆ 3 ಮರಗಳಂತೆ ಒಟ್ಟು 25 ಮರಗಳನ್ನು ಕಡಿತಲೆ ಮಾಡಲು ಆದೇಶ ನೀಡಲಾಗಿದೆ. ಆದರೆ, ಅರ್ಜಿದಾರರು ಅನುಮತಿ ನೀಡಿದ 25 ಮರಗಳನ್ನಲ್ಲದೆ ಇತರ ಅನುಮತಿ ನೀಡದ 158 ಮರಗಳನ್ನು ಕಡಿದಿರುತ್ತಾರೆ. ಅದರಲ್ಲಿ 363.343 ಘನ ಮೀಟರ್ ನಾಟಾ ಹಾಗೂ 484.650 ಘನ ಮೀಟರ್ ಸೌದೆಯನ್ನು ತಯಾರಿಸಿರುತ್ತಾರೆ.

ಅನುಮತಿ ನೀಡದೆ ಕಡಿದ 158 ಮರಗಳಿಗೆ 5 (ಐದು) ಅರಣ್ಯ ಮೊಕದ್ದಮೆಗಳನ್ನು ದಾಖಲಿಸಿಕೊಳ್ಳಲಾಗಿದೆ. ಹಾಗೂ ಈ ಮೊಕದ್ದಮೆಗಳನ್ನು ಇಲಾಖಾ ಮುಖಾಂತರ ಇತ್ಯರ್ಥ ಪಡಿಸಿ ಪ್ರತಿಯೊಂದು ಮೊಕದ್ದಮೆಗೆ ರೂಪಾಯಿ 3 ಸಾವಿರದಂತೆ ರಾಜಿ ಶುಲ್ಕ ವಿಧಿಸಿ ಮತ್ತು ಇದಲ್ಲದೆ ಸ್ವತ್ತುಗಳ ಸೀನಿಯರೇಜ್ ದರದಲ್ಲಿ ಮೌಲ್ಯ ಮತ್ತು ಇತರ ತೆರಿಗೆಗಳು ಸೇರಿ ಒಟ್ಟು 2,79,424-00 ರೂಪಾಯಿಗಳನ್ನು ಪಡೆದು ಅರ್ಜಿದಾರರಿಗೆ ಅರಣ್ಯ ಮೊಕದಮೆಯಲ್ಲಿನ ನಾಟಾ ಮತ್ತು ಕಟ್ಟಿಗೆಯನ್ನು ಬಿಡುಗಡೆ ಗೊಳಿಸಲಾಗಿದೆ. ಹಾಗೂ ಅನುಮತಿ ನೀಡಿದ 25 ಮರಗಳಿಂದ ತಯಾರಿಸಿದ 183.940 ಘನ ಮೀಟರ್ ನಾಟಾ ಮತ್ತು 185.048 ಸೌದೆಯನ್ನು ದಿನಾಂಕ 14-5-1996ರಲ್ಲಿ ಬಿಡುಗಡೆಗೊಳಿಸಲಾಯಿತು. ಅನುಮತಿ ನೀಡಿದ ಎಲ್ಲಾ ಮರಗಳು ಮೆದು ಜಾತಿಯ ಮರಗಳಾಗಿರುತ್ತವೆ. ಕಡಿದ ಮರಗಳು ಪೂನ್, ನೀಲಿ, ಧೂಪ, ಕಲ್‌ಗರಿಗೆ, ನೊಗ

ಹಾಗೂ ಇತರ ಕಾಡು ಜಾತಿಗೆ ಸೇರಿದ ಮರಗಳಾಗಿರುತ್ತವೆ.

ಈ ಮಧ್ಯ ಕುಮಾರ ಹಳ್ಳಿ ಗ್ರಾಮದ ಶ್ರೀ ಕೆ.ಕೆ.ಅನಂದರವರು ದಿನಾಂಕ 12-8-1996ರಂದು ಮೇಲೆ ತಿಳಿಸಿದ ಸರ್ವೆ ನಂಬರು ಜಾಗಗಳನ್ನು ಅದಲು ಬದಲು ಮಾಡಿ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂದು ದೂರರ್ಜಿಯಲ್ಲಿ ತಿಳಿಸಿರುತ್ತಾರೆ. ಇದರಂತೆ ಸಾಗಾಟಕ್ಕಾಗಿ ನೀಡಿದ ರಹದಾರಿಯನ್ನು ತಡೆಹಿಡಿಯುವಂತೆ ವಲಯ ಅರಣ್ಯಾಧಿಕಾರಿ, ಸೋಮಾವರ ಪೇಟೆ ವಲಯಕ್ಕೆ ದೂರವಾಣಿ ಮೂಲಕ ತಿಳಿಸಲಾಯಿತು. ಆ ವೇಳೆಗಾಗಲೇ 262.000 ಘನ ಮೀಟರ್ ನಾಟಾವನ್ನು ಕೇರಳಕ್ಕೆ ರಹದಾರಿ ಮೂಲಕ ಸಾಗಿಸಿರುತ್ತಾರೆ. ಇದಲ್ಲದೆ ಸದರಿ ದೂರರ್ಜಿಯನ್ನು ಪರಿಶೀಲಿಸಲು ಕೊಡಗು ಜಿಲ್ಲೆಯ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಕಳುಹಿಸಲಾಯಿತು'' ಆದರೆ, ಎಡಿ.ಎಲ್.ಆರ್.ರವರು ಈ ಸ್ಥಳವನ್ನು ತಾವೇ ಮೋಜಣಿ ನಡೆಸಿರುವುದರಿಂದ ಮತ್ತೊಮ್ಮೆ ವರದಿ ನೀಡುವ ಅಗತ್ಯ ಇಲ್ಲವೆಂದು ಪತ್ರ ಮುಖೇನ ತಿಳಿಸಿರುತ್ತಾರೆ. ನಂತರ ಇದರ ಬಗ್ಗೆ ಡಿ.ಡಿ.ಎಲ್.ಆರ್.ಮಂಗಳೂರು ರವರಿಗೆ ಪತ್ರ ಬರೆದು ಜಂಟಿ ತನಿಖೆ ನಡೆಸಿ ವರದಿ ನೀಡಲು ತಿಳಿಸಲಾಯಿತು. ಅದರಂತೆ ಡಿ.ಡಿ.ಎಲ್.ಆರ್.ರವರು ದಿನಾಂಕ 10-6-1997ರಂದು ವರದಿ ನೀಡಿ ಸದರಿ ಸ್ಥಳವು ಸರ್ಕಾರಿ ಜಾಗವಾಗಿರುತ್ತದೆಂದೂ ಹಾಗೂ 1981-82ನೇ ಸಾಲಿನಲ್ಲಿ ಕುಮಾರ ಹಳ್ಳಿ ಗ್ರಾಮದ ಸರ್ವೆ ನಂಬರ್ 1:348 10.60 ಎಕರೆ ಜಾಗದಲ್ಲಿ ತೆಗೆದು ಮರದ ಸ್ಥಳವು ನಿಜವಾದ ಸರ್ಕಾರಿ ಜಾಗವಾಗಿರುತ್ತದೆ ಹಾಗೂ ಈವಾಗ್ಗೆ ಮರಗಳನ್ನು ತೆಗೆದ ಸ್ಥಳವು ಸರ್ಕಾರಿ ಜಾಗವಾಗಿರುತ್ತದೆ. ಮತ್ತು ಈ ಎರಡು ಸ್ಥಳಗಳ ಅಂತರ ಸುಮಾರು 1 ಕಿ.ಮೀ. ಇರುತ್ತದೆ. ಸದರಿ ಸ್ಥಳವು ಸರ್ಕಾರ ಜಾಗವೆಂದು ಖಾತರಿ ಮಾಡಿಕೊಂಡ ನಂತರ ಸಾಗಾಣಿಕೆ ಆಗದೇ ಉಳಿದಿದ್ದ 268.280 ನಾಟಾ ಮತ್ತು 358.000 ಘನ ಮೀಟರ್ ಸೌದೆಯನ್ನು ಸರ್ಕಾರಕ್ಕೆ ದಿನಾಂಕ 16-7-1997ರಂದು ಮುಟ್ಟುಗೋಲು ಹಾಕಿಕೊಂಡು ಸರ್ಕಾರಿ ಮರ ಸಂಗ್ರಹಾಲಯ, ಕುಶಾಲನಗರದ ಅನೆಕಾಡು ಡಿಪೋವಿಗೆ ಸಾಗಿಸಲಾಗಿದೆ. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಪತ್ರ ದಿನಾಂಕ 14-7-1997ರಂದು ಈ ಪ್ರಕರಣದಲ್ಲಿ ಶಾಮೀಲಾದ ಇಲಾಖಾ ಸಿಬ್ಬಂದಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ ಹಾಗೂ ಈ ಪ್ರಕರಣದಲ್ಲಿ ಶಾಮೀಲಾದ ಸರ್ವೆ ಇಲಾಖೆಯ ಸಿಬ್ಬಂದಿಯವರ ಮೇಲೆ ಕ್ರಮ ತೆಗೆದುಕೊಳ್ಳಲು ದಿನಾಂಕ 12-7-1997ರಂದು ಭೂದಾಖಲೆಗಳ ನಿರ್ದೇಶಕರು, ಬೆಂಗಳೂರು ಇವರಿಗೆ ಪತ್ರ ಬರೆಯಲಾಗಿದೆ.

ಸರ್ಕಾರಿ ವಕೀಲರ ಅಭಿಪ್ರಾಯ ಪಡೆದು ಅವರ ಸೂಚನೆಯಂತೆ ಶ್ರೀ ಬಾಬುರಾಜೇಂದ್ರರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಸಂಖ್ಯೆ 146:97ರಂತೆ ಸೋಮವಾರಪೇಟೆ ಆರಕ್ಷಕರ ಠಾಣೆಯಲ್ಲಿ ಮಾಡಲಾಗಿದೆ.

ಈ ಮಧ್ಯೆ ಶ್ರೀ ಹೆಚ್.ಸಿ.ಬಾಬುರಾಜೇಂದ್ರರವರು ಕರ್ನಾಟಕ ಉಚ್ಚ

ನ್ಯಾಯಾಲಯದಲ್ಲಿ ಸಾಗಾಣಿಕೆಗಾಗಿ ತಡೆ ಹಿಡಿದ ರಹದಾರಿ ನೀಡಲಿಲ್ಲವೆಂದು ರಿಟ್ ಅರ್ಜಿ ಸಂಖ್ಯೆ 12735: 1997 ರಂತೆ ಸರ್ಕಾರದ ವಿರುದ್ಧ ದಾವೆ ಮಾಡಿರುತ್ತಾರೆ. ಇದರ ಬಗ್ಗೆ ತೀರ್ಪು ನ್ಯಾಯಾಲಯದಿಂದ ಬಂದಿರುವುದಿಲ್ಲ. ಆದಕ್ಕಾಗಿ ಸನ್ಮಾನ್ಯ ಅಧ್ಯಕ್ಷರೇ, ಇದು ಒಂದು ಸ್ವಲ್ಪ ನಮಗೂ ಕೂಡ, ಸರ್ಕಾರಕ್ಕೆ ಇದು ಅನ್ನಿಸಿದೆ. ಇದನ್ನು ಸಿ.ಓ.ಡಿ.ಗೆ ನಾವು ವಹಿಸಬೇಕು ಎಂದು ಮನಸ್ಸು ಮಾಡಿದ್ದೇನೆ. ಸಿ.ಓ.ಡಿ.ಗೆ ವಹಿಸುತ್ತೇನೆ. ಸಂಪೂರ್ಣವಾಗಿ ಇದರ ತನಿಖೆಯನ್ನು ಮಾಡಿಸಿ, ಇದು ಯಾರ್ಯಾರು ಒಳಗೆ ಇದ್ದಾರೆ, ನಿರ್ಧಾಕ್ಷಿಣ್ಯವಾಗಿ ಅವರನ್ನು ಒಳಗೆ ಹಾಕಿಸುತ್ತೇನೆ.

ಶ್ರೀ ಎಂ.ಪಿ ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೇ, ಇದು 12.8.96 ಅಂತ ಉತ್ತರದಲ್ಲಿ ಕೊಟ್ಟಿದ್ದಾರೆ. ಅದಕ್ಕೆ ಎ.ಡಿ.ಎಲ್.ಆರ್.ಮಂಗಳೂರಿಗೆ ಕಳಿಸಿ ಅವರ ಪತ್ರ ಬಂದ ನಂತರ ಇದು ಅದೇ ಜಾಗ ಅಂತ ಹೇಳಿ 10.6.97ರಲ್ಲಿ ಉತ್ತರ ಬಂದಿದೆ ಅಂತ ಹೇಳುತ್ತಾರೆ. ಆದರೆ ಇವರು ಅದಕ್ಕೆ ಮುಂಚೇನೆ 7.9.96ರಲ್ಲಿ ಎಲ್ಲ ಮರಗಳನ್ನು ರಿಲೀಸ್ ಮಾಡಿದ್ದಾರೆ, ರಿಲೀಸ್ ಮಾಡಲಿಕ್ಕೆ ಪರ್ಮಿಟ್ ಕೂಡ ಕೊಟ್ಟಿದ್ದಾರೆ. ನನ್ನ ಹತ್ತಿರ ಆರ್ಡರ್ ಕಾಪಿ ಕೂಡ ಇದೆ. ಈ ಪುಕಾರು ಬರೆದವರು 1992-93ರಲ್ಲಿ ಇದೇ ಜಾಗದ ಸರ್ವೆನಂಬರ್‌ನಿಂದ ಸುಮಾರು 622 ಮರಗಳನ್ನು ಕಡಿಯಲು ಪರ್ಮಿಶನ್ ಕೊಟ್ಟಿದ್ದಾರೆ. ಪುನಃ ಅದೇ ಜಾಗದಲ್ಲಿ, ಏನು ಮಾನ್ಯ ಮಂತ್ರಿಗಳು ಕೊಟ್ಟ ಉತ್ತರ ಏನಿದೆ, ಅದು ಸತ್ಯಕ್ಕೆ ದೂರವಾದ ಉತ್ತರ ಇದೆ. ಅಲ್ಲಿ 1/348, 1/348ಬಿ ಅಂತ ಹೇಳಿರುವುದೇ ಸರ್ವೆ ನಂಬರ್ ಇಲ್ಲ. ಈ ಸರ್ವೆ ನಂಬರುಗಳನ್ನು ಸೃಷ್ಟಿ ಮಾಡಿದ್ದಾರೆ. ಇದು ಖೋಟಾ ದಾಖಲೆಗಳನ್ನು ಮಾಡಿ ಈ ಮರ ಕಡಿಯುವುದನ್ನು ಮಾಡಿದ್ದಾರೆ. ಒಂದು ಸಾರಿ 1992-93ರಲ್ಲಿ 662 ಮರಗಳನ್ನು ಕಡಿಯಲಿಕ್ಕೆ ಪರ್ಮಿಶನ್ ಕೊಟ್ಟನಂತರ ಪುನಃ ಅದೇ ಜಾಗದಲ್ಲಿ ಹೇಗೆ ಮರಗಳು ಬರುತ್ತವೆ? ಅದಕ್ಕೆ ಚಕ್ಕುಬಂಧಿಗಳು ಇಲ್ಲವೇ? ಇವತ್ತು ಆ ಪುಕಾರು ಯಾರು ಕಳಿಸಿದ್ದಾರೆ, ಅದನ್ನು ನಾನು ಓದುತ್ತೇನೆ-

ಕುಮಾರಹಳ್ಳಿ ಗ್ರಾಮದ ಹೆಚ್.ಸಿ.ಬಾಬುರಾಜೇಂದ್ರ ಎನ್ನುವವರು ಸರ್ವೆನಂಬರು 1:348ಎ-ಬಿ ನಲ್ಲಿ ಸ್ಥಳ ಅದಲುಬದಲು ಮಾಡಿ ಮರ ಕಡಿದ ಬಗ್ಗೆ ಕುಮಾರಹಳ್ಳಿ ಗ್ರಾಮದ ಹೆಚ್.ಸಿ.ಬಾಬುರಾಜೇಂದ್ರ ಎಂಬುವವರು ರಿಡೀಮ್ಡ್ ಸಾಗು ಸರ್ವೆ ನಂಬರ್ 1/348 ಎ ಮತ್ತು ಬಿ ಎಂಬಲ್ಲಿ 10 ಎಕರೆ 60 ಸೆಂಟು ವಿಸ್ತೀರ್ಣದಲ್ಲಿ 1993-94ರಲ್ಲಿ ಅರಣ್ಯ ಇಲಾಖೆಯಿಂದ ಆದೇಶ ಪಡೆದು ದೊಡ್ಡಬೆಟ್ಟ ಎಂಬಲ್ಲಿಂದ ಮರಗಳನ್ನು ಕಡಿದು ಸುಬ್ರಹ್ಮಣ್ಯ ಮಾರ್ಗವಾಗಿ ಮರವನ್ನು ಸಾಗಿಸಿರುತ್ತಾರೆ. ಪುನಃ ಈಗಾಗಲೇ ಅಂದರೆ 1996ನೇ ಇಸವಿಯಲ್ಲಿ ಅದೇ ರೀಡಿಮ್ಡ್ ಜಾಗದಲ್ಲಿ ಸರ್ವೆ ನಂಬರ್ 1/348ನ್ನು ತೋರಿಸಿ ಮಲ್ಲಳ್ಳಿ ಹತ್ತಿರ ಕಾಟಿಗುಂಡಿ ಎಂಬ ಸ್ಥಳದಿಂದ ಅಂದರೆ ಮೊದಲು ಕಡಿದ ಸ್ಥಳದಿಂದ ಅಂದಾಜು 2 ಕಿಲೋಮೀಟರ್ ದೂರದಲ್ಲಿ, ಅಂದಾಜು 20 ಸಾವಿರ ಘನ ಅಡಿ ಮರವನ್ನು ಅನುಮತಿ ಪಡೆದು ಕಡೆದಿದ್ದಾರೆ ಅಂತ ಹೇಳಿ ಪುಕಾರು ಬರೆದಿದ್ದಾರೆ. ಪುಕಾರು ಬಂದರೂ ಕೂಡ ಈ ಪುಕಾರನ್ನು ಕೇವಲ 20 ದಿವಸದಲ್ಲಿ ವಿಚಾರಣೆ ಮಾಡಿ

ಪುನಃ ಮರ ಕಡಿಯಲು ಅನುಮತಿಯನ್ನು ಕೊಡುತ್ತಾರೆ; ಮರ ಸಾಗಿಸಲು ಅನುಮತಿ ಕೊಡುತ್ತಾರೆ. ಈ ಜಾಗಕ್ಕೆ ಸರಿಯಾದ ಜಮಾಬಂಧಿ ಇದೆಯೋ, ಆ ಜಾಗಕ್ಕೆ ಮ್ಯೂಟೇಶನ್ ಕಾಪಿ ಇದೆಯೊ? ಹೇಗೆ? ಈ ಜಾಗದಿಂದ ಮೊದಲು ಮರ ಕಡಿದಿದ್ದಾರೆಯೆ? ಇದು ಯಾವುದನ್ನೂ ತಿಳಿಯಲಿಲ್ಲ. 18.1.95ರಂದು ಒಂದು ಎಕರೆಗೆ ಮೂರು ಮರ ಪ್ರಕಾರ 25 ಮರಗಳು ಮಾತ್ರ ಬರುತ್ತವೆ. ಈ ಜಾಗ ಹೇಗೆ ಬಂತು, ಈ ಜಾಗ ಯಾವಾಗ ಬಂತು ಇದು ಯಾವುದನ್ನು ಪರಿಶೀಲನೆ ಮಾಡಲಿಲ್ಲ. ಏಕಾಏಕಿ 20 ದಿವಸಗಳಲ್ಲಿ ಮರಗಳನ್ನು ಸಾಗಿಸಲು ಪುನಃ ಅನುಮತಿ ಕೊಡುತ್ತಾರೆ. ಅನುಮತಿ ಕೊಡುವಾಗ ವಲಯ ಅರಣ್ಯಾಧಿಕಾರಿಗಳಿಗೆ ಫೋನು ಮಾಡಿ ಅಲ್ಲಿಯ ಡಿ.ಎಫ್.ಒ. ಸಂದೇಶ ಕೊಡುತ್ತಾರೆ. ಈ ಮರ ರಿಲೀಸ್ ಮಾಡಿ ಎಂದು. ಒಂದು ಸಾರಿ ನಿಲ್ಲಿಸಿ ಅಂತ ಹೇಳಿ 12.8.96ರಲ್ಲಿ ನಿಲ್ಲಿಸುವುದಕ್ಕೆ ಆದೇಶ ಮಾಡುತ್ತಾರೆ. ಅದನ್ನು ಪುನಃ ರಿಲೀವ್ ಮಾಡಲಿಕ್ಕೆ 7.9.96ರಲ್ಲಿ ರಿಲೀವ್ ಮಾಡಿಸುತ್ತಾರೆ ಪರ್ಮಿಟ್ ಕೊಡುತ್ತಾರೆ ಎಂದರೆ ಇಷ್ಟರೊಳಗೆ ಅಲ್ಲಿಯ ವಲಯಾಧಿಕಾರಿ 17 ಪರ್ಮಿಟ್ ಕೊಟ್ಟಾಗಿದೆ, ಬಾಕಿ 10 ಪರ್ಮಿಟ್ ಇದೆ ಅಂತ ಹೇಳಿ ಉತ್ತರವನ್ನು ಕೊಡುತ್ತಾರೆ. ಆದರೆ 20 ದಿವಸದಲ್ಲಿ ಕೊಡುವ ಔಚಿತ್ಯ ಏನಿತ್ತು? ಇದರಲ್ಲಿ ಭ್ರಷ್ಟಾಚಾರ ನಡೆದಿದೆ. ಇಲ್ಲದಿದ್ದರೆ....

ಅಧ್ಯಕ್ಷರು: ಒಂದು ನಿಮಿಷ. ತಾವು ಏನು ಹೇಳುತ್ತೀರಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಮಂತ್ರಿ): ಇದೆಲ್ಲ ನೋಡಿದ ಮೇಲೆ ಸರ್ಕಾರದ ಗಮನಕ್ಕೆ ಬಂದಿದೆ, ಇದು ಅನಾಹುತ ಮಾಡಿದ್ದಾರೆ, ಜಾಗ ಬದಲಾಯಿಸಿದ್ದಾರೆ, ಈ ಮರಗಳನ್ನು ಮಾಡಿದ್ದಾರೆ....ಅದಕ್ಕಾಗಿ ಸಿ.ಓ.ಡಿ.ಗೆ ಕೊಡುತ್ತೇವೆ ಅಂತ ನಾನೇ ಸ್ವಂತವಾಗಿ ಹೇಳಿದ್ದೇನೆ.

ಅಧ್ಯಕ್ಷರು: ಈಗ ಯಾರಾದರೂ ನಿಮ್ಮ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ? ಇದುವರೆಗಾಗಲೀ ನಿಮ್ಮ ಅಧಿಕಾರಿಗಳು ಯಾರ ಮೇಲೆಯಾದರೂ ಕ್ರಮ ಜರುಗಿಸಿದ್ದೀರಾ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಈಗ ಅವರ ಮೇಲೆ ವಿಚಾರಣೆ ನಡೆಸುತ್ತಿದ್ದೇವೆ. ಅದಕ್ಕೂ ಮೇಲಾಗಿ ಇನ್ನೂ ಯಾರ್‍ಯಾರು ಇದರಲ್ಲಿ, ಇದು ಸನ್ಮಾನ್ಯ ಅಧ್ಯಕ್ಷರೇ, ಇದು ಏನಾಗಿದೆ ಎಂದರೆ ಸರ್ವೆ ಡಿಪಾರ್ಟಮೆಂಟ್ ಅದರಲ್ಲಿ ಸೇರಿದೆ. ಆಮೇಲೆ ರೆವಿನ್ಯೂ ಡಿಪಾರ್ಟ್‌ಮೆಂಟ್, ಅರಣ್ಯ ಡಿಪಾರ್ಟಮೆಂಟ್ ಇವೆಲ್ಲ ಸೇರಿ ಮಾಡಿದ್ದಾರೆ ಎನ್ನುವ ಭಾವನೆ ನಮಗೂ ಬರುತ್ತಿದೆ. ಅದಕ್ಕಾಗಿ ನಾನು ಸಿ.ಒ.ಡಿ.ಗೆ ಕೊಡುತ್ತಿದ್ದೇವೆ ಅಂತ ಹೇಳಿದ್ದು. ಸಿ.ಓ.ಡಿ.ಗೆ ಒಪ್ಪಿಸಿದ್ದೇವೆ. ಎನ್‌ಕ್ವೈರಿ ನಡೆಯುತ್ತಿದೆ...

ಶ್ರೀ ಬಿ.ಎಸ್.ಯಡಿಯೂರಪ್ಪ: ಅದೇ ಭ್ರಷ್ಟ ಅಧಿಕಾರಿಗಳು ಇದ್ದರೆ ಅಲ್ಲಿ ಸಿ.ಒ.ಡಿ. ತನಿಖೆಯಿಂದ ನ್ಯಾಯ ಸಿಗುತ್ತದಾ? ಕೋಟಿಗಟ್ಟಲೆ ನಷ್ಟವಾಗಿದೆ. ಅವರನ್ನು ಸಸ್ಪೆಂಡ್

ಮಾಡಿಸಿ....

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಎನ್‌ಕ್ವೈರಿ ಮಾಡಿಸುತ್ತಿದ್ದೇವೆ. ರಿಪೋರ್ಟ್ ಬಂದತಕ್ಷಣ ನಿರ್ಧಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ ಅಂತ ನಾನು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಮೇಲ್ನೋಟಕ್ಕೆ ನಿಮ್ಮ ಅಧಿಕಾರಿಗಳು ಭ್ರಷ್ಟಾಚಾರ ಮಾಡಿದ್ದಾರೆ ಎಂದು ಗೊತ್ತಾಗುವುದಿಲ್ಲವೆ? ಮಾನ್ಯ ಅರಣ್ಯ ಸಚಿವರೇ, ಮೇಲ್ನೋಟಕ್ಕೆ ನಿಮ್ಮ ಅಧಿಕಾರಿಗಳು ತಪ್ಪು ಮಾಡಿದ್ದಾರೆ ಎಂದು ತಮಗೆ ಗೊತ್ತಾಗಿದೆ ತಾನೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಸ್ವಾಮಿ, ಈಗ ರಿಪೋರ್ಟು ಪೂರ್ತಿ ಬಂದಿಲ್ಲ. ಬರುತ್ತದೆ. ನನಗೆ ಆ ಭಾವನೆ ಬಂದಿದೆ ಅಂತ ನಾನು ಸಿ.ಓ.ಡಿ.ಗೆ ಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ತಾವು ಸಿ.ಓ.ಡಿ.ಗೆ ಒಪ್ಪಿಸಬೇಕು ಅಂತ ತೀರ್ಮಾನಕ್ಕೆ ಬಂದಿರುವಾಗ ತಪ್ಪಾಗಿರಬೇಕಲ್ಲ?....

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಾನೇ ಹೇಳುತ್ತಿದ್ದೇನೆ, ತಪ್ಪು ಮಾಡಿದವನನ್ನು ಉಳಿಸುವುದಿಲ್ಲ.

ಅಧ್ಯಕ್ಷರು: ಈಗ ಒಂದುವೇಳೆ ವಿಧಾನಸಭೆ, ಅಧಿವೇಶನ ಇರಲಿಲ್ಲ ಅಂತ ತಿಳಿದುಕೊಳ್ಳೋಣ. ಅಪ್ಪಚ್ಚು ರಂಜನ್ ಅವರು ನೋಟೀಸ್ ಕೊಟ್ಟಿಲ್ಲ. ಆವಾಗ ಇದು ಏನು ಆಗುತ್ತಾ ಇತ್ತು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಾನು ಅವರಿಗೆ ಸಸ್ಪೆಂಡ್ ಮಾಡುವುದಕ್ಕೆ ಈಗಾಗಲೇ ಆದೇಶವನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು: ಇಲ್ಲ, ನನ್ನ ಪ್ರಶ್ನೆಗೆ ಉತ್ತರ ಹೇಳಿ. ಅಸೆಂಬ್ಲಿ ಅಧಿವೇಶನ ಇದ್ದಿರಲಿಲ್ಲ ಅಂತ ತಿಳಿದುಕೊಳ್ಳೋಣ. ಈ ರೀತಿ ನೋಟೀಸ್ ಯಾರೂ ಕೊಡುತ್ತಾ ಇರಲಿಲ್ಲ. ಆವಾಗ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನೋಟೀಸ್ ಕೊಡಲಿ, ಕೊಡದೇ ಇರಲಿ. ಸರ್ಕಾರದ ಕರ್ತವ್ಯವನ್ನು ಸರ್ಕಾರ ಮಾಡುತ್ತದೆ. ನಮ್ಮ ಕರ್ತವ್ಯವನ್ನು ನಾವು ಮಾಡುತ್ತೇವೆ. ಅದಕ್ಕೆ ಯಾವುದೇ ನಿರ್ಧಾಕ್ಷಿಣ್ಯ ಇಲ್ಲ.

ಅಧ್ಯಕ್ಷರು: ದಯಮಾಡಿ ತಿಳಿದುಕೊಳ್ಳಿ. ನಾನು ತಮಗೆ ಸೂಚನೆ ಕೊಡುತ್ತಿದ್ದೇನೆ. ಮಾನ್ಯ ಮಂತ್ರಿಗಳೇ, ಈ ರೀತಿಯ ಅಧಿಕಾರಿಗಳು ಯಾರ್‍ಯಾರು ಇರುತ್ತಾರೆ, ಅವರು ಯಾವ್ಯಾವ ಇಲಾಖೆಗಳಿಗೇ ಸೇರಿರಲಿ. ಇವರೇನೂ ನಿಮ್ಮ ಸರ್ಕಾರವನ್ನು ರಕ್ಷಣೆ ಮಾಡುವವರಲ್ಲ. ಊಟ ಮಾಡುವುದಕ್ಕೆ ಇರುವವರು. ಮೇಲ್ನೋಟಕ್ಕೆ ಎಲ್ಲೆಲ್ಲಿ

ಸಾಬೀತಾಗಿದೆ, ಮೊದಲು ಅವರನ್ನು ಬಲಿಹಾಕಿ. ಆಮೇಲೆ ವಿಚಾರಣೆ ಎಲ್ಲ ನಡೆಸಿ. ತಕ್ಷಣಕ್ಕೆ ಸಾಯಂಕಾಲ ಒಳಗಾಗಿ ಅವರ ಮೇಲೆ ಕ್ರಮ ತೆಗೆದುಕೊಂಡು ನಿಮ್ಮ ಸಹದ್ಯೋಗಿಗಳ ಹತ್ತಿರ ಕೂಡ ಮಾತನಾಡಿ ಅವರು ಯಾವ್ಯಾವ ಇಲಾಖೆಗಳಿಗೆ ಸೇರಿದವರು ಇದ್ದಾರೆ ಅವರನ್ನೆಲ್ಲ ಮಟ್ಟಹಾಕಿ, ಸಾಯಂಕಾಲ ಬಂದು ವರದಿಯನ್ನು ಕೊಡಿ. ಗೌರವ ಬರುತ್ತದೆ ನಿಮ್ಮ ಸರ್ಕಾರಕ್ಕೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಾನು ಸ್ವತಃ ಹೇಳುತ್ತಿದ್ದೇನೆ. ಎಲ್ಲರ ಮೇಲೂ ಕ್ರಮ ತೆಗೆದುಕೊಳ್ಳುತ್ತೇನೆ ಅಂತ ನಾನು ಒಪ್ಪಿದ್ದೇನೆ. ಸಿ.ಓ.ಡಿ.ಗೆ ಕೊಡುತ್ತೇನೆ ಅಂತ ಹೇಳಿದ್ದೇನೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಅಂತ ಕೂಡ ಹೇಳಿದ್ದೇನೆ. ಇದರಲ್ಲಿ ದೊಡ್ಡವರು ಸಣ್ಣವರು ಯಾರೇ ಇರಲಿ....

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸರ್ಕಾರ ಮಾಡುವುದು ಇಷ್ಟೇ....

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಯಾರೇ ಬಂದರೂ ಒಳಗೆ ಹಾಕ್ತೀವಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮೊದಲು ಅವರನ್ನು ಸಸ್ಪೆಂಡ್ ಮಾಡಿ.

ಅಧ್ಯಕ್ಷರು: ಏನು ಅಪ್ಪಚ್ಚು, ತಾವು ಏನು ಹೇಳಬೇಕೂಂತ ಇದ್ದೀರಿ?

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಯಾರು ಡಿ.ಎಫ್.ಓ, ಎ.ಸಿ.ಎಫ್, ರೇಂಜರ್, ಫಾರೆಸ್ಟ್, ಈ ನಾಲ್ಕು ಜನರನ್ನು ನೀವು ಸಸ್ಪೆಂಡ್ ಮಾಡಬೇಕು. ಅದು ಬಿಟ್ಟು ಇಲ್ಲಿ ಪ್ರಶ್ನೆ ಎತ್ತಿದಾಕ್ಷಣ ಯಾರೋ ಬಡಪಾಯಿ ಫಾರೆಸ್ಟರ್, ರೇಂಜರ್‌ರವರನ್ನು ಸಸ್ಪೆಂಡ್ ಮಾಡುವುದಲ್ಲ. ಎಲ್ಲರನ್ನೂ ತಾವು ಸಸ್ಪೆಂಡ್ ಮಾಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಇದರಲ್ಲಿ ಯಾರು ತಪ್ಪಿತಸ್ಥರೆಂದು ಕಂಡುಬರುತ್ತಾರೋ ಅವರು ದೊಡ್ಡವರಿರಲಿ, ಸಣ್ಣವರಿರಲಿ, ಇದು ಯಾವುದನ್ನು ಗಣನೆಗೆ ತೆಗೆದುಕೊಳ್ಳದೆ ಅವರನ್ನು ಮಾಡುತ್ತೇವೆ.

(ಗೊಂದಲ)

MR. SPEAKER: Mr. Yedeyurappa, you are permitted to help your friend.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಧ್ಯಕ್ಷರೆ, ಈ ಗಮನ ಸೆಳೆಯುವ ಸೂಚನೆಯ ಮಧ್ಯ ಪ್ರವೇಶಿಸಬಾರದು ಎನ್ನುವ ಅರಿವು ನನಗಿದೆ. ಆದರ ಇಲ್ಲಿ 25 ಮರಗಳನ್ನು

ಕಡಿಯುವುದಕ್ಕೆ ಅನುಮತಿ ಕೊಟ್ಟರು. ಇವರೇ ಅಧಿಕಾರಿಗಳು ಸ್ಥಳ ಪರಿವೀಕ್ಷಣೆ ಮಾಡಿದರು, ಆದರೆ 158 ಮರಗಳನ್ನು ಕಡಿದಿದ್ದಾರೆ ಅಂತ ಆಯಿತು. ಅದು ಈಗ ಸರ್ವೆ ನಂಬರ್ ಸುಳ್ಳು ಎಂದು ಈಗ ಗೊತ್ತಾಗಿದೆ. ಹಿಂದೆ ಅದೇ ಸ್ಥಳದಲ್ಲಿ 662 ಮರಗಳನ್ನು ಕಡಿಯುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅರಣ್ಯ ಇಲಾಖೆಯಲ್ಲಿ ನಮ್ಮ ಸ್ವಂತದ್ದು ಮರ ಕಡಿಯುವುದಕ್ಕೆ ಪರ್ಮಿಷನ್ ದೊರಕಬೇಕಾದರೆ ಸುಮಾರು ಆರು ತಿಂಗಳು ಕಾಲಾವಕಾಶ ಬೇಕು. ಇಲ್ಲಿ ಕೇವಲ 20 ದಿವಸಗಳಲ್ಲಿ ಮರಗಳನ್ನು ಕಡಿದು, ಸಾಗಾಣಿಕೆ ಮಾಡುವುದಕ್ಕೆ ಕೂಡ ಅಧಿಕಾರಿಗಳು ಶಾಮೀಲಾಗಿ ಎಲ್ಲಾ ಮಾಡಿಕೊಟ್ಟರು. ದಯಮಾಡಿ ಅಧ್ಯಕ್ಷರು ಹೇಳಿದ ಹಾಗೆ.. ನಾವು ಇಲ್ಲಿ ಅಪರೂಪಕ್ಕೆ ಎಲ್ಲ ನಿಷ್ಠೂರವನ್ನು ಸಹಿಸಿಕೊಂಡು ಅವರು ಪ್ರಸ್ತಾಪ ಮಾಡಿದ್ದಾರೆ. ಒಂದುನೂರು ಘಟನೆ ನಡೆದರೆ ಇಲ್ಲಿ ಒಂದು ಘಟನೆ ಬೆಳಕಿಗೆ ಬಂದಿದೆ. ಇದಕ್ಕಾಗಿ ತಾವು ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನು ಇಮ್ಮೀಡಿಯೇಟ್ ಆಗಿ ಸಸ್‌ಪೆಂಡ್‌ನಲ್ಲಿಟ್ಟು....ಮಾನ್ಯ ಅಧ್ಯಕ್ಷರು ಈಗಾಗಲೇ ಹೇಳಿದಾಗೆ ಸಂಜೆಯೊಳಗೆ ವಿವರವಾದ ಒಂದು ಹೇಳಿಕೆಯನ್ನು ತಾವು ಕೊಡಿ, ಅದುಬಿಟ್ಟು ಕಾಲಿಂಗ್ ಅಟೆಂಕ್ಷನ್‌ಗೆ ಸುಮ್ಮನೆ ಏನೋ ಉತ್ತರ ಕೊಡಬೇಡಿ. ನೋಡಿ ಇಲ್ಲಿರುವುದು ಅರಣ್ಯ ಸಂಪತ್ತನ್ನು ಉಳಿಸುವುದಕ್ಕೆ ವಿನಾಃ ಸರ್ಕಾರಕ್ಕೆ ಹೆಲ್ಪ್ ಮಾಡತಕ್ಕಂಥ ಕೆಲಸ ನಾವು ಮಾಡುತ್ತಿದ್ದೇವೆ. ಈಗ ಗಮನ ಸೆಳೆಯುವ ಸೂಚನ ಪ್ರಸ್ತಾಪ ಮಾಡುವುದಕ್ಕೆ ಮುಂಚಿತವಾಗಿ ತಾವು ಸಸ್‌ಪೆಂಡ್ ಮಾಡಿ ಇಲ್ಲಿಗೆ ಬರಬೇಕಾಗಿತ್ತು.

MR. SPEAKER: I have requested the Chief Minister to intervene. Please yeild for one minute.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಅಧ್ಯಕ್ಷರೇ, ಯಾವ ಅಧಿಕಾರಿ ಅವನು ತಪ್ಪು ಮಾಡಿದ್ದರೆ ಅವನನ್ನು ಪ್ರೊಟೆಕ್ಟ್ ಮಾಡುವುದಾಗಲಿ, ಕ್ಷಮಿಸುವುದಾಗಲಿ, ಉದ್ದೇಶ ನಮಗೆ ಖಂಡಿತವಾಗಿ ಇಲ್ಲ. ತತ್‌ಕ್ಷಣ ಕಾರ್ಯಕ್ರಮ ಕೈಗೊಂಡು, ಅವರು ಯಾರ ಮೇಲೆ ಕಂಪ್ಲೇಂಟ್ ಕೊಟ್ಟಿದ್ದಾರೋ ಅದನ್ನು ತೆಗೆದುಕೊಂಡು, ನಂತರ ನಿಮ್ಮ ಹತ್ತಿರ ಬಂದರೆ ಆಗಬಹುದೆ?

MR. SPEAKER: Are you satisfied? ತಕ್ಷಣ ಕ್ರಮವನ್ನು ತೆಗೆದುಕೊಂಡು ಸಂಜೆಯೊಳಗೆ ನಿಮಗೆ ಒಪ್ಪಿಸುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳೆ ಹೇಳಿದ್ದಾರೆ. ಅವನ್ನೆಲ್ಲ ಕಳಿಸಿ ಕೊಡಿ, ತಾವು ಒಂದು ಕೆಲಸ ಮಾಡಿ, you can find some time the Hon'ble Chief Minister, explain everything to him in person. The Hon'ble Minister for Forest would also be there. They would be in a position to take action immediately.

(ಆ) ತುಮಕೂರು ಜಿಲ್ಲೆಯ 8 ತಾಲ್ಲೂಕುಗಳು ಹಾಗೂ ಕೋಲಾರ ಜಿಲ್ಲೆಯ ಕೆಲವು ತಾಲ್ಲೂಕುಗಳನ್ನು ಕಪ್ಪು ಹಾಗೂ ಬೂದು ಎಂದು ವರ್ಗೀಕರಿಸಿ ರೈತರ ಕೊಳವೆ ಬಾವಿಗಳಿಗೆ ವಿದ್ಯುತ್ ಸರಬರಾಜು ನಿಲುಗಡೆ

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯ್ಕನಹಳ್ಳಿ): ಅಧ್ಯಕ್ಷರೆ, ತುಮಕೂರು ಜಿಲ್ಲೆಯ 8 ತಾಲ್ಲೂಕು ಹಾಗೂ ತಮ್ಮ ಕೋಲಾರ ಜಿಲ್ಲೆಯ ಎಲ್ಲ ತಾಲ್ಲೂಕುಗಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ವತಿಯಿಂದ, ಕಪ್ಪು ಹಾಗೂ ಬೂದು ಪ್ರದೇಶ ಎಂದು ವರ್ಗೀಕರಿಸಿ, ರೈತರ ಪಂಪ್ ಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡುವುದಿಲ್ಲ ಎಂದು ಇಲಾಖೆಯವರು ಮಾಡಿರುವ ತೀರ್ಮಾನ, ಹಾಗೂ ಬಾಕಿ ತೀರಿಸಿಲ್ಲ ಎಂದು ಹೇಳಿ ಟ್ರಾನ್ಸ್‌ಫಾರ್ಮರ್‌ಗಳು ಏನು ಫೇಲ್ ಆಗುತ್ತವೆ ಆ ಟ್ರಾನ್ಸ್‌ಫಾರ್ಮರ್ಸ್‌ನ್ನು ರೀಪ್ಲೇಸ್ ಮಾಡದೆ ಇರುವ ಕೆ.ಇ.ಬಿ.ಯವರ ವರ್ತನೆ, ಹಾಗೂ 825 ಅಡಿ ಒಳಗಡೆ ನೀರಾವರಿ ಕೊಳವೆ ಬಾವಿ ಇದೆ ಅಂತ ಹೇಳಿ ರೈತರಿಗೆ ವಿದ್ಯುತ್ ಸರಬರಾಜು ಮಾಡುತ್ತಿಲ್ಲ. ಈ ಮೂರು ಅಂಶಗಳ ಬಗ್ಗೆ ಸನ್ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

+ ಶ್ರೀ ಶರಣಬಸಪ್ಪ ದರ್ಶನಾಪುರ (ರಾಜ್ಯ ಇಂಧನ ಸಚಿವರು): ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ರಾಜ್ಯದ 175 ತಾಲ್ಲೂಕ್‌ಗಳಲ್ಲಿ 21 ತಾಲ್ಲೂಕುಗಳನ್ನು ಡಾರ್ಕ್ (ಕಪ್ಪು) ತಾಲ್ಲೂಕುಗಳೆಂದು ಮತ್ತು 22 ತಾಲ್ಲೂಕುಗಳನ್ನು ಗ್ರೇ (ಬೂದು;) ತಾಲ್ಲೂಕುಗಳೆಂದೂ ವರ್ಗಿಕರಣ ಮಾಡಿ ಘೋಷಿಸಿರುತ್ತದೆ. ಡಾರ್ಕ್ (ಕಪ್ಪು) ತಾಲ್ಲೂಕುಗಳಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಅಂತರ್ಜಲವನ್ನು ಉಪಯೋಗಿಸಿಕೊಂಡಿರುವುದರಿಂದ ಇನ್ನು ಮುಂದೆ ಇಲ್ಲಿ ಯಾವುದೇ ನೀರಾವರಿ ಪಂಪುಸೆಟ್ಟುಗಳನ್ನು ಅಳವಡಿಸಬಾರದೆಂದು ಸೂಚಿಸಿರುತ್ತದೆ. ಇದೇ ರೀತಿ ಗ್ರೇ (ಬೂದು) ತಾಲ್ಲೂಕುಗಳಲ್ಲಿ ಲಭ್ಯವಿರುವ ಅಂತರ್ಜಲವನ್ನು ಹೆಚ್ಚಿನ ಮಟ್ಟದಲ್ಲಿ ಈಗಾಗಲೇ ಉಪಯೋಗಿಸುತ್ತಿದ್ದು, ದಿನಾಂಕ 1-1-1995ರ ನಂತರ ಸಂಪರ್ಕ ನೀಡಬಹುದಾದ ಪಂಪುಸೆಟ್ಟುಗಳ ಗರಿಷ್ಠ ಮಿತಿಯನ್ನು ಸೂಚಿಸಿರುತ್ತದೆ.

ಪ್ರಸ್ತುತ ತುಮಕೂರು ಮತ್ತು ಕೋಲಾರ ಜಿಲ್ಲೆಯಲ್ಲಿ ಕೆಳಕಂಡ ತಾಲ್ಲೂಕುಗಳು ಕಪ್ಪು ಮತ್ತು ಬೂದು ತಾಲ್ಲೂಕುಗಳೆಂದು ಭೂವಿಜ್ಞಾನ ಇಲಾಖೆಯು ಸೂಚಿಸಿರುತ್ತದೆ.

ಅ) ತುಮಕೂರು ಜಿಲ್ಲೆ:-

1) ಕಪ್ಪು ತಾಲ್ಲೂಕುಗಳು: ಗುಬ್ಬಿ, ಮಧುಗಿರಿ, ತಿಪಟೂರು, ತುಮಕೂರು, ತುರುವೇಕೆರೆ.

2) ಬೂದು ತಾಲ್ಲೂಕುಗಳು: ಕೊರಟಗೆರೆ, ಕುಣಿಗಲ್, ಶಿರಾ.

ಆ) ಕೋಲಾರ ಜಿಲ್ಲೆ:-

1) ಕಪ್ಪು ತಾಲ್ಲೂಕುಗಳು: ಚಿಕ್ಕಬಳ್ಳಾಪುರ, ಕೋಲಾರ, ಮಾಲೂರು.

2) ಬೂದು ತಾಲ್ಲೂಕುಗಳು: ಚಿಂತಾಮಣಿ, ಗೌರಿಬಿದನೂರು, ಮುಳಬಾಗಿಲು, ಶಿಡ್ಲಘಟ್ಟ, ಶ್ರೀನಿವಾಸಪುರ.

ಈ ಸಂದರ್ಭದಲ್ಲಿ ಮಂಡಳಿಯು ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಅಳವಡಿಸುವುದರ ಬಗ್ಗೆ ಕೆಲವು ಮಾರ್ಗ ಸೂಚಿಯನ್ನು ನೀಡಿರುತ್ತದೆ.

(1) ಕಪ್ಪು ತಾಲ್ಲೂಕುಗಳಲ್ಲಿ ಗುರಿಯನ್ನು ನಿಗದಿಪಡಿಸಿರುವುದಿಲ್ಲ. ಆದರೆ ದಿನಾಂಕ 17-4-1997ಕ್ಕೆ ಮೊದಲೇ ನೊಂದಾಯಿಸಿದ ಅರ್ಜಿಗಳಲ್ಲಿ, ಮಂಡಳಿಯ ನಿಯಮ ಪಾಲಿಸಿ ಕಾರ್ಯಾದೇಶ ಪಡೆದವುಗಳಿಗೆ ಸ್ವಯಂ ಆರ್ಥಿಕ ಯೋಜನೆಯಲ್ಲಿ ಸಂಪರ್ಕ ನೀಡಬಹುದಾಗಿದೆ.

(2) ಇದೇ ರೀತಿಯಲ್ಲಿ ಬೂದು ಪ್ರದೇಶದ ತಾಲ್ಲೂಕುಗಳಲ್ಲಿಯು ಸಹ ದಿನಾಂಕ 1-1-1995ರ ನಂತರ ಸಂಪರ್ಕ ನೀಡಬಹುದಾದ ಪಂಪುಸೆಟ್ಟುಗಳ ಸಂಖ್ಯೆಯನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯು ನಿಗದಿಪಡಿಸುವುದರಿಂದ ಈಗಾಗಲೇ ಸದರಿ ಮಿತಿಯನ್ನು ದಾಟಿರುವ ತಾಲ್ಲೂಕುಗಳಲ್ಲಿ ಮಾತ್ರ ಹೊಸ ವಿದ್ಯುತ್ ಸಂಪರ್ಕ ನೀಡುವಿಕೆಯನ್ನು ತಡೆಹಿಡಿಯಲಾಗಿದೆ.

ಆದರೆ, ದಿನಾಂಕ 1-4-1997ಕ್ಕೆ ಮೊದಲು ಮಂಡಳಿಯ ನಿಯಮಾನುಸಾರ ಕಾರ್ಯಾದೇಶ ಪಡೆದ ಅರ್ಜಿಗಳಿಗೆ ಸದರಿ ತಾಲ್ಲೂಕಿನಲ್ಲಿ ನಿಗದಿಪಡಿಸಿದ ಗರಿಷ್ಠ ಮಿತಿಯನ್ನು ಮೀರದಿದ್ದ ಪಕ್ಷದಲ್ಲಿ ಸ್ವಯಂ ಆರ್ಥಿಕ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡಬಹುದಾಗಿದೆ.

ನೀರಾವರಿ ಪಂಪುಸೆಟ್ಟು ಬಳಕೆದಾರರಿಗೆ ಸಂಬಂಧಿಸಿದಂತೆ ವಿಫಲ ಹೊಂದಿದ ಪರಿವರ್ತಕಗಳಿದ್ದಲ್ಲಿ, ಆಯಾ ನೀರಾವರಿ ಪಂಪುಸೆಟ್ಟು ಬಳಕೆದಾರರ ಮನವೊಲಿಸಿ ಬಾಕಿಯನ್ನು ಕಟ್ಟಿಸಿಕೊಂಡು ಹೊಸ ಪರಿವರ್ತಕಗಳನ್ನು ಬದಲಾಯಿಸಲಾಗುತ್ತದೆ. ಕೆಟ್ಟು ಹೋದ ಪರಿವರ್ತಕಗಳನ್ನು ಬದಲಾಯಿಸಲು ಎಲ್ಲಿಯೂ ನಿರಾಕರಣೆಯನ್ನು ಮಾಡಿರುವುದಿಲ್ಲ. ವಿದ್ಯುತ್ ಪರಿವರ್ತಕಗಳು ಸಕಾಲದಲ್ಲಿ ಲಭ್ಯವಿಲ್ಲದಿದ್ದಾಗ, ಬದಲಾವಣೆಯಲ್ಲಿ ಸ್ವಲ್ಪ ವಿಳಂಬವಾಗಿರಬಹುದು.

ಸರ್ಕಾರಿ ಕೊಳವೆ ಬಾವಿಗಿಂತ ಕನಿಷ್ಠ 825 ಅಡಿ ದೂರದಲ್ಲಿ ಯಾವುದೇ ವೈಯಕ್ತಿಕ

ನೀರಾವರಿ ಕೊಳವೆ ಬಾವಿಗಳು ಇದ್ದಲ್ಲಿ ಅಂತಹ ಕೊಳವೆ ಬಾವಿಗಳಿಗೆ ಹೊಸದಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿಕೂಡದೆಂದು ಆದೇಶವಿರುವುದರಿಂದ ಸದರಿ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದಿಲ್ಲ. ಆದರೆ ಸದರಿ ಸುತ್ತೋಲೆಗಿಂತ ಮೊದಲೇ ವಿದ್ಯುತ್ ಸಂಪರ್ಕ ಹೊಂದಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಮಾಡಿರುವುದಿಲ್ಲ.

ಅಧ್ಯಕ್ಷರು: ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಹೇಳಿದ ಹಾಗೆ ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಅತಿ ಹೆಚ್ಚು ಕಪ್ಪು ಹಾಗೂ ಬೂದು ಪ್ರದೇಶಗಳು ಎಂದು ವರ್ಗೀಕರಿಸಿದೆ. ಈಗಾಗಲೇ ನಮ್ಮ ಇಲಾಖೆಯ ವತಿಯಿಂದ ಆರ್.ಇ.ಸಿ.ಯವರಿಗೂ ಕೂಡ ಒಂದು ಪತ್ರವನ್ನು ಬರೆದಿದ್ದೇವೆ. ಹಾಗೂ ಬೆಂಗಳೂರಿಗೆ ಆರ್.ಇ.ಸಿ. ಟೀಮ್ ಬಂದಾಗ ನಮ್ಮ ಇಲಾಖೆಯವರು ಮನವಿ ಮಾಡಿಕೊಂಡಿದ್ದಾರೆ. ಏನೆಂದರೆ ಬೂದು ಹಾಗು ಕಪ್ಪು ಎಂದು ವರ್ಗಿಕರಿಸಿರುವ ಪ್ರದೇಶದ ಪಂಪುಸೆಟ್ಟುಗಳಿಗೆ ನೀವು ಲೋನ್ ಮಂಜೂರು ಮಾಡಬೇಕೆಂದು ಮನವಿ ಮಾಡಿಕೊಂಡಿದ್ದೇವೆ. ನಂತರ ನಾವು ಈಗಾಗಲೇ ಇದರಲ್ಲಿ ಕನೆಕ್ಷನ್ ಕೂಡ ಕೊಡುತ್ತಿದ್ದೇವೆ, ಸ್ವಯಂ ಆರ್ಥಿಕ ಯೋಜನೆಯಡಿಯಲ್ಲಿ ಕೂಡ ಕನೆಕ್ಷನ್ ಕೊಡುತ್ತಿದ್ದೇವೆ. 10,000 ಮಿನಿಮಮ್ ಚಾರ್ಜ್, ಅಥವಾ ಅಂದಾಜು ವೆಚ್ಚ ಏನಾಗುತ್ತಿದೆಯೋ ಆ ದುಡ್ಡು ಸಂದಾಯ ಮಾಡಿದಾಗ ತೋಡಿದಂತಹ ಬಾವಿಗಳಿಗೆ ಈಗಾಗಲೇ ನಾವು ಕನೆಕ್ಷನ್ ಕೊಡುತ್ತಿದ್ದೇವೆ. ಇದಲ್ಲಿ ಎಸ್‌ಸಿ/ಎಸ್‌ಟಿ ಯವರಿಗೆ 5000 ರೂ.ಗಳೆಂದು ನಿಗದಿ ಮಾಡಿದ್ದೇವೆ. ಆಮೇಲೆ ಈಗಾಗಲೇ ನಾವು ಆರ್.ಇ.ಸಿ.ಯಿಂದ 32 ಸಾವಿರ ಪಂಪ್‌ಸೆಟ್ಟುಗಳಿಗೆ ಲೋನ್ ಕೊಡುತ್ತಿದ್ದೇವೆ. ಇದರಲ್ಲಿ ನಮ್ಮ ಫೈನಾನ್ಸ್ ಸ್ಕೀಮ್‌ನಲ್ಲಿ 8000 ರೂ.ಗಳನ್ನು ಹಾಕಿಕೊಳ್ಳುತ್ತೇವೆ. ಪ್ರತಿ ವರ್ಷ 40 ಸಾವಿರ ಪಂಪ್‌ಸೆಟ್ಟುಗಳಿಗೆ ಕನೆಕ್ಷನ್ ಕೊಡಬೇಕೆಂದು ರಾಜ್ಯ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

+ ಶ್ರೀ ಜೆ.ಸಿ.ಮಾಧುಸ್ವಾಮಿ: ಅಧ್ಯಕ್ಷರೆ, ಇಲ್ಲಿ ಎರಡು ಅಂಶಗಳಿವೆ. ಒಂದು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಇದು ರೀಚಾರ್ಜ್ ಆಗುವುದಿಲ್ಲ, further exploitation of water ಆಗಬಾರದು ಎಂದು ಹೇಳಿದ್ದಾರೆ ಎನ್ನುವುದು ಒಂದು. ಮೊದಲೆ ಲೆಂಡಿಂಗ್ ಪರ್ಪ್‌ಸ್, ಸಾಲ ಕೊಡಬಾರದು ಎನ್ನುವ ಉದ್ದೇಶಕ್ಕೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಇದನ್ನು ಕಪ್ಪು ಹಾಗೂ ಬೂದು ಪ್ರದೇಶ ಎಂದು ವರ್ಗಿಕರಿಸುತ್ತಾರೆ. ಇನ್‌ಸ್ಟಿಟ್ಯೂಷನ್ ಸಾಲ ಕೊಡಬಾರದು ಅಂತ ಮಾಡಿದ್ದು ಬಿಟ್ಟರೆ 1995ನೇ ಇಸವಿಯವರೆವಿಗೆ ವಿದ್ಯುತ್ ಸರಬರಾಜುಗೆ ಇದಕ್ಕೂ ಸಂಬಂಧವಿರಲಿಲ್ಲ. 1991ನೇ ಇಸವಿಯಿಂದ ಬೋರ್‌ವೆಲ್ ಎನರ್ಜೈಸ್ ಆಗಬೇಕಾದದ್ದು ಪೆಂಡಿಂಗ್‌ನಲ್ಲಿದೆ. ಎಸ್ಟಿಮೇಟ್ ಆಗಿದೆ ಸ್ಯಾಂಕ್ಷನ್ ಆಗದೆ, ಸೀನಿಯಾರೀಟಿ ಲೀಸ್ಟ್‌ನಲ್ಲಿ ಕೂಡ ಸೇರಿವೆ. ಎರಡನೇಯದು ಇವರು ವಾಟರ್ ರೀಚಾರ್ಜ್ ಆಗುವುದಿಲ್ಲವಾದ್ದರಿಂದ, ನಾವು ಕೊಡುವುದಿಲ್ಲ ಬೇಕಾದರೆ ಸ್ವಯಂ ಆರ್ಥಿಕ ಯೋಜನೆಯಲ್ಲಿ ಕೊಡುತ್ತೇವೆ ಎಂದು ಹೇಳುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶ ಏನೆಂದರೆ ಹಣ ಕಟ್ಟಿಬಿಟ್ಟರೆ ವಾಟರ್

ರೀಚಾರ್ಜ್ ಆಗಿಬಿಡುತ್ತದೆಯೇ? ಅಥವಾ ಅವನು ಡೀಸಲ್ ಜನರೇಟರ್ ಸೆಟ್ಟು ಹಾಕಿಕೊಂಡು ಹೊಡೆಯುವುದಕ್ಕೆ ನಿಮ್ಮದು ಏನು ತಕರಾರು ಇಲ್ಲ. ಇದರ ಬಗ್ಗೆ ಸರ್ಕಾರ ಕಾನೂನು ಮಾಡಬೇಕೆಂದರೆ ವಾಟರ್ ರೀಚಾರ್ಜ್ ಆಗುವುದಿಲ್ಲ ಎನ್ನುವ ಕಾರಣಕ್ಕೆ ನಾವು ಬೂದು ಮತ್ತು ಕಪ್ಪು ಎಂದು ಮಾಡಿರುವ ವಿಷಯವನ್ನು ಕೆ.ಯಿ.ಬಿ.ಯವರು ತೆಗೆದುಕೊಳ್ಳುವ ಅಗತ್ಯವಿಲ್ಲ. ಅಲ್ಲಿ ಈಲ್ಡ್ ಟ್ರಸ್ಟ್ ಮಾಡಿಸಿ, ಅಲ್ಲಿರುವ ಬೋರ್‌ವೆಲ್‌ಗಳಿಗೆ ತಾವು ನೀರು ಕೊಡಬೇಕಾಗಿದೆ. ಮತ್ತೊಂದು ಅಂಶವೆಂದರೆ ಉದಾಹರಣೆಗೆ ಹೇಳುವುದಾದರೆ ಒಂದು ಎಗ್ಸಿಸ್ಟಿಂಗ್ ಬೋರ್‌ವೆಲ್ ಇರುತ್ತದೆ, ತೋಟ ಕೂಡ ಮಾಡಿರುತ್ತೇನೆ ಒಂದು ಪಕ್ಷ ಡ್ರೈ ಆದರೆ ನಾನು ಏನು ಮಾಡಬೇಕು? ಏಕೆಂದರೆ ಪುನಃ ನಾನು ಮತ್ತೊಂದು ಬೋರ್ ವೆಲ್‌ನ್ನು ಕೊರೆದರೂ ನೀವು ಪಂಪ್ ಸೆಟ್‌ಗೆ ಎನರ್ಜಿ ಕೊಡುವುದಿಲ್ಲವೆಂದರೆ ನಾವು ಎಲ್ಲಿ ಹೋಗಬೇಕಾಗಿದೆ? ಮೂರನೇಯ ವಿಚಾರವೆಂದರೆ ಈ ಭೂಮಿಯೊಳಗಡೆ ಇರುವ ನೀರನ್ನು ಇಷ್ಟು ಮಾತ್ರ ಬಳಸಿ, ಬಳಸಬೇಡಿ ಎಂದು ಒಂದು ನೀತಿ ಮಾಡಬೇಕಾಗಿತ್ತು. ಇದು ಯಾವುದೂ ನೀತಿ ಇಲ್ಲದೇನೆ ದಿಢೀರನೆ ಕೆ.ಇ.ಬಿ.ಯಿಂದ ಒಂದು ಆದೇಶ.. ಇದು ಒಂದು ಬ್ಯೂರಾಕ್ರಟಿಕ್ ಡಿಸಿಶನ್. ನಾವು ಅತ್ಯಂತ ಬೇಡಿಕೆಯಿರುವ ಜಿಲ್ಲೆಗಳಾದ ಕೋಲಾರ ಮತ್ತು ತುಮಕೂರು ಜಿಲ್ಲೆಗಳಿಗೆ ಕೆ.ಇ.ಬಿ ಯಿಂದ ವಿದ್ಯುತ್ತನ್ನು ಇರಿಗೇಷನ್ ಪವರ್‌ಗೆ ಕೊಡಿ ಎಂದು ಕೇಳಿರುವುದು. ಈ ಎರಡು ಜಿಲ್ಲೆಗೆ ವಿದ್ಯುತ್ ಸರಬರಾಜನ್ನು ನಿಲ್ಲಿಸಿ ಬಿಟ್ಟರೆ ಸುಮಾರು ಮೂರನೇ ಒಂದು ಭಾಗದಷ್ಟು ವಿದ್ಯುತ್‌ನ್ನು ಕಡಿತಗೊಳಿಸಬಹುದು. ಇದರಿಂದಾಗಿ ನಿಮ್ಮ ಇಲಾಖೆಯವರು ಕೂಡ ಚೆನ್ನಾಗಿ ನಿದ್ದೆ ಮಾಡಬಹುದು. ಈ ಕಾರಣಕ್ಕಾಗಿ ನೀವು ಆರ್‌ಯಿ.ಸಿಯನ್ನು ಮುಂದಿಟ್ಟುಕೊಂಡು ಅವರು ಸೂಚನೆ ಕೊಟ್ಟಿದ್ದಾರೆ ಕೊಡುವುದು ಬೇಡ ಅಂತ ಹೇಳುವುದು ಅಷ್ಟೊಂದು ಗೌರವಯುತವಾದುದಲ್ಲ. ಇದರಿಂದಾಗಿ ಎರಡು ಮೂರು ಜಿಲ್ಲೆಗಳ ರೈತರು ನರಳುತ್ತಿದ್ದಾರೆ. 1991ನೇ ಇಸವಿಯಿಂದ ಕೆ.ಇ.ಬಿ.ಗೆ ಅರ್ಜಿ ಹಾಕಿಕೊಂಡಿರುವವರು ತೋಟ ಮಾಡಿಕೊಂಡಿರುವವರು ನರಳುತ್ತಿದ್ದೇವೆ. ನೀವು ದಿಢೀರನೆ 1995ರಲ್ಲಿ ಕೊಡುವುದಿಲ್ಲ ಎಂದಿರಿ. ಇದು ತಪ್ಪು. ಆದ್ದರಿಂದ ಇಂಥಿಂಥ ತಾಲ್ಲೂಕುಗಳನ್ನು ನಾವು ಬ್ಲಾಕ್ ಮಾಡಿರುವುದರಿಂದ ಇನ್ನು ಮುಂದೆ ಕೊಡುವುದಿಲ್ಲ ಎನ್ನುವಂತಹ ಒಂದು ನಿರ್ಣಯ ತೆಗೆದುಕೊಂಡರೆ, ನಾವು ರೈತರಿಗೆ ಹೇಳಬಹುದು, ಏನು ಮಾಡಕ್ಕಾಗಲ್ಲ, ಈಗಾಗಲೇ ಕೊರೆದು, ಅಂದಾಜು ಮಾಡಿ, ಸ್ಯಾಂಕ್ಷನ್ ಆಗಿರುವವರು ಮಾತ್ರ ತೆಗೆದುಕೊಳ್ಳಿ, ಇನ್ನು ಮುಂದೆ ಕೊರೆಯುವುದು ಕಡಿಮೆ ಮಾಡಿ ಎಂದು ಹೇಳುತ್ತೇವೆ. ಇದರ ಜೊತೆಗೆ ಅರಿಯರ್ಸ್ ಕಟ್ಟಲಿಲ್ಲ ಅಂತ ಹೇಳಿ ಎಕ್ಸಿಸ್ಟಿಂಗ್ ಟ್ರಾನ್ಸ್‌ಫಾರ್ಮ್ 30-40 ಇ.ಪಿ. ಸೆಟ್ಟಿಗೆ ಪವರ್ ಕೊಡುವ ಟ್ರಾನ್ಸ್‌ಫಾರ್ಮ್‌ರ್ ಫೇಲಾದರೆ, ಅದನ್ನು ತುಮಕೂರು ಜಿಲ್ಲೆಯಲ್ಲಿ ರೀಪ್ಲೇಸ್ ಮಾಡುವುದಿಲ್ಲ. ಕಾರಣ ಕೇಳಿದರೆ ನಿಮ್ಮದು ಅರಿಯರ್ಸ್ ಬಾಕಿ ಎಂದು ಹೇಳುತ್ತಾರೆ. ಕೆಲವು ಜನ ಕಟ್ಟಿರುತ್ತಾರೆ, ಅವರ ಗತಿ ಏನಾಗಬೇಕು? ಯಾರೋ ಒಬ್ಬರು ಕಟ್ಟಲಿಲ್ಲ ಎಂದು ಎಲ್ಲರಿಗು ಟ್ರಾನ್ಸ್‌ಫಾರ್ಮರ್, ಇಡುವುದಿಲ್ಲ, ಪವರ್ ಡಿಸ್ಟ್ರಿಬ್ಯೂಷನ್ ಸ್ಟಾಪ್ ಮಾಡುತ್ತೇವೆ

ಎನ್ನುವ ಆದೇಶವನ್ನು ತಾವು ವಾಪಸ್ ತೆಗೆದುಕೊಳ್ಳಬೇಕು. ಏಕೆಂದರೆ ತಮ್ಮ ಸರ್ಕಾರದ ಅಂತಹ ನೀತಿ ಯಾವುದು ಇಲ್ಲ ಎಂದು ಹೇಳಿದ್ದೀರಿ. ಹಾಗಿದ್ದಮೇಲೆ ಸಂಬಂಧಪಟ್ಟ ಎಕ್ಸಿಕ್ಯೂಟೀವ್ ಇಂಜಿನಿಯರ್‌ನ ಏನು ನಮ್ಮ ಜಿಲ್ಲೆಯಲ್ಲಿ ಬರೆದಿದ್ದಾರೆ, ಅವರ ಮೇಲೆ ತಾವು ಕ್ರಮ ಕೈಗೊಳ್ಳಬೇಕು.

1.00 ಪಿ.ಎಂ

ಮೂರನೆಯದು, 825 ಅಡಿಯವರೆಗೆ ಒಂದು ಕುಡಿಯುವ ನೀರಿನ ಬೋರವೆಲ್ ಇದೆಯೆಂದರೆ, ನಾವು ಸಪ್ಲೈ ಮಾಡುವುದಿಲ್ಲವೆಂದು ಹೇಳುತ್ತಾರೆ. ಸ್ವಾಮಿ, ಇಲ್ಲಿಂದ ಮುಂದಕ್ಕೆ ಮಾಡುವುದಿಲ್ಲವೆಂದು ಹೇಳಿ. ರೆಟ್ರಾಸ್ಪೆಕ್ಟೀವ್ ತೀರ್ಮಾನ ತೆಗೆದುಕೊಳ್ಳುವುದು ಬೇಡ. 1992-93ರಲ್ಲಿ ಬೋರ್ ಹಾಕಿ, ಸಪ್ಲೈ ಬರುತ್ತದೆಂದು ಕಾಯುತ್ತಿರುತ್ತಾನೆ. ನೀವು ರೆಟ್ರಾಸ್ಪೆಕ್ಟೀವ್ ಆಗಿ ಮಾಡಿರುವುದು ತಪ್ಪು ಎನ್ನುವುದಷ್ಟೆ ನಮ್ಮ ವಾದ. ಕುಡಿಯುವ ನೀರಿಗೆ ತೊಂದರೆ ಮಾಡಬೇಕು, ಇರೀಗೇಷನ್ ಬೋರ್‌ವೆಲ್ ಪಕ್ಕದಲ್ಲಿ ಹಾಕಿದವರಿಗೆ ಸಪ್ಲೈ ಕೊಡಿ ಎಂದು ನಾವೂ ಹೇಳುವುದಕ್ಕೆ ತಯಾರಿಲ್ಲ. ಈಗಾಗಲೇ ಕೊರೆದಿರುವ ಮತ್ತು ನೀವು ಬೋರ್‌ವೆಲ್ ಹಾಕುವುದಕ್ಕೆ ಮೊದಲೇ ಬೋರ್‌ವೆಲ್ ಹಾಕಿರುವವರಿಗೆ ಸಪ್ಲೈ ತಾವು ಮಾಡಬೇಕಾಗುತ್ತದೆ. ಈ ಮೂರು ಅಂಶಗಳನ್ನು ತಾವು ಮನಗಂಡು, ತ್ವರಿತವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿ ನಮಗೆ ಮಳೆ ಕೂಡ ಇಲ್ಲ. ಈ ಕಡೆ ಪವರ್ ಸಪ್ಲೈ ಇಲ್ಲ ಈ ಬಗ್ಗೆ ತಾವು ಖಚಿತವಾದ ಉತ್ತರ ಹೇಳಬೇಕೆಂದು ನಿರೀಕ್ಷಣೆ ಮಾಡುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ್: ಸನ್ಮಾನ್ಯ ಅಧ್ಯಕ್ಷರೇ, ಕೋಲಾರ ಮತ್ತು ತುಮಕೂರು ಜಿಲ್ಲೆಯಲ್ಲಿ ಕಪ್ಪು ಮತ್ತು ಬೂದು ಬಣ್ಣದ ತಾಲ್ಲೂಕುಗಳೆಂದು ಇಲಾಖೆಯವರೇನು ಡಿಕ್ಲೇರ್ ಮಾಡಿದ್ದಾರೆ, ಈ ಬಗ್ಗೆ ಈಗಾಗಲೇ 17ನೇ ಏಪ್ರಿಲ್ ತಿಂಗಳು ನಮ್ಮ ಕೆ.ಇ.ಬಿ. ಇಲಾಖೆಯವರು ಒಂದು ಸುತ್ತೋಲೆ ಕೂಡ ಹೊರಡಿಸಿದ್ದಾರೆ. ಈ ಸುತ್ತೋಲೆ ಹೊರಡಿಸುವುದಕ್ಕೆ ಮೊದಲು ಏನು ಕೊಳವೆ ಬಾವಿಗಳನ್ನು ಕೊರೆದಿದ್ದಾರೆ, ಅದಕ್ಕೆ ಸೆಲ್ಫ್ ಫೈನಾನ್ಸ್ ಸ್ಕೀಮ್‌ನಲ್ಲಿ ಇವುಗಳಿಗೆ ಸಂಪರ್ಕ ಕೂಡ ನಾವು ಕೊಡುತ್ತಾ ಇದ್ದೇವೆ. ಏಕೆಂದರೆ, ಪ್ರತಿಯೊಂದು ಪಂಪ್‌ಸೆಟ್ಟಿಗೆ 25 ಸಾವಿರ ರೂಪಾಯಿಗಳ ಲೋನ್‌ನ್ನು ಆರ್.ಇ.ಸಿ.ನವರು ಕೊಡುತ್ತಿದ್ದಾರೆ. ಸುಮಾರು 32ಸಾವಿರ ಐ.ಪಿ. ಸೆಟ್‌ಗಳಿಗೆ ಲೋನ್ ಕೊಡುವುದರಿಂದ, ಈ ಕಪ್ಪು ಮತ್ತು ಬೂದು ಏರಿಯಾಗಳಿಗೆ ನಾವು ಲೋನ್ ಕೊಡುವುದಿಲ್ಲವೆಂದು ಹೇಳಿದ್ದೇವೆ. ಇದಕ್ಕೆ ಕೊಡುವುದಕ್ಕೆ ಹಣಕಾಸಿನ ತೊಂದರೆ ಇದೆ. ನಾವು ಏಪ್ರಿಲ್ ತಿಂಗಳಲ್ಲಿ ಆದೇಶ ಮಾಡುವುದಕ್ಕೆ ಮುನ್ನ ಬೋರ್‌ವೆಲ್ ಏನು ಹಾಕಿದ್ದಾರೆ, ಆ ಬಗ್ಗೆ ಆರ್.ಇ.ಸಿ.ನವರಿಗೂ ಕೂಡ....

ಅಧ್ಯಕ್ಷರು: ಮಾನ್ಯ ಮಂತ್ರಿಗಳೇ, ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಬಹಳ ಸ್ಪಷ್ಟವಾದ, ನಿಖರವಾದ ಮೂರು ವಿಚಾರಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ. ಆ

ಮೂರು ವಿಚಾರಗಳಿಗೆ ತಮ್ಮ ಉತ್ತರ ಕೊಡಿ. ಒಂದನೆಯದು 825 ಅಡಿ ವಿಚಾರಕ್ಕೆ ಕುಡಿಯುವ ನೀರಿನ ಬೋರ್‌ವೆಲ್ ಇದ್ದರೆ, ಮಾಡತಕ್ಕ ನಿರ್ಣಯವನ್ನು ಪ್ರಾಸ್ಪೆಕ್ಟೀವ್ ಆಗಿ ಮಾಡಿ, ರೆಟ್ರಾಸ್ಪೆಕ್ಟೀವ್ ಆಗಿ ಮಾಡಬೇಡಿ ಎಂದು ಹೇಳಿದ್ದಾರೆ. ಸ್ವಂತ ಹಣದಿಂದ ಬೋರ್‌ವೆಲ್ ಹಾಕಿಕೊಳ್ಳತಕ್ಕಂಥವರಿಗೆ ನಿಮ್ಮ ನಿರ್ಬಂಧ ಏನೂ ಬರುವುದಿಲ್ಲ. ಫೈನಾನ್ಸ್ ಕೇಳತಕ್ಕಂಥವರಿಗೆ ಮಾತ್ರ ಈ ಬೂದು ಮತ್ತು ಕಪ್ಪು ಎಲ್ಲಾ ಬರುತ್ತೆ. ಇದು ಸರಿಯಲ್ಲ ಎಂದು ಹೇಳಿದ್ದಾರೆ. ಆಮೇಲೆ ರೀಪ್ಲೇಸ್‌ಮೆಂಟ್ ಆಫ್ ಟ್ರಾನ್ಸ್‌ಫಾರ್ಮರ್ಸ್ ಯಾರೋ ಕೆಲವರು ಬಾಕಿ ಇದ್ದಾರೆಂದು ಆ ಲೈನಿನಲ್ಲಿರತಕ್ಕ ಎಲ್ಲರಿಗೂ ಕೂಡ ಪವರ್ ಡಿನೈ ಮಾಡತಕ್ಕಂತಾದ್ದು ಅಷ್ಟೊಂದು ಚೆನ್ನಾಗಿರುವುದಿಲ್ಲವೆಂದು ಹೇಳಿದ್ದಾರೆ. Please confine you reply to these points so that I can give opportunity to other Members.

ಶ್ರೀ ಶರಣಬಸಪ್ಪ ದರ್ಶನಾಪುರ್: ಈಗ 825 ಅಡಿ ಅಂತರದಲ್ಲಿ ಏನು ಕುಡಿಯುವ ನೀರಿನ ಕೊಳವೆ ಬಾವಿ ಇರುತ್ತೆ. ಈ ಆದೇಶ ಬರುವುದಕ್ಕೆ ಮೊದಲು ಇದ್ದಂಥ ಕೊಳವೆ ಬಾವಿಗಳಿಗೆ ನಾವು ಸಂಪರ್ಕ ಕೊಡುತ್ತೇವೆ. ಆದರೆ, ಈ ಆದೇಶ ಬಂದಮೇಲೆ ಏನು ಕೊಳವೆ ಬಾವಿಗಳನ್ನು ಕೊರೆದಿದ್ದಾರೆ, ಇವುಗಳಿಗೆ ಕೆ.ಇ.ಬಿ. ವತಿಯಿಂದ ಸಂಪರ್ಕ ಕೊಡುವುದಕ್ಕೆ ಆಗುವುದಿಲ್ಲ. ಎರಡನೆಯದಾಗಿ ಈಗಾಗಲೇ ಕಳೆದ 15 ದಿವಸಗಳ ಹಿಂದೆ, ಮಾನ್ಯ ಮಾಧುಸ್ವಾಮಿಯವರು ಹೇಳಿದರು. ಆ ದಿನ ನಾವು ಕೆ.ಇ.ಬಿ ಇಲಾಖೆಯವರಿಗೂ ಕೂಡ ಹೇಳಿದ್ದೇವೆ. ಒಂದು ಟ್ರಾನ್ಸ್‌ಫಾರಂ ಬರತಕ್ಕಂತಾದ್ದರಲ್ಲಿ 30-40 ಹಿಡುವಳಿದಾರರು ಆ ನೀರನ್ನು ತೆಗೆದುಕೊಳ್ಳುತ್ತಾರೆ. ಅದರಲ್ಲಿ ಒಬ್ಬರು, ಇಬ್ಬರು ದುಡ್ಡು ತುಂಬಿದರೆ, ಬಾಕಿಯವರು ಕೊಡುವುದಿಲ್ಲವೆಂಬುದನ್ನು ನಮ್ಮ ಗಮನಕ್ಕೆ ಕೂಡ ತಂದಿದ್ದಾರೆ. ಆಗ ನಾವು ಹೇಳಿದೆವು, ಏಕೆಂದರೆ ಒಬ್ಬಿಬ್ಬರು ದುಡ್ಡು ತುಂಬದೇ ಹೋದರೆ, ಎಲ್ಲರಿಗೂ ಅದು ಕೆಟ್ಟಪರಿಣಾಮವಾಗುತ್ತದೆ. ಈಗಾಗಲೇ ನಾವು ಅಧಿಕಾರಿಗಳಿಗೆ ಹೇಳಿದ್ದೇವೆ. ಅಂತಹ ಯಾವುದಾದರೂ ಪ್ರಕರಣಗಳಿದ್ದರೆ, ನಮಗೆ ತಿಳಿಸಿದರೆ, ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಆಮೇಲೆ 17ನೇ ಏಪ್ರಿಲ್ 1997ರಲ್ಲಿ ಕೆ.ಇ.ಬಿ.ನವರು ಈ ಆದೇಶ ಹೊರಡಿಸಿದ್ದಾರೆ. ಈ ಕಪ್ಪು ಮತ್ತು ಬೂದು ತಾಲ್ಲೂಕುಗಳನ್ನು ಗುರುತಿಸಬೇಕು ಎಂದು ಅದರಲ್ಲಿ ಹೇಳಿದ್ದಾರೆ. ಹಿಂದಿನಿಂದ ಬರತಕ್ಕಂಥ ದುಡ್ಡನ್ನು ಆರ್.ಇ.ಸಿ.ನವರು ಕೊಡುತ್ತಾ ಇಲ್ಲ. ಅದಕ್ಕೋಸ್ಕರ ನಾವು ಅವರಿಗೆ ಸೆಲ್ಫ್ ಫೈನಾನ್ಸ್ ಸ್ಕೀಮ್‌ನಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ.

ಅಧ್ಯಕ್ಷರು: ನಿಮಗೆ ಅರ್ಥವಾಗಲಿಲ್ಲ. ಯಾರು ಪಿ.ಸಿ.ಆರ್.ಡಿ. ಬ್ಯಾಂಕ್ ಮುಖಾಂತರ ಅಥವಾ ಮತ್ತೆ ಯಾವುದಾದರೂ ಬ್ಯಾಂಕ್ ಮುಖಾಂತರ ಬೋರ್‌ವೆಲ್ ಕೊರೆಯುವುದಕ್ಕೆ ಸಾಲ ಪಡೆದುಕೊಳ್ಳುವುದಕ್ಕೆ ಇಷ್ಟಪಡುತ್ತಾರೆ, ಅವರಿಗೆ ಜಿಯಾಲಜಿಸ್ಟ್ ಸರ್ಟಿಫಿಕೇಟ್ ಅಗತ್ಯ ಯಾರು ತಮ್ಮ ಸ್ವಂತ ಹಣದಲ್ಲಿ ಬೋರ್‌ವೆಲ್ ಡ್ರಿಲ್ ಮಾಡುತ್ತಾರೆ, ನಿಮ್ಮ ಕೆ.ಇ.ಬಿ.ಗೆ ಸರ್ವೀಸ್ ಬೇಕೆಂದು ಕೇಳುತ್ತಾರೆ, ಅವರಿಗೆ ಯಾವ

ಜಿಯಾಲಜಿಸ್ಟ್ ಸರ್ಟಿಫಿಕೇಟೂ ಅಗತ್ಯ ಇಲ್ಲ. ಅವರಿಗೆ ಕಪ್ಪು, ಬೂದು ಅನ್ವಯಿಸುವುದೇ ಇಲ್ಲ. ಕಪ್ಪು, ಬೂದು ಏನಿದ್ದರೂ ಲೋನ್ ಕೇಳತಕ್ಕಂಥವರಿಗೆ ಮಾತ್ರ ಅನ್ವಯಿಸುತ್ತದೆ. ಅದು ತಪ್ಪು ಎನ್ನತಕ್ಕ ಮಾತನ್ನು ಮಾನ್ಯ ಸದಸ್ಯರು ಹೇಳಿರತಕ್ಕಂತಾದ್ದು. ಸರ್ಕಾರದ ಪರವಾಗಿ ತಮ್ಮ ಖಚಿತವಾದ ಉತ್ತರವೇನು, ಅದನ್ನು ಹೇಳಿ.

ಶ್ರೀ ಶರಣಬಸಪ್ಪ ದರ್ಶನಾಪುರ್: ಇವತ್ತು ಇರತಕ್ಕ ಸಚಿವ ಸಂಪುಟದ ಮುಂದೆ ಕೂಡ ಈ ವಿಷಯವನ್ನು ತಂದಿದ್ದೇವೆ. ಅದರ ಬಗ್ಗೆ ತೀರ್ಮಾನ ತೆಗೆದುಕೊಂಡು ನಾಳೆ ಇದರ ಬಗ್ಗೆ ಒಂದು ಹೇಳಿಕೆ ಕೊಡುತ್ತೇನೆ.

ಶ್ರೀ ಜೆ.ಹೆಚ್.ಪಟೇಲ್: ಈ ಕಪ್ಪು, ಬೂದು ಎಂಬ ಕ್ಲಾಸಿಫಿಕೇಷನ್ ಬಂದದ್ದು ಮೈನಿಂಗ್‌ಗೆ. ಎಲೆಕ್ಟ್ರಿಸಿಟಿಗೂ ಅದಕ್ಕೂ ಏನೂ ಸಂಬಂಧ ಇರಲಿಲ್ಲ.

ಶ್ರೀ ಟಿ.ಬಿ.ಜಯಚಂದ್ರ: ನಾನೊಂದು ಪ್ರಶ್ನೆ ಕೇಳುತ್ತೇನೆ, ಅದಕ್ಕೆ ತಾವು ಉತ್ತರ ಹೇಳಿದರೆ, ಅನುಕೂಲವಾಗುತ್ತದೆಂದು ನನ್ನ ಭಾವನೆ. ತಾವು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಏನೆಂದು ಕೊಟ್ಟಿದ್ದೀರೆಂದರೆ, ಕಪ್ಪು ತಾಲ್ಲೂಕುಗಳಿಗೆ ಗುರಿಯನ್ನು ನಿಗದಿಪಡಿಸಿರಲಿಲ್ಲ. ದಿನಾಂಕ: 17-4-97ಕ್ಕೆ ಮೊದಲು ನೊಂದಾಯಿಸಿದ ಅರ್ಜಿಗಳಲ್ಲಿ, ಮಂಡಳಿಯ ನಿಯಮ ಪಾಲಿಸಿ, ಕಾರ್ಯಾದೇಶ ಪಡೆದವುಗಳಿಗೆ ಸ್ವಯಂ ಆರ್ಥಿಕ ಯೋಜನೆಯಲ್ಲಿ ಸಂಪರ್ಕ ನೀಡಬಹುದಾಗಿದೆ ಎಂದು ಉತ್ತರ ಹೇಳಿದ್ದೀರಿ. ಈಗ ಏನೆಂದರೆ, ಒಂದುಸಾರಿ ನೀವು ನೀರಾವರಿ ಪಂಪ್‌ಸೆಟ್ಟಿಗೋಸ್ಕರ ಸ್ಯಾಂಕ್ಷನ್ ಎಂದು ಮಾಡಿದಮೇಲೆ, ನೀವು ಸ್ಯಾಂಕ್ಷನ್ ಆರ್ಡರ್ ಕೊಟ್ಟಮೇಲೆ, ವರ್ಕ್ ಆರ್ಡರ್ ಆದಮೇಲೆ, it is an agreement KEB and the Entrepreneur, ನೀವು ಒಂದುಕಾಲ ನಿಗದಿಪಡಿಸಿ, ಈಗ ಅದಕ್ಕೆ ಹಿಂದೆ ಎಷ್ಟು ಪೆಂಡಿಂಗ್ ಇದೆ ಎಂಬುದಕ್ಕೆ ಒಂದು ಮಾಹಿತಿ ಹೇಳುತ್ತೇನೆ. ನನ್ನದೇ ಕ್ಷೇತ್ರದಿಂದ ಒಂದು ಮಾಹಿತಿ ತರಿಸಿದ್ದೇನೆ. ಸುಮಾರು 600 ಪಂಪುಸೆಟ್ಟುಗಳಿಗೆ ಅರ್ಧ ವರ್ಕ್ ಆಗಿದೆ. ವರ್ಕ್ ಆರ್ಡರ್ ಇಷ್ಯೂ ಆಗಿದೆ, ಸ್ಯಾಂಕ್ಷನ್ ಆಗಿದೆ. ಅಗ್ರಿಮೆಂಟ್ ಆಗಿದೆ, ಇವತ್ತು...

ಅಧ್ಯಕ್ಷರು: ನಾನು ತಮಗೆ ಮಾರ್ಗದರ್ಶನ ಮಾಡುತ್ತೇನೆ. ಮಾನ್ಯ ಮಾಧುಸ್ವಾಮಿಯವರು ಒಂದು ಮಾತನ್ನು ಹೇಳಿದರು. ಭೂಗರ್ಭದಲ್ಲಿರತಕ್ಕ ನೀರು ಕಡಿಮೆಯಾಗುತ್ತದೆ ಎನ್ನತಕ್ಕ ಕಾರಣದಿಂದ, ರೀಚಾರ್ಜಿಂಗ್ ಇಲ್ಲದೇ ಇರತಕ್ಕ ಕಾರಣದಿಂದ ನಾವು ಹೆಚ್ಚು ಹೆಚ್ಚು ಬೋರ್‌ವೆಲ್‌ಗಳನ್ನು ಕೊರೆದರೆ, ಬಹಳ ತೊಂದರೆಗೆ ಒಳಗಾಗುತ್ತೇವೆಂಬ ಕಾರಣದಿಂದ ಈ ಕಪ್ಪು ಮತ್ತು ಬೂದು ಎಂದು ಮಾಡಿದ್ದಾರೆ. ಸ್ವಂತ ಹಣದಲ್ಲಿ ಬೋರ್‌ವೆಲ್ ಹಾಕಿಕೊಳ್ಳುವವನಿಗೆ ರೀಚಾರ್ಜಿಂಗ್ ಬರುವುದೂ, ಲೋನ್ ಕೇಳತಕ್ಕಂಥವರಿಗೆ ರೀಚಾರ್ಜಿಂಗ್ ಇಲ್ಲದೇ ಇರುವುದು ಆಗುತ್ತದೆಯೇ? don't create these clauses, ಎಂದು ಅವರು ಹೇಳತಕ್ಕಂತಾದ್ದು. I think the Chief Minister has understood the point. Let him

reply.

ಶ್ರೀ ಜೆ.ಹೆಚ್.ಪಟೇಲ್: ಕಪ್ಪು ಅಥವಾ ಬೂದು, ಇದು ಬಂದಿದ್ದು ಕ್ಲಾಸಿಫಿಕೇಷನ್ ಮೈನಿಂಗ್‌ಗೆ. ಅವರೇನು ಹೇಳಿದರು, ಇಲ್ಲಿ ಇಂತಹ ಕಡೆ, ನೀರು ಬಹಳ ಕೆಳಗೆ ಹೋಗಿದೆ, ಮತ್ತು ಕೆಲವು ಸಾರಿ ಸಿಕ್ಕುವುದಿಲ್ಲವೆಂಬ ಕಾರಣವನ್ನು ಕೊಟ್ಟು, ಕೆ.ಇ.ಬಿ.ನವರಿಗೆ ಏನು ಸೂಚನೆ ಕೊಟ್ಟರು. ಎಂದರೆ, ಆ ಏರಿಯಾದಲ್ಲಿ ನೀವು ಕನೆಕ್ಷನ್ ಕೊಡುತ್ತೇವೆಂದು ಹೇಳಬೇಡಿ. ಹಿಂದೆ ಕೊಟ್ಟಿರಬಹುದು. ಅದಕ್ಕೆ ನಾಳೆ ನಾವೇನು ವಿಚಾರ ಮಾಡುತ್ತಿದ್ದೇವೆ ಎಂದರೆ. ಯಾವ ಯಾವ ಬೂದು ಅಥವಾ ಕಪ್ಪು ಏರಿಯಾದಲ್ಲಿ ಬೋರ್ ಹಾಕಿಸಿದರೆ, ಅಲ್ಲಿ ನೀರು ಬಂದರೆ, We cannot take that individual opinion, ಇವರ ಕ್ಷೇತ್ರದಲ್ಲಿ ಮೂರರಲ್ಲಿ ಬಂದಿರಬಹುದು. entire area is classified, ಅದನ್ನು ಕೆ.ಇ.ಬಿ.ನವರು ಮಾನ್ಯ ಮಾಡಬೇಕಾಗುತ್ತದೆ. ಅದಕ್ಕೆ ನಾವು ಕೇಂದ್ರಸರ್ಕಾರದವರಿಗೆ ಹೇಳಬೇಕು. ಟೋಟಲ್ ಬ್ಯಾನ್ ಮಾಡಬೇಕು. ಏಕೆಂದರೆ, ಅವರಿಗೂ ಸೆಟಲೈಟ್ ರಿಪೋರ್ಟ್ ಮೇಲೆ, ಕೆಲವು ಜಿಯಾಲಜಿಕಲ್ ಮೇಲೆ ಹೇಳುತ್ತಾರೆ. ಅದರೊಳಗೆ ಒಂದೊಂದು ಎಕ್ಸೆಪ್ಷನ್ ಇರಬಹುದು. ನಿಮ್ಮ ಹೊಲದಲ್ಲಿ ನೀರು ಬಿದ್ದುಬಿಡಬಹುದು. ಆದ್ದರಿಂದ, ನಾವು ಅಲ್ಲಿಂದ ಕ್ಲಿಯರೆನ್ಸ್ ಬರುವವರೆಗೂ ಇಲ್ಲಿ ಕೆ.ಇ.ಬಿ. ಏನೂ ಮಾಡುವುದಕ್ಕಾಗುವುದಿಲ್ಲ. ಅದನ್ನೇ ಸಚಿವರು ಹೇಳಿದ್ದು.

ಶ್ರೀ ಟಿ.ಬಿ.ಜಯಚಂದ್ರ: ಕಪ್ಪು ಮತ್ತು ಬೂದು ಎಂದು ವರ್ಗೀಕರಣ ಮಾಡುವಂಥ ಸಂದರ್ಭದಲ್ಲಿ, ಇವತ್ತಿನ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿ ಬದಲಾವಣೆಯಾಗಿದೆ. ಈಗ ಹೇಮಾವತಿ ನೀರನ್ನು ನೀವೇ ಕೊಟ್ಟಿದ್ದೀರಿ. ಅದಾದ ಮೇಲೆ ಇಲ್ಲಿ ಕಪ್ಪು ಮತ್ತು ಬೂದು ಎಂಬ ಪ್ರಶ್ನೆ ಇಲ್ಲಿ ಉಳಿದಿಲ್ಲ. ಅದಕ್ಕಿಂತ ಮುಖ್ಯವಾಗಿ ಒಂದುಸಾರಿ ಅಗ್ರಿಮೆಂಟಾದ ಮೇಲೆ, ಪವರ್ ಸ್ಯಾಂಕ್ಷನ್ ಆದಮೇಲೆ ನೀವು ರೆಫ್ಯೂಸ್ ಮಾಡುವುದಕ್ಕೆ ಹೇಗೆ ಬರುತ್ತದೆ? ಅದಕ್ಕಾಗಿ ನಾನು ದಯಮಾಡಿ ಹೇಳತಕ್ಕಂತಾದ್ದು ಇಷ್ಟೆ. ಈಗ ಎಷ್ಟು ವರ್ಕ್ ಆರ್ಡರ್ ಆಗಿದೆಯೋ, ಎಷ್ಟು ಸ್ಯಾಂಕ್ಷನ್ ಆಗಿದೆಯೊ ಅವೆಲ್ಲಕ್ಕೂ ಸರ್ವೀಸ್ ಕೊಡುವುದನ್ನು ಕೊಡಿ. ಆಮೇಲೆ, ಮುಖ್ಯವಾಗಿ ನಮಗೆ ತೊಂದರೆ ಏನಾಗಿರುವುದೆಂದರೆ, ಟಾರ್ಜೆಟ್ ಕೊಟ್ಟಿಲ್ಲ. ಈ ಕಪ್ಪು ಮತ್ತು ಬೂದು ಏರಿಯಾಕ್ಕೆ ಟಾರ್ಜೆಟ್ ಫಿಕ್ಸ್ ಮಾಡಿಲ್ಲ. ದಯಮಾಡಿ ಟಾರ್ಜೆಟ್‌ನ್ನು ರಿಲೀಸ್ ಮಾಡಿದರೆ, ನಂತರದ ವರ್ಕ್ ಏನಿದೆಯೋ ಅದನ್ನು ಪೂರ್ಣ ಮಾಡುವುದಕ್ಕೆ ಅವಕಾಶವಾಗುತ್ತದೆ. ಅವರು ಸೆಲ್ಫ್ ಫೈನಾನ್ಸಿಂಗ್ ಎಂದು ಹೇಳುತ್ತೀರಿ....

ಶ್ರೀ ಜೆ.ಹೆಚ್.ಪಟೇಲ್: ನಾನು ಪುನಃ ಪುನಃ ಅದನ್ನೇ ಹೇಳುವುದು. ಒಂದು ಪೋಲ್ ಹಾಕಿದ್ದೆ, ವೈರ್ ಎಳೆದಿದ್ದೆ, ಅಲ್ಲಿ ನೀರು ಬಂತು ಆದರೆ ಸರ್ವೀಸ್ ಕೊಟ್ಟಿಲ್ಲವೆಂದು ಹೇಳುತ್ತಾರೆ. 5 ಪೋಲ್ ಹಾಕಿದ್ದೆ, ಇದಲ್ಲ. ಬೇಸಿಕಲಿ ಹಿಂದೆ ಏನು

ಟಾರ್ಜೆಟ್ ಫಿಕ್ಸ್ ಮಾಡಿದ್ದರು, ಆ ಪ್ರಕಾರ ಕೊಟ್ಟರು. ಅದರೊಳಗೆ ಕೆ.ಇ.ಬಿ.ನವರೂ ಮೂರ್ಖತನ ಮಾಡಿದ್ದಾರೆ. ಈ ಕ್ಲಾಸಿಫಿಕೇಷನ್ ಬರುವುದಕ್ಕೆ ಮುಂಚೆ ಅವರು ಪಾಪ ಸಂಪರ್ಕ ಕೊಡುತ್ತಾರೆಂದು ಸಾಲಗೀಲ ಮಾಡಿ, ಬಡ್ಡಿಯನ್ನೂ ಕೊಟ್ಟಿದ್ದಾರೆ. ಅದಕ್ಕೆ ನಾನು ಈ ಸಾರಿ ಏನು ಹೇಳಿದ್ದೇನೆಂದರೆ, ಮೊದಲು ಏನು ಟಾರ್ಜೆಟ್ ಫಿಕ್ಸ್ ಮಾಡಿದ್ದೆವು, ಸೀನಿಯಾರಿಟಿ ಮೇಲೆ, ಆದರೆ ಸೀನಿಯಾರಿಟಿ ಅಲ್ಲ. ಮೂರೇ ಕಂಬದಲ್ಲಿ ಕೊಡುವಹಾಗಿದ್ದರೆ, ಅವರಿಗೆ ಮೊದಲು ಕೊಡುತ್ತಾರೆ. 10 ಕಂಬ ಇದ್ದರೆ, ಆನಂತರ ಕೊಡುತ್ತಾರೆ. 1994ನೇ ಇಸವಿಯಲ್ಲಿ ಅರ್ಜಿ ಕೊಟ್ಟಿದ್ದರೆ, ಸೀನಿಯಾರಿಟಿ ಇದೆ ಎಂದಲ್ಲ. ಹೀಗಾಗಿ ಇದರೊಳಗೆ ಸ್ವಲ್ಪ ಕನ್‌ಫ್ಯೂಷನ್ ಇದೆ. ಅದಕ್ಕೆ ನಾಳೆ ಅಧಿಕಾರಿಗಳನ್ನು ಕರೆಸಿ, ಈಗ ಹೇಮಾವತಿ ನದಿ ನೀರು ಬಿಟ್ಟಿರುವುದರಿಂದ ಅಲ್ಲಿನ ಬ್ಲಾಕ್ ಲಿಸ್ಟ್ ಎಲ್ಲಾ ಹೋಗಿಬಿಟ್ಟಿದೆ. ಆದ್ದರಿಂದ ಆ ಏರಿಯಾವನ್ನು, That also we will have to do. We will have to write to the Government of India then I will come to the particular case.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಸನ್ಮಾನ್ಯ ಸಭಾಧ್ಯಕ್ಷರೇ, ಈ ಕಪ್ಪು ಮತ್ತು ಬೂದು ಎಂಬುದನ್ನು ದಯಮಾಡಿ ತೆಗೆಯಿರಿ. ರೈತರ ಕರ್ಮ, ಅವರೇನೋ ಕಷ್ಟಪಟ್ಟು ಒಂದು ಬೋರ್‌ವೆಲ್ ಹಾಕಿಸಿಕೊಂಡಿರುತ್ತಾರೆ, ಅವರಿಗೆ ನೀರು ಸಿಕ್ಕಿದರೆ ನೀವು ವಿದ್ಯುತ್ ಕೊಡಿ. ಯಾರೋ ಭೂ ವಿಜ್ಞಾನ ಇಲಾಖೆಯವರು ಮಾಡಿದರು, ಅವರು ಮಾಡಿದರು ಎಂದು ಹೇಳಿ, ಪರ್ಟಿಕ್ಯುಲರ್ ತುಮಕೂರು ಜಿಲ್ಲೆಯಲ್ಲಿ ಕೆಲವು ತಾಲ್ಲೂಕು ಮತ್ತು ಕೋಲಾರ ಜಿಲ್ಲೆಯಲ್ಲಿ ಏನು ಮಾಡಿದ್ದಾರೆ ಇದು ವೈಜ್ಞಾನಿಕವಾಗಿ, ಇದು ಯಾವುದೇ ಆಧಾರವಿಲ್ಲದೇ ಇರುವುದು ಆದ್ದರಿಂದ ದಯಮಾಡಿ ನಮ್ಮನ್ನು ಗುರಿ ಮಾಡುವುದು ಬೇಡ. ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದೂ ರೈತರಿಗೆ ಅಂತಹ ತೊಂದರೆ ಏನೂ ಆಗಿಲ್ಲ, ನೀರು ಸಿಕ್ಕುತ್ತಾ ಇದೆ. ಇದೇ ಸಮಸ್ಯೆ ಬೇರೆ ತಾಲ್ಲೂಕುಗಳಲ್ಲೂ ಇದೆ, ಬೇರೆ ಜಿಲ್ಲೆಯಲ್ಲೂ ಇದೆ.

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಜಯಚಂದ್ರರವರು ಮತ್ತು ಮುದ್ದ ಹನುಮೇಗೌಡರು ಒಂದು ವೈಜ್ಞಾನಿಕವಾದ ಸಲಹೆಯನ್ನು ಕೊಟ್ಟಿದ್ದಾರೆ. ಎಲ್ಲಾ ಬ್ಲಾಕ್ ಹೋಗಿಬಿಟ್ಟಿದೆ. ಆದಷ್ಟು ಬೇಗ ಡಿಕ್ಲೇರ್ ಮಾಡಿ ಎಂದು ಬರೆಯುತ್ತೇವೆ, ಇದಕ್ಕಿಂತ ಹೆಚ್ಚಿಗೆ ಇನ್ನೇನು ಬರೆಯಲಿ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ನಮಗೆ ಏನಾಗಿದೆ ಎಂದರೆ, ಸರ್ಕಾರ ಅಥವಾ ಭೂ ವಿಜ್ಞಾನ ಇಲಾಖೆಯವರು, ಅಥವಾ ಕರ್ನಾಟಕ ವಿದ್ಯುತ್ ಮಂಡಳಿಯವರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂಬುದು ನಮ್ಮ ಉದ್ದೇಶ ಅಲ್ಲ. ನಮ್ಮ ಜಿಲ್ಲೆಯಲ್ಲಿ

ನೀರಾವರಿಗೆ ರೈತರಿಗೆ ಯಾವುದೇ ಯೋಜನೆ ಇಲ್ಲ. ಈಗ ಕೆಲವು ಭಾಗಗಳಲ್ಲಿ ಹೇಮಾವತಿ ನೀರು ಬರುತ್ತಾ ಇದೆ. ನಮಗೆ, ಅಂತರ್‌ಜಲವೇ ನಮ್ಮ ಆಸ್ತಿ. ನಾವು ಅದರ ಮೇಲೆಯೇ ಜೀವನ ಮಾಡಬೇಕು.

ಅಧ್ಯಕ್ಷರು: ಹೌದು, ಅಂತರ್ ಜಲ ಎಷ್ಟು ಬಳಸಬೇಕೆಂಬುದಕ್ಕೂ ಇತಿಮಿತಿ ಇರುತ್ತದೆ. ತಾವು ಮತ್ತು ನಾನಾದರೂ ಕೂಡ ಸ್ವಲ್ಪ ವೈಜ್ಞಾನಿಕವಾಗಿ ಯೋಚನೆ ಮಾಡಬೇಕಾಗುತ್ತದೆ. ನೀವಾದರೂ ಹೇಮಾವತಿ ಬಳಿ ಇದ್ದೀರಿ, ನಮಗೆ ಅದೂ ಕೂಡ ಇಲ್ಲ. ಆದರೂ ಕೂಡ ನಾವು ಬರೀ ನಮಗಾಗಿ ಬದುಕುತ್ತಾ ಇಲ್ಲ. ಮುಂದಿನ ಜನರೇಷನ್‌ಗಾಗಿ ಕೂಡ ನಾವು ಸಮಾಜವನ್ನು ಇಟ್ಟು ಹೋಗಬೇಕಾಗುತ್ತದೆ. Let us not act in haste. Let us have a scientific approach to the whole problem. ನಮಗೆ ವೈಜ್ಞಾನಿಕವಾದ ಸಲಹೆಯೇ ಬೇಡ ಎಂದು ಹೇಳತಕ್ಕಂಥಾದ್ದು ಬೇಡ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ತಾವೂ ಕೂಡ ಅನುಮತಿಯನ್ನು ಕೊಟ್ಟಿದ್ದೀರಿ. ತಮ್ಮಲ್ಲಿ ಬಹಳ ಸಲ ನಾನು ಹೇಳಿದ್ದೇನೆ. ಮತ್ತೆ ನಾವು ನಿಲುವಳಿ ಸೂಚನೆ ಮೂಲಕವೂ ತಮಗೆ ಕೊಟ್ಟಿದ್ದೆವು. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಸದನದಲ್ಲಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಅಸಮರ್ಪಕ ವಿದ್ಯುತ್ ಸರಬರಾಜಿನ ಬಗ್ಗೆ ನಾನು ಪದೇ ಪದೇ ಹೇಳುತ್ತಾ ಬಂದಿದ್ದೇನೆ. ನಿಲುವಳಿ ಸೂಚನೆಯಲ್ಲೂ ಕೂಡ ನಾವು ಅದನ್ನು ಹೇಳಿದ್ದೆವು. ಅಂತರಸನಹಳ್ಳಿಯಲ್ಲಿ ಒಂದು ಟ್ರಾನ್ಸ್‌ಫಾರ್ಮರ್ ಹೋಯಿತೆಂದು ಇಡೀ ತುಮಕೂರು ಜಿಲ್ಲೆಯಲ್ಲಿ ಮತ್ತು ಕೋಲಾರ ಜಿಲ್ಲೆಯಲ್ಲಿ ಇವತ್ತು ವಿದ್ಯುತ್ ಸರಿಯಾಗಿ ಸರಬರಾಜು ಆಗುತ್ತಾ ಇಲ್ಲ. ಅದನ್ನು ರೀಪ್ಲೇಸ್ ಮಾಡತಕ್ಕ ಕೆಲಸವನ್ನೂ ಕೂಡ ಸರಿಯಾಗಿ ಮಾಡಲಿಲ್ಲ. ಮತ್ತು ಎರಡನೆಯದು, ಪರ್ಟಿಕ್ಯುಲರ್ಲಿ ಕುಣಿಗಲ್ ಕ್ಷೇತ್ರಕ್ಕೆ ಏನು ತೊಂದರೆಯಾಗಿದೆ ಎಂದರೆ, ಡಬಲ್ ಸರ್ಕ್ಯೂಟ್ ಲೈನ್ ಎಂದು ಎಳೆದಿದ್ದಾರೆ. ಈ ಲೈನ್ ಈಗಾಗಲೇ ಕಂಪ್ಲೀಟ್ ಆಗಿದೆ. ಬೋರ್ಡಿನವರು ಲಕ್ಷಾಂತರ ರೂಪಾಯಿ ಖರ್ಚುಮಾಡಿ, ಆ ಲೈನ್ ಎಳೆದಿದ್ದಾರೆ. ಅದರ ಮೇಲೆ, ಹೆಬ್ಬೂರು ಸ್ಟೇಷನ್, ಮತ್ತೆ ಕುಣಿಗಲ್ ಸ್ಟೇಷನ್, ಹುಲಿಯೂರುದುರ್ಗ, ಮದ್ದೂರು ತಾಲ್ಲೂಕು ಮತ್ತು ಮಳವಳ್ಳಿ ತಾಲ್ಲೂಕಿಗೆ ಆ ಲೈನ್‌ನಿಂದ, ಅಂತರಸಹಳ್ಳಿಯಿಂದ ಬರಬೇಕು. ಆ ಲೈನ್ ಪೂರ್ಣವಾದ ಮೇಲೆ ಏನಾಗಿದೆ ಎಂದರೆ, ಸನ್ಮಾನ್ಯ ಮಾಜಿ ಹೈಕೋರ್ಟಿನ ನ್ಯಾಯಾಧೀಶರು, ಸರ್ಕಾರಿ ಜಮೀನು ನನಗೆ ಸೇರಿದ್ದು ಎಂದು ಏನೋ ಒಂದು ಕಾರಣ ಒಡ್ಡಿ ಉಚ್ಚ ನ್ಯಾಯಾಲಯದಲ್ಲಿ ಸ್ಟೇ ತೆಗೆದುಕೊಂಡಿದ್ದಾರೆ. ದಯಮಾಡಿ, ಇಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳೂ ಇದ್ದಾರೆ. ನಾನು ಮನವಿ ಮಾಡುವುದು ಇಷ್ಟೆ. ಹೈಕೋರ್ಟಿನಲ್ಲಿ ಸ್ಟೇ ಗೋಸ್ಕರ, ಅದನ್ನು ಯಾವ ಕಾರಣಕ್ಕೆ ಕೊಟ್ಟಿದ್ದಾರೆ, ಯಾರು ತೆಗೆದುಕೊಂಡಿದ್ದಾರೆಂಬ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನನ್ನ

ಮನವಿ ಏನೆಂದರೆ, ಒಂದು ಸರ್ಕಾರಿ ಜಮೀನಿನ ಮೇಲೆ ಮೈನ್ ಹೋಗಿರುವುದಕ್ಕೆ ಸ್ಟೇ ಆರ್ಡರ್ ತೆಗೆದುಕೊಂಡು ಕುಳಿತಿರುವುದನ್ನು, ಸುಮಾರು 3-4 ವರ್ಷದಿಂದ ಆ ಸಮಸ್ಯೆಯನ್ನು ಪರಿಹಾರ ಮಾಡದೇ, ಇಡೀ ನನ್ನ ಕ್ಷೇತ್ರಕ್ಕೆ, ಮಾಗಡಿ ತಾಲ್ಲೂಕಿಗೆ, ಮದ್ದೂರು ತಾಲ್ಲೂಕಿಗೆ ಇವತ್ತು ನಾವೇನು ಅಂತರಸಹನಳ್ಳಿಯಿಂದ ವಿದ್ಯುತ್ ಸರಬರಾಜು ಮಾಡಬೇಕಾಗಿತ್ತು, ಅದನ್ನು ಮಾಡುವುದಕ್ಕಾಗಲಿಲ್ಲ. ಕೋಟ್ಯಾಂತರ ರೂಪಾಯಿ ಹಣವನ್ನು ಇನ್‌ವೆಸ್ಟ್ ಮಾಡಿ, ಒಂದುಸಣ್ಣ ಸ್ಟೇಗೋಸ್ಕರ ಅದು ನಿಂತಿದೆ. ದಯಮಾಡಿ, ನಾನು ಸರ್ಕಾರದಲ್ಲಿ ಮನವಿ ಮಾಡುವುದು ಇಷ್ಟೆ. Please take action to see that the stay is vacated. ದಯಮಾಡಿ ಅದನ್ನು ಮಾಡಿ, ನನಗೆ ಬಂದಿರುವ ಮಾಹಿತಿ ಪ್ರಕಾರ, ಸರ್ಕಾರಿ ಜಮೀನು ನನಗೆ ಸೇರಿದ್ದು ಎಂದು ಆ ಆಧಾರದ ಮೇಲೆ, ಸರಿಯಾಗಿ ಮಾಹಿತಿ ಕೊಡದೇ ಸ್ಟೇ ಆರ್ಡರ್ ಸಿಕ್ಕಿದೆ ಎಂಬುದಾಗಿ ತಿಳಿದು ಬಂದಿದೆ. ಅದರ ಬಗ್ಗೆ ದಯಮಾಡಿ, ಚಿಂತನೆ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಎಸ್.ಶಿವನಂಜಪ್ಪ: ಮಧುಗಿರಿ ತಾಲ್ಲೂಕು, ದೊಡ್ಡೇರಿ ಹೋಬಳಿ ಅದು ಬೆಳ್ಳಾವಿ ಕ್ಷೇತ್ರಕ್ಕೆ ಸೇರುತ್ತದೆ. ಕುಡಿಯುವ ನೀರಿನ ಸಮಸ್ಯೆ ಬಂದಾಗ, ಪಿ.ಎಲ್.ಡಿ.ಬ್ಯಾಂಕಿನವರು ಸಾಲ ಕೊಡಬೇಕೆಂದಾಗ, ದೊಡ್ಡೇರಿ ಹೋಬಳಿ ಬ್ಲಾಕ್ ಏರಿಯಾಕ್ಕೆ ಸೇರಿದೆ, ಅಲ್ಲಿ ಕುಡಿಯುವ ನೀರು ಸಿಗುವುದಿಲ್ಲವೆಂದು ಪ್ರಾರಂಭ ಮಾಡಿದರು. ಆಗಿನ ಮುಖ್ಯಮಂತ್ರಿಗಳು ದೇವರಾಜ ಅರಸರು ಇದ್ದರು. ಅವರಿಗೆ ನಾನು ಕೇಳಿದೆ. ಅಲ್ಲಿ ಬೋರ್ ತೆಗೆಸಿ, ನೀರು ಬರುತ್ತೋ ಇಲ್ಲವೋ ನೋಡೋಣ ಎಂದರು. ಆಗ ತೆಗೆಸಿದ ಎಲ್ಲಾ ಬೋರ್‌ವೆಲ್‌ಗಳಲ್ಲೂ ನೀರು ಬಂತು, ಕೇವಲ 2 ಪರ್ಸೆಂಟ್ ಮಾತ್ರ ಫೇಲಾಯಿತು. ವಿಜ್ಞಾನ ಇಷ್ಟೊಂದು ಅಡ್ವಾನ್ಸ್ ಆದರೂ ಕೂಡ ಭೂಗರ್ಭದಲ್ಲಿ ಎಲ್ಲಿ ನೀರಿದೆ ಎಂದು ಹೇಳುವುದಕ್ಕೆ ಇವತ್ತು ಯಾವುದೇ ಮಿಷನ್ ಇಲ್ಲ, ಯಾರೋ ಹೇಳಿಬಿಟ್ಟರು ಎಂದು ನೀವು ಅದನ್ನೇ ಫಾಲೋ ಮಾಡಿದರೆ ಹೇಗಾಗುತ್ತದೆ? ರೈತರು ಎಲ್ಲಿ ಹೋಗಬೇಕು. ಈಗ ನಾನು ಪ್ರೈವೇಟ್ ಪರ್ಸನ್, ನಾನು ಹಾಕಿಕೊಳ್ಳುತ್ತೇನೆ, ಒಂದು ಡೀಸೆಲ್ ಇಂಜಿನ್ ತೆಗೆದುಕೊಂಡು ನೀರು ಎತ್ತಿಕೊಳ್ಳುತ್ತೇನೆ. ಆಗ ನಿಮ್ಮ ಕಾನೂನು ಬರುವುದಿಲ್ಲವೇ?

MR. SPEAKER: You are in-correct track, The Hon'ble Member does have the correct information. ನಮಗೆ ಆ ಸೆಟಲೈಟ್ ಮುಖಾಂತರ ಆ ರಿಮೋಟ್ sensing sattelite ಟ್ರೆಸ್ಸಿಂಗ್ ಎಲ್ಲಾ ಇಟ್ಟುಕೊಂಡು, ಭೂಗರ್ಭದಲ್ಲಿ ಎಷ್ಟು ನೀರು ಇದೆ, ಯಾವ ಪ್ರಮಾಣದಲ್ಲಿ ಇದೆ, ಎಲ್ಲಿ ನದಿ ಹರಿಯುತ್ತಿದೆ ಎಂಬುದನ್ನೆಲ್ಲಾ ಕಂಡು ಹಿಡಿಯತಕ್ಕ ಸಾಧನಗಳು ಇವೆ. ಎಲ್ಲಾ ಸೌಕರ್ಯಗಳೂ ಇವೆ.

ಶ್ರೀ ಜಿ.ಎಸ್.ಶಿವನಂಜಪ್ಪ: ಕುಡಿಯುವ ನೀರಿಗೆ ಜಿಯಾಲಿಜಿಸ್ಟ್ ಏನು ಪಾಯಿಂಟ್ ತೋರಿಸುತ್ತಿದ್ದಾರೆ, 100ಕ್ಕೆ 50 ಫೇಲಾಗುತ್ತಿವೆ. ನಾನು ಆ ಪ್ರಶ್ನೆಯಲ್ಲಿ ಹೇಳಿದ್ದು, ಈಗ ಮಾಧುಸ್ವಾಮಿಯವರು ಹೇಳಿದಂತೆ, ನಾನು ಪ್ರೈವೇಟ್‌ನಲ್ಲಿ ಬೋರ್‌ವೆಲ್ ಹಾಕಿಕೊಳ್ಳುತ್ತೇನೆ, ಡೀಸೆಲ್ ಇಂಜಿನ್ ತೆಗೆದುಕೊಂಡು ಬರುತ್ತೇನೆ. ಆಗ ಕಪ್ಪು ಮತ್ತು ಬೂದು ಎಂಬುದು ಬರುವುದಿಲ್ಲವೇ? ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ, ಜಿಯಾಲಿಜಿಸ್ಟ್ ಹೇಳಿಬಿಟ್ಟರು ಎಂದು ನೀವು ಎಲ್ಲರಿಗೂ ನಿಲ್ಲಿಸಿದರೆ ಹೇಗಾಗುತ್ತದೆ?

ಅಧ್ಯಕ್ಷರು: ಸರ್ಕಾರಿ ಆಜ್ಞೆಯನ್ನು ರ್‍ಯಾಷನಲೈಸ್ ಮಾಡಬೇಕೆಂದು ಹೇಳತಕ್ಕಂಥದ್ದರಲ್ಲಿ ಅರ್ಥ ಇದೆ. ಆ ಮಾತನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಸ್ವಂತ ಹಣದಲ್ಲಿ ಬೋರ್ ಹಾಕಿಕೊಳ್ಳತಕ್ಕಂಥವರಿಗೆ, ಕಪ್ಪು ಮತ್ತು ಬೂದು ಇರುವುದಿಲ್ಲ, ಲೋನ್ ಕೇಳತಕ್ಕಂಥವರಿಗೆ ಮಾತ್ರ ಕಪ್ಪು ಮತ್ತು ಬೂದು ಎಂದು ಹೇಳತಕ್ಕಂಥಾದ್ದು ಸರಿಯಲ್ಲ. ಯಾವ ಏರಿಯಾವನ್ನು ಓವರ್ ಎಕ್ಸ್‌ಪ್ಲೋಯ್ಟೇಡ್ ಎಂದು ಟ್ರೀಟ್ ಮಾಡಿದ್ದಾರೆ, ಅಲ್ಲಿ ಯಾರೂ ಕೂಡ ಕೊರೆಯಕೂಡದು. ರೀ ಚಾರ್ಜಿಂಗ್‌ಗೆ ಸರ್ಕಾರ ವ್ಯವಸ್ಥೆ ಮಾಡಬೇಕು. ಅದನ್ನು ಹೇಳಿ.

ಶ್ರೀ ಜಿ.ಎಸ್.ಶಿವನಂಜಪ್ಪ: 17-4-97ರ ಹಿಂದಕ್ಕೆ 5-6 ವರ್ಷಗಳಿಂದ ಪೆಂಡಿಂಗ್ ಇವೆ. ಇವುಗಳಿಗೆ ಸಂಪರ್ಕ ಏಕೆ ಕೊಡಬಾರದು?

ಶ್ರೀ ಸಿ.ಭೈರೇಗೌಡ: ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕ ಕೊಡುವಾಗ, ತಗಲುವ ಹಣವನ್ನು ನಬಾರ್ಡ್ ಸಂಸ್ಥೆಯವರು ಈ ವಿದ್ಯುತ್ ಮಂಡಳಿಗೆ ತುಂಬುತ್ತಾರೆ. ಈ ಕಪ್ಪು ಮತ್ತು ಬೂದು ಆಗಿರತಕ್ಕ ತಾಲ್ಲೂಕುಗಳಲ್ಲಿ, ಸಂಪರ್ಕ ಕೊಟ್ಟರೆ, ನಬಾರ್ಡ್ ಸಂಸ್ಥೆಯವರು ಹಣ ಕೊಡುವುದಿಲ್ಲವೆಂಬ ಮಾತನ್ನು ಅವರು ಹೇಳಿದ್ದಾರೆ. ಆದ್ದರಿಂದ, ಇಲ್ಲಿ ಇರತಕ್ಕಂತಾದ್ದು ಹಣಕಾಸಿನ ತೊಂದರೆ. ಈ ವರ್ಗ ಆ ವರ್ಗ ಎಂದು ಹೇಳುವುದಕ್ಕಿಂತ ಹೆಚ್ಚಾಗಿ, ಹಣಕಾಸಿನ ತೊಂದರೆ ಇರತಕ್ಕಂಥಾದ್ದು. ಒಂದು ಪಂಪುಸೆಟ್ಟಿಗೆ, ಸಂಪರ್ಕ ಕೊಡಬೇಕಾದರೆ, ಕೆಲವು ಕಡೆ 5 ಸಾವಿರ, ಕೆಲವು ಕಡೆ 10 ಸಾವಿರ ಮತ್ತೆ ಕೆಲವು ಕಡೆ 50 ಸಾವಿರ ಕೂಡ ಆಗುತ್ತದೆ. ಅಷ್ಟು ಹಣವನ್ನು, ಕಪ್ಪು ಮತ್ತು ಬೂದು ಏರಿಯಾ ಇರದೇ ಇರುವ ಏರಿಯಾಕ್ಕೆ ನಬಾರ್ಡ್ ಸಂಸ್ಥೆಯವರು ಹಣ ಕೊಡುತ್ತಾರೆ. ಆದರೆ, ವಿದ್ಯುತ್ ಮಂಡಳಿಯ ಹಣಕಾಸಿನ ಪರಿಸ್ಥಿತಿ ಎಷ್ಟರಮಟ್ಟಿಗೆ ಇದೆ ಎಂಬುದು ಎಲ್ಲರಿಗೂ ಗೊತ್ತಿದೆ. ಈಗ ಅವರು ಹೇಳಿರತಕ್ಕಂತಾದ್ದು ಈ ತೊಂದರೆ ಇವೆ, ಆ ಕಾರಣದಿಂದ ನಾವು ಕೊಡುವುದಕ್ಕಾಗುತ್ತಾ ಇಲ್ಲವೆಂಬ ಮಾತನ್ನು ಹೇಳಿದ್ದಾರೆ.

ಅಧ್ಯಕ್ಷರು: ಮಾಧುಸ್ವಾಮಿಯವರು ಏನು ಹೇಳಿದ್ದಾರೆಂದರೆ, ಆರ್.ಇ.ಸಿ. ಮತ್ತು ನಬಾರ್ಡ್‌ನವರು ಕೊಡತಕ್ಕಂಥಾದ್ದು ನಮಗೆ ಮುಖ್ಯ ಅಲ್ಲ. ಅದನ್ನೆಲ್ಲಾ ನೀವು

ಮುಂದಕ್ಕೆ ಮಾಡಿ. ಈಗಾಗಲೇ ಕೊರೆದು ದುಡ್ಡೆಲ್ಲಾ ಇನ್‌ವೆಸ್ಟ್ ಮಾಡಿರುವವರಿಗೆ, ಮಾನ್ಯ ಸದಸ್ಯರಾದ ಟಿ.ಬಿ.ಜಯಚಂದ್ರರವರು ಹೇಳಿದಂತೆ, ಯಾರು ಅಪ್ಲಿಕೇಷನ್ ಕೊಟ್ಟು ಎಸ್ಟಿಮೇಟ್ಸ್ ಎಲ್ಲ ಸ್ಯಾಂಕ್ಷನ್ ಆಗಿ, ವರ್ಕ್ ಆರ್ಡರ್ ಆಗಿವೆ, ಅಂಥಾದ್ದಕ್ಕೆ ನಿಮ್ಮ ಹಣಕಾಸಿನ ತೊಂದರೆ ಇದೆಯೆಂದು ನಮಗೆ ಹಿಂಸೆ ಮಾಡಬೇಡಿ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಆರ್.ನಾರಾಯಣ: ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಮಾತನಾಡಿದಂಥ ಸದಸ್ಯರು ಕಪ್ಪು ಮತ್ತು ಬೂದು ಭೂಮಿ ಬಗ್ಗೆ ಬಹಳಷ್ಟು ಬೆಳಕನ್ನು ಚೆಲ್ಲಿದ್ದಾರೆ. ತಾವು ಕೂಡ ಸಾಕಷ್ಟು ವಿವರಣೆಯನ್ನು ಕೊಟ್ಟಿದ್ದೀರಿ. ಸರ್ಕಾರಕ್ಕೆ ನನ್ನ ಮನವಿ ಏನೆಂದರೆ, ತಮಗೆಲ್ಲರಿಗೂ ತಿಳಿದಿರುವ ರೀತಿಯಲ್ಲಿ, ಗ್ರೌಂಡ್ ವಾಟರ್ ಮ್ಯಾನೇಜ್‌ಮೆಂಟ್ ಬಗ್ಗೆ, ಯಾವುದೇ ಒಂದು ಪಾಲಿಸಿ, ನೀತಿ ನಿಯಮ ಒಂದು ಕಾನೂನು ಇಲ್ಲ. ಮತ್ತೆ ಈಗ ನನಗೆ ತಿಳಿದಿರುವ ಮಾಹಿತಿ ಪ್ರಕಾರ, ಈ ಹಿಂದೆಯೂ ಈ ಸಮಸ್ಯೆ ಬಂದಿತ್ತು. ಕೇಂದ್ರಸರ್ಕಾರದವರು, they are contemplating to bring about the Ground water Management Authority Bill. ಆ ಬಿಲ್ಲನ್ನು ತರಬೇಕೆಂಬ ಚಿಂತನೆಯಲ್ಲಿದ್ದಾರೆ. ಈಗಾಗಲೇ ಅದಕ್ಕೆ ಕೆಲವು ರೂಪುರೇಷೆಗಳನ್ನು ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಅದನ್ನು ಅನುಸರಿಸಿ, ರಾಜ್ಯ ಸರ್ಕಾರದವರು, the Ground Water Management Authority Bill, ಎಂದು ತರಬೇಕು. ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇದರ ಬಗ್ಗೆ ಮಾತನಾಡಿರತಕ್ಕ ಎಲ್ಲಾ ಸದಸ್ಯರಿಗೂ ಚಿಂತನೆ ಇದೆ. ಈಗ ಬೋರ್‌ವೆಲ್ ಕೊರೆದಿದ್ದಾರೆ, ನೀರು ಬಂದಿದೆ, ಸಂಪರ್ಕ ಕೊಡಿ ಎಂದು ಕೇಳುವುದೂ ತಪ್ಪಾಗುತ್ತದೆ. ಆ ನೀರನ್ನು ನಾವು ಡ್ರಾ ಮಾಡಿದರೆ, ಪಕ್ಕದಲ್ಲಿ ಡ್ರೈ ಆಗುತ್ತದೆ. ವಾಟರ್ ಪೊಟೆನ್‌ಷಿಯಲ್ ಏನಿದೆ, 100ಕ್ಕೆ 80 ಭಾಗ ಎಕ್ಸ್‌ಪ್ಲೋಯಿಟ್ ಆಗಿದೆ ಎಂಬ ಕಾರಣಕ್ಕೋಸ್ಕರ ಇವತ್ತು ಕಪ್ಪು ಮತ್ತು ಬೂದು ಎಂದು ಮಾಡಿರತಕ್ಕಂತಾದ್ದು. ಆದರೆ, ನನ್ನ ಮನವಿ ಏನೆಂದರೆ, ಯಾವುದೇ ಒಂದು ಪಾಲಿಸಿ ಒಂದು ನೀತಿ ನಿಯಮ ಇಲ್ಲದೇ ಇರುವುದರಿಂದ, ಮತ್ತು ಗ್ರೌಂಡ್ ವಾಟರ್ ಅಥಾರಿಟಿ ಬಿಲ್ಲನ್ನು, ಕೇಂದ್ರಸರ್ಕಾರ ತರುವ ಹಂತದಲ್ಲಿರುವುದರಿಂದ, ಅದರಂತೆ ರಾಜ್ಯದಲ್ಲೂ ಸಹ ಗ್ರೌಂಡ್‌ವಾಟರ್ ಅಥಾರಿಟಿ ಬಿಲ್ಲನ್ನು ತರತಕ್ಕ ಸೂಚನೆ ಇರುವುದರಿಂದ ದಯಮಾಡಿ ನಾನು ಕೂಡ ಮಾಧುಸ್ವಾಮಿಯವರ ಮಾತಿಗೆ ಸ್ಪಂದಿಸಿ, ಇದನ್ನು ನೀವು ರೆಟ್ರಾಸ್ಪೆಕ್ಟೀವ್ ಕೊಡದೇ, 1998ರ ಜನವರಿ ಒಂದರಿಂದ ನಾವು, ಅಥವಾ ಆ ಕಾನೂನು ಜಾರಿಗೆ ಬಂದಂಥ ಕಾಲದಲ್ಲಿ ಮಾಡಲೇಬೇಕಾಗುತ್ತದೆ. ತಾವು ಕೂಡ ಬಹಳ ಚೆನ್ನಾಗಿ ಹೇಳಿದ್ದೀರಾ? ಏಕೆಂದರೆ ಮುಂದಿನ ಜನಾಂಗಕ್ಕೆ ದೃಷ್ಟಿ ಕೊಡಬೇಕಾಗಿದೆ. ಕೇವಲ ಸೆಟ್‌ಲೈಟ್‌ದಲ್ಲಿ ಡಾರ್ಕ್ ಇದೆ ಅಲ್ಲ ಅದರಲ್ಲಿ ಇನ್ನು ಒಂದು ರಿಪೋರ್ಟ್ ಇದೆಯೆಂದು ಭಾಷಣ

ಮಾಡುತ್ತಿದ್ದರು ಆ ಏರಿಯಾದಲ್ಲಿ ಡಾರ್ಕ್ ಮತ್ತು ಗ್ರೇ ಅಂತ ಮಾಡಿದ್ದೇವೆ 15 ವರ್ಷವಾದ ಮೇಲೆ ಕುಡಿಯುವುದಕ್ಕೆ ನೀರು ಸಿಗುವುದಿಲ್ಲವೆನ್ನುವ ಮಾಹಿತಿ, ಅದೇ ಸೆಟಲೈಟ್‌ನಿಂದ ಬಂದಿದೆ. ಈ ಎಲ್ಲ ಅರ್ಜಿಗಳನ್ನು ಬಹಳ ಕುಲಂಕುಷವಾಗಿ ಪರಿಶೀಲೀಸಬೇಕಾಗುತ್ತದೆ. ಅಲ್ಲಿಯವರೆಗೂ ಒಂದು ಗ್ರಾಂಡ್ ಅಥಾರಿಟಿ ಬಿಲ್‌ನ್ನು ತರುವವರೆಗಾದರೂ ದಯಮಾಡಿ ಇದನ್ನು ಮುಂದಕ್ಕೆ ಹಾಕಿ ಯಾರ್ಯಾರು ಕೊರೆದು ಬಿಟ್ಟಿದ್ದಾರೆ. ಅವರಿಗೆ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು: ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, the related subject is immediately being taken up under Rule 69. 69ನಲ್ಲಿ ನಾವು ಅತಿವೃಷ್ಟಿ ಬಗ್ಗೆ ಅನಾವೃಷ್ಟಿ ಬಗ್ಗೆ ನಾವು ತೆಗೆದುಕೊಳ್ಳುತ್ತೇವಲ್ಲಾ, it is a related subject. ಪುಟ್ಟಣ್ಣಯ್ಯನವರು, ಶ್ರೀರಾಮರೆಡ್ಡಿಯವರು ಮಾನ್ಯ ಶಿವರಾಮರವರು ತಾವು ಇನ್ನು ಈ ವಿಚಾರದಲ್ಲಿ ಹೆಚ್ಚು ಮಾತನಾಡಬೇಕೆಂದು ಅಪೇಕ್ಷೆ ಪಡುವಂಥವರು, you can participate in the discussion under Rule 69. ರೂಲ್ 69ರಲ್ಲಿ ಹೇಗೂ ಇದೇ ವಿಚಾರವನ್ನು ತೆಗೆದುಕೊಳ್ಳುತ್ತೇವಲ್ಲಾ? ಇಲ್ಲಿ ಕೊಡಬೇಕೆನ್ನುವ ಸಲಹೆಗಳನ್ನು ಆ ರೂಪದಲ್ಲಿ ಕೊಟ್ಟರೂ ಆಗುತ್ತದೆ. ಈಗ ಕೊನೆಯದಾಗಿ ಸರ್ಕಾರದ ಪರವಾಗಿ ಮುಖ್ಯಮಂತ್ರಿಗಳು, ತಾವು ಹೇಳಿಕೆ ಕೊಡಿ.

(ಗದ್ದಲ)

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಲೀಗಲ್ಲಾಗಿ ಗ್ರೀನ್ ಕಾರ್ಡು ಕೊಟ್ಟಿರುತ್ತೇವೆ ಅಕ್ಕಿ ಇರುವುದಿಲ್ಲ. ಆವಾಗ ಏನು ಮಾಡುತ್ತೀರಿ? ಅದ್ದರಿಂದ ಇಲ್ಲಿ ಕಾನೂನು ಒಂದು, ರೈತರಿಗೆ ಆಗಿರುವ ಕಷ್ಟ ಇನ್ನೊಂದು ಆ ಕಷ್ಟ ಗೊತ್ತಾಗಿ ಹೇಳುತ್ತಿರುವುದು ನಾನು. ಅವರು ಯಾವುದೋ ಒಂದು ಕಾಲಕ್ಕೆ ಅರ್ಜಿ ಹಾಕಿ ರಜಿಸ್ಟರ್ ಮಾಡಿಕೊಂಡು ಬಿಟ್ಟರು ಖರ್ಚನ್ನು ಮಾಡಿದರು. ಈಗ ನಾವು ಅವರಿಗೆ ಕನೆಕ್ಷನ್ ಕೊಡುತ್ತಿಲ್ಲ? ಅದು ನನಗೆ ಅರ್ಥವಾಯಿತು ಮೊದಲೇ, ಇನ್ನು ಮಾಧುಸ್ವಾಮಿಯವರು ಹೇಳಿದ್ದು ಈ ಗ್ರೀನ್ ಬ್ಲಾಕ್ ಈಗ ಪ್ರಜೆಂಟ್ ಪೋಸಿಷನ್ ಏನು ಇದೆ ಅದನ್ನು ನೋಡಿಕೊಂಡು ಇವರಿಗಾದರೂ ಒಂದು ಕನೆಕ್ಷನ್ ಕೊಡಿಸಿ ಅಂತ. ಮುದ್ದಹನುಮಯ್ಯ ಅವರು ಹೇಳಿದ್ದು ಏನೆಂದರೆ ಈಗ ನದಿ ಬಂದು ಬಿಟ್ಟಿದೆ, ಗ್ರಾಂಡ್ ವಾಟರ್ ಲೆವಲ್ ಮೇಲೆ ಬಂದಿದೆ, ಅದರಿಂದಲಾದರೂ ನೀರು ಕೊಡಿ. ಅಂತ ಈ ಎಲ್ಲಾ ಕಾರಣಗಳಿಗೂ ಚ್ಯುತಿ ಬರದಂತೆ ಪರ್ಯಾಲೋಚನೆ ಮಾಡಿ ತತ್‌ಕ್ಷಣ ಯಾವುದನ್ನು ಕೊಡುವುದನ್ನು ನಾನು ಕೆ.ಇ.ಬಿ.ಗೆ ಹೇಳಿಬಿಟ್ಟಿದ್ದೇನೆ. ತತ್‌ಕ್ಷಣ ಯಾವುದೇ ತೊಂದರೆ ಇಲ್ಲದೆ ಕನೆಕ್ಷನ್ ಕೊಡುವುದನ್ನು ಕೊಡಿ, ಹೊಸ ಅಪ್ಲಿಕೇಷನ್‌ಗಳನ್ನು ತೆಗೆದುಕೊಳ್ಳಬೇಡಿ ಈಗ ಇರುವುದನ್ನು ಮೊದಲು ಕಂಪ್ಲೀಟ್ ಮಾಡಿದರೆ ಒಂದು ಪಕ್ಷ ಹೊಸ ಅಪ್ಲಿಕೇಷನ್‌ಗಳನ್ನು

ಕೊಡುವವರು ಸ್ವಲ್ಪ ಸಿಟ್ಟಾದರೂ ಚಿಂತೆ ಇಲ್ಲ, ಇರುವವರದನ್ನು ಪೂರೈಸಿ ಆನಂತರ ಅದನ್ನು ಮಾಡಿ ಅಂತ ಹೇಳಿದ್ದೇನೆ. ಅದಕ್ಕೆ ಬೇಕಾಗಿರತಕ್ಕಂಥದ್ದು ಕೇಂದ್ರಸರ್ಕಾರದ್ದು, ನಮ್ಮ ಸರ್ಕಾರದ್ದು ಕೆ.ಇ.ಬಿ. ಬಗ್ಗೆ ಬೈರೇಗೌಡರು ಹೇಳಿದ್ದು ಕೇಳಿದಿರಾ? ಇದಕ್ಕೆ ನಬಾರ್ಡ್‌ದವರು ನಮಗೆ ದುಡ್ಡು ಕೊಡುವುದು. ಅದಕ್ಕೆ ನಬಾರ್ಡದವರು ಏನು ಹೇಳುತ್ತಾರೆ, ನೀವು ಗ್ರೇ ಏರಿಯಾದಲ್ಲಿ ಬ್ಲಾಕ್ ಏರಿಯಾದಲ್ಲಿ ಕೊಟ್ಟರೆ ನಾವು ದುಡ್ಡು ಕೊಡುವುದಿಲ್ಲವೆಂದು ಹೇಳುತ್ತಾರೆ. ದುಡ್ಡು ಕೊಡುವುದಿಲ್ಲವೆಂದು ಹೇಳಿದಾಗ ಆವಾಗ ಕೆ.ಇ.ಬಿ.ಯವರು ನಮ್ಮದು ಇಲ್ಲವೆಂದು ಅನ್ನುತ್ತಾರೆ. ಇವೆಲ್ಲಾ ಕನೆಕ್ಟೆಡ್ ಇದ್ದಾವೆ? ಆದರೆ ತತ್‌ಕ್ಷಣ ಯಾವುದನ್ನು ಕೊಡಬೇಕು, ಯಾವ ಜಿಲ್ಲೆಗೆ ಯಾವ ಏರಿಯಾದ್ದನ್ನು ಆದಷ್ಟು ಬೇಗ ಡಿಸೈಡ್ ಮಾಡುವುದಕ್ಕೆ ಕೆಲಸ ಮಾಡುವುದಕ್ಕೆ ಮೊನ್ನೆ ಹೇಳಿದ್ದೇನೆ. ನಾನು ಮತ್ತೊಮ್ಮೆ ಹೇಳುತ್ತೇನೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಇನ್‌ಪ್ರಾಪರ್ ಸಪ್ಲೈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನೂ ಹೇಳಲಿಲ್ಲ. ನಮ್ಮ ಜಿಲ್ಲೆಯಲ್ಲಿ ಸರಿಯಾಗಿ ಸರಬರಾಜು ಆಗುತ್ತಿಲ್ಲ. Improper supply of electricity in Tumkur and Kolar District. ತಾವು ದಯಮಾಡಿ ಅಧಿಕಾರಿಗಳಿಗೆ ಸೂಚನೆ ಕೊಡಿ ನಮ್ಮ ಎಲ್ಲಾ ಕಡೆ ಚೆನ್ನಾಗಿ ಸಪ್ಲೈ ಆಗುತ್ತದೆ ಎಂದು ಹೇಳಿದಿರಿ ಅದು ಬಹಳ ಸಂತೋಷ. ತುಮಕೂರು ಮತ್ತು ಕೋಲಾರ ಜಿಲ್ಲೆಯಲ್ಲಿ ಸರಿಯಾಗಿ ಸಪ್ಲೈ ಆಗುತ್ತಿಲ್ಲ. 16 ಗಂಟೆ ಕಾಲ ವಿದ್ಯುತ್ ಶೆಡ್‌ಡೌನ್ ಮಾಡುತ್ತಿದ್ದಾರೆ.

MR. SPEAKER: There will be discussion under Rule 69. Please cooperate. There are two Members in the front benches. I have not permitted them. I want to regulate the business.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾವು ಕೇಳಿರುವ ಪ್ರಶ್ನೆಯೇ ಇಷ್ಟು ಕೆ.ಇ.ಬಿ.ಯವರು ಮಟೀರಿಯಲ್ ಮ್ಯಾನೇಜ್‌ಮೆಂಟ್ ಮಾಡಲಾರದೆ ಬೇರೆ ಸಬೂಬು ಹೇಳಿಕೊಂಡು ಎರಡು ಜಿಲ್ಲೆಗಳು ಪ್ರಮುಖವಾಗಿ ಮಟೀರಿಯಲ್ಸ್‌ನ್ನು ಕನ್‌ಸ್ಯೂಮ್ ಮಾಡಬೇಕಾದ್ದನ್ನು ಲಿಸ್ಟಿನಿಂದ ಆಚೆ ಇಡುವ ವ್ಯವಸ್ಥೆ ಮಾಡಿದ್ದಾರೆ. ಇದೇ ಸರ್ಕಾರದ ನೀತಿ ಅಂದರೆ ನಮ್ಮದೇನೂ ತಕರಾರು ಇಲ್ಲ. ನಾವು ಇಲ್ಲಿ ಅಳತಾ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲಾ ಸರ್, ಪ್ರಮುಖವಾಗಿ ಪಂಪ್‌ಸೆಟ್ ಇರಿಗೇಷನ್ ಮೇಲೆ ನಿಂತಿರುವ ಎರಡು ಜಿಲ್ಲೆಗಳನ್ನು ಕೋಲಾರ ಮತ್ತು ತುಮಕೂರು ನಿಮ್ಮ ಮ್ಯಾಪಿನಿಂದ ಅಥವಾ ಗ್ರಾಫಿನಿಂದ ಆಚೆ ಇಡುವುದಾದರೆ ತಾವು ಪವರ್ ಸಪ್ಲೈ ಮಾಡುವುದಾದರೆ ಹೇಗೆ ತಾವು ತೆಗೆಸಿ ನೋಡಿ, ಒಂದು ವರ್ಷಕ್ಕೆ ಮೇಜರ್ ಕನ್‌ಸ್ಯೂಮ್ ಆಫ್ ಇರಿಗೇಷನ್ ಪವರ್ ತುಮಕೂರು

ಮತ್ತು ಕೋಲಾರ ಮೈನ್ಸ್ ಆ್ಯಂಡ್ ಜಿಯಾಲಜಿಯವರು ಹೇಳುತ್ತಾರೆ, ಅವರು ಇವತ್ತು ಹೇಳುತ್ತಿಲ್ಲ. 1975-76ರಿಂದ ಮೈನ್ಸ್ ಆ್ಯಂಡ್ ಜಿಯಾಲಜಿಯವರು ಹೇಳುತ್ತಿದ್ದಾರೆ. ಈ ವರ್ಷದವರೆಗೆ ಕೆ.ಇ.ಬಿ.ಯವರು ಇದರ ಕೆಳಗಡೆ ರಿಸ್ಕ್ ತೆಗೆದುಕೊಳ್ಳಲಿಲ್ಲ. ಇದರ ಕೆಳಗೆ ಅವರು ರಕ್ಷಣೆಗೆ ಬರಲಿಲ್ಲ. ಹೋದ ವರ್ಷ ಈ ವರ್ಷ ನಾವು ಕೊಡುವುದಿಲ್ಲ.

MR. SPEAKER: We will find a solution to this. ಇಲ್ಲಿ ಚರ್ಚೆ ಮಾಡಿ ಸಮಯ ಹಾಳು ಮಾಡಿಕೊಳ್ಳುವುದು ಬೇಕೆ?

ಶ್ರೀ ಜೆ.ಹೆಚ್.ಪಟೇಲ್: ಬರಿ ಮಾತನಾಡುವುದೇ ಅದಕ್ಕೆ ಬೇರೆ ಏನಾದರೂ.... ಈಗ ಹೋದವರ್ಷ ಇರಲಿಲ್ಲ, 1980ನೇ ಇಸ್ವಿಯಲ್ಲಿ ಇರಲಿಲ್ಲ ಅಲ್ಲ. ಯಾವಾಗ ಈ ನಬಾರ್ಡ್‌ದವರು ಗ್ರೇ ಮತ್ತು ಬ್ಲಾಕ್ ತೆಗೆದುಕೊಂಡು ಬಂದರು ಆವಾಗಿನಿಂದ ಅವರಿಗೆ ತೊಂದರೆಯಾಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಅದೇ ಇರುವುದು 1975ರಿಂದ ಗ್ರೇ ಮತ್ತು ಬ್ಲಾಕ್? ಸರ್ ಮೊದಲೇ ನನ್ನ ತಾಲ್ಲೂಕು ಬ್ಲಾಕ....

ಶ್ರೀ ಜೆ.ಹೆಚ್.ಪಟೇಲ್: ಅಧ್ಯಕ್ಷರೆ, ನಾನು ಹೇಳುವುದಾದರೂ ಕೇಳಲಿ ಇಲ್ಲವೇ ಬಂದು ನನಗೆ ಬುದ್ಧಿ ಹೇಳುವುದಾದರೂ ಹೇಳಲಿ, ವಿಷಯ ಕೇಳಬಾರದೇ?

ಶ್ರೀ ಜೆ.ಸಿ.ಮಾಧುಸ್ವಾಮಿ: ನಿಮಗೆ ಬುದ್ಧಿ ಹೇಳುವುದಕ್ಕೆ ನಾನು ನಿಂತಿಲ್ಲ ನನ್ನ ಜಿಲ್ಲೆ ಹಾಳಾಗಿ ಹೋಗುತ್ತಿದೆ ಅದಕ್ಕೆ ಏನಾದರೂ ಮಾಡಿ ಎಂದು ಕೇಳುವುದಕ್ಕೆ ನಿಂತಿದ್ದೇನೆ.

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಅಧ್ಯಕ್ಷರೆ, ಎಲ್ಲಾ ಕೇಳಿ ಮಾನ್ಯ ಮಾಧುಸ್ವಾಮಿಯವರು ಕೆ.ಇ.ಬಿ.ಮೆಟೀರಿಯಲ್ ಮ್ಯಾನೇಜ್‌ಮೆಂಟ್ ಬಗ್ಗೆ ಹೇಳುವುದಕ್ಕೆ ನನಗೆ ಅರ್ಧ ಗಂಟೆ ಬೇಕಾಗುತ್ತದೆ. ಅದರಲ್ಲಿ ಕೆಲವು ದೋಷಗಳು ಇವೆ, ನಾಳೆ ಅದಕ್ಕೋಸ್ಕರ ಸಮಗ್ರವಾಗಿ ಚರ್ಚೆಮಾಡಿ ಪ್ರಿಯಾರಿಟಿ ಬೇಸಿನ್ ಮೇಲೆ ಯಾವ ಜಿಲ್ಲೆಗಳು ತುಮಕೂರು, ಕೋಲಾರ, ರೂರಲ್ ಬೆಂಗಳೂರು, ರೂರಲ್ ಮೈಸೂರು, ಪಾರ್ಟ್ಸ್ ಆಫ್ ಚಿತ್ರದುರ್ಗ ಇಷ್ಟು ಕಡೆ ಪ್ರಾಬ್ಲಮ್ ಇದೆ. ಗೊತ್ತಿರುವುದರಿಂದ ಹೇಳುತ್ತೇನೆ ಅಂದರೆ ಈಗಲೇ ಹೇಳಿ ಅಂದರೆ ಹೇಗೆ?

ಅಧ್ಯಕ್ಷರು: ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು, ಶ್ರೀರಾಮರೆಡ್ಡಿಯವರು, ನಬಿಯವರು, ಶಿವರಾಮರವರು, ಮಾತನಾಡುವುದಕ್ಕೆ ನನಗೆ ಅವಕಾಶ ಕೇಳಿದ್ದರೂ ಕೊಡುವುದಕ್ಕೆ ಆಗಲಿಲ್ಲ ತಾವು ಸಹಕರಿಸಬೇಕು. 69ನೇ ನಿಯಮದ ಕೆಳಗಡೆ ಏನು ಚರ್ಚೆಯನ್ನು ತೆಗೆದುಕೊಳ್ಳುತ್ತಿದ್ದೇವೆ, ಅನಾವೃಷ್ಟಿಯ ಬಗ್ಗೆ ಚರ್ಚೆ ತೆಗೆದುಕೊಂಡಾಗ ತಮಗೂ ಅವಕಾಶ ಕೊಡುತ್ತೇನೆ. ತಾವು ಈ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಸ್ತಾಪ

ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್: ಅದು ಅಲ್ಲೆ ಬೇರೆ ವಿಚಾರ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಬೆಳಗಾಂ ವಿಷಯದ ಬಗ್ಗೆ, ಅವರು ಹೊರಟು ಹೋಗುತ್ತಾರೆ. ಅದಕ್ಕೋಸ್ಕರ....

ಅಧ್ಯಕ್ಷರು: ಉಪಾಧ್ಯಕ್ಷರು ಏನೋ ಹೇಳುವವರು ಇದ್ದಾರೆ, ಅವಾಗಲೇ ಅವರು ಅನುಮತಿಯನ್ನು ಕೇಳಿದ್ದರು. ಅವರು ಬೆಳಗಾಂ ವಿಚಾರವಾಗಿ ಅವರು ಅದೇ ಊರಿನವರು ಏನು ಹೇಳುತ್ತಾರೆ ಹೇಳಲಿ ಮಾನ್ಯ ಉಪಾಧ್ಯಕ್ಷರು ಅವಾಗಲೇ ಏನೋ ಹೇಳಬೇಕೆಂದಿದ್ದರು ನಾನು ಅನುಮತಿಯನ್ನು ಕೊಟ್ಟಿರಲಿಲ್ಲ. ಅವರು ಅದೇ ಊರಿನವರು ತಾನೆ? ತಾವು ಚಾಮರಾಜ್‌ನಗರದವರು, ಅವರು ಹತ್ತಿರದವರು ತಾನೆ? ಅವರು ಏನು ಹೇಳುತ್ತಾರೆ ಹೇಳಲಿ.

(5) ಅಧ್ಯಕ್ಷರ ಆದೇಶದ ಮೇರೆಗೆ

ವಿಷಯ:- ಬೆಳಗಾಂ ವಿಭಜನೆಯ ಬಗ್ಗೆ

ಶ್ರೀ ಚಂದ್ರಶೇಖರ ಮಾಮನಿ (ಸವದತ್ತಿ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಬೆಳಗಾಂ ವಿಭಜನೆಯ ಬಗ್ಗೆ ಸರ್ಕಾರ ಒಂದು ನಿರ್ಧಾರವನ್ನು ಮೊನ್ನೆ ದಿವಸ ನಾನು ಮಾನ್ಯ ಮುಖ್ಯಮಂತ್ರಿಗಳ ಕೂಡ ಸಂಪರ್ಕ ಮಾಡಿ ಏನು ನಿರಶನ ಮಾಡುತ್ತಿದ್ದಾರೆ, ಬೈಲಹೊಂಗಲ, ರಾಮದುರ್ಗ ಮತ್ತು ಸವದತ್ತಿ ತಾಲ್ಲೂಕಿನಲ್ಲಿ ಅವರಿಗೆ ಇದನ್ನು ಕೈಬಿಡಲಾಗಿದೆ ಎಂಬುದನ್ನು ಕನ್ನಡಪರ ಹೋರಾಟಗಾರರು, ಕನ್ನಡದ ಅಭಿಮಾನಿಗಳು ಒಂದು ಮನವಿಯ ಮೇರೆಗೆ ಅದನ್ನು ನಾವು ನಿಲ್ಲಿಸಲಾಗಿದೆ ಅನ್ನುವ ಮಾತನ್ನು ಮುಖ್ಯಮಂತ್ರಿಗಳು ತಿಳಿಸಿದ ಪ್ರಕಾರವಾಗಿ ನಾನು ಹೋಗಿ ಬೈಲಹೊಂಗಲದಲ್ಲಿ ನಿರಶನ ಮಾಡತಕ್ಕಂಥ ಸಮಯದಲ್ಲಿ ನಾವು, ಜಿಲ್ಲಾಧಿಕಾರಿಗಳು, ಪೊಲೀಸ್ ಸೂಪರಿಂಟೆಂಡೆಂಟ್ ಮತ್ತು ಲೋಕಸಭಾಸದಸ್ಯರು ಕೂಡ ಹಾಜರಿದ್ದು ವಿನಂತಿ ಮಾಡಿದ್ದರು ಅವರು ವಿನಂತಿ ಮಾಡಿದಾಗ ಅವರು ಮೊದಲು ಏನು ಹೇಳಿದರು ಎಂದರೆ ನೀವು ಬಂದು ಸರ್ಕಾರದ ಪರವಾಗಿ ಹೇಳಿಬಿಡಿ, ನಾವು ನಿರಶನವನ್ನು ಹಿಂದೆ ತೆಗೆದುಕೊಳ್ಳುತ್ತೇವೆಂದು. ನಂತರ ನಾವು ಅಲ್ಲಿ ಹೋದಾಗ ಏನು ಹೇಳಿದರು ಎಂದರೆ ನೀವು ಏನಾದರೂ ಇದ್ದರೆ ಮುಖ್ಯಮಂತ್ರಿಗಳ ಪರವಾಗಿ ಹೇಳುತ್ತಿರೆನ್ನುವುದು ನಮಗೆ ಖಾತರಿ ಏನು? ನೀವು ಬಂದು ಹೇಳಿ, ಏನಾದರೂ ಒಂದು ಲಿಖಿತವಾಗಿ ಬೇಕು ಎಂದರು; ನಾವು ಮತ್ತೆ ಕೂಡಲೇ ಮುಖ್ಯಮಂತ್ರಿಗಳ ಕಛೇರಿಯನ್ನು ಸಂಪರ್ಕ ಮಾಡಿ, ಅವರ ಆಪ್ತ ಕಾರ್ಯದರ್ಶಿಯವರ ಜೊತೆ ಮಾತನಾಡಿ, ಮುಖ್ಯಮಂತ್ರಿಗಳ ಜೊತೆ ತಾವು ಮಾತನಾಡಿ ಒಂದು ಫ್ಯಾಕ್ಸ್ ಸಂದೇಶವನ್ನು ದಯಮಾಡಿ ಕಳುಹಿಸಿಕೊಡಬೇಕೆಂದು

ವಿನಂತಿ ಮಾಡಿದಾಗ, ನಂತರ ಒಂದು ಗಂಟೆಯೊಳಗೆ ಫ್ಯಾಕ್ಸ್ ಸಂದೇಶವನ್ನು ಕಳುಹಿಸಿದರು. ನಂತರ ನಾವು, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಲೋಕಸಭಾಸದಸ್ಯರಾದ ಸನ್ಮಾನ್ಯ ಕೌಜಲಗಿಯವರು ಕೂಡಿ ಹೋಗಿ ಅವರಿಗೆ ವಿನಂತಿ ಮಾಡಿದೆವು. ನಾವು ಹೋದಾಗ ಮೂರು ಗಂಟೆಯಾಗಿತ್ತು. ಆವಾಗ ಅವರು ನಿರಶನವನ್ನು ಹಿಂದೆ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿ, ಮೈಕ್ ಮುಖಾಂತರ ನಾವು ನಿರಶನವನ್ನು ಹಿಂದೆ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಪ್ರಚಾರ ಮಾಡಿ ಅಂತ ಹೇಳಿದ ಮೇಲೆ ಬೆಳಗಾಂಗೆ ಬಂದು ನಾನು ಒಂದು ಪ್ರೆಸ್ ಮೀಟಿಂಗ್ ಮಾಡಿ ಅವರಿಗೂ ಕೂಡ ನಾವು ಹೇಳಿದೆವು. ಅದು ಪ್ರೆಸ್ಸಿನಲ್ಲಿ ಕೂಡ ಬಂತು. ಇವತ್ತು ಪುನಃ ಅಲ್ಲಿ ನಿರಶನ ನಡೆಯುತ್ತಿದೆ. ರಾಮದುರ್ಗ ಮತ್ತು ಬೈಲಹೊಂಗಲ, ಸವದತ್ತಿಯಲ್ಲಿ ನಿರಶನ ನಡೆಯುತ್ತದೆ, ಅವರು ಏನು ಹೇಳುತ್ತಾರೆ, ಎಂದರೆ ನೀವು 11ನೇ ತಾರೀಖಿನ ಮೀಟಿಂಗ್‌ನ್ನು ರದ್ದು ಮಾಡಿದ್ದೇವೆ ಮತ್ತು ಇದನ್ನು ಸಂಪೂರ್ಣವಾಗಿ ಕೈಬಿಟಿದ್ದೇವೆಂದು ಸ್ಪಷ್ಟವಾಗಿ ನೀವು ಮುಖ್ಯಮಂತ್ರಿಗಳ ಕಡೆಯಿಂದ ಹೇಳಿಸಬೇಕು, ನಾವು ಅಲ್ಲಿಯವರೆಗೆ ನಿರಶನವನ್ನು ಮುಂದುವರೆಸುತ್ತೇವೆ ಎನ್ನುವ ಮಾತನ್ನು ಹೇಳಿ ಇವತ್ತು ಮೂರು ತಾಲ್ಲೂಕುಗಳಾದ ಸವದತ್ತಿ, ರಾಮದುರ್ಗ, ಬೈಲಹೊಂಗಲದಲ್ಲಿ ಸಂಪೂರ್ಣ ಬಂದು ಮಾಡಿ, ನಾನು ದೂರವಾಣಿ ಮಾಡಿ ಹೇಳಿದಾಗ ಬೈಲಹೊಂಗಲದಲ್ಲಿ ಒಂದು ಜೀಪ್‌ನ್ನು ಸುಟ್ಟಿದ್ದಾರೆ. ಸೌದತ್ತಿಯಲ್ಲಿ ಸಾರ್ವಜನಿಕರ ಎರಡು ಸ್ಕೂಟರ್‌ಗಳನ್ನು ಸುಟ್ಟಿದ್ದಾರೆ. ರಾಮದುರ್ಗದಲ್ಲಿ ಕೂಡ ಅಲ್ಲಲ್ಲಿ ಗಲಾಟೆ ಕೂಡ ಆಗುತ್ತಿದೆ. ಆ ದೃಷ್ಟಿಯಿಂದ ಮುಖ್ಯಮಂತ್ರಿಗಳು ದಯಮಾಡಿ ಇವತ್ತು ಅದನ್ನು ಸಂಪೂರ್ಣವಾಗಿ ಮೊದಲು ಏನು ಒಂದು ಬೆಳಗಾಂ ಇತ್ತು, ಕನ್ನಡಿಗರ ಏನು ಒಂದು ಕೂಗು ಇದೆ, ಒಕ್ಕಟ್ಟಾಗಿ ಇರಲಿ ಎನ್ನುವುದನ್ನು ನಾವು ಅದನ್ನು ಉಳಿಸಿಕೊಂಡು ಹೋಗುತ್ತೇವೆನ್ನುವ ಭರವಸೆಯನ್ನು ಕೊಟ್ಟು ಮನವಿ ಮಾಡಿ ಈ ಸಂಪೂರ್ಣ ನಿರಶನವನ್ನು ಬಿಡಬೇಕೆನ್ನುವ ಮಾತನ್ನು ಅವರು ಹೇಳಬೇಕು ಎಂದು ತಮ್ಮ ಮುಖಾಂತರ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ತಮ್ಮ ಕೊಠಡಿಗೆ ಬಂದಾಗ ನಾವು ಇದೇ ವಿಷಯವನ್ನು ಮಾತನಾಡಿದೆವು. ಮುಖ್ಯಮಂತ್ರಿಗಳು ಇದ್ದರು, ಅಲ್ಲಿ ಬೈಲಹೊಂಗಲದಲ್ಲಿಯಾಗಲಿ, ರಾಮದುರ್ಗದಲ್ಲಿಯಾಗಲಿ, ಸವದತ್ತಿಯಲ್ಲಿಯಾಗಲಿ, ಸತ್ಯಾಗ್ರಹ ಮಾಡುತ್ತಿರುವುದು ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆನ್ನುವುದಕ್ಕಿಂತ ಹೆಚ್ಚಾಗಿ ಈಗಾಗಲೇ ಏನೋ ತೀರ್ಮಾನವಾಗಿಬಿಡುತ್ತದೆ, ಒಂದು ಸಾರಿ ಇದನ್ನು ಕೈಬಿಟ್ಟಿದ್ದೇವೆಂದು ಸ್ಪಷ್ಟ ಉತ್ತರ ಬರದಿದ್ದರೆ ಹೋರಾಟಕ್ಕೆ ಇಳಿದಂಥ ಜನಕ್ಕೆ ಅಲ್ಲಿ ವಿಶ್ವಾಸ ಬರುವುದಿಲ್ಲವೆನ್ನುವ ಒಂದೇ ಒಂದು ಕಾರಣಕ್ಕೆ ಮಾಡುತ್ತಿರುವುದು, ಇದಕ್ಕೆ ಬೇರೆ ಏನೂ ಕಾರಣವಿಲ್ಲ. ಯಾರೋ ತಿಳಿಗೇಡಿಗಳು ಎರಡು ಸ್ಕೂಟರ್‌ಗಳನ್ನು ಸುಟ್ಟಿದ್ದರೆ ಅದಕ್ಕೂ

ಈ ಸತ್ಯಾಗ್ರಹ ಮಾಡುತ್ತಿರುವವರಿಗೆ ಏನೂ ಸಂಬಂಧವಿಲ್ಲ. ಎಲ್ಲ ಪಕ್ಷದ ಅತ್ಯಂತ ಪ್ರಮುಖರ ಕೂಗು ಅಲ್ಲಿ ಇವತ್ತು ಒಂದೇರೀತಿ ಯಾಗಿದೆ ಅಲ್ಲಿರುವಂತಹ ನಮ್ಮ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ ಎನ್ನುವುದನ್ನು ಅವರು ಮಾತನಾಡುತ್ತಿದ್ದಾರೆ.

1.30 ಪಿ.ಎಂ

ಬೆಳಗಾವಿ ಜಿಲ್ಲೆಯನ್ನು ವಿಭಜನೆ ಮಾಡುವುದು ಬೇಡವೆಂದು ಮಾನ್ಯ ಉಪಾಧ್ಯಕ್ಷರೂ ಹೇಳಿದ್ದಾರೆ. ಅದನ್ನು ಕೈಬಿಟ್ಟಿದ್ದೇವೆಂದು ಅವರು ಹೇಳಿದರೆ ಅಲ್ಲಿ ಶಾಂತಿ ನೆಲಸುತ್ತದೆ ಮತ್ತು ಸರಿಯಾದ ತೀರ್ಮಾನವನ್ನು ಸೂಕ್ತ ಸಮಯದಲ್ಲಿ ಇದರ ಬಗ್ಗೆ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅದನ್ನು ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಬೆಳಗಾವಿ ಪ್ರಶ್ನೆ ಬಂದಾಗ ನಾನು ಹಿಂದೆಯೂ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿದ್ದೆ. ಈ ಮಹಾಜನ್ ವರದಿ ಸಂಪೂರ್ಣ ಇತ್ಯರ್ಥವಾಗುವವರೆಗೂ ಅಲ್ಲಿ ವಿಭಜನೆ ಮಾಡತಕ್ಕಂಥ ವಿಚಾರಕ್ಕೆ ಹೋಗಲೇಬಾರದು. ಏಕೆಂದರೆ ಮಹಾಜನ್ ವರದಿ ಒಂದುಕಡೆ ಇರುವಾಗ ನಾವು ಅದನ್ನು ಬೇರ್ಪಡಿಸಿ ಮೂರು ಜಿಲ್ಲೆ ಮಾಡುವುದಾದರೆ, ನನಗೆ ತಿಳಿದಿರುವ ಮಟ್ಟಿಗೆ ಒಂದು ಜಿಲ್ಲೆ ಬರೇ ಮರಾಠಿಗರಿಗೇ ಆಗಿಹೋಗುತ್ತದೆ.

ಅಧ್ಯಕ್ಷರು: ಮೊನ್ನೆ ಮಾತನಾಡುವಾಗಲೂ ಅದೇ ಆಯಿತು, ಮರಾಠಿ ಭಾಷೆ ಮಾತನಾಡುವವರು ಅಂತ ಹೇಳಿ. ಏಕೆಂದರೆ ಅನೇಕ ಜನ ಮರಾಠಿಗರು ಕನ್ನಡ ಮಾತನಾಡತಕ್ಕಂಥವರು ನಮ್ಮಲ್ಲೇ ಇದ್ದು ನಮ್ಮಷ್ಟೇ ಕನ್ನಡ ಪ್ರೇಮ ಇಟ್ಟುಕೊಂಡಿರುವವರು ಇದ್ದಾರೆ. ಆದ್ದರಿಂದ ಮರಾಠಿಗರು ಎನ್ನುವ ಬದಲು ಮರಾಠಿ ಭಾಷೆ ಮಾತನಾಡುವವರು ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್: ಬೆಳಗಾವಿ ಪ್ರಶ್ನೆ ಬಂದಾಗ ಬೇರೆ ಆಗುತ್ತದೆ. ರಾಜ್ಯದಲ್ಲಿ ಮರಾಠಿ ಪ್ರಶ್ನೆ ಬಂದಾಗ ಅದು ಬೇರೆಯಾಗುತ್ತದೆ. ಆದರೆ, ಬೆಳಗಾವಿ ಪ್ರಶ್ನೆ ಬಂದಾಗ ಅದು ಮರಾಠಿನೇ, ಅದರಲ್ಲಿ ಬೇರೆ ಮಾತು ಬರುವುದಿಲ್ಲ. ಈಗ ಬೆಳಗಾವಿ ಮಹಾನಗರ ಪಾಲಿಕೆ ಅಧಿಕಾರ ಮರಾಠಿಯವರ ಕೈಯಲ್ಲಿದೆ. ಜಿಲ್ಲಾ ಪಂಚಾಯಿತಿ ಅಧಿಕಾರ ಕೂಡಾ ಮರಾಠರಿಗೆ ಹೋಗುತ್ತದೆ ಎನ್ನುವಂಥ ಒಂದು ದೊಡ್ಡ ಭಯ ಇದೆ. ಆದ್ದರಿಂದ ಈ ಬೆಳಗಾವಿಯನ್ನು 'ಮತ್ತೊಂದು ಬರ್ಲಿನ್' ಆಗುವುದಕ್ಕೆ ಬಿಡುವುದು ಬೇಡ. ಅದು ಎರಡು ಭಾಗ ಅಥವಾ ಮೂರು ಭಾಗವಾಗಿ ದುರಂತಕ್ಕೆ ಈಡುಮಾಡುವುದು ಬೇಡ. ಇದರ ಬಗ್ಗೆ ಈಗಾಗಲೇ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ತಮ್ಮಲ್ಲೂ ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ. ಇದನ್ನು ಸುಮ್ಮನೆ

ತಾತ್ಕಾಲಿಕವಾಗಿ ನಿಲ್ಲಿಸಿದ್ದೇವೆ ಎಂದು ಹೇಳುವುದಕ್ಕೇ ಹೋಗಬೇಡಿ. ಮಹಾಜನ್ ವರದಿ ಪ್ರಕಾರ ಆ ಸಮಸ್ಯೆ ತೀರ್ಮಾನ ಆದ ಮೇಲೆ ಏನು ಮಾಡಬೇಕೆಂದು ಯೋಚನೆ ಮಾಡಬಹುದು. ಆದ್ದರಿಂದ, ಖಂಡಿತವಾಗಿ ಆ ಜಿಲ್ಲೆಯನ್ನು ಈಗ ವಿಂಗಡಣೆ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ತಾವು ಹೇಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಈಗಾಗಲೇ ನೋಡಿ, ಬೈಲಹೊಂಗಲದಲ್ಲಿ ಇವತ್ತೂ ಬೆಳಿಗ್ಗೆ....

SRI NARAYANRAO TARALE: Because we are in dominance there, he is always hitting against Marati. It is not good.

(INTERRUPTIONS)

ಶ್ರೀ ವಾಟಾಳ್ ನಾಗರಾಜ್: ಇವರ ಬಗ್ಗೆ ನಾನು ಏನೂ ಹೇಳಿಲ್ಲ. ಇವರು ನಮ್ಮ ಜೊತೆಯಲ್ಲೇ ಇರಬೇಕು, ಅವರು ಮಹಾರಾಷ್ಟ್ರಕ್ಕೆ ಹೋಗಬಾರದೆಂದು ನಾವು ಹೇಳುವುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಹೆಚ್ಚಿನದಾಗಿ ಚರ್ಚೆ ಮಾಡುವಂಥ ಅವಶ್ಯಕತೆ ಇಲ್ಲ. ಎಲ್ಲರ ಒಟ್ಟಾರೆ ಅಭಿಪ್ರಾಯ ಏನೆಂದರೆ ಬೆಳಗಾಂ ಜಿಲ್ಲೆ ಒಟ್ಟಾಗಿರಬೇಕು, ಅದರ ವಿಭಜನೆಯಾಗಬಾರದು, ಈಗ ಆ ಜಿಲ್ಲೆಯನ್ನು ವಿಭಜನೆ ಮಾಡಿದರೆ ನಾಳೆ ದಿವಸ ನಮಗೆ ತೊಂದರೆಯಾಗಬಹುದು ಎನ್ನುವ ಅಭಿಪ್ರಾಯ ಬೆಳಗಾಂನಲ್ಲಿರತಕ್ಕಂಥ ಜನರದ್ದೂ ಆಗಿದೆ, ಮತ್ತು ಅನೇಕ ಮುಖಂಡರ ಅಭಿಪ್ರಾಯ ಕೂಡಾ ಅದೇ ಆಗಿದೆ. ಈ ಬಗ್ಗೆ ಪುನರ್ ಪರಿಶೀಲನೆ ಮಾಡುವ ಅಗತ್ಯವಿಲ್ಲದೇ ಇರುವುದರಿಂದ ಬೆಳಗಾಂ ಜಿಲ್ಲಾ ಪುನರ್ ವಿಂಗಡಣಾ ಕಾರ್ಯವನ್ನು ಕೈಬಿಟ್ಟಿದ್ದೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು. ಎಲ್ಲಿ ಜಿಲ್ಲೆಗಳನ್ನು ಮಾಡಿ ಎಂದು ಹೇಳುತ್ತಾರೋ ಅಲ್ಲಿ ಜಿಲ್ಲೆಗಳನ್ನು ಮಾಡುತ್ತಾರೆ, ಎಲ್ಲಿ ಜಿಲ್ಲೆಗಳನ್ನು ವಿಂಗಡಣೆ ಮಾಡಬಾರದೆಂದು ಚಳುವಳಿ ಮತ್ತು ಸತ್ಯಾಗ್ರಹವನ್ನು ಮಾಡುತ್ತಾರೋ ಅಲ್ಲಿ ಮಾಡುತ್ತೇವೆಂದು ಇವರು ಹೇಳುತ್ತಾರೆ.

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಅಧ್ಯಕ್ಷರೆ, ಒಳ್ಳೆಯ ಅಡ್ಮಿನಿಸ್ಟ್ರೇಷನ್ ಕೊಡಬೇಕೆನ್ನುವ ಉದ್ದೇಶದಿಂದ ಮಾತ್ರ ಜಿಲ್ಲೆಗಳನ್ನು ಪುನರ್ ವಿಂಗಡಣೆ ಮಾಡಲಾಗಿದೆ. ಸಣ್ಣ ಸಣ್ಣ ಜಿಲ್ಲೆಗಳನ್ನು ಮಾಡಬೇಕೆಂದು ಅನೇಕ ಮಾನ್ಯ ಸದಸ್ಯರುಗಳೂ ಹೇಳಿದ್ದಾರೆ. ದೊಡ್ಡ ಜಿಲ್ಲೆಗಳನ್ನು, ಆಡಳಿತ ದೃಷ್ಟಿಯಿಂದ ಮರು ವಿಂಗಡಣೆ ಮಾಡುವುದು ಅವಶ್ಯಕತೆ ಇದೆಯೆಂದು, ದೊಡ್ಡ ಜಿಲ್ಲೆಯಾದ ಬೆಳಗಾವಿಯನ್ನು ಪುನರ್ ವಿಂಗಡಣೆ ಮಾಡುವುದಕ್ಕೆ ಸಂಬಂಧಪಟ್ಟಂತೆ ಆ ಜಿಲ್ಲೆಯ

ಎಲ್ಲಾ ಶಾಸಕರುಗಳೊಡನೆ ಚರ್ಚೆ ಮಾಡಿದಂಥ ಸಂದರ್ಭದಲ್ಲಿ, ನಾವುಗಳೆಲ್ಲಾ ಒಮ್ಮತದಿಂದ ತೀರ್ಮಾನ ಮಾಡಿದ್ದೇವೆಂದು ಹೇಳಿ ಒಂದು ಲಿಸ್ಟನ್ನು ಕೊಟ್ಟರು. ಅದರಲ್ಲಿ ಯಾವುದನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬಹುದು, ಹಾಗೂ ಆ ಜಿಲ್ಲೆಗಳಿಗೆ ಯಾವ ಯಾವ ತಾಲ್ಲೂಕುಗಳನ್ನು ಸೇರಿಸಬಹುದೆಂದು ಇತ್ತು. ಆನಂತರ ಕನ್ನಡ ಪರ ಚಳುವಳಿ ಮಾಡತಕ್ಕಂಥವರಾದ ಮಾನ್ಯ ವಾಟಾಳ್ ನಾಗರಾಜ್‌ರವರು, ಚಿದಾನಂದ ಮೂರ್ತಿಯವರು, ಸಾಶಿ ಮರುಳಯ್ಯನವರೆಲ್ಲಾ ಬಂದು ಬೆಳಗಾವಿ ಜಿಲ್ಲೆಯನ್ನು ವಿಂಗಡಣೆ ಮಾಡುವ ಬಗ್ಗೆ ಅವಸರದ ಕ್ರಮವನ್ನು ತೆಗೆದುಕೊಳ್ಳಬೇಡಿ, ಮಹಾಜನ್ ವರದಿ ಯಾವ ರೂಪಕ್ಕೆ ಬರುತ್ತದೆಂದು ನೋಡಿಯಾದ ಮೇಲೆಯೇ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳಿದರು. ಆಗ, ಅವರು ಹೇಳಿರುವ ವಿಷಯ ಸರಿಯೆಂದು ನನಗನಿಸಿತು. ಆದುದರಿಂದ, ಈ ಬೆಳಗಾವಿ ಜಿಲ್ಲಾ ವಿಂಗಡಣಾ ವಿಷಯವನ್ನು ಮಹಾಜನ್ ವರದಿ ಬಗ್ಗೆ ತೀರ್ಮಾನವಾಗುವವರೆಗೂ ಸುದ್ದಿ ಎತ್ತುವುದಿಲ್ಲ ಮತ್ತು ಇದರ ಬಗ್ಗೆ ಮಾತನಾಡಲು ಯಾರು ಕರೆದರೂ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆಗಬಹುದಾ? ಬೆಳಗಾವಿ ಜಿಲ್ಲೆ ವಿಭಜನೆ ಬಗ್ಗೆ ಪ್ರಸ್ತಾಪವೇ ಇಲ್ಲ.

(6) ನಿಯಮ 69ರ ಮೇರೆಗೆ ಚರ್ಚೆ

ರಾಜ್ಯದಲ್ಲಿನ ಕೆಲವು ಭಾಗಗಳಲ್ಲಿ ಉಂಟಾಗಿರುವ ಬರಗಾಲ, ಅನಾವೃಷ್ಠಿಯಿಂದ ಜನರು ಬೇರೆ ಕಡೆ ವಲಸೆ ಹೋಗುತ್ತಿರುವುದು.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದನಾಯಕರು): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿನ ಕೆಲವು ಭಾಗಗಳಲ್ಲಿ ಉಂಟಾಗಿರುವ ಅನಾವೃಷ್ಠಿಯಿಂದ ಜನಗಳು ಬೇರೆ ಕಡೆ ವಲಸೆ ಹೋಗುತ್ತಿದ್ದಾರೆ, ಈ ಬಗ್ಗೆ ಪ್ರಸ್ತಾಪ ಮಾಡುವ ಸಲುವಾಗಿ ನಾವು ನಿಲುವಳಿ ಸೂಚನೆಯ ನೋಟೀಸನ್ನು ಕೊಟ್ಟಿದ್ದೆವು, ಆದರೆ, ಈ ನಿಲುವಳಿ ಸೂಚನೆಯ ನೋಟೀಸನ್ನು ನಿಯಮ 69 ಕ್ಕೆ ಪರಿವರ್ತಿಸಿ ಚರ್ಚೆ ಮಾಡಬೇಕೆಂದು ಮಾನ್ಯ ಅಧ್ಯಕ್ಷರು ಸೂಚನೆ ಕೊಟ್ಟಿರುವುದನ್ನು ಒಪ್ಪಿಕೊಂಡು ಚರ್ಚೆ ಮಾಡುವುದಕ್ಕೆ ಪ್ರಾರಂಭ ಮಾಡುತ್ತೇನೆ.

(ಈ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಸ್ಥಾನದಲ್ಲಿ ಅಲಂಕರಿಸಿದರು)

ಮಾನ್ಯ ಅಧ್ಯಕ್ಷರೆ, ಪ್ರಮುಖವಾಗಿ ನಾನು ಪ್ರಸ್ತಾವ ಮಾಡತಕ್ಕಂಥ ವಿಷಯ ಏನೆಂದರೆ ನಮ್ಮ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಅನಾವೃಷ್ಠಿಯಿಂದಾಗಿ ಸಾಕಷ್ಟು ಹಳ್ಳಿಗಳು ಬರಗಾಲಕ್ಕೆ ತುತ್ತಾಗಿವೆ. ಈ ರೀತಿ ಬರಗಾಲದ ಬವಣೆ ತಡೆಯಲಾರದೆ ಅನೇಕ ಜನ ಹಳ್ಳಿಗಳಿಂದ, ತಾಲ್ಲೂಕುಗಳಿಂದ ತಮ್ಮ ಊರುಗಳನ್ನು ಬಿಟ್ಟು ಬೆಂಗಳೂರು, ಗೋವಾ, ಮಂಗಳೂರು, ಮುಂಬಯಿ ಇಂಥಾ ದೊಡ್ಡ ದೊಡ್ಡ ಪಟ್ಟಣಗಳಿಗೆ ತಮ್ಮ ಹೊಟ್ಟೆ

ತುಂಬಿಸಿಕೊಳ್ಳುವುದಕ್ಕೋಸ್ಕರ ಭಾರಿ ಸಂಖ್ಯೆಯಲ್ಲಿ ವಲಸೆ ಹೋಗುತ್ತಿದ್ದಾರೆ. ವಿಶೇಷವಾಗಿ, ಗುಲ್ಬರ್ಗಾ, ಬೀದರ್, ರಾಯಚೂರು, ಬಿಜಾಪುರ, ಬಳ್ಳಾರಿ, ಹಾಗೂ ಈ ಭಾಗದಲ್ಲಿರತಕ್ಕಂಥ ತುಮಕೂರು, ಕೋಲಾರ, ಜಿಲ್ಲೆಗಳಿಂದ ಜನರು ವಲಸೆ ಹೋಗುತ್ತಿದ್ದಾರೆ. ಬರಗಾಲ ಕಾಮಗಾರಿಗಳಿಗಾಗಿ ಸುಮಾರು 7 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಉಪ ಮುಖ್ಯಮಂತ್ರಿಯವರು ಮೈಸೂರಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ ನಮ್ಮಲ್ಲಿರತಕ್ಕಂಥ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ ಮುಂಗಾರು ಬೆಳೆ ಸಂಪೂರ್ಣ ಫೇಲ್ ಆಗಿದೆ. ಈ ಬೆಳೆಯು ಯಾವುದೇ ರೀತಿಯಿಂದ ಜನರ ಕೈಗೆ ಬರುವುದಕ್ಕೆ ಸಾಧ್ಯವಿಲ್ಲ. ಮತ್ತು ನಿಮ್ಮ ಹೇಳಿಕೆ ಏನು ಕರ್ನಾಟಕ ಡ್ರಾಟ್ ಮಾನಿಟರಿಂಗ್ ಸೆಲ್ ಎಂದು ಇದೆ. ಇವರ ರಿಪೋರ್ಟ್ ಪ್ರಕಾರ ನಾನು ಹೇಳಬೇಕಾದರೆ. "Distribution of cumulative rainfall among 175 taluks in the State shows that 51 taluks had excess rainfall and 78 taluks had normal rainfall, but in the remaining 46 taluks, cumulative rainfall was deficit. Of these 36 taluks where rainfall was defecit, in ten taluks the same was severe." ಅಂದರೆ ಒಟ್ಟಾರೆ ಸುಮಾರು 46 ತಾಲ್ಲೂಕುಗಳಲ್ಲಿ ಎಕ್ಸೆಸ್ ರೈನ್‌ಫಾಲ್ ಬಿಟ್ಟರೆ ಉಳಿದಂತೆ 129-130 ತಾಲ್ಲೂಕುಗಳಲ್ಲಿ ಸರಿಯಾಗಿ ಮಳೆಯಾಗಿಲ್ಲ ಎನ್ನತಕ್ಕಂಥ ಮಾತನ್ನು ಅವರ ಒಂದು ವರದಿಯ ಮೇಲೆ ಮತ್ತು ಡ್ರಾಟ್ ಮಾನಿಟರಿಂಗ್ ಸೆಲ್ ಏನಿದೆ, ಅವರು ಕೊಟ್ಟಿರತಕ್ಕಂಥ ರಿಪೋರ್ಟ್‌ನ ಪ್ರಕಾರ ಅಂಕಿಅಂಶಗಳು ಇವೆ. ಇದು ಆಗಸ್ಟ್ ಕೊನೆಯವಾರದಲ್ಲಿ ಕೊಟ್ಟಂಥ ರಿಪೋರ್ಟ್. ಆದರೆ ಇತ್ತೀಚೆಗೆ ಕೂಡ ಅವರು ಪುನಃ ಮುಂದೆ ಹೋಗಿ ಹೇಳಿದ್ದಾರೆ. 32 ತಾಲ್ಲೂಕುಗಳಲ್ಲಿ 54 ಪರ್‌ಸೆಂಟ್, ಅಂದರೆ ನಮಗೆ ಎವರೇಜ್ ಏನು ಮಳೆ ಬರುತ್ತದೆ ಅದರಲ್ಲಿ 54 ಪರ್‌ಸೆಂಟ್ ಮಾತ್ರ ಬಂದಿದೆ ಸೌಥ್ ಇಂಟೀರಿಯರ್ ಕರ್ನಾಟಕದಲ್ಲಿ 70 ತಾಲ್ಲೂಕುಗಳ ಪೈಕಿ 23 ತಾಲ್ಲೂಕುಗಳಲ್ಲಿ ನಾರ್ಥ್ ಇಂಟೀರಿಯರ್ ತಾಲ್ಲೂಕುಗಳಲ್ಲಿ ಮಾಡರೇಟ್ ಅಂಡ್ ಸೀವಿಯರ್ ರೈನ್‌ಫಾಲ್ ಡೆಫೀಶಿಯನ್ಸಿ, ಅಲ್ಲಿಯೂ ಕೂಡ 50 ಪರ್‌ಸೆಂಟ್‌ಗಿಂತಲೂ ಹೆಚ್ಚಿನ ತಾಲ್ಲೂಕುಗಳಲ್ಲಿ ಬಂದಿಲ್ಲ, ಎನ್ನುವುದನ್ನು ಕೂಡ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಹೀಗೆ ನಾವು ಇವೊತ್ತು ಜಿಲ್ಲಾವಾರು ಅಥವಾ ಡಿವಿಜನ್‌ವಾರು ನೋಡಿದರೂ ಕೂಡ ಅನೇಕ ಜಿಲ್ಲೆಗಳಿಗೆ, ಅನೇಕ ತಾಲ್ಲೂಕುಗಳಿಗೆ ಇವೊತ್ತು ಈ ಅನಾವೃಷ್ಟಿಯಿಂದ ತೊಂದರೆಯಾಗಿದೆ, ಬರಗಾಲ ಪರಿಸ್ಥಿತಿಯು ಇವೊತ್ತು ಬಿದ್ದಿದೆ ಮತ್ತು ಕುಡಿಯುವ ನೀರಿನ ತೊಂದರೆಯೂ ಕೂಡ ಅನೇಕ ತಾಲ್ಲೂಕುಗಳಲ್ಲಿದೆ, ಅಷ್ಟೇ ಅಲ್ಲದೇ ಜಾನುವಾರುಗಳಿಗೆ ಮೇವಿನ ವ್ಯವಸ್ಥೆಯಲ್ಲಿ ಕೂಡ ಕೆಲವು ತಾಲ್ಲೂಕುಗಳಲ್ಲಿ ತೊಂದರೆಯಾಗಿದೆ ಎಂಬ ಮಾತನ್ನು ಕೂಡ ನಾನು ಸ್ಪಷ್ಟಪಡಿಸುತ್ತೇನೆ. ಆ ವರದಿಯು

ಕೂಡ ಅವರಿಗೆ ಜಿಲ್ಲಾಧಿಕಾರಿಗಳಿಂದ ಬರುತ್ತಾ ಇರಬಹುದು. ಆದರೆ ಇತ್ತೀಚೆಗಿನ ರಿಪೋರ್ಟ್‌ಗಳನ್ನು ನಾವು ತರಿಸಿಕೊಳ್ಳುತ್ತಾ ಇದ್ದೇವೆ ಎಂಬ ಮಾತು ಪತ್ರಿಕೆಗಳಲ್ಲಿ ಬಂದಿದೆ. ಈಗಾಗಲೇ ನಿಮ್ಮ ಹೇಳಿಕೆ ಪ್ರಕಾರ ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಸ್ಟ್ಯಾಂಡಿರ್ಡೈನ್‌ಫಾಲ್ ಎನ್ನತಕ್ಕಂಥ ವರದಿ ಇವೊತ್ತು ಬಂದಿದೆ. ಅಷ್ಟು ವರದಿ ಬಂದಿದ್ದರೂ ಕೂಡ ಸರಕಾರದವರು ಯಾಕೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಮತ್ತು ಎಲ್ಲಾ ಡೆಪ್ಯುಟಿ ಕಮಿಶನರ್ಸ್‌ನ್ನು, ಚೀಫ್ ಎಕ್ಸಿಕ್ಯುಟಿವ್ ಆಫೀಸರ್ಸ್‌ನ್ನು, ಕೆ.ಇ.ಬಿ ಇಂಜಿನಿಯರ್ಸ್‌ನ್ನು, ಕರೆದು ಈ ಬರಗಾಲ ಪರಿಸ್ಥಿತಿಯ ಬಗ್ಗೆ, ಮತ್ತು ಅತಿವೃಷ್ಟಿಯಲ್ಲಿ ಆದಂಥ ಲುಕ್ಸಾನಿನ ಬಗ್ಗೆ ಒಂದು ಸಭೆಯನ್ನು ನಡೆಸಲಿಲ್ಲ. ತಾವು ಎಲ್ಲಾ ಜಿಲ್ಲಾಧಿಕಾರಿಗಳನ್ನು ಒಂದು ಕಡೆಯಲ್ಲಿ ಸೇರಿಸಿದರೆ, ಖಂಡಿತವಾಗಿ ಜಿಲ್ಲೆಯಲ್ಲಿ ನಡೆದಂಥ ಕೆಲಸಗಳ ಬಗ್ಗೆ ಮತ್ತು ಅವರಲ್ಲಿರತಕ್ಕಂಥ ಹಣದ ಬಗ್ಗೆ ಮತ್ತು ಎಷ್ಟು ಹಣ ಇವೊತ್ತು ಖರ್ಚಾಗಿದೆ, ಇನ್ನೂ ಎಷ್ಟು ಹಣ ಅವರಿಗೆ ಬೇಕು, ಎಷ್ಟು ಜನ ಕೂಲಿಕಾರರಿದ್ದಾರೆ, ಅವರಿಗೆ ಎಷ್ಟು ಕೂಲಿ ಬೇಕು, ಜಿಲ್ಲಾಪರಿಷತ್‌ನಿಂದ ಅವರು ಎಷ್ಟು ಹಣವನ್ನು ಖರ್ಚು ಮಾಡಬಹುದು, ಅವರಿಗೆ ಸಪೋರ್ಟಿಂಗ್ ಹಣ ನೀವು ಎಷ್ಟು ಕೊಡಬಹುದು, ಯಾಕೆಂದರೆ ಕೆಲವುಕಡೆ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಾರೆ. ಜಿಲ್ಲಾಪರಿಷತ್‌ನವರು ಹೇಗೆ ತೆಗೆದುಕೊಳ್ಳುತ್ತಾರೆ? ಎಲ್ಲೆಲ್ಲಿ ಅವರ ಆ್ಯಕ್ಷನ್‌ಪ್ಲಾನ್ ಅಪ್ರೂವ್ ಆಗಿದೆ, ಅಂಥ ಕಡೆಗಳಲ್ಲಿ ಮಾತ್ರ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಾರೆ. ಇವೊತ್ತು ಸುಮಾರು 25-26 ಸಾವಿರ ಹಳ್ಳಿಗಳಲ್ಲಿ ಮಳೆ ಕಡಿಮೆ ಇದೆ ಅಂದರೆ, ಆ ಹಳ್ಳಿಗಳಲ್ಲಿ ಎಲ್ಲ ಕಡೆಯೂ ಕೂಡ ಕೆಲಸ ಇರುವುದಿಲ್ಲ. ನಿಮ್ಮ ಆಕ್ಷನ್‌ಪ್ಲಾನ್ ಪ್ರಕಾರ ಅಥವಾ ಪ್ರಾಜೆಕ್ಟ್ ಏನು ಅಪ್ರೂವ್ ಮಾಡುತ್ತೀರಿ, ಅದರ ಪ್ರಕಾರ ಕೆಲವು ಕಡೆಗಳಲ್ಲಿ ಕೆಲಸ ಇರುತ್ತದೆ, ಕೆಲವು ಕಡೆಗಳಲ್ಲಿ ಕೆಲಸ ಇರುವುದಿಲ್ಲ. ಅಂದಾಗ ನೀವು ಅವರನ್ನು ಕರೆಸಿ, ಇಲ್ಲಿ ಚರ್ಚೆ ಮಾಡಿ, ಯಾವ್ಯಾವ ಭಾಗಗಳಲ್ಲಿ ಕೆಲಸ ಇಲ್ಲ, ಅಲ್ಲಿ ನಿಮ್ಮ ನಿಸರ್ಗ ವಿಕೋಪ ನಿಧಿಯಿಂದ ಹಣವನ್ನು ಬಿಡುಗಡೆ ಮಾಡಬೇಕು. ಅದರಲ್ಲಿಯೂ ಕೂಡ ಜನರಿಗೆ ಕೆಲಸವನ್ನು ಒದಗಿಸತಕ್ಕಂಥ ಕೆಲಸವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಇವೊತ್ತು ಜಿಲ್ಲಾಪರಿಷತ್‌ನಲ್ಲಿ ಒಂದು ಬ್ರಿಡ್ಜ್‌ಗೆ ಹಣ ಇರಬಹುದು. ಅಥವಾ ಒಂದು ಬಿಲ್ಡಿಂಗ್‌ಗೆ ಹಣ ಇರಬಹುದು. ಹೈಸ್ಕೂಲ್‌ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ಸ್ ಇರಬಹುದು. ಅಥವಾ ಆಸ್ಪತ್ರೆ ಕನ್ಸಟ್ರಕ್ಷನ್ಸ್ ಮಾಡುವುದಕ್ಕೆ ಇರಬಹುದು. ಇದರಲ್ಲಿ ಕೂಲಿಕಾರರಿಗೆ ಕೆಲಸ ಕೊಡತಕ್ಕಂಥಾದ್ದು ಸಾಧ್ಯವಿಲ್ಲ. ಬಹಳ ಅಂದರೆ ಇವೊತ್ತಿನ ದಿನ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್‌ನಲ್ಲಿ, 10-20 ಜನರಿಗೆ ಕೆಲಸ ಸಿಗುತ್ತದೆ. ಅಥವಾ ಬ್ರಿಡ್ಜ್ ಕನ್‌ಸ್ಟ್ರಕ್ಷನ್ಸ್‌ನಲ್ಲಿ ಬಹಳ ಅಂದರೆ 5-6 ಜನರಿಗೆ ಕೆಲಸ ಸಿಗಬಹುದು. ಉಳಿದ ಕಡೆಗಳಲ್ಲಿ ನೀವು ಆ ಪ್ರದೇಶದಲ್ಲೇ ಹೆಚ್ಚಿನ ರೀತಿಯಲ್ಲಿ ಜನರಿಗೆ ಕೆಲಸ ಕೊಡಿಸಬೇಕು ಎಂದರೆ ಕೆರೆದುರಸ್ತಿ ಕೆಲಸಗಳಾಗಿರಲಿ, ರಸ್ತೆ ದುರಸ್ತಿ ಕೆಲಸಗಳಾಗಲೀ, ಹೊಸ ರಸ್ತೆಗಳ ನಿರ್ಮಾಣದ ಕೆಲಸಗಳಾಗಲೀ, ಇಂಥ ಒಂದು ಮಾಸ್‌ಬೇಸ್ಡ್ ಮತ್ತು ಲೇಬರ್

ಓರಿಯಂಟೆಡ್ ಕೆಲಸಗಳನ್ನು ತೆಗೆದುಕೊಳ್ಳಬೇಕೋ ಆ ಕೆಲಸಗಳನ್ನು ತೆಗೆದುಕೊಂಡು ನೀವು ಕೆಲಸವನ್ನು ಮಾಡಿದರೆ, ಕೂಲೀಕಾರರಿಗೆ ಕೆಲಸ ಸಿಗುತ್ತದೆ. ಇಲ್ಲವಾದರೆ ಇವೊತ್ತು ಪ್ರತಿಯೊಂದು ಜಿಲ್ಲೆಯಿಂದ ಪಟ್ಟಣಗಳಿಗೆ ಜನರು ವಲಸೆ ಹೋಗುತ್ತಾ ಇದ್ದಾರೆ ಅದನ್ನು ನೋಡಿದಾಗ ನಿಜವಾಗಲೂ ಸರಕಾರ ಇದರಲ್ಲಿ ಹೆಚ್ಚಿನ ಆಸಕ್ತಿ ವಹಿಸಿಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇವೊತ್ತು ನನ್ನ ಮುಂದಿರುವ ರಿಪೋರ್ಟ್ ತಮ್ಮ ಮುಂದೆಯೂ ಇರಬಹುದು ಎಂದು ತಿಳಿದುಕೊಳ್ಳುತ್ತೇನೆ. ಅದರ ಪ್ರಕಾರ Khariff areas sown as on 31/7/1997 expressed as percentage of their normals in Belgaum, Dharwad, Chitradurga, Shimoga, Mysore, Raichur, Tumkur. ತುಮಕೂರಿನಲ್ಲಿ ಆಕ್ಚುವಲ್ ಖಾರೀಫ್, ಸೋಯಿಂಗ್ ಎಷ್ಟಾಗಿದೆ ಅಂದರೆ, ಕೇವಲ ಹತ್ತು ಪರ್ಸೆಂಟ್‌ನಷ್ಟು ಮಾತ್ರ. ರಾಯಚೂರಿನಲ್ಲಿ ಅಕ್ಚುವಲ್ 25 ಪರ್ಸೆಂಟ್ ನಾವು 80-90 ಪರ್ಸೆಂಟ್‌ನಷ್ಟು ಸೋಯಿಂಗ್ ಆದರೆ ನಾವು ಒಳ್ಳೆಯದು ಎಂದು ತಿಳಿದುಕೊಳ್ಳುತ್ತೇವೆ. 75 ರಿಂದ 80 ಪರ್ಸೆಂಟ್‌ನಷ್ಟಾದರೂ ಕೂಡ ಎವರೇಜ್ ಆಗಿದೆ ಎಂದು ತಿಳಿದುಕೊಳ್ಳಬಹುದು. ಆದರೆ ಇವೊತ್ತು ರಾಯಚೂರಿನಲ್ಲಿ 25 ಪರ್ಸೆಂಟ್ ಸೋಯಿಂಗ್, ತುಮಕೂರಿನಲ್ಲಿ 10 ಪರ್ಸೆಂಟ್, ಚಿತ್ರದುರ್ಗ, ಶಿವಮೊಗ್ಗ, ಧಾರವಾಡ, ಬೆಳಗಾಂ, ಮೈಸೂರುಗಳಲ್ಲಿ 60 ಪರ್ಸೆಂಟ್, ಮೈಸೂರಿನಲ್ಲಿ 40 ರಿಂದ 60 ಪರ್ಸೆಂಟ್ ಎಂದು ಈ ರೀತಿಯಾಗಿ ನಿಮ್ಮ ಮಾನಿಟರಿಂಗ್ ಸೆಲ್‌ನವರು ಕೊಟ್ಟಿರತಕ್ಕಂಥ ವರದಿಯಲ್ಲಿ ಕೊಟ್ಟಿದ್ದಾರೆ. ಅದರ ಆಧಾರದ ಮೇಲೆ ನಾವು ಇವೊತ್ತು ಖಾರೀಫ್ ಕ್ರಾಪ್ ನಮಗೆ ಸಂಪೂರ್ಣವಾಗಿ ಬರುವುದಿಲ್ಲ, ಇವೊತ್ತು ಅನೇಕ ಜಿಲ್ಲೆಗಳಲ್ಲಿ ಈ ರೀತಿಯಾದ ಒಂದು ವಾತಾವರಣ ತಯಾರಾಗಿದೆ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದೇ ರೀತಿಯಾಗಿ ಬೀದರ್, ಬಳ್ಳಾರಿ, ಹಾಸನ ಬಿಜಾಪುರ, ಚಿಕ್ಕಮಗಳೂರು, ಬೆಂಗಳೂರು ರೂರಲ್, ಕೋಲಾರ್, ಮಂಡ್ಯ ಇಲ್ಲಿಯ ಪರಿಸ್ಥಿತಿಯು ಹೇಗಿದೆ ಅಂದರೆ, ಬೀದರ್‌ನಲ್ಲಿ 60ರಿಂದ 70 ಪರ್ಸೆಂಟ್, ಇವೊತ್ತಿನ ದಿವಸ ಸೋಯಿಂಗ್ ಆದರೆ, ಅಲ್ಲಿ ಮಳೆ ಇಲ್ಲದ ಕಾರಣ ಭಿತ್ತಿದಂಥ ಬೀಜವೂ ಹೋಯಿತು, ಅವರಿಗೆ ಯಾವ ಬೆಳೆ ಬರತಕ್ಕಂಥ ಆಶೆಯೂ ಕೂಡ ಇಲ್ಲ. ಅದೇ ರೀತಿಯಾಗಿ ಬಳ್ಳಾರಿ ಮತ್ತು ಹಾಸನದ ಬಗ್ಗೆ 40 ರಿಂದ 60 ಪರ್ಸೆಂಟ್ ಖಾರೀಫ್‌ಕ್ರಾಪ್‌ನ ಬಿತ್ತಣಿಕೆಯಾಗಿದೆ ಎಂದು ಹೇಳಿದ್ದಾರೆ. ಆದರೆ ಅದರ ಅಸ್ತಿತ್ವ ಇವೊತ್ತು ಏನಿದೆ, ಅಂದರೆ ಮಳೆ ಇಲ್ಲದ ಕಾರಣ ಇವೊತ್ತು ಅದೂ ಕೂಡ ಒಣಗುತ್ತಾ ಇದೆ ಎಂದು ಹೇಳುವ ಮಾತನ್ನು ಕೂಡ ಇದರಲ್ಲಿ ಸ್ಪಷ್ಟಪಡಿಸಿದ್ದಾರೆ. ಆ ಮೇಲೆ ಬೆಂಗಳೂರು ರೂರಲ್, ಕೊಲಾರ, ಈ ಭಾಗಗಳಲ್ಲಿ 20ರಿಂದ 40 ಪರ್ಸೆಂಟ್‌ವರೆಗೆ ಖಾರೀಫ್ ಬಿತ್ತಣಿಕೆಯು ಆಗಿದೆ. ಬಹುಶಃ ಈ ಭಾಗದಲ್ಲಿ ಖಾರೀಫ್ ಕ್ರಾಪ್ ಕಡಿಮೆ ಇದ್ದರೂ ಕೂಡ, ಪರ್ಸೆಂಟೇಜ್ ಆಫ್ ಸೋಯಿಂಗ್‌ಗಳನ್ನು ನಾವು ನೋಡಿದಾಗ ಮಳೆಯು ಇನ್ನೂ ಅವರಿಗೆ ಬೇಕಾಗಿತ್ತು ಆ

ಪ್ರಮಾಣದಲ್ಲಿ ಮಳೆಯು ಇಲ್ಲದ ಕಾರಣ, ಇವೊತ್ತು ಅಲ್ಲಿ ಬಿತ್ತಣಿಕೆಯು ಆಗಿಲ್ಲ, ಮತ್ತು ಅನೇಕ ಕಡೆಗಳಲ್ಲಿ ಬಿತ್ತಣಿಕೆಯಾದಲ್ಲಿಯೂ ಕೂಡ ಅನುಕೂಲಕರ ಪರಿಸ್ಥಿತಿಯು ಇಲ್ಲ, ಅವರ ಬೆಳೆಗಳು ಹಾಳಾಗುತ್ತಾ ಇವೆ, ಅವರುಗಳು ಹಾಕಿದ ಬೀಜಗಳೂ ಹೋದವು ಮತ್ತು ಅವರು ಏನು ಅಪೇಕ್ಷೆ ಪಡುತ್ತಾ ಇದ್ದರು ಅದರ ಪ್ರಕಾರ ಅವರಿಗೆ ಬೆಳೆಯು ಕೂಡ ಸಿಗುತ್ತಾ ಇಲ್ಲ. ಅದಕ್ಕಾಗಿ ಈ ಅಗ್ರಿಕಲ್ಚರ್ ಲೇಬರ್ಸ್‌ಗಳಿಗೂ ತೊಂದರೆ. ಇವೊತ್ತು ಬೆಳೆಗಳು ಚೆನ್ನಾಗಿ ಇದ್ದರೆ ಕೂಲಿಕಾರರಿಗೆ ಕೂಲಿಯೂ ಸಿಗುತ್ತಾ ಇತ್ತು. ಸಜೆ ಕಳೆಯತಕ್ಕಂಥಾದ್ದಾಗಲೀ, ಎಡೆಹೊಡೆಯತಕ್ಕಂಥಾದ್ದಾಗಲೀ, ಮುಂತಾದ ಕೆಲಸಗಳು ಇಲ್ಲದೆ ಅಗ್ರಿಕಲ್ಚರಲ್ ಲೇಬರ್ಸ್‌ಗಳಿಗೂ ಕೂಲಿಯು ಸಿಗತಕ್ಕಂಥಾದ್ದು ತಪ್ಪಿ ಹೋಗಿದೆ. ಇಂಥ ಸಂದರ್ಭದಲ್ಲಿ ಸರಕಾರವು ಹೆಚ್ಚಿನ ರೀತಿಯಲ್ಲಿ ಮುಂದೆ ಬರಬೇಕಾಗುತ್ತದೆ. ಇವೊತ್ತು ಬೆಳಗಾಂ, ಮೈಸೂರು, ರಾಯಚೂರು, ಬಿಜಾಪುರ, ತುಮಕೂರುಗಳ ಪರಿಸ್ಥಿತಿಯನ್ನು ತೆಗೆದುಕೊಂಡರೂ ಕೂಡ, ಅತಿ ಹೆಚ್ಚು ಅಂದರೆ ಬೆಳಗಾಂನಲ್ಲಿ 80 ಪರ್‌ಸೆಂಟ್-ಬಿತ್ತಣಿಕೆಯಾಗಿದ್ದರೆ, 20-40 ಪರ್‌ಸೆಂಟ್‌ಗಳಷ್ಟು ಬಿಜಾಪುರ ಮತ್ತು ತುಮಕೂರಗಳಲ್ಲಿ ಆಗಿದೆ. ಈ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ. ಹೀಗೆ, ನೀವು ಯಾವುದೇ ಅಂಕಿಅಂಶಗಳನ್ನು ತೆಗೆದುಕೊಂಡರೂ ಕೂಡ, ಎರಡು ತಿಂಗಳಿಂದ ಈ ಪರಿಸ್ಥಿತಿಯು ಇದ್ದಾಗಲೂ ಕೂಡ ಸರಕಾರದವರು ಯಾಕಾಗಿ ಈ ಬಗ್ಗೆ ಲಕ್ಷ್ಯ ಕೊಡಲಿಲ್ಲ? ಇವೊತ್ತು ಇವರು ಹಣ ಬಿಡುಗಡೆ ಮಾಡಿದ್ದು ನೋಡಿದರೆ, ಕೆಲವು ಕಡೆಗಳಲ್ಲಿ ಕೇವಲ 10 ಲಕ್ಷ, 20 ಲಕ್ಷ, ಹಣವನ್ನು ಬಿಡುಗಡೆ ಮಾಡಿದ್ದಾರೆ. ಇದರಿಂದ ಯಾವ ಪ್ರಯೋಜನಾವಾಗುತ್ತದೆ? ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು 45 ಲಕ್ಷ ಅಗ್ರಿಕಲ್ಚರಲ್ ಲೇಬರ್ಸ್ ಇದ್ದಾರೆ.

ಶ್ರೀ ರಮೇಶ್ ಸಿ.ಜಿಗಜಿಣಗಿ: 10 ಲಕ್ಷ ರೂ.ಗಳನ್ನು ಯಾವ ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆ ಎಂದು ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಮಗೆ ನಿಮ್ಮ ಜಿ.ಓ.ವನ್ನು ತೆಗೆದು ಹೇಳಲೆ? ಸರ್ಕಾರದ ಆದೇಶ ಸಂಖ್ಯೆ:32 ಟಿಎಸ್‌ವೈ 97, ದಿನಾಂಕ: 20.7.1997ರ ಆದೇಶದಲ್ಲಿ ಚಿತ್ರದುರ್ಗ 20 ಲಕ್ಷ, ಹಾಸನ 10 ಲಕ್ಷ, ಧಾರವಾಡ 15 ಲಕ್ಷ, ಬಳ್ಳಾರಿ 20 ಲಕ್ಷ, ಬೀದರ್ 20 ಲಕ್ಷ, ಗುಲ್ಬರ್ಗಾ 10 ಲಕ್ಷ, ರಾಯಚೂರು 2 ಲಕ್ಷ ಎಂದು ಇದೆ. ಅದಕ್ಕಾಗಿ ನಾನು ಹೇಳುವವರೆಗೆ ತಾವು ಸ್ವಲ್ಪ ಸಮಾಧಾನವಾಗಿರಿ....

ಶ್ರೀ ರಮೇಶ್ ಸಿ.ಜಿಗಜಿಣಗಿ: ಇತ್ತೀಚಿನ ಸರ್ಕಾರಿ ಆದೇಶದಲ್ಲಿರುವುದನ್ನು ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇತ್ತೀಚಿನದನ್ನೂ ಹೇಳುತ್ತೇನೆ, ಎಲ್ಲವನ್ನೂ ಹೇಳುತ್ತೇನೆ. ನನ್ನ ಹತ್ತಿರ ದಿನಾಂಕ: 8.7.1997, 19.7.1997, 20.5.1997 ಮತ್ತು

20.7.1997ರ ಸರ್ಕಾರದ ಆದೇಶಗಳೂ ಕೂಡ ಇವೆ. ಆದರೆ ಇವೊತ್ತು ಕೊಟ್ಟಿರುವುದು ಮಾತ್ರ ನನಗೆ ಗೊತ್ತಿಲ್ಲ. 45 ಲಕ್ಷ ಅಗ್ರಿಕಲ್ಚರ್ ಲೇಬರ್ಸ್ ಇರಬೇಕು ಎಂದರೆ ಕನಿಷ್ಠ ಪಕ್ಷ 25 ಪರ್ಸೆಂಟ್ ಜನ ಕೆಲಸ ಮಾಡುತ್ತಾರೆ ಎಂದು ನಾವು ತಿಳಿದುಕೊಳ್ಳೋಣ. ಏಕೆಂದರೆ ಯಾವ ಸರ್ಕಾರಕ್ಕೂ ಯಾವ ಕಾಲಕ್ಕೂ 45 ಲಕ್ಷಕ್ಕೆ ಅಷ್ಟು ಜನರಿಗೂ ಯಾವ ಕೆಲಸವನ್ನೂ ಕೊಡುವುದಕ್ಕೆ ಸಾಧ್ಯವಿಲ್ಲ. ಕೊನೆಯಪಕ್ಷ ಅತ್ಯಂತ ನಿರ್ಗತಿಕರು ಯಾರಿದ್ದಾರೆ ಅಥವಾ ಯಾರ ಹತ್ತಿರ ಏನೂ ಇಲ್ಲ, ಅಂಥವರಲ್ಲಿ ಕನಿಷ್ಠ ಪಕ್ಷ 25 ಪರ್ಸೆಟ್ ಕಾರ್ಮಿಕರಿಗಾದರೂ ಕೆಲಸ ಕೊಡಬೇಕು. ಏಕೆಂದರೆ ಈ 45 ಲಕ್ಷದಲ್ಲಿ ಕೇವಲ ಅಗ್ರಿಕಲ್ಚರಲ್ ಲೇಬರ್ಸ್ ಅಷ್ಟೇ ಅಲ್ಲ ಒಂದು ಎಕರೆ, ಎರಡು ಎಕರೆ ಹೀಗೆ ಸಣ್ಣಪುಟ್ಟ ಜಮೀನು ಇಟ್ಟುಕೊಂಡು ಕೂಲಿ ಮಾಡತಕ್ಕಂಥವರಿರುತ್ತಾರೆ. ಅಥವಾ ನಮ್ಮ ಕಡೆ ಡ್ರೈಲ್ಯಾಂಡ್‌ನಲ್ಲಿ 5 ಎಕರೆ ಒಣಭೂಮಿ ಇರುವಂಥವರೂ ಕೂಲಿ ಮಾಡುವವರಿದ್ದಾರೆ, 5 ಅಥವಾ ಹತ್ತು ಎಕರೆ ಜಮೀನಿರತಕ್ಕಂಥವರೂ ಡ್ರೈಲ್ಯಾಂಡ್‌ನಲ್ಲಿ ಕೆಲಸ ಮಾಡುವವರಿದ್ದಾರೆ. ಅದನ್ನು ನಾವು ಇವೊತ್ತು ಲೆಕ್ಕ ಹಾಕಿದರೂ ಕೂಡ ಕನಿಷ್ಠಪಕ್ಷ ನೀವು 10 ಲಕ್ಷ ಜನರಿಗಾದರೂ ಕೆಲಸ ಕೊಡಬೇಕು. ಇಲ್ಲದಿದ್ದರೆ 10 ಪರ್ಸೆಂಟ್ ಎಂದು ಒಪ್ಪಿಕೊಂಡರೂ ಕೂಡ 5 ಲಕ್ಷ ಜನರಿಗೆ ನಿಮ್ಮ ಡೇಟು ಲೆಕ್ಕದ ಪ್ರಕಾರ 16 ಅಥವಾ 18 ರೂಪಾಯಿ ಎಂದು ಮಿನಿಮಮ್ ವೇಜಸ್ ಏನು ಕೊಡುತ್ತೀರಿ ಆ ರೀತಿ ಲೆಕ್ಕ ಹಾಕಿದರೂ ಕೂಡ ಇವೊತ್ತು ಇಡೀ ರಾಜ್ಯದಲ್ಲಿ ಅವರಿಗೆ ಕೆಲಸ ಕೊಟ್ಟು ಅವರನ್ನು ಬದುಕಿಸಬೇಕಾದರೂ ಕೂಡ ಕನಿಷ್ಠ ನಿಮಗೆ ಮೂರು-ನಾಲ್ಕು ಕೋಟಿ ರೂಪಾಯಿ ಆದರೂ ಬೇಕಾಗುತ್ತದೆ. ಆದರೆ ಇವರು ಇಲ್ಲಿಯವರೆಗೆ ಬಿಡುಗಡೆ ಮಾಡಿರುವುದೇ 7 ಕೋಟಿ ರೂಪಾಯಿ ಬೇಕೆಂದರೆ ನಿಮಗೆ ಲೆಕ್ಕ ಹೇಳುತ್ತೇನೆ. ಇವೊತ್ತು ಅವರ ಲೆಕ್ಕದ ಪ್ರಕಾರ ದಿನಾಂಕ: 8.7.1997ರ ಸರ್ಕಾರದ ಆದೇಶದಲ್ಲಿ 2 ಕೋಟಿ, 90 ಲಕ್ಷ ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ಅತೀವೃಷ್ಟಿ ಮತ್ತು ಅನಾವೃಷ್ಟಿ ಜಿಲ್ಲೆಗಳೂ ಬಂದಿವೆ. ಏಕೆಂದರೆ ದಕ್ಷಿಣ ಕನ್ನಡ, ಬೆಳಗಾವಿ, ಹಾಸನ, ಚಿಕ್ಕಮಗಳೂರು ಕೊಡಗು, ಉತ್ತರ ಕನ್ನಡ ಈ ಜಿಲ್ಲೆಗಳೂ ಸೇರಿವೆ. ದಿನಾಂಕ: 19ನೇ ಜುಲೈ 1997ರ ಗೌರ್ನಮೆಂಟ್ ಆರ್ಡರ್‌ನಲ್ಲಿ ಬಂದಿರುವುದು 2 ಕೋಟಿ 90 ಲಕ್ಷ ರೂಪಾಯಿಗಳು. ಅದೇ ರೀತಿ ಇನ್ನೊಂದು ದಿನಾಂಕ: 20ನೇ ಜೂನ್ 1997ರ ಇನ್ನೊಂದು ಗೌರ್ನಮೆಂಟ್ ಆರ್ಡರ್‌ನಲ್ಲಿ 1 ಕೋಟಿ 15 ಲಕ್ಷ ರೂಪಾಯಿ ಹಣ ಬಿಡುಗಡೆಯಾಗಿದೆ. ಇದರಲ್ಲಿ ಚಿತ್ರದುರ್ಗ, ಹಾಸನ, ಧಾರವಾಡ, ಬಳ್ಳಾರಿ, ಬೀದರ್, ಗುಲ್ಬರ್ಗಾ, ರಾಯಚೂರು ಮತ್ತು ಉಳಿದ ಕೆಲವು ಜಿಲ್ಲೆಗಳಲ್ಲಿ ಇತ್ತೀಚೆಗೆ ಕೊಟ್ಟಿರುವಂಥದ್ದನ್ನು ನಾನು ಈಗಾಗಲೇ ಹೇಳಿದ್ದೇನೆ. ಅದಲ್ಲದೆ ಹಿಂದೆ 20ನೇ ಮೇ ತಿಂಗಳಿನಲ್ಲಿ ಹೊರಡಿಸಿರುವ ಆದೇಶದಲ್ಲಿ ಆಗಿನ್ನೂ ಖಾರೀಫ್ ಕ್ರಾಪ್ ಪ್ರಶ್ನೆಯೇ ಉದ್ಭವವಾಗಿರಲಿಲ್ಲ. ಅಥವಾ ಅನಾವೃಷ್ಟಿಗೆ ತುತ್ತಾದಂಥ ಜಿಲ್ಲೆಗಳು ಅದರಲ್ಲಿ ಬರಲಿಲ್ಲ. ಈಗ 9 ಜಿಲ್ಲೆಗಳೂ ಸೇರಿದಂತೆ ನೈಸರ್ಗಿಕ ವಿಕೋಪ ನಿಧಿಗಾಗಿ 1 ಕೋಟಿ 25 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದರು. ಅದನ್ನೆಲ್ಲಾ ಲೆಕ್ಕಕ್ಕೆ

ತೆಗೆದುಕೊಂಡರೂ ಈ ಮೂರು ತಿಂಗಳ ಲೆಕ್ಕ ತೆಗೆದುಕೊಂಡರೆ 7 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಹಣವಾಗುವುದಿಲ್ಲ. ಅಂದಾಗ ಎಲ್ಲಿ ಪ್ರತಿದಿನ ಮೂರು ನಾಲ್ಕು ಕೋಟಿ ರೂಪಾಯಿ ಖರ್ಚು ಮಾಡಬೇಕು ಅಂಥ ಕಡೆ ಮೂರು ನಾಲ್ಕು ತಿಂಗಳ ಲೆಕ್ಕ ತೆಗೆದುಕೊಂಡು ತಾವು 7 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೀರಿ ಎಂದರೆ ಅದರಲ್ಲಿ ನೀರಿಗೆ ಎಷ್ಟಾಗುತ್ತದೆ, ಮೇವಿಗೆ ಎಷ್ಟಾಗುತ್ತದೆ, ಜನರಿಗೆ ಅಂದರೆ ಅಗ್ರಿಕಲ್ಚರಲ್ ಲೇಬರರ್ಸ್‌ಗಳಿಗೆ ಕೆಲಸ ಕೊಡುವುದು ಎಷ್ಟು ಮತ್ತು ಬೇರೆ ಯಾವ ಯಾವ ಕಾಮಗಾರಿಗಳನ್ನು ನೀವು ತೆಗೆದುಕೊಂಡಿರಿ ಎಂಬುದನ್ನು ಹೇಳಿ. ಬರಗಾಲ ಕಾಮಗಾರಿಗಳಿಗಾಗಿ ಎಷ್ಟು ಕೆಲಸಗಳನ್ನು ತೆಗೆದುಕೊಂಡಿರಿ, ಅದಕ್ಕೆ ಎಷ್ಟು ಹಣ ಖರ್ಚು ಮಾಡಿದ್ದೀರಿ, ಎಷ್ಟು ಜನ ಲೇಬರರ್ಸ್‌ಗಳಿಗೆ ತಾವು ಉದ್ಯೋಗ ಕೊಟ್ಟಿದ್ದೀರಿ, ಎಂಬುದಾದರೂ ಮುಖ್ಯ. ಅದರ ಜೊತೆಗೆ ನೀವು ಮೇವಿಗಾಗಿ ಫಾಡ್ಡರ್ ಬ್ಯಾಗ್ಸ್ ವ್ಯವಸ್ಥೆಯನ್ನು ಕನಿಷ್ಠ ಪಕ್ಷ ಹೋಬಳಿವಾರು ಕೊಡತಕ್ಕಂಥ ವ್ಯವಸ್ಥೆಯನ್ನಾದರೂ ಮಾಡಬೇಕು ಅದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ಎಂಬುದನ್ನೆಲ್ಲಾ ಕೂಡ ತಾವು ಹೇಳಬೇಕಾಗುತ್ತದೆ. ಮತ್ತು ಇದರ ಬಗ್ಗೆ ಇಲ್ಲಿ ಅವರ ಡಿಮಾಂಡ್ ಪಾಸ್ ಆಗುವಾಗಲೆಲ್ಲಾ ಹೇಳುತ್ತಾರೆ ಎಂದು ತಿಳಿದುಕೊಂಡು ನಿರೀಕ್ಷೆ ಮಾಡಿದ್ದೇವೆ. ಜಾನುವಾರುಗಳಿಗೆ ಏನು ವ್ಯವಸ್ಥೆ ಮಾಡಿದ್ದಾರೆ, ಜನರಿಗೆ ಏನು ವ್ಯವಸ್ಥೆ ಮಾಡಿದ್ದಾರೆ, ಕುಡಿಯುವ ನೀರಿಗೆ ಏನು ವ್ಯವಸ್ಥೆ ಮಾಡಿದ್ದಾರೆ ಮತ್ತು ಬೇರೆ ಬೇರೆ ಇಲಾಖೆಗಳು ಇದಕ್ಕೆ ಸಹಕರಿಸಿವೆಯೆ? ಏಕೆಂದರೆ ನಿಮ್ಮ ಒಂದೇ ಇಲಾಖೆಯಿಂದ ಇದನ್ನು ನೆರವೇರಿಸುವುದು ಸಾಧ್ಯವಿಲ್ಲ. ನಿಮ್ಮ ಜೊತೆಗೆ ಗ್ರಾಮೀಣಾಭಿವೃದ್ಧಿ ಇಲಾಖೆ, ಕೆ.ಇ.ಬಿ, ಪಿಡಬ್ಲ್ಯೂಡಿ, ಮೈನರ್ ಇರೀಗೇಷನ್, ಮೇಜರ್ ಇರಿಗೇಷನ್ ಇಲಾಖೆಯವರೂ ಇದ್ದಾರೆ. ಇಂಥ ಸಂದಿಗ್ದ ಕೆಟ್ಟ ಪರಿಸ್ಥಿತಿಯಲ್ಲಿ ಇವರೆಲ್ಲರನ್ನೂ ಕೋ-ಆರ್ಡಿನೇಟ್ ಮಾಡಿ ಮೀಟಿಂಗ್ ಕರೆದು ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆಗ ಮಾತ್ರ ಬರಪರಿಹಾರಕ್ಕೆ ನೀವು ಸಮರೋಪಾದಿಯಲ್ಲಿ ಕೆಲಸ ತೆಗೆದುಕೊಂಡಂತಾಗುತ್ತದೆ. ಆದರ ಇಲ್ಲಿ ಯುದ್ಧೋಪಾದಿಯಲ್ಲಿ ಕೆಲಸ ನಡೆದಿಲ್ಲ. ಏನೋ ನಾವು ತಾತ್ಪೂರ್ತಿಕವಾಗಿ ಕೇಳುತ್ತಿದ್ದೇವೆ ಎಂದರೆ ಏನಾದರೂ ಉತ್ತರ ಕೊಡಬೇಕು ಎಂದು ತಾವು ಹೇಳುತ್ತಿದ್ದೀರಿ. ನಿಜವಾಗಿಯೂ ತಾವು ಗಮನಿಸಿದ್ದೀರೋ ಇಲ್ಲವೋ, ಇದೇ ಜೂನ್ 25ರಲ್ಲಿ ಅನೇಕ ಪತ್ರಿಕೆಗಳಲ್ಲಿ ಹೇಳಿಕೆಗಳು ಕೂಡ ಬಂದಿವೆ, ಅದನ್ನು ತಮ್ಮ ಅವಗಾಹನೆಗಾಗಿ ನಾನು ತರುತ್ತಿದ್ದೇನೆ. ದಿನಾಂಕ: 26.6.1997ರಲ್ಲಿ ಪ್ರಜಾವಾಣಿಯಲ್ಲಿ ಈ ಹೇಳಿಕೆ ಬಂದಿದೆ. ತಾವೂ ಕೂಡ ಅದನ್ನು ಗಮನಿಸಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಆ ಹೇಳಿಕೆ ಈ ರೀತಿ ಇದೆ. ದಕ್ಷಿಣ ಒಳನಾಡಿನ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು ಚಿತ್ರದುರ್ಗ, ಮೈಸೂರು, ಮಂಡ್ಯ, ಹಾಸನ ಮತ್ತು ಉತ್ತರ ಒಳನಾಡಿನ ಕಲ್ಬುರ್ಗಿ, ಬೀದರ್, ಬಳ್ಳಾರಿ, ರಾಯಚೂರು, ಬಿಜಾಪುರ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಕಡಿಮೆ ಮಳೆಯಾಗಿದೆ. ರಾಜ್ಯದ 175 ತಾಲ್ಲೂಕುಗಳ ಪೈಕಿ 161

ತಾಲ್ಲೂಕುಗಳ ವರದಿ ದೊರಕಿದ್ದು ಅದರಲ್ಲಿ ಕೇವಲ 15 ತಾಲ್ಲೂಕುಗಳಲ್ಲಿ ಅಧಿಕ ಮಳೆ ಮತ್ತು 21 ತಾಲ್ಲೂಕುಗಳಲ್ಲಿ ಮಾಮೂಲಿ ಮಳೆಯಾಗಿದೆ. 42 ಜಿಲ್ಲೆಗಳಲ್ಲಿ ಸಾಧಾರಣ ಮತ್ತು 47ರಲ್ಲಿ ಅಲ್ಪ ಮಳೆಯಾಗಿದೆ. 36 ತಾಲ್ಲೂಕುಗಳಲ್ಲಿ ಮಳೆಯಾಗಿರುವುದಿಲ್ಲ. ಆದರೆ ಕಳೆದ ಸಾಲಿನಲ್ಲಿ ಇದೇ ಅವಧಿಯಲ್ಲಿ ಉತ್ತಮ ಮಳೆಯಾಗಿದ್ದು 77 ತಾಲ್ಲೂಕುಗಳಲ್ಲಿ ಅಧಿಕ ಮತ್ತು 18 ತಾಲ್ಲೂಕುಗಳಲ್ಲಿ ಮಾಮೂಲಿ ಮಳೆಯಾಗಿತ್ತು. ಅಂದರೆ ಈ ವರದಿಯನ್ನು ಸುಮಾರು ಎರಡೂವರೆ ತಿಂಗಳ ಹಿಂದೆ ಬಂದಿದೆ. ಎರಡೂವರೆ ತಿಂಗಳ ಹಿಂದೆ ಇಂಥ ವರದಿಗಳು ಬಂದ ಮೇಲೂ ಕೂಡ ತಮ್ಮ ಸರ್ಕಾರದವರು ಏತಕ್ಕೆ ಕ್ರಮವನ್ನು ಕೈಗೊಂಡಿಲ್ಲ? ಇದರ ಬಗ್ಗೆ ಏತಕ್ಕೆ ಒಂದು ಮೀಟಿಂಗ್ ಕರೆದು ಯುದ್ಧೋಪಾಯದಲ್ಲಿ ಕೆಲಸ ತೆಗೆದುಕೊಳ್ಳಲಿಲ್ಲ? ಮತ್ತು ಸುಮಾರು ಹೆಚ್ಚು ಕಡಿಮೆ ಒಂದೂವರೆ ತಿಂಗಳಿನಿಂದ ಈ ಸದನದಲ್ಲಿ ಸೇರುತ್ತಿದ್ದೇವೆ. ಇದರಲ್ಲಿ ಹಣವನ್ನು ಖರ್ಚು ಮಾಡಿದ್ದರ ಬಗ್ಗೆಯಾಗಲಿ ಅಥವಾ ಕೆಲಸ ಕಾರ್ಯವನ್ನು ತೆಗೆದುಕೊಂಡದ್ದರ ಬಗ್ಗೆಯಾಗಲಿ ಯಾವುದೇ ತರಹದ ಹೇಳಿಕೆಗಳು ಇವತ್ತಿನ ದಿವಸ ಬಂದಿಲ್ಲ. ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಜೂನ್ 25ರಲ್ಲಿ ''ಹಿಂದೂ''ದಲ್ಲಿ ಒಂದು ರಿಪೋರ್ಟಿಂಗ್ ಆಗಿತ್ತು. ಅಲ್ಲಿ ಕೂಡ ಒಂದು ಮಾತನ್ನು ಹೇಳಿದ್ದಾರೆ. "According to the latest report". ಅಂದರೆ ಸೀಜನಲ್ ಕಂಡೀಶನ್‌ನಲ್ಲಿ....

"Insufficient Rain Affects Khariff Farming". Accroding to the latest report, an area of only 6.16 lakh hectares had been sown under various khariff crops against the normal khariff area of 71.60 lakh hectares accounting for nearly 8.6%. ಅಂದರೆ ನಮ್ಮ ಟೋಟಲ್ ಖಾರೀಫ್ ಬಿತ್ತನೆಯಾಗತಕ್ಕಂಥ 71.60 ಲಕ್ಷ ಹೆಕ್ಟೇರ್ ಪ್ರದೇಶ ಏನಿದೆ ಅದರಲ್ಲಿ ಬಿತ್ತನೆ ಆಗಿದ್ದುದು 6 ಲಕ್ಷ 16 ಸಾವಿರ ಹೆಕ್ಟೇರ್ ಮಾತ್ರ. ಅಂದರೆ 8.6 ಪರ್ಸೆಂಟ್ ಕವರೇಜ್ ಆಗಿದೆ. ಅಂದರೆ ಸುಮಾರು 93-94 ಪರ್ಸೆಂಟ್ ಖಾರೀಫ್ ಬಿತ್ತನೆ ಹೆಚ್ಚಿನ ಪ್ರಮಾಣದಲ್ಲಿ ಆಗಿಲ್ಲ ಎನ್ನುವುದು ಈ ವರದಿಗಳಲ್ಲಿ ಇವೊತ್ತಿನ ದಿವಸ ಇದೆ. ಹಳೆಯ ವರದಿಗಳನ್ನೂ ಕೂಡ ನಾನು ಹೇಳಿದೆ, ಆಗಸ್ಟ್ ತಿಂಗಳಿನಲ್ಲಿ ಲೇಟೆಸ್ಟ್ ಆಗಿ ಏನಾಗಿದೆ ಎಂಬುದನ್ನೂ ಹೇಳಿದ್ದೇನೆ. ಮಾನಿಟರಿ ಸೆಲ್‌ನವರು ಏನು ರಿಪೋರ್ಟ್ ಕೊಟ್ಟಿದ್ದಾರೆ ಅದನ್ನೂ ನಾನು ಸ್ಪಷ್ಟಪಡಿಸಿದ್ದೇನೆ. ಇದೆಲ್ಲವೂ ಕೂಡ ನಿಮ್ಮ ಮುಂದೆ ಇದ್ದರೂ ಕೂಡ ಸರ್ಕಾರದವರು ಇದನ್ನು ಏತಕ್ಕೆ ಕಡೆಗಣಿಸಿದ್ದಾರೆ? ಏತಕ್ಕೆ ಇದರಲ್ಲಿ ಆಸಕ್ತಿ ವಹಿಸಿ ಇವೊತ್ತು ಹಣವನ್ನು ಬಿಡುಗಡೆ ಮಾಡಲಿಲ್ಲ ಎಂಬುದನ್ನು ನಾನು ಸ್ಪಷ್ಟವಾಗಿ ಕೇಳಬಯಸುತ್ತಿದ್ದೇನೆ. ಇದರ ಅರ್ಥ ಏನೆಂದರೆ ಅದರಲ್ಲಿಯೂ ಕೂಡ ಉಳಿದ ಭಾಗದಲ್ಲಿ ನೀವು ಹಣ ಬಿಡುಗಡೆ

ಮಾಡಿದರೂ ಕೂಡ, ಅದು ಅಳುವವರ ಕಣ್ಣೀರು ಒರೆಸಿದಂತಾಗಿದೆ ಎಂದು ಹೇಳಿದ್ದಕ್ಕೆ ತಕ್ಷಣ ನೀವು ಎಲ್ಲೆಲ್ಲಿ, ಎಷ್ಟೆಷ್ಟು ಎಂದು ಕೇಳಿದಿರಿ. ನೀವು ಪ್ರತಿ ತಾಲ್ಲೂಕಿಗೆ ತಿಂಗಳಿಗೆ ಅಥವಾ 15 ದಿವಸಕ್ಕೆ ಬಿಡುಗಡೆ ಮಾಡಿದಂಥ ಹಣ ಎಷ್ಟು ಎಂದರೆ 10 ಲಕ್ಷ, 20 ಲಕ್ಷ ಮಾತ್ರ. ಅದನ್ನು ಬಿಟ್ಟರೆ ಏನೂ ಇಲ್ಲ.

2.00 ಪಿ.ಎಂ

ಎಲ್ಲ ಲೆಕ್ಕಹಾಕಿದರೂ 6-7 ಕೋಟಿಯ ಮೇಲೆ ಹೋಗುವುದಿಲ್ಲ. ಅತಿವೃಷ್ಟಿ ಅನಾವೃಷ್ಟಿ ಎರಡೂ ಸೇರಿಸಿ ಅದರ ಪರಿಹಾರದ ಕಡೆಗೆ ನಾವು ಗಮನ ಕೊಡಬೇಕಾಗುತ್ತದೆ. ನಮ್ಮ ಮಂಗಳೂರಿನ ಒಂದೇ ಜಿಲ್ಲೆಯು ಅಲ್ಲಿ ಕಳೆದ ವರ್ಷ ಅತಿವೃಷ್ಟಿಯಿಂದ ಸಮುದ್ರ ಕೊರೆತದಿಂದ ಕೆಲವು ಮನೆಗಳು ಬಿದ್ದಿದೆ, ರಸ್ತೆಗಳೂ ಡ್ಯಾಮೇಜಾಗಿದೆ. ಇದರ ಬಗ್ಗೆ ತಾವೇ ವರದಿಯನ್ನು ತರಿಸಿಕೊಂಡಿದ್ದೀರಿ. ಇದಕ್ಕೊಂದು ಪ್ಲಾನ್ ಮಾಡಿ ಅತಿವೃಷ್ಟಿಯಲ್ಲಿ ಹಾನಿಗೊಳಗಾದ ಒಂದು ಜಿಲ್ಲೆಗೆ ಐದೂವರೆ ಕೋಟಿ ರೂ.ಗಳನ್ನು ಕೇಳಿದ್ದರು. ಮಾಸ್ಟರ್‌ಪ್ಲಾನ್ ಮಾಡಿ ತಾತ್ಕಾಲಿಕವಾಗಿ ಇಷ್ಟು ಹಣ ಬೇಕೆಂದು ಕೇಳಿದ್ದರು. ಆದರೆ ಇವತ್ತು ಅವರಿಗೆ ಕಳಿಸಿದ್ದನ್ನು ನೋಡಿದರೆ ಬಹಳ ಕಡಿಮೆ ಹಣ ಒಂದೂವರೆ ಕೋಟಿ ಕಳಿಸಿದ್ದಾರೆ. ಇದು ಅತಿವೃಷ್ಟಿಗೆ ಅನಾವೃಷ್ಟಿಗೂ ಇನ್ನು 10-20ಲಕ್ಷ ಬೇಕಾಗುತ್ತದೆ. ಇವತ್ತಿನ ದಿವಸ ತಾವು ಬಿಡುಗಡೆ ಮಾಡಿದಂತಹ ಸರಕಾರದ ಆದೇಶಗಳನ್ನು ನೋಡಿದಾಗ ಎಷ್ಟರ ಮಟ್ಟಿಗೆ ಹಣ ಬಿಡುಗಡೆಯಾಗಿದೆ ಎಂದು ತಿಳಿಯುತ್ತದೆ. ಕೆಲವಂತೂ ಬಿಡಿಸಿ ಬಿಡಿಸಿ ಕಳಿಸಿದ್ದೀರಿ. ಒಂದೊಂದು ಸರಕಾರದ ಆದೇಶಗಳೂ 10-10 ಲಕ್ಷಕ್ಕೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯ ಅಧಿಕಾರಿಗಳ ಪತ್ರದ ಮೇರೆಗೆ ಅವರಿಗೆ 25/8ಕ್ಕೆ 10 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೀರಿ. ರಾಯಚೂರು ಜಿಲ್ಲೆಯ ಮೇವು ಪೂರೈಕೆಗೆ 15 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೀರಿ. ಸ್ವಾತಂತ್ರ್ಯ ದಿನಾಚರಣೆಯ ಮರು ದಿವಸ ಬಿಡುಗಡೆ ಮಾಡಿದ್ದೀರಿ. 16-8-1997ಕ್ಕೆ ಬೆಳಗಾಂ ಜಿಲ್ಲೆ, ಮಾನ್ಯ ಅಧ್ಯಕ್ಷರೆ, ತಮ್ಮ ಜಿಲ್ಲೆಗೆ 35 ಲಕ್ಷ ಬಿಡುಗಡೆ ಮಾಡಿದ್ದಾರೆ. ತಾವು ಹೇಳಿರಬಹುದು. ಅತಿವೃಷ್ಟಿಯಲ್ಲಿ ಕೊಡಗು, ಉತ್ತರ ಕನ್ನಡ ಧಾರವಾಡ ಚಿಕ್ಕಮಗಳೂರು ಶಿವಮೊಗ್ಗ, ಇವುಗಳಿಗೆ ಸುಮಾರು 3 ಕೋಟಿ ರೂಪಾಯಿಗಳನ್ನು ಆಗಸ್ಟ್ 14ರಂದು ಬಿಡುಗಡೆ ಮಾಡಿದ್ದೀರಿ. ಅದೇ ರೀತಿಯಾಗಿ ಆಗಸ್ಟ್ 14ಕ್ಕೆ 1997ಕ್ಕೆ ಬೆಂಗಳೂರು, ಮಂಡ್ಯ ಚಿತ್ರದುರ್ಗ, ಬಿಜಾಪುರ, ಕೋಲಾರ ಹಾಸನ್, ತುಮಕೂರು, ಮೈಸೂರು, ರಾಯಚೂರು ಧಾರವಾಡ ಬಳ್ಳಾರಿ ಇದಕ್ಕೆ 5 ಕೋಟಿ. ಆಮೇಲೆ 2.8.97ಕ್ಕೆ ಚಿತ್ರದುರ್ಗ, ಧಾರವಾಡ, ಹಾಸನ ಮಂಡ್ಯ ಮೈಸೂರು, ರಾಯಚೂರು ತುಮಕೂರು, ಗುಲ್ಬರ್ಗ, ಕೋಲಾರ, ಬಿಜಾಪುರ, ಬೆಳಗಾಂ ಇಲ್ಲಿಗೆ 7 ಕೋಟಿ 55 ಲಕ್ಷ ಹಣ ಬಿಡುಗಡೆ ಮಾಡಿದ್ದು ಇದರಲ್ಲಿ ಅತಿವೃಷ್ಟಿ ಅನಾವೃಷ್ಟಿ ಎರಡೂ ಸೇರುತ್ತದೆ. ಕೊನೆಯದಾಗಿ 2 ಕೋಟಿ 90 ಲಕ್ಷ ವನ್ನು 19ನೇ ಜುಲೈಗೆ ಕೊಟಿದ್ದನ್ನು

ಮೊದಲೇ ಹೇಳಿದ್ದೇನೆ. ಈಗ ಇದಕ್ಕಿಂತ ಹೆಚ್ಚು ಹಣ ಬಿಡುಗಡೆ ಮಾಡಬೇಕು. ಅನಾವೃಷ್ಠಿಯ ಪ್ರದೇಶದಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಎಷ್ಟು, ಹಣ ತಾವು ಬಿಡುಗಡೆ ಮಾಡಿದ್ದೀರಿ, ಎಷ್ಟು ಲೇಬರ್ ಅನ್ನು ಎಂಪ್ಲಾಯಿ ಮಾಡಿದ್ದೀರಿ ಕುಡಿಯುವ ನೀರಿಗಾಗಿ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಮತ್ತು ಯಾವ್ಯಾವ ಭಾಗದಲ್ಲಿ ಟ್ಯಾಂಕರ್ ಮುಖಾಂತರವಾಗಿಯಾಗಲೀ ಇಲ್ಲವೇ ಜಿಲ್ಲಾ ಪರಿಷತ್ತಿನಿಂದಾಗಲೀ, ಇಲ್ಲವೇ ನೇರವಾದ ಜಿಲ್ಲಾಧಿಕಾರಿಗಳ ಮುಖಾಂತರವಾಗಿ ನಿಮ್ಮದೇ ನೇರವಾಗಿ ಹಣ ಬಿಡುಗಡೆ ಮಾಡಿದ್ದೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಇಂತಹ ಪರಸ್ಥಿತಿಯಲ್ಲಿ ನೀವು ಯಾರಾದರೂ ಒಬ್ಬ ಜಿಲ್ಲಾ ಅಧಿಕಾರಿಗಳಿಗೆ ಒಪ್ಪಿಸಬೇಕು. ಜಿಲ್ಲಾಧಿಕಾರಿಯನ್ನು ಒಂದು ಜಿಲ್ಲೆಗೆ ಕ್ಯಾಪ್ಟನ್ ಎಂದು ಮಾಡಬೇಕು. ಜಿಲ್ಲಾ ಪರಿಷತ್ತಿನವರು ಮತ್ತು ಜಿಲ್ಲೆಯಲ್ಲಿರುವ ಎಲ್ಲ ಅಧಿಕಾರಿಗಳು, ಅದು ಲೋಕೋಪಯೋಗಿ ಇಲಾಖೆ ಇರಬಹುದು, ಇರಿಗೇಷನ್ ಇರಬಹುದು, ಇವರೆಲ್ಲರೂ ಕೂಡ ಕೋಆಪರೇಟ್ ಮಾಡತಕ್ಕಂತಹ ಒಂದು ಸ್ಥಿತಿಯಲ್ಲಿಟ್ಟು ಅವರಿಗೆ ಆದೇಶ ಕೊಡಬೇಕು. ಯಾರಾದರೂ ಡಿಸ್ ಒಬೇ ಮಾಡಿದರೆ, ಯಾರಾದರೂ ಅವರ ಮಾತಿಗೆ ಮನ್ನಣೆ ಕೊಡದೇ ಹೋದರೆ, ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಕೂಡ ಆ ಜಿಲ್ಲಾಧಿಕಾರಿಗಳೇ ಕೊಡಬೇಕು. ಹಾಗಾದಾಗ ಮಾತ್ರ ಜನರಿಗೆ ರಿಲೀಫ್ ಸಿಗುತ್ತದೆ ಮತ್ತು ಕೂಡಲೇ ಸ್ಪಾಟ್ ಡಿಸಿಷನ್ ತೆಗೆದುಕೊಳ್ಳಬೇಕೆಂದರೆ, ಜಿಲ್ಲಾಧಿಕಾರಿಗಳಿಗೆ ಕೂಡ ಅನುಕೂಲವಾಗುತ್ತದೆ. ಅವರಿಗೆ ಅಧಿಕಾರವೇ ಇಲ್ಲವೆಂದರೆ ಅವರು ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ? ನೀವು ಬರೀ ಹಣ ಕಳಿಸಿದ್ದೇನೆಂದು ಹೇಳಿ ಅಂತಹ ಕಡೆ ಕೆಲಸ ತೆಗೆದುಕೊಳ್ಳಿ ಎಂದು ಹೇಳಬಹುದು. ಆದರೆ ಅಲ್ಲಿ ಬೇರೆ ಇಲಾಖೆಯವರು ಕೋಆಪರೇಟ್ ಮಾಡದಿದ್ದರೆ ತೊಂದರೆಯಾಗುತ್ತದೆ. ಅರಣ್ಯ ಇಲಾಖೆ ಇರಬಹುದು ಇಲ್ಲವೇ ಮೇಜರ್ ಇರಿಗೇಷನ್ ಇರಬಹುದು, ಲೇಬರ್‌ಗೆ ಕೆಲಸ ಕೊಡಬೇಕೆಂದಾಗ ಇಂಥ ಕೆನಾಲ್ ಕೆಲಸ ತೆಗೆದುಕೊಳ್ಳದು, ಅಥವಾ ಇಂಥ ಡಿಸ್ಟ್ರಿಬ್ಯೂಟರಿ ಕೆಲಸ ತೆಗೆದುಕೊಳ್ಳಿ, ಅಥವಾ ಕಾಡಾದಲ್ಲಿ ಕೆಲಸ ತೆಗೆದುಕೊಳ್ಳಿ ಎಂದರೆ ಹಣವಿದ್ದಾಗ ತಕ್ಷಣ ಆ ಕೆಲಸವನ್ನು ಪ್ರಾರಂಭ ಮಾಡಬಹುದು. ಕೆಲವು ಕಡೆಗಳಲ್ಲಿ ಹಣ ಇರುತ್ತದೆ ಅಲ್ಲಿ ತಾಂತ್ರಿಕ, ಆಡಳಿತ ಮಂಜೂರಾತಿ ಇರುವುದಿಲ್ಲ. ಅದಕ್ಕಾಗಿ ಅವರು ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕಾಗಿ ನೀವು ಎಲ್ಲಾ ಜಿಲ್ಲಾಧಿಕಾರಿಗಳನ್ನು ಕರೆಸಿ ಇಲ್ಲವೇ ಮುಖ್ಯ ಕಾರ್ಯದರ್ಶಿಗಳನ್ನು ಮತ್ತು ಉಳಿದಂತಹ ಇಲಾಖಾಧಿಕಾರಿಗಳ ಹಿರಿಯ ಅಧಿಕಾರಿಗಳನ್ನು ಕರೆಸಿ, ಎಲ್ಲೆಲ್ಲಿ ಕೆಲಸ ತೆಗೆದುಕೊಳ್ಳಬೇಕು, ಅಲ್ಲಿ ನೀವು ಯುದ್ಧದೋಪಾದಿಯಲ್ಲಿ ಕೆಲಸ ಪ್ರಾರಂಭ ಮಾಡಬೇಕು ಆ ಮೂಲಕ ಜನರಿಗೆ ಕೆಲಸ ಸಿಗಬೇಕು. ನಮಗೆ ಶಿಕಾಯತ್ ಬರಬಾರದು ಎನ್ನುವಂತಹ ಒಂದು ಎಚ್ಚರಿಕೆಯನ್ನು ಅವರಿಗೆ ಕೊಟ್ಟರೆ ಅವರು ತಾನೇ ಮಾಡುತ್ತಾರೆ ಮತ್ತು ಅದೇ ರೀತಿಯಾಗಿ ಹಣ ಬಿಡುಗಡೆ ಮಾಡುತ್ತಿರಬೇಕು. ಮಾರವಾಡಿಯ ಕಂಜೂಸುತನ ಮಾಡಿ 1-2 ಕೋಟಿ

ಬಿಡುಗಡೆ ಮಾಡುತ್ತಾ ಹೋದರೆ ಸುಮ್ಮನೆ ಬರೀ ಪತ್ರಿಕೆಗಳಿಗೆ ಮಾತ್ರ ನಾವು 1-2 ಕೋಟಿ ಬಿಡುಗಡೆ ಮಾಡಿದ್ದೇವೆಂದು ಹೇಳಿದ ಹಾಗಾಗುತ್ತದೆ. ಇದರಿಂದ ಯಾವ ಕೆಲಸವೂ ಆಗುವುದಿಲ್ಲ. ತಾವು ಇಲ್ಲಿ ಕೊಟ್ಟಂತಹ ಅಂಕಿ ಅಂಶದ ಪ್ರಕಾರ ನೋಡಿದರೆ ಒಬ್ಬರಿಗೆ 2 ರೂಪಾಯಿ ಕೂಡ ಬರುವುದಿಲ್ಲ. ಇದರಿಂದ ಅವರು ಎರಡು ಸಲ 'ಟೀ' ಕುಡಿಯುವುದಕ್ಕಾಗುವುದಿಲ್ಲ. ಅಂತಹ ರಿಲೀಫ್ ನಿಮ್ಮಿಂದ ಹೋದ ಹಾಗಾಗುತ್ತದೆ. ಆದ್ದರಿಂದ ಅತಿವೃಷ್ಟಿಯಲ್ಲಿ ತೊಂದರೆಗೀಡಾದ ಸೌತ್ ಕೆನರಾ, ನಾರ್ತ್ ಕೆನರಾ, ಶಿವಮೊಗ್ಗ ಜಿಲ್ಲೆಯ ಕೆಲವು ಭಾಗ ಇರಬಹುದು, ಬೆಳಗಾಂನಲ್ಲಿ ಇರಬಹುದು ಅಲ್ಲಿ ಅನುಕೂಲ ಮಾಡಿಕೊಡಬೇಕು. ಆಲಮಟ್ಟಿಯಿಂದ ಜಮಖಂಡಿ ಬಾಗಲಕೋಟೆ, ಬೀಳಗಿ ಈ ಭಾಗದಲ್ಲಿ ಕೂಡ ತೊಂದರೆಯಾಗಿದೆ. ಏಕೆಂದರೆ ಮಹಾರಾಷ್ಟ್ರದವರು ತಮ್ಮ ಡ್ಯಾಮಿನಿಂದ ಹೆಚ್ಚಿನ ನೀರನ್ನು ಬಿಡುಗಡೆ ಮಾಡಿದರು ಆ ತಕ್ಷಣವೇ ಆಲಮಟ್ಟಿ ಓವರ್ ಫ್ಲೋ ಆಗಿ ಅನೇಕ ಕಡೆ ತೊಂದರೆಗೀಡಾಗಿದೆ. ಅಲ್ಲಿಗೆ ತಾವೂ ಹೋಗಿ ಬಂದಿದ್ದೀರಿ. ಆದರೆ ಈಗ ರಿಲೀಫ್ ಏನು ಕೊಟ್ಟಿರಿ ಅದು ಮುಖ್ಯ. ಬರೀ ಹೆಲಿಕಾಪ್ಟರ್‌ನಲ್ಲಿ ಹೋಗಿ ಬಂದು ನಾವು ಎಲ್ಲವನ್ನೂ ಸರಿ ಮಾಡಿದ್ದೇವೆಂದು ಹೇಳಿದರೆ ಆಗುವುದಿಲ್ಲ. ಹಣದ ಬಿಡುಗಡೆ ಮತ್ತು ಅಲ್ಲಿ ರಿಹ್ಯಾಬಿಲಿಟೇಷನ್ ವರ್ಕ್ ನೋಡಿದಾಗ ಹೇಳಬೇಕಾಗುತ್ತದೆ. ಯಾವ ಆಶ್ವಾಸನೆಗಳನ್ನು ತಾವು ಕೊಟ್ಟಿದ್ದೀರಿ ಅವುಗಳು ಪೂರ್ತಿಯಾಗಿ ಈಡೇರಿಲ್ಲ. ಇದು ನೀರು ಬಿಟ್ಟಿದ್ದಕ್ಕಾಗಿ ಆಗಿರುವಂತಹ ಅನಾಹುತ. ಆದರೆ ಬಿಜಾಪುರದಲ್ಲಿ ನೀರು ಇಲ್ಲವೆಂದು ಅನಾಹುತವಾಗಿದೆ. ಆದರೆ ಅನಾವೃಷ್ಟಿಯಂತೂ ಇದ್ದೇ ಇದೆ. ಇದೆಲ್ಲವನ್ನು ತಾವು ಗಮನದಲ್ಲಿಟ್ಟುಕೊಂಡು ಅತಿವೃಷ್ಟಿ ಅನಾವೃಷ್ಟಿಯನ್ನು ಗಮನದಲ್ಲಿ ಇಡಬೇಕು. ಇವೆರಡನ್ನೂ ಕೇಂದ್ರ ಸರಕಾರದ ಮುಂದೆ ಮೆಮೊರ್‍ಯಾಂಡಮ್ ಅನ್ನು ಕೊಟ್ಟಾಗ ಅವರು ಕೂಡ ನಗುತ್ತಾರೆ. ಏಕೆಂದರೆ ಒಂದು ಕಡೆ ಇವರು ಮಳೆ ಜಾಸ್ತಿ ಇದೆ ಎಂದು ಮತ್ತೊಂದು ಕಡೆ ಮಳೆ ಇಲ್ಲವೆಂದು ಮೆಮರೆಂಡಮ್ ಕೊಡುತ್ತಾರೆ. ಯಾವುದನ್ನು ನಂಬುವುದು ಎಂದು ಹೇಳುತ್ತಾರೆ. ಅದಕ್ಕೇ ನೀವು ಸೆಂಟ್ರಲ್ ಸ್ಕೀಮ್ ಅನ್ನು ವಿಸಿಟ್ ಮಾಡಿಸಿ. ಕೆಲವು ಸಲ ಕನಫ್ಯೂಸ್ ಆಗತಕ್ಕಂತಹ ಸಾಧ್ಯತೆ ಇದೆ ಕೆಲವು ಸಲ ನಮ್ಮ ಮಾತಿಗೆ ಮನ್ನಣೆಯಲ್ಲ ಸಿಗುವುದಿಲ್ಲ. ಹೋದ ಸಾರಿ ನೀವು ಮೆಮೊರ್‍ಯಾಂಡಮ್ ಕೊಟ್ಟಿದ್ದೀರಿ ಒಂದು ಪೈಸೆ ಕೂಡ ಬರಲಿಲ್ಲ, ಅಥವಾ ನನಗೆ ತಿಳಿದ ಮಟ್ಟಿಗೆ ಅಡ್ವಾನ್ಸ್ ಅಮೌಂಟ್ ಕೂಡ ಬರಲಿಲ್ಲ. ನಮಗೆ ಯಾವಾಗಲೂ ಅವರು ಗ್ರ್ಯಾಂಟ್ ಎಂದು ಕೊಡುವುದಿಲ್ಲ, ಅಡ್ವಾನ್ಸ್ ಎಂದು ಕೊಡುತ್ತಾರೆ. ಕೊನೆಯ ಪಕ್ಷ ಹೋದ ಸಲ ಅಡ್ವಾನ್ಸ್ ಎಂದು ಕೊಡಬಹುದಿತ್ತು, ಅದನ್ನೂ ಕೊಡಲಿಲ್ಲ. ಇವತ್ತು 130 ಕೋಟಿ ಇದ್ದಿದ್ದನ್ನು ಅದರಲ್ಲಿ ಅಡ್ವಾನ್ಸ್ ಏನಾದರೂ ಕೊಟ್ಟು ನೀವೇನಾದರೂ ಕೆಲಸ ಮಾಡಿಕೊಳ್ಳಿ ಎಂದು ಹೇಳಬಹುದಿತ್ತು ಅದಕ್ಕೂ ಕೊಟ್ಟಿಲ್ಲ. ಈ ವರ್ಷವೂ ಇವರು ಮೆಮೊರ್‍ಯಾಂಡಮ್ ತಯಾರು ಮಾಡಿಕೊಂಡು ಹೋದರೆ ಕಳೆದ ವರ್ಷದಂತೆ ಈ ವರ್ಷವೂ ಏನೂ ಬರುವುದಿಲ್ಲ ಎನ್ನತಕ್ಕಂತ ಸಾಧ್ಯತೆ ಕಾಣುತ್ತದೆ. ಅಂದಮೇಲೆ ಎಲ್ಲ

ರಿಸೋರ್ಸಸ್ ಅನ್ನು ಪೂಲ್ ಮಾಡಬೇಕಾಗುತ್ತದೆ, ಇಲ್ಲೇ ಕ್ರೋಢೀಕರಿಸಿಕೊಳ್ಳಬೇಕಾಗುತ್ತದೆ. ಆ ರಿಸೋರ್ಸಸ್ ಅನ್ನು ಪೂಲ್ ಮಾಡಿಕೊಂಡು ಎಷ್ಟು ದಿವಸಕ್ಕೆ ನೀವು ಕೆಲಸ ಕೊಡಬಹುದೆಂಬ ಬಗ್ಗೆ ಯೋಜನೆ ಹಾಕಿಕೊಂಡು, ಹಂತ ಹಂತವಾಗಿ ಹಣ ಬಿಡುಗಡೆ ಮಾಡಬೆಕಾಗುತ್ತದೆ. ಈ ಕೆಲಸ ನಾವು ಮಾಡದೇ ಹೋದರೆ ನಮಗೆ ಒಳ್ಳೆಯ ಹೆಸರೂ ಬರುವುದಿಲ್ಲ, ಮತ್ತು ಯಾವ ಬಡ ಜನ ನಮ್ಮಲ್ಲಿ ನಂಬಿಕೆ ಇಟ್ಟುಕೊಂಡು ಸರಕಾರ ನಮಗೆ ರಿಲೀಫ್ ಕೊಡುತ್ತಾರೆ, ಸಹಾಯ ಮಾಡುತ್ತಾರೆನ್ನುವ ಮಾತಿನ ಮೇಲೆ ನಂಬಿಕೆ ಇಟ್ಟುಕೊಂಡು ತಮ್ಮ ತಮ್ಮ ಊರಿನಲ್ಲಿ ಕೆಲವು ಜನ ಇದ್ದಾರೆ. ಇನ್ನು ಕೆಲವು ಜನ ವಲಸೆ ಹೋಗುತ್ತಿದ್ದಾರೆ ಅವರೆಲ್ಲರನ್ನೂ ತಡೆಗಟ್ಟುವ ವ್ಯವಸ್ಥೆ ನಿಮ್ಮ ಹಣದ ಮೇಲೆ ನಿಮ್ಮ ಎಫರ್ಟ್ಸ್ ಮೇಲೆ ಮತ್ತು ನೀವೇನು ಸಾಧನೆ ಮಾಡಬೇಕೆಂದು ಮನಸ್ಸು ಮಾಡಿದ್ದೀರಿ ಅದರ ಮೇಲೆ ಅವಲಂಬಿಸಿರುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ.... ತಮ್ಮಲ್ಲಿ ಪುನಃ ಕೇಳಿಕೊಳ್ಳುತ್ತೇನೆ. ಈ ಎಲ್ಲಾ ಕೆಲಸಗಳು ಯುದ್ಧದೋಪಾದಿಯಲ್ಲಿ ನಡೆಯಬೇಕು. ಫಾಡರ್ ಬ್ಯಾಂಕ್ಸನ್ನು ನಾವು ಪ್ರತಿಯೊಂದು ಹೋಬಳಿಯಲ್ಲಿ ಎಲ್ಲೆಲ್ಲಿ ಅನಾವೃಷ್ಟಿಗೆ ಜಾನುವಾರುಗಳು ತುತ್ತಾಗಿದ್ದಾವೆ ಅಂಥ ಕಡೆ ಈ ವ್ಯವಸ್ಥೆ ಮಾಡಬೇಕು, ಕುಡಿಯುವ ನೀರಿನ ವ್ಯವಸ್ಥೆ ಕೂಡ ತಕ್ಷಣ ಆಗಬೇಕು ಮತ್ತು ಏನು ಕ್ರಮವನ್ನು ತಾವು ಜರುಗಿಸಿದ್ದೀರಿ ಎನ್ನುವ ಬಗ್ಗೆ ಕೂಡ ಒಂದು ಸವಿಸ್ತಾರ ಹೇಳಿಕೆಯೂ ಅಲ್ಲದೆ, ನಮಗೆ ಗೌರ್ನಮೆಂಟ್ ಆರ್ಡರ್‌ಗಳನ್ನು ಕೊಡಿ. ಏಕೆಂದರೆ ನಾವು ಅನೇಕ ಸಾರಿ ಪತ್ರಗಳನ್ನು ಬರೆಯುತ್ತೇವೆ. ಈಗೇನೋ ಬಂತು. ನಿಮ್ಮ ಪರ್ಮಿಷನ್ ಇಲ್ಲದೇ ಗೌರ್ನಮೆಂಟ್ ಜಿ.ಓ. ಕಾಪಿಗಳು ಯಾವಾಗ ತಾವು ಇಶ್ಯೂ ಮಾಡುತ್ತೀರಿ, ಪ್ರತಿಯೊಬ್ಬ ಶಾಸಕರಿಗೆ ಕೊಡುವುದಕ್ಕೇನು ತೊಂದರೆ ಇದೆ. ಏಕೆಂದರೆ ಅದು ಜಿ.ಓ ಆಗಿ ಡೆಪ್ಯುಟಿ ಕಮೀಷನರ್ ಹತ್ತಿರ ಹೋಗಿ ಸೆಕ್ಷನ್ ಕ್ಲರ್ಕ್ ಹತ್ತಿರ ಬಿದ್ದಿರುತ್ತದೆ. ಅಂಥ ಗೌರ್ನಮೆಂಟ್ ಆರ್ಡರ್‌ಗಳನ್ನು ನಮಗೆ ಕೊಡುವುದಕ್ಕೆ ಹಿಂದೆಮುಂದೆ ನೋಡುತ್ತಾರೆ. ನನಗೆ ಈಗ ಬಂತು. ಬಹುಶಃ ನಿಮ್ಮ ಪರ್ಮಿಷನ್ ತೆಗೆದುಕೊಂಡರೋ ಅಥವ ಸೆಕ್ರೆಟರಿ ಪರ್ಮಿಷನ್ ತೆಗೆದುಕೊಂಡು ಕೊಟ್ಟರೋ ಗೊತ್ತಿಲ್ಲ. ಅಂದರೆ ಈ ರೀತಿಯಾಗಿ ಮಾಡಿದರೆ ನಾವು ಯಾವುದೋ ಒಂದು ಜಿಲ್ಲೆಗೆ ಹೋಗುತ್ತೇವೆ, ಸರ್ಕಾರ ಏನು ಹಣ ಬಿಡುಗಡೆ ಮಾಡಿದೆ, ಅದರ ಬಗ್ಗೆ ತಿಳಿವಳಿಕೆ ಕೊಡುವುದೂ ಇರುತ್ತದೆ. ಬರೀ ಟೀಕೆ ಮಾಡುವುದು ಒಂದೇ ಇರುವುದಿಲ್ಲ. ಜನರಿಗೆ ಹೇಳುವುದೂ ಇರುತ್ತದೆ, ತಿಳುವಳಿಕೆ ಕೊಡುವುದೂ ಇರುತ್ತದೆ ಅಥವಾ ಇಂಥ ಹೆಡ್‌ನಲ್ಲಿ ಮೇವಿಗಾಗಿ ಇಷ್ಟು ಹಣ ಬಿಡುಗಡೆಯಾಗಿದೆ, ರಸ್ತೆ ರಿಪೇರಿಗಾಗಿ ಇಷ್ಟು ಹಣ ಬಿಡುಗಡೆಯಾಗಿದೆ, ಅಥವಾ ಕೆರೆ ದುರಸ್ತಿಗಾಗಿ ಇಷ್ಟು ಮಾಡಿದ್ದಾರೆ, ಅಥವಾ ಬೇರೆ ಬೇರೆ ಯಾವ ಯಾವ ಹೆಡ್‌ನಲ್ಲಿ ನೀವು ಹಣವನ್ನು ಬಿಡುಗಡೆ ಮಾಡುತ್ತೀರೋ ಅದರಲ್ಲಿ ಸರ್ಕಾರ ಬಿಡುಗಡೆ ಮಾಡಿದೆ ಎಂದು ಹೇಳುವುದಕ್ಕಾದರೂ ಬೇಕಲ್ಲ. ಆ ಕೆಲಸವನ್ನೂ ನೀವು ಮಾಡಲಿಲ್ಲ ಎಂದರೆ ನಾವು ಯಾವ ರೀತಿಯಾಗಿ ಕೆಲಸ ಮಾಡಬೇಕೆನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಅದಕ್ಕಾಗಿ

ಹೆಚ್ಚಿನ ಕಾಲಾವಕಾಶವನ್ನು ತೆಗೆದುಕೊಳ್ಳದೆ ಇಷ್ಟು ಹೇಳುತ್ತೇನೆ. ದಯವಿಟ್ಟು ಈ ವ್ಯವಸ್ಥೆಯನ್ನು ಅವರು ತಕ್ಷಣ ಮಾಡಬೇಕು ಮತ್ತು ಕೇಂದ್ರಸರ್ಕಾರಕ್ಕೂ ಕೂಡ ಇವೆರಡೂ ಮೆಮೊರಾಂಡಂ, ಒಂದು ಫ್ಲಡ್‌ನಲ್ಲಿ ನಮಗೆ ಆದಂಥ ತೊಂದರೆ ಬಗ್ಗೆ, ಅತಿವೃಷ್ಟಿಯಿಂದ, ಇನ್ನೊಂದು ಅನಾವೃಷ್ಟಿಯಿಂದ ಆದಂಥ ತೊಂದರೆ ಬಗ್ಗೆ ಕೂಡ ನಾವು ಮೆಮೊರಾಂಡಂನ್ನು ಈಗಾಗಲೇ ಸಲ್ಲಿಸಬೇಕಾಗಿತ್ತು. ಏಕೆಂದರೆ 20ನೇ ಜೂನ್‌ನಿಂದ ಈ ಪರಿಸ್ಥಿತಿ ಇದೆ. ಒಂದು ಪ್ರಿಲಿಮಿನರಿ ಮೆಮೊರಾಂಡಂ ಸಬ್‌ಮಿಟ್ ಮಾಡಿ ಪುನಃ ಇವತ್ತಿನ ಪರಸ್ಥಿತಿ ಏನು ಇದೆ, ಏಕೆಂದರೆ ಎರಡು ಮೂರು ನಾವು ಮಾಡುವುದಕ್ಕೇನು ತೊಂದರೆಯಾಗುವುದಿಲ್ಲ. ಇದರಿಂದ ಅನೇಕ ಪ್ರಯೋಜನಗಳಾಗುತ್ತದೆ. ಏಕೆಂದರೆ ನಮ್ಮಲ್ಲಿ ಈ ಒಂದು ಬರಗಾಲ ಮತ್ತು ಅತಿವೃಷ್ಟಿಗೆ ಎರಡೂ ಕೂಡ ಮೆಮೊರಾಂಡಂ ಸಬ್‌ಮಿಟ್ ಮಾಡಿರುವುದರಿಂದ ಒಂದು ಏನು ಅನುಕೂಲವಾಗುತ್ತದೆ ಎಂದರೆ ನಬಾರ್ಡ್‌ನಿಂದ ಬರುವ ಸಾಲದ ಬಗ್ಗೆ ಅಥವಾ ಕೇಂದ್ರಸರ್ಕಾರಕ್ಕೆ ನಾವು ಕೊಡುವ ಸಾಲದ ಬಗ್ಗೆ, ಬಡ್ಡಿ ಬಗ್ಗೆ ನಾವು ಹೇಳಬಹುದು, ನಾವು ಇವತ್ತು ತೊಂದರೆಯಲ್ಲಿದ್ದೇವೆ, ನಿಮಗೆ ಕೊಡುವ ಇನ್‌ಸ್ಟಾಲ್‌ಮೆಂಟನ್ನು ಈ ಸಲ ನಮ್ಮಿಂದ ಕೊಡುವುದಕ್ಕಾಗುವುದಿಲ್ಲ. ದಯವಿಟ್ಟು ನಾವು ಅತಿವೃಷ್ಟಿ ಅನಾವೃಷ್ಟಿಯಿಂದ ನರಳುತ್ತಿದ್ದೇವೆ, ಅದಕ್ಕೆ ನೀವು ತಡೆಹಿಡಿಯಿರಿ ಎಂದು ಹೇಳಿ ಮನ ಒಲಿಸಬಹುದು. ಇದು ಅನೇಕ ದೃಷ್ಟಿಯಿಂದ ಈ ಕೆಲಸದಿಂದ ನಮಗೆ ಸಹಾಯವಾಗುತ್ತದೆ. ತಾವು ಈಗಾಗಲೇ ವಿಳಂಬ ಮಾಡಿದ್ದೀರಿ. ವಿಳಂಬ ಮಾಡುವುದರಿಂದ ನಮಗೆ ತಕ್ಷಣ ಅವರು ಕೊಡಬೇಕಾದದ್ದನ್ನು ಕೊಡುವುದಕ್ಕೂ ಆಗಿಲ್ಲ, ಟೀಮೂ ಬಂದಿಲ್ಲ. ಈಗಾಗಲೇ ಆಂಧ್ರದಲ್ಲಿ ಈ ಟೀಮ್ ಬಂದಿದೆ. ಬೇರೆ ಕಡೆ ಹಿಮಾಚಲಪ್ರದೇಶಕ್ಕೆ ಟೀಮ್ ಹೋಗಿದೆ, ನಿಮ್ಮ ಗುಜರಾತಿಗೆ ಟೀಮ್ ಹೋಗಿದೆ. ಏಕೆಂದರೆ ನೆರೆ ಹಾವಳಿಯಿಂದ ಆದಂಥ ಅನಾಹುತದ ಬಗ್ಗೆ ಹೋಗಿದೆ. ಆದರೆ ನಮ್ಮಲ್ಲಿ ಯಾವ ಟೀಮೂ ಬಂದಿಲ್ಲ. ಅತಿವೃಷ್ಟಿಗಾಗಿಯೂ ಬಂದಿಲ್ಲ, ಅನಾವೃಷ್ಟಿಗಾಗಿಯೂ ಬಂದಿಲ್ಲ, ಕೇಂದ್ರ ಸರ್ಕಾರಕ್ಕೂ ಮೆಮೊರಾಂಡಂ ಕೂಡ ಹೋಗಿಲ್ಲ. ನೀವು ಕೂಡ ಹಣವನ್ನು ಬಿಡುಗಡೆ ಮಾಡುತ್ತಿಲ್ಲ ಎಂದಾಗ ಇದಕ್ಕೆ ಪರಿಹಾರ ಹೇಗೆ? ಈ ಎಲ್ಲಾ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳಬೇಕಾಗುತ್ತದೆ. ಮತ್ತು ಏನು ವಿಳಂಬವಾಗಿದೆ, ಇದಕ್ಕೆ ಸಂಪೂರ್ಣವಾದ ಹೊಣೆಯನ್ನು ಕೂಡ ತಾವು ಹೊತ್ತುಕೊಳ್ಳಬೇಕಾಗುತ್ತದೆ. ಅದಕ್ಕೆ ದಯವಿಟ್ಟು ಇದರ ಬಗ್ಗೆ ಸ್ಪಷ್ಟವಾದ ಸರ್ಕಾರದ ನಿಲುವು, ಸರ್ಕಾರದ ಕೆಲಸ ಮತ್ತು ಮುಂದೆ ಯಾವ ರೀತಿಯಾಗಿ ಇದನ್ನು ಪರಿಹಾರ ಮಾಡುತ್ತೀರಿ ಎನ್ನುವುದರ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು ಎಂದು ಹೇಳಿ ತಮ್ಮ ಮುಖಾಂತರ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ಈಗ ಸಭೆಯನ್ನು ಮುಂದೂಡಿ ಪುನಃ ಒಂದು ಗಂಟೆ ನಂತರ ಅಂದರೆ 3. 15ಕ್ಕೆ ಸೇರುವುದು.

(ಸಭೆಯು 2-15ಕ್ಕೆ ಮುಕ್ತಾಯಗೊಂಡಿತು. ಮತ್ತೆ 3-15 ಕ್ಕೆ ಪುನಃ ಸಭೆಯು ಸಮಾವೇಶಗೊಳ್ಳುವುದು).

(ಸಭೆಯು ಮಧ್ಯಾಹ್ನ 3-20 ಪ್ರಾರಂಭವಾಯಿತು. ಉಪಾಧ್ಯಕ್ಷರು ಆಸನದಲ್ಲಿ ಉಪಸ್ಥಿತರಿದ್ದರು)

(6) ನಿಯಮ 67ರ ಮೇರೆಗೆ ಮುಂದುವರಿದ ಚರ್ಚೆ

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪಾಧ್ಯಕ್ಷರೇ, ಈ ನಿಲುವಳಿ ಸೂಚನೆ ಮೂಲಕ ರಾಜ್ಯದ ರೈತಾಪಿ ಜನ ಏನು ಬರಗಾಲ ಮತ್ತು ಅತಿವೃಷ್ಟಿಯನ್ನು ಎದುರಿಸುತ್ತಿದ್ದಾರೆ ಅದರ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಯೋಚನೆ ಮಾಡಿದ್ದೆವು. ಆದರೆ ಅಧ್ಯಕ್ಷರು ಅದನ್ನು ಬದಲಾಯಿಸಿ ನಿಯಮ 69ರ ಪ್ರಕಾರ ಚರ್ಚೆಗೆ ತೆಗೆದುಕೊಂಡಿದ್ದಾರೆ. ನಾನು ಅನೇಕ ವರ್ಷಗಳಿಂದ ಇಲ್ಲಿ ನೋಡುತ್ತಿದ್ದೇನೆ, ಮಾತನಾಡುತ್ತಿದ್ದೇನೆ, ಈ ಅತಿವೃಷ್ಟಿ ಬರಗಾಲಕ್ಕೆ ತುತ್ತಾದಂತಹ ರೈತನ ಬಗ್ಗೆ ಮಾತನಾಡುವುದು ಇದು ಕೇವಲ ಅರಣ್ಯರೋಧನವಾಗಿದೆ. ಯಾವುದೇ ರೀತಿಯ ಒಂದು ಪರಿಹಾರ ಆ ರೈತ ಸಮೂದಾಯಕ್ಕೆ ಪ್ರಾಮಾಣಿಕವಾಗಿ ಕೊಡುವಂತಹ ಪ್ರಯತ್ನವನ್ನು ನಾವು ಮಾಡಲಿಲ್ಲ ಅಥವಾ ಕೇಂದ್ರ ಸರ್ಕಾರದ ಮನವೊಲಿಸಿ ಅದನ್ನು ಮಾಡಿಸುವಂತಹ ಪ್ರಯತ್ನವು ಸಹ ಆಗಲಿಲ್ಲ. ನಾನು ನೊಂದು ಒಂದು ಮಾತನ್ನು ಹೇಳುತ್ತೇನೆ, ಈ ನಿಮಿಷದವರೆಗೆ ಕರ್ನಾಟಕ ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ರೈತರು ತೀವ್ರವಾದ ಬರಗಾಲವನ್ನು ಎದುರಿಸುತ್ತಿದ್ದಾರೆ, ಎಲ್ಲೆಲ್ಲಿ ಇನ್ನು ಬಿತ್ತನೆ ಆಗಿಲ್ಲ ಈ ಬಾರಿ ಮಾನ್ಸೂನ್ ತಡವಾಗಿ ಬಂದಿದ್ದರಿಂದ ಎಲ್ಲಿ ನಾವು ಬಿತ್ತನೆ ಮಾಡಿದ್ದೆವು ಆ ಬಿತ್ತನೆ ಅದು ಹೆಸರು ಇರಬಹುದು, ಉದ್ದು ಇರಬಹುದು, ಕಡಲೆ ಇರಬಹುದು ಅದು ಕೈಗೆ ಬರಲಿಲ್ಲ, ಅದು ನಾಶವಾಯಿತು. ಇನ್ನು ಅತಿವೃಷ್ಟಿಯಿಂದ ಏನೇನು ನಾಶವಾಗಿದೆ ಈ ವಿವರ ಇವತ್ತಿಗೂ ಸಹ ನಮ್ಮ ರೆವಿನ್ಯೂ ಮಂತ್ರಿಗಳ ಹತ್ತಿರ, ಅವರ ಅಧಿಕಾರಿಗಳ ಹತ್ತಿರ ಇಲ್ಲ. ಯಾವುದೇ ಜಿಲ್ಲೆಯಲ್ಲಿ ಆ ಜಿಲ್ಲಾಧಿಕಾರಿ ತನ್ನ ರೆವಿನ್ಯೂ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಓಡಾಟ ಮಾಡಿ ಅವನಿಗೆ ಸೂಚನೆ ಕೊಟ್ಟು, ವಾಸ್ತವಿಕ ಸ್ಥಿತಿ ಏನು ಇದೆ ಅದನ್ನು ತಿಳಿದುಕೊಳ್ಳುವಂತಹ ಪ್ರಯತ್ನವನ್ನು ಬಹುತೇಕ ಕಡೆ ನಮ್ಮ ರೆವಿನ್ಯೂ ಅಧಿಕಾರಿಗಳು ಮಾಡಲಿಲ್ಲ. ಹೀಗಾಗಿ ನಮ್ಮ ಮಂತ್ರಿಗಳ ಮುಂದೆ ಕರ್ನಾಟಕ ರಾಜ್ಯದಲ್ಲಿ ಸುಮಾರು 70 ರಿಂದ 75 ತಾಲ್ಲೂಕುಗಳಲ್ಲಿ ತೀವ್ರತರವಾದ ಬರಗಾಲದ ಪರಿಸ್ಥಿತಿ ಇದೆ. ಅದರಲ್ಲಿ ಸುಮಾರು 45ರಿಂದ 50 ತಾಲ್ಲೂಕುಗಳಲ್ಲಿ ಬಿತ್ತನೆ ಸಹಿತ ಪ್ರಾರಂಭವಾಗಿಲ್ಲ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಈ ಕಡೆ ಯಥೇಚ್ಛವಾಗಿ ಮಳೆಯಾಗಿದೆ, ಜಲಾಶಯಗಳು ತುಂಬಿವೆ, ಕೆರೆ-ಕಟ್ಟೆಗಳು ತುಂಬಿವೆ. ಹೀಗಾಗಿ ನಮ್ಮ ಸರ್ಕಾರಕ್ಕೆ ವಾಸ್ತವಿಕವಾಗಿ ಅತಿವೃಷ್ಟಿಯಿಂದಾಗಲಿ, ಬರಗಾಲದಿಂದಾಗಲೀ ಸಿಕ್ಕಂಥ ರೈತನ

ವಾಸ್ತವಿಕ ಸ್ಥಿತಿಯನ್ನು ಅರಿತುಕೊಂಡು ಪರಿಹಾರ ಒದಗಿಸಿಕೊಡುವಂತಹ ಯಾವುದೇ ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಮಾಡಲಿಲ್ಲ. ಹಿಂದಿನ ವರ್ಷವು ಸಹ ಅದು ಗುಲ್ಬರ್ಗಾ ಜಿಲ್ಲೆಯಲ್ಲಿ ಬೆಳದಂತಹ ತೊಗರಿ ಇರಬಹುದು, ಆಲುಗಡ್ಡೆ ಇರಬಹುದು, ಇರುಳ್ಳಿ ಇರಬಹುದು, ಜೋಳ ಇರಬಹುದು ಅದಕ್ಕೆ ಸರಿಯಾದ ಬೆಲೆ ಸಿಗಲಿಲ್ಲ. ಹೀಗಾಗಿ ರೈತ ತತ್ತರಿಸಿ ಹೋದ. ಈ ಬಾರಿ ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೋಲಾರ, ತುಮಕೂರು ಜಿಲ್ಲೆ, ತುಮಕೂರು ಜಿಲ್ಲೆಯನ್ನಂತೂ, ಬರಗಾಲ ಪೀಡಿತ ಜಿಲ್ಲೆ ಎಂದು ಘೋಷಣೆ ಮಾಡಬೇಕೆಂದು ತುಮಕೂರು ಜಿಲ್ಲಾ ಪರಿಷತ್ತಿನವರು ಒಕ್ಕರಲಿನಿಂದ ತೀರ್ಮಾನ ಮಾಡಿದ್ದಾರೆ. ಈ ರೀತಿಯ ಧಾರಣ ಪರಿಸ್ಥಿತಿ ಒಂದು ಕಡೆ ಇದೆ. ಇನ್ನೊಂದು ಕಡೆ ಇವತ್ತು ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಬೀದರ್ ಬೆಳಗಾಂ ಈ ಭಾಗದಲ್ಲಿ ನಮ್ಮ ನಿರೀಕ್ಷೆಗೆ ಮೀರಿ ಕೆಲವುಕಡೆ ಮಳೆಯಾಗಿ ತೀವ್ರತರವಾದ ಅತಿವೃಷ್ಟಿಯಾಗಿ, ಬೆಳೆಗಳು. ನಾಶವಾಗಿ, ರಸ್ತೆಗಳು ಕೊಚ್ಚಿ ಹೋಗಿ, ಜಾನುವಾರುಗಳು ಸತ್ತು, ಮನೆಗಳು ಬಿದ್ದು ಸರ್ವನಾಶವಾದ ಪರಿಸ್ಥಿತಿ ಇದೆ. ಶಿಕಾರಿಪುರದಲ್ಲಿ ಅತಿವೃಷ್ಟಿಯಾಗಿ ಏನೇನು ಬೆಳೆಗಳು ನಾಶವಾಗಿವೆ, ಅವುಗಳ ಸಂಪೂರ್ಣ ವಿವರವನ್ನು ನಾನು ತಮಗೆ ಕೊಟ್ಟಿದ್ದೇನೆ. ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಬಂದು ನೋಡಿ ಹೋದ ವರದಿಯನ್ನು ನಾನು ತಮಗೆ ಕೊಟ್ಟಿದ್ದೇನೆ. ಸನ್ಮಾನ್ಯ ಕಂದಾಯ ಮಂತ್ರಿಗಳಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ, ದಯಮಾಡಿ ತಮ್ಮ ಗಮನ ಯಾವ ಕಡೆ ಇರಬೇಕು ಎಂದರೆ, ಯಾವ ರೈತ ಕೇವಲ ಮಳೆ ಆಶ್ರಯದಲ್ಲಿ ಕೆರೆ-ಕಟ್ಟೆಗಳನ್ನು ಅವಲಂಬಿಸಿಕೊಂಡು ಬೆಳೆಯನ್ನು ಬೆಳೆಯುತ್ತ ಇದ್ದಾನೋ, ಯಾವ ರೈತ ಬೋರ್‌ವೆಲ್‌ಗಳನ್ನು ತೆಗೆದು ಅಲ್ಪ-ಸ್ವಲ್ಪ ಬೆಳೆಯನ್ನು ಮಾಡಿಕೊಂಡು ಬದುಕಲು ಪ್ರಯತ್ನ ಮಾಡುತ್ತಿದ್ದಾನೋ, ಅವನ ಬಗ್ಗೆ ಇವತ್ತು ಸರ್ಕಾರ ಯಾವುದೇ ಕಾಳಜಿಯನ್ನು ವಹಿಸುತ್ತಾ ಇಲ್ಲ. ನಮ್ಮ ದುರಾದೃಷ್ಟ, ಬ್ರಿಟೀಷರು ಕೆರೆ-ಕಟ್ಟೆಗಳನ್ನು ಕಟ್ಟಿ ಹೋದರು. ಆದರೆ ಇವರು ಹೊಸ ಕೆರೆಗಳನ್ನು ಕಟ್ಟುವುದು ಬೇಡ, ಇರುವ ಕೆರೆಗಳು ಅರ್ಧಂಬರ್ಧ ಮುಚ್ಚಿಕೊಂಡು ಹೋಗಿವೆ. ಅದರ ಹೂಳು ತೆಗೆಯುವ ಪ್ರಾಮಾಣಿಕ ಪ್ರಯತ್ನದ ಬಗ್ಗೆ ಅನೇಕ ಬಾರಿ ಇಲ್ಲಿ ಚರ್ಚೆ ಮಾಡಿದ್ದೇವೆ, ಅದಕ್ಕಾಗಿ ಬಜೆಟ್ಟನಲ್ಲಿ ಬೇರೆ ಹಣವನ್ನು ತೆಗೆದಿಟ್ಟು ಆ ಕೆರೆಯನ್ನು ಉಳಿಸಿ ಆ ತೂಬುರಿಪೇರಿ ಮಾಡಿ ನೀರು ನಿಲ್ಲುವ ಹಾಗೆ ಮಾಡಿದರೆ ಆ ವಾಟರ್ ಲೇವಲ್ ಜಾಸ್ತಿ ಯಾಗುತ್ತದೆ ಇದರಿಂದ ಅನುಕೂಲವಾಗುತ್ತದೆ. ಇದರ ಕಡೆಯು ಸಹ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಿಲ್ಲ, ಅದರ ಅಂಕಿ-ಅಂಶಗಳು ವರದಿಗಳು ಎಷ್ಟರಮಟ್ಟಿಗೆ ಇವೆಯೋ ಗೊತ್ತಿಲ್ಲ. ಹಿಂದೆ ಮೂರು ವರ್ಷಗಳಿಂದ ಹೇಳುತ್ತಿದ್ದೀರಿ ಕೆರೆ-ಕಟ್ಟೆಗಳ ಹೂಳು ತೆಗೆಯುತ್ತೇವೆ. ಕೋಲಾರದಲ್ಲಿ ಆಂದೋಲನ ಶುರುಮಾಡಿದ್ದೇವೆ, ವಿಶೇಷ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೀರಿ. ಆದರೆ ಅದು ಬೇರೆ ಎಲ್ಲೂ ಕಾರ್ಯರೂಪಕ್ಕೆ ಬರಲಿಲ್ಲ ಎನ್ನುವ ಮಾತನ್ನು

ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಇವತ್ತು ರೈತನ ಸ್ಥಿತಿ ಯಾವ ರೀತಿ ಇದೆ ಎನ್ನುವುದು ಒಂದು ಸಣ್ಣ ಉದಾಹರಣೆ ಹೇಳುತ್ತೇನೆ, ಇವತ್ತು ಆಲುಗಡ್ಡೆ, ಈರುಳ್ಳಿ ಬಗ್ಗೆ ಕೂಗು ಕೇಳುತ್ತಿದ್ದೀರಾ, ಅದಕ್ಕೆ ಒಂದು ಬೆಂಬಲ ಬೆಲೆಯನ್ನು ಘೋಷಣೆ ಮಾಡುತ್ತೇವೆ ಎಂದು ಒಂದು ಕಡೆ ಹೇಳುತ್ತಿದ್ದೀರಿ. ಮತ್ತೊಂದು ಕಡೆ ಹೋದ ವರ್ಷ ಗುಲ್ಬರ್ಗಾದಲ್ಲಿ 1100 ರೂ.ಗೆ ಒಂದು ಕ್ವಿಂಟಾಲ್ ತೊಗರಿ ಬೇಳೆ ಮಾರಾಟವಾಗಿದೆ. ಅದಕ್ಕಿಂತ ಹಿಂದಿನ ವರ್ಷ ಸುಮಾರು 2200 ಅಥವಾ 2300ಕ್ಕೆ ಮಾರಾಟವಾಗಿದೆ. ಅರ್ಧ ಬೆಲೆ ಅವನಿಗೆ ಸಿಗಲಿಲ್ಲ. ಅವನು ಖರ್ಚು ಮಾಡಿದ ಗೊಬ್ಬರ ಮತ್ತು ಬಿತ್ತನೆ ಬೀಜಗಳ ಬೆಲೆ ಅವನಿಗೆ ಸಿಗದೆ ಆತ ಬೀದಿಪಾಲು ಆಗಿರುವ ಪರಿಸ್ಥಿತಿಯನ್ನು ಸಹ ನಾವು ಕಾಣುತ್ತಿದ್ದೇವೆ. ಯಾವ ರೈತ ಬರಗಾಲಕ್ಕೆ ತುತ್ತಾಗಿ ಅವನು ಬಿತ್ತನೆ ಮಾಡಿ ಗೊಬ್ಬರ ಹಾಕಿ, ಎಲ್ಲ ಬೆಲೆ ಹಾಳು ಮಾಡಿಕೊಂಡಿದ್ದಾನೆ, ಅವನ ಬಗ್ಗೆ ಯಾವುದೇ ಚಿಂತನೆ ಮಾಡಲು ಸರ್ಕಾರ ಇವತ್ತು ಸಿದ್ಧವಾಗಿಲ್ಲ, ಆ ರೀತಿಯ ಪರಿಸ್ಥಿತಿ ಇವತ್ತು ಇದೆ. ಈ ಪ್ರಕೃತಿ ವಿಕೋಪವಾದಂಥ ಸಂದರ್ಭದಲ್ಲಿ ನಾವು ಏನು ಮಾಡುತ್ತೇವೆ ಎಂದರೆ, ಅದರ ಬಗ್ಗೆ ಚರ್ಚೆ ಮಾಡುತ್ತೇವೆ, ತಾವು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕಳುಹಿಸುತ್ತೀರಾ, ರಾಜ್ಯ ಸರ್ಕಾರದ ಅಧಿಕಾರಿಗಳು ಒಂದು ಸುತ್ತು ಹೋಗಿ ಬರುತ್ತೀರಾ. ಕೇಂದ್ರ ಸರ್ಕಾರದವರು ಬಂದು ನೋಡಿಕೊಂಡು ಹೋಗುತ್ತಾರೆ. ಹೀಗೆ ಮೂರು-ನಾಲ್ಕು ತಿಂಗಳು ಕಳೆದುಹೋಗುತ್ತದೆ. ಅಷ್ಟರಲ್ಲಿ ಮಳೆಗಾಲ ಮುಗಿದುಹೋಗುತ್ತದೆ. ಸಕಾಲಕ್ಕೆ ಯಾವುದೇ ರೀತಿಯ ಪರಿಹಾರ ಇದುವರೆಗೆ ಸಿಗಲಿಲ್ಲ ಅವನು ಉಳಿಯುವಂಥ ಪ್ರಯತ್ನ ತಾವು ಮಾಡಲಿಲ್ಲ. ಇವತ್ತಿನವರೆಗೆ ಓವರೇಟ್ ಗ್ರ್ಯಾಂಟ್ ಒಂದು ರೂ.ಯನ್ನು ಸಹಿತ ಕೇಂದ್ರ ಸರ್ಕಾರ ಕೊಡಲಿಲ್ಲ. ಅನೇಕ ನಾಲ್ಕಾರು ವರ್ಷಗಳಿಂದ ನೀವು ಮನವಿಯನ್ನು ಸಲ್ಲಿಸುತ್ತಾ ಬಂದಿರೇ ಹೊರತು, ಆ ಕೆಲಾಮಿಟಿ ರಿಲೀಫ್ ಫಂಡ್‌ನಿಂದ ನೀವು ಏನಾದರೂ ಕೇಳಿದಾಗ ಹಣಕೊಡುತ್ತಾರೆ, ಇನ್ನು ಹೆಚ್ಚು ಲಾಸ್ ಆದರೆ ಮುಂದಿನ ವರ್ಷದನ್ನು ಮುಂಗಡವಾಗಿ ಕೊಡುತ್ತಾರೆ ಹೊರತು, ಬೇರೆ ಯಾವ ರೀತಿಯಲ್ಲಿ ನೆರವು ಈ ರಾಜ್ಯದ ರೈತ ಸಮೂಹ ಈ ತರಹ ಸಂಕಟಕ್ಕೆ ಸಿಕ್ಕಾಗ ಪರಿಹಾರ ಕೊಡುವಂತಹ ಪ್ರಯತ್ನ ಆಗಲಿಲ್ಲ. ತಾವು ಸಹ ಬೆಳೆ ನಾಶವಾದಂಥ ಸಂದರ್ಭದಲ್ಲಿ ವಾಸ್ತವಿಕ ಸ್ಥಿತಿಯನ್ನು ಅರ್ಥಮಾಡಿಕೊಂಡು ಪುಕ್ಕಟೆ ಬೇಡ, ಕೊನೆಯ ಪಕ್ಷ ಈ ಬೆಳೆ ನಾಶವಾದಾಗ ಮುಂದಿನ ಬೆಳೆ ಬೆಳೆಯಲು ಉಚಿತವಾಗಿ ಗೊಬ್ಬರ ಮತ್ತು ಬಿತ್ತನೆ ಬೀಜ ಕೊಡಲು ಆಗದಿದ್ದರೆ, ಯಾವುದಾದರೊಂದು ಮಾರ್ಕೆಟ್ ದರದಲ್ಲಿ ಕೊಟ್ಟು ಆ ಮೇಲೆ ಅವನು ಬೆಳೆದ ಮೇಲೆ ವಾಪಸ್ಸು ತೆಗೆದುಕೊಳ್ಳುವಂತಹ ಯಾವುದೇ ಪ್ರಯತ್ನ ಆಗಲಿಲ್ಲ. ಇವತ್ತು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ತಮಗೆ ನಾನು ಒಂದು ಸಲಹೆ ಕೊಡುತ್ತೇನೆ. ತಮಗೆ ಸಾಧ್ಯವಾದರೆ ಇದನ್ನು ನಿಮ್ಮ ಕಾಲದಲ್ಲಾದರೂ ಮಾಡಿ. ಇವತ್ತು ಸಾವಿರಾರು ಕೋಟಿ ರೂಪಾಯಿಗಳನ್ನು ಈ ನಾಡಿನ ಜನರಿಗೆ ನಾವು ಖರ್ಚು ಮಾಡುತ್ತೇವೆ. ನೀವು ಈ ವರ್ಷದಿಂದ ಬಜೆಟ್‌ನಲ್ಲೇ ಅಲೋಕೇಶನ್ ಮಾಡಿ ಒಂದು ನೂರು ಕೋಟಿ

ರೂಪಾಯಿಯನ್ನು ಕೆಲಾಮಿಟಿ ಫಂಡ್ ಎಂದು ತೆಗೆದಿಡಲು ಸಾಧ್ಯವೇ? ಆ ರೀತಿ ನೀವು ಹಣವನ್ನು ಈ ವರ್ಷ ತೆಗೆದಿಟ್ಟು, ಕೇಂದ್ರ ಸರ್ಕಾರ, ಆ ಸರ್ಕಾರ, ಈ ಸರ್ಕಾರ ಎಂದು ಕಾಯ್ದುಕೊಂಡು ಕುಳಿತುಕೊಳ್ಳುವುದಕ್ಕೆ ಮುಂಚೆ, ಈ ರೀತಿ ನ್ಯಾಚುರಲ್ ಕೆಲಾಮಿಟಿ ಫಂಡ್ ಎಂದು ಒಂದು ನೂರು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದರೆ ಕೂಡಲೇ ಆಯಾಯಾ ಜಿಲ್ಲಾಧಿಕಾರಿಗಳ ಮೂಲಕ ತಕ್ಷಣ ರಿಲೀಫ್ ಕೊಟ್ಟಹಾಗೆ ಆಗುತ್ತದೆ, ರೈತ ಬದುಕಿಕೊಳ್ಳುತ್ತಾನೆ. ಇವತ್ತು ನಾವು ಇದಕ್ಕೆ ಒಂದು ನೂರು ಕೋಟಿ ತೆಗೆದಿಟ್ಟು, ಅದರಲ್ಲಿ 40-50 ಕೋಟಿ ಖರ್ಚಾದರೆ ಮುಂದಿನ ವರ್ಷ ಅದನ್ನು ಭರ್ತಿ ಮಾಡಿದರೆ ಒಳ್ಳೆಯದು. ಇದರ ಜೊತೆಗೆ ಕೇಂದ್ರ ಸರ್ಕಾರದಿಂದ ಬರುತ್ತದೆ, ಕೆಲಾಮಿಟಿ ರಿಲೀಫ್ ಫಂಡ್ ಸಹಾ ಬರುತ್ತಿರುತ್ತದೆ. ನಾನು ಒತ್ತಾಯ ಮಾಡುತ್ತಿದ್ದೇನೆ, ಇದರ ಜೊತೆಗೆ ಈ ವರ್ಷದಿಂದ ದಯಮಾಡಿ ಕೆಲಾಮಿಟಿ ರಿಲೀಫ್ ಫಂಡ್ ಎಂದು ಒಂದು ನೂರು ಕೋಟಿ ರೂಪಾಯಿಯನ್ನು ತಾವು ತೆಗೆದಿಟ್ಟು, ಈರೀತಿ ಬರಗಾಲ, ಅತಿವೃಷ್ಟಿಗೆ ತುತ್ತಾದಂಥ ರೈತನ ನೆರವಿಗೆ ಸರ್ಕಾರ ಬರುವಂಥ ಸರಿಯಾದಂಥ ಒಂದು ನಿಲುವನ್ನು ತಾವು ತೆಗೆದುಕೊಳ್ಳಬೇಕು ಎನ್ನುವಂಥ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ನಾನು ವಿನಂತಿಯನ್ನು ಮಾಡುತ್ತೇನೆ, ತಾವು ದಯಮಾಡಿ ಒಂದು ಅಂಕಿ ಅಂಶವನ್ನು ಕೊಡಲು ಸಾಧ್ಯವೇ? ಬಹಳ ಹಳೆಯ ವರ್ಷಗಳದ್ದನ್ನು ನಾನು ಹೇಳುವುದಿಲ್ಲ. 1996-97ನೇ ಸಾಲಿನಲ್ಲಿ ನಮ್ಮ ರಾಜ್ಯದಲ್ಲಿ ಅತಿವೃಷ್ಟಿ, ಅನಾವೃಷ್ಟಿಯ ಸಂದರ್ಭಗಳಲ್ಲಿ ನಾವು ಎಷ್ಟು ಖರ್ಚು ಮಾಡಿದ್ದೆವು. ಕೇಂದ್ರ ಸರ್ಕಾರ ಅದಕ್ಕೆ ಕೊಡಬೇಕಾದಂಥ ಹಣದಲ್ಲಿ ಎಷ್ಟು ಕೊಟ್ಟಿದೆ? ನೀವೇ ಒಂದುಕಡೆ ಅಂಕಿಅಂಶಗಳನ್ನು ಹೇಳಿರುವ ಪ್ರಕಾರ, 1996-97ರಲ್ಲಿ ಒಂದು ಪೈಸೆಯಾ ಬರಲಿಲ್ಲ ಎಂದು ಹೇಳಿದ್ದೀರಿ. 27-7-97ರಂದು ಒಂದು ಪ್ರೆಸ್ ಮೀಟ್ ಮಾಡಿ, ಕೆಲಾಮಿಟಿ ರಿಲೀಫ್ ಫಂಡ್‌ಗೆ 8 ಕೋಟಿ, 25 ಲಕ್ಷ ರೂಪಾಯಿ ಬಂದಿದೆ ಎನ್ನುವಂಥ ಒಂದು ಮಾತು ಪತ್ರಿಕೆಯಲ್ಲಿ ಬಂದಿದೆ. ಅದು 1996-97ನೇ ಸಾಲಿನಲ್ಲಿ ಎಷ್ಟು ಬಂದಿದೆ ಎನ್ನುವುದನ್ನು ತಾವು ಉತ್ತರ ಕೊಡುವಂಥ ಕಾಲದಲ್ಲಿ ಹೇಳಬೇಕು.

ಶ್ರೀ ರಮೇಶ್ ಸಿ.ಜಿಗಜಿಣಗಿ: ಎಕ್ಸ್‌ಟ್ರಾ ಗ್ರ್ಯಾಂಟ್ ಯಾವುದೂ ಬಂದಿಲ್ಲ. 130 ಕೋಟಿಯನ್ನು ಕೇಳಿದ್ದೆವು. ಅದರ ಪ್ರಕಾರ ಯಾವುದೇ ಗ್ರ್ಯಾಂಟ್ ಬಂದಿಲ್ಲ. ಆದರೆ ಪ್ರತಿವರ್ಷ ನಮಗೆ 43 ಕೋಟಿ ರೂಪಾಯಿ ಕೊಡಬೇಕು ಎಂದು ಏನು ಫಿಕ್ಸ್ ಮಾಡಿರುತ್ತಾರೆ ಅದರಲ್ಲೇ 8 ಕೋಟಿ 25 ಲಕ್ಷ ರೂಪಾಯಿ ಬಂದಿರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ: ತಮ್ಮ ಪ್ರಕಾರವೇ, ನಮಗೆ ಪ್ರತಿವರ್ಷ ಕೊಡಬೇಕಾದಂಥ 43 ಕೋಟಿ ರೂಪಾಯಿಗಳಲ್ಲಿ 1996-97ನೇ ಸಾಲಿಗೆ ಇದುವರೆಗೆ ಬಂದಿರುವ ಹಣ ಕೇವಲ 8 ಕೋಟಿ 25 ಲಕ್ಷ. ಅಂದರೆ ಯಾವರೀತಿ ಕೇಂದ್ರ ಸರ್ಕಾರ ಮಾಡುತ್ತಿದೆ. ಕೆಲಾಮಿಟಿ ರಿಲೀಫ್ ಫಂಡ್‌ಗೆ ತೆಗೆದಿಟ್ಟಿದ್ದನ್ನು ಘೋಷಣೆ ಮಾಡಿದ

ಮೇಲೂ ಸಹ, 1996-97ನೇ ಸಾಲಿನಲ್ಲಿ 66 ಕೋಟಿ ಕೊಡುವುದಕ್ಕೆ ಇದುವರೆಗೆ 8 ಕೋಟಿ 25 ಲಕ್ಷ ಮಾತ್ರ ಬಿಡುಗಡೆಯಾಗಿದೆ ಎನ್ನುವುದಾದರೆ, ಇದು ಎಷ್ಟರ ಮಟ್ಟಿಗೆ ರಾಜ್ಯ ಸರ್ಕಾರಕ್ಕೆ ಶೋಭೆ ತರುವಂಥಾದ್ದು? ನೀವು ಕೇಂದ್ರಸರ್ಕಾರಕ್ಕೆ ಏಕೆ ಒತ್ತಾಯ ಮಾಡಲಿಲ್ಲ? ಹೋದ ವರ್ಷವೂ ನಾವು ಸಂಕಷ್ಟದಲ್ಲಿ ಸಿಕ್ಕಿಕೊಂಡಿದ್ದೆವು. ಹಿಂದೆಂದೂ ಕಾಣದಂಥ ವಿಚಿತ್ರವಾದ ಪರಿಸ್ಥಿತಿಯಲ್ಲಿ ನಾವು ಸಿಕ್ಕಿಕೊಂಡಿದ್ದೆವು. ನಮಗೆ ಅಲೋಕೇಟ್ ಮಾಡಿದಂಥ ಕೆಲಾಮಿಟಿ ರಿಲೀಫ್ ಫಂಡ್‌ನ್ನೂ ಸಹ ತಾವು ಪಡೆಯುವುದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ ಎನ್ನುವುದಾದರೆ, ಹೋದವರ್ಷ, ಬರಗಾಲಕ್ಕೆ, ಅತಿವೃಷ್ಟಿಗೆ ತುತ್ತಾದಂಥ ರೈತರ ಪರಿಸ್ಥಿತಿ ಏನು? ರೈತರ ಮಕ್ಕಳಾಗಿ ನಾವು ಇಲ್ಲಿ ಬಂದು ಕುಳಿತಿದ್ದೇವಲ್ಲ, ಅವನ ಸ್ಥಿತಿ ಹೇಗಿರಬಹುದು, ಅವನು ಯಾವ ಪರಿಸ್ಥಿತಿಯಲ್ಲಿರಬಹುದು ಎನ್ನುವುದನ್ನು ತಾವೇ ಯೋಚನೆ ಮಾಡಿ. ಕೇಂದ್ರಸರ್ಕಾರಕ್ಕೆ ಹಣ ಬಿಡುಗಡೆ ಮಾಡಬೇಕು ಎನ್ನುವ ಮನಸ್ಸಿಲ್ಲವೋ ಅಥವಾ ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತಂದು ಈ ಹಣವನ್ನು ಖರ್ಚು ಮಾಡಬೇಕು ಎನ್ನುವ ಕಳಕಳಿ ಇಲ್ಲವೋ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅದಕ್ಕಾಗಿ ನಾನು ಇವತ್ತು ತಮಗೆ ಒತ್ತಾಯ ಮಾಡುತ್ತಿದ್ದೇನೆ, ಈವರೆಗೆ ಕೇಂದ್ರ ಸರ್ಕಾರ 1996-97ನೇ ಸಾಲಿನಲ್ಲಿ, ತಾವೇ ಹೇಳಿದ ಪ್ರಕಾರ 8 ಕೋಟಿ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಉಳಿದ ಹಣ ಇದುವರೆಗೆ ಬಂದಿಲ್ಲ. ಇವತ್ತು ನಾವು ಬರಗಾಲ, ಅತಿವೃಷ್ಟಿಗೆ ಏನು ತುತ್ತಾಗಿದ್ದೇವೆ, ನೀವು ಯಾವ ಯಾವ ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಬರಗಾಲ ಮತ್ತು ಅತಿವೃಷ್ಟಿಗಾಗಿ, ಯಾವಯಾವ ಜಿಲ್ಲೆಯಲ್ಲಿ ಎಷ್ಟು ಹಣವನ್ನು ನಿಮ್ಮ ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡಿದ್ದಾರೆ? ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಹಣ ಖರ್ಚಾಗಿದೆ? ಈ ಮೂರೂ ಅಂಕಿಅಂಶಗಳನ್ನು ತಾವು ಕೊಡಬೇಕು. ಆಗ ನಿಮಗೆ ವಾಸ್ತವಿಕ ಸ್ಥಿತಿ ಏನು ಎಂದು ನಿಮಗೆ ಅರ್ಥವಾಗುತ್ತದೆ. ಉದಾಹರಣೆಗೆ, ಶಿವಮೊಗ್ಗ ಜಿಲ್ಲಾಧಿಕಾರಿಗಳ ಹತ್ತಿರ ನಾನು ಮೊನ್ನೆ ಮಾತನಾಡಿದೆ. ನಮ್ಮನ್ನು ಏಕೆ ಕತ್ತಲೆಯಲ್ಲಿ ಇಡುತ್ತೀರಿ? ನಮ್ಮನ್ನು ಏಕೆ ನೀವು ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲ? ಏಕೆ ಈ ರೀತಿ ಬೇಜವಾಬ್ದಾರಿ ಹೇಳಿಕೆಯನ್ನು ಕೊಡುತ್ತೀರಿ? ಎಂದು ನನಗೆ ಅರ್ಥವಾಗಲಿಲ್ಲ. ತಾವು ಏನು ಹೇಳಿದಿರಿ? ಯಡಿಯೂರಪ್ಪನವರೇ ಕೆಲವು ಜಿಲ್ಲೆಗಳಿಗೆ ಒಂದೊಂದು ಕೋಟಿ ರೂಪಾಯಿಗಳ ಕೆಲಾಮಿಟಿ ರಿಲೀಫ್ ಫಂಡ್‌ಅನ್ನು ಕೊಟ್ಟಿದ್ದೇವೆ, ಶಿವಮೊಗ್ಗ ಜಿಲ್ಲೆಗೂ ಒಂದು ಕೋಟಿಯನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದಿರಿ. ನಿನ್ನೆಯಲ್ಲ ಮೊನ್ನೆ ನಾನು ಜಿಲ್ಲಾಧಿಕಾರಿಗಳ ಹತ್ತಿರ ಮಾತನಾಡಿದಾಗ, ಅವರು ಹೇಳುತ್ತಾರೆ, ಯಡಿಯೂರಪ್ಪನವರೇ ಒಂದು ಕೋಟಿ ಮಂಜೂರಾಗಿದೆ, ಆದರೆ ಬಿಡುಗಡೆಯಾಗಿರುವುದು ಕೇವಲ 50 ಲಕ್ಷ ಎಂದು. 50 ಲಕ್ಷದಲ್ಲಿ 10 ಲಕ್ಷವನ್ನು ಯಾವುದಾದರೂ ತೊಂದರೆಗಳಾದರೆ ಬೇಕು ಎಂದು ಉಳಿಸಿದ್ದೇವೆ. 10 ಲಕ್ಷ ರೂಪಾಯಿಯನ್ನು ಈ ರೀತಿ ಇಟ್ಟುಕೊಂಡಿದ್ದೇವೆ. ಇನ್ನುಳಿದ 40 ಲಕ್ಷವನ್ನು ಶಿವಮೊಗ್ಗ ಜಿಲ್ಲೆಯ ಎಲ್ಲ ತಾಲ್ಲೂಕುಗಳ ಎಲ್ಲಾ ಇಲಾಖೆಗೆ, ಅಂದರೆ, ನೀರಾವರಿ,

ಲೋಕೋಪಯೋಗಿ, ಜಿಲ್ಲಾ ಪರಿಷತ್ತು ಎಲ್ಲಕ್ಕೂ ಸೇರಿಸಿ 40 ರೂಪಾಯಿಯನ್ನು ಬಿಡುಗಡೆ ಮಾಡಿ ನಾನು ಹಂಚಿದ್ದೇನೆ ಎಂದು ಜಿಲ್ಲಾಧಿಕಾರಿಗಳು ನನ್ನ ಹತ್ತಿರ ಮಾತನಾಡಿದ್ದಾರೆ. ನಾವು ಏನು ಹೇಳಿದೆವು, ಒಂದು ಕೋಟಿಯನ್ನು ಬಿಡುಗಡೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ ನೀವು ಎಲ್ಲರಿಗೂ ಕೊಡಿ ಎಂದು ಹೇಳಿದೆವು. ಅಂದರೆ ಇವತ್ತು ಅತಿವೃಷ್ಟಿಯಾಗಿ, ಕೆರೆಕಟ್ಟೆಗಳು ಒಡೆದುಹೋಗಿ, ರಸ್ತೆಗಳಲ್ಲಿ ವಾಹನ ಸಂಚಾರಗಳ ಓಡಾಟಕ್ಕೆ ಆಗದೇ ವಾಹನಗಳು ನಿಂತು ಹೋಗಿರುವಂಥ ಪರಿಸ್ಥಿತಿ ಇದ್ದಾಗ, ಶಿವಮೊಗ್ಗ ಜಿಲ್ಲೆಯ ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ, ಈ ರೀತಿ ಇದ್ದಾಗ, ನಿಮ್ಮ ಜಿಲ್ಲಾಧಿಕಾರಿ ಭಿಕ್ಷೆಯಂತೆ ಒಂದು ತಾಲ್ಲೂಕಿಗೆ 3-4 ಲಕ್ಷ ರೂಪಾಯಿಯನ್ನು ಒಂದು ಇಲಾಖೆಗೆ ಹಂಚುತ್ತಾನೆ, ಅವನು ಅದನ್ನು ಬೇರೆಬೇರೆ 5-6 ಇಲಾಖೆಗಳಿಗೆ ಹಂಚಬೇಕು. ನೀರಾವರಿಗೆ ಜಿಲ್ಲಾಧಿಕಾರಿ 10 ಲಕ್ಷ ರೂಪಾಯಿ ಕೊಟ್ಟಿದ್ದಾನೆ ಎಂದರೆ, ಅವನು ಇಡೀ ಜಿಲ್ಲೆಯಲ್ಲಿರುವಂಥ ಎಲ್ಲ ತಾಲ್ಲೂಕುಗಳಿಗೆ 2-3 ಲಕ್ಷ ರೂಪಾಯಿ ಬರುತ್ತದೆ. ಇದು ಭಿಕ್ಷೆ ಕೊಟ್ಟಂತಾಗುತ್ತದೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ನೀವು ಈ ಇಲಾಖೆಯನ್ನು ವಹಿಸಿಕೊಂಡ ನಂತರ, ಬಹಳ ಕಳಕಳಿ ಇರುವಂಥ ನಿಮ್ಮಂಥ ವ್ಯಕ್ತಿ ಅಲ್ಲಿಗೆ ಬಂದ ಮೇಲೆ, ನಿಮಗೆ ಇದು ಏನು ಅನ್ನಿಸುತ್ತದೆ? ಏನೋ ಒಂದು ರೀತಿ ನಾವು ಇಲ್ಲಿ ಕೇಳುತ್ತೇವೆ, ನಿಮಗೆ ಮನವಿ ಸಲ್ಲಿಸುತ್ತೇವೆ, ಆಗ ಭಿಕ್ಷೆ ಕೊಟ್ಟಂತೆ ನೀವು ಏನೋ ಸ್ವಲ್ಪ ಕೊಡುವುದರಿಂದ ರೈತರ ಮರ್ಯಾದೆ ಉಳಿಯುತ್ತದೆಯೇ? ಅವನು ಅವನ ಕಾಲ ಮೇಲೆ ನಿಂತು ಬದುಕುವಂಥ ವ್ಯವಸ್ಥೆಯನ್ನು ತಾವು ಮಾಡಬೇಕು ಎನ್ನುವಂಥ ಕಳಕಳಿ ತಮಗೆ ಇದೆಯೇ ನನಗೆ ಅರ್ಥವಾಗಲಿಲ್ಲ. ನಾವಂತೂ ಎಲ್ಲ ರೀತಿಯ ಭಾಷೆಗಳಲ್ಲೂ ಹೇಳಿತಿಳಿಸಿದ ಮೇಲೂ ಸಹ, ಏಕೋ, ಏನೋ ತಾವು ತುಂಬ....

ಶ್ರೀ ರಮೇಶ್ ಸಿ.ಜಿಗಜಿಣಗಿ: ಸರ್ಕಾರಕ್ಕೆ ಕಳಕಳಿ ಇರುವುದರಿಂದಲೇ ಇದುವರೆಗೆ ನ್ಯಾಚುರಲ್ ಕೆಲಾಮಿಟಿ ಫಂಡ್ ಸಲುವಾಗಿ (22.5) ಇಪ್ಪತ್ತೆರಡೂವರೆ ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದೆ. ಅತಿವೃಷ್ಟಿ ಅನಾವೃಷ್ಟಿಯ ಸಲುವಾಗಿ ಸರ್ಕಾರ ಇಲ್ಲಿಯವರೆಗೆ ಇಪ್ಪತ್ತೆರಡೂವರೆ ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದೆ. ಕಳಕಳಿ ಇರುವುದರಿಂದಲೇ ಅಲ್ಲವೇ ಬಿಡುಗಡೆ ಮಾಡಿರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಷ್ಟು ಹಣ ಎಲ್ಲಿ ಖರ್ಚಾಗಿದೆ ಸ್ವಾಮಿ.

ಶ್ರೀ ರಮೇಶ್ ಸಿ.ಜಿಗಜಿಣಗಿ: ನಾನು ಹೇಳಿಕೆ ಮಾಡುವಾಗ ಯಾವಯಾವ ಜಿಲ್ಲೆಗೆ, ಯಾವಯಾವ ತಾಲ್ಲೂಕಿಗೆ ಎಷ್ಟು ಖರ್ಚು ಮಾಡಿದ್ದೇವೆ ಎನ್ನುವ ವಿವರಗಳನ್ನು ಹೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಹೇಳುತ್ತೇನೆ, ತಾವು ಯಾವಾಗಲೂ ಲೆಕ್ಕ ಕೊಡುವಂಥ ಕಾಲದಲ್ಲಿ ಏನು ಮಾಡುತ್ತೀರಿ ಎಂದರೆ, 1996-97, 1997-98ನೇ ಸಾಲು

ಇವುಗಳನ್ನೆಲ್ಲಾ ಸೇರಿಸಿ ಏನೋ ಒಂದು ಅಂಕಿಅಂಶಗಳನ್ನು ಹೇಳುತ್ತೀರಿ. ನನಗೆ ಬೇಕಾಗಿರುವಂಥಾದ್ದು, ಈ ಸಾರಿ ಮಳೆಗಾಲ ಪ್ರಾರಂಭವಾದಮೇಲೆ, ಈ ವರ್ಷದಲ್ಲಿ ಬರಗಾಲ ಮತ್ತು ಅತಿವೃಷ್ಟಿಗಾಗಿ ನೀವು ಯಾವುದೇ ಜಿಲ್ಲೆಯಲ್ಲಿ, ಅದು ದಕ್ಷಿಣ ಕನ್ನಡದಂಥ ವಿಶೇಷವಾದಂಥ ಅತಿವೃಷ್ಟಿಗೆ ತುತ್ತಾಗಿರುವಂಥ ಜಿಲ್ಲೆಗಳನ್ನು ಬಿಟ್ಟರೆ, ಎಲ್ಲೂ ಸಹ ಇದುವರೆಗೆ 50 ಲಕ್ಷ ರೂಪಾಯಿಯನ್ನು ಖರ್ಚು ಮಾಡಿದ್ದೇವೆ ಎನ್ನುವಂಥ ಒಂದು ಜಿಲ್ಲೆ ಇಲ್ಲ. ನೀವು ಜಿಲ್ಲಾಧಿಕಾರಿಗೆ ಕೊಟ್ಟಿದ್ದೀರಿ. ಅವರು ಹಣ ಬಿಡುಗಡೆ ಮಾಡಿಲ್ಲ. ನಾವು ಬಿಡುಗಡೆ ಮಾಡಿಸುತ್ತೇವೆ ಎಂದು ಅವರಿಗೆ ಹೇಳಿ ಬರುತ್ತಿದ್ದೇವೆ. ಇದ್ಯಾವುದೇ ವಾಸ್ತವಿಕ ಸತ್ಯ ಸಂಗತಿಯನ್ನು ಹೇಳುವಂಥ ಸ್ಥಿತಿಯಲ್ಲಿ ತಾವು ಇಲ್ಲ; ತುಮಕೂರು ಜಿಲ್ಲೆಯನ್ನೂ ಸೇರಿದಂತೆ. ತುಮಕೂರು ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಿ ಎಂದು ಜಿಲ್ಲಾ ಪರಿಷತ್ತು ಒಕ್ಕೊರಲಿನ ತೀರ್ಮಾನ ತೆಗೆದುಕೊಂಡಿದೆ. ಇವತ್ತು ಅಲ್ಲಿರುವಂಥ ಕೃಷಿ ಕಾರ್ಮಿಕ ಗತಿ ಏನು? ಎಲ್ಲೂ ಕೆಲಸ ಇಲ್ಲದೇ ಇರುವಂಥ ಕಾಲದಲ್ಲಿ ಆ ಭಾಗದವರು ಮಂಗಳೂರು ಕಡೆ ಹೋದರು, ಮಹಾರಾಷ್ಟ್ರದ ಕಡೆ ಹೋದರು, ಗೋವಾ ಕಡೆ ಹೋದರು. ಇವತ್ತು ನಿಜಕ್ಕೂ ಜಲಾಶಯಗಳು ತುಂಬಿ ತುಳುಕುತ್ತಿರುವಂಥ ಕಾಲದಲ್ಲಿ, ಒಂದು ಆಶಾದಾಯಕವಾದಂಥ ವಾತಾವರಣ ರಾಜ್ಯದಲ್ಲಿ ಇರುವಂಥ ಕಾಲದಲ್ಲಿ, ಯಾರು ನಿಜವಾಗಿ ಸಂಕಷ್ಟಕ್ಕೆ ಸಿಕ್ಕಿದ್ದಾರೆ, ಅತಿವೃಷ್ಟಿಗೆ ಸಿಕ್ಕಿದ್ದಾರೆ, ಬರಗಾಲಕ್ಕೆ ಸಿಕ್ಕಿಕೊಂಡಿದ್ದಾರೆ, ಅವರಿಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಿ ಅವನ ರಕ್ಷಣೆಗೆ ತಾವು ಬರದಿದ್ದರೆ, ಸರ್ಕಾರ ಬದುಕಿದ್ದರೆ ಏನು? ಸತ್ತರೇನು? ನಾವು ಶಾಸಕರಾಗಿ ಗೌರವದಿಂದ ಅವರ ಎದುರುಗಡೆ, ರೈತರ ಮುಂದೆ ಓಡಾಟ ಮಾಡಲು ಆಗದೇ ಇರುವಂಥ ಒಂದು ವಿಶೇಷವಾದಂಥ ಪರಿಸ್ಥಿತಿಯಲ್ಲಿ ಇವತ್ತು ನಾವು ಸಿಕ್ಕಿಕೊಂಡಿದ್ದೇವೆ. ಅದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಬಹಳ ವಿವರವಾಗಿ ದಿವಸಗಟ್ಟಲೆ ಇದನ್ನು ಚರ್ಚೆ ಮಾಡುವುದರಿಂದ ಏನೂ ಉಪಯೋಗವಾಗುವುದಿಲ್ಲ. ಏಕೆಂದರೆ ನಿಮ್ಮ ಸರ್ಕಾರದ ಹತ್ತಿರ ಕಂದಾಯ ಅಧಿಕಾರಿಗಳ ಮೂಲಕ, ಕೃಷಿ ಇಲಾಖೆಯ ಅಧಿಕಾರಿಗಳ ಮೂಲಕ ಯಾವ ಜಿಲ್ಲೆಯಲ್ಲಿ ಬರಗಾಲವಿದೆ, ಯಾವ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಜನ ಸಂಕಷ್ಟಕ್ಕೆ ತುತ್ತಾಗಿದ್ದಾರೆ ಎನ್ನುವ ಎಲ್ಲ ವಿವರ ಇದೆ. ನಮಗೆ ಬೇಕಾಗಿರುವುದು ಏನೆಂದರೆ, ನೀವು ಏನು ಅದಕ್ಕೆ ಕಾರ್ಯಕ್ರಮವನ್ನು ರೂಪಿಸಿದ್ದೀರಾ ಎನ್ನುವುದು. ನಾನು 15 ದಿವಸದಿಂದ ನಿಮಗೆ ಒತ್ತಾಯ ಮಾಡುತ್ತಿದ್ದೇನೆ, ಕೇಂದ್ರ ಸರ್ಕಾರಕ್ಕೆ ಒಂದು ಮೆಮೊರಾಂಡಂ ಕಳುಹಿಸಿಕೊಡಿ, ವಾಸ್ತವಿಕ ಸ್ಥಿತಿ ಏನಿದೆ ಎಂದು ತಿಳಿಸಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತನ್ನಿ. ಮತ್ತೇನಾದರೂ ತೊಂದರೆಯಾದರೆ ಅಡಿಷನಲ್ ಆಗಿ ಇನ್ನೊಂದು ರಿಲೀಫ್ ಕೇಳಿ ಮನವಿಯನ್ನು ಕಳುಹಿಸಿ ಕೊಡಲು ಆಗುತ್ತದೆ ಎಂದು ಹೇಳಿದರೂ, ಇದುವರಗೆ ವಾಸ್ತವಿಕ ಸ್ಥಿತಿಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒಂದು ವರದಿಯನ್ನು ನೀವು ಕೊಡುವುದಕ್ಕೆ ಇದುವರೆಗೆ ಸಾಧ್ಯವಾಗಲಿಲ್ಲ ಎನ್ನುವುದಾದರೆ, ಎಷ್ಟರಮಟ್ಟಿಗೆ ಸರ್ಕಾರಕ್ಕೆ ಇದರ ಬಗ್ಗೆ ಕಳಕಳಿ ಇದೆ, ಈ ದಿಕ್ಕಿನಲ್ಲಿ ಏನು ಪ್ರಾಮಾಣಿಕ

ಪ್ರಯತ್ನವನ್ನು ತಾವು ಮಾಡುತ್ತಿದ್ದೀರಿ ಎನ್ನುವುದು ಇದರಿಂದ ಬಹಳ ಸ್ಪಷ್ಟವಾಗಿ ಅರ್ಥವಾಗುತ್ತದೆ. ಅದಕ್ಕಾಗಿ ನಾನು ಪ್ರಾರಂಭದಲ್ಲಿ ಒತ್ತಾಯ ಮಾಡಿದಂಥಾದ್ದು. ತಾವು ಒಂದು ಹೊಸ ರೂಪವನ್ನು ತನ್ನಿ, ಒಂದು ಹೊಸ ಯೋಜನೆಯನ್ನು ಹಾಕಿಕೊಳ್ಳಿ. ಬಜೆಟ್‌ನಲ್ಲಿ ಈ ವರ್ಷ ಇದಕ್ಕೆ ಒಂದು ಅವಕಾಶ ಮಾಡಿಕೊಟ್ಟು ಒಂದು ನೂರು ಕೋಟಿ ರೂಪಾಯಿಯನ್ನು ಕೆಲಾಮಿಟಿ ರಿಲೀಫ್ ಫಂಡ್ ಎಂದು ರಾಜ್ಯದಲ್ಲಿ ಮಾಡಿ, ಪ್ರತಿವರ್ಷ ಸಂಕಷ್ಟಕ್ಕೆ ಈಡಾದವರ ನೆರವಿಗೆ ಬಂದು ತಕ್ಷಣ ಖರ್ಚು ಮಾಡುವಂಥ ವ್ಯವಸ್ಥೆಯನ್ನು ತಾವು ಮಾಡಬೇಕು ಎನ್ನುವಂಥ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಅದೇ ರೀತಿ ತೀವ್ರತರವಾದಂಥ ಬರಗಾಲಕ್ಕೆ ಜನ ತುತ್ತಾಗಿದ್ದಾರೆ, ಅನೇಕ ಕಡೆ ಜಾನುವಾರುಗಳಿಗೆ ಮೇವಿನ ಸಮಸ್ಯೆಯೂ ಇದೆ. ಅದಕ್ಕೋಸ್ಕರ, ಈ ಸಾರಿ ದಯಮಾಡಿ, ಬೇರೆ ಕಡೆಗಳಲ್ಲಿ ಮೇವು ದೊಡ್ಡ ಪ್ರಮಾಣದಲ್ಲಿ ಸಿಗುವುದರಿಂದ ಅದನ್ನು ಸ್ಟಾಕ್ ಮಾಡಿಕೊಂಡು, ನಿಜವಾಗಿಯೂ ಬರಗಾಲಕ್ಕೆ ತುತ್ತಾಗಿರುವಂಥ ಕಡೆ ದಯಮಾಡಿ ಮೇವಿನ ವ್ಯವಸ್ಥೆ ಆಗುವಂಥಾದ್ದು ಆಗಬೇಕು. ಮತ್ತು ಕೃಷಿ ಕಾರ್ಮಿಕ ಯಾರು ಈ ರೀತಿ ಕೃಷಿಯಲ್ಲಿ ತೊಡಗಿದ್ದಾನೆ, ಅದರಲ್ಲೇ ಉದ್ಯೋಗವನ್ನು ಮಾಡುತ್ತಿದ್ದಾನೆ ಅವನು ಎಲ್ಲಕಡೆಗೆ ವಲಸೆ ಹೋಗುತ್ತಿದ್ದಾನೆ. ಅವನಿಗೆ ತಕ್ಷಣ ಕೆಲಸ ಕೊಡಿಸಿ, ಮುಂದೆ ಅವನ ಕಾಲಮೇಲೆ ಅವನು ನಿಲ್ಲುವವರೆಗೆ ಯಾವುದೇ ಕಾರಣಕ್ಕೆ ಅವನಿಗೆ ತೊಂದರೆಯಾಗದಂತೆ, ಕೆರೆಕಟ್ಟೆಗಳ, ರಸ್ತೆಗಳ ಕಾಮಗಾರಿಯನ್ನು ತೆಗೆದುಕೊಂಡು ಅವನಿಗೆ ಕೆಲಸ ಸಿಗುವಂಥ ರೀತಿಯಲ್ಲಿ ವಿಶೇಷವಾದಂಥ ಕೆಲಸ ಮಾಡಬೇಕು. ಮತ್ತು ಸಹಕಾರಿ ಸಂಘದ ಸಾಲಗಳು ಏನಿವೆ, ಅದನ್ನು ರೀಶೆಡ್ಯೂಲ್ ಮಾಡಿ ಬಡ್ಡಿ ಮನ್ನಾ ಮಾಡುವ ಕಡೆ ಮನ್ನಾ ಮಾಡಿ, ಅವನನ್ನು ಉಳಿಸುವಂಥ ಒಂದು ವಿಶೇಷವಾದ ಪ್ರಯತ್ನವನ್ನು ಮಾಡಬೇಕು. ಈಗ ಕೆಲವು ಕಡೆ ಮಳೆ ಬೀಳುತ್ತಿರುವುದರಿಂದ ಈಗಾಗಲೇ ಬಿತ್ತನೆ ಮಾಡಿದಂಥ ಬಿತ್ತನೆ ಬೀಜ, ಗೊಬ್ಬರ ಎಲ್ಲ ಸರ್ವನಾಶವಾಗಿರುವಂಥ ರೈತನಿಗೆ ಉಚಿತವಾಗಿ ಸ್ವಲ್ಪ ಬಿತ್ತನೆ ಬೀಜ ಮತ್ತು ಗೊಬ್ಬರವನ್ನು ಕೊಟ್ಟು ಆ ರೈತನನ್ನು ಉಳಿಸುವಂಥ ವಿಶೇಷವಾದಂಥ ಒಂದು ಪ್ರಯತ್ನವನ್ನು ಸರ್ಕಾರ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ನಾನು ಅಂದುಕೊಂಡಿದ್ದೆ, ನಾವು ಇವತ್ತು ಇದನ್ನು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡುತ್ತೇವೆ ಎಂದು ಹೇಳಿದಾಗ, ಬಹುಶಃ ತಾವೇ ಎದ್ದುನಿಂತು, ರಾಜ್ಯದಲ್ಲಿ ವಾಸ್ತವಿಕ ಸ್ಥಿತಿ ಏನಿದೆ ಎನ್ನುವ ಬಗ್ಗೆ ಒಂದು ಹೇಳಿಕೆಯನ್ನು ತಾವು ಮಾಡಿದ್ದರೆ, ಇಂಥಿಂಥ ಜಿಲ್ಲೆಯಲ್ಲಿ ಬರಗಾಲ ಇದೆ, ಇಷ್ಟು ತಾಲ್ಲೂಕಿನಲ್ಲಿ ಬರಗಾಲ ಇದೆ, ಇಂಥ ಪರಿಸ್ಥಿತಿ ಇದೆ, ಇಂಥ ಕಡೆ ನಾವು ಕೆಲಸ ಮಾಡಿದ್ದೇವೆ ಎಂದು ಹೇಳಿದ್ದರೆ, ಶಾಸಕರಾಗಿ ನಮ್ಮ ಅನುಭವ 'ಏನಿದೆ, ವಾಸ್ತವವಾಗಿ ನಾವು ಏನು ಕಂಡಿದ್ದೇವೆ, ನೀವು ಹೇಳಿದ್ದಕ್ಕೂ ಇದಕ್ಕೂ ಎಷ್ಟು ಒಂದು ದೊಡ್ಡ ಅಂತರ ಇದೆ ಎನ್ನುವುದನ್ನು ತಿಳಿಸುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೆವು. ತಾವು ವಿವರಗಳನ್ನು ಕೊಟ್ಟಮೇಲೆ, ಒಂದು ಹೇಳಿಕೆಯನ್ನು ಮಾಡಿದ ಮೇಲೆ ಇನ್ನೂ ಹೆಚ್ಚು ವಿವರಗಳನ್ನು ಕೇಳಲು ನಮಗೆ ಅನುಕೂಲವಾಗುತ್ತದೆ ಎಂದು ನಾನಾದರೂ ಭಾವಿಸಿದ್ದೇವೆ. ಇವತ್ತು ರೆವಿನ್ಯೂ

ಅಧಿಕಾರಿಗಳಾಗಲೀ, ಕೃಷಿ ಇಲಾಖೆಯ ಅಧಿಕಾರಿಗಳಾಗಲೀ ರಾಜ್ಯದಲ್ಲಿ ಓಡಾಟ ಮಾಡಿ ವಾಸ್ತವಿಕವಾಗಿ ರೈತ ಯಾವ ಸಂಕಷ್ಟಕ್ಕೆ ಸಿಕ್ಕಿದ್ದಾನೆ ಎನ್ನುವ ಬಗ್ಗೆ ಒಂದು ವರದಿಯನ್ನು ತಮಗೆ ಇದುವರೆಗೂ ತರಿಸಿಕೊಳ್ಳಲು ಆಗಲಿಲ್ಲ ಎಂದರೆ ತಾವು ಅವರನ್ನು ಕರೆಯಲಿಲ್ಲ. ಈಗಲೇ ತಾವು ಒಂದಲ್ಲ ಎರಡು ಬಾರಿ ಸಂಬಂಧಪಟ್ಟ ಎಲ್ಲಾ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆಯ ಅಧಿಕಾರಿಗಳನ್ನು ನೀವೇ ಕರೆಸಿ, ಕುಳಿತು ಚರ್ಚೆ ಮಾಡಿ, ವಾಸ್ತವಿಕ ಸ್ಥಿತಿ ಏನಿದೆ ಎಂಬ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡು, ಅದನ್ನು ಶಾಸಕರುಗಳಿಗೆ ಕಳುಹಿಸಿಕೊಟ್ಟು, ಅವರು ಎಷ್ಟರ ಮಟ್ಟಿಗೆ ವಾಸ್ತವಿಕವಾಗಿ ಕೊಟ್ಟಿದ್ದಾರೆ ಎಂದು ಅದರ ಸರಿ ತಪ್ಪುಗಳನ್ನು ನಾವು ಹೇಳಿ, ಸರಿಯಾದಂಥ ವಾಸ್ತವಿಕ ಸ್ಥಿತಿಯನ್ನು ತಿಳಿಸಲು ಅನುಕೂಲವಾಗುತ್ತಿತ್ತು. ಆ ದಿಕ್ಕಿನಲ್ಲೂ ತಾವು ಏನೂ ಪ್ರಯತ್ನ ಮಾಡಲಿಲ್ಲ. ಇನ್ನೊಂದು 3-4 ದಿವಸದಲ್ಲಿ ಅಧಿವೇಶನ ಮುಗಿದು ಹೋಗುತ್ತದೆ. ಅಧಿವೇಶನ ಮುಗಿದ ಮೇಲೆ ಇನ್ನೊಂದು 4-5 ತಿಂಗಳ ನಂತರ ನಾವು ವಿಚಾರಗಳನ್ನು ತಮ್ಮ ಗಮನಕ್ಕೆ ತರುವಂಥಾದ್ದು ಆದರೆ, ನಾವು ಮಾಡಿದ್ದೇವೆ, ಕೇಂದ್ರ ಸರ್ಕಾರವನ್ನು ಕೇಳಿದ್ದೇನೆ ಎನ್ನುವಂಥ ಉತ್ತರವನ್ನು ಕೊಡುತ್ತಿದ್ದೀರಿ. ಕಳೆದ 4-5 ವರ್ಷಗಳಿಂದ ಇದೇ ಅನುಭವ ನಮಗೆ ಆಗಿದೆ. ತಾವು ಅಂಕಿ ಅಂಶಗಳನ್ನು ಬೇಕಾದರೆ ತೆಗೆದುನೋಡಿ. ಮೂರು ನಾಲ್ಕು ವರ್ಷಗಳಿಂದ ಬರಗಾಲ, ಅತಿವೃಷ್ಟಿಗೆ ತುತ್ತಾದಂತಹ ಕಾಲದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಎಷ್ಟು ದೊಡ್ಡ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಿದ್ದಾರೆ; ಆದರೆ ನೀವು ಅಧಿಕಾರಕ್ಕೆ ಬಂದ ಮೇಲೆ, ಯಾವುದಾದರೂ ಬರಕ್ಕೆ ತುತ್ತಾದ, ಉದಾಹರಣೆಗೆ ತುಮಕೂರು ಜಿಲ್ಲೆ ಒಂದನ್ನೇ ಹೇಳಿ. ತುಮಕೂರು ಜಿಲ್ಲೆಯಲ್ಲಿ ಎಷ್ಟು ಜನ ಕೃಷಿ ಕಾರ್ಮಿಕರಿಗೆ ಉದ್ಯೋಗವನ್ನು ಕೊಟ್ಟಿದ್ದೇವೆ? ಇಷ್ಟು ಹಣವನ್ನು ಖರ್ಚು ಮಾಡಿದ್ದೇವೆ? ಅತಿವೃಷ್ಟಿಯಾಗಿರುವಂತಹ ಕಡೆ ಇಷ್ಟು ಕೆರೆಕಟ್ಟೆಗಳು, ಇಷ್ಟುರಸ್ತೆಗಳು, ಇಷ್ಟು ಬೆಳೆಗಳು ನಾಶವಾಗಿದೆ, ಇಷ್ಟು ಬೆಳೆಗೆ ನಾವು ಪರಿಹಾರವನ್ನು ಕೊಟ್ಟಿದ್ದೇವೆ. ಆ ಯಾವುದಾದರೂ ಅತಿವೃಷ್ಟಿಯದ್ದು ಮತ್ತು ಒಂದು ಬರಗಾಲದ್ದು ಎರಡು ಜಿಲ್ಲೆಗಳ ಬಗ್ಗೆ ಉದಾಹರಣೆಯನ್ನು ಕೊಟ್ಟು ಡಿಟೈಲ್ಸ್‌ನ್ನು ನೀವು ಕೊಟ್ಟರೆ, ಆಗ ನೀವು ಎಲ್ಲಿದ್ದೀರಿ, ಯಾವ ಮಟ್ಟಕ್ಕೆ ನಮ್ಮ ರೈತ ಸಮುದಾಯವನ್ನು ಕಡೆಗಣಿಸಿದ್ದೀರಾ, ಈ ಅತಿವೃಷ್ಟಿ, ಬರಗಾಲದ ಬಗ್ಗೆ ಸಮರ್ಪಕವಾಗಿ ನಿರ್ವಹಿಸಿ ಅವರಿಗೆ ಪರಿಹಾರವನ್ನು ಕೊಡುವುದರಲ್ಲಿ ವಿಫಲರಾಗಿದ್ದೇವೆ ಎನ್ನುವುದು ಮನವರಿಕೆಯಾಗುತ್ತದೆಂದು ಹೇಳುತ್ತಾ, ದಯಮಾಡಿ ತಾವು ಸ್ಟೇಟ್‌ಮೆಂಟ್ ಮಾಡಿದ ಮೇಲೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತಾ, ದಯಮಾಡಿ ಮತ್ತೊಮ್ಮೆ ಒತ್ತಾಯವನ್ನು ಮಾಡುವುದೇನೆಂದರೆ ನಾನು ಅಲ್ಲಿ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ, ಇಲ್ಲಿ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆಂದು ಹೇಳುವುದಕ್ಕಿಂತಲೂ, ನಾನೇನು ಪ್ರಾರಂಭದಲ್ಲಿ ಹೇಳಿದೆ, ದಯಮಾಡಿ ನಿಮ್ಮ ಕಾಲದಲ್ಲಿಯಾದರೂ ಸಹಿತ ಈ ಒಂದು ರಾಜ್ಯ ಸರ್ಕಾರವೇ ಮುಂದೆ ಬಂದು ಒಂದು ನೂರು ಕೋಟಿ ರೂಪಾಯಿಗಳ ಒಂದು ಕೆಲಾಮಿಟಿ ಫಂಡ್‌ನ್ನು ಮಾಡಿ, ಅದರ ಮೂಲಕ ತಕ್ಷಣ ರೈತರಿಗೆ

ತೊಂದರೆಯಾಗದಂತೆ 15-20 ದಿವಸಗಳಲ್ಲಿ ರೈತರಿಗೆ ನೆರವು ಬರುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಅದರಲ್ಲಿಯೂ ವಿಶೇಷವಾಗಿ ಕೆರೆಕಟ್ಟೆಗಳ ಹೂಳು ತೆಗೆದು, ತೂಬುಗಳನ್ನು ರಿಪೇರಿ ಮಾಡಿ, ಸ್ವಲ್ಪ ನೀರು ನಿಲ್ಲುವಂತೆ ವ್ಯವಸ್ಥೆಯನ್ನಾದರೂ ಮಾಡಿದರೆ ಮಳೆ ಬಂದಾಗ ಮುಂದಿನ ವರ್ಷಕ್ಕಾದರೂ ಅನುಕೂಲವಾಗುತ್ತದೆ. ಜಾನುವಾರುಗಳಿಗೆ ಕುಡಿಯುವುದಕ್ಕಾದರೂ ನೀರು ಸಿಗುತ್ತದೆ. ಆ ದಿಕ್ಕಿನಲ್ಲಿ ವಿಶೇಷವಾದಂತಹ ಒಂದು ಕಾರ್ಯಕ್ರಮವನ್ನು ರೂಪಿಸಬೇಕೆಂದು ಒತ್ತಾಯವನ್ನು ಮಾಡುತ್ತಾ, ಇವತ್ತು ನೀವು ಯಾವ ಜಿಲ್ಲೆಗಳಲ್ಲಿ ಹಣವನ್ನು ಬಿಡುಗಡೆ ಮಾಡಿದ್ದೀರಿ, ಅದರಲ್ಲಿ ಎಷ್ಟು ಹಣ ಖರ್ಚಾಗಿದೆ, ಎಷ್ಟು ಹಣ ರಿಲೀಜ್ ಆಗಿದೆ? ಆ ವಿವರಗಳನ್ನು ಪ್ರತಿ ಜಿಲ್ಲೆಯ ಬಗ್ಗೆ ಅದು ಅತಿವೃಷ್ಟಿ ಇರಲಿ, ಬರಗಾಲ ಇರಲಿ, ಆ ವಿವರಗಳನ್ನು ಒದಗಿಸಬೇಕೆಂದು ನಾನು ಒತ್ತಾಯವನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ ನಾಗರಾಜ್ (ಚಾಮರಾಜ ನಗರ): ಮಾನ್ಯ ಉಪಾಧ್ಯಕ್ಷರೇ, ಈ ಬರಗಾಲ ಒಂದು ರೀತಿ ಪ್ರತಿವರ್ಷ ಇದ್ದದ್ದೇ, ಈ ಬಗ್ಗೆ ಸಮರೋಪಾದಿಯಲ್ಲಿ ಇದೊಂದು ಶಾಶ್ವತವಾದಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಇದನ್ನು ಪ್ರತಿವರ್ಷ ಮಾಡಬೇಕು. ಪ್ರತಿವರ್ಷ ನಾವು ಅಧಿವೇಶನ ಸೇರಿದಾಗ ನಾವು ಚರ್ಚೆಯನ್ನು ಮಾಡುತ್ತೇವೆ. ಅವರು ಪ್ರತಿ ಜಿಲ್ಲೆಗೆ ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳತಕ್ಕಂಥದ್ದು ಇದು ಇದ್ದದ್ದೇ. ಇದರ ಜೊತೆಗೆ ಕೇಂದ್ರ ಸರ್ಕಾರಕ್ಕೆ ಇವರು ಸರ್ಕಾರದ ಕಾರ್ಯದರ್ಶಿಗಳು ಇಡೀ ಸರ್ಕಾರವೇ ಸೇರಿ ಅಂಕಿ ಅಂಶಗಳನ್ನು ಮಾಡಿ ನಮಗೆ ಇಷ್ಟು ಹಣಬೇಕೆಂದು ಹೇಳಿ ಪ್ರತಿವರ್ಷವೂ ಸಹ ವರದಿಯನ್ನು ಕಳುಹಿಸುತ್ತಿದ್ದಾರೆ. ನಾನು ಇವರು 5-6 ವರ್ಷಗಳಿಂದ ಕಳುಹಿಸಿರತಕ್ಕಂಥದ್ದನ್ನು ಬಹಳ ಎಚ್ಚರದಿಂದ ನೋಡಿದ್ದೇನೆ. ಮಾನ್ಯ ದಿ.ವೀರೇಂದ್ರ ಪಾಟೀಲ್‌ರವರು ಮುಖ್ಯ ಮಂತ್ರಿಯಾಗಿದ್ದಂತಹ ಕಾಲದಿಂದ ಇಲ್ಲಿಯವರೆಗೆ ನೋಡುತ್ತಿದ್ದೇನೆ. ಕೇಂದ್ರ ಸರ್ಕಾರ ಅವರದೇ ಆದಂತಹ ಒಂದು ನಿರ್ಧಾರವನ್ನು ಇಟ್ಟುಕೊಂಡಿದ್ದಾರೆ. ಇಲ್ಲಿಗೆ ಎಷ್ಟು ಹಣವನ್ನು ಕೊಡಬೇಕೆನ್ನುವುದು ಒಂದು ತೀರ್ಮಾನ, ಇಡೀ ರಾಜ್ಯದಾದ್ಯಂತ ಎಷ್ಟೇ ಬರಗಾಲ ಬರಲಿ, ಭೀಕರವಾದಂತಹ ಪರಿಸ್ಥಿತಿಯು ಬರಲಿ, ಯಾವುದೇ ಪರಿಸ್ಥಿತಿಯು ಬಂದರೂ ನಾವು ಕೊಡುವುದು ಇಷ್ಟೇ ಹಣವೆಂದು ಅವರು ಮಾಡಿದ್ದಾರೆ. ಈ ಸಂದರ್ಭದಲ್ಲಿ ನನ್ನದು ಏನು ಒತ್ತಾಯವೆಂದರೆ, ನಮ್ಮ ಪಾರ್ಲಿಮೆಂಟ್ ಸದಸ್ಯರು, ನಮ್ಮ ರಾಜ್ಯಕ್ಕೆ ಸೇರಿದಂತಹ ಸಚಿವರು ಯಾರು ಕೇಂದ್ರ ಸರ್ಕಾರದಲ್ಲಿದ್ದಾರೆ, ಅವರುಗಳು ಪ್ರಧಾನ ಮಂತ್ರಿಗಳನ್ನು ಮತ್ತು ಹಣಕಾಸು ಸಚಿವರನ್ನು ಭೇಟಿ ಮಾಡಿ, ಕರ್ನಾಟಕ ರಾಜ್ಯದಲ್ಲಿರುವ ಭೀಕರವಾದಂತಹ ಪರಿಸ್ಥಿತಿಯಲ್ಲಿ ನೀವು ಹೆಚ್ಚಿನ ರೀತಿಯಲ್ಲಿ ಸಹಕಾರವನ್ನು ಕೊಡಬೇಕೆಂದು ಹೇಳಿ ಕೇಂದ್ರ ಸರ್ಕಾರದ ಮೇಲೆ ಹೆಚ್ಚಿನ ಒತ್ತಡವನ್ನು ತರತಕ್ಕಂತಹ ಕೆಲಸವನ್ನು ಅವರುಗಳು ಪ್ರಾಮಾಣಿಕವಾಗಿ ಮಾಡಬೇಕೆಂದು ನನ್ನ

ಒತ್ತಾಯ. ಇದರ ಜೊತೆಗೆ ಈಗ ಹೊಸದಾಗಿ ಜಿಲ್ಲೆಗಳಾಗಿವೆ. ಚಾಮರಾಜನಗರ ಜಿಲ್ಲೆ ಅದು ಮೈಸೂರು ಜಿಲ್ಲೆಯಿಂದ ಬೇರ್ಪಟ್ಟಿದೆ. ಈಗ ಮೊನ್ನೆಯ ದಿವಸ ಇವರು ಹಣವನ್ನು ಬರೀ ಮೈಸೂರು ಜಿಲ್ಲೆಗೆ ಮಾತ್ರ ಬಿಡುಗಡೆ ಮಾಡಿರುತ್ತೀರಿ. ಚಾಮರಾಜ ನಗರಕ್ಕೆ ಬಿಡುಗಡೆಯನ್ನೇ ಮಾಡಿಲ್ಲ. ಇವರು ಏನು ಹೇಳುತ್ತಾರೆಂದರೆ ಮೈಸೂರಿನಿಂದಲೇ ಹಣವನ್ನು ತೆಗೆದುಕೊಳ್ಳಿ ಎಂದು. ಅದು ಸಾಧ್ಯವಿಲ್ಲ. ಚಾಮರಾಜ ನಗರ ನಿಜವಾಗಿಯೂ ಗಡಿ ಪ್ರದೇಶ, ನಾಲ್ಕು ತಾಲ್ಲೂಕುಗಳು ಸೇರಿ ಒಂದು ಗಡಿ ಪ್ರದೇಶವಾಗಿದೆ. ಆ ಗಡಿ ಪ್ರದೇಶದಲ್ಲಿ ನನಗನ್ನಿಸುತ್ತದೆ, ಸಂಪೂರ್ಣವಾಗಿ ಕೆರೆಗಳೆಲ್ಲ ಒಣಗಿ ಹೋಗಿದೆ, ದನಕರುಗಳಿಗೆ ಮೇವಿಗೆ ತುಂಬಾ ತೊಂದರೆಯಾಗಿದೆ, ಜನರಿಗೆ ಕೆಲಸವಿಲ್ಲದೇ, ಜನರಿಗೆ ಕೂಲಿ ಸಿಗದೇ ಅಲ್ಲಿಯ ಜನರು ತಮಿಳುನಾಡಿಗೆ, ಕೇರಳಕ್ಕೆ ಗೂಳೆ ಹೋಗತಕ್ಕಂತಹ ಪರಿಸ್ಥಿತಿಯು ನಿರ್ಧಾರವಾಗಿದೆ. ಆದ್ದರಿಂದ ತಮ್ಮಲ್ಲಿ ನಾನು ಕಳಕಳಿಯ ಮನವಿಯನ್ನು ಮಾಡಿಕೊಳ್ಳುವುದೇನೆಂದರೆ, ಮೈಸೂರು ಜಿಲ್ಲೆಗೆ ಯಾವ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡಿರುತ್ತೀರಿ, ಅದೇ ರೀತಿಯಲ್ಲಿ ಚಾಮರಾಜನಗರ ಜಿಲ್ಲೆಗೆ ಹೆಚ್ಚಿನ ಹಣವನ್ನು ವಿಶೇಷವಾಗಿ ಕೊಡಬೇಕು? ಅಲ್ಲಿಯ ದನಕರುಗಳಿಗೆ ಮೇವಿನ ಬ್ಯಾಂಕ್‌ಗಳನ್ನು ಮಾಡಬೇಕು. ಕೆಲವು ಕಡೆ ಬಹಳ ಭೀಕರವಾಗಿದೆ. ಬೇಕಾದರೆ ತಾವು ಒಂದು ಅಧಿಕಾರಿಗಳ ತಂಡವನ್ನು ಅಲ್ಲಿಗೆ ಕಳುಹಿಸಿ. ಅಲ್ಲಿ ಪರಿಸ್ಥಿತಿಯೂ ಬಹಳ ಭೀಕರವಾಗಿದೆ. ಅಲ್ಲಿಯ ದನಕರುಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ಮೇವು ಇಲ್ಲ, ಕೆರೆಗಳೆಲ್ಲ ಒಣಗಿದೆ. ಒಂದು ಕಡೆ ಇದು ವಿಪರ್ಯಾಸವಾಗಿದೆ. ನಿಸರ್ಗದ ವಿಪರ್ಯಾಸ ಒಂದು ಕಡೆಯಾದರೆ, ಜಲಾಶಯಗಳು ತುಂಬಿ ಹರಿಯುತ್ತಿದೆ. ಮತ್ತೊಂದು ಕೆರೆಗಳಲ್ಲಿ ನೀರು ಇಲ್ಲದೇ ಒಣಗಿದೆ. ನೀವು ರಾಜಕೀಯವನ್ನು ಮಾಡುತ್ತಿದ್ದೀರಿ ಎಂದು ನಾನು ಅಂದುಕೊಂಡಿಲ್ಲ. ನಾವೆಲ್ಲರೂ ಪಕ್ಷರಹಿತವಾಗಿ ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡೋಣ. ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಭೀಕರವಾದಂತಹ ಬರಗಾಲ ಇದೆ, ಇದನ್ನು ಸರಿಪಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಏನಾಗಬೇಕೆನ್ನುವ ಬಗ್ಗೆ ತಾವು ಹೇಳಬೇಕು. ನಾವು ಒಂದು ಹೇಳಿದರೆ ನೀವು ಒಂದು ಅಂಕಿ ಅಂಶವನ್ನು ಕೊಡುವಂಥದ್ದು ಆಗಬಾರದು. ಈಗ ಕೊಟ್ಟಿರತಕ್ಕಂತಹ ಹಣ ಖಂಡಿತವಾಗಿಯೂ ಸಾಕಾಗುವುದಿಲ್ಲ, ಇದನ್ನು ಪುನರ್ ಪರಿಶೀಲನೆಯನ್ನು ಮಾಡಿ ಇನ್ನು ಹೆಚ್ಚು ಹಣವನ್ನು ತಾವು ಕೊಡಬೇಕೆಂದು ಅಧ್ಯಕ್ಷರ ಮೂಲಕ ತಮ್ಮಲ್ಲಿ ಕಳಕಳಿಯ ಮನವಿಯನ್ನು ಮಾಡುತ್ತಿದ್ದೇನೆ. ಕೆಲವು ಕಡೆ ಪರಿಸ್ಥಿತಿಯು ಬಹಳ ಭೀಕರವಾಗಿದೆ. ಕೆರೆಗಳಲ್ಲಿ ನೀರು ಇಲ್ಲದೇ ದನಕರುಗಳು ಸಾಯುತ್ತಿದೆ. ಈ ಬಗ್ಗೆ ಸರ್ಕಾರ ಕ್ರಮವನ್ನು ಕೈಗೊಳ್ಳಬೇಕು. ಮತ್ತು ಹೊಸ ಜಿಲ್ಲೆಗಳಿಗೆ, ಹಳೆಯ ಜಿಲ್ಲೆಯಿಂದಲೇ ಹಣವನ್ನು ಕೊಡಿ ಎಂದು ಸೇರಿಸಬೇಡಿ. ಈಗ ಅದನ್ನು ಬದಲಾವಣೆ ಮಾಡಿ ಆಯಾಯ ಜಿಲ್ಲೆಗೆ ಹಣವನ್ನು ಬಿಡುಗಡೆ ಮಾಡತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕು ಅಂತ....

ಶ್ರೀ ರಮೇಶ್ ಸಿ. ಜಿಗಜಿಣಗಿ: ಮಾನ್ಯ ಅಧ್ಯಕ್ಷರೇ, ಚಾಮರಾಜನಗರದವರು

ಮೈಸೂರಿನಲ್ಲಿ ಹಣವನ್ನು ತೆಗೆದುಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್: ನೀವು ಮಾಡಿರುವಂಥದ್ದು ಸರಿಯಾದುದು ಅಲ್ಲ. ಎಲ್ಲಾ ಜಿಲ್ಲೆಗಳಿಗೂ ಹಣ ಕೊಡುವಂಥಾದ್ದನ್ನು ಕೊಡಿ. ಅವರ ಹತ್ತಿರ ತೆಗೆದುಕೊಳ್ಳಿ ಅಂತ ಹೇಳಿದರೆ, ಅದು ಸರಿಯಾಗಿ ಕಾಣುವುದಿಲ್ಲ. ಅದರಲ್ಲೂ ವಿಶೇಷವಾಗಿ ನಾನು ನಿಮಗೆ ಹೇಳುವುದೇನೆಂದರೆ, ಚಾಮರಾಜ ನಗರ ಜಿಲ್ಲೆ ಗಡಿನಾಡು ಜಿಲ್ಲೆ. ಈ ಜಿಲ್ಲೆಯಲ್ಲಿ ಭೀಕರವಾದಂತಹ ಬರಗಾಲ ಇದೆ. ಅದಕ್ಕೆ ತಾವು ಪ್ರಾಮಾಣಿಕವಾಗಿ ವಿಶೇಷವಾದಂತಹ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಎಷ್ಟು ವರ್ಷಗಳಾಯಿತು ಚಾಮರಾಜ ನಗರ ಜಿಲ್ಲೆಯಾಗಿ?

ಶ್ರೀ ವಾಟಾಳ್ ನಾಗರಾಜ್: ಸುಮಾರು 15 ದಿವಸಗಳಾಯಿತು. ಏಕೆ ನೀವು ಪ್ರತಿಸಾರಿ ನಮ್ಮ ಮೇಲೆ ಬೀಳುತ್ತಿದ್ದೀರಿ? ನಿಮ್ಮ ಪರ ನಾನು ವಕಾಲತ್ತು ವಹಿಸಿದ್ದೇನೆ. ನನ್ನ ವಕಲಾತ್ತನ್ನು ಹಿಂತೆಗೆದುಕೊಳ್ಳುತ್ತೇನೆ....

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು): ಬೆಳಗಾಂ ಸ್ಥಿತಿಯು ನಿಮಗೆ ಬರಬಾರದು.

ಶ್ರೀ ವಾಟಾಳ್ ನಾಗರಾಜ್: ಬೆಳಗಾಂ ಬಗ್ಗೆ ಸರ್ಕಾರದ ನಿರ್ಧಾರ ಕರೆಕ್ಟ್ ಆಗಿದೆ. ಇಷ್ಟು ಹೊಸ ಜಿಲ್ಲೆಗಳನ್ನು ಮಾಡಿರುವ ಪೈಕಿ ನಮ್ಮ ಜಿಲ್ಲೆಯದ್ದು ತಕರಾರೇ ಇಲ್ಲ. ನಮ್ಮದು ಸಂತೋಷವಾಗಿರತಕ್ಕಂಥ ಜಿಲ್ಲೆ. ಅದರ ಬಗ್ಗೆ ಬೇರೆ ಪ್ರಶ್ನೆ ಇಲ್ಲ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆ ಎಂದರೆ....

ಶ್ರೀ ಸಿ.ಬೈರೇಗೌಡ: ತಾವು ಚಾಮರಾಜ ನಗರ ರಾಜ್ಯದವರೋ ಅಥವಾ ಕರ್ನಾಟಕ ರಾಜ್ಯದವರೋ ದಯವಿಟ್ಟು ಹೇಳಿ.

ಶ್ರೀ ವಾಟಾಳ್ ನಾಗರಾಜ್: ನಾನು ಕೇವಲ ಆಲೂಗೆಡ್ಡೆಯ ಬಗ್ಗೆ ಮಾತ್ರ ಮಾತನಾಡುವವನು ಅಲ್ಲ. ಇಡೀ ರಾಜ್ಯದಲ್ಲಿ ಕೋಲಾರದ ಆಲೂಗೆಡ್ಡೆ ಟೊಮೋಟೊ ಬಗ್ಗೆ ಮಾತನಾಡುತ್ತಿಲ್ಲ. ಚಾಮರಾಜನಗರವು ಸೇರಿದಂತೆ....

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಬೈರೇಗೌಡರು ಆ ಆಲುಗೆಡ್ಡೆಯ ಬಗ್ಗೆಯೂ ಮಾತನಾಡಲಿಲ್ಲ. ಟೋಮೊಟೋ ಬಗ್ಗೆಯೂ ಮಾತನಾಡಲಿಲ್ಲ. ಅವರ ಮೇಲೆ ಏಕೆ ಅಪವಾದವನ್ನು ಹಾಕುತ್ತಿದ್ದೀರಿ.,

ಶ್ರೀ ವಾಟಾಳ್ ನಾಗರಾಜ್: ಹಾಗಾದರೆ ಅದೂ ಇಲ್ಲ ಎಂದು ಕಾಣುತ್ತದೆ. ಮತ್ತೆ ಮೊನ್ನೆಯ ದಿವಸ ಆ ಆಲುಗೆಡ್ಡೆಗೆ ಹೆಚ್ಚು ಹಣವನ್ನು ಕೊಟ್ಟು ಖರೀದಿ ಮಾಡುತ್ತೀನಿ

ಎಂದು ಹೇಳಿದ್ದು ನೀವೇ ತಾನೇ. ತಾವೋ ಅಥವಾ ಇವರೋ?

ಶ್ರೀ ಬಿ.ವಿ.ಶ್ರೀರಾಮರೆಡ್ಡಿ: ಖರೀದಿಯನ್ನು ಮಾಡುತ್ತೇನೆ ಎಂದು ಹೇಳಿದ್ದು ವಿಷಯ ಬೇರೆ, ಮಾತನಾಡಿದ ವಿಷಯ ಬೇರೆ.

ಶ್ರೀ ವಾಟಾಳ್ ನಾಗರಾಜ್: ಖರೀದಿಯನ್ನು ಮಾಡಬೇಕು ಎನ್ನುವ ಉದ್ದೇಶ ಅವರಿಗೆ ಸಹಾಯವನ್ನು ಮಾಡಬೇಕು ಎನ್ನುವ ಅರ್ಥ ತಾನೇ. ಅವರು ನಷ್ಟವನ್ನು ಮಾಡಬೇಕೆಂದು ಏನೂ ಇಲ್ಲ. ಆದ್ದರಿಂದ ನಿಮ್ಮ ಸಹಾಯಕ್ಕೆ ಅವರು ಬಂದಿದ್ದಾರೆ. ಆದರೆ ನಾನು ಅವರ ತರಹ ಕೋಲಾರದ್ದು ಮಾತ್ರ ಹೇಳಿಲ್ಲ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಚಾಮರಾಜ ನಗರದ ಜಿಲ್ಲೆ ಪರಿಸ್ಥಿತಿಯು ಆ ರೀತಿಯಾಗಿದೆ. ಆದ್ದರಿಂದ ಅಷ್ಟೇ ಹೊರತು ಅದಕ್ಕೆ ವಿಶೇಷವಾಗಿ ಮಾತನಾಡಬೇಕೆಂದು ಅಲ್ಲ ಶ್ರೀ ಬೈರೇಗೌಡರೆ. ತಾವು ಸಹ ಹೋಗಿ ನೋಡಿದ್ದೀರಿ. ಅಲ್ಲಿ ಪರಿಸ್ಥಿತಿಯು ಸಹ ಹಾಗಿದೆ. ಈ ಬಗ್ಗೆ ಸರ್ಕಾರ ತೀವ್ರವಾಗಿ ಗಮನವನ್ನು ಕೊಡಬೇಕು. ಆಯಾಯ ಜಿಲ್ಲೆಗಳಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು, ಸಾಧ್ಯವಾದರೆ ಕೇಂದ್ರಕ್ಕೆ ಒಂದು ನಿಯೋಗವನ್ನು ನಾವೇನು ಅಂತ ಅಲ್ಲ, ನೀವೇ ಹೋಗಿ ತಕ್ಷಣ ಕೇಂದ್ರ ಸರ್ಕಾರದ ಮೇಲೆ ಹೆಚ್ಚಿನ ಒತ್ತಡವನ್ನು ತಂದು ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿಸಿ ಹೆಚ್ಚಿನ ರೀತಿಯಲ್ಲಿ ಸಹಕಾರವನ್ನು ಮಾಡಬೇಕು. ಆದರೆ ನೀವು ಕೊಡತಕ್ಕಂತಹ ಅಂಕಿ ಅಂಶಗಳನ್ನು ನಮ್ಮ ಜೊತೆಯಲ್ಲಿ ಸ್ವಲ್ಪ ಚರ್ಚೆಯನ್ನು ಮಾಡಿ. ಏನು ಮಾಡುತ್ತೇವೆ, ಏನು ಮಾಡುವುದಕ್ಕೆ ಅವಕಾಶ ಇದೆ. ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆ, ದನಕರುಗಳಿಗೆ ಎಷ್ಟು ಹಣ? ಕೂಲಿಗಾಗಿ ಎಷ್ಟು ಹಣ? ಬೇರೆ ಬೇರೆ ವಿಚಾರಗಳಿಗೆ, ಬಾವಿಗೆಷ್ಟು ಹಣವನ್ನು ಕೊಡುತ್ತೇವೆ ಮೇವಿಗೆ ಎಷ್ಟು ಕೊಡುತ್ತೇವೆ, ಇದನ್ನೆಲ್ಲಾ ತಾವು ತೀವ್ರವಾಗಿ ಚಿಂತನೆಯನ್ನು ಮಾಡಬೇಕು. ನೀವು ಮೈಸೂರು ಜಿಲ್ಲೆಗೆ ಕೊಟ್ಟಿರುವಂತಹ ಹಣ ಕೇವಲ 20 ಲಕ್ಷ ರೂಪಾಯಿಗಳು. ಅಂದರೆ ಮೈಸೂರು ಜಿಲ್ಲೆಗೆ ಮತ್ತು ಚಾಮರಾಜನಗರ ಜಿಲ್ಲೆ ಎರಡು ಸೇರಿದಂತೆ, ಅಂದರೆ ಬೇರೆ ಜಿಲ್ಲೆಗಳ ಹಣೆಬರಹವು ಕೂಡ ಇಷ್ಟೇ ಆದ್ದರಿಂದ ಇಡೀ ರಾಜ್ಯದ ಸಮಗ್ರ ಚಿತ್ರವನ್ನು ತಾವು ಪ್ರಾಮಾಣಿಕವಾಗಿ ಪರಿಚಯವನ್ನು ಮಾಡಿಕೊಂಡು ಸಮರೋಪಾದಿಯಲ್ಲಿ ಈ ಬರಗಾಲವನ್ನು ನೀಗುವುದಕ್ಕೆ ತಾವು ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಉಪಾಧ್ಯಕ್ಷರೇ, ಬರಗಾಲದ ಅತಿವೃಷ್ಟಿ ಮತ್ತು ಅನಾವೃಷ್ಟಿ ಎರಡು ವಿಷಯಗಳು ಪ್ರತಿ ವರ್ಷ ನಮ್ಮ ರಾಜ್ಯವನ್ನು ಕಾಡುತ್ತಿರತಕ್ಕಂತಹ ವಿಷಯವಾಗಿದೆ. ಅದರಲ್ಲಿ ಪ್ರಮುಖವಾಗಿ ಬರಗಾಲದ ಸಮಸ್ಯೆ ನಾನಂತೂ ಶಾಶ್ವತವಾದಂತಹ ಬರಗಾಲ ಜಿಲ್ಲೆಯಿಂದ ಬಂದಿರತಕ್ಕಂಥವನು.....

ಶ್ರೀ ವಾಟಾಳ್ ನಾಗರಾಜ್: ನಿಮ್ಮನ್ನು ನೋಡಿದರೆ ಗೊತ್ತಾಗುತ್ತದೆಯಲ್ಲಾ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಿಮ್ಮನ್ನು ನೋಡಿದರೆ ಚಾಮರಾಜ ನಗರದಿಂದ ಬಂದಿರುವವರು ಎಂದು ಗೊತ್ತಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಆದ್ದರಿಂದ ಈ ಬರಗಾಲದಲ್ಲಿ ತೊಂದರೆಯಾಗುತ್ತದೆಂದು ಹೇಳಿ ನಾನು ಮದುವೆಯಾಗುವುದೇ ಬೇಡವೆಂದು ಹೇಳಿ, ಶಾಶ್ವತವಾಗಿ ತಪಸ್ವಿ ನಿರ್ಧಾರವನ್ನು ಮಾಡಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೇ, ಬರಗಾಲದ ಬಗ್ಗೆ ಸರ್ಕಾರ ಯಾವಾಗಲೂ ಕ್ರಮವನ್ನು ತೆಗೆದುಕೊಳ್ಳತಕ್ಕಂತಹ ವಿಧಾನ ಯಾವುದು ಇದೆ, ಆ ವಿಧಾನವೇ ಸರಿಯಾದುದು ಅಲ್ಲ. ಯಾವಾಗಲೂ ಬರಗಾಲ ಬಂದಿದೆ ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲ, ದನಕರುಗಳಿಗೆ ಮೇವಿಲ್ಲ ಎನ್ನತಕ್ಕಂತಹ ಪರಿಸ್ಥಿತಿಯೂ ನಿರ್ಮಾಣವಾದಾಗ ಮಾತ್ರ ಬರಗಾಲದ ಬಗ್ಗೆ ಆಲೋಚನೆಯನ್ನು ಮಾಡತಕ್ಕಂಥದ್ದು, ಚರ್ಚೆ ಮಾಡತಕ್ಕಂಥದ್ದು ರೂಢಿಯಾಗಿದೆ. ಸರ್ಕಾರ ಈ ರೀತಿಯಾದಂತಹ ಆಲೋಚನೆಯನ್ನು ಮಾಡಬಾರದು. ಸರ್ಕಾರದಲ್ಲಿ ಒಂದು ನಿರ್ದಿಷ್ಟವಾದಂತಹ ಧೋರಣೆ ಇರಬೇಕು, ಅತಿವೃಷ್ಟಿ, ಅನಾವೃಷ್ಟಿಯ ಬಗ್ಗೆ. ಏಕೆಂದರೆ ಒಂದು ವರ್ಷದ ಆಕಸ್ಮಿಕವಾಗಿ ಬಂದಿರತಕ್ಕಂತಹ ಅಥವಾ ಆಕಸ್ಮಿಕವಾಗಿ ಬರತಕ್ಕಂಥದ್ದು ಅಲ್ಲ. ಪ್ರತಿವರ್ಷ ನಮ್ಮ ರಾಜ್ಯದಲ್ಲಿ ಯಾವುದಾದರೂ ಒಂದು ಇದ್ದೇ ಇರುತ್ತದೆ. ಮತ್ತು ಹಲವಾರು ಸಂದರ್ಭಗಳಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಎರಡು ಸಹ ಇರುತ್ತದೆ. ಆದ್ದರಿಂದ ಸರ್ಕಾರ ಇದಕ್ಕೆ ಶಾಶ್ವತವಾದಂತಹ ಒಂದು ಪರಿಹಾರವನ್ನು ಹುಡುಕುವುದಕ್ಕೆ ಮತ್ತು ಶಾಶ್ವತವಾದಂತಹ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಅದು ಯಾವುದೇ ವರ್ಷದಲ್ಲಿ ನಮಗೆ ತಪ್ಪಿಲ್ಲ. ಹಾಗಾಗಿ ಸಮಸ್ಯೆ ಬಂದಾಗ ಮಾತನಾಡತಕ್ಕಂಥದ್ದು ಮತ್ತು ಇನ್ನೂ ಸ್ವಲ್ಪ ಹಣವನ್ನು ಬಿಡುಗಡೆ ಮಾಡತಕಂಥದ್ದು ಇದು ಸರಿಯಾದಂತಹ ಕ್ರಮವು ಅಲ್ಲ. ಅದು ಯಾವುದೇ ರೀತಿಯಲ್ಲಿಯೂ ಪ್ರಯೋಜನ ಆಗಲಿಕ್ಕಿಲ್ಲ.

3.50 ಪಿ.ಎಂ

ಈಗ ಬರಗಾಲ ಬಂತು ಅಂದ ತಕ್ಷಣ ಹಣವನ್ನು ಬಿಡುಗಡೆ ಮಾಡಿ ಎಂದು ನಾವೆಲ್ಲ ಕೇಳುವುದು, ಸರ್ಕಾರ ಇದರ ಬಗ್ಗೆ ಸ್ವಲ್ಪ ಹಣವನ್ನು ಬಿಡುಗಡೆ ಮಾಡುತ್ತದೆ. ವಾಸ್ತವಿಕವಾಗಿ ಆ ಹಣ ಏನಾಗುತ್ತದೆ, ಎಲ್ಲಿ ಹೋಗುತ್ತದೆ ಅಂತ ನಮಗೆ ಗೊತ್ತಿದೆ. ಬರಗಾಲ ಪರಿಹಾರ ನಿಧಿಗೆ ಹಣ ಬಿಡುಗಡೆ ಮಾಡಿದರೆ ಕಂಟ್ರಾಕ್ಟರ್, ಇಂಜಿನಿಯರುಗಳು ಮತ್ತು ಇನ್ನಿತರರು ಕೈವಾಡ ಮಾಡಿ ಆ ಹಣ ನಿಜವಾಗಿಯೂ ಆ ಜನಕ್ಕೆ ಸೇರಿದಂತಹ ಪರಿಸ್ಥಿತಿ ಉಂಟಾಗತಕ್ಕಂಥದ್ದನ್ನು ವಾಸ್ತವಿಕವಾಗಿ ನಾವೆಲ್ಲರೂ ಕೂಡ ನೋಡಿರತಕ್ಕಂಥ ವಿಷಯ ಹಾಗಾಗಿ ಈ ಅತಿವೃಷ್ಟಿ ಮತ್ತು ಅನಾವೃಷ್ಟಿಯನ್ನು ತಪ್ಪಿಸಲಿಕ್ಕೆ ನಿರ್ದಿಷ್ಟವಾದಂತಹ ಧೋರಣೆಗಳನ್ನು ನಿಯಮಾವಳಿಗಳನ್ನು ಶಾಶ್ವತವಾಗಿ ಸರ್ಕಾರ

ಮಾಡಬೇಕಾಗುತ್ತದೆ. ನಾವು ಬರಗಾಲವನ್ನು ಎದುರಿಸುತ್ತಿರತಕ್ಕಂತಹ ಹೆಚ್ಚಿನ ಸಂದರ್ಭದಲ್ಲಿ ಇದು ಮಾನವ ನಿರ್ಮಿತವಾದ ಬರಗಾಲವಾಗಿದೆ. ನಮ್ಮಲ್ಲಿ ಬರಗಾಲ ಅಂದರೆ ಬರೀ ಮಳೆ ಬರಲಿಲ್ಲ ಎನ್ನುವಂತಹ ವಾದ ವೇನು ಇದೆ ಆ ವಾದ ಪೂರ್ತಿಯಾಗಿ ಸತ್ಯವಲ್ಲ. ಈಗ ನಮ್ಮ ಜಿಲ್ಲೆಯಲ್ಲಿ ಅಂತರಜಲ ಇಲ್ಲ, ನದಿಗಳು ಇಲ್ಲ, ನಾಲೆಗಳು, ಇಲ್ಲ; ತುಮಕೂರು ಜಿಲ್ಲೆ, ಕೋಲಾರ ಇವೆಲ್ಲವೂ ಹೆಚ್ಚು ಕಡಿಮೆ ಚಿತ್ರದುರ್ಗ ನಾವೆಲ್ಲರೂ ಹೆಚ್ಚುಕಡಿಮೆ ಒಂದೇ ದಾರಿಯಲ್ಲಿದ್ದೇವೆ. ನಮ್ಮಲ್ಲಿ ಕೆರೆಗಳು ಮಾತ್ರ ಹೆಚ್ಚಿಗೆ ಇರತಕ್ಕಂಥಾದ್ದು ಇದೆ. ನಮ್ಮಲ್ಲಿ ನೂರಾರು ವರ್ಷಗಳ ಕೆರೆಗಳು ಇದ್ದು, ಈ ಕೆರೆಗಳಲ್ಲಿ ಹೂಳು ಸಹ ಹೆಚ್ಚಾಗಿ ತುಂಬಿಕೊಂಡಿದೆ. ಈ ಹೂಳು ತೆಗೆಯುವಂತಹ ಕಾರ್ಯಕ್ರಮವನ್ನು ಇದುವರೆಗೂ ಆಗಲಿಲ್ಲ. ಈಗ ಮಾನ್ಯ ಭೈರೇಗೌಡರು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಪ್ರಾಸ್ತಾವಿಕವಾಗಿ ಅವರು ಪ್ರಯತ್ನವನ್ನು ಸಹ ಮಾಡುತ್ತಾ ಇದ್ದಾರೆ. ಆ ಕೆರೆಗಳಲ್ಲಿ ಹೂಳು ತೆಗೆಯುವಂಥದ್ದು ಹೆಚ್ಚು ತೀವ್ರವಾಗಬೇಕು. ಹೂಳನ್ನು ತೆಗೆದು ಕೆರೆಗಳಲ್ಲಿ ನೀರನ್ನು ತುಂಬಿಸಬೇಕು. ನಮ್ಮಲ್ಲಿ ಇನ್ನೊಂದು ಏನು ಸಮಸ್ಯೆ ಇದೆ ಅಂದರೆ ನೂರಾರು ವರ್ಷದಿಂದ ಯಾವುದೇ ಕೆರೆ ಕಟ್ಟೆಗಳ ರಿಪೇರಿ ಅಥವಾ ತೂಬುಗಳು ರಿಪೇರಿ ಆಗಿಲ್ಲ ಮತ್ತು ಕಾಲುವೆಗಳು ರಿಪೇರಿ ಆಗಿಲ್ಲ. ಅಥವಾ ಕೋಡಿ ಹೋಗತಕ್ಕಂತಹ ವೇಸ್ಟ್‌ವೇರ್ ಚಾನಲ್ ಕೂಡ ರಿಪೇರಿ ಆಗಿಲ್ಲ. ತಾವು ಹೂಳು ತೆಗೆದರೂ ಕೂಡ ಅಲ್ಲಿನ ಕೆರೆಯಲ್ಲಿ ಶಾಶ್ವತವಾಗಿ ನೀರು ಉಳಿಯತಕ್ಕಂತಹ ಪರಿಸ್ಥಿತಿಯಲ್ಲಿ ನಮ್ಮ ಕೆರೆಗಳು ಇಲ್ಲ. ನಮ್ಮಲ್ಲಿ ಕೆರೆಗಳು, ಕಟ್ಟೆಗಳು, ಕಾಲುವೆಗಳು, ತೂಬುಗಳು ಹೋಗಿದೆ. ವೇಸ್ಟ್‌ವೇರ್ ಚಾನಲ್ಸ್ ಎಲ್ಲಹೋಗಿದೆ. ಇದನ್ನು ಸರಿ ಮಾಡದೆ ಬರೇ ಹೂಳನ್ನು ತೆಗೆಯುವುದರಿಂದ ನೀರನ್ನು ಶೇಖರಣೆ ಮಾಡಬಹುದು ಅನ್ನುವುದು ಸಾಧ್ಯವಿಲ್ಲ. ಕೆರೆಗಳಲ್ಲಿ ಶಾಶ್ವತವಾಗಿ ನೀರನ್ನು ನಿಲ್ಲಿಸಿದರೆ ಮಾತ್ರ ಒಂದು ಹಂತದಲ್ಲಿ ನಾವು ಅಂತರ್‌ಜಲವನ್ನು ಹೆಚ್ಚಿಸಲಿಕ್ಕೆ ಸಾಧ್ಯವಾಗುತ್ತದೆ. ಇನ್ನೊಂದು ಬಹಳ ಪ್ರಮುಖವಾದಂತಹ ಅಂಶ, ಈ ಕಾಡು. ಅರಣ್ಯ ಮಂತ್ರಿಗಳು ಪಾಪ ಬೇರೆ ಎಲ್ಲೋ ಮಾತನಾಡುತ್ತಿದ್ದಾರೆ. ಅವರು ಗಮನಿಸಿದರೆ ಒಳ್ಳೆಯದಾಗುತ್ತದೆ. ಮಾನವ ನಿರ್ಮಿತವಾದ ಬರಗಾಲವನ್ನು ಶಾಶ್ವತವಾಗಿ ತಡೆಯಬೇಕಾದರೆ ಇದರ ಬಗ್ಗೆ ಅರಣ್ಯ ಇಲಾಖೆಯವರು, ಸಣ್ಣ ನೀರಾವರಿ ಇಲಾಖೆಯವರು ಬಹಳ ಪ್ರಮುಖವಾದ ಪಾತ್ರವನ್ನು ವಹಿಸಬೇಕಾಗುತ್ತದೆ. ಇದರ ಜೊತೆಗೆ ಅರಣ್ಯ ಇಲಾಖೆಯವರೂ ಸಹ ಪ್ರಮುಖವಾದ ಪಾತ್ರವನ್ನು ವಹಿಸಬೇಕಾಗುತ್ತದೆ. ಮರಗಿಡಗಳನ್ನು ನೆಡತಕ್ಕಂಥದ್ದು, ನಮ್ಮಲ್ಲಿ ದುರಂತ ಏನಾಗಿದೆ ಎಂದರೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರ ವಾದ ಎರಡು ರೀತಿಯಲ್ಲಿ ಇದೆ. ಒಂದು ಬೆಟ್ಟ, ಗುಡ್ಡ, ಎಲ್ಲೆಲ್ಲಿ ಈ ಪ್ರದೇಶ ಇರುತ್ತದೋ ಕೃಷಿಗೆ ಯೋಗ್ಯವಲ್ಲದ ಭೂಮಿ ಎಲ್ಲೆಲ್ಲಿರುತ್ತದೋ ಅಲ್ಲಿ ಮರಗಳನ್ನು ನೆಡತಕ್ಕಂತಹ ಕೆಲಸಕ್ಕೆ ಇವರು ಹೋಗುವುದೇ ಇಲ್ಲ. ಹಾಗೆ ಹೋದರೂ ಕೂಡ ಇವರು ಎಂತಹ ಮರಗಳನ್ನು ಹಾಕುತ್ತಾರೆ ಅಂದರೆ ನೀಲಗಿರಿ ಅಕೇಶಿಯಾ ಹಾಕುತ್ತಾರೆ. ಇದು ಮಾನ್ಯ ಎಲ್ಲಾ ಹಿರಿಯ ಮಂತ್ರಿಗಳಿಗೂ ಸದಸ್ಯರಿಗೂ ಗೊತ್ತಿದೆ? ಹಿಂದೆ ನೇರಳೆ ಮರ ಇರುತ್ತಿತ್ತು, ಹೊಂಗೇ

ಮರ, ಹುಣಸೇಮರ, ಬೇವಿನಮರ ಇರುತ್ತಿತ್ತು. ನೂರಾರು, ಸಾವಿರಾರೂ ಮರಗಳು ಇರುತ್ತಿತ್ತು. ಶಾಶ್ವತವಾಗಿ ವಾತಾವರಣಕ್ಕೆ ತಕ್ಕಂತೆ ಇದ್ದವು. ಆದರೆ ಆ ಮರದ ಬಗ್ಗೆ ಏಕೋ ಫಾರೆಸ್ಟ್‌ನವರಿಗೆ ಕಾಳಜೀನೇ ಇಲ್ಲ. ಆ ಮರಗಳನ್ನು ಹಾಕಲಿಕ್ಕೆ ಹೋಗುವುದಿಲ್ಲ, ತೋಟಗಾರಿಕೆ ಇಲಾಖೆಯವರು ಆ ಸಸಿಗಳನ್ನು ಬೆಳೆಯುವುದಕ್ಕೆ ಹೋಗುವುದಿಲ್ಲ.....

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಒಂದು ನಿಮಿಷದಲ್ಲಿ ಉತ್ತರವನ್ನು ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು, ನೀಲಗಿರಿ, ಅಕೇಶಿಯಾ ಅಂತ ಹೇಳುತ್ತಿದ್ದಾರೆ. ಅದನ್ನು ಹಾಕುವುದು ನಿಜ, ನಾನು ಈಗ ಆರ್ಡರ್ ಹೊರಡಿಸಿದ್ದೇನೆ. ಈಗ ಹುಣಸೇ ಹಣ್ಣು, ಬೇವಿನ ಮರ ಬೇರೆ ಬೇರೆ ಹಣ್ಣಿನ ಮರಗಳನ್ನು ಹಾಕಬೇಕು. ಅಂತ ಮಾಡುತ್ತಿದ್ದೇವೆ. ವಿಶೇಷವಾದಂಥ ವ್ಯವಸ್ಥೆ ಮಾಡುತ್ತಿದ್ದೇನೆ. ಅವುಗಳನ್ನು ಕಡಿಮೆ ಮಾಡಿ ಜಾಸ್ತಿ ಹಣ್ಣಿನ ಮರಗಳನ್ನು ಮಾಡುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ತಾವು ಸಮತಟ್ಟಾಗಿ ಬಹಳ ಫಲವತ್ತಾಗಿ ಕೃಷಿಗೆ ಯೋಗ್ಯವಾದಂತಹ ಭೂಮಿಯಲ್ಲಿ ಅರಣ್ಯ ಇಲಾಖೆಯವರು ಈ ಮರಗಳನ್ನು ನೆಡುತ್ತಾರೆ. ಇದು ನಮಗೆ ಅರ್ಥವಾಗುತ್ತದೆ. ಕಾಡಿನಲ್ಲಿ ಬೆಟ್ಟ, ಗುಡ್ಡಗಳಿಗೆ ಹತ್ತಿಕೊಂಡು ಅಲ್ಲಿಗೆ ಹೋಗುವುದಕ್ಕೆ ಆಗುವುದಿಲ್ಲ, ಕಷ್ಟವಾಗುತ್ತದೆ. ಎರಡನೇಯದಾಗಿ ಆ ಜಾಗದಲ್ಲಿ ಮರಗಳನ್ನು ನೆಡಲು ಗುಳಿ ಹೊಡೆಯಬೇಕಾದರೆ ಹಣವು ಜಾಸ್ತಿ ಖರ್ಚಾಗುತ್ತದೆ. ಒಂದು ಟ್ರೆಂಚಸ್‌ಗೆ ಸರ್ಕಾರದವರು 4-50 ಪೈಸೆಯನ್ನು ಅಂತ ಕೊಡುತ್ತಾರೆ. ಇದರಿಂದ ಅವರಿಗೇನೂ ಉಳಿಯುವುದಿಲ್ಲ. ಸಮತಟ್ಟಾದ ಭೂಮಿಯಲ್ಲಾದರೆ 50 ಪೈಸೆಗೆ ಒಂದು ಟ್ರೆಂಚಸ್ ಹೊಡೆಸಿಬಿಟ್ಟು ಉಳಿಕೆ 4-00 ರೂಪಾಯಿಯನ್ನು ಅಧಿಕಾರಿಗಳು ಗುಳುಂ ಮಾಡಿಬಿಡುತ್ತಾರೆ. ಅದಕ್ಕೋಸ್ಕರ ಅವರು ಸಮತಟ್ಟಾದ ಭೂಮಿಯನ್ನು ಹುಡುಕಿಕೊಂಡು ಹೋಗಿ ಬಿಡುತ್ತಾರೆ. ಅವರು ಫಲವತ್ತಾದ ಭೂಮಿ, ಕೃಷಿಗೆ ಯೋಗ್ಯವಾದಂತಹ ಭೂಮಿ ಎಲ್ಲೆಲ್ಲಿ ಇದೆ ಎಂದು ಹುಡುಕಿಕೊಂಡು ಹೋಗುತ್ತಾರೆ, ಮೊದಲು ನೀವು ಅದನ್ನು ತಪ್ಪಿಸಬೇಕು.

ಶ್ರೀ ರಮೇಶ್ ಸಿ.ಜಿಗಜಿಣಗಿ: 50 ಪೈಸೆ ಕೊಟ್ಟು ಸಮತಟ್ಟಾದ ಭೂಮಿಯಲ್ಲಿ ಗುಳಿ ಹೊಡೆದು ಉಳಿಕೆ ಹಣವನ್ನು ಅಧಿಕಾರಿಗಳು ಹೊಡೆಯುತ್ತಾರೆ ಅಂತ ಹೇಳುತ್ತೀರಿ. ಆದರೆ ಆ ಸಮತಟ್ಟಾದ ಲ್ಯಾಂಡ್‌ನ್ನು ಭೂಮಿಯನ್ನು ಕಬಳಿಸುವವರು ಹೊಡೆಯುವರು ಅಂತ ನೀವು ಹೇಳುವುದಿಲ್ಲ. ಬೆಟ್ಟದ ಮೇಲೆ ಗಳ ಹೊಡೆಯುತ್ತಾರಾ ರಂಟೆ ಹೊಡೆಯುತ್ತಾರಾ? ಫಾರೆಸ್ಟ್ ಜಮೀನನ್ನು ಉಳಿಸಿಕೊಳ್ಳಬೇಕಾದರೆ ಇದನ್ನು ಮಾಡಬೇಕಾಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇಲ್ಲಿ ಫಾರೆಸ್ಟ್ ಜಮೀನನ್ನು ಉಳಿಸಬಾರದು ಅಂತ ನಾನು ವಾದ ಮಾಡುತ್ತಿಲ್ಲ. ನೀವು ಪ್ರಯಾರಿಟಿ ಪ್ರಕಾರ ಮರ ಹಾಕಲಿಕ್ಕೆ ಕೊಡಬೇಕಾದಂತಹ

ಜಾಗ ಯಾವುದು? ನಮ್ಮ ಪಕ್ಕದಲ್ಲಿ ಆಂಧ್ರ ಇದೆ, ನೀವು ಬೇಕಾದರೆ ಹೋಗಿ ನೋಡಿ ಬೇಕಾದರೆ ಅರಣ್ಯ ಮಂತ್ರಿಗಳು ಸಹ ಬರಲಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಎರಡೂ ಕಡೆಯಲ್ಲೂ ಮಾಡುತ್ತಿದ್ದೇವೆ. ಅಲ್ಲಿಯೂ ಮಾಡಬೇಕು, ಈ ಜಾಗವನ್ನು ಉಳಿಸಬೇಕು. ಬೆಟ್ಟದ ಮೇಲೂ ಸಹ ಮರಗಳನ್ನು ನೆಡುವ ಕೆಲಸ ಮಾಡುತ್ತಿದ್ದೇವೆ. ನೀವು ಬನ್ನಿ ಬೇಕಾದರೆ, ಕರೆದುಕೊಂಡು ಹೋಗಿ ತೋರಿಸುತ್ತೇನೆ.

ಉಪಾಧ್ಯಕ್ಷರು: ಈಗ ಅವರಿಗೆ ಮಾತನಾಡಲು ಅವಕಾಶ ಕೊಡಿ. ಮಧ್ಯ ಅವರಿಗೆ ಡಿಸ್ಟರ್ಬ್ ಮಾಡಬೇಡಿ. ಶ್ರೀರಾಮರೆಡ್ಡಿಯವರೇ, ಈ ಕಡೆ ನೋಡಿ ಮಾತನಾಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಹಾಗಾಗಿ ಫಸ್ಟ್ ಪ್ರಿಯಾರಿಟಿ ಮರಗಳನ್ನು ಹಾಕಲಿಕ್ಕೆ ಆ ಜಾಗವನ್ನು ಹುಡುಕಿ ಹಾಕಬೇಕು. ಅಲ್ಲದೇ ಜಮೀನಿನ ರಕ್ಷಣೆಯನ್ನು ಮಾಡಬೇಕು. ಹೀಗೆ ಮಾಡಿದರೆ ವಾತಾವರಣ ಎಕಲಾಜಿಕಲ್ ಬ್ಯಾಲೆನ್ಸ್ ಆಗಿ ಮಳೆ ಬರಲಿಕ್ಕೆ ಸಾಧ್ಯವಾಗುತ್ತದೆ. ಹಾಗೆ ಮಾಡದೇ ಇರುವುದರಿಂದ ಮಾನವ ನಿರ್ಮಿತವಾದ ಬರಗಾಲ ಬರುತ್ತದೆಂದು ನಾನು ಹೇಳುತ್ತಿದ್ದೇನೆ. ಒಳ್ಳೆಯ ಮರಗಳನ್ನು ಬೆಳೆದರೆ ಬರಗಾಲವನ್ನು ತಡೆಯಲಿಕ್ಕೆ ಸಾಧ್ಯವಿದೆ. ಅಂತರ್ ಜಲವನ್ನು ಹೆಚ್ಚಿಸಬಹುದು. ವ್ಯವಸಾಯ ಇವತ್ತು ಬರೀ ಮಳೆಯನ್ನು ಆಧಾರಿತವಾಗಿಯೇ ಇಲ್ಲ, ಹೆಚ್ಚು ಜನರು ಅಂಡರ್‌ಗ್ರೌಂಡ್‌ನಿಂದ ನೀರನ್ನು ತೆಗೆದು ವ್ಯವಸಾಯವನ್ನು ಮಾಡುತ್ತಾ ಇದ್ದಾರೆ. ಇದನ್ನು ಹೆಚ್ಚಿಗೆ ಮಾಡಿದಾಗ ಬರಗಾಲದ ತೀವ್ರತೆ ಕಡಿಮೆ ಮಾಡಿದಂತಾಗುತ್ತದೆ. ಆದ್ದರಿಂದ ಅದನ್ನು ರಕ್ಷಣೆ ಮಾಡಬಹುದೆಂದು ನಾನು ಇದನ್ನು ಹೇಳುತ್ತಿದ್ದೇನೆ. ಸರ್ಕಾರ ಈ ಕೂಡಲೇ ಬರಗಾಲಕ್ಕೆ ಒಳಗಾದಂತಹ ಪ್ರದೇಶ, ಅನಾವೃಷ್ಟಿಗೆ ಒಳಗಾದಂತಹ ಪ್ರದೇಶಗಳಿಗೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಕುಡಿಯುವ ನೀರಿನ ಸಮಸ್ಯೆ ಇದೆ. ಮೇವಿನ ಸಮಸ್ಯೆ ಇದೆ. ದನಕರುಗಳಿಗೆ ಮೇವು ಇಲ್ಲ. ಕುಡಿಯುವ ನೀರಿನ ಬಗ್ಗೆ ಮಾನ್ಯ ಶ್ರೀ ಯಡಿಯೂರಪ್ಪನವರು ಹೇಳಿದರು. ಒಂದು ಕೋಟಿ ರೂ. ಬಂದಿಲ್ಲ, ಅರ್ಧ ಅಂಶವೇ ಬಂದಿರುವುದು ಎಂದು ಹೇಳಿದರು. ಈಗ ನಮ್ಮ ಜಿಲ್ಲೆಯ ಒಂದೊಂದು ತಾಲ್ಲೂಕಿಗೆ ಆರು ಲಕ್ಷ ಕೊಟ್ಟಿದ್ದೀರಿ. ಅದರಲ್ಲಿ 10 ಅಥವಾ 20 ಬೋರ್‌ವೆಲ್‌ಗಳನ್ನು ಹಾಕಬಹುದು. ಅದಕ್ಕಿಂತ ಜಾಸ್ತಿ ಹಾಕುವುದಕ್ಕೆ ಸಾಧ್ಯವಿಲ್ಲ. ಯಾವ್ಯಾವ ಜಿಲ್ಲೆಗೆ ಎಷ್ಟು ಅವಶ್ಯಕತೆ ಇದೆ, ಆ ಅವಶ್ಯಕತೆಗೆ ತಕ್ಕಂತೆ ಕುಡಿಯುವ ನೀರಿಗೆ ಮೊದಲು ಹಣವನ್ನು ಬಿಡುಗಡೆ ಮಾಡಬೇಕು. ಕೃಷಿ ಕಾರ್ಮಿಕರಿಗೆ ಕೆಲಸವನ್ನು ಒದಗಿಸಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಲಿಕ್ಕೆ ಕೂಡ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಒಂದೊಂದು ತಾಲ್ಲೂಕಿಗೆ ಕನಿಷ್ಟ ತಲಾ 50 ಲಕ್ಷ ರೂಪಾಯಿಯನ್ನು ಬಿಡುಗಡೆ ಮಾಡಿದರೆ ತಕ್ಷಣ ಪರಿಹಾರವಾಗುತ್ತದೆ. ಬರೀ 3 ಲಕ್ಷ ಮತ್ತು 4 ಲಕ್ಷ ಕೊಡುವುದರಿಂದ ಯಾವುದೇ ರೀತಿಯ ಪರಿಹಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಜೊತೆಗೆ

ಶಾಶ್ವತವಾದಂತಹ ಕಾರ್ಯಕ್ರಮಗಳನ್ನು ರೂಪಿಸಬೇಕು, ತಕ್ಷಣ ಸಣ್ಣ ನೀರಾವರಿ ಇಲಾಖೆಯವರು ಕೆರೆ ಕಟ್ಟೆಗಳನ್ನು, ತೂಬುಗಳನ್ನು, ಕಾಲುವೆಗಳನ್ನು ವೇಸ್ಟ್‌ವೇರ್ ಚಾನಲ್ಸ್‌ಗಳನ್ನು ರಿಪೇರಿ ಮಾಡುವಂತಹ ಕೆಲಸವನ್ನು ಮಾಡಬೇಕು ಅಂತ ಹೇಳಿ ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಉಪಾಧ್ಯಕ್ಷರೆ, ಬರಗಾಲದ ಬಗ್ಗೆ ನಾವು 3 ಭಾಗವಾಗಿ ಚಿಂತನೆ ಮಾಡಬೇಕು. ಒಂದು, ಹತ್ತುವರ್ಷದ ಸರಾಸರಿಯಲ್ಲಿ ಯಾವ ಪ್ರದೇಶಗಳಲ್ಲಿ ಖಾಯಂ ಆಗಿ ಬರಗಾಲ ಇದೆ, 'ಬಿ' ಅಂದರೆ 10 ವರ್ಷಗಳಲ್ಲಿ 2 ವರ್ಷ, 3 ವರ್ಷ, 4 ವರ್ಷ ಇರತಕ್ಕಂತಹ ಬರಗಾಲ, 'ಸಿ' ಅಂದರೆ 10 ವರ್ಷಗಳಿಗೆ ಒಂದು ಸಾರಿ ಅಥವಾ ಆಕಸ್ಮಿಕವಾಗಿ ಬರತಕ್ಕಂತಹ ಬರಗಾಲ. ಹೀಗೆ ನಾವು ಭಾಗ ಮಾಡಿಕೊಳ್ಳಬೇಕು. ಖಾಯಂ ಬರಗಾಲದ ಬಗ್ಗೆ ನಿರಂತರವಾಗಿ ಕಾರ್ಯಕ್ರಮವನ್ನು ಯಾವ ರೀತಿ ಮಾಡಬೇಕು. ಇನ್ನು ಎರಡಕ್ಕೆ ಯಾವಯಾವ ತರಹದ ಕಾರ್ಯಕ್ರಮ ಮಾಡಬೇಕು ಅಂತ ತಾವು ಯೋಚನೆ ಮಾಡಬೇಕಾಗಿದೆ. ಜತೆಗೆ ಕೇಂದ್ರ ಸರ್ಕಾರ ವರ್ಷವರ್ಷ 43 ಕೋಟಿ ರೂಪಾಯಿಗಳನ್ನು ಕೊಡುತ್ತಿದೆ. ಅದು 43 ಕೋಟಿಗೆ ಆಗುವಷ್ಟು ಬರಗಾಲವನ್ನು ಬರೆಸಿಕೊಳ್ಳಿ ಅಂತ ಅಲ್ಲ. ಹೀಗೆ ಮಾಡಿದರೆ ಇಷ್ಟು ಕೋಟಿಗೆ ಇಷ್ಟೇ ಬರಗಾಲ ಬರಬೇಕು ಅಂತ ರೂಲ್ಸ್‌ನ್ನು ಮಾಡಿದ ಹಾಗೆ ಆಗುತ್ತದೆ. ಒಂದು ವರ್ಷ 20 ಕೋಟಿ ಆಗಬಹುದು, ಮತ್ತೊಂದು ವರ್ಷ 70 ಕೋಟಿ ಆಗಬಹುದು. ತಾವು ಕೇಂದ್ರ ಸರ್ಕಾರದ ಜೊತೆ ಮಾತನಾಡಿ, ಸಮಿತಿಗಳು ಏನು ಇದೆಯೋ ಅವರು ಬಂದು ನೋಡಿಕೊಂಡು ಹೋಗಲಿ. ಏಕೆಂದರೆ ಅವರಿಗೆ ಬರಗಾಲ ಬಂದಿಲ್ಲ ಅದಕ್ಕೆ ಅವರು ಬಹಳ ನಿಧಾನ ಮಾಡುತ್ತಾರೆ. ಬರಗಾಲದ ಬಗ್ಗೆ ಬಹಳ ಅಪಾಯ ಸ್ಥಿತಿಯಲ್ಲಿರುವಾಗ ದನಗಳನ್ನು ಮಾರುತ್ತಾರೆ, ರಾಶಿಗಳನ್ನೆಲ್ಲಾ ಮಾರಿ ವಲಸೆ ಹೋಗಿ ಯಾವ ಮಟ್ಟಕ್ಕೆ ದಾರುಣ ಸ್ಥಿತಿ ಇರುತ್ತದೆಂದರೆ ವಯಸ್ಸಾದಂಥವರನ್ನು ಬಿಟ್ಟುಬಿಟ್ಟು ಹೊರಟುಹೋಗುತ್ತಾರೆ. ಅವರು ಯಾವ ಮಟ್ಟದಲ್ಲಿ ಸಾವನ್ನಪ್ಪುತ್ತಾರೆಂದು ಹೇಳಲಿಕ್ಕೇ ಅಸಾಧ್ಯವಾಗುತ್ತದೆ. ಆದುದರಿಂದ ದನಗಳನ್ನು ಉಳಿಸುವುದಕ್ಕೆ ಮೇವಿನ ಬಗ್ಗೆ ನೀವು ಏನು ಮಾಡಿದ್ದೀರಿ? ನಿಜ ಹೇಳಬೇಕೆಂದರೆ ನೀವು ಮೇವಿನ ಬ್ಯಾಂಕ್‌ನ್ನು ಮಾಡಬೇಕು. ಬರಗಾಲ ಬಂದಾಗ ಮೇವನ್ನು ಹುಡುಕುವುದಕ್ಕೆ ಹೋಗಬಾರದು. ಬರಗಾಲ ಬರುತ್ತದೆ ಎನ್ನುವ ಮೊದಲೇ ಮೇವನ್ನು ರೆಡಿ ಮಾಡಿಕೊಳ್ಳಬೇಕು. ಇದರ ಬಗ್ಗೆ ಕಂದಾಯ ಇಲಾಖಾಧಿಕಾರಿಗಳಿಗೆ ನೀವು ಆದೇಶ ಕೊಡಬೇಕು. ಇನ್ನು ಕುಡಿಯುವ ನೀರಿನ ಬಗ್ಗೆ ನಮ್ಮ ಹಿರಿಯರೆಲ್ಲರೂ ಮಾತನಾಡಿದ್ದಾರೆ. ಉದ್ಯೋಗ ನೀತಿ ಬಗ್ಗೆ ಹೇಳುವುದಾದರೆ, 77 ತಾಲ್ಲೂಕುಗಳಲ್ಲಿ ಯಾವ ಯಾವ ಇಲಾಖೆಗಳು ಹೇಗೆ ಉದ್ಯೋಗವನ್ನು ಸೃಷ್ಟಿ ಮಾಡಬಹುದು ಎಂಬುದನ್ನು ಹೇಳಿ ಈಗ ಹಣ ಬಿಡುಗಡೆಯಾಗಿದೆ. ನಾವು ಆಗಾಗ ಹೇಳುತ್ತಲೇ ಇರುತ್ತೇವೆ, ಹಣ ಬಿಡುಗಡೆ ಮಾಡಿ ಎಂದು. ಈ ಎಲ್ಲಾ ಇಲಾಖೆಗಳು ಅಲ್ಲಿ ಕೆಲಸ ಮಾಡಬೇಕು. ಆಮೇಲೆ ಆರೋಗ್ಯ

ಇಲಾಖೆ ಬಗ್ಗೆ ಹೇಳಬೇಕೆಂದರೆ, ಬರಗಾಲ ಪರಿಸ್ಥಿತಿ ಆರೋಗ್ಯ ಇಲಾಖೆಯವರು ವಿಶೇಷವಾಗಿ ಸಂಚಾರಿ ಆರೋಗ್ಯ ಕೇಂದ್ರಗಳ ಮೂಲಕ ತಪಾಸಣೆ ಮಾಡಿ ಅವರಿಗೆ ಆರೋಗ್ಯವನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಬರಗಾಲ ಅಂದರೆ ಕೇವಲ ಕಂದಾಯ ಇಲಾಖೆಗೆ ಸಂಬಂಧಪಟ್ಟ ವಿಚಾರವಲ್ಲ. ಇಡೀ ಮಾನವ ಕುಲ ನಾಶವಾಗತಕ್ಕಂಥ ವಿಚಾರವನ್ನು ಎಲ್ಲಾ ಇಲಾಖೆಯವರು ಗಂಭೀರವಾಗಿ ಪರಿಗಣಿಸಬೇಕು. ಕೇಂದ್ರ ಸರ್ಕಾರದ ಹಣವನ್ನು ಕಾಯ್ದುಕೊಂಡು ಕುಳಿತಿರಬಾರದು. ಇದರಲ್ಲಿ ರಾಜ್ಯ ಸರ್ಕಾರದ ಹೊಣೆಗಾರಿಕೆ ಹೆಚ್ಚಿರಬೇಕು. ಹಿಂದೆ ಬರಗಾಲ ಬಂದಾಗ, ಬಡವರಿಗಾಗಿ ಗಂಜಿ ಕೇಂದ್ರಗಳನ್ನು ತೆಗೆಯುತ್ತಿದ್ದರು. ನನಗೇ ಗೊತ್ತಿರುವ ಹಾಗೆ ನಾವೆಲ್ಲರೂ ಗಂಜಿ ಕಾಯಿಸಿ ಎಲ್ಲ ಜನರನ್ನೂ ಕರೆಸಿ ಗಂಜಿ ಕೊಡತಕ್ಕಂಥ ವ್ಯವಸ್ಥೆ ಇತ್ತು. ಆದುದರಿಂದ ಆಹಾರ ಭದ್ರತೆ ಬಗ್ಗೆ ತಾವು ಚಿಂತನೆಯನ್ನು ಮಾಡಬೇಕು. ಇದಾದಮೇಲೆ ವಲಸೆ ಬಗ್ಗೆ ಹೇಳುವುದಾದರೆ, ಇಂದು ಹಳ್ಳಿಗಳಿಂದ ಬೆಂಗಳೂರಿಗೆ ವಲಸೆ ಬರುವವರು ಜಾಸ್ತಿಯಾಗಿದ್ದಾರೆ, ನಾವು ಮುಂದೆ ವಲಸೆ ಬಂದ ಹಳ್ಳಿಯವರ ಸಂಘವೆಂದು ಮಾಡಬೇಕಾದ ಪರಿಸ್ಥಿತಿ ಬಂದಿದೆ. ವಲಸೆ ಬಂದಿರುವವರಿಗೆ ಹಸಿರುಕಾರ್ಡ್ ಕೂಡ ಇಲ್ಲ. ಅವರು ಫುಟ್‌ಪಾತ್‌ನಲ್ಲಿ ಮಲಗಿರುತ್ತಾರೆ, ಏನೋ ಕಾಲಕಳೆದುಕೊಳ್ಳುತ್ತಾರೆ, ದಿನನಿತ್ಯ ಉದ್ಯೋಗ ಮಾಡುತ್ತಾರೆ. ಈ ರೀತಿ ವಲಸೆ ಬರುವುದನ್ನು ತಡೆಯಬೇಕು. ಇನ್ನು ಯಾವ್ಯಾವ ಬೆಳೆಯನ್ನು ಬೆಳೆಯುವುದಕ್ಕೆ ಅಗೆ ಹಾಕಿದ್ದಾರೆ, ಎಷ್ಟು ನಷ್ಟವಾಗಿದೆ ಅದನ್ನು ಪರಿಶೀಲನೆ ಮಾಡಿಸಿ ತಮ್ಮ ಕಂದಾಯ ಇಲಾಖೆಯಿಂದ ವರದಿ ತರಿಸಿಕೊಂಡು ಆ ರೈತರಿಗೆ ಏನಾದರೂ ಸಹಾಯ ಮಾಡುವ ಬಗ್ಗೆ ಯೋಚನೆ ಮಾಡಬೇಕು. ಇಂದು ಬರಗಾಲ ಬಂದಿರುವುದು ಕೇವಲ 77 ತಾಲ್ಲೂಕುಗಳಲ್ಲಿ ಮಾತ್ರವಲ್ಲ. ಉದಾಹರಣೆಗೆ ಮಂಡ್ಯ ಜಿಲ್ಲೆಯನ್ನು ತೆಗೆದುಕೊಂಡರೆ, ಪಾಂಡವಪುರ ಕ್ಷೇತ್ರದಲ್ಲಿ ಮೇಲುಕೋಟೆ ವಿಭಾಗ, ಶಿಳ್ಳೆರೆ ವಿಭಾಗ, ಕೆ.ಆರ್.ಪೇಟೆಯ ಕೆಲವು ಭಾಗ, ನಾಗಮಂಗಲದಲ್ಲಿ ಕೆಲವು ಭಾಗ, ಮಳವಳ್ಳಿಯಲ್ಲಿ ಕೆಲವು ಭಾಗ ಮತ್ತು ಮಂಡ್ಯ ತಾಲ್ಲೂಕಿನಲ್ಲಿ ಕೆಲವು ಭಾಗ, ಬರಗಾಲ ಪೀಡಿತ ಪ್ರದೇಶಗಳಾಗಿವೆ. ಮಂಡ್ಯ ಎಂದ ಕೂಡಲೇ ಅಲ್ಲಿಗೆ ಕಾವೇರಿ ನೀರು ಬರುತ್ತದೆಯಾದ್ದರಿಂದ ಬರಗಾಲವಿಲ್ಲವೆಂದಲ್ಲ. ಕೆಲವು ಭಾಗಕ್ಕೆ ನೀರಾವರಿಯಾಗಿದೆ, ಕೆಲವು ಭಾಗ ಬರಗಾಲವಾಗಿದೆ. ನಮ್ಮ ಬರಗಾಲದ ಕಾನೂನಿನಲ್ಲಿ ಯಾವುದಾದರೂ ನಿಯಮಾವಳಿ ಇದೆಯೇ ಎಂಬ ಬಗ್ಗೆ ಕಂದಾಯ ಮಂತ್ರಿಗಳು ಹೇಳಬೇಕು. ಏಕೆಂದರೆ ಜೀವವಿಮೆಯವರು ಬೆಳೆ ವಿಮೆಯನ್ನು ಮಾಡಿದ್ದಾರೆ, ಇದರಲ್ಲಿ ಅವರು ಏನು ಹೇಳುತ್ತಾರೆಂದರೆ ಒಂದು ಎಕರೆ ನಷ್ಟವಾದರೆ ನಾವು ಹಣವನ್ನು ಕೊಡುವುದಿಲ್ಲ, ಸಾಮೂಹಿಕವಾಗಿ ನಷ್ಟವಾದರೆ ಮಾತ್ರ ನಾವು ಹಣ ಕೊಡುತ್ತೇವೆ ಎನ್ನುತ್ತಾರೆ.. ಆ ರೀತಿಯಲ್ಲಿ ಸಾಮೂಹಿಕವಾಗಿ ಎಲ್ಲ ಕಡೆ ಬರಗಾಲ ಬಂದರೆ ಮಾತ್ರ ಪರಿಹಾರ ಕೊಡಬೇಕು ಎಂದು ಕಾನೂನು ಏನಾದರೂ ಇದೆಯೇ ಎಂಬ ಬಗ್ಗೆ ತಾವು ಹೇಳಬೇಕು. ಯಾವ ಯಾವ ಭಾಗಾಂಶದಲ್ಲಿ ಬರಗಾಲ ಬಂದಿದೆ ಅದರ ಬಗ್ಗೆ ತಾವು ಚಿಂತನೆಯನ್ನು

ಮಾಡಬೇಕು. ಆಮೇಲೆ ನೀವು ದತ್ತು ತೆಗೆದುಕೊಳ್ಳುವಂಥ ಕೆಲಸವನ್ನು ಮಾಡಿ. ಉದಾಹರಣೆಗೆ ಕೋಲಾರ ಖಾಯಂ ಬರಗಾಲ, ತುಮಕೂರು ಖಾಯಂ ಬರಗಾಲ, ಬಿಜಾಪುರ ಖಾಯಂ ಬರಗಾಲ. ಒಂದು ವರ್ಷದಲ್ಲಿ ಪೂರ್ಣವಾಗಿ ಬರಗಾಲದಲ್ಲಿ ಒಂದು ಜಿಲ್ಲೆಯನ್ನು ದತ್ತು ತೆಗೆದುಕೊಳ್ಳಿ, ಆ ಜಿಲ್ಲೆಗೆ ಬೇಕಾದಂಥ ಎಲ್ಲ ಸವಲತ್ತನ್ನು ಕೊಟ್ಟು ಕನಿಷ್ಠ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ, ಬದಲಾವಣೆಯನ್ನು ಮಾಡಬೇಕು. ಕೆ.ಇ.ಬಿ.ಯವರು ಇದರ ಬಗ್ಗೆ ಬಹಳ ಚಿಂತನೆಯನ್ನು ಮಾಡಬೇಕು. ಅಂತರ್ಜಲದ ಬಗ್ಗೆ ಬೆಳಿಗ್ಗೆ ಚರ್ಚೆ ನಡೆಯುತ್ತಿತ್ತು. ಇದರ ಒಬ್ಬ ಒಬ್ಬ ಭೂಗರ್ಭಶಾಸ್ತ್ರಜ್ಞ ಹೇಳುತ್ತಾನೆ, ಅಂತರ್ಜಲವನ್ನು ಕೇವಲ 30 ಪರ್ಸೆಂಟ್ ಉಪಯೋಗಿಸಿಕೊಂಡಿದ್ದೀರಿ. ಇನ್ನೂ ಭೂಮಿಯಲ್ಲಿಯೇ 70 ಪರ್ಸೆಂಟ್ ಇದೆಯಾದ ಕಾರಣ ಅದನ್ನು ರೀ-ಸೈಕ್ಲಿಂಗ್ ಮಾಡದಿದ್ದರೆ ನೀರು ಕೆಟ್ಟುಹೋಗುತ್ತದೆಂದು ಒಬ್ಬ ಭೂಗರ್ಭಶಾಸ್ತ್ರಜ್ಞ ಹೇಳುತ್ತಾನೆ. ಇನ್ನೊಬ್ಬ ಭೂಗರ್ಭಶಾಸ್ತ್ರಜ್ಞ ಹೇಳುತ್ತಾರೆ, ನೀವು ನೀರನ್ನು ಹೆಚ್ಚು ಉಪಯೋಗಿಸಿಕೊಂಡುಬಿಟ್ಟಿದ್ದೀರಿ, ಆದುದರಿಂದ ಇದನ್ನು ಕಪ್ಪು ಮತ್ತು ಬೂದು ಎಂದು ಡಿಕ್ಲೇರ್ ಮಾಡಿದ್ದೇವೆಂದು ಒಬ್ಬ ಭೂಗರ್ಭಶಾಸ್ತ್ರಜ್ಞ ಹೇಳುತ್ತಾರೆ. ಈ ಎರಡು ಗರ್ಭಶಾಸ್ತ್ರಜ್ಞರ ಬಗ್ಗೆ ರೈತರ ಗರ್ಭಕ್ಕೆ ಭಾರಿ ಅಪಾಯ ಬಂದುಬಿಟ್ಟಿದೆ. ಆದುದರಂದ ಇದರ ಬಗ್ಗೆ ಅತ್ಯಂತ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು. ಅಂತರ್ಜಲ ಪ್ರಕೃತಿಗೆ ಸಂಬಂಧಪಟ್ಟ ವಿಷಯವಾಗಿದೆ. ಈ ಅಂತರ್ಜಲ ಒಂದು ಬಾರಿ ಜಾಸ್ತಿಯಾಗುತ್ತದೆ, ಒಂದು ಬಾರಿ ಕಡಿಮೆಯಾಗುತ್ತದೆ, ಈ ಅಂತರ್ಜಲ ಜಾಸ್ತಿಯಾದಾಗ ಕೆ.ಇ.ಬಿ. ಕನೆಕ್ಷನ್ ಕೊಡುವುದು. ಯಾವಾಗ ಇದು ಕಡಿಮೆಯಾಗುತ್ತದೆ ಆಗ ಕೆ.ಇ.ಬಿ. ಕನೆಕ್ಷನ್ ಕಿತ್ತುಹಾಕುವುದು ಆಗುತ್ತಿದೆ. ಇದು ಪ್ರಕೃತಿಗೆ ಸಂಬಂಧಪಟ್ಟ ವಿಷಯವಾಗಿದೆ. ಆದುದರಿಂದ ಕೆ.ಇ.ಬಿ.ಯವರು ಇದರ ಬಗ್ಗೆ ಅತ್ಯಂತ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು. ಇನ್ನು ರಿಸರ್ವ್ ಬ್ಯಾಂಕ್ ನಾರ್ಮ್ಸ್ ಬಗ್ಗೆ ಈಗಾಗಲೇ ಯಡಿಯೂರಪ್ಪನವರು ಮಾತನ್ನಾಡಿದ್ದಾರೆ. ಒಂದು ಸಾರಿ ಬರಗಾಲ ಬಂದರೆ ರೈತರು ತೆಗೆದುಕೊಂಡ ಸಾಲದ ಬಗ್ಗೆ 'ಏನು ತೀರ್ಮಾನ ಮಾಡಬೇಕು ಎನ್ನುವುದನ್ನೂ ಕೂಡ ಯಡಿಯೂರಪ್ಪನವರು ಹೇಳಿದ್ದಾರೆ. ಆ ನಾರ್ಮ್ಸ್ ಪ್ರಕಾರ ತಾವು ಕೆಲಸವನ್ನು ಮಾಡಬೇಕು. ಸಾಲ ಮನ್ನಾ ಮಾಡತಕ್ಕಂಥ ಪರಿಸ್ಥಿತಿ ಸೃಷ್ಟಿಯಾದರೆ ನೀವು ಸಾಲವನ್ನು ಮಾಡಬೇಕು. ಇಲ್ಲದಿದ್ದರೆ ಬಡ್ಡಿ ಮನ್ನಾ ಮಾಡುವುದಾಗಲಿ ಅಥವಾ ಕಂತುಗಳ ಮೂಲಕ ಒಂದೈದು ವರ್ಷ, ಹತ್ತು ವರ್ಷ ಮೂಲಕ ತೆಗೆದುಕೊಳ್ಳುವ ಬಗ್ಗೆ ರಿಸರ್ವ್ ಬ್ಯಾಂಕ್ ನಾರ್ಮ್ಸ್ ಏನಿದೆ ಅದರ ಪ್ರಕಾರ ಬರಗಾಲದವರಿಗೆ ಅನುಕೂಲಮಾಡತಕ್ಕಂಥ ಸಾಲದ ನೀತಿ ಬಗ್ಗೆ ಸನ್ಮಾನ್ಯ ಹಣಕಾಸಿನ ಮಂತ್ರಿ ತಾವು ಯೋಚನೆ ಮಾಡಬೇಕು. ಇನ್ನೊಂದು ವಿಷಯವೇನೆಂದರೆ ಮಳೆ ಬಂದಮೇಲೆ ಹೊರಟು ಹೋಯಿತು ಎಂದು ತಿಳಿಯಬಾರದು, ಯಾವ ಯಾವ ಕಾಲದಲ್ಲಿ ಮಳೆ ಬರಬೇಕೋ ಆ ಕಾಲದಲ್ಲಿ ಮಳೆ ಬಂದರೆ ಮಾತ್ರ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ, ಹೊರತು ಅಕ್ಟೋಬರ್-ನವೆಂಬರ್ ಒಳ್ಳೆಯ ಮಳೆಯಾಯಿತು, ಆದಕಾರಣ ಇಲ್ಲಿ

ಬರಗಾಲವಿಲ್ಲವೆಂದು ಹೇಳಬಾರದು. ಮಳೆ ಹೊಯ್ಯುವುದರ ಮೂಲಕ ಬರಗಾಲವಲ್ಲ. ಕಾಲಕಾಲಕ್ಕೆ ಮಳೆ ಹುಯ್ಯದೇ ಇದ್ದರೆ ಬೆಳೆಯನ್ನೇ ಬೆಳೆಯಲಿಕ್ಕಾಗದ ಪರಿಸ್ಥಿತಿ ಸೃಷ್ಟಿಯಾದಾಗ ದನಗಳಿಗೆ ಮತ್ತು ಮನುಷ್ಯರಿಗೆ ಆಹಾರದ ಕೊರತೆ ಸೃಷ್ಟಿಯಾದಾಗ, ಅದು ಬರಗಾಲವೆನಿಸಿಕೊಳ್ಳುತ್ತದೆ ಹೊರತು ಮಳೆ ಹೊಯ್ದು ಮಾತ್ರಕ್ಕೆ ಬರಗಾಲ ಹೊರಟು ಹೋಯಿತು ಎಂದು ತಾವು ತಿಳಿದುಕೊಳ್ಳಬಾರದು. ಇನ್ನು ಅತಿವೃಷ್ಟಿಯಲ್ಲಿ ಬೆಳೆ ನಷ್ಟವಾಗುವ ಬಗ್ಗೆ ತಾವು ಅತ್ಯಂತ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು. ಆದರೆ ಈಗ ಏನೂ ಗೊತ್ತಿಲ್ಲದಿರುವವರು ಇದರ ಬಗ್ಗೆ ತೀರ್ಮಾನ ಮಾಡಿದ್ದಾರೆ. ಕಂದಾಯಮಂತ್ರಿಗಳಿಗೆ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ, ಏಕೆಂದರೆ ಅವರೂ ಗಾಂಧಿಟೋಪಿಯನ್ನೂ ಕೂಡ ಹಾಕಿದ್ದಾರೆ. ತಮಗೆ ಗೊತ್ತಿದ್ದರೆ ತಾವು ದಯವಿಟ್ಟು ಸರಿಮಾಡಬೇಕು. ಬಹಳ ಪ್ರಮುಖವಾದ ಟೋಪಿ ಅದು.

ಶ್ರೀ ರಮೇಶ್ ಸಿ.ಜಿಗಜಿಣಗಿ: ಮೊಯಿಲಿಯವರು ಮಾಡಿದ್ದುದು. ನಾವು ಮಾಡಿದ್ದಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ನೀವೂ ಮಾಡಿಲ್ಲ, ಮೊಯ್ಲಿಯವರೂ ಮಾಡಿಲ್ಲ. ಯಾರೋ ಏನೋ ಹೇಳಿದರು ಅದನ್ನು ನೀವು ಮಾಡಿದಿರಿ.

ಶ್ರೀ ಶ್ರೀರಂಗದೇವರಾಯಲು: ಮೊಯಿಲಿಯವರ ಪಿರಿಯಡ್‌ನಲ್ಲಿ ನಾವು ಮಾಡಿದ್ದೇವೆ. ಬರಗಾಲ ಬಂದಾಗ ರಾಯಚೂರು ಜಿಲ್ಲೆಗೆ ಸಾಧಾರಣ 20 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಕಳೆದ ವರ್ಷ ಮಂಡ್ಯ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ 8 ಕೋಟಿ ರೂ.ಗಳ ನಷ್ಟವಾಗಿದೆಯೆಂದು ಹೇಳಿ ಅಂದಾಜು ಪಟ್ಟಿ ಮಾಡಿದರೆ ಕೇವಲ 60 ಲಕ್ಷ ರೂ.ಗಳನ್ನು ಕೊಡುತ್ತಾರೆ, ಇನ್ನುಳಿದ 7 ಕೋಟಿ 40 ಲಕ್ಷ ರೂ.ಗಳ ನಷ್ಟ ಪ್ರಕೃತಿ ವಿಕೋಪದಿಂದೇನಾಗಿದೆ, ಅವರು ಖಾಯಂ ಆಗಿ ಇರಬೇಕೋ ಬೇಡವೋ?

ಶ್ರೀ ರಮೇಶ್ ಸಿ.ಜಿಗಜಿಣಗಿ: ಸರ್ಕಾರ ಕೊಡುವ ಹಣ ಕಾಂಪನ್‌ಸೇಶನ್ ಅಲ್ಲ. ಈಗ 10 ಕೋಟಿ ರೂ.ಗಳ ನಷ್ಟವಾಗಿದ್ದರೆ 10 ಕೋಟಿ ರೂ.ಗಳನ್ನೂ ಕೊಟ್ಟರೆ ಅದು ಕಾಂಫನ್‌ಸೇಶನ್ ಆಗುತ್ತದೆ. ಸರ್ಕಾರದವರು ಕೊಡುವುದು ಕೇವಲ ರಿಲೀಫ್ ಅಷ್ಟೇ. ಸರ್ಕಾರ ರಿಲೀಫ್ ಕೊಡುತ್ತದೆ ವಿನಃ ಕಾಂಪನ್‌ಸೇಶನ್ ಅಲ್ಲ. ಅದನ್ನು ತಾತ್ಕಾಲಿಕವಾಗಿ ಕೊಡತಕ್ಕಂಥದ್ದು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ತಾತ್ಕಾಲಿಕವಾಗಿ ರಿಲೀಫ್ ಅಂತ ಕೊಟ್ಟರೆ ಆತ ಮುಂದೆ ಬದುಕಬೇಕೋ ಅಥವಾ ಬೇಡವೊ? ಒಂದು ಬಾಳೆಗೊನೆಗೆ ರಿಲೀಫ್ ಒಂದೂವರೆ ರೂಪಾಯಿ ತೆಗೆದುಕೊಂಡರೆ ಆತ ಹೇಗೆ ಬದುಕುವುದಕ್ಕಾಗುತ್ತದೆ, ಆತ ಫಾಲಿಡಾಲ್

ಕುಡಿಯಬೇಕಾಗುತ್ತದಷ್ಟೆ. ಇನ್ನು ಕೆರೆಗಳ ಕೋಡಿಬಿದ್ದು ಎಲ್ಲ ತೂಬು, ಎಲ್ಲ ಕಾಲುವೆಗಳು ನಷ್ಟವಾಗಿರುವುದರಿಂದ ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು. ಪ್ರಕೃತಿ ವಿಕೋಪಕ್ಕೆ ಸಿಕ್ಕರುವಂಥ ಆ ಕೆರೆಗಳು, ಕಾಲುವೆಗಳು, ಗ್ರಾಮಗಳು ಮನೆಗಳ ಬಗ್ಗೆ ಪರಿಹಾರದ ಮೊತ್ತವನ್ನು ಹೆಚ್ಚು ಮಾಡುವ ಬಗ್ಗೆ ಯೋಚನೆ ಮಾಡಿ.

ಶ್ರೀ ಟಿ.ವಿ.ಶ್ರೀರಾಮರೆಡ್ಡಿ: ಪರಿಹಾರದ ಮೊತ್ತವನ್ನು ಹೆಚ್ಚು ಮಾಡಿ ಎಂದು ನಾವು ಕಂದಾಯ ಮಂತ್ರಿಗಳಿಗೆ ಹೇಳಿದರೆ. ಅವರು ನಿಯಮಾವಳಿ ಪ್ರಕಾರ ಎಷ್ಟು ಇದೆಯೋ ಅಷ್ಟನ್ನೇ ಕೊಡುವುದಕ್ಕಾಗುವುದು ಎಂದು ಹೇಳುತ್ತಾರೆ. ಯಾವುದನ್ನೇ ಕೇಳಿದರೂ ಕೂಡ ನಿಯಮಾವಳಿ ಎಂದು ಹೇಳಿಬಿಡುತ್ತಾರೆ. ಒಬ್ಬ ರೈತನ ಒಂದು ಎಕರೆಯಲ್ಲಿ 20 ಸಾವಿರ ರೂ.ಗಳ ನಷ್ಟವಾಗಿದ್ದರೂ, ಕೂಡ ನಾವು ಕೊಡುವುದು 500 ರೂಪಾಯಿಗಳನ್ನೇ, ಅವನಿಗೆ ಒಂದು ಲಕ್ಷ ರೂ.ಗಳ ನಷ್ಟವಾಗಿದ್ದರೂ ನಾವು ಕೂಡ ಕೊಡುವುದು 500 ರೂಪಾಯಿ. ಪ್ರಕೃತಿ ವಿಕೋಪಕ್ಕೆ ಸಂಬಂಧಪಟ್ಟ ರೂಲ್ಸ್ ಪ್ರಕಾರ ಅಷ್ಟನ್ನೇ ಕೊಡುವುದಕ್ಕೆ ಬರುತ್ತದೆ ಎನ್ನುವ ವಾದವಿದೆ. ಆದುದರಿಂದ ಈ ನಿಯಮಾವಳಿಗಳನ್ನು ಬದಿಗೊತ್ತಿ ರೈತರಿಗೆ ಎಷ್ಟು ನಷ್ಟವಾಗಿರುತ್ತದೆ ಅದನ್ನು ಕಟ್ಟಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮತ್ತೆ ನಿಯಮಾವಳಿ ಬಗ್ಗೆ ಹೇಳಿದರೆ ನಾವು ಕೇಳುವುದಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಕಡೆಗೆ ನಿಮಗೆ ಇವೆರಡನ್ನೂ ಮಾಡುವುದಕ್ಕೆ ಇಷ್ಟವಿಲ್ಲದಿದ್ದರೆ ಮಳೆಗಾಲದವರೆಗ್ಯಾರಿಗಾದರೂ ಅರ್ಜಿಯನ್ನಾದರೂ ಹಾಕಿಕೊಳ್ಳಿ. ಆಗ ನೀವು ಪರಿಹಾರ ಬೇಗ ಕೊಡ್ತೀರಿ. ಅರ್ಜಿ ಹಾಕಿಯಾದರೂ ಬೇಗ ಮಳೆಯನ್ನು ಬರುವಂತೆ ಮಾಡುವ ಮತ್ತು ಅರ್ಜಿ ಹಾಕಿ ಅತಿವೃಷ್ಟಿಯನ್ನು ನಿಲ್ಲಿಸುವ ಕೆಲಸವನ್ನಾದರೂ ಮಾಡಿ. ಇಲ್ಲದಿದ್ದರೆ ನಿಯಮಾವಳಿ ಮತ್ತು ಕಾನೂನುಗಳನ್ನು ಬದಲಾವಣೆ ಮಾಡಿ. ಇಂಜಿನಿಯರ್ ಇಲಾಖೆ ಎಂದು ಹೇಳಿ ಎಸ್ಸಾರ್ ರೇಟ್‌ನ ಮೇಲೆ ಯಾವ ಯಾವ ಹಣ ಜಾಸ್ತಿ ಮಾಡಿದಿರಿ ಎಂದು ಅದರ ಆಧಾರದ ಮೇಲೆ ತಾವು ದಯವಿಟ್ಟು ಮಾಡಬೇಕು. ಕೊನೆಯದಾಗಿ ಒಂದು ವಿಷಯ. ಈಗ ಬರಗಾಲ ಪರಿಹಾರಕ್ಕಾಗಿ ಬಿಡುಗಡೆ ಮಾಡಿರುವ ಹಣ ನಿಜವಾಗಿಯೂ ನೊಂದ ವ್ಯಕ್ತಿಗೆ ತಲುಪಬೇಕು. ಈ ರೀತಿಯಾಗದಿದ್ದರೆ ತೀರಿಸಿಕೊಂಡು ಬಿಡುತ್ತಾರಷ್ಟೆ. ಆದುದರಿಂದ ಹಣ ಕೊಡುವುದು ಮುಖ್ಯವಲ್ಲ, ಆ ಹಣದ ಉಪಯೋಗ ಬಹಳ ಮುಖ್ಯ. ಸರ್ಕಾರ ಈ ಎರಡು ವಿಷಯಗಳನ್ನು ಅತ್ಯಂತ ಗಂಭೀರವಾಗಿ ಚಿಂತನೆ ಮಾಡಬೇಕು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

+ ಶ್ರೀಮತಿ ಬಿ.ಟಿ.ಲಲಿತಾನಾಯಕ್: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡುವುದಕ್ಕಿಂತ ಮೊದಲು ಒಂದು ಮಾತು. ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ಈ ಅಧಿಕಾರಿಗಳು ನೋಡಿ ಬರುವುದು ಬೇರೆ

ರೀತಿಯಾಗುತ್ತದೆ. ಅಧಿಕಾರಿಗಳು ಯಾವರೀತಿ ನೋಡಿ ಬರುತ್ತಾರೆ, ಹೇಗೆ ಅವರು ಬರಗಾಲವನ್ನು ಅರ್ಥೈಸುತ್ತಾರೆ ಎನ್ನುವುದಕ್ಕೆ 10 ವರ್ಷಗಳ ಹಿಂದೆ ನಾನು ಬರೆದಂತಹ ಕವನವನ್ನು ಓದುತ್ತೇನೆ. ಈಗಲೂ ಕೂಡ ಅದೇ ಒಂದು ಪದ್ಧತಿ ಬೆಳೆದು ಬರುತ್ತಿದೆ. ದಯವಿಟ್ಟು ನನಗೆ ಒಂದೆರಡು ನಿಮಿಷ ಅವಕಾಶ ಮಾಡಿಕೊಡಬೇಕು. ಇದು ನಾನು ಬರಗಾಲವನ್ನು ಕುರಿತು ಬರೆದಂತಹ ಪದ್ಯ,

ನಾಚಿ ಮುದುಡಿತು ಹೂವಿನ ಮಾಲೆ

ಕಾಳಮ್ಮನೂರಿಗೆ ಬರಗಾಲ ಬಂತೆಂದು
ಕಾರ್ಯ ನಿಲ್ಲಲಿಲ್ಲ
ಕಟುಕರಂಗಡಿಯ ಮುಂದೆ
ಕ್ಯೂ ನಿಂತ ದನಗಳ ಕಂಡು
ಯಾವ ನಾಯಕನು ಬೆಚ್ಚಲಿಲ್ಲ
ದಿಕ್ಕೆಟ್ಟ ಜನ ಗುಳೆ ಹೋದದನ್ನು
ಮುದಿ ಅಜ್ಜ-ಅಜ್ಜಿಯರು
ಅಲ್ಲೆ ಉಳಿದುಬಿಟ್ಟಿದ್ದನ್ನು
'ಕಾಲ' ಪರಿಗಣಿಸಲಿಲ್ಲ,
ಕಾಳಮ್ಮನೂರಿಗೆ ಬರಗಾಲ ಬಂತೆಂದು ನಾಡಿನ
ಕಾರ್ಯ ನಿಲ್ಲಲಿಲ್ಲ.

ಹಬ್ಬ ಹುಣ್ಣಿಮೆ ಬಂತು
ತೇರು ಪರಿಷೆ ಮೇಳ ಬಂತು
'ನಾಟಕ' ಕಂಪನಿ ಬಂತು,
ಕಾಮಧೇನು ಕಲ್ಪವೃಕ್ಷ
ಕಣ್ಣೆದುರೇ ಕಾಣಿಸಿದಾಗ,
ಕಾಳಮ್ಮನೂರ ಸುದ್ದಿ ಕಸದ ಬುಟ್ಟಿಗೆ ಬಿತ್ತು.
ಒಂದು ಅಪರಾಹ್ನದ ಹೊತ್ತು
ಕಾಳಮ್ಮನೂರಿನ ಹಾಳು ಬೇಳ್ವಾದಿಯಲಿ
ಕಾರೊಂದು ಹರಿದು ಬಂತು,
ಬಂದೆಯೂ ಎನಲು ಮಂದಿಯೇ ಇರಲಿಲ್ಲ

ಮುತ್ತಿಕೊಳ್ಳಲು ಇನ್ನು ಮಕ್ಕಳೆಲ್ಲಿ?
ಬಸುರಿ ಬಾಣಂತಿಯರು,
ಅಳಿದುಳಿದ ಮುದುಕರು,
ಬಂದು ಅಡ್ಡುದ್ದಬಿದ್ದರು

ಆಸೆ ತುಂಬಿದ ನೋಟ ಹಾಯಿಸುತ್ತ
'ಹಸಿದು ನೊಂದವರು ಧಣಿ ನಾವು'
ಎನ್ನುತ್ತ ತೊದಲಿದರು - ಮುಂದೆ
ಬಿಗಿದ ಕೊರಳಿಂದ ಮಾತು ಹೊರಡಲಿಲ್ಲ.

ಕಾರಿಂದ ಇಳಿದ ಸಾಹೇಬರು ಕನಿಕರದ ನಗೆಬೀರುತ್ತ
ಕ್ಯಾಮರವ ಕ್ಲಿಕ್ಕಿಸಿದರು.
ಕಾರೊಳಗೆ ತೂಗಿದ್ದ ಹೂಮಾಲೆಯೊಂದನ್ನು ತೆಗೆದು
ಬಸುರಿ ಕಾಳಮ್ಮನ ಕೈಗಿತ್ತು ನುಡಿದರು.
''ನೀ ಬಡವಿಯಾದರೇನಂತೆ?
ಚೆಲುವಿನಲಿ ಅಗದಿ ಸಿರಿವಂತೆ,
ತೆಗೆದುಕೋ ಇದ ಮುಡಿದುಕೊಳ್ಳುವೆಯಂತೆ
ಉದಾರಿ ಸಾಹೇಬರ ಕಾರು ಧೂಳೆರಚಿ ಓಡಿತು,
ಕಾಳಮ್ಮನೂರ ಜನ ಕಣ್ಕಣ್ಣು ಬಿಟ್ಟರು.
ಕೆಮ್ಮಿದರು ಬಿಕ್ಕಿದರು, ಕಂಬನಿಯ ಮಿಡಿದರು
ಅವರ ಒಡಲ ಕಿಚ್ಚಿನ ಬಿಸಿಗೆ ತತ್ತರಿಸಿತು ಹೂಮಾಲೆ
ನೋವು ನಾಚಿಕೆಯಿಂದ ಮುದುಡಿ ಹಿಡಿಯಾಯ್ತು....

ಹೀಗೆ ಹೂವಿನ ಮಾಲೆಗೆ ನಾಚಿಕೆ ಬಂತು. ಆದರೆ ಮನುಷ್ಯರಿಗೆ ನಾಚಿಕೆ ಬರಲಿಲ್ಲ ಎನ್ನುವ ರೀತಿಯಲ್ಲಿ ಅಧಿಕಾರಿಗಳು ಹೋಗಿ ಬರುತ್ತಾರೆ. ಆದುದರಿಂದ ನಮ್ಮೂರಿನ ಜನ ವಲಸೆ ಹೋಗಿದ್ದಾರೆ. ಯಾರೂ ಕೂಡ ಊರಿನಲ್ಲಿ ಇರಲ್ಲ. ಅವರೆಲ್ಲಾ ಸಾಯುವ ಮೊದಲು ಅವರಿಗೆ ಏನಾದರೂ ಮಾಡಬೇಕು. ಮೊನ್ನೆ ನಮ್ಮಲ್ಲಿ ಉಸ್ತುವಾರಿ ಸಚಿವರು ಒಂದು ಸಭೆ ಕರೆದಿದ್ದರು. ಆ ಸಂದರ್ಭದಲ್ಲಿ ನಮಗೆಲ್ಲಾ ಇಷ್ಟಿಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಅದನ್ನಾದರೂ ಆದಷ್ಟು ಬೇಗ ಬಿಡುಗಡೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಎಂ.ವೀರಪ್ಪಮೊಯಿಲಿ (ಕಾರ್ಕಳ ಕ್ಷೇತ್ರ): ಮಾನ್ಯ ಉಪಾಧ್ಯಕ್ಷರೇ, ಈಗ ಅತಿವೃಷ್ಟಿ, ಅನಾವೃಷ್ಟಿ ಬಗ್ಗೆ ಸಾಕಷ್ಟು ನಮ್ಮ ಹಿರಿಯ ನಾಯಕರೆಲ್ಲ ವಿಶ್ಲೇಷಣೆ ಮಾಡಿದ್ದಾರೆ, ಮಾತನಾಡಿದ್ದಾರೆ. ನಾನು ಬಹಳ ವಿವರಕ್ಕೆ ಹೋಗುವುದಿಲ್ಲ. ಆದರೆ ಕೆಲವು ವಿಚಾರ ಮಾತ್ರ ತಮ್ಮ ಮುಖೇನ ಮಾನ್ಯ ಸಚಿವರ ಗಮನಕ್ಕೆ ಮತ್ತು ಮಾನ್ಯ ಸಚಿವ ಸಂಪುಟದ ಗಮನಕ್ಕೆ ತರಬೇಕೆಂದು ಅಪೇಕ್ಷೆ ಪಡುತ್ತಿದ್ದೇನೆ. ಈಗ ಅತೀವೃಷ್ಟಿ, ಅನಾವಷ್ಟಿ ಸಾಮಾನ್ಯವಾಗಿ ಪ್ರತಿವರ್ಷ ಕೂಡ ಆಗುತ್ತದೆ. ಆದರೆ ಈ ವರ್ಷ ಸ್ವಲ್ಪ ಜಾಸ್ತಿಯಾಗಿದೆ. ಈಗ ಸುಮಾರು ಫೈನಾನ್ಸ್ ಕಮಿಷನರ್ ಪ್ರಕಾರ 62 ಕೋಟಿ ರೂಪಾಯಿ ನಿಮಗೆ ಸೀಲಿಂಗ್ ಕೊಟ್ಟಿದ್ದಾರೆ. ಯಾವಾಗ ನಾವು ಕೇಂದ್ರಕ್ಕೆ ಕೇಳಬಹುದೆಂದರೆ, ಆ

ಸೀಲಿಂಗ್‌ನ್ನು ಮೀರಿ ನೀವು ಖರ್ಚು ಮಾಡತಕ್ಕಂಥ ಒಂದು ವ್ಯವಸ್ಥೆ ಅತಿವೃಷ್ಟಿ ಮತ್ತು ಅನಾವೃಷ್ಟಿ ಒಂದು ಕ್ಷೇತ್ರದಲ್ಲಿ ಇದ್ದರೆ ತಾವು ಕೇಂದ್ರಕ್ಕೆ ಒಂದು ಮೆಮೋರಾಂಡಂ ಅನ್ನು ಕಳುಹಿಸಬೇಕಾಗುತ್ತದೆ. ಒಂದು ವೇಳೆ 62 ಕೋಟಿ ರೂಪಾಯಿ ಒಳಗಾಗಿ ಪರಿಹಾರ ಅಥವಾ ತಾವು ಕಾಮಗಾರಿ ಅದು ಯಾವುದೇ ತೆಗೆದುಕೊಳ್ಳಬೇಕಾದರೆ ಅದರ ಒಳಗೆ ಖರ್ಚು ಮಾಡತಕ್ಕಂಥ ಸಂಪೂರ್ಣ ಹಕ್ಕು ರಾಜ್ಯಸರ್ಕಾರಕ್ಕೆ ಇದೆ. ಇಲ್ಲಿ ಪ್ರಶ್ನೆ ನಮಗೆ ಬಹಳ ಸ್ಪಷ್ಟವಾಗಿಲ್ಲ. ಏಕೆಂದರೆ ತಮ್ಮ ಪತ್ರಿಕಾ ಹೇಳಿಕೆಗಳು, ತಾವು ಹೇಳಿದಂತಹ ಹೇಳಿಕೆಗಳು, ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತಹ ಹೇಳಿಕೆಗಳು, ಇದನ್ನೆಲ್ಲಾ ನೋಡಿದಾಗ ನಮಗೆ ಒಂದು ಪರಿಸ್ಥಿತಿ ಅಸ್ಪಷ್ಟವಾಗಿದೆ. ಬಹುಶಃ ಇವತ್ತು ತಮ್ಮ ಹೇಳಿಕೆಯ ಮೂಲಕ ಸ್ಪಷ್ಟ ಮಾಡುತ್ತೀರೆಂದು ನಾವು ವಿಶ್ವಾಸದಿಂದ ಇದ್ದೇವೆ. ಆದರೆ ನಾವು ಇವತ್ತು ಕಂಡುಕೊಂಡ ಪ್ರಕಾರ ಯಾವಾಗ ನಿಮಗೆ ಸ್ಪಷ್ಟ ಚಿತ್ರ ಗೊತ್ತಾಗುತ್ತದೆ? ಅನಾವೃಷ್ಟಿಯಾದಾಗ, ಆಯಾಯ ಜಿಲ್ಲೆಯಲ್ಲಿ ಆ್ಯಕ್ಷನ್ ಪ್ರೋಗ್ರಾಂ ಅನ್ನು ನೀವು ತಯಾರು ಮಾಡಬೇಕು. ಆಗ ಎಷ್ಟು ಎಸ್ಟಿಮೇಟೆಡ್ ಕಾಸ್ಟ್ ಎಂದು ಗೊತ್ತಾಗುತ್ತದೆ. ಈಗ ತಾವು ಏನು ಹೇಳುತ್ತೀರಿ, ಇಲ್ಲ ಆ್ಯಕ್ಷನ್ ಪ್ರೋಗ್ರಾಂ ಎಲ್ಲಾ ಜಿಲ್ಲಾಪಂಚಾಯಿತಿಯವರು ಅಥವಾ ತಾಲ್ಲೂಕು ಪಂಚಾಯಿತಿಯವರು ತಯಾರು ಮಾಡಿದ್ದಾರೆಂದು. ಅದೂ ಕೂಡ ನನಗೆ ತಿಳಿದ ಮಟ್ಟಿಗೆ ಅನೇಕ ಜಿಲ್ಲೆಗಳಲ್ಲಿ ಇವತ್ತು ಕೂಡ ತಾಲ್ಲೂಕು ಮಟ್ಟದ ಆ್ಯಕ್ಷನ್ ಪ್ರೋಗ್ರಾಂ ಅಪ್ರೂವ್ ಆಗಿಲ್ಲ. ಆದುದರಿಂದ ಜಿಲ್ಲಾಪಂಚಾಯಿತಿಯ ದಿಸೆಯಿಂದ ನೋಡಿದರೂ ಕೂಡ ಇವತ್ತು ಎಷ್ಟು ಹಣ ಖರ್ಚು ಮಾಡಬೇಕು? ಏನು ಆ್ಯಕ್ಷನ್ ಪ್ರೋಗ್ರಾಂ ಇದೆ? ಎಷ್ಟು ಜನರಿಗೆ ಎಂಪ್ಲಾಯ್‌ಮೆಂಟ್ ಕೊಡಬೇಕಾಗಿದೆ? ಈ ಒಂದು ಆಧಾರ ಇಲ್ಲದ ನೀವು ರಾಜ್ಯಸರ್ಕಾರ ಕೂಡ ನಿರ್ಣಯ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅಥವಾ 62 ಕೋಟಿ ರೂಪಾಯಿಗಿಂತ ಹೆಚ್ಚು ಖರ್ಚು ಮಾಡಬೇಕು ಎಂದು ಹೇಳಿದರೂ ಕೂಡ ಕೇಂದ್ರಕ್ಕೆ ಮೆಮೋರಾಂಡಂ ಕಳುಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನೀವು ಕಾಮಗಾರಿಯನ್ನು ಸಮರೋಪಾದಿಯಲ್ಲಿ ತೆಗೆದುಕೊಳ್ಳಬೇಕು. ಆದರೆ ಅದಕ್ಕೆ ಬೇಕಾದಂತಹ ಸಿದ್ಧತೆ ಏನಿದೆ ಅದನ್ನು ಕೂಡ ತಾವು ಸಮರೋಪಾದಿಯಲ್ಲಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಕಾಮಗಾರಿ ಎಲ್ಲಿ ಆಗಬೇಕು? ಇವತ್ತು 50 ಲಕ್ಷ ರೂಪಾಯಿ ಒಂದು ಜಿಲ್ಲೆಗೆ ಎಂದು ರಿಲೀಜ್ ಮಾಡುತ್ತೀರಿ. ಒಂದು ಕೋಟಿ ರಿಲೀಜ್ ಮಾಡುತ್ತೀರಿ. ಏಕೆ ಮಾಡುತ್ತೀರಿ? ಅವರ ಬೇಡಿಕೆ, ಏನಿದೆ, ಅದು ಸಾಧುವಾದ ಬೇಡಿಕೆ. ಏಕೆಂದರೆ ಕೆಲವು ವ್ಯತ್ಯಾಸಗಳು ಆಡಳಿತಗಳಲ್ಲಿ ಇದೆ. ಒಂದು ಕಡೆ ಜಿಲ್ಲಾಪಂಚಾಯತ್, ಅವರದೇ ಆದಂತಹ ಕಮಿಟೆಡ್ ಕಾರ್ಯಕ್ರಮಗಳು ಇದೆ, ಅಲ್ಲಿ ಅವರದೇ ಜನ ಜನಪ್ರತಿನಿಧಿಗಳಿದ್ದಾರೆ. ತಾವು ಹೇಳಿದರೆ ಅವರು ಮಾಡುವುದಿಲ್ಲ? ಮಾಡಬೇಕಾಗಿಲ್ಲ. ಏಕೆಂದರೆ They enjoy that kind of autonomy. ಆದುದರಿಂದ ತಾವು ಇವತ್ತು ಒಂದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದರೆ ಬರಗಾಲ ಅಥವಾ ಅನಾವೃಷ್ಟಿ ಅಥವಾ ಅತೀವೃಷ್ಟಿ ಕಾರ್ಯಕ್ರಮ ಸರ್ಕಾರದ ಜವಾಬ್ದಾರಿ ಎಂದು ಮೊದಲು ತಿಳಿದುಕೊಳ್ಳಬೇಕು. ಅದು

ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಜವಾಬ್ದಾರಿ ಎಂದು ಹೇಳಿ ನೀವು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ಕೆಲಸವಾಗುವುದಿಲ್ಲ. ಈ ಜವಾಬ್ದಾರಿ ಸರ್ಕಾರದ ಜವಾಬ್ದಾರಿ. ಅದು ಸರ್ಕಾರದ ಜವಾಬ್ದಾರಿ ಎಂದು ಒಂದನೆಯದಾಗಿ ತಾವು ನಿರ್ಣಯ ತೆಗೆದುಕೊಳ್ಳಬೇಕು. ಸರ್ಕಾರದ ಜವಬ್ದಾರಿ ಎಂದು ಹೇಳಿದಮೇಲೆ ತಾವು ಬೇರೆಬೇರೆ ಏಜೆನ್ಸಿ ಮಾಡಬಹುದು. ಆದರೆ ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್‌ಗೆ ನೀವು ನಿಮಗೆ ಇರತಕ್ಕಂಥ ಜವಾಬ್ದಾರಿ ಅವರಿಗೆ ಇರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅವರು ಏನು ತಿಳಿದುಕೊಳ್ಳುತ್ತಾರೆ ಅದೇ ಅವರಿಗೆ ತುರ್ತು, ಅದೇ ಹೆಚ್ಚಿನ ಜವಾಬ್ದಾರಿ, ಅದೇ ಅವರ ಆದ್ಯತೆ. ಆದುದರಿಂದ ತಾವು ದಯಮಾಡಿ ಈ ಮೂಲತಃ ಸೈದ್ಧಾಂತಿಕವಾದಂತಹ, ಈ ನಿರ್ಣಯವನ್ನು ಸರ್ಕಾರದಲ್ಲಿ ತೆಗೆದುಕೊಳ್ಳದೇ ಇದ್ದರೆ ನೀವು ಹಣವನ್ನು ಎಷ್ಟೇ ಬಿಡುಗಡೆ ಮಾಡಿ, ಈ ಕಾರ್ಯಕ್ರಮ ಯಶಸ್ವಿಯಾಗುವುದಿಲ್ಲ. ಆದರೆ ನೀವು ಹೇಳಬಹುದು ಹಣ ಬಿಡುಗಡೆ ಮಾಡಿದ್ದೇವೆಂದು. ಆದರೆ ನಮಗೆ ಈ ಫೀಲ್ಡ್‌ನಲ್ಲಿ ಈ ಪ್ರಭಾವ, ಪರಿಣಾಮ ಇವತ್ತು ಏನೂ ಕಾಣುತ್ತಿಲ್ಲ. ಇದು ಈ ಕಡೆ ಇರುವವರೆಲ್ಲರ ಅಭಿಪ್ರಾಯ. ಬಹುಶಃ ಆ ಕಡೆಯವರೂ ಕೂಡ ಇದನ್ನು ನೀವು ವಿಚಾರ ಮಾಡಬೇಕಾದಂತಹ ಸಂಗತಿ. ಇಲ್ಲದಿದ್ದರೆ ಇವತ್ತು ಜನರಿಗೆ ತೊಂದರೆಯಾಗುತ್ತದೆ. ಏಕೆಂದರೆ ಇದೇ ಈ ಪರಿಸ್ಥಿತಿ ಮುಂದೆ ಬರುವುದಿಲ್ಲ. ಕೆಲವು ಸಾರಿ ನಾವು ಏನು ತಿಳಿದುಕೊಳ್ಳುತ್ತೇವೆ? ಕಾಲಯ ತಸ್ಮೈ ನಮಃ ಎಂದು ಕಾಲಕ್ಕೆ ಶರಣು ಎಂದು ಹೇಳುತ್ತೇವೆ. ಹೀಗಾಗಿ ಇದರಿಂದ ಜನ ಬಹಳ ಬವಣೆ ಪಡುತ್ತಾರೆ. ನೀವು ಜನರಿಗೆ ನೇರವಾಗಿ ಸಹಾಯ ಮಾಡತಕ್ಕಂಥಾದ್ದು ಅದು ಖಂಡಿತವಾಗಿ ಕೂಡ ಆಗುವುದಿಲ್ಲ. ಇವತ್ತು ಕೂಡ ನೀವು ಹೇಳಬೇಕಾಗುತ್ತದೆ, ಇಂತಹ ತಾಲ್ಲೂಕುಗಳಲ್ಲಿ ಅನಾವೃಷ್ಟಿ ದಿಸೆಯಿಂದ ಇಷ್ಟು ಆ್ಯಕ್ಷನ್ ಪ್ರೋಗ್ರಾಂ ಮಾಡಬೇಕು, ಇಷ್ಟು ಜನರಿಗೆ ಕೆಲಸ ಸಿಗಬೇಕು, ಇಷ್ಟು ಜನರಿಗೆ ಕೇಸ್ ಕೊಟ್ಟಿದ್ದೇವೆಂದು you have to give the statistics. ಇವತ್ತು ಸ್ಯಾಂಪಲ್ ಆಗಿ ಇಷ್ಟು ತಾಲ್ಲೂಕು ಅಥವಾ ಇಷ್ಟು ಡಿಸ್ಟ್ರಿಕ್ಟ್ ಎಂದು ವಿವರ ಕೊಡಿ. ಇಷ್ಟು ಮಾಡದೇ ಇದ್ದರೆ ಹೇಗೆ? ಏಕೆಂದರೆ ರೆವಿನ್ಯೂ ಕಮಿಷನರ್ ಅಥವಾ ಅವರಿಂದ ಡೆಸಿಗ್ನೇಟ್ ಆದ ಒಬ್ಬ ರಿಲೀಫ್ ಕಮಿಷನರ್ ಇರುತ್ತಾರೆ. ಆ ರಿಲೀಫ್ ಕಮಿಷನರ್ ಎಷ್ಟು ಟೂರ್ ಮಾಡಿದ್ದಾರೆ ಹೇಳಿ? ಯಾವ ಕಡೆ ಹೋಗಿ ಯಾವ ರೈತರ ಜೊತೆ ಮಾತನಾಡಿದ್ದಾರೆ? ಯಾವ ತಾಲ್ಲೂಕಿಗೆ ಹೋಗಿದ್ದಾರೆ? ಎಷ್ಟು ಡಿಸ್ಟ್ರಿಕ್ಟ್‌ಗೆ ಹೋಗಿದ್ದಾರೆ? ತಾವು ಹೋಗಿರಬಹುದು, ತಾವು ಇಲ್ಲಿ ರಿವ್ಯೂ ಮಾಡಿರಬಹುದು. This requires lot of co-ordination between various departments. ಬರೀ ನೀವು ರೆವಿನ್ಯೂ ಕೋ-ಆರ್ಡಿನೇಟಿಂಗ್ ಕನ್ವೀನರ್ ಆಗಿರಬಹುದು. ಆದರೆ ಸರಿಯಾದಂತಹ ಒಂದು ಸಂಘಟನೆಯಾದಂತಹ, ಒಂದು ಸಂಯೋಜನೆಯಿಂದ ತಾವು ಕೆಲಸ ಮಾಡದೇ ಇದ್ದರೆ ಆ ಕೆಲಸ ಏನು ನಡೆಯುವುದೇ ಇಲ್ಲ. ಯಾವುದೋ ಒಂದು ಇಲಾಖೆ ಮಾಡಬಹುದು, ಮತ್ತೊಂದು ಇಲಾಖೆ ಮಾಡಬಹುದು. ಆದರೆ ಸಮಗ್ರವಾಗಿ ಈ ಸಮಸ್ಯೆಯನ್ನು ಎದುರಿಸತಕ್ಕಂಥ

ಮನಸ್ಸಿನ ಸಿದ್ಧತೆ ಭೌತಿಕವಾದಂತಹ ಸಿದ್ಧತೆ ಈ ಎರಡೂ ಜೊತೆ ಜೊತೆಯಲ್ಲಿ ಇವತ್ತು ಹೋಗುವಂತಹ ಅವಶ್ಯಕತೆ ಬಹಳ ಇದೆ. ನಾನು ಅದನ್ನು ಕಾಣಲೇ ಇಲ್ಲ. ರಿಲೀಫ್ ಕಮಿಷನರ್ ಕೂಡ ಆ ರಿಲೀಫ್ ಕಮಿಷನರ್ ಕಾನ್ಸ್‌ಪ್ಟ್ ಮರೆತು ಬಿಟ್ಟಿದ್ದಾರೆ ಎಂದು ನನಗೆ ಅನುಮಾನವಾಗುತ್ತದೆ. ಆದರೆ ಆ ರಿಲೀಫ್ ಕಮಿಷನರ್ ಎಷ್ಟು ಕಡೆ ಟೂರ್ ಮಾಡಿದ್ದಾರೆ? ಏನು ವರದಿ ಕೊಟ್ಟಿದ್ದಾರೆ? Relief commissioner may work ರಿಲೀಫ್ ಕಮಿಷನರ್ ತಯಾರು ಮಾಡಿದಂತಹ ವರದಿ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತಹ ಸಮಗ್ರವಾದ ವರದಿಯನ್ನು ಈ ಸದನದ ಮುಂದೆ ಇಡಿ. let me have the report ಅದಕ್ಕೆ ನಾವು ಸಲಹೆ ಕೊಡುವುದಕ್ಕಾಗುತ್ತದೆ. ತಾವು ದಯಮಾಡಿ ಅದು ಕ್ರೋಡಿಕರಣವಾಗದೇ ಇದ್ದರೆ ನೀವು ಇಲ್ಲಿ ಪರಿಣಾಮಕಾರಿಯಾಗಿ ಫೈನಾನ್ಸ್ ಮಂತ್ರಿಯವರ ಹತ್ತಿರ ಮಾತನಾಡಬಹುದು. ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಮಾತನಾಡಬಹುದು. ಇದು ನಿಮಗೆ 62 ಕೋಟಿ ರೂಪಾಯಿ ಮೀರುತ್ತದೆ. ನನಗೆ ಗೊತ್ತಿದೆ, ಒಂದು ಪ್ರೈಮಾಫೇಸಿ, ಕಡಿಮೆ ಎಂದರೂ ಒಂದು ನೂರು ಕೋಟಿ ರೂಪಾಯಿಯಾದರೂ ನಿಮಗೆ ಬೇಕು. ನೀವು 60 ಕೋಟಿ ರೂಪಾಯಿಯಲ್ಲಿ 22 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೀರಿ. ಅದು ಎಷ್ಟು ಖರ್ಚಾಗಿದೆ? ಅದು ಯಾವ ತಾಲ್ಲೂಕಿಗೆ ಹೋಗಿದೆ ಅದು ಪ್ರತ್ಯೇಕ. ಆದರೆ 62 ಕೋಟಿ ರೂಪಾಯಿಯಲ್ಲಿ 22 ಕೋಟಿ ರೂಪಾಯಿ ಖರ್ಚು ಮಾಡಿದಾಗ I must say ಬಹಳ ನಾರ್ಮಲ್ ಆಗಿದೆ ಅಷ್ಟೇ ಹೊರತು ಅನಾವೃಷ್ಟಿ, ಅತೀವೃಷ್ಟಿ ಇಲ್ಲ ಎಂದು ಹೇಳಿ ಸರ್ಟಿಫಿಕೇಟ್ ಕೊಟ್ಟಹಾಗೆ ಆಗುತ್ತದೆ. 25 ಕೋಟಿ ರೂಪಾಯಿ ನಾರ್ಮಲ್ ಇಯರ್‌ನಲ್ಲಿ ಕೂಡ ಖರ್ಚಾಗುತ್ತದೆ. ಈ ಅನಾವೃಷ್ಟಿ, ಅತೀವೃಷ್ಟಿ That demonstrates, the fact that you have not taken it very seriously. ಅಥವಾ ಅತೀವೃಷ್ಟಿ ಅನಾವೃಷ್ಟಿ ತೀವ್ರವಾಗಿ ಇಲ್ಲ ಎಂದು ಹೇಳಿ ಒಂದು ನಿರ್ಣಯಕ್ಕೆ ಇವತ್ತು ಸಾರ್ವಜನಿಕರು ಅಥವಾ ನಮ್ಮ ಕರ್ನಾಟಕ ರಾಜ್ಯ ಅಥವಾ ನಮ್ಮ ಪ್ಲಾನಿಂಗ್ ಕಮಿಷನ್ ಬರುವುದಕ್ಕೆ ಸಾಧ್ಯತೆ ಇದೆ.

4.20 ಪಿ.ಎಂ

Rs. 22 Crores is no money at all. ಏಕೆಂದರೆ ಇವೊತ್ತಿನವರೆಗೆ ಅಂದರೆ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ನೀವು 22 ಕೋಟಿ ಖರ್ಚು ಮಾಡಿದರೆ ಇದರಲ್ಲಿ ಯಾವ ಅರ್ಜೆನ್ಸಿ ತೋರಿಸಿದಂತಾಯಿತು; ಯಾವ ಆದ್ಯತೆಯನ್ನು ತೋರಿಸಿದಂತಾಯಿತು? ಕೇವಲ ದುಡ್ಡು ಬಿಡುಗಡೆ ಮಾತ್ರ. ಆದ್ದರಿಂದ ದಯಮಾಡಿ ಈ ಅಂಕಿಅಂಶಗಳನ್ನು ಕೊಟ್ಟು ನಾವೆಲ್ಲ ಪ್ರಾಮಾಣಿಕವಾಗಿ ಕೆಲಸಮಾಡಿದ್ದೇವೆ ಎಂದು ಹೇಳಿದರೆ ಅದು ಪ್ರಾಮಾಣಿಕವಾದ ಹೇಳಿಕೆ ಖಂಡಿತವಾಗಿಯೂ ಕೂಡ ಆಗುವುದಿಲ್ಲ. It is very normal. ನಾವು ಆವರೇಜ್ ತೆಗೆದುಕೊಳ್ಳೋಣ. ನಾರ್ಮಲ್ ಇಯರ್‌ಗಳಲ್ಲಿ ಎಷ್ಟಾಗುತ್ತದೆ ಎಂದು ಕೊಟ್ಟರೆ ಅದಕ್ಕಿಂತ ಜಾಸ್ತಿ ಆಗುವುದಿಲ್ಲ. ಅದನ್ನು

ಸಮಗ್ರವಾಗಿ ಪರಿಶೀಲನೆ ಮಾಡಬೇಕು. ಮುಖ್ಯಕಾರ್ಯದರ್ಶಿಯವರಾಗಲಿ, ಮುಖ್ಯಮಂತ್ರಿಗಳಾಗಲೀ, ಯಾರಾದರೂ ರಾಜ್ಯ ಮಟ್ಟದಲ್ಲಿ ಎಲ್ಲಾ ಅಧಿಕಾರಿಗಳನ್ನು ಕರೆದು ಯಾವ ಮಟ್ಟದಲ್ಲಿ, ಯಾವರೀತಿಯಲ್ಲಿ ನಾವು ಖರ್ಚು ಮಾಡಲಿಕ್ಕೆ ಸಾಧ್ಯ ಇದೆ, ಎಷ್ಟು ನಮ್ಮ ಲಿಮಿಟೇಷನ್ಸ್ ಇದೆ, ಇವೊತ್ತು ಸೀಲಿಂಗ್ಸ್ ಜಾಸ್ತಿ ಆಗುತ್ತದೆ...

ಶ್ರೀ ರಮೇಶ್ ಸಿ.ಜಿಗಜಿಣಗಿ: ಮಾನ್ಯ ಅಧ್ಯಕ್ಷರೆ, ಈ ವಿಷಯದ ಗಂಭೀರತೆಯನ್ನು ಅರ್ಥ ಮಾಡಿಕೊಂಡು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಹೋದವಾರವೇ ಎಲ್ಲಾ ಜಿಲ್ಲಾಧಿಕಾರಿಗಳ ಸಭೆಯನ್ನು ನಡೆಸಬೇಕೆಂದು ತೀರ್ಮಾನ ಮಾಡಿದ್ದೆವು. ಈ ಡಿಮ್ಯಾಂಡ್ ಮೇಲೆ ಚರ್ಚೆ ಬಂದು ಆ ಡಿಮ್ಯಾಂಡ್ ರಿಪ್ಲೈಗೆ ಬಂದಿರುವುದರಿಂದ ಪೋಸ್ಟ್‌ಪೋನ್ ಆಗಿ ಪುನಃ ನಾಳೆ ಸಭೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕರೆದಿದ್ದಾರೆ. ಎಲ್ಲಾ ಜಿಲ್ಲಾಧಿಕಾರಿಗಳನ್ನು ಕರೆದು, ಎಲ್ಲೆಲ್ಲಿ ಏನೇನು ತೊಂದರೆಯಾಗಿದೆ ಆ ವಿಷಯದ ಗಂಭೀರತೆಯನ್ನು ಅರ್ಥ ಮಾಡಿಕೊಂಡು ಬೇಗ ಇದರ ಕೆಲಸ ಪ್ರಾರಂಭ ಮಾಡಬೇಕೆಂದು ಸಭೆಯನ್ನು ಕರೆದಿದ್ದೇವೆ.

ಶ್ರೀ ಎಂ.ವೀರಪ್ಪಮೊಯಿಲಿ: ಬೇಕಾದರೆ ಈ ಸದನವನ್ನು ಮುಂದೂಡಿ ಆ ಸಭೆಯನ್ನು ಮಾಡಿ. ನಮಗೆ ಅದು ಮುಖ್ಯ ಇದು ಮುಖ್ಯವಲ್ಲ. This is urgent. This stands priority against all other items. ಅದಕ್ಕೆ ಕಾಣುತ್ತದೆ, ಮಾನಸಿಕವಾಗಿ ಕೇಳುವ ಸಿದ್ಧತೆ ಇಲ್ಲ ಎಂದು ಹೇಳತಕ್ಕಂಥದ್ದನ್ನು ನಾನು ಹೇಳಿದೆ. ಮಾನಸಿಕವಾಗಿ ಸಿದ್ಧತೆ ಇಲ್ಲದಿದ್ದರೆ ಭೌತಿಕವಾಗಿ, ನೀವು ಪರಿಣಾಮಕಾರಿಯಾಗಿ ಕೆಲಸ ಹೇಗೆ ಮಾಡುತ್ತೀರಿ? ಇದನ್ನು ಆಲೋಚನೆ ಮಾಡಿ. ಇದು ಡಿಮ್ಯಾಂಡ್ಸ್‌ನ ನೆಪ ಅಲ್ಲ, ಈ ಸದನದ ಸಮಾವೇಶದ ನೆಪ ಅಲ್ಲ. ಅದು ಆಗಬಾರದು. ಜನತೆಯ ಬವಣೆ, ಆ ಕಷ್ಟ ನಷ್ಟ, ಇವೊತ್ತಿಗೆ ಆ ಅತಿವೃಷ್ಟಿಯಾಗಿ ಎರಡು ತಿಂಗಳಾಯಿತು. 4-5 ತಿಂಗಳಿನಿಂದ ಅನಾವೃಷ್ಟಿ ಇದೆ, ಅಲ್ಲದೆ ಸೆನ್ಸ್ ಆಫ್ ಅರ್ಜನ್ಸಿ ಇಲ್ಲಿದೆ. ದಯಮಾಡಿ ನಾಳೆ ಮೀಟ್ ಆಗುತ್ತೇವೆ, ನಾಡಿದ್ದು ಮೀಟ್ ಆಗುತ್ತೇವೆ ಇದಕ್ಕೆ ಸಮಯ ಇಲ್ಲ ಎಂದರೆ ಹೇಗೆ? ಇದಕ್ಕೆ ನೀವು ಮೊದಲು ಸಮಯವನ್ನು ನಿಗದಿ ಮಾಡಬೇಕು, ಆಮೇಲೆ ಬಾಕಿ ಎಲ್ಲ ಕೆಲಸ ಮಾಡಬೇಕಾಗುತ್ತದೆ. ನಿಮ್ಮ ಮೆಮೋರಾಂಡಂ ದೆಹಲಿಗೆ ಹೋದರೆ ಅದನ್ನು ಕಸದಬುಟ್ಟಿಗೆ ಎಸೆಯುತ್ತಾರೆ. ಏಕೆಂದು ಹೇಳಿದರೆ ನಿಮ್ಮಲ್ಲಿ ಅರ್ಜನ್ಸಿ ಇಲ್ಲ. ಚರ್ಚೆ ಮಾಡುವುದಕ್ಕೆ ಸಮಯ ಇಲ್ಲದಿದ್ದರೆ ನಿಮಗೆ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಿಕ್ಕೆ ಸಮಯ ಎಲ್ಲಿದೆ ದಯಮಾಡಿ ಹೇಳಿ. ಆದ್ದರಿಂದ ಇದಕ್ಕೆ ಸೆನ್ಸ್ ಆಫ್ ಅರ್ಜನ್ಸಿ ನೀವು ಅಷ್ಟೆ ಮಾಡಬೇಕಾಗುತ್ತದೆ. ನಾಳೆ ಕುಳಿತುಕೊಳ್ಳಿ, ನಾಡಿದ್ದು ಕುಳಿತುಕೊಳ್ಳಿ, ಆದರೆ ಸಮಗ್ರವಾದಂಥ ಚಿಂತನೆ ಇವೊತ್ತು ಇದಕ್ಕೆ ಬರಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಜಿಲ್ಲಾ ಮಟ್ಟದಲ್ಲೂ ಕಾಣುತ್ತಿಲ್ಲ, ತಾಲ್ಲೂಕು ಮಟ್ಟದಲ್ಲೂ ಕಾಣುತ್ತಿಲ್ಲ ಅಥವಾ ರಾಜ್ಯಮಟ್ಟದಲ್ಲೂ ಕೂಡ ಇವೊತ್ತಿನವರೆಗೆ ಕಾಣುತ್ತಿಲ್ಲ. ನಾಳೆಯಿಂದ ನಾವು ಈ ಸೆನ್ಸ್ ಆಫ್ ಅರ್ಜನ್ಸಿ ತೋರಿಸುತ್ತೇವೆ ಎಂದು ಪ್ರಾಮಾಣಿಕವಾಗಿ ಹೇಳಿದಿರಿ, ನಾಳೆಯದನ್ನು

ನಾಳೆ ನೋಡೋಣ. ಆದರೆ ಖಂಡಿತವಾಗಿಯೂ ಇವೊತ್ತಿನವರೆಗೂ ಕೂಡ ತಮಗೆ ಸೆನ್ಸ್ ಆಫ್ ಅರ್ಜನ್ಸಿ ತಮ್ಮಿಂದ ಇಲ್ಲ. ಇವೊತ್ತು ಇದನ್ನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಇನ್ನೊಂದು ವಿಚಾರ ತಾವು ಹೇಳಿದಿರಿ, ಈ ಅತಿವೃಷ್ಟಿಗೆ ಸಂಬಂಧಪಟ್ಟಂಥದ್ದು, ನಮ್ಮ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಇದಕ್ಕೆಲ್ಲ ಅನ್ವಯವಾಗುತ್ತದೆ. ಇಲ್ಲಿ ನನ್ನ ಕ್ಷೇತ್ರದಲ್ಲಿ ಸೆಂಟ್ ಲಾರೆನ್ಸ್ ಚರ್ಚ್ ಎಂದು ಇದೆ. ರಾಜ್ಯದಲ್ಲಿ ಮಾತ್ರವಲ್ಲ ಇಡೀ ರಾಷ್ಟ್ರದಲ್ಲೇ ಬಹಳ ಪವಿತ್ರವಾದಂಥದ್ದು, ಜನವರಿಯಲ್ಲಿ ಇಲ್ಲಿ ಹಬ್ಬ ಆಗುವಾಗ ಸುಮಾರು ಹತ್ತು ಲಕ್ಷ ಜನ ಅಲ್ಲಿಗೆ ಬರುತ್ತಾರೆ. ಅದೊಂದು ಪ್ರಸ್ಟೀಜಿಯಸ್ ಚರ್ಚ್. ಇಡೀ ಪರ್ವತ ಜರಿದು, ಅದರ ಮುಖಮಂಟಪ, ಆ ಪ್ರಾರ್ಥನಾ ಭವನ ಕುಸಿದುಹೋಗಿದೆ. ಸುಮಾರು ಒಂದು ಐವತ್ತು ಸಾವಿರ ರೂಪಾಯಿಯ ನಷ್ಟವಾಗಿದೆ. ಆ ಪರ್ವತ ಕುಸಿದು ಬಿದ್ದು ಇವೊತ್ತಿಗೆ ಒಂದು-ಒಂದೂವರೆ ತಿಂಗಳಾಯಿತು. ಇವೊತ್ತಿನವರೆಗೆ ಆ ಸೆನ್ಸ್ ಆಫ್ ಅರ್ಜನ್ಸಿ ಎಷ್ಟು ಎಂದು ಹೇಳಿದರೆ ನಾನು ಇದನ್ನು ಕಂಪೇರ್ ಮಾಡುವುದಿಲ್ಲ, ಅಥವಾ ನೀವು ಹೇಳಬಹುದು, ನಿಮ್ಮ ಕ್ಷೇತ್ರ ಇತ್ತು ನೀವು ಎಮರ್‌ಜೆಂಟ್ ಆಗಿ ಕೆಲಸ ಮಾಡಿದ್ದೀರಿ, ಎಂದು ಹೇಳುವ ಪ್ರಶ್ನೆ ಅದಲ್ಲ. ನಾವು ಏನು ಮಾಡಿದೆವು? ರಾತ್ರೋರಾತ್ರಿ ಅದು ಕುಸಿದುಬಿತ್ತು ಆಗ ಎರಡು ದಿವಸದಲ್ಲಿ ಕುಸಿದುಬಿದ್ದ ಮಣ್ಣನ್ನು ನಾವು ಎತ್ತು ಸಾಗಿಸಿದ್ದೇವೆ. ಎಂ.ಆರ್.ಪಿ.ಎಲ್.ದು ಮತ್ತೊಂದು ಎಲ್ಲಾ ಶವೆಲ್ಸ್ ಎಲ್ಲ ತಂದು ಆ ಮಣ್ಣನ್ನು ಎತ್ತಿಹಾಕಿದ್ದೇವೆ. ಇವೊತ್ತಿಗೆ ಸುಮಾರು ಒಂದೂವರೆ ಎರಡು ತಿಂಗಳಾಯಿತು ಯಾರೂ ಸಹ ಹೋದದಿಲ್ಲ, ಹೋಗಿದ್ದೀರಿ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಹೋಗಿದ್ದಾರೆ, ಜಿಲ್ಲಾಧಿಕಾರಿಗಳು ಹೋಗಲಿಲ್ಲ ಎಂದು ಹೇಳುವುದಿಲ್ಲ. ಆದರೆ ಎಷ್ಟು ಸೆನ್ಸ್ ಆಫ್ ಆರ್ಜನ್ಸಿ ಅಂದರೆ ಇವೊತ್ತಿನವರೆಗೆ ಅಧ್ಯಕ್ಷರೆ, ಆ ಪ್ರಾರ್ಥನಾ ಭವನ, ಮುಖಮಂಟಪ ಎಲ್ಲ ಮಣ್ಣಿನ ಒಳಗಡೆಯೇ ಇದೆ. ಯಾರಾದರೂ ಒಳಗೆ ಸತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ. ಇವೊತ್ತು ಮಣ್ಣು ಎತ್ತುವಂಥ ಗತಿ ಇಲ್ಲ. ಇದು ಅಲ್ಲಿಯ ಚರ್ಚ್‌ನವರು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ, ಅದಕ್ಕೆ ಹತ್ತು ಲಕ್ಷ ರೂಪಾಯಿಗಳ ವೆಚ್ಚವಾಗುತ್ತದೆ. ಯಾಕೆ ನಿಮ್ಮ ಸರ್ಕಾರ ಇದೆ, ಜಿಲ್ಲಾಧಿಕಾರಿಗಳು ಇದ್ದೀರಿ, ನೀವು ಅವರಿಗೆ ಹೇಳಿದರೆ, ಎಂ.ಆರ್.ಪಿ.ಎಲ್, ಮತ್ತೊಬ್ಬರಿಗೆ ನೀವು ಹೇಳಿ ಆ ಶವೆಲ್ಸ್ ಎಲ್ಲ ನೀವು ಕೊಂಡು ಹೋಗಿ ಅದನ್ನೆಲ್ಲ Remove ಮಾಡಿ ಒಂದು ಹೇಳತಕ್ಕಂಥ ಕೆಲಸ ಮಾಡುವುದಕ್ಕೆ ಆಗುವುದಿಲ್ಲವೆ? This is the minimum work which can be done. You can pay after one year, or you need not pay. You can tell them. A mere order is sufficient. ಇದು ಸೆನ್ಸ್ ಆಫ್ ಅರ್ಜನ್ಸಿ ಅಲ್ಲಿಯೇ ಹೇಳಿ. ಜನ ಏನು ತಿಳಿದುಕೊಳ್ಳುತ್ತಾರೆ? ಆ ಪರ್ವತ ಕುಸಿದು ಬಿದ್ದು ಪ್ರಾರ್ಥನಾ ಮಂದಿರ ಮುಚ್ಚಿಹೋಗಿದೆ ಅದನ್ನು ತೆಗೆಯಬೇಕು ಎಂದು ಹೇಳಿದಾಗಲೂ ಕೂಡ ಇವೊತ್ತಿಗೂ ಸೆನ್ಸ್ ಆಫ್ ಅರ್ಜನ್ಸಿ ಇಲ್ಲ. ಬೇಕಾದರೆ ವಿಸಿಟ್ ಮಾಡಿ ಅಥವಾ ನಿಮ್ಮ

ಅಧಿಕಾರಿಗಳನ್ನೂ ಕೂಡ ಅಲ್ಲಿ ಕಳುಹಿಸಿ. If you are not convinced about the DC's report. ಅದನ್ನು ತೆಗೆದಮೇಲೆ ಆ ಮುಖಮಂಟಪವನ್ನು ಪುನಃ ಕಟ್ಟಬೇಕಾಗುತ್ತದೆ. ಅದಕ್ಕೂ ತಾವು ಸಹಾಯ ಮಾಡಬೇಕಾಗುತ್ತದೆ. ಹಿಂದೊಮ್ಮೆ ಅಂತಹ ಘಟನೆ ನಡೆದಾಗ ಸುಮಾರು ಹದಿನೈದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಐವತ್ತು ಲಕ್ಷ ರೂಪಾಯಿ ನಷ್ಟವಾಗುತ್ತದೆ, ಅದಕ್ಕೆ ತಾವು ಕಡೇಪಕ್ಷ 25 ಲಕ್ಷ ರೂಪಾಯಿಗಳನ್ನಾದರು ಒದಗಿಸಬೇಕಾಗುತ್ತದೆ. ಎಲ್ಲಾದರು ಡೊನೇಷನ್ ತೆಗೆದುಕೊಂಡು ಅವರು ಮಾಡಲಿ. ಕೊನೆಯಪಕ್ಷ ಒಂದು 25 ಲಕ್ಷ ರೂಪಾಯಿಗಳನ್ನಾದರೂ ತಕ್ಷಣ ಕೊಡಬೇಕು. ನಾನು ಮಾನ್ಯ ಮುಖ್ಯಮಂತ್ರಿಗಳಿಗೂ ವಿನಂತಿ ಮಾಡಿದ್ದೇನೆ, ತಮಗೂ ಸಹ ಕಾಗದವನ್ನು ಬರೆದಿದ್ದೇನೆ, ಮಾನ್ಯ ಉಪಮುಖ್ಯಮಂತ್ರಿಯವರಿಗೂ ಕೂಡ ಹೇಳಿದ್ದೇನೆ. ತಕ್ಷಣ ಇದಕ್ಕೆ ಕಡಿಮೆಯೆಂದರೆ 25 ಲಕ್ಷ ರೂಪಾಯಿಗಳನ್ನಾದರು ಕೊಡಿ. ಬೇಕಾದರೆ ಮಣ್ಣನ್ನು ನೀವೇ ತೆಗೆದುಕೊಡಬಹುದಿತ್ತು, ತೆಗೆದುಕೊಡಲಿಲ್ಲ, ಅಟ್‌ಲಿಸ್ಟ್ ಈ ಹಣವನ್ನಾದರು ಬಿಡುಗಡೆ ಮಾಡಿ. ಅದನ್ನು ಪುನಃ ಪುನರ್ ನಿರ್ಮಾಣ ಮಾಡತಕ್ಕಂಥ ಕೆಲಸಮಾಡಲಿ ಎಂದು ನಾನು ಹೇಳಿದ್ದೇನೆ. ಇವೊತ್ತಿನವರೆಗೂ ಕೂಡ ಏನೂ ಕೆಲಸ ಆಗಲಿಲ್ಲ, ಒಂದು ನಯಾಪೈಸೆ ಬಿಡುಗಡೆ ಆಗಲಿಲ್ಲ. ಜಿಲ್ಲಾಧಿಕಾರಿಗಳು ಹೇಳುತ್ತಾರೆ, ಇಲ್ಲ ಈ ಹಣ ಅದಕ್ಕೆಲ್ಲ ಕೊಡುವುದಕ್ಕಾಗುವುದಿಲ್ಲ ಎಂದು. ಆದ್ದರಿಂದ ಇಂತಹ ಒಂದು ಕೆಲಸಕ್ಕೆ ಸೆನ್ಸ್ ಆಫ್ ಅರ್ಜೆನ್ಸಿ ಇಲ್ಲ ಎಂದರೆ ಹೇಗೆ? ಒಂದು ಭಯಂಕರವಾದಂಥ, ಭೀಕರವಾದಂಥ ಅಪಘಾತ ಆದರೂ ಕೂಡ The Government does not act, does not respond. ಎಂದರೆ ಏನು ತಿಳಿದುಕೊಳ್ಳಬೇಕಾಗುತ್ತದೆ ನಾವು; ದಯಮಾಡಿ ಇದರ ಬಗ್ಗೆ ತಕ್ಷಣ ಕಾರ್ಯಕ್ರಮವನ್ನು ತೆಗೆದುಕೊಳ್ಳಿ, ಇವೊತ್ತೆ ತಾವು ಟೆಲೆಕ್ಸ್ ಮೇಸೇಜನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡಿ, ಅವರು ಹೇಗೆ ಮಾಡುತ್ತಾರೆ ಅದನ್ನು ಬಿಟ್ಟುಬಿಡಿ. This has to be removed within two or three days. You must send that kind of a report to the Deputy Commissioner. ಮಣ್ಣನ್ನು ರಿಮೂವ್ ಮಾಡಿ ಎಂದು ಕಡಿಮೆಪಕ್ಷ ಅಷ್ಟನ್ನು ಹೇಳಿ ಪುನರ್ ನಿರ್ಮಾಣ ಮಾಡತಕ್ಕಂಥದ್ದಕ್ಕೆ ನೀವು ಅನುದಾನ ಬಿಡುಗಡೆ ಮಾಡಿಕೊಡಿ. ಇದು ಅತಿವೃಷ್ಟಿಯನ್ನು ಎದುರಿಸತಕ್ಕಂಥ ಕ್ರಮ ಇರಬೇಕಾಗುತ್ತದೆ. ನಮ್ಮ ವಿಷಯ ಎಂದು ಹೇಳುವುದಲ್ಲ, 1993-94ರಲ್ಲಿ ಮೂಡಿಗೆರೆಯಲ್ಲಿ ಕೆಲವು ರಸ್ತೆಯೆಲ್ಲ ಬಂದ್ ಆಗಿ, ಸೇತುವೆಯೆಲ್ಲ ಕುಸಿದಾಗ ಎಂ.ಇ.ಜಿ.ಯ ಮಿಲಿಟರಿ ಎಂಜಿನಿಯರ್ಸ್‌ನ್ನು ಅಲ್ಲಿಗೆ ಕಳುಹಿಸಿ ತಾತ್ಕಾಲಿಕವಾದಂಥ ಸೇತುವೆಯನ್ನು ಎರಡು ದಿನದಲ್ಲಿ ಮಾಡಿಕೊಟ್ಟು ಜನರಿಗೆ ಪುನರ್ವಸತಿ ಮಾಡಿಕೊಟ್ಟಿದ್ದೇವೆ. ಇದು ಮಾಡಲಿಕ್ಕೆ ಸಾಧ್ಯ ಇದೆ. ನಮ್ಮ ಆರ್ಮಿ ಇದೆ, ಎಂ.ಇ.ಜಿ.ಗಳು ಇವೆ, ನನ್ನ ವಿನಂತಿ ಏನೆಂದು ಹೇಳಿದರೆ, ಕಾರ್ಕಳದ ಹತ್ತಿರ ಇರುವ ಸೆಂಟ್ ಲಾರೆನ್ಸ್ ಚರ್ಚ್ ಪಕ್ಕದ ಪರ್ವತ ಇನ್ನು ಕುಸಿಯದಹಾಗೆ ಯಾವರೀತಿಯಲ್ಲಿ ಟೆಕ್ನಾಲಜಿಯನ್ನು ಉಪಯೊಗ ಮಾಡಬೇಕು ಎಂದು ತಾವು ಎಂ.ಇ.ಜಿ.ಯ

ಇಂಜಿನಿಯರ್ಸ್ ಅನ್ನು ಅಲ್ಲಿಗೆ ಕಳುಹಿಸಿ, ಮತ್ತು ಅಲ್ಲಿ ಪುನಃ ತೊಂದರೆ ಆಗದಹಾಗೆ ಏನು ಮಾಡಬಹುದು ಎಂದು ತಾವು ಅದಕ್ಕೆ ಬೇಕಾದಂಥ ತಾಂತ್ರಿಕ ಸಲಹೆಗಳನ್ನು ಕೂಡ ಪಡೆಯತಕ್ಕಂಥದ್ದನ್ನು ಮಾಡಬೇಕಾಗುತ್ತದೆ. ಅಲ್ಲಿಯೂ ಕೂಡ ನಾನು ಎಲ್ಲರಿಗೂ ಸಲಹೆಗಳನ್ನು ಕೊಟ್ಟೆ, ತಮಗೂ ಸಹ ಕೊಟ್ಟೆ; ಮಂಗಳೂರಿನಿಂದ ಕಾರ್ಕಳಕ್ಕೆ ಹೋಗತಕ್ಕಂಥ ರಸ್ತೆ ಸುಮಾರು ಗುರುಪುರದ ಬದಿಯಲ್ಲಿ ಅದು ಸಂಪೂರ್ಣ ಒಂದು ರೀತಿ ಇಡೀ ಭೂಮಿ ಕುಸಿದಹಾಗೆ ಆಯಿತು. ದೊಡ್ಡ ಲೈನೇಜ್, ಸಾಧಾರಣ ಭೂಕಂಪ ಆದಹಾಗೆ ಆಯಿತು. ಆದರೆ ಇವೊತ್ತು ಆ ರಸ್ತೆಯಲ್ಲಿ ಮಣ್ಣನ್ನೆಲ್ಲ ನೀವು ತೆಗೆದಿದ್ದೀರಿ. ಅದು ಬಹಳ ಮುಖ್ಯವಾದ ರಾಜ್ಯ ಹೆದ್ದಾರಿ. ಅದು ಏನಾಗಬೇಕೆಂದರೆ, Again there are lot of technical problems. ಸನ್ಮಾನ್ಯ ಉದಾಸಿಯವರು ಈಗ ಆ ಮಾರ್ಗವನ್ನು ತೆರವು ಮಾಡಿದ್ದಾರೆ. ಆದರೆ ಅದು ಶಾಶ್ವತ ಅಲ್ಲ. ತಾವು ಎಂ.ಇ.ಜಿ. ಎಂಜಿನಿಯರ್ಸ್ ಅನ್ನು ಕರೆದುಕೊಂಡುಹೋಗಿ. Let there be no prestige with regard to P.W.D ಕೆಲವು ವ್ಯವಸ್ಥೆಗಳಲ್ಲಿ ಕೆಲವರು ಪರಿಣಿತರಿರುತ್ತಾರೆ. ಅವರ ಸಲಹೆಗಳನ್ನು ತಾವು ಪಡೆದುಕೊಳ್ಳಬೇಕಾಗುತ್ತದೆ. ಆ ರಸ್ತೆ ಇನ್ನು ಮುಂದೆ ಯಾವುದೇ ರೀತಿಯಲ್ಲಿ ಡ್ಯಾಮೇಜ್ ಆಗದ ರೀತಿಯಲ್ಲಿ ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಿಕೊಂಡು ತಾವು ರಸ್ತೆ ಕೆಲಸವನ್ನು ಶೀಘ್ರವಾಗಿ ಮಾಡತಕ್ಕಂಥ ಅವಶ್ಯಕತೆ ಇದೆ. These are the two major things that have happened in South Kanara. ಈ ಸಾರಿಯ ಅತಿವೃಷ್ಟಿಯಲ್ಲಿ ಅದು ಬಹಳ ಮುಖ್ಯವಾದಂಥ ಘಟನೆ. ಈ ಎರಡನ್ನು ಕೂಡ ಸರಿಯಾಗಿ ಮೀಟ್ ಮಾಡಿದರು ಎಂದುಹೇಳಿ, ಪಿ.ಡಬ್ಲ್ಯೂ.ಡಿ. ಇಂಜಿನಿಯರ್ಸ್‌ಗೆ ನಾವು ಶಹಭಾಷ್‌ಗಿರಿಯನ್ನು ಕೊಡಬೇಕು. ಅವರು ರಸ್ತೆಯನ್ನು ತೆರವು ಮಾಡಿಕೊಟ್ಟಿದ್ದಾರೆ. ಅದಕ್ಕೋಸ್ಕರ ಅವರಿಗೆ ಶಹಭಾಷ್‌ಗಿರಿಯನ್ನು ಕೊಡಬೇಕು ಆದರೆ ಅದಷ್ಟೇ ಸಾಲದು. ಅದಕ್ಕೆ ಎಂ.ಇ.ಜಿ.ಎಂಜಿನಿಯರ್ಸ್‌ಗೆ ಆ ಪರಿಣಿತಿ ಇದೆ, ಪರ್ವತಗಳ ಮಧ್ಯದಲ್ಲಿ ಹಾದುಹೋಗತಕ್ಕಂಥ ರಸ್ತೆಗಳು ಯಾವರೀತಿಯಲ್ಲಿ ಕುಸಿತಕ್ಕೆ ಒಳಗಾಗುತ್ತದೆ. These are all some of the very technical and very sensitive matters. ಇದನ್ನು ದಯಮಾಡಿ ಮಾಡಬೇಕೆಂದು ಮಾನ್ಯ ಇಬ್ಬರು ಸಚಿವರಿಬ್ಬರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು sea erosion ಬಗ್ಗೆ, ಅಲ್ಲಿ ಹಣ ಇದೆಯೆಂದು ಹೇಳುತ್ತಾರೆ. ಈ ಹಣ ಯಾವುದಕ್ಕಿದೆ ಎಂದರೆ ಕಮಿಟೆಡ್ ವರ್ಕ್‌ಗೆ ಇದೆ ಎಂದು ಹೇಳುತ್ತಾರೆ. ಇದನ್ನು ಡೈವರ್ಟ್ ಮಾಡುವುದಕ್ಕಾಗುವುದಿಲ್ಲ. ಅದನ್ನು ಬಿಟ್ಟರೆ ಮತ್ತೂ ಸಮಸ್ಯೆ ಜಾಸ್ತಿ ಆಗುತ್ತದೆ, ಎಮರ್ಜೆನ್ಸಿಯಲ್ಲಿ ಸಮುದ್ರದ ಕೊರೆತವಾದಾಗ ಅದನ್ನು ಆನ್‌ಗೋಯಿಂಗ್ ವರ್ಕ್ಸ್ or items which can be taken-up at a later stage. ಸಮುದ್ರ ಕೊರೆತದಲ್ಲಿ ಎಮರ್ಜೆನ್ಸಿ ವರ್ಕ್ ಎಂದು ಸಹ ಇರುತ್ತದೆ. The Government has totally lost sight of it.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ಉಪಾಧ್ಯಕ್ಷರೆ, ಪ್ರತಿಯೊಂದು ಕಡೆಯಲ್ಲೂ ಎಮರ್ಜೆನ್ಸಿ ವರ್ಕ್‌ನಲ್ಲಿ ತಕ್ಷಣ ಎಲ್ಲೆಲ್ಲಿ ಕೊರೆತ ಪ್ರಾರಂಭವಾಗಿದೆ, ಅಲ್ಲಿ ಎಲ್ಲಾ ಕೆಲಸವನ್ನು ಮಾಡಿ ಈ ಸಮುದ್ರದ ಕೊರೆತವನ್ನು ನಿಲ್ಲಿಸಲಾಗಿದೆ. ಅಂತಹ ಎಮರ್ಜೆನ್ಸಿ ವರ್ಕ್‌ನಲ್ಲಿ ಎಲ್ಲೂ ಉದಾಸೀನ ಮಾಡಿಲ್ಲ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಉಪಾಧ್ಯಕ್ಷರೆ, ಇವರು ಕೆಲಸ ಮಾಡಿಸಿದ್ದಾರೆ, ಆದರೆ ಎಲ್ಲೂ ಸಹಿತ ಒಂದು ಪೈಸೆ ಕೂಡ ಬಿಡುಗಡೆಯಾಗಿಲ್ಲ; ಇವರು 5 ಕೋಟಿ ರೂಪಾಯಿಗಳ ಅಂದಾಜು ಪಟ್ಟಿಯನ್ನು ಕೊಟ್ಟಿರುವ ಹಾಗೆ....

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ಉಪಾಧ್ಯಕ್ಷರೆ, ನಾವು ಕೆಲಸವನ್ನು ಮಾಡಿಸಿಯಾಗಿದೆ. ಹಣವನ್ನು ಬಿಡುಗಡೆ ಮಾಡುತ್ತೇವೆ. ಆ ಕೆಲಸವಾಗದಿದ್ದಲ್ಲಿ ಅದರ ಬಗ್ಗೆ ಸಮಸ್ಯೆ ಉಂಟಾಗುತ್ತಿತ್ತು. ಆದರೆ ಅಲ್ಲಿ ಕೆಲಸವಾಗಿದೆ.

ಶ್ರೀ ಎಂ.ವೀರಪ್ಪಮೊಯಿಲಿ: ಮಾನ್ಯ ಉಪಾಧ್ಯಕ್ಷರೆ, ತಾವು ಉಸ್ತುವಾರಿ ಮಂತ್ರಿಗಳು ಅಥವಾ ಸಚಿವರುಗಳು ಅಲ್ಲಿ ಕಂಟ್ರಾಕ್ಟ್‌ಗಳಿಗೆ, ಪಿ.ಡಬ್ಲ್ಯೂ.ಡಿ. ಇಲಾಖೆಯವರಿಗೆ ಹೇಳಿ ತಾವು ಏನೋ ಕೆಲಸವನ್ನು ಮಾಡಿಸುತ್ತೀರಿ. I am not disputing about that. ಆದರೆ ನಾನು ಹೇಳುವಂಥಾದ್ದು, There should be some urgency at the state level. ಅಲ್ಲಿ ಕೆಲಸವಾಗಿದೆ ಎಂದು ಒಂದು ನಯಾಪೈಸೆಯನ್ನು, ಬಿಲ್‌ನ ಹಣವನ್ನು ಕೊಡದಿದ್ದರೆ ಮುಂದೆ ಯಾರು ಕೆಲಸವನ್ನು ಮಾಡುತ್ತಾರೆ, ಯಾವ ರೀತಿಯಲ್ಲಿ ಕೆಲಸವಾಗುತ್ತದೆಂದು ನಾನು ಹೇಳುವಂಥಾದ್ದು. You have not released any money for that. ಮಾನ್ಯ ಉದಾಸಿಯವರೆ, ನೀವು ಈ ಸಮುದ್ರ ಕೊರೆತದ ಎಮರ್ಜನ್ಸಿ ವರ್ಕ್‌ಗೆ ಹಣವನ್ನು ಬಿಡುಗಡೆ ಮಾಡಿಲ್ಲವೆಂದು ನನ್ನ ಆರ್ಗ್ಯೂಮೆಂಟ್ ಆಗಿದೆ. ಅಲ್ಲಿ ಕೆಲಸಮಾಡುತ್ತೀರಿ, ಬಿಡುತ್ತೀರಿ ಎಂಬ ಪ್ರಶ್ನೆಯಲ್ಲ. ಸಮುದ್ರ ಕೊರೆತಕ್ಕೆ ಎಂದು ಐದು ಕೋಟಿ ರೂಪಾಯಿಗಳ ಎಸ್ಟಿಮೇಟ್ ಕಳುಹಿಸಿದ್ದಾರೆ. ಅದರಲ್ಲಿ ತಾವು ಒಂದು ನಯಾ ಪೈಸೆಯನ್ನು ಬಿಡುಗಡೆ ಮಾಡಿದ್ದೀರಾ? ಅಲ್ಲಿ ನಾವು ನೀವು ಕುಳಿತುಕೊಂಡು ಏನೋ ಮಾಡುತ್ತೇವೆ. We prevail upon the people here. ಸೌತ್ ಕೆನರಾದಲ್ಲಿ ನಾವು ಮಾಡುವಂಥಾದ್ದು ಟೀಮ್ ವರ್ಕ್. I don't dispute about that. ಆದರೆ ಇವತ್ತು ಇದಕ್ಕೆ ಐದು ಕೋಟಿ ರೂಪಾಯಿಗಳ ಎಸ್ಟಿಮೇಟ್ ಕಳುಹಿಸಿದ್ದು ಒಂದು ನಯಾಪೈಸೆಯನ್ನು ಬಿಡುಗಡೆ ಮಾಡಿಲ್ಲವೆಂದರೆ ಯಾವ sense of emergency ತಮಗೆ ಇದೆ ಎಂಬ ಪ್ರಶ್ನೆ ಇವತ್ತು ಇದೆ. ಇದು ಇಂಡಿವಿಜ್ಯೂಯಲ್ ಪ್ರಶ್ನೆಯಲ್ಲ. ಇದು ಒಂದು ಸೈದಾಂತಿಕ ಪ್ರಶ್ನೆ ಕೂಡ ಆಗಿದೆ. For emergency sea erosion you will have to provide money. ಇದು ಬರೀ ಬಜೇಟರಿ ಸಪೋರ್ಟ್ ಅಲ್ಲ, ಇದು ತಮ್ಮ ಬಜೇಟರಿ ಸಪೋರ್ಟ್‌ಗೆ ಕಾಯುವುದಿಲ್ಲ. ತಮಗೆ ಗೊತ್ತಿರುವಂತೆ

ಅನೇಕ ಸ್ಕೆಚ್‌ನಲ್ಲಿ ಈಗ ನಾವು ಯಾವಾಗಲೂ ಗೌವರ್ನಮೆಂಟ್ ಆಫ್ ಇಂಡಿಯಾಕ್ಕೆ ಕಳುಹಿಸುತ್ತೇವೆ. ಈ ಸಮುದ್ರದ ಕೊರೆತಕ್ಕೆ ಒಂದು ಪರ್ಮನೆಂಟ್ ಮೆಜರ್ಸ್ ತೆಗೆದುಕೊಳ್ಳಬೇಕೆಂದು ನೀವು ಕಳುಹಿಸಿದ್ದೀರಿ, ನಾವು ಹಿಂದೆ ಕಳುಹಿಸಿದ್ದೇವೆ. ಅದು ಯಾವಾಗ ಬರುತ್ತದೋ ಗೊತ್ತಿಲ್ಲ. ಆದರೆ ನನ್ನ ಸಜೇಷನ್ ಏನೆಂದರೆ ಮಾನ್ಯ ಉದಾಸಿಯವರು ಮಾಡಿದ ಹಾಗೆ ನಬಾರ್ಡ್ ನಿಂದ ಈ ಸಮುದ್ರ ಕೊರೆತದ ವರ್ಕ್‌ಗೆ ವರ್ಲ್ಡ್‌ಬ್ಯಾಂಕ್‌ನವರು ಕನ್ಸಿಡರ್ ಮಾಡಬೇಕು. ಇದರ ಬಗ್ಗೆ ಅನೇಕ ಸಾರಿ ನಾವು ಇದ್ದಾಗಲೂ ಡಿಸಿಷನ್ ಆಗಿದೆ. ಇದರ ಬಗ್ಗೆ ದೆಹಲಿಯಲ್ಲಿ, ವರ್ಲ್ಡ್ ಬ್ಯಾಂಕ್‌ನಲ್ಲೂ ಕೂಡ ಡಿಸ್‌ಕಷನ್ ಆಗಿದೆ. ಈಗ ನಾವು ಕಳುಹಿಸುವಂಥಾದ್ದು ಜನರಿಗೆ ಆಸೆ ತೋರಿಸುವುದು, ಮತ್ತೆ ಜನರು ನಿರೀಕ್ಷೆಯಲ್ಲಿರುವುದು, ನಂತರ ಅದು ಆಗುವುದಿಲ್ಲ. ಅದರ ಬದಲು ನನಗನಿಸುತ್ತದೆ. It is right thing. ಏಕೆಂದರೆ ಈಗ ನಬಾರ್ಡ್‌ನವರು ಅವರ ಪಾಲಿಸಿಯನ್ನು ಲಿಬರ್‌ಲೈಸ್ ಮಾಡಿದ್ದಾರೆ. ರಸ್ತೆ, ಸಣ್ಣನೀರಾವರಿ ಕೆಲಸಗಳಿಗೆ ಅದನ್ನ ಮಾಡಿದ್ದಾರೆ. ಈಗ ಈ ಸಮುದ್ರದ ಕೊರೆತವೇನು ಇದೆ, ಇದು ಸಹ ಇಕ್ವಲ್ ಇಂಪಾರ್‌ಟೆಂಟ್ ವರ್ಕ್ ಆಗಿದೆ. ನಾನು ಮಾನ್ಯ ಜಯಪ್ರಕಾಶ್ ಹೆಗಡೆಯವರಿಗೆ ಹೇಳುವಂಥಾದ್ದು ಏನೆಂದರೆ ಇದನ್ನು ಒಂದು ಪ್ರಾಜೆಕ್ಟ್‌ನ್ನಾಗಿ ಮಾಡಿ. The same project you can work-out in accordance with the norms prescribed by the NABARD. That is the best solution. In sea erosion cases, you should aproach the NABARD, this is the right time and they will sanction the amount. ಆಗ ಎಲ್ಲಾ ಸಮಸ್ಯೆಗಳು ಹೋಗುತ್ತದೆ. ಇದಕ್ಕೆ ಎರಡು ನೂರು ಕೋಟಿ ರೂಪಾಯಿಗಳೊ, ಮೂರು ನೂರು ಕೋಟಿ, ಅಥವಾ ನಾಲ್ಕು ನೂರು ಕೋಟಿ ರೂಪಾಯಿಗಳ Whatever the amount, the NABARD is in a position to finance. ಆದುದರಿಂದ ದಯಮಾಡಿ ತಾವು ನಬಾರ್ಡ್‌ಗೆ ಎಸ್ಟಿಮೇಟ್ ಕಳುಹಿಸಿ. ವಿಶ್ವಬ್ಯಾಂಕ್‌ನಿಂದ ಬರುವುದಾದರೆ, it is welcome ಅಥವಾ ಯಾವುದಾದರೂ ಒಂದು ಮೂಲದಿಂದ ಬಂದರೂ ಸಂತೋಷ. ಆದರೆ, we have seen enough of it since 15-20 years. ಎಲ್ಲಾ ಸರ್ಕಾರಗಳು ಇದರಲ್ಲಿ ಪ್ರಯತ್ನ ಮಾಡಿದೆ. ಯಾವ ಸರ್ಕಾರಗಳು ಕೂಡ ಇದರಲ್ಲಿ ಹಿಂದೆ ಉಳಿದಿಲ್ಲ. ಆದರೆ ಅವರು they have not financed. We do not find it viable. ಆದುದರಿಂದ ಈ ನಬಾರ್ಡ್‌ನಿಂದ ಈ ಕೆಲಸವನ್ನು ಮಾಡಿದರೆ ಇದು ಬಹಳ ಕ್ವಿಕ್ ಆಗಿ ಆಗಬಹುದು. ಇದನ್ನು ಬರುವ ಹಣಕಾಸಿನ ವರ್ಷದಲ್ಲಿ ಈ ಕೆಲಸವನ್ನು ಕಮೆನ್ಸ್ ಮಾಡಬಹುದು. ಇದನ್ನು ಎಮರ್ಜೆನ್ಸಿ ಬೇಸಿಸ್ ಮೇಲೆ ಈ ಕೆಲಸವನ್ನು ಮಾಡಬೇಕೆಂದು ಹೇಳಿ ವಿಶೇಷವಾಗಿ ನಾನು ಒಂದು ಸಲಹೆಯನ್ನು ಕೊಡುತ್ತಿದ್ದೇನೆ. ಇನ್ನೊಂದು ವಿಚಾರವೇನೆಂದರೆ ನಮ್ಮ ರಸ್ತೆಗಳು ಪೂರ್ತಿ ಹಾಳಾಗಿದೆ. ನಾನು ಹೇಳುವುದೇನೆಂದರೆ ಮೇಜರ್ ವರ್ಕ್‌ಗಳ ರೋಡ್‌ಗಳು ಏನಿದೆ,

ಅದನ್ನು ನಬಾರ್ಡ್‌ನಲ್ಲಿ ಐಡೆಂಟಿಫೈ ಮಾಡಿ, ತಾವೇ ಕುಳಿತುಕೊಂಡು, ಇಲ್ಲದಿದ್ದರೆ ವಿರೋಧಪಕ್ಷದವರನ್ನು ಕರೆದು ಈ ಮೇಜರ್ ರೋಡ್‌ಗಳು ಯಾವುದು ಇದೆ, ಅದನ್ನು ಮಾತ್ರ ಈಗ ನಬಾರ್ಡ್‌ನಲ್ಲಿ ಯಾವುದನ್ನು ತೆಗೆದುಕೊಳ್ಳುತ್ತೀರಿ, ಅದಕ್ಕೆ ಇದು ಸಂಬಂಧವಿದೆ. ಈಗ ಉಡುಪಿ-ಬೈಂದೂರಿಗೆ ನಾಲ್ಕು ಲೈನ್ ಮಾಡಬೇಕೆಂದು ನೀವು ಕೇಂದ್ರಸರ್ಕಾರಕ್ಕೆ ಬರೆದಿದ್ದೀರಿ. ನಾನು ಕೂಡ ಮೊನ್ನೆ ಪ್ರಧಾನಮಂತ್ರಿಯವರ ಜೊತೆಯಲ್ಲಿ ಮಾತನಾಡುವಾಗ ಕೂಡ ಇದನ್ನು ಪ್ರಸ್ತಾಪ ಮಾಡಿದೆ. ಅವರು ಸಹ ಇದನ್ನು ಮಂಜೂರು ಮಾಡುವಂತಹ ವ್ಯವಸ್ಥೆಯಲ್ಲಿದ್ದಾರೆ. ಈಗ ಹಾಸನ ಮತ್ತು ಮಂಗಳೂರು ರಸ್ತೆ ಏನಿದೆ, ಅದು ಸಾಧಾರಣವಾಗಿ ಚೆನ್ನಾಗಿದೆ, ಅದು ಬಿಟ್ಟರೆ ಎಲ್ಲಾ ರಸ್ತೆಗಳು ಕೂಡ ನೆಲಸಮವಾಗಿದೆ. ಪ್ರತಿ ಮಳೆಗಾಲದಲ್ಲೂ ಇದು ಹಾಳಾಗುತ್ತದೆ. You will have to consult them. ನಮ್ಮಲ್ಲಿ ಒಂದು ಗಾದೆ ಇದೆ. ಈ ಅನ್‌ಫಾಲ್ಟಿಂಗ್ ಯಾವ ರೀತಿ ಎಂದರೆ ಸಗಣಿ ಹಾಕಿದ ಹಾಗೆ ಇರುತ್ತದೆ. ಅದು ಮಳೆ ಬಂದರೆ ಸಗಣಿ ಹೇಗೆ ವಾಷ್‌ಔಟ್ ಆಗುತ್ತದೆಯೋ ಅದೇ ರೀತಿಯಲ್ಲಿ ಈ ರಸ್ತೆಗಳು ವಾಷ್ ಔಟ್ ಆಗುತ್ತದೆ. I have seen nothing more than that. ಆದುದರಿಂದ ತಾವು ನಬಾರ್ಡ್‌ನಲ್ಲಿ ಒಂದು ಸ್ಪೆಷಲ್ ನಾರ್ಮ್ಸ್ ಮಾಡಿ ಹೀಗೆ ವಿಶೇಷವಾಗಿ ಮಳೆ ಬಂದಂತಹ ಸಂದರ್ಭದಲ್ಲಿ, ಪರ್ಮನೆಂಟ್ ಆಗಿ ಕಾಂಕ್ರಿಟ್ ರಸ್ತೆಯನ್ನು ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. This is the time you can tackle this NABARD. ಇದರ ಬಗ್ಗೆ ನಬಾರ್ಡ್‌ನಲ್ಲಿ ಮಾತನಾಡಿ ಈ ರೀತಿ ಮಳೆ ಬಂದಾಗ ಹಾಳಾಗುವಂತಹ ರಸ್ತೆಗಳ ಬಗ್ಗೆ ನಬಾರ್ಡ್‌ಗೆ ನೀವು ಯಾವ ರಸ್ತೆಗಳ ಕಾರ್ಯಕ್ರಮಗಳನ್ನು ಕಳುಹಿಸಿದ್ದೀರಿ, ಅವುಗಳ ನಾರ್ಮ್ಸ್ ಪ್ರಕಾರ ಇವತ್ತು ರಾಜ್ಯದ ಉಳಿದೆಡೆ ಆ ಪ್ರಕಾರ ಆಗದೇ ಈ ಮಳೆಯಿಂದ ಆಗುವಂತಹ ಅಪಘಾತವನ್ನು ಎದುರಿಸುವಂತಹ all weather proof ರಸ್ತೆ ಆಗುವ ರೀತಿಯಲ್ಲಿ ಏನು ಮಾಡಬಹುದು? What is the technology to be adopted? ನಬಾರ್ಡ್‌ನಿಂದ ಮಾಡತಕ್ಕಂಥ ಕೆಲಸ ಪರ್ಮನೆಂಟ್ ಆಗಿ ಉಳಿಯುತ್ತದೆ. ಇದನ್ನು ನೀವು ವಿಶೇಷವಾಗಿ ಕೈಗೆ ಎತ್ತಿಕೊಳ್ಳಬೇಕೆಂದು ಮುಖ್ಯವಾಗಿ ಪಿ.ಡಬ್ಲ್ಯೂ.ಡಿ. ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಇದು ಸಾಧ್ಯತೆ ಇದೆ. Because of the liberalisation policy of the NABARD. ಇನ್ನೊಂದು ವಿಚಾರವನ್ನು ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದೇನೆಂದರೆ 1992ರಲ್ಲಿ ನಾನು ಒಂದು ರಿಪೋರ್ಟ್ ಮಾಡಿ ವಿಶ್ವ ಬ್ಯಾಂಕ್‌ಗೆ ಕಳುಹಿಸಿ ಎಂದು ಹೇಳಿದ್ದೆ. ಮುಖ್ಯವಾಗಿ ಎಲ್ಲಿ ವಿಶೇಷವಾಗಿ ಜನರು ಈ ಅನಾಹುತವನ್ನು ಎದುರಿಸುತ್ತಾರೆ ಅಲ್ಲಿ ಒಂದು ಪರ್ಮನೆಂಟ್ ಮೇಜರ್ ಹಾಕಿ ಮಾಡಬೇಕೆಂದು ಒಂದು ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿದ್ದೆವು. ಅದು ವಿಶ್ವಬ್ಯಾಂಕ್‌ಗೆ ಹೋಗುತ್ತದೆ, ಬರುತ್ತದೆ, ಆದರೆ ಅದನ್ನು ಅಪ್ರೂವ್ ಮಾಡುತ್ತಾ ಇಲ್ಲ. Again you can think of referring this matter to the NABARD. ಅದು ಏಕೆ ಎಂದರೆ ಖಾಯಂ ಆಗಿ ನಮಗೆ

ಒಂದು ಸಲ್ಯೂಷನ್ ಸಿಗುತ್ತದೆ. You can discuss with the NABARD, instead of waiting for the World Bank or any other Asain region Bank or anybody... ನೀವು ಇವರೊಡನೆ ಮಾತನಾಡಿ ನಬಾರ್ಡ್‌ನಲ್ಲಿ ಕೆಲವು ಮುಖ್ಯವಾದಂತಹ ಯೋಜನೆಗಳನ್ನು ಸುಮಾರು ಎಂಟು ನೂರು ಕೋಟಿಯಿಂದ ಒಂಬೈನೂರು ಕೊಟಿ ರೂಪಾಯಿಗಳ ಯೋಜನೆಗಳನ್ನು ನಾವು ಆವಾಗ ತಯಾರು ಮಾಡಿ ಕೊಟ್ಟೆವು. ಇದು ರಾಯಚೂರು ಜಿಲ್ಲೆ, ಬಿಜಾಪುರ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಈ ರೀತಿಯಾಗಿ ಎಲ್ಲಾ ಜಿಲ್ಲೆಗಳಲ್ಲೂ ನಾವು ಇವತ್ತು ಶಾಶ್ವತವಾಗಿ ಅತಿವೃಷ್ಟಿಯನ್ನು ಎದುರಿಸುವಂತಹ ಒಂದು ಕಾರ್ಯಕ್ರಮವನ್ನು ಕಲ್ಪಿಜನ್ಸಿ ಪ್ಲಾನ್ ಅನ್ನು ತಾವು ದಯಮಾಡಿ ನಬಾರ್ಡ್‌ನಲ್ಲಿ ಸಮಾಲೋಚನೆ ಮಾಡಿ ತಾವು ಇದನ್ನು ತಂದರೆ ಮುಂದೆ ಬರುವಂತಹ ಅತಿವೃಷ್ಟಿಯನ್ನು ಖಾಯಂ ಆಗಿ ಎದುರಿಸುವಂತಹ ಸಿದ್ಧತೆ, I am telling about the long range plan. ಇದನ್ನು ನೀವು ಮಾಡಬೇಕೆಂದು ವಿಶೇಷವಾಗಿ ನಾನು ಇಲ್ಲಿ ವಿನಂತಿ ಮಾಡಿಕೊಂಡು ಇದರ ಬಗ್ಗೆ ಗಂಗಾವತಿ ಎಂ.ಎಲ್.ಎಗಳಿಗೆ ಅವಕಾಶ ಕೊಡುವುದು ಒಳ್ಳೆಯದೆಂದು ಅನಿಸುತ್ತದೆ. ಏಕೆಂದರೆ ಅಲ್ಲಿ, ನೀರನ್ನು ನಿಲ್ಲಿಸಿದ ಮೇಲೆ ಕಬ್ಬು, ಬಾಳೆ, ಬೆಳೆಗಳಿಗೆ ಭಾರೀ ಅನಾಹುತ ಆಗಿದೆ. ಇದರ ಬಗ್ಗೆ ತಕ್ಷಣ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ತಾವು ದಯಮಾಡಿ ಇದರ ಬಗ್ಗೆ ಒಂದು ಸಮಗ್ರವಾದಂತಹ ವರದಿಯನ್ನು ಗೌವರ್ನಮೆಂಟ್ ಆಫ್ ಇಂಡಿಯಾಕ್ಕೆ ಕಳುಹಿಸದಿದ್ದರೂ ಕೂಡ ರಾಜ್ಯದ ಮಟ್ಟಿಗೆ ದಯಮಾಡಿ ಅದನ್ನು ಸರ್ಕ್ಯೂಲೆಟ್ ಮಾಡಬೇಕು ಮತ್ತು ನಾನು ಕೊಟ್ಟಂತಹ ಕೆಲವು ಸಲಹೆಗಳನ್ನು ತಾವು ತೀವ್ರವಾಗಿ ಗಂಭೀರವಾಗಿ, ಆಲೋಚನೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಂಡು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ನಾನು ವಿಶೇಷವಾಗಿ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಆರ್.ಯಾವಗಲ್ (ನರಗುಂದ);- ಮಾನ್ಯ ಉಪಾಧ್ಯಕ್ಷರೆ, ಬರಗಾಲ ಮತ್ತು ಅತಿವೃಷ್ಟಿ ಇದು ಎರಡು ನಮ್ಮ ರಾಜ್ಯದಲ್ಲಿ ಒಂದು ವಿಚಿತ್ರವಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ ಎಂದು ಹೇಳಿದರೆ ತಪ್ಪಾಗಲಾರದು. ನಾವು ಇಲ್ಲಿಂದ ಹೊರಟು ಹುಬ್ಬಳ್ಳಿ, ಬೆಳಗಾಂಗೆ ಹೋಗಿ ಬಂದರೆ ನಮ್ಮ ರಾಜ್ಯದ ಒಟ್ಟಾರೆ ದರ್ಶನ ಮಾಡಿದ ಹಾಗೆ ಆಗುತ್ತದೆನ್ನುವಂತಹ ಮಾತನ್ನು ಹೇಳಬಯಸುತ್ತೇನೆ. ಕೋಲಾರದ ಅನೇಕ ಸ್ನೇಹಿತರು ಮಳೆ ಇಲ್ಲವೆನ್ನುವಂತಹ ಮಾತನ್ನು ಹೇಳುತ್ತಿದ್ದಾರೆ. ಬೆಂಗಳೂರು ಸುತ್ತಮುತ್ತಲೂ ಮಳೆ ಇಲ್ಲ, ತುಮಕೂರು ನಲ್ಲೂ ಮಳೆ ಇಲ್ಲ, ಎಲ್ಲೂ ಬೆಳೆ ಕಾಣುವುದಿಲ್ಲ. ಹಾವೇರಿ, ಹಾನಗಲ್ ಸಮೀಪ, ಹುಬ್ಬಳ್ಳಿ, ಬೆಳಗಾಂನವರಿಗೆ ಅಲ್ಪಸ್ವಲ್ಪ ಬೆಳೆ ಇದ್ದರೂ ಬಹುತೇಕ ಪ್ರದೇಶಗಳಲ್ಲಿ ಮಳೆ ಇಲ್ಲದೆ ಪರದಾಡುವಂಥ ಪರಿಸ್ಥಿತಿಯನ್ನು ನಾವು ಅನುಭವಿಸುತ್ತಿದ್ದೇವೆ. ಒಂದು ಆಶಾದಾಯಕ ಕೆಲಸವೆಂದರೆ ಬಹುತೇಕ ಕೆರೆಕಟ್ಟೆಗಳು ತುಂಬಿದೆ. ಅದರಲ್ಲೂ ವಿಶೇಷವಾಗಿ ವಿದ್ಯುತ್ ತಯಾರು ಮಾಡುವಂತಹ ಶರಾವತಿ

ಇರಬಹುದು, ಇತರೆ ಜಲಾಶಯಗಳು ಎಲ್ಲಾ ತುಂಬಿದೆ. ಈ ಸರ್ಕಾರ ಬಂದರೆ ಪದೇ ಪದೇ ಬರಗಾಲ ಎನ್ನುವಂತಹ ಕೆಟ್ಟ ಕಳಂಕ ಹೋದಂತೆ ಆದರೂ ಅದರಿಂದ ಆದಂತಹ ಅನಾಹುತದ ಬಗ್ಗೆ ಬಹಳಷ್ಟು ನಾವು ಇವತ್ತು ಚರ್ಚೆ ಮಾಡುತ್ತಿದ್ದೇವೆ. ಒಂದು ಕಡೆ ಬಹಳಷ್ಟು ಅತಿವೃಷ್ಟಿಯಾಯಿತು. ನಮ್ಮ ಪ್ರದೇಶಕ್ಕೆ ತಾವೇ ಬಂದು ಪೂಜೆ ಮಾಡಿದಿರಿ. ಮಲಪ್ರಭಾ ಸಹಿತ ಬಹಳ ವರ್ಷಗಳ ನಂತರ ಅದರ ಪೂರ್ಣ ಪ್ರಮಾಣ ಏನು ಇತ್ತು ಅದರ ಶಕ್ತಿ ಏನು ಇತ್ತು ಅಥವಾ ಅದರ ಅಳತೆ ಏನು ಇತ್ತು ಅಥವಾ ಪರಿಮಿತಿ ಏನು ಇತ್ತು, ಅದು ಪೂರ್ಣ ತುಂಬಿ ಹೊರಚೆಲ್ಲುವಂತಹ ಪರಿಸ್ಥಿತಿ ಉಂಟಾಗಿದೆ. ಸುಮಾರು 10-15 ಸಾವಿರ ಕ್ಯೂಸೆಕ್ಸ್ ನೀರನ್ನು ಹೊರಗೆ ಬಿಡಲಾಯಿತು. ಒಂದು ಕಡೆ ನಮ್ಮ ಪ್ರದೇಶದಲ್ಲಿ ಮಳೆ ಇಲ್ಲ, ಇನ್ನೊಂದು ಕಡೆ ಆ ಬಿಟ್ಟಂತಹ ನೀರಿನಿಂದ ಮಹಾಪೂರ ಬಂದು ಬಹಳಷ್ಟು ಅನಾಹುತಗಳೂ ಸಹಿತ ನಮ್ಮ ಪ್ರದೇಶದಲ್ಲಿ ಆಗಿದೆ. ನಾನು ಒಮ್ಮೆ ಒಬ್ಬ ಹಿರಿಯ ಅಧಿಕಾರಿಗಳ ಹತ್ತಿರ ಹೋಗಿದ್ದೆ, ಅವರು ಈಗ ಇಲ್ಲ, ನಿವೃತ್ತಿಯಾಗಿದ್ದಾರೆ. ಸುಮಾರು ಎರಡೂವರೆ ಅಥವಾ ಮೂರು ತಿಂಗಳ ಹಿಂದೆ ನಾನು ಅವರ ಹತ್ತಿರ ಹೋಗಿದ್ದೆ. ನಮ್ಮಲ್ಲಿ ಮಳೆ ಇಲ್ಲ, ಬರಗಾಲದ ಕೆಲಸಗಳನ್ನು ಅಂದರೆ ಕಾಮಗಾರಿ ಕೆಲಸಗಳನ್ನು ಪ್ರಾರಂಭ ಮಾಡಲಿಕ್ಕೆ ತಾವು ಶಿಫಾರಸ್ಸು ಮಾಡಬೇಕು ಅಥವಾ ಅದರ ಬಗ್ಗೆ ತಾವು ಸ್ವಲ್ಪ ರಿವ್ಯೂ ಮಾಡಬೇಕು ಅಂತಹೇಳಿ ನಾನು ಅವರನ್ನು ಕೇಳಿದಾಗ, ಅವರು ತಮ್ಮ ಹತ್ತಿರ ಇದ್ದಂತಹ ಒಂದು ಚಾರ್ಟ್ ಅನ್ನು ತೆಗೆದರು. ತಮ್ಮ ಹತ್ತಿರ ಸಿದ್ಧಪಡಿಸಿದಂತಹ ನಕ್ಷೆಯೊಂದನ್ನು ಅವರು ತೆಗೆದು, ಅಲ್ಲಿ ಒಂದೆಡೆ ತೋರಿಸಿ, ನಿಮ್ಮ ತಾಲ್ಲೂಕಿನಲ್ಲಿ ಮಳೆಯಾಗಿದೆ ಎಂದು ಹೇಳಿದರು. ಆಗ ನಾನು ಅವರಿಗೆ ನಿಮ್ಮ ಚಾರ್ಟ್‌ನಲ್ಲಿ ಮಳೆಯಾಗಿದೆ ಎಂದು ತೋರಿಸುತ್ತಿದೆ, ಆದರೆ ವಾಸ್ತವಿಕವಾಗಿ ಅಲ್ಲಿ ಮಳೆ ಆಗಿಲ್ಲ, ನಾನು ಅಲ್ಲಿಂದಲೇ ಬರುತ್ತಿದ್ದೇನೆ, ಅಲ್ಲಿ ಮಳೆಯೇ ಆಗಿಲ್ಲ ಎಂದೆ. ಆಗ ಅವರು ಅಲ್ಲಿ ಎಷ್ಟು ಮಳೆಯಾಗಿದೆ ಎಂಬುದನ್ನು ಹೇಳಿ ಎಂದರು. ಆ ಅಧಿಕಾರಿ 2-3 ಬಣ್ಣ ಕೊಟ್ಟು ಆ ಚಾರ್ಟ್ ಅನ್ನು ತಯಾರು ಮಾಡಿ ಇಟ್ಟಿದ್ದರು. ಆ ಬಣ್ಣದ ಪ್ರದೇಶ ನೋಡಿ ಅವರು ನಿಮ್ಮ ಪ್ರದೇಶದಲ್ಲಿ ಮಳೆ ಖಂಡಿತವಾಗಿಯೂ ಆಗಿದೆ ಎಂದು ವಾದ ಮಾಡಿದರು, ಮಳೆಯಾಗಿಲ್ಲ ಎಂದು ನಾನು ಅವರ ಹತ್ತಿರ ವಾದ ಮಾಡಿದೆ. ಕೊನೆಗೂ ಕೂಡ ಆ ಅಧಿಕಾರಿ ಮಾಡಿದ ವಾದವೇ ಇವತ್ತಿಗೂ ಕೂಡ ನಡೆಯುತ್ತಿದೆ ಎಂದು ನನಗನಿಸುತ್ತಿದೆ. ಇವೊತ್ತೇನು ರಾಜ್ಯದ ತುಂಬಾ, ಸುಮಾರು 77-78 ತಾಲ್ಲೂಕುಗಳಲ್ಲಿ ಮಳೆ ಇಲ್ಲ, ಅಲ್ಲಿ ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕು. ಎಲ್ಲಿ ಅತಿವೃಷ್ಟಿಯಾಗಿದೆಯೋ ಅಲ್ಲಿ ಹೆಚ್ಚಿನ ರೀತಿಯಿಂದ ಜನರ ಸಹಾಯಕ್ಕೆ ಹೋಗಿ, ಆದಂತಹ ಅನಾಹುತಗಳನ್ನು ನಾಶವನ್ನು, ಪರಿಹಾರವೋ ಅಥವಾ ಯಾವುದೋ ರೀತಿಯಿಂದ ಸಮಾಧಾನಕರವಾದಂತಹ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಲಿಕ್ಕೆ ಅಲ್ಲಿ ಪ್ರಯತ್ನ ಮಾಡಬೇಕು. ಇಂತಹ ಒಂದು ಪರಿಸ್ಥಿತಿಯಲ್ಲಿ ಎಲ್ಲಿ ಮಳೆಯಾಗಿಲ್ಲ ಅಲ್ಲಿ ಬಹಳ ಗಂಭೀರವಾದಂತಹ ಪರಿಸ್ಥಿತಿ ಇದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸುತ್ತಿರುವ ವಿಷಯಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರು ಸದನದಲ್ಲಿ ಇಲ್ಲ.

ಉಪಾಧ್ಯಕ್ಷರು: ಅವರು ನನಗೆ ಹೇಳಿ ಹೋಗಿದ್ದಾರೆ.

ಶ್ರೀ ಯು.ಆರ್.ಸಭಾಪತಿ: ಆಗಲೇ ಸದನದಲ್ಲಿದ್ದ ಮಾನ್ಯ ಲೋಕೋಪಯೋಗಿ ಸಚಿವರು ಹಾಗೂ ಕಂದಾಯ ಸಚಿವರಿಬ್ಬರೂ ಹೊರಗೆ ಹೋಗಿದ್ದಾರೆ. ನಾವೇನು ಇಲ್ಲಿ ಹರಿಕಥೆ ಮಾಡಲಿಕ್ಕೆ ಈ ಸದನವನ್ನು ಉಪಯೋಗಿಸುತ್ತಿದ್ದೇವೆಯೇ? ಇದರ ಬಗ್ಗೆ ಸರ್ಕಾರಕ್ಕೇನು ಸೀರಿಯೆಸ್‌ನೆಸ್ ಇಲ್ಲವೇ?....

ಉಪಾಧ್ಯಕ್ಷರು: ಮಾನ್ಯ ಕಂದಾಯ ಸಚಿವರು ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿರುವ ವಿಷಯದ ಬಗ್ಗೆ ನೋಟ್ ಮಾಡಿಕೊಳ್ಳಲು ಮಾನ್ಯ ದರ್ಶನಾಪೂರ್ ಅವರಿಗೆ ಎನ್‌ಟ್ರಸ್ಟ್ ಮಾಡಿ ಹೋಗಿದ್ದಾರೆ. ಎರಡನೇ ನಿಮಿಷಗಳಲ್ಲಿ ಹಿಂತಿರುಗಿ ಬರುತ್ತೇನೆ ಎಂದು ಮಾನ್ಯ ಸಚಿವರು ನನಗೆ ಹೇಳಿ ಹೋಗಿದ್ದಾರೆ.

ಶ್ರೀ ಯು.ಆರ್.ಸಭಾಪತಿ: ಕ್ಯಾಬಿನೆಟ್ ಸಚಿವರ್‍ಯಾರೂ ಮುಂದಿನ ಸಾಲಿನಲ್ಲಿ ಇಲ್ಲ. ಇಷ್ಟೊಂದು ಗಂಭೀರವಾದಂತಹ ಸಮಸ್ಯೆ ಇಲ್ಲಿ ಚರ್ಚೆಯಾಗುತ್ತಿದೆ. ನೀವು ಏನು ಬರೆದುಕೊಳ್ಳುತ್ತೀರೋ ನಮಗಂತೂ ಅರ್ಥವಾಗುವುದಿಲ್ಲ.

ಶ್ರೀ ಕೆ.ಜಯಪ್ರಕಾಶ ಹೆಗಡೆ: ಸರ್ಕಾರದಿಂದ ಇದರ ಬಗ್ಗೆ ಉತ್ತರ ಕೊಡುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಅಪ್ಪಣೆ ಪಡೆದು ಸ್ವಲ್ಪ ಹೊರಗೆ ಹೋಗಿ ಬರಬಾರದೇ? ನಾವು ಚರ್ಚೆ ಬರೆದುಕೊಳ್ಳದೇ ನಿಮಗೆ ಉತ್ತರ ಕೊಡದಿದ್ದರೆ, ಆಗ ನೀವು ನಮ್ಮನ್ನು ಕೇಳಿ.

ಉಪಾಧ್ಯಕ್ಷರು: ಮಾನ್ಯ ಯಾವಗಲ್‌ರವರೇ, ತಾವು ಮಾತನಾಡುವುದನ್ನು ಮುಂದುವರೆಸಿ.

ಶ್ರೀ ಬಿ.ಆರ್.ಯಾವಗಲ್: ಮಾನ್ಯ ಉಪಾಧ್ಯಕ್ಷರೇ, ಈ ತಾಲ್ಲೂಕುಗಳಲ್ಲಿ ವಿಶೇಷವಾಗಿ, ತಮ್ಮನ್ನೂ ಸೇರಿ ಯಾವ ಭಾಗದಿಂದ ನಾವು ಬರುತ್ತೇವೊ, ಅಂತಹ ಕಡೆ ಬರಗಾಲ ಪರಿಹಾರ ಕಾಮಗಾರಿ ವ್ಯವಸ್ಥೆ ಹೇಗಾಗಿದೆ? ಎಂಬುದನ್ನು ಸರ್ಕಾರ ಗಮನಿಸಬೇಕು. ಎಲ್ಲಿ ಮುಂಗಾರು ಬೆಳೆ ಮೇಲೆ ಬಹಳಷ್ಟು ಅವಲಂಬನೆ ಇತ್ತು, ಅದು ವಿಶೇಷವಾಗಿ ಶೇಂಗಾ ಇರಬಹುದು, ಪಲ್ಸ್ ಕ್ರಾಪ್ ಇರಬಹುದು, ಈರುಳ್ಳಿ ಇರಬಹುದು, ಮೆಣಸಿನಕಾಯಿ ಇರಬಹುದು, ಜೋಳ ಇರಬಹುದು, ಮುಸುಕಿನ ಜೋಳ ಇರಬಹುದು, ಹತ್ತಿ ಇರಬಹುದು, ಇತ್ಯಾದಿ ಬೆಳೆಗಳು ಈ ಎಲ್ಲಾ ಪ್ರದೇಶಗಳಲ್ಲಿ ಇವತ್ತು ಇಲ್ಲವೇ ಇಲ್ಲ. ಅಲ್ಪ ಸ್ವಲ್ಪ ಮಳೆ ಬಂದು ಎಲ್ಲೆಲ್ಲಿ ಬಿತ್ತಿದ್ದರೋ, ಮುಂದೆ

ಮಳೆಯಾಗಿ ಬೆಳೆದು ಏನಾದರೂ ಸ್ವಲ್ಪ ಬೆಳೆ ಕೈಗೆ ಬರಬಹುದು ಎಂದು ನಿರೀಕ್ಷೆ ಮಾಡಿದ್ದಂತಹ ಪ್ರದೇಶಗಳಲ್ಲಿ ಅದೂ ಸಹಾ ಅವರ ಕೈಗೆ ಸಿಗದಂತಹ ಪರಿಸ್ಥಿತಿ ಇವತ್ತು ನಿರ್ಮಾಣ ಆಗಿದೆ. ಹುಟ್ಟಿದಂತಹ ಬೆಳೆ ಅಲ್ಲೇ ಕಮರಿ ಹೋಗಿ, ಅಲ್ಲಿ ಬೆಳೆಗೆ ಹಾಕಿದಂತಹ ಗೊಬ್ಬರ, ಬೀಜ ಸಹಿತ ಹೋಗುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಅದರಲ್ಲೂ ವಿಶೇಷವಾಗಿ ಎರಿ ನೆಲದಲ್ಲಿ, ಎಲ್ಲಿ ಮುಂಗಾರು ಬೆಳೆ ಮೇಲೆ ಹೆಚ್ಚಿನ ಭಾರ ಅಥವಾ ಅವಲಂಬನೆ ಇರುತ್ತದೋ, ಅಲ್ಲಿ ಈ ರೀತಿಯಾದಂತಹ ಪರಿಸ್ಥಿತಿಯಿಂದ ಬಹುತೇಕ ಇದನ್ನು ಸುಧಾರಿಸಿಕೊಳ್ಳಲಿಕ್ಕೆ, ಕೆಲವು ಪ್ರದೇಶಗಳಲ್ಲಿ ಬಹುತೇಕ ಅವರ ಅನುಭವದಲ್ಲಿ ಮೊಟ್ಟ ಮೊದಲ ಬಾರಿಗೆ ಈ ರೀತಿ ಆದಂತಹ ಪರಿಸ್ಥಿತಿಯನ್ನೂ ಸಹಿತ ನಾವು ನೋಡುತ್ತಿದ್ದೇವೆ. ಹೇಗೂ ಅವರಿಗೆ ಸ್ವಲ್ಪ ಮಳೆ ನಿಲ್ಲುತ್ತಿತ್ತು, ಒಣ ಬೇಸಾಯದಿಂದ ಅವರು ಕೆಲವು ಬೆಳೆಗಳನ್ನು ಹಾಕುತ್ತಿದ್ದರು, ಬೆಳೆಯುತ್ತಿದ್ದರು. ಇವತ್ತು ಅಲ್ಲಿ ಮೊಟ್ಟಮೊದಲನೇ ಬಾರಿಗೆ ಬೆಳೆ ಇಲ್ಲದಂತಹ ಪರಿಸ್ಥಿತಿ ರೈತರಿಗೆ ಹಾಕಿದ್ದೂ ಬರಲಿಲ್ಲ ಅಥವಾ ಈ ವರ್ಷದ ಬೆಳೆ ಇಲ್ಲ, ಕೂಲಿಗಾರರಿಗೆ ಕೆಲಸ ಇಲ್ಲ, ಕುಡಿಯಲಿಕ್ಕೆ ನೀರು ಇಲ್ಲ, ಇಂತಹ ಪರಿಸ್ಥಿತಿ ವಿಶೇಷವಾಗಿ ಧಾರವಾಡದಲ್ಲಿದೆ. ಈಗ ಧಾರವಾಡ ಜಿಲ್ಲೆ ಒಡೆದು ಮೂರು ಜಿಲ್ಲೆಯಾದುದು ತಮಗೆ ಗೊತ್ತಿದೆ. ಗದಗ್ ಜಿಲ್ಲೆಯಲ್ಲಿ ಬಹುತೇಕ ಒಣ ಪ್ರದೇಶಗಳಲ್ಲಿ ಬರುವಂತಹ, ಒಣ ನೀರಾವರಿ ಇಲ್ಲದೇ ಇದ್ದಂತಹ ಹಳ್ಳಿಗಳಲ್ಲಿ ನಾವು ಈ ಪರಿಸ್ಥಿತಿಯನ್ನು ಕಾಣಬಹುದಾಗಿದೆ. ರೋಣ ಇರಬಹುದು, ಗದಗ್ ಇರಬಹುದು, ಮುಂಡರಗಿ ಇರಬಹುದು, ಹೀಗೆ ಅನೇಕ ಪ್ರದೇಶಗಳಲ್ಲಿ ಈ ರೀತಿ ಇದ್ದಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಸರ್ಕಾರ ಆದಷ್ಟು ಬೇಗ ಇವತ್ತು ಯಾವ ರೀತಿಯಿಂದ, ಯಾವ ಈ ಕಾರಣಕ್ಕಾಗಿ ರೈತ ಏನು ತೊಂದರೆಗೀಡಾಗಿದ್ದಾನೆ, ಕೂಲಿಗಾರರಿಗೆ ಕೆಲಸ ಇಲ್ಲ, ನೀರಿನ ಕೊರತೆ ಇದೆ, ದನಕರುಗಳಿಗೆ ಮೇವು ಇಲ್ಲದಂತಹ ಪರಿಸ್ಥಿತಿಯಾಗಿದೆ, ಇಲ್ಲಿಯವರೆಗೆ ಮಳೆ ಇಲ್ಲ, ಭವಿಷ್ಯದಲ್ಲಿ ಮಳೆ ಆಗುತ್ತದೆ ಎನ್ನುವ ಭರವಸೆ ಇಲ್ಲ, ಆದಷ್ಟು ಬೇಗ ವಿಶೇಷವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ನಾನೂ ಕೂಡ ಸಂಪೂರ್ಣವಾಗಿ ಒಪ್ಪುತ್ತೇನೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಸರ್ಕಾರ ಸ್ವಲ್ಪ ಮಾನಸಿಕವಾಗಿ ಇನ್ನೂ ಸಿದ್ಧವಾಗಿಲ್ಲ ಎನ್ನುವಂತಹ ಭಾವನೆ ನನಗೂ ಬಂದಿದೆ. ಆದರೂ ಕೂಡ ಬಹಳಷ್ಟು ಮಳೆಯಾಯಿತು, ಜಲಾಶಯಗಳು ತುಂಬಿ ಹೋದವು. ಎರಡು ವರ್ಷದ ನಂತರ ಮೊಟ್ಟ ಮೊದಲನೇ ಬಾರಿಗೆ ಶರಾವತಿ ತುಂಬಿ ಹೋಗಿ ಇನ್ನೇನು ವಿದ್ಯುತ್ತಿನ ಬರ ಎಲ್ಲಾ ನೀಗಿ ಹೋಯಿತು, ಜಲಾಶಯಗಳಿಂದ ಎಷ್ಟು ಬೇಕಾದರೂ ನಾವು ನೀರು ಪಡೆಯಬಹುದು ಎನ್ನುವ ಹುಮ್ಮಸ್ಸು, ಹುರುಪು ಏನಿದೆ, ಅದು ಬಹಳ ದಿವಸ ಇರಲಿಕ್ಕಿಲ್ಲ ಎಂದು ನಾನು ಭಾವಿಸುತ್ತೇನೆ. ಅದೇ ಒಂದು ರೀತಿಯಿಂದ ಮಾನಸಿಕವಾಗಿ ನಾವು ಅದರಲ್ಲಿದ್ದೇವೆ. ವಾಸ್ತವಿಕ ಪರಿಸ್ಥಿತಿ ಸುಮಾರು 77-78 ತಾಲ್ಲೂಕುಗಳಲ್ಲಿ ಏನಿದೆ, ಅದನ್ನು ಇವತ್ತು ತೀವ್ರವಾಗಿ ಪರಿಗಣನೆ ಮಾಡಿ, ನಾವು ಅದನ್ನು ಯುದ್ಧೋಪಾದಿಯಲ್ಲಿ ಅಂತ ಹೇಳಿದರೂ ತಪ್ಪಿಲ್ಲ, ಇವತ್ತು ಅನೇಕ ಸ್ನೇಹಿತರು ಹೇಳಿದರು, ಆ ಕಡೆ

ಅತಿವೃಷ್ಟಿಯಿಂದ ಆದಂತಹ ಲುಕ್ಸಾನ್ ಅನ್ನು ಸರಿಪಡಿಸುವಂತಾದ್ದು, ಇವತ್ತೇನು ಇಲ್ಲಿಯವರೆಗೆ ಮಳೆ ಸುಮಾರು 670-700 ಮಿ.ಮೀ.ವರೆಗೆ ಮಳೆ ಆಗಬೇಕಾಗಿತ್ತು ನಮ್ಮ ಪ್ರದೇಶದಲ್ಲಿ, ಅಲ್ಲಿ ಇಲ್ಲಿಯವರೆಗೆ ಸುಮಾರು 100-150 ಮಿ.ಮೀ.ವರೆಗೆ ಮಾತ್ರ ಅಲ್ಲಿ ಮಳೆಯಾಗಿದೆ. ಅದಕ್ಕಿಂತ ಜಾಸ್ತಿ ಅಲ್ಲಿ ಇವತ್ತು ಮಳೆ ಇಲ್ಲ. ಉಳಿದ ಮಳೆ ಇನ್ನು 2-3 ತಿಂಗಳುಗಳಲ್ಲಿ ಸಮನಾಗಿ ಬೀಳದಿದ್ದರೆ ಕಷ್ಟವಾಗುತ್ತದೆ. ಅಕ್ಟೋಬರ್ ತಿಂಗಳೊಳಗಾಗಿ ಮಳೆ ಬೀಳದಿದ್ದರೆ ಹಿಂಗಾರು ಬೆಳೆಯೂ ಸಹಿತ ಬೆಳೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಆದಷ್ಟು ಬೇಗ ಸರ್ಕಾರ ಇದರ ಬಗ್ಗೆ ಜನತೆಗೆ ಸಹಾಯ ಮಾಡುವಂತಹ ಕೆಲಸವನ್ನು ಮಾಡಲಿಕ್ಕೆ ಸಂಪೂರ್ಣವಾಗಿ ಆಡಳಿತ ಯಂತ್ರವನ್ನು ತಯಾರಿ ಮಾಡಬೇಕು, ಹಚ್ಚಬೇಕು ಅಂತೇಳಿ ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಇನ್ನು, ಹಲವಾರು ವರ್ಷಗಳ ಹಿಂದೆ ಇದೇ ರೀತಿ ಬರಗಾಲ ನಮ್ಮ ಸರ್ಕಾರವಿದ್ದಾಗ ಬಂದಿತ್ತು. ಆಗ ಸರ್ಕಾರವು ಈ ಬರಗಾಲವನ್ನು ಎದುರಿಸುವಂತಹ ಉತ್ತಮ ಕಾರ್ಯಕ್ರಮಗಳನ್ನು ಹಾಕಿಕೊಂಡಿತ್ತು. ಆ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಂಡು ನೆನಪನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಕೆಲಸ ಕೊಡುವ ರೀತಿಯಿಂದ ಆಗಿರಬಹುದು, ಇವತ್ತು ನಾವೇನು ಅನೇಕ ಕಾರ್ಯಕ್ರಮಗಳ ಮೂಲಕ, ನಾವು ಕೆಲಸ ಕೊಡುತ್ತೇವೆ ಎಂದು ಹೇಳುವಂತಹ ಮಾತನ್ನು ಹೇಳಿ, ಇ.ಎ.ಎಸ್. ಆಗಿರಬಹುದು ಅಥವಾ ಜೆ.ಆರ್.ವೈ. ಆಗಿರಬಹುದು, ಅಲ್ಪ ಸ್ವಲ್ಪ ಬರಗಾಲ ಕೆಲಸಗಳನ್ನು ಕೊಡುವಂತಾದ್ದು ಆಗಿರಬಹುದು, ಕುಡಿಯುವ ನೀರನ್ನು ಒದಗಿಸುವುದು ಇರಬಹುದು, ಇದು ವ್ಯವಸ್ಥಿತವಾಗಿ ನಡೆಯುವಂತಹ ಪರಿಸ್ಥಿತಿ ಇವತ್ತು ಇನ್ನೂ ನಡೆಯುತ್ತಿಲ್ಲ ಎಂದೇಳಿ ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಅದರ ಬದಲಾಗಿ ಇವತ್ತು ಜಿಲ್ಲಾ ಪರಿಷತ್ ಎಂದು ಹೇಳಿದರೆ, ಜಿಲ್ಲಾ ಪರಿಷತ್‌ನ ಮೂಲಕ ಹೆಚ್ಚು ಕಾರ್ಯಕ್ರಮ ನಡೆಯುವಂಥಾದ್ದು. ನಾವು ಇದನ್ನು ಸಂಬಂಧಪಟ್ಟಂಥ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಾಗ ಬಹುತೇಕ ಅವರು ಹೇಳುವಂತಹ ಉತ್ತರ ಏನೆಂದರೆ, ಸಾಕಷ್ಟು ಸೆಲ್ಫ್ ಹೆಲ್ಪ್ ಪ್ರಾಜೆಕ್ಟ್‌ಗಳನ್ನು ಮಾಡಿದ್ದೇವೆ ಎನ್ನುತ್ತಾರೆ. ಅದೇನು ಹಳೆಯ ಕಾಲದ ಪದ್ಧತಿ ಇತ್ತು, ಅದನ್ನು ಮುಂದುವರೆಸಿಕೊಂಡು ಬಂದಿದ್ದೇವೆ. ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಎಸ್ಟಿಮೇಟ್‌ಗಳನ್ನು ಮಾಡಿ ಬೇಗ ಕೆಲಸ ಮುಗಿಸೋಣ. ಸಿಕ್ಕಂತಹ ಹಣವನ್ನು ಇ.ಎ.ಎಸ್.ನಲ್ಲಿ ಇದ್ದರೆ, ಅದನ್ನು ಉಪಯೋಗ ಮಾಡಿ ಜನಕ್ಕೆ ಕೆಲಸ ಕೊಡುವಂತಹ ಏನೊಂದು ಕಾರ್ಯಕ್ರಮ ಇವತ್ತು ಇದೆ, ಅದು ವ್ಯವಸ್ಥಿತವಾಗಿ ನಡೆಯುತ್ತಿಲ್ಲ. ಏನೊಂದು ಉದ್ದೇಶದಿಂದ ಅದು ಆಗಬೇಕೋ ಆ ರೀತಿಯಾಗಿ ಆ ಹಣ ಉಪಯೋಗ ಮಾಡಿ ಆ ಕೆಲಸಗಳನ್ನು ಒದಗಿಸಿಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಹಾಗೂ ಅದು ಸಾಧ್ಯವಾಗುವುದೂ ಇಲ್ಲ. ಆ ಕೆಲಸ ಆಗುವಂತಹ ಒಂದು ಪರಿಸ್ಥಿತಿಯಲ್ಲಿ ಮಾನಸಿಕವಾಗಿ ಅವರು ಸಿದ್ಧರಾಗಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಜಿಲ್ಲಾ ಪಂಚಾಯಿತಿ ವ್ಯವಸ್ಥೆಯಲ್ಲಿ ಇದನ್ನು ಎಲ್ಲರಿಗೂ ಒಂದು ರೀತಿಯ ಅನುಕೂಲವಾಗುವ ರೀತಿಯಲ್ಲಿ ಮಾಡಲಿಕ್ಕೆ ಆ

ಸಂದರ್ಭದಲ್ಲಿ ಸಾಧ್ಯವಾಗುವುದಿಲ್ಲ. ಅದರಲ್ಲೂ ವಿಶೇಷವಾಗಿ ಧಾರವಾಡದಂತಹ ಜಿಲ್ಲೆಯಲ್ಲಿ ಅದು ಆಗುವುದಿಲ್ಲ. ಇವತ್ತು ಧಾರವಾಡ ಜಿಲ್ಲೆ ಮೂರು ಜಿಲ್ಲೆಗಳಾಗಿ ಒಡೆದಿದೆ. ಆದರೆ ಜಿಲ್ಲಾ ಪರಿಷತ್ ಇರುವುದು ಒಂದೇ, ಆದರೆ ಮೂರು ಜಿಲ್ಲೆಗಳಿವೆ. ಈಗ ಮೂರು ಜಿಲ್ಲಾಧಿಕಾರಿಗಳೇನೋ ಇದ್ದಾರೆ. ಆದರೆ ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಇರಬಹುದು, ಎ.ಸಿ. ಇರಬಹುದು, ಕಡಿಮೆ ಸಂಖ್ಯೆಯಲ್ಲಿದ್ದ ಸಿಬ್ಬಂದಿ ಇರಬಹುದು, ಅವರು ಯಾರೇ ಇದ್ದರೂ ಇವತ್ತು ಒಂದು ಕಡೆ ಜಿಲ್ಲಾ ಪಂಚಾಯತ್‌ಗೆ ಆ ರೀತಿಯಾಗಿ ಮಾಡುವಂತಹ ಒಂದು ಸಿಬ್ಬಂದಿ ಇಲ್ಲ, ಅಥವಾ ಅವರಿಗೆ ಆ ಕಳಕಳಿ ಇದೆ ಅಂತಹೇಳಿ ನಾನು ಭಾವಿಸುತ್ತಿಲ್ಲ. ಜಿಲ್ಲೆಗಳು ಮೂರು ಕಡೆ ಆಗಿವೆ. ಈ ಹಿನ್ನೆಲೆಯಲ್ಲಿ ಅದಕ್ಕೆ ಬೇಕಾದಂತಹ ಚಾಲನೆಯನ್ನು, ಶಕ್ತಿಯನ್ನು, ಮಾರ್ಗದರ್ಶನವನ್ನು ಸರ್ಕಾರ ಕೂಡಲೇ ನೀಡಬೇಕು. ಆ ಮೂಲಕ ಆ ಕೆಲಸಗಳನ್ನು ಆಗುವ ರೀತಿಯಿಂದ ಜನರ ಏನೊಂದು ಪರಿಸ್ಥಿತಿ ಇದೆ, ಇರುವಂತಹ ಪರಿಸ್ಥಿತಿಯನ್ನು ಸ್ವಲ್ಪಮಟ್ಟಿಗೆ ಅವರಿಗೆ ಅನುಕೂಲವಾಗುವ ರೀತಿಯಿಂದ, ಕನಿಷ್ಠ ಮುಂದಿನ ಬೆಳೆ ಬರುವವರೆಗೆ, ಹಿಂಗಾರು ಆಗಿರಬಹುದು ಅಥವಾ ಮುಂದಿನ ವರ್ಷದ ಬೆಳೆ ಆಗಿರಬಹುದು, ಅಲ್ಲಿಯವರೆಗೆ ಜನರನ್ನು ಕೊಂಡೊಯ್ಯುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕು ಅಂತಹೇಳಿ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

4.50 ಪಿ.ಎಂ

ಇನ್ನೊಂದು ಬಹಳ ಮುಖ್ಯವಾದಂಥ ಅಂಶ ಅಲ್ಲಿ ಇದೆ. ಹಲವಾರು ವರ್ಷಗಳಿಂದ ಮಲಪ್ರಭಾ ಬಲದಂಡೆ ಯೋಜನೆಯ ಕೆಲಸ ನಡೆಯುತ್ತಿದೆ. ಆಗ ಅದು ನಿಧಾನಗತಿಯಿಂದ ಕೆಲಸ ನಡೆಯುತ್ತಿತ್ತು. ಈಗ ಆ ಕೆಲಸ ಚುರುಕಾಗಿ ನಡೆಯುತ್ತಿದೆ, ಅದನ್ನು ಇಲ್ಲ ಎಂದು ನಾನು ಹೇಳುತ್ತಿಲ್ಲ. ಆದರೂ ಅದು ಸಾಲದು, ಇನ್ನೂ ಹೆಚ್ಚು ಚುರುಕಾಗಿ ಕೆಲಸ ನಡೆಯಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಒಂದು ಕಡೆ ಅದನ್ನು ಮಾಡುವ ಮೂಲಕ ನಿರಂತರವಾಗಿ ಆ ಒಂದು ಪರಿಹಾರವನ್ನು ಇಲ್ಲಿ ಕಂಡುಕೊಳ್ಳಬಹುದು. ಆದರೂ ಕೂಡ ಇವತ್ತು ಏನು ಕೇಂದ್ರ ಸರ್ಕಾರದ ಅಕ್ಸಿಲರೇಟೆಡ್ ಪ್ರೋಗ್ರಾಮ್ ಇರಬಹುದು, ಅಥವಾ ಬಜೆಟ್ ಆಧರಿಸಿ ಕೊಡುವಂಥ ಹಣ ಇರಬಹುದು, ಇದನ್ನು ಉಪಯೋಗ ಮಾಡಿ, ಅದರಿಂದ ಜನಗಳಿಗೆ ಹೆಚ್ಚು ಹೆಚ್ಚು ಕೆಲಸವನ್ನು ಕೂಡ ಒದಗಿಸಲಿಕ್ಕೆ ಸಾಧ್ಯ ಇದೆ. ಇದರ ಬಗ್ಗೆ ಕಂದಾಯ ಸಚಿವರು ಅಥವಾ ನೀರಾವರಿ ಸಚಿವರು ಆಗಿರಬಹುದು ಒಟ್ಟಿನಲ್ಲಿ ಸಂಬಂಧಪಟ್ಟ ಸಚಿವರು ಕೂಡಲೇ ಗಮನಹರಿಸಿ ಹೆಚ್ಚು ಹಣವನ್ನು ಬಿಡುಗಡೆ ಮಾಡಿ, ಅದನ್ನು ಮೂನಿಟರ್ ಮಾಡುವಂಥ ವ್ಯವಸ್ಥೆ ಮಾಡಬೇಕು. ಅದರಲ್ಲೂ ಬಹಳ ಮುಖ್ಯವಾಗಿ ಈ ಒಡೆದಂಥ ಜಿಲ್ಲೆಗಳಿಗೆ ಕೂಡಲೇ ಪ್ರವಾಸ ಮಾಡಿ ಅಲ್ಲಿಗೆ ಏನೇನು ಅನುಕೂಲಗಳು ಬೇಕೋ ಅದನ್ನು ಮಾಡಿಕೊಟ್ಟು ಆ ರೀತಿ ಕೆಲಸವನ್ನು ಅವರಿಗೆ ಹಚ್ಚಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ವಿಶೇಷ ಪರಿಸ್ಥಿತಿ ಮೂಡಿ ಬಂದಿದೆ.

ಬಹುತೇಕ ತಮ್ಮಲ್ಲಿ ಕೂಡ ಅದೇ ತರಹದ ಪರಿಸ್ಥಿತಿ ಇದೆ. ಇವತ್ತು ಜಲಾಶಯಗಳು ತುಂಬಿಹೋಗಿವೆ. ನಮ್ಮಲ್ಲಿ ಮಳೆ ಇಲ್ಲ. ಜಲಾಶಯಗಳಿಂದ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಹೊರಕ್ಕೆ ಬಿಡುತ್ತಾರೆ. ಹಾಗೆ ಬಿಟ್ಟಂಥ ಸುಮಾರು 10-15 ಸಾವಿರ ಕ್ಯೂಸೆಕ್ಸ್ ನೀರಿನಿಂದ ಸುಮಾರು 20-25 ಸಾವಿರ ಎಕರೆ ಭೂಮಿಯಲ್ಲಿ ಇದ್ದಂಥ ಬೆಳೆಯನ್ನೆಲ್ಲ ಕೊಚ್ಚಿಕೊಂಡು ಹೋಗಿಬಿಟ್ಟಿದೆ. ಇದಕ್ಕೆ ಪರಿಹಾರ ಏನು? ಇದಕ್ಕೆ ಪರಿಹಾರವೆಂದರೆ 200 ಅಥವಾ 400 ರೂ.ಗಳಿಂದ ಇಷ್ಟೇ ಸರ್ಕಾರದ ನೀತಿಯೆಂದು ಕೊಡುತ್ತಾರೆ. ಪರಿಹಾರ ಕೊಡುವುದಕ್ಕೆ ನಿರ್ಬಂಧ ಏನು? ಒಬ್ಬ ವ್ಯಕ್ತಿ ತನ್ನ ಜಮೀನಿನಲ್ಲಿ ಬೆಳೆದ ಬೆಳೆ ಹಾಳಾದರೆ, ಆ ಭೂಮಿಯಲ್ಲಿ ಬೆಳೆದ ಒಟ್ಟು ಬೆಳೆಯಲ್ಲಿ ಕನಿಷ್ಟ ಅರ್ಧ ಬೆಳೆಯಾದರೂ ಒಂದು ಬೆಳೆಯಿಂದ ಇನ್ನೊಂದು ಬೆಳೆವರೆಗೆ ನಷ್ಟವಾಗಿರಬೇಕು. ತಮ್ಮ ಪ್ರದೇಶದಲ್ಲೂ ಸಹ ಇದೇ ಪರಿಸ್ಥಿತಿ ಇದೆ. ಇದು ನನಗೆ ಗೊತ್ತಿದೆ. ಇದರ ಅರ್ಥ ಏನು? ಆ ವ್ಯಕ್ತಿಗೆ ಒಂದು ಪ್ರದೇಶದಲ್ಲಿ ಎರಡು ಎಕರೆ ಜಮೀನಿನಲ್ಲಿ ಬೆಳೆದಂಥ ಬೆಳೆ ಅತಿವೃಷ್ಟಿ ಅಥವಾ ಅನಾವೃಷ್ಟಿಯಿಂದ ನಷ್ಟವಾದರೆ, ಅಕಸ್ಮಾತ್ ಅವನಿಗೆ ಬೇರೆ ಕಡೆಯಲ್ಲಿ 4 ಎಕರೆ ಭೂಮಿಯಲ್ಲಿ ಒಣ ಬೇಸಾಯ ಅಥವಾ ದೂರದ ಭೂಮಿಯಲ್ಲಿ ಅವನಿಗೆ ಏನಾದರೂ ಬೇರೆ ಬೇಸಾಯ ಇದ್ದರೆ, ಅವನಿಗೆ 2 ಎಕರೆಯಲ್ಲಿ ಇದ್ದಂಥ ಬೆಳೆ ನಷ್ಟವಾಗಿರುವುದಕ್ಕೆ ಅವನಿಗೆ ಪರಿಹಾರ ಸರ್ಕಾರದಿಂದ ಸಿಕ್ಕುವುದಿಲ್ಲ. ಸರ್ಕಾರ ಕೊಡುವಂಥ ಪರಿಹಾರವಾದರೂ ಎಷ್ಟು ಇರಬಹುದು? ಇವತ್ತಿನ ದಿವಸ ಗೊಬ್ಬರದ ಬೆಲೆ ಬಹಳಷ್ಟು ಜಾಸ್ತಿಯಾಗಿದೆ. ಬಿತ್ತನೆ ಬೀಜದ ಬೆಲೆ ಕೂಡ ಜಾಸ್ತಿ ಆಗಿದೆ. ಗೋದಿ ಅಥವಾ ಜೋಳದ ಬಿತ್ತನೆ ಬೀಜ ಇರಬಹುದು, ಹತ್ತಿಬೀಜ ಇರಬಹುದು, ಅಥವಾ ಸೂರ್ಯಕಾಂತಿ ಬೀಜ ಇರಬಹುದು, ಒಂದು ಬಿತ್ತನೆ ಬೀಜದ ಪ್ಯಾಕೆಟ್ಟಿಗೆ ಸುಮಾರು 500 ರೂಪಾಯಿ ಕೊಡಬೇಕಾಗುತ್ತದೆ. ಕನಿಷ್ಟ ಯಾರಿಗೆ ಲುಕ್ಸಾನು ಆಗಿದೆ ಅವರಿಗೆ ಸರಿಯಾಗಿ ಪರಿಹಾರವನ್ನು ಸರ್ಕಾರ ಕೊಡಬೇಕು. ಕಳೆದ 3 ವರ್ಷಗಳ ಕೆಳಗೆ ಸುಮಾರು 3 ಸಲ ಈ ಬೆಳೆ ನಷ್ಟವಾಗಿ ಹೋಯ್ತು. ಪ್ರತಿ ಸಲ ಬೀಜ ಹಾಕಿ, ಗೊಬ್ಬರ ಹಾಕಿ ಬೆಳೆದಂಥ ಬೆಳೆಯನ್ನು ನೀರು ಕೊಚ್ಚಿಕೊಂಡು ಹೋಗುತ್ತದೆ. ಆ ರೈತರು ಮಾಡಿದಂಥ ಪಾಪ ಆದರೂ ಏನು? ಅವರು ಅತ್ಯಂತ ಉತ್ಕೃಷ್ಟ ಮಣ್ಣಿನಲ್ಲಿ ಬೆಳೆದಂಥ ಬೆಳೆಯನ್ನು ಪ್ರತಿ ಸಲವೂ ಮಳೆ ಬಂದು ಜಲಾಶಯಗಳಲ್ಲಿ ನೀರು ತುಂಬಿ ಅದನ್ನು ಕೊಚ್ಚಿಕೊಂಡು ಹೋದರೆ ಅದರಿಂದ ಯಾವ ರೀತಿ ನಷ್ಟ ಆಗಬಹುದೆಂದು. ನಾವು ತಿಳಿದುಕೊಳ್ಳಬಹುದು. ಆದ್ದರಿಂದ ಒಬ್ಬ ವ್ಯಕ್ತಿಯ್ಯ ಬೆಳೆಯಲ್ಲಿ ಅರ್ಧ ಭಾಗ ಆದರೂ ಬೆಳೆ ನಷ್ಟವಾದರೆ ಮಾತ್ರ ಪರಿಹಾರವನ್ನು ಕೊಡಬಹುದು ಮತ್ತು ಇನ್ನಿತರ ನಿಬಂಧನೆಗಳು ಏನು ಇವೆ ಅವನ್ನು ತೆಗೆದುಹಾಕಬೇಕು. ಮತ್ತು ಬೆಳೆ ನಷ್ಟ ಆದವರಿಗೆ ಪರಿಹಾರವನ್ನು ಕೊಡುವಂಥ ಸಂದರ್ಭದಲ್ಲಿ ಪರಿಹಾರವನ್ನು ಸ್ವಲ್ಪ ಜಾಸ್ತಿ ಮಾಡಬೇಕು. ಮತ್ತು ಗೊಬ್ಬರದ ಬೆಲೆ ಅಥವಾ ಬೀಜದ ಬೆಲೆ ಇತ್ಯಾದಿಗಳ ಬೆಲೆ ಸೂಚ್ಯಾಂಕವನ್ನು ಆಧರಿಸಿ ಸ್ವಲ್ಪಮಟ್ಟಿಗೆ ಪರಿಹಾರವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಅತಿವೃಷ್ಟಿ ಮತ್ತು ಅನಾವೃಷ್ಟಿ ಆದಂಥ ಸಂದರ್ಭದಲ್ಲಿ ಅದಕ್ಕೆ ಒಂದು ಖಾಯಂ ಪರಿಹಾರವನ್ನು

ಕಂಡುಹಿಡಿಯಬೇಕು. ಅದು ರಾಜ್ಯದ ಯಾವುದೇ ಭಾಗದಲ್ಲಿ ಇರಬಹುದು. ಮತ್ತು ಅತಿವೃಷ್ಟಿಯಿಂದ ಇವತ್ತು ಅನೇಕಹಳ್ಳಿಗಳನ್ನು ಸ್ಥಳಾಂತರಿಸಬೇಕು ಎನ್ನುವ ಪ್ರಸ್ತಾವನೆಗಳು ಸರ್ಕಾರದ ಮುಂದೆ ಇವೆ. ಆಗ ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದರು ಎಂದು ನನ್ನ ಹಳೆಯ ನೆನಪು ರಾಯಚೂರು, ಗುಲ್ಬರ್ಗಾ, ಧಾರವಾಡ ಅಥವಾ ಬೆಳಗಾಂ ಜಿಲ್ಲೆಗಳಲ್ಲಿ ಅಥವಾ ಎಲ್ಲೇ ಆಗಲಿ ಒಟ್ಟಿನಲ್ಲಿ ನಮ್ಮ ರಾಜ್ಯದ ಯಾವುದೇ ಭಾಗದಲ್ಲಿ ಈ ರೀತಿಯ ಅನಾಹುತಗಳು ಆದಂಥ ಸಂದರ್ಭದಲ್ಲಿ ಅದಕ್ಕೆ ಬೇಕಾದಂಥ ಪರಿಹಾರವನ್ನು, ಅನಾಹುತಗಳಿಗೆ ಒಳಗಾಗುವಂಥ ಹಳ್ಳಿಗಳನ್ನು ಸ್ಥಳಾಂತರಗೊಳಿಸಲಿಕ್ಕೆ ಬೇಕಾದಂಥ ಹಣವನ್ನು ನಾವು ವಿಶ್ವಬ್ಯಾಂಕ್‌ನಿಂದ ಪಡೆಯುವುದಕ್ಕೆ ಪ್ರಪೋಸಲ್ ಕಳುಹಿಸಿದ್ದೇವೆ ಎಂದು ಹೇಳಿದ್ದರು. ಅದು ಏನಾಯಿತು ಎಂಬುದು ನನಗೆ ಗೊತ್ತಿಲ್ಲ. ಪ್ರತಿವರ್ಷ ಮಹಾಪೂರದಿಂದ ಅಥವಾ ಅತಿವೃಷ್ಟಿಯಿಂದ ಏನು ತೊಂದರೆಗೆ ಒಳಗಾಗುತ್ತಿದ್ದಾರೆ, ಅದನ್ನಾದರೂ ಕನಿಷ್ಟ ಮಟ್ಟಕ್ಕೆ ಮಾಡಲಿಕ್ಕೆ ತೊಂದರೆಗೊಳಗಾದ ಹಳ್ಳಿಗಳನ್ನು ತುರ್ತಾಗಿ ಸ್ಥಳಾಂತರಗೊಳಿಸುವುದಕ್ಕೆ ಬೇಕಾದಂಥ ಎಲ್ಲಾ ವ್ಯವಸ್ಥೆಯನ್ನು ಮಾಡಿ, ಅಕಾರಣವಾಗಿ ಖರ್ಚು ಮಾಡುವಂಥ ಹಣವನ್ನಾದರೂ ಉಳಿಸಿ ಎಂದು ಹೇಳುತ್ತೇನೆ. ಅಷ್ಟು ಮಾಡಲಿಕ್ಕೆ ತಾವು ಕೂಡಲೇ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿ, ಆದಷ್ಟು ಬೇಗ ಸರ್ಕಾರ ಸ್ವಲ್ಪ ಜಾಗ್ರತೆಯಾಗಿ ಈ ದಿಶೆಯಲ್ಲಿ ಮುನ್ನುಗುತ್ತಾರೆಂದು ಹೇಳಿ, ನಾನು ಆ ವಿಶ್ವಾಸವನ್ನು ಇಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಶ್ರೀರಂಗದೇವರಾಯಲು (ಗಂಗಾವತಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರೆಲ್ಲರೂ ಅವರವರ ಕ್ಷೇತ್ರದ, ರಾಜ್ಯದ ಸಮಸ್ಯೆಗಳ ಬಗ್ಗೆ ಮಾತನಾಡಿದರು. ನಾನು ಕೂಡ ನನ್ನ ಕ್ಷೇತ್ರದ ಸಮಸ್ಯೆಯ ಬಗ್ಗೆ ಮಾತನಾಡುವುದಕ್ಕೆ ಬಯಸುತ್ತೇನೆ. ಗಂಗಾವತಿ ಕ್ಷೇತ್ರದಲ್ಲಿ ಸುಮಾರು 25 ಪರ್ಸೆಂಟ್ ಒಣ ಬೇಸಾಯ ಮಾಡುತ್ತಾರೆ ಮತ್ತು 75 ಪರ್ಸೆಂಟ್ ನೀರಾವರಿ ಬೇಸಾಯ ಇದೆ. ಗಂಗಾವತಿಯಲ್ಲಿ ಗಂಗಾವತಿ ಶುಗರ್ ಫ್ಯಾಕ್ಟರಿ ಇದೆ. ನವೆಂಬರ್, ಡಿಸೆಂಬರ್ ಮತ್ತು ಜನವರಿ ತಿಂಗಳಿನಲ್ಲಿ ನಮ್ಮ ಗಂಗಾವತಿಯ ರೈತರು ಕಬ್ಬು ಬೆಳೆ ಬೆಳೆಯಲು ಕಬ್ಬು ಬಿತ್ತನೆ ಮಾಡಿದರು. ಆದರೆ ಮೇ 10ನೇ ತಾರೀಖು ಚಾನಲ್ ರಿಪೇರಿಗೋಸ್ಕರ ಚಾನಲ್‌ನ್ನು ಬಂದ್ ಮಾಡಲಾಯಿತು. ಆಗಸ್ಟ್ 15ನೇ ತಾರೀಖಿಗೆ ನೀರು ಬಿಡಲಾಯಿತು. ಅಂದರೆ ಸುಮಾರು ಮೂರೂವರೆ ನಾಲ್ಕು ತಿಂಗಳ ಕಾಲ ಕಬ್ಬಿನ ಬೆಳೆಗೆ ನೀರು ಇಲ್ಲದೆ ಶೇಕಡ 100 ರಷ್ಟು ಕಬ್ಬು ಪೂರ್ತಿ ಒಣಗಿಹೋಯಿತು. ಒಬ್ಬ ರೈತ ಒಂದು ಎಕರೆ ಭೂಮಿಯಲ್ಲಿ ಆರುತಿಂಗಳು ಕಬ್ಬನ್ನು ಬೆಳೆಯಬೇಕಾದರೆ ಕನಿಷ್ಟ 10ರಿಂದ 15 ಸಾವಿರ ರೂಪಾಯಿ ಅದಕ್ಕೆ ಖರ್ಚು ಮಾಡುತ್ತಾನೆ. ಅಂಥ ಪರಿಸ್ಥಿತಿಯಲ್ಲಿ ರೈತರಿಗೆ ನಾವು ಯಾವ ತರಹದಲ್ಲಿ ಸಹಾಯ ಮಾಡಬೇಕು? ಇನ್ನು 'ಬಾಳೆ' ಬೆಳೆಯ ಬಗ್ಗೆ ಹೇಳುವುದಾದರೆ, ನಮ್ಮ ಕ್ಷೇತ್ರದಲ್ಲಿ ಬಾಳೆಗೊನೆಗಳನ್ನು ಬೆಳೆದು ನಾಲ್ಕೈದು ರಾಜ್ಯಗಳಿಗೆ ಸಪ್ಲೈ ಮಾಡಲಾಗುತ್ತಿದೆ. ಆದರೆ ಈಗ ಪರಿಸ್ಥಿತಿ ಏನಾಗಿದೆಯೆಂದರೆ, ನಮ್ಮ ಕ್ಷೇತ್ರದಲ್ಲಿ

ಬಾಳೆ ಗಿಡಗಳನ್ನು ನೆಡುವುದು ಅಕ್ಟೋಬರ್ ತಿಂಗಳಿನಲ್ಲಿ. ಆದರೆ ಮೇ ಜೂನ್ ತಿಂಗಳಲ್ಲಿ ಬಾಳೆಗಿಡಗಳು ಫ್ಲವರಿಂಗ್‌ಗೆ ಬರುತ್ತವೆ. ನಾವು ನೀರು ತೆಗೆದಿದ್ದು ಮೇ ತಿಂಗಳಲ್ಲಿ. ಆದ್ದರಿಂದ ಫ್ಲವರಿಂಗ್ ಬರುವ ಸಮಯದಲ್ಲಿ ನೀರನ್ನು ತೆಗೆದು, ಸುಮಾರು ಮೂರುವರೆ ತಿಂಗಳ ಕಾಲ ನೀರು ಇಲ್ಲದೆ ಶೇಕಡ 100ರಷ್ಟು ಬಾಳೆ ಬೆಳೆಯಿಂದ ರೈತರಿಗೆ ನಷ್ಟ ಉಂಟಾಗಿದೆ. ಒಂದು ಎಕರೆ ಪ್ರದೇಶದಲ್ಲಿ ಬಾಳೆಯನ್ನು ಬೆಳೆಸಬೇಕಾದರೆ ರೈತರಿಗೆ ಕನಿಷ್ಟ 20 ಸಾವಿರ ರೂಪಾಯಿ ಖರ್ಚು ಬೀಳುತ್ತದೆ. ಈಗ ರೈತ ಒಣಭೂಮಿಯಲ್ಲಿ ಬೀಜ ಬಿತ್ತನೆ ಮಾಡದೆ ಇದ್ದುದರಿಂದ ಏನು ಆಗುತ್ತದೆ? ಮತ್ತು ಒಬ್ಬ ರೈತ ನೀರಾವರಿ ಸ್ಥಳದಲ್ಲಿಯೇ ಕನಿಷ್ಟ 10ರಿಂದ 20 ಸಾವಿರ ರೂಪಾಯಿ ಖರ್ಚು ಮಾಡಿ ಅವನಿಗೆ ನಷ್ಟವಾಗಿರುವಂಥದ್ದರ ಬಗ್ಗೆ ನಾವು ಆಲೋಚನೆ ಮಾಡಬೇಕಾಗುತ್ತದೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡಿ ಹೇಳುವುದೇನೆಂದರೆ, ಮೊನ್ನೆ ಕಂದಾಯ ಇಲಾಖೆಯಿಂದ ಅಧಿಕಾರಿಗಳನ್ನು ಕರೆಸಿ ರೈತರಿಗೆ ಏನು ಲಾಸ್ ಆಗಿದೆ ಅದನ್ನು ಹೇಗೆ ಸಾಲ್ವ್ ಮಾಡುತ್ತೀರಿ ಎಂದು ಕೇಳಿದೆ. ಆಣೆವಾರಿ ಪದ್ಧತಿ ಏನು ತಂದಿದ್ದೀರೋ ಅದನ್ನು ಕಡಿಮೆ ಮಾಡಿ, ಹೊಸ ಪದ್ಧತಿಯನ್ನು ಹೇಗೆ ಹಂತಹಂತವಾಗಿ ತರಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಿ. ಕಳೆದ ಸಲ ನವೆಂಬರ್‌ನಲ್ಲಿ ನಮ್ಮಲ್ಲಿ ಮಳೆ ಬಂದು ಎಷ್ಟೆಷ್ಟು ಅನಾಹುತವಾಗಿತ್ತು ಎಂಬುದರ ಬಗ್ಗೆ ಫೋಟೋ ಸಹಿತ ನಾಳೆ ಮಾನ್ಯ ಅಧ್ಯಕ್ಷರಲ್ಲಿ ಮಾತನಾಡುವುದಕ್ಕೆ ಅವಕಾಶ ಕೇಳಿದ್ದೇನೆ. ಕಳೆದ ವರ್ಷ ಗಂಗಾವತಿಯಲ್ಲಿ ಭಾರೀ ಮಳೆಯಾಗಿ ನದಿಯ ಮಟ್ಟಗಿಂತ ಸುಮಾರು 5 ರಿಂದ 6 ಅಡಿ ಎತ್ತರದಲ್ಲಿ ನೀರು ಹರಿದು 4 ಜನ ಸತ್ತರು. ಪ್ರತಿಯೊಂದು ಗಿರಾಣಿ ಅಂಗಡಿ, ಬಟ್ಟೆ ಅಂಗಡಿಗಳಲ್ಲಿ 2 ರಿಂದ 3 ಅಡಿ ನೀರು ನಿಂತಿತ್ತು. ಕೋಟ್ಯಾಂತರ ರೂಪಾಯಿ ನಷ್ಟವಾಯಿತು. ಗಂಗಾವತಿ ಕ್ಷೇತ್ರದಲ್ಲಿ ಇರತಕ್ಕಂಥ ಪ್ರತಿಯೊಂದು ರಸ್ತೆಗಳು ಸಹ ಹಾಳಾದವು. ಕಂದಾಯ ಸೆಕ್ರೆಟರಿಯವರು ಮತ್ತು ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀ ಎಂ.ಎಸ್.ಪಾಟೀಲರು ಬಂದು ಕೆಲವು ಸೇತುವೆಗಳನ್ನು ನೋಟಿಫೈ ಮಾಡಿ ಟೆಂಪರರಿ ರಿಪೇರಿ ಮಾಡಿದ್ದಾರೆಯೇ ವಿನಃ ಉಳಿದಕಡೆ ನಮ್ಮ ಕೆಲಸಗಳು ಯಾವುದೂ ಆಗಿಲ್ಲ. ಪುನಃ ಮೊನ್ನೆ 5ನೇ ತಾರೀಖು ಮಳೆಯಾಗಿ ಸುಮಾರು 2 ರಿಂದ 3 ಅಡಿ ಎತ್ತರದಲ್ಲಿ ಊರಿನೊಳಗೆ ನೀರು ಬಂದಿದೆ. ಗಂಗಾವತಿಯಲ್ಲಿ ಕಳೆದ ಸಲ ಕೋಟ್ಯಾನುಗಟ್ಟಲೆ ಹಣ ನಷ್ಟ ಆಗಿದೆ. ಯಾರಾದರೂ ಸತ್ತರೆ ಸರ್ಕಾರದಿಂದ ಸುಮಾರು ಒಂದೂವರೆ ಲಕ್ಷ ರೂಪಾಯಿ ಪರಿಹಾರವೆಂದು ಕೊಡುತ್ತಿದ್ದಾರೆ. ಆದರೆ ತೊಂದರೆಯಲ್ಲಿ ಇದ್ದವರಿಗೆ ಸಹಾಯ ಮಾಡಲಿಕ್ಕೆ ನಾವು ಒಪ್ಪುತ್ತಿಲ್ಲ. ಈ ರೀತಿ ಸರ್ಕಾರ ಏಕೆ ಮಾಡುತ್ತಿದೆ? ಕಳೆದ ವರ್ಷ ನವೆಂಬರ್ ತಿಂಗಳಲ್ಲಿ ನಮ್ಮ ಕ್ಷೇತ್ರದಲ್ಲಿ 4 ಜನರು ಸತ್ತಾಗ ಅವರಿಗೆ ಸರ್ಕಾರದ ವತಿಯಿಂದ ಸುಮಾರು 6 ಲಕ್ಷ ರೂಪಾಯಿ ಪರಿಹಾರವಾಗಿ ಕೊಟ್ಟೆವು. ಆದರೆ ರಸ್ತೆಗಳು ಮುಂತಾದವು ಹಾಳಾಗಿ ಒಂದು ವರ್ಷ ಕಳೆಯುತ್ತಾ ಬಂತು. ಆದರೂ ಕೂಡ ಅದನ್ನು ರಿಪೇರಿ ಮಾಡಿಸುವುದಕ್ಕೆ ಸರ್ಕಾರ ಮುಂದೆ ಬರಲಿಲ್ಲ. ನಾನು ಬಹಳ ವ್ಯಥೆಯಿಂದ ಸರ್ಕಾರವನ್ನು ಕೇಳುವುದೇನೆಂದರೆ - ಇಷ್ಟರವರೆಗೆ ಮಳೆ ಇರಲಿಲ್ಲ, ಭೂಮಿ ಒಣಗಿತ್ತು. ಈಗ ಮಳೆ ಬಂದಿರುವುದಕ್ಕೆ ಭೂಮಿ

ಸ್ವಲ್ಪ ಮೆತ್ತಗೆ ಆಗಿದೆ. ಈಗ ಪುನಃ ಸ್ವಲ್ಪ ಹೆಚ್ಚು ಮಳೆ ಬಂದುಬಿಟ್ಟರೆ ನದಿ ತುಂಬಿ ಸುಮಾರು ಐದಾರು ಅಡಿ ನೀರು ಹೆಚ್ಚಿಗೆ ಬಂದು ಗಂಗಾವತಿಯಲ್ಲಿ ನೆರೆಹಾವಳಿ ಬರುತ್ತದೆ ಎನ್ನುವ ಭಯ ನನಗಿದೆ. ಈ ರೀತಿಯ ನೈಸರ್ಗಿಕವಾಗಿ ಆಗುತ್ತಿರುವ ತೊಂದರೆಯನ್ನು ನಿವಾರಿಸುವ ಸಲುವಾಗಿ ಸರ್ಕಾರ ಕ್ರಮ ಕೈಗೊಳ್ಳುತ್ತಿಲ್ಲವೆಂದು ರೈತರು ನಮ್ಮ ಮೇಲೆ ಕೋಪಗೊಂಡಿದ್ದಾರೆ. ಆ ಕ್ಷೇತ್ರದ ಶಾಸಕನನ್ನು ಅಂದರೆ ಮುಖ್ಯವಾಗಿ ನನ್ನನ್ನು ನೀವು ಏನೂ ಸಹಾಯ ಮಾಡಿಸುತ್ತಿಲ್ಲವೆಂದು ಬಹಳ ಕೋಪದಿಂದ ಕೇಳುತ್ತಿದ್ದಾರೆ. ನಾನು ಸರ್ಕಾರವನ್ನು ಕ್ರಿಟಿಸೈಝ್ ಮಾಡುತ್ತಿಲ್ಲ. ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳು ಆಗಿದ್ದಂಥ ಕಾಲದಲ್ಲಿ ಗಂಗಾವತಿಯಲ್ಲಿ ನೆರೆಹಾವಳಿಯಿಂದ ನಷ್ಟವಾಗಿದ್ದಂಥ ಕಾಲದಲ್ಲಿ ಅವರು ಹೆಲಿಕಾಪ್ಟರ್ ಮೂಲಕ ಗಂಗಾವತಿಗೆ ಬಂದಿಳಿದರು. ಗಂಗಾವತಿಯಲ್ಲಿ ತಾಲ್ಲೂಕುವಾರು ಎಷ್ಟೆಷ್ಟು ನಷ್ಟವಾಗಿದೆ ಎಂಬುದನ್ನು ಅಂದಾಜು ಮಾಡಿ ಹಣ ಬಿಡುಗಡೆ ಮಾಡಿದರು. ಸಿಂಧನೂರಿನಲ್ಲಿ ಜನತಾ ದಳದ ಶಾಸಕರು ಇದ್ದರು. ಅಲ್ಲಿ ಎಷ್ಟು ಅನ್ಯಾಯವಾಗಿದೆ ಅಷ್ಟು ಹಣ ಬಿಡುಗಡೆ ಮಾಡಿದರು. ಆದರೆ ನನ್ನ ಕ್ಷೇತ್ರಕ್ಕೆ ನೀವು ಎಷ್ಟು ಕೊಟ್ಟಿದ್ದೀರಿ? ಯಾವ ಪ್ರಕಾರ ಕೆಲಸ ಮಾಡಿದ್ದೀರಿ? ಎಲ್ಲಿಯವರೆಗೆ ಆಗುತ್ತಿದೆ ನಮ್ಮ ಕ್ಷೇತ್ರದಲ್ಲಿ ಕೆಲಸ? ಜನರು ನನ್ನನ್ನು ಆರಿಸಿದ್ದಕ್ಕೆ ನನ್ನ ಕ್ಷೇತ್ರದ ಜನರು ಸಫರ್ ಆಗಬೇಕೆ ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತಿದ್ದೇನೆ. ಇಷ್ಟು ದಿನ ನಾನು ರಾಜಕೀಯ ದೃಷ್ಟಿಯಿಂದ ಮಾತನಾಡುತ್ತಿರಲಿಲ್ಲ. ಇವತ್ತು ಮಾತನಾಡುವ ಪರಿಸ್ಥಿತಿ ಏತಕ್ಕೆ ಬಂದಿದೆ ಎಂದರೆ, ಈ ಸಾರಿ ಮಳೆ ಬಂದರೆ ಜನರು ಸಹಿಸುವುದಿಲ್ಲ. ನಿನ್ನೆ ಆ ಪರಿಸ್ಥಿತಿಯನ್ನು ನೋಡುವುದಕ್ಕೆ ಹೋದರೆ ನೋಡದಂತ ಪರಿಸ್ಥಿತಿ ಬಂದಿದೆ. ಆದ್ದರಿಂದ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ, ತಾವು ಏನಾದರೂ ಮಾಡಿ, ತಕ್ಷಣ ಮಳೆ ಬಂದರೆ ಗಂಗಾವತಿ ಒಳಗಡೆ ನೀರು ಬಾರದಂತೆ, ಬಂದ ನೀರು ಹೊರಗಡೆ ಹೋಗುವುದಕ್ಕೆ ಯಾವ ರೀತಿ ವ್ಯವಸ್ಥೆ ಮಾಡುತ್ತೀರಿ? ನಾನು ಸರ್ಕಾರಕ್ಕೆ, ಸಣ್ಣ ನೀರಾವರಿ ಇಲಾಖೆಗೆ ವರದಿ ಕಳುಹಿಸಿದ್ದೇನೆ. ಒಂದು ರೂಪಾಯಿನ ಕೆಲಸ ಕೂಡ ಅಲ್ಲಿ ಆಗಿಲ್ಲ. ನಾನು ಮಾನ್ಯ ಕಂದಾಯ ಸಚಿವರನ್ನು ಸಾಕಷ್ಟು ಸಾರಿ ಭೇಟಿಯಾಗಿದ್ದೆ. ಅವರು ಜಿಲ್ಲೆಗೆ ಹಣ ಕೊಟ್ಟಿದ್ದಾರೆ. ಆದರೆ ಜಿಲ್ಲೆಯಿಂದ ತಾಲ್ಲೂಕಿಗೆ ಆ ಹಣ ಬರುತ್ತಿಲ್ಲ. ಅವರು ಹಣ ಕಳುಹಿಸಿದ್ದೇವೆಂದು ಹೇಳುತ್ತಿದ್ದರು. ಆದರೆ ನಮಗೆ ಏನಾಗಿದೆ? ನಮ್ಮ ಕ್ಷೇತ್ರಕ್ಕೆ ಏನಾಗಿದೆ? ನಾನು ಬಹಳ ಆತಂಕದಿಂದ ಹೇಳುತ್ತಿದ್ದೇನೆ. ನಾಳೆ ಮಳೆ ಬಂದರೆ ಬಹಳ ಕಷ್ಟವಾಗುತ್ತದೆ. ಅಲ್ಲಿ ಭೂಮಿ ಏನು ಆರಿ ಹೋಗಿತ್ತು ಅದು ನಿನ್ನೆ ಬಂದ ಮಳೆಯಿಂದಾಗಿ ಹಸಿಯಾಗಿದೆ. ಈಗ ಮಳೆ ಬಂದರೆ ನೀರು ಸಿಗುವುದಿಲ್ಲ, ಆ ನೀರೆಲ್ಲ ಮೇಲೆ ಬಂದಿರುತ್ತದೆ, ನಮ್ಮ ಗಂಗಾವತಿ ಕೊಚ್ಚಿ ಹೋಗುತ್ತದೆ. ನಮ್ಮ ಗಂಗಾವತಿ ಎರಡು ಭಾಗ ನೀರಾವರಿ ಪ್ರದೇಶ ಇದ್ದರೆ ಎರಡು ಭಾಗ ಗುಡ್ಡ ಇದೆ. ತಗ್ಗಿನಲ್ಲಿ ನಮ್ಮ ಗಂಗಾವತಿ ಇದೆ. ಗದ್ದೆಗೆ ನೀರು ಬಿಟ್ಟರೆ ಗಂಗಾವತಿಗೆ ಬರುತ್ತದೆ. ಗುಡ್ಡದ ಮೇಲಿನ ನೀರು ಗಂಗಾವತಿಗೆ ಬರುತ್ತದೆ. ಈ ಪರಿಸ್ಥಿತಿ ಉಂಟು ಏನು ಮಾಡುತ್ತೀರಿ ಆಲೋಚನೆ ಮಾಡಿ, ತಕ್ಷಣ ಕೆಲಸ ಮಾಡಬೇಕೆಂದು ತಮ್ಮ

ಮೂಲಕ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

+ ಶ್ರೀ ಕೆ.ವಿಶ್ವೇಶ್ವರ ಹೆಗಡೆ (ಅಂಕೋಲ): ಮಾನ್ಯ ಉಪಾಧ್ಯಕ್ಷರೆ, ತಾವು 69ನೇ ನಿಯಮದಡಿಯಲ್ಲಿ ಅತಿವೃಷ್ಟಿ ಅನಾವೃಷ್ಟಿ ವಿಚಾರವಾಗಿ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಪ್ರಾರಂಭದಲ್ಲಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಮ್ಮ ಎಲ್ಲ ಹಿರಿಯ ನಾಯಕರು ಸವಿಸ್ತಾರವಾಗಿ ಮಾತನಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಏನೇನು ತೊಂದರೆಯಾಗಿದೆ ಮತ್ತು ಸರ್ಕಾರ ಹೇಗೆ ಜಿಲ್ಲೆಯನ್ನು ನಿರ್ಲಕ್ಷ್ಯಕ್ಕೆ ಒಳಪಡಿಸಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತಮ್ಮ ಮೂಲಕ ತರಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ 80-90 ಇಂಚಿಗೂ ಹೆಚ್ಚು ಮಳೆಯಾಗಿದೆ; ಅದು ಮಲೆನಾಡು ಪ್ರದೇಶ ಇರುವುದರಿಂದ ಶೇಕಡ 80ರಷ್ಟು ಅರಣ್ಯಪ್ರದೇಶ ಇರುವುದರಿಂದ, ನಮ್ಮ ಜನತೆ ಗ್ರಾಮಾಂತರದಲ್ಲಿ ಅರಣ್ಯಗಳ ಮಧ್ಯೆ ಜೀವನವನ್ನು ಹಳ್ಳಿಗಳಲ್ಲಿ ನಡೆಸುತ್ತಿದ್ದಾರೆ. ಇವತ್ತು ಅಲ್ಲಿ ರಸ್ತೆಗಳ ಸ್ಥಿತಿ ಎಷ್ಟು ಕೆಟ್ಟುಹೋಗಿದೆ ಎಂದರೆ ಬಸ್ಸುಗಳು ಹೋಗುವುದಿಲ್ಲ. ಮಿಲ್ಕ್ ರೂಟ್ಸ್ ಏನಿದೆ ಅಲ್ಲಿ ಹಾಲಿನ ಗಾಡಿಗಳು ಓಡಾಡುವುದಿಲ್ಲ. ಖಾಸಗಿ ವಾಹನ ತೆಗೆದುಕೊಂಡು ಹೋಗಬೇಕೆಂದರೂ ಸಾಧ್ಯವಾಗುತ್ತಿಲ್ಲ. ಅವರು ಬೇರೆ ಯಾವುದೋ ಒಂದು ಹತ್ತಿರದ ಊರಿನಲ್ಲಿ ಇಟ್ಟು ಅವರ ಊರಿಗೆ ನಡೆದುಕೊಂಡು ಹೋಗುವ ದುಸ್ಥಿತಿ ಇದೆ. ಇದು ಏತಕ್ಕೆ ಹೀಗಾಗಿದೆ ಎಂದರೆ ಮೊದಲನೆಯದಾಗಿ, ನಮ್ಮ ಜಿಲ್ಲೆಯಲ್ಲಿ ಸುಮಾರು 4-5 ಸಾವಿರ ಕಿಲೋಮೀಟರ್ ಟೇಕನ್ ಓವರ್‌ರಸ್ತೆ ಇದೆ. ಕಳೆದ 4-5 ವರ್ಷಗಳಿಂದ ತಾಲ್ಲೂಕು ಪಂಚಾಯಿತಿಯಾಗಲಿ, ಜಿಲ್ಲಾ ಪಂಚಾಯಿತಿಯಾಗಲಿ, ಲೋಕೋಪಯೋಗಿ ಇಲಾಖೆಯಾಗಲೀ ಇವುಗಳಿಗೆ ಯಾವುದೇ ರೀತಿಯ ಅನುದಾನ ಇಲ್ಲದೆ ಈ ರಸ್ತೆಗಳೆಲ್ಲ ಪೂರ್ಣ ಹಾಳಾಗಿದೆ. ಇವತ್ತು ಅತಿವೃಷ್ಟಿ ಆದ ಸಂದರ್ಭದಲ್ಲಿ ಮಾನ್ಯ ಕಂದಾಯ ಸಚಿವರಿಗೆ ನಮ್ಮ ಜಿಲ್ಲೆಯ ಎಲ್ಲ ಶಾಸಕರು ಕೂಡಿ ಸಹಿ ಹಾಕಿ ವಿನಂತಿ ಪತ್ರ ಕೊಟ್ಟಿದ್ದೇವೆ. ಈಗ ನಮ್ಮ ಜಿಲ್ಲೆಗೆ ಒಂದೂಕಾಲು ಕೋಟಿ ರೂಪಾಯಿಗಳನ್ನು ಮಂಜೂರಾತಿ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಅದರಲ್ಲಿ 60 ಲಕ್ಷ ರೂಪಾಯಿ ಬಿಡುಗಡೆಯಾಗಿದೆ ಎಂದು ಅವರು ಹೇಳುತ್ತಾರೆ. ಸರ್ಕಾರ ಇನ್ನೂ 60 ಲಕ್ಷ ರೂಪಾಯಿ ಮಂಜೂರಾತಿ ಮಾಡಿದ್ದೇವೆಂದು ಹೇಳುತ್ತಿದೆ. ಆದರೆ ಒಂದೊಂದು ತಾಲ್ಲೂಕಿಗೆ 4-5 ಲಕ್ಷ ರೂಪಾಯಿ ಬಂದರೆ ಒಂದೊಂದು ತಾಲ್ಲೂಕಿನಲ್ಲಿ 4-5 ನೂರು ಕಿಲೋಮೀಟರ್ ಟೇಕನ್ ಓವರ್ ರಸ್ತೆಗಳು ಇದ್ದರೆ ಇವತ್ತು ಅದರ ಪರಿಸ್ಥಿತಿ ಏನಾಗಿದೆ? ಹೀಗಾಗಿ ಬಸ್ಸುಗಳು ಹೋಗುವುದಕ್ಕೆ ಆಗುತ್ತಿಲ್ಲ. ಅಲ್ಲಿ ಸರ್ವಋತು ರಸ್ತೆಗಳು ಆಗಬೇಕು; ಬಸ್ಸುಗಳು ಓಡಾಡುವಂತೆ ಆಗಬೇಕು. 6-8 ಕಿಲೋಮೀಟರ್ ನಡೆದುಕೊಂಡು ಹೋಗುವುದು ತಪ್ಪಬೇಕೆಂದರೆ ಅತಿವೃಷ್ಟಿಯಿಂದ ಕೊಚ್ಚಿಹೋಗುವ ರಸ್ತೆಗಳನ್ನು ಸರ್ವಋತು ರಸ್ತೆಗಳನ್ನು ಮಾಡುವುದಕ್ಕೆ ಹೆಚ್ಚಿನ ಹಣ ಬಿಡುಗಡೆ ಮಾಡಬೇಕಾಗುತ್ತದೆ ಮತ್ತು ಟೇಕನ್ ಓವರ್ ರಸ್ತೆಗಳು ಏನೇನಿವೆ ಅವನ್ನು ಗುರುತಿಸಿಕೊಂಡು ಈ ಸಾರಿಯಾದರೂ ಸರ್ಕಾರ

ಅನುದಾನ ಕೊಡುವುದಕ್ಕೆ ಮುಂದಾಗಬೇಕು. ಲೋಕೋಪಯೋಗಿಯವರಾಗಲಿ, ಜಿಲ್ಲಾ ಪರಿಷತ್ತಿನವರಾಗಲಿ ಬೇರೆ ಯಾವ ಅನುದಾನ ಕೊಡುವುದಿಲ್ಲ, ರೋಡ್ ಮೆಯಿಂಟೆನೆನ್ಸ್ ಗ್ರಾಂಟ್ ಕೊಡುವುದಿಲ್ಲ. ಆದ್ದರಿಂದ ಈ ಅತಿವೃಷ್ಟಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು ಎಂದು ನಾನು ಆಗ್ರಹಿಸುತ್ತಿದ್ದೇನೆ. ರೆಗ್ಯುಲರ್ ಮೆಂಟೆನೆನ್ಸ್‌ಗೆ ವರ್ಷದ ಬಜೆಟ್‌ನಲ್ಲಿ ಲೋಕೋಪಯೋಗಿ ಇಲಾಖೆಯವರು ಜಿಲ್ಲಾ ಪರಿಷತ್ತಿನವರು ಅತಿ ಹೆಚ್ಚಿನ ಹಣ ಕೊಡಬೇಕು. ಇಲ್ಲದಿದ್ದರೆ ನಮಗೆ ಸಾಮಾನ್ಯ ಸೌಕರ್ಯಕ್ಕೆ ಬಹಳ ತೊಂದರೆಯಾಗುತ್ತದೆ. ಇನ್ನು ಎರಡು ಸಂಗತಿಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಈಗ ಕೆಲವು ಕೆಲಸಗಳಿಗೆ ಟೆಂಡರ್ ಕರೆಯುತ್ತಿದ್ದಾರೆ. ಇದು ಅತಿವೃಷ್ಟಿಯಲ್ಲಿ ಹಣ ಮಂಜೂರ್ಮಾಡುವುದಕ್ಕೆ ಮಾಡಿರುವ ಕೆಲಸ. ನೀವು ಈಗ ಟೆಂಡರ್ ಕರೆದು ಕೆಲಸ ಮಾಡುವುದು ಯಾವಾಗ? ನೀವು ಇದನ್ನು ಗುರುತು ಹಾಕಿಕೊಂಡು ಅಲ್ಲಿನ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು, ಇದು ಟೆಂಡರ್ ಕರೆಯುವ ಕೆಲಸ ಅಲ್ಲ; ತುರ್ತಾಗಿ ಮಾಡಬೇಕಾದ ಕೆಲಸ ಅಂತ. ಟೆಂಡರ್ ಕರೆದು ಕುಳಿತುಕೊಂಡರೆ ಒಂದನೇ ಟೆಂಡರ್‌ಗೆ ಯಾರೂ ಬರಲಿಲ್ಲ, ಎರಡನೇ ಟೆಂಡರ್‌ಗೆ ಯಾರೂ ಬರಲಿಲ್ಲವೆಂದು ಈ ರೀತಿ ಹೇಳಿಕೊಂಡು ಹೋದರೆ ಕೆಲಸ ಯಾವಾಗ ಆಗುತ್ತದೆ? ಇದು ತುರ್ತಾಗಿ ಕೆಲಸ ಆಗಬೇಕೆಂದು ಹಣ ಬಿಡುಗಡೆ ಮಾಡುವುದು. ಎರಡನೆಯದಾಗಿ, ಅಗ್ರಿಮೆಂಟ್ ಮಾಡಿಕೊಂಡು ಬನ್ನಿ ಎಂದು ಹೇಳುತ್ತಾರೆ. 50 ಸಾವಿರ ರೂಪಾಯಿಗಳಿಗೆ ಮೇಲಿನ ಕೆಲಸ ಇದ್ದರೆ ಎಕ್ಸಿಕ್ಯೂಟೀವ್ ಇಂಜನಿಯರ್ ಅವರ ಮಟ್ಟದಲ್ಲಿ ಆಗುವುದಿಲ್ಲ. ನಾವು ಕಾರವಾರ ಜಿಲ್ಲೆಯವರು ಧಾರವಾಡ ಜಿಲ್ಲೆಗೆ ಹೋಗಬೇಕು. 50 ಸಾವಿರ ರೂಪಾಯಿಗಳಿಗೆ ಮೇಲೆ ಇದ್ದರೆ ಅಗ್ರಿಮೆಂಟ್ ಮಾಡಿಕೊಡುವುದಕ್ಕೆ ಇವರು ಹತ್ತು ಸಾರಿ ತಿರುಗಿಸುತ್ತಾರೆ. ಸುಮ್ಮನೆ ಹಣ ಬಿಡುಗಡೆ ಮಾಡುವುದಿಲ್ಲ. ಅಲ್ಲಿ ಅವರು ಸುಮ್ಮನೆ ಮಾಡಿಕೊಂಡು ಬರುವ ಸ್ಥಿತಿ ಇದೆ. ಇದು ವಸ್ತುಸ್ಥಿತಿ ಇದೆ. ನನ್ನ ಎರಡು ವರ್ಷದ ಅನುಭವದಲ್ಲಿ ಬಂದಿರುವ ಸ್ಥಿತಿಯನ್ನು ಹೇಳುತ್ತಿದ್ದೇನೆ. ಹಾಗಾಗಿ ನಿಮ್ಮ ಎಕ್ಸಿಕ್ಯೂಟೀವ್ ಇಂಜನಿಯರ್ ಅವರಿಗೆ ಹೆಚ್ಚಿನ ಮೊತ್ತದ ಅಗ್ರಿಮೆಂಟ್ ಮಾಡಿಕೊಡುವುದಕ್ಕೆ ಅಧಿಕಾರ ಕೊಡಿ. ನೀವು ನಿಮ್ಮ ಎಕ್ಸಿಕ್ಯೂಟೀವ್ ಇಂಜನಿಯರ್ ಮಟ್ಟದಲ್ಲಿ ಒಂದು ಲಕ್ಷ, ಎರಡು ಲಕ್ಷ ರೂಪಾಯಿಗಳವರೆಗಿನ ಕೆಲಸಕ್ಕೆ ಅಗ್ರಿಮೆಂಟ್ ಮಾಡಿಕೊಳ್ಳಬಹುದೆಂದು ಹೇಳಿ. ಇಲ್ಲದಿದ್ದರೆ ಅವರು ಧಾರವಾಡದ ಕಛೇರಿಗೆ, ವಿಜಾಪುರದ ಕಛೇರಿಗೆ ಅಲೆದಾಡಬೇಕಾಗುತ್ತದೆ. ಇದು ತಪ್ಪಬೇಕಾಗಿದೆ. ಹಾಗಾಗಿ ತಕ್ಷಣದಲ್ಲಿ ಆ ರೀತಿ ಹಣ ಬಿಡುಗಡೆಮಾಡಿ ಅನುಕೂಲ ಮಾಡಿ ಕೊಡಬೇಕೆಂದು ಹೇಳುತ್ತೇನೆ. ಕೃಷಿಕರಿಗೆ ಪರಿಹಾರವನ್ನು ಬಹಳ ನಾಮಿನಲ್ ಆಗಿ ಕೊಡುತ್ತಿದ್ದಾರೆ. ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಿಸುವುದು, ಅತಿವೃಷ್ಟಿ ಆದ ಸಂದರ್ಭದಲ್ಲಿ ರೈತರ ಬೇರೆ ಬೇರೆ ಬೆಳೆಗಳಿಗ ವಿವಿಧ ರೀತಿಯ ರೋಗಗಳು ಬರುತ್ತವೆ. ತೋಟಗಾರಿಕೆ ಇಲಾಖೆಯವರಾಗಲಿ, ಕೃಷಿ ಇಲಾಖೆಯವರಾಗಲಿ ಈ ವಿಷಯದ ಬಗ್ಗೆ ಸಹ ಗಮನ

ಕೊಡಬೇಕು. ಅತಿವೃಷ್ಟಿ ಆದ ಸಂದರ್ಭದಲ್ಲಿ ಸರ್ಕಾರದಿಂದ ಪರಿಹಾರ ಬರುವುದು ಒಂದು. ಆದರೆ ಬೇರೆ ಬೇರೆ ರೋಗಗಳು, ಅಡಿಕೆಗೆ ಕೊಳೆ ರೋಗ, ಬಾಳೆಗೆ ಕಟ್ಟೆ ರೋಗ, ಏಲಕ್ಕಿ ಇತ್ಯಾದಿ ಬೆಳೆಗೆ ಬೇರೆ ಬೇರೆ ರೋಗಗಳು ಇದೆ. ಆದರೆ ಆ ರೋಗಗಳಿಗೆ ಔಷಧಿಗಳನ್ನು ಕಂಡುಹಿಡಿಯುವುದಕ್ಕೆ ನಮ್ಮ ತಜ್ಞರು ವಿಫಲರಾಗುತ್ತಿದ್ದಾರೆ. ಅವರಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು, ಈ ಬೆಳೆಗಳಿಗೆ ಬರತಕ್ಕ ರೋಗಗಳನ್ನು ಪರಿಹರಿಸುವುದಕ್ಕೆ ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯವರು ವಿಶೇಷವಾದ ಪ್ರಯತ್ನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸುತ್ತಿದ್ದೇನೆ. ಇಷ್ಟು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು.

+ ಶ್ರೀ ಆರ್.ಶ್ರೀನಿವಾಸ್ (ಮುಳಬಾಗಿಲು): ಮಾನ್ಯ ಉಪಾಧ್ಯಕ್ಷರೆ, ತಾವು ನಮ್ಮ ಕೋಲಾರ ಜಿಲ್ಲೆಯ ಬರಗಾಲ ಪ್ರದೇಶದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ತಮಗೆ ಮೊಟ್ಟಮೊದಲನೆಯದಾಗಿ ಧನ್ಯವಾದಗಳನ್ನರ್ಪಿಸಿ, ಕೋಲಾರ ಜಿಲ್ಲೆ ಈಗಾಗಲೇ ಬರಗಾಲಕ್ಕೆ ತುತ್ತಾಗಿದೆ. ಬಹುಶಃ ನೂರಕ್ಕೆ 70ರಿಂದ 80 ಭಾಗ ಬಿತ್ತನೆ ಕೂಡ ಆಗಿಲ್ಲ. ಸರ್ಕಾರದ ಮಾಹಿತಿ ತೆಗೆದುಕೊಂಡಾಗ ಹೋದ ವರ್ಷಕ್ಕೂ ಈಗ್ಯೂ ಸುಮಾರು 70 ಪರ್ಸೆಂಟ್ ಕಡಿಮೆ ಮಳೆ ಆಗಿರತಕ್ಕದ್ದು ಕಂಡುಬರುತ್ತದೆ. ಮಾನ್ಯ ಕಂದಾಯ ಮಂತ್ರಿಗಳು ಇದರ ಬಗ್ಗೆ ಬಹಳವಾಗಿ ಗಮನ ಹರಿಸಬೇಕು. ನಾನು ಹೇಳಬೇಕಾದರೆ, ಸತತವಾಗಿ ನಾವೆಲ್ಲ ಕೂಡ ಬರಗಾಲ ಪೀಡಿತರಾಗಿರತಕ್ಕ ಜನ. ನಮ್ಮಲ್ಲಿ ಸುಮಾರು ಕೆರೆಗಳಿವೆ. ಆದರೆ ಸರಿಯಾದ ಕಾಲಕ್ಕೆ ಕೆರೆ ತುಂಬುವುದಿಲ್ಲ. 600 ಅಡಿ ಹೋದರೂ ಕೂಡ ಬೋರ್‌ವೆಲ್‌ಗೆ ನೀರು ಸಿಗದಂತ ಪರಿಸ್ಥಿತಿಯಾಗಿದೆ ಮೂರು ದಿನಗಳ ಹಿಂದೆ ನನ್ನ ಕ್ಷೇತ್ರಕ್ಕೆ ಹೋದಾಗ ದನಕರುಗಳಿಗೆ, ಜನಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗೆ ಬಹಳ ತೊಂದರೆಯಾಗಿರುವುದನ್ನು ನಾನು ನೋಡಿದ್ದೇನೆ. ಇದರ ಪರ್ಯಾಯವಾಗಿ ವಿದ್ಯುಚ್ಛಕ್ತಿ ಕೂಡ ಸಕಾಲದಲ್ಲಿ ಸರಿಯಾಗಿ ಕೊಡತಕ್ಕ ವ್ಯವಸ್ಥೆ ಇಲ್ಲವೆಂದು ನಾವು ನೋಡಿದ್ದೇವೆ. ಆ ಬೆಳೆ ಒಣಗತಕ್ಕದ್ದು ನೋಡಿದಾಗ ನನ್ನ ಕಣ್ಣಲ್ಲಿ ನೀರು ಬರತಕ್ಕ ಪರಿಸ್ಥಿತಿ ಉಂಟಾಯಿತು. ಆ ಜನರು 400-500 ರೂಪಾಯಿ ಖರ್ಚು ಮಾಡಿ ಗೊಬ್ಬರ ಹಾಕಿ 40-50 ರೂಪಾಯಿ ಒಂದು ಕೂಲಿ ಆಳಿಗೆ ಕೊಟ್ಟು, ಸುಮಾರು ಒಂದು ಎಕರೆಯಲ್ಲಿ ಟೊಮ್ಯಾಟೋ ಬೆಳೆಯಬೇಕಾದರೆ 10-15 ಸಾವಿರ ರೂಪಾಯಿ ಖರ್ಚಾಗುತ್ತದೆ. ಕೇವಲ 4-5 ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಆ ಜನ ಎಲ್ಲಾ ನನಗೆ ತಿಳಿಸಿದ್ದಾರೆ. ಇದೇ ರೀತಿಯಲ್ಲಿ ಆಲೂಗೆಡ್ಡೆ ವಿಚಾರದಲ್ಲೂ ಕೂಡ ನೋಡಿದಾಗ, 50 ಕೆ.ಜಿ. ಆಲೂಗೆಡ್ಡೆಗೆ 30-35 ದರವಿರುವ ಸ್ಥಿತಿ ಇದೆ. ಏಕೆಂದರೆ, ರೈತ ಇಂದು ಬಹಳ ಕಷ್ಟದಲ್ಲಿದ್ದಾನೆ. ರಾತ್ರಿ 12 ಗಂಟೆಗೆ ವಿದ್ಯುಚ್ಛಕ್ತಿ ಬಂದರೆ, ಹಾವಿನ ಕಾಟವಿದೆ. ಹಾವುಗಳನ್ನು ಹಿಡಿಯಬಾರದು, ಹೊಡೆಯಬಾರದೆಂದು ಕೇಂದ್ರ ಸರ್ಕಾರದ ನೀತಿಯಿದೆ. ಇದರಿಂದಾಗಿ ವಾರಕ್ಕೊಬ್ಬರೋ, ಇಬ್ಬರೋ ನೀರು ಎತ್ತುವುದಕ್ಕೆ ರಾತ್ರಿ ಸಮಯಕ್ಕೆ ಹೋದಾಗ ಹಾವು ಕಚ್ಚಿ ಸತ್ತಿರುವ ಸಂಗತಿ ಕೂಡ ನಮ್ಮ ಮಾಹಿತಿಗೆ ಬಂದಿದೆ. ಆರೀತಿ ಅವನು ಕಷ್ಟಪಟ್ಟು

ಬೆಳೆಯನ್ನು ಬೆಳೆದರೂ ಕೂಡ ಸಕಾಲದಲ್ಲಿ ಸರಿಯಾದ ಬೆಲೆ ಬರುತ್ತಿಲ್ಲ. ಈ ಪ್ರಕೃತಿ ವಿಕೋಪದಿಂದಾಗಿ ಕೋಲಾರ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಬೆಂಗಳೂರು ಗ್ರಾಮಾಂತರದಲ್ಲಿರುವ ಜನರೆಲ್ಲಾ ಬಹಳವಾಗಿ ಇವತ್ತಿನ ದಿವಸ ನೊಂದಿದ್ದೇವೆ. ಇದಕ್ಕಾಗಿ ಶಾಶ್ವತವಾದಂತಹ ಪರಿಹಾರವೊಂದನ್ನು ಕಂಡುಹಿಡಿಯಬೇಕಾಗುತ್ತದೆ. ನಮಗೆ ಶಾಶ್ವತವಾದ ನಾಲೆ ಇಲ್ಲ, ನಾವು ತಮ್ಮನ್ನೂ ಕೇಳುತ್ತಿಲ್ಲ. ನದಿ ನೀರು ಬಿಡಿ ಎಂದು ಕೇಳುವ ಅವಕಾಶವೂ ನಮಗೆ ಇಲ್ಲ. ನಾವು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳುವುದೇನೆಂದರೆ, ನಮಗೂ ಕೂಡ ಶಾಶ್ವತವಾದ ಒಂದು ಪರಿಹಾರವನ್ನು ಕಂಡುಹಿಡಿಯಿರಿ. ಬರಪೀಡಿತವನ್ನು ಹೋಗಲಾಡಿಸಬೇಕಾದರೆ, ಒಂದು ಶಾಶ್ವತವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಒತ್ತಾಯಿಸುತ್ತಿದ್ದೇವೆ. ಬಯಲು ಸೀಮೆ 57 ತಾಲ್ಲೂಕುಗಳಲ್ಲಿರುವ ಜನರಾದ ನಾವು ಇದಕ್ಕೆ ತುತ್ತಾಗಿದ್ದೇವೆ. ಆ ಭಾಗವನ್ನು ಪ್ರತಿನಿಧಿಸುವ 73 ಜನ ಶಾಸಕರಿದ್ದೇವೆ. ಸತತವಾಗಿ 50 ವರ್ಷಗಳಿಗೆ ನಾವು ಕಾಲಿಟ್ಟಾಗಲೂ ಕೂಡ, ಯಾವ ರೀತಿಯಾಗಿ ಅನ್ಯಾಯವಾಗಿದೆಯೆಂದರೆ, ಇದುವರೆಗೆ 36,661 ಕೆರೆಗಳಿದ್ದು, 6 ಲಕ್ಷ 80 ಹೆಕ್ಟೇರ್ ಪ್ರದೇಶದಲ್ಲಿ ನಾವೆಲ್ಲಾ ಬೆಳೆಯನ್ನು ಬೆಳೆದರೂ ಕೂಡ, ಈ ಕೆರೆಗಳಿಗೆ ಈ ಸಲ ಬರೇ 75 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆಂಬುದನ್ನು ನಾನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ 75 ಕೋಟಿ ರೂಪಾಯಿಗಳಲ್ಲಿ 60 ಕೋಟಿ ರೂಪಾಯಿಗಳನ್ನು ಹಿಂದಿನ ಕಾಮಗಾರಿಗಳಿಗೂ, 10 ಕೋಟಿ ರೂಪಾಯಿಗಳನ್ನು ಸಂಬಳ ವೆಚ್ಚಕ್ಕೂ, ಕೇವಲ 5 ಕೋಟಿ ರೂಪಾಯಿಗಳನ್ನು ಮಾತ್ರ ಸಣ್ಣ ನೀರಾವರಿಗೆ ಬಜೆಟ್ ಅಲೋಕೇಷನ್‌ನಲ್ಲಿ ಮೀಸಲಾಗಿಟ್ಟಿದೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕಳೆದ ಬಜೆಟ್ ಅಧಿವೇಶನದಲ್ಲಿ ಹೆಚ್ಚಿನ ಹಣವನ್ನು ಕೊಡಿ ಎಂದು ನಾವು ಶಾಸಕರೂ ಪ್ರಸ್ತಾಪಿಸಿದ್ದೆವು. ಆದರೆ, ಸರ್ಕಾರ ಸಣ್ಣ ನೀರಾವರಿ ಬಗ್ಗೆ ಹೇಳಲೇ ಇಲ್ಲ. ಅದರ ಪ್ರಸ್ತಾಪವೇ ಇಲ್ಲ. ನನಗೆ ಬಹಳ ಸಂಕಟವಾಗುತ್ತಿದೆ. ನಾವು ಬಯಲು ಸೀಮೆ ಪ್ರದೇಶದವರು ಯಾವ ರೀತಿಯಾಗಿ ಬದುಕಬೇಕು? ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದೇವೆ. ಇದಕ್ಕೆ ನಾನು ತಮ್ಮ ಮುಖಾಂತರವಾಗಿ ಕೇಳುವುದಿಷ್ಟೇ, ಶಾಶ್ವತವಾಗಿ ನೀರಿನ ಮಟ್ಟವನ್ನು ಏರಿಸುವುದಕ್ಕೆ ಸಣ್ಣ ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗುತ್ತದೆ. ಪ್ರತ್ಯೇಕವಾಗಿ ಕೆರೆಗಳ ಹೂಳೆತ್ತಬೇಕಾದ ಪರಿಸ್ಥಿತಿ ಇದೆ. ನಾನು ಸರ್ಕಾರವನ್ನು ಕೇಳುತ್ತಿರುವುದೇನೆಂದರೆ, ಯಾವುದೇ ಸರ್ಕಾರವಿರಲಿ, ಪಕ್ಷಭೇದ ವಿಲ್ಲದೆ ನಾನು ಮಾತನಾಡುತ್ತಿದ್ದೇನೆ. 1,250 ಕೋಟಿ ರೂಪಾಯಿಗಳನ್ನು ಇವತ್ತು ಅಪ್ಪರ್ ಕೃಷ್ಣಾಗೆ ಖರ್ಚು ಮಾಡುತ್ತಿದ್ದೀರಿ, ಕಾವೇರಿ ಬೇಸಿನ್‌ಗೆ ಖರ್ಚು ಮಾಡುತ್ತಿದ್ದೀರಿ 9 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ಎನ್ನುವ ಮಾಹಿತಿ ತಮ್ಮಲ್ಲಿದೆ. ಆದರೆ, ಇದುವರೆಗೂ ಕೂಡ 57 ತಾಲ್ಲೂಕುಗಳಿಗೆ ನೀವು ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎನ್ನುವ ಮಾಹಿತಿಯನ್ನು ಕೇಳುವುದಕ್ಕೆ ನಾನು ಇಚ್ಛಿಸುತ್ತೇನೆ. ನಾವೇಕೆ ಮಾಡತಬಾರದು? ಇವತ್ತು 224 ಜನ ಸದಸ್ಯರಲ್ಲಿ 3ನೇ 1 ಭಾಗದ ಪ್ರತಿನಿಧಿಗಳಾಗಿ 73ಜನ ಶಾಸಕರು ಈ ಪ್ರದೇಶವನ್ನು

ಪ್ರತಿನಿಧಿಸಿದ್ದೇವೆ. ನಿರ್ಲಕ್ಷ್ಯ ಮಾಡತಕ್ಕದ್ದನ್ನು ಏಕೆ ಮಾಡುತ್ತಿದ್ದೀರಿ? ಅಥವಾ ನಾವೇನೂ ಆ ಪ್ರದೇಶದ ಜನರಲ್ಲವೇ? ಅಥವಾ ನಾವು ಆ ಜನಗಳನ್ನು ಪ್ರತಿನಿಧಿಸಿಲ್ಲವೇ? ಎನ್ನುವುದನ್ನು ನಾನು ತಮ್ಮ ಮುಖಾಂತರ ಕೇಳಲಿಕ್ಕೆ ಇಚ್ಛಿಸುತ್ತೇನೆ. ಈಗಲೂ ಕೂಡ ಕನಿಷ್ಠಪಕ್ಷ 45 ವರ್ಷಗಳು ಆಗಿರುವ, ಯಾವುದೇ ಸರ್ಕಾರ ಕೂಡ ನಮಗೆ ಹೆಚ್ಚಿನ ಮೋಸ ಮಾಡಿದೆ. ಆದರೂ ಕೂಡ ನಮ್ಮ ಸರ್ಕಾರ ಬಂದಾಗಲೂ ಕೂಡ ಕನಿಷ್ಠಪಕ್ಷ ಇದರ ಬಗ್ಗೆ ಕಾಳಜಿ ತೋರಿಸುತ್ತಿಲ್ಲ ಎನ್ನುವುದೇ ನನಗೆ ಸಂಕಟವಾಗುತ್ತಿದೆ. ಆದುದರಿಂದ, ನಾನು ತಮ್ಮನ್ನು ಕೇಳುವುದೇನೆಂದರೆ, ನಾವು ಬಯಲು ಸೀಮೆ ಪ್ರದೇಶದಲ್ಲಿದ್ದೇವೆ. ಈಗ ಮಲೆನಾಡು ಪ್ರದೇಶಕ್ಕೆ 30-91ರಿಂದ 30-36 ಕೋಟಿ ರೂಪಾಯಿಗಳನ್ನು 2-3 ಜಿಲ್ಲೆಗಳಿಗೆ ಕೊಡುತ್ತಿದ್ದೀರಿ. ಹೈದರಾಬಾದ್-ಕರ್ನಾಟಕಕ್ಕೆ 60-66 ಕೋಟಿ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಇದೆ. ಅನೇಕ ಯೋಜನೆಗಳಿವೆ. ಸಂತೋಷ, ಅವರೂ ನಮ್ಮ ಜನರೇ. ಅವರೂ ನಮ್ಮ ಕರ್ನಾಟಕದವರೇ. ಅವರಿಗೆ ಕೊಡುವುದಕ್ಕೆ ನಮಗೇನೂ ಅಸಂತೋಷವಿಲ್ಲ. ಆದರೆ, ಬಯಲು ಸೀಮೆ ಪ್ರದೇಶಕ್ಕೆ 94ರಲ್ಲಿ ಪ್ರಾರಂಭವಾಗಿದ್ದನ್ನು ಬರೇ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಇದಕ್ಕೆ ಮುಖ್ಯಮಂತ್ರಿಗಳಲ್ಲಿ ಕೂಡ..ನಾವೆಲ್ಲಾ ಬಯಲು ಸೀಮೆ ಪ್ರದೇಶಕ್ಕೆ ಸಂಬಂಧಪಟ್ಟಹಾಗೆ ಸಭೆ ಸೇರಿ ಇದರಲ್ಲಿ ಕೂಡ ಹೆಚ್ಚಿಗೆ ಕೇಳಲಿಲ್ಲ. ಒಂದೊಂದು ಕ್ಷೇತ್ರಕ್ಕೆ ಒಂದೊಂದು ಕೋಟಿ ಕೊಡಿ ಎಂದೂ, 57 ಕೋಟಿ ರೂಪಾಯಿಗಳನ್ನು ಕೊಡಿ ಎಂದು ಕೇಳಿದಾಗಲೂ ಕೂಡ ಈ ಸಲ 3 ವರ್ಷಗಳಿಗೆ ಕೇವಲ 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಯಾವ ರೀತಿಯಲ್ಲಿ ನಾವೆಲ್ಲಾ ಬದುಕಬೇಕೆನ್ನುವುದೇ ಚಿಂತೆಯಾಗಿದೆ. ಇದೇ ರೀತಿಯಲ್ಲಿ, ನಾವೇನಾದರೂ 10-15 ದಿವಸಗಳು ಇದ್ದಾಗ, ಖಂಡಿತವಾಗಿ ಸ್ವಾಮಿ, ತಮ್ಮ ಗ್ರಾಮಗಳಿಗೆ ಕೂಲಿ ಮಾಡುವುದಕ್ಕೆ ನಾವು ಬರಬೇಕಾಗುತ್ತದೆ. 57 ತಾಲ್ಲೂಕುಗಳ ಜನರೆಲ್ಲಾ ಕೂಡ ಅಲ್ಲಿ ಬರಬೇಕಾಗುತ್ತದೆ. ಏಕೆಂದರೆ, ಕುಡಿಯಲಿಕ್ಕೆ ನೀರಿನ ಅವ್ಯವಸ್ಥೆ ಆಗುತ್ತದೆ, ವ್ಯವಸಾಯ ಮಾಡುವುದಕ್ಕೆ ವಿದ್ಯುಚ್ಛಕ್ತಿ ಸಕಾಲಕ್ಕೆ ಇರುವುದಿಲ್ಲ, 600 ಅಡಿ ಆಳಕ್ಕೆ ಹೋದರೂ ಕೂಡ ಬೋರ್‌ವೆಲ್ ಕೊರೆದರೂ ನೀರು ಬರುವುದಿಲ್ಲ. ಈ ಕಡೆ ಕೆರೆ ತುಂಬುವುದಕ್ಕೆ ಅಭಾವ ಪೀಡಿತ ಪ್ರದೇಶವಾಗಿರುವುದರಿಂದ ನೀರು ಬರುವುದಕ್ಕೆ ಸಕಾಲವಾಗುವುದಿಲ್ಲ. ಕಷ್ಟಪಟ್ಟು ಏನಾದರೂ ಬೆಳೆ ಬೆಳೆದರೂ ಕೂಡ ಟೊಮ್ಯಾಟೋಗೆ 50 ಪೈಸೆ ಆಗತಕ್ಕ ವ್ಯವಸ್ಥೆ ಇರುವುದರಿಂದ ನಮ್ಮ ಜನ ಅಧೋಗತಿಗಿಳಿದಿದ್ದು, ನಾವೆಲ್ಲಾ ಏನಾದರೂ ತುಂಗಭದ್ರಾ ಡ್ಯಾಮ್‌ಗೋ, ಕಾವೇರಿ ಅಥವಾ ಮಂಡ್ಯ ಕಡೆಗೋ, ಬೀದರ್ ಕಡೆಗೋ ವಲಸೆ ಹೋಗಿ ಕೂಲಿನಾಲಿ ಮಾಡಬೇಕಾದ ವ್ಯವಸ್ಥೆ ಬರುತ್ತದೋ, ಏನೋ ಎಂಬ ಚಿಂತೆಯಾಗಿದೆ. ದಯವಿಟ್ಟು ತಾವು ಇದಕ್ಕೊಂದು ಶಾಶ್ವತವಾದ ಪರಿಹಾರವನ್ನು ಹುಡುಕಬೇಕಾಗಿದೆ. ಚಿತ್ರದುರ್ಗ, ಗ್ರಾಮಾಂತರ, ತುಮಕೂರು ಇವೆಲ್ಲಾಕ್ಕೂ ಶಾಶ್ವತವಾಗಿ ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ. ಬಯಲು ಸೀಮೆ ಪ್ರದೇಶಕ್ಕೆ 200 ಕೋಟಿಯನ್ನು ಏಕೆ

ಕೊಡಬಾರದು? ಕನಿಷ್ಠಪಕ್ಷ ಒಂದು ತಾಲ್ಲೂಕಿಗೆ ಹೊಳೆತ್ತುವ ವ್ಯವಸ್ಥೆ ಮಾಡಿ, ಚೆಕ್‌ಡ್ಯಾಮ್ಸ್, ನಾಲಾ ಡ್ಯಾಮ್ಸ್ ಇವಕ್ಕೆಲ್ಲಾ ಶಾಶ್ವತವಾದ ವ್ಯವಸ್ಥೆಯನ್ನು ಮಾಡಿ, ಬಯಲುಸೀಮೆಯ ಪ್ರದೇಶದ ಒಂದೊಂದು ತಾಲ್ಲೂಕಿಗೂ ಕೂಡ 2-2 ಕೋಟಿ ರೂಪಾಯಿಗಳನ್ನು ಕೊಟ್ಟರೂ ಕೂಡ, 114 ಕೋಟಿ ರೂಪಾಯಿಗಳಾಗುತ್ತವೆ. ವಿಶ್ವೇಶ್ವರ ಚಾನಲ್‌ಗೆ 300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ನಾವು ಕೇಳುತ್ತಿರುವುದು..

ಶ್ರೀ ಜಿ.ಬಿ.ಶಿವಕುಮಾರ್: ಮಾನ್ಯ ಅಧ್ಯಕ್ಷರೇ....

ಉಪಾಧ್ಯಕ್ಷರು: ಅವರು ಮಾತನಾಡಲಿ.

ಶ್ರೀ ಬಿ.ಬಿ.ಶಿವಕುಮಾರ್: ಮಾನ್ಯ ಶ್ರೀನಿವಾಸರವರು ಅವರ ಬಯಲುಸೀಮೆ ಪ್ರದೇಶದ ಬಗ್ಗೆ ಬಜೆಟ್ ವಿಚಾರ ಬಂದಾಗ ಹಿಂದೆಯೂ ಕೂಡ ಸಾಕಷ್ಟು ಅವರೆಲ್ಲಾ ಮಾತನಾಡಿದ್ದಾರೆ. ನಾನೂ ಕೂಡ ಅದಕ್ಕೆ ಧ್ವನಿಗೂಡಿಸುತ್ತೇನೆ. ಮಾನ್ಯ ಶ್ರೀ ಶಿವಪ್ಪನವರು ಹೇಳುತ್ತಿದ್ದರು ಒಂದು ಸಲಹೆ ಕೊಡಿ ಎಂದು ಹೇಳಿ ಇವತ್ತು ಬಯಲು ಸೀಮೆ ಪ್ರದೇಶಕ್ಕೆ ಅಂತರ್ಜಲ ಮಟ್ಟವನ್ನು ಹೆಚ್ಚಿಸಬೇಕಾದರೆ ಅದಕ್ಕೆ ತಜ್ಞರ ಅಭಿಪ್ರಾಯದಂತೆ, ಒಡ್ಡು ಹಾಕಬೇಕು, Perculation ಟ್ಯಾಂಕ್ ಕಟ್ಟತಕ್ಕದ್ದು De-silting ಮಾಡತಕ್ಕದ್ದು ಇವೆಲ್ಲವನ್ನೂ ಈಗಾಗಲೇ ಸಲಹೆ ಕೊಟ್ಟಿದ್ದಾರೆ. ಅದಕ್ಕೆ ಸರ್ಕಾರದ ಮೂಲಕ ನಾನು ಅವರಿಗೆ ಬೆಂಬಲಿಸುತ್ತೇನೆ. ಹೆಚ್ಚಿನ ಹಣವನ್ನು ಸಣ್ಣ ನೀರಾವರಿ ಇಲಾಖೆಗೆ ಕೊಡಬೇಕೆನ್ನತಕ್ಕದ್ದರಲ್ಲಿ ಅರ್ಥವಿದೆ. ಆದರೆ, ಅವರು ಮಾತುಮಾತಿಗೂ ಮಂಡ್ಯ, ವಿಶ್ವೇಶ್ವರಯ್ಯ ನಾಲೆ ಅಂದರೆ, ನಾವು ಅಲ್ಲಿ ಹುಟ್ಟಿದ್ದೇ ತಪ್ಪಾ? ಇವರು ಕೋಲಾರದಲ್ಲಿ ಹುಟ್ಟಿದ್ದೇ ತಪ್ಪಾ?

ಶ್ರೀ ಆರ್.ಶ್ರೀನಿವಾಸ: ನಾನು ಅಲ್ಲಿಗೆ ಕೊಡಬೇಡಿ ಎಂದು ಹೇಳುತ್ತಿಲ್ಲ. ಬೀದರ್, ರಾಯಚೂರ್, ಮಂಡ್ಯಕ್ಕೆ ಕೊಡಬೇಡಿ ಎಂದು ಹೇಳುತ್ತಿಲ್ಲ. ಕೊಡಿ, ಅವರೂ ನಮ್ಮ ಜನ. ನಾಲೆ ಇದೆ. ನಮ್ಮ ಜಲವನ್ನು ಬೇರೆ ರಾಜ್ಯದವರಿಗೆ ಬಿಟ್ಟುಕೊಡಲು ನಾವು ಸಿದ್ಧರಾಗಿಲ್ಲ. ಆದರೆ ಅದೇ ರೀತಿಯಲ್ಲಿ, ನಮಗೂ ಕೂಡ ಆ ಜನಕ್ಕೆ 1 ರೂಪಾಯಿ ಕೊಡುವ ಕಡೆ ನಮಗೆ ನಾಲ್ಕಾಣೆಯಾದರೂ ಕೊಡಿ ಎಂದು ಸರ್ಕಾರವನ್ನು ಬೇಡಿಕೊಳ್ಳುತ್ತಿದ್ದೇವೆಯೇ ಹೊರತು, ಅವರಿಗೆ ಕೊಡಬೇಡಿ ಎಂದು ಹೇಳುತ್ತಿಲ್ಲ. ಒಂದು ನಾಲೆಗೆ 300ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ, ಇಡೀ ಬಯಲು ಸೀಮೆ ಪ್ರದೇಶದಲ್ಲಿ 136 ಸಾವಿರ ಇರುವ ಟ್ಯಾಂಕ್‌ಗಳಿಗೆ ಕನಿಷ್ಠಪಕ್ಷ 100-200 ಕೋಟಿ ರೂಪಾಯಿಗಳನ್ನಾದರೂ ಕೊಡಲು ಸರ್ಕಾರ ಮನಸ್ಸು ಮಾಡಿಲ್ಲವಲ್ಲವೆನ್ನುವುದೇ ನನಗೆ ಸಂಕಟವಾಗುತ್ತಿದೆ. ಕೇವಲ 5 ಕೋಟಿ ರೂಪಾಯಿಗಳನ್ನು ಈ ಸಾರಿ ಮೈನರ್ ಇರಿಗೇಷನ್‌ಗೆ ಕೊಟ್ಟಿದ್ದಾರೆ. ಅದರ ಬಗ್ಗೆ ಗಮನಹರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿಬಿಟ್ಟು... ಈ ಸಲ

ನಮ್ಮ ಕಂದಾಯ ಮಂತ್ರಿಗಳನ್ನು ಬೇಡಿಕೊಳ್ಳುವುದೇನೆಂದರೆ, ಈ ಸಲ ಏನೇ ಆಗಲೀ ತಾತ್ಕಾಲಿಕವಾಗಿ ನಮ್ಮ ರೈತರು ಸಂಘ-ಸಂಸ್ಥೆಗಳಲ್ಲಿ ಏನು ಸಾಲವನ್ನು ತೆಗೆದುಕೊಂಡಿದ್ದಾರೆ, ಅದಕ್ಕೆ ಈ ವರ್ಷಕ್ಕೆ ಮಾತ್ರ ಬಡ್ಡಿ ಮನ್ನಾ ಮಾಡಬೇಕೆಂದೂ, ತಾತ್ಕಾಲಿಕವಾಗಿ ವಸೂಲಿ ಮಾಡುವುದನ್ನು ನಿಲ್ಲಿಸಬೇಕೆಂದು ಕೋರುತ್ತೇನೆ. ಎರಡನೆಯದಾಗಿ, ಕುಡಿಯುವ ನೀರಿಗಾಗಿ ಹೆಚ್ಚಿನ ಹಣವನ್ನು ನಿಗದಿಪಡಿಸಬೇಕು, ಅಲ್ಲಿರುವ ಕೂಲಿಕಾರ್ಮಿಕರಿಗೆ ಕೂಲಿ ಸಿಗುವ ವ್ಯವಸ್ಥೆಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸ್ವಲ್ಪ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಬೇಕು. ಮೂರನೆಯದಾಗಿ, ಇವೆಲ್ಲಕ್ಕೂ ಕೂಡ ವ್ಯವಸ್ಥಿತವಾಗಿ ಆದಷ್ಟು ಬೇಗ ತಾವೆಲ್ಲಾ ಕೂಡ ಹಣ ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಕೇಳುತ್ತಿದ್ದೇನೆ. ಇದನ್ನು ತಾವು ಗಣನೆಗೆ ತೆಗೆದುಕೊಂಡು ಇದನ್ನು ಬಿಡುಗಡೆ ಮಾಡುತ್ತೀರೆಂಬ ಭಾವನೆ ನನಗಿದೆ. ಇದನ್ನು ಮಾಡಿ. ಕನಿಷ್ಠಪಕ್ಷ ಬಯಲು ಸೀಮೆ ಪ್ರದೇಶಕ್ಕೆ 200 ಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ಮಾಡುವ ವ್ಯವಸ್ಥೆ ಮಾಡಬೇಕೆಂದು ಕೋರುತ್ತಾ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ಮಾತುಗಳನ್ನು ಮುಗಿಸುತ್ತೇನೆ.

5.20 ಪಿ.ಎಂ

ಉಪಾಧ್ಯಕ್ಷರು: ಈಗ ಬಿ.ಶಿವರಾಮು ಅವರು.

ಶ್ರೀ ಜೆ.ಪಿ.ಮಾಧುಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ....

ಉಪಾಧ್ಯಕ್ಷರು: ರೂಲ್ 69ರ ಕೆಳಗೆ ಎಲ್ಲರೂ ಮಾತನಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ಅವಕಾಶ ಇಲ್ಲ.

+ ಶ್ರೀ ಬಿ.ಶಿವರಾಮು (ಗಂಡಸಿ): ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಅತಿವೃಷ್ಟಿ ಮತ್ತು ಅನಾವೃಷ್ಟಿ ಬಗ್ಗೆ....

ಶ್ರೀ ಜೆ.ಸಿ.ಮಾಧುಸ್ವಾಮಿ: ಸ್ಪೀಕರ್ ಅವರು ನಮಗೆಲ್ಲಾ ಮಾತನಾಡುವುದಕ್ಕೆ ಹೇಳಿ ಹೋಗಿದ್ದಾರೆ. ನಮ್ಮ ಹೆಸರು ಪಟ್ಟಿಯಲ್ಲಿದೆ.

ಶ್ರೀ ಡಿ.ವಿ.ಸದಾನಂದಗೌಡ: ನಮಗೂ ಅವಕಾಶ ಬೇಕು. ನಾವೆಲ್ಲಾ ಮೊದಲೇ ಕೇಳಿದವರು. ನಮಗೆ ಮಾತನಾಡುವುದಕ್ಕೆ ಅವಕಾಶವೇ ಸಿಗುತ್ತಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾವು ಕಾಲಿಂಗ್ ಅಟೆನ್‌ಷನ್ ಹಾಕಿದ್ದೇವೆ. ಸೈನ್ ಹಾಕಿದ್ದೇವೆ. ಬೆಳಗ್ಗೆ ಸ್ಪೀಕರ್ ಹೇಳಿಹೋಗಿದ್ದಾರೆ ಮಾತನಾಡಿ ಎಂದು.

ಉಪಾಧ್ಯಕ್ಷರು: ಈಗ ಶಿವರಾಮು ಅವರನ್ನು ಕರೆದಿದ್ದೇನೆ. ಅವರು ಮಾತನಾಡಲಿ. ಆಮೇಲೆ ನೋಡೋಣ.

ಶ್ರೀ ಬಿ.ಶಿವರಾಮು: ಸನ್ಮಾನ್ಯ ಅಧ್ಯಕ್ಷರೆ, ಈಗ ಸಾಕಷ್ಟು ಜನ ಅತಿವೃಷ್ಟಿ ಮತ್ತು ಅನಾವೃಷ್ಟಿ ಬಗ್ಗೆ ಅಂಕಿಅಂಶ ವಿಶ್ಲೇಷಣೆ ಮಾಡಿ ಅಂಕಿಷಂಶ ಕೊಡತಕ್ಕದ್ದನ್ನು ಮಾಡಿ ಈಗಾಗಲೇ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಈಗಾಗಲೇ ಈ ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಅನಾವೃಷ್ಟಿ ಅತಿವೃಷ್ಟಿ ಇದೆ ಎಂದು ಹೇಳುವುದರ ಜೊತೆಗೆ ನನ್ನ ಜಿಲ್ಲೆಯ ವಿಶೇಷ ಅಂದರೆ ಹಾಸನ ಜಿಲ್ಲೆಯದು...ನಾನು ಮಾತನಾಡುವುದಕ್ಕೆ ಶುರು ಮಾಡಿದಕೂಡಲೇ ಕೆಲವರು ನೋಡುತ್ತಾರೆ ಇದೇನು ಹಾಸನದವರು ಮತ್ತೆ ಅಲ್ಲಿಗೇ ಬಂದರು ಎಂದು. ಇಲ್ಲ. ನೀವು ಏತಕ್ಕೆ ನೋಡುತ್ತೀರಿ ಎಂದು ಅರ್ಥ ಆಗಿಬಿಡುತ್ತದಲ್ಲ. ನಮ್ಮದು ಒಂದು ವಿಶೇಷ ಜಿಲ್ಲೆ. ಏಕೆಂದರೆ....

ಶ್ರೀ ಎಚ್.ಶಿವಪ್ಪ: ನಾವು ಮಾತನಾಡುವಾಗ ನಮ್ಮನ್ನು ನೋಡುವುದಿಲ್ಲ ಎಂದು ಹೇಳುತ್ತೀರಿ. ನೋಡಿದರೆ ಹೀಗೆ ಹೇಳುತ್ತೀರಿ.

ಶ್ರೀ ಬಿ.ಶಿವರಾಮು: ನೋಡುವ ದೃಷ್ಟಿ ಇದೆಯಲ್ಲ ಅದರಲ್ಲಿ ವ್ಯತ್ಯಾಸ ಗೊತ್ತಾಗುತ್ತದೆ ಶಿವಪ್ಪನವರೇ. ಅಷ್ಟಕ್ಕೆ ಹೇಳಿದ್ದು.

ಉಪಾಧ್ಯಕ್ಷರು: ನೀವು ಶಿವಪ್ಪನವರ ಕಡೆ ನೋಡಬೇಡಿ. ಈ ಕಡೆ ನೋಡಿ.

ಶ್ರೀ ಬಿ.ಶಿವರಾಮು: ಮಂತ್ರಿಗಳ ಕಡೆ ನೋಡಿದೆ ಅಧ್ಯಕ್ಷರೆ.

ಉಪಾಧ್ಯಕ್ಷರು: ನೋಡಬೇಡಿ ಆ ಕಡೆ. ಈ ಕಡೆ ನೋಡಿ ನೀವು.

ಶ್ರೀ ಬಿ.ಶಿವರಾಮು: ಅಧ್ಯಕ್ಷರ ಕಡೆ ನೋಡೇ ಮಾತನಾಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಶಿವರಾಮು ಅವರೇ, ಅವರೇನು ಪವರ್ ಆಫ್ ಅಟಾರ್ನಿ ಕೊಟ್ಟಿದ್ದಾರಾ ಎಂದು ಕೇಳಬೇಕು ನೀವು. ಜೆ.ಪಿ.ಎ. ಇದೆಯೇ ಎಂದು. ಜನರಲ್ ಪವರ್ ಆಫ್ ಅಟಾರ್ನಿ ಇದ್ದರೆ ಡಿಸ್ಕ್ಲೋಸ್ ಮಾಡಿ ಯಾರುಯಾರಿಗೆ ಪವರ್ ಆಫ್ ಅಟಾರ್ನಿ ಕೊಟ್ಟಿದ್ದಾರೆ ಎಂದು.

ಶ್ರೀ ಬಿ.ಶಿವರಾಮು: ನಮ್ಮ ಜಿಲ್ಲೆಯ ವಿಶೇಷ ಏನೆಂದರೆ ಅದು ಮಲೆನಾಡು ಇದೆ. ಆ ಮಲೆನಾಡಿನಲ್ಲಿ ಅತಿವೃಷ್ಟಿ. ಈ ಕಡೆ ಬಯಲುಸೀಮೆ. ಇಲ್ಲಿ ಅನಾವೃಷ್ಟಿ. ಮಧ್ಯದ ಭಾಗ ಅರೆಮಲೆನಾಡು. ಒಂದು ರೀತಿ ಉತ್ತಮವಾದ ವಾತಾವರಣ ಆಗಿದೆ. ಈಗ ಅತಿವೃಷ್ಟಿ ಬಗ್ಗೆ ಮಾನ್ಯ ಮೊಯಿಲಿಯವರು ಸಾಕಷ್ಟು ವಿಚಾರವನ್ನು ಮಾತನಾಡುವುದರ ಮೂಲಕ ವಿಶೇಷವಾಗಿ ಈ ವರ್ಷ ಹೆಚ್ಚು ಮಳೆಯಾಗಿ ಕೆಲವು ಭಾಗದಲ್ಲಿ ಕೆರೆಕಟ್ಟೆಗಳು ತುಂಬಿ ಸಣ್ಣ ಪುಟ್ಟ ಕೆರೆಗಳು ಒಡೆದುಹೋಗಿರುವುದು ಮತ್ತು ವಿಶೇಷವಾಗಿ ರಸ್ತೆಗಳು ಹಾಳಾಗಿರುವುದನ್ನು ಹೇಳಿದರು. ನಮ್ಮ ಜಿಲ್ಲೆಯಲ್ಲೂ ಸಕಲೇಶಪುರ ಅರಕಲಗೂಡು, ಬೇಲೂರು ಭಾಗದಲ್ಲಿ ಮೂರು ತಿಂಗಳಿಂದ ಸತತವಾಗಿ ಮಳೆ ಒಂದು ರಸ್ತೆ

ಸಂಪೂರ್ಣವಾಗಿ ಹಾಳಾಗಿದೆ. ನಬಾರ್ಡ್‌ನಲ್ಲೇನೋ ರಸ್ತೆ ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಲೋಕೋಪಯೋಗಿ ಇಲಾಖೆ ಸಚಿವರು ಹೇಳಿದ್ದಾರೆ. ಅದು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ಬರುತ್ತದೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ಆದರೂ ಉಳಿದಂಥ ಬೇರೆ ರಸ್ತೆಗಳಿಗೂ ಸ್ವಲ್ಪ ಹಣವನ್ನು ಒದಗಿಸುವುದರ ಮೂಲಕ ಆ ಕೆಲಸಗಳು ತ್ವರಿತವಾಗಿ ಆಗಬೇಕು ಎನ್ನತಕ್ಕದ್ದು ಒಂದು. ನಾನು ಪ್ರತಿನಿಧಿಸತಕ್ಕ ಕ್ಷೇತ್ರ ಸತತವಾಗಿ ಅನಾವೃಷ್ಟಿಯಲ್ಲೇ ಇರತಕ್ಕ ಒಂದು ಪ್ರದೇಶ. ಅದು ಅರಸೀಕೆರೆ ತಾಲ್ಲೂಕು. ಹಾಸನ ಜಿಲ್ಲೆಯಲ್ಲಿ ಅರಸೀಕೆರೆ ತಾಲ್ಲೂಕು ಮತ್ತು ಚನ್ನರಾಯಪಟ್ಟಣದ ಸ್ವಲ್ಪ ಭಾಗ ಸಾಮಾನ್ಯವಾಗಿ ಅನಾವೃಷ್ಟಿಯಲ್ಲೇ ಇರತಕ್ಕಂಥದ್ದು. ಮಾನ್ಯ ಪುಟ್ಟಣ್ಣಯ್ಯನವರು ಒಂದು ವಿಚಾರವನ್ನು ಬಹಳ ಗಂಭೀರವಾಗಿ ಹೇಳಿದರು. ಈ ಅಂಕಿಅಂಶಗಳನ್ನು ನೋಡಿದಾಗ ಸಾಮಾನ್ಯವಾಗಿ 10 ವರ್ಷದ ಅಂಕಿಅಂಶಗಳಲ್ಲಿ ಸತತವಾಗಿ ಬರಗಾಲಕ್ಕೆ ತುತ್ತಾಗತಕ್ಕ ತಾಲ್ಲೂಕುಗಳು 10 ವರ್ಷಗಳಲ್ಲಿ ಆರು ವರ್ಷ ಆಗತಕ್ಕದ್ದು ಮತ್ತೆ ಕೆಲವು 10 ವರ್ಷದಲ್ಲಿ 2 ವರ್ಷ 3 ವರ್ಷ ಆಗತಕ್ಕದ್ದನ್ನು ವಿಂಗಡಣೆ ಮಾಡಿದಾಗ ನನ್ನದು ಎರಡನೆಯದಕ್ಕೆ ಸೇರುತ್ತದೆ ಚನ್ನರಾಯಪಟ್ಟಣ ಮತ್ತು ಅರಸೀಕೆರೆ. ಸಾಮಾನ್ಯವಾಗಿ ಹತ್ತು ವರ್ಷದ್ದನ್ನು ನಾವು ಸರಾಸರಿ ತೆಗೆದುಕೊಂಡರೆ 6 ವರ್ಷ ಬರಗಾಲ ಬರತಕ್ಕಂಥ ಒಂದು ಪ್ರದೇಶ. ಈಗಾಗಲೇ ಅಂಕಿಅಂಶ ಕೊಡತಕ್ಕ ಕಾಲದಲ್ಲಿ 20ರಿಂದ 22 ಪರ್ಸೆಂಟ್ ಮಾತ್ರ ಬಿತ್ತನೆಯಾಗಿದೆ ಎನ್ನತಕ್ಕದ್ದನ್ನು ಕೂಡ ಹಾಸನ ಜಿಲ್ಲೆಯ ಅರಸೀಕೆರೆ ಚನ್ನರಾಯಪಟ್ಟಣದನ್ನು ಹೇಳಿದೆ. ಅದರ ಪರಿಹಾರದ ಬಗ್ಗೆ ಕೂಡ ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ನಾವು ಒಂದು ತಾತ್ಕಾಲಿಕ ಪರಿಹಾರ, ಇನ್ನೊಂದು ಶಾಶ್ವತ ಪರಿಹಾರದ ಬಗ್ಗೆ ಚಿಂತನೆ ಮಾಡತಕ್ಕದ್ದು. ತಾತ್ಕಾಲಿಕ ಪರಿಹಾರದ ಬಗ್ಗೆ ಆಗಲೇ ಅತಿವೃಷ್ಟಿಗೆ ರಸ್ತೆಗಳ ಅಭಿವೃದ್ಧಿ ಕಟ್ಟೆ ಒಡೆದಿರತಕ್ಕದ್ದು ರಿಪೇರಿ ಮಾಡುವುದರ ಜೊತೆಗೆ ಅನಾವೃಷ್ಟಿ ಪ್ರದೇಶದಲ್ಲಿ ಕುಡಿಯುವ ನೀರಿನ ಬಗ್ಗೆ, ದನಕರುಗಳ ಮೇವಿನ ಬಗ್ಗೆ ಬೀಜವನ್ನು ಹಾಕಿ ಬಿತ್ತನೆ ಗೊಬ್ಬರವನ್ನು ಕಳೆದುಕೊಂಡಿರತಕ್ಕ ರೈತರ ಬಗ್ಗೆ ಕೃಷಿಕಾರ್ಮಿಕರ ಉದ್ಯೋಗದ ಬಗ್ಗೆ ಇವುಗಳನ್ನು ಚಿಂತನೆ ಮಾಡತಕ್ಕದ್ದು ಹಣವನ್ನು ಒದಗಿಸಬೇಕಾಗಿರತಕ್ಕದ್ದು. ಇಪ್ಪತ್ತೆರಡೂವರೆ ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ ಅಧ್ಯಕ್ಷರೆ. ಮಂತ್ರಿಗಳು ಇದರ ಬಗ್ಗೆ ಆ ಹಣದಲ್ಲಿ ಎಷ್ಟನ್ನು ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಖರ್ಚಾಗಿದೆ ಎನ್ನತಕ್ಕ ಅಂಕಿಅಂಶವನ್ನು ಕೊಡಬೇಕು. ನನ್ನ ಜಿಲ್ಲೆಯ ವಿಷಯ ಹೇಳುವುದಾದರೆ ಇಲ್ಲಿಯವರೆಗೂ ಒಂದು ಬೋರ್‌ವೆಲ್ಲನ್ನೂ ಕೂಡ ಹಾಕತಕ್ಕ ವ್ಯವಸ್ಥೆಯಾಗಿಲ್ಲ. ನಿನ್ನೆ ದಿವಸ ಪಟ್ಟಿ ಕೇಳಿದ್ದಾರೆ, ಕೊಟ್ಟಿದ್ದೇನೆ. ಹಣ ಬಿಡುಗಡೆ ಮಾಡತಕ್ಕದ್ದು ಮುಖ್ಯ ಅಲ್ಲ. ಅದು ಎಷ್ಟರಮಟ್ಟಿಗೆ ಸದುಪಯೋಗ ಆಗಿದೆ? ಟೈಮ್ ಬೌಂಡ್ ಪ್ರೋಗ್ರಾಂ ಹಾಕಿಕೊಂಡು ಇಂಪ್ಲಿಮೆಂಟೇಷನ್ ಮಾಡಬೇಕು. ಅದಾಗದೇ ಹೋದರೆ ಉಪಯೋಗ ಇಲ್ಲ ಎನ್ನತಕ್ಕ ಮಾತನ್ನು ಮಾನ್ಯ ಮೊಯಿಲಿಯವರು ಹೇಳಿದ್ದಾರೆ. ದಯವಿಟ್ಟು ಗಮನವನ್ನು ಇದರ ಬಗ್ಗೆ ಹರಿಸಬೇಕು ಎನ್ನತಕ್ಕಂಥದ್ದು. ಕೆಲವು ಸಮಿತಿಗಳನ್ನು ಮಾಡಿದೆ. ಶಾಸಕರನ್ನೂ ಒಳಗಂಡಂತೆ ಅಧಿಕಾರಿಗಳ ಸಮಿತಿ

ಮಾಡಿದೆ. ಬಹುಶಃ ನಮ್ಮ ಜಿಲ್ಲೆಯಲ್ಲಿ ಇಲ್ಲಿಯವರೆಗೂ ಆ ಸಮಿತಿಗಳನ್ನು ಕರೆದು ಚರ್ಚೆ ಮಾಡಿ ಎಲ್ಲಿ ಏನಾಗಿದೆ ಅನ್ನತಕ್ಕಂಥ ಕೆಲಸವನ್ನು ಮಾಡಿಲ್ಲ. ಆ ಒಂದು ಕೆಲಸವನ್ನು ಕೂಡ ಮಾಡುವುದಕ್ಕೆ ಮಂತ್ರಿಗಳು ನಾಳೆ ಮೀಟಿಂಗ್ ಇದೆ ಎನ್ನತಕ್ಕಂಥದ್ದನ್ನು ಹೇಳಿದ್ದಾರೆ. ಅದರಲ್ಲಿ ಜಿಲ್ಲಾಧಿಕಾರಿಗಳಿಗೆ ಕೂಡಲೇ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಮೀಟಿಂಗ್‌ಗಳನ್ನು ಕರೆದು ಬಿಡುಗಡೆಯಾದಂಥ ಹಣವನ್ನು ಮತ್ತು ಆಗಿರತಕ್ಕಂಥ ಅನಾವೃಷ್ಟಿ ಅಥವಾ ಅತಿವೃಷ್ಟಿ ಬಗ್ಗೆ ಚರ್ಚೆ ಮಾಡತಕ್ಕಂಥ ಕೆಲಸ ಆಗಬೇಕು ಎನ್ನತಕ್ಕಂಥ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಇನ್ನು ಶಾಶ್ವತ ಪರಿಹಾರದ ಬಗ್ಗೆ. ಈಗಾಗಲೇ ಮಾನ್ಯ ಶ್ರೀನಿವಾಸ್ ಅವರು ಇದರ ಬಗ್ಗೆ ಬ್ಲಾಕ್ ಗಮನ ಹರಿಸಿದರು. ಅಧ್ಯಕ್ಷರೇ, ಈ ರಾಜ್ಯದಲ್ಲಿ ಒಟ್ಟು 43 ತಾಲ್ಲೂಕುಗಳನ್ನು ಬ್ಲಾಕ್ ಅಂಡ್ ಗ್ರೇ, ಕಪ್ಪು ಮತ್ತು ಬೂದಿ ಪ್ರದೇಶಗಳೆಂದು ಘೋಷಣೆ ಮಾಡಿದ್ದಾರೆ. ಕಾರಣ ಏನೆಂದರೆ ಅಂತರಜಲದ ನೀರಿನ ಮಟ್ಟ ಏನಿದೆ ಅದು ಈಗ ಕೆಳಗಿದೆ ಎಂದು. ನಾನು ಈ ಒಂದು ಪುಸ್ತಕವನ್ನು, ಅಂಕಿಅಂಶಗಳನ್ನು ಸರ್ಕಾರದವರು ಏನು ಕೊಟ್ಟಿದ್ದಾರೆ ಅದನ್ನು ತೆಗೆದು ನೋಡುತ್ತಾ ಇದ್ದೆ. ಏನು ಇವತ್ತು ಮಳೆ ಕಡಿಮೆ ಇದೆ, ಅನಾವೃಷ್ಟಿ ಜಾಸ್ತಿ ಇರುವ ತಾಲ್ಲೂಕುಗಳು ಎಂದು ಏನು ಹೇಳಿದ್ದಾರೆ ಅದರಲ್ಲಿ 36 ತಾಲ್ಲೂಕುಗಳು ನಿರಂತರವಾದಂಥ ಅಂತರ್‌ಜಲ ಮಟ್ಟ ಕುಸಿದು ಬ್ಲಾಕ್ ಅಂಡ್ ಗ್ರೇ ಎಂದು ಡಿಕ್ಲೇರ್ ಮಾಡಿರತಕ್ಕ ಸರ್ಕಾರ ಪ್ರಕಟಣೆ ಮಾಡಿರತಕ್ಕ ತಾಲ್ಲೂಕುಗಳು. ಅಂದರೆ ಆ ಭಾಗದಲ್ಲಿ ನಿರಂತರವಾಗಿ ಅನಾವೃಷ್ಟಿ ಪದೇ ಪದೇ ಆಗುತ್ತಿದೆ. ಆ ಹಿನ್ನೆಲೆಯಲ್ಲಿ ನೀರಿನ ಮಟ್ಟ ಕುಸಿದಿದೆ. ಅದಕ್ಕೆ ಶಾಶ್ವತ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸರ್ಕಾರ ಏನು ಮಾಡಬೇಕು ಎಂಬ ಬಗ್ಗೆ. ಶ್ರೀನಿವಾಸ್ ಅವರು ಅದರ ಬಗ್ಗೆ ಗಮನ ಸೆಳೆದರು. ಒಟ್ಟು ಈ ರಾಜ್ಯದಲ್ಲಿ 9 ಲಕ್ಷ 37 ಸಾವಿರ ಹೆಕ್ಟೇರ್ ನೀರಾವರಿ ಇರತಕ್ಕದ್ದೇ ಸಣ್ಣ ನೀರಾವರಿಯಿಂದ. ಇಲ್ಲಿಯವರೆಗೆ 9 ಸಾವಿರ ಕೋಟಿ ರೂಪಾಯಿ ಖರ್ಚುಮಾಡಿ ರಾಜ್ಯ ಸರ್ಕಾರ ಸಾಧನೆ ಮಾಡಿರುವುದು ಎಷ್ಟು ಎಂದರೆ 15 ಲಕ್ಷ ಹೆಕ್ಟೇರ್ ಮಾತ್ರ ಭಾರಿ ನೀರಾವರಿಯಿಂದ. ಅಂದರೆ ಇರತಕ್ಕ ಪ್ರದೇಶ ಏನಿದೆ ಅದನ್ನು ಉತ್ತಮಪಡಿಸಿಕೊಂಡು ನೀರನ್ನು ನಿಲ್ಲಿಸಿಕೊಳ್ಳುವುದರ ಮೂಲಕ ರೈತನಿಗೆ ನೀರನ್ನು ಒದಗಿಸುವುದರ ಜೊತೆಗೆ ಅಂತರ್‌ಜಲ ನೀರಿನ ಮಟ್ಟ ಏನು ಏರಿಸಬೇಕು ಎಂಬ ಕಾನ್‌ಸೆಪ್ಟ್ ಇದೆಯೋ ಅದು ಬಿಟ್ಟು ಈ ರಾಜ್ಯದ ಹೆಚ್ಚು ಹಣವನ್ನು ಒಂದು ಭಾಗಕ್ಕೆ ಖರ್ಚು ಮಾಡುತ್ತಿದ್ದಾರೆ ಎಂದು ಶ್ರೀನಿವಾಸ್ ಅವರು ಏನು ಹೇಳಿದ್ದಾರೆ ಅದನ್ನು ನಾನು ಸಮರ್ಥಿಸುತ್ತೇನೆ. ಈ ವರ್ಷದ ಆಯವ್ಯಯದಲ್ಲಿ 1200 ಕೋಟಿ ರೂಪಾಯಿ ಹೆಚ್ಚು ಹಣವನ್ನು ಆಯವ್ಯಯದಲ್ಲಿ ಒದಗಿಸತಕ್ಕದ್ದನ್ನು ಮಾಡಿದ್ದಾರೆ. ಇಷ್ಟು ನೀರಾವರಿ ಅಚ್ಚುಕಟ್ಟು ಇರತಕ್ಕ ಪ್ರದೇಶದಲ್ಲಿ ಸಾಧಾರಣ 33 ಸಾವಿರ ಟ್ಯಾಂಕುಗಳು ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಎಂ.ಐ.ನಿಂದ ಸೇರಿಕೊಳ್ಳತಕ್ಕಂಥದ್ದಕ್ಕೆ ಕೊಟ್ಟಿರುವ ಹಣ ಒಟ್ಟು ಎಷ್ಟು ಎಂದರೆ 78 ಕೋಟಿ ರೂಪಾಯಿ. 10 ಪರ್ಸೆಂಟ್ ಕೂಡ ಇಲ್ಲ. ಇಲ್ಲಿ ನಾವು ಗಮನವನ್ನು ಶಾಶ್ವತ ಪರಿಹಾರಕ್ಕೆ ಹರಿಸಬೇಕು ಎಂಬುದಕ್ಕೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಎರಡನೆಯದು ಈ ರೀತಿಯ ಬ್ಲಾಕ್ ಅಂಡ್ ಗ್ರೇ ಎಂದು ತಾಲ್ಲೂಕುಗಳನ್ನು ನಾವು ಏನು ಗುರುತಿಸಿದ್ದೇವೆ ಮತ್ತೆ ಆ ಭಾಗದಲ್ಲಿ ಏನು ಪದೇಪದೇ ಅನಾವೃಷ್ಟಿಯಾಗುತ್ತಿದೆ ಅಲ್ಲಿ ಇವತ್ತು ಜಲಾನಯನ ಅಭಿವೃದ್ಧಿ ಯೋಜನೆಗಳು ಎಂಬುದನ್ನು ಹೆಚ್ಚು ತೆಗೆದುಕೊಳ್ಳತಕ್ಕ ಕೆಲಸವನ್ನು ಮಾಡಬೇಕು. ನಬಾರ್ಡ್‌ನಿಂದ ಹಣವನ್ನು ತೆಗೆದುಕೊಳ್ಳುವುದನ್ನು ಮಾಡುತ್ತಿದ್ದಾರೆ. ವಾಟರ್‌ಷೆಡ್ಸ್, ಜಲಾನಯನ ಅಭಿವೃದ್ಧಿ ಎಂದು ಏನಿದೆ ಅದರ ಕಾನ್‌ಸೆಪ್ಟ್ ಪ್ರಾಮುಖ್ಯವಾಗಿ ಏನಿದೆ ಎಂದರೆ ಇಂಥ ಪ್ರದೇಶದಲ್ಲಿ ಅದನ್ನು ಅನುಷ್ಠಾನಕ್ಕೆ ತರುವುದರ ಮೂಲಕ ಅಂತರ್‌ಜಲ ಮಟ್ಟವನ್ನು ಏರಿಸತಕ್ಕದ್ದು. ಮಾನ್ಯ ಶಿವಕುಮಾರ್ ಅವರು ಹೇಳಿದರಲ್ಲ ಸಣ್ಣ ಸಣ್ಣ ಕಟ್ಟೆಗಳನ್ನು ಕಟ್ಟತಕ್ಕದ್ದು, ನಾಲಾ ಬದುಗಳನ್ನು ಕಟ್ಟತಕ್ಕದ್ದು, ಪರ್ಕ್ಯುಲೇಷನ್ ಟ್ಯಾಂಕ್‌ಗಳನ್ನು ಕಟ್ಟತಕ್ಕದ್ದು, ಅಲ್ಲಿ ಮರಗಿಡಗಳನ್ನು ಬೆಳೆಸತಕ್ಕದ್ದು, ತೋಟಗಾರಿಕೆ ಮೂಲಕ ವ್ಯವಸ್ಥೆ ಮಾಡತಕ್ಕದ್ದು ಏನಿದೆ ಅದಕ್ಕೆ ಹೆಚ್ಚಿನ ಹಣವನ್ನು ಸರ್ಕಾರ ಗಮನ ಹರಿಸುವುದರ ಮೂಲಕ ನಬಾರ್ಡ್ ಆಗಲೀ ವಿಶ್ವ ಬ್ಯಾಂಕ್ ಆಗಲೀ ಅಥವಾ ಜರ್ಮನ್ ಅಭಿವೃದ್ಧಿ ಯೋಜನೆಗಳಾಗಲೀ ಆ ಮೂಲಕ ಹಣವನ್ನು ಪಡೆಯುವುದರ ಮೂಲಕ ಈ ಪ್ರದೇಶಗಳನ್ನು ಗುರುತು ಮಾಡಿ ಈ ಯೋಜನೆಗಳನ್ನು ತೆಗೆದುಕೊಳ್ಳುವುದರ ಮೂಲಕ ನಿರಂತರವಾದ ಒಂದು ಶಾಶ್ವತ ಪರಿಹಾರವನ್ನು ಮಾಡತಕ್ಕ ಕೆಲಸಕ್ಕೆ ಗಮನ ಹರಿಸಬೇಕೇ ಹೊರತು ಪ್ರತಿವರ್ಷ ನಮಗೆ 60 ಕೋಟಿ ರೂಪಾಯಿ ಕೇಂದ್ರಸರ್ಕಾರದವರು ಇಟ್ಟಿದ್ದಾರೆ, ನಾವು ತಾತ್ಕಾಲಿಕವಾಗಿ ಇಷ್ಟನ್ನು ಖರ್ಚು ಮಾಡಿದ್ದೇವೆ, ಕುಡಿಯುವ ನೀರು ಕೊಟ್ಟಿದ್ದೇವೆ ಎಂದರೆ ಕೊಡತಕ್ಕ ಹಣ ಖರ್ಚು ಮಾಡುವ ಹೊತ್ತಿಗೆ ಬರಗಾಲ ಹೋಗಿ ಮತ್ತೆ ಮಳೆ ಬಂದಿರುತ್ತದೆ. ನಾವು 8 ವರ್ಷಗಳಿಂದ ನಿರಂತರವಾಗಿ ನೋಡಿಕೊಂಡೇ ಬಂದಿದ್ದೇವೆ. ಅದಕ್ಕೋಸ್ಕರ ಈ ವ್ಯವಸ್ಥೆಯನ್ನು ಸೃಷ್ಟಿ ಮಾಡುವುದಕ್ಕೆ ಸರ್ಕಾರ ಹೆಚ್ಚು ಗಮನ ಹರಿಸಬೇಕು ಎಂದು ಹೇಳುತ್ತೇನೆ. ಭಾರಿ ನೀರಾವರಿ ಯೋಜನೆಯಲ್ಲಿ ಕೂಡ ಅಷ್ಟೆ. ಕೆಲವು ಈ ಭಾಗಕ್ಕೆ ನೀರು ಬರುತ್ತದೆಂದರೆ ಸರ್ಕಾರ ಬೇರೆ ಬೇರೆ ಕಡೆ ಹಣ ಪಡೆದು ತರತಕ್ಕ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ನಾನು ಮೊನ್ನೆ ಬೇಡಿಕೆಯ ಮೇಲೆ ಚರ್ಚೆ ಮಾಡಿದೆ. ನೇತ್ರಾವತಿ ನೀರಿನ ವ್ಯವಸ್ಥೆ ಇವತ್ತು ವೆಸ್ಟ್ ಫ್ಲೋಯಿಂಗ್ ರಿವರ್ಸ್‌ನಿಂದ 1996 ಟಿ.ಎಂ.ಸಿ. ನೀರು ಹೋಗುತ್ತದೆಂದರೆ ಕನಿಷ್ಠ ವೆಚ್ಚದಲ್ಲಿ ಈ ಭಾಗಕ್ಕೆ ನಾವು 100 ಟಿ.ಎಂ.ಸಿ.ನೀರನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ಅದನ್ನು ತೆಗೆದುಕೊಳ್ಳುವುದರ ಮೂಲಕ ವಿಶೇಷ ಬರಪೀಡಿತ ಪ್ರದೇಶ ಎಂದು ಏನು ಹೇಳಿದ್ದಾರೆ ತುಮಕೂರು ಜಿಲ್ಲೆ, ಹಾಸನದ ಕೆಲವು ಭಾಗ, ಬೆಂಗಳೂರು ಭಾಗ ಚಿತ್ರದುರ್ಗ ಈ ಭಾಗಕ್ಕೆ ನೀರು ಹರಿಸುವುದಕ್ಕೆ ಚಿಂತನೆ ಮಾಡುವುದರ ಮೂಲಕ ಬಹುಶಃ ಇದೊಂದು ಶಾಶ್ವತ ಪರಿಹಾರವಾಗುತ್ತದೆ. ಭಾರಿ ನೀರಾವರಿ ಇಲಾಖೆಯಿಂದ ಸಣ್ಣ ನೀರಾವರಿ ಇಲಾಖೆಯಿಂದ ಕೃಷಿ ಇಲಾಖೆಯವರ ಜಲಾನಯನ ಅಭಿವೃದ್ಧಿ ಯೊಜನೆಯಿಂದ ಮತ್ತು ಅರಣ್ಯೀಕರಣ ಮಾಡುವುದರ ಮೂಲಕ ಹೆಚ್ಚು ಒತ್ತನ್ನು ಕೊಡತಕ್ಕ ಕೆಲಸವನ್ನು ಮಾಡಿ ಈ ಅನಾವೃಷ್ಟಿ ಇರತಕ್ಕ ಪ್ರದೇಶಗಳನ್ನು ಇವತ್ತು ಹೋಗಲಾಡಿಸತಕ್ಕ ಕೆಲಸವನ್ನು ಮಾಡುವುದಕ್ಕೆ ಸರ್ಕಾರ ಗಮನ

ಹರಿಸ್ಬೇಕು ಎಂಬ ಮಾತನ್ನು ಹೇಳುತ್ತಾ ಇವತ್ತು ತಾತ್ಕಾಲಿಕ ಪರಿಹಾರ ಸಂದರ್ಭದಲ್ಲಿ ಜಿಲ್ಲಾ ಮಟ್ಟದಲ್ಲಿ ಹೆಚ್ಚು ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಒಂದು ಸಮನ್ವಯ ಸಮಿತಿಯನ್ನು ಮಾಡತಕ್ಕಂಥಾದ್ದನ್ನು ಮಾನ್ಯ ಕಂದಾಯ ಸಚಿವರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ಖರ್ಚು ಮಾಡುವುದಕ್ಕೆ ಹಣ ಇದೆ. ನಿಮ್ಮ ಹಣವೇ ಬೇಕಾಗಿಲ್ಲ. ಆದರೆ ಅದನ್ನು ಸಕಾಲದಲ್ಲಿ ಖರ್ಚು ಮಾಡುವಂಥ ವ್ಯವಸ್ಥೆಯನ್ನು ಜಿಲ್ಲಾ ಮಟ್ಟದಲ್ಲಿ ಮಾಡಬೇಕು. ಇವತ್ತು ಜಿಲ್ಲಾ ಪಂಚಾಯತ್‌ನಲ್ಲಿ ಎಷ್ಟು ಯೋಜನೆಗಳು ಇವೆ? ಪ್ಲಾನ್ ಇದೆ, ನಾನ್ ಪ್ಲಾನ್ ಇದೆ, ರೆವಿನ್ಯೂ ಹೆಡ್ ಇದೆ, ಜಿ.ಆರ್.ವೈ ಇದೆ, ಇ.ಎ.ಎಸ್. ಇದೆ. ಇಷ್ಟಕ್ಕೆಲ್ಲ ಆ್ಯಕ್ಷನ್ ಪಾಟರ್ ಆಗಿಲ್ಲ. ಕೃಷಿಕಾರ್ಮಿಕರಿಗೆ ಯಾವಾಗ ಉದ್ಯೋಗವನ್ನು ಒದಗಿಸತಕ್ಕಂಥಾದ್ದು? ಇದರ ಜೊತೆಗೆ ಕೆಲವು ಕಡೆ ಜಲಾನಯನ ಯೋಜನೆಗಳೂ ಇದ್ದಾವೆ. ಹಾಸನಜಿಲ್ಲೆಯಲ್ಲಿ ನ್ಯಾಷನಲ್ ವಾಟರ್ ಶೆಡ್ ಇದೆ; ಸ್ಟೇಟ್ ವಾಟರ್ ಶೆಡ್ ಇದೆ; ಜರ್ಮನ್ ವಾಟರ್‌ಶೆಡ್ ಇದೆ. ಹೋದಸಲ ನಾನು ಸದನದಲ್ಲಿ ಚರ್ಚೆ ಮಾಡಿದ್ದೆ. ಇನ್ನು ಹದಿನೈದು ದಿವಸಗಳಲ್ಲಿ 89ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ಮಾನ್ಯ ಕೃಷಿ ಸಚಿವರು ಹೇಳಿ, ಒಂದು ವಾರವಾಗಿದೆ ಬಿಡುಗಡೆ ಮಾಡಿ. ಅವರು ಯಾವಾಗ ಇಂಪ್ಲಿಮೆಂಟ್ ಮಾಡುತ್ತಾರೆ? ಹಣ ಇರುವುದನ್ನು ಸದುಪಯೋಗ ಮಾಡಿಕೊಂಡು ಸಕಾಲದಲ್ಲಿ ಯಾರಿಗೆ ಉದ್ಯೋಗದ ಬೇಡಿಕೆ ಇದೆಯೋ, ಅದನ್ನು ಒದಗಿಸತಕ್ಕಂಥಾದ್ದಕ್ಕೆ ತಾವು ಒಂದು ಸಮನ್ವಯ ಸಮಿತಿಯನ್ನು ಮಾಡುವಂಥಾದ್ದರ ಮೂಲಕ, ಅಂದರೆ ಕೋಆರ್ಡಿನೇಶನ್ ಕಮಿಟಿಯನ್ನು ತಾವು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇದನ್ನು ಸಮರ್ಪಕವಾಗಿ ಅನುಷ್ಠಾನ ಮಾಡತಕ್ಕಂಥ ವ್ಯವಸ್ಥೆಯನ್ನು ಸೃಷ್ಟಿಮಾಡಬೇಕೆಂದು ಹೇಳಿ ನಾನು ಅವರನ್ನು ಕೇಳಿಕೊಳ್ಳುತ್ತಾ ಹತ್ತು ಲಕ್ಷ ರೂಪಾಯಿಗಳನ್ನು ಹಾಸನಕ್ಕೆ ಬಿಡುಗಡೆ ಮಾಡಿದ್ದಾರಂತೆ. ಅರಸಿಕೆರೆ ತಾಲ್ಲೂಕಿಗೆ 425 ಹಳ್ಳಿಗಳಿವೆ. ಅಲ್ಲಿಗೆ ಹದಿನೈದು ಬೋರ್‌ವೆಲ್‌ಗಳನ್ನು ಕೊಟ್ಟಿದ್ದಾರೆ. ಇಲ್ಲಿಯವರೆಗೂ ಯಾವ ಊರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆಯೆಂದು ಹುಡುಕಲಿಕ್ಕೆ ಅವರು ತಲೆಯನ್ನು ಕೆಡಿಸಿಕೊಂಡಿಲ್ಲ. ಇದು ಜಿಲ್ಲಾಮಟ್ಟದ ವ್ಯವಸ್ಥೆ ಅನಾವೃಷ್ಟಿ ಬಗ್ಗೆ ತೆಗೆದುಕೊಂಡಿರತಕ್ಕಂಥಾದ್ದು. ಆದ್ದರಿಂದ ಈ ವಿಚಾರದಲ್ಲಿ ತಾವು ತ್ವರಿತವಾಗಿ ಕೆಲಸವನ್ನು ತೆಗೆದುಕೊಳ್ಳತಕ್ಕಂಥಾದ್ದು, ಮತ್ತು ಕೆಟ್ಟು ಹೋಗಿರುವ ರಸ್ತೆಗಳನ್ನು ದುರಸ್ಥಿ ಮಾಡತಕ್ಕಂಥ ಕೆಲಸವನ್ನು ಹಮ್ಮಿಕೊಳ್ಳಬೇಕೆಂದು ಹೇಳಿ ಪಿ.ಡಬ್ಲ್ಯೂ.ಡಿ.ನಲ್ಲಿ ಕೂಡ ಹಣ ಇದೆ. ಆ ಹಣವನ್ನು ಕೂಡ ಖರ್ಚು ಮಾಡತಕ್ಕಂಥಾದ್ದಕ್ಕೆ ಲೋಕೋಪಯೋಗಿ ಇಲಾಖೆಯಲ್ಲಿ ಮಾನ್ಯ ಮಂತ್ರಿಗಳು ಸ್ವಲ್ಪ ಗಮನವನ್ನು ಹರಿಸಬೇಕು. ಇನ್ನು ಬಹುಶಃ ನೂರಾರು ಲಕ್ಷ ರೂಪಾಯಿ ಹಾಸನ ಜಿಲ್ಲೆಗೆ ಕೊಡಬೇಕಾಗಿರುವುದು ಬಾಕಿಯಿದೆ ಏನೋ. ಜೊತೆಗೆ ಈಗ ಏನು ತಾವು ಯೋಜನೆಗಳನ್ನು ಮಂಜೂರಾತಿ ಮಾಡಿದ್ದೀರಿ, ಅದನ್ನು ಇಂತಹ ಸಂದರ್ಭದಲ್ಲಿ ಕೂಡಲೇ ಕಾರ್ಯಕ್ರಮಗಳನ್ನು ತೆಗೆದುಕೊಳ್ಳತಕ್ಕಂಥಾದ್ದಕ್ಕೆ ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶವನ್ನು ಕೊಡತಕ್ಕಂಥಾದ್ದೂ ಕೂಡ ಮಾಡಬೇಕೆಂದು ನಾನು

ಅಧ್ಯಕ್ಷರೇ, ತಮ್ಮ ಮೂಲಕ ಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ಬೇಗ ಮುಗಿಸಿರಿ.

ಶ್ರೀ ಬಿ.ಶಿವರಾಮು: ಇನ್ನು, ಹೆಚ್ಚು ಹಣ ಬಿಡುಗಡೆ ಮಾಡತಕ್ಕಂಥಾದ್ದು ಮತ್ತು ಮಾನ್ಯ ಸಚಿವರು ಹಾಸನ ಜಿಲ್ಲೆಗೆ ಹೆಚ್ಚಿನ ಗಮನವನ್ನು ಹರಿಸುವಂಥಾದ್ದನ್ನು ಮಾಡಬೇಕು. ಮತ್ತೆ ವಿದ್ಯುಚ್ಛಕ್ತಿ ಬಗ್ಗೆ ಒಂದು ಕೊರತೆ ಇದೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಎರಡೇ ಮಾತುಗಳನ್ನು ನಾನು ಹೇಳುತ್ತೇನೆ. ಬ್ಲಾಕ್ ಅಂಡ್ ಗ್ರೇ ಏರಿಯಾ ಎನ್ನತಕ್ಕಂಥ ತಾಲ್ಲೂಕುಗಳನ್ನು ಏನು ಪ್ರಕಟಣೆ ಮಾಡಿದ್ದಾರೆ, ಆ ಪ್ರದೇಶದ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಿಲ್ಲ ಅಂತಹೇಳಿ ಸ್ಥಗಿತಗೊಳಿಸಿದ್ದಾರೆ. ನಾನು ಮಾನ್ಯ ಸಚಿವರ ಗಮನವನ್ನು ಎರಡು ಸೆಳೆದೆ. ಆದರೆ ಇಲ್ಲ. ಅಧ್ಯಕ್ಷರೇ, ಈಗ ರಾಜ್ಯದಲ್ಲಿ ಏನು ಒಟ್ಟು 43 ತಾಲ್ಲೂಕುಗಳನ್ನು ಪ್ರಕಟಣೆ ಮಾಡಿದ್ದಾರೆ, ಅಲ್ಲಿ ರಿಜಿಸ್ಟಾರ್ ಆಗಿರತಕ್ಕಂಥ ಬಾವಿಗಳ ಸಂಖ್ಯೆ ಎಷ್ಟು ಎಂದು ಹೇಳಿದರೆ, 32,998. 43 ತಾಲ್ಲೂಕಿನಲ್ಲಿ 32,998 ಬಾವಿಗಳನ್ನು ರೈತ ಹಾಕಿಸಿಕೊಂಡು, ಅವುಗಳನ್ನು ನೋಂದಣಿ ಮಾಡಿಕೊಂಡು ಇವತ್ತು ವಿದ್ಯುತ್‌ಗಾಗಿ ಕಾಯುತ್ತಿದ್ದಾನೆ. ಅವರಿಗೆ ನಾವು ಕೊಡುವುದಿಲ್ಲ ಎನ್ನುವ ಮಾತನ್ನು ವಿದ್ಯುಚ್ಛಕ್ತಿ ಇಲಾಖೆಯವರು ಹೇಳಿದ್ದಾರೆ. ಒಂದು ಕಡೆ ರೈತನಿಗೆ ನೀರು ಇಲ್ಲ. ಇನ್ನೊಂದು ಕಡೆ ವಿದ್ಯುಚ್ಛಕ್ತಿಯನ್ನು ಕೂಡ ನಿಮಗೆ ಕೊಡುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೀರಿ. ನಬಾರ್ಡ್‌ನವರಾಗಲೀ, ಮೈನ್ಸ್ ಅಂಡ್ ಜಿಯಾಲಿಜಿ ಯವರು ಆಗಲಿ, ನೀವು ಸರ್ವಿಸ್ ಅವರಿಗೆ ಕೊಡಬೇಡಿ ಅಂತ ಹೇಳಿಲ್ಲ. ಅವರಿಗೆ ಇರತಕ್ಕಂಥ ಆದೇಶ ಏನು ಎಂದರೆ, ಬ್ಲಾಕ್ ಅಂಡ್ ಗ್ರೇ ತಾಲ್ಲೂಕುಗಳಿಗೆ ತಾವು ಏನಾದರೂ ಸರ್ವಿಸ್ ಕೊಡತಕ್ಕದ್ದನ್ನು ಮಾಡಿದರೆ, ಆ ಸರ್ವಿಸ್ ಕೊಡುವುದಕ್ಕೆ ತಾವು ಏನು ಸಾಮಗ್ರಿಗಳನ್ನು ಒದಗಿಸುತ್ತೀರಿ, ಆ ಒದಗಿಸಿದಂಥ ಸಾಮಗ್ರಿಗೆ ನಾವು ಆರ್.ಇ.ಸಿ.ಯವರು ನಿಮಗೆ ಆರ್ಥಿಕ ನೆರವನ್ನು ಕೊಡುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ, ಅಷ್ಟೆ. ಆರ್.ಇ.ಸಿ.ಯವರು ಮಾತ್ರ ಆ ಮ್ಯಾಟರ್‌ನ್ನು ರೆಫರ್ ಮಾಡಿದ್ದಾರೆ. ಅದಕ್ಕೆ ಕೆ.ಇ.ಬಿ.ಯವರು ಹಣ, ರಿಫೈನಾನ್ಸ್ ಸಿಗುವುದಿಲ್ಲ ಎನ್ನುವ ದೃಷ್ಟಿಯಿಂದ ವಿದ್ಯುಚ್ಛಕ್ತಿ ಕೊಡತಕ್ಕಂಥಾದ್ದನ್ನು ನಿಲ್ಲಿಸುವುದನ್ನು ಮಾಡಿದ್ದಾರೆ. ನಾನು ಅರಿಸಿಕರೆ ತಾಲ್ಲೂಕು, ಚನ್ನರಾಯಪಟ್ಟಣ ತಾಲ್ಲೂಕಿನದ್ದನ್ನು ಹೇಳುತ್ತೇನೆ. ಈಗ ಇರತಕ್ಕಂಥ ಹಾಲಿ ಬಾವಿಗಳಿಂದಾಗಿ ನಾಲ್ಕು ಪರ್ಸೆಂಟ್ ನೀರಾವರಿಯಾಗುತ್ತಾ ಇದೆ. ಇವತ್ತು ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಎಷ್ಟು ಬಾವಿಗಳು ನೀರಾವರಿಗೆ ರಿಜಿಸ್ಟ್ರೇಶನ್ ಆಗಿದೆ ಎಂದರೆ, 4,317 ಬಾವಿಗಳು ರಿಜಿಸ್ಟರ್ ಆಗಿ ವಿದ್ಯುಚ್ಛಕ್ತಿಗಾಗಿ ಕಾಯುತ್ತಾ ಇವೆ. ಇವತ್ತು ಬ್ಲಾಕ್ ತಾಲ್ಲೂಕುಗಳು ಅಂತ ಹೇಳಿ, ಕಪ್ಪು ಪ್ರದೇಶವೆಂದು ಘೋಷಣೆ ಮಾಡಿದ್ದರಿಂದ, ಅಷ್ಟು ಜನಕ್ಕೆ ವಿದ್ಯುಚ್ಛಕ್ತಿ ಇಲ್ಲ. ಅವನು ಬಾವಿ ಹಾಕಿಕೊಂಡು ಕಾಯುತ್ತಿದ್ದಾನೆ. ಅರಸಿಕೆರೆ ತಾಲ್ಲೂಕಿನಲ್ಲಿ 4,017 ಬಾವಿಗಳನ್ನು ರಿಜಿಸ್ಟ್ರೇಷನ್ ಮಾಡಿ ಕಾಯುತ್ತಾ ಇರತಕ್ಕಂಥಾದ್ದು. ಇದು ಗ್ರೇ ತಾಲ್ಲೂಕುಗಳು ಎಂದು ಡಿಕ್ಲೇರ್ ಮಾಡಿರುವಂಥಾದ್ದು.

ಈಗಿರತಕ್ಕಂಥ ಪ್ರದೇಶದ ಜೊತೆಗೆ ಇದಕ್ಕೂ ಕೊಟ್ಟರೆ ಬಹುಶಃ ಒಂದು ಆರು ಪರ್ಸೆಂಟ್ ನೀರಾವರಿ ಬಾವಿಯಿಂದ ಆಗತಕ್ಕಂಥಾದ್ದು ವ್ಯವಸ್ಥೆ ಆಗುತ್ತದೆ. ಅದು ಒಂದು ರೀತಿಯಲ್ಲಿ ಶಾಶ್ವತ ಪರಿಹಾರವೇ ಹೌದು. ಅದಕ್ಕೋಸ್ಕರ ಸಬ್‌ಕಮಿಟಿ ಎನ್ನತಕ್ಕದ್ದು ಇದೆ ಎನ್ನುವುದನ್ನು ತಾವು ಏನು ನಾಳೆ ಹೇಳುತ್ತಿದ್ದೀರಿ, ಆ ಕ್ಯಾಬಿನೇಟ್ ಸಬ್‌ಕಮಿಟಿಯಲ್ಲಿ ದಯವಿಟ್ಟು ಗಮನವನ್ನು ಹರಿಸತಕ್ಕಂಥಾದ್ದನ್ನು ಮಾಡಬೇಕು. ನಾನು ಉಪಮಂತ್ರಿಗಳನ್ನು ಕಾಯುತ್ತಿದ್ದೆ, ಏಕೆಂದರೆ ಅವರು ಇದ್ದಾಗ ಇವನ್ನು ಮಾಡಬೇಕು ಅಂತ. ಯಾವುದೋ ಒಂದು ದೃಷ್ಟಿಯಿಂದ, ನೀವು ಆರ್.ಇ.ಸಿ.ರಿಫೈನಾನ್ಸ್ ಕೆ.ಇ.ಬಿ.ಗೆ ಬರುವುದಿಲ್ಲ ಅಂತ ಹೇಳಿ ಆ ಒಂದು ದೃಷ್ಟಿಯಿಂದ ಒಂದೊಂದು ತಾಲ್ಲೂಕಿಗೆ ನಾಲ್ಕು ರಿಜಿಸ್ಟರ್ ಆಗಿರತಕ್ಕಂಥ ಬಾವಿಗಳಿಗೆ ಸರ್ವಿಸ್ ಕೊಡುವುದಿಲ್ಲ ಎನ್ನತಕ್ಕಂಥಾದ್ದು ಆದರೆ, ಆ ರೈತರ ಪರಿಸ್ಥಿತಿ ಏನಾಗುತ್ತದೆ? ಅದರ ಜೊತೆಗೆ ನಾನು ಇನ್ನೊಂದು ಹೇಳುವುದೇನೆಂದರೆ, ನಿಮಗೆ ಅಂದರೆ ಕೆ.ಇ.ಬಿ.ಗೆ ಸಾಮಗ್ರಿಗಳನ್ನು ಕೊಡಿಸತಕ್ಕಂಥ ಶಕ್ತಿ ಇಲ್ಲವೆಂದರೆ, ವಿದ್ಯುಚ್ಛಕ್ತಿ ಕೊಡಿ. ರೈತನೇ ಕಂಬ, ವೈರು ಎಲ್ಲತಂದು ಅವನೇ ಅನಧಿಕೃತವಾಗಿ ಹಾಕಿಕೊಳ್ಳುತ್ತಾನೆ....

ಶ್ರೀ ರಮೇಶ್ ಸಿ.ಜಿಗಜಿಣಗಿ: ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ ಮಾನ್ಯ ಸದಸ್ಯರಾದ ಶ್ರೀ ಶಿವರಾಮು ಅವರು ಇರಲಿಲ್ಲವೆಂದು ಕಾಣಿಸುತ್ತದೆ. ಕೆ.ಇ.ಬಿ.ಗೆ ಸಂಬಂಧಪಟ್ಟಂಥ ಮಂತ್ರಿಗಳು ಇದರ ಬಗ್ಗೆ ಹೇಳಿದ್ದಾರೆ. ಸರ್ಕಾರಿ ಆಜ್ಞೆ ಆಗುವುದಕ್ಕಿಂತ ಹಿಂದೆ ಎಷ್ಟು ಜನ ಕೊಳವೆಬಾವಿಗಳನ್ನು ಹಾಕಿಕೊಂಡಿದ್ದಾರೋ, ಅವರಿಗೆಲ್ಲ ಕನೆಕ್ಷನ್ ಕೊಡಿಸುತ್ತೇನೆ. ಸರ್ಕಾರಿ ಆಜ್ಞೆ ಆದಮೇಲೆ ಕೊಳವೆ ಬಾವಿಗಳನ್ನು ತೆಗೆಸಿದರೆ ಅದಕ್ಕೆ ನಾನು ಕೊಡಿಸುವುದಿಲ್ಲ ಎನ್ನುವ ಸ್ಟೇಟಮೆಂಟ್‌ನ್ನು ಬೆಳಿಗ್ಗೆ ಮಾಡಿದ್ದಾರೆ. ಅದಕ್ಕೆಲ್ಲ ಕನೆಕ್ಷನ್ ಕೊಡಿಸತಕ್ಕಂಥ ವ್ಯವಸ್ಥೆಯನ್ನು ಅವರು ಮಾಡಿಸುತ್ತಾರೆ.

ಶ್ರೀ ಬಿ.ಶಿವರಾಮು: ಅದು ಮುಂದಕ್ಕೆ ಇನ್ನೂ ಹೇಳುತ್ತೇನೆ. ಅಷ್ಟಕ್ಕೇ ಹೇಳಲಿಲ್ಲ. ನಮ್ಮ ಮಂತ್ರಿಗಳು ಹೇಳುತ್ತಲೇ ಇದ್ದಾರೆ. ಆದರೆ ಚೇರ್‌ಮನ್‌ರು ಕೇಳುತ್ತಾ ಇಲ್ಲ. ಅದು ಗೊತ್ತಿಲ್ಲ ಅವರಿಗೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಶಿವರಾಮುರವರೇ, ಕಂದಾಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಿರುವುದನ್ನು ನಾವು ಸ್ವಾಗತ ಮಾಡೋಣ. ಸರ್ಕಾರದ ಕಮಿಟ್‌ಮೆಂಟ್ ಅದು.

ಶ್ರೀ ಬಿ.ಶಿವರಾಮು: ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದೇ ಇಲ್ಲಿದೆ. ಆಶ್ವಾಸನೆ ಇನ್ನೂ ಕೂಡ ಇಂಪ್ಲಿಮೆಂಟ್ ಆಗಿಲ್ಲ. ಅದಕ್ಕೆ ನಾವು ಪದೇಪದೇ ಒತ್ತಾಯ ಮಾಡಿ ಹೇಳುತ್ತಿದ್ದೇವೆ. ಮುಖ್ಯಮಂತ್ರಿಗಳು ಕೊಟ್ಟಿರತಕ್ಕಂಥ ಆಶ್ವಾಸನೆಯನ್ನು ನಾನು ಇಲ್ಲೇ ಇಟ್ಟುಕೊಂಡಿದ್ದೇನೆ. ಆದರೆ ಇಲ್ಲಿಯವರೆಗೂ ಅದು ಆಗಿಲ್ಲ. ಎರಡು ತಾಲ್ಲೂಕುಗಳಲ್ಲಿ ಒಂಭತ್ತು ಸಾವಿರ ಬಾವಿಗಳಿಗೆ, ಹಾಸನಜಿಲ್ಲೆಯಲ್ಲಿ ಎಂದರೆ, ಬಹಳ

ಸಾಧನೆಯಾಗಿದೆಯಂತೆ. ಅದಕ್ಕೋಸ್ಕರ ನಾವು ಹೇಳುತ್ತಿರುವುದು, ನೀವು ಇದ್ದೀರಿ. ನಾಳೆ ನೀವು ಸಮಿತಿಯಲ್ಲಿ ಏನೊಂದು ಸಭೆ ಸೇರುತ್ತಿದ್ದೀರಿ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ, ಅಲ್ಲಿ ಇದನ್ನು ಒತ್ತಾಯ ಮಾಡತಕ್ಕಂಥ ಕೆಲಸ ಆಗಬೇಕು. ಈಗ ಮಾನ್ಯ ಸದಸ್ಯರಾದ ಶ್ರೀನಿವಾಸ್ ಅವರು ಹೇಳಿದರು. ಅವರ ಕ್ಷೇತ್ರದಲ್ಲೂ ಕೂಡ ಈ ರೀತಿ ತೊಂದರೆಯಾಗಿರುವುದರಿಂದ, ಸರ್ಕಾರದ ಜೊತೆಯಲ್ಲಿರತಕ್ಕಂಥವರು, ಅವರು ಅದಕ್ಕೆ ಹೋರಾಟ ಮಾಡತಕ್ಕಂಥ ಕೆಲಸ ಆಗಬೇಕಾಗುತ್ತದೆ. ನಾನು ಅದಕ್ಕೇ, ತಮ್ಮ ಮೂಲಕ ಇನ್ನೂ ಒಂದು ಮಾತನ್ನು ಹೇಳುತ್ತಿದ್ದೇನೆ. ಏನಾದರೂ ಇವರಿಗೆ, ಕೆ.ಇ.ಬಿ.ಯವರಿಗೆ ಸಾಮಗ್ರಿಗಳನ್ನು ಕೊಡಲಿಕ್ಕೆ ಶಕ್ತಿ ಇಲ್ಲ, ಅಷ್ಟು ನಿಶ್ಯಕ್ತರು ಎನ್ನುವ ತೀರ್ಮಾನಕ್ಕೆ ಅವರು ಬರುವುದಾದರೆ, ಕರೆಂಟ್ ಕೊಡಲಿ. ಕಂಬ, ವೈರ್‌ನ್ನು ರೈತ ತಂದು ಹಾಕಿಕೊಳ್ಳುತ್ತಾನೆ. ಆದರೆ ನಿಮ್ಮಲ್ಲಿ ಇವತ್ತು 20-25 ಸಾವಿರ ದಂಡಹಾಕುವುದು ಇದೆಯಲ್ಲ, ಅದನ್ನು ತಪ್ಪಿಸಿ. ನಾನು ಇದನ್ನು ಪ್ರಾಮಾಣಿಕವಾಗಿ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಬಹಳಷ್ಟು ಸಾರಿ ಇದನ್ನು ಹೇಳುತ್ತಿದ್ದೇನೆ. ರೈತನಿಗೆ ದಂಡವನ್ನು ಈ ಮಟ್ಟಕ್ಕೆ ಹಾಕುವುದನ್ನು ದಯವಿಟ್ಟು ಹಾಕಬೇಡಿ; ಕಂಬ, ವೈರ್‌ಗಳನ್ನು ಅವನೇ ತಂದುಹಾಕಿಕೊಂಡಿದ್ದಾನೆ. ಕನಿಷ್ಟ ನೀವು ಈ ರೀತಿಯಲ್ಲಿ ಬ್ಲಾಕ್ ಅಂಡ್ ಗ್ರೇ ಅಂತ ಡಿಕ್ಲೇರು ಮಾಡಿ, ಅವನಿಗೆ ಕರೆಂಟ್ ಕೊಡುವುದಿಲ್ಲ ಎಂದು ಹೇಳುವುದು ಬೇಡ. ಕೆ.ಇ.ಬಿ.ನಲ್ಲಿ ನಮಗೆ ಶಕ್ತಿ ಇಲ್ಲವೆಂದರೆ, ಈ ಮೂಲಕವಾದರೂ ರೈತ ಹಾಕಿಕೊಳ್ಳುವಂಥಾದ್ದಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುವಂಥ ಕನಿಷ್ಟ ಸೌಜನ್ಯವನ್ನಾದರೂ ಸರ್ಕಾರ ತೋರಿಸಲಿ ಅಂತಹೇಳಿ ತಮ್ಮಮೂಲಕ ಅಧ್ಯಕ್ಷರೇ, ನಾನು ಕೇಳಿಕೊಳ್ಳುತ್ತ ಇವರು ದಂಡನೆಯನ್ನು ಏನು ಪ್ರಕಟಣೆ ಮಾಡಿದ್ದಾರೆ, ಎಂಟೂವರೆ ಸಾವಿರ, ಹದಿಮೂರುವರೆ ಸಾವಿರ, ಇಪ್ಪತ್ತೈದು ಸಾವಿರ ಅಂತ, ಇದನ್ನು ಕಡಿಮೆ ಮಾಡಿ.

ಉಪಾಧ್ಯಕ್ಷರು: ಸಮಯ ಬಹಳವಾಯಿತು.

ಶ್ರೀ ಬಿ.ಶಿವರಾಮು: ಕನಿಷ್ಟ ಒಂದು ಮೂರು ಸಾವಿರ, ಐದು ಸಾವಿರಕ್ಕಾದರೂ ಇಳಿಸಿ, ವ್ಯವಸ್ಥೆ ಮಾಡತಕ್ಕಂಥಾದ್ದನ್ನು ಮಾಡಬೇಕು ಎಂದು ಹೇಳಿ ನಮ್ಮ ಕೆ.ಇ.ಬಿ.ಸಬ್ ಕಮಿಟಿಯಲ್ಲಾದರೂ ಚರ್ಚೆಮಾಡಿ. ಅಥವಾ ತಮ್ಮ ಅತಿವೃಷ್ಟಿ ಅನಾವೃಷ್ಟಿ ಸಮಿತಿಯಲ್ಲಾದರೂ ಚರ್ಚೆಮಾಡಿ ಇದಕ್ಕೆ ಒಂದು ಪರಿಹಾರವನ್ನು ಹುಡುಕಿ, ಆ ಪ್ರದೇಶದ ಜನತೆಗೆ ಇವತ್ತು ಏನು ಅವರು ಅನಾವೃಷ್ಟಿಯಲ್ಲಿ ನರಳುತ್ತಿದ್ದಾರೆ, ಆ ರೈತರಿಗೆ ಒಂದು ಐದು ಪರ್ಸೆಂಟ್, ಹತ್ತು ಪರ್ಸೆಂಟ್ ನೀರಾವರಿ ಆಗತಕ್ಕಂಥಾದ್ದಕ್ಕೆ ವಿದ್ಯುಚ್ಛಕ್ತಿ ಇಲಾಖೆ ಮೂಲಕ, ಮತ್ತೆ ಇತರೆ ಇಲಾಖೆಗಳ ಮೂಲಕ ಸಹಾಯವನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುವುದರ ಮೂಲಕ ಶಾಶ್ವತ ಪರಿಹಾರವನ್ನು ರೂಢಿಸತಕ್ಕಂಥಾದ್ದಕ್ಕೆ ಸರ್ಕಾರ ಚಿಂತನೆ ಮಾಡಬೇಕು ಎಂದು ಕೇಳಿಕೊಂಡು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಸನ್ಮಾನ್ಯ ಅಧ್ಯಕ್ಷರೇ, ಮೊನ್ನೆ ಒಂದು ಮ್ಯಾಗಜಿನ್‌ನಲ್ಲಿ ಓದುತ್ತಿದ್ದೆ. ಭಾರಿ ಸಂಪ್ರದಾಯಸ್ತರು ಅಂತ ಹೇಳಿ ಪಾಕಿಸ್ತಾನದವರನ್ನು ಕರೆಯುವ ಹಿಂದುಗಳು, ಹಸು ಕೊಲ್ಲಬಾರದು, ದೇವರು ಅಂತ ಹೇಳಿಬಿಟ್ಟು ಮೇವು. ಇಲ್ಲದೆ ಸಾಯಿಸುತ್ತಿದ್ದಾರೆ ಅಂತ. ನಾವು ಅವರನ್ನು ಭಾರಿ ಸಂಪ್ರದಾಯಸ್ಥರು ಅಂತ ಕರೆಯುತ್ತೇವೆ. ಇಲ್ಲಿ ನಮ್ಮ ಹಸುಗಳನ್ನು ಕೊಲ್ಲಬಾರದು ಅಂತ ನೀತಿ ಹೇಳಿ ಮೇವಿಲ್ಲದೆ ಸಾಯಿಸುತ್ತಿದ್ದಾರೆ. ಇದರಲ್ಲಿ ಯಾರು ಉತ್ತಮ ಅಂತ ಅವರು ಒಬ್ಬ ಪಾಕೀಸ್ತಾನದ ಒಬ್ಬ ರಿಲಿಜೀಯಸ್ ಮಾಂಕ್ ಕೇಳಿದ್ದಾರೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಬಚ್ಚೇಗೌಡರಿಗೆ, ನಿಂಗಯ್ಯನವರಿಗೆ ಗೊತ್ತು. ಈ ರಾಜ್ಯದಲ್ಲಿ ಎರಡು ಕೋಟಿ ಚಿಲ್ಲರೆ, ಕ್ಯಾಟಲ್ ಪಾಪ್ಯುಲೇಶನ್ ಇತ್ತು. ಎರಡು ಕೋಟಿ ಬರ್ಡ್ಸ್ ಇತ್ತು. ಅಧ್ಯಕ್ಷರೇ, ಇವತ್ತು ಹಕ್ಕಿಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ದನಕರುಗಳಿಗೇನೋ ಮನೆಗೆ ಕರೆದುಕೊಂಡು ಬಂದು, ಊರ ಮುಂದೆ ಇರುವ ಹ್ಯಾಂಡ್‌ಪಂಪ್‌ನಲ್ಲಿ ನಾವು ಏನಾದರೂ ಮಾಡಿ ನೀರು ಕುಡಿಸುತ್ತಿದ್ದೇವೆ. ನಮ್ಮ ನಾಲ್ಕೈದು ಜಿಲ್ಲೆಗಳಲ್ಲಿ ಇವತ್ತು ಯಾವ ಸ್ಥಿತಿ ಬಂದಿದೆ ಎಂದರೆ, ನೀರನ್ನು ಹುಡುಕಿಕೊಂಡು ಎಲ್ಲಿ ಹೋಗಬೇಕು ಎಂದು ಹಕ್ಕಿ ಪಕ್ಷಿಗಳು ಯೋಚನೆ ಮಾಡುತ್ತಿವೆ. ಕೋಳಿ, ಅಕಸ್ಮಾತ್ ಪೌಲ್ಟ್ರಿಗಳು ಇರುವುದರಿಂದ... ಬರ್ತೀನೆ, ನಿಮ್ಮ ವಿಷಯಕ್ಕೆ ಆಮೇಲೆ ಬರುತ್ತೇನೆ ಆಮೇಲೆ ಹೇಳುತ್ತೇನೆ ಅಕಸ್ಮಾತ್ ಒಂದಿಷ್ಟು ಪೌಲ್ಟ್ರಿಫಾರಂ ಏನಾದರು ಅರ್ಬನ್ ಏರಿಯಾದಲ್ಲಿ ಇರುವುದು ಬಿಟ್ಟರೆ, ರೈತನ ಕಸುಬಿಗೆ ಉಪಕಸುಬಾಗಿದ್ದ ಮೂರನೆ ಒಂದು ಭಾಗದಷ್ಟು ವರಮಾನ ಈ ರಾಜ್ಯಕ್ಕೆ, ರಾಷ್ಟ್ರಕ್ಕೆ ಬರುತ್ತಿತ್ತೋ ಅದು ಸರ್ವನಾಶವಾಗುತ್ತಿದೆ. ಪ್ರಮುಖವಾಗಿ ಬಯಲು ಸೀಮೆಯಲ್ಲಿ ಮಳೆ ಕಡಿಮೆ ಪ್ರಮಾಣದಲ್ಲಿ ಬೀಳುತ್ತದೆಯೋ, ಎಲ್ಲಿ ನಾವು ಖುಷ್ಕಿ ಬೆಳೆಯನ್ನು ಬೆಳೆಯುತ್ತಿದ್ದೇವೆ ಅಲ್ಲಿ ಈ ವ್ಯವಸ್ಥೆ ಇತ್ತು. ಇವತ್ತು ನಮಗೆ ನೀರು ಹೊರಗಡೆ ಸಿಗುವಂತಹ ಪರಿಸ್ಥಿತಿ ಇಲ್ಲವೇ ಇಲ್ಲ. ಸುಮಾರು 8- 10- 12 ವರ್ಷಗಳಿಂದ ಶ್ರೀಮತಿ ಲಲಿತಾನಾಯಕ್‌ರವರು ಹೇಳಿದ ಕಾಳಮ್ಮನ ಕಥೆ ನಮಗಾಗಿದೆ. ಸುತ್ತ ಸುಬೀಕ್ಷೆ ಇದೆ. ಮಧ್ಯೆ ನಾವು 4-5 ಜಿಲ್ಲೆ ಸಿಕ್ಕಿ ಹಾಕಿಕೊಂಡು ನರಳುತ್ತಿದ್ದೇವೆ. ಮಾನ್ಯ ಶಿವಕುಮಾರ್ ರವರ ಹತ್ತಿರ ಹೋಗುತ್ತೇವೆ, ಎಷ್ಟು ಖರ್ಚುಮಾಡಿದೆ ಈ ಸರ್ಕಾರ ಎನ್ನುವುದನ್ನು ಶ್ರೀ ಶ್ರೀನಿವಾಸರವರು ಹೇಳಿದ್ದನ್ನು ನಾನು ಅನುಮೋದಿಸುತ್ತೇನೆ. ಅದರ ಜೊತೆಗೆ ಮತ್ತೊಂದು ಮಾಡಿದ್ದಾರೆ. ಅದೇನೆಂದರೆ ಸುಮಾರು 230 ಕೋಟಿ ರೂ.ಗಳಷ್ಟು ಕ್ರಾಪ್ ಪ್ಯಾಟರ್ನ್ ವೈಲೆಟ್ ಮಾಡಿದವರದು ಪೆನಾಲ್ಟಿ ಇದೇ ಸದನದಲ್ಲಿ ರದ್ದು ಮಾಡಿದ್ದಾರೆ, ವೇವ್‌ಮಾಡಿದ್ದಾರೆ. ನಮಗೆ ಇವತ್ತು ಕೆ.ಇ.ಬಿ.ಕರೆಂಟ್ ಕೊಡಿ ಎಂದರೆ ಇವತ್ತು ಕುಳಿತುಕೊಂಡು ಕೊಡಬೇಕೋ ಬೇಡವೋ, ಕೊಟ್ಟರೆ ರೈತರ ದುಡ್ಡಿನಲ್ಲಿ ಕೊಡಬೇಕೋ ಅಥವಾ ಆರ್.ಇ.ಸಿ.ಯಿಂದ ರೀಫೈನಾನ್ಸ್ ಮಾಡಿಸಬೇಕೋ ಹೇಗೆ ಎಂದು ಲೆಕ್ಕಾಚಾರ ಮಾಡುತ್ತಿದ್ದಾರೆ. ಯಾರನ್ನು ಕೇಳಿ ಈ 230 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೀರಿ? ಪರ್‌ಎಕರ್ ಇನ್‌ವೆಸ್ಟ್‌ಮೆಂಟ್ ಸರ್ಕಾರದ್ದು ಅಲ್ಲಿಗೆ ಎಷ್ಟು ಇದೆ? ನಾವು ಯಾವ ಪಾಪ

ಮಾಡಿ ಈ ರಾಜ್ಯದಲ್ಲಿ ನಿಂತಿದ್ದೇವೆ? ಬಯಲು ಸೀಮೆಯಲ್ಲಿರುವವರು ಎಂದು ಕೇಳಿದರೆ ಉಸಿರು ಕಟ್ಟಿದ ರೀತಿ ಆಗುತ್ತದೆಯಂತೆ; ಏಕೆಂದರೆ 200 ವರ್ಷ ಬಂದು ಬಿಡುತ್ತದೆ, ನೀರು ಉಪಯೋಗಿಸಿಕೊಳ್ಳಬೇಕು ಎನ್ನುವ ಭೂತವನ್ನು ನಮ್ಮ ಎದುರಿಗೆ ನಿಲ್ಲಿಸಿ ನಾಳೆ ಬಾ ನಾಳೆ ಬಾ ಎಂದು ಗೋಡೆ ಮೇಲೆ ಬರೆಯುವ ರೀತಿಯಲ್ಲಿ...ನಾಳೆ ಬರುವುದಿಲ್ಲ, ಅದು ಮುಗಿಯುವುದಿಲ್ಲ, ಹೀಗಾಗಿ ನಾವು ಮಧ್ಯೆ ಸಿಕ್ಕಿ ಹಾಕಿಕೊಂಡು ಸುಮಾರು 50-60 ಮತ ಕ್ಷೇತ್ರದ ಎಂ.ಎಲ್.ಎ.ಗಳು ಜನಗಳಿಗೆ ಮುಖ ತೋರಿಸುವ ಹಾಗಿಲ್ಲ. ಇವರಿಗೆ ನಿಜವಾದ ಪವರ್ ಆಫ್ ಅಟಾರ್ನಿ ಕೊಟ್ಟು.. ಅವರು ಯಾರು ಎಂದು ಗೊತ್ತಾಗಬೇಕು.

ಶ್ರೀ ಹೆಚ್.ಶಿವಪ್ಪ: ಅದು ನಮಗೆ ಅನ್ವಯವಾಗುತ್ತದೆ, ಏಕೆಂದರೆ ಕ್ರಾಪಿಂಗ್ ಪ್ಯಾಟರ್ನ್‌ನಲ್ಲಿ ರೈತ...ಸ್ವಾಮಿ ಇನ್ನೊಬ್ಬರಿಗೆ ಕೊಟ್ಟಿರುವುದನ್ನು ಕೊಡಬೇಡಿ ಎಂದು ಕೇಳುವುದರ ಬದಲು ನಮಗೆ ಇದನ್ನು ಕೊಡಿ ಎಂದು ಹೇಳಬೇಕೆ ಹೊರತು ಅವರಿಗೆ ಏಕೆ ಕೊಟ್ಟಿದ್ದೀರಿ ಎಂದರೆ, ಅವರು ರೈತರೇ ಅವರಿಗೆ ಸಂಬಂಧಪಟ್ಟಿರುವುದು...

(ಗೊಂದಲ)

ಶ್ರೀ ಹೆಚ್.ಶಿವಪ್ಪ: ಅದು ಕ್ರಾಪಿಂಗ್ ಪ್ಯಾಟರ್ನ್ ವೈಲೇಷನ್ ಆಗಿದೆ,..

ಶ್ರೀ ಜೆ.ಸಿ.ಮಾಧುಸ್ವಾಮಿ: ಶಿವಪ್ಪನವರೆ ನಾನು ಅಲ್ಲಿಗೆ ಬರುತ್ತೇನೆ, ಸ್ವಲ್ಪ ಕುಳಿತುಕೊಂಡು ನಾನು ಹೇಳುವುದನ್ನು ಪೂರ್ತಿ ಕೇಳಿ ನಂತರ ತಾವು ಕಾಮೆಂಟ್ಸ್ ಮಾಡಿ. ಕ್ರಾಪಿಂಗ್ ಪ್ಯಾಟರನ್ ವೈಲೇಟ್ ಮಾಡುವ ರೈತನಿಗೆ, ದಂಡವನ್ನು ತೆಗೆದು ಹಾಕಿರುವುದು ನಾನು ತಪ್ಪು ಎಂದು ನಾನು ಮಾತನಾಡುವುದಿಲ್ಲ. ಮತ್ತೊಂದು ಕಡೆ ಒಬ್ಬ ರೈತ ಬದುಕುತ್ತಾನೆ, ಸ್ವಂತ ಬಂಡವಾಳದಲ್ಲಿ ಬೋರ್ ಹಾಕುತ್ತಾನೆ, ಪಂಪ್ ಹಾಕುತ್ತಾನೆ, ನೀರು ಬೀಳುತ್ತದೆಯೋ ಇಲ್ಲವೋ ಎಂದು ಇಡೀ ರಾತ್ರಿ ಮೋಟರ್ ಪಾಸ್ಟ್ ರಿಗ್ ಬೋರ್ ಕೊರೆಯುವುದನ್ನು ಚಾಪೆ ಹಾಕಿಕೊಂಡು ಕಾದುಕೊಂಡು ನಿಂತುಕೊಳ್ಳುತ್ತಾನೆ. ಅಕಸ್ಮಾತ್ ನೀರು ಬಿದ್ದರೆ ಪುಣ್ಯ ಎಂದು ತಿಳಿದುಕೊಂಡು ಗಂಗೆ ಬಂದು ಬಿಟ್ಟಳು ಎಂದು ಪೂಜೆ ಮಾಡುತ್ತಾನೆ. ಫೇಲಾದರೆ ಮತ್ತೊಂದು ಬೋರ್ ಕೊರೆಯಿರಿ ಎಂದು ಹೇಳುತ್ತಾನೆ. ಬಹುಶಃ ಈ ವಿಷಯ ತಮಗೆ ಗೊತ್ತಿರಬೇಕು ಏಕೆಂದರೆ ತುಮಕೂರು ಜಿಲ್ಲೆ ಅರಿಸೀಕೆರೆ ಅಥವಾ ಚನ್ನರಾಯಪಟ್ಟಣ ಭಾಗವಿರುವ ಹಾಸನ ಜಿಲ್ಲೆ, ಕಡೂರು ಭಾಗವಿರುವ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇವತ್ತು ಖುಷ್ಕಿ ಬೆಳೆಯ ಜೊತೆಗೆ ಬಾಗಾಯಿತ್ ಬೆಳೆ ಇದೆ. ತೆಂಗು, ಅಡಿಕೆ ಇದೆ. ಒಂದು ವರ್ಷ ನಮಗೆ ಏನಾದರೂ ನೀರು ನಿಂತುಹೋಗಿ ತೊಂದರೆ ಬಂತು ಎಂದರೆ ಸುಮಾರು 20 ವರ್ಷಬೇಕು ಆ ತೆಂಗಿನ ಮರಗಳನ್ನು ಬೆಳೆದು ನಿಲ್ಲಿಸುವುದಕ್ಕೆ. ಕನಿಷ್ಟ 10 ವರ್ಷವಾದರೂ ಅಡಿಕೆ ಮರ ಬೆಳೆಯುವುದಕ್ಕೆ ಕಾಲಾವಕಾಶಬೇಕು. ಇದು ಯಾವಾಗ ಎಂದರೆ ಎಲ್ಲಾ ಸಮಗ್ರವಾಗಿ ನಡೆದುಕೊಂಡು ಹೋದರೆ ಮಾತ್ರ.. ಆದರೆ ಅದು ಕೂಡ ಇವತ್ತು ಅದು

ಕಷ್ಟವಾಗುವಂತಹ ಪರಿಸ್ಥಿತಿಗೆ ಬಂದಿದೆ. ಒಂದು ಕಡೆ ಅನಿಮಲ್ ಅಥವಾ ಕ್ಯಾಡಲ್ ಪಾಪುಲೇಷನ್ ನಾಶವಾಗುತ್ತಿದೆ, ಮತ್ತೊಂದು ಕಡೆ ಈ ರಾಜ್ಯದ ಪ್ರಸ್ಟೀಜಿಯಸ್ ಕ್ರಾಪ್ ಏನಿತ್ತು ತೆಂಗು, ಅಡಿಕೆ, ಇತ್ತು, ಚಿಕ್ಕಮಗಳೂರಿನ ಏಲಕ್ಕಿ ಇತ್ತು, ಇವೆಲ್ಲವೂ ಸರ್ವನಾಶವಾಗುವ ಸ್ಥಿತಿ ನಿರ್ಮಾಣವಾಗಿದೆ. ಈ ಕಡೆ ತಾವು ಗಮನಹರಿಸಬೇಕು. ಏಕೆಂದರೆ ನಮಗೆ ಅನ್ಯ ಮಾರ್ಗವೇ ಇಲ್ಲ, ಭೂಗರ್ಭದಲ್ಲಿರುವ ನೀರನ್ನು ನಾವು ಮೇಲೆ ಎತ್ತಿಹಾಕಬೇಕಾಗಿದೆ. ಒಂದು ಕೊಳವೆ ಬಾವಿ ವಿಫಲವಾದರೆ ಮತ್ತೊಂದು ಕೊಳವೆ ಬಾವಿಯನ್ನು ಹಾಕಲೇಬೇಕಾಗಿದೆ. ಇದಕ್ಕೆ ಪವರ್ ಸಪ್ಲೈ ಬೇಕಾಗುತ್ತದೆ. ಇಂತಹ ಸ್ಥಿತಿ ಒಂದು ಕಡೆ ಇರುವಾಗ ಮತ್ತೊಂದು ಕಡೆ ನಾವು ಸಾರಾಸಗಟಾಗಿ ಮಾತನಾಡುತ್ತೇವೆ. ಎಷ್ಟು ನೀರು ವ್ಯಯ ಮಾಡುತ್ತೇವೆ, ಅನಾವಶ್ಯಕವಾಗಿ ಖರ್ಚು ಆಗುತ್ತಿದೆ, ಎಷ್ಟು ನೀರನ್ನು ಬಳಕೆ ಮಾಡಬಹುದಾಗಿತ್ತು... ಕನಿಷ್ಠ ಹೇಮಾವತಿ ನಾಲೆ ಹರಿಯಬೇಕಾದರೆ ಎಡದಂಡೆಗೆ ಎಷ್ಟು ಕಿ.ಮೀ. ನೀರು ಕೊಡಬಹುದಾಗಿತ್ತು ಎಂದು ಸ್ವಲ್ಪ ಯೋಚನೆ ಮಾಡಿದರೆ, ಇದರಲ್ಲಿ 50 ಮತಕ್ಷೇತ್ರಗಳ ಪೈಕಿ 20-30 ಮತಕ್ಷೇತ್ರಗಳ ಸಮಸ್ಯೆಯನ್ನು ಮಾನ್ಯ ಕಂದಾಯ ಸಚಿವರು ಶಾಶ್ವತವಾಗಿ ಬಗೆಹರಿಸಬಹುದು. ಸರ್ಕಾರದವರು ರೈತನಿಗೆ ಉಂಟಾಗುವ ನಷ್ಟವನ್ನು ಲೆಕ್ಕಕ್ಕೆ ತೆಗೆದುಕೊಂಡರೆ.. ಅದು ನಮಗೆ ಸೇರಿದ್ದು, ಯಾರೋ ಮನೆ ಹಾಳು ಮಾಡಿಕೊಳ್ಳುತ್ತಾರೆ, ಸಾಲ ತೆಗೆದುಕೊಳ್ಳುತ್ತಾರೆ, ಕೆ.ಇ.ಬಿ.ಮುಂದೆ ಅರ್ಜಿ ಹಿಡಿದುಕೊಂಡು ನಿಂತು ಕೊಳ್ಳುತ್ತಾರೆ, ಅವನು ಈ ದೇಶದ ಒಬ್ಬ ಪ್ರಜೆ ಎಂದು ತಿಳಿದುಕೊಂಡರೆ ತಾವು ಹಾಕುವ ಬಂಡವಾಳ ಬಹಳ ದೊಡ್ಡದು ಎಂದು ಎನಿಸುವುದಿಲ್ಲ. ಆದ್ದರಿಂದ ಆ ಕಡೆ ಒಂದು ಪರಿಹಾರ ಆಗಬೇಕಾಗಿತ್ತು ಇನ್ನೊಂದು ಕಡೆ ಏನಾಗಬೇಕಾಗಿದೆ ಎಂದರೆ ಮಾನ್ಯ ಬಚ್ಚೇಗೌಡರು ಅಲ್ಲಿಗೆ ಹೋಗಿ ಬಂದಿದ್ದಾರೆ ಅವರಿಗೆ ಗೊತ್ತಿರುವ ಹಾಗೆ, ತಿಪಟೂರಿನವರಿಗೆ ಕುಡಿಯುವುದಕ್ಕೆ ನೀರು ಕೊಟ್ಟು ಸುಮಾರು ಇವತ್ತಿಗೆ 23 ದಿನವಾಗಿದೆ. ಇದಕ್ಕಾಗಿ ಮಾನ್ಯ ಬಚ್ಚೇಗೌಡರನ್ನು ನಾನು ಅಭಿನಂದಿಸುತ್ತೇನೆ. ಮಾನ್ಯ ಸಚಿವರು ಮೋಟರ್ ಆನ್ ಮಾಡಿಸಿ ಕೆರೆಗೆ ಪಂಪ್ ಮಾಡಿ ಎಂದು ಹೇಳಿದ್ದಾರೆ, ಇವತ್ತು ಅಲ್ಲಿ ಏನಾಗಿದೆ ಎಂದರೆ 7-8 ದಿವಸದಿಂದ 80 ಹೆಚ್.ಪಿ ಮೋಟರ್ ರನ್ ಆಗುತ್ತಿದೆ, ಆದರೆ ನೀರನ್ನು ಇಡೀ ಕೆರೆಯೇ ಕುಡಿಯುತ್ತಿದೆ ಇನ್ನು 8-10 ದಿವಸ ನೀವು ಪಂಪ್ ಮಾಡಿಸಿದರೂ ಆ ಕೆರೆಯೇ ನೀರು ಕುಡಿಯುತ್ತದೆ. ಇದು ಕಟುಸತ್ಯವಾದ ಮಾತು. ಏಕೆಂದರೆ ಆ ಕೆರೆ ಬಹಳ ಅಗಲವಾಗಿರುವುದರಿಂದ ಹಾಗೂ ಬಹಳ ಬೆಂಡಾಗಿ ಬಳಲಿರುವ ಭೂಮಿ ಅದು. ಅದಕ್ಕಾಗಿ ನಾನು ಮೊನ್ನೆ ಹೋಗಿ ನಾಳೆಯಿಂದ ಡೈರೆಕ್ಟಾಗಿ ತಿಪಟೂರಿಗೆ ನೀರು ಕೊಟ್ಟು ಬಿಡಿ ಸಧ್ಯಕ್ಕೆ ನೀರು ಕುಡಿದು ಬದುಕಿರಲಿ, ನಂತರ ಅವರಿಗೆ ನೀವು ಪುಷ್ಠಿ ಕೊಡುವ ಕಾರ್ಯಕ್ರಮ ಮಾಡಿದರಾಯಿತು ಎಂದು ಹೇಳಿದ್ದೇನೆ. ಈ ವಿಷಯದ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗಿದೆ, ಏಕೆಂದರೆ ನರಳುತ್ತಿರುವ ಜಿಲ್ಲೆಗಳಿಗೆ ಏನಾದರೂ ಒಂದು ಕಾರ್ಯಕ್ರಮವನ್ನು ರೂಪಿಸುವುದು ಈ ಸರ್ಕಾರದ ಜವಾಬ್ದಾರಿ ಅಲ್ಲವೆ? ಈ ಸದನದ ಜವಾಬ್ದಾರಿ ಅಲ್ಲವೆ? ಎಷ್ಟು ದಿವಸದಿಂದ ಈ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ, ಎಷ್ಟು ಹಣವನ್ನು ಇದಕ್ಕಾಗಿ ನಾವು

ವ್ಯಯ ಮಾಡಿದ್ದೇವೆ? ಇದು ಯಾವದೂ ಗೊತ್ತಿಲ್ಲ. ಅಂದರೆ ನಾವು ಯಾರೂ ಈ ಭಾಗದಲ್ಲಿ ಬದುಕಿರುವಂತಹ ಜನರು ಈ ರಾಜ್ಯಕ್ಕೆ ಸಂಬಂಧಪಟ್ಟವರಲ್ಲವೆ? ಮಾನ್ಯ ಬಾಲಕೃಷ್ಣಾರವರು ನಮ್ಮನ್ನು ಕೇಳುತ್ತಿದ್ದರು ಏಕೆ ನೀವು ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಮೀಟಿಂಗ್‌ಗೆ ಬರುವುದಿಲ್ಲ ಎಂದು. ಅದಕ್ಕೆ ನಾನು ಹೇಳಿದೆ ಏಕೆ ಬರಬೇಕು ಚೀರೋಟಿ ತಿನ್ನುವುದಕ್ಕೆ ಪಲಾವ್ ತಿನ್ನುವುದಕ್ಕೆ ಬರಬೇಕೇ? ನಾವು ಸುಮಾರು ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ 2-3 ಲಕ್ಷ ಆ್ಯಕ್ಷನ್ ಪ್ಲಾನ್ ಕೊಡಬೇಕಂತೆ, ನೋಡಿ ಮಲೆನಾಡು ಭಾಗಗಳಲ್ಲಿ ರಸ್ತೆ ಹಾಳಾಗಿದೆ, ನಮ್ಮಲ್ಲಿ ಎಷ್ಟೋ ಜನ ಉಪವಾಸ ಬಿದ್ದು ನರಳುತ್ತಿದ್ದಾರೆ. ಹೋಗಲಿ ಹೇಗೋ ನೀರು ಕುಡಿಯೋಣ ಅಂದರೆ ಅದೂ ಕೂಡ ದೊರೆಯುತ್ತಿಲ್ಲ. ಏನು ಒಂದು ತಪಸ್ಸು ಮಾಡಿ ಋಷ್ಯ ಶೃಂಗನನ್ನು ಇಲ್ಲಿಗೆ ಕರೆದುಕೊಂಡು ಬರುವುದಕ್ಕೆ ಒಬ್ಬಳು ಸುರದ್ರೂಪಿ ನಮಗೆ ದೊರಕುತ್ತಾಳೆ ಇವಳು ಅವನ ತಪಸ್ಸು ಭಂಗ ಮಾಡಿ, ಕರೆದುಕೊಂಡು ಬರುತ್ತಾಳೆ. ಎಂದು ನಾವು ಕಾಯುತ್ತಲೇ ಇದ್ದೇವೆ. ಋಷಿಶೃಂಗನೂ ಇಲ್ಲ ಸ್ವುರದ್ರೂಪಿಯೂ ಇಲ್ಲ, ನಮಗೆ ನೀರು ಇಲ್ಲ, ನಾವು ಬದುಕಿಯೂ ಇಲ್ಲ. ಇಂತಹ ಒಂದು ಅವಸ್ಥೆಯಿಂದ ನಮ್ಮನ್ನು ಯಾರು ಆಚೆಗೆ ತರಬೇಕು?... ಋಷ್ಯಶೃಂಗದ ಋಷಿ, ಶಿವಪ್ಪನವರೇ ತಮಗೆ ಏನಾದರೂ ಇತಿಹಾಸ, ಸಾಹಿತ್ಯದ ಕಲೆ ಇದ್ದರೆ ಮಾತನಾಡಬೇಕು, ವ್ಯವಹಾರದವರು ಇದಕ್ಕೆಲ್ಲಾ ಬಾಯಿ ಹಾಕಬಾರದು. ನನಗೆ ಶಿವಪ್ಪನವರ ಬಗ್ಗೆ ಜಾಸ್ತಿ ಗೊತ್ತಿಲ್ಲ, ಆದ್ದರಿಂದ ನಾನು ಮಾತನಾಡುವುದಿಲ್ಲ.. ಬರಗಾಲದ ದವಡೆಯಲ್ಲಿ ಕೋಲಾರ ಹಾಗೂ ತುಮಕೂರು ಜಿಲ್ಲೆ ಮಾತ್ರ ಸುಮಾರು 10-12 ವರ್ಷಗಳಿಂದ ಬಂದಿವೆ. ಒಂದು ಕಡೆ ನಾವು ಅಗ್ರೀಕಲ್ಚರ್ ಬೆಳೆ ಬೆಳೆಯುತ್ತೇವೆ, ಕೋಲಾರ್ ಜಿಲ್ಲೆಯವರು ಏನಾದರೂ ಹಣ್ಣು, ತರಕಾರಿ ಬೆಳೆಯದೆ ಹೋದರೆ, ಹಾಲು ಉತ್ಪಾದಿಸದೇ ಹೋದರೆ ಈ ರಾಜ್ಯದ ಜನರ ಹೊಟ್ಟೆ ತುಂಬುವುದಿಲ್ಲ. ಕೇವಲ ನಾವೇ ನರಳುತ್ತಿವೆ, ಬಳಲುತ್ತಿವೆ, ಎಂದು ತಾವು ತಿಳಿದುಕೊಳ್ಳಬಾರದು. ಇದನ್ನು ಏನಾದರೂ ಮಾಡಿ ಸರ್ಕಾರ ಉಳಿಸಬೇಕು ಅಂತ ತಾವು ಭಾವಿಸಿದ್ದರೆ, ಸಮಗ್ರ ಕರ್ನಾಟಕದ 4-5 ಕೋಟಿ ಜನಸಂಖ್ಯೆಯ ಹಿತರಕ್ಷಣೆ ತಮ್ಮ ಜವಾಬ್ದಾರಿ ಅಂತ ತಮಗೆ ಇದ್ದರೆ ಈ ಬಗ್ಗೆ ತಮಗೆ ಏನಾದರೂ ಕನಿಷ್ಟ ಭಾವನೆ ಇದ್ದರೆ, ಇದರ ಬಗ್ಗೆ ತಾವು ಚಿಂತನೆ ಮಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು 18ನೇ ತಾರೀಖಿನ ದಿನ ನಮ್ಮನ್ನೆಲ್ಲಾ ಕರೆದು ಒಂದು ಸಭೆ ಮಾಡಿದರು. ಒಳ್ಳೆಯದನ್ನೇನೋ ಮಾತನಾಡಿದರು ಆದರೆ ಆ ಪ್ರಯೋಜನ ಮಾತ್ರ ನಮಗೆ ಇದುವರೆವಿಗೂ ಕಂಡು ಬರುತ್ತಿಲ್ಲ. ನಮ್ಮ ಕ್ಷೇತ್ರದಲ್ಲಿ ಒಂದು ದಿವಸಕ್ಕೆ ಸುಮಾರು 4-5 ಬೋರ್‌ವೆಲ್‌ಗಳು ಇವತ್ತು ಡ್ರೈ ಆಗುತ್ತಿವೆ. ಬೋರ್‌ವೆಲ್‌ಗಳನ್ನು 300 ಅಡಿ 400 ಅಡಿ ಕೊರೆದರೂ ಪ್ರಯೋಜನವಾಗಲ್ಲ. ಕನಿಷ್ಠ ಪಕ್ಷ 500 ಅಡಿಗಳಿಗಿಂತ ಹೆಚ್ಚಿಗೆ ಬೋರ್‌ವೆಲ್‌ಗಳನ್ನು ಕೋಲಾರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಕೊರೆಯಬೇಕಾಗಿದೆ. ಇದರ ಜೊತೆಗೆ ಹಳ್ಳಿಗಳ ಪಕ್ಕದಲ್ಲಿಯೇ ಬೋರ್‌ವೆಲ್ ಕೊರೆಯವುದಕ್ಕೆ ಪಾಯಿಂಟ್ ಸಿಕ್ಕುವುದಿಲ್ಲ. ಆ ಪಾಯಿಂಟ್‌ನಿಂದ ಸುಮಾರು ಅರ್ಧ, ಅಥವಾ ಮುಕ್ಕಾಲು ಕಿ.ಮೀ.ನಿಂದ ದೂರ

ಕೊರೆದು ಏನಾದರೂ ಮಾಡಿ ಗ್ರಾಮದ ಹತ್ತಿರ ತರಬೇಕು. ಆ ಕಾರ್ಯಕ್ರಮವನ್ನು ತಾವು ತ್ವರಿತವಾಗಿ ಮಾಡಬೇಕು. ಇವತ್ತು ಕನಿಷ್ಠ ಒಂದೊಂದು ತಾಲ್ಲೂಕಿಗೆ ಸುಮಾರು 70ರಿಂದ 100 ಬೋರ್‌ವೆಲ್‌ಗಳನ್ನು ಕೊರೆಯಬೇಕಾಗಿದೆ, ಯಾವುದೆಂದರೆ ಈಗಾಗಲೇ ಚಾಲನೆಯಲ್ಲಿದ್ದು ಬೋರ್‌ವೆಲ್‌ಗಳು ಡ್ರೈ ಆಗಿರುವಂತಹವುಗಳನ್ನು ರೀಪೇರಿ ಮಾಡಬೇಕಾಗಿದೆ, ನಾನು ಪುನಃ ಹೊಸ ಬೋರ್‌ವೆಲ್‌ಗಳ ಬಗ್ಗೆ ಮಾತನಾಡುತ್ತಿಲ್ಲ. ಇವತ್ತು ಸುಮಾರು ಒಂದೊಂದು ತಾಲ್ಲೂಕಿನಲ್ಲಿ ನೀರು ಇಲ್ಲದಂತಹ ಹಳ್ಳಿಗಳು 15 ರಿಂದ 20ರವರೆಗೆ ಇವೆ. ನೀರು ಕಡಿಮೆಯಾಗಿದೆ ಎನ್ನುವುದು ನಿಜ, ಆದರೆ ಅದಕ್ಕಿಂತ ಎರಡರಷ್ಟು ಸಂಖ್ಯೆ ಸಿಗುತ್ತದೆ. ಬೆಳಿಗ್ಗೆಯಿಂದ ಸಂಜೆಯವರಿಗೆ ಪಂಪ್ ಮಾಡಿದರು ಟ್ಯಾಂಕ್ ತುಂಬುವುದಿಲ್ಲ, ತುಮಕೂರು ಕೋಲಾರ್ ಜಿಲ್ಲೆಗಳಲ್ಲಿ ಪವರ್ ಕಟ್ ತೆಗೆದಿಲ್ಲ, ನಮಗೆ ಇಲ್ಲಿ ದಿನಕ್ಕೆ 16 ಗಂಟೆ ಪವರ್ ತೆಗೆಯುತ್ತಾರೆ. 8 ಗಂಟೆ ಆಫ್ ಮಾಡುತ್ತಾರೆ, ಉಳಿದ 8 ಗಂಟೆಯಲ್ಲಿ ಎರಡು ಫೇಸ್‌ನಲ್ಲಿ ತೆಗೆಯುತ್ತಾರೆ. ಇನ್ನು 8 ಗಂಟೆಯಲ್ಲಿ ನೀರಿನ ಟ್ಯಾಂಕ್ ತುಂಬುವುದಿಲ್ಲ. ನೀವು ಯಾವುದೇ ಕ್ಷೇತ್ರದಲ್ಲಿ ಯೋಚನೆ ಮಾಡುವುದಾದರೆ.. ಮನೆಯಲ್ಲಿರುವ ಟಿ.ವಿ.ಗಳನ್ನು ತೆಗೆದು ಹಾಕಿ ಎಂದು ಮನೆಯಲ್ಲಿರುವ ಹೆಣ್ಣು ಮಕ್ಕಳು ಮಾತನಾಡುತ್ತಾರೆ. ಎಲ್ಲಾ ಕಡೆ ಧಾರಕಾರವಾದ ಮಳೆ, ಉದಾಹರಣೆಗೆ ಬೆಳಿಗ್ಗೆ ಪೇಪರ್ ಓದಿದರೆ, ಲಿಂಗನಮಕ್ಕಿ ಡ್ಯಾಮ್, ಸೂಪ್‌ಡ್ಯಾಮ್, ವರಾಹಿ ಇಷ್ಟು ಇದೆ ಎಂದು ಅಂಕಿಅಂಶಗಳಲ್ಲಿ ಕೊಟ್ಟಿರುತ್ತಾರೆ. ಇದು ಬೇರೆ ದುರಂತ ನಮಗೆ ಏಕೆಂದರೆ ಎಲ್ಲ ಚೆನ್ನಾಗಿದ್ದರೆ ನಮಗೆ ಏಕೆ ಇದು ವಕ್ರಿಸಿಕೊಂಡಿದೆ? ನೀವು ಟಿ.ವಿ.ಯನ್ನು ನೋಡುವುದಾದರೆ ಅವರು ನಕ್ಷೆಯ ಮೇಲೆ ಕಡ್ಡಿಯಿಡುವ ಕಡೆಯಲ್ಲೆಲ್ಲಾ ಬರಿ ಮೋಡವೆ ಕವುಚಿಕೊಂಡಿರುತ್ತದೆ. ನಮಗೆ ಏನಾಯಿತು? ಏಕೆಂದರೆ ಟಿ.ವಿ.ಯಲ್ಲಿ ನಾವು ಕಾಣುವುದಿಲ್ಲ ಅದರ ಜೊತೆಗೆ ನಮ್ಮ ಭಾಗದಲ್ಲಿ ಡ್ಯಾಮ್‌ಗಳು ಯಾವುದೂ ಇಲ್ಲ, ನದಿನೂ ಇಲ್ಲ, ನಾವು ನಿಮಗೆ ನದಿ ಹರಿಸಿ ಎಂದು ಕೇಳುವುದಿಲ್ಲ, ಆದರೆ ನಮ್ಮ ಕಣ್ಣೀರನ್ನು ಒರೆಸಿ ಬಿಟ್ಟರೆ ಸಾಕು ಎಂದು ಕೇಳುತ್ತೇವೆ. ಕೋಲಾರ ಹಾಗೂ ತುಮಕೂರಿನ ಜನರ ಕಣ್ಣೀರನ್ನು ಒರೆಸುವುದಕ್ಕೆ ಏನು ಮಾಡಬೇಕು ಎಂದರೆ, ಮಾನ್ಯ ಕಂದಾಯ ಸಚಿವರಲ್ಲಿ ಕೇಳಿಕೊಳ್ಳುವುದು ಇಷ್ಟೇ, ನಮಗೆ ಕನಿಷ್ಟ ಕುಡಿಯುವ ನೀರು ಕೊಡುವಂತಹ ಒಂದು ವ್ಯವಸ್ಥೆಯನ್ನು ತಾವು ಮಾಡಿಕೊಡಬೇಕು. ನಾನು ಇಷ್ಟು ಮಾಡಿ, ಅಷ್ಟು ಮಾಡಿ ಎಂದು, ಕೇಳುವುದಿಲ್ಲ ಏಕೆಂದರೆ ನಮ್ಮ ಮಾತು ಅವರು ಕೇಳುವುದಿಲ್ಲ, ನಿಮ್ಮ ಜಿಲ್ಲಾಧಿಕಾರಿಗಳ ಮಾತನ್ನೇ ಕೇಳಿ ನೀವು ಸರ್ಕಾರ ನಡೆಸುತ್ತಿರುವುದರಿಂದ ಈಗಲೂ ನೀವು ಅವರ ಮಾತು ಕೇಳಿ, ಅವರು ನಮಗೆ ಕನಿಕರ ತೋರಿಸಿಯಾದರು ನಮಗೆ ನೀರು ಕೊಡಲಿ, ಪರವಾಗಿಲ್ಲ. ನಾವೇ ನಿಮ್ಮ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳುತ್ತೇವೆ. ಅವರನ್ನು ಕರೆಸಿ ಎಷ್ಟು ಬೋರ್ ಅವಶ್ಯಕತೆ ಇದೆ? ಯಾವ ಊರಿನಲ್ಲಿ ಅವಶ್ಯಕತೆ ಇದೆ? ಎನ್ನುವುದನ್ನು ಅವರಿಗೆ ಡಿಸ್‌ಕ್ರೀಷನ್ ಕೊಟ್ಟಾದರೂ ಮಾಡಿ. ಹೋದ ವರ್ಷದ್ದು ನಮ್ಮ ತುಮಕೂರು ಜಿಲ್ಲೆದು 8 ಲಕ್ಷ ಚಿಲ್ಲರೆ ಪೇಮೆಂಟ್ ಬಾಕಿ ಇದೆ. ನಾವು ಅಲ್ಲಿನ ಡಿ.ಸಿ.ಯವರಿಗೆ ಒಂದೇ ಸಮನಾಗಿ ಒತ್ತಡ ತಂದು ಬೋರ್ ಇಲ್ಲ ಕೊರೆಸಿ ಅಂತ

ಹೇಳಿದೆವು. ಇದಕ್ಕೆ ನಮಗೆ ಅವರು ಏನು ಹೇಳಿದರು ಎಂದರೆ ''ಸ್ವಾಮಿ ಕಳೆದು ವರ್ಷದ್ದೇ 8 ಲಕ್ಷದ್ದು ನಾವು ಪೇಮೆಂಟ್ ಮಾಡಬೇಕಾಗಿರುವುದರಿಂದ ಈ ವರ್ಷಕ್ಕೆ ಹಣ ಕೊಡುವವರು ಯಾರು? ಏನಾದರೂ ಒಂದು ನಿರ್ಧಿಷ್ಟವಾದ ಒಂದು ಡೆರೆಕ್ಷನ್ ಬರದೆ ನಾವು ಮಾಡುವುದಕ್ಕಾಗುವುದಿಲ್ಲ'' ಎನ್ನುತ್ತಾರೆ. ಆದ್ದರಿಂದ ತಾವು ಈ ಕಡೆ ಹೆಚ್ಚು ಒತ್ತು ಕೊಡಬೇಕು, ಎರಡನೇಯದು ಪ್ರಮುಖ ಹಳ್ಳಿಗಳಲ್ಲಿ ಏನು ಬೋರ್‌ವೆಲ್‌ನಿಂದ ಟ್ಯಾಂಕ್‌ಗಳಿಗೆ ನೀರನ್ನು ಪಂಪ್ ಮಾಡುತ್ತಿದ್ದರೋ, ಅಂತಹ ಕಡೆಗಳಲ್ಲಿ ಸುಮಾರು 30ರಿಂದ 40 ಬೋರ್‌ವೆಲ್‌ಗಳು ಇವತ್ತು ಡ್ರೈ ಆಗಿವೆ. ಇವು ನಿಮ್ಮ ರಿಲೀಫ್ ನಾರಮ್ಸ್ ಅಡಿಯಲ್ಲಿ ಬರುವುದಿಲ್ಲ. ಆದ್ದರಿಂದ ಜಿಲ್ಲಾ ಪಂಚಾಯಿತಿಗೆ ಹೇಳಿ, ಅಥವಾ ತಮ್ಮ ದುಡ್ಡಿನಿಂದ ಕೊಡಿಸಿ ಆ ಊರಿನ ವಾಟರ್ ಸಪ್ಲೈಯನ್ನೂ ರೆಸ್ಟೋರ್ ಮಾಡಬೇಕು. 2000-2500-3000 ಜನಸಂಖ್ಯೆಯಿರುವ ಗ್ರಾಮಗಳಲ್ಲಿ ಇವತ್ತು ಟ್ಯಾಂಕ್ ತುಂಬುತ್ತಿಲ್ಲ, ನೀರು ಕೊಡುತ್ತಿಲ್ಲ ಎಂದರೆ ಅವರ ಹಾಹಾಕಾರ ತಪ್ಪಿಸುವುದಕ್ಕಾಗುವುದಿಲ್ಲ ಇಲ್ಲಿ ಏನಾಗಿದೆ ಇದು ಒಂದು ಉದ್ದಿಮೆಯಾಗಿ ಪರಿಣಮಿಸಿದೆ. ಏಕೆಂದರೆ ನಾವು ಮೊದಲು ಬೆಂಗಳೂರಿನಲ್ಲಿ ಮಾತ್ರ ನೀರನ್ನು ಕೊಂಡು ಕೊಳ್ಳುತ್ತಾರೆ ಎಂದು ಭಾವಿಸಿದ್ದೆವು, ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೆಕೇರಿಯಲ್ಲಿ ಕೂಡ ನೀರನ್ನು ಮಾರುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ನಾವು ಯಾವಾಗಲೂ ಇಸ್ರೇಲ್, ಅರಬ್‌ಗಳಲ್ಲಿ ನೀರಿಗೆ ದುಡ್ಡು ಕೊಡುತ್ತಾರೆ ಎಂದು ಭಾವಿಸಿದ್ದೆವು, ಅದೇ ರೀತಿಯಲ್ಲಿ ಇಲ್ಲೂ ಕೂಡ ಬಿಸಿಲೇರಿ ಬಾಟ್ಲಿ ಬಂದಾದಮೇಲೆ ನಾವೇ ಅದನ್ನು ಮನೆಗೆ ಕೊಂಡು ಕೊಳ್ಳಬೇಕಾಗಿದೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುವುದಾದರೆ ತಿಪಟೂರಿನಿಂದ ನಮ್ಮ ಸಂಬಂಧಿಕರು ನಮ್ಮ ಊರಿಗೆ ಬರುತ್ತಾರೆ. ಊರಿಗೇನಾದರೂ ಬರುವ ಕಾರ್ಯಕ್ರಮ ಇದ್ದರೆ ಅಲ್ಲಿ ಹೋದರೆ ನೀರಿರುತ್ತದೆ; ಸ್ನಾನ ಮಾಡುತ್ತೇವೆ. ತಿಪಟೂರಿನಲ್ಲಿ ಏನಿರುತ್ತದೆ ಅಂತ ಕೇಳುತ್ತಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ನಾವು ಬದುಕಿದ್ದೇವೆ. ತಾವು ಈ ಕಡೆ ತತ್‌ಕ್ಷಣ ಕಾರ್ಯಕ್ರಮ ಹಾಕಬೇಕು, ಕುಡಿಯುವ ನೀರಿಗೆ ಮೊದಲ ಆಧ್ಯತೆ ಕೊಟ್ಟು ನೀರನ್ನು ರೆಸ್ಟೋರ್ ಮಾಡಬೇಕು. ಸಾರ್ವಜನಿಕವಾಗಿ ದನ ಕರುಗಳಿಗೆ ನೀರು ಕುಡಿಯುವುದಕ್ಕೆ ತೊಟ್ಟಿ ಕಟ್ಟಿಸಬೇಕು. ಏಕೆಂದರೆ ಅಷ್ಟು ಜಾನುವಾರುಗಳು ಮನೆಗೆ ಬಂದು ನೀರು ಕುಡಿಯುವುದಕ್ಕಾಗುವುದಿಲ್ಲ. 30 ಪರ್ಸೆಂಟ್‌ನಷ್ಟು ಬರ್ಡ್‌ಪಾಪುಲೇಷನ್ ಕಡಿಮೆಯಾಗಿದೆ. ಬರ್ಡ್ ಪಾಪುಲೇಷನ್ ಅರ್ಧ ಕಡಿಮೆಯಾಗಿದೆ, ಬಹುಶಃ ತಮಗೆ ಗೊತ್ತಿಲ್ಲವೋ ಏನೋ ಈ ರಾಜ್ಯದಲ್ಲಿ ಹಕ್ಕಿ-ಪಕ್ಷಿಗಳ ಸಂತತಿ ಅರ್ಧ ಕಡಿಮೆಯಾಗಿದೆ. ನಿಮ್ಮ ಯಾವುದೇ ಬಂಡವಾಳ ಇಲ್ಲದೆ, ನಿಮ್ಮ ಪಿತ್ರಾರ್ಜಿತ ಆಸ್ತಿ ಇಲ್ಲದೆ, ನಿಮಗೆ ವರಮಾನ ತಂದು ಕೊಟ್ಟಿರತಕ್ಕಂಥ ಕ್ಷೇತ್ರ ಅದು. ಒಂದು ಹಸು ಇದ್ದರೆ ಒಂದು ವರ್ಷಕ್ಕೆ ಒಂದು ಹಸುವನ್ನು ಬೋನಸ್ ಕೊಡುವುದು, ಮತ್ತು ಮೇಂಟೇನೆನ್ಸ್ ಮಾಡಿದ ಕಾಸ್ಟ್‌ನಲ್ಲಿ ಹಾಲು ಕೊಡುವುದು, ಗೊಬ್ಬರ ಕೊಡುವುದು ಅದು ಇಳಿದು ಬಿಟ್ಟಿದೆ.

5.50 ಪಿ.ಎಂ

ರೈತರ ಮನೆಯಲ್ಲಿರುವ ರಾಸು ನೋಡಿ ಹೆಣ್ಣುಮಕ್ಕಳನ್ನು ಕೊಡುತ್ತಿದ್ದರು. ಮನೆಯಲ್ಲಿ ಏನಾದರೂ ದನಕರು ಇಟ್ಟಿದ್ದಾನೆಯೇ, ದವಸಧಾನ್ಯ ಇಟ್ಟಿದ್ದಾನೆಯೇ ಎಂದು ನೋಡಿ ಹೆಣ್ಣು ಕೊಡುತ್ತಿದ್ದರು. ಮನೆ ನೋಡುವುದಕ್ಕೆ ಹೋಗುತ್ತಿದ್ದುದು ಇದಕ್ಕಾಗಿಯೇ. ಏನಾದರೂ ಜಾನುವಾರು ಸಂಖ್ಯೆ ಚೆನ್ನಾಗಿದೆಯೇ, ಬದುಕಿರುವ ಮನೆಯೇ ಎಂದು ನೋಡಿ ಅದರ ಆಧಾರದ ಮೇಲೆ ಹೆಣ್ಣು ಕೊಡುತ್ತಿದ್ದರು. ಮುಖ ನೋಡಿ ಆವತ್ತು ಹೆಣ್ಣು ಕೊಡುತ್ತಿರಲಿಲ್ಲ. ಏಕೆ ಕೊಡುತ್ತಿದ್ದರು ಎಂದರೆ, ಸುಭಿಕ್ಷವಾಗಿದ್ದಾರೆಂದರೆ, ಮನೆ ತುಂಬ ಜಾನುವಾರು ಇರುತ್ತಿತ್ತು, ಒಂದಷ್ಟು ಮೂಟೆಗಳು ಕಾಣುವುದು, ಇನ್ನೊಂದು ಕಡೆ ಮೇವು ಕಾಣುವುದು. ಇವತ್ತು ನಮ್ಮ ಸ್ಥಿತಿ ಹೇಗಿದೆ? ದನಕರುಗಳು ಇಲ್ಲ. ಅಕಸ್ಮಾತ್ ಇದ್ದರೆ, ಆ ದನಕರುಗಳ ಬೆನ್ನುಮೇಲೆ ಇರತಕ್ಕ ಮೂಳೆಗಳನ್ನು ನೀವು ಎಣಿಸಬಹುದು. ಸ್ಪಷ್ಟವಾಗಿ, ಯಾರೂ ಬೇಕಾಗಿಲ್ಲ ಎಂಟೈರ್ ಸಿಸ್ಟಂ, ಆ ಶರೀರದಮೇಲೆ ಎಷ್ಟು ಮೂಳೆ ಇರುತ್ತೆ, ಆ ಸ್ಥಿತಿಗೆ ಬಂದಿರುವ ಹಸುಗಳು ಇವೆ. ಮೇವಿಗೂ ಕೂಡ ನಮಗೆ ಹಾಹಾಕಾರ ಬಂದುಬಿಟ್ಟಿದೆ. ಚಿಕ್ಕನಾಯ್ಕನಹಳ್ಳಿ, ತುರುವೇಕೆರೆ, ಶಿರಾ, ಪಾವಗಡ ಮತ್ತು ಮಧುಗಿರಿ ತಾಲ್ಲೂಕುಗಳುಗಳಲ್ಲಿ. ಇದು ಏಕೆ? ಒಂದೇ ಸಮನೆ, ಈ ಭಾಗದಲ್ಲಿ ರಾಗಿ ಬೆಳೆಯುತ್ತಿದ್ದರು. ಹೊಸದುರ್ಗ, ಕಡೂರಿನಿಂದ ಹಿಡಿದು ಪ್ರಮುಖವಾಗಿ ರಾಗಿಯನ್ನು ಮೇವಿಗಾಗಿ ಎಂದು ನಾವು ಬೆಳೆಯುತ್ತಿದ್ದೆವು. ಭಾರಿ ಪುಷ್ಟಿಯಾದ ವಸ್ತು ಎಂದು ನಾವು ತಿಳಿದು ಕೊಂಡಿದ್ದೆವು. ಈ ವರ್ಷ ಸಂಪೂರ್ಣ ರಾಗಿ ಬೆಳೆ ಇಲ್ಲವೇ ಇಲ್ಲ. ಮಾನ್ಯ ಕಂದಾಯ ಸಚಿವರು ಒಂದು ಆದೇಶ ಕೊಡುತ್ತಾರೆ. ಅಣೆವಾರು ಬೆಳವಣಿಗೆ, ಅಣೆವಾರು ಫಲವನ್ನು ಡಿಕ್ಲೇರ್ ಮಾಡಿ ಎಂದು ಆ ಸೆಕ್ರೆಟರಿ ದಾಕ್ಷಿಣ್ಯದಲ್ಲಿ ಈಗ ನಾವು ಬದುಕಬೇಕು. ಆ ವಿಲೇಜ್ ಅಕೌಂಟೆಂಟ್ 8 ಆಣೆ ಎಂದರೆ, 8 ಆಣೆ, 10 ಆಣೆ ಎಂದರೆ 10 ಆಣೆ, 12 ಆಣೆ ಎಂದರೆ 12 ಆಣೆ. ಯಾವ ತೆನೆ ಕುಯ್ಯುತ್ತಾನೋ, ಎಲ್ಲಿ ಸುಡುತ್ತಾನೋ, ಎಲ್ಲಿ ರಾಗಿ ಉದುರಿಸುತ್ತಾನೋ ನಮಗಂತೂ ಗೊತ್ತಾಗುವುದಿಲ್ಲ. ತಾವು ಈ ಕಡೆ ಹೆಚ್ಚು ಒತ್ತು ಕೊಟ್ಟು ರೆಮಿಷನ್ ಮಾಡಬೇಕಾದರೆ, ದಯಮಾಡಿ ನಿಮ್ಮ ವಿಲೇಜ್ ಅಕೌಂಟೆಂಟ್ ಮುಖ ನೋಡಿ ರೆಮಿಷನ್ ಮಾಡಬೇಡಿ. ನಿರ್ಧಿಷ್ಟವಾಗಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟನಿಂದ ಮಾಹಿತಿ ತರಿಸಿ, ನಿರ್ಧಿಷ್ಟವಾಗಿ ನಿಮ್ಮ ತಹಶೀಲ್ದಾರರಿಂದ ಮಾಹಿತಿ ತರಿಸಿ. ನಿರ್ದಿಷ್ಟವಾಗಿ ಆ ಭಾಗದ ರೈತ ಪ್ರತಿನಿಧಿಗಳಿಂದ ಮಾಹಿತಿ ತರಿಸಿ ಮಾಡಬೇಕಾಗಿದೆ. ಮೇವಿಗೆ ತಾವು ತಕ್ಷಣ ಕಾರ್ಯಕ್ರಮ ಹಾಕಬೇಕು. ಒಂದು ಟನ್‌ಗೆ 400 ರೂಪಾಯಿ ಕೊಡುತ್ತೇವೆ ಅಥವಾ ಒಂದು ಲೋಡ್‌ಗೆ 400 ರೂಪಾಯಿ ಕೊಡುತ್ತೇವೆ ಎಂಬ ತಮ್ಮ ಆದೇಶ ಇದೆ. ಇದನ್ನು ತಾವು ತಪ್ಪಿಸಬೇಕು. ಇವತ್ತೇನು ಮೇವಿನ ಬೆಲೆ ಇದೆ, ಅದನ್ನಾದರೂ ಸಬ್ಸಿಡಿ ಮಾಡಬೇಕು. ಅಥವಾ ಕನಿಷ್ಟ ಸಾಗಾಣಿಕೆ ವೆಚ್ಚವನ್ನಾದರೂ ಕೊಡಬೇಕು. ರೈತರು ಹೋಗಿ ಮೇವಿಗೆ ದುಡ್ಡು ಕೊಟ್ಟರೆ,

ಸಾಗಾಣಿಕೆ ವೆಚ್ಚವನ್ನಾದರೂ ಸರ್ಕಾರ ಕೊಡಬೇಕು. ಜೊತೆಗೆ ಹಿಂದೆ ಗೋಶಾಲೆಗಳನ್ನು ಮೊದಲೆಲ್ಲ ಮಾಡಿದ್ದಿರಿ, ಸರ್ಕಾರದ ವತಿಯಿಂದ ಅದನ್ನು ಇವತ್ತೂ ಮಾಡಬೇಕು. ನಾವು ಸನ್ಮಾನ್ಯ ಮುಖ್ಯಮಂತ್ರಿಗಳ ಸಭೆಯಲ್ಲಿ ಒಂದು ಸಲಹೆ ಕೊಟ್ಟೆವು. ನಿಮ್ಮ ಅನಿಮಲ್ ಹಸ್‌ಬೆಂಡ್ರಿ ಫಾರಂಗಳೇನಿದೆ, ತಕ್ಷಣಕ್ಕೆ ಅದನ್ನು ಬಳಕೆ ಮಾಡಿ. ಅಲ್ಲಿ ಏನಾದರೂ ಮೇವು ಬೆಳೆಯಿರಿ. ಇನ್ನೂ ಒಂದೆರಡು ಮೂರು ತಿಂಗಳು ಸ್ಥಿತಿ ಸುಧಾರಿಸದೇ ಹೋದರೆ, ಆ ಮೇವನ್ನು ತಂದು ಜನಗಳಿಗೆ ಹಂಚಿ ಎಂದು ಹೇಳಿ. ಅಮೃತ್‌ಮಹಲ್ ಕಾವಲು, ಹಳ್ಳಿಕಾರ್ ಕಾವಲು ಇದನ್ನೆಲ್ಲಾ ಬಳಕೆ ಮಾಡಬೇಕಾಗಿದೆ. ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಇದೆ. ಬೋರ್ ಇದೆ, ಸಿಬ್ಬಂದಿ ಇದ್ದಾರೆ. ಮೇವು ಬೆಳೆದುಕೊಡಿ ಎಂದು ಅವರಿಗೆ ಆದೇಶ ಕೊಡಿ. ತಾವು ಏನೂ ಖರ್ಚು ಮಾಡಬೇಕಾಗಿಲ್ಲ.

ಶ್ರೀ ರಮೇಶ್ ಸಿ.ಜಿಗಜಿಣಗಿ: ಅಮೃತ ಮಹಲ್ ಕಾವಲ್ಲೂ ಇಲ್ಲ ಏನೂ ಇಲ್ಲ. ಎಲ್ಲವನ್ನೂ ಒತ್ತುವರಿ ಮಾಡಿಕೊಂಡು, ಉಳುಮೆ ಮಾಡುತ್ತಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ತಾವು ಕುಣಿಕೇನಹಳ್ಳಿ ಫಾರಂ ಎಂದು ಬರೆದುಕೊಳ್ಳಿ, ಅಜ್ಜಂಪುರ ಫಾರಂನವರಿಗೆ ಹೇಳಿ. ಅವೆಲ್ಲಾ ಫಾರಂಗಳು ಇವೆ. ಫೆನ್ಸಿಂಗ್ ಮಾಡಿ, ಬೋರ್‌ವೆಲ್ ಹಾಕಿದ್ದಾರೆ. ಅದೇ ಹನ್ನೊಂದು ಫಾರಂ, ಫಾಡರ್ ಫಾರಂ ತಾಲ್ಲೂಕುಗಳಿದ್ದವನ್ನೆಲ್ಲಾ ಉಳುಮೆ ಮಾಡಿದ್ದಾರೆ. ಆದರೆ, ಕೆಲವು ಫಾರಂಗಳು ಇವೆ, ಅದರಲ್ಲಿ ಮೇವು ಬೆಳೆಯುವುದಕ್ಕೆ ತಾವು ಆದೇಶ ಕೊಡಬೇಕು. ಈ ವರ್ಷದಂಥ ಭೀಕರ ಬರಗಾಲವನ್ನು ನಾವು ಕಳೆದ 10-12 ವರ್ಷದಿಂದ ನೋಡಿರಲಿಲ್ಲ. ನಾವು ಇವತ್ತು ಹುಡುಗಾಟಕ್ಕೆ ನಿಂತುಕೊಂಡು ಮಾತನಾಡತಕ್ಕ ಸ್ಥಿತಿಯಲ್ಲಿ ಇಲ್ಲ. 8-10 ವರ್ಷದಿಂದ ಆಸೆ ಇಟ್ಟುಕೊಂಡು, ಇವತ್ತಲ್ಲ ನಾಳೆ ಮಳೆ ಬರುತ್ತೆ, ಎಂದು ಬದುಕಿದವರು ಇವತ್ತೇನು ಮಾಡಿದ್ದೇವೆಂದರೆ, ಕೊನೇ ಹಂತಕ್ಕೆ ಬಂದಿದ್ದೇವೆ. ಇದರ ಜೊತೆಗೆ ನಮ್ಮ ಭಾಗದಲ್ಲಿ ಅಡಿಕೆ ಬೆಳೆದವರು ಸರ್ವ ನಾಶವಾಗುತ್ತಿದ್ದಾರೆ. ಅಡಿಕೆ ಒಂದು ಕ್ವಿಂಟಾಲ್‌ಗೆ 20 ಸಾವಿರ, 22 ಸಾವಿರ ಇದ್ದುದು ಇವತ್ತು 8-10 ಸಾವಿರಕ್ಕೆ ಇಳಿದಿದೆ. ಇದನ್ನು ಬೆಳೆಯುವುದಕ್ಕೆ ಅದರಷ್ಟೇ ಖರ್ಚು ಬರುತ್ತದೆ. ಆದ್ದರಿಂದ ದಯಮಾಡಿ ತಾವು ಇದರ ಬಗ್ಗೆ ಸ್ವಲ್ಪ ಗಮನ ಹರಿಸಬೇಕು. ಆಮೇಲೆ ತುಮಕೂರಿಗೆ ಇವತ್ತು 11 ಕೋಟಿಯಷ್ಟು ತಕ್ಷಣದ ಪರಿಹಾರ ಹಣ ಬೇಕೆಂದು ಕೇಳಿದ್ದೇವೆ. ಇದನ್ನು ತಾವು ಒದಗಿಸಿಕೊಡಬೇಕು. ತುಮಕೂರು ಎ.ಇ.ಎಸ್.ನಲ್ಲಿ ಏನು ದುಡ್ಡು ಖರ್ಚಾಗಿಲ್ಲ, 3-4 ಕೋಟಿ ತಾವು ಅಲ್ಲಿಂದ ಖರ್ಚು ಮಾಡಿಸಬಹುದು. ಕುಡಿಯುವ ನೀರಿಗೆ ಕನಿಷ್ಟ ಒಂದು ತಾಲ್ಲೂಕಿಗೆ ಒಂದು ನೂರಾದರೂ ಕೊಳವೆಬಾವಿಗಳನ್ನು ತಾವು ಹಾಕಿಸಿಕೊಡಬೇಕು. ದೂರದಲ್ಲಿರುವವರಿಗೆ ಪಂಪ್ ಮಾಡತಕ್ಕ ವ್ಯವಸ್ಥೆ ಮಾಡಿಕೊಡಬೇಕು.

ಉಪಾಧ್ಯಕ್ಷರು: ಮಾಧುಸ್ವಾಮಿಯವರೇ ಬೇಗ ಮುಗಿಸಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ತಾವು ಪ್ರಮುಖವಾಗಿ ನಮ್ಮನ್ನೇ ಕರೆಯಬೇಕಾಗಿತ್ತು

ಅತಿವೃಷ್ಟಿಯವರನ್ನು ಮೊದಲು ಕರೆದಿರಿ, ನಾವು ಊಟಕ್ಕೆ ಇಲ್ಲದವರು, ಅವರು ಊಟ ಹೆಚ್ಚಾಗಿರುವವರು. ಖಾಯಿಲೆ ಏನೋ ಇಬ್ಬರಿಗೂ ಇದೆ. ಆದ್ದರಿಂದ ಊಟಕ್ಕೆ ಇಲ್ಲದವರಿಗೆ ಮೊದಲು ತಾವು ಊಟ ಕೊಡಬೇಕು. ಆಮೇಲೆ ಊಟ ಮಾಡಿದವರು, ಅತಿವೃಷ್ಟಿಯಾದವರೂ ಚರ್ಚೆ ಆಗಬಹುದಾಗಿತ್ತು. ನಾವು ಖಂಡಿತವಾಗಿಯೂ ಹೇಳುತ್ತಿದ್ದೇವೆ. ಈ ವರ್ಷ ತುಮಕೂರು, ಚಿತ್ರದುರ್ಗ, ಕೋಲಾರ ಭಾಗದಲ್ಲಿ ತೀಕ್ಷ್ಣವಾದ ಬರಗಾಲ ಇದೆ. ತಾವು ಆದ್ಯತೆ ಮೇಲೆ ಕೆಲಸ ಮಾಡಬೇಕು. ತಾವು ಯಾವ ರಿಪೋರ್ಟ್ ತರಿಸಿಕೊಳ್ಳಬೇಕೋ ಅದನ್ನು ತರಿಸಿಕೊಳ್ಳಿ. ನಾವು ಇಷ್ಟೊಂದು ಕಡು ಬರಗಾಲವನ್ನು ಯಾವತ್ತೂ ನೋಡಿರಲಿಲ್ಲ. ನಮಗೆ ಹೋದವರ್ಷದ ಮೂರನೇ ಒಂದು ಭಾಗದಷ್ಟು ತೆಂಗು ಬೆಳೆ ಇಲ್ಲ ಅಡಿಕೆ ಬೆಳೆಯಂತೂ ಉಳಿಯುವುದೇ ಇಲ್ಲ. ಒಂದು ವಾರ ನೀರು ಕಟ್ಟದಿದ್ದರೆ, ನಮಗೆ ಅಡಿಕೆ ಬೆಳೆ ಬರುವುದೇ ಇಲ್ಲ. ಆ ಕಡೆ ಹೆಚ್ಚು ಗಮನ ಕೊಟ್ಟು, ತೀಕ್ಷ್ಣವಾಗಿ ಮಾನ್ಯ ಕಂದಾಯ ಸಚಿವರು ಕುಡಿಯುವ ನೀರಿಗೆ ಮತ್ತು ಮೇವಿಗೆ ಹಣವನ್ನು ಬಿಡುಗಡೆ ಮಾಡಿಕೊಡಬೇಕೆಂದು ಕೇಳಿ ಕಾಮಗಾರಿಗಳನ್ನೂ ಆದ್ಯತೆ ಮೇಲೆ ಶುರು ಮಾಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ.ಶ್ರೀನಿವಾಸಗೌಡ (ಕೋಲಾರ): ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಬರಗಾಲ ಪೀಡಿತ ಪ್ರದೇಶವಾದಂಥ ಕೋಲಾರ ಜಿಲ್ಲೆ ಬಗ್ಗೆ ನಾವು ಹೆಚ್ಚಿಗೆ ಒತ್ತುಕೊಟ್ಟು ಹೇಳಬೇಕಾಗುತ್ತದೆ. ಅನಾವೃಷ್ಟಿ ಕೂಡ ಇದೆ. ಏನಾಗಿದೆ ಎಂದರೆ, ತೆಂಗಿನಕಾಯಿಯವನು ಮತ್ತು ಉಪ್ಪಿನವನು ಸಂತೆಗೆ ಹೋಗುತ್ತಾರೆ. ಪಕ್ಕಪಕ್ಕದಲ್ಲಿ ಅಂಗಡಿಗಳು ಇರುತ್ತವೆ. ಮಳೆ ಬರುತ್ತದೆ, ಈ ಉಪ್ಪಿನವನು ಬಾಯಿಬಡಕೊಳ್ಳುತ್ತಾನೆ. ಮಳೆ ಬರುತ್ತದೆ, ನಾನು ಎಲ್ಲಿಯಾದರೂ ಎತ್ತಿಕೊಂಡು ಹೋಗಬೇಕೆಂದು ಹೊಡೆದುಕೊಳ್ಳುತ್ತಾನೆ. ಆದರೆ, ಈ ತೆಂಗಿನಕಾಯಿಯವನೂ ಬಾಯಿ ಬಡಕೊಳ್ಳುತ್ತಾನೆ. ಹಾಗಾಗಿದೆ ಇವತ್ತಿನ ಅನಾವೃಷ್ಟಿಯವರ ಪರಿಸ್ಥಿತಿ. ಅತಿವೃಷ್ಟಿಯವರಿಗೆ ರಸ್ತೆಗಳು ಹಾಳಾಗಿದೆ ಎಂಬುದನ್ನು ಬಿಟ್ಟರೆ, ನಮಗೇ ಹೊಟ್ಟೆಗೇ ಹಿಟ್ಟಿಲ್ಲ. ಒಂದು ಗಾದೆ ಹೇಳುತ್ತಾರೆ. ''ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು'' ಎಂದು. ಆ ಪರಿಸ್ಥಿತಿ ಇವತ್ತು ಬರಗಾಲ ಪ್ರದೇಶವಾದಂಥ ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿದೆ.

ಉಪಾಧ್ಯಕ್ಷರು: ಕೋಲಾರ ಚಿನ್ನದ ಗಣಿ ಎಂದು ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ.

ಶ್ರೀ ಕೆ.ಶ್ರೀನಿವಾಸಗೌಡ: ಕೋಲಾರ ಚಿನ್ನದ ಗಣಿಯೇ. ಆದರೆ ಅದರಲ್ಲಿ ಸಿಕ್ಕುವ ಅರ್ಧ ಗ್ರಾಂ ಚಿನ್ನಕ್ಕೆ ಒಂದು ಟನ್ ಮಣ್ಣು ಈಚೆಗೆ ಬರುತ್ತದೆ. ಅದರ ಬೆಲೆ ನಿಮಗೇ ಗೊತ್ತಿದೆ. ನೀವೇ ಲೆಕ್ಕ ಹಾಕಿಕೊಳ್ಳಿ, ಇವತ್ತು ನಾವು ಚಿನ್ನದ ಗಣಿಯವರು ಎಂದು ಹೇಳಿಕೊಳ್ಳಬಹುದು. ಆದರೆ, ಇವತ್ತು ನಿಜವಾಗಿಯೂ ಚಿನ್ನದ ಗಣಿ ಎಂದರೆ ರೇಷ್ಮೆ

ಮತ್ತು ಹಾಲು. ಇದು ಬಿಟ್ಟರೆ ಇನ್ನಾವುದೂ ಇಲ್ಲ. ಇವತ್ತು ನಮ್ಮ ಪರಿಸ್ಥಿತಿಯನ್ನು ಮಾನ್ಯಸದಸ್ಯರಾದ ಮಾಧುಸ್ವಾಮಿಯವರು ಬಹಳ ಚೆನ್ನಾಗಿ ಹೇಳಿದರು. ದನಕರುಗಳಿಗೆ ಬಕೀಟುಗಳಲ್ಲಿ ಏನಾದರೂ ನೀರು ಇಟ್ಟರೆ, ಕುಡಿಸಬಹುದು. ಆದರೆ, ಕುರಿ ಮತ್ತು ಮೇಕೆಗಳಿಗೆ ನೀರು ಯಾವ ತರಹ ಕುಡಿಸುತ್ತೀರಿ? ಏನಾದರೂ ಕೆರೆ ಕುಂಟೆಗಳಲ್ಲಿ ನೀರಿರಬೇಕು, ಅಥವಾ ಕೆರೆಗಳಲ್ಲಿ ನೀರಿರಬೇಕು. ಇವತ್ತು ಪರಿಸ್ಥಿತಿ ಎಷ್ಟು ಭೀಕರವಾಗಿದೆಯೆಂದರೆ, ಅಷ್ಟಿಷ್ಟು ಭೀಕರ ಅಲ್ಲ. ಧರ್ಮವೀರ ಅವರು ರಾಜ್ಯಪಾಲರಾಗಿ ಇದ್ದರು. ಅವರು ಒಂದು ಸಾರಿ ನಮ್ಮ ಜಿಲ್ಲೆಗೆ ಬಂದಾಗ, ಒಂದು ಹರಿಜನ ಮನೆಗೆ ಹೋದಾಗ, ಅವರ ಅಡಿಗೆ ಮನೆಯ ಒಂದು ಮಡಿಕೆ ತೆಗೆದುನೋಡಿದರು. ಕತ್ತಾಳಿ ಗೆಡ್ಡೆಯನ್ನು ಬೇಯಿಸಿಕೊಂಡು ತಿನ್ನುವಂಥ ಕಾಲ; ಅವತ್ತು ನೋಡಿದರು. ಇವತ್ತು ನಮ್ಮಲ್ಲಿ ಆ ಪರಿಸ್ಥಿತಿ ಇದೆ. ನಮ್ಮಲ್ಲಿ ಕೊಟ್ಟಿಗೆಡ್ಡೆ ಎಂದು ಸಣ್ಣಗಡೆ ಬರುತ್ತದೆ. ಅದೂ ಕೂಡ ಇವತ್ತು ಸರಿಯಾಗಿ ಕಾಣುವುದಿಲ್ಲ. ಕತ್ತಾಳಿಯನ್ನು ಸುತ್ತಲೂ ನಾವು ಬೇಲಿಗೆ ಹಾಕಿದ್ದೇವೆ. ಹೊಲಗಳಿಗೆ ಮತ್ತು ಮಾವಿನ ತೋಟಗಳಿಗೆ, ಬೇಲಿಯಾಗಿ ಇದನ್ನು ಹಾಕಿದ್ದೇವೆ. ಆ ಒಂದು ಗೆಡ್ಡೆಯನ್ನು ಹೊಡೆದುಕೊಂಡು ಬಂದು ತಿನ್ನುವಂಥ ಪರಿಸ್ಥಿತಿ ಕೋಲಾರ ಜಿಲ್ಲೆಯಲ್ಲಿದೆ. ಕೋಲಾರ ಜಿಲ್ಲೆಯಲ್ಲಿ ಬರಗಾಲ ಅಷ್ಟೊಂದು ಭೀಕರವಾಗಿದೆ. ಕತ್ತಾಳಿ ಗೆಡ್ಡೆಯನ್ನು ಬೇಯಿಸಿಕೊಂಡು ತಿನ್ನುವಂಥ ಭೀಕರ ಪರಿಸ್ಥಿತಿ ಬಂದಿರುತ್ತದೆ. ಕತ್ತಾಳಿ ಎಂದರೆ, ನಮ್ಮಲ್ಲಿ ಹೊಲದ ಸುತ್ತಲೂ ಬೇಲಿ ಹಾಕುತ್ತಾರೆ. ದಪ್ಪ ಕಳ್ಳಿ ಎಂದು ಬೇರೆ ಕಡೆ ಹೇಳುತ್ತಾರೆ. ಇವತ್ತು ಈ ಪರಿಸ್ಥಿತಿ ಕೋಲಾರ ಜಿಲ್ಲೆಯಲ್ಲಿದೆ. ನೀವು ಕೃಷ್ಣಾ ಮೇಲ್ದಂಡೆಯವರಿಗೆ ಒಳ್ಳೆಯ ದುಡ್ಡು ಕೊಡಿ, ನಾವೇನು ಬೇಡ ಎಂದು ಹೇಳುವುದಿಲ್ಲ. ಹದಿನೆಂಟುವರೆ ಪರ್ಸೆಂಟ್ ಕೊಟ್ಟು, ಬಾಂಡುಗಳ ಮೂಲಕ 750 ಕೋಟಿ ರೂಪಾಯಿಗಳನ್ನು ಕ್ರೋಢೀಕರಿಸಿದ್ದೀರಿ. ಬೇರೆಯದು 150 ಕೋಟಿ ಕೊಟ್ಟಿದ್ದೀರಿ. ಸುಮಾರು ಒಂದು ಸಾವಿರ ಕೋಟಿಗೆ ಬಡ್ಡಿ 20 ಪರ್ಸೆಂಟ್ ಎಂದರೂ ನೀವು ಸುಮಾರು 200 ಕೋಟಿ ರೂಪಾಯಿಗಳ ಬಡ್ಡಿ ಕೊಡಬೇಕು. ಕೇವಲ 200 ಕೋಟಿ ರೂಪಾಯಿಗಳನ್ನು ಬಯಲುಸೀಮೆ ಅಭಿವೃದ್ಧಿಗೆ ಒಂದುಸಾರಿ ಕೊಡಿ ಎಂದರೆ, ಅದು ನಿಮಗೆ ಇಷ್ಟವಾಗುವುದಿಲ್ಲ. ರಾಜ್ಯದಲ್ಲಿ ಒಂದು ಸಮತೋಲನ ಇರಬೇಕು. ಇವತ್ತು ಆ ಜಿಲ್ಲೆ, ಈ ಜಿಲ್ಲೆ ಎಂದಲ್ಲ ಎಲ್ಲರಿಗೂ ಸಮತೋಲನ ಇರಬೇಕು. ಇವತ್ತು ಮೂರರಲ್ಲಿ ಒಂದು ಭಾಗ ಜನ ಬಯಲುಸೀಮೆ ಅಭಿವೃದ್ಧಿ ಜನಗಳು ನಾವು ಇದ್ದೇವೆ. ನಮಗೆ ಏನು ಮಾಡಿದ್ದೀರಿ ಎಂಬುದನ್ನು ಸರ್ಕಾರ ಪ್ರಶ್ನೆ ಮಾಡಿಕೊಳ್ಳಬೇಕು. ಇವತ್ತು 200 ಕೋಟಿ ಬಡ್ಡಿ ಕೊಟ್ಟರೆ ಕೃಷ್ಣಾ ಮೇಲ್ದಂಡೆಯಿಂದ ಎಷ್ಟು ಜಿಲ್ಲೆಗೆ ಅನುಕೂಲವಾಗುತ್ತದೆ ಸ್ವಾಮಿ? ಆ ಪ್ರಶ್ನೆಯನ್ನು ಹಾಕಿಕೊಂಡಾಗ, ಸರ್ಕಾರ ಇದರ ಬಗ್ಗೆ ಯೋಚನೆ ಮಾಡಬೇಕು. ಇವತ್ತು ಅವರಿಗೆ 200 ಕೋಟಿ ಬಡ್ಡಿ ಕೊಡುವುದನ್ನು, ಬಯಲು ಸೀಮೆಯ ಅಭಿವೃದ್ಧಿಗೂ 200 ಕೋಟಿ ಕೊಡಿ ಎಂದು ಕೇಳುತ್ತೇವೆ. ಬೇರೆ ಅಭಿವೃದ್ಧಿಗಳೂ ಇವೆ ಮಲೆನಾಡು ಅಭಿವೃದ್ಧಿ ಇರಬಹುದು, ಹೈದರಾಬಾದ್ ಅಭಿವೃದ್ಧಿ ಇರಬಹುದು. ಈ ಅಭಿವೃದ್ಧಿಯನ್ನು

ಮಾಡುವುದು ಬೇಡ ಎಂದು ನಾನು ಹೇಳುತ್ತಾ ಇಲ್ಲ. ಈ ಸಾರಿ ನಮಗೆ ಕೇವಲ 4 ಕೋಟಿಯನ್ನು ಕೊಟ್ಟಿದ್ದೀರಿ. ಇವತ್ತು ಬಯಲುಸೀಮೆಯ 73 ಶಾಸಕರು ಪ್ರತಿನಿಧಿಸತಕ್ಕ ಈ ಬಯಲುಸೀಮೆ ಅಭಿವೃದ್ಧಿಗೆ ಕೇವಲ 4 ಕೋಟಿ ರೂಪಾಯಿಗಳಲ್ಲಿ ಏನು ಅಭಿವೃದ್ಧಿ ಮಾಡುತ್ತೀರಿ. ಇವತ್ತು 10-15 ಪರ್ಸೆಂಟ್ ರಾಗಿ ಬಿತ್ತಿದ್ದಾರೆ. ಕಡ್ಲೆಕಾಯಿ ಬೀಜ ಹಾಕಿದರು, ಯಾವುದೂ ಮೊಳಕೆ ಬರಲಿಲ್ಲ. ಸ್ವಾಮಿ, ಯಾವ ಪರಿಸ್ಥಿತಿ ಇದೆಯೆಂದರೆ, ಕತ್ತಾಳೆ ಗೆಡ್ಡೆಯನ್ನು ತಿನ್ನುವಂಥ ಪರಿಸ್ಥಿತಿ ಕೋಲಾರ ಜಿಲ್ಲೆಯಲ್ಲಿ ಉದ್ಭವವಾಗಿದೆ. ಸರ್ಕಾರದ ನಿದ್ರೆ ಹೋಗುತ್ತಿದೆ ಎನ್ನುವ ಮಾತನ್ನು ನಾನು ನೇರವಾಗಿ ಹೇಳಬೇಕಾಗಿದೆ. ಇದರಲ್ಲಿ ಆ ಪಕ್ಷ, ಈ ಪಕ್ಷ ಬೇಡ. 12ನೇ ತಾರೀಖಿನೊಳಗಾಗಿ ಕನಿಷ್ಟ 200 ಕೋಟಿ ರೂಪಾಯಿ ಕೊಡದೇ ಇದ್ದರೆ, ನಾವೆಲ್ಲಾ ಧರಣಿ ಮಾಡುತ್ತೇವೆ. ನಾವು 73 ಜನರೂ ಕೂಡ ಧರಣಿ ಮಾಡುತ್ತೇವೆ, ಆ ಪಕ್ಷ, ಈ ಪಕ್ಷ ಇವೆಲ್ಲಾ ಆಮೇಲೆ. ಜನರು ಬದುಕಬೇಕು ಸ್ವಾಮಿ ಜನರ ಬವಣೆಯನ್ನು ನೋಡಿ, ಕೆಲಸ ಮಾಡಬೇಕು. ರಾತ್ರಿ ಸ್ವಲ್ಪ ಮಳೆ ಬಿತ್ತು. ಎರಡೂವರೆ ಗಂಟೆಯಲ್ಲಿ ಮಳೆ ಬಿತ್ತು. ನಾನು ಆ ಮಳೆಯನ್ನು ನೋಡುವುದಕ್ಕಾಗಿ ಬಾಗಿಲು ತೆಗೆದುಕೊಂಡು ನೋಡುವ ಪರಿಸ್ಥಿತಿ ನಮ್ಮ ಕೋಲಾರ ಜಿಲ್ಲೆಯಲ್ಲಿ ಬಂದಿದೆ. ಇದನ್ನು ನಾವು ಯಾರಿಗೆ ಹೇಳೋಣ. ಕುಡಿಯುವ ನೀರಿಗೂ ಕೂಡ ನಾವು ಇವತ್ತು 500 ರಿಂದ 600 ಅಡಿ ಆಳಕ್ಕೆ ಹೋಗಿದ್ದೇವೆ. ಇವತ್ತು ನನ್ನ ಸ್ವಂತದ್ದು 10 ಬೋರ್‌ವೆಲ್‌ಗಳು ಇವೆ. ಅದರಲ್ಲಿ ಆರು ಬೋರ್‌ವೆಲ್‌ಗಳು ಈಗಾಗಲೇ ನಿಂತು ಹೋಗಿವೆ. ಇವತ್ತು ಎಲ್ಲಾ ನದಿಗಳಲ್ಲಿ ನೀರು ತುಂಬಿ ವಿದ್ಯುತ್ ಉತ್ಪಾದನೆ ಆಗುತ್ತಿದ್ದರೂ ಸಹ ಕೋಲಾರ ಜಿಲ್ಲೆಯಲ್ಲಿ ಕೇವಲ 3 ಗಂಟೆಗಳೂ ವಿದ್ಯುತ್ ಸಿಗುತ್ತಿಲ್ಲ, ಇದು ಏನಾಗುತ್ತಿದೆ ಎನ್ನುವುದು ಗೊತ್ತಾಗುತ್ತಿಲ್ಲ. ನಾನು ನಮ್ಮ ಶಾಸಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. 11ನೇ ತಾರೀಖು ಒಳಗಾಗಿ ಇನ್ನೂರು ಕೋಟಿ ಕೊಡದೇಹೋದರೆ ಬಯಲು ಸೀಮೆ ಪ್ರದೇಶದಿಂದ ಬಂದಿರತಕ್ಕಂಥ ಎಲ್ಲಾ 73 ಶಾಸಕರು ನಾವೇ ಧರಣಿ ಮಾಡುತ್ತೇವೆ, ನಾವು ಆ ಪಕ್ಷ ಈ ಪಕ್ಷ ಎನ್ನುವುದನ್ನು ಮರೆಯುತ್ತೇವೆ. ಈ ಮಾತನ್ನು ನಾನು ಸರ್ಕಾರಕ್ಕೆ ನೇರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತಾ, ನಾನು ಒಂದು ಸಾರಿ ನಮ್ಮ ಕೃಷಿ ಮಂತ್ರಿಗಳ ಜೊತೆಯಲ್ಲಿ ಮತ್ತು ನಮ್ಮ ತೋಟಗಾರಿಕಾ ಮಂತ್ರಿಗಳ ಜೊತೆಯಲ್ಲಿ ಇಸ್ರೇಲ್‌ಗೆ ಹೋಗಿದ್ದೆ. ಅಲ್ಲಿ ಇವರು ಎರಡು ಜಿಲ್ಲೆಗಳನ್ನು ಕೊಟ್ಟರು. ಕೋಲಾರ ಜಿಲ್ಲೆ ಮತ್ತು ಗುಲ್ಬರ್ಗ ಜಿಲ್ಲೆ, ವಾಟರ್ ಅನ್ನು ರೀಚಾರ್ಜ್ ಮಾಡುವುದಕ್ಕೆ ಮೇಲೆ ತರುವುದಕ್ಕೆ ಕೆಲವು ಅಗ್ರಿಮೆಂಟ್‌ಗಳನ್ನು ಮಾಡಿಕೊಂಡು ಬಂದರು. ಸ್ವಾಮಿ ನಾವು ಹೋಗಿ ಬಂದು ಎರಡೂವರೆ ವರ್ಷಗಳು ಆಯಿತು, ಈಗ ತೋಟಗಾರಿಕಾ ಇಲಾಖೆಯ ಮಂತ್ರಿಗಳು ಇಲ್ಲಿ ಕುಳಿತಿದ್ದಾರೆ ಅವರ ಜೊತೆಯಲ್ಲಿ ನಾನು ಇದ್ದೆ. ಕನಿಷ್ಟ ಆ ಅಗ್ರಿಮೆಂಟ್‌ಗಳು ಏನಾಗಿದೆ ಏನಾಗಿಲ್ಲ ಎನ್ನುವುದು ಗೊತ್ತಾಗುತ್ತಿಲ್ಲ. ಮೊದಲು ಕನಿಷ್ಟ 18 ಅಡಿಗಳಿಗೆ ನೀರು ಸಿಗುತ್ತಿತ್ತು. ಆದರೆ ಇವತ್ತು 600 ಅಡಿಗಳಿಗೆ ಹೋಗಿದ್ದೇವೆ. ಇದನ್ನು ಸರ್ಕಾರ ಯೋಚನೆ ಮಾಡಬೇಕು. ನಾವು ಬದುಕಬೇಕು, ಬಯಲು ಸೀಮೆ ಜನ ಕೂಡ ಬದುಕಬೇಕು. ನಾವೇನು ಸವತಿ ಮಕ್ಕಳೇ ಎಂದು ನಾನು ನೇರವಾಗಿ ಸರ್ಕಾರವನ್ನು

ಕೇಳಬೇಕಾಗುತ್ತದೆ. ತಾವು 18-20 ಪರ್ಸೆಂಟ್ ಬಡ್ಡಿ ಕೊಟ್ಟು ಸಾಲ ಮಾಡಿ ಅವರ ಅಭಿವೃದ್ಧಿಯನ್ನು ಮಾಡುತ್ತೀರಿ. ಆದರೆ ಬಯಲುಸೀಮೆ ಪ್ರದೇಶದ ಜನರ ಅಭಿವೃದ್ಧಿ ಮಾಡಲು ನಿಮಗೆ ಅನೇಕ ಅಡೆತಡೆಗಳು ಬರುತ್ತವೆ, ಅದು ಏಕೆ? 1961-62ರಲ್ಲಿ ಒಂದು ಸಲ ಬರ ಬಂದಿತ್ತು. ಆಗ ಕತ್ತಾಳಿ ಗಡ್ಡೆಯನ್ನು ಬೇಯಿಸಿಕೊಂಡು ತಿನ್ನುತ್ತಿದ್ದೆವು. ಕತ್ತಾಳಿ ಅಂದರೆ ಬೇರೆ ಕಡೆ ಏನು ಅಂತಾರೆ ಅಂತ ನಮಗೆ ಗೊತ್ತಿಲ್ಲ. ಆದರೆ ನಮ್ಮಲ್ಲಿ ಆ ಕತ್ತಾಳಿ ಗಡ್ಡೆಯನ್ನು ಬೇಯಿಸಿಕೊಂಡು ತಿನ್ನುವಂತಹ ಪರಿಸ್ಥಿತಿ ಬಂದಿದೆ. ಇದನ್ನು ನೋಡಿದರೆ ಸರ್ಕಾರ ನಿದ್ದೆ ಮಾಡುತ್ತಿದೆ ಎನ್ನುವ ಮಾತನ್ನು ನಾನು ನೇರವಾಗಿ ಹೇಳಬೇಕಾಗುತ್ತದೆ. ನಾನು ಇಲ್ಲಿ ಒಬ್ಬ ಶಾಸಕನಾಗಿ ಮಾತನಾಡುತ್ತಿದ್ದೇನೆಯೇ ಹೊರತು ನಾನು ಆಡಳಿತ ಪಕ್ಷದ ಸದಸ್ಯ ಹಾಗೂ ವಿರೋಧಪಕ್ಷದ ಸದಸ್ಯ ಅಂತ ಇಲ್ಲ. ಇವತ್ತು ಆ ಜನಗಳ ಬವಣೆಯನ್ನು ತಾವು ಅರ್ಥ ಮಾಡಿಕೊಳ್ಳಬೇಕು ಇಲ್ಲದಿದ್ದರೆ ಆ ಜನಗಳ ಶಾಪ ನಿಮಗೆ ತಟ್ಟುತ್ತದೆ. ಆ ಜನಗಳ ಬವಣೆಯನ್ನು ನೀಗಿಸಬೇಕಾದರೆ ತಾವು ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಬೇಕು ಅಂತ ನಾನು ಈ ಸಮಯದಲ್ಲಿ ಹೇಳುತ್ತೇನೆ.

ಶ್ರೀ ಎಂ.ಶ್ರೀನಿವಾಸ್: ಮಾನ್ಯ ಅಧ್ಯಕ್ಷರೇ, ಅವರಿಗೆ 200 ಕೋಟಿ ಬರಬೇಕಾದರೆ ಅವರ ಜೊತೆ ಇರುವ 73 ಜನ ಶಾಸಕರು ಈ ಕಡೆ ಬಂದು ಬಿಟ್ಟರೆ ನಾಳೆಯೇ ಅವರಿಗೆ 200 ಕೋಟಿ ರಿಲೀಜ್ ಮಾಡಿಬಿಡುತ್ತಾರೆ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, ಆ ಸಮಯ ಬಂದಾಗ ನೋಡೋಣ. ಏಕೆಂದರೆ ಅದನ್ನೆಲ್ಲಾ ಅವರು ಮಾಡಿ ನೋಡಿರುವವರು. ಅದು ಅವರಿಗೆ ಚೆನ್ನಾಗಿ ಗೊತ್ತಿದೆ. ನಮಗೆ ಗೊತ್ತಿಲ್ಲ. ಏಕೆಂದರೆ ಅದರು ಆ ಕಡೆ ಹೋಗುವುದು ಕಲಿತಂತ ಪಾಠ. ಅದು ಈಗ ಬೇಡ. ಮೊನ್ನೇ ಟಾಸ್ಕ್ ಫೋರ್ಸ್ ಕಮಿಟಿ ಮೀಟಿಂಗ್ ಕರೆದಿದ್ದರು. ಕೇವಲ 3 ಲಕ್ಷ ರೂಪಾಯಿಗಳು ಮಾತ್ರ ಕೊಟ್ಟಿದ್ದಾರೆ ಕುಡಿಯುವ ನೀರಿಗೆ. ರಾಕ್ಷಸನ ಹೊಟ್ಟೆಗೆ ಮಜ್ಜಿಗೆ ಸಾರು ಅಂತ ಒಂದು ಗಾದೆ ಹೇಳುತ್ತಾರೆ ನೋಡಿ ಆ ರೀತಿ ಕೊಟ್ಟಿದ್ದೀರಿ ಹಣ. 3 ಲಕ್ಷ ರೂಪಾಯಿಗಳನ್ನು ಒಂದು ತಾಲ್ಲೂಕಿಗೆ ಕೊಟ್ಟರೆ ನಾವೇನು ಮಾಡುವುದು. ಯಾವ ಹಳ್ಳಿಯಲ್ಲಿ ಬೋರ್‌ವೆಲ್ ಹಾಕುವುದು ಯಾವ ಪಟ್ಟಣದಲ್ಲಿ ಬೋರ್‌ವೆಲ್ ಹಾಕುವುದು ಇದನ್ನು ತಾವೇ ಯೋಚನೆ ಮಾಡಬೇಕು. ಇವತ್ತು ತಾವು ಕೊಡುತ್ತಿರುವ ಪರಿಹಾರ ಏನೇನು ಸಾಲದು. ಈ ಪರಿಹಾರವನ್ನು ಹೆಚ್ಚು ಮಾಡಬೇಕಾಗುತ್ತದೆ. ಇವತ್ತು ತಮಗೆಲ್ಲಾ ಗೊತ್ತಿರುವ ಹಾಗೆ ಕೋಲಾರ ಜಿಲ್ಲೆಯಲ್ಲಿ ಸುಮಾರು 4 ಸಾವಿರ ಚಿಲ್ಲರೆ ಕೆರೆಗಳು ಇವೆ. ಸ್ವಾಮಿ ನಾವು ಒಂದೇ ಸಾರಿ ಕೆರೆಗಳಲ್ಲಿ ಹೂಳು ಎತ್ತಿ ಅಂತ ನಾನು ಹೇಳುತ್ತಿಲ್ಲ. ಕನಿಷ್ಟ ಆ ಕೆರೆಗಳಲ್ಲಿ ನೀರನ್ನು ನಿಲ್ಲಿಸಿ, ಹೋದ ವರ್ಷ ನೀವು ಎಲ್ಲಾ ಕೆರೆಗಳಲ್ಲಿ ನೀರು ನಿಲ್ಲಿಸಿದ್ದರೆ ಸರ್ಕಾರಕ್ಕೆ ಕನಿಷ್ಟ 20-25 ಕೋಟಿ ರೂಪಾಯಿಗಳು ಉಳಿಯುತ್ತಿತ್ತು. ಇವತ್ತು ಗದ್ದೆ ಉಳುಮೆ ಮಾಡುವವರು ಕಡಿಮೆ ಆಗಿದ್ದಾರೆ. ಇವತ್ತು ಬೋರ್‌ವೆಲ್‌ಗಳನ್ನು ಹಾಕಿ ಅದರಿಂದ ರೈತ ವ್ಯವಸಾಯವನ್ನು ಮಾಡುವಂತಹ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾನೆ ಸರ್ಕಾರ ಯಾವುದಕ್ಕೂ ಗಮನ

ಕೊಡದೇ ಬಯಲುಸೀಮೆ ಪ್ರದೇಶದ ಜನರನ್ನು ಬಹಳಷ್ಟು ನಿರ್ಲಕ್ಷಿ ಮಾಡಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ವರ್ಷ ಅಸಲನ್ನು ಮುಂದಿನ ವರ್ಷ ವಸೂಲಿ ಮಾಡುವಂತೆ ಮಾಡಿ ಈ ವರ್ಷದ ಬಡ್ಡಿಯನ್ನು ಪೂರ್ತಿ ಮನ್ನಾ ಮಾಡಬೇಕು ಸಹಕಾರ ಸಂಘಗಳಿಂದ. ಆಮೇಲೆ ಕಮರ್ಷಿಯಲ್ ಬ್ಯಾಂಕ್‌ಗಳಿಂದ ತೆಗೆದುಕೊಂಡಿರುವ ಸಾಲವನ್ನು ಮತ್ತು ಬಡ್ಡಿಯನ್ನು ಸಹ ಮನ್ನಾ ಮಾಡಬೇಕಾಗುತ್ತದೆ. ಇವತ್ತು ಅಣೆವಾರು ಮಾಡಿ ಪರಿಹಾರವನ್ನು ಡಿಕ್ಲೇರ್ ಮಾಡಬೇಕಾಗುತ್ತದೆ. ತಾತ್ಕಾಲಿಕವಾಗಿ ಕುಡಿಯುವ ನೀರಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ಇದನ್ನು ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ. ಇವತ್ತು ವಿಶ್ವೇಶ್ವರಯ್ಯನವರು ಕೋಲಾರ ಜಿಲ್ಲೆಯಲ್ಲಿ ಹುಟ್ಟಿ ಮಂಡ್ಯ ಜಿಲ್ಲೆಯವರ ಕಷ್ಟವನ್ನು ನೋಡಲಾರದೇ ಕೆ.ಆರ್.ಎಸ್. ಡ್ಯಾಮ್ ಕಟ್ಟಿ ಮಂಡ್ಯ ಜಿಲ್ಲೆಯವರಿಗೆ ನೀರನ್ನು ಕೊಟ್ಟರು. ನಾವು ನಮ್ಮ ಕಷ್ಟವನ್ನು ಹೇಳಿಕೊಳ್ಳುತ್ತಿದ್ದೇವೆಯೇ ಹೊರತು ಬೇರೆ ಜಿಲ್ಲೆಯವರನ್ನು ನೋಡಿ ನಾವು ಅಸೂಯೆಪಟ್ಟುಕೊಳ್ಳುವುದಿಲ್ಲ. ಆದ್ದರಿಂದ ನಾನು ನಮ್ಮ ಬಯಲುಸೀಮೆ ಪ್ರದೇಶದ 73 ಜನ ಶಾಸಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಸರ್ಕಾರ 11ನೇ ತಾರೀಖು ಒಳಗೆ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿಗೆ 200 ಕೋಟಿ ರೂಪಾಯಿಗಳನ್ನು ಕೊಡದೇ ಹೋದರೆ ನಾವು ಬಂದು ಧರಣಿ ಕುಳಿತುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ಹೇಳಿ, ಸರ್ಕಾರ ಇದರ ಕಡೆ ಹೆಚ್ಚುಗಮನ ಕೊಡಬೇಕು, ಇದರ ಜೊತೆಗೆ 1983-84ರಲ್ಲಿ ಸರ್ಕಾರ ಗೋಶಾಲೆಗಳನ್ನು ತೆಗೆದಿದ್ದರು. ಆ ಗೋಶಾಲೆಗಳಲ್ಲಿ ಜಾನುವಾರುಗಳಿಗೆ ಸರ್ಕಾರದಿಂದಲೇ ಮೇವು ಕೊಟ್ಟು ಎಲ್ಲಾ ವ್ಯವಸ್ಥೆ ಮಾಡಿದರು. ಈ ರೀತಿಯಾದ ಭೀಕರ ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಸರ್ಕಾರದ ವತಿಯಿಂದ ಬೇಗ ಗೋಶಾಲೆಗಳನ್ನು ತೆರೆಯಬೇಕಾಗುತ್ತದೆ. ಗೋಶಾಲೆಗಳ ಮೂಲಕ ಗೋವುಗಳಿಗೆ ಹುಲ್ಲನ್ನು ಒದಗಿಸಿ ಆ ಗೋವುಗಳನ್ನು ಉಳಿಸಬೇಕಾಗುತ್ತದೆ. ಆಗಲೇ ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಹೇಳುತ್ತಿದ್ದರು, ನಮ್ಮಲ್ಲಿ ಈ ಹಿಂದೆ 4 ಲಕ್ಷ ಲೀಟರ್ ಪ್ರತಿದಿನ ಹಾಲು ಉತ್ಪತ್ತಿಯಾಗುತ್ತಿತ್ತು. ಆದರೆ ಇವತ್ತು ದಿನಂಪ್ರತಿ 3 ಲಕ್ಷ ಚಿಲ್ಲರೆ ಲೀಟರ್‌ಗೆ ಇಳಿದಿದೆ. ಅದಕ್ಕೆ ಕಾರಣ ಇಷ್ಟೇ, ನೀರು ಸಿಗುವುದಿಲ್ಲ ಹಸಿ ಮೇವು ಸಿಗುವುದಿಲ್ಲ. ಇದರ ಜೊತೆಗೆ ಹಸುಗಳಿಗೆ ಬೇಕಾಗಿರತಕ್ಕಂಥ ಬೂಸಾ ಇದೆಲ್ಲಾ ರೇಟುಗಳು ಗಗನಕ್ಕೆ ಏರಿವೆ. ಹೀಗಾಗಿ ಇವತ್ತು ನಮ್ಮ ಜಿಲ್ಲೆಯಲ್ಲಿ ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗಿದೆ. ಇವತ್ತು ಈಗಾಗಲೇ ಯಾರ್ಯಾರು ಗೊಬ್ಬರ ಹಾಕಿ ಬೀಜ ಬಿತ್ತಿ ಹಾಳಾಗಿದೆ ಅವರಿಗೆಲ್ಲಾ ಸರ್ಕಾರ ಪರಿಹಾರ ಕೊಡಬೇಕು. ಆ ಪರಿಹಾರವನ್ನು ಕೊಡುವಾಗ ಸರ್ಕಾರ ವಿಲೇಜ್ ಅಕೌಂಟೆಂಟ್, ಜಿಲ್ಲಾಧಿಕಾರಿ, ಮತ್ತು ಅಸಿಸ್ಟೆಂಟ್ ಕಮೀಷನರ್ ಅವರ ವರದಿ ನೋಡಿ ಪರಿಹಾರ ಕೊಡಬಾರದು, ಅಲ್ಲಿ ನಿಜವಾಗಿಯೂ ಏನು ಪರಿಸ್ಥಿತಿ ಇದೆ ಎನ್ನುವುದನ್ನು ನೋಡಿ ಅವರಿಗೆ ಪರಿಹಾರವನ್ನು ಕೊಡಬೇಕೆಂದು ಹೇಳಿ ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥಿಸುತ್ತಾ ಇದುವರೆಗೂ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ರೇವುನಾಯಕ್ ಬೆಳವಾಗಿ (ಕಮಲಾಪುರ): ಮಾನ್ಯ ಉಪಾಧ್ಯಕ್ಷರೇ, ನಮ್ಮ ನಾಯಕರು ಮತ್ತು ಅನೇಕ ಜನ ಹಿರಿಯ ಸದಸ್ಯರು ಬರಗಾಲಪೀಡಿತ ಬಗ್ಗೆ ಸಾಕಷ್ಟು ಸವಿಸ್ತಾರವಾಗಿ ಮಾತನಾಡಿದ್ದಾರೆ. ಆದರೆ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳಲಾರದೇ ನಾನು ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ಅಷ್ಟೇ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಗುಲ್ಬರ್ಗ ತಾಲ್ಲೂಕು ಮತ್ತು ಆಳಂದ್ ತಾಲ್ಲೂಕುಗಳಲ್ಲಿ ನಾನು ಪ್ರವಾಸ ಮಾಡಿದ್ದೇನೆ. ಆದರೆ ಎಲ್ಲಿಯೂ ಮಳೆ ಇಲ್ಲ ಬೆಳೆ ಇಲ್ಲ. ರೈತರು ಬೀಜ ಬಿತ್ತಿದ್ದಾರೆ. ಗೊಬ್ಬರ ಹಾಕಿದ್ದಾರೆ, ಆದರೆ ಬೆಳೆ ಇಲ್ಲದೆ ಅವರು ಭಯಬೀತರಾಗಿ ಬೀದಿಪಾಲಾಗಿದ್ದಾರೆ. ಕುಡಿಯುವ ನೀರು ಇಲ್ಲ, ಜಾನುವಾರುಗಳಿಗೆ ಮೇವು ಇಲ್ಲ, ನಾನು ಅನೇಕ ಹಳ್ಳಿಗಳಿಗೆ ಹೋದರೆ ಜಾನುವಾರುಗಳಿಗೆ ಹಾಕಲು ತಪ್ಪಲು ತರುತ್ತಿದ್ದಾರೆ. ಬೇವಿನ ತಪ್ಪಲು ಅಂತಹ ಇಂತಹ ತಪ್ಪಲು ತರುತ್ತಿದ್ದಾರೆ, ನಾನು ಕಣ್ಣಾರೆ ಕಂಡಿದ್ದೇನೆ. ದೊಂಗರ ಗ್ರಾಮಕ್ಕೆ ನಾನು ಹೋದರೆ ಕೂಲಿಕಾರ್ಮಿಕರು ದಲಿತರು ನನ್ನನ್ನು ಘೇರಾವು ಮಾಡಿ ಏನಾದರೂ ಮಾಡಿ ನಮ್ಮನ್ನು ಬದುಕಿಸಿ, ಯಾವುದಾದರೂ ಒಂದು ಕಾಮಗಾರಿ ತೆಗೆಯಿರಿ, ಇಲ್ಲದಿದ್ದರೆ ನಾವು ಜೀವನ ಸಾಗಿಸಲು ಏನು ಮಾಡಬೇಕು ಅಂತ ನನ್ನನ್ನು ಘೇರಾವು ಮಾಡಿದರು. ಮಾನ್ಯಅಧ್ಯಕ್ಷರೇ, ನಾನು ಕಂದಾಯ ಮಂತ್ರಿಗಳ ಮನವೊಲಿಸಿಕೊಂಡು ಅವರಿಗೆ ಒಂದು ಮನವಿ ಪತ್ರವನ್ನು ಸಹ ಕೊಟ್ಟಿದ್ದೇನೆ. ಆಗ ಅವರು ಒಂದು ಕೆಲಸವನ್ನು ಪ್ರಾರಂಭ ಮಾಡುತ್ತೇನೆಂದು ಹೇಳಿದರು. ನನ್ನ ಕ್ಷೇತ್ರದಲ್ಲಿ 4 ರೆವಿನ್ಯೂ ಸರ್ಕಲ್‌ಗಳು ಬರುತ್ತವೆ, ಅಲ್ಲಿ ಒಂದೊಂದು ಕಾಮಗಾರಿಯನ್ನು ಪ್ರಾರಂಭ ಮಾಡಿದರೆ ಆ ಕೂಲಿಕಾರ್ಮಿಕರು ಮತ್ತು ದಲಿತರು ಬದುಕಿಕೊಳ್ಳುತ್ತಾರೆಂದು ನಾನು ಹೇಳಿದ್ದೇನೆ. ನಾನು ಜಿಲ್ಲಾಧಿಕಾರಿಗಳನ್ನು ಕೇಳಿದಾಗ ಅವರು ಹೇಳಿದರು ಸರ್ಕಾರದಿಂದ ನಮಗೆ ಆದೇಶ ಬಂದಿಲ್ಲ ಆದೇಶ ಬಂದರೆ ನಾನು ಕೆಲಸ ಪ್ರಾರಂಭ ಮಾಡುತ್ತೇನೆಂದು ಹೇಳಿದ್ದಾರೆ. ಆದರೆ ಸ್ವತಃ ಜಿಲ್ಲಾಧಿಕಾರಿಗಳು ನನ್ನ ಕ್ಷೇತ್ರದಲ್ಲಿ ಪ್ರವಾಸ ಮಾಡಿದ್ದಾರೆ. ಅವರು ಸ್ವತಃ ಒಪ್ಪಿದ್ದಾರೆ. ಪೂರಾ ಬೆಳೆ ಹೋಗಿದೆ, ಮಳೆ ಇಲ್ಲ. ಜನ ಅಲ್ಲಿ ಕಂಗಾಲಾಗಿರುವ ಬಗ್ಗೆ ನಾನು ಸರ್ಕಾರಕ್ಕೆ ವರದಿ ಕಳುಹಿಸುತ್ತೇನೆಂದು ಹೇಳಿದ್ದಾರೆ. ಆದರೆ ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಈ ಸರ್ಕಾರ ಮಾಡುತ್ತೇನೆಂದು ಹೇಳುತ್ತಾರೆ ಆದರೆ ಮಾಡುವುದಿಲ್ಲ. ಮಾನ್ಯ ಅಧ್ಯಕ್ಷರೇ ಟ್ರೈನ್ ಹೋದ ಮೇಲೆ ಟಿಕೆಟ್ ತೆಗೆದುಕೊಂಡರೆ ಹೇಗೆ? ನಮ್ಮ ಕೂಲಿಕಾರ್ಮಿಕರು, ದಲಿತರು ಪರರಾಜ್ಯಗಳಿಗೆ ವಲಸೆ ಹೋಗಬೇಕೆಂದು ಹೇಳುತ್ತಾರೆ. ಸಧ್ಯದಲ್ಲಿಯೇ ಸರ್ಕಾರ ಕೆಲಸ ಪ್ರಾರಂಭ ಮಾಡಿದರೆ ಆ ಜನ ಇಲ್ಲೇ ಉಳಿಯುತ್ತಾರೆ. ಮಾನ್ಯ ಅಧ್ಯಕ್ಷರೇ ಸಚಿವರು ಶಾಸಕರು ಇರಲಿ ಸರ್ಕಾರಿ ನೌಕರರು ಇರಲಿ ಅವರು ತಿಂಗಳಿಗೊಮ್ಮೆ ಪಗಾರ ತೆಗೆದುಕೊಳ್ಳುತ್ತಾರೆ. ಆ ರೈತರು ಪಾಪ ಒಂದು ವರ್ಷಕ್ಕೆ ಒಂದು ಬೆಳೆ ಮಾಡುತ್ತಿದ್ದಾರೆ. ಅವರ ಬೆಳೆ ಎಲ್ಲಾಹೋಗಿದೆ ಅವರು ಯಾವ ರೀತಿ ಜೀವನ ಮಾಡಬೇಕು ಎನ್ನುವ ಚಿಂತನೆ ಆಗಿದೆ. ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು ಎಂದು ಖಡಾಖಂಡಿತವಾಗಿ ನೊಂದು ಅವರಿಗೆ ಹೇಳುತ್ತಿದ್ದೇನೆ.

ಹಿರಿಯರು ಒಂದು ಮಾತು ಹೇಳಿದ್ದಾರೆ. ಮನೆಯಲ್ಲಿ ಮಕ್ಕಳು ಹೆಚ್ಚಾದರೆ ಮನೆಯಲ್ಲಿ ಫ್ಯಾಮಿಲಿ ಪ್ಲಾನಿಂಗ್ ಪ್ರಕಾರ ಮೂರು ಮಕ್ಕಳು ಮನೆಯಲ್ಲಿರಬೇಕೆಂದು, ಮನೆಯಲ್ಲಿ ಇಟ್ಟುಕೊಂಡು ಹೆಚ್ಚಿಗೆ ಮಕ್ಕಳಾದರೆ ದವಾಖಾನೆಗೆ ತೋರಿಸದೆ ಒಂದೊಂದು ಕೊಲ್ಲಿರಿ ಅಂತ. ಲಾಸ್ಟಿಗೆ 13 ಮಕ್ಕಳಲ್ಲಿ 4 ಮಕ್ಕಳು ಉಳಿಯುತ್ತವೆ. ಒಂದು ದಿವಸ ಆ ನಾಲ್ಕು ಮಕ್ಕಳು ಖಾಯಿಲೆ ಬಂದು ಸತ್ತು ಹೋದರಂತೆ. ಎಲ್ಲಾ ಜನ ಸತ್ತು ಹೋದರೆ ಹಿಂದಾಗಡೆ ಆ ತಾಯಿಯಂದಿರು ಅಳುತ್ತಿದ್ದರಂತೆ. ಆ ಪ್ರಕಾರ ಈ ಸರ್ಕಾರ ಮಾಡಬಾರದು. ತಕ್ಷಣವೇ ರಕ್ಷಣೆಯನ್ನು ಕೊಡಬೇಕು, ಕೂಲಿಕಾರರಿಗೆ ಕೆಲಸ ಸಿಗುವಂತೆ ಮಾಡಬೇಕು, ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು, ಜಾನುವಾರಗಳಿಗೆ ಮೇವನ್ನು ಪೂರೈಸಬೆಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

+ ಡಾ|| ಎ.ಬಿ.ಮಲಕರೆಡ್ಡಿ (ಯಾದಗೀರ್): ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಾಕಷ್ಟು ಮಿತ್ರರು ಇದರ ಬಗ್ಗೆ ಮಾತನಾಡಿದ್ದಾರೆ. ಆದರೆ ಒಂದು ವಿಷಯವನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದು ನನ್ನ ಭಾಗಕ್ಕೆ ಸಂಬಂಧಪಟ್ಟದ್ದು. ಗುಲ್ಬರ್ಗಾ ಜಿಲ್ಲೆಯಲ್ಲಿ 1972ರಿಂದ ಇಲ್ಲಿಯವರೆಗೆ ಯಾವುದೇ ರೀತಿ ಸರಾಸರಿ ರೇನ್‌ಫಾಲ್ ಆದದ್ದು 16 ಇಂಚಿಸ್ ಹೆಚ್ಚೆಂದರೆ 20 ಇಂಚು. ಅಂದಮೇಲೆ ಗುಲ್ಬರ್ಗಾ ಜಿಲ್ಲೆಯಲ್ಲಿ ಮಾಡತಕ್ಕಂಥ ರೈತರ ಪರಿಸ್ಥಿತಿ ಬಹಳ ಕ್ರಿಟಿಕಲ್ ಇದೆ. ಅದರಲ್ಲಿ ಇಂತಹ ಒಂದು ಅಭಾವ ಪರಿಸ್ಥಿತಿಯಲ್ಲಿರತಕ್ಕಂಥ ಜನರಿಗೆ ಪೂರ್ಣ ಮಳೆ ಹೋಗಿದ್ದಕ್ಕಾಗಿ ಅಲ್ಲಿ ಮೂರು ವರ್ಗದ ಜನರಿಗೆ ಬಹಳ ತೊಂದರೆಯಾಗಿದೆ. ಒಂದನೆಯದು ಕೃಷಿಕರಿಗೆ, ಎರಡನೆಯದು ಕೃಷಿ ಅವಲಂಬಿತ ಕಾರ್ಮಿಕರಿಗೆ ಮೂರನೆಯದು ಜಾನುವಾರುಗಳಿಗೆ. ಈ ಮೂರು ವರ್ಗಕ್ಕೆ ವಿಪರೀತ ತೊಂದರೆಯಾಗಿದೆ. ಗುಲ್ಬರ್ಗಾಕ್ಕೆ ವಿಶೇಷವಾಗಿ ನಿಜಾಮರ ಕಾಲದಿಂದ ಇದು ಅಭಾವಕ್ಕೆ ತುತ್ತಾಗಿರತಕ್ಕಂಥ ಜಿಲ್ಲೆ ಎಂದು ತಿಳಿದುಕೊಂಡು ಅಲ್ಲಿ ವಿಶೇಷವಾಗಿ ಕೆರೆಗಳು ನಿರ್ಮಾಣವಾಗಿವೆ. ಚೆನ್ನಾಗಿ 16 ಇಂಚಿಸ್ ಮಳೆ ಬಂದರೂ ಕೂಡ ಆ ಕೆರೆ ತುಂಬುವಂಥಹ ವ್ಯವಸ್ಥೆ ಏನು ಇದೆ ಆ ವ್ಯವಸ್ಥೆಯನ್ನು ಮಾಡಿದ್ದಾರೆ. ಈ ಎಲ್ಲ ಕೆರೆಗಳಲ್ಲಿ ಒಂದು 10 ದಿವಸ ಆಗುವಷ್ಟು ನೀರು ಶೇಕರಣೆ ಕೂಡ ಆಗಿಲ್ಲ. ಹೀಗಾಗಿ ಜಾನುವಾರುಗಳಿಗೆ ನೀರಿನ ತೊಂದರೆಯಾಗಿದೆ, ಮೇವಿನ ತೊಂದರೆಯಾಗಿದೆ. ರೈತ ಅಲ್ಪಸ್ವಲ್ಪ, ಮುಂಜಾನೆ ವಿರೋಧ ಪಕ್ಷದ ನಾಯಕರು ಅಂಕಿ ಅಂಶ ಆಧಾರದ ಮೇಲೆ ಹೇಳಿದರು. ಈಗ 20 ಪರ್ಸೆಂಟು ರಾಯಚೂರದಲ್ಲಿ ಬಿತ್ತನೆಯಾಗಿದೆ. ಬೀದರ್‌ದಲ್ಲಿ 60 ಪರ್ಸೆಂಟು ಅಂತ ಹೇಳಿದರು, ಗುಲ್ಬರ್ಗಾದಲ್ಲಿ 22 ರಿಂದ 30 ಪರ್ಸೆಂಟು ಅಂತ ಹೇಳಿದರು. ಆದರೆ 22 ರಿಂದ 30 ಪರ್ಸೆಂಟು ಬಿತ್ತನೆಯಾದರೂ ಕೂಡ ಸುಮಾರು 2 1/2 ತಿಂಗಳಿಂದ ಒಂದು ಇಂಚ್ ಮಳೆಯಾಗಿಲ್ಲ. ಹೀಗಾಗಿ ರೈತ ತನ್ನ ಬೀಜವನ್ನು ಹಾಳು ಮಾಡಿಕೊಂಡನು, ಗೊಬ್ಬರವನ್ನು ಹಾಳುಮಾಡಿಕೊಂಡನು, ಸಂಪೂರ್ಣವಾಗಿ ರೈತರು

ಕಂಗಾಲಾಗಿದ್ದಾರೆ. ಅವನಿಗೆ ತಾವು ಯಾವರೀತಿ ಪರಿಹಾರವನ್ನು ಒದಗಿಸಿಕೊಡುತ್ತೀರಿ. ಅದನ್ನು ಆಲೋಚನೆ ಮಾಡಬೇಕು. ಕಾರ್ಮಿಕರಿಗೆ ಈಗ ತುರ್ತಾಗಿ ಕೆಲಸವನ್ನು ತೆಗೆದುಕೊಳ್ಳಬೇಕು, ನಾನು ಡಿಟೇಲಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ತಾವು ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಿ. ಹೋದಸಲ ಹೇಳಿದರು, ಒಂದು ಗಮನ ಸೆಳೆಯುವ ಸೂಚನೆ ಬಂದಾಗ ಕೇಂದ್ರದ ಮಂತ್ರಿಗಳು ಹೇಳಿದರು. ಇಲ್ಲ, ಜವಾಹರ ರೋಜಗಾರ್ ಯೋಜನೆಯಲ್ಲಿ ಸಾಕಷ್ಟು ಹಣ ಇದೆ. ಎಲ್ಲರಿಗೂ ಸೂಚನೆ ಕೊಟ್ಟಿದ್ದೇವೆ, ಅವರು ಕೆಲಸ ತೆಗೆದುಕೊಳ್ಳುತ್ತಾರೆಂದು ಹೇಳಿದರು, ನನಗೆ ತಿಳಿದಮಟ್ಟಿಗೆ ಅದರ ಏನು ಚಟುವಟಿಕೆ ಕಾಣುತ್ತಿಲ್ಲ. ಅದಕ್ಕೆ ಏನು ತೊಂದರೆ ಇದೆ ಗೊತ್ತಾಗಲಿಲ್ಲ. ಈಗ ಎಂಪ್ಲಾಯಿಮೆಂಟ್ ಅಫರ್‌ಮೇಷನ್ ಸ್ಕೀಮ್‌ನಲ್ಲಿ ಕೂಡ ಪ್ರತಿಯೊಂದು ತಾಲ್ಲೂಕು ಮಟ್ಟಕ್ಕೆ ಒಂದೊಂದು ಕೋಟಿ ರೂಪಾಯಿ ಖರ್ಚು ಮಾಡುವಂಥ ಒಂದು ಯೋಜನೆ ಇದೆ. ಅದರಲ್ಲೂ ಕೂಡ ಯಾವ ಕಾರ್ಯಕ್ರಮವೂ ಇಲ್ಲ. ಸೆಂಟ್ರಲ್ ಗೌರ್ನಮೆಂಟ್ ಹಣ ಬಂದಿಲ್ಲವೋ, ಅಥವಾ ಆ ಹಣ ಬರುತ್ತದೆ, ಆದರೆ ಸ್ಟೇಟ್ ಗೌರನ್‌ಮೆಂಟ್ ಆದರೂ ಹಣವನ್ನು ಖರ್ಚು ಮಾಡಿ ತತ್‌ಕ್ಷಣ ಎಂಪ್ಲಾಯಿಮೆಂಟ್ ಅಫರ್‌ಮೇಶನ್ ಸ್ಕೀಮ್‌ನಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಆಮೇಲೆ ನೀರಿನ ತೊಂದರೆ ಇದೆ, ಜಾನುವಾರುಗಳಿಗೆ ತೊಂದರೆ ಮತ್ತು ಜನರಿಗೂ ಕೂಡ ಬಹಳ ನೀರಿನ ತೊಂದರೆಯಾಗುತ್ತಿದೆ. ವಾಟರ್ ಲೆವಲ್ ಕೆಳಗೆ ಹೋಗುತ್ತಿದೆ, ಇದುವರೆಗೆ ಇದ್ದ ಬೋರ್‌ವೆಲ್‌ಗಳಲ್ಲಿ ನೀರು ಬರುತ್ತಿಲ್ಲ. ಅದಕ್ಕಾಗಿ ಒಂದು ವಿಶೇಷ ಯೋಜನೆ ಹಾಕಿಕೊಂಡು ಜನರಿಗೆ ನೀರನ್ನು ತಕ್ಷಣ ಒದಗಿಸಿಕೊಡುವಂಥ ಯೋಜನೆಯನ್ನು ಸರ್ಕಾರ ಕೈಗೊಳ್ಳಬೇಕು. ನಾಲ್ಕನೆಯದಾಗಿ ಯಾವಾಗಲೂ ಈ ಕ್ರಾನಿಕ್ಕಾಗಿ ಈ ಅಭಾವ ಪರಿಸ್ಥಿತಿ ಇರುವ ಜಿಲ್ಲೆಗಳು ಏನು ಇರುತ್ತವೆ ರೈತರಿಗೆ ಒಂದು ವೈಜ್ಞಾನಿಕವಾಗಿ ಒಂದು ಮಾಹಿತಿಯನ್ನು ಕೊಡತಕ್ಕಂಥದ್ದು, ಅಥವಾ ಅವರು ಯಾವ ಬೆಳೆಯನ್ನು ಅವರು ಬೆಳೆಯಬೇಕು. ಎನ್ನುವಂಥ ಒಂದು ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಂಡು 8, 9, 10 ಇಂಚು ಮಳೆಯಾದರೂ ಕೂಡ ಆ ಬೆಳೆಯತಕ್ಕಂಥ ಒಂದು ವ್ಯವಸ್ಥೆಯಾಗಬೇಕು. ಮತ್ತು ಸಾಯಿಲ್ ಕನ್ಸರ್‌ವೇಶನ್ ಡಿಪಾರ್ಟ್‌ಮೆಂಟ್‌ದವರು ಯಾವರೀತಿ ಸ್ವಾಯಿಲ್ ಕನ್ಸರ್‌ವೇಶನ್ ಮಾಡಿದರೆ ಅಲ್ಪಮಳೆ ಬಂದರೂ ಕೂಡ ನೀರನ್ನು ತಮ್ಮ ಹೊಲದಲ್ಲಿ ಶೇಖರಣೆ ಮಾಡಲಿಕ್ಕೆ ಸಾಧ್ಯವಿದೆ, ಅಥವಾ ಒಂದೆರಡು ಮೂರು ತಿಂಗಳು ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ ಅಂಥ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ತಮ್ಮ ಮುಖಾಂತರ ನಾನು ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಶಿವಾನಂದ ಎಸ್.ಪಾಟೀಲ್ (ತಿಕೋಟಾ): ಮಾನ್ಯ ಉಪಾಧ್ಯಕ್ಷರೆ, ಕೊನೆಯ ಪಕ್ಷ ನೀವು ಇದ್ದಾಗ ಆದರೂ ಹಿಂದಿನ ಬೆಂಚಿನವರಿಗೆ ಅವಕಾಶ ಸಿಕ್ಕಿತು ಅದಕ್ಕೆ ನಿಮಗೆ ಧನ್ಯವಾದಗಳನ್ನು ಹೇಳಬೇಕಾಗುತ್ತದೆ. ಬೆಳಗ್ಗಿನಿಂದ ಬರಗಾಲದ ಬಗ್ಗೆ

ಚರ್ಚೆಯಾಗುತ್ತಿದೆ ವಿರೋಧ ಪಕ್ಷದ ನಾಯಕರು ಹಾಗೂ ಅನೇಕ ಗಣ್ಯರು ಮಾತನಾಡಿದರು ಆದರೆ. ನಮ್ಮ ಜಿಲ್ಲೆಯಲ್ಲಿ ಬಹುತೇಕ ಕಂದಾಯ ಮಂತ್ರಿಗಳು ಇದ್ದಾರೆಂದು ಬರಗಾಲ ಇಲ್ಲವೆಂದು ತಿಳಿದುಕೊಂಡಿದ್ದಾರೆಂದು ನನಗೆ ಅನಿಸುತ್ತದೆ. ಹೆಚ್ಚಿಗ ಬರಗಾಲ ಇರುವುದು ಕಂದಾಯ ಸಚಿವರ ಜಿಲ್ಲೆಯಲ್ಲಿ ಎನ್ನುವುದು ಸ್ವಲ್ಪ ನನಗೆ ಅನಿಸುತ್ತದೆ. ಕಂದಾಯ ಸಚಿವರಿಗೆ ಸ್ವಂತ ತಿಳಿದಿರಬಹುದು ಆದರೂ ಈ ಸಭೆಯಲ್ಲಿ ಎಲ್ಲರಿಗೂ ತಿಳಿಯಬೇಕು. ಏಕೆಂದರೆ ಈಗಾಗಲೇ ಮಾಧುಸ್ವಾಮಿ ಮತ್ತು ಶ್ರೀನಿವಾಸ್‌ರವರು ಮಾತನಾಡುವಂಥ ಸಂದರ್ಭದಲ್ಲಿ ಬರೀ ಕೋಲಾರ, ಮತ್ತು ತುಮಕೂರು ಅಂತ ಹೇಳಿದರು. ನಮ್ಮಲ್ಲಿ ಈ ಸಾರಿ ಕನಿಷ್ಟ 6 ಲಕ್ಷ 25 ಸಾವಿರ ಹೆಕ್ಟೇರ್ ಜಮೀನು ಈ ಸಲ ಮುಂಗಾರು ಬಿತ್ತನೆಗೆ ಆಗತಕ್ಕಂಥ ಜಮೀನಿನಲ್ಲಿ, ಕನಿಷ್ಟ 3 ಲಕ್ಷ 27 ಸಾವಿರ ಹೆಕ್ಟೇರ್ ಜಮೀನನ್ನು ಬಿತ್ತನೆಯನ್ನು ರೈತರು ಮಾಡಿದ್ದರು. ಅದರಲ್ಲಿ ನಿಮಗೆ ವಿಚಿತ್ರ ಅನಿಸುತ್ತದೆ, ಜೂನ್‌ನಲ್ಲಿ ಆದಂತಹ ಮಳೆಯನ್ನು ಬಿಟ್ಟರೆ ಜುಲೈ ಮತ್ತು ಆಗಸ್ಟ್‌ನಲ್ಲಿ ಈ 3 ಲಕ್ಷ 27 ಸಾವಿರ ಹೆಕ್ಟೇರ್ ಬಿತ್ತಿದಂಥ ಜಮೀನನ್ನು ಪುನಃ ರೈತರು ಅದನ್ನು ಮುರಿದು ಈ ಸಂದರ್ಭದಲ್ಲಿ ಮಳೆ ಇಲ್ಲದೆ ಹಾಕಿದ ಬೀಜವನ್ನು ಕಳೆದುಕೊಂಡರು ಮತ್ತು ಈ 3 ಲಕ್ಷ ಹೆಕ್ಟೇರ್‌ಕ್ಕಿಂತ ಹೆಚ್ಚಿನ ಜಮೀನನ್ನು ಇವತ್ತು ಪುನಃ ಬಿತ್ತನೆಯನ್ನು ಮುರಿದಂಥ ಪರಿಸ್ಥಿತಿ, ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲಿ ಎಲ್ಲಾದರೂ ಇದ್ದರೆ ಅದು ಬಿಜಾಪುರ ಜಿಲ್ಲೆಯಲ್ಲಿ ಅಂತ ಹೇಳಿ ತಮ್ಮ ಗಮನಕ್ಕೆ ನಾನು ತರಲಿಕ್ಕೆ ಇಚ್ಛಿಪಡುತ್ತೇನೆ. ಮತ್ತು ಈಗಾಗಲೇ ಮಾಧುಸ್ವಾಮಿಯವರು ಕೂಡ ಬಹಳ ಉಪಯುಕ್ತವಾದಂಥ ಒಂದು ಸಲಹೆಯನ್ನು ಕೊಟ್ಟರು. ಮೇವು ಸಾಕಾಣಿಕೆ ಬಗ್ಗೆ ನಿಮಗೆ ಹೇಳಬೇಕಾದರೆ, ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಮೇವು ಸಾಕಷ್ಟು ಬೆಳೆಯುತ್ತೇವೆ, ಆದರೆ ನಮ್ಮ ಮೇವು ಇಲ್ಲಿಂದ ಮಹಾರಾಷ್ಟ್ರಕ್ಕೆ ಇಲ್ಲಿಂದ ಕಮರ್ಷಿಯಲ್ ರೇಟಿಗೆ ಮಾರಿಕೊಳ್ಳಲಿಕ್ಕೆ ರೈತರು ಅವಲಂಬನೆಯಾಗಿ ಅಥವಾ ಅಲ್ಲಿಯ ರೈತರ ಮನವೊಲಿಸಿ ಅಲ್ಲಿಯ ವ್ಯಾಪಾರಸ್ಥರು ಬಂದು ಎಷ್ಟೋ ಮೇವು ಬಿಜಾಪುರ ಜಿಲ್ಲೆಯಿಂದ ಮಹಾರಾಷ್ಟ್ರಕ್ಕೆ ಅಂದರೆ ಸೋಲ್ಲಾಪೂರಕ್ಕಾಗಲಿ, ಅಥವಾ ಕೊಲ್ಲಾಪೂರಕ್ಕಾಗಲಿ ಹೋಗತಕ್ಕಂಥ ಪರಿಸ್ಥಿತಿ ವರ್ಷ ವರ್ಷ ಉದ್ಭವವಾಗುತ್ತಿರುತ್ತದೆ, ಅದು ಈ ಸಾರಿಯಂತು ತೀವ್ರವಾಗಿ ಉದ್ಭವವಾಗಿದೆ. ಇದರಲ್ಲಿ ಎಲ್ಲಕ್ಕಿಂತ ನಾವು ಹೆಚ್ಚಿಗೆ ಹೇಳಬೇಕಾದರೆ, ಇನ್ನೊಂದು ವಿಚಾರ ಬೆಳಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇದ್ದಾಗೆ ಒಂದು ವಿಚಾರ ಪ್ರಸ್ತಾಪಕ್ಕೆ ಬಂತು. ಇದು ಗ್ರೇ ಮತ್ತು ಡಾರ್ಕ್ ಏರಿಯಾ ಅಂತ ಡಿಕ್ಲೇರ್ ಮಾಡಿರತಕ್ಕಂಥದ್ದು ಸಂಪೂರ್ಣ ಅವೈಜ್ಞಾನಿಕವಾಗಿ ಆಗಿರತಕ್ಕಂಥ ವಿಚಾರ. ಆದರೆ ನಮ್ಮ ಜಿಲ್ಲೆಯಲ್ಲಿ ನಮ್ಮ ಮೂರು ತಾಲ್ಲೂಕಿನಲ್ಲಿ ಇವತ್ತು ಮಾನ್ಯ ಕಂದಾಯ ಸಚಿವರ ತಾಲ್ಲೂಕನ್ನು ಕೂಡ ಡಾರ್ಕ್ ಎಂದು ಡಿಕ್ಲೇರ್ ಮಾಡಿದ್ದಾರೆ. ಅದು ಬಿಜಾಪುರ ತಾಲ್ಲೂಕು ಬಸವನ ಬಾಗೇವಾಡಿ ತಾಲ್ಲೂಕನ್ನು ಗ್ರೇ ಅಂತ ಡಿಕ್ಲೇರ್ ಮಾಡಿ ರೈತರು ಇದ್ದಷ್ಟು ಏನಾದರೂ ಬೋರ್ ಇದ್ದರೆ ಬೋರ್ ಹಾಕಿಕೊಂಡು ಅಥವಾ ಬಾವಿಯನ್ನು ಹಾಕಿಕೊಂಡು ಬೇರೆ ಉಳುಮೆ ಮಾಡಬೇಕಾದರೆ ಅದನ್ನು ಕೂಡ ಇವತ್ತು

ಕಳೆದುಕೊಂಡಂಥ ದುರ್ಬಲದ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿಯ ನಮ್ಮ ತಾಲ್ಲೂಕುಗಳಲ್ಲಿ ಒದಗಿದೆ. ಅದರಲ್ಲಿ ವಿಶೇಷವಾಗಿ ನಮ್ಮ ಕಂದಾಯ ಮಂತ್ರಿಗಳ ತಾಲ್ಲೂಕವೇ ಕೂಡ ಇವತ್ತು ಡಾರ್ಕ್ ಅಂತ ಡಿಕ್ಲೇರ್ ಆಗಿದೆ. ಅಲ್ಲಿ ಯಾವ ಬ್ಯಾಂಕಿನವರು ಲೋನ್ ಕೊಡುವುದಿಲ್ಲ, ರೈತರು ಸ್ವಲ್ಪ ಏನಾದರೂ ಪಂಪ್‌ಸೆಟ್ ಹಾಕಿಕೊಂಡು ಸ್ವಲ್ಪ ಉಳುಮೆ ಮಾಡಬೇಕಾದರೆ ಅವನ ಪರಿಸ್ಥಿತಿ ಸಂಪೂರ್ಣ ಹದಗೆಟ್ಟು ಹೋಗಿದೆ. ಇದೆಲ್ಲಕ್ಕಿಂತ ವಿಚಿತ್ರವೆಂದರೆ, ನಮ್ಮಲ್ಲಿ ಮಳೆ ಇಲ್ಲ, ನೀರು ಇಲ್ಲವೆಂದು ನಾವು ಹೇಳುತ್ತೇವೆ. ಈ ಸಾರಿ ಭೀಮಾನದಿಯನ್ನು ನಾವು 11 ವರ್ಷದ ನಂತರ ನೋಡುತ್ತಿದ್ದೇವೆ, ಭೀಮಾನದಿ ಬಂದು ಇವತ್ತು 22 ಹಳ್ಳಿಗಳನ್ನು ಕೊಚ್ಚಿಕೊಂಡ ಹೋದ ಪರಿಸ್ಥಿತಿ ಬಂದಿದೆ. ಇನ್ನೊಂದು ಕಡೆ ಕೃಷ್ಣಾನದಿ ಬಂದು ಒಂದು ತಿಂಗಳವರೆಗೆ 45 ರಿಂದ 50 ಹಳ್ಳಿಗಳನ್ನು ಕೊಚ್ಚಿಕೊಂಡ ಹೋದ ಪರಿಸ್ಥಿತಿ ಇವತ್ತು ಬಂದಿದೆ. ಇದೆಲ್ಲವನ್ನು ನೋಡಿದರೆ ನನಗೆ ಅನಿಸುತ್ತದೆ ಕಂದಾಯ ಮಂತ್ರಿಗಳು ಇಲ್ಲಿಯವರೆಗೆ ಈ ಬರಕಾಮಗಾರಿ ಪರಿಹಾರ ನಿಧಿಯನ್ನು ರೀಲೀಜ್ ಮಾಡಿದ್ದು ಇಡೀ ರಾಜ್ಯದಲ್ಲಿ 7-8 ಜಿಲ್ಲೆಗಳಿಗೆ ಮಾಡಿದ್ದಾರೆ. ಬಿಜಾಪುರಕ್ಕೆ ಏಕೆ ಅವರು ಮಾಡಿಲ್ಲವೆಂದು ನನಗೆ ಗೊತ್ತಾಗುತ್ತಿಲ್ಲ. ಆದಷ್ಟು ತೀವ್ರವಾಗಿ ಅವರು ಪ್ರಯತ್ನ ಪಟ್ಟು ಬಿಜಾಪುರ ಜಿಲ್ಲೆ ಕೂಡ ಬರಗಾಲ ಪರಿಸ್ಥಿತಿಯ ಜಿಲ್ಲೆ ಅಂತ ಅಂದುಕೊಂಡು ಸರ್ಕಾರದ ಗಮನಕ್ಕೆ ಅವರೇ ತಂದರೆ ಬಹಳ ಒಳ್ಳೆಯದೆನಿಸುತ್ತದೆ. ಏಕೆಂದರೆ ಅವರ ಜಿಲ್ಲೆಯೇ ಈ ಪರಿಸ್ಥಿತಿಯಲ್ಲಿ ಸಿಕ್ಕು ಇವತ್ತು ಒದ್ದಾಡುತ್ತಿರತಕ್ಕಂಥ ಈ ಸಂದರ್ಭದಲ್ಲಿ ಸದನಕ್ಕೆ ತಪ್ಪು ಕಲ್ಪನೆಗೆ ಬರಬಾರದು. ಕಪ್ಪು ಮತ್ತು ಬೂದು ಬಣ್ಣ ಅಂತ ತಾಲ್ಲೂಕುಗಳನ್ನು ಡಿಕ್ಲೇರ್ ಮಾಡಿದ್ದು ಇದು ಸಂಪೂರ್ಣವಾಗಿ ಅವೈಜ್ಞಾನಿಕವಾಗಿರತಕ್ಕಂಥದ್ದು ಅದು. ಏನೋ ನಮ್ಮಲ್ಲಿ ಕೆಲವು ತೋಟಗಾರಿಕೆ ಬೆಳೆಗಳನ್ನು ಕೆಲವೊಂದು ಏರಿಯಾಗಳಲ್ಲಿ ನಾವು ಬೆಳೆಯುತ್ತಿದ್ದೇವೆ. ಅದನ್ನು ಉಳಿಸಿಕೊಂಡು ಹೋಗಬೇಕು ಅದನ್ನು ಇನ್ನಷ್ಟು ಹೆಚ್ಚಿಗೆ ಅದು ಆಗಬೇಕಾದರೆ ಸ್ವಲ್ಪ ನನಗೆ ಅನಿಸುತ್ತದೆ, ಅದರ ಬಗ್ಗೆ ಮರು ಚಿಂತನೆಯಾಗಬೇಕು ಎನ್ನುವುದು ಅವಶ್ಯಕ. ಅದನ್ನು ಸ್ವಲ್ಪ ವಿಚಾರವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಕಳಕಳಿಯಿಂದ ನಾನು ಕೇಳಿಕೊಂಡು, ಶ್ರೀನಿವಾಸರವರು ಹೇಳಿದರು. ಬಯಲು ಸೀಮೆಯ ಬಗ್ಗೆ ನಾವು 73 ಜನ ಶಾಸಕರು ಬಯಲು ಸೀಮೆಯಲ್ಲಿ ಬರುತ್ತಿದ್ದೇವೆ ಎಂದು ಅದರಲ್ಲಿ ಇನ್ನೊಂದು ನ್ಯೂನತೆ ಇದೆ. ನಗರ ಶಾಸಕರು ಕೂಡ ಇವತ್ತು ಬಯಲು ಸೀಮೆಯಲ್ಲಿ ಬಂದಿದ್ದಾರೆ ಇವತ್ತು. ಗ್ರಾಮೀಣ ಶಾಸಕರಲ್ಲ. ಯಾವ ಶಾಸಕರಿಗೆ ಇವತ್ತು ನಗರದ ಸಂಪೂರ್ಣವಾಗಿ 80ರಷ್ಟು 90 ರಷ್ಟು ಭಾಗ ಬರುತ್ತದೆ, ಅವರು ಕೂಡ ಬಯಲು ಸೀಮೆಯಲ್ಲಿ ಹಕ್ಕುದಾರರು ಮತ್ತು ಪಾಲುದಾರರು; ನಮಗೆ 3 ಲಕ್ಷ ಬಂದರೆ ಅವರಿಗೂ 3 ಲಕ್ಷ ರೂಪಾಯಿಗಳನ್ನು ಕೊಡಬೇಕು. ಅವರು ಆ ಹಣವನ್ನು ಒಯ್ದು ನಗರದಲ್ಲಿ ಖರ್ಚು ಮಾಡುತ್ತಾರೆ. ಇದು ಅಂತು ಒಂದು ಕಡೆಯಾಯಿತು. ಆದರೆ ಬಯಲು ಸೀಮೆಗೆ ಮತ್ತು ಹೆಚ್.ಕೆ.ಡಿ.ಬಿ.ಗೆ ನಾವು ಹೋಲಿಸಿ ನೋಡಿದರೆ ಸಂಪೂರ್ಣವಾಗಿ ಸರ್ಕಾರ ತಾರತಮ್ಯ ಮಾಡುತ್ತಿದೆ. ಬಯಲು ಸೀಮೆಯಲ್ಲಿ ಬರತಕ್ಕಂಥ ಬಹುಸಂಖ್ಯಾತ ನಾವೆಲ್ಲ

ಶಾಸಕರು ಬಹಳ ಮುಖ್ಯವಾಗಿ ಈ ಸಂದರ್ಭದಲ್ಲಿ ಕಳಕಳಿಯಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಹಿರಿಯ ಸಚಿವರನ್ನು ಕೇಳಿಕೊಳ್ಳುವುದು ಇಷ್ಟೆ ನಮ್ಮ ಬಯಲು ಸೀಮೆಯ ಅಭಿವೃದ್ಧಿ ಮಂಡಳಿಯನ್ನು ತಾವು ಅಭಿವೃದ್ಧಿ ಮಾಡದೆ ಹೋದರೆ ನಾವೆಲ್ಲಾ ಶಾಸಕರು ಒಂದಾಗಿ ಪಕ್ಷಾತೀತವಾಗಿ ಹೋರಾಟಕ್ಕೆ ಇಳಿಯಬೇಕಾದಂಥ ಪರಿಸ್ಥಿತಿ ಬರಬಹುದು. ಇದನ್ನು ತಾವು ದಯವಿಟ್ಟು ಗಮನದಲ್ಲಿ ಇಟ್ಟುಕೊಂಡು ಬಯಲು ಸೀಮೆಗೆ ಸಂಪೂರ್ಣವಾದ ಹಣವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ತಾವು ಈ ಸಂದರ್ಭದಲ್ಲಿ ಮಾಡುತ್ತೀರೆಂದು ತಮ್ಮಲ್ಲಿ ಕಳಕಳಿಯ ಮನವಿಯನ್ನು ಮಾಡಿಕೊಂಡು ಮತ್ತು ಇವತ್ತು ಮಾನ್ಯ ಕಂದಾಯ ಮಂತ್ರಿಗಳು ತಮ್ಮ ಜಿಲ್ಲೆಯನ್ನು ಮರೆಯಲಾರದೆ, ತಮ್ಮ ಜಿಲ್ಲೆಯಲ್ಲಿಯೇ ಭಯಂಕರ ಭೀಕರವಾದಂಥ ಬರಗಾಲ ಇದೆ. ಏಕೆಂದರೆ ನೂರಕ್ಕೆ ಎಪ್ಪತ್ತೈದರಷ್ಟು ಬಿತ್ತನೆ ಮಾಡಿದಂಥ ಭೂಮಿಯನ್ನು ಪುನಃ ಇವತ್ತು ರೈತ ಎಲ್ಲಾ ಹರಗಿ ಹಾಳು ಮಾಡಿದ್ದಾನೆ. ಅದನ್ನು ತಮ್ಮ ಗಮನದಲ್ಲಿಟ್ಟುಕೊಂಡು ಉತ್ತರ ಕೊಡುವಾಗ ಬಿಜಾಪುರ ಜಿಲ್ಲೆ ಬಗ್ಗೆ ತಾವು ಸವಿಸ್ತಾರವಾಗಿ ಉತ್ತರವನ್ನು ಕೊಡುತ್ತೀರೆಂದು ಈ ಸಂದರ್ಭದಲ್ಲಿ ಕೇಳಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

6.20 ಪಿ.ಎಂ

+ ಶ್ರೀ ಗುತ್ತೇದಾರ್ ಸುಭಾಶ್ (ಅಳಂದ್): ಮಾನ್ಯ ಅಧ್ಯಕ್ಷರೆ, ನಮ್ಮ ಕಡೆ ಬರಗಾಲ ಬಂದಿರುವುದರಿಂದ ಅಳಂದ್ ತಾಲ್ಲೂಕಿನ ರೈತರುಗಳು ಕಂಗಾಲಾಗಿದ್ದಾರೆ. ಜೂನ್ ತಿಂಗಳಲ್ಲಿ ಒಂದು ಸಾರಿ ಭಾರಿ ಮಳೆ ಬಂದು ನಮ್ಮ ತಾಲ್ಲೂಕಿನಲ್ಲಿ ಬಹಳ ತೊಂದರೆ ಆಯಿತು, ಆಗ ಬಾವಿಗಳು ಮುಚ್ಚಿ ಹೋದವು, ಪಂಪ್ ಹೌಸ್‌ಗಳೆಲ್ಲಾ ಕೊಚ್ಚಿಕೊಂಡು ಹೋದವು, ಹೊಲಗಳಲ್ಲಿ ಹಾಕಿದ್ದ ಬಂಡ್‌ಗಳೆಲ್ಲಾ ನಾಶವಾದವು. ಆಮೇಲೆ ಇದೇ ರೀತಿ ಮುಂದೆಯೂ ಮಳೆ ಬರಬಹುದೆಂದು ರೈತರುಗಳು ಹೊಲಗಳಿಗೆ ಗೊಬ್ಬರ ಹಾಕಿ ಬಿತ್ತನೆ ಮಾಡಿದರು. ಆದರೆ, ಬಿತ್ತನೆ ಮಾಡಿಯಾದ ಮೇಲೆ ಮೂರು ತಿಂಗಳುಗಳಾದರೂ ಮಳೆ ಬಾರದೆ ರೈತರುಗಳು ಹಾಕಿದ್ದ ಬಿತ್ತನೆ ಬೀಜವೆಲ್ಲಾ ಹಾಳಾಗಿ ಹೋಯಿತು. ಇದರಿಂದಾಗಿ ನಮ್ಮಲ್ಲಿನ ರೈತರುಗಳು ಕಂಗಾಲಾಗಿ ಹೋಗಿದ್ದಾರೆ. ಬರಗಾಲದಿಂದ ಕಂಗಾಲಾಗಿರುವ ನಮ್ಮ ರೈತರುಗಳಿಗೆ ಯಾವ ರೀತಿ ಸಹಾಯ ಮಾಡಲಾಗುತ್ತದೆಂದು ಮಾನ್ಯ ಸಚಿವರು ಹೇಳಬೇಕು. ಬರಗಾಲದ ಪ್ರಯುಕ್ತ ಕೂಲಿಗಾರರಿಗೆ ಕೆಲಸ ಕೊಡುತ್ತೇವೆಂದು ಕಾರ್ಯಕ್ರಮವನ್ನು ಹಾಕಿಕೊಂಡರೆ, ಅದರಲ್ಲಿ ಮಧ್ಯವರ್ತಿಗಳೇ ದುಡ್ಡನ್ನು ಹೊಡೆದುಕೊಂಡು ಹೋಗುತ್ತಾರೆ. ಇದರಿಂದ ಕೂಲಿಕಾರರಿಗೂ ಮತ್ತು ರೈತರುಗಳಿಗೆ ಯಾವುದೇ ರೀತಿಯಲ್ಲೂ ಪ್ರಯೋಜನವಾಗುವುದಿಲ್ಲ. ಅದೇರೀತಿ ಅಂತರ್ಜಲ ಹೆಚ್ಚು ಮಾಡುವ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಈಗಾಗಲೇ ಎಲ್ಲರೂ ಹೇಳಿದ್ದಾರೆ. ಆದರೆ ನಮ್ಮ ತಾಲ್ಲೂಕಿನಲ್ಲೂ ಹಲವಾರು ಕೆರೆಗಳಿದ್ದರೂ ಇದುವರೆಗೂ ಅಂತರ್ಜಲ ಹೆಚ್ಚು ಮಾಡುವ ಬಗ್ಗೆ ಒಂದು ಕೆಲಸವನ್ನು ತೆಗೆದುಕೊಂಡಿಲ್ಲ.

ಉದಾಹರಣೆಗೆ ಹೇಳಬೇಕೆಂದರೆ ನಾನು ಶಾಸಕನಾಗಿ ಆರಿಸಿ ಬಂದಮೇಲೆ 50 ಲಕ್ಷ ರೂಪಾಯಿಗಳಲ್ಲಿ ತಡಕಲ್ ಕೆರೆ ಕಟ್ಟುವ ಬಗ್ಗೆ ಪ್ರಪೋಸಲ್ ಮಾಡಿ ಎರಡೂವರೆ ವರ್ಷಗಳಿಂದ 50 ಲಕ್ಷ ರೂಪಾಯಿ ಇಟ್ಟರೆ ಮೈನರ್ ಇರಿಗೇಷನ್‌ನವರು ಇನ್ನೂ ಎಸ್ಟಿಮೇಟ್ ಮಾಡಿಲ್ಲ. ಕೆಲಸ ಶುರುಮಾಡುವುದು ಕಡೆಗುಳಿಯಿತು. ಅಂತರ್ಜಲವನ್ನು ಹೆಚ್ಚಿಸುವ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆಂದು ಒಂದು ಕಡೆ ಹೇಳಲಾಗುತ್ತದೆ, ಇನ್ನೊಂದು ಕಡೆ ಅದರ ಬಗ್ಗೆ ಯಾವುದೇ ಕೆಲಸವನ್ನು ಮಾಡುವುದಿಲ್ಲ. ನಮ್ಮ ಅಳಂದ್ ತಾಲ್ಲೂಕು ಮಹಾರಾಷ್ಟ್ರ ಬಾರ್ಡ್‌ರ್‌ನಲ್ಲಿದೆ. ಅಂತರ್ಜಲ ಹೆಚ್ಚು ಮಾಡುವ ಬಗ್ಗೆ ಮಹಾರಾಷ್ಟ್ರದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿರುವುದನ್ನು ನಾವು ನೋಡಿದ್ದೇವೆ. ಸಣ್ಣ ಸಣ್ಣ ಹಳ್ಳಗಳಿಗೂ ಅಡ್ಡಲಾಗಿ ಕಟ್ಟೆಗಳನ್ನು ಕಟ್ಟಿಸಿ ನೀರನ್ನು ನಿಲ್ಲಿಸಿದ್ದಾರೆ. ಅದೇ ರೀತಿಯಾಗಿ ನಮ್ಮ ತಾಲ್ಲೂಕಿನಲ್ಲೂ ಹಳ್ಳಗಳಿಗೆ ಅಡ್ಡಲಾಗಿ ಕಟ್ಟೆಗಳನ್ನು ಕಟ್ಟಿಸಿ ನೀರನ್ನು ನಿಲ್ಲಿಸಿ ಅಂತರ್ಜಲವನ್ನು ಹೆಚ್ಚು ಮಾಡುವಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ತಮ್ಮ ಮುಖಾಂತರ ನಾನು ಕಳಕಳಿಯಿಂದ ಅವರಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಸಹಕಾರ ಮಂತ್ರಿಗಳು ಈ ಕಡೆಗೆ ಲಕ್ಷ್ಯಕೊಡಬೇಕು. ಈ ಸಾರಿ ನಮ್ಮ ತಾಲ್ಲೂಕಿನಲ್ಲಿ ಬರಗಾಲ ಬಂದಿರುವುದರಿಂದ ಸರಿಯಾಗಿ ಬೆಳೆ ಆಗುವುದಿಲ್ಲ. ಆದುದರಿಂದ ಹೋದ ಸಾರಿ ವ್ಯವಸಾಯ ಸೇವಾ ಸಹಕಾರ ಸಂಘದಿಂದ ಯಾವ ರೀತಿ ಬೆಳೆ ವಿಮೆಯನ್ನು ಕೊಡಲಾಗಿತ್ತೋ ಅದೇ ರೀತಿ ಈ ವರ್ಷವೂ ಬೆಳೆ ವಿಮೆ ಕೊಡಿಸಬೇಕೆಂದು ಮಾನ್ಯ ಸಹಕಾರ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಆಮೇಲೆ, ನಮ್ಮ ತಾಲ್ಲೂಕಿನಲ್ಲಿ ಒಂದು ಅತಿವೃಷ್ಟಿಯಾಗಿ ರೈತರುಗಳಿಗೆ ಹಾನಿಯಾಗಿದೆ ಮತ್ತು ಈಗ ಅನಾವೃಷ್ಟಿಯಿಂದ ರೈತರುಗಳಿಗೆ ಬಹಳ ತೊಂದರೆಯಾಗಿದೆ. ಆದುದರಿಂದ, ಹಾನಿಯಾಗಿರುವ ರೈತರುಗಳಿಗೆ ಪರಿಹಾರ ಕೊಡಬೇಕೆಂದು ತಮ್ಮ ಮಾನ್ಯ ರೆವಿನ್ಯೂ ಸಚಿವರಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಅಶೋಕ್ ಕುಮಾರ್ ಕಾಟ್ವೆ (ಹುಬ್ಬಳ್ಳಿ): ಮಾನ್ಯ ಅಧ್ಯಕ್ಷರೆ, ನಮ್ಮ ಹುಬ್ಬಳ್ಳಿ, ಧಾರವಾಡ ನಗರ ಪ್ರದೇಶಗಳಲ್ಲಿ ರಸ್ತೆಗಳೆಲ್ಲಾ ಹಾಳಾಗಿ ಹೋಗಿವೆ.

ಉಪಾಧ್ಯಕ್ಷರು: ಈಗ ಬರಗಾಲದ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಅಶೋಕ್ ಕಾಟ್ವೆ: ಸನ್ಮಾನ್ಯ ಮಾಜಿ ಮುಖ್ಯ ಮಂತ್ರಿಗಳಾದ ವೀರಪ್ಪ ಮೊಯಿಲಿಯವರು ಮಾತನಾಡುತ್ತಾ ನಗರ ಪ್ರದೇಶಗಳಲ್ಲಿರತಕ್ಕಂಥ ರಸ್ತೆಗಳನ್ನು ಅಭಿವೃದ್ಧಿ ಪಡಿಸಬೇಕಾದರೆ ಕನಿಷ್ಠ ಪಕ್ಷ ಪ್ರತಿ ವರ್ಷ ಎರಡು ಮೂರು ರಸ್ತೆಗಳಿಗಾದರೂ ಸಿಮೆಂಟ್ ಕಾಂಕ್ರೀಟ್ ಹಾಕಬೇಕೆಂದು ಹೇಳಿದ್ದಾರೆ. ಈ ರೀತಿ ಸಿಮೆಂಟ್ ಕಾಂಕ್ರೀಟನ್ನು ಹಾಕಿದರೆ ರಸ್ತೆಗಳು ಬಹಳ ವರ್ಷಗಳ ಕಾಲ ಬಾಳಿಕೆ ಬರುತ್ತದೆ. ಇವತ್ತಿನ ಮಹಾನಗರ ಪಾಲಿಕೆಗಳಲ್ಲಿ ಕೆಲಸ ಮಾಡಲು ದುಡ್ಡು ಇಲ್ಲದೆ ದಿವಾಳಿಯಾಗಿರುವುದರಿಂದ ನಬಾರ್ಡನಿಂದ ಅಥವಾ ವರ್ಲ್ಡ್ ಬ್ಯಾಂಕ್‌ನಿಂದ ಅಥವಾ ಐ.ಡಿ.ಬಿ.ಐ.ನಿಂದ ಸಾಲ

ತೆಗೆದುಕೊಂಡು ರಸ್ತೆಗಳನ್ನು ಅಭಿವೃದ್ಧಿ ಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆದ್ದರಿಂದ ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಹೋದ ವರ್ಷ ಯಾವ ರೀತಿ ಅನುದಾನ ಕೊಟ್ಟಿದ್ದೀರಿ, ಅದಷ್ಟು ಬೇಗ ಅದೇ ರೀತಿ ಈ ವರ್ಷ 3 ಕೋಟಿ ರೂಪಾಯಿಗಳನ್ನು ಅನುದಾನ ಕೊಟ್ಟು ಕನಿಷ್ಟ 5 ರಸ್ತೆಗಳಿಗಾದರೂ ಕಾಂಕ್ರೀಟ್ ರಸ್ತೆ ಮಾಡಲಿಕ್ಕೆ ತಾವು ಮನಸ್ಸು ಮಾಡಬೇಕೆಂದು ಹೇಳುತ್ತೇನೆ. ಹುಬ್ಬಳ್ಳಿ-ಧಾರವಾಡದ ನಗರದಲ್ಲಿ ಒಳಚರಂಡಿ ವ್ಯವಸ್ಥೆಯಾಗಿಲ್ಲದೇ ಇರುವುದರಿಂದ ಎಲ್ಲಾ ಹೊಲಸು ರಸ್ತೆ ಮೇಲೆ ಬಂದು, ಒಂದು ರೀತಿಯ ಸ್ಲಮ್ ತರಹ ನಗರ ಪ್ರದೇಶದಲ್ಲೂ ಆಗಿದ್ದು ಇದರಿಂದ ರೋಗರುಜಿನಗಳು ಆಗಿ ಜನರು ರೋಗಕ್ಕೆ ತುತ್ತಾಗುತ್ತಿದ್ದಾರೆ. ಆದುದರಿಂದ, ಈ ಮಹಾ ನಗರಕ್ಕೆ ಹೆಚ್ಚು ಅನುದಾನವನ್ನು ಕೊಟ್ಟು ತಾವು ಕಾಪಾಡಬೇಕೆಂದು ಹೇಳುತ್ತಾ ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಮಂಜುನಾಥ್ ಸಿ.ಕುನ್ನೂರ್ (ಶಿಗ್ಗಾಂವ್): ಸನ್ಮಾನ್ಯ ಉಪಾಧ್ಯಕ್ಷರೆ, ಅತಿವೃಷ್ಟಿ ಮತ್ತು ಅನಾವೃಷ್ಟಿ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ಮೊದಲನೆಯದಾಗಿ ಅಭಿನಂದಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನನ್ನ ಮತ ಕ್ಷೇತ್ರದ ಪೂರ್ವ ಭಾಗದಲ್ಲಿ ಹಳ್ಳಿಗಳಲ್ಲಿ ಅತಿವೃಷ್ಟಿಯಾಗಿದೆ, ಪಶ್ಚಿಮ ಭಾಗದಲ್ಲಿ ಅನಾವೃಷ್ಟಿಯಾಗಿದೆ. ನನ್ನ ಮತ ಕ್ಷೇತ್ರದಲ್ಲಿ 'ವರದಾ' ನದಿ ಇದೆ ಹಾಗೂ 'ಬಾಜಿರಾವ್' ಹಳ್ಳ ಕೂಡಾ ಇದೆ. ಈ ನದಿ ಮತು ಹಳ್ಳ ಇರುವ ಭಾಗದಲ್ಲಿ 'ಪಕೀರ್ ನಂದಿ ಹಳ್ಳಿ' ಮತ್ತು 'ಕುರುಬರ್‌ಮುನ್ನೂರ್' ಎಂಬ ಎರಡು ಹಳ್ಳಿಗಳಿವೆ. ಈ ಎರಡೂ ಹಳ್ಳಿಗಳನ್ನು ಸ್ಥಳಾಂತರ ಮಾಡುವುದು ಅವಶ್ಯಕತೆ ಇದೆಯೆಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದಾರೆ. ಕುರುಬರ ಮುನ್ನೂರು ಗ್ರಾಮಕ್ಕೆ ಕೇವಲ ಜಮೀನು ಖರೀದಿಗೆ ಅನುಕೂಲ ಮಾಡಿ ಕೊಟ್ಟರೆ ಪಕೀರ್‌ನಂದಿ ಹಳ್ಳಿಗೆ ಮಳೆಗಾಲದಲ್ಲಿ ನೀರು ನುಗ್ಗಿ ಕನಿಷ್ಟ ಅರ್ಧದಷ್ಟು ಊರು ನೀರಿನಲ್ಲಿ ಮುಳುಗಿರುವುದರಿಂದ ಜರೂರಾಗಿ ಈ ಹಳ್ಳಿಯನ್ನು ಸ್ಥಳಾಂತರ ಮಾಡುವುದು ಅವಶ್ಯಕತೆ ಇದೆ. ಆದುದರಿಂದ, ಈ ಹಳ್ಳಿಯನ್ನು ಶಿಫ್ಟ್ ಮಾಡುವುದಕ್ಕೆ ಬೇರೆ ಕಡೆ ಜಮೀನನ್ನು ಕೊಂಡುಕೊಂಡು ಪುನರ್‌ವಸತಿ ಮಾಡುವುದಕ್ಕಾಗಿ ಪ್ರೈಯಾರಿಟಿ ಬೇಸಿಸ್ ಮೇಲೆ ಹಣವನ್ನು ಬಿಡುಗಡೆ ಮಾಡಿ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಅತಿವೃಷ್ಟಿಯಿಂದ ಆಗಿರುವ ನಷ್ಟದ ಬಗ್ಗೆ ಕಳೆದ ವರ್ಷದ ರಿಪೋರ್ಟ್‌ನ್ನು ನೋಡಿದರೆ ಅದರಲ್ಲಿ ತಾವು 96-97ರಲ್ಲಿ ಕೇವಲ 30 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ಆದರೆ, ಸರಿಯಾದ ಅಂಕಿ ಸಂಖ್ಯೆಗಳನ್ನು ನೋಡಿದರೆ ಕಳೆದ ವರ್ಷ 200 ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಲುಕ್ಸಾನಾಗಿದೆ. ಈ ಲುಕ್ಸಾನಿನ ಬಗ್ಗೆ ಪ್ರಾಮಾಣಿಕವಾದ ವರದಿಯನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಿ ಸಹಾಯವನ್ನು ಪಡೆಯುವುದರಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆಯೆಂದು ನಾನು ಹೇಳಬೇಕಾಗಿದೆ. ಈಗ ನನ್ನ ತಾಲ್ಲೂಕು ಶಿಗ್ಗಾಂವಿಗೆ 25 ಸಾವಿರ ಬಿಡುಗಡೆ

ಮಾಡಿದರೆ ಸವಣೂರು ತಾಲ್ಲೂಕಿಗೆ 25 ಸಾವಿರ ಮಾತ್ರ ಬಿಡುಗಡೆ ಮಾಡಿದ್ದಾರೆ. ಈ ಪರಿಸ್ಥಿತಿ ನೋಡಿದರೆ 25 ಸಾವಿರ ಬದಲಾಗಿ 25 ಲಕ್ಷ ರೂ.ಗಳನ್ನಾದರೂ ಕೂಡ ಈ ಬರಗಾಲ ಕಾಮಗಾರಿ ಕೆಲಸಕ್ಕಾಗಿ ತಾವು ಒದಗಿಸಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಂಗಣ್ಣ ಕರಡಿ (ಕೊಪ್ಪಳ): ಮಾನ್ಯ ಉಪಾಧ್ಯಕ್ಷರೆ, ನಮ್ಮ ಕೊಪ್ಪಳವನ್ನು ಹೊಸದಾಗಿ ಜಿಲ್ಲೆಯಾಗಿ ಮಾಡಿರುವುದರಿಂದ ಮೊದಲನೆಯದಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಹೇಳಿ, ಈಗ ಕೊಪ್ಪಳ ಜಿಲ್ಲೆಯಲ್ಲಿ ಬರಗಾಲ ಬಂದಿರುವ ಬಗ್ಗೆ ಹೇಳುತ್ತೇನೆ. ಇವತ್ತಿನ ದಿವಸ ಬರೀ ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಮಾತ್ರ ಬರಗಾಲ ಬಂದಿದೆ ಎನ್ನುವ ರೀತಿಯಲ್ಲಿ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಆದರೆ, ಬಳ್ಳಾರಿ, ರಾಯಚೂರು, ಕೊಪ್ಪಳ, ಚಿತ್ರದುರ್ಗ, ಬಿಜಾಪುರ ಹೀಗೆ ಸುಮಾರು ಎಂಟರಿಂದ ಹತ್ತು ಜಿಲ್ಲೆಗಳಲ್ಲಿ ಬರಗಾಲ ಬಂದಿರುವುದನ್ನು ನಾವು ಕಾಣುತ್ತಿದ್ದೇವೆ. ಯಾರು ಮುಂಚೂಣಿಯಲ್ಲಿ ಮಾತನಾಡಿದ್ದಾರೋ ಅವರ ಜಿಲ್ಲೆಗಳಿಗೆ ಮಾತ್ರ ಹಣ ಕೊಡುವಂಥ ವ್ಯವಸ್ಥೆಯಾಗಬಾರದು. ಇವತ್ತು ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ಬಂದಿರುವ ಬರಗಾಲದ ಬಗ್ಗೆ ಹೇಳುವುದಾದರೆ, ಕೊಪ್ಪಳ, ಕುಷ್ಟಗಿ, ಯಲ್ಬುರ್ಗಾ ಇವು ಒಣ ಪ್ರದೇಶದ ತಾಲ್ಲೂಕುಗಳಾಗಿವೆ. ಇದುವರೆಗೆ ಮಳೆ ಬಾರದೇ ಇರುವುದರಿಂದ ಈ ತಾಲ್ಲೂಕಿನ ಜನರು ಗುಳೇ ಹೋಗತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಇದರಿಂದಾಗಿ ಜಾನುವಾರುಗಳನ್ನು ಕಟುಕರಿಗೆ ಮಾರುವಂಥ ವ್ಯವಸ್ಥೆ ನಿರ್ಮಾಣವಾಗಿದೆ. ಈ ಬರಗಾಲ ಕಾಮಗಾರಿಗಾಗಿ 1.4 ಕೋಟಿ ರೂಪಾಯಿಗಳನ್ನು ರಾಯಚೂರು ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆಯೆಂದು ಮಾನ್ಯ ಕಂದಾಯ ಸಚಿವರು ಹೇಳಿದ್ದಾರೆ. ಆದರೆ, ಇದುವರೆಗೂ ಯಾವುದೇ ಕೆಲಸವನ್ನು ಕೈಗೆತ್ತಿಕೊಂಡಿಲ್ಲ. ಆಮೇಲೆ ನಮ್ಮ ಜಿಲ್ಲೆ ಬೈಫರ್ಕೇಟ್ ಆಗಿರುವುದರಿಂದ ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿದಾಗ, ಇನ್ನೂ ನಮಗೆ ಏನೂ ಆದೇಶ ಬಂದಿಲ್ಲ, ಅವರೇನೂ ಕಂದಾಯ ಖಾತೆಗಳ ಬಗ್ಗೆ ಬೈಫರ್ಕೇಟ್ ಮಾಡಿಕೊಡುವ ಬಗ್ಗೆ ಸರಿಯಾದ ಮಾಹಿತಿಗಳು ಸಿಗುತ್ತಾ ಇಲ, ಆ ಕಾರಣಕ್ಕಾಗಿ ನಾನು ಮಾನ್ಯ ಕಂದಾಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇವೊತ್ತು ಕಡಿಮೆ ಪಕ್ಷ ಸಾಗಾಣಿಕೆ ವೆಚ್ಚವನ್ನಾದರೂ ತಾವು ಭರಿಸಬೇಕಾಗುತ್ತದೆ. ರೈತರು ಇವೊತ್ತು ಮೇವಿನ ವ್ಯವಸ್ಥೆಯನ್ನು ಮಾಡಿಕೊಂಡರೂ ಕೂಡ ಸಾಗಾಣಿಕಾ ವೆಚ್ಚವನ್ನು ಸರಕಾರದವರು ಭರಿಸದಿದ್ದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ ಎಂಬುದನ್ನು ತಾವು ಮನವರಿಕೆ ಮಾಡಿಕೊಳ್ಳಬೇಕು. ಅದರ ಜೊತೆಗೆ ಇವೊತ್ತು ಸಣ್ಣ ನೀರಾವರಿ ಬಗ್ಗೆ ಬಹಳಷ್ಟು ಜನರು ಮಾತನಾಡಿದ್ದಾರೆ. ಅದಕ್ಕೆ ಬಹಳ ಒತ್ತು ಕೊಟ್ಟು ನಾವು ಆ ಕೆಲಸವನ್ನು ಮಾಡಬೇಕಾಗುತ್ತದೆ. ಅನೇಕ ದೊಡ್ಡ ದೊಡ್ಡ ಯೋಜನೆಗಳಿಗೆ ನಾವು ಹೇಗೆ ಒತ್ತು ಕೊಡುತ್ತೇವೆ ಹಾಗೆಯೇ ಸಣ್ಣ ಸಣ್ಣ ಯೋಜನೆಗಳಿಗೂ ನಾವು ಒತ್ತು ಕೊಟ್ಟರೆ

ಕಡಿಮೆ ಹಣದಲ್ಲಿ ನಾವು ಹೆಚ್ಚು ನೀರಾವರಿಯನ್ನು ಮಾಡಲು ಸಾಧ್ಯವಿದೆ. ನಮ್ಮ ತಾಲ್ಲೂಕಿನ ವಿಚಾರವನ್ನು ನಾವು ತೆಗೆದುಕೊಂಡರೆ ಕೊಪ್ಪಳದವರು ತುಂಗಭದ್ರಾ ಡ್ಯಾಂಗಾಗಿ ನಮ್ಮ ಅನೇಕ ಗ್ರಾಮಗಳವರು ತಮ್ಮ ಜಮೀನನ್ನು ಕಳೆದುಕೊಂಡಿದ್ದೇವೆ. ಆದರೆ ನಮ್ಮ ದುರ್ದೈವ ನಮಗೆ ನೀರಾವರಿ ಇಲ್ಲ. ಆದ್ದರಿಂದ ರಾಜ್ಯ ಸರಕಾರದವರು ಹೆಚ್ಚು ಹೆಚ್ಚಾಗಿ ಸಣ್ಣ ನೀರಾವರಿಗೆ ಹಣವನ್ನು ಕೊಟ್ಟರೆ ಅದರ ಮೂಲಕ ಕೆರೆಗಳನ್ನು ನಿರ್ಮಾಣ ಮಾಡುವುದರಿಲಿ, ಅಥವಾ ಏತನೀರಾವರಿ ಯೋಜನೆಯನ್ನು ಮಾಡುವುದೇ ಇರಲಿ, ಮುಂತಾಗಿ ಹೆಚ್ಚು ಒತ್ತು ಕೊಟ್ಟರೆ ನಮ್ಮ ರೈತ ಜನಾಂಗಕ್ಕೆ ಹೆಚ್ಚು ಅಭ್ಯುದಯವಾಗುತ್ತದೆ ಎಂದು ಹೇಳುತ್ತಾ, ಮತ್ತು ಕಾಮಗಾರಿಗಳಿಗೆ ಬಂದ ಹಣವನ್ನು ಯಾವುದಕ್ಕಾಗಿ ಖರ್ಚು ಮಾಡಿದ್ದೀರಿ ಎಂದು ಜಿಲ್ಲಾಧಿಕಾರಿಗಳನ್ನು ಕೇಳಿದರೆ ಅವರು ಕೇವಲ ಕುಡಿಯುವ ನೀರಿಗೆ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಕುಡಿಯುವ ನೀರಿನ ವಿಚಾರದಲ್ಲಿ ಕೂಡ ಅವರು ವಿಂಗಡಿಸಿ ಹೇಳುತ್ತಾರೆ. ಕೇವಲ ಬೋರ್‌ವೆಲ್‌ಗಳನ್ನು ಮಾತ್ರ ನಾವು ಕೊರೆಯುತ್ತೇವೆ ಅವುಗಳಿಗೆ ಪಂಪ್‌ಗಳನ್ನು ಕೂಡಿಸುವುದಿಲ್ಲ ಎಂದು ಹೇಳುತ್ತಾರೆ. ಹೀಗೆ ಮಾಡಿದರೆ ಅದರ ಸಾರ್ಥಕತೆ ಆಗುವುದಿಲ್ಲ. ಆ ಕಾರಣಕ್ಕಾಗಿ ಎಲ್ಲಾ ವಿಧವಾದ ಕೆಲಸಗಳನ್ನು ತೆಗೆದುಕೊಳ್ಳಲು ತಾವುಗಳು ಸೂಚನೆಯನ್ನು ಕೊಡಬೇಕಾಗಿ ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಂಥ ಸಭಾಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಸವರಾಜು (ಹೊಸದುರ್ಗ): ಮಾನ್ಯ ಅಧ್ಯಕ್ಷರೇ, ಸದನದ ಎಲ್ಲಾ ಸದಸ್ಯರು ಪಕ್ಷಾತೀತವಾಗಿ ಬರಗಾಲದ ಬಗ್ಗೆ ಮಾತನಾಡಿದ್ದಾರೆ. ನಾನು ಕೂಡ ನನ್ನ ಜಿಲ್ಲೆಗೆ ಸೀಮಿತವಾಗಿ ಈಗ ಏನು ಹೊಸದಾಗಿ ಚಿತ್ರದುರ್ಗ ಜಿಲ್ಲೆ ರಚಿತವಾಗಿದೆ, ಅಲ್ಲಿ ಬರತಕ್ಕಂಥ ಎಲ್ಲಾ ತಾಲ್ಲೂಕುಗಳು ಕೂಡ ಬರಗಾಲದಲ್ಲಿ ಬಂದವುಗಳು. ನಮ್ಮ ಹೊಸದುರ್ಗ ತಾಲ್ಲೂಕಿನಲ್ಲಿ ಕೂಡ ವೇದಾವತಿ ನದಿ ಹರಿಯುತ್ತದೆ. ನಮ್ಮ 25 ವರ್ಷಗಳ ಅನುಭವದಲ್ಲಿ ಆ ನದಿಯು ಬತ್ತಿದ್ದು ಇದೇ ವರ್ಷದಲ್ಲಿ ಮಾತ್ರ. ಸುಮಾರು ಒಂದು ತಿಂಗಳಿಂದ ನದಿಯಲ್ಲಿ ಯಾವುದೇ ನೀರು ಬಂದಿಲ್ಲ. ಅದಕ್ಕೆ ಕಾರಣ ಪಕ್ಕದ ತಾಲ್ಲೂಕಾದ ಕಡೂರು ಮತ್ತು ಚಿಕ್ಕಮಗಳೂರುಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿರತಕ್ಕಂಥಾದ್ದು. ಹೊಸದುರ್ಗ ತಾಲ್ಲೂಕು ಮೊದಲಿನಿಂದಲೂ ತೆಂಗು ಮತ್ತು ಎಳ್ಳು ಬೆಳೆಗೆ ಬಹಳ ಪ್ರಸಿದ್ಧವಾಗಿರತಕ್ಕಂಥಾದ್ದು. ಹೊಸದುರ್ಗದ ಎಳ್ಳು ಕರ್ನಾಟಕದಲ್ಲಿಯೇ ಹೆಸರುವಾಸಿಯಾಗಿರತಕ್ಕಂಥದ್ದು. ವರ್ಷಕ್ಕೆ ಸುಮಾರು ಮೂರು ಕೋಟಿ ರೂ. ಬೆಲೆ ಬಾಳತಕ್ಕಂಥ ಎಳ್ಳನ್ನು ರೈತರು ಬೆಳೆಯುತ್ತಿದ್ದರು. ಅದೊಂದು ಆರ್ಥಿಕ ಬೆಳೆಯಾಗಿ ರೈತರಿಗೆ ಸಹಕಾರಿಯಾಗಿತ್ತು. ಅದೇ ರೀತಿಯಲ್ಲಿ ತೆಂಗು ಕೂಡ ಸುಮಾರು 5 ಕೋಟಿ ರೂ.ಗಳಷ್ಟು ವರಮಾನವನ್ನು ರೈತರಿಗೆ ಕೊಡುತ್ತಾ ಇತ್ತು. ಆದರೆ ಈ ಐದಾರು ವರ್ಷಗಳ ಅವಧಿಯಲ್ಲಿ ಮಳೆಯು ಕಡಿಮೆಯಾಗಿ ಸುಮಾರು 30 ಸಾವಿರ ತೆಂಗಿನ ಮರಗಳು ಒಣಗಿದ್ದಾವೆ, ಒಬ್ಬ ರೈತ 50 ಸಾವಿರ ತೆಂಗಿನ ಕಾಯಿಗಳನ್ನು

ಬೆಳೆಯುತ್ತಿದ್ದವರು ಈಗ ಸುಮಾರು 2-3 ಸಾವಿರ ಕಾಯಿ ಬೆಳೆಯುವ ಸ್ಥಿತಿಗೆ ಬಂದಿದೆ. ಅದಕ್ಕೆಲ್ಲಾ ಕಾರಣ ಈ ವರುಣನ ಕೃಪೆ. ಆದ್ದರಿಂದ ಮಾನ್ಯ ಕಂದಾಯ ಮಂತ್ರಿಗಳು ನಮ್ಮ ಹೊಸದಾಗಿ ರಚಿತವಾದಂಥ ಚಿತ್ರದುರ್ಗ ಜಿಲ್ಲೆಗೆ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡುವುದರ ಜೊತೆಗೆ, ಈಗಾಗಲೇ ಚಿಕ್ಕಮಗಳೂರು ಜಿಲ್ಲೆಗೆ 20 ಪರ್‌ಸೆಂಟ್‌ನಷ್ಟು ಜನರು ವಲಸೆ ಹೋಗಿದ್ದಾರೆ. ಹಾಗೆ ಹೋದ ಜನರು ವಾಪಸ್ ಆಗುವುದಕ್ಕೆ ಅಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು. ನಮ್ಮ ಮಿತ್ರರು ಹೇಳಿದ ಹಾಗೆ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬೇಕು. ನಮ್ಮಲ್ಲಿ ಒಂದು ಮಾರಿಕಣಿವೆ ಅಂತ ಗುಂಡಿಹಳ್ಳ ಇದೆ. ಅದಕ್ಕೆ ಒಡ್ಡನ್ನು ನಿರ್ಮಿಸಿದರೆ ಅದರಿಂದ ರೈತರಿಗೆ ಬಹಳ ಅನುಕೂಲವಾಗುತ್ತದೆ. ಆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರಲ್ಲಿ ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಅತಿವೃಷ್ಟಿ ಮತ್ತು ಅನಾವೃಷ್ಟಿ ಕುರಿತಾದ ಚರ್ಚೆಯು ಇಲ್ಲಿಗೆ ಮುಕ್ತಾಯವಾಯಿತು. ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ಪುನಃ ಸೇರುವುದು.

(ಸಭೆಯು ತನ್ನ ದಿನದ ಕಾರ್ಯಕಲಾಪಗಳನ್ನು 6-35 ಗಂಟೆಗೆ ಮುಕ್ತಾಯಗೊಳಿಸಿ ನಾಳೆ (9-9-97) ಬೆಳಿಗ್ಗೆ 10-00 ಗಂಟೆಗೆ ಪುನಃ ಸಮಾವೇಶಗೊಳ್ಳಲು ನಿರ್ಧರಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನ ಸಭೆ

ಮಂಗಳವಾರ 9ನೇ ಸೆಪ್ಟೆಂಬರ್ 1997ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-05 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು: (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

ವಿಷಯ: (5) 1956ರಲ್ಲಿ ಆದ ಭಾಷವಾರು ಪ್ರಾಂತ್ಯ ರಚನೆ ಮೇಲೆ ಮೆಡಿಕಲ್ ಕಾಲೇಜುಗಳ ಸೀಟಿನ ಹಂಚಿಕೆ

+ ಶ್ರೀ ವೈಜನಾಥ್ ಪಾಟೀಲ್ (ಚಂಚೋಳಿ): ಮಾನ್ಯ ಅಧ್ಯಕ್ಷರೆ, 1956ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾದ ಮೇಲೆ ಬಾಂಬೆಯಿಂದ 4 ಜಿಲ್ಲೆಗಳು, ಹೈದಾರಬಾದ್‌ನಿಂದ 3 ಜಿಲ್ಲೆಗಳು, ಕೊಡಗು-ಮದ್ರಾಸ್‌ನಿಂದ 2 ಜಿಲ್ಲೆಗಳು ಮಂಗಳೂರು ಮತ್ತು ಬಳ್ಳಾರಿ, ಹಳೇ ಮೈಸೂರಿನಿಂದ 8 ಜಿಲ್ಲೆಗಳು, ಈ ರೀತಿ ಕನ್ನಡ ನಾಡು ಏನು ಹಂಚಿ ಹೋಗಿತ್ತು ಅದು 1956ರಲ್ಲಿ ಒಂದಾಯಿತು. ಭಾವನಾತ್ಮಕವಾಗಿ ಎಲ್ಲರೂ ಒಂದುಗೂಡಿ, ಒಂದು ಭಾಷೆ ಕನ್ನಡ ಮಾತನಾಡುವವರು ಒಂದುಗೂಡಿ ಇರಬೇಕೆಂಬುದು ಜನರ ಇಚ್ಛೆ ಇತ್ತು; ಎಲ್ಲರೂ ಒಂದಾದೆವು. ಆದರೆ ಬೇರೆ ಬೇರೆ ದೇಶಗಳಿಂದ ಬಂದಂಥ ಜನರ ಭಾವನೆಗಳು ಏನಿದ್ದವು, ಹಿಂದುಳಿದ ಪ್ರದೇಶಗಳಿವೆ ವಿಶೇಷ ಅವಕಾಶ ಕೊಡಬೇಕೆಂದು ನಮ್ಮ ಸಂವಿಧಾನದಲ್ಲಿ ಕೂಡ ಇತ್ತು. ಅದೇ ಪ್ರಕಾರ ಭಾಷಾವಾರು ಪ್ರಾಂತ್ಯದ ರಚನೆಯ ಸಲುವಾಗಿ ನಿರ್ಮಿತವಾದ ಆಯೋಗ, ತನ್ನ ವರದಿಯಲ್ಲಿ ಕೂಡ ಶಿಫಾರಸ್ಸು ಮಾಡಿದ್ದರು. ಆ ಪ್ರಕಾರ ಇವತ್ತು ಪಶ್ಚಿಮ ಬಂಗಾಳದಲ್ಲಾಗಲಿ, ಆಂಧ್ರ ಪ್ರದೇಶದಲ್ಲಾಗಲಿ, ಅಸ್ಸಾಮಿನಲ್ಲಾಗಲಿ, ಮಹಾರಾಷ್ಟ್ರದಲ್ಲಾಗಲಿ ಇಂಥ ಇನೇಕ ವ್ಯವಸ್ಥೆಗಳನ್ನು ಕೆಲವು ಸ್ಪೆಷಲ್ ಬೋರ್ಡ್ ಫಾರ್ ಡೆವಲಪ್‌ಮೆಂಟ್ ಸಲುವಾಗಿ ಮಾಡಿದ್ದಾರೆ. ಅದಲ್ಲದೆ ಎಂಪ್ಲಾಯ್‌ಮೆಂಟ್‌ನಲ್ಲಿ ಮತ್ತು ಟೆಕ್ನಿಕಲ್ ಎಜ್ಯುಕೇಷನ್‌ನಲ್ಲಿ, ಪ್ರೊಫೆಷನಲ್ ಎಜ್ಯುಕೇಷನ್‌ನಲ್ಲೂ ಕೂಡ ಕೆಲವರಿಗೆ ಅವಕಾಶ ಸಿಗುವುದಿಲ್ಲವೆಂದು ರಾಜ್ಯ ಸರ್ಕಾರಗಳೇ ಸ್ಪೆಲ್ ರಿಸರ್ವ್‌ೇಷನ್ ಮಾಡಬಹುದೆಂದು ನಮ್ಮ ಸಂವಿಧಾನದಲ್ಲಿದೆ. ಆ ಪ್ರಕಾರ ಅನೇಕ ರಾಜ್ಯಗಳು ಮಾಡಿದವು. ದುರ್ದೈವದಿಂದ ನಮ್ಮ ರಾಜ್ಯದಲ್ಲಿ ಅಂಥ ವ್ಯವಸ್ಥೆ ಆಗಿಲ್ಲ. ಮೊದಲು ಅಷ್ಟು ಸಮಸ್ಯೆ ಇರಲಿಲ್ಲ. ವಿಶೇಷವಾಗಿ ಸುಪ್ರೀಂ ಕೋರ್ಟ್ ಆರ್ಡರ್ ಬಂದನಂತರ ಸೀಟುಗಳನ್ನು ಸರ್ಕಾರದ ವತಿಯಿಂದ ಮೆರಿಟ್‌ವೈಸ್ ಹಂಚಬೇಕೆಂದಾಗ ಬಹಳಷ್ಟು ಸ್ಥಳೀಯ ಜನರಿಗೆ ಸೀಟು ಸಿಗುತ್ತಿಲ್ಲ. ಆ ದೃಷ್ಟಿಯಿಂದ ಆಂಧ್ರಪ್ರದೇಶದಲ್ಲಿ ಚೆನ್ನಾ

ರೆಡ್ಡಿಯವರ ನೇತೃತ್ವದಲ್ಲಿ 1979-80ರಲ್ಲಿ ಏನು ದೊಡ್ಡ ಮೂವ್‌ಮೆಂಟ್ ಆಯಿತು ಆಗ ಅಲ್ಲಿ ಒಂದು ರೂಲ್ ಮಾಡಿದರು. ಶೇಕಡ 85ರಷ್ಟು ಮೆಡಿಕಲ್ ಸೀಟುಗಳನ್ನು ಸ್ಥಳೀಯ ಜನರಿಗೆ ಕೊಡಬೇಕೆಂದು ಮಾಡಿದ್ದಾರೆ. ಈಗ ಅದೇ ಪ್ರಕಾರ ಆಗುತ್ತಿದೆ. 85 ಪರ್ಸೆಂಟ್ ತೆಲಂಗಾಣದವರಿಗೆ ಅಂದರೆ ಆ ಭಾಗದ 8 ಜಿಲ್ಲೆಗಳಲ್ಲಿ ಯಾವ ಮೆಡಿಕಲ್ ಕಾಲೇಜುಗಳು ಬರುತ್ತದೆ ಅವರಿಗೆ 85 ಪರ್ಸೆಂಟ್. ರಾಯಲಸೀಮೆಯಲ್ಲಿ ಯಾವ ಮೆಡಿಕಲ್ ಕಾಲೆಜುಗಳು ಬರುತ್ತವೆ ಅಲ್ಲಿಯ ಸ್ಥಳೀಯರಿಗೆ 85 ಪರ್ಸೆಂಟ್. ಅದೇ ಪ್ರಕಾರ ಕೋಸ್ಟಲ್ ಆಂಧ್ರಪ್ರದೇಶದಲ್ಲಿ ಬರುವ ಮೆಡಿಕಲ್ ಕಾಲೇಜುಗಳಲ್ಲಿ ಅಥವಾ ಯೂನಿವರ್ಸಿಟಿಯಲ್ಲಿ 85 ಪರ್ಸೆಂಟ್ ಅಲ್ಲಿಯ ಜನರಿಗೆ ಸೀಟುಗಳು ಸಿಗುತ್ತವೆ. ಅದೇ ಪ್ರಕಾರ ಮಹಾರಾಷ್ಟ್ರದಲ್ಲಿ ಕೂಡ 7 ವರ್ಷಗಳಿಂದ ನಡೆಯುತ್ತಾ ಬಂದಿದೆ. ವಿದರ್ಭ ನಾಗಪುರ ಏರಿಯದಲ್ಲಿ ಬರುವ ಮೆಡಿಕಲ್ ಕಾಲೇಜ್ ಏನಿದೆ ಅಲ್ಲಿ 70 ಪರ್ಸೆಂಟ್ ಸ್ಥಳೀಯರಿಗೆ ಸಿಗುತ್ತದೆ, 30 ಪರ್ಸೆಂಟ್ ಮೆರಿಟ್ ಲಿಸ್ಟ್ ತಯಾರಾಗುತ್ತದೆ. ಔರಂಗಾಬಾದ್, ಮರಾಠವಾಡ ಏರಿಯ ಎಂದು ಏನು ಹೇಳುತ್ತಾರೆ ನಮ್ಮ ಹಳೆಯ ಹೈದರಾಬಾದ್‌ನಿಂದ ಹೋದ ಜಿಲ್ಲೆಗಳ ಸಲುವಾಗಿ ಅಲ್ಲಿ ಏನು ಕಾಲೇಜುಗಳಿವೆ ಲಾತ್ತೂರ್ ನಾಂದೇಡ್, ಔರಂಗಾಬಾದ್; ಔರಂಗಾಬಾದ್ ಯೂನಿವರ್ಸಿಟಿ ಕೆಳಗಡೆ ಬರುವ ಮೆಡಿಕಲ್ ಕಾಲೇಜುಗಳಿಗೆ ಅಲ್ಲಿನ ಸ್ಥಳೀಯರಿಗೆ 70 ಪರ್ಸೆಂಟ್ ಮತ್ತು ಉಳಿದ 30 ಪರ್ಸೆಂಟ್ ಸೀಟುಗಳು ಸ್ಟೇಟ್ ಮೆರಿಟ್ ಎಂದು ಹೇಳುತ್ತಾರೆ. ಏಕೆಂದರೆ ಸ್ಟೇಟ್ ಮೆರಿಟ್‌ನಲ್ಲಿ ಹೈಲಿ ಇಂಟಲಿಜೆಂಟ್ ಸ್ಟೂಡೆಂಟ್ಸ್‌ಗೆ ಅನ್ಯಾಯವಾಗಬಾರದೆಂದು ಅಂಥ ವ್ಯವಸ್ಥೆಯನ್ನು ಮಹಾರಾಷ್ಟ್ರದಲ್ಲಿ ಮಾಡಲಾಗಿದೆ. ಈ ವಿಷಯದ ಬಗ್ಗೆ ಕಳೆದ 3 ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದರೂ ಅನೇಕ ಸಲ ಅಧಿಕಾರಿಗಳು ಮಿಸ್‌ಲೀಡ್ ಮಾಡುತ್ತಾರೆ. ಇಲ್ಲಿ ನಾವು ಅಷ್ಟು ಕೊಡುತ್ತಿದ್ದೇವೆ, 30 ಪರ್ಸೆಂಟ್ ಕೊಡುತ್ತಿದ್ದೇವೆಂದು ಹೇಳುತ್ತಾರೆ. ನಮ್ಮ ಉದ್ದೇಶ ಏನಿದೆ ಎಂದರೆ ಕರ್ನಾಟಕದಲ್ಲಿ ಎಷ್ಟು ವಿಶ್ವವಿದ್ಯಾನಿಲಯಗಳಿವೆ, ಎಷ್ಟು ಮೆಡಿಕಲ್ ಕಾಲೇಜುಗಳಿವೆ ಅಂದರೆ ಮೈಸೂರು ವಿಶ್ವವಿದ್ಯಾನಿಲಯದ ಕೆಳಗೆ ಬರುವ ಮೆಡಿಕಲ್ ಕಾಲೇಜುಗಳು ಎಷ್ಟು ಎಂದು ನೋಡಿ ಅಲ್ಲಿ ಒಂದು ಮ್ಯಾಕ್ಸಿಮಂ ರಿಸರ್ವೇಷನ್ ಗೊತ್ತು ಮಾಡಿ. ಅಲ್ಲಿ ಸ್ಥಳೀಯರಿಗೆ, ಮೈಸೂರು ವಿಶ್ವವಿದ್ಯಾನಿಲಯದವರಿಗೆ, ಆ ಭಾಗದವರಿಗೆ ಹೆಚ್ಚು ಸೀಟುಗಳು ಸಿಗಬೇಕು. ಬೆಂಗಳೂರು ವಿಶ್ವವಿದ್ಯಾನಿಲಯದ ಕೆಳಗೆ ಬರುವ ಮೆಡಿಕಲ್ ಕಾಲೇಜುಗಳಾಗಲಿ, ಇಂಜಿನಿಯರಿಂಗ್ ಕಾಲೇಜು ಗಳಾಗಲೀ, ಅಲ್ಲಿ ಮ್ಯಾಕ್ಸಿಮಂ 'ಸೀಟುಗಳು ಸ್ಥಳೀಯರಿಗೆ ಸಿಗಬೇಕು. ಅದೇ ರೀತಿಯಾಗಿ ಕರ್ನಾಟಕ ವಿಶ್ವಿವಿದ್ಯಾನಿಲಯದ ಕೆಳಗೆ ಬರುವ ಬಾಂಬೆ ಕರ್ನಾಟಕದವರಿಗೆ, ಸ್ಥಳೀಯರಿಗೆ ಮ್ಯಾಕ್ಸಿಮಂ ಸೀಟುಗಳು ಸಿಗಬೇಕು. ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕೆಳಗೆ ಬರುವ ವಿದ್ಯಾರ್ಥಿಗಳಿಗೆ ಮ್ಯಾಕ್ಸಿಮಂ ಸೀಟುಗಳು ಸಿಗಬೇಕು. 70 ಪರ್ಸೆಂಟ್ ಅಥವಾ 85 ಪರ್ಸೆಂಟ್, ಯಾವುದಾದರೂ ಒಂದು ವ್ಯವಸ್ಥೆ ಮಾಡಬೇಕು ಸರ್ಕಾರ. ಆ ರೀತಿ ಈ ಸರ್ಕಾರ ಮಾಡುತ್ತಿಲ್ಲ, ಅನ್ಯಾಯವಾಗುತ್ತಿದೆ. ಸ್ಟೇಟ್ ಮೆರಿಟ್ ನಮ್ಮಲ್ಲಿ ಏನು ವ್ಯವಸ್ಥೆ ಇದೆ ಎಂದರೆ ಎಂಟ್ರೆನ್ಸ್ ಎಕ್ಸಾಂ ಇದೆ. ಅದರ ಅವಶ್ಯಕತೆ ಏನಿದೆ

ಎಂದು ಗೊತ್ತಿಲ್ಲ. ಅದನ್ನು ಏತಕ್ಕೆ ಮಾಡಿದ್ದಾರೋ ಗೊತ್ತಿಲ್ಲ. ಎಂಟ್ರೆನ್ಸ್ ಎಕ್ಸಾಮಿನೇಷನ್‌ನಲ್ಲಿ ಒಂದು ಮೆರಿಟ್ ಮಾಡಿದ್ದಾರೆ. ಎಲ್ಲಾ ಕನ್‌ಫ್ಯೂಸ್ ಮಾಡಿ, ಗುಲ್ಬರ್ಗಾ ಮತ್ತು ಧಾರವಾಡ ಯೂನಿವರ್ಸಿಟಿ ಅಡಿಯಲ್ಲಿ ಬರುವ ವಿದ್ಯಾರ್ಥಿಗಳಿಗೆ ಇಕ್ವಿಟಿಬಲ್ ಷೇರ್ಸ್ ಎಷ್ಟು ಸಿಗಬೇಕಾಗಿತ್ತೋ, ಅಷ್ಟು ಸಿಗುತ್ತಿಲ್ಲ. ಆ ದೃಷ್ಟಿಯಲ್ಲಿ ಕೂಡ ಸರ್ಕಾರ ಒಂದು ಪ್ರಾವಿಷನ್ ಮಾಡಬೇಕು. ಅದನ್ನು ಮಾಡುತ್ತಿಲ್ಲ. ಆ ದೃಷ್ಟಿಯಿಂದ, ಕಳೆದ 3 ವರ್ಷಗಳಿಂದ ನಾನು ಪ್ರಯತ್ನಪಡುತ್ತಿದ್ದೇನೆ. ಶ್ರೀಮತಿ ಕಾಂತಮ್ಮ ಎನ್ನುವ ಡೈರೆಕ್ಟರ್ ಇದ್ದರು, ಅವರು ಪ್ರತಿಸಲವೂ 30 ಪರ್ಸೆಂಟ್ ಕೊಡುತ್ತೇನೆಂದು ಹೇಳುತ್ತಿದ್ದರು. ಅಷ್ಟು ಕೊಡದಿರುವುದರಿಂದ ಅನ್ಯಾಯವಾಗುತ್ತಿದೆ. ಆ ದೃಷ್ಟಿಯಿಂದ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಂಡು ಎಲ್ಲ ಭಾಗದವರಿಗೆ, ತಮ್ಮ ತಮ್ಮ ಏರಿಯಾದವರಿಗೆ ಇಕ್ವಿಟಬಲ್‌ಷೇರ್ಸ್ ಸಿಗಬೇಕೆಂದು ನಾವು ಕೇಳಿಕೊಳ್ಳುತ್ತಿದ್ದೇವೆ. ಸರ್ಕಾರ ಇದಕ್ಕೆ ವ್ಯವಸ್ಥೆ ಮಾಡಬೇಕು. ಇದನ್ನು ಮಾಡುವ ಸಲುವಾಗಿ ರೀಕೌನ್ಸಲಿಂಗ್ ಶುರುವಾಗಿದೆ. ಅದನ್ನು ತಡೆಯಬೇಕು. ಈ ವರ್ಷದಿಂದ ಪ್ರಾರಂಭವಾಗಬೇಕು. ಈ ವರ್ಷ ಮುಗಿಯಲಿ, ಮುಂದಿನ ವರ್ಷ ನೋಡೋಣವೆಂದು ಹೇಳುತ್ತಾರೇನೋ. ಅದನ್ನು ಒಪ್ಪುತ್ತಾರೋ, ಇಲ್ಲವೋ ಗೊತ್ತಿಲ್ಲ. ಪ್ರತಿವರ್ಷ ನವೆಂಬರ್, ಡಿಸೆಂಬರ್ ತಿಂಗಳಲ್ಲಿ ಅಡ್ಮಿಷನ್ ನಡೆದಿದೆ. ಅದು ನಿನ್ನೆ ಶುರುವಾಗಿದೆ, ಅದನ್ನು ತಡೆಹಿಡಿಯಬೇಕು ಮತ್ತು ಬಾಂಬೆ-ಕರ್ನಾಟಕ, ಹೈದರಾಬಾದ್-ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ ಅಲ್ಲಲ್ಲಿ ಲೋಕಲ್ ಮೆರಿಟ್ ತೆಗೆದು, ಸೀಟು ಹಂಚಬೇಕೆಂದು ನಾನು ಸರ್ಕಾರವನ್ನು ಬೇಡಿಕೊಳ್ಳುತ್ತೇನೆ.

+ ಡಾ|| ಎ.ಬಿ.ಮಲಕರೆಡ್ಡಿ (ಯಾದಗೀರ್): ಸನ್ಮಾನ್ಯ ಅಧ್ಯಕ್ಷರೆ, ಶ್ರೀ ವೈಜನಾಥ್ ಪಾಟೀಲರು ಹೇಳಿದ ಮಾತುಗಳನ್ನು ಸಮರ್ಥಿಸುತ್ತಾ, ಕೆಲವು ಅಂಶಗಳನ್ನು ನಾನು ಸ್ಪಷ್ಟೀಕರಿಸಲು ಬಯಸುತ್ತೇನೆ. 1990ರವರೆಗೆ ಈ ಪ್ರಶ್ನೆ ಬಂದಿರಲಿಲ್ಲ. ಅದಕ್ಕಾಗಿ ನಾನು 27 ವರ್ಷಗಳಿಂದ ಇದೆ, ಎಂದು ತಮಗೆ ನೋಟೀಸ್ ಕೊಟ್ಟಿದ್ದೆ. 1970ನೇ ಇಸವಿಯಲ್ಲಿ ಏನಾಯಿತೆಂದರೆ, ಸ್ಟೇಟ್ ಲೆವೆಲ್ ಪಿ.ಯು.ಸಿ. ಬೋರ್ಡ್ ಕಾನ್‌ಸ್ಟಿಟ್ಯೂಟ್ ಆಯಿತು. ಅದಕ್ಕಿಂತ ಮೊದಲು ಆಯಾಯ ಭಾಗದಲ್ಲಿ ಪಿಯುಸಿ ಪರೀಕ್ಷೆಯನ್ನು ಯೂನಿವರ್ಸಿಟಿಯವರೇ ಮಾಡುತ್ತಿದ್ದರು. ಸಹಜವಾಗಿ ಆಯಾಯ ಭಾಗದಲ್ಲೇ ವಿದ್ಯಾರ್ಥಿಗಳು ಯೂನಿವರ್ಸಿಟಿಗೆ ಅಪಿಯರ್ ಆಗುತ್ತಿದ್ದರು ಮತ್ತು ಅಲ್ಲೇ ಮೆಡಿಕಲ್‌ಗೆ ಕೂಡ ಅರ್ಹತೆ ಪಡೆದು, ಆ ಮೆಡಿಕಲ್ ಕಾಲೇಜ್‌ನಲ್ಲೇ ಪ್ರವೇಶ ಪಡೆಯುತ್ತಿದ್ದರು. ಈ ರೀತಿಯ ಅಸಮತೋಲನ ಇರಲಿಲ್ಲ. ಯಾವಾಗ ಸ್ಟೇಟ್ ಲೆವೆಲ್ ಪಿಯುಸಿ ಬೋರ್ಡ್ ಆಯಿತು, ಆಗ ಕಾಮನ್ ಎಗ್ಜಾಮಿನೇಷನ್ ಆಯಿತು. ಕಾಮನ್ ಎಗ್ಜಾಮಿನೇಷನ್ ಆದಕೂಡಲೇ ಕಾಮನ್ ಮೆರಿಟ್ ಬಂತು. ಕಾಮನ್ ಮೆರಿಟ್‌ನಲ್ಲಿ, 27 ವರ್ಷಗಳಿಂದ ಸತತವಾಗಿ ಏನು ಅನ್ಯಾಯವಾಗುತ್ತಿದೆಯೆಂದರೆ, ನಾನು 1970ರಲ್ಲಿ ಗುಲ್ಬರ್ಗಾ ಮೆಡಿಕಲ್ ಕಾಲೇಜಿನ ಅಧ್ಯಕ್ಷನಾಗಿದ್ದಾಗಿನ ಲಿಸ್ಟ್ ನೋಡಿದರೆ, 150 ಹುಡುಗರಲ್ಲಿ

ಕೇವಲ 3 ಹುಡುಗರು ಆ ಡಿವಿಜನ್‌ಗೆ ಬಳ್ಳಾರಿಯಿಂದ ಬಂದವರು. ಗುಲ್ಬರ್ಗಾದಿಂದಲ್ಲ, ರಾಯಚೂರಿನಿಂದಲ್ಲ, ಬೀದರ್‌ನಿಂದಲ್ಲ. ನಾನು ಈ ಪ್ರಶ್ನೆಯನ್ನು ಆಗ ಮುಖ್ಯಮಂತ್ರಿಗಳಾಗಿದ್ದ ಶ್ರೀ ಗುಂಡೂರಾವ್‌ರವರ ಹತ್ತಿರ ಪ್ರಸ್ತಾಪಿಸಿದಾಗ, ಅವರು ಗಾಬರಿಯಾದರು. ನಾನು ಅವರನ್ನು ಅಪ್ರೀಷಿಯೇಟ್ ಮಾಡಬೇಕಾಗುತ್ತದೆ ಮತ್ತು ನೆನಪಿಸಿಕೊಳ್ಳಬೇಕಾಗುತ್ತದೆ. ಅವರು ತಕ್ಷಣ ಆಗಿನ ಕಾಲದ ಹೆಲ್ತ್ ಮಿನಿಸ್ಟರ್ ಆಗಿದ್ದವರನ್ನು ಕರೆಯಿಸಿ, ಮೊದಲು ಎಕ್ಸ್‌ಪೆರಿಮೆಂಟ್ ಮಾಡೋಣ, ಪ್ರತಿಶತ 25ರಂತೆ ಗುಲ್ಬರ್ಗಾ ಮೆಡಿಕಲ್ ಕಾಲೇಜಿನ ಭಾಗದವರಿಗೆ ಕೊಡಿ ಎಂದು ಆದೇಶವನ್ನು ಕೊಟ್ಟರು. 1984ರ ತನಕ ಅದೇ ರೀತಿ ಆಯಿತು. ಆದರೆ, 1983ನೇ ಇಸವಿಯಲ್ಲಿ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಯಾರೋ ಒಬ್ಬರು ಕೋರ್ಟಿಗೆ ಹೋದರೆಂಬ ನೆಪದ ಮೇಲೆ ಕಾನೂನಿನ ಅಧಿನಿಯಮವನ್ನನುಸರಿಸಿ ಅದಕ್ಕೆ ಪೂರ್ತಾ ಸ್ವರೂಪ ಕೊಡಲಿಲ್ಲವೆಂದು ಕಾಣಿಸುತ್ತದೆ. ಹೀಗಾಗಿ, ಅದನ್ನು ಸ್ಟ್ರಕ್ ಡೌನ್ ಮಾಡಿದರು. ಇದುವರೆಗೆ ಬಾಂಬೆ-ಕರ್ನಾಟಕ, ಹೈದರಾಬಾದ್ ಅಥವಾ ಗುಲ್ಬರ್ಗಾ ಭಾಗದ ಹುಡುಗರಿಗೆ ಕೊಟ್ಟಿರುವುದನ್ನು ಪರಿಶೀಲನೆ ಮಾಡಿ ನೋಡಿದರೆ, ಹೆಚ್ಚಿನ ಹುಡುಗರು ಬೆಂಗಳೂರು, ಮಂಗಳೂರು, ಮೈಸೂರು ಮತ್ತು ಬೆಂಗಳೂರಿನ ಸುತ್ತಲಿನವರೇ ಇರುವುದು ಗೊತ್ತಾಗುತ್ತದೆ. ಶೇ.70ರಷ್ಟು ಅಡ್ಮಿಷನ್ ಅವರೇ ಆಗುತ್ತಿದ್ದಾರೆ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಸರ್ಕಾರದ ಮುಂದೆ ಆಗಾಗ್ಗೆ ಇದನ್ನು ನಾವು ಪ್ರಸ್ತಾಪಿಸುತ್ತಿದ್ದೇವೆ, ಈ ಮನೆಯಲ್ಲೂ ಪ್ರಸ್ತಾಪಿಸಿದ್ದರೂ ಕೂಡ, ಇದನ್ನು ನೈಬರಿಂಗ್ ಸ್ಟೇಟ್‌ಗಳಿಂದ ಮಾಹಿತಿ ತರಿಸಿಕೊಳ್ಳುತ್ತೇವೆಂದು ಹೇಳುತ್ತಾರೆ. ಅದರ ಬಗ್ಗೆ ಹೆಚ್ಚಿನ ಅಡಚಣೆಯಿಲ್ಲ. ಆದರೆ, ಕಾರಣ ಏನು ಹೇಳುತ್ತಾರೆಂದರೆ, ಹೈಕೋರ್ಟ್, ಸುಪ್ರೀಂ ಕೋರ್ಟ್ ಇದನ್ನು ಸ್ಟ್ರಕ್‌ಡೌನ್ ಮಾಡಿದ್ದಾರೆ. because of discrimination ಕಾಮನ್ ಎಗ್ಸಾಮಿನೇಷನ್ ತೆಗೆದುಕೊಂಡಾಗ, ಕಾಮನ್ ಮೆರಿಟ್ ಮಾಡಬೇಕಾಗುತ್ತದೆಂದು ಹೇಳಿ ಒಂದೇ ಸ್ಟೇಟ್‌ನಲ್ಲಿ ಡಿಸ್ಕ್ರಿಮಿನೇಷನ್ ಮಾಡಲಿಕ್ಕೆ ಬರುವುದಿಲ್ಲ, ಬೇರೆ ಬೇರೆ ಭಾಗಗಳಿಂದ ಬರುತ್ತಾರೆನ್ನುವ ಕಾರಣದಿಂದ ಎಂದು ತಿಳಿದುಕೊಂಡು ಪ್ರಸ್ತಾಪ ಮಾಡಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಮೇ ತಿಂಗಳಲ್ಲಿ ಬಾಂಬೆ ಹೈಕೋರ್ಟ್‌ನ ಫುಲ್ ಬೆಂಚ್‌ನವರು ಒಂದು ಜಡ್ಜ್‌ಮೆಂಟ್ ಕೊಟ್ಟರು. ಏಕೆಂದರೆ, ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲಿ ಯೂನಿವರ್ಸಿಟಿ ಏರಿಯಾವೈಸ್ ಕೊಡುತ್ತಿದ್ದರು. ಅಲ್ಲಿಯೂ ಕಾಮನ್ ಎಗ್ಸಾಮಿನೇಷನ್ ಇತ್ತು. ಅಲ್ಲೇನೂ ಲೋಕಲ್ ಬೋರ್ಡ್ ಇದ್ದಿಲ್ಲ. ವಿದರ್ಭ, ಮರಾಠವಾಡ, ಮಹಾರಾಷ್ಟ್ರದಲ್ಲೂ ಬೋರ್ಡ್ ಇರಲಿಲ್ಲ. ಕಾಮನ್ ಎಗ್ಸಾಮಿನೇಷನ್ ಇದ್ದರೂ ಕೂಡ, ಯೂನಿವರ್ಸಿಟಿಯಲ್ಲಿ ಮೆರಿಟ್ ತೆಗೆದು ಆ ಭಾಗದಿಂದ ಬರತಕ್ಕ ಮೆಡಿಕಲ್ ಕಾಲೇಜುಗಳಲ್ಲಿ ಎಷ್ಟೆಷ್ಟು ವಿದ್ಯಾರ್ಥಿಗಳಿದ್ದಾರೆ ಅವರಿಗೆ ಸೀಟು ಕೊಡುತ್ತಿದ್ದರು. ಅದನ್ನು ಮುಂದೆ ಸ್ಟ್ರಕ್‌ಡೌನ್ ಮಾಡಿದರು. ಸ್ಟ್ರಕ್‌ಡೌನ್ ಮಾಡಿದ ಮೇಲೆ, ಸ್ವಲ್ಪ ಓದಿ ಹೇಳುತ್ತೇನೆ ಸನ್ಮಾನ್ಯ ಕಾನೂನು ಸಚಿವರೇ ತಾಳ್ಮೆಯಿಂದ ಕೇಳಿ.

"Under clause (c) of Article 371 sub-section (2) of constitution of India, the Hon'ble Governor of Maharashtra has issued a specific directives to the State Government regarding distribution of seats to the medical and dental colleges and it has been Hon'ble Full Bench of Mumbai High Court in Writ petition NO so and so as per the orders passed by the hon'ble Full Bench of Mumbai Highcourt on 2nd May, 97 rule 6(2) (b) was struck down and the State Government was asked to frame new rules to regulate the admission to medical colleges..." ಇದರ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ಸರ್ಕಾರ ಹೊಸ ರೂಲ್ಸ್ ಮಾಡಿತು. ಏನೆಂದರೆ:

"Keeping in view of the judicial pronouncements, the directives of the Governor of Maharashtra and also keeping the larger interests of the applicants in mind rule governing to the admission of medical and dental courses for all government, private, municipal, medical, dental, in Maharashtra in the State are framed" ಅದರ ಪ್ರಕಾರ, ಈ ಜಡ್ಜಮೆಂಟ್ ಬಂದ ಮೇಲೆ, ಅವರೇನು ಫ್ರೇಮ್ ಮಾಡಿದ್ದಾರೆಂದರೆ, ·"Out of the seats at the disposal of the competent authority. i.e.Director or Medical Education, 30% of the seats in Colleges will be made available for the applicants from the State Government" ಅಂದರೆ ಸ್ಟೇಟ್ ಮೆರಿಟ್ 30 ಪರ್ಸೆಂಟ್. "and these seats will be filled in on the basis of State level merit. There will be constitutional reservations in these seats as per the rules. Now the second para read as thus:

"after exclusion of the state level merit seats mentioned in Rule 2 (a) of the above, remaining 70% seats in the Government colleges, private-aided colleges, Municipal Corporation colleges will be filled in from amongst the applicants who have passed 12th Standard, i.e.PUC, from the Schools and colleges situated in the areas of the concerned Development Board" "The word 'University'

has been removed here. ಹೈಕೋರ್ಟ್‌ನವರು ಸ್ಟ್ರಕ್‌ಡೌನ್ ಮಾಡಿದಮೇಲೆ, ಯೂನಿವರ್ಸಿಟಿಯವರು ಏನು ಹೇಳಿದರೆಂದರೆ, ಕನ್‌ಸರ್ನ್ಡ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಹಾರಾಷ್ಟ್ರದಲ್ಲೇನು ಮಾಡಿದ್ದಾರೆ, Vidharbha Development Board ಎಂದು ಮಾಡಿದ್ದಾರೆ. ಏಕೆ ಮಾಡಿದ್ದಾರೆ? ಅದಕ್ಕೆ with a specific purpose to bring the other backward areas on par with the other advanced regions. ಎಂದು ಆ ದೃಷ್ಟಿಯಿಂದ ಅವರೇನು ಮಾಡಿದರೆಂದರೆ, ಈ ಡೆವಲಪ್‌ಮೆಂಟ್ ಬೋರ್ಡ್ ಕಕ್ಷೆಯಲ್ಲಿ ಬರುವ ಸ್ಕೂಲ್-ಕಾಲೇಜುಗಳಲ್ಲಿ ಪಾಸಾದಂತಹ ವಿದ್ಯಾರ್ಥಿಗಳಿಗೆ ಆ ಭಾಗದಲ್ಲಿ 70 ಪರ್ಸೆಂಟ್ ಸೀಟನ್ನು ರಿಸರ್ವೇಶನ್ ಮಾಡಬೇಕು. There will be constitutional reservations in the seats also. ಈ ರೀತಿಯಾಗಿ ಅವರು ಮಾಡಿದರು. ಅದೇರೀತಿ, ಆಂಧ್ರಪ್ರದೇಶದಲ್ಲೂ ಕೂಡ ಅವರು ಮಾಡಿದರು. ಅದಕ್ಕೂ ಇದಕ್ಕೂ ಏನೂ ವ್ಯತ್ಯಾಸವಿಲ್ಲ. ಅದಕ್ಕಾಗಿ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿಸಿಕೊಳ್ಳುವುದೇನೆಂದರೆ, ಈಗಾಗಲೇ the deep talk is going on inciting people to this effect... ಇದನ್ನು ನಾನು ತಂದಿದ್ದೇನೆ. pamplet distribute ಮಾಡುತ್ತಿದ್ದಾರೆ. ಕೆಲವು ಮುಂದುವರಿದ ಪ್ರದೇಶಗಳಲ್ಲಿರುತ್ತವೆ, ಕೆಲವು ಹಿಂದುಳಿದ ಪ್ರದೇಶದಲ್ಲಿರುತ್ತವೆ. ನಿಮ್ಮ ನೆರೆಹೊರೆ ರಾಜ್ಯಗಳ ದೃಷ್ಟಿಯನ್ನಿಟ್ಟುಕೊಂಡು ಮಾಡಿದಾಗ, ಜನರ ಪ್ರತಿನಿಧಿಗಳು ಪದೇಪದೇ ತಮ್ಮ ಮುಂದೆ ಇದನ್ನು ಪ್ರಸ್ತಾಪಿಸಿದಾಗ, ತಾವು ಏಕೆ ಇಷ್ಟು ನಿರ್ಲಕ್ಷ್ಯ ಮಾಡುತ್ತಿದ್ದೀರಿ ಎನ್ನುವುದೇ ನನಗರ್ಥವಾಗುತ್ತಿಲ್ಲ. ಪಿ.ಡಬ್ಲ್ಯೂ.ಡಿ.ಬಗ್ಗೆ ನಾವು ಸ್ಕ್ರೂಟಿನಿ ಮಾಡುತ್ತಿದ್ದೇವೆ. ಹೈದರಾಬಾದ್-ಕರ್ನಾಟಕ official budget allotment is very poor. ಒಂದಲ್ಲ, ಎಲ್ಲದರಲ್ಲೂ ಹೀಗೇ. ಆಂಧ್ರಪ್ರದೇಶದಲ್ಲಿ ಮಿನಿಸ್ಟರ್ ರೆಸ್ಪಾನ್ಸಿಬಲ್ ಎಂದು ನಾನು ಹೇಳುತ್ತಿಲ್ಲ. ಯಾಂತ್ರಿಕವಾಗಿ ಬಂದುಬಿಟ್ಟಿದೆ. ಈ ಪ್ರವೇಶ ಪ್ರಕ್ರಿಯೆ ನಿನ್ನೆಯಿಂದ ಪ್ರಾರಂಭವಾಗಿದೆ. ಅದಕ್ಕೋಸ್ಕರ, ಸೂಕ್ತ ಆದೇಶ ನೀಡಿ ಬಾಂಬೆ-ಕರ್ನಾಟಕ, ಹೈದರಾಬಾದ್-ಕರ್ನಾಟಕ ಭಾಗದವರಿಗೆ ಅನ್ಯಾಯವಾಗದಂತೆ ತಾಂತ್ರಿಕ ಕಾಲೇಜುಗಳ ಪ್ರವೇಶವನ್ನು ಸರ್ಕಾರ ನಿಯಂತ್ರಣ ಮಾಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಸನ್ಮಾನ್ಯ ಅಧ್ಯಕ್ಷರೆ, ಶ್ರೀ ವೈಜನಾಥ್ ಪಾಟೀಲರು ಬಹಳ ಮೂಲಭೂತವಾದ ಪ್ರಶ್ನೆಯನ್ನು ತಂದಿದ್ದಾರೆ. ಇಡೀ ಕರ್ನಾಟಕದಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಬಹಳ ಅನ್ಯಾಯವಾಗಿದೆ. ಇದನ್ನಾದರೂ ಸರಿ ಮಾಡಬೇಕು. ಈಗಿರತಕ್ಕ ರೂಲ್‌ನಿಂದ ಅನ್ಯಾಯವಾಗಿರುವುದನ್ನು ಎಲ್ಲರೂ ಮನಗಂಡಿದ್ದಾರೆ. ಅದಕ್ಕೇನಾದರೂ ಕಾರಣವಿರಬಹುದು. ಆದರೆ, ಈಗಲಾದರೂ ಅದನ್ನು ಸರಿಪಡಿಸಬೇಕಾದುದು ಎಲ್ಲರ ಕರ್ತವ್ಯ. ನಾನಾದರೂ

ಮಂತ್ರಿಗಳನ್ನು ಕೇಳುವುದೇನೆಂದರೆ, ಕರ್ನಾಟಕದಲ್ಲಿರತಕ್ಕ ಮೆಡಿಕಲ್ ಕಾಲೇಜಾಗಲೀ ಅಥವಾ ಟೆಕ್ನಿಕಲ್ ಕಾಲೇಜಾಗಲೀ ಕರ್ನಾಟಕದ ವಿದ್ಯಾರ್ಥಿಗಳಿಗೆ ಇರಬೇಕೆನ್ನುವುದು ನನ್ನ ಅಭಿಮತ. ಈಗ ಇಡೀ ಇಂಡಿಯಾದವರನ್ನೆಲ್ಲಾ ಹೀಗೆ ತರುವ...

MR. SPEAKER: Yours is a different case ಇವರು ಹೇಳಿದ್ದೇನೆಂದರೆ, ಕರ್ನಾಟಕದವರಿಗೆ ಕೊಟ್ಟಿರತಕ್ಕ ಸೀಟುಗಳಲ್ಲಿ ಹೈದರಾಬಾದ್ - ಕರ್ನಾಟಕ, ಬಾಂಬೆ - ಕರ್ನಾಟಕ ಭಾಗದವರಿಗೆ ಅನ್ಯಾಯವಾಗುತ್ತಿದೆ, ಯಾವ ರೀತಿಯಲ್ಲಿ ಪ್ರಪೋರ್ಷನಲ್ ಸಿಗಬೇಕಾಗಿತ್ತೋ, ಅಷ್ಟು ಸಿಗುತ್ತಿಲ್ಲವೆಂದು. ನೀವು ಹೇಳುತ್ತಿರುವುದು, ಸುಪ್ರೀಂಕೋರ್ಟ್‌ನವರು ಮೊನ್ನೆ ಕೊಟ್ಟಿರುವ ತೀರ್ಪಿನ ವಿಚಾರದಲ್ಲಿ ನೀಮಗೆ ನೋವಾಗಿರುವ ಬಗ್ಗೆ; ನಮ್ಮ ಮಕ್ಕಳಿಗೆ ಅನ್ಯಾಯವಾಗುತ್ತದೆ ರೀ-ಕೌನ್ಸಿಲಿಂಗ್ ನಿಂದ... That is altogether a different issue. ಇವರ ಕೇಸ್ ವೀಕ್ ಆಗುವುದು ಬೇಡ.

ಶ್ರೀಮತಿ ಪ್ರಮೀಳ ನೇಗಿ೯: ಇವರು ಏನು ಕೇಳುತ್ತಿದ್ದಾರೆ ರೀಜನಲ್ ಬೇಸಿನ್‌ನಲ್ಲಿ ಯಾವ ವಿದರ್ಭ ಬೋರ್ಡ್ ಮರಾಠವಾಡ ಬೋರ್ಡ್ ಎಂದು ಮಹಾರಾಷ್ಟ್ರದಲ್ಲಿ, ಆಂಧ್ರಪ್ರದೇಶದಲ್ಲಿ ತೆಲಂಗಾಣ ಎಂದು ಯಾವರೀತಿ ಮಾಡಿದ್ದಾರೋ ಅದೇರೀತಿ ಕರ್ನಾಟಕದಲ್ಲಿ ರೀಜನಲ್‌ವೈಸ್ ಡಿವಿಷನ್ ಮಾಡುವುದಕ್ಕೆ ನೀವು ಕಾನೂನು ತನ್ನಿ ಎಂದು ಹೇಳುತ್ತಿದ್ದೇನೆ. ನಾನಾದರೂ ಹೇಳುವುದಿಷ್ಟೆ. ಹಾಗೆ ತರತಕ್ಕ ಸಂದರ್ಭದಲ್ಲಿ ಇದನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಿ. ಕರ್ನಾಟಕದ ಕಾಲೇಜುಗಳಿರುವುದು ಕರ್ನಾಟಕದ ವಿದ್ಯಾರ್ಥಿಗಳಿಗೆ ಮಾತ್ರ ಮೀಸಲು. ಏಕೋ ಏನೋ ಕಾರಣ ಗೊತ್ತಿಲ್ಲ. ಸುಪ್ರೀಂ ಕೋರ್ಟಿನಲ್ಲಿ ಕಷ್ಟವಾಗುತ್ತಿದೆ. ನಮ್ಮ ಕಾನೂನು ಸರಿಯಾಗಿ ನಡೆಯುತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಇಡೀ ಭಾರತದಲ್ಲಿರತಕ್ಕ ವಿದ್ಯಾರ್ಥಿಗಳಿಗೆ...ನಮ್ಮ ಸೀಟು ನಮ್ಮ ಕಾಲೇಜು, ಇನ್‌ಫ್ರಾಸ್ಟ್ರಕ್ಚರ್ ನಮ್ಮದು. ಯೂನಿವರ್ಸಿಟಿ ಏತಕ್ಕೋಸ್ಕರ ಅಫಿಲಿಯೇಷನ್ ಕೊಟ್ಟಿರುವುದೆಂದರೆ ಕರ್ನಾಟಕದಲ್ಲಿ ನೀಡ್ ಇದೆ. ನಮ್ಮ ವಿದ್ಯಾರ್ಥಿಗಳಿಗೆ ಸಿಗಲಿ ಎಂದು ಅಫಿಲಿಯೇಷನ್ ಕೊಟ್ಟರು. ಭಾರತದಲ್ಲಿರುವವರಿಗೆ ಎಂದು ಕೊಟ್ಟಿಲ್ಲ. ಆದ್ದರಿಂದ ಕರ್ನಾಟಕದಲ್ಲಿ ತೆರೆದಿರುವ ಕಾಲೇಜುಗಳಲ್ಲಿ ಕರ್ನಾಟಕ ವಿದ್ಯಾರ್ಥಿಗಳಿಗೆ ಮೀಸಲಾಗಿರತಕ್ಕದ್ದು ಎಂದು ಸಮಗ್ರವಾಗಿ ಒಂದು ಕಾನೂನನ್ನು ದಯಮಾಡಿ ತೆಗೆದುಕೊಂಡು ಬನ್ನಿ. ನಾವೆಲ್ಲಾ ಸಪೋರ್ಟ್ ಮಾಡುವುದಕ್ಕೆ ಇದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರು: ಅವರು ಪ್ರಧಾನವಾಗಿ ನಿಮ್ಮ ಸಪೋರ್ಟ್ ನಂಬಿಕೊಂಡೇ ಲಾ ಮಿನಿಸ್ಟರ್ ಆಗಿರುವುದು. ನೀವು ಸರಿಯಾಗಿ ಗೈಡ್ ಮಾಡುತ್ತೀರಿ ಎಂದು.

ಶ್ರೀಮತಿ ಪ್ರಮೀಳಾ ನೇಸರ್ಗಿ: ಏಕೆಂದರೆ 711 ಜನ ವಿದ್ಯಾರ್ಥಿಗಳಿಗೆ ಈ ವರ್ಷ ಅನ್ಯಾಯವಾಗಿದೆ. ಇಡೀ ಕರ್ನಾಟಕದಲ್ಲಿರತಕ್ಕ ವಿದ್ಯಾರ್ಥಿಗಳಿಗೆ...

ಅಧ್ಯಕ್ಷರು: ಮಂತ್ರಿಗಳು ಹೇಳುವುದನ್ನು ಕೇಳೋಣ.

ಶ್ರೀಮತಿ ಪ್ರಮೀಳಾ ನೇಸರ್ಗಿ: ದಯವಿಟ್ಟು ಒಂದು ಸಮಗ್ರವಾದ ಕಾನೂನು ತನ್ನಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: ಗುರುನಾಥ್ ಅವರೆ, ತಾವು ಎರಡು ನಿಮಿಷ ಮಾತ್ರ ಮಾತನಾಡಿ. ನಿಮ್ಮ ನೋಟೀಸ್ ನನಗೆ ತಡವಾಗಿ ತಲುಪಿತು. ಆದರೂ ತಾವು ಯಾವಾಗಲೂ ಅವಕಾಶ ಕೇಳದಿರುವುದರಿಂದ ತಮಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಸಿ.ಗುರುನಾಥ್: ಅಧ್ಯಕ್ಷರೆ, ಈಗಾಗಲೇ ಮಾನ್ಯ ವೈಜನಾಥ ಪಾಟೀಲರು ಮಲಕರೆಡ್ಡಿಯವರು ನಮ್ಮ ಭಾಗದಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಇಂಜಿನಿಯರಿಂಗ್‌ನಲ್ಲಿ ಮೆಡಿಕಲ್‌ನಲ್ಲಿ. ವಿದ್ಯಾರ್ಥಿಗಳಿಗೆ ನಮ್ಮ ಭಾಗದಲ್ಲಿ ಈ ಪ್ರವೇಶಕ್ಕಾಗಿ ಇಲ್ಲಿ ನಡೆಸತಕ್ಕ ಸಂದರ್ಶನ ತಪ್ಪಾಗಿದೆ. ಈ ವಿಷಯವನ್ನು ಕುರಿತು ನಾನು ಮತ್ತು ಸನ್ಮಾನ್ಯ ಶ್ರೀವೈಜನಾಥ ಪಾಟೀಲರು ಮಹಾರಾಷ್ಟ್ರದಲ್ಲಿ ಯಾವರೀತಿ ನೀತಿ ಇದೆ ಆಂಧ್ರ ಪ್ರದೇಶದಲ್ಲಿರತಕ್ಕ ನೀತಿ ಯಾವ ಆಧಾರದ ಮೇಲೆ ಇದೆ ಎಂಬ ಬಗ್ಗೆ ಎಲ್ಲಾ ವಿಷಯವನ್ನೂ ನಾವು ತಂದಿದ್ದೇವೆ. ಈಗಾಗಲೇ ದಾಖಲೆಪತ್ರ ಸಹ ವೈಜನಾಥಪಾಟೀಲರು ತಮ್ಮ ಮುಖಾಂತರ ಮಂತ್ರಿಗಳಿಗೂ ಸಹ ಒದಗಿಸಿರಬಹುದು. ದಯಮಾಡಿ ಈಗ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

+ ಡಾ|| ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಸಭಾಧ್ಯಕ್ಷರೇ, ಈ ಚರ್ಚೆ ಸುಮಾರು ಒಂದು ವರ್ಷದಿಂದ ನಡೆಯುತ್ತಿದೆ. ಟೆಕ್ನಿಕಲ್ ಎಜ್ಯುಕೇಷನ್, ಮೆಡಿಕಲ್, ಡೆಂಟಲ್ ಇಂಜಿನಿಯರಿಂಗ್‌ಗೆ ಯಾವುದೇ ಕಾಲೇಜುಗಳು ಸೀಟು ಕೊಡಬೇಕಾದರೆ ಡಿಸ್ಟ್ರಿಕ್ಟ್‌ವೈಸ್ ಮತ್ತು ಯೂನಿವರ್ಸಿಟಿವೈಸ್ ಕೊಡತಕ್ಕದ್ದು ಮಾಡಬೇಕೆಂದು ಸರ್ಕಾರ ಸಹ ಇದರ ಬಗ್ಗೆ ಸಾಕಷ್ಟು ಗಮನ ಹರಿಸಿ ಇದನ್ನು ಜಾರಿಗೆ ತರಬೇಕೆಂಬ ಅಭಿಪ್ರಾಯದಿಂದ ನಾವು ಇದನ್ನು ತರುವುದಕ್ಕೆ ಹೊರಟಿದ್ದೆವು. ತಮಗೆ ಗೊತ್ತಿರುವ ಹಾಗೆ ಹೋದ ಅಧಿವೇಶನದಲ್ಲಿ ನಾವು ಹೇಳಿದ್ದೆವು ಬರುವ ವರ್ಷ ಏನಾದರೂ ಆದರೆ ಏರಿಯಾವೈಸ್ ಸೀಟ್ ಡಿಸ್ಟ್ರಿಬ್ಯೂಷನ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು. ಅದೇ ಪ್ರಕಾರ ಹಿಂದೆ ಹೇಳಿದ ಹಾಗೆ ಮಹಾರಾಷ್ಟಕ್ಕೆ ಹೋಗಿ ಅಲ್ಲಿ ಮಾಡತಕ್ಕ ವಿಧಿವಿಧಾನಗಳನ್ನು ಪರಿಶೀಲನೆ ಮಾಡಿದಾಗ ಅವರು ಹೇಳಿದರು ಗೌರ್ನರ್ ಆರ್ಡಿನೆನ್ಸ್ ಮುಖಾಂತರ ಏರಿಯಾವೈಸ್ ಡಿಸ್ಟ್ರಿಬ್ಯೂಷನ್ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ ಎಂದು. ಪ್ರೊಸೀಜರ್ ಎಲ್ಲಾ ಫಾಲೋ ಮಾಡುತ್ತಿದ್ದೇವೆ ಎಂದು ಎಲ್ಲಾ ನಮಗೆ ಕೊಟ್ಟರು. ಅದಾದನಂತರ ಏನಾಯಿತು ಅಂದರೆ ನಾವು ಏನು ಮಾಡಲಿಕ್ಕೆ ಹೊರಟಿದ್ದೆವು ಅದರ ಮೇಲೆ ಡಿವಿಷನ್ ಬೆಂಚ್ ತಡೆಹಿಡಿದಿದೆ. ಆದ್ದರಿಂದ ನಾವು ಮಾಡಲಿಕ್ಕಾಗಲಿಲ್ಲ ಎನ್ನತಕ್ಕದ್ದು ಮತ್ತು ನಾವು ಏನು ರೂಲ್ಸ್ ಮಾಡಿದ್ದೆವು ಡಿಸ್ಟ್ರಿಕ್ಟ್‌ವೈಸ್

ಆಗಲೀ ಯೂನಿವರ್ಸಿಟಿವೈಸ್ ಆಗಲೀ ಮಾಡಬೇಕೆಂದು ಅದರ ಬಗ್ಗೆ ಕಾನೂನು ಇಲಾಖೆಯವರು ಇಂಡಿಯನ್ ಕಾನ್ಸ್ಟಿಟ್ಯೂಷನ್ ಆರ್ಟಿಕಲ್ 114ರ ಪ್ರಕಾರ ಇದನ್ನು ಏರಿಯಾವೈಸ್ ಮಾಡುವುದಕ್ಕಾಗುವುದಿಲ್ಲ ಎಂದು ಅಭಿಪ್ರಾಯ ಕೊಟ್ಟರು. ಆ ರೀತಿ ಅವರು ಹೇಳಿದಮೇಲೆ ನಾವು ಇದನ್ನು ತಡೆಹಿಡಿದಿದ್ದೇವೆ. ಆದರೆ ಹಿಂದೆ ಕರ್ನಾಟಕದಲ್ಲಿ ಖಾಸಗಿ ಕಾಲೇಜುಗಳು ಬರುವುದಕ್ಕೆ ಮುಂಚೆ ನಾಲ್ಕು ಮಾತ್ರ ಸರ್ಕಾರಿ ಕಾಲೇಜುಗಳಿತ್ತು. ಡಾ. ಮಲಕರೆಡ್ಡಿಯವರು ಹೇಳಿದಹಾಗೆ ಆಯಾ ಖಾಸಗಿ ಕಾಲೇಜುಗಳಿಗೇ ಇಂಟರ್‌ವ್ಯೂ ಕಮಿಟಿಗಳು ಹೋಗಿ ಅಲ್ಲಿ ಬರತಕ್ಕ ಮಕ್ಕಳಿಗೆ ಸೀಟನ್ನು ಅಲಾಟಮೆಂಟ್ ಮಾಡುವ ಪ್ರೋಸೀಜರ್ ಮೊದಲಿತ್ತು. ನಮಗೆಲ್ಲಾ ಬಂದಿದ್ದು ಸೀಟುಗಳು ಅದೇರೀತಿಯಲ್ಲೇ. 1963ರಿಂದ ಸಿಕ್ಕಿದ್ದು ಅದೇ ತರಹದೇ. ಆದರೆ ಖಾಸಗಿ ಕಾಲೇಜುಗಳಾದ ಮೇಲೆ ಅನೇಕ ಕೋರ್ಟ್‌ಗಳು ಇಂಟರ್‌ಫಿಯರೆನ್ಸ್ ಆದ ನಂತರ ಒಂದು ಸೆಲೆಕ್ಷನ್ ಕಮಿಟಿ ಎಂದು ರಾಜ್ಯದಲ್ಲಿ ಮಾಡಿ ಕರ್ನಾಟಕದಲ್ಲಿ ಸಿ.ಇ.ಟಿ. ಮೂಲಕ ಇದು ನಡೆಯಲಿ, ಬೇರೆಯವರಿಗೆ ಅನ್ಯಾಯ ಆಗದೇ ಇರಲಿ ಎನ್ನುವ ಅಭಿಪ್ರಾಯದಿಂದ ಮುಂಚಿನಿಂದ ನಡೆದುಬರುತ್ತಾ ಇದೆ. ಆದರೆ ಈಗ ಮಾನ್ಯ ವೈಜನಾಥಪಾಟೀಲರು ಹೇಳುತ್ತಾರೆ ಮಹಾರಾಷ್ಟ್ರದ ವಿದರ್ಭಾ ಮರಾಠವಾಡಾ ಎಂದು ಸೀಟ್ ಡಿಸ್ಟ್ರಿಬ್ಯೂಷನ್ 30 ಪರ್ಸೆಂಟ್ ಸರ್ಕಾರ ಮಾಡುತ್ತದೆ ಬಾಕಿಯದನ್ನು ಯೂನಿವರ್ಸಿಟಿವೈಸ್ ಕೊಡುತ್ತಾರೆ ಎಂದು. ಅದರಲ್ಲೂ ಆಂಧ್ರ ಪ್ರದೇಶದಲ್ಲೂ ಇದೇ ರೀತಿ ನಡೆಯುತ್ತದೆಂದು ಮಾಹಿತಿ ತಂದುಕೊಟ್ಟಿದ್ದಾರೆ. ಆಂಧ್ರದಲ್ಲಿರತಕ್ಕದ್ದು ಹಿಂದೆ ಇತ್ತಲ್ಲಾ ಸರ್ಕಾರಿ ಕಾಲೇಜುಗಳು ಅದೇ ತರಹ ನಾಲ್ಕು ಮಾತ್ರ ಸರ್ಕಾರಿ ಕಾಲೇಜಿದೆ. ಒಂದೇ ಒಂದು ಪ್ರೈವೇಟ್ ಕಾಲೇಜಿದೆ. ಆದರೆ ಹಿಂದೆ ನಾವು ಯಾವ ತರಹ ಮಾಡುತ್ತಿದ್ದೆವೋ ಅದೇ ತರಹ ಆಂಧ್ರದಲ್ಲೂ ಮಾಡುತ್ತಿದ್ದಾರೆ. ಯೂನಿವರ್ಸಿಟಿವೈಸ್ ಹೋಗಿ ಅಲ್ಲೇ ಹಂಚಿಕೆಯನ್ನು ಮಾಡತಕ್ಕಂಥ ಕೆಲಸ ಆಂಧ್ರದಲ್ಲಿ ಮಾಡುತ್ತಿದ್ದಾರೆ. ನಮ್ಮಲ್ಲಿ ಕಾಲೇಜು ಹೆಚ್ಚಿಗೆ ಇರುವುದರಿಂದ ನಮ್ಮಲ್ಲಿ 18 ಮೆಡಿಕಲ್ ಕಾಲೇಜುಗಳಿದ್ದು ಮಹಾರಾಷ್ಟ್ರದಲ್ಲಿ 20 ಕಾಲೇಜುಗಳಿವೆ. ಇಡೀ ದೇಶದಲ್ಲಿ ಖಾಸಗಿ ಕಾಲೇಜುಗಳು ಮತ್ತು ಮೆಡಿಕಲ್ ಕಾಲೇಜು ಹೆಚ್ಚಿಗೆ ಇರತಕ್ಕದ್ದು ನಮ್ಮ ರಾಜ್ಯ ಮತ್ತು ಮಹಾರಾಷ್ಟ್ರದಲ್ಲಿ. ಅದರಲ್ಲೂ ಇಡೀ ದೇಶದಲ್ಲಿರತಕ್ಕ 100 ಡೆಂಟಲ್ ಕಾಲೇಜುಗಳ ಪೈಕಿ 40 ಡೆಂಟಲ್ ಕಾಲೇಜು ಕರ್ನಾಟಕದಲ್ಲಿ ಮಾತ್ರ ಇದೆ. ಆದ್ದರಿಂದ ಹೆಚ್ಚಿಗೆ ಕಾಲೇಜುಗಳು ಇಲ್ಲಿರುವುದರಿಂದ ಹೆಚ್ಚಿಗೆ ತಾರತಮ್ಯ ಆಗಬಾರದು ಎಂದು ಸರ್ಕಾರ ಕೂಡ ಗಮನ-ಹರಿಸಿ ನಾವು ಮಾಡಬೇಕೆಂಬ ಉದ್ದೇಶದಿಂದ ನಾವು ಹೊರಟಿದ್ದೆವು. ಕಾನೂನು ಮಾಡಲಿಕ್ಕೆ ಬರುವುದಿಲ್ಲ ಎನ್ನುವ ರೀತಿಯಲ್ಲಿ ಹೇಳಿದ್ದರಿಂದ ನಾವು ಹೇಳಿದ ರೀತಿಯಲ್ಲಿ ಈ ವರ್ಷ ಮಾಡುವುದಕ್ಕಾಗಲಿಲ್ಲ. ಈಗ ಏನು ಅವರು ಮಹಾರಾಷ್ಟ್ರದಲ್ಲಿ ಮತ್ತು ಆಂಧ್ರದಲ್ಲಿ ಮಾಡಿದ್ದಾರೆ ಎಂಬುದನ್ನು ಹೇಳಿದ್ದಾರೆ ಅದನ್ನು ಮತ್ತೆ ನಾವು ಪರಿಶೀಲನೆ ಮಾಡಿ, ಈಗ ತಮಗೆ ಗೊತ್ತಿದೆ ಕೌನ್ಸಿಲಿಂಗ್ ಮತ್ತೆ ಎರಡನೇ ಬಾರಿ ಶುರು ಆಗುತ್ತಿದೆ. ನಾವು ಮೊದಲನೇ ಸಾರಿ ಕೌನ್ಸಿಲಿಂಗ್ ಮಾಡಿ ಮತ್ತೆ ಸುಪ್ರೀಂ ಕೋರ್ಟ್ ಆದೇಶ ಆದಮೇಲೆ

ಮತ್ತೆ ಈಗ ನಿನ್ನೆಯಿಂದ ಶುರುವಾಗಿದೆ. ಅದನ್ನು ನಿಲ್ಲಿಸಿ ಮತ್ತೆ ಮೂರನೇ ಬಾರಿ ಮಾಡುತ್ತೇವೆಂದರೆ ಜನರ ಅಪಹಾಸ್ಯಕ್ಕೆ ಗುರಿಯಾಗುತ್ತೇವೆ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಮತ್ತೆ ಇದೇನು ಕಾನೂನು ಅಡೆತಡೆ ಇಲ್ಲದೆ ನಾವು ಇದನ್ನು ಪರಿಶೀಲನೆ ಮಾಡಿ ಮುಂದಿನ ವರ್ಷ ಜಾರಿಗೆ ತರಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ. ಮತ್ತೆ 15 ಪರ್ಸೆಂಟ್ 30 ಪರ್ಸೆಂಟ್ ಎಂದು ತಾವೇನು ಹೇಳುತ್ತೀರಿ ನಾವು 30 ಪರ್ಸೆಂಟ್ ಪ್ರತಿ ಯೂನಿವರ್ಸಿಟಿವೈಸ್ ವಿದ್ಯಾರ್ಥಿಗಳಿಗೆ ಸಿಗಬೇಕು ಎನ್ನುವ ಉದ್ದೇಶದಿಂದ ನಾವು ಆಗಲೇ ಕಂಪ್ಯೂಟರ್‌ನಲ್ಲಿ ಮಾಡಿ ಯಾವ ಏರಿಯಾಕ್ಕೂ ಅನ್ಯಾಯವಾಗದೇ ಇರುವ ರೀತಿಯಲ್ಲಿ ಪ್ರತಿ ಯೂನಿವರ್ಸಿಟಿಗೆ 30 ಪರ್ಸೆಂಟ್ ಸಿಗುವ ರೀತಿಯಲ್ಲಿ ನಾವು ಈ ಸಾರಿ ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ವೈಜನಾಥ ಪಾಟೀಲರೂ ಕೂಡ ಕೇಳಿದಹಾಗೆ ನಾವು ಸಿ.ಇ.ಟಿ. ಬೋರ್ಡಿನ ಸ್ಪೆಷಲ್ ಆಫೀಸರ್ ಅವರನ್ನು ಕರೆಯಿಸಿ 30 ಪರ್ಸೆಂಟ್ ನಾವು ಯಾವರೀತಿ ಜಿಲ್ಲಾವಾರು ಕೊಟ್ಟಿದ್ದೇವೆ ಎನ್ನುವುದನ್ನೂ ಅವರಿಗೆ ಎಕ್ಸ್‌ಪ್ಲೈನ್ ಮಾಡಿ ಹೇಳಿದ್ದಾರೆ. ಬಾಕಿ ಸೀಟುಗಳನ್ನು ಯಾವರೀತಿ ಕೊಡುತ್ತೇವೆ ಎನ್ನುವುದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ;

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಅವರು ಹೇಳಿದ್ದು ಯೂನಿವರ್ಸಿಟಿವೈಸ್ 70 ಪರ್ಸೆಂಟ್, 30 ಪರ್ಸೆಂಟ್ other than outside the University ಆಂಧ್ರಪ್ರದೇಶದಲ್ಲಿ 85 ಪರ್ಸೆಂಟ್ ಇದೆ, ಉಳಿದಕಡೆ 70 ಪರ್ಸೆಂಟ್, ಆ ಬೇಸಿಸ್ ಮೇಲೆ ಮಾಡಿ ಎಂದು ಅವರು ಹೇಳಿದ್ದುದು.

ಡಾ।। ಎಂ.ಶಂಕರನಾಯಕ್: 15 ಪರ್ಸೆಂಟ್ ಎನ್.ಆರ್.ಐ.15 ಪರ್ಸೆಂಟ್ ನಾನ್-ಕರ್ನಾಟಕ. ಉಳಿದ 70 ಪರ್ಸೆಂಟಿನಲ್ಲಿ 30 ಪರ್ಸೆಂಟ್ ಕಾಮನ್‌ಪೂಲ್‌ಗೆ ಸ್ಟೇಟ್‌ನಲ್ಲಿ ಎಲ್ಲರಿಗೂ ಹೋಗುತ್ತದೆ. ಬಾಕಿಯದನ್ನು ಈ ಮಾರ್ಕ್ಸ್‌ಪ್ರಕಾರ ಡಿಸ್ಟ್ರಿಕ್ಟ್‌ವೈಸ್ ಅಥವಾ ಯೂನಿವರ್ಸಿಟಿವೈಸ್ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಕರ್ನಾಟಕದವರಿಗೇ ಕೊಡಬೇಕು ಎನ್ನುವ ಬಗ್ಗೆ ತಾವೇನೂ ಹೇಳಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆಂಧ್ರದವರು ಇದನ್ನು ಮಾಡಿದಮೇಲೆ ಒಂದು ವರ್ಷದಿಂದ ಈ ಪ್ರಶ್ನೆಯನ್ನು ಪದೇಪದೇ ಈ ಸದನದಲ್ಲಿ ಎತ್ತಿದಾಗಲೂ ಕೂಡ ಇಲ್ಲ, ಇಲ್ಲ ಎಂತಲೇ ಹೇಳಿಕೊಂಡು ಬಂದಿರಿ. ಸುಪ್ರೀಂ ಕೋರ್ಟ್ ಈಗಾಗಲೇ ಮಹಾರಾಷ್ಟ್ರದ ಬಗ್ಗೆ ಸ್ಟ್ರೈಕ್‌ಡೌನ್ ಮಾಡಿದೆ. ಅದಕ್ಕಾಗಿ ಅದನ್ನು ತೆಗೆದುಕೊಳ್ಳತಕ್ಕ ಅವಶ್ಯಕತೆ ಇಲ್ಲ ಎನ್ನತಕ್ಕ ಮಾತನ್ನು ಹೇಳಿದರು. ಈಗ ಅದನ್ನು ಆಂಧ್ರದವರು ಇಂಪ್ಲಿಮೆಂಟ್ ಮಾಡುವಾಗ ನಾವು ಪ್ರಯತ್ನವನ್ನೇ ಮಾಡಲಿಲ್ಲ. ಬೇರೆಯವರು

ಮಾಡಿದ್ದನ್ನು ನೋಡಿಕೊಂಡೇ ನಾವು ಹೇಳಿಕೊಳ್ಳುತ್ತಾ ಹೋಗಿದ್ದೇವೆಯೇ ಹೊರತಾಗಿ ಪ್ರಯತ್ನ ಮಾಡಿ ಎಲ್ಲಾದರೂ ಫೈಲಾಗಿದ್ದರೆ ಹೈಕೋರ್ಟ್‌ನವರು ಇದನ್ನು ಈ ರೀತಿಯಾಗಿ ಸ್ಟ್ರಕ್‌ಡೌನ್ ಮಾಡಿದ್ದಾರೆ ಎಂದು ಹೇಳಬಹುದಾಗಿತ್ತು. ಇದೇನಾಗುತ್ತದೆಂದರೆ ಟೋಟಲ್ಲಾಗಿ ನೆಗ್ಲೆಕ್ಟ್ ಮಾಡಿದ ಹಾಗಾಗುತ್ತದೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಉತ್ತರ ಹೇಳಿದರು ಆಂಧ್ರದ್ದು ಮಹಾರಾಷ್ಟ್ರದ್ದು ಎರಡೂ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಾರ್, ಹಿಂದೆ ಗುಂಡೂರಾವ್ ಕಾಲದಲ್ಲಿ 25 ಪರ್ಸೆಂಟ್ ಸೀಟ್ಸ್ ಬರೀ ಎಗ್ಸಿಕ್ಯುಟೀವ್ ಆರ್ಡರ್ ಮೇಲೆ ಆಯಿತು. ಈ ರೀತಿಯಾಗಿ ಒಂದು ಆಕ್ಟೂ ಮಾಡಲಿಲ್ಲ ರೂಲನ್ನೂ ಅಮೆಂಡ್ ಮಾಡಲಿಲ್ಲ. ಅದೇರೀತಿ ಸುಮಾರು ಮೂರು ನಾಲ್ಕು ವರ್ಷ ನಡೆಯಿತು. ಈ ಸಾರಿ ನೀವು ಕಡೇ ಪಕ್ಷ ಆ ಬೇಸಿಸ್ ಮೇಲೆ ನೀವು ಮಾಡಿದ್ದರೆ ಹೈಕೋರ್ಟ್ ಸ್ಟ್ರಕ್‌ಡೌನ್ ಮಾಡಿದರೆ ಮುಂದೆ ಏನು ಮಾಡಬೇಕು ಎಂಬುದನ್ನು ಯೋಚನೆ ಮಾಡಬಹುದು.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು): ಅಧ್ಯಕ್ಷರೇ, ಇವತ್ತಿನ ದಿವಸ admission to professional colleges ಈಗ ಅವರು ಎತ್ತಿರತಕ್ಕ ವಿಚಾರ ಯಾವುದೆಂದರೆ ಮಹಾರಾಷ್ಟ್ರದಲ್ಲಿ ಮುಂಚೆ ಯೂನಿವರ್ಸಿಟಿ ಬೇಸಿಸ್‌ನಲ್ಲಿ ಅವರು ರಿಸರ್ವೇಷನ್ಸ್ ಮಾಡಿದ್ದಾಗ full bench of Maharashtra Highcourt stcuk down the rule ಕಡೆಗೆ ಕೆಲವು ಗೈಡ್‌ಲೈನ್ಸ್ ಕೊಟ್ಟರು. ಹಾಗೆ ಗೈಡ್‌ಲೈನ್ಸ್ ಕೊಟ್ಟಾದಮೇಲೆ ಸಬ್ಸಿಕ್ವೆಂಟಾಗಿ 1997-98ಕ್ಕೆ ಪುನಃ ಒಂದು ಹೊಸ ರೂಲ್ಸನ್ನು ಫ್ರೇಮ್ ಮಾಡಿದರು. ಹೀಗೆ ಫ್ರೇಮ್ ಮಾಡಿರತಕ್ಕದ್ದರಲ್ಲಿ 30 ಪರ್ಸೆಂಟ್ ಸೀಟನ್ನು ಏನು ಮಾಡಿದ್ದಾರೆಂದರೆ ಅವರು ಮಹಾರಾಷ್ಟ್ರ ಸ್ಟೇಟ್ ಮೆರಿಟ್ ಲಿಸ್ಟ್ ಎಂದು ತೆಗೆದುಕೊಂಡು ಬಾಕಿ ಇರತಕ್ಕ 70 ಪರ್ಸೆಂಟಿನಲ್ಲಿ ವಿದರ್ಭ, ಮರಾಠವಾಡ ಮತ್ತು ರೆಸ್ಟ್ ಆಫ್ ಮಹಾರಾಷ್ಟ್ರ ಎಂದು ಮಾಡಿಕೊಂಡರು. ದಯವಿಟ್ಟು ಇದನ್ನು ಗಮನದಲ್ಲಿಟ್ಟುಕೊಳ್ಳಿ. 30 ಪರ್ಸೆಂಟ್ ಎಂದು ಹೇಳುತ್ತಿರುವುದು ಆಲ್ ಇಂಡಿಯಾ ಸ್ಟೇಟ್ ಮೆರಿಟ್ ಎಂದು ಮಾಡುತ್ತಾ ಇರತಕ್ಕದ್ದು, ಬಾಕಿ ಇರತಕ್ಕ 70 ಪರ್ಸೆಂಟನ್ನು....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹಾಗೇ ಮಾಡಿ.

ಶ್ರೀ ಎಂ.ಸಿನಾಣಯ್ಯ: ನನಗೆ ಬಂದಿರುವ ಮಾಹಿತಿಯಂತೆ ಪುನಃ ಈ ರೂಲ್ಸ್ ಮಾಡಿಯಾದಮೇಲೆ I do not know whether admissions have gone or according to 1997-98 rules ಅದಕ್ಕೆ ನಾನು ಹೇಳಿದೆ 25 ಪರ್ಸೆಂಟ್ ಯಾವುದಿತ್ತು ನಿಮಗೆ ಈಗ 30 ಪರ್ಸೆಂಟ್ ಯೂನಿವರ್ಸಿಟಿ ಬೇಸಿಸ್‌ನಲ್ಲಿ

ಈಗಿರತಕ್ಕ ಅಡ್ಮಿಷನ್ಸ್ ಆಗುತ್ತಾ ಇದೆ. ದಯವಿಟ್ಟು ಇದನ್ನು ಗಮನದಲ್ಲಿಟ್ಟುಕೊಳ್ಳಿ, ಈಗ ಅವರು ಎತ್ತಿರತಕ್ಕ ವಿಚಾರವನ್ನೂ ಪುನಃ ಎತ್ತಿಕೊಂಡು we will look into the whole matter afresh and subsequent suggestion given by Hon'ble member Smt.Pramila Nesarge will also be looked into. ಸಮಗ್ರವಾಗಿರತಕ್ಕ ಮುಸೂದೆ... ಈಗ ನಮ್ಮ ಪ್ರೊಫೆಷನಲ್ ಕಾಲೇಜುಗಳಿಗೆ ಅಡ್ಮಿಷನ್ಸ್ ಆಗುತ್ತಾ ಇರತಕ್ಕದ್ದು ಟೈಮ್ ಅಂಡ್ ಎಗೈನ್ ಏನಾಗಿದೆ ಎಂದರೆ ಸುಪ್ರೀಂ ಕೋರ್ಟಿನವರು ಇಂಟೆರಿಂ ಆರ್ಡರ್ ಕೊಡುತ್ತಾ ಹೋಗುತ್ತಾ ಇರತಕ್ಕಂಥದ್ದು, ಕಡೆಗೆ ನಮಗೆ ಅದರ ಮೇಲೆ ಮಾಡಲಿಕ್ಕೆ ಏನೂ ಆಗುವುದಿಲ್ಲ, ಈ ಒಂದು ಪರಿಸ್ಥಿತಿ ಕಳೆದ ನಾಲ್ಕೈದು ವರ್ಷಗಳಿಂದ ಬಂದಿದೆ. ಅದಕ್ಕೋಸ್ಕರವೇ ನಾವು ಒಂದು ಲೆಜಿಸ್ಲೇಷನ್ ತರಬೇಕು ಎನ್ನುವ ಚಿಂತನೆಯನ್ನು ನಾವು ಮಾಡಿದ್ದೇವೆ.

11.30 ಎ.ಎಂ

ಇವತ್ತು ಸುಪ್ರೀಂ ಕೋರ್ಟ್ ಸ್ಕೀಮ್‌ಗೆ ಎದುರಾಗಿ ನಡೆಯುತ್ತಾ ಇರತಕಂಥಾದ್ದು The whole issue has gone before the 11 member constitutional bench of the Supreme Court. The only worry is, 11 Member constitutional bench ಮುಂದೆ ಇದ್ದಾಗ ಈ ಲೆಜಿಸ್ಲೇಷನ್ ಮಾಡುತ್ತಾ ಇರತಕ್ಕಂಥಾದ್ದು ಅವರು ಕೊಟ್ಟಿರುವ ಇಂಟರೀಮ್ ಆರ್ಡರ್‌ನ ವಿರುದ್ಧವೇ ನಾವು ಲೆಜಿಸ್ಲೇಷನ್ ಮಾಡಬೇಕಾಗುತ್ತದೆ. ಅದಕ್ಕೋಸ್ಕರ let me tell you Sir, I am taking up a meeting now with all concerned ಒಂದು ಮೀಟಿಂಗ್ ತಂದು-Comprehensive Legislation relating to the admission policy relating to professional colleges, we are trying to make it. And for the year 1998-99 we will certainly look into that.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬೇಗನೆ ಮಾಡಿ. ಎಕ್ಸೈಸ್ ರೂಲ್ಸ್, ಗ್ರಾನೈಟ್ ರೂಲ್ಸ್, ಅಮೆಂಡಮೆಂಟ್ ಬೇಗನೆ ಮಾಡುವುದಕ್ಕೆ ಬರುತ್ತದೆ. ಇದು ಮಾಡುವುದಕ್ಕೆ ಏಕೆ ಬರುವುದಿಲ್ಲ? ಇದನ್ನೂಸ್ವಲ್ಪ ಬೇಗನೆ ಮಾಡಿ.

ಶ್ರೀ ಎಂ.ಸಿ.ನಾಣಯ್ಯ: ಎಕ್ಸೈಸ್ ರೂಲ್ಸ್ ಮಾಡಬೇಕಾಗಿರತಕ್ಕಂಥ ಪರಿಸ್ಥಿತಿ ಏಕೆ ಬಂತು ಎಂದರೆ ರಾಜ್ಯಸರ್ಕಾರ ಹಣ ಕಳೆದುಕೊಳ್ಳಲಿಕ್ಕೆ ತಯಾರಾಗಿರುತ್ತಿರಲಿಲ್ಲ. ಒಬ್ಬರಿಗೆ ಮನಾಪಲಿ ಕೊಟ್ಟುಬಿಟ್ಟು ರಾಜ್ಯಸರ್ಕಾರಕ್ಕೆ ಬರಬೇಕಾಗಿರತಕ್ಕಂಥ ಹಣ ಅದನ್ನು ಅಲ್ಲಿ ನಾವು ಕಳೆದುಕೊಳ್ಳಲಿಕ್ಕೆ ತಯಾರಾಗಿಲ್ಲ. ಅದಕ್ಕೇ ಮಾಡಬೇಕಾಗಿ ಬಂತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಲ್ಲಿ ಮಕ್ಕಳಿಗೆ ಅನುಕೂಲವಾಗುತ್ತದೆ, ಇಲ್ಲಿ ಮಾಡಿ.

ಶ್ರೀ ಎಂ.ಸಿ.ನಾಣಯ್ಯ: ಎಕ್ಸೈಸ್ ಪಾಲಿಸಿಯನ್ನು ಪೂರ್ತಿಯಾಗಿ ಡ್ರಾಫ್ಟ್ ಮಾಡಿದವರು ಅವರು ತಾನೆ? ನಿಮ್ಮ ಕಾಲದಲ್ಲಿ ತಾನೇ ಮಾಡಿದ್ದು? ಲೈಸೆನ್ಸ್ ಕೊಟ್ಟವರು ನೀವೇ, ರೂಲ್ಸ್ ಮಾಡಿದವರೂ ನೀವೇ. ನಾವು ಅಲ್ಲ.

ಶ್ರೀ ವಾಟಾಳ್ ನಾಗರಾಜ್: ಹೊರನಾಡು ಕನ್ನಡಿಗರಿಗೆ ಮೀಸಲಾತಿ ಇರತಕ್ಕಂಥದ್ದನ್ನು ಸರ್ಕಾರ ಏನು ಮಾಡಿದೆ? ಹೊರನಾಡು ಕನ್ನಡಿಗರಿಗೆ ವೈದ್ಯಕೀಯ ಸೀಟು, ತಾಂತ್ರಿಕವಾದ ಸೀಟುಗಳನ್ನು ಕೊಡಬೇಕು ಎಂದು ಸರ್ಕಾರದ ನೀತಿ ಇತ್ತು. ಇದರ ಬಗ್ಗೆ ಏನು ಮಾಡಿದ್ದೀರಿ? ಹೊರನಾಡು ಕನ್ನಡಿಗರಿಗೆ, ಗಡಿನಾಡಲಿದ್ದಾರಲ್ಲಾ ಅವರಿಗೆ...

ಶ್ರೀ ಎಂ.ಸಿ.ನಾಣಯ್ಯ: ಹೊರನಾಡು ಕನ್ನಡಿಗರು, ಗಡಿನಾಡು ಕನ್ನಡಿಗರು ಎಂದು ಹೇಳುತ್ತಾ ಇರತಕ್ಕಂಥ ನಮ್ಮ ಕನ್ನಡಿಗರು ಯಾರು ಇದ್ದಾರೆ, ಅವರೆಲ್ಲರಿಗೂ ಕೂಡ ಈಗ ಕರ್ನಾಟಕದಲ್ಲಿ ಇರತಕ್ಕಂಥ ನಮ್ಮ ಕನ್ನಡಿಗರಿಗೆ ಕೊಡತಕ್ಕಂಥ ಸೌಕರ್ಯ, ಸೌಲಭ್ಯವನ್ನು ಅವರಿಗೂ ಕೊಡುತ್ತಿದ್ದೇವೆ. ಮುಂಚೆ ಐದು ಸೀಟು, ಆರು ಸೀಟು ಎಂದು ಇತ್ತಲ್ಲಾ, ದಯವಿಟ್ಟು ತಿಳಿದುಕೊಳ್ಳಿ. ಈಗ ಅವರು ಏನಾಗುತ್ತದೆ ಎಂದರೆ They come into the mainstream. ಹೊರನಾಡು ಕನ್ನಡಿಗರು, ಗಡಿನಾಡು ಕನ್ನಡಿಗರನ್ನು ಈಗ ಕನ್ನಡಿಗರು ಅಂತಲೇ ಭಾವನೆ ಮಾಡಿ ಅವರಿಗೂ ಕೂಡ ಈಗ ಸಮಗ್ರವಾಗಿರತಕ್ಕಂಥ ಸೀಟಿನ ಒಳಗಡೆ ಬಂದು ಹೆಚ್ಚಿಚ್ಚು ಸೀಟುಗಳನ್ನು ಕೊಡುವುದಕ್ಕೆ ಅವಕಾಶವನ್ನು ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಹೊರಗಡೆ ಪ್ರದೇಶದಲ್ಲಿ ಇರತಕ್ಕಂಥವರು....

ಶ್ರೀ ಎಂ.ಸಿ.ನಾಣಯ್ಯ: ಕರ್ನಾಟಕದ ಹೊರಗಡೆ ಇದ್ದವರನ್ನೂ ಕನ್ನಡಿಗರಂತಲೇ ಭಾವನೆ ಮಾಡಿ ಅವರಿಗೂ ಕೊಡಲಿಕ್ಕೆ ಇರತಕ್ಕಂಥ ತೀರ್ಮಾನ ಮಾಡಿದ್ದೇವೆ.

ಅಧ್ಯಕ್ಷರು: ಎರಡನೇ ವಿಷಯ. ಸುಬಾಶ್ ಆರ್.ಗುತ್ತೇದಾರ್ ಅವರು....

ಶ್ರೀ ಕಾಗೋಡು ತಿಮ್ಮಪ್ಪ: ಅಧ್ಯಕ್ಷರೇ....

ಅಧ್ಯಕ್ಷರು: ಬೇಡಿ. ಇದನ್ನು ಕ್ಲೋಸ್ ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ: ಇದಕ್ಕೆ ಸರಿಯಾದಂಥ ಸ್ಟ್ಯಾಟ್ಯೂಟನ್ನು ತರಬೇಕು. ಇದನ್ನು ತಾರದೇ ಇರುವ ಕಾರಣಕ್ಕಾಗಿಯೇ ನಾವು ಅನಾವಶ್ಯಕವಾಗಿ ಇಂಟರ್‌ಫಿಯರ್ ಆಗಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ.

ಅಧ್ಯಕ್ಷರು: ಅವರು ರೆಡಿ ಇದ್ದಾರಲ್ಲಾ ಈಗ ವೈಜನಾಥರವರೇ, ಈ ವಿಷಯವನ್ನು ಮುಕ್ತಾಯ ಮಾಡೋಣ. ಮತ್ತೆ ಇದರ ಮೇಲೆ ಚರ್ಚೆ ಬೇಡ.

ಶ್ರೀ ವೈಜನಾಥ ಪಾಟೀಲ್: ಮೊನ್ನೆ ಗುರುವಾರ ದಿವಸ ಈ ಪ್ರಶ್ನೆ ಎತ್ತಿದಾಗ ಆವಾಗ ಉತ್ತರ ಹೇಳಿದರು. ಸುಪ್ರೀಂ ಕೋರ್ಟ್, ಹೈಕೋರ್ಟ್‌ದ್ದು ಎಲ್ಲಾ ಆಯಿತು. ಆವತ್ತು ಗುರುವಾರ ದಿವಸ ನಾನು ಮತ್ತು ಮಾನ್ಯ ಗುರುನಾಥರವರು ಇಲ್ಲಿಂದ ಬಾಂಬೆಗೆ ಹೋಗಿ ಶುಕ್ರವಾರ ದಿವಸ ಸೆಕ್ರೆಟರಿಯೇಟ್‌ಗೆ ಹೋಗಿ ಮಾತನಾಡಿ ಅದು ಆರ್ಡರ್ ತಂದಿದ್ದು. ಅಡ್ಮಿಷನ್ ಎಲ್ಲಾ ಸಂಪೂರ್ಣವಾಗಿ ಮುಗಿಯುತ್ತಾ ಬಂದಿದೆ. ಯಾವ ಕೋರ್ಟು ಆರ್ಡರ್ ಮಹಾರಾಷ್ಟ್ರದಲ್ಲಿ ಅಬ್‌ಸ್ಟಕಲ್ ಆಗಿಲ್ಲ. ಅದರ ನಂತರ ಆಂಧ್ರಕ್ಕೆ ಹೋಗಿ ಶನಿವಾರ ದಿವಸ ಅದು ಎರಡೂ ಆರ್ಡರನ್ನೂ ತಂದುಕೊಟ್ಟಿದ್ದೆ. ಎಲ್ಲಾ ಕಡೆ ಅಡ್ಮಿಷನ್ ಆಗಿದೆ. ಇಲ್ಲದಿದ್ದರೆ ಪ್ರತಿವರ್ಷ ನವೆಂಬರ್ ಡಿಸೆಂಬರ್ ತನಕ ಅಡ್ಮಿಷನ್ ನಡೆಯುತ್ತಿತ್ತು.

ಅಧ್ಯಕ್ಷರು: ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು....

ಶ್ರೀ ವೈಜನಾಥ್ ಪಾಟೀಲ್: ಪ್ರಕ್ರಿಯೆ ಮತ್ತೊಂದು ಸಲ ಪ್ರಾರಂಭವಾದರೆ ಏನೂ ಲುಕ್ಸಾನು ಆಗುವುದಿಲ್ಲ. ಬೇಕಾದರೆ ಮಾನ್ಯ ಮಂತ್ರಿಗಳು ಇವತ್ತು ಬೊಂಬಾಯಿಗೆ ಹೋಗಿ, ನಾಳೆ ಹೈದರಾಬಾದ್‌ಗೆ ಹೋಗಿ ಅಲ್ಲಿಂದ ಆರ್ಡರ್ಸ್ ತಂದು ನಾಡಿದ್ದರಿಂದ ಶುರುಮಾಡಲಿ.

+ ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಆಯಾಯ ಪ್ರದೇಶದ ಹುಡುಗರಿಗೆ ಅನುಕೂಲವಾಗಬೇಕು ಎಂದರೆ ಆಯಾಯ ಪ್ರದೇಶದಲ್ಲಿ ಅವರಿಗೆ ಪರೀಕ್ಷೆಯಾಗಿ ಅಲ್ಲಿ ಮೆರಿಟ್ ಮೇಲೆ ಸೀಟು ಕೊಡಬೇಕು. ಎಲ್ಲಾ ಒಂದೇ ಕಡೆ ಆದರೆ, ಬೆಂಗಳೂರಿನವರು, ಮೈಸೂರಿನವರು ಅಥವಾ ಬಾಂಬೆಯಿಂದ ಬಂದವರು ಎಲ್ಲಾ ಅವರೇ ತೆಗೆದುಕೊಂಡುಬಿಡುತ್ತಾರೆ. ಅದು ಮಹಾರಾಷ್ಟ್ರದ ಒಂದು ಕಾನೂನು ಪುಸ್ತಕವನ್ನು ತೆಗೆದುಕೊಂಡು ಬಂದು ತೋರಿಸಿದರು. ನಾವು ಏಕೆ ಇದನ್ನು ಮಾಡಬಾರದು ಎಂದು, ಅದಕ್ಕೆ ಕಾನೂನಿನ ಪ್ರಕಾರ ಸಾಧ್ಯ ಇದ್ದರೆ ಅದನ್ನು ಮಾಡೋಣ. ಆದರೆ ಈ ತರಹ ಮಾಡುವುದಕ್ಕೆ ಬರುವುದಿಲ್ಲ ಎಂದು ಮಹಾರಾಷ್ಟ್ರದಲ್ಲಿ ಅದನ್ನು ಸ್ಟ್ರಕ್‌ಡೌನ್ ಮಾಡಿದ್ದಾರೆ ಅಂತ ಒಂದು ಅಭಿಪ್ರಾಯ ಬಂತು. I am for it. ಏಕೆಂದರೆ ಆಯಾಯ ಪ್ರದೇಶಗಳ ಜನರಿಗೆ....

ಶ್ರೀ ಹೆಚ್.ಎನ್.ನಂಜೇಗೌಡ: ಮುಖ್ಯಮಂತ್ರಿಗಳೇ, ಹಳೆ ಮೈಸೂರು ಇದ್ದಾಗ ಜಿಲ್ಲಾವಾರು ಸೀಟೇ ಕೊಡುತ್ತಿದ್ದರು.

ಶ್ರೀ ಜೆ.ಹೆಚ್.ಪಟೇಲ್: ನಾನು ಹೇಳುವುದು, ಈಗ ಜಿಲ್ಲಾವಾರು

ಅಪಾಯಿಂಟ್‌ಮೆಂಟ್ ಇದ್ದಾಗ ಹಿಂದೆ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಅಪಾಯಿಂಟ್‌ಮೆಂಟ್ ಕಮಿಟಿಗಳು ಎಂದು ಮಾಡಿದ್ದರು.

ಶ್ರೀ ಹೆಚ್.ಎನ್.ನಂಜೇಗೌಡ: ಜಿಲ್ಲಾವಾರು ಕೊಡುತ್ತಿದ್ದರು. ಎಲ್.ಎಂ.ಪಿ, ಎಂ.ಬಿ.ಬಿ.ಎಸ್. ಎಲ್ಲಾ ಇತ್ತು. ಜಿಲ್ಲೆಗೆ ಇಷ್ಟು ಎಂದು ಸೀಟು ಕೊಡುತ್ತಿದ್ದರು.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದು ಫ್ರೀಸೀಟು. That you make applicable. You make it compact.

ಶ್ರೀ ಜೆ.ಹೆಚ್.ಪಟೇಲ್: ಇವೆಲ್ಲಾ ಆವಾಗ ಇರಲಿಲ್ಲ. ಈ ಕ್ಯಾಪಿಟೇಶನ್ ಎಲ್ಲಿತ್ತು? ಈಗ ಪರಿಸ್ಥಿತಿ ಬೇರೆ. ಆವಾಗ ಜಿಲ್ಲಾವಾರು ಸೀಟು ಕೊಡುತ್ತಿದ್ದ ಪರಿಸ್ತಿತಿ ಬೇರೆ. ಆದರೂ ಇವತ್ತು ತಾವು ಏನು ಹೇಳಿದ್ದೀರಿ, ಆಯಾಯ ಪ್ರದೇಶದ ರೆಪ್ರಸೆಂಟೇಶನ್ ತೆಗೆದುಕೊಂಡು ಅಲ್ಲಿ ಮೆರಿಟ್ ಮೇಲೆ ಕೊಡುವುದಕ್ಕೆ ಕಾನೂನಿನ ಪ್ರಕಾರ ಕೊಡುವುದಕ್ಕೆ ಸಾಧ್ಯವಿದ್ದರೆ ನಾಳೇನೆ ಶುರುಮಾಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ಕೇಳಿ. ತಾವು ಲೇಟ್ ಮಾಡಿ ಬಂದಿದ್ದೀರಿ ಎಂದು ಕಾಣುತ್ತದೆ. ಈಗ ಮಲಕರೆಡ್ಡಿಯವರು ಮತ್ತು ವೈಜನಾಥ ಪಾಟೀಲರು ಹೇಳಿದ್ದು ಏನೆಂದರೆ, ಮಹಾರಾಷ್ಟ್ರದಲ್ಲಿ ಏನು ರೂಲ್ ಸ್ಟ್ರಕ್‌ಡೌನ್ ಆಯಿತಲ್ಲಾ, ಅದರ ಮೇಲೆ ಪುನಃ ಏನು ಮಾಡಿದರು ಎಂದರೆ, ಈ ಡೆವಲಪ್‌ಮೆಂಟ್ ಬೋರ್ಡ್ಸ್ ಎಂದು ಇರುತ್ತವಲ್ಲಾ, ಅದನ್ನು ಜ್ಯೂರಿಸಿಡಿಕ್ಷನ್ ಆಗಿ ತೆಗೆದುಕೊಂಡು ರೂಲ್ಸ್‌ನ್ನು ಮತ್ತೆ ಫ್ರೇಮ್ ಮಾಡಿದರು. ಆ ರೂಲ್ಸ್ ಪ್ರಕಾರ ರೀಜನ್‌ವೈಸ್ ಈಗ ಕೊಡುತ್ತಿದ್ದಾರೆ. ಅದು ಸ್ಟ್ರಕ್‌ಡೌನ್ ಆಗಿಲ್ಲ.

ಅಧ್ಯಕ್ಷರು: ಎಲ್ಲಾ ಸಲಹೆಗಳನ್ನು ಅವರು ಮುಕ್ತಮನಸ್ಸಿನಿಂದ ಸ್ವೀಕಾರ ಮಾಡುವುದಕ್ಕೆ ಸಿದ್ಧರಿದ್ದಾರೆ. ಸರ್ಕಾರ ಕೂಡ ನಿಮ್ಮ ಜತೆಗೆ ಸಹಮತ ಇರುವುದರಿಂದ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಒಂದು ವರ್ಷ ಹೋಗುತ್ತದಲ್ಲಾ? ಈ ಅಕ್ಯಾಡೆಮಿಕ್ ಇಯರ್ ಹೋಗುತ್ತದೆ. ಅದಕ್ಕೆ ಅವರು ಹೇಳಿದ್ದು ಏನೆಂದರೆ, ಹೋದಸಲ ತಾವು ನವೆಂಬರ್‌ವರೆಗೆ ಅಡ್ಮಿಷನ್ ಮಾಡಿದ್ದೀರಿ. ಈ ಸಾರಿ ಕೂಡ ಬೇಕಾದರೆ ಒಂದು ತಿಂಗಳು ಅಥವಾ ಹದಿನೈದು ದಿವಸಗಳಲ್ಲಿ ಹೊಸ ರೂಲ್ಸ್‌ಮಾಡಿ....

ಅಧ್ಯಕ್ಷರು: ಈಗ we will close the discussion.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾಡಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು: ಖರ್ಗೆಯವರೇ, ಸಮಯ ಹೋಗುತ್ತಿದೆ. ಈ ವರ್ಷ ಎಲ್ಲಿ ಆಗುತ್ತದೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾಡಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು: ನೋಡೋಣ. They will examine that also.

SRI M.C.NANAIAH: Sir, one thing Sir....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, He will alwyas examine that.

ಅಧ್ಯಕ್ಷರು: ಎಕ್ಸಾಮಿನ್ ಮಾಡಿಯಪ್ಪ.

SRI M.C.NANAIAH: For 1997-98, 30% reservation is there.

MR. SPEAKER: You cannot be like this.

SRI M.C.NANAIAH: We will look into the matter.

MR. SPEAKER: The matter is closed. No I am moving on to the second matter.

ಶ್ರೀ ವೈಜನಾಥ ಪಾಟೀಲ್: ಅಧ್ಯಕ್ಷರೇ....

ಅಧ್ಯಕ್ಷರು: ಬೇಡ. ನೀವು ಏಕೆ ಕಾಂಪ್ಲಿಕೇಟ್ ಮಾಡುವುದಕ್ಕೆ ಹೋಗುತ್ತೀರಿ? ಆ ವೀಷಯ ಆಯಿತು ಬಿಡಿ.

ಶ್ರೀ ವೈಜನಾಥ ಪಾಟೀಲ್: ಆ ಇನ್‌ಫಾರ್ಮೇಶನ್ ಅನ್ನು ತರಬೇಕು....

ಅಧ್ಯಕ್ಷರು: ಆ ವಿಚಾರದಲ್ಲಿ ಅವರು ಕ್ರಮ ತೆಗೆದುಕೊಳ್ಳುತ್ತಾರೆ. ದಯಮಾಡಿ ನಿಲ್ಲಿಸಿ. ಸುಭಾಶ್‌ರವರೇ, ತಾವು ಏನು ಸೂಚನೆ ಕೊಟ್ಟಿದ್ದೀರಿ ಎಂದರೆ 'ಶೂನ್ಯವೇಳೆಯಲ್ಲಿ ಈಚಲು ಮರದಿಂದ ಸೇಂದಿ ಇಳಿಸುವ ಕಾರ್ಮಿಕರ ವಿಷಯ' ಎಂದು ಹೇಳಿ. ಶೂನ್ಯವೇಳೆಯಲ್ಲಿ ಸೇಂದಿ ಇಳಿಸುವುದಿಲ್ಲ. ಆದ್ದರಿಂದ ನೀವು ವಿಷಯ ಪ್ರಸ್ತಾಪ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್: ಇದು ತೆಗೆದುಕೊಳ್ಳುವುದು ಶೂನ್ಯವೇಳೇಯಲ್ಲಿಯೇ.

ಅಧ್ಯಕ್ಷರು: ನಿಮ್ಮ ಅನುಭವ ನನಗೇನು ಗೊತ್ತು?

ಶ್ರೀ ವಾಟಾಳ್ ನಾಗರಾಜ್: ಯಾರ್‍ಯಾರು ತೆಗೆದುಕೊಳ್ಳುತ್ತಾರೆ ಎಂದು ತಮಗೆ ಗೊತ್ತಿರುತ್ತದೆ ಸ್ವಾಮಿ.

ಮಾನ್ಯ ಸದಸ್ಯರು: ಬೆಳಿಗ್ಗೆ ತೆಗೆದುಕೊಂಡರೆ ಅದು ನೀರಾ. ಮಧ್ಯಾಹ್ನ ತೆಗೆದುಕೊಂಡರೆ ಅದು ಸೇಂದಿ ಆಗುತ್ತದೆ.

(ಆ) ಈಚಲು ಮರದಿಂದ ಸೇಂದಿ ಇಳಿಸುವ ಕಾರ್ಮಿಕರ ವಿಷಯ:

+ ಶ್ರೀ ಸುಭಾಶ್ ಆರ್.ಗುತ್ತೇದಾರ್ (ಆಳಂದ): ಮಾನ್ಯ ಅಧ್ಯಕ್ಷರೇ, ನಾನು ಮೊದಲು ಒಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಉತ್ತರ ಸಿಕ್ಕಿಲ್ಲ. ಆದ್ದರಿಂದ ಇದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಈಗ ನಮ್ಮ ಸರ್ಕಾರ ನವೆಂಬರ್ ಒಂದನೇ ತಾರೀಖಿನಿಂದ ಒಂದು ಹೊಸ ಪದ್ಧತಿಯನ್ನು ಎಕ್ಸೈಸ್‌ನಲ್ಲಿ ತರುತ್ತಿದೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ರೀತಿಯಿಂದ ಸೇಂದಿ ಕಾರ್ಮಿಕರಿಗೆ ಸಹಕಾರ ಸಂಘಗಳಿಂದ ಏನು ಮಾರಾಟ ಮಾಡಲು ಕೊಡುತ್ತಿದ್ದಾರೆ, ಅದೇ ತರಹ ನಮ್ಮ ಉತ್ತರ ಕರ್ನಾಟಕಕ್ಕೆ ಕೊಡುತ್ತೀರಾ ಎಂದು ಇವತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬಯಸುತ್ತಿದ್ದೇನೆ. ಏಕೆಂದರೆ ನಮ್ಮ ಕಡೆ ಬಹಳಷ್ಟು ಜನ ಕಾರ್ಮಿಕರು ಇದ್ದಾರೆ. ಇವರಿಗೆ ಒಂದು ನೆಲೆಯೇ ಇಲ್ಲ. ಇಂತಹ ಊರು ಎಂದು ಇಲ್ಲ, ನೆಲೆ ಇಲ್ಲ. ಎಲ್ಲಿ ಮರಗಳು ಇರುತ್ತವೆ, ಅಲ್ಲಿ ಕೆತ್ತಿಕೊಂಡು ಹೋಗುತ್ತಾರೆ. ಅಲ್ಲಿ ಮುಗಿದರೆ ಮತ್ತೆ ಮುಂದೆ ಹೋಗುತ್ತಾರೆ. ಬಹಳಷ್ಟು ಜನರು ಮುಂಬಯಿ, ಪುನಃ ಮಹಾರಾಷ್ಟ್ರಕ್ಕೆ ಹೋಗಿದ್ದಾರೆ. ಅದಕ್ಕೋಸ್ಕರ ಈ ಸೇಂದಿ ಇಳಿಸುವವರು ಮತ್ತು ಸಪ್ಲೈ ಮಾಡುವವರು ಮತ್ತು ಮಾರುವವರು ಬಹಳಷ್ಟು ಕಾರ್ಮಿಕರು ನಿರ್ಗತಿಕರಾಗಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ವಲ್ಪ ಲಕ್ಷ್ಯ ಕೊಟ್ಟು ಏಕೆಂದರೆ ಮೊದಲು ವೈಜನಾಥ ಪಾಟೀಲರು, ದೇವೇಗೌಡರೂ ಕೂಡ ಬಂದು ಅಲ್ಲಿ ಒಂದು ಸಂಘ ಕರೆದು ಎಲ್ಲಾ ಜನರಿಗೆ ಆಶ್ವಾಸನೆ ಕೊಟ್ಟು ಬಂದಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಕೇಳುತ್ತೇನೆ. ನಮ್ಮ ಉತ್ತರ ಕರ್ನಾಟಕದವರಿಗೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆದಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಸಭಾಪತಿಯವರು....

ಶ್ರೀ ಕಾಗೋಡು ತಿಮ್ಮಪ್ಪ: ಅಧ್ಯಕ್ಷರೇ....

ಅಧ್ಯಕ್ಷರು: ನೀವು ಸೇಂದಿಗೆ ನೋಟೀಸ್ ಕೊಟ್ಟಿಲ್ಲ, ಕೊಡದಿದ್ದರೂ ಮಾತನಾಡಬೇಕಂತೆ ನೀವೇ ಹೇಳಿ ಏನು ಮಾಡುವುದು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸುಭಾಶ್‌ರವರಿಗೆ ಹೇಳುವುದು ಏನೆಂದರೆ, ದಕ್ಷಿಣಕನ್ನಡದಲ್ಲಿ ಒಂದು ವಿಶೇಷ ಪರಿಸ್ಥಿತಿ

ಇದೆ. ಇದನ್ನು ನಾನು ಸ್ವತಃ ನೋಡಿದ್ದೇನೆ, ಹಾಗೂ ಮೂರ್ತೆದಾರರ ಸಂಘದ ಅರ್ಜಿಯನ್ನು ಕೇಳಿದ್ದೇನೆ. ಅಲ್ಲಿ ಸೇಂದಿ ಇಳಿಸುವುದಕ್ಕೆ ಬೇಕಾಗತಕ್ಕಂಥ ಮರಗಳಿವೆ. ಇದರಲ್ಲಿ ತೆಂಗಿನ ಮರವಾಗಿರಬಹುದು ಅಥವಾ ಈಚಲು ಮರವಾಗಿರಬಹುದು. ಈ ಹಿಂದೆ ನಾವು ಈ ಸೇಂದಿಯನ್ನು ಏಕೆ ಬ್ಯಾನ್ ಮಾಡಿದ್ದೇವೆಂದರೆ, ಮಾನ್ಯ ಸುಭಾಶ್‌ರವರು ಗಮನಿಸಬೇಕು. ಅಲ್ಲಿ ಒಂದು ದೊಡ್ಡದು ಸಂಪು ರೀತಿಯಲ್ಲಿ ಹೊಂಡ ತೆಗೆದು, ಅವರ ಹತ್ತಿರ ಸ್ಟಾಕ್ ಇರುವ ಬಿಳಿಪುಡಿಯನ್ನು ಹಾಕಿ ಕೋರೆಲಾ ಹೈಡ್ರೇಟ್ ಎನ್ನುವ ವಿಷ, ಚಾಕ್ ಪೌಡರ್, ನೀರು ಈ ಮೂರು ಸೇರಿಸಿ ಹೆಂಡ ಎಂದು ಮಾಡಿ ಮಾರುತ್ತಿದ್ದರು. ಇದು ಜನರ ಆರೋಗ್ಯಕ್ಕೆ ಮಾರಕ ಅಷ್ಟೇ ಅಲ್ಲದೇ ವಿಷಪೂರಿತವಾಗಿದೆ. ಇದನ್ನೆಲ್ಲಾ ನಾವು ನೋಡಿ ಬಹಳ ಹಿಂದೆ ಅಂದರೆ ಸುಮಾರು 4-5 ವರ್ಷಗಳ ಹಿಂದೆ ನಮ್ಮ ಸರ್ಕಾರವಿದ್ದಾಗ ನಾವು ಈ ಸೇಂದಿಯನ್ನು ಎಲ್ಲಾ ಕಡೆ ನಿಷಿದ್ದ ಮಾಡಿದ್ದೇವೆ. ಈ ಒಂದು ಕಾರಣಕೋಸ್ಕರ ಮಂಗಳೂರಿಗೆ ಮಾತ್ರ ಏಕೆಂದರೆ ಅಲ್ಲಿ ಸೇಂದಿ ಇಳಿಸುವ ಜಾತಿಯವರು ಇರಬಹುದು, ಉದಾಹರಣೆಗೆ ನಮ್ಮಲ್ಲಿ ಈಡಿಗರು ಎಂದು ಕರೆಯುತ್ತಾರೆ, ಕೇರಳದಲ್ಲಿ ಕೂಡ ಅವರನ್ನು ಮತ್ತೊಂದು ಹೆಸರಿನಲ್ಲಿ ಕರೆಯುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಈಡಿಗರು ಹೆಚ್ಚಾಗಿರುವುದನ್ನು ಕಾಣುತ್ತೇವೆ. ಇದೇ ರೀತಿಯಲ್ಲಿ ಕೊಡಗಿನಲ್ಲೂ ಇದ್ದಾರೆ, ಆದರೂ ಅಲ್ಲಿ ನಾವು ಈ ಸೇಂದಿಗೆ ಅವಕಾಶ ಕೊಟ್ಟಿಲ್ಲ. ಏಕೆಂದರೆ ಮರ ಇಲ್ಲದಿದ್ದ ಮೇಲೆ ಹೇಗೆ ಸೇಂದಿ ಇಳಿಸುತ್ತಾರೆ? ಸ್ವಲ್ಪ ಪೂರ್ತಿ ವಿಷಯ ಹೇಳುತ್ತೇನೆ ಕೇಳಿ ಎಲ್ಲಿ ಸೇಂದಿ ಇಳಿಸುವುದಕ್ಕೆ ಮರಗಳಿಲ್ಲವೋ ಅಂತಹ ಕಡೆಗಳಲ್ಲಿ ಸೇಂದಿ ಇಳಿಸಬಾರದು, ಏಕೆಂದರೆ ಈ ದುಷ್ಟಪದ್ಧತಿಗೆ ಕೈ ಹಾಕುತ್ತಾರೆಂದು ನಾವು ಅವಕಾಶ ಕೊಟ್ಟಿಲ್ಲ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ವಿಶೇಷ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅವರಿಗೆ ಅವಕಾಶ ಕೊಟ್ಟಿದ್ದೇವೆ. ಬೇರೆ ಕಡೆ ಇದು ಸಾಧ್ಯವಾಗುವುದಿಲ್ಲ. ಜನರಿಗೆ ಅಪಾಯ.

ಶ್ರೀ ಕಾಗೋಡು ತಿಮ್ಮಪ್ಪ: ಅಧ್ಯಕ್ಷರೆ, ಅಲ್ಲಿ ಏನಾಗಿದೆ ಈ ಸೇಂದಿಯನ್ನು ತೆಗೆದುಹಾಕುವ ಸಂದರ್ಭದಲ್ಲಿ ತಾವು ಹೇಳಿರುವುದು ನಿಜ. ಇದಕ್ಕೆ ಯಾವುದೂ ಭಿನ್ನಾಭಿಪ್ರಾಯ ಇಲ್ಲ. ಈಗ ಸರ್ಕಾರದ ವರದಿ ಪ್ರಕಾರ ಅವರು ಹೇಳುವುದು.. ಇಡೀ ರಾಜ್ಯದಲ್ಲಿ ಎಂದು ಹೇಳುವುದಿಲ್ಲ. ಯಾವ ತಾಲ್ಲೂಕುಗಳಲ್ಲಿ ನಮ್ಮ ನಿರೀಕ್ಷೆಗಿಂತ ಹೆಚ್ಚಿನ ಸೇಂದಿ ಮರಗಳಿವೆ, ಅಂತಹ ಕಡೆಗಳಲ್ಲಿ ಈ ಸೊಸೈಟಿ ಮೂಲಕ ತೆಗೆದು ಮಾರುವುದಕ್ಕೆ ಅವಕಾಶ ಮಾಡಿ ಕೊಡಿ. ಏಕೆಂದರೆ ಈ ಸೇಂದಿ ಕುಯ್ಯುವವರು ಯಾರು ಭೂಮಿ ವಗೈರೆ ಇಟ್ಟುಕೊಂಡಿಲ್ಲ, ಕೇವಲ ಕೂಲಿನಾಲಿ ಮಾಡಿಕೊಂಡು ಇರತಕ್ಕಂಥವರು. ಆದ್ದರಿಂದ ನೀವು ನಿಮ್ಮ ಸಿದ್ಧಾಂತದಂತೆ ಹೋಗಬೇಡಿ, ನೀವು ಮಾಡತಕ್ಕಂಥದ್ದನ್ನು ನಾನು ಒಪ್ಪುತ್ತೇನೆ. ಆದ್ದರಿಂದ ಎಲ್ಲಿ ಅಗತ್ಯವಾದಷ್ಟು ಸೇಂದಿ ಮರಗಳಿವೆ, ಅಷ್ಟಕ್ಕೆ ಸೀಮಿತ ಮಾಡಿದರೆ ಆ ಜನರಿಗೆ ಒಂದು ಸಹಾಯವಾಗುತ್ತದೆ..

ಶ್ರೀ ಜೆ.ಹೆಚ್.ಪಟೇಲ್: ಅಧ್ಯಕ್ಷರೆ, ನಾನು ಎಲ್ಲಾ ಜಿಲ್ಲೆಗಳ ಡೆಪ್ಯೂಟಿ

ಕಮೀಷನರ್‌ರವರಿಂದ ವರದಿ ತರಿಸಿಕೊಂಡು ಅಲ್ಲಿರುವ ಸೇಂದಿವನ ಇವು ಸಾಮಾನ್ಯವಾಗಿ ರೆವಿನ್ಯೂ ಲೆಕ್ಕದಲ್ಲಿ ಇರುತ್ತವೆ, ಈಗ ಆ ವನಗಳು ಏನಾದರೂ ಉಳಿದಿವೆಯೇ? ಮೇಲಾಗಿ ಸೇಂದಿಮರವನ್ನು ಹತ್ತಿ ಕಟ್ಟುವವರೇ ಇಲ್ಲ. ಮೊದಲು ಎಷ್ಟು ವೇಗವಾಗಿ ಮತ್ತು ಎಫಿಷಿಯಂಟ್ ಆಗಿ ಮರ ಹತ್ತಿ ಕಟ್ಟುತ್ತಿದ್ದರು, ಇಳಿಯುತ್ತಿದ್ದರು, ಈಗ ಏನಾಗಿದೆ ಮರ ಹತ್ತಿ ಬೀಳುವವರೇ ಜಾಸ್ತಿ ಜನ ಇದ್ದಾರೆ.

(ಇ) ಬೀಳಗಿ ತಾಲ್ಲೂಕಿನ ಹೇರಕಲ್ ಗ್ರಾಮದಲ್ಲಿ ತಾಲ್ಲೂಕು ಪಂಚಾಯಿತಿ ಸದಸ್ಯರಿಗೆ ಆ ಶಾಲೆಯ ಶಿಕ್ಷಕರೊಬ್ಬರು ಅಪಮಾನ ಮಾಡಿರುವುದು.

ಶ್ರೀ ರಾಜಶೇಖರ ಶೀಲವಂತ (ಗುಳೇದ ಗುಡ್ಡ): ಅಧ್ಯಕ್ಷರೆ, ಬೀಳಗಿ ತಾಲ್ಲೂಕಿನ ಹರಕೆರೆ ಗ್ರಾಮದಲ್ಲಿ ತಾಲ್ಲೂಕು ಪಂಚಾಯಿತಿಯ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ಮುಗಿಸಿ ಊರಿನ ವಿಷಯಕ್ಕೆ ಸಂಬಂಧಿಸಿದಂತೆ ಊರಿನ ಜನತೆ ಹಾಗೂ ಶಿಕ್ಷಕರು ಚರ್ಚೆ ಮಾಡಿದಾಗ, ಶಾಲೆಯಲ್ಲಿ ಸರಿಯಾದ ವಿದ್ಯಾಭ್ಯಾಸ ನಡೆದಿಲ್ಲ, ಶಾಲೆ ಸರಿಯಾಗಿ ನಡೆಯುತ್ತಿಲ್ಲ ಎನ್ನುವ ಕಾರಣಕ್ಕಾಗಿ ಅಲ್ಲಿಯ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಗ್ರಾಮಸ್ಥರಿಗೆ ಕೂಡ ತೊಂದರೆಯಾಗಿದೆ ಎನ್ನತಕ್ಕಂಥ ವಿಷಯವನ್ನು ಗ್ರಾಮದ ತಾಲ್ಲೂಕು ಪಂಚಾಯಿತಿಯ ಸದಸ್ಯರಾಗಿರುವ ಮಾನ್ಯ ಸಂಗಮೇಶ್ ಭಗವತಿಯವರು ಪ್ರಸ್ತಾಪ ಮಾಡಿದಾಗ, ಆ ಶಾಲೆಯ ಟೀಚರ್ ಆಗಿರುವ ಟಿ.ವೈ.ಜಾನಮಟ್ಟಿಯವರು, ಅವ್ವರ ಜೊತೆ ಕೋಪಗೊಂಡು ತುಂಬಾ ಕೆಟ್ಟದಾಗಿ ನಡೆದುಕೊಂಡರು ಹಾಗೂ ಎಲ್ಲಾ ಮಹಾಜನಗಳ ಮುಂದೆ ಅಪಮಾನವನ್ನೂ ಕೂಡ ಮಾಡಿದ್ದಾರೆ. ನಂತರ ಅಲ್ಲಿರುವ ಊರಿನ ಹಿರಿಯರು ಅವರೇ ಕುಳಿತುಕೊಂಡು ಅಪಮಾನಕ್ಕೆ ಒಳಗಾದವರನ್ನು ಸಮಾಧಾನ ಮಾಡುವಂತಹ ಕೆಲಸವನ್ನೂ ಕೂಡ ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಆ ಶಿಕ್ಷಕ ತನ್ನ ಹತ್ತಿರ ಒಂದು ಬಂದೂಕು ಕೂಡ ಇಟ್ಟುಕೊಂಡಿದ್ದಾನೆ. ಇಲ್ಲಿ ಒಂದು ವಿಚಿತ್ರವಾದ ಸಂಗತಿ ಏನೆಂದರೆ ಆ ಶಿಕ್ಷಕ ಏಕೆ ಬಂದೂಕು ಇಟ್ಟುಕೊಂಡಿದ್ದಾನೆ ಎಂಬುದು ನಮಗೆ ಗೊತ್ತಿಲ್ಲ. ಆ ಬಂದೂಕನ್ನೇ ಆಧಾರವಾಗಿ ಇಟ್ಟುಕೊಂಡು ತಾಲ್ಲೂಕು ಪಂಚಾಯಿತಿಯ ಸದಸ್ಯರ ಮೇಲೆ ಆಕ್ರಮಣ ಮಾಡುವುದಕ್ಕೆ ಬಂದಾಗ, ಅಲ್ಲಿದ್ದ ಗ್ರಾಮದ ಹಿರಿಯ ಮುಖಂಡರು ಅವರಿಗೆ ಸಮಾಧಾನ ಮಾಡಿ ಹೇಳಿ ಕಳುಹಿಸಿದ್ದಾರೆ. ನಂತರ ಅದೇ ದಿನ ಸಂಜೆ ಸುಮಾರು 5-00 ಗಂಟೆಗೆ ಹೇರಕಲ್ ಗ್ರಾಮದ ಬಳಿಯಿರುವ ಹೇರಕಲ್ ಪುನರ್‌ವಸತಿ ಕೇಂದ್ರಕ್ಕೆ ತನ್ನ ಸಂಬಂಧಿಗಳನ್ನು ಕರೆದುಕೊಂಡು ಹಾಗೂ ತನ್ನ ಹಿಂಬಾಲಕರನ್ನು ತನ್ನದೇ ಆದ ಒಂದು 709ನೇ ನಂಬರಿನ ಟ್ರಕ್‌ನಲ್ಲಿ ಬಂದು, ಜೊತೆಗೆ ತಾನೂ ಕೂಡ ಮೋಟಾರ್ ಸೈಕಲ್‌ನಲ್ಲಿ ಬಂದೂಕನ್ನು ತನ್ನ ಹೆಗಲ ಮೇಲೆ ಹಾಕಿಕೊಂಡು, ಮಾರಕ ಅಸ್ತ್ರಗಳನ್ನು ತೆಗೆದುಕೊಂಡು ಬಂದು ಗ್ರಾಮದಲ್ಲಿ ಗಲಾಟೆ ಮಾಡಿದಾಗ, ಇಡೀ ಊರಿನ ಜನತೆ ಎಲ್ಲರೂ ಸಹ ಬಾಗಿಲು ಮುಚ್ಚಿ ಕುಳಿತುಕೊಳ್ಳುವ ಪರಿಸ್ಥಿತಿ ಉಂಟಾಯಿತು. ಇಷ್ಟೆಲ್ಲಾ ಆದರೂ ಕೂಡ ಶಾಲೆಯ ಬಗ್ಗೆ ಮಾತನಾಡುವ ಯಾರಾದರೂ ಗಂಡು ಮಕ್ಕಳಿದ್ದರೆ ಹೊರಗೆ ಬನ್ನಿ,

ನಿಮ್ಮನ್ನು ಹೊಡೆಯುತ್ತೇನೆ, ಬಡಿಯುತ್ತೇನೆ ಎಂದು ಅವಾಚ್ಯ ಶಬ್ದಗಳಿಂದ ಆರ್ಭಟಿಸುತ್ತಾ, ಜನರನ್ನು ರೊಚ್ಚಿಗೆಬ್ಬಿಸಿರುವುದರಿಂದ ಇಡೀ ಊರಿನ ಜನತೆಯಲ್ಲಿ ಭಯದ ವಾತಾವರಣ ಉಂಟಾಗಿದೆ. ಇದೇ ಕಾರಣಕ್ಕಾಗಿ ಆ ಭಾಗದ ಸುಮಾರು 15-20 ಜನರು ನನ್ನ ಬಳಿ ಬಂದಿದ್ದರು, ಅವರನ್ನೂ ಕೂಡ ಮಾನ್ಯ ಗೋವಿಂದೇಗೌಡರಿಗೆ ಭೇಟಿ ಮಾಡಿಸಿ, ಆ ಶಿಕ್ಷಕನ ಮೇಲೆ ಕ್ರಮ ಜರುಗಿಸಲಿಕ್ಕೆ ಈಗಾಗಲೇ ತಿಳಿಸಲಾಗಿದೆ. ಆದರೆ ನಾನು ಮುಖ್ಯವಾಗಿ ಹೇಳುವುದೇನೆಂದರೆ ಆತ ಹೊಂದಿರುವಂತಹ ಬಂದೂಕಿನ ಲೈಸೆನ್ಸ್‌ನ್ನು ತತ್‌ಕ್ಷಣವೇ ಕ್ಯಾನ್ಸಲ್ ಮಾಡಿ, ಆ ಊರಿನಿಂದ ಬಹಳ ದೂರದ ಊರಿಗೆ ವರ್ಗ ಮಾಡಬೇಕು. ಏಕೆಂದರೆ ಸುಮಾರು 15 ವರ್ಷದಿಂದಲೂ ಆ ಶಿಕ್ಷಕ ಅದೇ ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದಾನೆ. ಇದರಿಂದಾಗಿ ಆತ ಅಲ್ಲಿ ಬೇರು ಬಿಟ್ಟು ಜನಗಳಿಗೆ ಸಾಕಷ್ಟು ತೊಂದರೆ ಕೊಡುವಂತಹ ಕೆಲಸ ಮಾಡುತ್ತಿದ್ದಾನೆ. ಇದಕ್ಕಿಂತ ಮೊದಲು ಅವನನ್ನು ವರ್ಗಾವಣೆ ಮಾಡಿಸುವುದಕ್ಕೆ ಪ್ರಯತ್ನ ಪಟ್ಟರು ಇದು ಸಾಧ್ಯವಾಗಿಲ್ಲ. ಏಕೆಂದರೆ ರಾಜಕೀಯವಾಗಿ ಬಹಳ ಪ್ರಬಲವಾಗಿ ಆ ವ್ಯಕ್ತಿ ಇದ್ದಾನೆ.

ಅಧ್ಯಕ್ಷರು: ಬೇಡ ಅದನ್ನು ಅಲ್ಲಿ ನಿಲ್ಲಿಸಬೇಡಿ, ನಿಮ್ಮ ಸಮಸ್ಯೆಯನ್ನು ಹೇಳಿದೀರಿ, ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಶಿಕ್ಷಣ ಸಚಿವರು): ಅಧ್ಯಕ್ಷರೆ, ಮಾನ್ಯ ಮಿತ್ರರು ಏನು ಹೇಳಿದ್ದಾರೆ ಅದು ನಿಜ. ಆ ಭಾಗದ ಊರಿನವರು ಬಂದು ನನ್ನನ್ನು ಭೇಟಿ ಮಾಡಿ ಆ ಶಿಕ್ಷಕ ಹಲ್ಲೆ ಮಾಡುತ್ತಿದ್ದಾನೆ ಹಾಗೂ ಶಾಸಕರು ಏನು ಹೇಳಿದರು ಆ ವಿಷಯವನ್ನು ನನ್ನ ಹತ್ತಿರ ಹೇಳಿದರು. ನಾನು ಕೂಡಲೇ ಬಿಜಾಪುರ ಡಿ.ಡಿ.ಪಿ.ಐ.ಗೆ ಆ ಶಿಕ್ಷಕನನ್ನು ಸಸ್ಪೆಂಡ್ ಮಾಡಲು ಹೇಳಿದ್ದೇನೆ. ಹಾಗೂ ಅವನು ಈಗಾಗಲೇ ಸಸ್ಪೆನ್‌ಷನಲ್ಲಿ ಇದ್ದಾನೆ. ನಂತರ ಬಂದೂಕು ತೆಗೆದುಕೊಂಡು ಹೊಡೆಯುವುದಕ್ಕೆ ಬಂದಿದ್ದ ಎನ್ನುವುದರ ಬಗ್ಗೆ ಅಲ್ಲಿನ ಎಸ್.ಪಿ.ಗೆ ಕಂಪ್ಲೇಂಟ್ ಮಾಡಿ, ಈ ಬಗ್ಗೆ ಲೈಸನ್ಸ್ ಇದೆಯೋ ಇಲ್ಲವೋ ಎನ್ನುವುದರ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಅವನ ಮೇಲೆ ಸೂಕ್ತ ಕ್ರಮ ಜರುಗಿಸಿ ಎಂದು, ಇದರ ಬಗ್ಗೆ ಮಾಹಿತಿ ಕಳುಹಿಸಿ ಎಂದು ಹೇಳಿದ್ದೇವೆ.

ಅಧ್ಯಕ್ಷರು: ಒಂದು ವೇಳೆ ಆತ ಶಿಕ್ಷಕನಾಗಿದ್ದು, ಬಂದೂಕನ್ನು ತೆಗೆದುಕೊಂಡು ಈ ರೀತಿ ಮಾಡುವುದಾದರೆ ಅದರ ಲೈಸನ್ಸ್ ರದ್ದು ಮಾಡಲು ತಮ್ಮ ಸಹೋದ್ಯೋಗಿಗಳ ಹತ್ತಿರ ಚರ್ಚಿಸಿ....

ಶ್ರೀ ಹೆಚ್.ಜಿ.ಗೋವಿಂದೇಗೌಡ: ಕೆಲವು ಸಾರಿ ಏನಾಗುತ್ತದೆ ಎಂದರೆ ಕೆಲವು ಉಪಾಧ್ಯಾಯರುಗಳು ಜಮೀನುಗಳನ್ನು ಹೊಂದಿರುತ್ತಾರೆ. ಆದ್ದರಿಂದ ಅವರಿಗೆ ಬಂದೂಕನ್ನು ತೆಗೆದುಕೊಳ್ಳುವ ಅವಕಾಶವಿದೆ.

ಅಧ್ಯಕ್ಷರು: ಅಲ್ಲಿ ಗನ್ ಲೈಸೆನ್ಸ್ ತೆಗೆದುಕೊಳ್ಳಬಾರದು ಎಂದೇನೂ ಇಲ್ಲ, ಅದನ್ನು ಉಪಧ್ಯಾಯರು ಇಟ್ಟುಕೊಳ್ಳಬಾರದು ಎಂದೇನೂ ಇಲ್ಲ, ಆದರೆ ಅದನ್ನು ತೆಗೆದುಕೊಂಡು ಶಾಲೆಗೆ ಹೋಗಬಾರದು. ಶಾಲೆಗೆ ಗನ್‌ನ್ನು ತೆಗೆದುಕೊಂಡು ಆ ಉಪಾಧ್ಯಾಯ ಹೋಗುತ್ತಿರುವುದರಿಂದ ಅದನ್ನು ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆ ಇದೆ ಎಂದು ತಾವು ಅಧಿಕಾರಿಗಳಿಗೆ ಹೇಳಿ ಆ ಗನ್ ಲೈಸೆನ್ಸ್ ಕ್ಯಾನ್ಸಲ್ ಮಾಡಿಸಿ.

(ಈ) ದಕ್ಷಿಣ ಕನ್ನಡ ಜಿಲ್ಲೆಯನ್ನು ತುಳು ಜಿಲ್ಲೆಯನ್ನಾಗಿ ನಾಮಕರಣ.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ್): ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆ, ತುಳು ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ಯಕ್ಷಗಾನ, ಭೂತಾರಾಧನೆ, ಮುಂತಾದವುಗಳಿಗೆ ಹೆಸರಾದ ಜಿಲ್ಲೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಇತ್ತೀಚೆಗೆ ವಿಭಜನೆ ಮಾಡಿ ಉಡುಪಿ ಜಿಲ್ಲೆಯನ್ನು ಪ್ರತ್ಯೇಕ ಮಾಡಿದ್ದಾರೆ. ಆ ಭಾಗದ 15 ಜನ ಶಾಸಕರಿದ್ದರೂ ಅವರ ಹತ್ತಿರ ಸಮಾಲೋಚನೆ ಮಾಡದೆ ಈ ಕಾರ್ಯವನ್ನು ಮಾಡಿದ್ದಾರೆ. ನಾನು ಆ ಬಗ್ಗೆ ವಿಚಾರ ಮಾಡಲಿಕ್ಕೆ ಈಗ ಹೋಗುವುದಿಲ್ಲ. ಏಕೆಂದರೆ ಇದು ಮುಗಿಯದ ವಿಚಾರವಾಗಿದೆ. ದೇಶದಲ್ಲಿ ಸುಮಾರು 50 ಲಕ್ಷ ಜನ ತುಳು ಮಾತನಾಡುವ ಮಾತೃಭಾಷೆಯ ಜನರಿದ್ದಾರೆ. ಈಗ ವಿಭಜನೆಯ ನಂತರ ಉತ್ತರ ಕನ್ನಡ, ದಕ್ಷಿಣ ಕನ್ನಡ ಮಧ್ಯದಲ್ಲಿ ಉಡುಪಿ ಜಿಲ್ಲೆಎಂದು ಮಾಡಿಕೊಂಡಿದ್ದಾರೆ. ತುಳುನಾಡಿನ ಇತಿಹಾಸದಂತೆ ಇಲ್ಲಿನ ಜನರು ಪರಶುರಾಮ ಸೃಷ್ಠಿಯ ಇತಿಹಾಸದಲ್ಲಿ ಬೆಳೆದವರು. ವೀರರಾದ ಕೋಟಿ ಚೆನ್ನಯ್ಯ, ಕಾಂತಾತಾರ್, ಬೂದಬಾರ್, ಆಗೋಳ್ ಮಂಜಣ್ಣ, ದೇವ ಪುಂಜ, ದೇಶದ ಪ್ರಪ್ರಥಮ ಸ್ವಾತಂತ್ರ್ಯ ಹೋರಾಟಗಾರ ಮಹಿಳೆ ಚೌಟರಾಣಿ, ಉಳ್ಳಾಲದ ಅಬ್ಬಕ್ಕದೇವಿ, ಈ ತುಳುನಾಡಿಗೆ ಹೆಸರನ್ನು ತಂದವರು. ಪಂಚ ದ್ರಾವಿಡ ಭಾಷೆಗಳಲ್ಲಿ ಒಂದಾದ ಈ ತುಳು ಭಾಷೆ ಅಭಿವೃದ್ಧಿ ಪಡಿಸುವ ದೃಷ್ಠಿಯಿಂದ ರಾಜ್ಯ ಸರ್ಕಾರ ಈ ಭಾಷೆಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತುಳು ಸಾಹಿತ್ಯ ಅಕಾಡೆಮಿಯನ್ನು ಕೂಡ ರಚಿಸಿ, ಪ್ರೋತ್ಸಾಹ ನೀಡಿದೆ. ತುಳುವರೇ ಅಧಿಕವಾಗಿರುವ ಜನ, ತುಳು ಭಾಷೆಯನ್ನೇ ಹೆಚ್ಚಾಗಿ ಮಾತನಾಡುವ ಜನ, ಅನ್ಯ ಮತದವರೂ ಕೂಡ ತುಳು ಭಾಷೆಯನ್ನು ಬಲ್ಲವರಾಗಿರುವುದರಿಂದ ಮಂಗಳೂರು ಕೇಂದ್ರವಾಗಿರುವ ಈ ಜಿಲ್ಲೆಯಲ್ಲಿ ಈಗ ಮೂರು ಜನ ಸಂಸತ್ ಸದಸ್ಯರಲ್ಲಿ ಇಬ್ಬರು ಸಂಸತ್ ಸದಸ್ಯರು...ವಿಷಯ ಏನೆಂದರೆ 9ಜನರಲ್ಲಿ 8 ಜನ ಎಲ್ಲಾ ತುಳು ಭಾಷೆಯನ್ನು ಮಾತನಾಡುವವರು ಇರುವುದರಿಂದ ಈಗ ಉಳಿದಿರುವುದಕ್ಕೆ ತುಳು ಜಿಲ್ಲೆ ಎಂದು ನಾಮಕರಣ ಮಾಡಬೇಕೆಂದು ನಾನು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ನಾನು ತುಳು ಜಿಲ್ಲೆಯನ್ನು ಕೇಳುತ್ತಿಲ್ಲ, ನಾನು ಇಲ್ಲಿ ಸ್ಪಷ್ಟ ಪಡಿಸುವುದೇನೆಂದರೆ, ಈ ದೇಶದ ಸುಮಾರು 50 ಲಕ್ಷ ತುಳು ಭಾಷೆ ಮಾತನಾಡುವ ಜನರ ಭಾಷಾಭಿವೃದ್ಧಿಯ ದೃಷ್ಟಿಯಿಂದ ಈ ಜಿಲ್ಲೆಗೆ ತುಳು ಜಿಲ್ಲೆ ಎಂದು ನಾಮಕರಣ ಮಾಡಬೇಕು; ಕರ್ನಾಟಕಕ್ಕೆ ಮುಂಚೆ ಮೈಸೂರು ಎಂದು ಹೆಸರಿತ್ತು. ಕನ್ನಡ ಮಾತನಾಡುವವರು ಇದ್ದಾರೆಂದು ಇದಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದೆ.

ಕೊಡುಗು ಭಾಷೆ ಮಾತನಾಡುವವರು ಇರುವುದರಿಂದ ಅದನ್ನು ಕೊಡಗು ಜಿಲ್ಲೆ ಎಂದು ನಾಮಕರಣ ಮಾಡಿದ್ದಾರೆ. ಆದ್ದರಿಂದ ಭಾಷೆಯ ವಿಚಾರವಾಗಿರುವುದರಿಂದ, ಈ ತುಳು ಭಾಷೆಗೆ ಹೆಚ್ಚು ಪ್ರೋತ್ಸಾಹ ಕೊಡುವ ದೃಷ್ಠಿಯಿಂದ ಉಳಿದ ಭಾಗವಾದ ಮಂಗಳೂರು ಕೇಂದ್ರವಾಗಿರುವ ಈ ಭಾಗವನ್ನು ತಾವು ತುಳು ಜಿಲ್ಲೆ ಎಂದು ನಾಮಕರಣ ಮಾಡಬೇಕು ಎಂದು ನಾನು ರಾಜ್ಯ ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ.

ಅಧ್ಯಕ್ಷರು: ಇಲ್ಲ ಸಮಗ್ರ ಕರ್ನಾಟಕದ ಹಿತದೃಷ್ಟಿಯಿಂದ ಇಂತಹ ಬೇಡಿಕೆಗಳಿಗೆ ನಾವು ಅವಕಾಶ ಕೊಡಬಾರದು, ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ, ಕರ್ನಾಟಕ ಏಕೀಕರಣಕ್ಕೆ ಬಹಳ ಜನ ತಮ್ಮ ಪ್ರಾಣವನ್ನು ತ್ಯಾಗ ಮಾಡಿ ಈ ಕರ್ನಾಟಕವನ್ನು ಸೃಷ್ಠಿ ಮಾಡಿದ್ದಾರೆ, ಇದರ ವಿಚಾರವಾಗಿ ತಾವು ಆನಂತರ ಬನ್ನಿ ಬೇಕಾದರೆ ನಾನು ನಿಮ್ಮ ಹತ್ತಿರ ಚರ್ಚೆ ಮಾಡುತ್ತೇನೆ.

ಶ್ರೀ ಕೆ.ಜಯರಾಮಶೆಟ್ಟಿ: ಜನರ ಭಾವನೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ದೇಶದಲ್ಲಿ 50 ಲಕ್ಷ ಜನ ತುಳು ಭಾಷೆ ಮಾತನಾಡುವ ಜನರಿದ್ದಾರೆ,

ಅಧ್ಯಕ್ಷರು: ಆಯಿತು, ಈಗ ಅದರ ಮೇಲೆ ಚರ್ಚೆ ಬೇಡ, ತಾವು ದಯಮಾಡಿ ನನ್ನ ಕಛೇರಿಗೆ ಬನ್ನಿ ನಾವು ನೀವು ಮಾತನಾಡೋಣ. There is no need for the Government to answer. ಆಯಿತು ತಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಮಾನ್ಯ ಅಧ್ಯಕ್ಷರೇ, ನಾನು ಪ್ರಸ್ತಾಪ ಮಾಡುವ ವಿಷಯ....

ಅಧ್ಯಕ್ಷರು: ದಯವಿಟ್ಟು ನೀವೂ ನನ್ನ ಕಚೇರಿಗೆ ಬರಬೇಕು. ನಿನ್ನೆ ಮುಖ್ಯಮಂತ್ರಿಗಳು ಆ ವಿಚಾರದಲ್ಲಿ ಫೈನಲ್ ಸ್ಟೇಟ್‌ಮೆಂಟ್ ಮಾಡಿದ್ದಾರೆ. ತಾವು ಮತ್ತೆ ರೀ ಓಪನ್ ಮಾಡಬೇಕಾದರೆ, ದಯಮಾಡಿ ತಾವು ನನ್ನ ಆಫೀಸಿಗೆ ಬನ್ನಿ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಸನ್ಮಾನ್ಯ ಅಧ್ಯಕ್ಷರೇ, ಇವತ್ತು ತಾವೆಲ್ಲಾ ಕೂಡ ಪತ್ರಿಕೆಯಲ್ಲಿ ಓದಿದ್ದೀರಿ. ಹೈಕೋರ್ಟ್ ಜೋನಲ್ ರೆಗ್ಯುಲೇಷನ್ ಅಮೆಂಡ್‌ಮೆಂಟ್ ಆಕ್ಟನ್ನು ವಾಯ್ಡ್ ಎಂದು ಈಗಾಗಲೇ ತೀರ್ಮಾನ ಮಾಡಿದ್ದಾರೆ. ಸುಪ್ರೀಂ ಕೋರ್ಟಿನಲ್ಲಿ ಆರ್ಡರ್ ಆಗಿತ್ತು.

ಅಧ್ಯಕ್ಷರು: ಈಗ ಕಾನೂನು ಸಚಿವರು ಇಲ್ಲ. ಇದನ್ನು ನಾಳೆ ತೆಗೆದುಕೊಳ್ಳೋಣ. ತಮ್ಮ ನೋಟೀಸ್ ತಡವಾಗಿ ನನಗೆ ತಲುಪಿತು. I will ask him to be present here tomorrow.

(ಉ) ಖಾಸಗಿ ಡೆಂಟಲ್ ಹಾಗೂ ಮೆಡಿಕಲ್ ಕಾಲೇಜುಗಳ ಕುರಿತು

+ ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಸಭಾಧ್ಯಕ್ಷರೇ, ತಮ್ಮ ಮೂಲಕ ವೈದ್ಯಕೀಯ ಶಿಕ್ಷಣ ಸಚಿವರ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಈ ಸದನದಲ್ಲಿ ಖಾಸಗಿ ಡೆಂಟಲ್ ಹಾಗೂ ಮೆಡಿಕಲ್ ಕಾಲೇಜುಗಳ ಬಗ್ಗೆ, ಅನೇಕ ಸಲ ನಾವು ಪ್ರಸ್ತಾಪ ಮಾಡಿದ್ದೇವೆ. ಆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮೇಲೆ ನಡೆಯುವ ದೌರ್ಜನ್ಯ ಇರಬಹುದು, ಮತ್ತು ಆ ಕಾಲೇಜುಗಳಲ್ಲಿನ ಕೊರತೆ ಬಗ್ಗೆ ನಾವು ಅನೇಕ ಸಲ ಸರ್ಕಾರದ ಗಮನ ಸೆಳೆದಿದ್ದೇವೆ. ಇವತ್ತು ಅನೇಕರು ಕಾಲೇಜ್ ಪ್ರಾರಂಭ ಮಾಡಿ, ತಮ್ಮ ಮಕ್ಕಳಿಗೆ ಡಾಕ್ಟರು ಮಾಡುವುದಕ್ಕೋಸ್ಕರ ಕಾಲೇಜು ಪ್ರಾರಂಭ ಮಾಡಿದ್ದಾರೇನೋ ಎಂಬ ಬಗ್ಗೆ ಒಂದು ಉದಾಹರಣೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಹೆಬ್ಬಾಳ ಬಳಿ, ರಾಜೀವ್ ಗಾಂಧಿ ದಂತ ವಿಜ್ಞಾನ, ವೈದ್ಯಕೀಯ ಕಾಲೇಜೊಂದಿದೆ. ಅದಕ್ಕೆ ಸದಾಶಿವನ್ ಎಂಬುವರು ಅಧ್ಯಕ್ಷರು. ನಿನ್ನೆ ಆ ಕಾಲೇಜಿನಲ್ಲಿ ಸೆಕೆಂಡ್ ಇಯರ್ ಬಿ.ಡಿ.ಎಸ್.ಗೆ ಪರೀಕ್ಷೆ ನಡೆಯುತ್ತಿರುವಾಗ, ಡೆಂಟಲ್ ಅನಾಟಮಿ ಹಾಗೂ ಓರಲ್ ಹಿಸ್ಟಾಲಜಿ ಪರೀಕ್ಷೆ ನಡೆಯುತ್ತಿದ್ದಾಗ ಬೆಂಗಳೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ (ಮೌಲ್ಯಮಾಪನ) ಶಿವನಂಜಯ್ಯನವರು ಒಂದು ಸ್ಕ್ವಾಡ್ ತೆಗೆದುಕೊಂಡು ಅಲ್ಲಿ ಹೋದರು. ಆ ಹಾಲ್‌ನಲ್ಲಿ ಚೇರ್ಮನ್ ಮಗ, ಅವರು ಯಾವ ಜಾಗದಲ್ಲಿ ಕುಳಿತುಕೊಳ್ಳಬೇಕಾಗಿತ್ತೋ ಅಲ್ಲಿ ಕುಳಿತಿರಲಿಲ್ಲ. ಆ ರೂಮಿನ ಯಾರು ಮೇಲ್ವಿಚಾರಕಿ ಇದ್ದರು, ಆ ಮಹಿಳೆಯನ್ನು, ಆ ಹುಡುಗ ಎಲ್ಲಿ ಎಂದು ಕೇಳಿದರು. ಎಂತಹ ಹ್ಯಾಂಡ್ ಇನ್‌ಗ್ಲೋ ಆಪರೇಷನ್ ಎಂದರೆ, ಆ ಮೇಲ್ವಿಚಾರಕಿ ಹೇಳಿದರು, ಆ ಹುಡುಗ ಇವತ್ತು ಪರೀಕ್ಷೆಗೇ ಬಂದಿಲ್ಲ ಎಂದು. ಪರೀಕ್ಷೆಗೆ ಬಂದಿಲ್ಲವೆಂದ ಮೇಲೆ ಆ ಬ್ಲಾಂಕ್ ಉತ್ತರ ಪತ್ರಿಕೆ ತೋರಿಸಿ ಮತ್ತು ನೀವು ಮಾರ್ಕ್ ಮಾಡಿರುವುದನ್ನು ತೋರಿಸಿ ಎಂದರೆ, ಆಕೆ ಸರಿಯಾಗಿ ಉತ್ತರ ಕೊಡಲಿಲ್ಲ. ಆಮೇಲೆ ರಿಜಿಸ್ಟ್ರಾರ್‌ಗೆ ಗೊತ್ತಾಯಿತು. ಅವರು ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆ ಎರಡೂ ತೆಗೆದುಕೊಂಡು, ತಮ್ಮ ಮನೆಗೆ ತೆಗೆದುಕೊಂಡು ಹೋಗಿದ್ದಾರೆ ಉತ್ತರ ಬರೆಯುವುದಕ್ಕೆ ಎಂದು. ಟೇಕಿಂಗ್ ಕಾಪಿ to a higher level, Hi-tech copying ಇವರು, ಅವರ ಮನೆಗೆ ಓಡಿಹೋದರು. ಅಷ್ಟೊತ್ತಿಗೆ ಅವನು ಸಿಗಲಿಲ್ಲ. ಹಿಂದಿನ ಬಾರಿ ಇದೇ ವಿದ್ಯಾರ್ಥಿ ಮನೆಗೇನು ತೆಗೆದುಕೊಂಡು ಹೋಗುವುದು, ಹಾಲ್‌ನಲ್ಲೇನು ಬರೆಯುವುದು ಎಂದು ಚೇರ್ಮನ್ನರ ರೂಮಿನಲ್ಲಿ ಕುಳಿತುಕೊಂಡು, ಉತ್ತರವನ್ನು ಬರೆದಿದ್ದ ಉದಾಹರಣೆ ಕೂಡ ನಮ್ಮಮುಂದೆ ಇದೆ. ಸನ್ಮಾನ್ಯ ಅಧ್ಯಕ್ಷರೇ, ನಮ್ಮ ನಾಡು ಚಿನ್ನದ ನಾಡು, ಗಂಧದ ಬೀಡು ಎಂದು ಇತ್ತು. ಇವತ್ತು ಕಾಪಿ ಹೊಡೆಸುವುದನ್ನು ಕಲಿಸುವ ನಾಡು ಆಗುತ್ತಾ ಇದೆಯಾ? ಈ ಸಂದರ್ಭದಲ್ಲಿ ರಾಜೀವ್ ಗಾಂಧಿ ಡೆಂಟಲ್ ಕಾಲೇಜ್ ಮೇಲೆ ರಾಜ್ಯ ಸರ್ಕಾರದ ಕ್ರಮ ಏನು? ಇದರಿಂದ ನಾವೆಲ್ಲರೂ ಕೂಡ ತಲೆತಗ್ಗಿಸಬೇಕು. ರಾಜ್ಯಕ್ಕೆ ಒಂದು ಕೆಟ್ಟ ಹೆಸರು ಬರುವ ಘಟನೆ ಆಗಿದೆ. ಚೇರ್ಮನ್ನರು ತಮ್ಮ ಮಗನನ್ನು ಮನೆಯಲ್ಲಿ ಕೂರಿಸಿ, ಕಾಪಿ ಬರೆಸುವ ಪ್ರಸಂಗ ಇವತ್ತು ಬೆಳಕಿಗೆ ಬಂದಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ

ತೆಗೆದುಕೊಳ್ಳುತ್ತದೆ ಎನ್ನುವುದನ್ನು ತಮ್ಮ ಮುಂದೆ ಕೇಳುವುದಕ್ಕೆ ಇಷ್ಟಪಡುತ್ತೇನೆ.

MR. SPEAKER: Before you reply that there are two things involved, ಒಂದು ಕಾಪಿ ಹೊಡೆಯುವುದು, ಅದಕ್ಕೆ ನೀವೇನು ಹೇಳುತ್ತೀರಿ ಅದನ್ನು ಹೇಳಿ. ಎರಡನೆಯದು ರಾಜೀವ್‌ಗಾಂಧಿ ಹೆಸರು, ಇನ್ನೊಬ್ಬರ ಹೆಸರು, ಅವರು ಈ ದೇಶದ ಪ್ರಧಾನ ಮಂತ್ರಿಯಾಗಿದ್ದವರು. ಅವರನ್ನು ಗೌರವಿಸತಕ್ಕಂಥವರು, ಅವರನ್ನು ಪ್ರೀತಿ ಮಾಡತಕ್ಕ ಜನ ಈ ದೇಶದಲ್ಲಿ ಇವತ್ತು ಒಂದು ವರ್ಗ ಇದ್ದೇ ಇದ್ದಾರೆ. ಅಂತಹ ದೊಡ್ಡ ಮನುಷ್ಯರ ಹೆಸರನ್ನು ಈ ಸಂಸ್ಥೆಗಳಿಗೆ ಯಾರ್‍ಯಾರೋ ಕೆಲಸಕ್ಕೆ ಬಾರದವರೆಲ್ಲಾ ಇಟ್ಟುಕೊಂಡು ಈ ರೀತಿ ಮಾಡುತ್ತಾರಲ್ಲಾ, We should not drag those people. Immediately you see that the name of the Institution is changed. They have no business to use such big names and do all such things.

ಡಾ॥ ಎಂ.ಶಂಕರನಾಯಕ್: ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್‌ರವರು ಹೇಳತಕ್ಕಂಥ ವಿಚಾರವನ್ನ ನಾನು ಇವತ್ತು ಪತ್ರಿಕೆಯಲ್ಲಿ ಓದಿದೆ. ಬೆಂಗಳೂರು ಯೂನಿವರ್ಸಿಟಿ ಮೌಲ್ಯಮಾಪನ ರಿಜಿಸ್ಟ್ರಾರ್‌ರವರು ನಿನ್ನೆ ಹೋಗಿ, ಅದನ್ನು ತಪಾಸಣೆ ಮಾಡುವ ವೇಳೆಯಲ್ಲಿ ಹಿಡಿದಿದ್ದಾರೆ, ಇದನ್ನು ನಾನು ಸದನಕ್ಕೆ ಬಂದಮೇಲೆ ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ರೈಸ್ ಮಾಡುತ್ತಾರೆಂದು ಗೊತ್ತಾಯಿತು. ನಾನು ಮಾಹಿತಿಯನ್ನು ತರಿಸುವುದಕ್ಕೆ ಹೇಳಿದ್ದೇನೆ. ಆದರೆ, ಅವರು ಯಾರೇ ಆಗಿರಲಿ, ರಾಜೀವ್‌ಗಾಂಧಿ ಡೆಂಟಲ್ ಕಾಲೇಜ್ ಚೇರ್ಮನ್ ಮಗ ಆಗಿರಲಿ, ಯಾರೇ ಆಗಿರಲಿ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಸೂಕ್ತ ಕ್ರಮ ಎಂದರೆ ಏನು?

ಡಾ॥ ಎಂ.ಶಂಕರನಾಯಕ್: ಅವರನ್ನು ಡಿಬಾರ್ ಮಾಡುವುದಾಗಲೀ, ಆ ಕಾಲೇಜಿಗೆ ನೋಟೀಸ್ ಕೊಟ್ಟು, ಮುಂದೆ ಆ ಕಾಲೇಜ್ ಬಗ್ಗೆ ಕಾನೂನಿನ ರೀತಿಯಲ್ಲಿ ಏನು ಕ್ರಮ ತೆಗೆದುಕೊಳ್ಳಬಹುದು. ಆಮೇಲೆ ತಾವು ಒಂದು ಸಲಹೆ ಮಾಡಿದ್ದೀರಿ. ಇಂತಹ ಮಹಾನ್ ನಾಯಕರುಗಳ ಹೆಸರುಗಳನ್ನಿಟ್ಟುಕೊಂಡು, ಈ ನಾಯಕರುಗಳ ಹೆಸರನ್ನು ಹಾಳುಮಾಡತಕ್ಕ ಕೆಲಸವನ್ನು ಇವರು ಮಾಡುತ್ತಿದ್ದಾರೆ ಎಂದು. ಏಕೆಂದರೆ ಇದು ನಮ್ಮ ದೇಶದಲ್ಲಿ ಮುಂಚೆನಿಂದಲೂ ನಡೆಯುತ್ತಾ ಇದೆ.

MR. SPEAKER: I have a question. Do you treat this as malpratice by the student?

DR. M.SHANKAR NAIK: I will get the report.

MR. SPEAKER: If facts stated by Mr.Suresh Kumar are found to be correct, it will not end up as a case of malpractice committed by the student. It is something beyond that where the management has connived, to encourage malpratice. All those institution has to be derecognised. We will not be incurring loss by derecognising such institutions.

ಡಾ|| ಎಂ.ಶಂಕರನಾಯಕ್: ಮಾನ್ಯ ಸಭಾಧ್ಯಕ್ಷರೇ, ಮಾಲ್‌ಪ್ರಾಕ್ಟೀಸ್ ಯಾವಾಗ ಬರುತ್ತದೆ ಅವನು ಅಲ್ಲೇ ಹಾಲ್‌ನಲ್ಲಿ ಇದ್ದು ಕಾಪಿ ಹೊಡೆದಾಗ. ಆದರೆ, ಇದು ಆ ತರಹ ಇಲ್ಲ. ಇವರು ಮನೆಗೆ ಹೋಗಿ ಮಾಡುತ್ತಿರುವುದರಿಂದ, ಅವರ ಮೇಲೆ ಬೇರೆ ತರಹದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮ್ಯಾನೇಜ್‌ಮೆಂಟೇ ಮಾಡಿಸುತ್ತಾ ಇದ್ದಾರೆ. That is why it has to be derecognised

MR. SPEAKER: You kindly get the details. Can you make a statement in the House by tommorrow?

DR. M.SHANKAR NAIK: Definitely, Sir.

(ಊ) ಬಾಗೇಪಲ್ಲಿ ಕ್ಷೇತ್ರದ ವಿದ್ಯುಚ್ಛಕ್ತಿ ಮಂಡಳಿ ವಿಚಾರ

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಅಧ್ಯಕ್ಷರೇ, ವಿದ್ಯುಚ್ಛಕ್ತಿ ಮಂಡಳಿ ವಿಚಾರ, ಇದು ನನ್ನ ಕ್ಷೇತ್ರದ ಒಂದು ಪ್ರಮುಖವಾದ ವಿಷಯ. ಸರ್ಕಾರ ಪ್ರತಿಯೊಂದು ತಾಲ್ಲೂಕಿಗೂ ಒಂದು ವರ್ಷಕ್ಕೆ ಇಷ್ಟು ಎಂದು ಹೇಳಿ, ಐ.ಪಿ.ಸೆಟ್‌ಗೆ ಸಂಪರ್ಕ ಕೊಡುವುದಕ್ಕೆ ಗುರಿ ನಿಗದಿ ಮಾಡಿದೆ. ಆ ಗುರಿ ಪ್ರಕಾರ ಬಾಗೆಪಲ್ಲಿ ತಾಲ್ಲೂಕಿಗೆ 570 ಐ.ಪಿ.ಸೆಟ್‌ಗಳಿಗೆ, 1997ರ ಏಪ್ರಿಲ್‌ನಿಂದ 1998 ಏಪ್ರಿಲ್‌ವರೆಗೆ ಸಂಪರ್ಕ ಕೊಡಬೇಕೆಂದು ಇದೆ. ಈಗ ಸೆಪ್ಟಂಬರ್ ಮೊದಲನೇ ವಾರದಲ್ಲಿ ನಾವಿದ್ದೇವೆ. ಇದುವರೆಗೂ ಕೊಟ್ಟಿರತಕ್ಕಂಥಾದ್ದು ಕೇವಲ 13 ಮಾತ್ರ. ಅದು ಎಸ್.ಸಿ./ಎಸ್.ಟಿ ಸೇರಿ 13ಕ್ಕೆ ಮಾತ್ರ ಇದುವರೆಗೆ ಸಂಪರ್ಕ ಕೊಟ್ಟಿದ್ದಾರೆ, ಇದರಲ್ಲಿ ಏನಾಗುತ್ತಿದೆಯೆಂದರೆ, ವರ್ಕ್ ಆರ್ಡರ್ ಸ್ಯಾಂಕ್ಷನ್ ಆಗಿ, ಡಿಪಾಸಿಟ್ ಕಟ್ಟಿ ವರ್ಷದಿಂದ ಕಾಯುತ್ತಿರತಕ್ಕಂಥವರಿಗೆ, ಐ.ಪಿ.ಸೆಟ್‌ಗೆ ಸಂಪರ್ಕ ಕೊಡದೇ, ಸೆಲ್ಫ್‌ಫೈನಾನ್ಸ್ ಸ್ಕೀಮ್‌ನ್ನು ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರ, ಇದರಿಂದ ಹೆಚ್ಚು ಹಣ ಬರುತ್ತದೆ, estimated cost or... whichever is higher, ಎಂದು ಕೆ.ಇ.ಬಿ.ನಲ್ಲಿ ಒಂದು ನಿಯಮ

ಇದೆ. ಅದನ್ನು ಉಪಯೋಗಿಸಿಕೊಳ್ಳುವುದಕ್ಕೋಸ್ಕರ ರೈತರಿಗೆ, ಸಾಮಾನ್ಯ ರೈತರು ಯಾರು ವರ್ಕ್ ಆರ್ಡರ್ ಮಾಡಿಸಿ ಯಾರು ಎಸ್ಟಿಮೇಟ್ ಮಾಡಿ ಇಟ್ಟಿದ್ದಾರೆ, ಯಾರು ಸೀನಿಯಾರಿಟಿ ಲಿಸ್ಟ್‌ನಲ್ಲಿದ್ದಾರೆ, ಅವರು ಯಾರಿಗೂ ಸಂಪರ್ಕ ಕೊಡದ ಹಾಗೆ, ಕೇವಲ ಒಂದು ತಿಂಗಳಿಗೆ 50ರ ಪ್ರಕಾರ ಸಂಪರ್ಕ ಕೊಡಬೇಕಾಗಿತ್ತು. ಒಂದು ತಿಂಗಳಿಗೆ 50ರ ಪ್ರಕಾರ ಕೊಟ್ಟಿದ್ದರೆ, ನಮ್ಮ ತಾಲ್ಲೂಕಿನಲ್ಲಿ ಇಷ್ಟೊತ್ತಿಗೆ, 300 ಐ.ಪಿ.ಸೆಟ್‌ಗೆ ಸಂಪರ್ಕ ಕೊಡಬೇಕಾಗಿತ್ತು. ಆದರೆ, ಅಷ್ಟು ಕೊಟ್ಟಿಲ್ಲ, ಕೇವಲ 13ಕ್ಕೆ ಮಾತ್ರ ಕೊಟ್ಟಿದ್ದಾರೆ. ನಾನು ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ಸುಮಾರು ಒಂದು ತಿಂಗಳ ಹಿಂದೆಯೇ ತಂದಿದ್ದೇನೆ. ಅಲ್ಲಿನ ಅಧಿಕಾರಿಗಳನ್ನೂ ಕೇಳಿದ್ದೇನೆ. ಇದುವರೆಗೂ ಕೂಡ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣವಾಗಿರತಕ್ಕ ಚಿಕ್ಕಬಳ್ಳಾಪುರ ಡಿವಿಜನ್‌ನಲ್ಲಿರತಕ್ಕ ಎಕ್ಸಿಕ್ಯೂಟಿವ್ ಇಂಜಿನಿಯರ್ ಯಾರಿದ್ದಾರೆ, ಅವರು ಇದಕ್ಕೆ ನೇರವಾಗಿ ಹೊಣೆ ಇದ್ದಾರೆ. ಆದರೆ, ಇಡೀ ರಾಜ್ಯದಲ್ಲಿ ಏನು ಟಾರ್ಜೆಟ್ ನಿಗದಿ ಮಾಡಿದ್ದಾರೆ, ಅದು ಹೆಚ್ಚುಕಡಿಮೆ ಸರಾಸರಿ ಪೂರ್ತಿಯಾಗಿದೆ. ಆದರೆ ಬಾಗೆಪಲ್ಲಿ ಮಾತ್ರ ಕೇವಲ 13 ಆಗಿರುತ್ತದೆ. ಇದಕ್ಕೆ ಯಾರು ಹೊಣೆ? ನನ್ನ ಪ್ರಕಾರ ಅಲ್ಲಿರತಕ್ಕ ಎಕ್ಸಿಕ್ಯೂಟಿವ್ ಇಂಜಿನಿಯರ್ ಹೊಣೆಯಾಗಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೂ ಒಂದು ತಿಂಗಳ ಹಿಂದೆಯೇ ತಂದಿದ್ದೇನೆ. ಆದರೆ ಇದುವರೆಗೂ ಕೂಡ ಏನೂ ಆಗಿಲ್ಲ. ನಾನು ತಮ್ಮ ಮುಖಾಂತರ ಸರ್ಕಾರವನ್ನು ಮತ್ತು ಸಂಬಂಧಪಟ್ಟ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಇಲ್ಲದೇಹೋದರೆ, ನಾನಿಲ್ಲಿ ಧರಣಿ ಕುಳಿತುಕೊಳ್ಳಬೇಕಾಗುತ್ತದೆ.

ಶ್ರೀ ಶರಣಬಸಪ್ಪ ದರ್ಶನಾಪುರ್ (ವಿದ್ಯುತ್ ಖಾತೆ ರಾಜ್ಯ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಸನ್ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಇದರ ಬಗ್ಗೆ 2-3 ಬಾರಿ ಪ್ರಸ್ತಾವನೆ ಮಾಡಿದ್ದಾರೆ. ಇದರ ಬಗ್ಗೆ ನಾವು ಅಲ್ಲಿರತಕ್ಕ ಎ.ಇ.ಇ. ಮತ್ತು ಎಕ್ಸಿಕ್ಯೂಟಿವ್ ಇಂಜನಿಯರ್ ಜೊತೆ ಮಾತನಾಡಿದ್ದೇವೆ. ಅವರು ಹೇಳಿದರು, ಸಾಕಷ್ಟು ಮೇಟೀರಿಯಲ್ಸ್ ಬಂದಿಲ್ಲ, ಆದ್ದರಿಂದ ಹೆಚ್ಚಿನ ಮೆಟೀರಿಯಲ್ಸ್ ಕಳುಹಿಸಿದರೆ, ನಾವು ಆ ಕ್ಷೇತ್ರಕ್ಕೆ ಹೆಚ್ಚಿನ ಪಂಪುಸೆಟ್ಟುಗಳಿಗೆ ಸಂಪರ್ಕ ಕೊಡಬಹುದು ಎಂದು ಹೇಳಿದ್ದಾರೆ. ಹಿಂದೆ ನಮ್ಮ ಹತ್ತಿರ ಸಾಕಷ್ಟು ಮೆಟೀರಿಯಲ್ ಇರಲಿಲ್ಲ. ಮುಷ್ಕರ ಆದುದರಿಂದ ಮೆಟೀರಿಯಲ್ ಸಾಕಷ್ಟು ನಮಗೆ ಬರಲಿಲ್ಲ. ಮೊನ್ನೆ 4 ಅಥವಾ 5ನೇ ತಾರೀಖಿಗೆ ಸುಮಾರು 50-60 ಪಂಪುಸೆಟ್ಟುಗಳಿಗೆ ಆಗುವಷ್ಟು ಮೆಟಿರೀಯಲ್ ಕಳುಹಿಸಿದ್ದೇವೆ. ಆದರೆ, ನಿನ್ನೆ ಮಾನ್ಯ ಸದಸ್ಯರು ಹೇಳಿದರು, ಅಲ್ಲಿ ಮೆಟೀರಿಯಲ್ ಮುಟ್ಟಿಲ್ಲವೆಂದು ಹೇಳಿದ್ದಾರೆ. ಇವತ್ತು ಅಲ್ಲಿಯ ಎಕ್ಸಿಕ್ಯೂಟಿವ್ ಇಂಜನಿಯರನ್ನು ಬರಲಿಕ್ಕೆ ಹೇಳಿದ್ದೇವೆ. ಅಲ್ಲಿರತಕ್ಕ ಜನರಿಗೆ ಅಥವಾ ಶಾಸಕರಿಗೆ ತೊಂದರೆ ಕೊಡುವ ಕೆಲಸ ಯಾರೇ ಮಾಡಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇವತ್ತು ಚೀಫ್ ಇಂಜನಿಯರ್ ಕೂಡ

ಯಾರೇ ಬರುತ್ತಾರೆ. ಇದರ ಬಗ್ಗೆ ನಾವು ಇವತ್ತೇ ತೀರ್ಮಾನ ಮಾಡಿ, ಸದಸ್ಯರಿಗೆ ಮಾಹಿತಿ ಕೊಡುತ್ತೇವೆ. ಈಗಾಗಲೇ ಒಂದಷ್ಟು ಮೆಟೀರಿಯಲ್ಸ್ ಕೂಡ ಕಳುಹಿಸಿದ್ದೇವೆ. ಅವರು ಮುಟ್ಟಿಲ್ಲವೆಂದು ಹೇಳಿದ್ದಾರೆ, ಅದರ ಬಗ್ಗೆ ನಮಗಿನ್ನೂ ಮಾಹಿತಿ ಬಂದಿಲ್ಲ. ಇವತ್ತು ಅಲ್ಲಿಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಇಲ್ಲಿಗೆ ಬರುವುದರಿಂದ, ವಿಚಾರ ಮಾಡುತ್ತೇನೆ. ತಾವು ನನಗೆ ಸ್ವಲ್ಪ ಸಮಯ ಕೊಟ್ಟರೆ, ಈಗಾಗಲೇ ನಾನು ಹೇಳಿದಹಾಗೆ, ನಿರ್ಧಿಷ್ಟವಾಗಿ ತೊಂದರೆ ಕೊಡುವ ರೀತಿಯಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ವರ್ತನೆ ಮಾಡಿದ್ದರೆ, ಅವರ ಬಗ್ಗೆ ನಾವು ಕ್ರಮವನ್ನು ತೆಗೆದುಕೊಳ್ಳಲೇಬೇಕಾಗುತ್ತದೆ. ಈಗೇನು ತಾರತಮ್ಯವಾಗಿದೆ, ಇದನ್ನು ಆದಷ್ಟುಬೇಗ ಸರಿಮಾಡುತ್ತೇವೆ. ಸುಮಾರು 240 ಕಿಲೋಮೀಟರ್‌ವೈರ್ ಬೇಕಾಗಿತ್ತು. ಆದಷ್ಟು ಬೇಗ ಅದನ್ನು ಪ್ರೊವೈಡ್ ಮಾಡಿ ಬೇರೆ ತಾಲ್ಲೂಕುಗಳಲ್ಲಿ ನಾವೇನು ಸರಾಸರಿಯಾಗಿ ಕೊಟ್ಟಿದ್ದೇವೆ, ಅದರಂತೆ ಇಲ್ಲಿಯೂ ಪೂರ್ತಿ ಮಾಡಲು ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂಬುದನ್ನು ತಮ್ಮ ಮುಖಾಂತರ ಮಾನ್ಯಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮೆಟೀರಿಯಲ್ಸ್ ಎಲ್ಲಾ ಕಡೆಗೆ ಕಳುಹಿಸಿದ್ದಾರೆ, ಆದರೆ, ಅಲ್ಲಿಗೆ ಮಾತ್ರ ಹೋಗಿಲ್ಲ.

ಅಧ್ಯಕ್ಷರು: ಕಳುಹಿಸಿದ್ದಾರೆ. I will see that it is sent to Bagepalli.

12.00 ಪಿ.ಎಂ

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಎಲ್ಲಾ ಕಡೆ ಹೋಗಿದೆ ನಮ್ಮ ಊರಿಗೆ ಮಾತ್ರ ಹೋಗಿಲ್ಲ.

ಅಧ್ಯಕ್ಷರು: ಕಳುಹಿಸಿಕೊಡೋಣ. ಮಾನ್ಯ ವಿರೋಧಪಕ್ಷದ ನಾಯಕರು ಆಗಿನಿಂದ ಆಪಾದನೆ ಮಾಡುತ್ತಿದ್ದಾರೆ. ನಿಮ್ಮ ಹೆಸರು ಕರೆದ ತಕ್ಷಣ ಇವರೆಲ್ಲಾ ಸ್ಪೀಕರ್ ಅವರಿಗೆ ಖಾಯಂ ಗಿರಾಕಿಗಳು ಎಂದು ಹೇಳಿ. ನೀವು ಗೌರವ ತೆಗೆಯಬೇಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಆ ರೀತಿ ಏನೂ ತಿಳಿದುಕೊಳ್ಳಬೇಕಾಗಿಲ್ಲ. ಅದು ನಮ್ಮ ಹಕ್ಕು ಇದೆ. ಮಾನ್ಯ ವಿರೋಧಪಕ್ಷದ ನಾಯಕರು ಖಂಡಿತವಾಗಿ ಆ ರೀತಿ ತಿಳಿದುಕೊಳ್ಳಲು ಸಾಧ್ಯವಿಲ್ಲ. ಆ ನಂಬಿಕೆ ನನಗೆ ಇದೆ.

MR. SPEAKER: It's all in the lighter vein.

ಶ್ರೀ ಎಚ್.ಎನ್.ನಂಜೇಗೌಡ: ಆ ಪೀಠದ ಪ್ರಭಾವವೋ ಏನೋ ಸದನದಲ್ಲಿ ಕೋಲಾರದ ವಿಚಾರ ಭಾರಿ ಪ್ರಸ್ತಾಪವಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಖಾಯಂ ಗಿರಾಕಿಗಳು ಎಂದು ತಾವು

ಪದ ಉಪಯೋಗ ಮಾಡಿದ್ದೀರಿ. ಆ ಗಿರಾಕಿ ಅಂದರೆ ಅರ್ಥ ಏನು?

ಅಧ್ಯಕ್ಷರು: ಸ್ನೇಹಿತರು ಎಂದು.

ಶ್ರೀ ವಾಟಾಳ್ ನಾಗರಾಜ್: ಗಿರಾಕಿಗಳು ಅಂದರೆ ಸ್ನೇಹಿತರು ಎಂದು ಯಾವ ಡಿಕ್ಷ್‌ನರಿಯಲ್ಲಿ ಇದೆ ಅಧ್ಯಕ್ಷರೇ.

ಅಧ್ಯಕ್ಷರು: ನಾನು ಹೇಳಿದ್ದೇನೆ. ಇಲ್ಲ ಎಂದು ತಾವು ಇನ್ನೊಂದು ಡಿಕ್ಷ್‌ನರಿಯನ್ನು ತಂದು ತೋರಿಸಿ, ನಾನು ಆಗ ಒಪ್ಪಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಹಾಗಾದರೆ ಎಷ್ಟು ಜನ ಗಿರಾಕಿಗಳು ನಿಮಗೆ ಸ್ನೇಹಿತರು ಇದ್ದಾರೆ.

ಅಧ್ಯಕ್ಷರು: ತಾವೆಲ್ಲಾ ನನ್ನ ಗಿರಾಕಿಗಳೇ.

(ಖ) ಗ್ರಂಥಾಲಯಕ್ಕೆ ಕನ್ನಡ ಪುಸ್ತಕಗಳನ್ನು ಖರೀದಿಸುವಲ್ಲಿ ತಾರತಮ್ಯ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿ ಪುರ): ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಲೋಕಸಭೆಯ ಸದಸ್ಯರಾಗಿದ್ದಂತಹ ಸಂದರ್ಭದಲ್ಲಿ ಲೋಕಸಭೆಯಲ್ಲಿ ಕನ್ನಡದಲ್ಲಿ ಮಾತನಾಡಿ ಒಂದು ದಾಖಲೆಯನ್ನು ನಿರ್ಮಿಸಿ ನಮ್ಮ ಕನ್ನಡ ನಾಡಿನ ಜನರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಆದರೆ ದುರಾದೃಷ್ಟ ತಾವು ಮುಖ್ಯಮಂತ್ರಿಗಳಾಗಿರುವಂತಹ ಕಾಲದಲ್ಲಿ ಕನ್ನಡ-ಕನ್ನಡ ಎಂದು ತಾವು ಅನೇಕ ಸಾರಿ ಮಾತನಾಡಿದ್ದೀರಿ. ಆದರೆ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಲಭ್ಯವಿರುವ ಹಣದಲ್ಲಿ ಹಿಂದಿನ ಆಜ್ಞೆ ಪ್ರಕಾರ ಕನ್ನಡ ಪುಸ್ತಕಗಳನ್ನು ಖರೀದಿ ಮಾಡುವುದಕ್ಕೆ ಶೇಕಡ 80 ಪರ್ಸೆಂಟ್ ಹಣ ಖರ್ಚು ಮಾಡುವ ಒಂದು ನಿಯಮ ಇತ್ತು. ಪ್ರತಿಶತ 10 ರಷ್ಟು ಹಣದಲ್ಲಿ ಆಂಗ್ಲ ಭಾಷಾ ಪುಸ್ತಕಗಳನ್ನು ಖರೀದಿ ಮಾಡಬೇಕು, ಮತ್ತು ಪ್ರತಿಶತ 10 ರಷ್ಟು ಹಣದಲ್ಲಿ ಇತರೇ ಭಾರತೀಯ ಭಾಷಾ ಪುಸ್ತಕಗಳನ್ನು ಖರೀದಿ ಮಾಡಬೇಕೆಂದು ಸುತ್ತೋಲೆ ಇದೆ. ಆದರೆ ಈಗ ದುರಾದೃಷ್ಟ ಅಂದರೆ ಆ ಸುತ್ತೋಲೆಯನ್ನು ಸಂಪೂರ್ಣವಾಗಿ ವಾಪಸ್ಸು ತೆಗೆದುಕೊಂಡಿದ್ದಾರೆ. ಇದರ ಪರಿಣಾಮ ಕನ್ನಡ ಪುಸ್ತಕ ಬೇಕಾದರೆ ಖರೀದಿ ಮಾಡಬಹುದು ಬೇಡವಾದರೆ ಬಿಡಬಹುದು, ಯಾವುದೋ ಬೇಡವಾದ ಪರಭಾಷಾ ಪುಸ್ತಕಗಳನ್ನು ಕಸದ ಬುಟ್ಟಿಗೆ ಹಾಕುವಂತಹ ಪುಸ್ತಕಗಳನ್ನು ಕಮೀಷನ್ ಆಸೆಗೆ ಖರೀದಿ ಮಾಡುವಂತಹ ಒಂದು ಹೊಸ ಕುತಂತ್ರ ತಾವು ಮುಖ್ಯಮಂತ್ರಿಗಳಾಗಿರುವಂತಹ ಕಾಲದಲ್ಲಿ ಇವತ್ತು ಗ್ರಂಥಾಲಯ ನಿರ್ದೇಶಕರು ಆಜ್ಞೆಯನ್ನು ಹೊರಡಿಸಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ? ಎರಡನೇಯದು, ಆಶ್ಚರ್ಯ ಅಂದರೆ ಮಾನ್ಯ ಅಧ್ಯಕ್ಷರೇ, 50 ವರ್ಷದ ಸ್ವರ್ಣ ಜಯಂತಿಯನ್ನು ಆಚರಣೆ ಮಾಡುತ್ತಿದ್ದೇವೆ ನಾವು ಈ ಕಾಲದಲ್ಲಿ ಗ್ರಂಥಾಲಯ

ನಿರ್ದೇಶಕರೇ, ಪಾಕಿಸ್ತಾನ್ 50 ಇಯರ್ಸ್ ಆಫ್ ಇಂಡಿಪೆಂಡೆನ್ಸ್ ಎನ್ನುವಂತಹ ಒಂದು ಪುಸ್ತಕವನ್ನು ಕೊಂಡುಕೊಂಡಿದ್ದಾರೆ. ಒಂದು ಪುಸ್ತಕಕ್ಕೆ 6 ಸಾವಿರ ರೂಪಾಯಿಗಳು 10 ಲಕ್ಷ ರೂಪಾಯಿಗಳಷ್ಟು ಪುಸ್ತಕಗಳನ್ನು ಖರೀದಿ ಮಾಡಿಬಿಟ್ಟಿದ್ದಾರೆ. ನನಗೆ ಅರ್ಥವಾಗುತ್ತಿಲ್ಲ. ನಮ್ಮ ದೇಶವನ್ನು ಭೌತಿಕವಾಗಿ ಆರ್ಥಿಕವಾಗಿ ಮಾರಾಟ ಮಾಡುವಂತಹ ಪ್ರಯತ್ನ ಏನಾದರೂ ನಡೆದಿದೆಯೇ ಅಥವಾ ನಮ್ಮ ದೇಶದ ಸ್ವರ್ಣ ಜಯಂತಿ ಆಚರಿಸುವಂತಹ ಸಂದರ್ಭದಲ್ಲಿ ನಮ್ಮ ಪುಸ್ತಕವನ್ನು ಯಾರಾದರೂ ಖರೀದಿ ಮಾಡಿದ್ದಾರಾ? ಇದರ ಅಗತ್ಯ ಇತ್ತೇ? ಏನು ಮಾಡುವುದಕ್ಕೆ ಹೊರಟಿದ್ದೀರಿ ಇದು ದಯವಿಟ್ಟು ಸತ್ಯ ಆದರೆ ತಾವು ಕ್ಷಮಾಪಣೆಯನ್ನು ಕೇಳಬೇಕು. ತಕ್ಷಣ ಆ ಪುಸ್ತಕವನ್ನು ವಿತ್‌ಡ್ರಾ ಮಾಡಬೇಕು, ಈಗ ಖರೀದಿ ಮಾಡಿರುವುದನ್ನೆಲ್ಲಾ ವಾಪಸ್ಸು ಕಳುಹಿಸಿಕೊಡಬೇಕು. ಹಿಂದಿನಂತೆ ಶೇಕಡ 80 ರಷ್ಟು ಕನ್ನಡ ಪುಸ್ತಕಗಳನ್ನು ಖರೀದಿ ಮಾಡುವುದಕ್ಕೆ ಅವಕಾಶ ಇತ್ತು ಆ ಸುತ್ತೋಲೆಯನ್ನು ಮಾರ್ಪಾಡು ಮಾಡಿದ ಆ ಪುಣ್ಯಾತ್ಮ ಯಾರು? ಇದರ ಹಿನ್ನೆಲೆಯಾದರೂ ಏನು? ಯಾವ ಕಾರಣಕ್ಕಾಗಿ ಇದು ಆಗಿದೆ? ದಯವಿಟ್ಟು ತಾವು ಇದಕ್ಕೆ ಉತ್ತರ ಕೊಟ್ಟ ಮೇಲೆ ನನ್ನ ಹತ್ತಿರ ಇನ್ನೂ ಕೆಲವು ಮಾಹಿತಿಗಳು ಇವೆ ಆ ಮೇಲೆ ನಾನು ಕೇಳುತ್ತೇನೆ. ಇದು ನಿಮ್ಮ ಸರ್ಕಾರಕ್ಕೆ ಶೋಭೆ ತರತಕ್ಕಂಥ ಸಂಗತಿಯಲ್ಲ.

+ ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ನಿಜವಾಗಿಯೂ ಆತ ಈ ಕೆಲಸ ಮಾಡಿದ್ದರೆ ಅವನಿಗೆ ಎಂತಹ ಶಿಕ್ಷೆ ಕೊಡಬೇಕೋ ಎಂದು ನಾನು ಆಮೇಲೆ ಹೇಳುತ್ತೇನೆ. ಪಾಕಿಸ್ತಾನಕ್ಕೆ ಸ್ವಾತಂತ್ರ್ಯ ಬಂದು 50 ವರ್ಷಗಳಾಯಿತು ಎನ್ನುವ ಪುಸ್ತಕವನ್ನು ಇಷ್ಟು ದುಡ್ಡು ಕೊಟ್ಟು ಕೊಂಡುಕೊಳ್ಳಲು ಅವನಿಗೆ ಯಾರು ಹೇಳಿದರು? ಯಾರ ಪರ್ಮಿಷನ್ ತೆಗೆದುಕೊಂಡಿದ್ದ? ಯಾರಿಂದ ಅವನಿಗೆ ಅನುಮತಿ ಸಿಕ್ಕಿತು? ದುಡ್ಡು ಹೇಗೆ ಖರ್ಚು ಮಾಡಿದ? ಪ್ರತಿಯೊಂದು ವಿವರವನ್ನು ಕೇಳಿ ಅವನು ಏನಾದರೂ ಈ ತರಹ ಮಾಡಿದ್ದರೆ ಅವನಿಗೆ ಎಂತಹ ಶಿಕ್ಷೆ ಕೊಡುತ್ತೇನೆ ಎನ್ನುವುದನ್ನು ತಾವೇ ನೋಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ,

ಶ್ರೀ ಜೆ.ಹೆಚ್.ಪಟೇಲ್: ನಾನು ಆಗಲೇ ಹೇಳಿದೆ. ಅವನ ವಿವರಣೆಯನ್ನು ಕೇಳದೆ ಶಿಕ್ಷೆ ಕೊಡಬಾರದು ಎನ್ನುವ ಕಾರಣಕ್ಕೆ ಸುಮ್ಮನೆ ಇದ್ದೇನೆ. ಇಲ್ಲದಿದ್ದರೆ ಎಷ್ಟು ಸಿಟ್ಟು ಬಂದಿತ್ತು ಅಂದರೆ ಈಗಲೇ ಹೇಳಿಬಿಡೋಣ ಎಂದು ಅನ್ನಿಸಿತ್ತು. ಆದರೆ ಕೇಳದೆ ಶಿಕ್ಷೆ ಕೊಡಬಾರದು ಎನ್ನುವ ಕಾರಣಕ್ಕೆ ಸುಮ್ಮನೇ ಇದ್ದೇನೆ.

ಶ್ರೀ ಹೆಚ್.ಎನ್.ನಂಜೇಗೌಡ: ಹಳೆಯ ಸುತ್ತೋಲೆಯನ್ನು ರೆಸ್ಟೋರ್ ಮಾಡಿ. ಪುಸ್ತಕ ಕೊಂಡಿದ್ದರೆ ಶಿಕ್ಷೆ ಕೊಡುವುದು ಅಲ್ಲ. ಸರ್‌ಚಾರ್ಜ್ ಎಂದು ಹೇಳಿ ಅವನ ಹತ್ತಿರ ವಸೂಲಿ ಮಾಡಿ. It is not the expenditure to be spend.

ಶ್ರೀ ಅರಗ ಜ್ಞಾನೇಂದ್ರ: 80 ಪರ್ಸೆಂಟ್ ಕನ್ನಡ ಪುಸ್ತಕಗಳನ್ನು ಕೊಳ್ಳುವಂತಹ ಸುತ್ತೋಲೆಯನ್ನು ಮತ್ತೆ ಮುಂದುವರಿಸಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಕರ್ನಾಟಕ ಪ್ರಕಾಶಕರ ಸಂಘವೇ ಆ ಆರೋಪ ಮಾಡಿದೆ ನಾನು ಹುಟ್ಟು ಹಾಕಿರುವಂಥಾದ್ದು ಅಲ್ಲ. ಮತ್ತು ಈಗಾಗಲೇ 10 ಲಕ್ಷ ರೂಪಾಯಿ ಪುಸ್ತಕಗಳನ್ನು ಖರೀದಿ ಮಾಡಿರುವುದು ನಿಜ. ಒಂದು ಪುಸ್ತಕದ ಬೆಲೆ 6 ಸಾವಿರ ರೂಪಾಯಿ.

ಶ್ರೀ ಜೆ.ಹೆಚ್.ಪಟೇಲ್: ವಿಚಾರ ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇವತ್ತೇ ಮಾಹಿತಿ ತರಿಸಿ. ಉತ್ತರ ಹೇಳಿ.

MR. SPEAKER: He is hurt. ಅವರು ಏನು ಹೇಳಿದ್ದಾರೆ ಅಂದರೆ ನಾನು ಈಗಲೇ ಕ್ರಮ ತೆಗೆದುಕೊಳ್ಳುವವನಿದ್ದೆ, ಆದರೆ ನ್ಯಾಚುರಲ್ ಜಸ್ಟೀಸ್ ಎನ್ನುವುದು ಒಂದು ಡಿಮ್ಯಾಂಡ್ ಮಾಡುತ್ತದೆ. ಅವನನ್ನು ಒಂದು ವಿವರಣೆ ಕೇಳಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾಳೆ ಉತ್ತರ ಹೇಳಲಿ.

ಅಧ್ಯಕ್ಷರು: ಆಗಲಿ ಮಾಡಿಸೋಣ.

ಶ್ರೀ ಅರಗ ಜ್ಞಾನೇಂದ್ರ: 80 ಪರ್ಸೆಂಟ್ ಕನ್ನಡ ಪುಸ್ತಕಗಳನ್ನು ಕೊಳ್ಳುವಂತಹ ಸುತ್ತೋಲೆಯನ್ನು ಮುಂದುವರಿಸಬೇಕು. ಅದನ್ನು ರದ್ದು ಮಾಡಿದ್ದಾರಾ ಹೇಗೆ ಎಂದು.

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರು ಈ ಸದನದಲ್ಲಿ ಭಾರತೀಯ ಜನತಾಪಕ್ಷದ ನಾಯಕರು. ಅವರು ನನ್ನ ಹತ್ತಿರ ಅಪ್ಪಣೆ ಪಡೆದು ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಎದ್ದು ನಿಂತಿರುತ್ತಾರೆ. ಅವರು ಸಾಕಷ್ಟು ಪ್ರಭಲ ನಾಯಕರು ಆಗಿದ್ದಾರೆ. 4 ಜನ ಸದಸ್ಯರನ್ನು ಇಟ್ಟುಕೊಂಡು ಈ ಸದನದಲ್ಲಿ ಹೋರಾಟ ಮಾಡಿದಂತಹ ಇತಿಹಾಸ ಅವರಿಗೆ ಇದೆ. ಅವರಿಗೆ ತಾವೆಲ್ಲಾ ಬೆಂಬಲಕ್ಕೆ ಇದ್ದೀರಿ. ಅವರು ಅತ್ಯಂತ ಯಶಸ್ವಿಯಾಗಿ ಒಂದು ವಿಚಾರವನ್ನು ಇವತ್ತು ಇಲ್ಲಿ ಮಂಡನೆ ಮಾಡುವ ಶಕ್ತಿ ಇದೆ. ಅದಕ್ಕೆ ತಾವು ಎದ್ದು ನಿಲ್ಲುವ ಅಗತ್ಯ ಇಲ್ಲ. ಆ ರೀತಿಯ ಪರಿಪಾಠ ಒಳ್ಳೆಯದಲ್ಲ. ನಾನು ತಮಗೆ ಒಬ್ಬ ಹಿತಚಿಂತಕನಾಗಿ ಈ ಮಾತನ್ನು ಹೇಳುತ್ತಿದ್ದೇನೆ ಸರ್ಕಾರ ಬಹಳ ತೀವ್ರವಾಗಿ ಈ ವಿಚಾರವನ್ನು ತೆಗೆದುಕೊಂಡಿದೆ. ನಾಳೆಯೇ ಅವರು ಈ ಬಗ್ಗೆ ಹೇಳಿಕೆ ಕೊಡುವವರಿದ್ದಾರೆ ಮತ್ತೆ ಇದನ್ನು ಬೆಳೆಸುವ ಅಗತ್ಯ ಇಲ್ಲ.

(ಎ) ಸಚಿವ ಸಂಪುಟ ಸಭೆಯನ್ನು ಹುಬ್ಬಳ್ಳಿಯಲ್ಲಿ ಮಾಡುವ ವಿಚಾರ

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ): ಮಾನ್ಯ ಅಧ್ಯಕ್ಷರೇ, ಮಾನ್ಯ

ಜೆ.ಎಚ್.ಪಟೇಲರು ಮುಖ್ಯಮಂತ್ರಿಗಳಾದ ನಂತರ ತಮ್ಮ ಸರ್ಕಾರವನ್ನು ಚುರುಕುಗೊಳಿಸುವುದಕ್ಕೆ ನಾನಾ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರಿ. ಅದರಲ್ಲಿ ತಿಪ್ಪಗೊಂಡನಹಳ್ಳಿಯಲ್ಲಿ ಸಚಿವ ಸಂಪುಟವನ್ನು ನಡೆಸುವ ಬಗ್ಗೆ ಸಹ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಿರಿ. ಅಲ್ಲಿ ಸಚಿವ ಸಂಪುಟ ಸಭೆಯನ್ನು ಮಾಡಿ ಮುಂದೆ ಎನೇನು ಆಗಬೇಕೆಂದು ಹೇಳಿ ಸಚಿವರ ಕಾರ್ಯಭಾರದ ಬಗ್ಗೆ ತಾವು ಸಮಗ್ರವಾಗಿ ಚಿಂತನೆ ಮಾಡಿ, ಇಡೀ ದಿನವೆಲ್ಲಾ ಮಾಡಿದಿರಿ. ಅದರ ಪ್ರತಿಫಲ ಏನಾಗಿದೆ ಎನ್ನತಕ್ಕಂಥದಾದ್ದು ಒಂದು. ಈಗ ತಾವು ಸಚಿವ ಸಂಪುಟದ ಸಭೆಯನ್ನು ಹುಬ್ಬಳ್ಳಿಯಲ್ಲಿ ಮಾಡುತ್ತೇವೆಂದು ಹೇಳಿದ್ದೀರಿ. ಅದರಿಂದ ನನಗನಿಸಿತು. ಸಚಿವ ಸಂಪುಟದ ಸಭೆಯನ್ನು ಹುಬ್ಬಳ್ಳಿಯಲ್ಲಿ ಮಾಡುವುದಕ್ಕಿಂತ ಹೆಚ್ಚಾಗಿ ಆ ಭಾಗದ ಜನರ ಮನೋಭಾವನೆ, ಅಭಿವೃದ್ಧಿ ಆಗಿಲ್ಲ ಎಂದು ಹೇಳಿ, ಅನೇಕ ಕಡೆ ಒತ್ತಡ ಬಂದು ನಾವು ಎರಡು ಕರ್ನಾಟಕ ಮಾಡಬೇಕು ಎನ್ನುವವರೆಗೂ ಮಾತುಗಳು ನಮಗೂ ತಮಗೂ ಕೇಳಿ ಬರುತ್ತಿವೆ. ಆದ್ದರಿಂದ ನಾನು ತಮಗೆ ಏನು ಹೇಳುತ್ತೇನೆ ಅಂದರೆ ಈ ಸಚಿವ ಸಂಪುಟದ ಸಭೆಗಿಂತ ಹೆಚ್ಚಾಗಿ ಆ ಪ್ರದೇಶದ ಜನರ ಅಭಿವೃದ್ಧಿಗೆ ಹೆಚ್ಚು ಗಮನ ಕೊಡತಕ್ಕಂಥಾದ್ದು, ಬಹಳ ಪ್ರಾಮುಖ್ಯತೆ ಇದೆ. ನಾಳೆ ಹುಬ್ಬಳ್ಳಿಯಲ್ಲಿ ಆದ ತಕ್ಷಣ ಇನ್ನೊಬ್ಬರು ಇನ್ನೊಂದು ಜಿಲ್ಲೆಯಲ್ಲಿ ಸಚಿವ ಸಂಪುಟದ ಸಭೆ ಆಗಬೇಕೆಂದು ಹೇಳುತ್ತಾರೆ. ಆ ಒಂದು ಶಕ್ತಿ ಸಚಿವ ಸಂಪುಟದ ಸಭೆ ಬೆಂಗಳೂರಿನಲ್ಲಿ ರಾಜ್ಯ ಮಟ್ಟದಲ್ಲಿಯೇ ನಡೆಯಬೇಕು ಎನ್ನತಕ್ಕಂಥ ಯೋಗ್ಯತೆ ಇದೆ ಎನ್ನತಕ್ಕಂಥಾದ್ದು ನನ್ನ ಚಿಂತನೆ. ತಾವು ಯಾವ ಉದ್ದೇಶದಿಂದ ಅಲ್ಲಿ ಸಚಿವ ಸಂಪುಟದ ಸಭೆಯನ್ನು ಮಾಡುತ್ತೀರಿ ಎನ್ನುವುದನ್ನು ಹೇಳಿ. ಇವತ್ತು ಹುಬ್ಬಳ್ಳಿಯಲ್ಲಿ ಮಾಡುತ್ತೀರಿ, ನಾಳೆ ಬೆಳಗಾಂನಲ್ಲಿ ಕೇಳುತ್ತಾರೆ. ಮೈಸೂರಿನಲ್ಲಿ ಕೇಳುತ್ತಾರೆ, ಚಾಮರಾಜನಗರದಲ್ಲಿ ಕೇಳುತ್ತೇವೆ. ನೀವು ಬರುತ್ತೀರೋ ಇಲ್ಲವೋ ಆ ಮಾತು ಬೇರೆ. ಆದರೆ ಸಮಸ್ಯೆಗಳು ಒಂದರಿಂದ ಒಂದು ಉದ್ಭವವಾಗುತ್ತವೆ. ಆದ್ದರಿಂದ ಪ್ರಾಮಾಣಿಕವಾಗಿ ಸಚಿವ ಸಂಪುಟದ ಸಭೆ ಬೆಂಗಳೂರಿನಲ್ಲಿಯೇ ನಡೆಯತಕ್ಕಂಥಾದ್ದು ಆ ಸಭೆಗೆ ಭೂಷಣ ಎನ್ನತಕ್ಕಂಥಾದ್ದು ಒಂದು. ಎರಡನೆಯದು ತಿಪ್ಪಗೊಂಡನಹಳ್ಳಿಯಲ್ಲಿ ಸಚಿವ ಸಂಪುಟದ ಸಭೆ ಆದ ಪ್ರತಿ ಫಲ ಏನು ಎನ್ನತಕ್ಕಂಥಾದ್ದು ತಾವು ಹೇಳಬೇಕು. ಮೂರನೇಯದು ತಾವು ಈ ಸಭೆ ನಡೆದ ನಂತರ ಮಂತ್ರಿಮಂಡಲವನ್ನು ಪುನರ್‌ರಚನೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಅನೇಕ ಸಾರಿ ಹೇಳಿದ್ದೀರಿ. ಎಷ್ಟು ಜನ ಸದಸ್ಯರನ್ನು ತೆಗೆಯುತ್ತೀರಿ ಎಷ್ಟಜನ ಸದಸ್ಯರನ್ನು ಸೇರಿಸಿಕೊಳ್ಳುತ್ತೀರಿ?

ಅಧ್ಯಕ್ಷರು: ಅದೆಲ್ಲಾ ಬೇಡ. ಅದು ಅವರ ಇಷ್ಟ. ಅವರ ವಿವೇಚನೆಗೆ ಬಿಟ್ಟಿದ್ದು ನಾವೇಕೆ ಚರ್ಚೆ ಮಾಡಬೇಕು?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಪರಿಸ್ಥಿತಿ ಶೂನ್ಯವಾಗಿದೆ. ಆದ್ದರಿಂದ ನಾವು ಆ ಬಗ್ಗೆ ಚರ್ಚೆ ಮಾಡಬೇಕಾಗಿದೆ.

ಅಧ್ಯಕ್ಷರು: ಆ ಶೂನ್ಯದಲ್ಲಿಯೇ ನಾವೆಲ್ಲಾ ಇದ್ದೇವೆ.

+ ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದಂತೆ ಉತ್ತರ ಕರ್ನಾಟಕದ ಭಾಗಗಳನ್ನು ನಿರ್ಲಕ್ಷ್ಯ ಮಾಡಿದ್ದೇವೆ ಈ ಸರ್ಕಾರ ಎಂಬ ಬೇಜವಾಬ್ದಾರಿ ಹೇಳಿಕೆಗಳನ್ನು ಕೇಳಿದ್ದೇನೆ. ನೋಡಿದ್ದೇವೆ. ಇವತ್ತು ಉತ್ತರ ಕರ್ನಾಟಕದ ಭಾಗ, ದಕ್ಷಿಣ ಕರ್ನಾಟಕದ ಭಾಗ, ಹೈದ್ರಾಬಾದ್ ಕರ್ನಾಟಕ ಭಾಗ ಬಾಂಬೇ ಕರ್ನಾಟಕದ ಭಾಗ ಎಂದು ನಮ್ಮ ಮನಸ್ಸಿನಲ್ಲಿ ಇಲ್ಲ. ಕರ್ನಾಟಕ ಒಂದಾದ ಮೇಲೆ ನಾವೆಲ್ಲಾ ಒಂದೇ. ಐತಿಹಾಸಿಕ ಕಾರಣಗಳಿಗೋಸ್ಕರ ಕೆಲವು ಕಡೆ ಅಭಿವೃದ್ಧಿ ಆಗಿರಬಹುದು ಕೆಲವು ಕಡೆ ಆಗದೇ ಇರಬಹುದು. ಸರ್ ಎಂ.ವಿಶ್ವೇಶ್ವರಯ್ಯನವರು 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಡ್ಯಾಮ್ ಕಟ್ಟಿಸಿದರು. ಜನರಿಗೆ ಪುಕ್ಕಟೆಯಾಗಿ ನೀರು ಕೊಟ್ಟರು. ಆ ಸ್ಥಿತಿ ಈಗ ಇಲ್ಲ. ಇವತ್ತು ನಾವು 10 ಸಾವಿರ ಕೋಟಿ ರೂಪಾಯಿಯನ್ನು ಯು.ಕೆ.ಪಿಗೆ ಇನ್‌ವೆಸ್ಟ್ ಮಾಡುತ್ತಿದ್ದೇವೆ. 15 ಲಕ್ಷ ಎಕರೆ ಜಮೀನಿಗೆ ನೀರು ಕೊಡುತ್ತೇವೆ. ಅವಾಗ ಈ ಕೆ.ಆರ್.ಎಸ್. ಎನ್ನುವುದು ಜುಜುಬಿ ಆಗುತ್ತದೆ. 15 ಲಕ್ಷ ಎಕರೆ ಜಮೀನು ತಮಗೆ ಗೊತ್ತಿದೆ. ಅದೇರೀತಿ ಔದ್ಯೋಗಿಕ ಬಂಡವಾಳ ಇವತ್ತು ಟೆಲ್ಕೋ ಕಾರ್ಖಾನೆಯಲ್ಲಿ ಬರುತ್ತಿದೆ. ಬಿಜಾಪುರ ಹತ್ತಿರ ಒಂದು ಫುಡ್ ಪ್ರೋಸೆಸ್ಸಿಂಗ್ ಯುನಿಟ್ ಪೆಪ್ಸಿಯವರು ತರುತ್ತಿದ್ದಾರೆ. ಕೋಲಾರ ಅಥವ ಬಿಜಾಪುರದಲ್ಲಿ ಮಾಡಿ ಎಂದು ಹೇಳಿದ್ದೇವೆ. ಅವರು ಯಾವುದನ್ನು ಆಯ್ಕೆ ಮಾಡುತ್ತಾರೊ, ಗೊತ್ತಿಲ್ಲ. ಹಾಗೆ ಬಿಜಾಪುರ ಹತ್ತಿರ ಒಂದು ಏರಪೋರ್ಟ್ ಕಟ್ಟಿ ಅದರಿಂದ ಅಟ್‌ಲೀಸ್ಟ್ ಒಂದು ಕಾರ್ಗೊ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಅಲ್ಲಿ ತರಕಾರಿ ಮತ್ತು ಹೂ ಹಣ್ಣು ಬಹಳ ಚೆನ್ನಾಗಿ ಬರುತ್ತಿದೆ. ಕೋಲಾರ ಮತ್ತು ಬಿಜಾಪುರ ಈ ರೀತಿ ಎಲ್ಲಾ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದೇವೆ. ಆ ಭಾಗದಲ್ಲಿ ಹುಬ್ಬಳ್ಳಿಯಿಂದ ನಾವು ರೈಲ್ವೆ ಲೈನ್‌ಗಳನ್ನು ಹೊಸದು ಹಾಕುತ್ತಿದ್ದೇವೆ. ಡೆವಲಪ್‌ಮೆಂಟ್ ಅಂದರೆ ಏನು, ಡೆವಲಪ್‌ಮೆಂಟ್ ಅಂದರೆ ಮಾನ್ಯ ಅಧ್ಯಕ್ಷರೆ, ನೀರು ಇಲ್ಲದ ಭೂಮಿಗೆ ನೀರು ಕೊಡುವುದು, ವಿದ್ಯಾಭ್ಯಾಸದಲ್ಲಿ ಬಿಡಿ, ವಿದ್ಯಾಭ್ಯಾಸದಲ್ಲಿ ಯಾವುದಾದರೂ ಅಂದರೆ, ಚಿಕ್ಕಮಂಗಳೂರು ಒಂದೇ, ಇವತ್ತು ಪರ್‌ಕ್ಯಾಪಿಟಿ ಇನ್‌ಕಮ್‌ನಲ್ಲಿ ಬಹಳ ರಿಚ್ ಡಿಸ್ಟ್ರಿಕ್ ಅನ್ನುತ್ತಾರೆ ಆದರೆ But I don't see any richness there. ಅಲ್ಲೂ ಪಾವರ್ಟಿ ಇದೆ, ಅಲ್ಲೂ ಬಡವರು ಇದ್ದಾರೆ. ಅದಕ್ಕೆ ಇವತ್ತು ನಾವು ಸರ್ವಾಂಗೀಣ ಅಭಿವೃದ್ಧಿ ಕಾರ್ಯಕ್ರಮವನ್ನು ಹಾಕಿಕೊಂಡು ಎರಡು ಟೀಮ್ ಮಾಡಿಕೊಂಡು ಎಲ್ಲಾ ಭಾಗವನ್ನು ತಿರುಗಾಡಿಕೊಂಡು ಬಂದು ಅಲ್ಲಿ ವಾಟಾಳ್‌ರವರೇ ಯಾವುದಾದರೊಂದು ಆರ್ಡರ್ ಪಾಸು ಮಾಡುವುದಕ್ಕೆ ಅಲ್ಲ, ಆ ಭಾಗದಲ್ಲಿ ಏನು ಕೆಲವು ಜಿಲ್ಲೆಗಳಿಗೆ ಹೋಗುತ್ತಿದ್ದೇವೆ, ಉಪ ಮುಖ್ಯಮಂತ್ರಿಗಳು ಕೆಲವು ಜಿಲ್ಲೆಗಳಿಗೆ ಹೋಗುತ್ತಿದ್ದಾರೆ. ಹೋಗಿ ಬಂದು ನಾವು ಕುಳಿತು ಏನು ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯ ಅದನ್ನು ನಾವು ಬೆಂಗಳೂರಿಗೆ ಬಂದು ಆರ್ಡರ್ ಇಶ್ಯೂ

ಮಾಡುವುದು. ಹುಬ್ಬಳ್ಳಿಯಲ್ಲಿ ಇಶ್ಯೂ ಮಾಡುವುದಕ್ಕೆ ಆಗುವುದಿಲ್ಲ. ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕಾಗಿ ಸಚಿವ ಸಂಪುಟ ಸಭೆಯನ್ನು ಕರೆದಿದ್ದೇವೆ. ಅಲ್ಲಿ ಬೇರೆ ಏನೇನೂ ವಿಶೇಷವಿಲ್ಲ. ಆದ್ದರಿಂದ ಇವತ್ತು ಚಾಮರಾಜ ನಗರದಲ್ಲಿ ಕ್ಯಾಬಿನೆಟ್ ಮೀಟಿಂಗ್ ಮಾಡಬೇಕೆಂದರೆ ಹೇಳುತ್ತೇನೆ, ಅಲ್ಲಿ ವ್ಯವಸ್ಥೆ ಚೆನ್ನಾಗಿ ಇದೆ ಹೋಗೋಣ ಎಂದು ಎಲ್ಲರೂ ಒಪ್ಪಿದರೆ ಬರುತ್ತೇನೆ ನನ್ನದೇನೂ ಅಭ್ಯಂತರವಿಲ್ಲ, ಅದಕ್ಕೆ ಅಭಿನಂದನೆಗಳು. ಅದಕ್ಕೆ ಈ ದೃಷ್ಟಿಯಿಂದ ಇವತ್ತು ಹುಬ್ಬಳ್ಳಿಯಲ್ಲಿ ಸೇರುತ್ತಿದ್ದೇವೆ. ನಾವು ಇವತ್ತು ಅತ್ಯಂತ ಜಾಗರೂಕತೆಯಿಂದ ಆ ಭಾಗದ ಜನರ ಕೆಲಸ, ಉದ್ಯೋಗ, ನೀರಾವರಿ, ವಿದ್ಯುತ್ ಸಪ್ಲೈ ಇದನ್ನೆಲ್ಲಾ ಬಹಳ ಜಾಗರೂಕತೆಯಿಂದ ಕೆಲಸ ಮಾಡುತ್ತಿದ್ದೇವೆ. ಅದನ್ನು ದಯಮಾಡಿ ಅವರಿಗೆ ಬುದ್ಧಿ ಹೇಳಿ, ನೀವು ಕರ್ನಾಟಕಕ್ಕೋಸ್ಕರ, ಕನ್ನಡ ಭಾಷೆಗೋಸ್ಕರ ಹೋರಾಟ ಮಾಡಿದವರು. ಈಗ ಎರಡು ಕರ್ನಾಟಕದ ಬಗ್ಗೆ ಮಾತನಾಡುತ್ತಾರೆ ಅವರನ್ನು ಈ ರಾಜ್ಯ ಸಹಿಸದು. ಉತ್ತರ ಕರ್ನಾಟಕದ ಬಗ್ಗೆ ನನಗೂ ಗೊತ್ತಿದೆ ಇವರಿಂದ ಏನೂ ಮ್ಯಾಪ್ ನೋಡಬೇಕಾಗಿಲ್ಲ ನಾನು. ಆದ್ದರಿಂದ ದಯಮಾಡಿ ತಾವು ಅವರಿಗೆ ಬುದ್ಧಿ ಹೇಳಿ ನಾವು ಮಾಡುವ ಕೆಲಸ ಮಾಡುತ್ತಿದ್ದೇವೆ.

\+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ನಾನು ಒಪ್ಪಿಕೊಳ್ಳುತ್ತೇನೆ, ಅವರು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡ ಬಗ್ಗೆ ಅದನ್ನು ಪ್ರಸ್ತಾಪ ಮಾಡಿದ ಬಗ್ಗೆ ಒಪ್ಪಿಕೊಳ್ಳೋಣ. ಆದರೆ ಉತ್ತರ ಕರ್ನಾಟಕ ನಿರ್ಲಕ್ಷ್ಯ ಮಾಡಿದ್ದಾರೆ ಎಂದು ಹೇಳಿರತಕ್ಕಂಥ ಮಾತು ಬೇಜವಾಬ್ದಾರಿಯಿಂದ ಕೂಡಿದೆ ಎನ್ನುವಂಥದ್ದನ್ನು ನಾನು ಖಂಡಿಸುತ್ತೇನೆ. ಏಕೆಂದರೆ ತಾವು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ದಿಂದ ಅಂಕಿ ಅಂಶ ತೆಗೆದುಕೊಳ್ಳಿ, ಹೈದರಾಬಾದ್ ಕರ್ನಾಟಕದಲ್ಲಿ ಯಾವರೀತಿಯಾಗಿ ಡೆವಲಪ್‌ಮೆಂಟ್ ಆಗಿದೆ, ಬಾಂಬೆ ಕರ್ನಾಟಕದಲ್ಲಿ ಯಾವರೀತಿಯಾಗಿ ಡೆವಲಪ್‌ಮೆಂಟ್ ಆಗಿದೆ, ಅದು ರೋಡ್‌ಮೈಲೇಜ್ ಇರಬಹುದು, ಇರಿಗೇಷನ್ ಇರಬಹುದು, ಸ್ಕೂಲ್ ಇರಬಹುದು, ನೀವು ಬೇಕಾದರೆ ಅಂಕಿ ಅಂಶ ತೆಗೆದುಕೊಳ್ಳಿ ಅದರಲ್ಲಿ ಸತ್ಯಾಂಶ ಇಲ್ಲ ಅಂದರೆ ನೀವು ಹೇಳಿದ್ದು ನಾನು ಕೇಳುತ್ತೇನೆ. ಆದರೆ ಬೇಜವಾಬ್ದಾರಿಯಿಂದ ಅಂತ ನೀವು ಮಾತು ಹೇಳಿದ್ದರೆ....

ಶ್ರೀ ಜೆ.ಹೆಚ್.ಪಟೇಲ್: ಉತ್ತರ ಕರ್ನಾಟಕ ಅಂದರೆ ಬರಿ ಗುಲ್ಬರ್ಗಾ, ರಾಯಚೂರು ಅಲ್ಲ, ಬಾಂಬೆ ಕರ್ನಾಟಕದಲ್ಲಿರತಕ್ಕಂಥ ಕೆಲವು ಅಲ್ಲಿರುವ ಸಂಸ್ಥೆಗಳು, ಅಲ್ಲಿರತಕ್ಕಂಥ ಪ್ರಗತಿ ಇಲ್ಲಿ ಇನ್ನೂ ಮಂಡ್ಯದಲ್ಲಿ ಆಗಿಲ್ಲ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಂಕಿಅಂಶ ತೆಗೆದುಕೊಳ್ಳಿ, ಇವತ್ತಿನ ದಿವಸ ಆ ಭಾಗದಲ್ಲಿ ಅನ್ಯಾಯವಾಗಿದೆ ಅಂದರೆ, ನಿಮ್ಮ ಇಲಾಖೆಯವರು ಹೇಳಿದರೆ ನೀವು ರಾಜಿನಾಮೆ ಕೊಡುತ್ತೀರಾ? ಹೇಳಿ ಬೇಕಾದರೆ ನಾನು ಕೇಳುತ್ತೇನೆ. ಕೇಳಿದ ಕೂಡಲೇ

ಜವಾಬ್ದಾರಿಯಿಂದ ಮಾತನಾಡಿ ಅದಕ್ಕೆ ನಾವು ಮಾತನಾಡಿರತಕ್ಕಂಥವರು ಬೇಜವಾಬ್ದಾರಿ ಅಂದರೆ ಆ ಭಾಗದ ಜನರಿಗೆ ಅನ್ಯಾಯವಾಗಿದೆ ಎಂದು ಹೇಳಿದರೆ...

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ವಿರೋಧ ಪಕ್ಷದ ನಾಯಕರು, ಬೇಜವಾಬ್ದಾರರು ಎಂದು ನಾನು ಹೇಳಲಿಲ್ಲ, ನಾನು ಹೇಳಿದ್ದು ಬೇರೆಯವರಿಗೆ. ಅವರಿಗೆ ಅರ್ಥವಾಗಿರದಿದ್ದರೆ ಇರಲಿ, ಅದು ಆಗಲಿ ಆಗದೇ ಇರಲಿ ಅದು ಅವರ ಜವಾಬ್ದಾರಿ. ನಾನು ಹೇಳುತ್ತಿರುವುದು ಉತ್ತರ ಕರ್ನಾಟಕದ ಮತ್ತು ಹಳೆಯ ಮೈಸೂರು ಏರಿಯಾ ಎಂದು ಹೇಳಿದೆ, ಅಲ್ಲಿ ಏನೇನು ಕಾರ್ಯಕ್ರಮ ಹಾಕಿದ್ದೇವೆ ಎಂದು ಬೇಕಾದರೆ ನಾನು ಸಮಗ್ರವಾದ ಚಿತ್ರವನ್ನು ತಮಗೆ ಅರ್ಪಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಉತ್ತರ ಕರ್ನಾಟಕದಲ್ಲಿ ಅನೇಕ ಜನ ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ. ಒಬ್ಬರು ಇಬ್ಭಾಗ ಆಗಬಹುದು ಎಂದು, ಈ ಒಂದು ವಾತಾವರಣ ತರಬೇಡಿ, ಇಬ್ಭಾಗ ಮಾಡುವುದಕ್ಕೆ ಎನ್ನತಕ್ಕಂಥ ಮಾತನ್ನು ಹೇಳಿರಬಹುದು. ಆದರೆ ನೀವು ಅಲ್ಲಿ ಆದಂಥದ್ದು ಸರಿ ಇದೆ, ಬಹಳಷ್ಟು ಪ್ರಗತಿಯಾಗಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತೀರಲ್ಲಾ? ಇವತ್ತು ನೀವು ಮೂರು ವರ್ಷಗಳಲ್ಲಿ, 10 ವರ್ಷದ್ದು ಬೇಡ, ಮೂರು ವರ್ಷದಲ್ಲಿ ನಿಮ್ಮ ಬಜೆಟ್ ಅಲಾಟ್‌ಮೆಂಟ್ ನೋಡಿ ಎಲ್ಲಾ ಇಲಾಖೆಗಳಲ್ಲಿ. ಜಿಲ್ಲಾ ಪಂಚಾಯತ್ ಬಿಟ್ಟುಬಿಡಿ. ಅದು ಗೌರ್ನಮೆಂಟ್ ಆದರೆ ನಾವು ಮಾಡಿದ್ದು ಹೇಳಿ, ನೀವು ಮಾಡಿದ್ದು ಹೇಳಿ, ಆದರೆ ಇದನ್ನು ನೀವು ಮಾಡಿದ್ದು ನಾವು ಮಾಡಿದ್ದು ಎಂದು ಹೇಳಿ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ ಇವತ್ತು ನೀವು ಜವಾಬ್ದಾರಿಯನ್ನು ಹೊತ್ತುಕೊಂಡಿದ್ದೀರಿ. ಜವಾಬ್ದಾರಿ ಹೊತ್ತುಕೊಂಡಮೇಲೆ ನೀವು ಏನು ಮಾಡಿದ್ದೀರಿ ಎನ್ನತಕ್ಕಂಥದ್ದು ಬಹಳ ಇಂಪಾರ್ಟೆಂಟ್. ಇನ್ನೊಬ್ಬರು ಏನು ಮಾಡಿದ್ದಾರೆಂದು ಕೇಳತಕ್ಕಂಥ ಅವಕಾಶ ನಿಮಗೆ ಹೋಯಿತು. ಆದರೆ ಇವತ್ತು ನಾನು ಏನು ಹೇಳುತ್ತೇನೆ, ನೀವು ಬೇಕಾದರೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ದಿಂದ ತರಿಸಿ ಸ್ಟ್ಯಾಟಿಸ್ಟಿಕ್ಸ್ ಪ್ರತಿಯೊಂದು ಇಲಾಖೆಯ ಅಂಕಿ ಅಂಶ ಇದೆ. ಅದರ ಪ್ರಕಾರ ಪರಕ್ಯಾಪಿಟಾ ಇನ್‌ಕಮ್ ಅಥವಾ ಎಕ್ಸ್‌ಪೆಂಡಿಚರ್ ಅಲ್ಲಿ ಏನು ಮಾಡಿದ್ದಾರೆ ಇಲಾಖಾವಾರು ಇವತ್ತು ಹೇಳಿ ಬೇಕಾದರೆ ನೀವು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ದಯವಿಟ್ಟು ನೀವು ಇದನ್ನು ಹೇಳುವುದಕ್ಕೆ ಹೋಗಬೇಡಿ. ಯಾವುದೋ ಅನ್ಯಾಯವಾಗಿರುವುದನ್ನು ಅಲ್ಲಿಯ ಜನ ಪ್ರತಿಭಟಿಸಿದರೆ ಬೇಜವಾಬ್ದಾರಿ ಹೇಳಿಕೆ ಹೇಳುತ್ತಾರೆ, ಎನ್ನತಕ್ಕಂಥ ಮಾತನ್ನು ನಾನು ಒಪ್ಪುವುದಿಲ್ಲ. ಇವತ್ತಿನ ದಿವಸ ಈ ದೇಶದಲ್ಲಿ ಯಾವತ್ತೂ ಪ್ರತಿಭಟನೆ ಮಾಡಿಲ್ಲ. ಸಾವಿರಾರು ವರ್ಷಗಳಿಂದ ಅನ್ಯಾಯವಾದರೂ ಪ್ರತಿಭಟನೆ ಮಾಡಿಲ್ಲ ಸಹಿಸಿಕೊಂಡು ಹೋಗುತ್ತಿದ್ದಾರೆ. ಅದರ ಅರ್ಥ ಹೀಗೆ ಅಲ್ಲ, ಎಲ್ಲ ಸರಿಯಾಗಿ ನಡೆದುಕೊಂಡು ಹೋಗುತ್ತದೆಂದು ಅಲ್ಲ. ಕಾಲ ಬಂದಾಗ ತೋರಿಸುತ್ತಾರೆ, ಅದಕ್ಕೆ ದಯಮಾಡಿ ನೀವು ಇವತ್ತಿನ ದಿವಸ ಬೇಕಾದರೆ ತೆಗೆದು ನೋಡಿ. ಉದಾಹರಣೆಗೆ ನಾನು ಹೇಳುತ್ತೇನೆ,

ಹೆಚ್.ಕೆ.ಡಿ.ಬಿ.ಯಲ್ಲಿ ಹಿಂದೆ 89 ರಿಂದ ಇಲ್ಲಿಯವರೆಗೂ 2-3-4 ವರ್ಷದಲ್ಲಿ ನೋಡಿ ಪ್ರತಿವರ್ಷ 60 ಕೋಟಿ 70 ಕೋಟಿ ರೂಪಾಯಿ ಈ ರೀತಿಯಾಗಿ ಕೊಡುತ್ತಿದ್ದರು. ಈಗ ನೀವು ಪುನಃ ಏನು ಮಾಡಿರುತ್ತೀರಿ ನೀವು 65 ಕೋಟಿ ರೂಪಾಯಿಗೆ ತಂದು ನಿಲ್ಲಿಸಿದ್ದೀರಿ. ಅದರಲ್ಲಿ ಪುನಃ ಕಡಿತ ಮಾಡಿ 40 ಕೋಟಿ ರೂಪಾಯಿಗೆ ನಿಲ್ಲಿಸಿದ್ದೀರಿ ಇದು ವ್ಯತ್ಯಾಸ ಇರಬಹುದು. ನೀವು ಕೇಳಿ ಯಾರಿಗಾದರೂ ಈಗ ಅದೇರೀತಿಯಾಗಿ ಬೇರೆ ಬೇರೆ ಇಲಾಖೆಗಳಲ್ಲಿ ಕೂಡ ಹಾಗಾಗಿದೆ. ಒಂದು ನೀರಾವರಿ ಅಥವಾ ಯು.ಕೆ.ಪಿ.ಯಲ್ಲಿ ನೀವು 1240 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆ, ಅದರ ಬಗ್ಗೆ ನೀವು ಹೇಳುವುದಕ್ಕೆ ಹೋಗಬೇಡಿ. ದಯಮಾಡಿ ಬೇರೆ ಕೂಡ ಯೋಚನೆ ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಉತ್ತರ ಕರ್ನಾಟಕದಲ್ಲಿ ಎಷ್ಟು ಅಭಿವೃದ್ಧಿ ಆಗಬೇಕಾಗಿತ್ತು ಅಷ್ಟು ಅಭಿವೃದ್ಧಿ ಆಗಲಿಲ್ಲ ಎನ್ನುವ ಮಾತು ಎಲ್ಲರಿಂದ ಆ ಕೂಗು ಕೇಳಿಬರುತ್ತಿದೆ. ಹಿಂದೆ ಅಧಿಕಾರದಲ್ಲಿ ಇದ್ದಂಥ ಕಾಲದಲ್ಲಿ ಅವಕಾಶ ಸಿಕ್ಕಾಗ ಆ ಭಾಗದ ಜನರಿಗೆ ಒಂದು ಸ್ಥಾನ ಮಾನ ಸಿಕ್ಕರೂ ಸಹ ಆ ಬಗ್ಗೆ ಯಾವುದೇ ಅಭಿವೃದ್ಧಿ ಮಾಡದೆ ನಿರ್ಲಕ್ಷ್ಯಕ್ಕೆ ಒಳಗಾಯಿತು. ಅದು ಈಗಲೂ ಮುಂದುವರೆಯುತ್ತಿದೆ ಎನ್ನುವ ಭಾವನೆ ಆ ಜನರಲ್ಲಿ ಇದೆ. ಅದಕ್ಕೋಸ್ಕರ ರಾಜಕಾರಣಿಗಳು ಇರಬಹುದು ಆ ಭಾಗದ ಕ್ಷೇತ್ರದಲ್ಲಿರತಕ್ಕಂಥ ಗಣ್ಯರು ಇರಬಹುದು ಈ ಭಾವನೆಯನ್ನು ಒಳಗೊಂಡಿದೆ. ರೈಲ್ವೆ ವಲಯ ಹುಬ್ಬಳ್ಳಿಗೆ ಆಗಲಿಲ್ಲ, ಆ ಒಂದು ಆಕ್ರೋಶ ಇದೆ, ಹೈಕೋರ್ಟ್ ಪೀಠ ಆಗಬೇಕು ಆ ಭಾಗದಲ್ಲಿ ಇದೆ, ನಾನು ಏನು ಹೇಳುತ್ತೇನೆ ತಾವು ಮಾತನಾಡುವಂಥ ಕಾಲದಲ್ಲಿ ಆ ರೀತಿಯಾದಂಥ ಜವಾಬ್ದಾರಿ ವ್ಯಕ್ತಿಗಳು ಅನ್ಯಾಯವಾಗಿದೆ ಎಂದು ಹೇಳಿದಾಗ, ಬೇಜವಾಬ್ದಾರಿ ಎನ್ನತಕ್ಕಂಥದ್ದು ಅದು ತಮ್ಮ ಬಾಯಿಯಿಂದ ಬರಬಾರದು. ತಾವು ಪರಿಶೀಲನೆ ಮಾಡಿ ಅಂಕಿ ಅಂಶಗಳನ್ನು ತರಿಸಿಕೊಳ್ಳಿ. ಈ ತರಹ ಅನ್ಯಾಯವಾಗಿದ್ದು ಸರಿಪಡಿಸಿದ್ದನ್ನು ಜನ ಸ್ವಾಗತ ಮಾಡುತ್ತಾರೆ. ಆ ಕೆಲಸವನ್ನು ಜನ ನಿಮ್ಮಿಂದ ನಿರೀಕ್ಷೆ ಮಾಡುತ್ತಾರೆ. ಯಾರೊಬ್ಬರು ಕೆಲವೊಬ್ಬರು ಬೇಜವಾಬ್ದಾರಿಯಿಂದ ದುರುದ್ದೇಶದಿಂದ ಮಾತನಾಡಿದ್ದರೆ ಆ ಬಗ್ಗೆ ನನ್ನ ಸಲಹೆ.

ಶ್ರೀ ಜೆ.ಹೆಚ್.ಪಟೇಲ್: ಎರಡು ಕರ್ನಾಟಕದ ಮಾತು ಜವಾಬ್ದಾರಿಯೇ? ನಾನು ಅದನ್ನೇ ಹೇಳಿದ್ದುದು

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಗುಲ್ಬರ್ಗಾ ಹೋಗಿ, ಹುಬ್ಬಳ್ಳಿಗೆ ಹೋಗಿ ಈ ಮಾತು ಯಾರಿಂದಾದರೂ ಬಂದರೆ ಖಂಡನೆ ಮಾಡಬೇಕೆಂದು ಹೇಳಿದ್ದೇನೆ. ಆ ಭಾಗದ ಅಭಿವೃದ್ಧಿಗೋಸ್ಕರ ವಿಶೇಷ ಗಮನ ನಿಮ್ಮ ಸರ್ಕಾರವು ಮಾಡಲಿಲ್ಲ ತಮ್ಮ ಕಾಲದಲ್ಲೂ ಮಾಡಲಿಲ್ಲ ಈಗಲಾದರೂ ಪ್ರಾರಂಭ ಮಾಡಿ.

ಶ್ರೀ ವಾಟಾಳ್ ನಾಗರಾಜ್: ಎರಡು ಕರ್ನಾಟಕದ ವಾದ ನಿಜ, ಮುಖ್ಯಮಂತ್ರಿಗಳ

ಜೊತೆಯಲ್ಲಿ ನಾವು ಸೇರುತ್ತೇವೆ. ಎರಡು ಕರ್ನಾಟಕದ ಕೂಗು ಎಂದೂ ಆಗಬಾರದು. ಕರ್ನಾಟಕದ ಏಕೀಕರಣಕ್ಕೆ ನಿರಂತರವಾದ ಹೋರಾಟ, ಶ್ರಮ ಮತ್ತು ಬಲಿದಾನ ಎಲ್ಲಾ ಆಗಿದೆ. ಇವತ್ತು ಆ ಕೂಗು ಆಗಬಾರದು ಅಲ್ಲಿ ಅಭಿವೃದ್ಧಿಯಾಗಬೇಕು. ನಾವೆಲ್ಲರೂ ಒಟ್ಟಿಗೆ ಸೇರೋಣ. ಅಭಿವೃದ್ಧಿ ಮಾಡಬೇಕು, ಉತ್ತರ ಕರ್ನಾಟಕ ಹಿಂದುಳಿದಿರೆ ಅದರ ಅಭಿವೃದ್ಧಿಗೆ ಎಲ್ಲವನ್ನು ಮಾಡೋಣ.

ಶ್ರೀ ಜೆ.ಹೆಚ್.ಪಟೇಲ್: ಅಧ್ಯಕ್ಷರೆ, ತಾವು ಅನುಮತಿಯನ್ನು ಕೊಟ್ಟರೆ, ವಾಟಾಳ್ ನಾಗರಾಜ್‌ರವರು, ಯಡಿಯೂರಪ್ಪನವರು, ಖರ್ಗೆಯವರು ನೀವು ಮೂರು ಜನ ನಿಮಗೆ ಪುರುಸೊತ್ತಾದಾಗ (ಸಮಯ ಸಿಕ್ಕಾಗ) ಆ ಜಿಲ್ಲೆಗಳಲ್ಲಿ ನೀರಾವರಿ ಇರಬಹುದು, ವಿದ್ಯುಚ್ಛಕ್ತಿ ಇರಬಹುದು, ವಿದ್ಯಾಭ್ಯಾಸ ಇರಬಹುದು, ಆರೋಗ್ಯ ಇರಬಹುದು, ಅಲ್ಲಿ ರೋಡ್ಸ್‌ಗಳು ಎಲ್ಲಾ ಚೆನ್ನಾಗಿ ಇಲ್ಲ, ಬರೀ ಅಲ್ಲೆ ಅಲ್ಲ ದಯಮಾಡಿ ತಾವು ಹೋಗಿ ಬಂದು ಇಂಥಲ್ಲಿ ಆಗಿಲ್ಲವೆಂದು, ಹೋಗಿ ನೋಡಿಕೊಂಡು ಬಂದು ಹೇಳಲಿ ನಾನು ಅತ್ಯಂತ ಕಳಕಳಿಯಿಂದ ಇವತ್ತು ಹೇಳುತ್ತೇನೆ ಮೂವರು ಹೋಗಿ ಬರಲಿ. ಎಲ್ಲಾ ಜಿಲ್ಲೆಗೆ ಹೋಗಿ ಅಲ್ಲಿ ಕೆಲಸ ಏನಾಗಿದೆ ಎಂದು ನೋಡಿಕೊಂಡು ಬಂದು ತಿಳಿಸಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ತಿಂಗಳಿಗೆ ಒಂದು ಸಲವಾದರೂ ನಾನು ಆ ಭಾಗದಲ್ಲಿ ಪ್ರವಾಸ ಮಾಡುತ್ತಿರುತ್ತೇನೆ. ನಾನು ಆ ಆಧಾರದ ಮೇಲೆ ಅಂಕಿ ಅಂಶಗಳ ಆಧಾರದ ಮೇಲೆ ಹೇಳುತ್ತೇನೆ. ಕೆಲವು ಅಂಕಿ ಅಂಶಗಳನ್ನು ತಮಗೆ ಕಳುಹಿಸಿ ಕೊಡುತ್ತೇನೆ, ತಾವು ಪರಿಶೀಲನೆ ಮಾಡಿ.

ಅಧ್ಯಕ್ಷರು: ತಾವು ನೀರನ್ನು ಎಲ್ಲಾ ಕಡೆ ಬಿಟ್ಟಿದ್ದೀರಿ ಏನು ಸಮಸ್ಯೆ ಇಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಈಗ ಒಂದು ಸಬ್‌ಮಿಷನ್, ಮುಖ್ಯಮಂತ್ರಿಗಳಿಗೆ, ಹಿಂದೆ, ಒಂದು ಪ್ರಸ್ತಾಪ ಇತ್ತು ತಮಗೆ ನೆನಪು ಇರಬಹುದು ನಾನು ಏಕೆ ಹೇಳುತ್ತೇನೆಂದರೆ, ಈಗ ಮಹಾರಾಷ್ಟ್ರ ವಿಧಾನಸಭೆಯನ್ನು ನಾಗಪುರದಲ್ಲಿ ನಡೆಸುತ್ತಾರೆ. ಅಲ್ಲೇ ಒಂದು ವಿಧಾನಸೌಧ ಮಾಡಿಕೊಂಡಿದ್ದಾರೆ. ಪಾರ್ಲಿಮೆಂಟ್ ಕೂಡ ಮಾಡಬೇಕೆಂದಿದ್ದರು. ಹಿಂದೆ ಒಂದು ಸಾರಿ ಏನಾಗಿತ್ತು ಹಗರಿಬೊಮ್ಮನಹಳ್ಳಿಯನ್ನು ಈ ರಾಜ್ಯದ ಕ್ಯಾಪಿಟಲ್ ಮಾಡಬೇಕೆಂದು ಒಂದು ಪ್ರಪೋಸಲ್ ಇತ್ತು. ಬೆಂಗಳೂರಿನಲ್ಲಿ ಪಾಪ್ಯುಲೇಷನ್ ಜಾಸ್ತಿಯಾಗಿದೆ, ಈ ರೀತಿ ಮಾಡುವುದರಿಂದ ಒತ್ತಡ ಕಡಿಮೆಯಾಗುತ್ತದೆ. ಈ ಬಗ್ಗೆ ನಾನು ಏನು ಸಲಹೆ ಕೊಡುವುದೇನೆಂದರೆ, ವರ್ಷದಲ್ಲಿ ಒಂದೋ, ಎರಡೋ ಸೆಷನ್ ಆ ಭಾಗದಲ್ಲಿ ಆಗುವ ಹಾಗೆ ಒಂದು ಮಿನಿ ವಿಧಾನಸೌಧ ಕಟ್ಟಿಸಿ ಮಾಡಿದರೆ, ಭಾವನಾತ್ಮಕವಾಗಿ ಮತ್ತು ಸೈಕಲಾಜಿಕಲ್ ಆಗಿ ಅವರಿಗೂ ಒಂದು ಒಳ್ಳೆಯ ಅಭಿಪ್ರಾಯ ಬರುತ್ತದೆ. ಹಾಗೂ ಕರ್ನಾಟಕವನ್ನು ಎರಡು ಮಾಡಬೇಕೆಂದು ಮಾತನಾಡತಕ್ಕವರಿಗೆ ಒಂದು ಫುಲ್ ಸ್ಟಾಪ್ ಹಾಕಿದ ಹಾಗೂ ಆಗುತ್ತದೆ.

(ಏ) ಕೋಲಾರ ಜಿಲ್ಲೆಯ ಪರ್‌ಕ್ಯಾಪಿಟಾ ಇನ್‌ಕಂ ಕಡಿಮೆ ಇರತಕ್ಕಂಥ ಜಿಲ್ಲೆಯಾಗಿರುವುದು.

+ ಶ್ರೀ ಜೆ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಸರ್ಕಾರವೇ ಕೊಟ್ಟಿರುವ ಅಂಕಿ ಅಂಶದ ಪ್ರಕಾರ ಕೋಲಾರ ಜಿಲ್ಲೆಯು ಪರ್ ಕ್ಯಾಪಿಟಾ ಇನ್‌ಕಂ ಕಡಿಮೆ ಇರತಕ್ಕಂಥ ಜಿಲ್ಲೆಯಾಗಿದೆ.

ಅಧ್ಯಕ್ಷರು: ಪರ್ ಕ್ಯಾಪಿಟಾ ಇನ್‌ಕಂ ಲೋಯೆಸ್ಟ್, ಬೈರೇಗೌಡರ ರಭಸ ನೋಡಿ ಅದನ್ನು ಯಾರೂ ಒಪ್ಪಿಕೊಳ್ಳುತ್ತಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇದು ಬೈರೇಗೌಡರ ಅಥವಾ ರಮೇಶ್ ಕುಮಾರ್ ಅವರ ಪ್ರಶ್ನೆ ಇದಲ್ಲ. ಕೋಲಾರ ಜಿಲ್ಲೆ ಪ್ರಶ್ನೆ ಇದಾಗಿದೆ. ಇದರ ಬಗ್ಗೆ ಏನು ಕಾರ್ಯಕ್ರಮ ಹಾಕಲಾಗಿದೆಯೆಂದು ಮಾನ್ಯ ಮುಖ್ಯಮಂತ್ರಿಗಳು ಇವತ್ತು ಹೇಳಬೇಕು. ಎಲ್ಲರೂ ಉತ್ತರ ಕರ್ನಾಟಕ, ಮಂಡ್ಯ ನೀರಾವರಿ ಬಗ್ಗೆ ಮಾತನಾಡಿದರೆ, ಕೋಲಾರ ಜಿಲ್ಲೆಯವರ ಪರಿಸ್ಥಿತಿ ಏನು? ತಾವು ಅಧ್ಯಕ್ಷರಾಗಿರುವಾಗ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಈ ವಿಷಯವನ್ನು ಬೇರೆ ಸಂದರ್ಭದಲ್ಲಿ ತೆಗೆದುಕೊಳ್ಳೋಣ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ಹೆಚ್ಚು ಹೊತ್ತು ಮಾತನಾಡುವುದಿಲ್ಲ, ಬೇಗ ಮುಗಿಸಿಬಿಡುತ್ತೇನೆ, ಉತ್ತರ ಕರ್ನಾಟಕ, ಬಾಂಬೆ ಕರ್ನಾಟಕ, ಮೈಸೂರು ಜಿಲ್ಲೆಗಳ ಆರ್ಥಿಕ ಪರಿಸ್ಥಿತಿ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಸರ್ಕಾರವೇ ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಪ್ರಕಾರ ಪರ್ ಕ್ಯಾಪಿಟಾ ಇನ್‌ಕಂ ಕೋಲಾರ ಜಿಲ್ಲೆಯಲ್ಲಿ ಕಡಿಮೆ ಇದೆ. ಕೋಲಾರ ಜಿಲ್ಲೆಗೆ ನೀರಾವರಿ ಸೌಲಭ್ಯ ಇಲ್ಲ, 600 ಅಡಿ ಆಳ ಬೋರ್‌ವೆಲ್ ಕೊರೆದರೂ ಇವತ್ತು ನೀರು ಸಿಗುತ್ತಿಲ್ಲ, ಆದ್ದರಿಂದ, ಈ ಜಿಲ್ಲೆಯನ್ನು ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ? ಹಾಗೂ ಎಷ್ಟು ಹಣವನ್ನು ಈ ಬಾಬಿಗಾಗಿ ಖರ್ಚು ಮಾಡಿದೆ? ಹೈದರಾಬಾದ್ ಕರ್ನಾಟಕ ಅಭಿವೃದ್ಧಿಗಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ? ಬಾಂಬೆ ಕರ್ನಾಟಕ ಅಭಿವೃದ್ಧಿಗಾಗಿ ಎಷ್ಟು ಖರ್ಚು ಮಾಡಲಾಗಿದೆ? ಕಾವೇರಿ ಬೇಸಿನ್‌ಗೆ ಎಷ್ಟು ಖರ್ಚು ಮಾಡಲಾಗಿದೆಯೆಂದು ಮತ್ತು ಕೋಲಾರ ಜಿಲ್ಲೆಯನ್ನು ಏಕೆ ಕಡೆಗಣಿಸಲಾಗಿದೆ ಎಂಬ ಬಗ್ಗೆ ಉತ್ತರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೆ, ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಿಂದ ಫಿಗರ್ಸ್‌ನ್ನು ತರಿಸಿಕೊಳ್ಳಿ ಎಂದು ನೀರಾವರಿ ಇಲಾಖೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮೆನ್‌ಷನ್ ಮಾಡಿದ್ದಾರೆ. ಮೂರು ಯೋಜನೆಗಳನ್ನು ಮಾತ್ರ ತೆಗೆದುಕೊಂಡು ಅದರ ಬಗ್ಗೆ ಮತ್ತೊಮ್ಮೆ ಹೇಳುವುದಕ್ಕೆ ಬಯಸುತ್ತೇನೆ, ಸರಿಯಾಗಿ ಕೆಲಸ

ಮಾಡಿದರೂ ಮಾಡಿಲ್ಲವೆಂದು ಹೇಳಿದರೆ ಹೇಗೆ ಒಪ್ಪಿಕೊಳ್ಳುವುದಕ್ಕಾಗುತ್ತದೆ? ಕೆಲಸ ಮಾಡಿದ್ದರೂ, ಮಾಡಲಿಲ್ಲವೆಂದು ಹೇಳಿದವರಿಗೆ ಬೇ-ಜವಾಬ್ದಾರಿಯೆಂದು ಹೇಳಲೇಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ ತಮಗೆ ಗೊತ್ತಿರುವ ಹಾಗೆ ನಮಗೆ ಎ.ಐ.ಡಿ.ಬಿ., ಪ್ರೋಗ್ರಾಮ್ ಬಂತು ಅದರಲ್ಲಿ ಬಂದ 144 ಕೋಟಿ ರೂಪಾಯಿಗಳನ್ನೂ ಸಂಪೂರ್ಣವಾಗಿ ನಾರ್ಥ್ ಕರ್ನಾಟಕಕ್ಕೆ ಕೊಟ್ಟಿದ್ದೇವೆ, ಆಮೇಲೆ 114 ಕೋಟಿಗಳ ನಬಾರ್ಡ್ ಪ್ರೋಗ್ರಾಮ್‌ನಲ್ಲಿ 90 ಕೋಟಿ ರೂಪಾಯಿಗಳನ್ನು ಅವರಿಗೇ ಕೊಟ್ಟಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿರುವ ಪ್ರಕಾರ ಕೊಡಲಾಗಿದೆಯೆಷ್ಟೇ ಹೊರತು ಏನೋ ದೊಡ್ಡ ಮೆಹರ್‌ಬಾನಿ ಮಾಡಿದ ಹಾಗೆ ಅವರು ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್.ನಾಗೇಗೌಡ: ಅದು ಮೆಹರ್‌ಬಾನಿ ಅಲ್ಲ. ಬಜೆಟ್ ಪ್ರಾವಿಷನ್ ಮಾಡಿದ್ದುದು ನಾವೇ ಅಲ್ಲವಾ?

(ಗೊಂದಲ)

ಅಧ್ಯಕ್ಷರು: ಯಾವುದೇ ವಿಚಾರ ಪ್ರಸ್ತಾಪಕ್ಕೆ ಬಂದಾಗ, ಅದರ ಹಿನ್ನೆಲೆ, ಏನು ಪ್ರಸ್ತಾಪ ಮಾಡಿದ್ದಾರೆಂದು ಗಮನಿಸಿಕೊಂಡು ಪ್ರತಿಯೊಬ್ಬರೂ ಚರ್ಚೆಯಲ್ಲಿ ತೊಡಗಿಸಿಕೊಂಡರೆ ಸಮಸ್ಯೆಯಾಗುವುದಿಲ್ಲ. ಕ್ಯಾಬಿನೆಟ್ ಮೀಟಿಂಗ್‌ನ್ನು ರಾಜ್ಯದ ಇನ್ನೊಂದು ಭಾಗದಲ್ಲಿ ಮಾಡಬೇಕೆನ್ನುವ ವಿಚಾರವನ್ನು ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದರು, ಬೇ-ಜವಾಬ್ದಾರಿ ಎನ್ನುವ ಪದವನ್ನು ಮಾನ್ಯ ಮುಖ್ಯ ಮಂತ್ರಿಗಳು ಉಪಯೋಗಿಸಿದ್ದು ಯಾವುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಅಂಥಾ ಅಂದರೆ, ಕರ್ನಾಟಕವನ್ನು ಎರಡನ್ನಾಗಿ ಮಾಡಬೇಕೆನ್ನುವ ಮಾತು ಯಾವುದು ಇದೆ, ಅದು ಬೇಜಬ್ದಾರಿ ಎಂದು ಹೇಳಿದ್ದಾರೆ. ಸಾಕಷ್ಟು ಮಾಡಿದ್ದಾರೆ, ಮಾಡತಕ್ಕಂಥದ್ದು ಇನ್ನೂ ಬೇಕಾದಷ್ಟು ಇದೆ, ಆ ಭಾವನೆ ಅವರಿಗೆ ಬರದೇ ಇರುವ ಹಾಗೆ ಈ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ, ಅದನ್ನೂ ನಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋಗಬೇಕೆನ್ನುವ ಮಾತನ್ನು ಅವರು ಹೇಳಿದರು. ಅದನ್ನು ಮಾನ್ಯ ಖರ್ಗೆಯವರು ತಪ್ಪಾಗಿ ತಿಳಿದುಕೊಂಡರು. ಅದಕ್ಕೆ ಮುಖ್ಯಮಂತ್ರಿಗಳು ವಿವರಣೆ ಕೊಟ್ಟ ನಂತರ ಅದು ಅಲ್ಲಿಗೆ ಮುಗಿಯಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು, ಮೊದಲನೇ ಸಲ ಆ ಮಾತು ಹೇಳಿದರು, ಉತ್ತರ ಕರ್ನಾಟಕದಲ್ಲಿ ಅಭಿವೃದ್ಧಿಯಾಗಿಲ್ಲವೆಂದು ಕೂಗು ಏಳುತ್ತಿದೆ, ಬೇ-ಜವಾಬ್ದಾರಿ ಹೇಳಿಕೆಗಳು ಬರುತ್ತಿದೆ ಎಂದು ಕೊನೆ ಹಂತದಲ್ಲಿ ಹೇಳಿದ್ದಾರೆ.

ಅಧ್ಯಕ್ಷರು: ತಾವು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ, ಅವರ ಉದ್ದೇಶ ಬೇರೆ

ಇದೆ, ಹೇಳುವುದರಲ್ಲಿ ಸ್ವಲ್ಪ ವ್ಯತ್ಯಾಸವಾಗಿರಬಹುದು. ತಾವು ಅದನ್ನು ಹೇಳಿದಮೇಲೆ ಮಾನ್ಯ ಮುಖ್ಯಮಂತ್ರಿಗಳು, ನಾನು ಆ ದೃಷ್ಟಿಯಲ್ಲಿ ಹೇಳಿಲ್ಲವೆಂದು ಸ್ಪಷ್ಟೀಕರಣ ಕೊಟ್ಟಾದ ಮೇಲೆ ಅಲ್ಲಿಗೆ ಮುಗಿಯಿತು.

ಶ್ರೀ ಕೆ.ಎನ್.ನಾಗೇಗೌಡ: ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ ದುಡ್ಡು ಕೊಟ್ಟಿಲ್ಲವೆಂದು ಅವರು ಹೇಳಿದ್ದಾರೆ.

ಅಧ್ಯಕ್ಷರು: ತಾವು ಬಹಳ ಧಾರಾಳಿಗಳು, ಎಲ್ಲಕ್ಕೂ ಹಣವನ್ನು ಕೊಟ್ಟಿದ್ದೀರಿ.

ಶ್ರೀ ಕೆ.ಎನ್.ನಾಗೇಗೌಡ: ನಮ್ಮ ಸರ್ಕಾರ ಬಂದ ಮೇಲೆ ನಾವು 2300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಅವರ ಪಕ್ಷ ಆಡಳಿತ ಮಾಡಿದ 10 ವರ್ಷಗಳಲ್ಲಿ 1600 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆ ಫಿಗರ್ಸ್ ನೋಡಿ ಮಾತನಾಡಬೇಕೆ ವಿನಃ ಎಲ್ಲಿ ಕೊಟ್ಟಿಲ್ಲವೋ ಅದನ್ನು ಮಾತ್ರ ಹೇಳುವುದು ಎಲ್ಲಿ ಖರ್ಚು ಮಾಡಲಾಗಿದೆಯೋ ಅದನ್ನು ಹೇಳದೇ ಇದ್ದರೆ ಹೇಗೆ?

ಅಧ್ಯಕ್ಷರು: ಈಗ ನಾವು ಜೀರೋ ಅವರ್‌ನಲ್ಲಿದ್ದೇವೆ. ವಿಷಯವನ್ನು ಹೆಚ್ಚು ದೀರ್ಘವಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಈ ವಿಷಯ ಇಲ್ಲಿಗೆ ಮುಕ್ತಾಯವಾಯಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಮಗೇನೂ ನೀರು ಬರುವುದಿಲ್ಲ. ಆದರೆ ನಾನು ಹೋರಾಟ ಮಾಡುವುದನ್ನು ನಿಲ್ಲಿಸುವುದಿಲ್ಲ.

(ಐ) ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಸುಟ್ಟ ಗಾಯಗಳ ವಿಭಾಗವನ್ನು ಆಧುನೀಕರಿಸುವ ಬಗ್ಗೆ

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮೆಡಿಕಲ್ ಎಜ್ಯುಕೇಷನ್ ಮಿನಿಸ್ಟರ್ ಅವರು ಸದನದಲ್ಲೇ ಇದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಇರತಕ್ಕಂಥ ಬರ್ನ್ಸ್ ವಾರ್ಡ್ ಅತ್ಯಂತ ಕೆಳ ಮಟ್ಟದ ಸ್ಥಿತಿಯಲ್ಲಿ ಇದೆ. ಈ ಬರ್ನ್ಸ್ ವಾರ್ಡ್‌ಗೆ ಪ್ರತಿ ದಿನ ಬಹಳ ಜನ ಪೇಷಂಟ್ಸ್ ಬರುತ್ತಾರೆ, ಈ ಪೇಷೆಂಟ್ಸ್ ನೋಡಿಕೊಳ್ಳುವುದಕ್ಕೆ ಬೇಕಾದ ಅರೇಂಜ್‌ಮೆಂಟ್ಸ್, ಆಗಲೀ, ಬೇಕಾದಂಥ ಔಷಧಿಗಳಾಗಲೀ, ಡಾಕ್ಟರುಗಳಾಗಲೀ ಸರಿಯಾದ ರೀತಿಯಲ್ಲಿ ಇಲ್ಲ. ಆ ಬಗ್ಗೆ 'ವಿಮೋಚನಾ' ಎನ್ನುವ ಮಹಿಳಾ ಸಂಸ್ಥೆಯೊಂದು ಚಳುವಳಿ ಮಾಡುತ್ತಿರುವ ವಿಷಯ ತಮ್ಮ ಗಮನಕ್ಕೂ ಬಂದಿರಬಹುದು. ಆ ವಿಮೋಚನಾ ಮಹಿಳಾ ಸಂಘಟನೆಯವರು ಅಲ್ಲಿನ ಅವ್ಯವಸ್ಥೆ ಬಗ್ಗೆ ಪತ್ರಿಕೆಗಳಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ, ಸಂಬಂಧಪಟ್ಟ ಸೂಪರಿಂಟೆಂಡೆಂಟ್ ಅವರೊಡನೆ ಚರ್ಚೆ ಮಾಡಿದ್ದಾರೆ. ಇಷ್ಟಾದರೂ ಕೂಡ ಆ ಕಡೆ ಸರ್ಕಾರ ಗಮನ ಹರಿಸಿಲ್ಲ. ಬರ್ನಿಂಗ್‌ನಿಂದ ಸಾಯತಕ್ಕಂಥ ಜನರ ಅಂಕಿ

ಸಂಖ್ಯೆಗಳನ್ನು ತಮ್ಮ ಗಮನಕ್ಕೆ ತರುವುದಾದರೆ, ಜನವರಿ ತಿಂಗಳಲ್ಲಿ 33, ಫೆಬ್ರವರಿಯಲ್ಲಿ 35, ಮಾರ್ಚ್ ತಿಂಗಳಲ್ಲಿ 45, ಏಪ್ರಿಲ್ ತಿಂಗಳಲ್ಲಿ 34, ಮೇ ತಿಂಗಳಲ್ಲಿ 63, ಜೂನ್ ತಿಂಗಳಲ್ಲಿ ಜುಲೈನಲ್ಲಿ 39 ಜನರು ಸತ್ತಿದ್ದಾರೆ. ಪೇಷೆಂಟ್ಸ್‌ಗಳಿಗೆ ಬೇಕಾದ ಎಮರ್ಜೆನ್ಸಿ ಎಸೆನ್‌ಷಿಯಲ್ ಡ್ರಗ್ಸ್ ಆಸ್ಪತ್ರೆಯಲ್ಲಿ ಇಲ್ಲ, ಡಾಕ್ಟರ್‌ಗಳೂ ಕೂಡ ಸಮಯಕ್ಕೆ ಸರಿಯಾಗಿ ಅಟೆಂಡ್ ಮಾಡುವುದಿಲ್ಲ, ಇಡೀ ರಾಜ್ಯದಲ್ಲಿ ಬರ್ನಿಂಗ್ ವಾರ್ಡ್ ಇರುವುದು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮಾತ್ರ. ಆದ್ದರಿಂದ ಇಡೀ ರಾಜ್ಯದ ಹಲವಾರು ಜಿಲ್ಲೆಗಳಿಂದ ಸುಟ್ಟ ಗಾಯದ ಪೇಷೆಂಟ್ಸ್ ಇಲ್ಲಿಗೆ ಬರುತ್ತಾರೆ. ಸುಟ್ಟ ಗಾಯದ ಪರ್‌ಸೆಂಟೇಜ್ ಹೆಚ್ಚಿಗೆ ಇದ್ದಂಥ ಪೇಷೆಂಟ್ಸ್ ಬದುಕುವುದು ಬಹಳ ಕಡಿಮೆ, ಆದರೆ, ಬಂದಂಥ ಪೇಷೆಂಟ್ಸ್‌ಗಳನ್ನು ಸರಿಯಾಗಿ ನೋಡಿಕೊಳ್ಳುವುದು ಮತ್ತು ಅವರಿಗೆ ಸಾಧ್ಯವಾದಷ್ಟು ಮಟ್ಟಿಗೆ ಎಸೆನ್‌ಷಿಯಲ್ ಡ್ರಗ್ಸ್‌ನ್ನು ಕೊಡತಕ್ಕಂಥ ವ್ಯವಸ್ಥೆಯನ್ನಾದರೂ ಮಾಡಬೇಕು.

12.30 ಪಿ.ಎಂ

ಆ ಆಸ್ಪತ್ರೆಯಲ್ಲಿನ ಪರಿಸ್ಥಿತಿಯು ಬಹಳ ಕೆಟ್ಟ ಸ್ಥಿತಿಯಲ್ಲಿದೆ. 30ರಿಂದ 40 ಪರ್‌ಸೆಂಟ್ ಸುಟ್ಟಗಾಯಗಳಿಂದ ಬಂದ ಪೇಷೆಂಟ್ಸ್‌ಗೆ ಅಲ್ಲಿ ಇರುವುದು ಕೇವಲ 25 ಬೆಡ್‌ಗಳು ಮಾತ್ರ ಎಂದು ತಿಳಿದು ಬರುತ್ತದೆ. ಆ 25 ಬೆಡ್‌ಗಳಿಗೆ ಪ್ರತಿದಿನವೂ ಅಡ್ಮಿಟ್ ಆಗತಕ್ಕಂಥವರು ಎಷ್ಟು ಅಂದರೆ, ಉದಾಹರಣೆಗೆ ಫೆಬ್ರವರಿಯಲ್ಲಿ 65 ಜನರು, ಮಾರ್ಚ್‌ನಲ್ಲಿ 73, ಏಪ್ರಿಲ್‌ನಲ್ಲಿ, 66, ಮೇನಲ್ಲಿ 60, ಜೂನ್‌ನಲ್ಲಿ 70, ಈ ರೀತಿಯಾಗಿ ಸಂಖ್ಯೆಯು ಬೆಳೆದುಕೊಂಡು ಹೋಗಿದೆಯೇ ಹೊರತಾಗಿ ಕಡಿಮೆಯಾಗಿಲ್ಲ. ಆದ್ದರಿಂದ ಅಲ್ಲಿ ಯಾವ ಒಂದು ಕೆಟ್ಟ ಪರಿಸ್ಥಿತಿಯು ಇದೆ ಅದನ್ನು ಸುಧಾರಣೆ ಮಾಡಿಸುವುದಕ್ಕೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ, ಯಾವರೀತಿಯಾಗಿ ಅಲ್ಲಿ ತಾವು ವ್ಯವಸ್ಥೆಯನ್ನು ಮಾಡುತ್ತೀರಿ, ಮತ್ತು ಅಲ್ಲಿ ಈ ಒಂದು ವ್ಯವಸ್ಥೆಯ ವಿರುದ್ಧ ಇವೊತ್ತು ಅಲ್ಲಿ ಚಳುವಳಿಯನ್ನು ಮಾಡುತ್ತಾ ಇದ್ದಾರೆ. ಅದನ್ನು ನಿಲ್ಲಿಸಲು ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎನ್ನುವ ಬಗ್ಗೆ ಸ್ವಲ್ಪ ಮಾಹಿತಿಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಉಪಾಧ್ಯಕ್ಷರೇ, ಇದೇ ವಿಷಯದ ಬಗ್ಗೆ ತಮ್ಮ ನೆನಪನ್ನು ನಾನು ಸೆಳೆಯುತ್ತೇನೆ. ಕಳೆದ ವರ್ಷ ಇದೇ ವಿಕ್ಟೋರಿಯ ಆಸ್ಪತ್ರೆಯ ಬರ್ನ್ ಇಂಜ್ಯುರಿ ವಾರ್ಡ್‌ನ ಬಗ್ಗೆ ನಾವು ಪ್ರಸ್ತಾಪ ಮಾಡಿದಾಗ ಆಗತಾನೇ ಡಾ: ಶಂಕರ್‌ನಾಯಕ್‌ರವರು ಸಂಬಂಧಪಟ್ಟ ಇಲಾಖೆಯ ಕಾರ್ಯಭಾರವನ್ನು ತೆಗೆದುಕೊಂಡಿದ್ದರು. ವಿಕ್ಟೋರಿಯ ಆಸ್ಪತ್ರೆಯ ಬರ್ನ್ಸ್ ಇಂಜುರಿ ವಿಭಾಗ ಬೆಂಗಳೂರಿನ ನಗರ ನರಕದ ಇನ್ನೊಂದು ರೂಪ. ಅಲ್ಲಿ ಕಾಸು ಕೊಡದೆ ಇದ್ದರೆ ಇಂಜಕ್ಷನ್ ಚುಚ್ಚುವುದಿಲ್ಲ. ಕಾಸು ಕಡಿಮೆ ಕೊಟ್ಟರೆ ಆ ಪೇಷೆಂಟ್ಸ್‌ಗೆ ನೋವು ಆಗುವ

ರೀತಿಯಲ್ಲಿ ಇಂಜಕ್ಷನ್ ಕೊಡುತ್ತಾರೆ. ಅವರು ಡಾಕ್ಟರ್‌ಗಳೇ ಅಥವಾ ಪಾತಕರೇ ಎನ್ನುವುದು ಇವೊತ್ತು ತೀರ್ಮಾನವಾಗ ಬೇಕು. ಇವೊತ್ತು ಇಲ್ಲಿ ಕೆಲವು ಮಹಿಳೆಯರು ಅಲ್ಲಿ ಧರಣಿ ಕುಳಿತಿದ್ದಾರೆ. Sir, it is a very good occasion to take some action against that Burn Injury Ward.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಮಾನ್ಯ ಅಧ್ಯಕ್ಷರೇ, ವಿಕ್ಟೋರಿಯಾ ಆಸ್ಪತ್ರೆಯು ನನ್ನ ಕ್ಷೇತ್ರಕ್ಕೆ ಬರುತ್ತದೆ ಆದ್ದರಿಂದ ಈ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಇದೇ ವಿಷಯದಲ್ಲಿ ಮಾನ್ಯ ಮಂತ್ರಿದ್ವಯರಿಬ್ಬರನ್ನೂ ಕೂಡ ಹೋದ ಸೋಮವಾರ ದಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ, ಇಬ್ಬರೂ ಕೂಡ ಅಲ್ಲಿಗೆ ಬಂದಿದ್ದರು. ಬರ್ನ್‌ವಾರ್ಡ್ ಮತ್ತು ಇಡೀ ವಿಕ್ಟೋರಿಯ ಆಸ್ಪತ್ರೆಯಲ್ಲಿರತಕ್ಕಂಥ ಚಿತ್ರಣವನ್ನು ಅವರುಗಳು ಕಣ್ಣಾರೆ ನೋಡಿ ಬಂದಿದ್ದಾರೆ. ನೋಡಿಬಂದು ಬೆಳಗ್ಗಿನಿಂದ ಸಂಜೆ ಅಲ್ಲಿ ಮೂರು ಗಂಟೆಗಳ ಕಾಲ ಮೀಟಿಂಗ್ ಮಾಡಿ ಏನು ಶಸ್ತ್ರಚಿಕಿತ್ಸೆ ಈ ವಾರ್ಡ್‌ಗಳಿಗೆ ಆಗಬೇಕೆನ್ನುವ ಬಗ್ಗೆ ಒಂದು ವಿಮರ್ಶೆ ಕೂಡ ನಡೆಯಿತು. ಇಲ್ಲಿ ಆಗಿರತಕ್ಕಂಥ ವಿಷಯ ಏನೆಂದರೆ ಬರ್ನ್‌ವಾರ್ಡ್ ವಿಕ್ಟೋರಿಯ ಆಸ್ಪತ್ರೆಗೆ ಅಟ್ಯಾಚ್ ಆಗಿದೆ. ಇದು ಟೀಚಿಂಗ್ ಇನ್ಸಿಟಿಟ್ಯೂಷನ್‌ಗೆ ಸೇರಿದೆ. ಆದ್ದರಿಂದ ಇಲ್ಲಿ ಅಡ್ಮಿನಿಸ್ಟ್ರೇಷನ್ ಎರಡು ಕಡೆ ವ್ಯತ್ಯಾಸವಿದೆ. ಹಾಸ್ಪಿಟಲ್ ಮತ್ತು ಕಾಲೇಜ್ ಅಡ್ಮಿನಿಸ್ಟ್ರೇಷನ್ ಹೀಗೆ ಎರಡರಲ್ಲೂ ಕೂಡ ವ್ಯತ್ಯಾಸವಿದೆ. ಇಲ್ಲಿ 45 ಬೆಡ್‌ಗಳು ಇದ್ದಾವೆ. ಇದರಲ್ಲಿ ಹೆಣ್ಣುಮಕ್ಕಳದ್ದೇ ಹೆಚ್ಚು ಸಂಖ್ಯೆ. 1500 ಜನ ಪೇಷೆಂಟ್ಸ್ ಒಂದು ವರ್ಷದಲ್ಲಿ ಇಲ್ಲಿ ಅಡ್ಮಿಟ್ ಆಗುತ್ತಾರೆ. 1500 ಜನರಲ್ಲಿ ಸುಮಾರು 1300 ಜನರು ಇದರಲ್ಲಿ ಸಾಯುತ್ತಾರೆ. ಇದು ಅಲ್ಲಿ ಬಂದಿರತಕ್ಕಂಥ ಪರಿಸ್ಥಿತಿ. ನಾನು ಅದಕ್ಕೋಸ್ಕರ ಇದಕ್ಕೆ ಒಂದು ಸುಧಾರಣ ಕ್ರಮ ಆಗಬೇಕೆಂದು ಕೇಳಿದಾಗ ಇಲ್ಲಿ ಬರತಕ್ಕಂಥ ಪೇಷೆಂಟ್ಸ್ 18ರಿಂದ 20 ವಯಸ್ಸಿನ ಕ್ರಮ ಮಹಿಳೆಯರು. ಅದು ಸ್ಟೌ ಬರ್ಸ್ಟ್ ಕೇಸ್‌ಗಳು ಎಂದು ಹೇಳುತ್ತಾರೆ. ನಾನೂ ಕೂಡ ಗಮನಕ್ಕೆ ತಂದೆ, ಸ್ಟೌಬರ್ಸ್ಟ್ ಕೇಸ್‌ಗಳಲ್ಲಿ ಡೌರಿಗೆ ಸಂಬಂಧಪಟ್ಟ ಕೇಸ್‌ಗಳು ಹೆಚ್ಚು ಇರುತ್ತವೆ. ಇವರು ಪೊಲೀಸರು ಬರುವವರೆಗೂ ಕೂಡ ಸ್ಟೇಟ್‌ಮೆಂಟ್ ತೆಗೆದುಕೊಳ್ಳುವುದಿಲ್ಲ. ಡಾಕ್ಟರ್‌ಗಳು, ಪೊಲೀಸರು ಬರುವವರೆಗೆ ಸ್ಟೇಟ್‌ಮೆಂಟ್ ತೆಗೆದುಕೊಳ್ಳದೇ ಇರುವುದು ತಪ್ಪು, ಅವರು ಎಕ್ಸ್‌ಟ್ರಾ ಜ್ಯುಡಿಶಿಯಲ್ ಕನ್‌ಫೆಷನ್ ಮಾಡುವಂಥ ಸಂದರ್ಭದಲ್ಲಿ ಅವರು ಏನು ಸ್ಟೇಟ್‌ಮೆಂಟ್ ತೆಗೆದುಕೊಳ್ಳುತ್ತಾರೆ, ಆ ನರ್ಸ್‌ಗಳು, ಡಾಕ್ಟರ್‌ಗಳು ಕೂಡ ಸ್ಟೇಟ್‌ಮೆಂಟ್ ತೆಗೆದುಕೊಳ್ಳಬೇಕು, ಪೊಲೀಸರು ಬಂದ ತತ್‌ಕ್ಷಣ ಅತ್ತೆ ಮಾವ ಯಾರು ಬೇರೆಯವರು ಯಾರಿಗೆ ಶಿಕ್ಷೆ ಕೊಡುತ್ತಾರೆ, ಅವರು ಹೇಳಿಕೆಗಳನ್ನು ಬದಲಾಯಿಸತಕ್ಕಂಥ ಪರಿಸ್ಥಿತಿಯು ಬಂದಿದೆ, ಆದ್ದರಿಂದ ಈ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ಅಲ್ಲಿ ಕೇವಲ 6 ಜನ ನರ್ಸ್‌ಗಳು ಇದ್ದಾರೆ. ಒಂದು ಶಿಫ್ಟ್‌ಗೆ ಇಬ್ಬರು. 45 ಬೆಡ್‌ಗಳಿಗೆ ಇಬ್ಬರೇ ನರ್ಸ್‌ಗಳು. ಅದಕ್ಕಾಗಿ ಇಲ್ಲಿಗೆ ನರ್ಸ್‌ಗಳನ್ನು ಜಾಸ್ತಿ

ಕೊಡಬೇಕೆಂದು ಕೇಳಿದಾಗ ಇದರ ಬಗ್ಗೆ ಮೀಟಿಂಗ್ ಮಾಡಿ ಕೊಡುತ್ತೇವೆ ಎಂಬ ಆಶ್ವಾಸನೆಯನ್ನೂ ಕೂಡ ಕೊಟ್ಟಿದ್ದಾರೆ. ನಾನು ಕೇಳುವುದು ಇಷ್ಟೆ, ಬರ್ನ್‌ವಾರ್ಡ್‌ನ್ನು ಈಗ ಜಯದೇವ ಇನ್ಸಿಟಿಟ್ಯೂಟ್ ಏನಿದೆ, ಅಲ್ಲಿಗೆ ಮಾಡಬೇಕು. ಇದರ ಜೊತೆಗೆ ಬರ್ನ್ ಇನ್ಸಿಟ್ಯೂಟ್ ಎಂದು ಪ್ರತ್ಯೇಕ ಇನ್ಸಿಟಿಟ್ಯೂಟ್ ಮಾಡಿ ಅದನ್ನು ಅಟಾನಮಸ್ ಬಾಡಿ ಮಾಡಿದರೆ ಅದಕ್ಕೆ ಸರಿಯಾದ ಒಂದು ರೂಪವನ್ನು ಕೊಡಲು ಆಗುತ್ತದೆ. ಆದ್ದರಿಂದ ಜಯದೇವ ಇನ್ಸಿಟಿಟ್ಯೂಟ್ ಶಿಫ್ಟ್ ಆದ ತತ್‌ಕ್ಷಣ ಬರ್ನ್‌ವಾರ್ಡ್‌ನ್ನು ಅಲ್ಲಿಗೆ ಶಿಫ್ಟ್ ಮಾಡಿ ಅಟಾನಮಸ್ ಬಾಡಿ ಮಾಡಿ ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಆ ದಿಸೆಯಲ್ಲಿ ಅವರು ಕೆಲಸ ಮಾಡಬೇಕು. ಅತೀ ಶೀಘ್ರವಾಗಿ ಇಲ್ಲಿ ಹೆಚ್ಚು ನರ್ಸ್‌ಗಳನ್ನು ಕೊಡಬೇಕೆಂದು ಕೇಳಿದ್ದೇನೆ, ಈ ವಿಷಯ ಬಂದಾಗ ನಿನ್ನೆ ಮಾನ್ಯ ಸಚಿವರ ಹತ್ತಿರ ಮಾತನಾಡಿದಾಗ, ನಾವು ಇವೊತ್ತು ಬೆಳಿಗ್ಗೆ ನನ್ನ ವಿಷಯವೇ ಇದು, ಈ ವಿಷಯ ಮುಗಿದ ತತ್‌ಕ್ಷಣ ಅಲ್ಲಿಗೆ ಹೋಗೋಣ ಎಂದು ಅವರು ಹೇಳಿದ್ದರು. ಇದು ಮುಗಿದ ತತ್‌ಕ್ಷಣ ನಾನು ಮತ್ತು ಮಾನ್ಯ ಡಾ: ಶಂಕರನಾಯಕ್‌ರವರು ಮತ್ತು ಸಂಬಂಧಪಟ್ಟ ಎಲ್ಲರೂ ಕೂಡ ಹೋಗಿ ವಿಕ್ಟೋರಿಯ ಆಸ್ಪತ್ರೆಯಲ್ಲಿ ಯಾವ ಮಹಿಳೆಯರು ಅಲ್ಲಿ ಧರಣಿ ಕುಳಿತಿದ್ದಾರೆ, ಅವರನ್ನೂ ಕೂಡ ಕರೆಸಿ, ಅವರ ಅಭಿಪ್ರಾಯಗಳನ್ನೂ ಕೂಡ ತೆಗೆದುಕೊಂಡು ಒಂದು ಮೀಟಿಂಗ್ ಮಾಡಿ ಅಲ್ಲಿ ಬೇಕಾಗಿರುವಂಥ ಕೆಲಸಗಳನ್ನು ಮಾಡಬೇಕೆಂದು ಕೇಳಿದ್ದೇನೆ. ಮಾನ್ಯ ಸಚಿವರು ಬರುತ್ತೇನೆ ಎಂದು ಒಪ್ಪಿಕೊಂಡಿದ್ದಾರೆ. ಈ ವಿಷಯ ಈಗ ಇಲ್ಲಿ ಇರುವುದರಿಂದ ಬರುವುದಕ್ಕೆ ಆಗುವುದಿಲ್ಲ ತಮ್ಮ ಅನುಮತಿ ಕೊಟ್ಟರೆ ಬರುವುದಕ್ಕೆ ಸಾಧ್ಯವೆಂದು ಹೇಳಿದ್ದಾರೆ. ತಾವು ಅನುಮತಿ ಕೊಟ್ಟರೆ ಅಲ್ಲಿಗೆ ಹೋಗಲು ಅನುಕೂಲವಾಗುತ್ತದೆ. ಎಂಬ ವಿಷಯವನ್ನು ಈ ಸಂದರ್ಭದಲ್ಲಿ ನಾನು ಹೇಳ ಬಯಸುತ್ತೇನೆ.

+ ಡಾ|| ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಸಭಾಧ್ಯಕ್ಷರೇ, ಬರ್ನ್ ವಾರ್ಡ್ ಬಗ್ಗೆ ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದ ಹಾಗೆ ಹೋದ ವರ್ಷವೂ ಚರ್ಚೆ ಆಯಿತು. ಅವರ ಮೇಲೆ ನಾವು ಕ್ರಮವನ್ನೂ ತೆಗೆದುಕೊಂಡಿದ್ದೇವೆ. ಹಿಂದೆ ಇದ್ದ ದಾದಿಯರು ಲಂಚ ತೆಗೆದುಕೊಂಡರು, ಡ್ರೈವರ್ ಅಂಬುಲೆನ್ಸ್‌ನಲ್ಲಿ ತೆಗೆದುಕೊಂಡು ಹೋಗಲು ಹಣವನ್ನು ತೆಗೆದುಕೊಂಡ ಎಂಬಿತ್ಯಾದಿಗಳ ಬಗ್ಗೆ ತನಿಖೆ ಮಾಡಿ ತಪ್ಪಿತಸ್ಥರನ್ನು ಸಸ್ಪೆಂಡ್ ಮಾಡಿ ಅವರನ್ನು ವರ್ಗಾವಣೆ ಮಾಡುವ ಕ್ರಮವನ್ನು ತೆಗೆದುಕೊಂಡಿದ್ದೇವೆ. ಆದರೆ ರಾಜ್ಯದಲ್ಲಿ ಒಂದೇ ಬರ್ನ್‌ವಾರ್ಡ್ ಎಂದೇನೂ ಇಲ್ಲ. ಪ್ರತಿಯೊಂದು ದೊಡ್ಡ ದೊಡ್ಡ ಆಸ್ಪತ್ರೆಯಲ್ಲಿಯೂ ಒಂದೊಂದು ಬರ್ನ್‌ವಾರ್ಡ್ ಇದೆ. ಬಳ್ಳಾರಿ, ಹುಬ್ಬಳ್ಳಿ ಮುಂತಾಗಿ ಡಿಸ್ಟ್ರಿಕ್ಟ್ ಆಸ್ಪತ್ರೆಗಳಲ್ಲಿಯೂ ಬರ್ನ್‌ವಾರ್ಡ್ ಇದೆ. ಎಲ್ಲಾ ಕಡೆಯಿಂದ ಇಲ್ಲಿಗೆ ಜನರು ಬರಬೇಕಾದದ್ದು ಇಲ್ಲ. ಆದರೆ ಈ ಭಾಗದ ಜನರು ಇಲ್ಲಿ ಬರುತ್ತಾರೆ. ಅಲ್ಲಿ 45 ಬೆಡ್‌ಗಳು ಮಾತ್ರ ಇವೆ. ಇಲ್ಲಿಗೆ ಬರತಕ್ಕಂಥ ರೋಗಿಗಳು ಸಾಮಾನ್ಯವಾಗಿ ಎಲ್ಲಾ

ಖಾಸಗಿ ನರ್ಸಿಂಗ್‌ಹೋಂಗಳಿಗೆ ಹೋಗಿ ಅಲ್ಲಿ ರಿಜೆಕ್ಟ್ ಆಗಿರುವವಗಳು ಇಲ್ಲಿಗೆ ಬರುತ್ತವೆ. 5ರಿಂದ 10 ಪರ್ಸೆಂಟ್ ವರೆಗೆ ಬರ್ನ್ ಆದರೆ ಸಾಮಾನ್ಯವಾಗಿ ಅವರು ಖಾಸಗಿ ಆಸ್ಪತ್ರೆಗೆ ಹೋಗುತ್ತಾರೆ. ಅನೇಕ ಪ್ರಸಂಗಗಳಲ್ಲಿ ಬೇರೆ ಆಸ್ಪತ್ರೆಗಳಲ್ಲಿ ಟ್ರೀಟ್‌ಮೆಂಟ್ ಕೊಡಿಸಿ 2-3 ದಿನಗಳು ಆದಮೇಲೆ ಇನ್ನೇನು ಸಾಯುತ್ತಾರೆ ಎಂದಾಗ ಅವರು ಸರಕಾರಿ ಆಸ್ಪತ್ರೆಗೆ ತರುತ್ತಾರೆ. ಬರ್ನ್ಸ್‌ವಾರ್ಡ್‌ನಲ್ಲಿ ಎಷ್ಟೇ ಪೇಷೆಂಟ್ಸ್ ಇದ್ದರೂ ಕೂಡ ಚರ್ಮ ಸುಟ್ಟು ಹೋದಮೇಲೆ ಆ ವಾಸನೆಯಲ್ಲಿ ಯಾರೂ ಇರುವುದಕ್ಕೆ ಆಗುವುದಿಲ್ಲ. ಅದನ್ನು ಯಾರೂ ಸರಿ ಮಾಡಲು ಆಗುವುದಿಲ್ಲ. ಇಲ್ಲಿ ಬರತಕ್ಕಂಥ ಪೇಷೆಂಟ್ಸ್ 30 ರಿಂದ 35 ಪರ್‌ಸೆಂಟ್‌ಗಿಂತಲೂ ಹೆಚ್ಚು ಬರ್ನ್ ಆದವರೇ. ಆಗ ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಅವರನ್ನು ಉಳಿಸಲು ಆಗುವುದಿಲ್ಲ. ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತೇವೆ. ನಾನು ಎರಡು ಸಾರಿ ಭೇಟಿ ನೀಡಿ ಅಲ್ಲಿ ಆಗಬೇಕಾದಂಥ ಸುಧಾರಣೆಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ತಾವು ಔಷಧಿಗಳ ಕೊರತೆ ಎಂದು ಹೇಳಿದ್ದೀರಿ. ಆದರೆ ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆಯು ಇಲ್ಲ.

ಶ್ರೀ ಎಸ್.ಸುರೇಶ್ ಕುಮಾರ್: ಅಲ್ಲಿ ಔಷಧಿಗಳ ಕೊರತೆ ಇಲ್ಲ, ಮಾನವೀಯತೆಯ ಕೊರತೆ ಇದೆ.

ಡಾ|| ಎಂ.ಶಂಕರ್‌ನಾಯಕ್: ಮಾನವೀಯತೆಯನ್ನು ನೀವಾಗಲೀ, ನಾವಾಗಲೀ ನಡೆಸಿಕೊಳ್ಳಬಾರದು ಎಂದು ಇದೆಯೇ? ಅಲ್ಲಿ ಇರತಕ್ಕಂಥವರೆಲ್ಲರಿಗೂ ನಾವು ಪಾಠ ಹೇಳಲು ಆಗುತ್ತದೆಯೇ? ಎಲ್ಲರೂ ಮನುಷ್ಯರೇ. ಅಲ್ಲಿರತಕ್ಕಂಥ ದಾದಿಯರು, ಡಾಕ್ಟರ್‌ಗಳು, ಅವರೇ ತಾವಾಗಿಯೇ ನಡೆದುಕೊಳ್ಳಬೇಕು. ನಾವು, ನೀವು ಪಾಠ ಹೇಳಿದರೆ ಒಂದೆರಡು ದಿನಗಳು ಇರಬಹುದು. ಅವರ ಮನಸ್ಸಿನಲ್ಲಿ ರೋಗಿಗಳ ಬಗ್ಗೆ ಯಾವ ತರಹದಲ್ಲಿ ನಡೆದುಕೊಳ್ಳಬೇಕೆಂಬ ಭಾವನೆಯು ಬಾರದಿದ್ದರೆ ಇದನ್ನು ಯಾವ ಸಮಾಜದಲ್ಲಿ ಯಾರು ಏನು ಸುಧಾರಣೆ ಮಾಡಲು ಸಾಧ್ಯವಾಗುತ್ತದೆ ಎಂಬುದನ್ನು ತಾವೇ ಹೇಳಿ. ಇದು ಎಲ್ಲಾ ಕಡೆಗಳಲ್ಲಿ ಇರುವ ಸಮಸ್ಯೆಯಾಗಿದೆ. ಬರೇ ಡಾಕ್ಟರ್‌ಗಳದ್ದೊಂದೇ ಇಲ್ಲ. ಬೇರೆ ಇಲಾಖೆಗಳನ್ನು ಕೂಡ ತೆಗೆದುಕೊಳ್ಳಿ, ಯಾವ ಅಧಿಕಾರಿಗಳು ಮಾನವೀಯತೆಯಿಂದ ಪೂರ್ಣವಾಗಿದ್ದಾರೆ? ಹಾಗಿದ್ದಿದ್ದರೆ ಇವೊತ್ತು ಈ ಪರಿಸ್ಥಿತಿ ಏಕೆ ಬರುತ್ತಿತ್ತು?

ಅಧ್ಯಕ್ಷರು: ಸಚಿವರೇ, ಇಂಜಿನೀಯರಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ ಇಂಜಿನಿಯರ್ ಬಿಲ್‌ನ್ನು ನಿಧಾನ ಮಾಡಿದರೆ ಅಥವಾ ದುಡ್ಡು ಜಾಸ್ತಿ ಕೇಳಿದರೆ ಯಾರ ಪ್ರಾಣವೇನೂ ಹೋಗುವುದಿಲ್ಲ. ಸಹಕಾರ ಇಲಾಖೆಯಲ್ಲಿ ಜಾಯಿಂಟ್ ರಿಜಿಸ್ಟ್ರಾರ್ ರಿಪೋರ್ಟ್‌ಗಳನ್ನು ಸರಿಯಾಗಿ ಕೊಡದಿದ್ದರೆ ಏನೂ ದೊಡ್ಡ ತೊಂದರೆಯಾಗುವುದಿಲ್ಲ. ತಾವು ದಯಮಾಡಿ ಆಸ್ಪತ್ರೆಯ ವಿಚಾರದಲ್ಲಿ ಆ ಮಾತನ್ನು ಹೇಳಬೇಡಿ. ಪಾಪ ಎಲ್ಲಾ ಗತಿ ಇಲ್ಲದ

ನಿರ್ಗತಿಕರು ಅಲ್ಲಿಗೆ ಬರುತ್ತಾರೆ. ನೀವೇ ಅಷ್ಟು ಅಸಹಾಯಕರಾಗಿ ಬಿಡಬೇಡಿ. ಇವೊತ್ತು ತಮಗೆ ಹೇಳುತ್ತೇನೆ, ತಾವುಗಳು ಎರಡು ವಿಧದಲ್ಲಿ ನೋಡ ಬೇಕು. ಒಂದನೆಯದಾಗಿ ತಾವು ಸ್ವತಃ ಡಾಕ್ಟರ್ ಇದ್ದೀರಿ. ಎರಡನೆಯದಾಗಿ ಈ ಸಮಾಜದಲ್ಲಿ ತಾವು ಅತ್ಯಂತ ನಿರ್ಲಕ್ಷ್ಯಕ್ಕೆ ಒಳಪಟ್ಟಂಥ ಒಂದು ವರ್ಗದಿಂದ ಬಂದು ಇವೊತ್ತು ವಿಧಾನಸಭೆಯಲ್ಲಿ ತಾವು ಕುಳಿತಿದ್ದೀರಿ. ಜಯದೇವ ಇನ್ಸಿಟಿಟ್ಯೂಟ್ ಒಂದನ್ನು ಬಿಟ್ಟು ಕಿದ್ವಾಯಿಯಾಗಲಿ, ಬರ್ನ್ಸ್‌ಸೆಂಟರ್ ಆಗಲೀ, ವಿಕ್ಟೋರಿಯ ಆಗಲಿ, ನಿಮ್ಹಾನ್ಸ್ ಆಗಲೀ, ಅಲ್ಲೆಲ್ಲಿಯೂ ಜನಸಾಮಾನ್ಯರು ಹೋಗುವ ಹಾಗೆ ಇಲ್ಲ. ನ್ಯಾಯ ಪಡೆದುಕೊಳ್ಳುವ ಹಾಗೂ ಇಲ್ಲ. ಅವರು ಮಾನವೀಯತೆಯನ್ನು ಎಲ್ಲಿ ಕಾಣುವುದು?

ಶ್ರೀ ವಾಟಾಳ್ ನಾಗರಾಜ್: ಮಾನವೀಯತೆ ಎನ್ನುವುದು ಇವೊತ್ತು ಹೊರಟೇ ಹೋಗಿದೆ. ಸರಕಾರಿ ಆಸ್ಪತ್ರೆಗಳಲ್ಲಿ ಅದು ಇಲ್ಲ. ಆದುದರಿಂದ ತಾವು ಅದರ ಬಗ್ಗೆ ಜನರಲ್ ಆಗಿ ಮಾತನಾಡುವುದು ಬೇಡ, ಅದು ಹೊರಟೇ ಹೋಗಿದೆ. ಜಯದೇವ ಆಸ್ಪತ್ರೆಯ ವ್ಯವಸ್ಥೆ ನಿಜವಾಗಿಯೂ ಸಂತೋಷ ಪಡತಕ್ಕಂಥ ಒಂದು ಆಸ್ಪತ್ರೆ.

ಅಧ್ಯಕ್ಷರು: ಡಾ: ಜಿ.ಎನ್.ರೆಡ್ಡಿಯವರು ನಿಮ್ಹಾನ್ಸ್‌ನಲ್ಲಿದ್ದಷ್ಟು ದಿವಸ ನಮಗೆ ಯಾವ ಸಮಸ್ಯೆಗಳೂ ಕಾಣುತ್ತಾ ಇರಲಿಲ್ಲ. ಆಮೇಲೆ ಬಂದಂಥ ಡಾ: ಚೆನ್ನಬಸವಣ್ಣನವರೂ ಕೂಡ ಚೆನ್ನಾಗಿ ಸುಧಾರಿಸಿಕೊಂಡು ಹೋದರು. ಈಗ ನಿಮ್ಹಾನ್ಸ್‌ಗೆ ಯಾವ ಪೇಷೆಂಟ್ಸ್‌ನ್ನಾದರೂ ಕರೆದುಕೊಂಡು ಹೋದರೆ, ಅವರು ಕೂಡಲೇ ಮೆಡಿನೋವಕ್ಕೆ ಅಥವಾ ಇನ್ನೊಂದು ಕಡೆಗೆ ಸ್ಕ್ಯಾನಿಂಗ್‌ಗೆ ಕಳುಹಿಸುತ್ತಾರೆ. ಡಾಕ್ಟರ್‌ಗಳ ಅಜಾಗ್ರತೆಯಿಂದಾಗಿಯೂ ಅನೇಕ ಜನ ಪೇಷೆಂಟ್ಸ್ ಸಾಯುತ್ತಾ ಇದ್ದಾರೆ. ಕ್ರಿಟಿಕಲ್ ಮೂವ್‌ಮೆಂಟ್‌ನಲ್ಲಿ ಅಲ್ಲಿಗೆ ಹೋಗತಕ್ಕಂಥವರ ವಿಚಾರ ನೋಡಿದರೆ ಎಷ್ಟು ಮನಸ್ಸಿಗೆ ನೋವು ಉಂಟಾಗುತ್ತದೆ ಗೊತ್ತೇ? ಹಾಗಾದರೆ ನಾವು ಇಷ್ಟು ಅಸಹಾಯಕರಾಗ ಬೇಕೇ? ಚೆನ್ನಬಸಪ್ಪನವರಿಗೆ ಹೆಲ್ತ್‌ಡಿಪಾರ್ಟ್‌ಮೆಂಟ್ ಕೊಟ್ಟಿದ್ದಾರೆ ಎಂದು ಗೊತ್ತಾದರೆ ಡಾಕ್ಟರ್‌ಗಳಿಗೆಲ್ಲಾ ಒಂದು ರೌಂಡ್ ಜ್ವರ ಬರುವುದು. ಈಗ ನೀವು ಸ್ವತಃ ಜೀವನದಲ್ಲಿ ನೋವು ಉಂಡವರು ಆದ್ದರಿಂದ ವಿಷಯವನ್ನು ನಿಮ್ಮ ವಿವೇಚನೆಗೆ ಬಿಡುತ್ತೇನೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಆಸ್ಪತ್ರೆಯಲ್ಲಿ ಸತ್ತ ಹೆಣವನ್ನು ಸಂಬಂಧಪಟ್ಟವರಿಗೆ ಬಿಟ್ಟುಕೊಡಲು ಕೂಡ ಹಣವನ್ನು ತೆಗೆದುಕೊಳ್ಳುತ್ತಾರೆ. ಅಲ್ಲಿ ಸಿಬ್ಬಂದಿ ಜನ ಸತ್ತರೂ ಕೂಡ ಹಾಗೇ ಬಿಡುವುದಿಲ್ಲ.

ಡಾ: ಎಂ.ಶಂಕರನಾಯಕ್: ನಾವು ಸರಕಾರದ ಪತಿಯಿಂದ ದಾದಿಯರ ಮೇಲೆ, ಡಾಕ್ಟರ್‌ಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಅಲ್ಲಿನ ವಾರ್ಡ್‌ಬಾಯ್‌ನಿಂದ ಹಿಡಿದು ಉನ್ನತ ಡಾಕ್ಟರ್‌ವರೆಗೂ ಸರಿಯಾಗಿ ಅಲ್ಲಿಗೆ ಬರತಕ್ಕಂಥ ರೋಗಿಗಳ ಉಪಚಾರ ಮಾಡದಿದ್ದರೆ ಇಡೀ ಆಸ್ಪತ್ರೆಗೆ ಕೆಟ್ಟ ಹೆಸರು ಬರುತ್ತದೆ.

ಅಧ್ಯಕ್ಷರು: ನಾನು ಒಂದು ಮಾತು ಕೇಳುತ್ತೇನೆ, ಡಾ: ಕೃಷ್ಣಭಾರ್ಗವರವರು ಆಕಾಶದಿಂದ ಬಂದಿದ್ದರೇ? ಕೃಷ್ಣಭಾರ್ಗವ ಯಾವುದೋ ಶತಮಾನದಲ್ಲಿದ್ದವರೇ? ಸಿಂಧ್ಯ ಮಿನಿಸ್ಟರ್ ಆಗಿದ್ದರೆ, ಕೃಷ್ಣಭಾರ್ಗವ ಡೈರೆಕ್ಟರ್ ಆಗಿದ್ದರೆ ಮಾತ್ರ ಕಿದ್ವಾಯಿ ಚೆನ್ನಾಗಿ ನಡೆಯುತ್ತದೆ ಇಲ್ಲವಾದರೆ ಇವೊತ್ತು ಕಿದ್ವಾಯಿ ಹಾಳಾಗಿ ಹೋಗುತ್ತದೆ ಎನ್ನಲು ಇದು ಯಾವುದೋ ಇತಿಹಾಸವೇ? ಕೇವಲ 8- 10 ವರ್ಷಗಳ ಮಾತು.

ಡಾ|| ಎಂ.ಶಂಕರ್‌ನಾಯಕ್: ಮಾನ್ಯ ಅಧ್ಯಕ್ಷರೆ, ಈಗಿನ ಜನರೇಷನ್‌ನಲ್ಲಿ ಅಂಥ ಡಾಕ್ಟರ್‌ಗಳೇ ಇಲ್ಲ. ಯಾರಾದರೂ ಒಳ್ಳೆಯವರು ಸಿಗುತ್ತಾರೇನೋ ಎಂದು ಹುಡುಕುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಅದನ್ನು ನೀವು ಸರಿಪಡಿಸಬೇಕು. ಸರ್ಕಾರಿ ಆಸ್ಪತ್ರೆಗಳು ನರಕವಾಗುತ್ತಿವೆ. ಅದನ್ನು ಸರಿಪಡಿಸುವಂಥ ಪ್ರಾಮಾಣಿಕ ಪ್ರಯತ್ನ ಆಗಬೇಕಾಗಿದೆ. ಈಗ ಅಪಘಾತ ಮಾಡಿಕೊಂಡು ಬಂದವರನ್ನು, ಸುಟ್ಟವರನ್ನು ಕೇಳುವವರೆ ಗತಿ ಇಲ್ಲ, ಔಷಧಗಳು ಸಿಗುವುದಿಲ್ಲ. ಈ ಪರಿಸ್ಥಿತಿಯಾಗಿದೆ. ಅಲ್ಲಿ ಅಡುಗೆ ಮನೆಯಂತೂ ಅತ್ಯಂತ ನರಕವಾಗಿದೆ. ಆದ್ದರಿಂದ ಪ್ರತಿ ಆಸ್ಪತ್ರೆಯ ಒಳಗಡೆ ಹೋಗಿಬನ್ನಿ ಸ್ವಾಮಿ.

DR. M.SHANKAR NAIK: I have gone many times.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮನಿ ಟೈಂ ಬೇಡ. ಇವೊತ್ತು ಕೆಲವು ಜನ ಅಲ್ಲಿ ಏನು ನಡೆದಿದೆ ಎಂದು ಹೇಳತಕ್ಕಂಥ ಜನರಿದ್ದಾರೆ. ಯಾವ ರೀತಿಯಾಗಿ ಸುಧಾರಣೆಯಾಗಬೇಕು ಅಥವಾ ಇಂಪ್ರೂವ್‌ಮೆಂಟ್ಸ್ ಆಗಬೇಕಾಗಿದೆ, ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಏನು ಅವಕಾಶ ಇದೆ ಎನ್ನತಕ್ಕಂಥದ್ದರ ಬಗ್ಗೆ ಕನಿಷ್ಠ ಪಕ್ಷ ಆ ಹೆಣ್ಣುಮಕ್ಕಳು ಚಳುವಳಿಯನ್ನು ಮಾಡುವ ಬಗ್ಗೆ ಹೇಳಿಕೊಡುತ್ತಾರೆ. ಆದ್ದರಿಂದ ಕನಿಷ್ಠಪಕ್ಷ ಅಲ್ಲಿ ಏನು ಸಾಧಿಸಿದ್ದಾರೆ ಎಂಬುದನ್ನಾದರೂ ಹೋಗಿ ನೋಡಿಕೊಂಡು ಬಂದು ಹೇಳಿದರೆ ಒಳ್ಳೆಯದು. ಇಲ್ಲದಿದ್ದರೆ ಸರ್ಕಾರದ ವಿರುದ್ಧ ಅಥವಾ ವಿಕ್ಟೋರಿಯಾ ಆಸ್ಪತ್ರೆಯ ವಿರುದ್ಧ ನಡೆಯುವ ಅಪಪ್ರಚಾರ ನಡೆಯುತ್ತಲೇ ಇರುತ್ತದೆ; ಅದು ನಿಲ್ಲುವುದಿಲ್ಲ. ನೀವು ಒಂದುಕಡೆ ಅಸಹಾಯಕತೆ ತೋರಿಸುವುದು, ಇನ್ನೊಂದು ಕಡೆ ಅವರ ಮೇಲೆ ಚಳುವಳಿ ಮಾಡುವುದು ಸರಿಯಲ್ಲ.

MR. SPEAKER: My sincere advice to you, as well-wisher, kindly take Mr.Sindhia's guidance. He has held that portfolio. He was a very effective Minister while holding that charge. Kindly take his help.

ಡಾ|| ಎಂ.ಶಂಕರ್‌ನಾಯಕ್: ಮಾನ್ಯ ಅಧ್ಯಕ್ಷರೆ, ಹಿರಿಯ ಸಹೋದ್ಯೋಗಿಗಳು

ಮತ್ತು ಮಾನ್ಯ ಸದಸ್ಯರ ಸಲಹೆಯನ್ನು ತೆಗೆದುಕೊಂಡಿದ್ದೇವೆ. ನಮ್ಮ ಹಿರಿಯ ಸದಸ್ಯರಾದಂಥ ಶ್ರೀಮತಿ ಪ್ರಮೀಳಾ ನೇಸರ್ಗಿಯವರನ್ನು ಬೋರ್ಡ್ ಆಫ್ ವಿಸಿಟರ್ಸ್‌ಗೆ ಚೇರ್ಮನ್‌ರನ್ನಾಗಿ ಮಾಡಿದ್ದೇವೆ. ಅವರ ಭಾಗಕ್ಕೆ ಬರುವ ಡಾಕ್ಟರನ್ನು ಪ್ರತಿ ತಿಂಗಳ ಮೀಟಿಂಗ್‌ಗೆ ಕರೆದು ಅಲ್ಲಿ ಬರತಕ್ಕಂಥ ಸಮಸ್ಯೆಗಳನ್ನು ಆ ಹಂತದಲ್ಲಿಯೇ ಯಾವ ರೀತಿ ಸುಧಾರಿಸಬೇಕು ಎಂಬುದನ್ನೂ ಸಹ ಮಾಡಿದ್ದೇವೆ. ಈಗ ನಾನು ಏನು ಹೇಳುವುದಕ್ಕೆ ಬಯಸುತ್ತೇನೆ ಎಂದರೆ ನಾವು ಯಾವುದೇ ಡಾಕ್ಟರ್ ಬಗ್ಗೆ ದೂರು ಬಂದ ತಕ್ಷಣ ಅಲ್ಲಿಗೆ ಬೇರೆ ಯಾರನ್ನು ಒಳ್ಳೆಯ ಡಾಕ್ಟರ್ ಎಂದು ಹೇಳುತ್ತಾರೆ ಅವರನ್ನು ಹಾಕುತ್ತೇವೆ. ಅಲ್ಲಿ ಸುಧಾರಣೆ ಮಾಡುವುದಕ್ಕೆ ಏನೇನು ಕ್ರಮಗಳನ್ನು ಕೈಗೊಳ್ಳಬೇಕೋ ಅದನ್ನೆಲ್ಲಾ ತೆಗೆದುಕೊಳ್ಳುತ್ತಿದ್ದೇವೆ. ನಾನು ಮೊನ್ನೆ ಅವರು ಎದುರಿಗೆ ಬಂದು ಕೇಳಿದಾಗ ಹಣದ ಕೊರತೆ ಇದೆಯೆ, ಔಷಧಿಗಳೇನಾದರೂ ಬೇಕೇ ಎಂದು ಕೇಳಿದೆ. ಅದಕ್ಕವರು ಔಷಧಿಗೇನೂ ಕೊರತೆ ಇಲ್ಲ, ಬರ್ನ್ಸ್ ವಾರ್ಡ್‌ನಲ್ಲಿ ಆಕ್ಸಿಜನ್ ಕೊರತೆ ಕೂಡ ಇಲ್ಲ ಎಂದು ಹೇಳಿದರು. ಅಲ್ಲಿರುವುದು ಯಾವ ರೀತಿಯ ತೊಂದರೆ ಎಂದರೆ ವಾಸನೆ, ಗಲೀಜು ಮತ್ತು ಅದರ ಜೊತೆಗೆ ಒಬ್ಬರು ಪೇಷೆಂಟ್ಸ್ ಅಡ್ಮಿಟ್ ಆದರೆ 15-20 ಜನ ಅವರನ್ನು ನೋಡುವುದಕ್ಕೆ ಬರುತ್ತಾರೆ. ಅವರಿಗೆ ಅಡೆತಡೆ ಮಾಡಿದರೆ ಅಲ್ಲಿರತಕ್ಕಂಥ ವಾಚ್‌ಮನ್‌ಗಳ ಮೇಲೆ ಗಲಾಟೆ ಮಾಡಿ ಅವರ ಮೇಲೆ ಕೈಮಾಡುವುದು ಇಂಥದೆಲ್ಲಾ ನಡೆಯುತ್ತಿದೆ. ಅದನ್ನು ಸರಿಮಾಡುವುದಕ್ಕೆ ನಾವು ಎಲ್ಲಾ ವ್ಯವಸ್ಥೆ ಮಾಡಿದ್ದೇವೆ. ಬರ್ನ್ಸ್ ವಾರ್ಡನ್ನು ವಿಕ್ಟೋರಿಯಾ ಆಸ್ಪತ್ರೆಯಿಂದ ಪ್ರತ್ಯೇಕಿಸುವಂಥ ಆಲೋಚನೆ ಸರ್ಕಾರದ ಮುಂದೆ ಇದೆ. ಅದಕ್ಕೆ ಜಾಗ ಇಲ್ಲ. ಈಗಿನ ಜಯದೇವ ಆಸ್ಪತ್ರೆಯನ್ನು ಕೋರಮಂಗಲಕ್ಕೆ ಸ್ಥಳಾಂತರಿಸಿದರೆ ಆ ಜಾಗದಲ್ಲಿ ಇದನ್ನು ಏನಾದರೂ ಮಾಡುವುದಕ್ಕೆ ಸಾಧ್ಯವೇ ಎಂಬ ಆಲೋಚನೆ ಇದೆ. ಈ ಎಲ್ಲಾ ಕ್ರಮ ನಾವು ಇದರಲ್ಲಿ ಮಾಡಬೇಕಾಗಿದೆ. ಒಂದು ದೂರು ಬಂದ ತಕ್ಷಣವೆ ಅಲ್ಲಿ ಹೋಗಿ ಸೂಕ್ತ ವ್ಯವಸ್ಥೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಅಧ್ಯಕ್ಷರು: ಹೋಗಿ ಮಾಡಿ, I wish you all the best.

ಶ್ರೀ ಎಸ್.ಸುರೇಶ್ ಕುಮಾರ್: ಈ ಸಂದರ್ಭದಲ್ಲಿ ನಾನು ಒಂದು ಎಚ್ಚರಿಕೆಯ ಮಾತನ್ನು ಹೇಳಬೇಕೆಂದುಕೊಂಡಿದ್ದೇನೆ. ಕಳೆದ ಬಾರಿ ಇಲ್ಲಿ ಈ ವಿಷಯವನ್ನು ರೈಸ್ ಮಾಡಿದಾಗ ನಾವು ಯಾವ ವೈದ್ಯರ ಬಗ್ಗೆ ಇಲ್ಲಿ ಕಂಪ್ಲೇಂಟ್ ಮಾಡಿದೆವೊ ಅವರನ್ನು ಬಿಟ್ಟು ಪಾಪ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಶ್ರೀ ಸದಾಶಿವಮೂರ್ತಿಯವರ ಮೇಲೆ ನೋಟಿಸ್ ಕೊಟ್ಟು ಅವರನ್ನು ರಾಜಕೀಯಕ್ಕೆ ಬಲಿಪಶು ಮಾಡಿದರು. ನಾವು ಇಲ್ಲಿ ಸದನದಲ್ಲಿ ಪ್ರಸ್ತಾಪ ಮಾಡುವ ವಿಷಯ ಯಾರಿಗೋ ಮಾರ್ಕೆಟ್ ಆಗಬಾರದು.

ಶ್ರೀ ಚಂದ್ರಕಾಂತ ಬೆಲ್ಲದ: ಅದೇ ಪ್ರಕಾರ ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಶ್ರೀ ನಾಗಾಲೋಟಿ ಮಠ್ ಅವರಿಗೂ ಮಾಡಿದರು. ಈ ಪ್ರಕಾರ ಮಾಡುತ್ತಾ ಹೋದರೆ

ಸಾಮಾನ್ಯ ಜನರಿಗೆ ಸರಿಯಾದಂಥ ಸೇವೆ ಎಲ್ಲಿ ಸಿಗುತ್ತದೆ?

(2) ಕಂದಾಯ ಸಚಿವರ ಹೇಳಿಕೆ.

ವಿಷಯ: ರಾಜ್ಯದಲ್ಲಿ ಬರಗಾಲ ಉಂಟಾಗಿರುವ ಬಗ್ಗೆ

+ ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಸರ್ಕಾರವು ಅತಿವೃಷ್ಟಿ ಮತ್ತು ಅನಾವೃಷ್ಟಿಗಳನ್ನು ಅತ್ಯಂತ ಕಳಕಳಿಯಿಂದ ಗಮನಿಸುತ್ತಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಂದ ಮತ್ತು ವಿವಿಧ ಇಲಾಖೆಗಳಿಂದ ವರದಿಗಳನ್ನು ಆಗಿಂದಾಗ್ಗೆ ತರಿಸಲಾಗುತ್ತಿದೆ. ಅಲ್ಲದೆ, ಪ್ರತಿ ದಿವಸ ಪರಿಸ್ಥಿತಿಯನ್ನು 'ಮಾನಿಟರ್' ಮಾಡಲಾಗುತ್ತಿದೆ. ಮಾನ್ಯ ಶಾಸಕರು ವಿಧಾನಸಭೆ ಮತ್ತು ಪರಿಷತ್‌ನಲ್ಲಿ ಈ ಬಗ್ಗೆ ಎತ್ತಿರುವ ಹಲವಾರು ಪ್ರಶ್ನೆಗಳಿಗೆ ಸೂಕ್ತವಾದ ಉತ್ತರಗಳನ್ನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಅತಿವೃಷ್ಟಿ ಮತ್ತು ಅನಾವೃಷ್ಟಿಗಳನ್ನು 'ಮಾನಿಟರ್' ಮಾಡುತ್ತಿಲ್ಲವೆಂಬ ವಾದವು ಸರಿಯಾದುದಲ್ಲ. ಇದಲ್ಲದೆ ಸರ್ಕಾರವು ಆಗಿಂದಾಗ್ಗೆ ಜಿಲ್ಲಾಧಿಕಾರಿಗಳು ಮತ್ತು ವಿವಿಧ ಇಲಾಖೆಗಳನ್ನು ಸಂಪರ್ಕಿಸಿ, ವಿಧಾನಪರಿಷತ್ತಿನ ಮತ್ತು ವಿಧಾನಸಭೆಗೆ ಬೇಕಾಗುವ ಮಾಹಿತಿಯನ್ನು ಒದಗಿಸಿರುವುದು ತಮಗೆಲ್ಲರಿಗೂ ಗೊತ್ತಿದೆ.

ಅನಾವೃಷ್ಟಿಯಿಂದ ಮತ್ತು ಅತಿವೃಷ್ಟಿಯಿಂದ ಕೆಲಸ ಇಲ್ಲದವರಿಗೆ ಕೆಲಸ ಕೊಡುವ ಬಗ್ಗೆ:

ಈಗ ಇರುವ ಸರ್ಕಾರದ ನೀತಿ-ನಿಯಮಗಳಂತೆ ಇಂತಹ ಸಂದರ್ಭದಲ್ಲಿ ಕೆಲಸಗಳನ್ನು ಕೊಡುವಂತಾದ್ದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯದ್ದಾಗಿದೆ. ಕಾರಣ, ಇದರಲ್ಲಿ ಇ.ಎ.ಎಸ್ ಮತ್ತು ಜೆ.ಆರ್.ವೈ ಯೋಜನೆಗಳಡಿಯಲ್ಲಿ ಇದಕ್ಕಾಗಿ ಹೇರಳವಾಗಿ ಹಣ ಇದ್ದು, ಕೆಲಸಗಳನ್ನು ಕೊಡುವುದಕ್ಕೆ ಯಾವ ತರಹದ ಹಣದ ತೊಂದರೆ ಇರುವುದಿಲ್ಲ. ಈ ಬಗ್ಗೆ ಕೆಲಸಗಳನ್ನು ಎಷ್ಟರ ಮಟ್ಟಿಗೆ ಕೊಟ್ಟಿದ್ದಾರೆ ಮತ್ತು ಕೊಡಬೇಕು ಎಂಬುದರ ಬಗ್ಗೆ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯನ್ನು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಉದ್ದೇಶಿಸಿ ಮಾತನಾಡಿ, ಮುಂಗಾರು ನೈರುತ್ಯ ಮಳೆ ಕಡಿಮೆಯಾಗಿರುವ ಪ್ರದೇಶಗಳಲ್ಲಿ ಜವಾಹರ್ ರೋಜ್‌ಗಾರ್ ಯೋಜನೆ ಮತ್ತು ಉದ್ಯೋಗ ಭರವಸೆ ಯೋಜನೆ ಅಡಿಯಲ್ಲಿ ಕೊಡಬೇಕು ಹಾಗೂ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಒಂದು ಸುತ್ತೋಲೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ದಿನಾಂಕ 11.7.97ರಂದು ಕಳುಹಿಸಿದೆ: ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಈ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಹಾಗೆಯೇ, ನಾನು ಕರೆದಿರುವ ವಿವಿಧ ಸಭೆಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಕಾರ್ಯದರ್ಶಿಯವರನ್ನು ಆಹ್ವಾನಿಸಿ, ಅವರಿಗೆ ಸೂಕ್ತ ಸಲಹೆ:. ಸೂಚನೆಗಳನ್ನು ಕೊಟ್ಟಿದ್ದೇನೆ. ಅವರಿಗೆ ಯಾವ ಯಾವ ಪ್ರದೇಶಗಳಲ್ಲಿ

ಅನಾವೃಷ್ಟಿಯಾಗಿದೆ ಎಂಬ ಬಗ್ಗೆ ತಿಳಿಸಿ, ಅವರು ಮೇಲೆ ತಿಳಿಸಿದ ಸುತ್ತೋಲೆಯನ್ನು ಹೊರಡಿಸಿದ್ದಾರೆ.

ತಾರೀಖು 1.4.97ರಿಂದ 3.9.97ರವರೆಗೆ ವಿವಿಧ ಶೀರ್ಷಿಕೆಗಳಲ್ಲಿ ಬಿಡುಗಡೆ ಮಾಡಿದ ಹಣದ ಮೊತ್ತ ಈ ಕೆಳಗಿನಂತಿದೆ-

		1997-98ನೇ ಸಾಲಿಗೆ ಬಿಡುಗಡೆ ಮಾಡಿದ ಮೊತ್ತ	**1996-97ನೇ ಸಾಲಿಗೆ ಬಿಡುಗಡೆ ಮಾಡಿದ ಮೊತ್ತ**
		(ಲಕ್ಷ ರೂಪಾಯಿಗಳಲ್ಲಿ)	
1.	ಸಾರ್ವಜನಿಕ ಆಸ್ತಿಗಳ ದುರಸ್ತಿ	25.00	46.40
2.	ನೆರೆ ಹಾವಳಿ	786.00	166.85
3.	ದೋಣಿಗಳ ಖರೀದಿ	35.00	-
4.	ಮೇವು	95.00	-
5.	ಕುಡಿಯುವ ನೀರು	1575.00	610.00
6.	ಉದ್ಯೋಗ ಭರವಸೆ	-	92.24
	ಒಟ್ಟು	**2516.00**	**915.49**

ಈ ರೀತಿ ಕಳೆದ ವರ್ಷ ಮತ್ತು ಈ ವರ್ಷ ಬಿಡುಗಡೆ ಮಾಡಿದ ಹಣವನ್ನು ಹೋಲಿಸಿದರೆ ಈ ಸಲ ಬಿಡುಗಡೆ ಮಾಡಿದ ಹಣವು ಕಳೆದ ವರ್ಷ ಬಿಡುಗಡೆ ಮಾಡಿದ ಹಣಕ್ಕಿಂತ ಎರಡೂವರೆ ಪಟ್ಟು ಜಾಸ್ತಿಯಾಗಿದೆ.

ಜಿಲ್ಲಾಧಿಕಾರಿಗಳಿಂದ ಮತ್ತು ಉಳಿದ ಇಲಾಖೆಗಳಿಂದ ಮಾಹಿತಿ ಪಡೆಯುವುದರ ಜೊತೆಗೆ ದಿ: 18-8-1997ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ತುಮಕೂರು ಜಿಲ್ಲೆಯ ಎಲ್ಲಾ ಶಾಸಕರುಗಳನ್ನು ಕರೆಸಿ ಚರ್ಚೆ ನಡೆಸಿ ಆ ಜಿಲ್ಲೆಯ ಸಮಸ್ಯೆಗಳಿಗೆ ವಿವಿಧ ಪರಿಹಾರಗಳನ್ನು ಕೈಗೊಳ್ಳಲಾಯಿತು.

ಅದೇ ರೀತಿ ಬಾಧಿತ ಪ್ರದೇಶಗಳ ಉಳಿದ ಶಾಸಕರ ಸಭೆಯನ್ನು ತಾರೀಖು 9-9-97 ರಂದು ಮಾನ್ಯ ಮುಖಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಈ ಸಭೆಗೆ ಚಿತ್ರದುರ್ಗ, ರಾಯಚೂರು, ಕೋಲಾರ, ಬಿಜಾಪುರ, ಬೆಳಗಾವಿ, ತುಮಕೂರು ಜಿಲ್ಲೆಯ ಶಾಸಕರುಗಳನ್ನು ಕರೆಯಲಾಗಿದೆ. ಉಳಿದ ಜಿಲ್ಲೆಗಳಿಂದ ಶಾಸಕರುಗಳನ್ನು ಸಧ್ಯದಲ್ಲಿಯೇ

ಕರೆದು ಸಭೆ ನಡೆಸಿ ಅಲ್ಲಿಯ ಸಮಸ್ಯೆಗಳಿಗೂ ಪರಿಹಾರಗಳನ್ನು ಕಂಡುಕೊಳ್ಳಲಾಗುವುದು.

ಕಳೆದ ವರ್ಷ ತಮಗೆಲ್ಲಾ ತಿಳಿದಂತೆ ಡಿಸೆಂಬರ್ ತಿಂಗಳಿನಲ್ಲಿ ಒಂದು ಮೆಮೊರ್ಯಾಂಡಮ್ ಅನ್ನು ಭಾರತ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. ಈ ಮೆಮೊರೆಂಡಮ್‌ನ ಮೇಲೆ ಭಾರತ ಸರ್ಕಾರವು ಇನ್ನೂ ಹಣ ಬಿಡುಗಡೆ ಮಾಡಿರುವುದಿಲ್ಲ. ಆದರೂ ತಾವೆಲ್ಲಾ ಸಲಹೆ ಮಾಡಿದಂತೆ ಶೀಘ್ರವಾಗಿ ಒಂದು ಮೆಮೋರೆಂಡಮ್‌ನ್ನು ತಯಾರಿಸಿ ಭಾರತ ಸರ್ಕಾರಕ್ಕೆ ಕಳುಹಿಸಲಾಗುವುದು ಮತ್ತು ಅವರಿಂದ ಆದಷ್ಟು ಹಣವನ್ನು ಪಡೆಯಲು ಪ್ರಯತ್ನಿಸಲಾಗುವುದು. ಜೊತೆಗೆ ಭಾರತ ಸರ್ಕಾರದ ಟೀಮನ್ನು ನಮ್ಮ ರಾಜ್ಯದ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಬರುವಂತೆ ಕೋರಲಾಗುವುದು. ಜೆ.ಆರ್.ವೈ ಮತ್ತು ಇ.ಎ.ಎಸ್ ನಲ್ಲಿ ಉತ್ಪನ್ನವಾದ ಉದ್ಯೋಗದ ಬಗ್ಗೆ ಎಲ್ಲಾ ವಿವರಗಳನ್ನು ಸಭೆಯ ಮುಂದೆ ಇಡಲು ನಾನು ತಯಾರಾಗಿದ್ದೇನೆ. ಆದರೂ ಸಂಕ್ಷಿಪ್ತವಾಗಿ ಈ ವರ್ಷ ಉತ್ಪನ್ನವಾದ ಮ್ಯಾನ್‌ಡೇಸ್ 106:58 ಲಕ್ಷಗಳು. ಇನ್ನು 97.63 ಕೋಟಿ ಹಣದಿಂದ ಕೆಲಸಗಳನ್ನು ಕೊಡುವ ಸಾಧ್ಯತೆ ಇದೆ. ಆದುದರಿಂದ ಇನ್ನೂ ಬೇಕಾದಷ್ಟು ಕೆಲಸವನ್ನು ಜೆ.ಆರ್.ವೈ ಮತ್ತು ಇ.ಎ.ಎಸ್.ಗಳ ಮೂಲಕ ಕೊಡಿಸಲಾಗುವುದು. ಸರ್ಕಾರವು ಜಿಲ್ಲಾ ಪರಿಷತ್ ಮೂಲಕ ಕೆಲಸ ಎಲ್ಲೆಲ್ಲಿ ಇಲ್ಲವೋ ಅಲ್ಲಲ್ಲಿ ಕೆಲಸಗಳನ್ನು ಕೊಡಿಸಲು ತಯಾರಾಗಿದೆ.

ಕುಡಿಯುವ ನೀರಿನ ಬಗ್ಗೆ ಕಳೆದ ವರ್ಷ ಸರ್ಕಾರವು ಅಭಾವ ಪರಿಹಾರ ನಿಧಿಯಿಂದ ರೂ.610.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು ಈ ವರ್ಷ ರೂ.1575 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಅರ್ಥಾತ್ ಈ ಹಣವು ಕಳೆದ ವರ್ಷ ಬಿಡುಗಡೆ ಮಾಡಿದ ಹಣಕ್ಕಿಂತ ಎರಡುಪಟ್ಟಿಗಿಂತಲೂ ಹೆಚ್ಚಾಗಿದೆ. ಈ ಹಣದ ಬಿಡುಗಡೆಯು ಸಾಮಾನ್ಯವಾಗಿ ಸರ್ಕಾರವು ತೆಗೆದುಕೊಳ್ಳುವ ನೀರು ಸರಬರಾಜು ಮಾಡುವ ಹಣದ ಜೊತೆಗೆ ಬಿಡುಗಡೆ ಮಾಡಿದ ಹಣವಾಗಿದೆ.

ಇಷ್ಟೆಲ್ಲಾ ಕೆಲಸಗಳನ್ನು ಸರ್ಕಾರವು ಮಾಡಿದೆ. ಇದರ ಜೊತೆಗೆ ತಮ್ಮ ಸಲಹೆ : ಸೂಚನೆಗಳು ಇದ್ದರೆ, ಅವುಗಳನ್ನು ಪಡೆದುಕೊಂಡು, ಸರ್ಕಾರವು ಈ ದಿಶೆಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಆದರೆ ಕೆಲಸಕಾರ್ಯಗಳನ್ನು ಕೊಡುವಂತದ್ದಕ್ಕೆ ಜೆ.ಆರ್.ವೈ ಮತ್ತು ಇ.ಎ.ಎಸ್.ನ ಹಣವನ್ನು ಉಪಯೋಗ ಮಾಡುವುದು ಸೂಕ್ತ, ಕಾರಣ ಈ ಎರಡು ಸ್ಕೀಮ್‌ನಲ್ಲಿ ಶೇಕಡಾ 80ರಷ್ಟು ಹಣವನ್ನು ಭಾರತ ಸರ್ಕಾರವು ಭರಿಸುತ್ತದೆ. ಮತ್ತು ಜಿಲ್ಲಾ ಪಂಚಾಯತ್‌ನಲ್ಲಿ ಪರಿಶೀಲನೆ ಮಾಡಿ ಈ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಅದಲ್ಲದೆ ಇವೊತ್ತಿನ ದಿವಸ ಮುಖ್ಯ ಮಂತ್ರಿಗಳು ಈ ಎಲ್ಲಾ ಜಿಲ್ಲೆಯ ಶಾಸಕರುಗಳನ್ನು ಕರೆದು ಅವರ ಹತ್ತಿರ ಚರ್ಚೆ ಮಾಡಿ ಅವರು ಏನೇನು ಸಲಹೆ ಸೂಚನೆಗಳನ್ನು ಕೊಡುತ್ತಾರೆ ಆ ರೀತಿ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಈಗಾಗಲೇ

ನಾಯಕರು ತಯಾರಾಗಿದ್ದಾರೆ. ಸಭೆಗಳನ್ನು ಬಹಳ ಬೇಗ ಮಾಡುತ್ತೇವೆ.

ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆ. ಕ್ಲಾರಿಫಿಕೇಶನ್ ಬೇಡ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: 5 ತಾಸು ಚರ್ಚೆಯಾಗಿದೆ. ಕನಿಷ್ಠಪಕ್ಷ....

ಅಧ್ಯಕ್ಷರು: ಏನಿಲ್ಲ, ಲೆಜಿಸ್ಲೇಚರ್‌ನವರದ್ದು ನಿನ್ನೆಯೂ ತೆಗೆದುಕೊಂಡಿಲ್ಲ, ಇವೊತ್ತು ಎರಡು ಗಮನ ಸೆಳೆಯುವ ಸೂಚನೆ ಇದೆ;

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇವೊತ್ತು 3 ಬಿಲ್ ಪಾಸ್ ಮಾಡಿ ಕೊಡುತ್ತೇವೆ. ಅವೆಲ್ಲಾ ರೆಡಿ ಇವೆ. ಮೈಸೂರಿನಿಂದ ಹೆಡ್‌ಕ್ವಾರ್ಟರ್ಸ್‌ಗೆ ಟ್ರಾನ್ಸ್‌ಫರ್ ಮಾಡುವ ಬಗ್ಗೆ ಮತ್ತು ಕೂಡಲ ಸಂಗಮದ ಬಗ್ಗೆ ಒಂದೆರಡು ಮೂರು ಬಿಲ್‌ಗಳೇನಿವೆ, ಅವುಗಳನ್ನು ಪಾಸ್ ಮಾಡಿ ಕೊಡುತ್ತೇವೆ.

ಸಭಾಧ್ಯಕ್ಷರು: ಅದಕ್ಕೆ ನನಗೆ ನೀವು ಎಂದರೆ ಬಹಳ ಮೆಚ್ಚುಗೆ. ನೀವು ಬಹಳ ಧಾರಾಳ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಹೋಲಿಕೆ ಮುಖಾಂತರ 1996-97ರಲ್ಲಿ 9 ಕೋಟಿ 15 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ, ಈ ಸಾಲಿನಲ್ಲಿ 25 ಕೋಟಿ 16 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದು ಹೋದ ಸಲವೇನೂ ಬರಗಾಲ ಬರಲಿಲ್ಲ. ಬರಗಾಲಕ್ಕೆ ಹೋಲಿಸಿ ನೀವು ಕೊಟ್ಟಿದ್ದರೆ ಅದು ಒಂದು ರೀತಿಯಾಗುತ್ತಿತ್ತು. ಬರಗಾಲ ಪರಿಸ್ಥಿತಿ ಇಲ್ಲದೆ ಇದ್ದಾಗ ನಾವು ಹೋದ ಸಲ 9 ಕೋಟಿ ಕೊಟ್ಟಿದ್ದೇವೆ ಈ ಸಲ 25 ಕೊಟ್ಟಿದ್ದೇವೆ ಎಂದರೆ ಯಾರಾದರೂ ನಗುತ್ತಾರೆ. ಇದರ ಅರ್ಥ ಹೇಗೆ ಎಂದರೆ ನಿಮ್ಮ ಪಕ್ಕದಲ್ಲಿ ನಾಗೇಗೌಡರು ಕುಳಿತಿದ್ದಾರೆ. ಅವರ ಸ್ಟ್ಯಾಟಿಸ್ಟಿಕ್ಸ್ ಹಾಗೆ ಇವರ ಸ್ಟ್ಯಾಟಿಸ್ಟಿಕ್ಸ್ ಕೂಡ. ಆದುದರಿಂದ ಇದು ಅದಕ್ಕೆ ಹೋಲಿಕೆಯಿಲ್ಲ. ಉದ್ಯೋಗ ಭರವಸೆ ಯೋಜನೆಯಲ್ಲಿ ಕೊನೇಪಕ್ಷ ತಾವು ಬರಗಾಲ ಇಲ್ಲದೆ ಇದ್ದಾಗ 92 ಲಕ್ಷ ರೂಪಾಯಿ ಖರ್ಚು ಮಾಡುವುದಕ್ಕೆ ಬಿಡುಗಡೆ ಮಾಡಿದ್ದೀರಿ, ಈಗ ಇದರಲ್ಲಿ ಒಂದು ಪೈಸೆಯೂ ಇಲ್ಲ. ನಂತರ ಇನ್ನೊಂದು ಮಾತು ನಾನು ಹೇಳುವುದೇನೆಂದರೆ ಕಳೆದ ವರ್ಷ ತಮಗೆಲ್ಲಾ ತಿಳಿದಂತೆ ಡಿಸೆಂಬರ್ ತಿಂಗಳಿನಲ್ಲಿ ಒಂದು ಮೆಮೊರೆಂಡಮ್ ಕೊಟ್ಟಿದ್ದರು. ಹೋದ ಸಲ ಮೆಮೊರೆಂಡಮ್ ಕೊಟ್ಟಿದ್ದರು ಎಂದು ತಿಳಿದುಕೊಂಡು ಈ ಸಲ ಕೊಡಬಾರದು ಎಂದೇನೂ ಇಲ್ಲ. ಹೋದ ಸಲ ಡಿಸೆಂಬರಿನಲ್ಲಿ ಕೊಟ್ಟಿರಿ ಎಂದರೆ ಈ ಸಲದ ಪರಿಸ್ಥಿತಿ ಅತಿವೃಷ್ಟಿ ಅನಾವೃಷ್ಟಿ ಎರಡೂ ಸೇರಿ 25 ಕೋಟಿ ಹಣ ಬಿಡುಗಡೆ ಮಾಡಿದ್ದೀರಿ. ಇದು ಕೇವಲ ಅತಿವೃಷ್ಟಿಗೆ ಕೇವಲ ಅನಾವೃಷ್ಟಿಗೆ ಅಷ್ಟೇ ಅಲ್ಲ. ಎರಡೂ ವಿಷಯಗಳ ಬಗ್ಗೆ ಕೇಂದ್ರ ಸರಕಾರದವರಿಗೆ ತಾವು

ಈ ವರ್ಷ ಮೆಮೊರ್ಯಾಂಡಮ್ ಕೊಟ್ಟಿಲ್ಲ. ಈ ರೀತಿಯಾದಾಗ ಅವರಿಗೆ ಹೇಗೆ ಮನವರಿಕೆಯಾಗುತ್ತದೆ? ಇಲ್ಲಿನ ಪರಿಸ್ಥಿತಿ ಹೇಗೆ ಗೊತ್ತಾಗುತ್ತದೆ? ಇದಕ್ಕೆ ಹಣ ನ್ಯಾಚುರಲ್ ಕಲಾಮಿಟಿ ಫಂಡ್‌ನಲ್ಲಿ ಬರಬೇಕು. ಅದು ಹೇಗೆ ಬರುತ್ತದೆ. ಸರಕಾರ ಇದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಹೋದ ಸಲ ಕಳುಹಿಸಿದರೆ ಈ ಸಲ ಅವಶ್ಯಕತೆ ಇಲ್ಲವೇ ಎಂದು ನಾನು ಅವರನ್ನು ಕೇಳುತ್ತಿದ್ದೇನೆ. ಸರಕಾರ ಇದಕ್ಕೆ ನಿರ್ಲಕ್ಷ್ಯ ಮಾಡುತ್ತಿದೆ ಇದರಲ್ಲಿ ವಿಫಲಗೊಂಡಿದೆ. ಈ ಕಡೆ ಅವರ ಗಮನ ಇಲ್ಲ. ಕೇಂದ್ರ ಸರಕಾರದ ಎಕ್ಸ್‌ಪರ್ಟ್ ಟೀಮ್ ತೆಗೆದುಕೊಂಡು ಅವರಿಂದ ಏನು ಸಹಾಯ ಪಡೆದುಕೊಳ್ಳಬೇಕೋ ಅದರಲ್ಲಿ ಆಸಕ್ತಿ ಇಲ್ಲವೆಂಬುದು ಕ್ಲಿಯರ್ ಆಗುತ್ತದೆ. ಇಷ್ಟೆಲ್ಲಾ ಕೆಲಸಗಳನ್ನು ಸರಕಾರ ಮಾಡಿದೆ. ಇದರ ಜೊತೆಗೆ ತಮ್ಮ ಸಲಹೆ ಸೂಚನೆಗಳು ಇದ್ದರೆ ಕೊಡಿ ಎಂದು ಹೇಳಿದರು. ನಾವು ನಿನ್ನೆ ಯಿಂದ 5 ತಾಸುಗಳ ಕಾಲ ಸಲಹೆ ಸೂಚನೆ ಕೊಟ್ಟಿದ್ದು ಎಲ್ಲಾ ವ್ಯರ್ಥವಾಯಿತು ಎಂತಲೇ? ಅದಕ್ಕೆ ಬಹುಶಃ ಪತ್ರಿಕೆಯವರೂ ಬರೆದಿಲ್ಲ.

ಶ್ರೀ ರಮೇಶ್ ಸಿ.ಜಿಗಜಿಣಗಿ: ನಾನು ಆ ರೀತಿ ಹೇಳಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ನಾಳೆ ಆ ಸಭೆಯಲ್ಲಿ ನಿಮ್ಮ ಸಲಹೆ ಸೂಚನೆಗಳನ್ನು ಕೊಡಿ ಎಂದು ಹೇಳಿದ್ದು ತಪ್ಪೇ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇದರಲ್ಲಿ ಆ ರೀತಿ ಬರೆದಿಲ್ಲ. ನೀವು ಹೇಳಿದ ರೀತಿಯಲ್ಲಿ ಇದರಲ್ಲಿ ಬರೆದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನನಗೆ ನಂಬಿಕೆ ಏಕೆ ಬರುತ್ತಿಲ್ಲವೆಂದರೆ, ನಾನು ಈ ವಿಷಯವನ್ನು ನಿನ್ನೆ ಪ್ರಸ್ತಾಪ ಮಾಡಿದ್ದು ಪತ್ರಿಕೆಯಲ್ಲಿ ಕೆಲವು ಕಡೆಯಲ್ಲಿ ಬಂದಿಲ್ಲ. ಅದನ್ನು ತಿಳಿದುಕೊಂಡು ಬಹುಶಃ ಇವರೂ ಉತ್ತರವನ್ನು ಕೊಟ್ಟಿರಬಹುದು. ನಿಮ್ಮ ಸಲಹೆ ಸೂಚನೆ ಏನಾದರೂ ಇದ್ದರೆ ಕೊಡಿ ಎಂದರೆ ಅದು ಸರಿಯಲ್ಲ. ನಿನ್ನೆ 5 ತಾಸುಗಳಿಂದ ಬಹಳ ಜನ ಸದಸ್ಯರು ಕೆಲವರು ಬಯಲು ಸೀಮೆಯವರು ಬಾಂಬೆ ಕರ್ನಾಟಕದವರು ಎಲ್ಲರೂ ಮಾತನಾಡಿದ್ದಾರೆ. ಯಾವ ರೀತಿಯಾಗಿ ಕೆಲಸ ಮಾಡಬೇಕು ಯಾವ ರೀತಿಯಾಗಿ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಸಲಹೆ ಕೊಟ್ಟಿದ್ದಾರೆ. ಈ ರೀತಿಯಾಗಿ ಸದಸ್ಯರು ಕೊಟ್ಟಂಥ ಸಲಹೆಯನ್ನು ನಾನು ಹೀಗೆ ಇಂಪ್ಲಿಮೆಂಟ್ ಮಾಡಿದ್ದೇನೆಂದು ಹೇಳುವುದನ್ನು ಬಿಟ್ಟು ನೀವು ಸಲಹೆ ಕೊಡಿ ಪುನಃ ಪರಿಶೀಲನೆ ಮಾಡುತ್ತೇನೆಂದರೆ ಎಷ್ಟರ ಮಟ್ಟಿಗೆ ಈ ಹೇಳಿಕೆ ಸಮಂಜಸ ಇದೆ ಎಂದು ತಾವು ಹೇಳಬೇಕು. ನಾನು ಈ ಹೇಳಿಕೆಯನ್ನು ಖಂಡಿಸುತ್ತೇನೆ ಮತ್ತು ಇಂತಹ ಹೇಳಿಕೆಯನ್ನು ಅವರು ಕೊಡಬಾರದು. ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಕೇಂದ್ರ ಸರಕಾರಕ್ಕೇನು ಅವರು ಮೆಮೊರ್ಯಾಂಡಮ್ ಕೊಟ್ಟಿಲ್ಲ ಅದನ್ನೂ ಕೂಡ ಖಂಡಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಮಂತ್ರಿಗಳು ಉತ್ತರದಲ್ಲಿ

ಮೆಮೊರ್ಯಾಂಡಮ್ ಅನ್ನು ಕೇಂದ್ರ ಸರಕಾರಕ್ಕೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಈಗಲೂ ಒಂದು ಸಲ್ಲಿಸುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇದರಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ. ತಾವೆಲ್ಲರೂ ಸಲಹೆ ಮಾಡಿದಂತೆ ಶೀಘ್ರವಾಗಿ ಆದಷ್ಟು ಹಣವನ್ನು ಅವರಿಂದ ಪಡೆಯಲು ಪ್ರಯತ್ನಿಸಲಾಗುವುದು ಎಂದು ಹೇಳಿದ್ದಾರೆ.

ಶ್ರೀ ಧರ್ಮಸಿಂಗ್: 5 ತಾಸುಗಳ ಕಾಲ ಇದರ ಬಗ್ಗೆ ಚರ್ಚೆಯಾಗಿದೆ. ಮಾನ್ಯ ಕಂದಾಯ ಮಂತ್ರಿಗಳು ತಾವು ಆಗಿದ್ದು ಅಧಿಕಾರಿಗಳು ಪ್ರಿಪೇರ್ ಮಾಡಿದಂತಹ ಉತ್ತರವನ್ನು ನಿರೀಕ್ಷೆ ಮಾಡುತ್ತಿಲ್ಲ. ತಾವು ಕಂದಾಯ ಮಂತ್ರಿಗಳಾಗಿ ಪ್ರತಿ ಜಿಲ್ಲೆಯಲ್ಲಿ ಏನು ಕೆಲಸಕಾರ್ಯಗಳು ನಡೆಯುತ್ತಿದೆ ಡಿವಿಜನಲ್ ಲೆವೆಲ್ ಜಿಲ್ಲಾ ಮಟ್ಟದಲ್ಲಿ ಏನು ಇದರ ರೆವ್ಯೂ ಮಾಡಿದ್ದೀರಿ, ಅಲ್ಲಿ ತೊಂದರೆ ಏನು ಇದೆ, ಎಂಬುದನ್ನೆಲ್ಲ ನೋಡಿ ಅದರ ಪರಿಹಾರದ ಕಡೆಗೆ ತಾವು ಗಮನ ಕೊಡಬೇಕು. 4 ತಿಂಗಳವರೆಗೆ ಏನೂ ಮಳೆ ಬಂದಿಲ್ಲ. ನಿನ್ನೆ ಗುಲ್ಬರ್ಗದಲ್ಲಿ ಮತ್ತು ಬೇರೆ ಕಡೆಯಲ್ಲಿ ಸ್ವಲ್ಪ ಮಳೆ ಬಂದಿದೆ. ನಮ್ಮ ಬಿಜಾಪುರದಲ್ಲಿ ಹಾಗೇ ಆಗಿದೆ. ಮಾಲೀಕಯ್ಯ ಗುತ್ತೇದಾರ್ ಅವರು ಜಿಲ್ಲಾ ಮಂತ್ರಿಗಳಾಗಿದ್ದು ಗುಲ್ಬರ್ಗ ಜಿಲ್ಲೆಗೆ ಹೋಗಿದ್ದರು ಅವರಿಗೂ ಕೂಡ ರಿಪೋರ್ಟ್ ಕೊಟ್ಟಿದ್ದಾರೆ. ಈ ವರದಿಯನ್ನು ತಾವು ಕಂದಾಯ ಮಂತ್ರಿಗಳಾಗಿ ಕೊಡುವುದಕ್ಕಾಗುವುದಿಲ್ಲ. ಹಿಂದೆ ನಮ್ಮ ಮಾನ್ಯ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಹತ್ತನೇ ಹಣಕಾಸು ಆಯೋಗದಿಂದ ಮಾನ್ಯ ಕೆ.ಸಿ.ಪಂತ್ ಅವರು ಬಂದಿದ್ದರು. ಇವತ್ತು ನ್ಯಾಚುರಲ್ ಕೆಲಾಮಿಟಿಯಲ್ಲಿ 27 ಕೋಟಿ ಇದೆ. That is not sufficient for the State. 110 ಕೋಟಿ ಮಾಡಬೇಕೆಂಬುದನ್ನೂ ಕೂಡ we have pleaded. ಅದನ್ನು ಮಾಡಿದ್ದೇವೆ. ಇವತ್ತು ಏನೂ ಇಲ್ಲಿ ತಿರುಳು ಇಲ್ಲ. ಮಾನ್ಯ ಖರ್ಗೆಯವರು ಹೇಳಿದ ಹಾಗೆ ಸೆಂಟ್ರಲ್ ಟೀಮ್ ಬಂದು ಎಷ್ಟು ಹಣ ಕೊಡುತ್ತದೆ ಎಂಬುದು ಬೇರೆ ವಿಚಾರ. ತೀವ್ರತರವಾದ ಸಮಸ್ಯೆ ಏನು ಇದೆ ಇದನ್ನು ಬಗೆಹರಿಸಲಿಕ್ಕೆ ಕಂದಾಯ ಮಂತ್ರಿಗಳಾದ ತಾವು ಹಾಗೂ ಹಣಕಾಸು ಸಚಿವರು ಹೋಗಿ ಅಪ್ರೈಸ್ ಕೂಡ ಮಾಡಬೇಕಾಗಿತ್ತು ಅದು ಆಗಿಲ್ಲ. ಜನರು ಬಹಳ ತೊಂದರೆಗೀಡಾಗಿದ್ದಾರೆ. We are not exaggerating. ಏನೋ ಆಗಿದೆ ಎನ್ನುವ ರೀತಿಯಲ್ಲಿ ಇಲ್ಲಿ ಪ್ರಸ್ತಾಪ ಮಾಡುತ್ತಿಲ್ಲ. ಮಾನ್ಯ ದೇವರಾಜ ಅರಸರ ಕಾಲದಲ್ಲಿ 1978 ರಲ್ಲಿ ಏನು ಬರಗಾಲ ಪರಿಸ್ಥಿತಿ ಇತ್ತು ಆಗ ಮಾನ್ಯ ಘೋರ್ಪಡೆಯವರನ್ನು 4 ತಿಂಗಳ ಕಾಲ ಅವರು ಗುಲ್ಬರ್ಗ ಜಿಲ್ಲೆಯಲ್ಲಿ ಪ್ರವಾಸ ಮಾಡಲಿಕ್ಕೆ ಡೆಪ್ಯೂಟ್ ಮಾಡಿದ್ದರು. ಪ್ರಾಕ್ಟಿಕಲ್ ಆಗಿ ಕೆಲಸ ಮಾಡಿದ್ದಾರೆ. ಜಿಲ್ಲಾಧಿಕಾರಿಗಳು ಹೆಡ್‌ನಲ್ಲಿ ಏನು ಹಣ ಕೊಡಬೇಕು ಏನು ಕೆಲಸ ಮಾಡಬೇಕು ಅದರ ಕಡೆಗೆ ಗಮನ ಕೊಡಬೇಕು. ಅಲ್ಲಿ ಬೋರವೆಲ್ ಮಾಡುವುದು ಮೆಕ್ಯಾನಿಕ್ಸ್ ತೆಗೆದುಕೊಳ್ಳುವ ರೀತಿಯಲ್ಲಿ ಆದ್ಯತೆ ಕೊಟ್ಟಿಲ್ಲ ಅದರ ಕಡೆ ಗಮನ ಕೊಡುತ್ತಿಲ್ಲ.

ಸುಮ್ಮನೆ ಏನೋ ಆಗುತ್ತಿದೆ ಹಾಗೆ ಹೀಗೆ ಎಂದು ಹಾರಿಕೆ ಉತ್ತರ ಕೊಟ್ಟಿದ್ದೀರಿ ಸಮಂಜಸವಾಗಿ ಉತ್ತರ ಕೊಟ್ಟಿಲ್ಲ. ಕಂದಾಯ ಸಚಿವರಾಗಿ ತಾವು ಸದನಕ್ಕೆ ಸರಿಯಾದ ವಿವರವನ್ನು ತಿಳಿಸಬೇಕು. ಸ್ಪೆಸಿಫಿಕ್ ಆಗಿ ಕ್ರಮ ತೆಗೆದುಕೊಳ್ಳುತ್ತೇವೆ ಬಹಳ ಕಷ್ಟದಲ್ಲಿ ಜನರು ಇದ್ದಾರೆ ಎಂದು ಹೇಳಬೇಕು. As a Revenue Minister, You have to tell to the House specifically. ನೀವು ಹೀಗೆ ಕೊಟ್ಟಿರುವುದು ಸರಿಯಲ್ಲ. Specifically you have to give answer.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಮಧ್ಯದಲ್ಲಿ ನಿಲ್ಲಬೇಕೆಂದು ಇಲ್ಲ. ಇಡೀ ಒಂದು ದಿವಸ ಚರ್ಚೆ ಮಾಡಿದ್ದೇವೆ. ನೀವೆಲ್ಲಾ ಸ್ಟಡಿ ಮಾಡಿ ಅಧಿಕಾರಿಗಳಿಂದ ಬೇಕಾದ ಅಂಕಿ ಅಂಶ ತೆಗೆದುಕೊಂಡು ವಿವರವಾದ ಮಾಹಿತಿಕೊಡುತ್ತೀರೆಂದು ತಿಳಿದುಕೊಂಡು ನಾವು ಇಂದು ತಾವು ಉತ್ತರಕೊಡಿ ಎಂದು ಹೇಳಿದ್ದೆವು. ನಾನು ಕೇಳಿದಂತ ಮಾಹಿತಿಯನ್ನು ಈಗಲಾದರೂ ಕೊಡಿ. ಅತಿವೃಷ್ಠಿ ಅನಾವೃಷ್ಠಿ ಬರಗಾಲದ ಹಿನ್ನೆಲೆಯಲ್ಲಿ 1997-98ನೇ ಸಾಲಿನಲ್ಲಿ ಎಷ್ಟು ಹಣವನ್ನು ಪ್ರತಿಯೊಂದು ಜಿಲ್ಲೆಗೆ ಬಿಡುಗಡೆ ಮಾಡಿದ್ದೀರಿ? ಎಷ್ಟು ಹಣ ಇದರಲ್ಲಿ ಖರ್ಚಾಗಿದೆ? ಬರಗಾಲದಿಂದ ತತ್ತರಿಸಿ ಕೆಲಸ ಇಲ್ಲದೆ ಗೋವಾ, ಮಹಾರಾಷ್ಟ್ರ ಮತ್ತು ಇತರ ಕಡೆಗೆ ವಲಸೆ ಹೋಗುತ್ತಿದ್ದಾರಲ್ಲಾ ಅವರನ್ನು ಉಳಿಸುವುದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಜಿಲ್ಲಾಧಿಕಾರಿಗಳಿಗೇನು ಸೂಚನೆ ಕೊಟ್ಟಿದ್ದೀರಿ? ಉದಾಹರಣೆಗೆ ಹೇಳುವುದಾದರೆ ಶಿವಮೊಗ್ಗ ಜಿಲ್ಲೆಯಲ್ಲಿ ಏನಾಗಿದೆ ಎಂಬುದನ್ನು ಹೇಳುತ್ತೇನೆ. ಶಿವಮೊಗ್ಗ ಜಿಲ್ಲೆಗೆ ಒಂದು ಕೋಟಿ ಬಿಡುಗಡೆ ಮಾಡಿದ್ದೇವೆಂದು ಹೇಳಬೇಡಿ. ಒಂದು ಕೋಟಿಯಲ್ಲಿ 50 ಲಕ್ಷ ಬಿಡುಗಡೆ ಮಾಡಿದ್ದೀರಿ. 50 ಲಕ್ಷದಲ್ಲಿ 10 ಲಕ್ಷ ಜಿಲ್ಲಾಧಿಕಾರಿಗಳು ರಿಸರ್ವ್ ಇಟ್ಟುಕೊಂಡಿದ್ದಾರೆ. ಲೋಕೋಪಯೋಗಿಗೆ ಇಡೀ 9 ತಾಲ್ಲೂಕಿಗೆ 15 ಲಕ್ಷ. ನೀರಾವರಿ ಮೈನರ್ ಇರಿಗೇಷನ್‌ಗೆ 10 ಲಕ್ಷ ಜಿಲ್ಲಾಪರಿಷತ್ತಿಗೆ 5 ಲಕ್ಷ ಇನ್ನೊಂದಕ್ಕೆ 5 ಲಕ್ಷ ಹೀಗೆ ಇಡೀ ಜಿಲ್ಲೆಗೆ 9 ತಾಲ್ಲೂಕಿಗೆ ಬಿಡುಗಡೆ ಮಾಡಿದ್ದಾರೆ. ಅಂದರೆ ಒಂದು ತಾಲ್ಲೂಕಿನಲ್ಲಿ 1-2 ಕಾಮಗಾರಿ ತೆಗೆದುಕೊಂಡರೆ ಆ ಕೆಲಸ ಮುಗಿಯುತ್ತದೆ. ಎಷ್ಟು ಬಿಡುಗಡೆ ಮಾಡಿದ್ದೀರಿ? ಎಷ್ಟು ಖರ್ಚಾಗಿದೆ ಮುಂದೇನು? ನಾಳೆ ನಾಡಿದ್ದು ನಾವು ಅಧಿವೇಶನ ಮುಗಿಸಿಕೊಂಡು ವಾಪಸ್ ಹೋಗುತ್ತೇವೆ. ಮತ್ತೆ ನಿಮ್ಮ ಜೊತೆ ದೂರವಾಣಿಯಲ್ಲಿ ಮಾತನಾಡಬೇಕಾಗುತ್ತದೆ. ನೀವೇನೋ ಉತ್ತರ ಕೊಟ್ಟರೆ ನಾವು ವಾಕೌಟ್ ಮಾಡುವುದಿಲ್ಲ ಧರಣಿ ಕುಳಿತುಕೊಳ್ಳುವುದಿಲ್ಲ. ನಮಗೆ ಸರಿಯಾದ ಉತ್ತರ ಬೇಕು. ಒಬ್ಬ ಚುನಾಯಿತ ಪ್ರತಿನಿಧಿಯಾಗಿ ನಮ್ಮ ಜನರಿಗೆ ಸರಿಯಾದ ಮಾಹಿತಿ ಕೊಡುವ ಶಕ್ತಿ ಇಲ್ಲದಿದ್ದರೆ ಏನು ಮಾಡುವುದು ನಮ್ಮ ಹತ್ತಿರ ಹಣ ಇಲ್ಲ ನಾವೇನೂ ಮಾಡುವುದಿಲ್ಲವೆಂದರೆ ನಮ್ಮದೇನೂ ಅಭ್ಯಂತರ ಇಲ್ಲ. ಸ್ಪಷ್ಟವಾದ ಅಂಕಿ ಅಂಶ ಕೊಡಿ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ನಾವು ನಿನ್ನೆ ಮಾತನಾಡುವಾಗ ನಿರಂತರವಾಗಿ 5 ಗಂಟೆಗಳ ಕಾಲ ಚರ್ಚೆ ನಡೆದು ಸಲಹೆ ಸೂಚನೆಗಳನ್ನು ಕೊಟ್ಟಿದ್ದೇವೆ.

ಮಾನ್ಯ ಮಂತ್ರಿಗಳೂ ಕೂಡ ಇಲ್ಲಿ ಕುಳಿತಿದ್ದು ಅದನ್ನು ಆಲಿಸಿ ಬರೆದುಕೊಂಡಿದ್ದಾರೆ. ತಮ್ಮ ಸಲಹೆ ಸೂಚನೆಗಳನ್ನು ಕೊಟ್ಟರೆ ನಾವು ಮಾಡುತ್ತೇವೆಂದು ಈಗ ಹೇಳುತ್ತಿದ್ದೀರಿ. ನಾವು ನಿನ್ನೆ ಹೇಳಿರತಕ್ಕಂತಹ ಪ್ರತಿಯೊಂದು ವಿಚಾರದಲ್ಲೂ ಸಹ ನಮ್ಮ ಸಲಹೆಗಳನ್ನು ತಾವು ಗಮನಕ್ಕೆ ತೆಗೆದುಕೊಂಡಿಲ್ಲ. ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೇವೆಂಬ ಸ್ಪಷ್ಟವಾದ ಚಿತ್ರಣವನ್ನು ಕೊಟ್ಟಿಲ್ಲ. ಚಾಮರಾಜ ನಗರ, ಮೈಸೂರು ನಗರ ಬೇರೆಯಾಗಿದೆ. ಬರೀ ಮೈಸೂರಿಗೆ ಹಣ ಕೊಟ್ಟಿದ್ದೀರಿ ಚಾಮರಾಜನಗರಕ್ಕೆ ಕೊಟ್ಟಿಲ್ಲವೆಂದು ನೇರವಾಗಿ ನಾನು ಹೇಳಿದ್ದೆ. ಜನರು ಗಡಿ ನಾಡು ಪ್ರದೇಶದಿಂದ ಜನರು ಗೂಳೆ ಹೋಗುತ್ತಿದ್ದಾರೆ ತಮಿಳುನಾಡು, ಕೇರಳಕ್ಕೆ ಹೋಗುತ್ತಿದ್ದಾರೆ ಅದನ್ನು ತಡೆಯುವುದಕ್ಕೇನು ಮಾಡಿದ್ದೀರಿ ಎಂದು ಕೇಳಿದ್ದೆ. ದನಕರುಗಳಿಗೆ ಮೇವನ್ನು ತಕ್ಷಣ ಒದಗಿಸತಕ್ಕಂತಹ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಸರಕಾರಕ್ಕೆ ನಿರಂತರವಾಗಿ ಹೇಳಿದ್ದೆ. ಯಾವುದನ್ನೂ ಮಾಡಿಲ್ಲ. ಇದು ಒಂದು ರೀತಿಯಲ್ಲಿ ಮೊಸಳೆ ಕಣ್ಣೀರು. ಇದರಿಂದ ಜನರಿಗೇನೂ ಅನುಕೂಲವಾಗಿಲ್ಲ. ಇದರಿಂದ ಜನರಿಗೆ ಬರಗಾಲ ಹೋಗುವುದಿಲ್ಲ. ನಿಮ್ಮ ಮೂಲಕ ಅಂದರೆ ಮೊಸಳೆ ಕಣ್ಣೀರನ್ನು ಮಾನ್ಯ ಕಂದಾಯ ಸಚಿವರಾದಂತಹ ಜಿಗಜಿಣಗಿಯವರ ಕಣ್ಣಿನ ಮೂಲಕ ಆ ಕಣ್ಣೀರನ್ನು ಇಳಿಸುತ್ತಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಸರಕಾರ ಬರಗಾಲದ ಬಗ್ಗೆ ಅತಿವೃಷ್ಠಿಯ ಬಗ್ಗೆ ಎಷ್ಟು ಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆಂಬುದಕ್ಕೆ ಒಂದೇ ಒಂದು ಉದಾಹರಣೆ. ಇದುವರೆವಿಗೂ ಕೇಂದ್ರ ಸರಕಾರಕ್ಕೆ ಮೆಮೊರ್ಯಾಂಡಮ್ ಅನ್ನು ಸಬ್‌ಮಿಟ್ ಮಾಡಿ ನಮ್ಮ ರಾಜ್ಯದಲ್ಲಿ ಅತಿವೃಷ್ಠಿ ಅನಾವೃಷ್ಠಿಯಿಂದ ಇಷ್ಟು ನಷ್ಟವಾಗಿದೆ ಇದಕ್ಕೆ ಪರಿಹಾರ ಬೇಕು ಎಂದು ಇವರ ಪ್ರಕಾರ ಕೇಳಿಯೇ ಇಲ್ಲ. ಇಲ್ಲೇ ಹೇಳುತ್ತಾರೆ. ಭಾರತ ಸರಕಾರಕ್ಕೆ ಮತ್ತು ರಾಜ್ಯದ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಬರುವಂತೆ ಕೋರಲಾಗುವುದು ಎಂದು ಇದರಲ್ಲಿ ಇದೆ.

1.00 ಪಿ.ಎಂ

ಇನ್ನೂ ಮನವಿ ತಯಾರಾಗಿಲ್ಲ. ಎಷ್ಟು ಜವಾಬ್ದಾರಿ ಇದೆ ಎಂದು ಸ್ಪಷ್ಟವಾಗಿ ಇದರಿಂದಲೇ ಗೊತ್ತಾಗುತ್ತದೆ. ಇದು ಬೇಜವಾಬ್ದಾರಿ ಸರ್ಕಾರ. ಇನ್ನೂ ಮನವಿ ಕೊಟ್ಟಿಲ್ಲ. ಯಾವಾಗ ಇವರು ಮನವಿಯನ್ನು ಕೊಡುವುದು? ಅವರು ಯಾವಾಗ ಹಣವನ್ನು ಕೊಡುವುದು? ಅವರು ಕೊಡುವುದೇ ಕಡಿಮೆ. ಇವರು ಇನ್ನೂ ಕೇಳೇ ಇಲ್ಲ. ಕೇಂದ್ರದ ಟೀಮ್ ಬಂದಿಲ್ಲ. ಕೇಂದ್ರದ ಟೀಮ್ ಬಂದು ಅಧ್ಯಯನಮಾಡಿ ಹೋಗಿ ಆಮೇಲೆ ಅವರು ಹಣವನ್ನು ಬಿಡುಗಡೆ ಮಾಡುವುದು. ಕೇಂದ್ರದ ಟೀಮ್ ಬರಬೇಕಾದರೆ ಇವರು ಮೊದಲೇ ಮೆಮೊರಾಂಡಂನ್ನು ಸಬ್‌ಮಿಟ್ ಮಾಡಿರಬೇಕು. ಇವರು ಪರಿಸ್ಥಿತಿಯನ್ನು ವಿವರಣೆ ಮಾಡಿರಬೇಕು. ಇದುವರೆಗೂ ಮಾಡಿಲ್ಲ. ಅದು ಬೇಜವಾಬ್ದಾರಿತನ ಸರ್ಕಾರದ್ದು. ಎರಡನೆಯದು ಇವತ್ತು ಏನು ಹಣ ಬಿಡುಗಡೆ

ಮಾಡಿದ್ದೇವೆ ಎಂದು ಹೇಳಿಕೆ ಕೊಟ್ಟಿದ್ದಾರೆ, ಇದು ಕಾಗದದಲ್ಲಿ ಇರಬಹುದು. ಆದರೆ ವಾಸ್ತವಿಕವಾಗಿ ಒಂದೊಂದು ಕೋಟಿ ರೂಪಾಯಿ ಒಂದು ಜಿಲ್ಲೆಗೆ ಹೋಗಿದೆ ಎಂದು ಹೇಳತಕ್ಕಂಥದ್ದು ಹಾಗೆ ಹೋಗಿಲ್ಲ. ಒಂದು ಜಿಲ್ಲೆಗೆ ಸರಾಸರಿಯಾಗಿ ಹೋಗಿರುವುದು 40 ರಿಂದ 50 ಲಕ್ಷ ರೂಪಾಯಿಗಳು ಅಷ್ಟೇ ಹೊರತು ಹೆಚ್ಚಿಗೆ ಹೋಗಿಲ್ಲ. 40-50 ಲಕ್ಷ ರೂಪಾಯಿಗಳಿಂದ ಯಾವುದೇ ಕುಡಿಯುವ ನೀರಿನ ಸಮಸ್ಯೆಯಾಗಲಿ, ಮೇವಿನ ಸಮಸ್ಯೆಯಾಗಲಿ ಪರಿಹಾರ ಮಾಡಲಿಕ್ಕೆ ಸಾಧ್ಯವಿಲ್ಲ. ಮತ್ತೆ ಜೆ.ಆರ್.ವೈನಲ್ಲಿ ಇಲ್ಲೊಂದು ಸಮಸ್ಯೆ ಇದೆ. ಇದರಲ್ಲಿ ನಿಯಮಾವಳಿ ಪ್ರಕಾರ ಲೇಬರ್ ಕಾಂಪೊನೆಂಟ್ 30 ಪರ್ಸೆಂಟ್ ಎಂದು ಮಾತ್ರ ಇರತಕ್ಕಂಥದ್ದು. 70 ಪರ್‌ಸೆಂಟ್ ಮೆಟೀರಿಯಲ್ ಸಪ್ಲೈಗೆ ಹೋಗುತ್ತೆ ಜೆ.ಆರ್.ವೈ.ನಲ್ಲಿ ಈ ಬರಗಾಲದ ಸ್ಥಿತಿಯಲ್ಲಿ ನೀವು ಕೃಷಿಕಾರ್ಮಿಕರಿಗೆ ಕೆಲಸ ಕೊಡಬೇಕೆಂದಾದರೆ ಅವರಿಗೆ ಕೂಲಿ ಕೊಡಬೇಕೆಂದಾದರೆ 70 ಪರ್‌ಸೆಂಟ್ ಮೆಟೀರಿಯಲ್ ಕಾಂಪೋನೆಂಟ್ ಇದ್ದರೆ ನೀವು ಕೂಲಿಯನ್ನು ಒದಗಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ಹಾಗೆಯೇ ಕುಡಿಯುವ ನೀರಿನ ವ್ಯವಸ್ಥೆಗೆ ಒಂದೊಂದು ತಾಲ್ಲೂಕಿಗೆ ತಕ್ಷಣ ಒಂದೊಂದು ಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಈ ಸಮಸ್ಯೆ ಪರಿಹಾರವಾಗಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಉತ್ತರ ಕೊಡಬೇಕು.

(ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ್ ಎಂ.ಮಾಮನಿ)ರವರು ಅಧ್ಯಕ್ಷ ಪೀಠವನ್ನಂಕಲರಿಸಿದರು)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಉಪಾಧ್ಯಕ್ಷರೆ, ಬಹಳ ಗಂಭೀರವಾದ ಸಮಸ್ಯೆ ಇದೆ. ನಿನ್ನೆ ಏನೇನು ವಿಷಯವನ್ನು ಹೇಳಿದ್ದೇವೆ, ಅದನ್ನು ಗಂಭೀರವಾಗಿ ಚಿಂತನೆ ಮಾಡಿ ಹೇಳಬೇಕಾಗುತ್ತದೆ. ನಾನು ರಾತ್ರಿಯಲ್ಲಾ ನಿದ್ದೆ ಮಾಡಿಲ್ಲವೇನೊ ಕಂದಾಯಮಂತ್ರಿಗಳು ಎಂದು ತಿಳಿದುಕೊಂಡಿದ್ದೆ. ಪೂರ್ತಿ ಬರಗಾಲದ ಬಗ್ಗೆ ಚಿಂತನೆ ಮಾಡಿ ದೊಡ್ಡದೊಂದು 10-12 ಪೇಜಿನ ಸ್ಟೇಟ್‌ಮೆಂಟನ್ನು ಕೊಡುತ್ತಾರೆ ಎಂದು ನಾವು ಕಾಯುತ್ತಾ ಇದ್ದವು. ಇದು ಏನಾಗಿದೆ ಯಾರೋ ಬರೆದುಕೊಟ್ಟಿರುವುದು ತಂದು ನಮಗೆ ಒಪ್ಪಿಸಿದಂತೆ ಆಗಿದೆ. ನಿನ್ನೆ ಅವರ್‍ಯಾರೋ ಸ್ನೇಹಿತರು ಹೇಳಿದರು, ಅವರ ಜಿಲ್ಲೆಯಲ್ಲೇ ಅತಿ ಬರಗಾಲ ಎಂದು. ನನಗನ್ನಿಸುತ್ತದೆ ಇವರಿಗೆ ಬರಗಾಲ ಇಲ್ಲ, ಜಿಲ್ಲೆಗೆ ಬರಗಾಲ ಇರಬಹುದು ಎಂದು ಅನ್ನಿಸುತ್ತದೆ. ಅದಕ್ಕೆ ಇವರು ಈ ರೀತಿಯ ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ನಿಜವಾಗಿ ಮೇವಿನ ಬಗ್ಗೆಯಾಗಲಿ, ವಲಸೆ ತಡೆಯುವುದರ ಬಗ್ಗೆಯಾಗಲಿ ಆಹಾರ ಭದ್ರತೆ ಬಗ್ಗೆಯಾಗಲೀ, ಮೇವಿನ ಬಗ್ಗೆಯಾಗಲಿ, ಆರೋಗ್ಯದ ಬಗ್ಗೆಯಾಗಲಿ ಜಿಲ್ಲಾವಾರು ಇಷ್ಟಿಷ್ಟು ಮಾಡಿದ್ದೇವೆ ಯಾವ ರೀತಿ ಆದೇಶ ಕೊಟ್ಟಿದ್ದೇವೆ ಎಂದು ಯಾವುದೇ ವಿಚಾರ ಇಲ್ಲ. ಒಟ್ಟಾರೆ ಸ್ಟೇಟ್‌ಮೆಂಟ್ ಹರಿಕಥೆ ದಾಸರು ಹೇಳಿದಂಗೆ 'ಮಾನವ ಜನ್ಮ ದೊಡ್ಡದು' ಮಾನವ ಜನ್ಮ ದೊಡ್ಡದು. ಇನ್ನು ಬರಗಾಲ ಖಾಯಂ ಎಂದು ಹೇಳಿ ಈ ರೀತಿ ಹೇಳಿದರೆ ನಾವೇನು

ಮಾಡುವುದು? ಅದರಿಂದ ಇದೇನೂ ಪ್ರಯೋಜನವಿಲ್ಲ. ದಯವಿಟ್ಟು ಪೂರ್ತಿ ಜಿಲ್ಲಾವಾರು ನಮಗೆ ಸ್ಟೇಟ್‌ಮೆಂಟನ್ನು ಮಾಡಿಕೊಡಬೇಕು. ಸುಮ್ಮನೆ ಈ ರೀತಿ ಲೆಟರ್ ಕೊಟ್ಟರೆ ಹೇಗೆ?

SRI B.I.PATIL (UCHGAON): Sir, In Khanapur and Belgaum taluks the crops are damaged and washed out due to heavry rains. The crops were damaged for the second time. The farmers want relief immediately. Kindly release relief immediately.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ (ಸದಲಗಾ): ಮಾನ್ಯ ಉಪಾಧ್ಯಕ್ಷರೆ, ಡಿ.ಸಿ.ಯವರಿಗೆ ನೀವು ಹಣವನ್ನು ಬಿಡುಗಡೆ ಮಾಡುತ್ತೀರಿ. ಅತಿವೃಷ್ಟಿ ಅನಾವೃಷ್ಟಿಯಲ್ಲಿ ಆ ಹಣವನ್ನು ಆ ಕ್ಷೇತ್ರಕ್ಕೆ ಕೆಲಸದ ಕಾಮಗಾರಿಗಳ ಸಲುವಾಗಿ ಹಣವನ್ನು ಬಿಡುಗಡೆ ಮಾಡುತ್ತೀರೋ ಅಥವಾ ಡಿ.ಸಿ.ಯವರು ಡಿಪಾಸಿಟ್ ಸಲುವಾಗಿ ಇದನ್ನು ಕಳುಹಿಸುತ್ತೀರೋ ಎಂದು ನಾನು ಕೇಳಬೇಕಾಗುತ್ತದೆ. ಏಕೆಂದರೆ 31-3-1997ಕ್ಕೆ ಬೆಳಗಾಂ ಡಿ.ಸಿ.ಯವರ ಹತ್ತಿರ 2 ಕೋಟಿ 12 ಲಕ್ಷ ರೂಪಾಯಿಗಳು ಅವರ ಹತ್ತಿರ ಇದೆ. ಸರ್ಕಾರದ ಕಡೆಯಿಂದ ಒಂದು ಸ್ಟೇಟ್‌ಮೆಂಟ್ ಬಂದಿದೆ. ಅದೇ ಪ್ರಕಾರ 18-8-97ರ ಸ್ಟೇಟ್‌ಮೆಂಟ್‌ನಲ್ಲಿ 1 ಕೋಟಿ 17 ಲಕ್ಷ ರೂಪಾಯಿಗಳು ಡಿ.ಸಿ.ಯವರ ಹತ್ತಿರ ಬಾಕಿ ಇದೆ. ಅತಿವೃಷ್ಟಿ ಮತ್ತು ಅನಾವೃಷ್ಟಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಬೆಳಗಾಂ ಡಿ.ಸಿ.ಯವರಿಗೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ಆ ದೃಷ್ಟಿಯಿಂದ ನಾನು ಕೇಳುತ್ತಿದ್ದೇನೆ, ಸರ್ಕಾರದ ಕಡೆಯಿಂದ ಹಣ ಬಿಡುಗಡೆಯಾಗುತ್ತದೆ. ಅತಿವೃಷ್ಟಿಯ ಬಗ್ಗೆ ನಮ್ಮ ಬಿ.ಐ.ಪಾಟೀಲರು ಹೇಳಿದರು, ಈಗ ನಮ್ಮ ಜಿಲ್ಲೆಯಲ್ಲಿ ಮಳೆ ಹೆಚ್ಚಾಗಿ ಸೋಯಾಬೀನ್ ಬೆಳೆ ಹೋಗಿದೆ, ಕಬ್ಬು ಹೋಗಿದೆ, ಸಾಕಷ್ಟು ರಸ್ತೆಗಳು ಇವತ್ತು ಕೆಟ್ಟು ನಿಂತಿವೆ. ಇವತ್ತು ಬೆಳಗಾಂ ಸಿಟಿಯಲ್ಲಿ ತಿರುಗಾಡುವ ಪರಿಸ್ಥಿತಿ ಇಲ್ಲ ಶಾಸಕರೇ ಆಗಲೀ, ಇವತ್ತು ಮಂತ್ರಿಗಳೇ ಆಗಲೀ, ಇವತ್ತು ನಮ್ಮ ಉಸ್ತುವಾರಿ ಸಚಿವರು ಬೆಳಗಾಂಗೆ ಭೇಟಿ ಕೊಟ್ಟರೆ ಅವರೇನು ಮಾಡುತ್ತಾರೆ ಎಂದರೆ ಸರ್ಕೀಟ್ ಹೌಸ್‌ಗೆ ಬಂದು ತಮ್ಮ ಕಾರನ್ನು ಬಿಟ್ಟು ಬೇರೆ ಒಂದು ಕಾರನ್ನು ತೆಗೆದುಕೊಂಡು ತಮ್ಮ ಮನೆಗೆ ಹೋಗುತ್ತಾರೆ. ಸ್ಟೇಟ್ ಕಾರಿನಲ್ಲಿ ಹೋದಾಗ ಜನರು ಕೇಳುತ್ತಾರೆಂದು. ಮಂತ್ರಿಗಳೇ, ರಸ್ತೆ ಯಾವ ಪರಿಸ್ಥಿತಿಯಲ್ಲಿದೆ ನೋಡಿ ಎಂದು ಕೇಳಬಹುದು. ಒಂದೊಂದು ಮೊಳ ತಗ್ಗುಗಳು ಬಿದ್ದಿದೆ. ಆ ದೃಷ್ಟಿಯಿಂದ ನಾನು ಕೇಳುತ್ತಿದ್ದೇನೆ. ಬೆಳಗಾಂ ಜಿಲ್ಲೆಗೆ ರಸ್ತೆಗಳನ್ನು ಸುಧಾರಣೆ ಮಾಡಲಿಕ್ಕೆ, ಬೆಳೆಗಳು ಏನು ನಾಶವಾಗಿದೆ, ಅದಕ್ಕೆ ಹಣ ಬಿಡುಗಡೆ ಮಾಡುವ ವ್ಯವಸ್ಥೆಯಾಗಬೇಕು. ನನ್ನ ಮತಕ್ಷೇತ್ರದಲ್ಲಿ ಮಾಂಗೂರು ಮತ್ತು ಕುನ್ನೂರು ಎರಡು ಗ್ರಾಮಗಳು ಬರುತ್ತವೆ. ಆ ಎರಡು ಗ್ರಾಮಗಳಿಗೆ ದೂದ್‌ಗಂಗಾ ನದಿ ಸುತ್ತುವರಿಯುವುದರಿಂದ ಕಳೆದ 15 ದಿವಸಗಳಿಂದ 20 ದಿವಸಗಳವರೆಗೆ ಶಾಲೆಗೆ ಮಕ್ಕಳು ಹೋಗಿಲ್ಲ. ಜನರು ಕೂಡ

ಹೊರಗೆ ಹೋಗಿಲ್ಲ. ಆದ್ದರಿಂದ ರಸ್ತೆಗಳನ್ನು ಸುಧಾರಿಸುವ ಸಲುವಾಗಿ ಹಣವನ್ನು ಬಿಡುಗಡೆ ಮಾಡಬೇಕು. ನಿಮಗೆ ಸಾಕಷ್ಟು ಮನವಿಗಳನ್ನು ಕೊಟ್ಟಿದ್ದೇವೆ. ವಿಶೇಷವಾಗಿ ಬೆಳಗಾಂನಲ್ಲಿ ಏನು ರಸ್ತೆಗಳು ಕೆಟ್ಟಿವೆ, ಅವುಗಳನ್ನು ಸುಧಾರಿಸುವ ಸಲುವಾಗಿ ಹಣವನ್ನು ಬಿಡುಗಡೆ ಮಾಡಿ.

ಉಪಾಧ್ಯಕ್ಷರು: ಹೇಳುತ್ತಾರೆ, ತಾವು ಕುಳತುಕೊಳ್ಳಿ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಮಾನ್ಯ ಉಪಾಧ್ಯಕ್ಷರೆ, ತಾವು ಕೂಡ ಬೆಳಗಾಂ ಜಿಲ್ಲೆಯವರು ಇದ್ದೀರಿ. ಬರೀ ತಲೆ ಆಡಿಸಬೇಡಿ. ಮಂದಿ ಏನು ಮಾತನಾಡುವುದಕ್ಕೆ ಹತ್ತಿದ್ದಾರೆ, ಸ್ವಲ್ಪ ನೋಡಿ.

ಉಪಾಧ್ಯಕ್ಷರು: ಆಯಿತು. ನಿನ್ನೆ ಎಲ್ಲಿಗೆ ಹೋಗಿದ್ದೀರಿ ತಾವು.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಆಯಿತು ಎಂದರೆ ಹೇಗೆ ಸಾರ್?

ಉಪಾಧ್ಯಕ್ಷರು: ನಿನ್ನೆ ಇದರ ಬಗ್ಗೆ ಸವಿಸ್ತಾರವಾಗಿ ಚರ್ಚೆ ಆಯಿತು. ಆ ಟೈಮ್‌ನಲ್ಲಿ ತಾವು ಎಲ್ಲಿಗೆ ಹೋಗಿದ್ದರಿ? ನಿನ್ನೆ ಏಕೆ ತಾವು ಸದನದಲ್ಲಿರಲಿಲ್ಲ? ನಿನ್ನೆ ತಾವು ಏಕೆ ಇರಲಿಲ್ಲ? ಈ ವಿಷಯ ಚರ್ಚೆಯಾದಾಗ. 20 ಜನ ಮಾತನಾಡಿದ್ದಾರೆ ನಿನ್ನೆ. ನೀವು ಎಲ್ಲಿಗೆ ಹೋಗಿದ್ದರಿ. ತಾವು ಎಲ್ಲಿದ್ದರಿ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಲ್ಲಿನ ಪರಿಸ್ಥಿತಿ ನೋಡಿ ಬರುವುದಕ್ಕೆ ಹೋಗಿದ್ದರು.

ಉಪಾಧ್ಯಕ್ಷರು: ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಏನಾದರೂ ಒಂದು ಆದೇಶ ಮಾಡಿಸಿ

ಉಪಾಧ್ಯಕ್ಷರು: ಅವರು ಹೇಳಿಕೆ ಕೊಟ್ಟಮೇಲೆ ನಾನು ಆದೇಶ ಮಾಡಬೇಕಲ್ಲಾ. ಅವರೂ ಇನ್ನೂ ಹೇಳಿಕೆಯನ್ನು ಕೊಟ್ಟಿಲ್ಲ. ದಯಮಾಡಿ ಕೂಡಿ.

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಉಪಾಧ್ಯಕ್ಷರೇ, ನೀವು ಈಗಾಗಲೇ ಹೇಳಿದಿರಿ, 20ಜನ ಸದಸ್ಯರು ಚರ್ಚೆ ಮಾಡಿದ್ದಾರೆ, ಸಾಕಷ್ಟು ಚರ್ಚೆ ಮಾಡಿದ್ದಾರೆ ಎಂದು ಹೇಳಿ. ಆದರೆ ಆ ಚರ್ಚೆಯನ್ನು ಇವರು ಕೂಲಂಕುಷವಾಗಿ ಅಧ್ಯಯನ ಮಾಡಿಯೇ ಇಲ್ಲ ಎಂದು ಇಲ್ಲಿ ತೋರಿಸುತ್ತಿದೆ. ವಿವಿಧ ಇಲಾಖೆಗಳಲ್ಲಿ ಲೋಕೋಪಯೋಗಿ ಇಲಾಖೆ ವ್ಯವಸಾಯ ಇಲಾಖೆ ಬೇರೆ ಬೇರೆ ಇಲಾಖೆಗಳಲ್ಲಿ ಅತಿವೃಷ್ಠಿಯಿಂದ ಆದಂಥ ಹಾನಿಯ ಅಸೆಸ್‌ಮೆಂಟ್ ಆಗಿದೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದಲೇ 21 ಕೋಟಿ ರೂಪಾಯಿಗಳ ಒಂದು ಎಸ್ಟಿಮೇಟ್ ಅಲ್ಲಿಗೆ ಹೋಗಿದೆ. ಮೈನರ್ ಇರಿಗೇಷನ್

ಡಿಪಾರ್ಟ್‌ಮೆಂಟ್‌ಗೆ 5 ಕೋಟಿ ರೂಪಾಯಿಗಳ ಎಸ್ಟಿಮೇಟ್ ಹೋಗಿದೆ. ಇದರ ಬಗ್ಗೆ ಸ್ಪೆಸಿಫಿಕ್ ಆಗಿ ಯಾವುದೇ ಉತ್ತರ ಕೊಡದೆ ಹಾರಿಕೆಯ ಉತ್ತರ ಕೊಟ್ಟರೆ ಏನು? ನಿನ್ನೆ ನಾವು 5 ಗಂಟೆ ಇಲ್ಲಿ ಚರ್ಚೆ ಮಾಡಿದ್ದು ನಮ್ಮ ನಾಲಗೆ ತೀಟೆ ತೀರಿಸಲಿಕ್ಕೆ ಅಲ್ಲ. ಇದೊಂದು ಸದನ. ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಹಾರಿಕೆಯ ಉತ್ತರ ಕೊಡುವುದಾದರೆ ಇದು ಬೇಜವಾಬ್ದಾರಿ ಉತ್ತರ ಎಂದು ಹೇಳಬಯಸುತ್ತೇನೆ.

ಉಪಾಧ್ಯಕ್ಷರು: ಕಾಶಪ್ಪನವರು ಎರಡು ನಿಮಿಷ ಕೇಳುತ್ತಾರೆ. ಸುದೀರ್ಘವಾಗಿ ಭಾಷಣ ಮಾಡುವ ಹಾಗೆ ಇಲ್ಲ. ಕ್ಲಾರಿಫಿಕೇಷನ್ ಏನಾದರೂ ಕೇಳುವುದು ಇದ್ದರೆ ಕೇಳಿ.

ಶ್ರೀ ಎಸ್.ಆರ್.ಕಾಶಪ್ಪನವರ್ (ಹುನಗುಂದ): ಮಾನ್ಯ ಉಪಸಭಾಧ್ಯಕ್ಷರೇ, ಈ ನಿಸರ್ಗ ವಿಕೋಪಕ್ಕೆ ತುತ್ತಾಗಿ ನಮ್ಮ ಬಿಜಾಪುರ ಜಿಲ್ಲೆಯಲ್ಲಂತೂ ಸಂಪೂರ್ಣ ಬರಗಾಲ ಪರಿಸ್ಥಿತಿ ಇದೆ ಎನ್ನುವ ವಿಷಯವಾಗಿ ನಿನ್ನೆ ಸದನದಲ್ಲಿ ರೂಲಿಂಗ್ ಪಾರ್ಟಿಯ ಸದಸ್ಯರಾಗಿರುವ ಶಿವಾನಂದ್ ಅವರು ಒಳ್ಳೆಯ ಮುಜುಗರವನ್ನು ಉಂಟುಮಾಡಿದರು ಎಂದು ಹೇಳಲಿಕ್ಕೆ ನನಗೆ ಸಂತೋಷವೆನಿಸುತ್ತದೆ. ಏಕೆಂದರೆ ಅಲ್ಲಿಯ ಪರಿಸ್ಥಿತಿ ಯಾರೂ ಕೂಡ ಗಂಭೀರವಾದ ಪರಿಸ್ಥಿತಿ ಇದೆ, ಜನರಿಗೆ ಚಿಂತಾಜನಕ ಪರಿಸ್ಥಿತಿ ಇದೆ, ಅದನ್ನು ಸದನಕ್ಕೆ ರೂಲಿಂಗ್ ಪಾರ್ಟಿಯ ಸದಸ್ಯರಾಗಿಯೂ ಕೂಡ ಇವತ್ತಿನ ದಿವಸ ಸರ್ಕಾರದ ಬಗ್ಗೆ ಅವರು ಯಾವುದನ್ನು ತಿಳಿದುಕೊಳ್ಳದೆ ಹೇಳಿದರು, ಅದು ನಿಜವಾಗಿಯೂ ಸತ್ಯ ಇದೆ. ಇವತ್ತು ಬಿಜಾಪುರ ಜಿಲ್ಲೆ ಶಾಶ್ವತವಾಗಿ ಬರಗಾಲ ಪ್ರದೇಶ ಎಂದು ತಿಳಿದುಕೊಳ್ಳಬೇಕಾಗಿರುವುದು, ರಾಜ್ಯದಲ್ಲಿ...

ಶ್ರೀ ಅಜಯ್ ಕುಮಾರ್ ಸರ್ ನಾಯಕ್: ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸದಸ್ಯರಿಗೆ ತಾವು ಇನ್ನೂ ಬಾಗಲಕೋಟಿ ಜಿಲ್ಲೆಯಲ್ಲಿ ಇದ್ದೀರಿ, ಇನ್ನು ಬಿಜಾಪುರ ಜಿಲ್ಲೆಯಲ್ಲಿ ಇಲ್ಲ.

ಶ್ರೀ ಎಸ್.ಆರ್.ಕಾಶಪ್ಪನವರ್: ಸಂತೋಷ. ತಾವು ಹೇಳುವ ಮಾತನ್ನು ಇನ್ನು ಆಡಳಿತದ ಯಾವುದೇ ವ್ಯವಸ್ಥೆಯನ್ನು ಒಂದು ಕಡತ ಕೂಡ ಇನ್ನೂ ಬಾಗಲಕೋಟೆಗೆ ಬಂದಿಲ್ಲ ಎನ್ನುವುದನ್ನು ಅಜಯ್‌ಸರ್‌ನಾಯಕ್‌ರವರು ಅರಿತುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಉಪಾಧ್ಯಕ್ಷರು: ಕಾಶಪ್ಪನವರೇ, ಕ್ಲಾರಿಫಿಕೇಷನ್ ಕೇಳಿ. ತಾವು ಸುದೀರ್ಘವಾಗಿ ಭಾಷಣ ಮಾಡುವ ಹಾಗೆ ಇಲ್ಲ. ಸಾಕಷ್ಟು ನಿನ್ನೆ ಅವಕಾಶವನ್ನು ಕೊಟ್ಟಿದ್ದೇವೆ. ಏನಾದರೂ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಸ್.ಆರ್.ಕಾಶಪ್ಪನವರ್: ನಮ್ಮ ಬಾಗಲಕೋಟೆ ಜಿಲ್ಲೆಯವರಿಗೆ ಇನ್ನೂ

ಅವಕಾಶವನ್ನೇ ಕೊಟ್ಟಿಲ್ಲ. ಇವತ್ತೇನು ಅಲ್ಲಿ ಪರಿಸ್ಥಿತಿ ಇದೆ ಎಂದರೆ ಕಳೆದ ವರ್ಷ ಸಹಿತ ಏನು ಫ್ಲಡ್ ಆಗಿ ರಸ್ತೆಗಳು ಹಾಳಾಗಿದೆ, ಇವತ್ತಿನವರೆಗೂ ಬಿಜಾಪುರ ಜಿಲ್ಲೆ, ಬಾಗಲಕೋಟೆ ಜಿಲ್ಲೆಗಳಲ್ಲಿ ಒಂದು ರೂಪಾಯಿ ಕೂಡ ಖರ್ಚು ಮಾಡಿಲ್ಲ. ಇವತ್ತು ಎಷ್ಟೋ ರಸ್ತೆಗಳು ಹಾಳಾಗಿ ಹೋಗಿದ್ದಾವೆ. ಅಷ್ಟೇ ಅಲ್ಲ, ನಮ್ಮಲ್ಲಿ ಮಳೆ ಇಲ್ಲದೆ ಈಗಾಗಲೇ ಕಾರೀಫ್ ಪೀಕಂತೂ ಸಂಪೂರ್ಣವಾಗಿ ಫೇಲಾಗಿ ಹೋಯಿತು. ಇನ್ನು ಮೇಲೆ ಮಳೆ ಆದರೂ ಸಹ ಅಲ್ಲಿ ಬಿತ್ತನೆ ಮಾಡುವುದಕ್ಕೆ ಸಾಧ್ಯ ಇಲ್ಲ, ಬೆಳೆ ಬೆಳೆಯುವುದಕ್ಕೂ ಸಾಧ್ಯ ಇಲ್ಲ. ಜನರು ಗುಳೆ ವಲಸೆ ಏನು ಹೋಗುತ್ತಾ ಇದ್ದಾರೆ ಅವರಿಗೆ ಹೋಗುವಾಗ ಅವರ ಸ್ಥಾವರ ಮತ್ತು ಜಂಗಮ ಆಸ್ತಿಯನ್ನು ತೊರೆದು ಹೋಗಬೇಕಾಗುತ್ತದೆ. ಹಾಗೆ ಹೋಗುವಂತಹ ಪರಿಸ್ಥಿತಿಯಲ್ಲಿ ಇವತ್ತು ಅವರು ಗೋವಾಗೆ ಹೋಗಲಿ, ಮಂಗಳೂರಿಗೆ ಹೋಗಲಿ, ಬಾಂಬೆಗೆ ಹೋಗಲಿ, ಅವರು ಹೋದ ಕೂಡಲೇ ತಕ್ಷಣ ಅವರಿಗೆ ಕೆಲಸ ದೊರೆಯುವುದಿಲ್ಲ. ಅವರು ಅಲ್ಲಿಗೆ ಹೋದ ಮೇಲೆ, ಏನಂದರೆ....

ಉಪಾಧ್ಯಕ್ಷರು: ನೀವು ಅವರಿಗೆ ಏನು ಮಾಡಬೇಕು ಎಂದು ಸಲಹೆ ಕೊಡಿ.

ಶ್ರೀ ಶಿವಶಂಕರಪ್ಪ ರಾಚಪ್ಪ ಕಾಶಪ್ಪನವರ್: ಈಗ ನಾನು ಸಲಹೆಯನ್ನೇ ಕೊಡುತ್ತಿರುವುದು. ಅದೇನೆಂದರೆ, ಅಲ್ಲಿಗೆ ಹೋದವರು ಬಹುತೇಕ ಜನ ರಸ್ತೆ ಮೇಲೆ, ಫುಟ್‌ಪಾತ್ ಮೇಲೆ ಮಲಗಿದಾಗ ಪೊಲೀಸರ ಅತಿಥಿ ಆಗುವಂತಹ ಉದಾಹರಣೆ, ಕರುಣಾಜನಕ ಪರಿಸ್ಥಿತಿ ಸಾಕಷ್ಟು ಆಗುತ್ತಾ ಇದೆ.

ಉಪಾಧ್ಯಕ್ಷರು: ಸನ್ಮಾನ್ಯ ಕಾಶಪ್ಪನವರೆ, ಇಲ್ಲಿ ಅವರು ಏನು ಮಾಡಬೇಕೆಂದು ಹೇಳಿ, ಬಾಂಬೆಗೆ ಹೋಗಿದ್ದು ಬೇಡ, ಇಲ್ಲಿ ಏನು ಮಾಡಬೇಕು ಅದನ್ನು ಹೇಳಿ.

ಶ್ರೀ ಶಿವಶಂಕರಪ್ಪ ರಾಚಪ್ಪ ಕಾಶಪ್ಪನವರ್: ಅದಕ್ಕೆ ಸಂಬಂಧ ಇದೆಯೆಂದೇ ನಾನು ಈ ವಿಷಯವನ್ನು ಹೇಳುತ್ತಿರುವುದು. ಇದೂವರೆವಿಗೂ ಏನಾಗಿದೆ ಎಂದರೆ, ಇನ್ನು ಬ್ರಿಟೀಷರ ಕಾಲದ ಪದ್ಧತಿಯನ್ನೇ ಮುಂದುವರೆಸಿಕೊಂಡು ಬರುತ್ತಾ ಇದ್ದೇವೆ. ಬ್ರಿಟೀಷ್ ಕಾಲದ ಪದ್ಧತಿ ಅಂದರೆ ವಸಾಹತುಶಾಹಿ ವ್ಯವಸ್ಥೆ ನಮ್ಮಲ್ಲಿ ಇದೆ. ಇವತ್ತಿನ ತನಕ ಪಾಲಿಸಿ ಮೇಕರ್ಸ್ ಯಾರು ಅಂದರೆ ಸದನ ಆಗಬೇಕು, ಸರ್ಕಾರ ಆಗಬೇಕು. ಸದನ ಮತ್ತು ಸರ್ಕಾರ ಇವತ್ತಿನ ದಿವಸ ಪಾಲಿಸಿ ಮೇಕರ್ಸ್ ಆಗದೆ, ಅಧಿಕಾರಿಗಳು ಏನು ಹೇಳುತ್ತಾ ಇದ್ದಾರೆ, ಅದನ್ನೇ ನಾವು ಜಿಲ್ಲಾಧಿಕಾರಿಗಳ ಮೇಲೆ ನಾವು ಡಿಪೆಂಡ್ ಆಗಿದ್ದೇವೆ, ಜಿಲ್ಲಾಧಿಕಾರಿಗಳು ಹೇಳುತ್ತಾ ಇದ್ದಾರೆ ಬಿಜಾಪುರ ಮತ್ತು ಬಾಗಲುಕೋಟೆ, ಎರಡೂ ಜಿಲ್ಲೆ ಸೇರಿ ಕುಡಿಯುವ ನೀರಿಗಾಗಿ ಮುವತ್ತೊಂಭತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಬಿಜಾಪುರ ಜಿಲ್ಲೆ ಮತ್ತು ಬಾಗಲಕೋಟೆಯ ಉಸ್ತುವಾರಿ ಸಚಿವರು ಇದೂವರೆವಿಗೂ ನೇಮಕ ಆಗಿಲ್ಲವೆಂದು ನಾನು ಭಾವಿಸುತ್ತೇನೆ. ಸನ್ಮಾನ್ಯ ಶ್ರೀ ರಮೇಶ್ ಜಿಗಜಿಣಗಿ ಅವರು ನಮ್ಮ ಜಿಲ್ಲೆಯವರೇ ಅವರು ಕಂದಾಯ ಸಚಿವರು ಆಗಿದ್ದರೂ ಸಹ,

ಇದರ ಬಗ್ಗೆ ಗಮನ ಹರಿಸಿಲ್ಲ. ಇವತ್ತಿನ ದಿವಸ ನನ್ನ ಕ್ಷೇತ್ರದಲ್ಲಿಯೇ ಚಿಕ್ಕಯಾದಾಪುರ ಎಂಬ ಗ್ರಾಮ ಇದೆ, ನಮಗೆ ಇವತ್ತಿನ ದಿವಸ 50ನೇ ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಆಚರಿಸುವಂತಹ ಸಂದರ್ಭದಲ್ಲಿ ಸಹ ಒಂದು ಕುಡಿಯುವ ನೀರಿನ ಯೋಜನೆ ಇಲ್ಲ ಅಲ್ಲಿ....

ಉಪಾಧ್ಯಕ್ಷರು: ಸನ್ಮಾನ್ಯ ಖರ್ಗೆ ಅವರೆ, ಅವರು ಭಾಷಣ ಮಾಡುವುದಕ್ಕೆ ನಿಂತರೆ ಹೇಗೆ, ಇಲ್ಲಿ ಬಿಸಿನೆಸ್ ನಡೆಯುತ್ತಾ ಇದೆ. ನಿನ್ನೆ ದಿವಸ 20 ಜನ ನಿಯಮ 69ರ ಕೆಳಗೆ ಇದನ್ನು ತೆಗೆದುಕೊಂಡು ಮೂರೂವರೆ ತಾಸು, ನಾಲ್ಕು ತಾಸು ಇದರ ಬಗ್ಗೆ ಚರ್ಚೆಯಾಗಿದೆ. ಈಗ ನೀವು ಕ್ಲಾರಿಫಿಕೇಷನ್ ಕೇಳಿ, ಸಲಹೆ ಕೊಡಿ, ಅದು ಬಿಟ್ಟು ಉದ್ದುದ್ಧ ಭಾಷಣ ಮಾಡಿದರೆ ಹೇಗಾಗುತ್ತದೆ?

ಶ್ರೀ ಶಿವಶಂಕರಪ್ಪ ರಾಚಪ್ಪ ಕಾಶಪ್ಪನವರ್: ನಾನು ನನ್ನ ಕ್ಷೇತ್ರದ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು: ಅದಕ್ಕೋಸ್ಕರವೇ ನಾನು ಹೇಳುವುದು, ನಿಮ್ಮ ಕ್ಷೇತ್ರಕ್ಕೆ ಏನು ಬೇಕು ಅದನ್ನು ಹೇಳಿ.

ಶ್ರೀ ಶಿವಶಂಕರಪ್ಪ ರಾಚಪ್ಪ ಕಾಶಪ್ಪನವರ್: ಅಲ್ಲ ನೀವು ಒಂದೇ ಒಂದು ಕರುಣಾಜನಕ ಪರಿಸ್ಥಿತಿ ಬಗ್ಗೆ ಕೇಳುವುದಕ್ಕೆ ತಯಾರು ಇಲ್ಲಾ ಅಂದರೆ ಹೇಗೆ? ದಯವಿಟ್ಟು ಕೇಳಿ. ಈಗ ಚಿಕ್ಕಯಾದಾಪುರ ಎಂಬ ಗ್ರಾಮದಲ್ಲಿ ಇವತ್ತಿನವರೆವಿಗೂ ಒಂದು ಗೋಕಟ್ಟೆ ಆಗಿದೆ, ಗೋಕಟ್ಟೆ ಬಿಟ್ಟರೆ ಬೇರೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಅದು ಒಂದು ಗ್ರಾಮಕ್ಕೂ ಕೂಡ ಸಾಕಾಗುವುದಿಲ್ಲ, ಅಷ್ಟೊಂದು ಫಂಡನ್ನು ರಿಲೀಸ್ ಮಾಡಿದ್ದಾರೆ. ಇವತ್ತು ಬರಗಾಲದ ಪರಿಸ್ಥಿತಿ ಬಂದಾಗ ಕೇಂದ್ರ ಸರ್ಕಾರದಿಂದ ತಾವು ಎಷ್ಟು ಹಣವನ್ನು ಪಡೆದಿದ್ದೀರಿ? ಬರಗಾಲದ ಪರಿಸ್ಥಿತಿ ಬಂದ ಕೂಡಲೇ ಕೇಂದ್ರ ಸರ್ಕಾರ ನೆರವಿಗೆ ಬರುತ್ತದೆ. ಇವತ್ತು ರಾಜ್ಯ ಸರ್ಕಾರ ಮುಂದಾಗಿ ಖರ್ಚು ಮಾಡಬೇಕಾಗುತ್ತದೆ. ಏಕೆಂದರೆ ನಿಸರ್ಗದ ವಿಕೋಪಕ್ಕೆ ತುತ್ತಾದಾಗ ಸರ್ಕಾರ ಮುಂದಾಗಿ ಸಮರೋಪಾದಿಯಲ್ಲಿ ಕೆಲಸ ಮಾಡಬೇಕು. ಇಷ್ಟು ದಿವಸ ಆದರೂ ಕೂಡ ಐದು ಕಿ.ಮೀ.ನವರೆಗೆ ಕೆಲಸ ಪ್ರಾರಂಭ ಮಾಡಬೇಕು ಎಂದು ಅನೇಕ ಜನ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೂ ಸಹ, ಅದರ ಮೇಲೆ ತೆಗೆದುಕೊಂಡಂತಹ ಕ್ರಮ ಏನು ಎಂದರೆ, ಏನೂ ಇಲ್ಲ. ಆದ್ದರಿಂದ ಜನರಿಗೆ ಏನು ಅನ್ನಿಸುತ್ತಾ ಇದೆ ಎಂದರೆ, ಸರ್ಕಾರ ಇದೆಯೋ ಅಥವಾ ಇಲ್ಲವೋ ಎಂಬ ಪರಿಸ್ಥಿತಿ ಉಂಟಾಗಿದೆ. ಆದಕಾರಣ, ಸನ್ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಈ ಬರಗಾಲ ಕಾಮಗಾರಿಗಳನ್ನು ಬೇಗ ತೆಗೆದುಕೊಳ್ಳಬೇಕು, ಗೋಶಾಲೆಗಳನ್ನು ಪ್ರಾರಂಭ ಮಾಡಬೇಕು, ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ನಾನು ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷರು: ದಯಮಾಡಿ ಸನ್ಮಾನ್ಯ ಕಾಶಪ್ಪನವರ್‌ರವರು ಕುಳಿತುಕೊಳ್ಳಬೇಕು. ಕಂದಾಯ ಸಚಿವರು ಉತ್ತರ ಹೇಳಿ.

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು): ಸರ್ಕಾರ ಇದನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತಾ ಇದೆ. ನಾನು ಸನ್ಮಾನ್ಯ ಎಲ್ಲಾ ಸದಸ್ಯರಿಗೂ ಮನವಿ ಮಾಡಿಕೊಳ್ಳುತ್ತೇನೆ. ಇದರಲ್ಲಿ ಯಾವುದೇ ರೀತಿಯ ಮುಚ್ಚು ಮರೆ ಇಲ್ಲ. ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಮೊಟ್ಟಮೊದಲನೆಯದಾಗಿ ಕೇಳಿಕೊಳ್ಳುತ್ತೇನೆ, ಇದರಲ್ಲಿ ಯಾರೂ ರಾಜಕಾರಣ ಮಾಡುವುದು ಬೇಡ. ಸನ್ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಾ ಜಿಲ್ಲೆಯ ಶಾಸಕರು ತಮ್ಮ ಅಭಿಪ್ರಾಯಗಳನ್ನು ಮುಖ್ಯ ಮಂತ್ರಿಗಳ ಹತ್ತಿರ ಹೇಳಿ, ನಮ್ಮ ಹತ್ತಿರ ಹೇಳಿ, ಎಲ್ಲರೂ ಕೂಡಿ ಜನರಿಗೆ ಒಳ್ಳೆಯದಾಗುವಂತಹ ಕೆಲಸ ಮಾಡೋಣ ಎಂದು. ಏಕೆಂದರೆ ಇದರಲ್ಲಿ ಯಾವುದೇ ರೀತಿಯ ಮುಚ್ಚುಮರೆ ಇಲ್ಲ. ಸನ್ಮಾನ್ಯ ಉಪಸಭಾಪತಿಯವರೆ, ಹೋದ ಸಲ ಕೇಂದ್ರಸರ್ಕಾರಕ್ಕೆ ನಾನೇ ಹೋಗಿ ಒಂದು ಮೆಮೋರೆಂಡಂ ಕೊಟ್ಟು ಬಂದಿದ್ದೆ. ಅದೂ ಅಲ್ಲದೆ ಇನ್ನೂ ಮೂರು ಸಲ...

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ದಯಮಾಡಿ ಹೇಳುತ್ತೇನೆ, ಇದು ಒಂದು ರೀತಿಯ ಹೊಸ ಕೆಟ್ಟ ಸಂಪ್ರದಾಯವಾಗಿದೆ. ಏನೆಂದರೆ ಸದನ ನಡೆಯುತ್ತಾ ಇದೆ, ನಾವೆಲ್ಲಾ ನಿನ್ನೆ ದಿವಸ ಮಾತನಾಡಿದ್ದೇವೆ, ಮುಖ್ಯ ಮಂತ್ರಿಗಳನ್ನು ಕರೆದು ಮಾತನಾಡುವುದು ಆಮೇಲೆ, ಈಗ ಸದನದಲ್ಲಿ...

ಉಪಾಧ್ಯಕ್ಷರು: ಅವರ ಉತ್ತರ ಮುಗಿಯುವವರೆಗಾದರೂ ಕೇಳಿ, ಅವರ ಉತ್ತರ ಇನ್ನೂ ಮುಗಿದಿಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಉತ್ತರ ಕೊಡಲಿ ಸ್ವಾಮಿ, ಮುಖ್ಯಮಂತ್ರಿಗಳನ್ನು ಕರೆಯುತ್ತೇವೆ, ಮಾತನಾಡೋಣ ಅಂದರೆ, ನಾವು ಅಲ್ಲಿಗೆ ಬರುವುದಿಲ್ಲ. ನೀವು ಸ್ಪಷ್ಟವಾಗಿ ಉತ್ತರ ಕೊಡಿ. ನಿನ್ನೆ ದಿವಸವೆಲ್ಲಾ ಮಾತನಾಡಿದ್ದೇವೆ, ರೆಕಾರ್ಡ್ ಇದೆ, ಬೇಕಾದರೆ ತರಿಸಿ ನೋಡಿ. ಅವರು ಯಾವುದೇ ಪ್ರಶ್ನೆಗೂ ಉತ್ತರ ಕೊಟ್ಟಿಲ್ಲ.

ಉಪಾಧ್ಯಕ್ಷರು: ದಯವಿಟ್ಟು ತಾವು ಉತ್ತರ ಮುಗಿಯುವವರೆವಿಗೆ ಸಮಾಧಾನದಿಂದ ಕೇಳಿ.

ಶ್ರೀವಾಟಾಳ್ ನಾಗರಾಜ್: ಸದನ ಇಲ್ಲಿ ನಡೆಯುವಾಗ ಬೇರೆ ಕಡೆ ಸಭೆ ನಡೆಸುವುದು ಅಂದರೆ ಏನು? ಈ ಸದನದಲ್ಲೇ ಅವರು ಹೇಳಬೇಕು.

ಉಪಾಧ್ಯಕ್ಷರು: ಅವರು ಉತ್ತರವನ್ನು ಹೇಳುತ್ತಿದ್ದಾರೆ, ಅದು ಮುಗಿಯುವವರೆವಿಗೂ ಕೇಳಿ ದಯಮಾಡಿ.

ಶ್ರೀ ರಮೇಶ್ ಸಿ.ಜಿಗಜಿಣಗಿ: ಸನ್ಮಾನ್ಯ ಉಪಾಧ್ಯಕ್ಷರೆ, ಇದೂವರೆವಿಗೂ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ತಮಗೆ ಕಳುಹಿಸಿಕೊಡುತ್ತೇನೆ.

(ಗೊಂದಲ)

ಮಾನ್ಯ ಸದಸ್ಯರು: ನೀವು ಅದನ್ನು ಸದನಕ್ಕೆ ಕೊಡಬೇಕು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ವಿವರ ಕೊಡಿ ಎಂದರೆ, ನಿಮಗೆ ಕಳುಹಿಸಿ ಕೊಡುತ್ತೇನೆ ಎಂದರೆ... ಅದನ್ನು ನಾವು ಅವರಿಂದ ನಿರೀಕ್ಷೆ ಮಾಡಿರಲಿಲ್ಲ.

ಉಪಾಧ್ಯಕ್ಷರು: ದಯವಿಟ್ಟು ತಾವು ಕುಳಿತುಕೊಳ್ಳಿ. ಅವರು ವಿವರವನ್ನು ಹೇಳುತ್ತಾರೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಅವರು ಪೂರ್ಣ ಉತ್ತರ ಕೊಡುವುದಕ್ಕೆ ಬಿಡಲೇ ಇಲ್ಲ.

ಉಪಾಧ್ಯಕ್ಷರು: ಅದನ್ನೇ ನಾನು ಹೇಳುತ್ತಿದ್ದೇನೆ. ಅವರ ಉತ್ತರ ಮುಗಿಯುವವರೆಗಾದರೂ ಸಮಾಧಾನದಿಂದ ಕುಳಿತುಕೊಳ್ಳಿ ಎಂದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಸಿದ್ಧರಾಮಯ್ಯ: ಪ್ರತಿಯೊಂದಕ್ಕೂ ಅವರು ಕ್ಲಾರಿಫಿಕೇಷನ್ ಕೇಳುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಂಕಿ ಅಂಶಗಳ ವಿವರದ ಪ್ರತಿಯನ್ನು ಉಪಾಧ್ಯಕ್ಷರಿಗೂ ಕೊಡಿ, ಮತ್ತು ನಮ್ಮೆಲ್ಲರಿಗೂ ಅದರ ಪ್ರತಿಯನ್ನು ಕೊಡಿ.

ಉಪಾಧ್ಯಕ್ಷರು: ತಾವು ದಯವಿಟ್ಟು ಕುಳಿತುಕೊಳ್ಳಿ, ಉಪ ಮುಖ್ಯಮಂತ್ರಿಗಳು ಏನೋ ಹೇಳುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸನ್ಮಾನ್ಯ ನಾಗೇಗೌಡರೆ, ಅವರು ಅಂಕಿ ಅಂಶ ಕೊಟ್ಟರೆ ತಾನೇ ನಾವು ಏನಾದರೂ ಹೇಳಬಹುದು.

ಶ್ರೀ ಕೆ.ಎನ್.ನಾಗೇಗೌಡ: ಸಾರ್, ಅವರು ಜಿಲ್ಲಾವಾರು ಪಟ್ಟಿಯನ್ನು ಇಟ್ಟುಕೊಂಡಿದ್ದಾರೆ, ಅವರು ಹೇಳುತ್ತಾರೆ, ತಾವು ಕೇಳಿ, ಇನ್ನೊಂದು ಹತ್ತು ನಿಮಿಷ ಟೈಂ ಕೊಡಿ.

ಉಪಾಧ್ಯಕ್ಷರು: ವಿವರವಾಗಿ ಜಿಲ್ಲಾವಾರು ವಿವರ ಹೇಳಿ.

ಶ್ರೀ ರಮೇಶ್ ಸಿ.ಜಿಗಜಿಣಗಿ: ಸನ್ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ಅರ್ಬನ್‌ಗೆ ಹದಿನೈದು ಲಕ್ಷ ಬೆಂಗಳೂರು ರೂರಲ್‌ಗೆ ಐವತ್ತು ಲಕ್ಷ, ಕೋಲಾರಕ್ಕೆ ಒಂದು ಕೋಟಿ ಐದು ಲಕ್ಷ. ತುಮಕೂರಿಗೆ ಎಂಭತ್ತೈದು ಲಕ್ಷ, ಚಿತ್ರದುರ್ಗಕ್ಕೆ ಒಂದು ಕೋಟಿ ಎಪ್ಪತ್ತೈದು ಲಕ್ಷ, ಮೈಸೂರಿಗೆ ಒಂದು ಕೋಟಿ ನಲವತ್ತೈದು ಲಕ್ಷ, ಮಂಡ್ಯಕ್ಕೆ ನಲವತ್ತು ಲಕ್ಷ, ಗುಲ್ಬರ್ಗಕ್ಕೆ ಒಂದು ಕೋಟಿ ಹತ್ತು ಲಕ್ಷ, ರಾಯಚೂರಿಗೆ ಮೂರು ಕೋಟಿ ಐದು ಲಕ್ಷ, ಬೀದರ್‌ಗೆ ಅರವತ್ತು ಲಕ್ಷ, ಬಳ್ಳಾರಿಗೆ ಐವತ್ತೈದು ಲಕ್ಷ, ಬಿಜಾಪುರಕ್ಕೆ ಒಂದು ಕೋಟಿ ಇಪ್ಪತ್ತೈದು ಲಕ್ಷ, ಬೆಳಗಾಂಗೆ ಒಂದು ಕೋಟಿ ಹದಿನೇಳು ಲಕ್ಷ ಐವತ್ತು ಸಾವಿರ, ಧಾರವಾಡಕ್ಕೆ ಒಂದು ಕೋಟಿ ತೊಂಭತ್ತೈದು ಲಕ್ಷ ರೂ.ಗಳ ಹಣ ಬಿಡುಗಡೆ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಹೊಸ ಜಿಲ್ಲೆಗೆ ಎಲ್ಲೆಲ್ಲಿ ಹಣ ಬಿಡುಗಡೆ ಮಾಡಿದ್ದೀರಿ ಹೇಳಿ.

(ಗೊಂದಲ)

ಉಪಾಧ್ಯಕ್ಷರು: ನಾಗ್‌ರಾಜ್ ಅವರೇ, ದಯವಿಟ್ಟು ಅವರು ಹೇಳುವವರೆಗಾದರೂ ಕೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಬಹಳ ಜಿಲ್ಲೆಗಳನ್ನು ಕಡೆಗಾಣಿಸಿದ್ದಾರೆ, ಅದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ರಮೇಶ್ ಸಿ.ಜಿಗಜಿಣಗಿ: ಅತೀವೃಷ್ಠಿ ಪರಿಹಾರಕ್ಕಾಗಿ ಶಿವಮೊಗ್ಗ ಜಿಲ್ಲೆಗೆ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಚಿಕ್ಕಮಗಳೂರು ಜಿಲ್ಲೆಗೆ ನಲವತ್ತು ಲಕ್ಷ, ಹಾಸನ ಜಿಲ್ಲೆಗೆ ಇಪ್ಪತ್ತು ಲಕ್ಷ, ಕೊಡಗು ಜಿಲ್ಲೆಗೆ ಎರಡು ಕೋಟಿ, ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ಕೋಟಿ ಅರವತ್ತು ಲಕ್ಷ, ಬೆಳಗಾಂಗೆ ಮುವತ್ತು ಲಕ್ಷ, ಧಾರವಾಡ ಜಿಲ್ಲೆಗೆ ಮುವತ್ತು ಲಕ್ಷ, ಉತ್ತರ ಕನ್ನಡಕ್ಕೆ ಒಂದು ಕೋಟಿ ಹದಿನಾರು ಲಕ್ಷ ಶಿವಮೊಗ್ಗ ಜಿಲ್ಲೆಗೆ ಒಂದು ಕೋಟಿ ಹಣವನ್ನು ನಾವು ಈಗಾಗಲೇ ಅತಿವೃಷ್ಠಿ ಪರಿಹಾರಕ್ಕಾಗಿ ಬಿಡುಗಡೆ ಮಾಡಿದ್ದೇವೆ.

ಶ್ರೀ ಡಿ.ಆರ್.ಫಾಟೀಲ್: ಯಾವಾಗ ಮಾಡಿದ್ದೀರಿ?

ಉಪಾಧ್ಯಕ್ಷರು: ಅಲ್ಲ, ಅವರು ಹೇಳುವವರೆಗಾದರೂ ಕೇಳಿ ಪಾಟೀಲರೇ.

ಶ್ರೀ ರಮೇಶ್ ಸಿ.ಜಿಗಜಿಣಗಿ: ಸನ್ಮಾನ್ಯ ಉಪಾಧ್ಯಕ್ಷರೆ, ದಿನಾಂಕ 1.4.1997 ರಿಂದ 18.8.1997ರವರೆಗೆ ನೈಸರ್ಗಿಕ ವಿಕೋಪದಲ್ಲಿ ಬಿಡುಗಡೆ ಮಾಡಿದಂತಹ ಹಣ. ಎರಡಕ್ಕೂ ಒಟ್ಟು ಇಪ್ಪತ್ತೈದು ಕೋಟಿ ರೂಪಾಯಿ ಹಣವನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಹೊಸ ಜಿಲ್ಲೆದು ಎಷ್ಟು ಸಲ ಕೇಳುವುದು?

(ಗೊಂದಲ)

ಉಪಾಧ್ಯಕ್ಷರು: ಅವರು ಹೇಳುವವರೆಗಾದರೂ ಸಮಾಧಾನದಿಂದ ಕೇಳಿ.

ಶ್ರೀ ವಾಟಾಳ್ ನಾಗ್‌ನಾಜ್: ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಎಂದು ಹೇಳಬೇಕಲ್ಲಾ ಸ್ವಾಮಿ. ಈಗ ಹೇಳುತ್ತಿರುವಂತಹದ್ದು ಸರಿ ಇಲ್ಲ, ನಾನು ಹೇಳುತ್ತಾ ಇದ್ದೇನೆ, ಹೊಸ ಜಿಲ್ಲೆಗಳು....

(ಗೊಂದಲ)

ಉಪಾಧ್ಯಕ್ಷರು: ಅವರು ಹೇಳುತ್ತಾರೆ, ದಯಮಾಡಿ ತಾವು ಕೇಳಿ. ಇಲ್ಲಿ ಉಪ ಮುಖ್ಯ-ಮಂತ್ರಿಗಳು ಹೇಳುತ್ತಾರೆ ತಾವು ಕೇಳಿ. ಸನ್ಮಾನ್ಯ ಖರ್ಗೆ ಅವರೇ ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆಂದು ಹೇಳಿದ್ದಾರೆ. ಪ್ರಕೃತಿ ವಿಕೋಪ ನಿಧಿಯಲ್ಲಿ ಈ ವರ್ಷ ಒಟ್ಟು ಇರತಕ್ಕಂತಹ ಹಣ 44 ಕೋಟಿ 10 ಲಕ್ಷ ರೂಪಾಯಿಗಳು. ಇದರಲ್ಲಿ ಈಗಾಗಲೇ 27 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನು ಉಳಿದಂತಹ ಹಣದ ಬಗ್ಗೆ ಮುಖ್ಯಮಂತ್ರಿಗಳು ಮೀಟಿಂಗ್ ಮಾಡಿದ್ದಾರೆ. ಇಲ್ಲಿರುವಂತಹ ಸನ್ಮಾನ್ಯ ಸದಸ್ಯರೆಲ್ಲಾ ಸಲಹೆ ಕೊಟ್ಟಿದ್ದಾರೆ, ಈ ಹಣವನ್ನು ಕುಡಿಯುವ ನೀರಿಗೆ, ಮೇವಿಗೆ ಈ ಹಣವನ್ನು ಉಪಯೋಗಿಸಬೇಕೆಂದು, ಮತ್ತು ವಲಸೆ ಹೋಗುವಂತಹ ಜನರಿಗೆ ಕೆಲಸ ಕೊಡಬೇಕೆಂದು, ಈ ಮೂರಕ್ಕೆ ಹಣ ಒದಗಿಸಬೇಕೆಂದು ಹೇಳಿದ್ದಾರೆ. ಒಂದು ಕಡೆ ಜಿಲ್ಲಾ ಪಂಚಾಯಿತಿಗಳಲ್ಲಿ, ತಾಲ್ಲೂಕು ಪಂಚಾಯಿತಿಗಳಲ್ಲಿ ಇ.ಎ.ಎಸ್.ಮತ್ತು ಜೆ.ಆರ್.ವೈ ಸ್ಕೀಂಗಳಿಂದ ಕೆಲಸ ಕೊಡುತ್ತಾರೆ. ಪ್ರತಿ ಜಿಲ್ಲೆಗೆ ಪ್ರತಿ ತಾಲ್ಲೂಕುಗಳಿಗೆ ಆಕ್ಷನ್ ಪ್ಲಾನ್ ಮಾಡಿದ್ದಾರೆ. ಅದನ್ನು ಡೀವಿಯೇಟ್ ಮಾಡುವುದಕ್ಕೆ ಆಗುವುದಿಲ್ಲ.

ಬೇರೆ ಕೊಡಬೇಕೆಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ನಾವು ಜಿಲ್ಲಾಧಿಕಾರಿಗಳನ್ನೂ ಕೂಡ ಕರೆದು ಚರ್ಚೆ ಮಾಡಿದ್ದೇವೆ. ಮತ್ತೆ ಇನ್ನೊಮ್ಮೆ 15ನೇ ತಾರೀಖು ಜಿಲ್ಲಾಧಿಕಾರಿಗಳು, ಜಿಲ್ಲಾ ಸಿ.ಇ.ಓಗಳು, ಇವರನ್ನೂ ಕೂಡ ಕರೆದು ಇನ್ನೂ ಅವರಿಗೆ ಕುಡಿಯುವ ನೀರಿಗೆ, ಮೇವಿಗೆ, ಕೆಲಸ ಕೊಡಲಿಕ್ಕೆ ಎಷ್ಟು ಹಣ ಬೇಕು ಎಂದು ಹೊಂದಿಸಿ ಕೊಡಲಿಕ್ಕೆ ಸರ್ಕಾರ ಬದ್ಧವಾಗಿದೆ. ಇದರ ಜೊತೆಗೆ ಕೇಂದ್ರ ಸರ್ಕಾರದವರಿಗೆ ಮೆಮೊರ್‍ಯಾಂಡಮ್ ಕೊಟ್ಟು ಅಲ್ಲಿ ಕೂಡ ಹಣ ಕೇಳುತ್ತೇವೆ. ಮಾನ್ಯ ಮೊಯಿಲಿಯವರಿಗೆ, ಬೇರೆ ಹಿರಿಯ ಮಂತ್ರಿಗಳಿಗೆಲ್ಲಾ ಗೊತ್ತಿದೆ, ಕೇಂದ್ರ ಸರ್ಕಾರದಿಂದ ಯಾವ ರೀತಿ ಹಣ ಕೊಡುತ್ತಾರೆ ಎಂದು ಗೊತ್ತಿದೆ. ಏನೇ ಮಾಡಿದರೂ ಕೂಡ ಒಂದು ವೇಳೆ ಅವರು ವಿಸಿಟ್ ಮಾಡಿದರೂ ಮುಂದಿನ ವರ್ಷಕ್ಕೆ ಕೊಡತಕ್ಕದ್ದರಲ್ಲಿ ಹಿಡಿದುಕೊಳ್ಳುತ್ತಾರೆ. ಪ್ಲಾನ್‌ನಲ್ಲಿ ಕೊಡತಕ್ಕ ಅಸಿಸ್ಟೆನ್ಸ್‌ನಲ್ಲಿ ಕಟ್ ಮಾಡತಕ್ಕ ಪರಿಸ್ಥಿತಿಗಳು ಇದ್ದಾವೆ. ಆ ಕಾರಣದಿಂದ ನಾನೇನು ಹೇಳುತ್ತೇನೆ ಎಂದರೆ ನಾವೇ ನಮ್ಮಲ್ಲಿರತಕ್ಕಂಥ ಸಂಪನ್ಮೂಲಗಳಲ್ಲಿ ಎಲ್ಲಿ ಅಗತ್ಯ ಇದೆ, ಯಾವ ಜಿಲ್ಲೆಯಲ್ಲಿ ಕೆಲಸ ಇದೆ, ತಾಲ್ಲೂಕಿನಲ್ಲಿ ಅಗತ್ಯವಾಗಿ ಜನಗಳಿಗೆ ಕೆಲಸ ಕೊಡಬೇಕಾಗಿದೆ, ಮೇವು ಕೊಡಬೇಕಾಗಿದೆ, ನೋಡುತ್ತೇವೆ. ಈಗಾಗಲೇ ಸುಮಾರು 25 ಕೋಟಿ ರೂಪಾಯಿಗಳ ಹತ್ತಿರ ಹಣ ಇದೆ. ಬೇಕಾದರೆ ಬೇರೆ ಹಣ ಕೂಡ ನಾವು ಕೊಡುತ್ತೇವೆ. ಅದರಿಂದ ಹೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಒಂದು ನಿಮಿಷ ಯೀಲ್ಡ್ ಆಗಿ. ನಾನು ನಿಮಗೆ ಹೇಳುತ್ತೇನೆ. ನಾನು ಇಲ್ಲಿ ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಒಂದು ಮಾತು ಹೇಳುತ್ತೇನೆ. ತಾವು ಹೇಳುತ್ತಿರುವಂಹತಹ ಮೊತ್ತ ಸ್ಯಾಂಕ್ಷನ್ ಆಗಿರುವಂತಹ ಮೊತ್ತ. ಬಿಡುಗಡೆ ಆಗಿರುವಂತಹದು ಉದಾಹರಣೆಗೆ ಶಿವಮೊಗ್ಗದಲ್ಲಿನ ವಿಚಾರ ಹೇಳುತ್ತೇನೆ. ನಾನು ಹೇಳುವುದು ತಪ್ಪಾದರೆ. ನಾನು ಈಗಲೇ ರಾಜೀನಾಮೆ ಕೊಟ್ಟು ಮನೆಗೆ ಹೋಗುತ್ತೇನೆ. ನೀವು ರಾಜೀನಾಮೆ ಕೊಡಬೇಡಿ, ಸರಿಯಾದಂತಹ ಅಂಕಿ ಅಂಶ ಕೊಡಿ. ಈಗ ಶಿವಮೊಗ್ಗದ ಉದಾಹರಣೆ. ಒಂದು ಕೋಟಿ ರೂಪಾಯಿ ಎಂದು ಅವರು ಹೇಳಿದರು. ತಾವು ಈಗಲೇ ಡಿಸಿಗೆ ಫೋನ್ ಮಾಡಿ ಕೇಳಿ. ನೀವು ಸ್ಯಾಂಕ್ಷನ್ ಮಾಡಿರುವ ಮೊತ್ತ ಒಂದು ಕೋಟಿ ರೂಪಾಯಿಗಳಾದರೆ ರಿಲೀಸ್ ಆಗಿರುವುದು ಕೇವಲ 50 ಲಕ್ಷ.

ಉಪಾಧ್ಯಕ್ಷರು: ಸ್ಯಾಂಕ್ಷನ್ ಆಗಿದ್ದು ಒಂದು ಕೋಟಿ ರಿಲೀಜ್ ಆಗಿದ್ದು 50 ಲಕ್ಷ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಬರೇ ಸ್ಯಾಂಕ್ಷನ್ ಮಾಡಿದರೆ ನಾನು ತೆಗೆದುಕೊಂಡು ಏನು ಮಾಡಲಿ? ಅಲ್ಲಿ ಕೆಲಸಕ್ಕೆ ದುಡ್ಡು ಬೇಕಲ್ಲಾ.

ಉಪಾಧ್ಯಕ್ಷರು: ಚೆಕಪ್ ಮಾಡಿಸಿ.

ಶ್ರೀ ಸಿದ್ಧರಾಮಯ್ಯ: ಶಿವಮೊಗ್ಗದ್ದು ಬೇಕಾದರೆ ಚೆಕಪ್ ಮಾಡಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಬರೀ ಶಿವಮೊಗ್ಗ ವಿಚಾರ ಅಲ್ಲ, ಇಡೀ ರಾಜ್ಯದಲ್ಲಿನ ವಿಚಾರ ಇದೆ. ನೀವು ಹೇಳಿರುವಂತಹ ಮೊತ್ತ ಇಡೀ ರಾಜ್ಯದಲ್ಲಿ ಸ್ಯಾಂಕ್ಷನ್ ಆಗಿರುವುದು. ನೀವು ರಿಲೀಸ್ ಮಾಡಿದ್ದು ಎಷ್ಟು? ನಮಗೆ ಸ್ಯಾಂಕ್ಷನ್ಡ್ ಅಮೌಂಟ್ ಬೇಡ. ರಿಲೀಸ್ ಆದ ಅಮೌಂಟ್ ಹೇಳಿ.

ಉಪಾಧ್ಯಕ್ಷರು: ಆರ್ಥಿಕ ಮಂತ್ರಿಗಳು ಬಿಡುಗಡೆ ಆಗಿರುವುದನ್ನು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ತಾವು ನಂಬ ಬೇಕಾಗುತ್ತದೆ. ಆರ್ಥಿಕ ಮಂತ್ರಿಗಳು ಹೇಳಿದಾಗ ನಾವು ನಂಬ ಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಹೇಳಲಿ ನೋಡೋಣ, ಒಂದು ಕೋಟಿ ರೂಪಾಯಿ ಬಿಡುಗಡೆ ಆಗಿದೆ. ಎಂದು ಹೇಳಿದರು. ಅದು ನಿಜವಾದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ. ಮತ್ತೆ ಏನು ಸಾರ್ ಈ ತರಹ.

ಉಪಾಧ್ಯಕ್ಷರು: ಅದಕ್ಕೆ ಏಕೆ ರಾಜೀನಾಮೆ ಕೊಡಬೇಕು?

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇವೆ.

ಉಪಾಧ್ಯಕ್ಷರು: ಎಷ್ಟು ಬಿಡುಗಡೆ ಮಾಡಿದ್ದಾರೆ ಎಂದು ಚೆಕಫ್ ಮಾಡಿಸಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಒಂದೇ ಸಲ ಖರ್ಚು ಮಾಡುವುದಕ್ಕೂ ಆಗುವುದಿಲ್ಲ. ಬಿಡುಗಡೆ ಆಗಿದೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಯಡಿಯೂರಪ್ಪನವರೇ, ಏನು ಇಷ್ಟೊಂದು ಕೋಪದಿಂದ ಹೇಳಿದರೆ ಹೇಗೆ? ಕೋಡೋಣ, ಕೆಲಸ ಮಾಡಿಸೋಣ, ನೀವು ಆ ಕಡೆ ಹೋದ ಮೇಲೆ ಕೋಪ ಕಡಿಮೆ ಆಗಿದೆ ಎಂದು ತಿಳಿದಿದ್ದೆ. ಕೋಪ ಸ್ವಲ್ಪ ಜೋರಾಯಿತಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಲ್ಲಿ ಜನ ಹಾಳಾಗಿ ಹೋಗುತ್ತಾರೆ. ನಾವು ಇಲ್ಲಿ ಸುಮ್ಮನೆ ಇರಬಹುದು. ನಾವು ಸುಮ್ಮನೆ ಇದ್ದರೆ ಜನರ ಗತಿ ಏನು ಎಂದು ಯೋಚನೆ ಮಾಡಿ.

ಶ್ರೀ ಸಿದ್ಧರಾಮಯ್ಯ: ಇದು ಬಹಳ ಗಂಭೀರವಾದ ವಿಚಾರ. ಇದು ಜನಗಳ ಸಮಸ್ಯೆ ಬಹಳ ಗಂಭೀರವಾಗಿದೆ. ಅನೇಕ ಜಿಲ್ಲೆಗಳಲ್ಲಿ, ಅನೇಕ ತಾಲ್ಲೂಕುಗಳಲ್ಲಿ ಮಳೆ ಬೆಳೆ

ಆಗಿಲ್ಲ ಎನ್ನತಕ್ಕದ್ದು ಇದನ್ನು ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಿದೆ. ನಾವು ಇದನ್ನು ಲಘುವಾಗಿ ತೆಗೆದುಕೊಂಡಿದ್ದೇವೆ ಎನ್ನತಕ್ಕ ಭಾವನೆಯನ್ನು ಯಾರೂ ಕೂಡ ಮಾನ್ಯ ಸದಸ್ಯರು ತಾಳಬೇಕಾದಂತಹ ಅಗತ್ಯ ಇಲ್ಲ. ಆದರೆ ಇವತ್ತು ತಾನೇ ನಾವು ಮೀಟಿಂಗ್ ಮಾಡಿದ್ದೇವೆ. ಅನೇಕ ಜನ ಮಾನ್ಯ ಸದಸ್ಯರು ಬಂದಿದ್ದರು. ಬೆಳಿಗ್ಗೆ 9.30ಕ್ಕೆ ಮೀಟಿಂಗ್ ಮಾಡಿದ್ದೇವೆ. ಅಲ್ಲಿ ಕೆಲವು ಜಿಲ್ಲಾಧಿಕಾರಿಗಳೂ ಕೂಡ ಬಂದಿದ್ದರು. ಈಗ ರಾಯಚೂರು ಜಿಲ್ಲೆಯ ಚರ್ಚೆ ಆಯಿತು. ಸುಮಾರು 2 ಕೋಟಿ 25 ಲಕ್ಷ ರೂಪಾಯಿ ಕುಡಿಯುವ ನೀರಿಗೆ ಅವರ ಹತ್ತಿರ ಇದೆ. ಆದರೆ ಅವರು ಏನು ಹೇಳುತ್ತಿದ್ದಾರೆ ಎಂದರೆ ಕೆಲವು ತಾಲ್ಲೂಕುಗಳಲ್ಲಿ ಉದಾಹರಣೆಗೆ ಸಿಂಧನೂರು ಶಾಸಕರು ಹೇಳುತ್ತಾರೆ. ನಮ್ಮ ಊರಿನಲ್ಲಿ ಕುಡಿಯುವ ನೀರಿಗೆ ತೊಂದರೆ ಇಲ್ಲ. ಕುಡಿಯುವ ನೀರನ್ನು ಜನಗಳಿಗೆ ಕೆಲಸ ಕೊಡಲಿಕ್ಕೆ ಡೀವಿಯೇಟ್ ಏನು ಮಾಡಬೇಕೋ ಅದನ್ನು ಮಾಡಿ ಎಂದು ಹೇಳಿದರು. ಅದಕ್ಕೆ ನಾನು ಹೇಳುವುದು ಅವರಿಗೆ ಏನಾಗಿದೆ ಎಂದರೆ ಕುಡಿಯುವ ನೀರಿನ ಹಣ ಬೇರೆದಕ್ಕೆ ಖರ್ಚು ಮಾಡಬಾರದು ಎನ್ನತಕ್ಕದ್ದು ಆ ನಾರ್ಮ್ಸ್‌ನಲ್ಲಿ ಬರುವುದಿಲ್ಲ, ಎಂದು ಹೇಳಿ ಗೈಡ್‌ಲೈನ್ಸ್ ಇದೆ, ಆ ತರಹ ಮಾಡುವುದಕ್ಕೆ ಆಗುವುದಿಲ್ಲ. 15ನೇ ತಾರೀಖು ಜಿಲ್ಲಾಧಿಕಾರಿಗಳ, ಸಿ.ಇ.ಓಗಳ ಮೀಟಿಂಗ್ ಕರೆದು ಕುಡಿಯುವ ನೀರಿಗೆ ಪ್ರತಿ ಜಿಲ್ಲೆಯಲ್ಲಿ ಎಷ್ಟು ಹಣ ಬೇಕಾಗುತ್ತದೆ, ಮೇವಿಗೆ ಎಷ್ಟು ಬೇಕಾಗುತ್ತದೆ, ಕೆಲಸ ಕೊಡಲಿಕ್ಕೆ ಎಷ್ಟು ಬೇಕಾಗುತ್ತದೆ? ದನಕರುಗಳಿಗೆ ಔಷಧಿಗಳಿಗೆ ಎಷ್ಟು ಬೇಕಾಗುತ್ತದೆ? ಇಷ್ಟನ್ನೂ ಕೂಡ ಮಾಹಿತಿ ಸಂಗ್ರಹ ಮಾಡುತ್ತೇವೆ. ಈಗಾಗಲೇ ಮಾಹಿತಿಗಳು ಇದ್ದಾವೆ. ಇನ್ನೊಮ್ಮೆ ಇದರಲ್ಲಿರೆತಕ್ಕ ನಾರ್ಮ್ಸ್‌ಗಳಲ್ಲಿರತಕ್ಕ ಅಡೆತಡೆಗಳನ್ನು ಕಾರ್ಯಗತ ಮಾಡುವಾಗ ತೆಗೆದು ಹಾಕುವುದಕ್ಕೋಸ್ಕರ ಮೀಟಿಂಗ್ ಕರೆದಿದ್ದೇವೆ. ಇದಕ್ಕೆ ಎಷ್ಟೇ ಹಣ ಖರ್ಚಾದರೂ ಕೂಡ ಹಣ ಖರ್ಚು ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ ಎನ್ನತಕ್ಕ ಮಾತನ್ನು ಹೇಳುತ್ತೇವೆ. ಆದ್ದರಿಂದ ಮಾನ್ಯ ಸದಸ್ಯರು ಏನೂ ಮಾಡಿಲ್ಲ ಎನ್ನತಕ್ಕ ಭಾವನೆಯನ್ನು ತಾಳಬಾರದು ನಾವು ಇವತ್ತು ಎಲ್ಲಾ ಎಂ.ಎಲ್.ಎಗಳನ್ನು ಕರೆಯಬೇಕೆಂದು ವಿಚಾರ ಮಾಡಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳೂ ಹೇಳಿದ್ದಾರೆ. ಕಂದಾಯ ಮಂತ್ರಿಗಳು ಸಹ ಬೇರೆ ಬೇರೆ ಜಿಲ್ಲೆಗಳಿಗೆ ಹೋಗಿ ಕಾರ್ಯವನ್ನು ನೋಡಿ ರಿವ್ಯೂ ಮಾಡತಕ್ಕದ್ದನ್ನು ಕೂಡ ಮಾಡುತ್ತಿದ್ದಾರೆ. ಸರ್ಕಾರ ಬಹಳ ಸೀರಿಯಸ್ಸಾಗಿ ಈ ಸಮಸ್ಯೆಯನ್ನು ತೆಗೆದುಕೊಂಡಿದೆ ಎನ್ನತಕ್ಕ ಮಾತನ್ನು ಎಲ್ಲ ಮಾನ್ಯ ಸದಸ್ಯರಿಗೆ ತಿಳಿಸಲು ಬಯಸುತ್ತೇನೆ.

ಶ್ರೀ ಶ್ರೀರಂಗ ದೇವರಾಯ (ಗಂಗಾವತಿ): ನನ್ನ ಸಮಸ್ಯೆ ಎಂದರೆ ಗಂಗಾವತಿಯಲ್ಲಿ ಕಬ್ಬು ಆರೇಳು ತಿಂಗಳು ಬೆಳೆಸಿದ್ದಾರೆ. ಸುಮಾರು ಆರೇಳು ತಿಂಗಳು ಬೆಳೆಸಿದ ಕಬ್ಬು ಸುಮಾರು 15-20 ಸಾವಿರ ರೂಪಾಯಿ ಒಂದು ಎಕರೆಗೆ ಖರ್ಚು ಮಾಡಿದ್ದಾರೆ. ಬಾಳೆಗೆ ಸುಮಾರು 20 ಸಾವಿರ ರೂಪಾಯಿ ಒಂದು ಎಕರೆಗೆ ಖರ್ಚು ಮಾಡಿದ್ದಾರೆ. ಅವೆಲ್ಲಾ ಕಂಪ್ಲೀಟ್‌ಆಗಿ ನಾಶವಾಗಿವೆ. ನೀವು ಅಣೆವಾರಿ ಪದ್ಧತಿ ಛೇಂಜ್ ಮಾಡಿಸಿ, ಅದಕ್ಕೆ ನೀವು

ಸಾಧ್ಯವಾದಷ್ಟು ಕಡಿಮೆ ಮಾಡಿಸಿ, ಆಮೇಲೆ ಲಾಸ್ ಏನು ಇದೆ, ಅದನ್ನು ರಿಕವರಿ ಮಾಡಿ. ನಾನೇನು ಕೇಳುತ್ತಿದ್ದೇನೆ ಎಂದರೆ ಈಗ ಅಣೆವಾರಿ ಪ್ರಶ್ನೆ ಬಗ್ಗೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ರೆಸಲ್ಯೂಷನ್ ಕಳುಹಿಸಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ನಮಗೇನೋ ಬಹಳ ದೀರ್ಘವಾಗಿ ಉತ್ತರ ಕೊಡುತ್ತಾರೆ ಎಂದು ನಾವು ಅಪೇಕ್ಷೆ ಮಾಡಿದ್ದೆವು. ಸುಮಾರು 4-5 ತಾಸು ಎಲ್ಲಾ ಮುಖಂಡರು ಸಾಕಷ್ಟು ಸಲಹೆಗಳನ್ನು ಕೊಟ್ಟರು. ಅದಕ್ಕೆ ಒಂದು ಉತ್ತರವನ್ನೂ ಕೂಡ ಈ ಒಂದು ಸ್ಟೇಟ್‌ಮೆಂಟ್‌ನಲ್ಲಿ ಕೊಡಲಿಲ್ಲ. ಮತ್ತು ಈ ನಿಮ್ಮ ಹೇಳಿಕೆಯ ಪ್ರಕಾರ ಸುಮಾರು 25 ಕೋಟಿ ರೂಪಾಯಿ ಬಿಡುಡೆ ಮಾಡಿದ್ದೀರಿ. ಇದರಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಯಾವ್ಯಾವ ಜಿಲ್ಲೆಯಲ್ಲಿ ಎಷ್ಟು ಖರ್ಚಾಗಿದೆ ಎನ್ನತಕ್ಕ ಅಂಕಿ ಅಂಶ ಒದಗಿಸಿಲ್ಲ. ಆಮೇಲೆ ಕೇಂದ್ರ ಸರ್ಕಾರಕ್ಕೆ ಮೆಮೋರಾಂಡಮ್ ಇಲ್ಲಿಯವರೆಗೆ ಕೊಟ್ಟಿಲ್ಲ. ಆಮೇಲೆ ನಿರ್ಲಕ್ಷ್ಯ ಮಾಡಿದ್ದಾರೆ ಎನ್ನತಕ್ಕ ಮಾತನ್ನು ನಾವು ಹೇಳಬೇಕಾಗುತ್ತದೆ. ಆಮೇಲೆ ಎಕ್ಸ್‌ಪೆಂಡಿಚರ್ ಸ್ಟೇಟ್‌ಮೆಂಟ್ ಇಲ್ಲ. ಫಾಡರ್ ಬ್ಯಾಂಕ್ಸ್ ಮಾಡಬೇಕು ಪ್ರತಿ ಒಂದು ಹೋಬಳಿ ಹೆಡ್ ಕ್ವಾರ್ಟರ್‌ನಲ್ಲಿ, ಅನಾವೃಷ್ಟಿ ಇದ್ದಲ್ಲಿ ಎನ್ನತಕ್ಕದ್ದು ಹೇಳಿದ್ದೇವೆ. ಆಮೇಲೆ ಅತಿವೃಷ್ಟಿ ಇದ್ದಲ್ಲಿ ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಲುಕ್ಸಾನು ಆಗಿದೆ? ಅದಕ್ಕೆ ನೀವು ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಎಷ್ಟು ಖರ್ಚು ಮಾಡಿದಿರಿ? ಅದಕ್ಕೆ ಏನು ಮೆಮೋರ್‍ಯಾಂಡಂಮ್ ಕೊಟ್ಟಿರಿ, ಅದನ್ನು ಕೇಳಿದೆ, ಅದೂ ಕೂಡ ಇದರಲ್ಲಿಲ್ಲ. ಆಮೇಲೆ ಉಳಿದಂತಹ ಡ್ರಿಂಕಿಂಗ್ ವಾಟರ್ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಎನ್ನತಕ್ಕದ್ದು ಕೇಳಿದೆ. ಇಲ್ಲಿ ಬಿಡುಗಡೆ ಆಗಿದ್ದು 14 ಕೋಟಿ 84 ಲಕ್ಷ ರೂಪಾಯಿ ಎಂದು ತೋರಿಸಿದ್ದಾರೆ. ಅದರ ಬಗ್ಗೆ ಕೂಡ ನೀವು ಸವಿಸ್ತಾರವಾಗಿ ಮಾಹಿತಿಯನ್ನು ಕೊಡಲಿಲ್ಲ. ನೀವು ಕೊಟ್ಟಿರುವಂತಹ ಸ್ಟೇಟ್‌ಮೆಂಟ್ ಯಾವುದು ಇದೆ ಇದು ಸುಮ್ಮನೇ ಒಂದು ಸ್ಟೇಟ್‌ಮೆಂಟ್ ಕೊಡಬೇಕು ಎಂಬ ದೃಷ್ಟಿಯಿಂದ ಕೊಟ್ಟಿದ್ದೇ ಹೊರತಾಗಿ ಇದರಲ್ಲಿ ಯಾವ ಮಾಹಿತಿಯೂ ಕೂಡ ಇಲ್ಲ. ಪ್ರತಿ ಒಂದು ವಿಚಾರ ನಾವು ಕೇಳಬೇಕು. ಖರ್ಚು ಎಷ್ಟಾಗಿದೆ ಎಂದಾಗ ಈ ಜಿಲ್ಲೆಗೆ ಇಷ್ಟು ಬಿಡುಗಡೆ ಆಯಿತು, ಇಷ್ಟು ಖರ್ಚು ಆಯಿತು ಎಂದು ಹೇಳುವುದು ಆಮೇಲೆ ಎಷ್ಟು ಜನರಿಗೆ ಕೆಲಸವನ್ನು ಒದಗಿಸಿಕೊಟ್ಟಿದ್ದೀರಿ ಎಂದು ಕೇಳಿದ್ದೇವೆ. ಅದರ ಬಗ್ಗೆ ಕೂಡ ಸವಿಸ್ತಾರವಾಗಿ ಅವರು ಮಾಹಿತಿ ಕೊಡಲಿಲ್ಲ. ಅದರ ಮೇಲೆ ಏನು ಖರ್ಚು ಮಾಡಿದಿರಿ? ಈಗ ಜೂನ್ ತಿಂಗಳಿಂದ ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಮಳೆ ಆಗಿದೆ, ಎಷ್ಟೆಷ್ಟು ಹಾನಿ ಆಗಿದೆ ಎನ್ನತಕ್ಕದ್ದು ಎರಡೂ ಕೂಡ ತಮಗೆ ಗೊತ್ತಿದೆ. ಈ ನಾಲ್ಕು ತಿಂಗಳಲ್ಲಿ ಹಾನಿ ಆಗಿರುವಂತಹದ್ದು, ಅದು ಅನಾವೃಷ್ಠಿಯಿಂದ ಅಥವಾ ಅತಿ ವೃಷ್ಠಿಯಿಂದ ಇರಬಹುದು. ಖರ್ಚಾಗದೇ ಇರುತ್ತದಾ ಅದು? ಅಂದರೆ 25 ಕೋಟಿ ರೂಪಾಯಿ ಜಿಲ್ಲಾಧಿಕಾರಿಗಳ ಹತ್ತಿರ ಇದೆ ಎಂದರೆ ಅದರ ಅರ್ಥ ಇಲ್ಲಿಯವರೆಗೂ

ಏನೂ ಹಣವೇ ಖರ್ಚಾಗಿಲ್ಲ ಎನ್ನತಕ್ಕ ಉತ್ತರ ಬರುತ್ತದೆ; ನಾವು ತಿಳಿದುಕೊಳ್ಳಬೇಕಾಗುತ್ತದೆ. ಇದು ಎಲ್ಲ ಕೂಡ ನೋಡಿದಾಗ ನಾನು ಖಂಡಿತವಾಗಿ ಹೇಳಬೇಕಾಗುತ್ತದೆ. ಈ ಸರ್ಕಾರಕ್ಕೆ ಅನಾವೃಷ್ಟಿ ಬಗ್ಗೆ ಅಥವಾ ಅತೀವೃಷ್ಠಿ ಬಗ್ಗೆ ಆಸಕ್ತಿ ಇಲ್ಲ. ಸಮಸ್ಯೆಯನ್ನು ಬಗೆಹರಿಸಬೇಕು ಎನ್ನತಕ್ಕ ಆಸಕ್ತಿ ಇಲ್ಲ. ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳೇ ಹೇಳಿದರು. 25 ಕೋಟಿ ರೂಪಾಯಿಗಳನ್ನು ಇವತ್ತು ಆ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ ಎಂದರು. ಅಂದರೆ 27 ಕೋಟಿ ರೂಪಾಯಿಗಳಲ್ಲಿ ಎರಡು ಕೋಟಿ ರೂಪಾಯಿ ಖರ್ಚಾಗಿದೆ. 25 ಕೋಟಿ ರೂಪಾಯಿ ಅವರ ಹತ್ತಿರ ಇದೆ ಎಂದು ಆಗುತ್ತದೆ. ಇನ್ನೊಂದು ವಿಚಾರ ಅಂದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವಂತಹದ್ದು. ಇಲ್ಲಿ ಸದನ ನಡೆದಿದೆ. ಈ ಸದನ ನಡೆದಾಗ, ಸದನದಲ್ಲಿ ಪ್ರತಿ ಒಂದು ಜಿಲ್ಲೆಯಲ್ಲಿ ತಾವೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ತಿಳಿಸಬೇಕು. ಆ ಸದನ ನಡೆದಾಗ ಅಲ್ಲಿ ಮೀಟಿಂಗ್ ಕರೆದಿದ್ದಾರೆ ಅಲ್ಲಿ ಹೇಳುತ್ತೇವೆ ಎಂದರೆ ಏನರ್ಥ? ನಾವು ಇಲ್ಲಿ ಚರ್ಚೆಗೆ ತೆಗೆದುಕೊಂಡಿದ್ದೇವೆ. ನಿನ್ನೆ 5-6 ತಾಸು ಇಲ್ಲಿ ಚರ್ಚೆ ಮಾಡಿದ್ದೇವೆ. ಸಲಹೆಗಳನ್ನು ಕೊಟ್ಟಿದ್ದೇವೆ. ಆ ಸಲಹೆಗೆ ಯಾವುದೇ ರೀತಿ ಸ್ಪಂದಿಸದೇ ನೀವು ಕೇವಲ ಅಲ್ಲಿ ಮೀಟಿಂಗ್ ಮಾಡಿಕೊಂಡು ಬಂದಿದ್ದೇವೆಂದು ಹೇಳಿದರೆ ಈ ಸದನಕ್ಕೆ ಉತ್ತರ ಕೊಟ್ಟ ಹಾಗೆ ಆಗುತ್ತದೆಯೇ? ಅದಕ್ಕೆ ಯಾವ ಕಾರ್ಯಕ್ರಮದ ಬಗ್ಗೆಯೂ ಇಲ್ಲ. ರಿಲೀಫ್ ವರ್ಕ್ಸ್ ಬಗ್ಗೆಯೂ ಇಲ್ಲ. ಯಾವ ಕಾಮಗಾರಿಗಳು, ಈ ನ್ಯಾಚರಲ್ ಕಲಾಮಿಟಿ ಫಂಡ್‌ನಲ್ಲಿ ನಡೆದಿದೆ ಅಥವಾ ರೆಗ್ಯುಲರ್ ವರ್ಕ್ಸ್‌ನಲ್ಲಿ ಎಷ್ಟು ಕೆಲಸಗಳು ನಡೆದಿವೆ ಎನ್ನತಕ್ಕ ಬಗ್ಗೆ ಕೂಡ ಮಾಹಿತಿ ಇಲ್ಲ. ಇದಕ್ಕೆ ನಾನು ಹೇಳಬೇಕಾಗುತ್ತದೆ. ಸರ್ಕಾರ ಈ ಒಂದು ಅತಿವೃಷ್ಟಿ ಕೆಲಸದ ಬಗ್ಗೆ ನಿರ್ಲಕ್ಷ್ಯ ಮಾಡಿದೆ. ಮೆಮೋರಾಂಡಮ್ ಕೂಡ ಕೇಂದ್ರಸರ್ಕಾರಕ್ಕೆ ಕೊಡುವಷ್ಟು ಇವರಿಗೆ ಪುರಸೋತ್ತು ಇಲ್ಲ. ಹೋದ ವರ್ಷ ನಾವು ಕೊಟ್ಟಂತಹ ಮೆಮೋರ್‍ಯಾಂಡಮ್ ಅನ್ನು ನಮ್ಮ ಮೆಮೊರ್‍ಯಾಂಡಮ್ ಎಂದು ಇವತ್ತು ಇವರು ಹೇಳುತ್ತಿದ್ದಾರೆ. ಇದರಿಂದ ಸೆಂಟ್ರಲ್ ಕಮಿಟಿ ಕೂಡ ಇವತ್ತು ನಮ್ಮಲ್ಲಿ ಬಂದಿಲ್ಲ. ಬೇರೆ ಎಲ್ಲಾ ಕಡೆಗೆ ಕೇಂದ್ರ ಸರ್ಕಾರದ ಎಕ್ಸ್‌ಪರ್ಟ್ ಕಮಿಟಿಗಳು ಇವತ್ತು ಹೋಗುತ್ತಿವೆ.

1.30 ಪಿ.ಎಂ

ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಇರಬಹುದು, ಫೈನಾನ್ಸ್ ಡಿಪಾರ್ಟ್‌ಮೆಂಟ್ ಇರಬಹುದು, ಅವರೆಲ್ಲರೂ ಕೂಡ ಗುಜರಾತ್‌ನಲ್ಲಿ, ಹಿಮಾಚಲ ಪ್ರದೇಶದಲ್ಲಿ, ಆಂಧ್ರಪ್ರದೇಶದಲ್ಲಿ ಅಡ್ಡಾಡುತ್ತಿದ್ದಾರೆ. ಆದರೆ, ಇಲ್ಲಿಗೆ ಮಾತ್ರ ಯಾವುದೇ ಕಮಿಟಿಗಳು ಬಂದಿಲ್ಲ, ಆ ಕಮಿಟಿಯನ್ನು ತರುವ ಪ್ರಯತ್ನ ಕೂಡ ಮಾಡಿಲ್ಲ, ಆ ಬಗ್ಗೆ ಒಂದು ಕಾಗದ ಕಳುಹಿಸತಕ್ಕಂಥ ವ್ಯವಸ್ಥೆ ಆಗಿಲ್ಲ. ಇವರಿಗೆ ಇದರ ಬಗ್ಗೆ ಆಸಕ್ತಿ ಇಲ್ಲ ಮತ್ತು ಮನವರಿಕೆ ಮಾಡಿಕೊಡುವ ರೀತಿಯಲ್ಲಿ, ಕೆಲಸದ ಬಗ್ಗೆ ತಿಳಿವಳಿಕೆ ಮೂಡಿಸಿ ರಿಲೀಫ್ ಕಾಮಗಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ಯಾವುದೇ ಆಸಕ್ತಿಯನ್ನು ಸರ್ಕಾರ

ತೋರಿಸಿಲ್ಲದಿರುವುದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಸರ್ಕಾರದ ಧೋರಣೆ ಪ್ರತಿಭಟಿಸಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಸಭಾತ್ಯಾಗ ಮಾಡಿದರು)

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ನಾವು ಸಭತ್ಯಾಗ ಮಾಡುವುದಿಲ್ಲ. ಮಾನ್ಯ ಉಪಾಧ್ಯಕ್ಷರೆ, ತಾವು ತಪ್ಪು ತಿಳಿದುಕೊಳ್ಳಬೇಡಿ. ನಾವು ರಾಜ್ಯದ ಜನರ ಪರವಾಗಿ ಸರ್ಕಾರಕ್ಕೆ ವಾಸ್ತವಿಕ ಸ್ಥಿತಿಯನ್ನು ತಿಳಿಸುವುದಕ್ಕೋಸ್ಕರ ಪ್ರತಿಪಕ್ಷದವರಾಗಿ ಕುಳಿತಿದ್ದೇವೆ. ನಿನ್ನೆ ದಿವಸ ಪ್ರಸ್ತಾಪಿಸಿದ್ದು ಏನೆಂದರೆ, ಕಳೆದ ಮೂರ್ನಾಲ್ಕು ತಿಂಗಳುಗಳಿಂದ....ಹಾಗೆ ಮಾಡಬೇಡಿ ನಾವು ಸಭಾತ್ಯಾಗ ಮಾಡುವುದಿಲ್ಲ. ಉತ್ತರ ಕೊಡದಿದ್ದರೆ ನಾವು ಬಿಡುವುದಿಲ್ಲ. ನನ್ನ ಪಾಯಿಂಟ್ ಏನೆಂದರೆ, ನಾವು ಏನು ತಮಗೆ ಒಂದು ವರದಿ ಒಪ್ಪಿಸಬೇಕು, ಅದಕ್ಕೆ ತಾವು ಏನು ಉತ್ತರ ಕೊಡಬೇಕು. ನಾವು ಸಭಾತ್ಯಾಗ ನಡೆಸುವುದರಿಂದ ನಮಗೆ ಸಮಾಧಾನ ಬರುವುದಾದರೆ ಬಹುಶಃ ಅದರಲ್ಲಿ ಏನೂ ಅರ್ಥವಿಲ್ಲ. ಅವರೇ ಕೊಟ್ಟಿರುವ ಅಂಶದ ಪ್ರಕಾರ ಎಲ್ಲಾ ಜಿಲ್ಲೆಗಳಿಗೂ ಸುಮಾರು 25 ಕೋಟಿ 43 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅಷ್ಟು ಹಣದಲ್ಲಿ ಇದುವರೆವಿಗೂ 2-3 ಕೋಟಿ ರೂಪಾಯಿಗಳು ಸಹ ಖರ್ಚಾಗಿಲ್ಲ. ಅಂದರೆ, ರಾಜ್ಯದ 6-7 ಜಿಲ್ಲೆಗಳಲ್ಲಿ ಇಂತಹ ವಿಚಿತ್ರವಾದ ಬರಗಾಲದ ಪರಿಸ್ಥಿತಿಯಿದ್ದರೂ ಸಹ ಕೃಷಿ ಕಾರ್ಮಿಕರಿಗೆ ಉದ್ಯೋಗ ಒದಗಿಸಿಕೊಡುವ ಕೆಲಸವಾಗಲಿಲ್ಲ. ಅತಿವೃಷ್ಟಿಯಿಂದ ರಸ್ತೆಗಳೆಲ್ಲಾ ಹಾಳಾಗಿವೆ, ಕೆರೆ-ಕಟ್ಟೆಗಳು ಹಾಳಾಗಿವೆ, ದುರಸ್ತಿ ಕೆಲಸಕ್ಕೆ ಹಣ ಖರ್ಚು ಮಾಡುವಂಥ ಪ್ರಯತ್ನವಾಗಿಲ್ಲ. ನಾವು ನಿನ್ನೆ ಪೂರ್ತಿ ದಿವಸ ಪ್ರಸ್ತಾಪ ಮಾಡಿದಂಥ ಯಾವುದೇ ಪ್ರಶ್ನೆಗೂ ಉತ್ತರವಿಲ್ಲ. ನಾವು ರಿಕ್ವೆಸ್ಟ್ ಮಾಡಿಕೊಂಡೆವು. ಕೆಲಾಮಿಟಿ ಫಂಡ್‌ಗೆ ಸಂಬಂಧಿಸಿದಂತೆ ಕೇಂದ್ರಕ್ಕೆ ಹೋದರೆ ಒಂದು ಟೀಮ್ ಬರುತ್ತದೆ, ನಾವು ಒಂದು ಟೀಮ್ ಹೋಗಬಹುದು. ನೋಡಿಕೊಂಡು ಬಂದರೂ ನಮಗೇನೂ ಪರಿಹಾರ ಸಿಗುವುದಿಲ್ಲ. ನೂರು ಕೋಟಿ ರೂಪಾಯಿಗಳಷ್ಟು ಕೆಲಾಮಿಟಿ ಫಂಡನ್ನು ಸ್ಟೇಟ್ ಬಜೆಟ್‌ನಲ್ಲಿ ತೆಗೆದಿಟ್ಟು ಖರ್ಚಾಗುವುದನ್ನು ಪ್ರತಿ ವರ್ಷವೂ ಭರ್ತಿ ಮಾಡಿಕೊಂಡರೆ ತತ್‌ಕ್ಷಣ ರಿಲೀಫ್ ಸಿಗುತ್ತದೆಂದು ಸಲಹೆ ಕೊಟ್ಟೆವು. ಆದರೆ, ಇದರ ಬಗ್ಗೆ ಯಾವುದೇ ಉತ್ತರವಿಲ್ಲ. ನನಗೇನು ಬೇಕಾಗಿದೆಯೆಂದರೆ, ನಮಗೆ ಸಮಾಧಾನವಾಗುವ ರೀತಿಯಲ್ಲಿ ಆಗದೇ ಇದ್ದರೂ ಸಹ ವಾಸ್ತವಿಕ ಸ್ಥಿತಿಯನ್ನು ಯಾವ್ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಡ್ಯಾಮೇಜ್ ಆಗಿದೆ? ಏನೇನು ಹಾಳಾಗಿವೆ? ಎಲ್ಲಿ ರೈತರು ಬರಗಾಲಕ್ಕೆ ತುತ್ತಾಗಿದ್ದಾರೆ? ಎಷ್ಟು ಜನರು ವಲಸೆ ಹೋಗಿದ್ದಾರೆ? ತಾವು ಎಷ್ಟು ಹಣ ಖರ್ಚು ಮಾಡಿದ್ದೀರಿ? ಮುಂದೆ ಏನು ಮಾಡಬೇಕೆಂದಿದ್ದೀರಿ? ಇದರ ಬಗ್ಗೆ ಯಾವ ಸೂಚನೆಯೂ ಇಲ್ಲ, ಬೇಕಾದರೆ ಉತ್ತರ ನೋಡಿ. ಉತ್ತರದಲ್ಲಿ ರಿಲೀಸ್ ಎಂದು ಇದೆ. ನನಗೆ ರಿಲೀಸ್ ವಿವರ ಬೇಕಾಗಿಲ್ಲ. ರಿಲೀಸ್ ಇಟ್ಟುಕೊಂಡು, ಫಿಕ್ಸೆಡ್ ಡಿಪಾಸಿಟ್ ಅನ್ನು ನಿಮ್ಮ ಡಿ.ಸಿ.

ಇಟ್ಟುಕೊಂಡರೆ ನನಗೇನು ಸುಖ? ನನಗೆ ಆ ದುಡ್ಡು ಖರ್ಚಾಗಬೇಕು, ಬಡವನಿಗೆ ನೆರವಾಗಬೇಕು. ಆ ಕೆಲಸ ಇದುವರೆವಿಗೆ ಎಷ್ಟಾಗಿದೆ? ಈಗ ಸದನ ನಡೆಯುತ್ತಿದ್ದು, ಇನ್ನು ಮೂರು ದಿವಸಗಳಲ್ಲಿ ಮುಗಿಯುತ್ತದೆ, ಮೂರು ತಿಂಗಳುಗಳ ನಂತರ ನಾವು ಮತ್ತೆ ಸೇರುತ್ತೇವೆ. ನನಗೆ ಆ ಅಂಕಿ-ಅಂಶ ಬೇಕು. ಅದನ್ನು ಕೊಡುವವರೆಗೆ ನಾವು ಹೊರಗಡೆ ಸಭಾತ್ಯಾಗ ಮಾಡುವುದಿಲ್ಲ, ನಾವು ಇಲ್ಲಿರುತ್ತೇವೆ, ನಮಗೆ ಸರಿಯಾದ ಉತ್ತರ ಬೇಕು. ಇಲ್ಲದಿದ್ದರೆ ಇದನ್ನು ವಿತ್‌ಡ್ರಾ ಮಾಡಿಕೊಳ್ಳಿ. ಇವೊತ್ತು ಏನು ರಿಪ್ಲೆ ಕೊಟ್ಟಿದ್ದೀರಿ, ನಾನು ಅದನ್ನು ಹರಿದು ಹಾಕುವುದಕ್ಕೆ ಹೋಗುವುದಿಲ್ಲ. ನಾವು ಕೇಳಿದಂಥ ಪ್ರಶ್ನೆಗೆ ನಮಗೆ ತೃಪ್ತಿ ತರುವಂತೆ ಉತ್ತರ ಕೊಡದಿದ್ದರೆ ವಾಸ್ತವಿಕ ಸ್ಥಿತಿಯನ್ನು ಸರ್ಕಾರ ಹೇಳದೆ ಇದ್ದರೆ, ನಾಮಕಾವಸ್ತೆಗೆ ನಾವು ಇಲ್ಲಿ ಬರಲು ಸಿದ್ಧರಿಲ್ಲ. ಹಣ ಬಿಡುಗಡೆ ಆದದ್ದು ಎಷ್ಟು ಹಾಗೂ ಖರ್ಚಾದದ್ದು ಎಷ್ಟು ಎಂಬುದನ್ನು ತಿಳಿಸಬೇಕು. ಇಲ್ಲದಿದ್ದರೆ ವಿತ್‌ಡ್ರಾ ಮಾಡಿಕೊಳ್ಳಿ. ನಿನ್ನೆ ನಾವು ಮಾತನಾಡಿದ ಯಾವುದೇ ಅಂಶದ ಬಗ್ಗೆಯೂ ಉತ್ತರದಲ್ಲಿ ಪ್ರಸ್ತಾಪಿಸಿಲ್ಲ. ಉಪಾಧ್ಯಕ್ಷರೆ, ಒದಗಿಸಿರುವ ಉತ್ತರದಲ್ಲಿ ಏನಿದೆಯೆಂದು ಓದಿ. ನಮಗೆ ನೀವೇ ರಕ್ಷಣೆಗೆ ಬರಬೇಕಾಗುತ್ತದೆ.

ಉಪಾಧ್ಯಕ್ಷರು: ತಾವು ಕೇಳಿರುವಂಥ ಪ್ರಶ್ನೆಗಳಿಗೆ ಸಚಿವರು ಈಗ ಉತ್ತರ ಹೇಳುತ್ತಾರೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಅರಗ ಜ್ಞಾನೇಂದ್ರರವರು ಮಾತನಾಡಲು ಎದ್ದು ನಿಂತರು)

ಉಪಾಧ್ಯಕ್ಷರು: ನಿಮ್ಮ ಲೀಡರ್ ಈಗ ಮಾತನಾಡಿದ್ದಾರಲ್ಲಾ, ತಾವು ಕುಳಿತುಕೊಳ್ಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಸಚಿವರು ಸಮರ್ಪಕವಾದ ಉತ್ತರ ಕೊಟ್ಟಿಲ್ಲದಿರುವುದರಿಂದ ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಸಿ.ಪಿ.ಎಂ.ಪಕ್ಷದ ಸದಸ್ಯರಾದ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಸರ್ಕಾರದ ಧೋರಣೆ ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗ್‌ರಾಜ್: ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ಪ್ರಶ್ನೆ ಕೇಳಿದ್ದೆ. ಹೊಸ ಜಿಲ್ಲೆಗಳನ್ನು ಮಾಡಿದಾಗ....

ಉಪಾಧ್ಯಕ್ಷರು: ವಾಟಾಳ್ ನಾಗರಾಜ್‌ರವರೆ, ಸಚಿವರು ಉತ್ತರ ಹೇಳುವ ತನಕವಾದರೂ ತಾವು ತಡೆ ಹಿಡಿಯಿರಿ. ಅರಗ ಜ್ಞಾನೇಂದ್ರ ಮತ್ತು ವಾಟಾಳ್ ನಾಗರಾಜ್‌ರವರೆ, ತಾವು ಕುಳಿತುಕೊಳ್ಳಿ, ಸಚಿವರಿಂದ ನಿಮಗೆ ಉತ್ತರ ಕೊಡಿಸುತ್ತೇನೆ.

ಶ್ರೀ ರಮೇಶ್ ಸಿ.ಜಿಗಜಿಣಗಿ: ಮಾನ್ಯ ಉಪಾಧ್ಯಕ್ಷರೆ, ವಿಷಯದ ಗಂಭೀರತೆ ಬಗ್ಗೆ

ಮಾನ್ಯ ಉಪಮುಖ್ಯಮಂತ್ರಿಗಳು ಕೂಡ ಹೇಳಿದ್ದಾರೆ. ಆದರೆ, ಒಟ್ಟಾರೆಯಾಗಿ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಹೇಳುತ್ತಾರೆ ನಮ್ಮವರೂ ಹೇಳುತ್ತಾರೆ. ಇಡೀ ರಾಜ್ಯದಲ್ಲಿ ಮಳೆ ಅತ್ಯಂತ ಕಡಿಮೆಯಾಗಿರುವುದು 57 ತಾಲ್ಲೂಕುಗಳಲ್ಲಿ ಮಾತ್ರ. ಸುಮಾರು 118 ತಾಲ್ಲೂಕುಗಳಲ್ಲಿ ಸರಾಸರಿ ಮಳೆಯಾಗಿದೆ.

(ಈ ಹಂತದಲ್ಲಿ ರೈತ ಸಂಘದ ಸದಸ್ಯರಾದ ಶ್ರೀ ಕೆ.ಎಸ್.ಪುಟ್ಟಣ್ಣಯ್ಯನವರು ಮಾತನಾಡಲು ಎದ್ದು ನಿಂತರು)

ಉಪಾಧ್ಯಕ್ಷರು: ಪುಟ್ಟಣ್ಣಯ್ಯನವರೆ, ತಾವು ದಯಮಾಡಿ ಕೇಳಬೇಕು, ತಾವು ಡಿಸ್ಟರ್ಬ್ ಮಾಡಬಾರದು, ಇದು ಒಳ್ಳೆಯದಲ್ಲ.

ಶ್ರೀ ರಮೇಶ್.ಸಿ.ಜಿಗಜಿಣಗಿ: 57 ತಾಲ್ಲೂಕುಗಳಲ್ಲಿ ಮಾತ್ರ ಬರಗಾಲದ ಛಾಯೆ ಕಂಡಿದೆ. ಇಷ್ಟು ತಾಲ್ಲೂಕುಗಳಲ್ಲಷ್ಟೇ ಅಲ್ಲ, ಇನ್ನು ಎಲ್ಲೆಲ್ಲಿ ಹೆಚ್ಚಿಗೆ ತೊಂದರೆಯಾಗಿದೆಯೆಂದು ಜನರು ಹೇಳುತ್ತಾರೆ, ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದಂತೆ ಅಂತಹ ಕಡೆಗಳಲ್ಲಿ ನಾವು ಯಾವುದೇ ಕೆಲಸ ತೆಗೆದುಕೊಳ್ಳುವುದಕ್ಕೂ ಹಿಂಜರಿಯುವುದಿಲ್ಲ. ಅದೆಷ್ಟೇ ಹಣ ಖರ್ಚಾಗಲಿ, ಸರ್ಕಾರ ಆ ಹಣ ಖರ್ಚು ಮಾಡುವುದಕ್ಕೆ ಬದ್ಧವಿದೆಯೆಂಬ ಮಾತನ್ನು ಹೇಳಿ, ಮೆಮೊರ್‍ಯಾಂಡಮ್ ಕಳುಹಿಸುವ ವಿಚಾರದಲ್ಲಿ ಹೇಳುವುದಾದರೆ ನನಗೆ ಬಹಳ ವ್ಯಥೆಯೆನಿಸುತ್ತದೆ. ಹೋದ ಸಲ ಮೂಲು ಸಭೆಗಳಿಗೆ ಮೂರು ಸಲ ಮೆಮೊರಾಂಡಮ್ ತೆಗೆದುಕೊಂಡು ಹೋಗಿ ಬಂದೆ, ಅದರಲ್ಲಿ ಪರಿಹಾರವಾಗಿ 130 ಕೋಟಿ ರೂಪಾಯಿಗಳಷ್ಟು ಹಣ ಕೇಳಿದ್ದೆ, ಪರಿಹಾರ ಹಣ ಏನೂ ಸಿಕ್ಕಿಲ್ಲ. ಪರಿಹಾರ ಸಿಗದಿರುವುದರಿಂದ ಈ ಸಲ ಮೆಮೊರಾಂಡಮ್ ಕೊಡಬೇಕೇ ಬೇಡವೇ ಎನ್ನುವುದರ ಬಗ್ಗೆ ತೀರ್ಮಾನ ಮಾಡಿಲ್ಲ. ಈಗ ಸದಸ್ಯರು ಸಲಹೆ ಮಾಡಿರುವುದರಿಂದ, ಆ ಪ್ರಕಾರ ನಾವು ಕೇಂದ್ರ ಸರ್ಕಾರಕ್ಕೆ ಒಂದು ಮೆಮೊರಾಂಡಮ್ ಕಳುಹಿಸತಕ್ಕಂಥ ಕೆಲಸವನ್ನು ನಾನು ಮಾಡುತ್ತೇನೆ. ಇನ್ನು ಹೊಸದಾಗಿ ರಚನೆಯಾದ ಜಿಲ್ಲೆಗಳಿಗೆ ಏನು ಮಾಡಿದ್ದೀರೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಕಳೆದ ತಿಂಗಳು ಆಗಸ್ಟ್, 15ರಂದು ಜನ್ಮ ತಾಳಿದ ಹೊಸ ಜಿಲ್ಲೆಗಳೇನಿವೆ, ಇದು ನಮ್ಮ ಸರ್ಕಾರದ ಒಂದು ಮಹತ್ವದ ಸಾಧನೆಯೆಂದು ಹೇಳುತ್ತಾ, ಮೈಸೂರು ಜಿಲ್ಲೆಯಲ್ಲಿ ಇನ್ನೊಂದು ಹೊಸ ಜಿಲ್ಲೆ ಏನು ರಚನೆಯಾಗಿದೆ, ನಾವು ಮೈಸೂರು ಜಿಲ್ಲೆಗೆ ಬಿಡುಗಡೆ ಮಾಡಿರುವ ಹಣದಲ್ಲೇ ಆ ಜಿಲ್ಲೆಗೂ ಕೂಡ ಖರ್ಚು ಮಾಡಬೇಕೆಂದು ಆದೇಶ ಹೊರಡಿಸಿದ್ದೇವೆ. ಮತ್ತೆ ಈ ಹಣವನ್ನೆಲ್ಲಾ ಕೊಡತಕ್ಕಂಥಾದ್ದು ಜಿಲ್ಲಾಧಿಕಾರಿಗಳ ವರದಿ ಮೇಲೆಯೇ. ಈಗ ಬಿಜಾಪುರದಲ್ಲಿ ಕುಡಿಯುವ ನೀರಿನ ತೊಂದರೆಯಿರುವುದರಿಂದ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಅಲ್ಲಿನ ಜಿಲ್ಲಾಧಿಕಾರಿಗಳು ಏನೇನು ಕೇಳಿದ್ದಾರೆ, ಅವರ ವರದಿ ಆಧಾರದ ಮೇಲೆಯೇ ನಾವು ಹಣ ಬಿಡುಗಡೆ ಮಾಡಿದ್ದೇವೆ. ಪುನಃ ಇದಕ್ಕೆ

ಜಿಲ್ಲಾಧಿಕಾರಿಗಳಿಂದ ವರದಿ ಬಂದರೆ, ಅದು ಕುಡಿಯುವ ನೀರಿನ ಉದ್ದೇಶಕ್ಕಾಗಿರಬಹುದು ಅಥವಾ ಇನ್ನಿತರ ಉದ್ದೇಶಕ್ಕಾಗಿರಬಹುದು, ವರದಿಗಳು ಬಂದರೆ ನಾವು ಹಣ ಬಿಡುಗಡೆ ಮಾಡುವ ವ್ಯವಸ್ಥೆ ಮಾಡುತ್ತೇವೆ. ಇದರ ಬಗ್ಗೆ ಯಾರಿಗೂ ಕೂಡ ಸಂದೇಹ ಬೇಡ.

ಉಪಾಧ್ಯಕ್ಷರು: ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಾ, ಇದುವರೆವಿಗೂ ಎಷ್ಟು ದುಡ್ಡು ಖರ್ಚಾಗಿದೆ ಎಂದು ಕೇಳಿರುವುದಕ್ಕೆ ಉತ್ತರ ಹೇಳಿ.

ಶ್ರೀ ರಮೇಶ್.ಸಿ.ಜಿಗಜಿಣಗಿ: ಯಾವ್ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಹಣ ಖರ್ಚಾಗಿದೆ ಎಂಬುದರ ಅಂಕಿ-ಅಂಶಗಳನ್ನು ಅವರಿಗೆ ಕೊಟ್ಟು ಕಳುಹಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇದರ ಅಂಕಿ-ಅಂಶಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. 57 ತಾಲ್ಲೂಕುಗಳಲ್ಲಿ ಬರಗಾಲ ಛಾಯೆ ಮೂಡಿದೆ, ಅದು ಇನ್ನೂ ಕಡಿಮೆಯಾಗಲಿ. ತಾವು ಏನು ಅಂಕಿ-ಅಂಶ ಒದಗಿಸಿದಿರಿ, ಅದರ ಬಗ್ಗೆ ನಾನು ಡಿಸ್‌ಪ್ಯೂಟ್ ಮಾಡುವುದಿಲ್ಲ. ನನಗೆ ಏನು ಬೇಕಾಗಿದೆ ಯೆಂದರೆ, ಕಳೆದ ಮೂರು ತಿಂಗಳುಗಳಿಂದ ಸತತವಾಗಿ ಈ 57 ತಾಲ್ಲೂಕುಗಳಲ್ಲಿ ಬರಗಾಲದ ಛಾಯೆ ಇದೆ. ಇಷ್ಟು ತಾಲ್ಲೂಕುಗಳಲ್ಲಿ ಯಾವ್ಯಾವ ಉದ್ದೇಶಗಳಿಗೆ ಎಷ್ಟೆಷ್ಟು ಹಣ ಖರ್ಚು ಮಾಡಿದ್ದೀರಿ? ರೈತರುಗಳನ್ನು ಉಳಿಸಬೇಕೆಂದು ಹೇಳುತ್ತೇನೆ. ನಾವು ಬಿ.ಜೆ.ಪಿ.ಯ 39 ಜನ ಸದಸ್ಯರುಗಳು ಇದಕ್ಕೆ ತಾವು ಸಮರ್ಪಕವಾಗಿ ಉತ್ತರ ಕೊಡದಿದ್ದರೆ, ಈಗ ಊಟದ ಸಮಯದ ನಂತರ ನಾವು ಮತ್ತೆ ಸೇರಿದಾಗಲೂ ಅದೇ ಉತ್ತರಕ್ಕೆ ನಿಂತುಕೊಳ್ಳುತ್ತೇನೆ. ಇವೊತ್ತು ಪೂರ್ತಿ ದಿವಸವಾಗಲಿ, ನಾನು ಮೊಂಡುತನ ಮಾಡುವುದಿಲ್ಲ.

ಉಪಾಧ್ಯಕ್ಷರು: ಸಚಿವರು ಮಾಹಿತಿಯನ್ನು ಒದಗಿಸಿಕೊಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸಚಿವರು ಸದನಕ್ಕೆ ಬಂದಾಗ ಮಾಹಿತಿ ಸಹಿತ ಬರಬೇಕಲ್ಲ. 57 ತಾಲ್ಲೂಕುಗಳಲ್ಲಿ ಬರಗಾಲದ ಛಾಯೆಯಿದ್ದು ಏನು ಖರ್ಚು ಮಾಡಿದ್ದಾರೆಂದು...

ಶ್ರೀ ವಾಟಾಳ್ ನಾಗರಾಜ್: ನಮ್ಮ ಜಿಲ್ಲೆ ಬಗ್ಗೆ ಸಚಿವರು ಪ್ರಾಮಾಣಿಕವಾಗಿ ಹೇಳಲಿಲ್ಲ. ಆದುದರಿಂದ, ಅವರ ಹೇಳಿಕೆಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಬರಗಾಲದ ಬಗ್ಗೆ ಏನು ಪ್ರಸ್ತಾಪಿಸಿದೆವು, ಆ

ಬರಗಾಲದ ಕ್ರೂರತೆಯೇನಿದೆ, ಕೊಟ್ಟಿರುವ ಉತ್ತರ ಅದಕ್ಕಿಂತಲೂ ಕ್ರೂರವಾಗಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ನಾನೂ ಸಹ ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ರೈತ ಸಂಘದ ಸದಸ್ಯರಾದ ಶ್ರೀ ಕೆ.ಎಸ್.ಪುಟ್ಟಣ್ಣಯ್ಯನವರು ಸರ್ಕಾರದ ಧೋರಣೆ ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಕಾಯುತ್ತೇವೆ, ಊಟದ ಸಮಯದ ನಂತರ ಆ ಕುರಿತು ಮಾಹಿತಿ ತರಿಸಿಕೊಡಿ. ನಾನು ಸಭಾತ್ಯಾಗ ಮಾಡುವುದಿಲ್ಲ, ನನಗೆ ಉತ್ತರ ಬೇಕು. ಜಿಲ್ಲಾಧಿಕಾರಿಗಳಿಗೆ ದುಡ್ಡು ಕೊಟ್ಟಿದ್ದರೂ ಅವರು ಖರ್ಚು ಮಾಡುವುದಿಲ್ಲ, ಖರ್ಚು ಮಾಡಬಾರದೆಂದು ನೀವು ಸೂಚನೆ ಕೊಟ್ಟಿದ್ದೀರಿ.

ಶ್ರೀ ಸಿದ್ಧರಾಮಯ್ಯ: ಆ ಕುರಿತು ಮಾಹಿತಿಯನ್ನು ಒದಗಿಸಿಕೊಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಯಾವಾಗ?

ಉಪಾಧ್ಯಕ್ಷರು: ಇವೊತ್ತು ಸಾಯಂಕಾಲದೊಳಗೆ...

ಶ್ರೀ ಬಿ.ಎಸ್.ಯಡಿಯೂರಪ್ಪ: ಬೇರೆ ಯಾವುದೇ ಚರ್ಚೆಯಾಗುವುದಕ್ಕೆ ನಾವು ಬಿಡುವುದಿಲ್ಲ, ನಮಗೆ ಸಮರ್ಪಕವಾದ ಉತ್ತರ ಬೇಕು, ನಮ್ಮ ಜನರಿಗೆ ಉತ್ತರ ಕೊಡಬೇಕು.

ಉಪಾಧ್ಯಕ್ಷರು: ಯಡಿಯೂರಪ್ಪನವರೆ, ತಾವು ದಯಮಾಡಿ ಕೇಳಬೇಕು. ಈ ರೀತಿ ತಾವು ಉದ್ವೇಗಕ್ಕೊಳಗಾಗುವುದು ಬೇಡ.

ಶ್ರೀ ಅರಗ ಜ್ಞಾನೇಂದ್ರ: ನಮ್ಮ ತಾಲ್ಲೂಕುಗಳಿಗೆ ಇನ್ನೂ ಹಣ ಬರಲಿಲ್ಲ, ಜಿಲ್ಲಾಧಿಕಾರಿಗಳು ಆ ಹಣವನ್ನು ಖರ್ಚು ಮಾಡುತ್ತಿಲ್ಲ. ಅವರ ಮರ್ಜಿಗೋಸ್ಕರ ಹಣ ಕೊಡುವುದೇ? ಅಲ್ಲಿ ಜನರು ಸಾಯುತ್ತಿದ್ದಾರೆ, ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಅವರ ನೆರವಿಗೆ ಹೋಗಬೇಕಲ್ಲ.

ಉಪಾಧ್ಯಕ್ಷರು: ಯಡಿಯೂರಪ್ಪನವರೆ, ಸಾಯಂಕಾಲದೊಳಗೆ, ಸದನ ಮುಗಿಯುವುದರೊಳಗೆ ಸಚಿವರು ತಮಗೆ ಮಾಹಿತಿ ಒದಗಿಸಿಕೊಡುತ್ತಾರೆ.

SRI B.I.PATIL: We had requested the Government to give fertilizer subsidy to the farmers. The Government has not responded.

(INTERRUPTIONS)

(ಈ ಹಂತದಲ್ಲಿ ಎಂ.ಇ.ಎಸ್. ಪಕ್ಷದ ಸದಸ್ಯರಾದ ಶ್ರೀ ಬಿ.ಐ.ಪಾಟೀಲರವರು ಸಭಾತ್ಯಾಗ ಮಾಡಿದರು)

ಶ್ರೀ ರಮೇಶ್.ಸಿ.ಜಿಗಜಿಣಗಿ: ನನಗೆ ಹೇಳುವುದಕ್ಕೆ ಅವಕಾಶ ಕೊಡಿ. ಹಣ ಖರ್ಚು ಮಾಡಿಲ್ಲವೆಂದು ಅವರು ಆರೋಪ ಮಾಡಿದ್ದಾರೆ. ಜಿಲ್ಲಾಧಿಕಾರಿಗಳಿಂದ ನಾವು ವರದಿ ತರಿಸಿಕೊಳ್ಳಬೇಕಾಗಿದೆ. ಯಾವ್ಯಾವ ಉದ್ದೇಶಗಳಿಗೆ ಎಷ್ಟೆಷ್ಟು ಹಣ ಖರ್ಚಾಗಿದೆಯೆಂಬುದರ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ನಾಳೆ ಅವರಿಗೆ ಅದನ್ನು ಒದಗಿಸಿಕೊಡುವ ಕೆಲಸ ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನನ್ನ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಬೇಕು. ಉಪಮುಖ್ಯಮಂತ್ರಿಗಳೇ, ಇದು ಮೊಂಡತನ ಅಲ್ಲ. ನೀವು ಏನು ಬೇಕಾದರೂ ಮಾಡಿ ನಾವು ಒತ್ತಾಯ ಮಾಡುವುದಿಲ್ಲ. ಇವತ್ತು ನಾನೊಂದು ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ನಾನು ಒಂದು ಮಾತು ಏನು ಹೇಳಿದೆ, ತಾವು 25 ಕೋಟಿ 43 ಲಕ್ಷ ಬಿಡುಗಡೆ ಮಾಡಿದ್ದೇವೆ ಎಂದು ಹೇಳುತ್ತೀರಿ, ಆದರೆ ಅದು ಸ್ಯಾಂಕ್ಷನ್ ಆಗಿರತಕ್ಕ ಹಣ, ಬಿಡುಗಡೆ ಆಗಿರುವುದು ಅದರ ಅರ್ಧಭಾಗ ಮಾತ್ರ. ಅದಕ್ಕೆ ನನ್ನ ಜಿಲ್ಲೆಯದ್ದೇ ಒಂದು ಉದಾಹರಣೆಯನ್ನು ಕೊಟ್ಟೆ, ಡಿ.ಸಿ.ಯವರ ಹತ್ತಿರ ಮಾತನಾಡಿದ್ದೇನೆ, ಅವರು ಬರೀ 50 ಲಕ್ಷ ಮಾತ್ರ ಬಿಡುಗಡೆ ಆಗಿದೆ ಯಡಿಯೂರಪ್ಪನವರೇ, ಜಿಲ್ಲೆಯ ಪ್ರತಿ ಇಲಾಖೆಗಳಿಗೂ 40 ಲಕ್ಷವನ್ನೂ ಹಂಚಿದ್ದೇವೆ, ಇನ್ನುಳಿದ 10 ಲಕ್ಷವನ್ನು ಎಮರ್ಜೆನ್ಸಿಗಾಗಿ ಡೆಪಾಸಿಟ್ ಇಟ್ಟಿದ್ದೇನೆ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಆದುದರಿಂದ ನಾನು ಜನರಿಗೆ ಏನು ಉತ್ತರವನ್ನು ಕೊಡಬೇಕು, ಎರಡನೆಯದು ಈ ಸ್ಯಾಂಕ್ಷನ್ ಆಗಿರತಕ್ಕ ಅಮೌಂಟ್‌ನಲ್ಲಿ ಬಿಡುಗಡೆ ಆಗಿರುವ ಮೊತ್ತ ಎಷ್ಟು? ಖರ್ಚಾಗಿರುವ ಮೊತ್ತ ಎಷ್ಟು? ಬೇರೆ ಕಡೆ ಬೇಡ ಇವತ್ತು 57 ತಾಲ್ಲೂಕು ಬರಗಾಲದಲ್ಲಿವೆ ಅಲ್ಲಿ ಎಷ್ಟು ಖರ್ಚು ಮಾಡಿದ್ದೀರಿ? ಅತಿವೃಷ್ಟಿಯಿಂದಾಗಿ ಕೆರೆಕಟ್ಟೆಗಳು ಒಡೆದು ರಸ್ತೆಗಳು ಹಾಳಾಗಿರುವ ಕಡೆ ನೀವು ಏನು ರಿಲೀಫ್ ಕೊಟ್ಟಿದ್ದೀರಾ?

ಉಪಾಧ್ಯಕ್ಷರು: ನಾಳೆ ಸದನ ಮುಗಿಯುವುದರೊಳಗೆ ಅವರು ನಿಮಗೆ ಮಾಹಿತಿಯನ್ನು ಒದಗಿಸಿ ಕೊಡುತ್ತಾರೆ, ದಯವಿಟ್ಟು ನಿಮ್ಮ ಸಹಕಾರವನ್ನು ನೀಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಮಗೆ ಸರಿಯಾದ ಮಾಹಿತಿ ಸಿಗುವ ತನಕ ಸದನದಲ್ಲಿ ಬೇರೆ ಯಾವುದೇ ಚರ್ಚೆಗೆ ನಾವು ಅವಕಾಶ ಕೊಡುವುದಿಲ್ಲ. ಸದನಕ್ಕೆ ಒಂದು ಮಹತ್ವ ಇದೆ. ದಾಖಲೆಗಳಿಗೆ ಹೋಗುತ್ತದೆ. ನಿಮಗೆ ಹೇಗೆ ಬೇಕೋ ಹಾಗೆ ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲ. ನೀವು ಏನೋ ಒಂದು ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಮಧ್ಯಾಹ್ನ ನಮಗೆ ಮಾಹಿತಿ ಬೇಕು, ಇಲ್ಲ ಅಂದರೆ ಊಟ ಆದ ಮೇಲೂ

ಸಹಿತ ಇದನ್ನೇ ಮುಂದುವರೆಸುತ್ತೇವೆ. ಯಾವುದ್ಯಾವುದೋ ವಿಷಯಗಳಿಗೆ ಸದನ ಆಡ್‌ಜರ್ನ್ ಆಗಿದೆ ದಯವಿಟ್ಟು ಸದನವನ್ನು ಅಡ್‌ಜರ್ನ್ ಮಾಡಿ.

ಉಪಾಧ್ಯಕ್ಷರು: ಈಗ ಸದನದೊಳಗೆ ನೀವು ಹೇಳಿದ ಹಾಗೆ ನಡೆಯುವುದಕ್ಕೆ ಆಗುವುದಿಲ್ಲ. ನಿಯಮಾವಳಿಗಳ ಪ್ರಕಾರ ನಾವು ಹೋಗಬೇಕಾಗುತ್ತದೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಯಾವುದೇ ಸರ್ಕಾರವನ್ನು ಒತ್ತಾಯ ಮಾಡುವುದು ನಿಯಮಾವಳಿಗಳಲ್ಲಿ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇದರ ಬಗ್ಗೆ ನಿಯಮ 69ರ ಪ್ರಕಾರ ಚರ್ಚೆ ಮಾಡಿ, ದಾಖಲೆಗೆ ಹೋಗಿದೆ, ಇವತ್ತು ಉತ್ತರ ಕೊಡಿ ಎಂದು ಕೇಳಿದ್ದೆವು ಸಂಬಂಧಪಟ್ಟ ಜಿಲ್ಲಾಧಿಕಾರಿಯವರ ರಿಪ್ಲೈ ತೆಗೆದುಕೊಂಡು ಬನ್ನಿ ಎಂದು ಕೇಳಿದ್ದೆವು ನೀವು ಒಂದು ಗಂಟೆ ಹೌಸ್ ಅನ್ನು ಅಡ್‌ಜರ್ನ್ ಮಾಡಿ, ನಿಮ್ಮ ಕೊಠಡಿಗೆ ಬರುತ್ತೇವೆ, ನಿಮಗೆ ರಿಕ್ವೆಸ್ಟ್ ಮಾಡುತ್ತೇವೆ.

(ಗೊಂದಲ)

ಉಪಾಧ್ಯಕ್ಷರು: ತಾವು ಜವಾಬ್ದಾರಿ ಸ್ಥಾನದಲ್ಲಿ ಇರುವವರು, ತಾವು ದಯಮಾಡಿ ಸಹಕಾರವನ್ನು ನೀಡಿ, ಸಾಕಷ್ಟು ಅನುಭವ ಇರುವವರು, ಮಂತ್ರಿಗಳು ಈಗಾಗಲೇ ಸ್ಪಷ್ಟಪಡಿಸಿದ್ದಾರೆ ಮತ್ತು ಉಪಮುಖ್ಯಮಂತ್ರಿಗಳೂ ಸಹಿತ ಹೇಳಿದ್ದಾರೆ, ಉತ್ತರ ಹೇಳಿದ್ದಾರೆ, ತಾವು ದಯಮಾಡಿ ಸಹಕಾರ ನೀಡಿ, ಈಗ ಸಭೆಯನ್ನು ಊಟಕ್ಕಾಗಿ ಮುಂದೂಡಿ ಮತ್ತೆ 3 ಗಂಟೆ ಸಮಾವೇಶಗೊಳ್ಳುವುದು.

(ಸದನವು 1 ಗಂಟೆ 43 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3:00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3.10 ನಿಮಿಷಕ್ಕೆ ಸಮಾವೇಶಗೊಂಡಿತು. ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರ ಶೇಖರ ಎಂ.ಮಾಮನಿ)ರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು)

(2) ಕಂದಾಯ ಸಚಿವರ ಹೇಳಿಕೆ:

ವಿಷಯ: ರಾಜ್ಯದಲ್ಲಿ ಬರಗಾಲ ಉಂಟಾಗಿರುವ ಬಗ್ಗೆ ಮುಂದುವರೆದ ಚರ್ಚೆ

+ ಶ್ರೀ ಬಿ.ಎಸ್.ಯಡಿಯೂರಪ್ಪ: ಸನ್ಮಾನ್ಯ ಉಪಾಧ್ಯಕ್ಷರೇ....

ಉಪಾಧ್ಯಕ್ಷರು: ತಾವು ಈಗಾಗಲೇ ಹೇಳಿದಿರಲ್ಲಾ, ಅವರು ನಾಳೆ ಸಂಜೆ ಈ ಸದನ ಮುಗಿಯುವುದರೊಳಗಾಗಿ ತಾವು ಏನು ಪ್ರಸ್ತಾಪವನ್ನು ಮಾಡಿರುತ್ತೀರಿ ಅದಕ್ಕೆ ಸಂಪೂರ್ಣವಾದಂತಹ ಉತ್ತರವನ್ನು ಕೊಡುತ್ತೇನೆಂದು ಭರವಸೆಯನ್ನು ಕೊಟ್ಟಿದ್ದಾರೆ. ತಾವು ದಯಮಾಡಿ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕು ವಿನಂತಿಯನ್ನು ಮಾಡುತ್ತೇನೆ. ದಯಮಾಡಿ ವಿಚಾರ ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸ್ವಾಮಿ ದಯಮಾಡಿ ನನ್ನ ಮಾತನ್ನು ಕೇಳಿ, ನಾನು ಏನು ಹೇಳುತ್ತೇನೆ ದಯಮಾಡಿ ಕೇಳಬೇಕು. ನನ್ನ ಮಾತಿಗೆ ಕನ್ವಿನ್ಸ್ ಆಗದೇ ಹೋದರೆ ನಾನು ನೀವು ಹೇಳಿದಂತೆ ನಡೆದುಕೊಳ್ಳುತ್ತೇನೆ. ಅಲ್ಟಿಮೇಟ್ ಆಗಿ ತಾನೇ ತಾವು ಹೇಳುವುದು. ತಾವು ಹೇಳಿದಂತೆ ತಾನೇ ನಾವು ಸದನವನ್ನು ನಡೆಸಬೇಕು. ನಾವುಗಳು ಒಬ್ಬರು ಹೀಗೆಯೇ ಆಗಬೇಕು ಎನ್ನುವುದಕ್ಕೆ ಆಗುವುದಿಲ್ಲ. ತಾವು ಅಂತಿಮವಾಗಿ ಏನು ಆದೇಶನ್ನು ಕೊಡುತ್ತೀರಿ ಅದರಂತೆ ನಡೆದುಕೊಳ್ಳಬೇಕು ಎನ್ನುವಂತಹ ಸಾಮಾನ್ಯ ಪ್ರಜ್ಞೆ ನನಗೆ ಇದೆ. ನಾನು ಹೇಳುವುದೇನೆಂದರೆ, ಈ ಅತಿವೃಷ್ಟಿ ಬರಗಾಲದ ಬಗ್ಗೆ ಈ ಸದನ ಪ್ರಾರಂಭವಾದ ಒಂದು ತಿಂಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಪ್ರಸ್ತಾಪವನ್ನು ಮಾಡುತ್ತಿದ್ದೇವೆ. ನಿಲುವಳಿ ಸೂಚನೆಯ ಮೂಲಕ ನೆನ್ನೆಯ ದಿವಸ ಪ್ರಸ್ತಾಪವನ್ನ ಮಾಡಬೇಕೆಂದು ಇದ್ದೆವು. ನಿಯಮ 69ರ ಮೂಲಕ ಪ್ರಸ್ತಾಪವನ್ನು ಮಾಡುವುದಕ್ಕೆ ಅಧ್ಯಕ್ಷರು ಅವಕಾಶವನ್ನು ಮಾಡಿಕೊಟ್ಟರು. ಒಂದು ದಿವಸ ಪೂರ್ಣ ಅವರ ಹತ್ತಿರ ಎಲ್ಲವನ್ನೂ ಸಹ ತಿಳಿಸಿದ್ದೇವೆ. ನಾವು ಆ ತಾಲ್ಲೂಕುಗಳ ಬಗ್ಗೆ, ಜಿಲ್ಲೆಯ ಬಗ್ಗೆ, ರಾಜ್ಯದ ಬಗ್ಗೆ ಪ್ರಶ್ನೆಗಳು ಏನಿವೆ ಅದರ ಮಾಹಿತಿಯನ್ನು ತರಿಸಿಕೊಂಡು ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವುದಕ್ಕೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಇಷ್ಟೊಂದು ವ್ಯಾಪಕವಾದಂತಹ ಚರ್ಚೆಯಾದ ಮೇಲೆ ಉತ್ತರವನ್ನು ಕೊಡುವುದಕ್ಕೆ ಕೇಳಿದ್ದೇವೆ. ಆದರೆ ಅವರು ಉತ್ತರವನ್ನು ಏನು ಕೊಟ್ಟಿದ್ದಾರೆ ಅದು ತಮ್ಮ ಹತ್ತಿರವೂ ಸಹ ಇದೆ. ನಾವು ಏನು ಕೇಳಿದ್ದೇವೆ ಎಂದರೆ, ಎಲ್ಲಿ ಬರಗಾಲ ಇದೆ, ಎಲ್ಲಿ ಅತಿವೃಷ್ಟಿ ಇದೆ, ಆ ಬರಗಾಲಕ್ಕೆ ತುತ್ತಾದಂತಹ ಪ್ರದೇಶಗಳಲ್ಲಿ ವಲಸೆ ಹೋಗುತ್ತಿರತಕ್ಕಂತಹ ಕೃಷಿ ಕಾರ್ಮಿಕರಿಗೆ ಉದ್ಯೋಗ ಏನಾದರೂ ಸಿಕ್ಕಿದೆಯಾ? ಪರಿಹಾರ ಕಾರ್ಯಕ್ರಮಗಳನ್ನು ಏನಾದರೂ ತೆಗೆದುಕೊಂಡಿದ್ದೀರೊ? ಜಾನುವಾರುಗಳು ಸತ್ತಿವೆಯೋ? ಮೇವು ಏನಾದರೂ ಕೊಟ್ಟಿದ್ದೀರೋ? ಏನೇನು ಮಾಡಿದ್ದೀರಿ? ಅದೇ ರೀತಿಯಲ್ಲಿ ಅತಿವೃಷ್ಟಿಗಳು ಆಗಿರುವಂತಹ ಕಡೆಗಳಲ್ಲಿ ರಸ್ತೆಗಳು ಹಾಳಾಗಿದೆ, ಕೆರೆ ಕಟ್ಟೆಗಳು ಒಡೆದು ಹೋಗಿದೆ ಬೆಳೆ ಎಷ್ಟು ನಾಶವಾಗಿದೆ ನಮ್ಮದು ಏನೋ ಒಂದು ಮಾಹಿತಿ, ನಾವು ಹೇಳುತ್ತೇವೆ. ನಿಮಗೆ ಸರ್ಕಾರ ಇದೆ, ಜಿಲ್ಲಾಧಿಕಾರಿಗಳು ಇದ್ದಾರೆ, ಎಷ್ಟು ಬೆಳೆ ನಾಶವಾಗಿದೆ? ಇದಕ್ಕೆ ಎಷ್ಟು ಪರಿಹಾರವನ್ನು ಕೊಟ್ಟಿದ್ದೀರಿ? ಎಷ್ಟು ಕೆರೆಕಟ್ಟೆಗಳು ಒಡೆದು ಹೋಗಿದೆ? ಅದನ್ನು ರಿಪೇರಿ ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಎಲ್ಲಿ ಸಂಚಾರಕ್ಕೆ ಯೋಗ್ಯ ಇಲ್ಲದೇ ಇರತಕ್ಕಂಥಹ ರಸ್ತೆಗಳಾಗಿದೆ

ಅದಕ್ಕೆ ನೀವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಬರಗಾಲಕ್ಕೆ ತುತ್ತಾಗಿ ಎಷ್ಟು ಜನರು ವಲಸೆ ಹೋಗಿದ್ದಾರೆ? ಯಾರಿಗೆ ಉದ್ಯೋಗವನ್ನು ಕೊಟ್ಟಿದ್ದೀರಿ? ಎಂದು ನಾವು ಕೇಳಿದ್ದೆವು. ನಾವು ಏನು 100 ಕೋಟಿ ರೂಪಾಯಿಗಳನ್ನೇ ನಿಗದಿ ಮಾಡಿ ಇಲ್ಲದಿದ್ದರೆ ನಾವು ಬಿಡುವುದಿಲ್ಲ, ಎಂದು ಹೇಳುತ್ತಿಲ್ಲ. ನೀವು ಬಿಡುಗಡೆ ಮಾಡಿರುವಂತಹ ಹಣ 25 ಕೋಟಿ 43 ಸಾವಿರದ 72 ಸಾವಿರ ರೂಪಾಯಿಗಳು, ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಇದರಲ್ಲಿ 3 ಕೋಟಿ ರೂಪಾಯಿಗಳೂ ಸಹ ಖರ್ಚಾಗಿಲ್ಲ. ನೀವು ಬಿಡುಗಡೆ ಮಾಡಿದ್ದೀರಾ? ನನ್ನದು ಏನಿದೆ ಎಂದರೆ ತಾವು ಮಂಜೂರು ಮಾಡಿದ್ದೀರಿ, ಬಿಡುಗಡೆ ಮಾಡಿರುವಂಥದ್ದು 25 ಕೋಟಿ 43 ಲಕ್ಷ ರೂಪಾಯಿಗಳು ಅಲ್ಲ. Not even 50%. ಬಿಡುಗಡೆಯಾಗಿರುವುದು. ಬಿಡುಗಡೆಯಾಗಿರುವ ಹಣದಲ್ಲಿ ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಖರ್ಚಾಗಿದೆ? ನಾನು ಕಾಮಗಾರಿಯ ವಿವರಗಳನ್ನು ಕೇಳುತ್ತಿಲ್ಲ. ನೀವೇ ಹೇಳಿದ್ದೀರಿ 57 ತಾಲ್ಲೂಕುಗಳು ತೀವ್ರವಾದಂತಹ ಬರಗಾಲಕ್ಕೆ ತುತ್ತಾಗಿದೆ. ನಾನು ಅದನ್ನು 92 ಮಾಡಿ ಎಂದು ಹೇಳುತ್ತಿಲ್ಲ. ಈ 57 ತಾಲ್ಲೂಕುಗಳಲ್ಲಿ ಅಲ್ಲಿರುವಂತಹ ಕೃಷಿ ಕಾರ್ಮಿಕರನ್ನು ಉಳಿಸುವುದಕ್ಕೋಸ್ಕರವಾಗಿ ಏನು ಕಾಮಗಾರಿಗಳನ್ನು ತೆಗೆದುಕೊಂಡಿದ್ದೀರಿ ಅದನ್ನು ಹೇಳಿ. ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಅದರಲ್ಲಿ ಎಷ್ಟು ಖರ್ಚು ಮಾಡಿದ್ದೀರಿ? ಇದನ್ನು ನಾನು ಇವತ್ತು ಹೇಳುತ್ತಿಲ್ಲ. ನೆನ್ನೆಯ ದಿವಸ ಮಾತನ್ನು ಪ್ರಾರಂಭ ಮಾಡಿದ ತಕ್ಷಣ ಕೇಳಿ 10 ನಿಮಿಷ ಮಾತನಾಡಿದೆ. ನಾನೇನು ಹೇಳಿದೆ ಎಂದರೆ, ಏನು ಹಣ ಬಿಡುಗಡೆಯಾಗಿದೆ, ವಾಸ್ತವವಾಗಿ ಖರ್ಚು ಎಷ್ಟು ಆಗಿದೆ, ಎಲ್ಲೆಲ್ಲಿ ಖರ್ಚು ಮಾಡಿದ್ದೀರಿ ಅದರ ವಿವರಗಳನ್ನು ನಮಗೆ ಕೊಡಿ. ನಾವು ನಮ್ಮ ಜಿಲ್ಲೆಯನ್ನು ಉದಾಹರಣೆಯನ್ನು ಕೊಟ್ಟು ಒಂದು ಕೋಟಿ ರೂಪಾಯಿಗಳೆಂದು ಹೇಳಿರುವಂಥದ್ದು ಸರಿಯಾದುದು ಅಲ್ಲ. 50 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿರುವಂಥದ್ದು. ತಪ್ಪು ಮಾಹಿತಿಯನ್ನು ಕೊಟ್ಟಿರುತ್ತೀರಿ ಇದನ್ನೆಲ್ಲಾ ನಾನು ಈಗ ಹೇಳಿರುವಂಥದ್ದು. ಇವತ್ತು ನಾನೇನು ಹೊಸ ಪ್ರಶ್ನೆಯನ್ನು ಕೇಳುತ್ತಿಲ್ಲ. ಆ ವಿವರಗಳನ್ನು ಕೇಳಿದರೆ ಅವರ ಉತ್ತರದಲ್ಲಿ ಎಲ್ಲಿಯಾದರೂ ಒಂದು ಕಡೆ ಈ ವಿವರ ಇದೆಯಾ? ಜನರ ಪ್ರತಿನಿಧಿಗಳಾಗಿ ಜನರ ವರದಿಯನ್ನು ಒಪ್ಪಿಸುವುದಕ್ಕೆ ಬಂದಿದ್ದೇವೆ. ಅವರು ಏನೋ ಉತ್ತರವನ್ನು ಕೊಡುತ್ತಾರೆ, ನಾವು ಒಂದು ಸಭಾತ್ಯಾಗವನ್ನು ಮಾಡುತ್ತೇವೆ, ಧರಣಿ ಕುಳಿತುಕೊಳ್ಳುತ್ತೇವೆ ಇದರಿಂದ ಅವನಿಗೆ ಏನು ಲಾಭವಾಗುವುದಿಲ್ಲ....

ಶ್ರೀ ಎನ್.ರಾಜಣ್ಣ: ಪಾಯಿಂಟ್ ಆಫ್ ಆರ್ಡರ್.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಯಾವುದಕ್ಕೆ ಪಾಯಿಂಟ್ ಆಫ್ ಆರ್ಡರ್ ರಾಜಣ್ಣನವರೆ

ಶ್ರೀ ಎನ್.ರಾಜಣ್ಣ: ಪುಟ ಸಂಖ್ಯೆ 128 ಸೆಕ್ಷನ್ 350, ಮಾನ್ಯ ಉಪಾಧ್ಯಕ್ಷರೆ, ನಿನ್ನೆ ದಿವಸದಿಂದ ಇದರ ಬಗ್ಗೆ ಚರ್ಚೆಯಾಗುತ್ತಿದೆ. ಮಧ್ಯಾಹ್ನ ನಮ್ಮ ಕಂದಾಯ ಮಂತ್ರಿಗಳು

ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕೆ ಕೊನೆ ಏನು? ಏನು ಲಿಮಿಟ್ ಏನು, ದಯವಿಟ್ಟು ತಾವು ರೂಲಿಂಗ್‌ನ್ನು ಕೊಡಬೇಕು.

(ಗೊಂದಲ)

ಉಪಾಧ್ಯಕ್ಷರು: ಅವರೂ ಸಹ ಸದಸ್ಯರಾಗಿದ್ದು ಅವರು ಮಾತನಾಡುವುದಕ್ಕೆ ಹಕ್ಕು ಇದೆ. ಅದುದರಿಂದ ಅವರು ಏನು ಮಾತನಾಡುತ್ತಾರೆ ಅದನ್ನು ದಯವಿಟ್ಟು ತಿಳಿದುಕೊಳ್ಳಿ.

+ ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಶ್ರೀಮಾನ್ ಬಿ.ಎಸ್.ಯಡಿಯೂರಪ್ಪನವರು ಮತ್ತು ಇತರ ಗೌರವಾನ್ವಿತ ಸದಸ್ಯರುಗಳು ರಾಜ್ಯದಲ್ಲಿ ಬರಗಾಲ ಮತ್ತು ಅತಿವೃಷ್ಟಿಯ ಬಗ್ಗೆ ಏನು ಕೇಳಿದ್ದಾರೆ. ಅದನ್ನು ಮಾನ್ಯ ಕಂದಾಯ ಸಚಿವರು ಮಾಹಿತಿಯನ್ನು ತರಿಸಿಕೊಳ್ಳಬೇಕಾದರೆ ಸ್ವಲ್ಪ ಸಮಯ ಬೇಕಾಗುತ್ತದೆ. ಇಲ್ಲವೆಂದು ಹೇಳುವುದಿಲ್ಲ. ಅದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳೇ ಸ್ವತಃ ಇವತ್ತು ಜಿಲ್ಲಾವಾರು ಶಾಸಕರುಗಳ ಸಭೆಯನ್ನು ಕರೆದು ಇದರ ಬಗ್ಗೆ ಏನು ಮಾಡಬೇಕು ಏನೇನು ಆಗಿದೆ ಎನ್ನುವುದರ ಬಗ್ಗೆ ತಿಳಿದುಕೊಳ್ಳಲು ಸುಮಾರು 6 ಜಿಲ್ಲೆಯ ಜಿಲ್ಲಾಧಿಕಾರಿಗಳನ್ನೂ ಸಹ ಕರೆಸಿದ್ದಾರೆ. ಇದು ಈ ರೀತಿಯಾಗಿ ಎಲ್ಲರನ್ನೂ ಕರೆಸಿದರೆ ಉಪಯೋಗವಿಲ್ಲ. ಜಿಲ್ಲಾವಾರು ಶಾಸಕರ ಸಭೆಯನ್ನು ಕರೆಯಬೇಕೆಂದು ಸಲಹೆಯನ್ನು ಕೊಟ್ಟ ಮೇರೆಗೆ ಇವತ್ತು ರಾಯಚೂರು ಜಿಲ್ಲೆಯ ಶಾಸಕರ ಸಭೆಯನ್ನು ಮಾಡಿ ಆ ಒಂದು ಜಿಲ್ಲಾವಾರು ಶಾಸಕರ ಸಭೆಯನ್ನು ಇವತ್ತಿನಿಂದ 12ನೇ ತಾರೀಖು ಒಳಗಡೆ ನಮ್ಮ ಮುಖ್ಯಮಂತ್ರಿಗಳು ಮಾಡುವವರಿದ್ದಾರೆ. ಈಗ ಎಲ್ಲಿ ವಿಶೇಷವಾಗಿ ಮಳೆ ಕಡಿಮೆಯಾಗಿ ತೊಂದರೆಯಾಗಿರತಕ್ಕಂತಹ ಕಡೆಗಳಿಗೆ ಕುಡಿಯುವ ನೀರು, ಮೇವಿನ ವಿಚಾರದಲ್ಲಿ ಏನು ಮಾಡಬೇಕು ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಕಂದಾಯ ಮಂತ್ರಿ ಮತ್ತು ಇತರ ಮಂತ್ರಿಗಳೆಲ್ಲರೂ ನಾಳೆ ದಿವಸ ಕುಳಿತುಕೊಂಡು ಚರ್ಚೆಯನ್ನು ಮಾಡುವವರು ಇದ್ದೇವೆ. ಅದರ ಜೊತೆಗೆ ಅತಿವೃಷ್ಟಿಯಾಗಿರುವಂತಹ ಕಡೆಗಳಲ್ಲಿ ಏನು ತೊಂದರೆಗಳಾಗಿವೆ ಅದಕ್ಕೆ ಏನು ಪರಿಹಾರವನ್ನು ಕಂಡು ಹಿಡಿಯಬೇಕು. ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎಷ್ಟು ಮಾಡಬಹುದು ಎನ್ನುವುದನ್ನು ಅರ್ಥ ಮಾಡಿಕೊಂಡು ಇ.ಎ.ಎಸ್.ನಲ್ಲಿ ಮತ್ತು ಬೇರೆ ಬೇರೆ ಕಾರ್ಯಕ್ರಮಗಳ ಮೂಲಕ ಹಣವನ್ನು ಬಿಡುಗಡೆ ಮಾಡತಕ್ಕಂಥದ್ದು ಒಂದು ಕುಡಿಯುವ ನೀರಿಗೆ ಹಣವನ್ನು ಕೊಡತಕ್ಕಂಥದ್ದು ಇನ್ನೊಂದು. ಇದು ಅಲ್ಲದೇ ವಿಶೇಷವಾಗಿ ಅನುದಾನವನ್ನು ಕೊಡುವುದರ ಬಗ್ಗೆಯೂ ಸಹ ಸರ್ಕಾರ ಚಿಂತನೆಯನ್ನು ಮಾಡುತ್ತಿದೆ. ಅದರಿಂದ ಮಾನ್ಯ ಬಿ.ಎಸ್.ಯಡಿಯೂರಪ್ಪ ಮತ್ತು ವಿರೋಧ ಪಕ್ಷದ ನಾಯಕರಲ್ಲಿ ಹಾಗೂ ಗೌರವಾನ್ವಿತ ಎಲ್ಲಾ ಸದಸ್ಯರಲ್ಲಿ ವಿನಂತಿಯನ್ನು ಮಾಡುತ್ತೇನೆ. ಮಾನ್ಯ ರಮೇಶ್ ಸಿ.ಜಿಗಜಿಣಗಿಯವರು ನಾಳೆ ಸಾಯಂಕಾಲದೊಳಗಡೆ ಬಾಕಿ ವಿವರಗಳನ್ನು

ಕೊಡುತ್ತೇನೆಂದು ಹೇಳಿದ್ದಾರೆ. 12ನೇ ತಾರೀಖಿನವರೆಗೆ ಸದನ ನಡೆಯುವುದರಿಂದ ಇದರ ಬಗ್ಗೆ ಮತ್ತೆ ಚರ್ಚೆಯನ್ನು ಮಾಡೋಣ. ನೀವು ಸಲಹೆಗಳನ್ನು ಕೊಡಿ, ನಮಗೂ ಕೂಡ ಗೊತ್ತಿದೆ ಕೇಂದ್ರ ಸರ್ಕಾರ ಇದಕ್ಕೆ ವಿಶೇಷವಾಗಿ ಹಣವನ್ನು ಕೊಡತಕ್ಕಂಥದ್ದನ್ನು ನಿಲ್ಲಿಸಿದೆ ಎನ್ನುವುದೂ ಸಹ ನಿಮಗೆ ಗೊತ್ತಿದೆ. ರಾಜ್ಯ ಸರ್ಕಾರಕ್ಕೂ ಕೂಡ ಇತಿಮಿತಿಗಳು ಇದೆ. ಆದರೆ ನಿಜವಾಗಿಯೂ ತೊಂದರೆ ಇದೆ ಅಲ್ಲ ಸರ್ಕಾರ ಸಹಾಯ ಮಾಡುವುದು ನಮ್ಮ ಕರ್ತವ್ಯ ಇದೆ. ಅದನ್ನು ಮಾಡುತ್ತೇವೆ. ಆದ್ದರಿಂದ, ಶ್ರೀಮಾನ್ ಯಡಿಯೂರಪ್ಪನವರು ಮತ್ತು ಇತರೆ ಸದಸ್ಯರು ಕಾರ್ಯ ಕಲಾಪಗಳನ್ನು ನಡೆಸಲಿಕ್ಕೆ ಸಹಕಾರ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸನ್ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಸರ್ಕಾರ ಬರಗಾಲ, ಅತಿವೃಷ್ಟಿ ಸಂದರ್ಭದಲ್ಲಿ 1.4.1997ರಲ್ಲಿದ್ದಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಹತ್ತಿರ 25 ಕೋಟಿ 43 ಲಕ್ಷ 72 ಸಾವಿರ ಇದೆ ಎಂದು ನೀವು ಹೇಳುತ್ತೀರಿ. ಅದಾದಮೇಲೆ ಹಣವನ್ನು ಬಿಡುಗಡೆ ಮಾಡಿದ್ದೇನೆಂದು ಅವರು ಹೇಳುತ್ತಾರೆ. ಅದರ ಬಗ್ಗೆ ಅವರು ಕೊಟ್ಟಂಥ ಸ್ಟೇಟ್‌ಮೆಂಟ್ ನಂ.(1)ರಲ್ಲಿ ವಿವರವಿಲ್ಲ. ಸ್ಟೇಟ್‌ಮೆಂಟ್ ನಂ. (2)ರ ಪ್ರಕಾರ, ಡಿಸಿ ಹತ್ತಿರ ದುಡ್ಡಿದ್ದರೆ ನಾಯಿ ಮೊಲೇಲಿ ಹಾಲಿದ್ದ ಹಾಗಾಯಿತು. ಖರ್ಚು ಮಾಡಿದ್ದಾರಾ ಅವರು? ಬರಗಾಲ ಇದ್ದರೆ, ಅತಿವೃಷ್ಟಿ ಇದ್ದರೆ, ಖರ್ಚು ಮಾಡದೇ ಇದ್ದರೆ, ನೀವು ಫೇಲ್ಯೂರ್ ಆಗಿಲ್ಲವೇ ಅದರಲ್ಲಿ?

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅಲ್ಲಿ ಏನಾಗಿದೆಯೆಂದರೆ, ಈಗ ಜಿಲ್ಲಾ ಪಂಚಾಯಿತಿಗೆ ಕಾಮಗಾರಿಗಳನ್ನು ಐ.ಎ.ಎಸ್ ಇತರೆ ಬಾಬುಗಳಲ್ಲಿ ಖರ್ಚು ಮಾಡಲು ಹಣವನ್ನು ಕೊಡಲಾಗಿದೆ. ಇ.ಎ.ಎಸ್.ನಲ್ಲಿ ಗೌರ್ನಮೆಂಟ್ ಆಫ್ ಇಂಡಿಯಾದವರು ಕೆಲವು ರಿಸ್ಟ್ರಿಕ್ಷನ್‌ಗಳನ್ನು ಹಾಕಿದ್ದಾರೆ. ಅದಕ್ಕೋಸ್ಕರ ರಾಯಚೂರು ಶಾಸಕರು ಇಲ್ಲೇ ಇರಬಹುದು. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿದ್ದೇನೆ. ಗೌರ್ನಮೆಂಟ್ ಆಫ್ ಇಂಡಿಯಾದವರು ಇ.ಎ.ಎಸ್.ಗೆ ರಿಸ್ಟ್ರಿಕ್ಷನ್ ಹಾಕಿದ್ದಾರೆ ಹಾರ್ಟಿಕಲ್ಚರ್, ಫಾರೆಸ್ಟ್ ಡಿಪಾರ್ಟ್‌ಮೆಂಟ್, ಮತ್ತೊಂದಕ್ಕೆ ಖರ್ಚು ಮಾಡಲೆಂದು ರಿಸ್ಟ್ರಿಕ್ಷನ್ ಹಾಕಿದ್ದಾರೆ. ಮಳೆ ಇಲ್ಲದೆ ಇರುವ ಕಡೆ, ಹಾರ್ಟಿಕಲ್ಚರ್ ಮತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಖರ್ಚು ಮಾಡುವುದಕ್ಕೆ ಎಲ್ಲಿ ಆಗುತ್ತದೆ? ಅದರಿಂದಾಗಿ, ಕೇಂದ್ರ ಸರ್ಕಾರದವರನ್ನು, ನೀವು ಗೈಡ್‌ಲೈನ್ಸ್ ಚೇಂಜ್ ಮಾಡಿ ಎಂದು ಹೇಳಿದರೆ, ಇನ್ನೂ 6 ತಿಂಗಳೋ, ವರ್ಷವೋ ಆಗಬಹುದು, ಆಗದಿರಲೂ ಬಹುದು. ಅವರು ಹನುಮಂತರಾಯರ ಕಮಿಷನ್ ರೆಕಮೆಂಡೇಷನ್ ಆಧಾರದ ಮೇಲೆ ಮಾಡುತ್ತಿದ್ದಾರೆ. ಅದರಿಂದಾಗಿ, ರಾಜ್ಯ ಸರ್ಕಾರದಿಂದ ನಾವು ಇದರ ಬಗ್ಗೆ ಏನಾದರೊಂದು ಇವತ್ತಿನ ಪರಿಸ್ಥಿತಿಯಲ್ಲಿ ಮಾಡಬೇಕೆಂಬ ಚಿಂತನೆ ನಮ್ಮ ಮುಂದಿದೆ. ಆದ್ದರಿಂದ, ಅವೆಲ್ಲವುಗಳ ಬಗ್ಗೆ ಸಹ 2 ದಿವಸಗಳೊಳಗೆ ಮತ್ತು ನಾಳೆ ಸಾಯಂಕಾಲದೊಳಗೆ ಆದಷ್ಟು ವಿವರಗಳನ್ನು ಮಾನ್ಯ ಕಂದಾಯ ಸಚಿವರು ಕೊಡುತ್ತಾರೆ. ತಾವು ಸಹಕಾರ ಕೊಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಸ್ಪೆಸಿಫಿಕ್ ಆಗಿ 289 ಹೆಡ್‌ನಲ್ಲಿ ತಾವು ಹಣವನ್ನು ಬಿಡುಗಡೆ ಮಾಡಿದ್ದೀರೆಂದು ಹೇಳಲಿಲ್ಲ. ಕೆಲಾಮಿಟಿ ಫಂಡಿನಿಂದ ಕೇಂದ್ರಸರ್ಕಾರ ಹಣವನ್ನು ಬಿಡುಗಡೆ ಮಾಡದಿದ್ದ ಪ್ರಸಂಗದಲ್ಲಿ....

ಉಪಾಧ್ಯಕ್ಷರು: ಈ ಕಡೆ ತಾವು ಸ್ವಲ್ಪ ಲಕ್ಷ್ಯ ಕೊಡಬೇಕು. ತಾವೂ ಅದನ್ನೇ ಹೇಳುತ್ತೀರಿ, ಸರ್ಕಾರದವರೂ ಅದನ್ನೇ ಹೇಳುತ್ತಾರೆ. ಅದಕ್ಕೆ ತಾವು ನಾಳೆ ಸಾಯಂಕಾಲದೊಳಗೆ ಕೊಡುತ್ತೇನೆಂದಿದ್ದಾರೆ ಆಮೇಲೆ ಅವಕಾಶ ಕೊಡುವುದು ಒಳ್ಳೆಯದು. ಆದ್ದರಿಂದ, ತಾವು ದಯವಿಟ್ಟು ಸಹಕರಿಸಿ. ಬಿಲ್‌ಗಳಿವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾಳೆ ನೀವು ಸ್ಟೇಟ್‌ಮೆಂಟ್ ಮಾಡಿಸಿ. ನಾನು ನಿಮ್ಮನ್ನು ಕೇಳುತ್ತೇನೆ, ತಾವು ನಿಷ್ಪಕ್ಷಪಾತವಾಗಿ, ಅಲ್ಲಿ ಕೆಲಸ ಮಾಡುತ್ತಿದ್ದೀರಿ, ಆ ಸ್ಥಾನದಲ್ಲಿದ್ದೀರಿ, ತಾವೇ ಹೇಳಿ ಸನ್ಮಾನ್ಯ ಉಪಾಧ್ಯಕ್ಷರೆ, 3 ತಿಂಗಳಿನಿಂದ ಈ ಬರಗಾಲಕ್ಕೆ ಸಿಕ್ಕಿ ಸಾಯುತ್ತಿರುವ ಕೃಷಿ ಕಾರ್ಮಿಕರಿಗೆ, ಆ ರೈತರಿಗೆ ಇದುವರೆಗೆ ಅವರೇ ಹೇಳುವ ಪ್ರಕಾರ ಸುಮಾರು 57 ತಾಲ್ಲೂಕುಗಳಲ್ಲಿ ಭೀಕರ ಬರಗಾಲ ಇದ್ದರೂ ಕೂಡ, 10ಲಕ್ಷ 20 ಲಕ್ಷ ಒಂದು ಕೋಟಿಯನ್ನು ಒಂದು ತಾಲ್ಲೂಕಿಗೆ ಖರ್ಚು ಮಾಡಿ ಅವರನ್ನು ಉಳಿಸುವಂತಹ ಪ್ರಯತ್ನವನ್ನು ಈ ಸರ್ಕಾರ ಮಾಡಲಿಲ್ಲವಲ್ಲಾ? ಈ ಸರ್ಕಾರಕ್ಕೆ ನಾವು ಸಹಕಾರ ಕೊಡುವುದಾ? ಕೆಲಸ ಮಾಡುವುದಾ? ಸರ್ಕಾರ ಇದೆಯೆಂದು ನಾವು ತಿಳಿದುಕೊಳ್ಳಬೇಕೇ? ಕೆಟ್ಟ ಪದ್ಧತಿ ಏನಿದೆಯೆಂದರೆ, ಸದನ ನಡೆಯುವಂತಹ ಕಾಲದಲ್ಲಿ ನಾವು ಪ್ರಸ್ತಾಪ ಮಾಡಿದ್ದು, ಅದಕ್ಕೆ ಉತ್ತರ ಕೊಡುವ ಸರ್ಕಾರ ಬೇರೆ ಸಮಯದಲ್ಲಿ ಕೆಲಸ ಮಾಡುವುದಿಲ್ಲವೇ?

ಶ್ರೀ ರಮೇಶ್.ಸಿ.ಜಿಗಜಿಣಗಿ: ಅವರು ಕೇಳಿದ್ದಕ್ಕೆ ನಾನು ರಿಪ್ಲೈ ಕೊಟ್ಟಿದ್ದೇನೆ. ಅವರು ಕೇಳಿದ ಆ ತಾಲ್ಲೂಕುಗಳ ಅಂಕಿ-ಅಂಶಗಳನ್ನು ನಾನು ನಾಳೆ ಕೊಡುತ್ತೇನೆಂದು ಹೇಳಿದ್ದೇನೆ. ಸದನದ ಅಮೂಲ್ಯ ವೇಳೆಯನ್ನು ಹಾಳು ಮಾಡುವುದೇ?

ಉಪಾಧ್ಯಕ್ಷರು: ಈಗ ಸರ್ಕಾರದ ಪರವಾಗಿ ಕಂದಾಯ....

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಹೀಗೆ ಹೇಳಿದರೆ, ನೀವು ಒಬ್ಬ ಕಂದಾಯ ಸಚಿವರಾಗಿ ಕೆಲಸ ಮಾಡುವಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ, ರಾಜೀನಾಮೆ ಕೊಟ್ಟು ಹೋಗಿ ಎಂದು ಹೇಳಬೇಕಾಗುತ್ತದೆ. ನಾವೇನಾದರೂ ಸಮಯವನ್ನು ಹಾಳು ಮಾಡುತ್ತೇವೆಂದು ಬೇಜವಾಬ್ದಾರಿಯ ಮಾತನ್ನು ಕಂದಾಯ ಸಚಿವರು ತಮ್ಮ ಕರ್ತವ್ಯ ನಿರ್ವಹಿಸದೆ ನಮ್ಮ ಮೇಲೆ ಹೇಳುವುದಾದರೆ, ನಾವು ನಿಮ್ಮ ಮೇಲೆ ಆರೋಪ ಮಾಡಬೇಕಾಗುತ್ತದೆ.

(ಗೊಂದಲ)

ನಿಮ್ಮ ಬಗ್ಗೆ ನಾವು ಗೌರವವನ್ನಿಟ್ಟುಕೊಂಡಿದ್ದೆವು. It is too much. ನಿಮಗೆ ಕೊಟ್ಟಂತಹ ಗೌರವವನ್ನು ನೀವು ದುರುಪಯೋಗ ಮಾಡಿಕೊಂಡಿದ್ದೀರಿ.

(ಗೊಂದಲ)

ಉಪಾಧ್ಯಕ್ಷರು: ನಿಮ್ಮ ನಾಯಕರು ಇಲ್ಲಿ ಮಾತನಾಡುವಾಗ, ನೀವು ಆ ರೀತಿ ಎದ್ದುನಿಂತು ಮಾತನಾಡಿದರೆ ಹೇಗೆ?

(ಗೊಂದಲ)

ಉಪಾಧ್ಯಕ್ಷರು: ಮತ್ತೊಮ್ಮೆ ತಮ್ಮನ್ನು ವಿನಂತಿಸಿಕೊಳ್ಳುತ್ತೇನೆ. ತಾವು ಹೇಳಿದ್ದಕ್ಕೆ ನನ್ನದು ಬೇರೆ ಅಭಿಪ್ರಾಯವಿಲ್ಲ. ತಾವು ಕೇಳತಕ್ಕದ್ದು ತಪ್ಪು ಎಂಬ ಮಾತನ್ನೂ ನಾನು ಹೇಳುವುದಿಲ್ಲ. ಅವರು ಸಮಯವನ್ನು ಕೇಳುತ್ತಿದ್ದಾರೆ, ನಾಳೆ ದಿವಸ 6 ಗಂಟೆಯೊಳಗೆ ಹೇಳುತ್ತೇವೆಂದು ಹೇಳಿದ್ದಾರೆ. ದಯವಿಟ್ಟು ಸಹಕರಿಸಿ. ಈಗ ಇದನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಹೀಗೆಲ್ಲಾ ರೆವಿನ್ಯೂ ಮಿನಿಸ್ಟರ್ ಉತ್ತರ ಕೊಟ್ಟರೆ, ಸಮಯ ಹಾಳು ಮಾಡಲು ಬಂದಿದ್ದೇವೆಯೇ ನಾವು? ನಮ್ಮಿಂದ ತೊಂದರೆಯಾಗುವುದಿದ್ದರೆ ನಾವು ಹೊರಗೆ ಹೋಗುತ್ತೇವೆ, ಈ ಸದನವನ್ನು ನಡೆಸಿಕೊಂಡು ಹೋಗಿ ನಮ್ಮದೇನೂ ಅಡ್ಡಿ ಇಲ್ಲ.

ಉಪಧ್ಯಕ್ಷರು: ಏಕೆ ಹೊರಗೆ ಹೋಗುತ್ತೀರಿ? ನಾವೇನಾದರೂ ಈ ಸದನದೊಳಗೇ ಹೋರಾಟ ಮಾಡಬೇಕು, ಸದನದ ಹೊರಗಲ್ಲ. ತಾವು ದಯವಿಟ್ಟು ಸಹಕರಿಸಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ರೆವಿನ್ಯು ಮಿನಿಸ್ಟರ್‌ರಲ್ಲಿ, ಸರ್ಕಾರಕ್ಕೆ, ನಿಮಗೆ ಸಮಯವನ್ನು ಹಾಳು ಮಾಡುತ್ತಿದ್ದೇವೆಂದು ಅನ್ನಿಸಿದರೆ ನಾವು ಹೊರಗೆ ಹೋಗುತ್ತೇವೆ.

ಉಪಾಧ್ಯಕ್ಷರು: ಬೇಡ. ಸದನದೊಳಗೇ ಕೆಲಸ ಮಾಡಬೇಕು. ಹೊರಗಡೆ ಹೋಗಿ ಏನು ಮಾಡುವುದು? ತಾವು ಜನರ ಪರವಾಗಿ ಹೇಳಿದಿರಿ. ಇದು ಜನರ ಕೆಲಸ. ತಾವು ಹೇಳಿದ್ದನ್ನು ತಪ್ಪೆಂದು ನಾನು ಹೇಳುವುದಿಲ್ಲ. ಸರ್ಕಾರ ಸಮಯ ಬೇಡಿದೆ. ನಾಳೆ ಸಾಯಂಕಾಲದವರೆಗೆ ಅವಕಾಶವನ್ನು ಕೊಡೋಣ. ಸದನ ಮುಗಿಯುವುದರೊಳಗಾಗಿ ನಾನು ಜವಾಬ್ದಾರಿಯಿಂದ ಉತ್ತರವನ್ನು ಕೊಡಿಸುತ್ತೇನೆ. ತಾವು ಸಹಕರಿಸಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಿನ್ನೆ ದಿವಸ ಚರ್ಚೆ ಮಾಡುವಾಗ ನಿಮ್ಮ ರೆವಿನ್ಯೂ ಇಲಾಖೆ ಇಲ್ಲವೇ? ಡಿಸಿ ಇಲ್ಲವೇ? ಇಲ್ಲಿ ಚರ್ಚೆಯಾಗುವುದು ಬೇಡವೇ?

ಉಪಾಧ್ಯಕ್ಷರು: ಆದಷ್ಟುಬೇಗ ಕೊಡಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾಳೆ ಅವರು ಇನ್ನೇನಾದರೂ ಹೇಳಿದರೆ ಏನು ಮಾಡಲಿ?

ಉಪಾಧ್ಯಕ್ಷರು: ತಾವು ಹೇಳಿದ್ದನ್ನೇ ಕೊಡಿಸುತ್ತೇನೆ. ಈಗಾಗಲೇ ತಾವೇನು ಹೇಳಿದ್ದೀರೆಂದರೆ, ಬಿಡುಗಡೆಯಾದ ಹಣವೆಷ್ಟು? ಅದರಲ್ಲಿ ಯಾವ ಯಾವ ತಾಲ್ಲೂಕಿಗೆ, ಯಾವ ಯಾವ ಜಿಲ್ಲೆಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ? ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ? ಎಲ್ಲೆಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಇದರ ಬಗ್ಗೆ ಡೀಟೇಲಾಗಿ ವಿವರ ಕೊಡಬೇಕೆಂದು ತಾವು ಹೇಳಿದ್ದೀರಿ, ಅವರು ಕೊಡುತ್ತಾರೆ. ಅನಾವೃಷ್ಟಿ ಮತ್ತು ಅತಿವೃಷ್ಟಿ ಬಗ್ಗೆಯೂ ಕೂಡ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಈ ಸದನದಲ್ಲಿ ಕಳೆದ ಒಂದು-ಒಂದೂಕಾಲು ತಿಂಗಳಿಂದ ನಾವು ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಹಿಂದಿನ ಸಾಲಿನಲ್ಲಿ ಕುಳಿತಿರುವ ಕೆಲವು ಸದಸ್ಯರು ಪ್ರತಿ ಸಾರಿ ಮುಂದಿನ ಸಾಲಿನಲ್ಲಿರತಕ್ಕವರು ಸರ್ಕಾರವನ್ನು ಟೀಕೆ ಮಾಡುವುದರ ಜೊತೆಗೆ ಏನೇನು ಕೆಲಸ ಮಾಡಬೇಕೆನ್ನುವುದರ ಬಗ್ಗೆ ಹೇಳಿದ್ದಾರೆ. ಈ ಸಾರಿ ವಿಶೇಷವಾಗಿ ಶ್ರೀ ಅರಗ ಜ್ಞಾನೇಂದ್ರ ಅಂಥ ಶಾಸಕರು ಅತ್ಯಂತ ಉತ್ತಮವಾದ ವಿಚಾರಗಳು ಸರ್ಕಾರದ ಮುಂದಿಟ್ಟಿದ್ದಾರೆ. ನಾವು, ನೀವು ಕುಳಿತುಕೊಂಡು ಅತಿವೃಷ್ಟಿ ಬಗ್ಗೆ ಶಾಶ್ವತವಾದ ಕೆಲಸವೇನು ಮಾಡಬೇಕು ಮತ್ತು ಅನಾವೃಷ್ಟಿ ಆಗಿರುವ ಕಡೆ ಅದರಲ್ಲೂ ಬರಗಾಲಪೀಡಿತ ಕೆಲವು ಪ್ರದೇಶಗಳಲ್ಲಿ ಅಂದರೆ ಚಿತ್ರದುರ್ಗದ ಕೆಲವು ತಾಲ್ಲೂಕುಗಳು, ಗುಲ್ಬರ್ಗಾ, ಬೀದರ್ ಮತ್ತು ಕೋಲಾರದ ಕೆಲವು ತಾಲ್ಲೂಕುಗಳು ಶಾಶ್ವತವಾಗಿ ಬರಗಾಲಕ್ಕೆ ಒಳಗಾಗಿವೆ. ನೀವು ಕೊಡತಕ್ಕ ಸಲಹೆಗಳನ್ನು ತೆಗೆದುಕೊಳ್ಳಲು ಸರ್ಕಾರ ಸದಾ ಸಿದ್ಧವಿದೆ. ಅದಕ್ಕೋಸ್ಕರವೇ, ತಾವು ನಮಗೆ ಸಹಕಾರ ಕೊಡಿ, 4ನೇ ತಾರೀಖು ಬಜೆಟ್ ಪಾಸ್ ಆಗಲು ಸಹಕರಿಸಿದ್ದೀರಿ. ನಾವು 12ನೇ ತಾರೀಖಿನವರೆಗೂ ಸೇರುವವರಿದ್ದೇವೆ. 24 ಗಂಟೆಯೊಳಗೆ ವಿವರಕೊಡುತ್ತೇವೆಂದು ಕಂದಾಯ ಸಚಿವರು ಹೇಳಿದ್ದಾರೆ.. ನನಗೆ ಬಹಳ ಸಂತೋಷವಾಗುತ್ತಿದೆ. ಎಲ್ಲಾ ಮಾಹಿತಿ ಕೊಡುವುದಾಗಿ ಒಪ್ಪಿಕೊಂಡಿದ್ದಾರೆ. ಕಷ್ಟವಿದೆ. ತಾಲ್ಲೂಕಿನಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದಾರೆ? ಏನು ಮಾಡಿದ್ದಾರೆ? ಪರಿಸ್ಥಿತಿ ಏನೂ ಎನ್ನುವುದನ್ನು ಜಿಲ್ಲಾವಾರು ವಿವರ ಕೊಡಬಹುದು. ಆದರೆ, ತಾಲ್ಲೂಕು-ವಾರು, ಕಾನ್‌ಸ್ಟಿಟ್ಯೂಯೆನ್ಸಿವಾರು, ವರ್ಕ್‌ವೈಸ್ ಕೊಡುವುದು ಸ್ವಲ್ಪ ಕಷ್ಟವಾಗಬಹುದು. ಆದರೆ, ಸರ್ಕಾರ ಚರ್ಚೆಗೆ ಸಿದ್ಧವಿದೆ. ಇವತ್ತು ಚರ್ಚೆಯನ್ನು ಈ ಘಟ್ಟದಲ್ಲೇ ನಾವು ನಿಲ್ಲಿಸುವ ಅವಶ್ಯಕತೆ ಇಲ್ಲ. ಚರ್ಚೆ ಮಾಡೋಣ. ನಾಳೆ ಈ ಚರ್ಚೆಗೆ ಮುಂದಾಗಿ. ಬಿಲ್ ಪಾಸ್ ಮಾಡಲು ದಯವಿಟ್ಟು ಸಹಕಾರ ಕೊಡಿ. ಬಾಕಿ ವಿಚಾರಗಳೇನಿವೆ, ಅದರ ಅಂಕಿಅಂಶಗಳನ್ನು ನಾಳೆ ನಾವು ಅದನ್ನು ಒದಗಿಸುತ್ತೇನೆ. ಮತ್ತೆ ನಿಮಗೆ ಏನು ಬೇಕು ಅನ್ನಿಸುತ್ತದೆಯೋ ಅದನ್ನೂ ಸಹ ಒದಗಿಸಿಕೊಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಬೇಡದ್ದನ್ನು ನಾವು ಕೇಳಿಲ್ಲ ಸನ್ಮಾನ್ಯ ಹಿರಿಯ

ಸಚಿವರಾದ ಸಿಂಧ್ಯಾರವರೇ. ನಾವು ಕೇಳಿರುವುದಿಷ್ಟೇ, ನಾವು ಜಾಸ್ತಿ ಕೊಡಿ ಎಂದೂ ಕೇಳಿಲ್ಲ. ಅದು ನಿಮಗೆ ಬಿಟ್ಟಿದ್ದು. ನೀವು ಬಿಡುಗಡೆ ಮಾಡಿದಂತಹ 25 ಕೋಟಿ ಚಿಲ್ಲರೆ ಹಣದಲ್ಲಿ, ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ? ಎಷ್ಟು ಹಣ ಖರ್ಚಾಗಿದೆ? ಬರಗಾಲ ಪ್ರದೇಶವಿರಬಹುದು, ಅತಿವೃಷ್ಟಿ ಇರಬಹುದು. ಅಂಕಿ-ಅಂಶಗಳು ಸಿಗುವುದಿಲ್ಲವೇ?

ಶ್ರೀ ಕೆ.ಎಸ್.ನಾಗೇಗೌಡ: ಅವರು ಹೇಳಿರುವುದು, 57 ತಾಲ್ಲೂಕುಗಳ ವಿವರಗಳನ್ನೂ ಸಹ ಜಿಲ್ಲಾಧಿಕಾರಿಗಳು ಕೊಟ್ಟಿರುತ್ತಾರೆ. ಜಿಲ್ಲಾಧಿಕಾರಿಗಳ ತಾಲ್ಲೂಕು ಆಫೀಸ್ ಹತ್ತಿರ ಲೆಕ್ಕವಿರುತ್ತದೆ. ಅಲ್ಲಿಂದ ತರಿಸಿಕೊಡುತ್ತೇನೆಂದು ಹೇಳಿದರೂ ಸಹ ಕನಿಷ್ಠಪಕ್ಷ ಅದು ಆನ್-ಗೋಯಿಂಗ್ ವರ್ಕ್. ವರ್ಕ್ ಕಂಪ್ಲೀಟಾಗಿ, ಅಕೌಂಟ್ಸ್ ಫೈನಲೈಸ್ ಆಗಿದ್ದರೆ, ಇಮ್ಮೀಡಿಯೆಟ್ ಆಗಿ ಕೇಳಿದ ತಕ್ಷಣ ಸಿಗುತ್ತದೆ. ನಾಳೆಯವರೆಗೆ ಅವಕಾಶ ಕೊಡಿ. ಖಂಡಿತವಾಗಿ ನಾಳೆ ಕಂದಾಯ ಮಂತ್ರಿಗಳು ಸದನದಲ್ಲಿ ಮಂಡಿಸುತ್ತಾರೆ.

(3) ಶಾಸನ ರಚನೆ ಕಾರ್ಯಕಲಾಪಗಳು

ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು

(1) ಕೂಡಲ ಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ 1996 ಪರ್ಯಾಲೋಚನಾ ಪ್ರಸ್ತಾವ

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, 1996ರ ಕೂಡಲ ಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಈಗ ಕೂಡಲ ಸಂಗಮದ ಅಭಿವೃದ್ಧಿ ಮಂಡಳಿ ತಿದ್ದುಪಡಿ ವಿಧೇಯಕ 1996ನ್ನೇನು ತರುತ್ತಿದ್ದಾರೆ, ಅದರ ಜೊತೆಗೆ ಚಿಕ್ಕೋಡಿ ತಾಲ್ಲೂಕಿನ ಯಡಿಯೂರು ದೇವಸ್ಥಾನದ ಬಗ್ಗೆಯೂ ಕೂಡ ತರಬೇಕು.

ಉಪಾಧ್ಯಕ್ಷರು: ನೀವು ಯಡಿಯೂರಿನ ಬಗ್ಗೆ ಹೇಳುತ್ತೀರಿ, ಮತ್ತೊಬ್ಬರು ಪಂಡರಾಪುರದ ಬಗ್ಗೆ ಹೇಳುತ್ತಾರೆ. ಈಗ ಯಾವುದನ್ನು ತರುತ್ತಾರೆ, ಅದರ ಬಗ್ಗೆ ಮಾತನಾಡುವುದಿದ್ದರೆ ಮಾತನಾಡಿ. ದಯಮಾಡಿ ಕೇಳಿ. ನೀವು ಈಗ ಏನಾದರೂ ಪ್ರಸ್ತಾವನೆ ಬಗ್ಗೆ ಮಾತನಾಡುವುದಿದ್ದರೆ ಮಾತನಾಡಿ. ಬೇರೆ ವಿಷಯದ ಬಗ್ಗೆ ತಾವು ಮಾತನಾಡಿದರೆ ಹೇಗೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದರ ವಿಚಾರವೇನು? ಅಬ್ಜೆಕ್ಟ್ ಏನು?...

ಉಪಾಧ್ಯಕ್ಷರು: ಅವರು ಹೇಳುತ್ತಾರೆ, ತಾವು ಕುಳಿತು ಕೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬೇಡವೆಂದವರ್ಯಾರು?

ಉಪಾಧ್ಯಕ್ಷರು: ಅವರು ಎದ್ದುನಿಂತರೆ, ಅವರು ಹೇಗೆ ಮಾತನಾಡಬೇಕು? ಅವರು ಉತ್ತರಿಸುವಾಗ... (ಗೊಂದಲ)

ಉಪಾಧ್ಯಕ್ಷರು: ತಾವು ಹೇಳಿ ಕೂಡಸಂಗಮ ಅಭಿವೃದ್ಧಿ ಅಧಿನಿಯಮದ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ಒಂದನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದೇನೆ. ಈಗ ಜಿಗಜಿಣಗಿಯವರಿಗೆ ಎಷ್ಟೊಂದು ಜನ ಸಚಿವರು ಸಹಕಾರ ಕೊಡುತ್ತಿದ್ದಾರೆ. ತಾವು ಎದ್ದಿರಿ. ಸಿಂಧ್ಯಾ ಅವರೆದ್ದರು. ಅವರಿಗೆ ಉತ್ತರ ಕೊಡುವಷ್ಟು ಶಕ್ತಿ ಇಲ್ಲವೇ? ತಾವು ಏತಕ್ಕೆ ಎದ್ದಿರಿ? ಒಟ್ಟಿಗೆ ಏತಕ್ಕೆ ಎದ್ದಿರಿ?

ಶ್ರೀ ಸಿ.ಬೈರೇಗೌಡ: ತಾವು ಅವರಿಗೆ ಅವಕಾಶ ಕೊಡಿ ಎಂದು ತಮ್ಮಲ್ಲಿ ಕೇಳುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಅವಕಾಶ ಕೊಡುತ್ತಿಲ್ಲವೇ ನಾವು?

ಉಪಾಧ್ಯಕ್ಷರು: ಆಯಿತು. ತಾವು ಹೇಳಿ.

ಶ್ರೀ ರಮೇಶ್.ಸಿ.ಜಿಗಜಿಣಗಿ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕೂಡಲಸಂಗಮ ಅಭಿವೃದ್ಧಿ ಮಂಡಳಿ ಅಧಿನಿಯಮ 94 ಏನಿದೆ ಅದಕ್ಕೆ ಕೆಲವು ತಿದ್ದುಪಡಿ ಮಾಡಿದೆ. ಇದು ಬಹಳ ಚಿಕ್ಕದು. ಅಧ್ಯಕ್ಷರ ಬದಲಾಗಿ ಮುಖ್ಯಮಂತ್ರಿ ಎನ್ನುವ ಪದ ನೇಮಿಸಬೇಕು ಎಂಬುದು ಒಂದು. ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳನ್ನು ಮಾತ್ರವೇ ನಾಮನಿರ್ದೇಶನ ಮಾಡಲು ಇರುವ ನಿರ್ಬಂಧವನ್ನು ತೆಗೆದುಹಾಕಲಾಗಿದೆ. ಆಮೇಲೆ ಹಿತಾಸಕ್ತಿ ಎಂಬ ಪದವನ್ನು ಸೇರಿಸಲು ಉದ್ದೇಶಿಸಲಾಗಿದೆ. ಆಮೇಲೆ ಸರ್ಕಾರೇತರ ಎಂಬುದನ್ನು ಬದಲಾಯಿಸಿ ಪದನಿಮಿತ್ತ ಎಂಬ ಪದ ಹಾಕತಕ್ಕದ್ದು. ಅಥವಾ ಬಳಸಲು ಎಂಬ ಪದ ಸೇರಿಸುವುದು. ಆದ್ದರಿಂದ ಪ್ರತಿಯೋಜನೆ ಎಂಬ ಪದವನ್ನು ಸೇರಿಸಲಾಗಿದೆ. ನೇಮಿಸಬಹುದು ಎಂಬುದಕ್ಕೆ ಬದಲಾಗಿ ಗೊತ್ತುಪಡಿಸಬಹುದು ಎಂಬ ಕರೆಕ್ಷನ್ ಅಷ್ಟೆ. ಇದರಲ್ಲಿ ಏನೂ ತಿದ್ದುಪಡಿ ಇಲ್ಲ.

(ಗೊಂದಲ)

ಉಪಾಧ್ಯಕ್ಷರು: ಅಪೊಸಿಷನ್ ಲೀಡರ್ ಮಾತನಾಡುತ್ತಾರೆ. ತಾವೆಲ್ಲಾ ಎದ್ದುನಿಂತರೆ ಹೇಗೆ?

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸಾಮಾನ್ಯ ಅಧ್ಯಕ್ಷರೆ, ನಾನೇನು ತಿಳಿದುಕೊಂಡಿದ್ದೆ ಅಂದರೆ ಈ ಕೂಡಲಸಂಗಮ ಅಭಿವೃದ್ಧಿ ಮಂಡಳಿ ತಿದ್ದುಪಡಿ ವಿಧೇಯಕ ಏನಿದೆ ಈ ವಿಧೇಯಕವನ್ನು ಮಂಡಿಸುವಾಗ ಮಾನ್ಯ ಮಂತ್ರಿಗಳು ಇದನ್ನು ಸರಿಯಾಗಿ ನೋಡಿಕೊಂಡಿದ್ದಾರೆ ಎಂದು ನಾನು ಭಾವಿಸಿದ್ದೆ. ಇದರಲ್ಲಿ ಇರತಕ್ಕದ್ದು ಏನೆಂದರೆ ಛೇರ್ಮನ್ ಎಂಬುದನ್ನು ತೆಗೆದು ಮುಖ್ಯಮಂತ್ರಿಗೆ ಎಕ್ಸ್‌ಅಫಿಷಿಯೋ ಛೇರ್ಮನ್ ಎಂದು ಮಾಡಿದೆ ಫುಲ್‌ಟೈಮ್ ಛೇರ್ಮನ್ ತೆಗೆದು. ಅದನ್ನು ಸ್ವಲ್ಪಸರಿಯಾಗಿ ನೋಡಿಕೊಂಡು ಹೇಳಿದರೆ ಸರಿ. ಆದ್ದರಿಂದ ಇದರ ಉದ್ದೇಶ ಏನೆಂದರೆ ಹಿಂದೆ ಕೂಡಲ ಸಂಗಮ ಡೆವಲಪ್ ಮಾಡಬೇಕು, ಯಾರಾದರೂ ಒಬ್ಬರು ಫುಲ್‌ಫ್ಲೆಡ್ಜ್ಡ್ ಛೇರ್ಮನ್ ಇರಬೇಕು, ಅಥಾರಿಟಿಗೆ ಸಂಪೂರ್ಣವಾದ ಅಧಿಕಾರ ಇರಬೇಕು ಎಂಬ ದೃಷ್ಟಿಯಿಂದ ಈ ಒಂದು ಅಥಾರಿಟಿಯನ್ನು, ಕೂಡಲಸಂಗಮ ಬೋರ್ಡನ್ನಾಗಿ ಕ್ರಿಯೇಟ್ ಮಾಡಿತ್ತು. ಆದರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಎಕ್ಸ್-ಅಫಿಷಿಯೋ ಛೇರ್ಮನ್ ಎಂದು ಮಾಡಿದರೆ ಇದರ ಅನಾಹುತ ಏನಾಗುತ್ತದೆಂದರೆ ಈಗಾಗಲೇ ಅನೇಕ ಕೆಲಸದ ಒತ್ತಡಗಳಲ್ಲಿ ಸಾಧಾರಣ ಮೀಟಿಂಗ್‌ಗಳನ್ನೇ ಅವರು ಅಟೆಂಡ್ ಮಾಡುವುದಕ್ಕಾಗುವುದಿಲ್ಲ. ಇಂಥ ಸಮಯದಲ್ಲಿ ಈ ಬೋರ್ಡಿನ ಕೆಲಸವನ್ನೂ ನೋಡಿಕೊಳ್ಳುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ಎಂಬುದನ್ನು ಯೋಚನೆ ಮಾಡಿ. ಏಕೆಂದರೆ ಏರಿಯಾ ಡೆವಲಪ್ ಮಾಡಬೇಕೆಂಬ ಉದ್ದೇಶದಿಂದಲೇ ಈ ಬೋರ್ಡನ್ನು ಫಾರ್ಮೇಷನ್ ಮಾಡಿದ್ದುದು. ಏಕೆಂದರೆ ಅಲ್ಲಿ ಬಸವೇಶ್ವರರ ಐಕ್ಯಮಂಟಪ ಇದೆ. ಸಂಕೇಶ್ವರ ಗುಡಿ ಇದೆ. ಆಮೇಲೆ ಅಲ್ಲಿ ಎಲ್ಲಾ ಕೂಡ ಕೆಲವು ಎಜ್ಯುಕೇಷನ್ ಇನ್‌ಸ್ಟಿಟ್ಯೂಷನ್ಸ್ ಮಾಡಬೇಕು ಅಥವಾ ಫಿಲಸಾಫಿಕಲ್ ಸೆಂಟರ್ ಮಾಡಬೇಕು, ಹೊರಗಿನಿಂದ ಬರುವವರಿಗೆ ಆ ಸ್ಥಳದ ಬಗ್ಗೆ ಹೆಚ್ಚಿನ ಆಸಕ್ತಿ ಹುಟ್ಟಬೇಕು, ಅದನ್ನು ನೋಡತಕ್ಕ ಟೂರಿಸಂ ಸ್ಥಳವನ್ನಾಗಿ ಮಾಡಬೇಕು, ಹಾಗೆ ಅಟ್ರ್ಯಾಕ್ಷನ್ ಆಗುವಂತೆ ಮಾಡಬೇಕು ಎನ್ನತಕ್ಕ ರೀತಿಯಲ್ಲಿ ಅಭಿವೃದ್ಧಿ ಮಾಡಬೇಕೆಂದು ಕೂಡಲಸಂಗಮ ಬೋರ್ಡ್ ಮಾಡಿದ್ದು, ಇವತ್ತು ನೀವು ಫುಲ್‌ಫ್ಲೆಡ್ಜ್ಡ್ ಛೇರ್ಮನ್ ತೆಗೆದು ಮುಖ್ಯಮಂತ್ರಿಗಳನ್ನು ಎಕ್ಸ್‌ಅಫಿಷಿಯೋ ಛೇರ್ಮನ್ ಮಾಡಿದರೆ ಕೆಲವು ನಾಮಕಾವಸ್ಥೆಗೆ ಹೋಗುತ್ತಾರಲ್ಲಾ ಹಾಗಾಗಿ ಐದುನಿಮಿಷ ಕುಳಿತು ಅಡ್ಜರ್ನ್ ಆಗಿಬಿಡುತ್ತದೆ. ಮತ್ತೆ ಯಾರಾದರೂ ಅಲ್ಲಿ ಕುಳಿತು ಮೀಟಿಂಗ್ ನಡೆಸಿಕೊಳ್ಳುತ್ತಾರೆ. ಆದರೆ ಅವರಿಗೆ ಡಿಸಿಷನ್ ತೆಗೆದುಕೊಳ್ಳತಕ್ಕ ಯಾವ ಹಕ್ಕೂ ಅಥವಾ ಅಧಿಕಾರವೂ ಇರುವುದಿಲ್ಲ. ಅದಕ್ಕೆ ದಯವಿಟ್ಟು ಈ ಮೊದಲು ಹೇಗೆ ಇಂಡಿಪೆಂಡೆಂಟ್ ಛೇರ್ಮನ್ನರಿದ್ದರು ಹಾಗೆ ಅವರು ಇರಬೇಕು. ಮತ್ತು ಇತರೆ ಸಂಪೂರ್ಣವಾಗಿ ಕಾನೂನಿನ ಅಡಿಯಲ್ಲಿ ಅಧಿಕಾರಗಳನ್ನು ಕೊಡಬೇಕು. ಮತ್ತು ಹಣವನ್ನೂ ಕೂಡ

ಕೊಡಬೇಕು. ಸೆಪರೇಟಾಗಿ ಡೆವಲಪ್ ಮಾಡುವುದಕ್ಕೆ ಯಾವರೀತಿಯಾಗಿ ಕಾರ್ಪೊರೇಷನ್ಸ್ ಮತ್ತು ಬೋರ್ಡಿನಲ್ಲಿ ಸರ್ವಾಧಿಕಾರ ಇರುತ್ತದೋ, ಆ ರೀತಿ ಅಧಿಕಾರವನ್ನು ಕೊಟ್ಟು ಇದನ್ನು ಅಭಿವೃದ್ಧಿಪಡಿಸಬೇಕು. ಈಗಾಗಲೇ ನಮ್ಮ ಸರ್ಕಾರ ಆಸ್ಪತ್ರೆಗಳು ಸರಿಯಾಗಿ ನಡೆಯುತ್ತಿಲ್ಲ ಎಂದು ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಲಜಿಯನ್ನು ಇಂಡಿಪೆಂಡೆಂಟ್ ಮಾಡಿದೆವು. ಹುಬ್ಬಳ್ಳಿ ಧಾರವಾಡ ಮೆಡಿಕಲ್ ಕಾಲೇಜನ್ನು ಇಂಡಿಪೆಂಡೆಂಟ್ ಮಾಡಿದೆವು. ಬಳ್ಳಾರಿ ಮೆಡಿಕಲ್ ಕಾಲೇಜನ್ನು ಅಟಾನಮಸ್ ಎಂದು ಮಾಡಿದ್ದೇವೆ. ಹೀಗೆ ಅಟಾನಮಸ್ ಎಂದು ಬೇರೆ ಸಂಸ್ಥೆಗಳನ್ನು ಮಾಡುವಾಗ ಈ ಸಂಸ್ಥೆಗೆ ಎಕ್ಸ್ ಅಫಿಷಿಯೋ ಛೇರ್ಮನ್ ಎಂದು ಸುಮ್ಮನೆ ಬೇಕಾಬಿಟ್ಟಿ ಮಾಡುವುದರಲ್ಲಿ ಅರ್ಥವಿರುವುದಿಲ್ಲ. ದಯವಿಟ್ಟು ಇದಕ್ಕೆ ಪೂರ್ಣಾವಧಿ ಛೇರ್ಮನ್ ಮಾಡಿ ಬೋರ್ಡ್ ಮಾಡಿ. ಸ್ವತಂತ್ರವಾಗಿ ಹಣ ಕೊಟ್ಟು ಮುದ್ನಾಳ ಕಮಿಟಿಯಲ್ಲಿ ಇದಕ್ಕೆ ಯಾವ ರೀತಿ ಸ್ಕೀಮುಗಳನ್ನು ಕೊಟ್ಟಿದ್ದಾರೋ ಅದರ ಪ್ರಕಾರ ಇದನ್ನು ಡೆವಲಪ್ ಮಾಡುವಂತೆ ಸರ್ಕಾರ ಮಾಡಬೇಕು. ಅದಕ್ಕೆ ದಯವಿಟ್ಟು ಈ ತಿದ್ದುಪಡಿಯನ್ನು ತಾವು ವಾಪಸ್ ತೆಗೆದುಕೊಳ್ಳಬೇಕು. ಮತ್ತು ಪಿ.ಡಬ್ಲ್ಯೂ.ಡಿ. ಎಂಬ ಪದವನ್ನು ತೆಗೆದು ಹಾಕಿದ್ದೀರಿ. ಏತಕ್ಕೆ ಸ್ವಾಮಿ? ಪಿ.ಡಬ್ಲ್ಯೂ.ಡಿ.ಗೆ ಅನೇಕ ಬಿಲ್ಡಿಂಗ್‌ಗಳನ್ನು ಕೊಡುತ್ತೀರಿ. ಇವತ್ತು ಎಸ್ಟಿಮೇಟ್ ನಮ್ಮದು ಅಪ್ರೂವ್ ಆಗತಕ್ಕದ್ದು ಅದು ಟೆಕ್ನಿಕಲ್ ಅಪ್ರೂವಲ್ ಆಗಲೀ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಆಗಲೀ ಅವರಿಗೇ ಬರುತ್ತದೆ. ಇದಕ್ಕೆ ಮಾತ್ರ ಲೋಕೋಪಯೋಗಿ ಇಲಾಖೆ ಎಂಬುದನ್ನು ತೆಗೆದರೆ ನಾಳೆ ಯಾವ ಯಾವುದೋ ಕಾರ್ಪೊರೇಷನ್ ಇಂಜಿನಿಯರ್ಸ್ ಅಲ್ಲಿ ಬರಬಹುದು. ಮುನಿಸಿಪಾಲಿಟಿಯಲ್ಲಿ ಕೆಲಸ ಮಾಡುವವರು ಇನ್‌ಫ್ಲೂಯೆನ್ಸ್‌ನಲ್ಲಿ ಅಲ್ಲಿ ಬಂದು ಇಂಜಿನಿಯರಾಗಿ ಕೆಲಸ ಮಾಡಬಹುದು. ಅಥವಾ ಬೇರೆ ಸಂಘಸಂಸ್ಥೆಗಳಲ್ಲಿ ಇರುವವರನ್ನು ತೆಗೆದುಕೊಳ್ಳತಕ್ಕ ಅವಕಾಶವಾಗುತ್ತದೆ. ಮತ್ತು ಸರ್ಕಾರದ ಹಣವನ್ನು ದುರುಪಯೋಗ ಮಾಡಬಹುದು. ಅಕೌಂಟಬಲಿಟಿ ಎಂದು ಏನು ಇರುತ್ತದೆ ಆ ಅಕೌಂಟಬಿಲಿಟಿ ಇರುವುದಿಲ್ಲ. ತಾವು ಏನು ಹೇಳಿದ್ದೀರೆಂದರೆ:

In the Kudala Sangama Development Board Act, 1994 (Karnataka Act 37 of 1994) it is proposed to amend sub-section (4) of section 3 to make the Chief Minister as Ex-Officio Chairman instead of Chairman and in the proviso to clause (g) of sub-section (4) the words "PWD (C&B) is being omitted so as to remove the restriction of nominating persons who are working only in (C&B) of Public Works Department.

ಏನು ಸ್ವಾಮಿ ಇದು? ಸಿ ಆಂಡ್ ಬಿ ಎಂದರೆ ಪಿ.ಡಬ್ಲ್ಯೂ.ಡಿ.ನಲ್ಲಿ ಕೆಲಸ

ಮಾಡತಕ್ಕವರು ಎಕ್ಸ್‌ಪರ್ಟ್ಸ್, ಡೆವಲಪ್ಮೆಂಟ್ ವರ್ಕ್ಸ್ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ಸ್ ನೋಡುವವರು ಇರಬೇಕು ಎಂಬ ದೃಷ್ಟಿಯಿಂದ ಹಾಕಿದ್ದು. ಇಲ್ಲಿ ನೀವು ಯಾರಿಗೋ ನಾಮಿನೇಟ್ ಮಾಡುವುದಕ್ಕೆ ಬರೀ ಕನ್‌ಸ್ಟ್ರಕ್ಷನ್ ಮತ್ತು ಬಿಲ್ಡಿಂಗ್ ಕೆಲಸ ಗೊತ್ತಿದ್ದರೆ ಸಾಕು ಎಂದರೆ ಏನಾಗುತ್ತದೆಂದರೆ ಅಕೌಂಟಬಲಿಟಿ ಇರುವುದಿಲ್ಲ. ನಾಳೆ ಏನಾದರೂ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಬೇಕು ಎಂದರೆ ಹೊರಗಿನ ಮನುಷ್ಯ ಇದ್ದಾಗ ಮಿಸ್‌ಅಪ್ರೋಪ್ರಿಯೇಷನ್ ಆದಾಗ ಅಥವಾ ಅಲ್ಲಿಂದ ಹಣ ದೋಚಿಕೊಂಡು ಅಥವಾ ತಿಂದುಕೊಂಡು ಹೋದಾಗ ನೀವು ಇವರ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದಕ್ಕೆ ದಯವಿಟ್ಟು ಹೊರಗಿನವರನ್ನು ತಂದು ಇಲ್ಲಿ ಮೆಂಬರ್ ಮಾಡತಕ್ಕದ್ದು ಬೇಡ. ಮುಖ್ಯಮಂತ್ರಿಗಳನ್ನು ಎಕ್ಸ್ ಅಫಿಷಿಯೋ ಛೇರ್ಮನ್ ಆಗಿ ಮಾಡುವುದು ಬೇಡ. ಈ ಕಾಲದಲ್ಲಿ ಮತ್ತೆ ಚೀಫ್ ಮಿನಿಸ್ಟರನ್ನು ಮಾಡುವುದೆಂದರೆ ಮೊದಲೇ ಅವರಿಗೆ ಪುರಸೊತ್ತಿರುವುದಿಲ್ಲ. ಇಂಥ ಸಮಯದಲ್ಲಿ ಎಕ್ಸ್-ಅಫಿಷಿಯೋ ಛೇರ್ಮನ್ ಆಗಿ ಮಾಡಿದರೆ ಬೋರ್ಡ್ ಕಂಪ್ಲೀಟಾಗಿ ಮಲಗಿಬಿಡುತ್ತದೆ. ಬೋರ್ಡ್ ಜೀವಂತವಾಗಿರಬೇಕು, ಕೆಲಸ ಆಗಬೇಕು, ಮುದ್ನಾಳ ಕಮಿಟಿ ಶಿಫಾರಸ್ಸಿನ ಪ್ರಕಾರ ಅಲ್ಲಿ ಅಭಿವೃದ್ಧಿ ಆಗಬೇಕು ಮತ್ತು ಕೂಡಲಸಂಗಮಕ್ಕೆ ಒಂದು ಟೂರಿಸಂ ಅಟ್ರ್ಯಾಕ್ಷನ್ ಆಗತಕ್ಕ ರೀತಿಯಲ್ಲಿ ಕೆಲಸ ಮಾಡಬೇಕೆಂಬ ಇಚ್ಛೆ ನಿಮಗಿದ್ದರೆ ಇದನ್ನು ವಾಪಸ್ ತೆಗೆದುಕೊಳ್ಳಿ. ಇರತಕ್ಕ ವ್ಯವಸ್ಥೆಯನ್ನು ಮುಂದುವರೆಸಿ. ಅವರಿಗೆ ಹೆಚ್ಚು ಹಣವನ್ನು ಕೊಟ್ಟು ತಿಂಗಳಿಗೆ ಕನಿಷ್ಠ ಒಂದು ಸಾರಿಯಾದರೂ ಮೀಟಿಂಗ್ ಕರೆದು ಆ ಕೆಲಸವನ್ನು ವ್ಯವಸ್ಥಿತವಾಗಿ ನಡೆಸತಕ್ಕದ್ದನ್ನು ಮಾಡಿ. ಮುಖ್ಯಮಂತ್ರಿಗಳು ಇದ್ದರೆ ಏನೋ ಆಗುತ್ತದೆ ಎಂದು ತಿಳಿದು ನೀವು ಮಾಡಿದರೆ ಅದು ಸರಿಯಲ್ಲ. ಏಕೆಂದರೆ ಅವರಿಗೆ ಈ ಕಡೆ ಗಮನ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ಪ್ರಾಕ್ಟಿಕಲ್ ಡಿಫಿಕಲ್ಟಿ. ಅನೇಕ ಸಾರಿ ತಮಗೂ ಗೊತ್ತಿದೆ, ಕೆ.ಐ.ಎ.ಡಿ.ಬಿ. ಮೀಟಿಂಗ್‌ಗೆ ಇಂಡಸ್ಟ್ರೀಲ್ ಡೆವಲಪ್ಮೆಂಟ್ ಸಿಂಗಲ್ ವಿಂಡೋ ಏಜೆನ್ಸಿಗಳಿಗೆ ಅಥವಾ ಇಂಥ ಅನೇಕ ಮೀಟಿಂಗ್‌ಗಳಿಗೇ ಮುಖ್ಯಮಂತ್ರಿಗಳು ಅಟೆಂಡ್ ಆಗುವುದಕ್ಕಾಗುವುದಿಲ್ಲ. ಆದ್ದರಿಂದ ದಯವಿಟ್ಟು ಇದನ್ನು ವಾಪಸ್ ತೆಗೆದುಕೊಂಡು ಯಥಾಪ್ರಕಾರ ಇಡಿ ಮತ್ತು ತಿಂಗಳಿಗೆ ಒಂದು ಸಾರಿ ಕಡ್ಡಾಯವಾಗಿ ಮೀಟಿಂಗ್ ಕರೆಸುವುದನ್ನು ಮಾಡಿ. ಡೆವಲಪ್ಮೆಂಟ್ ಬಗ್ಗೆ ಪ್ರತಿವರ್ಷ ನಿಗದಿತ ಹಣವನ್ನು ನಿಗದಿಮಾಡಿ ಇದಕ್ಕೆ ಬೇಕಾದರೆ ಟೈಮ್ ಬೌಂಡ್ ಪ್ರೋಗ್ರಾಂ ಹಾಕಿ. ಇಷ್ಟು ದಿವಸದಲ್ಲಿ ಅಥವಾ ಐದು ವರ್ಷದಲ್ಲಿ ಇಷ್ಟಿಷ್ಟು ಕೆಲಸ ಆಗಲೇಬೇಕು ಎಂದು ಹಾಕಿ. ಆದ್ದರಿಂದ ನಾನು ದಯವಿಟ್ಟು ಈ ತಿದ್ದುಪಡಿ ಅವಶ್ಯಕತೆ ಇಲ್ಲ, ಇದನ್ನು ತಾವು ವಾಪಸ್ ತೆಗೆದುಕೊಳ್ಳಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ): ಇಂಗ್ಲೀಷ್ ಟ್ರಾನ್ಸ್‌ಲೇಷನ್ ತಪ್ಪಿದೆಯೋ ಸರಿ ಇದೆಯೋ ಗೊತ್ತಿಲ್ಲ. ಅಮೆಂಡ್‌ಮೆಂಟ್ ಹೇಗೆ ತರಬೇಕು ಎಂದರೆ

ಪ್ರಾಯಶಃ ಕಾನೂನು ಇಲಾಖೆಗೆ ಗೊತ್ತಿದೆಯೋ ಇಲ್ಲವೋ ಅದೂ ಕೂಡ ಗೊತ್ತಿಲ್ಲ. ಇಲ್ಲಿ ಏನು ಹೇಳುತ್ತಾರೆಂದರೆ "Amendment of Section 3-(1) in clause (a) for the word 'Chairman', then words 'ex-officio Chairman" shall be substituted". ಒರಿಜಿನಲ್ ಸೆಕ್ಷನ ದಯವಿಟ್ಟು ತೆಗೆದುಕೊಳ್ಳಿ, ಚೀಫ್ ಮಿನಿಸ್ಟರ್ ಎನ್ನುವ ಕಡೆ ಎಕ್ಸ್-ಅಫಿಷಿಯೋ ಎಂದು ಹೇಳುತ್ತಾರೆ. ಅಂದರೆ ಅದರ ಅರ್ಥ ಏನು? ಚೀಫ್ ಮಿನಿಸ್ಟರ್ ಹೋದರು ಎಕ್ಸ್ ಅಫಿಷಿಯೊ ಹೇಗೆ ಸೆಕ್ಷನ್ ಓದುತ್ತದೆಂದರೆ "ex-officio shall be the Chairman of the Board" ದಯವಿಟ್ಟು ಇದನ್ನು ಸ್ವಲ್ಪ ನೋಡಬೇಕು ಯಾವರೀತಿ ಅಮೆಂಡ್‌ಮೆಂಟ್ ತಂದಿದ್ದೀರಿ ಎಂದು. ಚೀಫ್ ಮಿನಿಸ್ಟರ್ ಎಂಬ ಪದ ಹೋಗಿ ಎಕ್ಸ್ ಅಫಿಷಿಯೋ ಎಂಬ ಪದ ಬರುತ್ತದೆಂದರೆ ಇದರಲ್ಲಿ ಅರ್ಥವೂ ಇಲ್ಲ, ಏನೂ ಇಲ್ಲ. ಕಣ್ಣು ಮುಚ್ಚಿಕೊಂಡು ಪಾಸ್ ಮಾಡಿದರೆ ಏನಾಗುತ್ತದೆ ನೋಡಿ.

3.40 ಪಿ.ಎಂ

ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಸ್ವಲ್ಪ ನೋಡಬೇಕಲ್ಲಾ? ಈಗ ಸನ್ಮಾನ್ಯ ಖರ್ಗೆಯವರು ಹೇಳಿದರು, ಮುಖ್ಯಮಂತ್ರಿಗಳಿಗೆ ಹೋಗುವುದಕ್ಕೆ ಆಗುವುದಿಲ್ಲ; ಮಾಡುವುದಕ್ಕೆ ಆಗುವುದಿಲ್ಲ. ಚೀಫ್ ಮಿನಿಸ್ಟರ್ ಯಾಕೆ ಬೇಕು ಎಂದು ನಾನು ಹೇಳುವುದಿಲ್ಲ. ಕೂಡಲಸಂಗಮ ಬೋರ್ಡ್ ಎಂದು ಏನಿದೆ, ಎಂದರೆ ಸಕಲ ಜೀವಾತ್ಮಗಳಿಗೆ ಲೇಸನ್ನೇ ಬಯಸುವ ಬಸವಣ್ಣ. ಇವನಾರವ ಇವನಾರವ ಎಂದು ಹೇಳಿದಾಗ 'ಇವ ನಮ್ಮವ' ''ಇವ ನಮ್ಮವ'' ಎಂದು ಹೇಳಿದರು. ಅಂದರೆ ಈ ದೇಶದಲ್ಲಿ, ಕರ್ನಾಟಕ ರಾಜ್ಯದಲ್ಲಿ ಯಾರು ಮುಖ್ಯಮಂತ್ರಿಯಾಗುತ್ತಾರೋ, ಅವರು ಎಲ್ಲರನ್ನೂ ಕೂಡ ಸರಿಸಮಾನವಾಗಿ ನೋಡಿಕೊಳ್ಳಬೇಕು ಎಂದು ಹೇಳಿ ಕೂಡಲಸಂಗಮದ ಬಸವೇಶ್ವರರು ಏನು ಹೇಳಿದ್ದಾರಲ್ಲಾ, ಅದನ್ನು ಕೇಳಿ, ಒಂದು ಮೀಟಿಂಗ್‌ನಲ್ಲಿ ಹೋದಾಗ ಅವರ ನುಡಿ ಅವರ ಕಿವಿಗೆ ಬಿದ್ದು ನೋಡತಕ್ಕಂಥ ಅವಕಾಶ ದೊರಕಿದರೆ, ಮುಖ್ಯಮಂತ್ರಿಗಳಿಗೆ ಏನಾದರೂ ಕೆಟ್ಟ ಚಟಗಳು ಇದ್ದರೆ ಅದು ಹೋಗಿ ಒಳ್ಳೆಯದಾಗಲೀ ಎಂದು ಹೇಳಿ ಇದನ್ನು ತಂದಿದ್ದಾರೆ. ಆದ್ದರಿಂದ ಮುಖ್ಯಮಂತ್ರಿಗಳೇ ಇದಕ್ಕೆ ಅಧ್ಯಕ್ಷರಾಗಿರಬೇಕು ಎನ್ನತಕ್ಕಂಥಾದ್ದು ನನ್ನ ಅಭಿಮತ. ಈ ಸಂಜಯಗಾಂಧಿ, ಜಯದೇವ ಇನ್ಸ್ಟಿಟ್ಯೂಟ್, ಕ್ಯಾನ್ಸರ್ ಇನ್ಸ್ಟಿಟ್ಯೂಟ್, ಇವಕ್ಕೆಲ್ಲಾ ಬೇಕಾದರೆ ತೆಗೆಯಿರಿ. ಆದರೆ ಕೂಡಲ ಸಂಗಮ ಮಂಡಲ ಏನಿದೆ, ಬಸವಣ್ಣನವರು ಐಕ್ಯವಾದಂಥ ಪುಣ್ಯಸ್ಥಳಕ್ಕೆ ಸಂಬಂಧಪಟ್ಟಂಥ ಬೋರ್ಡ್‌ನಲ್ಲಿ ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿರಬೇಕು. ಅದು ಎಲ್ಲರಿಗೂ ಕೂಡ ಒಳ್ಳೆಯದನ್ನು ಮಾಡತಕ್ಕಂಥ ಕೆಲಸ. ಆದ್ದರಿಂದ ಅದಕ್ಕೆ ತಾವು ಇರಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಈ ಅಮೆಂಡ್‌ಮೆಂಟ್‌ನಲ್ಲಿ ತಪ್ಪು ಬರೆದಿದ್ದಾರೆ, ಅದನ್ನು ಸರಿಪಡಿಸಬೇಕು. ಇನ್ನೊಂದು ಎರಡನೇಯದು, ಸೆಕ್ಷನ್ 3- "Amendment of section 3-(1) in clause (a) for the word

'chairman, then words "ex-officio chairman' shall be substituted'. ಅದು ಯಾರು ನೋಡಿಕೊಳ್ಳುತ್ತಿದ್ದಾರೋ ಗೊತ್ತಿಲ್ಲ. ಅಧ್ಯಕ್ಷರೇ, ತಾವು ದಯವಿಟ್ಟು ಒರಿಜಿನಲ್ ಸೆಕ್ಷನ್‌ನ್ನು ತೆಗೆದು ನೋಡಬೇಕು. ಅಮೆಂಡ್‌ಮೆಂಟ್ ಆಫ್ ಸೆಕ್ಷನ್ 5 - Clause (F) provisoನಲ್ಲಿ ಈಗಾಗಲೇ You have any share or interest ಎಂದು ಇದೆ. ಈಗಿರುವ ಒರಿಜಿನಲ್ ಸೆಕ್ಷನ್‌ನಲ್ಲಿ. ಈಗ ಇವರು ಅನ್ನುತ್ತಾರೆ- "For the words any interest, the words any share or interest shall be substituted" ಎಂದು ಹೇಳುತ್ತಾರೆ. ಅಧ್ಯಕ್ಷರೇ, ಇದು ನನಗೆ ಅರ್ಥವಾಗುತ್ತಿಲ್ಲ. ಅವರು ಏನು ಹೇಳಬೇಕು ಎಂದು ಬಯಸುತ್ತಿದ್ದಾರೆ? ಈಗಾಗಲೇ ಇದೆ. 'Any share or interest' ಎಂದು Section 5 Clause F proviso ಇದು ಹಾಗೆ ಇದೆ. ನೀವು ಅಮೆಂಡ್‌ಮೆಂಟ್‌ನಲ್ಲಿ ಹೇಳುತ್ತೀರಿ 'For the words' any interest' the words' any share or interest' shall be substituted'. ಇದು ನನಗೆ ಅರ್ಥವಾಗುತ್ತಿಲ್ಲ. ಇರುವುದನ್ನೇ ನೀವು ತೆಗೆದುಹಾಕಬೇಕು ಅನ್ನುತ್ತೀರಾ ಅಥವಾ ಇಲ್ಲದೇ ಇರುವುದನ್ನು ಸೇರಿಸಬೇಕು ಅನ್ನುತ್ತೀರಾ? ಇದೇನು ಅಮೆಂಡ್‌ಮೆಂಟ್ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಇದನ್ನು ತಾವು ದಯವಿಟ್ಟು ನೋಡಬೇಕು. ಏತಕ್ಕೆಂದರೆ ಕಣ್ಣುಮುಚ್ಚಿಕೊಂಡು ತಂದು, ಅಮೆಂಡ್‌ಮೆಂಟ್‌ಗಳನ್ನು ಮಾಡಿಕೊಂಡು ಹೋಯಿತು ಎಂದರೆ, ಆಮೇಲೆ ನೋಡಿದವರು ನಗುತ್ತಾರೆ. ದಯವಿಟ್ಟು ಇದಕ್ಕೆ ಸ್ವಲ್ಪ ಗಮನಹರಿಸಿ. ಅದನ್ನು ತೆಗೆದುಹಾಕಿ. ಇಲ್ಲದೇ ಇದ್ದರೆ 'any interest' ಬದಲು ತಾವು 'any share or interest ಎಂದು ತರಬೇಕು ಎಂದು ಇದ್ದೀರಾ? ಅದನ್ನು ಅಲ್ಲಿ ಹೇಳಬೇಕಲ್ಲಾ ಈಗ ಇರುವ ಸೆಕ್ಷನ್‌ನಲ್ಲಿ 'any share or interest' ಎಂದು ಇದೆ. ಇದು ಏನು ಎಂಬುದು ನನಗೆ ಅರ್ಥವಾಗುತ್ತಾ ಇಲ್ಲ. 'ex-officio section 6', ಏಕೆ? 'shall be substituted-nonofficial ಕೊನೆಗೆ 'amendment of section 8' ಇದನ್ನು ಕಾನೂನು ಮಂತ್ರಿಗಳು ದಯವಿಟ್ಟು ಗಮನಹರಿಸಿ ನೋಡಬೇಕು. ಸೆಕ್ಷನ್ 6ರಲ್ಲಿ '(c) provided that this clause shall not be applicable in case of non-official Members' ಎಂಬುದು ಈಗಿರುವಂಥ ಸೆಕ್ಷನ್. ಇವರು ಏನು ಹೇಳುತ್ತಾರೆ ಎಂದರೆ- "In sub-section (2) of section 8 of the Principal Act, in clause (c) after the word 'appropriate', the words 'or apply' shall be inserted" ಇದೂ ಅರ್ಥವಾಗುತ್ತಾ ಇಲ್ಲ. ಹಾಗಂತ ಓದಿದರೆ- "Provided that this clause shall not be applicable in case of ex-officio Members" ಎಂದು ಅರ್ಥ ಬರುತ್ತದೆ. ಇದು ಕೂಡ ಅರ್ಥವಾಗುತ್ತಾ ಇಲ್ಲ. It becomes obsolete. ದಯವಿಟ್ಟು ಇದನ್ನು ಸರಿಯಾದಂಥ ಕಾನೂನು ಮಾಡಿಕೊಂಡು ತೆಗೆದುಕೊಂಡುಬನ್ನಿ. ದಯವಿಟ್ಟು ವಿತ್‌ಡ್ರಾ ಮಾಡಿ. ಇದು

ಸರಿಯಲ್ಲ. ಯೋಚನೆ ಮಾಡಿ ಇದನ್ನು ತೆಗೆದುಕೊಂಡು ಬರುವಂಥ ಕೆಲಸ ಮಾಡಿ ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಮತ್ತೊಂದು ಅಧ್ಯಕ್ಷರೇ, ಕ್ಲಾಸ್ 'ಜಿ' ನಲ್ಲಿ 'ಆರ್' ಎನ್ನತಕ್ಕಂಥ ವರ್ಡ್ ಎಲ್ಲೆಲ್ಲಿದೆ ಅಲ್ಲಿ 'ಆ್ಯಂಡ್' ಎಂದು ಮಾಡಿದ್ದಾರೆ. ಅಂದರೆ ಏನು ಎಂದರೆ- "holding a Bachelor degree in Civil Engineering awarded by any University established by law in India; or' 'ಆರ್' ಎಂದು ಇತ್ತು. ಅದನ್ನು 'ಆ್ಯಂಡ್' ಎಂದು ಹೇಳಿ ಮಾಡಿದ್ದಾರೆ. ಅಂದರೆ ಅವನು civil engineer ಆಗಿರಬೇಕು. ಅವನು Chief Engineer ಆಗಿರಬೇಕು. ಅದು Civil PWD (C&B) ಆಗಿರಬೇಕು. C&B ಎಂದು ನಾರ್ಮಲಿ ಯಾವುದಾದರೂ ಲೆಜಿಸ್ಲೇಷನ್ ಮಾಡಬೇಕಾದರೆ ಎಕ್ಸ್‌ಟ್ರಾ ವರ್ಡ್ಸ್‌ನ್ನು ಹಾಕಬಾರದು. ಆದಷ್ಟು ಕಡಿಮೆ ವರ್ಡ್ಸ್‌ನ್ನು ಹಾಕಬೇಕು. ಮೀನಿಂಗ್‌ಫುಲ್ ಆಗಿ ಇರಬೇಕು. ಅದರಿಂದ ಡೌಟು ಕ್ರಿಯೇಟ್ ಆಗುವಹಾಗೆ ಇರಬಾರದು. ಇದರಲ್ಲಿ ಹೆಚ್ಚು ಡೌಟ್‌ಗಳನ್ನು ಕ್ರಿಯೇಟ್ ಮಾಡುತ್ತಿದ್ದೀರಿ. ಆದ್ದರಿಂದ ಇದು ಸರಿಯಾಗಿಲ್ಲ. ದಯವಿಟ್ಟು ವಾಪಸ್ಸು ತೆಗೆದುಕೊಂಡು ಯಾವರೀತಿ ಮಾಡಬೇಕು ಎನ್ನುವುದನ್ನು ದಯವಿಟ್ಟು ಮಾಡಿ. ಆಮೇಲೆ ಸೆಕ್ಷನ್ 14ರಲ್ಲಿ 'ಸಿ'ನಲ್ಲಿ ಇದರಲ್ಲೂ ಕೂಡ ಹಾಗೆ ಮಾಡಿದ್ದಾರೆ. ಕ್ಲಾಸ್ 'ಸಿ' ಸೆಕ್ಷನ್ 8ರಲ್ಲಿ- "to lease, sell or otherwise transfer any movable or immovable property which belongs to it and to 'appropriate' ಅದಕ್ಕೂ ಅಪ್ರೊಪ್ರಿಯೇಟ್ ಎನ್ನುವ ಶಬ್ದಕ್ಕೆ ಟು ಅಪ್ಲೈ ಎನ್ನುತ್ತಾರೆ. ಇದು ಏನೂ ಅರ್ಥವಾಗುವುದಿಲ್ಲ. ದಯವಿಟ್ಟು ಆ ಸೆಂಟೆನ್ಸ್‌ನ್ನು ಓದಿ. "to lease, sell or otherwise transfer any movable or immovable property which belongs to it and to appropriate" ಈಗ ಇದ್ದದ್ದು ಅಪ್ರೊಪ್ರಿಯೇಟ್ ಇತ್ತು. ಅದರ ಬದಲು 'and to apply any land' ಅಂದರೆ ಇದೇನು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಕಾನೂನು ಮಂತ್ರಿಗಳು ಹೇಳಬೇಕು. ಸೆಕ್ಷನ್ 8 (ಸಿ)ಯನ್ನು ದಯವಿಟ್ಟು ನೋಡಿ. 'appropriate' ಎನ್ನುವ ವರ್ಡ್‌ನ್ನು 'apply' ಎಂದು ಯೂಸ್ ಮಾಡಿದ್ದೀರಿ. You have substituted.

ಶ್ರೀ ಎಂ.ಸಿ.ನಾಣಯ್ಯ: ಇದು ಕೂಡಲ ಸಂಗಮ-ಇದಕ್ಕೆ ಸಂಬಂಧಪಟ್ಟಿರತಕ್ಕಂಥ ಕಾಯದೆ. Authorised text ಇದಕ್ಕೆ ಸಂಬಂಧಪಟ್ಟಹಾಗೆ ಕನ್ನಡ. Kannada is the authorised text as far as the legislation is concerned. ನಾವು ಇಂಗ್ಲಿಷಿನಲ್ಲಿ ಇರತಕ್ಕದ್ದನ್ನು ಟ್ರಾನ್ಸಲೇಷನ್ ಕೊಟ್ಟಿದ್ದೇವೆ. ಟ್ರಾನ್ಸಲೇಷನ್ ನಾವು ಕೊಡಬೇಕಾಗುತ್ತದೆ. ಕನ್ನಡದ್ದು ಕೊಟ್ಟಿದ್ದೇವೆ. ದಯವಿಟ್ಟು ನೀವು ನೋಡಿ. ಕನ್‌ಫ್ಯೂಷನ್ ಏಕೆ ಕ್ರಿಯೇಟ್ ಆಯಿತು ಎಂದರೆ ನಾನು ಹೇಳುತ್ತೇನೆ,....

ಶ್ರೀಮತಿ ಪ್ರಮೀಳಾ ನೇಸರ್ಗಿ: ನೀವು ಏನು ಕಳುಹಿಸಿದ್ದೀರಿ ಅದನ್ನು ಓದಿಕೊಂಡು ನಾವು ತಯಾರಾಗಿ ಬಂದಿದ್ದೇವೆ.

ಶ್ರೀ ಎಂ.ಸಿ.ನಾಣಯ್ಯ: ಕನ್ನಡದ್ದು ತೆಗೆದುಕೊಳ್ಳಿ,

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಇನ್ನುಮೇಲೆ ಯಾವುದೇ ಇದ್ದರೂ ಕೂಡ ಕನ್ನಡದಲ್ಲಿ ಇರುವುದು ಮಾತ್ರ ಅಧಿಕೃತ, ಇಂಗ್ಲಿಷಿನಲ್ಲಿ ತಪ್ಪಿರುತ್ತದೆ ಎಂದು ಭಾವಿಸಬೇಕೇ?

ಶ್ರೀ ಎಂ.ಸಿ.ನಾಣಯ್ಯ: ಯಡಿಯೂರಪ್ಪನವರೇ, ಕೇಳಿ....

ಉಪಾಧ್ಯಕ್ಷರು: ಅವರು ಹೇಳುವುದನ್ನು ಕೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇನ್ನುಮುಂದೆ ಇಂಗ್ಲೀಷನ್ನು ಯಾವುದೇ ಕಾರಣಕ್ಕೆ ದಾಖಲೆ ಎಂದು ಪರಿಗಣಿಸಬೇಡಿ, ಕನ್ನಡ ಮಾತ್ರ ಸರ್ಕಾರದ ಅಧಿಕೃತ ದಾಖಲೆ ಎಂದು ಪರಿಗಣಿಸಬೇಕು ಎಂದು ಕಾನೂನು ಮಂತ್ರಿಗಳು ಹೇಳುವುದಾದರೆ ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಒಂದು ನಿಮಿಷ, ನಾನು ಹೇಳುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಉಪಾಧ್ಯಕ್ಷರೇ, Authorised text is Kannada.

ಶ್ರೀ ವಾಟಾಳ್ ನಾಗರಾಜ್: ಈಗ ರಾಜ್ಯದ ಅಧಿಕೃತ ಭಾಷೆ ಕನ್ನಡ. ಅಧಿಕೃತವಾದಂಥ ಭಾಷೆ ಕನ್ನಡ. ಅಧಿಕೃತ ಭಾಷೆ-ಈಗ ನಾವು ಏಕೆ ಇಂಗ್ಲೀಷ್ ಬೇಕು ಎಂದು ಕೇಳತಕ್ಕಂಥಾದ್ದು. ಅದು ತಪ್ಪು ತಪ್ಪು ಇಂಗ್ಲೀಷ್ ಕೊಡತಕ್ಕಂಥಾದ್ದು ಅದು ಸರಿಯಲ್ಲ. ಮತ್ತೊಂದು ತಮಗೆ ಹೇಳುತ್ತೇನೆ. ಆಮೇಲೆ ಇಂಗ್ಲಿಷ್‌ನಲ್ಲಿರುವುದನ್ನು ಕನ್ನಡಕ್ಕೆ ತರ್ಜುಮೆ ಮಾಡತಕ್ಕಂಥಾದ್ದು ಇದೆಯಲ್ಲಾ ಅದು ತೀರಾ ಅಪಾಯಕಾರಿ. ಇಲ್ಲಿದೆ. 'ಪರಂತುಕದಲ್ಲಿ' ಎಂದು ಹಾಕಿದ್ದಾರೆ. ಅದು ಏನು ಎಂದು ಇನ್ನೂ ಅರ್ಥವಾಗುತ್ತಿಲ್ಲ. ಪರಂತುಕ, ಆಗಂತುಕ ಯಾವುದು ಇದು? ಇದೇನು ಕನ್ನಡ ಭಾಷೆಯೇ, ಯಾವ ಭಾಷೆ? ಇದಕ್ಕೆ ಅರ್ಥ ಹುಡುಕಬೇಕಾದರೆ ನಾವು ಮತ್ತೆ ಇಂಗ್ಲೀಷಿಗೆ ಹೋಗಬೇಕು. ಇದೇನು ಆಗಿದೆ ಎಂದು ಹೇಳಿದರೆ ನಮ್ಮಲ್ಲಿ ತರ್ಜುಮೆ ಮಾಡತಕ್ಕಂಥವರು ಪಂಡಿತರಾಗಬೇಕು, ಕನ್ನಡದ ಬಗ್ಗೆ ಜ್ಞಾನ ಇರತಕ್ಕಂಥವರು ಆಗಬೇಕು; ಇದು ಯಾರ್‍ಯಾರದ್ದೋ ಕೈಯಲ್ಲಿ ತರ್ಜುಮೆ ಮಾಡಿಸಿ ನಾವು ಅಪಾಯಕ್ಕೆ

ಸಿಕ್ಕುತ್ತಿದ್ದೇವೆ. ಒಂದು ಹೇಳುವುದಕ್ಕೆ ಹೋಗಿ ಇನ್ನೊಂದು ಹೇಳುತ್ತೇವೆ. ಇದು ಅಪಾರ್ಥವಾಗುತ್ತದೆ. ಆದ್ದರಿಂದ....

ಶ್ರೀ ಕಾಗೋಡು ತಿಮ್ಮಪ್ಪ: ಈಗ ಅವನ್ನು ಎಕ್ಸ್ ಅಫಿಷಿಯೋ ಎಂದರೆ 'ಪದನಿಮಿತ್ತ ಅಧ್ಯಕ್ಷರನ್ನಾಗಿ ಮಾಡುವ ಉದ್ದೇಶ ಏನು? ಹಿಂದೆ ಇದ್ದ ತೊಂದರೆ ಏನಾಗಿತ್ತು?

(ಗೊಂದಲ)

ಉಪಾಧ್ಯಕ್ಷರು: ಲಾಮಿನಿಸ್ಟರ್ ಹೇಳುತ್ತಾರೆ, ದಯವಿಟ್ಟು ಕೇಳಿ.

ಶ್ರೀ ಎಂ.ಸಿ.ನಾಣಯ್ಯ: ಏಕೆ ಎಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಈ ಪರಂತುಕ, ಪದನಿಮಿತ್ತ ಅಂದರೆ ಏನು?

ಶ್ರೀ ಎಂ.ಸಿ.ನಾಣಯ್ಯ: ಈಗ ಏನಾಗುತ್ತದೆ ಎಂದರೆ, ಕೂಡಲ ಸಂಗಮಕ್ಕೆ ಸಂಬಂಧಪಟ್ಟ ವಿಧೇಯಕ ಯಾವುದಿದೆ, ಅದರಲ್ಲಿ ಅದನ್ನು ನಡೆಸುತ್ತಾ ಇರತಕ್ಕಂಥ ಜವಾಬ್ದಾರಿಯನ್ನು ಒಬ್ಬರಿಗೆ ಕೊಟ್ಟಿರುತ್ತಾರೆ. ಈ ಹಿಂದಿನ ನಮ್ಮ ವಿಧೇಯಕದಲ್ಲಿ ಮುಖ್ಯಮಂತ್ರಿಗಳನ್ನು ಅದರ ಅಧ್ಯಕ್ಷರು ಎಂದು ಮಾಡಿದ್ದರು. ಚೇರ್ಮನ್ ಅಂದರೆ ಅದು ಪರ್ಮನೆಂಟ್ ಆಗಿರತಕ್ಕಂಥ ಚೇರ್ಮನ್ ಆಗುತ್ತಾರೆ. He becomes a permanent Chairman. ಎಂದು ಹೇಳುತ್ತಾ ಇರತಕ್ಕಂಥ ಅರ್ಥ. ಚೇರ್ಮನ್ ಆದಮೇಲೆ ಏನು? ಬೋರ್ಡ್ ಮತ್ತು ಕಾರ್ಪೊರೇಷನ್‌ಗಳಲ್ಲಿ....

ಶ್ರೀ ವಾಟಾಳ್ ನಾಗರಾಜ್: ಎಲ್ಲಿಯವರೆಗೆ?

ಉಪಾಧ್ಯಕ್ಷರು: ಅವರು ಹೇಳಲಿ. ಕೇಳಿ.

ಶ್ರೀ ಎಂ.ಸಿ.ನಾಣಯ್ಯ: ಈಗ 'ಚೇರಮನ್' ಎಂದು ಹೇಳತಕ್ಕಂಥಾದ್ದು ಮಾಡಿದಮೇಲೆ ಏನಾಗುತ್ತದೆ? He becomes a permanent Chairman of that particular committee. ಇದರಲ್ಲಿ ಏನಾಗುತ್ತದೆ ಎಂದರೆ, ನಮ್ಮಲ್ಲಿ ಬೋರ್ಡ್ಸ್ ಅಂಡ್ ಕಾರ್ಪೊರೇಷನ್ಸ್ ಉಂಟು. ಅದಕ್ಕೆ ಸಂಬಂಧಪಟ್ಟ ಹಾಗೆ ನಾವು ಒಬ್ಬರನ್ನು ಚೇರ್ಮನ್‌ರಾಗಿ ಮಾಡುತ್ತೇವೆ. He is a permanent Chairman of that. ಆ ಒಂದು ಕಾನ್ಸೆಪ್ಟನ್ನು ಈ ವಿಧೇಯಕಕ್ಕೆ ಕೊಟ್ಟು ಮುಖ್ಯಮಂತ್ರಿಗಳನ್ನು ಅದರ ಪರ್ಮನೆಂಟ್ ಛೇರಮನ್ ಎಂದು ಹೇಳಿದ್ದು ಅದನ್ನು ಕೊಡಬಾರದು ಎಂದು ಹೇಳುವ ಹಿನ್ನೆಲೆಯಲ್ಲಿ we have made it ex-officio. That is all. ಇದರಲ್ಲಿ ನೀವು ಅದನ್ನು ಸುತ್ತಿ ಬಳಸಿ ಮಾತನಾಡಿದರೆ ಪರ್ಮನೆಂಟ್ ಛೇರ್‌ಮನ್ ಎಂದು ಹೇಳತಕ್ಕಂಥದ್ದು ಬೇಡ ಎಂದು ಮಾಡಿ ಎಕ್ಸ್-ಅಫಿಷಿಯೋ ಎನ್ನುವುದನ್ನು ಮಾಡಿರುವುದು ಇದೆ....

ಶ್ರೀ ಹೆಚ್.ಶಿವಪ್ಪ: ಈಗ ಛೇರಮನ್ ಎಂದರೆ by designation Chief Minister. ಎಕ್ಸ್-ಅಫಿಷಿಯೋ ಅನ್ನುವುದರಿಂದ ಏನು ಲಾಭವಾಗುತ್ತದೆ? ಜೆ.ಹೆಚ್.ಪಟೇಲರು ಎಂದು ಬರೆದರೆ ಮುಂದೆ ತೊಂದರೆಯಾಗುತ್ತದೆ. Whoever becomes the Chief Minister will be the Chairman of the Board ಹೀಗಿರುವಾಗ ಎಕ್ಸ್-ಅಫಿಷಿಯೋ ಎನ್ನುವುದು ಏಕೆ ಬೇಕು? It is superfluous.

ಶ್ರೀ ಎಂ.ಸಿ.ನಾಣಯ್ಯ: ನಾರ್ಮಲಿ ಗೌರ್ನಮೆಂಟ್ ಬಾಡಿಗೆ ಸಂಬಂಧಪಟ್ಟಂತೆ ಉದಾಹರಣೆಗೆ ಹೇಳಬೇಕಾದರೆ. ಕೆ.ಪಿ.ಸಿ. ಇದು ಪಬ್ಲಿಕ್ ಸೆಕ್ಟೇರ್ ಅಂಡರ್‌ಟೇಕಿಂಗ್ ಇಲ್ಲಿ ಏನಾಗುತ್ತದೆ ಎಂದರೆ KPC is public sector undertaking. The Chief Minister is the Chairman of that Board. This is not a public sector undertaking. This is a private body as such. When it is a private body, the Cheif Minister, by virtue of his office, cannot become a permanent Chairman. This is the distintion. It is an independent body not connected with the Government. ಆದರೆ ಏನಾಗುತ್ತದೆ ಎಂದರೆ ಅದನ್ನು ನಡೆಸುವ ಸಂದರ್ಭ ಒದಗಿ ಬಂದಾಗ ಚೀಫ್ ಮಿನಿಸ್ಟರ್ ಎಕ್ಸ್-ಅಫಿಷಿಯೋ ಛೇರಮನ್ ಆಗಿರುವಾಗ ಅದನ್ನು ಬೆಳವಣಿಗೆ ಮಾಡಲು ಅನುಕೂಲವಾಗುತ್ತದೆ ಎನ್ನುವ ಹಿನ್ನಲೆಯಲ್ಲಿ ಈ ಹಿಂದೆ ಅದು ಮುಳುಗಡೆ ಆಗುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳೇ ಇರಬೇಕು ಎನ್ನುವ ಒಂದು ಬಲವಾದ ವಾದ ಬಂತು. ಏಕೆಂದರೆ ಇದನ್ನು ಬೆಳೆಸಲಿಕ್ಕೆ ಮುಖ್ಯಮಂತ್ರಿಗಳೇ ಇರಬೇಕಾಗುತ್ತದೆ. ಇದಕ್ಕೆ ಏನಾಗಿದೆ ಎಂದರೆ ಛೇರಮನ್ ಎಂದು ಹೇಳತಕ್ಕಂಥದ್ದು That is separate body ಆದರೆ ನಾವು an independent bodyಗೆ ವಿಧೇಯಕವನ್ನು ಮಾಡಿದ್ದೇವೆ. ಅಲ್ಲಿ ಪರ್ಮನೆಂಟಾಗಿ ಮುಖ್ಯಮಂತ್ರಿಗಳನ್ನು ಪರ್ಮನೆಂಟ್ ಛೇರಮನ್ ಎನ್ನುವ ಹೆಸರನ್ನು ಕೊಡಬಾರದು ಎನ್ನುವ ಉದ್ದೇಶಕ್ಕಾಗಿ, ಎಕ್ಸ್-ಅಫಿಷಿಯೋ ಎನ್ನುವ ಪದವನ್ನು ಬದಲಾವಣೆ ಮಾಡಿದ್ದೇವೆ. ಇಂಟರ್ ಪ್ರಿಟೇಷನ್ ಕೊಟ್ಟರೆ ಛೇರಮನ್ ಅಂಡ್ ಎಕ್ಸ್-ಅಫಿಷಿಯೋ ಅಂದರೆ ಏನು ಅರ್ಥ ಎಂದು ಕೇಳುತ್ತೀರಾ?

SRI KAGODU THIMMAPPA: "Chief Minister shall be the Chairman of the Board" ಎಂದು ಮಾಡಬೇಕಾಗಿರುವುದನ್ನು ಮಾಡಿದ್ದೀರಿ. ಇದ್ದು 1996ರಲ್ಲಿ ಈ ಕಾನೂನು ಜಾರಿಯಲ್ಲಿ ಬಂದಿದೆ. ಅವತ್ತಿನಿಂದ ಇಲ್ಲಿಯವರೆಗೆ ಮುಖ್ಯಮಂತ್ರಿಗಳೇ ಅಧ್ಯಕ್ಷರು ಎನ್ನುವ ಪದದಿಂದಲೇ ಕಾರ್ಯಾಚರಣೆ

ಮಾಡಿಕೊಂಡು ಬಂದಿದ್ದೀರಿ. ಇದರಿಂದ ಉಂಟಾಗಿರತಕ್ಕ ಕಷ್ಟ ನಷ್ಟ ಏನು? ಏನಾದರೂ ಇದರಿಂದ ನಿಮಗೆ ತೊಂದರೆ ಉಂಟಾಗಿತ್ತಾ? ಏಕೆ ಬದಲಾವಣೆ ಮಾಡಿದ್ದೀರಿ?

ಶ್ರೀ ಎಂ.ಸಿ.ನಾಣಯ್ಯ: ಕೆಲವು ಸಂದರ್ಭಗಳಲ್ಲಿ Chairman of the Board, and Corporations are the offices of profit. ಆದ್ದರಿಂದ ಕೆಲವು ಸಂದರ್ಭ ಬಂದಾಗ Chief Minister cannot be the Chairman of another independent body. ನಾಳೆ ಏನಾಗುತ್ತದೆ ಎಂದರೆ ಈ ಚೀಫ್ ಮಿನಿಸ್ಟರ್ ಛೇರ್ಮನ್ ಆಗುವುದಿಲ್ಲ. Someone else will become Chairman of that. ಛೇರ್ಮನ್ ಆಗುವಂತಹ ಸಂದರ್ಭದಲ್ಲಿ we may try to give him the status. Then it becomes an office of profit. ಈಗ ಮುಖ್ಯಮಂತ್ರಿ ಬೇಡ ಎಂದು ನಿಮಗೆ ಅನ್ನಿಸಿದರೆ ಅವರನ್ನು ತೆಗೆದು ಮತ್ತೊಬ್ಬರನ್ನು ನೀವು ಛೇರಮನ್ ಮಾಡಬಹುದು. ಎಕ್ಸ್-ಅಫಿಷಿಯೋ ಎಂದು ಹೇಳಿದ ಕೂಡಲೇ he does not become Chairman of that particular committee. ಹಾಗೂ ಅದಕ್ಕೆ ಇರತಕ್ಕಂಥ ವರ್ಕ್ಸ್ ಬಂದಾಗ ನೋ... ಆ ಪರಿಸ್ಥಿತಿ ನಿರ್ಮಾಣ ಮಾಡಲಿಕ್ಕೆ ಇದೆ. It is a subtle distintion between permanent chairman and ex-officio chairman. ಇದಕೋಸ್ಕರ to be on the safer side we have bought this amendment. ಮತ್ತೊಂದು ತಮಗೆ ಹೇಳಬೇಕೆಂದರೆ, ಈಗಿರತಕ್ಕಂಥ ವಿಧೇಯಕ ಯಾವುದಿದೆ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಒಂದು ನಿಮಿಷ. ಈಗ ತಾವು ಒರಿಜಿನಲ್ ಸೆಕ್ಷನ್ 3 ನೋಡಿದರೆ ಗೊತ್ತಾಗುತ್ತದೆ. ನಮಗೆ ಅಫಿಷಿಯಲ್ ಆಗಿ ಸಪ್ಲೈ ಮಾಡಿರುವುದು ಇದೇ ತಾನೆ....

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ: ಹೌದು ಅದನ್ನು ನಾವು ಮಾಡಬೇಕಾಗುತ್ತದೆ. ಟ್ರಾನ್ಸ್‌ಲೇಷನ್ ನಾವು ಕೊಡಲೇಬೇಕಲ್ಲಾ? Amendment has been brought to the original Kannada text. ನಮ್ಮಲ್ಲಿ ಕೆಲವು ವಿಧೇಯಕಗಳು ಅಫಿಷಿಯಲ್ ಇಂಗ್ಲೀಷ್ ಟೆಕ್ಸ್ಟನಲ್ಲಿ ಉಂಟು. ಕೆಲವು ವಿಧೇಯಕಗಳು ಅಫಿಷಿಯಲ್ ಕನ್ನಡ ಟೆಕ್ಸ್ಟನಲ್ಲಿ ಉಂಟು. ಇದಕ್ಕೆ ಸಂಬಂಧಪಟ್ಟ ಹಾಗೆ ಹೇಳಿ. ಕೋರ್ಟಿನಲ್ಲಿ ಆರ್ಗ್ಯುಮೆಂಟ್ ಮಾಡಿದ ರೀತಿಯಲ್ಲಿ ಮಾಡಬೇಡಿ, ಇದು ಸ್ಮಾಲ್ ಅಮೆಂಡ್‌ಮೆಂಟ್....

ಶ್ರೀಮತಿ ಪ್ರಮೀಳ ನೇಸರ್ಗಿ: ಇದರಲ್ಲಿ ನೀವೀಗ ಎಸ್ಕೇಪ್ ಆಗುವುದಕ್ಕೆ

ಆಗುವುದಿಲ್ಲ. ಹೈಕೋರ್ಟ್‌ನಲ್ಲಿ ಈಗ ಟ್ರಾನ್ಸ್‌ಫಾರ್ಸ್ ಆಫ್ ಜಡ್ಜ್‌ ಆಗುತ್ತಿರುವುದರಿಂದ ಇಡೀ ಇಂಡಿಯಾದಲ್ಲಿ ಇರುವವರೆಲ್ಲರೂ ಬರುತ್ತಾರೆ. ತಾವು ಮೊದಲು ಕೊಡಬೇಕಾದದ್ದು ಕನ್ನಡ ಜೊತೆಗೆ ಇಂಗ್ಲೀಷ್‌ದ್ದೂ ಕೂಡ ಟ್ರಾನ್ಸ್‌ಲೇಷನ್ ಕೂಡ ಕೊಡಬೇಕು. ನೀವು ಕೊಟ್ಟಿರುವ ಟ್ರಾನ್ಸ್‌ಲೇಷನ್ ಅವರು ನೋಡತಕ್ಕಂಥದ್ದು..

ಶ್ರೀ ಎಂ.ಸಿ.ನಾಣಯ್ಯ: ಹೊರಗಡೆಯಿಂದ ಜಡ್ಜ್‌ಗಳು ಬರುತ್ತಾರೆ, ಬಂದಾಗ ಟ್ರಾನ್ಸ್‌ಲೇಷನ್ ಮಾಡುವುದಕ್ಕೆ ಒಂದು ಪ್ರತ್ಯೇಕ ಶಾಖೆ ಉಂಟು, ನಾವು ಸರ್ಕಾರದ ವತಿಯಿಂದ ಅಥವಾ ಖಾಸಗಿಯವರ ವತಿಯಿಂದ ಕನ್ನಡದಲ್ಲಿ ತರ್ಜುಮೆ ಮಾಡಿ ಕೊಡಲೇಬೇಕಾಗುತ್ತದೆ. ಇದು ಇಲ್ಲಿ ಹಾಗೂ ಹೊರಗಡೆ ಕೂಡ ನಡೆಯುತ್ತದೆ. ತಮಿಳುನಾಡಿನಲ್ಲಿ, ಉತ್ತರ ಪ್ರದೇಶದಲ್ಲಿ ಇದು ನಡೆಯುವ ರೀತಿಯಲ್ಲಿ ಕರ್ನಾಟಕದಲ್ಲಿ ಕೂಡ ನಡೆಸಬೇಕಾಗುತ್ತದೆ. ಹೊರಗಡೆಯಿಂದ ಬಂದ ಮಾತ್ರಕ್ಕೆ ಪೂರ್ತಿ ಇಂಗ್ಲೀಷ್‌ನಲ್ಲಿ ಮಾಡಬೇಕೆಂದು ಅಲ್ಲ. ಕರ್ನಾಟಕದಲ್ಲಿ ಕನ್ನಡವೇ. ವಾಟಳ್‌ರೇ, ನೋಡಿ ಅಲ್ಲಿ ಅವರು ಹೇಳುತ್ತಿದ್ದರೂ ನೀವು ಕೇಳುವುದಿಲ್ಲ.. ಅವರು ಏನು ಹೇಳುತ್ತಾರೆಂದರೆ ಇಲ್ಲಿ ಇಂಗ್ಲೀಷ್ ಕೊಡಬೇಕು ಕನ್ನಡ ಕೊಡಲೇ ಬಾರದು ಎನ್ನುವ ಮಾತನ್ನು ಹೇಳುತ್ತಿದ್ದಾರೆ....

ಶ್ರೀ ವಾಟಾಳ್ ನಾಗರಾಜ್: ಕನ್ನಡವೇ ಅಧಿಕೃತ ಭಾಷೆ, ಕನ್ನಡ ಆಡಳಿತ ಭಾಷೆಯಾಗಿರುವುದರಿಂದ ನನ್ನನ್ನೇ ಎತ್ತಿಕಟ್ಟಬೇಕಾಗಿಲ್ಲ. ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ನಿಮಗೆ ಸಹಕಾರ ಮಾಡಬೇಕು ಎನ್ನುವ ಅರ್ಥವಲ್ಲ. ಕೆಲವು ಸಾರಿ ತಮಗೆ ಬೇಕಾದಾಗ ನಮ್ಮನ್ನು ಉಪಯೋಗಿಸಿಕೊಳ್ಳುತ್ತೀರಿ, ಬೇಡವಾದಾಗ ಕೈ ಬಿಡುತ್ತೀರಿ. ಆದ್ದರಿಂದ ಇದು. ಒಪ್ಪುವುದಕ್ಕೆ ಸಾಧ್ಯವಿಲ್ಲ....

ಉಪಾಧ್ಯಕ್ಷರು: ಅಲ್ಲ ಕನ್ನಡದ ಬಗ್ಗೆ ಸಹಕಾರ... ಕನ್ನಡದ ಬಗ್ಗೆ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನಾನು ಏನು ಹೇಳುವುದೆಂದರೆ ತಾವು ಕನ್ನಡದಲ್ಲಿ ಕೊಟ್ಟರೂ ಎಂಥ ಕನ್ನಡ ಕೊಡಬೇಕೆಂದರೆ, ಅಪರಂಜಿಯಂತಹ ಕನ್ನಡ ಕೊಡಬೇಕು, ಕಸ್ತೂರಿ ಕನ್ನಡ ಕೊಡಬೇಕು, ಇದನ್ನು ಬಿಟ್ಟು ಇದು ಯಾವುದು? ಪದನಿಮಿತ್ತ, ಪರಂತು, ಆಗಂತುಕ, ಇದು ಯಾವುದು? ಇದನ್ನು ಯಾರು ತರ್ಜುಮೆ ಮಾಡಿದ್ದವರು? ತರ್ಜುಮೆ ಮಾಡುವ ಇಲಾಖೆ ಎನ್ನುವುದು ಒಂದು ಇದೆಯಲ್ಲಾ, ಅದು ಏನಾಗಿದೆ ಸತ್ತಿದೆಯೇ? ಅಲ್ಲಿ ಪ್ರಾಜ್ಞರು ಇದ್ದಾರೆಯೇ? ಒಳ್ಳೆಯವರು ಇದ್ದಾರೆಯೇ? ಅಲ್ಲಿ ಯಾರಿದ್ದಾರೆ ಎನ್ನುವುದನ್ನು ತಾವು ಹೇಳಿ. ಭಾಷೆಯ ಬಗ್ಗೆ ನಮ್ಮಲ್ಲಿ ಎಂಥೆಂಥ ಕನ್ನಡ ಸಾಹಿತ್ಯ ಅಭಿಮಾನಿಗಳಿದ್ದಾರೆ, ಸಾಹಿತ್ಯ ಕ್ಷೇತ್ರದಲ್ಲಿ ಇದ್ದಾರೆ, ಇಂಥವರನ್ನು ಕರೆದುಕೊಂಡು ಬರುವುದು ಬಿಟ್ಟು... ಈ ತರ್ಜುಮೆ ಇಲಾಖೆಯಲ್ಲಿ ಯಾರಿದ್ದಾರೆ?

ಏನು ಇದು? ಇದು ನಿಜವಾಗಲೂ ಅರ್ಥವಿಲ್ಲದ್ದು. ನಿಜವಾಗಲೂ ಹೇಳಬೇಕೆಂದರೆ ಇದು ಕನ್ನಡದ ಬಗ್ಗೆ ಅಪಮಾನ, ಕನ್ನಡಕ್ಕೆ ಮಾಡತಕ್ಕಂಥ ಅಗೌರವ, ಕನ್ನಡದ ಹೆಸರಿನಲ್ಲಿ ತರ್ಜುಮೆ ಮಾಡುವ ಕಾರ್ಯ ಏನು ಇದೆ ಇದರಲ್ಲಿ ನೂರಕ್ಕೆ ನೂರರಷ್ಟು ಕನ್ನಡದ ಪದಗಳಿಲ್ಲ. ಬೇರೆ ಯಾವುದೋ ಪದ, ಯಾರೋ ತರ್ಜುಮೆ ಮಾಡುತ್ತಾರೆ. ಆದ್ದರಿಂದ ದಯಮಾಡಿ ತಾವು ನಾಳೆಯಿಂದ ಇದನ್ನು ಪರಿಶೀಲನೆ ಮಾಡಿ, ನೀವು ಒಪ್ಪುವುದು, ಬಿಡುವುದು ಆ ಪ್ರಶ್ನೆ ಬೇರೆ, ನೀವು ಈ ರೀತಿ ಕೊಟ್ಟು ಬಿಟ್ಟರೆ ಕನ್ನಡದ ಉದ್ಧಾರ ಮಾಡಿದ ಹಾಗೆ ಆಗುವುದಿಲ್ಲ. ಇದು ಬಹಳ ಅತ್ಯಂತ ಸಣ್ಣ ಕೆಲಸ ಮಾಡುತ್ತಿದ್ದೀರಿ, ನೀವು ಒಳ್ಳೆಯ ಕೆಲಸ ಮಾಡುತ್ತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅನುಬಂಧ 4(ಎ) ನಲ್ಲಿ ''ಮುಖ್ಯಮಂತ್ರಿಯು ಮಂಡಲಿಯ ಅಧ್ಯಕ್ಷನಾಗಿರತಕ್ಕದ್ದು'' ಇದರ ಹಿಂದೆ ಇದು ಬರುತ್ತದೆ ಯಾವುದು ಎಂದರೆ 4... ''ಪದನಿಮಿತ್ತ ಮುಖ್ಯಮಂತ್ರಿಯು ಮಂಡಳಿಯ ಅಧ್ಯಕ್ಷನಾಗಿರತಕ್ಕದ್ದು'' ಎಂದು ಇದೆ... ಅದಕ್ಕೆ ಏನು ವ್ಯತ್ಯಾಸವಾಗುತ್ತಿದೆ?...

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ: ಸೇರಿಸಬೇಕಾಗಿರತಕ್ಕಂಥ ಡಿಸ್ಟಿಂಗ್‌ಷನ್‌ನ್ನು ಹೇಳಿದೆ. ಏಕೆಂದರೆ ಮುಖ್ಯಮಂತ್ರಿಯಾಗಿರತಕ್ಕಂಥವರು. ಮುಖ್ಯ ಬೇರೆ ಸಂಸ್ಥೆಗೆ ಸಂಬಂಧಪಟ್ಟಿರತಕ್ಕಂಥ ವಿಧೇಯಕವನ್ನು ಮಾಡಿದಾಗ, ಈ ವಿಧೇಯಕಕ್ಕೆ ಸಂಬಂಧಪಟ್ಟ ಹಾಗೆ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರಬೇಕು ಎಂಬುದು ಜನರ ಒಂದು ಬಯಕೆ. ನಾಳೆ ನಾವು ಮುಖ್ಯಮಂತ್ರಿ ಎಂದು ಹೇಳತಕ್ಕಂಥದ್ದು ಅದರ ಒಬ್ಬ ಅಧ್ಯಕ್ಷ. ಅಂದರೆ ಪರ್ಮನೆಂಟ್ ಛೇರಮನ್ ಎಂದು ಹೇಳುವ ಅರ್ಥ ಕೊಡುವುದರ ಬದಲು by virtue of his office he is the ex-officio chairman. It is only for that. ನಾನು ಏಕೆ ಹೇಳಿದೆನೆಂದರೆ....

ಶ್ರೀ ಕಾಗೋಡು ತಿಮ್ಮಪ್ಪ: ಹೇಗೆ?

SRI M.C.NANAIAH: An amendment may be brought. ಮುಖ್ಯಮಂತ್ರಿಗಳ ಪದವಿ ಹೋದ ತಕ್ಷಣ ಅವರು ಹೋಗುತ್ತಾರೆ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಖರ್ಗೆಯವರು ಏನು ಹೇಳಿದರು? ನಾಳೆ ಅದನ್ನು ಒಂದು ಇಂಡಿಪೆಂಡೆಂಟ್ ಬಾಡಿ ಮಾಡಿ, ಅಲ್ಲಿಗೆ ಒಬ್ಬ ಅಧ್ಯಕ್ಷರನ್ನು ಮಾಡಿಕೊಂಡು, ಅದನ್ನು ಸಂಪೂರ್ಣವಾಗಿ ನಡೆಸಲಿಕ್ಕೆ ಒಂದು ಕ್ರಮ ತೆಗೆದುಕೊಳ್ಳಿ, so that let that whole thing develop. ಆದ್ದರಿಂದ ನಾನು ಹೇಳುವುದೇನೆಂದರೆ ಇವತ್ತು ಮುಖ್ಯಮಂತ್ರಿ ಬೇಡ ಎಂದು ಹೇಳತಕ್ಕಂಥದ್ದನ್ನು, ಪರ್ಮನೆಂಟ್ ಛೇರಮನ್ ಎಂದು

ಹೇಳಿಕೊಂಡು ಅವರನ್ನು ಆಫೀಸ್ ಆಫ್ ಪ್ರಾಫಿಟ್ ಎಂದು ಹೇಳುವ ಒಂದು ಹುದ್ದೆಗೆ ನೀವು ತಳ್ಳಬಾರದು ಎನ್ನುವ ಒಂದು ಹಿನ್ನೆಲೆಯಲ್ಲಿ.. it is a desire of the public at large. ಕೂಡಲ ಸಂಗಮ ದೇವ ಎಂದು ಹೇಳತಕ್ಕಂಥದ್ದು ಅದು ಕೇವಲ ವೀರಶೈವ ಮಹಾಸಭಾದವರಿಗೆ ಸೇರುತ್ತದೆ ಎನ್ನತಕ್ಕ ವಾದವನ್ನು ನಾನು ಒಪ್ಪುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಈಗ ಅದನ್ನು ಯಾರು ಹೇಳಿದ್ದಾರೆ?

ಶ್ರೀ ಎಂ.ಸಿ.ನಾಣಯ್ಯ: ಸ್ವಲ್ಪ ಕೇಳಿ. ನೀವು ಏಕೆ ಆತುರಪಡುತ್ತೀರಿ.

ಶ್ರೀ ಕಾಗೋಡು ತಿಮ್ಮಪ್ಪ: ಯಾರಾದರೂ ಈ ಮಾತನ್ನು ಹೇಳಿದ್ದರೆ ಪರವಾಗಿಲ್ಲ, ಯಾರು ಹೇಳಿದ್ದಾರೆ? ಯಾರೂ ಹೇಳಿಲ್ಲ....

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ: ಸ್ವಲ್ಪ ಕೇಳಿ ನಾನು ಏಕೆ ಹೇಳುತ್ತೇನೆಂದರೆ ಇದಕ್ಕೆ ಸಂಬಂಧಪಟ್ಟ ಹಾಗೆ, ಖರ್ಗೆಯವರ ಮಾತಿನಂತೆ ಯಾರಾದರೂ ಒಬ್ಬರನ್ನು ಸಂಪೂರ್ಣ ಪರಾಮಾವಧಿ ಅಧ್ಯಕ್ಷರನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಂಡಾಗ ಕೆಲವು ಸಂದರ್ಭದಲ್ಲಿ ಈ ಹಿಂದೆ ಬೇಡಿಕೆ ಏನು ಇತ್ತು ಎಂದರೆ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿದ್ದರೆ ಆ ಒಂದು ಕ್ಷೇತ್ರವನ್ನು ಬಹಳಷ್ಟು ವೃದ್ಧಿ ಮಾಡಬಹುದು ಎನ್ನುವ ಹಿನ್ನೆಲೆಯಲ್ಲಿ ಮಾಡಿದ್ದೇವೆ. ಆದ್ದರಿಂದ ಮುಖ್ಯಮಂತ್ರಿಗಳೇ ಮುಂದುವರಿಯಬೇಕು ಎನ್ನುವ ಚಿಂತನೆಯಾದರೆ ಮುಖ್ಯಮಂತ್ರಿಗಳು ಅಲ್ಲಿ ಎಕ್ಸ್ ಅಫಿಷಿಯೋ ಎನ್ನುವ ಪದವನ್ನು ನಾವು ಅಲ್ಲಿ ಬಳಸಿಕೊಂಡಿದ್ದೇವೆ. ಬಹುಶಃ ನಾಳೆ ಇದಕ್ಕೆ ಏನಾದರೂ ಒಂದು ತಿದ್ದುಪಡಿ ತರಬೇಕು ಎಂದು ಆಸೆ ಪಟ್ಟಾಗ.. ಆಗ ನಾವು ಏನು ಹೇಳುತ್ತೇವೆಂದರೆ ಎಕ್ಸ-ಅಫಿಷಿಯೋ ಎಂದು ಹೇಳಿದಾದ ಮೇಲೆ separate body for that to be nominated by a body ಈ ಪರಿಸ್ಥಿತಿಯನ್ನು ನಾವು ತಪ್ಪಿಸಿಕೊಳ್ಳುವುದಕ್ಕೋಸ್ಕರ ಎಕ್ಸ್-ಅಫಿಷಿಯೋ ಎನ್ನುವುದನ್ನು ಮಾಡಿದ್ದೇವೆ. Nothing more about this.

(ಗೊಂದಲ)

ಶ್ರೀಮತಿ ಪ್ರಮೀಳ ನೇಸರ್ಗಿ: ಕನ್ನಡದಲ್ಲಿ ಹೇಳುವುದಾದರೆ ಈ ಮೂಲ ಅಧಿನಿಯಮದ 14ನೇ ಪ್ರಕರಣ (5)ನೇ ಉಪ ಪ್ರಕರಣದ ಕೊನೆಯಲ್ಲಿ... ''ಪ್ರಕ್ರಿಯಾತ್ಮಕ ನಿಯಮಗಳನ್ನು ನಿಯಮಿಸಬಹುದು'' ಎಂಬ ಪದಗಳಿಗೆ ''ಪ್ರಕ್ರಿಯೆಗಳನ್ನು ಗೊತ್ತುಪಡಿಸಬಹುದು'' ಎಂಬ ಪದಗಳನ್ನು ಪ್ರತಿನಿಯೋಜಿಸತಕ್ಕದ್ದು. ಏನು ಇದು? ದಯಮಾಡಿ ಇದರ ಅರ್ಥ ಹೇಳಿ, ''ಪ್ರಕ್ರಿಯಾತ್ಮಕ ನಿಯಮಗಳನ್ನು

ನಿಯಮಿಸಬಹುದು'' ಎನ್ನುವುದು ಸರಿಯಾಗಿತ್ತು. ಇದನ್ನು ತೆಗೆದು ಎಂಬ ಪದಗಳಿಗೆ ''ಪ್ರಕ್ರಿಯೆಗಳನ್ನು ಗೊತ್ತುಪಡಿಸಬಹುದು'' ಇಲ್ಲಿ ''ಪ್ರಕ್ರಿಯೆ'' ''ಪ್ರಕ್ರಿಯಾತ್ಮಕ'' ಇದು ಏಕೆ ಬೇಕಾಗಿತ್ತು? ಇದಕ್ಕೆ ಅರ್ಥ ಏನು ಹೇಳಿ. ನೀವು ಇಂಗ್ಲೀಷಿನಲ್ಲಿ ಸ್ಪೆಸಿಫೈ, ಪ್ರಿಸ್ಕೈಬ್ ಎಂದು ಹೇಳುತ್ತೀರಿ.

ಉಪಾಧ್ಯಕ್ಷರು: ಅವರು ಕನ್ನಡದ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತಿದ್ದಾರೆ, ತಾವು ಕೇಳಿ.

ಶ್ರೀ ಎಂ.ಸಿ.ನಾಣಯ್ಯ: ಕನ್ನಡ ಪದಗಳ ಜೋಡಣೆ. ಈಗಿರತಕ್ಕಂಥಾದ್ದು ಏನಿದೆ ಎಂದರೆ, ಪ್ರಕ್ರಿಯಾತ್ಮಕ ಎಂದಿದೆ. ಪ್ರಕ್ರಿಯಾತ್ಮಕ means it is 'prescribed'. ಪ್ರಕ್ರಿಯೆ 'specify'. Instead of 'prescribe' you specify' ಪ್ರಕ್ರಿಯಾತ್ಮಕ ಎಂದರೆ ಪ್ರಕ್ರಿಯೆಗಳು. ಈ ಕನ್ನಡ ಪದಗಳು ಬೇಕಾಗುತ್ತದೆ.

SMT. PRAMILA NESARGI: Any rule has to be prescribed. ಸ್ಪೆಸಿಫೈ ಯಾರೂ ಮಾಡುವುದಿಲ್ಲ. ರೂಲ್‌ನ ಪ್ರಿಸ್ಕೈಬ್ ಮಾಡುತ್ತಾರೆ. ರೆಗ್ಯುಲೇಷನ್‌ನ್ನು ಪ್ರಿಸ್ಕೈಬ್ ಮಾಡುತ್ತಾರೆ.

ಶ್ರೀ ಎಂ.ಸಿ.ನಾಣಯ್ಯ: ಇದು ನಮಗೆ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟಿನಿಂದ ಬಂದಿದೆ. ನಾವು ಅದನ್ನು ಸ್ವಲ್ಪಮಟ್ಟಿಗೆ ಅಳವಡಿಸಿಕೊಂಡಿದ್ದೇವೆ. We are not going to make a big disctinction about this. ಆದರೆ, ಕೆಲವು ಸಂದರ್ಭದಲ್ಲಿ ಅಡ್ಮಿನಿಸ್ಟ್ರೇಟಿವ್ ಡಿಪಾರ್ಟ್‌ಮೆಂಟಿನಿಂದ, ಕೆಲವು ನಿಯಮಗಳನ್ನು ಅನುಸರಿಸಲೇಬೇಕಾದ ಸಂದರ್ಭಗಳಲ್ಲಿ, ಅವರು ಕೆಲವು ವಿಚಾರಗಳನ್ನು ಮಾಡುವಾಗ, 'prescribe' and 'specify' there is a difference between prescribe and specification. 'Prescribe' 'specify' ಪ್ರಿಸ್ಕೈಬ್ ಎಂದರೆ ಅದಕ್ಕೆ ಪ್ರಕ್ರಿಯಾತ್ಮಕ ಇದೆ. ಅದಕ್ಕೆ ಕೆಲವು ನಿಯಮಗಳನ್ನು ಅನುಸರಿಸಬೇಕು. ಆದರೆ, ಸ್ಪೆಸಿಫೈ ಮಾಡಬೇಕಾದರೆ ಬೇಕಾಗಿಲ್ಲ. ಆದ್ದರಿಂದ, ಪ್ರಕ್ರಿಯಾತ್ಮಕ ಅಥವಾ ಪ್ರಕ್ರಿಯೆಗಳು ಇದನ್ನು ನಾವು ಮಾಡಿದ್ದೇವೆ. ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟಿಂದ ಬಂದು ಮಾಡಿರತಕ್ಕಂಥಾದ್ದು. ಇದರಲ್ಲಿ ತಪ್ಪೇನಿದೆ?

ಶ್ರೀ ಕಾಗೋಡು ತಿಮ್ಮಪ್ಪ: ಮೂಲ ಅಧಿನಿಯಮದ 18ನೇ ಪ್ರಕರಣದ 1ನೇ ಉಪ ಪ್ರಕರಣ ಮೊದಲನೆಯದು 5ನೇ ಉಪ ಪ್ರಕರಣದ ಕೊನೆಯಲ್ಲಿ ಎಂದು ಇದೆ. ಇದರ ಕೊನೆಯಲ್ಲಿ ಪ್ರಕ್ರಿಯಾತ್ಮಕ ಎಂದು ಇದೆ. ಇಲ್ಲಿ, ಕೊನೆಯಲ್ಲಿ ಪ್ರಕ್ರಿಯಾತ್ಮಕ ಎಂದು ಎಲ್ಲಿದೆ? ಅಸಲಿಯಲ್ಲಿ ನಿಯಮ 14ರ ಕೊನೆಯಲ್ಲಿ ಪ್ರಕ್ರಿಯಾತ್ಮಕ ನಿಯಮಗಳನ್ನು ನಮೂದಿಸಬಹುದು ಎಂದಿದೆ. ಇದನ್ನು ಕೊನೆಯಲ್ಲಿ ಏಕೆ ಸೇರಿಸುವುದಕ್ಕೆ ಹೋದಿರಿ? ಈ ಪದ ಕೊನೆಯಲ್ಲಿ ಏಕೆ ಬರಬೇಕು? ಅಂದರೆ ಸಬ್ ಸೆಕ್ಷನ್‌ನಲ್ಲಿರತಕ್ಕಂಥಾದ್ದನ್ನು,

ಸಬ್‌ಸ್ಟಿಟ್ಯೂಟ್ ಮಾಡಬೇಕೆಂದು ಇರಬೇಕು. ಈ ಉಪ ನಿಬಂಧನೆಯ ಕೊನೆಯಲ್ಲಿ ಏಕೆ ಸೇರಿಸಬೇಕಿತ್ತು?

SRI H.SHIVAPPA: What is the subtle difference between 'prescribe' and specify'? Both are verbs. What is the utility or use by using 'specifying' or 'prescribing'?

SRI M.C.NANAIAH: If you are asking what is the difference between 'prescribe' and 'specify', then I think there would not have been either of the words. If 'prescribe' is nothing but 'specify'then, word 'specify' would not have been there. Let us look into the dictionary.

SRI H.SHIVAPPA: They are synonyms.

SRI M.C.NANAIAH: They are not synonyms. When you say "prescribe", certain norms will have to be followed. ಪ್ರಿಸ್ಕ್ರೈಬ್ ಎಂದು ಬಂದಾಗ ನಾವು ನಾರಮ್ಸ್‌ನ್ನು ಫಾಲೋ ಮಾಡಬೇಕು. ಸ್ಪೆಸಿಫೈ ಬಂದಾಗ ನಾರಮ್ಸ್ ಇಲ್ಲ. For example, I specify it should be done.

ಉಪಾಧ್ಯಕ್ಷರು: ಶಿವಪ್ಪನವರೇ, ತಾವೊಬ್ಬರೇ ಎಷ್ಟೊತ್ತು ಮಾತನಾಡುತ್ತೀರಿ. ಆ ಕ್ಷೇತ್ರದ ಶಾಸಕರು ಮಾತನಾಡಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಹೆಚ್.ಶಿವಪ್ಪ: ಇದು ಕ್ಷೇತ್ರದವರು ಎಂದಲ್ಲ. ಪದ ಬಳಕೆಯಲ್ಲಿ ಎಲ್ಲರೂ ಭಾಗವಹಿಸಬೇಕಾಗುತ್ತದೆ. ನಾಳೆ We are answerable. ಆ ಕ್ಷೇತ್ರದವರಿಗೆ ಅಲೋ ಮಾಡುವಹಾಗೆ ಇಲ್ಲವೆಂದಲ್ಲ. ಪದಗಳ ಬಳಕೆ ಬಂದಾಗ ನಾವು ಇಂಟರ್ ಪ್ರಿಟೇಷನ್ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು: ಈಗಾಲೇ ತಾವು ಮಾತನಾಡಿದ್ದೀರಿ. ಅವರು ನನ್ನ ಕ್ಷೇತ್ರದಲ್ಲಿದೆ, ನಾನು ಮಾತನಾಡುತ್ತೇನೆಂದು ಕೇಳುತ್ತಿದ್ದಾರೆ. ಅವರಿಗೂ ಒಂದೆರಡು ನಿಮಿಷ ಅವಕಾಶ ಕೊಡೋಣ.

ಶ್ರೀ ಕಾಗೋಡು ತಿಮ್ಮಪ್ಪ: ಪ್ರಿಸ್ಕ್ರೈಬ್ ಎನ್ನುವುದೇ ಸರಿ. ಸ್ಪೆಸಿಫೈ ಅಲ್ಲ. ನೀವು ಎಲ್ಲಾ ಆ್ಯಕ್ಟ್ ತೆಗೆದುಕೊಳ್ಳಿ, "as may be prescribed" ಎಂದು ಹೇಳುತ್ತೇವೆಯೇ

ವಿನಹ "as may be specified" ಎಂದು ಹೇಳುವುದಿಲ್ಲ.

ಶ್ರೀ ಎಂ.ಸಿ.ನಾಣಯ್ಯ: ಈಗ ಪ್ರಿಸ್ಕ್ರೈಬ್ ಎಂದು ಇರುವುದರಿಂದ, then necessarily certain rules have to be framed. ಆ ಬಾಡಿ ನಾಳೆ ಕುಳಿತುಕೊಂಡು, ಯಾವುದಾದರೊಂದು ವಿಚಾರಕ್ಕೆ ಸಂಬಂಧಪಟ್ಟಹಾಗೆ, ಒಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಮಾಡಿದಾಗ, ಆ ಬಾಡಿಯವರು ಏನು ಮಾಡುತ್ತಾರೆಂದರೆ, ಆ ಪ್ರಕ್ರಿಯೆಯನ್ನು ಅವರೇ ಶುರು ಮಾಡಬಹುದು. ಪ್ರಿಸ್ಕ್ರೈಬ್ ಎಂದು ಹೇಳತಕ್ಕಂಥ ಪ್ರಶ್ನೆ ಬಂದಾಗ; ರೂಲ್ಸ್ ಇಲ್ಲದೇ ಹೋದರೆ, ಅವರಿಗೆ ಅದನ್ನು ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ, ಆ ಒಂದು ಸಮಿತಿ, ತಮಗೆ ನ್ಯಾಯೋಚಿತವಾದ ಕಾರ್ಯಕ್ರಮವನ್ನು ಮಾಡಬೇಕೆಂದು ಬಂದಾಗ, ಆ ಸಂಸ್ಥೆಯನ್ನು ಅಭಿವೃದ್ಧಿಪಡಿಸುವುದಕ್ಕೆ ರೂಲ್ಸ್ ಇಲ್ಲದೇ ಇದ್ದಂಥ ಸಂದರ್ಭದಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಈ ಒಂದು ಸ್ಪೆಸಿಫೈ. 'Specify' is an easier term where the Committee can take action without referring back to the Rules, and if the Rules are not there, they can continue to do that. If it is 'prescribed' Rules will have to be framed. It is only to give authority to the Committee to take up certain works without falling back to the Rules. ಆ ಒಂದು ಸಂಸ್ಥೆಯನ್ನು ಬೆಳೆಸುವುದಕ್ಕೆ ಅಲ್ಲಿರತಕ್ಕ ಸಮಿತಿಯವರು ಏನೋ ಕೆಲಸ ಮಾಡಿಕೊಂಡು ಹೋಗಲಿ ಅವರಿಗೆ ಅಧಿಕಾರ ಕೊಡೋಣ ಎಂದು ನಾವು ಕೆಲವು ತಿದ್ದುಪಡಿಗಳನ್ನು ತಂದರೆ, ಇವರು ಅಡ್ಡಿ ಮಾಡುವುದಾದರೆ ನಾವು ಹಿಂದಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಆ ಪುಣ್ಯಾತ್ಮ ಬಸವಣ್ಣನವರ ಬಗ್ಗೆ ನಾವೇನೋ ಕೆಲವು ಕಾರ್ಯಕ್ರಮ ಮಾಡಬೇಕೆಂದು ಹೊರಟರೆ, ನೀವು ಅದಕ್ಕೆಲ್ಲಾ ಬೇಡ ಎಂದು ಹೇಳುತ್ತೀರಿಲ್ಲಾ.

ಶ್ರೀ ಚಂದ್ರಕಾಂತ್ ಸಿ.ಬೆಲ್ಲದ್: ಪದಗಳನ್ನು ತಪ್ಪಾಗಿ ಹಾಕುತ್ತಿದ್ದೀರಿ. ನೀವು ಅಧಿಕಾರ ಸರಿಯಾಗಿ ಕೊಡಿ. ಕ್ಲಿಯರ್ ಆಗಿರಲಿ. ಸರಿಯಾದಂಥ ಪದಗಳನ್ನು ಬಳಸಿ.

SRI H.SHIVAPPA: Interpretation is not an impediement for development of that area. ನಾಳೆ ತಪ್ಪಾದರೆ, ನೀವು ಕಾನೂನು ಮತ್ತು ಸಂಸದೀಯ ಸಚಿವರಿದ್ದೀರಿ. ಸರಿಯಾಗಿ ಪದ ಬಳಸಿ ಎಂದು ಹೇಳಿದ್ದೇವೆ. ನಾವು ಅಡ್ಡಿ ಬರುತ್ತಾ ಇಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇಲ್ಲಿ ಒಂದು ಕಡೆ ಬರೆದಿದ್ದಾರೆ. ''ರಾಜ್ಯಸರ್ಕಾರದ ಅಭಿಪ್ರಾಯದಲ್ಲಿ, ನೈತಿಕ ಅಧಃಪತನಗೊಳ್ಳುವ ಒಂದು ಅಪರಾಧಕ್ಕಾಗಿ, ಅಪರಾಧಿ ಎಂದು ನಿರ್ಣಯಿತನಾಗಿದ್ದು, ಕಾರಾವಾಸದ ಶಿಕ್ಷೆಗೆ ಗುರಿಯಾಗಿ,'' ಇದು ಯಾವಸೀಮೆ

ಕನ್ನಡ, ಇದರ ಅರ್ಥವೇನು? ರಾಜ್ಯಸರ್ಕಾರ ನಾಳೆದಿವಸ ಯಾರನ್ನಾದರೂ ತೀರ್ಮಾನ ಮಾಡಬಹುದು. ಇವನು ನೈತಿಕವಾಗಿ ಅಧಃಪತನ ಹೊಂದಿದ್ದಾನೆ ಎಂದು. ಅದಕ್ಕೇನು ಕಾನೂನು ಕಟ್ಟಳೆ ಏನೂ ಬೇಡ.

ಉಪಾಧ್ಯಕ್ಷರು: ಅದು ತಿದ್ದುಪಡಿಯೊಳಗೆ ಇದೆಯೇ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಹೌದು, 4ನೇ ಪುಟದಲ್ಲಿದೆ. 4ನೇ ಪುಟದ 5ನೇ ಪ್ಯಾರಾದಲ್ಲಿ ಸದಸ್ಯನ ಪದಕ್ಕೆ ಅನರ್ಹತೆಗಳು ಎಂಬುದರಲ್ಲಿ ಆ ರೀತಿ ಬರೆದಿದ್ದಾರೆ. ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ನೈತಿಕ ಅಧಃಪತನಗೊಳ್ಳುವ ಒಂದು ಅಪರಾಧಕ್ಕಾಗಿ, ಅಪರಾಧಿ ಎಂದು ನಿರ್ಣಯಿತನಾಗಿದ್ದು, ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ, ಇಂತಹವನು ಅನರ್ಹ ಎಂದು ಹೇಳಿದ್ದಾರೆ. ಎಲ್ಲಾದರೂ ಉಂಟೇ? ರಾಜ್ಯಸರ್ಕಾರ ನಾಳೆ ಯಾರನ್ನು ಬೇಕಾದರೂ ತೀರ್ಮಾನ ಮಾಡಬಹುದು. ಸರ್ಕಾರಕ್ಕೆ ಏಕೆ ಅಧಿಕಾರ ಕೊಡುತ್ತೀರಿ? ಕಾನೂನು ಇದೆ, ಕೋರ್ಟ್ ಇದೆ, ಅದನ್ನು ತೀರ್ಮಾನ ಮಾಡುವುದಕ್ಕೆ. ಸರ್ಕಾರ ತಿರ್ಮಾನ ಮಾಡುತ್ತೇನು? It should not be decided by the State Government, whether it is moral or immoral, sane or insane. ಎಂಬುದನ್ನು ತೀರ್ಮಾನ ಮಾಡತಕ್ಕ ಅಧಿಕಾರ ರಾಜ್ಯಸರ್ಕಾರಕ್ಕೆ ಇಲ್ಲ, ಕೇಂದ್ರಸರ್ಕಾರಕ್ಕೂ ಇಲ್ಲ. It is only the judiciary which is having the power. How can the State Government have that power?

ಶ್ರೀಮತಿ ಬಿ.ಟಿ.ಲಲಿತಾ ನಾಯಕ್: ತಾವು ಮುಂದೆ ಓದಿ. ರಾಜ್ಯಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನಗೊಳ್ಳುವ ಒಂದು ಅಪರಾಧಕ್ಕಾಗಿ, ಅಪರಾಧಿ ಎಂದು ನಿರ್ಣಯಿತನಾಗಿದ್ದು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ, ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಹಾಗೆಂದು ತಕ್ಷಣ ನ್ಯಾಯಾಲಯದಿಂದ ಘೋಷಿತನಾಗಿದ್ದರೆ ಎಂದು ಹೇಳಿದೆ. ಇದು ಅದಕ್ಕೆ ಲಿಂಕ್ ಆಗಿರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ರಾಜ್ಯಸರ್ಕಾರದ ಅಭಿಪ್ರಾಯದಲ್ಲಿ ಎಂದು ಏಕೆ ಬೇಕು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅದು ನಂತರ ಬರತಕ್ಕಂಥ ಒಂದು ವಾಕ್ಯ. ಅದು ಪಾರ್ಟ್-ಬಿ ನಲ್ಲಿ ಬರತಕ್ಕಂಥಾದ್ದು. ಫಾರಂನಲ್ಲಿರುವುದೇನು? ರಾಜ್ಯಸರ್ಕಾರದ ಅಭಿಪ್ರಾಯದಲ್ಲಿ ಎಂದು ಇದೆ. What right the State and the Central Government is having to declare? It is only the Judiciary. It is not the State Government.

ಶ್ರೀ ವಾಟಾಳ್ ನಾಗರಾಜ್: ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ

ಅಧಃಪತನಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣಯಿತವಾಗಿದ್ದು, ಇರಲಿ. ಈ ಕಾರಾವಾಸ ಯಾವುದು? ಕಾರಾಗೃಹವೇ ಕಾರಾವಾಸವೇ ಯಾವುದು? ಕಾರಾವಾಸ ನಾನು ಎಲ್ಲೂ ಕಂಡಿಲ್ಲ. ಕಾರಾವಾಸ. ಸಿಹಿವಾಸ, ಕಾವಾಸೇವೇಯೇ ಇದು.

ಉಪಾಧ್ಯಕ್ಷರು: ಜೈಲು ವಾಸ.

ಶ್ರೀ ವಾಟಾಳ್ ನಾಗರಾಜ್: ಅದನ್ನೇ ಹೇಳಲಿ. ಜೈಲುವಾಸ ಎಂದು ಹಾಕಲಿ. ಈ ಕಾರಾವಾಸ ಯಾವುದು? ಎಲ್ಲಿದೆ?

ಶ್ರೀಮತಿ ಬಿ.ಟಿ.ಲಲಿತಾನಾಯಕ್: ಕಾರಾಗೃಹವಾಸ ಎಂಬುದನ್ನು ತಾವು ಒಪ್ಪುತ್ತೀರಲ್ಲಾ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ನಾನು ತಮಗೆ ಒಂದು ಸಲಹೆಯನ್ನು ಕೊಡುತ್ತೇನೆ. ಕನ್ನಡದಲ್ಲಿ ಉತ್ತಮವಾದ ಪದ ಸಿಗಲಿಲ್ಲ ಎಂದು ಹೇಳಿದರೆ ಇಂಗ್ಲೀಷ್ ಪದವನ್ನೇ ಕನ್ನಡಕ್ಕೆ ಸೇರಿಸಿ ಅಪರಾಧ ಏನೂ ಆಗುವುದಿಲ್ಲ. ಪೊಲೀಸ್ ಎನ್ನುವುದನ್ನು ಪೊಲೀಸ್ ಎಂದು ಹಾಕಿ. ಅದನ್ನು ಬಿಟ್ಟು ಆರಕ್ಷಕ ಪರಾಕ್ಷಕ ಎಂದು ಹಾಕಿ ಕುಲಗೆಡಿಸಿ ನಾಶಮಾಡಬೇಡಿ, ಪೊಲೀಸ್ ಎಂದೇ ಹಾಕಿ; ಏನಾಗುತ್ತದೆ. ಹೋಟೆಲ್ ಅಂತಲೇ ಹಾಕಿ. ಬೂಟ್ಸ್ ಎಂದೇ ಹಾಕಿ, ತೀರಾ ಪರಿಶುದ್ಧವಾಗಿ ಮಡಿವಂತಿಕೆಯಿಂದ ಕನ್ನಡ ಪದಗಳನ್ನು ಹಾಕುವುದಕ್ಕೆ ಹೋಗಿ, ಯಾವ ಯಾವುದೋ ಪದಗಳನ್ನು ಹಾಕಿ ಕುಲಗೆಡಿಸಿ ತರ್ಜುಮೆಯನ್ನು ನಾಶ ಮಾಡಿ ಕನ್ನಡವನ್ನು ನಾಶ ಮಾಡಿ, ಯಾರಿಗೂ ಅರ್ಥವಾಗದೇ,

ಉಪಾಧ್ಯಕ್ಷರು: ಈಗ ನಾನು ಹೇಳುತ್ತೇನೆ ಕೇಳಿ, ಈಗ ನಮ್ಮ ಮುಂದೆ ಇರತಕ್ಕಂಥಾದ್ದು 7-8 ಅಷ್ಟೇ. ಈಗ ತಾವು ಏನು ಓದುತ್ತಿದ್ದೀರಲ್ಲಾ ಅದು ಹಿಂದೆ ಆದದ್ದು. ಅದರ ಬಗ್ಗೆ ಅನಾವಶ್ಯಕವಾಗಿ ತಾವು ಎತಕ್ಕೆ ಚರ್ಚೆ ಮಾಡುತ್ತೀರಿ? ಅನುಬಂಧ ಏನು ಇದೆ ಅದರ ಬಗ್ಗೆ ತಾವು ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ತಮ್ಮನ್ನು ನಾನು ನೇರವಾಗಿ ಒಂದು ಮಾತು ಕೇಳುತ್ತೇನೆ. ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಇದಕ್ಕೆ ನಾವು ಒಪ್ಪಿಗೆ ಕೊಟ್ಟೆವು ಎಂದು ಇಟ್ಟುಕೊಳ್ಳಿ. ಕೊಟ್ಟಾಯಿತು.

ಉಪಾಧ್ಯಕ್ಷರು: ಮೊದಲೇ ಪಾಸ್ ಆಗಿ ಹೋಗಿದೆ ಅದು. ಹಿಂದೆ ಆದದ್ದು 'ಅದನ್ನು ಈಗ ತಾವು ಏಕೆ ತೆಗೆದುಕೊಳ್ಳುತ್ತೀರಿ? ತಾವು ಬೇಕಾದರೆ ಆಮೇಲೆ ತಿದ್ದುಪಡಿಯನ್ನು ತನ್ನಿ. ಈಗ ಏಕೆ ಅದರ ಬಗ್ಗೆ ಚರ್ಚೆ ಮಾಡುತ್ತೀರಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೇ, ದಯವಿಟ್ಟು ಕೋಪ ಮಾಡಿಕೊಳ್ಳಬೇಡಿ. ರಾಜ್ಯ ಸರ್ಕಾರ ಎನ್ನುವುದನ್ನು ದಯವಿಟ್ಟು ತೆಗೆದು ಹಾಕಿ ಎಂದು

ನಾವು ಹೇಳುತ್ತಿದ್ದೇವೆ.

ಉಪಾಧ್ಯಕ್ಷರು: ಆ ಸಮಸ್ಯೆ ಈಗ ಬರುವುದಿಲ್ಲ. ಈಗ ಸರ್ಕಾರ ಏನು ತಿದ್ದುಪಡಿ ತಂದಿದ್ದಾರೆ. ಅದಕ್ಕೆ ಸೀಮಿತವಾಗಿ ತಾವು ಮಾತನಾಡಿ. ತಾವು ತಿದ್ದುಪಡಿ ಮಾಡಿದರೆ ಮಾಡಬಹುದು. ಅದರಲ್ಲಿ ಏನಿದೆ? ಮಾನ್ಯ ನಾಣಯ್ಯನವರೇ ತಾವು ಇದರ ಬಗ್ಗೆ ವಿವರಣೆಯನ್ನು ಕೊಡಿ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೇ, ನಾವು ತಂದಿರತಕ್ಕಂಥ ತಿದ್ದುಪಡಿ ಬಹಳ ಸರಳ ತಿದ್ದುಪಡಿ. ಸರಳ ತಿದ್ದುಪಡಿಯನ್ನು ಬಹಳ ಜಟಿಲ ತಿದ್ದುಪಡಿಯನ್ನಾಗಿ ಮಾಡಿಬಿಟ್ಟರು ನಮ್ಮ ಸ್ನೇಹಿತರು ಈ ತರಹ ವಾದ ವಿವಾದಗಳನ್ನು ಮಾಡುವುದರ ಜೊತೆಗೆ, ನಾವು ಸಾಮಾನ್ಯವಾಗಿ ಬಳಸುತ್ತಿರುವಂತಹ ಕನ್ನಡ ಪದಗಳೇ ಬೇರೆ. ತರ್ಜುಮೆ ಮಾಡುವಂತಹ ಸಂದರ್ಭದಲ್ಲಿ ಅದಕ್ಕೆ ಇರತಕ್ಕಂಥ ಕೆಲವು ಪದಗಳು ಕನ್ನಡ ಶಬ್ದಕೋಶದಲ್ಲಿ ಆ ಪದಗಳು ಇರುವುದರಿಂದ ನಾವು ಆ ಪದಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಈಗ ಮಾನ್ಯ ನಾಗರಾಜ್ ಅವರು ಹೇಳಿದ ಹಾಗೆ ಇನ್ನು ಮುಂದೆ ಎಲ್ಲಿಯಾದರೂ ಬಹಳ ಸರಳವಾಗಿ ಪ್ರತಿದಿನ ಉಪಯೋಗಿಸುವಂತಹ ಕೆಲವು ಇಂಗ್ಲೀಷ್ ಪದಗಳು ಇವೆ ಆ ಇಂಗ್ಲೀಷ್ ಪದ ಬಂದಾದ ಕೂಡಲೇ ನಾವು ಈಗ ಪೊಲೀಸ್ ಆರಕ್ಷಕ ಎಂದು ಕರೆಯುವುದಕ್ಕಿಂತ ಪೊಲೀಸ್ ಎಂದು ಮಾಡುವುದೇ ಒಳ್ಳೆಯದು. ಅವರ ಸಲಹೆ ಏನು ಇದೆ ಇನ್ನು ಮುಂದೆ ನಾವು ತರ್ಜುಮೆ ಮಾಡುವಾಗ ಅವರನ್ನು ಕರೆದು ಹೇಳಬೇಕು, ಸಾಮಾನ್ಯವಾಗಿ ಉಪಯೋಗಿಸುವಂತಹ ಪದಗಳನ್ನು ಬಳಸಿ, ನೀವು ಹೊಸ ಪದಗಳನ್ನು ಹುಡುಕುವುದಕ್ಕೆ ಹೋಗಿ ಅದು ಒಂದಕ್ಕೆ ಎರಡು ಆಗುತ್ತಾ ಇರತಕ್ಕಂಥಾದ್ದು ಗೊತ್ತಿದೆ, ಆದ್ದರಿಂದ ಇದನ್ನು ಮಾಡಬಾರದು ಎಂದು ಹೇಳುವಂತಹ ಅವರ ಸಲಹೆ, ನನ್ನ ಇನ್ನಿತರೆ ಎಲ್ಲಾ ಮಿತ್ರರ ಸಲಹೆಯನ್ನು ನಾನು ಸ್ವೀಕಾರ ಮಾಡುತ್ತೇನೆ. ಈಗ ತಂದಿರತಕ್ಕಂಥ ತಿದ್ದುಪಡಿಯಲ್ಲಿ ಏನು ಇದೆ ಅಂದರೆ ಒಂದು ಜಾಗದಲ್ಲಿ ಎನಿ ಷೇರು, ಆರ್ ಇಂಟ್ರೆಸ್ಟ್ ಎಂದು ತಾವು ಆಗಲೇ ಎಲ್ಲೋ ಒಂದು ಕಡೆ ಹೇಳಿದಿರಿ. ಕನ್ನಡದಲ್ಲಿ ಏನಾಗುತ್ತದೆ ಅಂದರೆ ಎನಿ ಷೇರ್ ಆರ್ ಇಂಟ್ರೆಸ್ಟ್ ಎಂದು ಹೇಳುತ್ತಾ ಇರತಕ್ಕಂಥಾದ್ದು, ಇಂಟ್ರೆಸ್ಟ್ ಇತ್ತು ಷೇರು ಬಿಟ್ಟು ಹೋಗಿತ್ತು. ಅದಕ್ಕೆ ತಿದ್ದುಪಡಿಯನ್ನು ತರಬೇಕಾಗಿತ್ತು. ಎನಿ ಷೇರು ಆರ್ ಇಂಟ್ರೆಸ್ಟ್ ಎಂದು ನಮ್ಮ ಮೂಲ ವಿಧೇಯಕದಲ್ಲಿ ಬಿಟ್ಟು ಹೋಗಿದ್ದರಿಂದ ಅದನ್ನು ನಾವು ಈ ಸಂದರ್ಭದಲ್ಲಿ ಸೇರಿಸಿಕೊಂಡಿದ್ದೇವೆ. ಎರಡನೇಯದು ಮುಖ್ಯಮಂತ್ರಿಗಳು ಪಧನಿಮಿತ್ತ ಎಂದು ಮಾಡಲಿಕ್ಕೆ ಇರುವುದಕ್ಕೆ ನಾನು ಒಂದು ವಿವರಣೆಯನ್ನು ಕೊಟ್ಟಿದ್ದೇನೆ. ಪದನಿಮಿತ್ತ ಎಂದು ಇರಬೇಕಾಗುತ್ತದೆ. ಅದು ಒಂದು ಸ್ವಾಯತ್ತ ಸಂಸ್ಥೆ. ಅದು ನಾಳೆ ಬೇಡ ಅಂದರೆ ಅದನ್ನು ಕಿತ್ತು ಬೇರೆ ಏನಾದರೂ ಒಂದು ಮಾಡಬಹುದು. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಇದರಲ್ಲಿ ಸ್ವಲ್ಪ ವಿಚಾರಗಳನ್ನು ತಂದು ಅಡ್ಮಿನಿಸ್ಟ್ರೇಟಿವ್ ಡಿಪಾರ್ಟ್‌ಮೆಂಟ್ ಮತ್ತು ಕೆಲವು ಜನರ ಜೊತೆಯಲ್ಲಿ ಆ ಸಮಿತಿ ನಡೆಯುತ್ತಾ ಇರತಕ್ಕಂಥ ಸಂದರ್ಭದಲ್ಲಿ

ಅವರು ಅನುಭವಿಸುತ್ತಿರುವಂತಹ ಕೆಲವು ಕಷ್ಟಗಳನ್ನು ಅರಿತು ಅಲ್ಲಿ ಅದಕ್ಕೆ ಒಂದು ತಿದ್ದುಪಡಿಯನ್ನು ತಂದರೆ ಆ ಸಮಿತಿ ನಡೆಯುವುದಕ್ಕೆ ಅನುಕೂಲವಾಗುತ್ತದೆ ಎಂದು ನಾವು ಈ ತಿದ್ದುಪಡಿಯನ್ನು ತಂದರೆ ಆ ಸಮಿತಿ ನಡೆಯುವುದಕ್ಕೆ ಅನುಕೂಲವಾಗುತ್ತದೆ ಎಂದು ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ. ಇದರಲ್ಲಿ ಮೂಲಭೂತವಾಗಿರತಕ್ಕಂಥ ಬದಲಾವಣೆಯನ್ನು ನಾವೇನೂ ಮಾಡಲಿಲ್ಲ. ಆದ್ದರಿಂದ ನಮಗೆ ಮೂಲ ಇರತಕ್ಕಂಥಾದ್ದು ಕನ್ನಡ. ಇದು ಅಫಿಷಿಯಲ್ ಟೆಕ್ಸ್ಟ್ ಕನ್ನಡ. ಇವರೆಲ್ಲರ ಸಲಹೆಗೆ ಅನುಗುಣವಾಗಿ ಇನ್ನು ಮುಂದೆ ಕನ್ನಡ ತರ್ಜುಮೆ ಮಾಡಿಸುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸ್ವಲ್ಪ ಮಟ್ಟಿಗೆ ಅಲ್ಲಿ ಇಲ್ಲಿ ಪದಗಳ ಜೋಡಣೆಯಲ್ಲಿ ಪದಗಳನ್ನು ಬಳಸುವಲ್ಲಿ. ಸ್ವಲ್ಪ ಮಟ್ಟಿಗೆ ಕಷ್ಟವಾಗುತ್ತದೆ. ಅದನ್ನು ಸ್ವಲ್ಪ ಮಟ್ಟಿಗೆ ಸರಳಭಾಷೆಯಲ್ಲಿ ಇರತಕ್ಕಂಥಾದ್ದನ್ನು ಮಾಡಲಿಕ್ಕೂ ಸಹ ನಾವು ಪ್ರಯತ್ನ ಪಡುತ್ತಿದ್ದೇವೆ. ಒಂದು ಭಾಷಾಂತರ ಶಾಖೆ ಇದೆ. ಅವರು ಹೊಸ ಹೊಸ ಪದಗಳು ಬಂದಾಗ ಅವರು ಜೋಡಿಸಿಬಿಡುತ್ತಾರೆ. ಆದ್ದರಿಂದ ಇದನ್ನು ತಾವು ಮಂಜೂರಾತಿ ಮಾಡಿ ಕೊಡಿ ಇದರಲ್ಲಿ ಯಾವುದೂ ಇಲ್ಲ.

ಡಾ|| ಎಂ.ಪಿ.ಕರ್ಕಿ: ಮಾನ್ಯ ಅಧ್ಯಕ್ಷರೇ, ಅಫಿಷಿಯಲ್ ಟೆಕ್ಸ್ಟ್ ಕನ್ನಡ ಎಂದು ಹೇಳಿದ್ದಾರೆ. ತಾವು ಇಂಗ್ಲೀಷ್‌ಗೆ ತರ್ಜುಮೆ ಮಾಡಬೇಕಾದರೆ ಅಂತಲೂ ಹೇಳುತ್ತೀರಿ.

ಉಪಾಧ್ಯಕ್ಷರು: ಎರಡೂ ಕೊಟ್ಟಿದ್ದಾರೆ.

ಡಾ|| ಎಂ.ಪಿ.ಕರ್ಕಿ: ತಪ್ಪು ತಪ್ಪಾಗಿ ಇರತಕ್ಕಂಥ ಈ ಕಾನೂನು ನಾವು ಪಾಸ್ ಮಾಡಬೇಕೇ? ಅದನ್ನು ತಾವು ನಿರ್ಣಯ ಮಾಡಬೇಕಾಗಕುತ್ತದೆ.

+ ಶ್ರೀ ಎಂ.ವೀರಪ್ಪಮೋಯ್ಲಿ (ಕಾರ್ಕಳ): ಮಾನ್ಯ ಅಧ್ಯಕ್ಷರೇ, ನಾನು ಬಹಳ ಉದ್ದ ಭಾಷಣ ಮಾಡಲಿಕ್ಕೆ ಅಪೇಕ್ಷೆಪಡುವುದಿಲ್ಲ. ಕೂಡಲ ಸಂಗಮ ಅಭಿವೃದ್ಧಿ ಮಂಡಲಿ ಎಂದು ಹೇಳಿ, ಅದನ್ನು ಸ್ಥಾಫನೆ ಮಾಡಿದ ಉದ್ದೇಶಗಳ ಬಗ್ಗೆ ನಾನು ಸ್ವಲ್ಪ ಹೇಳಬೇಕೆಂದು ಇದ್ದೇನೆ. ತಾವು ಇದನ್ನು ಈಗ ಕಂದಾಯ ಇಲಾಖೆ ಅಡಿಯಲ್ಲಿ ತರುತ್ತಿದ್ದೀರಿ. ಇಲ್ಲಿ ನಮ್ಮ ಉದ್ದೇಶ ಏನು ಇತ್ತು ಅಂದರೆ ಕನ್ನಡ ವಿಶ್ವವಿದ್ಯಾಲಯವನ್ನು ನಾವು ಮಾಡಿದ್ದೇವೆ. ಅದೇ ರೀತಿಯಲ್ಲಿ ಈ ಕೂಡಲ ಸಂಗಮ ಅಭಿವೃದ್ಧಿ ಮಂಡಲಿ ಯಾವುದೋ ಒಂದು ಸಂಯೋಜನೆ ಮಾಡಲಿಕ್ಕೆ ಇರತಕ್ಕಂಥದ್ದು ಅಲ್ಲ. ಒಂದು ಸಾಂಸ್ಕೃತಿಕವಾಗಿ ಸಾಹಿತ್ಯಿಕವಾಗಿ, ಅದು ಒಂದು ರೀತಿಯಲ್ಲಿ ಇಡೀ ಕರ್ನಾಟಕಕ್ಕೆ ಸೀಮಿತವಾಗಿ ಅಲ್ಲ. ಅಥವಾ ಒಂದು ಸೀಮಿತವಾದ ವಿಶ್ವವಿದ್ಯಾಲಯದ ಮಾದರಿ ಅಲ್ಲ. ವಿಶ್ವದ ಒಂದು ಅಧ್ಯಯನ ಕೇಂದ್ರವಾಗಬೇಕು ಎನ್ನುವ ಒಂದು ಉದ್ದೇಶದಿಂದ ಈ ಕೂಡಲ ಸಂಗಮ ಅಭಿವೃದ್ಧಿ ಮಂಡಲಿಯನ್ನು ಸ್ಥಾಪನೆ ಮಾಡಿದ್ದು. ಅದರ ಬಗ್ಗೆ ನಾವು ಕೆಲಸ ಮಾಡುತ್ತಾ ಇರುವಾಗ ಅದನ್ನು ಬದಲಾವಣೆ ಮಾಡಬೇಕು ಎಂದು ಇದ್ದರೆ ಈಗ ತಾವೇನು ತಿದ್ದುಪಡಿಯನ್ನು ತಂದಿದ್ದೀರಿ, ಅದನ್ನು ಏಕೆ ತಂದಿದ್ದೀರಿ ಎನ್ನುವುದು ನನಗೆ

ಅರ್ಥವಾಗುತ್ತಿಲ್ಲ. ಏಕೆಂದರೆ ಪದನಿಮಿತ್ತ, ಕನ್‌ಕರೆಂಟ್ ಚಾರ್ಜ್, ಇವೆಲ್ಲಾ ಕಾನೂನಿನ ಅಡಿಯಲ್ಲಿ ಅವಶ್ಯಕವಾದ ಶಬ್ದಗಳು ಅಲ್ಲ. ಆ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ಆದರೆ ನಾನು ಹೇಳುವುದೇನೆಂದರೆ, ಈ ಕೂಡಲ ಸಂಗಮ ಅಭಿವೃದ್ಧಿ ಮಂಡಲಿ ಏಕೆ ಬೇಕು? ಯಾವ ರೀತಿಯಲ್ಲಿ ಬೆಳೆಯಬೇಕು ಇದರ ಬಗ್ಗೆ ತಾವು ಒಂದು ಪರಿಣಿತರ ಉನ್ನತ ಮಟ್ಟದ ಸಮಿತಿಯನ್ನು ಸಿದ್ಧಪಡಿಸಿ, ಇದರಲ್ಲಿ ನಮಗೂ ಕೆಲವು ಅಭಿಪ್ರಾಯಗಳು ಇವೆ. ಕೆಲವು ಭಾವನೆಗಳು ಇವೆ. ಏಕೆಂದರೆ ಬಸವೇಶ್ವರರ ಕೆಲವು ತತ್ವಗಳು ಇವೆ, ಅದು ಬಹುಶಃ ವಿಶ್ವಮಾನ್ಯವಾದಂತಹ ತತ್ವಗಳು. ಆ ವಿಶ್ವಮಾನ್ಯವಾದಂತಹ ತತ್ವಗಳ ಬಗ್ಗೆ ಹೆಚ್ಚು ಪ್ರಚಾರ ಸಿಗಬೇಕು, ಹೆಚ್ಚು ಅಧ್ಯಯನವಾಗಬೇಕಾಗುತ್ತದೆ, ಅದು ಸಂಯೋಜಿತವಾದಂತಹ ಒಂದು ಅಧ್ಯಯನ ಆಗಲಿಲ್ಲ. ಬೇರೆ ಬೇರೆ ರೀತಿಯಲ್ಲಿ ಅವರವರ ಕ್ಷೇತ್ರಕ್ಕೆ ಒಳಪಟ್ಟು ಬೇರೆ ಬೇರೆ ಪಂಗಡಗಳು ಮತ್ತೊಂದು ಎಲ್ಲಾ ಉದ್ಭವವಾಗಿವೆ. ಆದರೆ ಮೂಲಭೂತವಾಗಿ ಯಾವ ಒಂದು ಸೈದ್ಧಾಂತಿಕವಾದಂತಹ ಒಂದು ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಚಳುವಳಿಯ ಒಂದು ಅಧ್ಯಯನ ಆಗಬೇಕಾಗಿತ್ತೋ ಅದು ಕೊನೆ ಕೊನೆಗೆ ಏನಾಗುತ್ತದೆ ಅಂದರೆ ಅದನ್ನೆಲ್ಲಾ ನಾವು ಮರೆತು ಬಿಡುತ್ತೇವೆ. ಮೂಲಭೂತವಾದಂತಹ, ಸೈದ್ಧಾಂತಿಕವಾದಂತಹ ಸಂಘರ್ಷಣೆಯ, ವಿಶ್ವಮಾನ್ಯವಾದಂತಹ ವಿಷಯಕ್ಕೆ ಬಸವೇಶ್ವರರು ಹೋರಾಟ ಮಾಡಿದ್ದಾರೆ ಆ ದಿಸೆಯಲ್ಲಿ ಇದು ಪ್ರಕಾಶ ಬೀಳತಕ್ಕಂಥ ಒಂದು ದೀಪಸ್ಥಂಭ ಆಗಬೇಕು. ಆ ಉದ್ದೇಶದಿಂದ ಈ ಮಂಡಳಿಯನ್ನು ಸ್ಥಾಪನೆ ಮಾಡಿದ್ದು ಈಗ ಇದ್ದುದರಲ್ಲಿ ಹತ್ತರಲ್ಲಿ ಒಂದು ಎನ್ನುವ ದೃಷ್ಟಿಯಲ್ಲಿ ಸರ್ಕಾರ ಇದನ್ನು ನೋಡಬಾರದು. ಇದು ಇಡೀ ದೇಶದಲ್ಲಿ ಒದು ಪ್ರತಿಷ್ಟೆಯ ಸಂಸ್ಥೆಯಾಗಿ ಬೆಳೆಯಬೇಕೆನ್ನುವುದು ನನ್ನ ಆಸೆ ಆಗಿತ್ತು. ಒಂದು ಸೈದ್ಧಾಂತಿಕ ದೃಷ್ಟಿಯನ್ನು ಇಟ್ಟುಕೊಂಡು ಈ ಸಂಸ್ಥೆಯನ್ನು ಬೆಳೆಸಬೇಕೆನ್ನುವ ಉದ್ದೇಶವಾಗಿರಬೇಕು, ಇದರ ಬಗ್ಗೆ ನಾನು ಬಹಳ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ದಯಮಾಡಿ ಸರ್ಕಾರ ಈ ಬಗ್ಗೆ ಬರೀ ರಾಜ್ಯಕ್ಕೆ ಸೀಮಿತವಾಗಿರತಕ್ಕಂಥ ಪರಿಣಿತರು ಅಲ್ಲ. ನಾನು ಹೇಳುವುದಿದ್ದರೆ ವಿಶ್ವದ ಕೆಲವು ವಿದ್ವಾಂಸರನ್ನೂ ಕೂಡ ತೆಗೆದುಕೊಂಡು ಇದರಲ್ಲಿ ಪರಿಣಿತರ ಸಂಸ್ಥೆಯನ್ನು ಮಾಡಿ ವರದಿಯನ್ನು ತರಿಸಿ ಯಾವ ಸ್ವರೂಪದಿಂದ ಯಾವ ಉದ್ದೇಶದಿಂದ ಈ ಮಂಡಲಿ ಈ ಸಂಸ್ಥೆ ಬೆಳೆಯಲಿಕ್ಕೆ ತಾವು ಸೂಕ್ತವಾದ ಕ್ರಮ ಕೈಗೊಳ್ಳಬೇಕೆಂದು ಹೇಳಿ ತಮ್ಮ ಮುಖಾಂತರ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

+ ಶ್ರೀ ಶಿವಶಂಕರಪ್ಪ ರಾಚಪ್ಪ ಕಾಶಪ್ಪನವರ್ (ಹುನಗುಂದ): ಈ ಕೂಡಲ ಸಂಗಮ ಕ್ಷೇತ್ರ ನನ್ನ ಮತಕ್ಷೇತ್ರದಲ್ಲಿ ಬರುವುದು, ಮತ್ತು ಇದನ್ನು 1994ನೇ ಇಸ್ವಿಯಲ್ಲಿ ಸನ್ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳು ಆಗಿದ್ದಾಗ ಈ ಒಂದು ಕೂಡಲ ಸಂಗಮ ಅಭಿವೃದ್ಧಿ ಮಂಡಲಿ ಪ್ರಾಧಿಕಾರವನ್ನು ರಚನೆ ಮಾಡಿದರು. ಇದನ್ನು ರಚನೆ ಮಾಡಲು ಅವಶ್ಯಕತೆ ಏನು ಇತ್ತು ಎನ್ನುವುದರ ಬಗ್ಗೆ ಮಾನ್ಯ ಮೊಯಿಲಿಯವರು ಇದರ

ಬಗ್ಗೆ ಸಂಕ್ಷಿಪ್ತವಾಗಿ ಹೇಳಿದ್ದಾರೆ. ಇವತ್ತು ಏತಕ್ಕೆ ರಚನೆ ಮಾಡಿದರು ಎಂಬ ಬಗ್ಗೆ ಹೇಳುತ್ತಿದ್ದೇನೆ. ಸಂಕುಚಿತ ಭಾವನೆ, ಮೇಲು ಕೀಳು, ಉಚ್ಚ, ನೀಚ ಎನ್ನತಕ್ಕಂಥ ತಾರತಮ್ಯಗಳು ಸಮಾಜದಲ್ಲಿ, ವರ್ಗರಹಿತ ಸಮಾಜದಲ್ಲಿ ಅದರಲ್ಲಿ ಅನೇಕ ಜನ ಶೋಷಣೆಗೆ ಒಳಪಟ್ಟಿರತಕ್ಕಂಥ ಪರಿಸ್ಥಿತಿಯಲ್ಲಿ 12ನೇ ಶತಮಾನದಲ್ಲಿ ಶರಣರು ಉದಯವಾಗಿ ಅವರು ಮುಖ್ಯವಾಗಿ ಈ ತತ್ವಗಳನ್ನು ವಚನ ಸಾಹಿತ್ಯವನ್ನು ಬಸವಣ್ಣನವರು ರಚನೆ ಮಾಡುವುದರ ಮೂಲಕ ಇವತ್ತಿನ ದಿವಸ ಪ್ರಪಂಚದಲ್ಲಿರುವ ಎಲ್ಲಾ ಧರ್ಮಗಳಿಗೂ ಹಾಗೂ ಪ್ರಪಂಚದಲ್ಲಿರತಕ್ಕಂಥ ಎಲ್ಲಾ ಮಾನವ ಜನಾಂಗಕ್ಕೂ ಸಕಲರಿಗೂ ಲೇಸನ್ನೇ ಬಯಸತಕ್ಕಂಥ ಮಾನವನ ಧರ್ಮವನ್ನು ಮಹಾ ಮಾನವತಾವಾದವನ್ನು ಅವರು ಸ್ಥಾಪನೆ ಮಾಡಿದರು. ಇಂತಹ ಬಹುತೇಕ ಬುದ್ಧ, ಬಸವ, ಕ್ರೈಸ್ತ ಇವರನ್ನೆಲ್ಲಾ ಇವತ್ತಿನ ದಿವಸ ಇಡೀ ಪ್ರಪಂಚದ ಎಲ್ಲಾ ಸಪ್ತ ಮತಗಳ ಎಲ್ಲಾ ಪಂಗಡಗಳೂ ಕೂಡ ಬಸವಣ್ಣನವರ ಭಾವನೆಗೆ.. ಅದೇ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡುತ್ತಿದ್ದೇನೆ. ಆ ಕಾರಣದಿಂದ ಈ ಒಂದು ಪ್ರಾಧಿಕಾರ ರಚನೆಯಾಗಿ ಇಂದಿಗೆ ಸುಮಾರು 3 ವರ್ಷಗಳ ಕಾಲ ಇವತ್ತಿನವರೆಗೆ ಅಲ್ಲಿ ಸುಮಾರು 4,078 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡರು. ಸರ್ಕಾರ ಈಗಾಗಲೇ ಆ ಜಮೀನನ್ನು ಸ್ವಾಧೀನ ಪಡಿಸಿಕೊಂಡು ಇಂದಿನವರೆಗೆ ಅದು ಬಂಜರು ಭೂಮಿಯಾಗಿ ಅಲ್ಲಿ ಗಿಡಗಂಟಿಗಳು ಬೆಳೆದಿವೆ.

ಉಪಾಧ್ಯಕ್ಷರು: ಆಯಿತು, ಅದನ್ನು ಎರಡು ನಿಮಿಷದಲ್ಲಿ ಮುಗಿಸಿ, ಮುಗಿಸಬೇಕು, ಇತಿಹಾಸ ಹೇಳುವಂಥದ್ದು ಏನು ಇಲ್ಲ? ತಿದ್ದುಪಡಿಯ ಬಗ್ಗೆ ಏನಾದರೂ ಹೇಳುವುದಿದ್ದರೆ ಹೇಳಿ,

ಶ್ರೀ ಶಿವಶಂಕರಪ್ಪ ರಾಚಪ್ಪ ಕಾಶಪ್ಪನವರ್: ಅದಕ್ಕೆ ಸಂಬಂಧಪಟ್ಟಿರತಕ್ಕಂಥದ್ದನ್ನು ನಾನು ಹೇಳುತ್ತಿದ್ದೇನೆ. ಅಲ್ಲಿ ಮುಖ್ಯವಾಗಿ ಬಸವಣ್ಣನವರು ಕಾಯಕ ಎನ್ನತಕ್ಕಂಥ ಒಂದು ತತ್ವದ ಅಡಿಯಲ್ಲಿ ಕಾಯಕ ಎನ್ನುವುದು ಎಲ್ಲರಿಗೂ ಅನಿವಾರ್ಯ. ಹಾಗೂ ಅಗತ್ಯವಾಗಿರತಕ್ಕಂಥದ್ದು. ಆ ಕಾಯಕ ತತ್ವ ಅಂದರೆ ಸಜೀವವಾಗಿರತಕ್ಕಂಥದ್ದು. ಚೈತನ್ಯವಾಗಿರತಕ್ಕಂಥದ್ದು, ಅವುಗಳಿಗೆ ಇವತ್ತಿನ ದಿವಸ ಸರ್ಕಾರದವರು ಕ್ರಿಯಾ ಯೋಜನೆ ಎಂದು ತಯಾರು ಮಾಡಿದ್ದಾರೆ, ಅದರಲ್ಲಿ ಕೇವಲ ಜಡತ್ವಗಳಿಗೆ, ಸ್ಮಾರಕಗಳಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಬಹುತೇಕವಾಗಿ ಅಲ್ಲಿ ಮೊಟ್ಟಮೊದಲನೆಯದಾಗಿ ಏನು ಸ್ಥಾಪನೆಯಾಗಬೇಕೆಂದರೆ ಇವತ್ತಿನ ದಿವಸ ಬಸವಣ್ಣನವರ ವಿಚಾರಗಳನ್ನು ಬಸವಣ್ಣನವರ ತತ್ವಗಳಿಗೆ ತರಬೇತಿಯ ಒಂದು ವಿಶ್ವವಿದ್ಯಾನಿಲಯ ಸ್ಥಾಪನೆಯಾಗಬೇಕು. ಇದನ್ನು ಇಟ್ಟುಕೊಂಡು ಸ್ಥಾಪನೆಯಾಗಿದೆ. ಇವರೂ ಕೂಡ ಇದಕ್ಕೆ ತಿದ್ದುಪಡಿಯನ್ನು ತರುತ್ತಿರುವುದು ಎರಡನೆಸಲ. ಅಲ್ಲಿ ಕಾರ್ಯವನ್ನು ಇದುವರೆಗೆ ಯಾವುದನ್ನು ಮಾಡುತ್ತಿಲ್ಲ. ಅದೂ ಅಲ್ಲದೆ ಮುಖ್ಯಮಂತ್ರಿಗಳು ಎರಡು ತಿಂಗಳ ಹಿಂದೆ ಒಂದು ಸಭೆಯನ್ನು ಕರೆದರು. ಆವಾಗ ಮುಖ್ಯಮಂತ್ರಿಗಳು ಹೇಳಿದರು ನಾನು ಒಂದು ತಿಂಗಳಲ್ಲಿ

ಮತ್ತೊಂದು ಸಭೆಯನ್ನು ಕೂಡಲ ಸಂಗಮದಲ್ಲಿ ಕರೆಯುತ್ತೇನೆ, ಕರೆದು ಅದರ ಎಲ್ಲಾ ಅಭಿವೃದ್ಧಿ ಮಾಡುತ್ತೇನೆಂದು ಹೇಳಿದರು. ಆದರೆ ಈವರೆಗೂ ಯಾವ ಸಭೆಯು ಆಗಲಿಲ್ಲ. ನಮ್ಮ ಉದ್ದೇಶ ಅದಕ್ಕೆ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರಬಾರದೆಂದು ಅಲ್ಲ....

ಉಪಾಧ್ಯಕ್ಷರು: ಈಗ ಪರ್ಯಾಲೋಚನೆಯ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. 1996ನೇ ಸಾಲಿನ ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ತಿದ್ದುಪಡಿ... ಬೇಗ ಮುಗಿಸಿ.

ಶ್ರೀ ಶಿವಶಂಕರಪ್ಪ ರಾಚಪ್ಪ ಕಾಶಪ್ಪನವರ್: ಅತಿ ಮಹತ್ವವಾದ ಒಂದೇ ಒಂದು ವಿಷಯವನ್ನು ತಮ್ಮ ಎದುರಿಗೆ ನಾನು ಪ್ರಸ್ತಾಪ ಮಾಡುತ್ತೇನೆ. ಬಸವೇಶ್ವರರ ಆರಾಧ್ಯದೇವರು ದೈವವಾಗಿರುವ ಕೂಡಲ ಸಂಗಮ ದೇವಸ್ಥಾನವನ್ನು ಕೆಡವಿ ಹಾಕಿದ್ದಾರೆ. ಇದ್ದ ದೇವಸ್ಥಾನವನ್ನು ಎಲ್ಲಾ ಮಠಾಧಿಪತಿಗಳು ಮತ್ತು ರಾಜಕೀಯ ಮುಖಂಡರು ಮತ್ತೆ ಕಟ್ಟಬೇಕೆಂದು ಇದ್ದರೂ ಕೂಡ ಆ ಗರ್ಭಗುಡಿಯನ್ನು ಬಿಟ್ಟು ಉಳಿದ ಎಲ್ಲವನ್ನೂ ಕೆಡವಿ ಹಾಕಿದ್ದಾರೆ. ಅದಕ್ಕೆ ಕಟ್ಟಡವಾಗುತ್ತಿಲ್ಲ, ಬಸವಣ್ಣನವರ ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ ತಮ್ಮ ಎದುರಿಗೆ. ಬಸವಣ್ಣನವರ ಗುರುಗಳಾಗಿರತಕ್ಕಂಥ ಜಾತವೇದ ಮುನಿಗಳ ಗದ್ದುಗೆ ಕುಸಿದು ಹೋಗುತ್ತಿದೆ. ಆ ಬಸವೇಶ್ವರರ ಕ್ಷೇತ್ರದ ಹೆಸರಿನಲ್ಲಿ ಪ್ರಾಧಿಕಾರ ರಚನೆ ಮಾತ್ರ ಹೆಸರಿನಲ್ಲಿ ಇದೆ. ಆದರೆ ಅಲ್ಲಿ ಯಾವ ಅಭಿವೃದ್ಧಿ ಕೆಲಸಗಳೂ ಅಲ್ಲಿ ನಡೆಯುತ್ತಿಲ್ಲ. ಆದ್ದರಿಂದ ದಯವಿಟ್ಟು ಅದರ ಕಡೆ ಸರ್ಕಾರ ಹೆಚ್ಚು ಗಮನ ಕೊಡಬೇಕು, ಒಂದು ತಿಂಗಳಲ್ಲಿ ಅಲ್ಲಿ ಒಂದು ಸಭೆಯನ್ನು ಕರೆಯಬೇಕು. ಇನ್ನೊಂದು ಮಹತ್ವದ ವಿಷಯವೇನೆಂದರೆ, ಇದರಲ್ಲಿ ಸದಸ್ಯರನ್ನು ಬಸವ ತತ್ವವನ್ನು ಬಲ್ಲಂಥವರನ್ನು ಬಸವ ತತ್ವ ಅನುಭವ ಇರುವಂಥವರನ್ನು ನಾಮಕರಣ ಮಾಡಬೇಕು ಇವತ್ತು ಅದು ಆ್ಯಕ್ಟ್‌ನಲ್ಲಿ ಇದೆ. ಅದರಲ್ಲಿ ನಾಮಕರಣ ಮಾಡಿದ್ದು ಅಲ್ಲಿ ಪಾರ್ಟಿ ವರ್ಕರ್ಸ್‌ನ್ನು ನಾಮಕರಣ ಮಾಡಿದ್ದೀರಿ. ನೀವು ಬಸವಣ್ಣನವರ ಅನುಯಾಯಿಗಳನ್ನು ನಾಮಕರಣ ಮಾಡಿಲ್ಲ, ಇಂತಹ ಒಂದು ಸಣ್ಣ ತನದ ಕೆಲಸವನ್ನು ಸರ್ಕಾರ ಮಾಡುವುದು ಬಿಡಬೇಕು. ಏಕೆಂದರೆ ಬಸವಣ್ಣನವರಂಥ ವಿಶ್ವಕ್ಕೆ ಒಳ್ಳೆಯದನ್ನು ಮಾಡತಕ್ಕಂಥ ವಿಚಾರದಲ್ಲಿ ನಾನು ಗಂಭೀರವಾಗಿ ತರುತ್ತಿದ್ದೇನೆ. ಅಲ್ಲಿ 6 ಜನರನ್ನು ನಾಮಕರಣ ಮಾಡಿದ್ದಾರೆ. ಇವತ್ತು ತಮಗೆ ಅತಿ ಮಹತ್ವವಾದ ವಿಷಯವನ್ನು ಹೇಳುತ್ತಿದ್ದೇನೆ. ಬಸವಣ್ಣನವರ ವಚನ ಇಡೀ ಮಾನವ ಕುಲಕೋಟಿಗೆ ಸೀಮಿತವಾಗಿದೆ.

ಉಪಾಧ್ಯಕ್ಷರು: ಇಲ್ಲ ಅದರ ಬಗ್ಗೆ ಮತ್ತೊಂದು ದಿವಸ ಚರ್ಚೆ ಮಾಡೋಣ. ಮತ್ತೊಂದು ದಿವಸ ತಾವು ಭಾಷಣ ಮಾಡಬಹುದು. ದಯಮಾಡಿ ತಾವು ಕುಳಿತುಕೊಳ್ಳಿ, ದಯಮಾಡಿ ಕುಳಿತುಕೊಳ್ಳಬೇಕು ಹೇಳಿದ್ದನ್ನು ತಾವು ಕೇಳಬೇಕು, ಆ ರೀತಿ ಮಾಡಿದರೆ ಅದು ರಿಕಾರ್ಡಿಗೆ ಹೋಗುವುದಿಲ್ಲ, ತಾವು ಕೂಡಬೇಕು.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ; 1996ನೇ ಸಾಲಿನ ಕೂಡಲ ಸಂಗಮ ಅಭಿವೃದ್ಧಿ

ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 8ರವರೆಗೆ

ಉಪಾಧ್ಯಕ್ಷರು: ''ಖಂಡ 2ರಿಂದ 8ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 8ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ;

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ, ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಶ್ರೀ ರಮೇಶ್.ಸಿ.ಜಿಗಜಿಣಗಿ (ಕಂದಾಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, 1996ರ ಕೂಡಲ ಸಂಗಮ ಅಭಿವೃದ್ಧಿ ಮಂಡಲಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''1996ರ ಕೂಡಲ ಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಿಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(2) ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1997

ಪರ್ಯಾಲೋಚನಾ ಪ್ರಸ್ತಾವ

ಶ್ರೀ ರಮೇಶ್.ಸಿ.ಜಿಗಜಿಣಗಿ (ಕಂದಾಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, 1997ರ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಲ್ಪಟ್ಟಿತು

ಶ್ರೀ ರಮೇಶ್.ಸಿ.ಜಿಗಜಿಣಗಿ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಈ ಒಂದು ತಂದಿರತಕ್ಕ ಬಿಲ್ ಇದು ಬಹಳ ಮಹತ್ವವಾಗಿರತಕ್ಕಂಥ ಬಿಲ್ ಇದು. ಸುಮಾರು ವರ್ಷಗಳ ಹಿಂದೆ ದೇವರಾಜ ಅರಸುರವರು ಈ ತಂದಿರತಕ್ಕಂಥ ಕಾನೂನು ಏನು ಇದೆ, ಅದರಲ್ಲಿ ಕಟ್ ಆಫ್ ಡೇಟ್ ಆದಮೇಲೆ ಜನ ಬಹಳ ಬಡವರು ಅರ್ಜಿ ಹಾಕುವುದಕ್ಕಾಗಲಿಲ್ಲ. ಈವತ್ತೂ ಕೂಡ ಬಹಳ ಜನ ರೈತರು ಅವರ ಹೊಲದಲ್ಲಿ ಕಲ್ಟಿವೇಷನ್ ಮಾಡಿಕೊಂಡು ಇದ್ದಾರೆ. ಆದರೂ ಅವರು 7 ನಂಬರ್ ಅರ್ಜಿಯನ್ನು ಹಾಕಿಲ್ಲವೆಂದು ಇವತ್ತು ಆ ಜಮೀನುಗಳಿಗೆ ಸರ್ಕಾರ ಎನ್ನತಕ್ಕಂಥ ಪದವನ್ನು ಎಂಟ್ರಿಯಾಗಿದೆ. ಅದಕ್ಕೆ ಕಳೆದ 20 ವರ್ಷಗಳಿಂದ ಹೊಲದಲ್ಲಿ ಇದ್ದರೂ ಕೂಡ ಅವನಿಗೆ ನಾನು ಓನರ್‌ಶಿಫ್ ರೈಟ್ ಕೊಡುವುದಕ್ಕಾಗಲಿಲ್ಲ. ಅಂದರೆ ಅವನು 7 ನಂಬರ್ ಫಾರ್ಮ್ ಹಾಕಿಲ್ಲವೆಂದು ಅವನಿಗೆ ಯಾವ ಸಾಲ ಸೌಲಭ್ಯವನ್ನೂ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಈ ಬಡ ರೈತನಿಗೆ ಅನುಕೂಲವಾಗಲೆಂದು ಈ ಬಿಲ್ಲನ್ನು ತಂದಿದೆ. ದಯಯಿಟ್ಟು ಮಂಜೂರಾತಿಯನ್ನು ಮಾಡಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ (ಬಸವನ ಗುಡಿ): ಮಾನ್ಯ ಅಧ್ಯಕ್ಷರೆ, ನಾನು ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ಇದರಲ್ಲಿ 77 ಎ ಏನು ಮಾಡಿದ್ದೀರಿ? Insertion of New Sec.77-A ಅದರಲ್ಲಿ sub clause 1 was immediately before the 1st day March 1974 in actual possession and cultivation. ಎಂದು ಹಾಕಲಾಗಿದೆ. And ಇದನ್ನು or ಎಂದು ಮಾಡಬೇಕು. ಇದು ''ಅಥವಾ'' ಎಂದು ಆಗಬೇಕು, 'ಮತ್ತು' ಎಂದು ಆಗಬಾರದು. ಇದೂ ಒಂದು. "..vested in the State Government under Sec.44 Suppose under any other law, it may affect the Government Is it the fault of the person who is cultivating? "..Under any other law in force' ಎಂದು ಆಗಬೇಕು. ಸಬ್ ಕ್ಲಾಸ್ 3 ರಲ್ಲೂ And ಎಂದು ಬಂದಿದೆ. ಅದನ್ನೂ or ಎಂದು ಮಾಡಬೇಕು. ಇದಷ್ಟನ್ನು ತಾವು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

+ ಶ್ರೀ ಎಂ.ವೀರಪ್ಪಮೊಯಿಲಿ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ಭೂ ಮಸೂದೆಗೆ ಅವಶ್ಯಕವಾಗಿ ತಂದಿರತಕ್ಕಂಥ ತಿದ್ದುಪಡಿ ಇದಾಗಿದೆ. ಏಕೆಂದರೆ, ಆ ಸಂದರ್ಭದಲ್ಲಿ ಅನೇಕ ಭೂ ಮಾಲೀಕರ ಒತ್ತಡಕ್ಕೆ, ಬೆದರಿಕೆಗೆ ಒಳಗಾಗಿ ಮತ್ತು ತಿಳುವಳಿಕೆ ಕೂಡ ಇಲ್ಲದೆ ಅನೇಕ ಜನ ಅರ್ಜಿಗಳನ್ನು ಹಾಕಲಿಲ್ಲ. ಆದರೆ, ಅವರು ಈಗಲೂ ಕೂಡ ಅದೇ ಭೂಮಿಯ ಸ್ವಾಧೀನದಲ್ಲಿದ್ದಾರೆ. ಆದ್ದರಿಂದ ಇದು ಒಂದು ಅನಿವಾರ್ಯವಾದಂಥ ತಿದ್ದುಪಡಿಯಾಗಿದೆ. ಇದರಿಂದ ಮಿಸ್‌ಯೂಸ್ ಆಗಲಿಕ್ಕೂ ಕೂಡಾ ಸಾಧ್ಯತೆ ಇಲ್ಲ. ಒಂದನೇ ಮಾರ್ಚ್ 1974ರಿಂದ ಇವತ್ತಿನವರೆಗೂ ಯಾರು ಸ್ವಾಧೀನದಲ್ಲಿದ್ದಾರೋ ಅವರಿಗೇ ಕೊಡತಕ್ಕಂಥ ಕೆಲಸವನ್ನು ಮಾಡಿರುವುದು ಸರಿಯಾಗಿದೆ. ಮಾನ್ಯ ನಂಜೇಗೌಡರು ಹೇಳಿದ ಹಾಗೆ, 'ಅಥವಾ' ಇರುವುದೇ ಒಳ್ಳೆಯದು. ಏಕೆಂದರೆ 'ಅಥವಾ' ಇದ್ದರೆ ಮತ್ತೊಂದು ಕ್ಲಾರಿಫಿಕೇಷನ್ ಕೂಡ ಬೇಕಾಗುತ್ತದೆ. ಬರೀ 'ಅಥವಾ' ಎಂದು ಹಾಕಿ, ಪೊಸಿಷನ್ ಮತ್ತು ಕಲ್ಟಿವೇಷನ್, 'ಮತ್ತು' ಎಂದು ಇದ್ದರೆ ಬರೀ ಅಗ್ರಿಕಲ್ಚರ್ ಟೆನೆಂಟ್‌ಗೆ ಮಾತ್ರ ಅಷ್ಟೆ ಆಗುತ್ತದೆ. ಇದರಲ್ಲಿ ಕಾರ್ಮಿಕರೂ ಇದ್ದಾರೆ, ಅವರೂ ಕೂಡ ಡಿಕ್ಲರೇಷನ್ ಕೊಡುವುದಕ್ಕೆ ಆಮೇಲೆ ತಿದ್ದುಪಡಿ ಮಾಡಿ ಜಾರಿಗೆ ತಂದೆವು. ಕೃಷಿ ಕಾರ್ಮಿಕರು, ಡ್ವೆಲ್ಲಿಂಗ್ ಹೌಸಸ್ ಎಂದು ಯಾರಿದ್ದಾರೆ ಅವರಿಗೂ ಕೂಡ ಸೆಕ್ಷನ್ 2(ಎ)ಗೆ ಅವಕಾಶ ಕೊಟ್ಟಿದ್ದೇವೆ. ಅದು ಸೆಕ್ಷನ್ ಅದು 7 (ಎ) ನಲ್ಲಿ ಬರುವುದಿಲ್ಲ. ಇದರಲ್ಲಿ ತಮ್ಮ ಉದ್ದೇಶ ಏನಿದೆ? ಕಲ್ಟಿವೇಷನ್ ಮಾತ್ರವಲ್ಲ, ಸ್ವಾಧೀನ ಇದ್ದವರಿಗೂ ಕೂಡ ಸಿಗಬೇಕೆಂದು ಮಾಡಲಾಗಿದೆ. ಬಹಳ ಜನ ಕಲ್ಟಿವೇಷನ್ ಮಾಡದೆ, ಬರೀ ಬಂಜರು ಭೂಮಿಯೋ ಮತ್ತೊಂದೋ, ಹೌಸ್ ಸೈಟೋ ಮಾಡಿಕೊಂಡಿರುವವರಿಗೂ ಇದು ಅನ್ವಯವಾಗಬೇಕೆಂದು ಮಾನ್ಯ ನಂಜೇಗೌಡರು ಹೇಳಿದ್ದಾರೆ. ಇದನ್ನು ಅಷ್ಟು ಮಾಡಿದರೂ ಕೂಡಾ ಕೃಷಿ ಕಾರ್ಮಿಕರಿಗೆ ಇದು ಅನ್ವಯವಾಗುವುದಿಲ್ಲ. ಇದರಲ್ಲಿ ಸೆಕ್ಷನ್ 2 (ಎ) ಅನ್ನೂ ಸೇರಿಸುವುದಿದ್ದರೆ ನಮ್ಮ ಗಮನ ಮೊದಲು ಅತ್ಯಂತ ಕೆಳ ಸ್ಥರದಲ್ಲಿರತಕ್ಕಂಥವರ ಮೇಲೆ ಹೋಗಬೇಕಾಗುತ್ತದೆ. ಅಗ್ರಿಕಲ್ಚರ್ ಟೆನೆಂಟ್ಸ್‌ನಲ್ಲಿ ಸುಮಾರು 85 ಪರ್‌ಸೆಂಟ್ ಜನರು ಡಿಕ್ಲರೇಷನ್ ಹಾಕಿದ್ದಾರೆ. ಆದರೆ 2 (ಎ)ನಲ್ಲಿ ಬರುವವರಲ್ಲಿ ಸುಮಾರು 75 ಪರ್‌ಸೆಂಟ್ ಜನ ಡಿಕ್ಲೇರೇಷನ್ ಹಾಕಲಿಕ್ಕೇ ಆಗಲಿಲ್ಲ. ಏಕೆಂದರೆ, ಒಬ್ಬ ಪ್ರಬಲವಾದ ಅಗ್ರಿಕಲ್ಚರ್ ಟೆನೆಂಟ್, ಅವನ ಜಾಗದಲ್ಲೇ ಇರುತ್ತಾನೆ; ಅದೂ ಒಂದು ಗೊಂದಲ. ಮತ್ತೊಂದು ಕಡೆ ಭೂ ಮಾಲೀಕರ ಗೊಂದಲ. ಡಿಕ್ಲೇರೇಷನ್ ಹಾಕುವುದಕ್ಕೆ ಸಮಯ ಕೊಟ್ಟಿದ್ದರೂ ಬಹಳ ಕಡಿಮೆ ಸಮಯ ಕೊಡಲಾಗಿತ್ತು. ಬಹಳ ಕಡಿಮೆ ಸಮಯ ಕೊಟ್ಟಿದ್ದರಿಂದ, ಅನೇಕರಿಗೆ ಡಿಕ್ಲರೇಷನ್ ಹಾಕಲಿಕ್ಕೆ ಸಾಧ್ಯವೇ ಆಗಲಿಲ್ಲ. ಈಗಲೂ ಕೂಡ ಅನೇಕ ಕೇಸ್‌ಗಳು ಮುನ್ಸಿಫ್ ಕೋರ್ಟ್‌ಗಳಲ್ಲಿ, ಎವಿಕ್ಷನ್‌ಗೆ ಬಾಕಿ ಇವೆ. ಆದ್ದರಿಂದ, ಇದು ಬಹಳ ಅವಶ್ಯಕವಾಗಿದೆ, ದಯಮಾಡಿ ಇದನ್ನು ಸೇರಿಸದೇ ಇದ್ದರೆ ಅನುಕೂಲವಾಗುವುದಿಲ್ಲ. ಸೆಕ್ಷನ್ 2(ಎ) ಪ್ರಕಾರ ಯಾರು ಡಿಕ್ಲರೇಷನ್ ಹಾಕಿಲ್ಲವೊ ಅವರಿಗೂ ಕೂಡ ಇದು ಅನ್ವಯವಾಗುತ್ತದೆಂದು ಸೆಪರೇಟ್ ಆದ ಒಂದು ಸಬ್‌ಕ್ಲಾಸನ್ನು ಹಾಕಿದರೆ

ಪ್ರಯೋಜನಕ್ಕೆ ಬರುತ್ತದೆ. ಈ ಭೂ ಮಸೂದೆಯು, ನಮ್ಮ ಕರ್ನಾಟಕದ ರಾಜ್ಯದಲ್ಲಿ ಮಾನ್ಯ ದೇವರಾಜ್ ಅರಸ್ ಅವರು ಮುಖ್ಯ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ತಂದಂಥ ಒಂದು ದೊಡ್ಡ ಕ್ರಾಂತಿಕಾರಕ ಮತ್ತು ಚಳುವಳಿಯೋಪಾದಿಯಲ್ಲಿ ನಡೆದಂಥ ದೊಡ್ಡ ಹೆಜ್ಜೆಯಾಗಿತ್ತು. ಇಡೀ ರಾಷ್ಟ್ರದಲ್ಲೇ ಇದು ಕ್ರಾಂತಿಕಾರಿಯಾಗಿ ಮತ್ತು ಪರಿಣಾಮಕಾರಿಯಾಗಿ ಜಾರಿಗೆ ಬಂತು. ಕೆಲವು ಸಂದರ್ಭಗಳಲ್ಲಿ ಕ್ರಾಂತಿ ಎನ್ನುವುದು ಬರೀ 'ಪದ'ದಲ್ಲಿ ಇರುತ್ತದೆಯೇ ಹೊರತು ಪರಿಣಾಮಕಾರಿಯಾಗಿರುವುದಿಲ್ಲ. ಈ ಭೂ ಮಸೂದೆಯನ್ನು ಕರ್ನಾಟಕ ರಾಜ್ಯದಲ್ಲಿ ಏನು ಅನುಷ್ಠಾನ ಮಾಡಲಾಗಿದೆಯೋ ಆ ಪ್ರಕಾರ ಬಹುಶಃ ಕಮ್ಯುನಿಸ್ಟ್ ರಾಜ್ಯಗಳಲ್ಲೂ ಇಷ್ಟು ಪರಿಣಾಮಕಾರಿಯಾಗಿ ಅನುಷ್ಠಾನವಾಗಲಿಲ್ಲ. ಅದಕ್ಕಾಗಿ ಟ್ರಿಬ್ಯುನಲ್‌ಗಳನ್ನು ಮಾಡಿದ್ದೆವು, ಪಂಚಾಯತನ್ನು ಮಾಡಿದ್ದೆವು. ಪಂಚಾಯತ್‌ದಾರರು ಜಾಗಕ್ಕೆ ಹೋಗಿ ಇನ್ಸ್‌ಪೆಕ್ಟ್ ಮಾಡಿ ಮಹಜರ್ ಮಾಡಿ ಟೆನೆಂಟ್‌ದಾರರಿಗೆ ಅಧಿಕಾರವನ್ನು ಕೊಡುವಂತೆ ಕಾನೂನು ಮಾಡಿದ್ದೆವು. ಏಕೆಂದರೆ, ಬರೀ ಗೇಣಿ ಚೀಟಿ ಅವರ ಹತ್ತಿರ ಇರುವುದಿಲ್ಲ, ಅನೇಕ ರೆಕಾರ್ಡ್‌ಗಳು ಇರುವುದಿಲ್ಲ, ಅವರು ಸ್ವಾಧೀನದಲ್ಲಿರುವುದೇ ಒಂದು ಸಾಕ್ಷಿ. ಯಾರು ಅಗ್ರಿಕಲ್ಚರ್ ಟೆನೆಂಟ್ ಮತ್ತು ಯಾರು ಕೃಷಿ ಕಾರ್ಮಿಕ ಇರುತ್ತಾನೋ ಅವನ ಕಣ್ಣಿನ ಕಾಂತಿಯಲ್ಲಿರತಕ್ಕಂಥ ಸತ್ಯವನ್ನು ಹುಡುಕಬೇಕೆಂದು ನಾವು ಹೇಳುತ್ತಿದ್ದೆವು. ರೆಕಾರ್ಡ್ ನೋಡುವುದಲ್ಲ, ರೆಕಾರ್ಡ್ ನೋಡಿದರೆ ಅವನಿಗೆ ಸಿಗುವುದಿಲ್ಲ. ಇವತ್ತು ಅವುಗಳ ಬಗ್ಗೆ ಏನಾಗುತ್ತಿದೆ? ಕೋರ್ಟ್‌ಗಳಲ್ಲಿ ಏನಾಗಿದೆ ಎಂಬ ಬಗ್ಗೆ ಮಾನ್ಯ ಸಚಿವರು ರಿವ್ಯೂ ಮಾಡಬೇಕು. ಈ ವಿಷಯ ಅನೇಕರ ಗಮನದಲ್ಲಿ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಈಗ ಜ್ಯುಡಿಷಿಯರಿಯಲ್ಲಿ ಏನಾಗಿದೆ ಮತ್ತು ಅವರು ಏನು ಹೇಳುತ್ತಾರೆಂದರೆ.... Mere possession is not sufficient. There is a ruling. He has to prove landlord-tenant relationship. That is the latest decision. Proving possession is not important. ಈಗ ಅದನ್ನು, ಟೆನೆಂಟ ರಿಲೇಷನ್ ಷಿಫ್‌ನ್ನು ಪ್ರೂವ್ ಮಾಡುವುದಕ್ಕಾಗುವುದಿಲ್ಲ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಈ ಟ್ರಿಬ್ಯುನಲ್‌ಗಳನ್ನು ಮಾಡಿದ್ದು, ಇಲ್ಲವೆಂದರೆ, ಸಿವಿಲ್ ಕೋರ್ಟ್ ಅಥವಾ ಮುನ್ಸೀಫ್ ಕೋರ್ಟ್‌ಗಳಿಗೆ ಹೋಗಬಹುದಾಗಿತ್ತು. ಈ ತರಹ ಆಗುವುದಿದ್ದರೆ, ನಮಗೆ ಲ್ಯಾಂಡ್ ರಿಫಾರ್ಮ್ಸ್ ಬೇಡವೇ ಬೇಡ. We get better justice from the Munisff court. ಏನಾದರೂ ಆಗಲಿ ಮುನ್ಸೀಫ್ ಕೋರ್ಟ್‌ನಲ್ಲಿ, ಎವಿಡೆನ್ಸ್ ರೆಕಾರ್ಡ್ ಮಾಡುತ್ತಾರೆ, ಸಮಯಾವಕಾಶ ಇದೆ, ಎಲ್ಲಾ ಇದೆ. ಇದು ಒಂದು ಕಡೆ ಸಮ್ಮರಿ ಪ್ರೊಸೀಡಿಂಗ್ಸೂ ಅಲ್ಲ ಮತ್ತೊಂದು ಕಡೆ ಮುನ್ಸೀಫ್ ಕೋರ್ಟೂ ಅಲ್ಲ, ಇದು ಏನಾಗುತ್ತದೆ? ಇವತ್ತು ಬೇಕಾಬಿಟ್ಟಿಯಾಗಿ ಜನರನ್ನು ಎಬ್ಬಿಸತಕ್ಕಂಥ ಒಂದು ದೊಡ್ಡ ಪ್ರಯತ್ನ, ಬಹುಶಃ ಎಲ್ಲಾ ಕೇಸಸ್ ರಿಮ್ಯಾಂಡ್ ಆಗುತ್ತದೆ. We will have to provide some presumption. ತಾವು ಚೆನ್ನಾಗಿ ಅರ್ಥ ಮಾಡಿಕೊಂಡು ಇದನ್ನು ಹಾಕಿದ್ದೀರಿ. ಇದರಲ್ಲಿ ಏನು ಕಾಣಿಸಿದ್ದೀರಿ?

74 ಮಾರ್ಚ್ 1ನೇ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ 44ನೇ ಪ್ರಕರಣದ ಅಡಿ ರಾಜ್ಯ ಸರ್ಕಾರದಲ್ಲಿ ವಿಹಿತವಾಗಿದ್ದ ಒಂದು ಘಟಕವನ್ನು ಮೀರದ ಯಾವುದೇ ಭೂಮಿಯ ವಾಸ್ತವಿಕ ಸ್ವಾಧೀನತೆಯನ್ನು ಹೊಂದಿದ್ದನೆಂದು ಅಥವಾ ಸಾಗುವಳಿ ಮಾಡುತ್ತಿದ್ದನೆಂದು ತಂದಿರುವ ಈ ಕ್ಲಾಸ್ ಏನಿದೆ the same clause if you can include ಲ್ಯಾಂಡ್ ಲಾರ್ಡ್ ಮತ್ತು ಟೆನೆಂಟ್ ರಿಲೇಷನ್‌ಶಿಪ್ ಅನ್ನು ಪ್ರೂವ್ ಮಾಡಬೇಕಾದಂಥ ಬರ್ಡನ್ ಏನಿದೆ, on the tenant ಅದು ಬರುವುದಿಲ್ಲ. ಅದನ್ನು ಸರಿಯಾಗಿ ಅರ್ಥ ಮಾಡಿಕೊಂಡು ಹಾಕಿದ್ದೀರಿ. ಇದಕ್ಕೆ ಮತ್ತೊಂದು some such ಅಮೆಂಡ್‌ಮೆಂಟ್ ತರಬೇಕಾಗುತ್ತದೆ.

ಅಧ್ಯಕ್ಷರು: ಮಾನ್ಯ ಮೊಯಿಲಿಯವರೆ, I think there is some kind of confusion. Primarily this was intended to enable those applicants who has to seek regularisation of the land which they were unauthorisedly cultivating.

SRI M.MALLIKARJUNA KHARGE: That is different.

SRI M.VEERAPPA MOILY: That is different. ಅದು ಬೇರೆ. ಇದು ಭೂ ಮಸೂದೆ. ಖಾಸಗಿ ಜಮೀನೇ ಇದು. ಆ ಟೆನೆಂಟ್ 1 ಮಾರ್ಚ್ 74ರಿಂದ ಪೊಸಿಷನ್‌ನಲ್ಲಿ ಇದ್ದಾನೆ, ಆದರೆ ನಾನಾ ಕಾರಣಗಳಿಂದ ಅವನು ಇದುವರೆಗೆ ಡಿಕ್ಲರೇಷನ್ ಕೊಡಲಿಕ್ಕಾಗಲಿಲ್ಲ. ಆ ಭೂಮಿ ಈಗ ಸರ್ಕಾರದಲ್ಲಿ ವೆಸ್ಟ್ ಆಗಿದೆ. ಆ ಭೂಮಿಯನ್ನು ಯಾವ ಟೆನೆಂಟ್ ಇದ್ದಾನೋ ಅವನಿಗೇ ಕೊಡತಕ್ಕಂಥಾದ್ದು ಅಷ್ಟೇ. I have welcomed it. I am also pointing out certain loopholes arisen out of the judicial decisions. ಈಗಾಲೇ ಟೆನೆಂಟ್ ಇದ್ದವರಿಗೆ ಟ್ರಿಬ್ಯುನಲ್ ಮೂಲಕ ಆಕ್ಯುಫೆನ್ಸಿ ರೈಟ್ಸ್ ಕೊಟ್ಟಿದ್ದೇವೆ. ಇದರ ಬಗ್ಗೆ ಹೈಕೋರ್ಟ್ ಮತ್ತು ಟ್ರಿಬ್ಯುನಲ್‌ಗಳಲ್ಲಿ ಏನಾಗುತ್ತಿದೆ ಎಂಬುದನ್ನು ನೋಡಿಕೊಂಡು ಅಡಿಷನಲ್ ಅಮೆಂಡ್‌ಮೆಂಟ್ ತರಬೇಕೆಂದು ನಾನು ಹೇಳುತ್ತಿದ್ದೇನೆ. ಏಕೆಂದರೆ, ಇವತ್ತು ಹೈಕೋರ್ಟ್ ಡಿಸಿಷನ್ಸ್ ಇವೆ, ಯಾವುದೇ ಕೇಸ್‌ನಲ್ಲಿ ಲ್ಯಾಂಡ್ ಲಾರ್ಡ್ ಮತ್ತು ಟೆನೆಂಟ್ ರಿಲೇಷನ್‌ಷಿಪ್ ಪ್ರೂವ್ ಮಾಡಬೇಕಾದರೆ ಲೀಸ್ ಡೀಡ್ ಅಥವಾ ಗೇಣಿ ಸಾಲದ ಡೀಡ್ ಬೇಕು ಮತ್ತು ಇನ್ನೂ ಕೆಲವು ರೆಕಾರ್ಡ್ಸ್ ಬೇಕಾಗುತ್ತದೆ. ಬರೀ ರೆವಿನ್ಯೂ ಆರ್.ಟಿ.ಸಿ. ರೆಕಾರ್ಡ್ ಇದ್ದರೆ ಸಾಲದು. RTC record will not prove landlord relationship with tenant. It does not prove. ಅಲ್ಲಿ ಡಾಕ್ಯುಮೆಂಟೇಷನ್ ಬೇಕಾಗುತ್ತದೆ. ಅನೇಕ ಟೆನೆಂಟ್ ಕೇಸ್‌ಗಳಲ್ಲಿ ಲೀಸ್ ಡೀಡ್ ಸಿಗಲೇ ಇಲ್ಲ. ಆದ್ದರಿಂದ ಕೊಟ್ಟಿರುವಂಥ ಎಲ್ಲಾ ಅಕ್ಯುಫೆನ್ಸಿ ರೈಟ್ ರದ್ದಾಗುತ್ತದೆ ಈಗ.

Every landlord will rush to the High Court to cancel out those occupancy right. ಇದರಿಂದ ಬಹಳ ಗಂಡಾಂತರ ಬರುತ್ತದೆ, ದೇವರಾಜ್ ಅರಸ್‌ರವರ ಕಾಲದಲ್ಲಿ ನಾವು ಯಾವುದನ್ನು ಕೊಟ್ಟಿದ್ದೇವೆ? That will be taken away. You have given it in right hand and left hand you have withdrawn, because of the judicial decision. ಪೊಸಿಷನ್ ಇದ್ದರೆ ಸಾಲದು, as the latest High Court decision, the burden is on the tenant to prove the landlord-tenant relationship. ultimately many cases are coming back. ಹೈಕೋರ್ಟ್‌ನಲ್ಲಿ ನೀವು ನೋಡಿರಬಹುದು, ದಯಮಾಡಿ, ಹೈಕೋರ್ಟನಲ್ಲಿ ಡಿಸೈಡ್ ಆದಂಥ ಕೇಸನ್ನು ತರಿಸಿ. I am not blaming the courts.

4.40 ಪಿ.ಎಂ

ಏಕೆಂದರೆ ಅಲ್ಲಿ ಬರತಕ್ಕಂಥ ಕೇಸ್‌ಗಳನ್ನು ಲೆಕ್ಕ ಹಾಕಿ. Almost 90% of the cases are going against the tenants. Tenants are losing the land. ದೊಡ್ಡ ಒಂದು ಗಂಡಾಂತರ ಇವೊತ್ತು ಆಗುತ್ತಾ ಇದೆ. ಇನ್ನೊಂದು ಏನಾಗಿದೆ ಅಂದರೆ ಹಿಂದೆ ಏನಾಗುತ್ತಿತ್ತು ಎಂದು ಮಾನ್ಯ ಅಧ್ಯಕ್ಷರಿಗೆ ಗೊತ್ತಿದೆ. ಶಾನುಭೋಗರು ಮತ್ತು ವಿಲೇಜ್ ಅಕೌಟೆಂಟ್‌ಗಳು ಬಂದವರು ಟೆನೆಂಟ್ ಡಿಕ್ಲೇರೇಷನ್ ಕೊಡಲು ಅವರ ಹತ್ತಿರ ಸರ್ವೆ ನಂಬರ್ ಇರುವುದಿಲ್ಲ. ಅವರು ಶಾನುಭೋಗರ ಹತ್ತಿರ ಹೋಗಲೇ ಬೇಕಾಗುತ್ತದೆ. ಹೀಗಾಗಿ ಅನೇಕ ಸಾರಿ ಡಿಕ್ಲರೇಷನ್‌ನ್ನು ತಪ್ಪುತಪ್ಪಾಗಿ ಕೊಟ್ಟಿದ್ದಾರೆ. ವಿಸ್ತೀರ್ಣವನ್ನು ಸರಿಯಾಗಿ ಕೊಟ್ಟಿಲ್ಲ, ಅಥವಾ ಸರ್ವೆ ನಂಬರ್ ಸರಿಯಾಗಿ ಡಿಕ್ಲರೇಷನ್‌ಗಳಲ್ಲಿ ಹಾಕಿರುವುದಿಲ್ಲ. ಆಮೇಲೆ ಟ್ರಿಬ್ಯೂನಲ್‌ನವರು ಏನು ಮಾಡಿದ್ದಾರೆ ಅಂದರೆ, ಆ ಜಾಗಕ್ಕೆ ಹೋಗಿ ಮಹಜರ್ ಮಾಡಿ ಪುನಃ ಸರ್ವೆ ಮಾಡಿಸಿದ್ದಾರೆ. Based on the detailed survey report ಲೋಕಲ್ ಇನ್ಸ್‌ಪೆಕ್ಷನ್ ಆಗಿ, ಸರ್ವೆ ಕಂಡಕ್ಟ್ ಮಾಡಿದ ಮೇಲೆ ಇದೇ ಸರಿಯಾದ ಸರ್ವೆ ನಂಬರ್ ಎಂದು ಹೇಳಿ, ನಿಷ್ಕರ್ಷೆ ಮಾಡಿ ಆಮೇಲೆ ಟ್ರಿಬ್ಯೂನಲ್‌ನವರು ಡಿಸಿಷನ್ ಕೊಟ್ಟಿದ್ದಾರೆ. ಈಗ ಡಿಸಿಶನ್ ಆಫ್ ದ ಹೈಕೋರ್ಟ್ ಏನಾಗಿದೆ ಅಂದರೆ, ಅದು ಯಾವುದನ್ನು ಡಿಕ್ಲರೇಶನ್‌ನಲ್ಲಿ ಸರ್ವೆ ನಂಬರ್‌ನ್ನು ಕೊಟ್ಟಿದ್ದಾನೆ, ಯಾವ ವಿಸ್ತೀರ್ಣವನ್ನು ಕೊಟ್ಟಿದ್ದಾನೆ, ಅಷ್ಟುಮಾತ್ರ ಕೊಡತಕ್ಕದ್ದು. ಆ ಸರ್ವೆ ನಂಬರ್‌ನ್ನು ತಿದ್ದುಪಡಿ ಮಾಡತಕ್ಕಂಥ ಅಥವಾ ವಿಸ್ತೀರ್ಣವನ್ನು ಹೆಚ್ಚು ಕಡಿಮೆ ಮಾಡತಕ್ಕಂಥ ಅಧಿಕಾರ ಟ್ರಿಬ್ಯೂನಲ್‌ಗಳಿಗೆ ಇಲ್ಲ ಎನ್ನತಕ್ಕಂಥ ತೀರ್ಮಾನವನ್ನು ಇವೊತ್ತು ಹೈಕೋರ್ಟ್‌ನವರು ಕೊಟ್ಟಿದ್ದಾರೆ. ಇದರಿಂದ ಏನಾಗುತ್ತದೆ? ಅನೇಕ ಕೇಸ್‌ಗಳಲ್ಲಿ You have to save the situation. ಏಕೆಂದರೆ ಅನಕ್ಷರಸ್ಥರು ಇದ್ದಾರೆ,

ಅನೇಕರು ನೂರಕ್ಕೆ 99 ರಷ್ಟು ಪಾಲು ಅಗ್ರಿಕಲ್ಚರಿಸ್ಟ್ ಟೆನೆಂಟ್ಸ್ ಅನಕ್ಷರಸ್ಥರು ಇರುತ್ತಾರೆ. ಅನೇಕರು ಸರ್ವೆ ನಂಬರ್ ಹಾಕದೆ ಡಿಕ್ಲರೇಷನ್ ಕೊಟ್ಟಿದ್ದು ಕೂಡ ಇದೆ. ಕೆಲವರು ತಪ್ಪು ಗಡಿ ನಿರ್ಣಯ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಇದನ್ನೆಲ್ಲಾ ತಾವುಗಳು ಅಧ್ಯಯನ ಮಾಡಿಕೊಂಡು ಸರಿಪಡಿಸ ತಕ್ಕಂಥ ತಿದ್ದುಪಡಿಯನ್ನು ತರದೇ ಇದ್ದರೆ, ಇದರಿಂದ ದೊಡ್ಡ ಅನಾಹುತವಾಗುತ್ತದೆ. ಬಹುಶಃ ದೇವರಾಜ್ ಅರಸರವರು ಸ್ವರ್ಗದಲ್ಲಿರತಕ್ಕಂಥವರು ಕಣ್ಣೀರು ಇಡುವ ಪರಿಸ್ಥಿತಿಯು ಇವೊತ್ತು ಬರುತ್ತದೆ. ಇದನ್ನು ಬಹಳ ಗಂಭೀರವಾಗಿ ಮಾನ್ಯ ಕಂದಾಯ ಸಚಿವರು ತೆಗೆದುಕೊಳ್ಳ ಬೇಕಾಗುತ್ತದೆ. ಇದಕ್ಕೆ ಸರಿಯಾದಂಥ ಒಂದು ತಿದ್ದುಪಡಿಯನ್ನು ತರಬೇಕಾದಂಥ ಒಂದು ಅವಶ್ಯಕತೆಯೂ ಕೂಡ ಇದೆ. ಇನ್ನೊಂದು ವಿಚಾರ ನೀವು ಪ್ರೊವೈಡ್ ಮಾಡಿ. ಮಹಜರ್ ಮಾಡಿ, ಯಾವುದು ಸರಿಯಾದಂಥ ಸರ್ವೆನಂಬರ್, ನಿಜವಾಗಿಯೂ ಅವನ ಸ್ವಾಧೀನ ಇರತಕ್ಕಂಥ ಜಾಗ ಯಾವುಧು, ಅದನ್ನು ಮಹಜರ್ ಮಾಡಿ ಆ ಮಹಜರ್‌ನ್ನು ಎವಿಡೆನ್ಸ್ ಆಗಿ ತೆಗೆದುಕೊಂಡು ನಿರ್ಣಯ ಮಾಡತಕ್ಕಂಥ ಹಕ್ಕನ್ನು ಟ್ರಿಬ್ಯುನಲ್‌ಗೆ ಇವೊತ್ತು ಕೊಡಬೇಕು. ಅಂಥ ತಿದ್ದುಪಡಿಯನ್ನು ತಾವು ಮಾಡಬೇಕಾಗುತ್ತದೆ. ಏಕೆಂದರೆ ಆ ಸಮಯದಲ್ಲಿ ಒಂದು ಚಳುವಳಿಯೋಪಾದಿಯಲ್ಲಿ ಎಲ್ಲಾ ಆಯಿತು. ಈಗ ಎಲ್ಲಾ ಟೆನೆಂಟ್ಸ್ ಅದನ್ನು ಕ್ರಮೇಣ ಕಳೆದುಕೊಳ್ಳುತ್ತಾ ಇದ್ದಾರೆ. ಇನ್ನೊಂದು ಅನಾಹುತ ಆಗುತ್ತಾ ಇದೆ. ಅದನ್ನು ತಾವು ಗಮನಿಸಿದ್ದೀರೋ ಇಲ್ಲವೋ? According to the recent Supreme Court decision ಏನಾಗಿದೆ ಅಂದರೆ ಯಾರು, ಯಾರ ಹೆಸರಿಗೆ... ಒಬ್ಬ ಹೆಡ್ ಆಫ್‌ದಿ ಫ್ಯಾಮಿಲಿ ಇರುತ್ತಾನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಳಿಯ ಸಂತಾನ Law of inheritance ಇದೆ. ಅದರ ಪ್ರಕಾರ ಯಜಮಾನ ಯಾರು ಇರುತ್ತಾನೆ ಅವನು ಭೂಮಿಯಲ್ಲಿ ಇರುವುದಿಲ್ಲ. ಅವನು ಹೆಚ್ಚಾಗಿ ಹೆಂಡತಿ ಮನೆಯಲ್ಲಿ ಇರುತ್ತಾನೆ. ಕುಟುಂಬದ ಯಜಮಾನ ಯಾರು ಇರುತ್ತಾನೆ ಅವನು-ಮಾವ ಅಥವಾ ಅಜ್ಜ, ಅವನು ನಿಜವಾಗಿಯೂ ಹೆಂಡತಿ ಮನೆಗೆ ಹೆಚ್ಚು ಹೋಗುವುದು. ಏಕೆಂದರೆ ಹೆಂಡತಿ ಮನೆಯ ಆಸ್ತಿ ಅವನಿಗೆ ಸಿಗುವ ಮುಂದಿನ ಆಸ್ತಿ. ಈ ಆಸ್ತಿಯು ಅವನಿಗೆ ಸಿಗುವುದಿಲ್ಲ. ಹಾಗಾಗಿ ಅವನು ಹೆಂಡತಿ ಮನೆಯಲ್ಲಿ ಇರುತ್ತಾನೆ. ಆದರೆ ಡಿಕ್ಲರೇಷನ್ ಈ ಜಾಗಕ್ಕೆ ಕೊಟ್ಟಿರುತ್ತಾನೆ. ಅವನೇ ಕೊಡಬೇಕು, ಯಾಕೆಂದರೆ ಅದರಲ್ಲಿ ಅವನ ಹೆಸರೇ ಇರತಕ್ಕಂಥಾದ್ದು. ಹೀಗಾಗಿ ಅವನಿಗೆ ಹೆಂಡತಿ ಮನೆಯ ಆಸ್ತಿಯೂ ಸಿಕ್ಕಿತು ಮತ್ತು ಈಗ ಯಾವುದು ಅವನ ಸ್ವಾಧೀನ ಇರಲಿಲ್ಲ, ಯಾವುದನ್ನೂ ಅವನು ಕಲ್ಟಿವೇಷನ್ ಮಾಡಿಲ್ಲ, ಅದೂ ಕೂಡ ಸಿಕ್ಕಿತು. ಹೌದು... ಯಾಕೆಂದರೆ ಅವನದು ಜಾಯಿಂಟ್ ಫ್ಯಾಮಿಲಿ ಅಲ್ಲ. ಅವನ ಹೆಸರಿಗೆ ಬಂದದ್ದು ಅವನದೇ ಆಸ್ತಿ ಎಂದು ಆಯಿತು. ಇದು ಬಹಳ ಗಂಡಾಂತರವಾಗುತ್ತದೆ. ನಾವು ಆ ಸಂದರ್ಭದಲ್ಲಿ ನಾವು ಪ್ರತಿನಿಧಿಗಳಾದವರು ಅನೇಕರು ಏನು ಹೇಳುತ್ತೇವೆ ಅಂದರೆ, ನಮಗೆ ಒಟ್ಟಾರೆ ಟೆನೆಂಟ್ಸ್ ಸಾಲಿಡಾರಿಟಿ ಬೇಕಾಗಿತ್ತು. We wanted solidarity among the tenants to fight against the landlords. ಆವಾಗ ಏನು ಮಾಡಿದ್ದೇವೆ

ಅಂದರೆ ಎಲ್ಲಾ ನಿಮ್ಮ ಫ್ಯಾಮಿಲಿ ಡಿಸ್ಪ್ಯೂಟ್ಸ್ ಮರೆತು ಬಿಡಿ, ನಿಮಗೆ ಭೂಮಿ ಬರಲಿ ಎಂದು ಅವನ ಹೆಸರಿಗೆ ಭೂಮಿಯ ಡಿಕ್ಲೆರೇಷನ್ ಹಾಕಿ ಬಿಟ್ಟರೆ ಅವನು ಭೂಮಿಯನ್ನು ನೋಡಿದ್ದೇ ಇಲ್ಲವಾದರೂ, ಆತನು ಬಾಂಬೆಯಲ್ಲಿಯೇ ಇದ್ದರೂ ಕೂಡ he has now come back and created problems. ಬಹಳ ದೊಡ್ಡ ಸಂಘರ್ಷಣೆ ಇವೊತ್ತು ಪ್ರಾರಂಭವಾಗಿದೆ. ಆದ್ದರಿಂದ ಇಂಥ 2, 3, 4, ವಿಷಯಗಳು ಮಹತ್ವವುಳ್ಳವುಗಳಿದೆ. ಇದಕ್ಕೆ ಸರಕಾರದವರು ಒಂದು ಸಮಿತಿಯನ್ನು ಮಾಡಿ. ಕಂದಾಯ ಸಚಿವರು ನಾನು ಹೇಳಿದ ಎರಡು ಮೂರು ವಿಷಯಗಳಲ್ಲದೆ ಇನ್ನೂ ಅನೇಕ ವಿಷಯಗಳಿವೆ, ಅವುಗಳನ್ನು ಮುಖ್ಯವಾಗಿ ತೆಗೆದುಕೊಂಡು ಒಂದು ಸಮಿತಿಯನ್ನು ದಯಮಾಡಿ ರಚಿಸ ಬೇಕು. ಇವೊತ್ತು ನಮ್ಮಲ್ಲಿ ಬಹಳ ಪರಿಣಾಮಕಾರಿಯಾದ ಭೂ ಮಸೂದೆಯು ಇದೆ, ಅದು ಒಂದು ನಿಷ್ಪ್ರಯೋಜಕ ಪರಿಸ್ಥಿತಿಗೆ ಹೋಗತಕ್ಕಂಥದ್ದನ್ನು ತಡೆಗಟ್ಟತಕ್ಕಂಥದ್ದು ಬಹಳ ಅಗತ್ಯವಿದೆ. ದಯಮಾಡಿ ಅದಕ್ಕಾಗಿ ಒಂದು ಅಧಿಕಾರಿಗಳ ಸಮಿತಿಯನ್ನು ಮಾಡಿ, ಅಥವಾ ಇದರಲ್ಲಿ ನಂಬಿಕೆ ಇರತಕ್ಕಂಥ ಶಾಸಕರ ಸಮಿತಿಯನ್ನು ಮಾಡಿ ಅಂಥವರಿಗೆ ಇದರಲ್ಲಿ ಒಂದು ನಂಬಿಕೆ ಇರಬೇಕು ಏತಕ್ಕೆಂದರೆ faith is important in this progressive legislation. ನೀವು ಅಂಥ ಒಂದು ಸಮಿತಿಯನ್ನು ಮಾಡಿ ಅದರ ಸಜೆಷನ್ಸ್ ತೆಗೆದುಕೊಂಡು ಇನ್ನೊಂದು ಅಧಿವೇಶನದಲ್ಲಿ ಒಂದು ತಿದ್ದುಪಡಿಯನ್ನು ತರತಕ್ಕಂಥ ಆಲೋಚನೆಯನ್ನು ಮಾಡಬೇಕು ಎಂದು ನಾನು ವಿಶೇಷವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಸಭಾಧ್ಯಕ್ಷರೇ, ನನಗೆ ಇದರಲ್ಲಿ ಒಂದೇ ಒಂದು ಕ್ಲಾರಿಫಿಕೇಷನ್ ಬೇಕು. ಏಕೆಂದರೆ ಸೆಕ್ಷನ್ 48-ಎ ರ ಕೆಳಗೆ ನಾವು ಫಾರ್ಮ್ ನಂಬರ್-7ನ್ನು ಹಾಕಿ ಟ್ರಿಬ್ಯುನಲ್ ಮುಂದೆ ಹೋಗಿ, ಬಡವರಿಗೆ ಟೆನೆಂಟ್‌ಗಳಿಗೆ, ಅವರ ಟೈಟಲ್‌ನ್ನು ಕನ್‌ಫರ್ಮ್ ಮಾಡತಕ್ಕಂಥ ಅಧಿಕಾರವು ಹಿಂದೆ ಇತ್ತು. ಈಗ ನಾವು ಅದನ್ನು ತೆಗೆದು ಬಹುಶಃ ಈಗ ಡೈರೆಕ್ಟಲೀ, ಡೆಪ್ಯುಟಿ ಕಮಿಶನರ್, ಸ್ಪೆಶಲ್ ಡಿ.ಸಿ., ಇವರುಗಳಿಗೆ ನಾವು ಈ ಕೆಲಸವನ್ನು ವಹಿಸುತ್ತಾ ಇದ್ದೇವೆ. ನಮ್ಮ ಹೊಸ ಕಾನೂನಿನ ಪ್ರಕಾರ. ಸ್ಪೆಶಲ್ ಡಿ.ಸಿಗೆ. ನಾವು ಇದನ್ನು ಎಂಪವರ್ ಮಾಡುವಾಗ ಡೇಟ್‌ನ್ನು ನಾವು ನಿಗದಿ ಮಾಡಿಲ್ಲ. ಅದಕ್ಕೆ ಒಂದು ಕಟ್ ಆಫ್ ಡೇಟ್ ಎಂದು ಇರಬೇಕಲ್ಲವೇ? ಯಾವರೀತಿಯಾಗಿ ನಮ್ಮ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ 1-3-1974ರಲ್ಲಿ ಬಂತು, ಅದಕ್ಕೆ ಅಪ್ಲಿಕೇಷನ್ಸ್ ಹಾಕಲು ಒಂದು ಕಟ್ ಆಫ್ ಡೇಟ್ ಆಯಿತು. ಮುಂದೆ ಎಕ್ಸ್‌ಟೆನ್‌ಷನ್ ಕೂಡ 1981ರಲ್ಲಿ ಆಯಿತು. ಹೀಗೆ ನಾವು ಅನೇಕ ಸಾರಿ ಆ ಡೇಟ್‌ನ್ನು ಎಕ್ಸ್‌ಟೆಂಡ್ ಮಾಡಿಕೊಂಡು ಸಂಬಂಧಪಟ್ಟವರಿಗೆ ನ್ಯಾಯ ಸಿಗಲಿ ಎಂದು ಮಾಡಿದ್ದೇವೆ. ಈಗ ಅದನ್ನು ಮಾಡಬಾರದು ಎನ್ನತಕ್ಕಂಥ ಉದ್ದೇಶ.... ಏತಕ್ಕೆಂದರೆ ಒಂದು ಫ್ಲಡ್‌ಗೇಟ್ ತೆರೆದ ಹಾಗೆ ಆಗುತ್ತದೆ. ಎಲ್ಲರೂ ಕೂಡ ಪುನಃ ಅರ್ಜಿ ಹಾಕಲು ಪ್ರಾರಂಭ ಮಾಡುತ್ತಾರೆ. ಹಳ್ಳಿಗಳಲ್ಲಿ ಜಗಳಗಳು

ಪ್ರಾರಂಭವಾಗುತ್ತವೆ; ಎನ್ನತಕ್ಕಂಥ ದೃಷ್ಟಿಯಿಂದ ಉಳಿದಂಥ ಟೆನೆಂಟ್‌ಗಳಿಗೆ ಯಾರು 1974ರಿಂದ ಜಮೀನನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದಾರೋ ಅಂಥವರಿಗೆ ನೇರವಾಗಿ ಗ್ರಾಂಟ್ ಮಾಡಬೇಕೆಂಬ ದೃಷ್ಟಿಯಿಂದ ಈ ಒಂದು ತಿದ್ದುಪಡಿಯನ್ನು ತಂದಿದೆ. ಆದರೆ ಅದಕ್ಕೆ ಟೈಂ ಲಿಮಿಟ್ ಇರಲಿಲ್ಲ ಅಂದರೆ, ಖಂಡಿತವಾಗಿ ಇದು ವರ್ಷಾನುಗಟ್ಟಳೆಯಾಗಿ ನಡೆಯುತ್ತದೆ. ಯಾರೋ ಅವರಿಗೆ ಫೇವರೆಬಲ್ ಡಿಸಿ ಬರಲಿಲ್ಲ, ಲ್ಯಾಂಡ್‌ಲಾರ್ಡ್ ಪರ ಆಗಲಿಲ್ಲ, ಎಂದು ಬಂದಾಗ ಆಗ ಅವನು ಏನು ಮಾಡುತ್ತಾನೆ ಅಂದರೆ, ಆ ಡಿಸಿ ನಮಗೆ ಚೆನ್ನಾಗಿಲ್ಲ, ಮುಂದೆ ಬೇರೆ ಡಿಸಿ ಬಂದಾಗ ನೋಡೋಣ ಎಂದು ಮುಂದಕ್ಕೆ ಹಾಕಿಸಿಕೊಂಡು ಕೇಸ್‌ನ್ನು ತಿರುಗಿಸಿ ತಿರುಗಿಸಿ ಟೆನೆಂಟ್ ಸುಸ್ತಾಗುವವರೆಗೆ, ಅಥವಾ ಅವನಿಗೆ ಬೇಕಾದಂಥ ಸ್ಪೇಷಲ್ ಡಿಸಿ ಅಥವಾ ಅನುಕೂಲವಾದ ವಾತಾವರಣ ಬರುವವರೆಗೆ ಮುಂದಕ್ಕೆ ತಳ್ಳುತ್ತಾನೆ. ಆದ್ದರಿಂದ ದಯಮಾಡಿ ಇದಕ್ಕೆ ಏನಾದರೂ ಕಟ್ ಆಫ್ ಡೇಟ್‌ನ್ನು ಮಾಡಿದ್ದೀರಾ ಅಥವಾ ರೂಲ್ಸನಲ್ಲಿ ಪ್ರಿಸ್ಕ್ರೈಬ್ ಮಾಡುತ್ತೀರಾ? ಹೀಗೆ ಏನಾದರೂ ಒಂದು ಬೇಕಲ್ಲವೇ? ಏತಕ್ಕೆಂದರೆ ನೀವು ಕೊಟ್ಟಂಥ ತಿದ್ದುಪಡಿಯಲ್ಲಿ ಅದು ಇಲ್ಲ. ಇದರಲ್ಲಿ ಕೇವಲ ಏನಿದೆ ಅಂದರೆ, ಇಷ್ಟು ಮಾತ್ರವಿದೆ, 77A-Grant of land in Certain cases:

"Notwithstanding anything contained in this Act, if the Dy.Commissioner or the Spl. Dy.Commissioner is satisfied after holding such enquiry as he deems fit that a person was immediately before 1st day of March 1974 in actural possession and cultivation of any land not exceeding one unit which is vested in the State Government under Section-44".

Now the tenant will not go before the Tribunal headed by the Assistant Commissioner and non-official members. He will go ultimately before the D.C. or the spl.D.C. ಅಂದರೆ ಒಂದು ವ್ಯಕ್ತಿ ಅಲ್ಲಿ ಹೋಗುವಾಗ ಅನೇಕ ಸಾರಿ ಇದು ಅನಾಹುತಕ್ಕೆ ಕಾರಣವಾಗುತ್ತದೆ.

ಶ್ರೀ ರಮೇಶ್.ಸಿ.ಜಿಗಜಿಣಗಿ (ಕಂದಾಯ ಮಂತ್ರಿಯವರು): ಮಾನ್ಯ ವಿರೋಧ ಪಕ್ಷದ ನಾಯಕರು ಇದಕ್ಕೆ ಒಂದು ಟೈಂ ಫಿಕ್ಸ್ ಮಾಡಬೇಕೆಂದು ಹೇಳುತ್ತಿದ್ದಾರೆ. ನಾವು ಅಮೆಂಡ್‌ಮೆಂಟ್ ತಂದದ್ದು, ಈಗಾಗಲೇ ಸರಕಾರಕ್ಕೆ ಯಾವ ಲ್ಯಾಂಡ್ ವೆಸ್ಟ್ ಆಗಿದೆ ಸರಕಾರದ್ದು ಎಂದು ಎಂಟ್ರಿ ಆಗಿದೆ; ಆದರೆ ಅವನು ಪೊಸಿಷನ್‌ನಲ್ಲಿ ಇದ್ದಾನೆ. With this amendment we are giving right to grant that land to

that poor person.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏತಕ್ಕೆಂದರೆ ನಿಮಗೆ ಗೊತ್ತಿರುವ ಹಾಗೆ ಆಕ್ಟ್ ಯಾವಾಗ ಎನ್‌ಫೋರ್ಸ್‌ನಲ್ಲಿ ಬಂತು, ಆ ದಿವಸದಿಂದ ಎಲ್ಲಾ ಲ್ಯಾಂಡ್ vested with the government. ಅದರ ಮೇಲೆ ಅವರಿಗೆ ನಾವು ಒಂದು ಚಾನ್ಸ್‌ನ್ನು 48-(ಎ)ರ ಕೆಳಗೆ ಫೈಲ್ ಮಾಡಲು ಕೊಟ್ಟಂಥ ಹಕ್ಕು ಅದು ಆಗಿದೆ. ಆದರೆ ಕಾನೂನಿನ ಪ್ರಕಾರ ಎಲ್ಲಾ ಜಮೀನುಗಳನ್ನೂ ಸರ್ಕಾರದ ವಶದಲ್ಲಿ ಬರುವಂತೆ ದಿನಾಂಕ: 1ನೇ ಮಾರ್ಚ್ 1974ರಲ್ಲಿ ವಶಪಡಿಸಿಕೊಂಡಿದ್ದಾರೆ. ಅದಕ್ಕಾಗಿ ನಾನು ಹೇಳುವುದೇನೆಂದರೆ ನಾನು ಏತಕ್ಕೆ ಸಂಶಯ ವ್ಯಕ್ತಪಡಿಸುತ್ತೇನೆ ಎಂದರೆ ಕೆಲವು ಸಲ ಸ್ಪೆಷಲ್ ಡೆಪ್ಯುಟಿ ಕಮಿಷನರ್, ಅವರ ಪರವಾಗಿ ಇಲ್ಲದೇ ಇದ್ದಾಗ ಅನೇಕ ಭೂಮಾಲೀಕರು ಇದನ್ನು ಮುಂದೆ ಮುಂದೆ ತಳ್ಳಿಕೊಂಡು ಹೋಗತಕ್ಕಂಥ ಸಾಧ್ಯತೆ ಇದೆ. ಇಲ್ಲ ಸರ್ಕಾರದಲ್ಲಿ ಅವರ ಪರವಾಗಿ ಬರತಕ್ಕಂಥ ಜನ; ಇಲ್ಲ ಅಧಿಕಾರಿಗಳು ಯಾವುದೇ ಒಂದು ರೀತಿಯಿಂದ ಆಗಬಹುದು. ಆದುದರಿಂದ ನಾನು ಹೇಳುವುದೇನೆಂದರೆ 2 ವರ್ಷ ಅಥವಾ 3 ವರ್ಷ ಎಂದು ಯಾವುದಾದರೂ ಲಿಮಿಟ್ ಹಾಕಿ ಇದರೊಳಗಾಗಿ ಗ್ರಾಂಟ್ ಮಾಡಲೇಬೇಕು. The Dy. Commissioners should be bound by this rightly or wrongly. ಬೇಕೆಂದರೆ ಅವರು ಮುಂದೆ ಹೈಕೋರ್ಟಿಗೆ ಅಪೀಲು ಹೋಗಲಿ. ನಾವು ಅದನ್ನು ನಿಗದಿ ಮಾಡದೆ ಹೋದರೆ ಅಥವಾ ಸ್ಪೆಷಲ್ ಡಿ.ಸಿ. ಅಥವಾ ಡಿಸಿ ಸ್ಯಾಂಕ್ಷನ್ ಮಾಡದೆ ಹೋದರೆ ಅವನ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುತ್ತೇವೆ ಎಂದು ಏನಾದರೂ ನಿಯಮ ಇರಬೇಕು. ಅದು ಇಲ್ಲದೆ ಹೋದರೆ ಖಂಡಿತ ಇದು ಮತ್ತೆ ತೊಂದರೆಯಾಗುತ್ತದೆ. ಇಂಪ್ಲಿಮೆಂಟೇಷನ್‌ಗೆ ಈಗಿರತಕ್ಕಂಥ ಕಾನೂನಿನಲ್ಲಿ ಬರುವಂಥ ಕೇಸಸ್‌ಗಳಿಗೆ ತೊಂದರೆಯಾಗುತ್ತದೆ. ಅದರ ಬಗ್ಗೆ ತಾವು ಯಾವ ರೀತಿಯಾಗಿ ಕಾಳಜಿ ವಹಿಸುತ್ತೀರಿ? ಎರಡನೆಯದಾಗಿ ನಂಜೇಗೌಡರು ಏನು ಹೇಳಿದರು "Or" and "And" ಅದರಲ್ಲಿ ಸ್ವಲ್ಪ ತೊಂದರೆಯಾಗಬಹುದು. ಹೇಗೆಂದರೆ ವೀರಪ್ಪ ಮೊಯಿಲಿಯವರು ಹೇಳಿದ್ದನ್ನೂ ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಹೌಸಿಂಗ್‌ಗೆ ಅವರೂ ಕೂಡ ಫಾರ್ಮ್-7 2ಎ ಪ್ರಕಾರ ತುಂಬಿ ಓನರ್‌ಶಿಫ್ ತೆಗೆದುಕೊಳ್ಳಬೇಕೆಂದು ಕಾನೂನಿನಲ್ಲಿ ಅಳವಡಿಸಬೇಕೆಂದು ನಿರ್ಧರಿಸಿ ಅದಕ್ಕೂ ಕೂಡ ಒಂದು ಟೈಮ್ ಗೊತ್ತು ಮಾಡಿದ್ದರು. ಈಗ ಅದು ಫಾರ್ಮ್-6 ಎಂದು ಹಾಕುವುದರಿಂದ ಅವರಿಗೆ ಏನಾಗುತ್ತದೆ ಎಂದರೆ ಯಾರಿಗೆ ಪೊಸಿಶನ್ ಇದ್ದರೂ ಕೂಡ ನಾನ್ ಅಗ್ರಿಕಲ್ಚರಿಸ್ಟ್ ಆಗಿದ್ದರೆ ಆ ಭೂಮಿಯನ್ನು ತನ್ನ ವಶದಲ್ಲಿಟ್ಟುಕೊಂಡಿದ್ದರೆ ಅವನು ನಾಳೆ ಅಪ್ಲಿಕೇಷನ್ ಹಾಕಿ ವಿಶೇಷವಾಗಿ ದೊಡ್ಡ ದೊಡ್ಡ ಸಿಟಿಗಳು ಅಥವಾ ಸಿಟಿಯ ಅಕ್ಕಪಕ್ಕದಲ್ಲಿರತಕ್ಕಂಥ ಜನರೂ ಕೂಡ ಇದ್ದಂಥ ಈ ಜಮೀನುಗಳನ್ನು ಫಾಲ್ಸ್ ಕ್ಲೈಮ್ ಹಾಕಿ ತೆಗೆದುಕೊಳ್ಳತಕ್ಕಂಥ ಸಾಧ್ಯತೆ ಇದೆ. ಇಲ್ಲದಿದ್ದರೆ ಯಥಾಪ್ರಕಾರ ಅದು ಸರ್ಕಾರಕ್ಕೆ ಬರುತ್ತದೆ. ಬರುವುದಿಲ್ಲ ಎಂದರೆ ನೀವು ಒಂದು ಸಲ ಕಾನೂನು ಮಾಡಿದರೆ

ಯಾರಾದರೂ ಆ ರೀತಿ ಅಪೀಲು ಹೋಗುತ್ತಾರೆ. ಅದಕ್ಕಾಗಿ ಬಹುಶಃ ಅದನ್ನು ಪುನರ್ ಪರಿಶೀಲನೆ ಮಾಡಿ ಎಂದು ನಾನು ತಮಗೂ ಕೇಳಿಕೊಳ್ಳುತ್ತೇನೆ. ಏಕೆಂದರೆ ಇದರ ಅನಾಹುತ ಬೇರೆ ಟೆನೆಂಟ್‌ಗಳಿಗೆ ಆಗುತ್ತದೆ. ಅದಕ್ಕಾಗಿ ತಾವು ಹೇಳಿದ ಪದದಲ್ಲಿ ಕೆಲವು ಕಡೆ ಸೇರಿಸಿಕೊಟ್ಟಿದ್ದಾರೆ. ಎಲ್ಲಿ ಎಂದರೆ Section 77A Sub-clause (3) "has continued to be in actual possession or cultivation of such land" ಅಂದರೆ ಪೊಸೆಷನ್ ಇದ್ದರೂ ಆಗಬಹುದು, ಇಲ್ಲ ಕಲ್ಟಿವೇಷನ್ ಇದ್ದರೂ ಆಗಬಹುದು ಎಂದು ಅರ್ಥ ಬರುತ್ತದೆ. ಏಕೆಂದರೆ ಪೊಸಿಷನ್ ಇರತಕ್ಕಂಥವರು ಅಗ್ರಿಕಲ್ಚರಿಸ್ಟ್ ಆಗಿದ್ದರೆ ಕಲ್ಟಿವೇಶನ್ ಮಾಡಿಯೇ ಮಾಡುತ್ತಾನೆ. ಇರದಿದ್ದರೆ ಏನು ಅರ್ಥ ಬರುತ್ತದೆ ಆ ಡೆಫನಿಷನ್ ಕೆಳಗೆ ಅದೇ ಅರ್ಥ ಬರುತ್ತದೆ. ಅದು ಯಾವುದೆಂದರೆ ಸೆಕ್ಷನ್ 2ಎ ಕೆಳಗೆ ಡ್ವೆಲ್ಲಿಂಗ್ ಹೌಸಿಂಗ್ ಸ್ಕೀಂ ಏನಿರುತ್ತದೆ ಅದರಲ್ಲಿ ಬರುತ್ತದೆ. ಅದರಲ್ಲಿ ಅವನು ಕ್ಲೈಮ್ ಮಾಡಿಕೊಳ್ಳಬಹುದು. ಆದುದರಿಂದ ತಾವು ದಯವಿಟ್ಟು ಇನ್ನೊಮ್ಮೆ ಗಂಭೀರವಾಗಿ ವಿಚಾರ ಮಾಡಿ. ಏಕೆಂದರೆ pros and cons ಎರಡೂ ನೋಡಿಕೊಂಡು ನಾವು ನಾಳೆ ಅದರ ಲಾಭವನ್ನು ಪಡೆದುಕೊಂಡು ಬೇರೆ ಎಸ್ಟೇಟ್ ಏಜೆಂಟ್ಸ್ ರೆಗ್ಯುಲರೈಜೇಷನ್ ಮಾಡಿಕೊಳ್ಳತಕ್ಕಂಥದ್ದನ್ನು ಮಾಡಬಾರದು. ಅದಕ್ಕಾಗಿ ದಯವಿಟ್ಟು ಅದನ್ನು ಯಾವ ರೀತಿಯಾಗಿ ಬಗೆಹರಿಸುತ್ತೀರಿ ಎಂಬುದನ್ನೂ ಕೂಡ ಪರಿಶೀಲನೆ ಮಾಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಅಧ್ಯಕ್ಷರೆ, ಈ ಸಬ್ ಸೆಕ್ಷನ್ (1) ಪ್ರಕಾರ ಅವರು ಹೇಳಿದಂತೆ ವಸ್ತು ಸ್ಥಿತಿಯಲ್ಲಿ ಏನೆಂದರೆ ಹಿಂದೆ ಅರ್ಜಿ ಹಾಕದೆ ಇರತಕ್ಕಂಥ ಜನರಿಗೆ ಈಗಲೂ ಭೂಮಿಯನ್ನು ಮಂಜೂರು ಮಾಡತಕ್ಕಂಥ ಅವಕಾಶವನ್ನು ಕಲ್ಪಿಸಲಾಗುವುದು. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ರೀತಿಯ ವ್ಯವಸ್ಥೆ ಇದೆ, ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ರೀತಿ ಇದೆ. ಪೊಸೆಷನ್ ಅಂಡ್ ಕಲ್ಟಿವೇಶನ್ ಎಂದು ಮಾಡಿದರೆ ಅವನು ಸಾಗುವಳಿಯನ್ನೂ ಮಾಡಬೇಕು ಮತ್ತು ಆ ಜಮೀನು ಅವನ ಸ್ವಾಧೀನದಲ್ಲೂ ಇರಬೇಕು. ಈಗ ಒಂದು ವೇಳೆ ಒಂದು ಮನೆ ಮತ್ತು 4 ತೆಂಗಿನ ಗಿಡಗಳನ್ನು ಹಾಕಿಕೊಂಡು ಮನೆ ಬಹಳ ಇಕ್ಕಟ್ಟಿದ್ದರೆ ಅದು ಸ್ವಾಧೀನ ಮಾತ್ರ ಆಗುತ್ತದೆ ಕಲ್ಟಿವೇಷನ್ ಆಗುವುದಿಲ್ಲ. ಪೊಸೆಷನ್ ಅಥವಾ ಕಲ್ಟಿವೇಷನ್ ಖುಷ್ಕಿ ಜಮೀನು ಇದ್ದರೆ ಅವನ ಸ್ವಾಧಿನದಲ್ಲಿಟ್ಟುಕೊಂಡಿರುತ್ತಾರೆ. ಇಲ್ಲದಿದ್ದರೆ ಕಲ್ಟಿವೇಷನ್ ಎಂಬ ಪದಕ್ಕೆ ವ್ಯಾಖ್ಯಾನವನ್ನು ವಿಸ್ತಾರ ಮಾಡಬೇಕು.

ಶ್ರೀ ಹೆಚ್.ಎನ್.ನಂಜೇಗೌಡ: ಕೆಲವು ಜಮೀನನ್ನು ದನ ಮೇಯಿಸುವುದಕ್ಕೆ ಇಟ್ಟುಕೊಂಡಿರುತ್ತಾರೆ; ಕಲ್ಟಿವೇಷನ್ ಮಾಡಿರುವುದಿಲ್ಲ. ಅವರು ಏನು ಮಾಡಬೇಕು?

ಶ್ರೀ ಕಾಗೋಡು ತಿಮ್ಮಪ್ಪ: ಹುಲ್ಲು ಬೆಳೆಸುವುದಾದರೂ ಕೂಡ ಅದು ಕಲ್ಟಿವೇಷನ್

ಒಟ್ಟಾರೆ ಅರ್ಥದಲ್ಲಿ ಕಲ್ಟಿವೇಷನ್ ಎಂದರೆ ನಮ್ಮ ಸಿವಿಲ್ ಕೋರ್ಟ್ ಇಂಟರ್‌ಪ್ರಿಟೇಷನ್ ಪ್ರಕಾರ actual crop ploughing. ಇದೆಲ್ಲಾ ಹೇಳುತ್ತಾರೆ, ಆದರೆ ಅದಲ್ಲ. ಇವೊತ್ತು ನಾಲ್ಕು ತೆಂಗಿನ ಗಿಡಗಳನ್ನು ಇಟ್ಟುಕೊಂಡು ಅಥವಾ ಅವರು ಹೇಳಿದಂತೆ ನಾವು ಸೆಕ್ಷನ್ 44ರಲ್ಲಿ ಏನು ಹೇಳಿದ್ದೇವೆ ಎಂದರೆ "land held by or in possession of the tenant." ಎಂದು ಹೇಳಿಬಿಟ್ಟಿದ್ದೇವೆ. ಆದುದರಿಂದ ಅದೇ ವ್ಯಾಖ್ಯಾನ ಇಲ್ಲಿ ಇರಬೇಕು. ಹಾಗಾಗಿ ಏನಾಗುತ್ತದೆ ಎಂದರೆ ಆ ಪದವನ್ನು ಹೇಳಿದ್ದರಿಂದ ಏನಾಯಿತು ಎಂದು ತಿಳಿದುಕೊಂಡು ಸಿವಿಲ್ ಕೋರ್ಟ್‌ನವರು ಅವರ ಖಡ್ಗದಿಂದ ನಾವು ಗೇಣಿರೈತರು ಉಳಿದಿದ್ದೇವೆ. ಇಲ್ಲದಿದ್ದರೆ ಅವರು ಬರೀ ಪಹಣಿ ನೋಡಿಕೊಂಡು ಪಹಣಿಯಲ್ಲಿದ್ದರೆ person to be tenant ಎಂದು ಹೇಳುತ್ತಿದ್ದರು. ಇದರಿಂದ ನಮಗೆ ಪಹಣಿ ಇಲ್ಲ, ಇದು ಸ್ವಾಧೀನದಲ್ಲಿದೆ ಎಂದು ಹೇಳುತ್ತಾರೆ. ಸ್ವಾಧೀನದಲ್ಲಿದ್ದಾರೆ ಆದರೂ ಕೂಡ ಅದನ್ನು ಇವೊತ್ತು ಮಾಡಿದ್ದರಿಂದ ಭೂನ್ಯಾಯ ಮಂಡಳಿಯಲ್ಲಿ ಹೇಳಿದ್ದರಿಂದ ಅವನು ಉಳುಮೆ ಮಾಡಬೇಕಾದಂಥ ಅಗತ್ಯವಿಲ್ಲ, ಅವನ ಸ್ವಾಧಿನದಲ್ಲಿದ್ದರೆ ಕೊಡಬಹುದು ಎಂದು ಇವೊತ್ತು ತೀರ್ಮಾನ ಮಾಡಿದ್ದೇವೆ. ಆದುದರಿಂದ ಇವೊತ್ತಿನ ದಿವಸ ಇಲ್ಲಿ 'ಅಂಡ್' ಎಂದು ಹೇಳಿದರೆ ಆ ಭೂಮಿ ಅವನ ಸ್ವಾಧಿನದಲ್ಲಿರಬೇಕು ಮತ್ತು ಕಲ್ಟಿವೇಷನ್ ಕೂಡ ಮಾಡಬೇಕು. ಇದರಿಂದ ಆಗುವುದಿಲ್ಲ. ಅದು ಕಲ್ಟಿವೇಷನ್ ಆರ್ ಪೊಸೆಷನ್ ಎಂದು ಆಗಬೇಕು. ಅಲ್ಲಿ ಏನು ಅರ್ಥ ಕೊಟ್ಟಿದೆ?

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಈಗ ನಾವು ನಮ್ಮ ಮೂಲಭೂತವಾಗಿರತಕ್ಕಂಥ ಚಿಂತನೆಯನ್ನು ಬಿಟ್ಟು ಚರ್ಚೆ ಮಾಡುತ್ತಿದ್ದೇವೆ. Under Section 45, you are giving power, whereby you vest the land in favour of the tenants or protected tenant or whoever he may be. Where he personally cultivates the land, Section 45 is all the more important. Section 45... ಉಳುವವನಿಗೆ ಭೂಮಿ ಎಂದು ಹೇಳತಕ್ಕಂಥ ಕಾನ್ಸೆಪ್ಟ್ ತಂದಿರತಕ್ಕಂಥ ಸಂದರ್ಭದಲ್ಲಿ ಪೊಸೆಷನ್ ಎನ್ನುವುದು ಯಾವುದಕ್ಕೆ ಸಂಬಂಧಿಸಿದೆ ಎಂದರೆ I remember when Mr. Veerappa Moily, at that time when he was the member of the sub-committee.... ಸಬ್ಸಿಕ್ಟೆಂಟ್ಲಿ ನಾವು ಫಾರ್ಮ್‌ಹೌಸ್‌ಗೆ ಸಂಬಂಧಪಟ್ಟ ಹಾಗೆ ಕಲ್ಟಿವೇಷನ್ ಮಾಡತಕ್ಕಂಥ ಜಮೀನಿನ ಪಕ್ಕದಲ್ಲಿರುವ 3-4 ಸೈಟು ಜಾಗದಲ್ಲಿ ಒಂದು ಮನೆ ಕಟ್ಟಿಕೊಂಡಿರುತ್ತಾನೆ. ಅಥವಾ ಆ ಮನೆಯಲ್ಲಿರುತ್ತಾರೆ. ಅದಕ್ಕೆ ಅವಕಾಶವನ್ನು ಕೊಡತಕ್ಕಂಥ by bringing a separate amendment to Section 103 of the Land Reforms Act, ಮಾಡಿದ್ದೇವೆ. ಆದುದರಿಂದ ಅಲ್ಲಿ ಒಬ್ಬ

ಉಳುಮೆ ಮಾಡುತ್ತಿದ್ದಾನೆ, ಪಕ್ಕದಲ್ಲಿ ಒಬ್ಬ ಒಂದು ಚಿಕ್ಕ ಮನೆಯಲ್ಲಿ ವಾಸವಾಗಿದ್ದಾನೆ. ಅದನ್ನೂ ಕೂಡ ಇದರ ಜೊತೆಯಲ್ಲೇ ಕೊಡಬೇಕು ಎಂದಾಗ ಆ 2-3 ಸೈಟು ಜಾಗದ ಜೊತೆಗೆ ಆ ಮನೆಯನ್ನೂ ಕೂಡ ಕೊಡಬೇಕೆಂದು ಹೇಳಿ ಭೂಸುಧಾರಣೆ-103ರಲ್ಲಿ ನಾವು ಆ ಸಂದರ್ಭದಲ್ಲಿ ತಂದೆವು. ಆದುದರಿಂದ ನಾನು ಹೇಳುತ್ತೇನೆ, ಇದರಲ್ಲಿ ಪೊಸಿಷನ್ ಎಂದು ಹೇಳುತ್ತಿರತಕ್ಕಂಥದ್ದಲ್ಲ. Well, I think, Land Reforms Act primarily depended upon the cultivation. Whether he cultivates the land or not, that is all the more important. Possession of land without cultivation, where is the question? Land Reforms Act doesn't contemplate this.

SRI KAGODU THIMMAPPA: What is the meaning of land held by tenant or in possession? ನೀವು ದಯವಿಟ್ಟು ತೆಗೆದು ನೋಡಿ, ಇದರ ಅರ್ಥ ಏನು ಹೇಳಿ.

SRI M.C.NANAIAH: Section 45 under which we have...

ಶ್ರೀ ಹೆಚ್.ಎನ್.ನಂಜೇಗೌಡ: ನಾಣಯ್ಯನವರೇ, ಒಂದು ಮಾತು, ನಮ್ಮ ಗ್ರಾಮದಲ್ಲಿ ಒಂದು ಮಾವಿನ ತೋಪು ಇದೆ ಎಂದು ಹೇಳಿದರೆ ಅದರಲ್ಲಿ ಕಲ್ಟಿವೇಟ್ ಮಾಡುವ ಹಾಗಿಲ್ಲ, ಕೇವಲ ಕಾದುಕೊಂಡಿರುವುದಷ್ಟೆ, ಈಗ ಟೆನೆಂಟ್ ಇರುವುದನ್ನು ಕ್ಯಾನ್ಸಲ್ ಮಾಡೋಣವೇ? ಈ ರೀತಿ ಎಲ್ಲಾ ಇರುತ್ತವೆ.

ಶ್ರೀ ಎಂ.ಸಿ.ನಾಣಯ್ಯ: ಒಂದು ತೋಟ ಇದೆ, ಮೊದಲು ಅವನು ಲೀಸ್‌ಗೆ ಕೊಟ್ಟಿದ್ದಾನೆ. ಆ ರೀತಿ ಕೊಟ್ಟಂಥ ಸಂದರ್ಭದಲ್ಲಿ ನಾವು ಆ ಜಾಗವನ್ನು ಯಾವುದಕ್ಕಾಗಿ ಎಂದು ಕನ್‌ಫರ್ಮ್ ಮಾಡಿದ್ದೇವೆ. ಕನ್‌ಫರ್ಮ್ ಮಾಡುವುದಕ್ಕಿರುವಂಥ ಸೆಕ್ಷನ್ ಯಾವುದು? ಸೆಕ್ಷನ್-45 ತಾನೇ? Section 45 under which we have confirmed all these lands in favour of the tenants.

SRI KAGODU THIMMAPPA: Which are the lands vested in the government? The land held by tenants?

ಶ್ರೀ ಎಂ.ಸಿ.ನಾಣಯ್ಯ: ಈಗ ನಾವು ನಮ್ಮ ವಾಸ್ತವಿಕ ಯೋಚನೆಗೆ ಸ್ವಲ್ಪ ವಿಭಿನ್ನವಾಗಿ ಹೋಗುವುದು ಬೇಡ.

SRI M.MALLIKARJUNA KHARGE: Please see Section 44.

SRI M.C.NANAIAH: Land which is vested with the Government. ಸಬ್ಸೆಕ್ಷೆಂಟ್ಲಿ 45ರಲ್ಲಿ ಯಾರಿಗೆ ಯಾವುದನ್ನು ಕನ್‌ಫರ್ಮೇಷನ್ ಮಾಡಬೇಕು ಎಂದು ಹೇಳುತ್ತಿರುವುದು ಈ ಸೆಕ್ಷನ್-45. There are two things. Whether he was cultivating the land on the appointed date or not. ಆದುದರಿಂದ ಇವೊತ್ತು ನಾವು ಅಮೆಂಡ್‌ಮೆಂಟ್ ತಂದಿರತಕ್ಕಂಥದ್ದು ಏನು ಎಂದರೆ ಒಬ್ಬ ವ್ಯಕ್ತಿ ಸೆಕ್ಷನ್ 45ರಲ್ಲಿ ರಿಜಿಸ್ಟರ್ ಮಾಡುವುದಕ್ಕೆ ಇರತಕ್ಕಂಥ ಅಧಿಕಾರವನ್ನು ಎಕ್ಸೈಜ್ ಮಾಡದೇ ಇರತಕ್ಕಂಥವರಿಗೆ ಮಾತ್ರ. Such of those persons who are in actual possession of the land which was vested in the government and who did not make an application to get the lands registered under section 45, we are giving one more opportunity through the Spl.D.Cs/Dy.Commissioners. to get the land granted.

SRI KAGODU THIMMAPPA: I don't dispute as far as that part is concerned. Land held-which is the land vested in the government? The land held by or in possession of the tenant? What is the meaning "by" and "held". Cultivation means actual ploughing, actual growing of the crop, ಹಾಗಲ್ಲ ಅವರು ಹೇಳಿದ ರೀತಿಯಲ್ಲಿ ಇವೊತ್ತು ಕಲ್ಟಿವೇಶನ್ ಎಂಬುದರ ಅರ್ಥ ಅದು ಹುಲ್ಲು ಬೆಳೆಸುವುದಕ್ಕೂ ಆಗಿರಬಹುದು ಅಥವಾ ಮಾವಿನ ತೋಪನ್ನು ಹಾಕಿಕೊಂಡಿರಬಹುದು, ಅಥವಾ ಇನ್ನೊಂದು ಏನಾದರೂ ಮಾಡಿರಬಹುದು, ಮನೆ ಕಟ್ಟಿಕೊಂಡಿರಬಹುದು, ನಾಲ್ಕು ತೆಂಗಿನ ಗಿಡಗಳನ್ನು ಹಾಕಿಕೊಂಡಿರಬಹುದು. ಆತನೂ ಗೇಣಿ ರೈತನಂತೆ ಅದನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದಾನೆ. ಅದಕ್ಕೋಸ್ಕರ....

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ಹಿಂದೆ ಭೂಸುಧಾರಣೆ ಜಾರಿಗೆ ಬಂದಾಗ ಭೂನ್ಯಾಯ ಮಂಡಳಿ ವ್ಯಾಪ್ತಿಗೆ ಖುಷ್ಕಿ ಜಮೀನುಗಳು ಬರುವುದೇ ಇಲ್ಲ ಎಂದು ಹೇಳಿದ್ದೀರಿ ಗೇಣಿ ರೈತರಿಗೆ ತರಿ ಭೂಮಿ ಮತ್ತು ಅವರು ಕಲ್ಟಿವೇಷನ್ ಮಾಡತಕ್ಕಂಥ ಭಾಗಾಯತಿಗಳನ್ನು ಮಾತ್ರ ಅಧಿಭೋಗದಾರನು ಎಂದು ಹಾಕಿಕೊಟ್ಟರೇ ವಿನಃ ಖುಷ್ಕಿ ಜಮೀನನ್ನು ವಾಪಸ್ ಒಡೆಯನಿಗೆ ಬಿಟ್ಟುಕೊಡುವಂಥ ಒಂದು ಪರಿಸ್ಥಿತಿ ಉದ್ಭವವಾಯಿತು. ಜಮೀನು ತಲೆಯ ಮೇಲೆ ಇರತಕ್ಕಂತಹ ಖುಷ್ಕಿಯಲ್ಲಿ ಮೇವು ಬೆಳೆಯಲಿಕ್ಕೆ ಜಾನುವಾರುಗಳನ್ನು ಸಾಕಲಿಕ್ಕೆಂದೇ ಆ ಜಮೀನನ್ನು ಕೊಟ್ಟಿರತಕ್ಕಂಥಾದ್ದು, ಆ ಜಮೀನಿಗೆ ಹೊಂದಿಕೊಂಡಿರತಕ್ಕಂತಹ ಖುಷ್ಕಿಗಳು. ಅದನ್ನು ಅದರಲ್ಲಿ ಫ್ಲೋ ಮಾಡುವುದಿಲ್ಲ. ಅಂತಹ ಸಂದರ್ಭದಲ್ಲಿ ಅವರಿಗೆ ಕೊಡದೇ ಹೋದರೆ ಅವರಿಗೆ

ಜಮೀನಿಗೆ ಇಳಿಯಲಿಕ್ಕೆ ದಾರಿ ಕೂಡ ಇರುವುದಿಲ್ಲ. ಅಂತಹ ಒಂದು ಸ್ಥಿತಿ ಬರುತ್ತದೆ.

SRI M.VEERAPPA MOILY: It is very clear. ಕಲ್ಟಿವೇಟ್ ಎಂದರೆ ಬರೀ it is not mere tilling. It is very clear. Cultivate means, with this grammatical variations and cognate expression means till or husband the land. ಇದು ನಿಮಗೆ ಬರುತ್ತದೆ. Husband the land for the purpose of raising or improving the agricultural produce whether by manual labour or by means of cattle or machinery or to carry on any agriculture operations thereon. And the expression uncultivated shall be construed correspondingly. Therefore, there is no confusion.

SRI H.N.NANJE GOWDA: Mr. Moily, what is the purpose of putting those two words possession and cultivation? You please remove one of the words. ಪೊಸಿಷನ್ ಆರ್ ಕಲ್ಟಿವೇಷನ್ ಕರೆಕ್ಟ್ ಅದೇ ಬರಬೇಕು.

ಶ್ರೀ ಎಂ.ವೀರಪ್ಪ ಮೊಯಿಲಿ: ಮಾನ್ಯ ಕಾನೂನು ಮಂತ್ರಿಗಳಿಗೆ ನಾನು ಹೇಳುವುದು ಏನೆಂದರೆ ಮಾನ್ಯ ನಂಜೇಗೌಡರು ಏನು ಹೇಳುತ್ತಾರೆ ಅದೇ ಸರಿ. ಅದರಲ್ಲಿ ಬಹಳ ಅರ್ಥ ಇದೆ ಏಕೆಂದರೆ ಸೆಕ್ಷನ್ 44ರಲ್ಲಿ What you are going to introduce now it is little variation is there, not exact. ನೀವು ಕಲ್ಟಿವೇಟ್ ಎಂದು ಈಗ ಏನು ಇಂಟ್ರಡ್ಯೂಸ್ ಮಾಡುತ್ತಿದ್ದೀರಿ It is not very much in consonance with Section 44. All lands held by or in possession of the Tenant. They have not introduced the word 'cultivation'. ಅಲ್ಲಿನ ಕಲ್ಟಿವೇಷನ್ ಇಂಟ್ರಡ್ಯೂಸ್ ಮಾಡಿಯೇ ಇಲ್ಲ. You can as well delete that word 'cultivation'. Because the word cultivation will create more confustion. Suppose if you adhere to the same definition, of Section 44 it resolves all the problems.

SRI M.C.NANAIAH: Mr. Moily, the intention of the original Act is to find out whether the man is actually cultivating the land. The definition cultivation extends not only to tilling it extends to so many other things.

E.g. A Particular bit of land is there. ನೀವು ಈಗ ಪರ್ಟಿಕ್ಯುಲರ್ ಸೆಕ್ಷನ್ ಬಂದು ಪೊಸಿಷನ್ ಆರ್ ಎನ್ನುವ ಪ್ರಶ್ನೆ ಮಾಡಿದಾಗ....

ಶ್ರೀ ಕಾಗೋಡು ತಿಮ್ಮಪ್ಪ: ಇನ್‌ಪ್ರಿನ್ಸಿಪಲ್ ಏನಾಯಿತು? ಯಾರಿಗೆ ಕೊಡುತ್ತೀರಿ. Because they were all tenants.

ಶ್ರೀ ಎಂ.ಸಿ.ನಾಣಯ್ಯ: ನಮ್ಮ ಒರಿಜಿನಲ್ ಕಾನೂನಿನಲ್ಲಿ ನಾವು ಯಾರಿಗೆ ಈ ಒಂದು ಒಡೆತನವನ್ನು ಕೊಡುವುದಕ್ಕೆ ಆಗಲಿಲ್ಲ ಆ ಒಡೆತನವನ್ನು, ಅದನ್ನು ಕಲ್ಟಿವೇಟ್ ಮಾಡುತ್ತಿರತಕ್ಕಂತಹವರು ಸೆಕ್ಷನ್ 45ರ ಅಡಿಯಲ್ಲಿ ಅರ್ಜಿ ಹಾಕದೇ ಇದ್ದವರಿಗೆ ನಾವು ಒಂದು ಅವಕಾಶವನ್ನು ಕೊಡುವುದಕ್ಕೆ ಇದನ್ನು ಮಾಡಿದ್ದು ತಾನೇ? ಇದು ಬೇರೆ ಯಾರಿಗೂ ಅಲ್ಲ. ಅಂತಹವರ್ಯಾರಾದರೂ ಇದ್ದರೆ 45ನೇ ಸೆಕ್ಷನ್‌ನಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿ ಟೆನೆಂಟ್ ಎನ್ನುವುದನ್ನು ಡಿಕ್ಲರೇಷನ್ ಮಾಡುವುದಕ್ಕೆ ಕಾನೂನಿನ ಅರಿವು ಇಲ್ಲದೇ ಮಾಡದೇ ಇರತಕ್ಕಂತಹ ಜನ ಯಾರಾದರೂ ಇದ್ದರೆ ಅವರು ಇವತ್ತಿಗೂ ಕೂಡ ಆ ಜಮೀನು ಅವರ ಸ್ವಾಧೀನವೆಂದುಕೊಂಡರೆ ಆ ಜಮೀನಿನಲ್ಲಿ ಅವರೇನಾದರೂ ಬೆಳೆಸಲೇ ಬೇಕಾಗುತ್ತದಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ: ಯಾವ ಕಲ್ಪನೆಯನ್ನು ಆಧಾರವಾಗಿಟ್ಟುಕೊಂಡು ಅವನಿಗೆ ಮಾಲೀಕತ್ವವನ್ನು ಕೊಡತಕ್ಕಂತಹ ಕೆಲಸದಲ್ಲಿ ಯಾವ ಶಬ್ದ ಪ್ರಯೋಗ ಮಾಡಿದ್ದೆವೋ ಅದೇ ಶಬ್ದದಿಂದ ಲಕ್ಷಾಂತರ ಜನರಿಗೆ ಸಹಾಯ ಮಾಡಿದ್ದೆವೋ ಅದೇ ಶಬ್ದ, ಏಕೆಂದರೆ, ಪ್ರಿನ್ಸಿಪಲ್ ಆ ಟೆನೆಂಟ್ ಲ್ಯಾಂಡ್‌ನಲ್ಲಿ ಇದ್ದರೇನೇ ಇಲ್ಲಿ ಇವನಿಗೆ ಕೊಡುವುದಕ್ಕೆ ಬರುತ್ತದೆ.

ಶ್ರೀ ಎಂ.ಸಿ.ನಾಣಯ್ಯ: ಸೆಕ್ಷನ್ 45ರ ಕೆಳಗೆ ನಾವು ಈ ಅಧಿಕಾರವನ್ನು ಕೊಟ್ಟಿದ್ದೇವೆ. ಭೂನ್ಯಾಯ ಮಂಡಲಿಗಳು ಸೆಕ್ಷನ್ 45ರ ಅಡಿಯಲ್ಲಿ ಖುದ್ದಾಗಿ ಈ ಜಮೀನಿನಲ್ಲಿ ಕಲ್ಟಿವೇಟ್ ಮಾಡುತ್ತಿರತಕ್ಕಂತಹವರು ಎಂದು ಈ ಜಮೀನನ್ನು ಕೊಡುವುದಕ್ಕೆ ಸೆಕ್ಷನ್ 45ರ ಅಡಿಯಲ್ಲಿ ತಾನೇ ನಾವು ಎಲ್ಲರಿಗೂ ಅಧಿಕಾರ ಕೊಟ್ಟಿರುವುದು ಸೆಕ್ಷನ್ 45ರಲ್ಲಿ ತಾವು ನೋಡಿದಾಗ A tenant cultivating the land personally, ಎಂದು ಹೇಳತಕ್ಕಂಥಾದ್ದು ಭೂನ್ಯಾಯ ಮಂಡಳಿಯಲ್ಲಿ ಹೋಗಿ ಕಡೆಗೆ ಅದನ್ನು ನೋಡಿ ಪರ್ಸನಲೀ ಅವರು ಕಲ್ಟಿವೇಟ್ ಮಾಡುತ್ತಿರತಕ್ಕಂಥಾದ್ದನ್ನು ಅವರು ಧೃಡಪಡಿಸಿದ ಮೇಲೆಯೇ ನಾವು ಅವರಿಗೆ ಕೊಡುತ್ತೇವೆ. ಈಗ ನಾವು ಮಾಡುತ್ತಿರತಕ್ಕಂಥಾದ್ದು ಏಕೆ ಎಂದರೆ ಎಲ್ಲಿಯಾದರೂ ಅಲ್ಲಿ ಇಲ್ಲಿ ನಮ್ಮ ದೃಷ್ಟಿಯಲ್ಲಿ ಬಿಟ್ಟು ಹೋಗಿರತಕ್ಕಂತಹವರಿಗೆ ಮಾತ್ರ. ಆ ಪಾಪದ ಜನರಿಗೆ. ಪೊಸಿಷನ್ ಎನ್ನುವ ಪ್ರಶ್ನೆ ಬಂದಾಗ ನಾನು ಹೇಳುತ್ತೇನೆ. It will lead to lot of other things.

ಶ್ರೀ ಕಾಗೋಡು ತಿಮ್ಮಪ್ಪ: ಆಗ ಇದೇ ರೀತಿಯ ವಾದವನ್ನು ನಾಯ್ಕರ್‌ರವರು

ಮಾಡುತ್ತಿದ್ದರು. ಇನ್ ಪ್ರಿನ್ಸಿಪಲ್ ನಾನು ಹೇಳುವುದನ್ನು ಒಪ್ಪಿಕೊಳ್ಳಿ. ಗೇಣಿ ರೈತರು.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಕಾಗೋಡು ತಿಮ್ಮಪ್ಪನವರೇ, ಉಳುವವನಿಗೇ ಭೂಮಿ ಎಂದು ಹೇಳುವ ನಿಮ್ಮ ಸಮಾಜವಾದದ ಚಿಂತನೆ 1970ನೇ ಇಸವಿಯಲ್ಲಿ ಇತ್ತಲ್ಲಾ, ಆದರಿಂದ 27 ವರ್ಷ ಕಳೆದಾದ ಮೇಲೆ ಭಾರಿ ಬದಲಾವಣೆಯನ್ನು ಕಾಣುತ್ತಿದ್ದೇವೆ. ಅದೂ ಕೂಡ ಬೇಕಾಗುತ್ತದೆ. Sir, I am prepared to agree with you. But this provision is going to be misused. Definitely this provision is going to be misused.

SRI M.VEERAPPA MOILY: The Clause which is incorporated under Section 44, is a well tested. So many years it has undergone, and it has been tested. ಆದ್ದರಿಂದ ನಾನು ಹೇಳುವುದು. Why should you give room for any judicial interpretation by introducting a new word? ನೀವು ಯಾರಿಗೆ ಕೊಡುವುದು ಸೆಕ್ಷನ್ 44 ಪ್ರಕಾರ ಯಾರಿಗೆ ಡಿಕ್ಲರೇಷನ್ ಕೊಡಲಿಕ್ಕೆ ಅರ್ಹತೆ ಇದೆಯೋ ಅವರಿಗೇ ಕೊಡತಕ್ಕದ್ದು ಬೇರೆ ಯಾರಿಗೂ ಅಲ್ಲ. You are not introducing any new persons. I agree with You. Possession or cultivation or and cultivation may create lot of problems. and ಬೇಡ or ಎನ್ನುವುದು ಬೇಡ You please reintroduce the same word as it is used in Section 40. It solves the entire problem. Otherwise, it will have lot of mischeif. Whatever is judicially tested after 1974 till 1997, I think you will be very safe to reintroduce the same word to avoid all problems.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮಾನ್ಯ ಕಾಗೊಡು ತಿಮ್ಮಪ್ಪನವರು ಮಾತನಾಡಿದ ಮೇಲೆ ಎರಡು ನಿಮಿಷ ಮಾತನಾಡುತ್ತೇನೆ. ಒಂದೇ ಒಂದು ಇಂಟರ್‌ಫಿಯರೆನ್ಸ್ ಎಂದರೆ There cannot be any cultivation without possession. Possession and cultivation ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ It may lead to lot of complications. ಆದ್ದರಿಂದ ಪೊಸಿಷನ್ ಅಂಡ ಕಲ್ಟಿವೇಶನ್ ಎನ್ನುವ ಪದ It is not in good taste. ಎಂದು ಕಾಣುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹರಿ ಬರಿಯಲ್ಲಿ ಆಗುವುದು ಬೇಡ. ಎಲ್ಲಾ

ಕ್ಲಾರಿಫೈ ಆಗಲಿ. ಸೆಕ್ಷನ್ 45ರಲ್ಲಿ Tenants to be registered as occupants of land on certain conditions. Which are the conditions? Subject to the provisions of the succeeding sections of this chapter, every person who was a permanent tenant, protected tenant.... You leave this. If a Tenant of other person referred to in sub-section 1 holds land partly as owner and partly as tenant ಇದು ಬಿಟ್ಟು ಬಿಡಿ. Second, does not hold and cultivate personally any land as a owner but holds land as tenant which he cultivates personally in excess of ceiling area, he shall be entitled to be registered as an occupant to the extent of ceiling area. Number three, holds and cultivates personally as a owner of any land the area of which is less than the ceiling area, he shall be entitled to be registered as an occupant to the extent of such area as will be sufficient to make up his holding to the extent of ceiling area. Third, he land held by a person before the date of vesting in this respect. ಅಂದರೆ ಸೆಕ್ಷನ್ 45ರ ಕೆಳಗೆ these there words they have purposely used ಏನು ಎಂದರೆ ಕಲ್ಟಿವೇಟ್ಸ್ ಪರ್ಸನಲೀ, ಸೆಕೆಂಡ್, ಥರ್ಡ್, ನೋಡಿ when they insist for, this is a precondition to register as a tenant, ಅಂದಾಗ ಓನರ್ಸ್‌ಗೆ ಕನ್‌ಫರ್ಮ್ ಮಾಡುವಾಗ ಈ ಬೇಸಿಕ್ essential ingredient ಅನ್ನಿ ಅಥವಾ essential condition is personal cultivation. ಅಂದಾಗ ಇದನ್ನು ಬಿಟ್ಟು ನಾವೇನಾದರೂ ಮಾಡುವುದಕ್ಕೆ ಹೋದರೆ ನಾಳೆ ತೊಂದರೆಯಾಗುತ್ತದೆ. ಕೋರ್ಟಿನವರೂ ಕೂಡ ಅಲ್ಲಿ ಬೇರೆ ಇಂಟರ್‌ಪ್ರಿಟೇಷನ್ ಮಾಡಬಹುದು. ನಾಳೆ ಟೆನೆಂಟ್‌ಗಳಿಗೆ ತೊಂದರೆಯಾಗತಕ್ಕಂತಹ ರೀತಿಯಲ್ಲಿ ಆಗಬಾರದು. ಸೆಕ್ಷನ್ 45 (1) (2) (3)ರ ಅದರ ಮೇಲೆ ಈಗಾಗಲೇ ಇಂಟರ್‌ಪ್ರಿಟೇಷನ್ಸ್‌ಗಳು ಅನೇಕ ಆರ್ಡರ್ಸ್‌ಗಳೂ ಬಂದಿವೆ. ಆದ್ದರಿಂದ ದಯವಿಟ್ಟು ಇದರಲ್ಲಿ ಆಲ್ಟರೇಷನ್ ಮಾಡುವುದಕ್ಕೆ ಹೋಗಬೇಡಿ ಎನ್ನುವ ಮಾತನ್ನು ನಾನು ಹೇಳುತ್ತೇನೆ.

5. 10 ಪಿ.ಎಂ

ಶ್ರೀಮತಿ ಪ್ರಮೀಳಾ ನೇಸರ್ಗಿ: ಯಾರನ್ನೋ ಓಲೈಸುವುದಕ್ಕೆ ಅಮೆಂಡ್‌ಮೆಂಟನ್ನು ತಂದಿದ್ದಾರೆ ನನ್ನ ಪ್ರಕಾರ. 23 ವರ್ಷದ ನಂತರ...

(ಗೊಂದಲ)

MR. SPEAKER: How would you view it as a person from the profession? Because you have the dubious honour of appearing for the largest number of landlords in the State. I would like to remind you that you have the dubious hunour of representing yourself on record for the largest number of landlords in the State. Am I correct?

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾನ್ಯ ಅಧ್ಯಕ್ಷರೇ, ತಾವು ಹೇಳಿದ್ದಕ್ಕೆ ಹೇಳುತ್ತಿದ್ದೇನೆ. ಡಾಕ್ಟರ್ ಹತ್ತಿರ ಹೋಗುತ್ತಾರೆ. ಏಕೆ ಎಂದರೆ ಡಾಕ್ಟರ ಹತ್ತಿರ ಮೆಡಿಷಿನ್‌ಗಾಗಿ ಪ್ರಿಸ್ಕ್ರಿಪ್ಷನ್ ತೆಗೆದುಕೊಳ್ಳುತ್ತಾರೆ. ಆಮೇಲೆ ಹೋಗಿ ಫಾರ್ಮಾಸಿಸ್ಟ್ ಹತ್ತಿರ ಮೆಡಿಷಿನ್‌ನ್ನು ತೆಗೆದುಕೊಳ್ಳುತ್ತಾರೆ. ಏಕೆಂದರೆ he must servive ಎಂದು. Then, I must throw the medicine to the dustbin, because I must survive ಎಂದು. ಇದು ಇರುವುದು. ನಾನು ಹೇಳುವುದು ಇಲ್ಲಿ ಚರ್ಚೆಗೆ ಬಂದಾಗ ಈ ವಿಚಾರಣೆಗೆ ಬಂದಾಗ ಇದರ ಬಗ್ಗೆ ಪ್ರೋಸ್ ಅಂಡ್ ಕಾನ್ಸ್‌ನ್ನು ವಿಚಾರಣೆ ಮಾಡಬೇಕಾಗುತ್ತದೆ. ಇದು 23 ವರ್ಷಗಳ ನಂತರ 44ನೇ ಸೆಕ್ಷನ್ ಪ್ರಕಾರ ಯಾರು ಅಪ್ಲಿಕೇಷನ್ ಹಾಕಲಿಕ್ಕೆ ಆಗಿರಲಿಲ್ಲವೋ ಅವರಿಗೆ ಅವಕಾಶ ಮಾಡುವುದಕ್ಕೋಸ್ಕರ ತಂದಿದ್ದೇವೆ ಎಂದು ಹೇಳುತ್ತಿದ್ದಾರೆ. ನನಗೆ ಆಶ್ಚರ್ಯವಾಗುತ್ತಿದೆ ಅಧ್ಯಕ್ಷರೇ, 79ನೇ ಇಸವಿಗೆ ಲಾಸ್ಟ್ ಡೇಟ್ ಆಯಿತು. 79ನೇ ಇಸವಿ ನಂತರ ಸುಮಾರು ಜನ ಅಪ್ಲಿಕೇಷನನ್ನು ಹಾಕಿದರು. ಅವರ ಅಪ್ಲಿಕೇಶನ್ನೆಲ್ಲಾ ಇವತ್ತು ರಿಜೆಕ್ಟ್ ಆಯಿತು. ರಿಜೆಕ್ಟ್ ಆದಮೇಲೆ ಏನು ಹೇಳಿದರು, ಗೌರ್ನಮೆಂಟ್ ಜಮೀನುಗಳನ್ನೆಲ್ಲಾ ಅಕ್ವೈರ್ ಮಾಡಿಕೊಂಡು ಆಶ್ರಯ ಯೋಜನೆ ಪ್ರಕಾರ ಮತ್ತೆ ಬೇರೆ ಬೇರೆ ಜನರಿಗೆ ಹರಿಜನರಿಗೆ ಗಿರಿಜನರಿಗೆ ಜಮೀನೆಲ್ಲಾ ಹಂಚಿದ್ದಾರೆ. ಈ ಸೆಕ್ಷನ್‌ನಲ್ಲಿ ಏನು ಹೇಳುತ್ತಾರೆ, ಅವರಿಗೋಸ್ಕರ ತಂದಿದ್ದೇವೆ ಎಂದು. ತರುವುದಾದರೆ 1-3-74ರಲ್ಲಿ ಯಾರ್‍ಯಾರು ಕಲ್ಟಿವೇಷನ್ ಮತ್ತು ಪರ್ಸನಲ್ ಆಕ್ಯುಪೇಷನ್ ಮಾಡುತ್ತಿದ್ದರೋ ಅವರೆಲ್ಲರಿಗೂ ಕೊಡಬೇಕಾಗುತ್ತದೆ. Not withstanding the Judgment, notwithstanding the rejection of cases by the Land Tribunal or by the High Court.. ಅವರಿಗೂ ಕೊಡಬೇಕಾಗುತ್ತದೆ. ನೀವು ಏನು ಹೇಳುತ್ತಿದ್ದೀರಿ ಈಗ, ಇವತ್ತು ಪೊಸಿಷನ್‌ನಲ್ಲಿ ಇರಬೇಕು ಎಂದು ಹೇಳುತ್ತೀರಿ. 1-3-74ರಲ್ಲಿ ಇರಬೇಕು ಎಂದು ಹೇಳುತ್ತೀರಿ. ಆಮೇಲೆ ಇವತ್ತು ಕೂಡ ಆ್ಯಕ್ಟ್ ಬರುವಾಗ 1997ರಲ್ಲಿ ಇರಬೇಕು ಎಂದು

ಹೇಳುತ್ತೀರಿ. ಅಂದರೆ 23 ವರ್ಷಗಳ ಕಾಲ ಸತತವಾಗಿ ಯಾರು ಇರುತ್ತಾರೋ, ಯಾರು ಪರ್ಸನಲಿ ಕಲ್ಟಿವೇಟ್ ಮಾಡುತ್ತಾರೋ ಅಂಥವರಿಗೆ ಇದು ಅನ್ವಯಿಸತಕ್ಕಂಥದ್ದು ಎಂದು ಹೇಳುತ್ತಿದ್ದಾರೆ. ಅಂಥ ಜಮೀನು ಯಾರದ್ದೋ ಉದ್ದೇಶ ಇಟ್ಟುಕೊಂಡು ಈ ಕಾನೂನನ್ನು ತಂದಿದ್ದಾರೆ ಎಂದು ನನಗನಿಸುತ್ತದೆ. ಅಂಥವರು ಈಗ ಯಾರೂ ಕೂಡ ಇಲ್ಲ. ಎಲ್ಲಾವನ್ನು ಹೆಚ್ಚುಕಡಿಮೆ, somebody is in view, ಇದು ಯಾರದೋ ವ್ಯೂನಿಂದ ತಂದಿದ್ದಾರೆ ಎಂದೆನಿಸುತ್ತದೆ. There is somebody. 23 ವರ್ಷಗಳ ನಂತರ ಎಲ್ಲಾ ಅಕ್ಟೈರ್ ಆಗಿದೆ. ಡಿಸ್ಟ್ರಿಬ್ಯೂಟ್ ಮಾಡಿದ್ದೀರಿ, ಎಲ್ಲರಿಗೂ ಹಂಚಿಬಿಟ್ಟಿದ್ದೀರಿ. ಈಗ ಮಾಡಿದ್ದಾರೆ, ಹಂಚಿದ್ದಾರೆ, ನಾನೇ ಆ ಕೇಸುಗಳ ಮೇಲೆ ಸ್ಟೇಯನ್ನು ತೆಗೆದುಕೊಂಡು ಬರುವುದಕ್ಕೆ ಹೋಗಿದ್ದೆ.

ಶ್ರೀ ರಮೇಶ್ ಸಿ.ಜಿಗಜಿಣಗಿ: ಮಾನ್ಯ ಅಧ್ಯಕ್ಷರೇ, ನಾನು ಇಷ್ಟೇ ಅವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಬರೀ ಬೆಳಗಾಂ ಜಿಲ್ಲೆಯಲ್ಲಿ ಒಂದೇ ಇಂಥವು ಹತ್ತು ಸಾವಿರ ಕೇಸುಗಳು ಇದ್ದಾವೆ. ಬಿಜಾಪುರದಲ್ಲಿ ಎಂಟು ಸಾವಿರ ಇದೆ. ಧಾರವಾಡದಲ್ಲಿ ಇದೆ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೇ, ಮೊಯಿಲಿಯವರು ನನ್ನನ್ನು ಅರ್ಥಮಾಡಿಕೊಳ್ಳಲಿಲ್ಲ ಎಂದು ಕಾಣುತ್ತದೆ. Possession and cultivation ಎಂದು ಹಾಕಿದ್ದೀರಲ್ಲಾ, ನಾನು ಹೆಸರೇ ಹೇಳಿಬಿಡುತ್ತೇನೆ. ಹಿಂದೆ ಶ್ಯಾನುಭೋಗರುಗಳು ಇದ್ದರಲ್ಲಾ, ಅವರು ಪೊಸೆಷನ್ ಬರೆಯಲೇ ಇಲ್ಲ. ಹರಿಜನರು ಕಲ್ಟಿವೇಷನ್ ಮಾಡುತ್ತಿದ್ದರು. ಅಂಥ ಕೇಸುಗಳು ಕೆಲವಾರು ಬಿಟ್ಟು ಹೋಗಿವೆ. ಪೊಸೆಷನ್ ಕಲ್ಟಿವೇಷನ್ ಎರಡೂ ಸೇರಿಸಿದರೆ ಪೊಸೆಷನ್ ಇರುವುದಿಲ್ಲ. ಕಲ್ಟಿವೇಷನ್ ಇರುತ್ತದೆ. ನಾನು ಅದಕ್ಕೇ ಪೊಸೆಷನ್ ಆರ್ ಕಲ್ಟಿವೇಷನ್ ಎಂದು ಹೇಳಿದ್ದುದು. ಬಹುಶಃ ಇದು ಸರ್ಕಾರದ ಗಮನಕ್ಕೆ ಬಂದಿರಬೇಕು. ಪೊಸೆಷನ್ ಇಲ್ಲದೇ ಕಲ್ಟಿವೇಟ್ ಮಾಡಿರುವುದು ಅನೇಕ ಕೇಸುಗಳು ಇದ್ದಾವೆ.

SRI M.C.NANAIAH: Sir, one thing let me tell you. Possession or Cultivation ಎಂದು ಮಾಡಿದಾಗ, here round about Bangalore City, round about Bangalore Rural District, there are so many persons who are holding lands in possessiion. ಸರ್ಕಾರದ ಜಮೀನೇ ಅವರ ಸ್ವಾಧೀನದಲ್ಲಿ ಉಂಟು. ನೀವು ಅದನ್ನು ತಂದಾಗ, as at the moment ನಾವು ಟೆನೆಂಟ್ಸ್‌ಗೆ ಇದನ್ನು ಕೊಡುತ್ತಿಲ್ಲ. All of them have become trespassers now, as at the moment. But, we are granting the land. We are giving the power not under the Land Reforms Act, by virtue of

his power as tenant ಈಗ ನಾವು ಟೆನೆಂಟ್ಸ್‌ಗೆ ಕೊಡುತ್ತಿಲ್ಲ. ಆ ಜನ ಯಾರಾದರೂ ಇದ್ದರೆ ಅವರಿಗೆ ಆ ಜಮೀನನ್ನು ಗ್ರಾಂಟ್ ಮಾಡಲಿಕ್ಕೆ ಇರತಕ್ಕಂಥದ್ದು. ಒಂದುಯೂನಿಟ್ ಎಂದು ಹೇಳುತ್ತಿರುವಂಥದ್ದು 5.4 Acres of dry land. Round about the Bangalore District now, I think some may be in possession of these Government lands. They will take advantage of this particular Section, and all these lands will have to be granted by the Deputy Commissioner. You think of it now. Unless you qualify these lands as agricultural lands in cultivation, let me tell you, round about the major cities, such of those of persons who are in actual possesion of it being the trespassers of the Government lands, I think we need have to confirm these things to them. This is my thinking. Subsequently, thereafter you decide.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಅದು ತಮ್ಮ ಅಪ್ರೆಹೆನ್‌ಷನ್ ಇದ್ದರೆ, then all the lands vest with the Government as it is and they have become Government lands. Then grant them under the Land Revenue Act. ಇದು 77ರ ಪ್ರಕಾರ ಏಕೆ ಬರುತ್ತದೆ. ಏಕೆಂದರೆ Land Revenue Act ಕೆಳಗೆ It has become government land now. ಗೌರ್ನಮೆಂಟ್ ಲ್ಯಾಂಡ್ ಆದಮೇಲೆ the Land Revenue Act will be applicable for that. ಇದು ಮಾಡಬೇಕು ಎಂದು ಇದ್ದರೆ. ಇದು ಮಿಸ್‌ಯೂಸ್ ಆಗುತ್ತದೆ ಎಂದು ನಿಮಗನ್ನಿಸಿದಾಗ....

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೇ, ಲ್ಯಾಂಡ್ ರೆವಿನ್ಯೂ ಆ್ಯಕ್ಟ್‌ನಲ್ಲಿ ಜಾಗವನ್ನು ಗ್ರಾಂಟ್ ಮಾಡಲಿಕ್ಕೆ ಇರತಕ್ಕಂಥದ್ದೇ ಬೇರೆ ಪ್ರಾವಿಷನ್ಸ್. ಇದನ್ನು ನಾವು ಒಕೆ ಮಾಡುತ್ತೇವೆ ಎಂದು ಹೇಳಿದರೆ 74ಕ್ಕಿಂತ ಮುಂಚೆ, Mr. Kharge, kindly bear it in mind.. 74ಕ್ಕಿಂತ ಮುಂಚೆ ಸ್ವಾಧೀನದಲ್ಲಿದ್ದು ಕಲ್ಟಿವೇಷನ್ ಮಾಡುತ್ತಿರುವವರು ಫಾರಂ ನಂ.45ರಲ್ಲಿ ಅಪ್ಲೈ ಮಾಡದೇ ಇರತಕ್ಕಂಥವರು ಎಲ್ಲಿಯಾದರೂ ಇದ್ದರೆ ಅವರಿಗೆ ಡೆಪ್ಯುಟಿ ಕಮೀಷನರ್, after holding sufficient enquiry, ಇದನ್ನು ಕೊಡಲಿಕ್ಕೆ ಇರತಕ್ಕಂಥದ್ದು. This is a very very sparing clause. ನಾನು ಹೇಳುತ್ತೇನೆ, ಅದ್ದರಿಂದ ಪೊಸೆಷನ್ ಆರ್ ಕಲ್ಟಿವೇಷನ್ ಎಂದು ಮಾಡಿದರೆ, I

think we are certainly giving this in favour of those people, who are in occupation of the Government lands in and around Bangalore City and other major cities.

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾನ್ಯ ಅಧ್ಯಕ್ಷರೇ, ಇನ್ನೊಂದು ಏನೆಂದರೆ ಅರ್ಬಿಟ್ರರಿ ಪವರ್ಸ್... Deputy Commissioner....ನೀವು ಏನು ಮಾಡಿದ್ದೀರಿ, ಅವರಿಗೆ ಒಂದು ಅಧಿಕಾರವನ್ನು ಕೊಟ್ಟಿದ್ದೀರಿ, ಯಾವ ರೀತಿ ಎಂದರೆ ಅವರಿಗೆ ಬೇಕಾದ ಲೂರ್ಸ್ ಮಾಡಿಕೊಳ್ಳಬಹುದು. ನಾನು ನಿಮಗೆ ಕೇಳುತ್ತಿದ್ದೇನೆ, ಇದು ದುರುಪಯೋಗವಾಗುವುದಿಲ್ಲವೇ? ಗೈಡ್‌ಲೈನ್ಸ್‌ನ್ನು ಹಾಕಿದ್ದೀರಾ ನೀವು? ಯಾರಿಗೆ ಕೊಡಬೇಕು, ಎಂಥವರಿಗೆ, ಯಾವ ರೀತಿ ಎನ್‌ಕ್ವೈರಿ ಮಾಡಬೇಕು ಎನ್ನುವುದಕ್ಕೆ ಗೈಡ್‌ಲೈನ್ಸ್ ಇಲ್ಲ. ಕಾನೂನಿನಲ್ಲಿ ಯಾವುದಾದರೂ ಗೈಡ್‌ಲೈನ್ಸ್ ಇಲ್ಲದೇ ಇರುವುದು ಬಂದರೆ, it become arbitrary. ನೀವು ಇದನ್ನು ತರುವುದು, ಹೈಕೋರ್ಟಿನಲ್ಲಿ ಅದನ್ನು ವಜಾ ಮಾಡುವುದು. ಈ ರೀತಿಯಾಗುತ್ತದೆ.

SRI M.C.NANAIAH: Sir, this is a one time operation. ಎಂದು ಹೇಳುತ್ತಿರುವುದು. ಮಾನ್ಯ ಖರ್ಗೆಯವರು ನೀವು ಟೈಮ್ ಲಿಮಿಟ್ ಹಾಕಿಲ್ಲ ಎಂದು ಹೇಳಿದರು. ಟೈಮ್ ಲಿಮಿಟ್ ಹಾಕುವುದಕ್ಕೆ an Administrative Order can be issued in this. ಮತ್ತೆ ಮೂರನೆಯದಾಗಿ ಏನೆಂದರೆ ಸಬ್‌ಸಿಕ್ವೆಂಟ್‌ಲಿ ಎನ್‌ಕ್ವೈರಿ ಮಾಡಿದಮೇಲೆ ಟರ್ಮ್ಸ್ ಅಂಡ್ ಕಂಡೀಷನ್ಸ್‌ನ್ನು ಡೆಪ್ಯುಟಿ ಕಮೀಷನರ್ ಹಾಕಲಿಕ್ಕೆ ಇರುವ ಅಧಿಕಾರವನ್ನು ನಾವು ಇದರಲ್ಲಿ ಅಳವಡಿಸಿಕೊಂಡಿದ್ದೇವೆ. ಎನ್‌ಕ್ವೈರಿ ಎಂದು ಹೇಳುವಂಥದ್ದು ಇವತ್ತು ಅಕ್ರಮ, ಸಕ್ರಮ ಸಮಿತಿಯಲ್ಲಿರುವವರಿಗೂ ಕೂಡ, for example, another Bill is coming under the Land Revenue Act. ಅದರಲ್ಲಿ ಕೂಡ ಫಾರಂ ನಂ.50ನ್ನು ಹಾಕದೇ ಇರುವವರು ಬಹಳಷ್ಟು ಜನರು ನಮ್ಮ ರಾಜ್ಯದಲ್ಲಿದ್ದಾರೆ. ಅವರಿಗೂ ಕೂಡ ನಾವು ಇದೇ ರೀತಿಯ ಒಂದು ಅವಕಾಶವನ್ನು ಕಲ್ಪಿಸಬೇಕು ಎಂದು ಹೇಳಿ, we have already made it now, where the Deputy Commissioner through his revenue agencies will have to inspect, then he must draw the mahazar, find out who is he, whether he is in actual possession and subsequently he will grant the power. ನಾವು ಮಾಡಿರುವುದು ಏನೆಂದರೆ It is only to protect the people such of those people, who are in possession and who for various reasons could not file an application under Section 45 or under Form No.50.

ಇವರಿಗೆ ಮಾಡಿರುವ ಒಂದು ಅವಕಾಶ. ನಾವು ಇದನ್ನು ಮಾಡಿದ್ದೇವೆ. We have received representations from all over the State to do that, and very rightly we should do that, but this should not be misused. That is why we have brought these provosions. Possession and cultivation, I am very certain, it will lead to lot of other things.

ಶ್ರೀಮತಿ ಪ್ರಮೀಳಾ ನೇಸರ್ಗಿ: ಇದು ಬಿಯಾಂಡ್ ಪೊಸೆಷನ್ ಆಗುವುದಿಲ್ಲ ಅಧ್ಯಕ್ಷರೇ.

SRI M.MALLIKARJUNA KHARGE: Sir, we are very much interest in this. ನಾವು ಹೇಳಿದಂತೆ ಮಾಡುತ್ತೇವೆ. But, let us apply our mind, tomorrow

SRI M.C.NANAIAH: Alright Sir, I have no objection we will take it up tomorrow morning.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ನಾಣಯ್ಯನವರಿಗೆ ಕನ್‌ಫ್ಯೂಷನ್ ಆಗಿದೆ ಎಂದು ನನಗನಿಸುತ್ತದೆ. ಬೆಂಗಳೂರು ಸುತ್ತ, ನಾನು ಹೇಳುವುದು ಕೇಳಿ. ನೀವು ಯಾರಿಗೆ ಲ್ಯಾಂಡನ್ನು ಕೊಡುವುದಕ್ಕೆ ಮಾಡುತ್ತಿದ್ದೀರಿ 1974 ರ ಮಾರ್ಚಿಗೆ ಮುಂಚೆ ಯಾರು ಪೊಸೆಷನ್‌ನಲ್ಲಿದ್ದರೋ ಅವರಿಗೆ, ಪೊಸೆಷನ್‌ನಲ್ಲಿದ್ದು ಅನ್‌ರೀಸನಬಲಿ ಅವನನ್ನು ಒದ್ದೋಡಿಸಿ ಅವನಿಗೇನೂ ಕೊಡದೆ ಅವನ ಬಾಯಿಗೆ ಬಟ್ಟೆ ಕಟ್ಟಿ ನೂಕಿಬಿಟ್ಟಿದ್ದೀರಿ. ಅವನನ್ನು ಗುರುತುಮಾಡುವುದಕ್ಕೆ ಅವಕಾಶವಿದ್ದರೂ ಗುರುತು ಮಾಡಿಕೊಡಿ ಎಂದು ತಾನೇ ನಾವು ಕಾನೂನನ್ನು ತಂದಿರುವುದು. ಇವತ್ಯಾರೋ ಅಕ್ರಮ ಮಾಡಿಕೊಂಡಿದ್ದರೆ ಅವನಿಗೆ ಕೊಡಿ ಎಂದು ಹೇಳಿದ್ದೇವೆಯೋ? ಬೆಂಗಳೂರಿನಲ್ಲಿ ಮಾಡಿರುವುದೆಲ್ಲಾ ನಾಲ್ಕೈದು ವರ್ಷದ ಈಚೆಗೆ ಮಾಡಿದ್ದಾರೆ. ಅವರನ್ನು ಒದ್ದೋಡಿಸಿ. ಯಾರು ಬೇಡ ಎನ್ನುತ್ತಾರೆ.

ಶ್ರೀ ಎಂ.ಸಿ.ನಾಣಯ್ಯ: ಅಗ್ರಿಕಲ್ಚರ್ ಲ್ಯಾಂಡ್ ಎಂದು ಹೇಳುವುದು ಒಂದು ಭಾಗ. ನಾನ್ ಅಗ್ರಿಕಲ್ಚರಲ್ ಇನ್ನೊಂದು ಭಾಗ. ಇದೀಗ ನಾನ್ ಅಗ್ರಿಕಲ್ಚರ್ ಲ್ಯಾಂಡ್ ಎಂದು ಹೇಳುವುದು ನೀವು ಕಲ್ಟಿವೇಷನ್ ಇಲ್ಲ ಎಂದು ಬಂದಾಗ automatically it becomes a non-agricultural land. ಆ ನಾನ್ ಅಗ್ರಿಕಲ್ಚರ್‌ಲ್ಯಾಂಡ್ ಎಂದಾದಮೇಲೆ ಪೊಸೆಷನ್. ಪೊಸೆಷನ್ ಎಂದು ಹೇಳುವುದನ್ನು ಒಂದನ್ನೇ ಇಟ್ಟುಕೊಂಡರೆ 74ನೇ ಇಸವಿಗಿಂತ ಮುಂಚೆ ಇದ್ದರೆ ಕೊಡಬೇಕು ಎಂದು. I think,

that provision can be misused by all the officials, because they are in possession of it and it canbe dated back to 75.

1997ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ಸ್ (ಎರಡನೇ ತಿದ್ದುಪಡಿ) ವಿಧೇಯಕ.

ಅಧ್ಯಕ್ಷರು: ಈಗ ಐಟೆಂ ನಂ.4. ರಮೇಶ್ ಜಿಗಜಿಣಗಿ ಅವರೆ,

(ಇ) ಕರ್ನಾಟಕ ಸ್ಟ್ಯಾಂಪ್ಸ್ (ಎರಡನೇ ತಿದ್ದುಪಡಿ) ವಿಧೇಯಕ 1997

ಪರ್ಯಾಲೋಚನೆ ಪ್ರಸ್ತಾವ.

ಶ್ರೀ ರಮೇಶ್.ಸಿ.ಜಿಗಜಿಣಗಿ (ಕಂದಾಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, 1997ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ಸ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ನಾನು ತಮ್ಮಲ್ಲಿ ಕೋರುತ್ತೇನೆ. ಇದು ಬಹಳ....

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬಹಳ ಏನೂ ಇಲ್ಲ, ಇದು ಪಾಸ್ ಆಗಬಹುದು.

ಶ್ರೀ ರಮೇಶ್ ಸಿ.ಜಿಗಜಿಣಗಿ: ಆಗಬಹುದೇ? ಅಧ್ಯಕ್ಷರೆ, ತುಂಬಾ ಧನ್ಯವಾದಗಳು.

ಅಧ್ಯಕ್ಷರು: ಪರ್ಯಾಲೋಚನೆ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಇದು ನಾಲ್ಕನೆ ಬಿಲ್, ಇದನ್ನು ಪಾಸ್ ಮಾಡಿದರು, ಅದೇ ರೀತಿ ಅವೆರಡನ್ನೂ ಪಾಸ್ ಮಾಡಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಇದೆಲ್ಲಾ ಅವರಿಗೆ ಅನುಕೂಲ ಮಾಡುವುದಕ್ಕೆ ತಂದಿದ್ದುದು.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ): ಸ್ಟ್ಯಾಂಪ್ ಡ್ಯೂಟಿ ಬಗ್ಗೆ ಕ್ರೆಡಿಟ್ ತೆಗೆದುಕೊಳ್ಳುವುದು ಬೇಡ. ಈಗಾಗಲೇ ಅದು ಕೋರ್ಟಿಗೆ ಹೋಗಿದೆ, ಇದರ ಬಗ್ಗೆ ತೀರ್ಮಾನ ಕೊಟ್ಟಿದ್ದಾರೆ, ಇದು ಆಗಲೇ ಬೇಕೆಂದು ಅದಕ್ಕೆ ಹೊಸದಾಗಿ ಕ್ರೆಡಿಟ್ ಕೊಡಬೇಕಾಗಿತ್ತು. ಇದರ ಬಗ್ಗೆ ಕೋರ್ಟಿನಿಂದ ತೀರ್ಮಾನ ಬಂತಲ್ಲಾ, ಜಸ್ಟೀಸ್ ಶಿವಶಂಕರ ಇದರ ಬಗ್ಗೆ ಯಾವಾಗಲೋ ತೀರ್ಮಾನ ಕೊಟ್ಟಿದ್ದಾರೆ.

ಅಧ್ಯಕ್ಷರು: ಮೇಡಂ ಟೈಂ ಬಹಳ ಕಡಿಮೆ ಇದೆ,

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಈಗ ಸ್ಟ್ಯಾಂಪ್ ಡ್ಯೂಟಿ ಬಗ್ಗೆ ನಮ್ಮ ಅಭಿಪ್ರಾಯ ಕೇಳಿ. ಈಗ ಅವರು ಅಮೆಂಡ್‌ಮೆಂಟ್ ತಂದಿದ್ದಾರಲ್ಲಾ, ಅದು ಬಾರೀ

ಲಿಮಿಟೆಡ್ ಪರ್‌ಪಸ್‌ಗೆ ತಂದಿದ್ದಾರೆ ಅಲ್ಲವೇ? ಕಾಂಪ್ರಿಹೆನ್‌ಸಿವ್ ಆಗಿ ತರಲಿಲ್ಲ ನೀವು? ನೀವು ಈ ಸಭೆಯಲ್ಲಿ ಸ್ಟ್ಯಾಂಪ್ ಡ್ಯೂಟಿ ರಿವೈಸ್ ಮಾಡುತ್ತೇವೆ ಎಂದು ಭರವಸೆ ಕೊಟ್ಟಿರುವಿರಿ, ಅದನ್ನು ಯಾವಾಗ ಮಾಡುತ್ತೀರಿ? ನಿಮಗೆ ಇಷ್ಟ ಇರುವುದನ್ನು ಬೇಗ ತರುವುದು, ಇಷ್ಟ ಇಲ್ಲದೇ ಇರುವುದನ್ನು ತರುವ ಹಾಗೆ ಇಲ್ಲ. ಇದನ್ನು ವಿತ್ ಡ್ರಾ ಮಾಡಿ. ಎರಡನ್ನೂ ಒಟ್ಟಿಗೆ ತನ್ನಿ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಎರಡನ್ನೂ ಒಟ್ಟಿಗೆ ತನ್ನಿ.

(ಗೊಂದಲ)

ಶ್ರೀ ರಮೇಶ್ ಸಿ.ಜಿಗಜಿಣಗಿ: ಜಾಸ್ತಿ ಆಗಿದ್ದರೆ ರಿವೈಸ್ ಮಾಡುತ್ತೇವೆ ಎಂದು ಹೇಳಿದ್ದೆವು, ಬೇಕಾದರೆ ರಿವೈಸ್ ಮಾಡೋಣ.

ಮಾನ್ಯ ಸದಸ್ಯರು: ಇಲ್ಲ ಅವರು ಕಡಿಮೆ ಮಾಡುತ್ತೇವೆ ಎಂದು ಹೇಳಿದ್ದರು.

ಶ್ರೀ ಹೆಚ್.ಎನ್.ನಂಜೇಗೌಡ: ಅಧ್ಯಕ್ಷರೆ, ಒಂದು ಕೆಲಸ ಮಾಡಿ, ಈಗ ಅವರು ಏನೇನು ರೇಟ್ ನಿಗದಿಮಾಡಿದ್ದಾರೋ, ಮತ್ತು ನಮ್ಮ ಗ್ರಾಮದ ಹತ್ತಿರ ನಲವತ್ತೆಂಟು ಸಾವಿರ ರೂ. ನಿಗದಿ ಮಾಡಿದ್ದಾರೆ, ನಮ್ಮ ಊರಿನಲ್ಲಿರುವ ಎಲ್ಲಾ ಜಮೀನನ್ನು ಸರ್ಕಾರದವರಿಗೆ ಕೊಡಿಸುತ್ತೇನೆ ಅವರು ತೆಗೆದುಕೊಳ್ಳಲಿ. ಈಗ ನಾನು ವಾಸವಾಗಿರುವ ಜಯನಗರದಲ್ಲಿ ಚದುರ ಅಡಿಗೆ ಎರಡು ಸಾವಿರ ಚಿಲ್ಲರೆ ಹಣ ಎಂದು ನಿಗದಿ ಮಾಡಿದ್ದಾರೆ. ಅಲ್ಲಿ ಒಂದು ಹತ್ತು ಸೈಟ್ ನಾಳೆ ಬೆಳಗ್ಗೆ ಕೊಡಿಸುತ್ತೇವೆ ಸರ್ಕಾರದವರು ತೆಗೆದುಕೊಳ್ಳಲಿ ಸಾಕು. ಸ್ಟ್ಯಾಂಪ್ ಡ್ಯೂಟಿ ಇಷ್ಟು ವ್ಯಾಲ್ಯೂಯೇಷನ್ ಎಂದು ಇವರು ಹಾಕಿದ ಮೇಲೆ Government should be in a position. ತಾಕತ್ತು ಇರಬೇಕು ಸರ್ಕಾರಕ್ಕೆ. ಅವರು ಇಷ್ಟು ಬೆಲೆಗೆ ಕೊಡುತ್ತೇವೆ ಎಂದು ಹೇಳಿದರೆ, ಅದನ್ನು ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ತಯಾರಿರಬೇಕು. ಇಲ್ಲ ಎಂದರೆ ಏಕೆ ನೀವು ಸ್ಟಾಂಪ್ ಡ್ಯೂಟಿ ಹಾಕುತ್ತೀರಿ?

ಮಾನ್ಯ ಸದಸ್ಯರು: ಕಡಿಮೆ ಮಾಡುತ್ತೇವೆ ಎಂದು ಸದನದಲ್ಲಿ ಹೇಳಿದ್ದರು ಅವರು. ನಾನು ಪ್ರಸ್ತಾಪ ಮಾಡಿದಾಗ ನೂರರಿಂದ ಏಳನೂರು ಐವತ್ತು ಪರ್ಸೆಂಟೇಜ್‌ವರೆಗೂ ಹೋಗಿದೆ, ಆದ್ದರಿಂದ ಇಪ್ಪತ್ತೈದರಿಂದ ಮೂವತ್ತು ಪರ್ಸೆಂಟ್‌ವರೆವಿಗೂ ಕಡಿಮೆ ಮಾಡುತ್ತೇವೆ ಎಂದು ಹೇಳಿದ್ದರು.

ಶ್ರೀ ಹೆಚ್.ಎನ್.ನಂಜೇಗೌಡ: ಯಾರಿಗೋಸ್ಕರವೂ ಕಡಿಮೆ ಮಾಡಬೇಡಿ. ಇಲ್ಲ ಕಡಿಮೆ ಮಾಡಿ ಇಲ್ಲ ನೀವು ಏನು ಬೆಲೆ ಹಾಕಿದ್ದೀರೋ ಆ ಬೆಲೆಗೆ ಕೊಂಡು ಕೊಳ್ಳುವುದಕ್ಕೆ ನಿಧಿ ಕ್ರಿಯೇಟ್ ಮಾಡಿ, ನಿಮಗೆ ಜಮೀನು ಕೊಡಿಸುತ್ತೇವೆ, ಸೈಟ್

ಕೊಡಿಸುತ್ತೇವೆ, ಬೆಂಗಳೂರಿನಲ್ಲಿ, ಹಳ್ಳಿ ಕಡೆ, ಲ್ಯಾಂಡ್ ಕೊಡಿಸುತ್ತೇವೆ.

ಮಾನ್ಯ ಸದಸ್ಯರು: ಎಲ್ಲಾ ಕಡೆಯಲ್ಲೂ ಇದೇ ಪರಿಸ್ಥಿತಿ ಇದೆ.

ಶ್ರೀ ಹೆಚ್.ಎನ್.ನಂಜೇಗೌಡ: ನೀವು ಮಾಡುವುದಾದರೂ ಯಾವಾಗ? ನಿಮಗೆ ಬೇಕಾಗಿರುವುದನ್ನು ತರುತ್ತೀರಾ, ಬೇಡವಾಗಿರುವುದನ್ನು ತರುವುದಿಲ್ಲ. ಯಾವಾಗ ತರುತ್ತೀರಿ? ಒಂದು ಕ್ಯಾಟಗರಿಕಲ್ ಆಗಿ, ಅಷ್ಯೂರೆನ್ಸ್ ಕೊಡಿ.

ಅಧ್ಯಕ್ಷರು: ಕಾಂಪ್ರಹೆನ್‌ಸೀವ್ ಆಗಿ ಈಗ ಏನು ಮಾಡೋಣ?

ಶ್ರೀ ಹೆಚ್.ಎನ್.ನಂಜೇಗೌಡ: ಪೀಸ್ ಮೀಲ್ ಆಗಿ ಬೇಡ. ಯಾವುದೋ ಒಂದು ತಂದು ಬಿಟ್ಟರೆ....

ಅಧ್ಯಕ್ಷರು: ಅವರು ಆಗಬಹುದು ಎಂದು ಹೇಳಿದರಲ್ಲಾ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಸ್ವಲ್ಪ ಯಾವುದೋ ಮೂಡ್‌ನಲ್ಲಿ ಇದ್ದೆವು.

ಅಧ್ಯಕ್ಷರು: ಆಗಬಹುದು, ನಾನು ನಿಮ್ಮ ಮೂಡಿಗೆ ಅಡ್‌ಜಸ್ಟ್ ಆಗುತ್ತೇನೆ. ಏನೂ ತೊಂದರೆ ಇಲ್ಲ.

ಮಾನ್ಯ ಸದಸ್ಯರು: ಎಲ್ಲವನ್ನೂ ಒಟ್ಟಿಗೆ ತನ್ನಿ ಎಂದು

ಅಧ್ಯಕ್ಷರು: ಸರಿ ಈಗ ಅದು ಮುಂದಕ್ಕೆ ಹೋಯಿತಾ? 5ನೇದು? ಏನಪ್ಪ ಡಾ. ಮಹದೇವಪ್ಪ ಇದು ಆಗಬಹುದೇ?

ಡಾ. ಹೆಚ್.ಸಿ.ಮಹದೇವಪ್ಪ: ನಿರಶನಗೊಳಿಸುವುದು, ಮಾನವ ನೇತ್ರಗಳು;

ಅಧ್ಯಕ್ಷರು: ಅದಕ್ಕೆ ಏನಾದರೂ ತಕರಾರು ಇದೆಯೋ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ರಿಪೆಲ್‌ಗೆ ಏನೂ ಇಲ್ಲ. ಏನಾದರೂ ಮಾಡುವುದಾದರೆ ಹೇಳಬಹುದು.

ಅಧ್ಯಕ್ಷರು: ಮುಂದಕ್ಕೆ ಹೋಯಿತು. ನೀವು ನಿಮ್ಮ ಪಕ್ಕದಲ್ಲಿ ಇರುವವರ ಜೊತೆ ಮಾತನಾಡುತ್ತಾ ಕುಳಿತಿರಿ.

(ಗೊಂದಲ)

ಅಧ್ಯಕ್ಷರು: ಈಗ ಇದನ್ನು ಓಟಿಗೆ ಹಾಕಬಹುದಾ ಯಡಿಯೂರಪ್ಪನವರೇ

ಮಾನ್ಯ ಸದಸ್ಯರು: ಜನಗಳಿಗೆ ಬಹಳ ತೊಂದರೆ ಆಗುತ್ತದೆ. ನಮ್ಮ ಮಾನ್ಯ ಶ್ರೀ ನಂಜೇಗೌಡರು ಏನು ಹೇಳಿದರು ಅಂದರೆ, ಸ್ಟಾಂಪ್ ಡ್ಯೂಟಿ ಜಾಸ್ತಿಯಾಗಿದೆ ಇದನ್ನು ಸ್ವಲ್ಪವಾದರೂ ಕಡಿಮೆ ಮಾಡಿ ಎಂದು....

(ಗೊಂದಲ)

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು): ಅಧ್ಯಕ್ಷರೆ, ಬಿಲ್ಲನ್ನು ಯಾವ ಯಾವಾಗಲೋ ಮಂಡಿಸುವುದು ಬೇಡ. ನಾನು ಈ ಬೆಲೆಯನ್ನು ರಿವ್ಯೂ ಮಾಡುತ್ತೇನೆ. ಎಂದು ಈ ಸದನದಲ್ಲಿ ಹೇಳಿದ್ದೇನೆ, ಅದೇ ರೀತಿ ಮಾಡುತ್ತೇನೆ. ನೀವು ದಯವಿಟ್ಟು ಈ ಬಿಲ್ಲನ್ನು ಮಾಡಿಸಿಕೊಡಿ.

MR. SPEAKER: Divided opinion. Why should I force it? ಈಗ ಓಟಿಗೆ ಹಾಕೋಣವೇ?

ಶ್ರೀ ಹೆಚ್.ಎನ್.ನಂಜೇಗೌಡ: ಇಲ್ಲ, ಆಗುವುದಿಲ್ಲ, ಈಗ ಗೌರ್ನಮೆಂಟ್ ಏಜೆನ್ಸಿಗೆ ಸ್ಟ್ಯಾಂಪ್ ರೇಟ್ ಜಾಸ್ತಿಯಾಗುತ್ತದೆ ಎಂದರೆ ಅವರಿಗೆ ಕನ್ಸಿಷನ್ ಕೊಡಬೇಕು. ಅದಕ್ಕೆ...

ಮಾನ್ಯ ಸದಸ್ಯರು: ಹಾಗಾದರೆ ಇದನ್ನು ತಳ್ಳಿಕೊಂಡು ಹೋದರೆ ಇನ್ನು ಮೂರು ತಿಂಗಳು ಆಗುತ್ತದೆ.

MR. SPEAKER: You convince your friends..

ಶ್ರೀ ಹೆಚ್.ಎನ್.ನಂಜೇಗೌಡ: ಒಂದು ಕೆಲಸ ಮಾಡಿ ಅಧ್ಯಕ್ಷರೆ, ಯಾರೋ ಮಗಳ ಮದುವೆ ಮಾಡಬೇಕು, ಅವರು ಸೈಟ್ ಮಾರಬೇಕು. ಇವರು ಹಾಕಿರುವ ರೇಟಿಗೆ ಸರ್ಕಾರದವರು ತೆಗೆದುಕೊಂಡುಬಿಡಲಿ. ಇಲ್ಲ, ಹಿಂದೆ ಇದ್ದಿದ್ದು ಏನು? ಸರ್ಕಾರಕ್ಕೆ ಏನು ಫೋರ್ಸ್ ಇದೆ, ಸ್ಟ್ಯಾಂಪ್ ಡ್ಯೂಟಿ ಫಿಕ್ಸ್ ಮಾಡುವುದಕ್ಕೆ? It is the respective Deputy Commissioner that is the District Registrar who taking into consideration the local conditions, market value, he will fix. ಈ ಸ್ಟ್ಯಾಂಪ್ ಡ್ಯೂಟಿ ಏಕೆ ಹೆಚ್ಚು ಮಾಡಬೇಕು?

ಮಾನ್ಯ ಸದಸ್ಯರು: ಸನ್ಮಾನ್ಯ ಅಧ್ಯಕ್ಷರೆ, ಪ್ರತಿ ವರ್ಷ ಸ್ಟ್ಯಾಂಪ್ ಡ್ಯೂಟಿಯಿಂದ ಇಷ್ಟು ರೆವಿನ್ಯೂ ಕೊಡಬೇಕೆಂದು ಹೇಳಿ ಡೈರೆಕ್ಷನ್ ಕೊಟ್ಟಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು): ಗೌರ್ನಮೆಂಟ್ ಮನಸ್ಸು ಮಾಡಿದರೆ

ಆರ್ಡಿನೆನ್ಸ್ ಫಾರಂನಲ್ಲಿ ತರುವುದಕ್ಕೆ ಆಗುವುದಿಲ್ಲವೇ? ಭರವಸೆ ಕೊಟ್ಟಿದ್ದಾರೆ ದಯವಿಟ್ಟು....

(ಗೊಂದಲ)

ಶ್ರೀ ಹೆಚ್.ಎನ್.ನಂಜೇಗೌಡ: ಈಗ ನನ್ನ ಒಂದು ಮಾತನ್ನು ಕೇಳುತ್ತೀರಾ? ಈಗ ವಿಧಾನಸಭೆ ಮುಗಿದು ಹೋಗುತ್ತದೆ, ಆರ್ಡಿನೆನ್ಸ್ ಆದರೂ ಇಷ್ಯೂ ಮಾಡುತ್ತಾರಾ ಇನ್ನು ಹದಿನೈದು ದಿವಸದೊಳಗೆ?

ಶ್ರೀ ರಮೇಶ್ ಸಿ.ಜಿಗಜಿಣಗಿ: ನಾನು ಮೊದಲು ಸದನದಲ್ಲಿ ಹೇಳಿದ್ದೇನೆ, ಬೆಲೆ ಹೆಚ್ಚಾದುದು ನಿಜ. ಮಾನ್ಯ ನಂಜೇಗೌಡರೇ, ಅವತ್ತಿನ ದಿವಸಕ್ಕೆ ಏನು ಬೆಲೆ ನಿಗದಿ ಮಾಡಿದ್ದಾರೆ ಅದು ಸರಿಯಾಗಿ ಇದೆ ಎಂದು ನಾನು ಈಗಲೂ ಡಿಫೆಂಡ್ ಮಾಡುತ್ತೇನೆ. ಇವತ್ತಿನ ದಿವಸ ಮಾರುಕಟ್ಟೆಯಲ್ಲಿ ಬೆಲೆ ಕಡಿಮೆಯಾಗಿದೆ, ಆದಕಾರಣ ಇದನ್ನು ಕಡಿಮೆ ಮಾಡಬೇಕೆಂದು ಈ ಸದನದಲ್ಲಿ ಎಲ್ಲಾ ಸದಸ್ಯರು ಹೇಳಿದ್ದಾರೆ, ಹೊರಗಡೆ ಇರುವ ಜನರೂ ಸಹ ಹೇಳಿದ್ದಾರೆ. ಆದಕಾರಣ ಮೂರು ತಿಂಗಳೊಳಗಾಗಿ ಇದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೇನೆ ಎಂದು ಒಪ್ಪಿಕೊಂಡಿದ್ದೇನೆ. ಆದರೂ ಸಹ ನೀವು ಬೇಡ ಬೇಡ ಎಂದರೆ ಅದು ಸರಿ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಮಾಡಿಸಿ ಕೊಡುತ್ತಾರೆ.

ಶ್ರೀ ಮಂಜುನಾಥ ಸಿ.ಕುನ್ನೂರು: ಸನ್ಮಾನ್ಯ ಅಧ್ಯಕ್ಷರೇ, ಈ ರೈತರ ಜಮೀನುಗಳಿಗೂ ಕೂಡ ಇವತ್ತು ಸ್ಟಾಂಪ್ ಡ್ಯೂಟಿ ಮತ್ತು ರಿಜಿಸ್ಟ್ರೇಷನ್ ಫೀ....

ಅಧ್ಯಕ್ಷರು: ಅದನ್ನು ಯಾರು ಕೇಳುತ್ತಾರಪ್ಪ, ಈಗ ಬೆಂಗಳೂರು ಸುತ್ತ ಇರುವುದಕ್ಕೆ ಅವರು ಜಗಳ ಮಾಡುತ್ತಾ ಇದ್ದಾರೆ. ನೀನು....

ಶ್ರೀ ಮಂಜುನಾಥ್ ಸಿ.ಕುನ್ನೂರ್: ಸಾರ್ ಬಹಳ ಜಾಸ್ತಿ ಆಗಿದೆ ಸಾರ್, ಇವತ್ತು ಅಲ್ಲಿ ಯಾವುದೇ ರೀತಿಯ ವಹಿವಾಟು ನಡೆಯುತ್ತಿಲ್ಲ, ಎಲ್ಲಾ ಸಬ್ ರಿಜಿಸ್ಟ್ರಾರ್ ಕಛೇರಿ ಖಾಲಿ ಇದೆ.

ಅಧ್ಯಕ್ಷರು: ನಮ್ಮ ಜಮೀನು ಬಗ್ಗೆ ಏನು ಹೇಳುತ್ತಾರೆ ಬಾರಪ್ಪ, ಇದು ಬೇರೆ ಜಮೀನು ಜಗಳ.

SRI MANJUNATH C.KUNNUR: It is also included Sir, Our Revenue Minister might be knowing. Definitely

he is knowing...

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''1997ರ ಕರ್ನಾಟಕ ಸ್ಟಾಂಪ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು: 'ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ಎರಡು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, '' 1997ನೇ ಕರ್ನಾಟಕ ಸ್ಟಾಂಪ್ (ಎರಡನೇ ತಿದ್ದುಪಡಿ) ವಿಧೇಯಕವನ್ನು'' ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''1997ರ ಕರ್ನಾಟಕ ಸ್ಟಾಂಪ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಈ) ಮಾನವ ನೇತ್ರಗಳ (ಚಿಕಿತ್ಸೆ ಮತ್ತು ಸಂಶೋಧನಾ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದಕ್ಕೆ ಅಧಿಕಾರ ನೀಡುವುದು) ಮತ್ತು ಕಾನೂನುಗಳ (ನಿರಸನ) ಕರ್ನಾಟಕ ವಿಧೇಯಕ, 1996.

(ಪರ್ಯಾಲೋಚನಾ ಪ್ರಸ್ತಾವ)

ಡಾ|| ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ''1997ರ ಮಾನವ ನೇತ್ರಗಳ (ಚಿಕಿತ್ಸೆ, ಸಂಶೋಧನಾ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದಕ್ಕೆ ಅಧಿಕಾರ ನೀಡುವುದು) ಮತ್ತು ಇತರ ಕಾನೂನುಗಳ (ನಿರಸನ) ಕರ್ನಾಟಕ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ''

ಪ್ರಸ್ತಾವವನ್ನು ಮಂಡಿಲ್ಪಟ್ಟಿತು

ಇದನ್ನು ಓಟಿಗೆ ಹಾಕಬಹುದಾ?

ಅಧ್ಯಕ್ಷರು: ''1996ರ ಮಾನವ ನೇತ್ರಗಳ (ಚಿಕಿತ್ಸಾ ಮತ್ತು ಸಂಶೋಧನಾ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದಕ್ಕೆ ಅಧಿಕಾರ ನೀಡುವುದು) ಮತ್ತು ಇತರ ಕಾನೂನುಗಳ (ನಿರಸನ) ಕರ್ನಾಟಕ ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು: ''ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಡಾ|| ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ ''1996ರ ಮಾನವ ನೇತ್ರಗಳ ಚಿಕಿತ್ಸಾ ಮತ್ತು ಸಂಶೋಧನಾ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದಕ್ಕೆ ಅಧಿಕಾರ ನೀಡುವುದು ಮತ್ತು ಇತರ ಕಾನೂನುಗಳ (ನಿರಸನ) ಕರ್ನಾಟಕ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ''

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''1996ರ ಮಾನವ ನೇತ್ರಗಳ ಚಿಕಿತ್ಸಾ ಮತ್ತು ಸಂಶೋಧನಾ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದಕ್ಕೆ ಅಧಿಕಾರ ನೀಡುವುದು ಮತ್ತು ಇತರ ಕಾನೂನುಗಳ (ನಿರಸನ) ಕರ್ನಾಟಕ ವಿಧೇಯಕವನ್ನು ಅಂಗೀಕರಿಸುವುದು''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

(ಉ) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ, 1997

ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಮಾಲೀಕಯ್ಯ ಗುತ್ತೇದಾರ್ (ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1997ನೇ ಸಾಲಿನ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು

ಶ್ರೀ ಎಂ.ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕವನ್ನು ತರುವ ಉದ್ದೇಶವೇನೆಂದರೆ, ಶಾಶ್ವತವಾಗಿ ಆಯೋಗದ ಅಧ್ಯಕ್ಷರನ್ನು ಈ ಮೊದಲು ನೇಮಕ ಮಾಡತಕ್ಕ ಸಂದರ್ಭದಲ್ಲಿ ನಿವೃತ್ತ ನ್ಯಾಯಾಧೀಶರು ಅಥವಾ ಸೇವೆಯಲ್ಲಿರುವ ನ್ಯಾಯಾಧೀಶರನ್ನು ನೇಮಕ ಮಾಡಲು ಕಾನೂನಿನಲ್ಲಿ ಅವಕಾಶವಿತ್ತು. ಇದರಿಂದ ನಮಗೆ ತೊಂದರೆಯಾಗುತ್ತಿತ್ತು. ಆದ್ದರಿಂದ ಈ ಹುದ್ದೆಗೆ ಸಾಕಷ್ಟು ಅನುಭವವಿರುವ ಅರ್ಹ ವ್ಯಕ್ತಿಗಳನ್ನು ಅಧ್ಯಕ್ಷರನ್ನಾಗಿ ನೇಮಕ

ಮಾಡಬೇಕೆಂದು ಈ ತಿದ್ದುಪಡಿಯನ್ನು ತಂದಿದ್ದೇವೆ. ಎರಡನೆಯದಾಗಿ ಇದರಲ್ಲಿ ಏಜ್ ಲಿಮಿಟ್‌ನ್ನು ಮಾಡಿದ್ದೇವೆ. ಅದು 67 ವಯಸ್ಸು ಮೀರಿರಬಾರದೆಂದು ಮಾಡಿದ್ದೇವೆ. ಹಿಂದೆ ವೀರಪ್ಪಮೊಯ್ಲಿರವರು ಮುಖ್ಯಮಂತ್ರಿಗಳಾಗಿದ್ದಾಗ ಜಸ್ಟೀಸ್ ಕುದೂರ್ ನಾರಾಯಣ್‌ರವರನ್ನು ನೇಮಕಾತಿ ಮಾಡಿದ ಸಮಯದಲ್ಲಿ, 67ವರ್ಷ ವಯಸ್ಸಾಗಿರುವವರನ್ನು ಆ ಸ್ಥಾನದಿಂದ ತೆಗೆಯಬೇಕೆಂದೇನು ಆದೇಶದ ಮೇರೆಗೆ ಅವರು ಕಾನೂನು ತಂದರು ಅದರ ಅನ್ವಯ ಕೇವಲ ಹನ್ನೊಂದು ತಿಂಗಳಿನಲ್ಲಿ ಜಸ್ಟೀಸ್ ಕುದೂರ್ ನಾರಾಯಣರವರನ್ನು ಆ ಸ್ಥಾನದಿದ ತೆಗೆಯತಕ್ಕ ಸಂದರ್ಭ ಬಂತು. ಯಾವುದೇ ಒಂದು ವ್ಯಕ್ತಿಯನ್ನು ಸರ್ಕಾರದಿಂದ ನೇಮಕಾತಿ ಮಾಡಿದಾಗ ಕನಿಷ್ಠ ಮೂರು ವರ್ಷಗಳಾದರೂ ಸಹ ಅವರು ಆ ಸೇವೆಯಲ್ಲಿದ್ದು ಈ ವರ್ಗದ ಜನರನ್ನು, ಏನು ಕೆಲವು ಜಾತಿಯ ಹೆಸರು ಬಿಟ್ಟು ಹೋಗಿದೆ, ಸ್ಪೆಲಿಂಗ್ ಮಿಸ್ಟೇಕ್‌ಗಳಿವೆ ಅದನ್ನು ಸರಿಪಡಿಸಲು ಅನುಕೂಲವಾಗಬೇಕು ಎನ್ನತಕ್ಕ ವಿಚಾರಧಾರೆಯಲ್ಲಿ ಈ ತಿದ್ದುಪಡಿಯನ್ನು ತಂದಿದ್ದೇವೆ. ಸೋಷಿಯಲ್ ಸೈಂಟಿಸ್ಟ್ ಎನ್ನತಕ್ಕ ಪದವನ್ನೇಕೆ ಸೇರಿಸಿದ್ದೀರಿ ಎಂಬ ಬಗ್ಗೆ ಸದಸ್ಯರುಗಳೇನು ವಾದವನ್ನು ಮಂಡಿಸಿದ್ದಾರೆ, ಅದರ ಬಗ್ಗೆ ಹೇಳುವುದಾದರೆ ಇದರಿಂದ ಅನುಕೂಲವಾಗಬೇಕು, ದುರುಪಯೋಗವಾಗಬಾರದು. ಎಲ್.ಜಿ.ಹಾವನೂರ್‌ರವರು ಸೋಷಿಯಲ್ ಸೈಂಟಿಸ್ಟ್, ಮಾನ್ಯ ದೇವರಾಜ್‌ಅರಸುರವರು ಸೋಷಿಯಲ್ ಸೈಂಟಿಸ್ಟ್ ಅಂಥ ಅರ್ಹತೆ ಹೊಂದಿರುವ ವ್ಯಕ್ತಿಗಳನ್ನು ಆ ಸ್ಥಾನದಲ್ಲಿ ಕೂರಿಸಬೇಕಾಗುತ್ತದೆ. ಅದನ್ನು ಬಿಟ್ಟು ಯಾರ್‍ಯಾರನ್ನಾದರೂ ಅಲ್ಲಿಕೂರಿಸಿ ಈ ವರ್ಗದ ಜನರಿಗೆ ಅನ್ಯಾಯ ಮಾಡತಕ್ಕ ಕಾರ್ಯಕ್ರಮ ಸರ್ಕಾರಕ್ಕಿಲ್ಲ. ಈಗಾಗಲೇ ಈ ಆಯೋಗದ ರಚನೆಗೆ ಬಹಳ ವಿಳಂಬವಾಗಿದೆ. ಹಲವಾರು ಜಾತಿಗಳ ಹೆಸರು ಬಿಟ್ಟು ಹೋಗಿರುವ ಬಗ್ಗೆ ಹಲವಾರು ಸದಸ್ಯರು ನಮ್ಮ ಗಮನಕ್ಕೆ ತಂದಿದ್ದೀರಿ. ಇದಕ್ಕೆ ಮಾನ್ಯ ಸದಸ್ಯರುಗಳು ಅಂಗೀಕೃತಗೊಳಿಸಿದರೆ ಇವತ್ತೇನು ಜಾತಿಗಳ ಹೆಸರು ಪಟ್ಟಿಯಿಂದ ಬಿಟ್ಟು ಹೋಗಿದೆ, ಅದನ್ನು ಸರಿಪಡಿಸಲು ಅನುಕೂಲವಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಇದಕ್ಕೆ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, 'The Karnataka State Commission for Backward Classes (Amendment) Bill, 1997' ಬಗ್ಗೆ ಹಿಂದುಳಿದ ವರ್ಗಕ್ಕೆ ಸಂಬಂಧಪಟ್ಟಂಥ ಸಚಿವರು ಏನು ತಂದಿದ್ದಾರೆ, ಅದನ್ನು ವಿರೋಧಿಸಬೇಕಾಗುತ್ತದೆ. ಏಕೆಂದರೆ ಹಿಂದುಳಿದ ವರ್ಗದವರನ್ನು ಗುರುತಿಸಿ ಅದರ ಪಟ್ಟಿಯನ್ನು ಮಾಡಿ ಆ ಜನಾಂಗಕ್ಕೆ ಸಹಾಯ ಮಾಡಬೇಕು ಎನ್ನತಕ್ಕ ಆಸೆ ಎಲ್ಲರಿಗೂ ಇದೆ. ಆದರೆ ಹಿಂದೆ ಏನು constitution of Karnataka Commission for Backward Classes, ನಲ್ಲಿ ಯಾವ ರೀತಿಯಾಗಿ ಕಾಂಪೊಸಿಷನ್ ಇತ್ತು, ಅದರಲ್ಲಿ ಇರತಕ್ಕದ್ದು, ಆ ಕಮಿಷನ್‌ನ ಅಧ್ಯಕ್ಷರಾಗಿ who is or has been a judge of the High

Court, ಸದಸ್ಯರಾಗಿ ಸೋಷಿಯಲ್ ಸೈಂಟಿಸ್ಟ್ ಅನಂತರ ನಾಲ್ಕು ಜನ, who have special knowledge in matters relating to backward classes nominated by the State Government and the Director of B.Cs and Minorities shall be the Member Secretary of the Commission. ಇದರಲ್ಲೇನು ಕನಿಷ್ಠ ಮೂರು ವರ್ಷವಾದರೂ ಒಬ್ಬರು ಅಧ್ಯಕ್ಷರು ಇರಬೇಕೆಂದು ತಂದಿದ್ದಾರೆ ಆದರ ಬಗ್ಗೆ ನಮ್ಮ ತಕರಾರೇನಿಲ್ಲ. ಆದರೆ ತಾವು ಸೋಷಿಯಲ್ ಸೈಂಟಿಸ್ಟ್ ಎಂದು ಅಧ್ಯಕ್ಷರನ್ನಾಗಿ ಯಾರನ್ನಾದರೂ ಇಲ್ಲಿ ನಾಮಿನೇಟ್ ಮಾಡಿದರೆ ಇದರಿಂದ ಖಂಡಿತವಾಗಿ ಅನಾಹುತವಾಗುತ್ತದೆ. ನಾವು ಯಾವುದೇ ಕಾನೂನನ್ನು ಮಾಡಿದರೂ ಸಹ ಅದು ಶಾಶ್ವತವಾಗಿರಬೇಕು. ವ್ಯಕ್ತಿಗಳು, ಮಂತ್ರಿಗಳು, ಸರ್ಕಾರ ಬದಲಾವಣೆಯಾಗಬಹುದು ಆದರೆ ಕಾನೂನು ಶಾಶ್ವತವಾಗಿರಬೇಕು. ಆದ್ದರಿಂದಲೆ ಕಾನೂನನ್ನು ತರುತ್ತೇವೆ. ಆದ್ದರಿಂದ ಇದರಲ್ಲಿ ಸೋಷಿಯಲ್ ಸೈಂಟಿಸ್ಟ್ ಎಂದರೆ ಕೆಲವರು ಎಂ.ಎಲ್.ಎ.ಗಳನ್ನೂ ಸಹ ನೇಮಕ ಮಾಡಬಹುದು. ಎಂ.ಪಿ.ಗಳು ಬರಬಹುದು. ಅಥವಾ ಯಾರಿಗಾದರೂ ಅವಕಾಶ ಕೊಡುವ ಉದ್ದೇಶದಿಂದ ಮತ್ತಾರಿಗಾದರೂ ಕೊಡಬಹುದು.

ಶ್ರೀ ಹೆಚ್.ಶಿವಪ್ಪ: ಹಾಗಾದರೆ ಶಾಸಕರು ಸೋಷಿಯಲ್ ಸೈಂಟಿಸ್ಟ್ ಅಲ್ಲವೆಂದು ಸಾರಾಸಗಟಾಗಿ ತಿರಸ್ಕಾರ ಮಾಡುತ್ತೀರಾ? It is a relevant point I have raised. Supposing, you are a social scientist and I am a social scientist..

MR SPEAKER: Both of you are treated as social scientists. We will go ahead.

SRI H.SHIVAPPA: Let us not take it lightly. ತಾವು ಡೈಲ್ಯೂಟ್ ಮಾಡುವುದು ಬೇಡ.

MR. SPEAKER: Both are social scientists.

ಶ್ರೀ ಹೆಚ್.ಶಿವಪ್ಪ: ಹಾಗಾದರೆ ನಮಗ್ಯಾರಿಗೂ ಸೋಷಿಯಲ್ ಸೈಂಟಿಸ್ಟ್ ಆಗತಕ್ಕ ಕೈಪ್ಯಾಸಿಟಿ ಇಲ್ಲವೇ? ಕವಿಗಳು ಇಲ್ಲವೆ? Why do you anticipate such an event? Why apprehension?

(INTERRUPTIONS)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಖಂಡಿತವಾಗಿ ಅವರನ್ನು ಆ್ಯಂಟಿಸೋಷಿಯಲ್ ಎಂದು ಕರೆದಿಲ್ಲ.

SRI H.SHIVAPPA: It is called innuendo. It amounts to defamation. Indirectly attributing something. It is not allowed.

MR. SPEAKER: You are impleading your selves into the situation. When he wants to exonerate you, you want to implead yourselves.

(INTERRUPTIONS)

SRI H.SHIVAPPA: I want a clarification.

(INTERRUPTIONS)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಎಂ.ಎಲ್.ಎ, ಎಂ.ಪಿ.ಗಳಲ್ಲಿ ಸೋಷಿಯಲ್ ಸೈಂಟಿಸ್ಟ್ ಇಲ್ಲವೆಂದು ಹೇಳುವುದಿಲ್ಲ. ಇರಬಹುದು. ಆದರೆ ಸೋಷಿಯಲ್ ಸೈಂಟಿಸ್ಟ್ ಹೆಸರಿನಲ್ಲೇ ಅಧ್ಯಕ್ಷರನ್ನಾಗಿ ಮಾಡುವುದು ಬೇಡವೆಂದು ನಾನು ಹೇಳುತ್ತಿದ್ದೇನೆ. ಸೋಷಿಯಲ್ ಸೈಂಟಿಸ್ಟ್ ಎಂ.ಎಲ್.ಎ.ಗಳೇ ಇರಬಹುದು, ಅಂತ್ರೊಪಾಲಜಿಯಸ್ಟ್, ಸೋಷಿಯಾಲಾಜಿಸ್ಟ್‌ಗಳೇ ಇರಬಹುದು ಸಮಾಜದ ಬಗ್ಗೆ ಸಂಶೋಧನೆ ಮಾಡಿ ಒಳ್ಳೆ ವರದಿಯನ್ನು ತಯಾರು ಮಾಡಿದಂಥ ವ್ಯಕ್ತಿಗಳೇ ಇರಬಹುದು, ಆದರೆ ಇದನ್ನು ಏಕೆ ಬೇಡವೆಂದು ಹೇಳುತ್ತಿದ್ದೇನೆಂದರೆ, ಜ್ಯುಡಿಷಿಯಲ್ ಆಗಿ ಮೈಂಡ್‌ನ್ನು ಅಪ್ಲೈ ಮಾಡುವುದಿದ್ದರೆ ಇದಕ್ಕೆ ಅನುಕೂಲವಾಗುತ್ತದೆ.

(ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ.ಮಾಮನಿ)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸಾಕಷ್ಟು ಕೇಸ್‌ಗಳಲ್ಲಿ ಸುಪ್ರೀಮ್‌ಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲಿ ಇದರ ಬಗ್ಗೆ ಇಂಟರ್‌ಪ್ರಿಟೇಷನ್ ಬರುತ್ತದೆ. ಶಬ್ದದ ಬಳಕೆಯಾಗಲಿ, ನಿಯಮವನ್ನು ಮಾಡುವುದಾಗಲಿ, ಯಾವುದೇ ವರ್ಗದವರನ್ನು ಸೇರಿಸಬೇಕಾದರೆ, ತೆಗೆಯಬೇಕಾದರೆ ಅದಕ್ಕೆ ಹೆಚ್ಚಿನ ಶಕ್ತಿ ಮತ್ತು ಪುಷ್ಟಿಯನ್ನು ಕೊಡತಕ್ಕವರು ನ್ಯಾಯಾಧೀಶರುಗಳು.

5.40 ಪಿ.ಎಂ

ಈ ವರದಿ ಬೇಡವೆಂಬುದೇ ನನ್ನ ವಾದವಾಗಿದೆ. ಮೊದಲು ಮಾಡಿದ್ದ ಕಾನೂನಿನಲ್ಲಿ ಜಡ್ಜ್ ಅವರನ್ನು ನೇಮಕ ಮಾಡಲಾಗಿತ್ತು. ಇದರ ಉದ್ದೇಶವೇನೆಂದರೆ, ತಾವು ಬೇಕಾದರೆ ನೋಡಿ, ಹಾವನೂರು ಆಯೋಗ ಹೊರತುಪಡಿಸಿದರೆ, ಹಾವನೂರು ಅವರೂ ಕೂಡ ಹಿಂದುಳಿದ ಸಮಾಜದ ಬಗ್ಗೆ ಬಹಳ ಆಸಕ್ತಿಯಿಟ್ಟು ಕೆಲಸ ಮಾಡಿದಂಥ

ವ್ಯಕ್ತಿಯಾದರೂ ಅವರೊಬ್ಬ ಅಡ್ವೋಕೇಟ್, ಜಡ್ಜ್ ಇಲ್ಲದಿರಬಹುದು. ಆದರೆ, ಒಬ್ಬ ಉತ್ತಮ ಅಡ್ವೋಕೇಟ್ ರೀತಿಯಲ್ಲಿ ಈ ಕೇಸ್‌ಗಳನ್ನು ಅನೇಕ ಸಾರಿ ಡೀಲ್ ಮಾಡಿ ಅನೇಕ ಬಾರಿ ಸುಪ್ರೀಂ ಕೋರ್ಟಿಗೆ ಹೋಗಿ ಹಿಂದುಳಿದ ಜನಾಂಗದ ಬಗ್ಗೆ ಸಾಕಷ್ಟು ರೀತಿಯಲ್ಲಿ ಹೋರಾಟ ಮಾಡಿದಂಥ ವ್ಯಕ್ತಿ. ಅದು ಎಕ್ಸೆಫ್ಷನಲ್ ಕೇಸಸ್. ಆದರೆ, ನಾವು ಕಾನೂನು ಮಾಡುವಾಗ ಎಲ್ಲವನ್ನೂ ವಿಚಾರ ಮಾಡಿ ಸಾರ್ವಜನಿಕವಾಗಿ ಅನುಕೂಲ, ಉಪಯೋಗವಾಗುವಂತಾದ್ದರ ಕಡೆ ನೋಡಬೇಕು. ಎಕ್ಸೆಪ್ಷನಲ್ ಕೇಸಸ್ ಒಂದೆರಡು ಇರಬಹುದು. ಹಾವನೂರು ಮತ್ತು ದೇವರಾಜ ಅರಸು ಅಂತಹವರಿರಬಹುದು. ದಿವಂಗತ ದೇವರಾಜ ಅರಸುರವರು ಸಮಾಜದ ಸಮಸ್ಯೆಗಳನ್ನು ಬಿಡಿ ಬಿಡಿಯಾಗಿ ತಿಳಿದುಕೊಂಡು ಹಿಂದುಳಿದವರಿಗೆ ಸಹಾಯ ಮಾಡತಕ್ಕಂಥ ವ್ಯಕ್ತಿತ್ವ ಹೊಂದಿ ಇಡೀ ಕರ್ನಾಟಕದಾದ್ಯಂತ ಒಂದು ಸಾಮಾಜಿಕ ಕ್ರಾಂತಿ ತಂದರು. ಅಂತಹ ವ್ಯಕ್ತಿಗಳು ವಿರಳ. ಇಂತಹವರನ್ನು ಗಮನದಲ್ಲಿಟ್ಟುಕೊಂಡು ಸೋಷಿಯಲ್ ಸೈಂಟಿಸ್ಟ್ ಅನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂಬ ಪದ ಉಪಯೋಗಿಸಿದರೆ ನಾಳೆ ಏನಾಗುತ್ತದೆಂದರೆ, ಇದೇ ಜನಾಂಗದಲ್ಲಿ ವಿದ್ಯಾಭ್ಯಾಸ ಕಡಿಮೆ ಇರತಕ್ಕಂಥವರು ಬರುತ್ತಾರೆ. ಏಕೆಂದರೆ, ಕೆಲವು ಸಲ ನಾವೇ ಮಾಡುತ್ತೇವೆ. ಮಂತ್ರಿಗಳಾದ ನಾವೇ ಅನೇಕ ಸಾರಿ ಏನು ಮಾಡುತ್ತೇವೆಂದರೆ, ಯಾರೋ ಒಬ್ಬ ಅಭ್ಯರ್ಥಿಯನ್ನು ಸಧ್ಯಕ್ಕೆ ಅಲ್ಲಿಗೆ ನೇಮಿಸಿ ಆರು ತಿಂಗಳುಗಳ ಕಾಲ ಕಛೇರಿ ನಡೆಯಲಿ, ನೋಡೋಣ. ಮುಂದೆ ಮತ್ತೆ ಯಾರಾದರೂ ಬಂದರೆ ಅವರನ್ನು ಸೇರಿಸೋಣ ಎನ್ನುವ ರೀತಿಯಲ್ಲಿ ಆಗುತ್ತದೆ. ತಮಗೆ ಗೊತ್ತಿರುವಂತೆ ಅನೇಕ ಸಂಸ್ಥೆಗಳಿಗೆ ಎಕ್ಸ್‌ಪರ್ಟ್‌ಗಳನ್ನು ಅಧ್ಯಕ್ಷರನ್ನಾಗಿ ನೇಮಿಸಬೇಕೆಂದಿದ್ದರೂ ಸಹ ಕೆಲವು ಸಲ ಅಂತಹವರು ಸಿಗದೆಹೋದರೆ ನಮಗೆ ಯಾರು ಬೇಕೋ ಅವರನ್ನು ನಾಮಿನೇಟ್ ಮಾಡುತ್ತೇವೆ. ಉದಾಹರಣೆಗೆ, ಎಂ.ಎಲ್.ಸಿ.ಗಳನ್ನು ನಾಮಿನೇಟ್ ಮಾಡಬೇಕೆಂದರೆ ಅವರು ಸಾಮಾಜಿಕ ಕಾರ್ಯಕರ್ತರಾಗಿರಬೇಕು, ಶಿಕ್ಷಣ ತಜ್ಞರಾಗಿರಬೇಕು, ಕಲಾವಿದರಾಗಿರಬೇಕು, ಯಾವುದಾದರೊಂದು ಕ್ಷೇತ್ರದಲ್ಲಿ ಪರಿಣಿತರಾಗಿರಬೇಕೆಂಬ ಪಟ್ಟಿ ಇರುತ್ತದೆ. ಆ ಪ್ರಕಾರ ನಾವು ಅಂತಹವರನ್ನು ನೇಮಿಸಬೇಕೆಂದಿದ್ದರೂ ರಾಜಕೀಯ ಒತ್ತಡದಿಂದ ನಮಗೆ ಬೇಕಾದವರನ್ನು ನಾಮಿನೇಟ್ ಮಾಡುತ್ತೇವೆ. ಅಂತಹ ಸಂದರ್ಭದಲ್ಲಿ ಸೋಷಿಯಲ್ ಸೈಂಟಿಸ್ಟ್ ಕೆಲವು ಸಲ ಇರುವುದಿಲ್ಲ, ಎಜ್ಯುಕೇಷನಿಸ್ಟ್ ಇರುವುದಿಲ್ಲ, ಆರ್ಟಿಸ್ಟ್ ಇರುವುದಿಲ್ಲ ಅಥವಾ ಯಾವುದೇ ವಿಧದಲ್ಲೂ ಪ್ರವೀಣರಾಗಿರುವುದಿಲ್ಲ. ಆದರೂ ಸಹ ಪೊಲಿಟಿಕಲ್ ಕಂಪಲ್ಷನ್‌ನಿಂದ ನಾವು ಆ ಕ್ರಮ ತೆಗೆದುಕೊಳ್ಳುತ್ತೇವೆ. ಅದಕ್ಕೋಸ್ಕರ ಹಿಂದೆ ಕಾನೂನಿನಲ್ಲಿ ಏನಿತ್ತು, ಅದೇ ಇರಲಿ. 67 ವರ್ಷ ಎಂದು ತೆಗೆದುಹಾಕಿದರೂ ಮೂರು ವರ್ಷಗಳ ಕಾಲ ಯಾರಿಗೇ ಮಾಡಿ, ಅದರ ಬಗ್ಗೆ ನನ್ನ ವಿರೋಧ ಏನೂ ಇಲ್ಲ. ಆದರೆ, ಇಲ್ಲಿ ಹೈಕೋರ್ಟ್ ಜಡ್ಜ್ ಮಾತ್ರ ಇರಬೇಕು. ಅವರು ಸಿಟ್ಟಿಂಗ್ ಜಡ್ಜ್ ಆದರೂ ಇರಲಿ, ರಿಟೈರ್ಡ್ ಜಡ್ಜ್ ಆದರೂ ಇರಲಿ, ಜಡ್ಜ್ ಇದ್ದರೆ ಆಯೋಗಕ್ಕೊಂದು ತೂಕ ಬರುತ್ತದೆ. ನಾಳೆ ಹಿಂದುಳಿದ ಜನಾಂಗಕ್ಕೆ ಏನೇ ಅನ್ಯಾಯವಾದರೂ ಅವರಿಗೆ ರಕ್ಷಣೆ

ಕೊಡತಕ್ಕಂಥ ಆ ಕುರಿತು ತಿಳಿವಳಿಕೆ ಇರುವ ವ್ಯಕ್ತಿ ಅಲ್ಲಿ ಬಂದು ಕುಳಿತರೆ ಅವರಿಂದ ಆ ಜನಾಂಗಕ್ಕೆ ಸಾಕಷ್ಟು ಅನುಕೂಲವಾಗುತ್ತದೆ. ಇಲ್ಲದಿದ್ದರೆ, ವಿಮ್ಸ್ ಅಂಡ್ ಫ್ಯಾನ್ಸಿಸ್ ಮೇಲೆ ಕೆಲವು ಸಲ ಡಿಸಿಷನ್ ತೆಗೆದುಕೊಳ್ಳುವುದಾಗುತ್ತದೆ. ಸೋಷಿಯಲ್ ಸೈಂಟಿಸ್ಟ್ ಎನ್ನುವ ಪದ ಬಹಳ ವಿಶಾಲವಾದುದಾಗಿದೆ. ಅದನ್ನು ಯಾರಿಗೆ ಬೇಕೋ ಅವರಿಗೆ ಅಪ್ಲಿಕಬಲ್ ಮಾಡಬಹುದು ಇಂಜಿನಿಯರ್ ಆಗಬಹುದು, ಎಜ್ಯುಕೇಷನಿಸ್ಟ್ ಆಗಬಹುದು, ಸೋಷಿಯಾಲಜಿ ಲೆಕ್ಚರರ್ ಕೂಡ ಆಗಬಹುದು.

ಶ್ರೀ ಕಾಗೋಡು ತಿಮ್ಮಪ್ಪ: ಈಗ ಡಾ॥ ಭೀಮಪ್ಪ ಎನ್ನುವವರಿದ್ದಾರೆ. ವೈಯಕ್ತಿಕ ಭಿನ್ನಾಭಿಪ್ರಾಯ ಬೇರೆ ಇರಬಹುದು. ಡಾ॥ ಭೀಮಪ್ಪನವರು ಬ್ಯಾಕ್‌ವರ್ಡ್ ಕ್ಲಾಸ್ ವಿಚಾರದಲ್ಲಿ ಅಪಾರವಾಗಿ ಅಧ್ಯಯನ ಮಾಡಿ ಸಾಕಷ್ಟು ವಿಚಾರಗಳನ್ನು ತಿಳಿದುಕೊಂಡಿದ್ದಾರೆ. ಅಂಥವರನ್ನು ನಾವು ನೇಮಕ ಮಾಡಬೇಕೆಂಬ ಪ್ರಶ್ನೆ ಬಂದರೆ ಏನು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಎಕ್ಸೆಪ್‌ಷನಲ್ ಕೇಸುಗಳು ಒಂದೆರಡು ಇರಬಹುದೆಂದು ಅದಕ್ಕೋಸ್ಕರ ನಾನು ಹೇಳಿದೆ. ಹಾವನೂರು, ದೇವರಾಜು ಅರಸು ಅಂಥವರು ಎಕ್ಸೆಪ್‌ಷನಲ್ ಕೇಸ್ ಇರಬಹುದು.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಹಾವನೂರ್‌ರವರು ಆಗ ಹೈಕೋರ್ಟ್ ಜಡ್ಜ್ ಆಗುವುದಕ್ಕೆ ಅರ್ಹತೆ ಇದ್ದಂಥ ವ್ಯಕ್ತಿಯಾಗಿದ್ದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಏಕೆ ಹೇಳುತ್ತೇನೆಂದರೆ, ಕಾನೂನು ಮಾಡುವಾಗ ಒಬ್ಬರು ಜಡ್ಜ್ ಅವರನ್ನು ನೇಮಕ ಮಾಡಬೇಕೆನ್ನುವ ಅವಶ್ಯಕತೆ ಏಕೆ ಇದೆಯೆಂದರೆ, ಈಗ ಓ.ಚಿನ್ನಪ್ಪರೆಡ್ಡಿ, ಮತ್ತು ವೆಂಕಟಸ್ವಾಮಿಯವರು ಜಡ್ಜ್ ಆಗಿದ್ದಾರೆ. ಇಡೀ ರಾಜ್ಯದಲ್ಲಿ ಯಾವುದೇ ಒಂದು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಇರಬಹುದು ಅಥವಾ ಎಸ್‌ಸಿ/ಎಸ್‌ಟಿ ಕಮಿಷನ್ ಇರಬಹುದು, ಹೆಚ್ಚು-ಕಡಿಮೆ ಇಂತಹ ಕಮಿಷನ್‌ಗಳಲ್ಲಿ ಕೆಲಸ ಮಾಡಲು ಶೇಕಡಾ 80-90ರಷ್ಟು ಜಡ್ಜ್‌ಗಳನ್ನೇ ನೇಮಕ ಮಾಡಲಾಗಿದೆ. ಆದುದರಿಂದ ಸೆಕ್ಷನ್ 3, ಸಬ್‌ಕ್ಲಾಸ್ 2ಕ್ಕೆ ತಾವು ಏನು ತಿದ್ದುಪಡಿ ತರುತ್ತಿದ್ದೀರಿ, ಇದನ್ನು ತರತಕ್ಕಂಥ ಅವಶ್ಯಕತೆಯಿಲ್ಲ. ಅದಕ್ಕೋಸ್ಕರ ಅದು ಹೇಗಿದೆಯೋ ಹಾಗೆ ಇಡಬೇಕು. ಮತ್ತು ಉಳಿದ ಸೆಕ್ಷನ್ 4ಕ್ಕೆ ಏನು ತಿದ್ದುಪಡಿ ತರುತ್ತಿದ್ದೀರಿ, ಅದು ಬೇಕಾದರೆ ಮೂರು ವರ್ಷಗಳಿರಲಿ, ಆದರೆ ಜಡ್ಜ್ ಮಾತ್ರ ಖಾಯಂ ಆಗಿರಬೇಕೆಂಬ ಮಾತು ಹೇಳುತ್ತೇನೆ. ದಯವಿಟ್ಟು ಅದನ್ನು ಬದಲಾವಣೆ ಮಾಡಬೇಕು, ಇಲ್ಲದಿದ್ದರೆ ಮೊದಲನೆಯದನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ: ಅಧ್ಯಕ್ಷರನ್ನು ನೇಮಕ ಮಾಡುವಾಗ ಸಂವಿಧಾನ ಹಾಗೂ ಕಾನೂನಿನ ಜ್ಞಾನ ಎರಡೂ ಕೂಡ ಇರಲೇಬೇಕಾಗುತ್ತದೆ. ಸನ್ಮಾನ್ಯ

ಹಾವನೂರು ಅವರಾಗಲೀ, ವೆಂಕಟಸ್ವಾಮಿ ಅವರಾಗಲೀ ಇರಲಿ. ಈ ಕಾನೂನನ್ನು ಮೊದಲು ತಂದು ಹೈಕೋರ್ಟ್ ಜಡ್ಜ್ ಅನ್ನು ಏಕೆ ತಂದರು ಎಂದರೆ ಸುಪ್ರೀಂ ಕೋರ್ಟ್‌ನಲ್ಲಿ ಹಲವಾರು ಜಡ್ಜ್‌ಮೆಂಟ್‌ಗಳಾದಾಗ, ಮಂಡಲ್ ಕಮಿಷನ್ ಜಡ್ಜ್‌ಮೆಂಟ್ ಆದಾಗ ಕೂಡ, ಇವನ್ನೆಲ್ಲಾವನ್ನೂ ಅರ್ಥೈಸಿಕೊಂಡು, ಮಂಡಲ್ ಕಮೀಷನ್ ಜಡ್ಜ್‌ಮೆಂಟ್‌ನಲ್ಲಿ ಈ ಸ್ಟೇಟ್‌ನಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್ ಮಾಡಬೇಕೆಂದು ಏನು ಡೈರೆಕ್ಷನ್, ತೀರ್ಮಾನ ಕೊಟ್ಟಿದ್ದಾರೆ, ಅದರ ಪ್ರಕಾರ ನೀವು ಮಾಡಿದ್ದೀರಿ. ಆದರೆ, ಇವರು ಮೊದಲು ಏನು ಮಾಡಿದರು ಎಂದರೆ ಮೆಂಬರ್ಸ್ ಮಾಡುವಾಗ ಒಬ್ಬ ಸೋಷಿಯಲ್ ಸೈಂಟಿಸ್ಟ್ ಇರಬೇಕೆಂದು ತಂದಿದ್ದಾರೆ. ಅಂದರೆ, "Clause 5: Persons who have special knowledge in matters relating to backward classes of whom one shall be a social scientist" ಎಂದು ಇದೆ. ಆದುದರಿಂದ, ಒಬ್ಬ ಮೆಂಬರ್ ಸೋಷಿಯಲ್ ಸೈಂಟಿಸ್ಟ್ ಇರುವಾಗ ಛೇರ್ಮನ್ ಅವರೇ ಆಗಬೇಕೆಂಬ ಅವಶ್ಯಕತೆಯಿಲ್ಲ. ಒಬ್ಬರು ಲೀಗಲ್ ನಾಲೆಡ್ಜ್ ಇರುವ ಸೋಷಿಯಲ್ ಸೈಂಟಿಸ್ಟ್ ಇದ್ದರೆ ಅದು ಸಂಪೂರ್ಣ ಆಗುತ್ತದೆ. ಯಾತಕ್ಕೋಸ್ಕರ ಯಾವ ಉದ್ದೇಶದಿಂದ ಇವರು ಇದನ್ನು ತಂದಿದ್ದಾರೋ ಗೊತ್ತಿಲ್ಲ. ಹಿಂದೆ ಸನ್ಮಾನ್ಯ ನಾರಾಯಣರಾವ್ ಕುದೂರ್ ಅವರನ್ನು ನೇಮಕ ಮಾಡಿದಾಗ, ಅವರು ಬೇಕಾದಷ್ಟು ಅವಕಾಶ ಕೊಡುತ್ತಾರೆ, ಈ ಕಮೀಷನ್‌ನಿಂದ ಉತ್ತಮ ತೀರ್ಪು ಬರುತ್ತದೆಂದು ನಾವು ಅವರಿಂದ ಸಾಕಷ್ಟು ನಿರೀಕ್ಷಿಸಿದ್ದೆವು. ಆದರೆ, ಕಾರಣಾಂತರಗಳಿಂದ ಅವರಿಗೆ ಇರುವಷ್ಟು ದಿವಸವೂ ಅವಕಾಶ ಕೊಡದೆ, ಕಛೇರಿ ತೆರೆಯಲು ಬಿಡದೆ....

ಶ್ರೀ ಕಾಗೋಡು ತಿಮ್ಮಪ್ಪ: ಪರ್ಸನಲಿ ನಾನೇ ಜವಾಬ್ದಾರಿ ತೆಗೆದುಕೊಂಡು ಆ ಜಾಗ ಖಾಲಿ ಮಾಡಿಸಿ ಅವರಿಗೆ ಕಛೇರಿ ವ್ಯವಸ್ಥೆ ಮಾಡಿಕೊಟ್ಟಿದ್ದೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಕೇವಲ ಆಫೀಸ್ ಮಾಡಿಕೊಟ್ಟು....

ಶ್ರೀ ಕಾಗೋಡು ತಿಮ್ಮಪ್ಪ: ನೋ, ನೋ, ಆಗ ಚುನಾವಣೆ ಬಂತು Within that whatever was possible, we did.

ಶ್ರೀಮತಿ ಪ್ರಮೀಳಾ ನೇಸರ್ಗಿ: ಅವರು ಎಷ್ಟು ದುಃಖ ಪಟ್ಟುಕೊಂಡು ಹೋದರೆಂಬುದು ತಮಗೂ ಕೂಡ ಗೊತ್ತಿದೆ.

SRI KAGODU THIMMAPPA: It is too much. I took so much pain to see that he should not be hurt.

ಶ್ರೀಮತಿ ಪ್ರಮೀಳಾ ನೇಸರ್ಗಿ: ಬರೀ ರೂಮ್ ಕೊಟ್ಟರೆ ಆಗುವುದಿಲ್ಲ, ಅವರಿಗೆ

ಅವಕಾಶ ಕೊಡಬೇಕಾಗಿತ್ತು, ಎಲ್ಲೆಲ್ಲಿ ಏನೇನು ಮಾಡಬೇಕಾಗಿತ್ತೋ ಅದನ್ನು ಮಾಡುವುದಕ್ಕೆ ಅವಕಾಶ ಕೊಡಬೇಕಾಗಿತ್ತು. 1995ರಲ್ಲಿ ತಂದರೂ ಒಂದೂ ಕೆಲಸ ಮಾಡಲು ಬಿಡಲಿಲ್ಲ, ಏನಾದರೂ ಅವಕಾಶ ಕೊಟ್ಟಿರಾ? ನೀವು ಅವರಿಗೆ ಬೇಕಾದಂಥ ಸೆಕ್ರೆಟರಿಯವರನ್ನು ಕೊಟ್ಟು ಕೆಲಸ ನಿರ್ವಹಿಸಲು ಅವಕಾಶ ಮಾಡಿಕೊಡಬೇಕಾಗಿತ್ತು, ಮಾಡಲಿಲ್ಲ. ಆದುದರಿಂದ ಇನ್ನು ಮುಂದೆ ಈ ರೀತಿ ಆಗಬಾರದು. ಅವರಿಗೆ ಟೆನ್ಯೂರ್ ಸಹ ಫಿಕ್ಸ್ ಮಾಡದೆ ದುಃಖ ಕೊಟ್ಟಿದ್ದೀರಿ, ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕು. ಇದು ಪರ್ಸನಲಿ ಅಲ್ಲ, ನ್ಯಾಯಾಧೀಶರ ಬಗ್ಗೆ ವಿಚಾರ ಬಂದಾಗ ಮಾತ್ರ ಹೇಳುತ್ತಿದ್ದೇನೆ. ಆಗ ಅವರು ದುಃಖ ಪಟ್ಟಿದ್ದು ನಿಜ.

ಶ್ರೀ ಎಂ.ವೀರಪ್ಪ ಮೊಯಿಲಿ: ನೀವು ಮಾತನಾಡಿದ್ದಕ್ಕೆ ನಾನು ಹೇಳಬೇಕಾಗಿದೆ. ಏಕೆಂದರೆ, ಯಾರೇ ಒಂದು ಕಮೀಷನ್ ಅಧ್ಯಕ್ಷರಾದರೂ ಆ ಒಂದು ಸಿದ್ಧಾಂತದಲ್ಲಿ ನಂಬಿಕೆ ಇರಬೇಕಾಗುತ್ತದೆ. ಬ್ಯಾಕ್‌ವರ್ಡ್ ಕ್ಲಾಸ್ ಕಾನ್‌ಸೆಫ್ಟ್ ಏನಿದೆ, ಅದರಲ್ಲಿ ನಂಬಿಕೆ ಇಲ್ಲದಿದ್ದರೆ, yes, with a bonafide belief we appointed him. You know what he has said? He said, I will not care for the Mandal Commission. It is not binding. ನನಗೆ ಹತ್ತು ವರ್ಷಗಳ ಕಾಲ ಅಧ್ಯಯನ ಮಾಡಲು ಅವಕಾಶ ಬೇಕು, ಆನಂತರ ನಾನು ನಿರ್ಣಯ ಕೊಡುತ್ತೇನೆಂದು ಹೇಳಿದರು, in a meeting, when the Chief Secretary was present. ಹಾಗಾದರೆ, ಅವರಿಗೆ ಹತ್ತು ವರ್ಷಗಳ ವಾಯಿದೆ ಕೊಡಬೇಕಾಗಿತ್ತೇ? ಮಂಡಲ್ ಕಮಿಷನ್ ವರದಿ ಮತ್ತು ಚಿನ್ನಪ್ಪರೆಡ್ಡಿ ಕಮೀಷನ್ ವರದಿಯಲ್ಲಿ ಏನು ಗುರ್ತು ಮಾಡಿದ್ದಾರೋ ಆ ಪ್ರಕಾರ ಪರ್ಮನೆಂಟ್ ಕಮಿಷನ್ ನಿರ್ಣಯ ಮಾಡಬೇಕು. In a meeting where so many people were present, the Hon'ble Minister was also present, he said I will not care for any of these reports, I will prepare my own report. ಆನಂತರ, ಆ ರಿಪೋರ್ಟ್ ತಯಾರಿಸುವುದಕ್ಕೆ ನಮಗೆ ಹತ್ತು ವರ್ಷ ಕಾಲಾವಕಾಶ ಬೇಕು ಎಂದರೆ ಅಷ್ಟರೊಳಗೆ ಬ್ಯಾಕ್‌ವರ್ಡ್ ಕ್ಲಾಸ್‌ನವರು ಸಾಯಬೇಕೆ? ಇದಕ್ಕೇನಾದರೂ ಅರ್ಥವಿದೆಯೇ? ಅವರು ಬಹಳ ವ್ಯಥೆ ಪಟ್ಟರು ಎಂದು ತಾವು ಹೇಳಿದರೆ that is his own making.

SMT. PRAMILA NESARGI: Mr. Moily, it is not fair on your part. ಅವರ ಬಗ್ಗೆ ಈ ರೀತಿ ಹೇಳುವುದು ಸರಿಯಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ: ಸರಿ. ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್ ಇರುವುದು ಯಾರಿಗೂ ಉದ್ಯೋಗ ಕೊಡಿಸುವುದಕ್ಕಲ್ಲ. We want some social justice to be served. ಇದು ಹತ್ತು ವರ್ಷ ಟೆನ್ಯೂರ್ ಕೊಡುವುದಕ್ಕೆ ಮಾಡುವಂಥಾದ್ದಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಅವರನ್ನು ನೇಮಕ ಮಾಡುವಾಗ ಏನು ಮಾಡುತ್ತಾರೆಂದು ಗೊತ್ತಿರಲಿಲ್ಲವೇ? ನಿಮಗೆ ಬೇಡವಾದಾಗ ಏನಾದರೂ ಕಾರಣ ಕೊಡಬಹುದು, ಅದಲ್ಲ, ಹತ್ತು ವರ್ಷ ಸಮಯ ಕೇಳಿದರೆಂಬ ಪ್ರಶ್ನೆಯಲ್ಲ. ಹಾಗಿದ್ದರೆ, ನೀವು ಕಮೀಷನ್ ಏಕೆ ಮಾಡುತ್ತೀರಿ? ಮಂಡಲ್ ಕಮೀಷನ್ ಈಗಾಗಲೇ ಇದೆಯಲ್ಲಾ, ಹಾವನೂರು ಕಮೀಷನ್ ಮತ್ತು ವೆಂಕಟಸ್ವಾಮಿ ಕಮೀಷನ್ ಕೂಡ ಇದೆ. ಇವೆಲ್ಲಾ ಏಕೆ ಬೇಕು? ಸುಪ್ರೀಂ ಕೋರ್ಟ್ ಡೈರೆಕ್ಷನ್ ಇರುವುದರಿಂದ ಮಾಡಬೇಕು. ಅಂದ ಮೇಲೆ ಮಂಡಲ್ ಕಮೀಷನ್ ಹೇಳಿದ್ದೇ ಮಾಡಬೇಕೆಂದಲ್ಲ ಮತ್ತು ಹಾವನೂರು ಕಮೀಷನ್ ಹೇಳಿದ್ದೇ ಮಾಡಬೇಕೆಂದಲ್ಲ. ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಎನ್ನುವುದನ್ನು ಗುರ್ತಿಸಿ ಮಾಡಬೇಕಾಗುತ್ತದೆ. ಕಮೀಷನ್‌ನಲ್ಲಿ ಬೇರೆ ಏನೇನು ಅನ್ಯಾಯಗಳಾಗಿದೆಯೋ ಅದೆಲ್ಲವನ್ನೂ ಕೂಡ ಸರಿಪಡಿಸಬೇಕಾಗಿದೆ. ಅದಕ್ಕೋಸ್ಕರ ಹೊಸ ಕಮೀಷನ್ ಮಾಡಿ ಯಾವ್ಯಾವ ಅನುಸೂಚಿತ ಜಾತಿಗಳು, ಹಿಂದುಳಿದ ಜಾತಿಗಳು ಬಿಟ್ಟುಹೋಗಿವೆಯೋ, ಸಿನಾನಿಮ್ಸ್ ಪದಗಳು ಬಿಟ್ಟುಹೋಗಿವೆಯೋ ಅದನ್ನೆಲ್ಲವನ್ನೂ ಸೇರಿಸಬೇಕಾಗುತ್ತದೆ. ಅದಕ್ಕೋಸ್ಕರ ನೀವು ಅದನ್ನೇ ಆಧಾರವಾಗಿಟ್ಟುಕೊಂಡು ಮಾಡುವುದಾಗಿದ್ದರೆ ಆನ್ ದಿ ರೆಫರೆನ್ಸ್ ಹಾಗೇ ಮಾಡಬೇಕು, on the basis of Mandal Commission and Havanur Commission ಮಾಡಿ ಎನ್ನುವುದಲ್ಲ, ಸುಪ್ರೀಂ ಕೋರ್ಟ್ ಡೈರೆಕ್ಷನ್ ಪ್ರಕಾರ ಪ್ರತಿಯೊಂದು ರಾಜ್ಯ ಕೂಡ ಅದೇ ವರ್ಷಕ್ಕೆ ಸಂಬಂಧಿಸಿದಂತೆ, ಆ ಜಾಗ ಭೌಗೋಳಿಕವಾಗಿ, ಚಾರಿತ್ರಿಕವಾಗಿ ಅವರು ನಿಜವಾಗಿಯೂ ಹಿಂದುಳಿದ ವರ್ಗದವರೇ ಅಲ್ಲವೇ ನಿಜವಾದ ಹಿಂದುಳಿದ ವರ್ಗದವರನ್ನು ಮೇಲ್ವರ್ಗಕ್ಕೆ ಸೇರಿಸಿದ್ದಾರೆಯೇ ಅಥವಾ ಮೇಲ್ವರ್ಗದವರನ್ನು ಹಿಂದುಳಿದ ವರ್ಗಕ್ಕೆ ಸೇರಿಸಿದ್ದಾರೆಯೇ? ಅವೆಲ್ಲವನ್ನೂ ಕೂಡ ಅವರು ಕೂಲಂಕಷವಾಗಿ ನೋಡಬೇಕಾಗುತ್ತದೆ. ಆದ್ದರಿಂದ ಮಂಡಲ್ ಕಮೀಷನ್ ಆಧಾರವನ್ನು ನಾವು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನಾವು ಹೋರಾಟ ಮಾಡಿದೆವು ಹಾವನೂರು ಕಮೀಷನ್ ಬಂದಾಗ. ಈಗಲೂ ಮಾಡುತ್ತೇವೆ. ಮಾಡುವುದಿಲ್ಲ ಎಂದು ನಾವು ಹೇಳುವುದಿಲ್ಲ. ಅನ್ಯಾಯ ಮಾಡಿದಾಗ ಹೋರಾಟ ಮಾಡಲೇಬೇಕಾಗುತ್ತದೆ. ಎಲ್ಲಾ ಜಾತಿಗಳಿಗೆ ಅನ್ಯಾಯ ಮಾಡಿದಾಗ ನಾವು ಹೋರಾಟ ಮಾಡಬೇಕಾಗುತ್ತದೆ. ಈಗಲೂ ಮಾಡುತ್ತೇವೆ. ಮುಂದೆಯೂ ಮಾಡುತ್ತೇವೆ. ನೀವು ಮುಂದೆ ಯಾವುದೇ ಕಮೀಷನ್ ತಂದರೂ ಕೂಡ ಅವರ ಮುಂದೆ ನಾವು ಹೋರಾಟ ಮಾಡುವವರಿದ್ದೇವೆ. ಅನ್ಯಾಯವಾದಾಗ ಸರಿಪಡಿಸಬೇಕಾದುದು ನಿಮ್ಮ ಕರ್ತವ್ಯ ನಮ್ಮ ಕರ್ತವ್ಯ. ಒಂದೇ ಒಂದು ವರ್ಗವನ್ನು ಮೇಲ್ವರ್ಗ ಎಂದು ಮಾಡಿ ಇಡೀ ಜನಾಂಗವನ್ನೇ ಅನ್ಯಾಯ ಮಾಡುವಂಥಾದ್ದಕ್ಕೆ ತೆಗೆದುಕೊಂಡು ಹೋದಾಗ ನಾವು ಸುಮ್ಮನೇ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಸರಿಯಾಗಿ ನ್ಯಾಯೋಚಿತವಾಗಿ, ಯಾರು ನ್ಯಾಯಾಧೀಶರು ಕಾನೂನು ತಿಳಿದುಕೊಂಡು ರಾಜ್ಯಾಂಗವನ್ನು ಆಧಾರವಾಗಿ ಇಟ್ಟುಕೊಂಡು ಮಾಡುತ್ತಾರೋ ಅಂತಹವರನ್ನು ಮಾಡಬೇಕು, ಸೋಷಿಯಲ್ ಸೈಂಟಿಸ್ಟ್ ಎನ್ನುವಂತಹ

ಹೆಸರಿನಲ್ಲಿ ಯಾರನ್ನಾದರೂ ತಂದು ಕೊಟ್ಟು ತಮಗೆ ಬೇಕಾದಂಥ ವ್ಯಕ್ತಿಯನ್ನು ಹಾಕಿಕೊಂಡು ಮತ್ತೆ ಇದೇ ಅನಾಹುತವಾಗುವುದಕ್ಕೆ ಕಾರಣ ಆಗಬಾರದು ಎನ್ನುವ ದೃಷ್ಟಿಯಿಂದ ಈ ಸೋಷಿಯಲ್ ಸೈಂಟಿಸ್ಟ್ ಎನ್ನುವಂತಹ ಪದವನ್ನು ತೆಗೆದು ನ್ಯಾಯಾಧೀಶರು ಎಂದು ಏನು ಇದೆ ಅದನ್ನೇ ಇಟ್ಟುಕೊಂಡು ಮುಂದೆ ಸೋಷಿಯಲ್ ಸೈಂಟಿಸ್ಟ್ ಎನ್ನುವಂತಹ ಮೆಂಬರ್ ಏನು ಇದ್ದಾರೆ ಅವರನ್ನು ಇಟ್ಟುಕೊಂಡು ಮಾಡಬೇಕು. ಇದನ್ನು ಡಿಲೀಟ್ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ): ಮಾನ್ಯ ಅಧ್ಯಕ್ಷರೇ, ಈಗ ತಂದಿರುವ ಮಸೂದೆಯನ್ನು ನಾನು ಅನುಮೋದಿಸುತ್ತೇನೆ. ಸಮಾಜಕ್ಕೆ ನ್ಯಾಯ ಕೊಡಬೇಕು ಅಂದರೆ ಯಾವುದೋ ಒಬ್ಬ ವ್ಯಕ್ತಿಯನ್ನು ತಂದು ಒಂದು ವರ್ಗದಲ್ಲಿ ಕೆಲಸ ಮಾಡಿದವರು ಎಂದು ಏಕೆ ನಾವು ಭಾವಿಸಿ ಕೊಳ್ಳಬೇಕು? ಯಾರಾದರೂ ಒಬ್ಬರು ಆ ಸಿದ್ಧಾಂತದಲ್ಲಿ ನಂಬಿಕೆ ಇರುವವರು, ಆ ಕ್ಷೇತ್ರದಲ್ಲಿ ದುಡಿದಿರುವವರು, ಆ ಕ್ಷೇತ್ರದಲ್ಲಿ ನುರಿತಿರುವವರು ಅಧ್ಯಕ್ಷನಾಗಿ ನ್ಯಾಯ ದೊರಕಿಸಬಹುದು ಸ್ಪೀಡ್ ಆಗಿ ಕೆಲಸ ಮಾಡಬಹುದು, ಅಂದಾಗ ಮಾನ್ಯ ಸಚಿವರು ಸೂಚನೆ ಸರಿಯಾಗಿದೆ. ಈ ಕೆಟಗರಿಯಲ್ಲಿ ಕೆಲಸ ಮಾಡಿರುವವರೇ. This is not an enquiry commission. ಇಲ್ಲಿ ಅಸಿಸ್ಟ್ ಮಾಡುವುದಕ್ಕೆ ಅಧಿಕಾರಿಗಳು ಇರುತ್ತಾರೆ. ನಾವು ಯಾವುದಾದರೂ ಬ್ಯಾಕ್‌ವರ್ಡ್ ಕಮಿಟಿ ಇನ್ನೊಂದು ಕಮಿಟಿಯನ್ನು ನಾವು ಮಾಡಿದಾಗ ಜಿಲ್ಲಾಧಿಕಾರಿಗಳಿಂದ ಹಿಡಿದು ಬಾಕಿ ಇರತಕ್ಕಂಥ ಎಲ್ಲಾ ಅಧಿಕಾರಿಗಳು ಅವರ ಸಹಾಯಕ್ಕೆ ಇರುತ್ತಾರೆ. ಹಾಗಾಗಿ ಇದನ್ನು ರಿಸ್ಟ್ರಿಕ್ಟ್ ಮಾಡಿ ಯಾವುದೋ ಒಂದು ನಿವೃತ್ತಿ ಹೊಂದಿರುವಂತಹ ಕೆಟಗರಿಗೆ ರಿಜರ್ವ್ ಮಾಡಬೇಕು ಎನ್ನುವಂತಹ ವಾದದಲ್ಲಿ ನಮಗಂತೂ ಹುರಳು ಇಲ್ಲ. ಸರ್ಕಾರದವರು ಏನು ಬಿಲ್ ತಂದಿದ್ದಾರೆ ಅದು ವಸ್ತುಶಃ ಸರಿಯಾಗಿದೆ. ಹಾಗಾದರೆ ಎಲ್.ಜಿ.ಹಾವನೂರ್ ಅವರು ಮಾಡಿದ್ದುದು ತಪ್ಪು ಎಂದು ನೀವೆಲ್ಲಾ ಇನ್ನು ಒಪ್ಪಿಕೊಳ್ಳುವುದಕ್ಕೆ ಆಗುತ್ತದೆಯೇ Was it not just to appoint Sri. L.G.Havanur as Commission? ಇವತ್ತು ಅವರು ಮಾಡುವುದಕ್ಕೆ ನಾವು ಬೆಂಬಲ ಕೊಡುತ್ತೇವೆ.

ಶ್ರೀ ಎಚ್.ಶಿವಪ್ಪ (ಹರಿಹರ): ಮಾನ್ಯ ಅಧ್ಯಕ್ಷರೇ, ಬೇರೆ ವರ್ಗದವರನ್ನು ಏಕೆ ಸಸ್‌ಪೆಕ್ಟ್ ಮಾಡಬೇಕು. ಇದೇ ರೀತಿಯಲ್ಲಿ ಮಾಡುತ್ತಾರೆ ಎಂದು ಏಕೆ ಎಕ್ಸ್‌ಪೆಕ್ಟ್ ಮಾಡಬೇಕು. ಆ ವರ್ಗದವರು ಆದರೆ ಮಾತ್ರ ಜ್ಯುಡಿಷಿಯಲ್ ವ್ಯೂ ಇದೆ ನಾನ್ ಜಡ್ಜ್‌ಸ್‌ಗೆ ಇಲ್ಲ ಎನ್ನುವ ಭಾವನೆ ಏಕೆ ತೆಗೆದುಕೊಳ್ಳುತ್ತೀರಿ? ಈಗ ಮಾನ್ಯ ಕಾಗೋಡು ತಿಮ್ಮಪ್ಪನವರು ಯಾರೋ ಒಬ್ಬರು ಡಾಕ್ಟರ್ ಭೀಮಪ್ಪ ಎನ್ನುವವರನ್ನು ಸಜಸ್ಟ್ ಮಾಡಿದಿರಿ.

(INTERRUPTIONS)

SRI H.SHIVAPPA: I need not be taught by Hon'ble Members. I know. I am quoting him. That is all. I cannot be prevented from quoting anybody. ಅವರಲ್ಲಿ ಹೇಳುವಂತಹ ಸತ್ಯ ಇದ್ದರೆ ಅವರು ಹೇಳಿದ್ದನ್ನೂ ಸಹ ನಾನು ಕೋಟ್ ಮಾಡುತ್ತೇನೆ. ಇಲ್ಲದಿದ್ದರೆ ಇಲ್ಲ ಎಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ನಾವು ಏನಾದರೂ ಅವರಿಗೆ ಪ್ರಿವೆಂಟ್ ಮಾಡಿದ್ದೇವೆಯೇ?

ಶ್ರೀ ಎಚ್.ಶಿವಪ್ಪ: ತಾವು ಹೇಳಿದಿರಲ್ಲಾ ಅಲ್ಲಿ ಮಂಡಿಸಿ ಇಲ್ಲಿ ಮಂಡಿಸಿ ಎಂದು I need not be directed to place my views here or there or elsewhere. I am doing it. ಸರ್ಕಾರ ತಂದಿರತಕ್ಕಂಥಾದ್ದು ಸರಿ ಇದೆ. ಮಾನ್ಯ ಮಾಧುಸ್ವಾಮಿ ಹೇಳಿದ್ದು ಸರಿ ಇದೆ. ಸೋಷಿಯಲ್ ಸೈಂಟಿಸ್ಟ್ ಯಾರಾದರೂ ಆಗಬಹುದು. ಜಡ್ಜ್‌ಗಳಿಗೆ ಮೀಸಲಿಟ್ಟು ನಾವೆಲ್ಲಾ ಅನರ್ಹರು ಎಂದು ಈಗಲೇ ನಾವು ಭಾವಿಸಬಾರದು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಇಂತಹ ವಿಚಾರಗಳಲ್ಲಿ ನಾವು ಬಹಳ ಮುಕ್ತ ಮನಸ್ಸಿನಿಂದ ಮತ್ತು ಇಂತಹ ವರ್ಗದ ಜನರಿಗೆ ಮೀಸಲಾತಿ ವಿಷಯದಲ್ಲಿ ಅನುಕೂಲಗಳನ್ನು ಕಲ್ಪಿಸುವಂಥಾದ್ದರಲ್ಲಿ ಈ ಹೋರಾಟದ ವಿಷಯವನ್ನು ತೆಗೆದುಕೊಂಡರೆ ಯಾರ‍್ಯಾರು ಹಿಂದುಳಿದ ವರ್ಗದವರಿಗೆ ಸೇರಿದವರಿಗಿಂತಲೂ ಹೆಚ್ಚಾಗಿ ಅನ್ಯಾಯವನ್ನು ಭೌತಿಕವಾಗಿ ವೈಚಾರಿಕವಾಗಿ ಯೋಚನೆ ಮಾಡಿ ಪ್ರತಿಭಟನೆ ಮಾಡಿರತಕ್ಕಂಥ ವಿಚಾರಗಳಲ್ಲಿ ಅನೇಕ ಸಂದರ್ಭಗಳಲ್ಲಿ ಇತಿಹಾಸದಲ್ಲಿ ಮುಂದುವರಿದ ಜನಾಂಗದಿಂದ ಬಂದಿರತಕ್ಕಂಥವರೇ. ಮತ್ತೆ ಬೇರೆ ಬೇರೆ ಸಂದರ್ಭಗಳಲ್ಲಿ ಸೌಕರ್ಯವುಳ್ಳವರು ಸೌಕರ್ಯರಹಿತವಾದ ಜನಗಳ ಪರವಾಗಿ ಹೋರಾಟ ಮಾಡಬೇಕೆಂದು ಸ್ವತಃ ಗಾಂಧೀಜೀಯವರು ಹೇಳುತ್ತಾರೆ. ಅವರಿಗೆ ಮಾತ್ರ ಸೌಕರ್ಯರಹಿತವಾಗಿರತಕ್ಕಂಥವರ ಪರವಾಗಿ ಗಟ್ಟಿಯಾಗಿ ನಿಂತು ಹೋರಾಟ ಮಾಡುವುದಕ್ಕೆ ಒಂದು ಧ್ವನಿಯನ್ನು ನೆಲೆಯನ್ನು ತಂದುಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರಗಳನ್ನು ಪ್ರಾರಂಭದಲ್ಲಿ ಬಸವಣ್ಣನವರಂತಹವರು ಆಗಬಹುದು, ಬುದ್ಧವೇ ಆಗಿರಬಹುದು, ಅಥವಾ ಇತ್ತೀಚಿನ ದಿನಮಾನಗಳಲ್ಲಿ ಮಹಾತ್ಮಾಗಾಂಧೀಜಿಯವರು ಆಗಬಹುದು, ಲೋಹಿಯಾರವರು ಆಗಬಹುದು ಅವರೆಲ್ಲರೂ ಸಹ ಸಾಮಾಜಿಕ ವಿಜ್ಞಾನಿಗಳಾಗಿ ಕೆಲಸ ಮಾಡಿದ್ದಾರೆ. ಅವರು ಇಂತಹ ವಿಚಾರಗಳ ಬಗ್ಗೆ ಪ್ರತಿಪಾದನೆ ಮಾಡಿದ್ದಾರೆ. ಇವರೇ ಸಮಾಜವಿಜ್ಞಾನಿಗಳಾಗಿರತಕ್ಕಂಥವರು ಮತ್ತು ನ್ಯಾಯಾಧೀಶರಾಗಲು ಅರ್ಹರಾಗಿರತಕ್ಕಂಥವರು ಆದ್ದರಿಂದ ನಾವು ಯಾರನ್ನಾದರೂ

ಒಬ್ಬರನ್ನು ತಂದು ಕೂರಿಸಿ ಅದರ ಇಡೀ ಉದ್ದೇಶವನ್ನು ಬದಲಾಯಿಸಬೇಕು ಎನ್ನುವಂತಹ ಉದ್ದೇಶ ಸರ್ಕಾರಕ್ಕೆ ಇಲ್ಲ. ಆದ್ದರಿಂದ ಸಮಾಜದ ವಿಜ್ಞಾನಿಯನ್ನು ತಂದಿದ್ದೇವೆ ಎಂದ ಕೂಡಲೇ ಯಾರನ್ನಾದರೂ ಒಬ್ಬ ವ್ಯಕ್ತಿಯನ್ನು ತಂದು ಕೂರಿಸುವಂತಹ ಮಾತು ಸರ್ಕಾರದ ದೃಷ್ಟಿಯಲ್ಲಿ ಇದೆ ಎಂದು ಅಲ್ಲ. ಯಾರು ಇದಕ್ಕೆ ಅರ್ಹರಾಗಿರುತ್ತಾರೆ ಇಂತಹ ಮೀಸಲಾತಿ ವಿಚಾರಗಳಲ್ಲಿ ಸ್ಪಷ್ಟವಾದ ನಿಲುವನ್ನು ತಾಳಿರುತ್ತಾರೆ, ಅಂತಹವರನ್ನು ಮಾಡಲಿಕ್ಕೆ ಸಾಮಾಜಿಕ ವಿಜ್ಞಾನಿಗಳನ್ನು ತಂದರೆ ತಪ್ಪಲ್ಲ. ಲೋಹಿಯಾರವರು ಒಬ್ಬ ಸಾಮಾಜಿಕ ಚಿಂತಕರಾಗಿದ್ದರು. ಸಮಾಜದ ವಿಜ್ಞಾನಿಗಳು ಆಗಿದ್ದರು ರಾಮಸ್ವಾಮಿ ನಾಯಕ್‌ರವರು ಯಾರು ಆಗಿದ್ದರು. ಈ ರೀತಿಯಾದಂತಹ ಜನರು ಅನೇಕರು ಇದ್ದಾರೆ. ಆದ್ದರಿಂದ ಪ್ರತಿಭಾವಂತರನ್ನು ಗುರುತಿಸಿ ಈ ಕೆಲಸ ಮಾಡುವುದಕ್ಕೆ ಸಾಧ್ಯತೆ ಇದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಅಧ್ಯಕ್ಷರೇ, ಹಿಂದುಳಿದವರ್ಗಗಳ ಆಯೋಗದ ತಿದ್ದುಪಡಿಯನ್ನು ಏನು ತಂದಿದ್ದಾರೆ ಇದರ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ ಈಗ ಕುದೂರ್ ಅವರನ್ನು ನೇಮಿಸಿದ್ದರು. ಮಂಡಲ್ ಕಮೀಷನ್ ಆಧಾರದ ಮೇಲೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಆದ ಮೇಲೆ ಒಂದು ಪರ್ಮನೆಂಟ್ ಬ್ಯಾಕ್‌ವರ್ಡ್ ಕಮೀಷನ್ ಆಗಬೇಕೆಂದು ಹೇಳಿ ಎಲ್ಲಾ ರಾಜ್ಯಗಳಲ್ಲಿ ಈ ಆಯೋಗವನ್ನು ರಚನೆ ಮಾಡಿದರು. ಆಗ ಅವರಿಂದ ಬಹಳ ಉತ್ತಮವಾದ ಕೆಲಸಗಳನ್ನು ನಿರೀಕ್ಷೆ ಮಾಡಿದ್ದರು. ಬಹುಶಃ ಅವರಿಗೆ ಏನೇನೋ ಕಾರಣಗಳು ಇರಬಹುದು ನಾವು ನಿರೀಕ್ಷೆ ಮಾಡಿದಷ್ಟು ಕೆಲಸ ಮಾಡುವುದಕ್ಕೆ ಆಗಲಿಲ್ಲ ಆಗ ನಾನೂ ಕೂಡ ಒಬ್ಬ ಸದಸ್ಯನಾಗಿದ್ದೆ. 4-5ತಿಂಗಳುಗಳ ಕಾಲ ಪರಿಣಾಮಕಾರಿಯಾದ ಕೆಲಸಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇದಾದ ಮೇಲೆ ಅವರು ರಾಜೀನಾಮೆಯನ್ನು ಕೊಟ್ಟರು. ನಂತರ ಸರ್ಕಾರಗಳು ಬದಲಾವಣೆಗಳು ಆದವು. ನಾನು ತಮ್ಮನ್ನು ಕೇಳತಕ್ಕಂಥ ಉದ್ದೇಶ ಇಷ್ಟೇ. ತಾವೇನು ಈಗ ತಿದ್ದುಪಡಿಯನ್ನು ತಂದು ಬಹಳ ಒಳ್ಳೆಯ ರೀತಿಯಿಂದ ಈ ಕೆಲಸವನ್ನು ಮಾಡಲು ಹೊರಟಿದ್ದೀರಿ, ನಾನು ತಮ್ಮನ್ನು ಕೇಳುತ್ತಿದ್ದೇನೆ ಕಳೆದ 3 ವರ್ಷಗಳಿಂದ ನಾವು ಈ ಸದನದಲ್ಲಿ ಪ್ರಶ್ನೆ ಕೇಳಿದಾಗ ತಾವೇ ಉತ್ತರ ಕೊಟ್ಟಿದ್ದೀರಿ, ನಮಗೆ ಒಳ್ಳೆಯ ಜಡ್ಜ್ ಸಿಗುತಿಲ್ಲ, ನಾವು ಜಡ್ಜ್‌ನ್ನು ನೋಡತಕ್ಕಂಥ ನಿರೀಕ್ಷೆಯಲ್ಲಿದ್ದೇವೆ ನಮಗೆ ಒಬ್ಬ ಒಳ್ಳೆ ನಿವೃತ್ತ ನ್ಯಾಯಾಧೀಶರು ಸಿಕ್ಕಿದರೆ ನಾವು ಆದಷ್ಟು ಮಾಡುತ್ತೇವೆಂದು ಹೇಳಿದಿರಿ. ಈಗ ತಾವು ಈ ತಿದ್ದುಪಡಿಯನ್ನು ತರುವುದರ ಮೂಲಕ ಏನು ಸಾದನೆಯನ್ನು ಮಾಡಿದ್ದೀರಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಬಹುಶಃ ತಾವು ಮನಸ್ಸು ಮಾಡಿದರೆ ಮಾಡಿದ್ದೀರಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಬಹುಶಃ ತಾವು ಮನಸ್ಸು ಮಾಡಿದ್ದರೆ ತಾವೂ ಕೂಡ ಒಬ್ಬ ಹಿಂದುಳಿದ ವರ್ಗದ ಮಂತ್ರಿಗಳಾಗಿದ್ದೀರಿ, ತಾವೂ ಸಹ ಈ ಬಗ್ಗೆ ಕಳಕಳಿ ಇರುವ ಒಬ್ಬ ಮಂತ್ರಿಯಾಗಿರುವುದರಿಂದ ಈಗ ತಂದ ತಿದ್ದುಪಡಿಯನ್ನು ಕಳೆದ 2 ವರ್ಷಗಳ ಹಿಂದೆ

ತಂದಿದ್ದರೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಾನು ಹೇಳುವುದಾದರೆ ತಾವು ಈ ವರ್ಗದ ಜನರಿಗೆ ಒಂದು ಸಾಮಾಜಿಕ ನ್ಯಾಯ ಕೊಟ್ಟಿರಿ ಎನ್ನುವ ಕೀರ್ತಿಗೆ ಪಾತ್ರರಾಗುತ್ತಿದ್ದಿರಿ. ನೀವು ಸುಮಾರು 3 ವರ್ಷಗಳ ಕಾಲ ಕಾಲಹರಣ ಮಾಡಿ ಸರ್ಕಾರ, ತಾವು ಸಾಮಾಜಿಕ ನ್ಯಾಯ ಕೊಡುತ್ತೇವೆಂದು ಹೇಳುವ ನೀವುಗಳು ಇದು ನಿಮ್ಮಿಂದ ಆಗಲಿಲ್ಲವಲ್ಲಾ ಎಂದು ನನಗೆ ದುಃಖವಾಗುತ್ತದೆ. ಇವತ್ತು ಈ ವರ್ಗದಲ್ಲಿ ಅನೇಕ ಜಾತಿಗಳು ಬಿಟ್ಟುಹೋಗಿವೆ ಈ ವರ್ಗದ ಜನರಿಗೆ ಬಹಳ ಅನ್ಯಾಯವಾಗಿದೆ. ಅವರಿಗೆ ಸಿಗಬೇಕಾದ ಸಹಾಯ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇವತ್ತು ಈ ಒಂದು ತಿದ್ದುಪಡಿಯನ್ನು ತಂದು ಒಬ್ಬ ನ್ಯಾಯಾಧೀಶರನ್ನು ಆದರೂ ನೇಮಿಸಿ ಒಂದು ಪಕ್ಷ ಅವರು ಸಿಗದೇ ಹೋದಲ್ಲಿ ತೀವ್ರಗತಿಯಿಂದ ಕಮಿಟ್‌ಮೆಂಟ್ ಇರತಕ್ಕಂಥ ಒಬ್ಬ ವ್ಯಕ್ತಿಯನ್ನು ನೇಮಿಸಿ ಈ ಕೆಲಸ ಮಾಡಲು ಚಾಲನೆಯನ್ನು ತಾವು ಕೊಟ್ಟಿದ್ದೇ ಆದರೆ ಆಗ ಈ ತಿದ್ದುಪಡಿ ತಂದಿದ್ದಕ್ಕೆ ಸಾರ್ಥಕವಾಗುತ್ತದೆ. ಆದ್ದರಿಂದ ಆದಷ್ಟು ಬೇಗ ತಾವು ಈ ಕಮಿಟಿಗೆ ಒಂದು ಅಸ್ತಿತ್ವ ಕೊಟ್ಟು ಅದಕ್ಕೆ ಹಣವನ್ನು ಕೊಟ್ಟು ಸಿಬ್ಬಂದಿಯನ್ನು ಕೊಟ್ಟು ಮಾಡಬೇಕು. ಅದು ಬಿಟ್ಟು ಕೇವಲ ನಾವು ನ್ಯಾಯಾಧೀಶರನ್ನು ತಂದು ಕೂರಿಸಿ ಕೆಲಸ ಮಾಡಿ ಎಂದು ಹೇಳಿದರೆ ನಾವು ಕಣ್ಣು ಕಟ್ಟಿ ಓಡಿ ಎಂದು ಹೇಳಿದಂತೆ ಆಗುತ್ತದೆ. ನ್ಯಾಯಾಧೀಶರಿಗೂ ಸಹ ನಾವು ಅನೇಕ ಸವಲತ್ತುಗಳನ್ನು ಕೊಡಬೇಕಾಗುತ್ತದೆ ಆರ್ಥಿಕ ವ್ಯವಸ್ಥೆ ಮಾಡಬೇಕಾಗುತ್ತದೆ. ಒಳ್ಳೆಯ ಕಮಿಟ್‌ಮೆಂಟ್ ಇರತಕ್ಕಂಥ ಸದಸ್ಯರನ್ನು ನೇಮಿಸಿ ಟೀಮ್ ವರ್ಕ್ ಎಂಬ ರೀತಿ ಮಾಡಬೇಕಾಗುತ್ತದೆ. ಆ ಬಗ್ಗೆ ತಾವು ತೀವ್ರವಾಗಿ ಆಲೋಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ ಶ್ರೀ ಎಂ.ವೀರಪ್ಪ ಮೊಯಿಲಿ (ಕಾರ್ಕಳ): ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ತಿದ್ದುಪಡಿ ವಿಚಾರದಲ್ಲಿ ಬಹಳ ಚರ್ಚೆಗೆ ಒಳಪಟ್ಟಿದ್ದು ಎಂದು ಹೇಳಿದರೆ ಅಧ್ಯಕ್ಷರು ಯಾರು ಇರಬೇಕು ಎನ್ನುವಂಥಾದ್ದು. ಯಾರು ಇರಬಾರದು ಎಂದು ಅಲ್ಲ. ಈಗ ಮಂಡಲ್ ಕಮಿಷನ್ ಮಾಡುವಾಗಲೂ ಸಹ ಮಂಡಲ್ ಕಮೀಷನ್ ಅಧ್ಯಕ್ಷರು ನ್ಯಾಯಾಧೀಶರಾಗಿರಲಿಲ್ಲ. ಅಥವಾ ಹಾವನೂರ್ ಕಮೀಷನ್ ಮಾಡುವಾಗಲೂ ಸಹ ಹಾವನೂರ್ ಅವರು ನ್ಯಾಯಾಧೀಶರಾಗಿರಲಿಲ್ಲ. ಈ ರೀತಿಯ ಸಾಮಾಜಿ ವಿಜ್ಞಾನ ಅಥವಾ ಸೋಷಿಯಲ್ ಇಂಜಿನಿಯರಿಂಗ್ ಎಂದು ಏನು ಹೇಳುತ್ತೇವೆ. ಅದಕ್ಕೆ ಸಂಬಂಧಪಟ್ಟ ವಿಚಾರ. ಈಗ ಪರ್ಮನೆಂಟ್ ಕಮಿಷನ್‌ಗೂ, ಮಂಡಲ್ ಕಮೀಷನ್‌ಗೂ, ಚಿನ್ನಪ್ಪರೆಡ್ಡಿ ಕಮೀಷನ್‌ಗೂ ಮತ್ತು ಹಾವನೂರು ಕಮೀಷನ್‌ಗೂ ಬಹಳ ವ್ಯತ್ಯಾಸ ಇದೆ. ಪರ್ಮನೆಂಟ್ ಕಮಿಷನ್ ಏನು ಮಾಡಬೇಕು ಎಂದರೆ ಈ ಮಂಡಲ್ ಪಂಚಾಯತ್‌ನಲ್ಲಿ ಏನು ಜಾತಿಗಳನ್ನು ಗುರುತಿಸಿರುತ್ತಾರೆ, ಅಥವಾ ನಮ್ಮಲ್ಲಿ ಚಿನ್ನಪ್ಪರೆಡ್ಡಿ ಕಮಿಷನ್ ಯಾವ ಜಾತಿಗಳನ್ನು ಗುರುತಿಸಿರುತ್ತಾರೆ, ಅಥವಾ ನಮ್ಮಲ್ಲಿ ಚಿನ್ನಪ್ಪರೆಡ್ಡಿ ಕಮೀಷನ್ ಯಾವ ಜಾತಿಗಳನ್ನು ಹಿಂದುಳಿದ ವರ್ಗ ಎಂದು ಗುರುತಿಸಿರುತ್ತಾರೆ, ಅದರ ಮೇಲೆ he has to sit over

the Judgement, ಅದು ಸರಿ ಇದೆಯೇ ಡಿಲೀಷನ್ ಮಾಡಬೇಕೇ, ಸೇರಿಸಬೇಕೇ ಎನ್ನುವ ಒಂದು ರೀತಿಯ ನ್ಯಾಯಾಧೀಕರಣದ ಕೆಲಸ ಅಲ್ಲಿ ಬರುತ್ತದೆ. Some judicial mind, Objective mind will have to be applied here ಕಮಿಷನ್ಸ್ ಒರಿಜನಲ್ ವರದಿ ಕೊಡುವುದಕ್ಕೂ, ಆಮೇಲೆ ಆ ವರದಿ ಗಮನದಲ್ಲಿಟ್ಟುಕೊಂಡು ಅದರ ಮೇಲೆ ನಿರ್ಣಯ ಕೊಡುವುದಕ್ಕೂ ಬಹಳ ವ್ಯತ್ಯಾಸ ಇದೆ. ಏನು ಈ ಮಂಡಲ್ ಕಮಿಷನ್ ಯಾವ ಲೆಕ್ಕಕ್ಕೂ ಇಲ್ಲ, ನಾನೇ ಒಂದು ಕಮಿಷನ್ ರಿಪೋರ್ಟ್ ಮಾಡುತ್ತೇನೆ ಎಂದರೆ ಅದಲ್ಲ ಕೆಲಸ. ಪರ್ಮನೆಂಟ್ ಕಮಿಷನ್ ಅಧ್ಯಕ್ಷರ ಕೆಲಸ ಮಂಡಲ್ ಕಮಿಷನ್ ಮಾಡತಕ್ಕ ಕೆಲಸ ಅಲ್ಲ. ಚಿನ್ನಪ್ಪರೆಡ್ಡಿ ಕಮಿಷನ್ ಮಾಡತಕ್ಕ ಕೆಲಸ ಅಲ್ಲ, ಮತ್ತು ಹಾವನೂರು ಕಮಿಷನ್ ಮಾಡತಕ್ಕ ಕೆಲಸ ಅಲ್ಲ. ಅವರ ಕೆಲಸವೇ ಬೇರೆ, ಅವರ ಜವಾಬ್ದಾರಿಯೇ ಬೇರೆ, He has to sit over the Judgment ಈ ಜಾತಿ ಸೇರಿಸಿದ್ದು ಸರಿಯೇ, ಇಲ್ಲವೇ ಇದನ್ನು ಹೊಸಜಾತಿ ಸೇರಿಸಬೇಕೇ he has to rise above that ಅಲ್ಲಿ ಕುಳಿತುಕೊಂಡು ಅವನು ಜಡ್ಜ್ ಮಾಡಬೇಕಾಗುತ್ತದೆ. ಆ ಅಧ್ಯಕ್ಷನಿಗೆ ಅಸಿಸ್ಟ್ ಮಾಡಲಿಕ್ಕೆ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ಅವರ ವಿಚಾರಗಳಲ್ಲಿ ವಿಶೇಷ ಜ್ಞಾನವನ್ನೂ ಹೊಂದಿರತಕ್ಕ ವ್ಯಕ್ತಿಗಳು ಇರುತ್ತಾರೆ. ಅಲ್ಲಿ ಸದಸ್ಯರಾಗಿ, ಮತ್ತು ಸಾಮಾಜಿಕ ವಿಜ್ಞಾನವನ್ನು ಹೊಂದಿರುವ ವ್ಯಕ್ತಿಗಳು ಸಹಿತ ಅಲ್ಲಿ ಇರುತ್ತಾರೆ. ಆದರೆ ಒಂದೇ ಕ್ಯಾಟಗರಿಯವರನ್ನು ಒಂದೇ ವರ್ಗದವರನ್ನು ಅಲ್ಲಿ ಹಾಕುವುದರಲ್ಲಿ ಅರ್ಥ ಇಲ್ಲ. ಅಲ್ಲಿ ಅವರ ಅಭಿಪ್ರಾಯಗಳನ್ನು ಸಂಗ್ರಹ ಮಾಡಿಕೊಂಡು, ಒಂದು ಜ್ಯುಡಿಷಿಯರಿಯಲ್ಲಿ ಪರಿಣತಿ ಇರುವವರನ್ನು ಜಡ್ಜ್‌ಮೆಂಟ್ ಬಗ್ಗೆ ಪರಿಣಿತಿ ಇರುವವರನ್ನು ಆತನಿಗೆ ಹಿಂದುಳಿದ ವರ್ಗಗಳ ಬಗ್ಗೆ ಫೈಥ್ ಇರಬೇಕು, ಯಾವುದೇ ಒಂದು ಫೈಥ್ ಹಿಂದುಳಿದವ ಬಗ್ಗೆ ಇಲ್ಲದೇ ಹೋದರೆ ಆತ ಹಿಂದುಳಿದ ವರ್ಗದವರ ವಿರುದ್ಧವೇ ಒಂದು ಲಾಬಿಯನ್ನೇ ಮಾಡತಕ್ಕ ಒಬ್ಬ ಮನುಷ್ಯನನ್ನು ನೀವು ಅಲ್ಲಿ ಕೂರಿಸಿದರೆ, ಅಲ್ಲಿ ಯಾವ ನ್ಯಾಯ ಕೂಡ ಸಿಗುವುದಿಲ್ಲ. ಆ ವರದಿಗಳನ್ನು ಅವರು ಸಮಾಧಿ ಮಾಡಿಬಿಡುತ್ತಾರೆ. ಸೋಷಿಯಲ್ ಜಸ್ಟೀಸ್ ಅನ್ನು ಸಹಿತ ಆತ ಸಮಾಧಿ ಮಾಡಿಬಿಡುತ್ತಾರೆ. ಸಮಾಧಿ ಮಾಡುವವರನ್ನು ಅಲ್ಲಿ ಕೂರಿಸಿದರೂ ಪ್ರಯೋಜನ ಇಲ್ಲ. Suppose you have throughout oppose. If you are made the chairman, what will happen?

(INTERRUPTIONS)

SMT.PRAMILA NESARGI: When I become a Chairman, I don't see all those things. When I apply my mind as a Chairman, it is something different.

(INTERRUPTIONS)

SRI M.P.PRAKASH: When you have a particular discretion, in a cause, you are likely to deviate. I full appreciate Mr. Veerappa's Moily stand that the persons who are wedded to this principle should be there.

ಶ್ರೀ ಎಂ.ವೀರಪ್ಪ ಮೊಯಿಲಿ: ಈ ಸಿದ್ಧಾಂತದಲ್ಲಿ ವಿಶ್ವಾಸವೇ ಇಲ್ಲದೆ ಇರತಕ್ಕ ಮನುಷ್ಯನನ್ನು ಅಲ್ಲಿ ಅಧ್ಯಕ್ಷನನ್ನಾಗಿ ಕೂರಿಸಿದರೆ ಎಲ್ಲಾ ಸಮಾಧಿಯಾಗುತ್ತದೆ. ಆದರೆ ಅವರು ಹೇಳುತ್ತಾರೆ, ನಾನು ಬೇರೆ ಬೇರೆ ಅವತಾರಗಳನ್ನು ತಾಳಬಲ್ಲೆ ಎಂದು ಹೇಳುತ್ತಾರೆ. ಸಹೋದರಿ ಹೇಳುವುದನ್ನು ಏಕೆ ಅಪ್ರಿಷಿಯೇಟ್ ಮಾಡಬಾರದು? ನಾನು ಅಧ್ಯಕ್ಷ ಸ್ಥಾನಕ್ಕೆ ಏರಿದ ಮೇಲೆ ನನ್ನ ಅವತಾರ ಬೇರೆ ಇದೆ ಎಂದು ಹೇಳಿದರೆ, We should appreciate that she is capable. Social transformation can take place. ನಮ್ಮ ಸಹೋದರಿ ಆ ಹೊಸ ಅವತಾರ ತಾಳಲಿಕ್ಕೆ ಸಾಧ್ಯ ಇದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ನಮಗೆ ಕರ್ತವ್ಯ ಮುಖ್ಯ. Work is worship. ನಾವು ಬಸವಣ್ಣನ ವಚನಗಳಲ್ಲಿ ನಂಬಿಕೆ ಉಳ್ಳತಕ್ಕವರು, ಯಾವ ಕೆಲಸ ಹೇಗೆ ಮಾಡಬೇಕು ಎಂಬುದು ಗೊತ್ತಿದೆ. ಆದುದರಿಂದ ತಾವು ಅಧ್ಯಕ್ಷರ ಸ್ಥಾನವನ್ನು ಕೊಟ್ಟರೆ ಮಿಸ್ ಯೂಸ್ ಮಾಡುತ್ತಾರೆ ಮತ್ತು ಪರ್ಸನಲಿ ಯೂಸ್ ಮಾಡುತ್ತಾರೆ ಎನ್ನುವ ವಿಷಯ ಅಲ್ಲ ಅದು. That is a wrong notion.

SRI M.VEERAPPA MOILY: You have fought against Land Reforms Act ಲ್ಯಾಂಡ್ ರಿಫಾರ್ಮ್ ಆಕ್ಟ್ ವಿರುದ್ಧ ಹೋರಾಟ ಮಾಡಿರುವವರು ನೀವು; ಅಲ್ಲಿ ಟ್ರಿಬ್ಯುನಲ್ ಮೆಂಬರ್ ಮಾಡಿ ಕೂರಿಸಿದರೆ ಅವರು ಯಾರಿಗೆ ಬೆಂಬಲ ಕೊಡುತ್ತಾರೆ, ಲ್ಯಾಂಡ್‌ಲಾರ್ಡ್‌ಗೆ ಜಸ್ಟೀಸ್ ಕೊಡುತ್ತಾರಾ? ಟೆನೆಂಟ್‌ಗೆ ಜಸ್ಟೀಸ್ ಕೊಡುತ್ತಾರಾ? ಅದೆಲ್ಲಾ ಬಿಡಿ ಈಗ ಬಾರ್ಡರ್ ಡಿಸ್‌ಪ್ಯೂಟ್ ಅನ್ನು ಡಿಸೈಡ್ ಮಾಡಲಿಕ್ಕೆ ನಾವು ಅಲ್ಲಿ ಮಹಾರಾಷ್ಟ್ರ ಏಕೀಕರಣದವರನ್ನು ಸದಸ್ಯರಾಗಿ ಕೂಡಿಸಿದರೆ ಅವರು ಯಾರ ಪರವಾಗಿ ಜಸ್ಟೀಸ್ ಕೊಡುತ್ತಾರೆ? ಅವರು ಕರ್ನಾಟಕದ ಪರವಾಗಿ ಜಡ್ಜ್‌ಮೆಂಟ್ ಕೊಡಲಿಕ್ಕೆ ಸಾಧ್ಯವಿಲ್ಲ.

(ಗೊಂದಲ)

ಶ್ರೀ ಕೆ.ಶ್ರೀನಿವಾಸ ಗೌಡ (ಕೋಲಾರ): ಹಿಂದೆ ಹಾವನೂರು ರಿಪೋರ್ಟ್ ಅನ್ನು ನಮ್ಮಲ್ಲಿ ಮಾಡಿದಾಗ, ಆ ಕಡೆ ಕುಳಿತುಕೊಂಡು ಆ ವರದಿಯನ್ನು ಹರಿದಂಥವರು, ಆ ಕಾನ್‌ಸೆಫ್ಟ್ ಅನ್ನು ಒಪ್ಪಿಕೊಂಡು ಮಂತ್ರಿಗಳಾದರು. ನಾನು ಗ್ಯಾಲರಿಯಲ್ಲಿ ಕುಳಿತುಕೊಂಡು ನೋಡುತ್ತಿದ್ದೆ, ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಆ ಕಡೆ

ಕುಳಿತುಕೊಂಡು ಆ ವರದಿಯನ್ನು ಹರಿದು ಹಾಕಿದರು. ಅವರು ಅದೇ ಸಭೆಯಲ್ಲಿ ಮಂತ್ರಿಗಳು ಆದರು.

ಶ್ರೀ ಎಂ.ವೀರಪ್ಪ ಮೊಯಿಲಿ: ಅವರು ಹಿಂದುಳಿದ ವರ್ಗಗಳ ಮಂತ್ರಿಗಳಾಗಲಿಲ್ಲ, ನಾನು ಇಲ್ಲಿ ಏಕೆ ಹಾಗೆ ಹೇಳಿದೆ ಎಂದರೆ, ತಾವೇ ಹೇಳಿದ್ದೀರಿ ನಾವೆಲ್ಲಾ ಹಾವನೂರು ಕಮೀಷನ್ ವಿರುದ್ಧ ಹೋರಾಟ ಮಾಡಿದ್ದೆವು ಎಂದು, ಅದಕ್ಕೆ ಹೇಳಿದ್ದು ಅಷ್ಟೆ. ನಾನು ಪ್ರಾಸಂಗಿಕವಾಗಿ ಹೇಳಿದೆನೇ ಹೊರತು ನೀವು ಈ ಬಗ್ಗೆ ಅದೇ ದೃಷ್ಟಿಯನ್ನು ಇಟ್ಟುಕೊಂಡಿದ್ದೀರೆಂದು ಹೇಳಲಿಲ್ಲ. May be you can always change views what is there ಆದುದರಿಂದ ಸನ್ಮಾನ್ಯ ಅಧ್ಯಕ್ಷರೆ, ನಾನು ತಿಳಿದುಕೊಂಡ ಹಾಗೆ, ಯಾವುದೇ ರಾಜ್ಯದಲ್ಲಿ ವರದಿಯ ಸಂಪೂರ್ಣ ಮಾಹಿತಿಯನ್ನು ತೆಗೆದುಕೊಂಡು ನ್ಯಾಯಾಧೀಶರನ್ನೇ ಪರ್ಮನೆಂಟ್ ಕಮಿಷನ್‌ನ ಅಧ್ಯಕ್ಷರನ್ನಾಗಿ ಮಾಡುತ್ತಾರೆ. ಎಲ್ಲಿಯೂ ಕೂಡ ನ್ಯಾಯಾಧೀಶರಲ್ಲದವರನ್ನು ಅಧ್ಯಕ್ಷರನ್ನಾಗಿ ಮಾಡಿಲ್ಲ. ಏಕೆ ಮಾಡಲಿಲ್ಲ ಅಂದರೆ ಅವರಿಗೆಲ್ಲಾ ಬುದ್ಧಿ ಇಲ್ಲ ನಮಗೆ ಮಾತ್ರ ವಿವೇಚನೆ ಇರುವುದು ಎಂದು ತಿಳಿದುಕೊಳ್ಳಬಾರದು, ಏಕೆಂದರೆ ಸಾಮಾಜಿಕ ವಿಜ್ಞಾನಿಗಳು ಎಲ್ಲಾ ಇರತಕ್ಕ ಕಡೆ ನ್ಯಾಯಾಧೀಶರೇ ಅಧ್ಯಕ್ಷತೆಯನ್ನು ವಹಿಸಿದೆ ಅವರಿಂದ ಅಬ್ಜೆಕ್ಟೀವ್ ಆಗಿ ಕಾನೂನು ಪ್ರಕಾರ ಒಂದು ಸರಿಯಾದ ನಿರ್ಣಯ ಕೊಡಲಿಕ್ಕೆ ಸಾಧ್ಯ. ಏಕೆಂದರೆ ಪರ್ಮನೆಂಟ್ ಕಮಿಷನ್‌ಗಳಲ್ಲಿ ಆಗತಕ್ಕ ನಿರ್ಣಯಗಳು ಮುಂದೆ ಸುಪ್ರೀಮ್ ಕೋರ್ಟ್, ಹೈಕೋರ್ಟ್ ಮತ್ತು ಬೇರೆ ಬೇರೆ ಕೋರ್ಟ್‌ಗಳಿಗೆ ಹೋಗುವುದರಿಂದ ಅದಕ್ಕನುಗುಣವಾಗಿ ನಾನು ತಿಳಿದ ಹಾಗೆ ಎಲ್ಲಾ ರಾಜ್ಯಗಳಲ್ಲೂ ಕೂಡ ನ್ಯಾಯಾಧೀಶರನ್ನೇ ಅಧ್ಯಕ್ಷರನ್ನಾಗಿ ಮಾಡುತ್ತಾರೆ. ಆಂಧ್ರದಲ್ಲಿ ನಮ್ಮ ಕರ್ನಾಟಕದ ಹೈಕೋರ್ಟ್ ನ್ಯಾಯಾಧೀಶರಾದ ಜಸ್ಟೀಸ್ ಪುಟ್ಟಸ್ವಾಮಿಯವರು ಅಧ್ಯಕ್ಷರಾಗಿದ್ದರು. ನಮ್ಮ ರಾಜ್ಯದಲ್ಲಿ ನ್ಯಾಯಾಧೀಶರು ಸಿಗದಿದ್ದರೆ, ಬೇರೆ ಕಡೆಯಿಂದ ಹಿಂದುಳಿದ ವರ್ಗಗಳ ಬಗ್ಗೆ ಫೈಥ್ ಇರುವವರನ್ನು ಅಧ್ಯಕ್ಷರನ್ನಾಗಿ ಮಾಡಬೇಕು. ಎಲ್ಲಾ ಜನರು ಹಿಂದುಳಿದ ವರ್ಗಗಳ ಪರವಾಗಿಯೇ ಇರುತ್ತಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದರೂ ಕೂಡ ಹಿಂದುಳಿದವರ್ಗಗಳ ಪರವಾಗಿ ಇರತಕ್ಕ ಮತ್ತು ಸದನದಲ್ಲಿ ನಂಬಿಕೆ ಉಳ್ಳ ಜನರು ಇದ್ದಾರೆ.

ಶ್ರೀ ಹೆಚ್.ಶಿವಪ್ಪ: ಅಲ್ಲ, ಅದನ್ನು ಹೇಗೆ ಪತ್ತೆ ಹಚ್ಚುತ್ತೀರಿ?

ಶ್ರೀ ಎಂ.ವೀರಪ್ಪ ಮೊಯ್ಲಿ: ಶಿವಪ್ಪನವರಿಗೆ ಪತ್ತೆ ಹಚ್ಚಲಿಕ್ಕೆ ಸಾಧ್ಯವಿಲ್ಲ. ಆದರೆ ಹಿಂದುಳಿದ ವರ್ಗಗಳ ವಿಚಾರದಲ್ಲಿ ನಂಬಿಕೆ ಇರತಕ್ಕ ಗುತ್ತೇದಾರ್‌ರವರಿಗೆ ಪತ್ತೆ ಹಚ್ಚಲಿಕ್ಕೆ ಸಾಧ್ಯವಿದೆ. ಮುಖ್ಯಮಂತ್ರಿಯವರಿಗೂ ಸಾಧ್ಯ ಇದೆ, ಪ್ರಕಾಶ್‌ರವರಿಗೂ ಸಾಧ್ಯವಿದೆ, ಅದನ್ನು ಪತ್ತೆ ಹಚ್ಚಲಿಕ್ಕೆ ಮಾನಸಿಕವಾದ ಸಿದ್ಧತೆ ಬೇಕು. ಜಿಗಜಿಣಗಿಯವರಿಗೆ, ಗುತ್ತೇದಾರರವರಿಗೆ ಸಾಧ್ಯವಿದೆ ಏಕೆಂದರೆ ಅವರು ಆ ಸಿದ್ಧಾಂತದಲ್ಲಿ ನಂಬಿಕೆ ಉಳ್ಳವರು ಅವರು. ಆದುದರಿಂದ ನ್ಯಾಯಾಧೀಶರಲ್ಲದವರನ್ನು ಪರ್ಮನೆಂಟ್ ಕಮಿಷನ್‌ಗೆ

ಅಧ್ಯಕ್ಷನನ್ನಾಗಿ ಮಾಡಬಾರದು ಎಂಬುದು ನಮ್ಮ ನೆಗೆಟೀವ್ ವಾದ ಅಲ್ಲ. ಇದು ಪಾಸಿಟೀವ್ ವಾದ. ನ್ಯಾಯಾಧೀಶರನ್ನೇ ಪರ್ಮನೆಂಟ್ ಕಮಿಷನ್‌ಗೆ ಅಧ್ಯಕ್ಷರಾಗಬೇಕು. ಆದುದರಿಂದ ಬೇರೆ ರಾಜ್ಯಗಳಿಂದ ವರದಿಯನ್ನು ತರಿಸಿಕೊಳ್ಳಿ, ಏಕೆ ಹಾಗೆ ಮಾಡಿದ್ದಾರೆ ಎಂಬುದರ ಬಗ್ಗೆ ತಿಳಿದುಕೊಳ್ಳಿ, ಇದರ ಬಗ್ಗೆ ಸಾಕಷ್ಟು ಸಮಾಲೋಚನೆ ಮಾಡಿ ಕನ್‌ಸಲ್ಟ್ ಮಾಡಿ, ಅವಸರದಿಂದ ಮಾಡಬೇಡಿ. ಏಕೆಂದರೆ ಈ ಕ್ಯಾಟಗರಿಗೆ ಜಾರಿ ಬಿದ್ದರೆ ಕಷ್ಟವಾಗುತ್ತದೆ. ಬರೀ ಸರ್ಕಾರ ಯಾವುದೂ ಶಾಶ್ವತ ಅಲ್ಲ,

6. 10 ಪಿ.ಎಂ

ಅವಕಾಶ ಸಿಗುತ್ತದೆ. ಏಕೆಂದರೆ ಇದು ಒಂದು ರೀತಿಯ ಪೊಲಿಟಿಕಲ್ ಎಕ್ಸ್‌ಪಿರಿಯೆನ್ಸಿ ಆಗಬಾರದು. ಇದು ಸಾಮಾಜಿಕ ನ್ಯಾಯವನ್ನು ಕೊಡತಕ್ಕಂಥ, ಪರಿಣಾಮಕಾರಿಯಾದಂಥ ಒಂದು ಸಂಸ್ಥೆಯಾಗಿರಬೇಕಾಗುತ್ತದೆ. ಇದರಲ್ಲಿ ಎಲ್ಲರಿಗೂ ನ್ಯಾಯ ಸಿಗುತ್ತದೆ ಎನ್ನುವ ಒಂದು ವಿಶ್ವಾಸ ಆ ಸಂಸ್ಥೆಯಲ್ಲಿ ಹುಟ್ಟಬೇಕು. ಯಾವುದೇ ಒಂದು ಸಂಸ್ಥೆ ಈ ಪ್ರಜಾಪ್ರಭುತ್ವದಲ್ಲಿ ಉಳಿಯಬೇಕಾದರೆ faith is important. Once faith is shaken, ಆ ಸಂಸ್ಥೆ ಅಶಕ್ತವಾಗುತ್ತದೆ, ಅಸಹಾಯಕವಾಗುತ್ತದೆ, ಯಾವುದೇ ಒಂದು ಸಾಮಾಜಿಕ ನ್ಯಾಯವನ್ನು ಕೊಡಲು ಆಗುವುದಿಲ್ಲ. ಆದ್ದರಿಂದ ಸಾಮಾಜಿಕ ನ್ಯಾಯ ಯಾವುದೇ ಒಂದು ಸಮಾಜದ ಒಪ್ಪಂದದ ವ್ಯವಸ್ಥೆ ಅಲ್ಲ. ಅದು ನಿರ್ದಿಷ್ಟವಾದಂಥ ಒಂದು ನ್ಯಾಯದ ಕಡೆಗೆ ಜನತೆಯನ್ನು ಕೊಂಡು ಹೋಗುವಂಥ ಒಂದು ಸಮರ್ಥವಾದ ಅಸ್ತ್ರ. ಆ ದೃಷ್ಟಿಯಿಂದ ತಾವು ಈ ಬಗ್ಗೆ ಒಂದು ಸ್ಪಷ್ಟವಾದಂಥ ಕಲ್ಪನೆ ಇದರಲ್ಲಿ ಇರಬೇಕಾದುದನ್ನು ಹೇಳಬೇಕಾಗುತ್ತದೆ. ಅಸ್ಪಷ್ಟವಾದಂಥ ಕಲ್ಪನೆ ಇರಲು ಆಗುವುದಿಲ್ಲ. ಅಸ್ಪಷ್ಟವಾದ ಕಲ್ಪನೆಯಿಂದ ತಾವು ಹೋದದ್ದೇ ಆದರೆ ಗುರಿಯನ್ನು ತಲುಪುವುದೂ ಕೂಡ ಅಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಹೇಳುವುದು, ನ್ಯಾಯಾಧೀಶರನ್ನು ಆಯ್ಕೆ ಮಾಡುವಾಗ ಕೂಡ ತಾವು ವಿಶೇಷವಾದಂಥ ವಿವೇಚನೆಯಿಂದ ಹೆಜ್ಜೆ ಹಾಕಿಕೊಂಡು ಹೋಗಬೇಕು. ತಾವು ಈಗ ಅಮೆಂಡ್‌ಮೆಂಟನ್ನು ಪಾಸ್ ಮಾಡಿಸಿಕೊಂಡು ಹೋಗಬಹುದು. ಆದರೆ ನೀವು ನೇಮಕ ಮಾಡುವಾಗ ಮಾತ್ರ, ರಾಷ್ಟ್ರದ ಯಾವ ಮೂಲೆಯಲ್ಲೇ ಇರಲಿ, ಈಗ ಚಿನ್ನಪ್ಪರೆಡ್ಡಿಯವರು ಇದ್ದಾರೆ. He was totally committed to the cause of the backward classes development. ಸುಪ್ರೀಂ ಕೋರ್ಟ್ ಜಡ್ಜ್ ಆಗಿದ್ದರು. ಆ ದೃಷ್ಟಿಕೋನ ಇರಬೇಕಾಗುತ್ತದೆ. ಸಾಮಾಜಿಕ ದೃಷ್ಟಿಕೋನ ಇಲ್ಲದೇ ಇರತಕ್ಕಂಥ ವ್ಯವಸ್ಥೆಯನ್ನು ದಯಮಾಡಿ ಮಾಡಬೇಡಿ ಮತ್ತು ಯಾವುದೇ ಒಂದು ವರದಿ ಬಂದರೂ ಕೂಡ, ಯಾವುದೇ ಒಂದು ನಿರ್ಣಯವನ್ನು ಪರ್ಮನೆಂಟ ಕಮೀಷನ್ ಕೊಟ್ಟರೂ ಕೂಡ, ಅದು ಎಲ್ಲಾ ಕೋರ್ಟುಗಳ ಕಟಕಟೆಯಲ್ಲಿ ಸಮರ್ಥವಾಗಿ ಒಂದು ಸವಾಲನ್ನು ಎದುರಿಸತಕ್ಕಂಥ ರೀತಿಯಲ್ಲಿ ಆ ವರದಿ ಇರಬೇಕೇ ಹೊರತು ಯಾವುದೇ ಒಂದು ಅನುಕೂಲಕ್ಕಾಗಿ ಅಥವಾ ತಾತ್ಕಾಲಿಕವಾದಂಥ

ವ್ಯವಸ್ಥೆಗಾಗಿ ನಿಲ್ಲತಕ್ಕಂಥ ಒಂದು ನಿರ್ಣಯ ಆಗಬಾರದು. ಈ ದೃಷ್ಟಿಯಿಂದ ಅಬ್ಜೆಕ್ಟೀವ್ ಆಗಬೇಕಾದರೆ, ಸರಿಯಾದಂಥ ಒಂದು ಅಡ್ಜುಡಿಕೇಷನ್ ಆಗಬೇಕಾದರೆ ಆ ನಿರ್ಣಯ ನಿಜವಾಗಿ ಸಾಮಾಜಿಕ ನ್ಯಾಯವನ್ನು ತೋರಿಸುವುದಲ್ಲ, ಅದು ಆ ಮಟ್ಟಕ್ಕೆ ತಲುಪಬೇಕಾಗುತ್ತದೆ. ಆ ಸಾಮಾಜಿಕ ನ್ಯಾಯ ಕೊನೆಯ ವರ್ಗಕ್ಕೂ, ಕೊನೆಯ ಒಂದು ಸಮಾಜದ ಪದರಕ್ಕೂ ಕೂಡ ದೊರಕಬೇಕಾದರೆ ಸರಿಯಾದಂಥ ನಿರ್ಣಯವನ್ನು ಮಾಡತಕ್ಕಂಥ ಒಂದು ಶಕ್ತಿ ಇರತಕ್ಕಂಥ, ನ್ಯಾಯ ಕೊಡತಕ್ಕಂಥ ಶಕ್ತಿ ಇರುವಂಥ ಒಬ್ಬ ವ್ಯಕ್ತಿಯನ್ನು ನೇಮಕ ಮಾಡಬೇಕು. ಆ ದೃಷ್ಟಿಯಿಂದ ತಾವು ಇದನ್ನು ಪುನಃ ವಿವೇಚನೆ ಮಾಡಬೇಕು ಎಂದು ತಮ್ಮ ಹತ್ತಿರ ಅಧ್ಯಕ್ಷರ ಮುಖೇನ ಕೇಳಿಕೊಳ್ಳುತ್ತೇನೆ.

+ ಶ್ರೀ ಮಾಲಿಕಯ್ಯ ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಮತ್ತು ವೀರಪ್ಪ ಮೊಯ್ಲಿಯವರು, ಕಾಗೋಡು ತಿಮ್ಮಪ್ಪನವರು ಮತ್ತು ಹಲವಾರು ಸದಸ್ಯರು ಹಿಂದುಳಿದ ವರ್ಗದ ವಿಧೇಯಕದ ಈ ಒಂದು ತಿದ್ದುಪಡಿಯ ಬಗ್ಗೆ ಕೆಲವೊಂದು ವಿಷಯಗಳಲ್ಲಿ ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಸೋಷಿಯಲ್ ಸೈಂಟಿಸ್ಟ್ ಎಂಬ ಪದವನ್ನು ಇಲ್ಲಿ ಉಪಯೋಗಿಸಿದಾಗ ಅದರ ಅರ್ಥ ರಿಟೈರ್ಡ್ ಜಡ್ಜ್ ಅಥವಾ ಅದರ ಅರ್ಥ ಇರತಕ್ಕಂಥ ಒಬ್ಬ ವ್ಯಕ್ತಿ ಮತ್ತು ವಕೀಲರಿಗೂ ಕೂಡ ಇದರಲ್ಲಿ ಅನುಭವವಿದ್ದುದರಿಂದ ಆ ಒಂದು ಪದವನ್ನು ಸೇರಿಸಿದ್ದೇವೆ. ಸೋಷಿಯಲ್ ಸೈಂಟಿಸ್ಟ್ ಅಥವಾ ಸಮಾಜದ ವಿಜ್ಞಾನಿ ಎನ್ನುವ ಪದದಿಂದ, ಯಾವುದೋ ಒಬ್ಬ ವ್ಯಕ್ತಿಯನ್ನು ಅಲ್ಲಿ ಕೂಡಿಸಿ ಈ ಒಂದು ವರ್ಗಕ್ಕೆ ಎಲ್ಲಿ ಅನ್ಯಾಯವಾಗುತ್ತದೋ ಎನ್ನುವ ಒಂದು ಆತಂಕದಿಂದ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯದ ಬಗ್ಗೆ ಬಹಳಷ್ಟು ಚರ್ಚೆಯನ್ನು ನಾವು ವಿಧಾನ ಪರಿಷತ್ತಿನಲ್ಲಿ ಮಾಡಿದ್ದೇವೆ. ಎಂಥ ಒಂದು ಸನ್ನಿವೇಶ ಬಂತು ಎಂದರೆ ಈ ''ಸಮಾಜ ವಿಜ್ಞಾನಿ'' ಎನ್ನುವ ಪದದ ಬಗ್ಗೆಯೇ. ಈ ಒಂದು ಪದದಿಂದ ಎಲ್ಲಿ ಈ ಒಂದು ವರ್ಗಕ್ಕೆ ಅನ್ಯಾಯವಾಗುತ್ತದೋ ಎನ್ನುವ ಭಾವನೆಯನ್ನು ಹಲವಾರು ಸದಸ್ಯರು ವ್ಯಕ್ತಪಡಿಸಿದರು. ಶಿವಪ್ಪನವರು, ಮಾಧುಸ್ವಾಮಿಯವರು ಯಾವ ರೀತಿ ಬೆಂಬಲ ಕೊಟ್ಟರು, ಆ ರೀತಿ ಕೆಲವರು ಬೆಂಬಲವನ್ನೂ ಕೂಡ ಕೊಟ್ಟರು. ಆ ಸಂದರ್ಭದಲ್ಲಿ ನಾನು ವಿಧಾನ ಪರಿಷತ್ತಿನ ಸಭಾಪತಿಯವರಿಗೆ ಒಂದು ಭರವಸೆಯನ್ನು ಕೊಟ್ಟೆ. ಬಿಲ್ಲನ್ನು ಮಂಡಿಸಿದಂಥ ಸಂದರ್ಭದಲ್ಲಿ, ಸದನದ ಸಭಾನಾಯಕರನ್ನು ಕರೆಸಿ, ಅವರ ಜೊತೆ ಚರ್ಚಿಸಿ, ಈ ವಿಷಯವನ್ನು ಏತಕ್ಕೋಸ್ಕರ ತಂದಿದ್ದೇವೆ ಎನ್ನುವುದರ ಬಗ್ಗೆ ಸಂಪೂರ್ಣವಾದಂಥ ಮನವರಿಕೆ ಮಾಡಿ, ಸಮಾಜದ ವಿಜ್ಞಾನಿ ಎನ್ನುವ ಪದದಿಂದ ನಾವು ಬೇರೆ ಯಾರನ್ನೂ, ಈ ವರ್ಗದ ಬಗ್ಗೆ ಕಾಳಜಿ ಇಲ್ಲದೇ ಇರುವಂಥ ವ್ಯಕ್ತಿಗಳನ್ನು ನಾವು ನೇಮಕ ಮಾಡುವುದಿಲ್ಲ ಎನ್ನುವ ಭರವಸೆಯನ್ನು ಕೊಟ್ಟೆ. ಆಗ ಈ ವಿಷಯದ ಬಗ್ಗೆ ಚರ್ಚಿಸಿದ ನಂತರ ಎಲ್ಲರ ಒಮ್ಮತದಿಂದ ವಿಧಾನ ಪರಿಷತ್ತಿನಲ್ಲಿ ಈ ಮೊದಲನೇ ಬಿಲ್ಲನ್ನು ಮಂಡಿಸಿ, ಅದ ಪಾಸ್ ಕೂಡ ಆಗಿದೆ. ವಿಧಾನಸಭೆಯಲ್ಲಿ ಕೂಡ ಪಾಸ್

ಮಾಡುತ್ತಾರೆ ಎಂದು ನಾನು ಈ ಸಂದರ್ಭದಲ್ಲಿ ಭಾವಿಸುತ್ತೇನೆ. ಒಂದು ಮಾತು, ನಾನು ಈ ಸದನಕ್ಕೆ ಭರವಸೆ ಕೊಡುತ್ತಿದ್ದೇನೆ, ನಾನು ಹಿಂದುಳಿದ ವರ್ಗದಿಂದ ಬಂದಂಥ ಒಬ್ಬ ವ್ಯಕ್ತಿ. ಸಮಾಜದ ವಿಜ್ಞಾನಿ ಎಂಬ ಪದದ ಬಗ್ಗೆ ಒಂದು ತಿದ್ದುಪಡಿಯನ್ನು ತಂದು, ಆ ವರ್ಗದ ಬಗ್ಗೆ ಚಿಂತನೆ ಇಲ್ಲದೇ ಇರತಕ್ಕಂಥ ಒಬ್ಬ ವ್ಯಕ್ತಿಯನ್ನು ನೇಮಕಾತಿ ಮಾಡಿ ಆ ವರ್ಗಕ್ಕೆ ಅನ್ಯಾಯ ಮಾಡತಕ್ಕಂಥ ಕೆಲಸವನ್ನು ಖಂಡಿತವಾಗಿ ನಾನು ಮಾಡುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈಗ ತಾವೆಲ್ಲಾ ಸಾಕಷ್ಟು ಚರ್ಚೆ ಮಾಡಿದ್ದೀರಿ. ಸಾಕಷ್ಟು ವಿಷಯಗಳ ಬಗ್ಗೆ ಸದನದ ಮುಖಾಂತರ ಸಮಾಜಕ್ಕೆ ಬೆಳಕನ್ನು ಚೆಲ್ಲತಕ್ಕಂಥ ಒಂದು ಪ್ರಯತ್ನವನ್ನು ಮಾಡಿದ್ದೀರಿ. ಆದ್ದರಿಂದ ದಯವಿಟ್ಟು ತಾವು ಇದಕ್ಕೆ ಮಾನ್ಯತೆ ಕೊಡಬೇಕು. ನಮ್ಮ ಚಿಮ್ಮನಕಟ್ಟಿಯವರು ಒಂದು ಮಾತನ್ನು ಹೇಳಿದರು, ಇದು ಎರಡು ವರ್ಷ ಏಕೆ ಹಿಂದೆ ಬಿತ್ತು? ಹಿಂದುಳಿದ ವರ್ಗದ ಬಗ್ಗೆ ಬಹಳ ಮಾತನಾಡುತ್ತೀರಿ, ಆಗಲೇ ನೀವು ಇದನ್ನು ಮಾಡಬೇಕಾಗಿತ್ತು ಎನ್ನುವ ಮಾತನ್ನು ಅವರು ಹೇಳಿದರು. ಅವರ ಮಾತಿನಲ್ಲಿ ಕೂಡ ಒಂದು ಸತ್ಯಾಂಶ ಇದೆ. ಹಲವಾರು ಜಾತಿಗಳನ್ನು ಈ ಬ್ಯಾಕ್‌ವರ್ಡ್ ಕಮೀಷನ್ನಿನಲ್ಲಿ ಸೇರಿಸಬೇಕಾದಂಥ ಪರಿಸ್ಥಿತಿ ಇತ್ತು. ಈ ಒಂದು ನೇಮಕಾತಿಯಾಗದೆ ನಮಗೆ ಇದನ್ನು ಸೇರಿಸುವುದಕ್ಕೆ ಆಗುತ್ತಿಲ್ಲ. ಕಾರಣವೇನೆಂದರೆ ನೇಮಕಾತಿ ಆಗಿಲ್ಲ. ಆದರೆ ನಾನು ಮಂತ್ರಿಯಾದಮೇಲೆ ಒಂದೇ ತಿಂಗಳಲ್ಲಿ ಜಸ್ಟೀಸ್ ವಿಠ್ಠಲ್‌ರಾವ್ ಎನ್ನುವ ರಿಟೈರ್ಡ್‌ಜಡ್ಜ್‌ಅನ್ನು ಕಳುಹಿಸಿ, ನೇಮಕಾತಿ ಮಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಎಲ್ಲಾ ಹಿರಿಯ ಸದಸ್ಯರ ಜೊತೆ ಮಾತನಾಡಿ, ಆಗ ನಮಗೆ ಇದೇ ಸಮಸ್ಯೆ ಉದ್ಭವಿಸಿತ್ತು. 67 ವಯಸ್ಸಿನವರದ್ದು. ಆಗ ಕೇವಲ ಐದಾರು ತಿಂಗಳಲ್ಲಿ ಅವರನ್ನೂ ಕೂಡ ಇಳಿಸಬೇಕಾಗುತ್ತಿತ್ತು. ಈ ಒಂದು ಕಾರಣದಿಂದ ಇದಕ್ಕೆ ಒಂದು ತಿದ್ದುಪಡಿಯನ್ನು ತಂದರೆ ಒಳ್ಳೆಯದು ಎಂದು ನಾನು ಕಾನೂನು ಮಂತ್ರಿಗಳ ಜೊತೆ ಮಾತನಾಡಿದಾಗ ಕಳೆದ ಅಧಿವೇಶನ ಮುಗಿದಿತ್ತು. ಈ ಅಧಿವೇಶನದಲ್ಲಿ ತರೋಣವೆಂದು ಕಾಯುತ್ತಿದ್ದೆವು. ಈಗಾಗಲೇ ಅಧಿವೇಶನ ಮುಗಿಯುವ ಹಂತದಲ್ಲಿದೆ. ಈಗಾಗಲೇ ಸಾಕಷ್ಟು ವಿಳಂಬವಾಗಿದೆ. ಕೂಡಲೇ ಒಂದು ಶಾಶ್ವತ ಆಯೋಗವನ್ನು ನೇಮಕಾತಿ ಮಾಡಬೇಕಾಗಿರುವುದರಿಂದ ಎಲ್ಲ ಮಾನ್ಯ ಸದಸ್ಯರು ಈ ವಿಧೇಯಕವನ್ನು ಪರ್ಯಾಲೋಚನೆಗೆ ಮಂಡಿಸಲು ಅವಕಾಶ ಕೊಟ್ಟು, ಇದನ್ನು ಅಂಗೀಕರಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಲ್ಲಿ ವಿನಂತಿಸಿಕೊಂಡು, ತಾವು ದಯವಿಟ್ಟು ಇದಕ್ಕೆ ಅವಕಾಶ ಕೊಡಬೇಕು ಎಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ;

''1997ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಉಪಾಧ್ಯಕ್ಷರು: '2 ಮತ್ತು 3ನೇಯ ಖಂಡಗಳು ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡು ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಹೆಸರು ಮತ್ತು ಅವತರಣಿಕೆ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ;

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1997 ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ;

''ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1997ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಊ) ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ 1997

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷರೇ, 1997ರ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೇ, ಇದರ ಮೇಲೆ ಚರ್ಚೆ ಮಾಡಬೇಕು.

ಶ್ರೀ ಮಾಲೀಕಯ್ಯ ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ಅಂಥ ಚರ್ಚೆ ಮಾಡಬೇಕಾದ ಪ್ರಮೇಯ ಇಲ್ಲವೆಂದೆನಿಸುತ್ತದೆ. ಏಕೆಂದರೆ ಈ ಹಿಂದೆ ಪ್ರಮಾಣ ಪತ್ರ ನೀಡುವುದಕ್ಕೆ ಸಂಬಂಧಪಟ್ಟಂತೆ ತಹಸೀಲ್ದಾರ್‌ರವರಿಗೆ ಕ್ಲಿಯರ್ ಡೈರೆಕ್ಷನ್ ಇರಲಿಲ್ಲ. ಆದರೆ ಈಗ ನಾವು ತಂದಿರುವ ತಿದ್ದುಪಡಿಯಿಂದ ನೇರವಾಗಿ ತಹಶೀಲ್ದಾರ್‌ರವರಿಗೆ ಡೈರೆಕ್ಷನ್ ಕೊಡಲಾಗಿದೆ. ಒಂದು ವೇಳೆ ಯಾವುದೇ ಕಾರಣದಿಂದ ಸರ್ಟಿಫಿಕೇಟ್ ಕೊಡುವುದಕ್ಕೆ ಅರ್ಜಿಯನ್ನು ತಹಸೀಲ್ದಾರ್ ರಿಜೆಕ್ಟ್ ಮಾಡಿದ ಪಕ್ಷದಲ್ಲಿ ಅಸಿಸ್ಟೆಂಟ್ ಕಮಿಷನರ್ ಹತ್ತಿರ ಅಪೀಲ್ ಹೋಗಬಹುದು. ಇದು ಬಹಳ ಸರಳವಾಗಿರುವುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಒಪ್ಪಿಗೆಯನ್ನು ಕೊಡಬೇಕು.

\+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೇ, ಈ ವಿಷಯವನ್ನು ನಾನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಈ ಹಿಂದೆ ಅಂದರೆ 1990ರಲ್ಲಿ ಈ ಕಾನೂನು ಜಾರಿಗೆ ಬಂತು. ಆದರೆ ಇದಕ್ಕೆ ರೂಲ್ಸ್ ಇಲ್ಲದ ಕಾರಣ ಸುಮಾರು ಎರಡು ಮೂರು ವರ್ಷಗಳಿಂದ ಅದು ಇಂಪ್ಲಿಮೆಂಟ್ ಆಗಲೇ ಇಲ್ಲ.

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್: ಇನ್ನು ಮೇಲೆ ಮಾಡುತ್ತೇವೆ. ಈ ಹಿಂದೆ ಅಪೀಲ್ ಹೋಗುವುದಕ್ಕೆ ಅವಕಾಶವಿರಲಿಲ್ಲ. ಈಗ ತಸಹೀಲ್ದಾರ್‌ರವರಿಗೆ ಡೈರಕ್ಷನ್ ಕೊಟ್ಟಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹಿಂದೆ ರೂಲ್ಸ್ ಇಲ್ಲದೇ ಇದ್ದುದ್ದರಿಂದ ಹುದ್ದೆಗಳ ನೇಮಕಾತಿಯಲ್ಲಾಗಲೀ ಅಥವಾ ಬಡ್ತಿಯಲ್ಲಾಗಲೀ ಈ ಕಾನೂನು ಜಾರಿಯಲ್ಲಿ ತರಬೇಕೆಂದರೂ ಕೂಡ ಆಗುತ್ತಿರಲಿಲ್ಲ. ಈಗ ಜಾತಿ ಪ್ರಮಾಣಪತ್ರವನ್ನು ಕೊಡುವುದಕ್ಕಾಗಿ ತಹಸೀಲ್ದಾರ್‌ರವರಿಗೆ ಕ್ಲಿಯರ್ ಡೈರಕ್ಷನ್ ಕೊಟ್ಟಿದ್ದೇವೆಯಾದ ಕಾರಣ ಅವರ ಮುಖಾಂತರ ಪ್ರಮಾಣಪತ್ರ ತೆಗೆದುಕೊಳ್ಳಬಹುದು ಎಂದು ಒಂದು ಅಂಶವಿದೆ. ಆದರೆ ತಹಸೀಲ್ದಾರ್‌ರವರಿಗೆ ಜಾತಿ ಪ್ರಮಾಣಪತ್ರವನ್ನು ಕೊಡುವುದಕ್ಕೆ ಆಥರೈಸೇಷನ್ ಕೊಡುವಾಗ ಬೋಗಸ್ ಕ್ಯಾಸ್ಟ್ ಸರ್ಟಿಫಿಕೇಟ್‌ಗಳನ್ನು ಕೊಡದೇ ಇರುವ ಹಾಗೆ ಮಾಡಬೇಕು. ಏಕೆಂದರೆ ಈಗಾಗಲೇ ಕೆಲವು ಜನರು ಬೋಗಸ್ ಕ್ಯಾಸ್ಟ್ ಸರ್ಟಿಫಿಕೇಟ್‌ಗಳನ್ನು ಪಡೆದುಕೊಂಡು ನೌಕರಿಗೆ ಸೇರಿದ್ದಾರೆ. ಆ ರೀತಿಯಲ್ಲಿ ಬ್ಯಾಂಕ್‌ಗಳಲ್ಲಿ ಸೇರಿದ್ದಾರೆ, ಕೆಲವು ಜನರು ಕೆ.ಪಿ.ಎಸ್.ಸಿ.ಪರೀಕ್ಷೆಗಳಲ್ಲಿ ಪಾಸಾಗಿರುವವರೂ ಕೂಡ ಇದ್ದಾರೆ, ಕೆಲವು ಜನರು ಮುನ್ಸೀಫ್ ಆಗಿದ್ದಾರೆ. ಈ ರೀತಿಯ ಕೇಸ್‌ಗಳಿಗೆ ಸಂಬಂಧಪಟ್ಟಂತೆ ಡಿ.ಐ.ಜಿ.ಸೆಲ್, ಎಸ್.ಸಿ./ಎಸ್.ಟಿ. ಸೆಲ್ ಮುಂದೆ ಪೆಂಡಿಂಗ್ ಇದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಲು ಕೆಲವರು ಹೆದರುತ್ತಾರೆ, ಏಕೆಂದರೆ ಬಡವರಿಗೆ ಇದರಿಂದ ಅನ್ಯಾಯವಾಗಿದೆ, ಬಡವರ ಹಕ್ಕನ್ನು ನೀವು ತೆಗೆದುಕೊಳ್ಳುತ್ತಿದ್ದೀರಿ ಎಂದು ಹೇಳಿ ಆ ರೀತಿ ಮಾಡಬೇಡಿ ಎಂದು ಬೋಗಸ್ ಸರ್ಟಿಫಿಕೇಟ್ ಪಡೆದವರಿಗೆ ಹೇಳಿದರೆ ಎಲ್ಲಿ ತಮ್ಮ ಮೇಲೆ ಅವರುಗಳು ಮೈಮೇಲೆ ಬೀಳುತ್ತಾರೋ ಎಂದು ಹೆದರಿ ಒಬ್ಬರೂ ಕೂಡ ಮಾತನಾಡುವುದೇ ಇಲ್ಲ. ಈ ರೀತಿಯಲ್ಲಿ ಇರುವಾಗಲೇ ರಿಕ್ರೂಟ್‌ಮೆಂಟ್‌ಗಳು ಆಗುತ್ತಿವೆ, ಬೋಗಸ್ ಸರ್ಟಿಫಿಕೇಟ್‌ನವರಿಗೆ ಪ್ರಮೋಷನ್ ಮೇಲೆ ಪ್ರಮೋಷನ್‌ಗಳೂ ಆಗುತ್ತಿವೆ ಬೇರೆಯವರನ್ನೂ ಕೂಡ ವಾಚ್ ಮಾಡುತ್ತಿದ್ದಾರೆ. ತಹಸೀಲ್ದಾರ್ ಆಗಿರುವವರು ಮತ್ತು ಮುನ್ಸೀಫ್ ಆದವರೇ ಫಾಲ್ಸ್ ಸರ್ಟಿಫಿಕೇಟ್ ತೆಗೆದುಕೊಂಡು ಅಧಿಕಾರಿಗಳಾಗಿರುವಾಗ ನಾವೇಕೆ ಆಗಬಾರದು ಎನ್ನುವ ಧೋರಣೆಯುಳ್ಳ ಅನೇಕ ಉದಾಹರಣೆಗಳು ಇವೆ. ನನಗೆ ತಿಳಿದಿರುವ ಹಾಗೆ ಇಂಥ ನೂರಾರು ಕೇಸ್‌ಗಳು ಪೆಂಡಿಂಗ್‌ನಲ್ಲಿವೆ. ಈ ರೀತಿಯ ಬೋಗಸ್ ಸರ್ಟಿಫಿಕೇಟ್‌ಗಳನ್ನು ಪಡೆದುಕೊಂಡಿರುವ ಬಗ್ಗೆ ಇರತಕ್ಕಂಥ ಕೇಸ್‌ಗಳನ್ನು ಬೇಗನೇ ತೀರ್ಮಾನ ಮಾಡಿಸಿ. ಇಂಥವುಗಳಲ್ಲಿ ಕೆಲವು ಜನರಿಗಾದರೂ ಶಿಕ್ಷೆ ಕೊಡಿಸತಕ್ಕಂಥ ಕೆಲಸವನ್ನ ಮಾಡಿ. ಆ ರೀತಿಯಲ್ಲಿ ಶಿಕ್ಷೆ ಕೊಟ್ಟರೆ ಬೇರೆಯವರಿಗೆ ಭಯ ಹುಟ್ಟುತ್ತದೆ. ಫಾಲ್ಸ್ ಸರ್ಟಿಫಿಕೇಟ್ ಪಡೆದುಕೊಂಡು ನೌಕರಿಗೆ ಸೇರಿ ಅಧಿಕಾರಿಗಳಾಗಿ ಸೇರಿದರೆ ಸರ್ಕಾರ ಒಂದಲ್ಲ ಒಂದು ದಿನ ಕೇಳಿಯೇ ಕೇಳುತ್ತದೆ ಎಂಬ ಬಗ್ಗೆ ಜನರಲ್ಲಿ ಅಥವಾ ಯಾರು ಈ ರೀತಿಯಲ್ಲಿ ಲಾಭವನ್ನು ಪಡೆದುಕೊಂಡಿದ್ದಾರೋ ಅಂಥವರಲ್ಲಿ ಮೆಡಿಕಲ್ ಸೀಟ್ ಪಡೆದುಕೊಂಡಿರುವವರಿರಬಹುದು, ಇಂಜನಿಯರಿಂಗ್ ಸೀಟ್ ಪಡೆದುಕೊಂಡಿರುವವರಿರಬಹುದು, ಇಂಥವರಿಗೆಲ್ಲಾ ಭಯ ಬಂದೇ ಬರುತ್ತದೆ. ಆದುದರಿಂದ ಇದರ ಬಗ್ಗೆ ಕಟ್ಟುನಿಟ್ಟಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇಂದು ಏನು ಸರ್ಟಿಫಿಕೇಟ್ ಇಷ್ಯೂ ಮಾಡುವುದಕ್ಕೆ ಸಂಬಂಧಪಟ್ಟಂತೆ

ತಹಸೀಲ್ದಾರ್‌ರವರು ಕಾಂಪಿಟೆಂಟ್ ಅಥಾರಿಟಿ ಇರುತ್ತಾರೆಂದು ಏನು ಮಾಡಿದ್ದಾರೆ ಅದರ ಜೊತೆಯಲ್ಲಿ ಈ ಬೋಗಸ್ ಸರ್ಟಿಫಿಕೇಟ್ ಕೊಡತಕ್ಕಂಥದ್ದನ್ನು ನಿಲ್ಲಿಸಬೇಕು, ತಡೆ ಹಿಡಿಯಬೇಕು. ಅದಕ್ಕೂ ಕೂಡ ಕಡಿವಾಣ ಹಾಕಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದಕ್ಕೆ ಸಂಬಂಧಪಟ್ಟ ರೂಲ್ಸ್ ಕೂಡ ಬಹಳ ಬೇಗನೇ ಆಗಬೇಕು. ಇದರೊಳಗಡೆ ಏನು ಹೇಳಿದ್ದಾರೆಂದರೆ ಪ್ರಿಸ್ಕ್ರೈಬ್ಡ್ ಎಂದು ಹೇಳಿಬಿಡುತ್ತಾರೆ, ಆದರೆ ಮೂರ್‍ನಾಲ್ಕು ವರ್ಷಗಳಾದರೂ ರೂಲ್ಸ್ ಫ್ರೇಮ್ ಆಗುವುದಿಲ್ಲ. ಆ್ಯಕ್ಟ್ ಇರುತ್ತದೆ, ಆದರೆ ರೂಲ್ಸ್ ಇಲ್ಲದೇ ಇರುವುದರಿಂದ ಅದು ಇಂಪ್ಲಿಮೆಂಟ ಆಗುವುದಿಲ್ಲ. ಉದಾಹರಣೆಗೆ ನಿಮಗೆ ಹೇಳುವುದಾದರೆ Sec.4 (c) (2) "Any person who has obtained a caste Certificate or an Income and Caste Certificate undr Sec.4 (a) of 4(b) appointing authority or any authority making admission to a course of study in the University or in any educational institution, may make an application to the Verification Committee in such form and in such manner as may be prescribed for issue of validity certificate". ಅಂದರೆ ಇದಕ್ಕೆ ರೂಲ್ಸ್ ಆಗಬೇಕು. ರೂಲ್ಸ್ ಮಾಡುವುದಕ್ಕೆ ವರ್ಷಾನುಗಟ್ಟಲೇ ಟೈಮ್ ತೆಗೆದುಕೊಳ್ಳುತ್ತಾರೆ. ಈ ರೀತಿಯಾದರೆ ನ್ಯಾಚುರಲೀ ನಮ್ಮ ಗುರಿ ಏನಿರುತ್ತದೆ ಆ ಗುರಿಯನ್ನು ಮುಟ್ಟುವುದಕ್ಕೆ ಆಗುವುದಿಲ್ಲ. ಆ ಕಾರಣಕ್ಕೋಸ್ಕರ ನಾವು ಯಾವ ಯಾವ ಕಾನೂನುಗಳನ್ನು ನಾವು ಪಾಸ್ ಮಾಡುತ್ತೇವೋ ಅದಕ್ಕೆ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಯವರು ಕುಳಿತು ರೂಲ್ಸ್ ಮಾಡಿದರೆ ಮಾತ್ರ ಇದರ ಬೆನಿಫಿಟ್ ಇಮ್ಮಿಡಿಯೇಟ್ ಸಿಗುತ್ತದೆ. ಈ ರೀತಿ ರೂಲ್ಸ್ ಇಲ್ಲದಿದ್ದರೆ ಮತ್ತೆ ಅಡ್‌ಹಾಕ್ ಬೇಸಿಸ್ ಮೇಲೆ ಅಡ್ಮಿಷನ್ಸ್ ಆಗುತ್ತವೆ, ಅಡಹಾಕ್ ಬೇಸಿಸ್‌ನಲ್ಲಿ ಸರ್ಟಿಫಿಕೇಟ್ ಕೊಡುತ್ತಾರೆ ಮತ್ತು ಅಡ್‌ಹಾಕ್ ಬೇಸಿಸ್‌ನಲ್ಲಿಯೇ ಎಲ್ಲವೂ ಕೂಡ ನಡೆಯುತ್ತದೆ. ಆದುದರಿಂದ ಇದರ ಜೊತೆಯಲ್ಲಿಯೇ ರೂಲ್ಸನ್ನೂ ಕೂಡ ಅಮೆಂಡ್‌ಮೆಂಟ್ ಮಾಡಿ ಇಮ್ಮಿಡಿಯೇಟ್ ಅದನ್ನು ಜಾರಿಯಲ್ಲಿ ತರಬೇಕು ಮತ್ತು ಬೋಗಸ್ ಸರ್ಟಿಫಿಕೇಟ್ ಕೊಡತಕ್ಕಂಥದ್ದನ್ನು ನಿಲ್ಲಿಸಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ.ವೀರಪ್ಪ ಮೊಯ್ಲಿ (ಕಾರ್ಕಳ): ಮಾನ್ಯ ಉಪಾಧ್ಯಾಕ್ಷರೇ, ಹೈಕೋರ್ಟ್ ಏನು ಆದೇಶವನ್ನು ಕೊಟ್ಟಿದೆ ಆ ಪ್ರಕಾರ ಈ ಮಸೂದೆಯನ್ನು ತರಲಾಗಿದೆ. ಇದರಲ್ಲಿ ಈ ಸರ್ಟಿಫಿಕೇಟ್ ಬಗ್ಗೆ ನಾಲ್ಕು ಹಂತಗಳಲ್ಲಿ ವ್ಯವಹರಿಸಬೇಕಾಗುತ್ತದೆ. ತಾವು ಹೇಳಿದಿರಿ ಒಂದನೇ ಹಂತದಲ್ಲಿ ತಹಸೀಲ್ದಾರ್ ಸರ್ಟಿಫಿಕೇಟ್ ಕೊಡುತ್ತಾರೆ, ಒಂದು ವೇಳೆ ಕೊಡದಿದ್ದಾಗ ಅಸಿಸ್ಟೆಂಟ್ ಕಮಿಶನರ್‌ರವರ ಹತ್ತಿರ ಅಪೀಲ್ ಹೋಗಬಹುದು ಎಂದಿರಿ. ತಾವು ಈ ರೀತಿ ಹೇಳಿದ್ದೀರಿ ಎಂಬುದರಿಂದ ಮಾತ್ರ ನಾವು ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ ಇದರಲ್ಲಿ ನೀವು ಹೇಳಲಿಲ್ಲ. You could

have put Tahsildar as a Certificate Issuing Authority. ಪುನಃ ಅದನ್ನು ರೂಲ್ಸ್‌ನಲ್ಲಿ ಹಾಕುವ ಬದಲು ನೇರವಾಗಿ ತಹಸೀಲ್ದಾರ್‌ರವರಿಗೆ ಹೆಸರಿಸಬಹುದು. ಆದರೆ ಆ ರೀತಿ ಮಾಡಿಲೇ ಇಲ್ಲ. ಇನ್ನು ನೀವು ಯಾರಿಗೆ ಇದನ್ನು ಮಾಡುತ್ತೀರೋ ನನಗಂತೂ ಗೊತ್ತಿಲ್ಲ. ನೀವೇನೋ ಹೇಳುತ್ತೀರಿ ತಹಸೀಲ್ದಾರ್‌ರವರಿಗೆ ಮಾಡುತ್ತೇವೆಂದು ಇದರಲ್ಲಿ ಏಕೆ ಅಸ್ಪಷ್ಟತೆ? ತಹಸೀಲ್ದಾರ್‌ರವರಿಗೆ ಎಂದು ಹೇಳಿ ಜವಾಬ್ದಾರಿ ತಿಳಿಸಿ ಇವರ ನಂತರ ಅಪೀಲ್‌ಗೆ ಎ.ಸಿ.ಯವರ ಹತ್ತಿರ ಹೋಗಬಹುದು ಎಂದು ಮಾಡಿ. ಈ ರೀತಿ ಮಾಡದಿದ್ದರೆ ಖರ್ಗೆಯವರು ಹೇಳಿದ ಪ್ರಕಾರ ರೂಲ್ಸ್ ಇನ್ನು ಯಾವಾಗ ಬರುತ್ತದೋ ಏನೋ ಗೊತ್ತಿಲ್ಲ. ಇದು ಸಣ್ಣ ಅಮೆಂಡ್‌ಮೆಂಟ್ ಆಗಿರುವುದರಿಂದ You try to get an order. ಮಾಡಿ ಇದನ್ನು ಈಗಲೇ ಮಾಡಬಹುದು. ತಹಸೀಲ್ದಾರಿಗೆ ಸಂಬಂಧಪಟ್ಟದ್ದು ಬೇಕಾದರೆ ನಾಳೆಗೆ ಬರಲಿ. ತಹಸೀಲ್ದಾರರಿಗೆ ಕಾಂಪಿಟೆಂಟ್ ಅಥಾರಿಟಿ ಎಂದು ಡೆಸಿಗ್‌ನೇಟ್ ಮಾಡಿ. ಎ.ಸಿ.ಯನ್ನು ಅಪಿಲೇಟ್ ಅಥಾರಿಟಿ ಎಂದು ಮಾಡಿ. ಇದು Appeal to Assist.Commissioner, ಅದನ್ನು ದಯಮಾಡಿ ಈಗಲೇ ಇಂಟ್ರಡ್ಯೂಸ್ ಮಾಡಿ. ನೀವು ರೂಲ್ಸ್‌ಗಾಗಿ ಪುನಃ ಕಾದುಕುಳಿತರೆ ಆರು ತಿಂಗಳೋ ಅಥವಾ ಒಂದು ವರ್ಷವೋ ಆಗುತ್ತದೆ. ನನ್ನ ಇನ್ನೊಂದು ವಿನಂತಿಯೆಂದರೆ ಈಗ ಮತ್ತೊಂದು ಕ್ಲಾಸ್ ವೆರಿಫಿಕೇಷನ್ ಎಂದು ಹೇಳಿದ್ದೀರಿ. ವೆರಿಫಿಕೇಷನ್ ಆದಮೇಲೆಯೇ ವ್ಯಾಲಿಡಿಟಿ ಬರುವುದು. ಆಕ್ಚುಯಲಿ ಆ ವ್ಯಾಲಿಡಿಟಿ ಅಪೀಲ್ ಪಿರಿಯಡ್ ಆದಮೇಲೆ Caste Certificate will not hold good unless that is validated. ಆದುದರಿಂದ ಇದಕ್ಕೆ ಬಹಳ ಟೈಮ್ ಕನ್‌ಸ್ಯೂಮ್ ಆಗುತ್ತದೆ. ಈ ಟೈಮ್ ಕನ್‌ಸ್ಯೂಮ್‌ನ್ನು ಕಡಿಮೆ ಮಾಡಬೇಕು ಎಂದರೆ 4(c) (3) Verification Certificate may after holding such enquiry as it deems fit within three months from ನೀವು ಅದಕ್ಕೆ ಡೀಮ್ಡ್ ಪ್ರಾವಿಷನ್ ಕೊಡಿ. ಇದಕ್ಕೆ ಜವಾಬ್ದಾರಿಯನ್ನು ಆ ಅಧಿಕಾರಿಗೆ ಕೊಡಿ. ಇಲ್ಲದಿದ್ದರೆ ಏನಾಗುತ್ತದೆಂದರೆ ರಿಜೆಕ್ಷನ್ ಅಥವಾ ಗ್ರ್ಯಾಂಟ್ ಮಾಡುವುದಕ್ಕೆ ಮೂರು ತಿಂಗಳಲ್ಲಿಯೇ ಅದನ್ನು ಮಾಡಬೇಕೆಂದರೆ it has no value at all. ಆದುದರಿಂದ ಮೂರು ತಿಂಗಳ ಕಾಲಾವಧಿಯನ್ನು ಕೊಡದೇ ಕೇವಲ ಒಂದು ತಿಂಗಳ ಕಾಲಾವಧಿ ಕೊಡಿ. ಆ ಒಂದು ತಿಂಗಳಲ್ಲಿ ವ್ಯಾಲಿಡಿಟಿ ಆಗದಿದ್ದರೆ it deems to have been valid ಎಂದು ಹೇಳಿ. ಇದಕ್ಕೆ ಡಿಲೇ ಮಾಡಬೇಡಿ. ಏಕೆಂದರೆ ಒಬ್ಬ ರಿಸರ್ವೇಷನ್ ಅಡಿಯಲ್ಲಿ ಪ್ರೊಫೆಷನಲ್ ಕಾಲೇಜ್‌ಗೆ ಅಡ್ಮಿಷನ್ ಆಗಬೇಕಾದರೆ ಅಥವಾ ಯಾವುದಾದರೂ ನೇಮಕಾತಿಗೆ ಹೋಗಬೇಕಾದರೆ ನಿಮ್ಮ ಸರ್ಟಿಫಿಕೇಟ್‌ಗಾಗಿ ಈ ಪ್ರೊಸೀಜರ್ ಪ್ರಕಾರ ನನಗೆ ತಿಳಿದಿರುವ ಹಾಗೆ 6 ತಿಂಗಳಾದರೂ ಕಾಯಬೇಕಾಗುತ್ತದೆ. ವ್ಯಾಲಿಡಿಟಿ ಸಿಗಬೇಕಾದರೆ 6 ತಿಂಳುಗಳ ಕಾಲ ಕಾಯಬೇಕಾಗುತ್ತದೆ. ದಯಮಾಡಿ ಅಷ್ಟು ಡಿಲೇ ಮಾಡಬೇಡಿ. ಏಕೆಂದರೆ ಇದರ ಬೆನಿಫಿಟ್ ಹೆಚ್ಚಾಗಿ ಬಡವರು

ತೆಗೆದುಕೊಳ್ಳಬೇಕಾಗಿರುತ್ತದೆ. ಸಾಮಾಜಿಕ ನ್ಯಾಯಕ್ಕಾಗಿ ಇರತಕ್ಕಂಥ ವಿಚಾರ ಇದಾಗಿದೆ. ಆದುದರಿಂದ ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕಾಗಿ 6 ತಿಂಗಳುಗಳ ಕಾಲ ಈ ಪ್ರೊಸಿಜರ್‌ಗಾಗಿ ಹಿಡಿದರೆ ಬಹಳ ಕಷ್ಟವಾಗುತ್ತದೆ. ಇನ್ನೊಂದು ವಿಷಯವೆಂದರೆ ಆ ಕ್ಲಾಸ್‌ನಲ್ಲಿ ಹೇಳಿದ ಹಾಗೆ ಈಗ ವೆರಿಫಿಕೇಷನ್ ಆಗಿ ವ್ಯಾಲಿಡಿಟಿ ಸರ್ಟಿಫಿಕೇಟ್ ಕೊಟ್ಟಮೇಲೆ it should be final unless it is appealed against. ಅದನ್ನು ಫೈನಲ್ ಮಾಡಬೇಕು. ಏಕೆಂದರೆ ಈ ಎಲ್ಲಾ ಸರ್ಟಿಫಿಕೇಟ್‌ಗಳನ್ನು ಕೊಟ್ಟು ಪ್ರೊಸೀಜರ್ ಪ್ರಕಾರ ಅಪಾಯಿಂಟ್‌ಮೆಂಟ್ ಆಗಬೇಕಾದರೆ ಏನಾಗುತ್ತದೆಂದರೆ ಪುನಃ ಅಪಾಯಿಂಟ್‌ಮೆಂಟ್ ವಿಚಾರದಲ್ಲಿ ಕೆ.ಪಿ.ಎಸ್.ಸಿ.ಯವರಾಗಲಿ ಅಥವಾ ಯಾವುದೇ ಡಿಪಾರ್ಟ್‌ಮೆಂಟಲ್ ಕಮಿಟಿಯಾಲೀ ನೇಮಕಾತಿ ವಿಷಯದಲ್ಲಿ ರಿಕ್ರೂಟ್‌ಮೆಂಟ್ ಆದಮೇಲೆ again it is sent to the Districts. ಕೆಲವು ಸಂದರ್ಭಗಳಲ್ಲಿ ಕೆ.ಪಿ.ಎಸ್.ಸಿ.ಯಲ್ಲಿ ಸೆಲೆಕ್ಷನ್ ಆಗಿದ್ದರೂ ಕೂಡ ಎರಡು ಮೂರು ವರ್ಷಗಳಾದರೂ ಕೂಡ ಈ ಅಪಾಯಿಂಟ್‌ಮೆಂಟ್ ಲೆಟರ್‌ನ್ನು ಇಷ್ಯೂ ಮಾಡುವುದಕ್ಕೆ ಆಗುತ್ತಿಲ್ಲ. ಅದಕ್ಕೋಸ್ಕರ ಆ ಪ್ರೊಸೀಜರ್‌ನ್ನು ಕಟ್‌ಶಾರ್ಟ್ ಮಾಡಬೇಕು ಮತ್ತು ಅದಕ್ಕೊಂದು ಕ್ಲಾಸ್ ಸೇರಿಸಬೇಕು, ಏನೆಂದರೆ, Unless it is appealed against, it is held to be final ಎಂದು ಹೇಳಿ ಮಾಡಿದಮೇಲೆ that validity certificate will hold good even for production during the recruitment before the recruiting authority like the KPSC. ಆದುದರಿಂದ ಮುಂದೆ ಪುನಃ ಅದು ಡಿ.ಸಿ.ಗೆ ಹೋಗತಕ್ಕಂಥದ್ದು, ಪುನಃ ವೆರಿಫೈ ಮಾಡತಕ್ಕಂಥದ್ದು ಮತ್ತೆ ಪುನಃ ಅದು ವಾಪಸ್ ಬರತಕ್ಕಂಥದ್ದು ಆಗುತ್ತದೆ. ಈಗ ರಿಕ್ರೂಟ್‌ಮೆಂಟ್ ಮುಗಿದು ಎರಡ್ಮೂರು ವರ್ಷಗಳಾದರೂ ಸೆಲೆಕ್ಷನ್ ಆಗಿದ್ದರೂ ನೇಮಕಾತಿ ಆದೇಶದ ಪತ್ರಕ್ಕಾಗಿ ಅಭ್ಯರ್ಥಿಗಳು ಕಾಯತಕ್ಕಂಥ ಅರಾಜಕತೆಯ ಸ್ಥಿತಿ ಇದೆ. ಆದುದರಿಂದ ಈಗ ತಾವು ಏನು ಮಸೂದೆ ತಂದಿದ್ದೀರಿ ಅದರಲ್ಲಿ ನಾನು ಹೇಳಿದ ತಿದ್ದುಪಡಿಯನ್ನು ಮಾಡಿ ನಾಳೆ ಇದನ್ನು ತೆಗೆದುಕೊಂಡು ಬನ್ನಿ. ನಾನು ಹೇಳಿದ ಅಂಶ ಬಹಳ ಉಪಯುಕ್ತವಾಗಿದೆ. ಆ ರೀತಿ ಮಾಡದಿದ್ದರೆ ಸುಮ್ಮನೇ ಹೆಚ್ಚು ಟೈಮ್ ಕನ್‌ಸ್ಯೂಮ್ ಆಗುತ್ತದೆ. ಇದಲ್ಲದೆ ವ್ಯಾಲಿಡಿಟಿ ಸರ್ಟಿಫಿಕೇಟ್ ಕೊಟ್ಟರೂ ಕೂಡ ಈ ಕ್ಯಾಸ್ಟ್ ಸರ್ಟಿಫಿಕೇಟ್‌ಗಾಗಿ ನೇಮಕಾತಿ ವಿಷಯದಲ್ಲಿ ಮತ್ತೆ ಎರಡ್ಮೂರು ವರ್ಷಗಳು ಕಾಯಬೇಕಾಗುತ್ತದೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಮಾನ್ಯ ಉಪಾಧ್ಯಕ್ಷರೇ, ರೂರಲ್‌ನಲ್ಲಾದರೆ ತಹಸೀಲ್ದಾರ್‌ರವರಿಗೆ ಕಳುಹಿಸುತ್ತೀರಿ. ಆದರೆ ಬೆಂಗಳೂರು ಸಿಟಿ ಅಥವಾ ಮುನಿಸಪಲ್ ಏರಿಯಾಗಳಲ್ಲಿ ಆ ಮನೆಯವರ ಇನ್‌ಕಮ್ ಎಷ್ಟು ಎಂಬುದು ರೆವಿನ್ಯೂ ಇನ್ಸ್‌ಪೆಕ್ಟರ್‌ರವರಿಗೆ ಗೊತ್ತಿರುತ್ತದೆಯೆ? ತಹಸೀಲ್ದಾರ್‌ರವರು ಯಾರ ಮನೆಯ ಇನ್‌ಕಮ್ ಎಷ್ಟಿದೆ ಎಂಬುದನ್ನು ನೋಡುವುದಕ್ಕೆ ಆಗುವುದಿಲ್ಲ.

ವೆರಿಫಿಕೇಷನ್ ಮಾಡಬೇಕಾಗುತ್ತದೆ. ಆದುದರಿಂದ ನೀವು ರೂರಲ್ ಏರಿಯಾಗಳಲ್ಲಿ ತಹಸೀಲ್ದಾರ್‌ರವರಿಗೆ ತನ್ನಿ ಆದರೆ ಬೆಂಗಳೂರು ಕಾರ್ಪೊರೇಷನ್‌ಗಳಲ್ಲಿ ಕಂದಾಯಾಧಿಕಾರಿಗಳನ್ನು ತಂದರೆ ಅಥವಾ ಕಾರ್ಪೊರೇಷನ್ ಮುಖಾಂತರ ತಂದರೆ ಆಗುತ್ತದೆ. ಅದಕ್ಕೋಸ್ಕರ ತಾವು ಬೇರೆತಂದು ಇದರ ಬಗ್ಗೆ ಮಸೂದೆ ಪಾಸ್ ಮಾಡಬೇಕಾಗುತ್ತದೆ. ಅಧ್ಯಕ್ಷರೇ, ನನಗೆ ಬಹಳ ದುಃಖವಾಗುತ್ತಿದೆ, 1993ನೇ ಇಸವಿಯಲ್ಲಿ ಇದೇ ವೆರಿಫಿಕೇಷನ್ ಕಮಿಟಿ 110 ಜನಗಳಿಗೆ ಸರ್ಟಿಫಿಕೇಟ್ ಕೊಟ್ಟರು. ಅಪಿಲೇಟ್ ಅಥಾರಿಟಿಗೆ ಹೋದರು, ಅಪೀಲ್‌ನಲ್ಲಿ ಯಾರಿಗೆ ಕೊಡಲಿಲ್ಲವೋ ಅವರೆಲ್ಲರಿಗೂ ಕೂಡ ವ್ಯಾಲಿಡೇಟ್ ಮಾಡಿಬಿಟ್ಟರು. ಲೆಜಿಸ್ಲೇಟಿವ್ ಕಮಿಟಿ ಅಪಾಯಿಂಟ್ ಮಾಡಿದರು, ಕಮಿಟಿ ಇದರ ಬಗ್ಗೆ ರಿಪೋರ್ಟ್ ಕೊಟ್ಟರು, ಇದೆಲ್ಲಾ ಅನಧಿಕೃತವಾಗಿದ್ದು ಇದರಲ್ಲಿರುವವರೆಲ್ಲರೂ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಸೇರಿದ ವ್ಯಕ್ತಿಗಳಾಗಿಲ್ಲವಾದ ಕಾರಣ ಅವರು ಅಡ್ಮಿಷನ್ ಆಗಿರುವುದು ತಪ್ಪಾಗಿದೆ. ಇವರಿಗೆ ಯಾವ ಅಧಿಕಾರಿಗಳು ಸರ್ಟಿಫಿಕೇಟ್ ಕೊಟ್ಟಿದ್ದಾರೆಯೋ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ರಿಪೋರ್ಟ್ ಕೊಟ್ಟರು. ಇದನ್ನು 1994ನೇ ಇಸವಿಯಲ್ಲಿ ಕೊಟ್ಟಿದ್ದರೂ ಕೂಡ ಇವೊತ್ತಿನವರೆಗೂ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ನಿಮ್ಮ ವ್ಯಾಲಿಡೇಷನ್ ಕಮಿಟಿ ಮಾಡಿದರೇನು? ಅಪಿಲೇಟ್ ಅಥಾರಿಟಿ ಮಾಡಿದರೇನು? ನೀವು ಕಾರ್ಯಕ್ರಮಗಳನ್ನು ಹಾಕಿಕೊಂಡು ಇಂಪ್ಲಿಮೆಂಟ್ ಮಾಡದೇ ಇದ್ದರೆ ಏನೂ ಪ್ರಯೋಜನವಿಲ್ಲ. ಲೆಜಿಸ್ಲೇಟಿವ್ ಕಮಿಟಿ ಕೊಟ್ಟ ರಿಪೋರ್ಟ್ ಇವೊತ್ತಿನವರೆಗೂ ಹಾಗೆಯೇ ಬಿದ್ದಿದೆ. ಏನೂ ಕ್ರಮವನ್ನು ಅಧಿಕಾರಿಗಳ ಮೇಲೆ ತೆಗೆದುಕೊಂಡಿಲ್ಲ. ಯಾವ ಅಧಿಕಾರಿ 110 ಜನಗಳಿಗೆ ಮೆಡಿಕಲ್ ಕಾಲೇಜುಗಳಿಗೆ ಮತ್ತು ಇಂಜನಿಯರ್ ಕಾಲೇಜ್‌ಗೆ ಅಡ್ಮಿಷನ್ ಆಗುವುದಕ್ಕೆ ಸುಳ್ಳು ಸರ್ಟಿಫಿಕೇಟ್‌ನ್ನು ಕೊಟ್ಟರೋ ಅವರ ಮೇಲೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಆದರೆ ಇದಕ್ಕೆ ಒಂದು ಮನಸ್ಸು ಬೇಕು, ನಿಜವಾಗಿ ಯಾರು ಹಿಂದುಳಿದವರು ಇದ್ದಾರೆ, ಯಾರು ಪರಿಶಿಷ್ಟಜಾತಿಯವರು ಇದ್ದಾರೆ ಅವರಿಗೆ ಇದುನಿಜವಾಗಿ ಅವರಿಗೆ ದೊರೆಯಬೇಕಾದರೆ ಈ ಸುಳ್ಳು ಪ್ರಮಾಣ ಪತ್ರವನ್ನು ಏನು ಕೊಡುತ್ತಿದ್ದಾರೆ ಶ್ರೀಮಾನ್ ಖರ್ಗೆಯವರು ಮತ್ತು ಮೊಯ್ಲಿಯವರು ಹೇಳಿದಹಾಗೆ ಅವರ ಬಗ್ಗೆ ಏನು ಶಿಕ್ಷೆ ವಿಧಿಸಬೇಕು. ಆಟೋಮ್ಯಾಟಿಕ್ ಆಗಿ ಅವರ ಸೀಟ್ಸ್ ಲ್ಯಾಪ್ಸ್ ಮಾಡಿ ಅವರನ್ನು ಮನೆಗೆ ಕಳುಹಿಸಬೇಕು. ದಯವಿಟ್ಟು ಈ ನಿಟ್ಟಿಯಲ್ಲಿ ಯಾವ ಕ್ರಮತೆಗೆದುಕೊಳ್ಳಬೇಕು ಅದನ್ನು ನಾಳೆ ತೆಗೆದುಕೊಂಡು ಬನ್ನಿ ಇವತ್ತು ಇದನ್ನು ಮುಂದಕ್ಕೆ ಹಾಕಿ.

ಶ್ರೀ ಬಿ.ಎಸ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು): ಶಿಕ್ಷೆ ವಿಧಿಸಲು ಬೇರೆ ಪ್ರಾವೀಷನ್ ಇದೆ. ಐ.ಪಿ.ಸಿ ಪೀನಲ್ ಕೋಡ್ ಇದೆ Criminal Procedure Code ಇದೆ ಅದರಲ್ಲಿ ಯಾರು ಸಿಕ್ಕಿ ಹಾಕಿಕೊಳ್ಳುತ್ತಾರೆ, ಯಾರು ಈ ರೀತಿ ಫೋರ್ಜ್ ಮಾಡುತ್ತಾರೆ, ಯಾರು ಈ ರೀತಿಯ ಪ್ರಮಾಣ ಪತ್ರವನ್ನು ಕೊಡುತ್ತಾರೆ,

ಶ್ರೀಮತಿ ಪ್ರಮೀಳಾ ನೇಸರ್ಗಿ: ವಿಚಾರಣೆ ಮಾಡಿ ನೂರಾರು ಸರ್ಟಿಫಿಕೇಟ್‌ಗಳು ಫಾಲ್ಸ್ ಎಂದು ಹೇಳಿ legislative committee report ಕೊಟ್ಟಿದೆ. ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಿ ಎಂದು ಹೇಳಿದೆ, ಆದರೆ ಸರ್ಕಾರ ಇದುವರೆಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. 93ನೇ ಇಸವಿಯಲ್ಲಿ ವರದಿ ಕೊಟ್ಟರೂ ಇದುವರೆಗೆ ಯಾವ ಕ್ರಮ ತೆಗೆದುಕೊಂಡಿಲ್ಲ.

ಒಬ್ಬ ಮಾನ್ಯ ಸದಸ್ಯರು: ಈಗ ಕಸಬುಗಳ ಮೇಲೆ ಜಾತಿಗಳು ಆಗಿರುವುದರಿಂದ ನಮ್ಮ ನಮ್ಮ ಉಪಜಾತಿಗಳು ಗೊತ್ತಾಗುತ್ತಿವೆ. ಈಗ ಮುಸ್ಲಿಮ್ ಜನಾಂಗದವರೂ ಕೂಡ ತಮ್ಮ ಕಸಬುಗಳ ಮೇಲೆ ಉಪ ಜಾತಿಗಳನ್ನು ವಿಂಗಡಿಸಲು ಹೊರಟಿದ್ದಾರೆ. ಖಸಾಯಿ ಇರಬಹುದು, ದನಗಳಿಗೆ ಲಾಳ ಹೊಡೆಯುವವರು ಇವರನ್ನೂ ಕೂಡ ಈಗ ರಿಸರ್ವೇಷನ್ ನಲ್ಲಿ ತಂದಿದ್ದಾರೆ. ಇದರಲ್ಲಿ ಬಹಳ ಬೋಗಸ್ ಕೂಡ ಕೆಲವು ಕಡೆ ಆಗುತ್ತಿವೆ, ಇದನ್ನು ಸರಿಯಾದಂತಹ ರೀತಿಯಲ್ಲಿ ಯಾರು ಖಸಾಯಿ ಇದ್ದಾರೆ, ಲಾಳಹೊಡೆಯುವವರು ಇದ್ದಾರೆ ಅವರನ್ನು ಗುರುತಿಸಿ ಪ್ರಮಾಣ ಪತ್ರವನ್ನ ಸರ್ಕಾರ ಕೊಡಬೇಕು. ಇದರಲ್ಲಿ ಬಹಳಷ್ಟು ಮೋಸ ಆಗುತ್ತಾ ಇದೆ, ಅವರು 50 ವರ್ಷಗಳಿಂದ ತಿಳಿದುಕೊಂಡಿರಲಿಲ್ಲ. ಅವರ ಕಸಬುಗಳಿಂದ ಮೀಸಲಾತಿ ಬರುತ್ತದೆ ಎಂದು. ಈವತ್ತು ಅವರ ಕಸಬುಗಳು ಏನು ಇವೆ ಅವು ವಿಂಗಡಣೆಯಾಗಿ ಉಪಜಾತಿಗಳಾಗುತ್ತಿವೆ. ಇದರಲ್ಲಿ ಇರುವವರಿಗೆ ವಂಚನೆಯಾಗದಂತೆ ಯಾರು ಆ ಉಪಜಾತಿಗಳಿಗೆ ಸೇರಿದವರು ಇದ್ದಾರೆ ಅವರಿಗೆ ಪ್ರಮಾಣ ಪತ್ರ ಸಿಗುವ ಹಾಗೆ ಮಾಡಬೇಕೆಂದು ತಮ್ಮ ಮುಖಾಂತರ ಅವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ಉಪಾಧ್ಯಕ್ಷರೆ, ಈ ಸಂದರ್ಭದಲ್ಲಿ ಪ್ರಾಯಶಃ ಸಚಿವರಾದ ಪ್ರಕಾಶ್‌ರವರಿಗೆ ಗಮನಕ್ಕೆ ಬಂದಿರಬಹುದು, ರಾಯಚೂರು ಹತ್ತಿರ, ಈ ಬಾಂಗ್ಲಾದೇಶವಾರ್ ಆದಾಗ ಅಲ್ಲಿಯ ರೆಫ್ಯುಜೀಸ್ ತುಂಬಾ ಜನ ಬಂದಾಗ ಅನೇಕ ರಾಜ್ಯಗಳನ್ನು ಕೇಳಿಕೊಂಡರು ನಿಮ್ಮ ರಾಜ್ಯಕ್ಕೆ ಸ್ವಲ್ಪ ಜನರನ್ನು ತೆಗೆದುಕೊಳ್ಳುತ್ತೀರಾ ಎಂದು, ನಮ್ಮ ರಾಜ್ಯದವರು ಬಹಳ ಉದಾರತೆಯಿಂದ ಎರಡು ಸಾವಿರನೊ ಅಥವಾ ಐದು ಸಾವಿರ ಜನರನ್ನೋ ಕರೆದುಕೊಂಡು ಬಂದರು, ರಾಯಚೂರು ಹತ್ತಿರ ಅವರ ಒಂದು ಕಾಲೋನಿ ಇದೆ. ಈಗ ಅವರು ನಮ್ಮ ಜಾತಿ ಪ್ರಮಾಣ ಪತ್ರ ಕೊಡಿ ಎಂದು ಕೇಳುತ್ತಿದ್ದಾರೆ, ಏಕೆಂದರೆ they can become Indians. ಅಂದರೆ ಇವತ್ತು ನಾವು ಯಾವ ರೀತಿಯ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ ಎನ್ನುವುದಕ್ಕೆ ಉದಾಹರಣೆ. ಶ್ರೀ ಖರ್ಗೆಯವರು ಹೇಳಿದಹಾಗೆ ಇವತ್ತು ಯಾರಿಗೆ ಅರ್ಹತೆ ಇದೆ ಅವರಿಗೆ ಈ ಪ್ರಮಾಣ ಪತ್ರ ಸಿಗುತ್ತಾ ಇಲ್ಲ. ಇವತ್ತು ನನ್ನ ಹತ್ತಿರ ಹಣ ಇದ್ದರೆ ನಾನು ಕೆಳಜಾತಿಯ ಪ್ರಮಾಣ ಪತ್ರವನ್ನು ತೆಗೆದುಕೊಳ್ಳಬಹುದು, ವಿಶೇಷವಾಗಿ ಚುನಾವಣೆ ಸಂದರ್ಭದಲ್ಲಿ ನಾವು ಮೀಸಲಾತಿಯನ್ನು ತಂದಿರುವುದರಿಂದ ಯಾರೋ ಯಾವುದೋ ಜಾತಿ ಪ್ರಮಾಣ ಪತ್ರ ತಂದು ಇವತ್ತು ಚುನಾವಣೆಗೆ ನಿಂತ

ನಿದರ್ಶನಗಳನ್ನು ನಾವು ನೋಡಿದ್ದೇವೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಕೇಳಿ ಕೊಳ್ಳುತ್ತೇನೆ, ಈಗಾಗಲೇ ಶ್ರೀಮತಿ ಪ್ರಮೀಳಾ ಅವರು ಹೇಳಿದಹಾಗೆ ಬೆಂಗಳೂರಿನಲ್ಲಿ ಆ ತಹಸೀಲ್ದಾರ್ ಕಛೇರಿಯಲ್ಲಿ ಆ ನೂಕು ನುಗ್ಗುಲನ್ನು ನಾವು ನೋಡುತ್ತೇವೆ, ಒಂದು ದಿವಸ ಕೊಟ್ಟು ಒಂದು ವಾರ ಕಾಯಬೇಕು. ಅದರ ಬದಲು ಬೆಂಗಳೂರು ಮಹಾನಗರ ಪಾಲಿಕೆ ಅಥವಾ ಯಾವುದೇ ಮಹಾನಗರ ಪಾಲಿಕೆಯಲ್ಲಿ ಡೆಪ್ಯುಟಿ ಕಮೀಷನರ್‌ಗಿಂತ ಮೇಲಿನ ರ್‍ಯಾಂಕ್ ಇರುವಂತಹ ಅಧಿಕಾರಿಗಳು ಇರುವುದರಿಂದ whole revenue establishment ಇರುವುದರಿಂದ ಆ ರೆವಿನ್ಯೂ ಇನ್ಸ್‌ಪೆಕ್ಟ್‌ರಿಗೆ ಆ ಏರಿಯ ಪರಿಚಯ ಇರುವುದರಿಂದ ಈ ಜಾತಿ ಪ್ರಮಾಣ ಪತ್ರವನ್ನು ಕೊಡುವುದನ್ನು ಡೆಲಿಗೇಟ್ ಮಾಡಿದರೆ ಆ ಪ್ರೆಷರ್ ಕಡಿಮೆ ಆಗುತ್ತದೆ ತಹಸೀಲ್ದಾರ್ ಕಛೇರಿಯಲ್ಲಿ ಮತ್ತು ಸ್ವಲ್ಪ ಸಮಯವನ್ನು ಉಳಿಸಿದ ಹಾಗೆ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಿ, ಮಾನ್ಯ ಸಚಿವರು ಇದನ್ನು ಇನ್‌ಕಾರ್ಪೋರೇಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಗುತ್ತೇದಾರ್‌ರವರು ಇದರ ಬಗ್ಗೆ ಸ್ವಲ್ಪ ಮೈಂಡ್ ಅಪ್ಲೈ ಮಾಡಲಿ ಇನ್ನೊಂದು ದಿವಸ ಬೇಕಾದರೆ ತೆಗೆದುಕೊಳ್ಳಲಿ. ನಾವು ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಮಾತನಾಡಿದಮೇಲೆ ಕೂಡ ನಾಳೆ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ನಾನು ಏಕೆ ಇವರಿಗೆ ಹೇಳುತ್ತಿದ್ದೇನೆ ಎಂದರೆ ಕಲಂ 4ಎ, 2, 3, 4, ಆಮೇಲೆ 4 ಎ ಮತ್ತು 4ಬಿ ಇದು ಎಲ್ಲದರಲ್ಲೂ ಸಹ ಆಕ್ಟ್ ಪ್ರಿಸ್‌ಕ್ರೈಬ್ಡ್ ಎಂದು ಇದೆ. ಫೈನಲ್ ಅಪೀಲ್‌ನಲ್ಲಿ ಮಾತ್ರ ಡಿವಿಜನಲ್ ಕಮಿಷನರ್ ಎಂದು ಡೆಫಿನೇಟ್ ಆಗಿ ತೋರಿಸಿದ್ದೀರಿ, ಅದರಲ್ಲಿ ರೂಲ್ಸ್ ಏನೂ ಬೇಕಾಗಿಲ್ಲ, ಡಿವಿಜನಲ್ ಕಮೀಷನರ್ ಹತ್ತಿರ ನೇರವಾಗಿ ಅಪೀಲ್‌ನ್ನು ಅವರ ಮುಂದೆ ಫೈಲ್ ಮಾಡಬಹುದು, ಹಾಗೆ ಪ್ರಮಾಣ ಪತ್ರವನ್ನು ಕೊಡುವವನು ತಹಸೀಲ್ದಾರ್ next appeal lies under s.4(b) AC/DC Verification lies with District Social Welfare Officer, Backward Class Officer ಹೀಗೆ ಏನಾದರೂ ಮಾಡಿ ಡೆಫಿನೆಟ್ ಮಾಡಿದರೆ ಪುನಃ ನೀವು ಇದಕ್ಕೆ ಕಾಯಬೇಕಾಗಿಲ್ಲ, ನೇರವಾಗಿ ಅವರಿಗೆ ಆರ್ಡರ್ ಕಳುಹಿಸಬಹುದು. ಇಲ್ಲದೇ ಹೋದರೆ ಸಬಾರ್ಡಿನೇಟ್ ಕಮಿಟಿಮುಂದೆ ಹೋಗಿ ವೆರಿಫಿಕೇಷನ್ ಆಗಿ ನೀವು ಎಲ್ಲಾ ಮಾಡಬೇಕಾದರೆ ಐದಾರು ತಿಂಗಳು ಹಿಡಿಯುತ್ತದೆ, ಇದರಿಂದ ನ್ಯಾಯ ಸಿಗುವುದಿಲ್ಲ. ಇದರಲ್ಲಿಯೇ ಸೇರಿಸಿಕೊಂಡು ಬನ್ನಿ ಪಾಸ್ ಮಾಡಿ ಕೊಡೋಣ.

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್ (ಹಿಂದುಳಿದ ಮತ್ತು ಅಲ್ಪಾಸಂಖ್ಯಾತರ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ನಾವು ರೂಲ್ಸ್ ಫ್ರೇಮ್ ಮಾಡತಕ್ಕಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದರಂತೆ ಮಾಡುತ್ತೇವೆ. ಇದರ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಕೂಡ ಸಾಕಷ್ಟು ಚರ್ಚೆಯಾಗಿದೆ. ಡಿಸಿಯವರಿಗೆ

ಅಪೀಲ್ ಹೋಗಲು ಏನು ಅವಕಾಶ ಮಾಡಿದ್ದೇವೆ, ಡೆಪ್ಯುಟಿ ಕಮೀಷನರ್ ರಿಜಕ್ಟ್ ಮಾಡಿದರೆ ಡಿವಿಜನಲ್ ಕಮೀಷನರ್ ಹತ್ತಿರ ಹೋಗುವ ಅವಕಾಶ ಮಾಡಿದ್ದೇವೆ, ಡೆಪ್ಯುಟಿ ಕಮೀಷನರ್ ರಿಜಕ್ಟ್ ಮಾಡಿದರೆ ಡಿವಿಜನಲ್ ಕಮೀಷನರ್ ಹತ್ತಿರ ಹೋಗುವ ಅವಕಾಶ ಇದೆ ಇದರಲ್ಲಿ. ಈ ಪ್ರಮಾಣ ಪತ್ರ ಕೊಡುವುದು ಬಹಳ ಡಿಲೇ ಆಗುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಅದನ್ನು ತೀವ್ರಗತಿಯಲ್ಲಿ ಮಾಡುವಂತಹ ಕಾರ್ಯಕ್ರಮವನ್ನು ರೂಪಿಸುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಉಪಾಧ್ಯಕ್ಷರೇ, ಈಗ ಜಾತಿ ಪ್ರಮಾಣ ಪತ್ರ ಕೊಡುವಂತಹ ಕೆಲಸವನ್ನು ತಹಸೀಲ್ದಾರ್ ಮಾಡುತ್ತಿದ್ದಾರೆ. ವೆರಿಫಿಕೇಷನ್ ಮಾಡುವಂತಹ ಕೆಲಸವನ್ನು ಡೆಪ್ಯುಟಿ ಕಮೀಷನ್ ಮತ್ತು ಸಂಬಂಧಪಟ್ಟ ಸಮಾಜಕಲ್ಯಾಣ ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಮಾಡುತ್ತಿದ್ದಾರೆ. ಇದಕ್ಕೆ ಒಂದು ಕಾನೂನಿನ ಬಲ ಮಾಡಬೇಕು. ಆದ್ದರಿಂದ ಈ ತಿದ್ದುಪಡಿಯಲ್ಲಿಯೇ ಹೊಸ ರೂಲ್ ಮಾಡುವುದಕ್ಕಿಂತ caste certificate shall be issued by the Tahashildar; ಇಷ್ಟು ದಿವಸದಲ್ಲಿ ಕೊಡಬೇಕು. ಆಮೇಲೆ ಅಪೀಲ್ ಯಾರಿಗೆ ಹೋಗಬೇಕು ಎಂದು; ವೆರಿಫಿಕೇಷನ್ ಇದೆ, ಈಗ ಏನು ಇದೆ ಅದನ್ನು ಮಾಡಿಬಿಟ್ಟರೆ, ಒಳ್ಳೆಯದು ನೀವು ಒಂದು ಮಾತನ್ನು ತಿಳಿದುಕೊಳ್ಳಿ. ರೂಲ್ಸ್‌ನ್ನು ಇವರು ಮಾಡಿಕೊಡುತ್ತಾರೆ ಎಂದು ತಿಳಿದುಕೊಂಡಿದ್ದೀರಾ ನೀವು? ನೋಡಿ, ನಾವು ತಿಳಿದುಕೊಂಡ ಹಾಗೆ ಈ ವ್ಯವಸ್ಥೆ ಇಲ್ಲ, ನಾಳೆನೆ ಜಾತಿ ಪ್ರಮಾಣ ಪತ್ರವನ್ನು ಕೊಡಬೇಕಾಗಿದೆ, ಹಾಗೆ ವೆರಿಫಿಕೇಷನ್ ಆಗಬೇಕಾಗಿದೆ ಒಂದು ದಿವಸವನ್ನು ಕಳೆಯಲು ಸಮಯವಿಲ್ಲ, ಅವಕಾಶವಿಲ್ಲ, ಬೇರೆ ಪ್ರೋಸಿಜರ್ ಮಾಡಲು ಕಾಲಾವಕಾಶ ಬೇಕಾದರೂ, ಕೊನೆಯ ಪಕ್ಷ ಜಾತಿ ಪ್ರಮಾಣ ಪತ್ರವನ್ನು ಕೊಡುವಂತಹ ಅಧಿಕಾರ ಬರುವಾಗ ಅದಕ್ಕೆ ನೀವು ರೂಲ್ಸ್‌ಗೆ ಕಾಯಬೇಕು. ಈ ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ತಹಸೀಲ್ದಾರ್ ಇಲ್ಲವೇ ಅಪೀಲ್ ಯಾರಿಗೆ ಇದೆ, ಡಿಸಿಗೆ ಏನು ಇದೆ, ಇದಕ್ಕೇಕೆ ನೀವು....

ಶ್ರೀ ಎಂ.ವೀರಪ್ಪ ಮೊಯಿಲಿ: ಮಾನ್ಯ ಉಪಾಧ್ಯಕ್ಷರೆ, ಇದೆಲ್ಲಾ ಈಗ ಏನು ಆಗಬೇಕು ಎಂದರೆ ಬಿಲ್ ಪೆಂಡಿಗ್ ಇದೆ ಎಂದು ಇವತ್ತಿನಿಂದ ಯಾವ ತಹಸೀಲ್ದಾರ್ ಆಗಲೀ ಸರ್ಟಿಫಿಕೇಟ್ ಕೊಡುವುದಿಲ್ಲ. ಈಗ ಅನೇಕ ರಿಕ್ರೂಟ್‌ಮೆಂಟ್‌ಗಳು ಆಗುತ್ತವೆ, ರಿಕ್ರೂಟ್‌ಮೆಂಟ್‌ಗಳು ಪೆಂಡಿಂಗ್ ಇವೆ, ನೀವು ರೂಲ್ಸ್ ಎಂದು ಹೇಳಿ 30 ದಿವಸ you have to call for objections ಇದು 15 ದಿವಸಗಳೊಳಗೆ ಇದು ಆಕ್ಟ್ ಆಗಿ ಪರಿಣಾಮ ಆಗದೇ ಇದ್ದರೆ ಇನ್ನು ಆರೇಳು ತಿಂಗಳು ಯಾವ ರಿಕ್ರೂಟ್‌ಮೆಂಟ್ ಆಗುವುದಿಲ್ಲ. ಬಹಳ ಸಮಸ್ಯೆಯಾಗುತ್ತದೆ. Suppose somebody wants to appear for KPSC, if he does not produce a caste certificate, he is not eligible to appear for interview. ನೀವು ಪ್ರಾಕ್ಟಿಕಲ್ ಪ್ರಾಬ್ಲಂ ಅನ್ನು ಅರ್ಥಮಾಡಿಕೊಳ್ಳಬೇಕು. ಏಕೆಂದರೆ ಕೆಪಿಎಸ್‌ಸಿಯಲ್ಲಿ

ಮೊದಲು ಸಂದರ್ಶನಕ್ಕೆ ಹೋಗುವಾಗಲೇ ಜಾತಿ ಪ್ರಮಾಣ ಪತ್ರವನ್ನು ತೋರಿಸಬೇಕಾಗುತ್ತದೆ. ಇಲ್ಲದಿದ್ದರೆ he is not eligible to appear for any interview ನೀವು ಈ ಆ್ಯಕ್ಟ್ ಬರುವವರೆಗೆ ಡೈರೆಕ್ಷನ್ ಕೊಡಬೇಕಾಗುತ್ತದೆ caste certificate should be issued by the Tahsildar ಎಂದು ನೀವು ಪುನಃ ಡೈರೆಕ್ಷನ್ ಕೊಡಬೇಕಾಗುತ್ತದೆ. either you should do that or you should immediately incorporate that. ಇಲ್ಲದಿದ್ದರೆ ನಿಮಗೆ ಬಹಳ ಅನಾಹುತವಾಗುತ್ತದೆ. ಹಿಂದೆ ಏನಾದರೂ ಪ್ರಮಾಣ ಪತ್ರವನ್ನು ತೆಗೆದುಕೊಂಡಿದ್ದರೆ ಸರಿ, ಇಲ್ಲದಿದ್ದರೆ ಈಗ ಅವರು ಪ್ರಮಾಣಪತ್ರವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಇದರಲ್ಲಿ ಬಹಳ ಪ್ರಾಕ್ಟಿಕಲ್ ಪ್ರಾಬ್ಲಂ ಬರುತ್ತದೆ. ನೀವು ಒಂದು ದಿವಸ ಕಾಯ್ದು ಈ ಸಣ್ಣ ಅಮೆಂಡ್‌ಮೆಂಟ್ ಬಿಲ್‌ನ್ನು ನಾಳೆ ಪಾಸ್ ಮಾಡಿಕೊಂಡರೆ ನೇರವಾಗಿ ಆಕ್ಟ್ ಪಾಸ್‌ಮಾಡಿಕೊಂಡು ಮುಂದೆ ಹೋಗಬಹುದು, ರೂಲ್ಸ್‌ನ್ನು ಯಾವಾಗಲಾದರೂ ಮಾಡಿ. Please reconsider this; ಏಕೆ ನೀವು ಕೊಂಕಣ ಸುತ್ತಿ ಮೈಲಾರಕ್ಕೆ ಹೋಗುತ್ತೀರಿ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಉಪಾಧ್ಯಕ್ಷರೆ, ಅದು ಪಬ್ಲಿಕೇಷನ್ ಆಗಬೇಕು, ಅಬ್‌ಜಕ್ಷನ್ ಆಗಬೇಕು, ಸುಡಗಾಡು ಶುಂಠಿಕೊಪ್ಪ ಮಾಡಿಕೊಂಡು ಅದು ಆಗುತ್ತದೆ ಎಂದುಕೊಂಡರೆ ಅದು ಆಗುವುದಿಲ್ಲ ಇನ್ನು ಆರು ತಿಂಗಳು ಹಿಡಿಯುತ್ತದೆ.

6.40 ಪಿ.ಎಂ

ಉಪಾಧ್ಯಕ್ಷರು: 30 ದಿವಸದ ಒಳಗಾಗಿ ರೂಲ್ಸ್ ಫ್ರೇಮ್ ಮಾಡುವುದಕ್ಕೆ....

ಶ್ರೀ ಎಂ.ವೀರಪ್ಪ ಮೊಯಿಲಿ: ಆ್ಯಕ್ಟ್‌ನಲ್ಲಿ ಅಸೆಂಟ್ ಆಫ್ ದಿ ಗವರ್ನ್‌ರ್ ಬರಬೇಕು. ಅಸೆಂಟ್ ಅಫ್ ದಿ ಗವರ್ನ್‌ರ್ ಆದಮೇಲೆ ರೂಲ್ಸ್ ಫ್ರೇಮ್ ಮಾಡಬೇಕು. You will have to call for objections. ನಾನು ಪ್ರಾಕ್ಟಿಕಲ್ ಪ್ರಾಬ್ಲಂ ಹೇಳುತ್ತಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ: ಇವತ್ತು ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುವುದಕ್ಕೆ ನಮ್ಮ ಕಾನೂನಿನಲ್ಲಿ ಅವಕಾಶ ಯಾವುದೂ ಇಲ್ಲ. ಈ ರೀತಿ ಸರ್ಟಿಫಿಕೇಟ್ ಈ ತರಹ ಕೊಟ್ಟಿರತಕ್ಕಂಥಾದ್ದು ರಾಜ್ಯದ ಉಚ್ಚ ನ್ಯಾಯಾಲಯಕ್ಕೆ ಹೋದಾಗ ಯಾವ ಅಥಾರಿಟಿ ಮೇಲೆ ನೀವು ಕೊಟ್ಟರಿ ಎಂದು ಕೇಳುತ್ತಾರೆ. The Tahsildar does not have the power now. ಅದಾದಮೇಲೆ ಏನಾಯಿತು, ನಾವು ಆ್ಯಕ್ಟ್‌ನ್ನು ಅಮೆಂಡ್‌ಮೆಂಟ್ ಮಾಡಬೇಕೆಂದು ಹೇಳಿ ಪ್ರಿಸ್ಕ್ರೈಬ್ ಅಥಾರಿಟಿ ಎಂದು ನಾವು ಹಾಕಿದ್ದೇವೆ. As at the moment, ಈಗ ತಹಸೀಲ್ದಾರ್ ಕೊಡುತ್ತಿದ್ದಾರೆ. ಪ್ರಿಸ್ಕ್ರೈಬ್ ಅಥಾರಿಟಿಗೆ ಎಂದು ಹೇಳತಕ್ಕಂಥಾದ್ದು, ರೂಲ್ಸ್‌ನಲ್ಲಿ ಈಗ ಪ್ರಿಸ್ಕ್ರೈಬ್

ಅಥಾರಿಟಿಯನ್ನು ತಹಸಿಲ್ದಾರ್ ಮಾಡುತ್ತಿದ್ದೇವೆ. ಅಪಿಲೇಟ್ ಅಥಾರಿಟಿ Assistant commissioner. ಇದಾದಮೇಲೆ ವೆರಿಫಿಕೇಷನ್ ಕಮಿಟಿ. More than one committees you can have it. ಎಂದು ವೆರಿಫಿಕೇಷನ್ ಕಮಿಟಿ ಎಲ್ಲಾದರೂ ರಿಜೆಕ್ಟ್ ಮಾಡಿದರೆ he will have to go in for appeal. These will be done by framing the rules now.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ನಾಣಯ್ಯನವರೆ, ತಾವು ಮೊದಲಿಂದಲೂ ಇದ್ದಿದ್ದರೆ ಈ ಪ್ರಶ್ನೆ ಬರುವುದಿಲ್ಲ. ಕೊನೆಗೆ ಬಂದುಬಿಡುವುದು. ಇದೆಲ್ಲಾ ಚರ್ಚೆಯಾಗಿದೆ. ನಾವು ಏನು ಹೇಳುತ್ತಿದ್ದೇವೆ ಎಂದರೆ ಇದಕ್ಕೆ ಒಂದು ಸ್ಟ್ಯಾಟ್ಯೂಟ್‌ನ ಬಲ ಇರಲಿಲ್ಲ. ಈಗ ಅದನ್ನು ಹೇಳುತ್ತಿದ್ದೀರಿ. ಅದನ್ನು ಸ್ವಾಗತ ಮಾಡಿದ್ದೇವೆ ಈಗ ನಾವು ಏನು ಹೇಳುತ್ತೇವೆ, ಅಂದರೆ ಪ್ರಿಸ್ಕ್ರೈಬ್ ಅಥಾರಿಟಿ ಎನ್ನುವುದನ್ನು ಆ್ಯಕ್ಟ್‌ನಲ್ಲಿ ಮಾಡಬೇಡಿ.

ಶ್ರೀ ಎಂ.ಸಿ.ನಾಣಯ್ಯ: ಇದನ್ನು ನಾವು ನಾರ್ಮಲಿ ಆ್ಯಕ್ಟ್‌ನಲ್ಲಿ ಮಾಡುವುದಿಲ್ಲ. ಎಲ್ಲೋ ಒಂದು ಕಡೆ ಅಮೆಂಡ್‌ಮೆಂಟ್ ಮಾಡಬೇಕೆಂದು ಬಂದಾಗ ನಾವು ಸ್ಟ್ಯಾಟ್ಯೂಟ್‌ಗೆ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ರೂಲ್ಸ್‌ನಲ್ಲಿ ಆದರೆ ನಾವು ಅಮೆಂಡ್‌ಮೆಂಟ್‌ನ್ನು anytime we can bring it. ಆದುದರಿಂದ ಇದು ಗವರ್ನರ್ ಅಸೆಂಟ್‌ಗೆ ಹೋಗುತ್ತಿರತಕ್ಕಂಥ ಸಂದರ್ಭದಲ್ಲಿ ರೂಲ್ಸ್‌ನ್ನೂ ಕೂಡ ಏಕಕಾಲದಲ್ಲಿ ಫ್ರೇಮ್ ಮಾಡಿ ನಾವು ಇಟ್ಟುಕೊಂಡು ಬಿಡುತ್ತೇವೆ. ಒಂದು ಬಾರಿ ಅಸೆಂಟ್ ಬಂದಾದಕೂಡಲೇ by giving 15 days notice 15 ದಿವಸ ನೋಟೀಸ್ ಕೊಟ್ಟುಬಿಟ್ಟು ನಾವು ರೂಲ್ಸ್‌ನ್ನು ಫ್ರೇಮ್ ಮಾಡಿಕೊಂಡು ಬಿಟ್ಟು....ನಾವು ಇಲ್ಲಿ ತಿದ್ದುಪಡಿ ತರುವುದಕ್ಕೆ ಪ್ರಿಸ್ಕ್ರೈಬ್ ಅಥಾರಿಟಿ ಎಂದರೆ ನಾರ್ಮಲಿ ಮಾಡತಕ್ಕಂಥಾದ್ದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಲ್ಲಿ ತಾವು ಯಾವರೀತಿಯಾಗಿ ವೆರಿಫಿಕೇಷನನ್ನು ಇನ್‌ಕಂ ಅಂಡ್ ಕ್ಯಾಸಟ್ ಸರ್ಟಿಫಿಕೇಟ್ ಮೇಲೆ ಅಪೀಲ್‌ನಲ್ಲಿ ಸೆಕ್ಷನ್ 4 (ಡಿ) ಕೆಳಗೆ ಡಿವಿಜನಲ್ ಕಮಿಷನರ್....

SRI M.C.NANAIAH: There are two issues. ವೆರಿಫಿಕೇಷನ್ ಕಮಿಟೀಸ್ ಎಂದು ಹೇಳುತ್ತಾರೆ, ಅದರ ಮೇಲೆ ಡಿವಿಜನಲ್ ಕಮಿಷನರ್.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ಕೇಳಿ. ಡಿವಿಜನಲ್ ಕಮಿಷನರ್ ಮಾಡಿದ್ದೀರಿ. ಅದೇರೀತಿಯಾಗಿ ಸೆಕ್ಷನ್ 4(ಎ)ನಲ್ಲಿ ನಾವು ಹೇಳುವುದೇನೆಂದರೆ issue of caste certificate and income certificate, "prescribed for issue of caste certificate" ಇಲ್ಲಿ ತಹಶೀಲ್ದಾರ್ ಎಂದು ಹೇಳಿಸೆಕ್ಷನ್

4(ಬಿ)ಯಲ್ಲಿ ಅಪೀಲ್ ಆಗಿರುವುದು. ಆರ್ಡರ್ ಸೆಕ್ಷನ್ 4(ಎ) ಕೆಳಗೆ ಎ.ಸಿ.ಎಂ.ಪಿ.ಯಲ್ಲಿ ಅಸಿಸ್ಟೆಂಟ್ ಕಮಿಷನರ್ ಎಂದು ಹೇಳುತ್ತೀರಿ. ನಂತರ ವೆರಿಫಿಕೇಷನ್‌ನಲ್ಲಿ ಡೆಪ್ಯುಟಿ ಕಮಿಷನರ್, ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್, ಬ್ಯಾಕ್‌ವರ್ಡ್ ಕ್ಲಾಸ್ ಎಂದು ಇಲ್ಲಿ ನೋಟಿಫೈ ಮಾಡಿ. ನಿಮಗೆ ಇದು ಕಂಪ್ಲೀಟ್ ಆಗುತ್ತದೆ. ಇದರಲ್ಲಿ ನೀವು ಚೇಂಜ್ ಮಾಡಬೇಕಾದಂತಹ ಅವಶ್ಯಕತೆ ಇಲ್ಲ. ಇಲ್ಲಿ ನೀವು ಅವರಿಗೆ ಒಂದು, ಇವರಿಗೆ ಒಂದು ಹಾಕಿ ಬಿಟ್ಟು ವ್ಯತ್ಯಾಸ ಮಾಡುತ್ತಾರೆ.

ಶ್ರೀ ಎಂ.ಸಿ.ನಾಣಯ್ಯ: ತಾವು ಸ್ಟ್ಯಾಟ್ಯೂಟ್ಸ್ ಮಾಡುವಾಗ ಮಾನ್ಯ ಮೊಯಿಲಿಯವರೆ ತಮಗೆ ಗೊತ್ತಿದೆ. ನಿಮಗೆ ಗೊತ್ತಿದೆ. ನಾರ್ಮಲಿ ನಾವು ಅಥಾರಿಟೀಸ್ ಅನ್ನು ಫಿಕ್ಸ್ ಮಾಡುವಾಗ ನಾವು ಸ್ಟ್ಯಾಟ್ಯೂಟ್ಸ್‌ಗೆ ಅಮೆಂಡ್‌ಮೆಂಟ್‌ನ್ನು....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಮಾಡಿಲ್ಲವೆ? ವೆರಿಫಿಕೇಷನ್ ಅಸಿಸ್ಟೆಂಟ್ ಕಮಿಷನರ್ ಆದಮೇಲೆ ನೆಕ್ಸ್ಟ್ ಅಪೀಲ್ ವಿಶೇಷ ಜಿಲ್ಲಾಧಿಕಾರಿ ಎಂದು ಆಯಿತು. ಮುನಿಸಿಪಾಲಿಟಿ ಆ್ಯಕ್ಟ್‌ನಲ್ಲಿ ಇಲ್ಲವೇ?

ಶ್ರೀ ಎಂ.ಸಿ.ನಾಣಯ್ಯ: ನಾವು ರೂಲ್ಸ್‌ನ್ನು ಏಕೆ ಮಾಡುತ್ತೇವೆಂದರೆ ನಾಳೆ....

ಶ್ರೀ ಎಂ.ವೀರಪ್ಪಮೊಯಿಲಿ: ಸುಮ್ಮನೆ ಇಲ್ಲದೆ ಇದ್ದರೆ, ನೀವೆಲ್ಲಾ ರೆಡ್ ಟೇಪಿಸಂ ಎಂದು ಹೇಳಿ....

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ: ಡಿವಿಜನಲ್ ಕಮಿಷನರ್ ಎನ್ನುವ ಬಗ್ಗೆ ಹೇಳುತ್ತೇನೆ. Kindly hear me. There is a proposal to abolish the post of Divisional Commissioner. At that time, I will have to bring an amendment to the very statute itself. ಆ ಸ್ಟ್ಯಾಟ್ಯೂಟ್ಸ್ ಬಂದಮೇಲೆ ಆರ್ಡಿನೆನ್ಸ್ ಇಷ್ಯೂ ಮಾಡಬೇಕಾಗುತ್ತದೆ. ಯಾವಾಗಲೂ ಪ್ರಿಸ್ಕ್ರೈಬ್ ಅಥಾರಿಟಿ ಮಾಡುತ್ತೇವೆ ಎಂದರೆ ರೂಲ್ಸ್‌ನ್ನು ಫ್ರೇಮ್ ಮಾಡುವುದಕ್ಕೆ ಇರತಕ್ಕಂಥ by and large there is one system which is being followed now because it is easier to bring amendments at any point of time. ಯಾವುದೇ ಸಂದರ್ಭದಲ್ಲಿ ಅಮೆಂಡ್ಮೆಂಟ್ ತರುವುದಕ್ಕೆ ಸುಲಭವಾಗುತ್ತದೆ. ಸ್ಟ್ಯಾಟ್ಯೂಟ್ಸ್‌ನಲ್ಲಿ ಆದರೆ ಅಮೆಂಡ್‌ಮೆಂಟ್ ತರುವುದಕ್ಕೆ....

ಶ್ರೀ ಕಾಗೋಡು ತಿಮ್ಮಪ್ಪ: ಇಂತಹ ಪ್ರಮುಖವಾದಂತಹ ವಿಚಾರದಲ್ಲಿ ಯಾರು ಕ್ಯಾಸ್ಟ್ ಸರ್ಟಿಫಿಕೇಟ್ ಕೊಡಬೇಕು...

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ: ಕಾನೂನೇ ಇರಲಿಲ್ಲ. 10 ವರ್ಷದಿಂದ ಕಾನೂನು ಇರಲಿಲ್ಲ. ಕಾನೂನು ತಂದಾದಮೇಲೆ ಈಗ....

ಶ್ರೀ ಎಂ.ವೀರಪ್ಪ ಮೊಯಿಲಿ: ಈಗ ತಾನೇ ಹೇಳಿ, ಹೈಕೋರ್ಟ್ ಡಿಸಿಷನ್ ಪ್ರಕಾರ ತಹಸೀಲ್ದಾರ್‌ಗೆ ಈಗ ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುವುದಕ್ಕೆ ಆಗುವುದಿಲ್ಲ. ಈ ವ್ಯಾಕ್ಯೂಮ್ ಇದೆ. ಸರ್ಟಿಫಿಕೇಟ್ ಕೊಡುವುದಿದ್ದರೆ ಯಾರು ಕೊಡಬೇಕು? ಏಕೆಂದರೆ ಅನೇಕ ರಿಕ್ರೂಟ್‌ಮೆಂಟ್‌ಗಳು ಆಗುತ್ತವೆ. ಕೆ.ಪಿ.ಎಸ್.ಸಿ.ಯಲ್ಲಿ ಆಗುತ್ತದೆ.

SRI M.C.NANAIAH: It is being done now

SRI M.VEERAPPA MOILY: Somebody will challenge it. ಈ ಆ್ಯಕ್ಟ್‌ನಲ್ಲಿ ಇದನ್ನು ಸೇರಿಸಿದರೆ 10ನೇ ದಿವಸದಲ್ಲಿ ಗವರ್ನರ್ ಅಸೆಂಟ್ ಸಿಕ್ಕಿಬಿಟ್ಟರೆ ಎಲ್ಲಾ ಸಾರಾಸಗಟಾಗಿ ಆಗುತ್ತದೆ.

ಶ್ರೀ ಎಂ.ಸಿ.ನಾಣಯ್ಯ: ನಾನು ಒಂದು ಹೇಳುತ್ತೇನೆ. ಅವರು ಒಂದು ವಿಚಾರ ಎತ್ತಿದ್ದಾರೆ. Let me tell you, Mr. Moily. Many of the statutes which were framed, which were enacted during your time, the prescribed authority, you have done it only under the rules.

(ಗೊಂದಲ)

ಶ್ರೀ ಎಂ.ವೀರಪ್ಪ ಮಯಿಲಿ: ಎಲ್ಲಾದಕ್ಕೂ ಒಂದೇ ಔಷಧ ಅಲ್ಲ. ಅದರಲ್ಲಿ ವ್ಯತ್ಯಾಸ ಇದೆ.

ಶ್ರೀ ಎಂ.ಸಿ.ನಾಣಯ್ಯ: ಈಗ ಪ್ರಿಸ್ಕ್ರೈಬ್ ಅಥಾರಿಟಿ ಎಂದು ಹೇಳತಕ್ಕಂಥಾದ್ದು

(ಗೊಂದಲ)

ಶ್ರೀ ಎಂ.ವೀರಪ್ಪ ಮೊಯಿಲಿ: ನಿಮ್ಮ ಹಾಗೆ ನಾವೂ ಕೂಡ with the administrative experience we are telling

SRI M.VEERAPPA MOILY: We are wasting our energy..

SRI M.C.NANAIAH: Tomorrow if there is a change in

the Government, are you going to amend the statute?

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ: ತಾವು ದಯವಿಟ್ಟು ಒಂದನ್ನು ತಿಳಿದುಕೊಳ್ಳಬೇಕು. ಅವರು ಹೇಳುತ್ತಾರೆ....

ಶ್ರೀ ಎಂ.ವೀರಪ್ಪ ಮೊಯಿಲಿ: ಸನ್ಮಾನ್ಯ ಉಪಾಧ್ಯಕ್ಷರೇ, Even a smaller change, if you are not going to accept,. it is most disgusting.

(INTERRUPTIONS)

SRI M.C.NANAIAH: What is disgusting in this I want to know?

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಉಪಾಧ್ಯಕ್ಷರೇ, ಮುಖ್ಯಮಂತ್ರಿಯಗಿದ್ದವರು, ಈ ಸದನವನ್ನು ನಡೆಸಿರತಕ್ಕಂಥವರು ಇಂತಹ ನೂರಾರು ಲೆಜಿಸ್ಲೇಷನ್‌ನ್ನು ಅವರು ತಂದಿದ್ದಾರೆ. ಪ್ರತಿಯೊಂದರಲ್ಲಿ ಪ್ರಿಸ್ಕ್ರೈಬ್ ಅಥಾರಿಟಿ ಎಂದು ಹೇಳತಕ್ಕಂಥಾದ್ದರಲ್ಲಿ ರೂಲ್ಸ್ ಫ್ರೇಮ್ ಮಾಡಿದರೆ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಪ್ರಾಬ್ಲಂ ಹೇಳುತ್ತಿದ್ದೇವೆ. ಇದನೆಲ್ಲಾ ಆರ್ಗ್ಯೂ ಆಗಿ ತಾವು ಕೊನೆಗೆ ಬಂದಿರಿ. ಇದೆಲ್ಲಾ discuss ಮಾಡಿ convience ಮಾಡಿ, ನಾವು ಹೇಳಿದ್ದೇನೆಂದರೆ ಒಂದು ಅಥಾರಿಟಿ ಎಂದು ತಹಸೀಲ್ದಾರ್‌ಗೆ ಮಾಡೋಣ. Then appeal lies to the Assistant Commissioner; we have discussed here, ನೀವು ಬಂದು ಇಲ್ಲಿ ಹಠ ಹಿಡಿದಿರಿ ಎಂದರೆ. we gave constructive suggestions.

ಶ್ರೀ ಎಂ.ಸಿ.ನಾಣಯ್ಯ: ಇದರಲ್ಲಿ ಪ್ರೆಸ್ಟೀಜ್ ಮೇಲೆ ನಿಲ್ಲಬೇಕು ಎನ್ನುವುದು ಏನಿದೆ?

ಶ್ರೀ ಕಾಗೋಡು ತಿಮ್ಮಪ್ಪ: ನಿಮ್ಮ ತಲೆಯಲ್ಲಿ ಬೇರೆ ಏನಾದರೂ ಮಾಡಬೇಕು; ತಹಸೀಲ್ದಾರ್ ಅಲ್ಲದೆ ಬೇರೆ ಯಾರನ್ನಾದರೂ ಮಾಡಬೇಕೆಂದು ಇದೆಯಾ?

ಶ್ರೀ ಎಂ.ಸಿ.ನಾಣಯ್ಯ: ಈಗ ನನ್ನ ತಲೆ, ನಿಮ್ಮ ತಲೆ ಎರಡು ಒಂದೇ.

ಶ್ರೀ ಕಾಗೋಡು ತಿಮ್ಮಪ್ಪ: ಒಂದೇ ಆದಮೇಲೆ ಏಕೆ ಮಾಡಬಾರದು?

ಶ್ರೀ ಎಂ.ಸಿ.ನಾಣಯ್ಯ: ಇದರಲ್ಲಿ ನಾವು ಯಾವುದಾದರೂ ಒಂದು ವಿಚಾರ ತಂದಾಗ

ಒಂದುವೇಳೆ ನಾಳೆ ಎಲ್ಲಾದರೂ ಸ್ಟ್ಯಾಟ್ಯೂಟ್ಸ್‌ನಲ್ಲಿ ತಿದ್ದುಪಡಿ ಮಾಡಬೇಕು ಎಂದು ಪ್ರಶ್ನೆ ಬಂದಾಗ ನೀವು ಸ್ಟಾಟ್ಯೂಟ್‌ನಲ್ಲಿ ಅಮೆಂಡ್ಮೆಂಟ್ ತರಬೇಕಾಗುತ್ತದೆ. ರೂಲ್ಸನ್ನು ಸ್ಟಾಟ್ಯೂಟ್‌ನಲ್ಲಿ ಮಾಡಬೇಕಾದರೆ anytime we can bring They want to win a point over us.

SRI M.VEERAPPA MOILY: That is not our intention.

SRI KAGODU THIMAPPA: That is not correct.

SRI M.C.NANAIAH: I thought that they want to win a point over us. They say that it is not. If that is the case, Sir, we will bring an official amendment. We will bring an official amendment tomorrow,

ಉಪಾಧ್ಯಕ್ಷರು: ಬಿಲ್ ಮುಗಿಯಲಿ. ಬಿಲ್ ಮುಗಿದರೆ ಮುಗಿಸಿಕೊಂಡು ಹೋಗಿಬಿಡುತ್ತೀರಿ ಈಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಧೇಯಕ ಪರ್ಯಾಲೋಚನೆ ಪ್ರಸ್ತಾಪ ಮಂಡಿಸುವುದು.

(ಖ) ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 1996 ಪರ್ಯಾಲೋಚನಾ ಪ್ರಸ್ತಾವ

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, 1996ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಉಪಾಧ್ಯಕ್ಷರು: ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ, ಇದರ ಬಗ್ಗೆ ತಾವು ಮಾತನಾಡುತ್ತೀರಾ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ತಾವು ಒಪ್ಪಿದರೂ ಅವರು ಒಪ್ಪುವುದಿಲ್ಲ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಉಪಾಧ್ಯಕ್ಷರೆ, ಕಾನೂನು ಮಾಡುವಂತಹ ಸಂದರ್ಭದಲ್ಲಿ ನಾಳೆ ಎಲ್ಲಾದರೂ ತಿದ್ದುಪಡಿ ಮಾಡಬೇಕು, ಸರಳವಾಗಿ ತಿದ್ದುಪಡಿ ಮಾಡಬೇಕೆಂದು ಒಂದು ವಿಚಾರವಷ್ಟೆ, ಅವರ ವಿಚಾರದಲ್ಲಿ ಅದು ಸ್ಟ್ಯಾಚುಟ್‌ನಲ್ಲಿ

ಇತ್ತು, ಸ್ಟ್ಯಾಚುಟ್‌ಗೆ ಅಮೆಂಡ್ಮೆಂಟ್ ಬರಬೇಕೆಂದರೆ ಮಾಡಿಕೊಳ್ಳಲಿ, ಅದಕ್ಕೆ ನಾನು ಏನು ಮಾಡಲಿ,

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

''1996ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಉಪಾಧ್ಯಕ್ಷರು: ''ಖಂಡ 2 ಮತ್ತು 3, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಲ್ಪಟ್ಟಿತು

(ಖಂಡ 2 ಮತ್ತು 3 ಎರಡೂ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು) ಮಾನ್ಯ ಉಪಾಧ್ಯಕ್ಷರೇ, 1996ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1996ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಎ) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ 1997 ಪರ್ಯಾಲೋಚನಾ ಪ್ರಸ್ತಾವ

ಡಾ|| ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಮಂತ್ರಿಗಳು ಮಾನ್ಯ ಉಪಾಧ್ಯಕ್ಷರೆ, 1997ರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಅವರು ಗುಲ್ಬರ್ಗಾಕ್ಕೆ ಆಗಬೇಕೆಂದು ಮಾತನಾಡುತ್ತಾರೋ ಏನೋ....

ಉಪಾಧ್ಯಕ್ಷರು: ಗುಲ್ಬರ್ಗಾಕ್ಕೆ ಆಗಬೇಕೆಂದು ಹೇಳಿ ಅದರಲ್ಲಿ ತಪ್ಪು ಏನು ಇದೆ?

ಶ್ರೀಮತಿ ಪ್ರಮೀಳ ನೇಸರ್ಗಿ: ಮಾನ್ಯ ಉಪಾಧ್ಯಕ್ಷರೆ, ಇದನ್ನು ಗುಲ್ಬರ್ಗಾ ಬಿಜಾಪುರ ಎಲ್ಲಾದರೂ ತರಲಿ. ಆದರೆ ಎಲ್ಲವನ್ನೂ ಏಕೆ ಬೆಂಗಳೂರಿಗೆ ತರುತ್ತಾರೆ?

+ ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ಉಪಾಧ್ಯಕ್ಷರೆ, ಈ ಸದನದಲ್ಲಿ ಎಲ್ಲರೂ ಒಂದು ಮಾತನ್ನು ಹೇಳುತ್ತಿದ್ದಾರೆ. ಬೆಂಗಳೂರು ಬೆಳೆಯುವುದನ್ನು ನಿಲ್ಲಿಸಬೇಕು. ಮತ್ತೆ ಬೆಂಗಳೂರಿನಿಂದ ಕೆಲವೊಂದು ಹೊರಗೆ ಹಾಕಬೇಕೆಂದು ಹೇಳುತ್ತಿದ್ದಾರೆ. ನೀವು ಅದಕ್ಕೋಸ್ಕರ ಎಕ್ಸ್‌ಪ್ರೆಸ್‌ವೇ ಮಾಡಿ ಅದಕ್ಕೆ ಟೌನ್‌ಶಿಫ್ ಮಾಡುವುದಕ್ಕೆ ಹೊರಟಿದ್ದೀರಿ ಮೈಸೂರು ಎಲ್ಲಾ ರೀತಿಯಲ್ಲೂ ಶೈಕ್ಷಣಿಕ ಕೇಂದ್ರವಾಗುವುದಕ್ಕೆ ಒಂದು ಒಳ್ಳೆಯ ವಾತಾವರಣವಿರುವಂತಹ ಊರು ಆಗಿದೆ, ನೀವು ಮೈಸೂರಿನಲ್ಲಿ ಮಾಡಬೇಕೆಂದು ನಿಶ್ಚಯ ಮಾಡಿದ್ದು ಏತಕ್ಕೆ ಈಗ ಬೆಂಗಳೂರಿಗೆ ತರುವಂಥಾದ್ದು ಮಾಡುತ್ತಿದ್ದೀರಿ ಈಗ ನೀವು ಇದನ್ನು ಬೆಂಗಳೂರಿಗೆ ತರುವಂಥಾದ್ದಕ್ಕೆ ಉದ್ದೇಶ ಮತ್ತು ಕಾರಣಗಳ ವಿವರಣೆಯನ್ನು ಕೊಟ್ಟಿದ್ದೀರಿ. ಇದರಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಕೇಂದ್ರ ಕಾರ್ಯಸ್ಥಾನವನ್ನು ಮೈಸೂರಿನಿಂದ ಬೆಂಗಳೂರಿಗೆ ಬದಲಾಯಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ ಎಂದು ಹೇಳಿದ್ದೀರಿ. ಇದಕ್ಕೆ ಕಾರಣವೇನು ಎಂದು ಗೊತ್ತಿಲ್ಲ. ಇದಕ್ಕೆ ನೀವು ಕಾರಣವನ್ನು ಕೊಡಬೇಕಲ್ಲವೇ? ಈಗ ಮೈಸೂರಿನಿಂದ ಬೆಂಗಳೂರಿಗೆ ಏಕೆ ತರುತ್ತಿದ್ದೀರಿ ಎಂಬುದನ್ನು ತಿಳಿಸಬೇಕು. ಇದನ್ನು ಯಾವುದಾದರೂ ಒಬ್ಬ ವ್ಯಕ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡು

ಮಾಡುತ್ತಿದ್ದೀರಾ? ಅವರು ಏನಾದರೂ ಮೈಸೂರಿನಲ್ಲಿ ಇರುವುದಿಲ್ಲವೆಂದು ಬೆಂಗಳೂರಿನಲ್ಲಿ ಇರುತ್ತೇನೆಂದು ಹೇಳಿದ್ದಾರಾ?

ಡಾ|| ಎಂ.ಶಂಕರ್‌ನಾಯಕ್: ನಾನು ಇನ್ನು ಏನೂ ಹೇಳೇ ಇಲ್ಲ.

ಉಪಾಧ್ಯಕ್ಷರು: ಮಾನ್ಯ ಮಂತ್ರಿಯವರು ಏನು ಉತ್ತರವನ್ನು ಹೇಳಲೇ ಇಲ್ಲ, ನೀವು ಪ್ರಶ್ನೆಯನ್ನು ಕೇಳುತ್ತಾ ಇದ್ದೀರಿ.

ಎಸ್.ಸುರೇಶ್‌ಕುಮಾರ್: ಇದಕ್ಕೆ ತಾವು ಕಾರಣವನ್ನು ಕೊಡಿ, ಕಾರಣ ಕೊಡುವುದಕ್ಕಾಗದಿದ್ದರೆ ಈಗ ಮೈಸೂರಿನಲ್ಲಿ ಏನು ಇದೆ, ಅದನ್ನು ಅಲ್ಲೆ ಮುಂದುವರೆಸಿ ಇಲ್ಲದಿದ್ದರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ಗುಲ್ಬರ್ಗಾಕ್ಕೆ ಬದಲಾಯಿಸಿ. ಬೆಂಗಳೂರಿನಲ್ಲಿ ಹೊರೆ ಹೆಚ್ಚಾದರೆ ತಡೆಯುವಂತಹ ಕೆಪ್ಯಾಸಿಟಿ ಇಲ್ಲ.

ಡಾ|| ಎಂ.ಶಂಕರ್‌ನಾಯಕ್: ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಹಿಂದೆಯೇ ತೀರ್ಮಾನವಾಗಿ ಗೌವರ್ನ್‌ರ್‌ರವರಿಂದ ಅಸೆಂಟ್ ಪಡೆದು 1996ನೇ ಜೂನ್ ತಿಂಗಳಲ್ಲಿ ಈ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿ ಕೆಲಸವನ್ನು ಮಾಡುತ್ತಿದೆ. ಈಗ ಏನಾಗಿದೆ ಎಂದರೆ ಈ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಸುಮಾರು 200ಕ್ಕೂ ಹೆಚ್ಚು ಕಾಲೇಜುಗಳು ಇದರಡಿಯಲ್ಲಿ ಬರುವುದರಿಂದ ಇದರ ಕೇಂದ್ರ ಸ್ಥಾನ ಮೈಸೂರು ಅಂದರೆ ದೂರವಾಗುತ್ತದೆ. ಈಕಡೆ ಗುಲ್ಬರ್ಗಾ, ಬೀದರ್, ದಾವಣಗೆರೆ ಎಲ್ಲಾ ಕಡೆಗಳಿಂದಲೂ ಬೆಂಗಳೂರಿಗೆ ಬರುವಂಥಾದ್ದು ಇರುವುದರಿಂದ ಇದು ಇಲ್ಲೇ ಇರಲಿ ಎಂಬ ಉದ್ದೇಶದಿಂದ ಮಾಡುತ್ತಿರುವುದು. ಇದನ್ನು ಹಿಂದೆ ಮಾಡಿರುವುದನ್ನು ಈಗ ರ್ಯಾಟಿಫಿಕೇಷನ್‌ಗೆ ತಂದಿದ್ದೇವೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಉಪಾಧ್ಯಕ್ಷರೆ, ಇದನ್ನು ರ್ಯಾಟಿಫಿಕೇಷನ್‌ಗೆ ಇಡುವಂತಹ ವಿಚಾರದಲ್ಲಿ. ಇವತ್ತಿನ ದಿವಸ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವಂತಹ ಸಂದರ್ಭದಲ್ಲಿ ಬಂದಂತಹ ವಿಚಾರ ಮೈಸೂರಿನಲ್ಲಿ ಸ್ಥಾಪನೆಯಾಗಬೇಕೆನ್ನುವಂತಹ ವಿಚಾರವಿದೆ, ರೀಜ್‌ನಲ್ . ಇಮ್ ಬ್ಯಾಲೆನ್ಸ್ ತೆಗೆಯಬೇಕೆನ್ನುವಂತಹ ವಿಚಾರ ಎಲ್ಲರಿಗೂ ಇದೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997 ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು: ''ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀರಿಸಲ್ಪಟ್ಟಿತು.

(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಡಾ|| ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಮಂತ್ರಿಗಳು) ಮಾನ್ಯ ಉಪಾಧ್ಯಕ್ಷರೆ, 1997ರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ರ ರಾಜೀವ್‌ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಬಿ.ಜೆ.ಪಿ. ಸದಸ್ಯರುಗಳಾದ ಶ್ರೀ ವಿಜಯಶಂಕರ್ ಹಾಗೂ ಎ.ರಾಮದಾಸ್ ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)

ಉಪಾಧ್ಯಕ್ಷರು: ತಾವು ಈ ರೀತಿಯಾಗಿ ಮಾತನಾಡಬಾರದು, ಒಳ್ಳೆಯ ರೀತಿಯಲ್ಲಿ ಮಾತನಾಡಬೇಕು. ಈಗ ತಾವು ಅಬ್ಜೆಕ್ಷನ್ ರೈಸ್ ಮಾಡಿದ ಮೇಲೆ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ನಂತರ ನಾನು ಮತಕ್ಕೆ ಹಾಕಿದ್ದೇನೆ. ಮಾನ್ಯ ಸದಸ್ಯರುಗಳು,

ಒಳ್ಳೆಯ ರೀತಿಯಲ್ಲಿ ವರ್ತಿಸಬೇಕು, ಇದು ಸರಿಯಲ್ಲ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡುತ್ತಿದ್ದೇನೆ, ಮಾತನಾಡುವುದಕ್ಕಿಂತ ಮುಂಚೆಯೇ ಮಂಡಿಸಿದ್ದೀರಿ.

ಉಪಾಧ್ಯಕ್ಷರು: ಮಾನ್ಯ ಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ಇದು ಕೇಂದ್ರ ಸ್ಥಾನವಿರುವುದರಿಂದ ಎಲ್ಲರಿಗೂ ಅನುಕೂಲವಾಗುತ್ತದೆನ್ನುವ ದೃಷ್ಟಿಯಿಂದ ತಂದಿದ್ದಾರೆಂದು ಸ್ಪಷ್ಟಪಡಿಸಿದ ಮೇಲೆ ಅವರು ಇದನ್ನು ಮತಕ್ಕೆ ಹಾಕಿ ಎಂದು ಹೇಳಿದ ಮೇಲೆ ನಾನು ಮತಕ್ಕೆ ಹಾಕಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಉಪಾಧ್ಯಕ್ಷರೆ, ನನ್ನ ಮಿತ್ರರಾದಂತಹ ಮಾನ್ಯ ರಾಮದಾಸ್‌ರವರಿಗೂ ಹಾಗೂ ಇನ್ನಿತರ ಸ್ನೇಹಿತರಿಗೆ ನಾನು ಕೇಳುತ್ತಿದ್ದೇನೆ. ಇದು ಒಂದು ಸರಳ ವಿಧೇಯಕ ಈಗ ಅದು ಮೈಸೂರಿನಲ್ಲಿರುವಂಥಾದ್ದು ಬೆಂಗಳೂರಿಗೆ ಬರಲಿ ಎಂದು ಇದರ ಬಗ್ಗೆ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿದ್ದೆವು. ಇದಾದಮೇಲೆ ಇದನ್ನು ಬೆಂಗಳೂರಿಗೆ ತರಬೇಕೆಂದು ಆಯಿತು. ಅದು ಆದ ಮೇಲೆ ಇದನ್ನು ಬೆಂಗಳೂರಿನಲ್ಲೇ ನಡೆಸಿಕೊಂಡು ಬಂದಿದ್ದಾರೆ. ಈಗ ನಾವು ರಿಪ್ಲೇಸಿಂಗ್ ಬಿಲ್ ತಂದಿದ್ದೇವೆ. ಈ ಸಂದರ್ಭದಲ್ಲಿ ತಾವು ದಯಮಾಡಿ ಸಹಕಾರ ಕೊಡಿ. ಮೈಸೂರಿನಿಂದ ಬೆಂಗಳೂರಿಗೆ ತರುವಂಥಾದ್ದು ಏಕೆ ಎಂಬ ಕಾರಣ ತಮಗೆ ಗೊತ್ತಿದೆ. ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಲ್ಲಿ ಬೇಕಾದಷ್ಟು ಪ್ಯಾರ ಮೆಡಿಕಲ್ ಕೋರ್ಸ್‌ಗಳು ಬರುತ್ತಾ ಇದೆ. ನಾಳೆ ಗೌವರ್ನಮೆಂಟ್‌ನಿಂದ ಆಗುವಂತಹ ಕೆಲಸ ಮತ್ತೆ ಯೂನಿವರ್ಸಿಟಿಗೆ ಹೋಗಬೇಕಾಗುತ್ತದೆ. ಆದುದರಿಂದ ಇದು ಬೆಂಗಳೂರಿನಲ್ಲೇ ಇದ್ದರೆ ಈ ಪ್ಯಾರ ಮೆಡಿಕಲ್ ಕೋರ್ಸ್ ಇರುವಂಥಾದ್ದು ಇದರಲ್ಲಿ ತುಂಬಾ ಕೊರ್ಸ್‌ಗಳು ಇರುವುದರಿಂದ ಇಲ್ಲೇ ಇದ್ದರೆ ಇದು ಸುಲಭವಾಗುತ್ತದೆನ್ನುವ ದೃಷ್ಟಿಯಿಂದ ಮಾಡಿರುವಂಥಾದ್ದು. ಇದನ್ನು ಯಾರನ್ನೂ ಗಮನದಲ್ಲಿಟ್ಟುಕೊಂಡು ಮಾಡುತ್ತಾ ಇಲ್ಲ. ಈಗ ಮಾನ್ಯ ಉಪಾಧ್ಯಕ್ಷರು ಸಭೆಯ ಮತಕ್ಕೆ ಹಾಕಿದ್ದಾರೆ. ತಾವು ದಯಮಾಡಿ ಸಹಕಾರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

(ಶ್ರೀ ಸಿ.ಹೆಚ್.ವಿಜಯಶಂಕರ್‌ರವರು ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)

ಉಪಾಧ್ಯಕ್ಷರು: ತಾವು ಈ ರೀತಿ ಹೇಳಬಾರದು, ಎಲ್ಲಾ ಸದಸ್ಯರುಗಳಿಗೂ ಅವಕಾಶವನ್ನು ಕೊಟ್ಟಿದೆ, ಎಲ್ಲರೂ ಮಾತನಾಡಿದ್ದಾರೆ.

(ಗೊಂದಲ)

SRI M.C.NANAIAH: I request you to kindly co-operate with us. ಈಗ ವಿಧೇಯಕವನ್ನು ಮತಕ್ಕೆ ಹಾಕಿದ್ದಾರೆ. ಉಪಾಧ್ಯಕ್ಷರು

ತೀರ್ಮಾನವನ್ನು ತೆಗೆದುಕೊಂಡ ಮೇಲೆ ನಾವು ಅದಕ್ಕೆ ಗೌರವಿಸಬೇಕು.

ಉಪಾಧ್ಯಕ್ಷರು: ತಾವು ಅಬ್ಜೆಕ್ಷನ್ ರೈಸ್ ಮಾಡಿದ ಮೇಲೆ ಮಾನ್ಯ ಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಮೇಲೆ ಮತಕ್ಕೆ ಹಾಕಿದ್ದೇನೆ. ಈಗ ನಿರ್ಣಯ ಮಾಡಿದ ಮೇಲೆ ತಾವು ಪ್ರಶ್ನೆ ಮಾಡುವಂಥಾದ್ದು ಅಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಮಗೆ ಕಾಪೀಸ್ ಬರುವುದಿಲ್ಲ.

ಉಪಾಧ್ಯಕ್ಷರು: ಎಲ್ಲರ ಟೇಬಲ್‌ಗಳ ಮೇಲೂ ಕಾಪೀಸ್ ಇಟ್ಟಿದ್ದಾರೆ.

(ಗೊಂದಲ)

(ಮಾನ್ಯ ವಿಜಯಶಂಕರ್‌ರವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

SRI M.C.NANAIAH: Let us not defy the Chair You can't defy the Chair.

(INTERRUPTIONS)

ಉಪಾಧ್ಯಕ್ಷರು: ಮಾನ್ಯ ವಿಜಯಶಂಕರ್‌ರವರೆ, ತಾವು ಬಾವಿಯಲ್ಲಿ ನಿಂತು ಮಾತನಾಡಿದರೆ ಇಲ್ಲಿ ರೆಕಾರ್ಡ್‌ಗೆ ಹೋಗುವುದಿಲ್ಲ. ತಾವು ಮಾತನಾಡುವುದಾದರೆ ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ. ಬಿಲ್ ಇಂಟ್ರಡ್ಯೂಸ್ ಆದಾಗ ಅದರ ಕಾಪಿಗಳನ್ನು ತಮಗೆ ಕಳುಹಿಸಲಾಗಿದೆ. ಪ್ರತಿ ದಿವಸ ಕೊಡುವುದಕ್ಕಾಗುವುದಿಲ್ಲ, ಇಲ್ಲಿ ಇರುತ್ತವೆ, ತಮಗೆ ಬೇಕಾದಾಗ ಅದನ್ನು ತರಿಸಿಕೊಳ್ಳಬೇಕು. ತಾವು ಈಗ ಈ ರೀತಿಯಾಗಿ ವೆಲ್‌ನಲ್ಲಿ ನಿಂತು ಮಾತನಾಡಬಾರದು. ದಯಮಾಡಿ ತಾವು ತಮ್ಮ ಸ್ಥಾನಕ್ಕೆ ಹೋಗಬೇಕು.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಅವರು ಬಿಲ್ ಮೇಲೆ ಮಾತನಾಡಲು ತಯಾರಾಗಿ ಬಂದಿದ್ದಾರೆ. ಅವರಿಗೆ ಮಾತನಾಡಲು ಅವಕಾಶವನ್ನು ಕೊಡಿ.

ಉಪಾಧ್ಯಕ್ಷರು: ಮಾನ್ಯ ಅರಗ ಜ್ಞಾನೇಂದ್ರರವರೆ, ಅವರು ಇಲ್ಲಿ ಪ್ರಶ್ನೆ ಎತ್ತಿದ ಮೇಲೆ ಅವರಿಗೆ ಮಾನ್ಯ ಮಂತ್ರಿಯವರು ಸ್ಪಷ್ಟವಾಗಿ ಉತ್ತರವನ್ನು ಹೇಳಿದ್ದಾರೆ. ಮೈಸೂರಿನಲ್ಲಿ ಮಾಡುವುದಕ್ಕಾಗುವುದಿಲ್ಲ ಎಂದು ಬೆಂಗಳೂರು ಕೇಂದ್ರ ಸ್ಥಾನವಾಗಿರುತ್ತದೆ. ಎಲ್ಲಾ ಅವಶ್ಯಕತೆಯನ್ನು ನೋಡಿಕೊಂಡು ಮಾಡಿದ್ದಾರೆ. ಇದಕ್ಕೆ ಅನುಮೋದನೆಯನ್ನು ಕೊಡಿ ಎಂದಾಗ ನಾನು ಮತಕ್ಕೆ ಹಾಕಿದ್ದೇನೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಉಪಾಧ್ಯಕ್ಷರೇ, ತಮ್ಮ ತೀರ್ಮಾನ ಅಂತಿಮವಾದ ಮೇಲೆ ತಾವು ವಿವರಣೆಯನ್ನು ನಮಗೆ ಏಕೆ ಕೊಡುತ್ತಿದ್ದೀರಿ? ಈಗ ನೀವು ಕೊಟ್ಟಿರುವಂತಹ ತೀರ್ಮಾನಕ್ಕೆ, ನಿಮ್ಮ ಹಕ್ಕಿಗೆ ನಾವು ಪ್ರಶ್ನೆ ಮಾಡುವುದಕ್ಕೆ ಬರುವುದಿಲ್ಲ. ಈಗ ಅವರ ಮನವೊಲಿಸುವ ವಿಚಾರ ಸರ್ಕಾರಕ್ಕೆ ಬಿಟ್ಟಿದ್ದು. ಅದಕ್ಕೆ ಕಾನೂನು ಮಂತ್ರಿಗಳಿದ್ದಾರೆ, ಸಂಬಂಧಪಟ್ಟಂತಹ ಮಂತ್ರಿಗಳಿದ್ದಾರೆ.

7.10 ಪಿ.ಎಂ

ಶ್ರೀ ಎಂ.ಸಿ.ನಾಣಯ್ಯ: ನಾನು ನನ್ನ ಮಿತ್ರರನ್ನು ಇಷ್ಟೇ ಕೇಳಿಕೊಳ್ಳುತ್ತೇನೆ, ಮಾನ್ಯ ಉಪಾಧ್ಯಕ್ಷರು: ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಬಹುಶಃ ಇದರ ಬಗ್ಗೆ ಮಾತನಾಡಬೇಕೆಂಬ ಅಪೇಕ್ಷೆ ಮಾನ್ಯ ಸದಸ್ಯರಲ್ಲಿತ್ತು. ಮಾನ್ಯ ಉಪಾಧ್ಯಕ್ಷರ ತೀರ್ಮಾನವನ್ನ ಮಾನ್ಯ ಸದಸ್ಯರು ಒಪ್ಪಿ ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಬೇಕೆಂದು ನಾನು ಅವರಲ್ಲಿ ಕೇಳಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು: ಮಾನ್ಯ ಸದಸ್ಯರು ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು. ತಾವು ಮಾತನಾಡಲು ಅವಕಾಶ ನೀಡಬಾರದೆಂಬುದು ನನ್ನ ಉದ್ದೇಶವಾಗಿರಲಿಲ್ಲ. ಮಾನ್ಯ ಸದಸ್ಯರು ದಯವಿಟ್ಟು ಆ ರೀತಿ ತಿಳಿದುಕೊಳ್ಳಬಾರದು. ಮಾನ್ಯ ಮಂತ್ರಿಗಳು ಸ್ಪಷ್ಟವಾದ ಉತ್ತರ ಕೊಟ್ಟ ಮೇಲೆ ನಾನು ವಿಧೇಯಕವನ್ನು ಮತಕ್ಕೆ ಹಾಕಿದ್ದೇನೆ. ತಾವು ತಪ್ಪು ತಿಳಿದುಕೊಳ್ಳದೇ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರು ಒಂದು ನಿರ್ಣಯ ತೆಗೆದುಕೊಂಡಿದ್ದಾರೆ, ಅದಕ್ಕೆ ನಾವು ತಲೆ ಬಾಗಬೇಕಾಗುತ್ತದೆ. ಸರ್ಕಾರವನ್ನು ಮಾನ್ಯ ಸದಸ್ಯರು ಬೇರೆ ರೀತಿಯಿಂದ ತರಾಟೆಗೆ ತೆಗೆದುಕೊಳ್ಳಬಹುದು. ಅಥವಾ ಬೇರೊಂದು ರೂಪದಲ್ಲಿ ಇದನ್ನು ಚರ್ಚೆಗೆ ತಾವು ತರಬಹುದಾಗಿದೆ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಉಪಾಧ್ಯಕ್ಷರೇ, ನಾನಾಗಲೀ ಅಥವಾ ನಮ್ಮ ಪಕ್ಷದ ಸದಸ್ಯರಾಗಲೀ ಛೇರ್‌ನ ರೂಲಿಂಗ್ ಅನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ಅದಕ್ಕೆ ನಾವು ಸಂಪೂರ್ಣ ಗೌರವ ನೀಡುತ್ತೇವೆ.

ಉಪಾಧ್ಯಕ್ಷರು: ಇಲ್ಲಿಯವರೆವಿಗೂ ನೀವು ಛೇರ್‌ನ ರೂಲಿಂಗ್ ಅನ್ನೇ ಪ್ರಶ್ನೆ ಮಾಡಿ, ಈಗ ನಾವು ರೂಲಿಂಗ್ ಪ್ರಶ್ನೆ ಮಾಡುತ್ತಿಲ್ಲ ಎಂದರೆ ಹೇಗೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಸದಸ್ಯರು ಸರ್ಕಾರದ ಮೇಲಿನ ಸಿಟ್ಟಿಗೋಸ್ಕರ ಬಾವಿಗೆ ಧರಣಿಗೆ ಬಂದರು. ಅವರಿಗೆ ನಿಮ್ಮ ಮೇಲೆ ಅಗೌರವವಿಲ್ಲ.

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತವಾಗಿದ್ದ ಮಾನ್ಯ ಸದಸ್ಯರುಗಳಾದ

ಶ್ರೀ ಎ.ರಾಮದಾಸ್ ಹಾಗೂ ಶ್ರೀ ಸಿ.ಹೆಚ್.ವಿಜಯಶಂಕರ್‌ರವರು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿದರು)

ಶ್ರೀ ಎಂ.ಸಿ.ನಾಣಯ್ಯ: ಒಂದು ವೇಳೆ ಮಾನ್ಯ ಸದಸ್ಯರು ನಮ್ಮ ಮೇಲೆ ಸಿಟ್ಟು ಮಾಡಿಕೊಂಡಿದ್ದರೆ ಅವರಿಗೆ ನಮ್ಮ ಮೇಲೆ ಸಿಟ್ಟು ಮಾಡಿಕೊಳ್ಳಬೇಡಿ ಎಂದು ಕೋರುತ್ತೇನೆ. ತಾವು ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿದ್ದೀರಿ, ತಮಗೆ ನನ್ನ ಅಭಿನಂದನೆಗಳು.

ಶ್ರೀ ಎನ್.ಸುರೇಶ್ ಕುಮಾರ್: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಮದಾಸ್‌ರವರು ವಿಧೇಯಕಕ್ಕೆ ಏತಕ್ಕೆ ವಿರೋಧ ವ್ಯಕ್ತಪಡಿಸಿದರು ಎಂಬ ಬಗ್ಗೆ ಅವರಿಗೆ ಹೇಳಲಿಕ್ಕೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು: ಒಮ್ಮೆ ಬಿಲ್ ಪಾಸ್ ಆದಮೇಲೆ ಅದರ ಬಗ್ಗೆ ಮತ್ತೆ ಮಾತನಾಡಲು ಅವಕಾಶ ಕೊಡುವುದಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ.

SRI M.C.NANAIAH: It is not the procedure. Now You cannot speak on the Bill which has already been passed.

(4) ಗಮನ ಸೆಳೆಯುವ ಸೂಚನೆಗಳು

(ಅ) ಬಿಜಾಪುರ ಜಿಲ್ಲೆಯ ಇಂಡಿ, ಬಸವನ ಬಾಗೇವಾಡಿ ಹಾಗೂ ಬಿಜಾಪುರ ತಾಲ್ಲೂಕುಗಳನ್ನು ಕಪ್ಪು ಹಾಗೂ ಬೂದು ಬಣ್ಣ ಎಂದು ವರ್ಗೀಕರಿಸಿರುವುದರ ಬಗ್ಗೆ.

ಶ್ರೀ ಶಿವಾನಂದ ಪಾಟೀಲ್ (ತಿಕೋಟಾ): ಮಾನ್ಯ ಉಪಾಧ್ಯಕ್ಷರೇ, ಬಿಜಾಪುರ ಜಿಲ್ಲೆಯ ಇಂಡಿ, ಬಸವನ ಬಾಗೇವಾಡಿ ಹಾಗೂ ಬಿಜಾಪುರ ತಾಲ್ಲೂಕುಗಳನ್ನು ಕಪ್ಪು ಹಾಗೂ ಬೂದು ಬಣ್ಣ ಎಂದು ವರ್ಗೀಕರಿಸಿರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆಗಳ ಬಗ್ಗೆ ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

+ ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ,

ರಾಜ್ಯದ ಅಂತರ್ಜಲ ಸ್ಥಿತಿಗತಿಯ ಬಗ್ಗೆ ಲೆಕ್ಕಾಚಾರ ಮಾಡಲು ಕಂದಾಯ ಇಲಾಖೆ ಸಹಯೋಗದೊಂದಿಗೆ ರಾಜ್ಯದಲ್ಲಿರುವ ಎಲ್ಲಾ ನೀರಾವರಿ ಬಾವಿಗಳ ಗಣತಿ ಕಾರ್ಯಕೈಗೊಂಡು ಇದರ ಪ್ರಕಾರ ಅಂತರ್ಜಲ ಸ್ಥಿತಿಗತಿಯ ಬಗ್ಗೆ ಗಣಿ ಮತ್ತು ಭೂ

ವಿಜ್ಞಾನ ಇಲಾಖೆಯು 1994ರ ಅಂತ್ಯಕ್ಕೆ ಒಂದು ವರದಿಯನ್ನು ಪ್ರಕಟಿಸಿತ್ತು. ಈ ವರದಿಯ ಆಧಾರದಮೇಲೆ ನಬಾರ್ಡ್ ಸಂಸ್ಥೆಯು 21 ತಾಲ್ಲೂಕುಗಳನ್ನು "ಕಪ್ಪು" ಎಂತಲೂ ಹಾಗೂ 22 ತಾಲ್ಲೂಕುಗಳನ್ನು "ಬೂದು" ಎಂತಲೂ ಘೋಷಿಸಿರುತ್ತದೆ. ತಾಲ್ಲೂಕಿನಲ್ಲಿ ಅಂತರ್ಜಲ ಬಳಕೆಯು ಶೇಕಡ 85ಕ್ಕಿಂತಲೂ ಹೆಚ್ಚಾಗಿದ್ದರೆ ಅಂತಹ ತಾಲ್ಲೂಕುಗಳನ್ನು ಕಪ್ಪು ಎಂತಲೂ ಹಾಗೂ ಅಂತರ್ಜಲ ಬಳಕೆಯು ಶೇಕಡ 65 ರಿಂದ 85 ಇದ್ದರೆ ಅಂತಹ ತಾಲ್ಲೂಕುಗಳನ್ನು ಬೂದು ಎಂದು ವರ್ಗೀಕರಿಸಲಾಗಿದೆ. ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಅಂರ್ಜಲ ಬಳಕೆಯು ಶೇಕಡ 85 ಇರುವುದರಿಂದ ಈ ತಾಲ್ಲೂಕನ್ನು ಕಪ್ಪು ಎಂತಲೂ ಹಾಗೂ ಬಿ.ಬಾಗೇವಾಡಿ ಮತ್ತು ಬಿಜಾಪುರ ತಾಲ್ಲೂಕುಗಳನ್ನು ಬೂದು ಎಂದು ಘೋಷಿಸಲಾಗಿದೆ.

ನಬಾರ್ಡ್ ಸಂಸ್ಥೆಯ ನಿಯಮಗಳ ಪ್ರಕಾರ "ಕಪ್ಪು" ಮತ್ತು "ಬೂದು" ಎಂದು ಘೋಷಿಸಿರುವ ಯಾವುದೇ ತಾಲ್ಲೂಕುಗಳಲ್ಲಿ ಅಂತರ್ಜಲ ಬಳಕೆಯ ಸಲುವಾಗಿ ರಾಷ್ಟ್ರೀಕೃತ ಅಥವಾ ಮತ್ತು ಇತರ ಬ್ಯಾಂಕುಗಳಿಂದ ಸಾಲ ಸೌಲಭ್ಯದ ಅನುಕೂಲವಿರುವುದಿಲ್ಲ.

"ಬೂದು" ಎಂದು ಘೋಷಿಸಿರುವ ತಾಲ್ಲೂಕುಗಳಲ್ಲಿ ಹಾಲಿ ಇರುವ ನೀರಾವರಿ ಬಾವಿಗಳಿಗೆ ಮಾತ್ರ ವಿದ್ಯುಚ್ಛಕ್ತಿ ಕಲ್ಪಿಸುವ ಸೌಲಭ್ಯವಿರುತ್ತದೆ.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಕಪ್ಪು ಮತ್ತು ಬೂದು ಎಂದು ಘೋಷಿಸಿರುವ ತಾಲ್ಲೂಕುಗಳಲ್ಲಿ ಅಂತರ್ಜಲ ಅಭಿವೃದ್ಧಿಪಡಿಸಲು ಕೃತಕ ಮರುಪೂರೈಕೆ ರಚನೆಗಳಾದ ಚೆಕ್ ಡ್ಯಾಂ, ಗಲ್ಲಿ ಪ್ಲಗಿಂಗ್, ಪರ್ಕ್ಯುಲೇಷನ್ ಪಾಂಡ್ಸ್ ಹಾಗೂ ಕೃತಕ ಡೈಕುಗಳು ಇತ್ಯಾದಿ ನಿರ್ಮಾಣ ಕಾರ್ಯಗಳನ್ನು ಆದ್ಯತೆಯ ಮೇಲೆ ಹಮ್ಮಿಕೊಳ್ಳಲಾಗಿದೆ. ಇಂತಹ ಕಾರ್ಯಕ್ರಮಗಳನ್ನು ಕೃಷಿ ಇಲಾಖೆ, ಹಾಗೂ ಡಿ.ಎಲ್.ಡಿ.ಬಿ.ಸಹ ಕೈಗೊಂಡಿದೆ. ಈ ಕಾರ್ಯಕ್ರಮ ಅನುಷ್ಠಾನಗೊಳಿಸಲು ತಾಂತ್ರಿಕ ಸಲಹೆ ನೀಡಲಾಗುತ್ತಿದೆ. ಈ ಕಾರ್ಯಕ್ರಮಗಳು ಪೂರ್ಣಗೊಂಡ ನಂತರ ಪುನಃ ಕ್ಲಿಷ್ಟ ಎಂದು ಘೋಷಿಸಿರುವ ತಾಲ್ಲೂಕುಗಳಲ್ಲಿ ದೀರ್ಘವಾದ ಅಂತರ್ಜಲ ಸಮೀಕ್ಷೆ ಕೈಗೊಳ್ಳಲಾಗುವುದು.

+ ಶ್ರೀ ಶಿವಾನಂದ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ಸಪ್ಲಿಮೆಂಟರಿ ಪ್ರಶ್ನೆ ಇದೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಅಂತರ್ಜಲ ಸ್ಥಿತಿಗತಿಯ ಬಗೆಗಿನ ವರದಿ ಬಗ್ಗೆ ಉಲ್ಲೇಖಿಸಿದರು. 1994ನೇ ಇಸವಿಯಲ್ಲಿ ಕಂದಾಯ ಇಲಾಖೆಯವರು ಮತ್ತು ಅಂತರ್ಜಲ ವಿಭಾಗದವರು ಈ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದಾರೆ. ಈ ವರದಿಗನುಗುಣವಾಗಿ 1997ರಲ್ಲಿ ಆದೇಶ ಹೊರಡಿಸಲಾಗಿದೆ. ಇದು ಬಹಳ ವಿಚಿತ್ರವಾಗಿದೆ. 1994ರಲ್ಲಿ ಸರ್ವೆಯಾದರೆ 1997ರಲ್ಲಿ ಸರ್ಕಾರದವರು ಆದೇಶ ಹೊರಡಿಸಿದ್ದಾರೆ. ನಿಮ್ಮ ಇಲಾಖೆಯವರು ಸಂಪೂರ್ಣವಾಗಿ ಅವೈಜ್ಞಾನಿಕವಾಗಿ ಕೈಗೊಳ್ಳತಕ್ಕಂತಹ ಕಾರ್ಯಕ್ರಮ ಇದಾಗಿದೆ. ಅದು ನಿಮ್ಮ ಇಲಾಖೆಯೇ ಇರಬಹುದು

ಅಥವಾ ಕಂದಾಯ ಇಲಾಖೆಯೇ ಇರಬಹುದು. ದುರದೃಷ್ಟಕರ ಸಂಗತಿಯೆಂದರೆ ಮಾನ್ಯ ಕಂದಾಯ ಮಂತ್ರಿಗಳೇ ನಮ್ಮ ಜಿಲ್ಲೆಯವರಾಗಿದ್ದಾರೆ. ಅವರ ತಾಲ್ಲೂಕನ್ನೇ 'ಕಪ್ಪು' ಎಂದು ಇವತ್ತು ಘೋಷಣೆ ಮಾಡಲಾಗಿದೆ. ಇವತ್ತು ಅಲ್ಲಿರತಕ್ಕ ರೈತರು ತಮ್ಮ ತಮ್ಮ ಕೊಳವೆ ಬಾವಿಗಳಿಗೆ ನೀಡಲಾಗುವ ವಿದ್ಯುತ್ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಯಾವೊಂದು ಸಂಸ್ಥೆಗಳು ಇವತ್ತು ಅವರಿಗೆ ಸಾಲ ಸೌಲಭ್ಯಗಳನ್ನು ಕೊಡುತ್ತಿದ್ದವೋ ಅವು ಈಗ ರೈತರಿಗೆ ಅವುಗಳನ್ನು ಕೊಡುತ್ತಿಲ್ಲ. ಪಿ.ಎಲ್.ಡಿ. ಬ್ಯಾಂಕ್ ಆಗಿರಬಹುದು ಡಿ.ಸಿ.ಸಿ. ಬ್ಯಾಂಕ್ ಆಗಿರಬಹುದು, ಗ್ರಾಮೀಣ ಬ್ಯಾಂಕ್ ಆಗಿರಬಹುದು, ಎಲ್ಲಾ ಬ್ಯಾಂಕ್‌ಗಳೂ ಸಾಲ ನೀಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿದೆ. ಇಷ್ಟೆಲ್ಲಾ ಸಮಸ್ಯೆಗಳು ಇದರಿಂದ ಉಂಟಾಗಿದೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಹಾಗೂ ಇದರ ಬಗ್ಗೆ ವಿಚಾರ ಮಾಡಬೇಕು. ಮಾನ್ಯ ಅಂತರ್ಜಲ ಮಂತ್ರಿಗಳು 'ಅಂತರ್ಜಲ ಬಳಕೆ ನಿಷೇಧಿಸತಕ್ಕಂತಹ' ಘೋಷಣೆ ಮಾಡತಕ್ಕ ಮಂತ್ರಿಗಳಾಗಬೇಡಿ. ಅಂತರ್ಜಲ ಕಡಿಮೆಯಾಗುವುದನ್ನು ತಡೆಗಟ್ಟತಕ್ಕಂತಹ ಕಾರ್ಯಕ್ರಮವನ್ನೇನಾದರೂ ತಾವು ಹಾಕಿಕೊಳ್ಳಬೇಕು. ಬರೀ ಘೋಷಣೆ ಮಾಡುವುದಷ್ಟೇ ತಮ್ಮ ಇಲಾಖೆಯ ಕೆಲಸವಾಗಬಾರದು. ಅವೈಜ್ಞಾನಿಕವಾದಂತಹ ಕಾರ್ಯಕ್ರಮಗಳನ್ನು ನಿಮ್ಮ ಇಲಾಖೆಯವರು ಇವತ್ತು ಹಮ್ಮಿಕೊಂಡಿದ್ದಾರೆ. ನಮ್ಮ ಮೂರು ತಾಲ್ಲೂಕಿನ ರೈತರು ಇದರಿಂದ ನಮ್ಮ ಯಾವ ಶಾಸಕರನ್ನೂ ಕೂಡ ಬಿಡುತ್ತಿಲ್ಲ. ಇವತ್ತು ನೀವು ನೋಡಬಹುದು, 1994ರಿಂದೀಚೆಗೆ ನಮ್ಮ ಬಿಜಾಪುರ ತಾಲ್ಲೂಕು ಒಂದರ ಬಗ್ಗೆಯೇ ನಾನು ನಿಮಗೆ ಹೇಳುತ್ತೇನೆ. ಅದಕ್ಕೆ ಸಂಬಂಧಪಟ್ಟಂತಹ ಅಂಕಿ ಅಂಶಗಳೂ ಕೂಡ ನನ್ನ ಬಳಿ ಇವೆ. 1994ರಿಂದೀಚೆಗೆ ಹೇಳಬೇಕಾದರೆ ನಮ್ಮಲ್ಲಿ 34 ಮೈನರ್ ಇರಿಗೇಷನ್ ಟ್ಯಾಂಕ್ಸ್ ಇವೆ, 30 ಗೋಕಟ್ಟೆಗಳು ಇವೆ, 9 ಪರ್ಕ್ಯೂಲೇಷನ್ ಟ್ಯಾಂಕ್ಸ್ ಇವೆ, 505 ನಾಲಾಬಂಡ್ಸ್ ಇವೆ, ಮತ್ತು 26 ಚೆಕ್ ಡ್ಯಾಮ್ಸ್ ಇವೆ. ಇದೇ ತರಹ ಇಂಡಿಯಲ್ಲಿ ಹಾಗೂ ಬಾಗೇವಾಡಿಯಲ್ಲಿ ಸಹ ಆಗಿವೆ. ಸಂಪೂರ್ಣವಾಗಿ ಅವೈಜ್ಞಾನಿಕವಾಗಿ ನಿಮ್ಮ ಇಲಾಖೆಯವರು ಎಲ್ಲೋ ಒಂದು ಕಡೆ ಟ್ರಯಲ್ ಬೋರ್ ಮಾಡಿದ್ದಾರೆ. ಅವರು ಟ್ರಯಲ್ ಬೋರ್ ಕೊರೆದು ಸರ್ವೆ ಮಾಡತಕ್ಕಂತಹ ಸಂದರ್ಭದಲ್ಲಿ ಪ್ರತಿಯೊಂದು ಸಂಬಂಧಪಟ್ಟ ಇಲಾಖೆಯವರನ್ನು ತಮ್ಮ ಜೊತೆಗೆ ಕರೆದುಕೊಂಡು ಹೋಗಿ ಅವರು ಸರ್ವೆ ಮಾಡಬೇಕು. ಜಿಲ್ಲಾ ಪರಿಷತ್ತು, ಡಿ.ಎಲ್.ಡಿ.ಬಿ. ಅಥವಾ ಕನಿಷ್ಟ ಮೈನರ್ ಇರಿಗೇಷನ್ ಇಲಾಖೆಯವರನ್ನಾದರೂ ಕರೆದುಕೊಂಡು ಹೋಗಿ ಅಥವಾ ಕನ್‌ಸಲ್ಟ್ ಮಾಡಿ ಅವರು ಸರ್ವೆ ಮಾಡಬೇಕಾಗಿತ್ತು. ಅವರು ಯಾರನ್ನೂ ಕರೆದುಕೊಂಡು ಹೋಗದೇ, ತಾವೇ ಸ್ವತಃ ಹೋಗಿ ಸರ್ವೆ ಮಾಡಿ ಸರ್ಕಾರಕ್ಕೆ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅದರ ಶಿಫಾರಸ್ಸಿನ ಮೇರೆಗೆ ತಾವು ಘೋಷಣೆ ಮಾಡಿ ಸುಮ್ಮನೆ ಕುಳಿತಿದ್ದೀರಿ. ಇದರಿಂದಾಗಿ ಅಲ್ಲಿರತಕ್ಕ ರೈತರಿಗಾಗಲೀ ಅಥವಾ ನಮಗಾಗಲೀ ಎಷ್ಟು ಅನಾನುಕೂಲತೆ ಉಂಟಾಗಿದೆ ಎಂಬ ಬಗ್ಗೆ ತಾವು ವಿಚಾರ ಮಾಡುತ್ತಿಲ್ಲ. ನಿಮಗೆ ಹೇಳಬೇಕೆಂದರೆ, ನಮ್ಮ ಮೂರೂ ತಾಲ್ಲೂಕಿನ ಜನ ಇವತ್ತು 1994ರಿಂದೀಚೆಗೆ ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್

ಬೋರ್ಡಿನಿಂದ ಕೆಲಸ ಮಾಡಿಸಿದ್ದಾರೆ, ಜೆ.ಆರ್.ವೈ. ಹಣದಿಂದ ಕೆಲಸ ಮಾಡಿಸಿದ್ದಾರೆ. ಇ.ಎ.ಎಸ್.ನಿಂದ ಕೆಲಸ ಮಾಡಿಸಿದ್ದಾರೆ. ಬರೇ ಈ ನಾಲ್ಕು ವರ್ಷದಲ್ಲಿ ನಮ್ಮ ಒಂದೇ ಒಂದು ತಾಲ್ಲೂಕಿನಲ್ಲಿ 20 ಕೋಟಿ ರೂ.ಗಳನ್ನು ನಾವು ಖರ್ಚು ಮಾಡಿದ್ದೇವೆ.

ಉಪಾಧ್ಯಕ್ಷರು: ಮಾನ್ಯ ಶಿವಾನಂದ ಪಾಟೀಲ್‌ರವರೇ, ತಾವು ಕೇವಲ ಮಾನ್ಯ ಮಂತ್ರಿಗಳ ಗಮನ ಸೆಳೆದರೆ ಸಾಕು, ಮಾನ್ಯ ಮಂತ್ರಿಗಳು ಅದಕ್ಕೆ ಉತ್ತರಿಸುತ್ತಾರೆ. ತಾವು ತಾಸುಗಟ್ಟಲೆ ಭಾಷಣ ಮಾಡಿದರೆ ಹೇಗೆ?

ಶ್ರೀ ಶಿವಾನಂದ್ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಡಲಿಲ್ಲ, ಅವರು ಬರೀ ತಮ್ಮ ಹೇಳಿಕೆ ಓದಿದ್ದಾರೆ ಅಷ್ಟೇ.

ಉಪಾಧ್ಯಕ್ಷರು: ತಾವು ಏನಾದರೂ ಸ್ಪಷ್ಟೀಕರಣ ಕೇಳುವುದಿದ್ದರೆ ಕೇಳಿಬಿಡಿ ಸಾಕು.

ಶ್ರೀ ಶಿವಾನಂದ ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಅಂತರ್ಜಲ ಮಂತ್ರಿಗಳು ಅಂತರ್ಜಲ ಅಭಿವೃದ್ಧಿ ಪಡಿಸಬೇಕೇ ವಿನಃ ಅಂತರ್ಜಲ ಹೋಯಿತು ಎಂದು ಘೋಷಣೆ ಮಾಡಿಕೊಂಡು ಸುಮ್ಮನೆ ಕುಳಿತರೆ, ನಮ್ಮ ರೈತರಿಗೆ ಆಗತಕ್ಕಂತಹ ಅನಾನುಕೂಲತೆಗಳನ್ನು ಅವರಿಗೆ ಯಾರು ತಿಳಿಸಬೇಕು?

ಉಪಾಧ್ಯಕ್ಷರು: ಅವರೇನು ಕೇಳಿದರೋ ಅದಕ್ಕೆ ಮಾನ್ಯ ಮಂತ್ರಿಗಳೇ ಉತ್ತರ ಹೇಳಿ.

ಶ್ರೀ ಆರ್.ತಿಪ್ಪೇಸ್ವಾಮಿ: ಮಾನ್ಯ ಉಪಾಧ್ಯಕ್ಷರೇ, ಈ ಒಂದು ವ್ಯವಸ್ಥೆ ಆಗಬೇಕಾಗಿರುವುದು ಇವತ್ತು ಮಳೆ ಹೋಗಿ ಬಿಟ್ಟು ಇಡೀ ರಾಜ್ಯದಲ್ಲೇ ಈ ಒಂದು ಅಂತರ್ಜಲ ಹೆಚ್ಚಿಗೆ ಬಳಸುವುದರಿಂದ ಇವತ್ತು ಭೂಮಿಯಲ್ಲಿ ಇಂತಹ ಒಂದು ಪರಿಸ್ಥಿತಿ ಬಂದಿದೆ. ಮಾನ್ಯ ಸದಸ್ಯರು ರೆವಿನ್ಯೂ ಮಿನಿಸ್ಟರ್‌ರವರ ತಾಲ್ಲೂಕೇ ಈ ರೀತಿ ಆಗಿದೆ ಎಂದು ಹೇಳುತ್ತಾರೆ. ನಾನು ಅಂತರ್ಜಲ ಸಚಿವನಾಗಿದ್ದೇನೆ, ನನ್ನ ತಾಲ್ಲೂಕನ್ನೇ ಈಗ ಬೂದು ಎಂದು ಘೋಷಣೆ ಮಾಡಿದ್ದಾರೆ. ಅಂತರ್ಜಲ ಪೂರೈಕೆಗೆ ಹೆಚ್ಚಿನ ಗಮನ ಕೊಡಿ ಎಂಬುದು ಮಾನ್ಯ ಸದಸ್ಯರ ಕಳಕಳಿಯಾಗಿದೆ. ಅದಕ್ಕೆ ನಾವು ಹೆಚ್ಚಿನ ಗಮನ ಕೊಡೋಣ. ಅದಕ್ಕೆಂದೇ ನಾವು ಇವತ್ತು 19 ಕೋಟಿ ರೂ.ಗಳ ಒಂದು ಯೋಜನೆಯನ್ನು ರೂಪಿಸಿ ನಬಾರ್ಡ್‌ಗೆ ಕಳುಹಿಸಿಕೊಟ್ಟಿದ್ದೇವೆ. ಅದು ಬಂದ ತಕ್ಷಣ ಏನು ಇವತ್ತು 'ಕಪ್ಪು' ಮತ್ತು 'ಬೂದು' ಎಂದು ಘೋಷಣೆ ಮಾಡಲಾಗಿದೆಯೋ, ಈ ತಾಲ್ಲೂಕುಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆ. ಅದು ಪೂರೈಕೆ ಆಗುವಂತೆ ಮಾಡಬೇಕು. ಇವತ್ತು ಸರ್ಕಾರ ಈ ಭೂಮಿಯಲ್ಲಿರತಕ್ಕಂತಹ ನೀರನ್ನು ಯಥೇಚ್ಛವಾಗಿ ತೆಗೆದು, ಇದ್ದುದ್ದನ್ನೂ ಎಲ್ಲಾ ತೆಗೆದು ನಾಳೆ ಬೆಳಿಗ್ಗೆ ಭಯಾನಕವಾದ ಪರಿಸ್ಥಿತಿ ಜನರನ್ನು ನಾವು ಬಿಟ್ಟರೆ, ಅದು ನಮ್ಮ ತಪ್ಪಾಗುತ್ತದೆ. ತಾವು ಹೇಳಿದಂತೆ ಹೆಚ್ಚಿನ ಒಂದು ಕಾರ್ಯಕ್ರಮಗಳು ಮುಂದೆ ಈ ಬೂದು, ಕಪ್ಪು ಆಗಿರತಕ್ಕಂತಹ ತಾಲ್ಲೂಕುಗಳಲ್ಲೆಲ್ಲಾ

ಹಮ್ಮಿಕೊಳ್ಳುತ್ತೇವೆ. ಅಂತರ್ಜಲವನ್ನು ಇಂಪ್ರೂವ್ ಮಾಡುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಶಿವಾನಂದ್ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಸರ್‌ಫೇಸ್ ವಾಟರ್ ಅನ್ನು ಡ್ರಾ ಮಾಡಲಿಕ್ಕೆ ಈಗೇನೂ ಪ್ರಾಬ್ಲಮ್ ಇಲ್ಲವಲ್ಲಾ. ನದಿ ಹರಿಯುತ್ತದೆ, ಹಳ್ಳ ಹರಿಯುತ್ತದೆ, ಅದು ಹರಿದು ಹೋಗಿ ನೀರು ಬೇರೆ ಕಡೆಗೆ ಹೋಗುತ್ತದೆ. ಇವತ್ತು ಕೆ.ಇ.ಬಿ.ನವರು ಅದಕ್ಕೂ ಕನೆಕ್ಷನ್ ಕೊಡುವುದು ನಿಲ್ಲಿಸಿ ಬಿಟ್ಟಿದ್ದಾರೆ. ನೀವು ಅದನ್ನಾದರೂ ನೋಡಬೇಕಲ್ಲಾ.

ಉಪಾಧ್ಯಕ್ಷರು: ನೀವು ಕೆ.ಇ.ಬಿ.ಯವರ ಬಗ್ಗೆ ಸಣ್ಣ ನೀರಾವರಿ ಸಚಿವರಿಗೆ ಹೇಳಿದರೆ ಹೇಗೆ?

ಶ್ರೀ ಶಿವಾನಂದ ಪಾಟೀಲ್: ನಿನ್ನೆ ಇದರ ಬಗ್ಗೆ ಸವಿಸ್ತಾರವಾಗಿ ಮಾನ್ಯ ಮುಖ್ಯಮಂತ್ರಿಗಳು ಕೂಡ ಉತ್ತರ ಕೊಟ್ಟರು. ಆಗ ತಾವೂ ಸದನದಲ್ಲಿದ್ದೀರಿ. ಆದರೆ ಇವತ್ತು ನಾನೇನು ಅವರಿಗೆ ಕೇಳಿಕೊಳ್ಳಬಯಸುತ್ತೇನೆ ಎಂದರೆ, ಇವತ್ತು ನಮ್ಮ ಬಿಜಾಪುರ ತಾಲ್ಲೂಕಿನಲ್ಲಿ ಕೃಷ್ಣಾ ನದಿ ತುಂಬಿ ಹರಿದು ಅಣೆಕಟ್ಟುಗಳ ಬ್ಯಾಕ್ ವಾಟರ್‌ನಿಂದ ಸುಮಾರು 50-60 ಹಳ್ಳಿಗಳು ಮುಳುಗಡೆಯಾಗಿವೆ.

ಉಪಾಧ್ಯಕ್ಷರು: ಮಾನ್ಯ ಮಂತ್ರಿಗಳ ಗಮನವನ್ನು ತಾವು ಸೆಳೆದಿದ್ದೀರಿ. ತಾವು ಅಷ್ಟೇ ಕೆಲಸ ಮಾಡಬೇಕು, ಇದರ ಬಗ್ಗೆ ತಾವು ಬಹಳ ಮಾತನಾಡಬಾರದು. ನೀವು ಅವರ ಹತ್ತಿರ ಹೋಗಿ ಕುಳಿತುಕೊಂಡು ನಾಳೆ ಮಾತನಾಡಿ.

ಶ್ರೀ ಶಿವಾನಂದ ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಅಟ್‌ಲೀಸ್ಟ್ ಈಗ ಸರ್‌ಫೇಸ್ ವಾಟರ್ ಅನ್ನು ಡ್ರಾ ಮಾಡಲಿಕ್ಕಾದರೂ ನಮಗೆ ಪರ್ಮಿಷನ್ ಕೊಡಲಿ. ಬೋರ್‌ವೆಲ್ ಡ್ರಿಲ್ ಮಾಡಿದರೆ ಅಥವಾ ಓಪನ್ ವೆಲ್ ತೆಗೆದರೆ ಅದನ್ನು ನೀವು ಬಂದ್ ಮಾಡಿ. ನಾವು ಅದನ್ನು ಬೇಡ ಎನ್ನುವುದಿಲ್ಲ. ಇವತ್ತು ನದಿ ಹರಿಯುತ್ತದೆ, ಹಳ್ಳ ಹರಿಯುತ್ತದೆ, ಅಲ್ಲಿ ನೀರು ನಮಗೆ ಸಿಗುತ್ತದೆ. ಅಟ್‌ಲೀಸ್ಟ್ ಅದನ್ನಾದರೂ ಡ್ರಾ ಮಾಡಲಿಕ್ಕೆ ನಮಗೆ ಪರ್ಮಿಷನ್ ಕೊಡಬೇಕೋ ಬೇಡವೋ?

ಉಪಾಧ್ಯಕ್ಷರು: ಅದರ ಬಗ್ಗೆ ಇವರ ಹತ್ತಿರ ಏನು ಮಾತನಾಡುತ್ತೀರಿ, ಆ ಬಗ್ಗೆ ನಾಳೆ ಕೆ.ಇ.ಬಿ.ಯವರ ಹತ್ತಿರ ಮಾತನಾಡಿ.

ಶ್ರೀ ಶಿವಾನಂದ ಪಟೀಲ್: ಮಾನ್ಯ ಉಪಾಧ್ಯಕ್ಷರೇ, ಇವರೇ ನಮಗೆ ಪರ್ಮಿಷನ್ ಕೊಡಬೇಕು. ಇವರು ಈ ರೀತಿ ಕಪ್ಪು, ಬೂದು ಎಂದು ಡಿಕ್ಲೇರ್ ಮಾಡಿದ್ದಾರೆ ಎಂದು ಹೇಳಿ, ಕೆ.ಇ.ಬಿ.ಯವರು ವಿದ್ಯುತ್ ಸಂಪರ್ಕ ಕೊಡುವುದಿಲ್ಲ ಎಂದು ಬ್ಯೆಂಡಿಂಗ್

ಹಾಕಿಕೊಂಡು ಕುಳಿತಿದ್ದಾರೆ. ಇದು ಎರಡೂ ಇಲಾಖೆಗಳ ನಡುವಿನ ಪ್ರಶ್ನೆಯಾಗಿದೆ. ಇದನ್ನು ತಾವು ವಿಚಾರ ಮಾಡಿ ಎಂದು ನಾನು ಅವರಿಗೆ ಕೇಳುತ್ತಿದ್ದೇನೆ.

ಉಪಾಧ್ಯಕ್ಷರು: ಮಾನ್ಯ ಸದಸ್ಯರು ಏನು ಕೇಳುತ್ತಾರೋ ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಿ.

ಶ್ರೀ ತಿಪ್ಪೇಸ್ವಾಮಿ: ಮಾನ್ಯ ಸದಸ್ಯರು ನನ್ನ ಬಳಿಗೆ ಬಂದು ಮಾತನಾಡಲಿ. ಅದರಲ್ಲಿ ಅವರಿಗೇನಾದರೂ ಸಹಾಯ ಮಾಡುವಂತಿದ್ದರೆ ನಾನು ನಮ್ಮ ಅಧಿಕಾರಿಗಳೊಡನೆ ಸಮಾಲೋಚನೆ ಮಾಡಿ ಅವರಿಗೆ ಸಹಾಯ ಮಾಡಿಕೊಡುತ್ತೇನೆ.

ಶ್ರೀ ಶಿವಾನಂದ ಪಾಟೀಲ್: ಮಾನ್ಯ ಉಪಾಧ್ಯಕ್ಷರೇ....

ಉಪಾಧ್ಯಕ್ಷರು: ಇದು ಚರ್ಚೆ ನಡೆಸಿ ಉತ್ತರ ಕೊಡುವುದಲ್ಲ. ಇದು ಗಮನ ಸೆಳೆಯುವ ಸೂಚನೆ. ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ತಾವು ಇದನ್ನು ಅರ್ಥ ಮಾಡಿಕೊಳ್ಳದಿದ್ದರೆ ನಾವೇನು ಮಾಡಬೇಕು? ಹೀಗಾದರೆ ನಾವು ಸದನ ಹೇಗೆ ನಡೆಸುವುದು?

ಶ್ರೀ ಶಿವಾನಂದ ಪಟೀಲ್: ಎಲ್ಲಾ ಶಾಸಕರೂ ಕೂಡ ತಮ್ಮ ಕ್ಷೇತ್ರಗಳಲ್ಲಿ ಈ ಸಮಸ್ಯೆ ಎದುರಿಸುತ್ತಿದ್ದಾರೆ. ತಾವು ಇದನ್ನು ಚರ್ಚೆ ಎಂದು ತಿಳಿದುಕೊಳ್ಳಬೇಡಿ.

ಉಪಾಧ್ಯಕ್ಷರು: ತಾವು ಆ ರೀತಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಶಿವಾನಂದ ಪಾಟೀಲ್: ಆಯಿತು ಸಾರ್, ನಾವು ಕುಳಿತುಕೊಳ್ಳುತ್ತೇವೆ,....

ಉಪಾಧ್ಯಕ್ಷರು: ಮಾನ್ಯ ಮಂತ್ರಿಗಳು ತಮ್ಮ ಬಳಿಗೆ ಬನ್ನಿ, ನಾನು ನಿಮ್ಮ ಸಮಸ್ಯೆಯನ್ನು ಬಗೆಹರಿಸಿಕೊಡುತ್ತೇನೆ ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ತಾವು ಮಾನ್ಯ ಮಂತ್ರಿಗಳ ಕಛೇರಿಗೆ ಹೋಗಿ. ಅವರು ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಡುತ್ತಾರೆ.

ಶ್ರೀ ಶಿವಾನಂದ ಪಾಟೀಲ್: ಈಗ ಆಗಿರುವ ಸರ್ವೆ ಅವೈಜ್ಞಾನಿಕವಾಗಿ ಆಗಿದೆ. ಆದುದರಿಂದ ಮಾನ್ಯ ಮಂತ್ರಿಗಳು ಪುನಃ ಇದರ ಬಗ್ಗೆ ರೀ-ಸರ್ವೆ ಮಾಡಿಸಲಿಕ್ಕೆ ಆದೇಶ ನೀಡುತ್ತಾರೆಯೇ?

ಉಪಾಧ್ಯಕ್ಷರು: ಮಾನ್ಯ ಮಂತ್ರಿಗಳು ರೀ-ಸರ್ವೆ ಮಾಡಿಸಿಕೊಡುತ್ತಾರೆ ಬಿಡಿ.

ಶ್ರೀ ತಿಪ್ಪೇಸ್ವಾಮಿ: ರೀ-ಸರ್ವೆ ಮಾಡಿಸುತ್ತೇನೆ.

(ಆ) ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆ ದರದ ಕುಸಿತದಿಂದ ರೈತರಿಗೆ ತೊಂದರೆ:

ಶ್ರೀ ಬಿ.ಶಿವರಾಮು (ಗಂಡಸಿ): ಮಾನ್ಯ ಉಪಾಧ್ಯಕ್ಷರೇ, ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆ ದರದ ಕುಸಿತದಿಂದ ರೈತರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ನಾನು ಮಾನ್ಯ ತೋಟಗಾರಿಕಾ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

+ ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕಾ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೇ,

ಕರ್ನಾಟಕ ರಾಜ್ಯದ ಆಲೂಗೆಡ್ಡೆ ಮತ್ತು ಈರುಳ್ಳಿ ಬೆಳೆಗಾರರು ಅದರಲ್ಲೂ ಮುಖ್ಯವಾಗಿ ಹಾಸನ ಜಿಲ್ಲೆಯ ಆಲೂಗೆಡ್ಡೆ ಬೆಳೆಗಾರರು ಈ ಋತುಮಾನದಲ್ಲಿ ಬೆಳೆದಿರುವ ಆಲೂಗೆಡ್ಡೆಗೆ ಸರಿಯಾದ ಬೆಲೆ ಸಿಗದೆ ಇರುವುದು ಸರ್ಕಾರದ ಗಮನಕ್ಕೆ ಬಂದು ತಕ್ಷಣ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

ಮಾನ್ಯ ಕೃಷಿ ಸಚಿವರಾದ ಶ್ರೀ ಬೈರೇಗಡೌರು ಮಾನ್ಯ ತೋಟಗಾರಿಕೆ ರಾಜ್ಯ ಸಚಿವರಾದ ಶ್ರೀ ಡಿ.ಟಿ.ಜಯಕುಮಾರ್‌ರವರು ಹಾಗೂ ಮಾನ್ಯ ವಸತಿ ಸಚಿವರಾದ ಶ್ರೀ ರೇವಣ್ಣನವರು ಈ ವಿಚಾರದ ಬಗ್ಗೆ ಕ್ರಮ ಕೈಗೊಳ್ಳಲು ದಿನಾಂಕ 6-9-97ನೇ ಶನಿವಾರ ಬೆಂಗಳೂರಿನ ಯಶವಂತಪುರದ ವ್ಯವಸಾಯೋತ್ಪನ್ನ ಮಾರುಕಟ್ಟೆಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿರುತ್ತಾರೆ. ಅಲ್ಲಿ ರೈತರು ಮಾರಾಟ ಮಾಡಲು ತಂದಿದ್ದ ಆಲೂಗೆಡ್ಡೆಯನ್ನು ಪರೀಕ್ಷಿಸಿ ಅತಿ ಕಡಿಮೆ ಬೆಲೆಗೆ ಮಾರಾಟವಾಗುತ್ತಿದ್ದ ಬಗ್ಗೆ ರೈತರೊಂದಿಗೆ ಚರ್ಚಿಸಿರುತ್ತಾರೆ.

ಅದೇ ದಿನ ಮಧ್ಯಾಹ್ನ ಮಾನ್ಯ ಕೃಷಿ ಸಚಿವರ ಕಛೇರಿಯಲ್ಲಿ, ರೈತರ ಹಾಗೂ ಉನ್ನತ ಅಧಿಕಾರಿಗಳ ಸಭೆ ನಡೆಸಿ ಕೂಲಂಕುಷವಾಗಿ ಚರ್ಚಿಸಲಾಗಿದೆ. ಅದರಂತೆ ರೈತರು ಬೆಳೆದಿರುವ ಆಲೂಗೆಡ್ಡೆಗೆ ಪ್ರತಿ ಕ್ವಿಂಟಾಲ್‌ಗೆ ರೂ.350-00 ರಂತೆ ಹಾಗೂ ಈರುಳ್ಳಿಗೆ ಪ್ರತಿ ಕ್ವಿಂಟಾಲ್‌ಗೆ ರೂ.300-00 ರಂತೆ ಬೆಲೆ ನಿಗಧಿಪಡಿಸಿ ಕೊಂಡುಕೊಳ್ಳಲು ನಿರ್ಧರಿಸಲಾಯಿತು. ಅದರಂತೆ ದಿನಾಂಕ 10-9-97 ರಿಂದಲೇ ಸಂಘ ಸಂಸ್ಥೆಗಳಾದ ಹಾಪ್‌ಕಾಮ್ಸ್, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಹಾಗೂ ಕರ್ನಾಟಕ ಕೃಷಿ ಕೈಗಾರಿಕಾ ನಿಗಮದವರು ತಕ್ಷಣ ಕಾರ್ಯೋನ್ಮುಖರಾಗಿ ನಿಗಧಿಪಡಿಸಿರುವ ಬೆಂಬಲ ಬೆಲೆಯಂತೆ ಆಲೂಗೆಡ್ಡೆ ಮತ್ತು ಈರುಳ್ಳಿಯನ್ನು ಖರೀದಿಸಲು ತೀರ್ಮಾನಿಸಲಾಗಿದೆ. ಪ್ರಸ್ತುತ ಮುಂಗಾರು ಹಂಗಾಮಿನ ಕಟಾವು ಋತುವಿನಲ್ಲಿ ಆಲೂಗೆಡ್ಡೆ ಫಸಲಿಗೆ ಬೆಲೆ ಕುಸಿತದಿಂದ ಆಗಬಹುದಾದ ನಷ್ಟವನ್ನು ತಪ್ಪಿಸಲು ಕೈಗೊಂಡ ಕ್ರಮಗಳು:

ರಾಜ್ಯದಲ್ಲಿ ಆಲೂಗೆಡ್ಡೆಯು ಪ್ರಮುಖ ತರಕಾರಿ ಬೆಳೆಯಾಗಿದ್ದು, ಒಟ್ಟು ತರಕಾರಿ ಉತ್ಪಾದನೆಯ ಶೇಕಡ 20 ರಷ್ಟು ವಿಸ್ತೀರ್ಣ ಮತ್ತು ಉತ್ಪಾದನೆಯನ್ನು ಆಲೂಗೆಡ್ಡೆ ಬೆಳೆ ವ್ಯಾಪಿಸಿರುತ್ತದೆ. ಮುಂಗಾರು ಮತ್ತು ಹಿಂಗಾರು ಋತುಗಳಲ್ಲಿ ಒಟ್ಟು 45 ಸಾವಿರ

ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುವ ಈ ಆಲೂಗೆಡ್ಡೆಯ ಒಟ್ಟು ವಾರ್ಷಿಕ ಉತ್ಪಾದನೆ ಎಂಟೂವರೆ ಲಕ್ಷ ಟನ್‌ಗಳು.

ಪ್ರಸ್ತುತ ಮುಂಗಾರು ಹಂಗಾಮಿನಲ್ಲಿ ಒಟ್ಟು 36 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಆಲೂಗೆಡ್ಡೆ ಬೆಳೆದಿರುವುದು ತಿಳಿದು ಬಂದಿದೆ. (ಹಾಸನ, 25ಸಾವಿರ ಹೆಕ್ಟೇರ್, ಬೆಳಗಾಂ 6 ಸಾವಿರ ಹೆಕ್ಟೇರ್, ಧಾರವಾಡ 3 ಸಾವಿರ ಹೆಕ್ಟೇರ್ ಚಿಕ್ಕಮಗಳೂರು 2ಸಾವಿರ ಹೆಕ್ಟೇರ್) ಪ್ರತಿ ಹೆಕ್ಟೇರಿಗೆ 10 ಟನ್ ಉತ್ಪನ್ನ ಬರಬಹುದೆಂದು ಅಂದಾಜು ಮಾಡಲಾಗಿದ್ದು, ಸುಮಾರು 4 ಲಕ್ಷ ಮೆಟ್ರಿಕ್ ಟನ್‌ಗಳು ಕಟಾವು ಆಗಲಿದೆ. ಇದರಿಂದಾಗಿ ಆಗಸ್ಟ್ ಕೊನೇ ವಾರದಿಂದ ಅಕ್ಟೋಬರ್ ಕೊನೇ ವಾರದವರೆಗೆ ಹೆಚ್ಚಿನ ಆಲೂಗೆಡ್ಡೆ ಮಾರುಟ್ಟೆಗೆ ಬಂದು ಬೆಲೆ ಕುಸಿತ ಉಂಟಾಗುವ ಸಂಭವವಿದೆ.

ಆಲೂಗೆಡ್ಡೆ ಬೆಳೆಗಾರರಿಗೆ ಕಟಾವಿನ ಋತುವಿನಲ್ಲಿ ಬೆಲೆ ಕುಸಿತದಿಂದ ಉಂಟಾಗುವ ನಷ್ಟವನ್ನು ತಪ್ಪಿಸುವ ಉದ್ದೇಶದಿಂದ ಹಿಂದಿನ ಸಾಲಿನಂತೆ ಈ ವರ್ಷವೂ ಬೆಂಬಲ ಬೆಲೆ ನೀಡಲು ಪರಿಶೀಲನೆಯಲ್ಲಿದೆ. ಪೂರ್ವಭಾವಿಯಾಗಿ ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿಗಳು (ಕೃಷಿ ಇಲಾಖೆ) ಇವರೊಂದಿಗೆ 8.8.97ರಂದು ಬೆಂಗಳೂರಿನಲ್ಲಿ ಸಭೆ ನಡೆಸಲಾಗಿದೆ.

ಬೆಂಬಲ ಬೆಲೆಯು ಆಲೂಗೆಡ್ಡೆಯ ಉತ್ಪಾದನಾ ವೆಚ್ಚಕಿಂತಲೂ ಸ್ವಲ್ಪ ಅಧಿಕವಾಗಿರಬೇಕಾದುದು ವಾಸ್ತವಿಕವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಇಲಾಖೆಯ ಅಧಿಕಾರಿಗಳು ಪ್ರವಾಸ ಕೈಗೊಂಡು ಆಲೂಗೆಡ್ಡೆ ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ಸಿದ್ಧಪಡಿಸಿರುತ್ತಾರೆ. ಅದರಂತೆ ಪ್ರತಿ ಹೆಕ್ಟೇರಿಗೆ 25 ಸಾವಿರ ರೂ.ಗಳು ಉತ್ಪಾದನಾ ವೆಚ್ಚ ತಗುಲಲಿದ್ದು, 10 ಟನ್ ಉತ್ಪಾದನೆಯಾಗಲಿದೆ. ಹೀಗಾಗಿ ಪ್ರತಿ ಕ್ವಿಂಟಾಲಿಗೆ 250 ರೂ. ಉತ್ಪಾದನಾ ವೆಚ್ಚವಾಗಿದ್ದು, 50 ರೂ. ಲಾಭಾಂಶವನ್ನು ಸೇರ್ಪಡಿಸಿ 300 ರೂ.ಗಳ ಬೆಂಬಲ ಬೆಲೆಯನ್ನು ನೀಡುವುದು ಸಮರ್ಪಕವಾಗಿದೆ.

ಬೆಂಬಲ ಬೆಲೆ ಕಾರ್ಯಕ್ರಮವು ಬೆಲೆ ಕುಸಿತ ಉಂಟಾಗುವುದಕ್ಕಿಂತ ಮುನ್ನವೇ ಆರಂಭವಾಗಬೇಕಾಗಿದ್ದು, ಈ ಉದ್ದೇಶಕ್ಕಾಗಿ ಪ್ರಸ್ತುತ ಸಾಲಿನಲ್ಲಿ ಹಾಪ್‌ಕಾಮ್ಸ್ ಕರ್ನಾಟಕ ಕೃಷಿ ಕೈಗಾರಿಕಾ ನಿಗಮ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಲ ಮತ್ತು ಕ್ಯಾಂಪ್ಕೋ ಸಂಸ್ಥೆಗಳು 40 ಸಾವಿರ ಮೆಟ್ರಿಕ್ ಟನ್ ಖರೀದಿಸಲು ಸಿದ್ಧತೆ ಮಾಡಿಕೊಳ್ಳಬೇಕಾಗಿದೆ. ಈ ಕಾರ್ಯಕ್ರಮಕ್ಕಾಗಿ ಒಟ್ಟು 12 ಕೋಟಿ ರೂ.ಗಳ ಅವಶ್ಯಕತೆ ಇದ್ದು, ಪ್ರತಿ 15 ದಿನಗಳಿಗೊಮ್ಮೆ ಆಲೂಗೆಡ್ಡೆ ಮಾರಾಟದಿಂದ ಮರು ಹಣ ಪಡೆಯಬೇಕಾಗಿರುವುದರಿಂದ ತುರ್ತಾಗಿ 4 ಕೋಟಿ ರೂ.ಗಳ ಅವಶ್ಯಕತೆ ಇರುತ್ತದೆ.

ಈ ಪ್ರಸ್ತಾವನೆಯು ಸರ್ಕಾರದ ಜರೂರು ಪರಿಶೀಲನೆಯಲ್ಲಿದೆ.

ಉಪಾಧ್ಯಕ್ಷರು: ಮಾನ್ಯ ಶಿವರಾಮುರವರೇ, ಇದರ ಬಗ್ಗೆ ಸ್ಪಷ್ಟೀಕರಣ ಏನಾದರೂ ಕೇಳಬೇಕಾಗಿದ್ದರೆ ಸಂಕ್ಷಿಪ್ತವಾಗಿ ಕೇಳಿಬಿಡಿ.

ಶ್ರೀ ಬಿ.ಶಿವರಾಮು: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಈಗ ಕ್ರಮ ತೆಗೆದುಕೊಂಡಿರುವ ಬಗ್ಗೆ ಮಾಹಿತಿಯನ್ನು ಒದಗಿಸಿದ್ದಾರೆ. ನಾನು ತಿಳಿದುಕೊಂಡ ಹಾಗೆ ಎರಡು ಕೋಟಿ ರೂ.ಗಳ ಹಣವನ್ನೂ ಕೂಡ ಬಿಡುಗಡೆ ಮಾಡಲಾಗಿದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಇದರಲ್ಲಿ ಆಲೂಗೆಡ್ಡೆ ಕೊಳ್ಳಲಿಕ್ಕೆ ಎಷ್ಟು ಈರುಳ್ಳಿ ಕೊಳ್ಳಲಿಕ್ಕೆ ಎಷ್ಟು ಎಂಬುದು ನನ್ನ ಮೊದಲನೆಯ ಪ್ರಶ್ನೆ. ಬಹುಶಃ ಒಟ್ಟು ತಾವು ಕೊಟ್ಟಿರತಕ್ಕಂತಹ ಎರಡು ಕೋಟಿ ರೂ.ಗಳ ಹಣದಲ್ಲಿ, ರಾಜ್ಯ ಸರ್ಕಾರ ಏನು ಆಯವ್ಯಯದಲ್ಲಿ ಒದಗಿಸಿದೆ, ಅದರ ಪ್ರಕಾರ ಕೊಟ್ಟಿರತಕ್ಕಂತಹ ಹಣದಲ್ಲಿ, ಈ ವರ್ಷದಲ್ಲಿರತಕ್ಕಂತಹ ಬೆಳೆಯ ಪ್ರಮಾಣದ ಕನಿಷ್ಟ 10 ಭಾಗವನ್ನು ಕೊಳ್ಳಲಿಕ್ಕೆ ಸಾಧ್ಯತೆ ಇದೆಯೇ ಎಂಬುದು ನನ್ನ ಎರಡನೆಯ ಪ್ರಶ್ನೆ. ಈಗ ಸರ್ಕಾರದವರೇ ಹಾಸನ ಜಿಲ್ಲೆಯಲ್ಲಿ ಒಂದು ಸಮೀಕ್ಷೆಯನ್ನು ಮಾಡಿ, ಈ ವರ್ಷ ರಾಜ್ಯದಲ್ಲಿ ಎಷ್ಟು ಬೆಳೆ ಬರುತ್ತದೆ ಎಂಬ ಬಗ್ಗೆ ಇಡೀ ರಾಜ್ಯದ ಒಂದು ಸರ್ವೆಯನ್ನು ಮಾಡತಕ್ಕಂಥದ್ದರ ಮೂಲಕ it is estimated that about 4 lakh metric tonnes ಆಗಿರತಕ್ಕಂಥದ್ದನ್ನು ಹೇಳುವುದರ ಜೊತೆಗೆ from August Last week to October last week the arrivals would be around 6000 metric tonnes per day. ಒಂದು ದಿವಸಕ್ಕೆ ಇಷ್ಟು ಬರುತ್ತದೆ ಎಂದು ಹೇಳಿ ಸರ್ಕಾರದ ಅಧಿಕಾರಿಗಳು ಅಧಿಕೃತವಾದಂತಹ ವರದಿಯನ್ನು ಆಸಗ್ಟ್ 18, 1997ರಂದು ಕೊಟ್ಟಿದ್ದಾರೆ. 6 ಸಾವಿರ ಟನ್ನನ್ನು ಕೊಂಡುಕೊಳ್ಳಲಿಕ್ಕೆ ಕನಿಷ್ಟ 2 ಕೋಟಿ 10 ಲಕ್ಷ ರೂ.ಗಳು ಬೇಕಾಗುತ್ತದೆ. ಒಂದು ದಿವಸದಲ್ಲಿ ಮಾರ್ಕೆಟ್‌ಗೆ ಬರುತ್ತದೆ ಎಂದು ನಿರೀಕ್ಷೆ ಮಾಡಿರತಕ್ಕಂಥದ್ದು ಈ ವರ್ಷದ ಒಟ್ಟು ಉತ್ಪಾದನೆಯಲ್ಲಿ ಒದಗಿಸಿರತಕ್ಕಂತಹ ಹಣ ಒಟ್ಟಾರೆ ಈರುಳ್ಳಿ ಮತ್ತು ಆಲೂಗೆಡ್ಡೆಯನ್ನು ಕೊಂಡುಕೊಳ್ಳಲಿಕ್ಕೆ ಸಾಕಾಗುತ್ತದೆಯೇ? ಯಾವ ರೀತಿ ಇದನ್ನು ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ನಾನು ಮಾನ್ಯ ಮಂತ್ರಿಗಳಿಗೆ ಕೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಡಿ.ಟಿ.ಜಯಕುಮಾರ್: ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಪ್ರಶ್ನೆ ಉದ್ಭವಿಸಿರತಕ್ಕದ್ದು 2 ಕೋಟಿ ರೂ.ಗಳ ಬಗ್ಗೆ ಅಲ್ಲ ಅಥವಾ ಈರುಳ್ಳಿಗೆ ಎಷ್ಟು ಆಲೂಗೆಡ್ಡೆಗೆ ಎಷ್ಟು ಎಂದು ಅಲ್ಲ. ಅಲ್ಲಿ ಬೇಡಿಕೆ ಯಾವ ರೀತಿ ಇದೆ, ಅಲ್ಲಿ ವಸ್ತುಸ್ಥಿತಿ ಯಾವುದು ಇದೆ, ಅದರ ಬಗ್ಗೆ ಡಿಪೆಂಡ್ ಆಗುತ್ತದೆ. ಕಳೆದ ಸಾರಿಯ ಅನುಭವದಿಂದ ಹೇಳುವುದಾದರೆ, ನಾವು ಮಾರ್ಕೆಟ್ ಇಂಟ್‌ರ್‌ವೀನ್ ಆದ ತಕ್ಷಣವೇ ಬೇರೆ ಖಾಸಗಿಯವರು ಬಂದು ನಮಗಿಂತ ಹೆಚ್ಚಾಗಿ ಕೊಂಡುಕೊಂಡು ಹೋದರು. 3.50 ರೂ.ಇದ್ದುದನ್ನು 6 ರೂ.ಗಳವರೆಗೆ ಕೂಡ ಕೊಂಡುಕೊಂಡು ಹೋಗಿದ್ದಾರೆ. ನಾವೂ ಕೂಡ ಮಾರ್ಕೆಟ್ ಇಂಟರ್‌ವೆನ್‌ಷನ್ ಸ್ಕೀಮ್ ಪ್ರಕಾರ ಈಗಾಗಲೇ ಸಾಕಷ್ಟು ಶ್ರಮ ವಹಿಸಿದ್ದೇವೆ. ಇವತ್ತು ಮತ್ತು ನಿನ್ನೆ ಕೂಡ

ಇದರ ಬಗ್ಗೆ ಮೀಟಿಂಗ್ ಕರೆದಿದ್ದೆವು. ಮಾನ್ಯ ರೇವಣ್ಣನವರು ಹಾಗೂ ಮಾಜಿ ಪ್ರಧಾನಿಗಳಾದ ಮಾನ್ಯ ದೇವೇಗೌಡರೂ ಕೂಡ ಇದರಲ್ಲಿ ಆಸಕ್ತಿ ವಹಿಸಿದ್ದಾರೆ. ಕೇಂದ್ರ ಸರ್ಕಾರದಿಂದ ಕೂಡ ಇದಕ್ಕೆ ಶೇಕಡ 50ರಷ್ಟು ಬರಬೇಕಾಗುತ್ತದೆ. ಈಗಾಗಲೇ ಅವರು ಆ ಫ್ಯಾಕ್ಸ್ ಕಾಪಿ ತೆಗೆದುಕೊಂಡು ಹೋಗಿ ಅಲ್ಲಿ ಕೂಡ ಪ್ರಯತ್ನ ಪಡುತ್ತಿದ್ದಾರೆ. ನಾವು ರೈತರಿಗೆ ತೊಂದರೆಯಾಗುತ್ತದೆ ಎಂಬ ದೃಷ್ಟಿಯಿಂದ ಇಷ್ಟೆಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಫ್ಯಾಕ್ಸ್ ಬಂದು ಅದೆಲ್ಲಾ ತೀರ್ಮಾನವಾಗುವುದಕ್ಕೆ ಇನ್ನೂ ಒಂದು ವಾರ ಆಗುತ್ತದೆ. ಆದರೂ ಕೂಡ ರೈತರ ಕಷ್ಟಕ್ಕೆ ನಾವು ನೆರವಾಗಬೇಕು, ಅವರಿಗೆ ಏನಾದರೂ ಕೂಡ ಪರಿಹಾರ ಕೊಡಬೇಕು ಎನ್ನುವ ದೃಷ್ಟಿಯಿಂದ ತತ್‌ಕ್ಷಣದಿಂದಲೇ ಕಾರ್ಯಕ್ರಮಗಳನ್ನು ತೆಗೆದುಕೊಂಡು ನಂತರ ರ್‍ಯಾಟಿಫಿಕೇಷನ್ ಮಾಡಿಕೊಳ್ಳೋಣ, in anticipation ಈಗಾಗಲೇ ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಕಳೆದ ಸಾರಿ ಯಾವ ರೀತಿ ಮಾಡಿದ್ದೆವು ಅದೇ ರೀತಿ ಗೌರ್ನಮೆಂಟ್ ಆರ್ಡರ್ ಕೂಡ ಇವತ್ತು ಇಷ್ಯೂ ಆಗಿದೆ. ಆಲೂಗೆಡ್ಡೆಗೆ 3.50 ರೂ. ಮತ್ತು ಈರುಳ್ಳಿಗೆ 3 ರೂ. ಎಂದು ನಿಗದಿಪಡಿಸಿ, ಇದನ್ನು ನಾಳೆಯಿಂದಲೇ ಜಾರಿಗೆ ತರುತ್ತಿದ್ದೇವೆ. ಬಹುಶಃ ನಾವು ಮಾರ್ಕೆಟ್ ಇಂಟರ್‌ಫಿಯರ್ ಆದರೆ ಖಾಸಗಿಯವರು ಬರುವುದರಿಂದ ರೈತರಿಗೆ ಕಳೆದ ಸಾರಿ ಯಾವ ರೀತಿ ಲಾಭ ಸಿಕ್ಕಿತೋ ಆ ರೀತಿ ಈ ಸಾರಿ ಕೂಡ ಸಿಗುತ್ತದೆ. ನಮ್ಮ ಸಂಸ್ಥೆಗೆ ನಷ್ಟವಾಯಿತು. ಆದರೆ ರೈತರಿಗೆ ಬಹಳ ಲಾಭವಾಯಿತು. ಒಂದು ಕೆ.ಜಿ.ಗೆ 1.25 ರೂ.ಗಳಂತೆ ಮಾರಾಟವಾಗುತ್ತಿದ್ದ ಆಲೂಗಡ್ಡೆ 4-6 ರೂ.ಗಳವರೆಗೆ ಮಾರಾಟವಾಯಿತು. ಕೋಟ್ಯಾಂತರ ರೂ.ಗಳು ರೈತರಿಗೆ ಲಾಭವಾಯಿತು. ಆದರೆ ನಮ್ಮ ಸಂಸ್ಥೆಗೆ ಲಾಸ್ ಆಯಿತು. ಲಾಸ್ ಆಗಿದ್ದರೂ ಕೂಡ ಚಿಂತೆ ಇಲ್ಲ. ಈ ಸಾರಿಯೂ ಕೂಡ ಲಾಸ್ ಅನ್ನು ಭರಿಸಲಿಕ್ಕೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಸಿದ್ಧವಿದೆ. ಶೇಕಡ 50 ರಷ್ಟು ಲಾಸ್ ಏನು ಆಗುತ್ತದೆಯೋ ಅದಕ್ಕೆ ಸರ್ಕಾರದವರು ಬದ್ಧರಾಗಿದ್ದೇವೆ. ರೈತರ ಪರವಾಗಿ ನಾವು ಇವತ್ತು ಕೆಲಸ ಮಾಡುತ್ತಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಯಾರೂ ಕೂಡ ಇದರ ಬಗ್ಗೆ ಚಿಂತೆ ಮಾಡಬೇಕಾಗಿಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರ ಸಲಹೆಗಳೇನಾದರೂ ಇದ್ದರೆ, ಅಲ್ಲಿ ಏನಾದರೂ ಲೋಪ ದೋಷಗಳಿದ್ದರೆ, ಅಥವಾ ಬೇರೆ ಇನ್ನೇನಾದರೂ ತೊಂದರೆಯಾಗಿದ್ದರೆ ನಮಗೆ ತಿಳಿಸಿ. ಆ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಬೈರೇಗೌಡರು ನಾಲ್ಕೈದು ದಿವಸದ ಹಿಂದೆಯೇ ಇದರ ಬಗ್ಗೆ ಸ್ಟೇಟ್‌ಮೆಂಟ್ ಕೊಟ್ಟಿದ್ದರು. ಈರುಳ್ಳಿಗೆ 300 ರೂ. ಕ್ವಿಂಟಾಲ್ ಮತ್ತು ಆಲೂಗೆಡ್ಡೆಗೆ ಪ್ರತಿ ಕ್ವಿಂಟಾಲ್‌ಗೆ 350 ರೂ. ಫಿಕ್ಸ್ ಮಾಡಿರುವುದಾಗಿ ಅವರು ಹೇಳಿದ್ದರು. ಅವರು ಇಲ್ಲಿ ಹೇಳಿಕೆ ಕೊಟ್ಟು 4-5 ದಿವಸವಾಯಿತು. ಆದರೆ ಹಾಪ್‌ಕಾಮ್ಸ್‌ನವರು ಇಲ್ಲಿಯವರೆಗೆ ಎಷ್ಟು ಕ್ವಿಂಟಾಲ್ ಈರುಳ್ಳಿ ಮತ್ತು ಆಲೂಗೆಡ್ಡೆಯನ್ನು ಖರೀದಿ

ಮಾಡಿದ್ದಾರೆ? ಸರ್ಕಾರದ ವತಿಯಿಂದ ಇದಕ್ಕಾಗಿ ಎಷ್ಟು ಹಣವನ್ನು ಒದಗಿಸಲಾಗಿದೆ? ಸರ್ಕಾರವೇ ನೇರವಾಗಿ ಹಾಪ್‌ಕಾಮ್ಸ್‌ಗೆ ಹಣ ಕೊಡದಿದ್ದರೆ ಅವರಿಗೂ ಕೂಡ ಖರೀದಿ ಮಾಡತಕ್ಕಂತಹ ಶಕ್ತಿ ಬರುವುದಿಲ್ಲ. ಸುಮ್ಮನೆ ಎಲ್ಲವೂ ಪುಸ್ತಕದ ಮೇಲೆಯೇ ಉಳಿಯುತ್ತವೆ. ಆದ್ದರಿಂದ ದಯವಿಟ್ಟು ತಾವು ಇದನ್ನು ಸ್ಪೆಸಿಫೈ ಮಾಡಿ. ಹಾಪ್‌ಕಾಮ್ಸ್‌ಗೆ ನೇರವಾಗಿ ಎಷ್ಟು ಹಣ ತಾವು ಬಿಡುಗಡೆ ಮಾಡಿದ್ದೀರಿ ಮತ್ತು ಎಲ್ಲೆಲ್ಲಿ ಸೆಂಟರ್ಸ್‌ಗಳನ್ನು ಮಾಡಿದ್ದೀರಿ ಎಂಬುದನ್ನು ತಾವು ತಿಳಿಸಬೇಕು. ಬರೇ ನಾವು ಬೆಂಗಳೂರಿನಲ್ಲಿ ಮಾತ್ರ ತೆಗೆದುಕೊಳ್ಳುತ್ತೇವೆ ಎಂದರೆ ಆಗುವುದಿಲ್ಲ. ಬಿಜಾಪುರದಲ್ಲಿ ಸಮಸ್ಯೆ ಇದೆ, ಗುಲ್ಬರ್ಗಾದಲ್ಲೂ ಕೂಡ ಸಮಸ್ಯೆ ಇದೆ. ಆ ಭಾಗದಲ್ಲೂ ಕೂಡ ಈರುಳ್ಳಿ ಬೆಲೆ ಕುಸಿದಿದೆ. ಅದಕ್ಕಾಗಿ ಸೆಂಟರ್‌ಗಳನ್ನೇನಾದರೂ ಮಾಡಿ ತಾವು ಪರ್ಚೇಸ್ ಮಾಡುತ್ತಿದ್ದೀರೋ ಅಥವಾ ನೇರವಾಗಿ ಇಲ್ಲಿ ಬೆಂಗಳೂರಿಗೆ ಬಂದವರಿಗೆ ಮಾತ್ರ ಪರ್ಚೇಸ್ ಮಾಡುತ್ತಿದ್ದೀರೋ? ಎನ್ನತಕ್ಕದ್ದನ್ನು ಕೂಡ ತಾವು ಹೇಳಬೇಕು.

+ ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಉಪಾಧ್ಯಕ್ಷರೇ, ನಾನೇನು ಹೇಳಲಿಕ್ಕೆ ಹೊರಟೆ ಎಂದರೆ, ಪ್ರತಿ ವರ್ಷ ಮಾಲು ಮಾರ್ಕೆಟ್‌ಗೆ ಬರುತ್ತದೆ, ರೈತರು ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತಾರೆ, ಅವರು ಪುನಃ ಗಲಾಟೆ ಮಾಡುತ್ತಾರೆ, ಅವರ ಪರವಾಗಿ ಈ ಸಭೆಯಲ್ಲಿ ಯಾರೋ ಪ್ರಸ್ತಾಪ ಮಾಡಬೇಕು, ಆಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು, ಇದು ಪದ್ಧತಿ ಆಗಬಾರದು. ಖಾಯಂ ಆಗಿ ಸರ್ಕಾರ ಒಂದು ರಿಸರ್ವ್ ಫಂಡ್ ಮಾಡಿ. ಈಗ ಏನಾಗುತ್ತದೆಂದರೆ ವ್ಯಾಪಾರಸ್ಥರಿಗೆ, ಅವರು ತೆಗೆದುಕೊಂಡು ಹೋಗಿ ಏನು ಮಾಡುತ್ತಾರೆ, ಮನೆಯಲ್ಲಿಟ್ಟುಕೊಳ್ಳುತ್ತಾರೆಯೇ? ಅವರೂ ವ್ಯಾಪಾರ ಮಾಡುತ್ತಾರೆ. ಕಲ್ಕತ್ತಾಗೆ ಸಾಗಿಸುತ್ತಾರೆ, ಬಾಂಬೆಗೆ ಸಾಗಿಸುತ್ತಾರೆ, ಬೇರೆ ಮಾರುಕಟ್ಟೆಗೆ ಸಾಗಿಸುತ್ತಾರೆ. ನಿಮ್ಮ ಹಾಪ್‌ಕಾಮ್ಸ್‌ನವರು ಏತಕ್ಕೆ ಆ ಕೆಲಸ ಮಾಡಬಾರದು? ನೀವು ಏತಕ್ಕೆ ನಷ್ಟ ಮಾಡಿಕೊಳ್ಳುತ್ತೀರಿ? ಯಾರೇ ಹಾಪ್‌ಕಾಮ್ಸ್‌ನವರು ಸರ್ಕಾರಿ ಏಜೆನ್ಸಿಯಾಗಿ ಕೆಲಸ ಮಾಡುತ್ತಿದ್ದಾರೆ ಅವರಿಗೂ ಧೈರ್ಯ ಇದೆ, ತಾಕತ್ತು ಇದೆ ಮಾಡುವುದಕ್ಕೆ ಎಂದು ಅರ್ಥವಾಗುತ್ತದೆ, ಆಗ ಅವರೂ ಮಾರುಕಟ್ಟೆಗೆ ಬರುತ್ತಾರೆ. ನೀವು ಹೋಲ್ ಹಾರ್ಟೆಡ್ ಆಗಿ ಒಂದು ಕೋಟಿ ರೂಪಾಯಿ ಕೊಟ್ಟಿರಬೇಕು, ಎರಡು ಕೋಟಿ ಅಲ್ಲ. ಸುಮ್ಮನೆ ನಮ್ಮನ್ನು ಹೆದರಿಸುವುದಕ್ಕೆ ಕೊಟ್ಟಿದ್ದಾರೆಂಬ ಭಾವನೆ ಬರುತ್ತದೆ ಅವರಿಗೆ. ಇದು ಆಗಬಾರದು. ಖಾಯಂ ಆಗಿ ಸರ್ಕಾರ ರೈತರ ಸಮಸ್ಯೆ ಬಗ್ಗೆ ಸೀರಿಯಸ್ ಆಗಿದೆ ಎಂಬ ಭಾಸವಾಗಬೇಕಾಗುತ್ತದೆ. ಅದಕ್ಕೆ ನೀವೂ ಕೊಂಡ ಮಾಲನ್ನು ಮಾರ್ಕೆಟ್ ಮಾಡಲು ತಯಾರಾಗಬೇಕಾಗುತ್ತದೆ. ಆಲೂಗೆಡ್ಡೆಯಾಗಲೀ, ಈರುಳ್ಳಿಯಾಗಲಿ, ಅವರು ಹೇಗೆ ಬೇರೆ ಕಡೆ ಮಾರಾಟ ಮಾಡುತ್ತಾರೆ ಆ ರೀತಿ ಸರ್ಕಾರಿ ಏಜೆನ್ಸಿ ಮಾಡತಕ್ಕ ವ್ಯವಸ್ಥೆ ಮಾಡುತ್ತೇವೆಂಬ ಮನೋಧರ್ಮ ತೋರಿದಾಗ ಮಾತ್ರ ಅವರಿಗೆ ಸಮಾಧಾನವಾಗುತ್ತದೆ. ಅದಕ್ಕೆ ನೀವು ಏನಾದರೂ ಒಂದು ಕ್ರಮ ತೆಗೆದುಕೊಳ್ಳಿ.

ಶ್ರೀ ಡಿ.ಟಿ.ಜಯಕುಮಾರ್: ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿರತಕ್ಕ ಪ್ರಶ್ನೆಗೆ ಈಗಾಗಲೇ ನಾವು 50 ಲಕ್ಷ ರೂಪಾಯಿಗಳನ್ನು ಹಾಪ್‌ಕಾಮ್ಸ್ ಸಂಸ್ಥೆಗೂ, ಕೆ.ಎ.ಐ.ಟಿ.ಗೆ 20 ಲಕ್ಷ ರೂಪಾಯಿಗಳನ್ನು, ಮಾರ್ಕೆಟಿಂಗ್ ಫೆಡರೇಷನ್ನಿಗೆ 25ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ನಾಳೆ ಎಷ್ಟು ಹಣ ಬೇಕಾದರೂ ಬಿಡುಗಡೆ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ.

ಉಪಾಧ್ಯಕ್ಷರು: ಸ್ವತಃ ನನ್ನ ಅನುಭವ ಹೇಳುತ್ತೇನೆ ಕೇಳಿ. ನಾನು 3 ಎಕರೆ ಜಮೀನಿಗೆ ಆಲೂಗೆಡ್ಡೆ ಹಾಕಿದ್ದೇನೆ. ನಿಮ್ಮ ಎಂ.ಡಿ.ಅವರನ್ನು ಫೋನ್ ಮಾಡಿ ಕರೆಸಿ ಕೇಳಿದರೆ, ನಮ್ಮ ಮಗನನ್ನು ಕಳುಹಿಸಿ ಕೇಳಿದರೆ ಅವರು 500 ಕೆ.ಜಿ.ಗಿಂತ ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರು. ನಾನು ಸ್ವತಃ ಬೆಳೆದ ಮಾಲನ್ನು ಬೇರೆ ಏಜೆನ್ಸಿ ಮೂಲಕ ಮಾರಿ ಮರುದಿನ ನಮಗೆ ದುಡ್ಡು ಕೊಟ್ಟು ಕಳುಹಿಸಿದರು. ನಿಮ್ಮ ಹತ್ತಿರ ಕಳುಹಿಸಿದರೆ 8 ದಿನಗಟ್ಟಲೆ ದುಡ್ಡು ಸಿಗುವುದಿಲ್ಲ, ಅದೂ ಸರಿಯಾಗಿ ಸಿಗುವುದಿಲ್ಲ, ಮಾರುಕಟ್ಟೆಯಲ್ಲಿ ಸರಿಯಾದ ಧಾರಣೆ ಸಿಗುವುದಿಲ್ಲ. ಅವರ ಮೇಲೆ ನೀವು ಸ್ವಲ್ಪ ನಿಗಾ ಇಟ್ಟು ಕೆಲಸ ಮಾಡಿ.

ಶ್ರೀ ಡಿ.ಟಿ.ಜಯಕುಮಾರ್: ತಾವು ಸರಿಯಾಗಿ ಹೇಳಿದಿರಿ. ನಮ್ಮ ಹಾಪ್‌ಕಾಮ್ಸ್‌ನಲ್ಲಿರತಕ್ಕ ಕೆಪ್ಯಾಸಿಟಿ ಬೆಳೆದ ಮಾಲಿನ 10ಪರ್ಸೆಂಟ್. ಆದ್ದರಿಂದ ಇಂಡೆಂಟ್ ತೆಗೆದುಕೊಂಡು ಹೋಗಬೇಕು. ಎಲ್ಲಾ ರೈತರು ದಾಳಿಂಬೆ ಬೆಳೆದು ತಂದರೆ ಅದನ್ನು ನಾವು ತೆಗೆದುಕೊಂಡು ವೇಸ್ಟ್ ಮಾಡುವುದಕ್ಕಾಗುವುದಿಲ್ಲ. ನಮಗೆ ಆ ಶಕ್ತಿ ಇಲ್ಲ. ಅದನ್ನು ನಿಯಂತ್ರಣ ಮಾಡುವುದಕ್ಕೆ ಮಾಡುತ್ತಿದ್ದೇವೆ.

ಉಪಾಧ್ಯಕ್ಷರು: ನಿಮಗೆ ಶಕ್ತಿ ಇಲ್ಲವೆಂದರೆ ಹಾಫ್‌ಕಾಮ್ಸ್ ಸಂಸ್ಥೆ ಏತಕ್ಕೆ ಬೇಕು? ಅದನ್ನು ಮುಚ್ಚಿಬಿಡಿ. ಅಲ್ಲಿ ಕೆಲವರಿಗೆ ಮಾತ್ರ ಪ್ರವೇಶ ಇದೆ. ನನ್ನ ಅನುಭವ ಹೇಳುತ್ತೇನೆ ಕೇಳಿ. ಯಾರು ಪ್ರಭಾವಿಗಳಿದ್ದಾರೆ ಅವರಿಗೆ ಅಷ್ಟೇ ಅಲ್ಲಿ ಅವಕಾಶ ಇದೆ; ಬಾಕಿಯವರಿಗೆ ಇಲ್ಲ. ನನಗೆ 3 ವರ್ಷದಿಂದ ಇದರ ಅನುಭವ ಇದೆ. ರೈತರ ಸಲುವಾಗಿ, ರೈತ ಬೆಳೆದಂಥ ಮಾಲಿನ ಸಲುವಾಗಿ ಹೇಳುತ್ತೇನೆ. ನಾನು ವೈಯಕ್ತಿಕವಾಗಿ ಹೇಳುತ್ತಿಲ್ಲ. ನಮ್ಮಂಥವರ ಪರಿಸ್ಥಿತಿ ಈ ರೀತಿಯಾದರೆ ಸಾಮಾನ್ಯ ರೈತರ ಪರಿಸ್ಥಿತಿ ಏನಾಗುತ್ತದೆ?

ಶ್ರೀ ಡಿ.ಟಿ.ಜಯಕುಮಾರ್: ತಾವು ಒಳ್ಳೆಯ ಸಲಹೆ ಕೊಟ್ಟಿದ್ದೀರಿ....

ಶ್ರೀ ಕಾಗೋಡು ತಿಮ್ಮಪ್ಪ: ಇವತ್ತು 8 ಆಣೆಗೆ ಒಂದು ಕೆ.ಜಿ. ಆಲೂಗೆಡ್ಡೆ ಮಾರುತ್ತಿದ್ದಾರೆ. ನಮ್ಮ ರಾಷ್ಟ್ರದಲ್ಲಿ ಎಲ್ಲೆಲ್ಲಿ ಯಾವ ಯಾವ ಮಾರುಕಟ್ಟೆಯಲ್ಲಿ ಏನೇನು ರೇಟ್ ಇದೆ, ಏನೇನು ಡಿಮ್ಯಾಂಡ್ ಇದೆ ಎಂಬುದನ್ನು ತಿಳಿದುಕೊಳ್ಳಿ. ನೀವು ಈ ರೀತಿ ಮಾಡಿ ಎಂದರೆ ಮಾಡುವುದಕ್ಕೆ ತಯಾರಿಲ್ಲ. ನಾನು 3 ದಿನದ ಹಿಂದೆ ಬಾಂಬೆಗೆ

ಹೋದರೆ ಅಲ್ಲಿ 6 ರೂಪಾಯಿ ಕೆ.ಜಿ. ಆಲೂಗೆಡ್ಡೆ.

ಶ್ರೀ ಆರ್. ಶ್ರೀನಿವಾಸ್: ನಾನು ಮಾವಿನ ಹಣ್ಣನ್ನು ಹಾಪ್‌ಕಾಮ್ಸ್‌ಗೆ ಕೊಟ್ಟರೆ ನನಗೆ ಸಿಕ್ಕಿದ ದರ 7 1/2 ಸಾವಿರ ರೂಪಾಯಿಗಳು. ಇದು ಹಾಪ್‌ಕಾಮ್ಸ್‌ನಲ್ಲಿ ನಡೆಯುತ್ತಿರುವುದು. ನಿಮ್ಮ ಮ್ಯಾನೇಜಿಂಗ್ ಡೈರೆಕ್ಟರ್ ನನಗೆ ಈ ರೀತಿ ಮಾಡಿದರೆ ಇನ್ನು ಸಾಮಾನ್ಯ ಜನರ....

(ಗೊಂದಲ)

ಉಪಾಧ್ಯಕ್ಷರು: ಮೊದಲು ಆ ಎಂ.ಡಿ. ಅವರನ್ನು ವರ್ಗ ಮಾಡಿ, ಒಳ್ಳೆಯ ಅಧಿಕಾರಿಯನ್ನು ಹಾಕಿ ಕೆಲಸ ಮಾಡಿಸಿ.

ಶ್ರೀ ಆರ್.ಶ್ರೀನಿವಾಸ್: ಶಾಸಕರಿಗೆ 2 1/2 ಸಾವಿರ ರೂಪಾಯಿ ಟೋಪಿ ಹಾಕಿದರೆ ಇನ್ನು ಸಾಮಾನ್ಯ ರೈತರಿಗೆ ಹೇಗೆ ಮಾಡುತ್ತಾರೆ? ನಾನು ಆಡಳಿತ ಪಕ್ಷದ ಶಾಸಕ, ನಾನು ಒಬ್ಬ ರೈತ ನನಗೆ ಈ ರೀತಿ ಆದರೆ ಹೇಗೆ ದಯವಿಟ್ಟು ಹೇಳಿ. ಹಾಪ್ ಕಾಮ್ಸ್‌ನಲ್ಲಿ ಬಹಳ ದುರ್ವ್ಯವಹಾರ ನಡೆಯುತ್ತಿದೆ. ನೀವು ಮೊದಲು ಅವರನ್ನು ತೆಗೆದುಬಿಡಿ. ನನ್ನಂಥವರಿಗೆ ಎರಡೂವರೆ ಸಾವಿರ ರೂಪಾಯಿಗೆ ಟೋಪಿ ಹಾಕಿದರೆ ಸಾಮಾನ್ಯ ರೈತರಿಗೆ ಹೇಗೆ ಮಾಡುತ್ತಾರೆ? ನಾನು ನಿಮಗೆ ಈಗ ಬಗ್ಗೆ ದೂರು ಕೊಟ್ಟಿದ್ದೇನೆ.

ಉಪಾಧ್ಯಕ್ಷರು: ನಾಳೆ ಬೆಳಿಗ್ಗೆಯೇ ಅವರನ್ನು ತೆಗೆದು ಮತ್ತೊಬ್ಬರನ್ನು ಹಾಕಬೇಕು.

ಶ್ರೀ ವಾಟಾಳ್ ನಾಗರಾಜ್: ಈ ಬಗ್ಗೆ ಸಮಗ್ರವಾಗಿ ತನಿಖೆ ಆಗಬೇಕು.

ಶ್ರೀ ಡಿ.ಟಿ.ಜಯಕುಮಾರ್: ವಿಷಯ ಬೇರೆ, ಅವರು ಕೇಳುತ್ತಿರುವುದು ಬೇರೆ, ಕ್ರಮ ತೆಗೆದುಕೊಳ್ಳುವುದು ಬೇರೆ. ಅಲ್ಲಿ ಲೋಪದೋಷ ಇದೆ, ಇಲ್ಲವೆಂದು ಹೇಳುತ್ತಿಲ್ಲ. ನಾನು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಆದರೆ ನಮ್ಮಲ್ಲಿ 10 ಜನರಿಗೆ ಮಾತ್ರ ಊಟಕ್ಕೆ ಹಾಕುವ ವ್ಯವಸ್ಥೆ ಇದೆ, ಒಂದೇ ಸಾರಿ ನೂರು ಜನ ಬಂದು ಊಟಕ್ಕೆ ಹಾಕಿ ಎಂದರೆ ಹಾಕುವುದಕ್ಕಾಗುತ್ತದೆಯೆ? ಇವತ್ತು ಉತ್ಪಾದನೆ ಆಗತಕ್ಕದ್ದು 100 ಪರ್ಸೆಂಟ್ ನಾವು ಡಿಸ್‌ಪೋಸಲ್ ಮಾಡುತ್ತಿರುವುದು 10 ಪರ್ಸೆಂಟ್. ನಾವು ಅದನ್ನು ನಿಯಂತ್ರಣ ಮಾಡುವ ಕೆಲಸ ಮಾಡುತ್ತಿದ್ದೇವೆಯೇ ಹೊರತು ಬೇರೆ ಅಲ್ಲ.

ಉಪಾಧ್ಯಕ್ಷರು: ನಾನಲ್ಲ ಮತ್ತೊಬ್ಬ ಹೋದರೂ ಸಿಗಬೇಕಲ್ಲಾ. ನನಗೆ ಸಿಗುವುದಿಲ್ಲ, ಮತ್ತೊಬ್ಬ ಹೋದರೆ ಸಿಗುತ್ತದೆ. ಅಂದಾಗ ಅವನಿಗೆ ಏತಕ್ಕೆ ಸಿಗುತ್ತದೆ? ನಾನು ಸ್ಪಷ್ಟವಾಗಿ ಹೇಳುತ್ತೇನೆ, ಆ ಎಂ.ಡಿ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಆ ಎಂ.ಡಿಯನ್ನು ಕೂಡಲೇ ವರ್ಗಾವಣೆ ಮಾಡಿ, ಒಬ್ಬ ದಕ್ಷ ಅಧಿಕಾರಿಯನ್ನು ಹಾಕಿ. ಅಲ್ಲಿ ಬಹಳ ಅನ್ಯಾಯವಾಗುತ್ತಿದೆ, ತಾವು ಅದನ್ನು ನೋಡಿ ಸರಿಪಡಿಸಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ತಮ್ಮ ಆದೇಶವನ್ನು ಮಾನ್ಯ ಮಂತ್ರಿಗಳು ಪಾಲಿಸಬೇಕು. ವರ್ಗಾವಣೆ ಮಾಡದಿದ್ದರೆ ಬೇರೆ ಮಾರ್ಗ ಇರುವುದಿಲ್ಲ. ತಾವು ಮತ್ತೊಂದು ಸಾರಿ ಹೇಳಿ ಅಧ್ಯಕ್ಷರೆ,

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆ ವ್ಯವಸ್ಥೆ ಕೆಟ್ಟಿದೆ. ಅದನ್ನು ಯಾವ ರೀತಿ ಸುಧಾರಣೆ ಮಾಡುತ್ತೀರಿ?

ಉಪಾಧ್ಯಕ್ಷರು: ನೀವು ಸುಧಾರಣೆ ಮಾಡುತ್ತೇವೆಂದು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಬೈರೇಗೌಡರಿಗೆ ಆಲೂಗೆಡ್ಡೆ ಬೆಳೆದರೆ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಡಿ.ಟಿ.ಜಯಕುಮಾರ್: ಇದು ಒಂದು ಸಹಕಾರ ಸಂಘ. ಜೊತೆಗೆ ಇದು ಲಾಭದಲ್ಲಿದೆ. ಜನರಿಗೆ ತೊಂದರೆಯಾದರೆ ನಾವು ಯಾವುದೇ ಕ್ರಮ ತೆಗೆದುಕೊಳ್ಳುತ್ತೇವೆ. ನಷ್ಟದಲ್ಲಿದ್ದಂಥ ಸಂಸ್ಥೆ 1995-96, 1996-97ಕ್ಕೆ ಒಂದು ಕೋಟಿ 95 ಲಕ್ಷ ರೂಪಾಯಿ ಲಾಭ ಹೊಂದಿದೆ ಎಂದರೆ ಚೆನ್ನಾಗಿ ಕೆಲಸ ಮಾಡುತ್ತದೆ ಎಂದೋ ಅಥವಾ ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಎಂದೋ?

ಉಪಾಧ್ಯಕ್ಷರು: ಅದು ಸರಿಯಾಗಿ ಕೆಲಸ ಮಾಡಿದರೆ ಹತ್ತು ಕೋಟಿ ರೂಪಾಯಿ ಲಾಭ ಬರುತ್ತದೆ.

ಶ್ರೀ ಡಿ.ಟಿ.ಜಯಕುಮಾರ್: ಈರುಳ್ಳಿ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಶ್ನೆ ಎತ್ತಿದ್ದಾರೆ. ಇದು ಬಹಳ ಮುಖ್ಯವಾದ ಅಂಶ. ಬೆಂಗಳೂರಿಗೆ ಬಂದರೆ ಮಾತ್ರ ತೆಗೆದುಕೊಳ್ಳುತ್ತೀರೋ ಅಥವಾ ಬೇರೆ ಕಡೆ ಸೆಂಟರ್ ಓಪನ್ ಮಾಡಿದ್ದೀರೋ ಎಂದು. ಆಲೂಗೆಡ್ಡೆ, ಈರುಳ್ಳಿ ಎಲ್ಲಿ ಬೆಳೆಯುತ್ತಾರೆ ಅಲ್ಲಿಗೇ ಹೋಗಿ ರೈತರ ಹತ್ತಿರ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾಡಲು ನಾವು ತೀರ್ಮಾನ ಮಾಡಿದ್ದೇವೆ. ಹಾಸನದ್ದು ಹಾಸನದಲ್ಲಿ, ಬಳ್ಳಾರಿಯದ್ದು ಬಳ್ಳಾರಿಯಲ್ಲಿ; ಅಂದರೆ ಇದು ಯಾವಾಗಲೂ ಅಲ್ಲ. ಆದರೆ ಅವರೆಲ್ಲಾ ಏನು ನಿರೀಕ್ಷೆ ಮಾಡುತ್ತಿದ್ದಾರೆಂದರೆ ಯಾವಾಗಲೂ ರೈತರಿಂದ ಮಾರುಕಟ್ಟೆಗೆ ಬಂದದ್ದನ್ನು ತೆಗೆದುಕೊಳ್ಳಬೇಕು ಎಂದು. ಆ ವಿಚಾರ ನಮ್ಮಲ್ಲಿ ಇಲ್ಲ. ಇವತ್ತು ಮಾರ್ಕೆಟ್ ಇಂಟರ್‌ವಿನ್ ಸ್ಕೀಂ ಮೂಲಕ ಬೆಲೆ ಕುಸಿದಿರುವುದರಿಂದ ಸ್ಥಳಕ್ಕೆ ಹೋಗಿ ತೆಗೆದುಕೊಳ್ಳತಕ್ಕ ಏರ್ಪಾಡನ್ನು ತಾತ್ಕಾಲಿಕವಾಗಿ ಮಾಡಿರತಕ್ಕದ್ದು; ಖಾಯಂ ಆಗಿ ನಾವು ಮಾಡಿಲ್ಲ. ಅದಕ್ಕೆ ಸಾವಿರಾರು ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಅದನ್ನು ಮಾಡಲಿಕ್ಕೆ ಕರ್ನಾಟಕ ಹಾರ್ಟಿಕಲ್ಚರ್ ಫೆಡರೇಷನ್ ಪ್ರಯತ್ನ ಮಾಡಿ, ಅದನ್ನು

ಇಡೀ ಕರ್ನಾಟಕದಾದ್ಯಂತ ಜಾರಿಗೆ ತರಬೇಕೆಂದು ಇವತ್ತು 66 ಕೋಟಿ ರೂಪಾಯಿ ಮಂಜೂರಾಗಿದೆ. ಅದು ಜಾರಿಗೆ ಬಂದಮೇಲೆ ನಮಗೆ ಎಲ್ಲವನ್ನೂ ತೆಗೆದುಕೊಳ್ಳುವುದಕ್ಕೆ ಶಕ್ತಿ ಬರುತ್ತದೆ. ಅಲ್ಲಿಯವರೆಗೆ ತಾತ್ಕಾಲಿಕವಾಗಿ ನಮ್ಮ ಇತಿಮಿತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ತಾವು ಒಳ್ಳೆಯ ಅಭಿಪ್ರಾಯ ಕೊಟ್ಟಿದ್ದೀರಿ. ಎಲ್ಲಿಯಾದರೂ ಲೋಪದೋಷ ಇದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು: ಅಲ್ಲಿ ವ್ಯವಹಾರ ಮಾಡುವುದಕ್ಕೆ ದುಡ್ಡು ಬೇಕಾಗಿಲ್ಲ. ಅಲ್ಲಿ ಮಾಲನ್ನು ಮುಂಬೈ, ಕಲ್ಕತ್ತಾಗೆ ಕಳುಹಿಸಬಹುದು. 5 ಪರ್ಸೆಂಟ್ ಕಮಿಷನ್ ತೆಗೆದುಕೊಂಡು ಮಾರಿ ಅವರಿಗೆ ದುಡ್ಡು ಕೊಡಬೇಕು. ಬೇರೆ ಖಾಸಗಿಯವರು ಈ ಕೆಲಸ ಮಾಡುವುದಿಲ್ಲವೆ? ನೀವು ಏತಕ್ಕೆ ರೈತರ ಪರವಾಗಿ ಮಾಡಬಾರದು? ಆ ರೀತಿ ವ್ಯವಹಾರ ಮಾಡುವುದಕ್ಕೆ ದುಡ್ಡು ಬೇಕಾಗಿಲ್ಲ. ನಮ್ಮ ಮಾಲು ಖರೀದಿಸಿ ದುಡ್ಡು ಬಂದಮೇಲೆ ಕೊಡಿ. ನಿಮಗೆ ಏತಕ್ಕೆ ಬಂಡವಾಳ ಬೇಕು? ನೀವು ವ್ಯಾಪಾರಿಯಾಗಿ ಕೆಲಸ ಮಾಡಬೇಕು ಅಷ್ಟೆ.

ಶ್ರೀ ಡಿ.ಟಿ.ಜಯಕುಮಾರ್: ಮಾನ್ಯ ಉಪಾಧ್ಯಕ್ಷರೆ, ತಾವು ಆ ರೀತಿ ಮಾತನಾಡಿದರೆ ಕಷ್ಟವಾಗುತ್ತದೆ.

ಉಪಾಧ್ಯಕ್ಷರು: ಕಷ್ಟ ಅಲ್ಲರಿ, ನನಗೆ ಏನು ತೊಂದರೆಯಾಗಿದೆ ಅದನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ದಳ್ಳಾಳಿ ಕೆಲಸ ಮಾಡುವುದಕ್ಕಾಗುವುದಿಲ್ಲವೇ ನಿಮ್ಮ ಕೈಯಲ್ಲಿ? ಮಾಲು ತೆಗೆದುಕೊಂಡು ಕೊಡುವುದು, ನೀವು ಹಣ ಕೊಡುವುದು ಬೇಡ. ದಳ್ಳಾಳಿ ಕೆಲಸ ಮಾಡುವುದಕ್ಕೆ ಕೋಟ್ಯಾಂತರ ರೂಪಾಯಿ ದುಡ್ಡು ಬೇಕೇ?

ಶ್ರೀ ಹೆಚ್.ಎಸ್.ಪ್ರಕಾಶ್ (ಹಾಸನ): ಈ ಆಲೂಗೆಡ್ಡೆಯ ಸಂಬಂಧ ಹಾಸನ ಮತ್ತು ಕೋಲಾರ ಜಿಲ್ಲೆಗಳಿಗೆ ಬಹಳಷ್ಟು ವರ್ಷಗಳಿಂದ ಇದೆ. ಬಹಳಷ್ಟು ವರ್ಷಗಳ ಕಾಲ ರೈತರ ಆಲೂಗೆಡ್ಡೆ ದರ ಕಡಿಮೆ ಆದಾಗ ಸರ್ಕಾರದಿಂದ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ. ಹೋದ ವರ್ಷ ಬಹಳಷ್ಟು ಕಡಿಮೆ ದರದಲ್ಲಿ ಮಾರಾಟವಾಗುತ್ತಿದ್ದ ಸಂದರ್ಭದಲ್ಲಿ ಸರ್ಕಾರ 75 ಲಕ್ಷ ರೂಪಾಯಿಗಳನ್ನು ಕೊಟ್ಟು ಆಲೂಗೆಡ್ಡೆ ಖರೀದಿ ಮಾಡುವ ಕೆಲಸ ಮಾಡಿತು. ಅದಾದ ನಂತರ ರೈತರಿಗೆ ಉತ್ತಮವಾದ ದರ ಸಿಕ್ಕಿದೆ. ರೈತ ಬೆಳೆದ 4 ಲಕ್ಷ ಟನ್ ಆಲೂಗೆಡ್ಡೆಯನ್ನು ಯಾವುದೇ ಸರ್ಕಾರಕ್ಕೆ ಕೊಳ್ಳುವ ಶಕ್ತಿ ಇಲ್ಲ. ಸರ್ಕಾರ ಒಂದು ದರ ನಿಗದಿ ಮಾಡಿ ಸರ್ಕಾರವೇ ನೇರವಾಗಿ ರೈತರ ಹತ್ತಿರ ಕೊಳ್ಳುತ್ತದೆ ಅಂದಾಗ ಮಾರುಕಟ್ಟೆಯಲ್ಲಿ ದರ ಬರುತ್ತದೆ.

ಹಾಸನ ತಾಲ್ಲೂಕಿನಲ್ಲಿ ಹೋಬಳಿ ಮಟ್ಟದಲ್ಲಿ 6 ವಿಭಾಗಗಳನ್ನು ಮಾಡಿ ರೈತರ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಅವರು ಆಲೂಗೆಡ್ಡೆ ಒಳ್ಳೆಯ ದರ ಬರುವ ಹಾಗೆ ಮಾಡಬೇಕೇ ಹೊರತು ಇನ್ನು ಯಾರೇ ಬೇರೆಯವರು ಬಂದರೂ ಆಗುವುದಿಲ್ಲ. ಕೆಲವು ಕಡೆ ಮಾರ್ಕೆಟಿಂಗ್ ಫೆಡರೇಷನ್ನಿನವರು, ಆಗ್ರೋ ಇಂಡಸ್ಟ್ರೀಸ್‌ನವರು, ಹಾಪ್‌ಕಾಮ್ಸ್‌ನವರು ಬಂದು ಕೊಳ್ಳುತ್ತಿದ್ದಾರೆ. ಅವರು ಕೊಳ್ಳುವುದರಿಂದ ರೈತರಿಗೆ ಉತ್ತಮ ದರ ಸಿಗುತ್ತಿದೆ. ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸರ್ಕಾರ ಆಲೂಗೆಡ್ಡೆಯನ್ನು ಕೊಳ್ಳುವುದಕ್ಕೆ ಹೊರಟಿದೆ. ಆದುದರಿಂದ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಿಂದಿನ ಪ್ರಧಾನ ಮಂತ್ರಿಗಳಾದ ಮಾನ್ಯ ದೇವೇಗೌಡರು, ಶ್ರೀ ಬೈರೇಗೌಡರು, ಶ್ರೀ ಜಯಕುಮಾರ್ ಅವರು ಹಾಗೂ ಜಿಲ್ಲೆಯ ಉಸ್ತುವಾರಿ ಸಚಿವರಾದ ಶ್ರೀ ರೇವಣ್ಣನವರು ಪ್ರಥಮ ಪ್ರಯೋಗ ಮಾಡಿದ್ದಾರೆ. ಏನಾದರೂ ಸಣ್ಣಪುಟ್ಟ ದೋಷಗಳಾದರೆ ನಾವೆಲ್ಲರೂ ಸ್ನೇಹಿತರು ಸೇರಿ ಸರಿಪಡಿಸುವ ಕಾರ್ಯಕ್ರಮ ಮಾಡೋಣ. ರೈತರ ಪರವಾಗಿ ನಾವೆಲ್ಲರೂ ಒಟ್ಟಾಗಿ ಸೇರಿ ಪ್ರಯತ್ನ ಮಾಡೋಣವೆಂದು ಹೇಳುತ್ತೇನೆ.

+ ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ನಂಜೇಗೌಡರು ಸರ್ಕಾರಕ್ಕೆ ಬಹಳ ಉತ್ತಮವಾದ ಸಲಹೆಗಳನ್ನು ನೀಡಿದ್ದಾರೆ. ಇವತ್ತು ಏನಾಗುತ್ತಿದೆ ಎಂದರೆ, ಕಳೆದ ಒಂದೂವರೆ ವರ್ಷದಿಂದ ಒಂದಲ್ಲ ಒಂದು ಕಾರಣದಿಂದ ಕೃಷಿ ಉತ್ಪನ್ನದ ಬೆಲೆ ನೆಲ ಕುಸಿಯುತ್ತಿದೆ. ತಮಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯದಲ್ಲಿ ಬೆಳೆದಂಥ ಕಬ್ಬನ್ನು ಬೆಂಕಿ ಇಟ್ಟು ಸುಟ್ಟರು. ಸುಮಾರು 1,700ರಿಂದ 1,800 ರೂಪಾಯಿ ಇದ್ದ ಹತ್ತಿ ಬೆಲೆ ಈಗ 700-800ಕ್ಕೆ ಇಳಿದಿದೆ. 500-600 ರೂಪಾಯಿ ಇದ್ದ ಮುಸುಕಿನ ಜೋಳ, 200-300ಕ್ಕೆ ಇಳಿದಿದೆ. ತೊಗರಿ ಬೇಳೆ ಸುಮಾರು 1,800-2000 ರೂಪಾಯಿ ಇದ್ದದ್ದು 900-1000ಕ್ಕೆ ಇಳಿದಿದೆ. ಈಗ ಸ್ವಲ್ಪಮಟ್ಟಿಗೆ ಮುಂದೆ ಹೋಗಿದೆ. ಈ ರೀತಿಯಾಗಿ ಟೊಮ್ಯಾಟೋ ಆಯಿತು, ಆಲೂಗೆಡ್ಡೆ, ಈರುಳ್ಳಿ ಆಯಿತು. ಅದರ ಬಗ್ಗೆ ಎಲ್ಲಾ ವಿವರವನ್ನು ಕೊಡಬೇಕಾದರೆ ದೊಡ್ಡ ಪಟ್ಟಿ ಕೊಡಬೇಕಾಗುತ್ತದೆ. ಒಟ್ಟಿನಲ್ಲಿ ಸಾರಾಂಶವೇನೆಂದರೆ, ನಮ್ಮ ದೇಶದಲ್ಲಿ ಮತ್ತು ರಾಜ್ಯದಲ್ಲಿ ಪ್ರತಿದಿವಸ ಯಾವುದೇ ಒಂದನ್ನು ತೆಗೆದುಕೊಂಡರೆ ಒಂದಲ್ಲೊಂದು ಕೃಷಿ ಉತ್ಪನ್ನದ ಬೆಲೆ ನೆಲಕಚ್ಚುತ್ತಿದೆ-ಎಂಬುದು ನಮ್ಮೆಲ್ಲರ ಕಹಿ ಅನುಭವದಲ್ಲಿದೆ. ಇದಕ್ಕೆ ಕಾರಣವೇನು ಎನ್ನತಕ್ಕದ್ದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಮ್ಮ ದೇಶದಲ್ಲಿ ಇವತ್ತು ನಾವು ಫ್ರೀ ಮಾರ್ಕೆಟ್ ಎಕಾನಮಿ ಎಂದೆಲ್ಲಾ ಇಟ್ಟುಕೊಂಡಿದ್ದೇವೆ. ಎಕ್ಸ್‌ಪರ್ಟ್ಸ್‌ನ್ನು ಕೇಳಿದರೆ, ಮಾರ್ಕೆಟ್ ಫೋರ್ಸಸ್ ಇದೆಲ್ಲವನ್ನೂ ಡಿಟರ್‌ಮೈನ್ ಮಾಡುತ್ತೇವೆಂಬುವ ಮಾತನ್ನು ಹೇಳುತ್ತಾರೆ. ಆದರೆ, ಇವತ್ತಿನ ದಿವಸ ಹಣ್ಣು, ತರಕಾರಿ ಮುಂತಾದವು ಕೆಲವು ಪೆರಿಷಬಲ್ ಇವೆ. ಇವುಗಳಿಗೆ ನಾವು ಬೇರೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯತೆ ಸಧ್ಯದಲ್ಲಿಲ್ಲ. ಇದಕ್ಕೆ ಬೇಕಾಗಿರತಕ್ಕ ಕೋಲ್ಡ್ ಸ್ಟೋರೇಜ್ ಇಲ್ಲ. ಅದಕ್ಕೋಸ್ಕರ, ಮಂತ್ರಿಗಳು

ಹಾರ್ಟಿಕಲ್ಚರ್ ಫೆಡರೇಷನ್ ಸ್ಥಾಪನೆ ಮಾಡಿ ಇದರಲ್ಲಿ ಕೋಲ್ಡ್ ಸ್ಟೋರೇಜ್, ಪ್ರೋಸೆಸಿಂಗ್ ಇದನ್ನೆಲ್ಲಾ ಎನ್‌ಕರೇಜ್ ಮಾಡಬೇಕೆಂದು ಸರ್ಕಾರದ ಯೋಜನೆಯಿದೆ. ಅದನ್ನು ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ, ಎನ್.ಸಿ.ಡಿ.ಸಿ.ಕೂಡ ಒಪ್ಪಿಗೆ ಕೊಡಲು ಸಿದ್ಧತೆ ನಡೆಸಿದೆ. ಒಂದು ವಿಚಾರವನ್ನು ಸದನದ ಗಮನಕ್ಕೆ ತರುವುದೇನೆಂದರೆ, ಕೆಲವು ಮುಂದುವರಿದ ದೇಶಗಳಲ್ಲಿ ನಾವು ಪೋಸ್ಟ್ ಹಾರ್ವೆಸ್ಟ್ ಟೆಕ್ನಾಲಜಿ ಅಂದರೆ ಬೆಳೆ ಬೆಳೆದ ಮೇಲೆ ಏನಾಗುತ್ತದೆಂದರೆ, ನಾನು ಕೆಲವು ದೇಶಗಳ ಉದಾಹರಣೆ ಕೊಡುತ್ತೇನೆ, ಅಮೆರಿಕಾ, ಮೆಕ್ಸಿಕೋ ಮತ್ತು ಮಲೇಶಿಯಾ ಈ ಕಡೆಗಳಲ್ಲಿ ಶೇ.80-85ರಷ್ಟು ಸಂಸ್ಕರಣೆಗೆ ಒಳಪಡುತ್ತದೆ. ನಮ್ಮಲ್ಲಿ, ಮುಖ್ಯವಾಗಿ ತೋಟಗಾರಿಕೆ ಬೆಳೆಗಳಲ್ಲಿ ಎಷ್ಟು ಸಂಸ್ಕರಣೆಗೆ ಒಳಪಡುತ್ತಿದೆಯೆಂದರೆ ಶೇ. ಒಂದೂವರೆಯಷ್ಟು ಮಾತ್ರ. ಸಂಸ್ಕರಣೆ ಬಗ್ಗೆ ಒಂದು ಉದಾಹರಣೆ ಕೊಡುವುದಾದರೆ, ಟೊಮ್ಯಾಟೋವನ್ನು ಬಹಳ ಹೆಚ್ಚೆಂದರೆ ನಾವು ಫ್ರೀಜ್‌ನಲ್ಲಿಟ್ಟರೆ, ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟರೆ ಒಂದುವಾರ ಅಥವಾ 10 ದಿವಸ, 15 ದಿವಸ ಇಡಬಹುದು. ಅದಕ್ಕಿಂತ ಹೆಚ್ಚು ಕಾಲ ಕೋಲ್ಡ್ ಸ್ಟೋರೇಜ್‌ನಲ್ಲಿ ಇಡುವುದಕ್ಕಾಗುವುದಿಲ್ಲ. ಆದರೆ, ಅದನ್ನು ಪ್ರೊಸೆಸಿಂಗ್ ಮಾಡಿದರೆ ಒಂದು ವರ್ಷ ಒಂದೂವರೆ ವರ್ಷವರೆಗೂ ಕೂಡ ಟೊಮ್ಯಾಟೋ ಕೆಚಪ್ ಮುಂತಾದುವನ್ನು ಇಡುವುದಕ್ಕೆ ಸಾಧ್ಯತೆ ಇದೆ. ಅಂದರೆ, ಅದರ ಸೆಲ್ಫ್‌ಲೈಫ್ ಎಂದು ಏನು ಕರೆಯುತ್ತೇವೆ, ಅದು ಜಾಸ್ತಿಯಾಗುತ್ತದೆ. ಆದರೆ, ಈ ದೇಶದಲ್ಲಿ ದುರಾದೃಷ್ಟವಶಾತ್ ಕಳೆದ 50 ವರ್ಷಗಳಿಂದ ಈ ಪ್ರಯತ್ನ ನಡೆದಿಲ್ಲ. ಆದ್ದರಿಂದ ಇವತ್ತಿನ ದಿವಸ ನಮಗೆ ಸ್ವಾತಂತ್ರ್ಯ ಬಂದಂಥ ಕಾಲದಲ್ಲಿ ನಾವು ಆಹಾರದ ಕೊರತೆಯನ್ನನುಭವಿಸಿದೆವು. ಇವತ್ತು ಆಹಾರದ ಸ್ವಯಂಸಂಪೂರ್ಣತೆ ಇದೆ. ಹಸಿರು ಕ್ರಾಂತಿ ಎಂದು ಏನು ಹೇಳುತ್ತಿದ್ದೇವೆ, ಇದೇ ಅದಕ್ಕೆ ಕಾರಣ. ಇವತ್ತು ಈ ದೇಶದಲ್ಲಿ 2ನೇ ಹಸಿರು ಕ್ರಾಂತಿಯಾಗಬೇಕಾಗಿದೆ. 2ನೇ ಹಸಿರು ಕ್ರಾಂತಿ ಎಂದರೆ, ಯಾರು ಬೆಳೆಗಾರರಿದ್ದಾರೆ, ಆ ಬೆಳೆಗಾರರಿಗೆ ಯೋಗ್ಯವಾದ ಬೆಲೆ ಕೊಡುವ ರೀತಿಯಲ್ಲಿ ಆಗಬೇಕಾಗಿದೆ. ಅದ್ಯಾವುದರಿಂದ ಆಗುತ್ತದೆಂದರೆ, ವಾಲ್ಯು ಅಡಿಷನ್ ಪ್ರೋಸೆಸಿಂಗ್‌ನಿಂದ ಆದ್ದರಿಂದ, ಇವತ್ತು ನಮ್ಮಲ್ಲಿ ಕೋಲ್ಡ್ ಸ್ಟೋರೇಜ್ ಇಲ್ಲ. ಮತ್ತೆ ಪ್ರೋಸೆಸಿಂಗ್ ಇಲ್ಲ. ಈ ಕಾರಣಗಳಿಂದ ಏಷ್ಟಾಗುತ್ತದೆ ದೇಶದಲ್ಲಿ ಅಂದರೆ, ಸುಮಾರು ಶೇ.30ರಷ್ಟು ಟ್ರಾನ್ಸ್‌ಪೋರ್ಟ್‌ನಲ್ಲಿ, ಸ್ಟೋರೇಜ್‌ನಲ್ಲಿ ಹಾಳಾಗುತ್ತಿದೆ, ಕೊಳೆತು ಹೋಗುತ್ತಿದೆ. ಇದರ ಬೆಲೆ ಎಷ್ಟಾಗುತ್ತಿದೆ ಎಂದರೆ, ಸುಮಾರು 3 ಸಾವಿರ ಕೋಟಿ ರೂಪಾಯಿಗಳಷ್ಟು ಉತ್ಪನ್ನ ಪ್ರತಿ ವರ್ಷ ಹಾಳಾಗುತ್ತಿದೆ. ಇದಕ್ಕೆಲ್ಲಾ ಕಾರಣವೆಂದರೆ, ನಾನು ಆಗಲೇ ಹೇಳಿದ ಹಾಗೆ, ಪ್ರೋಸೆಸಿಂಗ್ ಮತ್ತು ಕೋಲ್ಡ್ ಸ್ಟೋರೇಜ್ ಫೆಸಿಲಿಟಿ ಇಲ್ಲದಿರುವುದು. ಇವತ್ತಿನ ದಿವಸ ಇಂಡಸ್ಟ್ರೀಯವರು ಏನು ಮಾಡುತ್ತಾರೆಂದರೆ, ಇಂಡಸ್ಟ್ರೀಯಲ್ ಎಸ್ಟೇಟ್ ಎಂದು ಮಾಡಿದ್ದಾರೆ. ಜೊತೆಗೆ, ಗ್ರೋಥ್ ಸೆಂಟರ್ ಎಂದು ಮಾಡಿದ್ದಾರೆ. ಹಾಸನ, ರಾಯಚೂರು, ಧಾರವಾಡದಲ್ಲಿ ಒಂದೊಂದು ಗ್ರೋಥ್ ಸೆಂಟರ್‌ಗಳಿವೆ. ಇದರಲ್ಲಿ ಏನು ಮಾಡುತ್ತಾರೆಂದರೆ, ಯಾರು ಕಾರ್ಖಾನೆಗಳನ್ನು ತೆರೆಯುತ್ತಾರೋ ಅವರಿಗೆ ವಿಶೇಷವಾದ ಸವಲತ್ತುಗಳನ್ನು ಕೊಡುವ

ವ್ಯವಸ್ಥೆ ಈ ದೇಶದಲ್ಲಿದೆ. ಆದರೆ, ವ್ಯವಸಾಯದಲ್ಲಿ ಇವತ್ತಿನ ದಿವಸ ಈ ವ್ಯವಸ್ಥೆ ಇಲ್ಲ. ಈ ವ್ಯವಸ್ಥೆ ಇವತ್ತು ಕೃಷಿ ರಂಗದಲ್ಲಿಲ್ಲ. ಆದ್ದರಿಂದ, ಇವತ್ತಿನ ದಿವಸ ನಮ್ಮರಾಜ್ಯದಲ್ಲಿ ಮುಖ್ಯವಾಗಿ ತೋಟಗಾರಿಕೆ ಬೆಳೆಗಳಿಗೆ ವಿಪುಲ ಅವಕಾಶವಿದೆ. ಈಗಿರುವ ಸುಮಾರು 12 ಸಾವಿರದಿಂದ 13 ಸಾವಿರ ಹೆಕ್ಟೇರ್ ಪ್ರದೇಶವನ್ನು 26 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಿಸಬೇಕೆಂಬುದಿದೆ. ಅಂದರೆ, ಉತ್ಪಾದನೆಯನ್ನು ಜಾಸ್ತಿ ಮಾಡಬೇಕು ಎನ್ನತಕ್ಕದ್ದು ಸರ್ಕಾರದ ಕಾರ್ಯಕ್ರಮದಲ್ಲಿದೆ. ಉತ್ಪಾದನೆಯೊಂದು ಕಡೆ ಜಾಸ್ತಿಯಾದರೆ ಇನ್ನೊಂದು ಕಡೆ ಬೆಳೆದಂಥ ಉತ್ಪನ್ನದ ಬೆಳೆ ಕುಸಿಯುತ್ತಿದ್ದರೆ, ಯಾರೂ ಕೂಡ ಮುಂದೆ ಬರುವುದಿಲ್ಲ. ಆದ್ದರಿಂದ, ಕೈಗಾರಿಕಾ ರಂಗದಲ್ಲಿ ಯಾವ ರೀತಿಯಾಗಿ ಗ್ರೋಥ್ ಸೆಂಟರ್‌ಗಳನ್ನು ಮಾಡಿ ಯಾವ ಆಧಾರದ ಮೇಲೆ ಮಾಡಿದ್ದಾರೆ, ಅದೇ ಆಧಾರದ ಮೇಲೆ ರಾಜ್ಯದಲ್ಲಿ ಈ ವ್ಯವಸಾಯದಿಂದ ಬರುವ ಉತ್ಪನ್ನಗಳಿಗೆ ಮುಖ್ಯವಾಗಿ ತೋಟಗಾರಿಕೆ ಉತ್ಪನ್ನಗಳನ್ನು ಸಂಸ್ಕರಣೆ ಮಾಡತಕ್ಕದ್ದು ಮತ್ತು ವಾಲ್ಯು ಅಡಿಷನ್ ಹಾಕತಕ್ಕದ್ದು ಖಾಸಗಿ ರಂಗದವರಿಗೆ ಪ್ರೋತ್ಸಾಹ ಕೊಡಬೇಕೆನ್ನತಕ್ಕದ್ದು ಸರ್ಕಾರದ ಉದ್ದೇಶವಾಗಿದೆ. ಅವರಿಗೆ ಹೆಚ್ಚೆಚ್ಚು ಪ್ರೋತ್ಸಾಹ ಮತ್ತು ಕೋಲ್ಡ್ ಸ್ಟೋರೇಜ್ ನಿರ್ಮಿಸುವವರಿಗೆ ಹೆಚ್ಚೆಚ್ಚು ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ. ಕೇಂದ್ರಸರ್ಕಾರ ನ್ಯಾಷನಲ್ ಹಾರ್ಟಿಕಲ್ಚರ್ ಬೋರ್ಡ್, ಮಿನಿಸ್ಟ್ರಿ ಆಫ್ ಫುಡ್ ಪ್ರೋಸೆಸಿಂಗ್ ಇವರಿಗೂ ಕೊಡುತ್ತಿದೆ. ಅದಕ್ಕೂ ಹೆಚ್ಚಿನ ರೀತಿಯಲ್ಲಿ ನಾವು ದೊಡ್ಡ ಪ್ರಮಾಣದಲ್ಲಿ ಖಾಸಗಿ ರಂಗದಲ್ಲಿ ಆಹಾರವನ್ನು ಸಂಸ್ಕರಣೆಗೊಳಪಡಿಸತಕ್ಕದ್ದು ಮತ್ತು ಕೋಲ್ಡ್ ಸ್ಟೋರೇಜ್‌ನ್ನು ಹೆಚ್ಚೆಚ್ಚು ಕಟ್ಟಿಸಿರಬೇಕೆನ್ನತಕ್ಕದ್ದಕ್ಕೆ ಈಗಾಗಲೇ ನಾನು ಅದರ ಬಗ್ಗೆ ತಜ್ಞರೊಂದಿಗೆ ಸಮಾಲೋಚನೆ ನಡೆಸುತ್ತಿದ್ದೇನೆ. ಒಂದು ಶಾಶ್ವತವಾದ ಪರಿಹಾರವನ್ನು ಇದಕ್ಕೆ ಕಂಡು ಹಿಡಿಯುವ ಅವಶ್ಯಕತೆ ಇದೆ. ಅದನ್ನು ಇವತ್ತು ನಾವು ಪ್ರಾರಂಭ ಮಾಡುತ್ತಿದ್ದೇವೆ. ಅದರ ಬಗ್ಗೆ ಸರ್ಕಾರ ತೀವ್ರವಾದ ಚಿಂತನೆ ಮಾಡಿದೆ ಎನ್ನುವ ಮಾತನ್ನು ಹೇಳಿ, 2ನೇ ಹಸಿರು ಕ್ರಾಂತಿ ಏನಿದೆ ಅದು ಕರ್ನಾಟಕ ರಾಜ್ಯದಿಂದ ಆರಂಭವಾಗಬೇಕೆನ್ನತಕ್ಕದ್ದು ಈ ಸರ್ಕಾರದ ಉದ್ದೇಶವಿದೆ. ಅದನ್ನು ಆರಂಭ ಮಾಡುತ್ತೇವೆಂಬ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ನೀಡುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ಮಾನ್ಯ ನಂಜೇಗೌಡರಿಗೆ ಉತ್ತರ ಸಿಕ್ಕಿದೆ ಎಂದು ನಾನು ಭಾವಿಸಿದ್ದೇನೆ. ಈಗಾಗಲೇ ಮಾನ್ಯ ಮಂತ್ರಿಗಳು ಉತ್ತರಿಸಿದ್ದಾರೆ. ಆಲೂಗೆಡ್ಡೆ, ಈರುಳ್ಳಿಯನ್ನು ನಾವು ಹೋದ ಸಾರಿ ನಮಗಾಗಿರುವ ಕಹಿ ಅನುಭವ ನೆನಪಿದೆ. ಸ್ವಲ್ಪಮಟ್ಟಿಗೆ ನಷ್ಟವಾಗಿದೆ. ಅದಕ್ಕೆ ಬೇರೆ ಬೇರೆ ಕಾರಣಗಳಿವೆ. ನಷ್ಟವಾಗದ ರೀತಿಯಲ್ಲಿ ಸರಿಪಡಿಸಬೇಕಾಗುತ್ತದೆ. ನಿಜವಾದ ರೈತರಿಗೆ ಇದರಿಂದ ಪ್ರಯೋಜನ ದೊರಕಬೇಕು. ಹೋದ ವರ್ಷ ರೈತರಿಗೆ ಸಾಕಷ್ಟು ಪ್ರಯೋಜನವಾಗಿದೆ. ಆದ್ದರಿಂದ, ನಾವು ಮಾರ್ಕೆಟ್‌ನಲ್ಲಿ ಪ್ರವೇಶಿ ಮಾಡುತ್ತೇವೆಂದರೆ, ಯಾರೋ ಹೇಳುತ್ತಿದ್ದರು, 2 ಕೋಟಿ ರೂಪಾಯಿ ಸಾಕೇ ಇದಕ್ಕೆ ಎಂದು. ಸುಮ್ಮನೆ ನಾವು ಮಾರ್ಕೆಟ್‌ಗೆ ಬರುವ ಎಲ್ಲ ವಸ್ತುಗಳನ್ನೂ ಕೊಂಡುಕೊಳ್ಳಲು ಹೋಗುವುದಿಲ್ಲ. ನಾವು ಯಾವಾಗ ದರ 3 ರೂಪಾಯಿಗಿಂತ ಕಡಿಮೆ ಬರುತ್ತದೆ, ಆಗ ಮಾತ್ರ

ಕೊಂಡುಕೊಳ್ಳುತ್ತೇವೆ. ಒಂದು ಕೆ.ಜಿ. ಆಲೂಗೆಡ್ಡೆ ಮೂರೂವರೆ ರೂಪಾಯಿಗಿಂತ ಕಡಿಮೆಯಾದಾಗ, ಮಾತ್ರ ನಾವು ಅದನ್ನು ಕೊಂಡುಕೊಳ್ಳುತ್ತೇವೆ. ನಾವು ಪ್ರೈಸ್ ಸ್ಟೆಬಿಲೈಜೇಷನ್ ಮಾಡತಕ್ಕದ್ದಕ್ಕೆ ಕೊಟ್ಟಿರುವ ಹಣವನ್ನು ಬಳಸಿಕೊಳ್ಳುತ್ತೇವೆಯೇ ವಿನಃ ಮಾರ್ಕೆಟ್‌ಗೆ ಬರುವ ಮಾಲನ್ನೆಲ್ಲಾ ಖರೀದಿಸುವುದಕ್ಕೆ ಹೋಗುವುದಿಲ್ಲ ಮತ್ತು ಅದು ಸಾಧ್ಯವೂ ಇಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸರ್ಕಾರ ಕೂಡ ಆಲೂಗೆಡ್ಡೆ, ಈರುಳ್ಳಿ, ಬೆಳ್ಳುಳ್ಳಿ, ವ್ಯಾಪಾರ ಮಾಡುತ್ತಾ ಕೂರಲಿಕ್ಕಾಗುವುದಿಲ್ಲ. ಸರ್ಕಾರಕ್ಕೂ ಬೇರೆ ಬೇರೆ ಕಾರ್ಯಕ್ರಮಗಳಿವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಮಗೆ ಯಾರೂ ವ್ಯಾಪಾರ ಮಾಡಿ ಎಂದು ಹೇಳಲಿಲ್ಲ. ಪ್ರೈಸ್ ಸ್ಟೆಬಿಲೈಜೇಷನ್ ಮಾಡುವುದಕ್ಕೋಸ್ಕರ ಏನು ಮಾಡಬೇಕೆಂದು ಕೇಳಿದ್ದು.

ಶ್ರೀ ಸಿ.ಬೈರೇಗೌಡ: ಅವರು ಹಣ ಸಾಕಾಗುವುದಿಲ್ಲ ಎಂದು ಹೇಳುತ್ತಿದ್ದರಲ್ಲಾ ಆದ್ದರಿಂದ, ಸರ್ಕಾರ ಇದರಲ್ಲಿ ವ್ಯಾಪಾರ ಮಾಡುವುದಕ್ಕಾಗುವುದಿಲ್ಲ. ಮುಖ್ಯವಾಗಿ ರೈತನ ರಕ್ಷಣೆ ಮಾಡಬೇಕು. ರೈತನಿಗೆ ರಕ್ಷಣೆ ಕೊಡತಕ್ಕ ಕೆಲಸವನ್ನು ಮಾಡಬೇಕೆನ್ನತಕ್ಕ ತೀರ್ಮಾನವನ್ನು ಈಗಾಗಲೇ ನಾವು ಮಾಡಿದ್ದೇವೆ. ಯಾವ್ಯಾವುದಕ್ಕೆ ಯಾವ ರೀತಿಯಾಗಿ ಮಾಡಬೇಕೆನ್ನುವುದರ ಬಗ್ಗೆ ಇವತ್ತು ಸರ್ಕಾರೀ ಆಜ್ಞೆ ಹೊರಡಿಸಿದ್ದೇವೆ. ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಇವತ್ತೇ ಸರ್ಕಾರೀ ಆಜ್ಞೆ ಹೊರಡಿಸಿದ್ದೇವೆ. ಮೊನ್ನೆ ದಿವಸ ಇಲ್ಲಿ ಆಶ್ವಾಸನೆ ಕೊಟ್ಟೆ. ರೈತರನ್ನು ಕೈಬಿಡುವ ಪ್ರಶ್ನೆ ಇಲ್ಲವೆಂದು ಹೇಳಿದ್ದೆ. ನಾವು ಕೊಟ್ಟ ಮಾತಿಗೆ ತಪ್ಪದೆ ಸರ್ಕಾರೀ ಆಜ್ಞೆ ಹೊರಡಿಸಿದ್ದೇವೆ. ಮಾನ್ಯ ಕಾಗೋಡು ತಿಮ್ಮಪ್ಪನವರೆ, ತಮಗೂ ಒಂದು ಪ್ರತಿ ಕಳುಹಿಸುತ್ತೇನೆ.

ಶ್ರೀ ಬಿ.ಶಿವರಾಮು: ನಾನು ಮಂತ್ರಿಗಳನ್ನು ಆ ತರಹ ಕೇಳಲಿಲ್ಲ. ನಾನು ಹೇಳಿದ್ದನ್ನೇ ಅವರು ಅರ್ಥ ಮಾಡಿಕೊಳ್ಳಲಿಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೆ. ಒಟ್ಟಾರೆ ಉತ್ಪಾದನೆಯ 10 ಭಾಗವನ್ನು ಕೊಂಡುಕೊಳ್ಳಲು ಬೆಂಬಲ ಬೆಲೆ ಎಲ್ಲಿ ಎಂದು. ಇದು ವರದಿಯಲ್ಲಿ ಸ್ಪಷ್ಟವಾಗಿದೆ. ನಾನು ಏಕೆ ಈ ವ್ಯವಸ್ಥೆ ಬಗ್ಗೆ ಆತಂಕ ವ್ಯಕ್ತಪಡಿಸಲಿಕ್ಕೆ ಎದ್ದೆ ಎಂದರೆ, 3ನೇ ತಾರೀಖು.. ಮಾತನಾಡುವುದಕ್ಕೆ ಅವಕಾಶ ಕೊಡಿ....

ಶ್ರೀ ಸಿ.ಬೈರೇಗೌಡ: ನಿಮ್ಮ ಆತಂಕಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಬಿ.ಶಿವರಾಮು: ನಾನು ಹೇಳುತ್ತೇನೆ. ಮೂರೇ ದಿವಸ ಸದನವಿರುವುದು ಆಮೇಲೆ....

ಶ್ರೀ ಡಿ.ಟಿ.ಜಯಕುಮಾರ್: ....ಬೆಂಬಲ ಬೆಲೆ ಕೊಟ್ಟಿಲ್ಲ. ಹೋದಸಾರಿ, ಈ ವರ್ಷ ಮಾತ್ರ ಕೊಟ್ಟಿರುವುದು.

ಶ್ರೀ ಬಿ.ಶಿವರಾಮು: ಅದನ್ನು ಹೇಳುತ್ತೇನೆ. ಆದರೆ, ವಿಚಾರವನ್ನು ಮಂಡಿಸುವವರೆಗಾದರೂ ಅವಕಾಶ ಕೊಡಿ.

7.40 ಪಿ.ಎಂ

ಶ್ರೀ ಬಿ.ಶಿವರಾಮು: ಅಧ್ಯಕ್ಷರು ಏನು ಹೇಳಿದರು? ಏನಿದೆ ಹೇಳಿ ಎಂದು.

ಶ್ರೀ ಸಿ.ಬೈರೇಗೌಡ: ಹೇಳಿ.

ಶ್ರೀ ಬಿ.ಶಿವರಾಮು: ಹೇಳುತ್ತೇನೆ ತಡೆಯಿರಿ. ಅಧ್ಯಕ್ಷರೆ, 3ನೇ ತಾರೀಖು ಬೆಂಗಳೂರು ಮಾರ್ಕೆಟ್ಟಿಗೆ 250ರಿಂದ 300 ಲೋಡ್ ಆಲೂಗೆಡ್ಡೆ ಬಂತು.

ಶ್ರೀ ಸಿ.ಬೈರೇಗೌಡ: ಏನಾಯಿತು?

ಶ್ರೀ ಬಿ.ಶಿವರಾಮು: ಹೇಳುತ್ತೇನೆ ಒಂದು ನಿಮಿಷ ಇರಿ. ಮುಂದೆ ನಾನು ಏನು ಹೇಳುತ್ತೇನೆ ಎಂದು ಕೇಳುವುದಕ್ಕೆ ಸಮಾಧಾನ ಇಲ್ಲದಿದ್ದರೆ ಹೇಗೆ? ನೀವು ಹೇಳಿದ್ದನ್ನು ನಾವು ಕೇಳಲಿಲ್ಲವೇ?

ಶ್ರೀ ಸಿ.ಬೈರೇಗೌಡ: ಅದಕ್ಕೆ ಉತ್ತರ ಕೊಟ್ಟಿದ್ದೇನೆ. ವಿಚಾರ ಪ್ರಕಾಶ್ ಅವರು ಪ್ರಸ್ತಾಪ ಮಾಡಿದಾಗ ಉತ್ತರ ಕೊಟ್ಟಿದ್ದೇವೆ ನಾವು.

ಶ್ರೀ ಬಿ.ಶಿವರಾಮು: ನಾನು ಏತಕ್ಕೆ ಹೇಳುತ್ತಿದ್ದೇನೆ ಎಂಬುದನ್ನು ಒಂದು ನಿಮಿಷ ಕೇಳಿ. ಕೇಳಿದಮೇಲೆ ನೀವು ಹೇಳುವಿರಂತೆ. ನಾನು ಹೇಳಿದ್ದು ತಪ್ಪಿದ್ದರೆ ಮಾತನಾಡಿ. ಅದಾದಮೇಲೆ ಏನಾಯಿತು ಅಧ್ಯಕ್ಷರೆ....

ಉಪಾಧ್ಯಕ್ಷರು: ಈಗಾಗಲೇ ಉತ್ತರ ಕೊಟ್ಟಿದ್ದೇನೆ ಎಂದು ಮಂತ್ರಿಗಳು ಹೇಳುತ್ತಾರೆ.

ಶ್ರೀ ಬಿ.ಶಿವರಾಮು: ನಾನು ಮಾತನಾಡುವುದೇ ಬೇಡ ಎಂದರೆ ನಾನು ಮಾನಾಡುವುದಿಲ್ಲ. ನಾನು ಮಾತನಾಡುವುದಕ್ಕೆ ಎದ್ದಕೂಡಲೇ ಈ ತರಹ ಮಾಡಿದರೆ ಹೇಗೆ?

ಉಪಾಧ್ಯಕ್ಷರು: ದಯಮಾಡಿ ತಾವು ತಿಳಿದುಕೊಳ್ಳಿರಿ. ಗಮನ ಸೆಳೆಯುವ ಸೂಚನೆಗೆ ಅವರು ಉತ್ತರ ಕೊಟ್ಟಿದ್ದಾರೆ. ತಾವು ಕ್ಲಾರಿಫಿಕೇಷನ್ ಕೇಳಿದರೆ ಮುಗಿದುಹೋಯಿತು.

ಶ್ರೀ ಬಿ.ಶಿವರಾಮು: ಎರಡು ನಿಮಿಷ ಮಾತನಾಡುತ್ತೇನೆ. 250 ಲೋಡ್ ಏನು ಹೋಯಿತು ಅವತ್ತು ಗೊಂದಲ ಆಯಿತು. ಕಾರಣ ಏನೆಂದರೆ 100 ಕೆ.ಜಿ.ಗೆ 120 ರೂಪಾಯಿ ಆವತ್ತು ಸಿಕ್ಕಿದಂಥ ಬೆಲೆ. ಅಲ್ಲಿಗೆ ಗಲಾಟೆ ಆದಮೇಲೆ ತಾವೆಲ್ಲಾ ಭೇಟಿ ಮಾಡಿದಿರಿ. ಒಂದು ಕಾರ್ಯಕ್ರಮವನ್ನು ಕೂಡ ತಾವು ಹಮ್ಮಿಕೊಂಡಿರಿ. ಇವತ್ತು

ಏನಾಗಿದೆ ಎಂದರೆ ಮಾರ್ಕೆಟ್ಟಿಗೆ ಬರುವ ಆಲೂಗೆಡ್ಡೆ ಕಡಿಮೆಯಾಗಿದೆ. ಕಾರಣ ಏನೆಂದರೆ ಈ ರೀತಿ ತಾವು ಬೆಂಬಲಬೆಲೆ ಕೊಟ್ಟು ಮಾರ್ಕೆಟ್ ಇಂಟರ್‌ವೆನ್‌ಷನ್ ಆಗಿ ಅಲ್ಲಲ್ಲೇ ಸ್ಥಳದಲ್ಲಿ ಪರ್ಚೇಸ್ ಮಾಡುತ್ತೀರಿ ಎಂಬ ವಿಶ್ವಾಸಕ್ಕೆ ಇವತ್ತು ಮಾರ್ಕೆಟ್ಟಿಗೆ 20-25 ಲೋಡ್ ಅಷ್ಟೆ ಬೆಂಗಳೂರಿಗೆ ಬರುತ್ತಿದೆ. ಆದರೂ ಬೆಲೆ ಏರಿಲ್ಲ. ಮಾಲು 250 ರೂಪಾಯಿಯೊಳಗಡೆಯೇ ಇದೆ. ಕೇಂದ್ರ ಎಲ್ಲೆಲ್ಲಿ ಫಿಕ್ಸ್ ಮಾಡಿದ್ದೀರಿ ಅಲ್ಲಿ ಕಾಯುತ್ತಿದ್ದಾರೆ. ನಾಲ್ಕೈದು ದಿವಸದಿಂದ ಬೆಂಬಲ ಬೆಲೆ ಸಿಗುತ್ತದೆ 350 ರೂಪಾಯಿ ಎಂದು ಕಾಯುತ್ತಿದ್ದಾರೆ. ನಾಳೆ ಪ್ರಾರಂಭ ಮಾಡಿದರೆ ಅಲ್ಲಿ ಹೆಚ್ಚು ಒತ್ತಡ ಬೀಳುತ್ತದೆ. ಏನು ಮೂರನೇ ತಾರೀಖು ಮಾರ್ಕೆಟ್ಟಿನಲ್ಲಿತ್ತು ಆ ರೀತಿಯ ಒತ್ತಡ ಬಿದ್ದಂಥ ಸಂದರ್ಭದಲ್ಲಿ ಈಗ ತಾವು ಕೊಟ್ಟಿರತಕ್ಕ ಒಂದು ಕೋಟಿ ರೂಪಾಯಿ ಹಣಕ್ಕೆ ಕೇವಲ 8000 ಮೆಟ್ರಿಕ್‌ಟನ್ ಅಷ್ಟೇ ಪರ್ಚೇಸ್ ಮಾಡುವುದಕ್ಕೆ ಸಾಧ್ಯವಿದೆ. ಒಂದೊಂದು ಕೇಂದ್ರದಲ್ಲಿ ಬೆಂಗಳೂರಿಗೆ ಬಂದಂತೆ ಆ ಪ್ರಮಾಣದಲ್ಲಿ ಬಂದಾಗ ತಾವು ಏನು ಮಾಡುತ್ತೀರಿ? ಬಿಡುಗಡೆ ಮಾಡಿರತಕ್ಕ ಹಣ ಒಂದು ಕೋಟಿ ರೂಪಾಯಿ. ತಮ್ಮ ರಾಜ್ಯ ಸರ್ಕಾರ ಆಯವ್ಯಯದಲ್ಲಿ ಒದಗಿಸಿರುವ ಹಣ 2 ಕೋಟಿ ರೂಪಾಯಿ. ತಮ್ಮ ವರದಿಯಲ್ಲಿ ಕೊಟ್ಟಿರುವ ಪ್ರಕಾರ 12 ಕೋಟಿ ಎಂದು ತಾವೇ ಹೇಳಿದ್ದೀರಿ. ಅಂದರೆ 15 ದಿವಸ ಅಂತರದಲ್ಲಿ. ಆ 12 ಕೋಟಿ ಹಣದ ವ್ಯವಸ್ಥೆಯನ್ನು ಏನು ಮಾಡುತ್ತೀರಿ ಎಂಬ ಮಾತನ್ನು ಕೇಳಲಿಕ್ಕೆ ಇದನ್ನು ಮನವರಿಕೆ ಮಾಡುತ್ತಿದ್ದೇನೆಯೇ ಹೊರತು ಇದು ಕೇವಲ ಆಲೂಗೆಡ್ಡೆಗೆ ಹೇಳಿರುವುದು. ಜೊತೆಗೆ ಈರುಳ್ಳಿಯೂ ಕೂಡ ಇದೆ.

ಶ್ರೀ ಸಿ.ಬೈರೇಗೌಡ: ಏನು ಮಾಡಬೇಕು ಎಂಬುದನ್ನು ಹೇಳಿ.

ಶ್ರೀ ಬಿ.ಶಿವರಾಮು: ಏನು ಮಾಡಬೇಕು ಎಂದು ಕೇಳಿದರೆ ಅದರ ವಿಚಾರವನ್ನು ಒಂದು ರಾಜ್ಯ ಸರ್ಕಾರದಲ್ಲಿನ ಆಯವ್ಯಯದಲ್ಲಿ ಒದಗಿಸಿರುವ ಹಣವನ್ನು ಪೂರ್ಣವಾಗಿ ಬಿಡುಗಡೆ ಮಾಡುವುದರ ಜೊತೆಗೆ ಪೂರ್ಣವಾಗಿ ಕೇಂದ್ರಸರ್ಕಾರದಿಂದ ಮ್ಯಾಚಿಂಗ್ ಗ್ರಾಂಟನ್ನು ಪಡೆಯಬೇಕು. ಎರಡನೆಯದು ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಮಂಡಳಿ ಇದೆ. ಅಲ್ಲಿ ಸಾಕಷ್ಟು ಹಣ ಇದೆ. ರೈತ ಬೆಳೆದ ಮಾಲಿಗೆ....

ಉಪಾಧ್ಯಕ್ಷರು: ಬಜೆಟ್ ಭಾಷಣದಲ್ಲಿ ಮಾತನಾಡಿದ ಹಾಗೆ ಮಾತನಾಡುತ್ತಾ ಇದ್ದರೆ ಹೇಗೆ? ಟೈಮಿಲ್ಲ ಎಂಬುದನ್ನು ನೀವು ವಿಚಾರ ಮಾಡಬೇಕು. ಇದು ಗಮನ ಸೆಳೆಯುವ ಸೂಚನೆ. ಎಷ್ಟು ಹೊತ್ತಿನವರೆಗೆ ಮಾತನಾಡುವುದು ಹೇಳಿ.

ಶ್ರೀ ಬಿ.ಶಿವರಾಮು: ಈ ರೀತಿಯ ವ್ಯವಸ್ಥೆ ಬೇರೆ ಕೇಂದ್ರದಲ್ಲಿ ಪ್ರಾರಂಭ ಆಗುವುದಾದರೆ ಬಹಳ ಕಷ್ಟವಾಗುತ್ತದೆ ರೈತರಿಗೆ.

ಶ್ರೀ ಸಿ.ಆರ್.ಸಗೀರ್‌ಅಹಮದ್: ಮಾನ್ಯ ಉಪಾಧ್ಯಕ್ಷರೆ...

ಉಪಾಧ್ಯಕ್ಷರು: ತಾವು ಕೂಡ್ರಿ. ತಮ್ಮನ್ನು ಮಾತನಾಡುವುದಕ್ಕೆ ಕರೆದಿಲ್ಲ ನಾನು. ಅವರು ಉತ್ತರ ಹೇಳುತ್ತಾರೆ. ಉತ್ತರ ಹೇಳುವುದಕ್ಕೆ ಅವರಿಗೆ ಹೇಳಿದ್ದೇನೆ. ರೇವಣ್ಣನವರೇ, ತಾವು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಖಾತೆ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಕಳೆದ ನಾಲ್ಕು ದಿವಸದ ಹಿಂದೆ ಆಲೂಗೆಡ್ಡೆ ಬೆಲೆ ಬಿದ್ದು ನಾವು ಕಳೆದ 15 ದಿವಸದಿಂದ ರಾಜ್ಯದಲ್ಲಿ ಇದರ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ. ರಾಜ್ಯದಲ್ಲಿ 25 ಸಾವಿರ ಹೆಕ್ಟೇರ್ ಆಲೂಗೆಡ್ಡೆ ಬೆಳೆದಿದ್ದಾರೆ ಎಂಬ ಮಾಹಿತಿ ಸರ್ಕಾರಕ್ಕೆ ಬಂತು. ಅದರಲ್ಲಿ ಹಾಸನ ತಾಲ್ಲೂಕು ಒಂದರಲ್ಲೇ 18 ಸಾವಿರ ಹೆಕ್ಟೇರ್ ಆಲೂಗೆಡ್ಡೆ ಇದೆ. ಮಾನ್ಯ ಕೃಷಿ ಸಚಿವರು, ಮಾನ್ಯ ತೋಟಗಾರಿಕೆ ಸಚಿವರು ನಾವು ಸೇರಿ ಸಂಬಂಧಪಟ್ಟ ಹಿರಿಯ ಅಧಿಕಾರಿಗಳನ್ನು ಕರೆದು ಮಾತನಾಡಿದಾಗ 18 ಸಾವಿರ ಹೆಕ್ಟೇರ್ ಇದೆ ಎಂದು ಮಾಹಿತಿ ಕೊಟ್ಟರು. ಅದರ ಪ್ರಕಾರ ಮೊನ್ನೆ ವಿಶೇಷವಾಗಿ ಎಲ್ಲಾ ಇಲಾಖಾಧಿಕಾರಿಗಳನ್ನು ಕರೆದು ನಾವು ಮೀಟಿಂಗ್ ಮಾಡಿದ್ದೇವೆ. ಇದು ಹಾಸನ ಜಿಲ್ಲೆ ಒಂದಕ್ಕೇ ಅಲ್ಲ. ಹಾಸನ ಜಿಲ್ಲೆಯಲ್ಲಿರಬಹುದು. ಬೆಳಗಾಂ ಜಿಲ್ಲೆಯಲ್ಲಿರಬಹುದು. ಧಾರವಾಡ ಜಿಲ್ಲೆಯಲ್ಲಿರಬಹುದು. ಚಿಕ್ಕಮಗಳೂರು ಜಿಲ್ಲೆಯಲ್ಲಿರಬಹುದು. ಎಲ್ಲಾ ಭಾಗದಲ್ಲೂ ಒಟ್ಟು ರಾಜ್ಯದಲ್ಲಿರುವ 36 ಸಾವಿರ ಹೆಕ್ಟೇರ್ಸ್‌ನಲ್ಲಿ, ಹಾಸನ ಜಿಲ್ಲೆಯಲ್ಲಿ 26 ಸಾವಿರ ಬೇರೆ ಜಿಲ್ಲೆಯಲ್ಲಿ 10 ಸಾವಿರ ಹೆಕ್ಟೇರ್‌ನಲ್ಲಿ ಬೆಳೆದಿದ್ದಾರೆ ಎಂಬ ಮಾಹಿತಿಯನ್ನು ಇಲಾಖೆಯವರು ಕೊಟ್ಟಿದ್ದಾರೆ. ಇವತ್ತಿನ ದಿವಸ ಕೇವಲ ಒಂದು ಕೋಟಿ ರೂಪಾಯಿ ಕೊಟ್ಟಿರುವುದು ತಾತ್ಕಾಲಿಕವಾಗಿ. ಹಾಪ್‌ಕಾಮ್ಸ್‌ನಿಂದ 50 ಲಕ್ಷ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್‌ನಿಂದ 25 ಲಕ್ಷ, ಮಾರ್ಕೆಟಿಂಗ್ ಫೆಡರೇಷನ್‌ನಿಂದ 25 ಲಕ್ಷ ಎಂದು ಒಟ್ಟು ಒಂದು ಕೋಟಿ ರೂಪಾಯಿ ಕೊಟ್ಟಿದ್ದೇವೆ. ಎ.ಪಿ.ಎಂ.ಸಿ.ಕಡೆಯಿಂದ ಕೊಡುವುದಕ್ಕೆ ಎ.ಪಿ.ಎಂ.ಸಿ.ಮಂತ್ರಿಗಳೂ ಕೂಡ ಒಪ್ಪಿದ್ದಾರೆ. ಹಾಸನ ಜಿಲ್ಲಾ ಪಂಚಾಯಿತಿಯಿಂದ 25 ಲಕ್ಷ ರೂಪಾಯಿ ತಾತ್ಕಾಲಿಕವಾಗಿ ಕೊಡುತ್ತೇವೆಂದು ಜಿಲ್ಲಾ ಪಂಚಾಯಿತಿಯವರು ಹೇಳಿದ್ದಾರೆ. ಸಾಲ ಎಂದು ಕೊಟ್ಟಿರುತ್ತಾರೆ ಮತ್ತೆ ವಾಪಸ್ಸ್ ಸರ್ಕಾರದಿಂದ ತೆಗೆದುಕೊಳ್ಳುತ್ತಾರೆ. ಮತ್ತು ಅದಾದಮೇಲೆ ಕೇಂದ್ರಸರ್ಕಾರಕ್ಕೆ ಶನಿವಾರವೇ ಪತ್ರ ಕಳುಹಿಸಿಕೊಟ್ಟಿದ್ದೇವೆ. ನಾಳೆ ಅಥವಾ ನಾಡಿದ್ದು ಆದೇಶ ಬರಬಹುದು ಎಂದು ಸರ್ಕಾರ ಎಕ್ಸ್‌ಪೆಕ್ಟೇಷನ್ ಇಟ್ಟುಕೊಂಡಿದ್ದೇವೆ. ಹೋದಸಾರಿ ಒಂದೇ ವಾರ ನಾವು ಇದನ್ನು ಮಾಡಿದೆವು. ಮಾಡಿದ ತಕ್ಷಣ 500ರಿಂದ 600 ರೂಪಾಯಿ ಆಲೂಗೆಡ್ಡೆ ಹೋಯಿತು. ಕಳೆದ ಸಾರಿ ಒಂದು ವಾರದಲ್ಲಿ ಒಂದು ಕೋಟಿ 75 ಲಕ್ಷ ರೂಪಾಯಿಗೆ ಮಾತ್ರ ಆಲೂಗೆಡ್ಡೆ ಕೊಂಡಿದ್ದು. 500 ರೂಪಾಯಿ 600 ರೂಪಾಯಿ 700 ರೂಪಾಯಿ 800 ರೂಪಾಯಿವರೆಗೆ ಹೋಗಿದೆ ಕಳೆದಸಾರಿ. ನಾವು ಎಲ್ಲಾ ಮೂಲನ್ನೂ ಕೊಳ್ಳುತ್ತೇವೆ ಎನ್ನುವ ಉದ್ದೇಶ ಅಲ್ಲ. ಮಾರ್ಕೆಟ್ಟಿನಲ್ಲಿ ನಾವು ಕಾಂಪಿಟ್ ಮಾಡಿದರೆ ರೈತರಿಗೆ ಸ್ಟೆಬಲೈಸ್ ಮಾಡಬಹುದು ಎಂಬ ಉದ್ದೇಶದಿಂದ ಮಾಡುತ್ತಿದ್ದೇವೆ ಸರ್ಕಾರದಲ್ಲಿ.

ಅದೂ ಬೈರೇಗೌಡರು ಎಲ್ಲಾದಕ್ಕೂ ಮಾಡಬೇಕಾ ಎಂದು ಕೇಳಿದರು. ನಾವು ಇಲ್ಲಾ ಸ್ವಾಮಿ ಅರ್ಜೆಂಟ್ ಎಂದು ಬೈರೇಗೌಡರ ಹತ್ತಿರ ಕಳೆದ ಮೂರು ದಿವಸದಿಂದ ನಾವು ನಮ್ಮ ಶಾಸಕರೆಲ್ಲಾ ಅವರ ಮನೆ ಹತ್ತಿರ ಕೂತಿದ್ದೇವೆ ಸ್ವಾಮಿ. ಇಷ್ಟು ಅವರು ಮಾಡಿದ್ದಕ್ಕೆ ನಮ್ಮ ಹಾಸನ ಜಿಲ್ಲೆ ರೈತರ ಪರವಾಗಿ ಬೈರೇಗೌಡರಿಗೆ, ಜಯಕುಮಾರ್ ಅವರಿಗೆ ಬಹಳ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

ಉಪಾಧ್ಯಕ್ಷರು: ಮಾನ್ಯ ವಿಧಾನಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 103ರ ಮೇರೆಗೆ ದಿನಾಂಕ 9ನೇ ಸೆಪ್ಟೆಂಬರ್ 1997ರಂದು ಕರ್ನಾಟಕ ಸಿನಿಮಾಗಳ ನಿಯಂತ್ರಣ (ತಿದ್ದುಪಡಿ) ವಿಧೇಯಕ 1997ನ್ನು ಕರ್ನಾಟಕ ವಿಧಾನ ಪರಿಷತ್ತು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ. ಈ ವಿಧೇಯಕಕ್ಕೆ ವಿಧಾನಸಭೆಯ ಸಹಮತಿಯನ್ನು ನೀಡಬೇಕೆಂದು ಕೋರುತ್ತೇನೆ. ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಗ್ಗೆ 11 ಗಂಟೆಗೆ ಪುನಃ ಸೇರುತ್ತದೆ.

(ಸದನವು 7 ಗಂಟೆ 47 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಬುಧವಾರ 10.9.97ರಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣೆ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನ ಸಭೆ

ಬುಧವಾರ 10ನೇ ಸೆಪ್ಟೆಂಬರ್ 1997ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್‌ರವರು) ಪೀಠವನ್ನು ಅಲಂಕರಿಸಿದ್ದರು.

1. ಸಭೆಯ ಮುಂದಿಡಲಾದ ಕಾಗದಪತ್ರಗಳು

I. ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿ): ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 262(3)ನೇ ಪ್ರಕರಣದ ಮೇರೆಗೆ;

1) 1994-95ನೇ ಸಾಲಿನ ತುಮಕೂರು ಜಿಲ್ಲಾ ಪಂಚಾಯತ್‌ನ ಪ್ರಮಾಣೀಕೃತ ವಾರ್ಷಿಕ ಲೆಕ್ಕಗಳು;

2) 1994-95ನೇ ಸಾಲಿನ ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕಗಳು ಹಾಗೂ ಲೆಕ್ಕಗಳ ಮೇಲಿನ ಲೆಕ್ಕಪರಿಶೋಧನಾ ವರದಿ;

3) 1994-95ನೇ ಸಾಲಿನ ರಾಯಚೂರು ಜಿಲ್ಲಾ ಪಂಚಾಯತ್‌ನ ಪ್ರಮಾಣೀಕೃತ ವಾರ್ಷಿಕ ಲೆಕ್ಕಗಳು ಹಾಗೂ ಲೆಕ್ಕಗಳ ಮೇಲಿನ ಲೆಕ್ಕಪರಿಶೋಧನಾ ವರದಿ;

1956ರ ಕಂಪೆನಿಗಳ ಕಾಯ್ದೆಯ 619ಎ ಪ್ರಕರಣದ ಮೇರೆಗೆ;

4) 1992-93 ಹಾಗೂ 1993-94ನೇ ಸಾಲುಗಳ ಕರ್ನಾಟಕ ಭೂ ಸೇನಾ ನಿಗಮ ನಿಯಮಿತದ 19 ಹಾಗೂ 20ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

II. ಶ್ರೀ ಎಸ್.ಎಸ್.ಪಾಟೀಲ್ (ಸಹಕಾರಿ ಮಂತ್ರಿ)ರವರ ಪರವಾಗಿ,

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ,

1962ರ ಉಗ್ರಾಣ ನಿಗಮದ ಕಾಯ್ದೆಯ 31 (11)ನೇ ಪ್ರಕರಣದ ಮೇರೆಗೆ;

1995-96ನೇ ಸಾಲಿನ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 38ನೇ ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕಪತ್ರವನ್ನು ಮಂಡಿಸುತ್ತೇವೆ.

ಅಧ್ಯಕ್ಷರು: ಕಾಗದ ಪತ್ರಗಳನ್ನು ಸದನದ ಮುಂದೆ ಮಂಡಿಸಲಾಯಿತು.

(2) ಗಮನ ಸೆಳೆಯುವ ಸೂಚನೆ

ಕಾರವಾರ ಜಿಲ್ಲೆಯ ಕುಮಟಾ ಮತ್ತು ಅಂಕೋಲಾ ತಾಲ್ಲೂಕಿನಲ್ಲಿ ಕೃಷಿ ಭೂಮಿಯನ್ನು ನಿಗಧಿತ ಉದ್ದೇಶಕ್ಕೆ ಬಳಸದೆ ಇರುವುದು

ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲಾ): ಕಾರವಾರ (ಉತ್ತರ ಕನ್ನಡ) ಜಿಲ್ಲೆಯ ಕುಮಟಾ ಮತ್ತು ಅಂಕೋಲಾ ತಾಲ್ಲೂಕಿನಲ್ಲಿ ಸರ್ಕಾರವು 1848 ಎಕರೆ ರೈತರ ಕೃಷಿ ಭೂಮಿಯನ್ನು 1973ರಲ್ಲಿ ವಶಪಡಿಸಿಕೊಂಡಿದ್ದು ನಿಗಧಿತ ಉದ್ದೇಶಕ್ಕೆ ಬಳಸದೇ ಬಂಜರು ಬಿದ್ದಿರುವ ಬಗ್ಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ,

An extent of 1849 acres of land in Kumta & Ankola Taluks of Uttara Kannada District, had been acquired under the Karnataka Industrial Areas Development Act, in December 1972. This land was allotted and handover to M/s Ballapur Industries Ltd., on a lease cum sale basis for manufacture of Salt on 26.12.1978. The lease period expired on 4.1.1985.

Subsequently, these lands were surrendered to the KIADB. Thereafter, 30 acres of this land was allotted to M/s, Konkan Railways and the remaining 1818-00 acres of land was allotted in June 1994 to M/s. Murdeshwara Foods & Exports Limited for aquaculture project, on a lease-cum-sale basis for a period of 21 years.

In the meanwhile the Assistant Commissioner, Karwar Subdivision has passed an award in respect of compensation on these lands. In pursuance thereof, the Government has paid an amount of Rs.44,30,000-00 to land owners as compensation.

On the award passed by the Assistant Commissioner, karwar Sub-division, the land owners had approached the Civil Court, Karwar for payment of higher compensation. The Civil Court had passed an order granting higher compensation, in 1983. The Assistant Commissioner, Karwar and KIADB Board had filed a case in the Hon'ble High Court of Karnataka against this order of the Civil Court. The Hon'ble High Court of Karnataka has in its judgment dated 6.11.1996 up-held the orders passed by the Civil Court Karwar.

Against the judgment passed by the Hon'ble High Court, the KIADB Board has filed Special Leave Petitions (SLP) in the Hon'ble Supreme Court of India vide No.SLP-5361:67:97. The Hon'ble Supreme Court of India has granted stay on 27.3.1997.

As the said lands have already been acquired and taken possession of by KIADB Board and have been allotted to M/s Murdeswara Foods & Exports Limited, Since the lease cum sale agreement with that company is still in force and since the matter is now pending with the Supreme Court, the KIADB is awaiting orders of ths Supreme Court and will take actioin on the basis of these orders.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮದು ಏನೆಂದರೆ ಅವರು ರೈತರನ್ನು ಉಳಿಸುವಂತಹ ಉತ್ತರವನ್ನು ನೇರವಾಗಿ ಕೊಟ್ಟರೆ ಸಾಕು.

+ ಶ್ರೀ ವಿಶ್ವೇಶ್ವರ ಹೆಗಡೆ: ಮಾನ್ಯ ಅಧ್ಯಕ್ಷರೆ, ಈಗ ಸರ್ಕಾರವೇ ಒಪ್ಪಿಕೊಂಡಿರುವ ಹಾಗೆ 1974ರಲ್ಲಿ 1848 ಎಕರೆ ಭೂಮಿ ಇದನ್ನು 949 ಕುಟುಂಬಗಳಿಂದ ತೆಗೆದುಕೊಂಡು ಎಕರೆಗೆ 1600 ರೂಪಾಯಿಗಳಂತೆ ಪರಿಹಾರವನ್ನು ಕೊಡಬೇಕೆಂದು ಸಿವಿಲ್ ಕೋರ್ಟ್, ಹೈಕೋರ್ಟ್ ಎಲ್ಲವೂ ರೈತರ ಪರವಾಗಿ ಎಂಟು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಸ್ಪಷ್ಟವಾಗಿ ಸರ್ಕಾರಕ್ಕೆ ಹೇಳಿದ್ದರೂ, ಇಲ್ಲಿ ನಾನು ಕೇಳುವಂಥಾದ್ದು ಇದು ಸುಪ್ರೀಂ ಕೋರ್ಟ್‌ಗೆ ಏಕೆ ಹೋಯಿತು? ಸರ್ಕಾರ ಎಂಟು ಸಾವಿರ

ರೂಪಾಯಿಗಳು ಒಂದು ಎಕರೆಗೆ ಎಂದು ಕೊಡಬೇಕಾಗಿತ್ತು. ಏಕೆಂದರೆ ಇವರು ಎಲ್ಲಾ ಬಡ ರೈತರು ಇದ್ದಾರೆ. ಇಲ್ಲಿ 945 ಕುಟುಂಬಗಳು ಕೊಟ್ಟಿರುವಂತಹ 1848 ಎಕರೆ ಭೂಮಿ ಇದೆ. ಆದುದರಿಂದ ಈಗ ಸುಪ್ರೀಂಕೋರ್ಟ್‌ಗೆ ಹೋಗಿರುವಂಥಾದ್ದನ್ನು ವಿತ್ ಡ್ರಾ ಮಾಡಿಕೊಳ್ಳಬೇಕು. ಈ ಪರಿಹಾರವನ್ನು ತಕ್ಷಣ ಕೊಡಬೇಕು, ಮತ್ತೆ ಯಾವ ಉದ್ದೇಶಕ್ಕೆ ಈ ಭೂಮಿಯನ್ನು ಖರೀದಿ ಮಾಡಿತ್ತೋ ಆ ಉದ್ದೇಶ ಇದುವರೆಗೂ ಸಫಲವಾಗಿಲ್ಲ. ಇದರಲ್ಲಿ ಬಹಳ ಆಶ್ಚರ್ಯವಾದಂತಹ ಸಂಗತಿ ಎಂದರೆ ಮುರುಡೇಶ್ವರ ಸೀವುಡ್‌ರವರಿಗೆ 1994ರಲ್ಲಿ ಒಂದು ಎಕರೆಗೆ ಒಂದೂವರೆ ರೂಪಾಯಿಗಳಂತೆ 21 ವರ್ಷಗಳಿಗೆ ಲೀಜ್‌ನಲ್ಲಿ ಕೊಟ್ಟಿದ್ದಾರೆ. ಈ ರೀತಿಯಾಗಿ ಯಾವ ದೇಶದಲ್ಲಿ ಇದೆ, ಇದು ಯಾವ ನ್ಯಾಯ? ಇದು ರೈತರ ಪರವಾಗಿ ಇರತಕ್ಕಂಥ ಸರ್ಕಾರವೆಂದು ನಾವು ಭಾವಿಸೋಣವೇ? ಹಾಗಾಗಿ ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದೇನೆಂದರೆ ಈಗ ಈ ಕೆ.ಐ.ಎ.ಡಿ.ಬಿಯವರು ಯಾವ ಉದ್ದೇಶಕ್ಕೆ ತೆಗೆದುಕೊಂಡಿದ್ದಾರೋ ಆ ಉದ್ದೇಶ ಸಫಲವಾಗಲಿಲ್ಲ. ಹಾಗಾಗಿ ರೈತರಿಗೆ ಕೋರ್ಟ್ ಆದೇಶದಂತೆ ಪರಿಹಾರವನ್ನು ಕೊಡಬೇಕು. ಸುಪ್ರೀಂ ಕೋರ್ಟಿಗೆ ಹೋಗಿರುವಂಥಾದ್ದನ್ನು ಹೊರತುಪಡಿಸಿ ಅದನ್ನು ಪರಿಹರಿಸಿಕೊಳ್ಳಬೇಕು. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ರೈತರಿಗೆ ಕೊಡಬೇಕಾದಂತಹ ಪರಿಹಾರದ ವಿಚಾರದಲ್ಲಿ ಹೆಚ್ಚು ಆರ್ಗ್ಯುಮೆಂಟ್ ಮಾಡುವುದಕ್ಕೆ ಹೋಗಬಾರದು. ಕೆ.ಐ.ಎ.ಡಿ.ಬಿ.ಯವರು ಕೊಂಕಣ ರೈಲ್ವೆಯವರಿಗೆ 27 ಎಕರೆಯನ್ನು ಎಕರೆಗೆ 53 ಸಾವಿರದಂತೆ 15 ಲಕ್ಷ ರೂಪಾಯಿಗಳನ್ನು ಪರಿಹಾರ ತೆಗೆದುಕೊಂಡಿದ್ದಾರೆ ಇವರು ಕೊಂಕಣ ರೈಲ್ವೆಯವರಿಂದ ತೆಗೆದುಕೊಳ್ಳುತ್ತಾರೆ. ರೈತರಿಗೆ ಒಂದು ಎಕರೆಗೆ 8 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಏಕೆ ಸರ್ಕಾರ ಮುಂದೆ ಬರುವುದಿಲ್ಲ? ಇದಕ್ಕೆ ಸರ್ಕಾರ ಸ್ಪಷ್ಟವಾದಂತಹ ಉತ್ತರ ಹೇಳಬೇಕೆಂದು ಕೇಳುತ್ತೇನೆ.

+ ಡಾ|| ಎಂ.ಪಿ.ಕರ್ಕಿ (ಕುಮಟ): ಮಾನ್ಯ ಅಧ್ಯಕ್ಷರೆ, 1973ರಲ್ಲಿ ಕರ್ನಾಟಕ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಕಾರ್ಪೋರೇಷನ್‌ರವರು ತೊರ್ಕೆ, ಹಿತ್ತಲಬಕ್ಕಿ ಮೊರ್ಬಾ, ಮುಡಿಗೆರೆ, ಹಿರೇಗುತ್ತಿ, ಎನ್ನಮಡಿ, ಮಿಡ್ರಗದ್ದಿ (ಕುಮಟಾ ತಾಲ್ಲೂಕಿನದ್ದು) ಹಾಗೂ ಬಡಲೆ, ಅಂಕೋಲಾ, ತಾಲ್ಲೂಕಿನ 1850 ಎಕರೆಯನ್ನು ಇದು ನನಗೆ ಮಾಹಿತಿ ಗೊತ್ತಿರುವಂತೆ ಇದನ್ನು ಇಂಡಸ್ಟ್ರೀಯಲ್ ಪರಪಸ್‌ಗೆ ಎಂದು ತೆಗೆದುಕೊಂಡರು. ಅದನ್ನು ಬಳ್ಳಾಪುರ ಇಂಡಸ್ಟ್ರೀಯವರು ಉಪ್ಪು ಮಾಡಲು ಎಂದು ಕೊಟ್ಟರು. ಆದರೆ ಬಳ್ಳಾಪುರ ಇಂಡಸ್ಟ್ರೀಯವರು ಅಲ್ಲಿ ಉಪ್ಪನ್ನು ಮಾಡಲಿಲ್ಲ. ಕೇವಲ 574 ಎಕರೆಗಳಲ್ಲಿ ಮಾತ್ರ ಉಪ್ಪನ್ನು ಮಾಡಲು ಕೆಲ ಸಮಯ ಭೂಮಿಯನ್ನು ಬಳಸಿಕೊಂಡರು. ಬಾಕಿ ಉಳಿದಂತಹ ಭೂಮಿಯನ್ನು ಹಾಗೆ ಬೀಳು ಬಿಟ್ಟರು. ಇದಾದನಂತರ ಇಲ್ಲಿ ತಯಾರಾದ ಉಪ್ಪು ಸರಿಯಾಗಿಲ್ಲವೆಂದು ಗುಜರಾತ್‌ನಿಂದ ಉಪ್ಪನ್ನು ಆಮದು ಮಾಡಿಕೊಂಡರು. ಹಾಗಾಗಿ ಈಗ ಕೊಟ್ಟಿರುವಂತಹ ಭೂಮಿ ಸಹ

1973ರಿಂದ ಇಲ್ಲಿಯವರೆಗೆ ಏನು ಪ್ರಯೋಜನವಾಗಿಲ್ಲ. ಅದನ್ನು ಉಪಯೋಗಿಸಿದ್ದರೆ ಬೆಳೆ ಬರುತ್ತಾ ಇತ್ತು. ಆ ಬೆಳೆ ಕೂಡ ಬರದೇ ಸರ್ಕಾರಕ್ಕೆ ನಷ್ಟವಾಗಿದೆ. ಇದರಿಂದ ನಮ್ಮ ರಾಜ್ಯಕ್ಕೆ ಕೂಡ ಏನೂ ಉಪಯೋಗವಾಗಿಲ್ಲ. ಮತ್ತೆ 1974ರಲ್ಲಿ ಕಾಂಪನ್‌ಸೇಷನ್ 1600 ರೂಪಾಯಿಗಳೆಂದು ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಿದ್ದಾರೆ. ಆದರೆ ಕೆಳಗಿನ ಕೋರ್ಟ್ ಅಲ್ಲಿ 70 ಪರ್ ಗುಂಟ, 40 ಪರ್ ಗುಂಟ ಎಂದು ಎರಡು ಡಿವಿಜನ್ ಮಾಡಿ ಒಂದಕ್ಕೆ 70, ಮತ್ತೊಂದಕ್ಕೆ 40 ಖುಷ್ಕಿ ಎಂದು ಹೇಳಿ ಮಾಡಲಾಗಿತ್ತು. ಆದರೆ ಸಿವಿಲ್ ಕೋರ್ಟ್ ಎಲ್ಲವನ್ನೂ ಯೂನಿಫಾರಂ ಆಗಿ 200 ರೂಪಾಯಿಗಳಂತೆ ಗುಂಟೆಗೆ ಕೊಡಬೇಕೆಂದು ಮಾಡಿ 1974ರಲ್ಲಿ ಆದೇಶವನ್ನು ಕೊಟ್ಟಿತು. ಆದರೆ ಸರ್ಕಾರ ಇದರ ವಿರುದ್ಧ ಹೈಕೋರ್ಟ್‌ಗೆ ಹೋಯಿತು. ಅದರ ತೀರ್ಮಾನ ಕೂಡ ಬಂದಿದೆ. ಹೈಕೋರ್ಟ್‌ನ ತೀರ್ಮಾನದಲ್ಲಿ 8 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಬಂದಿದೆ. ಆಗಿನ ಕಾಲದಲ್ಲಿ ಇದು ಆಗಿದ್ದು, ಈಗಿನ ಕಾಲದಲ್ಲಿ ಅಲ್ಲ. ಆಗ ಎಂಟು ಸಾವಿರ ರೂಪಾಯಿಗಳನ್ನು ಕೊಡಬೇಕು, ಶೇ. 30ರಷ್ಟು ಸೊಲೇಷಿಯಂ ಕೊಡಬೇಕು, ಶೇ. 15ರಂತೆ ಬಡ್ಡಿಯನ್ನು ಕೊಡಬೇಕೆಂದು ಆಯಿತು. ನಾನು ಇದರ ಬಗ್ಗೆ ಸಚಿವರ ಹತ್ತಿರ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಮಾತನಾಡಿದ್ದೇನೆ. ಈಗ ಅವರಿಗೆ ಸೊಲೇಷಿಯಂ ಕೊಡುವುದಕ್ಕೆ ತಕರಾರು ಇದೆ. ಈ ಸೊಲೇಷಿಯಂ ಕೊಡುವುದಕ್ಕೆ ತಕರಾರು ಇದ್ದರೆ ಸುಪ್ರೀಂ ಕೋರ್ಟ್ ಏನು ನಿರ್ಣಯ ಕೊಡುತ್ತದೋ ಆ ರೀತಿ ಮಾಡಿ. ಆದರೆ 8 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಏನೂ ಅಬ್ಜೆಕ್ಷನ್ ಇಲ್ಲ. ಈಗ ಬರೀ ಸೊಲೇಷಿಯಂ ಮತ್ತು ಇಂಟ್ರೆಸ್ಟ್ ಮಾತ್ರ ಕೊಡುವುದಕ್ಕೆ ಅಬ್ಜೆಕ್ಷನ್ ಇದೆ. ಈಗ ಹದಿನಾರು ಸಾವಿರ ರೂಪಾಯಿಗಳ ಬದಲಾಗಿ ಎಂಟು ಸಾವಿರ ರೂಪಾಯಿಗಳನ್ನು ತಾತ್ಕಾಲಿಕವಾಗಿ ಕೊಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ? ಈಗಾಗಲೇ 1973ರಿಂದ 1997ನೇ ಇಸವಿಯವರೆಗೆ ಬಡ ರೈತರು ಕೇಳುತ್ತಿದ್ದಾರೆ. ಇದರಲ್ಲಿ ಅರ್ಧ ಎಕರೆ, ಒಂದೂವರೆ ಎಕರೆ ಭೂಮಿ ಇರುವಂಥವರು ಇದ್ದಾರೆ. ಇದರಲ್ಲಿ ಎಲ್ಲರೂ ಶ್ರೀಮಂತರಲ್ಲ, ಕೆಲವು 20-30 ಎಕರೆ ಇರುವವರು ಇರಬಹುದು. ಆದರೆ ಅನೇಕ ರೈತರು ಅರ್ಧ, ಒಂದು ಎಕರೆ ಇರುವಂತಹ ಬಡ ರೈತರೇ ಹೆಚ್ಚು ಇದ್ದಾರೆ. ನಾನು ಈ ವಿಷಯವನ್ನು ಕೇಳಿದಾಗ ಇದು ಮೂರು ತಿಂಗಳಲ್ಲಿ ಡಿಸೈಡ್ ಆಗುತ್ತದೆಂದು ಹೇಳಿದರು. ಆದರೆ ಆರು ತಿಂಗಳಾಯಿತು. ಆದರೂ ಕೂಡ ಸರ್ಕಾರ ಇದರ ಕಡೆಗೆ ಗಮನ ಕೊಟ್ಟಿಲ್ಲ. ರೈತರು ಬಹಳ ಕಷ್ಟದಲ್ಲಿ ಸಿಕ್ಕಿದ್ದಾರೆ. ಈಗ ಬಳ್ಳಾಪುರ ಇಂಡಸ್ಟ್ರೀಯವರು 574 ಎಕರೆಯನ್ನು ಬಳಸುತ್ತಾರೆಂದು ಹೇಳಿದ್ದರೂ ಕೂಡ ಅವರು ನಿಜವಾಗಿ ಬಳಸಿದ್ದು 25-30 ಎಕರೆಗಳನ್ನು ಮಾತ್ರ ಬಳಸಿದ್ದಾರೆ. ಹೀಗಾಗಿ ಇಷ್ಟು ದೀರ್ಘ ಕಾಲಾವಧಿಯವರೆಗೂ ಈ ಜಮೀನನ್ನು ಹಾಳುಗೆಡವಿ ಇದು ಉತ್ಪನ್ನ ಬರುವಂತಹ ಜಮೀನನ್ನು ತೆಗೆದುಕೊಂಡು ಬೆಳೆ ಬರುವಂತಹ ಜಮೀನನ್ನು ತೆಗೆದುಕೊಂಡು ಕೇವಲ 30-40 ರೂಪಾಯಿಗಳಿಗೆ ಗುಂಟೆಯನ್ನು ಕೊಡುವಂತಹದ್ದು ಸರ್ಕಾರದ ನೀತಿಯಲ್ಲ. ಈ ರೀತಿ ಜಡ್ಜಮೆಂಟ್ ಕೂಡ ಬಂದಿದೆ. ಇಂಟರಿಯಂ

ಆದರೂ ಕೊಡಬೇಕು, ಸೋಲೇಷಿಯಂ ಅಥವಾ ಇಂಟ್ರೆಸ್ಟ್ ಪೂರ ಅವರಿಗೆ ಕೊಡುವಂಥಾದ್ದು ನ್ಯಾಯವಿದೆ. ಆ ನ್ಯಾಯದ ವಿರುದ್ಧ ತಾವು ಏಕೆ ಸುಪ್ರೀಂಕೋರ್ಟಿಗೆ ಮನವಿಯನ್ನು ಸಲ್ಲಿಸಿದ್ದೀರೆಂಬುದು ಗೊತ್ತಾಗುತ್ತಿಲ್ಲ. ಕೇವಲ ಅವರು ಜಡ್ಜಮೆಂಟ್ ಪ್ರಕಾರ ಎಂಟು ಸಾವಿರ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಆದುದರಿಂದ ಅವರಿಗೆ ಕೋರ್ಟ್ ಆದೇಶದಂತೆ ಎಂಟು ಸಾವಿರ ರೂಪಾಯಿಗಳನ್ನು ಕೂಡಲೇ ರೈತರಿಗೆ ಪಾವತಿ ಮಾಡಬೇಕೆಂದು ನಾನು ಇಲಾಖೆಯವರು ಮತ್ತು ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಹಾಗೂ ಡಾ॥ ಎಂ.ಪಿ.ಕರ್ಕಿಯವರು ಹೇಳಿದಂತಹ ಬಹಳಷ್ಟು ಸಂಗತಿಗಳು ನಿಜವಿದೆ. 1972ನೇ ಇಸವಿಯಲ್ಲಿ ಅಸಿಸ್ಟೆಂಟ್ ಕಮೀಷನರ್ ಕಾರವಾರ, ರವರು 1849 ಎಕರೆ ಅದು ತೊರ್ಕೆ, ಹಿರೇಗುತ್ತಿ, ಸುತ್ತಮುತ್ತಲಿನ ಹಳ್ಳಿಗಳಲ್ಲಿ ಬಳ್ಳಾಪುರ ಇಂಡಸ್ಟ್ರೀಯಲ್ ಸಾಲ್ಟ್ ಮಾಡಬೇಕೆಂದು ಲ್ಯಾಂಡ್ ಅಕ್ವಾಯರ್ ಮಾಡಿಕೊಳ್ಳಲಾಯಿತು. ಈ ಲ್ಯಾಂಡ್ ಅಕ್ವಾಯರ್ ಮಾಡಿ 1974ರಲ್ಲಿ ಬಳ್ಳಾಪುರ ಇಂಡಸ್ಟ್ರಿಯವರಿಗೆ ಲೀಜ್ ಕಂ ಸೇಲ್ ಬೇಸಿಸ್ ಮೇಲೆ ಕೊಡಲಾಯಿತು. ಆಗಿನ ಅಸಿಸ್ಟೆಂಟ್ ಕಮಿಷನರ್‌ರವರು 44 ಲಕ್ಷ ರೂಪಾಯಿಗಳ ಅವಾರ್ಡ್ ಮಾಡಿದರು. ಆ ಹಣ ಈಗಾಗಲೇ ಕೆ.ಐ.ಎ.ಡಿ.ಬಿಗೆ ಕೊಟ್ಟಿದೆ, ಅದಾದನಂತರ ಇಲ್ಲಿ ಬಹಳಷ್ಟು ಲ್ಯಾಂಡ್ ಸ್ಟೆರಿಸ್ಟೆಡ್ ಲ್ಯಾಂಡ್ ಇದೆ. ಹಾಗಾಗಿ ಮಾಲೀಕರು ಮತ್ತು ರೈತರು ಇಬ್ಬರು ಕಾರವಾರದ ಸಿವಿಲ್ ಕೋರ್ಟ್ ಎನಾನ್ಸ್‌ಮೆಂಟ್ ಆಫ್ ಕಾಂಪೋನ್‌ಸೇಷನ್‌ಗೆ ಅಪ್ರೋಚ್ ಆದಾಗ ಅಲ್ಲಿ ಇನ್ನೂರು ರೂಪಾಯಿಗಳು ಪರ್ ಗುಂಟೆ ಕೊಡಬೇಕೆಂದು ನಿರ್ಣಯವಾಯಿತು. ಕಾರವಾರದ ಅಸಿಸ್ಟೆಂಟ್ ಕಮೀಷನರ್‌ರವರು ಡ್ರೈಲ್ಯಾಂಡ್ ಪರ್ ಗುಂಟ 40 ರೂಪಾಯಿಗಳಂತೆ, ವೆಟ್ ಲ್ಯಾಂಡ್‌ಗೆ ಒಂದು ಗುಂಟೆಗೆ 70 ರೂಪಾಯಿಗಳೆಂದು ಬೆಲೆಯನ್ನು ನಿಗದಿ ಮಾಡಿದರು. ಅದನ್ನು ಸಿವಿಲ್ ಕೋರ್ಟ್ 200 ರೂಪಾಯಿಗಳೆಂದು ಆರ್ಡರ್ ಮಾಡಿದರು. ಅದರ ಮೇಲೆ ಕೆ.ಐ.ಎ.ಡಿ.ಬಿಯವರು ಹೈಕೋರ್ಟ್‌ನಲ್ಲಿ ಅಪೀಲ್ ಮಾಡಿದರು. ಈ ಅಪೀಲ್ ಡಿಸ್‌ಮಿಸ್ ಆಗಿದೆ. ಅದರ ಮೇಲೆ ಸ್ಪೆಷಲ್ ಪಿಟಿಷನ್ ಸುಪ್ರೀಂ ಕೋರ್ಟ್‌ಗೆ ಕೆ.ಐ.ಎ.ಡಿ.ಬಿಯವರು ಹಾಕಿದ್ದಾರೆ. ಅದರಲ್ಲಿ ಹೈಕೋರ್ಟ್‌ಗೆ ಆಜ್ಞೆ ಮಾಡಿದ್ದಾರೆ, ಅದಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ಕೊಟ್ಟಿದೆ. ಆದುದರಿಂದ ಎಲ್ಲಿಯವರೆಗೆ ಸುಪ್ರೀಂ ಕೋರ್ಟ್‌ನಲ್ಲಿ ಇದು ನಿರ್ಣಯವಾಗುವುದಿಲ್ಲವೋ ಅಲ್ಲಿಯವರೆಗೆ ಕೆ.ಐ.ಎ.ಡಿ.ಬಿಗೆ ಹಣವನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ.

11.30 ಎ.ಎಂ

1972ನೇ ಇಸವಿಯಲ್ಲಿ ಲ್ಯಾಂಡ್ ಅಕ್ವೈರ್ ಆಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾವು ಅಸಿಸ್ಟೆಂಟ್ ಕಮೀಷನರ್ ಅವಾರ್ಡ್ ಪ್ರಕಾರ ಪರಿಹಾರ

ಕೊಟ್ಟಿದ್ದೇವೆ. ಎನ್‌ಹಾನ್ಸ್ಡ್ ಕಾಂಪನ್‌ಸೇಷನ್ ಏನಿದೆ ಅದನ್ನು ಇನ್ನೂ ಕೊಡಬೇಕಾಗಿದೆ. ಹೈಕೋರ್ಟ್ ತೀರ್ಮಾನಕ್ಕೆ ಸುಪ್ರೀಂ ಕೋರ್ಟ್ ಸ್ಟೇ ಕೊಟ್ಟಿದೆ. ಎಲ್ಲಿಯತನಕ ಆ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ನಿರ್ಣಯ ಆಗುವುದಿಲ್ಲವೋ ಆ ತನಕ ಸರ್ಕಾರಕ್ಕೆ ಅಥವಾ ಕೆ.ಐ.ಎ.ಡಿ.ಬಿಗೆ ಹಣ ಕೊಡಿಸುವುದು ಕಷ್ಟವಾಗುತ್ತದೆ. ಆದರೂ ಸಹ ಆದಷ್ಟು ಬೇಗನೆ ಈ ಪ್ರಕರಣ ಇತ್ಯರ್ಥ ಮಾಡಲಿಕ್ಕೆ....

ಅಧ್ಯಕ್ಷರು: ಅವರೇನು ಹೇಳುತ್ತಾರೆ ಎಂದರೆ, ಹೈಕೋರ್ಟ್‌ನಲ್ಲಿ ನಮಗೆ ಹೈಯರ್ ಕಾಂಪನ್‌ಸೇಷನ್ ಅನ್ನು ಕೊಟ್ಟಿದ್ದರು, ಸುಪ್ರೀಂ ಕೋರ್ಟ್‌ಗೆ ಸರ್ಕಾರ ಅಪೀಲ್ ಪ್ರಿಫರ್ ಮಾಡತಕ್ಕಂಥ ಅಗತ್ಯ ಇರಲಿಲ್ಲ, ಗೌರ್ನಮೆಂಟ್ ಸ್ವಲ್ಪ ಹೆಚ್ಚು ಔದಾರ್ಯ ತೋರಿಸಿ ನಮಗೆ ಹೈಕೋರ್ಟ್ ಕೊಟ್ಟಿದ್ದನ್ನು ಕೊಡಿಸಬೇಕಾಗಿತ್ತು ಎಂದು ಮಾನ್ಯ ಸದಸ್ಯರಾದ ಶ್ರೀ ವಿಶ್ವೇಶ್ವರ ಹೆಗ್ಗಡೆಯವರು ಹೇಳುತ್ತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗ್ಗಡೆ: ಸರ್ಕಾರದವರು ಸುಪ್ರೀಂ ಕೋರ್ಟ್‌ಗೆ ಅಪೀಲ್ ಹೋಗಿರುವುದೇ ತಪ್ಪು.

ಅಧ್ಯಕ್ಷರು: ಮಾನ್ಯ ದೇಶಪಾಂಡೆಯವರು ಬಹಳ ಧಾರಾಳಿಗಳು, ನಮ್ಮ ವಿಚಾರದಲ್ಲಿ ಅವರಿಗೆ ಬಹಳ ಪ್ರೀತಿ, ಅವರು ಒಪ್ಪಿಕೊಳ್ಳುತ್ತಾರೆ ಎಂಬ ಮಾತನ್ನೂ ಕೂಡ ಮಾನ್ಯ ಸದಸ್ಯರು ಹೇಳಿದರು. I will leave it to you.

ಶ್ರೀ ಆರ್.ವಿ.ದೇಶಪಾಂಡೆ: ನಾನು ಒಂದು ಮಾತನ್ನು ಹೇಳುತ್ತೇನೆ. ಇದು ಸುಪ್ರೀಂ ಕೋರ್ಟ್‌ನಲ್ಲಿ ಪೆಂಡಿಂಗ್ ಇದೆ. ಮೊದಲನೆಯದಾಗಿ ಸುಪ್ರೀಂ ಕೋರ್ಟ್‌ನಲ್ಲಿ ಇದರ ಬಗ್ಗೆ ನಿರ್ಣಯವಾಗಬೇಕು. ಅಥವಾ ಕೆ.ಐ.ಎ.ಡಿ.ಬಿ. ಬೋರ್ಡ್‌ನಲ್ಲಿ ಅಪೀಲ್ ವಿತ್‌ಡ್ರಾ ಮಾಡಬೇಕೆಂದು ನಿರ್ಣಯ ಮಾಡಬೇಕಾಗುತ್ತದೆ. ನನಗೆ ಕೆ.ಐ.ಎ.ಡಿ.ಬಿ. ಬೋರ್ಡ್ ಮೇಲೆ ಯಾವುದೇ ಕಂಟ್ರೋಲ್ ಇಲ್ಲ. ನಾನು ಪ್ರಾಮಾಣಿಕವಾಗಿ ಇರುವುದನ್ನು ಹೇಳುತ್ತಿದ್ದೇನೆ. ಇದು ಡಾ|| ಕರ್ಕಿಯವರಿಗೂ ಗೊತ್ತು.

ಅಧ್ಯಕ್ಷರು: ಆಫ್ಟರ್ ಆಲ್, ಇದು ರೈತರಿಗೆ ಕೊಡುವುದು. ಇದರಲ್ಲಿ ನಿಮ್ಮ ಪ್ರಭಾವ ಬಳಸಿ ರೈತರಿಗೆ ಅನುಕೂಲ ಮಾಡಿಕೊಡಿ.

ಶ್ರೀ ಆರ್.ವಿ.ದೇಶಪಾಂಡೆ: ನಾನು ನನ್ನ ಉತ್ತರವನ್ನು ಹೇಳಿ ಮುಗಿಸುತ್ತೇನೆ. ಇದರ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಕೂಡ ಇಲ್ಲ. ಕಳೆದ 10-12 ವರ್ಷಗಳ ಕಾಲ ನಾನು ಸಣ್ಣ ಕೈಗಾರಿಕಾ ಮಂತ್ರಿಯಾಗಿದ್ದಾಗ ಸ್ಥಳಕ್ಕೆ ಹೋಗಿ ಲ್ಯಾಂಡ್ಸ್ ಅನ್ನೇ ಅವರಿಗೆ ವಾಪಸ್ ಕೊಡಬೇಕೆಂದು ಪ್ರಯತ್ನ ಮಾಡಿದೆ. ಬೇಕಾದರೆ ನಿಮ್ಮ ಲ್ಯಾಂಡ್ಸ್ ವಾಪಸ್ ತೆಗೆದುಕೊಳ್ಳಿ ಎಂದು ನಾನು ರೈತರಿಗೆ ಕಾಲ್ ಕೊಟ್ಟೆ. ಬಳ್ಳಾಪುರ ಇಂಡಸ್ಟ್ರೀಸ್‌ನವರು ಯಾವಾಗ ನಮಗೆ ಲ್ಯಾಂಡ್ ಬೇಕಾಗಿಲ್ಲ ಎಂದು ಹೇಳಿದರೋ ಆಗ ಆ ಲ್ಯಾಂಡ್ ಬೇಕಾದರೆ

ವಾಪಸ್ ಕೊಡೋಣ ಎಂದು ಹೇಳಿದೆ. ಆವಾಗ ಅಲ್ಲಿ ಒಂದು ದೊಡ್ಡ ಸಮಸ್ಯೆ ಏನಾಗಿದೆ ಎಂದರೆ ಅದರಲ್ಲಿ ಬಹಳಷ್ಟು ಲ್ಯಾಂಡ್ಸ್ ಟೆನೆಂಟೆಡ್ ಲ್ಯಾಂಡ್ಸ್ ಇವೆ. ಮಾಲೀಕರೇ ಹೋಗಿ ಬಿಟ್ಟರು, ರೈತರು ಇದ್ದಾರೆ, ಪರಿಹಾರ ಶೇಕಡ 40-60ರಷ್ಟು ಕೊಟ್ಟಿದ್ದಾರೆ, ಆಗೊಂದು ದೊಡ್ಡ ಸಮಸ್ಯೆ ನಿರ್ಮಾಣ ಆಯಿತು. ಹಾಗಾಗಿ ಅದೂ ಮಾಡಲಿಕ್ಕಾಗಲಿಲ್ಲ. ರೈತರ ಬಗ್ಗೆ ಸಂಪೂರ್ಣವಾದಂತಹ ಸಹಾನುಭೂತಿ ಸರ್ಕಾರಕ್ಕೆ ಇದೆ. ಇವರಿಗೆ ಅನ್ಯಾಯ ಮಾಡಬೇಕು ಎನ್ನುವ ದೃಷ್ಟಿಯಿಂದ ಸರ್ಕಾರಕ್ಕೆ ಹೋಗಿಲ್ಲ. ಆದರೆ ಇವತ್ತು ಸುಪ್ರೀಂಕೋರ್ಟ್‌ನಲ್ಲಿ ವ್ಯಾಜ್ಯ ಇದ್ದಾಗ ಹೋಗಿಲ್ಲ. ಆದರೆ ಇವತ್ತು ಸುಪ್ರೀಂ ಕೋರ್ಟ್‌ನಲ್ಲಿ ವ್ಯಾಜ್ಯ ಇದ್ದಾಗ ಕೆ.ಐ.ಎ.ಡಿ.ಬಿ.ಗೆ ಪೇಮೆಂಟ್ ಮಾಡುವುದು ಕಷ್ಟವಿದೆ. ಆದರೂ ಸಹ ನಾನು ಕೆ.ಐ.ಎ.ಡಿ.ಬಿ. ಜೊತೆಗೆ ಇದರ ಬಗ್ಗೆ ಚರ್ಚೆ ಮಾಡಿ ಇದಕ್ಕೊಂದು ಪರಿಹಾರ ಕಂಡು ಹಿಡಿಯಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸಾರ್, ಇಲ್ಲಿರುವ ವಿಚಾರ ಇಷ್ಟೇ. 1973ರಲ್ಲಿ 945 ಕುಟುಂಬಕ್ಕೆ ಸಂಬಂಧಪಟ್ಟಂತಹ 1848 ಎಕರೆ ತಾವು ತೆಗೆದುಕೊಂಡಿರಿ, 1600 ರೂ. ಪರಿಹಾರ ಕೊಟ್ಟರಿ. ತಾವೇ ಹೇಳಿದ ಪ್ರಕಾರ ಹೈಕೋರ್ಟ್ 8 ಸಾವಿರ ಪರಿಹಾರ ಕೊಡಬೇಕೆಂದು ತೀರ್ಮಾನ ಮಾಡಿತು. ಈ ರೈತರಿಗೆ ಅನುಕೂಲ ಮಾಡಿಕೊಡುವುದರ ಬದಲಾಗಿ ಸುಪ್ರೀಂ ಕೋರ್ಟ್‌ಗೆ ಕೆ.ಐ.ಎ.ಡಿ.ಬಿ.ನವರು ಹೋದರು. ಈಗ ನಾನು ಸರ್ಕಾರಕ್ಕೆ ಕೇಳುವುದೇನೆಂದರೆ, ಲ್ಯಾಂಡ್ ಅಕ್ವೈರ್ ಆಗಿ 25 ವರ್ಷವಾಗಿ ಹೋಯಿತು, ನೀವು ಯಾವ ಉದ್ದೇಶಕ್ಕಾಗಿ 1848 ಎಕರೆ ಜಮೀನು ತೆಗೆದುಕೊಂಡಿದ್ದರೋ, ಆ ಬಳ್ಳಾಪುರ ಇಂಡಸ್ಟ್ರೀಸ್‌ಗೆ 11 ವರ್ಷದ ಲೀಸ್‌ಗೆ ಕೊಟ್ಟಿದ್ದರೋ, ಅಲ್ಲಿ ಸಮಯವೂ ಮುಗಿದು ಹೋಯಿತು, ಅಲ್ಲಿ ಉಪ್ಪನ್ನೂ ಕೂಡ ತಯಾರು ಮಾಡಲಿಲ್ಲ. ಆಮೇಲೆ 1994ರಲ್ಲಿ ಆರ್.ಎನ್.ಶೆಟ್ಟಿಯವರಿಗೆ ಫ್ಲೋರಿಕಲ್ಚರ್‌ಗಾಗಿ ಈ ಭೂಮಿಯನ್ನು ಕೊಡಬೇಕೆಂದು ನೀವು ಪ್ರಯತ್ನ ಮಾಡಿದಿರಿ. 1997ರಲ್ಲಿ ಹೈಕೋರ್ಟ್ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿತು. ಅಂದರೆ ಅದೂ ಆಗಲಿಲ್ಲ. ಈಗ ನಾವೇನು ಹೇಳುತ್ತೇವೆ ಎಂದರೆ, ರೈತರನ್ನು ಮಾರಣ ಹೋಮ ಮಾಡುವಂತಹ ಕೆಲಸವನ್ನು ಸರ್ಕಾರದ ಈ ನಿಮ್ಮ ಇಲಾಖೆ ಮಾಡಿದೆ, ಯಾವ ಪರ್ಪಸ್‌ಗೆ ಲ್ಯಾಂಡ್ ತೆಗೆದುಕೊಂಡರೋ ಆ ಪರ್ಪಸ್‌ಗೆ ಅದು ಉಪಯೋಗವಾಗಲಿಲ್ಲ, ಅವನ ಲ್ಯಾಂಡ್ ಟೆನೆಂಟ್‌ಗೆ ಹೋಗುತ್ತಿತ್ತೋ, ರೈತನಿಗೆ ಹೋಗುತ್ತಿತ್ತೋ, ಅಥವಾ ಮತ್ತೊಬ್ಬನಿಗೆ ಹೋಗುತ್ತಿತ್ತೋ, ನಿಮಗೇನು ತೆಗೆದುಕೊಳ್ಳುತ್ತೀರಾ? ಯಾವ ಪರ್ಪಸ್‌ಗೆ ತೆಗೆದುಕೊಂಡಿರೋ, ಅದಕ್ಕೆ ಉಪಯೋಗ ಮಾಡಲಿಲ್ಲವಾದರೆ ಅದನ್ನು ವಾಪಸ್ ಕೊಡಬೇಕಾಗಿತ್ತು. ನೀವು ಆ ಕೆಲಸವನ್ನೂ ಕೂಡ ಮಾಡಲಿಲ್ಲ. ಇವತ್ತು ಇಡೀ ರಾಜ್ಯದಲ್ಲಿ ಯಾವುದಾದರೂ ಕುಗ್ರಾಮದಲ್ಲಿ ಇವತ್ತು 8 ಸಾವಿರ ರೂ.ಗಳಿಗೆ ಒಂದು ಜಮೀನು ಸಿಗುವುದನ್ನು ತೋರಿಸಿಬಿಡಿ ನೋಡೋಣ. ಅಷ್ಟು ಬೆಲೆಗೆ ಜಮೀನು ಎಲ್ಲಿ ಸಿಗುತ್ತದೆ? ಅದನ್ನು ಇವರು ಕೆ.ಐ.ಎ.ಡಿ.ಬಿ.ಯವರನ್ನು ಉದ್ಧಾರ ಮಾಡುತ್ತೇವೆ ಎಂದು

ಹೇಳಿ ಸುಪ್ರೀಂ ಕೋರ್ಟ್‌ಗೆ ಹೋಗಿದ್ದಾರೆ. ಕೆ.ಐ.ಎ.ಡಿ.ಬಿ. ಮಾನ್ಯ ಮಂತ್ರಿಗಳ ಕಂಟ್ರೋಲ್‌ನಲ್ಲೇ ಇದೆ. ಈ ಸಮಸ್ಯೆ ನಿಮ್ಮ ಜಿಲ್ಲೆಯದೇ ಆಗಿದೆ. ರೈತರು ನಾವು ಅಲ್ಲಿಗೆ ಹೋದಾಗ 4-6 ಸಾರಿ ನಮ್ಮನ್ನು ಭೇಟಿ ಮಾಡಿದ್ದರು, ಅವರು ನಿಮ್ಮನ್ನೂ ಸಹ ಭೇಟಿ ಮಾಡಿದ್ದಾರೆ, ಅವರು ಇವತ್ತು ಕಣ್ಣೀರು ಹಾಕುತ್ತಿದ್ದಾರೆ. ಲ್ಯಾಂಡ್ ಅಕ್ವೈರ್ ಆಗಿ 25 ವರ್ಷವಾಗಿದೆ. ಅವರು ಇವತ್ತು ಸರ್ವನಾಶವಾಗಿದ್ದಾರೆ. ಈಗಲಾದರೂ ನೀವು ಕೇಸ್ ಅನ್ನು ವಿತ್‌ಡ್ರಾ ಮಾಡಿ, ಅಥವಾ ಕಾನೂನು ಏನಿದೆ ಎನ್ನುವುದನ್ನು ನೋಡಿ ರೈತರಿಗೆ ಜಮೀನನ್ನು ರಿಟರ್ನ್ ಮಾಡಿ. ಈಗ ಯಾವನು ಇದ್ದಾನೋ ಅವನು ಅದನ್ನು ತೆಗೆದುಕೊಳ್ಳುತ್ತಾನೆ, ಟೆನೆಂಟ್ ಇದ್ದರೆ ಟೆನೆಂಟ್ ತೆಗೆದುಕೊಳ್ಳುತ್ತಾನೆ; ಅಲ್ವೇ ಅಧ್ಯಕ್ಷರೇ?

ಡಾ|| ಎಂ.ಪಿ.ಕರ್ಕಿ: ಮಾನ್ಯ ಅಧ್ಯಕ್ಷರೇ, ಈ ಜಮೀನನ್ನು ಈಗ ರೈತರಿಗೆ ವಾಪಸ್ ಕೊಟ್ಟರೆ ಅವರು ಫ್ರಾನ್ ಕಲ್ಟಿವೇಷನ್ ಮಾಡಲಿಕ್ಕೆ ಆಗುತ್ತದೆ. ಉಪ್ಪು ತಯಾರಿಸಲಿಕ್ಕೆ ಆಗುತ್ತದೆ. It is a very very profitable venture. ಅದು ಮಾಡಲಿಕ್ಕೆ ಆಗುತ್ತದೆ. ಅದನ್ನಾದರೂ ಕೊಡಿ. ತಾವು ಕೇವಲ ಸೊಲೇಷಿಯಮ್ ವಿಷಯಕ್ಕೆ ಮಾತ್ರ ಕೋರ್ಟಿಗೆ ಹೋಗಿದ್ದೀರಿ. ತಾವು 8 ಸಾವಿರ ರೂ. ಪರಿಹಾರ ಕೊಡಲಿಕ್ಕೆ ತಯಾರಿದ್ದೀರಿ. ಆದರೆ ಸೊಲೇಷಿಯಮ್ ಕೊಡಲಿಕ್ಕೆ ತಾವು ತಯಾರಿಲ್ಲ. ಆ ಸೊಲೇಷಿಯಮ್ ಕೊಡುವುದನ್ನು ಸುಪ್ರೀಂ ಕೋರ್ಟ್ ಯಾವುದೋ ಜಡ್ಜ್‌ಮೆಂಟ್‌ನಲ್ಲಿ ತೆಗೆದುಹಾಕಿದೆ, ಅದಕ್ಕಾಗಿ ತಾವು ಹೈಕೋರ್ಟಿಗೆ: ಸುಪ್ರೀಂ ಕೋರ್ಟಿಗೆ ಹೋಗಿದ್ದೇವೆ ಎಂದು ತಾವು ಹೇಳುತ್ತೀರಿ. ಈ 8 ಸಾವಿರ ರೂ.ಗಳನ್ನು ತಾವು ಇಂಟರೀಮ್ ರಿಲೀಫ್ ಆಗಿ ಕೊಡಿ. ಸೊಲೇಷಿಯಮ್ ಕೊಡಬೇಕೋ ಬೇಡವೋ ಎಂದು ಸುಪ್ರೀಂ ಕೋರ್ಟ್ ನಂತರ ಆದೇಶ ಮಾಡಲಿ. ತಾವು ಈಗ ಪರಿಹಾರವನ್ನೂ ಕೂಡ ಕೊಡದೇ ರೈತರನ್ನು ಸತಾಯಿಸುತ್ತಿದ್ದೀರಿ. ನಾನು ಈ ಮಾತನ್ನು ನೇರವಾಗಿ ಹೇಳುತ್ತಿದ್ದೇನೆ. ನಿಮಗೆ ಪರಿಹಾರ ಧನ ಕೊಡಲು ಏನಾಗಿದೆ? ಸುಪ್ರೀಂ ಕೋರ್ಟ್‌ನಲ್ಲಿ ಇದ್ದಾಗ ಇಂಟರೀಯಮ್....

ಅಧ್ಯಕ್ಷರು: ನಾನೇನು ಹೇಳುತ್ತೇನೆ ಎಂದರೆ, If you follow each other scruplously, ನನಗೆ ಬಹಳ ಸಮಯ ಉಳಿಯುತ್ತದೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಏನು ಹೇಳಿದರು ಎಂದರೆ, ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ನವರು they have preferred an appeal to Supreme Court. ಅವರದೊಂದು ಪ್ರತ್ಯೇಕ ಬೋರ್ಡ್ ಇದೆ; ನಮಗೆ ಈಗ ಇರತಕ್ಕದ್ದು ಎರಡೇ ಮಾರ್ಗ, ಮೊದಲನೆಯದು ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್‌ನವರು ಹಾಕಿರತಕ್ಕ ಅಪೀಲ್ ಅನ್ನು ವಿತ್‌ಡ್ರಾ ಮಾಡುವುದು, ಎರಡನೆಯದು ಸುಪ್ರೀಂ ಕೋರ್ಟ್‌ನಲ್ಲಿ ಏನು ಇತ್ಯರ್ಥವಾಗುತ್ತದೆಯೋ ಅದಕ್ಕೆ ಕಾಯುವುದು. ನಾನು ನನ್ನ ಎಲ್ಲಾ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್‌ನಲ್ಲಿ ಡೈರೆಕ್ಟರ್ಸ್ ಜೊತೆಗೆ ನಾನು ಮಾತನಾಡಿ....

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಕೇಸ್ ವಿತ್‌ಡ್ರಾ ಮಾಡಿಕೊಳ್ಳುತ್ತೇವೆ ಎಂದು ಹೇಳಿದರೆ ನನ್ನದೇನೂ ಅಭ್ಯಂತರ ಇಲ್ಲ.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಕೇಸ್ ವಿತ್‌ಡ್ರಾ ಮಾಡಿಕೊಳ್ಳುವಂತೆ ಬೋರ್ಡ್ ಅನ್ನು ಹೇಗೆ ಕೇಳುವುದಕ್ಕಾಗುತ್ತದೆ? It is a Board.

ಶ್ರೀ ಬಿ.ಎಸ್.ಯಡಿಯೂರಪ್ಪ: ಬೋರ್ಡ್ ಸರ್ಕಾರದ್ದೇ ಅಲ್ಲವೇ?

ಅಧ್ಯಕ್ಷರು: ಹಾಗಾಗುವುದಿಲ್ಲ, ಅದೊಂದು ಸ್ಟಾಚ್ಯುಟರಿ ಬೋರ್ಡ್.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಈ ಬೋರ್ಡ್ ಇರುವುದು ಏತಕ್ಕೆ? ರೈತರ ಮರಣ ಹೋಮ ಮಾಡುವುದಕ್ಕಾಗಿಯೇ ಇದು ಇದೆಯೇ? ಯಾವುದೋ ಉದ್ದೇಶಕ್ಕೆ ಜಮೀನನ್ನು ತೆಗೆದುಕೊಂಡು, ಆ ಉದ್ದೇಶಕ್ಕೆ ಅದನ್ನು ಉಪಯೋಗ ಮಾಡದೇ, 25 ವರ್ಷಗಳಾದರೂ ರೈತರಿಗೆ ಪರಿಹಾರವನ್ನೂ ಕೂಡ ಕೊಡದೇ, ಇವರು ಸುಪ್ರೀಂ ಕೋರ್ಟ್‌ಗೆ ಹೋಗುತ್ತಾರೆ.

ಅಧ್ಯಕ್ಷರು: ನೀವು ಹೇಳುವುದು ನಿಜ. ಆದರೆ ಈ ಬೋರ್ಡ್ ಒಂದು ಸ್ಟಾಚ್ಯುಟರಿ ಬೋರ್ಡ್. ಅವರೊಂದು ಅಪೀಲ್ ಪ್ರಿಫರ್ ಮಾಡಿದಾಗ The Board will have to take a decision about it. ಇದನ್ನೂ ಮಾಡಿಸಿ ಅಂತಲೇ ನಾನು ಮಾನ್ಯ ಮಂತ್ರಿಗಳಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಯಡಿಯೂರಪ್ಪನವರೇ, ನಾನು ಮಾತನಾಡಲಿಕ್ಕೆ ಅವಕಾಶ ಕೊಡಿ. ರೈತರ ಮರಣ ಹೋಮ ಮಾಡಲಿಕ್ಕೆ ನಾವು ಹೊರಟಿಲ್ಲ. ಇವತ್ತು ಜ್ಯುಡಿಷಿಯರಿಯಲ್ಲಿ ಇದರ ಬಗ್ಗೆ ಏನು ವಿಳಂಬವಾಗಿದೆ, ಅದಕ್ಕೆ ನಾನು ಕಾರಣನಲ್ಲ ಅಥವಾ ಕೆ.ಐ.ಎ.ಡಿ.ಬಿ. ಕಾರಣವಲ್ಲ ಅಥವಾ ರೈತರು ಕಾರಣರಲ್ಲ. ಇದು ನಮ್ಮಲ್ಲಿರುವ ಸಿಸ್ಟಮ್. ನಾನೂ ಸಹ ವಕಾಲತ್ತು ಮಾಡಿದ್ದೇನೆ. ನನ್ನ ತಂದೆಯವರು 1944ರಲ್ಲಿ ಫೈಲ್ ಮಾಡಿದ್ದ ಸೂಟ್ಸ್ ಅನ್ನು ಮೂವತ್ತು ವರ್ಷವಾದ ಮೇಲೆ ನಾನು ಮುಗಿಸಿದ್ದೇನೆ. This is the system in the country. I am helpless. We have to think over. Everybody has to think over it. ಇದರಲ್ಲಿ ಲೇಟಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. I do not deny all these things. ನಾನೇನು ಹೇಳುತ್ತಿದ್ದೇನೆ ಎಂದರೆ, ಒಂದೆರಡು ಬಾರಿ ನಾನು ಇದರ ಬಗ್ಗೆ ಮಾನ್ಯ ಕರ್ಕಿಯವರು ಹಾಗೂ ಮಾನ್ಯ ವಿಶ್ವೇಶ್ವರ ಹೆಗ್ಗಡೆಯವರ ಜೊತೆಗೆ ಚರ್ಚೆಯನ್ನೂ ಸಹಾ ಮಾಡಿದ್ದೇನೆ. ನಾನು ಅಧಿಕಾರಿಗಳನ್ನೂ ಕೂಡ ಕರೆಸಿ ಚರ್ಚೆ ಮಾಡಿದ್ದೇನೆ. ಅದರಲ್ಲೂ ಇದು ರೈತರ ಸಮಸ್ಯೆಯಾಗಿದೆ, ನಮ್ಮ ಜಿಲ್ಲೆಯ ಸಮಸ್ಯೆಯಾಗಿದೆ. ನಾನು ಪುನಃ ಇದರ ಬಗ್ಗೆ ಮತ್ತೊಮ್ಮೆ ಸಂಬಂಧಪಟ್ಟವರೆಲ್ಲರ ಮೀಟಿಂಗ್ ಅನ್ನು ಕರೆಯುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, 25 ವರ್ಷದ ಕಥೆ ಇದು. ಅವರಿಗೆ ಮಾಡಬೇಕು ಎಂದು ಮನಸ್ಸಿದ್ದರೆ ಐದು ನಿಮಿಷದಲ್ಲಿ ಇದನ್ನು ಬಗೆಹರಿಸಬಹುದು.

ಶ್ರೀ ಆರ್.ವಿ.ದೇಶಪಾಂಡೆ: ದಯವಿಟ್ಟು ನಾನು ಹೇಳುವುದನ್ನು ಕೇಳಿ. ನಾನು ನಮ್ಮ ಶಾಸಕರನ್ನು ಕರೆಸಿ ಇದರ ಬಗ್ಗೆ ಮತ್ತೊಂದು ಸಭೆ ನಡೆಸುತ್ತೇನೆ. ಕೆ.ಐ.ಎ.ಡಿ.ಬಿ. ಛೇರ್ಮನ್‌ರವರನ್ನೂ ಕೂಡ ಆ ಮೀಟಿಂಗ್‌ಗೆ ಕರೆಯುತ್ತೇನೆ. ಒಂದು ವೇಳೆ ಇದನ್ನು ವಿತ್‌ಡ್ರಾ ಮಾಡುವುದಕ್ಕೆ ಸಾಧ್ಯವಿದ್ದರೆ ಖಂಡಿತವಾಗಿಯೂ ಅದರ ಬಗ್ಗೆ ಪ್ರಯತ್ನ ನಡೆಯುತ್ತದೆ. ಮಾನ್ಯ ಕರ್ಕಿಯವರು ಹೇಳಿದ ಹಾಗೆ ಜಮೀನನ್ನು ರೈತರಿಗೆ ವಾಪಸ್ ಕೊಡಲಿಕ್ಕೆ ಸಾಧ್ಯವಿದ್ದರೆ, ಅದನ್ನೂ ಸಹಾ ಪರಿಶೀಲನೆ ಮಾಡುತ್ತೇನೆ. ನನಗೇನೂ ಇದರ ಬಗ್ಗೆ ತಕರಾರು ಇಲ್ಲ. I am very clear on that. So we will discuss with them and sort it out.

MR. SPEAKER: He is a positive man. ಅವರ ಹತ್ತಿರ ನಡೆಯುವುದಿಲ್ಲ. You do not know Mr. Visveswar Hegde. Mr. Deshpande is a very efficient Minister. ಹಾಗೆಲ್ಲಾ ನಡೆಯುವುದಿಲ್ಲ. It's all right.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಲ್ಯಾಂಡ್ ರೈತರಿಗೆ ಕೊಡುತ್ತೇವೆ ಎಂದು ಅವರು ಹೇಳಿಬಿಡಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ ನಮಗೇನು ಈಗ ತೊಂದರೆ ಎಂದರೆ, ನಾವು ಸರ್ಕಾರಕ್ಕೆ ನೀವು ಸರಿಯಿಲ್ಲ, ನೀವು ಹಾಗೆ ಮಾಡಿಲ್ಲ, ಹೀಗೆ ಮಾಡಿಲ್ಲ ಎಂದು ಹೇಳುತ್ತಿರುತ್ತೇವೆ. ಆದರೆ ತಾವು ಈಗ ಈ ರೀತಿ ಹೇಳಿದ್ದರಿಂದ, ಮಾನ್ಯ ಅಧ್ಯಕ್ಷರೇ, ನಮಗೆ ಸರ್ಟಿಫಿಕೇಟ್ ಕೊಟ್ಟಿದ್ದಾರೆ, ಆದರೆ ಈ ವಿರೋಧ ಪಕ್ಷದವರು ನಮ್ಮನ್ನು ಟೀಕೆ ಮಾಡುತ್ತಿದ್ದಾರೆ, ಅವರಿಗೆ ಬುದ್ಧಿಯಿಲ್ಲ ಅವರು ಯಾವಾಗಲೂ ವಿರೋಧವೇ ಮಾಡುತ್ತಿರುತ್ತಾರೆ ಎಂಬುದು ಬರುತ್ತದೆ. ಆದ್ದರಿಂದ ದಯವಿಟ್ಟು ಅವರಿಗೆ ಸರ್ಟಿಫಿಕೇಟ್ ಕೊಡಬೇಡಿ.

ಅಧ್ಯಕ್ಷರು: ನನಗೆ ಇರುವ ಕಷ್ಟ ಏನೆಂದರೆ, ಗುಟ್ಟು ಯಾವುದು, ಬಹಿರಂಗ ಯಾವುದು ಎನ್ನುವುದೇ ನನಗೆ ಗೊತ್ತಾಗುವುದಿಲ್ಲ. ನೀವು ಹೇಳುತ್ತೀರಿ, ಇಂಥಿಂಥವರು ಎಫಿಷಿಯೆಂಟ್ ಇದ್ದಾರೆ, ಹೇಳಿ ಪರವಾಗಿಲ್ಲ ಎಂದು. ಈಗ ಬಂದು ಇಲ್ಲಿ ಈ ಸ್ಟ್ಯಾಂಡ್ ತೆಗೆದುಕೊಳ್ಳುತ್ತೀರಿ. ಹೀಗಾದರೆ ನಾನೇನು ಮಾಡಬೇಕು ಎಂಬುದನ್ನು ಹೇಳಿ?

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರಿಗೆ ಹೆಚ್ಚೇನೂ ಕೇಳುವುದಿಲ್ಲ ಸಾರ್. ನೀವು

ದುಡ್ಡೂ ಕೊಡುವುದೂ ಬೇಡ, ದಯಮಾಡಿ ಕೇಸ್ ವಿತ್‌ಡ್ರಾ ಮಾಡಿಕೊಂಡು ಜಮೀನನ್ನು ವಾಪಸ್ ಕೊಟ್ಟುಬಿಡಿ. ಈ ಕೆಲಸ ಮಾಡುವುದಕ್ಕೆ ಇವರಿಗೇನು ಕಷ್ಟ? ಇವರು ರೈತರನ್ನು ಉದ್ಧಾರ ಮಾಡುವ ರೀತಿ ಇದೆಯೇ? ಯಾವ ಉದ್ದೇಶಕ್ಕಾಗಿ ನೀವು ಜಮೀನನ್ನು ತೆಗೆದುಕೊಂಡಿರೋ, ಆ ಉದ್ದೇಶ 25 ವರ್ಷಗಳಾದರೂ ಇನ್ನೂ ಸಫಲವಾಗಲಿಲ್ಲ. ಅಲ್ಲಿ ಯಾವುದೂ ಇಂಡಸ್ಟ್ರೀ ಬರಲಿಲ್ಲ.

ಅಧ್ಯಕ್ಷರು: ಅವರು ಮಾಡುವುದಿಲ್ಲ ಎಂದು ಹೇಳಲೇ ಇಲ್ಲ.

SRI R.V.DESHPANDE: I will be very fair. ನಾನೇನು ಹೇಳಿದೆ ಎಂದರೆ ಇಲ್ಲಿ ಬಳ್ಳಾರ್‌ಪುರ ಇಂಡಸ್ಟ್ರೀಸ್‌ಗೆ ಇಂಡಸ್ಟ್ರಿಯಲ್ ಸಾಲ್ಟ್ ಮಾಡಲಿಕ್ಕೆ ಲ್ಯಾಂಡ್ ಅಕ್ವೈರ್ ಮಾಡಲಾಯಿತು. ಆ ಇಂಡಸ್ಟ್ರೀಯವರು ಸಾಲ್ಟ್ ಮಾಡಲಿಕ್ಕೆ ಆಗಲಿಲ್ಲ. They surrendered the land. ಅದರ ನಂತರ ಮುರ್ಡೇಶ್ವರ ಫುಡ್ಸ್‌ಗೆ ಕೊಟ್ಟರು. ಈಗೇನಾಗಿದೆ ಎಂದರೆ, ಸುಪ್ರೀಂ ಕೋರ್ಟ್‌ನಲ್ಲಿ ಅಕ್ವಾ ಕಲ್ಚರ್ ಅನ್ನೂ ಸಹ ಬ್ಯಾನ್ ಮಾಡಬೇಕೆಂದು ಡಿಸಿಷನ್ ಆಯಿತು. ಆದ್ದರಿಂದ ಅವರು ಈಗ ನಾವು ಅಕ್ವಾ ಕಲ್ಚರ್ ಮಾಡಲಿಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. That decision of the Supreme Court again has been stayed. Murdeshwar Foods they have to pay the compensation. ನಮ್ಮ ಸರ್ಕಾರ ಬರುವುದಕ್ಕಿಂತ ಮುಂಚೆ 1994ರಲ್ಲಿ ಮುರ್ಡೇಶ್ವರ ಫುಡ್ಸ್‌ಗೆ ಈ ಲ್ಯಾಂಡ್‌ನ ಪೊಸಿಷನ್ ಕೊಟ್ಟಿದ್ದಾರೆ. As per the Agreement, Murdeshwar Foods have to pay the compensation which is being determined by the Supreme Court. ಇಂತಹ ಕಾಂಪ್ಲಿಕೇಷನ್ ಇದ್ದಾಗ ನಾನೇನು ಹೇಳುತ್ತಿದ್ದೇನೆ ಎಂದರೆ, ನಾನು ಎರಡು ವಿಚಾರ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಮೀಟಿಂಗ್ ಮಾಡಿ, ಒಂದು ವೇಳೆ ಕೇಸ್ ವಿತ್‌ಡ್ರಾ ಮಾಡಲಿಕ್ಕೆ ಕಾಯಿದೆ ಬದ್ಧವಾಗಿ, ನ್ಯಾಯಬದ್ಧವಾಗಿ ಸಾಧ್ಯವಿದ್ದರೆ ಅದನ್ನೂ ಪರಿಶೀಲನೆ ಮಾಡುತ್ತೇನೆ. ಅಥವಾ ಲ್ಯಾಂಡ್ ವಾಪಸ್ ಕೊಡಲಿಕ್ಕೆ ಸಾಧ್ಯವಾದರೆ, ಅದನ್ನೂ ಕೂಡ ಕೊಡುವುದಕ್ಕೆ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದೇನೆ. What more you want from me?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ನೀವೇ ಹೇಳಿ, ನಾನು ನಿಮಗೆ ಇಷ್ಟೇ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ಜಮೀನು ವಾಪಸ್ ಕೊಡುವುದಕ್ಕೆ ಇವರಿಗೆ ಕಷ್ಟವೇನು? ನಾವು ಜಮೀನು ತೆಗೆದುಕೊಳ್ಳುವುದಿಲ್ಲ ಎಂದು ರೈತರು ಹೇಳಿದರೆ ನಿಮಗೆ ಕಷ್ಟವಾಗುತ್ತದೆ.

ಅಧ್ಯಕ್ಷರು: ಅದನ್ನೂ ಕೂಡ ಅವರು ಮನಸೋ ಇಚ್ಛೆ ಮಾಡುವುದಕ್ಕೆ ಬರುವುದಿಲ್ಲ. ಕಾನೂನು ರೀತ್ಯವೇ ಮಾಡಬೇಕಾಗುತ್ತದೆ. ಅವರು ಮಾಡುವುದಿಲ್ಲ ಎನ್ನುವ ಮಾತನ್ನು

ಹೇಳುತ್ತಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಹಾಗಿದ್ದರೆ ಆ ಇಂಡಸ್ಟ್ರೀಸ್‌ಗೆ ಬೇಕೋ ಬೇಡವೋ ಎಂದು ಗೊತ್ತಿಲ್ಲದೇ ಲ್ಯಾಂಡ್ ಅಕ್ವೈರ್ ಏಕೆ ಮಾಡಿಕೊಂಡಿರಿ? ಆ ರೈತನ ಜಮೀನು ಬಂಜರಾಯಿತು, ಬೆಳೆಯೂ ಬೆಳೆಯಲಿಲ್ಲ, ಉಪ್ಪನ್ನೂ ತಯಾರು ಮಾಡಲಿಲ್ಲ. 25 ವರ್ಷದಿಂದ ಸಾಯುತ್ತಿರುವ ರೈತನಿಗೆ ಜಮೀನು ವಾಪಸ್ ಕೊಡಿಸಿ.

ಅಧ್ಯಕ್ಷರು: ಈ ಘಳಿಗೆಯಲ್ಲಿ ಇಲ್ಲಿಯೇ ಕೊಟ್ಟುಬಿಡುತ್ತೇನೆಂದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇಲ್ಲಿಯೇ ಕೊಡುವುದು ಬೇಡ, ಆದರೆ ಮಾನ್ಯ ಮಂತ್ರಿಗಳು ಅಶ್ಯೂರೆನ್ಸ್ ಕೊಡಲಿ.,

ಅಧ್ಯಕ್ಷರು: ಮಾನ್ಯ ಮಂತ್ರಿಗಳು ತಾವು ಕೇಳಿದ ರೀತಿಯಾಗಿ ಅಶ್ಯೂರೆನ್ಸ್ ಕೊಟ್ಟಿದ್ದಾರಲ್ಲವೇ?

ಶ್ರೀ ಬಿ.ಎಸ್.ಯಡಿಯೂರಪ್ಪ: ಕಾನೂನಿನಲ್ಲಿ ಅವಕಾಶ ಇದ್ದರೆ ವಿತ್‌ಡ್ರಾ ಮಾಡುತ್ತೇವೆ ಎಂದು ಹೇಳಿದರು. ಎಲ್ಲಿದೆ ಕಾನೂನು? ಕಾನೂನನ್ನು ಯಾರು ಮಾಡಿಕೊಂಡಿದ್ದುದು?

(ಗೊಂದಲ)

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಕಾನೂನಿನಲ್ಲಿ ಅವಕಾಶ ಇದ್ದರೆ ಮಾಡಿಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಆ ಕಾನೂನಿಗೆ ಯಾವ ರೀತಿ ಅವಕಾಶ ಬೇಕೋ ಅದಕ್ಕೆ ತಿದ್ದುಪಡಿ ಮಾಡಿ ಸದನಕ್ಕೆ ತನ್ನಿ. ನಾವು ಅದನ್ನು ಪಾಸ್‌ಮಾಡಿ ಕೊಡುತ್ತೇವೆ. ರೈತರಿಗೆ ಕೊಡುವುದಕ್ಕೆ ಸರ್ಕಾರಕ್ಕೆ ಏನು ಕಷ್ಟ? ಅದು ಅಷ್ಟೇ ಅಲ್ಲ....

ಅಧ್ಯಕ್ಷರು: ಈಗ ಅಲ್ಲಿರತಕ್ಕಂಥ ಜಮೀನನ್ನು ವಾಪಸ್ಸು ಮಾಡುವುದಕ್ಕೆ ಸಾಧ್ಯವಾದರೆ ಮಾನ್ಯ ಮಂತ್ರಿಗಳೇ ತಮ್ಮ ಸ್ವಂತ ವಿವೇಚನೆಯನ್ನು ಖರ್ಚು ಮಾಡಿ ಮಾಡುತ್ತಾರೆ. ಒಂದು ವೇಳೆ ಕಾನೂನಿನಲ್ಲಿ ತೊಡಕು ಇದ್ದರೆ, ನಿಮ್ಮೆಲ್ಲರ ಸಹಾಯವನ್ನು ಅಪೇಕ್ಷೆ ಮಾಡಿ ಕಾನೂನನ್ನು ಸಡಿಲಗೊಳಿಸಿ ಆ ರೈತರಿಗೆ ಮಾಡುತ್ತಾರೆ. ಇದು ಆಗಬಹುದಲ್ಲವೇ?

ಡಾ॥ ಎಂ.ಪಿ.ಕರ್ಕಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಎರಡು ಆಪ್ಷನ್‌ನ್ನು ಹೇಳುತ್ತಿದ್ದಾರೆ. ಇದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು ಅಥವಾ ನಿರ್ಣಯ ಆಗುವವರೆಗೆ ಕಾಯಬೇಕು. ಸರ್ಕಾರದವರಿಂದ ಆ ರೈತರಿಗೆ ಇಂಟರಿಮ್ ರಿಲೀಫ್ ಕೊಡಲಿಕ್ಕೆ ತೊಂದರೆ ಏನಿದೆ?....

MR. SPEAKER: When they are willing to settle the matter once and for all. Why do you want to settle for interim relief? If you are asking for any interim relief, you don't have final settlement. If you want interim relief, there is nothing like your interim relief and you are hinting final settlement could be delayed. I am urging upon you to go in for final settlement. Let us close this matter.

ಶ್ರೀ ವಿಶ್ವೇಶ್ವರ ಹೆಗ್ಗಡೆ: ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ಹೇಳುತ್ತೇನೆ. ಕೆ.ಐ.ಎ.ಡಿ.ಬಿ.ಯವರು ಕೊಂಕಣ ರೈಲ್ವೆಗೆ ಇದೇ ಭೂಮಿಯ ಸ್ವಲ್ಪ ಭಾಗವನ್ನು ನೀಡಿದರೂ ಸರ್ಕಾರ ಒಂದು ಎಕರೆ ಜಮೀನಿಗೆ ಸುಮಾರು 53 ಸಾವಿರ ರೂಪಾಯಿ ಪರಿಹಾರವನ್ನಾಗಿ ತೆಗೆದುಕೊಂಡರು.

ಅಧ್ಯಕ್ಷರು: ನಿಮಗೆ ಜಮೀನನ್ನು ವಾಪಸ್ಸು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ

ಶ್ರೀ ವಿಶ್ವೇಶ್ವರ ಹೆಗ್ಗಡೆ: ಮಾನ್ಯ ಅಧ್ಯಕ್ಷರೆ, ಸರ್ಕಾರ ಹಣ ತೆಗೆದುಕೊಳ್ಳುವಾಗ ಒಂದು ಎಕರೆ ಜಮೀನಿಗೆ 53 ಸಾವಿರ ರೂಪಾಯಿ ತೆಗೆದುಕೊಳ್ಳುವುದಕ್ಕೆ ಕಾಳಜಿ ವಹಿಸುತ್ತದೆ. ಅದೇ ರೀತಿ ರೈತರಿಗೆ ಪರಿಹಾರ ಕೊಡುವುದರ ಬಗ್ಗೆ ಕಾಳಜಿ ವಹಿಸದೆ ನಿರ್ಲಕ್ಷ್ಯ ಧೋರಣೆ ತಾಳಬಾರದು ದಯವಿಟ್ಟು ಈಗ ಸರ್ಕಾರ, ಮಾನ್ಯ ಮಂತ್ರಿಗಳು ಏನು ಒಪ್ಪಿಕೊಂಡಿದ್ದಾರೆ ಅದನ್ನು ಟೈಮ್ ಬೌಂಡ್‌ನಲ್ಲಿ....

ಅಧ್ಯಕ್ಷರು: ಸರಿ, ಈ ಎಲ್ಲಾ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸಮಗ್ರವಾಗಿ ಅವರು ಕೆಲಸ ಮಾಡುತ್ತಾರೆ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, at the earliest I will convene a meeting. ಆದಷ್ಟು ಬೇಗ ಮೀಟಿಂಗ್ ಕರೆಯುತ್ತೇನೆ. ಆ ಮೀಟಿಂಗ್‌ಗೆ ತಮ್ಮೆಲ್ಲರನ್ನು ಸಹ ಕರೆಯುತ್ತೇನೆ. ಇದರ ಬಗ್ಗೆ ಒಂದು ನಿರ್ಣಯ ಮಾಡುತ್ತೇನೆ. ಫಾನೂ ಸಹ ರೈತರ ಜೊತೆ ಮಾಲೀಕರ ಜೊತೆ ಸಂಪರ್ಕ ಸಾಧಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ತಾವೂ ಸಹ ರೈತರ ಜೊತೆಯಲ್ಲಿ, ಮಾಲೀಕರ ಜೊತೆಗೆ ಸಂಪರ್ಕ ಸಾಧಿಸಿರಿ. ಎಸ್.ಪಿ.ಕಾಮತ್‌ರವರು ನನ್ನ ಜೊತೆ ಹಲವಾರು ಬಾರಿ ಮಾತನಾಡಿದ್ದಾರೆ. He is dealing with the case. ಒಂದು ವೇಳೆ ರೈತರಿಗೆ ಜಮೀನು ವಾಪಸ್ಸು ಬೇಕಾದರೂ ಸಹ I will find out a way if possible. I have noting in this. I will settle the matter.

(3) ಅರ್ಧಗಂಟೆ ಕಾಲಾವಧಿ ಚರ್ಚೆ

ವಿಷಯ: ಬೆಂಗಳೂರು ನಗರದ ಮೇಲು ಸೇತುವೆ ನಿರ್ಮಾಣದ ಕಾರ್ಯ.

+ ಶ್ರೀ ಎನ್.ರಾಜಣ್ಣ (ಭಾರತೀನಗರ): ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಮೇಲು ಸೇತುವ ನಿರ್ಮಾಣದ ಬಗ್ಗೆ ಅರ್ಧಗಂಟೆ ಕಾಲಾವಧಿ ಚರ್ಚೆಯಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಮೊದಲು ನಾನು ಕೃತಜ್ಞತೆಗಳನ್ನರ್ಪಿಸುತ್ತೇನೆ. ಬೆಂಗಳೂರು ನಗರದಲ್ಲಿ ಮೇಲುಸೇತುವೆ ಮಾಡುವ ಬಗ್ಗೆ ಬಹಳ ಕೂಲಂಕಷವಾಗಿ ಚರ್ಚೆ ಮಾಡಿ ಆದಷ್ಟು ಬೇಗನೆ ಇದು ಜಾರಿಗೆ ಬರುವ ಹಾಗೆ ಮಾಡಬೇಕು. ಎರಡನೆಯದು, ಲಾರಿಗಳು ಓಡಾಡುವುದಕ್ಕೆ ಔಟರ್ ರಿಂಗ್ ರೋಡನ್ನು ಆದಷ್ಟು ಬೇಗನೆ ಜಾರಿ ಮಾಡಬೇಕು. ಮೂರನೆಯದು, ಇನ್ನರ್ ರಿಂಗ್ ರೋಡ್ ಆದಷ್ಟು ಬೇಗನೆ ಜಾರಿಗೆ ಬರಬೇಕು ಎನ್ನುವ ಈ ಮೂರು ವಿಷಯಗಳ ಬಗ್ಗೆ ನಾನು ಪ್ರಸ್ತಾಪ ಮಾಡುತ್ತೇನೆ. ಈ ಬೆಂಗಳೂರು ನಗರ ನಮ್ಮ ಕರ್ನಾಟಕ ರಾಜ್ಯದ ರಾಜಧಾನಿಯಾಗಿದೆ - ಈ ರಾಜಧಾನಿ ಜನಸಂಖ್ಯೆಯ ಒತ್ತಡದಿಂದ ನರಳುತ್ತಿದೆ. ಎರಡನೆಯದಾಗಿ ಬೆಂಗಳೂರು ನಗರದಲ್ಲಿ ವಾಹನಗಳ ಓಡಾಟದಿಂದ ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. Inflation rate in Bangalore City is 70%, Compared to other States Maharashtra is only 40%, Tamilnadu 35%, where-as in Bangalore City it is 70%. ಹಿಂದೆ 80ರಿಂದ 100 ಅಡಿ ಜಾಗದಲ್ಲಿ ಒಂದು ಕುಟುಂಬ ಇದ್ದು ಅವರು ಒಂದು ವಾಹನ ಇಟ್ಟುಕೊಂಡಿರುತ್ತಿದ್ದರು. ಈಗ ಅದೇ ಜಾಗದಲ್ಲಿ 40ರಿಂದ 50 ಮನೆಗಳು ಇನ್ನು ಕೆಲವು ಕಡೆ 100 ಮನೆಗಳು ಆಗಿವೆ. ಒಂದೊಂದು ಕುಟುಂಬ ಕಡಿಮೆ ಎಂದರೆ 2ರಿಂದ 3 ವಾಹನಗಳನ್ನು ಇಟ್ಟುಕೊಂಡಿದ್ದಾರೆ. ಇವತ್ತು ಬೆಂಗಳೂರು ನಗರದಲ್ಲಿ 12 ಲಕ್ಷ ವಾಹನಗಳು ದಿನಂಪ್ರತಿ ಓಡಾಡುತ್ತಿವೆ. ಆರ್.ಟಿ.ಓ. ಕಛೇರಿಯಲ್ಲಿ ಒಂದು ದಿನಕ್ಕೆ 500 ವಾಹನಗಳು ರಿಜಿಸ್ಟರ್ ಆಗುತ್ತಿವೆ. ತಿಂಗಳಿಗೆ ಸುಮಾರು 12 ಸಾವಿರ ವಾಹನಗಳು ಹೊಸದಾಗಿ ರಸ್ತೆಗಳಲ್ಲಿ ಓಡುತ್ತವೆ. ಈ ಮೇಲುಸೇತುವೆ ಕೆಲಸವು 4 ಸಲ ಮುಂದಕ್ಕೆ ಹೋಯಿತು ಈಗ ನಮ್ಮ ಸರ್ಕಾರ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ಫ್ಲೈಓವರ್ ರಸ್ತೆ ಮಾಡುವುದಕ್ಕೆ 1983ರಲ್ಲಿ ಫೌಂಡೇಷನ್ ಸ್ಟೋನ್ ಹಾಕಿದರು. ಆದರೆ ಕೆಲಸ ಪ್ರಾರಂಭವಾಗಲಿಲ್ಲ. ಪುನಃ 1991-92ರಲ್ಲಿ ಮೇಲು ಸೇತುವೆ ನಿರ್ಮಾಣಕ್ಕೆ ಫೌಂಡೇಷನ್ ಸ್ಟೋನ್ ಹಾಕಿದರು. ಆಗಲೂ ಸಹ ಕೆಲಸ ಪ್ರಾರಂಭವಾಗಿಲ್ಲ. 1-11-1993ರಲ್ಲಿ ಹಿಂದಿನ ಸರ್ಕಾರ ಫೌಂಡೇಷನ್ ಸ್ಟೋನ್ ಹಾಕಿ ಈ ಮೇಲು ಸೇತುವೆ ಕೆಲಸ ಪ್ರಾರಂಭವಾಗುತ್ತದೆಂದು ಹೇಳಿದರು. ಆದರೂ ಸಹ ಕೆಲಸ ಪ್ರಾರಂಭವಾಗಲಿಲ್ಲ. I must be thankful to Mr. J.H.Patel Hon'ble Chief Minister and his colleagues for their efforts taken. ಆದರೆ 1996ರಲ್ಲಿ ನಮ್ಮ ಸರ್ಕಾರದ ಹಿಂದಿನ ಮುಖ್ಯಮಂತ್ರಿಗಳು ಹಾಗೂ

ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ದೇವೇಗೌಡರು - ಸಿರ್ಸಿ ವೃತ್ತದಿಂದ ಟೌನ್‌ಹಾಲ್‌ವರೆಗೆ ಮೇಲು ಸೇತುವೆ ಆಗಬೇಕೆಂದು ಅದಕ್ಕೆ ಫೌಂಡೇಷನ್ ಸ್ಟೋನ್ ಮಾಡಿದ್ದು, ಈಗ 25 ಭಾಗ ಕೆಲಸ ನಡೆಯುತ್ತಿದೆ. ಈ ಮೇಲು ಸೇತುವೆ ಕೆಲಸವು 94 ಕೋಟಿ ರೂಪಾಯಿಗಳಿಗೆ ಟೆಂಡರ್ ಆಗಿದೆ. ಆದರೆ ಈ ಮೇಲು ಸೇತುವೆ ಕೆಲಸವನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗನೆ ಮಾಡಿ ಮುಗಿಸಬೇಕು. I request the Hon' Minister to call the contractors and to build one more ramp connecting Victoria Hospital ವಾಹನಗಳ ಒತ್ತಡದಿಂದ, ಜನಸಂಖ್ಯೆಯ ಒತ್ತಡದಿಂದ ಕನ್‌ಜೆಸ್ಟೆಡ್ ಆಗಿ ಬಹಳ ತುರ್ತಾಗಿರತಕ್ಕಂಥ ರೋಗಿಯನ್ನು ವಿಕ್ಟೋರಿಯ ಆಸ್ಪತ್ರೆಯೊಳಗೆ ತೆಗೆದುಕೊಂಡು ಹೋಗಬೇಕಾದರೆ ಅರ್ಧ ಗಂಟೆ ಆ ಗೇಟಿನಲ್ಲಿ ಕಾಯುವ ಪರಿಸ್ಥಿತಿ ಬಂದಿದೆ. ಮತ್ತು ಸಾಮಾನ್ಯ ರೋಗಿಗಳು ಆಸ್ಪತ್ರೆಯ ಒಳಗೆ ಹೋಗುವುದಕ್ಕೆ ಸರಿಯಾದಂಥ ದಾರಿಯಿಲ್ಲದೆ ಒದ್ದಾಡುತ್ತಿದ್ದಾರೆ. ಅದು ತಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ವಿಕ್ಟೋರಿಯಾ ಆಸ್ಪತ್ರೆಗೆ ಅಲ್ಲಿ ಗೇಟಿನ ಮುಖಾಂತರ ಹೃದಯ ರೋಗದವರು ಹೋಗಬೇಕಾಗುತ್ತದೆ, ನಂತರ ಅಪಘಾತಕ್ಕೆ ಈಡಾದವರು ಹೋಗಬೇಕಾಗುತ್ತದೆ ಮತ್ತು ಪ್ರಸೂತಿಗಾಗಿ ಹೋಗುವ ಗರ್ಭಿಣಿ ಸ್ತ್ರೀಯರು, ಪ್ರಸವ ವೇದನೆಯಿಂದ ನರಳುತ್ತಿರುವ ಆ ತಾಯಂದಿರು ಆಸ್ಪತ್ರೆಯ ಗೇಟಿನ ಬಳಿ ಅರ್ಧ ಗಂಟೆ ಅಥವಾ ಒಂದು ಗಂಟೆ ನಿಂತು ನಂತರ ಆಸ್ಪತ್ರೆಯ ಒಳಗಡೆ ಹೋಗುವುದಕ್ಕಾಗುತ್ತದೆಯೇ ಎಂಬುದನ್ನು ನಾವೆಲ್ಲಾ ಸೀರಿಯಸ್ ಆಗಿ ಚಿಂತನೆ ಮಾಡಬೇಕು. ಆ ತಾಯಿ ಹೆರಿಗೆ ಆಸ್ಪತ್ರೆಯ ಒಳಗಡೆಗೆ ಹೋಗುತ್ತಾಳೆ. ಆಕೆ ಬೇರೆ ಕಡೆಗೆ ಅಂದರೆ ಸಿನೇಮಾ ಥಿಯೇಟರ್‌ಗೆ ಹೋಗಿ ಕುಳಿತುಕೊಳ್ಳುವುದಾದರೆ ಪರವಾಗಿಲ್ಲ. ಕಬ್ಬನ್‌ಪಾರ್ಕ್‌ಗೆ ಹೋಗಿ ಕುಳಿತುಕೊಳ್ಳುವುದಾದರೆ ಪರವಾಗಿಲ್ಲ. ಆ ಗರ್ಭಿಣಿ ತಾಯಿಯ ಕಷ್ಟವನ್ನು ಅರ್ಥ ಮಾಡಿಕೊಂಡು ಈ ಕೆಲಸ ಜರೂರಾಗಿ ಆಗಬೇಕೆಂದು ನಾನು ಸಂಬಂಧಪಟ್ಟ ಮಂತ್ರಿಗಳಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಆ ಮೇಲು ಸೇತುವೆಯಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ ಸೆಪರೇಟ್ ಆಗಿ ಒಂದು ರಸ್ತೆಯನ್ನು ಕನೆಕ್ಟ್ ಮಾಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬೆಂಗಳೂರಿಗೆ ಸಿಟಿಗೆ ಏಳು ಮೇಲು ಸೇತುವೆಗಳನ್ನು ಮಾಡುತ್ತಿದ್ದಾರೆ. ಅವು ಯಾವುವು ಎಂದರೆ

1) Sirsi Circle to Town Hall,

2) Integrated Sub Way from Hudson Circle to Town Hall,

3) Tracks Grade Separation and Flyover at Richmond Circle.

4) Corridar improvement from Mahasrani's College to Rajajinagar, Entrance

5) Flyover at Trinity Circle.

6) Flyover from Subhashnagar to Shanthala Silk House & Sarees Magadi Road,

7) Fly over at Mekhri Circle.

ಈ 7 ಮೇಲು ಸೇತುವೆಗಳಿಗೆ ಸುಮಾರು 384 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಈಗ ಪ್ರಾರಂಭ ಮಾಡಿರುವ ಒಂದು ಮೇಲು ಸೇತುವೆಗೆ 94 ಕೋಟಿ ರೂಪಾಯಿ ಖರ್ಚಾಗುತ್ತಿದ್ದು, ಈಗಾಗಲೇ ಶೇಕಡ 30ರಷ್ಟು ಕೆಲಸ ಆಗಿದೆ. ಈ 384 ಕೋಟಿ ರೂಪಾಯಿ ಹಣವನ್ನು ಮೇಲು ಸೇತುವೆ ಮಾಡಲು ಯಾರು ಒದಗಿಸುತ್ತಾರೆ. ಈ ಮೇಲು ಸೇತುವೆಗಳ ಕೆಲಸ ಕಾರ್ಪೊರೇಷನ್‌ನ ಸಹಾಯದಿಂದ ಆಗುತ್ತದೆಯೇ ಅಥವಾ ಮೆಗಾಸಿಟಿ ಪ್ರಾಜೆಕ್ಟ್‌ನಿಂದ ಈ ಕೆಲಸ ಆಗುತ್ತದೆಯೇ ಅಥವಾ ಖಾಸಗಿಯವರಿಗೆ ಈ ಮೇಲು ಸೇತುವೆಗಳ ಕೆಲಸವನ್ನು ಕೊಟ್ಟು ಆದಷ್ಟು ಬೇಗ ಈ ಕೆಲಸವನ್ನು ಮುಗಿಸುತ್ತಾರೆಯೇ? ಈ ಮೂರು ಅಂಶಗಳಿಗೆ ಸರ್ಕಾರದ ವತಿಯಿಂದ ನನಗೆ ಸರಿಯಾದಂಥ ಉತ್ತರ ಸಿಗಬೇಕು. ಕಾರ್ಪೊರೇಷನ್‌ನ ವತಿಯಿಂದ ಈ ಮೇಲು ಸೇತುವೆಗಳ ಕೆಲಸಕ್ಕೆ ಹಣ ಸಹಾಯ ಸಿಗುತ್ತದೆಂದು ಸರ್ಕಾರವೇನಾದರೂ ನಂಬಿಕೊಂಡರೆ ಬಹಳ ಕಷ್ಟವಾಗುತ್ತದೆ. Corporation is Bankrupt. Gentleman in the Rank nothing in the bank. ಕಾರ್ಪೊರೇಷನ್‌ನಿಂದ ಮಾತ್ರ ಹಣಸಹಾಯ ಸಿಗುತ್ತದೆಂದು ಸರ್ಕಾರ ನಂಬಿಕೊಳ್ಳುವುದು ಬೇಡ. ಅಲ್ಲಿ ಹಣದ ಅಭಾವ ಬಹಳ ಇದೆ. The Corporation was in a very worst condition.

MR. SPEAKER: Was it bankrupt when you were there in the Corporation?

SRI N.RAJANNA: I have tried my level best to improve it, myself and Mr. Suresh Kumar.

MR. SPEAKER: So, you left and came.

SRI N.RAJANNA: No, no. When we left Rs.15 crores was in balance.

MR. SPEAKER: Four of us, you came.

ಶ್ರೀ ಎನ್.ರಾಜಣ್ಣ: ಮಾನ್ಯ ಅಧ್ಯಕ್ಷರೆ, ನಾನು, ಶ್ರೀ ಸುರೇಶ್‌ಕುಮಾರ್ ಮತ್ತು ನನ್ನ ಇನ್ನೂ ಕೆಲವು ಗೆಳೆಯರು ಆ ಕಾರ್ಪೊರೇಷನ್‌ನ್ನು ಬಿಟ್ಟು ಬರುವಾಗ ಕಾರ್ಪೊರೇಷನ್‌ನಲ್ಲಿ 15 ಕೋಟಿ ರೂಪಾಯಿ ಬ್ಯಾಲೆನ್ಸ್ ಇತ್ತು.

MR. SPEAKER: You did not make the Corporation bankrupt.

SRI N.RAJANNA: No, never Sir. I am a self-made man. I am for city, for the State, for the Country. Not the country for me, I am for the country. There are many Hon. MLAs here. And when I became MLA-there were reporters whom I must be thankful, they have written 'Is it possible to replace one more Rajanna in the Bangalore City Corporation'? ಅವರು ಒಂದು ಮಾತನ್ನು ಬರೆದಿದ್ದರು, ಅದು ಏನೆಂದರೆ, We used to fight for the good causes. ಏಕೆಂದರೆ, ನಾನು ಬೆಂಗಳೂರು ನಗರದಲ್ಲಿಯೇ ಹುಟ್ಟಿದ್ದೇನೆ. ನಮ್ಮ ತಾತ, ಮುತ್ತಾತ 400 ವರ್ಷಗಳಿಂದ ಹಿಂದಿನಿಂದಲೂ ಬೆಂಗಳೂರಿನಲ್ಲಿರುವವರು. ನಾವುಗಳು ಬೆಂಗಳೂರು ನಗರದ ಬಗ್ಗೆ ನಾನು ಚಿಂತನೆಯನ್ನು ರಾತ್ರಿಯ ವೇಳೆಯಲ್ಲಿ ಮಾಡುತ್ತಿದ್ದರೆ ನನಗೆ ಅಳು ಬರುತ್ತದೆ. Once upon a time we used to call this a Garden City, Pensioner's Paradise City. Now it is a poisonous city. Because of there 12 lakhs vehicles. ಸತ್ಯಹರಿಶ್ಚಂದ್ರನ ಕಾಲದಲ್ಲಿ ಯಾರೂ ಸಹ ಪಾಪವನ್ನೇ ಮಾಡುತ್ತಿರಲಿಲ್ಲವಂತೆ, ಏಕೆಂದರೆ ಅವರ ಕಾಲದಲ್ಲಿ ಸುಭೀಕ್ಷವಾಗಿ ಎಲ್ಲಾ ಜನರಿಗೂ ಶುದ್ಧವಾದಂತಹ ನೀರು ಸಿಗುತ್ತಿತ್ತು, ಮಳೆಯು ಕಾಲ ಕಾಲಕ್ಕೆ ಆಗುತ್ತಿತ್ತು. ಶುದ್ಧವಾದಂತಹ ಗಾಳಿಯೂ ಸಹ ಮನುಷ್ಯನಿಗೆ ಮುಖ್ಯವಾದುದು. ಅದೂ ಸಹ ಚೆನ್ನಾಗಿ ಸಿಗುತ್ತಿತ್ತು. ಆದುದರಿಂದ ಯಾರೂ ತಪ್ಪು ಮಾಡುತ್ತಿರಲಿಲ್ಲ. ಆದ್ದರಿಂದ ಅವರುಗಳೆಲ್ಲರೂ ಸತ್ತ ಮೇಲೆ ಡೈರಕ್ಟ್ ಆಗಿ ಕೈಲಾಸಕ್ಕೆ ಹೋಗುತ್ತಿದ್ದರು, ಆದರೆ ಈಗ ನಾವುಗಳೆಲ್ಲರೂ ಸತ್ತ ಮೇಲೆ ಯಮಲೋಕಕ್ಕೆ ಹೋಗುತ್ತಿದ್ದೇವಂತೆ, ಅದರ ಬಗ್ಗೆ ಕಥೆಯಲ್ಲಿ ಕೇಳಿದ್ದೇನೆ. ಆದರೆ ಇವತ್ತು ಗಾಳಿ ಕೆಟ್ಟು ಹೋಗಿದೆ, ನೀರು ಕೆಟ್ಟು ಹೋಗಿದೆ, ನಾವು ಮಾಡುವಂತಹ ಕೆಲಸಗಳೂ ಕೂಡ ಕೆಟ್ಟು ಹೋಗಿದೆ.

ಶ್ರೀ ಎಂ.ಶ್ರೀನಿವಾಸ್ (ಉತ್ತರಳ್ಳಿ): ಮಾನ್ಯ ಅಧ್ಯಕ್ಷರೇ, ಮಾನ್ಯ ಎಸ್.ರಾಜಣ್ಣನವರು ಬಹಳ ಚೆನ್ನಾಗಿ ಬೆಂಗಳೂರಿನ ಬಗ್ಗೆ ಮಾತನಾಡುತ್ತಿದ್ದಾರೆ ಅದು ನನಗೆ ಬಹಳ ಸಂತೋಷವಾಗಿದೆ. ತಮ್ಮ ಮುಖಾಂತರ ರಾಜಣ್ಣನವರಿಗೆ ಒಂದು ಮಾತನ್ನು

ಹೇಳುವುದೇನೆಂದರೆ, ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬೆಂಗಳೂರಿನ ಬಗ್ಗೆ ಎಷ್ಟು ಕಳಕಳಿಯಿಂದ ಹೇಳುತ್ತಿದ್ದೀರೋ, ದಿನಾ ಬೆಳಿಗ್ಗೆ ಬೆಂಗಳೂರಿನಲ್ಲಿ ಮನೆ, ಬಿಲ್ಡಿಂಗ್‌ಗಳನ್ನು ಒಡೆಯುತ್ತಿದರಲ್ಲಾ ಅದನ್ನು ಏಕೆ ನಿಲ್ಲಿಸಬಾರದೆಂದು ಸರ್ಕಾರಕ್ಕೆ ಹೇಳಿ.

ಶ್ರೀ ಎಸ್.ರಾಜಣ್ಣ: ಮಾನ್ಯ ಅಧ್ಯಕ್ಷರೇ, ನಮ್ಮ ಮಂತ್ರಿಗಳು ಅದಕ್ಕೆ ಪ್ರತ್ಯೇಕವಾಗಿ ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು: ಈಗ ಮೇಲೂ ಸೇತುವೆಗಳಿಗೆ ಸಂಬಂಧಿಸಿದಂತೆ ಈ ಸದನದಲ್ಲಿ ಬಂದಿದ್ದ ಪ್ರಶ್ನೆಗೆ ಉತ್ತರಿಸುವಂತಹ ವೇಳೆಗೆ ಇದು ಬಹಳ ಪ್ರಾಮುಖ್ಯವಾದಂಥದ್ದು ಎಂದು ಹೇಳಿ ಅರ್ಧ ಗಂಟೆಯ ಚರ್ಚೆಗೆ ತೆಗೆದುಕೊಂಡಿದ್ದೇವೆ. ತಾವು ತಮ್ಮ ಅಭಿಪ್ರಾಯಗಳನ್ನೆಲ್ಲಾ ವ್ಯಕ್ತಪಡಿಸಿದ್ದೀರಿ, ಇನ್ನು ಒಂದಿಬ್ಬರಿಗೆ ಮಾತನಾಡುವುದಕ್ಕೆ ಒಂದೊಂದು ನಿಮಷಗಳು ಮಾತನಾಡುವುದಕ್ಕೆ ಕಾಲಾವಕಾಶವನ್ನು ಕೊಡಬೇಕು. ತಾವು ಪ್ರಧಾನವಾಗಿ ಮಾಡಬೇಕಾದಂತಹ ವಿಷಯಗಳನೆಲ್ಲಾ ಪ್ರಸ್ತಾಪ ಮಾಡಿಬಿಟ್ಟಿರುತ್ತೀರಿ, ಸ್ವಲ್ಪ ಬೇಗ ಮಾತನಾಡಿ ಮುಗಿಸಿದರೆ ಇನ್ನೂ ಇಬ್ಬರು ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಎಸ್.ರಾಜಣ್ಣ: ಬೆಂಗಳೂರಿನಲ್ಲಿರತಕ್ಕಂತಹ 12 ಲಕ್ಷ ವಾಹನಗಳ ಒತ್ತಡದಿಂದ - lead oxide, carbon monoxide - it is very dangerous to human beings ಇವತ್ತು 250 ಜನ ಪೊಲೀಸ್‌ನವರು ಈ ಕಾರ್ಬನ್ ಮನೋಆಕ್ಸೈಡ್, ಲೆಡ್‌ಆಕ್ಸೈಡ್ ಜಾಸ್ತಿಯಾಗಿ ಆಸ್ಪತ್ರೆ ಸೇರುತ್ತಿದ್ದಾರೆ. ಮನುಷ್ಯನಿಗೆ ಊಟ ಇಲ್ಲದೇ ಇದ್ದರೂ ಸಹ ವರ್ಷಗಳು ಬದುಕುತ್ತಾರೆ. ಉದಾಹರಣೆಗೆ ಋಷಿಗಳು ಊಟ ಇಲ್ಲದೇ ವರ್ಷಗಟ್ಟಲೆ ಬದುಕುತ್ತಿದ್ದರು. ನೀರು ಇಲ್ಲದೇ ಇದ್ದರೆ 15-20 ದಿವಸಗಳು ಸಹ ಬದುಕುವುದು ಕಷ್ಟ. ಗಾಳಿಯು ಹತ್ತು ನಿಮಿಷ ಇಲ್ಲದೇ ಇದ್ದರೆ ಚಟ್ ಎಂದು ಸತ್ತು ಹೋಗುತ್ತಾನೆ. ಆದುದರಿಂದ ಇದರ ಬಗ್ಗೆ ಸೀರಿಯಸ್ ಆಗಿ ಯೋಚನೆಯನ್ನು ಮಾಡಬೇಕು.

ಅಧ್ಯಕ್ಷರು: ಚಟ್ ಎಂದು ಹೇಳಿ ಮುಂದೆ ಮಾತನಾಡಬೇಕು. ಆದರೆ ಅವರು ಚಟ್ ಎಂದು ಹೇಳಿ ಅವರು ಮಾತನಾಡುವುದನ್ನು ನಿಲ್ಲಿಸಿಬಿಟ್ಟರು.

ಶ್ರೀ ಎಸ್.ರಾಜಣ್ಣ: ಆದುದರಿಂದ ನಮ್ಮ ಸರ್ಕಾರ ಶುದ್ಧವಾದಂತಹ ಗಾಳಿಯನ್ನು ಕೊಡಬೇಕೆಂದು ಒಳ್ಳೆಯ ಕೆಲಸ ಮಾಡುತ್ತಿದೆ. 1960ನೇ ಇಸವಿಯ ಹಿಂದೆ ಬೆಂಗಳೂರು ನಗರದಲ್ಲಿ ಎರಡು ಲಕ್ಷ ವಾಹನಗಳು ಇದ್ದವು. ನಾನೂ ವಾಹನಗಳನ್ನು ಓಡಿಸಿದ್ದೇನೆ. ನಾನು ಒಬ್ಬ ರೈತನ ಮಗನಾಗಿ ಕಸವನ್ನು ತುಂಬಿಕೊಂಡು ಹೋಗಿದ್ದೇನೆ. ಹಿಂದೆ ಟಾಂಗಗಳನ್ನು ಓಡಿಸುತ್ತಿದ್ದರು. ಅದು ಬಹಳ ಚನ್ನಾಗಿತ್ತು. ಆದರೆ ನಾವು ಆ ಮಟ್ಟದಿಂದ ಬಹಳ ಬದಲಾವಣೆಯಾಗಿದ್ದೇವೆ. ಇವತ್ತಿನ ವಾಹನಗಳ ಸ್ಪೀಡ್ ತುಂಬಾ

ಬದಲಾವಣೆಯಾಗಿದೆ. ಬೆಂಗಳೂರು ನಗರದ ಒಳಗಡೆ 10 ಕಿಲೋ ಮೀಟರ್ ದೂರ ಹೋಗಬೇಕೆಂದರೆ ಕಡಿಮೆ ಎಂದರೆ ಒಂದು ಗಂಟೆ ಬೇಕಾಗಿದೆ. ಹಿಂದೆ ಇದೇ 10 ಕಿಲೋ ಮೀಟರ್ ದೂರವನ್ನು 10 ನಿಮಿಷಗಳಲ್ಲಿ ಹೋಗುತ್ತಿದ್ದರು. 10 ನಿಮಿಷಕ್ಕೆ ಒಂದು ಲೀಟರ್ ಪೆಟ್ರೋಲ್ ಬೇಕಾದರೆ ಒಂದು ಗಂಟೆಗೆ ಎಷ್ಟು ಲೀಟರ್ ಪೆಟ್ರೋಲ್ ಬೇಕಾಗುತ್ತದೆಂದರೆ ಕನಿಷ್ಟ 6 ಲೀಟರ್ ಪೆಟ್ರೋಲ್ ಬೇಕು. ಇದರಿಂದ ಟೈಮ್ ವೇಸ್ಟ್ ಆಗುತ್ತಿದೆ, ವೇಸ್ಟ್ ಆಫ್ ಎಕಾನಾಮಿ, ಹಣವೂ ಸಹ ವೇಸ್ಟ್ ಇದನ್ನು ಬಹಳ ಗಂಭೀರವಾಗಿ ಯೋಚನೆ ಮಾಡಬೇಕೆಂದು ಹೇಳುತ್ತಿದ್ದೇನೆ. That means, we are wasting time, waste of economy, waste of money. ನೀವು ಬೆಂಗಳೂರಿಗೆ ಬಂದು ಆರೋಗ್ಯದಿಂದ ಇರಬೇಕಾದರೆ ಇವುಗಳನ್ನು ಗಂಭೀರವಾಗಿ ಯೋಚನೆಯನ್ನು ಮಾಡಿ ಇದನ್ನು ಸರಿ ಮಾಡುವುದಕ್ಕೆ ನಮಗೆ ಸಹಕಾರವನ್ನು ಕೊಡಿ. ಆದಷ್ಟು ಬೇಗ ಮೇಲು ಸೇತುವೆಗಳನ್ನು ಕಟ್ಟೋಣ.

ಅಧ್ಯಕ್ಷರು: ಈಗ ವೇಸ್ಟ್ ಎಲ್ಲಾ ಆಯಿತು, ಯೂಸ್‌ಫುಲ್ ಆಗಿರುವಂಥದ್ದನ್ನು ಮಾತನಾಡೋಣ, ಬೇಗ ಮಾತನಾಡಿ.

SRI H.SHIVAPPA: Repetition means Emphasis.

ಶ್ರೀ ಎಸ್.ರಾಜಣ್ಣ: ಮೇಲು ಸೇತುವೆಗಳು ಆದಷ್ಟು ಬೇಗ ಮಾಡಿ ಮುಗಿಸಬೇಕು. ಬೆಂಗಳೂರಿನ ಓಲ್ಡ್ ಸಿಟಿಯಲ್ಲಿಯೇ ತೊಂದರೆಯಾಗಿರುವುದು. ರಸ್ತೆಗಳು ಇನ್ನು 30 ಅಡಿ ಅಗಲನೇ ಇದೆ, ಕೆಲವು ಕಡೆಗಳಲ್ಲಿ 25 ಅಡಿಗಳೇ ಇದೆ. The Police Department is taking all efforts to improve the traffic. ಆದರೆ ಪೊಲೀಸ್‌ನವರು ಏನೇನೋ ಸರ್ಕಸ್ ಮಾಡುತ್ತಾರೆ. ಆದರೆ ಇದನ್ನು ಸುಧಾರಿಸುವುದಕ್ಕೆ ಆಗುತ್ತಿಲ್ಲ. ರಸ್ತೆಯ ಮಧ್ಯೆದಲ್ಲಿ ಬಿಳಿಯ ಬಣ್ಣವನ್ನು ಹಾಕುತ್ತಾರೆ, ಕೆಲವು ಕಡೆ ಹಸಿರು ಬಣ್ಣವನ್ನು ಹಾಕುತ್ತಾರೆ, ರೋಡ್ ಮಿಡಿಯನ್ ಹಾಕುತ್ತಾರೆ, ಏನು ಹಾಕಿದರೂ ಸಹ ಅಪಘಾತಗಳು ಕಡಿಮೆಯಾಗಲಿಲ್ಲ. ಅಪಘಾತಗಳು ದಿನಕ್ಕೆ ಹೆಚ್ಚಾಗಿ ಬೆಂಗಳೂರು ಸಿಟಿಯಲ್ಲಿಯೇ ಕನಿಷ್ಟ ಮೂರು ಜನರಾದರೂ ಸಾಯುತ್ತಿದ್ದಾರೆ. ಬೆಂಗಳೂರು ಸಿಟಿಯಲ್ಲಿಯೇ ಆಗುವ ಅಪಘಾತದಿಂದ ಒಂದು ವರ್ಷಕ್ಕೆ 8,000 ಜನರು ಕೈ ಮುರಿದುಕೊಂಡು, ಸೊಂಟ ಮುರಿದುಕೊಂಡು, ಕಣ್ಣು ಕಳೆದುಕೊಂಡು ತಲೆಗೆ ಪೆಟ್ಟು ಬಿದ್ದು ಹುಚ್ಚು ಹಿಡಿದು ವರ್ಷಾನುಗಟ್ಟಲೆ ಆಸ್ಪತ್ರೆಯಲ್ಲಿ ಇದ್ದು ಅಂಗವಿಕಲರಾಗುತ್ತಿದ್ದಾರೆ.

ಅಧ್ಯಕ್ಷರು: ತಲೆಕೆಟ್ಟಿರುವವರು ಎಲ್ಲೆಲ್ಲಿ ಇದ್ದಾರೋ ಅವರ ಸುದ್ದಿ ನಮಗೆ ಬೇಡ.

ಶ್ರೀ ಎಸ್.ರಾಜಣ್ಣ: ಮಾನ್ಯ ಮಂತ್ರಿಗಳು ಒಂದನ್ನು ಯೋಚನೆ ಮಾಡಬೇಕು. ಬೆಂಗಳೂರು ಸಿಟಿಯಲ್ಲಿ ವಾಹನಗಳ ಸಂಚಾರವನ್ನು ಸರಿ ಮಾಡಲಿಲ್ಲ ಎಂದರೆ, ಈ

ತೊಂದರೆಯು ಯಾವತ್ತೂ ಸಹ ಮುಗಿಯುವುದಿಲ್ಲ. ಆದಕಾರಣ ಇದನ್ನು ಸರಿಪಡಿಸಬೇಕು. ಬೆಂಗಳೂರಿಗೆ ನಾಲ್ಕು ಕಡೆಯಿಂದ ನ್ಯಾಷನಲ್ ಹೈವೇಯಿಂದ ಹೇವಿ ವೈಹಿಕಲ್‌ಗಳು ಬರುತ್ತದೆ. ಮೊದಲನೆಯದಾಗಿ ಓಲ್ಡ್ ಮದ್ರಾಸ್ ರಸ್ತೆಯಿಂದ ಕೋಲಾರದ ಕಡೆಯಿಂದ ಬರತಕ್ಕಂಥದ್ದು, ರಸ್ತೆ ಮತ್ತೊಂದು ಹೊಸೂರು ಕಡೆಯಿಂದ ಬರತಕ್ಕಂತಹ ರಸ್ತೆ, ಈ ರಸ್ತೆಗಳಿಂದ ಕಂಟೋನ್‌ಮೆಂಟ್ ಏರಿಯಾದಿಂದ ವಾಹನಗಳು ಬಂದು ಮತ್ತೆ ಜಯಮಹಲ್ ರಸ್ತೆಯಿಂದ ಬರಬೇಕು. ನಮ್ಮ ಮಾನ್ಯ ಮಂತ್ರಿಗಳಾದ ಉದಾಸಿಯವರ ಮನೆಯು ಜಯಮಹಲ್ ರೋಡ್‌ನಲ್ಲಿ ಇದೆ. ಆದುದರಿಂದ ಅವರಿಗೆ ಏನು ತೊಂದರೆ ಇದೆ ಎಂದು ಗೊತ್ತಾಗುತ್ತದೆ. ಅವರು ಮನೆಯ ಮುಂದೆ ಒಂದು ದಿನಕ್ಕೆ 10,000 ಲಾರಿಗಳು ಹೋಗುತ್ತದೆ. ನಮ್ಮ ಕ್ಷೇತ್ರದಲ್ಲಿ ಸಾವಿರಾರು ಮಕ್ಕಳು ಶಾಲೆಗೆ ಹೋಗುತ್ತಾರೆ. ಆ ರಸ್ತೆಯಲ್ಲಿಯೇ ಈ ವಾಹನಗಳು ಹೋಗುವುದರಿಂದ ಒಂದು ದಿನಕ್ಕೆ ಒಂದೆರಡು ಅಪಘಾತಗಳು ಆಗುತ್ತಲೇ ಇರುತ್ತದೆ.

ಅಧ್ಯಕ್ಷರು: ಇನ್ನು ಹೊಸ ವಿಚಾರಗಳು ಏನಾದರೂ ಇದ್ದರೆ ಹೇಳಿ. ಏಕೆಂದರೆ ಇನ್ನೂ ನಾಲ್ಕು ವಿಚಾರಗಳನ್ನು ಇದೇ ನಿಯಮದಲ್ಲಿ ತೆಗೆದುಕೊಳ್ಳಬೇಕು. ತಾವು ಮಾತನಾಡಿದ ಮೇಲೆ ಇನ್ನೂ ಇಬ್ಬರು ಸದಸ್ಯರುಗಳು ಇದರ ಬಗ್ಗೆ ಮಾತನಾಡಬೇಕು, ತಾವು ಸಾಕಷ್ಟು ತಿಳುವಳಿಕೆಯನ್ನು ಈ ವಿಚಾರದಲ್ಲಿ ಸದನಕ್ಕೆ ಕೊಟ್ಟಿರುತ್ತೀರಿ, ಬೇರೆ ಸದಸ್ಯರಿಗೂ ಸಹ ಅವಕಾಶವನ್ನು ಕೊಡಬೇಕು. ಆದುದರಿಂದ ತಾವು ಬೇಗ ಮಾತನಾಡಿ ಮುಗಿಸಿ. You are a disciplined man. You don't need to be told of.

ಶ್ರೀ ಎನ್.ರಾಜಣ್ಣ: ನಾನು ಎಷ್ಟೋ ಸಾರಿ ಹೇಳಿದ್ದೇನೆ. ಈ ದೇಶದಲ್ಲಿ ಶಿಸ್ತು ಇಲ್ಲದೇ ಸುಸ್ತು ಆಗಿರುವಂಥದ್ದು. ಆದರೆ ಶಿಸ್ತನ್ನು ನಾನು ಮೇನ್‌ಟೈನ್ ಮಾಡಿಕೊಂಡು ಬಂದಿರುತ್ತೇನೆ. ಆದರೆ ಮಾತನಾಡುವುದಕ್ಕೆ ಸ್ವಲ್ಪ ಟೈಮ್ ಕೊಡಿ.

ಅಧ್ಯಕ್ಷರು: ಆಯಿತು ಏನೂ ತೊಂದರೆ ಇಲ್ಲ. ದಯಮಾಡಿ ಬೇಗ ಮಾತನಾಡಿ ಮುಗಿಸಿ.

ಶ್ರೀ ಎನ್.ರಾಜಣ್ಣ: ಬೆಂಗಳೂರಿನಲ್ಲಿ ನಿರ್ಮಾಣ ಮಾಡುತ್ತಿರುವ ಮೇಲು ಸೇತುವೆಗೆ ಬೆಂಗಳೂರು ಸಿಟಿ ಕಾರ್ಪೊರೇಷನ್‌ನಿಂದ ಹಣವನ್ನು ತೆಗೆದುಕೊಂಡು ಮಾಡುತ್ತೇವೆಂದು ನಂಬಿಕೊಂಡಿದ್ದರೆ, ಇಲ್ಲಿ ಒಂದು ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಇನ್ ಎಫಿಷಿಯೆನ್ಸಿ ಜಾಸ್ತಿ....

ಶ್ರೀ ಅನಂತ್ ನಾಗ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೇ, ಮೇಲು ಸೇತುವೆಯನ್ನು ನಿರ್ಮಾಣ ಮಾಡಲು ಹುಡ್ಕೋ ಸಂಸ್ಥೆಯಿಂದ ಮತ್ತು ಕರ್ನಾಟಕ ಅರ್ಬನ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಿಂದ ಹಣವನ್ನು ಸಾಲ ತೆಗೆದುಕೊಂಡು ಎಲ್ಲಾ ಮೇಲು ಸೇತುವೆಗಳನ್ನು ಮಾಡುತ್ತಿದ್ದೇವೆ.

12.00 ಪಿ.ಎಂ

ಶ್ರೀ ಎನ್.ರಾಜಣ್ಣ: ನನಗೆ ಇನ್ನೇನೂ ಇಲ್ಲ, ಈ ರಿಂಗ್ ರೋಡ್ ಔಟರ್ ರಿಂಗ್ ರೋಡ್ ಕೆಲಸ ಏನಿದೆ ಇದನ್ನು ಆದಷ್ಟು ಬೇಗ ಮುಗಿಸಿಕೊಡಬೇಕು. ಇದಕ್ಕೆ ನೀವು ಉತ್ತರ ಕೊಡಬೇಕು; ಔಟರ್ ರಿಂಗ್ ರೋಡ್‌ನಲ್ಲಿ ಇಬ್ಬರು ಕಂಟ್ರಾಕ್ಟರುಗಳಲ್ಲಿ ಒಬ್ಬ ಕಂಟ್ರಾಕ್ಟರ್ ಕೆಲಸ ಶುರು ಮಾಡಿಲ್ಲವೆಂದು ಗೊತ್ತಾಗಿದೆ. ಅವರು ಆದಷ್ಟು ಬೇಗ ಶುರು ಮಾಡುವಂತೆ ಮಾಡಬೇಕು. ಔಟರ್ ರಿಂಗ್ ರೋಡ್ ಕೆಲಸ ಯಾವಾಗ ಮುಗಿಸಿಕೊಡುತ್ತೀರಿ ಎಂಬುದನ್ನು ತಿಳಿಸಬೇಕು. ಇನ್ನರ್‌ರಿಂಗ್ ರೋಡ್ ಕೆಲಸ ಯಾವಾಗ ಮುಗಿಸುತ್ತೀರೆಂಬುದನ್ನು ತಿಳಿಸಬೇಕು. ಮೊನ್ನೆ ವಿಷಯ ಸಮಿತಿಯಲ್ಲಿ ಚರ್ಚೆಯಾಗಿದೆ. ವಿಷಯ ಸಮಿತಿ-97 ಪುಟ ಸಂಖ್ಯೆ: 14ರಲ್ಲಿ ''96 ಕಿಲೋಮೀಟರ್ ಎತ್ತರಿಸಿ ಹಾಗು ರೈಲು ವ್ಯವಸ್ಥೆಯನ್ನು 4 ಹಂತಗಳಲ್ಲಿ ಜಾರಿಗೊಳಿಸಿ ಮೂಲ ಅಂದಾಜನ್ನು 4200 ಕೋಟಿ ರೂಪಾಯಿಗಳಿಗೆ ಪರಿಷ್ಕರಿಸಲಾಗುವುದು.'' ಪರಿಷ್ಕರಿಸಲಾಗುವ ಮೊತ್ತ 6500 ಕೋಟಿ ರೂಪಾಯಿಗಳಿಗೆ ಹೋಗುತ್ತದೆಯಂತೆ. 6500 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು ಬೇಡ ಎಂದು ಈ ಯೋಜನೆಯನ್ನು ಡ್ರಾಪ್ ಮಾಡಿ, ಈ ಯೋಜನೆ ಉಪಯುಕ್ತ ಅಲ್ಲವೆಂದು ಭಾವಿಸಿದ ಸಮಿತಿಯು ಅದಕ್ಕೆ ಬದಲಾಗಿ ಹಾಲಿ ಇಟ್ಟಿರುವ ಹಣವನ್ನು ವರ್ತುಲ ರೈಲ್ವೆ ನಿರ್ಮಾಣ ಮತ್ತು ರಿಂಗ್ ರೋಡ್ ನಿರ್ಮಾಣ ಮಾಡಿದರೆ ಉಪಯೋಗಕ್ಕೆ ಬರುತ್ತದೆಂದು ಸಮಿತಿ ಆದೇಶ ಕೊಟ್ಟಿದೆ.'' ಇದನ್ನು ಜಾರಿಗೆ ತರಬೇಕೆಂದು ಹೇಳುತ್ತಿದ್ದೇನೆ. ಈ ರೈಲು, ಲೈಟ್ ರೈಲು ಇದೆಯಲ್ಲ ಇದಕ್ಕೆ ನೀವು 4200 ಕೋಟಿ ರೂಪಾಯಿ ಇಟ್ಟಿದ್ದೀರಿ. Elevated Light Rail Transit system ಇದು ಪೂರ್ಣ ಆಗಬೇಕಾದರೆ 6500 ಕೋಟಿ ರೂಪಾಯಿ ಆಗುತ್ತದೆ. ಆದುದರಿಂದ ಇದನ್ನು ನೀವು ಚಿಂತನೆ ಮಾಡಬೇಕಾಗುತ್ತದೆ. ಈ ಯೋಜನೆಗೆ ಬದಲಾಗಿ ರಿಂಗ್ ರೋಡ್ ರೆಡಿ ಮಾಡಿದರೆ ವಾಹನಗಳ ಒತ್ತಡ ಕಡಿಮೆಯಾಗುತ್ತದೆ; ಮತ್ತು ಜನರಿಗೆ ಅನುಕೂಲವಾಗುತ್ತದೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದು ಕಳೆದ 30 ವರ್ಷಗಳಿಂದ ಪೆಂಡಿಂಗ್ ಇತ್ತು. There was a proposal to acquire the defence land for windening of roads. This was when Sri H.D.Deve Gowda was the Prime Minister. ಅವರ ಕಾಲದಲ್ಲಿ 85 ಎಕರೆ ಅಕ್ವೈರ್ ಮಾಡಿಕೊಂಡು ಇನ್ನೂ ಪೆಂಡಿಂಗ್ ಇದೆ. ದಯವಿಟ್ಟು 85 ಎಕರೆ ಅಕ್ವೈರ್ ಮಾಡಿಕೊಂಡು ರಸ್ತೆಗಳನ್ನೆಲ್ಲಾ ವಿಸ್ತಾರ ಮಾಡಿದರೆ ಅಪಘಾತಗಳು ಕಡಿಮೆಯಾಗುತ್ತವೆಂದು ತಿಳಿಸುತ್ತಾ, I request the Hon'ble Minister through you Sir, to give correct reply as to when he is going to complete all these works.

+ ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಅಧ್ಯಕ್ಷರೆ, ಮಾನ್ಯ

ರಾಜಣ್ಣನವರು ಮಾತನಾಡುತ್ತಿದ್ದಾಗ ಹಿರಿಯ ಸದಸ್ಯರಾದ ಶ್ರೀ ಶಿವಪ್ಪನವರು ಒಂದು ಮಾತು ಹೇಳಿದರು, repetition means emphasis. Repetition of false promises means deception. ಕಳೆದ ಹತ್ತು ವರ್ಷಗಳಿಂದ ಈ ಪ್ರಾಜೆಕ್ಟ್‌ನ್ನು ಕೇಳಿಕೊಂಡು ಕೇಳಿಕೊಂಡು ಬಂದು ನಮ್ಮ ಕಿವಿ ತೂತು ಬಿದ್ದುಹೋಗಿದೆ. ಮಾನ್ಯ ಸಚಿವರಲ್ಲಿ ಕೆಲವು ಅಂಶಗಳ ಬಗ್ಗೆ ಕ್ಲಾರಿಫಿಕೇಷನ್ ಕೇಳುತ್ತೇನೆ. ಇವತ್ತು ಏನು ನೀವು ಸುಮಾರು ಏಳು ಫ್ಲೈಓವರ್‌ಗಳ ಬಗ್ಗೆ ಹೇಳುತ್ತಿದ್ದೀರಿ ಈ ಫ್ಲೈಓವರ್‌ಗಳು ಇವತ್ತು ಯಾವ ಹಂತದಲ್ಲಿವೆ? ಬರೀ ಉದ್ದೇಶದ ಹಂತದಲ್ಲಿವೆಯೆ? ನೀವು ಏನಾದರೂ ಆ ದಿಕ್ಕಿನಲ್ಲಿ ಒಂದು ಇಂಚು ಆದರೂ ಪ್ರಗತಿ ಮಾಡಿದ್ದೀರಾ? ಈ ಉದ್ದೇಶ ಯಾವಾಗಿನಿಂದ ಸರ್ಕಾರದ ಮನಸ್ಸಿನಲ್ಲಿದೆ? ಈ ಉದ್ದೇಶಗಳು ಯಾವಾಗಿನಿಂದ ಅನುಷ್ಠಾನಕ್ಕೆ ಬರುತ್ತಿವೆ? ನಮ್ಮ ಜೀವಿತ ಕಾಲದಲ್ಲಿ ಫ್ಲೈ ಓವರ್‌ಗಳನ್ನು ನೋಡುತ್ತೇವೆಯೇ? ನಾನು ಹಿಂದೆ ಇಲ್ಲಿ ಶಾಸಕರಾಗಿದ್ದ ಶೀ ರಘುಪತಿಯವರ ಜೊತೆ ಒಬ್ಬ ಇನ್‌ವೆಸ್ಟರ್ ಮಾತನಾಡುತ್ತಾ ಇದ್ದಾಗ ಜಪಾನ್‌ನವರು ಬಂದು ಹೇಳಿದ್ದಾರಂತೆ. ಬೆಂಗಳೂರಿಗೆ ಬರಬೇಕಾದ ಇನ್‌ವೆಸ್ಟರ್ಸ್ ಇವತ್ತು ಹೈದರಾಬಾದಿಗೆ ಹೋಗುತ್ತಿದ್ದಾರಂತೆ ಏಕೆಂದರೆ ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಚೆನ್ನಾಗಿದೆ ಎಂದು. ಅದರಲ್ಲಿ ಟ್ರಾನ್ಸ್‌ಪೋರ್ಟ್ ಫೆಡರೇಷನ್ ಕೂಡ ಒಂದು. ನಾವು ಏನೂ ಮಾಡದೆ ಇವತ್ತು ಬನ್ನಿ ಬನ್ನಿ ಎಂದು ಕರೆಯುವುದು ಇಲ್ಲಿ ನಮ್ಮ ನಾಗರೀಕರಿಗೆ ಪ್ರಾಮಿಸ್ ಮಾಡುತ್ತಾ ಹೋಗುವುದು. ಈ ಉದ್ದೇಶಗಳು ಯಾವಾಗ ಅನುಷ್ಠಾನಕ್ಕೆ ಬರುತ್ತವೆ? ಮೂರನೆಯದಾಗಿ, ಸುಮಾರು 385 ಕೋಟಿ ರೂಪಾಯಿ ಎಂದು ತಮ್ಮ ಹೇಳಿಕೆಯಲ್ಲಿ ಹೇಳಿದ್ದೀರಿ. 385 ಕೋಟಿ ರೂಪಾಯಿ ಯಾವ ವರ್ಷದ ಫಿಗರ್? ಯಾವ ವರ್ಷದಲ್ಲಿ ಯಾರು ಮಾಡಿದ ಫಿಗರ್? ಈಗ ಎಷ್ಟು ಖರ್ಚಾಗುತ್ತದೆ? ಈ ಹಣ ನಾವೇನೋ ಹುಡ್ಕೋ ಇನ್ನೊಂದು ಎಂದು ಹೇಳಿದಿರಿ. ಬಹುಶಃ ತಾವು ಬೆಂಗಳೂರಿನಲ್ಲಿ ಇದಕ್ಕೋಸ್ಕರ ಬಾಂಡ್ಸ್ ಕರೆಯುತ್ತೇವೆಂದು ಹೇಳಿದಿರಿ. ಆ ಬಾಂಡ್ಸ್ ಕರೆಯುವ ವಿಚಾರ ಎಲ್ಲಿಯವರೆಗೆ ಬಂತು? ಫ್ಲೈ ಓವರ್ ಬಗ್ಗೆ ಮಾತನಾಡುತ್ತಾ, ಹಿಂದೆ ನಮ್ಮ ಸಚಿವರಾದ ಶ್ರೀ ರೋಷನ್ ಬೇಗ್ ಅವರು ಬೆಂಗಳೂರಿನ ಡ್ರೈನ್ ಮೇಲೆ ಟ್ರೈನ್ ಬಿಡುತ್ತೇವೆಂದು ಹೇಳಿದ್ದರು. ಎಲ್ಲಾ ಡ್ರೈನ್ ಮೇಲೆ ಟ್ರೈನ್ ಬರುತ್ತದೆಂದು ಅದರ ಫೋಟೋ ಕೂಡ ತೆಗೆಸಿದ್ದರು. ಈಗ ಅದು ಏನಾಯಿತೆಂದು ಗೊತ್ತಿಲ್ಲ. ಇದು ಯಾವುದೇ ಆಡಳಿತ ಪಕ್ಷದ ಕೆಲಸ ಆಗದೆ ಸರ್ಕಾರದ ಕೆಲಸ ಆಗಬೇಕು, ಜನತೆಗೆ ಕೊಡಬೇಕು. ಇನ್ನೊಂದು ಬಹಳ ಮುಖ್ಯ ಎಂದರೆ, 1991ನೇ ಇಸವಿ ಮಾರ್ಚ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಎಷ್ಟು ಫ್ಲೈ ಓವರ್‌ಗಳಿಗೆ ಶಂಕುಸ್ಥಾಪನೆ ಮಾಡಲಾಯಿತು? ಎಷ್ಟು ಫ್ಲೈ ಓವರ್‌ಗಳಿಗೆ ಶಂಕುಸ್ಥಾಪನೆ ಮಾಡಿದರು ಮತ್ತು ಆ ಫ್ಲೈ ಓವರ್‌ಗಳ ಗತಿ ಏನಾಗಿದೆ? ಆ ಕಲ್ಲುಗಳು ಏನಾಗಿವೆ ಎಂಬುದು ನಮಗೆ ಬೇಕು. ಆ ಫ್ಲೈ ಓವರ್‌ಗಳ ಶಂಕುಸ್ಥಾಪನೆ ಏನಾಯಿತು? ಆ ಫ್ಲೈ ಓವರ್‌ಗಳನ್ನು ಡಿಸೈನ್ ಮಾಡಿದ ಆರ್ಕಿಟೆಕ್ಟಿಗೆ ನೀವು ಎಷ್ಟು ಫೀ ಅನ್ನು ಕೊಟ್ಟಿದ್ದೀರಿ? ನನಗೆ ಮಾಹಿತಿ ಇರುವುದು, ಏನೂ ಕೆಲಸ ಆಗದೆ, ಟೆಂಡರ್ ಕರೆಯದೆ ಆರ್ಕಿಟೆಕ್ಟ್‌ಗೆ 60 ಲಕ್ಷ

ರೂಪಾಯಿಗಳನ್ನು ಬೆಂಗಳೂರು ಮಹಾನಗರ ಪಾಲಿಕೆ ಕೊಟ್ಟು ಕೃತಾರ್ಥವಾಗಿದೆ. ಅವರಿಗೋಸ್ಕರ ನೀವು ಫ್ಲೈಓವರ್ ಡಿಸೈನ್ ಮಾಡುವುದು. 1971ರಲ್ಲಿ ಶಾಂತಲಾ ಸಿಲ್ಕ್‌ನಿಂದ ರಾಜಾಜಿನಗರ ಎಂಟ್ರೆನ್ಸ್‌ಗೆ ಒಂದು ಫ್ಲೈಓವರ್ ಮಾಡುವುದಕ್ಕೆ ಶಂಕುಸ್ಥಾಪನೆ ಮಾಡಿದರು. ಆ ಕಲ್ಲಾದರೂ ನೋಡೋಣವೆಂದು ನಾನು ಪರದಾಡುತ್ತಿದ್ದೇನೆ. ಈಗಾಗಲೇ 26-27 ವರ್ಷವಾಯಿತು. ಅದಕ್ಕೋಸ್ಕರ ಮಾನ್ಯ ಸಚಿವರು ಏಳು ಫ್ಲೈಓವರ್‌ಗಳ ಬಗ್ಗೆ ಏನು ಭರವಸೆ ಕೊಟ್ಟಿದ್ದಾರೆ ಅದರ ಬಗ್ಗೆ ನಮಗೆ ಇದು ಇನ್ನೊಂದು ಮೆಗಾಸಿಟಿ ತರಹ ಪ್ರಾಮಿಸ್ ಆಗದೆ ಖಚಿತವಾಗಿ ಹೇಳಿ; ಈ ಕಾರ್ಯಕ್ರಮವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಈ ಹಣವನ್ನು ಎಲ್ಲಿಂದ ತರುತ್ತೀರಿ? ನಮ್ಮ ಜೀವಿತ ಕಾಲದಲ್ಲಿ ನೋಡುತ್ತೇವೆಯೇ? ಶಾಸಕರ ಜೀವಿತ ಕಾಲದಲ್ಲಿ ಅಲ್ಲ, ನಮ್ಮ ಒಟ್ಟು ಜೀವಿತ ಕಾಲದಲ್ಲಿ ನೋಡುತ್ತೀರಿ ಎಂದು ಆಶ್ವಾಸನೆ ಕೊಡಿ. ತಮಗೆ ಗೊತ್ತಿರುವ ಹಾಗೆ, ಬೆಂಗಳೂರಿನಲ್ಲಿ ಬೆಳಿಗ್ಗೆ ಎಂಟೂವರೆಯಿಂದ ಹನ್ನೊಂದೂವರೆ, ಸಂಜೆ ನಾಲ್ಕೂವರೆಯಿಂದ ಏಳೂವರೆಯವರೆಗೆ ನಗರದ ಪ್ರಮುಖವಾದ ಜಾಗಕ್ಕೆ ಯಾವುದೇ ವೆಸ್ಟರ್ನ್ ಸೆಕ್ಟಾರ್ ಇರಬಹುದು, ಯಾವುದೇ ಸೆಕ್ಟಾರ್‌ನಿಂದ ಮಧ್ಯ ನಾವು ಬರುವುದಕ್ಕಾಗುವುದಿಲ್ಲ. ವಿಶೇಷವಾಗಿ ರಾಮಕುಮಾರ್ ಮಿಲ್ಸ್ ಹತ್ತಿರ ಜನ ರಸ್ತೆ ಧಾಟುವುದಕ್ಕಾಗುವುದಿಲ್ಲ. ನಾನು ಹಿಂದಿನ ಆಡಳಿತಾಧಿಕಾರಿಗಳನ್ನು, ಮೇಯರ್ ಅವರೆಲ್ಲರನ್ನು ಕರೆದುಕೊಂಡು ಹೋಗಿದ್ದೇನೆ. ನೋಡುತ್ತಾರೆ, ನಮಗೆ ಸಮಾಧಾನ ಮಾಡಿ ಮಾಡುತ್ತೇವೆಂದು ಹೇಳುತ್ತಾರೆ. ಇದಕ್ಕೆಲ್ಲಾ ಒಟ್ಟಾರೆ ನೀವು ಸಮಗ್ರವಾಗಿ ಉತ್ತರ ಕೊಟ್ಟು, ಬೆಂಗಳೂರು ನಗರದ ನಾಗರೀಕರಿಗೆ ನಿಜವಾಗಿ ಸಂಚಾರದ ಒತ್ತಡ ಏನಿದೆ ಅದನ್ನು ಪರಿಹಾರ ಮಾಡುವುದಕ್ಕೆ ಫ್ಲೈಓವರ್‌ಗಳು ನಿಜವಾಗಿ ಬರುತ್ತವೆ, ಮೇಲು ಸೇತುವೆಗಳು ಬರುತ್ತವೆ, ಗಾಳಿಗೋಪುರಗಳು ಬರುವುದಿಲ್ಲವೆಂದು ಸರಿಯಾಗಿ ತಿಳಿಸಿ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ): ಮಾನ್ಯ ಅಧ್ಯಕ್ಷರೆ, ನಾನು ಸುರೇಶ್ ಕುಮಾರ್ ಮತ್ತು ರಾಜಣ್ಣನವರು, ನಾವು ಮೂರು 1983ರಿಂದ 1988ರವರೆಗೆ ಜನ ನಗರಸಭಾ ಸದಸ್ಯರಾಗಿದ್ದೆವು. ಮತ್ತೆ ಈಗ ಶಾಸಕರಾಗಿ ಇಲ್ಲಿದ್ದೇವೆ. 1983ರಿಂದ ಕಾರ್ಪೊರೇಷನ್ ವತಿಯಿಂದ 'ಪ್ರೋಗ್ರಾಂ ಆಫ್ ವರ್ಕ್ಸ್' ಎಂದು ಒಂದು ಪುಸ್ತಕ ಪ್ರಿಂಟ್ ಮಾಡುತ್ತಾರೆ. ಅದನ್ನು ತರಿಸಿಕೊಳ್ಳಿ. 1983ರಿಂದ ಸತತವಾಗಿ ಈ ಫ್ಲೈಓವರ್‌ಗಳನ್ನು ತೆಗೆದುಕೊಳ್ಳುತ್ತೇವೆಂದು ಪ್ರತಿವರ್ಷ ಪ್ರಿಂಟ್ ಆಗುತ್ತದೆ. ಇನ್ನೂ ಯಾವುದೂ ಆಗಿಲ್ಲ. ಹಣ ಇರುವುದಿಲ್ಲ. ಒಂದು ಕೋಟಿ ರೂಪಾಯಿ ಕೆಲಸಕ್ಕೆ 2 ಲಕ್ಷ, 3 ಲಕ್ಷ ಇಡುತ್ತಾರೆ. ಅದು ಶಂಕುಸ್ಥಾಪನೆಯಾಗುತ್ತದೆ. ಈಗ ಸಿರಸಿ ವೃತ್ತದಿಂದ ಹಿಡಿದು ನಗರಸಭೆಯವರೆಗೆ ಏನು ಫ್ಲೈಓವರ್ ಮಾಡುತ್ತಿದ್ದಾರೆ ಇದಕ್ಕೆ ಹಿಂದೆ ಎರಡು ಸಾರಿ ನೀವೇ ಶಂಕುಸ್ಥಾಪನೆ ಮಾಡಿದ್ದೀರಿ. ಈಗ ಅದೊಂದು ಮಾತ್ರ ನಡೆಯುತ್ತಿದೆ. ಏನು ಐದಾರು ಫ್ಲೈಓವರ್‌ಗಳನ್ನು ಮಾಡುತ್ತೇವೆಂದು ಹೇಳುತ್ತೀರಿ ಇದು 5 ವರ್ಷದ ಹಿಂದೆ

ಮಾತನಾಡಿದ್ದು. ಆಗ ನಾನು ಮಂತ್ರಿಯಾಗಿರಲಿಲ್ಲ. ಐದು ವರ್ಷದ ಹಿಂದೆ ಮಾತನಾಡಿದಾಗ ನಾನು ಹೇಳಿದೆ, ನೂರು ವರ್ಷವಾದರೂ ಕಾರ್ಪೊರೇಷನ್‌ನವರ ಕಡೆಯಿಂದ ಫ್ಲೈಓವರ್ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದೆ. ಏಕೆಂದರೆ, ಕಾರ್ಪೊರೇಷನ್‌ನವರದ್ದು ಬಹಳ ಲಿಮಿಟೆಡ್ ಸ್ಕೋಪ್. ಅವರ ಕೈಯಲ್ಲಿ ಖಂಡಿತವಾಗಿ ಆಗುವುದಿಲ್ಲ. ನಾನು ಐದು ವರ್ಷಗಳ ಹಿಂದೆಯೇ ಹೇಳಿದೆ, ಸರ್ಕಾರ ನೇರವಾಗಿ ತೆಗೆದುಕೊಳ್ಳಿ, ಆ ಕೆಲಸಗಳನ್ನು ಕಾರ್ಪೊರೇಷನ್‌ನವರೂ ಮಾಡುವುದು ಬೇಡ, ನೀವು ಲೋಕೋಪಯೋಗಿ ಇಲಾಖೆಯ ವತಿಯಿಂದ ಮಾಡಿಸಿ ಎಂದು. ಏನು ತೊಂದರೆ ಇದೆ ಲೋಕೋಪಯೋಗಿ ಇಲಾಖೆಯ ವತಿಯಿಂದ ಮಾಡಿಸುವುದಕ್ಕೆ, ಏತಕ್ಕೆ ಮಾಡಿಸಬಾರದು? ನೀವು ಆಕ್ಟ್ರಾಯ್ ಕಾಂಪನ್‌ಸೇಷನ್ ಏನು ಕೊಡುತ್ತೀರಿ ಅದರಲ್ಲಿ ಷೇರ್ ತೆಗೆದುಕೊಳ್ಳಿ, ನೀವೇ ಸರ್ಕಾರದವರೇ ಮಾಡಿ. ಬೆಂಗಳೂರು ನಗರದಲ್ಲಿ ಎಷ್ಟು ಕೋಟಿ ರೂಪಾಯಿ ರೆವಿನ್ಯೂ ನೀವು ಕಲೆಕ್ಟ್ ಮಾಡುತ್ತೀರಿ ಅದು ನಿಮ್ಮ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆ. ಅವರಿಗೆ ಏತಕ್ಕೆ ನೀವು ಹಣ ಕೊಡುವುದಿಲ್ಲ? ಕಾರ್ಪೊರೇಷನ್‌ಗೆ ಆಕ್ಟ್ರಾಯ್ ಕಾಂಪನ್‌ಸೇಷನ್ ಎಂದು ಹಣ ಕೊಡುತ್ತಾರೆ. ಆದರೆ, ಉಳಿದ ಹಣವನ್ನು ಇವರು ಕೊಡುವುದಿಲ್ಲ. ಕಾರ್ಪೋರೇಷನ್‌ನವರು ಮಾಡುವುದಕ್ಕೆ ಹೇಗೆ ಸಾಧ್ಯ? ಅವರು ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ನೇರವಾಗಿ ಕಾರ್ಪೋರೇಷನ್‌ಗೆ ವಹಿಸುವುದನ್ನು ಬಿಟ್ಟು ಬಿಡಿ. ಅವರ ಕೈಯಲ್ಲಿ ನೂರು ವರ್ಷವಾದರೂ ಆಗುವುದಿಲ್ಲ. ಅವರು ಕೆಲಸ ಮಾಡುವುದಿಲ್ಲ. ಆದ್ದರಿಂದ, ನೇರವಾಗಿ ಸರ್ಕಾರವೇ ಇದನ್ನು ಮಾಡಿ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನೀವು ಮದ್ರಾಸ್‌ಗೆ ಹೋಗಿ ನೋಡಿದರೆ ಅಲ್ಲಿ ಸಣ್ಣ ಸಣ್ಣ ಜಾಗದಲ್ಲೂ ಫ್ಲೈ ಓವರ್ ಮಾಡಿದ್ದಾರೆ. ಕೊಯಮತ್ತೂರಿಗೆ ಹೋದರೆ ಅದೊಂದು ಸಣ್ಣ ಸಿಟಿ ಅಲ್ಲಿ ಕೂಡ ಫ್ಲೈಓವರ್ ಮಾಡಿದ್ದಾರೆ. 40-50 ಲಕ್ಷ ಜನ ಇರುವ ಕಾರ್ಪೋರೇಷನ್‌ನಿಂದ ಫ್ಲೈಓವರ್ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ, ಸರ್ಕಾರವೇ ನೇರವಾಗಿ ಇದನ್ನು ತೆಗೆದುಕೊಂಡು ಮಾಡಬೇಕೆಂದು ಹೇಳಿ, ಅವಕಾಶ ಕೊಟ್ಟ ತಮಗೆ ಕೃತಜ್ಞತೆಗಳನ್ನರ್ಪಿಸಿ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಮುನಿಯಪ್ಪ (ಗಾಂಧೀನಗರ): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜಣ್ಣನವರು ತಂದಿರುವ ಗಮನ ಸೆಳೆಯುವ ಸೂಚನೆಯ ಅರ್ಧ ಗಂಟೆ ಕಾಲಾವಧಿ ಚರ್ಚೆಯ ಮೇಲೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಬೆಂಗಳೂರು ನಗರದಲ್ಲಿ ಮಹಾನಗರ ಪಾಲಿಕೆಯಿಂದ ಫ್ಲೈ ಓವರ್ ಮಾಡುವುದೆಂದು ಹೇಳುತ್ತಿರುವುದು ಕನಸಿನ ಮಾತಾಗುತ್ತದೆ. ನಮ್ಮ ಮಿತ್ರರಾದಂತಹ ಶ್ರೀ ರಾಮಲಿಂಗಾರೆಡ್ಡಿಯವರು ಹೇಳಿದ ರೀತಿಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಅವರ ಪ್ರತಿ ತಿಂಗಳ ಸಂಬಳ ಮತ್ತು ಗುತ್ತಿಗೆದಾರರಿಗೆ ಹಣ ಕೊಡಬೇಕಾದರೆ ಅದು ಸರ್ಕಾರದ ಬಳಿ ಭಿಕ್ಷಾ ಪಾತ್ರೆ ಇಟ್ಟುಕೊಂಡು ಆಕ್ಟ್ರಾಯ್ ಪರಿಹಾರ ಧನ ಬೇಡುವುದಕ್ಕೇ ಅದಕ್ಕೆ ಸಮಯ ಸಾಕಾಗುವುದಿಲ್ಲ. ಸರ್ಕಾರವೇನಾದರೂ ತೀವ್ರವಾದ ರೀತಿಯಲ್ಲಿ

ಚಿಂತಿಸಿ, ಹಣವನ್ನೇನಾದರೂ ಒದಗಿಸಿ, ಕಾರ್ಯ ಪ್ರಾರಂಭಿಸಿದರೆ ಮಾತ್ರ ಬೆಂಗಳೂರಿನಲ್ಲೇನಾದರೂ ನಾವು ಮೇಲು ಸೇತುವೆ ನೋಡಲಿಕ್ಕೆ ಸಾಧ್ಯ. ಮಹಾನಗರ ಪಾಲಿಕೆಯಿಂದ ಸಾಧ್ಯವಾಗುವುದಿಲ್ಲ. ಕಾರಣ ಅಲ್ಲಿರುವ ಎಸ್ಟಾಬ್ಲಿಷಮೆಂಟ್ ಏನಿದೆ ಅದನ್ನು ನೋಡಿಕೊಳ್ಳುವುದೇ ಕಾರ್ಪೋರೇಷನ್‌ನವರಿಗೆ ಆಗುತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಮಹಾನಗರಪಾಲಿಕೆಯಲ್ಲಿ ಇಂಥ ಕೆಲಸಗಳೆಲ್ಲಾ ಆಗುತ್ತವೆನ್ನುವುದನ್ನೇ ನಾವು ಮರೆತಿದ್ದೇವೆ. ನಂಬಿಕೆ ಕೂಡ ಕಳೆದುಕೊಂಡಿದ್ದೇವೆ. ಇದನ್ನು ನಾನು ಇಲ್ಲಿ 3ನೇ ಬಾರಿ ಪ್ರಸ್ತಾಪಿಸುತ್ತಿದ್ದೇನೆ. ಮಾನ್ಯ ಶ್ರೀ ಅನಂತನಾಗ್‌ರವರು ನಗರಾಭಿವೃದ್ಧಿ ಸಚಿವರಾದ ಮೇಲೆ ನಮ್ಮ ಸಿಟಿ ರೈಲ್ವೆ ಸ್ಟೇಷನ್‌ನಿಂದ ರಾಜಾಜಿನಗರಕ್ಕೆ ಹೋಗಬೇಕಾದರೆ, ಬಸವೇಶ್ವರ ನಗರ, ವಿಜಯನಗರ, ಮಾಗಡಿ ರೋಡ್ ಇರಬಹುದು, ಸುಜಾತ ಟಾಕೀಸ್ ಮುಂದೆಯೇ ಹೋಗಬೇಕು. ಸನ್ಮಾನ್ಯ ಶ್ರೀ ವಾಟಾಳ್ ನಾಗರಾಜ್ ರಸ್ತೆ ಮಾರ್ಗವಾಗಿ ನಾವು ಅಲ್ಲಿ ವೀನಸ್ ಸರ್ಕಸ್ ದುರಂತವಾದ ಸ್ಥಳವನ್ನು ದಾಟಿ ಓಕಳೀಪುರಂ ದಾಟಿ ಸುಜಾತ ಚಿತ್ರಮಂದಿರದ ಬಳಿ ಹೋಗುವಾಗ, ಒಂದು ಸಾರಿ ಮಂತ್ರಿಗಳು ಒಂದು ತಿಂಗಳಲ್ಲಿ, ಒಂದು ವಾರದಲ್ಲಿ ಮಾಡಿಸುತ್ತೇನೆಂದು ಹೇಳಿದರು. ಮಿನರ್ವಾ ಮಿಲ್ ಜಾಗದಲ್ಲಿ ರಸ್ತೆಯನ್ನು ಅಗಲಗೊಳಿಸುವ ಕಾರ್ಯಕ್ರಮವನ್ನು ಮಾಡಬೇಕು ಮತ್ತು ರಾಮಚಂದ್ರ ಪುರಕ್ಕೆ ಹೋಗಬೇಕಾದರೆ ಸುರಂಗಮಾರ್ಗ ಮಾಡಬೇಕೆಂದು ಕಾರ್ಪೋರೇಷನ್‌ನ ಪ್ರಾಜೆಕ್ಟ್ ಇಲಾಖೆಯ ಯೋಜನೆಯನ್ನು ರೂಪಿಸಿ. ಮಿನರ್ವ್ ಮಿಲ್ ಬಳಿ ಯಾವುದೇ 'ದಾಖಲಾತಿ ಇಲ್ಲದಿದ್ದರೂ ಕೂಡ, ಕೋರ್ಟಿನಿಂದ ಸ್ಟೇ ಆರ್ಡರ್ ತೆಗೆದುಕೊಂಡು ಬಂದು ನಾವು ರೋಡನ್ನು ವೈಡನ್ ಮಾಡುವುದನ್ನು ಹಲವಾರು ವರ್ಷಗಳಿಂದ ತಡೆಹಿಡಿದಿದ್ದಾರೆ. ಮಾನ್ಯ ಮಂತ್ರಿಗಳು ಒಂದು ವಾರದಲ್ಲಿ ಇದನ್ನು ಇತ್ಯರ್ಥಪಡಿಸುತ್ತೇನೆ ಎಂದು ಹೇಳಿದ್ದರು. ಆ ಜಾಗದಲ್ಲಿ ಹೋಗುವ ವೆಹಿಕಲ್ಸ್, ರಾಜಾಜಿನಗರ ಪ್ರದೇಶಕ್ಕೆ ಹೋಗುವಂತಹವರು ಬಹಳ ಕಷ್ಟಪಡಬೇಕಾಗುತ್ತದೆ. ಅಲ್ಲಿ ರಸ್ತೆಯನ್ನು ಅಗಲಗೊಳಿಸಬೇಕು. ಒಂದು ಕಡೆ ಅಲ್ಲಿ ಮಿನರ್ವ್ ಮಿಲ್ ಕಾಟ, ಇನ್ನೊಂದು ಕಡೆ ರೈಲ್ವೆ ಇಲಾಖೆ ಕಾಟ. ಅಲ್ಲಿ ಮೋರಿ ಮಾಡಬೇಕೆಂದರೂ ಕೂಡ, ಬೆಂಗಳೂರಿನ ಮ್ಯಾಪ್ ಬರೆದಿಟ್ಟುಕೊಂಡು ರೈಲ್ವೆಯವರು ಅರ್ಧ ಜಾಗ ನಮ್ಮದೇ ಎಂದು ಹೇಳುತ್ತಾರೆ. ಯಾವುದೇ ಕೆಲಸ ಮಾಡುವುದಕ್ಕೂ ಬಿಡುವುದಿಲ್ಲ. ಈಗ ಶ್ರೀ ರಾಮವಿಲಾಸ್ ಪಾಸ್ವಾನ್‌ನವರು ಬಂದಿದ್ದಾಗ, ಅವರ ಹತ್ತಿರ ಮನವಿ ಕೊಟ್ಟಿದ್ದೆವು. ರೋಡ್ ಮಾಡಬೇಕಾದರೆ ರೈಲ್ವೆ ಸಚಿವರ ಹತ್ತಿರ ಹೋಗಬೇಕಾಯಿತು. ಆ ತರಹ ಪರಿಸ್ಥಿತಿ ಇದೆ. ಇನ್ನು ಮೈಸೂರು ಬ್ಯಾಂಕ್ ಸರ್ಕಲ್, ಕೆಂಪೇಗೌಡ ಸರ್ಕಲ್, ಸಂಗಂ ಸರ್ಕಲ್, ರೇಸ್ ಕೋರ್ಸ್ ಹತ್ತಿರ ಬೆಳಿಗ್ಗೆ, ಸಾಯಂಕಾಲ ತಾವು ಮಂತ್ರಿಗಳು ಸಿಟಿ ಎಂ.ಎಲ್.ಎಗಳನ್ನು ಕರೆದುಕೊಂಡು ನಿಂತುಕೊಳ್ಳಬೇಕು. ಆ ಕಡೆ ಹೋಗುವ ವೆಹಿಕಲ್ಸ್ ರಾಜಾಜಿನಗರಕ್ಕೆ ಹೋಗಬೇಕಾದರೆ ಈ ಕಡೆಯೇ ಹೋಗಬೇಕು. ಆನಂದರಾವ್ ಸರ್ಕಲ್ ಕಡೆ ನೋ ಎಂಟ್ರಿ ಇದೆ. ಹೋಗುವುದಕ್ಕಾಗುವುದಿಲ್ಲ. ಆ ಕಡೆಯಿಂದ ಬರುವವರಿಂದ ರಸ್ತೆ ಜಾಮ್ ಆಗುತ್ತದೆ.

ಒಂದೂವರೆಯಿಂದ 2 ಗಂಟೆ ಆಗುತ್ತದೆ. ನಾನು ಮಾನ್ಯ ಮಂತ್ರಿಯವರಿಗೆ ಸಲಹೆ ಮಾಡುವುದೇನೆಂದರೆ, ರೇಸ್ ಕೋರ್ಸ್ ರಸ್ತೆಗೆ ಹೋಗಿ ಹೈಲ್ಯಾಂಡ್ ಹೋಟೆಲ್ ಕಡೆ....

ಅಧ್ಯಕ್ಷರು: ಯಾವ ಯಾವ ರಸ್ತೆಯಲ್ಲಿ ಹೋಗಬೇಕೆನ್ನುವ ಪ್ರಶ್ನೆ ಬೇರೆ. ಬೆಂಗಳೂರಲ್ಲಿ ಫ್ಲೈ ಓವರ್‌ನ ಅಗತ್ಯವಿದೆ. ಆ ಕಡೆಗೆ ಹೆಚ್ಚು ಗಮನವನ್ನು ಸರ್ಕಾರ ಕೊಡಬೇಕು. That is more important, ಯಾವ ಯಾವ ರಸ್ತೆಗೆ, ಅದೆಲ್ಲವನ್ನೂ ನೋಡಿಕೊಳ್ಳಲು ಕಾರ್ಪೋರೇಷನ್‌ನವರಿದ್ದಾರೆ.

ಶ್ರೀ ಬಿ.ಮುನಿಯಪ್ಪ: ಹೈ ಗ್ರೌಂಡ್ಸ್ ಕಡೆಯಿಂದ ಸುರಂಗ ಮಾರ್ಗವನ್ನು ತೆಗೆದು, ಮಿನರ್ವ ಟಾಕೀಸ್ ಹತ್ತಿರ ಬರುವ ರೀತಿಯಲ್ಲಿ ವ್ಯವಸ್ಥೆ ಮಾಡಿದರೆ ಶಿವಾನಂದ ಸ್ಟೋರ್ಸ್ ಕಡೆ ಹೋಗುವ ಒತ್ತಡ ಕಡಿಮೆಯಾಗುತ್ತದೆ. ಅದನ್ನು ತಾವು ಮಾಡಬೇಕು. ನೀವು ಮೊದಲು ಬೆಂಗಳೂರು ಸಿಟಿ ಎಂ.ಎಲ್.ಎ.ಗಳ ಸಭೆ ಕರೆಯುತ್ತಿದ್ದೀರಿ. ಅದನ್ನು ಬಿಟ್ಟಿದ್ದೀರಿ. ಆ ಸಭೆಯಲ್ಲಿ ನಾವು ಎಷ್ಟೋ ವಿಚಾರಗಳನ್ನು ಪ್ರಸ್ತಾಪಿಸಿದ್ದೆವು, ಅದು ಜಾರಿಗೆ ಬಂದಿಲ್ಲ. ನೀವು ಬೆಂಗಳೂರು ನಗರದಲ್ಲಿ ಮಹಾನಗರ ಪಾಲಿಕೆಯವರು ಮಾಡುತ್ತಾರೆಂದು ಹೇಳಿದ್ದೀರಿ, ಆ ಭರವಸೆಯನ್ನು ನಾವು ನಂಬುವುದಕ್ಕೆ ತಯಾರಿಲ್ಲ. ಮುಖ್ಯಮಂತ್ರಿಗಳ ಬಳಿ ನಿಯೋಗವನ್ನು ಕರೆದುಕೊಂಡು ಹೋಗಿ ಬೆಂಗಳೂರಿನಲ್ಲಿರುವ ಪರಿಸ್ಥಿತಿಯನ್ನು ತೋರಿಸಬೇಕು. ಇವತ್ತು 20 ಲಕ್ಷ ವಾಹನಗಳು ಬೆಂಗಳೂರು ನಗರದಲ್ಲಿವೆ. ಬರುವ ವರ್ಷ, ಅದರ ಮುಂದಿನ ವರ್ಷ ನಾವು ವಾಹನಗಳನ್ನು ಮನೆ ಮುಂದೆ ಗೇಟ್ ಹತ್ತಿರ ನಿಲ್ಲಿಸಿ, ಪುನಃ ಮನೆಯೊಳಗೆ ತೆಗೆದುಕೊಂಡು ಹೋಗಬೇಕಾಗುತ್ತದೆ. ಮುಂದೆ ಹೋಗುವುದಕ್ಕಾಗುವುದಿಲ್ಲ. ಆದಕಾರಣ, ಮಾನ್ಯ ಸಚಿವರು ದಯವಿಟ್ಟು ಗಮನ ಹರಿಸಿ ಬೆಂಗಳೂರು ಶಾಸಕರನ್ನೆಲ್ಲಾ ಕರೆದು ಬೆಂಗಳೂರಿನ ನಾಲ್ಕೂ ಕಡೆಗೆ ಪಾದಯಾತ್ರೆ ಮಾಡಿ, ವಾಹನಗಳ ಸಮೀಕ್ಷೆ ಮಾಡಬೇಕು. ನೀವು ವಾಹನ ಯಾತ್ರೆ ಮಾಡಿದಾಗ, ಕೆಲವು ಕಡೆ ಅಲ್ಲಿ ನಾವು ಸಿಕ್ಕಿ ಆನಂದಪಡುವುದನ್ನು ತಮಗೂ ಆನಂದಪಡಿಸಬೇಕೆಂಬುದು ನಮ್ಮ ಆಸೆ. ಶಾಸನಸಭೆ ಮುಗಿದ ಮೇಲೆ ತಮ್ಮ ಜೊತೆಯಲ್ಲಿ ಬಂದರೆ ಬೆಂಗಳೂರು ನಗರ ಯಾವ್ಯಾವ ರೀತಿಯಲ್ಲಿ ಇದೆ ಎಂದು ತೋರಿಸುತ್ತೇವೆ. ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಇದು ಚರ್ಚೆಯಲ್ಲ. ಎಲ್ಲರೂ ನಿಯಮಾವಳಿಗಳನ್ನು ತಿಳಿದುಕೊಳ್ಳಬೇಕು. ಸದನದಲ್ಲಿ ಪ್ರಶ್ನೆ ಬಂದಾಗ, ಪ್ರಶ್ನೆ ಬಹಳ ಮುಖ್ಯವಾದುದೆನ್ನುವ ಕಾರಣಕ್ಕಾಗಿ ಉದ್ಭವಿಸತಕ್ಕ ಇತರೆ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಅರ್ಧ ಗಂಟೆ ಕಾಲಾವಧಿ ಚರ್ಚೆ ಇಟ್ಟುಕೊಂಡಿದ್ದೇವೆ. ಎಲ್ಲರೂ ಕೂಡ ಭಾಷಣ ಮಾಡದೆ, 2-2 ನಿಮಿಷಗಳಲ್ಲಿ ತಮ್ಮ ಸಲಹೆ ಏನಿದೆ ಅದನ್ನು ಕೊಟ್ಟರೆ, ಅದಕ್ಕೆಲ್ಲಾ ಸಮಗ್ರವಾಗಿ ಮಂತ್ರಿಗಳು ಉತ್ತರಿಸುತ್ತಾರೆ. ಬೆಂಗಳೂರಿಗೆ ಸಂಬಂಧಿಸಿದವರಿಗೆಲ್ಲ ಅವಕಾಶ

ಕೊಡುತ್ತೇನೆ.

+ ಶ್ರೀ ಪಿ.ಎಸ್.ಪ್ರಕಾಶ್ (ಚಿಕ್ಕಪೇಟೆ): ಅವರು ಮುಖ್ಯಮಂತ್ರಿಗಳಾಗಿದ್ದಾಗ, ಮೇಲು ಸೇತುವೆಯನ್ನು ಬೆಂಗಳೂರು ನಗರದಲ್ಲಿ 1994ರಲ್ಲಿ ನಾನು ಕಟ್ಟುತ್ತೇವೆಂದು ಹೇಳಿದ್ದರು. 1995-96ರಲ್ಲಿ ಶ್ರೀ ರೋಷನ್ ಬೇಗ್‌ನವರು ಅದರ ಮೇಲೆ ರೈಲು ಬಿಡುತ್ತೇನೆಂದು ಹೇಳಿದ್ದರು ನಗರಾಭಿವೃದ್ಧಿ ಸಚಿವರಾಗಿದ್ದಾಗ. ಎರಡು ಕೆಲಸಗಳೂ ಆಗಿಲ್ಲ. ಆದರೆ, ಈ ಮೇಲು ಸೇತುವೆ ಬಗ್ಗೆ ಅರ್ಧ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಶ್ರೀ ರಾಜಣ್ಣನವರು ಸೂಚನೆ ತಂದಿದ್ದಾರೆ. ಆದ್ದರಿಂದ, ಮೇಲು ಸೇತುವೆ ಸಿರ್ಸಿ ಸರ್ಕಲ್‌ನಿಂದ ಟೌನ್‌ಹಾಲ್‌ವರೆಗೆ ಸೇರುತ್ತದೆ. ಸಿರ್ಸಿ ಸರ್ಕಲ್‌ನಿಂದ ಮಾರ್ಕೆಟ್‌ವರೆಗೂ ನನ್ನ ಕ್ಷೇತ್ರ ಬರುವ ಕಾರಣ, ಈಗಾಗಲೇ ಡಾ|| ರಾಯನ್ ರಸ್ತೆ ಕಾಟನ್‌ಪೇಟೆ ಮುಖ್ಯರಸ್ತೆ, ಬಿವಿಕೆ ಅಯ್ಯಂಗಾರ್ ರಸ್ತೆ, ಈ ಕಡೆ ಬಹಳ ಟ್ರಾಫಿಕ್ ಜಾಮ್ ಆಗಿ ಕಾಟನ್ ಪೇಟೆ ಮುಖ್ಯರಸ್ತೆಯಲ್ಲಿ ಒಂದು ಫುಟ್‌ಪಾತ್ 15 ಅಡಿ ಅಗಲವಿದೆ. ಅದನ್ನು ಧಾಟಬೇಕಾದರೆ 20 ನಿಮಿಷ ಬೇಕಾಗುತ್ತದೆ. ಒಂದು ತಿಂಗಳಿಗೆ 3 ಜನ ಸಾಯುತ್ತಿದ್ದಾರೆ. ಆದುದರಿಂದ ಮಾನ್ಯ ಗೃಹ ಸಚಿವರನ್ನು ನಾನು ವಿಜ್ಞಾಪನೆ ಮಾಡಿಕೊಳ್ಳುವುದೇನೆಂದರೆ, ಕಾಟನ್‌ಪೇಟೆ ಮುಖ್ಯರಸ್ತೆಯಲ್ಲಿ ಮೈಸೂರಿಗೆ ಹೋಗುವ ಬಸ್ಸು ಮತ್ತು ಲಾರಿಗಳು ಓಕಳಿಪುರಂ ಮೇಲೆ ಬಿಟ್ಟು ವೆಸ್ಟ್ ಆಫ್ ಕಾರ್ಡ್ ಮೇಲೆ, ಮೈಸೂರು ರೋಡ್ ಸೇರುವಂತೆ ವ್ಯವಸ್ಥೆಯನ್ನು ತಾವು ಮಾಡಬೇಕು. ಕಾಟನ್‌ಪೇಟೆ ರಸ್ತೆಯಲ್ಲಿ ಜಾಸ್ತಿ ಟ್ರಾಫಿಕ್ ಜಾಮ್ ಇದೆ. ಮೈಸೂರು ರಸ್ತೆಯಲ್ಲಿ ಸ್ಮಶಾನ ಒಂದಿದೆ. ಚಾಮರಾಜಪೇಟೆಯಲ್ಲಿ 2 ಸ್ಮಶಾನಗಳಿವೆ. ಟ್ರಾಫಿಕ್ ಜಾಮ್ ಆಗಿ 15-20 ನಿಮಿಷ ಶವ ಸಾಗಿಸುವ ವಾಹನಗಳ ಜೊತೆಯಲ್ಲಿ ಹೆಣಗಳು ನಿಂತುಕೊಳ್ಳುವ ಪರಿಸ್ಥಿತಿ ಇದೆ. ಆದುದರಿಂದ, ದಯವಿಟ್ಟು ಫ್ಲೈಓವರ್ ಕೆಲಸ ಮುಗಿಯುವವರೆಗೂ ಮೈಸೂರಿಗೆ ಹೋಗುವ ಬಸ್ಸುಗಳನ್ನು ಬೇರೆ ಕಡೆಯಿಂದ ಓಡಿಸಲು ಕ್ರಮ ಕೈಗೊಳ್ಳಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀಮತಿ ಡಿ.ಹೇಮಾವತಿ (ಶಾಂತಿನಗರ): ಸನ್ಮಾನ್ಯ ಅಧ್ಯಕ್ಷರೆ, ನಮ್ಮ ರಿಚ್‌ಮಂಡ್ ಟೌನ್ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಫ್ಲೈ ಓವರ್ ಹಾಕಬೇಕಾಗಿತ್ತು. ಏಕೆಂದರೆ, ಅಲ್ಲಿ ಹೋಗಿ ಬರುವ ಮಕ್ಕಳಿಗೆ ತುಂಬಾ ಕಷ್ಟವಾಗುತ್ತಿದೆ. ಅದನ್ನು ಆದಷ್ಟು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳುವುದೇನೆಂದರೆ, ಟೌನ್ ಹಾಲ್‌ನಿಂದ ಸಿರ್ಸಿ ಸರ್ಕಲ್‌ನವರೆಗೆ ನನ್ನ ಕ್ಷೇತ್ರದಲ್ಲಿ ಬರುವ ಫ್ಲೈಓವರ್‌ನ್ನು ತಾವು ಮಾಡುತ್ತಿದ್ದೀರಿ. ಆದರೆ, ಇದರ ಬಗ್ಗೆ ಒಂದು ಕಮಿಟಿ ರಚಿಸಲಾಗಿತ್ತು. ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಹಾಕಿದ್ದು ತಮ್ಮ ಗಮನಕ್ಕೆ ಬಂದಿದೆಯೇ? ಆ ಕಮಿಟಿಯಲ್ಲಿ, ಕೋರ್ಟ್‌ನಲ್ಲಿ ಕಮಿಷನರ್ ಅಪಾಯಿಂಟ್ ಮಾಡಿ,

ಅವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ, ಅದು ತಮ್ಮ ಗಮನಕ್ಕೆ ಬಂದಿದೆಯೇ? ಆ ರೀಪೋರ್ಟನ್ನು ಇವತ್ತು ನಿಮ್ಮ ಗೌರ್ನಮೆಂಟ್ ಅಡ್ವೋಕೇಟ್ ಒಪ್ಪಿಕೊಂಡಿದ್ದಾರೆ, ಅದು ತಮ್ಮ ಗಮನಕ್ಕೆ ಬಂದಿದೆಯೇ, ಬಂದಿದ್ದರೆ, ನಿಮ್ಮ ಪ್ಲಾನ್ ಪ್ರಕಾರ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನ್ನು ಒಡೆದು ಹಾಕಬೇಕೆನ್ನುವ ಪ್ಲಾನ್ ಮಾಡಿದ್ದೀರಾ? ಸಿಲ್ವರ್ ಜ್ಯೂಬಿಲಿ ಪಾರ್ಕ್ ಬೆಂಗಳೂರಿನಲ್ಲೇ ಬಹಳ ದೊಡ್ಡ ಪಾರ್ಕ್. ಆ ಪಾರ್ಕಿಗೆ ನೀವು ಫ್ಲೈಓವರ್ ಕಟ್ಟತಕ್ಕ ಸಂದರ್ಭದಲ್ಲಿ ಯಾವುದೇ ವಿಧವಾದ ಅಡೆತಡೆಗಳು ಆಗಬಾರದು, ಎಂಬುದು ಅದು ನಾವು ಮೊದಲು ನೋಡಿದ ಪ್ಲಾನು. ಈಗ ಬಂದಿರುವ ಪ್ಲಾನ್‌ನಲ್ಲಿ ಕೋರ್ಟಿನಲ್ಲಿ ಹಾಕಿರತಕ್ಕ ಪ್ಲಾನ್ ಪ್ರಕಾರ, ರಿಪೋರ್ಟ್ ಪ್ರಕಾರವಾಗಿ, ಒಂದು ಧರ್ಮಕ್ಕೆ ಸೇರಿದ, ಒಂದು ದೇವಸ್ಥಾನವನ್ನು ಕೆಡವಬಾರದೆಂದು ಹೇಳಿ ಮಾರ್ಕ್ ಮಾಡಿದ್ದಾರೆ. ಮತ್ತೆ, ಮತ್ತೊಂದು ಧರ್ಮಕ್ಕೆ ಸೇರಿದ ಒಂದು ದೇವಸ್ಥಾನಕ್ಕೆ ಸಂಬಂಧಪಟ್ಟಿದ್ದನ್ನು ಒಡೆಯಬೇಕೆಂದು ರಿಪೋರ್ಟನ್ನು ಕೋರ್ಟಿನಲ್ಲಿ ಕೊಟ್ಟಿದ್ದಾರೆ. ಒಂದುವೇಳೆ, ತಾವೇನಾದರೂ ಅದನ್ನು ಅಕ್ಸೆಪ್ಟ್ ಮಾಡಿ, ಮಾಡುವುದಕ್ಕೆ ಹೋದರೆ ದೇಶದಲ್ಲಿ, ಕರ್ನಾಟಕದಲ್ಲಿ ಗಲಭೆಯಾಗುವ ಸಂದರ್ಭ ಬರುತ್ತದೆ.

ಅಧ್ಯಕ್ಷರು: ನಮ್ಮ ಹಳ್ಳಿಗಳಲ್ಲಿ ಎಷ್ಟೋ ಜನ ಬುದ್ಧಿವಂತರಿದ್ದರು. ಅವರಿಗೆ ಓದಿಲ್ಲ ಬರಹವಿಲ್ಲ, ಏನಿಲ್ಲ, ರಸ್ತೆಯಲ್ಲಿ ದೇವಸ್ಥಾನವನ್ನು ಅಲ್ಲಿ ಕಟ್ಟುವುದಿಲ್ಲ. ಎಲ್ಲಿ ಕಟ್ಟಬೇಕೋ, ಅಲ್ಲಿ ಕಟ್ಟುತ್ತಾರೆ. ಬೆಂಗಳೂರಿನಲ್ಲಿ ಫುಟ್‌ಪಾತ್‌ನಲ್ಲೂ ದೇವಸ್ಥಾನ ಕಟ್ಟುತ್ತಾರೆ. ಹಳ್ಳಿಯವರೇ ಎಷ್ಟೋ ಬೆಟರ್ ಅನಿಸುತ್ತದೆ ಫೋರ್ವರ್ಡೆಯವರೇ, ನಾವು ಹಳ್ಳಿಯಿಂದ ಬೆಂಗಳೂರಿಗೆ ಬಂದಾಗ, ಈ ಊರಲ್ಲಿ ಎಲ್ಲಾ ಬಹಳ ಸುಸಂಸ್ಕೃತರು, ತಿಳಿದವರಿದ್ದಾರೆ, ನಾವು ಹುಷಾರಾಗಿರಬೇಕೆಂದು ತಿಳಿದುಕೊಂಡಿದ್ದೆವು. ಇದು ನೋಡಿದರೆ ನಾವು ಕಲಿತುಕೊಳ್ಳುವುದೇನೂ ಇಲ್ಲವೇ ಇಲ್ಲ ಇಲ್ಲಿ. ಇವರು ನಮ್ಮಿಂದ ಕಲಿತುಕೊಳ್ಳುವುದೇ ಬಹಳ ಇದೆ. ರಸ್ತೆಗಳಲ್ಲೆಲ್ಲಾ ಕಟ್ಟುತ್ತಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ: ರಸ್ತೆಯಲ್ಲಿ ಕೇಳುತ್ತಿಲ್ಲ ನಾವು. ರಸ್ತೆಯಲ್ಲಿ ಏನು ಬೇಕಾದರೂ ಒಡೆದುಹಾಕಿ. ಫುಟ್‌ಪಾತ್‌ನಲ್ಲಿ ಒಡೆದುಹಾಕಿ. ನಾವು ಅದನ್ನು ಕೇಳುತ್ತಿಲ್ಲ.

ಅಧ್ಯಕ್ಷರು: ನಾನು ಕಣ್ಣಾರೆ ನೋಡಿದ್ದೇನೆ. ಫುಟ್‌ಪಾತ್‌ಗಳಲ್ಲಿ ಆ ಟ್ರಾಫಿಕ್ ಜಾಮ್, ಆ ವೆಹಿಕಲ್ಸ್ ಪಾರ್ಕ್ ಮಾಡುವುದಕ್ಕೆ ಜಾಗ ಇರುವುದಿಲ್ಲ, ಅಲ್ಲೇ ಭಕ್ತಾದಿಗಳು, ಅಲ್ಲೇ ಮಂಟಪ ಹಾಕುವುದು, ಅಲ್ಲೇ ಮೈಕು, ಏನೆಲ್ಲಾ ರಾಮ, ರಾಮ, ರಾಮ. ಆನಂದರಾವ್ ಸರ್ಕಲ್‌ನಲ್ಲಿ ನೋಡಿ. ವಿಶ್ವೇಶ್ವರಪುರಂನಲ್ಲಿ ಸರ್ಕಲ್ ಮಧ್ಯೆ ದೇವಸ್ಥಾನ ಕಟ್ಟಿದ್ದಾರೆ. ಮಕ್ಕಳು ಆಡುವ ಜಾಗದಲ್ಲಿ ಕಟ್ಟಿದ್ದಾರೆ. ಏನು ಕರ್ಮ ಎಂದು ಹೇಳಬೇಕು. ಇರುವ ದೇವರುಗಳಿಗೇ ಕೆಲಸವಿಲ್ಲ ಪಾಪ. ಅವರೇ ತಮಗೆ ಎಂಪ್ಲಾಯ್ಮೆಂಟ್ ಇಲ್ಲ ಎಂದು ಹೇಳುತ್ತಿದ್ದಾರೆ. ಮತ್ತೆ ಹೊಸದಾಗಿ ಇವರನ್ನು ಕರೆದುಕೊಂಡು ಬಂದು....

ಶ್ರೀ ಎಚ್.ಎನ್.ನಂಜೇಗೌಡ: ಈ ಫುಟ್‌ಪಾತ್‌ನಲ್ಲಿರುವ ದೇವರುಗಳನ್ನೆಲ್ಲಾ ತೆಗೆದುಕೊಂಡು ಹೋಗಿ ಒಂದು ಕಡೆ ಹಾಕಿ.

ಅಧ್ಯಕ್ಷರು: ನಿಮಗೆ ಇಷ್ಯೂ ಸಿಗಲಿ ಎಂದು. ಅವರು ಒಡೆಯಲಿ. ನೀವು ಇಷ್ಯೂ ತೆಗೆದುಕೊಂಡು ಹೋಗುತ್ತೀರಿ. ನಮಗೆ ಗೊತ್ತಿಲ್ಲವಾ ನಿಮ್ಮ ಜಾಣತನ?

ಶ್ರೀ ಎಚ್.ಎನ್.ನಂಜೇಗೌಡ: ರೋಡ್ ಮಧ್ಯದಲ್ಲಿರುತ್ತವೆ. ಐದಡಿ ಐದಡಿ ಹಾಕಿಬಿಟ್ಟು ಒಂದು ದೇವಸ್ಥಾನ. ನೀವು ಅವರಿಗೆ ಒಪ್ಪಿಸಿ ಒಡೆದುಹಾಕಿ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಫುಟ್‌ಪಾತ್‌ನಲ್ಲಿ ಒಡೆದುಹಾಕಿ. ಆದರೆ ಸಿಲ್ವರ್ ಜ್ಯುಬಲಿ ಪಾರ್ಕ್ ಒಳಗಡೆ, ಸಿಲ್ವರ್ ಜ್ಯುಬಿಲಿ ಪಾರ್ಕ್ ಟೌನ್‌ನಲ್ಲಿರತಕ್ಕ ಒಳ್ಳೆಯ ಪಾರ್ಕು. ತಮಗೂ ಕೂಡ ಗೊತ್ತಿದೆ. ಈ ಪಾರ್ಕ್ ಒಳಗಡೆ...

ಅಧ್ಯಕ್ಷರು: ಅಮ್ಮಾ, ಭಕ್ತಿ ಮನಸ್ಸಿನೊಳಗಿರಬೇಕು. ಧರ್ಮ ಬಾಗಿಲಿನೊಳಗಿರಬೇಕು. ಭಕ್ತಿ ಮತ್ತು ಮನಸ್ಸು ಬಾಗಿಲು ಧಾಟಿ ಹೊರಗೆ ಹೋದಾಗ ಅನಾಹುತವೇ. ಅದು ಪ್ರಚಾರವೇ ಹೊರತು ಅದು ಆಚರಣೆಯಾಗುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಅಲ್ಲ ಅಧ್ಯಕ್ಷರೇ, ಆ ರೀತಿ ಮಾಡಿದಾಗ, ಕಮಿಟಿ ರಿಪೋರ್ಟ್ ಆ ರೀತಿ ಕೊಟ್ಟಾಗ ತಾವು ನೋಡಬೇಕಾಗಿತ್ತಲ್ಲಾ, ಗಮನಿಸಬೇಕಾಗಿತ್ತಲ್ಲಾ. ಅದನ್ನೂ ನಿಮ್ಮ ಗಮನಕ್ಕೆ ತರುತ್ತೇನೆ. ಈ ರೀತಿ ಮಾಡುವುದಕ್ಕೆ ಅವಕಾಶ ಕೊಡಬೇಡಿ. ಅದನ್ನು ದಯವಿಟ್ಟು ತರಿಸಿನೋಡಿ. ಅದು ಆಗದಹಾಗೆ ನೋಡಿಕೊಳ್ಳಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: ಈಗ ಬೆಂಗಳೂರಿನಿಂದ ವಲಸೆ ಹೋದವರು ವಾಟಾಳ್ ನಾಗರಾಜ್ ಅವರು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ವಲಸೆ ಹೋದವರು ಎಂದು ನನಗೆ ಹೇಳಿದಿರಾ?

ಅಧ್ಯಕ್ಷರು: ಇಲ್ಲವಾ? ಹಾಗಾದರೆ ಬೆಂಗಳೂರಿನಲ್ಲೇ ಇದ್ದೀರಿ.

ಶ್ರೀ ವಾಟಾಳ್ ನಾಗರಾಜ್: ನಾನು ತಾವೆಲ್ಲೋ ಪ್ರಮೀಳ ಅವರಿಗೆ ಹೇಳುತ್ತೀರಿ ಅಂದುಕೊಂಡಿದ್ದೆ. ನಾನು ಗಮನಿಸಲೇ ಇಲ್ಲ.

ಅಧ್ಯಕ್ಷರು: ನಿಮಗೇ ಹೇಳಿದ್ದು.

ಶ್ರೀ ವಾಟಾಳ್ ನಾಗರಾಜ್: ನಮ್ಮ ಮೇಲೆ ಏನು ಈ ತರಹ ಧಾಳಿ ಮಾಡುತ್ತೀರಿ .

ಅಧ್ಯಕ್ಷರು: ಅವರು ವಲಸೆ ಬಂದವರು ನಿಮ್ಮ ಗೆಳೆಯರು. ನೀವು ವಲಸೆ ಹೋದವರು.

ಶ್ರೀ ವಾಟಾಳ್ ನಾಗರಾಜ್: ಅವಕಾಶ ಮಾಡಿಕೊಡಿ ಸ್ವಾಮಿ ನಮಗೆ ದಯವಿಟ್ಟು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಟೆಂಪೊರೆರಿಯಾಗಿ ನಾವೆಲ್ಲರೂ ವಲಸೆ ಬಂದಿರುವವರು ತಾನೇ ಇಲ್ಲಿ?

ಅಧ್ಯಕ್ಷರು: ಹಾಗಲ್ಲ ಬಿಡಿ. ಅವರಿಗೆ ಅರ್ಥವಾಗಿದೆ ನಾನು ಏನು ಹೇಳಿದೆ ಎಂದು. ಆ ಉದ್ದೇಶ ಇಟ್ಟುಕೊಂಡಿಲ್ಲ.

\+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಅಧ್ಯಕ್ಷರೇ, ಇಲ್ಲಿ ಸಂದರ್ಭ ಏನೆಂದರೆ ಬೆಂಗಳೂರಿನ ಕರ್ಮಕಥೆ ಬಗ್ಗೆ ಮಾತನಾಡುವುದಾದರೆ ತಿಂಗಳುಗಟ್ಟಲೆ ಮಾತನಾಡುವ ಪರಿಸ್ಥಿತಿ ಇದೆ. ಇದೊಂದು ಕರ್ಮಕಾಂಡ. ಬೆಂಗಳೂರಿನ ಸಮಗ್ರ ಪರಿಸ್ಥಿತಿ ಒಂದು ಕರ್ಮಕಾಂಡ. ಬೆಂಗಳೂರು ಎನ್ನುವುದು ಒಂದು ಕಾಲದಲ್ಲಿ ಸ್ವರ್ಗವಾಗಿದ್ದಂಥದ್ದು ಈಗ ನರಕವಾಗಿದೆ. ಇಡೀ ಪ್ರಪಂಚದ ಎಲ್ಲರೂ ಬೆಂಗಳೂರಿಗೆ ಬಂದಾಗ ಬೆಂಗಳೂರಿನಂಥ ನಗರ ಬೇರೆ ಇಲ್ಲ ಎಂದು ಏನು ಹೊಗಳುತ್ತಿದ್ದರು ಈಗ ಇದು ವಿಷದ ನಗರವಾಗಿದೆ. ಇದು ಎಲ್ಲರಿಗೂ ಗೊತ್ತಿರತಕ್ಕಂಥ ಪರಿಸ್ಥಿತಿ. ಆ ದೃಷ್ಟಿಯಿಂದ ನಾವು ಇವತ್ತು ನೆನೆದುಕೊಳ್ಳಬೇಕಾದ್ದು ಈ ಸದನವನ್ನು ಕಟ್ಟಿಸಿದಂಥ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರನ್ನು ಹೆಜ್ಜೆಹೆಜ್ಜೆಗೂ ಬೆಂಗಳೂರಿನ ಬಗ್ಗೆ ಹಗಲುರಾತ್ರಿ ಚಿಂತನೆ ಮಾಡುತ್ತಿದ್ದವರು ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು. ಒಂದು ಹಂತದಲ್ಲಿ ಅಧ್ಯಕ್ಷರೇ, ತಮಗೂ ಜ್ಞಾಪಕ ಇರಬಹುದು ರಿಸರ್ವ್ ಬ್ಯಾಂಕ್ ಕಟ್ಟುವುದಕ್ಕೂ ಅವಕಾಶ ಕೊಟ್ಟಿರಲಿಲ್ಲ. ಕಬ್ಬನ್ ಪಾರ್ಕಿನಲ್ಲಿ ರಿಸರ್ವ್ ಬ್ಯಾಂಕ್ ಕಟ್ಟುವುದಕ್ಕೆ ಖಂಡಿತ ಅವಕಾಶ ಕೊಡುವುದಿಲ್ಲ ಎಂದು ಆಗ ಆ ಕಾಲದಲ್ಲಿ ವಿರೋಧ ಮಾಡಿದಂಥವರು. ಈಗ ಏನಾಗಿದೆ ಯಾರು ಬೇಕಾದರೂ ಬೆಂಗಳೂರಿಗೆ ಬಂದು ಎಲ್ಲಿ ಬೇಕಾದರೂ ಕಟ್ಟಡ ಕಟ್ಟಬಹುದು; ಏನು ಬೇಕಾದರೂ ಮಾಡಬಹುದು ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ತಮಗೆ ಗೊತ್ತಿದೆ ಇಲ್ಲಿ ತಿರುಗಾಡುವುದಕ್ಕೆ ಜಾಗವಿಲ್ಲ. ಅದಕ್ಕೆ ನೇರವಾಗಿ ನಾನು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ, ಪಾಪ, ಅವರೇನು ಮಾಡುವುದಕ್ಕಾಗುತ್ತದೆ, ಅವರ ಪರಿಸ್ಥಿತಿಯೂ ಅದೇ ಆಗಿದೆ, ಏನೂ ಮಾಡುವುದಕ್ಕಾಗುತ್ತಿಲ್ಲ. ಒಂದು ತರಹ ಇಕ್ಕಟ್ಟಿನ ಪರಿಸ್ಥಿತಿಯಾಗಿದೆ. ವಿಷವರ್ತುಲ ನಿರ್ಮಾಣವಾಗಿದೆ. ಬೆಂಗಳೂರು ನಗರದ ಬಗ್ಗೆ ಬೇರೆ ಮಾತಿಲ್ಲ. ನಾನಾ ರೀತಿಯ ರೋಗಗಳನ್ನು ತರತಕ್ಕ ನಗರವಾಗಿದೆಯೇ ಹೊರತು, ಇದೊಂದು ಬಹಳ ಸೌಹಾರ್ಧತೆ, ಪ್ರೀತಿ ವಿಶ್ವಾಸ ಮತ್ತು ಆರೋಗ್ಯ ತರತಕ್ಕ ನಗರಕ್ಕಿಂತ ಹೆಚ್ಚಾಗಿ ಇದೊಂದು ರೀತಿ ವಿಷದ ನಗರವಾಗಿ ಪರಿಣಮಿಸುತ್ತಾ ಇದೆ. ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ, ಇದರ ಬಗ್ಗೆ ಪಕ್ಷಾತೀತವಾಗಿ ಒಂದು ಸಭೆಯನ್ನು ಕರೆದು

ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಈ ಬೆಂಗಳೂರು ನಗರವನ್ನು ಉಳಿಸಿ ಎಂಬ ಒಂದೇ ಒಂದು ಕಾರ್ಯಕ್ರಮಕ್ಕೆ ಏನೇನು ಸೂತ್ರಗಳನ್ನು ಹಾಕಬೇಕು ಎಂಬ ಬಗ್ಗೆ ಚರ್ಚೆ ಮಾಡಿ ಆ ಸೂತ್ರಗಳ ಪ್ರಕಾರ ಅತಿ ಬೇಗ ತಾವು ಕೆಲಸ ಮಾಡಬೇಕು. ಆಗ ಉತ್ತಮವಾದ ಸಲಹೆಗಳನ್ನು ನಾವು ಕೊಡೋಣ. ಮತ್ತು ಈಗ ಮೇಲುಸೇತುವೆ ಎಂದು ಏನಿದೆ ಇದು ತೋರಿಕೆಗೆ ಆಗಬಾರದು. ತರಾತುರಿಯಿಂದ ಇಷ್ಟು ದಿವಸದಲ್ಲಿ ಎಂದು ಒಂದು ಕಾಲಮಿತಿ ಹಾಕಿಕೊಂಡು ಮಾಡಬೇಕು. ಮತ್ತು ಇನ್ನೊಂದು ಲಘುರೈಲು ಎಂದು ಇತ್ತೀಚಿನ ದಿನಗಳಲ್ಲಿ ಹೇಳುತ್ತಿದ್ದಾರೆ. ಒಂದು ಕಡೆ ಮೇಲು ಸೇತುವೆ ಮಾಡುತ್ತೀರಿ, ಮತ್ತೊಂದು ಕಡೆ ಲಘು ರೈಲು ಮಾಡುತ್ತಿದ್ದೀರಿ. ಆ ಲಘು ರೈಲು ಮೇಲು ಸೇತುವೆಯನ್ನು ದಾಟಿ ಎಲ್ಲಿ ಹೋಗಬೇಕು? ಅದಕ್ಕೊಂದು ವ್ಯವಸ್ಥೆ ಇಲ್ಲ. ಅದಕ್ಕೆ ಒಂದು ಮಾರ್ಗ ಇಲ್ಲ. ಒಂದು ಯೋಜನೆ ಇಲ್ಲ. ಒಂದು ಕಡೆ ಮೇಲು ಸೇತುವೆ ಮತ್ತೊಂದು ಕಡೆ ಲಘು ರೈಲು, ಇನ್ನೊಂದು ಕಡೆ ಗಗನಚುಂಬಿ ಕಟ್ಟಡಗಳು. ಒಂದು ರೀತಿ ಬೆಂಗಳೂರು ಇದು ಬೆಂಗಳೂರಾಗಿ ಉಳಿದಿಲ್ಲ. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ, ಪ್ರಾಮಾಣಿಕವಾಗಿ ಇದರ ಬಗ್ಗೆ ಸಮಗ್ರ ಚಿಂತನೆ ಮಾಡಬೇಕು. ಬೆಂಗಳೂರಿನ ಬಗ್ಗೆ ಮೇಯರ್‌ಗಳು ಅನೇಕರು ನಿರಂತರವಾಗಿ ಸುಮಾರು ಹತ್ತು ವರ್ಷದ ಹಿಂದೆ ಲೆಕ್ಕ ಹಾಕಿದಾಗ ಮೇಯರುಗಳೆಲ್ಲಾ ಈ ಊರು ನನ್ನ ಸ್ವಂತ ಮನೆ ಎನ್ನುವ ದೃಷ್ಟಿಯಲ್ಲಿ ಪ್ರಾಮಾಣಿಕವಾದ ಕೆಲಸವನ್ನು ಮಾಡಿದ್ದಾರೆ. ಆದರೆ ಇವತ್ತು ಕಾರ್ಪೊರೇಷನ್ನೇ ಬೇರೆಯಾಗಿದೆ, ಸದಸ್ಯರೇ ಬೇರೆಯಾಗಿದೆ, ಶಾಸಕರೇ ಬೇರೆಯಾಗಿದೆ. ಒಂದಕ್ಕೊಂದು ಸಂಬಂಧ ಇಲ್ಲದೆ ಇಡೀ ನಗರವೇ ಒಂದು ರೀತಿಯಾಗಿ ಒಂದು ಕಗ್ಗಂಟಾದ ಪರಿಸ್ಥಿತಿ ಇದೆ. ನಿಮ್ಮಲ್ಲಿ ಶಕ್ತಿ ಇಲ್ಲ ಎನ್ನುವುದಕ್ಕಿಂತ ಹೆಚ್ಚಾಗಿ ಪ್ರಾಮಾಣಿಕವಾಗಿ ಚಿಂತನೆ ಮಾಡಿ ಈ ಊರನ್ನು ಉಳಿಸುವುದಕ್ಕೆ ನಾವು ಏನು ಮಾರ್ಗ ಮಾಡಬೇಕೋ ಅ ಬಗ್ಗೆ ತಾವು ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಸುದೀರ್ಘವಾಗಿ ಇದರ ಬಗ್ಗೆ ನಾನು ಅನೇಕ ವಿಚಾರಗಳನ್ನು ಹೇಳಬೇಕಾಗಿದೆ. ಸ್ವಾಮಿ ಅಧ್ಯಕ್ಷರೇ, ಕೆರೆಗಳೆಲ್ಲಾ ಹೊರಟುಹೋದವು. ಉದ್ಯಾನವನಗಳು ಹೊರಟುಹೋದವು. ರಸ್ತೆಯಲ್ಲಿ ಮನೆಗಳನ್ನು ಕಟ್ಟಿದರು. ತಾವು ಹೇಳಿದಹಾಗೆ ಫುಟ್‌ಪಾತಿನಲ್ಲೇ ದೇವಸ್ಥಾನಗಳು ಬಂದವು. ಒಂದರ ಹಿಂದೆ ಒಂದು ನಾವು ಲೆಕ್ಕ ಹಾಕಿದರೆ ಬೆಂಗಳೂರು ನಮ್ಮಲ್ಲಿ ಉಳಿದಿಲ್ಲ. ಆದ್ದರಿಂದ ಬೆಂಗಳೂರು ಸುತ್ತ ಉಪನಗರಗಳಾಗುತ್ತಿವೆ. ಅವರವರೇ ಉಪನಗರಗಳನ್ನು ಮಾಡುತ್ತಿದ್ದಾರೆ. ನೀವಲ್ಲ. ಅಭಿವೃದ್ಧಿ ಪ್ರಾಧಿಕಾರದವರು ಉಪನಗರ ಕಟ್ಟುತ್ತಿಲ್ಲ. ಅವರದೇ ಉಪನಗರಗಳು. ಬಿಡದಿ ರಾಮನಗರದಿಂದ ನಾನು ನೋಡುತ್ತಿದ್ದೇನೆ. ಅಲ್ಲಿಂದಾಚೆಗೆ ಮೂರು ಉಪನಗರ ಆಗಿದೆ. ಆ ರೈಲ್ವೆಯಿಂದ ಆಚೆಗೆ ಒಂದು ಉಪನಗರ, ಈ ಕಡೆ ಒಂದು ಉಪನಗರ, ಇದೇನಿದು ಒಂದು ತರಹ ಪಾಳೆಗಾರಿಕೆಯಾಗಿದೆ. ಇದಕ್ಕೆಲ್ಲಾ ನೀವು ಒಂದು ಮಸೂದೆಯನ್ನು ತಂದು ಯಾರು ಯಾರು ಬೆಂಗಳೂರಿಗೆ ಅವಹೇಳನ ಮಾಡಿ ಬೆಂಗಳೂರಿನ ಸೌಂದರ್ಯ ಹಾಳು ಮಾಡುತ್ತಿದ್ದಾರೆ ಇದರ ಬಗ್ಗೆ ಸಮರೋಪಾದಿಯಲ್ಲಿ

ನಾವು ಹೋರಾಟ ಮಾಡಿದರೂ ಚಿಂತೆ ಇಲ್ಲ. ಇದಕ್ಕೇ ನಾವು ನಿಲ್ಲಬೇಕು ಎನ್ನತಕ್ಕ ಮಾತನ್ನು ತಮಗೆ ಹೇಳಿ ತಾವು ತಕ್ಷಣದಲ್ಲೇ ಸಭೆ ಕರೆಯಿರಿ. ಸಂತೆ ತರಹ ಕರೆಯಬೇಡಿ. 25 ಜನ ಪ್ರಾಮಾಣಿಕವಾಗಿ ಮಾತನಾಡತಕ್ಕವರನ್ನು ಕರೆದು ಇದರ ಬಗ್ಗೆ ಒಂದು ಚಿಂತನೆಯನ್ನು ತಾವು ಮಾಡಬೇಕು ಎಂದು ಹೇಳುತ್ತೇನೆ. ಇದರ ಬಗ್ಗೆ ಬೇಕಾದಷ್ಟು ಮಾತನಾಡುವುದಿದೆ. ಬೇಡಿಕೆ ಸಂದರ್ಭದಲ್ಲಿ ಇದನ್ನು ಮಾತನಾಡಬೇಕಾಗಿತ್ತು. ಇರಲಿ. ಈ ಸಂದರ್ಭದಲ್ಲಿ ಕೂಡಲೇ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ತಾವು ಕರೆಯಬೇಕು. ನಮ್ಮ ಅಧ್ಯಕ್ಷರನ್ನೂ ಆ ಸಭೆಗೆ ಆಹ್ವಾನಿಸಬೇಕು. ಬೆಂಗಳೂರು ಎಂದರೆ ಇದು ಹೊರಗಡೆಯವರದಲ್ಲ. ನಮ್ಮೆಲ್ಲರದ್ದೂ. ಶಾಸಕರು ಇಲ್ಲೇ ಇದ್ದಾರೆ. ಮಂತ್ರಿಗಳು ಇಲ್ಲೇ ಇದ್ದಾರೆ. ಅಧಿಕಾರಿಗಳು ಇಲ್ಲೇ ಇದ್ದಾರೆ. ಎಲ್ಲರೂ ಬೆಂಗಳೂರಿನಲ್ಲಿರತಕ್ಕಂಥವರೇ. ಆದರೆ ಬೆಂಗಳೂರು ಯಾರಿಗೂ ಬೇಡ. ಗಾಳಿ ಕೆಟ್ಟಿದೆ. ರಸ್ತೆ ಕೆಟ್ಟಿದೆ. ನೀರು ಕೆಟ್ಟಿದೆ. ಪ್ರತಿಯೊಂದೂ ಕೆಟ್ಟುಹೋಗಿದೆ. ಎಲ್ಲಾ ಕುಲಗೆಟ್ಟಿರುವಾಗ ಇದನ್ನು ಸರಿಪಡಿಸುವುದಕ್ಕೆ ಕ್ರಮ ಕೈಗೊಳ್ಳಬೇಕಾದ್ದು ನಮ್ಮೆಲ್ಲರ ಜವಾಬ್ದಾರಿ. ಜನರೂ ಕೆಟ್ಟಿದ್ದಾರೆ. ಅದನ್ನೇನೂ ನಾವು ಮಾಡುವುದಕ್ಕಾಗುವುದಿಲ್ಲ. ಕೊನೆಗೆ ಒಂದೇ ಮಾತು ಹೇಳುತ್ತೇನೆ. ಸಾರ್ ಈಗ ಬೆಂಗಳೂರು ನಗರ ಕಾರ್ಪೊರೇಷನ್‌ನವರು ಎಲ್ಲಾಕಡೆ ಸಿಕ್ಕಾಪಟ್ಟೆ ಬಿಲ್ಡಿಂಗ್ ಒಡೆಯುತ್ತಿದ್ದಾರಲ್ಲಾ ವಿಕ್ಟೋರಿಯಾ ಆಸ್ಪತ್ರೆ ಪಕ್ಕ ಇದೆಯಲ್ಲಾ ಸ್ವಾಮಿ ಅಂಗಡಿಗಳಿದೆಯಲ್ಲಾ, ಆ ಫುಟ್‌ಪಾತ್‌ನಲ್ಲಿ ಅಂಗಡಿ ಕಟ್ಟಿದ್ದೀರಲ್ಲಾ 300-400 ಒಂದೊಂದು ಲೈನ್‌ನಲ್ಲಿ ಅದರ ಬಗ್ಗೆ ಪ್ರಾಮಾಣಿಕವಾಗಿ ಚಿಂತನೆ ಇಲ್ಲವೇ? ನಮ್ಮವರು ಸರಿಯಾಗಿ ವಾದ ಮಾಡಲಿಲ್ಲ. ಅವರು ತಡೆಯಾಜ್ಞೆ ಕೊಟ್ಟರು. ತಮ್ಮ ಲಾಯರ್‌ಗಳೆಲ್ಲಾ ಸರಿಯಾಗಿ ವಾದ ಮಾಡಿದ್ದರೆ ತಡೆಯಾಜ್ಞೆ ಯಾತಕ್ಕೆ ಕೊಡುತ್ತಿದ್ದರು? ಯಾವ ಉದ್ದೇಶಕ್ಕೆ ಕಟ್ಟಿದರು ಹೇಳಿ ವಿಕ್ಟೋರಿಯಾ ಆಸ್ಪತ್ರೆ ಪಕ್ಕ? ಇನ್ನೊಂದು ತಮಗೆ ಗೊತ್ತಿದೆಯಲ್ಲಾ ಸಾರ್ ಪುಟ್ಟಣ್ಣಚೆಟ್ಟಿ ಪುರಭವನದ ಎದುರಿಗೆ ಒಂದೇ ಲೈನ್ ತಾವು ನೋಡಬೇಕು ಸಾರ್ ಅಲ್ಲಿ ಕಟ್ಟಿರತಕ್ಕ ಅಂಗಡಿಗಳು, ಆ ವಿಕ್ಟೋರಿಯಾ ಆಸ್ಪತ್ರೆ ಪಕ್ಕ ಕಟ್ಟಿರತಕ್ಕದ್ದು ಮತ್ತು ಮಾರ್ಕೆಟ್ ಮುಂದೆ ಸ್ವೀಟ್ ಅಂಗಡಿಗಳು, ಇಲ್ಲೊಂದು ಅಂಗಡಿ ಅಲ್ಲೊಂದು ಅಂಗಡಿ. ಏನು ಇದೇನು ಊರೇ ಇದು? ಇದು ಬೆಂಗಳೂರೇ? ತಡೆಯಾಜ್ಞೆ ಇದೆ ಎಂಬುದನ್ನು ಒಂದೇ ಒಂದು ತೋರಿಸಿಬಿಟ್ಟು ಇದೆಲ್ಲದಕ್ಕೂ ನಾವು ಸಪೋರ್ಟ್ ಮಾಡತಕ್ಕದ್ದು ಸರಿಯಲ್ಲ ಎಂಬ ಮಾತನ್ನು ತಮಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು: ಈಗ ಮಾನ್ಯ ಮಂತ್ರಿಗಳು.

ಶ್ರೀಮತಿ ಪ್ರಮೀಳಾ ನೇಸರ್ಗಿ: ಸ್ಟೇ ಇಲ್ಲ, ಸುಪ್ರೀಂ ಕೋರ್ಟಿನಲ್ಲಿ. ನಾವು ಐದು ವರ್ಷ ವೆಕೇಟ್ ಮಾಡಿಸುವುದಿಲ್ಲ ಎಂದು ಹೇಳಿದ್ದಾರೆ. ತಮ್ಮ ಗಮನಕ್ಕೆ ತರುತ್ತಿದ್ದೇನೆ ಕಾರ್ಪೊರೇಷನ್ ಕಮಿಷನರ್ ಹೇಳಿದ್ದಾರೆ. ಕಾರ್ಪೊರೇಷನ್ ಕಮಿಷನರ್ ಹೇಳಿದ್ದಾರೆ. ಸ್ಟೇ ಇಲ್ಲ. ಸುಪ್ರೀಂ ಕೋರ್ಟಿನಲ್ಲಿ ಕೇಸ್ ಮುಗಿದಿದೆ. ಮುಗಿಸಿಬಿಟ್ಟು

ಪ್ರಮಾಣಪತ್ರ ಹಾಕಿದ್ದಾರೆ ಕಾರ್ಪೊರೇಷನ್ ಕಮಿಷನರ್ ಅವರು ನಾವು ವೆಕೇಟೇ ಮಾಡುವುದಿಲ್ಲ ಅಂತ.

MR. SPEAKER: Under what circumstances? Why did they give that undertaking?

SMT. PRAMILA NESARGI: God knows.

MR. SPEAKER: If the Commissioner of Corporation has to execute an undertaking before Supreme Court, there should be sufficient basis for it. What is the basis?

ಶ್ರೀಮತಿ ಪ್ರಮೀಳಾ ನೇಸರ್ಗಿ: ಅಧ್ಯಕ್ಷರೇ ಬೇಸಿಸ್ ಇಲ್ಲ. ಹೈಕೋರ್ಟಿನಲ್ಲಿ ವಜಾ ಮಾಡಿದ್ದಾರೆ.

MR. SPEAKER: Have they done it suo-moto, uncalled for. Is it the voluntary act committed by the Commissioner?

SMT. PRAMILA NESARGI: Sir, it is the voluntary act.

MR. SPEAKER: Then, the Hon'ble Minister for Bangalore Development has to explain on this.

ಶ್ರೀ ವಾಟಾಳ್ ನಾಗರಾಜ್: ಸರ್ಕಾರ ಈ ಬಗ್ಗೆ ಸ್ಪಷ್ಟನೆ ಕೊಡಬೇಕು. ಬೆಂಗಳೂರು ನಗರಾಭಿವೃದ್ಧಿ ಸಚಿವರು ವಿಕ್ಟೋರಿಯಾ ಆಸ್ಪತ್ರೆ ಪಕ್ಕ ಇರುವ ಅಂಗಡಿಗಳ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕಾಗುತ್ತದೆ.

+ ಶ್ರೀ ಅನಂತ್‌ನಾಗ್ (ಬೆಂಗಳೂರು ಅಭಿವೃದ್ಧಿ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯೆ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಏನು ಈಗ ಹೇಳಿದ್ದಾರೆ ಅವರ ಮಾಹಿತಿ ತಕ್ಷಣ ನನ್ನ ಹತ್ತಿರ ಇಲ್ಲ. ನಾನು ಕರೆಸಿ ಮಾತನಾಡಿ ಮಾಹಿತಿ ತರಿಸಿ ಒದಗಿಸುತ್ತೇನೆ. ಸನ್ಮಾನ್ಯ ವಾಟಾಳ್ ನಾಗರಾಜ್ ಅವರು ಏನು ಹೇಳಿದ್ದಾರೆ ಅದರ ಕುರಿತು ನಾನು ಈ ತಿಂಗಳೇ ಒಂದು ಸಭೆಯನ್ನು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಎಲ್ಲಾ ಶಾಸಕರನ್ನು ಕರೆಸಿ ಸಾಧ್ಯಾವಾದರೆ ತಾವು ಒಪ್ಪಿದಲ್ಲಿ, ಏಕೆಂದರೆ ಅನೇಕ ಭಿನ್ನಾಭಿಪ್ರಾಯಗಳು ಬರುತ್ತಿರುವ ಕಾರಣದಿಂದ ಇಲ್ಲಿ ಹೇಳುತ್ತಿದ್ದೇನೆ. ನಗರಪಾಲಿಕೆ ಸದಸ್ಯರನ್ನೂ ಸಹ ಕರೆಸಿ ಒಂದು ಸಮಗ್ರವಾಗಿ ಸಭೆ ಮಾಡಿದರೇನೆ ಸರಿಹೋಗಬಹುದು.

ಎಲ್ಲಾ ಕಡೆ ಎಲ್ಲಾ ಬಡಾವಣೆಗಳಲ್ಲಿ ಒಂದೊಂದು ಕಡೆ ಒಂದೊಂದು ಪರಿಸ್ಥಿತಿ ಇದೆ. ಒಂದು ಸಭೆ ಮಾಡಿಸಬೇಕು.

ಶ್ರೀ ವಾಟಾಳ್ ನಾಗರಾಜ್: ಸಂತೆ ಮಾಡಬೇಡಿ.

ಶ್ರೀ ಅನಂತ್‌ನಾಗ್: ಮಾನ್ಯ ರಾಮಲಿಂಗಾರೆಡ್ಡಿಯವರೂ ಹೇಳಿದ್ದಾರೆ. ಎಲ್ಲಾ ಶಾಸಕರನ್ನು ಮೊದಲು ಕರೆಸಿ ಮಾಡುತ್ತೇನೆ. ನಂತರ ಎಲ್ಲರನ್ನೂ ಕರೆಸಿ ಮಾಡುತ್ತೇನೆ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ.ಮಾಮನಿ)ರವರು ಪೀಠದಲ್ಲಿದ್ದರು)

ಸನ್ಮಾನ್ಯ ಉಪಸಭಾಧ್ಯಕ್ಷರೆ, ಮಾನ್ಯ ರಾಜಣ್ಣನವರು ಹೇಳಿದ ಅನೇಕ ವಿಚಾರಗಳಲ್ಲಿ ಮುಖ್ಯವಾಗಿ ಫ್ಲೈಓವರ್‌ಸ್ ಕುರಿತು ಅವರು ಕೇಳಿದ್ದಾರೆ. ಅದರಲ್ಲೂ ಕಾರಣ ಯಾವ ತರಹದ ಒತ್ತಡ ಇವತ್ತು ವಾಹನಗಳ ಒತ್ತಡ ಬೆಂಗಳೂರಿನಲ್ಲಿದೆ ಅದನ್ನು ಬಗೆಹರಿಸುವ ದೃಷ್ಟಿಯಿಂದ ಮೊದಲು ಅವರು ಹೇಳಿದ್ದಕ್ಕೆ ಫ್ಲೈಓವರ್ ಕುರಿತಾಗಿ ಹೇಳಿ ನಂತರ ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಅದಕ್ಕೆ ಪ್ರತಿಕ್ರಿಯಿಸುತ್ತೇನೆ.

12.30 ಪಿ.ಎಂ

ತಮಗೆ ಗೊತ್ತಿರುವ ಹಾಗೆ ಸಿರ್ಸಿವೃತ್ತದಿಂದ 94 ಕೋಟಿ ರೂಪಾಯಿಗಳ ಒಂದು ಫ್ಲೈಓವರ್‌ನ್ನು ಮಾಡಲಾಗುತ್ತಿದೆ. ಅದಕ್ಕೆ ಈಗಾಗಲೇ ನಾನು ಕ್ಲಾರಿಫೈ ಮಾಡಿದ್ದೇನೆ. ಇದಕ್ಕೆ ನಗರಪಾಲಿಕೆಯಿಂದ one-third of the amount and rest of it from HUDCOದಿಂದ ಸಾಲ ಮತ್ತು ಹಾಗೆಯೇ ರಾಜ್ಯಸರ್ಕಾರದಿಂದ ಅಂದರೆ ಕೆ.ಯು.ಐ.ಡಿ.ಎಫ್.ಸಿ-ಯಿಂದ ಬರುತ್ತದೆ. ಮೊನ್ನೆ ಮಾನ್ಯ ರಾಜಣ್ಣನವರು ಹೇಳಿದ್ದರು. ಹಿಂದೆ 1983ರಿಂದ ಪ್ರತಿವರ್ಷ ಈ ತರಹ ಭರವಸೆಗಳನ್ನು ಕೊಡಲಾಗುತ್ತಿದೆ, ಆದರೆ ಯಾವುದೂ ಕಾರ್ಯಗತವಾಗುತ್ತಿಲ್ಲ, ಇದು ಗಾಳಿಗೋಪುರವಾಗಿದೆ ಎಂದು ಅವರು ಹೇಳಿದರು. ಆದರೆ ನಾನು ಅವರಿಗೆ ಆಶ್ವಾಸನೆಯನ್ನು ನೀಡಬಯಸುತ್ತೇನೆ. ಎಲ್ಲವೂ ಕೂಡ ಇವತ್ತು ನಾವು ಏನೇನು ಫ್ಲೈಓವರ್‌ಸ್‌ಗಳನ್ನು ಹಾಕಿಕೊಂಡಿದ್ದೇವೆ, ಮುಖ್ಯವಾಗಿ ಟೌನ್‌ಹಾಲ್‌ನಿಂದ ಸಿರ್ಸಿವೃತ್ತದವರೆಗೆ, ಹಡ್ಸನ್ ವೃತ್ತದಿಂದ ಅಲ್ಲಿ ರಿಚ್‌ಮಂಡ್ ವೃತ್ತದಲ್ಲಿ, ಮಹಾರಾಣಿ ಕಾಲೇಜು ಅಲ್ಲಿಂದ ರಾಜಾಜಿನಗರದವರೆಗೆ ಕಾರಿಡಾರ್‌ನ ಅಭಿವೃದ್ಧಿ, ಟ್ರಿನಿಟಿ ವೃತ್ತದಲ್ಲಿ, ಮೇಖ್ರಿ ವೃತ್ತದಲ್ಲಿ ಮೇಲುಸೇತುವೆಗಳು ಮತ್ತು ಸುಭಾಷ್‌ನಗರದಿಂದ ಅಂದರೆ ಶಾಂತಲಾ ಸಿಲ್ಕ್‌ಹತ್ತಿರದಿಂದ ಮಾಗಡಿರಸ್ತೆ ಮುಖಾಂತರ ಪಶ್ಚಿಮಕಾರ್ಡ್ ರಸ್ತೆ ಸೇತುವೆ ನಿರ್ಮಾಣ-ಇವೆಲ್ಲವೂ ಕೂಡ ಆಗುವಂಥವು. ಇದು ಗಾಳಿಗೋಪುರಗಳು ಅಲ್ಲ. ಇದಕ್ಕೆ ಬಜೆಟರಿ ಪ್ರಾವಿಷನ್ ಕೂಡ ಮಾಡಿದ್ದೇವೆ. ಹಿಂದೆ ಮೆಘಾಸಿಟಿ ಅಡಿಯಲ್ಲಿ ಇದು ಇರಲಿಲ್ಲ. ಮೆಘಾಸಿಟಿ ಯಾವುದು ಸುಮಾರು 1990ನೇ ಇಸವಿಯಲ್ಲಿ ಕೇಂದ್ರಸರ್ಕಾರದಿಂದ ಪ್ರಾರಂಭವಾಗಿದೆ. ಹುಡ್ಕೋದಿಂದ ಹಣ

ಬರುತ್ತದೆ, ಕೆ.ಯು.ಐ.ಡಿ.ಎಫ್.ಸಿ ಎಂದು ನಾವು ಕೂಡ ಮಾಡಿದ್ದೇವೆ. ಇವೆಲ್ಲವೂ ಕೂಡ ಇವತ್ತು ಖಂಡಿತವಾಗಿ ಜಾರಿಗೆ ಬರುವಂಥಾದ್ದು. ಅದರಲ್ಲೂ ಕೂಡ ಸಿರ್ಸಿ ವೃತ್ತದ 94 ಕೋಟಿ ರೂಪಾಯಿಗೆ ನಾವು ಏನು ಪ್ರಾರಂಭ ಮಾಡಿದ್ದೇವೆ, It is a turn-Key project. ಆದರೆ ಇಂತಿಷ್ಟು ಹಣದಲ್ಲಿ, ಇಂತಿಷ್ಟು ಅವಧಿಯಲ್ಲಿ ಮುಗಿಯಬೇಕು ಎನ್ನುವಂಥಾದ್ದು. 1998 ಡಿಸೆಂಬರ್ ಒಳಗೆ ಮುಗಿಸುತ್ತೇವೆ ಅಂತ ಅವರು ಹೇಳಿದ್ದಾರೆ. ಆದ್ದರಿಂದ ಅಲ್ಲಿ ಯವರೆಗೆ ಯಾವರೀತಿಯಿಂದ, ಎಷ್ಟು ತ್ವರಿತಗತಿಯಲ್ಲಿ ಇದು ನಡೆಯುತ್ತದೆ ಅಥವಾ ಮುಗಿಯುತ್ತದೆ ಎನ್ನುವ ಹಿನ್ನಲೆಯಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಹಡ್ಸನ್ ವೃತ್ತದಲ್ಲಿ 35 ಕೋಟಿ ರೂಪಾಯಿಗಳಿಗೋಸ್ಕರ, ರಿಚ್ಮಂಡ್ ವೃತ್ತದಲ್ಲಿ 40 ಕೋಟಿ, ಮಹಾರಾಣಿ ಕಾಲೇಜಿನಿಂದ ಆ ಕಾರಿಡಾರ್‌ವರೆಗೆ ಮಾಡುತ್ತಿದ್ದೇವೆ. ಇನ್ನು ರಾಜಾಜಿನಗರ ಪ್ರವೇಶದ್ವಾರದವರೆಗೆ ಅದು 80 ಕೋಟಿಗೆ ಆಗುವಂಥಾದ್ದು. ಹಾಗೆಯೇ ಸುಭಾಷ್‌ನಗರದಿಂದ ಶಾಂತಲಾ ಸಿಲ್ಕ್-ಮಾಗಡಿ ರಸ್ತೆಯಿಂದ ಪಶ್ಚಿಮಕಾರ್ಡ್ ರಸ್ತೆಗೆ ಸೇರುವ ಮೇಲ್‌ಸೇತುವೆ ಇದಕ್ಕೂ 80 ಕೋಟಿ ರೂಪಾಯಿಗಳು. ಪ್ರತಿಯೊಂದಕ್ಕೂ ಕೂಡ HUDCO AND ಕೆ.ಯು.ಐ.ಡಿ.ಎಫ್.ಸಿ. ಇಂದ two-third of the amount will be coming. ಮಾನ್ಯ ರಾಮಲಿಂಗಾರೆಡ್ಡಿಯವರು ಮತ್ತು ತಾವೂ ಕೂಡ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಅದನ್ನು ನಾನು ಒಪ್ಪುತ್ತೇನೆ. ತಾವು ಹೇಳಿದ್ದನ್ನು ಮಾನ್ಯ ಮುಖ್ಯಮಂತ್ರಿಗಳಿಗೂ ಹೇಳಿ ಏಕೆಂದರೆ, ಇದಕ್ಕೆ ಸರ್ಕಾರವೇ ವಹಿಸಿಕೊಂಡರೆ ಸ್ವಲ್ಪ ಶೀಘ್ರದಲ್ಲಿ ಆಗಬಹುದು ಎನ್ನುವುದು. ಆದರೆ ಕೆಲವು ಟೆಕ್ನಿಕಲ್ ಪಾಯಿಂಟ್‌ಗಳಿವೆ. ಉದಾಹರಣೆಗೆ ಶ್ರೀಮತಿ ಹೇಮಾವತಿ ಅವರು ಪಾಯಿಂಟ್‌ಔಟ್ ಮಾಡಿದರು. ರಿಚ್‌ಮಂಡ್ ಸರ್ಕಲ್‌ದ್ದು ಅದು ಕ್ಲಿಯರ್ ಆಗಿದೆ. ಬಹುಶಃ ಇನ್ನು ಒಂದು ತಿಂಗಳೊಳಗೆ ಅದನ್ನು ಪ್ರಾರಂಭ ಮಾಡುತ್ತೇವೆ ಎನ್ನು ಭರವಸೆಯನ್ನು ನಾನು ಸದನಕ್ಕೆ ತಮ್ಮ ಮೂಲಕ ನೀಡಲು ಬಯಸುತ್ತೇನೆ. ಎರಡರದ್ದೂ ಕೂಡ ಸ್ವಲ್ಪ ಕಾಂಪ್ಲಿಕೇಷನ್ಸ್ ಇದೆ. ಒಂದು ಮೇಖ್ರಿಸರ್ಕಲ್‌ನಲ್ಲಿ ಅಲ್ಲಿ ಇ.ಎಲ್.ಆರ್.ಟಿ.ಎಸ್., ಆ ಖಾತೆ ನನಗೆ ಬರುವುದಿಲ್ಲ. ಆದರೆ ನನಗೆ ವಿಚಾರ ಗೊತ್ತಿದೆ. Elevated Light Rail Transport System ಅಂದು 99ರಲ್ಲಿ ಪ್ರಾರಂಭವಾಗಿ 2009ರಲ್ಲಿ ಮುಗಿಯುತ್ತದೆ ಎಂದು ಹೇಳಿದ್ದಾರೆ. ಅದು ಇನ್ನೂ ಪ್ರಾರಂಭವಾಗಿಲ್ಲ. ಆದರೆ ಪ್ಲಾನಿಂಗ್ ಸ್ಟೇಜ್‌ನಲ್ಲಿದೆ. ಆದರೆ ಮೈಸೂರು ಸರ್ಕಲ್‌ದ್ದು ಮತ್ತು ಟ್ರಿನಿಟಿ ಸರ್ಕಲ್‌ದ್ದು ಈ ಎರಡೂ ಕಡೆ ಒಂದ್ಕೊಂದು ಹೊಂದಾಣಿಕೆ ಆಗುವುದಿಲ್ಲ ಎನ್ನುವುದು ಹಿಂದೆ ಬಂದಿತ್ತು. ಅದಕ್ಕೇ ವಿಳಂಬವಾಗುತ್ತಿತ್ತು. ಆವಾಗಲೂ ಅವರು ಅನೇಕ ಸಭೆಗಳನ್ನು ಮಾಡಿದ್ದರೂ ಕೂಡ ಇದು ಸ್ವಲ್ಪ ಬಗೆಹರಿಯಲಿಲ್ಲ. ಅದಕ್ಕೆ ನಾವು ಮೊನ್ನೆ ಮುಖ್ಯಮಂತ್ರಿಗಳು ಆದೇಶ ನೀಡಿದ್ದಾರೆ. ಇನ್ನು ಒಂದು ತಿಂಗಳೊಳಗೆ ಎಲ್ಲ ಕ್ಲಿಯರೆನ್ಸ್ ಆಗುತ್ತದೆ. Finance is also cleared. There is no hitch whatsover. ಇ.ಎಲ್.ಆರ್.ಟಿ.ಎಸ್. ಮತ್ತು ಅದಕ್ಕೆ ಕ್ಲಾಷ್ ಆಗಬಾರದು ಎಂದು ಅದು ಒಂದೇ

ಹಿಚ್ ಇತ್ತು. ಇದನ್ನು ಕೂಡ ನಾವು ಒಂದು ತಿಂಗಳ ಒಳಗೆ ಪ್ರಾರಂಭ ಮಾಡುತ್ತೇವೆ ಎನ್ನುವುದನ್ನು ಇ.ಎಲ್.ಆರ್.ಟಿ.ಎಸ್.ಗೆ ಸ್ಪಷ್ಟವಾಗಿ ಹೇಳುವಂಥ ಪ್ರಮೇಯ ಒದಗಿಬಂತು. ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಇವೆಲ್ಲವೂ ಕೂಡ ಈ 80 ಕೋಟಿ ರೂಪಾಯಿಯ ಕಾರಿಡಾರ್ ಮಹಾರಾಣಿ ಕಾಲೇಜಿನಿಂದ ರಾಜಾಜಿನಗರ ಪ್ರವೇಶದ್ವಾರದವರೆಗೆ ಮತ್ತು 80 ಕೋಟಿ ಶುಭಾಶ್‌ನಗರದಿಂದ ಪಶ್ಚಿಮಕಾರ್ಡ್ ರಸ್ತೆಗೆ ಸೇರುವವರೆಗೆ, ಅದು 80 ಕೋಟಿ ರೂಪಾಯಿಯದ್ದು ಪ್ರಾಜೆಕ್ಟ್ ರಿಪೋರ್ಟ್‌ಗಳನ್ನು ಮಾಡಿದ್ದೇವೆ. ಹುಡ್ಕೋದಿಂದ ಸ್ಯಾಂಕ್ಷನ್ ಕ್ಲಿಯರ್ ಆಗಿ ಬರಬೇಕು, ಅದು ಬರುತ್ತದೆ. ಅದರಲ್ಲಿ ಏನೂ ಸಂಶಯ ಇಲ್ಲ. ಇದು ಯಾರ ಜೀವಿತದಲ್ಲಿ ಬರುತ್ತದೆ ಎನ್ನುವುದು ಮುಖ್ಯ ಅಲ್ಲ. ಆದರೆ ಮೂರು-ಐದು ವರ್ಷಗಳಲ್ಲಿ ಇವೆಲ್ಲವೂ ಕೂಡ ಕಾರ್ಯಗತವಾಗುತ್ತದೆ ಎನ್ನುವುದನ್ನು ನಾನು ಖಡಾಖಂಡಿತವಾಗಿ, ಬಹಳ ವಿಶ್ವಾಸದಿಂದ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲು ಇಚ್ಛಿಸುತ್ತೇನೆ. ಏಕೆಂದರೆ, this is planned since a long time. But, the pratical difficulty was... ಮಾನ್ಯ ತಿಮ್ಮಪ್ಪನವರು ಹೇಳಿದಹಾಗೆ, ಹಣ ಎಲ್ಲಿಂದ ತರುತ್ತೀರಿ ಎನ್ನುವುದು. ಇದು ಮೆಗಾಸಿಟಿ ಯೋಜನೆಯಡಿ ಇವೆಲ್ಲವೂ ಸ್ಯಾಂಕ್ಷನ್ ಆಗಿವೆ. ಮಾನ್ಯ ನಂಜೇಗೌಡರಿಗೆ ಈ ವಿಚಾರ ಗೊತ್ತಿದೆ. ಇದು ಇ.ಎಲ್.ಆರ್.ಟಿ.ಎಸ್.ನಿಂದ ತಡವಾಯಿತು ಹೇಗೋ, ಹಾಗೆ ಕೆಂಪಾಂಬುದಿ ಕೆರೆ, ಅಥವಾ ಜೆ.ಪಿ. ಪಾರ್ಕ್ ಮತ್ತಿಕೆರೆ, ಅವುಗಳಿಗೂ ಕೂಡ ಸ್ಯಾಂಕ್ಷನ್ ಆಗಿವೆ. ಆದರೆ ವ್ಯವಸ್ಥೆ ಹೇಗಿದೆ ಎಂದರೆ, ಹಿಂದೆ ಈ ಕೆರೆಗಳನ್ನು ಎಲ್ಲಾ ಅರಣ್ಯ ಇಲಾಖೆಗೆ ವಹಿಸಲಾಗಿತ್ತು. ಅವರೇ ಮಾಡಬೇಕು ಎಂದು ಇತ್ತು. ಇದು ನ್ಯಾಯಾಲಯದಲ್ಲಿದೆ. ನ್ಯಾಯಾಲಯದ ಅನುಮತಿ ಬೇಕಾಗಿದೆ. ಇದನ್ನು ಮಹಾನಗರಪಾಲಿಕೆಗೆ ವಹಿಸಿಕೊಟ್ಟನಂತರ ಕಾರ್ಯ ಪ್ರಾರಂಭ ಮಾಡಬೇಕು. ಇದರಲ್ಲಿ ಆರು ತಿಂಗಳು ವೇಸ್ಟ್ ಆಗಿದೆ. ಒಂದೊಂದು ಸಲ ಹತಾಶೆಯಿಂದಾಗುತ್ತದೆ. ಇಂತಹ ಕೆಲವು ವಿಚಾರಗಳಿಂದ....

ಶ್ರೀ ಎಂ.ಶ್ರೀನಿವಾಸ್: ಇದು 1989ರಲ್ಲಿ ಆಯಿತು. ಲಕ್ಷ್ಮಣರಾವ್ ಸಮಿತಿ ಮಾಡಿ ಆ ಕೆರೆಗಳನ್ನು ಎಲ್ಲಾ ಅರಣ್ಯ ಇಲಾಖೆಗೆ ವಹಿಸಿದ್ದರು. ಈಗ.....

ಶ್ರೀ ಅನಂತನಾಗ್: ವಹಿಸಿದ್ದರು. ಈಗ ಜೆ.ಪಿ.ಪಾರ್ಕ್ ಆಗಲೀ, ಕೆಂಪಾಂಬುಧಿ ಪಾರ್ಕ್ ಆಗಲೀ, ಅವುಗಳಲ್ಲಿ ಮೆಗಾಸಿಟಿಯಲ್ಲಿ ನಮಗೆ ಎರಡು ಕೋಟಿ ರೂಪಾಯಿ....

ಶ್ರೀ ಎಂ.ಶ್ರೀನಿವಾಸ್: ಅಂತರಜಲದಿಂದ ವಹಿಸಿಯಾದ ಮೇಲೆ ಇವತ್ತು ಕೆರೆಗಳು ಇಲ್ಲದಹಾಗೆ ಆಗಿರುವುದು.

ಶ್ರೀ ಅನಂತನಾಗ್: ಕೆರೆಗಳ ಸಮಸ್ಯೆ ಅಲ್ಲ. ನಾನು ಹೇಳುತ್ತಿರುವುದು. ಕೆಲವು ಕಾರ್ಯಗಳು ಪ್ರಾರಂಭವಾಗಿ ಹಣ ಸ್ಯಾಂಕ್ಷನ್ ಆಗಿದೆ, ಅದನ್ನು ಪ್ರಾರಂಭ ಮಾಡಬೇಕು ಎಂದರೆ ನ್ಯಾಯಾಲಯದಿಂದ ಆದೇಶ ಬರಬೇಕು, ಅರಣ್ಯ ಇಲಾಖೆ

ಮಹಾನಗರಪಾಲಿಕೆಗೆ ಕೊಡಬೇಕು. ಇಂತಹ ಕೆಲವು ಸ್ಮಾಲ್ ಹಿಚಸ್‌ನಿಂದ ಬಹಳಷ್ಟು ಡಿಲೇ ಆಗಿದೆ. ಆದರೆ ಇವೆಲ್ಲವುಗಳನ್ನೂ ಕೂಡ ಪ್ರಾರಂಭ ಮಾಡುತ್ತೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಮುಖ್ಯವಾಗಿ ಇದು ವಾಹನ ಸಂಚಾರಕ್ಕೆ ಸಂಬಂಧಪಟ್ಟಿರುವ ವಿಚಾರದಲ್ಲಿ ಮಾನ್ಯ ರಾಜಣ್ಣನವರು ಔಟ್‌ರಿಂಗ್ ವಿಚಾರದಲ್ಲಿ ಕೂಡ ಹೇಳಿದ್ದಾರೆ. ಸುಮಾರು 63 ಕಿಲೋಮೀಟರ್ ಉದ್ದದ ಈ ಔಟರ್‌ರಿಂಗ್ ರೋಡ್‌ನ್ನು ನಾವು ಕೈಗೊಂಡಿದ್ದೇವೆ. ಉದಾಹರಣೆಗೆ ಅದು ತುಮಕೂರು ರೋಡಿನಿಂದ ಬಳ್ಳಾರಿ ರೋಡಿಗೆ, ಜಾಯಿನ್ ಮಾಡಬೇಕು. ಬಳ್ಳಾರಿ ರೋಡ್‌ನಿಂದ ಓಲ್ಡ್‌ಮದ್ರಾಸ್ ರೋಡಿಗೆ ಅದನ್ನು ಜಾಯಿನ್ ಮಾಡಬೇಕಾಗಿದೆ. ಅದಾದರೆ ಬಹಳಷ್ಟು ಒತ್ತಡ ಇಲ್ಲಿ ಬೆಂಗಳೂರಿನಲ್ಲಿ ಕಡಿಮೆಯಾಗುತ್ತದೆ. ಈಗಾಗಲೇ ಒಬ್ಬರು ಕಾಂಟ್ರಾಕ್ಟರ್ ಕೆಲಸ ಪ್ರಾರಂಭ ಮಾಡಿಲ್ಲ ಎಂದು ಹೇಳಿದರು, ಆದರೆ ಮಾಡಿದ್ದಾರೆ. ನಾನು ಸ್ವತಃ ಹೋಗಿ ಇನ್‌ಸ್ಪೆಕ್ಟ್ ಮಾಡಿ ಬಂದಿದ್ದೇನೆ. ಕೆಲಸ ಪ್ರಾರಂಭವಾಗಿದೆ. ಒಂದು ಕಡೆ ಕಣ್ಣಿಗೆ ಬೀಳುತ್ತದೆ. ಏಕೆಂದರೆ ಅದು, ಹೋಗಿಬರುವ ದಾರಿಯಲ್ಲಿದೆ. ಇನ್ನೊಂದು ಕಡೆ ಅದು ಮಿಲಿಟರಿ ಜಾಗ ಇರುವುದರಿಂದ ಅಲ್ಲಿ ಎಲ್ಲರಿಗೂ ಪ್ರವೇಶ ಇಲ್ಲ. ಅಲ್ಲೂ ಕೂಡ ಕೆಲಸ ನಡೆಯುತ್ತಿದೆ. ಒಟ್ಟು ಸುಮಾರು 260 ಕೋಟಿ ರೂಪಾಯಿ ಈ ಔಟರ್ ರಿಂಗ್‌ರೋಡ್‌ಗೆ ಬೇಕಾಗಿದೆ. ಅದನ್ನು ಕೂಡ ಒದಗಿಸಿರಲಿಲ್ಲ. ಆದರೆ ನಾವು ಸರ್ಕಾರದಿಂದ 40 ಕೋಟಿಯನ್ನು....

ಶ್ರೀ ಎಂ.ಶ್ರೀನಿವಾಸ್: ಮಾನ್ಯ ಮಂತ್ರಿಗಳೇ, ನೀವು 200 ಕೋಟಿ ಎಂದು ಹೇಳುತ್ತೀರಲ್ಲಾ, ಆ ರಿಂಗ್‌ರೋಡ್‌ಗಳಿಗೆ ಗುಣಿಗಳನ್ನು ಮುಚ್ಚುವುದಕ್ಕೆ 11 ಲಕ್ಷ ರೂಪಾಯಿ ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ,. ನಾನು ಒಂದು ವರ್ಷದಿಂದ ಪ್ರಯತ್ನ ಬೀಳುತ್ತಿದ್ದೇನೆ. ರಿಂಗ್‌ರೋಡ್‌ನಲ್ಲಿ ಗುಣಿಗಳು ಬಿದ್ದಿದೆಯಲ್ಲಾ, ಹಳ್ಳ ಬಿದ್ದಿದೆಯಲ್ಲಾ, ಅದಕ್ಕೆ 11 ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿ ಒಂದು ವರ್ಷವಾಯಿತು. ತಮಗೂ ಹೇಳಿದ್ದೇನೆ, ಮುಖ್ಯಮಂತ್ರಿಗಳಿಗೂ ಹೇಳಿದ್ದೇನೆ. ಇದುವರೆಗೂ ಆ ರಿಂಗ್‌ರೋಡ್‌ನಲ್ಲಿ ಗುಣಿಗಳನ್ನು ಮುಚ್ಚಿಲ್ಲ ನೀವು 200 ಕೋಟಿಗೆ ಹೋದಿರಿ. ನಿಮಗೆ ಪುರುಸೊತ್ತು ಆದಾಗ ಬನ್ನಿ, ತಮ್ಮನ್ನು ಕೂಡ ನಾನು ಕರೆದಿದ್ದೇನೆ.

ಶ್ರೀ ಅನಂತ್‌ನಾಗ್: ಒಳ್ಳೆಯ ಕೆಲಸ ಬೆಂಗಳೂರಿಗೋಸ್ಕರ ಪ್ರಾರಂಭವಾದರೆ ನಂತರ ಬಂದ ಸರ್ಕಾರ ಕೂಡ ಅದನ್ನು ಮುಂದುವರೆಸಿಕೊಂಡು ಹೋದರೆ ಈ ತರಹ ಆಗುವುದಿಲ್ಲ. ಇದು ತಮಗೂ ಗೊತ್ತಿದೆ. ಇದು ಉತ್ತಮವಾದ ರೋಡೇ - it is going to see - ಉತ್ತಮವಾದ ರಸ್ತೆ ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ಹಾಕಿದ್ದು ಹಾಳಾಗಿದೆ. Because it was not completed, the whole road has to be redone almost. Such a road from Bellary Road to old Madras Road.... ಅದು ಪ್ರಾರಂಭವಾಗಿದೆ. ಒನ್ ಕ್ಯಾರಿಯೇಜ್‌ವೇ ಓಪನ್ ಮಾಡುವುದಕ್ಕೆ ಕೂಡ ನಾವು ಕ್ರಮ ಕೈಗೊಂಡಿದ್ದೇವೆ.

ಆಮೇಲೆ 180 ಕೋಟಿ ಮೊನ್ನೆ ತಾನೆ ನಮಗೆ ಹುಡ್ಕೋದಿಂದ ಸ್ಯಾಂಕ್ಷನ್ ಆಗಿದೆ. ಮೊನ್ನೆ ಸುರೇಶ್‌ಕುಮಾರ್ ಅವರು ಹೇಳಿದರು ಇದಕ್ಕೆ ಬಜೆಟರಿ ಸಪೋರ್ಟ್ ಕೊಡಬೇಕು ಎಂದು ಇದು ಆಗಿದೆ. ಇದು ಮೇ 1998ರೊಳಗೆ ಕಂಪ್ಲೀಟ್ ಆಗುತ್ತದೆ. ಇದು ಮುಗಿದಮೇಲೆ ಬೆಂಗಳೂರಿನ ಮೇಲೆ ಏನು ಒತ್ತಡ ಇದೆ, ಅದು ಬಹಳಷ್ಟು ಕಡಿಮೆಯಾಗುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. ಅದೂ ಅಲ್ಲದೇನೇ ಎಲ್ಲಾ ಟ್ರಾಫಿಕ್ ಡೈವರ್ಟ್ ಆಗಬೇಕು, ಬೆಂಗಳೂರಿಗೆ ಎಲ್ಲಾ ಲಾರಿಗಳಿಗೆ ಅತ್ಯಗತ್ಯವಾಗಿ ಬರಬೇಕಾದ ಪ್ರಮೇಯ ಬರಬಾರದು ಎನ್ನುವ ದೃಷ್ಟಿಯಿಂದ ಒಂದು ಎಕ್ಸಿಸ್ಟಿಂಗ್ ರೋಡನ್ನು ಆಗ್ಮಂಟೇಷನ್ ಮಾಡುವುದಕ್ಕೆ ಸುಮಾರು 40 ಕೋಟಿ ರೂಪಾಯಿಗಳಲ್ಲಿ ಎರಡು ಕೆಲಸಗಳನ್ನು ಕಂಟ್ರಾಕ್ಟ್ ಕೊಟ್ಟು ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಸಪೋರ್ಟಿಂಗ್ ರೋಡ್ ಟು ನ್ಯಾಷನಲ್ ಹೈವೇ. ಅದು ಡಾಬಸ್‌ಪೇಟೆಯಿಂದ ದೊಡ್ಡಬಳ್ಳಾಪುರ-ದೇವನಹಳ್ಳಿಗೆ, ಆಮೇಲೆ ದೇವನಹಳ್ಳಿಯಿಂದ ವಯಾ ಹೊಸಕೋಟೆ-ಅತ್ತಿಬೆಲೆಗೆ. ಇದು 130 ಕಿಲೋಮೀಟರ್ ಉದ್ದದ ರಸ್ತೆ ಇದೆ. ಇದು ಇನ್ನು ಒಂದು ವರ್ಷದೊಳಗೆ ಕಂಪ್ಲೀಟ್ ಆಗಬೇಕಾಗಿದೆ. ಇಬ್ಬರು ಕಾಂಟ್ರಾಕ್ಟರ್‌ಗಳಿಗೆ ಅದನ್ನು ಕೊಡಲಾಗಿದೆ, ಮತ್ತು ಕೆಲಸ ಪ್ರಾರಂಭವಾಗುತ್ತದೆ. ಈ ಕೆಲಸಗಳು ಮುಗಿದರೆ ಖಂಡಿತವಾಗಿಯೂ ಬೆಂಗಳೂರಿನಲ್ಲಿ ಈ ವಾಹನಗಳ ಒತ್ತಡ ಕಡಿಮೆಯಾಗುತ್ತದೆ. ಮಾನ್ಯ ರಾಜಣ್ಣನವರು ಒಂದು ಹೇಳಿದರು. ಇವೆಲ್ಲ ಯಾವಾಗ ಮುಗಿಯುತ್ತದೆ ಎಂದು ಅವರು ಪ್ರಶ್ನೆ ಹಾಕಿದ್ದರು. 1998ರಲ್ಲಿ ಈ ಸಿರ್ಸಿವೃತ್ತ-ಟೌನ್‌ಹಾಲ್‌ವರೆಗಿನ ಈ ಫ್ಲೈಓವರ್ ಕಂಪ್ಲೀಟ್ ಆಗುತ್ತದೆ. ಅದರ ನಂತರ ಎಲ್ಲವನ್ನೂ ಕೂಡ ನಾವು ನಮ್ಮ ಕಾಲದಲ್ಲೇ ಪ್ರಾರಂಭ ಮಾಡುತ್ತೇವೆ. ವಿದೇಶಗಳಲ್ಲಿ ಅನೇಕ ಕಡೆ ಒಂಭತ್ತು ತಿಂಗಳುಗಳಲ್ಲಿ, ಒಂದು ವರ್ಷದಲ್ಲಿ ಇಂತಹ ಫ್ಲೈಓವರ್ಸ್‌ಗಳನ್ನು ಕಂಪ್ಲೀಟ್ ಮಾಡಿದ ಉದಾಹರಣೆಗಳು ಇವೆ. ಆದರೆ ನಮ್ಮ ದೇಶದಲ್ಲಿ ಪ್ರಸಕ್ತ ಸಾಲಿನಲ್ಲಿ ಆದರೂ ಪ್ರಾರಂಭ ಮಾಡುವ ಪ್ರಯತ್ನ ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ಶ್ರೀಮತಿ ಪ್ರಮೀಳನೇಸರ್ಗಿಯವರು ಸಿಲ್ವರ್ ಜ್ಯುಬಿಲಿ ಪಾರ್ಕ್ ಬಗ್ಗೆ ಹೇಳಿದ್ದಾರೆ. ಆ ಬಗ್ಗೆಯೂ ಕೂಡ ಈಗಾಗಲೇ ಎಲ್ಲಾ ಶಾಸಕರನ್ನು ಕರೆದು ಒಂದು ಸಭೆ ಮಾಡಿದ್ದೇವೆ. ಫ್ಲೈಓವರ್ ಬಗ್ಗೆ ತಾವು ಸಲಹೆ ಕೊಟ್ಟಿದ್ದೀರಿ, ತಮಗೆ ಹೇಳಿದ ಹಾಗೆ ಆ ಕಡೆ ಮಿನರ್ವ ಮಿಲ್‌ನ ಕಾಟ ಇದೆ.....

ಶ್ರೀ ಬಿ.ಮುನಿಯಪ್ಪ: ಮಂತ್ರಿಗಳೆ, ಪ್ರಾಪರ್ಟಿ ಮಿನರ್ವಮಿಲ್ಲಿನದು ಅಲ್ಲ, ಸರ್ಕಾರದ್ದು. ಅವರ ಹತ್ತಿರ ಡಾಕ್ಯೂಮೆಂಟ್ಸ್ ಇಲ್ಲ. ಅದನ್ನು ಸರ್ವೆ ಮಾಡಿಸಬೇಕು, ಆ ರಸ್ತೆಯನ್ನು ವೈಡನ್ ಮಾಡಬೇಕು, ಇದನ್ನು ಮಾಡಿಲ್ಲ ಎಂದರೆ ಅಲ್ಲಿ ಜನರಿಗೆ ಓಡಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಅವರ ಹತ್ತಿರ ಡಾಕ್ಯುಮೆಂಟ್ಸ್ ಇಲ್ಲ, ಅದು ಸರ್ಕಾರದ ಜಾಗ, ಅವರು ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ. ಅದನ್ನು ವೇಕೆಂಟ್ ಮಾಡಿಸಿ.

ಶ್ರೀ ಎನ್.ಸುರೇಶ್ ಕುಮಾರ್: ಮಾನ್ಯ ಜಾಲಪ್ಪನವರೇ ನಮ್ಮ ರಾಜ್ಯದಿಂದ ಅಲ್ಲಿ ಮಿನಿಸ್ಟರ್ ಆಗಿರುವುದು, ಎನ್.ಟಿ.ಸಿಗೆ ಸೇರಿರುವುದು, ಎನ್.ಟಿ.ಸಿಯವರು ನಮ್ಮದು ಎಂದು ಅವರು ಕ್ಲೇಮ್ ಮಾಡುತ್ತಿದ್ದಾರೆ. ನೀವು ಹೋಗಿ ಒಂದೇ ಒಂದು ಸಿಟ್ಟಿಂಗ್ ಅಲ್ಲಿ ಕುಳಿತುಕೊಂಡು ರಸ್ತೆಗೋಸ್ಕರ ಬಿಡಿಸಿಕೊಂಡು ಬಂದು ಬಿಡಿ; ಮುಗಿದು ಹೋಗುತ್ತದೆ. ನಮ್ಮ ರಾಜ್ಯದಿಂದಲೇ ಅವರು ಟೆಕ್ಸ್‌ಟೈಲ್ ಮಿನಿಸ್ಟರ್ ಆಗಿರುವಾಗ it is a question of one visit to Delhi ಅಥವಾ ಬೆಂಗಳೂರಿಗೆ ಬಂದಾಗ ಕುಳಿತುಕೊಂಡು ಸೆಟ್ಲ್ ಮಾಡಿಸಿ.

ಶ್ರೀ ಬಿ.ಮುನಿಯಪ್ಪ: ಎನ್.ಟಿ.ಸಿಯವರು ಅವರ ಪ್ರಾಪರ್ಟಿಯನ್ನು 250 ಕೋಟಿ ರೂ.ಗಳಿಗೆ ಮಾರಿ ಲೇಟೆಸ್ಟ್ ಮಿಷನರಿಯನ್ನು ಹಾಕುತ್ತಾರಂತೆ. ಸರ್ಕಾರದ ಜಾಗವನ್ನು ಎನ್.ಟಿ.ಸಿ.ಯವರು ಮಾರುತ್ತಾರಂತೆ. ಅವರು ಜಾಹೀರಾತು ಕೊಟ್ಟುಬಿಟ್ಟು ಬೇರೆ ದೇಶದವರನ್ನು ಈಗಾಗಲೇ ಕರೆದಿದ್ದಾರೆ. ಆದ್ದರಿಂದ ಅವರ ಹತ್ತಿರ ಯಾವ ಡಾಕ್ಯೂಮೆಂಟ್ ಇಲ್ಲ, ಇದಕ್ಕೆ ನೀವು ಬೆಂಗಳೂರು ಡಿಸಿಯವರೊಂದಿಗೆ ಒಂದು ಮೀಟಿಂಗ್ ಮಾಡಿ. ನೀವು ಹೋದ ವರ್ಷದಲ್ಲಿ ಹೇಳಿದ್ದೀರಿ ಒಂದು ವಾರದಲ್ಲಿ ಮಾಡುತ್ತೇನೆಂದು ನಾನು ಮೂರು ಸಲ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ನಂತರ ಮೈಸೂರ್ ಬ್ಯಾಂಕ್ ಸರ್ಕಲ್, ಕೆಂಪೇಗೌಡ ಸರ್ಕಲ್, ಸಂಗಂ ಹತ್ತಿರ, ತಾವು ಇದು ಯಾವುದರ ಬಗ್ಗೆ ಪ್ರಸ್ತಾಪ ಮಾಡಿಲ್ಲ, ಬೇಕಾದರೆ ಅಲ್ಲಿಗೆ ಸಂಜೆ ಹೋಗೋಣ, ಅಲ್ಲಿ ಸುರಂಗ ಮಾರ್ಗ ಆಗಬೇಕು, ಅಲ್ಲಿ ರಸ್ತೆಯನ್ನು ಕ್ರಾಸ್ ಮಾಡಬೇಕಾದರೆ ಸುಮಾರು ಒಂದರಿಂದ ಒಂದೂವರೆ ಗಂಟೆಯಷ್ಟು ಸಮಯ ವ್ಯಯವಾಗುತ್ತಿದೆ, ಇದರಿಂದಾಗಿ ಜನ ಶಾಪ ಕೊಡುತ್ತಾರೆ. ಈ ಮೂರು ಜಾಗದಲ್ಲೂ ಸಬ್‌ವೇ ಆಗಬೇಕಾಗಿದೆ. ಸಂಗಂ ಹತ್ತಿರ ಪ್ರೈವೇಟ್‌ನವರು ಮಾಡುತ್ತೇವೆ ಎಂದರು, ಅವರಿಗೆ ನೀವು ಪರ್ಮಿಷನ್ ಕೊಡಿ, ಏಕೆಂದರೆ ಅವರು ದುಡ್ಡು ಖರ್ಚು ಮಾಡಿ ಜನಗಳು ಆ ಕಡೆಯಿಂದ ಈ ಕಡೆಗೆ ಓಡಾಡುವುದಕ್ಕೆ ಅನುಕೂಲ ಮಾಡಿಕೊಡುತ್ತಾರೆ. ಇದು ಯಾವುದೂ ತಾವು ಮಾಡುವುದಿಲ್ಲ.

ಶ್ರೀ ಅನಂತ್‌ನಾಗ್: ಇದಕ್ಕೆ ನಾನು ಹೇಳುವುದು ಮಾನ್ಯ ವಾಟಾಳ್‌ರವರು ಹೇಳಿದ ಹಾಗೆ ನಾವು ಎಲ್ಲರೂ ಕುಳಿತುಕೊಂಡು ಒಂದೇ ಸಲ ಈ ವಿಚಾರವನ್ನು ಚರ್ಚೆ ಮಾಡಿ ಸೆಟ್ಲ್ ಮಾಡುವಂಥದ್ದು ಆಗಿದೆ. ನಾನು ಸಭೆ ಕರೆಯುತ್ತೇನೆ ಆ ಸಭೆಯಲ್ಲಿ ತಾವು ಹೇಳಿ, ಏಕೆಂದರೆ ತಾವು ಕಾರ್ಪೋರೇಷನ್‌ನಲ್ಲಿದ್ದೀರಿ, ಯಾವ ಯಾವ ಕಂಟ್ರಾಕ್ಟರ್‌ಗಳು ಬಂದಿದ್ದರು, ಪ್ರೈವೇಟ್‌ನವರು ಬಂದಿದ್ದರು, ನಾವು ಮಾಡುತ್ತೇವೆಂದು ಹೇಳಿದರು, ಎಷ್ಟು ಕಂಪ್ಲೀಟ್ ಆಗಿದೆ, ಎಷ್ಟು ಜನ ತೆಗೆದುಕೊಂಡರು, ಎಷ್ಟಕ್ಕೆ ಕೊಡಲಾಗಿದೆ ಎಂಬುದು ತಮಗೂ ಗೊತ್ತಿದೆ. ಆದ್ದರಿಂದ ನಾವು ಒಂದು ಸಭೆಯನ್ನು ಮಾಡಿ, ಆ ಸಭೆಯಲ್ಲಿ ಒಂದು ತೀರ್ಮಾನ ಕೈಗೊಂಡು, ಎಲ್ಲೆಲ್ಲಿ ಹೋಗಬೇಕು, ಆ ಸ್ಥಳಗಳನ್ನು ಪರಿಶೀಲನೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಿ ಈ

ಕೆಲಸಗಳನ್ನು ಮಾಡೋಣ. ಏಕೆಂದರೆ ವಿಷಯ ಪ್ರಾರಂಭವಾಗಿದ್ದು, ಫ್ಲೈಓವರ್ ಬಗ್ಗೆ...

(4) ಅಧ್ಯಕ್ಷರ ಅಪ್ಪಣೆ ಮೇರೆಗೆ

ಕಂಠೀರವ ಸ್ಟೇಡಿಯಂಗೆ ಸೇರಿದ ಜಾಗವನ್ನು ಮಲ್ಯ ಆಸ್ಪತ್ರೆಗೆ ನೀಡಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಇಲ್ಲಿ ಏನಾಗಿದೆ ಎಂದರೆ, ನಾವು ಸರ್ಕಾರದ ಆಸ್ತಿ, ನಗರ ಸಭೆಯ ಆಸ್ತಿ, ಇವುಗಳನ್ನು ಉಳಿಸತಕ್ಕಂಥದ್ದು ನಮ್ಮ ಜವಾಬ್ದಾರಿ. ನಾವು ಧರ್ಮದರ್ಶಿಗಳು, ಈ ರಾಜ್ಯವನ್ನು ಕಾಪಾಡತಕ್ಕಂಥವರು, ನಗರ ಸಭೆಯಾಗಿರಬಹುದು, ಸರ್ಕಾರವಾಗಿರಬಹುದು, ಈ ರಾಜ್ಯವಾಗಿರಬಹುದು. ಇಲ್ಲಿ ಎರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಈ ಯುಬಿ ಗ್ರೂಪ್‌ನವರು ಇಲ್ಲಿ ಇದ್ದಾರಲ್ಲಾ ಅದು ಕಾರ್ಪೊರೇಷನ್‌ನವರದೇ ಜಾಗ ಸ್ವಲ್ಪ ಹೆಚ್ಚು ಕಡಿಮೆ ಅದು 10 ಕೋಟಿ ರೂ.ಗಳಿಗೆ ಹೋಗುತ್ತದೆ. ಅದನ್ನು ಪಾರ್ಕ್ ಮಾಡಿಕೊಂಡು ನೀವು ಇಟ್ಟುಕೊಳ್ಳಿ ಎಂದು ಯುಬಿ ಗ್ರೂಪ್‌ನವರಿಗೆ ಕೊಟ್ಟಿದ್ದರಲ್ಲಾ, ಇವತ್ತಿನವರೆಗೆ ಯುಬಿ ಗ್ರೂಪ್‌ನಿಂದ ಆ ಜಾಗವನ್ನು ಬಿಡಿಸಿಕೊಳ್ಳುವುದಕ್ಕೆ ನೀವು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಖೈದಿಗಳಿಗೆ ಆ ಜಾಗವನ್ನು ಮಾರಿದರೂ 10 ಕೋಟಿ ರೂ.ಗಳು ಬರುತ್ತದೆ, ಅಂತಹ ಸ್ಥಳವನ್ನು ಹಾಗೆ ಬಿಟ್ಟಿದ್ದೀರಿ, ಇವತ್ತು ನನಗೆ ಒಂದು ವಿಚಾರ ಗೊತ್ತಾಗಿಧೆ, ಕಂಠೀರವ ಸ್ಟೇಡಿಯಮ್‌ದು ಸುಮಾರು ಒಂದೂ ಕಾಲು ಎಕರೆ ಜಾಗವನ್ನು ಅಲ್ಲಿ ಮಲ್ಯ ಆಸ್ಪತ್ರೆಗೆ ಕೊಡಬೇಕೆಂದು ನೀವು ತೀರ್ಮಾನ ಮಾಡಿದ್ದೀರಿ, ಇವತ್ತು ಬೆಳಿಗ್ಗೆ ನಾವು ಬರುವಾಗ ಅಲ್ಲಿ ಲಾರಿ, ಬುಲ್ಡೋಜರ್ ಹಾಕಿಕೊಂಡು ಜಾಗವನ್ನು ರೆಡಿ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ.. ನೀವು ಎಲ್ಲಿ ತಲುಪಿದ್ದೀರಿ? ದಯಮಾಡಿ ಎಲ್ಲಾ ವಿರೋಧ ಪಕ್ಷಗಳಿಗೆ ನಾನು ಕೈ ಮುಗಿದು ಕೇಳುತ್ತೇನೆ, ಈ ಸದನದ ಮುಗಿದ ತಕ್ಷಣ ಸಂಜೆ ಆ ಸ್ಥಳಕ್ಕೆ ಭೇಟಿ ಮಾಡೋಣ... ವಿರೋಧ ಪಕ್ಷದ ನಾಯಕರು, ಯಡಿಯೂರಪ್ಪನವರು, ಸುರೇಶ್ ಕುಮಾರ್, ಎಲ್ಲರೂ ಇವತ್ತು ಆ ಸ್ಥಳಕ್ಕೆ ಭೇಟಿ ಮಾಡೋಣ. ಆ ಸ್ಥಳ ಮಾತ್ರ ಒಂದು ಇಂಚೂ ಕೂಡ ಹೋಗಬಾರದು, ಏಕೆಂದರೆ ಈ ರಾಜ್ಯದ ಆಸ್ತಿ ಅದು. ಆ ಆಸ್ತಿ ಕಂಠೀರವ ಸ್ಟೇಡಿಯಮ್‌ಗೆ ಸೇರಿದ್ದು ಸುಮಾರು 15 ಕೋಟಿ ರೂ. ಆಗುತ್ತದೆ, ಯು.ಬಿ.ಗ್ರೂಪ್‌ಗೆ ಪಕ್ಕದಲ್ಲಿ ಕೊಟ್ಟಿರುವಂಥದ್ದು 10 ಕೋಟಿ ರೂ.ಆಗುತ್ತದೆ. ಅಲ್ಲಿ ಸ್ಟೇಡಿಯಮ್‌ಗೆ ಕಷ್ಟ, ಹುಡುಗರು ಓಡಾಡುವುದಕ್ಕೆ ಕಷ್ಟ, ಆಟಗಾರರು ಓಡಾಡುವುದಕ್ಕೆ ಕಷ್ಟ, ಈ ರೀತಿಯ ಒಂದು ಪರಿಸ್ಥಿತಿ ಅಲ್ಲಿರುವಾಗ, ಆ ಮೂಲೆಯಲ್ಲಿರುವ ಜಾಗವನ್ನು ತೆಗೆದುಕೊಂಡು ಮಲ್ಯ ಆಸ್ಪತ್ರೆಗೆ ಯಾರಿಗೆ ದಾನ ಮಾಡುತ್ತಿದ್ದೀರಿ? ದಯಮಾಡಿ ತಮಗೆ ಕೈ ಮುಗಿದು ಹೇಳುತ್ತೇನೆ, ತಾವು ಎಲ್ಲರೂ ಬನ್ನಿ ನಾವೆಲ್ಲಾ ಒಟ್ಟಿಗೆ ಹೋಗೋಣ, ಆ ಸ್ಥಳ ಬೇಟಿ ಮಾಡಿಕೊಂಡು ಬರೋಣ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿರುವ ವಿಷಯವನ್ನು, ಮಾನ್ಯ ಸಿ.ಎಂ.ಲಿಂಗಪ್ಪನವರು, ಪ್ರಸ್ತಾಪ ಮಾಡುತ್ತೇನೆಂದು ಬರೆದೂ ಕೂಡ ಕೊಟ್ಟಿದ್ದರು. ಅವರು ಸುಮಾರು 3-4 ದಿವಸಗಳಿಂದ ಪ್ರಯತ್ನ ಪಡುತ್ತಿದ್ದಾರೆ, ಬಹುಶಃ ಇದಕ್ಕೆ ಕನ್‌ಸೆಂಟ್ ಸಿಕುತ್ತಾ ಇಲ್ಲ.... ಅವರು ಇವತ್ತು ಫೋಟೋ ತೆಗೆದುಕೊಂಡು ಹೋಗಿ ತೋರಿಸಿದರು, ವಾಟಾಳ್ ನಾಗರಾಜ್‌ರವರು ಇದನ್ನು ಪ್ರಸ್ತಾಪ ಮಾಡಿದ್ದಾರೆ. ಸಂಬಂಧಪಟ್ಟ ವಿಷಯವನ್ನು ಪ್ರಸ್ತಾಪ ಮಾಡಿರುವುದರಿಂದ ನಾನೂ ಕೂಡ ಹೇಳುತ್ತಿದ್ದೇನೆ. ಏಕೆಂದರೆ ಇವತ್ತು ಏನಾಗುತ್ತದೆ, ಯಾವುದೋ ಒಂದು ಕಾರಣಕ್ಕಾಗಿ ಜಾಗವನ್ನು ಕೊಡುತ್ತಾರೆ, ಹಿಂದೆ ಮಲ್ಯ ಗ್ರೂಪ್‌ನವರಿಗೆ ಅಲ್ಲಿ ಯಾವುದೋ ಒಂದು ಪಾರ್ಕ್ ಮೇಂಟೇನ್ ಮಾಡಿಕೊಂಡು ಹೋಗಬೇಕು, ಅಥವಾ ಅಲ್ಲಿ ನೀರಿನ ಕಾರಂಜಿಯನ್ನು ಮಾಡಬೇಕು.. ಏಕೆಂದರೆ ಚೆನ್ನಾಗಿ ಕಾಣಲಿ ಎಂದು, ತಾವು ಎಲ್ಲಾ ಕಡೆ ನೋಡಿರಬಹುದು, ಎಲ್ಲೆಲ್ಲಿ ಈ ಚೌಕ, ರಸ್ತೆಗಳು, ಬರುತ್ತವೆ ಅಲ್ಲಲ್ಲಿ ಮೇಂಟೇನ್ ಬೈ ಸೋ ಅಂಡ್ ಸೋ ಅಂಪನಿ, ಮೇಂಟೇನ್ ಬೈ ಹೆಚ್‌ಎಂಟಿ, ಮೇಂಟೇನ್ ಬೈ ಟೈಟಾನ್, ಹೀಗೆ ಬರೆದಿರುತ್ತಾರೆ. ಆ ರೀತಿಯಲ್ಲಿ ಮೇಂಟೇನ್ ಮಾಡುವುದಕ್ಕೆ ಅವರಿಗೆ ಜಾಗವನ್ನು ಕೊಟ್ಟಿರಬಹುದು. ಆದರೆ ಮೇಂಟೇನ್ ಮಾಡುವುದಕ್ಕೆ ಕೊಟ್ಟಿರುವ ಜಾಗಗಳನ್ನು ಇವರು ಆ ಎಲ್ಲಾ ಆಸ್ತಿಗಳನ್ನು ತಮ್ಮದೆಂದು ಮಾಡಿಕೊಳ್ಳಬೇಕು, ಹಾಗೂ ಸರ್ಕಾರ ಇದಕ್ಕೆ ಕನ್‌ಸೆಂಟ್ ಕೊಡಬೇಕು ಎಂದರೆ ಇದು ದೊಡ್ಡ ಅನ್ಯಾಯ. ಸರ್ಕಾರದ ಕೋಟಿಗಟ್ಟಲೆ ಹಣ ಈ ರೀತಿ ಲೂಟಿಯಾದರೆ ಬಹಳ ಕಷ್ಟವಾಗುತ್ತದೆ. ಇದಕ್ಕೆ ತಕ್ಷಣ ಅದನ್ನು ಕೊಡತಕ್ಕಂಥ ವ್ಯವಸ್ಥೆ ಇದ್ದರೆ ನಿಲ್ಲಿಸಬೇಕು; ಹಾಗೂ ಈಗಾಗಲೇ ಮಾನ್ಯ ಸದಸ್ಯರು ಹೇಳಿದಹಾಗೆ, ಕ್ರೀಡಾಂಗಣದಲ್ಲಿ ಕ್ರಿಕೇಟ್ ಮ್ಯಾಚ್ ಅಥವಾ ಇನ್ನೂ ಯಾವುದೇ ಮ್ಯಾಚ್ ನಡೆದಾಗ ಅಥವಾ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭವಿರಲಿ, ಮಕ್ಕಳ ದಿನಾಚರಣೆ ಮಾಡುವಾಗ, ನಮ್ಮ ಇಡೀ ಬೆಂಗಳೂರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಅಲ್ಲಿ ಫಂಕ್ಷನ್ ಮಾಡುತ್ತಿರುತ್ತಾರೆ. ಅಂಥ ಸಂದರ್ಭದಲ್ಲಿ ಕಾರು ಪಾರ್ಕಿಂಗ್ ಆಗಲಿ, ಅಥವಾ ಅಲ್ಲಿ ಮಕ್ಕಳ ಸೈಕಲ್, ಸ್ಕೂಟರ್, ಇವುಗಳನ್ನು ನಿಲ್ಲಿಸುವುದಕ್ಕೆ ಜಾಗವಿಲ್ಲ, ಓಡಾಡುವುದಕ್ಕೆ ಜಾಗವಿಲ್ಲ, ಇಂತಹ ಸನ್ನಿವೇಶದಲ್ಲಿ ಈಗ ನೀವು ಇರತಕ್ಕಂಥ ಜಾಗವನ್ನು ಮಲ್ಟಿ ಮಿಲಿಯನೇರ್‌ರವರಿಗೆ ಗಿರಿವಿ ಇಟ್ಟರೆ.. ಅದಕ್ಕೆ ನಾನು ಈ ಸರ್ಕಾರ ಮಾರ್ವಾಡಿಗಳ ಹತ್ತಿರ ಗಿರಿವಿಗೆ ಹೋಗಿದೆ ಎಂದು ಹೇಳಿದ್ದು. ಬಡವರಿಗೆ ನಗರಗಳಲ್ಲಿ ಅಥವಾ ಹಳ್ಳಿಗಳಲ್ಲಿ ನಿವೇಶನ ಕೊಡಿ ಎಂದರೆ, ಕೊಡುವುದಕ್ಕಾಗುವುದಿಲ್ಲ. ಇಂತಹ ಮಹತ್ವವಾಗಿರುವ, ನೂರಾರು ಕೋಟಿ ರೂಪಾಯಿ ಬೆಲೆ ಬಾಳುವ ಜಾಗಗಳನ್ನು ತಾವು ಇವತ್ತಿನ ದಿವಸ ಪ್ರೈವೇಟ್ ಫರ್ಮ್‌ಗಳಿಗೆ ಲೀಸ್ ಮಾಡಿಕೊಡತಕ್ಕಂಥದ್ದು, ಅಥವಾ ಪರಭಾರೆ ಮಾಡುವುದು,.. ಈ ವಿಷಯವನ್ನು ಕ್ಯಾಬಿನೆಟ್ ಮುಂದೆ ಕೂಡ ತರದೆ, ನೀವು

ನಿಮ್ಮ ನಿಮ್ಮ ಲೆವಲ್‌ನಲ್ಲಿ ಹೊರಗಡೆಯಿಂದಲೇ ಈ ರೀತಿ ಮಾಡಿದರೆ ಇದು ಹೇಗೆ? ಇವತ್ತು ಬಿಸಿನೆಸ್ ಟ್ರಾನ್ಸಾಕ್ಷನ್ ರೂಲ್ಸ್ ಪ್ರಕಾರ 5 ಲಕ್ಷ ರೂ.ಗಿಂತ ಹೆಚ್ಚಿನ ಆಸ್ತಿ ಇದ್ದರೆ ಕ್ಯಾಬಿನೆಟ್ ಮುಂದೆ ಬರಬೇಕು, ನಂತರ ಪರಭಾರೆ ಮಾಡಬೇಕು. ಇಲ್ಲದಿದ್ದರೆ, ಈ ಕಂಟ್ರಾಕ್ಟ್‌ಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ 50 ಲಕ್ಷ ರೂ.ಗಳಿಗಿಂತ ಹೆಚ್ಚಾಗಿದ್ದರೆ ಇದು ಕೂಡ ಕ್ಯಾಬಿನೆಟ್ ಮುಂದೆ ಬರಬೇಕು. ಈ ರೀತಿ ಇದೆ. ಇವತ್ತು ತಮಗೆ ಗೊತ್ತಿರುವ ಹಾಗೆ ಆ ಒಂದು, ಎರಡು ಎಕರೆ ಸಮೀಪವಿರುವ ಜಾಗದ ವ್ಯಾಲ್ಯೂ ಸುಮಾರು 10 ಕೋಟಿ ರೂ. ಮೇಲಾಗುತ್ತದೆ. ಇಂತಹ 10 ಕೋಟಿ ರೂ. ಮೌಲ್ಯದ ಜಾಗದ ವಿಚಾರ ಕ್ಯಾಬಿನೆಟ್ ಮುಂದೆ ಬರದೇ ಕೇವಲ ಅಲ್ಲಿಂದ ಅಲ್ಲೇ ನಿಮ್ಮ ಲೆವಲ್‌ಮೇಲೆ ಕೊಡಬೇಕು ಎನ್ನುವ ತೀರ್ಮಾನ ನೀವು ಕೈಗೊಂಡಿದ್ದೀರಿ ಎನ್ನುವ ಸುದ್ದಿಯನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಅದಕ್ಕಾಗಿ, ದಯಮಾಡಿ ಇಂತಹ ಜಾಗವನ್ನು ಕೊಡುವಂಥದ್ದು ಆಗಬಾರದು, ಒಂದು ಪಕ್ಷ ಅದು ನಡೆದಿದ್ದೇ ಆದರೆ ಒಂದು ದೊಡ್ಡ ಚಳುವಳಿ ಎಲ್ಲಾ ಪಕ್ಷದವರು... ಇದನ್ನು ವಿರೋಧ ಮಾಡತಕ್ಕಂಥವರು ನಿಮ್ಮ ಪಕ್ಷದಲ್ಲೂ ಇದ್ದಾರೆ. ಒಂದು ಪಕ್ಷ ನೀವು ಮಾಡಿದ್ದೇ ಆದರೆ ಇವತ್ತು ಬೆಂಗಳೂರಿನ ನಾಗರೀಕರು ಚಳುವಳಿ ಮಾಡಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ತಾವು ಯಾರಿಗೂ ಕೂಡ ತಲೆ ಬಾಗಬಾರದು. ಹಾಗೂ ನಾನು ಅನೇಕ ಸಲ ಯಾವ ಯಾವ ಜಾಗಗಳನ್ನು, ಯಾರ್‍ಯಾರಿಗೆ ಕೊಟ್ಟಿದ್ದೀರಿ ಎನ್ನುವ ಮಾಹಿತಿ ಕೊಡಿ ಎಂದು ಕೇಳಿದ್ದೇನೆ. ಹಿಂದೆ ಅನೇಕ ಚಾರೀಟಬಲ್ ಇನ್‌ಸ್ಟಿಟ್ಯೂಟ್‌ಗಳಿಗೆ ಕಂಡೀಷನ್ ಹಾಕಿ ಕೊಟ್ಟಿದ್ದಾರೆ. ಆದರೆ ನೀವು ಕೊಟ್ಟಿರುವುದು ಯಾರಿಗೆ? ಕಮರ್ಷಿಯಲ್, ಹಾಗೂ ಯಾರು ಮಲ್ಟಿ ಮಿಲಿಯನೇರ್ ಇದ್ದಾರೆ. ಅವರೇನು ಬಡವರು ಇದ್ದಾರೆಯೇ? ಮದರ್ ಥೆರೇಸಾ ರೀತಿಯಲ್ಲಿ ಚಾರಿಟಿ ನಡೆಸಿಕೊಂಡು, ಲೆಪ್ರಿಸಿ ಇನ್‌ಸ್ಟಿಟ್ಯೂಷನ್ ಇಟ್ಟುಕೊಂಡು, ಕುರುಡರಿಗೆ, ಕುಂಟರಿಗೆ, ಕಿವುಡರಿಗೆ, ಸಹಾಯ ಮಾಡುತ್ತಾರೆಯೇ? ಇವತ್ತು ನೀವು ಏನು ಮಾಡುತ್ತೀರಿ ಎಂದರೆ ಬ್ಲಾಕ್ ಮಾರ್ಕೆಟರ್, ದುಡ್ಡುಳ್ಳವರು, ಡಿಸ್ಟಿಲರಿ ಇರತಕ್ಕಂಥವರು, ವಿಮಾನವನ್ನು ಇಟ್ಟುಕೊಂಡಿರತಕ್ಕಂಥವರು, ದೊಡ್ಡ ದೊಡ್ಡ ಇಂಡಸ್ಟ್ರೀಸ್‌ರವರಿಗೆ, ಈಗಾಗಲೇ ಎಂ.ಸಿ.ಎಫ್. ಅನ್ನೇ ಒಂದು ಕಬಳಿಸಿ ಇಟ್ಟುಕೊಂಡಿದೆ. ಇಂತವರಿಗೆ ನೀವು ಕೊಡುತ್ತಾ, ಪ್ರೋತ್ಸಾಹವನ್ನು ಕೊಡತಕ್ಕಂಥದ್ದನ್ನು ಮಾಡಿದರೆ ಇದು.... ಮುಂದೆ ಯಾರು ಕೊಡುತ್ತಿದ್ದಾರೆ....

ಶ್ರೀ ಸಿ.ಬೈರೇಗೌಡ: ಎಂ.ಸಿ.ಎಫ್. ಅನ್ನು ಕಬಳಿಸಿದವರು, ಹಾಗೂ ಇದಕ್ಕೆ ಅವಕಾಶ ಮಾಡಿಕೊಟ್ಟವರು ಯಾರು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾರೇ ಇರಲಿ. ನಾನೇ ಇದ್ದೇನೆ ಎಂದು ತಿಳಿದುಕೊಳ್ಳಿ.

ಶ್ರೀ ಸಿ.ಬೈರೇಗೌಡ: ಈ ಮಾತನ್ನು ಈಗ ಹೇಳುತ್ತಿದ್ದೀರಲ್ಲಾ ಆಗ ಏನು

ಮಾಡಿದಿರಿ?... ಎಂ.ಸಿ.ಎಫ್ ಅನ್ನು ಕಬಳಿಸಿದ್ದಿರಲ್ಲಾ ಆಗ ಏನು ಮಾಡುತ್ತಿದ್ದೀರಿ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏನು ಮಾಡಿದ್ದೇವೆ ಎನ್ನುವುದು ಅಲ್ಲಿರುತ್ತದೆ. ಯಾವಾಗ ಏನು ಹೇಳಿದ್ದೇವೆ ಎನ್ನುವ ಪ್ರೊಸಿಡಿಂಗ್ಸನ್ನು ತಂದು ತೋರಿಸುವುದಕ್ಕಾಗುತ್ತದೆಯೇ? ನೀವು ತಂದು ತೋರಿಸುತ್ತೀರಾ?....

ಶ್ರೀ ಸಿ.ಬೈರೇಗೌಡ: ನಮ್ಮ ಮೇಲೆ ಹೇಳುತ್ತಿದ್ದೀರಲ್ಲಾ, ಏನು ಮಾಡುತ್ತಿದ್ದೀರಿ ಎಂದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಹೇಳುವುದು ಸರ್ಕಾರದ ಆಸ್ತಿ. ನಾನೇ ಇರಬಹುದು ನೀವೇ ಇರಬಹುದು, ಎಂ.ಸಿ.ಎಫ್.ದ್ದೇ ಇರಬಹುದು. ಇಲ್ಲಿ ಸ್ವಲ್ಪ ಕೇಳಿ, ನೀವು ಅದನ್ನು ಇನ್ನೊಬ್ಬರ ಮೇಲೆ ಹಾಕಿ ಹಿಂದಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ. ನಾನು ಹೇಳುವುದೇನೆಂದರೆ, ಟಿಫಾನಿಸ್ ಎದುರುಗಡೆ ಮೂಲೆಯಲ್ಲಿರತಕ್ಕಂಥ ಆಸ್ತಿನೂ ಕೂಡ ಹೋಯಿತು. ಅದನ್ನೂ ಕೂಡ ಮೊದಲು ಗಾರ್ಡನ್ ಮಾಡುತ್ತೇವೆ, ಫೌಂಟೆನ್ ಮಾಡುತ್ತೇವೆ, ಬ್ಯೂಟಿಫಿಕೇಷನ್ ಮಾಡುತ್ತೇವೆಂದು ಹೇಳಿ ಮೊದಲು ಅಲ್ಲಿ ಕಾಪೌಂಡ್ ಹಾಕುವುದು, ನಂತರ ಅದು ಉಪಯೋಗಕ್ಕೆ ಬರುವುದಿಲ್ಲವೆಂದು ಅಲ್ಲಿ ಏನೂ ಇಲ್ಲ ಎಂದು ಪುನಃ ಒಳಗಿಂದೊಳಗೆ ಲೀಸ್ ಮಾಡಿಕೊಳ್ಳತಕ್ಕಂಥದ್ದು, ಇಂತಹ ಕುತಂತ್ರದ ಪ್ರಯತ್ನಗಳು ಸತತವಾಗಿ ನಡೆಯುತ್ತಿವೆ. ನಂತರ ಏನಾಗುತ್ತದೆ? ನಿಮ್ಮ ಸರ್ಕಾರ ಹೋಗಿ, ನಮ್ಮ ಸರ್ಕಾರ ಬಂತು ಎಂದು ತಿಳಿದುಕೊಳ್ಳಿ.... 16 ವರ್ಷದಿಂದ ಸುಮ್ಮನೆ ಬಿದ್ದಿರುವುದರಿಂದ ಕೊಟ್ಟು ಬಿಡಿ ಎಂದು ಹೇಳುತ್ತೇವೆ. ಹೀಗೆಯೇ ಆಗುತ್ತಿದೆ. ಆದ್ದರಿಂದ ಈಗ ಏನು ಆಗುತ್ತದೆ ಎಂದರೆ ಇವತ್ತು ಕೋಟ್ಯಾಂತರ ರೂಪಾಯಿಗಳ ಆಸ್ತಿ ಹಸ್ತಾಂತರ ಆಗತಕ್ಕಂಥದ್ದು ಒಳಗಿಂದೊಳಗೆ ಆಗುತ್ತಿದೆ.

ಅನೇಕಸಾರಿ ಕ್ಯಾಬಿನೆಟ್ ಮುಂದೆಯೂ ಕೂಡ ಬರುವುದಿಲ್ಲ. ಅಂಥಾದ್ದು ಕೂಡ ನಡೆಯುತ್ತದೆ. ಅದಕ್ಕೆ ನಾನು ಕೇಳುತ್ತೇನೆ. ಏನು ಕ್ಯಾಬಿನೆಟ್ ನಿರ್ಣಯ ಆಗಿದೆಯೇ ಅಥವಾ ಕ್ಯಾಬಿನೆಟ್ ಮುಂದೆ ಬಂದು, ಕೊಡತಕ್ಕಂಥ ವ್ಯವಸ್ಥೆಯಾಗಿದೆಯೇ? ಅದು ಹೇಗೆ ಇವತ್ತಿನ ದಿವಸ ಅಲ್ಲಿ ಬುಲ್ಡೋಜರ್ ಹಚ್ಚಿ, ರಿಪೇರಿ ಮಾಡತಕ್ಕ ಕೆಲಸ ಹೇಗೆ ನಡೆಯುತ್ತಿದೆ? ಲೆವಲಿಂಗ್ ಮಾಡತಕ್ಕಂಥಾದ್ದಕ್ಕೆ ಯಾರು ಪರ್ಮಿಷನ್ ಕೊಟ್ಟರು? ಏನು ಕಾರ್ಪೊರೇಷನ್ ಕೊಟ್ಟಿದೆಯೇ, ಸ್ಪೋರ್ಟ್ಸ್ ಮಿನಿಸ್ಟರ್ ಕೊಟ್ಟರೆ ಅಥವಾ ಸರ್ಕಾರ ಕೊಟ್ಟಿದೆಯೇ ಅಥವಾ ಕ್ಯಾಬಿನೆಟ್‌ಗೆ ಬಂದು, ಅಲ್ಲಿ ಚರ್ಚೆಯಾದ ಮೇಲೆ, ಇದೊಂದು ಚಾರಿಟಿ ಇನ್‌ಸ್ಟಿಟ್ಯೂಷನ್ ನಡೆಸುತ್ತಾ ಇದ್ದಾರೆ, ಮಲ್ಯ ಹಾಸ್ಪಿಟಲ್‌ನವರು ಬಡವರಿಗೋಸ್ಕರ ನಡೆಸುತ್ತಾ ಇದ್ದಾರೆ, ಅವರಿಗೆ ಸಹಾಯ ಮಾಡಬೇಕೆಂಬ ಅನುಕಂಪದ ಆಧಾರದ ಮೇಲೆ ಏನಾದರೂ ಕೊಟ್ಟಿದ್ದೀರಾ? ಇದು ನಮಗೆ ಗೊತ್ತಾಗಬೇಕಲ್ಲಾ. ಇಲ್ಲದಿದ್ದರೆ ಏನಾಗುತ್ತದೆ, ಇದೇರೀತಿಯಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆನಿಫಿಟ್ ತೆಗೆದುಕೊಳ್ಳತಕ್ಕ ಜನ ಇರುತ್ತಾರೆ, ಅದು ನಮ್ಮ ಸರ್ಕಾರ ಮಾಡಿರಬಹುದು,

ಅದರ ಹಿಂದಿನ ಸರ್ಕಾರ ಮಾಡಿರಬಹುದು. ನೀವು ಮುಂದೆ ಮಾಡತಕ್ಕಂಥಾದ್ದು ಇರಬಹುದು. ಅದಕ್ಕೆ ನಾನು ದಯವಿಟ್ಟು ಹೇಳುತ್ತೇನೆ. ಇಂತಹ ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ಹಸ್ತಾಂತರ ಮಾಡತಕ್ಕಂಥಾದ್ದನ್ನು ಮಾಡಬಾರದು. ಹಾಗೇನಾದರೂ ಇದ್ದರೆ ಪುನಃ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ, ಇದನ್ನು ಕ್ಯಾನ್ಸಲ್ ಮಾಡಬೇಕೆಂಬ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ವಾಟಾಳ್ ನಾಗರಾಜ್‌ರವರು ಈ ವಿಷಯವನ್ನು ಪ್ರಾಸಂಗಿಕವಾಗಿ ಎತ್ತಿಬಿಟ್ಟಿದ್ದಾರೆ. ಇಲ್ಲಿ ಚರ್ಚೆಗೆ ಬಂದುಬಿಟ್ಟಿದೆ. ಭೈರೇಗೌಡರೂ ಹೇಳಿದರು. ನೀವು ಮಾಡಿದಿರಿ, ನಾವೂ ಮಾಡುತ್ತೇವೆ. ಇದು ಆಗಬಾರದು.

ಶ್ರೀ ಸಿ.ಭೈರೇಗೌಡ: ಅವರು ಎಂ.ಸಿ.ಎಫ್. ಬಗ್ಗೆ ಮಾತನಾಡಿದರು. ಎಂ.ಸಿ.ಎಫ್ ನಾವು ಮಾಡಿದ್ದಲ್ಲ. ಅದು ನಾವು ಮಾಡಿದ್ದರೂ ತಪ್ಪೇ ಇಂತಹ ಕೆಲಸವನ್ನು ಯಾರು ಮಾಡಿದ್ದರೂ ತಪ್ಪೇ. ಅದನ್ನು ನಾನು ಒಪ್ಪುತ್ತೇನೆ. ಅವರು ಎಂ.ಸಿ.ಎಫ್. ಬಗ್ಗೆ ಹೇಳಿದರು, ಅದು ನಾವು ಮಾಡಿದ್ದಲ್ಲ.

SRI M.MALLIKARJUNA KHARGE: Are you going to..

(INTERRUPTIONS)

ಶ್ರೀ ಸಿ.ಭೈರೇಗೌಡ: ನಾವು ಮಾಡಲಿಲ್ಲ ಎಂದಷ್ಟೇ ನಾನು ಹೇಳಿದ್ದುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆಗ ಕೊಟ್ಟಿರಬಹುದು. ಇದನ್ನು ಮುಂದುವರಿಸುವ ಬಗ್ಗೆಯಾದರೂ ತಾವು ಯೋಚನೆ ಮಾಡಬೇಕಲ್ಲಾ. ಅದೇ ಕಂಡೀಷನ್‌ಗೆ ಕೊಡಬೇಕೇ, ಆ ಸರ್ಕಾರ ಕೊಟ್ಟಂಥ ಕಂಡೀಷನ್ ಸರಿ ಇಲ್ಲ. ಆ ಆಸ್ತಿಯನ್ನೇ ಕಬಳಿಸುವಂತಿದ್ದರೆ, ನೀವು ಕ್ಯಾನ್ಸಲ್ ಮಾಡಿ. ನಾನು ಹೇಳುವುದು ಇದು. ಇದನ್ನು ನೀವು ಹೋಲಿಸಿಕೊಂಡು, ನೀವು ಕೊಟ್ಟಿರಿ, ಅವರು ಕೊಟ್ಟರು ಎಂದು ಹೇಳುವುದು ಬೇಡ ಎಂದು ಹೇಳುತ್ತೇನೆ.

+ ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ಒಂದು ತೀರ್ಮಾನ ಮಾಡಬೇಕು. ಈ ಸಭೆಯಲ್ಲಿಯೇ ಒಂದು ಕಾನೂನು ಮಾಡಿದರೆ ಒಳ್ಳೆಯದೆಂದು ನನ್ನ ಭಾವನೆ. ಇಲ್ಲದೇ ಇದ್ದರೆ, ನನಗೇನು ಅನಿಸುತ್ತದೆಂದರೆ, ನಿಮ್ಮ ಸರ್ಕಾರಕ್ಕೂ ಕೂಡ ಈ ಕುತ್ತೇಜಾಸ್ ರಹಾಜೇಸ್‌ಗೂ ಈ ಮಲ್ಯಾಕ್ಕೂ ಬಾರಿ ಸಂಪರ್ಕ; ಮಾನ್ಯ ಹೆಗಡೆಯವರು ಇದ್ದರು, ಫುಟ್‌ಬಾಲ್ ಸ್ಟೇಡಿಯಂ ಕೊಟ್ಟರು. ಫುಟ್‌ಬಾಲ್ ಸ್ಟೇಡಿಯಂ ಯಾರು ರಿಪೇರಿ ಮಾಡಿಸಿದವರು, ಸ್ಪೋರ್ಟ್ಸ್ ಮಿನಿಸ್ಟರು ಇಲ್ಲಿಯೇ

ಕುಳಿತಿದ್ದಾರೆ. ಈಗ ನೀವು ಮಾಡಿದಿರಿ. ಆದರೆ, ಮಾಡಬೇಕಾಗಿದ್ದವರು ಯಾರು, ಆ ರೆಹೇಜಾ ಮಾಡಬೇಕಾಗಿತ್ತು. ಅವರು ಮಾಡಿದ್ದೇನು. ಪ್ರಾಪರ್ಟಿಯೆಲ್ಲಾ ಹೋಗಿ, ಕಾಂಪ್ಲೆಕ್ಸ್ ಮಾಡಿ ಬಾಡಿಗೆ ಕೊಟ್ಟುಕೊಂಡು, ಕೆಲವರು ಮಾರಾಟ ಮಾಡಿಕೊಂಡು ಕೋಟಿಗಟ್ಟಲೆ ಗಂಟು ಮಾಡಿಕೊಂಡ. ಪ್ಲಾನ್‌ನಲ್ಲಿ ಅಪ್ರೂವಲ್ ಆಗದೇ ಇರುವುದನ್ನೆಲ್ಲಾ ಕಟ್ಟಿದ್ದಾನೆ. ಅದನ್ನು ಒಡೆಯುವುದಕ್ಕೆ ರವೀಂದ್ರ ಅವರ ಕಣ್ಣು ಬೀಳುವುದಿಲ್ಲ. ಏಕೆಂದರೆ, ಅದು ರೆಹೇಜಾಗೆ ಸೇರಿದೆ. ಜೆ.ಸಿ.ರೋಡಿನಲ್ಲಿ ಪಾರ್ಕಿಂಗ್‌ಗೆ ಎಂದು ದೇವೇಗೌಡರು ಇದ್ದಾಗ ಕೊಟ್ಟುಬಿಟ್ಟರು. ರೋಡನ್ನೂ ಸೇರಿಸಿ ಕೊಟ್ಟಿದ್ದಾರೆ. ಈಗ ನೀವು ಕಂಠೀರವ ಸ್ಟೇಡಿಯಂನ್ನೂ ಕೊಟ್ಟಿದ್ದೀರಿ, ಕೆಲಸ ನಡೆಯುತ್ತಾ ಇದೆ. ನಾನು ದಿನವೂ ಅದೇ ರೋಡಿನಲ್ಲಿ ತಿರುಗಾಡುತ್ತೇನೆ. ಈಗ ಮಾನ್ಯ ಖರ್ಗೆಯವರು ಹೇಳಿದಹಾಗೆ, ಮಲ್ಯ ಹಾಸ್ಪಿಟಲ್‌ಗೆ ಬರುವವರೆಲ್ಲಾ ಫೈವ್ ಸ್ಟಾರ್ ಕಲ್ಚರ್‌ನವರು. ಫೈವ್ ಸ್ಟಾರ್‌ನವರು ಏನು ಕಲ್ಚರ್ ಇಟ್ಟುಕೊಂಡಿರುತ್ತಾರೆ, ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಉಳಿದುಕೊಂಡು, ಒಳ್ಳೆಯ ಕಾರಿನಲ್ಲಿ ಬರುವವರು. ಅವರು ಆ ಕಾರ್ ಬೇಕಾದರೆ ಎಲ್ಲಿಯಾದರೂ ಪಾರ್ಕ್ ಮಾಡಿಕೊಳ್ಳಬಲ್ಲರು. ಅವರಿಗೆ ಏಕೆ ಕೊಟ್ಟಿದ್ದೀರಿ? ಬ್ಲಾಕ್ ಮನಿ ಏನಿರುತ್ತದೆ, ಅದು ಭಾರಿ ಕೆಲಸ ಮಾಡುತ್ತದೆ. ನಾನು ಧೈರ್ಯವಾಗಿ ಹೇಳುತ್ತೇನೆ. ಇದು ವೈಟ್ ಮನಿ ಕೆಲಸ ಅಲ್ಲ. ವೈಟ್ ಮನಿ ಸರ್ಕಾರಕ್ಕೆ ಬಂದಿಲ್ಲ; ಸರ್ಕಾರಕ್ಕೆ ಬರುವುದಿಲ್ಲ. ನಾಮಿನಲ್ಲಾಗಿ ಏನೋ ಬರುತ್ತದೆ. ಅವನಿಗೆ ಖರ್ಚು ಇರುತ್ತದೆ. ಯಾವನು ಇಂತಹ ಆಸ್ತಿಯನ್ನು ತೆಗೆದುಕೊಂಡಿರುತ್ತಾನೋ ಅವನಿಗೆ ಅನಧಿಕೃತವಾಗಿ 5 ರಿಂದ 10 ಕೋಟಿ ಖರ್ಚಾಗಿರುತ್ತದೆ. ಬ್ಲಾಕ್ ಮನಿ, ಅವನು ಯಾವುದೇ ಅಕೌಂಟ್ ಕೊಡುವಹಾಗಿಲ್ಲ. ಲಂಚ ತೆಗೆದುಕೊಂಡವರೂ ಕೊಡುವಹಾಗೆ ಇಲ್ಲ. ಇಲ್ಲಿ ಯಾರೂ ಕನ್‌ಸಿಡರೇಷನ್ ಇಲ್ಲದೇ, ಯಾವ ಸರ್ಕಾರವೂ ಇಂತಹ ಕೆಲಸ ಮಾಡುವುದೂ ಇಲ್ಲ. ಏಕೆ ಮಾಡುವುದಿಲ್ಲವೆಂದರೆ, ಇದು ರಾಜ್ಯದ್ರೋಹ, ಜನತೆಗೆ ಮಾಡತಕ್ಕಂಥ ದ್ರೋಹ. ಅಪರಾಧ. ಈಗ ನಾಳೆ ವಿಧಾನ ಸೌಧದ ಸುತ್ತ ಖಾಲಿ ಜಾಗ ಇದೆ. ಕೊಟ್ಟು ಬಿಡಿ. ಕಬ್ಬನ್ ಪಾರ್ಕ್ ಕೊಟ್ಟುಬಿಡಿ. ಫ್ರೇಜರ್ ಟೌನ್‌ನಲ್ಲಿ ಒಂದು ಕಾಂಪ್ಲೆಕ್ಸ್ ಕಟ್ಟುತ್ತಿದ್ದಾರೆ; ಯಾವುದರಲ್ಲಿ ಕಾರ್ಪೊರೇಷನ್ ಲ್ಯಾಂಡ್‌ನಲ್ಲಿ. ಅದು ಯಾರು ಪರ್ಮಿಷನ್ ಕೊಟ್ಟರು? ಹೇಗೆ ಕೊಟ್ಟರು, ಏನಾಯಿತು? ನಿಮಗೆ ಒಂದು ಇನ್‌ವೆಂಟ್ರಿ ಮಾಡುವುದಕ್ಕಾಗಿಲ್ಲ. ಕಾರ್ಪೊರೇಷನ್ ಪ್ರಾಪರ್ಟಿ ಯಾವುದು, ಸರ್ಕಾರದ ಪ್ರಾಪರ್ಟಿ ಯಾವುದೂ ಒಂದು ಇನ್‌ವೆಂಟ್ರಿ ಮಾಡಿಲ್ಲ. ಬೇಕಾದವರಿಗೆ ಬೇಕಾದಾಗ, ಬೇಕಾದ ಲ್ಯಾಂಡ್‌ನ್ನು ಕೊಟ್ಟುಕೊಂಡು ಹೋಗುವುದು. ಇದು ಎಲ್ಲಿಗೆ ತಲುಪತಕ್ಕ ವ್ಯವಸ್ಥೆ. ನಾನು ಹೇಳುತ್ತೇನೆ, ಇದರಲ್ಲಿ ಮಂತ್ರಿಗಳು ಶಾಮೀಲಾಗದೇ ಇದ್ದರೆ, ಮಂತ್ರಿಗಳು ಲಂಚ ತಿನ್ನದೇ ಇದ್ದರೆ, ನಾನು ನೇರವಾಗಿಯೇ ಹೇಳುತ್ತೇನೆ. ಇದನ್ನು ಕೈಬಿಡತಕ್ಕದ್ದು. ಇದನ್ನು ದಾನ ಕೊಡತಕ್ಕಂತಾದ್ದು ಅಲ್ಲ. ನಾನು ಬಾರಿ ವಿಚಾರ ಮಾಡಿದೆ. ಇದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಹೋಗಿಲ್ಲವಂತೆ. ಈ ಸರ್ಕಾರದಲ್ಲಿ ಏನು ನಡೆಯುತ್ತಾ ಇದೆ ಎಂದು ನನಗೆ ಅರ್ಥವಾಗುತ್ತಾ ಇಲ್ಲ. ಯಾರು

ತೀರ್ಮಾನ ತೆಗೆದುಕೊಳ್ಳುತ್ತಾರೆ, ಎಲ್ಲಿ ತೆಗೆದುಕೊಳ್ಳುತ್ತಾರೆ, ಯಾರಿಗೋಸ್ಕರ ತೆಗೆದುಕೊಳ್ಳುತ್ತಾರೆ, ಯಾವ ಕಾನೂನಿನ ಅಡಿಯಲ್ಲಿ ಈ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ ಇದು ನನಗೆ ಅರ್ಥವಾಗುವುದಿಲ್ಲ. ಇನ್ನು ಯಾವ ಯಾವ ಪ್ರಾಪರ್ಟಿ ಈ ರೀತಿ ಕೊಟ್ಟಿದ್ದಾರೋ ಅದು ಗೊತ್ತಾಗುತ್ತಾ ಇಲ್ಲ. ಆಮೇಲೆಯೇ ಗೊತ್ತಾಗತಕ್ಕಂಥಾದ್ದು ಆದ್ದರಿಂದ, ಮಾನ್ಯ ವಾಟಾಳ್‌ರವರು ಕೊಟ್ಟಂಥ ಸಲಹೆ ಸೂಕ್ತವಾಗಿದೆ. ಅವಶ್ಯಕತೆ ಬಿದ್ದರೆ ನಾವೆಲ್ಲಾ ಅಲ್ಲಿಗೆ ಹೋಗಿಬರತಕ್ಕಂಥಾದ್ದು ಸೂಕ್ತ. ಇದನ್ನು ಬಿಡುವುದಕ್ಕಾಗುವುದಿಲ್ಲ. ನೀವು ಗಲಾಟೆಗೆ ಅವಕಾಶ ಮಾಡಿಕೊಡದೇ ನೀವು ದುಡ್ಡು ತಿನ್ನದೇ ಇದ್ದರೆ, ದಯವಿಟ್ಟು ಇದನ್ನು ಕೈಬಿಡಬೇಕೆಂಬ ಎಚ್ಚರಿಕೆಯ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಎನ್.ರಾಜಣ್ಣ: ಒಂದು ಕರೆಕ್ಷನ್. ನಂಜೇಗೌಡರು ಹೇಳಿದಹಾಗೆ ಫ್ರೇಜರ್ ಟೌನ್ ಅಲ್ಲ, ಅದು ಆಸ್ಟಿನ್‌ಟೌನ್. ನಾನು ಇರುವವರೆಗೂ ಫ್ರೇಜರ್ ಟೌನ್‌ನಲ್ಲಿ ಯಾರಿಗೂ ಒಂದು ಇಂಚು ಜಾಗ ಸಿಕ್ಕುವುದಿಲ್ಲ.

ಉಪಾಧ್ಯಕ್ಷರು: ರಾಜಣ್ಣನವರೇ, ದಯಮಾಡಿ ಕುಳಿತುಕೊಳ್ಳಿ. ಈಗ ರಾಜಣ್ಣನವರ ವಿಷಯದ ಬಗ್ಗೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಲಾಗಿತ್ತು.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಅರ್ಧ ಗಂಟೆಯಾಗಿ, ಈಗಾಗಲೇ 2 ಗಂಟೆಯಾಗಿದೆ. ಇದುವರೆಗೂ ನಾವೇನಾದರೂ ಮಾತನಾಡಿದ್ದೇವೆಯೇ? ನಾವು ಬಾಯಿ ಮುಚ್ಚಿಕೊಂಡು ಕುಳಿತಿದ್ದೆವು. ನಾನು ಎರಡೇ ನಿಮಿಷ ಮಾತನಾಡುತ್ತೇನೆ. ತಾವು ಎಲ್ಲರಿಗೂ ಸಹಕಾರ ಕೊಟ್ಟಿದ್ದೀರಿ, ನಿಮ್ಮ ಬಗ್ಗೆ ಏನೂ ಇಲ್ಲ. ಸನ್ಮಾನ್ಯ ಸಚಿವರಿಗೆ ನಾನು ಇಷ್ಟೇ ವಿನಂತಿ ಮಾಡುವುದು. ದಯವಿಟ್ಟು, ಕಳೆದ 3-4 ವರ್ಷಗಳಲ್ಲಿ ಬೆಂಗಳೂರು ಸುತ್ತಮುತ್ತ ಈ ರೀತಿ ಆಯಕಟ್ಟಿನ ಜಾಗವನ್ನು ಯಾರು ಯಾರಿಗೆ ಕೊಟ್ಟಿದ್ದೀರಿ, ಅದರ ಒಂದು ಪಟ್ಟಿಯನ್ನು ಇಲ್ಲಿ ಮಂಡನೆ ಮಾಡಿ. ಎರಡನೆಯದು, ಅಲ್ಪಸ್ವಲ್ಪ ಉಳಿದಿದೆಯಲ್ಲಾ, 20 ಕಿಲೋಮೀಟರ್ ಬೆಂಗಳೂರು ಸುತ್ತಮುತ್ತ ಎಷ್ಟು ಉಳಿದಿದೆ, ಎಂಬುದು ಬೇಕಲ್ಲಾ. ನಮಗೊಂದು ದಾಖಲೆ ಬೇಕಲ್ಲಾ ರಾತ್ರಿ ರಾತ್ರಿಯೇ ನೀವು ಏನೇನೋ ಮಾಡಿ, ಯಾವಯಾವನಿಗೋ ಪರಭಾರೆ ಮಾಡುವುದಕ್ಕೆ ಹೊರಟಾಗ ಇದುವರೆಗೆ ಎಷ್ಟು ಕೊಟ್ಟಿದ್ದೀರಿ, ಎಲ್ಲೆಲ್ಲಿ ಎಷ್ಟೆಷ್ಟು ಉಳಿದಿದೆ ಆ ಪಟ್ಟಿಯನ್ನಾದರೂ ಇಟ್ಟುಕೊಳ್ಳಲು ನಮಗೆ ಕೊಡಿ. ಜನ ನಮ್ಮನ್ನು ಕೇಳುತ್ತಾರೆ. ಮುಂದಿನ ಪೀಳಿಗೆ ನಿಮ್ಮನ್ನು ಕ್ಷಮಿಸುವುದಿಲ್ಲ. ಬೆಂಗಳೂರನ್ನು ಮಾರುವುದಕ್ಕೆ ಹೊರಟ್ಟಿದ್ದೀರಿ. ಅಡವು ಇಡುವುದಕ್ಕೆ ಹೊರಟಿದ್ದೀರಿ. ಇವತ್ತು ಪ್ರತಿಪಕ್ಷದ ಶಾಸಕರು ನಾವೇ ಸಲಹೆ ಕೊಟ್ಟಂತೆ, ಇವತ್ತು ನೀವು ಏನಾದರೂ ಮಲ್ಯ ಹಾಸ್ಪಿಟಲ್‌ಗೆ ಯಾವುದೋ ಹೆಸರು ಹೇಳಿಕೊಂಡು ಜಾಗ ಏನು ಕೊಟ್ಟಿದ್ದೀರಿ, ಅದನ್ನು ವಜಾ ಮಾಡದೇ ಇದ್ದರೆ, ನಾವು ಅಲ್ಲಿ ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ನಾವು ಸತ್ಯಾಗ್ರಹ ಮಾಡಬೇಕಾಗುತ್ತದೆ. ದಯಮಾಡಿ

ನಾನು ಹೇಳುತ್ತೇನೆ ಕೇಳಿ.

ಉಪಾಧ್ಯಕ್ಷರು: ವಿಷಯಾಂತರ ಮಾಡಿದರೆ ಹೇಗೆ? ಇದು ಯಾರಿಗೆ ಸಾಧ್ಯವಾಗುತ್ತದೆ. ದಯಮಾಡಿ ತಾವು ಕೇಳಿ. ರಾಜಣ್ಣನವರ ವಿಷಯದ ಬಗ್ಗೆ ಅರ್ಧ ಗಂಟೆ ಕಾಲಾವಧಿ ಚರ್ಚೆ ಇತ್ತು. 11 ಗಂಟೆಗೆ ಚರ್ಚೆ ಪ್ರಾರಂಭವಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇವತ್ತು ನಿಯಮಾವಳಿಗಳು ಇರಲಿ, ಬೆಂಗಳೂರಿನ ಆಸ್ತಿಯನ್ನು ಉಳಿಸೋಣ. ಬೆಂಗಳೂರು ಉಳಿಸೋಣ. ಜನ ಮತ ಕೊಟ್ಟು ನಮ್ಮನ್ನು ಕಳುಹಿಸಿದ್ದಾರೆ. ಅದು ಬೆಂಗಳೂರು ದಾನ ಕೊಡುವುದಕ್ಕಲ್ಲ. ಯಾರಿಗೆ ಬೇಕೋ ಅವರಿಗೆ ಮಾರುವುದಕ್ಕಲ್ಲ. ಇದು ಯಾವುದು ನಿಯಮಾವಳಿ. ನಿಯಮಾವಳಿಯನ್ನು ಸಸ್ಪೆಂಡ್ ಮಾಡಿ ನಮಗೆ ಅವಕಾಶ ಮಾಡಿಕೊಡಿ. ಬೆಂಗಳೂರಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ತರಹ ಏನೇನು ಕೊಟ್ಟಿದ್ದಾರೆ, ನೀವು ಕೊಟ್ಟಿದ್ದೀರಿ, ಎಂದು ಅವರಿಗೆ ಹೇಳುವುದು, ಅವರು ನೀವು ಕೊಟ್ಟಿದ್ದೀರಿ ಎಂದು ಹೇಳುವುದು.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: 25 ಕೋಟಿ ರೂಪಾಯಿ ಆಸ್ತಿಯನ್ನು ಕೊಟ್ಟಿದ್ದಾರೆ....

ಉಪಾಧ್ಯಕ್ಷರು: ಸದನದೊಳಗೆ ಒಂದು ನಿಯಮ ಇಟ್ಟುಕೊಂಡು ಹೋಗಲ್ಲವೆಂದರೆ ಹೇಗೆ? ಯಾವರೀತಿ ಸದನ ನಡೆಸುವುದು? ನೀವೇ ಹೇಳಿ ಯಾವರೀತಿ ಸದನ ನಡೆಸುವುದು ಎಂದು, ಶ್ರೀನಿವಾಸ್‌ರವರೇ, ಈ ರೀತಿಯಾದರೆ ಹೇಗೆ ಸಭೆ ನಡೆಸುವುದು? ಇದು ಒಳ್ಳೆಯದಲ್ಲ. ನೀವು ವಿಷಯ ಎತ್ತುವುದಕ್ಕೆ ನಮ್ಮದೇನೂ ತಕರಾರು ಇಲ್ಲ. ನೀವು ನಿರ್ದಿಷ್ಟವಾಗಿ, ಬೇರೆ ರೂಪದಿಂದ ತೆಗೆದುಕೊಂಡು ಬನ್ನಿ.

ಶ್ರೀ ವಾಟಾಳ್ ನಾಗರಾಜ್: ನಿರ್ದಿಷ್ಟವಾಗಿ ನಾವೇ ಹೇಳುತ್ತಿದ್ದೇವಲ್ಲಾ. ಇವತ್ತು ಕಂಠೀರವ ಸ್ಟೇಡಿಯಂ ಯಾವ ಆಟಗಾರರಿಗೆ ಬೇಕಾಗಿತ್ತು, ಜನರಿಗೆ ಬೇಕಾಗಿತ್ತು, ಅದನ್ನು ಇವತ್ತು ಮಲ್ಯ ಆಸ್ಪತ್ರೆಯವರಿಗೆ ಕೊಡುತ್ತಿದ್ದಾರೆ. ಯು.ಬಿ.ಯವರಿಗೆ ಕೊಟ್ಟಿರುವುದೂ ಕಾರ್ಪೊರೇಷನ್ ಜಾಗ. 10 ಕೋಟಿ ಯು.ಬಿ.ಯವರು ಕೊಟ್ಟಿರತಕ್ಕಂತಾದ್ದು ಅದನ್ನು ಬಿಡಿಸಿ ಹೇಳಬೇಕೇ.

ಉಪಾಧ್ಯಕ್ಷರು: ನಿಮ್ಮ ಪ್ರಶ್ನೆ ಏನು? ನೀವು ವಿಷಯ ಎತ್ತುವುದಕ್ಕೆ ನಮ್ಮ ತಕರಾರು ಏನೂ ಇಲ್ಲ. ನಾವು ವಿಷಯ ಎತ್ತಬೇಡಿ ಎಂದು ಹೇಳುವುದಿಲ್ಲ ನಿಮಗೆ ಸಂಪೂರ್ಣವಾದ ಹಕ್ಕು ಇದೆ. ನಾನು ನಿಮ್ಮ ಹಕ್ಕನ್ನು ಮೊಟಕುಗೊಳಿಸುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಕಂಠೀರವ ಸ್ಟೇಡಿಯಂ ಜಾಗವನ್ನು ಮಲ್ಯ ಆಸ್ಪತ್ರೆಗೆ ಕೊಟ್ಟಿರುವುದನ್ನು ವಾಪಸ್ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು: ನಮ್ಮ ಮುಂದೆ ಇರತಕ್ಕ ಪ್ರಶ್ನೆ ಏನು? ರಾಜಣ್ಣನವರ ಅರ್ಧ ಗಂಟೆ ಕಾಲಾವಧಿ ಚರ್ಚೆ. ಆ ಚರ್ಚೆಗೆ ಈಗಾಗಲೇ ಸಾಕಷ್ಟು ಸಮಯವಾಗಿದೆ. ಅವರು ಉತ್ತರವನ್ನೂ ಕೊಟ್ಟಿದ್ದಾರೆ, ಕ್ಲಾರಿಫಿಕೇಷನ್ ಕೇಳಿ. ಆಮೇಲೆ, ನೀವು ಬೇರೆ ರೂಪದಲ್ಲಿ ನಿರ್ದಿಷ್ಟವಾಗಿ ಈ ವಿಷಯ ಕಳುಹಿಸಿಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಲ್ಲಿ ಉಳಿದಿರತಕ್ಕಂಥ ಜಾಗವನ್ನು ಮಾರುತ್ತಿದ್ದಾರೆ ಎಂದು ನಾವು ಹೇಳುತ್ತಿದ್ದೇವೆ. ದಾನ ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದೇವೆ. ಕಮೀಷನ್ ಏಜೆಂಟ್ ರೀತಿ ಸರ್ಕಾರ ಕೆಲಸ ಮಾಡುತ್ತಾ ಇದೆ ಎಂದು ಜನ ಮಾತನಾಡುತ್ತಿದ್ದಾರೆ ಎಂಬ ಭಾವನೆ ಬರುತ್ತಿದೆ ಎಂದು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು: ದಯಮಾಡಿ ಕೇಳಿ. ನಮ್ಮ ಮುಂದಿರುವಂಥ ಪ್ರಶ್ನೆ ಏನು? ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ನಗರದ ವಿವಿಧ ಭಾಗಗಳಲ್ಲಿ ಮೇಲು ಸೇತುವೆಗಳನ್ನು ನಿರ್ಮಾಣ ಮಾಡಲು ಸರ್ಕಾರ ಉದ್ದೇಶಿಸಿದೆ. ನಮ್ಮ ಮುಂದಿರುವುದು ಈ ಪ್ರಶ್ನೆ. ಇದರ ಮೇಲೆ ಚರ್ಚೆ ಮಾಡಿ, ಉತ್ತರ ತೆಗೆದುಕೊಳ್ಳಿ. ಆಮೇಲೆ, ನೀವು ಬೇರೆ ರೂಪದಲ್ಲಿ ಕಳುಹಿಸಿಕೊಡಿ. ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ. ತಮಗೆ ಯಾವುದೂ ಇಲ್ಲವೆಂದು ಹೇಳುವುದಿಲ್ಲ.

1.00 ಪಿ.ಎಂ

ಶ್ರೀ ಎಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೇ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದು ಸರಿಯೋ ತಪ್ಪೋ ತಾವು ಚರ್ಚೆಗೆ ಅಲೋ ಮಾಡಿದ್ದೀರಿ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಈ ಮಧ್ಯೆ ಮಾನ್ಯ ನಾಗರಾಜ್‌ರವರು ಎದ್ದು ನಿಂತು ಮಾತನಾಡಿದರು. ಈ ರೀತಿ ಆದರೆ ನಾವು ಯಾವ ರೀತಿ ಸದನ ನಡೆಸುವುದು? ನೀವು ಇಷ್ಟು ಹಿರಿಯ ಸದಸ್ಯರಿದ್ದು ಸದನದ ನಿಯಮಾವಳಿಗಳನ್ನು ಪಾಲಿಸುವುದಿಲ್ಲ ಅಂದರೆ ನಾವು ಯಾವ ರೀತಿ ಮಾಡುವುದು. ನೀವೇ ಹೇಳಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಒಮ್ಮೆಲೆ ಎದ್ದು ನಿಂತು ನಾನು ಮಾತನಾಡಲಿಲ್ಲ. ಬೆಂಗಳೂರು ನಗರದ ಸಮಸ್ಯೆ ಬಂದಾಗ ನಾವು ಈ ವಿಚಾರವನ್ನು ಹೇಳಿದ್ದೇವೆ.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದರು 20 ಕಿಲೋಮೀಟರ್ ಹೊರಗಡೆ ಎಲ್ಲಾ ಜಮೀನು ಅಕ್ರಮವಾಗಿ ಅವ್ಯವಹಾರ ನಡೆದಿದೆ, ಎಂಬ ಪ್ರಶ್ನೆ ಕೇಳಿದರೆ ಆ ಪ್ರಶ್ನೆಗೆ ಉತ್ತರ ಕೊಡಬಹುದು. ಇಲ್ಲಿ ಎಲ್ಲಾ ಸಮಸ್ಯೆಗಳನ್ನು ಹೇಳಿದರೆ ಹೇಗೆ ಉತ್ತರ ಹೇಳುವುದು?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ,

ಉಪಾಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ, ಮಾನ್ಯ ಶ್ರೀನಿವಾಸ್ ಅವರೇ, ಬಚ್ಚೇಗೌಡ್ರೇ ತಾವು ಕುಳಿತುಕೊಳ್ಳಿ....

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ: ಒಂದೇ ಪ್ರಶ್ನೆಯಲ್ಲಿ ಎಲ್ಲಾ ವಿಚಾರಗಳಿಗೂ ಉತ್ತರ ಹೇಳಿ ಅಂದರೆ ಹೇಗೆ ಉತ್ತರ ಹೇಳುವುದು?

(ಗೊಂದಲ)

ಉಪಾಧ್ಯಕ್ಷರು: ಈಗ ತಾವು ಉತ್ತರ ಹೇಳಿ ಈ ವಿಷಯಕ್ಕೆ ಸಂಬಂಧಪಟ್ಟದ್ದು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಕೊಟ್ಟಿದ್ದೀರಾ? ಕೊಟ್ಟಿದ್ದರೆ ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ?

ಉಪಾಧ್ಯಕ್ಷರು: ಅವರು ಆ ವಿಷಯದ ಬಗ್ಗೆ ನಿಯಮಾನುಸಾರ ಕಳುಹಿಸಿಕೊಲಿ ನಾನು ಅವಕಾಶ ಮಾಡಿಕೊಡುತ್ತೇನೆ. ಆಮೇಲೆ ತಾವು ಉತ್ತರ ಕೊಡಿ.

ಶ್ರೀ ಎಚ್.ಎನ್.ನಂಜೇಗೌಡ: ಮಾನ್ಯ ಉಪಾಧ್ಯಕ್ಷರೇ, ನಾವು ಈಗ ಆಪಾದನೆ ಮಾಡಿದ್ದೇವೆ. ಈಗ ಈ ವಿಷಯದ ಬಗ್ಗೆ ಅರ್ಧ ಚರ್ಚೆ ಆಯಿತು. ಸರ್ಕಾರ ಈ ಬಗ್ಗೆ ಉತ್ತರ ಹೇಳಲಿಲ್ಲ ಅಂದರೆ ಅವರಿಗೆ ಪ್ರೋಟೆಕ್ಷನ್ ಸಿಕ್ಕಿಬಿಡುತ್ತದೆ.

ಶ್ರೀ ಅಜಯಕುಮಾರ್ ಸರ್‌ನಾಯಕ್ (ಕ್ರೀಡಾ ಸಚಿವರು): ಮಾನ್ಯ ಅಧ್ಯಕ್ಷರೇ, ತಾವು ಪರವಾನಿಗೆ ಕೊಟ್ಟರೆ ನಾನು ಉತ್ತರ ಕೊಡುತ್ತೇನೆ. ಬಹುಶಃ ಈ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ಯಾರಿಗೂ ಸಂಶಯ ಬೇಡ. ಯಾವುದೇ ತರಹದಲ್ಲಿ ಈ ಲ್ಯಾಂಡನ್ನು

ಮಲ್ಯ ಆಸ್ಪತ್ರೆಗೆ ಆಗಲಿ, ಕಾರ್ ಪಾರ್ಕಿಂಗ್‌ಗೇ ಆಗಲಿ ಯಾರಿಗೂ ಕೊಟ್ಟಿಲ್ಲ. ಒಂದು ವೇಳೆ ಆದೇಶ ಕೊಟ್ಟಿದ್ದೇ ಆದರೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇವೆ. ಯಾರಾದರೂ ಅಧಿಕಾರಿಗಳು ಕೊಟ್ಟಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಅಲ್ಲಿರುವ ವಾಹನಗಳು ಯಾರದು? ವಾಹನಗಳನ್ನು ಅಲ್ಲಿ ನಿಲ್ಲಿಸುತ್ತಿದ್ದಾರೆ.

+ ಶ್ರೀ ಅಜಯಕುಮಾರ್ ಸರ್ ನಾಯಕ್: ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ ನಾನು ಅದನ್ನು ಹೇಳಿಬಿಡುತ್ತೇನೆ. ಇಲ್ಲಿಯವರೆಗೂ ಅಲ್ಲಿ ಒಳಗಡೆ ಯಾವುದೇ ವಾಹನಗಳು ನಿಂತಿಲ್ಲ. ಮಲ್ಯ ಆಸ್ಪತ್ರೆ ಎದುರುಗಡೆ ಏನಿದೆ, ಅಲ್ಲಿ ಪ್ಲೇಯರ್ಸ್‌ಗಾಗಿ ಎಂಟ್ರಿ ಇದೆ. ಒಳಗಡೆಗೆ ಪ್ಲೇಯರ್ ಬರಬೇಕಲ್ಲಾ ಅದಕ್ಕೆ ಅಲ್ಲಿ ಎಂಟ್ರಿ ಇದೆ. ಪ್ಲೆಯರ್ಸ್‌ಗಾಗಿ ನಾವು ಎಕ್ಸ್‌ಕ್ಲೂಸೀವ್ ಆಗಿ ಎಂಟ್ರಿ ಮಾಡಿದ್ದೇವೆ. ರಾಷ್ಟ್ರೀಯ ಕ್ರೀಡಾ ಕೂಟ ನಡೆದಂತಹ ಸಂದರ್ಭದಲ್ಲಿ ನಾವು ಅಲ್ಲಿ ಒಂದು ರ್‍ಯಾಂಪ್ ಮಾಡುವುದಕ್ಕೆ ಆಗಲಿಲ್ಲ. ಆಗ ಎಂ.ಇ.ಜಿ.ಯವರಿಗೆ ಹೇಳಿ ಟೆಂಪರರಿ ರ್‍ಯಾಂಪ್ಸ್ ಮಾಡಿಸಿದ್ದೆವು. ಅವಾಗ ಏನಾಯಿತು ಮಲ್ಯ ಆಸ್ಪತ್ರೆಯವರು ಅಫಿಷಿಯಲ್ ಹಾಸ್ಪಿಟಲ್ ಫಾರ್ ನ್ಯಾಷನಲ್ ಗೇಮ್ಸ್ ಎಂದು ಹೇಳಿ ನಮ್ಮ ಲೋಗೋ ಉಪಯೋಗ ಮಾಡಿಕೊಂಡು ಅವರಿಗೆ ಬ್ಯಾನರ್ಸ್ ಹಾಕುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೆವು. ಆದರೆ ಅವರಿಗೆ ನಾವು ಏನು ಹೇಳಿದ್ದೆವು ಅಂದರೆ ಆಗ ನೀವು ನ್ಯಾಷನಲ್ ಗೇಮ್ಸ್ ಮುಗಿದ ನಂತರ ಈ ಬ್ಯಾನರ್ಸ್ ನೀವು ಏನು ಹಾಕಿದ್ದೀರಿ ಅದರ ಪ್ರತಿಫಲವಾಗಿ ನೀವು ಒಂದು ರ್‍ಯಾಂಪ್ಸ್ ಫ್ರೀ ಆಗಿ ಮಾಡಿಕೊಡಬೇಕೆಂದು ಹೇಳಿದ್ದೆವು. ಆ ಪ್ರಕಾರ ಅವರು ರ್‍ಯಾಂಪ್ ಮಾಡಿದ್ದಾರೆ. ಅಷ್ಟೇ ಅಲ್ಲ, ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಯಾವುದೇ ರೀತಿಯ ಸಂಶಯ ಬೇಡ. ನಾವು 1996ರಲ್ಲಿ ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ನಾವು ಈ ಸ್ಟೇಡಿಯಂ ಕಟ್ಟುವಾಗ ಇಲ್ಲಿ ಪಾರ್ಕಿಂಗ್‌ಗೆ ಜಾಗ ಇಲ್ಲ ಎಂದು ತಿಳಿದುಕೊಂಡು ಕನಿಷ್ಟ 500-600 ಕಾರುಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಿದ್ದೇವೆ. ಸ್ಟೇಡಿಯಂ ಕೆಪ್ಯಾಸಿಟಿ ಇರುವುದು 25 ಸಾವಿರ. ಈ ಸ್ಟೇಡಿಯಂ ಫುಲ್ ಆದಾಗ ಮಾನ್ಯ ಅಧ್ಯಕ್ಷರೇ, ಯಾವುದೇ ಒಂದು ಮಹತ್ತರವಾದ ಕಾರ್ಯಕ್ರಮ ನಡೆದಾಗ ಕನಿಷ್ಟ ಒಂದು ಸಾವಿರ ಕಾರುಗಳು ಬರುತ್ತವೆ ಆಗ ಪಾರ್ಕಿಂಗ್ ವ್ಯವಸ್ಥೆ ಬೇಕು ಎಂದು ಹೇಳಿ ಕ್ರಮ ಕೈಗೊಂಡಿದ್ದೇವೆ ಏಕೆಂದರೆ ಅಲ್ಲಿ ಸುತ್ತಮುತ್ತಲೂ ಎಲ್ಲೂ ಪಾರ್ಕಿಂಗ್ ಇಲ್ಲ. ಆದ್ದರಿಂದ ಒಂದು ಸಾವಿರ ಕಾರುಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕೆಂದು ಹೇಳಿ ಆ ಜಾಗವನ್ನು ಮಲ್ಟಿಸ್ಟೋರ್ಡ್ ಕಾರ್ ಪಾರ್ಕಿಂಗ್ ಮಾಡಬೇಕೆಂದು ಹೇಳಿ ನಾವು ಟೆಂಡರ್ ಕರೆದಿದ್ದೇವೆ. ತ್ರೀಟೈರ್ ಮಲ್ಟಿಸ್ಟೋರೀಡ್ ಕಾರ್ ಪಾರ್ಕಿಂಗ್, ಅದರ ಮೇಲೆ ಟು ಟೈರ್ ಕಮರ್ಷಿಯಲ್ ಏರಿಯಾ ಎಂದು ಮಾಡಿ ನಾವು ಯಾವ ರೀತಿ ಟೆಂಡರ್ ಕರೆದಿದ್ದೆವು. ಅಂದರೆ ಅವರೇ ಬಿಲ್ಡರ್ಸ್ ಇನ್‌ವೆಸ್ಟ್ ಮಾಡಬೇಕು. ಬಿಲ್ಡರ್ಸ್ ಇನ್‌ವೆಸ್ಟ್ ಮಾಡಿ ಪೂರ್ಣವಾದ ಮೇಲೆ ಕಾರ್ ಪಾರ್ಕಿಂಗ್ ನಮಗೆ ಕೊಡಬೇಕು, ಆಮೇಲೆ

ಕಮರ್ಷಿಯಲ್ ಏರಿಯಾ ಏನು ಬರುತ್ತದೆ ಎಷ್ಟು ಪರ್ಸೆಂಟ್ ನಮಗೆ ಕೊಡುತ್ತಾರೆ ಎಷ್ಟು ಪರ್ಸೆಂಟ್ ಅವರು ಇಟ್ಟುಕೊಳ್ಳುತ್ತಾರೆ ಎಂದು ಹೇಳಿ ನಾವು ಟೆಂಡರ್ ಕರೆದಿದ್ದೇವೆ. ಆಗ ಒಂದೇ ಒಂದು ಕಂಪನಿಯವರು ಟೆಂಡರ್ ಹಾಕಿದ್ದರು. ಅದಾದ ನಂತರ ಒಬ್ಬರೇ ಹಾಕಿದ್ದಾರೆಂದು ನಾವು ಮತ್ತೆ ಟೆಂಡರ್ ರೀಕಾಲ್ ಮಾಡಿದ್ದೇವೆ. ನಂತರ ನ್ಯಾಷನಲ್ ಗೇಮ್ಸ್ ಮಾಡುವಂತಹ ಸಂದರ್ಭದಲ್ಲಿ ನಮಗೆ ಸಮಯ ಇರಲಿಲ್ಲ. ಆ ಒಂದು ಯೋಜನೆಯನ್ನು ನಾವು ಕೈಬಿಟ್ಟೆವು. ಆನಂತರ ಮಲ್ಯ ಆಸ್ಪತ್ರೆ ಸಂಪರ್ಕಿಸಿದರು. ಮಲ್ಯ ಆಸ್ಪತ್ರೆ ಅಧಿಕಾರಿಯವರು ಬಂದು ನಮ್ಮನ್ನು ಡಾಕ್ಟರ್ ರಾಮಮೂರ್ತಿ ಅವರು ಆಗ ಏನು ಹೇಳಿದರು ಅಂದರೆ ನೀವು ಆ ಪ್ರಾಜೆಕ್ಟ್ ಕೈಗೆತ್ತಿಕೊಂಡು ಪೂರ್ಣ ಮಾಡುವವರೆಗೂ ಈಗ ಅಲ್ಲಿ ಖಾಲಿ ಜಾಗ ಏನು ಇದೆ ಅಲ್ಲಿ ಒಂದು ನೂರು ಕಾರುಗಳನ್ನು ಪಾರ್ಕಿಂಗ್ ಮಾಡುವುದಕ್ಕೆ ಜಾಗ ಇದೆ. ದಯವಿಟ್ಟು ನಮ್ಮ ಆಸ್ಪತ್ರೆಗೆ ಏನು ಜನ ಬರುತ್ತಾರೆ ರೋಗಿಗಳನ್ನು ನೋಡುವುದಕ್ಕೆ ಮತ್ತು ರೋಗಿಗಳು ಅಡ್ಮಿಟ್ ಆಗುವುದಕ್ಕೆ ಹಾಗೆ ಬಂದಂತಹ ಸಂದರ್ಭದಲ್ಲಿ ಕಾರುಗಳಲ್ಲಿ ಬಂದಂತಹವರು ರಸ್ತೆಯಲ್ಲಿ ನಿಲ್ಲಿಸುತ್ತಾರೆ ಆಗ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಆಗುತ್ತದೆ ಅದಕ್ಕೆ ಆ ಕಾರುಗಳನ್ನು ನಾವು ಒಳಗಡೆ ಪಾರ್ಕಿಂಗ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿದರು. ನಾನು ಮೊದಲು ಓರಲಿ ಒಪ್ಪಿಕೊಂಡಿದ್ದೆ. ಇಲ್ಲಿ ಮುಚ್ಚಿ ಇಡುವುದು ಏನೂ ಇಲ್ಲ. ಆಮೇಲೆ ಅವರು ಬರವಣಿಗೆಯಲ್ಲಿ ಒಂದು ಪತ್ರ ಕಳುಹಿಸಿದರು.

(ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್‌ರವರು) ಅಧ್ಯಕ್ಷಪೀಠವನ್ನಂಕಲಸಿರಿದರು)

ಆಮೇಲೆ ನಾನು ವಿಚಾರ ಮಾಡಿದೆ, ಬಹುಶಃ ನಾನು ಈ ಜಾಗವನ್ನು ಅವರಿಗೆ ಕೊಟ್ಟುಬಿಟ್ಟರೆ ಇಂತಹ ಒಂದು ಸಮಸ್ಯೆ ಉದ್ಭವವಾಗುತ್ತದೆಂದು ತಿಳಿದುಕೊಂಡು ನಾನು ಅವರಿಗೆ ಮತ್ತೆ ಒಂದು ಪತ್ರ ಬರೆದಿದ್ದೇನೆ, ಇದನ್ನು ನಾವು ಕ್ಯಾಬಿನೆಟ್ ಮುಂದೆ ಇಟ್ಟು ಕ್ಯಾಬಿನೆಟ್ ಅಪ್ರೂವಲ್ ತೆಗೆದುಕೊಂಡು ನಂತರ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ. ಅಲ್ಲಿಯವರೆಗೂ ತೀರ್ಮಾನ ತೆಗೆದುಕೊಳ್ಳುವುದಿಲ್ಲ ನಾವು ಏನು ಮಲ್ಟಿಸ್ಟೋರ್ಡ್ ಕಾರ್ ಪಾರ್ಕಿಂಗ್ ಮಾಡುತ್ತೇವೆ ಅದು ಮಾಡಿದ ನಂತರ ನಾವು ನಿಮಗೆ ಕಾರು ಪಾರ್ಕಿಂಗ್‌ಗೆ ಕೊಡಬೇಕೋ ಬೇಡವೋ ಎನ್ನುವುದನ್ನು ತಿರ್ಮಾನ ತೆಗೆದುಕೊಳ್ಳಬೇಕಾಗಿದೆ ಎಂದು ನಾವು ಅವರಿಗೆ ಈಗಾಗಲೇ ತಿಳಿಸಿದ್ದೇವೆ. ಆದ್ದರಿಂದ ಇಲ್ಲಿ ಮಲ್ಯೆ ಆಸ್ಪತ್ರೆಯವರಿಗೆ ಆಗಲಿ ಬೇರೆಯವರಿಗೆ ಆಗಲಿ ಆ ಜಾಗವನ್ನು ಪಾರ್ಕಿಂಗ್‌ಗೆ ಕೊಡುವಂತಹ ಪ್ರಶ್ನೆಯೇ ಇಲ್ಲ.

ಅಧ್ಯಕ್ಷರು: ಅರ್ಧ ಗಂಟೆ ಚರ್ಚೆ ಹೋಗಿ ಎರಡೂವರೆ ಗಂಟೆ ಆಯಿತೇ?

ಶ್ರೀ ಅನಂತ್ ನಾಗ್: ಮಾನ್ಯ ಅಧ್ಯಕ್ಷರೇ, ಫ್ಲೈಓವರ್ಸ್ ಬಗ್ಗೆ ಏನು ವಿವರಣೆಯನ್ನು

ಕೇಳಿದ್ದರು ಅದನ್ನು ಕೊಟ್ಟಿದ್ದೇನೆ. ಅದರ ನಂತರ ಔಟ್ ರಿಂಗ್ ರೋಡ್ ಏನು ಮಾಡುತ್ತೀರಿ ಎಂದು ಕೇಳಿದರು. ಅದರ ಬಗ್ಗೆಯೂ ಹೇಳಿದ್ದೇನೆ. ಅದೂ ಅಲ್ಲದೇ, ನಾವು ದಾಬಸ್‌ಪೇಟೆಯಿಂದ ಒಂದು ದೊಡ್ಡ ಹೈವೇಗೆ ದಾಬಸ್‌ಪೇಟೆಯಿಂದ ಅತ್ತಿಬೆಲೆವರೆಗೂ 130 ಕಿಲೋಮೀಟರ್ ರಸ್ತೆ ಏನು ಮಾಡುತ್ತಿದ್ದೇವೆ ಅದರ ಬಗ್ಗೆಯೂ ಕೂಡ ಮಾಹಿತಿ ಕೊಟ್ಟಿದ್ದೇನೆ. ಮಾನ್ಯ ಸುರೇಶ್ ಕುಮಾರ್ ಅವರೂ ಸಹ ಕೆಲವು ವಿವರಗಳನ್ನು ಕೇಳಿದ್ದರು. 93ರಲ್ಲಿ ಎಷ್ಟು ಅಡಿಗಲ್ ಹಾಕಿದ್ದರು ಎಂದು ಕೇಳಿದ್ದರು.

ಅಧ್ಯಕ್ಷರು: ಈಗ ನಾನು ತಮಗೆ ಏನು ಹೇಳುತ್ತೇನೆ ಅಂದರೆ ಮಾನ್ಯ ವಾಟಾಳ್ ನಾಗರಾಜ್ ಅವರು ಸಲಹೆ ಕೊಟ್ಟಂತೆ ತಾವು ದಯಮಾಡಿ ನಗರದ ಎಲ್ಲಾ ಶಾಸಕರನ್ನು ಕರೆದು ಒಂದು ಮೀಟಿಂಗ್ ಮಾಡಿ.

ಶ್ರೀ ಅನಂತ್‌ನಾಗ್: ಅದನ್ನು ನಾನು ಈ ತಿಂಗಳೇ ಮಾಡುತ್ತೇನೆ.

ಅಧ್ಯಕ್ಷರು: ಅದನ್ನು ಮಾಡಿ ಈ ಫ್ಲೈ ಓವರ್ಸ್ ವಿಚಾರದಲ್ಲಿ ಮಾಸ್ ಟ್ರಾನ್ಸ್‌ಪೋರ್ಟ್ ಸಿಸ್ಟಂ ಏನೋ ಮಾಡುತ್ತಿದ್ದೀರಲ್ಲಾ, ಈ ಎಲ್ಲಾ ವಿಚಾರಗಳಲ್ಲಿ ಸಹ ಸ್ವಲ್ಪ ಬೇಗ ಒಂದು ತೀರ್ಮಾನ ತೆಗೆದುಕೊಳ್ಳಿ. ಬೇರೆ ಎಲ್ಲಾ ರಾಜ್ಯಗಳು ಮುಂದೆ ಹೋಗುತ್ತಿರುವಾಗ ನಾವು ಏಕೆ ಹಿಂದೆ ಬಿದ್ದಿದ್ದೇವೆ?

ಶ್ರೀ ಅನಂತ್‌ನಾಗ್: ಮಾನ್ಯ ರಾಮಲಿಂಗಾರೆಡ್ಡಿಯವರೂ ಸಹ ಸಲಹೆ ಕೊಟ್ಟರು. ನಾನು ಇದನ್ನು ಮಹಾನಗರಪಾಲಿಕೆಯಿಂದಲೇ ಮಾಡುತ್ತೇನೆಂದು ಹೇಳಿದ್ದೆ ಅದಕ್ಕೆ ಬಹಳ ವಿಳಂಬವಾಗುತ್ತದೆ ಸರ್ಕಾರದವರೇ ಮಾಡಲಿ ಎಂದು ಹೇಳಿದರು. ಅದಕ್ಕೆ ನಾನೂ ಸಹ ಒಪ್ಪುತ್ತೇನೆ. ಈ ತಿಂಗಳೇ ಎಲ್ಲಾ ಶಾಸಕರನ್ನು ಕರೆದು ಒಂದು ಸಭೆ ಮಾಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಪಡೆದು ಮಾನ್ಯ ಗೃಹ ಮಂತ್ರಿಗಳ ಗಮನಕ್ಕೆ ಒಂದೇ ಒಂದು ವಿಚಾರವನ್ನು ತರುತ್ತೇನೆ. ನಿನ್ನೆ ರಾತ್ರಿ ಹಾಸನ ಜಿಲ್ಲೆಯ ಚನ್ನರಾಯಪಟ್ಟಣದಲ್ಲಿ ಸರಣಿ ಡಕಾಯಿತಿ ಆಗಿದ್ದರಿಂದ....

ಅಧ್ಯಕ್ಷರು: ಇಲ್ಲಾ ಇಲ್ಲಾ ನಾನು ಅಜೆಂಡಾ ಪ್ರಕಾರ ಹೋಗಬೇಕು. ಆಮೇಲೆ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ.ಎಸ್.ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು: ಆ ವಿಷಯ ಈಗ ಚರ್ಚೆಗೆ ಬರುವುದಿಲ್ಲ. ತಾವು ಕಾಗದ ಬರೆದು ಕಳುಹಿಸಿದ್ದೀರಿ ಆ ನಂತರ ತಮಗೆ ಅವಕಾಶ ಮಾಡಿಕೊಡುತ್ತೇನೆ. ಈಗ ಅಜೆಂಡಾ ಪ್ರಕಾರ ಹೋಗುತ್ತಿದ್ದೇವೆ. ರಾಮದಾಸ್ ತಾವು ಮಾತನಾಡಿ.

(5) ಅರ್ಧ ಗಂಟೆ ಕಾಲಾವಧಿ ಚರ್ಚೆ

ನಂಜನಗೂಡಿನ ಕಪಿಲಾ ನದಿ ನೀರು ಕಲುಷಿತಗೊಂಡಿರುವ ಬಗ್ಗೆ.

+ ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆಯ ನಂಜನಗೂಡಿನ ಬಳಿ ಇರುವಂತಹ ಕಪಿಲಾ ನದಿಯಲ್ಲಿ ಅದರ ಪಕ್ಕದಲ್ಲಿ ಇರುವಂತಹ ಕಾರ್ಖಾನೆಗಳು ಅಲ್ಲಿ ಉಪಯೋಗವಾಗುವಂತಹ ಕಲುಷಿತವಾದಂತಹ ನೀರನ್ನು ನದಿಗೆ ಬಿಡುತ್ತಿರುವ ಬಗ್ಗೆ ನಾನು ಮಾನ್ಯ ಮಂತ್ರಿಗಳಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ಆಗ ಒಂದು ವಿಚಾರವನ್ನು ಹೇಳಿದರು. ಇದು ಸರ್ಕಾರದ ಗಮನಕ್ಕೆ ಯಾವುದೇ ರೀತಿಯಾಗಿ ಬಂದಿಲ್ಲ ಈ ತರಹದ ವಿಚಾರ ಎನ್ನತಕ್ಕಂಥದ್ದು. ಆನಂತರದಲ್ಲಿ ಇದರ ಸುತ್ತಮುತ್ತ ಇರುವಂಥ ಪ್ರದೇಶದಲ್ಲಿರುವಂಥ ಜಾನುವಾರುಗಳಿಗೆ ಮತ್ತು ಅಲ್ಲಿ ವಾಸ ಮಾಡತಕ್ಕಂಥ ಜನಗಳಿಗೆ ಇದರ ಸಮಸ್ಯೆಯಾಗಿದೆ, ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೋ ಎಂಬ ವಿಚಾರವನ್ನು ನಾನು ಕೇಳಿದ್ದೆ. ಈ ವಿಚಾರದಲ್ಲಿ ಕರ್ನಾಟಕ ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿಗೆ ಇದು ಗಮನಕ್ಕೆ ಬಂದಿಲ್ಲ ಎನ್ನುವ ಉತ್ತರವನ್ನು ಸನ್ಮಾನ್ಯ ಸಚಿವರು ಕೊಟ್ಟಿದ್ದಾರೆ. ಆಶ್ಚರ್ಯವಾಗುವಂಥ ವಿಚಾರ ಅಂದರೆ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದರೆ ಅವರ ಇಲಾಖೆಗೆ ಸಂಬಂಧಪಟ್ಟ ಯಾವುದೇ ಅಧಿಕಾರಿ ಗಮನಕ್ಕೆ ಕೂಡ ಬಂದಿಲ್ಲವೆನ್ನುವುದು ನನ್ನ ಭಾವನೆ. ಆದರೆ 31-1-1996ರಲ್ಲಿ ಮೈಸೂರಿನ ಜಿಲ್ಲಾ ಪಂಚಾಯತಿಯಲ್ಲಿ ಇದರ ಬಗ್ಗೆ ಒಂದು ಚರ್ಚೆ ನಡೆಸಲಾಯಿತು. ಚರ್ಚೆಯಾಗಿ 27-2-1996ರಂದು ಇಂದಿನ ಜಿಲ್ಲಾಪಂಚಾಯತ್ ಅಧ್ಯಕ್ಷರಾದ ಶ್ರೀ ರಾಮುರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನೂ ರಚನೆ ಕೂಡ ಮಾಡಲಾಯಿತು. ಆವತ್ತು ಮತ್ತೆ 21-3-1996ರಂದು ಯಾವ ಯಾವ ವಿಚಾರಗಳಿಗೆ ಈ ನಿರ್ಣಯದ ಪ್ರಕಾರದಲ್ಲಿ ಸಮಿತಿಯು ಈ ಪ್ರದೇಶಗಳಿಗೆ ಭೇಟಿ ಕೊಡಬೇಕೆಂದು ಜಿಲ್ಲಾ ಪಂಚಾಯತಿಯಲ್ಲಿ ಅವತ್ತಿನ ದಿವಸ ಇದ್ದ ವಿಚಾರ. ಇದರಲ್ಲಿ ಪ್ರಮುಖವಾಗಿ ಕಾರ್ಯಪಾಲಕ ಅಭಿಯಂತರರು, ನಂಜನಗೂಡು, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮೈಸೂರು, ಮತ್ತು ಉಪ ವಿಭಾಗಾಧಿಕಾರಿಗಳು ಮತ್ತು ಕಾರ್ಯಪಾಲಕ ಅಭಿಯಂತರರು, ಕಬಿನಿ ವಿಭಾಗದಲ್ಲಿ ಹಾಗೂ ಲಿಂಗರಾಜು ಎನ್ನುವಂತವರು ಉಪ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ಮಂಡಳಿ ಇವರೆಲ್ಲರೂ ಕೂಡ ಸದಸ್ಯರಾಗಿರುತ್ತಾರೆ. ಇವರು ಸದಸ್ಯಕಾರ್ಯದರ್ಶಿಗಳಾದ ಸಮಯದಲ್ಲಿ ಈ ಪ್ರಮುಖವಾದ ವಿಚಾರ ಚರ್ಚೆಗೆ ಬಂದಿಲ್ಲ ಈ ಒಂದು ಸಮಿತಿ 2-7-1996ರಲ್ಲಿ ನಂಜನಗೂಡಿನ ಜಮಿನಿ ಡಿಸ್ಟಿಲರಿಗೆ ಹಾಗೂ 26-11-1996ರಂದು ಸುಜಾತಾ ಟೆಕ್ಸ್‌ಟೈಲ್ಸ್‌ಗಳಿಗೆ, ಡನ್‌ಫೋರ್ಟ್ ಫೆಬ್ರಿಕ್ ಆಫೀಸಿಗೆ ಹೀಗೆ ಬೇರೆ ಬೇರೆ ಕಾರ್ಖಾನೆಗಳಿಗೆ ಭೇಟಿ ಕೊಟ್ಟು ಇಲ್ಲಿರುವಂಥ ಕಲುಷಿತ ನೀರನ್ನು ನದಿಗೆ ಬರುವ ವಿಚಾರವನ್ನು ಪರಿಶೀಲನೆಯನ್ನು ಮಾಡಿದರೆಂದು ಹೇಳಿ ವರದಿಯಲ್ಲಿ ಕೊಡಲಾಗಿದೆ. ಇಲ್ಲಿ ಈ ಒಂದು ಕಲುಷಿತ ನೀರನ್ನು ಮೈಸೂರಿನಲ್ಲಿರುವಂಥ ಪ್ರಯೋಗ ಶಾಲೆಗೂ

ಕೂಡ ಕಳುಹಿಸಲಾಯಿತು. ಪ್ರಯೋಗ ಶಾಲೆಯಲ್ಲಿ ಬಂದಿದ್ದ ವರದಿ ಆಧಾರದ ಮೇಲೆ ಮತ್ತೆ 24-8-1996ರಲ್ಲಿ ಬೆಂಗಳೂರಿನಲ್ಲಿರುವಂಥ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಅಧಿಕಾರಿಗಳು ಕಾರ್ಯದರ್ಶಿಗಳಿಗೆ ಇದನ್ನು ಕೊಡಲಾಯಿತು.

ಅಧ್ಯಕ್ಷರು: ಸನ್ಮಾನ್ಯ ಸದಸ್ಯರು ಮಾತನಾಡುತ್ತಿರುವುದು ನನಗೆ ಏನು ಕೇಳಿಸುತ್ತಿಲ್ಲ. ಬಹಳ ಜನ ಬಿಜಿ ಆಗಿದ್ದಾರೆ. ಬಹಳ ಕೆಲಸ ಇರುವಂಥವರು ಎರಡು ನಿಮಿಷ ಹೋಗಿ ಕಾಫಿ ಕುಡಿದುಕೊಂಡು ಬರಬಹುದು. ಇಲ್ಲಿ ಕೋರಂಗೆ ತೊಂದರೆಯಾಗದಂತೆ ಇದ್ದರೆ ಕೆಲಸವನ್ನು ನಡೆಸೋಣ. ಎಲ್ಲರೂ ಮಾತನಾಡಲಿಕ್ಕೆ ಶುರು ಮಾಡಿದರೆ ನನಗೆ ಕಷ್ಟವಾಗುತ್ತದೆ. ದಯಮಾಡಿ ಎಲ್ಲರೂ ಸ್ವಲ್ಪ ಸಹಕರಿಸಬೇಕು. ಅವರು ಬಿಜಿ ಆಗಿದ್ದಾರೆ; ಬಹಳ ಮಗ್ನರಾಗಿದ್ದಾರೆ. ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಾವು ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳತಕ್ಕಂಥವರು ಏರಿದ ಧ್ವನಿಯಲ್ಲಿ ಮಾತನಾಡಿದರೆ ನನಗೆ ಇಲ್ಲಿ ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ಏನು ಹೇಳುತ್ತಾರೆ ನನಗೆ ಗೊತ್ತಾಗುವುದಿಲ್ಲ. ಬಹಳ ಇಂಪಾರ್ಟೆಂಟ್ ವಿಷಯ ಡಿಸ್‌ಕಸ್ ಮಾಡುವುದಿದ್ದರೆ ಎರಡು ನಿಮಿಷ ಲಾಂಜ್‌ದಲ್ಲಿ ಕಾಫಿ ಕುಡಿದುಕೊಂಡು ಬರಬಹುದು. ಕಲಾಪ ನಡೆಸುತ್ತಿರುತ್ತೇವೆ, ಆಮೇಲೆ ತಾವು ಬಂದು ಕಲಾಪದಲ್ಲಿ ಸೇರಬಹುದು. ದಯಮಾಡಿ ಸಹಕರಿಸಬೇಕೆಂದು ಮತ್ತೊಮ್ಮೆ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎ.ರಾಮದಾಸ್: ಈ ನೀರು ಕಲುಷಿತವಾಗಿದೆ ಅಲ್ಲಿ ಜನರಿಗೆ ಸಮಸ್ಯೆಯಾಗಿದೆ ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಬೆಂಗಳೂರಿನಲ್ಲಿರುವಂಥ ಈ ಪರಿಸರ ಇಲಾಖೆ ಕಾರ್ಯದರ್ಶಿಯವರು ಅವರು ಒಬ್ಬರು ಸದಸ್ಯರಾಗಿದ್ದು ಅದಕ್ಕೆ ಸಂಬಂಧಪಟ್ಟ ಹಾಗೆ 24-12-1996ರಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಒಂದು ಪತ್ರವನ್ನು ಬರೆದು ಅದರ ಬಗ್ಗೆ ವಿಶ್ಲೇಷಣೆಯನ್ನು ಅದರ ಬಗ್ಗೆ ಒಂದು ವಿಚಾರವನ್ನು ಕೊಟ್ಟರು. ಆನಂತರದಲ್ಲಿ 10-4-1997ರಲ್ಲಿ ಸನ್ಮಾನ್ಯ ಕಾರ್ಯದರ್ಶಿಯವರೇ ಇದರ ಬಗ್ಗೆ ಒಂದು ವರದಿಯನ್ನು ತಯಾರು ಮಾಡಿ ನಿಜವಾಗಿಯೂ ಅಲ್ಲಿ ಏನೇನು ಸಮಸ್ಯೆಯಾಗಿದೆ ಎಂದು ಹೇಳಿ ಬೇರೆ ಬೇರೆ ಕಾರ್ಖಾನೆಯಿಂದ ಬರುವಂಥ ಕಲುಷಿತ ನೀರಿನಲ್ಲಿ ಏನೇನು ಪ್ರಮಾಣ ಇದೆ ಎನ್ನುವುದು ಒಂದು ಕೆಮಿಕಲ್ ರಿಪೋರ್ಟನ್ನು ಸರ್ಕಾರದ ವತಿಯಿಂದ ಕಳುಹಿಸಿಕೊಡಲಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿರಲಿಲ್ಲ ಈ ವಿಚಾರ ಮೂಲಭೂತವಾದಂಥ ಪ್ರಶ್ನೆ. ವಿಶೇಷವಾಗಿ ಆ ವರದಿ ಪ್ರಕಾರ ಆ ಜಮಿನ್ ಡಿಸ್ಟಿಲರಿ ಯಾವುದು ಇದೆ ಅಲ್ಲಿ ಪಕ್ಕದಲ್ಲಿರುವಂಥ ಗ್ರಾಮಗಳಾದ ಕಿಗ್ಗಳ್ಳಿ ಗ್ರಾಮ ಮತ್ತು ಮಾದೇಗೌಡನ ಕೊಪ್ಪಲು ಇಲ್ಲಿ ಸ್ವತಃ ಗ್ರೌಂಡ್‌ವಾಟರ್‌ದಲ್ಲಿ ಬೋರ್‌ಗಳನ್ನು ಎಲ್ಲೆಲ್ಲಿ ಹಾಕಿದೆ ಅಲ್ಲಿ ಕೂಡ ಬರುವಂಥ ನೀರನ್ನು ಉಪಯೋಗಿಸಲಿಕ್ಕೆ ಸಾಧ್ಯವಿಲ್ಲ ಎನ್ನುವಂಥ ವರದಿಯನ್ನು ಸರ್ಕಾರಕ್ಕೆ ಈಗಾಗಲೇ ಕೊಡಲಾಗಿದೆ. ಹಾಗೂ ಈ ಕುಡಿಯುವ ನೀರು ಕುಡಿಯಲಿಕ್ಕೆ ಬಹಳ ಯೋಗ್ಯವಾಗಿಲ್ಲ ಎನ್ನುವಂಥದ್ದನ್ನು, ಮತ್ತು ಮಹಿಳಾ ವಿದ್ಯಾಪೀಠ

ಏನು ಇದೆ ಅಲ್ಲಿರುವಂಥ ಬೋರ್‌ವೆಲ್ಲಿನ ನೀರು ಅಲ್ಲಿ ಬರತಕ್ಕಂಥ ನೀರನ್ನು ಕುಡಿದಾಗ ಸಮಸ್ಯೆಗಳಾಗಿವೆ ಎನ್ನುವಂಥ ವರದಿಯನ್ನು ಇಲ್ಲಿ ಕೊಡಲಾಗಿದೆ. ತಮಗೆ ಈ ವರದಿ ಪ್ರಕಾರದಲ್ಲಿ ಅಲ್ಲಿರುವಂಥ ದ್ರವದ ಆಮ್ಲಕ್ಕೆ ಮತ್ತು ಬ್ಯಾಕ್ಟೀರಿಯಾದ ಸೂಕ್ಷ್ಮ ಕಣಗಳು ಯಾವ ಪ್ರಮಾಣದಲ್ಲಿವೆ ಎನ್ನುವ ರಿಪೋರ್ಟ್‌ನ್ನು 10 ಬಾರಿ ಆ ಪ್ರದೇಶದಲ್ಲಿರುವಂಥ ಒಂದೊಂದು ಕಾರ್ಖಾನೆಗಳಿಗೆ ಭೇಟಿ ಕೊಟ್ಟು ಸುಮಾರು ಫೆಬ್ರವರಿ 1996ರಿಂದ ನವೆಂಬರ್ 1996ರವರೆಗೆ 10 ಬಾರಿ ಭೇಟಿಕೊಟ್ಟು ಆ ನೀರನ್ನು ತೆಗೆದುಕೊಂಡು ಬಂದು ಲ್ಯಾಬೊರೇಟರಿಯಲ್ಲಿ ಟೆಸ್ಟ್ ಮಾಡಿಯಾಗಿದೆ, ಕುಡಿಯಲಿಕ್ಕೆ ಯೋಗ್ಯವಲ್ಲದ ನೀರು ಎಂಬ ವರದಿಯನ್ನು ಕೊಟ್ಟಿರುವಂತದ್ದು ಸರ್ಕಾರದ ಗಮನದಲ್ಲಿ ಬಂದಿಲ್ಲ ಎನ್ನುವ ಪ್ರಶ್ನೆಯನ್ನು ನಾವು ಕೇಳಬೇಕಾದಂಥ ವಿಚಾರ ಇದೆ. ಎರಡನೆಯದು, ಡನ್‌ಫೋರ್ಟ್ ಫೆಬ್ರಿಕ್ ನದಿಯ ಪಕ್ಕದಲ್ಲಿದ್ದು ಕಲುಷಿತ ನೀರನ್ನು ನದಿಗೆ ಬಿಡುತ್ತಿರುವುದರಿಂದ ಜಾನುವಾರುಗಳು ಆ ನೀರನ್ನು ಕುಡಿದು ಸಾವಿಗೆ ಈಡಾಗಿರುವುದು ವರದಿಯಾಗಿದೆ. ಮತ್ತು ಈ ಪ್ರದೇಶದಲ್ಲಿ ಇರುವ ಗ್ರಾಮದ ಜನರೂ ಕೂಡ ಈ ನೀರನ್ನು ಕುಡಿದು ತೊಂದರೆಗೆ ಒಳಗಾಗಿರುವುದು ಗಮನಕ್ಕೆ ಬಂದಿದೆ. ಈ ರಿಪೋರ್ಟ್‌ನ್ನು ಕೊಟ್ಟಿರುವಂಥವರು ಕಾರ್ಯದರ್ಶಿಗಳವರು, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರು. ಇವರು ಈ ಫ್ಯಾಕ್ಟರಿಗೆ 11 ದಿವಸ ಭೇಟಿ ಕೊಟ್ಟಿದ್ದಾರೆ. ಅಂದರೆ ಡಿಸೆಂಬರ್ 1995 ರಿಂದ 1996ರ ನವೆಂಬರ್‌ವರೆಗೆ 11 ಬಾರಿ ಭೇಟಿ ಕೊಟ್ಟು ನೀರನ್ನು ಅಲ್ಲಿಂದ ಶೇಖರಣೆ ಮಾಡಿಕೊಂಡು ಬಂದು ಅದನ್ನು ಲ್ಯಾಬೊರೇಟರಿಯಲ್ಲಿ ಟೆಸ್ಟ್ ಮಾಡಿ ಅದರಲ್ಲಿ ಈಗಾಗಲೇ ಹೇಳಿದ ರೀತಿಯಲ್ಲಿ ಕೆಮಿಕಲ್ ಕಂಟೆಂಟ್ಸ್ ಎಷ್ಟೆಷ್ಟು ಇದೆ ಸಂಪೂರ್ಣವಾಗಿ ವರದಿಯನ್ನು ಸಲ್ಲಿಸಿದ್ದಾರೆ. ಆದರೆ ಸುಜಾತಾ ಟೆಕ್ಸ್‌ಟೈಲ್ಸ್ ಮಿಲ್‌ಗೆ ಏನು ಇದೆ ಅದಕ್ಕೆ ಸುಮಾರು 9 ಬಾರಿ ಜನವರಿ 1995ರಿಂದ 1996ರ ಅಕ್ಟೋಬರ್‌ವರೆಗೆ ಕೂಡ 9 ಬಾರಿ ಭೇಟಿ ನೀಡಿ ಅಲ್ಲಿ ಆಗಿರತಕ್ಕಂಥ ನೀರಿನಲ್ಲಿ ಕಲ್ಮಶ ಎಷ್ಟು ಹೊರಗೆ ಬರುತ್ತದೆ ಎನ್ನುವುದರ ಬಗ್ಗೆ ಒಂದು ಸಮಗ್ರವಾದಂಥ ವರದಿಯನ್ನು ಈಗಾಗಲೇ ಸಲ್ಲಿಸಿದ್ದಾರೆ. ಈ ಕಾರ್ಖಾನೆ ಬಗ್ಗೆ ಅವರೇ ಹೇಳುವ ಪ್ರಕಾರದಲ್ಲಿ ಈ ಕಾರ್ಖಾನೆಯಿಂದ ಕಲುಷಿತ ನೀರು ಕಾರ್ಖಾನೆ ಹತ್ತಿರದಲ್ಲಿರುವಂಥ ಕಾಲುವೆಗಳ ಮುಖಾಂತರ ಕಪಿಲಾ ನದಿಗೆ ರಾತ್ರಿಯ ವೇಳೆ ಬಿಡತಕ್ಕಂಥದ್ದು ಗಮನಕ್ಕೆ ಬಂದಿದೆ. ಇದು.ಅವರಲ್ಲಿ ಕೊಟ್ಟಂಥ ನೀರಿನ ವರದಿ. ಇನ್ನು ರಾಮನ್ ಬೋರ್ಡ್ಸ್‌ಗೆ ಸಂಬಂಧಪಟ್ಟ ಕಾರ್ಖಾನೆಯಿಂದಲೂ ಸಹ ಆ ಪ್ರದೇಶದಲ್ಲಿರುವಂಥ ಜನಗಳಿಗೆ ತೊಂದರೆಯಾಗಿದೆ ಎನ್ನುವ ಮಾತನ್ನು ಹೇಳುತ್ತಾ, ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. 23-5-1997 ಮತ್ತು 28-5-1997ರಲ್ಲಿ ಈ ಸಮಿತಿ ಒಂದು ಸಭೆಯನ್ನು ಸೇರಿ ಇದಕ್ಕೆ ಸಂಬಂಧಪಟ್ಟ ಮಾರ್ಕ್ಸ್ ಇಂಡಿಯಾ ಕಾರ್ಖಾನೆ ಕಲುಷಿತ ನೀರನ್ನು ಕುಡಿದ ವಿಚಾರದಲ್ಲಿ ಏಪ್ರಿಲ್ ತಿಂಗಳಲ್ಲಿ ಜಾನುವಾರು ಸತ್ತಿರುವಂಥದ್ದು ಮತ್ತು ಅಲ್ಲಿರುವಂಥ ಪ್ರದೇಶದ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಅಂದರೆ ಏಪ್ರಿಲ್ ತಿಂಗಳಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದಾರೆ. 47 ಹಸುಗಳು ಸತ್ತಿದ್ದಾವೆ,

ಜೊತೆಗೆ ಇಬ್ಬರು ಯುವಕರು ಮಾರ್ಕ್ಸ್ ಇಂಡಿಯಾ ಕಾರ್ಖಾನೆ ಪಕ್ಕದಲ್ಲಿ ವಾಸ ಮಾಡತಕ್ಕಂಥ ವ್ಯಕ್ತಿಗಳು ಸತ್ತಿದ್ದಾರೆ. ಆದರೆ ವಿಶೇಷವಾಗಿ ಯಾರು ಪರಿಸರ ಮಾಲಿನ್ಯ ಅಧಿಕಾರಿಗಳಿದ್ದಾರೆ, ಅವರ ಜೊತೆಯಲ್ಲಿ ಕೈಗೂಡಿಸಿ ಆ ಇಬ್ಬರು ಅಧಿಕಾರಿಗಳು ಸತ್ತಂಥ ಸಮಯದಲ್ಲಿ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಕೊಟ್ಟಿದ್ದನ್ನು ಹಿಂದಕ್ಕೆ ತೆಗೆಸಿ ಕಾರ್ಖಾನೆಯ ಮಾಲಿಕರಿಂದ ಸತ್ತಂಥ ಕುಟುಂಬದ ಮನೆಯವರಿಗೆ ಹತ್ತತ್ತು ಸಾವಿರ ರೂಪಾಯಿಗಳನ್ನು ಕೊಟ್ಟು ಕೇಸ್‌ಗಳನ್ನು ಹಿಂದಕ್ಕೆ ತೆಗೆದುಕೊಳ್ಳುವ ಕಲಸವನ್ನು ಮಾಡಲಾಗಿದೆ. ಜೊತೆಗೆ ಆಶ್ಚರ್ಯಕರವಾದಂಥದ್ದು ಯಾವ ಸಮಿತಿ ಸದನದಲ್ಲಿ ಈ ವಿಚಾರವನ್ನು ಇಟ್ಟಾಗ ಸತ್ಯಾಂಶ ಹೊರಗೆ ಬರುತ್ತದೆ ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದು ಅಲ್ಲಿರುವಂಥ ಜನಗಳ ಸಮಸ್ಯೆಯನ್ನು ನೀಗಿಸಬೇಕು ಎಂದು ಕೇಳಿದಾಗ, ಇಲ್ಲಿ ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ, ಯಾವ ಪರಿಸರ ಒಂದು ಇಲಾಖೆ ಇದೆ ಅದರ ಅರಿವಿಗೆ ಬಂದಿಲ್ಲವೆನ್ನುವ ವಿಚಾರವನ್ನು ಕೊಟ್ಟಿದ್ದನ್ನು ನೋಡಿ ಬಹಳ ನೋವು ಆದಂಥ ವಿಚಾರ, ಇದಕ್ಕೆ ದಯಮಾಡಿ ಕೂಲಂಕಷವಾಗಿ ಉತ್ತರವನ್ನು ತಮ್ಮ ಮೂಲಕ ನಾನು ಬಯಸುತ್ತೇನೆ.

+ ಶ್ರೀ ಬಸವರಾಜ ನೀಲಪ್ಪ ಶಿವಣ್ಣನವರ (ತಂತ್ರಜ್ಞಾನ ಮತ್ತು ಪರಿಸರ ಸಚಿವರು): ಮಾನ್ಯ ಅಧ್ಯಕ್ಷರೆ, ಈ ನಂಜನಗೂಡಿನಲ್ಲಿ ಬರತಕ್ಕಂಥ ಈ ಕರ್ನಾಟಕ ಪ್ರದೇಶ ಅಭಿವೃದ್ಧಿ ಸುಮಾರು 28 ಬೃಹತ್ ಮತ್ತು ಮಧ್ಯಮ ಕಾರ್ಖಾನೆಗಳು ಇಲ್ಲಿ ಇವೆ. 7 ಕಾರ್ಖಾನೆಗಳು ಈಗಾಗಲೇ ಬಂದಾಗಿವೆ, ಇದರಲ್ಲಿ ಯಾವ ಕಾರ್ಖಾನೆಗಳೂ ಕೂಡ ಎಲ್ಲಾ ತಮ್ಮ ಕಲುಷಿತ ನೀರನ್ನು ಸಂಸ್ಕರಣ ಮಾಡಿ ತಮ್ಮ ಪ್ರದೇಶದಲ್ಲಿ ತಮ್ಮ ಏರಿಯಾದಲ್ಲಿ ಅವನು ವ್ಯವಸಾಯಕ್ಕೆ ಈಗಾಗಲೇ ಉಪಯೋಗ ಮಾಡುತ್ತಿದ್ದಾರೆ. ಇದರಲ್ಲಿ ಮಾನ್ಯ ಸದಸ್ಯರು ಹೇಳುವಂತೆ ಜಿಲ್ಲಾ ಪರಿಷತ್ತಿನವರು ತಮ್ಮದೇ ಆದ ವ್ಯವಸ್ಥೆಯಲ್ಲಿ ಅವರ ಒಂದು ಕಮಿಟಿಯನ್ನು ಮಾಡಿಕೊಂಡು ಅಲ್ಲಿರತಕ್ಕಂಥ ಜೆಮಿನಿ ಡಿಸ್ಟಿಲರಿ ಮತ್ತು ಡನ್‌ಫೋರ್ಡ್ ಮತ್ತು ಸುಜಾತಾ ಟೆಕ್ಸ್‌ಟೈಲ್ ಮಿಲ್, ಈ ಮೂರು ಕಾರ್ಖಾನೆಗಳ ಬಗ್ಗೆ ವಿವರವಾದ ಒಂದು ವರದಿಯನ್ನು ಈಗಾಗಲೇ ಸರ್ಕಾರಕ್ಕೂ ಮುಟ್ಟಿಸಿದ್ದಾರೆ. ಆ ವರದಿಗಳ ಬಗ್ಗೆ ಈಗಾಗಲೇ ನಮ್ಮ ಅಧಿಕಾರಿಗಳು ಕೂಡ ಆ ಪ್ರದೇಶಕ್ಕೆ ಕಳುಹಿಸಿ ಅಲ್ಲಿ ಆಗತಕ್ಕಂಥ ವಸ್ತುಸ್ಥಿತಿಗಳನ್ನು ತಿಳಿದುಕೊಂಡು ಆ ಕಾರ್ಖಾನೆಗಳ ಮೇಲೆ ಏನು ಕ್ರಮ ಕೈಗೊಳ್ಳಬೇಕು ಎನ್ನುವುದರ ಬಗ್ಗೆ ಈಗಾಗಲೇ ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ನೀಡಿದ್ದೇನೆ. ಮತ್ತು ಇದಕ್ಕಿಂತ ಪೂರ್ವದಲ್ಲಿ ಈ ಒಂದು ಜೆಮಿನಿ ಡಿಸ್ಟಿಲರಿಗೆ ಮತ್ತು ಡನ್‌ಫೋರ್ಡ್ ಈ ಒಂದು ಕಾರ್ಖಾನೆಗೆ ನಾನು ಸ್ವತಃ ಭೇಟಿ ಕೂಡ ಕೊಟ್ಟಿದ್ದೇನೆ. ಡನ್‌ಫೋರ್ಡ್ ಕಾರ್ಖಾನೆ ಒಂದು ಅರಿವೆಗೆ ಬಣ್ಣ ಹಾಕುವಂಥ ಕಾರ್ಖಾನೆ. ಅಲ್ಲಿ ಈಗಾಗಲೇ ತನ್ನದೇ ಆದ ಸಮಸ್ಯೆಗಳು ಇದೆ ಎಂದು ಕಾರ್ಖಾನೆ ಬಂದಾಗಿದೆ. ಮತ್ತು ಜೆಮಿನಿ ಡಿಸ್ಟಿಲರಿಗೆ ನಾನೇ ಸ್ವತಃ ಹೋಗಿ ಭೇಟಿ ಮಾಡಿ ಬಂದಿದ್ದೇನೆ, ಜೊತೆಗೆ ಅಲ್ಲಿರುವ ಮಹಿಳಾ ವಿದ್ಯಾ ಪೀಠ ಹಾಗೂ ರೈತರುಗಳ ಬೋರ್‌ವೆಲ್‌ಗಳನ್ನು ಕೂಡಾ ನೋಡಿ ಬಂದಿದ್ದೇನೆ. ಅಲ್ಲಿ

ನೀರು ಕಲುಷಿತವಾಗಿರುವುದು ಸತ್ಯವಾಗಿದೆ. ಆ ಕಾರ್ಖಾನೆಯವರು ಕಲುಷಿತ ನೀರನ್ನು ಹೊರಗೆ ಬಿಟ್ಟು ಅದನ್ನು ವ್ಯವಸಾಯಕ್ಕೆ ಉಪಯೋಗ ಮಾಡಿರುವುದರಿಂದ ಭೂಮಿಯಲ್ಲಿ ಅದು ಇಂಗಿ ಆ ಕಾರ್ಖಾನೆಯ ಸುತ್ತಮುತ್ತಲಿರುವ ಬೋರ್‌ವೆಲ್‌ಗಳ ಮತ್ತು ಓಪನ್‌ವೆಲ್‌ಗಳ ನೀರು ಕಲುಷಿತಗೊಂಡಿದೆ. ಇದರ ಬಗ್ಗೆ ಜಿಲ್ಲಾ ಪರಿಷತ್ತಿನವರು ವರದಿ ಕೊಟ್ಟ ಮೇಲೆ ನಮ್ಮ ಇಲಾಖೆಯ ಅಧಿಕಾರಿಗಳು ಆ ಕಾರ್ಖಾನೆಗೆ ಭೇಟಿ ಕೊಟ್ಟು ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ. ಹಾಗೆಯೇ ಮ್ಯಾಕ್ಸ್ ಇಂಡಿಯಾ ಲಿಮಿಟೆಡ್ ಕಾರ್ಖಾನೆಯವರು ಮಾಡುತ್ತಿರುವ ಪರಿಸರ ಮಾಲಿನ್ಯದ ಬಗ್ಗೆಯೂ ಮಾನ್ಯ ಸದಸ್ಯರು ಹೇಳಿದ್ದಾರೆ, ಈ ಕಾರ್ಖಾನೆಯು ನದಿಯಿಂದ 500 ರಿಂದ 700 ಮೀಟರ್‌ಗಳ ದೂರದಲ್ಲಿದೆ. ಈ ಫ್ಯಾಕ್ಟರಿಯಲ್ಲಿ ಪ್ರತಿ ದಿವಸ 2010 ಕೆ.ಜಿ.ಯಷ್ಟು ಅಪಾಯಕಾರಿಯಾದ ತ್ಯಾಜ್ಯ ವಸ್ತು ಹೊರಬೀಳುತ್ತದೆ. ಈ ತ್ಯಾಜ್ಯ ವಸ್ತುವನ್ನು ವೈಜ್ಞಾನಿಕ ರೀತಿಯಲ್ಲಿ ಸರಿಯಾಗಿ ಇಡದೇ ಇದ್ದುದ್ದರಿಂದ ಆಕಸ್ಮಿಕವಾಗಿ ಮಳೆ ಬಂದಾಗ ಅದು ಚರಂಡಿಯಲ್ಲಿ ಹರಿದು ಬಂದು ಗುಂಡಿಯಲ್ಲಿ ಶೇಖರಣೆಯಾಗಿತ್ತು. ಈ ರೀತಿ ಅಪಾಯಕಾರಿಯಾದ ತ್ಯಾಜ್ಯವಸ್ತು ಮಿಶ್ರಿತ ನೀರನ್ನು ಕುಡಿದ 5 ದನಕರುಗಳು ಸತ್ತ ಬಗ್ಗೆ ನಮಗೆ ವರದಿ ಬಂದಿದೆ. ಆದರೆ, ಇದರಿಂದ ಮನುಷ್ಯರು ಸತ್ತ ಬಗ್ಗೆ ನಮಗೆ ಯಾವುದೇ ವರದಿ ಬಂದಿಲ್ಲ. ಅಲ್ಲಿನ ಪಶು ವೈದ್ಯಾಧಿಕಾರಿಗಳಿಂದ ದನಗಳ ಪೋಸ್ಟ್ ಮಾರ್ಟಮ್ ವರದಿ ಬಂದ ತಕ್ಷಣ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ಆಮೇಲೆ, ನಂಜನಗೂಡು ಪಟ್ಟಣದ ಕೊಳಚೆ ನೀರು ನದಿಗೆ ಸೇರುತ್ತಿರುವುದರಿಂದ ಮಾಲಿನ್ಯ ಉಂಟಾಗಿದೆಯೆಂದು ಹೇಳಿದ್ದಾರೆ. ಈ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ ಮಾಡುವ ಸಲುವಾಗಿ 44 ಲಕ್ಷ ರೂಪಾಯಿಗಳ ಒಂದು ಯೋಜನೆ ಸಿದ್ಧ ಮಾಡಿದ್ದು ಅದರ ಪೈಕಿ ಈಗಾಗಲೇ 11 ಲಕ್ಷದ 88 ಸಾವಿರ ರೂಪಾಯಿಗಳನ್ನು ಕರ್ನಾಟಕ ರಾಜ್ಯದ ಅರ್ಬನ್ ವಾಟರ್ ಸಪ್ಲೈ ಮತ್ತು ಸಿವೇಜ್ ಬೋರ್ಡ್‌ನವರಿಗೆ ಬಿಡುಗಡೆ ಮಾಡಲಾಗಿದೆ. ಇನ್ನು ಒಂದೂವರೆ ವರ್ಷದಲ್ಲಿ ಆ ಒಳಚರಂಡಿ ಕೆಲಸವನ್ನು ಮುಗಿಸಿಕೊಡಲಾಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ಒಂದೂವರೆ ವರ್ಷಗಳ ಹಿಂದೆಯೇ ಜಾನುವಾರುಗಳು ಸತ್ತಿದ್ದರೂ ಇದುವರೆಗೆ ಅವುಗಳ ಪೋಸ್ಟ್ ಮಾರ್ಟ್‌ಮ್ ರಿಪೋರ್ಟ್ ಬಂದಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಪರಿಸರ ಇಲಾಖೆಯಲ್ಲಿ ನಿಯಂತ್ರಣಾಧಿಕಾರಿಯಾಗಿರುವ ಲಿಂಗರಾಜು ಎನ್ನುವವರು ಈ ಕಾರ್ಖಾನೆಗಳಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಿದ ನಂತರ ಯಾವ ಯಾವ ಫ್ಯಾಕ್ಟರಿಗಳಿಂದ ಹೊರ ಬೀಳುವ ಕಲುಷಿತ ನೀರಿನಲ್ಲಿ ಯಾವ ಮಟ್ಟದ ತ್ಯಾಜ್ಯ ವಸ್ತುಗಳಿವೆ ಮತ್ತು ಯಾವ ಯಾವ ಗುಂಪಿನ ಬ್ಯಾಕ್ಟೀರಿಯಗಳು ಇವೆಯೆಂದು ವರದಿ ಕೊಟ್ಟಿದ್ದರೂ ಇದುವರೆಗೆ ಆ ಕಾರ್ಖಾನೆಗಳವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಂಡಿಲ್ಲ. ಆಮೇಲೆ, ಈ ತ್ಯಾಜ್ಯ ವಸ್ತುಗಳ ದುಷ್ಪರಿಣಾಮದಿಂದ ನಂಜನಗೂಡಿನ ಸುತ್ತಮುತ್ತ ಇರುವ ಜನರಿಗೆ ಅಸ್ತಮ, ಸ್ಕಿನ್

ಡಿಸೀಸ್ ಹೆಚ್ಚಾಗುತ್ತಿವೆಯೆಂದೂ ಸಹ ಸಂಶೋಧನಾ ವರದಿ ಇದೆ. ಪರಿಸರ ಇಲಾಖೆಯ ಅಧಿಕಾರಿಗಳೇ, ಜಾನುವಾರುಗಳು ಮತ್ತು ಮನುಷ್ಯರು ಸತ್ತಿರುವ ಬಗ್ಗೆ ಮಾಹಿತಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ.

ಅಧ್ಯಕ್ಷರು: ಮಾನ್ಯ ಮಂತ್ರಿಯವರು ಕಾರ್ಖಾನೆಯವರ ಪರವಾಗಿ ಮಾತನಾಡುತ್ತಿದ್ದಾರೆ, ಜನರ ಹಿತ ಅವರ ಮನಸ್ಸಿನಲ್ಲಿ ಇಲ್ಲ ಎನ್ನುವ ರೀತಿಯಲ್ಲಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಯಾರೇ ಮಂತ್ರಿಯಾಗಿದ್ದರೂ, ಅಧಿಕಾರಿಗಳಿಂದಲೇ ವರದಿಯನ್ನು ತರಿಸಿಕೊಂಡು ಹೇಳಬೇಕಾಗುತ್ತದೆ. ಅಧಿಕಾರಿಗಳು ಕೊಟ್ಟಿರತಕ್ಕಂಥ ವರದಿ ಸರಿಯಾಗಿಲ್ಲವೇನೋ ಎಂಬ ಅನುಮಾನ ತಮಗೆ ಬಂದರೆ, ಮಾನ್ಯ ಸದಸ್ಯರು ಹೇಳಿರುವ ವಿಷಯವನ್ನು ಗಮನದಲ್ಲಿಟ್ಟುಕೊಂಡು ಅಧಿವೇಶನ ಮುಗಿದ ನಂತರ ಮಂತ್ರಿಗಳಾದ ತಾವು ಅಲ್ಲಿ ಭೇಟಿ ಕೊಟ್ಟು ಅಧ್ಯಯನ ಮಾಡಿ. ಅದರಲ್ಲಿ, ಅಧಿಕಾರಿಗಳು ಕೊಟ್ಟಿರುವ ಹೇಳಿಕೆ ಸರಿಯಿದ್ದು, ಮಾನ್ಯ ಸದಸ್ಯರು ಹೇಳಿರುವುದು ಸತ್ಯಕ್ಕೆ ದೂರವಾಗಿದ್ದಲ್ಲಿ ಆ ಬಗ್ಗೆ ಅವರಿಗೆ ಒಂದು ಪತ್ರವನ್ನು ಬರೆದು ತಿಳಿಸಿಬಿಡಿ. ಅಥವಾ ಅಲ್ಲಿಗೆ ತಾವು ಹೋಗುವ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಸೂಚನೆ ಕೊಡಿ, ಅವರೂ ಬೇಕಾದರೆ ನಿಮ್ಮೊಡನೆ ಬರಲಿ. ಒಂದು ವೇಳೆ, ಮಾನ್ಯ ಸದಸ್ಯರು ಹೇಳಿರುವುದರಲ್ಲಿ ಸತ್ಯ ಇದ್ದು, ಅಧಿಕಾರಿಗಳು ಎಲ್ಲೋ ಅವಸರ ಪಟ್ಟು ವರದಿ ಕಳುಹಿಸಿರುವುದರಲ್ಲಿ ತಪ್ಪಾಗಿದ್ದರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಿ. ಒಟ್ಟಿನಲ್ಲಿ ನಮಗೆಲ್ಲರಿಗೂ ಜನರ ಹಿತ ಮುಖ್ಯ. ನೀವೇನೂ ತಪ್ಪು ಮಾಡತಕ್ಕಂಥವರಲ್ಲವೆಂದು ನನಗೆ ಗೊತ್ತಿದೆ, ತಮ್ಮಲ್ಲಿ ನನಗೆ ವಿಶ್ವಾಸ ಇದೆ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ: ಆಗಬಹುದು.

ಶ್ರೀ ಎ.ರಾಮದಾಸ್: ಮ್ಯಾಕ್ಸ್ ಇಂಡಿಯಾ ಲಿಮಿಟೆಡ್ ಕಂಪನಿಯಿಂದ ಹೊರ ಬರುವ ಕಲುಷಿತ ನೀರನ್ನು ರೀ-ಸೈಕ್ಲಿಂಗ್ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಪ್ರತಿ ದಿನ ಸಮಸ್ಯೆ ಉದ್ಭವವಾಗುತ್ತದೆ.

ಅಧ್ಯಕ್ಷರು: ಇನ್ನೆರಡು ದಿವಸಗಳಲ್ಲಿ ಅಧಿವೇಶನ ಮುಗಿಯುತ್ತದೆ. ಸಚಿವರು ಆ ಕಡೆ ಟೂರ್ ಹಾಕಿಕೊಂಡು ಬರುತ್ತಾರೆ, ಆ ಸಮಯದಲ್ಲಿ ತಾವು ಹೋಗಿ ಏನು ಸಮಸ್ಯೆ ಇದೆ ಎಂಬ ಬಗ್ಗೆ ಅವರಿಗೆ ಹೇಳಿ. ಅದರಿಂದ, ಅಲ್ಲಿ ವಾಸಿಸುವ ಜನರಿಗೆ ಒಳ್ಳೆಯದಾಗುತ್ತದೆ, ಮತ್ತು ಅದರ ಬಗ್ಗೆ ತಾವು ಒಳ್ಳೆ ಕೆಲಸ ಮಾಡಿದ ಹಾಗೆ ಆಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಪಾಕಿಸ್ತಾನದ 50 ವರ್ಷಗಳ ಸ್ವಾತಂತ್ರ್ಯ ದಿನಾಚರಣೆ ಬಗ್ಗೆ ಬಿಡುಗಡೆಯಾಗಿರುವ ಪುಸ್ತಕದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆ ಕೊಡುತ್ತೇನೆಂದು ಹೇಳಿದ್ದರು.

ಅಧ್ಯಕ್ಷರು: ಮುಖ್ಯ ಮಂತ್ರಿಯವರು ಆಸ್ಪತ್ರೆಗೆ ಹೋಗಿದ್ದಾರೆಂದು ಅವರ ಸಂಪರ್ಕ ಅಧಿಕಾರಿಯವರು ನನಗೆ ಬಂದು ಹೇಳಿದ್ದಾರೆ. ಅವರು ಆಸ್ಪತ್ರೆಯಿಂದ ಬರಲಿ, ಅವರು ಬಂದ ಮೇಲೆ ಹೇಳಿಕೆಯನ್ನು ಕೊಡಿಸುತ್ತೇನೆ.

(ಇ) ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ.

+ ಶ್ರೀ ಮಂಜುನಾಥ್ ಸಿ.ಕುನ್ನೂರ್ (ಶಿಗ್ಗಾಂವ್): ಸನ್ಮಾನ್ಯ ಅಧ್ಯಕ್ಷರೆ, 22ನೇ ಜುಲೈ 1997ರಂದು ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ ಪ್ರಶ್ನೆ ಕೇಳಿದ್ದಾಗ ಸರ್ಕಾರದಿಂದ ಸಮರ್ಪಕವಾದ ಉತ್ತರ ಬಾರದೇ ಇದ್ದಾಗ, ಇದರ ಬಗ್ಗೆ ಅರ್ಧ ಗಂಟೆ ಕಾಲ ಚರ್ಚೆ ಮಾಡಲು ಅನುವು ಮಾಡಿಕೊಡಬೇಕೆಂದು ಕೇಳಿಕೊಂಡಾಗ ತಾವು ಅದಕ್ಕೆ ಅನುಮತಿ ಕೊಟ್ಟಿರುವುದರಿಂದ ತಮಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಂದುವರಿಸುತ್ತೇನೆ. ಇದೊಂದು ಬಹಳ ಪ್ರಮುಖವಾದ ಯೋಜನೆಯಾಗಿರುವುದರಿಂದ ಹಲವಾರು ವಿಷಯಗಳನ್ನು ನಾನು ಹೇಳಬೇಕಾಗಿದೆ. ಧಾರವಾಡ ಜಿಲ್ಲೆಯ ದಕ್ಷಿಣ ಲೋಕಸಭಾ ಕ್ಷೇತ್ರದ ಜನರಿಗೆ, ನೂತನ ಜಿಲ್ಲೆಯಾಗಿರುವ ಹಾವೇರಿ ಭಾಗದ ಜನರಿಗೆ, ಚಿತ್ರದುರ್ಗ ಜಿಲ್ಲೆಯ ಹರಿಹರ ತಾಲ್ಲೂಕಿನ ಜನರಿಗೆ, ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ಮತ್ತು ಇತರ ತಾಲ್ಲೂಕುಗಳ ಜನರಿಗೆ, ಗದಗ್ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಕೆಲವು ಜನರಿಗೆ ಮತ್ತು ಕೊಪ್ಪಳ ತಾಲ್ಲೂಕಿನ ರೈತ ಜನರಿಗೆ ಅನುಕೂಲವಾಗುವಂಥ ಒಂದು ದೊಡ್ಡ ಯೋಜನೆ ಇದಾಗಿರುವುದರಿಂದ ಇದನ್ನು ಕಾರ್ಯಗತಗೊಳಿಸತಕ್ಕಂಥಾದ್ದು ಅತಿ ಮಹತ್ವ ಇದೆ. ಈ ವಿಚಾರದಲ್ಲಿ ಮಾನ್ಯ ಭಾರಿ ನೀರಾವರಿ ಸಚಿವರು ಅನೇಕ ಹೇಳಿಕೆಗಳನ್ನು ಮಾಡಿದ್ದಾರೆ. ಯೋಜನೆಗೆ ಮಹತ್ವ ಬರುವ ರೀತಿಯಲ್ಲಿ ವಸ್ತು ಸ್ಥಿತಿಯನ್ನು ಜನರಿಗೆ ತಿಳಿಸಿದ್ದಕ್ಕಾಗಿ ಮೊದಲಿಗೆ ಮಾನ್ಯ ಭಾರೀ ನೀರಾವರಿ ಸಚಿವರಿಗೆ ಅಭಿನಂದನೆಯನ್ನು ತಿಳಿಸುತ್ತೇನೆ. ಈ ಯೋಜನೆಯು ಮೊದಲು ಮೂಲೆಗೆ ಬಿದ್ದಿದ್ದನ್ನು ಹೊಸ ಬೆಳಕಿಗೆ ತರುವಲ್ಲಿ ಪತ್ರಕರ್ತರೂ ಮಹತ್ವ ಪಾತ್ರವನ್ನು ವಹಿಸಿದ್ದಾರೆ. ಈ ಯೋಜನೆಗೆ ಇದುವರೆಗೆ 18 ಕೋಟಿ 60 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದು ಇನ್ನೂ 670 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಅಂದಾಜು ಮಾಡಲಾಗಿದೆ. ಈ ಯೋಜನೆಯನ್ನು ಮಾಡುವ ಬಗ್ಗೆ ಆಂಧ್ರ ಸರ್ಕಾರದವರು ತಕರಾರು ತೆಗೆದಿರುವ ಬಗ್ಗೆ ನಮ್ಮ ಸರ್ಕಾರದ ನಿಲವು ಏನೆಂದು ಕೇಳಿದ್ದಕ್ಕೆ, ಸದರಿ ಯೋಜನೆಯನ್ನು ಬಚಾವತ್ ಅವಾರ್ಡ್‌ನ ಚೌಕಟ್ಟಿನಲ್ಲಿಯೇ ತೆಗೆದುಕೊಳ್ಳಲಾಗಿರುವುದರಿಂದ ಇದರ ಬಗ್ಗೆ ಸದರಿ ತೀರ್ಪಿನ ಉಲ್ಲಂಘನೆಯಾಗುವುದಿಲ್ಲವೆಂದು ಆಂಧ್ರ ಸರ್ಕಾರಕ್ಕೆ ಸ್ಪಷ್ಟೀಕರಿಸಲಾಗಿದೆಯೆಂದು. ಉತ್ತರವನ್ನು ಸರ್ಕಾರ ನೀಡಿದೆ. ಆಮೇಲೆ ಇದೇ ಸಂದರ್ಭದಲ್ಲಿ ಭದ್ರ ಮೇಲ್ದಂಡೆ ಯೋಜನೆಯನ್ನು ಕೈಗೆತ್ತಿಕೊಳ್ಳತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ ಈ ಭದ್ರ ಮೇಲ್ದಂಡೆ ಯೋಜನೆಯನ್ನು ತಾವು ಮಾಡುವುದರಿಂದ ಈ ತುಂಗಾ ಮೇಲ್ದಂಡೆ ಯೋಜನೆಗೆ 'ತುಂಗಾ ತಿರುವು' ಎನ್ನತಕ್ಕಂಥ ಒಂದು ಹೊಸ ನಾಮಾಂಕಿತವನ್ನು ಮಾಡಿ ತುಂಗಾ ಡೈವರ್ಷನ್ ಸ್ಕೀಮ್ ಎಂದು ಮಾಡಲಾಗುತ್ತಿದೆ.

ಇದರಿಂದಾಗಿ ತುಂಗಾ ಮೇಲ್ದಂಡೆ ಯೋಜನೆಗೆ ತೊಂದರೆಯಾಗುತ್ತದೆಯೇ ಇಲ್ಲವೇ ಎನ್ನುವ ಬಗ್ಗೆ ಸ್ಪಷ್ಟೀಕರಣ ನೀಡಬೇಕಾಗಿದೆ.

1.30 ಪಿ.ಎಂ

ನಾನು ಸಂಯುಕ್ತ ಕರ್ನಾಟಕ 13-2-97ರಂದು ಬಂದ ವರದಿಯನ್ನು ನೋಡಿದಾಗ "ಆಗುಂಬೆ ಬಳಿ ಲಿಫ್ಟ್ ಮಾಡಿ ಭದ್ರಾಕ್ಕೆ ತುಂಗೆಯಿಂದ 22 ಟಿ.ಎಂ.ಸಿ.ನೀರು" ಎಂಬ ವರದಿಯು ಪ್ರಮುಖವಾದ ಪತ್ರಿಕೆಯಲ್ಲಿ ವರದಿಯಾಗಿದೆ. ಇವೊತ್ತು ಆಗುಂಬೆಯ ಬಳಿ ಲಿಫ್ಟ್ ಮಾಡಿ 22 ಟಿ.ಎಂ.ಸಿ. ನೀರನ್ನು ತಾವು ತೆಗೆದುಕೊಂಡು ಹೋಗುವುದಾದರೆ ಇವೊತ್ತು ತುಂಗಾ ಮೇಲ್ದಂಡೆ ಯೋಜನೆಯಿಂದ ಆ ಭಾಗದ ಜನರಿಗೆ ಬರಬೇಕಾದಂಥ ನೀರಿನ ಒಂದು ಪ್ರಮಾಣವು ಕಡಿಮೆಯಾಗುತ್ತದೋ ಏನೋ ಎಂಬ ಸಂಶಯ ಆ ಭಾಗದ ಜನರಿಗೆ ಬರುತ್ತಾ ಇದೆ. ಕಾರಣ, ಇವೊತ್ತು ತುಂಗಾ ಮೇಲ್ದಂಡೆ ಯೋಜನೆಯನ್ನು ತಾವು ಮಾಡಿದ್ದೀರಿ. ಇದನ್ನು ಮಾಡುವಾಗ ಪ್ರಮುಖವಾಗಿ ಮೂರು ವಿಚಾರಗಳು ಅದರಲ್ಲಿ ಒಳಗೊಳ್ಳಬೇಕಾಗಿತ್ತು. ಮೊದಲನೇದಾಗಿ ಮೇಘರವಳ್ಳಿಯ ಹತ್ತಿರ ಮಾಲತಿ ಜಲಾಶಯಕ್ಕೆ ತಾವು ಅಣೆಕಟ್ಟನ್ನು ಕಟ್ಟ ಬೇಕಾಗಿತ್ತು. ಎರಡನೇದಾಗಿ ಗಾಜನೂರಿನ ಬಳಿ ಸಕ್ರೆಬೈಲು ಪ್ರದೇಶದಲ್ಲಿ ತಾವು ಕ್ರೆಸ್ಟ್‌ಗೇಟ್‌ಗಳನ್ನು ಕಟ್ಟಿ ಸುಮಾರು 340 ಕಿ.ಮೀ. ಉದ್ದದ ಕಾಲುವೆಯನ್ನು ಮಾಡತಕ್ಕಂಥಾದ್ದು. ಮತ್ತು ಆ ಭಾಗದ ಜನರಿಗೆ ನೀರನ್ನು ಒದಗಿಸುವಂಥ ಕೆಲಸವನ್ನು ತಾವು ಮಾಡಬೇಕಾಗಿತ್ತು. ಆದರೆ ತಾವು ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಕೇವಲ 12.24 ಟಿ.ಎಂ.ಸಿ. ನೀರನ್ನು ಬಳಸುವುದಾಗಿ ಹೇಳಿದ್ದೀರಿ. ವಸ್ತುಸ್ಥಿತಿಯಂತೆ ಇವೊತ್ತು ತುಂಗಾ ಮೇಲ್ದಂಡೆ ಯೋಜನೆ ಮಾಲತಿ ಜಲಾನಯನವನ್ನು ಒಳಗೊಂಡು ಆ ಯೋಜನೆಯು ಜಾರಿಗೆ ಬರಬೇಕಾದರೆ ಅಲ್ಲಿ 32.44 ಟಿ.ಎಂ.ಸಿ. ನೀರು ಆ ಜಲಾಶಯದಲ್ಲಿ ಸಂಗ್ರಹವಾಗುತ್ತದೆ ಎನ್ನತಕ್ಕಂಥ ತಜ್ಞರ ಅಭಿಪ್ರಾಯ ಇದೆ. 32.44 ಟಿ.ಎಂ.ಸಿ.ಗೆ ಬದಲಾಗಿ 12.24 ಟಿ.ಎಂ.ಸಿ. ನೀರನ್ನು ತಾವು ಉಪಯೋಗ ಮಾಡಿದ್ದರೆ ಈ ತುಂಗಾ ಮೇಲ್ದಂಡೆಯಲ್ಲಿ ಬರತಕ್ಕಂಥ ಜನರಿಗೆ ಅಂದರೆ ಸುಮಾರು 20 ಟಿ.ಎಂ.ಸಿ. ನೀರನ್ನು ಅವರು ಸರಳವಾಗಿ ಕಳೆದುಕೊಳ್ಳತಕ್ಕಂಥ ಭೀತಿ, ಭಯ ಆ ಭಾಗದ ಜನರಿಗೆ ಇದೆ. ತಾವು ಮಾಲತಿ ಜಲಾನಯನವನ್ನು ಬಿಟ್ಟು ಈ ಯೋಜನೆಯನ್ನು ಕೈಗೊಂಡಿದ್ದರೂ ಕೂಡ ಆ ಭಾಗದ ಜನರು ಮೊದಲು ಆ ಕೆಲಸ ಪ್ರಾರಂಭವಾಗಲಿ, ಮೊದಲ ಹಂತದಲ್ಲಿ ಸರಕಾರದವರು ತೆಗೆದುಕೊಂಡ ಕಾರ್ಯಕ್ರಮ ಪ್ರಾರಂಭವಾಗಲಿ, ಎರಡನೇ ಹಂತದಲ್ಲಿಯಾದರೂ ಕೂಡ ಮಾಲತಿ ಜಲಾನಯನದಲ್ಲಿ ಮುಳುಗಡೆಯಾಗತಕ್ಕಂಥ ಪ್ರದೇಶ ಮುಳುಗಡೆಯಾದರೂ ಕೂಡ, ಅದಕ್ಕೆ ಹಿಂದಿನಿಂದ ರಾಜ್ಯ ಮತ್ತು ಕೇಂದ್ರ ಸರಕಾರಗಳಿಗೆ ಒತ್ತಾಯ ತಂದು ಆ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದರಾಯಿತು ಎಂಬ ವಿಚಾರವನ್ನು ಆ ಭಾಗದ ರೈತ ಜನರು ಸಂಪೂರ್ಣವಾಗಿ ವಿಚಾರ ಮಾಡುತ್ತಾ ಇದ್ದಾರೆ. ಇವತ್ತು ತಾವು ನನಗೆ ಉತ್ತರವನ್ನು ಕೊಟ್ಟಿದ್ದೀರಿ. 18-2-1997ರಂದು ಭದ್ರಾಮೇಲ್ದಂಡೆ

ಯೋಜನೆಯ ಕುರಿತು ಪ್ರಶ್ನೆಯನ್ನು ಹಾಕಿದಾಗ ಭದ್ರಾ ಮೇಲ್ದಂಡೆ ಯೋಜನೆಯು ತುಂಗಭದ್ರಾ ತಿರುವು ಯೋಜನೆ ಎಂಬ ನಾಮಾಂಕಿತದಿಂದ ಅನ್ವೇಶಣಾ ಹಂತದಲ್ಲಿದೆ. ವಿವರಗಳ ಅನ್ವೇಶಣೆಯು ಪೂರ್ಣಗೊಂಡ ನಂತರ ಲಭ್ಯವಾಗುವುವು. ಸದರಿ ಯೋಜನೆಯ ಕಾರ್ಯಾರಂಭವನ್ನು ಯಾವಾಗ ಮಾಡಲಾಗುವುದು ಎಂದು ಕೇಳಿದ್ದಕ್ಕೆ ಅನ್ವೇಶಣೆಯು ಪೂರ್ಣಗೊಂಡು ಅಂದಾಜಿಗೆ ಅನುಮೋದನೆಯನ್ನು ನೀಡಿದ ನಂತರ ಕಾರ್ಯಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದು-ಎಂದು ಹೇಳಿದ್ದಾರೆ. ಸದರಿ ಯೋಜನೆಗೆ ಯಾವ ಮೂಲದಿಂದ ಮತ್ತು ಎಷ್ಟು ಟಿ.ಎಂ.ಸಿ. ನೀರನ್ನು ಪಡೆಯಲಾಗುವುದು ಎಂದು ಕೇಳಿದ್ದಕ್ಕೆ ಅನ್ವೇಶಣೆ ಪೂರ್ಣಗೊಂಡ ನಂತರ ವಿವರಗಳು ಲಭ್ಯವಾಗುವುವು ಎಂದು ಹೇಳಿದ್ದಾರೆ. ತಾವು ಪ್ರಶ್ನೆಗೆ ಉತ್ತರವನ್ನು ಭದ್ರಾ ಮೇಲ್ದಂಡೆ ಯೋಜನೆಗೆ ವಿವರವಾದಂಥ ಮಾಹಿತಿ ನಮಗೆ ಮತ್ತು ನಮ್ಮ ಈ ಸದನಕ್ಕೆ ಮತ್ತು ಆ ಜನತೆಗೆ ತಿಳಿಸಬೇಕಾಗಿದೆ. ಉತ್ತರದಲ್ಲಿ ಅದು ತಿಳಿದಿಲ್ಲ. ಮೊನ್ನೆ ತಾನೇ ಬೇಡಿಕೆಗಳ ಮೇಲೆ ಚರ್ಚೆ ನಡೆದಂಥ ಸಂದರ್ಭದಲ್ಲಿಯೂ ಕೂಡ ತಾವು ಉತ್ತರವನ್ನು ಕೊಡುವಾಗ ಭದ್ರಾ ಮೇಲ್ದಂಡೆ ಯೋಜನೆ ಇನ್ನೂ ಅನ್ವೇಶಣೆ ಕಾರ್ಯಕ್ರಮ ಅಲ್ಲಿ ನಡೆಯತಕ್ಕಂಥಾದ್ದು ಪೂರ್ತಿಗೊಂಡಿಲ್ಲ, ಇನ್ನೊಂದು ತಿಂಗಳಲ್ಲಿ ಮುಗಿಯಬಹುದು ಮುಗಿದ ನಂತರ ನಾವು ಮಾಹಿತಿಗಳನ್ನು ಒದಗಿಸುತ್ತೇವೆ ಎನ್ನುವ ಉತ್ತರವನ್ನು ನಾನು ಕೇಳಿದ್ದೇನೆ. ಇವೊತ್ತು ನಮಗೆ ತುಂಗಾ ತಿರುವು ಯೋಜನೆಯ ಬಗ್ಗೆ ನಮಗೆ ಮಾಹಿತಿಗಳು ದೊರೆಯುತ್ತಾ ಇಲ್ಲ. ಆದ್ದರಿಂದ ಅದರ ಮಾಹಿತಿಗಳು ನಮಗೆ ಸಂಪೂರ್ಣವಾಗಿ ಬೇಕಾಗಿದೆ. ಇನ್ನು ಮಾಲತಿ ಜಲಾನಯನ ಯೋಜನೆಯನ್ನು ಒಳಗೊಂಡು ಈ ಯೋಜನೆಯನ್ನು ಪ್ರಾರಂಭ ಮಾಡಬೇಕೆಂದು ಕೇಳಿದ ಪ್ರಶ್ನೆಗೆ ತಾವು ಒಂದು ಉತ್ತರವನ್ನು ಕೊಟ್ಟಿದ್ದೀರಿ. ದಿನಾಂಕ: 18-2-1997ರಂದು ನನ್ನ ಚುಕ್ಕೆ ಗುರುತಿಲ್ಲದ ಪ್ರಶ್ನೆ: 153. ಇದರಲ್ಲಿ ಮಾಲತಿ ಡ್ಯಾಂ ನಿರ್ಮಾಣದಿಂದ 10, 140 ಹೆಕ್ಟೇರ್ ಜಮೀನು ಮುಳುಗಡೆಯಾಗುತ್ತಲಿದ್ದು ಈ ಪೈಕಿ 697 ಹೆಕ್ಟೇರ್ ಅರಣ್ಯಪ್ರದೇಶವು ಒಳಗೊಂಡಿರುತ್ತದೆ. ಹಾಗೂ 25 ಹಳ್ಳಿಗಳಿಗೆ ತೊಂದರೆಯಾಗುತ್ತಲಿದ್ದುವು. ಆ ಪ್ರಯುಕ್ತ ಮಾಲತಿ ಜಲಾನಯನವನ್ನು ಕೈಬಿಡಲಾಯಿತು. ಈ ಜಲಾಶಯ ನಿರ್ಮಾಣದಿಂದ ಸಂಪೂರ್ಣ ಪ್ರದೇಶವನ್ನು ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಅಳವಡಿಸಲಾಗಿದೆ. ಈ ಒಂದು ಉತ್ತರದ ಬಗ್ಗೆ ಇವೊತ್ತು ನಮಗೆ ಸಾಕಷ್ಟು ಅನುಮಾನವು ಸರಕಾರದ ಬಗ್ಗೆ ಬರುತ್ತಾ ಇದೆ - ಎನ್ನತಕ್ಕಂಥ ಮಾತನ್ನು ನಾವು ನೇರವಾಗಿ ಹೇಳ ಬೇಕಾಗಿದೆ. ಇವೊತ್ತು ಅಲ್ಲಿ 25 ಹಳ್ಳಿಗಳು ಮುಳುಗಡೆಯಾಗಬಹುದು. ಅಥವಾ ರೈತರ ಜಮೀನು ಅಲ್ಲಿ ಮುಳುಗಡೆಯಾಗಬಹುದು. ನನ್ನಲ್ಲಿ ಇದ್ದ ಅಂಕಿಅಂಶಗಳ ಪ್ರಕಾರ ಅರಣ್ಯ ಜಮೀನು ಸುಮಾರು 17,021 ಎಕರೆ ಹೋದರೆ, ಇವೊತ್ತು ಉಳಿದಂಥ ಖುಷ್ಕಿ, ತರಿ, ತೋಟ, ಕಾಫಿ, ಮತ್ತಿತರ ಜಮೀನುಗಳು ಒಟ್ಟಾರೆ 25,000 ಎಕರೆ ಜಮೀನು ಅಲ್ಲಿ ಮುಳುಗಡೆಯಾಗುವುದರಿಂದ ಅರಣ್ಯದ ಜಮೀನನ್ನು ಕಳೆದರೆ ಕೇವಲ 10,000 ಎಕರೆ

ಜಮೀನುಗಳು ಮಾತ್ರ ರೈತರು ಜಮೀನು ಮುಳುಗಡೆಯಾಗಬಹುದು. ಈ ಜಮೀನು ಮುಳುಗಡೆಯಾಗುತ್ತದೆ ಎಂದಾಕ್ಷಣ ಅಥವಾ ಹಳ್ಳಿಗಳ ಮುಳುಗಡೆಯಾಗುತ್ತದೆ ಎಂದಾಕ್ಷಣ, ಈ ಯೋಜನೆಯನ್ನು ಕೈಬಿಡಲಾಗಿದೆ ಎಂಬ ಉತ್ತರವನ್ನು ತಾವು ಸರಕಾರದಿಂದ ಕೊಟ್ಟಾಗ ನಾವು ಇವೊತ್ತು ಬಹಳ ಚಿಂತನೆಯನ್ನು ಮಾಡಬೇಕಾಗಿದೆ. ಯಾವ ಯೋಜನೆಯಿಂದ ಅಲ್ಲಿ ಎಷ್ಟು ಲಾಭ ಅಥವಾ ನಷ್ಟವಾಗುತ್ತದೆ ಎನ್ನತಕ್ಕಂಥದ್ದರ ಬಗ್ಗೆ ನಾವು ಮಾಹಿತಿಗಳನ್ನು ಪಡೆದುಕೊಳ್ಳಬೇಕಾಗಿದೆ. ಇವೊತ್ತು ಯುಕೆಪಿ ಪ್ರಾಜೆಕ್ಟ್‌ನಲ್ಲಿ ಆಲಮಟ್ಟಿಯಲ್ಲಿ ಸುಮಾರು 200 ಹಳ್ಳಿಗಳು ಇವೊತ್ತು ಮುಳುಗಡೆಯಾಗುತ್ತಲಿವೆ. ಸಾಕಷ್ಟು ಎಕರೆಗಳಷ್ಟು ಜಮೀನು ಅಲ್ಲಿ ಮುಳುಗಡೆಯಾದರೂ ಕೂಡ ಹೆಚ್ಚು ಜನರಿಗೆ ಅಲ್ಲಿ ಅಚ್ಚುಕಟ್ಟು ಪ್ರದೇಶದಲ್ಲಿ ಆ ಭಾಗದ ಜನರಿಗೆ ನೀರಾವರಿಯಾಗುತ್ತದೆ ಎನ್ನತಕ್ಕಂಥ ಒಂದು ಸೌಲಭ್ಯ, ಅನುಕೂಲತೆಯಾಗುತ್ತಾ ಇರುವುದರಿಂದ, ಇವೊತ್ತು 8-10 ಲಕ್ಷ ಎಕರೆ ಜಮೀನು ನೀರಾವರಿಯಾಗತಕ್ಕಂಥ ಸಂದರ್ಭವೂ ಇದೆ. ಇವೊತ್ತು ತಾವು ತೆಗೆದುಕೊಂಡ ಯೋಜನೆಯ ಪ್ರಕಾರ ಕೇವಲ 2 ಲಕ್ಷ, 34 ಸಾವಿರ ಎಕರೆ ನೀರಾವರಿಯಾದರೆ, ಇವೊತ್ತು ತಾವು ಬಿಟ್ಟಂಥ ಮಾಲತಿ ಜಲಾನಯನದ ನೀರಾವರಿಯನ್ನು ತಾವು ಮಾಡಿದ್ದಾದರೆ ಸುಮಾರು 8-10 ಲಕ್ಷ ಎಕರೆ ಜಮೀನು ನೀರಾವರಿಯಾಗತಕ್ಕಂಥ ಸಂದರ್ಭವಿದೆ. ಆ ಬಗ್ಗೆ ತಾವು ವಿಶೇಷವಾದಂಥ ತಜ್ಞರಿಗೆ ತತ್‌ಕ್ಷಣ ಆದೇಶ ಮಾಡಿ ಆ ಜಮೀನು ಮುಳುಗಡೆಯಾಗುತ್ತದೆ ಎನ್ನುವ ವಿಚಾರದ ಬದಲಾಗಿ, ಅಥವಾ ಹಳ್ಳಿಗಳು ಮುಳುಗಡೆಯಾಗುತ್ತವೆ ಎನ್ನುವಂಥ ವಿಚಾರದ ಬದಲಾಗಿ, ಎಷ್ಟು ಜನರಿಗೆ ಅದರಲ್ಲಿನ ನೀರಾವರಿಯ ಅನುಕೂಲತೆಯಾಗುತ್ತದೆ ಎನ್ನುವ ಬಗ್ಗೆ ತಾವು ಯೋಜನೆಯನ್ನು ಮಾಡಬೇಕು. ಇವೊತ್ತು ನಾವು ರಾಜ್ಯದ ಯಾವುದೇ ಮೂಲೆಗಳಲ್ಲಿರಬಹುದು, ಒಂದು ಪ್ರದೇಶವು ಮುಳುಗಡೆಯಾದರೆ, ಮತ್ತೊಂದು ಪ್ರದೇಶಕ್ಕೆ ಇವೊತ್ತು ರೈತರಿಗೆ ಆಹಾರಧಾನ್ಯಗಳನ್ನು ಬೆಳೆಯುವುದಕ್ಕೆ ಈ ದೇಶದ ಸಂಪತ್ತನ್ನು ಹೆಚ್ಚಿಸಲಿಕ್ಕೆ ಅನುಕೂಲವಾಗತಕ್ಕಂಥ ಅವಕಾಶ ಉಂಟು. ನಾವು ಅನೇಕ ಸಂದರ್ಭಗಳಲ್ಲಿ ರೈತರು ನಮ್ಮ ದೇಶದ ಬೆನ್ನೆಲುಬು ಎಂದು ಕರೆಯುತ್ತೇವೆ. ಕೃಷಿ ಉತ್ಪನ್ನವು ಈ ದೇಶದಲ್ಲಿ ಮೊದಲನೇ ಸ್ಥಾನದಲ್ಲಿದೆ. ಆದ್ದರಿಂದಲೇ ನಾವು ಬದುಕಬೇಕಾಗಿದೆ ಎಂಬ ಮಾತನ್ನು ಹೇಳಿದಾಗ, ಇವೊತ್ತು ಅವರ ಬಗ್ಗೆ ನಾವು ಯೋಚನೆಯನ್ನು ಮಾಡದೇ ಈ ಮಾಲತಿ ಜಲಾನಯನ ಯೋಜನೆಯನ್ನು ಒಳಗೊಂಡು ಈ ಯೋಜನೆಯನ್ನು ಕಾರ್ಯರೂಪಕ್ಕೆ ತರತಕ್ಕಂಥಾದ್ದು ಅತೀ ಅವಶ್ಯಕತೆ ಇದೆ ಎಂದು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿದೆ. ಈ ಬಗ್ಗೆ ಅನೇಕ ರೈತ ಹೋರಾಟ ಸಮಿತಿಗಳೂ ಕೂಡ ಪ್ರಾರಂಭ ಆಗಿವೆ. ಅಲ್ಲಿ ಉತ್ತರ ಕರ್ನಾಟಕ ಅಭಿವೃದ್ಧಿ ವೇದಿಕೆಯ ಅಧ್ಯಕ್ಷರು ಕೂಡ ಈಗಾಗಲೇ ರಾಣಿಬೆನ್ನೂರಿನಲ್ಲಿ ಇವೊತ್ತು ಒಂದು ಸಭೆಯನ್ನು ಕರೆದು ಇನ್ನು ಜನಪ್ರತಿನಿಧಿಗಳಿಗೆ ಅಲ್ಲಿನ ಯಾವುದೇ ಕಾರ್ಯಕ್ರಮಗಳಲ್ಲಿ ಭಾಗವಹಿಸದಂತೆ ಅಡ್ಡಿಆತಂಕಗಳನ್ನು ಮಾಡಬೇಕಾಗಿದೆ ಎಂದು ಹೇಳುವ ಒಂದು ಎಚ್ಚರಿಕೆಯನ್ನು ಕಳೆದ ತಿಂಗಳು ತಾನೆ ಒಂದು ಸಭೆಯನ್ನು ಮಾಡಿ ತಮ್ಮ ವೇದಿಕೆಯ

ಮುಖಾಂತರ ನಮಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಇಂಥ ಸಂದರ್ಭದಲ್ಲಿಯೂ ಕೂಡ ನಾವು ಈ ಅಧಿವೇಶನದಲ್ಲಿ, ಸದನದಲ್ಲಿ ಮಾನ್ಯ ಸಚಿವರ ಗಮನಕ್ಕೆ ತಾರದೆ, ಸರಕಾರದ ಗಮನಕ್ಕೆ ತಾರದೆ, ನಮ್ಮ ಕರ್ತವ್ಯವನ್ನು ನಾವು ಮಾಡದೇ ಹೋದರೆ ನಾನು ಇಲ್ಲಿ ಕರ್ತವ್ಯಚ್ಯುತಿಯನ್ನು ಮಾಡಿದಂಥಾಗುತ್ತದೆ ಎಂಬ ಒಂದೇ ಒಂದು ಕಾರಣದಿಂದ ಮೇಲಿಂದ ಮೇಲೆ ಈ ಒಂದು ವಿಷಯವನ್ನು ಹೆಚ್ಚಾಗಿ ಪ್ರಸ್ತಾಪ ಮಾಡುತ್ತಾ ಇದ್ದೇನೆ. ಈ ಒಂದು ಯೋಜನೆಗೆ ತಾವು ಹೆಚ್ಚು ಆಸಕ್ತಿಯನ್ನು ವಹಿಸುತ್ತಾ ಇದ್ದೀರಿ ಎಂದು ನನಗೆ ಅನಿಸುತ್ತಾ ಇದೆ. ಆದರೆ ಯಾವ ಒಂದು ಯೋಜನೆ, ಈ ಮಾಲತಿ ಜಲಾನಯನವನ್ನು ಬಿಟ್ಟು ಮಾಡಿದ್ದೀರಿ, ಅದನ್ನು ತಾವು ಪುನಃ ಕೈಗೆತ್ತಿಕೊಳ್ಳಬೇಕು. ತುಂಗಾ ತಿರುವು ಯೋಜನೆ ಬಗ್ಗೆ ತಾವು ವಿವರವಾದ ಮಾಹಿತಿಗಳನ್ನು ನಮ್ಮ ಮುಂದಿಡಬೇಕು. ಇವೊತ್ತು ಇಲ್ಲಿ ಹಣಕಾಸಿನ ವಿಷಯದಲ್ಲಿ ಈ ಯೋಜನೆಗೆ ಕಳೆದ 7-8 ವರ್ಷಗಳಲ್ಲಿ ಕೇವಲ 19 ಕೋಟಿ ರೂ.ಗಳನ್ನು ತಾವು ಖರ್ಚು ಮಾಡಿದ್ದೀರಿ. ಕನಿಷ್ಟಪಕ್ಷ ಈ ವರ್ಷದಲ್ಲಿ 10 ಕೋಟಿಗಳನ್ನು ತಾವು ಇಟ್ಟಿದ್ದೀರಿ, ಅದು ಬಹಳ ಕಡಿಮೆ ಹಣ. ಇದರ ಬದಲಾಗಿ 200 ಕೋಟಿ ರೂ.ಗಳನ್ನಾದರೂ ಕೂಡ ತಾವು ಆಯವ್ಯಯದಲ್ಲಿ ಒದಗಿಸಿಕೊಡಬೇಕು. ಆ ಭಾಗದ ಜನತೆಯು ನೀರಾವರಿ ಬಾಂಡ್‌ಗಳನ್ನು ಕೊಳ್ಳಲು ತಯಾರಾಗಿದ್ದಾರೆ. ಹಣಕಾಸಿನ ವಿಚಾರ ಬಂದಾಗ ಯಾವರೀತಿಯಲ್ಲಿ ಕೃಷ್ಣ ಜಲಭಾಗ್ಯ ನಿಗಮವನ್ನು ತಾವು ಪ್ರಾರಂಭ ಮಾಡಿದ್ದೀರಿ, ಅದೇ ರೀತಿಯಲ್ಲಿ ತುಂಗಾ ಮೇಲ್ದಂಡೆ ಭಾಗ್ಯಜಲ ನಿಗಮ ಎನ್ನುವಂಥ ಒಂದು ಅಥಾರಿಟಿಯನ್ನು ತಾವು ಮಾಡಿದ್ದಾದರೆ ಖಂಡಿತವಾಗಿಯೂ ಆ ಭಾಗದ ರೈತರು, ನಾವೂ ಕೂಡ ಸರಕಾರಕ್ಕೆ ಹಣದ ಹೊರೆ ಹೆಚ್ಚು ಆಗದಂತೆ ನಾವು ಸಹಕಾರ ಮಾಡುತ್ತೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇವೊತ್ತಿನ ದಿವಸ ಒಂದು ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸಲಿದ್ದೇನೆ. ಇನ್ನೂ ಒಂದು ವಿಷಯವೇನೆಂದರೆ ಆಂಧ್ರ ಪ್ರದೇಶ ಸರ್ಕಾರದವರು ಇವೊತ್ತಿನ ದಿವಸ ಆಂಧ್ರ ಪ್ರದೇಶದ ಸಂಸತ್ ಸದಸ್ಯರೂ ಕೂಡ ಲೋಕಸಭೆಯಲ್ಲಿ ಈ ಯೋಜನೆ ಆಗದಂತೆ ತಮ್ಮ ತಕರಾರನ್ನು ಎತ್ತಿದ್ದಾರೆ. ಅದೂ ಕೂಡ ಪತ್ರಿಕೆಯಲ್ಲಿ ವರದಿಯಾಗಿದೆ. ಇವೊತ್ತು ನಮ್ಮ ರಾಜ್ಯದ ಸಂಸತ್ ಸದಸ್ಯರಾದಂಥ ಶ್ರೀ ಕೆ.ಎಸ್.ಮುನಿಯಪ್ಪನವರೂ ಕೂಡ ಅಲ್ಲಿ ಮಾತನಾಡಿದ್ದಾರೆ. ಕಾರಣ ಇದರ ಬಗ್ಗೆ ತಾವು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ತಮ್ಮ ಮುಖಾಂತರ ಮಾನ್ಯ ಭಾರೀ ನೀರಾವರಿ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

+ ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಶಾಸಕರಾದ ಶ್ರೀ ಮಂಜುನಾಥ ಸಿ.ಕುನ್ನೂರ್‌ರವರು ಎತ್ತಿರುವಂಥ ವಿಷಯದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನರ್ಪಿಸುತ್ತಾ ತುಂಗಾ ಮೇಲ್ದಂಡೆ ಯೋಜನೆ ಕಳೆದ ಸುಮಾರು 25 ವರ್ಷಗಳಿಂದ ಈ ಸದನದ ಒಳಗೆ ಮತ್ತು ಹೊರಗೆ ಹೋರಾಟ ಮಾಡಿಕೊಂಡು

ಬಂದಿದ್ದೇನೆ. ಆದರೆ ಒಂದು ದುರ್ದೈವದ ಸಂಗತಿ ಏನೆಂದರೆ ತುಂಗಾ ಮೇಲ್ದಂಡೆ ಯೋಜನೆಗೆ ಇದುವರೆಗೆ ಸ್ಪಷ್ಟವಾದ ಸ್ವರೂಪವನ್ನು ಸರ್ಕಾರ ಕೊಡಲಿಲ್ಲ. ಏಕೆಂದರೆ 1997ರಲ್ಲಿ ತುಂಗಾ ಮೇಲ್ದಂಡೆ ಯೋಜನೆ ಪ್ರಾರಂಭ ಆದಾಗ 38 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ 3 ಲಕ್ಷ 20 ಸಾವಿರ ಎಕರೆ ನೀರಾವರಿ ಮಾಡತಕ್ಕಂಥ ಯೋಜನೆಯನ್ನು ತಯಾರು ಮಾಡಲಾಯಿತು. ಪುನಃ ಸುಮಾರು 11 ವರ್ಷಗಳ ನಂತರ 1983ರಲ್ಲಿ 734 ಟಿ.ಎಂ.ಸಿ. ನೀರಿನ ಯೋಜನೆಯಲ್ಲಿ 8 ಟಿ.ಎಂ.ಸಿ. ಹಾಗು 1050 ಟಿ.ಎಂ.ಸಿ ನೀರಿನ ಸ್ಕೀಂನಲ್ಲಿ 37 ಟಿ.ಎಂ.ಸಿ ನೀರನ್ನು ತುಂಗಾ ಮೇಲ್ದಂಡೆ ಯೋಜನೆಗೆ ಕಾದಿಡಲಾಯಿತು. ಬೈರಂಪಾಸ್ ಏತ ನೀರಾವರಿ ಯೋಜನೆ, ಹಾಗೂ ಇತರ ಏತ ನೀರಾವರಿ ಯೋಜನೆಗಳ ಬದಲಾಗಿ ತುಂಗಾ ಮೇಲ್ದಂಡೆ ಯೋಜನೆಯಿಂದ 34 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಂಡು 2 ಲಕ್ಷ, 34 ಸಾವಿರ ಎಕರೆಗೆ ನೀರು ಕೊಡುವ ಯೋಜನೆ ಹಾಕಿ ತುಂಗಾ ಅಣೆಕಟ್ಟು ಎತ್ತರ ಮಾಡಿ ನೀರನ್ನು ಕೊಡುವಂಥ ಯೋಜನೆಯನ್ನು ಮಾಡಿದ್ದೇವೆ. ಪುನಃ ಸುಮಾರು 1984-85ರಲ್ಲಿ ಎರಡು ಪ್ರತ್ಯೇಕ ಯೋಜನೆಗಳನ್ನು ಮಾಡಲಾಯಿತು. ಮೊದಲನೆಯ ಯೋಜನೆ ಪ್ರಕಾರ ಶಿವಮೊಗ್ಗ, ಹೊನ್ನಾಳಿ, ನೊರಬಿ, ಹಿರೆಕೆರೂರು, ರಾಣಿಬೆನ್ನೂರು, ಹಾವೇರಿ, ಹಾನಗಲ್, ಸವಣೂರು, ಶಿಗ್ಗಾಂವ್, ಶಿರಹಟ್ಟಿ ಮುಂಡರಗಿ, ಹರಿಹರ ಹೀಗೆ 12 ತಾಲ್ಲೂಕುಗಳ ಅಡಿಯಲ್ಲಿ 3,54,500 ಎಕರೆ ನೀರಾವರಿ ಮಾಡುವಂಥ ಯೋಜನೆಗಳನ್ನು ಹಾಕಿಕೊಂಡು ಎರಡು ಬೆಳೆಗೆ ಹಾಲಿ ತುಂಗಾ ಅಣೆಕಟ್ಟಿನ ಅಡಿಯಲ್ಲಿ ಇರುವಂಥ 11 ಟಿ.ಎಂ.ಸಿ. ಹಾಗು ತುಂಗಾ ಮೇಲ್ದಂಡೆ ಯೋಜನೆಯ 47 ಟಿ.ಎಂ.ಸಿ. ನೀರನ್ನು ಅಳವಡಿಸಿ ಎರಡು ಬೆಳೆಗೆ ನೀರು ಕೊಡಬೇಕು ಎಂದು ಸುಮಾರು 460 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಯೋಜನೆಯ ಒಂದನೇ ಹಂತ ಹಾಗೂ ಎರಡನೆಯ ಪ್ರಸ್ತಾವನೆ ಎಂದರೆ ಶಿವಮೊಗ್ಗ, ಹೊನ್ನಾಳಿ, ಹಿರೆಕೆರೂರು, ರಾಣಿಬೆನ್ನೂರು, ಹಾವೇರಿ, ಹಾನಗಲ್ ಹಾಗು ಹರಿಹರ ಹೀಗೆ ಸುಮಾರು 7 ತಾಲ್ಲೂಕುಗಳಲ್ಲಿ ಎರಡು ಲಕ್ಷ ಎಕರೆ ಪ್ರದೇಶವನ್ನು ನೀರಾವರಿ ಮಾಡಿ ಎರಡು ಬೆಳೆಗೆ ತುಂಗಾ ಅಣೆಕಟ್ಟಿನಲ್ಲಿ ಈಗಿರುವಂಥ 11 ಟಿ.ಎಂ.ಸಿ. ನೀರು ಹಾಗು ತುಂಗಾ ಮೇಲ್ದಂಡೆ ಯೋಜನೆಯ 50 ಟಿ.ಎಂ.ಸಿ. ನೀರನ್ನು ಬಳಸಿ 1984-85ರ ದರಪಟ್ಟಿ ಪ್ರಕಾರ 766 ಕೋಟಿ ರೂಪಾಯಿಗಳ ಯೋಜನೆಯನ್ನೂ ಸಹ ತಯಾರಿಸಲಾಯಿತು. ಹಾಗೂ ಈಗ ಇರುವಂಥ ತುಂಗಾ ಮೇಲ್ದಂಡೆ ಯೋಜನೆಯ ಪ್ರಕಾರ ಮೊದಲಿಗೆ ತೀರ್ಥಹಳ್ಳಿ ತಾಲ್ಲೂಕು ಮೇಗರಹಳ್ಳಿ ಗ್ರಾಮದ ಹತ್ತಿರ ಬರುವ ಮಾಲತಿ ಡ್ಯಾಮ್‌ಗೆ ಅಡ್ಡಲಾಗಿ 32 ಟಿ.ಎಂ.ಸಿ. ನೀರು ಸಂಗ್ರಹಣೆ ಮಾಡುವಂಥ ಮಾಲತಿ ಜಲಾಶಯ ರಚನೆ ಮಾಡಿ ಸುಮಾರು 340 ಕಿಲೋಮೀಟರ್ ಮೇಲ್ಮಟ್ಟದ ಕಾಲುವೆ ಮಾಡಬೇಕೆಂದು ಯೋಜನೆ ತಯಾರಾಗಿದೆ. ಒಂದು ತಿಂಗಳ ಹಿಂದೆ ಮಾನ್ಯ ನೀರಾವರಿ ಸಚಿವರು ಎರಡು ಬಾರಿ ಸಭೆಯನ್ನು ಕರೆದರು, ಮಾನ್ಯ ಮುಖ್ಯಮಂತ್ರಿಗಳೂ ಸಹ ಇದರ ಬಗ್ಗೆ ಪ್ರಗತಿ ಪರಿಶೀಲನೆಗಾಗಿ ಎರಡು ಬಾರಿ ಸಭೆಯನ್ನು ಕರೆದಿದ್ದರು. ಈಗ ಒಂದು ತಿಂಗಳ ಹಿಂದೆ ಇವರು ಹೊಸದಾಗಿ ಏನು ಹೇಳುತ್ತಿದ್ದಾರೆ ಎಂದರೆ ಈಗಿರುವಂಥ

ಅಣೆಕಟ್ಟಿನ ಮೇಲೆ ಕ್ರಸ್ಟ್ ಗೇಟ್ ಕೂಡಿಸುವ ಬದಲು ಈ ಅಣೆಕಟ್ಟಿನ ಕೆಳಗೆ 100 ಮೀಟರ್ ದೂರದಲ್ಲಿ ಹೊಸ ಅಣೆಕಟ್ಟನ್ನು ಕಟ್ಟಬೇಕು ಎನ್ನುವ ಹೊಸ ಪ್ರಸ್ತಾವನೆ ಈಗ ಪುನಃ ಪ್ರಾರಂಭವಾಗಿದೆ. ಇದರ ಅರ್ಥ ಕಳೆದ 25 ವರ್ಷಗಳಿಂದ ಈ ಯೋಜನೆಗೆ ಸ್ಪಷ್ಟವಾದ ಸ್ವರೂಪ ಸಿಗುತ್ತಿಲ್ಲ. ಆದುದರಿಂದ 2000 ಇಸವಿಯೊಳಗೆ ಮುಗಿಸಲೇಬೇಕಾದಂಥ ಈ ಯೋಜನೆಯ ಸ್ವರೂಪವೇ ನಮ್ಮೆದುರಿಗಿಲ್ಲದೆ ಇರುವಾಗ ಪುನಃ ಈಗ ಹೊಸ ಅಣೆಕಟ್ಟು ಕಟ್ಟಿ ಅದನ್ನು ಮುಗಿಸುವುದು ಯಾವಾಗ? ಇದನ್ನು ಮುಗಿಸಿದ ಮೇಲೆ ಈ ತುಂಗಾ ಮೇಲ್ದಂಡೆ ಯೋಜನೆ ಜಾರಿಗೆ ಬರುವುದು ಯಾವಾಗ, ಎಂಬ ಪ್ರಶ್ನೆ ನಮ್ಮ ಜನರ ಮಧ್ಯೆ ಇದೆ. ಆದ್ದರಿಂದ ನಾನು ಮಾನ್ಯ ನೀರಾವರಿ ಸಚಿವರಲ್ಲಿ ಸ್ಪಷ್ಟವಾಗಿ ಕೇಳುವುದೇನೆಂದರೆ ತಾವು ಈ ಯೋಜನೆಯನ್ನು 2000 ಇಸವಿಯೊಳಗೆ ಮುಗಿಸಲು ಯಾವ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಿ? ಇದರ ಸ್ಪಷ್ಟ ಸ್ವರೂಪ ಏನು ಎಂಬುದನ್ನು ದಯಮಾಡಿ ತಿಳಿಸಿ. ಏಕೆಂದರೆ ಈಗ ಈ ಯೋಜನೆಯ ವೆಚ್ಚ 670 ಕೋಟಿ ರೂಪಾಯಿ. ಇವೊತ್ತಿನ ದಿವಸ ಪ್ರತಿ ವರ್ಷ 100 ಕೋಟಿ ರೂಪಾಯಿ ಹೆಚ್ಚಾಗುತ್ತಿರುವುದರಿಂದ 2000 ಇಸವಿಯೊಳಗೆ ಇದನ್ನು ಮುಗಿಸಲು 1000 ಕೋಟಿ ರೂಪಾಯಿ ಅವಶ್ಯಕತೆ ಇದೆ. ಆದುದರಿಂದ ಎರಡು ಸಾವಿರ ಇಸವಿಯೊಳಗೆ ಈ ಯೋಜನೆಯನ್ನು ಮುಗಿಸುವುದಕ್ಕೋಸ್ಕರ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಹೊಂದಿಸಲು ಯಾವ ರೀತಿ ತಾವು ಸಂಪನ್ಮೂಲವನ್ನು ಕ್ರೋಢೀಕರಣ ಮಾಡುತ್ತೀರಿ ಮತ್ತು ಈಗಿರುವಂಥ ಮೂರು ಆರ್ಥಿಕ ವರ್ಷಗಳಲ್ಲಿ ಯಾವ ಯಾವ ಕಾರ್ಯಕ್ರಮಗಳಿಂದ ಈ ಯೋಜನೆಯನ್ನು ಮುಗಿಸುವುದಕ್ಕೆ ಸಾಧ್ಯವಿದೆ ಎಂಬ ಟೈಮ್‌ಬೌಂಡ್ ಪ್ರೋಗ್ರಾಮನ್ನು ಹಾಕಿಕೊಂಡು ಅದರ ಪೂರ್ತಿಯಾದ ವಿವರವನ್ನು ದಯವಿಟ್ಟು ಕೊಡಬೇಕೆಂದು ನಾನು ಮಾನ್ಯಾ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, ಕೆಲವೊಮ್ಮೆ ತಾವು ಸಗೀರ್ ಅಹಮದ್‌ಗೆ ನಜೀರ್ ಅಹಮದ್ ಎಂದು ಕರೆಯುತ್ತೀರಲ್ಲಾ ಹಾಗಾಗಿದೆ ನನ್ನ ಕಥೆ. ಏಕೆಂದರೆ ತಾವು ಸಭೆ ನಡೆಸುವಂಥ ಸಂದರ್ಭಧಲ್ಲಿ ಭದ್ರಾ ಮೇಲ್ದಂಡೆ ಅನುಷ್ಠಾನಕ್ಕೆ ತರುತ್ತೇವೆಂದು ಅನೇಕ ಬಾರಿ ಸರ್ಕಾರದವರು ಹೇಳಿಕೆ ನೀಡಿದ್ದಾರೆ.

ಅಧ್ಯಕ್ಷರು: ಇದು ತುಂಗಾ ಯೋಜನೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಅದೇ ಸ್ವಾಮಿ, ಇಲ್ಲಿ ಹೆಸರು ಬದಲಾವಣೆ ಮಾಡಿದ್ದಾರೆ. ಮಾನ್ಯ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಇಲ್ಲಿದ್ದಾರೆ. ಭಾರಿ ನೀರಾವರಿ ಮಂತ್ರಿಗಳೂ ಇದ್ದಾರೆ. ನನಗೂ ಆ ಸಭೆಗೆ ಆಹ್ವಾನ ಕೊಟ್ಟಿದ್ದರು. ಎರಡು ಮೂರು ಬಾರಿ ನಾನು ಆ ಸಭೆಗೆ ಹೋಗಿರುವಂಥ ಸಂದರ್ಭದಲ್ಲಿ ಇವರು ಹಿರಿಯ ರಾಜಕಾರಣಿಗಳ ಮನವೊಲಿಸುವುದಕ್ಕಾಗಿಯೋ ಅಥವಾ ನೀರಿನ ಕೊರತೆ ಅಥವಾ ಅಭಾವ ಇರುವಂಥ ಜಿಲ್ಲೆಗಳಿಗೆ ನೀರನ್ನು ಒದಗಿಸಿಕೊಡುವ ಬಗ್ಗೆ ಸಾಕಷ್ಟು ಬಾರಿ ಚರ್ಚೆ

ನಡೆದರೂ ಸಹ ಭದ್ರಾ ಮೇಲ್ದಂಡೆ ಯೋಜನೆ ಎಂದು ಇಟ್ಟಿದ್ದಂಥ ಒಂದು ಯೋಜನೆಯ ಹೆಸರನ್ನು ತುಂಗಾ ಪರಿವರ್ತನೆ ನಾಲೆ ಎಂದು ಒಂದು ಸಲ ಮಾಡಿದರು. ಮಾನ್ಯ ಭಾರಿ ನೀರಾವರಿ ಮಂತ್ರಿಗಳು ಆ ರೀತಿ ಹೇಳಿದರು. ಇವೊತ್ತು ನಮ್ಮ ವಾದ ಏನಿದೆ ಎಂದರೆ ನಾವು ಮಲೆನಾಡು ಭಾಗದಲ್ಲಿ ವಾಸಿಸುತ್ತಿರುವ ನಾವುಗಳು ಅವರು 56 ತರಹದ ಹೆಸರುಗಳನ್ನು ಈ ಯೋಜನೆಗೆ ಇಟ್ಟರೂ ಸಹ ನಾವು ಆ ಯೋಜನೆ ಯಶಸ್ವಿಯಾಗುವುದಕ್ಕೆ ಬಿಡುವುದಿಲ್ಲ. ಕಾರಣವೇನೆಂದರೆ ಇದು ಮಲೆನಾಡು ಭಾಗದ ಜನರ ಬದುಕಿನ ಒಂದು ಪ್ರಶ್ನೆಯಾಗಿದೆ.

ಶ್ರೀ ಯು.ಬಿ.ಬಣಕಾರ್: ಸನ್ಮಾನ್ಯ ಅಧ್ಯಕ್ಷರೆ, ಇದು ವಿಷಯಾಂತರವಾಗುತ್ತಿದೆ. ಆದುದರಿಂದ ದಯಮಾಡಿ ಇದನ್ನು ಅವರು ಬೇರೆ ಸಂದರ್ಭದಲ್ಲಿ ಹೇಳಲಿ.

ಶ್ರೀ ತಿಪ್ಪೇಸ್ವಾಮಿ (ಸಣ್ಣನೀರಾವರಿ ಸಚಿವರು): ನಾವು ಅದನ್ನು ಪಡೆಯುತ್ತಿದ್ದೇವೆ, ಇವರು ಬಿಡುವುದಿಲ್ಲ ಎಂದು ಹೇಳುತ್ತಾ ಕುಳಿತರೆ ಇದು ನಡೆಯದಿರುವ ಮಾತು. ಭದ್ರಾ ಅಣೆಕಟ್ಟಿನಲ್ಲಿ 8 ಟಿ.ಎಂ.ಸಿ. ನೀರು ಇವೊತ್ತು ಅಪ್ಪರ್ ಭದ್ರಾ ಯೋಜನೆಗೆ ರಿಸರ್ವ್ ಆಗಿದೆ. ಅದನ್ನು ತೆಗೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆಯೆ ವಿನಃ ನಿಮ್ಮ ಭಾಗದ ನೀರನ್ನು ತೆಗೆದುಕೊಂಡು ನಿಮಗೆ ತೊಂದರೆ ಮಾಡಬೇಕೆನ್ನುವ ಉದ್ದೇಶ ನಮಗಿಲ್ಲ.

ಅಧ್ಯಕ್ಷರು: ಈಗ ನಿಮ್ಮ ತಕರಾರೇನಿದೆ ಹೇಳಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ಶ್ರೀ ಮಂಜುನಾಥ್ ಸಿ.ಕುನ್ನೂರ್‌ರವರ ಪ್ರಶ್ನೆಗೆ ಇಲ್ಲಿ ಒಂದು ಉತ್ತರವನ್ನು ಕೊಟ್ಟಿದ್ದಾರೆ. ಅದೇನೆಂದರೆ ಭದ್ರಾ ಮೇಲ್ದಂಡೆ ಯೋಜನೆಯನ್ನು ತುಂಗಭದ್ರಾ ತಿರುವು ಯೋಜನೆ ಎಂಬ ನಾಮಾಂಕಿತದೊಂದಿಗೆ ಅನುಷ್ಠಾನ ಹಂತದಲ್ಲಿದೆ. ಕೊಳವೆ ಮುಖಾಂತರವಾಗಿ ನಾವು ನೀರು ತರುತ್ತೇವೆ ಎಂದು ಹೇಳಿದ್ದಾರೆ.

ಅಧ್ಯಕ್ಷರು: ಉತ್ತರವನ್ನು ಇನ್ನೊಮ್ಮೆ ಓದಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ಸದರಿ ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ ದಿನಾಂಕ: 18.2.1997ರ ಪ್ರಶ್ನೆ

ಅಧ್ಯಕ್ಷರು: ಇಲ್ಲ, ಇದು ದಿನಾಂಕ 29.7.1997 ಬಂದಿರುವಂಥ ಪ್ರಶ್ನೆ.

ಶ್ರೀ ಸಿ.ಆರ್.ಸಗೀರ್ ಆಹಮದ್: ಇದು 149ನೇ ಪ್ರಶ್ನೆಗೆ ಉತ್ತರ. ಮೊನ್ನೆ ಭಾರಿ ನೀರಾವರಿ ಮಂತ್ರಿಗಳು ಸಭೆ ಕರೆದಾಗಲೂ ಸಹ ನಾನು ಆ ಸಭೆಯಲ್ಲಿ ಹಾಜರಿದ್ದೆ. ಅನೇಕ ಜನ ಶಿವಮೊಗ್ಗ ಭಾಗದಲ್ಲಿ....

ಅಧ್ಯಕ್ಷರು: ಪ್ರಸ್ತುತ ಇಲ್ಲಿ ಅರ್ಧ ಗಂಟೆ ಅವಧಿಗೆ ಚರ್ಚೆಗೆ ತೆಗೆದುಕೊಂಡಿರುವ ಪ್ರಶ್ನೆ ಸಂಖ್ಯೆ: 2079. ಇದು ದಿನಾಂಕ 29.7.1997ಕ್ಕೆ ಸದನದಲ್ಲಿ ಬಂದಿತ್ತು. ಈ ಪ್ರಶ್ನೆ ತುಂಗಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದ್ದು.

ಶ್ರೀ ಸಿ.ಆರ್.ಸಗೀರ್‌ಅಹಮದ್: ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಮಾನ್ಯ ನಾಗೇಗೌಡರು ಬಹಳ ಬುದ್ಧಿವಂತರು. ಅದರಲ್ಲಿ ಯಾವುದೇ ಅನುಮಾನವಿಲ್ಲ. ನಮ್ಮ ಭಾಗದ ಜನ ಆ ಬಗ್ಗೆ ರೊಚ್ಚಿಗೆದ್ದು ಗಲಾಟೆ ವಗೈರೆ ಮಾಡಬಹುದು ಎಂಬ ದೃಷ್ಟಿಯಿಂದ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಇಲ್ಲಿದ್ದಾರೆ. ನಮ್ಮನ್ನು ಕೂಡಿಸಿಕೊಂಡು ಹೆಸರು ಬದಲಾವಣೆ ಮಾಡಿಬಿಟ್ಟರೆ ನಮಗೆ ಸಮಾಧಾನವಾಗುತ್ತದೆ ಎನ್ನುವ ಮಟ್ಟದಲ್ಲಿ ಚರ್ಚೆ ನಡೆದಿದೆ. ಇವರು ಕೆಲವೊಮ್ಮೆ ಏನು ಹೇಳುತ್ತಾರೆ ಎಂದರೆ ಅರಣ್ಯ ಬೆಳೆಸಿರುವ ಯಾವುದೇ ಜಾಗ ಹಾಳುಮಾಡದೆ ನಾವು ಕೊಳವೆ ಮುಖಾಂತರ ನಿಮ್ಮ ಭಾಗಕ್ಕೆ ನೀರು ತರುವಂಥ ಯೋಜನೆ ಹಾಕುತ್ತೇವೆ ನಿಮಗೆ ಸಮಾಧಾನವಾಗುವುದಿಲ್ಲವೇ ಎನ್ನುತ್ತಾರೆ, ಇನ್ನೊಮ್ಮೆ ಏನು ಹೇಳುತ್ತಾರೆ ಎಂದರೆ ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ ನಮಗೆ ಯಾವುದೇ ತರಹದ ವಿರೋಧ ಇಲ್ಲ, ನೀರಿನ ಶೇಖರಣೆ ಮಾಡುವುದರ ಬಗ್ಗೆ ಇವರು 8 ಟಿ.ಎಂ.ಸಿ ನೀರನ್ನು ಏನು ಉಪಯೋಗಿಸಿಕೊಳ್ಳಬೇಕು ಅದು ಒಂದು ಪರಿವರ್ತನೆ ನಾಲೆ ಎನ್ನುತ್ತಾರೆ. ಇವರು ಒಂದೊಂದು ಸಲ ಒಂದೊಂದು ರೀತಿಯಲ್ಲಿ ಹೇಳುತ್ತಾರೆ. ಮೊನ್ನೆ ನಮ್ಮ ಲೋಕಸಭಾ ಸದಸ್ಯರು ಚಿಕ್ಕಮಗಳೂರಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ತುಂಗಾ ತಿರುವು ನಾಲೆಗಾಗಿ ನಾವು ಸಂಪೂರ್ಣವಾಗಿ ಯಶಸ್ವಿ ಮಾಡುವಂಥ ಪ್ರಯತ್ನದಲ್ಲಿದ್ದೇವೆ ಎಂದು ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆ. ಆ ತುಂಗಾ ತಿರುವು ನಾಲೆ ಎಲ್ಲಿ ಹೋಗುತ್ತದೆ ಎಂದರೆ ನಾಗೇಗೌಡರು ನಮಗೆ ಒಂದು ಮಾರ್ಗ ತೋರಿಸುತ್ತಾರೆ ಇನ್ನೊಬ್ಬರಿಗೆ ಒಂದು ಮಾರ್ಗ ತೋರಿಸುತ್ತಾರೆ. ಯಾವಾಗಿನಿಂದ ಈ ರೀತಿ ಎಂದರೆ ಅವರು ಆ ಕಡೆ ಹೋದಮೇಲೆ. ಆದುದರಿಂದ ಇವೊತ್ತು ಈ ಸದನದಲ್ಲಿ ಆ ಬಗ್ಗೆ ಒಂದು ಸ್ಪಷ್ಟ ಹೇಳಿಕೆ ಕೊಡಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಂದರೆ ಅವರು ಟ್ರಾಫಿಕ್ ಪೋಲೀಸ್‌ನವರು ಮಾಡಿದಂತೆ ಮಾಡುತ್ತಾರೆ ಎಂದ ಹಾಗಾಯಿತು. ಅವರಿಗೆ ಒಂದು ತೋರಿಸುವುದು, ಇವರಿಗೊಂದು ತೋರಿಸುವುದು, ಇವರನ್ನು ನಿಲ್ಲಿಸುವುದು, ಅವರನ್ನು ಬಿಡುವುದು.

MR. SPEAKER: Traffic police guides. I stop there. Traffic police guides. I don't know what he does.

ಶ್ರೀ ವಾಟಾಳ್ ನಾಗರಾಜ್: ಸಂಚಾರಿ ಪೋಲೀಸರು ಒಳ್ಳೆಯ ದಾರಿ ತೋರಿಸುತ್ತಾರೆ, ಇವರು ದಿಕ್ಕು ತಪ್ಪಿಸುತ್ತಾರೆ ಎಂದು ತಮ್ಮ ಮಾತಿನ ಅರ್ಥ.

ಅಧ್ಯಕ್ಷರು: ನಾನು ಹಾಗೆ ಹೇಳಲಿಲ್ಲ, ಅದು ನಿಮ್ಮ ಮಾತು. ನಾನು ನಮ್ಮ ಸ್ನೇಹಿತರ ಬಗ್ಗೆ ಹಾಗೆಲ್ಲಾ ಹೇಳುವುದಿಲ್ಲ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೆ, ಒಂದು ವಾದ ಏನೆಂದರೆ ನಾವು ಮಲೆನಾಡು ಭಾಗದ ಜನ. ಅದರಲ್ಲೂ ವಿಶೇಷವಾಗಿ ಚಿಕ್ಕಮಗಳೂರು ಭಾಗದ ಜನ ಬಹಳ ತೊಂದರೆಯಲ್ಲಿದ್ದೇವೆ. ಇದು ರಾಜ್ಯದ ಒಂದು ಸಮಸ್ಯೆ. ಮಾನ್ಯ ಮಂತ್ರಿಗಳಿಂದ ನನಗೆ ಯಾವ ಸ್ಪಷ್ಟೀಕರಣ ಬೇಕು ಎಂದು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವಂಥ ವಿಚಾರ ಯಾವುದೆಂದರೆ ಯಾವ ಯಾವ ಕಷ್ಟಗಳನ್ನು ನಾವು ಅನುಭವಿಸುತ್ತಿದ್ದೇವೆ ಎಂಬುದರ ಬಗ್ಗೆ ಮೊನ್ನೆ ತಾವು ಅವಕಾಶ ಕೊಟ್ಟಿದ್ದಾಗ ಗಂಗಡಿಕಲ್‌ನಲ್ಲಿ ಇವೊತ್ತು ಏನಾಗುತ್ತಿದೆ ಎನ್ನುವ ವಿಚಾರವನ್ನು ನಾನು ಆಗಲೇ ಸರ್ಕಾರದ ಗಮನಕ್ಕೆ ತಂದಿದ್ದೇನೆ. ನಮ್ಮ ಬದುಕಿನ ಬಗ್ಗೆ ನಾವು ಇವೊತ್ತು ಚಿಂತನೆ ಮಾಡದೆ ಹೋದಲ್ಲಿ ಪ್ರಾಯಶಃ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿರುವ ಜನ ನಮ್ಮನ್ನು ಸುಮ್ಮನೆ ಬಿಡುವುದಿಲ್ಲ. ಕೆಲವು ಭಾಗಗಳಲ್ಲಿ ನೀರು ಬೇಕು, ನಾವು ಕೊಡಬೇಡಿ ಎಂದು ಹೇಳುತ್ತಿಲ್ಲ. ಆದರೆ ನಮ್ಮನ್ನು ಉಳಿಸಿ ಅವರಿಗೆ ನೀರನ್ನು ಕೊಡುವ ಪ್ರಯತ್ನ ಮಾಡಿ ಎಂದು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆಯೇ ವಿನಃ ಕೊಡಕೂಡದು ಎಂಬ ವಿರೋಧ ಇಲ್ಲ. ಆದರೆ ತಾವು ಮಾಡುವಂಥ ಹೇಳಿಕೆ ಇದಕ್ಕೆ ಸಂಬಂಧಪಟ್ಟಂತೆ ಅಂದಾಜು ವೆಚ್ಚಗಳೇನು? ತಾವು ಭದ್ರಾ ಮೇಲ್ದಂಡೆ ಯೋಜನೆ ಎಂದು ಹೇಳುತ್ತಿರುವಂಥ ಯೋಜನೆಯನ್ನು ತೆಗೆದುಕೊಳ್ಳುವಂಥ ಆಸಕ್ತಿ ಸರ್ಕಾರಕ್ಕಿದೆಯೇ ಇದ್ದಲ್ಲಿ ಅದಕ್ಕೆ ಅಂದಾಜು ವೆಚ್ಚ ಎಷ್ಟು? ಅದನ್ನು ಮಾಡುವಂಥ ಹಂತದಲ್ಲಿ ಅರಣ್ಯ ನಾಶವಾಗದ ರೀತಿಯಲ್ಲಿ ಆ ಭಾಗದ ಜನ, ಸಾರ್ವಜನಿಕರು ಉಳಿದುಕೊಳ್ಳುವ ಹಾಗೆ ಯೋಜನೆಗೆ ಸಿದ್ಧತೆಗಳೇನಾದರೂ ಸರ್ಕಾರ ಮಾಡಿಕೊಂಡಿದೆಯೇ? ಇದರ ಬಗ್ಗೆ ತಾವು ಸಂಪೂರ್ಣವಾಗಿ ಈ ಸದನಕ್ಕೆ ಮಾಹಿತಿ ಕೊಡಬೇಕಾಗುತ್ತದೆ. ನನಗೆ ಒಂದು ಸಲ ಭದ್ರಾ, ಇನ್ನೊಂದು ಸಲ ತುಂಗಾ, ಮತ್ತೊಂದು ಸಲ ಕಾವೇರಿಯನ್ನು ದಯಮಾಡಿ ತೋರಿಸಬೇಡಿ. ಅದನ್ನು ನಮ್ಮ ಜಿಲ್ಲೆಯ ಜನ ಕೇಳುವಂಥವರಿದ್ದಾರೆ. ಆದುದರಿಂದ ದಯಮಾಡಿ ಸರ್ಕಾರ ಸಮಂಜಸವಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡುವಾಗ ತೀರ್ಥಹಳ್ಳಿಯಲ್ಲಿ ಮೇಗರ ಹಳ್ಳಿ ಗ್ರಾಮದಲ್ಲಿ ಮಾಲತಿ ನದಿಗೆ ಅಡ್ಡಗಟ್ಟೆಯನ್ನು ಹಾಕಿ ತುಂಗಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ತೀರ್ಥಹಳ್ಳಿ ಮೇಗರ ಹಳ್ಳಿಯ ಗ್ರಾಮ ನನ್ನ ಕ್ಷೇತ್ರಕ್ಕೆ ಬರುತ್ತದೆ. ಆಗುಂಬೆಯ ನಿತ್ಯ ಹರಿದ್ವರ್ಣ ಇರತಕ್ಕಂತಹ ಪಶ್ಚಿಮ ಘಟ್ಟದ ಉದಯದ ಭಾಗದಲ್ಲಿರತಕ್ಕಂತಹ ಒಂದು ಭಾಗ. ಈಗಾಗಲೇ ತೀರ್ಥಹಳ್ಳಿ ಹೊಸನಗರ

ತಾಲ್ಲೂಕುಗಳಲ್ಲಿ ಏನು ನದಿಗಳು ಹರಿಯುತ್ತಿವೆ ಅವುಗಳಿಗೆ ಅಡ್ಡಗಟ್ಟೆಯನ್ನು ಹಾಕಿ ಆ ಭಾಗದಲ್ಲಿರತಕ್ಕಂತಹ ಸಾಕಷ್ಟು ಪ್ರಕೃತಿ ಸಂಪತ್ತನ್ನು ಸಾಕಷ್ಟು ಮುಳುಗಿಸಿಯಾಗಿದೆ. ನಿಮಗೆ ನೀರು ಬೇಕೆಂದಾದರೆ ಮಳೆ ಬೇಕಾಗುತ್ತದೆ. ಮಳೆ ಬೇಕೆಂದಾದರೆ ಕಾಡುಗಳು ಆ ಮೋಡಗಳನ್ನು ತಡೆದು ಕ್ಯಾಚ್‌ಮೆಂಟ್ ಏರಿಯಾದಲ್ಲಿ ಮಳೆ ಸುರಿಸಬೇಕು. ನಿಮಗೆ ಕಾಡುಗಳೇ ಬೇಡವೆಂದಾದರೆ ನಿಮ್ಮ ಡ್ಯಾಮ್‌ಗಳೂ ಇಲ್ಲ ಕರ್ನಾಟಕ ರಾಜ್ಯವೂ ಇಲ್ಲವೆನ್ನುವ ಪರಿಸ್ಥಿತಿ ಒಂದು ದಿವಸ ಬರುತ್ತದೆ. ಬಹಳ ದೂರದೃಷ್ಟಿಯನ್ನು ಇಟ್ಟುಕೊಂಡು ಈ ಯೋಜನೆಯ ಬಗ್ಗೆ ಮಾಲತಿ ಯೋಜನೆಯ ಬಗ್ಗೆ ಹಿಂದೆ ಸದನದಲ್ಲಿ ಸಾಕಷ್ಟು ಪ್ರಸ್ತಾಪವಾಗಿದೆ. ಹಿಂದಿನ ಸರಕಾರ ಮತ್ತು ಈಗ ಇದ್ದಂತಹ ಮಾನ್ಯ ದೇವೇಗೌಡರು ಇಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಸ್ಪಷ್ಟವಾಗಿ ಈ ಮಾಲತಿ ಯೋಜನೆಯನ್ನು ಕೈ ಬಿಟ್ಟಿದ್ದೇವೆಂದು ಹೇಳಿದ್ದಾರೆ. ಮತ್ತೆ ಮತ್ತೆ ಪ್ರಸ್ತಾಪ ಮಾಡಿ ಸರಕಾರದ ಮೇಲೆ ಯಾವುದೇ ರೀತಿಯ ಒತ್ತಡ ತಂದರೆ, ತಾವು ದಯವಿಟ್ಟು....

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ಅವರ ಕ್ಷೇತ್ರದಲ್ಲಿ ಮುಳುಗಡೆಯಾಗಿ ಜನ ಸಾಯಬೇಕಾ? ಮಲೆನಾಡು ಏನಾಗಿದೆ ಹೇಳಿ....

ಅಧ್ಯಕ್ಷರು: ಮಲೆನಾಡು ಏನಾಗಿದೆ ಎಂದರೆ ಮಾನ್ಯ ನಾಣಯ್ಯನವರ ತಲೆ ಆದ ಹಾಗೆ ಆಗಿದೆ.

ಶ್ರೀ ಅರಗ ಜ್ಞಾನೇಂದ್ರ: ಮಲೆನಾಡಿನಲ್ಲಿ ಈ ರೀತಿಯಾಗುವುದಾದರೆ ಮಾಲತಿ ಯೋಜನೆಯನ್ನು ಯಾವುದೇ ಒತ್ತಡದಿಂದ ಕಾರ್ಯ ಕೈಗೊಂಡರೆ, ಅದು ಮಾಲತಿ ಹೊಳೆ ದಂಡೆಗೆ ನೀವು ಕಟ್ಟತಕ್ಕಂತಹ ಡ್ಯಾಮ್ ಆಗುವುದಿಲ್ಲ. ತೀರ್ಥಹಳ್ಳಿ ಶವದ ಮೇಲೆ ಮಾಲತಿ ಡ್ಯಾಂ ಅನ್ನು ಕಟ್ಟಬೇಕಾಗುತ್ತದೆ.

MR. SPEAKER: I have got regards for you. Please Continue.

ಶ್ರೀ ಅರಗ ಜ್ಞಾನೇಂದ್ರ: ಇದು ನನ್ನ ತಾಲ್ಲೂಕಿನ ಜನರ ಬದುಕಿನ ಪ್ರಶ್ನೆ. ತುಂಗಾ ನದಿಯಲ್ಲಿ ನಾವು ಒಂದು ಹನಿ ನೀರನ್ನೂ ಕೂಡ ಉಪಯೋಗಿಸಿಕೊಳ್ಳುವುದಕ್ಕಾಗುತ್ತಿಲ್ಲ. ತುಂಗಾ ನದಿಯ ನೀರು ಹರಿದು ಹೋಗುತ್ತಿದೆ ನಾವು ಆ ದಂಡೆಯ ಮೇಲೆ ಕುಳಿತುಕೊಂಡು ಕಣ್ಣೀರು ಹಾಕುತ್ತಿದ್ದೇವೆ ಪಂಪ್‌ಸೆಟ್ ಹಾಕುವುದಕ್ಕೆ ಸಾಧ್ಯವಾಗುತ್ತಿಲ್ಲ. ಅಲ್ಲಿ ಪಂಪ್‌ಸೆಟ್ ಹಾಕುವುದಕ್ಕೆ ಅನುಮತಿಯನ್ನು ನಿಮ್ಮ ಇಂಜಿನಿಯರ್ ಕೊಡುತ್ತಿಲ್ಲ. ಬಚಾವತ್ ಅವಾರ್ಡ್ ಪ್ರಕಾರ ನೀವು ಪಂಪ್‌ಸೆಟ್ ಹಾಕುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ತುಂಗಾ ನದಿ, ತುಂಗಾ ನದಿಯ ಉಪನದಿಗಳಿಗೆ ಪಂಪ್‌ಸೆಟ್ ಹಾಕುವ

ಹಾಗಿಲ್ಲ, ಮಾನ್ಯ ಭಾರಿ ನೀರಾವರಿ ಸಚಿವರು ಇದರ ಬಗ್ಗೆ ಯೋಚನೆ ಮಾಡಬೇಕು. ತುಂಗಾ ನದಿಯಲ್ಲಿ ಒಂದು ಟಿ.ಎಂ.ಸಿ. ನೀರನ್ನು ತೀರ್ಥಹಳ್ಳಿ ತಾಲ್ಲೂಕಿನ ಜನರು ಬಳಕೆ ಮಾಡುವುದಕ್ಕೆ ಮೀಸಲಾಗಿ ಇಡಬೇಕೆಂದು ತಮ್ಮನ್ನು ನಾನು ವಿನಂತಿಸುತ್ತೇನೆ. ತುಂಗಾ ನದಿಗೆ ಕ್ರಸ್ಟ್ ಗೇಟ್ ಏನು ಹಾಕುತ್ತಿದ್ದೀರಿ ಆ ಕೆಲಸವನ್ನು ಕೈಗೊಳ್ಳುವ ಮೊದಲು ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ ಭಾಗದಲ್ಲಿ ಏನು ಮುಳುಗಡೆಯಾಗುತ್ತದೆ ಆ ಮುಳುಗಡೆಯಾಗತಕ್ಕಂತಹ ಜನರ ಸರ್ವೆ ಮಾಡಿ ಅವರಿಗೆ ಪರಿಹಾರ ಪುನರ್ ವಸತಿ ಒದಗಿಸಿಕೊಟ್ಟಾದ ನಂತರ ತಾವು ಯೋಜನೆಯನ್ನು ಮಾಡಬೇಕು. ಯಾವುದೇ ಕಾರಣಕ್ಕೆ ಮಾಲತಿ ಯೋಜನೆಯನ್ನು ಕೈಗೊಳ್ಳಬಾರದೆನ್ನುವ ವಿನಂತಿಯನ್ನು ಸರಕಾರಕ್ಕೆ ಮಾಡಿಕೊಳ್ಳುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ.ಬಸವರಾಜ್ (ಹೊಸದುರ್ಗ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಗೀರ್ ಅಹಮದ್‌ರವರು ಮಾತನಾಡುತ್ತಿದ್ದನ್ನು ಕೇಳಿದರೆ ಬಹಳ ಶಂಕೆಯನ್ನು ಇಟ್ಟುಕೊಂಡಿದ್ದಾರೆಂದು ನಮಗೆ ಅನ್ನಿಸಿತು. ಭದ್ರಾ ಮೇಲ್ದಂಡೆ ಕಟ್ಟುವುದರಿಂದ ಬಹಳಷ್ಟು ಕಾಡು ಮುಳುಗುತ್ತದೆ ಎನ್ನುವ ದೃಷ್ಟಿಯಿಂದ ತುಂಗಾ ತೀರವನ್ನು ಕಟ್ಟಿದ್ದಾರೆ. ತುಂಗಾ ತೀರ ಬರುವುದರಿಂದ ಯಾವುದೇ ಕಾಡಿಗೆ ನಾಶವಾಗುವುದಿಲ್ಲ. ಮಾನ್ಯ ಸಚಿವರು ಸಾಕಷ್ಟು ವರದಿಯನ್ನು ಕೊಟ್ಟಿದ್ದಾರೆ. ಮಾನ್ಯ ಸಗೀರ್ ಅಹಮದ್‌ರವರು ಇದರ ಬಗ್ಗೆ ಏನು ಶಂಕೆ ಪಡುತ್ತಿದ್ದಾರೆ ಅದಕ್ಕೆ ಯಾವುದೇ ಆಧಾರ ಇಲ್ಲ. ಬಯಲು ಸೀಮೆಯಲ್ಲಿರುವ ಜನರಾದ ನಾವು ಏನು ಇದ್ದೇವೆ ನಾವೂ ಕೂಡ ಸ್ವಲ್ಪ ನೀರನ್ನು ಕಾಣುವ ಅವಕಾಶವನ್ನು ಮಾಡಿಕೊಳ್ಳಬೇಕು. ಇದರಿಂದ ಚಿಕ್ಕಮಗಳೂರು ಜನರಿಗೆ ಯಾವುದೇ ತೊಂದರೆ ಹಾನಿಯಾಗುವುದಿಲ್ಲ. ಸಂಬಂಧಪಟ್ಟ ಮಂತ್ರಿಗಳು, ಸದಸ್ಯರೂ ಕೂಡ ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ರಾಜಕೀಯ ದೃಷ್ಟಿಯಿಂದ ಇದನ್ನು ನೋಡದೇ ಸಾರ್ವಜನಿಕ ದೃಷ್ಟಿಯಿಂದ ಮತ್ತು ಬಯಲು ಪ್ರದೇಶದವರಿಗೆ ಅನುಕೂಲವಾಗುವಂತಹ ಆ ಒಂದು ತಿರುವಿಗೆ ಅವರೂ ಕೂಡ ಇದಕ್ಕೆ ಅನುಮೋದನೆ ಕೊಡಬೇಕೆಂದು ಹೇಳಬಯಸುತ್ತೇನೆ. ಅವರ ಶಂಕೆಗೆ ಯಾವುದೇ ಆಧಾರವಿಲ್ಲವೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು ಮುಂದೂಡಲಾಗಿದೆ. ಮತ್ತೆ ಸದನವು 3-00 ಗಂಟೆಗೆ ಸಮಾವೇಶಗೊಳ್ಳುವುದು. 3 ಗಂಟೆಗೆ ಮಾನ್ಯ ಮಂತ್ರಿಗಳಿಂದ ಉತ್ತರ.

(ಸದನವು 1-55ಕ್ಕೆ ಮುಂದೂಡಲ್ಪಟ್ಟು ಮತ್ತೆ 3-00 ಗಂಟೆಗೆ ಸಮಾವೇಶಗೊಳ್ಳುವುದೆಂದು ತೀರ್ಮಾನಿಸಿತು)

(ಸದನವು 3-15 ನಿಮಿಷಕ್ಕೆ ಸಮಾವೇಶಗೊಂಡಿತು. ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ.ಮಾಮನಿ)ರವರು ಪೀಠವನ್ನು ಅಲಂಕರಿಸಿದರು)

(ಇ) ಮುಂದುವರಿದ ಚರ್ಚೆ

ಅರ್ಧಗಂಟೆ ಕಾಲಾವಧಿ ಚರ್ಚೆ ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ ಭಾರಿ ನೀರಾವರಿ ಸಚಿವರಿಂದ ಉತ್ತರ.

+ ಶ್ರೀ ಕೆ.ಎನ್.ನಾಗೇಗೌಡ (ಭಾರೀ ನೀರಾವರಿ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ಮಂಜುನಾಥ ಕುನ್ನೂರ್‌ರವರು ತಂದಿರತಕ್ಕ ಅರ್ಧ ಗಂಟೆ ಚರ್ಚೆಯಲ್ಲಿ ಸ್ನೇಹಿತರಾದ ಶ್ರೀ ಬಣಕಾರರವರು ಮತ್ತು ಸಗೀರ್ ಅಹಮದ್‌ರವರು ಮತ್ತು ಶ್ರೀ ಅರಗ ಜ್ಞಾನೇಂದ್ರ ಅವರು ಮಾತನಾಡಿದ್ದಾರೆ. ನಾವು 20-7-1997ರಂದು ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಕೊಟ್ಟಂತಹ ಉತ್ತರದಲ್ಲಿ ಉದ್ಭವಿಸಿದ ಅನೇಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಮೂರು ವಿಚಾರಗಳು ಬಹಳ ಪ್ರಾಮುಖ್ಯವಾಗಿರತಕ್ಕವುಗಳಾಗಿವೆ. ಈ ಮೂರು ವಿಚಾರಗಳನ್ನು ನಾವು ಅರ್ಥಮಾಡಿಕೊಂಡರೆ ದಾರಿ ಯಾವ ಕಡೆಯು ಹೋಗುವುದಿಲ್ಲ, ಒಂದೇ ಕಡೆ ಸರಿಯಾಗಿ ಹೋಗುತ್ತದೆ. ಈ ಮೂರು ವಿಚಾರಗಳನ್ನು ಅರ್ಥಮಾಡಿಕೊಳ್ಳದೆ ಹೋದರೆ ದಾರಿಗಳು ಬೇರೆ ಬೇರೆ ಕಡೆ ಹೋಗುತ್ತವೆ ಎಂದು ನನ್ನ ಆತ್ಮೀಯ ಸ್ನೇಹಿತರಿಗೆ ತಿಳಿಸುತ್ತಾ, ಈ ಮೂರು ಪ್ರಾಜೆಕ್ಟ್‌ಗಳಲ್ಲಿ, ನಮ್ಮ ರಾಜ್ಯಕ್ಕೆ ದೊರಕಿರತಕ್ಕಂತಹ 734ರಲ್ಲಿ 5ನ್ನು ಬಿಟ್ಟರೆ 729 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲು ಹಾಕಿಕೊಂಡಿರುವ ನಮ್ಮ ಯೋಜನೆ ಪ್ರಕಾರ ಮಾತನಾಡಿದ್ದರೆ ನಮ್ಮ ಮುಂದೆ ಉದ್ಭವವಾಗಿರತಕ್ಕ ವಿಚಾರಗಳಲ್ಲಿ ಈ ಮೂರು ಯೋಜನೆಗಳು, ಒಂದು ತುಂಗಾ ಮೇಲ್ದಂಡೆ ಯೋಜನೆ, that is called Upper Tunga, ಯಾವುದು ನಮ್ಮ ಮಂಜುನಾಥ ಕುನ್ನೂರ್‌ರವರು ಪ್ರಸ್ತಾಪಮಾಡಿದ್ದಾರೆ ಅದು ಅಪ್ಪರ್ ತುಂಗಾ ಎಂದು ಹೆಸರು, ಯಾವುದು ನಮ್ಮ ಸಗೀರ್‌ರವರು ಪ್ರಸ್ತಾಪಮಾಡಿದ್ದಾರೆ ಅದು ತುಂಗಾ ಡೈವರ್‌ಷನ್ ಎಂದು. ಸಗೀರ್‌ರವರೇ, ತಾವು ಏನು ಭದ್ರಾ ಮೇಲ್ದಂಡೆ ಎಂದು ಕರೆಯುತ್ತಾ ಇದ್ದೀರಿ ಈ ಭದ್ರಾ ಮೇಲ್ದಂಡೆ ಯೋಜನೆಯನ್ನು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ದೇವೇಗೌಡರು ಕೊನೆ ಮಂತ್ರಿಮಂಡಲದಲ್ಲಿ ಭದ್ರಾಮೇಲ್ದಂಡೆ ಎನ್ನತಕ್ಕ ಯೋಜನೆಯನ್ನು ಕೈಬಿಟ್ಟು ಅದಕ್ಕೆ ಬದಲಾಗಿ ತುಂಗಾ ತಿರುವು ಎನ್ನತಕ್ಕ ಹೊಸ ಹೆಸರಿನಲ್ಲಿ ಸಂಪೂರ್ಣ ತನಿಖೆ ಮಾಡಿ ಎಂದು ಹಾಕಿದ್ದಾರೆ. ಆ ಸರ್ಕಾರದ ತೀರ್ಮಾನದಂತೆ ನಮ್ಮ ತುಂಗಾ ಡೈವರ್‌ಶನ್‌ಗೆ 20 ಟಿ.ಎಂ.ಸಿ. ಒಳಗೊಂಡು ಅನ್ವೇಷಣೆ ನಡೆಯುತ್ತಾ ಇದೆ. ಆ ಅನ್ವೇಷಣೆ ಇನ್ನು ಒಂದೆರಡುಮೂರು ತಿಂಗಳಲ್ಲಿ ಬರುತ್ತದೆ, ಅದು ಬಂದಮೇಲೆ ಅದರ ಸ್ವರೂಪದ ಬಗ್ಗೆ ಚರ್ಚೆ ಮಾಡಲು ತಮಗೆ ನಾನು ಅವಕಾಶವನ್ನು ಕೊಡುತ್ತೇನೆ. ಈಗಾಗಲೇ ತಾವು ಚರ್ಚೆ ಮಾಡಿ ಅನೇಕ ಸಭೆಗಳನ್ನು ಕರೆದಿದ್ದೇವೆ, ಇದಕ್ಕೆ ಸಂಬಂಧಪಟ್ಟ ಆ ಕ್ಷೇತ್ರದ ಶಾಸಕರನ್ನು ನಾವು ಕರೆದು ಆಲೋಚನೆ ಮಾಡಿ ಯಾರಿಗೂ ಯಾವ ರೀತಿಯ ಅನ್ಯಾಯ ಆಗದಂತೆ ನೋಡಿಕೊಳ್ಳುವುದು ನಮ್ಮ ಸರ್ಕಾರದ ಕರ್ತವ್ಯವಾಗಿದೆ. ಅಲ್ಲಿ ಇರುವವರೂ ರೈತರೇ, ನಮ್ಮ ರಾಜ್ಯದ ಪ್ರಜೆಗಳೇ, ಇಲ್ಲಿ

ಇರುವವರು ನಮ್ಮ ರೈತರೇ ಇಬ್ಬರನ್ನು ಸರಿಯಾಗಿ ನೋಡಿಕೊಳ್ಳುವ ದೃಷ್ಟಿಯಿಂದ ಸಬ್‌ಮರ್ಜ್ ಆಗುವುದು ಬೇಡ ಎನ್ನತಕ್ಕ ದೃಷ್ಟಿಯಿಂದ ತುಂಗಾ ಡೈವರ್‌ಶನ್ ಎನ್ನತಕ್ಕ ಹೆಸರಿನಲ್ಲಿ 20 ಟಿ.ಎಂ.ಸಿ.ಯನ್ನು ಒಳಗೊಂಡು, 8 ಟಿ.ಎಂ.ಸಿ. ನೀರನ್ನು ನಮ್ಮ ಗೋದಾವರಿ ಡೈವರಶನ್‌ನಿಂದ ನಮ್ಮ ಕೃಷ್ಣಾಕ್ಕೆ ಏನು ಬರುತ್ತದೆ, 20ರಲ್ಲಿ 8 ಟಿ.ಎಂ.ಸಿ. ನಮ್ಮ ತುಂಗ ಭದ್ರಾದಲ್ಲಿ ಉಳಿತಾಯ ಮಾಡಿ, ಇನ್ನು 6 ಟಿ.ಎಂ.ಸಿ.ಯನ್ನು ಭದ್ರಾ ಮಾಡರ್ನೈಸೇಷನ್ ಮಾಡಿ ನಮ್ಮ ಲಕ್ಕವಳ್ಳಿ ಡ್ಯಾಮ್ ಕೆಳಗಡೆಯಿಂದ ದಾವಣಗೆರೆಯ ಐದು ಭಾಗಗಳಲ್ಲಿ ನೀರು ಬರುತ್ತದೆ. ಅದನ್ನು ಮಾಡರ್ನೈಸೇಷನ್ ಮಾಡಿ 144 ಕೋಟಿ ರೂ. ಯೋಜನೆ ಹಾಕಿಕೊಂಡಿದ್ದೇವೆ. ಇಷ್ಟರಲ್ಲಿ ಅದು ಅಪ್ರೂವಲ್ ಆಗುವ ಸ್ಟೇಜ್‌ನಲ್ಲಿ ಇದೆ. ಅಲ್ಲಿ ಮಾಡರ್ನೈಸೇಷನ್ ಮಾಡಿ 6 ಟಿ.ಎಂ.ಸಿ. ಅಂದರೆ 8 ಟಿ.ಎಂ.ಸಿ. ಗೋದಾವರಿ ಡೈವರಶನ್‌ದ್ದು, 6 ಟಿ.ಎಂ.ಸಿ. ತುಂಗಭದ್ರಾ ಯೋಜನೆಯಿಂದ ಉಳಿತಾಯ ಮಾಡಿದ್ದು, ಇನ್ನು 6 ಟಿ.ಎಂ.ಸಿ. ಭದ್ರಾ ಯೋಜನೆಯಲ್ಲಿ ಉಳಿತಾಯ ಮಾಡಿ ಹೀಗೆ ಒಟ್ಟು 20 ಟಿ.ಎಂ.ಸಿ. ನೀರನ್ನು ನಾವು ಈ ತುಂಗಾ ಡೈವರಶನ್‌ಗೆ ಕೊಡತಕ್ಕದ್ದು 729ರಲ್ಲಿ ಇದು ಸೇರುವುದಿಲ್ಲ. ಈಗ ನಮ್ಮ ತುಂಗಾ ಮೇಲ್ದಂಡೆಯಲ್ಲಿ ಏನು ಮಾಡುತ್ತೇವೆ ಎಂದರೆ ನಮ್ಮ ಮಾನ್ಯ ಮಂಜುನಾಥ ಕುನ್ನೂರ್‌ರವರು ಪ್ರಸ್ತಾಪ ಮಾಡಿರತಕ್ಕದ್ದು ಅದು ಅಪ್ಪರ್ ತುಂಗಾಕ್ಕೆ 729 ಟಿ.ಎಂ.ಸಿ ಒಳಗಡೆನೇ ನಾವು ಇಟ್ಟಿರತಕ್ಕ ನೀರು. ಅದು ಸುಮಾರು 12.24 ಇದನ್ನು ನಾವು 729 ಟಿ.ಎಂ.ಸಿ ಅಲೋಕೇಷನ್‌ನಲ್ಲಿಯೇ ತುಂಗಾ ಮೇಲ್ದಂಡೆಗೆ ನಾವು ಅಲೋಕೇಟ್ ಮಾಡಿ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಇನ್ನೊಂದು ವಿಷಯ ನಮ್ಮ ಮಂಜುನಾಥ ರವರಿಗೆ ಗೊತ್ತಿಲ್ಲ ಎಂದು ಮಾಡಿದ್ದೇವೆ. ಅದನ್ನು ಮೈನರ್ ಇರಿಗೇಷನ್ ಸೇವಿಂಗ್‌ನಲ್ಲಿ ಇಟ್ಟುಕೊಂಡು ಅದನ್ನು ತುಂಗಾ ಲಿಫ್ಟ್ ಎಂದು ಮಾಡಿದ್ದೇವೆ. ಅದರಿಂದ ಒಂದಕ್ಕೊಂದು ಕನ್‌ಫ್ಯೂಸ್ ಆಗುವುದು ಬೇಕಾಗಿಲ್ಲ. ಇದು ನಮ್ಮ ಸಗೀರ್ ಸಾಹೇಬರಿಗೆ ಅರ್ಥವಾಯಿತು ಎಂದು ಕಾಣುತ್ತದೆ. ಅವರ ಮತ್ತು ಜ್ಞಾನೇಂದ್ರರವರ ಬವಣೆಯನ್ನು ಅರ್ಥ ಮಾಡಿಕೊಂಡು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಜಾಸ್ತಿ ನೀರು ಬಂದು ಜಮೀನುಗಳು ಮುಳಗಡೆ ಆಗಿವೆ. ತೀರ್ಥಹಳ್ಳಿ, ಚಿಕ್ಕಮಗಳೂರು ಈ ಭಾಗದಲ್ಲಿ ತುಂಗಾ ಭದ್ರಾ ಹುಟ್ಟಿದರೂ ಸಹಿತ ಅವರು ರಾಷ್ಟ್ರಕೋಸ್ಕರ, ಈ ರಾಜ್ಯಕೋಸ್ಕರ ದೊಡ್ಡ ತ್ಯಾಗವನ್ನು ಮಾಡಿದ್ದಾರೆ. ಆ ತ್ಯಾಗದ ಬಗ್ಗೆ ಯಾರು ಒಂದೆರಡು ಮಾತುಗಳನ್ನೂ ಆಡಲಿಲ್ಲ, ಆ ತ್ಯಾಗಕ್ಕಾಗಿ ಯಾವತ್ತು ನಮ್ಮ ರಾಜ್ಯದ ಜನರು ಚಿರಋಣಿ ಆಗಿರುತ್ತಾರೆ. ಅವರ ನೋವನ್ನು ಸರ್ಕಾರ ಅರ್ಥಮಾಡಿಕೊಂಡೇ ಶ್ರೀ ದೇವೇಗೌಡರು ಈ ಎರಡು ಯೋಜನೆಗಳಿಗೆ ಸ್ಪಷ್ಟವಾದ ಸ್ವರೂಪವನ್ನು ಕೊಟ್ಟು ಯಾವ ಕಾರಣಕ್ಕೂ ಜಮೀನು ಮುಳುಗಡೆ ಆಗಬಾರದು, ಆಗುವುದು ಬೇಡ ಎಂದು ತೀರ್ಪನ್ನು ಕೊಟ್ಟು ಇವೆರಡನ್ನು ಮತ್ತೆ ಹಾಕಿದ್ದಾರೆ. ಇನ್ನೊಂದು ಮಾಲತಿ ಡ್ಯಾಮ್ ಬಗ್ಗೆ ನಮ್ಮ ಹಳೆಯ ಸ್ನೇಹಿತರಾದ ಮಂಜುನಾಥ ಕುನ್ನೂರ್‌ರವರು ಮಾಲತಿ ಡ್ಯಾಮ್ ಆಗಬೇಕೆಂದು ಹೇಳಿದ್ದಾರೆ. ಉಪಾಧ್ಯಕ್ಷರೆ, ತಮ್ಮ ಕ್ಷೇತ್ರ ನೀರಾವರಿ ಕ್ಷೇತ್ರ, ಅದರ ಬಗ್ಗೆ ತಮಗೆ ಬಹಳ ಕಾಳಜಿ ಇದೆ.

ಅದು ನಮಗೂ ಗೊತ್ತು. ನೀರು ಅತ್ಯಂತ ಪ್ರಾಮುಖ್ಯವಾದದ್ದು, ಅದು ವಜ್ರಕ್ಕಿಂತ ಪ್ರಾಮುಖ್ಯವಾದದ್ದು, ವಜ್ರದ ಬೆಲೆ ಉತ್ಪತ್ತಿಯಿಂದ ಹೆಚ್ಚಾಗುವುದಿಲ್ಲ, ಆದರೆ ಇದು ಬರುತ್ತಾ ಬರುತ್ತಾ ಬೆಳೆ ಬಂದಷ್ಟು ಒಬ್ಬ ರೈತನ ಆರ್ಥಿಕ ಪರಿಸ್ಥಿತಿ ಬಹಳಷ್ಟು ಸುಧಾರಿಸುತ್ತದೆ. ಅದು ಹಳ್ಳಿಗಾಡಿನಲ್ಲಿ ಬೆವರಿನಲ್ಲಿ ಬದುಕುವ ಮನುಷ್ಯನಿಗೆ ಇದೊಂದು ಜೀವನ ದಾರಿ. ಅದನ್ನು ಅರ್ಥಮಾಡಿಕೊಂಡು ನಾವು ಮಾಲತಿ ಡ್ಯಾಮ್ ಬಗ್ಗೆ 1991ರಲ್ಲಿ ಮತ್ತು ಹಿಂದೆ ದೇವೇಗೌಡರು ಇದ್ದ ಕಾಲದಲ್ಲಿ 1984-85ರಲ್ಲಿ ಅವರು ಏನು ಭರವಸೆಗಳನ್ನು ಕೊಟ್ಟಿದ್ದರು ಆ ರಿಕಾರ್ಡ್ಸ್‌ಗಳನ್ನು ತರಿಸಿ ನೋಡಿದ್ದೇನೆ. ಈಗ ತನಿಖೆ ಮಾಡಿದರೆ 10 ಸಾವಿರಕ್ಕಿಂತ ಹೆಚ್ಚು ಎಕರೆ ಮುಳಗಡೆಯಾಗುತ್ತದೆ. ನಾವು ಯಾವುದೇ ಮನುಷ್ಯನಿಗೆ ನೋವು ಕೊಡಬೇಕಾದರೂ ಸಹ ಜಾಸ್ತಿ ಚುಚ್ಚುವುದಕ್ಕೆ ಹೋಗಬಾರದು. ಇದನ್ನು ನಮ್ಮ ಸ್ನೇಹಿತರು ಅರ್ಥಮಾಡಿಕೊಳ್ಳಬೇಕು, ಅವರು ಲೆಕ್ಕಾಚಾರ ಹಾಕಬೇಕು. ಅವರು ನಮ್ಮ ರೈತರು. ಕಾಡು ನಮ್ಮ ರಾಷ್ಟ್ರದ ಸಂಪತ್ತು. ನೀರಾವರಿ ಯೋಜನೆಗಳಿಗೆ, ವಿದ್ಯುತ್ ಯೋಜನೆಗಳಿಗೆ ಮುಳುಗಡೆಯಾಗದೇ ನಾವು ಆಕಾಶದಲ್ಲಿ ಡ್ಯಾಂ ಕಟ್ಟುವುದಕ್ಕೆ ಆಗುವುದಿಲ್ಲ. ನಾವು ಭೂಮಿಯ ಮೇಲೇ ಕಟ್ಟಬೇಕಾಗಿದೆ. ಆದರೆ ಅದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆಲಮಟ್ಟಿಯಲ್ಲಿ ಮುಳುಗಡೆಯಾದುದಕ್ಕೆ ನಾವು ಕೊಟ್ಯಾಂತರ ರೂಪಾಯಿ ಹಣ ಖರ್ಚು ಮಾಡಿ ನಾಲ್ಕು ಲಿಫ್ಟ್ ಇರಿಗೇಷನ್‌ಗಳನ್ನು ಸೈಡ್ ಬೈ ಸೈಡ್ ಹಾಕಿ ನೀರನ್ನು ಎತ್ತಿದ್ದೇವೆ. ಸಹಸ್ರಾರು ಕೋಟಿ ರೂಪಾಯಿ ಖರ್ಚು ಮಾಡಿ ಎರಡು ಲಕ್ಷ ಎಕರೆ ಮುಳುಗಡೆಯಾಗಿರತಕ್ಕಂಥ ಪ್ರದೇಶಕ್ಕೆ ನೀರು ಬರಬೇಕು ಎಂದು ನಾವು ಆಲೋಚನೆ ಮಾಡಿರತಕ್ಕಂಥಾದ್ದು. ಈ ಸಾಮಾಜಿಕ ನ್ಯಾಯವನ್ನು ಉಳಿಸುವುದರಲ್ಲಿ, ತಾಂತ್ರಿಕ ವಿಚಾರಕ್ಕಿಂತ ಸಾಮಾಜಿಕ ನ್ಯಾಯವನ್ನು ಉಳಿಸುವುದು ಬಹಳ ಪ್ರಾಮುಖ್ಯವಾಗಿದೆ. ಆದ್ದರಿಂದ ಅವರು ಆಲೋಚನೆ ಮಾಡಿದ್ದಾರೆ. ಮಾಲತಿ ಯೋಜನೆಯ ಎಲ್ಲವನ್ನೂ ವಿವರವಾಗಿ ಪರಿಶೀಲನೆ ಮಾಡಿ ಅದನ್ನು ಕೈಬಿಡಲಾಗಿದೆ. ಮತ್ತೆ ನಾವು ಅದನ್ನು ಪರಿಶೀಲನೆ ಮಾಡಲು ಹೋಗಿ ಅವರ ಸೆನ್ಸಿಟೀವ್‌ನೆಸ್ ಅನ್ನು ಪರೀಕ್ಷೆ ಮಾಡಬಾರದು. ತುಂಗ ಭದ್ರಾ, ಹೇಮಾವತಿ ಈ ಎಲ್ಲಾ ನದಿಗಳೂ ಶಿವಮೊಗ್ಗ, ಮಲೆನಾಡು, ಚಿಕ್ಕಮಗಳೂರು ಪ್ರದೇಶಗಳಲ್ಲಿ ಹರಿಯುತ್ತವೆ. ಅಲ್ಲಿ ಹುಟ್ಟಿದ ಹೆಣ್ಣುಮಕ್ಕಳನ್ನೆಲ್ಲಾ ನಮ್ಮ ಕಡೆಗೆ ಮದುವೆ ಮಾಡಿಬಿಟ್ಟಿದ್ದಾರೆ. ಅವರಿಗೆ ನೋವು ಮಾಡುವುದು ಬೇಡ. ಮಾಲತಿ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗದೆ, ಅದು ತೀವ್ರವಾಗಿ ಚರ್ಚೆಯಾಗಿರುವುದರಿಂದ ಅದನ್ನು ಅಲ್ಲಿಗೇ ನಿಲ್ಲಿಸುತ್ತೇನೆ. ಇನ್ನು ಉಳಿದಿರತಕ್ಕಂಥಾದ್ದು ಎಂದರೆ, ಬಹಳ ಪ್ರಾಮುಖ್ಯವಾಗಿ ಚರ್ಚೆಯಾಗಿರತಕ್ಕಂಥಾದ್ದು ನಮ್ಮ ತುಂಗಾ ಮೇಲ್ದಂಡೆ ಯೋಜನೆ. ಅವರು ಹೇಳಿದ ಹಾಗೆ ತುಂಗಾ ಮೇಲ್ದಂಡೆಗೆ 1988-89ರಲ್ಲಿ ಅಕ್ಟೋಬರ್‌ನಲ್ಲಿ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟರು. 271 ಕೋಟಿ ರೂಪಾಯಿಯಲ್ಲಿ 12.24 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡು ತುಂಗಾ ಮೇಲ್ದಂಡೆ ಮಾಡಬೇಕು ಎಂದು ಕೊಟ್ಟರು. 1989ರಿಂದ ಇಲ್ಲಿಯವರೆಗೆ ಸುಮಾರು 18 ಕೋಟಿ 61 ಲಕ್ಷ ಖರ್ಚಾಗಿದೆ. ಅದನ್ನು ನಾವು 1996-97ರಲ್ಲಿ ರಿವೈಸ್ಡ್ ಎಸ್ಟಿಮೇಟ್

ಮಾಡಿದೆವು. 1996-97ರಲ್ಲಿ ರಿವೈಸ್ಡ್ ಎಸ್ಟಿಮೇಟ್ ಮಾಡಿದ ಮೇಲೆ ಅದು 670 ಕೋಟಿಗೆ ಹೋಗಿದೆ. ಇನ್ನೂ ಸುಮಾರು 2,34,000 ಎಕರೆಗೆ ನಾವು ನೀರನ್ನು ಕೊಡುತ್ತಿದ್ದೇವೆ. ನೀರು ಕೊಡುವಂಥ ಈ ಎರಡು ಲಕ್ಷ ಮೂವತ್ತನಾಲ್ಕು ಎಕರೆಯ ಕಡೆ ಬರುವಂಥ ತಾಲ್ಲೂಕುಗಳ ಬಗ್ಗೆಯೂ ಸಹ ನಾನು ತರಿಸಿ ನೋಡಿದ್ದೇನೆ. ಅದರಲ್ಲಿ ಶಿವಮೊಗ್ಗ ತಾಲ್ಲೂಕು 5250 ಎಕರೆ, ಹೊನ್ನಾಳಿ ತಾಲ್ಲೂಕು 14,780 ಎಕರೆ, ಹಿರೇಕೆರೂರು ತಾಲ್ಲೂಕು 27,310 ಎಕರೆ, ರಾಣಿಬೆನ್ನೂರು ತಾಲ್ಲೂಕು 1,07,250 ಎಕರೆ, ಹಾವೇರಿ ತಾಲ್ಲೂಕು, 74,820 ಎಕರೆ, ಹಾನಗಲ್ ತಾಲ್ಲೂಕು 4,030 ಎಕರೆ, ಚಿತ್ರದುರ್ಗ ತಾಲ್ಲೂಕು 610 ಎಕರೆ. ಅಂದರೆ ಎರಡು ಲಕ್ಷದ ಮೂವತ್ತನಾಲ್ಕು ಸಾವಿರ ಎಕರೆಗೆ ಸುಮಾರು 380ಕ್ಕಿಂತ ಹೆಚ್ಚು ಕಿ.ಮೀ. ನಾಲೆಯನ್ನು ತೆಗೆದುಕೊಂಡು ಹೋಗಿ ಮಾಡಬೇಕಾಗಿದೆ. ಅದರಲ್ಲಿ ಸುಮಾರು 55 ಕಿ.ಮೀ.ವರೆಗೆ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದೇವೆ. ಇಲ್ಲಿವರೆಗೆ ಆ ಕೆಲಸವೇ ಪ್ರಾರಂಭವಾಗಿರಲಿಲ್ಲ. ಮಂಜುನಾಥ ಕುನ್ನೂರ್‌ರವರು ಒಂದು ಒಳ್ಳೆಯ ಮಾತನ್ನು ಹೇಳಿದರು, ಬಿದ್ದು ಹೋಗಿದ್ದಂಥ ಯೋಜನೆಗೆ ಇವತ್ತು ಚಾಲನೆ ಕೊಟ್ಟಿದ್ದೀರಿ ಎಂದು. ಇವತ್ತು ಮೂರ್ನಾಲ್ಕು ಕಡೆ ಕಿ.ಮೀ.ಗಳ ನಾಲೆ ಕೆಲಸ ಪ್ರಾರಂಭವಾಗಿದೆ. ಆ ನಾಲೆ ಕೆಲಸವನ್ನು ತೆಗೆದುಕೊಂಡಿದ್ದೇವೆ. ಸುಮಾರು 450 ಎಕರೆ ಮಾತ್ರ ಹೆಡ್ ವರ್ಕ್ಸ್ ಹತ್ತಿರ ಮುಳುಗಡೆಯಾಗುತ್ತದೆ. ಅದು ಯಾವುದು ಎಂದರೆ, ಹಿಂದೆ ನಾವು ತುಂಗಾ ಅಣೆಕಟ್ಟಿಗೆ ಗೇಟ್ ಇಟ್ಟು ಆ ಲೆವೆಲ್ ಅನ್ನು ಮೈನ್‌ಟೈನ್ ಮಾಡಿದ್ದೆವು. ಅದರ ಮೇಲೆ ಗೇಟ್ ಕೂಡಿಸಬೇಕು ಎಂದು ಆಲೋಚನೆ ಮಾಡಿದ್ದೆವು. ಇದಾದ ಮೇಲೆ ನಾವು ಮತ್ತು ನಮ್ಮ ಟೆಕ್ನಿಕಲ್ ಕಮಿಟಿಯವರೆಲ್ಲಾ ವೀಕ್ಷಣೆ ಮಾಡಿ ನೋಡಿದ ಮೇಲೆ, ಆ ಗೇಟ್ ಇಡಬೇಕಾದರೆ 2 ವರ್ಷ ಅಥವಾ 3 ವರ್ಷ ಬೇಕು. ರೈತರ ಬೆಳೆ ಹೋಗುತ್ತದೆ. ಈಗಾಗಲೇ ಅಲ್ಲಿ ಏನು ಅಚ್ಚುಕಟ್ಟು ಇದೆ, ಆ ಪ್ರದೇಶದ ರೈತರು ಬೆಳೆ ಹೋಗುವುದಕ್ಕೆ ಒಪ್ಪುವುದಿಲ್ಲ. ಅವರಿಗೆ ತೊಂದರೆಯಾಗುತ್ತದೆ ಎನ್ನುವುದು ಒಂದು. ಎರಡನೆಯದು ಎಂದರೆ, ಅದು 79 ವರ್ಷಗಳಷ್ಟು ಬಹಳ ಹಳೆಯ ಡ್ಯಾಂ. ಅದರ ಮೇಲೆ ಗೇಟ್ ನಿಲ್ಲಿಸಿದರೆ ಅದು ಭದ್ರವಾಗಿ ನಿಲ್ಲುತ್ತದೆ ಎಂದು ಅನ್ನಿಸಲಿಲ್ಲ. ಈ 2-3 ಕಾರಣಗಳನ್ನು ಆಲೋಚನೆ ಮಾಡಿ, ಗಾಜನೂರು ಡ್ಯಾಂ ಮಾಡುವಾಗ ಯಾವ ಲೆವೆಲ್‌ಅನ್ನು ತೆಗೆದುಕೊಂಡಿದ್ದೆವು, ಸಗೀರ್‌ರವರೇ ಅದೇ ಲೆವೆಲ್‌ನಲ್ಲಿ, ನಾನು ಕಡತ ತರಿಸಿ ನೋಡಿದೆ, ಆ ಲೆವೆಲ್ ಎಷ್ಟು ಇದೆ ಎನ್ನುವಂಥ ಮಾಹಿತಿ ನನ್ನ ಹತ್ತಿರ ಇದೆ. ಅದನ್ನು ನಾನು ನಿಮಗೆ ಕೊಡುತ್ತೇನೆ. ಅದೇ ಲೆವೆಲ್ ಅನ್ನು ಮೈನ್‌ಟೈನ್ ಮಾಡಿ, ಸುಮಾರು 100 ಅಡಿ ಕೆಳಗಡೆ, ಈಗ ಇರತಕ್ಕಂಥ ಡ್ಯಾಂನಿಂದ 100 ಅಡಿ ಕೆಳಗಡೆಗೆ ನಮ್ಮ ಸ್ನೇಹಿತರು ಫ್ಲಾಗ್ ಹಾಕಿ ನೋಡಿದ್ದಾರೆ. ಅಲ್ಲಿ 80 ಕೋಟಿ ರೂಪಾಯಿಯ ಒಂದು ಹೊಸ ಯೋಜನೆಯನ್ನು ಪ್ಯಾರಲಲ್ ಡ್ಯಾಂ ಕಟ್ಟುವುದಕ್ಕೆ ಟೆಕ್ನಿಕಲ್ ಕಮಿಟಿಯವರು ಮತ್ತು ಎಲ್ಲರೂ ಸಹ ಆಲೋಚನೆ ಮಾಡಿ, ಅದರ ಮೇಲೆ ಕ್ರಸ್ಟ್ ಗೇಟ್ ಕೂಡಿಸುವುದಕ್ಕಿಂತ ಪ್ಯಾರಲಲ್ ಡ್ಯಾಂ ಮಾಡುವುದು ಸರಿ ಎಂದು ಸುಮಾರು ಕೋಟಿ ರೂಪಾಯಿ ಹಾಕಿ ಯೋಜನೆಯನ್ನು ಮಾಡಬೇಕು, ಸುಮಾರು 100

ಅಡಿ ಕೆಳಗೆ ಮಾಡಬೇಕು ಎಂದು ಹೇಳಿದ್ದಾರೆ. ಆದರೆ ಒಂದನ್ನು ಮಾತ್ರ ಹೇಳುತ್ತೇನೆ. ಗಾಜನೂರು ಡ್ಯಾಂನ 1930 ಅಡಿ ಫುಲ್ ರಿಸರ್ವಾಯರ್ ಲೆವೆಲ್ ಏನಿದೆ, ಇದು ಆ ಲೆವೆಲ್ ಅನ್ನು ಮೈನ್‌ಟೈನ್ ಮಾಡುತ್ತದೆ. ಕೆಳಗಡೆ ಡ್ಯಾಂ ಬರುತ್ತದೆ. ಎಕ್ಸ್‌ಟ್ರಾ ಸಬ್‌ಮರ್ಷನ್ ಇಲ್ಲ. 450 ಎಕರೆ ಮಾತ್ರ ಮುಳುಗಡೆಯಾಗುತ್ತದೆ ಎಂದು ಆವತ್ತು ಏನು ಮಾಡಿದ್ದರೋ, ಆ ಎರಡು ರೋಡುಗಳು ಮತ್ತು ಅದನ್ನು ಬಿಟ್ಟರೆ ಬೇರೆ ಯಾವುದೂ ಸಹ ಆಗುವುದಿಲ್ಲ. ತೀರ್ಥಹಳ್ಳಿ ನಿಮ್ಮ ಭಾಗಕ್ಕೆ ಬರುತ್ತದೆ ಎಂದು ಕಾಣುತ್ತದೆ.

ಶ್ರೀ ಅರಗ ಜ್ಞಾನೇಂದ್ರ: ನಿಮ್ಮ ಅಧಿಕಾರಿಗಳು ತುಂಬಾ ತಪ್ಪು ಮಾಹಿತಿ ಕೊಟ್ಟಿದ್ದಾರೆ. 450 ಎಕರೆ ಅಲ್ಲ. ನಾನು ನಿಮ್ಮ ಗಮನಕ್ಕೆ ತಂದಿದ್ದೆ, ಮೊನ್ನೆ ದಿನ ಏನು ಫ್ಲಡ್ ಲೆವೆಲ್ ಬಂದಿತ್ತು, ಆ ಫ್ಲಡ್ ಲೆವೆಲ್ಲೇ ನಿಮ್ಮ ಎಫ್.ಆರ್.ಲೆವೆಲ್ ಆದರೆ ತೂದೂರು, ಮಂದಗದ್ದೆ ಎಲ್ಲಾ ರೋಡುಗಳು ಮುಳುಗುತ್ತವೆ ಮತ್ತು ಊರುಗಳು ಮುಳುಗುತ್ತವೆ. ಸಾಗುವಳಿ ಮಾಡತಕ್ಕಂಥ ಜಮೀನು ಮುಳುಗುತ್ತದೆ. ದಯಮಾಡಿ ಇನ್ನೊಮ್ಮೆ ಪರಿಶೀಲನೆ ಮಾಡಲು ತಾವು ಆದೇಶ ಕೊಡಬೇಕಾಗುತ್ತದೆ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೇ, ಜ್ಞಾನೇಂದ್ರರವರು ತಪ್ಪು ಮಾಹಿತಿ ಎಂದು ಹೇಳಿದರು. ಮಾಹಿತಿ ತಪ್ಪು ಅಲ್ಲ. ಅಲ್ಲಿ ಯಾರು ರೈತರಿದ್ದಾರೆ, ಅವರು ತಪ್ಪು ಮಾಡಿದ್ದಾರೆ. ನಾನು ಅದನ್ನು ಬಿಡಿಸಿ ಹೇಳಲು ಹೋಗುವುದಿಲ್ಲ. ಕಾರಣವೇನೆಂದರೆ, 50-60 ವರ್ಷಗಳ ಹಿಂದೆ 1930 ಅಡಿ ಎತ್ತರವನ್ನು ಮಾಡಿಕೊಂಡು ಗಾಜನೂರು ಡ್ಯಾಂ ಅನ್ನು ಕಟ್ಟಿದಾಗ ಎಷ್ಟು ಎಕರೆ ಜಮೀನು ಅಕ್ವೈರ್ ಆಗಿತ್ತೋ, ಅಕ್ವೈರ್‌ಆಗಿ ಎಲ್ಲಾ ಪೊಸೆಷನ್ ತೆಗೆದುಕೊಂಡಿದ್ದರೋ, ಅಷ್ಟು ಎತ್ತರಕ್ಕೆ ನೀರು ಬರಲಿಲ್ಲ, ಎಫ್.ಆರ್. ಮೈನ್‌ಟೈನ್ ಮಾಡಲಿಲ್ಲ, ಗೇಟ್ ಹಾಕಲಿಲ್ಲ, ಕೇವಲ ಹನ್ನೊಂದೂವರೆ ಟಿ.ಎಂ.ಸಿ. ಇತ್ತು, 10 ಸಾವಿರ ಎಕರೆ ಜಮೀನು ಇತ್ತು, ಆ ಡ್ಯಾಂ ಅನ್ನು ಅಭಿವೃದ್ಧಿ ಮಾಡಲಿಲ್ಲ, ಹಾಗೆ ಬಿಟ್ಟುಕೊಂಡರು. ಯಾವಾಗ ಅಕ್ವೈರ್ ಆಗಿದ್ದಂಥ ಜಮೀನನ್ನು ನೀರಾವರಿ ಇಲಾಖೆಯವರು ಉಪಯೋಗಿಸಿಕೊಳ್ಳಲಿಲ್ಲವೋ ಆಗ ರೈತರು ಅದನ್ನು ಅನ್‌ಆಥರೈಸ್ಡ್ ಆಗಿ ಆಕ್ಯುಪೈ ಮಾಡಿಕೊಂಡಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ: ನಿಮ್ಮ ಕಂದಾಯ ಇಲಾಖೆಯಿಂದ ರೀಗ್ರ್ಯಾಂಟ್ ಆಗಿದೆ.

ಶ್ರೀ ಕೆ.ಎನ್.ನಾಗೇಗೌಡ: ರೀಗ್ರ್ಯಾಂಟ್ ಆಗಿದೆ. ಅದನ್ನೂ ನೋಡಿದ್ದೇನೆ. ಅದೂ ಸರಿ. ಆದ್ದರಿಂದ, ಈ ಎರಡೂ ಅಂಶಗಳೂ ಸರಿ ಇರುವುದರಿಂದ ನಾನು ಮಧ್ಯಾಹ್ನವೇ ಅಧಿಕಾರಿಗಳಿಗೆ ಹೇಳಿದ್ದೇನೆ, ಎಷ್ಟು ರೀಗ್ರ್ಯಾಂಟ್ ಆಗಿದೆ, ಎಷ್ಟು ಅನ್‌ಆಥರೈಸ್ಡ್ ಆಗಿದೆ? ಒರಿಜಿನಲ್ ಅಕ್ವೈರ್ ಆಗಿದ್ದು ಎಷ್ಟು? ಈಗ ಎಷ್ಟು ರಿಕ್ವೈರ್‌ಮೆಂಟ್ ಇದೆ? ಇನ್ನು ಉಳಿದುಕೊಂಡಿರತಕ್ಕಂಥ ಸಬ್‌ಮರ್ಷನ್ ಎಷ್ಟು, ಎನ್ನತಕ್ಕಂಥಾದನ್ನೆಲ್ಲಾ ವಿವರವಾಗಿ ಇನ್‌ವೆಸ್ಟಿಗೇಷನ್ ಮಾಡಿಸಿ, ಒಂದು ಹೆಜ್ಜೆ ಮುಂದೆ ಹೋಗಿ ಆ ರೈತರಿಗೆ ಪರಿಹಾರ

ಕೊಡುತ್ತೇವೆ. ನಿಮ್ಮ ರಸ್ತೆಯಾಗಲೀ, ರೈತರ ಪರಿಹಾರವಾಗಲೀ, ಅದರಲ್ಲಿ ಎರಡನೇ ಮಾತಿಲ್ಲ ಅದಕ್ಕೆ ನಾನು ವಿಶೇಷ ಗಮನ ಹರಿಸಿ, ಬೇಕಾದರೆ ತುಂಗಾ ಮೇಲ್ದಂಡೆಯಲ್ಲಿರುವ ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿ, ವಿವರಗಳನ್ನು ತರಿಸಿಕೊಂಡು ಆ ರೈತರಿಗೆ ಅನ್ಯಾಯವಾಗದ ರೀತಿಯಲ್ಲಿ ಮಾಡುತ್ತೇವೆ. ಅವರು ಇದನ್ನು ಬಿಟ್ಟುಕೊಡಬೇಕಾಗುತ್ತಿದೆ. ಇಲ್ಲದಿದ್ದರೆ ನಾವು ಅವರಿಗೆ ಪರಿಹಾರ ಕೊಡಲು ತಯಾರಾಗಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ. ಆ ಲೆವೆಲ್‌ಅನ್ನು ಮೈನ್‌ಟೈನ್ ಮಾಡಲು ನಾವು ಈಗಾಗಲೇ ಯೋಚನೆ ಮಾಡಿದ್ದೇವೆ. ಮಂಜುನಾಥ್ ಕುನ್ನೂರ್‌ರವರು ಹೇಳಿದಂತೆ, ಈಗ ಆಂಧ್ರದಿಂದ ಯಾವ ತಕರಾರೂ ಇಲ್ಲ. ನಮಗೆ ಸಿ.ಡಬ್ಲ್ಯು.ಸಿ.ಯಿಂದ 2-3 ಕ್ಲಿಯರೆನ್ಸ್ ಕ್ಲಿಯರ್ ಆಗಿದೆ. ಒಂದನೇ ಕ್ಲಿಯರೆನ್ಸ್ ಎಂದರೆ ಇಂಟರ್ ಸ್ಟೇಟ್ ಮ್ಯಾಟರ್ಸ್ ಅನ್ನು ಸೆಂಟರ್ ವಾಟರ್ ಕಮೀಷನ್‌ರವರು ಕ್ಲಿಯರ್ ಮಾಡಿದ್ದಾರೆ. ಎರಡನೇ ಕ್ಲಿಯರೆನ್ಸ್ ಎಂದರೆ ಹೈಡ್ರಾಲಜಿ. ಅದು ಬಹಳ ಮುಖ್ಯವಾದ ಕ್ಲಿಯರೆನ್ಸ್. ಹೈಡ್ರಾಲಜಿ ಕ್ಲಿಯರೆನ್ಸ್ ಎಂದು ಹೇಳಿದರೆ ಏನು ಎಂದರೆ, ಆಂಧ್ರದವರು, ನೀವು ತುಂಗಾ ಮೇಲ್ದಂಡೆಯನ್ನು ಮಾಡಿದರೆ, ಆ ತುಂಗಾ ನದಿಯಿಂದ ಬರತಕ್ಕಂಥ ಫ್ಲೋ ಸ್ಟ್ರಕ್ಚರ್ ಎಫೆಕ್ಟ್ ಆಗಿ, ನಮ್ಮ ತುಂಗಭದ್ರಾಗೆ ಎಫೆಕ್ಟ್ ಆಗುತ್ತದೆ. ಅಲ್ಲಿ ಇರುವ ನಮ್ಮ ಮೂರನೇ ಒಂದು ಭಾಗ ಕಡಿಮೆಯಾಗುತ್ತದೆ ಎನ್ನುವುದು ಅವರ ವಾದ. ಅದು ಎಲ್ಲಾ ಕೋರ್ಟಿನಲ್ಲಿ ಹೋಗಿದೆ. ಮುಖ್ಯವಾಗಿ ಸುಪ್ರೀಂ ಕೋರ್ಟಿನಲ್ಲಿ. ಅದರ ಬಗ್ಗೆ ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ. ಒಂದು ಮಾತು ಹೇಳುವುದಾದರೆ ಸೆಂಟರ್ ವಾಟರ್ ಕಮೀಷನ್ ಇಂಟರ್ ಸ್ಟೇಟ್ ಮ್ಯಾಟರ್-ಕ್ಲಿಯರ್ ಮಾಡಿದೆ, ಹೈಡ್ರಾಲಜಿ, ಕ್ಲಿಯರ್ ಮಾಡಿದ್ದಾರೆ, ಕ್ರಾಫ್ ಪ್ಯಾಟರ್ನ್ ಕ್ಲಿಯರ್ ಮಾಡಿದ್ದಾರೆ, ಬೇರೆ ತಾಂತ್ರಿಕ ಕಾರಣಗಳನ್ನು ಕ್ಲಿಯರ್ ಮಾಡಿದ್ದಾರೆ. ಡ್ಯಾಂ ಬಗ್ಗೆ ಡೀಟೇಲ್ ಪ್ರಾಜೆಕ್ಟ್ ರಿಪೋರ್ಟನ್ನು ಕಳುಹಿಸಿ ಕೊಟ್ಟಿದ್ದೇವೆ. ಬಚಾವತ್ ತೀರ್ಪಿನಂತೆ, 12.24 ಟಿ.ಎಂ.ಸಿ. ನೀರನ್ನು ಇಟ್ಟುಕೊಂಡು, ಸೆಂಟರ್ ವಾಟರ್ ಕಮೀಷನ್‌ರವರ ಈ 3-4 ಅಂಶಗಳನ್ನು ಇಟ್ಟುಕೊಂಡು ನಾವು ಸರಿಯಾಗಿ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಯಾವುದೇ ಆದಂಥ ವಾಯ್‌ಲೇಷನ್ ಬರುವುದಿಲ್ಲ, ಯಾವುದೂ ಬರುವುದಿಲ್ಲ. ಇದು ಯಾರ ನೀರೂ ಅಲ್ಲ. ಇದು ಕರ್ನಾಟಕದ ಪಾಲು, ನಮಗೆ ದೊರೆತಿರತಕ್ಕಂಥ ಪಾಲಿನಲ್ಲಿ ಮಾಡಿದ್ದೇವೆ. ದುಡ್ಡಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕೊನೆಯದಾಗಿ ನಾನು ಹೇಳುವುದು ದುಡ್ಡಿನ ವಿಚಾರ. ನಿಜ, ಈ ಮೂರು ವರ್ಷದಿಂದಲೇ ನಾವು ಹೆಚ್ಚು ಹಣ ಕೊಟ್ಟಿರುವುದು. ಅದಕ್ಕೆ ಅವರು ಒಂದು ಒಳ್ಳೆಯ ಮಾತನ್ನು ಹೇಳಿದರು. ಈ ವರ್ಷ 10 ಕೋಟಿ ಹೋದವರ್ಷ 8 ಕೋಟಿ, ಮೊನ್ನೆ 6 ಕೋಟಿ, ಹೀಗೆ ಮೂರು ವರ್ಷದಲ್ಲಿ ಬಹಳಷ್ಟು ಹಣ ಕೊಟ್ಟು ಸ್ವಲ್ಪ ಚಾಲನೆ ಮಾಡಿದ್ದೇವೆ. 670 ಕೋಟಿಗೆ ಸಾಕಾಗುವುದಿಲ್ಲ. ಮೊನ್ನೆ ನಮ್ಮ ಮುಖ್ಯ ಮಂತ್ರಿಗಳು ಮತ್ತು ಆ ಭಾಗದ ನಾಯಕರುಗಳು ಮತ್ತು ತುಂಗಾ ಮೇಲ್ದಂಡೆ ಹೋರಾಟ ಸಮಿತಿಯವರು ಬಣಕಾರ್‌ರವರ ತಂದೆಯವರು, ನಮ್ಮ ಹಳೆಯ ನಾಯಕರೆಲ್ಲಾ ಬಂದಿದ್ದರು. ಬಂದು ಕುಳಿತು ಬಹಳ ಸುದೀರ್ಘವಾಗಿ ಚರ್ಚೆ

ಮಾಡಿದ್ದಾರೆ. ನಮ್ಮ ಮುಖ್ಯಮಂತ್ರಿಗಳು, ಹಣಕಾಸಿನ ಮಂತ್ರಿಗಳಾದಂಥ ಉಪ ಮುಖ್ಯಮಂತ್ರಿಗಳು ಮತ್ತು ನಾನು ಮೂವರೂ ಜನರೂ ಕುಳಿತು ಚರ್ಚೆ ಮಾಡಿ ಒಂದು ಉನ್ನತ ಸಮಿತಿಯನ್ನು ರಚನೆ ಮಾಡಿದ್ದೇವೆ. ಅಡಿಷನಲ್ ಚೀಫ್ ಸೆಕ್ರೆಟರಿಯವರು ಅಧ್ಯಕ್ಷರಾಗಿರುತ್ತಾರೆ. ಫೈನಾನ್ಸ್ ಸೆಕ್ರೆಟರಿ ಇರಿಗೇಷನ್ ಸೆಕ್ರೆಟರಿ, ಫಾರೆಸ್ಟ್ ಸೆಕ್ರೆಟರಿ, ಎನ್‌ವಿರಾನ್‌ಮೆಂಟ್ ಸೆಕ್ರೆಟರಿ ಎಲ್ಲರೂ ಸದಸ್ಯರಾಗಿದ್ದಾರೆ. ಫಾರೆಸ್ಟ್ ಲ್ಯಾಂಡ್‌ನ ಕ್ಲಿಯರೆನ್ಸ್ ಬಗ್ಗೆ ಡಿಸ್ಪ್ಯೂಟ್ ಇತ್ತು. ಇವೆಲ್ಲವನ್ನೂ ಮಾಡುವುದಕ್ಕೆ ಒಂದು ಸಮಿತಿಯನ್ನು ರಚನೆ ಮಾಡಿ ಯಾವ ರೀತಿ ರಿಸೋರ್ಸಸನ್ನು ಮೊಬಲೈಸ್ ಮಾಡುವುದು ಎಂಬುದನ್ನು ತೀರ್ಮಾನಿಸಲಾಗುವುದು ಒಂದು, ವರ್ಲ್ಡ್ ಬ್ಯಾಂಕ್ ಅನ್ನು ಅಪ್ರೋಚ್ ಮಾಡಬೇಕೇ? ಎರಡು, ರೈತರಿಂದ ಬಾಂಡ್ ಕಲೆಕ್ಟ್ ಮಾಡಬೇಕೇ? ಮೂರು, ಇಂಟರ್‌ನಲ್ ಲೋನ್ ತರಬೇಕೆ? ಈ ಮೂರರ ಬಗ್ಗೆ ಚರ್ಚಿಸಿ, ರಿಸೋರ್ಸಸ್‌ಅನ್ನು ಮೊಬಲೈಸ್ ಮಾಡಿ 200 ವರ್ಷದೊಳಗೆ 12.24 ಟಿ.ಎಂ.ಸಿ ನೀರನ್ನು ಉಪಯೋಗಿಸಿಕೊಂಡು ತುಂಗಾ ಮೇಲ್ದಂಡೆ ಯೋಜನೆಯನ್ನು ಸಂಪೂರ್ಣ ಮಾಡುವುದಕ್ಕೆ ಏನು ಮಾಡಬೇಕು ಎನ್ನುವುದಕ್ಕೆ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಹೋರಾಟ ಸಮಿತಿಯವರು ಬಂದಿದ್ದರು. ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ಆಗಿದೆ. ಆ ಸಮಿತಿಯೂ ಸಹ ಇವತ್ತು ಅಥವಾ ನಾಳೆಯಲ್ಲಿ ಒಂದು ಸಭೆ ಸೇರುವುದಕ್ಕೆ ನಾನು ಈಗಾಗಲೇ ಆದೇಶ ಕೊಟ್ಟಿದ್ದೇನೆ. ಅವರು ಬಂದ ತಕ್ಷಣ ಯಾವ ರೀತಿ ರಿಸೋರ್ಸಸ್ ಅನ್ನು ಮೊಬಲೈಸ್ ಮಾಡಬೇಕು ಎಂದು ಹೇಳಿ, ಆ ರಿಸೋರ್ಸಸ್ ಅನ್ನು ಮೊಬಲೈಸ್ ಮಾಡಿಕೊಂಡು, ತುಂಗಾ ಮೇಲ್ದಂಡೆ ಯೋಜನೆ ಈ ವರ್ಷಗಳಲ್ಲಿ ಅತ್ಯಂತ ಪ್ರಾಮುಖ್ಯವಾದ ಯೋಜನೆ ಎಂದು ಭಾವಿಸಿಕೊಂಡು, ಆ ಭಾಗದ ಜನರಿಗೆ 2000 ವರ್ಷಕ್ಕೆ ನೀರು ಕೊಡುವುದಕ್ಕೆ ಆ ಯೋಜನೆಯನ್ನು ಕಾಗೋಡು ತಿಮ್ಮಪ್ಪನವರ ಆಶೀರ್ವಾದದಿಂದ ಮುಗಿಸುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಸುಮಾರು 28 ಟಿ.ಎಂ.ಸಿ.ನೀರನ್ನು ಶೇಖರಣೆ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಏನು 8 ಟಿ.ಎಂ.ಸಿ. ಗೋದಾವರಿ ಡೈವರ್ಶನ್‌ದಿಂದ ಬರತಕ್ಕಂಥದ್ದು, 20 ಟಿ.ಎಂ.ಸಿ ನೀರು, ಸೇವಿಂಗ್ಸ್‌ದಿಂದ ಅದು ತುಂಗಾದಿಂದ ಇರಬಹುದು, ಭದ್ರಾದಿಂದ ಇರಬಹುದು, ಆ ನೀರಿನಿಂದ ಒಟ್ಟು 28 ಟಿ.ಎಂ.ಸಿ. ನೀರನ್ನು ಮಾಡಿ ತುಂಗಾ ತಿರುವು ಯೋಜನೆಯನ್ನು ಮಾಡುತ್ತೀರಿ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಆದರೆ ಪ್ರಾಮುಖ್ಯವಾಗಿ ನೀವು ಭದ್ರಾ ಡ್ಯಾಮನ್ನು ತುಂಗ, ಭದ್ರಾ ಡ್ಯಾಂ ಹತ್ತಿರ 24 ಟಿ.ಎಂ.ಸಿ.ದಷ್ಟು ಸಿಲ್ಪಫ್ ಆಗಿ ಆಂಧ್ರಪ್ರದೇಶಕ್ಕೆ ಹೋಗತಕ್ಕಂಥ ಹೆಚ್ಚು ನೀರನ್ನು ಇಲ್ಲಿ ಡೈವರ್ಟ್ ಮಾಡುವುದಕ್ಕೆ ಸಾಧ್ಯವಿಲ್ಲವೇ ಎನ್ನತಕ್ಕಂಥದ್ದು ಒಂದು ಪ್ರಶ್ನೆ. ಇನ್ನೊಂದು ತಮ್ಮ ಸ್ಕೀಮ್ (ಎ)ನಲ್ಲಿ ಇರತಕ್ಕಂಥ 729

ಟಿ.ಎಂ.ಸಿ. ಕೋಟ ಎಲ್ಲಿದೆ? ಕರ್ನಾಟಕ ಸರ್ಕಾರದ ಪಾಲಿಗೆ ಬರತಕ್ಕಂಥದ್ದನ್ನು ಕಂಪ್ಲೀಟಾಗಿ ಯುಟಿಲೈಸ್ ಮಾಡುವುದಕ್ಕೆ ನೀವು ಅನೇಕ ರೀತಿಯಾದ ಹಂತದಲ್ಲಿ ಯೋಜನೆಗಳನ್ನು ಹಾಕಿಕೊಂಡಿದ್ದೀರಿ, ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದೀರಿ. ಗೋದಾವರಿ ಡೈವರ್ಶನ್‌ನಲ್ಲಿ ಕೂಡ ಆಲೋಕೇಷನ್ ಮಾಡಿದ್ದೀರಿ. ಆದರೆ ಸ್ಕೀಮ್ ಬಿ, ನಿಮ್ಮ ಬಚಾವತ್ ತೀರ್ಪಿನ ಪ್ರಕಾರ ನೀವು ಎರಡು ಸಾವಿರ ಇಸ್ವಿಯವರೆಗೆ ಕಾಯತಕ್ಕಂಥ ಅವಶ್ಯಕತೆ ಇಲ್ಲ. ನಿಮ್ಮ ಪಾಲು ಏನು ಎನ್ನತಕ್ಕಂಥದ್ದು ಈಗಾಗಲೇ ನಿಗದಿಯಾಗಿರುವುದರಿಂದ ನಿಮಗೆ ಶೇಕಡಾ 50ರಷ್ಟು ಡಿಪೆಂಡೆಬಿಲಿಟಿ ಪ್ರಕಾರ ನಿಮಗೆ 181ರಿಂದ 182 ಟಿ.ಎಂ.ಸಿ. ನೀರು ಬರತಕ್ಕಂಥದ್ದರ ಬಗ್ಗೆ ನಿಮ್ಮ ಇಲಾಖೆಯಲ್ಲಿ ಮಾಹಿತಿ ಇದೆ. ಇವೊತ್ತು ಸ್ಕೀಮ್ 'ಬಿ'ಯನ್ನು ಉಪಯೋಗಿಸಿಕೊಳ್ಳುವುದಕ್ಕೋಸ್ಕರ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎನ್ನುವಂಥದ್ದು, ಒಂದು ಕಡೆ ನೀರನ್ನು ಎಲ್ಲಿ ಬೇಕಾದರೂ ಕೊಡಿ, ಅದು ಎಲ್ಲಾದರೂ ಕೂಡ ಕರ್ನಾಟಕಕ್ಕೆ ಆಗುತ್ತದೆ. ಆದರೆ ನೀವು ಸ್ಕೀಮ 'ಬಿ'ನಲ್ಲಿ ಬರತಕ್ಕಂಥ ನೀರನ್ನು ನೀವು ಉಪಯೋಗ ಮಾಡಿಕೊಳ್ಳದೇ ಇದ್ದರೆ ದೊಡ್ಡ ಅನ್ಯಾಯವಾಗುತ್ತದೆ, ನೀವು ಇಲ್ಲಿಯವರೆಗೆ ಏತಕ್ಕೆ ಸುಮ್ಮನೆ ಕೂತಿದ್ದೀರಿ? ಕೇಂದ್ರ ಸರ್ಕಾರಕ್ಕೆ ಎಷ್ಟು ಸಾರಿ ಮನವಿಯನ್ನು ಕೊಟ್ಟಿದ್ದೀರಿ? ಯಾವ ರೀತಿಯಾದಂಥ ಪ್ರಯತ್ನವನ್ನು ಮಾಡಿದ್ದೀರಿ? ಆದಕಾರಣ ನೀವು ಸ್ಕೀಮ್ 'ಬಿ'ಯ ಬಗ್ಗೆ ಏನು ಎಂಬುದರ ಬಗ್ಗೆ ದಯಮಾಡಿ ಉತ್ತರವನ್ನು ಕೊಡಬೇಕು. ಇನ್ನು ಕೊನೆಯದಾಗಿ ಕೇಳತಕ್ಕಂಥದ್ದು, ಸ್ಕೀಮ್ 'ಬಿ'ನಲ್ಲಿ ಬರತಕ್ಕಂಥ ನೀರಿನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಇಲ್ಲಿಯವರೆಗೆ ಆಲೋಕೇಷನ್ ಆಗಿಲ್ಲ, ನಿಮ್ಮ ಪಾಲು ಏನು ಎನ್ನತಕ್ಕಂಥದ್ದು ಗೊತ್ತಿಲ್ಲದೇ ಇರುವುದರಿಂದ ಅಲೋಕೇಷನ್ ಆಗಿಲ್ಲ, ದಯಮಾಡಿ ಆ ಸಂದರ್ಭದಲ್ಲಿ ಅಪ್ಪರ್ ಭದ್ರಾಕ್ಕೆ ಎಂದು ಹೇಳಿ ಯೋಜನೆಗೆ ಕನಿಷ್ಟ 70-80 ಟಿ.ಎಂ.ಸಿ.ನೀರು ಕೊಡತಕ್ಕಂಥ ಆಶ್ವಾಸನೆಯನ್ನು ಕೊಡುತ್ತೀರಾ? ಅದರ ಬಗ್ಗೆ ಪರಿಶೀಲನೆ ಮಾಡುತ್ತೀರಾ ಎಂಬುದನ್ನು ದಯಮಾಡಿ ತಿಳಿಸಿ.

ಶ್ರೀ ಮಂಜುನಾಥ ಸಿ.ಕುನ್ನೂರು: ಮಾನ್ಯ ಭಾರೀ ನೀರಾವರಿ ಸಚಿವರು ಉತ್ತರವನ್ನೇನೊ ನೀಡಿದ್ದಾರೆ. ಆದರೆ ಸದರಿ ಉತ್ತರದಿಂದ ನನಗೆ ಸಮಾಧಾನವಾಗಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಶ್ರೀ ಕಾಗೂಡು ತಿಮ್ಮಪ್ಪ: ಒಂದು ಸಾರಿ ಸಮಾಧಾನ ಆಗಿದೆ ಎಂದು ಹೇಳುತ್ತೀರಿ ಇನ್ನೊಂದ ಸಾರಿ ಸಮಾಧಾನವಾಗಿಲ್ಲ ಎಂದು ಹೇಳುತ್ತೀರಿ.

ಶ್ರೀ ಮಂಜುನಾಥ್ ಸಿ.ಕುನ್ನೂರ್: ಅವರು ಮಾಜಿ ಸಚಿವರಾದ ಕಾಗೋಡು ತಿಮ್ಮಪ್ಪನವರನ್ನು ಸಮಾಧಾನಪಡಿಸಿದ್ದಾರೆ. ಅವರು ಬಂದ ತಕ್ಷಣ ಅವರಿಗೆ ಹೆದರಿ ಉತ್ತರ ಕೊಟ್ಟಹಾಗೆ ಕಾಣಿಸುತ್ತದೆ. ಅವರು ಶಿವಮೊಗ್ಗ ಜಿಲ್ಲೆಯವರಿಗೆ ಹೆದರಿ ಈ ರೀತಿ

ಉತ್ತರವನ್ನು ಕೊಟ್ಟಿದ್ದಾರೆ. ಆದಕಾರಣ 25 ವರ್ಷದಿಂದ ಈ ಯೋಜನೆ ಇಲ್ಲಿಯವರೆಗೆ ಆಗಿರಲಿಕ್ಕಿಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈಗ ತಾವು ಹೇಳಿದ ಪ್ರಕಾರ 12.24 ಟಿ.ಎಂ.ಸಿ. ನೀರನ್ನು ತುಂಗಾ ಮೇಲ್ದಂಡೆ ಯೋಜನೆಗೆ ಕೃಷ್ಣಾ ಅವಾರ್ಡ್ ಪ್ರಕಾರ ಕೊಟ್ಟಿದ್ದೇವೆ ಎನ್ನತಕ್ಕಂಥದ್ದನ್ನು ಹೇಳಿದ್ದೀರಿ. ಅದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಆದರೆ ತಾವು ಕೃಷ್ಣಾ ವ್ಯಾಲಿ ಅಥಾರಿಟಿ ಮಾಡಿದ ನಂತರ ಸುಮಾರು 1050 ಟಿ.ಎಂ.ಸಿ. ನೀರಿನ ಶೇರಿನ ಪ್ರಕಾರ 37 ಟಿ.ಎಂ.ಸಿ. ನೀರು ಇಲ್ಲಿ ದೊರೆಯುತ್ತದೆ ಎನ್ನತಕ್ಕಂಥ ಒಂದು ಉತ್ತರವನ್ನು ದಿನಾಂಕ 15.3.83ರಂದು ಇದೇ ವಿಧಾನ ಸಭೆಯಲ್ಲಿ ನಮ್ಮ ಮಾಜಿ ಸಭಾಧ್ಯಕ್ಷರಾದಂಥ ಶ್ರೀಮಾನ್ ಬಿ.ಜಿ.ಬಣಕಾರ್‌ರವರ ಪ್ರಶ್ನೆಗೆ ಉತ್ತರವನ್ನೂ ಕೂಡ ಕೊಟ್ಟಿದ್ದಾರೆ. ಕಾರಣ ನಮಗೆ ಕೇವಲ 12.24 ಟಿ.ಎಂ.ಸಿ. ನೀರಲ್ಲ. ಇನ್ನೂ ಸುಮಾರು 34 ಟಿ.ಎಂ.ಸಿ. ತುಂಗಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ಜನರಿಗೆ ನ್ಯಾಯಯುತವಾಗಿ ಬರಬೇಕಾದಂಥ ನೀರನ್ನು ತಾವು ಒದಗಿಸಿಕೊಡಬೇಕೆಂದು ತಮ್ಮನ್ನು ಕೇಳುತ್ತಿದ್ದೇನೆ. ಜೊತೆಗೆ ಮಾಲತಿ ಜಲಾನಯನವನ್ನು ಮುಂದುವರೆಸತಕ್ಕಂಥ ಪ್ರಯತ್ನವನ್ನು ಬಿಡಬೇಕು ಎನ್ನತಕ್ಕಂಥ ಸಲಹೆಯನ್ನು ಕೂಡ ಕೊಟ್ಟಿದ್ದೀರಿ. ನನಗೂ ಕೂಡ ಆ ಭಾಗದ ರೈತರ ಬಗ್ಗೆಯಾಗಲೀ, ಜನರ ಬಗ್ಗೆಯಾಗಲೀ ಸಾಕಷ್ಟು ಅಭಿಮಾನ ಹಾಗೂ ಗೌರವ ಇದೆ. ಅವರೂ ಕೂಡ ರೈತರು ಆದರೆ ಒಬ್ಬರಿಗೆ ಅನುಕೂಲವನ್ನು ಮಾಡಿ ಮತ್ತೊಬ್ಬರಿಗೆ ತೊಂದರೆಯನ್ನು ಕೊಡಬೇಕು ಎನ್ನತಕ್ಕಂಥ ವಿಚಾರವಂತೂ ನಾನಂತೂ ಇಟ್ಟಿಲ್ಲ. ಆದರೆ ಇದರ ಬಗ್ಗೆ ತಾವು ಒಂದು ಇನ್‌ವೆಸ್ಟಿಗೇಷನ್‌ನ್ನು ಮಾಡಿಸತಕ್ಕಂಥದ್ದು ಯೋಗ್ಯ. ಅದರಲ್ಲಿ ಎಷ್ಟು ಮುಳುಗಡೆಯಾಗುತ್ತದೆ, ಎಷ್ಟು ಜನರಿಗೆ ಅದು ಉಪಯೋಗವಾಗುತ್ತದೆ, ಮುಳುಗಡೆಯಾಗತಕ್ಕಂಥವರಿಗೆ ಪರ್ಯಾಯವಾಗಿ ಯಾವ ವ್ಯವಸ್ಥೆಯನ್ನು ಸರ್ಕಾರದಿಂದ ಹೆಚ್ಚಿನ ಪ್ರಮಾಣದಲ್ಲಿ ಮಾಡಲಿಕ್ಕೆ ಅನುಕೂಲವಾಗುತ್ತದೆ ಎಂದು ಹೇಳತಕ್ಕಂಥದ್ದನ್ನು ತಾವು ಇವೊತ್ತು ಹೇಳಬೇಕಾಗಿದೆ. ಈಗ ಏನು ತಾವು ನಿಯೋಜಿತ ಮೇಲ್ದಂಡೆ ಯೋಜನೆಯನ್ನು ತಾವು ಮಾಡುತ್ತಿದ್ದೀರಿ ಇದರ ಸರ್ವೆ ಕಾರ್ಯ ಸಂಪೂರ್ಣವಾಗಿ ಮುಗಿದಿಲ್ಲ. ಇದಕ್ಕೆ ನಮ್ಮ ಹಾನಗಲ್ ಮತ್ತು ಹಾವೇರಿ ತಾಲ್ಲೂಕಿನವರೆಗೂ ಈ ಮಾಲತಿ ಜಲಾನಯನವನ್ನು ಬಿಟ್ಟು ಅಲ್ಲಿಯವರೆಗೆ ನೀರು ಬಂದಿದೆ. ಆದರೆ ಆ ಒಂದು ಸರ್ವೆಯನ್ನು ಸರಿಯಾಗಿ ತಜ್ಞರ ಕಡೆಯಿಂದ ಮನಃಪೂರ್ವಕವಾಗಿ ಮಾಡಿದರೆ ನನ್ನ ಮತಕ್ಷೇತ್ರ ಶಿಗ್ಗಾಂವ್ ಮತ್ತು ಸವಣೂರ್‌ಗೂ ಕೂಡ, ಈ ಮಾಲತೀ ಜಲಾಶಯವನ್ನು ಬಿಟ್ಟು ಕೂಡ ನೀರು ಬರತಕ್ಕಂಥ ಒಂದು ಸಾಧ್ಯತೆ ಇದೆ ಎನ್ನತಕ್ಕಂಥದ್ದನ್ನು ಆ ಭಾಗದಲ್ಲಿರತಕ್ಕಂಥ ಇಂಜಿನಿಯರ್ ಅಭಿಪ್ರಾಯವನ್ನು ಪಟ್ಟಿದ್ದಾರೆ. ಆದಕಾರಣ ತಾವು ಅದನ್ನು ರೀ ಸರ್ವೆ ಮಾಡಿಸಬೇಕು ಹಾಗೂ ನಮ್ಮ ರೈತರ ಪಾಲಿಗೆ ಬರತಕ್ಕಂಥ ನೀರನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಇನ್ನು ನಮ್ಮ ಸ್ನೇಹಿತರಾದ ಅರಗ ಜ್ಞಾನೇಂದ್ರರವರು ಬಹಳ ಆವೇಶದಿಂದ ಒಂದು

ಮಾತನ್ನು ಹೇಳಿದ್ದಾರೆ. ಆವೇಶ ಅಷ್ಟೇ ಅಲ್ಲ ನೀವು ಅಲ್ಲಿಯ ಜನರ ಶವಗಳ ಮೇಲೆ ನೀವು ಈ ಯೋಜನೆಯನ್ನು ಮಾಡಬೇಕಾಗುತ್ತದೆ ಎಂದು ಹೇಳಿದರು. ಆದರೆ ಇವೊತ್ತು ಉತ್ತರ ಕರ್ನಾಟಕದ ಜನತೆ ಅದರಲ್ಲೂ ಹಾವೇರಿ ಮತ್ತು ಧಾರವಾಡ ದಕ್ಷಿಣ ಭಾಗದ ಜನತೆ ಬಹಳ ಉಗ್ರವಾಗಿ ಉತ್ತರ ಕರ್ನಾಟಕದ ವೇದಿಕೆಯ ಮುಖಾಂತರ ಹೋರಾಟವನ್ನು ಪ್ರಾರಂಭ ಮಾಡಿದ್ದಾರೆ. ಕಾರಣ ಈ ಯೋಜನೆಯಾಗದಿದ್ದರೆ ಅಲ್ಲಿಯೂ ಕೂಡ ಎಷ್ಟು ಶವಗಳು ಆಗುತ್ತವೋ ಏನೋ ಎನ್ನುವಂಥದ್ದನ್ನು ತಾವು ಮುಂದಿನ ದಿವಸದಲ್ಲಿ ಸರ್ಕಾರದವರು ಕಾಣಬಹುದು. ಕಾರಣ ಇವೊತ್ತು ಶಾಂತಿ ಎನ್ನತಕ್ಕಂಥದ್ದು ಅತೀ ಅವಶ್ಯಕತೆ ಇರುವುದರಿಂದ ಇವೊತ್ತು ಅವರಾಗಲೀ ನಾವಾಗಲೀ ಆ ಭಾವೋದ್ವೇಗಕ್ಕೆ ಒಳಗಾಗದೇ ಇವೊತ್ತು ನಿಜ ಸ್ಥಿತಿ ಪ್ರಕಾರ ನಮಗೆ ಅಲ್ಲಿ ಏನು ಅನುಕೂಲತೆ ಆಗಬೇಕಾಗಿದೆ ಅದನ್ನು ತಾವು ಮಾಡಿಕೊಡಬೇಕೆಂದು ತಮ್ಮನ್ನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಭಾರೀ ನೀರಾವರಿ ಸಚಿವರು ಮಾಲತೀ ಯೋಜನೆಯನ್ನು ಕೈಬಿಟ್ಟಾಗಿದೆ ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಾನು ತೀರ್ಥಹಳ್ಳಿಯ ಜನರ ಪರವಾಗಿ ನಾನು ಅವರಿಗೆ ಅಭಿನಂದಿಸುತ್ತೇನೆ. ಇನ್ನೊಂದು ತುಂಗಾನದಿಯಲ್ಲಿ ಹರಿದು ಹೋಗತಕ್ಕಂಥ ನೀರು, ತುಂಗಾ ಡೈವರ್ಶನ್ ಯೋಜನೆಯನ್ನು ತಾವು ಮಾಡುವಾಗ ಒಂದು ಟಿ.ಎಂ.ಸಿ. ನೀರನ್ನು ತೀರ್ಥಹಳ್ಳಿ ಜನ ಬಳಸಿಕೊಳ್ಳಲಿಕ್ಕೆ ರಿಸರ್ವ್ ಆಗಿ ಇಡಬೇಕೆಂದು ನಾನು ಹೇಳಿದ್ದೆ. ದಯಮಾಡಿ ಅದನ್ನು ಇಡಬೇಕು. ಮತ್ತು ಅಧಿಕಾರಿಗಳಿಗೆ ಏತ ನೀರಾವರಿ ಯೋಜನೆಗಳಿಗೆ ನೀರನ್ನು ತುಂಗಾ ನದಿಯಿಂದ ತೆಗೆಯಲು ತೀರ್ಥಹಳ್ಳಿ ಜನಗಳಿಗೆ ಪರ್ಮಿಷನನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮಂದಗದ್ದೆಯಲ್ಲಿ ಮುಳುಗಡೆ ಆಗತಕ್ಕಂಥದ್ದರ ಬಗ್ಗೆ ತಾವು ಮಂತ್ರಿಗಳು ಏನು ಪ್ರಸ್ತಾಪ ಮಾಡಿದ್ದೀರಿ, ಹಿಂದೆ ಅಕ್ವೈರ್ ಆಗಿರತಕ್ಕಂಥದ್ದನ್ನು ಕೆಲವನ್ನು ರೀ ಗ್ರಾಂಟ್ ಮಾಡಿದ್ದಾರೆ ನೀವು ಅದರಲ್ಲಿ ನೀರು ನಿಲ್ಲಿಸಲಿಲ್ಲ. ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕಂಥದ್ದನ್ನು ರೀ ಗ್ರಾಂಟ್ ಮಾಡಿದ್ದಾರೆ. ರೆವೆನ್ಯೂ ಇಲಾಖೆಯವರು. ಉಳಿದಿರತಕ್ಕಂಥ ಜಮೀನಿನಲ್ಲಿ ಅದೇ ಭೂಮಾಲೀಕರು ಮತ್ತೆ ಒಂದು ಶತಮಾನದ, ಒಂದು ತಲೆಮಾರು ಅದೇ ಜಮೀನಿನಲ್ಲಿ ಬದುಕಿದ್ದಾರೆ, ತೆಂಗಿನ ತೋಟ ಇದೆ, ಅಡಿಕೆ ತೋಟ ಇದೆ ಜಮೀನು ಮಾಡಿ ಅದರಲ್ಲೇ ಬದುಕಿದ್ದಾರೆ. ಅವರಿಗೆ ಬೇರೆ ಯಾವುದೇ ಉದ್ಯೋಗ ಇಲ್ಲ. ಅಂತಹವರಿಗೆ ನೀವು ಏನು ಕಂಪೆನ್‌ಸೇಷನ್ ಕೊಡುತ್ತೀರಿ, ಹಿಂದೆ 50ನೇ ಇಸ್ವಿಯಲ್ಲಿ ಕಂಪನ್‌ಸೇಷನ್ ಕೊಟ್ಟಾಗಿದೆ ಈಗ ಏನೂ ಕೊಡುವುದಿಲ್ಲ ಎಂದು ಹೇಳಿದರೆ ತೊಂದರೆಯಾಗುತ್ತದೆ. ಅದರಲ್ಲೇ ಬದುಕಿರತಕ್ಕಂಥ ಜನಕ್ಕೆ ತಾವು ಏನನ್ನು ಕೊಡುತ್ತೀರಿ ಎನ್ನತಕ್ಕಂಥದ್ದನ್ನು ತಾವು ದಯಮಾಡಿ ಸ್ಪಷ್ಟಪಡಿಸಬೇಕು ಎನ್ನತಕ್ಕಂಥದ್ದನ್ನು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ಭಾರೀ

ನೀರಾವರಿ ಸಚಿವರು ತುಂಗಾ ಮೇಲ್ದಂಡೆ ಯೋಜನೆಯ ಪ್ರಶ್ನೆಗೆ ಉತ್ತರಿಸಿದ ಪ್ರಶ್ನೆಗೆ ಉತ್ತರ ಕೊಡುತ್ತಾ ಮಾಲತಿ ಡ್ಯಾಮ್‌ನ್ನು ಕೈಬಿಟ್ಟ ವಿಚಾರವನ್ನು ಹೇಳಿದರು. 1991ರಲ್ಲಿ ಬಂಗಾರಪ್ಪನವರ ನೇತ್ರತ್ವದ ಸರ್ಕಾರ ಈ ಮಾಲತಿ ಡ್ಯಾಮಿನ ಯೋಜನೆಯನ್ನು ಕೈಬಿಟ್ಟಿದೆ. ಈ ಹಿಂದೆ ಇಲ್ಲಿಯ ವಿಧಾನ ಸಭೆಯ ಸದಸ್ಯರಾದ ಶ್ರೀ ಪಟಮಕ್ಕಿ ರತ್ನಾಕರ್‌ರವರು ಈ ಒಂದು ಯೋಜನೆಯ ಮೇಲೆ ಮಾತನಾಡುವಾಗ ಅದಕ್ಕೆ ಉತ್ತರವಾಗಿ ಅಂದು ನೀರಾವರಿ ಸಚಿವರಾದ ಮಾನ್ಯ ದೇವೇಗೌಡರು ಒಂದು ಮಾತನ್ನು ಹೇಳಿದ್ದಾರೆ. ''ಮುಳುಗಡೆ ಬಗ್ಗೆ ಜನರು ಕ್ಷೀಣೀತರಾಗುವುದು ತರವಲ್ಲ. ಯಾವ ಪ್ರದೇಶ ಮುಳುಗಡೆ ವ್ಯಾಪ್ತಿಯಲ್ಲಿ ಬರುವುದೋ ಅದು ಮುಳುಗಡೆಯಾಗಲೇಬೇಕಾಗುತ್ತದೆ. ಅನಿವಾರ್ಯವಾಗಿ ಮುಳುಗಡೆಗೆ ಒಳಪಡುವ ಜನಗಳಿಗೆ ಪರ್ಯಾಯವಾದ ವ್ಯವಸ್ಥೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಿಸಿ ಕೊಡಬೇಕಾದುದು ಸರ್ಕಾರದ ಜವಾಬ್ದಾರಿ, ಹಾಗೆ ಬಿಡಲಿಕ್ಕೆ ಸಾಧ್ಯವಿಲ್ಲ, ಅವರು ಭೂಮಿಯನ್ನು ಕಳೆದುಕೊಳ್ಳುತ್ತಾರೆ, ಭೂಮಿಯನ್ನು ಕಳೆದುಕೊಳ್ಳುವಂಥ ರೈತರಿಗೆ ಸರಿಯಾದ ರೀತಿಯಲ್ಲಿ ಒಂದು ಔದಾರ್ಯವನ್ನು ಸರ್ಕಾರ ತೋರಿಸುತ್ತದೆ. ಅಂಥವರು ನೀರನ್ನು ಉಪಯೋಗ ಮಾಡಬೇಕು ಮಾಡುತ್ತಿದೆ'' ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಮೂಲತಃವಾಗಿ ಈ ಯೋಜನೆಯಲ್ಲಿ ಮಾಲತಿ ಡ್ಯಾಮನ್ನು ಅಳವಡಿಸಿದ್ದರು. ಈಗ ಮಾಲತಿ ಡ್ಯಾಮನ್ನು ಕೈಬಿಟ್ಟಿದ್ದರಿಂದ ಈ ಯೋಜನೆಯಲ್ಲಿ ಏನು ಬದಲಾವಣೆ ಆಗಿದೆ ಎಂದು ಇದುವರೆಗೂ ಸ್ಪಷ್ಟವಾಗಿ ಹೇಳಿಲ್ಲ. 34 ಟಿ.ಎಂ.ಸಿ. ನೀರಿನ ಸಂಗ್ರಹದ ಈ ಜಲಾಶಯ ಈ ಯೋಜನೆಯನ್ನು ಕೈ ಬಿಟ್ಟಮೇಲೆ ಏಳು ಲಕ್ಷ ಮೂವತ್ನಾಲ್ಕು ಸಾವಿರ ಎಕರೆ ನೀರಾವರಿಯಲ್ಲಿ ಏನಾದರೂ ಬದಲಾವಣೆ ಆಗಲೇಬೇಕಾಗುತ್ತದೆ. ಆ ಬದಲಾವಣೆಯನ್ನು ಏತಕ್ಕೆ ಅವರು ನೇರವಾಗಿ ಹೇಳುತ್ತಿಲ್ಲ. ಹಾಗೂ 450 ಹೆಕ್ಟೇರ್ ಜಮೀನು ಏನು ಮುಳುಗಡೆ ಆಗುತ್ತಿದೆ, ಇದು ಸುಮಾರು ನಾಲ್ಕೈದು ವರ್ಷದಿಂದ ಕೇಂದ್ರ ಸರ್ಕಾರಕ್ಕೆ ಹೋಗಿ ವಾಪಸ್ಸು ಬರುತ್ತಿದೆ. ಇದುವರೆಗೂ ಕೇಂದ್ರ ಸರ್ಕಾರದಿಂದ ಈ ಭೂಮಿಯನ್ನು ಪಡೆದುಕೊಳ್ಳಲಿಕ್ಕೆ ಸಾಕಷ್ಟು ಪ್ರಮಾಣದ ಪ್ರಯತ್ನ ಆಗಿಲ್ಲ.

3.40 ಪಿ.ಎಂ

ಉಪಾಧ್ಯಕ್ಷರು: ಸಗೀರ್ ಅಹಮದ್‌ರವರೇ, ತಾವು ಮಾತನಾಡಿ ಬೇಗ ಒಂದು ನಿಮಿಷದಲ್ಲಿ ಮುಗಿಸಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ಒಂದು ನಿಮಿಷ ಅಂದರೆ ಹೇಗೆ ಅಧ್ಯಕ್ಷರೇ, ಇದು ಬಹಳ ಮಹತ್ವವಾದ ವಿಚಾರ. ಒಂದು ನಿಮಿಷದಲ್ಲಿ ಪ್ರಾಣ ಕೂಡ ತೆಗೆದುಕೊಳ್ಳಲು ಆಗುವುದಿಲ್ಲ.

ಉಪಾಧ್ಯಕ್ಷರು: ಇದು ಅರ್ಧ ಗಂಟೆಗಳ ಕಾಲದ ಚರ್ಚೆ. ಕಥೆ ಹೇಳುತ್ತಾ

ಕುಳಿತುಕೊಂಡರೆ ಹೇಗಾಗುತ್ತದೆ? ನೀವು ನಿಯಮದ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಇದು ನಮ್ಮ ಭಾಗಕ್ಕೆ, ನಮ್ಮ ಜಿಲ್ಲೆಗೆ ಸಂಬಂಧಪಟ್ಟ ವಿಚಾರ.

ಉಪಾಧ್ಯಕ್ಷರು: ನಿಮ್ಮ ಭಾಗದ ವಿಚಾರವೇ ಇರಲಿ. ನಾನು ಇಲ್ಲವೆಂದು ಹೇಳುತ್ತಿಲ್ಲ. ಆದರೆ ಇಲ್ಲಿ ವೇಳೆಗೆ ಮಹತ್ವ ಕೊಟ್ಟು ಕೆಲಸ ಮಾಡಬೇಕಾಗುತ್ತದೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಚಿಕ್ಕಮಗಳೂರು): ಸನ್ಮಾನ್ಯ ಉಪಾಧ್ಯಕ್ಷರೆ, ವಿಚಾರ ಇರುವಂಥದ್ದು ಏನು ಎಂದರೆ ನಮ್ಮ ಜಿಲ್ಲೆಯಿಂದ ನೀರು ಬೇರೆ ಜಿಲ್ಲೆಗೆ ನೀರು ಒದಗಿಸುವುದರ ಬಗ್ಗೆ ಇದೆ. ಅದಕ್ಕೆ ನಮ್ಮದೇನೂ ಅಡ್ಡಿ ಆತಂಕ ಇಲ್ಲ. ಬಚಾವತ್ ಆಯೋಗದ ಪ್ರಕಾರ 729 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ನಮ್ಮದೇನೂ ವಿರೋಧ ಇಲ್ಲ. ಮಾನ್ಯ ಭಾರೀ ನೀರಾವರಿ ಸಚಿವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ತುಂಗಾ ಡೈವರ್ಶನ್ ಸ್ಕೀಮ್‌ನಲ್ಲಿ ತುಂಗಾ ಪರಿವರ್ತನ ಸಾಲಿಗಾಗಿ 12.24 ಟಿ.ಎಂ.ಸಿ. ನೀರನ್ನು ಇದರಲ್ಲಿ ಉಳಿದಿದೆ ಎನ್ನುವುದರ ಬಗ್ಗೆ ಅವರು ಸಂಪೂರ್ಣವಾಗಿ ಹೇಳಲಿಲ್ಲ. ಅಧಿಕಾರಿಗಳ ಮಾಹಿತಿ ಪ್ರಕಾರ ಹಾಗೂ ಭಾರೀ ನೀರಾವರಿ ಮಂತ್ರಿಗಳ ಪ್ರಕಾರ ಭದ್ರಾ ಮೇಲ್ದಂಡೆ ಯೋಜನೆಗಾಗಿ ತಯಾರಿಸಿದ್ದು a scheme for diverting about 12 TMC of water from Tunga Valley to Upper Bhadra Valley. ಇದು ಹೇಗೆ ಎಂದು ಅವರು ಸ್ವಲ್ಪ ವಿವರವಾಗಿ ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು: ತಾವು ದಯಮಾಡಿ ಕುಳಿತುಕೊಳ್ಳಿ ಸಚಿವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಒಂದು ಕಡೆ ಸರ್ಕಾರ ನಾವು ಅರಣ್ಯ ಉಳಿಸುತ್ತೇವೆ, ಪರಿಸರ ಕಾಪಾಡುವಂಥದ್ದು ಸರ್ಕಾರದ ಜವಾಬ್ದಾರಿ ಎಂದು ಹೇಳುತ್ತದೆ ಒಂದು ಕಡೆ ನಾವು ಅರಣ್ಯ ನಾಶವಾಗುತ್ತಿದೆ ಎಂದು ವಾದ ಮಾಡಿದರೆ ಹೇಗೆ? ಅವರು ಹೇಳುತ್ತಾರೆ ಕುಳಿತುಕೊಳ್ಳಿ ಎಂದು ಹೇಳಿದರೆ ನಾವು ಏನು ಕೇಳುವುದು? ಏಕೆಂದರೆ ಅವರು ಭದ್ರಾ ನಾಲೆಯಿಂದ ನೀರು ಡೈವರ್ಟ್ ಮಾಡದೆ 12.24 ಟಿ.ಎಂ.ಸಿ. ನೀರನ್ನು ತುಂಗಾ ಪ್ರಾಜೆಕ್ಟ್‌ಗೆ ಬರುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಾನು ಸರ್ಕಾರದವರಲ್ಲಿ ವಾದ ಮಾಡುತ್ತಿದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೇ, ಪ್ರಾರಂಭದಲ್ಲೇ ನಾನು ಅವರ ಕನ್‌ಫ್ಯೂಷನ್‌ನ್ನು ಕ್ಲಿಯರ್ ಮಾಡಿದ್ದೇನೆ. ತುಂಗಾ ಮೇಲ್ದಂಡೆಗೆ 12.24 ಟಿ.ಎಂ.ಸಿ. 79

ಟಿ.ಎಂ.ಸಿ.ಯೊಳಗೆ ಅಲೋಕೇಟ್ ಆಗಿದೆ ಎನ್ನತಕ್ಕಂಥದ್ದು ತುಂಗಾ ಮೇಲ್ದಂಡೆಯ ಒಂದು ಭಾಗ. ಈಗ ಯಾವುದು ಭದ್ರಾ ಮೇಲ್ದಂಡ ಯೋಜನೆ ಎಂದು ಕರೆಯುತ್ತಿದ್ದಾರೆ ಇದನ್ನು ಎರಡು ವರ್ಷಗಳ ಹಿಂದೆ ಬಹಳ ಆಲೋಚನೆ ಮಾಡಿ ಭದ್ರಾ ಮೇಲ್ದಂಡೆಯನ್ನು ರಿನೇಮ್ ಮಾಡಿ ತುಂಗಾ ಡೈವರ್ಶನ್ ಎಂದು ಮಾಡಿ ತುಂಗಾ ಡೈವರ್ಶನ್‌ನಲ್ಲಿ ಗೋದಾವರಿ ಡೈವರ್ಶನ್‌ನ 23 ಟಿ.ಎಂ.ಸಿ.ನಲ್ಲಿ 8 ಟಿ.ಎಂ.ಸಿ.ಯಂತೆ ತುಂಗಭದ್ರಾನಲ್ಲಿ ಸೇವಿಂಗ್ಸ್ 6 ಟಿ.ಎಂ.ಸಿ.ಯಂತೆ ಭದ್ರಾ ಮಾಡರ್ನೈಸೇಷನ್ ಮಾಡಿ 6 ಟಿ.ಎಂ.ಸಿ.ಯಂತೆ ಔಟ್ ಆಫ್ 729 ಇದು ಇರುವುದು ಅಲೋಕೇಷನ್ನಿನಂತೆ ಎಂದು ಪ್ರಾರಂಭದಲ್ಲಿಯೇ ಕನ್‌ಫ್ಯೂಷನನ್ನು ಕ್ಲಾರಿಫೈ ಮಾಡಿದ್ದೇನೆ. ಇನ್ನೂ ಹೆಚ್ಚಿನ ಅಂಶ ಸಗೀರ್‌ರವರಿಗೆ ಬೇಕಾದರೆ ನನ್ನ ಹತ್ತಿರ ಬರಲಿ ನಾನು ಹೇಳುತ್ತೇನೆ. ಇದನ್ನು ಇಲ್ಲಿಗೆ ಮುಗಿಸೋಣ, ಇನ್ನು ಇಲ್ಲಿ ಚರ್ಚೆಗೆ ಬಹಳಷ್ಟು ಕಾರ್ಯಕಲಾಪಗಳು ಇವೆ. ಇನ್ನು ಜಯಚಂದ್ರರವರು ಹೇಳಿದಂತೆ.:..

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಉಪಾಧ್ಯಕ್ಷರೆ,

ಉಪಾಧ್ಯಕ್ಷರು: ಅವರು ಉತ್ತರ ಹೇಳುವವರೆಗೆ ತಡೆಯಿರಿ. ಇದು ಸಮಯ ಪ್ರಶ್ನೆ ಕೇಳುವುದು ಉತ್ತರ ಹೇಳುವುದು ಅಲ್ಲ.

ಶ್ರೀ ಸಿ.ಆರ್.ಸಗೀರ್‌ಅಹಮದ್: ನಮಗೆ ಏನು ಬೇಕು ಎಂದರೆ, ಸಬ್‌ಮರ್ಜ್ ಆಗುವುದಿಲ್ಲ ಅದಕ್ಕೆ ಧಕ್ಕೆ ಬರುವುದಿಲ್ಲ ಎಂದು ಹೇಳಿಬಿಟ್ಟರೆ ಸಾಕು ನಾವು ಬೇರೆ ಪ್ರಶ್ನೆಯೇ ಕೇಳುವುದಿಲ್ಲ.

ಶ್ರೀ ಕೆ.ಎನ್.ನಾಗೇಗೌಡ: ನಾವು ಈಗಾಗಲೇ ಮೂರು ನಾಲ್ಕು ಸಭೆಗಳನ್ನು ಕರೆದಿದ್ದೇವೆ. ಆ ಒಂದು ಸಭೆನಲ್ಲಿ ಶ್ರೀ ಸಗೀರ್ ಅಹಮದ್‌ರವರು ಕೂಡ ಇದ್ದರು. ಆ ಸಭೆನಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ತುಂಗಾ ಡೈವರ್ಶನ್ನಿನ ಇಂಟೆನ್‌ಷನ್ನೇ ಸಬ್ ಮರ್ಜ್ ಮಾಡಕೂಡದು ಎಂದು ಇದೆ. ಮಾಲತಿಯನ್ನು ಡ್ರಾಫ್ ಮಾಡಿರತಕ್ಕಂಥದ್ದೇ 10ಸಾವಿರಕ್ಕಿಂತ ಹೆಚ್ಚು ಸಬ್‌ಮರ್ಜ್ ಆಗುತ್ತದೆ ಎನ್ನತಕ್ಕಂಥದ್ದು. ಈಗ ನಾವು 100 ಮೀಟರ್ ಬಿಲೋ ಏನು ಗಾಜನೂರು ಡ್ಯಾಮ್‌ನ್ನು ಕನಸ್ಟ್ರಕ್ಟ್ ಮಾಡುತ್ತಿದ್ದೇವೆ, 1993 ಫೀಟ್‌ಗೆ ಅಂದು ಏನು 60-70 ವರ್ಷಗಳ ಹಿಂದೆ ಗಾಜನೂರ್ ಡ್ಯಾಮ್‌ಗೆ ಏನು ಎಫ್.ಆರ್.ಎಲ್.ಮಾಡಿದ್ದರು ಸೇಮ್ ಎಫ್.ಆರ್.ಎಲ್.ಮೈಂಟೇನ್ ಮಾಡಿದ್ದೇನೆ. ಅದರಿಂದ ಅಲ್ಲಿ ಯಾವುದೇ ಪ್ರಾಜೆಕ್ಟ್‌ನಿಂದ ಮುಳುಗಡೆಯಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ಆ.ಸಭೆಗೆ ಜ್ಞಾನೇಂದ್ರರವರು, ಕಾಗೋಡ್‌ರವರು ಹಾಗೂ ಸಗೀರ್‌ರವರೂ ಕೂಡ ಬಂದಿದ್ದರು. ಇಲ್ಲಿಯಾವುದೇ ಆದಂಥ ಎಕರೆ ಮುಳುಗಡೆಯಾಗುವುದಿಲ್ಲ. ಆ 424 ಎಕರೆ ಏನು ಇದೆ ಅದು ಮಾತ್ರ ಗಾಜನೂರು ಡ್ಯಾಮನಲ್ಲಿ ಮುಳುಗಡೆಯಾಗುತ್ತದೆ. That is earlier acquired. Some people have been regranted. ಅದಕ್ಕೆ ರೀಹ್ಯಾಬಿಲಿಟೇಷನ್ ಕೇಳಿದ್ದಾರೆ

ನಮ್ಮ ಇರ್ರಿಗೇಷನ್ ಡಿಪಾರ್ಟ್‌ಮೆಂಟ್‌ಗೆ ದುಡ್ಡು ಕೊಟ್ಟು ರೀಹ್ಯಾಬಿಲಿಟೇಷನ್ ಕಮಿಟಿ ಮಾಡಿ, ಶಾಸಕರನ್ನು ಆ ಕಮಿಟಿಗೆ ಹಾಕಿ, ಆ ರೀಹ್ಯಾಬಿಲಿಟೇಷನ್‌ನಲ್ಲಿ ರಸ್ತೆ ಆಗಬೇಕೋ, ಅವರಿಗೆ ಪರಿಹಾರ ಕೊಡಬೇಕೋ ಅದನ್ನೆಲ್ಲಾ ಅಸೆಸ್ ಮಾಡಬೇಕೆಂದು ನಾವು ಕಮಿಟಿ ಮಾಡಿ ಅವರಿಗೆ ರೀ ಹ್ಯಾಬಿಲಿಟೇಷನ್ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇನೆ. ಇನ್ನು ಉಳಿದಿರತಕ್ಕಂಥದ್ದು ನಮ್ಮ ಉಪನಾಯಕರಾದಂಥ ಜಯಚಂದ್ರರವರು ಹೇಳಿರತಕ್ಕಂಥದ್ದು (ಬಿ) ಸ್ಕೀಮ್ ಬಗ್ಗೆ. ಕಳೆದ ಒಂದೂವರೆ ಎರಡು ವರ್ಷಗಳಿಂದ ಈ ಕೃಷ್ಣ, ಆಲಮಟ್ಟಿ, ತುಂಗಾ ಯೋಜನೆಯ ಬಗ್ಗೆ ನಮಗೆ ಮತ್ತು ಆಂಧ್ರದವರಿಗೆ ವಿನಾಕಾರಣ ಏನು ನಡೆಯುತ್ತಿದೆ, ಈ (ಬಿ) ಬಂದಂಥ ಸಂದರ್ಭದಲ್ಲಿ ಸ್ಪಷ್ಟವಾಗಿ ನಮ್ಮ ಲಾಯರ್‌ಗಳು ಸುಪ್ರೀಮ್‌ಕೋರ್ಟ್‌ನಲ್ಲಿ ಸಹಿತ ಅಫಿಡವಿಟ್ ಹಾಕುವಂಥ ಕಾಲದಲ್ಲಿ (ಬಿ) ಸ್ಕೀಮ್‌ಗೆ ಒಪ್ಪಿಕೊಳ್ಳಬೇಕು ಎನ್ನತಕ್ಕಂಥದ್ದನ್ನು ನಾವು ಒತ್ತಾಯ ಮಾಡಿದ್ದೇವೆ. ಕಾರಣವೇನೆಂದರೆ ಬಚಾವತ್ ಆಯೋಗದ ಪ್ರಕಾರ ನಮ್ಮ ಎರಡು ವರ್ಷಗಳಾದನಂತರ ಮಾಡಿಕೊಳ್ಳಬೇಕೆಂದು ಒಂದು ಇಲ್ಲ ಎರಡು ಸಾವಿರ ಇಸ್ವಿಯೊಳಗೆ ಮಾಡಿಕೊಳ್ಳಬೇಕೆಂದರೆ, all the three concerned States must come together, ಎಂದು ಹೇಳಿದ್ದಾರೆ. ನಾವು ಮಹಾರಾಷ್ಟ್ರದವರ ಜೊತೆಗೆ ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ, ಚಂದ್ರಬಾಬು ನಾಯ್ಡುರವರು ಇದ್ದರು, ಮಾನ್ಯ ಜೋಷಿಯವರು ಇದ್ದರು. ನಮ್ಮ ಮುಖ್ಯಮಂತ್ರಿಗಳಾದ ಜೆ.ಹೆಚ್.ಪಟೇಲರು ಇದ್ದರು. ನಮ್ಮ ವಿರೋಧ ಪಕ್ಷದ ನಾಯಕರಾದ ಖರ್ಗೆಯವರು ಬಂದಿದ್ದರು, ಆವೊತ್ತೂ ಸಹ ನಾವು ಹೇಳಿದ್ದೇವೆ ಈ (ಬಿ) ಸ್ಕೀಮನ್ನು ನಾವು ಇತ್ಯರ್ಥ ಮಾಡಿಕೊಳ್ಳಬೇಕೆಂದು ನಾವು ಆವೊತ್ತಿನಿಂದ ಹೇಳುತ್ತಾ ಬಂದಿದ್ದೇವೆ. ಈಗಲೂ ನಾವು (ಬಿ) ಸ್ಕೀಮನ್ನು ಆದಷ್ಟು ಬೇಗ ಇಂಪ್ಲಿಮೆಂಟ್ ಮಾಡಬೇಕಾಗುತ್ತದೆ, ನಾವು ಪಕ್ಕಪಕ್ಕದ ರಾಜ್ಯದವರಿದ್ದೇವೆ ನಾವು ಕುಳಿತುಕೊಂಡು ಪರಸ್ಪರ ಮಾತನಾಡಿಕೊಂಡು, ಸರ್‌ಪ್ಲಸ್ ವಾಟರ ಅಥವಾ ರಿಮೆನಿಂಗ್ ವಾಟರನ್ನು ನೋಡಿ ನಾವು ಹಂಚಿಕೊಳ್ಳಬೇಕೆಂದು ನಾವು ಬಹಳಷ್ಟು ಒತ್ತಾಯ ಮಾಡುತ್ತಿದ್ದೇವೆ.

ಇನ್ನು ತುಂಗಭದ್ರಾ ಸಿಲ್ಟ್ ಬಗ್ಗೆ ಹೇಳಿದರು. ನಿಜ 28 ಟಿ.ಎಂ.ಸಿ.ಸಿಲ್ಟ ಇದೆ ಆ ಸಿಲ್ಟ ತೆಗೆಸಬೇಕಾದರೆ 250 ಕೋಟಿ ರೂಪಾಯಿ ಆಗುತ್ತದೆ ಎಂದು ಎಸ್ಟಿಮೇಟ್ ಮಾಡಿದ್ದಾರೆ. ಬೇರೆ ಒಂದು ಎಕ್ಸ್‌ಟರ್ನ್‌ಲ್ ಫಾರಿನ್ ಏಜನ್ಸಿಗೆ ಟೆಕ್ನಿಕಲ್ ಪೀಪಲ್‌ಗೆ ಡ್ಯಾಮ್ ಹೈಟನ್ನು ಇನ್‌ಕ್ರೀಸ್ ಮಾಡುವುದಕ್ಕೆ ಆಗುತ್ತದೆಯೇ ಎಂಬ ಬಗ್ಗೆ ರೆಫರ್ ಮಾಡಿದ್ದಾರೆ. ಡ್ಯಾಮ ಹೈಟನ್ನು ಇನ್‌ಕ್ರೀಸ್ ಮಾಡುವುದಕ್ಕೆ ಸಾಧ್ಯವಿಲ್ಲ, ಸಿಲ್ಟ ತೆಗೆಯಬೇಕಾದರೂ ಕೂಡ 250 ಕೋಟಿ ರೂಪಾಯಿ ಆಗುತ್ತದೆ. ಆದಕಾರಣ ಏನು ಮಾಡಬೇಕು ಎಂಬುದಕ್ಕೆ ಒಂದು ಸ್ಪೆಶಲ್ ಕಮಿಟಿ ಕಾನ್ಸಿಟಿಟ್ಯೂಟ್ ಮಾಡುತ್ತಿದ್ದೇವೆ ಅದು ಬಂದ ನಂತರ ನಾವು ಆ ವಾಟರನ್ನು ಯಾವ ರೀತಿ ಶೇರ್ ಮಾಡಿಕೊಳ್ಳಬೇಕು ಎನ್ನತಕ್ಕಂಥದ್ದನ್ನು ಹೇಳಿದ್ದೇನೆ. ಮಾನ್ಯ ಮಂಜುನಾಥ್ ಕುನ್ನೂರ್‌ರವರು ಹೇಳಿದ ಹಾಗೆ 305 ಕಿ.ಮೀ. ಕೆನಾಲ್

ಹೋಗುತ್ತಿದೆ. ಶಿಗ್ಗಾಂವ್ ಮತ್ತು ಹೋಗತಕ್ಕಂಥ ಭಾಗಕ್ಕೆ ರೀ ಸರ್ವೆ ಆಗಬೇಕಾಗಿದೆ ಅಲ್ಲಿ ನೀರು ಹರಿದು ಹೋಗುತ್ತಿದೆ, ನಮ್ಮ ಏರಿಯಾ ಬಿಟ್ಟು ಹೋಗಿದೆ ಎನ್ನತಕ್ಕಂಥದ್ದು ಹೇಳಿದ್ದಾರೆ. ಇವೊತ್ತು ರಟ್ಟೆಹಳ್ಳಿನಲ್ಲಿ ಹಿರೇಕೇರೂರ್‌ನಲ್ಲಿ 200-300 ಕಿ.ಮೀ. ಮನೆ ಕಟ್ಟಿದ್ದೇವೆ, ಆಫೀಸಸ್ ರೆಡಿ ಮಾಡಬೇಕೆಂದು ಮಾಡುತ್ತಿದ್ದೇವೆ, ಇವೊತ್ತು ಅಪ್ಪರ್ ತುಂಗಾ ಒಂದು ಮೇಜರ್ ಪ್ರಾಜೆಕ್ಟ್ ಈ ಸರ್ಕಾರಕ್ಕೆ ಅದನ್ನು ತೆಗೆದುಕೊಂಡಿದ್ದೇವೆ ಅದನ್ನು ರೀ ಸರ್ವೆ ಮಾಡಿಸಿ ಅಲ್ಲೆ ಕೆನಾಲ್‌ನಲ್ಲಿ ಲೆವಲ್ ಪರ್ಮಿಟ್ ಮಾಡುತ್ತದೆ, ಶಿಗ್ಗಾಂವ್ ಏರಿಯಾಕ್ಕೆ ಎಷ್ಟು ಎಕರೆ ಬರುತ್ತದೆ ಕಮಾಂಡ್ ಏರಿಯಾ ಹಾಗೂ ಸವಣೂರು ಅವೆರಡರ ಬಗ್ಗೆ ನಾವು ಇವೊತ್ತೇ ಫೈಲನ್ನು ಬರೆದು ಕಳುಹಿಸುತ್ತೇನೆ. ಅದನ್ನು ರೀ ಸರ್ವೆ ಮಾಡಿಸಿ ಅವರ ಭಾಗಕ್ಕೆ ನೀರು ದೊರೆಯುವುದಾದರೆ ಲೆವಲ್ ಪರ್ಮಿಟ್ ಆಗುವುದಾದರೆ ಖಂಡಿತ ಮಾಡುತ್ತೇನೆ. ಮತ್ತೇ ಮಾನ್ಯ ಬಣಕಾರ್‌ರವರು ಹೇಳಿದ ಹಾಗೆ ಎಲ್ಲಾ ರೀತಿನಲ್ಲಿ ಈ ಸರ್ಕಾರ ತುಂಗಾ ಮೇಲ್ದಂಡೆ ಯೋಜನೆ ಎರಡು ಸಾವಿರಕ್ಕೆ ಮುಗಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮಾನ್ಯ ಖರ್ಗೆಯವರಿಗೆ ಹೇಳುವುದೇನೆಂದರೆ ಅವರ ಸರ್ಕಾರ ಮಾಡಲಿಲ್ಲ ನಾನು ಆಗ ಅವರ ಜೊತೆಯಲ್ಲಿದ್ದೆ ಆಗಲೂ ಮಾಡಲಿಲ್ಲ. ಇಲ್ಲಿ ಬಂದಿದ್ದೇನೆ ಮಾಡುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದಕ್ಕೆ ಹೇಳುವುದು ಏನೆಂದರೆ ಕಾಲು ಕೆದರಿ ಜಗಳ ತೆಗೆಯುವುದು ಎಂದ ಹಾಗೆ.

ಉಪಾಧ್ಯಕ್ಷರು: ಅವರೂ ಕೂಡ ನಿಮ್ಮ ಜೊತೆ ಇದ್ದೆ ಎಂದು ಹೇಳುತ್ತಿದ್ದಾರಲ್ಲಾ.

ಶ್ರೀ ಕೆ.ಎನ್.ನಾಗೇಗೌಡ: ಇನ್ನು ಒಂದು ಟಿ.ಎಂ.ಸಿ. ನೀರನ್ನು ತೀರ್ಥಹಳ್ಳಿಯಲ್ಲಿ ರಿಸರ್ವ್ ಮಾಡಿ ಏತ ನೀರಾವರಿಗೆ ಕೊಡಬೇಕು ಎಂದು ಅವೊತ್ತು ಪ್ರಸ್ತಾಪ ಮಾಡಿದ್ದರು. ಇವೊತ್ತು ಕೂಡ ತಿಳಿಸಿದ್ದಾರೆ. ನಾನು ಇನ್‌ವೆಸ್ಟಿಗೇಷನ್ ಮಾಡಿ ಪಾಸಿಬಿಲಿಟಿಸ್ ಇದ್ದರೆ ನಾನು ಜ್ಞಾನೇಂದ್ರರವರಿಗೆ ತಿಳಿಸುತ್ತೇನೆ. ಶಿವಮೊಗ್ಗ ತೀರ್ಥಹಳ್ಳಿ ಎಂದರೆ ಕಾಗೋಡು ತಿಮ್ಮಪ್ಪನವರಿಗೆ ಮೈಮೇಲೆ ಏನೋ ಬಂದು ಬಿಡುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಹೊಸದಾಗಿ ನೀರು ತರುವುದಾದರೆ ಇನ್‌ವೆಸ್ಟಿಗೇಷನ್ ಮಾಡುವುದು. ಇರೋ ನೀರನ್ನು?.....

ಶ್ರೀ ಕೆ.ಎನ್.ನಾಗೇಗೌಡ: ಆಯಿತು ಇನ್‌ವೆಸ್ಟಿಗೇಷನ್ ಮಾಡಿಸಿ ನೀರು ಇದ್ದರೆ ಕೊಡಿಸುತ್ತೇನೆ.

(6) ನಿಯಮ 69ರ ಮೇರೆಗೆ ಚರ್ಚೆ

ಕಾಡುಗಳ್ಳ ವೀರಪ್ಪನ್ ಬಗ್ಗೆ

ಉಪಾಧ್ಯಕ್ಷರು: ನಿಯಮ 69ರ ಮೇರೆಗೆ ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡಿ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಈ ವೀರಪ್ಪನ್ ವಿಚಾರದಲ್ಲಿ ಈ ಸದನದಲ್ಲಿ ಹಿಂದೆ ಪ್ರಸ್ತಾಪ ಮಾಡಿದಾಗ ಬಹಳ ಡೀಟೇಲಾಗಿ ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ತಾವು ಹೇಳಿದ್ದೀರಿ. ನಾವು ಇವೊತ್ತೇನೂ ನೋಟೀಸ್ ಕೊಟ್ಟಿಲ್ಲ ಸುಮಾರು 5-6 ದಿವಸದ ಹಿಂದೆ ನೋಟೀಸ್ ಕೊಟ್ಟಿದ್ದೇವೆ ಇದು ಬಹಳ ಮಹತ್ವದ ವಿಚಾರ ಇಲ್ಲಿ ಫಾರೆಸ್ಟ್ ಮಿನಿಸ್ಟರ್ ಹಾಗೂ ಹೋಮ್ ಮಿನಿಸ್ಟರ್ ಇಬ್ಬರೂ ಇಲ್ಲ ನಾವು ಯಾರಿಗೆ ಹೇಳಬೇಕು. ಈ ರೀತಿಯಾಗಿ ಇವತ್ತು ಬೇಕು ಎಂದೇ ತಪ್ಪಿಸಿಕೊಳ್ಳಬೇಕು ಎಂದು ಮಾಡಿದರೆ ಇದನ್ನು ನಾವು ಖಂಡಿಸಬೇಕಾಗುತ್ತದೆ.

ಉಪಾಧ್ಯಕ್ಷರು: ರೆವಿನ್ಯೂ ಮಂತ್ರಿಗಳು ಇದ್ದಾರೆ, ಸಹಕಾರ ಮಂತ್ರಿಗಳು ಇದ್ದಾರೆ, ಯಾರನ್ನಾದರೂ ಕರೆಯುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೇ, ಇದರ ಬಗ್ಗೆ ನೇರವಾದಂತಹ ಮಾಹಿತಿ ಅವರ ಹತ್ತಿರ ಇರುವುದಿಲ್ಲ. ಇಬ್ಬರು ಮಂತ್ರಿಗಳ ಪೈಕಿ ಒಬ್ಬರಿಗಾದರೂ ನೇರವಾದ ಮಾಹಿತಿ ಇರುತ್ತದೆ.

ಉಪಾಧ್ಯಕ್ಷರು: ನೀವು ಪ್ರಾರಂಭ ಮಾಡಿ ಅವರು ಟಿಪ್ಪಣಿ ಮಾಡಿಕೊಳ್ಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ, ಇವತ್ತು ಚರ್ಚೆಗೆ ಬರುತ್ತದೆ ಎಂಬುದು ಗೊತ್ತಿದೆ. ಅರಣ್ಯ ಇಲಾಖೆ ಸಚಿವರು ಇಲ್ಲ, ಗೃಹ ಸಚಿವರು ಇಲ್ಲವೆಂದರೆ ಹೇಗೆ?

ಉಪಾಧ್ಯಕ್ಷರು: ಮೇಲಿನ ಮನೆಯಲ್ಲಿ ಇದ್ದಾರೆಂದು ಹೇಳುತ್ತಿದ್ದಾರೆ, ತಾವು ಪ್ರಾರಂಭ ಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಪ್ರಾರಂಭ ಮಾಡುವುದಕ್ಕೆ ಏನೂ ತೊಂದರೆ ಇಲ್ಲ. ಆದರೆ ಏನಾಗುತ್ತದೆ ಎಂದರೆ ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇದ್ದಾಗ ಅದಕ್ಕೆ ಸಮರ್ಪಕವಾದ ಉತ್ತರ ಸಿಗುವುದಿಲ್ಲ ಎನ್ನುವ ದೃಷ್ಟಿಯಿಂದ ನಾವು ಹೇಳುತ್ತಿದ್ದೇವೆ. ಇಲ್ಲದೆ ಇದ್ದರೆ ಸುಮ್ಮನೆ ನಾವು ಮಾತನಾಡಿ ನಮ್ಮ ಬಾಯಿ ಚಟ ನಾವು ತೀರಿಸಿಕೊಂಡ ಹಾಗೆ ಆಗುತ್ತದೆಯೇ ಹೊರತು, ಇದರಿಂದ ಸರ್ಕಾರಕ್ಕೆ ಆಸಕ್ತಿ ಇಲ್ಲ ಎನ್ನುವುದನ್ನು

ತೋರಿಸುತ್ತದೆ. ಇದು ಇದೇ ರೀತಿಯಾಗಿ ನಡೆದಿದೆ. ನಮ್ಮ ಪಾಡಿಗೆ ನಾವು ಹೇಳುವುದು, ಅವರ ಪಾಡಿಗೆ ಅವರು ಡಿನ್ನೈ ಮಾಡುವುದು ಇಲ್ಲ ಎಂದರೆ ಅಬ್ಸೆಂಟ್ ಇರುವುದು, ಇಷ್ಟಕ್ಕೆ ನಾವು ಸೀಮಿತವಾಗಿದ್ದರೆ ಹೇಗೆ? ಇದು ಬಹಳ ಮುಖ್ಯವಾದ ವಿಷಯ. ಆದುದರಿಂದ ಏನೇನು ಆಯಿತು? ಯಾರು ಎಲ್ಲಿ ಹೋದರು? ಯಾವ ಕಾರಣಕ್ಕೆ ಹೋದರು ಅದನ್ನೆಲ್ಲಾ ಹೇಳಬೇಕಾದರೆ ಅದಕ್ಕೆ ಉತ್ತರ ಕೊಡಬೇಕಲ್ಲಾ.

ಶ್ರೀ ರಮೇಶ್ ಸಿ.ಜಿಗಜಿಣಗಿ: ನಾವು ಇದ್ದೇವೆ, ಬರೆದುಕೊಳ್ಳುತ್ತೇವೆ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಉಪಾಧ್ಯಕ್ಷರೇ....

ಉಪಾಧ್ಯಕ್ಷರು: ನಿಮ್ಮ ನಾಯಕರು ಇದ್ದಾರಲ್ಲಾ, ನೀವು ಏಕೆ ಮಾತನಾಡುತ್ತೀರಿ? ಅವರು ಎದ್ದು ನಿಂತಾಗ ಯಾವಾಗಲೂ ಮರ್ಯಾದೆ ಕೊಟ್ಟು ಕೇಳಬೇಕು.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಉಪಾಧ್ಯಕ್ಷರೇ, ಅವರು ಬಹಳ ಮುಖ್ಯವಾದ ವಿಷಯವನ್ನು ಮಾತನಾಡುವಾಗ ಈ ರೀತಿ ಅವಮಾನ ಮಾಡುವುದಲ್ಲ. ನಿಮಗೆ ನಮ್ಮ ನಾಯಕರ ಮೇಲೆ ವಿಶ್ವಾಸ ಇಲ್ಲ ಎನ್ನುವುದನ್ನು ತೋರಿಸುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಬಹುಶಃ ಸಭಾಪತಿಯವರಿಗೆ ಗೊತ್ತಿರಲಿಕ್ಕಿಲ್ಲ. ಮಾನ್ಯ ಖರ್ಗೆಯವರಿಗೆ ಗೊತ್ತಿದೆ. ಅವರು ಸಚಿವರಾಗಿ ಕೆಲಸ ಮಾಡಿದವರು. ಸಾಮೂಹಿಕ ಜವಾಬ್ದಾರಿ ನಮಗೆ ಇರುತ್ತದೆ, ನಾವು ಉತ್ತರ ಕೊಡುತ್ತೇವೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ಪರ್ವ್‌ಸ್ಲಿ ಪೋಸ್ಟ್‌ಫೋನ್ ಮಾಡಿಕೊಂಡು ಬಂದಿರುವುದು. ನನಗೆಲ್ಲಾ ಗೊತ್ತಿದೆ. ನೀವು ಇನ್ನೂ ಒಂದು ಟರ್ಮ್ ಕಂಪ್ಲೀಟ್ ಮಾಡಿ; ಬೇಡ ಎನ್ನುವುದಿಲ್ಲ. ಆದರೆ ಇದನ್ನು ಪೋಸ್ಟ್‌ಫೋನ್ ಮಾಡಿದ್ದು ಏಕೆಂದರೆ ಇದಕ್ಕೆ ಹೋಮ್ ಮಿನಿಸ್ಟರ್ ಬೇಕು ಅರಣ್ಯ ಮಂತ್ರಿಗಳು ಬೇಕು, ಅವರುಗಳು ಇಲ್ಲದಿದ್ದಾಗ ಇದನ್ನು ತೆಗೆದುಕೊಳ್ಳಬಾರದು ಎನ್ನುವ ದೃಷ್ಟಿಯಿಂದ ಮಾಡಿದ್ದು. ಇದು ಮೂರು ದಿವಸದಿಂದ ಪೋಸ್ಟ್‌ಪೋನ್ ಆಗುತ್ತಿದೆ.

ಉಪಾಧ್ಯಕ್ಷರು: ''ಬೀದರ್ ಜಿಲ್ಲೆ ಬರಗಾಲಕ್ಕೆ ಈಡಾಗಿದ್ದು, ಬರ ಪರಿಹಾರ ಮತ್ತು ಕಾನೂನು ವ್ಯವಸ್ಥೆ ವಿಷಯವಾಗಿ ಚರ್ಚಿಸಲು ದಿನಾಂಕ 9.9.97 ಸಂಜೆ ಬೀದರ್‌ಗೆ ತೆರಳಬೇಕಾಗಿರುವುದರಿಂದ ದಿನಾಂಕ 10.9.97 ರಿಂದ ದಿನಾಂಕ 12.9.97ರವರೆಗೆ ಮೂರು ದಿವಸಗಳ ಮಟ್ಟಿಗೆ ಸದನದಲ್ಲಿ ಹಾಜರಾಗಲು ಶಕ್ಯವಿಲ್ಲವೆಂದು ತಮ್ಮ ಗಮನಕ್ಕೆ ತಂದಿರುತ್ತೇನೆ.'' ಅರಣ್ಯ ಮಂತ್ರಿಗಳು ಅಧ್ಯಕ್ಷರ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹಾಗೆ ಅವರ ಕಾರಣ ಕೊಡುತ್ತಾರೆ ಆದರೆ ಇಲ್ಲಿ ಅವರ ವಿಷಯ ಇದೆ. ಈ ಸದನ 12 ತಾರೀಖಿಗೆ ಮುಗಿಯುತ್ತದೆ. ಅಂತಹ ಸಮಯದಲ್ಲಿ ಅವರು ಡಿಸ್‌ಕಷನ್ ಅವಾಯ್ಡ್ ಮಾಡುವುದಕ್ಕೆ ಹೋದರೆ?

ಉಪಾಧ್ಯಕ್ಷರು: ಅವರು ಹೇಳಿದ್ದಾರೆ, ಸಾಮೂಹಿಕ ಜವಾಬ್ದಾರಿ ಇದೆ ಎಂದು. ನಾನು ಉತ್ತರ ಕೊಡಿಸುತ್ತೇನೆಂದು ಅವರು ಹೇಳಿದ್ದಾರೆ, ನಾವೂ ನಿಮಗೆ ಸರಿಯಾದಂತಹ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅಥವಾ ಅರಣ್ಯ ಮಂತ್ರಿಗಳು ಉತ್ತರ ಕೊಡಬೇಕು. ಏಕೆಂದರೆ ಇದು ನೇರವಾಗಿ ಅವರಿಗೆ ಸಂಬಂಧಪಟ್ಟಿರುವುದು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಅವರಿಗೆ ದಯವಿಟ್ಟು ವಿನಂತಿ ಮಾಡಿಕೊಳ್ಳುತ್ತೇನೆ. ಅಜೆಂಡಾದಲ್ಲೆ ಎರಡನೆಯ ವಿಷಯ ಇದೆ. ಮೊದಲು ಅದನ್ನು ಇಲ್ಲಿ ಚರ್ಚೆಗೆ ತೆಗೆದುಕೊಂಡರೆ ನಂತರ ಇದನ್ನು ತೆಗೆದುಕೊಳ್ಳುವುದಕ್ಕೆ ಅಡ್ಡಿ ಇಲ್ಲ. ಅಷ್ಟರಲ್ಲಿ ಮಂತ್ರಿಗಳನ್ನು ಕರೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಎರಡನೆಯದರ ನಂತರ ಮೊದಲನೆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಿ.

ಉಪಾಧ್ಯಕ್ಷರು: ಈಗ ಕರೆಯುವುದಕ್ಕೆ ಹೋಗಿದ್ದಾರೆ. ತಾವು ಪ್ರಾರಂಭ ಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗೇನು ಬೀದರ್‌ನಿಂದ ಕರೆಸುತ್ತೀರಾ?

ಶ್ರೀ ಎಸ್.ಎಸ್.ಪಾಟೀಲ್: ಬೀದರ್‌ನಿಂದ ಅಲ್ಲ, ಇಲ್ಲಿ ಗೃಹಸಚಿವರು ಇದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕರೆಸಿರಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ, ನನಗೆ ಒಂದು ಅನುಮಾನ ಬಂದಿದೆ. ಬೆಳಿಗ್ಗೆ ನಿಮ್ಮ ಜನತಾ ದಳದ ಸಭೆಯಲ್ಲಿ ಮಂತ್ರಿಮಂಡಲವನ್ನು ಬದಲಾವಣೆ ಮಾಡುತ್ತಾರೆ ಎನ್ನುವ ವಿಚಾರ ಬಂದಿದೆ. ಆದುದರಿಂದ ನಿಮ್ಮ ನಿಮ್ಮಲ್ಲಿ ದ್ವಂದ್ವವಾಗಿ ಒಬ್ಬರಿಗೊಬ್ಬರು ಬಹಳ ಸಮಸ್ಯೆಯಾಗಿ ಕೂತಿದೆ. ಕೆಲವರನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆಯುತ್ತೇವೆ ಎಂದು ಹೊರಟಿದ್ದಾರೆ. ಯಾರನ್ನು ತೆಗೆಯುತ್ತಾರೆ. ಯಾರನ್ನು ಬಿಡುತ್ತಾರೆ ಎಂದು. ಬೆಳಿಗ್ಗೆಯಿಂದ ಭಾರಿ ದೊಡ್ಡ ಯುದ್ಧ ನಡೆದಿದೆ. ನಾಲ್ಕು ಜನ ಜನತಾ ದಳದ ಸ್ನೇಹಿತರು ನನಗೆ ಹೇಳಿದರು. ಕೆಲವರನ್ನು ತೆಗೆಯುತ್ತಾರೆ ಎಂದು ಹೇಳಿದರು.

ಉಪಾಧ್ಯಕ್ಷರು: ಅವರನ್ನು ತೆಗೆದರೆ ನಿಮಗೆ ಏನು ಅಲ್ಲಿ ಹೋಗುವುದಕ್ಕೆ ಬರುವುದಿಲ್ಲವಲ್ಲಾ.

ಶ್ರೀ ವಾಟಾಳ್ ನಾಗರಾಜ್: ನನ್ನ ಪ್ರಶ್ನೆ ಅದಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ ಅಲ್ಲಿ ಬಹಳ ಗೊಂದಲ ಇದೆ. ಅದಕ್ಕೋಸ್ಕರ ಯಾರ್‍ಯಾರನ್ನು ತೆಗೆಯುತ್ತಾರೆ ಎನ್ನುವ ಬಗ್ಗೆ....

ಉಪಾಧ್ಯಕ್ಷರು: ಹೋಮ್ ಮಿನಿಸ್ಟರ್ ಬರುವ ತನಕ ಅಲ್ಲಿಯವರೆಗೆ ಅಜೆಂಡಾದಲ್ಲಿರುವ ಮಾಧುಸ್ವಾಮಿಯವರ ಎರಡನೇ ವಿಷಯವನ್ನು ತೆಗೆದುಕೊಳ್ಳೋಣ. ಹಾಗೆ ಮಾಡೋಣ ಬೇಕಾದರೆ. ನಿಮ್ಮ ಒಪ್ಪಿಗೆ ಇದ್ದರೆ ಚರ್ಚೆ ಪ್ರಾರಂಭ ಮಾಡಿ. ಇಲ್ಲದಿದ್ದರೆ ಮಾಧುಸ್ವಾಮಿಯವರ ವಿಷಯವನ್ನು ತೆಗೆದುಕೊಳ್ಳೋಣ. ಈಗ ನಾವು ಹೇಳಿದ ಹಾಗೆ ತಾವು ಸ್ವಲ್ಪ ಕೇಳಬೇಕು.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಷಯವನ್ನು ಈ ಸದನದಲ್ಲಿ ಮಂಡನೆ ಮಾಡಿರುವಂತಹ ಸಂದರ್ಭದಲ್ಲಿ ಅವರ ವಿಚಾರವನ್ನು ಬಿಟ್ಟು ಬೇರೆ ವಿಚಾರವನ್ನು ತೆಗೆದುಕೊಳ್ಳುತ್ತೇವೆಂದರೆ, ಇದು ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಚ್ಯುತಿ ತಂದ ಹಾಗೆ ಆಗುತ್ತದೆ.

ಉಪಾಧ್ಯಕ್ಷರು: ನಾನು ಹೇಳಿದ್ದನ್ನು, ನೀವು ಕೇಳಿ ಮಾತನಾಡಬೇಕು. ನೀವು ಕೇಳಿ ಮಾತನಾಡಿದ್ದೇ ಆದರೆ ಸರಿ. ಇಲ್ಲ ಎಂದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ ಇಲ್ಲಿ? ತಾವು ಕುಳಿತುಕೊಳ್ಳಿ, ತಾವು ಕೇಳಿ ನಾನು ಏನು ಹೇಳಿದ್ದೇನೆ ಎಂದು.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಉಪಾಧ್ಯಕ್ಷರೇ, ಮೊದಲು ಒಬ್ಬರಾದರೂ ಕೂಡ ಮಂತ್ರಿಗಳು ಇದ್ದರು. ಈಗ ಅವರೂ ಕೂಡ ಎದ್ದು ಹೋದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ನೀವು ನಮಗೆ ಕೊಡುವ ಮರ್ಯಾದೆ. ಈ ವಿಷಯ ಬರುತ್ತದೆ ಎಂದು ಗೊತ್ತಿದ್ದು ಏಕೆ ತಪ್ಪಿಸಿಕೊಳ್ಳಬೇಕು? ಸ್ವಲ್ಪವೂ ನಾಚಿಕೆ ಎನ್ನುವುದೇ ಇಲ್ಲ.

ಉಪಾಧ್ಯಕ್ಷರು: 10 ನಿಮಿಷದಲ್ಲಿ ಹೋಮ್ ಮಿನಿಸ್ಟರ್ ಬರುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏಕೆ ಹೋಗಬೇಕು? ನಾವು ಇಲ್ಲಿ ಎಲ್ಲಾ ಮುಂಜಾನೆಯಿಂದ ಕುಳಿತುಕೊಂಡಿರುವುದಿಲ್ಲವೇ? ಯಾವುದೇ ಸಬ್ಜೆಕ್ಟ್ ಇದ್ದರೂ ಕುಳಿತುಕೊಳ್ಳುತ್ತೇವೆ. ಅವರ ಸಬ್ಜೆಕ್ಟ್ ಇದ್ದು, ಅವರಿಗೆ ಬರುವುದಕ್ಕಾಗುವುದಿಲ್ಲವೆಂದರೆ ಏನು?

ಉಪಾಧ್ಯಕ್ಷರು: ಈಗ ಅವರಿಗೆ ವಾರ್ನ್ ಮಾಡೋಣ. ಅವರಿಗೆ ಹೇಳೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಯಾವುದೇ ಮಂತ್ರಿಗಳ ಉತ್ತರ ಇದ್ದರೂ

ಇಲ್ಲಿ ಕೇಳುತ್ತಾ ಕುಳಿತುಕೊಳ್ಳುತ್ತೇವೆ. ನಿಮ್ಮ ನಿಮ್ಮ ಸಬ್ಜೆಕ್ಟ್ ಇದ್ದಾಗ ಇಲ್ಲಿ ಪ್ರೆಸೆಂಟ್ ಇರುವುದಕ್ಕೆ ಏನಾಗುತ್ತದೆ?

ಶ್ರೀ ವಾಟಾಳ್ ನಾಗರಾಜ್: ಇಷ್ಟೊಂದು ಬೇಜವಾಬ್ದಾರಿ ಸರಿಯಲ್ಲ. ರಾಜೀನಾಮೆ ಕೊಟ್ಟು ಹೋಗಲಿ. ಈ ಸದನವನ್ನು ಇಷ್ಟು ಹುಡುಗಾಟಕ್ಕೆ ತಿಳಿದುಕೊಳ್ಳಬಾರದು. ಇದು ಬೇಜವಾಬ್ದಾರಿ ತೋರಿಸುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದನ್ನು ಅಷ್ಟು ಲಘುವಾಗಿ ತೆಗೆದುಕೊಂಡರೆ ಹೇಗೆ?

ಉಪಾಧ್ಯಕ್ಷರು: ಲಘುವಾಗಿ ತೆಗೆದುಕೊಳ್ಳುವ ಪ್ರಶ್ನೆ ಅಲ್ಲ. ಯಾವಾಗಲೂ ಯಾರಿಗೆ ಸಂಬಂಧಪಟ್ಟ ವಿಷಯ ಇದ್ದು ಮಂತ್ರಿಗಳು ಇರುತ್ತಾರೆ, ಅದಕ್ಕೆ ಉತ್ತರ ಕೊಡುವವರು ಹಾಜರಿರಬೇಕು.

ಶ್ರೀ ವಾಟಾಳ್ ನಾಗರಾಜ್: ಇದು ಒಳ್ಳೆಯ ಸಂಪ್ರದಾಯವಲ್ಲ. ಯಾವಾಗಲೂ ಸಾಮೂಹಿಕ ಜವಾಬ್ದಾರಿ ಎಂದು ಹೇಳುವುದು ಸರಿಯಿಲ್ಲ. ನನ್ನ ಮುಂದಿರತಕ್ಕಂಥ ಕಾಗದ ಪತ್ರಗಳನ್ನು ಮಂಡಿಸುತ್ತಿದ್ದೇನೆ ಎಂದು ಹೇಳುವುದು. ಇದೆಲ್ಲಾ ನಿಜವಾಗಲೂ ಅನಾಗರೀಕ ಸಂಸ್ಕೃತಿಯಾಗುತ್ತದೆ. ಇದು ಪ್ರಜಾತಂತ್ರ ವ್ಯವಸ್ಥೆಯ ಅತ್ಯಂತ ಅಪಾಯಕಾರಿ ಬೆಳವಣಿಗೆ.

ಉಪಾಧ್ಯಕ್ಷರು: ಈಗ ನಾವು ವಾರ್ನ್ ಮಾಡುತ್ತಿದ್ದೇವೆ. ಈ ರೀತಿ ಮಾಡುವುದು ಸರಿಯಲ್ಲ ಎಂದು ಹೇಳಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೇ, ಇನ್ನು ಮೂರು ದಿವಸ ಸದನ ಇರುವುದು. ಮೂರು ದಿವಸ ಇದ್ದಾಗ, ಜವಾಬ್ದಾರಿಯಾಗಿ ಅನೇಕ ಪ್ರಶ್ನೆಗಳು ಬರುತ್ತವೆ. ನಾವು ಸದನದಲ್ಲಿ ಹಾಜರಿರಬೇಕು ಎನ್ನುವ ಭಾವನೆ ಇರಲಿಲ್ಲ ಎಂದರೆ?

ಶ್ರೀ ಎಸ್.ಎಸ್.ಪಾಟೀಲ್: ನಿಮಗೆ ಉತ್ತರ ಬಂದರೆ ಆಯಿತು ಅಲ್ಲ....

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾರಿಂದನಾದರೂ ತೆಗೆದುಕೊಳ್ಳುತ್ತಾರಾ? ಯಾರಾದರೂ ಆಯಿತು ಎಂದರೆ ಪೋರ್ಟ್‌ಫೋಲಿಯೋ ಹಂಚುವುದು ಏಕೆ?....

ಒಬ್ಬ ಸದಸ್ಯರು: ನೀವು ಉತ್ತರವನ್ನು ಊರಿಗೆ ಕಳುಹಿಸಿಕೊಡಿ. ಇಲ್ಲಿ ಏಕೆ ಮಾತನಾಡುವುದು?

ಉಪಾಧ್ಯಕ್ಷರು: ಎಲ್ಲರೂ ಮಾತನಾಡಿದರೆ ಹೇಗೆ? ನೀವು ಒಬ್ಬೊಬ್ಬರೇ ಮಾತನಾಡಿ. ಎಂಟು ಹತ್ತು ಜನ ಮಾತನಾಡಿದರೆ ಹೇಗೆ? ಸಗೀರ್ ಅಹಮದ್‌ರವರೆ, ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ, ಇದು ಹಕ್ಕುಚ್ಯುತಿಯಾಗುತ್ತದೆ. ಮಾನ್ಯ ಸಚಿವರ ಬಗ್ಗೆ ನನಗೆ ಗೌರವ ಇದೆ. ತಾವು ಏನು ಹೇಳಿದಿರಿ ಎಂದರೆ ನಾವು ಉತ್ತರ ಕೊಡುತ್ತೇವೆ, ರೆಕಾರ್ಡ್‌ಗೆ ಹೋಗುತ್ತದೆ ಎಂದು. ಹೋಗಿ ಬಿಡಿ ಎಲ್ಲಾ ಎದ್ದು. ಏಕೆ ಕುಳಿತಿದ್ದೀರಿ?

ಶ್ರೀ ಎಸ್.ಎಸ್.ಪಾಟೀಲ್: ಅವರನ್ನು ಕರೆಸಿ ಸರ್ಕಾರದ ಪರವಾಗಿ ಉತ್ತರ ಕೊಡಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ತಾವು ಏನು ಹೇಳಿದಿರಿ, ರೆಕಾರ್ಡ್‌ಗೆ ಹೋಗುತ್ತದೆ ಎಂದು. ರೆಕಾರ್ಡ್ ನೋಡಿಕೊಂಡು ಉತ್ತರ ಕೊಡುತ್ತೇವೆ ಎನ್ನುವುದಾದರೆ ಮಂತ್ರಿಗಳು ಬೇಕಾಗಿಲ್ಲ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ನಾಗರಾಜ್‌ರವರೇ, ವೀರಪ್ಪ ಮೊಯಿಲಿಯವರು ಏನೋ ಮಾತನಾಡುತ್ತಾರೆ.

ಶ್ರೀ ಎಂ.ವೀರಪ್ಪ ಮೊಯಿಲಿ: ಮಾನ್ಯ ಉಪಾಧ್ಯಕ್ಷರೇ, ನಾನು ಎದ್ದು ನಿಂತು ಮಾತನಾಡುತ್ತಿರಲಿಲ್ಲ. ಮಾನ್ಯ ಸಚಿವರು ನಾವು ರೆಕಾರ್ಡ್ ನೋಡುತ್ತೇವೆ ಉತ್ತರ ಕೊಡುತ್ತೇವೆ ಎಂದು ಹೇಳಿದ್ದು, ಈ ತರಹದ ಪರಂಪರೆಯನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಡಿ. ಏಕೆಂದರೆ ಯಾವಾಗಲೂ ಕೂಡ ನೀವು ಒಂದು ಸಂಪ್ರದಾಯ ಇಟ್ಟುಕೊಳ್ಳಬೇಕು. ನಾವು ಇಲ್ಲಿ 1972ನೇ ಇಸವಿಯಿಂದ ಇಲ್ಲಿ ಇದ್ದೇವೆ. ಮತ್ತು ಮಾನ್ಯ ಘೋರ್ಪಡೆ ಸಹ ಹಿಂದಿನಿಂದಲೂ ಈ ಸದನದಲ್ಲಿ ಇದ್ದಾರೆ. ಸಂಪ್ರದಾಯ ಏನಿದೆ ಎಂದರೆ ಮಾನ್ಯ ಮುಖ್ಯಮಂತ್ರಿಗಳು ಯಾವುದಾದರೂ ಒಂದು ವಿಷಯದ ಬಗ್ಗೆ ಮಾತನಾಡುವಾಗ ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಇರಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರದಲ್ಲಿ ಮಾತನಾಡುತ್ತಾರೆ ಎಂದಾಗ ಮಾನ್ಯ ಮುಖ್ಯಮಂತ್ರಿಯವರು ಇರಲೇ ಬೇಕು. ಸ್ವಾಭಾವಿಕವಾಗಿ ಮಂತ್ರಿಗಳು ಎಲ್ಲರೂ ಇರಬೇಕು. ಏನಾದರೂ ಆ ಅನಿವಾರ್ಯತೆ ಆದಂತಹ ಕಾರಣದಿಂದ ಔಟ್ ಆಫ್ ಹೆಡ್ ಕ್ವಾಟ್ರಸ್ ಆದರೆ ಅವರ ಬದಲು ಎರಡನೇ ಸೀನಿಯರ್ ಇರಬೇಕು. ಇಬ್ಬರೂ ಇಲ್ಲ, ಅದರಿಂದ ಏನಾಗುತ್ತದೆ ಎಂದರೆ ಕ್ರಮೇಣ ವಿರೋಧ ಪಕ್ಷದ ಸ್ಥಾನ ಹೋಗುತ್ತದೆ. ಈ ಸದನದ ನಾಯಕರ ಒಂದು ಸ್ಥಾನಕ್ಕೆ ಕೂಡ ಯಾವರೀತಿಯಾದಂತಹ ಮಹತ್ವ ಕೂಡ

ಬರುವುದಿಲ್ಲ. ಆದ್ದರಿಂದ ಇದು ಬಹಳ ಸಲಿಗೆಯಿಂದ ತೆಗೆದುಕೊಳ್ಳಬೇಕಾದಂಥ ವಿಚಾರ ಅಲ್ಲ. ಒಂದು ವೇಳೆ ಮಾನ್ಯ ಮುಖ್ಯಮಂತ್ರಿಗಳು ಬರಲಿಕ್ಕೆ ಆಗುವುದಿಲ್ಲ ಎಂದರೆ he should specifically entrust it to the next senior most person. ಇದು ಎರಡೂ ಇಲ್ಲದಿದ್ದರೆ, ಯಾರಾದರೂ ಉತ್ತರ ಕೊಡುತ್ತಾರೆ ಎಂದು ಹೇಳಿದರೆ ಅದು ಆಗುವುದಿಲ್ಲ. ಆ ತರಹ ಮಾತು ಬರಬಾರದು. ಪಾಟೀಲರೆ, ತಾವು ಹಿರಿಯರು, ಆ ತರಹ ಮಾತು ಬರಬಾರದು. ಒಂದುವೇಳೆ ಅವರಿಗೆ ನಿಜವಾದ ತೊಂದರೆ ಇದ್ದರೆ ಈ ತರಹ ಮಾತನಾಡುವುದಲ್ಲ, ಅದಕ್ಕೆ ಒಂದು ವ್ಯವದಾನ ಇರುತ್ತದೆ, ಯಾವುದೋ ಒಂದು ಮಹತ್ವ ಇರುತ್ತದೆ, ಒಂದು ಸ್ಥಾನಮಾನ, ಗೌರವ ಇರುತ್ತದೆ. ಅದನ್ನೆಲ್ಲಾ ನಾವು ಗಮನದಲ್ಲಿಟ್ಟುಕೊಂಡು ಈ ಸದನವನ್ನು ನಡೆಸಿದರೆ ಚರ್ಚೆಗೆ ಮಹತ್ವ ಬರುತ್ತದೆ. ಇಲ್ಲದಿದ್ದರೆ ಬರುವುದಿಲ್ಲ.

ಉಪಾಧ್ಯಕ್ಷರು: ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾರಿಗೆ ಯಾವ ವಿಷಯಬರುತ್ತದೆ, ಯಾವ ಮಂತ್ರಿ ಇರಬೇಕು ಎನ್ನುವುದನ್ನು ಅವರಿಗೆ ಸ್ಪಷ್ಟವಾಗಿ ತಿಳಿಸಿ ಇಲ್ಲಿ ಹಾಜರಿರಲಿಕ್ಕೆ ನೀವು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಸಭೆಯನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು: ದಯಮಾಡಿ ಎಂ.ಪಿ.ಪ್ರಕಾಶ್‌ರವರು ಮಾತನಾಡುತ್ತಿದ್ದಾರೆ ದಯಮಾಡಿ ತಾವುಗಳೆಲ್ಲವೂ ಕುಳಿತುಕೊಳ್ಳಿ. ಅವರು ಮಾತನಾಡಿದಮೇಲೆ ತಾವು ಮಾತನಾಡಿ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ (ಬೀದರ್): ಮಾನ್ಯ ಉಪಾಧ್ಯಕ್ಷರೇ, ಅವರು ನನ್ನ ಮಾತುಗಳನ್ನು ಕೇಳಿದಮೇಲೆ ಹೇಳಲಿ. ಒಂದೇ ಒಂದು ನಿಮಿಷದಲ್ಲಿ ನಾನು ಹೇಳುತ್ತೇನೆ, ಅರಣ್ಯ ಸಚಿವರು ಇವೊತ್ತು ಯಾಕೆ ಬಂದಿಲ್ಲ, ಬೀದರ್‌ನಲ್ಲಿನ ಅಭಿವೃದ್ಧಿ ಕಾರ್ಯಗಳ ಬಗ್ಗೆ ಶಾಸಕರ ಮೀಟಿಂಗ್ ಕರೆದಿದ್ದಾರೆ, ನಾನು, ವಿಜಯ್‌ಕುಮಾರ್ ಖಂಡ್ರೆಯವರು, ಬಸವರಾಜ ಪಾಟೀಲ್ ಅಟ್ಟೂರ್ ಎಲ್ಲಾ ಶಾಸಕರು ಇಲ್ಲಿದ್ದೇವೆ....ಅವರೇನು ಅಲ್ಲಿ ಮೀಟಿಂಗ್ ಮಾಡುತ್ತಾರೆ?

ಉಪಾಧ್ಯಕ್ಷರು: ನೀವು ಆ ರೀತಿ ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ, ನೀವು ಆ ರೀತಿ ಮಾತನಾಡಿದರೆ ಒಳ್ಳೆಯದಲ್ಲ. ನಿಮ್ಮನ್ನು ಮಾತನಾಡಲಿಕ್ಕೆ ಕರೆದಿಲ್ಲ, ತಾವು ದಯಮಾಡಿ ಕುಳಿತುಕೊಳ್ಳಿ, ಮೊದಲು ಪ್ರಕಾಶ್‌ರವರು ಮಾತನಾಡಲಿ.

ಶ್ರೀ ಎಂ.ಪಿ.ಪ್ರಕಾಶ್: ಈಗ ಅವರು ಹೇಳಬೇಕಾದದ್ದನ್ನೆಲ್ಲಾ ಹೇಳಿದ್ದಾರೆ....

ಶ್ರೀ ಡಿ.ಕೆ.ಶಿವಕುಮಾರ್: ಹಾಗಲ್ಲ, ರೆಕಾರ್ಡ್‌ಗೆ ಹೋಗುವುದಿಲ್ಲ ಎಂದು

ಹೇಳುತ್ತಾರೆ ಅವರು....

ಉಪಾಧ್ಯಕ್ಷರು: ಹೌದು ಹೋಗುವುದಿಲ್ಲ, ಈಗ ಒಬ್ಬರನ್ನು ಕರೆದಾಗ ಮತ್ತೊಬ್ಬರು ಮಾತನಾಡಿದರೆ ಹೇಗೆ ರೆಕಾರ್ಡ್‌ಗೆ ಹೋಗುತ್ತದೆ ಶಿವಕುಮಾರ್‌ರವರೆ, ತಾವು ಆ ರೀತಿ ಪ್ರಶ್ನೆ ಮಾಡತಕ್ಕದ್ದಲ್ಲ. ಇದು ಒಳ್ಳೆಯ ಸಂಪ್ರದಾಯ ಅಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಅವರೇನು ನಿಮಗೆ ಮಾತನಾಡುವುದು ಬೇಡ ಎಂದು ಹೇಳಿದರಾ?

ಶ್ರೀ ಡಿ.ಕೆ.ಶಿವಕುಮಾರ್: ಉಪಾಧ್ಯಕ್ಷರೆ ಏನು ಹೇಳಿದರು ಅಂದರೆ ಅರಣ್ಯ ಸಚಿವರು ಅಲ್ಲಿ ಬರಗಾಲ ಪರಿಸ್ಥಿತಿ ಇದೆ ಅದಕ್ಕೋಸ್ಕರ ಶಾಸಕರನ್ನೆಲ್ಲಾ ಕರೆದು ಅಲ್ಲಿ ಮೀಟಿಂಗ್ ಮಾಡುತ್ತಿದ್ದಾರೆ ಎಂದು ಇವರು ಹೇಳುವುದು ನಾವು ಈ ಸದನದಲ್ಲಿದ್ದೇವೆ, ನಮ್ಮ ಪರಿಸ್ಥಿತಿ ಏನಾಗಬೇಕು, ನಮಗೆ ಅದನ್ನು ಹೇಳುವುದಕ್ಕೆ ಅವಕಾಶ ಇಲ್ಲ ಎಂದರೆ ಹೇಗೆ?

ಶ್ರೀ ಎಂ.ಪಿ.ಪ್ರಕಾಶ್: ಅದನ್ನು ಹೇಳುವುದಕ್ಕೆ ಒಂದು ಪದ್ಧತಿ ಇಲ್ಲವೇ? ನಾವು ಇಲ್ಲಿ ಸರ್ಕಾರದ ಪರವಾಗಿ ನಿಂತು ಮಾತನಾಡುತ್ತೇನೆ ಎಂದಾಗ, ಅವರಿಗೆ ಅವಕಾಶವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ.

ಉಪಾಧ್ಯಕ್ಷರು: ಹಶ್ಮಿಯವರೆ ತಾವು ಕುಳಿತುಕೊಳ್ಳಿ, ತಾವು ಸಭೆಯ ನಿಯಮಗಳನ್ನು ಪಾಲಿಸಿಕೊಂಡು ಒಳಗೆ ಬನ್ನಿ, ಈ ರೀತಿ ಮಾಡಿದರೆ ಹೇಗೆ?

ಶ್ರೀ ಎಂ.ಪಿ.ಪ್ರಕಾಶ್: ಉಪಾಧ್ಯಕ್ಷರೆ, ಈ ರೀತಿಯಾಗಿ ತಮ್ಮ ವೈಯಕ್ತಿಕವಾದಂಥ ವಿಚಾರಗಳನ್ನು ಹೇಳುವುದಕ್ಕೆ ಬದಲಾಗಿ, ಅಲ್ಲಿ ನಿಯಮಾವಳಿಗಳ ಪ್ರಕಾರ ನಡೆಯಬೇಕು ಎನ್ನುತ್ತೀರಾ ಅಥವಾ ಬೇಡ ಎನ್ನುತ್ತೀರಾ; ಇದು ಹೇಗೆ ನಡೆಯಬೇಕು ಎನ್ನುತ್ತೀರಿ? ನಿಯಮಾವಳಿಗಳ ಪ್ರಕಾರ ನಡೆಯಬೇಕು. ಅವರು ಸದನದಲ್ಲಿ ನೀವು ಕುಳಿತುಕೊಳ್ಳಿ, ಅವರು ಮಾತನಾಡಲಿ ಎಂದು ಹೇಳಿದರೆ ನಿಮಗೆ ಅವಕಾಶ ಕೊಟ್ಟು ನಾನು ಕುಳಿತುಕೊಳ್ಳುತ್ತಿದ್ದೆ. ಸರ್ಕಾರದ ಪರವಾಗಿ ನಾನು ಉತ್ತರ ಕೊಡುವುದಕ್ಕೆ ನಿಂತುಕೊಂಡಾಗ ತಾವು ಕುಳಿತುಕೊಳ್ಳಿ ಎಂದು ಹೇಳಿದ್ದಾರೆ ಅಷ್ಟೆ. ಆದ್ದರಿಂದ ದಯಮಾಡಿ ಸಹಕಾರವನ್ನು ಕೊಡಬೇಕು. ಸನ್ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಕೆ.ಡಿ.ಪಿ. ಮೀಟಿಂಗ್ ಕರೆದಿದ್ದರೆ ಅದು ತಪ್ಪಾಗಿರುತ್ತದೆ. ಎಲ್ಲಾ ಸದಸ್ಯರಿದ್ದಾಗಲೇ ಕರೆಯಬೇಕಾಗುತ್ತದೆ. ಆದರೆ ಬರಗಾಲಕ್ಕೆ ಸಂಬಂಧಪಟ್ಟಂಥ ವಿಚಾರಕ್ಕೆ ಸಂಬಂಧಪಟ್ಟಿರತಕ್ಕ ಮಂತ್ರಿಗಳು ಹೋಗಿದ್ದರೆ ಅದು ಯಾವ ಕಾರಣಕ್ಕಾಗಿ ಹೋಗಿದ್ದಾರೋ ಗೊತ್ತಿಲ್ಲ. ಆದ್ದರಿಂದ ನಾವು ಆ ವಿಚಾರದಲ್ಲಿ ಏನೇನು ಹೇಳಿಕೆ ಕೊಡಬೇಕಾಗಿರತಕ್ಕಂಥದ್ದು ಇದ್ದರೆ ಅದನ್ನು ತೆಗೆದುಕೊಳ್ಳುತ್ತೇವೆ, ಅದರ ಜೊತೆಗೆ ಗೃಹ ಖಾತೆಯನ್ನು ಹೊಂದಿರತಕ್ಕ ಮುಖ್ಯಮಂತ್ರಿಯವರೂ ಕೂಡ ಇದಕ್ಕೆ ಉತ್ತರ

ಕೊಡಬೇಕಾಗುತ್ತದೆ. ಮಾನ್ಯ ಹಿರಿಯರಾದ ವೀರಪ್ಪ ಮೊಯಿಲಿಯವರು ಏನು ಸಜೆಸ್ಟ್ ಮಾಡಿದರು ಒಂದು ಸಭಾ ಗೌರವ ದೃಷ್ಟಿಯಿಂದ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಸಭಾನಾಯಕರು ಇರುವುದು, ಸಭಾನಾಯಕರು ಇರುವಾಗ ವಿರೋಧಪಕ್ಷದ ನಾಯಕರು ಇರುವುದು, ಎಲ್ಲರೂ ಇರಬೇಕಾಗಿರತಕ್ಕಂಥದ್ದು ಅದು ಅಗತ್ಯವೂ ಕೂಡ. ಆದರೆ ಕೆಲವು ಅಪವಾದಗಳಿವೆ, ಎಂತಹ ಅಪವಾದಗಳು; ವಿರೋಧ ಪಕ್ಷದ ನಾಯಕರು ಬಜೆಟಿನ ಮೇಲೆ ಮಾತನಾಡುವಾಗ ಅಥವಾ ಯಾವುದೋ ಬಹಳ ಮುಖ್ಯವಾದಂಥ ವಿಷಯವನ್ನು ಪ್ರಸ್ತಾಪಿಸುವಂತಹದ್ದು ಮೊದಲೇ ಗೊತ್ತಿದ್ದಂಥ ಸಂದರ್ಭಗಳಲ್ಲಿ ಇರಲಿಕ್ಕೆ ಆಗುತ್ತದೆ. ಈಗ ಬೇರೆ ಬೇರೆ ಕಾರಣಗಳಿಗಾಗಿ ವಿರೋಧಪಕ್ಷದ ನಾಯಕರು ಬೇರೆ ಕಡೆಗೆ ಹೋಗುವ ಸಂದರ್ಭ ಬರಬಹುದು ಅಥವಾ ಮುಖ್ಯಮಂತ್ರಿಗಳು ಸರ್ಕಾರವನ್ನು ನಡೆಸುತ್ತಿರುವಾಗ ಹೋಗಬೇಕಾದಂಥದ್ದು ಇರುತ್ತವೆ. That is what I am telling. We do not know, it may come to-day only. It has come, but to-day he is leaving for Delhi. ಪ್ರಾಯಶಃ ಆ ದೃಷ್ಟಿಯೇ ವಿನಃ ಈ ಸಭೆಯ ಗೌರವ ಕಡಿಮೆ ಮಾಡಬೇಕು ಎನ್ನತಕ್ಕಂಥದ್ದು ಯಾವುದೂ ಇಲ್ಲ. ಅವರಿಗೆ ನಾವು ಹೇಳಿಕಳುಹಿಸಿದ್ದೇವೆ: ಮತ್ತೆ ಗೃಹ ಖಾತೆಯ ಮಂತ್ರಿಗಳೂ ಕೂಡ ಬರುತ್ತಾರೆ. ತಾವು ಅದನ್ನು ಇವೊತ್ತು ಪ್ರಸ್ತಾಪ ಮಾಡಬಹುದು ಎಂದು ಎನ್ನುವುದಾದರೆ ಪ್ರಸ್ತಾಪ ಮಾಡಬಹುದು. ಇಲ್ಲ ನಾಳೆ ಅವರೆಲ್ಲರೂ ಇರುವಾಗ ಪ್ರಸ್ತಾಪ ಮಾಡುತ್ತೇವೆ ಎನ್ನುವುದಾದರೆ ನಾಳೆ ಮಾಡಬಹುದು...

ಉಪಾಧ್ಯಕ್ಷರು: ತಾವು ಈ ದಿನವೇ ಪ್ರಸ್ತಾಪ ಮಾಡುವುದಿದ್ದರೂ ಮಾಡಿ, ಇಲ್ಲ ನಾಳೆ ಮಾಡುವುದಿದ್ದರೆ ನಾಳೆ ಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಮೀಟಿಂಗ್ ಇದ್ದಾಗ ಹೇಳಿದರು, ನಾನು 10 ಮತ್ತು 11ನೇ ತಾರೀಖಿನಂದು ಇರುವುದಿಲ್ಲ, ಅದಕ್ಕಾಗಿ ದಯವಿಟ್ಟು ನನ್ನದು ಏನೇ ಸಬ್ಜೆಕ್ಟ್ ಇದ್ದರೂಕೂಡ ಸಂಬಂಧಪಟ್ಟಂಥ ಮಂತ್ರಿಗಳು ಇದ್ದಾಗ ಪ್ರಸ್ತಾಪ ಮಾಡಿ, ಅಂತಹದ್ದೇನಾದರೂ ವಿಷಯ ಇದ್ದರೆ ಬೇಕಾದರೆ ಮಾತನಾಡೋಣ ಎಂದು ಅವರು ನನಗೆ ಹೇಳಿದ್ದರು. ನಾನು ನ್ಯಾಚುರಲಿ 10-11ನೇ ತಾರೀಖು ಇರುವುದಿಲ್ಲ ಇವೊತ್ತು 7.00 ಗಂಟೆಗೆ ಹೋಗುತ್ತಾರೆ ಎಂದು ಅಂದರೆ ಅದರ ಒಳಗಾಗಿ ನಮ್ಮ ರೂಲ್ 69 ಕೆಳಗೆ ಚರ್ಚೆಗೆ ಬರುತ್ತದೆ. ಹೇಗೂ ಅರಣ್ಯ ಸಚಿವರು ಇರುತ್ತಾರೆ, ಇದಕ್ಕೆ ಉತ್ತರ ಕೊಡುತ್ತಾರೆ ಎಂಬ ದೃಷ್ಟಿಯಿಂದಲೇ ನಾವು ಇದನ್ನು ಪ್ರಸ್ತಾಪ ಮಾಡಿದ್ದೇವೆ. ಪ್ರಸ್ತಾಪವನ್ನು ಸಡನ್ನಾಗಿ ಮಾಡಿಲ್ಲ. ಇದಕ್ಕೆ ನೋಟೀಸ್ ಕೊಟ್ಟು ಸುಮಾರು ನಾಲ್ಕು ದಿವಸ ಆಯಿತು. ನಾಲ್ಕು ದಿವಸ ಆದಮೇಲೆ ಇವೊತ್ತು ಅದನ್ನು ತಾವೇ ಲಿಸ್ಟ್ ಮಾಡಿದ್ದೀರಿ, ನ್ಯಾಚುರಲಿ ಲಿಸ್ಟ್ ಮಾಡಿದಾಗ ಸಂಬಂಧಪಟ್ಟಂಥ ಮಂತ್ರಿಗಳು ಇರಬೇಕು, ಗೃಹ ಖಾತೆ ಮಂತ್ರಿಗಳು ಇರಬೇಕು. ಅವರ ಕರ್ತವ್ಯವಾದರೂ

ಏನು? ಮುಖ್ಯಮಂತ್ರಿಗಳಾದರೂ ಸೌಜನ್ಯವನ್ನಾದರೂ ತೋರಿಸಿದರು ಏನೆಂದರೆ ನಾನು 10 ಮತ್ತು 11ನೇ ತಾರೀಖು ಇರುವುದಿಲ್ಲ ನಮ್ಮ ಜನತಾದಳದ ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗ್ ಇದೆ, ನಾನು ಅದಕ್ಕೆ ಹೋಗಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟಂಥವರು ಏನೇ ವಿಷಯ ಇದ್ದರೂ ಕೂಡ ಅದನ್ನು ಪ್ರಸ್ತಾಪ ಮಾಡಿದರೆ ಅವರು ಉತ್ತರವನ್ನು ಕೊಡುತ್ತಾರೆ ಎನ್ನತಕ್ಕಂಥ ಮಾತನ್ನಾದರೂ ಹೇಳಿದರು. ಇವರು ಬರಗಾಲ ಇದೆ ಎಂದು ಹೇಳಿ ಕಾಗದ ಬರೆದು ಎಲ್ಲಿಯವರೆಗೆ ಇರುವುದಿಲ್ಲ ಎಂದರೆ 12ನೇ ತಾರೀಖಿನವರೆಗೆ ಇರುವುದಿಲ್ಲವಂತೆ. ಮತ್ತೆ ಮುಂದೆ ಎಲ್ಲಿರುತ್ತಾರೆ? 13-14 ರಂದು ನಾವೇನು ಮುಂದೆ ಸೆಷನ್ ಸೇರುತ್ತಿದ್ದೇವೆಯೇ? ಈಗ ಇನ್ನೇನು ಸೆಷನ್ ಕ್ಲೋಸ್ ಆಗುತ್ತಾ ಇದೆ ಅನೇಕ ವಿಷಯಗಳು ಬರಬಹುದು ಮತ್ತು ಈ ವಿಷಯವನ್ನು ನಾವು ಚರ್ಚೆ ಮಾಡಲೇ ಬೇಕು ಎಂದು ಇನ್‌ಸಿಸ್ಟ್ ಮಾಡುವಾಗ ಇವೊತ್ತಿನ ದಿವಸ ಅವರು ಹಾಜರಿ ಇರದೇಹೋದರೆ ಆ ಕಾಗದವನ್ನು ಕೊಟ್ಟು ನಾವು ಶಾಸಕರ ಸಭೆಯನ್ನು ಕರೆದಿದ್ದೇವೆ ಎಂದರೆ, ಈಗ ಬಿ.ಎಸ್.ಪಿ. ಎಂ.ಎಲ್.ಎ. ಹಳ್ಳಿಯವರು ಇಲ್ಲೇ ಇದ್ದಾರೆ, ನಮ್ಮ ವಿಜಯ್‌ಕುಮಾರ್ ಖಂಡ್ರೆಯವರು ಇಲ್ಲೇ ಇದ್ದಾರೆ, ಬಸವರಾಜ ಪಾಟೀಲ್ ಅಟ್ಟೂರ್‌ರವರು ಇಲ್ಲೇ ಇದ್ದಾರೆ, ಆಮೇಲೆ ನಮ್ಮ ಎಂ.ಎಲ್.ಸಿ. ಖಂಡ್ರೆಯವರು ಇಲ್ಲೇ ಇದ್ದಾರೆ. ಅಲ್ಲಿ ಇನ್ನು ಯಾವ ಎಂ.ಎಲ್.ಎ.ಗಳಿದ್ದಾರೆ, ಅಲ್ಲಿರುವುದೇ 5 ಜನ ಎಂ.ಎಲ್.ಎ.ಗಳು. ಮತ್ತೆ ಬಿ.ಜೆ.ಪಿ. ಎಂ.ಎಲ್.ಎ.ಯವರೂ ಇಲ್ಲೇ ಇದ್ದಾರೆ. ಹೀಗಾಗಿ ಒಟ್ಟು 5 ಎಂ.ಎಲ್.ಎ.ಗಳು ಇಲ್ಲಿದ್ದು ಯಾವ ಎಂ.ಎಲ್.ಎ.ಗಳ ಜೊತೆಯಲ್ಲಿ ಬರಗಾಲದ ಚರ್ಚೆ ಮಾಡುವುದಕ್ಕೆ ಅಲ್ಲಿಗೆ ಹೋಗುತ್ತಾರೆ? ಮುಖ್ಯಮಂತ್ರಿಗಳು ತುಮಕೂರು ಚಿತ್ರದುರ್ಗ ಎಂ.ಎಲ್.ಎ.ಗಳನ್ನು ವಿಧಾನಸೌಧಕ್ಕೆ ಕರೆದು ಮೀಟಿಂಗ್ ಇಲ್ಲಿ ಮಾಡುತ್ತಾರೆ, ಇವರು ಬೀದರ್‌ಗೆ ಕರೆಸಿ ಮಾತನಾಡುತ್ತಾರಾ? ಏನು ಇದು? ಇದಕ್ಕೆನಾದರೂ ಒಂದು ಸಂಬಂಧ ಇರಬೇಕಾ ಬೇಡವಾ? ಒಂದು ಸುಳ್ಳನ್ನು ಮುಚ್ಚಿಡುವುದಕ್ಕೆ ನೀವು ಹತ್ತು ಸುಳ್ಳು ಹೇಳಿದರೆ ಹೇಗೆ? ಇದು ಸತ್ಯಕ್ಕೆ ದೂರವಾದಂಥದ್ದು. ಇದನ್ನು ಅವರು ಲಘುವಾಗಿ ತೆಗೆದುಕೊಂಡಿದ್ದಾರೆ, ಸದನದಲ್ಲಿ ಅಧ್ಯಕ್ಷರಿಗೆ ಏನು ಹೇಳಿದರೂ ನಡೆಯುತ್ತದೆ, ಜನ ಸುಮ್ಮನೆ ಕೂಡುತ್ತಾರೆ ಇದೇ ಅದರ ಅರ್ಥ. ಇಲ್ಲದಿದ್ದರೆ ಈ ರೀತಿಯಾಗಿ ಅವರಿಗೆ ಈ ಒಂದು ಸದನದ ಬಗ್ಗೆ ಗೌರವ ಇರುತ್ತಿತ್ತು ಎಂದರೆ ಅಥವಾ ಛೇರ್ ಬಗ್ಗೆ ಗೌರವ ಇದ್ದಿದ್ದರೆ ನಾನು ಸುಳ್ಳು ಹೇಳುತ್ತಿದ್ದೇನಲ್ಲಪ್ಪ, ನಾಳೆ ಯಾರಿಗಾದರೂ ಗೊತ್ತಾದರೆ ಹೇಗೆ ಎನ್ನತಕ್ಕಂಥ ಭಯ ಮನುಷ್ಯನಿಗೆ ಇದ್ದರೆ, ಸ್ವಲ್ಪವಾದರೂ ಅವಲೋಕನ ಮಾಡಿಕೊಳ್ಳತಕ್ಕಂಥ ಒಂದು ಚಿಂತನೆ ಅವರ ಹತ್ತಿರ ಇದ್ದಿದ್ದರೆ ಈ ರೀತಿಯಾಗಿ ಪತ್ರ ಬರೆಯತಕ್ಕಂಥದ್ದು, ಈ ರೀತಿಯಾಗಿ ಹೇಳತಕ್ಕಂಥದ್ದು ಯಾರೂ ಮಾಡುತ್ತಾ ಇರಲಿಲ್ಲ.

4.10 ಪಿ.ಎಂ

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಈ ಚರ್ಚೆ ಬಹಳ ಗಂಭೀರವಾಗಿ

ಆಗಬೇಕಾದಂಥಾದ್ದು ಆಗಿದೆ. ಇದರ ಬಗ್ಗೆ ಸರ್ಕಾರವು ಪ್ರಾಮಾಣಿಕವಾಗಿ ಮಾನ್ಯ ಮುಖ್ಯಮಂತ್ರಿಯವರೇ ಅನೇಕ ವಿಚಾರಗಳಲ್ಲಿ ನೇರವಾಗಿ ಉತ್ತರವನ್ನು ಕೊಡಬೇಕಾಗುತ್ತದೆ. ಇದಕ್ಕೆ ಕಾರಣವೇನೆಂದರೆ ಮಾನ್ಯ ಮುಖ್ಯಮಂತ್ರಿಯವರು ತಮಿಳುನಾಡಿಗೆ ನಾಲ್ಕು ಬಾರಿ ಹೋಗಿಬಂದಿರತಕ್ಕಂಥಾದ್ದು ಮತ್ತು ಅವರೊಡನೆ ಅಲ್ಲಿ ಸಂಭಾಷಣೆ ನಡೆದಿರುವಂಥಾದ್ದು ಮತ್ತು ಟೇಪನ್ನು ನೋಡಿರುವಂಥಾದ್ದು, ಮತ್ತು ಆ ಟೇಪಿನ ವಿನಿಮಯ ಮತ್ತು ಇವರು ಷರತ್ತುಗಳನ್ನು ಹಾಕಿರುವಂಥಾದ್ದು ಪ್ರತಿಯೊಂದು ವಿಚಾರಗಳನ್ನು ನಾವು ಗಮನದಲ್ಲಿಟ್ಟುಕೊಂಡಾಗ ಇದು ಬಹಳ ಗಹನವಾದಂತಹ ವಿಚಾರವಾಗುತ್ತದೆ. ಈ ವಿಚಾರದಲ್ಲಿ ಯಾರೋ ಮಂತ್ರಿಗಳು, ಸದಸ್ಯರುಗಳು ಉತ್ತರ ಕೊಡುತ್ತಾರೆಂಬ ವಿಚಾರದಲ್ಲಿ ತಕರಾರು ಏನೂ ಇಲ್ಲ. ಈ ಪ್ರಶ್ನೆ ಈ ಕಾಡುಗಳ್ಳ ವೀರಪ್ಪನ್ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವಾಗ ಮುಖ್ಯಮಂತ್ರಿಗಳು ಹಾಗೂ ಅರಣ್ಯ ಸಚಿವರು ಸದನದಲ್ಲಿದ್ದರೆ ಅದಕ್ಕೆ ಒಂದು ಶಕ್ತಿ ಬರುತ್ತದೆ. ಅನೇಕ ವಿಚಾರಗಳನ್ನು ನಾವು ಸರ್ಕಾರದಿಂದ ತಿಳಿಯುವಂಥಾದ್ದಕ್ಕೆ ಅವಕಾಶವಿರುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉಪ ಸಭಾಧ್ಯಕ್ಷರೆ, ವಿರೋಧಪಕ್ಷದ ನಾಯಕರಾದ ಶ್ರೀ ವೀರಪ್ಪಮೊಯಿಲಿಯವರು ಮಾತನಾಡಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ಅವರು ಆ ನಡವಳಿಕೆಯ ಪ್ರಕಾರ ಹೋಗಬೇಕೆನ್ನುವುದನ್ನು ಒಪ್ಪಿಕೊಂಡಿದ್ದಾರೆ. ಪುನಃ ಹೆಚ್ಚಿಗೆ ಮಾತನಾಡುವುದು ಏನು ಇದೆ, ಅವರು ತಂದಂತಹ ನಡವಳಿಕೆಗೆ ಒಪ್ಪಿಕೊಂಡಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ತಮ್ಮಲ್ಲಿ ನನ್ನ ಮನವಿ ಏನೆಂದರೆ ಈಗ ಸದನದಲ್ಲಿ ಮಾನ್ಯ ಪ್ರಕಾಶ್‌ರವರು, ಮಾನ್ಯ ಸಿಂಧ್ಯರವರು, ಮಾನ್ಯ ರಮೇಶ್ ಜಿಗಜಿಣಗಿಯವರು ಇದ್ದಾರೆ, ಮತ್ತೆ ಮಾನ್ಯ ನಾಣಯ್ಯನವರು ಬಂದಿದ್ದಾರೆ. ನಾವು ಈಗ ಡಿಬೇಟ್ ಅನ್ನು ನಿಲ್ಲಿಸುವುದಿಲ್ಲ, ಅದನ್ನು ಮುಂದುವರೆಸುತ್ತೇವೆ. ಆದರೆ ಒಂದು ಮನವಿ ಏನೆಂದರೆ ಇನ್ನು ಮುಂದಾದರೂ ಈ ರೀತಿಯಾಗಿ ತಪ್ಪು ಮಾಹಿತಿಗಳನ್ನು ಕೊಟ್ಟು ಪತ್ರವನ್ನು ಬರೆಯತಕ್ಕಂಥಾದ್ದು ಮತ್ತು ಹಾಜರಿಲ್ಲದೆ ಇರುವಂಥಾದ್ದು ಮಾನ್ಯ ಮುಖ್ಯಮಂತ್ರಿಯವರು ಹೇಳಿ ಹೋಗಿದ್ದಾರೆ, ನಾನು ಅದರ ಬಗ್ಗೆ ಸ್ಪಷ್ಟ ಪಡಿಸಿದ್ದೇನೆ. ಅವರು 10, 11ನೇ ದಿನಾಂಕದಂದು ಇರುವುದಿಲ್ಲವೆಂದು ಹೇಳಿದ್ದಾರೆ. ಇವತ್ತು ಅವರು ಇದ್ದಿದ್ದರೆ ಅಡ್ಡಿ ಇರಲಿಲ್ಲ. ಆದರೆ ಇವತ್ತು ನಾವು ಉತ್ತರವನ್ನು ಯಾರಿಂದಲೂ ಅಪೇಕ್ಷೆ ಪಡುವುದಿಲ್ಲ. ಅದನ್ನು ನಾವು ಏಕೆ ಅಪೇಕ್ಷೆ ಪಡುವುದಿಲ್ಲವೆಂದರೆ ಆ ತಯಾರಿ, ಆ ಮಾತುಕತೆಗಳು ಮಾನ್ಯ ಕರುಣಾನಿಧಿಯವರೊಡನೆ ಏನು ನಡೆಯಿತು ಎನ್ನತಕ್ಕಂಥಾದ್ದು ಮಾನ್ಯ ಮುಖ್ಯಮಂತ್ರಿಯವರೇ ಹೇಳುವುದು ಒಳ್ಳೆಯದು. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರು ಬಂದಮೇಲೆ 12ನೇ ತಾರೀಖಿನಂದು ಉತ್ತರವನ್ನು ಅವರೇ ಕೊಡಲಿ, ಈಗ ಅವರಿಗೆ ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗ್‌ಗೆ ಎಂದು 10, 11 ರಂದು ಹೋಗಿದ್ದಾರೆ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಉಪ ಸಭಾಧ್ಯಕ್ಷರೆ, ನಾನೂ ಸಹ ಮಾನ್ಯ ಮುಖ್ಯಮಂತ್ರಿಯವರೊಡನೆ ಮೂರು ಮೀಟಿಂಗ್‌ನಲ್ಲಿ ಇದ್ದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಉಪಾಧ್ಯಕ್ಷರೇ, There are other angles.. ಮಾನ್ಯ ಕರುಣಾನಿಧಿಯವರ ಜೊತೆಯಲ್ಲಿ ಎರಡು ಸಾರಿ ಇದ್ದೀರಿ. ಬೇರೆ ಹೋಂಪೋರ್ಟ್ ಫೋಲಿಯೊ ಅವರ ಜೊತೆಯಲ್ಲೇ ಇದೆ, ಮತ್ತು ಫಾರೆಸ್ಟ್, ಅದಕ್ಕಾಗಿ ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಅದಕ್ಕಾಗಿ 12ನೇ ತಾರೀಖಿನಂದು ಮಾನ್ಯ ಮುಖ್ಯಮಂತ್ರಿಯವರಿಂದಲೇ ನಮಗೆ ಸ್ಪೆಸಿಫಿಕ್ ಉತ್ತರವನ್ನು ಕೊಡಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಾವು ಅವರು ಇದ್ದರೆ ಮಾತನಾಡುತ್ತೇವೆ ಇಲ್ಲದಿದ್ದರೆ ಇಲ್ಲವೆಂದಲ್ಲ. ಕೊನೆಯ ಪಕ್ಷ ಈ ವಿಷಯ ರಾಜ್ಯದ ಜನತೆಗಾದರೂ ಗೊತ್ತಾಗಬೇಕಲ್ಲಾ. ಈ ಸದನದಲ್ಲಿ ವೀರಪ್ಪನ್ ಬಗ್ಗೆ ಪ್ರಸ್ತಾಪ ಮಾಡಿ ಏನು ನಡೆದಿದೆ ಎಂಬ ತಿಳುವಳಿಕೆಯನ್ನು ಜನರಿಗೆ ನಾವು ಕೊಡದಿದ್ದರೆ ನಮ್ಮ ಕರ್ತವ್ಯ ಚ್ಯುತಿಯಾಗುತ್ತದೆನ್ನುವಂತಹ ಮಾತನ್ನು ಹೇಳುತ್ತೇನೆ. ಇವತ್ತು ನಾವು ಪ್ರಸ್ತಾಪ ಮಾಡುತ್ತೇವೆ. ಮಾನ್ಯ ವಿರೋಧಪಕ್ಷದ ನಾಯಕರುಗಳು ಮಾತನಾಡಲಿ, ಆ ಕಡೆಯವರೂ ಕೂಡ ಬೇಕಾದರೆ ಇದರ ಮೇಲೆ ಮಾತನಾಡುವುದಾದರೆ ಮಾತನಾಡಲಿ, ಆದರೆ ಉತ್ತರವನ್ನು ಮಾತ್ರ ಮಾನ್ಯ ಮುಖ್ಯಮಂತ್ರಿಯವರೇ 12ನೇ ತಾರೀಖಿನಂದು ಕೊಡಬೇಕು. ಆ ದಿವಸ ಬದಲಾವಣೆಯಾಗುವುದು ಬೇಡ, ಜ್ವರ ಬಂತು, ಅಲ್ಲಿ ಹೋದರು, ಇಲ್ಲಿ ಹೋದರೆಂಬುದು ಬೇಡ. ದಯವಿಟ್ಟು ನೇರವಾಗಿ ಉತ್ತರವನ್ನು ಕೊಡುವಂತೆ ಮಾಡಬೇಕು. ಮಾನ್ಯ ಉಪಾಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಕಾಡುಗಳ್ಳ, ನರಹಂತಕ ವೀರಪ್ಪನ್ ಬಗ್ಗೆ ಸದನದಲ್ಲಿ ಚರ್ಚಿಸಲು ಹಲವಾರು ಬಾರಿ ಒತ್ತಾಯ ಮಾಡಿದಾಗ ಸರ್ಕಾರವು ಒತ್ತೆಯಾಳುಗಳ ಬಿಡುಗಡೆಯಾಗುವ ಪರಿಸ್ಥಿತಿ ಇದ್ದು, ಹಾಗೂ ವೀರಪ್ಪನ್ ಶರಣಾಗುವ ಇಂಗಿತವನ್ನು ವ್ಯಕ್ತಪಡಿಸಿರುವ ಕಾರಣ ಅದನ್ನು ಸದನದಲ್ಲಿ ಚರ್ಚಿಸುವುದು ಬೇಡವೆಂಬುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ ಒತ್ತೆಯಾಳುಗಳ ಬಿಡುಗಡೆಯಾಗಿದ್ದು ವೀರಪ್ಪನ್ ಶರಣಾಗದೆ ಮತ್ತೆ ಕಾಡಿನಲ್ಲಿ ನುಸುಳಿಕೊಂಡಿದ್ದು ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ಉಂಟಾಗಿರುವ ಸಂದರ್ಭದಲ್ಲಿ ಈ ವಿಚಾರವನ್ನು ಸದನದಲ್ಲಿ ಇಂದು ಚರ್ಚಿಸಲು ನಿಯಮ 69ರ ಅಡಿಯಲ್ಲಿ ಅವಕಾಶವನ್ನು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ ಎಂದು ನಾನು ಇದನ್ನು ಕಳುಹಿಸಿದ್ದೇನೆ. ಇದರ ಅಡಿಯಲ್ಲಿ ಇದನ್ನು ಚರ್ಚೆ ಪ್ರಾರಂಭ ಮಾಡಬೇಕಾಗಿದೆ. ಇವತ್ತು ಪ್ರಮುಖವಾಗಿ ಪ್ರಸ್ತಾಪ ಮಾಡುವುದೇನೆಂದರೆ, ಮುಂಜಾನೆ ಈ ವಿಚಾರವಾಗಿ ಝಿ ಟಿ.ವಿಯಲ್ಲಿ ಇನ್‌ಸೈಟ್ ಎಂದು ನ್ಯೂಸ್ ಬರುತ್ತದೆ. ಇದರಲ್ಲಿ ಅವರ ಇತಿಹಾಸವನ್ನು 5- 10 ನಿಮಿಷದಲ್ಲಿ ಅವನು ಯಾವ ರೀತಿಯಲ್ಲಿ ಅಡವಿಯಲ್ಲಿ ಅಡಗಿಕೊಂಡಿದ್ದಾನೆ, ಯಾವ ರೀತಿ 'ನಕ್ಕೀರನ್ ಪತ್ರಿಕೆ'ಯ ಸಂಪಾದಕರಾದ ಗೋಪಾಲ್ ಅವರನ್ನು ಭೇಟಿಯಾಗುತ್ತಾರೆ, ಬೇರೆ ಬೇರೆ ವಿಚಾರಗಳನ್ನೂ ಕೂಡ ತಮಿಳುನಾಡಿನ

ಮುಖ್ಯಮಂತ್ರಿಯವರ ಮತ್ತು ನಮ್ಮ ಮುಖ್ಯಮಂತ್ರಿಯವರ ರಿ-ಆ್ಯಕ್ಷನ್, ಫಾರೆಸ್ಟ್ ಮಂತ್ರಿಯವರದು, ಮತ್ತು ಹೋಂ ಮಿನಿಸ್ಟರ್‌ರವರದ್ದು ಮತ್ತು ಶ್ರೀ ಶಂಕರ್ ಬಿದರಿಯವರದ್ದು ಇಂಟರ್‌ವ್ಯೂ ಇವೆಲ್ಲವೂ ಬಂತು. ಈ ಒಂದು ನ್ಯೂಸ್ ವೀರಪ್ಪನ್‌ನ ಇನ್ಸಿಡೆಂಟ್ ಇವತ್ತು ಇಡೀ ಪ್ರಪಂಚದಲ್ಲೇ ಹರಡಿದೆ. ಇದು ಬಿ.ಬಿ.ಸಿ. ನ್ಯೂಸ್, ಝಿ.ಟಿ.ವಿ ಹೀಗೆ ಅನೇಕ ಮಾಧ್ಯಮಗಳಲ್ಲಿ ಬಂದಿದೆ. ಅದಕ್ಕೆ ಏನು ಪ್ರಮುಖವಾದಂತಹ ಕಾರಣವಿದೆ, ಅಥವಾ ಅವನು ಏನು ಇವತ್ತು ಬೇಡಿಕೆ ಇಟ್ಟಿದ್ದಾನೆ ಹೆದುರಿಸತಕ್ಕಂಥದ್ದು, ಹಣ ಕೇಳತಕ್ಕಂಥಾದ್ದು ಅದು ಯಾವ ಕಾರಣಕ್ಕಾಗಿ? ಅದಕ್ಕೆ ಸರ್ಕಾರದ ಕುಮ್ಮಕ್ಕು ಇದೆ ಏನು? ಅಲ್ಲಿ ಇರತಕ್ಕಂಥ ಜನರ ಕುಮ್ಮಕ್ಕು ಇದೆ ಏನು ಅಥವಾ ತಮಿಳುನಾಡಿನ ಸರ್ಕಾರದ ಕುಮ್ಮಕ್ಕು ಇದೆ ಏನು ಅಥವಾ ನಮ್ಮ ಅಧಿಕಾರಿಗಳು ಅವನನ್ನು ಹಿಡಿಯುವಲ್ಲಿ ವಿಫಲರಾಗಿದ್ದಾರೋ ಅಥವಾ ನಮ್ಮ ಎಸ್.ಟಿ.ಎಫ್ ತಂಡ ವಿಫಲವಾಗಿದೆಯಾ? ನಾವು ಎಲ್ಲಿ ತಪ್ಪಿದ್ದೇವೆಂಬುದನ್ನು ಕೂಡ ನಾವು ತಿಳಿದುಕೊಳ್ಳಬೇಕಾಗುತ್ತದೆ. ಅದನ್ನು ನಾವು ತಿಳಿದುಕೊಳ್ಳದೆ ಹೋದರೆ ಅದರ ಬಗ್ಗೆ ನಾವು ಮಾತನಾಢದೆ ಹೋದರೆ ಖಂಡಿತವಾಗಿ ಮುಂದಿನ ಕಾರ್ಯಕ್ರಮವನ್ನು ಇದರ ಬಗ್ಗೆ ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲ. ಇವತ್ತು ಇವನು ಅನ್ ಚಾಲೆಂಜ್ಡ್ ಕಿಂಗ್ ಆಗಿದ್ದಾನೆ. ರಾಜರುಗಳಲ್ಲಿ ಇನ್ನೊಬ್ಬ ರಾಜನು ಧಾಳಿ ಮಾಡಿ ಹಿಡಿಯಬಹುದಾಗಿತ್ತು. ಆದರೆ ಇವನನ್ನು ಯಾರೂ ಹಿಡಿಯುವುದಕ್ಕೆ ಸಾಧ್ಯವಾಗಿಲ್ಲ. ಇವತ್ತು ಇಡೀ ಭಾರತ ದೇಶ ಒಂದಾಗಿ, ಇವತ್ತು ಕನ್ಯಾಕುಮಾರಿಯಿಂದ ಕಾಶ್ಮೀರವರೆಗೆ ಈ ಕಡೆ ವೆಸ್ಟ್ ಬೆಂಗಾಲ್‌ನಿಂದ ಗುಜರಾತ್‌ವರೆಗೆ ಒಂದಾದರೂ ಕೂಡ ಇಂತಹ ದೊಡ್ಡ ಸಾಮ್ರಾಜ್ಯದಲ್ಲೂ ಕೂಡ ಇಂತಹ ವೀರಪ್ಪನ್‌ನಂಥ ಒಬ್ಬ ಕಳ್ಳನನ್ನು ಹಿಡಿಯುವುದಕ್ಕೆ ಆಗುತ್ತಿಲ್ಲವಲ್ಲವೆಂಬ ವ್ಯಥೆ ಇವತ್ತು ಆಗುತ್ತಾ ಇದೆ. ಅದಕ್ಕೆ ಎಲ್ಲಾ ಸರ್ಕಾರಗಳು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ. ಆದರೆ ಆ ಪ್ರಯತ್ನದ ಫಲವಾಗಿ ಯಾವ ಒಂದು ಹಂತದಲ್ಲಿ ಈ ಮೂಮೆಂಟ್ ನಿಂತಿತ್ತು, ಯಾವ ಹಂತದಲ್ಲಿ ಕಾಡಿನಲ್ಲಿರತಕ್ಕ ಮನುಷ್ಯ ಅವನಿಗೂ ಕೂಡ push to the wall ಎಂದು ಹೇಳುತ್ತಾರಲ್ಲಾ, ಹಾಗೆ ಕೊನೆಗೆ ಅವನ ಬಾಡಿಯನ್ನು ಒಯ್ಯೋವಷ್ಟು ತಳ್ಳುವಷ್ಟು, ಮೂಲೆಗೆ ಹಾಕುವಷ್ಟು ಪ್ರಯತ್ನ ಸರ್ಕಾರದಿಂದ ನಡೆದಿದೆ. ಇಷ್ಟು ನಡೆದ ಮೇಲೆ ಮತ್ತೆ ಮತ್ತೆ ಅದನ್ನು ಸಡಿಲು ಮಾಡುವಂಥ ಪ್ರಯತ್ನ ಏಕೆ ಮಾಡಿತು. ಅವನು ದಿನಾಂಕ: 12-7-1997ಕ್ಕೆ ಹತ್ತು ಜನ ಲೋವರ್ ಫಾರಸ್ಟ್ ಆಫೀಸರ್‌ಗಳನ್ನು ಬುರುಡೆ ಫಾರಸ್ಟ್ ಕೊಳ್ಳೆಗಾಲದ ಹತ್ತಿರ ಅವರನ್ನು ಅರೆಸ್ಟ್ ಮಾಡಿಕೊಂಡು ಹೋದ, ಅವರನ್ನು ಕರೆದುಕೊಂಡು ಹೋದ ಮೇಲೆ ಜೀಪ್ ಡ್ರೈವರ್ ಬಸವರಾಜ್ ಜೊತೆಗೆ ಎರಡು ಕ್ಯಾಸೆಟ್ ಕೊಟ್ಟು ಕರ್ನಾಟಕೆ ಮತ್ತು ತಮಿಳುನಾಡಿನ ಚೀಪ್ ಮಿನಿಸ್ಟರ್‌ಗಳಿಗೆ ಕೊಡಬೇಕೆಂದು ಕಳುಹಿಸಿದರು. ಅವನು ಕಳುಹಿಸಿದ ಮೇಲೆ ಮುಂದೆ ತಮಿಳುನಾಡಿನ ಮುಖ್ಯಮಂತ್ರಿಯವರು ಆ್ಯಕ್ಟ್ ಮಾಡುತ್ತಾರೆ, ನಮ್ಮ ಕರ್ನಾಟಕ ಮುಖ್ಯಮಂತ್ರಿಗಳೂ ಕೂಡ ಅದಕ್ಕೆ ಸ್ಪಂದಿಸುತ್ತಾರೆ.

(ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್‌ರವರು) ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಈ ಒಂದು ಮೆಸೇಜನ್ನು 14ನೇ ತಾರೀಖಿನಂದು ತಮಿಳುನಾಡಿನ ಮುಖ್ಯಮಂತ್ರಿಗಳು ಫ್ಲಾಷ್ ಮಾಡುತ್ತಾರೆ. ಅಂದರೆ ಅವನು 12ನೇ ತಾರೀಖಿನಂದು ಅಧಿಕಾರಿಗಳನ್ನು ಅರೆಸ್ಟ್ ಮಾಡಿ ವಶಕ್ಕೆ ತೆಗೆದುಕೊಳ್ಳುತ್ತಾನೆ, 13ನೇ ತಾರೀಖಿನಂದು ಆ ಕ್ಯಾಸೆಟ್ ಅನ್ನು ಕೊಟ್ಟು ಆ ಡ್ರೈವರನ್ನು ಕಳುಹಿಸಿ ಕೊಡುತ್ತಾನೆ. 14ನೇ ತಾರೀಖು ಈ ನ್ಯೂಸ್ ತಮಿಳುನಾಡಿನ ಮುಖ್ಯಮಂತ್ರಿಗಳ ಮುಖಾಂತರ ಪ್ಲಾಷ್ ಆಗುತ್ತದೆ. 15ನೇ ತಾರೀಖು ತಮಿಳುನಾಡಿನ ಸರ್ಕಾರ ಶ್ರೀ ಗೋಪಾಲ್ ನಕ್ಕಿರನ್ ಪತ್ರಿಕೆ ಸಂಪಾದಕ for negotiations to free hostages says general amensty not possible but this life will be protected'.. ಅದರ ಪ್ರಕಾರ ಅವನು ಏನೇನು ಕೇಳಿದ್ದಾನೆ, ಆದರ ಕಂಡೀಷನ್‌ಗಳನ್ನು ಹಿಂದೆ ನಾವು ಎಲ್ಲಾ ಹೇಳಿದ್ದೇವೆ. ಅಂದರೆ ಯಾವ ರೀತಿಯಾಗಿ ಅವನಿಗೆ ಜೀವದಾನ ಮಾಡಬೇಕು, ಎಷ್ಟು ಹಣವನ್ನು ಕೊಡಬೇಕು, ಏನೇನು ಕಂಡೀಷನ್ ಎಂಬುದನ್ನು ಮೊದಲೇ ಅವನು ಹೇಳಿದ್ದ. ಮತ್ತೆ ನಮ್ಮ ಪೊಲೀಸ್ ಆಫೀಸರ್ಸ್‌ಗಳೂ ಕೂಡ ದಿ: 14-7-1997ಕ್ಕೆ ಹೋಂ ಸೆಕ್ರೆಟರಿ ಶ್ರೀ ಮುತ್ತಣ್ಣ ಹಾಗೂ ಡಿ.ಜಿ.ಪಿ.ಶ್ರೀನಿವಾಸಲುರವರು ಹೋಗಿದ್ದರು. ನಮಗೆ ಏನು ಸಂಶಯ ಬರುತ್ತಿದೆ ಎಂದರೆ, ವೀರಪ್ಪನ್ ತನ್ನ ವಶಕ್ಕೆ ತೆಗೆದುಕೊಂಡಿದ್ದ ಈ 10 ಜನ ಯಾರು? ಅವರ ಆ್ಯನ್‌ಸಿಡೆಂಟ್ ಏನು? ಅವರು ಫಾರೆಸ್ಟ್ ಅಧಿಕಾರಿಗಳೇ ಇರಬಹುದು. ಅವರ ಹಿನ್ನೆಲೆ ಏನಿದೆ? Whether they are reliable officers or whether they are unreliable officers. Whether they are hand in glove with Veerappan? ಅವರು ಫಾರೆಸ್ಟ್ ವರ್ಕರ್ಸ್ ಅಥವಾ ಫಾರೆಸ್ಟ್ ಗಾರ್ಡ್ಸ್ ಇರಬಹುದು. ಈ ಫಾರೆಸ್ಟ್ ಗಾರ್ಡ್ಸ್ ಅಥವಾ ಅರಣ್ಯದಲ್ಲಿ ಕೆಲಸ ಮಾಡತಕ್ಕ ಕೆಲಸಗಾರರ ಬ್ಯಾಕ್‌ಗ್ರೌಂಡ್ ಏನಿದೆ? ನಾವು ಇಲ್ಲಿ ಯಾವ ರೀತಿಯಿಂದ ನೋಡಿದರೂ ಇಲ್ಲಿ ಲೈಟ್ನಿಂಗ್ ಸ್ಪೀಡ್‌ನಲ್ಲೇ ಎಲ್ಲಾ ಘಟನೆಗಳು ನಡೆದಿರುವುದು ಕಂಡು ಬರುತ್ತದೆ. 12ರಂದು ವೀರಪ್ಪನ್ ಒತ್ತೆಯಾಳುಗಳನ್ನು ಅರೆಸ್ಟ್ ಮಾಡುತ್ತಾನೆ, 13ಕ್ಕೆ ಅವನು ಅಲ್ಲಿಂದ ಒಬ್ಬನನ್ನು ಬಿಡುಗಡೆ ಮಾಡಿ ಎರಡು ಕ್ಯಾಸೆಟ್‌ಗಳೊಂದಿಗೆ ಕಳುಹಿಸುತ್ತಾನೆ, 14ರಂದು ನಮ್ಮ ಅಧಿಕಾರಿಗಳು ಹೋಗುತ್ತಾರೆ, ಅದೇ 14ರಂದು ಮೆಸೇಜ್ ಪ್ಲಾಷ್ ಮಾಡುತ್ತಾರೆ, 15ರಂದು ಆರ್.ಆರ್.ಗೋಪಾಲ್‌ಗೆ ಮಾನ್ಯ ಮುಖ್ಯಮಂತ್ರಿಗಳು ನೆಗೋಷಿಯೇಷನ್‌ಗೆ ಕಳುಹಿಸುತ್ತಾರೆ, ಅಷ್ಟೇ ಅಲ್ಲದೆ ಬಹುಶಃ ಅದೇ ಸಂಬಂಧದಲ್ಲಿ ಅಂದಿನ ದಿವಸವೇ ಅಂದರೆ 15ನೇ ತಾರೀಖೇ ಮಾನ್ಯ ನಾಣಯ್ಯನವರು, ಮಾನ್ಯ ರೋಷನ್ ಬೇಗ್‌ರವರು ಇವರೆಲ್ಲರ ಜೊತೆ ಮಾನ್ಯ ಮುಖ್ಯಮಂತ್ರಿಗಳೂ ಸಹಿತ ಚೆನ್ನೈಗೆ ಇಲ್ಲಿಂದ ವಿಮಾನದಲ್ಲಿ ಹೋಗುತ್ತಾರೆ. ಈ ಘಟನಾವಳಿಗಳನ್ನೆಲ್ಲಾ ನೋಡಿದರೆ ಇದು ಎಷ್ಟು ತರಾತುರಿಯಲ್ಲಿ ನಡೆದಿದೆ ಎಂಬುದು ಗೊತ್ತಾಗುತ್ತದೆ. ಒಂದು ದಿವಸ ಕೂಡ ವೇಸ್ಟ್ ಮಾಡಿಲ್ಲ. ನಾನು ಈಗಾಗಲೇ

12-15ನೇ ತಾರೀಖಿನ ಸೀಕ್ವೆನ್ಸ್ ತಮಗೆ ಹೇಳಿದೆ. ಇಷ್ಟೊಂದು ಸ್ಪೀಡ್‌ನಲ್ಲಿ ಘಟನಾವಳಿಗಳು ನಡೆಯಬೇಕಾದರೆ ಇದರ ಹಿನ್ನೆಲೆಯಲ್ಲಿ ಏನಾದರೂ ಇದೆಯೇ? ಶ್ರೀ ಗೋಪಾಲ್‌ರವರು ವೀರಪ್ಪನ್ ಜೊತೆಗೆ ನೆಗೋಷಿಯೇಷನ್ ಮಾಡಿ ಕೆಲವು ಬಡವರ ಜೀವವನ್ನು ಉಳಿಸಿದರು ಎನ್ನತಕ್ಕಂಥ ಒಂದು ವಾದವೂ ಇದೆ, ಅದಕ್ಕೆ ನಾವು ಒಪ್ಪೋಣ. ಒತ್ತೆಯಾಳುಗಳ ಕೊಲೆಯಾಗಬೇಕಾಗಿತ್ತೇನೋ ಎನ್ನುವಂತಹ ಭಾವನೆ ನಿಮಗೆ ಇತ್ತೇನೋ ಎಂದು ಕೆಲವರು ಪ್ರಶ್ನೆಯನ್ನು ಕೇಳಬಹುದು. ಇಡೀ ಈ ಸದನದಲ್ಲಿರತಕ್ಕ ಎಲ್ಲಾ ಸದಸ್ಯರು ಮತ್ತು ಕರ್ನಾಟಕ ರಾಜ್ಯದಲ್ಲಿರತಕ್ಕ ಜನತೆಯ ಇಚ್ಛೆ ಏನಿತ್ತು ಅಂದರೆ, ಹೇಗಾದರೂ ಮಾಡಿ ಅವರು ಬದುಕಲಿ, ಅವರು ಕೊಲೆಯಾಗತಕ್ಕದ್ದು ಬೇಡ ಎನ್ನುವ ಇಚ್ಛೆ ಇತ್ತು. ಅದೇ ಒಂದು ದೃಷ್ಟಿಯಿಂದ ನಾವೂ ಕೂಡ ಇದರಲ್ಲಿ ನಿಜವಾಗಿಯೂ ಒಂದು ರೀತಿಯ ಅರ್ಥ ಇದೆ ಎಂದು ತಿಳಿದುಕೊಂಡೆವು. ಅದಕ್ಕಾಗಿ ಏನೋ ತರಾತುರಿಯಲ್ಲಿ ಕೆಲಸ ಮಾಡುತ್ತಿದ್ದಾರೆ, ಇದಕ್ಕೆ ನಾವು ಅಡ್ಡಿ-ಅಡಚಣೆ ಏಕೆ ಮಾಡಬೇಕು ಎಂದು ಸುಮ್ಮನಾದೆವು. ನಾನು ಸರೆಂಡರ್ ಆಗಬೇಕಾದರೆ ಕೆಲವೊಂದು ಷರತ್ತುಗಳನ್ನು ಪೂರೈಸಬೇಕೆಂದು ಆತ ಸರ್ಕಾರಕ್ಕೆ ಹೇಳಿದ. ಆಗ ನಾವು ಸದನದಲ್ಲಿ ಆ ವಿಷಯವನ್ನು ಪ್ರಸ್ತಾಪಿಸಿ ಆತ ಹಾಕಿರುವ ಕಂಡೀಷನ್ಸ್‌ಗಳೇನು? ಯಾವ ಕಂಡೀಷನ್ಸ್‌ಗೆ ನೀವು ಒಪ್ಪಿಕೊಂಡಿದ್ದೀರಿ? ಮುಂತಾದ ವಿಷಯಗಳನ್ನು ತಿಳಿಸುವಂತೆ ಸರ್ಕಾರವನ್ನು ಕೇಳಿದೆವು. ಆಗ ಸರ್ಕಾರದವರು ನಮಗೆ ಆತ ಸರೆಂಡರ್ ಆಗುತ್ತೇನೆ ಎಂದು ನಮಗೆ ಹೇಳಿದ್ದಾನೆ, ಸುಮಾರು 10 ಜನರನ್ನು ಆತ ಒತ್ತೆಯಾಳುಗಳಾಗಿ ಇಟ್ಟುಕೊಂಡಿದ್ದಾನೆ, ಅವನು ಆ ರೀತಿ ಒತ್ತೆಯಾಳುಗಳನ್ನು ತನ್ನ ಬಳಿ ಇಟ್ಟುಕೊಂಡಿರುವಾಗ, ನಾವೇನಾದರೂ ಮಾತನಾಡಿದರೆ, ನಮ್ಮ ಬಾಯಿಂದ ತಪ್ಪಿ ಯಾವುದಾದರೂ ಒಂದುನುಡಿ ಹೋದರೆ, ಅದೇ ಅವರ ಕೊಲೆಗೆ ಕಾರಣವಾಗಬಹುದು ಎನ್ನತಕ್ಕಂಥ ವಾದವನ್ನು ಸರ್ಕಾರದವರು ನಮ್ಮ ಮುಂದೆ ಇಟ್ಟಮೇಲೆ, ನಾವೆಲ್ಲರೂ ಕೂಡ ಇದರ ಬಗ್ಗೆ ಮಾತನಾಡುವುದೇ ಬೇಡ ಎಂದು ಮಾನವೀಯ ದೃಷ್ಟಿಯಿಂದ ಸುಮ್ಮನಾದೆವು. ಆದರೆ ವೀರಪ್ಪನ್ ಸರ್ಕಾರದವರ ಮುಂದೆ ಇಟ್ಟ ಷರತ್ತುಗಳು ಏನೆಂದರೆ,

General amnesty to Veerappan and his associates; Withdrawal of all cases filed against Veerappan and his associates in Karnataka and Tamilnadu; Payment of compensation of Rs.100 crores to rehabilitation of families of his associates killed by the police; Black cat commandoes for his security; Film productioin of his life on the lines of Bandit Queen for Phoolan devi. ಈ ಐದು ಕಂಡೀಷನ್ಸ್‌ಗಳನ್ನು ಸರ್ಕಾರದವರು ಒಪ್ಪಿಕೊಂಡರೆ ನಾನು ಒತ್ತೆಯಾಳುಗಳನ್ನು ಬಿಡುಗಡೆ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ವೀರಪ್ಪನ್ ಪತ್ರಿಕೆ ಮೂಲಕವಾಗಲೀ,

ಕ್ಯಾಸೆಟ್ ಮುಖಾಂತರವಾಗಲೀ, ಅಥವಾ ಅವನಿಗೆ ಬೇಕಾದಂತಹ, ಯಾರು ಮಧ್ಯಸ್ಥಿಕೆ ಮಾಡುತ್ತಿದ್ದರು, ಆ ಮೀಡಿಯೇಟರ್ ಮೂಲಕ ಈ ಷರತ್ತುಗಳನ್ನು ಹೇಳಿ ಕಳುಹಿಸಿದಮೇಲೆ, ಇದು ಪತ್ರಿಕೆಯಲ್ಲೂ ಕೂಡ ಬಂತು ಮತ್ತು ಅನೇಕ ಜನ ಇದರ ಬಗ್ಗೆ ಟೀಕೆಯನ್ನೂ ಕೂಡ ಮಾಡಿದರು. ಇದರಲ್ಲಿ ಎಷ್ಟು ಸರಿಯೋ, ತಪ್ಪೋ ಎನ್ನತಕ್ಕಂಥದ್ದು ಒಂದೆಡೆ ಇರಲಿ. ಆದರೆ ಈ ಐದು ಕಂಡೀಷನ್ಸ್ ಅವನು ಹಾಕಿದ್ದರೂ ಕೂಡ ಅವನಿಗೆ....

ಅಧ್ಯಕ್ಷರು: ಮಾನ್ಯ ಖರ್ಗೆಯವರೇ, ನಿಮಗೆ ತೊಂದರೆ ಮಾಡಬೇಕೆನ್ನುವ ಉದ್ದೇಶದಿಂದ ನಾನು ಮಧ್ಯೆ ಪ್ರವೇಶಿಸುತ್ತಿಲ್ಲ. Is it necessary to discuss all these things?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದನ್ನೆಲ್ಲಾ ನಾನೇಕೆ ಇಲ್ಲಿ ಚರ್ಚೆ ಮಾಡುತ್ತಿದ್ದೇನೆ ಎಂದರೆ, Veerappan is so inevitable, ಅವನು ಸರೆಂಡರ್ ಆಗುತ್ತಾನೆ ಎಂದು ನೀವು ನಮಗೆಲ್ಲಾ ಸಮಾಧಾನ ಮಾಡಿ, ಆ ದಿವಸ ಒಂದು ಪ್ರಶ್ನೆಯನ್ನೂ ಕೂಡ ನೀವು ಎತ್ತಲಿಕ್ಕೆ ನಮಗೆ ಅವಕಾಶ ಮಾಡಿಕೊಡಲಿಲ್ಲ. 9- 10 ಜನರಿಗೆ ಆತ ಹೋಸ್ಟೇಜ್ ಮಾಡಿದ್ದಾನೆ ಎಂದು ತಾವು ಹೇಳಿದ ಮೇಲೆ ಅವರ ಜೀವವನ್ನು ಬದುಕಿಸಬೇಕು ಎನ್ನತಕ್ಕಂಥ ಒಂದೇ ದೃಷ್ಟಿಯಿಂದ ನಾವು ಸರ್ಕಾರದ ಹೇಳಿದ್ದ ಎಲ್ಲಾ ಮಾತಿಗೆ ಮನ್ನಣೆ ಕೊಟ್ಟು ಇಲ್ಲಿಯವರೆಗೆ ಬಾಯಿ ಮುಚ್ಚಿಕೊಂಡು ಸುಮ್ಮನಿದ್ದೆವು.

ಅಧ್ಯಕ್ಷರು: ನನಗೆ ನೆನಪಿದ್ದ ಹಾಗೆ ಸರ್ಕಾರದವರು ಆತ ಸರೆಂಡರ್ ಆಗುತ್ತಾನೆ ಎಂದು ಇಲ್ಲಿ ಸ್ಟೇಟ್‌ಮೆಂಟ್ ಮಾಡಿರಲಿಲ್ಲ. ಆ 9 ಜನರ ಪ್ರಾಣ ಉಳಿಸಲಿಕ್ಕಾಗಿ ನಾವು ಆ ವಿಚಾರವನ್ನು ಚರ್ಚೆ ಮಾಡುವುದು ಬೇಡ ಎಂದು ಹೇಳಿದ್ದುದು ನನಗೆ ನೆನಪುಂಟು. ತಾವೂ ಕೂಡ ಆಗ ಸಹಕರಿಸಿದಿರಿ, ಅವರ ಪ್ರಾಣ ಕೂಡ ರಕ್ಷಣೆಯಾಯಿತು. ಉಳಿದ ಆತನ ಷರತ್ತುಗಳು ಇತ್ಯಾದಿ ಇಲ್ಲಿ ಚರ್ಚೆ ಮಾಡಿ ಇಂತಹ ಒಂದು ದೊಡ್ಡ ಸಭೆಯಲ್ಲಿ ಆತನನ್ನೇಕೆ ದೊಡ್ಡ ಮನುಷ್ಯನನ್ನಾಗಿ ಮಾಡುವುದಕ್ಕೆ ಹೋಗುತ್ತೀರಿ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆತನನ್ನು ದೊಡ್ಡಮನುಷ್ಯನನ್ನಾಗಿ ಮಾಡಲು ಇಲ್ಲಿ ಚರ್ಚೆ ಮಾಡುತ್ತಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳೇ ಖುದ್ದಾಗಿ ಆತನ ಬೇಡಿಕೆಗಳ ಬಗ್ಗೆ ಚೆನ್ನೈವರೆಗೆ ಹೋಗಿ ಮಾತುಕತೆ ನಡೆಸಿದ್ದಾರೆ. ಜವಾಬ್ದಾರಿ ಸ್ಥಾನದಲ್ಲಿರುವ ನಾವು ಇದರ ಬಗ್ಗೆ ಸರ್ಕಾರದಿಂದ ಉತ್ತರವನ್ನೂ ಕೂಡ ಪಡೆದುಕೊಳ್ಳಬೇಕಲ್ಲಾ.

MR. SPEAKER: I am not willing to defend the Chief Minister. He will defend himself. But, what I would like to say is, ಕಂಡೀಷನ್ ಇಂಪೋಸ್ ಮಾಡಿದ್ದು ಇತ್ಯಾದಿ ಇಲ್ಲಿ ಚರ್ಚೆಯಾಗಬೇಕೇ? Should we discuss all those things; should the Assembly

debate all those things?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಆ ಕಾಡುಗಳ್ಳ ವೀರಪ್ಪನ್‌ನನ್ನು ನಾವು ದೊಡ್ಡ ಮನುಷ್ಯನನ್ನಾಗಿ ಮಾಡಿಲ್ಲ. ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ತಮಿಳುನಾಡಿನ ಮುಖ್ಯಮಂತ್ರಿಗಳೇ ಆತನನ್ನು ದೊಡ್ಡ ಮನುಷ್ಯನನ್ನಾಗಿ ಮಾಡಿದ್ದಾರೆ. ಆತ ಕಳ್ಳ, ಕೊಲೆಗಡುಕ ಎನ್ನುವುದರಲ್ಲಿ ಎರಡನೇ ಮಾತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನಾನು ಇದನ್ನು ಒಪ್ಪಿಕೊಳ್ಳುತ್ತೇನೆ, ನಾನು ಹೇಳಿದ ಕಂಡೀಷನ್ಸ್‌ಗಳು...

ಅಧ್ಯಕ್ಷರು: ನಾನೇನು ಹೇಳುತ್ತೇನೆ ಎಂದರೆ ತಾವು ಸಾಕಷ್ಟು ಅನುಭವಸ್ಥರಿದ್ದೀರಿ. ನಮ್ಮ ಸಮಯ ಇಂತಹ ವಿಚಾರಗಳ ಚರ್ಚೆಗೆ ಮೀಸಲಾಗಬೇಕೇ ಎನ್ನತಕ್ಕಂಥದಷ್ಟೇ ನನ್ನ ಕಾಳಜಿ. ತಾವು ಅಪೇಕ್ಷೆ ಪಟ್ಟರೆ ಮಾತನಾಡುವುದನ್ನು ಮುಂದುವರೆಸಿ, ನಾನು ಅದಕ್ಕೆ ಅಡ್ಡ ಬರುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಸರ್ಕಾರದವರು ವೀರಪ್ಪನ್‌ನ್ನು ಹಿಡಿಯಲು ಕೋಟಿಗಟ್ಟಲೆ ಖರ್ಚು ಮಾಡಿದ್ದಾರೆ. ಆದ್ದರಿಂದಲೇ ಈ ಬಗ್ಗೆ ಇಲ್ಲಿ ಚರ್ಚೆಯಾಗಬೇಕೆಂಬುದು ನಮ್ಮ ಅಭಿಮತ.

ಅಧ್ಯಕ್ಷರು: ಆ ಆಸ್ಪೆಕ್ಟ್ ಅನ್ನೂ ಕೂಡ ಸ್ವಲ್ಪ ಹೇಳಿಬಿಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಸರ್ಕಾರ ಇದರಲ್ಲಿ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ಕಾನೂನು ಸಚಿವರು, ಗೃಹ ಸಚಿವರು, ಗೃಹ ಕಾರ್ಯದರ್ಶಿಗಳು, ಡಿ.ಜಿ.ಪಿ. ಮುಂತಾದವರೆಲ್ಲಾ ವೀರಪ್ಪನ್ ಶರಣಾಗತಿ ಸಲುವಾಗಿ ತಮಿಳುನಾಡಿಗೆ ಹೋಗಿ ಆ ರಾಜ್ಯದವರೊಂದಿಗೆ ಮಾತುಕತೆ ನಡೆಸಿ ಬಂದಿದ್ದಾರೆ. ಇದಕ್ಕಾಗಿಯೇ ಎಸ್.ಟಿ.ಎಫ್. ಎನ್ನತಕ್ಕಂಥ ಒಂದು ವಿಶೇಷ ಫೋರ್ಸ್ ಅಲ್ಲಿ ಸುಮಾರು 3-4 ವರ್ಷಗಳಿಂದ ಕೆಲಸ ಮಾಡುತ್ತಿದೆ. ಇಷ್ಟೊಂದು ಜನ ಕೆಲಸ ಮಾಡುವಾಗ ಮತ್ತು ಅವರ ಬಗ್ಗೆ ನಾವು ಹಣ ಖರ್ಚು ಮಾಡುವಾಗ ಅದರ ಬಗ್ಗೆ ನಾವಿಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಈಗೇನು 10 ಜನರನ್ನು ಆತ ಒತ್ತೆಯಾಳುಗಳಾಗಿ ಇಟ್ಟುಕೊಂಡಿದ್ದ, ಅವರು ಕರ್ನಾಟಕ ಸರ್ಕಾರದ ಪರವಾಗಿರುವವರೇ ಅಥವಾ ವೀರಪ್ಪನ್ ಪರವಿರುವವರೇ ಎನ್ನತಕ್ಕಂಥ ಸಂಶಯ ಕೂಡ ಈ ಸಂದರ್ಭದಲ್ಲಿ ಮೂಡಿದೆ. ವೀರಪ್ಪನ್ ಹೇಳಿದ ಐದು ಕಂಡೀಷನ್‌ಗಳನ್ನು ಸರ್ಕಾರ ಒಪ್ಪಿಕೊಳ್ಳಲಿಲ್ಲ ಎಂಬುದು ನಿಜ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರಬಹುದು, 19.8ಕ್ಕೆ "A Ministerial delegation led by the Hon'ble Chief Minister of Karnataka had an extensive discussion with

the Chief Minister of Tamilnadu at Chennai, to-day i.e., on 19/8/1997. Both the sides were assisted by senior officials of their respective Governments" ಎದು ಹೇಳಿ 19.8.97ಕ್ಕೆ ಒಂದು ನ್ಯೂಸ್ ಅನ್ನು ಚೆನ್ನೈಯಿಂದಲೇ ಫ್ಲಾಷ್ ಮಾಡಲಾಯಿತು. ಇಬ್ಬರೂ ಮುಖ್ಯಮಂತ್ರಿಗಳು ಭೇಟಿಯಾಗಿ ವೀರಪ್ಪನ್‌ನ ಯಾವ್ಯಾವ ಕಂಡೀಷನ್‌ಗಳನ್ನು ಒಪ್ಪಿಕೊಂಡರು ಎಂಬುದನ್ನು ಈಗ ಹೇಳುತ್ತೇನೆ. ವೀರಪ್ಪನ್ ಹೇಳಿದ ಕಂಡೀಷನ್ಸ್ ಬಗ್ಗೆ ಹೇಳುವುದು ಬಿಡೋಣ, ಸರ್ಕಾರದವರೇನು ಷರತ್ತುಗಳನ್ನು ಒಪ್ಪಿಕೊಂಡರು ಎಂಬುದನ್ನು ನೋಡೋಣ. After the deliberations the Chief Ministers decided as follows:

"Both the State Governments accept surrender of Veerappan and his associates and assure protection to their lives;

Veerappan and his associates will be kept in a special camp in Tamilnadu guarded by poilce and jail authorities;

The period of confinement of Veerappan and his associates in the special camp will be the minimum as per law;

All persons who have been arrested in connection with the investigation of Veerapan case will be released if there are no specific criminal charges against them. If there are specific charges, a review of such cases will be taken up immediately and decision taken. In any case, all such persons will be released on bail subject to law;

A rehabilitation package for Veerappan relatives will be considered sympathetically;

All the cases registered in Karnataka will be transferred to courts of Tamilnadu after getting necessary clearance according to law from the appropriate court; 7th, the Government of Karnataka will not demand the presence

of Veerappan in Karnataka for any reason." Both the Governments desire that in order to create goodwill and the right atmosphere, Veerappan should immediately release all the hostages.." ಇದು ಕೊನೆಯದು ಏನೋ ಫುಲ್‌ಫಿಲ್ ಆಯಿತು. ವೀರಪ್ಪನ್ ಆತನ ಕಂಡಿಷನ್ಸ್‌ನ್ನು ಬಿಟ್ಟುಬಿಡಿ. ಆದರೆ ಈ 7 ಕಂಡಿಶನ್‌ಗಳನ್ನು ಯಾರು ಮಾಡಿದ್ದು? ಈ ಇಬ್ಬರು ಮುಖ್ಯಮಂತ್ರಿಗಳು ಡಿಸೈಡ್ ಮಾಡಿ 19ನೇ ತಾರೀಖು ಸುಮಾರು 12 ಗಂಟೆಯ ಕಾಲಕ್ಕೆ ಈ 7 ಕಂಡೀಷನ್‌ಗಳನ್ನು ಇಬ್ಬರು ಸೇರಿ ರಿಲೀಸ್ ಮಾಡಿರುವುದಾಗಿದೆ. ಇದರ ಅರ್ಥ ಏನೆಂದರೆ ವೀರಪ್ಪನ್ ಹೇಳಿದಂಥ ಪ್ರತಿಯೊಂದು ಮಾತಿಗೆ ಇವರು ಸ್ಪಂದಿಸಿದ್ದಾರೆ. ಅದರಲ್ಲಿ ಕೆಲವು ಕಂಡೀಷನ್ಸ್‌ನ್ನು ಬಿಟ್ಟಿರಬಹುದು. ಕೆಲವು ಅತಿಶಯೋಕ್ತಿ ಇರಬಹುದು ಇನ್ನು ಕೆಲವನ್ನು ಇವರು ನೆಗ್ಲೆಕ್ಟ್ ಮಾಡಿರಬಹುದು. ಆದರೆ ಅವನಮಾತಿಗೆ ಬೆಲೆ ಕೊಟ್ಟಿದ್ದಾರೋ ಅಥವಾ ಇಲ್ಲವೋ ಎನ್ನತಕ್ಕಂಥದ್ದನ್ನು ಈ ಕಂಡೀಷನ್ಸ್‌ನಲ್ಲಿ ತಾವು ತಿಳಿದುಕೊಳ್ಳಬಹುದು. ಆತನ 8 ಕಂಡಿಷನ್‌ಗಳಲ್ಲಿ 7 ಕಂಡಿಷನ್‌ಗಳನ್ನು ಈಗಾಗಲೇ ಸರ್ಕಾರ ಒಪ್ಪಿಕೊಂಡು ಎಲ್ಲಾ ಕಡೆ ಈ ನ್ಯೂಸ್‌ನ್ನು ಜಾಯಿಂಟ್ ಆಗಿ ಫ್ಲಾಷ್ ಮಾಡಿದ್ದಾರೆ; ಅಂದಮೇಲೆ ಇವತ್ತು ವೀರಪ್ಪನ್ ಬಹಳ ಪ್ರಮುಖ ವ್ಯಕ್ತಿಯಾದ. ಅಂದರೆ ವೀರಪ್ಪನ್ ಮಾತಿಗೆ ಎಷ್ಟು ಬೆಲೆ ಕೊಟ್ಟಿದ್ದಾರೆಂದರೆ, ಅವನ ಮುಂದೆ ಇವತ್ತಿನ ದಿವಸ ಯಾವ ಸರ್ಕಾರವೂ ಇಲ್ಲ. ತಮಿಳುನಾಡಿನ ಸರ್ಕಾರವೂ ಇಲ್ಲ. ಕರ್ನಾಟಕದ ಸರ್ಕಾರವೂ ಇಲ್ಲ. ವೀರಪ್ಪನ್ ಹೇಳಿದ್ದನ್ನೇ ನಾವು ಒಪ್ಪಿಕೊಳ್ಳೋಣ ಎನ್ನುವಂಥದ್ದು ಆಗಿದೆ. ನಂತರ ಇವತ್ತು ಇನ್ನೊಂದು ಸಂಶಯ ಏನು ಬಂದಿದೆಯೆಂದರೆ ನಮ್ಮ ಎಸ್.ಟಿ.ಎಫ್. ನವರು ಇಷ್ಟೊಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಎನ್ನತಕ್ಕಂಥ ಮಾತಿನ ಬಗ್ಗೆ ಹಿಂದಿನ ಸರ್ಕಾರವೂ ಕೂಡ ಒಳ್ಳೆಯ ಮಾತುಗಳನ್ನು ಅವರ ಬಗ್ಗೆ ಹೇಳಿದರು ಮತ್ತು ಇವತ್ತಿನ ಸರ್ಕಾರವೂ ಕೂಡ ಎಸ್.ಟಿ.ಎಫ್.ನವರು ಒಳ್ಳೆಯ ಕೆಲಸ ಮಾಡಿದರು ಎನ್ನುವ ಒಳ್ಳೆಯ ಮಾತುಗಳನ್ನು ಹೇಳುತ್ತಿದ್ದಾರೆ. ಆದರೆ ನಾನು ಸರ್ಕಾರವನ್ನು ಕೇಳುವುದೇನೆಂದರೆ, ಎಸ್.ಟಿ.ಎಫ್.ನವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ನಾವು ಇಲ್ಲಿಯವರೆಗೆ ಹೇಳಿಕೊಂಡು ಬಂದಮೇಲೆ ಅದೇ ಎಸ್.ಟಿ.ಎಫ್.ನ ಬಗ್ಗೆ ತಮಿಳುನಾಡಿನ ಮುಖ್ಯಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ ವೀರಪ್ಪನನ್ನು ಹಿಡಿಯುವುದಕ್ಕಾಗಿ ಹೋದಂಥ ಎಸ್.ಟಿ.ಎಫ್.ನವರು ಈ ವೀರಪ್ಪನನ್ನು ಹಿಡಿಯಲಿಕ್ಕೆ ಹೋಗಲಿಲ್ಲ, ಮಜಾ ಮಾಡುವುದಕ್ಕೆ ಹೋಗಿದ್ದಾರೆ, ಮತ್ತು ಅಲ್ಲಿಗೆ ಚೆನ್ನಾಗಿ ತಿನ್ನುವುದಕ್ಕೆ ಹೋಗಿದ್ದಾರೆ ಎನ್ನತಕ್ಕಂಥ ಮಾತನ್ನು ಮಾನ್ಯ ಕರುಣಾನಿಧಿಯವರೇ ಸ್ಪಷ್ಟವಾಗಿ ಹೇಳಿದ್ದಾರೆ. ಇದನ್ನು ಸಾಮಾನ್ಯವಾಗಿ ಯಾರೋ ಎಸ್.ಟಿ.ಎಫ್‌ನವರನ್ನು ಕಂಡರೆ ಆಗದಿರತಕ್ಕಂಥವರು ಹೇಳಿದ್ದಾರೆ ಎನ್ನುವುದು ಅಲ್ಲ. ತಮಿಳುನಾಡಿನ ಜವಾಬ್ದಾರಿಯನ್ನು ಹೊತ್ತುಕೊಂಡಂಥ ಅಲ್ಲಿಯ ಮುಖ್ಯಮಂತ್ರಿಗಳಾದ ಮಾನ್ಯ ಕರುಣಾನಿಧಿಯವರು...

MR. SPEAKER: How can this House debate about a statement made by a neighbouring State's Chief Minister?

(INTERRUPTIONS)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, It is connected, I am referring only this matter.... ಅವರು ಹೀಗೆ ಹೇಳಿದ್ದಾರೆ ಎನ್ನತಕ್ಕಂಥದ್ದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇದು ಪ್ರತಿಕೆಯಲ್ಲಿ ಕೂಡ ಎಲ್ಲಾ ಕಡೆ ಬಂದಿದೆ. ಹಿಂದೆ ಅವರೂ ಕೂಡ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಏನೆಂದರೆ "Unhappy with the STF" I am only referring. I do not want to cast any aspersions about the conduct.. ಆದರೆ, ಇದರ ಮೇಲೆಯೇ ತಾವು ತಿಳಿದುಕೊಳ್ಳಬಹುದು ಮಾನ್ಯ ಅಧ್ಯಕ್ಷರೆ. "Unhappy with the STF.."

ಅಧ್ಯಕ್ಷರು: ನಾನು ಹೇಳುವುದೇನೆಂದರೆ, ಇವರು ನಾಳೆ ಮತ್ತೆ ರಿಪ್ರೊಡ್ಯೂಸ್ ಮಾಡುತ್ತಾರೆ. ಕರುಣಾನಿಧಿಯವರು ಹೇಳಿದರು ಎನ್ನುವುದನ್ನು, ಕರುಣಾನಿಧಿ ಎನ್ನುವುದನ್ನು ಸ್ವಲ್ಪ ಕಡಿಮೆ ಮಾಡಿ ಎಸ್.ಟಿ.ಎಫ್.ನವರು ಅಲ್ಲಿಗೆ ಹೋದವರೆಲ್ಲಾ ಅಲ್ಲೆಲ್ಲಾ ಮಜಾ ಉಡಾಯಿಸಿ ಬಂದರು ಎಂದು ಇವರು ರಿಪ್ರೋಡ್ಯೂಸ್ ಮಾಡುತ್ತಾರೆ. ಅಲ್ಲಿ ಹೋಗಿ ಪ್ರಾಣ ಕೊಟ್ಟು ಬಂದಿರತಕ್ಕಂಥವರ ಮನೆಯವರು ಯಾರಾದರೂ ಅದನ್ನು ಓದಿದರೆ ಅವರು ಏನು ತಿಳಿದುಕೊಳ್ಳಬಹುದು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾರ ಮನೆಯವರು?

ಅಧ್ಯಕ್ಷರು: ಯಾರು ಈ ಎಸ್.ಟಿ.ಎಫ್‌ನಲ್ಲಿ ಹೋಗಿ ಪ್ರಾಣ ಕೊಟ್ಟು ಬಂದಿದ್ದಾರೆ ಅವರ ಮನೆಯವರು ಈ ರೀತಿಯ ಸುದ್ದಿಯನ್ನು ಓದಿದರೆ...ಅವರ ಮನಸ್ಸಿಗೆ ಎಷ್ಟು ನೋವು ಆಗಬಹುದು? ಈ ವಿಷಯದ ಬಗ್ಗೆ ಮಾತನಾಡುವುದು ಅಥವಾ ಬಿಡುವುದು ಇದನ್ನು ತಮಗೆ ಬಿಡುತ್ತೇನೆ.

SRI M.MALLIKARJUNA KHARGE: Today either you abandon that STF, or you say that they are very bad fellows.. ಎಸ್.ಟಿ.ಎಫ್.ನವರು ಏನೂ ಕೆಲಸವನ್ನೇ ಮಾಡಿಲ್ಲ, ವುಮನೈಸರ್ ಆಗಿದ್ದರು, ಅಲ್ಲಿಗೆ ತಿನ್ನುವುದಕ್ಕೆ ಹೋಗಿದ್ದರು ಅಥವಾ ಕೆಟ್ಟ ಕೆಲಸ ಮಾಡುವುದಕ್ಕೆ ಹೋಗಿದ್ದರು ಎಂದು ಸರ್ಕಾರ ಹೇಳಿಬಿಡಲಿ. ಇಲ್ಲವೆಂದರೆ-ತಮಿಳುನಾಡು ಸರ್ಕಾರ ಹೇಳಿರುವುದು ಸರಿಯಲ್ಲವೆಂದು ಇದನ್ನು ಖಂಡಿಸಬೇಕು. ವೀರಪ್ಪನನ್ನು ಹಿಡಿಯುವುದಕ್ಕೆ ಹೋದಂಥ ಎಸ್.ಟಿ.ಎಫ್.ನವರು ಯಾರು ಜೀವ ಕಳೆದುಕೊಂಡಿದ್ದಾರೆ, ನಿಮ್ಮ ರಕ್ಷಣೆ ಮಾಡಿದ್ದಾರೆ, ಅಥವಾ ಇಲ್ಲಿಯವರೆಗೆ ಹೋರಾಟ

ಮಾಡಿದ್ದಾರೆ ಅವರ ಮಾತಿಗಾದರೂ ಬೆಲೆ ಕೊಡಬೇಕು. ಇವತ್ತು ಶಂಕರಿ ಬಿದರಿಯವರು ಬಳ್ಳಾರಿಯಿಂದ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ನಾವು ಇಲ್ಲಿ ಹೇಳಬಾರದೇ? ಅವರು ನಮ್ಮ ಅಧಿಕಾರಿಗಳು. ಅವರು ಬಳ್ಳಾರಿಯಲ್ಲಿ ಏನು ಹೇಳಿಕೆ ಕೊಟ್ಟಿದ್ದಾರೆ...

MR. SPEAKER: It is not my desire or intention to stop you from speaking anything. I an just trying to come to your rescue., by telling, can such things be discussed?

(INTERRUPTIONS)

MR. SPEAKER: If you still want to say, I cannot prevent you from saying.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ಎಸ್.ಟಿ.ಎಫ್‌ನವರ ಇತರೆ ಬೇರೆ ಕಾಂಡಕ್ಟ್ ಬಗ್ಗೆ ಮಾತನಾಡುತ್ತಿಲ್ಲ. ಅವರು ಏನು ಹೇಳಿಕೆ ಕೊಟ್ಟಿದ್ದಾರೆ ಅದನ್ನು ನಾನು ಇಲ್ಲಿ ಓದುತ್ತೇನೆ. ಬೇಕಾದರೆ ಅಷ್ಟಕ್ಕೆ ನಾನು ಸೀಮಿತ ಮಾಡುತ್ತೇನೆ. "Unhappy with the STF,: Mr. Karunanidhi was clearly unhappy with the STF persons. He says instead of arresting the Brigand, they had harassed and molested women in the hamlet, including the relatives of the brigand. They had also slaughtered cattles in the villages for food. The Government would go into the complaints and take action, he said." ಆದರೆ ಇಲ್ಲಿ ಏನಾಗುತ್ತದೆ ಎಂದರೆ-ನಮ್ಮ ಅಧಿಕಾರಿಗಳು ಯಾರು ಆಸಕ್ತಿಯಿಂದ ಕೆಲಸ ಮಾಡುತ್ತಿದ್ದಾರೆ ಅವರಿಗೆ ನಾವು ಇವತ್ತಿನ ದಿವಸ ಡಿಮಾರಲೈಸ್ ಮಾಡಿದ ಹಾಗೆ ಆಗುತ್ತದೆ ಅಥವಾ ಇದು ಹೇಳಿ ಕರೆಕ್ಟ್ ಇದೆಯೆಂದಾದರೆ then persons who are serving them, you take disciplinary action against them, if they are bad. If they are doing their duty rightly, then you have to defend. ಯಾವುದೋ ಒಂದು ಎಮೋಷನ್‌ನಲ್ಲಿ ಮಾನ್ಯ ಕರುಣಾನಿಧಿಯವರು ಹೇಳಿದ್ದಾರೆ. ಈ ರೀತಿ ಹೇಳಬಾರದಾಗಿತ್ತು. ಎನ್ನತಕ್ಕಂಥ ಮಾತನ್ನಾದರೂ ಕೊನೆಯ ಪಕ್ಷ ಸರ್ಕಾರದ ಕಡೆಯಿಂದ ಹೇಳಬೇಕಾಗಿತ್ತು ಅದಕ್ಕೆ ಸ್ಪಂದಿಸಿ ಶ್ರೀಮಾನ್ ಶಂಕರ್ ಬಿದರಿಯವರು ಓಪನ್ನಿ ಏನು ಹೇಳಿದ್ದಾರೆಂದರೆ- "I will take blame for mistake-Bidri.." ಇದನ್ನು 7 ನೇ ತಾರೀಖಿನಂದು ಬಳ್ಳಾರಿಯಲ್ಲಿ ಅವರಿಗೆ ಸನ್ಮಾನ ಮಾಡಿದಾಗ

ಹೇಳಿದ್ದಾರೆ ಏನು ಹೇಳಿದ್ದಾರೆಂದರೆ "the former STF Chief said, modalities were being worked out for Bandit's surrender." ಎಲ್ಲಾ ಕಡೆ ಇಂಥಹ ಸ್ಟೇಟ್‌ಮೆಂಟ್‌ಗಳು ಬರುತ್ತವೆ. ಅದರ ಬಗ್ಗೆ ಏನಿದೆ ಎಂಬುದನ್ನು ತಿಳಿಸಿ ಹೇಳಿರಿ ಎಂಬುದನ್ನು ಈ ಸದನದಲ್ಲಿ ಕೇಳಿದರೆ, ಅದರ ಬಗ್ಗೆ ಮಾತನಾಡುವುದು ಬೇಡ ಎಂದು ಸರ್ಕಾರದವರು ಪದೇ ಪದೇ ಹೇಳುತ್ತಾರೆ. ಇದಕ್ಕೆ ಸಂಬಂಧಪಟ್ಟ ವಿಚಾರವನ್ನೆಲ್ಲವನ್ನೂ ಹೊರಗಡೆಯಿಂದ ನಾವು ತಿಳಿದುಕೊಳ್ಳಬೇಕಾಗಿದೆ. ಪುನಃ ನಾನು ಇಲ್ಲಿ ಓದುವಂಥದ್ದು ಹೊರಗಡೆಯಿಂದ ಬಂದಂಥ ವಿಚಾರವಾಗಿದೆ. ಏನೆಂದರೆ - "So, if the surrender talks had failed, then both Karnataka and Tamil Nadu will resume operations to nab Veerappan. "We want to know, whether he has surrendered or not. At what stage it is there? Whether your people have met him or messengers or mediators had come and met you? ಇದು ನಮಗೆ ಗೊತ್ತಾಗಬೇಕಲ್ಲವೇ? ಶ್ರೀ ಶಂಕರ ಬಿದರಿಯವರು ಹೇಳಿದ ಮೇಲೆ ಇದು ನಮಗೆ ಗೊತ್ತಾಗಲೇಬೇಕು. ಈ ಸದನದಲ್ಲಿ ಸರ್ಕಾರ ಹೇಳುವುದಕ್ಕೆ ತಯಾರಿಲ್ಲ. ಆಮೇಲೆ "I am ready to head STF again, if the authorities feel it necessary. Unless the court starts trial against Veerappan and gives its verdict, the question of pardoning him does not arise. Both the States have definite ideas in this issue. Granting the vouch of pardon at this stage is out of question." ನಾವು ಅದೇ ಮಾತನ್ನು ಹೇಳುತ್ತಿದ್ದೇವೆ. ಸರ್ಕಾರ ವೀರಪ್ಪನಿಗೆ ಮಾಫಿ ಮಾಡಬೇಡಿ, ಅವನಿಗೆ ಕ್ಷಮೆ ಕೊಡಬೇಡಿ, ಕ್ಷಮಾದಾನ ಅವನಿಗೆ ಕೊಡಬೇಡಿ, ಅವನು ಸುಮಾರು 182 ಜನರ ಜೀವವನ್ನು ತೆಗೆದಿದ್ದಾನೆ, ಸುಮಾರು 1000 ಕೋಟಿ ರೂಪಾಯಿ ಅರಣ್ಯ ಲೂಟಿ ಮಾಡಿದ್ದಾನೆ, ಸಾವಿರಾರು ಆನೆಗಳನ್ನು ಕೊಂದಿದ್ದಾನೆ, ಎನ್ನತಕ್ಕಂಥ ಮಾತನ್ನೇ ನಾವು ಹೇಳುತ್ತಿದ್ದೇವೆ. ಈ ಮಾತನ್ನು ಸರ್ಕಾರ ಹೊರಗೆ ಹೇಳದೆ, ಇಲ್ಲಿ ಬಂದು ಈ ಪರಿಸ್ಥಿತಿ ಇದೆ ಎಂದು ನಾವು ಕೇಳಿಕೊಂಡರೆ ನಮ್ಮ ಬಾಯಿಯನ್ನು ಪದೇ ಪದೇ ಮುಚ್ಚತಕ್ಕಂಥದ್ದು ಆಯಿತು. ಈ ಸದನದಲ್ಲಿ ಅವನ ಬಗ್ಗೆ ಏನಾದರೂ ಹೇಳಿಕೆ ಕೊಟ್ಟರೆ ಅವನು 10 ಜನರನ್ನು ಹಿಡಿದಿದ್ದು ಅವರನ್ನು ಕೊಲೆ ಮಾಡಿಬಿಡುತ್ತಾನೆ, ಎನ್ನತಕ್ಕಂಥದ್ದು ಬಂತು. ಶಂಕರಿ ಬಿದರಿಯವರು ಮುಂದೆ ಏನು ಹೇಳುತ್ತಾರೆಂದರೆ "There is nothing wrong in transferring the Brigand's case to Tamil Nadu as the law is the same in both the states, Mr.Bidri said. 181 killed, the former STF said. In all 181 persons lost their lives in Police-Veerappan encounters. 32 police officers

including 22 from Karnataka 9 from Tamil Nadu, 1 from BSF, 10 forest officials, 6 from TamilNadu and 4 from Karnataka, 77 villagers of whom 64 belong to Veerappan's Padiyachi community and 62 of Bandit's men were killed in the encounters. 5 of the gang committed suicide while 184 were arrested. In the last three years, 138 criminal cases were filed against the Bandit and are pending Trial, 78 in Tamil Nadu and 58 in Karnataka. At present, there are about 5 or 6 men with Veerappan. Of late, some cattle-grazers have joined him in supplying food and other things, he said." ಇವು ಎಲ್ಲಾ ಮಾಹಿತಿಗಳನ್ನು ನಾವು ಪತ್ರಿಕೆ ಮುಖಾಂತರ ಇವತ್ತು ತಿಳಿದುಕೊಳ್ಳಬೇಕಾದಂಥ ಪರಿಸ್ಥಿತಿ ಬಂದಿದೆ. ಎಷ್ಟು ಕೇಸುಗಳನ್ನು ಅವನ ಮೇಲೆ ರಿಜಿಸ್ಟರ್ ಮಾಡಿದ್ದೀರಿ? ಎಷ್ಟು ಜನ ಇವತ್ತು ಅವನ ಜೊತೆಯಲ್ಲಿ ತಿರುಗಾಡುತ್ತಿದ್ದಾರೆ? ಎಷ್ಟು ಜನರಿಗೆ ಇವತ್ತು ಅವನಿಂದ ದೂರ ಮಾಡಿದ್ದೀರಿ ಎನ್ನತಕ್ಕಂಥ ಮಾತುಗಳಿಗೆ ಉತ್ತರವನ್ನು ನಾವು ಹೊರಗಿನಿಂದ ಕೇಳಬೇಕಾಗಿದೆ. ವೀರಪ್ಪನ್‌ನ್ನು ಹಿಡಿಯುವುದಕ್ಕಾಗಿ ಎಷ್ಟು ಖರ್ಚು ಮಾಡಿದಿರಿ? ಎಷ್ಟರಮಟ್ಟಿಗೆ ಅವನನ್ನು ಹತ್ತಿಕ್ಕಿದ್ದೀರಿ? ಎಷ್ಟರಮಟ್ಟಿಗೆ ನೀವು ಅಲ್ಲಿನ ಜನರ ಕಷ್ಟದಲ್ಲಿ ಭಾಗಿಗಳಾಗಿ ಅವರಿಗೆ ಸ್ಪಂದಿಸತಕ್ಕಂಥ ಕೆಲಸವನ್ನು ಮಾಡಿದ್ದೀರಿ ಎನ್ನತಕ್ಕಂಥ ಅಧಿಕೃತ ಮಾಹಿತಿಗಳನ್ನು ಸರ್ಕಾರ ಈ ಸದನದ ಮೂಲಕ ಕೊಡಿ ಎಂದು ಕೇಳಿದರೆ, ಅದಕ್ಕೆ ಈ ಸದನದಲ್ಲಿ 'ಅಂಥ ಮಾತುಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಡಿ, ಏನೋ ಪಾಪದ ಕೆಲಸ ಮಾಡುತ್ತಿದ್ದೇವೋ ಎನ್ನುವ ಹಾಗೆ ನಮಗೆ ಇಲ್ಲಿ ಎಲ್ಲರೂ ಕೂಡ ಬಾಯಿ ಮುಚ್ಚಿಸುತ್ತಾರೆ. Sir, are we not entitled for all these information? Is this House not entitled to get these information? ..ಹೌದಾ, ಉತ್ತರ ಸರ್ಕಾರ ಕೊಡಬೇಕು. ಅಂದರೆ ಇದು ಆದಮೇಲೆ ನಾವು ತಿಳಿದುಕೊಂಡು ನಾವು ಸರ್ಕಾರಕ್ಕೆ ಹೇಳಬೇಕು, ನಂತರ ಸರ್ಕಾರ ನಮಗೆ ಉತ್ತರ ಕೊಡಬೇಕು....

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಚರ್ಚೆಗೋಸ್ಕರ ಚರ್ಚೆ ಮಾಡುವುದಾದಲ್ಲಿ ನಮ್ಮದೇನೂ ತಕರಾರು ಇಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೂ ಸಹ ಬಹಳ ಜವಾಬ್ದಾರಿ ಸ್ಥಾನದಲ್ಲಿದ್ದವರು. ಎಸ್.ಟಿ.ಎಫ್.ನ್ನು ಯಾವ ಮುಖ್ಯಮಂತ್ರಿಗಳು ಟೀಕೆ ಮಾಡಿದರೋ ಅವರ ಜೊತೆಯಲ್ಲಿ, ಮಂತ್ರಿಮಂಡಲದಲ್ಲಿ ಕೆಲಸ ಮಾಡರತಕ್ಕಂಥವರು, ಶ್ರೀ ಶಂಕರ್ ಬಿದರಿಯವರು ಎಸ್.ಟಿ.ಎಫ್.ಚೀಫ್ ಆಗಿದ್ದಾಗಲೂ ಸಹಿತ, ಆ

ಮಂತ್ರಿಮಂಡಲದಲ್ಲಿ ಸಹಿತ ತಾವು ಇದ್ದವರು. ಮತ್ತು ಎಸ್.ಟಿ.ಎಫ್.ನಲ್ಲಿ ಏನು ಮಾಡಿದ್ದಾರೆ, ಅವರು ಸರಿಯಾಗಿ ಕೆಲಸ ಮಾಡಿದ್ದಾರೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಈಗ ಮಾನ್ಯ ಯಡಿಯೂರಪ್ಪನವರು ಅಥವಾ ಸರ್ಕಾರದಲ್ಲಿ ಇಲ್ಲದೇ ಇರತಕ್ಕಂಥವರು ಮಾತನಾಡಿದರೆ ನಾನು ಅದನ್ನು ಅರ್ಥಮಾಡಿಕೊಳ್ಳಬಲ್ಲೆ. ನಮ್ಮ ಪೊಲೀಸ್‌ನವರು ಎಷ್ಟು ಒಳ್ಳೆಯ ಕೆಲಸ ಮಾಡಿದ್ದಾರೆ ಎನ್ನುವಂಥದ್ದು ಎಲ್ಲವೂ ಸಹಿತ ತಮಗೆ ಗೊತ್ತಿರತಕ್ಕಂಥ ವಿಚಾರವಾಗಿದೆ.

4.40 ಪಿ.ಎಂ

ನಾವು ಯಾವುದೇ ಒಂದು ಇನ್‌ಫರ್ಮೇಷನ್‌ನ್ನು ಇಲ್ಲಿ ಇಟ್ಟುಕೊಳ್ಳಬೇಕೆಂದು ಏನೂ ಇಲ್ಲ. ನಾನೇ ಹಿಂದೆ ಗೃಹ ಸಚಿವನಾಗಿದ್ದಾಗ ನೀವು ಕೇಳಿದ ಅನೇಕ ಪ್ರಶ್ನೆಗಳಿಗೆ ಅಂಕಿ ಅಂಶಗಳನ್ನು ಸಹ ಕೊಟ್ಟಿರುತ್ತೇನೆ. ದಯಮಾಡಿ ಸ್ವಲ್ಪ ಕೇಳಿ. ತಮ್ಮ ಪಕ್ಷ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ತಮಗೆ ಗೊತ್ತಿದೆ ಮೊಯ್ಲಿಯವರೆ, ಈವನ್ ಸೆಂಟ್ರಲ್ ಗೌರ್ನಮೆಂಟ್‌ನಿಂದ ಸೆಂಟ್ರಲ್ ಫೋರ್ಸ್ ತರಿಸಿಕೊಳ್ಳಬೇಕಾದರೆ ಯಾವ ದಿನದಿಂದ ಕಳುಹಿಸುತ್ತೀವೆ ಮತ್ತೊಂದನ್ನು ಸಹಿತ ಕೇಳಿದಾಗ, ಇಲ್ಲ ನಾವು ಅಪರೇಷನ್ ಮಾಡಬೇಕಾಗಿದೆ, ಆದುದರಿಂದ ಡೀಟೈಲ್ಸ್‌ನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ನಾವು ವಿರೋಧಪಕ್ಷದಲ್ಲಿದ್ದಾಗ ನೀವು ಆಡಳಿತ ಪಕ್ಷದ ಕಡೆಯಲ್ಲಿದ್ದಾಗ ತಾವು ಹೇಳಿದ್ದೀರಿ. ಇವತ್ತು ನಾವೇನೂ ಅದನ್ನು ಹೇಳುತ್ತಿಲ್ಲ. ಆದರೆ ನಾವು ಏನು ಹೇಳುತ್ತಿದ್ದೇವೆಂದರೆ ಹೋಸ್ಟೇಜಸ್ ಇದ್ದುದ್ದರಿಂದ ಅವರ ಕೈಯಲ್ಲಿ 10 ಜನರು ಇದ್ದುದ್ದರಿಂದ ಅವರ ಪ್ರಾಣದ ದೃಷ್ಟಿಯಿಂದ ಚರ್ಚೆ ಬೇಡವೆಂದು ಹೇಳಿದ್ದೇವೆ ವಿನಃ ಬಾಕಿ ಎಲ್ಲಾ ವಿವರಗಳನ್ನು ಕೊಡುವುದಕ್ಕೆ ರೆಡಿ ಇದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಪ್ಪು ತಿಳಿದುಕೊಂಡಿದ್ದಾರೆ. ನಾವು ಬಿದರಿಗೆ ಅಥವಾ ಎಸ್.ಟಿ.ಎಫ್.ಯಾವುದೇ ಅಧಿಕಾರಿಯ ಮೇಲೆ ಯಾವುದೇ ಆಪಾದನೆಯನ್ನು ಮಾಡುತ್ತಿಲ್ಲ. ನಾನೇ ಮೊದಲು ಬೇರೆಯವರು ಬ್ಲೇಮ್ ಮಾಡಿರುವುದು ಸರಿಯಲ್ಲವೆಂದು ಇಲ್ಲಿ ಪ್ರಸ್ತಾಪ ಮಾಡಿದಾಗ ಬಹುಶಃ ತಾವು ಅದನ್ನು ಕೇಳಲಿಲ್ಲವೆಂದು ಕಾಣುತ್ತದೆ. ಬಹುಶಃ ಅಧ್ಯಕ್ಷರು ಅದನ್ನೇ ಹೇಳಿದರು. ನಾನು ಹೇಳಬೇಕಾದಂತಹ ಪ್ರಸಂಗ ಏನು ಬಂತು ಎಂದರೆ, ಒಂದು ಕಡೆ ಒಬ್ಬ ಮುಖ್ಯ ಮಂತ್ರಿಗಳು ಅವರನ್ನು ಬೈಯುತ್ತಾರೆ, ಇನ್ನೊಂದು ಕಡೆ ಮುಖ್ಯ ಮಂತ್ರಿಗಳು ಹೊಗಳುತ್ತಾರೆ. ಅಂದರೆ ಎಸ್.ಟಿ.ಎಫ್.ರವರ ಗತಿ ಏನಾಗಬೇಕು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು): ಅಧ್ಯಕ್ಷರೇ, STF is a Joint Action Force of Tamil Nadu and Karnataka ಆದ್ದರಿಂದ ಅವರ ದೃಷ್ಟಿಯಿಂದ ಅದು ಇರಬಹುದು. But as far as our constituency is concerned, we are always appreciating their actions.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆಯಿತು ಇದಾದಮೇಲೆ ಒಂದು ಮಾತು ಆದರೂ ಒಂತು ಅವರ ಬಗ್ಗ then if you are appreciating STF from your side ಅದು ನಮಗೆ ಸಂಬಂಧಪಟ್ಟಿಲ್ಲ ನಮ್ಮ ಕಡೆಯಲ್ಲಿರುವವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಎನ್ನತಕ್ಕಂತಹ ಮಾತನ್ನು ಮುಖ್ಯ ಮಂತ್ರಿಗಳು, ಅಥವಾ ಗೃಹ ಸಚಿವರು, ಅಥವಾ ಅರಣ್ಯ ಮಂತ್ರಿಗಳು ಹೇಳಿದ್ದಾರಾ? ಸುಮ್ಮನೆ ವಾದಕ್ಕೆ ವಾದ ಮಾಡುವುದಕ್ಕೆ ನಿಂತಿದ್ದೀರಿ. ನಾನು ನೀವು ಮಾಡಿದ್ದು ಸರಿಯಿಲ್ಲ ಎಂದು ಹೇಳುತ್ತಿಲ್ಲ. ನಾವು ನಮ್ಮ ಅಧಿಕಾರಿಗಳನ್ನು ಹೊಗಳುತ್ತಿದ್ದೇವೆ. ಅವರು ಕೆಲಸವನ್ನು ಮಾಡಿದ್ದಾರೆ ರಿಸ್ಕ್ ತೆಗೆದುಕೊಂಡರು....

ಶ್ರೀ ಪಿ.ಜಿ.ಆರ್.ಸಿಂಧ್ಯ: ಸಾರ್ವಜನಿಕವಾಗಿ ಪತ್ರಿಕೆಗಳಲ್ಲಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ವೀರಪ್ಪನ್ ಕರ್ನಾಟಕದೊಳಗೆ ಬರುವುದು ಬೇಡ. ಅವನ ಸಹವಾಸ ಬೇಕಾಗಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆಯಿತು. ಅಲ್ಲಿಯೇ ಚೆನ್ನೈನಲ್ಲಿಯೇ ದಿನಾ ಹೋಗಿ ಭೇಟಿಯಾಗಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕದೊಳಗೆ ಬರುವುದು ಬೇಡ, ಅವನ ಸಹವಾಸ ಬೇಡ ಎಂದು ಹೇಳಿಬಿಟ್ಟಿದ್ದಾರಂತೆ. ಅವನು ಅಲ್ಲಿಯೇ ಹೊರಟು ಹೋಗಿದ್ದಾನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಎಸ್.ಟಿ.ಎಫ್. ಕೆಲಸ ಮಾಡಿರತಕ್ಕಂಥದ್ದು ತಮಗೂ ಸಹ ಗೊತ್ತಿದೆ. ಕರ್ನಾಟಕದ ಯಾವ ಹಳ್ಳಿಗಳಲ್ಲಿಯೂ ಕೂಡ ಅದು ಸ್ಮಗ್ಲಿಂಗ್ ಆಕ್ಟಿವಿಟೀಸ್ ಇರಬಹುದು, ದಂತವನ್ನು ಕದಿಯುವಂಥದ್ದು ಇರಬಹುದು, ಆನೆಗಳನ್ನು ಕೊಲ್ಲತಕ್ಕಂಥದ್ದು ಇರಬಹುದು ಇವುಗಳನ್ನೆಲ್ಲಾ ಕಂಟ್ರೋಲ್ ಮಾಡಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರು ಹೇಳಿದಹಾಗೆ ಅನೇಕ ಸಾರಿ ಇಂತಹ ಇಷ್ಯೂಗಳು ಬಂದಾಗ ಸಿಂಧ್ಯರವರ ಸಲಹೆಯನ್ನು ತೆಗೆದುಕೊಳ್ಳಿ ಎಂದು ಹೇಳುತ್ತಿರುತ್ತಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಸರ್ಕಾರದ ದೃಷ್ಟಿಯಿಂದಾಗಿ ಅಧ್ಯಕ್ಷರ ಸಲಹೆಗಳನ್ನು ತೆಗೆದುಕೊಳ್ಳುತ್ತಿರುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೇ ಹೇಳಿದ್ದು, ಮಾನ್ಯ ಸಿಂಧ್ಯರವರು ಗೃಹ ಸಚಿವರಾಗಿ ಕೆಲಸವನ್ನು ಮಾಡಿದ್ದಾರೆ, ಇಂತಹ ಸಂಕಷ್ಟ ಸಮಯದಲ್ಲಿ ನೀವು ಸಹಾಯ ವನ್ನು ಪಡೆದುಕೊಳ್ಳಿ ಎಂದು ಹೇಳಿದ್ದಾರೆ.

L.A.-10 F-62

ಅಧ್ಯಕ್ಷರು: ನಿಮ್ಮ ಗಲಾಟೆಯಲ್ಲಿ ಎಲ್ಲಾ ಕಡೆ ನನ್ನನ್ನು ಸಾಕ್ಷಿಯನ್ನು ಮಾಡಿಕೊಂಡರೆ ನಾನು ಯಾರ ಕಡೆ ಸಾಕ್ಷಿಯನ್ನು ಹೇಳಲಿ; ಹೇಳಿ. ನಾನು ಈ ವಿಷಯಕ್ಕೆ ಸಂಬಂಧಿಸಿದಂತೆ ಏನೂ ಹೇಳಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನೀವು ಯಾರ ಪರವಾಗಿಯೂ ಆಗುವುದು ಬೇಡ.

ಅಧ್ಯಕ್ಷರು: ನಾನು ಈ ವಿಷಯಕ್ಕೆ ಸಂಬಂಧಿಸಿದಂತೆ ಏನೂ ಹೇಳಿಲ್ಲಾ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಯಾರ ಪರವಾಗಿಯೂ ಸಾಕ್ಷಿಯಾಗುವುದು ಬೇಡ ಸುಮ್ಮನೆ ಸುಖವಾಗಿ ಇರಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ತಾವು ಹೇಳಿದರಲ್ಲಾ, ಇಂತಹ ವಿಷಯಗಳು ಬಂದಾಗ ಸಿಂಧ್ಯರವರಿಂದ ಸಲಹೆಯನ್ನು ಪಡೆಯಬೇಕೆಂದು ಮಾನ್ಯ ಅಧ್ಯಕ್ಷರು ಹೇಳಿದರು ಎಂದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹೌದು.

SRI P.G.R.SINDHIA: It reflects something else.

MR. SPEAKER: I have not said anything like that.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆ ರೀತಿಯಾಗಿ ಅಲ್ಲ ಮೊನ್ನೆಯ ದಿವಸ ಮೆಡಿಕಲ್ ಎಜ್ಯುಕೇಷನ್ ಮಿನಿಸ್ಟರ್‌ರವರದ್ದು ಪ್ರಶ್ನೆ ಇತ್ತು. ತಮ್ಮನ್ನು ಕನ್‌ಸಲ್ಟ್ ಮಾಡಿ ಅದರ ಬಗ್ಗೆ ಅನುಭವ ಇದೆ ಎಂದು ಹೇಳಿದರೋ ಇಲ್ಲವೋ, ಹಾಗೆ ಗೃಹ ಖಾತೆಯೂ ಸಹ ನಿಮ್ಮ ಹತ್ತಿರ ಇತ್ತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಮಾಜ್ ಮಾಡುವುದಕ್ಕೆ ಹೋದರೆ, ಮಸೀದಿಯು ಮೈ ಮೇಲೆ ಬಂತು ಎನ್ನುವ ಹಾಗೆ ಅವರ ಸಹಾಯವನ್ನು ಪಡೆಯಿರಿ ಎಂದು ಹೇಳಿದ್ದುದು ನೀವು.

ಅಧ್ಯಕ್ಷರು: ನಾನು ಮೆಡಿಕಲ್ ಎಜ್ಯುಕೇಷನ್ ಮಿನಿಸ್ಟರ್‌ಗೆ ಆಸ್ಪತ್ರೆಯನ್ನು ಸುಧಾರಿಸುವ ವಿಷಯಕ್ಕೆ ಅವರು ಪ್ರೀವಿಯಸ್ ಹೆಲ್ತ್ ಮಿನಿಸ್ಟರ್ ಇದ್ದಾಗ ಚೆನ್ನಾಗಿ ಕೆಲಸವನ್ನು ಮಾಡಿದರು ಎಂದು ಹೇಳಿದರೆ, ನೀವು ಇದು ಯಾವುದೋ ವಿಚಾರಕ್ಕೆ ನನ್ನನ್ನು ತಂದು ಹಾಕಿಬಿಟ್ಟರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇವರು ಹಿಂದೆ ಗೃಹ ಸಚಿವರಾಗಿದ್ದರು.

ಅಧ್ಯಕ್ಷರು: ಅದು ಸರಿ, ಈ ವಿಷಯವನ್ನು ನಾನು ಹೇಳಿದೆನೇ, ಅದನ್ನು ನೀವು ಹೇಳಿ.

You cannot put your words into my mouth.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಅವರು ಏನು ಹೇಳಿದರು, ನಾನು ಗೃಹ ಸಚಿವನಾಗಿದ್ದಾಗ ಸಲಹೆ ಕೊಡಲಿಲ್ಲ ಎಂದು. ಅದಕ್ಕಾಗಿ ಅದನ್ನು ಬಿಡಿ. ಅವರು ಆ ಕೆಲಸವನ್ನು. ಮತ್ತೆ ಮಂತ್ರಿ ಮಂಡಲವನ್ನು ಪುನರ್ ರಚಿಸಿದರೆ (ಖಾತೆಗಳನ್ನು ಬದಲಾವಣೆ ಮಾಡಿದರೆ) ಮತ್ತೆ ಪ್ರಯತ್ನವನ್ನು ಪಟ್ಟು ಆ ಖಾತೆಯನ್ನು ತೆಗೆದುಕೊಂಡರೆ ನಮ್ಮದು ಏನೂ ಅಭ್ಯಂತರ ಇಲ್ಲ. ಆಮೇಲೆ ಎಲ್ಲಿಯವರೆಗೆ ಎಂದರೆ ಬಿದರಿಯವರು ಮುಂದೆ ಹೇಳಿದ್ದಾರೆ. "Bidri made it clear that neighter he, nor his men had harassed any villagers as alleged by Mr.Veerappan. He described Bandit's allegation against him as mischievous and misleading. He said that STF personnel had not committed any atrocities on the villagers. Veerappan always made false allegations against the officers and humiliated them for his own cause." ಅಂದರೆ ಈ ಒಂದು ವೀರಪ್ಪನ್ ಮಾಡಿದಂತಹ ಅಲಿಗೇಷನ್‌ಗೆ ಸಂಪೂರ್ಣವಾಗಿ ಬಿದರಿಯವರೂ ಕೂಡ ತಿರಸ್ಕಾರವನ್ನು ಮಾಡಿದ್ದಾರೆ. ಅದನ್ನು ನಾವು ಒಪ್ಪಬೇಕಾಗುತ್ತದೆ. ಏಕೆಂದರೆ ನಮ್ಮ ಒಬ್ಬ ಅಧಿಕಾರಿ ಇದನ್ನು ಹೇಳಿದ ಮೇಲೆ ಕೊನೆಯ ಪಕ್ಷ ಸರ್ಕಾರದವರು ಆ ಹೇಳಿಕೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನಾವು ಇದನ್ನು ಒಪ್ಪಿಕೊಂಡ ಮೇಲೆ ಅವನು ಹೇಳತಕ್ಕಂಥದ್ದು ಸರಿಯಿಲ್ಲ ಎಂದು ಹೇಳತಕ್ಕಂಥವರು ನಾವು ಅದನ್ನು ಖಂಡಿಸಬೇಕು. ಇವತ್ತು ಏನಾಗಿದೆಂದರೆ ನಾವು ಇಷ್ಟೊಂದು ಹಣವನ್ನು ಖರ್ಚು ಮಾಡಿ ಬಿದರಿಯವರು ಇವತ್ತು ಕೆಲವು ವಿಷಯಗಳನ್ನು ಹೊರ ತಂದಿದ್ದಾರೆ. ಅದು ಏನೆಂದರೆ ಆ ವೀರಪ್ಪನ್ ಜೊತೆಯಲ್ಲಿ ಇನ್ನು ಕೇವಲ 5 ಜನರು ಮಾತ್ರ ಉಳಿದಿದ್ದಾರೆ ಉಳಿದವರು ಅಲ್ಲಿ ದನವನ್ನು ಕಾಯತಕ್ಕಂತಹ ಜನರು ಮಾತ್ರ ಉಳಿದಿದ್ದಾರೆ. ಈಗ ಅವನು ಒಂದು ಫೋರ್ಸ್ ಎನ್ನುವುದನ್ನು ಕಳೆದುಕೊಂಡಿದ್ದಾನೆ. ನಿಸ್ಸಹಾಯಕನಾಗಿದ್ದಾನೆ. ಇದು ಸರೆಂಡರ್ ಆಗುವಂತಹ ಸ್ಥಿತಿಯಲ್ಲಿಯೇ ಇದ್ದಾನೆ ಎಂಬ ಅರ್ಥದಲ್ಲಿ ಅವರು ಹೇಳಿದ್ದಾರೆ. ಆ ಸ್ಥಿತಿ ಇರುವಾಗ, ನಾವು ಅವನ 7 ಕಂಡಿಷನ್‌ನ್ನು ಒಪ್ಪಿಕೊಂಡು, ನೀವು ಕಂಡಿಷನ್ ಎಂದರೆ ಬೇಡ ಅನ್ನುತ್ತೀರಲ್ಲಾ, ಆ 7 ಕಂಡಿಷನ್‌ನ್ನು ಫ್ಲಷ್ ಮಾಡಿದರಲ್ಲಾ ಜಾಯಿಂಟ್ ಆಗಿ 19ನೇ ತಾರೀಖು 12 ಗಂಟೆಗೆ ಇಡೀ ದೇಶದ ತುಂಬಾ ಹೋಯಿತಲ್ಲಾ, ಫ್ಯಾಕ್ಸ್ ಮತ್ತು ನ್ಯೂಸ್, ಅದು ಆಧಾರದ ಮೇಲೆ? ಅಂದರೆ ಬಿದರಿ ಹೇಳತಕ್ಕಂಥದ್ದು ಯಾವ ಮನುಷ್ಯ ಫೀಲ್ಡ್‌ನಲ್ಲಿದ್ದ, ಯಾವ ಮನುಷ್ಯ ಅಂಕಿ ಅಂಶಗಳನ್ನು ಕೊಟ್ಟು ಇವತ್ತು ಸ್ಪಷ್ಟವಾಗಿ ಇವತ್ತೂ ಕೂಡ ಅವರು ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿದ್ದಾರೆ ಅದನ್ನು ಮರೆಯಬೇಡಿ. Till today he is overall Adviser in Police Department. ಜನರಲ್

ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್ ಸಬ್ ಇನ್‌ಸ್ಪೆಕ್ಟರ್, ಸರ್ಕಲ್ ಇನ್‌ಸ್ಪೆಕ್ಟರ್ ಈ ಟ್ರಾನ್ಸ್‌ಫರ್‌ದ್ದು ಹೇಳುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು): ಅಧ್ಯಕ್ಷರು ಹೇಳಿದಂತೆ ನೀವು ವ್ಯಂಗ ಮಾಡುವುದನ್ನೂ ಕೂಡ ಕಲಿತಿರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಏನೇನು ಕಲಿಸುತ್ತೀರಿ ಅದನ್ನು ಕಲಿಯಬೇಕಾ?

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರು ವ್ಯಂಗ್ಯವನ್ನು ಮಾಡುತ್ತಾರೆಂದು ತಾವು ತೀರ್ಮಾನವನ್ನು ಮಾಡಿದಿರಾ?

ಅಧ್ಯಕ್ಷರು: ಈಗ ಅವರು ಇವರು ಎಲ್ಲಾ ಸೇರಿ ವೀರಪ್ಪನ್‌ನ್ನು ಬಿಟ್ಟು ಅಧ್ಯಕ್ಷರನ್ನು ಹಿಡಿದುಕೊಂಡಿದ್ದೀರಲ್ಲಾ. ನೇರವಾಗಿ ಹೇಳಿದರೆ 10 ನಿಮಿಷ ಉಪಾಧ್ಯಕ್ಷರನ್ನು ಕೂರಿಸಿ ಎದ್ದು ಹೊರಗೆ ಹೋಗುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇವತ್ತು ಇಷ್ಟು ಜನರು ಸಂಪೂರ್ಣವಾದಂತಹ ಮಾಹಿತಿಯನ್ನು ಅವರು ಬಿಡುಗಡೆ ಮಾಡಿದ್ದಾರೆ. ಬಿದರಿಯವರು ನಿವೃತ್ತಿಯನ್ನು ಹೊಂದಿ ಹೇಳಿಲ್ಲ. ಐ.ಜಿ.ಇಂಟಲಿಜನ್ಸ್ ಡಿಪಾರ್ಟ್‌ನಲ್ಲಿಯೂ ಸಹ ಇದ್ದಾರೆ. ಅದೇ ರೀತಿಯಲ್ಲಿ ಅಡ್ವೈಸ್ ಕೂಡ ಹೌದು. ಅಂದರೆ ಈ ಪೋಲೀಸ್ ಇಲಾಖೆಗೆ ಸಂಬಂಧಪಟ್ಟಂತೆ ಸಂಪೂರ್ಣವಾದಂತಹ ಸೀಕ್ರೆಟ್ ಮಾಹಿತಿಯೂ ಕೂಡ ಅವರ ಹತ್ತಿರ ಇರುತ್ತದೆ. ಸೀಕ್ರೆಟ್ ಮಾಹಿತಿ ಇರತಕ್ಕಂಥವರು ಇದನ್ನು ಹೇಳಿದ ಮೇಲೆ ನ್ಯಾಚುರಲಿ ವೀರಪ್ಪನ್ ಅಸಹಾಯಕನಾಗಿದ್ದಾನೆ ಎನ್ನುವ ಅರ್ಥ ಸ್ಪಷ್ಟವಾಗಿ ಬರುತ್ತದೆ. ಇದು ಎಲ್ಲಾ ಮಾಹಿತಿ ಇದ್ದು ನೀವು ಸರೆಂಡರ್ ಏಕೆ ಆದಿರಿ? ಕರ್ನಾಟಕ ಸರ್ಕಾರದವರು ವೀರಪ್ಪನ್‌ಗೆ ಸರೆಂಡರ್ ಆಗಿದ್ದಾರೆ ಎನ್ನುವಂತಹ ಮಾತುಗಳು ಬರುತ್ತಿದೆ. ಮತ್ತು ಅವರ ಮಾತಿಗೆ ಸಂಪೂರ್ಣವಾಗಿ ಒಪ್ಪದೇ ಇದ್ದರೂ ಕೂಡ ಸುಮಾರು 75 ಪರ್ಸೆಂಟ್ ಅವನ ಕಂಡಿಷನ್ ಒಪ್ಪಿದ ಹಾಗೆ ಆಗಿದೆ. ತಮಿಳು ನಾಡಿನಲ್ಲಿ ಕೇಸ್ ನಡೆಸತಕ್ಕಂಥದ್ದೇ ಆಗಿರಬಹುದು, ತಮಿಳು ನಾಡಿನ ಜೈಲಿನಲ್ಲಿಯೇ ಅವನನ್ನು ಇಡಬೇಕು ಎನ್ನುವುದೇ ಆಗಲಿ, ಯಾವುದೇ ಕಾರಣದಿಂದ ಅವನು ಕರ್ನಾಟಕಕ್ಕೆ ಬರಬಾರದು ಎನ್ನತಕ್ಕಂಥದ್ದು ಉಳಿದದ್ದು ಅವನ ಜೀವವನ್ನು ರಕ್ಷಣೆ ಮಾಡಬೇಕು ಎನ್ನತಕ್ಕಂಥದ್ದು ದುಡ್ಡಿನ ಒಂದು ವಿಚಾರವನ್ನು ಬಿಟ್ಟರೆ, ದುಡ್ಡಿದ್ದೂ ಕೂಡ ಕೆಲವು ಜನರು ಹೇಳುತ್ತಾರೆ ಬೇರೆಯವರಿಂದ ನಾವು ಸಹಾಯವನ್ನು ಮಾಡಿಸುತ್ತೇವೆಂದು, ಇದು ಅನೇಕ ಪತ್ರಿಕೆಗಳಲ್ಲಿಯೂ ಕೂಡ ಬಂದಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ವಿರೋಧ ಪಕ್ಷದ ನಾಯಕರಾಗಿ ಕೆಲವು ಜನ

ಹೇಳುತ್ತಾರೆಂದು ಭಾಷಣ ಮಾಡಿದರೆ ಹೇಗೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಪತ್ರಿಕೆಯಲ್ಲಿ ಬಂದಿದೆ. ತಾವು ಅದನ್ನು ಡಿಸೈಡ್‌ಮಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ವಿರೋಧ ಪಕ್ಷದ ನಾಯಕರಾಗಿ ಇಂಥ ವೈಲ್ಡ್ ಅಲಿಗೇಷನ್ಸ್ ಅನ್ನು ಹೌಸ್‌ನಲ್ಲಿ ಮಾಡುವುದು ಸರಿಯಲ್ಲ. ಹೌಸ್‌ನಿಂದ ಮಾತನಾಡತಕ್ಕವರು ಈ ಹೊರಗಡೆ ಮಾತನಾಡುವ ಹಾಗೆ ಮಾತನಾಡಿದರೆ ಹೇಗೆ?

ಶ್ರೀ ಹೆಚ್.ಎನ್.ನಂಜೇಗೌಡ: ಅಲಿಗೇಷನ್ ಅಲ್ಲ. ಸುಮಾರು 8-9 ಜನರ ಜೀವ ಉಳಿಸಬೇಕಲ್ಲಾ; ನೀವು ಅವರ ಜೀವ ಉಳಿಸುವುದಕ್ಕೋಸ್ಕರ ಯಾರಿಗೋ ಹೇಳಿ ದುಡ್ಡು ಕೊಡಿಸಿದಿರಿ ಎಂದು. ವೈಟ್ ಮನಿ ಕೊಡುವುದಕ್ಕೆ ಬರುವುದಿಲ್ಲ, ಸರ್ಕಾರ ಬಿಲ್ ಕೊಡುವುದಕ್ಕೆ ಬರುವುದಿಲ್ಲ. ಅದಕ್ಕೋಸ್ಕರ ಯಾರೋ ಕಂಟ್ರಾಕ್ಟರಿಗೆ ಹೇಳಿ ಕೊಡಿಸಿದಿರಿ ಎಂದು ಅಷ್ಟೆ. ಅದೇನೂ ಆಪಾದನೆ ಅಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಲಿಗೇಷನ್ ಅಲ್ಲ. ಅಲ್ಲಿ ಒಂದು ಆಪಾದನೆ ಬಂದಿದೆ ನೋಡಿ..

ಶ್ರೀ ವಾಟಾಳ್ ನಾಗರಾಜ್: ದುಡ್ಡು, ಸರ್ಕಾರದ ದುಡ್ಡಾದರೆ ಏನು? ಸರ್ಕಾರದ ಖಜಾನೆಯಿಂದ ತೆಗೆದರೆ ಏನು? ದುಡ್ಡ ಅಷ್ಟೆ. ತಾಂತ್ರಿಕವಾಗಿ ಸರ್ಕಾರದ ಮೂಲ ಅಲ್ಲ, ಬೇರೆ ಮೂಲ ಎಂದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇವತ್ತಿನ ದಿವಸ ನೀವು ಅವರ ಅನೇಕ ಷರತ್ತುಗಳಿಗೆ ಒಪ್ಪಿಕೊಂಡ ಮೇಲೆ ಅಲ್ಲಿ ಉಳಿದದ್ದು ಏನು? ಅಂದರೆ ಅದರ ಅರ್ಥ, ಒಬ್ಬ ಮನುಷ್ಯ....

ಅಧ್ಯಕ್ಷರು: ಆವಾಗಾವಾಗ ಚರ್ಚೆ ಮಾಡುತ್ತೀರಲ್ಲಾ ಆಗ ಈ ತರಹ ಗಂಭೀರವಾದ ಸಮಸ್ಯೆಗಳು ಬಂದಾಗ, ಕಾವೇರಿ, ವೀರಪ್ಪನ್ ಎಲ್ಲಾ ಬಂದಾಗ ವಿರೋಧ ಪಕ್ಷದವರನ್ನು ಕರೆಸಿ ಕೇಳುತ್ತೀರಲ್ಲಾ ಆಗ ಈ ದುಡ್ಡಿನ ವಿಚಾರವನ್ನು ಮಾತನಾಡಲಿಲ್ಲವೆ? ಹೇಗೆ ಕೊಡುವುದು, ಎಷ್ಟು ಕೊಡುವುದು ಏನು ಎಂದು ಅವರ ಜೊತೆ ಏನು ಚರ್ಚೆ ಮಾಡಲಿಲ್ಲವೆ?

ಶ್ರೀ ಪಿ.ಜಿ.ಆರ್.ಸಿಂಧ್ಯಾ: ದುಡ್ಡಿನ ವಿಚಾರ ಯಾವಾಗಲೂ ಚರ್ಚೆಗೆ ಬಂದಿದೆ. ಆದರೆ ಈ ಸದನದಲ್ಲಿ ಮಾತನಾಡುವಾಗ ಬಹಳ ಜವಾಬ್ದಾರಿಯಿಂದ ಮಾತನಾಡಿದ್ದೇವೆ. ಯಾವುದೇ ಅಲಿಗೇಷನ್ ಮಾಡುವಾಗ, ಯಾರೋ ಮಾತನಾಡುತ್ತಿದ್ದರು, ಅಲ್ಲಿ ಯಾರೋ ಹೇಳುತ್ತಿದ್ದರು, ಈ ರೀತಿ ನಾವು ಮಾತನಾಡುವುದಕ್ಕೆ ಹೋಗಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾರೋ ಹೇಳುತ್ತಿಲ್ಲ. ಅನೇಕ ಪತ್ರಿಕೆಗಳಲ್ಲಿ ಬಂದಿದೆ. ಬೇಕಾದರೆ ತಾವು ಡಿನೇ ಮಾಡಿ. ಇವತ್ತು ಬಿದಿರಿ ಹೇಳಿದ್ದುದು ಸುಳ್ಳೇ?

SRI H.N.NANJEGOWDA: Let them not take it as an allegation. We are giving appreciation. We appreciate the attempts of the government in saving the lives of the people.

MR. SPEAKER: Despite the fact that they are not taking you into confidence in this regard?

SRI M.P.PRAKASH: We are running the government. We are not going to have any negotiation with a man of that type who is a brigand and certainly we have no underhand dealings at all. ತಾವು ಯಾವ ರೀತಿಯಿಂದ ಹೇಳುವುದಕ್ಕೆ ಹೋದರೂ ದುಡ್ಡು ಕೊಡತಕ್ಕ ವ್ಯವಸ್ಥೆಯನ್ನು ಯಾವ ಸರ್ಕಾರ ಕೂಡ ಮಾಡುವುದಿಲ್ಲ. ತಾವೂ ಮಾಡಲಾರರಿ, ನಾವೂ ಮಾಡಲಾರೆವು, ಯಾರೂ ಮಾಡುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಹೇಳತಕ್ಕದ್ದು ಇಷ್ಟೆ: ಎಲ್ಲಾ ಸಂದರ್ಭಗಳನ್ನು ನೋಡಿದಾಗ, ಅವನನ್ನು ಒಂದು ಹತ್ತಿಕ್ಕತಕ್ಕ ಧಾಟಿಯಲ್ಲಿ ಸರ್ಕಾರ ಕೆಲಸ ಮಾಡಿದೆ. ಅದನ್ನು ಸಡಿಲಗೊಳಿಸತಕ್ಕದ್ದು ಏತಕ್ಕೆ? ಯಾರ ಮಾತು ಕೇಳಿ ಇದನ್ನು ಮಾಡಬೇಕು? ನಾನು ಅದಕ್ಕೆ ಹೇಳುವುದು, 9 ಜನರ ಆ್ಯಂಟಿಸಿಡೆಂಟ್ ತಿಳಿದುಕೊಳ್ಳತಕ್ಕದ್ದು ಬಹಳ ಮುಖ್ಯ. ಅವರು ಎಲ್ಲಿ ಹುಟ್ಟಿದರು, ಎಲ್ಲಿ ಬೆಳೆದರು, ಅವರ ಹಿನ್ನೆಲೆ ಏನು? ಅವರ ಕಮ್ಯುನಿಕೇಷನ್ ಯಾವ ರೀತಿ ಇತ್ತು? ಅವರ ಸಂಪರ್ಕ ವೀರಪ್ಪನ್ ಜೊತೆಯಲ್ಲಿ ಇದೆಯೇ ಹೇಗೆ ಅಥವಾ ಗೋಪಾಲನ್ ಜೊತೆ ಇದೆಯೇ ಹೇಗೆ? ಏಕೆಂದರೆ ಗೋಪಾಲನ್ 3 ಸಾರಿ ಹೋಗಿಬರುತ್ತಾನೆ. ಎರಡೆರಡು ದಿವಸ ಅಲ್ಲೇ ಇರುತ್ತಾನೆ. ಅವನು ಎಲ್ಲಿದ್ದರೂ ಪತ್ತೆಹಚ್ಚಬಹುದು. ನಮ್ಮ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್ ಇದೆ. ನಮ್ಮದು ಒಂದೇ ಅಲ್ಲ, ತಮಿಳ್ನಾಡಿನ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್ ಇದೆ, ನಮ್ಮ ಕರ್ನಾಟಕದ್ದು ಇದೆ, ಕೇಂದ್ರ ಸರ್ಕಾರದ್ದು ಇದೆ. ಇಷ್ಟೇ ಅಲ್ಲ, 3 ಸಾರಿ ಹೋಗಿ ಬರುವುದರಲ್ಲಿ ಅವನು ಇರತಕ್ಕ ಸ್ಥಳಗಳ ಬಗ್ಗೆ, ಅವನ ನಡವಳಿಕೆ ಬಗ್ಗೆ, ಅವನು ಮಾಡತಕ್ಕ ಕೆಲಸದ ಬಗ್ಗೆ ಅಥವಾ ಯಾವ ರೀತಿಯಾಗಿ ಅವನನ್ನು ಹಿಡಿಯಬೇಕೆಂಬುದರ ಬಗ್ಗೆ ಆಸಕ್ತಿ ತೋರಿಸಲಿಲ್ಲವೆಂದರೆ ನಾನು ಹೇಳುತ್ತೇನೆ, ಅವನು ಸುಪ್ರೀಂ ಆದ. ನಾವೆಲ್ಲಾ ನಾಳೆ ಹೇಳಬಹುದು, ವೀರಪ್ಪನ್ ಅಂದರೆ ವೀರ. ಪ್ರಜಾಪ್ರಭುತ್ವ ನಾಳೆ ತತ್ವದ ಪ್ರಕಾರ ನಡೆಯಲ್ಲವೆಂದರೆ ವೀರಪ್ಪನ್‌ಗೆ ನೀನು ಬಂದು ಆಳಪ್ಪ ಎಂದು ಹೇಳತಕ್ಕ ಪರಿಸ್ಥಿತಿ ಬರುತ್ತದೆ. ಏಕೆಂದರೆ ಹಿಂದೆ ಪಾಳೇಗಾರರು ಇದೇ

ರೀತಿ ಮಾಡುತ್ತಿದ್ದರು. ಯಾರಿಗೆ ಮಸಲ್ ಪವರ್ ಇತ್ತು ಅವರೇ ರಾಜ್ಯ ಆಳತಕ್ಕದ್ದು. ಹಾಗೆ ವೀರಪ್ಪನ್ ಮಸಲ್ ಪವರ್‌ನಿಂದ ಇವತ್ತು ಆ ಏರಿಯವನ್ನು ಆಳುತ್ತಿದ್ದ ಅಂದರೆ, ಸರ್ಕಾರ ಅಸಹಾಯಕತನ ತೋರಿಸುತ್ತಿತ್ತು ಅಂದರೆ ಇವತ್ತು ಖಂಡಿತ ನಾವು ಅಪ್ರಿಷಿಯೇಟ್ ಮಾಡಬೇಕಾಗುತ್ತದೆ, ಅವನೇ ಸುಪ್ರೀಂ ಎಂದು. ಇಲ್ಲದಿದ್ದರೆ ಇವತ್ತು ನಾವು ಸುಮಾರು 12 ಕೋಟಿ 37 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ; ಇಷ್ಟು ಹಣ ಇಲ್ಲಿಯವರೆಗೆ ಖರ್ಚು ಮಾಡಿ ಪ್ರತಿಯೊಂದು ಅವನ ಮಾತಿಗೆ ಒಪ್ಪಿಕೊಳ್ಳುತ್ತೇವೆಂದರೆ ಏನು ಅರ್ಥ? 15, 18, 19, 24ನೇ ತಾರೀಖಿಗೆ ಹೀಗೆ 4 ಸಾರಿ ಶ್ರೀ ಜೆ.ಹೆಚ್.ಪಟೇಲರು ಮದ್ರಾಸಿಗೆ ಹೋಗಿದ್ದಾರೆ. ಕಾವೇರಿ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಇಷ್ಟು ತರಾತುರಿಯಲ್ಲಿ ಅವರು ಹೋಗಲಿಲ್ಲ. ಆದರೆ ವೀರಪ್ಪನ್ ಕಂಡೀಷನ್ಸ್ ಒಪ್ಪಿಕೊಳ್ಳುವುದಕ್ಕೆ (ಬಿಡಿಸುವುದಕ್ಕಲ್ಲ) ಇಷ್ಟು ತರಾತುರಿಯಲ್ಲಿ ಆಸಕ್ತಿವಹಿಸಿ ಹೋದದ್ದು ನೋಡಿದರೆ ನಾನು ಹೇಳಬೇಕಾಗುತ್ತದೆ, ಇದರಲ್ಲಿ ಯಾವುದೋ ಕೈವಾಡ ಇದೆ ಮತ್ತು ವೀರಪ್ಪನ್ ಬಗ್ಗೆ ಸ್ಪಷ್ಟವಾಗಿ ಸಂಶಯ ಬರುತ್ತಿದೆ. ವೀರಪ್ಪನ್ ಜನರ ಕೈವಾಡ ಈ ಒಂದು ಕಾಂಪ್ರಮೈಸ್‌ನಲ್ಲಿದೆ ಎಂಬ ಮಾತನ್ನು ನಾನು ಹೇಳಬೇಕಾಗುತ್ತದೆ. ಇಲ್ಲದಿದ್ದರೆ, ಇದರಲ್ಲಿ ಎಷ್ಟು ಜನ ಜೀವ ಕಳೆದುಕೊಂಡರು. ಒಬ್ಬ ಎಸ್.ಪಿ.ಜೀವ ಕಳೆದುಕೊಂಡ, ಒಬ್ಬ ಅರಣ್ಯಾಧಿಕಾರಿ ಜೀವ ಕಳೆದುಕೊಂಡ, ಅನೇಕ ಜನ ಅರಣ್ಯಾ ವಲಯಾಧಿಕಾರಿಗಳು ಜೀವ ಕಳೆದುಕೊಂಡರು. ಇವತ್ತಿನ ದಿವಸ ತಮಗೆ ಹೇಳಬೇಕಾದರೆ, ಸುಮಾರು 32 ಜನ ಪೊಲೀಸ್ ಅಧಿಕಾರಿಗಳು, ಅರಣ್ಯಾಧಿಕಾರಿಗಳು 10 ಜನ, ಹಳ್ಳಿಯ ಜನ 77 ಒಟ್ಟು ಗಾಯಗೊಂಡವರು 60, ಜನ. ಉಳಿದ ಕ್ರಿಮಿನಲ್ ಕೇಸಸ್ ನಾನು ಹೇಳುವುದಿಲ್ಲ. ಇಂಥ ಕಡೆ 3 ಸಾರಿ ಗೋಪಾಲನ್ ಹೋಗಿಬರುತ್ತಾನೆಂದರೆ ಇದರಲ್ಲಿ ನಿಜವಾಗಿ ನಾವು ವಿಫಲರಾಗಿದ್ದೇವೆ ಮತ್ತು ಒಂದು ರಾಂಗ್ ಮೆಸೇಜ್ ಏನು ಹೋಗುತ್ತದೆಂದರೆ, ಯಾರೇ ಗೂಂಡಾಗಳು ನಾಳೆ ಇಂಥ ಕೆಟ್ಟ ಕೆಲಸ ಮಾಡತಕ್ಕವರಿಗೆ ನೀವು ಸರ್ಕಾರ ಮಣಿದರೆ, ನಾಳೆ ಬಡವರಿಗೆ ವಿಶ್ವಾಸ ಮೂಡುವುದಿಲ್ಲ; ಅಥವಾ ಸಾಮಾನ್ಯ ಜನರಿಗೆ ವಿಶ್ವಾಸ ಮೂಡುವುದಿಲ್ಲ. ಏನಪ್ಪ, ಈ ಸರ್ಕಾರ ಯಾರೋ ಒಬ್ಬ ಕಳ್ಳ, ಗೂಂಡಾ ಕಾಡು ಕಳ್ಳತನ ಮಾಡುವವನಿಗೆ ಬಗ್ಗಿದೆ ಎಂದು ಬೇರೆಯವರೂ ಕೂಡ ಕಾನೂನು ಮುರಿಯತಕ್ಕ ಜನ ಅಥವಾ ಲಾಲೆಸ್‌ನೆಸ್ ಕ್ರಿಯೇಟ್ ಮಾಡತಕ್ಕ ಜನ, ಅವರು ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಈ ರಾಜ್ಯವನ್ನು ಆಳತಕ್ಕ ಪ್ರಯತ್ನ ಮಾಡುತ್ತಾರೆ. ಅದಕ್ಕೆ ಅನೇಕ ಖೂನಿಗಳು ಕಟ್ಟಳೆಗಳು ಈಗಾಗಲೇ ನಡೆದಿವೆ. ಬೆಂಗಳೂರಿನಲ್ಲಿ, ಬಾಂಬೆ ರೀತಿಯಲ್ಲಿ ಖೂನಿಗಳು ಆಗುತ್ತವೆ. ಇದಕ್ಕೆ ಒಂದು ಸಾರಿ ಪ್ರೋತ್ಸಾಹ ಸಿಕ್ಕಿದರೆ ಮುಗಿಯಿತು. ನೀವೇ ಪ್ರೋತ್ಸಾಹ ಕೊಡುತ್ತೀರೆಂದು ಹೇಳುತ್ತಿಲ್ಲ. ಆದರೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಇಂಥ ಪ್ರೋತ್ಸಾಹ ಸಿಗುತ್ತದೆಂಬ ಭಾವನೆ ಒಂದುಸಾರಿ ಡಕಾಯಿತಿಗಳ ಹತ್ತಿರ ಅಥವಾ ಇಂಥ ಒಂದು ಕಾಡುಗಳ್ಳರ ಹತ್ತಿರ ಬಂದರೆ ಖಂಡಿತವಾಗಿ ನಮ್ಮ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಸರಿಯಾಗಿರುವುದಿಲ್ಲ; ಮತ್ತು ಸಾಮಾನ್ಯ ಜನರೂ ಕೂಡ

ನೆಮ್ಮದಿಯಿಂದ ಬಾಳುವುದಕ್ಕೆ, ಬದುಕುವುದಕ್ಕೆ ಸಾಧ್ಯವಾಗುವುದಿಲ್ಲವೆಂಬ ಮಾತನ್ನು ಹೇಳುತ್ತೇನೆ. ಅದಕ್ಕೆ ಕೊನೆಯದಾಗಿ ಉತ್ತರ ಕೊಡುವಾಗ ತಾವೆಲ್ಲರೂ ಕೂಡ ಇದನ್ನು ನೆನಪಿಟ್ಟುಕೊಂಡು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೀರೆಂದು ತಿಳಿದುಕೊಂಡಿದ್ದೇನೆ. ಏಕೆಂದರೆ ಇವತ್ತಿನ ದಿವಸ ನಾವು ಯಾವುದೇ ಕಾರಣಕ್ಕೂ ವೀರಪ್ಪನ್ ಕಂಡೀಷನ್‌ಗಳಿಗೆ ಮಣಿದೆವೆಂದರೆ ಖಂಡಿತ ಇಂಥ ನೂರಾರು ವೀರಪ್ಪನ್‌ಗಳು ಮತ್ತೆ ಹುಟ್ಟುತ್ತಾರೆ. ದಯವಿಟ್ಟು, ಏನೇ ಬರಲಿ ಧೈರ್ಯವನ್ನು ತೋರಿಸಿ ನಿಮ್ಮ ಎಸ್.ಪಿ.ಗೆ ಇನ್ನೂ ಹೆಚ್ಚಿನ ಶಕ್ತಿ ಕೊಟ್ಟು, ಏನು ಇವತ್ತು ಅವನಿಗೆ ಸರಂಡರ್ ಆಗಬೇಕೆಂಬ ಭಯ ಮೂಡಿತ್ತು ಆ ಭಯವನ್ನು ಹುಟ್ಟಿಸತಕ್ಕದ್ದು ಮತ್ತು ಆ ಒಂದು ಚಾಲನೆ ಇಡತಕ್ಕದ್ದು ಮಾಡಿದಾಗ ಮಾತ್ರ ಬೇರೆ ಜನರು ಸುಖವಾಗಿರುತ್ತಾರೆ. ಇಲ್ಲದಿದ್ದರೆ, ಇಷ್ಟೆಲ್ಲಾ ಮಾಡಿದರೂ ಅವನು ಬದುಕಿ ಬಂದ, ಅವನೇ ಧೀರ, ವೀರ, ಶೂರ, ಎನ್ನತಕ್ಕ ಮಾತು ಬರುತ್ತದೆ; ಮತ್ತು ರೂಲ್ ಆಫ್ ಲಾ ಎಂಬುದು ನಮ್ಮ ರಾಜ್ಯದಲ್ಲಿ ಇರುವುದಿಲ್ಲ. ಕಾನೂನಿಗೆ ಯಾರೂ ಗೌರವ ಕೊಡುವುದಿಲ್ಲ ಅಥವಾ ಕಾನೂನಿನ ಪ್ರಕಾರ ನಡೆದುಕೊಂಡು ಹೋಗತಕ್ಕ ಜನ ಅಥವಾ ರೂಲ್ ಅಬೈಂಡಿಂಗ್ ಸಿಟಿಜನ್ಸ್, ಲಾ ಅಬೈಂಡಿಂಗ್ ಸಿಟಿಜನ್ಸ್ ಏನಿದ್ದಾರೆ ಅವರು ನಾಳೆ ದಿಗ್ಭ್ರಮೆಯಾಗುತ್ತಾರೆ. ಏನು ಈ ಕಾನೂನಿಗೆ ಬೆಲೆ ಇಲ್ಲ, ನಾವು ಏತಕ್ಕೆ ಕಾನೂನು ಪ್ರಕಾರ ನಡೆದುಕೊಳ್ಳಬೇಕೆಂಬ ಒಂದು ವಾತಾವರಣ ಬಂದು ಗೂಂಡಾ ರಾಜ್ಯವಾಗುತ್ತದೆ, ಡಕಾಯಿತಿ ರಾಜ್ಯವಾಗುತ್ತದೆ. ಅದಕ್ಕೆ ದಯವಿಟ್ಟು ಅವಕಾಶ ಕೊಡದೆ ಸರ್ಕಾರ ಬಹಳ ಸ್ಟ್ರಿಕ್ಟ್ ಆಗಿ ಇರಬೇಕು; ಮತ್ತು ಯಾವುದೇ ರೀತಿಯಲ್ಲಿ ಅವನಿಗೆ ಮಣಿಯದೆ ಅವನನ್ನು ಸರಂಡರ್ ಮಾಡುವವರೆಗೆ ತನ್ನ ಪ್ರಯತ್ನವನ್ನು ಬಿಡಬಾರದೆಂದು ಹೇಳಿ, ಅದಕ್ಕೆ ಉಳಿದ ಎಲ್ಲಾ ವಿವರಗಳನ್ನು ಅವರು ನಮ್ಮ ಮುಂದಿಡತಕ್ಕದ್ದು ಬಹಳ ಅವಶ್ಯಕತೆ ಇದೆ ಎಂದು ಭಾವಿಸಿದ್ದೇನೆ. ಏಕೆಂದರೆ ಶ್ರೀ ಬಿದ್ರಿಯವರ ಮುಖಾಂತರ ನಾವು ಕೆಲವು ವಿಷಯಗಳನ್ನು ತಿಳಿದುಕೊಂಡಿದ್ದೇವೆ. ಇವತ್ತು ನಮಗೂ ಕೂಡ ಗೊತ್ತಾಗಲಿ, ಮತ್ತು ಅಲ್ಲಿರತಕ್ಕ ಜನರಿಗೂ ಗೊತ್ತಾಗಲಿ; ವೀರಪ್ಪನ್ ಪವರ್‌ಫುಲ್ ಇಲ್ಲ, ಅವನ ಹತ್ತಿರ ಇರತಕ್ಕ 4-5 ಜನ ಏನಿದ್ದಾರೆ ಅವರನ್ನು ಬಿಟ್ಟರೆ ಅವನಿಗೆ ಬೇರೆಯವರ ಬೆಂಬಲ ಇಲ್ಲ, ಹೊರಗಿನ ಜನರ ಬೆಂಬಲ ಇಲ್ಲ, ಸರ್ಕಾರದ ಬೆಂಬಲ ಇಲ್ಲ. ಅಲ್ಲಿರತಕ್ಕ ಹಳ್ಳಿಗಳಲ್ಲಿ ಏನು ಜನ ವಾಸಿಸುತ್ತಿದ್ದಾರೆ, ಅಲ್ಲಿನ ರೆಸಿಡೆಂಟ್ಸ್ ಏನಿದ್ದಾರೆ ಅವರ ಬೆಂಬಲ ಅವನಿಗೆ ಇಲ್ಲವೆಂಬ ವಾತಾವರಣವನ್ನು ತಾವು ಮೂಡಿಸುತ್ತೀರಿ ಮತ್ತು ನೆಮ್ಮದಿಯಿಂದ ಅಲ್ಲಿರತಕ್ಕ ಜನರು ಜೀವನವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಅದರ ಬಗ್ಗೆ ಸವಿಸ್ತಾರವಾಗಿ ಹೇಳಿಕೆ ಕೊಡಬೇಕು; ಮತ್ತು ಈ ಸದನದ ಮುಂದೆ ಎಲ್ಲಾ ವಿವರಗಳನ್ನು ಇಡಬೇಕೆಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಬಹಳ ಹೊತ್ತು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ವಿರೋಧ ಪಕ್ಷದ

ನಾಯಕರಾದ ಶ್ರೀ ಖರ್ಗೆಯವರು ಸಾಕಷ್ಟು ವಿವರವಾಗಿ ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು: ಈಗ ರೂಲ್ 69ರಲ್ಲಿ ಇನ್ನೊಂದು ವಿಷಯ ಇದೆ. ಮಾನ್ಯ ಮೊಯಿಲಿಯವರು ಅವಕಾಶ ಕೇಳಿದರು, ಅದಕ್ಕೆ ಹೇಳುತ್ತಿದ್ದೇನೆ. ಇದಾದಮೇಲೆ ಲೆಜಿಸ್ಲೇಟೀವ್ ಬಿಸಿನೆಸ್ ಇದೆ, ಮಸೂದೆಗಳು ಇವೆ. ಸುಮಾರು 22 ಜನ ಶೂನ್ಯ ವೇಳೆಯಲ್ಲಿ ಮೆನ್‌ಷನ್ ಮಾಡಬೇಕೆಂದರು. ನಾನು ನಿನ್ನೆ ಸಮಯವಾದ್ದರಿಂದ, ಕಡೆಯಲ್ಲಿ ತೆಗೆದುಕೊಳ್ಳುತ್ತೇನೆ, ಯಾವುದು ಇಂಪಾರ್ಟೆನ್ಸ್ ಇದೆ ಅದನ್ನು ಮೆನ್‌ಷನ್ ಮಾಡುತ್ತೇನೆಂದು ಹೇಳಿದ್ದೇನೆ. ನಮಗೆ ಉಳಿದಿರುವುದು ಇನ್ನು ಎರಡೇ ದಿವಸ. ನಾನು ಮಧ್ಯಾಹ್ನ 3 ಗಂಟೆಗೆ ಅವರನ್ನ ಉತ್ತರ ಹೇಳಿ ಎಂದರೆ, ಅವರು ಉತ್ತರ ಹೇಳುವ ಪ್ರಸಂಗವೇ ಒಂದೂಕಾಲು ಗಂಟೆಯಷ್ಟು ಮಾಡಿದ್ದಾರೆ. ಕ್ಲಾರಿಫಿಕೇಷನ್ ಕೇಳತಕ್ಕದ್ದಕ್ಕೆ ಅರ್ಧ ಗಂಟೆ ಡಿಸ್ಕಷನ್‌ಗೆ ರಿಪ್ಲೈ ಕೊಡುವುದು, ಕ್ಲಾರಿಫಿಕೇಷನ್ ಕೇಳುವುದು, ಇದಕ್ಕೆ ಒಂದೂಕಾಲು ಗಂಟೆಯಾದರೆ, ಹೌಸ್ ನಡೆಸುವುದು ಹೇಗೆ? ಆದ್ದರಿಂದ, ಈಗಾಗಲೇ ಒಂದು ಗಂಟೆಯಾಯಿತು. ಇದನ್ನು ತಾವು ಮನಸಿನಲ್ಲಿಟ್ಟುಕೊಂಡು ಮಾತನಾಡಿದರೆ ಒಳ್ಳೆಯದು. ರಾತ್ರಿ ಇವತ್ತು ಸ್ವಲ್ಪ ಹೊತ್ತು ಲೇಟಾದರೂ ಚಿಂತೆ ಇಲ್ಲ, ಕುಳಿತುಕೊಳ್ಳೋಣವೆಂದರೆ, ಲೆಜಿಸ್ಲೇಟಿವ್ ಬಿಸಿನೆಸ್ ಎಲ್ಲಾ ಮಾಡುವುದಕ್ಕೆ ನಾನು I am willing. When a senior Member Mr. Veerappa Moily asks for a permission it becomes very embarrassing. ಇಲ್ಲ, ಅವಕಾಶ ಕೊಡುವುದಕ್ಕಾಗವುದಿಲ್ಲವೆಂದು ನಾನು ಹೇಳುವುದಕ್ಕಾಗುವುದಿಲ್ಲ. It is difficult for the Chair. I have to permit him to have his say.

ಶ್ರೀ ಎಂ.ವೀರಪ್ಪಮೊಯಿಲಿ: ಅನೇಕ ಹೇಳಿಕೆಗಳು ಪತ್ರಿಕೆಗಳಲ್ಲಿ ಬಂತು, ಅನೇಕ ಸಂದರ್ಭಗಳಲ್ಲಿ I was about to react to the press. ಏಕೆಂದರೆ, ನಾವು ಇಂಥ ಸಮಯದಲ್ಲಿ ಕೂಡ ಆಪರೇಷನ್ಸ್, ನೋವು, ಏನು ಎಸ್‌ಟಿಎಫ್‌ನವರಿಗೆ ಸಂಕಷ್ಟವಿದೆ ಎಂಬುದು ನಮಗೆ ಗೊತ್ತಿದೆ. ಆದ್ದರಿಂದ, ಸದನದಲ್ಲಿ ಮಾತನಾಡಬಹುದೆಂದರೆ ಮಾತನಾಡುತ್ತೇನೆ. Otherwise I will have to go to the press.

MR. SPEAKER: That is your liberty. I am not coming in your way. My difficulty as Chairperson is that, after all, when a senior person like you asks for an opportunity, I will find it very difficult and I cannot say 'No, no'.

SRI M.VEERAPPA MOILY: The situation was that I

would have reacted to the press. ಈ ಸದನದಲ್ಲಿ.....

ಅಧ್ಯಕ್ಷರು: ನಾನು ಹೇಳಿದ್ದರ ಅಭಿಪ್ರಾಯವೇನೆಂದರೆ, ಜೂನಿಯರ್ ಮೆಂಬರ್ ಯಾರಾದರೂ ಕೇಳಿದರೆ, I can tell the junior Members, ಇಲ್ಲ ಸಮಯವಿಲ್ಲವೆಂದು ಹೇಳಬಹುದು. But, I cannot treat you the same way. You have the honour of being a Member of this Hon'ble House for 25 years. I have got to treat you in a different way.

ಶ್ರೀ ವೀರಪ್ಪ ಎಂ.ಮೊಯಿಲಿ: ನನ್ನ ಬಗ್ಗೆ ಬಹಳ ಗೌರವನ್ನಿಟ್ಟುಕೊಂಡಿದ್ದೀರಿ. ಅದರ ಬಗ್ಗೆ ನನಗೆ ಗ್ರಿವಿಯೆನ್ಸ್ ಇಲ್ಲ ನಾನೇಕೆ ಹೇಳುತ್ತಿದ್ದೇನೆಂದರೆ, a matter like this, I should have reacted long back. ಆದರೆ, ನಾನು ಮಾಡಲಿಲ್ಲ. ಏಕೆಂದರೆ, ಸದನದಲ್ಲಿ ವಿಚಾರ ಬರುವುದಿಲ್ಲ...

MR. SPEAKER: I will try to find some time.

ಶ್ರೀ ಬಿ.ಎಸ್.ಯಡಿಯೂರಪ್ಪ: ಇದುವರೆಗೆ ನಡೆದ ಘಟನೆಗಳನ್ನು ನೋಡಿದಾಗ, ಯಾವುದೋ ಒಂದು ನಾಟಕ, ಸಿನಿಮಾ ನೋಡುತ್ತಿದ್ದೇವೇನೋ ಎಂದು ಹೇಳಿದರೆ, ಅಲ್ಲಿಯೂ ಸಹ ಈ ರೀತಿ ಕಲ್ಪನೆ ಮಾಡಿಕೊಂಡು, ನಾಟಕ ಆಡುವುದಕ್ಕೆ, ಚಲನಚಿತ್ರವನ್ನು ತೆಗೆಯುವುದು ಸಾಧ್ಯವಿಲ್ಲ. ನಾಚಿಕೆಯಿಂದ, ತಲೆ ತಗ್ಗಿಸುವ ರೀತಿಯಲ್ಲಿ ನಮ್ಮ ಸರ್ಕಾರ ಈ ಸಂದರ್ಭದಲ್ಲಿ ನಡೆದುಕೊಂಡಿದೆ. ಒಬ್ಬ ನರಹಂತಕ, 4-5 ಜನರ ಜೊತೆ ಕಾಡಿನಲ್ಲಿ ಕೋವಿ ಹಿಡಿದುಕೊಂಡು ಒಂದು ಇಡೀ ಸರ್ಕಾರವನ್ನು ತನ್ನ ತಾಳಕ್ಕೆ ತಕ್ಕ ಹಾಗೆ ಕುಣಿಯುವಂತೆ ಮಾಡುತ್ತಾನೆ. ಅದಕ್ಕೆ ಎಲ್ಲಾ ರೀತಿಯಲ್ಲೂ ನಮ್ಮ ಸರ್ಕಾರ ಸಹಕಾರ ಕೊಡುತ್ತದೆ. ಇದನ್ನು ಮಾಡುವ ಹಾಗಿದ್ದರೆ, ಇಷ್ಟು ಬೇಗ ಭಯದಿಂದಲೋ, ಕರುಣೆಯಿಂದಲೋ, ಬೇರೆ ಯಾವುದೋ ಒಂದು ವಿಚಾರಗಳು ಬಯಲಾಗಬಹುದೆಂಬ ಭಯದಿಂದಲೋ, ನನಗೆ ಗೊತ್ತಿಲ್ಲ, ಈ ರೀತಿ ನೀವು ಸರೆಂಡರ್ ಆಗುವುದಿದ್ದರೆ, ಈ ರೀತಿ 150-160 ಜನರ ಮಾರಣ ಹೋಮ ಆಗುವುದಕ್ಕೇಕೆ ಅವಕಾಶ ಮಾಡಿಕೊಟ್ಟಿರಿ? 40 ಕೋಟಿ ರೂಪಾಯಿಗಳನ್ನು ಅದಕ್ಕೆ ಖರ್ಚು ಮಾಡುವುದಕ್ಕೆ ಏತಕ್ಕೆ ಅವಕಾಶ ಮಾಡಿಕೊಟ್ಟಿರಿ? ಅತ್ಯಂತ ಜವಾಬ್ದಾರಿಯಿಂದ ಕೆಲಸ ಮಾಡುವಂತಹ, ಒಳ್ಳೆಯ ಹೆಸರು ಪಡೆದಿರುವ ಎಸ್.ಟಿ.ಎಫ್‌ನ್ನು ಉಪಯೋಗ ಮಾಡಿಕೊಳ್ಳುವ ಪ್ರಯತ್ನವನ್ನೇಕೆ ಮಾಡಿದಿರಿ? ಕಣ್ಣಲ್ಲಿ ನೀರು ಬರುತ್ತದೆ. ಹರಿಕೃಷ್ಣರಂಥ ಎಸ್.ಪಿ.ಯನ್ನು ನಾವು ಕಳೆದುಕೊಂಡೆವು. ಹೀಗೆ ನೀವು ಮಾಡುತ್ತೀರಿ ಎಂದರೆ ಅವನೇಕೆ ಪ್ರಾಣ ತೆರಬೇಕಾಗಿತ್ತು? ಶ್ರೀನಿವಾಸ ಡಿ.ಎಫ್.ಓರವರು ಏಕೆ ಸಾಯಬೇಕಾಗಿತ್ತು? ಶಕೀಲ್ ಅಹಮದ್ ಎನ್ನುವ ಸಬ್-ಇನ್ಸ್‌ಪೆಕ್ಟರ್, ನಾನು ವೀರಪ್ಪನ್ ಹಿಡಿಯುವವರೆಗೆ ಮದುವೆ ಮಾಡಿಕೊಳ್ಳುವುದಿಲ್ಲವೆಂದು ಪಣ ತೊಟ್ಟು, ನರಹಂತಕನಿಗೆ ಅವನು ಪ್ರಾಣ

ಕೊಟ್ಟನಲ್ಲಾ, ಅವನೇಕೆ ಸ್ಯಾಕ್ರಿಫೈಸ್ ಮಾಡಬೇಕಾಗಿತ್ತು? ಒಂದು ಕಡೆ ಈ ರೀತಿ ನರಹಂತಕ ವೀರಪ್ಪನ್‌ನ ಚಟುವಟಿಕೆ ನಮ್ಮ ರಾಜ್ಯದಲ್ಲಿಲ್ಲ, ಪಕ್ಕದ ರಾಜ್ಯದಲ್ಲಿ, ದೇಶದಲ್ಲಿ ನಡೆಯುವುದಕ್ಕೆ ಬಿಡುವುದಿಲ್ಲವೆಂದು ಪಣ ತೊಟ್ಟಿರಿ. ಮತ್ತೆ, ಮತ್ತೊಂದು ಕಡೆ, ಏಕ್‌ದಂ ಸರೆಂಡರ್ ಆಗಿ, ನಾವು ಅಪಮಾನದಿಂದ ತಲೆತಗ್ಗಿಸುವಂತೆ ಮಾಡಿದಿರಿ. ತಮಿಳುನಾಡು, ಕರ್ನಾಟಕ ಎರಡೂ ರಾಜ್ಯ ಸರ್ಕಾರಗಳು ಪ್ರಯತ್ನಪಟ್ಟರೂ [illegible] ಅವನ ಚಲನವಲನವನ್ನು ಕಳೆದ ಹತ್ತಾರು ವರ್ಷಗಳಿಂದ ಕಂಡು [illegible] ನಾನು ಹೇಳುತ್ತೇನೆ, ನಮ್ಮ ರಾಜ್ಯ ಸರ್ಕಾರ ಬಿಡಿ. ವಾಲ್ಟರ್ ದೇವರಂ ಎಂಬ [illegible] ಪೋಲೀಸ್ ಆಫೀಸರ್ ಚೆನ್ನೈಯಲ್ಲಿ ಆ ನಕ್ಕೀರನ್ ಪತ್ರಿಕಾ ಸಂಪಾದಕ ಗೋಪಾಲನ್‌ರವರನ್ನು ಒಂದು ಸಾರಿ ಎನ್‌ಕ್ವೈರಿ ಮಾಡಿ, ಅನೇಕ ವಿಷಯಗಳು ಬಯಲಿಗೆ ಬರುತ್ತದೆಂದು ಹೇಳಿದರು. ಯಾರು ಹೇಳಿದ್ದು, ನಮ್ಮ ರಾಜ್ಯದವರಲ್ಲ, ಒಳ್ಳೆಯ ಹೆಸರು ಪಡೆದಿರುವ ವಾಲ್ಟರ್ ದೇವರಂ ಹೇಳಿರುತ್ತಾರೆ. ನಾನು ಕೇಳುತ್ತೇನೆ, ನಕ್ಕೀರನ್ ಸಂಪಾದಕರು ಚೆನ್ನೈಗೆ ಬೆಳಿಗ್ಗೆ ಹೋಗುತ್ತಾರೆ, ಯಾವುದೇ ರೀತಿ ಓಡಾಟ ನಡೆಸಿ ಅನುಭವವಿಲ್ಲ, ಸಾಯಂಕಾಲದೊಳಗೆ ಅಲ್ಲಿ ಹೋಗಿ ತಲುಪಿ, ವೀರಪ್ಪನ್‌ನ್ನು ಭೇಟಿ ಮಾಡುತ್ತಾರೆ, ಕ್ಯಾಸೆಟ್ ರೆಕಾರ್ಡ್ ಆಗುತ್ತದೆ. ಇದು ಹೇಗೆ ಸಾಧ್ಯ? ತಮಗೆ ಗೊತ್ತಿರುವ ಹಾಗೆ, ಪತ್ರಿಕೆಯಲ್ಲಿ ನಾವು ಓದಿದ್ದು, ಸತ್ಯಸಂಗತಿ ಏನೆಂದು ಸರ್ಕಾರಕ್ಕೆ ಗೊತ್ತಿರಬಹುದು. ಅವರು ನಕ್ಕೀರನ್ ಸಂಪಾದಕ ಗೋಪಾಲ್ ಹೋಗುವ ಕಾಲದಲ್ಲಿ ಪತ್ರಿಕಾ ವರದಿ ಪ್ರಕಾರ, ಯಾರೇ ಆಗಲಿ ಊಹೆ ಮಾಡುವಂಥಾದ್ದು, ಈ ನರಹಂತಕವೀರಪ್ಪನ್ ಸ್ಥಳ ಬದಲಾವಣೆ ಮಾಡುತ್ತಾನೆಂದು ಬೇರೆ ಬೇರೆ ಕಡೆ ಬೇರ್‍ಯಾರಿಗೂ ಸಿಗದ ರೀತಿಯಲ್ಲಿ ಓಡಾಟ ನಡೆಸುತ್ತಿದ್ದ ಅಂದರೆ ಚೆನ್ನೈನಲ್ಲಿ ಕುಳಿತುಕೊಂಡಿರುವ ಗೋಪಾಲ್‌ರಿಗೆ ಇವತ್ತು ಯಾವ ಸ್ಪಾಟ್‌ನಲ್ಲಿ ಇದ್ದಾನೆ, ಎಲ್ಲಿದ್ದಾನೆಂಬುದು ಗೊತ್ತಾಗುತ್ತದೆ. ಸರ್ಕಾರ ನಡೆಸುವ ನಿಮಗೆ ಗೊತ್ತಿಲ್ಲ, ತಮಿಳುನಾಡಿನ ಸರ್ಕಾರಕ್ಕೆ ಗೊತ್ತಿಲ್ಲ. ನಾಚಿಕೆಯಾಗುವುದಿಲ್ಲವೇ? ಇದರಲ್ಲಿ ನೀವು ಶಾಮೀಲಾಗಿದ್ದೀರೆಂದು ಜನ ಮಾತನಾಡಿಕೊಂಡರೆ ತಪ್ಪಾಗುತ್ತದೆಯೇ? ಕಾವೇರಿ ವಿವಾದದಲ್ಲೂ ಅವರ ತಾಳಕ್ಕೆ ತಕ್ಕಂತೆ....

ಶ್ರೀ ಎಚ.ಎನ್.ನಂಜೇಗೌಡ: ತಮಿಳುನಾಡು ಸರ್ಕಾರಕ್ಕೆ ಗೊತ್ತಿದ್ದೇ ಇದು ನಡೆಯಿತು.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಹೇಳುತ್ತಿದ್ದೇನೆ, ತಮಿಳುನಾಡು ಸರ್ಕಾರಕ್ಕೆ ಮಾತ್ರ ಗೊತ್ತಿತ್ತು, ನಮ್ಮ ರಾಜ್ಯ ಸರ್ಕಾರಕ್ಕೆ ಗೊತ್ತಿರಲಿಲ್ಲ ಅಂದರೆ ಇದು ಅಪಮಾನವೆಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ನಾನು ಕೇಳುತ್ತೇನೆ, ಆ ಗೋಪಾಲ್ ಹೋದರಲ್ಲಾ, ತಮಗೆ ಗೊತ್ತಿರುವ ಹಾಗೆ ಸಿಚ್ಯುಯೇಷನ್ ಈಗ ಏನು? ತನ್ನೆಲ್ಲಾ ಶಕ್ತಿ ಕಳೆದುಕೊಂಡು, ಕುಗ್ಗಿಹೋಗಿ, ಕೇವಲ 6-7 ಜನ ಮಾತ್ರ ಉಳಿದು, ಇನ್ನೇನು ಸರೆಂಡರ್ ಆಗಬೇಕು, ಬೇರೆ ದಾರಿ ಇಲ್ಲವೆನ್ನುವ ಪರಿಸ್ಥಿತಿ ಒದಗಿ ಬಂದಾಗ, ಆತ್ಮಸಾಕ್ಷಿಯಾಗಿ ಹೇಳಿ ಸ್ವಾಮಿ, ಲಂಚ ತೆಗೆದುಕೊಳ್ಳುವುದಕ್ಕೆ, ಕೊಟ್ಟದ್ದಕ್ಕೆ, ಇಂಥ ವ್ಯವಹಾರಗಳಲ್ಲಿ ದಾಖಲೆ

ಎಲ್ಲಿ ಇರುತ್ತೆ, ಮನೆ ಮಾತು. ದೊಡ್ಡದೊಡ್ಡ ಇಂಡಸ್ಟ್ರೀಗಳಿಂದ ಮೂರೂವರೆ ನಾಲ್ಕು ಕೋಟಿ ಸಂಗ್ರಹ ಮಾಡಿ ವೀರಪ್ಪನ್ ಕೊಟ್ಟು 9 ಜನರನ್ನು ಬಿಡಿಸಿಕೊಂಡು ಬಂದಿದ್ದೀರಿ ಎನ್ನುವುದನ್ನು ಎಲ್ಲರೂ ಮಾತನಾಡುವಂಥ ವಿಷಯ. ಮುಖ್ಯಮಂತ್ರಿಗಳು ಒಂದು ಕಡೆ ಪತ್ರಿಕೆಯಲ್ಲಿ ನನಗೆ ಗೊತ್ತಿಲ್ಲವೆಂದು ಹೇಳಿದರು. ಕೊಟ್ಟಿಲ್ಲವೆಂದು ಹೇಳಲಿಲ್ಲ. ಪತ್ರಿಕಾ ಹೇಳಿಕೆಯನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಬಹುಶಃ ಇನ್ನು ಮುಂದೆ ಏನಾಗಬಹುದು, ಈ ರೀತಿ ವೀರಪ್ಪನ್‌ನಂಥ ಅನೇಕ ವ್ಯಕ್ತಿಗಳು ಹುಟ್ಟಿಕೊಂಡು ಅದು ಊರೊಳಗಿರಬಹುದು, ಕಾಡಿನಲ್ಲಿರಬಹುದು, ಮತ್ತೊಂದೆಡೆ ಸರ್ಕಾರವನ್ನು ಆಟ ಆಡಿಸಬಹುದು, ಏನು ಬೇಕಾದರೂ ಮಾಡಿ ಯಶಸ್ಸನ್ನು ಗಳಿಸಬಹುದೆನ್ನುವುದಕ್ಕೆ ಒಂದು ದೊಡ್ಡ ಮೇಲ್ಪಂಕ್ತಿಯನ್ನು ತಾವು ಹಾಕಿಕೊಟ್ಟಂಥ ಕೀರ್ತಿ ನಿಮಗೆ ಬಂದಿದೆ. ಬಹುಶಃ ಯಾರೂ ಸಹ ನಿಮ್ಮ ಈ ನಡವಳಿಕೆಯನ್ನು ಕ್ಷಮಿಸುವುದಿಲ್ಲವೆನ್ನುವ ಮಾತನ್ನು ನಾನು ಹೇಳಲು ಬಯಸುತ್ತೇನೆ. 12.7.97ರಂದು 9 ಜನ ಅರಣ್ಯ ಸಿಬ್ಬಂದಿ ಹೋಗುತ್ತಿರಬೇಕಾದರೆ, ವೀರಪ್ಪನ್ ಕಡೆಯವರು ಬರುತ್ತಾರೆ, ಹಿಡಿದುಕೊಂಡು ಹೊರಟೇಹೋಗುತ್ತಾರೆ. ಒಬ್ಬನೂ ತಪ್ಪಿಸಿಕೊಳ್ಳುವುದಿಲ್ಲ ಕೂಗಲಿಲ್ಲ, ಪ್ರೊಟೆಸ್ಟ್ ಮಾಡಲಿಲ್ಲ, ಸ್ಪಾಟ್‌ನಲ್ಲಿ ಸಾಯಲಿಲ್ಲ. ಇದು ಸಾಧ್ಯವೇ? ಊಹೆ ಮಾಡಿಕೊಳ್ಳಿ. ಸಿನಿಮಾದಲ್ಲಿ ಈ ರೀತಿ ನಡೆಯುತ್ತದೆಯೇ? 9 ಜನ ಸರೆಂಡರ್ ಆಗಿ ಯಾರು ಅರಣ್ಯದಲ್ಲಿ ಓಡಾಡಿ ಕೆಲಸ ಮಾಡುವ, ಕಾಡು ಪ್ರಾಣಿ ಓಡಿಸಿ, ಕಾಡು ಮೃಗಗಳನ್ನು ಓಡಿಸಿ, ಅರಣ್ಯವನ್ನು ಲೂಟಿ ಮಾಡುವವರನ್ನು ಎದುರಿಸುವ, ಬಂದೂಕು ಹಿಡಿದುಕೊಂಡು ಅಭ್ಯಾಸವಿರುವವರು ಯಾರೋ 3-4 ಜನ ಬಂದು ಹಿಡಿದುಕೊಳ್ಳುತ್ತಾರೆ, ಇವರು ಜೀಪು ಹತ್ತಿ ಹೋಗೇ ಬಿಡುತ್ತಾರೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ತುಂಬಾ ಜವಾಬ್ದಾರಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ, ದಯಮಾಡಿ ಯಾರು 9 ಜನರನ್ನು ಬಿಡುಗಡೆ ಮಾಡಿದ್ದೇವೆಂದು ತಾವು ಬಹಳ ದೊಡ್ಡ ಹೆಗ್ಗಳಿಕೆಯಿಂದ ಹೇಳುತ್ತಿದ್ದೀರೋ, ಅವರ ಬಗ್ಗೆ ಎನಕ್ವೈರಿ ಮಾಡಿ. ಅವರ ಚಲನವಲನಗಳನ್ನು ನೋಡಿ ಗೋಪಾಲ್‌ರನ್ನು ಎನ್‌ಕ್ವೈರಿ ಮಾಡುವುದಕ್ಕೆ ತಮಿಳುನಾಡಿಗೆ ಹೋಗುವುದಕ್ಕೆ ಆಗುವುದಿಲ್ಲ. ನಿಮ್ಮ ಕೈಯಲ್ಲಿ ಆಗುವುದಿಲ್ಲ. ಆ ಪ್ರಯತ್ನವನ್ನು ತಮಿಳುನಾಡಿನವರು ಮಾಡುವುದೂ ಇಲ್ಲ. ಅವರದೇ ಆದ ರಾಜಕೀಯ ಲಾಭಕ್ಕೆ ವೀರಪ್ಪನ್ ಬದುಕಿ ಅಲ್ಲಿ ಬರಬೇಕು. ಎಲ್ಲಿಯವರೆಗೆ ಈ ಮಾತು? ಜವಾಬ್ದಾರಿ ಇರುವ ಮಾನ್ಯ ಮುಖ್ಯಮಂತ್ರಿಗಳ ಬಾಯಿಂದ. ಅವರು ಹೇಳುತ್ತಾರೆ, ಅಕಸ್ಮಾತ್ ಯಾರಾದರೂ ಅಲ್ಲಿ ತಮಿಳುನಾಡಿಗೆ ಹೋಗಿ ವೀರಪ್ಪನ್ ಚುನಾವಣೆಯಲ್ಲಿ ಗೆದ್ದು ಅಕಸ್ಮಾತ್ ಅವನು ಮಂತ್ರಿಯಾದರೆ, ನಮ್ಮ ಪೊಲೀಸ್ ಆಫೀಸರ್ ಬಿದರಿಯವರನ್ನು ಮಂತ್ರಿಯನ್ನಾಗಿ ಮಾಡುತ್ತೇನೆಂದು.

5.10 ಪಿ.ಎಂ

ಒಬ್ಬ ಜವಾಬ್ದಾರಿ ಇರುವಂಥ ಮುಖ್ಯಮಂತ್ರಿ ಇಷ್ಟೊಂದು ಹಗುರವಾಗಿ ಲೈಟ್

ಟಾಕ್ಸ್ ಇಂಥ ಗಂಭೀರವಾದಂಥ ಸಂದರ್ಭದಲ್ಲಿ ಆಡುವಂಥದ್ದು ಯಾರಿಗಾದರೂ ಶೋಭೆ ತರುವಂಥದ್ದಾ? ಯಾರಾದರೂ ಒಪ್ಪುತ್ತಾರಾ ಈ ತರಹದ ನಡವಳಿಕೆಗಳನ್ನು, ಈ ತರಹದ ಮಾತುಗಳನ್ನು? ಹೆಲಿಕ್ಯಾಪ್ಟರ್ ಕಳುಹಿಸಿಕೊಡುವ ಬಗ್ಗೆ ಪತ್ರಿಕೆಗಳಲ್ಲಿ ಬಂತು. ಅವಶ್ಯಕ ಎನಿಸಿದರೆ ನಾನು ಹೋಗುತ್ತೇನೆ ರಿಸೀವ್ ಮಾಡಿಕೊಳ್ಳುವುದಕ್ಕೆ ಎಂದು ಹೇಳಿದರು ನಮ್ಮ ರಾಜ್ಯದ ಮುಖ್ಯಮಂತ್ರಿ. ಇದು ಒಂದು ಸರ್ಕಾರ ನಡೆದುಕೊಳ್ಳುವಂಥ ರೀತಿ ಎಂದು ನನಗೇನೂ ಅನ್ನಿಸುವುದಿಲ್ಲ ಸ್ವಾಮಿ. ಆಯಿತು, 40 ಕೋಟಿ ರೂಪಾಯಿ ಖರ್ಚು ಮಾಡಿದಿರಿ. 150-160 ಜನರನ್ನು ಅವನು ಬಲಿ ತೆಗೆದುಕೊಂಡ. ಒಂದು ಸಾವಿರ ಕೋಟಿ ಮೌಲ್ಯದ ಅರಣ್ಯ ನಾಶವಾಯಿತು. ಎಲ್ಲಾ ಆದಮೇಲೆ ಈಗಲಾದರೂ ನನ್ನ ಒತ್ತಾಯ ಇಷ್ಟೆ. ಇಷ್ಟು ಹೊತ್ತು ಏನು ಮಾತನಾಡುವಂಥದ್ದಿದೆ? ಎಷ್ಟು ನಿಮಿಷ ನಾನು ಮಾತನಾಡುತ್ತೇನೆ ಎಂಬುದು ಬಹು ಮುಖ್ಯ. ಅದಲ್ಲ. ನನ್ನದು ಎರಡು ಮೂರು ಸಂಗತಿ ಇದೆ. ದಯಮಾಡಿ ಈ ವಿಷಯದಲ್ಲಿ ಪರಸ್ಪರ ರಾಜ್ಯದಲ್ಲಿ ನರಹಂತಕರನ್ನು ಮೆಟ್ಟಿ ನಿಲ್ಲಬೇಕು, ಇದು ರಿಪೀಟ್ ಆಗಬಾರದು ಎಂದು ಇದ್ದರೆ ದಯಮಾಡಿ ಗೋಪಾಲನ್ ಬಗ್ಗೆ ತನಿಖೆ ನಡೆಸಿ. 9 ಜನ ಅರಣ್ಯ ಸಿಬ್ಬಂದಿ ಒಂದು ನಾಟಕದ ರೀತಿಯಲ್ಲಿ ವೀರಪ್ಪನ್ ಜೊತೆ ಹೋಗಿ ವಾಪಸ್ ಬಂದು.... ನಾವು ನೋಡುತ್ತಿದ್ದೇವೆ; ಟಿ.ವಿ. ನೋಡಿದ್ದೇವೆ. ಪತ್ರಿಕಾ ಹೇಳಿಕೆ ಕಂಡಿದ್ದೇವೆ. ಸುಮ್ಮನೆ ಗಮನಿಸಿದರೆ ಮೇಲ್ನೋಟಕ್ಕೆ ನೋಡಿದರೆ ಇದೆಲ್ಲಾ ನಾಟಕ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ದಯಮಾಡಿ ತನಿಖೆ ಮಾಡಿಸಿ. ಮೂರನೆಯದು ಏನಾದರೂ ಈ ಸರ್ಕಾರಕ್ಕೆ ಈ ನಾಡಿನ ಜನರ ಬಗ್ಗೆ....ಎಷ್ಟು ಜನ ಮುಗ್ಧರು ಬಲಿಯಾಗಿ ದೊಡ್ಡದೊಡ್ಡ ಪೊಲೀಸ್ ಅಧಿಕಾರಿಗಳು ತಮ್ಮ ಪ್ರಾಣವನ್ನು ತೆತ್ತರೋ ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಕೈಜೋಡಿಸಿ ನಿಮ್ಮನ್ನು ಪ್ರಾರ್ಥನೆ ಮಾಡುತ್ತೇನೆ. ತಾವು ಸರೆಂಡರ್ ಆಗಬೇಡಿ. ತಾವು ಅವನನ್ನು ಕ್ಷಮಿಸಬೇಡಿ. ಅವನ ಮೇಲೆ ಎಲ್ಲಾದರೂ ಸಂದರ್ಭ ನೋಡಿಕೊಂಡು ಗುಂಡಿಕ್ಕಿ ಕೊಂದರೆ ಅಪರಾಧವಾಗುತ್ತದೇನು? ನಾನು ನಿಮ್ಮನ್ನು ಕೇಳುತ್ತೇನೆ ಸ್ವಾಮಿ. ತಮಿಳುನಾಡು ಸರ್ಕಾರ ನೀವು.... ಅದು ಮುಗಿದುಹೋಗಿದೆಯಲ್ಲಾ. 9 ಜನ ಬಂದಿದ್ದಾರಲ್ಲಾ ಇನ್ನೂ 9 ಜನರನ್ನು ಕರೆದುಕೊಂಡು ಹೋಗುವವರೆಗೆ ನಾವು ಮಾತನಾಡಬಹುದಲ್ಲಾ ಬಹಿರಂಗವಾಗಿ. ಗೋಪಾಲನ್ ಹೋದರಲ್ಲಾ, ನೀವೇ ಕಳುಹಿಸಿಕೊಟ್ಟಿರಲ್ಲಾ, ಇಷ್ಟೊಂದು ಲೇಟೆಸ್ಟ್ ಎಕ್ವಿಪ್‌ಮೆಂಟ್ಸ್ ಇದೆ, ಎಲ್ಲಾ ರೀತಿಯ ಅನುಕೂಲತೆಗಳು ನಮ್ಮಲ್ಲಿವೆ, ಅವನು ಎಲ್ಲಿ ಹೋಗುತ್ತಿದ್ದಾನೆ ಎಂದು ಫಾಲೋ ಮಾಡುವಂಥದ್ದು, ಬೇಕಾದಂಥ ಗುರುತುಗಳನ್ನು ಇಟ್ಟುಕೊಳ್ಳುವುದು, ನಿಮ್ಮ ಫೋರ್ಸ್‌ನಿಂದ ಅವನ ಸುತ್ತ ಕಾವಲು ಇಡಿಸುವಂಥದ್ದು, ಸರೆಂಡರ್ ಆದರೆ ಸರಿ 9 ಜನರನ್ನು ಕಳುಹಿಸಿದರೆ ಸರಿ, ಇಲ್ಲದಿದ್ದರೆ ಬಿಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದಿರಾ? ಪ್ರಾಮಾಣಿಕ ಪ್ರಯತ್ನ ಮಾಡಿದಿರಾ? ಅವನ ಹಿಂದೆ ಫೋರ್ಸ್ ಹೋಗುವಂಥ ಪ್ರಯತ್ನ ಆಯಿತಾ? ಯಾವುದೂ ಇಲ್ಲ. ಬಹುಶಃ ನನಗನ್ನಿಸುತ್ತದೆ ಈ ಸರ್ಕಾರದ ಬಗ್ಗೆ ಅಲ್ಪಸ್ವಲ್ಪ

ಯಾರಿಗಾದರೂ ವಿಶ್ವಾಸ ಇದ್ದರೆ ಅದನ್ನೂ ಕಳೆದುಕೊಂಡುಬಿಟ್ಟರಿ. ಮಾನ್ಯ ಸಿಂಧ್ಯಾ ಅವರು ಹೋಮ್ ಮಿನಿಸ್ಟರ್ ಆಗಿದ್ದಾಗ ಇಲ್ಲಿ ಚರ್ಚೆಯಾಗುತ್ತಿತ್ತು. ಅಲ್ಲಿ ಗುಂಡಿನ ಕಾಳಗ ಆಗುತ್ತಿತ್ತು. ನಾವು ಅಲ್ಲಿ ಸುದ್ದಿ ನೋಡುತ್ತಿದ್ದೆವು. ಸನ್ಮಾನ್ಯ ಸಿಂಧ್ಯಾ ಅವರು ಹೇಳಿದರು, ಅದು ರೆಕಾರ್ಡ್‌ನಲ್ಲಿದೆ ಸ್ವಲ್ಪ ತಡೆಯಿರಿ, ಅರ್ಧಗಂಟೆ ತಡೆಯಿರಿ, ಮುಗಿಯಿತು, ಆಗಿಹೋಯಿತು ಎಂದು ಹೇಳಿದರು. ಅಂದರೆ ಸಿಕ್ಕಿದಾಗಲೂ ಮುಗಿಸಲಿಲ್ಲ. ಚರ್ಚೆ ಬೇಡ. ಹುಷಾರು ಎಂದು ಹೇಳುತ್ತಿದ್ದರು. ಆವತ್ತಿನಿಂದ ಇವತ್ತಿನವರೆಗೂ ನಿಮಗೆ ಸಹಕಾರ ಕೊಟ್ಟು ಹುಷಾರಾಗಿ ಕುಳಿತುಕೊಂಡು ಎಲ್ಲವನ್ನೂ ನಾವು ಕಳೆದುಕೊಂಡಿದ್ದೇವೆ. ಸರ್ವನಾಶವಾಗಿದೆ. ಸರ್ಕಾರ ಈ ಘಟನೆಗಳ ಬಗ್ಗೆ ಒಂದು ನಾಟಕೀಯ ವರ್ತನೆ ಮಾಡಿದ್ದಾರೆಯೇ ಹೊರತು ಪ್ರಾಮಾಣಿಕವಾಗಿ ಏನೂ ಮಾಡಲಿಲ್ಲ ಎಂಬುದು ಇಡೀ ಈ ರಾಜ್ಯದ ಜನರಿಗೆ ಅವರು ತಿಳಿದವರಿರಲಿ, ತಿಳಿಯದೇ ಇರುವವರು ಇರಲಿ ಸಾಮಾನ್ಯ ಜನರಿಗೆ ಇದು ಅರಿವಾಗಿದೆ. ಈ ನಾಟಕದ ಪರದೆ ಹಿಂದಿರುವ ಕಾರಣಗಳೇನು ಎಂಬುದು ಗೊತ್ತಾಗಿದೆ. ಸರ್ಕಾರ ಈ ರೀತಿ ನಡೆದುಕೊಳ್ಳಬಹುದೆಂದು ಯಾರೂ ನಿರೀಕ್ಷಣೆ ಮಾಡಿರಲಿಲ್ಲ. ಈಗಲಾದರೂ ನಾನು ಹೇಳಿದಂತೆ ಅವನನ್ನು ಯಾವುದೇ ಕಾರಣಕ್ಕೆ ಕ್ಷಮೆ ಮಾಡುವಂಥ ವಿಚಾರವನ್ನು ಮಾತನಾಡದೆ ಈ ಕೆಲಸವನ್ನು ಮುಂದುವರೆಸಬೇಕು. ಎರಡನೆಯದು, ವೀರಪ್ಪನ್ ಬಗ್ಗೆ ತನಿಖೆ ಮಾಡಿ ಈ ಹಿನ್ನೆಲೆ ಏನು ಎಂಬುದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ಮೂರನೆಯದು 9 ಜನ ಹೇಗೆ ಸರೆಂಡರ್ ಆಗಿಹೋದರು ಮತ್ತು ಆನಂದವಾಗಿ ವಾಪಸ್ ಹೇಗೆ ಬಂದರು ಇದರ ಬಗ್ಗೆಯೂ ತಾವು ನಿಗಾ ಇಟ್ಟು ತನಿಖೆ ಮಾಡಿದರೆ ಅನೇಕ ಸತ್ಯಸಂಗತಿಗಳು ಬಯಲಾಗುತ್ತವೆ. ಬಹುಶಃ ಮುಖ್ಯಮಂತ್ರಿಗಳೇನಾದರೂ ಉತ್ತರಗಳನ್ನು ಬಹಳ ಹಗುರವಾಗಿ ಎಲ್ಲದಕ್ಕೂ ಕೊಡುತ್ತಾರೆ, ಇದಕ್ಕೂ ಹೇಳಿಬಿಡಬಹುದು. ನಮಗೆ ಬಹುಮುಖ್ಯ 9 ಜನರು ಎಂದು. 160 ಜನ ನೆಗೆದುಬಿದ್ದುಹೋದರಲ್ಲಾ, ನಿಮ್ಮ ಅಧಿಕಾರಿಗಳು ಸತ್ತುಹೋದರಲ್ಲಾ. ಒಂದು ಛಾಲೆಂಜ್, 9 ಜನರ ಪ್ರಾಣ ಹೋಗುವುದಕ್ಕೂ ಬಿಡುವುದಿಲ್ಲ ವೀರಪ್ಪನ್ ಸಹಿತ 9 ಜನರನ್ನು ನಾವು ಕರೆದುಕೊಂಡು ಬರುತ್ತೇವೆ ಎಂಬ ಹೇಳಿಕೆ ನಿಮ್ಮದಾಗಿದ್ದರೆ ಈ ಮಾತು ಬೇರೆಯಾಗುತ್ತಿತ್ತು. ಆದರೆ ಈ ಮಾತುಕತೆ, ವೀಡಿಯೋ ಕ್ಯಾಸೆಟ್ಸ್ ಪ್ರದರ್ಶನ ಇಡೀ ಜಗತ್ತಿಗೇ ನಾವು ಎಂಥ ರಾಜ್ಯ, ಇಡೀ ಪ್ರಪಂಚದ ಮುಂದೆಯೇ ಹೀಗೂ ಒಂದು ರಾಜ್ಯ ಇರುವುದಕ್ಕೆ ಸಾಧ್ಯವೇ, ಸ್ವತಂತ್ರ ಭಾರತದಲ್ಲಿ ಒಬ್ಬ ಕಾಡಿನಲ್ಲಿರುವವನು ನಾಲ್ಕೈದು ಜನರ ಜೊತೆಗೆ ಒಂದು ನಾಲ್ಕು ಕೋವಿ ಹಿಡಿದುಕೊಂಡು ಇಡೀ ರಾಜ್ಯವನ್ನೇ ಅಲುಗಾಡಿಸಿದ ಆ ರೀತಿ ಏನೂ ತಾಕತ್ತಿಲ್ಲದ ಸರ್ಕಾರ ನಮ್ಮದು ಎಂಬುದನ್ನು ಜಗಜ್ಜಾಹಿರುಪಡಿಸುವಂಥ ಒಂದು ದೊಡ್ಡ ಸಾಧನೆ ತಾವು ಮಾಡಿದ್ದೀರಿ. ಮುಖ್ಯಮಂತ್ರಿಗಳು ಉತ್ತರ ಕೊಟ್ಟಮೇಲೆ ಕೆಲವು ಕ್ಲಾರಿಫಿಕೇಷನ್ ಕೇಳುವಂಥ ಪ್ರಯತ್ನ, ಸಲಹೆ ಕೊಡುವಂಥ ಪ್ರಯತ್ನ ಮಾಡುತ್ತೇನೆ. ಅಧ್ಯಕ್ಷರೇ ಧನ್ಯವಾದಗಳು.

ಅಧ್ಯಕ್ಷರು: ವಾಟಾಳರೇ, ಯಡಿಯೂರಪ್ಪನವರು 12 ನಿಮಿಷ ತೆಗೆದುಕೊಂಡಿದ್ದಾರೆ. ತಾವು ಎಷ್ಟು ನಿಮಿಷದಲ್ಲಿ ಮುಗಿಸುತ್ತೀರಿ ತಮಗೇ ಬಿಡುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್:(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಕಾಡುಗಳ್ಳ ವೀರಪ್ಪನ್ ವಿಚಾರದಲ್ಲಿ ಲಾಭ ಆದದ್ದು 3 ಜನರಿಗೆ. ಒಂದು, ನಕ್ಕೀರನ್ ಸಂಪಾದಕ ಗೋಪಾಲನ್‌ಗೆ. ಇನ್ನೊಂದು ತಮಿಳುನಾಡು ಮುಖ್ಯಮಂತ್ರಿಗಳಿಗೆ ಮತ್ತು ಅವರ ಪಕ್ಷಕ್ಕೆ. ಮತ್ತೊಂದು ವೀರಪ್ಪನ್‌ಗೆ. 9 ಜನರದ್ದು ತಾವು ಹೇಳಿದ್ದು ಕರೆಕ್ಟ್. ನೀವು ಮತ್ತು ಖರ್ಗೆಯವರು ಹೇಳಿದ್ದು ಕರೆಕ್ಟ್. ಅವರ ಬಗ್ಗೆಯೇ ತನಿಖೆಯಾಗಬೇಕು ಎಂಬುದರಲ್ಲಿ ನನ್ನದೂ ಸಹಮತ. ಅದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ಮತ್ತು ಮುಖಭಂಗ ಆದದ್ದು ಯಾರಿಗೆ? ಕರ್ನಾಟಕ ಸರ್ಕಾರಕ್ಕೆ. ಮುಖಭಂಗ ಆಯಿತು. ಕರ್ನಾಟಕ ಪೊಲೀಸರ ಆತ್ಮಹತ್ಯೆ ಆಯಿತು. ಅವರ ಸ್ಥೈರ್ಯ, ಶಕ್ತಿ, ಯಾವರೀತಿ ನಾನು ಅವರನ್ನು ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ. ಆ ಕಾಡಿನಲ್ಲಿ ತಮಿಳುನಾಡಿನ ಕೆಲವು ಪೊಲೀಸರು ಬಹಳ ಪ್ರಾಮಾಣಿಕವಾಗಿ ಹೋರಾಟ ಮಾಡಿದ್ದಾರೆ. ಕರ್ನಾಟಕದ ಪೋಲೀಸರು ಅತ್ಯಂತ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ನಾವು ಯಾವುದೇ ಸಂದರ್ಭದಲ್ಲಿ ಅವರ ಬಗ್ಗೆ ಗೌರವವನ್ನು ಸೂಚಿಸತಕ್ಕದ್ದು ನಮ್ಮ ಅತ್ಯಂತ ಆದ್ಯಕರ್ತವ್ಯ. ಅದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ಈಗ ಒಂದು ಪ್ರಶ್ನೆ ಬಹಳ ಅತ್ಯಂತ ಗಾಢವಾಗಿ ಕಾಡುತ್ತಿರುವ ಪ್ರಶ್ನೆ ಎರಡು ಸಾವಿರ ಆನೆಗಳು ಹೋಯಿತು. ಅದರ ಬಗ್ಗೆ ನಮಗೆ ಲೆಕ್ಕ ಇಲ್ಲ. 100 ಕೋಟಿ ರೂಪಾಯಿಗಳಷ್ಟು ಗಂಧದಮರ ನಷ್ಟ. ಅದರ ಬಗ್ಗೆ ನಮಗೆ ತಕರಾರಿಲ್ಲ. 180 ಜನರ ಕೊಲೆ. ಅದರಲ್ಲೂ ಬಹಳ ಪ್ರಮುಖರಾದವರ ಕೊಲೆ. ಮನುಷ್ಯ ಎಂದಮೇಲೆ ಮನುಷ್ಯ. ಅದರಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ಅರಣ್ಯ ಇಲಾಖೆ ಅಧಿಕಾರಿಗಳು, ಇವರ ಕೊಲೆ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ಹೊಸ ವಿಷಯ ಏನಾದರೂ ಹೇಳುವುದಿದ್ದರೆ ಹೇಳಲಿ. ಅವರೇ ಹೇಳಿದ್ದನ್ನು ತಿರುಗಮುರುಗ ಹೇಳಿದರೆ ಏನರ್ಥ ಇದೆ? ತಾವೇ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕು ಅಧ್ಯಕ್ಷರೆ.

ಶ್ರೀ ವಾಟಾಳ್ ನಾಗರಾಜ್: ಇಲ್ಲ. ಹೊಸ ವಿಚಾರ ಏನಿದ್ದರೂ ತಮ್ಮ ಮಂತ್ರಿಮಂಡಲ ಬಹಳ ಪ್ರಾಮುಖ್ಯರು ಮತ್ತು ಪ್ರವೀಣರು ತಾವೆಲ್ಲಾ. ಸರ್ವಜ್ಞರು ಬಿಟ್ಟರೆ ನೀವೇ ನೆಕ್ಸ್ಟ್. ನೀವೇ ಅತ್ಯಂತ ಮೇಧಾವಿಗಳು. ನಿಮ್ಮ ಬಗ್ಗೆ ನಾವೇನೂ ತಕರಾರು ಎತ್ತುವ ಹಾಗಿಲ್ಲ ಬಿಡಿ. ನೀವು ಯಾವತ್ತೂ ಹೇಳಿದ ಮಾತನ್ನು ಹೇಳುವುದೇ ಇಲ್ಲ. ಎಲ್ಲಾ ಬುದ್ಧಿವಂತರು ನೋಡಿ. ಎಂಥೆಂಥ ಬುದ್ಧಿವಂತರು ಕೂತಿದ್ದೀರಿ. ನಾವು ಏನೂ ನಿಮ್ಮನ್ನು ಕಳೆಯುವ ಹಾಗಿಲ್ಲ ಬಿಡಿ. ನಿಮ್ಮನ್ನು ಎಲ್ಲೂ ತೆಗೆಯುವ ಹಾಗಿಲ್ಲ. ಇದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲವೇ ಇಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಪ್ರಾಯಶಃ ಎಸ್.ಎಸ್.ಪಾಟೀಲರು

ಹೇಳಿದ್ದು ಇನ್ನೂ ಒಂದು 63ನೇ ಸೆಕ್ಷನ್ ಕೆಳಗೆ ಮಾಧುಸ್ವಾಮಿಯವರು ಕೊಟ್ಟಿದ್ದು ಇದೆ, ಅಜೆಂಡಾದಲ್ಲಿರತಕ್ಕ ವಿಧೇಯಕಗಳು ಚರ್ಚೆಗೆ ಬರುತ್ತಿವೆ, ಆದ್ದರಿಂದ ಹೊಸ ವಿಷಯ ಪ್ರಸ್ತಾಪ ಮಾಡಿ; ಇಬ್ಬರು ಮಾನ್ಯ ಹಿರಿಯರು ಮಾತನಾಡಿದ್ದಾರೆ; ತಾವೂ ಹಿರಿಯರು; ಹೊಸ ವಿಷಯ ಇದ್ದರೆ ಹೇಳಿ ಎಂದು ಹೇಳಿದರೆ ವಿನಾ ಪ್ರಾಮಾಣಿಕವಾಗಿ ಅದರಲ್ಲಿ ಯಾವುದೇ ತರಹ ಏನೂ ಇಲ್ಲ. ತಾವು ಅದನ್ನು ಕೋಪಿಸಿಕೊಂಡು ನೀವೆಲ್ಲಾ ಹೇಗಿದ್ದೀರಿ ನೋಡಿ ಎಂದು ಸಾರಾಸಗಟಾಗಿ ಎಲ್ಲರ ಬಗ್ಗೆಯೂ ಆ ತರಹ ಹೇಳುವುದು....

ಶ್ರೀ ವಾಟಾಳ್ ನಾಗರಾಜ್: ಸಾರಾಸಗಟಾಗಿ ಹೇಳುವುದಿಲ್ಲ. ಕೆಲವರಿಗೆ ಎಂದು ಇಟ್ಟುಕೊಳ್ಳೋಣ.

ಶ್ರೀ ಎಂ.ಪಿ.ಪ್ರಕಾಶ್: ಕೆಲವರಿಗೂ ಅಲ್ಲ.

ಶ್ರೀ ವಾಟಾಳ್ ನಾಗರಾಜ್: ಎಷ್ಟು ಕಳೆಯೋಣ ಹೇಳಿ. 43 ನೀವು ಇರುವುದು. 43ರಲ್ಲಿ ಎಷ್ಟು ಕಳೆಯಬೇಕು ಹೇಳಿ.

ಶ್ರೀ ಎಂ.ಪಿ.ಪ್ರಕಾಶ್: ಒಟ್ಟು ಇಡೀ ಸರ್ಕಾರದಲ್ಲಿರುವವರು ನಾವೆಲ್ಲರೂ ಒಂದೇ. ಯಾರಿಗೆ ನೀವು ಇದು ಮಾಡಿದರೂ ಇಡೀ ಸರ್ಕಾರ ಎಂದರೆ ನಾವೆಲ್ಲಾ ಒಂದೇ. ಇಲ್ಲಿ ಪ್ರಶ್ನೆ ಇರತಕ್ಕದ್ದು ಆದಷ್ಟು ಮಿತವಾಗಿ ಈ ಸಮಯವನ್ನು ಬಳಸಿಕೊಳ್ಳೋಣ ಎಂದು.

ಶ್ರೀ ವಾಟಾಳ್ ನಾಗರಾಜ್: ಪ್ರಕಾಶ್ ಅವರೇ, ನಿಮಗಿಂತ ಮುಂಚೆ ನಾನು ಈ ಸಭೆಗೆ ಬಂದಿದ್ದೇನೆ. ದಯಮಿಟ್ಟು ಕ್ಷಮಿಸಬೇಕು ತಾವು. ಆದ್ದರಿಂದ ಈ ಸಭೆಯ ವೇಳೆಯನ್ನು ಹಾಳು ಮಾಡಿ ದಿಕ್ಕು ತಪ್ಪಿಸುವುದು ನಮ್ಮ ಉದ್ದೇಶ ಅಲ್ಲ. ಆದರೆ ನಾನು ಮಾತನಾಡತಕ್ಕ ಧಾಟಿಯನ್ನು ತಪ್ಪಿಸತಕ್ಕ ಚಿಂತನೆ ತಾವು ಮಾಡುತ್ತಿದ್ದೀರಿ. ಇದು ಒಳ್ಳೆಯದಲ್ಲ. ಆ ರೀತಿ ನಿಮ್ಮ ತಲೆಯಲ್ಲಿದ್ದರೆ ನನಗೂ ಅದು ಸಂತೋಷ ತರುವಂಥದ್ದಲ್ಲ. ಆದ್ದರಿಂದ ನಾನು ಹೇಳುತ್ತೇನೆ ಇಷ್ಟು ಹೊತ್ತಿಗೆ ನಾನು ಬೇರೆ ವಿಚಾರಕ್ಕೆ ಹೋಗುತ್ತಿದ್ದೆ. ಪಾಟೀಲರು ಮಾತೆತ್ತಿದರೆ ತಾವೇ ಸರ್ವಜ್ಞರು ಎನ್ನುವ ರೀತಿ ಮಾತನಾಡುತ್ತಾರೆ. ಅದು ಒಳ್ಳೆಯದಲ್ಲ. ನನಗೂ ಗೊತ್ತಿದೆ ಅದು. ಇಲ್ಲಿ ಈ ಇಲಾಖೆಗೆ ಉತ್ತರ ಕೊಡುವುದಕ್ಕೆ ಒಬ್ಬ ಸಚಿವರಿಲ್ಲ. ಈಗ ಬಂದಿದ್ದಾರೆ. ನಾನೂ ಒಪ್ಪುತ್ತೇನೆ. ಬಂದಿದ್ದಾರೆಂದು ನಾನೇ ಹೇಳುತ್ತಿದ್ದೇನೆ. ಬಂದಿಲ್ಲ ಎಂದು ಹೇಳಿ ಬಂದಿದ್ದಾರೆ ಎಂದು ಹೇಳಿದ್ದೇನೆ. ಆದ್ದರಿಂದ ನೀವು ಏನೂ ಭಯಪಡಬೇಕಾಗಿಲ್ಲ. ಇದರ ಬಗ್ಗೆ ಏನೂ ತಕರಾರಿಲ್ಲ. ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕ ಸರ್ಕಾರಕ್ಕೆ ಈ ವಿಚಾರದಲ್ಲಿ ಒಂದು ಪ್ರಶ್ನೆಯನ್ನು ನೇರವಾಗಿ ಅವರನ್ನು ಕೇಳುತ್ತೇನೆ. ನಿರಂತರವಾಗಿ ಒತ್ತೆಯಾಳುಗಳನ್ನು ನಾನು ಬಿಡುವುದಿಲ್ಲ, ನನ್ನ ಷರತ್ತಿಗೆ ತಾವು ಒಪ್ಪಲಿಲ್ಲ ಎಂದು ಹೇಳಿದರೆ ಒಂದೊಂದೇ ತಲೆಯನ್ನು ನಾನು ತೆಗೆಯುತ್ತೇನೆ ಎನ್ನುವ ಹಠವನ್ನು

ಮಾಡಿದಂಥ, ಷರತ್ತನ್ನು ಹಾಕಿದಂಥ ಮತ್ತು ಕಳೋರವಾದಂಥ ನಿರ್ಧಾರಕ್ಕೆ ಬಂದಂಥ ಆ ಕಾಡುಗಳ್ಳ ವೀರಪ್ಪನ್ ತಕ್ಷಣವೇ ಬಿಡುಗಡೆ ಮಾಡತಕ್ಕಂಥ ತೀರ್ಮಾನಕ್ಕೆ ಬರಬೇಕಾದರೆ ಕಾರಣ ಏನು? ಏನೋ ಇರಬೇಕಲ್ಲಾ? ನಾನು ನೇರವಾದಂಥ ಪ್ರಶ್ನೆಯನ್ನು ಹಾಕುತ್ತೇನೆ ಪಾಟೀಲರೇ, ಈ ಪ್ರಶ್ನೆ ಹೊಸದು ತಾನೇ ಹೌದಾ? ಬರೆದುಕೊಳ್ಳಿ ಯಾವುದು ಹೊಸದು ಎಂಬುದನ್ನು....

ಶ್ರೀ ಎಂ.ಪಿ.ಪ್ರಕಾಶ್: ನೋಡಿ, ನನಗಿಂತ ಮುಂಚಿತವಾಗಿ ಈ ಸದನಕ್ಕೆ ಬಂದವರು ಎಂದು ಹೇಳುತ್ತಿದ್ದೀರಿ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ದಯವಿಟ್ಟು ಕ್ಷಮಿಸಿ. ಹೋಗಲಿ, ಆಯಿತು. ಅದನ್ನು ತಪ್ಪಾಯಿತು ಎಂದು ಹೇಳಿದರೆ, ಆಯಿತು ಬಿಡಿ, ಸ್ವಾಮಿ, ಹೋಗಲಿ. ಹೆಜ್ಜೆ ಹೆಜ್ಜೆಗೂ ನೀವು ಪ್ರತಿಯೊಬ್ಬರ ರಕ್ಷಣೆ ಮಾಡುವುದಕ್ಕೆ ನಿಂತುಕೊಳ್ಳುವುದು ಅದು ಧರ್ಮವೂ ಅಲ್ಲ ನಿಮಗೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಆಯಿತು, ಅಭಿರುಚಿ ಅಂದುಕೊಳ್ಳೋಣವೇ?

ಶ್ರೀ ಎಂ.ಪಿ.ಪ್ರಕಾಶ್: ನೀವು ನೇರವಾಗಿ ಪಾಯಿಂಟ್‌ಗೆ ಬಂದರೆ ಸಾಕು:

ಶ್ರೀ ವಾಟಾಳ್ ನಾಗರಾಜ್: ಇದು ಒಳ್ಳೆ ಕಥೆಯಾಯಿತಲ್ಲಾ. ನೀವು ಹೇಳಿದ ಹಾಗೆ ನಾನು ಮಾತನಾಡಬೇಕಾ ಇಲ್ಲಿ?

ಶ್ರೀ ಎಂ.ಪಿ.ಪ್ರಕಾಶ್: ಆ ತರಹ ಏನೂ ಇಲ್ಲ. ಹಿರಿಯ ಸದಸ್ಯರಿಗೆ ಪ್ರಸ್ತಾಪ ಮಾಡುವುದಕ್ಕೆ ಇಲ್ಲಿ ಅಧಿಕಾರ ಇದೆ.

ಶ್ರೀ ವಾಟಾಳ್ ನಾಗರಾಜ್: ಮಾಡಿ.

ಶ್ರೀ ಎಂ.ಪಿ.ಪ್ರಕಾಶ್: ಈಗ ನಾವು ನಿಮಗೆ ಹೇಳಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಈಗ ನನಗೆ ಅಧ್ಯಕ್ಷರು ಯಾವುದೋ ಒಂದು ಕಾಲ ನಿಗದಿಯನ್ನು ಮಾಡಿದ್ದಾರೆ. ನಾನು ಹೇಳುವುದನ್ನೆಲ್ಲಾ ನಾನು ಹೇಳುತ್ತೇನೆ. ಯಾವ್ಯಾವ ಮಾತುಗಳನ್ನು ನೀವು ಸರ್ಕಾರದವರು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ, ಯಾವ್ಯಾವುದು ಬಿಡಬೇಕು ಅದು ನಿಮಗೆ ಸೇರಿದ್ದುದು.

ಅಧ್ಯಕ್ಷರು: ವಾಟಾಳರೇ, ಒಂದು ನಿಮಿಷ ಕುಳಿತುಕೊಳ್ಳಿ. ಈಗ ನನಗೆ ಏನು

ಎಂದರೆ, ನಮ್ಮ ಈ ಜೂನಿಯರ್ ಸದಸ್ಯರು ಇದ್ದಾರಲ್ಲ, ಅವರು ಇನ್ನೂ ಎಷ್ಟು ದಿವಸ ಸಭೆ ನಡೆಯುತ್ತದೆ ಎಂದು ತಿಳಿದುಕೊಂಡಿದ್ದಾರೋ ಗೊತ್ತಿಲ್ಲ. ಈಗಲೂ ದಿವಸಕ್ಕೆ ಇಪ್ಪತ್ತು-ಇಪ್ಪತ್ತು ನೋಟೀಸ್‌ಗಳನ್ನು ಕೊಡುತ್ತಾರೆ. ನನ್ನದು 68 ಸಾರ್, ನನ್ನದು ಕಾಲಿಂಗ್ ಅಟೆನ್‌ಷನ್ ಸಾರ್, ನನ್ನದು ಜಿರೋ ಅವರ್ ಸಾರ್ ಎಂದು ಕೇಳುತ್ತಾರೆ. ಎರಡೇ ದಿವಸ ಅಲ್ಲಪ್ಪ ಇರೋದು, ನಿಮ್ಮ ಪಾರ್ಟಿಯವರನ್ನು ರಿಕ್ವೆಸ್ಟ್ ಮಾಡಿಕೊಳ್ಳಿ ನಿಮ್ಮ ಲೀಡರ್‌ಗಳನ್ನು ಕೇಳಿ ಎಂದು ಹೇಳುತ್ತೇನೆ. ಪಾಪ, ಅವರಿಗೆ ಆ್ಯಂಗ್‌ಜೈಟಿ ಇರುತ್ತದೆ, ಆದಷ್ಟು ಇಶ್ಯೂಗಳನ್ನು ರೈಸ್ ಮಾಡಬೇಕು ಎಂದು ಆ ಕಾರಣದಿಂದ ನಾನು ಹೇಳಿದೆ. ಸ್ವಲ್ಪ ಸಮಯವನ್ನು ನಾವು ಸದ್ಬಳಕೆ ಮಾಡಿಕೊಂಡರೆ, ಹೆಚ್ಚು ಜನರಿಗೆ ಇನ್ನೂ ಹೆಚ್ಚು ವಿಷಯ ಮೆನ್‌ಷನ್ ಮಾಡುವುದಕ್ಕೆ ಅವಕಾಶ ಕೊಡಬಹುದು ಅಂತ. ಅಷ್ಟೆ. ಮತ್ತೇನೂ ಇಲ್ಲ, ತಾವು ಹೇಳಿ. ನಾನು ತಮಗೆ ತೊಂದರೆ ಮಾಡುವುದಿಲ್ಲ. ಸಮಯ ಏನೂ ನಿಗದಿಪಡಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಈ ವಿಚಾರದಲ್ಲಿ ಅಧ್ಯಕ್ಷರೇ, ಒಂದು ಪ್ರಶ್ನೆ ಎಂದರೆ ಸರ್ಕಾರ ಅತ್ಯಂತ ಜವಾಬ್ದಾರಿಯಿಂದ ನಡೆದುಕೊಂಡಿಲ್ಲ. ಈ ಸರ್ಕಾರ ಶರಣಾಗತಿಯಾಗಿರತಕ್ಕಂಥಾದ್ದು, ಕರ್ನಾಟಕ ಸರ್ಕಾರ ನೇರವಾಗಿ ಶರಣಾಗತಿಯಾಗಿದೆ. ಅದರಲ್ಲಿ ಬೇರೆ ಮಾತು ಇಲ್ಲ. ಈಗ ಬಿಡುಗಡೆ ಆಯಿತು. ಮುಂದೇನು? ಈ ಎಸ್.ಟಿ.ಎಫ್. ಗತಿ ಏನು? ಅದರ ಬಗ್ಗೆ ಮತ್ತೆ ನೇಮಕ ಮಾಡುತ್ತೀರಾ? ಮತ್ತೆ ಅವನನ್ನು ಹಿಡಿಯತಕ್ಕಂಥ ತಂತ್ರಗಾರಿಕೆ ಏನಿದೆ? ಬಿಟ್ಟೇ ಬಿಡುತ್ತೀರಾ ಹಾಗಾದರೆ? ಇದು ಅಷ್ಟು ಲಘುವಾಗಿ ತಿಳಿದುಕೊಳ್ಳುವುದಲ್ಲ. ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆ ಹೇಳಿದ್ದಾರೆ 'ಅವನು ಅವರ ಊರಿಗೇ ಹೊರಟುಹೋಗಲಪ್ಪ. ನಮ್ಮ ಕಡೆಗೆ ಬರುವುದು ಬೇಡ, ನಮ್ಮ ರಾಜ್ಯಕ್ಕೆ ಬರುವುದು ಬೇಡ. ಅವನು ಆ ಕಡೆಗೇ ಹೊರಟುಹೋಗಲಿ ಎಂದು. ಇವರು ಹೇಳಿದ ತಕ್ಷಣ ಮಾಯಮಂತ್ರವೇ ಅದು? ಹೋಗುವುದಿಲ್ಲ, ಖಂಡಿತ ಹೋಗುವುದಿಲ್ಲ. ಮತ್ತೆ ನಮ್ಮ ಎಸ್.ಟಿ.ಎಫ್. ಶಕ್ತಿಯನ್ನು ಜಾಸ್ತಿ ಮಾಡಿ, ಇದಕ್ಕೆ ಒಂದು ಹೊಸ ಯೋಜನೆಯನ್ನು ತಾವು ತಯಾರು ಮಾಡಿ, ಯಾವರೀತಿ ಅವನನ್ನು ಹಿಡಿಯಬೇಕು ಎನ್ನತಕ್ಕಂಥ ದೃಷ್ಟಿಯಿಂದ ಸರ್ಕಾರ ಪರಿಣಾಮಕಾರಿಯಾಗಿ ಪ್ರಯತ್ನ ಪಡಬೇಕು. ಇದುವರೆಗೂ ನೀವು ಏನು ಹೇಳಿದಿರಿ? ಇನ್ನೇನು ಶರಣಾಗತನಾಗಿ ಹೋಗುತ್ತಾನೆ, ನಮ್ಮ ಎಸ್.ಟಿ.ಎಫ್. ಅಲ್ಲಿಗೆ ಹೋಗುವುದು ಬೇಕಾಗಿಲ್ಲ, ನಾವೆಲ್ಲಾ ನಮ್ಮ ಬಂದೂಕುಗಳನ್ನು ಕೆಳಗೆ ಇಟ್ಟುಬಿಡೋಣ. ನಾವೇ ಒಂದುರೀತಿ ಶರಣಾಗತಿಯಾಗಿ ಬಿಡೋಣ, ಅಲ್ಲಿ ಹೋಗತಕ್ಕಂಥ ಪ್ರಶ್ನೆ ಬೇಡ ಎನ್ನತಕ್ಕಂಥಾದ್ದು ಒಟ್ಟಾರೆ ಅರ್ಥ ಬರುವ ರೀತಿಯಲ್ಲಿ ಸರ್ಕಾರ ನಡೆದುಕೊಂಡಿದೆ. ನಾನು ಹೇಳುತ್ತೇನೆ, ಕರ್ನಾಟಕ ಮೂರು ಜನ ಹಿರಿಯ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ. ಒಂದು ಕಡೆ ಶಂಕರ್ ಬಿದರಿಯವರು, ಮತ್ತೊಂದು ಕಡೆ ಕೆ.ಯು.ಶೆಟ್ಟಿಯವರು, ಇನ್ನೊಂದು ಕಡೆ ಮಡಿಯಾಳ್. ಇವರು ಅಲ್ಲಿ ಕೆಲಸ

ಮಾಡಿದಂಥವರು. ಅವರೇ ಹೇಳಿರುವ ಪ್ರಕಾರ 'ಅವನ ಬಗ್ಗೆ ನಂಬಿಕೆ ಇಟ್ಟುಕೊಳ್ಳಬೇಡಿ, ವೀರಪ್ಪನ್ ಶರಣಾಗತಿ ಆಗುವುದಿಲ್ಲ, ಇದೊಂದು ಮೋಸ' ಅನ್ನುವ ರೀತಿಯಲ್ಲಿ ನಮ್ಮ ಸರ್ಕಾರದ ಪೊಲೀಸ್ ಇಲಾಖೆಯ ಇವರು ನೇರವಾಗಿ ಈ ಮಾತನ್ನು ಹೇಳಿದ್ದಾರೆ. ಇದರ ಜೊತೆಗೆ ತಮಿಳುನಾಡಿನ ಮಾಜಿ ಮುಖ್ಯಮಂತ್ರಿಯವರೊಬ್ಬರು ಹೇಳುತ್ತಾರೆ. ನಂಬಿಕೆ ಇಟ್ಟುಕೊಳ್ಳಬೇಡಿ ಅವನಮೇಲೆ, ಇದು ಈಗಿನ ಸರ್ಕಾರ ಏನಿದೆ, ಈಗಿನ ಮುಖ್ಯಮಂತ್ರಿಗಳು ಏನಿದ್ದಾರೆ, ಅವರಿಗೆ ಇದು ಬೆಂಬಲವಾಗತಕ್ಕಂಥಾದ್ದು. ಅವರು ಮುಖ್ಯಮಂತ್ರಿಗಳ ಚುನಾವಣೆ ಸಂದರ್ಭದಲ್ಲಿ ಆ ನಕ್ಕಿರನ್ ಸಂಪಾದಕ ಆ ಪಕ್ಷದ ಒಡನಾಡಿಯಾಗಿದ್ದ. ಆ ಪಕ್ಷಕ್ಕೆ ಅನುಕೂಲವಾಗಲಿ ಎಂದು ಹೇಳಿ ಇವತ್ತು ಇದೊಂದು ನಾಟಕ ನಡೆದಿದೆ. ಈ ನಾಟಕಕ್ಕೆ ಬಲಿಯಾಗಿದ್ದೀರಿ ಎಂದು ಹೇಳಿ ತಮಿಳುನಾಡಿನ ಮಾಜಿ ಮುಖ್ಯಮಂತ್ರಿಯವರೊಬ್ಬರು ಈ ಮಾತನ್ನು ಹೇಳುತ್ತಿದ್ದಾರೆ. ಇಷ್ಟೆಲ್ಲ ಹೇಳಿದರೂ ನಮ್ಮ ಗಮನಕ್ಕೆ ಇದು ಬರಲಿಲ್ಲ; ಸರ್ಕಾರದ ಗಮನಕ್ಕೆ ಇದು ಬರಲಿಲ್ಲ. ಸರ್ಕಾರ ಇದರಲ್ಲಿ ಹೆಜ್ಜೆಹೆಜ್ಜೆಗೂ ಎಡವಿದ್ದಾರೆ. ನಾನು ಹೇಳುತ್ತೇನೆ ಸರ್ಕಾರಕ್ಕೆ, ಸರ್ಕಾರ ಹತ್ತು ವರ್ಷದಿಂದ ವೀರಪ್ಪನ್‌ನ್ನು ಹಿಡಿಯುವ ಬಗ್ಗೆ ಏನೇನು ಸಮರೋಪಾದಿಯಲ್ಲಿ ಕೆಲಸವನ್ನು ಮಾಡಿದ್ದಾರೆ, ಈ ಕೊನೆಗಳಿಗೆಯಲ್ಲಿ ಶರಣಾಗತಿಯ ನಾಟಕದಲ್ಲಿ ಆದಂಥ ವಿಚಾರಗಳು ಏನು? ಅವರು ನೀಡಿದಂಥ ಕ್ಯಾಸೆಟ್‌ಗಳು ಏನು? ಮಾತನಾಡಿದಂಥ ವಿಚಾರ ವಿನಿಮಯಗಳೇನು? ಕರುಣಾನಿಧಿಯವರು, ಇವರು ಮಾತನಾಡಿದಂಥ ವಿಚಾರಗಳು ಏನು? ಈ ಎಲ್ಲಾ ವಿಚಾರಗಳನ್ನು ಒಳಗೊಂಡಂಥ ಒಂದು ಸಮಗ್ರವಾದಂಥ ಹೇಳಿಕೆಯನ್ನು ಸರ್ಕಾರ ಸದನದ ಮುಂದೆ ಮಂಡಿಸಬೇಕು ಎನ್ನತಕಂಥ ಒತ್ತಾಯವನ್ನು ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ ಸ್ವಾಮಿ.

+ ಶ್ರೀ ಎಂ.ವೀರಪ್ಪ ಮೊಯಿಲಿ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ಹತ್ತೇ ನಿಮಿಷಗಳಲ್ಲಿ ನನ್ನ ವಿಚಾರಗಳನ್ನು ಸದನದ ಮುಂದೆ ಇಡಲಿಕ್ಕೆ ನಾನು ಅಪೇಕ್ಷಿಸಡುತ್ತಿದ್ದೇನೆ. ಈಗ ಸಾಕಷ್ಟು ವಿಚಾರಗಳನ್ನು ಈ ಸದನದ ಮುಂದೆ ನಮ್ಮ ವಿರೋಧ ಪಕ್ಷದ ನಾಯಕರು, ಮಾನ್ಯ ಯಡಿಯೂರಪ್ಪನವರು ಮತ್ತೆಮಾನ್ಯ ನಾಗರಾಜ್ ಅವರು ಹೇಳಿದ್ದಾರೆ. ಏಕೆಂದರೆ ನಾನು ಕೂಡ 1992,93,94 ಈ ಅವಧಿಯಲ್ಲಿ ಈ ರಾಜ್ಯದ ಮುಖ್ಯಮಂತ್ರಿಯಾಗಿ, ಏನು ಟಾಸ್ಕ್‌ಫೋರ್ಸ್ ಇದೆ, ಅದರ ಬಗ್ಗೆ ಕಾರ್ಯನಿರ್ವಹಣೆ ಮಾಡಿದಂಥ ಕೆಲವು ಅನುಭವದ ಮೇಲೆ ಕೆಲವು ಮಾತುಗಳನ್ನು ಮಾತ್ರ ಹೇಳುತ್ತೇನೆ. ಮುಖ್ಯವಾಗಿ ಒಂದು ರೀತಿ ಸಾರ್ವಜನಿಕರಿಗೆ ಏನು ಭಾವನೆ ಬಂದಿದೆ ಎಂದು ಹೇಳಿದರೆ, ಅದು ನಮ್ಮ ಸರ್ಕಾರವೇ ಕಾರಣ ಎಂದು ನಾನು ಇಲ್ಲಿ ಹೇಳುತ್ತಿಲ್ಲ. ಒಂದು ರೀತಿ ವೈಭವೀಕರಣ ವೀರಪ್ಪನ್ ಬಗ್ಗೆ ಆಗಿದೆ. ಅವನು ಏನೋ ಹಿರೋ ಮಾಡಲಿಕ್ಕೆ ಎಸ್.ಟಿ.ಎಫ್.ನಲ್ಲಿ ಕೆಲಸ ಮಾಡಿದಂಥ ಜನರು ವಿಲನ್ಸ್ ಎಂದು ಹೇಳಿ ಒಂದು ಅಭಿಪ್ರಾಯ ಸಾರ್ವಜನಿಕರಲ್ಲಿ ಮೂಡುವ ರೀತಿಯಲ್ಲಿ ಕೆಲವು ಮಾತುಗಳು, ಕೆಲವು ಹೇಳಿಕೆಗಳು, ಕೆಲವು ಇತ್ತೀಚಿನ ಕಾರ್ಯಾಚರಣೆಗಳು ನಡೆದಿದೆ. ಇದು ಬಹಳ

ವ್ಯಸನವಾಗುತ್ತದೆ. ಅಧ್ಯಕ್ಷರೇ, ನಾನು ಎರಡು ವಿಚಾರಗಳನ್ನು ಹೇಳುತ್ತೇನೆ. ಅಬ್ದುಲ್ ಕರೀಂ ಎಂದು ಹೇಳಿ ಷಕೀಲರ ತಂದೆ. ಅವರು ತಮ್ಮನ್ನೂ ಕೂಡ ಕಂಡಿರಬಹುದು. ಪಾಪ, ಬಂದಂಥ ಪೆನ್‌ಷನ್ ಹಣ, ಅದರ ಮೇಲೆ ಪೇಪರ್ಸ್ ಫ್ಲೆಡ್ಜ್ ಮಾಡಿ ಆ ಮನುಷ್ಯ ಟೆಲೆಕ್ಸ್ ಕಳುಹಿಸುತ್ತಲೇ ಇದ್ದಾನೆ; ರಾಷ್ಟ್ರಾಧ್ಯಕ್ಷರವರೆಗೆ. ನಮ್ಮ ಹತ್ತಿರಾನೂ ಮೊನ್ನೆ ಬಂದಿದ್ದರು. ಇವರಿಗೆ ನಾವು ಹೇಗೆ ಉತ್ತರ ಕೊಡಬೇಕು ಎಂದು ಹೇಳಿ ಒಂದು ವಿಚಾರ. ಎರಡನೆಯದು, ಆ ಹರಿಕೃಷ್ಣ ಅವರ ಮಗ, I think he is 4 or 4 1/2 years old. ಆ ಮಗು ಹೇಳುತ್ತದಂತೆ ನಮ್ಮ ಫ್ರೆಂಡ್ ಯಾರೋ ಒಬ್ಬರಿಗೆ. Uncle give me a rifle, I will kill Veerappan ಎಂದು ಹೇಳಿ ಅಂದರೆ ಆ ವೇದನೆ ಇದೆ. ಇದು ಎರಡು ಉದಾಹರಣೆಗಳನ್ನು ನಾನು ತಿಳಿದುಕೊಂಡಿದ್ದು. ಅವರು ಈಗ ಹರಿಕೃಷ್ಣ, ಶ್ರೀನಿವಾಸ್ ಶಕೀಲ್ ಇವರೆಲ್ಲಾ they have gone there to eat, womanise and sleep? ಅಧ್ಯಕ್ಷರೇ, ಇದು ಬಂದಿದೆ ಇವತ್ತು. ಇದಕ್ಕೆ ಒಂದು ಮಾತು ತಮ್ಮ ಸರ್ಕಾರದ ಪರವಾಗಿ ತಾವು.... ಏಕೆಂದರೆ ಕರುಣಾನಿಧಿಯವರು ಹೇಳಿಕೆ ಕೊಟ್ಟಿದ್ದಾರೆ. ಜವಾಬ್ದಾರಿ, ಬೇಜವಾಬ್ದಾರಿ ಎಂದು ಹೇಳುತ್ತಾ ಇಲ್ಲ....

ಅಧ್ಯಕ್ಷರು: ಒಂದು ನಿಮಿಷ. ವಾಟಾಳರೇ, ಎಲ್ಲೋ ಒಂದು ಕಡೆಗೆ ಅಪರೂಪಕ್ಕೆ ಒಂದು ಮಾತು ಹೇಳಿದರೆ ಅಷ್ಟು ಸಿಟ್ಟಾಗ್ತೀರಿ. ನೀವು ಒಂದು ದಿವಸದಲ್ಲಿ ಎಷ್ಟು ಜನರಿಗೆ ಎಷ್ಟು ಮಾತನಾಡ್ತೀರಿ....

(ಗೊಂದಲ)

ಅಧ್ಯಕ್ಷರು: ಏನೋ ಒಂದು ಮಾತು ಎಸ್.ಎಸ್.ಪಾಟೀಲರು ಹೇಳಿದರು ಎಂದು ಹೇಳಿ ಆವಾಗಿನಿಂದ ಇಷ್ಟು ಕಸಿವಿಸಿಗೊಂಡು ಅಷ್ಟು ಪ್ರತಿಕ್ರಿಯೆ ತೋರಿಸುತ್ತಿದ್ದೀರಿ....

ಶ್ರೀ ವಾಟಾಳ್ ನಾಗರಾಜ್: ಕಸಿವಿಸಿಯಾಗಿದೆ.

ಅಧ್ಯಕ್ಷರು: ತಾವು ಎಷ್ಟು ಸಲ ಎಷ್ಟು ಮಾತುಗಳನ್ನು ಹೇಳುತ್ತೀರಿ, ತಾವು ಎಷ್ಟು ಜನರಿಗೆ ಎಷ್ಟು ಮಾತು ಹೇಳುತ್ತೀರಿ?

ಶ್ರೀ ವಾಟಾಳ್ ನಾಗರಾಜ್: ಕಸಿವಿಸಿ ಆಗಿದೆ. ಅದು ಆಗಿಲ್ಲ ಎಂದು ನಾನು ಹೇಳುತ್ತಿಲ್ಲ. ನನಗೆ ಕಸಿವಿಸಿ ಆಗಿದೆ.

(ಗೊಂದಲ)

ಅಧ್ಯಕ್ಷರು: ಮೊಯಿಲಿಯವರೇ ನೀವು ಮಾತನಾಡಿ.

ಮಾನ್ಯ ಸದಸ್ಯರು: ಈ ತರಹ ಅವರು ಡಾಮಿನೇಟ್ ಮಾಡುತ್ತಿದ್ದರೆ ಇದು ಸರಿಯಲ್ಲ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ಎಸ್.ಎಸ್.ಪಾಟೀಲರು ಹೊಸಬರು, ಅವರು ಬಂದಿದ್ದಾರೆ....

ಶ್ರೀ ವಾಟಾಳ್ ನಾಗರಾಜ್: ನನಗೆ ಕಸಿವಿಸಿ ಆಗಿದೆ.

ಅಧ್ಯಕ್ಷರು: ಆಯಿತು ಸಂತೋಷ. ನಿಮಗೆ ಕಸಿವಿಸಿ ಆದರೆ ನಮಗೆ ಸಂತೋಷ. ಮೊಯಿಲಿಯವರೇ ನೀವು ಮಾತನಾಡಿ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಏನು ಮಾಡ್ತೀರಿ ನೀವು?

ಮಾನ್ಯ ಸದಸ್ಯರು: ಸದನ ಆರ್ಡರ್‌ನಲ್ಲಿ ಇದೆಯೇ?

ಶ್ರೀ ವಾಟಾಳ್ ನಾಗರಾಜ್: ನೀವು ಏನು ಮಾಡ್ತೀರೋ ಮಾಡಿ, ನೋಡೋಣ.

(ಗೊಂದಲ)

ಮಾನ್ಯ ಸದಸ್ಯರು: 'ಏನು ಮಾಡ್ತೀರಿ ಏನು ಮಾಡ್ತೀರಿ' ಎಂದು ಅವರು ಕೇಳಿದ್ದು ರೆಕಾರ್ಡಿನಲ್ಲಿ ಹೋಗುತ್ತಿದೆ.

ಅಧ್ಯಕ್ಷರು: ಅವರು ಬರೆದುಕೊಳ್ಳಲಿ. ಜನರಿಗೆ ಗೊತ್ತಾಗುತ್ತದೆ.

ಮಾನ್ಯ ಸದಸ್ಯರು: ಇದು ಸಭೆಯ ನಡವಳಿಕೆಯಾ? ಇದು ಗೌರವ ತರುತ್ತದಾ?

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೇ, ನಾನು ಕೈಮುಗಿದು ಹೇಳುತ್ತೇನೆ. ಅವರೇ ಹೇಳಲಿ...

(ಗೊಂದಲ)

ಅಧ್ಯಕ್ಷರು: ಗೊತ್ತಾಗಬೇಕು. ಇಲ್ಲಿಯ ಪ್ರತಿಯೊಬ್ಬರ ನಡತೆ ಕೂಡ ಜನರಿಗೆ ಗೊತ್ತಾಗಬೇಕು.

ಶ್ರೀವಾಟಾಳ್ ನಾಗರಾಜ್: ಜನರಿಗೆ ಗೊತ್ತಾಗಲಿ. ನಾನು ಇಲ್ಲಿ.... ಹೊಸಬನಾಗಿ ಬಂದಿಲ್ಲ.

ಅಧ್ಯಕ್ಷರು: ಅದೇ ನನ್ನ ಅಭಿಪ್ರಾಯ. ಹಳಬರಾದರೆ ಹೀಗೆಲ್ಲಾ ಮಾಡಬೇಕು ಎಂದು ರೂಲ್ಸ್‌ನಲ್ಲಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ದಯಮಾಡಿ ತಾವು ಕ್ಷಮಿಸಬೇಕು....

ಅಧ್ಯಕ್ಷರು: ಹಳಬರಾದ ಮಾತ್ರಕ್ಕೆ ತಮ್ಮ ಮನಸ್ಸಿಗೆ ಬಂದಂತೆ ಮಾತನಾಡಲಿಕ್ಕೆ ಆಗುವುದಿಲ್ಲ. ಸದನದಲ್ಲಿ ಹಳಬರಿಗೂ ಹೊಸಬರಿಗೂ ಎಲ್ಲರಿಗೂ ಒಂದೇ ನಿಯಮ ಇದೆ. ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ತಮ್ಮಲ್ಲಿ ನಾನು ಗೌರವ ಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ, ಇಲ್ಲಿ ನಾನು ಏನು ಎಂಬುದು ಗೊತ್ತಿದೆ, ನಾನು ಏನೂ ಆ ತರಹ ಬಂದಿಲ್ಲ, ಗೊತ್ತಿದೆ....

ಅಧ್ಯಕ್ಷರು: ಗೊತ್ತಾಗಬೇಕು ಎಂಬುದು ನಮ್ಮ ಅಭಿಪ್ರಾಯ. ತಾವು ಮಾತನಾಡಿ.

ಶ್ರೀ ಎಂ.ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೆ, ಒಂದು ರೀತಿಯ ದುಃಖ ಎಂದರೆ MK says "Policemen just ate, slept and womanized. ಈಗ ಅನೇಕ ಪೊಲೀಸ್ ಆಫೀಸರ್ಸ್, ಫಾರೆಸ್ಟ್ ಆಫೀಸರ್ಸ್, ಬಿ.ಎಸ್.ಎಫ್.ಆಫೀಸರ್ಸ್ ಹಾಗೂ ಸಿಬ್ಬಂದಿಗಳು ತಮ್ಮ ಪ್ರಾಣವನ್ನು ಒತ್ತೆ ಇಟ್ಟು ಅಲ್ಲಿ ಹೋಗಿದ್ದಾರೆ, ಬಲಿದಾನವಾಗಿದೆ. ತಾವು ಡೋಂಟ್ ಫರಗೆಟ್ ಇವರಿಗೆಲ್ಲಾ ಹೆಂಡತಿ, ಮಕ್ಕಳು, ಹೆತ್ತವರು, ಇದ್ದಾರೆ. One word if it has come from the Chief Minister or from any one of them about the sacrifices made by these people, I would have appreciated. ದಯಮಾಡಿ ತಾವು ಉತ್ತರ ಕೊಡುವಾಗ.. ಒಂದು ವೇಳೆ ಅದು ಮಾಡಿದ್ದರೆ ಆ ಆಫೀಸರ್ಸ್‌ಗಳನ್ನು ಗುರುತಿಸಿ ಶಿಕ್ಷೆ ಮಾಡಿ. ಆದರೆ ಸಾರಾಸಗಟಾಗಿ ಇವತ್ತು.. ಏಕೆಂದರೆ ಜಾಯಿಂಟ್ ಆ್ಯಕ್ಷನ್ ಟಾಸ್ಕ್ ಫೋರ್ಸ್ ಇತ್ತು; ನಮ್ಮ ಕಾಲದಲ್ಲಿ Walter Devaram, a very bold Officer, a great hero among the Officers. ಅಲ್ಲಿ ಹಾಗೂ ತಮಿಳುನಾಡಿನಲ್ಲಿ ಇರುವಂತಹ ಆಫೀಸರ್ಸ್ ಮಧ್ಯೆ ಡಿಸ್‌ಪ್ಯೂಟ್ ಅನ್ನು ಇವತ್ತು ಇಡೀ ಜಾಯಿಂಟ್ ಟಾಸ್ಕ್ ಫೋರ್ಸ್‌ಗೆ ತಂದು ಈ ರೀತಿಯಲ್ಲಿ ಅವಮಾನ ಮಾಡುವುದು ಇದ್ದರೆ ಅದು ಸರಿಯಲ್ಲ. ತಮಗೆ ಗೊತ್ತಿರುವ ಹಾಗೆ ನಾವು ಆಗ ಒಳ್ಳೆಯ ಅಧಿಕಾರಿಗಳನ್ನು ಅಲ್ಲಿಗೆ ಚೂಸ್ ಮಾಡಿ ಕಳುಹಿಸಿದ್ದೆವು. ಇಲ್ಲಿಗೆ ರಜಾ ಹಾಕಿ ಅವರು ಬರಲಿಲ್ಲ. ನಾವು ವೀರಪ್ಪನ್‌ನ್ನು ಹಿಡಿದುಕೊಂಡೇ ಬರುತ್ತೇವೆ ಎಂದು ಶಪಥ ತೊಟ್ಟು ಹೋದರು. ಈ ರೀತಿಯಾಗಿ ಹೋಗಿರುವಂತಹ ಎಷ್ಟೋ ಅಧಿಕಾರಿಗಳು, ತಮ್ಮ ಪ್ರಾಣ ಬಿಟ್ಟರು, ಪ್ರಾಣ ಕಳೆದುಕೊಂಡರು, ಅನ್ನನೀರು ಬಿಟ್ಟರು, ಮಕ್ಕಳನ್ನು ಹೆಂಡತಿಯನ್ನು ಇಲ್ಲಿಯೇ ಬಿಟ್ಟು ಹೋದರು. ಸುಮಾರು ನೂರಕ್ಕೆ 99 ರಷ್ಟು ಯಾವ ಅಧಿಕಾರಿಗಳು ರಜ ಹಾಕಲಿಲ್ಲ. I still remember ಹಾಗೆ ಅವರು ಅಲ್ಲಿ ಹೋಗಿ ಕೆಲಸ ಮಾಡಿದರು. ಏಕೆಂದರೆ very wrong impression sometimes it is created here. 40ಕೋಟಿ ರೂ.ಹಣ ಇದಕ್ಕೆ ಖರ್ಚು ಮಾಡಿದ್ದಾರೆ. ಅಲ್ಲ ಇದರಲ್ಲಿ 12.37 ಕೋಟಿ

ರೂ.ಗಳು ಮಾತ್ರ ಖರ್ಚಾಗಿದ್ದು. ಏಕೆಂದರೆ With that, already circulation 40 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆಂದು ಇದೆ. It has to be clarified. ಸರ್ಕಾರ ಮಾಡಬಹುದು. ಇಲ್ಲಿ ರೆಕಾರ್ಡ್ಸ್ ಇದೆ ನಾನು ಬೇಕಾದರೆ ಹೇಳುತ್ತೇನೆ. ಅದರಲ್ಲಿ ಪರಿಹಾರ ಕೊಟ್ಟಿದ್ದು, ಯಾರು ಗೌರ್ನಮೆಂಟ್ ಸರ್ವೆಂಟ್ ತೀರಿಕೊಂಡಿದ್ದಾರೋ ಅವರ ಕುಟುಂಬಕ್ಕೆ ಪರಿಹಾರ ಕೊಟ್ಟಿದ್ದು ರೂ. 1.34 ಲಕ್ಷ ಚಿಲ್ಲರೆ ಕೊಟ್ಟಿದ್ದಾರೆ. ಟಿ.ಎ/ಡಿ.ಎಗೆ 4.22 ಲಕ್ಷ ಖರ್ಚಾಗಿದೆ, ಬಾಕಿ communication equipments ತೆಗೆದುಕೊಂಡಿದ್ದು ಅದು ಯಾವುದೂ ನಷ್ಟವಾಗುವುದಿಲ್ಲ. ಅದು ಉಪಯೋಗಕ್ಕೆ ಬರುತ್ತದೆ. ಇಲ್ಲವಾದರೂ ಅದನ್ನು ತೆಗೆದುಕೊಳ್ಳಬೇಕಾಗಿತ್ತು. ಇದಕ್ಕಾಗಿ 5,7 ಲಕ್ಷ ಖರ್ಚಾಗಿದೆ. 5.7 ಲಕ್ಷ ಹಾಗೂ 1.34 ಲಕ್ಷ ಒಟ್ಟು ಸುಮಾರು 12 ಕೋಟಿ ರೂ.ಗಳಲ್ಲಿ 7 ಕೋಟಿ ರೂ.ಗಳು ಅದು ಅಸೆಟ್ಸ್ •That means, practically you have spent only about Rs.5 crores. ಬಿ.ಎಸ್.ಎಫ್.ಗೆ ಎಕ್ಸ್‌ಪಂಡಿಚರ್‌ಗೆ 1.22 ಲಕ್ಷ ಕೊಟ್ಟಿದ್ದಾರೆ. ಏಕೆಂದರೆ ನಾನು ಕೇಳುತ್ತಿದ್ದೇನೆ ಸರ್ಕಾರ ಈಗಲಾದರೂ ಕ್ಲಾರಿಫಿಕೇಷನ್ ಕೊಡುತ್ತೇವೆಂದು ಕೊಡುತ್ತಿಲ್ಲ. ಆದ್ದರಿಂದ ದಯಮಾಡಿ ತಾವು ಉತ್ತರ ಕೊಡುವಂತಹ ಸಮಯದಲ್ಲಿ ಕೊಡಬೇಕು. ನಂತರ ಬಹಳ ಜನ ಸಿಕ್ರೇಟ್ ಫಂಡ್‌ನಲ್ಲಿ ಬಹಳ ಖರ್ಚು ಮಾಡಿದ್ದಾರೆ, ಕೋಟ್ಯಾಂತರ ರೂಪಾಯಿಗಳು ಹೋಗಿದೆ ಎನ್ನುವ ಮಾತಿದೆ ಏಕೆ?.. ಒಂದು ತಿಂಗಳಿಗೆ ಆ್ಯವ್‌ರೇಜ್ 60 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿರಬಹುದು. ಎವ್‌ರೇಜ್ ಸಿಕ್ರೇಟ್ ಎಕ್ಸಿಪೆಂಡಿಚರ್ ಒಂದು ತಿಂಗಳಿಗೆ ಆ್ಯವ್‌ರೇಜ್ 60 ಸಾವಿರ ರೂಪಾಯಿಗಳನ್ನು ಖರ್ಚುಮಾಡಬಹುದು. ಪೋಲೀಸ್ ಬಡ್ಜೆಟ್ ಇರುವುದು 445 ಕೋಟಿ ರೂಪಾಯಿಗಳು. ಇದರಲ್ಲಿ ಪೋಲೀಸ್ ಬಡ್ಜೆಟ್ ಮಾಡುವಾಗ ಏರಿಯಾವೈಸ್ ಖರ್ಚು ಮಾಡುವ ರೀತಿಯಲ್ಲಿ ಬಡ್ಜೆಟ್‌ನಲ್ಲಿ ಲೆಕ್ಕ ಹಾಕುತ್ತಾರೆ. ಆ ಏರಿಯಾ ಬರತಕ್ಕಂಥದ್ದು 7000 ಸ್ಕ್ವೇರ್ ಕಿ.ಮೀ. ಮೈಸೂರು ಜಿಲ್ಲೆಯಲ್ಲಿ ಅದು ಎಸ್.ಟಿ.ಎಫ್.ಆಫ್‌ರೇಷನ್ ಮಾಡತಕ್ಕಂಥದ್ದು that constitutes 3.5% areawise geographical territory. ಆದ್ದರಿಂದ ಟಾಸ್ಕ್ ಫೋರ್ಸ್ ಆಫ್‌ರೇಷನ್ 5 ಸಾವಿರ ಸ್ಕ್ವೇರ್ ಕಿ.ಮಿ. ಇರತಕ್ಕಂಥದ್ದು. ಆದ್ದರಿಂದ ಸರ್ಕಾರ 3.5 ಪರ್ಸೆಂಟ್ ಖರ್ಚು ಮಾಡಬೇಕಾಗುತ್ತದೆ. ಏರಿಯಾವೈಸ್.. ನಾನು ಹೇಳುವುದು ಒಟ್ಟು ಟೊಟಲ್ ಬಡ್ಜೆಟ್‌ನಲ್ಲಿ ಅಂದರೆ ಪೊಲೀಸ್ ಬಡ್ಜೆಟ್‌ನಲ್ಲಿ 7 ವರ್ಷಗಳಲ್ಲಿ 2014 ಕೋಟಿ ಆದರೆ 3.5 ಪರ್ಸೆಂಟ್ ಎಷ್ಟು ಬರುತ್ತದೆ ಎಂದರೆ 70 ಕೋಟಿ ರೂ.ಗಳು ಬರುತ್ತವೆ. ಇಲ್ಲಿ ಖರ್ಚು ಆಗಿರುವುದು ಪ್ರಾಕ್ಟಿಕಲಿ 7 ಕೋಟಿ ರೂ.ಗಳು ಏಕೆಂದರೆ ಅದು ಪಬ್ಲಿಕ್ ಇಂಪ್ರೆಷನ್ ಕೆಲವು ಸಾರಿ ಏನಾಗುತ್ತದೆ ಎಂದರೆ ಹೇಳಿಕೆಗಳ ಮೇಲೆ ಕೊಟ್ಯಾಂತರ ರೂ.ಗಳನ್ನು ಖರ್ಚು ಮಾಡಿದ್ದಾರೆ ಎನ್ನುವ ಪಬ್ಲಿಕ್ ಇಂಪ್ರೆಷನ್ ಮೂಡುತ್ತದೆ. ಆ ಏರಿಯಾಕ್ಕೆ ನಿಜವಾಗಿ ಪರ್ಸೆಂಟೇಜ್‌ವೈಸ್ ಸುಮಾರು 70 ಕೋಟಿ ರೂ.ಗಳು ಖರ್ಚು ಆಗಬೇಕು. But what is spent is only Rs.5 crores. ಆದ್ದರಿಂದ ಈ ಇಂಪ್ರೆಷನ್‌ನನ್ನು

ತಾವು ಹೇಳಿಕೆ ಕೊಡುವಾಗ ಕೊಡಿ, ಏಕೆಂದರೆ, ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ನಮಗೆ ಏನಾಗುತ್ತದೆ ಎಂದರೆ ಕೋಟ್ಯಾಂತರ ರೂಪಾಯಿಗಳನ್ನು ವ್ಯಯ ಮಾಡಿರುವುದು ನಿಜವಿರಬಹುದು ಎನ್ನುವ ಶಂಕೆ ಸಾರ್ವಜನಿಕ ವಲಯದಲ್ಲಿ ಕಂಡು ಬರುತ್ತಿದೆ. ಏಕೆಂದರೆ ತಾವು ಸರಿಯಾದ ಉತ್ತರ ಕೊಡದೇ ಸುಮ್ಮನೆ ಇದ್ದರೆ ತಮಿಳು ನಾಡು ಮುಖ್ಯಮಂತ್ರಿಗಳು ಹೇಳಿರುವ ಹೇಳಿಕೆಗೆ ಪುಷ್ಟಿ ಬರುತ್ತದೆ. ಆದ್ದರಿಂದ ದಯಮಾಡಿ ಸರಿಯಾದ ವಿವರಣೆಯನ್ನು ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಕೊಡಬೇಕಾಗುತ್ತದೆ. ಮತ್ತೊಂದು ವಿಚಾರವನ್ನು ನಾನು ಬಹಳ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಲು ಅಪೇಕ್ಷಿಸುತ್ತೇನೆ. ಏಕೆಂದರೆ ಈಗ ಸರೆಂಡರ್ ಆಗುವುದಕ್ಕೆ ನೀವು ಅವನ ಕಂಡೀಷನ್‌ಗಳನ್ನು ಒಪ್ಪಿಕೊಂಡಿದ್ದೀರಿ, ಆದರೆ ಅವನು ಸರೆಂಡರ್ ಆಗಲಿಲ್ಲ. ನೀವು ಒಪ್ಪಿಕೊಂಡಿರುವ ಕಂಡಿಷನ್ ಏನಿದೆ? ಬಹುಶಃ ಮಧ್ಯಪ್ರದೇಶದಲ್ಲಿ, ಉತ್ತರ ಪ್ರದೇಶದಲ್ಲಿ ಸಾಕಷ್ಟು ದೊಡ್ಡ ದೊಡ್ಡ ಡಕಾಯತ್‌ಗಳು ಸರೆಂಡರ್ ಆಗಿದ್ದಾರೆ. ಹೇಗೆ ಸರೆಂಡರ್ ಆಗಿದ್ದಾರೆಂದರೆ; ಮನಸ್ಸೇಚ್ಛೆಯಂತೆ, ತಾವು ಮಾಡಿರುವ ತಪ್ಪನ್ನು ಒಪ್ಪಿಕೊಂಡು, ನಿರ್ಮಲ ಮನಸ್ಸಿನಿಂದ ಶರಣಾಗತರಾಗಿದ್ದಾರೆ. ಆದರೆ ಇವನ ಸ್ಟೇಟ್‌ಮೆಂಟ್ ಏನು ಹೇಳುತ್ತದೆ ಎಂದರೆ ತಾನು ಮಾಡಿದ್ದೇ ಸರಿ. ತಾನು ಮಾಡಿರುವ ಕಾರ್ಯವೇ ಸರಿ ಎಂದು ಹೇಳತಕ್ಕಂಥ ಒಬ್ಬ ನರಹಂತಕನ ಕಂಡೀಷನ್ ಅನ್ನು ಒಪ್ಪಿಕೊಂಡಿರುವುದೇ ಒಂದು ರೀತಿಯಲ್ಲಿ It is most unethical for any Government. He has not confessed. ಪಶ್ಚಾತ್ತಾಪ ಪಟ್ಟಿಲ್ಲ.

MR. SPEAKER: To set the records straight, whether it is Madhya Pradesh or Rajasthan or Karnataka, there is nothing like surrendering to the Government. It is only surrendeing to the law. This is what is to be borne in mind primarily.

SRI M.VEERAPPA MOILY: Yes, Exactly correct. It is surrendering to the law not to State or Authority.

MR. SPEAKER: There is no provision to surrender to the Government.

SRI VEERAPPA MOILY: This man has not surrendered to law. He wanted to go away from the law. Yes. Hon'ble Speaker has grasped the correct point. ಇವತ್ತು ಕಾನೂನಿಗೆ ಶರಣಾಗತಿಯಾಗಿಲ್ಲ. ಇವತ್ತು ಕಾನೂನನ್ನು ಮುರಿದು ಮುಂದೆ ಕೂಡ ಕಾನೂನನ್ನು ಪರಿಪಾಲಿಸದೆ, ಕಾನೂನಿಗೆ ಶರಣಾಗತಿ ಆಗದೆ ಅವನನ್ನು

ತಪ್ಪಿಸಿಕೊಳ್ಳುವಂಥ ಒಪ್ಪಂದ ತಾವು ಮಾಡಿಕೊಂಡಿದ್ದೀರಿ. This can never happen in the annuals of the surrenders by any person.

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ.ಮಾಮನಿ)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದು ಯಾವಾಗಲೂ ಆಗಿಲ್ಲ, ಇನ್ನು ಮುಂದೆ ಕೂಡ ಆಗಬಾರದು, ತಾವು ನಿಜವಾದ ಒಂದು ಮಾರಲ್ ಎಥಿಕ್ಸ್‌ನಲ್ಲಿ ಕಾನೂನನ್ನು ರಕ್ಷಣೆ ಮಾಡುವಂತಹ ಒಂದು ಮನೋಬಲ ತಮ್ಮಲ್ಲಿದ್ದರೆ ದಯವಿಟ್ಟು ಉತ್ತರಕೊಡುವಾಗ ತಾವು ಹೇಳಬೇಕಾಗುತ್ತದೆ. We will categorically withdraw these surrender terms. ಆದರೆ ಅನ್ ಎಥಿಕಲ್ ಆಗಿ ಒಪ್ಪಿಕೊಂಡಿದ್ದೀರಿ, ಇದು ಇವತ್ತು ಸರ್ವತ ಕಾನೂನಿಗೆ ರಕ್ಷಣೆ ಮಾಡತಕ್ಕಂಥವರು ಒಪ್ಪಿಕೊಳ್ಳತಕ್ಕಂಥದ್ದಲ್ಲ. ಕಾನೂನನ್ನು, ಕಾನೂನಿಂದ ನುಣುಚಿಕೊಳ್ಳುವ ಹಾಗೆ ಒಬ್ಬನಿಗೆ ಅವಕಾಶ ಮಾಡಿ ಕೊಡುವಂತಹ ಒಂದು ಒಪ್ಪಂದವನ್ನು ತಾವು ತಿಳಿದೋ, ತಿಳಿಯದೆಯೋ ಮಾಡಿದ್ದೀರಿ. ಬಹುಶಃ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವ ಆತಂಕದಲ್ಲಿ ಈ ಒಪ್ಪಂದ ತಾವು ಮಾಡಿರಬಹುದು. ಆದರೆ ಇದು ಕಾನೂನಿನ ಹಿಡಿತದಿಂದ ಒಬ್ಬ ವ್ಯಕ್ತಿಯನ್ನು ಪಾರುಗೊಳಿಸತಕ್ಕಂಥ I think the States have abetted. If there is any International law, I think this Government and Tamil Nadu Government can be arrayed as accused, as abettors. ಇದನ್ನು ನೀವು ಆಲೋಚನೆ ಮಾಡಿ Any law can haul you up for abetting. ಮಾನ್ಯ ಸಿಂಧ್ಯಾರವರೆ, ಇದರಲ್ಲಿ ಯಾವುದೂ ಉತ್ಪ್ರೇಕ್ಷೆ ಇಲ್ಲ. ತಾವು ವಿಚಾರ ಮಾಡಿ ಇದರಲ್ಲಿ ಬಹಳ ಗಂಭೀರತೆ ಇದೆ. ಈಗ ಈ ಕಂಡೀಷನ್‌ನ್ನು ವಿತ್‌ಡ್ರಾ ಮಾಡಬೇಕು. ಇವತ್ತು ಅವನು ಮನಸ್ಸೇಚ್ಛೆಯಿಂದ, ಸರಂಡರ್ ಆಗದೇ ಅಸಹಾಯಕತೆಯಿಂದ ಸರೆಂಡರ್ ಆಗುತ್ತಾನೆ. 1993ರ ಏಪ್ರಿಲ್‌ನಲ್ಲಿ ಸುಮಾರು 150 ಜನ ವೀರಪ್ಪನ್‌ನಂತೆ ಅವನ ಸಹಚರರು ಇದ್ದಾರೆ. ಈಗ ಅವರು ಕೇವಲ 4 ಜನಗಳು ಮಾತ್ರ ಇದ್ದಾರೆ. 150 ಜನರ ಪ್ರಶ್ನೆ ಅಲ್ಲ, ಅವನ ಹಿಂದೆ ಅತಿ ದೊಡ್ಡ, ಲಕ್ಷಾಧಿಪತಿಗಳು, ಕೋಟ್ಯಾಧಿಪತಿಗಳು, ಗ್ರಾನೈಟ್ ಲಾಬಿಗಳು, ಗಂಧವನ್ನು ಖರೀದಿ ಮಾಡತಕ್ಕಂಥವರು... ಅವರು ಹೇಳಿದರು ಒಂದ ಸಾವಿರ ಕೋಟಿ ರೂ.ಗಳಷ್ಟು ಮೌಲ್ಯದ ಆ ಗಂಧವನ್ನು ಖರೀದಿ ಮಾಡುವಂತಹ ದೊಡ್ಡ ದೊಡ್ಡ ಶ್ರೀಮಂತರು ಅವನ ಬೆನ್ನ ಹಿಂದೆ ಇದ್ದರು. ಈ ಮಾತನ್ನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ.

5.40 ಪಿ.ಎಂ

ಅವನ ಹಿಂದೆ, ಅಪಾರವಾದಂಥ, ದಂತ ವ್ಯಾಪಾರ ಮಾಡತಕ್ಕ ದೊಡ್ಡ ಜಾಲ ಇದೆ. ಅಂತರ್ ರಾಷ್ಟ್ರೀಯ ಜಾಲ ಕೂಡ ಇರಬಹುದು. ರಾಷ್ಟ್ರದಲ್ಲಿ ವ್ಯಾಪಾರ

ಮಾಡತಕ್ಕಂಥವರೂ, ಅವರ ಕಂಟ್ರೋಲ್‌ನಲ್ಲಿ ಇದ್ದಾರೆ. He was controlling that entire empire. ಅದರ ಜೊತೆಯಲ್ಲಿ, ಕರ್ನಾಟಕ ಮತ್ತು ತಮಿಳುನಾಡಿನ ಅನೇಕ ಗ್ರಾಮಗಳನ್ನು ತನ್ನ ಕಂಟ್ರೋಲ್‌ನಲ್ಲಿ ಇಟ್ಟುಕೊಂಡಿದ್ದಾನೆ. He had a total control over these villages. To-day one thing which is achieved by the Joint Task Force.. ಆ ಗ್ರಾಮಗಳನ್ನು ಇವತ್ತು ಬಿಡುಗಡೆ ಮಾಡಿದ್ದಾರೆ. This is a great achievement It is not merely killing somebody on the encounter. ಇವತ್ತು ಕೆಲವರನ್ನು ಪೋಲೀಸ್ ಕಸ್ಟಡಿಯಲ್ಲಿ ಅಥವಾ ಜ್ಯುಡಿಷಿಯಲ್ ಕಸ್ಟಡಿಯಲ್ಲಿಟ್ಟಿರುವುದು ಅಷ್ಟೇ ಸಾಧನೆ ಅಲ್ಲ. ಏಕೆಂದರೆ, it gives an impression that so many are killed. No. Hundered and hundres of villagers have been freed from the clutches of this Veerappan. ಅಲ್ಲಿ ವೀರಪ್ಪನ್ ಬಿಡುಗಡೆಯಾಗಿದೆ. ರಾಜ್ಯದ ಚಟುವಟಿಕೆಗಳು ಸ್ಥಬ್ದವಾಗಿತ್ತು, ಇವತ್ತು ನಡೆಯುತ್ತಾ ಇದೆ. ಆ ಗ್ರಾಮಗಳಲ್ಲಿ ಇವತ್ತು 5 ಚುನಾವಣೆಗಳಾಯಿತು. ಈ ಕಡೆಯಿಂದ 5 ಚುನಾವಣೆಗಳು ಆಯಿತು, ಆ ಕಡೆಯಿಂದ 2-3 ಚುನಾವಣೆಗಳು ಆಯಿತು. ಜನರು ನಿಸ್ಸಂಕೋಚವಾಗಿ ಚುನಾವಣೆಗಳನ್ನು ಪ್ರಜಾಪ್ರಭುತ್ವದ ಪ್ರಕ್ರಿಯೆಗಳನ್ನು ನಡೆಸತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದು ಯಾರು? ಈ ಎಸ್.ಟಿ.ಎಫ್.ನ ತ್ಯಾಗದ ಬಲದಿಂದ ಇವತ್ತು ಆಗಿದೆ. We have to acknowledge that. ಇದನ್ನು ದಯಮಾಡಿ, ಇವತ್ತು ಸರ್ಕಾರದ ಪರವಾಗಿ ಹೇಳಬೇಕು. ಇವತ್ತು ಯಾರು ಸುಮಾರು 7 ಸಾವಿರ ಚದರಡಿ ಜಾಗವನ್ನು ಆಳುತ್ತಿದ್ದವನು ಬರೀ ವೀರಪ್ಪನ್ ಅಲ್ಲ, ದೊಡ್ಡ ದೊಡ್ಡ ಗ್ರಾನೈಟ್ ಲಾಭಿಗಳು, ದೊಡ್ಡ ದೊಡ್ಡ ದಂತ ವ್ಯಾಪಾರ ಮಾಡತಕ್ಕಂಥವರು. ದೊಡ್ಡ ದೊಡ್ಡಜನ ಸ್ಯಾಂಡಲ್ ವುಡ್‌ನಿಂದ ಜೀವನ ಮಾಡತಕ್ಕಂಥ, ಕೋಟ್ಯಾಂತರ ರೂಪಾಯಿಗಳ ಗಳಿಕೆ ಮಾಡತಕ್ಕಂಥ ಜನರಿಂದ, ಆ ಜಾಗ ಇವತ್ತು ವಿಮುಕ್ತವಾಗಿದೆ.

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಸನ್ಮಾನ್ಯ ಮೊಯ್ಲಿಯವರು, ಗ್ರಾನೈಟ್ ಲಾಭಿ, ಗಂಧದ ಲಾಬಿ, ದಂತದ ಲಾಬಿ ಎಂದು ಹೇಳುತ್ತಿದ್ದಾರೆ. ಮಾನ್ಯ ವಾಟಾಳರು ಹೇಳಿದರೇ ಒಂದು ರೀತಿಯಾಗುತ್ತದೆ. ಇವರು ಮುಖ್ಯಮಂತ್ರಿಗಳಾಗಿದ್ದವರು, ಅವರಿಗೆ ಮಾಹಿತಿ ಇತ್ತು ಹೇಳುತ್ತಿದ್ದಾರೆ. ಈ ಲಾಬಿ ಬದುಕಿರುವುದೆಲ್ಲಾ ಕರ್ನಾಟಕ ಸರ್ಕಾರ ಮತ್ತು ತಮಿಳುನಾಡು ಸರ್ಕಾರದಿಂದ. ಈ ಲಾಬಿ ಬದುಕಿರುವುದೇ ತಮಿಳುನಾಡು ಸರ್ಕಾರದಿಂದ ಅಥವಾ ಕರ್ನಾಟಕ ಸರ್ಕಾರದಿಂದ ಬದುಕಿದೆ. ಈ ಲಾಬಿ ಇತ್ತು ಎಂದು ಸರ್ಕಾರಕ್ಕೆ ಗೊತ್ತಿಲ್ಲ. ಮೊಯ್ಲಿಯವರೇ ಕ್ರಮ ತೆಗೆದುಕೊಳ್ಳಬಹುದಿತ್ತು.

SRI M.VEERAPPA MOILY: No. We have put many of these abettors inside. ವಾಟಾಳ್ ನಾಗರಾಜರವರು ಇವತ್ತು ಕೇಳಿ.

ಅವರು ಸುಪ್ರೀಂ ಕೋರ್ಟಿನವರೆಗೆ ಹೋದರು. ಬೈಲ್‌ಗಾಗಿ ಸುಪ್ರಿಂ ಕೋರ್ಟಿನವರೆಗೆ ಹೋದರು. ಆದರೆ, ಸುಪ್ರಿಂ ಕೋರ್ಟಿನಲ್ಲಿ ಕೂಡ ಬಿಡುಗಡೆಯಾಗಲಿಲ್ಲ. We have put them inside. It is not only.... ವೀರಪ್ಪನ್ ಸಹಚರರನ್ನು ಮಾತ್ರ ನಾವು ಒಳಗೆ ಹಾಕಿದ್ದಲ್ಲ. ಈ ರೀತಿಯಲ್ಲಿ ಅವನಿಗೆ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಬೆಂಬಲ ಕೊಡುತ್ತಿದ್ದಂಥ ಜನರನ್ನೂ ಕೂಡ ನಾವು ಒಳಗೆ ಹಾಕಿದ್ದೆವು. ಆದರೆ, ಗ್ರಾನೈಟ್ ಅಪರೇಷನ್‌ನ್ನು ಕಂಪ್ಲೀಟ್ ಆಗಿ ಮೂರು ವರ್ಷಗಳ ಕಾಲ ನಿಲ್ಲಿಸಿದ್ದೆವು. ಎಷ್ಟೇ ಒತ್ತಾಯ ಬಂದರೂ ಕೂಡ ನಾವು ಅದನ್ನು ಮಾಡಲಿಕ್ಕೆ ಬಿಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ಒತ್ತೆಯಾಳುಗಳನ್ನು ಬಿಡುಗಡೆ ಮಾಡುವುದಕ್ಕೆ ಅವನಿಗೆ ಹಣ ಕೊಟ್ಟಿರುವವರು ಯಾರು ಗೊತ್ತೇ? ಆ ಗ್ರಾನೈಟ್‌ನವರೇ.

SRI M.VEERAPPA MOILY: Whatever it may be. ಆದ್ದರಿಂದ, ಇದು ಸಣ್ಣ ವಿಚಾರ ಎಂದು ತಿಳಿದುಕೊಳ್ಳಬಾರದು. Targeting ourselves to veerappan, targeting 150 people... No. The Government should target all his empire, which was fortified by not only Veerappan, but by many others. ಇವತ್ತು ಇದನ್ನು ಬಿಡಿಸುವುದಕ್ಕೆ ಹೋರಾಟ ಮಾಡಿದಂಥ, ಈ ಹೊರಾಟಗಾರರು ಏನಿದ್ದಾರೆ, ಅವರ ಬಗ್ಗೆ ಒಂದು ಶಬ್ದ ಅನುಕಂಪ ಬೇಡ. We don't require ಅನುಕಂಪ. ನೀವು ಎಲ್ಲಿ ಹೇಳಿದಿರಿ. ಕರುಣಾನಿಧಿ ಹೇಳಿದ ಮೇಲೆ, ಒಂದು ಶಬ್ದವನ್ನು ನೀವಾದರೂ ಹೇಳಬಹುದಿತ್ತಲ್ಲಾ.

SRI P.G.R.SINDHIYA: Do you mean to say that in the last 2 years this Government....

ಶ್ರೀ ಎಂ.ವೀರಪ್ಪ ಮೊಯಿಲಿ: ಮಾನ್ಯ ಸಿಂಧ್ಯರವರೇ, ಬಹುಶಃ ನಾನು ಹೇಳಿದ್ದನ್ನು ಕೇಳಿಸಿಕೊಳ್ಳದೇ, ಏನೋ ಮಾತನಾಡುತ್ತಿದ್ದೀರಿ. ನಾನು ಏನು ಹೇಳಿದೆ, ಕರುಣಾನಿಧಿಯವರು ಏನು ಹೇಳಿದ್ದರು, "the Task Force people ate, womanised and... ಎಂದೆಲ್ಲಾ ಹೇಳಿದಮೇಲೆ ಅದರ ಬಗ್ಗೆ ಒಂದು ಉತ್ತರ, ಒಂದು ಶಬ್ದ ತಾವು ಹೇಳಿದ್ದು ನೋಡಲಿಲ್ಲ. ನಾನು ಎರಡು ವರ್ಷದ ವಿಷಯ ಹೇಳಲಿಲ್ಲ. ಎರಡು ವರ್ಷ ಇವರು ಇರುವವರೆಗೆ ಅಲ್ಲಿ ಸಡಿಲ ಮಾಡಲಿಲ್ಲ. ಅಪರೇಷನ್ಸ್ ನಡೆಯುತ್ತಾ ಇತ್ತು. ನಿಮ್ಮ ಕಾಲದಲ್ಲಿಯೂ ಬಿದರಿ ಇದ್ದರು, ನಮ್ಮ ಕಾಲದಲ್ಲಿಯೂ ಬಿದರಿ ಇದ್ದರು. I am not blaming. ನೀವು ಸುಮ್ಮನೆ ಡೈವರ್ಟ್ ಮಾಡಲಿಕ್ಕೆ ಹೋಗಬೇಡಿ. No diversion Please.

SRI P.G.R.SINDHIYA: My only answer to you is,

don't get diverted.

(INTERRUPTIONS)

ಶ್ರೀ ವಾಟಾಳ್ ನಾಗರಾಜ್: ಕರುಣಾನಿಧಿಯವರು ಹೇಳಿದ ಮೇಲೆ, ನೀವು ಅದಕ್ಕೆ ಏಕೆ ಉತ್ತರ ಕೊಡಲಿಲ್ಲ? ಈ ರೀತಿ ನಮ್ಮ ಟಾಸ್ಕ್‌ಫೋರ್ಸ್ ಮೇಲೆ ಆರೋಪಣೆ ಮಾಡಿದ ಮೇಲೆ ನಮ್ಮ ಸರ್ಕಾರ ಅದರ ಬಗ್ಗೆ ಇಲ್ಲಿಯವರೆಗೆ ಉತ್ತರ ಕೊಡಲಿಲ್ಲವಲ್ಲಾ. ಏಕೆ ಉತ್ತರ ಕೊಡಲಿಲ್ಲ?

ಶ್ರೀ ಎಂ.ವೀರಪ್ಪ ಮೊಯ್ಲಿ: ನಾನು ಹೇಳಿದ್ದು, I have not blamed you or anybody.

ಶ್ರೀ ಪಿ.ಜಿ.ಆರ್.ಸಿಂಧ್ಯ: ತಾವು ಮುಖ್ಯಮಂತ್ರಿಗಳಾಗಿದ್ದವರು. ಹೋಮ್ ಪೋರ್ಟ್ ಫೋಲಿಯೋ ನೋಡಿರತಕ್ಕಂಥವರು. ನೀವು, ಖರ್ಗೆಯವರು, ವಾಟಾಳ್ ನಾಗರಾಜರು ಮತ್ತು ಯಡಿಯೂರಪ್ಪನವರ ಭಾಷಣವನ್ನು ಸಂಪೂರ್ಣವಾಗಿ ನಾನು ಇಲ್ಲಿಯೇ ಕುಳಿತುಕೊಂಡು ಬೇರೆ ಏನೂ ವಿಚಾರ ಮಾಡದೇ ಕೇಳಿದ್ದೇನೆ. ಇವರ ಎಲ್ಲಾ ಭಾಷಣಗಳ ಸಾರಾಂಶ ಏನಿದೆ ಎಂದರೆ, ಈ ಸರ್ಕಾರ ಎಸ್.ಟಿ.ಎಫ್.ನವರು ಮಾಡಿರತಕ್ಕ ತ್ಯಾಗ ಏನಿದೆ, ನಮ್ಮ ಪೊಲೀಸ್ ಅಧಿಕಾರಿಗಳು ಯಾರಿದ್ದಾರೆ, ಯಾರು ಪ್ರಾಣವನ್ನು ಕೊಟ್ಟಿದ್ದಾರೆ, ಅವರಿಗೆ ಬೆಲೆ ಕೊಡುತ್ತಾ ಇಲ್ಲವೆನ್ನತಕ್ಕಂಥ ಅರ್ಥ ಬರುವ ರೀತಿಯಲ್ಲಿ ಮಾತನಾಡಿರುವುದು ರಾಜ್ಯದ ಜನತೆಗೆ ಹೋಗುತ್ತದೆ. It is not correct. We have never done it. ಹಾಗೆ ಹೇಳಲಿಲ್ಲವೆಂದರೂ ಕೂಡ ಈ ಅರ್ಥ ಬರುತ್ತದೆ. We have done everything.

(ಗೊಂದಲ)

ಉಪಾಧ್ಯಕ್ಷರು: ಕರುಣಾನಿಧಿಯವರು ಹೇಳಿದ್ದಕ್ಕೆ, ರಾಜ್ಯಸರ್ಕಾರದಿಂದ ಏನೂ ಉತ್ತರ ಅಥವಾ ರೀ ಆಕ್ಷನ್ ಇಲ್ಲವೆಂದು ಹೇಳುತ್ತಿದ್ದಾರೆ....

ಶ್ರೀ ವಾಟಾಳ್ ನಾಗರಾಜ್: ಮಾನ್ಯ ವೀರಪ್ಪ ಮೊಯ್ಲಿಯವರು ಏನು ಹೇಳಿದರು ಎಂದರೆ, ಕರುಣಾನಿಧಿಯವರು ನೇರವಾಗಿ ಆರೋಪಣೆ ಮಾಡಿದ್ದಾರೆ. ಇದುವರೆಗೂ ಅವರ ಆರೋಪಣೆಗೆ ಸರ್ಕಾರ ಉತ್ತರಕೊಟ್ಟಿಲ್ಲ. ಹಾಗಾದರೆ ಏನು ಉತ್ತರ ಕೊಟ್ಟಿದ್ದೀರಿ, ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ: ನೀವು ಯಾರಾದರೂ ಇದನ್ನು ಡಿನೈ ಮಾಡಿದ್ದೀರಾ?

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾನು ಗೃಹಮಂತ್ರಿಯಾಗಿ ಪ್ರಮಾಣವನ್ನು ತೆಗೆದುಕೊಂಡಿದ್ದೇನೆ. ಅನೇಕ ವಿಚಾರಗಳನ್ನು ಕೆಲವು ಸಂದರ್ಭದಲ್ಲಿ ಗೋಪ್ಯವಾಗಿ

ಇಡಬೇಕಾಗುತ್ತದೆ. ಹೇಳುವುದಕ್ಕಾಗುವುದಿಲ್ಲ. ಏನು ವಿಚಾರಗಳು ನಡೆದಿವೆ, ಎಂಬ ಬಗ್ಗೆ ಸತ್ಯವನ್ನು ನಾನು ಹೇಳುತ್ತೇನೆ. ಆದರೆ, ಈ ಸಂದರ್ಭದಲ್ಲಿ ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಈ ಎಲ್ಲಾ ವಿಚಾರಗಳೂ ತಮಗೂ ಗೊತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ: ಕರುಣಾನಿಧಿಯ್ಯವರು ಏನು ಸ್ಟೇಟ್‌ಮೆಂಟ್ ಕೊಟ್ಟರು?

ಶ್ರೀ ಹೆಚ್.ಎನ್.ನಂಜೇಗೌಡ: ಇದು ಹಾರಿಸುವಂಥ ಮಾತಲ್ಲ. ಸರ್ಕಾರ ಎಡವಿದೆ. ನಮ್ಮ ರಾಜ್ಯದಲ್ಲಿ ಇನ್ನು ಯಾರಾದರೂ ಸರಿಯಾದ ಮುಖ್ಯಮಂತ್ರಿ ಇದ್ದಿದ್ದರೆ, ಕರುಣಾನಿಧಿ ಬಗ್ಗೆ ರೀ ಆಕ್ಟ್ ಬೇರೆ ರೀತಿ ಮಾಡುತ್ತಿದ್ದರು. **He had no business to attribute such motives.**

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಪ್ರಶ್ನೆ ಇರತಕ್ಕಂತಾದ್ದು, ಎಸ್.ಟಿ.ಎಫ್.ಎಂದು ಹೇಳಿದರೆ, ಬರೀ ಕರ್ನಾಟಕದ ಪೊಲೀಸ್ ಅಲ್ಲ. ಎಸ್.ಟಿ.ಎಫ್.ಹೇಳಿದರೆ, ತಮಿಳುನಾಡು ಪೊಲೀಸೂ ಇದೆ, ರಾಜ್ಯ ಪೊಲೀಸೂ ಇದೆ.

ಶ್ರೀ ವಾಟಾಳ್ ನಾಗರಾಜ್: ತಮಿಳುನಾಡು ಮುಖ್ಯಮಂತ್ರಿ, ಕರುಣಾನಿಧಿಯವರು ಹೇಳುವಾಗ, ತಮಿಳುನಾಡು ಪೊಲೀಸು, ಕರ್ನಾಟಕ ಪೊಲೀಸು ಎಂದು ಹೇಳದೇ ಇರಬಹುದು. ನೇರವಾಗಿ ಪೊಲೀಸರ ಮೇಲೆ ಕೆಟ್ಟ ಅಭಿಪ್ರಾಯ ಬರುವ ರೀತಿಯಲ್ಲಿ ಬೇಜವಾಬ್ದಾರಿ ಹೇಳಿಕೆ ಕೊಟ್ಟಿರುವಾಗ, ಕರ್ನಾಟಕ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆ ಎಂದರೆ, ಆ ಹೇಳಿಕೆಗೆ ಇವರು ಬೆಂಬಲ ಕೊಟ್ಟ ಹಾಗೆಯೇ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇಲ್ಲಿ ಕಾಗೋಡು ತಿಮ್ಮಪ್ಪನವರು ಒಂದುಮಾತು ಹೇಳಿದರು. ಅವರ ಭಾವನೆಯಲ್ಲಿ ಹೇಳಿರಬಹುದು. ಇದು ಕರ್ನಾಟಕ ಅಥವಾ ತಮಿಳುನಾಡು ಪೊಲೀಸ್ ಫೋರ್ಸ್ ಆಗಲೀ, ನಮ್ಮ ದೇಶದ ಯಾವುದೇ ಒಂದು ಪೊಲೀಸ್ ಸಿಬ್ಬಂದಿ ಬಂದು ಪ್ರಾಮಾಣಿಕವಾಗಿ ದುಡಿಯುವಂಥ ಕಾಲದಲ್ಲಿ, ಅವರು ಸುಮ್ಮನೆ ಕುಡಿದುಕೊಂಡು, ತಿಂದುಕೊಂಡು ಬಿದ್ದಿದ್ದರು ಎಂದು ಒಬ್ಬ ರಾಜ್ಯದ ಮುಖ್ಯಮಂತ್ರಿ ಹೇಳಿದಾಗ ನೀವು ಬಾಯಿ ಮುಚ್ಚಿಕೊಂಡು ಕುಳಿತಿದ್ದೀರಿ, ಏಕೆ ಎಂದು ವೀರಪ್ಪ ಮೊಯ್ಲಿಯವರು ಕೇಳುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಸನ್ಮಾನ್ಯ ಪಿ.ಜಿ.ಆರ್.ಸಿಂಧ್ಯಾರವರು ಹೇಳುತ್ತಿದ್ದಾರೆ. ಅವರು ಹಿಂದೆ ಗೃಹ ಸಚಿವರಾಗಿದ್ದರು ಅವರು, ಇನ್ನೂ ಅನೇಕ ವಿಷಯಗಳು ಇವೆ ಈ ಸಂದರ್ಭದಲ್ಲಿ ನಾನು ಬಹಿರಂಗ ಮಾಡುವ ಹಾಗೆ ಇಲ್ಲ ಎಂದು ಹೇಳುತ್ತಾರೆ. ಅದೇನು ಗುಟ್ಟು ಎಂಬುದನ್ನು ದಯಮಾಡಿ ಹೇಳಿ.

ಶ್ರೀ ಹೆಚ್.ಎನ್.ನಂಜೇಗೌಡ: ಕರುಣಾನಿಧಿಯವರು ಹೇಳಿದರಲ್ಲಾ, ಆ ಅಭಿಪ್ರಾಯವನ್ನು ನೀವು ಹಂಚಿಕೊಳ್ಳುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ: ಅವರು ಹೇಳಿಕೆ ಕೊಟ್ಟಮೇಲೆ, ತಮ್ಮದೂ ಒಂದು ಸರ್ಕಾರ ಎಂದು ಭಾವಿಸಿಕೊಂಡು, ಇದಕ್ಕೆ ಪ್ರತಿಯಾಗಿ ಉತ್ತರ ಹೇಳುವಂಥ ಅಗತ್ಯ ಇದೆ. ಅವರು ಹೇಳಿದ್ದರಿಂದ, ಜನರ ಮನಸ್ಸಿಗೆ ಏನು ಬರುತ್ತದೆ. ಇದೇ ಇರಬಹುದು ಎಂಬ ಅಭಿಪ್ರಾಯ ಜನರ ಮನಸ್ಸಿಗೆ ಬರುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಎಸ್.ಟಿ.ಎಫ್ ನವರು ಮಾಡಿರತಕ್ಕ ಕೆಲಸಕ್ಕೆ ಮೂರು ಕಾಸಿನ ಬೆಲೆ ಇಲ್ಲವೆಂದು ಹೇಳಿದರೆ....

ಉಪಾಧ್ಯಕ್ಷರು: ತಾವು ಏನು ನೋಟೀಸ್ ಕೊಟ್ಟಿದ್ದೀರಿ, ಮತ್ತು ಈಗ ಏನು ಚರ್ಚೆ ಮಾಡುತ್ತಿದ್ದೀರಿ. ಅದನ್ನು ನೋಡಿ. ತಾವು ನೋಟೀಸ್ ಏನು ಕೊಟ್ಟಿದ್ದೀರಿ.

''ಕಾಡುಗಳ್ಳ ನರಹಂತಕ ವೀರಪ್ಪನ್ ಬಗ್ಗೆ ಸದನದಲ್ಲಿ ಚರ್ಚಿಸಲು ಹಲವಾರು ಬಾರಿ ಒತ್ತಾಯ ಮಾಡಿದಾಗ, ಸರ್ಕಾರವು ಒತ್ತೆಯಾಳುಗಳ ಬಿಡುಗಡೆ ಪರಿಸ್ಥಿತಿ ಇದ್ದು, ಹಾಗೂ ವೀರಪ್ಪನ್ ಶರಣಾಗುವ ಇಂಗಿತವನ್ನು ವ್ಯಕ್ತ ಪಡಿಸಿರುವ ಕಾರಣ, ಅದನ್ನು ಸದನದಲ್ಲಿ ಚರ್ಚಿಸುವುದು ಬೇಡ ಎಂದು ಸರ್ಕಾರ ಭರವಸೆ ನೀಡಿದೆ. ಆದರೆ, ಒತ್ತೆಯಾಳುಗಳ ಬಿಡುಗಡೆಯಾಗಿದ್ದು ವೀರಪ್ಪನ್ ಶರಣಾಗದೇ ಮತ್ತೆ ಕಾಡಿನಲ್ಲ ನುಸುಳಿಕೊಂಡಿದ್ದು ಕಾನೂನು ಸುವ್ಯವಸ್ಥೆಗೆ ಭಂಗ ಉಂಟಾಗಿರುವ ಈ ಸಂದರ್ಭದಲ್ಲಿ ಈ ವಿಚಾರವನ್ನು ಸದನದಲ್ಲಿ ಚರ್ಚಿಸಲು, 69ರ ಅಡಿಯಲ್ಲಿ ಚರ್ಚೆ ಮಾಡಲು ಅವಕಾಶ ಕೊಡಿ ಎಂದು ಕೇಳಿದ್ದೀರಿ. ಆದರೆ, ಈಗ ನೀವು ಪೇಪರಿನಲ್ಲಿ ಬಂದುದನ್ನೆಲ್ಲಾ ಇಲ್ಲಿ ಚರ್ಚೆ ಮಾಡುತ್ತಾ ಹೋದರೆ, ಹೇಗೆ? ನಿಮ್ಮ ನೋಟೀಸಿಗೆ ಸೀಮಿತವಾಗಿ ಮಾತನಾಡಬೇಕು.

ಶ್ರೀ ಎಂ.ವೀರಪ್ಪ ಮೊಯಿಲಿ: ಈಗ ನಾನು ಅದನ್ನೆಲ್ಲಾ ಬಿಟ್ಟು ಏನಾದರೂ ಮಾತನಾಡಿದ್ದೇನಾ?

ಉಪಾಧ್ಯಕ್ಷರು: ನೋಡಿ.

ಶ್ರೀ ಎಂ.ವೀರಪ್ಪ ಮೊಯಿಲಿ: ನೋಡುವುದು ಬೇಡ. ತಮ್ಮ ಅಭಿಪ್ರಾಯ ಇದ್ದರೆ ನಾನು ಕುಳಿತುಕೊಂಡು ಬಿಡುತ್ತೇನೆ.

ಉಪಾಧ್ಯಕ್ಷರು: ನಾನೇನೂ ಬೇಡ ಎಂದು ಹೇಳುವುದಿಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ: ನಾವು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇವೆ. ನಾವು ಜವಾಬ್ದಾರಿಯಿಂದ ಮಾತನಾಡುವುದಿಲ್ಲ ಎಂದು ತಮ್ಮ ಅಭಿಪ್ರಾಯ ಆದರೆ ನಮಗ್ಗೆ ಅಪ್ಪಣೆ ಕೊಡಿ ನಾವು ಕುಳಿತುಕೊಂಡು ಬಿಡುತ್ತೇವೆ.

ಉಪಾಧ್ಯಕ್ಷರು: ಜವಾಬ್ದಾರಿ ಇಲ್ಲ ಎಂದು ನಾನು ಆ ತರಹ ಹೇಳಿಲ್ಲ.

SRI M.VEERAPPA MOILY: I am very sorry that will reflect on us. ನಾವೆಲ್ಲಾ ದಾರಿ ಬಿಟ್ಟು ಮಾತನಾಡುತ್ತಿದ್ದೇವೆ ಎಂಬ ತಮ್ಮ ಅಭಿಪ್ರಾಯ ಇದ್ದರೆ.

ಉಪಾಧ್ಯಕ್ಷರು: ನೋಟೀಸಿನ ಪ್ರಕಾರ ನಾನು ಹೇಳುತ್ತಿದ್ದೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ: ನೋಟೀಸ್ ಪ್ರಕಾರ ಸಬ್ಜೆಕ್ಟನ್ನು ನೋಡಿದ್ದೇವೆ. ಕನ್ನಡ ನಮಗೆ ಗೊತ್ತಿದೆ. ಅದರ ಪ್ರಕಾರವೇ ಮಾತನಾಡುತ್ತೇವೆ. That would reflect on us ನಾವು ವಿತಿನ್ ದಿ ಲಿಮಿಟ್ ಮಾತನಾಡಬೇಕು ಎಂದು ತಾವು ರೂಲಿಂಗ್ ಕೊಡಿ ನಾವು ಕುಳಿತುಕೊಂಡು ಬಿಡುತ್ತೇವೆ. ವಿಷಯದ ಬಹಳ ವಿವರಕ್ಕೆ, ವಿಶ್ಲೇಷಣೆಗೆ ನಾವು ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಇದರ ಬಗ್ಗೆ ಸ್ಪಷ್ಟವಾದಂತಹ ವಿಚಾರವನ್ನು ಹೇಳಬೇಕು ಎಂದು ಹೇಳುತ್ತಿದ್ದೇನೆ. ಮಾನ್ಯ ಕರುಣಾನಿಧಿಯವರು ಹೇಳಿಕೆ ಕೊಟ್ಟಿದ್ದಾರಲ್ಲಾ they just ate, slept and womanised, ಎಂದು ಯಾವ ಹೇಳಿಕೆ ಕೊಟ್ಟಿದ್ದಾರೆ, ಅದಕ್ಕೆ ಒಂದು ಉತ್ತರ ಕೊಡಬೇಕಿತ್ತು, ಕೊಟ್ಟಿಲ್ಲ ಎಂದು ಹೇಳಿ ಆಕ್ಷೇಪಣೆ ಅಷ್ಟೇ, ಬೇರೇನೂ ಇಲ್ಲ. ಇನ್ನೂ ಎರಡು ವಿಚಾರ ಹೇಳುತ್ತೇನೆ. ಸ್ಪಷ್ಟವಾಗಿ ಹೇಳುತ್ತೇನೆ. ಅನೇಕ ವಿಚಾರಗಳನ್ನು ಇಲ್ಲಿ ವಿಶ್ಲೇಷಣೆ ಮಾಡುವುದಕ್ಕೆ ಆಗುವುದಿಲ್ಲ. ಒಂದು ವಿಚಾರ ಎಂದು ಹೇಳಿದರೆ ತಾವು ಯಾವ ಕಂಡೀಷನ್ಸ್‌ಗೆ ಒಪ್ಪಿಕೊಂಡಿದ್ದೀರಿ, ಹೋಸ್ಟೇಜಸನ್ನು ಬಿಡುಗಡೆ ಮಾಡಿದ, ಆತ ಸರೆಂಡರ್ ಆಗಲಿಲ್ಲ. ಇವತ್ತಿನವರೆಗೂ those problems will hold good, ನಾನು ಅದನ್ನೇ ಹೇಳಿದೆ you should immediately withdraw, ಏಕೆಂದು ಹೇಳಿದರೆ ಜನಗಳಿಗೆ ಒಂದು ಭರವಸೆಯನ್ನು ಕೊಡಬೇಕು. ಎಸ್.ಟಿ.ಎಫ್.ಅನ್ನು ಬಲಗೊಳಿಸಿ ಇವತ್ತು ಅವನು ಹಾಗೂ ಅವನ ಕಡೆಯವರು ಮೂರ್ನಾಲ್ಕು ಜನ ಏನು ಇದ್ದಾರೆ, ಅವರನ್ನು ಹಿಡಿಯತಕ್ಕ ರೀತಿಯಲ್ಲಿ ಕಾರ್ಯಾಚರಣೆಯನ್ನು ತಾವು ಪ್ರಾರಂಭ ಮಾಡಬೇಕು. ಬೇರೆ ಪ್ರಶ್ನೆ ಇಲ್ಲ. ಈ ಕಂಡೀಷನ್ಸ್‌ನ್ನು ಉಳಿಸಿ ತಾವು ಕಾರ್ಯಾಚರಣೆ ಮಾಡಿದರೆ ಅದರಿಂದ ಯಾವುದೇ ರೀತಿಯಾದಂತಹ ಮನೋಬಲ ಆ ಪೊಲೀಸ್‌ನವರಿಗೆ ಬರುವುದಿಲ್ಲ. ದಯಮಾಡಿ ಅದನ್ನು ವಿತ್‌ಡ್ರಾ ಮಾಡಬೇಕಾಗುತ್ತದೆ. instead of stepping into that, ಏನೂ ಆಗುವುದಿಲ್ಲ. ಇನ್ನೊಂದು ಎರಡನೆಯ ವಿಚಾರ. ಗೋಪಾಲನ್ ಬಗ್ಗೆ we are not helpless, ಏಕೆಂದರೆ ವೀರಪ್ಪನ್ ಮತ್ತು ಅವನ ಸಹಚರರು ಅನೇಕ ಅಫೆನ್ಸ್‌ಗಳನ್ನು ಮಾಡಿದ್ದಾರೆ. 150 ಕೇಸ್‌ಗಳ ಛಾರ್ಜ್ ಶೀಟ್ ಇವತ್ತು ಆಗಿದೆ. You can always summon him here, interrogate him here, why not? ಏಕೆಂದರೆ ಯಾವಾಗ ಈ ಸರೆಂಡರ್ ಟರ್ಮ್ಸ್ ಹೊರಟು ಹೋಯಿತು call him, interrogate him

here. You are entitled to it. ಇವತ್ತು ಇಂಟರ್‌ಪೋಲನ್ನು ಹಿಡಿದು ಬೇರೆ ಬೇರೆ ದೇಶದಲ್ಲಿರತಕ್ಕಂಥ ಜನರನ್ನು ಕರೆದು ನಾವು ಇಂಟರಾಗೇಟ್ ಮಾಡುವಂತಹ ಅಧಿಕಾರ ಇವತ್ತು ಇರುವುದು ಇದ್ದರೆ ಮತ್ತೊಬ್ಬ ರಾಜ್ಯದಲ್ಲಿರತಕ್ಕದ್ದನ್ನು ಇಲ್ಲಿ ಅಫೆನ್ಸ್ ಕಮಿಟ್ ಮಾಡಿದ ಬಗ್ಗೆ ಇಲ್ಲಿ ಇಂಟರಾಗೇಟ್ ಮಾಡತಕ್ಕ ಅಧಿಕಾರ ತಮಗೆ ಇದೆ. ತಾವು ಇದರ ಬಗ್ಗೆ ಖಂಡಿತವಾಗಿಯೂ ಕೂಡ ವಿಚಾರ ಮಾಡಬೇಕಾಗುತ್ತದೆ. ಮತ್ತೆ ಅಮ್ನೆಸ್ಟಿ ವಿಚಾರ ತಾವು ತಕ್ಷಣ ಒಪ್ಪಿಕೊಂಡಿರಿ ಎಂದು ಪತ್ರಿಕೆಯಲ್ಲಿ ವಿಚಾರ ಬಂತು. ಆಮೇಲೆ ಸ್ಪಷ್ಟೀಕರಣವನ್ನೂ ಕೊಟ್ಟಿದ್ದೀರಿ. ಆದರೂ ಕೂಡ ಇವತ್ತು ಯಾವುದೇ ರೀತಿಯ ಅಮ್ನೆಸ್ಟಿಗಾಗಲೀ, ಯಾವುದೇ ರೀತಿಯ ಶರಣಾಗತಿಗೆ ಆ ಮನುಷ್ಯ ಯೋಗ್ಯನಾಗಿಲ್ಲ. ಮತ್ತು ತಾವು ಅನೇಕ ಬಾರಿ ಸರಂಡರ್ ಆಗುತ್ತಾನೆಂದು ಹೇಳಿದಿರಿ. ಆತ ಶರಣಾಗತನಾಗುತ್ತೇನೆಂದು ಎರಡು ಮೂರು ಸಾರಿ ಹೇಳಿದ್ದರೂ ಆತ ಶರಣಾಗತನಾಗಲಿಲ್ಲ. ನಾವು ಹೇಳಿಕೆ ಕೊಡುವುದಕ್ಕೆ ಹೋಗಲಿಲ್ಲ ಏಕೆಂದು ಹೇಳಿದರೆ ಹೋಸ್ಟೇಜಸನ್ನು ಬಿಡುಗಡೆ ಮಾಡಬೇಕೆಂದು ತಮ್ಮ ತವಕ ಇರುವಾಗ ಅದಕ್ಕೆ ಆತಂಕ ತರಬಾರದು ಎಂದು ಹೇಳಿ ನಾವು ಹೇಳಿಕೆ ಕೊಡಲಿಲ್ಲ. ನಮಗೆ ಗೊತ್ತಿತ್ತು. ಅವನು ಎರಡು ಮೂರು ಸಾರಿ ಇದೇ ತರಹ ಬ್ಲಾಕ್‌ಮೇಲ್ ಮಾಡಿದ್ದಾನೆ. ಇದು ಇನ್ನೊಂದು ಬ್ಲಾಕ್‌ಮೇಲ್ ಆದರೆ ತಾವು ಬಹಳ ಆಸೆಯಿಂದ, ಕಾತರದಿಂದ ಆತ ಸರಂಡರ್ ಆಗುತ್ತಾನೆಂದು ಹೇಳಿ ತಾವು ಕುಳಿತುಕೊಂಡಿದ್ದರೆ ಆತ ತಮ್ಮ ಮತ್ತೂ ನಿಮ್ಮ ಕೈ ಕತ್ತರಿಸುವುದಕ್ಕೆ ಏನು ಪ್ರಯತ್ನ ಮಾಡಬೇಕೋ ಮಾಡುತ್ತಾನೆ. ದಯಮಾಡಿ, ಅನೇಕ ಜನ ಸಹ ಹೇಳಿಕೆ ಕೊಟ್ಟರು. ಯಾರು ಹೋಸ್ಟೇಜಸ್ ಇದ್ದಾರೆ. ಎಂದೆಲ್ಲಾ ತಮಗೆ ಗೊತ್ತಿದೆ ಲೇಟೆಸ್ಟಾಗಿ ತುಫಾಕಿ ಸಿದ್ಧ ಎಂದು ಹೇಳಿ ಒಬ್ಬ ವೀರಪ್ಪನ್ ಜೊತೆ ಸೇರಿಕೊಂಡಿದ್ದಾನೆ. ತಮಗೆ ಗೊತ್ತಿದೆ. ತಾವು ದಯಮಾಡಿ, ತುಫಾಕಿ ಸಿದ್ಧನಿಗೂ ಈ ಹೋಸ್ಟೇಜಸ್‌ಗೂ ಯಾವ ರೀತಿಯ ಸಂಬಂಧ ಇತ್ತು ಏನು ಎಂದು ಹೇಳಿ ತಾವು ದಯಮಾಡಿ ಇದರ ಬಗ್ಗೆ ಒಂದು ಹೈಲೆವೆಲ್ ಕಮಿಟಿ ಇನ್‌ಸ್ಟಿಟ್ಯೂಟ್ ಮಾಡಿ ಆಮೂಲಾಗ್ರವಾದಂತಹ ತನಿಖೆ ನಡೆಸಿ. let the truth come out, ಏಕೆಂದರೆ ಜನಗಳಿಗೆ ಒಂದು ರೀತಿಯ ಸಂಶಯ ಇದೆ. ತುಫಾಕಿ ಸಿದ್ಧನಿಗೂ ಹಾಗೂ ಈ ಹೋಸ್ಟೇಜಸ್‌ಗೆ ಕೂಡ ಯಾವ ರೀತಿಯ ಸಂಬಂಧ ಇದೆ, ಏನು ಇದೆ ಎಂಬುದನ್ನು ತಾವು ದಯಮಾಡಿ ಒಂದು ಉನ್ನತ ಸಮಿತಿ ಮಾಡಿ. ನಿವೃತ್ತ ಡಿಜಿಪಿ ಆಗಿರಬಹುದು, ನಿವೃತ್ತ ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್ ಇರಬಹುದು. ಯಾರಾದರೂ ಇರಬಹುದು. ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಹೇಳುತ್ತಾ ಇಲ್ಲ. ತುಫಾಕಿ ಸಿದ್ಧ ಎಂಬುವನು ವೀರಪ್ಪನ್ ಜೊತೆ ಹೋಗಿ ಬಿಟ್ಟಿದ್ದಾನೆ. He is now with the Veerappan, ಆ ಹೋಸ್ಟೇಜಸ್‌ಗೂ ತುಫಾಕಿ ಸಿದ್ಧನಿಗೂ ಏನು ಸಂಬಂಧ ಇದೆ? What is the nexus between these two, ಅದರ ಬಗ್ಗೆ ವಿಚಾರಣೆ ಮಾಡಿ. ಅದು ಫಾಲ್ಸ್ ಇರಬಹುದು. ಆದರೆ ಜನಗಳಲ್ಲಿ ಒಂದು ಅಭಿಪ್ರಾಯ ಅದು ಬೇರೆ ಇದೆ. ಅದರಿಂದ ಇಷ್ಟಕ್ಕೆ ನಾನು ಸೀಮಿತಗೊಳಿಸಿ ನನಗೆ

ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜೆ.ಎಚ್.ಪಟೇಲ್ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ವೀರಪ್ಪನ್ ಬಗ್ಗೆ ಬಹಳ ವೀರಾವೇಶದಿಂದ ಶೂರಾಧಿಶೂರರ ಭಾಷಣಗಳನ್ನು ಎಲ್ಲಾ ಕೇಳಿದ್ದೇನೆ. ನಾನ ಸರ್ಕಾರಕ್ಕೆ ಬಂದು ಒಂದು ವರ್ಷ ನಾಲ್ಕು ತಿಂಗಳಾಯಿತು. ಅದಕ್ಕೆ ಮುಂಚೆ ಏನಾಗಿತ್ತು? ಯಾರ್‍ಯಾರು ಏನು ಶೌರ್ಯ ಮಾಡಿದರು? ಅವನನ್ನು ಎಲ್ಲಿ ಹಿಡಿ ತರಿಸಿದರು, ತುಫಾಕಿ ಸಿದ್ಧ ಎಲ್ಲಿದ್ದ ಇನ್ನೊಬ್ಬ ಮುದ್ದ ಎಲ್ಲಿದ್ದ ನನಗೆ ಗೊತ್ತಿಲ್ಲ. ನಾನು ಮತ್ತು ಉಪ ಮುಖ್ಯ ಮಂತ್ರಿಗಳು, ಗೃಹ ಮಂತ್ರಿಗಳು ಕಾನೂನುಮಂತ್ರಿಗಳು ಇದ್ದೆವು. ಒಂದು ಕ್ಯಾಸೆಟ್‌ಬಂತು. addressed to Karunanidhi and to me, ಏನು ಅದರಲ್ಲಿ ಹೇಳಿದ್ದ ಅಂದರೆ ಈಗ ಈ ಎಂಟು ಜನ ಏನು ಇದ್ದಾರೆ, ಇವರ ತಲೆಗಳನ್ನು ಇಂತಹ ದಿವಸ ಕಡಿದು ಹಾಕುತ್ತೇನೆ. ಇಂತಹ ದಿವಸದೊಳಗಾಗಿ ಅಮ್ನೆಸ್ಟಿ ಕೊಟ್ಟರೆ ನನಗೆ ಎಂದು ಹೇಳಿದ್ದ. ಅದಕ್ಕೆ ನನಗೆ ಮಾನ್ಯ ಕರುಣಾನಿಧಿಯವರು ಫೋನ್ ಮಾಡಿದರು. ಈ ತರಹ ಆತ ಸರಂಡರ್ ಆಗುತ್ತೇನೆ, ಎರಡೇ ವರ್ಷ ಜೈಲಿನಲ್ಲಿರುತ್ತೇನೆ, ಅದು ಇದೂ ಕೆಲವು ಕಂಡೀಷನ್ಸ್ ಇತ್ತು. ರಾಷ್ಟ್ರಪತಿಗಳು ಇರಬೇಕು ನಾನು ಸರಂಡರ್ ಆಗುವಾಗ, ಎರಡೂ ರಾಜ್ಯದ ಮುಖ್ಯಮಂತ್ರಿಗಳು ಇರಬೇಕು ಎಂದು ಹುಚ್ಚಾಟದ ಡಿಮ್ಯಾಂಡ್ಸ್‌ನ್ನು ಇಟ್ಟಿದ್ದ. level headed any sane person who knows something about law of the land., ಯಾವುದನ್ನು ಕೇಳಬಾರದು ಅದನ್ನು ಆತ ಕೇಳಿದ್ದ. ಅದಕ್ಕೆ ನಾವು ಹೋದಾಗ ತಮಿಳುನಾಡಿನ ಮುಖ್ಯಮಂತ್ರಿಗಳ ಜೊತೆಯಲ್ಲಿ ಆತ ಸರಂಡರ್ ಆಗುತ್ತೇನೆಂದು ಹೇಳಿರುವುದರಿಂದ ಮೊದಲನೆಯದಾಗಿ ಹೋಸ್ಟೇಜಸ್ ಬಿಟ್ಟು ಕೊಡುವುದು ಆಗಬೇಕು. ಎರಡನೆಯದಾಗಿ ಆತ ಹಾಕಿರುವ ಕಂಡೀಷನ್ಸ್ ಏನು? ನನಗೆ ತಮಿಳುನಾಡಿನಲ್ಲೇ ನನ್ನ ಟ್ರಯಲ್ ಆಗಬೇಕು. ಕರ್ನಾಟಕದಲ್ಲಿರತಕ್ಕಂಥ ಕೇಸಸ್‌ಗಳನ್ನೆಲ್ಲಾ ಟ್ರಾನ್ಸ್‌ಫರ್ ಮಾಡಬೇಕು. ಇನ್ನೂ ಕೆಲವು ಬೇಡಿಕೆ ಇತ್ತು. ಅದಕ್ಕೆ ನಾವು ತಿಳಿದುಕೊಂಡಿದ್ದು ಆತ ತಮಿಳುನಾಡಿನ ಕೋರ್ಟಿನಲ್ಲಿ ಟ್ರಯಲ್ ಆದರೂ ಅಷ್ಟೇ, ಕರ್ನಾಟಕದ ಕೋರ್ಟಿನಲ್ಲಿ ಟ್ರಯಲ್ ಆದರೂ ಅಷ್ಟೇ, ಇಂಡಿಯನ್ ಪೀನಲ್ ಕೋಡ್ ಆಗಲೀ ಅಥವಾ ಕ್ರಿಮಿನಲ್ ಪ್ರೊಸೀಜರ್ ಕೋಡ್ ತಮಿಳುನಾಡಿಗೆ ಒಂದು, ಕರ್ನಾಟಕಕ್ಕೆ ಬೇರೆ ಎಂದಿಲ್ಲ. ಅವನು ಸರಂಡರ್ ಆಗಬೇಕು. ಕಾನೂನಿನ ಪ್ರಕಾರ ಯಾವುದೇ ಕ್ರಮ ಜರುಗಿಸಿದರೆ ನಾನು ತಲೆ ಬಾಗುತ್ತೇನೆಂದು ಹೇಳಿ ಆತ ಆ ಕ್ಯಾಸೆಟ್‌ನಲ್ಲಿ ಹೇಳಿರುವುದರಿಂದ ನಾವು ಈ ಸಮಯವನ್ನು ಉಪಯೋಗಿಸಿಕೊಂಡು ಅವನು ಮೊದಲನೆಯದಾಗಿ ಹೋಸ್ಟೇಜಸನ್ನು ಬಿಟ್ಟು ಕೊಟ್ಟ. ಎರಡನೆಯದು ಅವನು ಸರಂಡರ್ ಆಗುವುದು. ಸರಂಡರ್ ಆದ ಮೇಲೆ ಅವನು ಹಾಕಿರುವ ಕಂಡಿಷನ್ಸ್ ಏನು ಇದ್ದಾವೆ, ಕರ್ನಾಟಕದ ಕೇಸಸ್ ಎಲ್ಲಾ ಟ್ರಾನ್ಸ್‌ಫರ್ ಆಗಬೇಕು, ಅದಕ್ಕೆ ಒಪ್ಪಿಕೊಳ್ಳುತ್ತೇವೆ. ಅಮ್ನೆಸ್ಟಿ ಕೊಡುವುದಕ್ಕೆ ಎರಡೂ ಸರ್ಕಾರಗಳಿಗೆ ಅಧಿಕಾರ ಇಲ್ಲ. ಮೊದಲನೆಯದಾಗಿ ಅಮ್ನೆಸ್ಟಿ ಎನ್ನುವ ಪದ ಆತನಿಗೆ

ಗೊತ್ತಿಲ್ಲ. ಫೂಲನ್ ದೇವಿ ಮತ್ತು ಮಾನ್‌ಸಿಂಗ್ ಇವರಿಗೆ ಯಾವ ರೀತಿ ಅಮ್ನೆಸ್ಟಿ ಸಿಕ್ಕಿತ್ತು ಈ ದೇಶದಲ್ಲಿ. ಅವರು ಕಾನೂನಿನ ಪ್ರಕಾರ ಕೋರ್ಟಿಗೆ ಹಾಜರಾಗಿ ಶಿಕ್ಷೆ ಆಗಿ ಆ ನಂತರ ರಾಷ್ಟ್ರಪತಿಗಳು ಅಮ್ನೆಸ್ಟಿ ಕೊಟ್ಟರು. ಅಮ್ನೆಸ್ಟಿ ಕೊಡುವುದು ರಾಷ್ಟ್ರಪತಿಗಳಿಗೆ ಮಾತ್ರ ಅಧಿಕಾರ ಇದೆ, ಅದೂ ಕನ್‌ವಿಕ್ಷನ್ಸ್ ಆದ ಮೇಲೆ. ಈ ಮಾತನ್ನು ಆತನಿಗೆ ಹೋಗಿ ತಿಳಿಸಪ್ಪ ಎಂದು ಗೋಪಾಲನ್‌ಗೆ ಹೇಳಿ ಆವತ್ತು ಗೋಪಾಲನನ್ನು ಕರೆಸಿದೆವು. ನಾವೆಲ್ಲಾ ಇದ್ದಾಗ ಆತನಿಗೆ ಹೇಳಿದೆವು. ಇದೊಂದು ಪಿಡುಗು. ಎ ಮೆನೇಸ್ ಇಲ್ಲಿಯವರೆಗೆ ಬಾರ್ಡರ್ ಸೆಕ್ಯುರಿಟಿ ಫೋರ್ಸ್ ಅವರನ್ನು ಕರೆಸಿ, ನಮ್ಮ ಕಡೆಯಿಂದ ಪೊಲೀಸ್‌ನವರು, ತಮಿಳುನಾಡಿನಿಂದ ಪೊಲೀಸ್‌ನವರು, ನಮ್ಮಲ್ಲಿ 60 ಜನ ಅವರಲ್ಲಿ 50 ಜನ ಪೊಲೀಸ್‌ನವರು ಸತ್ತು, ಬೇರೆ ಸಿವಿಲಿಯನ್ಸ್ ಸಹ 50-60 ಜನ ಸತ್ತರು. ಸುಮಾರು ನೂರಾರು ಆನೆಗಳನ್ನು ಕೊಂದು ಮಾಡಬಾರದಂತಹ ಅಪರಾಧವನ್ನೆಲ್ಲಾ ಮಾಡಿ, ತಕ್ಷಣ ಗಲ್ಲಿಗೆ ಏರಿಸತಕ್ಕಂಥ ಅಪರಾಧಗಳನ್ನು ಮಾಡಿದ್ದರೂ ಎರಡೂ ಸರ್ಕಾರಗಳೂ, ಕೇಂದ್ರ ಸರ್ಕಾರವೂ ಸೇರಿ ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳು ಆಗಿದ್ದರು. ಮೂರು ವರ್ಷ ಅವರೂ ಆ ಸಮಸ್ಯೆಯನ್ನು ಎದುರಿಸಿದರು. ಹಿಂದಿನ ಮುಖ್ಯಮಂತ್ರಿಗಳು ಎದುರಿಸಿದ್ದರು. ಸುಮಾರು 20 ವರ್ಷದ ಕಥೆ ಇದು. ಇವತ್ತು ನಿನ್ನೆಯದಲ್ಲ. ಈಗ ನಾವು ಅವನನ್ನು ಹಾಗೆಯೇ ಹಿಡಿದುಕೊಂಡು ಬರಬೇಕಾಗಿತ್ತು. ಯಾರು? ಶಂಕರ್ ಬಿದರಿಯವರು ಒಬ್ಬರು ಹೋಗಿ ತನ್ನ ಧೈರ್ಯದಿಂದ ಹೆದರಿಸದೇ ಹೋಗಿದ್ದರೆ ಅವನು ನಮ್ಮ ಬಾರ್ಡರ್ ಬಿಡುತ್ತಿರಲಿಲ್ಲ. Shankar Bedari the only person who did something to threaten him to drive him out of the boundaries of Karnataka. ನಾನು ಯಾವುದೇ ಪೊಲೀಸ್ ಅಧಿಕಾರಿ ಬಗ್ಗೆ ಕಾಮೆಂಟ್ ಮಾಡುವುದಿಲ್ಲ. ಯಾರೂ ಹೋಗುವುದಕ್ಕೆ ತಯಾರಿರಲಿಲ್ಲ. ಯಾರೋ ಒಬ್ಬ ಗನ್ ಕೊಟ್ಟಿದ್ದರೆ.... ಮೋಯಿಲಿಯವರ ಭಾಷಣವನ್ನು ಕೇಳುತ್ತಿದ್ದೆ ರೂಮಿನಲ್ಲಿ. ಯಾರೋ ಒಬ್ಬನ ಮಗ ನನಗೆ ರೈಫಲ್ ಕೊಟ್ಟಿದ್ದರೆ ಅವನನ್ನು ಕೊಂದು ಹಾಕುತ್ತಿದ್ದೆ ಎಂದು ಎಂದರು. ಅವನ ಜೊತೆಯಲ್ಲಿ ಇನ್ನು 4 ಜನ ಇವರು ಹೋಗಲಿ ಎಲ್ಲರಿಗೂ ರೈಫಲ್ ಕೊಡೋಣ. ಆ ಮಗುವಿನ ಫೀಲಿಂಗ್ಸ್ ಅರ್ಥವಾಗುತ್ತದೆ ನಮಗೆ. ಆ ಮಗುವಿನ ಭಾವನೆಗಳು ಅರ್ಥವಾಗುತ್ತದೆ. ರೈಫಲ್ ಕೊಟ್ಟರೆ ನಾನು ಹೊಡೆದು ಹಾಕಿ ಬಿಡುತ್ತೇನೆ. ನಾನು ಅದನ್ನೇ ಹೇಳುತ್ತಿರುವುದು ಆ ಮಗುವಿಗೆ ಬರುವುದು ಸ್ವಾಭಾವಿಕ. ಅವರ ಮನೆಯಲ್ಲಿ ಅವನ ತಂದೆ ಅಥವಾ ತಾಯಿ ಹತ್ಯೆ ಆಗಿರುವಾಗ ಆ ಮಕ್ಕಳಿಗೆ ಸಿಟ್ಟು ಬರುವುದಿಲ್ಲಾ? ಆ ಸಿಟ್ಟು ಎಷ್ಟು ಜನರಿಗೆ ಬಂದಿರಲಿಕ್ಕಿಲ್ಲ. ನಮ್ಮ ಒಬ್ಬ ಸೀನಿಯರ್ ಪೊಲೀಸ್ ಆಫೀಸರ್ ಕತ್ತು ಕಡಿದು ತಲೆ ಇಲ್ಲಿಗೆ ಕಳುಹಿಸಿದ್ದ. ಫಾರೆಸ್ಟ್ ಆಫೀಸರ್ಸ್ ಹೀಗೆ ಬಹಳ ಫಾರೆಸ್ಟ್ ಆಫೀಸರ್‌ಗಳನ್ನು ಇಷ್ಟೆಲ್ಲಾ ಅನ್ಯಾಯವಾಗಿರುವಾಗ ಅವನಿಗೆ ಯಾಕೆ ಇವರು ಈ ಕರುಣೆ ತೋರಿಸುತ್ತಾರೆಂದು ಹೇಳಿರಬಹುದು ಮತ್ತು ಇದರ ಬಗ್ಗೆ ಬಹಳ ಜನ ಹೇಳಿಕೆಯನ್ನು ಕೊಟ್ಟಿರಬಹುದು. ಪೊಲೀಸ್ ಅಧಿಕಾರಿಗಳು ಯಾರು ಅಲ್ಲಿ ಹೋಗಿ

ನಿಂತು ಹೋರಾಟ ಮಾಡುವುದಕ್ಕೆ ತಾಕತ್ತಿದ್ದರೆ ಅವರು ಬಹಳ ಹೇಳಬಹುದು ಆವಾಗ ಹಾಗಿತ್ತು ಹೀಗಿತ್ತೆಂದು. ಯಡಿಯೂರಪ್ಪನವರೇ, ಇದು ಮಾತಿನಿಂದ ಆಗುವ ಕೆಲಸವಲ್ಲ. ನಾವು ಯೋಚನೆಯನ್ನು ಮಾಡಿದೆವು ಈಗ ಅವನು ಯಾವ ಸ್ಥಿತಿಯಲ್ಲಿದ್ದಾನೆ; ವೀರಪ್ಪನ್ ಇರುವುದು ತಮಿಳುನಾಡಿನ ಏರಿಯಾದಲ್ಲಿ ಇರುವುದು ಅಲ್ಲಿ. ತಮಿಳುನಾಡು ಪೊಲೀಸ್‌ನವರು ನಮ್ಮವರು ಸೇರಿ ಜಾಯಿಂಟ್ ಆಕ್ಷನ್ ಮಾಡಿದರೆ ಏನಾದರೂ ಆಗುತ್ತದೆಂದು ನಾನು ಮೊದಲು ಈ ಸಂಭಾಷಣೆಯನ್ನು ಪ್ರಾರಂಭ ಮಾಡುವುದಕ್ಕೂ ಮುಂಚೆ ಆಲೋಚನೆ ಮಾಡಿ ಅವರು ನಮ್ಮ ಜೊತೆಗೆ ಸಹಕಾರವನ್ನು ಕೊಡದಿದ್ದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಇದು ಕಳೆದ 10-6 ವರ್ಷಗಳಿಂದ ನಡೆದಿರುವುದು. ತಮಿಳುನಾಡು ಪೊಲೀಸ್‌ನವರು ಅವನಿಗೂ ಹೇಗೆ ಸಂಬಂಧವಿದೆ ಅನ್ನುವುದು ನನಗೆ ಹೇಗೆ ಗೊತ್ತು. ಅವನು ಇನ್ನು ಪೊಲಿಟಿಕಲಿ ತಮಿಳುನಾಡಿನಲ್ಲಿ ಚುನಾವಣೆಯಲ್ಲಿ ನಿಂತು ಗೆಲ್ಲಬಲ್ಲೆ ಎಂದು ಹೇಳತಕ್ಕಂಥ ಆ ಧೈರ್ಯ ಇರಬೇಕಾದರೆ ಏನು ಕಾರಣ ಇರಬಹುದು? ನಾನು ಕರುಣಾನಿಧಿಯವರ ಮೇಲೆ ಮತ್ತು ಅವರಲ್ಲಿರತಕ್ಕಂಥ ಪೊಲೀಸ್‌ನವರ ಮೇಲೆ ಡೌಟ್ ಮಾಡಿ ಸರಂಡರ್ ಆದರೆಷ್ಟು ಬಿಟ್ಟರೆಷ್ಟು ನಮ್ಮಷ್ಟಕ್ಕೆ ನಾವು ಇರುತ್ತೇವೆ. ಕರುಣಾನಿಧಿಯವರು ಮೊದಲನೇ ದಿವಸ ಮೀಟ್ ಮಾಡಿದಾಗಲೇ, ಯಾವಾಗೆಂದರೆ ನಾನು ಕಾವೇರಿ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋದ ದಿವಸ ಅವರು ಹೇಳಿದರು. ಹೀಗೆ ವೀರಪ್ಪನ್ ಒಬ್ಬ ಕೆಟ್ಟವನು ಅಂದರೆ ಎಲ್ಲಾ ರೀತಿಯಿಂದ ಕೆಟ್ಟ ಪ್ರಾಣಿ. ಇವತ್ತು ಏನಾದರೂ ಮಾಡಿ ಅವನನ್ನು ಸರಂಡರ್ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿದರು. ಆಗ ನಾನು ಹೇಳಿದೆ ಮಾಡಿ, ಯಾವುದನ್ನು ನಾವು ಸ್ವಯಂ ನಮ್ಮ ಶಕ್ತಿಯಿಂದ ಗೆಲ್ಲುವುದಕ್ಕಾಗುವುದಿಲ್ಲ ಆಗ ಬೇರೆ ತಂತ್ರವನ್ನು ಉಪಯೋಗಿಸಬೇಕು. ನಾವು ಎರಡು ಸಲ ಮಾತನಾಡಿ ಆ ಗೋಪಾಲ್‌ನನ್ನು ಕರೆಸಿ ಮಾತನಾಡಿದೆವು. ಕೆಲವರು ಹೇಳಿದರು ಆ ಗೋಪಾಲ್‌ನನ್ನು ಅರೆಸ್ಟ್ ಮಾಡಿ ಹಾಗೆ ಅಂತ, ಆದರೆ ಅವನನ್ನು ಅರೆಸ್ಟ್ ಮಾಡಿಬಿಟ್ಟರೆ ಇದಕ್ಕೆ ಏನಾದರೂ ಒಂದು ಅರ್ಥ ಇದೆಯಾ? ಗೋಪಾಲ್‌ನನ್ನು ಅರೆಸ್ಟ್ ಮಾಡಿ ಹಾಗಾದರೆ ಅವನು ಬರುತ್ತಾನೆ, ಹಾಗಾದರೆ ನೀವು ಯಾರ್‍ಯಾರನ್ನು ಅರೆಸ್ಟ್ ಮಾಡುತ್ತೀರಿ; ಹಿಂದೆ ಇದ್ದ ಒಬ್ಬ ಮುಖ್ಯಮಂತ್ರಿ, ತಮಿಳುನಾಡು ಮುಖ್ಯಮಂತ್ರಿಗಳು ಅವರು ಎಲ್ಲಾ ವೀರಾವೇಷದ ಬಹಳಷ್ಟು ಸ್ಟೇಟ್‌ಮೆಂಟ್‌ನ್ನು ಕೊಟ್ಟರು. ಏಕೆ ಕೊಟ್ಟರು? ಏತಕ್ಕೆ ಕೊಟ್ಟರು ಅಲ್ಲಿದ್ದ ಪೊಲಿಟಿಕಲ್ ಸಿಚ್ಯುಯೇಷನ್ ಏನು ಇತ್ತು, ಅದನ್ನು ತಿಳಿದುಕೊಂಡ ಮೇಲೆ. ಅವನೇ ಹೇಳಿದ ನಾನು ಬಹಳ ಜನ ರಾಜಕಾರಣಿಗಳನ್ನು ಸಾಕಿಕೊಂಡಿದ್ದೇನೆಂದು. ನಂಜೇಗೌಡರೇ... ಕರ್ನಾಟಕದಲ್ಲಿಯೂ ಸಾಕಿಕೊಂಡಿದ್ದೇನೆ, ತಮಿಳುನಾಡಿನಲ್ಲಿ ಸಾಕಿಕೊಂಡಿದ್ದೇನೆ ಎಂದು ಹೇಳಿದ್ದಾನೆ. ಇದ್ದರು ಇರಬಹುದು ಅವನಂಥ ಒಬ್ಬ ಹುಚ್ಚ ಏನು ಬೇಕಾದರೂ ಹೇಳಬಹುದು, ಯಾವ ಜಂತುವನ್ನು ಇವತ್ತು ನಾವು, ಒಂದು ಇಲಿ ಹಿಡಿಯುವುದಕ್ಕಾಗುವುದಿಲ್ಲ ಅದು ಆ ಬೋನಿನಲ್ಲಿ ಎಲ್ಲಿ ಹೊಕ್ಕು ಬಿಡುತ್ತದೋ ಏನೋ ಇಲಿ ಹಿಡಿಯುವುದಕ್ಕೂ ಒಂದು ಏನೋ ತಂತ್ರ

ಮಾಡುತ್ತೇವೆ ಬರಲಿ ಆ ವಾಸನೆಗೆ ಎಂದು. ಇಲಿಯನ್ನು ಹಿಡಿಯುವುದಕ್ಕೆ ಆಗದೇ ಇರುವವರು ಇವತ್ತು ಹುಲಿ ಹಾಗೆ ಮಾತನಾಡುತ್ತಾರೆ. ನಮ್ಮ ಉದ್ದೇಶ ಏನು ಇತ್ತು ನಮ್ಮ ರಾಜ್ಯದಲ್ಲಿರತಕ್ಕಂಥವರು ಸತ್ತವರು ಎಲ್ಲಾ ಹೋದರು, ಹೋಗಿ ಬಿಡಲಿ ಎಂದು ಹೇಳುವುದಕ್ಕಾಗುತ್ತದೆಯೇ? ನಮಗೆ ಬೇಕಾಗಿತ್ತು ಇವತ್ತು ನಮ್ಮ 8 ಜನ ಅವರ ಮನೆತನದವರು ಅವರ ಮಕ್ಕಳು ಅವರು ಏನು ಆಶಿರ್ವಾದ ಕೊಡುತ್ತಾರೆ ಅದು ಇವತ್ತು ಬೇರೆ ವೀರಾವೇಷದ ಮಾತುಗಳನ್ನು ಹೇಳುವುದು ಅಲ್ಲ. ಒಳ್ಳೆಯದನ್ನು ಮಾಡಿದರೆ ಒಳ್ಳೇದು ಎಂದು ಹೇಳುವುದಕ್ಕಾಗುವುದಿಲ್ಲವೇ? ವಾಟಾಳರೇ, ವೀರಾವೇಷದ ಮಾತುಗಳು ನನಗೂ ಬರುತ್ತವೆ. ನಾನೇ ಹೋಗಿ ಹಿಡಿದುಕೊಂಡು ಬಂದು ಬಿಡುತ್ತೇನೆಂದು ಹೇಳುವುದಕ್ಕಾಗುತ್ತಾ ಆಗುವುದಿಲ್ಲ. ಸ್ವಾಮಿ ನಿಮ್ಮೆಲ್ಲರ ಮಾತುಗಳನ್ನು ನಾನು ಸ್ವತಃ ಕೇಳುತ್ತಿದ್ದೆ. ನಾನು ಯಾಕೆ ಇವರಲ್ಲಿ 3-4 ಜನರನ್ನು ಕಳುಹಿಸಿ ಕೊಡಬಾರದು? ಧೈರ್ಯ ಇದ್ದರೆ ಬಾರ್ಡರ್ ಸೆಕ್ಯೂರಿಟಿ ಫೋರ್ಸ್ ನೋಡಿ ಎಲ್ಲಾ ಹಗುರವಾಗಿ ಅಂದರೆ, ಭಾರವಾಗಿ ಅಂದರೆ ನೊಗ ಹೊತ್ತುಕೊಂಡು ಹೇಳಲಾ? ನಡೆದ್ದದ್ದನ್ನು ನಾನು ಹೇಳಿದೆ ಕರುಣಾನಿಧಿಯವರು ಹೇಳಿದ್ದು, ನಮ್ಮ ಡಿ.ಜಿ.ಗಳು ತಮಿಳುನಾಡಿನ ಹೈಯಸ್ಟ್ ಆಫೀಸರ್ಸ್ ಅವರನ್ನು ಕರೆಸಿ ಮಾತನಾಡಿ ಇದು ಒಂದು ಒಳ್ಳೆಯ ಅವಕಾಶ. ಮೊದಲು ಹಾಸ್ಟೇಜಸ್‌ಗಳು ಬರಲಿ. The primary concern was to get the hostages relieved off him. ಇಲ್ಲದಿದ್ದರೆ ನಾನೇಕೆ ಹೋಗುತ್ತಿದ್ದೆ ವೀರಪ್ಪನ್‌ನ ಬಗ್ಗೆ ಮಾತನಾಡುವುದಕ್ಕೆ? ಕರುಣಾನಿಧಿಯವರು ಹೇಳಿದರೂ ಹೋಗುತ್ತಿರಲಿಲ್ಲ, ನಾನು ಹೋಗಿದ್ದು ನಮ್ಮ ರಾಜ್ಯದ 8 ಜನರಿಗಾಗಿ. ನನಗೆ ಆ ಕನ್ಸ್‌ರನ್ಡ್ ಬೇಡ ಫಾರೆಸ್ಟ್ ಆಫೀಸರ್ಸ್ ಹೋದರು ಹೋಗಲಿ ಇನ್ನು ನನ್ನ ಶೌರ್ಯವನ್ನು ತೋರಿಸುತ್ತೇನೆಂದು ಹೇಳಿ ಅದಕ್ಕೆ ಹೋಗಬಾರದು, ಏನಾದರೂ ಸಾಧ್ಯವಾದಷ್ಟು ನಾವು ಅವನಿಗೆ ಸರಂಡರ್ ಆದರೆ, ಆತ ಹೇಳಿದ, ಕ್ಯಾಸೆಟ್ಟಿನಲ್ಲಿ ಹೇಳಿದ ಅವನ ಪ್ರತಿನಿಧಿಯಾದ ಗೋಪಾಲ್‌ನ ಮುಂದೆ ಹೇಳಿ ಕಳುಹಿಸಿದ ನಾನು ಸರಂಡರಾಗುತ್ತೇನೆಂದು; ನನ್ನನ್ನು ಇಂತಹ ಜೈಲಿನಲ್ಲಿ ಇಡಬೇಕೆಂದು ಅವನಿಗೆ ಯಾವ ಕಡೆಯಾದ ಜೈಲಿನಲ್ಲಿಯಾದರೂ ಇಡಲಿ. ನಾನು ಹೇಳಿದೆ, ನಮ್ಮ ರಾಜ್ಯಕ್ಕೆ ಅವನ ನೆರಳು ಬೀಳುವುದು ಬೇಡ. ಅವನನ್ನು ನಾವು ಕರೆಸುವುದು ಬೇಡ, ನಮ್ಮ ಕೋರ್ಟಿನಲ್ಲಿರುವ ಕೇಸುಗಳು ಬೇಕಾದರೆ ಅಲ್ಲೇ ಹೋಗಲಿ ಶಿಕ್ಷೆಯಾಗುವುದಾದರೂ ಅಲ್ಲಿ ಆಗಲಿ. ರಾಷ್ಟ್ರಪತಿಗಳು ಅವನಿಗೆ ಕ್ಷಮಾದಾನ ಕೊಡುವುದಾದರೆ ಅಲ್ಲೇ ಕೊಡಲಿ. ನಮ್ಮ ರಾಜ್ಯಕ್ಕೆ ಬರುವುದು ಬೇಡವೆಂದು ಹೇಳಿ ನಾನು ಒಬ್ಬನೇ ಅಲ್ಲ ನಾವು ಎಲ್ಲರೂ ಹೋಗಿ ಮಾತನಾಡಿ ಆ 8 ಜನರನ್ನು ಬಿಡಿಸಿದ್ದರ ಬಗ್ಗೆ ನೀವು ಏನು ವೀರಾವೇಷದ ಮಾತುಗಳನ್ನು ಆಡಿದಿರಲ್ಲಾ? ಆ 8 ಜನರು ಸತ್ತು ಹೋಗಿದ್ದರೆ ನಮಗೆ ಅವರನ್ನೂ ಕೊಂದು ಹಾಕಿದ್ದರೆ ಬಹಳ, ಹಿಂದಕ್ಕೆ 130 ಜನರ ಜೊತೆ ಈ 8 ಜನ ಎಂದು ಹೇಳಬೇಕಾಗಿತ್ತಾ? ಮಾನವಿಯತೆ ಬೇಡವಾ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಏನು ಹೇಳಿದ್ದೀರಿ, ನಾವು ಕೇಳಿಕೊಂಡು ಬಂದಿದ್ದೇವೆ. ಇಲ್ಲಿ ಮಾತನಾಡಬೇಡಿ ಎಂದು ಹೇಳಿದಿರಿ ನಾವು ಮಾತನಾಡಲಿಲ್ಲ. ಎಲ್ಲಾ ಮುಗಿದ ಮೇಲೆ ಈ ಸರ್ಕಾರದ ಏನು ತಪ್ಪಾಯಿತು ಎಂದು ಮಾತನಾಡಿದರೆ. ಅಲ್ಲಾ ಬಿಡಿಸಿದ್ದು ತಪ್ಪಲ್ಲ. ಬಾರ್ಡ್‌ರ್ ಸೆಕ್ಯುರಿಟಿ ಫೇಲ್ ಆಯಿತು, ನಾವು ಏನು ಹೇಳುವುದಕ್ಕೆ ಹೊರಟಿದ್ದೇವೆ ಎಂದರು. ಯಾಕೆ ಫೇಲ್ ಆಯಿತು? ತಮಿಳುನಾಡಿನ ಮುಖ್ಯಮಂತ್ರಿಗಳು ನೇರ ಆರೋಪ ಮಾಡಿದ್ದಾರೆ. ನೀವು ಒಪ್ಪುತ್ತೀರೋ ಬಿಡುತ್ತೀರೋ ಬಾರ್ಡ್‌ರ್ ಸೆಕ್ಯುರಿಟಿ ಫೇಲ್ ಆಯಿತು. ಅವನು ಚುನಾವಣೆಗೆ ಹೊರಟ್ಟಿದ್ದಾ ಅದಕ್ಕೆ ಅವನಿಗೆ ಬೆಂಬಲ ಬೇಕಾಗಿತ್ತು.... ವುಮನೈಸ್ ಮಾಡಿಕೊಂಡಿದ್ದರು

(ಗೊಂದಲ)

ಶ್ರೀ ಜೆ.ಹೆಚ್.ಪಟೇಲ್: ಇಂಪಾಸಿಬಲ್. ತಮಿಳುನಾಡಿನ ಮುಖ್ಯಮಂತ್ರಿ ಆ ಮಾತನ್ನು ಹೇಳಿಲ್ಲ. ನನಗೆ ಗೊತ್ತು ಏನು ಹೇಳಿದರು. ಅವರು ಏನು ಹೇಳಿದರು ಸ್ಪೆಷಲ್ ಟಾಸ್ಕ್ ಫೋರ್ಸ್ ಏನಿತ್ತಲ್ಲಾ ಸ್ಪೆಷಲ್ ಟಾಸ್ಕ್ ಫೋರ್ಸ್‌ದವರು ಇಲ್ಲಿ ಏನೂ ಮಾಡಲಿಲ್ಲ. ಬರೀ ಕುಡಿದುಕೊಂಡು ಬರೀ ಮಾಂಸವನ್ನು ತಿಂದುಕೊಂಡು ಸುತ್ತಮುತ್ತ ಹಳ್ಳಿಯ ಹೆಂಗಸರನ್ನು ಕೆಡಿಸುತ್ತಾ ಹೋದರು ಎಂದು ವೀರಪ್ಪನ್ ಹೇಳಿರುವುದು ಕ್ಯಾಸೆಟ್ಟಿನಲ್ಲಿದೆ ಪತ್ರಿಕೆಯವರನ್ನು ಬೇಕಾದರೆ ವೀರಪ್ಪನ್‌ನ ಹತ್ತಿರ ಕಳುಹಿಸೋಣ. ವಿಷಯವನ್ನು ತಿಳಿದುಕೊಂಡು ಬರಲಿ. ಹೇಳಿದ್ದು ಅವನ ಕ್ಯಾಸೆಟ್ಟಿನಲ್ಲಿ, ಆ ಕ್ಯಾಸೆಟ್ಟು ಬೇಕಾದರೆ ಅಧ್ಯಕ್ಷರೆ ಮಾನ್ಯ ವಿರೋಧ ಪಕ್ಷದ ನಾಯಕರುಗಳಿಗೆ ತೋರಿಸುತ್ತೇನೆ. ಆತ ಮಾತುಮಾತಿಗೂ ಹೇಳಿದ, ಕರ್ನಾಟಕದ ಪೊಲೀಸ್‌ನವರನ್ನು ಅಟ್ಯಾಕ್ ಮಾಡಿದನೇ ಹೊರತು ತಮಿಳುನಾಡಿನ ಪೊಲೀಸ್‌ನವರನ್ನು ಅಟ್ಯಾಕ್ ಮಾಡಲಿಲ್ಲ. ಇದರೊಳಗೆ ಸೂಕ್ಷ್ಮಗಳು ಇದ್ದಾವೆ. ತಾವು ಮುಖ್ಯಮಂತ್ರಿಗಳಾಗಿದ್ದವರು, ತಮ್ಮ ಕಾಲದಲ್ಲಿ ಯಾಕೆ ಹಿಡಿಯುವುದಕ್ಕಾಗಲಿಲ್ಲ? ಹೋಗಲಿ, ನನ್ನ ಕೈಯಲ್ಲಿ ಆಗಲಿಲ್ಲ, ನೀವು ಯಾಕೆ ಹಿಡಿಯಲಿಲ್ಲ? ನಿಮ್ಮ ಹಿಂದಿನವರು ಯಾಕೆ ಹಿಡಿಯಲಿಲ್ಲ. 20 ವರ್ಷ ಆ ಒಂದು ಪ್ರಾಣಿ ಕಾಡಿನಲ್ಲಿ ತಿರುಗಾಡಿಕೊಂಡು ಇದ್ದಾನೆ ಯಾರೂ ಹಿಡಿಯುವುದಕ್ಕಾಗಲಿಲ್ಲ. ಇವತ್ತು ನಾವು ನಮ್ಮವರು ಹೋಗಿ ಸಿಕ್ಕಿಹಾಕಿಕೊಂಡಿದ್ದರಲ್ಲಾ ಅದಕ್ಕೆ... ಇಲ್ಲ ಅವರಿಗೂ ಇವನಿಗೂ ಏನೋ ಒಂದು ಸಂಬಂಧ ಇರಬಹುದು. ಇವರು ಹೋಗಿ ಅಲ್ಲಿ ಬೇಕಾಗಿ ಸಿಕ್ಕಿಹಾಕಿಕೊಂಡಿರಬಹುದು.... ಹಾಗೆ ಮಾಡಬಾರದು.

6.10 ಪಿ.ಎಂ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ರೆಕಾರ್ಡ್ಸ್ ತಪ್ಪಾಗಿ ಬರಬಾರದು ಮತ್ತು ನಾವು ಹೇಳಿದ್ದು ಸರಿಯಿಲ್ಲವೆಂದು ಆಗಬಾರದು. "Asked whether Veerappan

and his associates would be allowed if surrendered, Mr. Karunanidhi stated that he could be provided the necessary security. When questioned why the Police had failed he states the Police Officers of both the States visited the villages in the jungles to eat, sleep and womanise.." ಎಂದು ಹೇಳಿರುವುದು. ನೀವು ರೆಸ್ಪೆಕ್ಟ್ ಮಾಡುವ ಹಿಂದೂ ಪೇಪರ್‌ನಲ್ಲೇ ಬಂದಿದೆ. ನಾವು ಇದನ್ನು ಕಂಡೆಮ್ ಮಾಡುತ್ತೇವೆಂದಲ್ಲ, ನಾವು ಎಲ್ಲವನ್ನೂ ರೆಸ್ಪೆಕ್ಟ್ ಮಾಡುತ್ತೇವೆ. ಇದರ ಜೊತೆಗೆ ಟೈಮ್ಸ್ ಆಫ್ ಇಂಡಿಯಾ ಪೇಪರ್‌ನಲ್ಲೂ ಬಂದಿದೆ. ಸುಮ್ಮನೆ ಗೇಲಿ ಮಾಡಿ, ಇಲಿ ಹಿಡಿಯುವುದಕ್ಕಾಗುವುದಿಲ್ಲವೆಂದು ಹೇಳಬೇಡಿ. ನಡೆಯಿರಿ, ನೀವೂ ನಾವೂ ಕೂಡಿ ಹೋಗೋಣ. ನೀವು ಮುಂದೆ, ನಾನೂ ಹಿಂದೆ ಬರುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಪಟೇಲರು ಮುಂದೆ ಹೋಗುವುದಾದರೆ ಅವರ ಲೀಡರ್ ಷಿಪ್‌ನಲ್ಲಿ ನಾನೂ ಬರುತ್ತೇನೆ.

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಅಧ್ಯಕ್ಷರೆ, ಒಂದು ಟಾಸ್ಕ್ ಫೋರ್ಸ್‌ನ್ನು ಅವರು ನೇಮ್ ಮಾಡಲಿ I will be the leader for the Task force. ಒಂದು ಇಲಿ ಹಿಡಿಯುವುದಕ್ಕಾಗುವುದಿಲ್ಲ ನಿಮ್ಮ ಕೈಯಲ್ಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ತಮಿಳುನಾಡಿನಲ್ಲಿ ಪೋಲೀಸ್ ಅಧಿಕಾರಿಯಾಗಿದ್ದ ವಾಲ್ಟರ್ ದೇವರಂ ಏನು ಹೇಳಿದ್ದಾರೆ? ಸ್ವತಃ ಗೋಪಾಲ್ ಬಗ್ಗೆ ತನಿಖೆಯಾಗಬೇಕೆಂದು ಹೇಳಿದ್ದಾರೆ.

ಶ್ರೀ ಜೆ.ಹೆಚ್.ಪಟೇಲ್: ದೇವರಂ ಏನು ಹೇಳಿದ ಎಂಬುದು ನಮಗೆ ಮುಖ್ಯವಲ್ಲ. ಕರುಣಾನಿಧಿ ಆ ಮಾತನ್ನು ಹೇಳಿಲ್ಲ. ಆ ಕ್ಯಾಸೆಟ್‌ನಲ್ಲಿ ಆ ತರಹ ಇತ್ತು ಎಂದು ಹೇಳಿದರು.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿ ಕೆಲವು ಅನುಮಾನಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಹೋಸ್ಟೇಜಸ್‌ನಲ್ಲಿ ಇದ್ದವರಲ್ಲಿ ಒಬ್ಬ ಅವನ ಜೊತೆಯಲ್ಲಿ ಹೋಗಿದ್ದಾನೆಂದು ಹೇಳಿದರು, ಇದನ್ನೆಲ್ಲಾ ಲಘುವಾಗಿ ಪರಿಗಣಿಸತಕ್ಕಂಥ ವಿಚಾರವಲ್ಲ. ಆಮೇಲೆ ಕೆಲವು ಗ್ರ್ಯಾನೈಟ್ ಲಾಬಿ, ಗಂಧದ ಲಾಬಿ, ದಂತದ ಲಾಬಿ ಯವರನ್ನು ಆ ಸಂದರ್ಭದಲ್ಲಿ ಒಳಕ್ಕೂ ಹಾಕಿದ್ದೇವೆಂದು ಮಾನ್ಯ ವೀರಪ್ಪಮೊಯಿಲಿಯವರು ಹೇಳಿದ್ದಾರೆ. ಈ ಅನುಮಾನಗಳನ್ನು ದಯಮಾಡಿ ಪರಿಹರಿಸಬೇಕು. ಚರ್ಚೆ ಮಾಡಿ ನಾವು ಹೊರಗೆ ಹೋದ ಮೇಲೆ ಆ ಅನುಮಾನಗಳು ಹಾಗೇ ಉಳಿದುಕೊಳ್ಳುವುದಾದರೆ, ಆ ಉತ್ತರಕ್ಕೆ

ಅರ್ಥ ಏನು? ಆದ್ದರಿಂದ, ಈ ಅನುಮಾನಗಳನ್ನು ಬಗೆಹರಿಸುವುದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಆಗತಕ್ಕಂಥ ಎಂಡ್ ರಿಸಲ್ಟ್ ಏನು? ಇದರ ಬಗ್ಗೆ ಹಿಂದೆ ಆಗಿರತಕ್ಕಂಥ ಪ್ರಯತ್ನಗಳೇನು? ಆ ರಾಜ್ಯದ ಪೊಲೀಸ್ ಬಗ್ಗೆ ನಾನು ಏನಾದರೂ ಹೇಳಿದರೆ ತಪ್ಪಾಗುತ್ತದೆ. ಎರಡೂ ರಾಜ್ಯಗಳ ಪೊಲೀಸಿನವರು ಜಾಯಿಂಟ್ ಆ್ಯಕ್ಷನ್ ತೆಗೆದುಕೊಂಡು, ಅವನು ಎಷ್ಟು ಜನರನ್ನು ಕೊಲ್ಲುತ್ತಾನೋ ನೋಡೋಣವೆಂದು ಹೋಗಿದ್ದಿದ್ದರೆ ಅವನನ್ನು 20 ವರ್ಷಗಳ ಹಿಂದೆಯೇ ಹಿಡಿಯಬಹುದಾಗಿತ್ತು. ಅವನನ್ನು ಲೋಕಲ್ ಹಳ್ಳಿಯ ಜನರು ಸಾಕಿದ್ದಾರೆ. ಅವನು ಅವರುಗಳಿಗೆ ಬಹಳ ಪ್ರಿಯನಾಗಿದ್ದ. ಸಾಮಾನ್ಯವಾಗಿ ಇಂತಹ ಬ್ರಿಗ್ಯಾಂಡ್ಸ್ ಏನು ಇರುತ್ತಾರೆ, ಮಾನ್‌ಸಿಂಗ್ ಇರಲಿ, ಫೂಲನ್‌ದೇವಿ ಇರಲಿ, ಯಾರೇ ಇರಲಿ, ಇಂಥವರು ಲೋಕಲ್ ಜನಗಳ ಮದುವೆಗಳಿಗೆ ಹಣ ಕೊಟ್ಟು, ಕಷ್ಟದ ಸಮಯದಲ್ಲಿ ಸಹಾಯ ಮಾಡಿ ಅವರ ಪ್ರೀತಿಯನ್ನು ಗಳಿಸಿಕೊಂಡುಬಿಡುತ್ತಾರೆ. ಸಾಮಾನ್ಯ ಜನರೂ ಅವನ ವಿರುದ್ಧ ಇದ್ದಿದ್ದರೆ ಇಷ್ಟು ವರ್ಷಗಳ ಕಾಲ ಅವನು ಬದುಕುವುದಕ್ಕೆ ಸಾಧ್ಯವಿರುತ್ತಿರಲಿಲ್ಲ. ಶಂಕರ್ ಬಿದಿರಿ ಈ ಕಡೆ ಬಂದಿದ್ದಾನೆಂದು ಆ ಜನರು ಅವನಿಗೆ ಮೊದಲೇ ತಿಳಿಸಿಬಿಡುತ್ತಿದ್ದರು. ಶಂಕರ್ ಬಿದಿರಿ ಈ ಕಡೆ ಬಂದಿದ್ದಾನೆಂದು ಆ ಜನರು ಅವನಿಗೆ ಮೊದಲೇ ತಿಳಿಸಿಬಿಡುತ್ತಿದ್ದರು. ಈ ಶಂಕರ್ ಬಿದಿರಿ, ಅಲ್ಲಿದ್ದ ಮೂರು ವರ್ಷಗಳಲ್ಲಿ 10 ಸಾರಿ ಅವನ ಗುಂಡಿನ ಏಟುಗಳಿಂದ ತಪ್ಪಿಸಿಕೊಂಡಿದ್ದಾನೆ. ನಮ್ಮ ಪೋಲೀಸಿನವರು ಅಲ್ಲಿ ಮಾಡಿರುವ ಕೆಲಸದ ಬಗ್ಗೆ ನನಗೆ ಹೆಮ್ಮೆ ಇದೆ. ಇವರು ಅಲ್ಲಿ ಎಷ್ಟು ಕಷ್ಟಪಟ್ಟಿದ್ದಾರೆ? ಎಷ್ಟು ಹೋರಾಟ ಮಾಡಿದ್ದಾರೆ? ಆಗ ತಮಿಳುನಾಡಿನ ಪೊಲೀಸಿನವರು ಏಕೆ ಸಹಕರಿಸಲಿಲ್ಲ ಮತ್ತು ಆವಾಗ ಅಲ್ಲಿ ಯಾರು ಮುಖ್ಯಮಂತ್ರಿಗಳಾಗಿದ್ದರೆಂಬ ಬಗ್ಗೆ ಹೇಳುವುದಾದರೆ ಅದು ಅರಣ್ಯರೋಧನವಾಗುತ್ತದೆ. ಅದಕ್ಕೋಸ್ಕರ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ವಿಧಾನ ಸಭೆ ಚುನಾವಣೆಗೆ ನಿಂತಿದ್ದ ಇಬ್ಬರು ಮೂವರು ಕ್ಯಾಂಡಿಡೇಟ್‌ಗಳಿಗೆ ದುಡ್ಡು ಕೊಟ್ಟಿದ್ದೇನೆಂದೂ ಸಹ ಹೇಳಿದ್ದಾನೆ, ಅವರ ಹೆಸರುಗಳನ್ನೂ ಕೂಡ ಹೇಳಿದ್ದಾನೆ; ಅವರು ಯಾವ ಪಾರ್ಟಿಗೆ ಸೇರಿದ್ದಾರೆಂದೂ ಹೇಳಿದ್ದಾನೆ. ಅವನು ಹೇಳಿದ್ದನ್ನು ನಾವು ಹೇಗೆ ನಂಬುವುದು?

ಶ್ರೀ ಎಂ.ವೀರಪ್ಪಮೊಯಿಲಿ: ಮಾನ್ಯ ಅಧ್ಯಕ್ಷರೆ, ಜಾಯಿಂಟ್ ಟಾಸ್ಕ್‌ಫೋರ್ಸ್ ಕಾನ್ಸ್ಟಿಟ್ಯೂಟ್ ಆದದ್ದೇ 1993 ರಲ್ಲಿ. ನಾನು ಮುಖ್ಯ ಮಂತ್ರಿಯಾಗಿದ್ದಾಗ ತಮಿಳುನಾಡಿಗೆ ಹೋಗಿ ಜಯಲಲಿತಾ ಅವರೊಡನೆ ಮಾತನಾಡಿಯಾದ ಮೇಲೆ walter Devaram was made the Chief Commander. ಆದಾದ ಮೇಲೆ, ತಮ್ಮ ಸರ್ಕಾರ ಬಂದಾದ ಮೇಲೂ ಅದು ಫೋರ್ಸ್‌ನಲ್ಲಿ ಇತ್ತು. ಆದರೆ, ತಮಿಳುನಾಡಿನಲ್ಲಿ ಕರುಣಾನಿಧಿಯವರು ಮುಖ್ಯಮಂತ್ರಿಯಾದ ಮೇಲೆ That was disbanded. Let the records be proper.

ಶ್ರೀ ಜೆ.ಹೆಚ್.ಪಟೇಲ್: ತಮಿಳುನಾಡಿನಲ್ಲಿ ಯಾರು ಮುಖ್ಯಮಂತ್ರಿಯಾಗಿದ್ದಾಗ ಏನು ಕೆಲಸ ಮಾಡಿದರೆಂಬ ಬಗ್ಗೆ ಅಥವಾ ಏನು ಮಾಡಲಿಲ್ಲ ಎಂಬ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡುವುದು ಅಪ್ರಸ್ತುತ. ಯಾರ ಮೇಲೆ ಏನೇ ವಿಚಾರ ಇದ್ದಿರಬಹುದು, ಕೆಲವು ಸರ್ಕಾರಿ ಅಧಿಕಾರಿಗಳು ಮತ್ತು ಕೆಲವು ಮಂತ್ರಿಗಳು ಆತನ ರಕ್ಷಣೆ ಮಾಡಿಯೂ ಇರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ. ನಮ್ಮ ರಾಜ್ಯದ ಅಸೆಂಬ್ಲಿ ಎಲೆಕ್ಷನ್‌ಗೆ ಇಂತಿಂಥವರಿಗೆ ದುಡ್ಡು ಕೊಟ್ಟಿದ್ದೇನೆಂದು ಅವನು ಹೇಳಿರುವ ಮಾತನ್ನು ನಾನು ದೊಡ್ಡ ಸ್ಟೇಟ್‌ಮೆಂಟ್ ಎಂದು ತೆಗೆದುಕೊಂಡುಬಿಡಲಾ? ಆದ್ದರಿಂದ, ಅವನಂಥವನ ಮಾತುಗಳನ್ನು ಈ ಸದನವಾಗಲೀ, ತಮಿಳುನಾಡಿನ ಸದನವಾಗಲೀ ರೆಕಗ್ನೈಸ್ ಮಾಡುವಷ್ಟು ದೊಡ್ಡ ಮಾತಲ್ಲ. ಅವನು ಹುಚ್ಚ, ಕಾಡು ಪ್ರಾಣಿ, ಅವನೊಬ್ಬ ಕೊಲೆಗಾರ, ಅವನೊಬ್ಬ ನರ ಹಂತಕ, ಇದರ ಬಗ್ಗೆ ನಮಗೆ ಎಳ್ಳಷ್ಟೂ ಸಂಶಯ ಇಲ್ಲ. ಇಷ್ಟು ವರ್ಷಗಳಾದರೂ ಅವನನ್ನು ನಾವು ಹಿಡಿಯುವುದಕ್ಕಾಗಲಿಲ್ಲ. ಈಗ ಅವನೇ ಒಂದು ಕ್ಯಾಸೆಟ್ ಮೂಲಕ ನಾನು ಶರಣಾಗಲು ಸಿದ್ದನಿದ್ದೇನೆ, ಮಾನ್ಯ ಕರುಣಾನಿಧಿಯವರೇ, ಮಾನ್ಯ ಪಟೇಲರೇ, ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರೇ ಎಂದು ಹೇಳಿದ್ದಾನೆ. ನಾಗಮಾರಪಲ್ಲಿಯವರು ತಮಿಳುನಾಡಿಗೇ ಸೇರಿದವರು ಇರಬಹುದೆಂದು ಅವರ ಬಗ್ಗೆ ಬಹಳ ಪ್ರೀತಿಯಿಂದ ಮಾತನಾಡಿದ್ದಾನೆ. ತಾವುಗಳೆಲ್ಲರೂ ಆ ಕ್ಯಾಸೆಟ್‌ನ್ನು ಒಂದು ಸಾರಿ ಕೇಳಬೇಕು. ಎಂಥದ್ದಾದರೂ ಆಗಿ ಈ ಪಿಡುಗು ಹೋಗಲಿ ಎಂದು ನಾನು ಆ ಬಗ್ಗೆ ಪ್ರಯತ್ನ ಮಾಡಿದ್ದೇನೆ. ಹಿಂದೆ ಕಾಲರಾ ಬಂದು ಜನ ಸತ್ತರು ಎಂದರೆ, ಇನ್ನು ಮುಂದಾದರೂ ಕಾಲರಾ ಬರದ ಹಾಗೆ ನಾವು ನೋಡಿಕೊಳ್ಳಬೇಕಲ್ಲಾ; ನಮ್ಮ ರಾಜ್ಯಕ್ಕೆ ಅವನಿಂದ ಬಂದಿರುವ ಪಿಡುಗು ತೊಲಗಲಿ, ನಮ್ಮ ರಾಜ್ಯದಿಂದ ಹಿಡಿದುಕೊಂಡು ಹೋಗಿರುವ 8 ಜನರ ಜೀವಗಳು ಉಳಿಯಲಿ, ಅದರಿಂದ ಅವರ ಸಂಸಾರದ ಮಕ್ಕಳು ಮೊಮ್ಮೊಕ್ಕಳು ಈ ಸರ್ಕಾರ ಒಳ್ಳೆಯ ಕೆಲಸ ಮಾಡಿದೆಯೆಂದು ಹೇಳಲಿ ಎನ್ನುವ ಒಂದೇ ಕಾರಣಕ್ಕಾಗಿ ಮತ್ತು ಕರುಣಾನಿಧಿಯವರು ಹೀಗೆ ಮಾಡೋಣವೆಂದು ಹೇಳಿದ್ದರ ಮೇಲೆ ನಾನು ಹೋಗಿದ್ದೆ. ನಾನಾಗಿ ನಾನು ಹೋಗಿರಲಿಲ್ಲ. ಆ ಕ್ಯಾಸೆಟ್‌ನ್ನು ಕೇಳಿಯಾದ ಮೇಲೆ ನಾವು ಹೋದದ್ದು. ಇದರ ಜೊತೆಗೆ ಆತನ ಜಂಘಾಬಲವೂ ಉಡುಗಿತ್ತು, ಆತನ ಫೋರ್ಸ್ ಕೂಡಾ ಬಹಳ ಡಿಕ್ರೀಸ್ ಆಗಿದೆ. ಹಿಡಿದುಕೊಂಡು ಹೋಗಿರುವ 8 ಜನರ ಪ್ರಾಣ ಹೋದರೂ ಪರವಾಗಿಲ್ಲ ನಾವು ಜಾಯಿಂಟ್ ಆಗಿ ಆ್ಯಕ್ಷನ್ ತೆಗೆದುಕೊಳ್ಳೋಣ ಎನ್ನುವ ಬಗ್ಗೆ ಎರಡೂ ರಾಜ್ಯದವರು ಒಪ್ಪಿಕೊಂಡರೆ ಮಾತ್ರ ಅದು ಸಾಧ್ಯವಾಗುತ್ತದೆ. ಬರೀ ನಮ್ಮ ಜನರನ್ನು ಕಳುಹಿಸಿ ಮತ್ತೊಂದು ಅಷ್ಟು ಜನ ಸತ್ತು ಬನ್ನಿರಿ ಎಂದು ಹೇಳುವುದಕ್ಕಾಗುವುದಿಲ್ಲ. ಈ ಕಾರಣಕ್ಕಾಗಿ ಸಮಗ್ರ ಪರಿಸ್ಥಿತಿಯನ್ನು ಅವಲೋಕಿಸಿ, ಕರುಣಾನಿಧಿಯವರ ಮನಸ್ಸನ್ನು ಅರ್ಥ ಮಾಡಿಕೊಂಡು ನಾವು ನಾಲ್ಕು ಜನರು ಅಲ್ಲಿಗೆ ಹೋಗಿ ಮಾತನಾಡಿದಮೇಲೆ, 8 ಜನರನ್ನು ಉಳಿಸುವುದಕ್ಕೆ ಮಾಡಿದ ಪ್ರಯತ್ನ ಸಫಲವಾಯಿತು. ಈ 8 ಜನರು ಬಂದರಲ್ಲಾ ಈ 8 ಜನರು ಬರದಿದ್ದರೆ ನಾವೂ ಕೂಡ

ನಿಮ್ಮ ಹಾಗೆ ಹೇಳಬಹುದಾಗಿತ್ತು. ಏನು ಬೇಕಾದರೂ ಆಗಲಿ ನೋಡಿ ಬಿಡೋಣ ಎಂದು ಹೇಳಬಹುದಾಗಿತ್ತು. ನಾವೂ ಬಂದೂಕು ತೆಗೆದುಕೊಂಡು ಹೋಗೋಣ ಎಂದು ಹೇಳಬಹುದಾಗಿತ್ತು. ಇಲ್ಲ.... ನಾವು ಬಂದೂಕು ತೆಗೆದುಕೊಂಡು ಹೋಗಿ ಹಿಡಿಯಲು ಆಗುತ್ತದೆಯೇ? ಈಗ ನಾನು ಮುಂದೆ ಹೋದೆ ಎಂದು ಇಟ್ಟುಕೊಳ್ಳೋಣ, ಹೋಗುವ ಧೈರ್ಯ ನನಗೂ ಇದೆ, ಇಲ್ಲ ಅಂದಲ್ಲಿ, ಅವರೆ ಬಂದೂಕು ಏನು ಪ್ರಯೋಜನ? ಬಂದೂಕು ಹಿಡಿದುಕೊಂಡು ನಾವು ನಾವೇ ಹೊಡೆದುಕೊಳ್ಳಬೇಕು. ನಮ್ಮನ್ನು ನೀವು ಹೊಡೆಯ ಬೇಕು, ನಿಮ್ಮನ್ನು ನಾವು ಹೊಡೆಯ ಬೇಕು. ವೀರಪ್ಪನ್‌ನ್ನಂತೂ ಹೊಡೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರೇ ಈಗ ಬಂದೂಕಿನ ಮಾತು ಬೇಡ. ಇನ್ನೂ ಅಂಥ ವಿಷಜಂತುಗಳನ್ನು ನಿರ್ನಾಮ ಮಾಡುವುದಕ್ಕೆ ಏನು ಪ್ರಯತ್ನಗಳನ್ನು ಮಾಡಬೇಕೋ ಅದನ್ನು ಎರಡೂ ಸರಕಾರಗಳು ಸೇರಿ ಮಾಡಬೇಕು. ಅದನ್ನೇ ಮೊನ್ನೆ ಮಾನ್ಯ ಕರುಣಾನಿಧಿಯವರೂ ಹೇಳಿದ್ದಾರೆ. ಅವನು ಶರಣಾಗತನಾದರೆ ಒಳ್ಳೆಯದು, ಇಲ್ಲವಾದರೆ ನಮ್ಮ ಸರಕಾರವೂ ನಮ್ಮ ವಿಚಾರವನ್ನು ರಿವೈಸ್ ಮಾಡುತ್ತೇವೆ ಎಂದಿದ್ದಾರೆ. ಅಂಥ ಒಂದು ಸಂದರ್ಭ ಬಂದರೆ ಸಾಕು. I wish it. ಅಂಥ ಒಂದು ಸಂದರ್ಭ ಬರಬೇಕು. ಅವರೂ ತೆಗೆದೇ ಬಿಡೋಣ ಎಂದು ತಯಾರಾಗ ಬೇಕು. ನಮ್ಮಲ್ಲಿ ಈಗಲೂ ತಯಾರಾಗಿದ್ದಾರೆ. ಈಗಲೂ ಶಂಕರಬಿದರಿಯವರು ನನ್ನನ್ನು ಕಳುಹಿಸಿಕೊಡಿ ಎಂದು ಹೇಳುತ್ತಿದ್ದಾರೆ. ಅದಕ್ಕೆ ನಾನು ಸಮಯ ಬಂದಾಗ ಕಳುಹಿಸುತ್ತೇನೆ ಎಂದು ಹೇಳಿದ್ದೇನೆ. ಹೀಗೆ ಅವರು ಈಗಲೂ ತಯಾರಾಗಿದ್ದಾರೆ. ನಮ್ಮ ಪೋಲೀಸ್ ಅಧಿಕಾರಿಗಳು ಯಾವುದೇ ಕಾರಣದಿಂದ their morale is very high. They want to finish him but I am only waiting for an opportune time. ಕೈಲಾಗದೇ ಇರುವ ಸಾಹಸವನ್ನು ಮಾತನಾಡುವುದಕ್ಕಿಂತ Let us wait for sometime ಅಂಥ ಸಮಯಕ್ಕೆ ನಾವು ಅವರಿಗೆ ಏನು ಉತ್ತರ ಹೇಳಬೇಕೋ ಏನು ಮಾಡಬೇಕೋ ಎಂದು ನೋಡೋಣ. ಅವನು ಶರಣಾಗತನಾಗಿ ಕೇಳ ಬಹುದು.... ಫಾರೆಸ್ಟ್ ಲಾಡ್ಜ್‌ನೊಳಗೆ ನನಗೆ ಸುತ್ತಲೂ ಸೆಕ್ಯುರಿಟಿ ಇಟ್ಟು..... ನಾನು ಹೇಳಿದ್ದೆ, ಫಾರೆಸ್ಟ್ ಲಾಡ್ಜ್‌ನೊಳಗೆ ಅಲ್ಲ, ನೀವು ಯಾವುದಾದರೂ ಹಳೆಯ ಅರಮನೆಯಲ್ಲಿ ಆದರೂ ಇದ್ದುಕೊಳ್ಳಿ. ನನಗೇನು? ನಮಗೆ ಏನು ಆಗಬೇಕಾಗಿದೆ? ಅವನು ಕಾನೂನಿಗೆ ಸರೆಂಡರ್ ಆಗಿ ಕಾನೂನಿನ ಪ್ರಕಾರ ಕೋರ್ಟ್‌ನ ಮುಂದೆ ಹಾಜರಾಗಿ, ಅವನಿಗೆ ಶಿಕ್ಷೆಯಾಗಿ ಜೈಲು ಎಂದು ಇದ್ದರೆ, ಸ್ಪೆಷಲ್‌ಜೈಲ್ ನಲ್ಲಿಯೇ ಇಡಲಿ. We do not have any objection. ನಮ್ಮ ಕೇಸ್‌ಗಳು ಟ್ರಾನ್ಸ್‌ಫರ್ ಆಗಲಿ. ಇದಕ್ಕೆ ಸುಪ್ರೀಂಕೋರ್ಟ್‌ನವರು ಪರ್ಮಿಷನ್ ಕೊಡಬೇಕು, ನಾವಾಗಿಯೇ ಏನೂ ಮಾಡುವ ಹಾಗಿಲ್ಲ. ಅದಕ್ಕೆ ನಮ್ಮ ಕಾನೂನು ಮಂತ್ರಿಯವರು ಹೇಳಿದರು... ಆಯಿತಪ್ಪ We will request the Supreme Court to transfer all our cases to Tamil Nadu. ಇಷ್ಟೊಂದು ಪ್ರಾಗ್‌ಮ್ಯಾಟಿಕ್ ಆಗಿ ಇಂಥ

ಒಂದು ಕೆಟ್ಟ ಶಕ್ತಿಯನ್ನು ದಮನ ಮಾಡುವುದಕ್ಕೆ ಹಿಂದೆ ದೇವತೆಗಳು ಯಾವನೋ ಒಬ್ಬನನ್ನು ಕೊಲ್ಲುವುದಕ್ಕೆ ಒಬ್ಬ ಬಾಣವಾದ, ಇನ್ನೊಬ್ಬ ಬಿಲ್ಲು ಆದ ಎಂದು ಹೇಳುತ್ತಾರೆ. ಅದಕ್ಕೆ ಆ ರೀತಿಯಿಂದ ನಾವು ವ್ಯವಹಾರವನ್ನು ನಡೆಸಿದ್ದೇವೆಯೇ ಹೊರತು, ಅದಕ್ಕೋಸ್ಕರ ನಾವೇ ಚೆನ್ನೈಗೆ ಹೋಗಿ ಅವರ ಹತ್ತಿರ ಮಾತುಕತೆ ನಡೆಸಿ, The only purpose was to get our eight persons released. That was the only purpose and nothing else. ಅದು ಆಗಿದೆ. ನಮ್ಮ ಉದ್ದೇಶ ಯಾವುದಿತ್ತು ಅದು ಸಾಧನೆಯಾಗಿದೆ ಎಂದು ನೀವೆಲ್ಲರೂ ಪರವಾಗಿಲ್ಲಪ್ಪ, ಇನ್ನು ಮುಂದೆ ಬೇಕಾದರೆ ಅವನನ್ನು ಏನು ಮಾಡಬೇಕು ಅದನ್ನು ಯೋಚನೆ ಮಾಡಿ ಎಂದು ಹೇಳುವುದನ್ನು ಬಿಟ್ಟು, ಸರಕಾರ ಶರಣಾಗತವಾಯಿತು... ಎಂದರೆ ಏನು? ಸರಕಾರ ಶರಣಾಗತವಾಗುತ್ತದೆಯೇ? ಸರಕಾರ ಅಂದರೆ ಏನು? ವೀರಪ್ಪನ್‌ಗೆ ಹೋಗಿ ನೀನು ಏನು ಬೇಕಾದರೂ ಮಾಡಿಕೊಳ್ಳಪ್ಪ ಎಂದು ಹೇಳಲು ಆಗುತ್ತದೆಯೇ? ಇಲ್ಲಿ ಶರಣಾಗತಿ ಪ್ರಶ್ನೆ ಇಲ್ಲ. ಯಾವ ಶಕ್ತಿಯ ಎದುರಿಗೂ ಈ ಸರಕಾರ ಶರಣಾಗತವಾಗುವುದಿಲ್ಲ.... ಯಾವ ಶಕ್ತಿ ಇದ್ದರೂ ಶರಣಾಗುವುದಿಲ್ಲ ಎಂಬುದನ್ನು ನಿಮಗೆ ಹೇಳುತ್ತಿದ್ದೇನೆ. we will face it, but teactfully, purposefully and successfully. ಅದನ್ನು ಮಾಡುವುದಕ್ಕಾಗಿ ಮಾಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರಾಗಲೀ, ಮಾನ್ಯ ಯಡಿಯೂರಪ್ಪನವರಾಗಲೀ, ಮಾನ್ಯ ವಾಟಾಳ್‌ರವರಾಗಲೀ,.... ಮಾನ್ಯ ನಂಜೇಗೌಡರು ಹೇಳಿದ್ದು ಸರಿ. ನಾವು ಹುಶಾರಾಗಿರಬೇಕು. ಯಾವುದೇ ಒಂದು ಹೆಜ್ಜೆ ಇಡುವಾಗ ಯಾವ ಉದ್ದೇಶಕ್ಕೆ ಈ ಹೆಜ್ಜೆಯನ್ನು ಇಟ್ಟಿದ್ದೇವೆ ಎನ್ನುವ ಬಗ್ಗೆ ಸಂಶಯಗಳೇನಾದರೂ ಇದ್ದರೆ ದಯವಿಟ್ಟು ಯಾವುದೇ ಸಂಶಯಗಳನ್ನು ಇಟ್ಟುಕೊಳ್ಳ ಬೇಡಿ. ನಾನು ಈ ಕುರಿತು ಬಹಳ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಉದ್ದೇಶ ಸ್ಪಷ್ಟ ಇತ್ತು. ಆ ಉದ್ದೇಶವು ಈಗ ಸಫಲವಾಗಿದೆ. ಮುಂದೆ ಏನು ಸ್ಟ್ರಾಟಜಿ ಎನ್ನುವುದನ್ನು ಈ ಸದನದಲ್ಲಿ ಚರ್ಚೆ ಮಾಡುವುದು ಬೇಡ. ಬೇಕಾದರೆ ನಿಮ್ಮ ಹತ್ತಿರ ಮಾತನಾಡಿ ಏನು ಮಾಡಬೇಕೆಂದು ವಿಚಾರ ಮಾಡೋಣ. ಅದು ಅಂಥ ಸಮಯ ಬಂದಾಗ ನಿಮ್ಮಗಳ ಹತ್ತಿರ ಮಾತನಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿ ಉತ್ತರವನ್ನು ಕೊಟ್ಟಿದ್ದಾರೆ. ನಾವು ಮಾತನಾಡುವ ಸಂದರ್ಭದಲ್ಲಿ ಬಹುಶಃ ನಾವು ಸಂಶಯ ವ್ಯಕ್ತಪಡಿಸಿದ್ದು ಯಾವುದರ ಮೇಲೆ ಅಂದರೆ, ಈಗಾಗಲೇ ತಾವು ಒಂದು ಮಾತನ್ನು ಹೇಳಿದ್ದೀರಿ. ನಮ್ಮ ಪೊಲೀಸ್ ಮೋರೇಲ್ ಬಹಳ ಹೈ ಇದೆ, ಆ ಪೊಲೀಸ್ ಮೋರೇಲ್ ಹೈ ಇದ್ದಾಗ, ಅವರ ಬಗ್ಗೆ ನಾವು ಲಘುವಾಗಿ ಮಾತನಾಡತಕ್ಕಂಥಾದ್ದು ಸರಿಯಲ್ಲ ಅನ್ನತಕ್ಕಂಥಾದ್ದೇ ನಮ್ಮ ವಾದವೂ ಕೂಡ ಆಗಿದೆ. ಅದನ್ನು ನಾವು ಇಲ್ಲಿ

ಪ್ರಸ್ತಾಪ ಮಾಡಿದ್ದೇವೆ. ಬಹುಶಃ ತಾವು ಇರಲಿಲ್ಲ. ನಮ್ಮ ವಿನಂತಿ ಇಷ್ಟೇ, ಒಬ್ಬ ರಾಜ್ಯದ ಮುಖ್ಯಮಂತ್ರಿಗಳು ಈ ರೀತಿಯಾಗಿ ಈ ಎಸ್.ಟಿ.ಎಫ್.ನ ಮೇಲೆ ಮಾತನಾಡಿದ ಮೇಲೆ, ಯಾವ ಜನರು ಅಲ್ಲಿಗೆ ಹೋಗಿ ತ್ಯಾಗ, ಬಲಿದಾನ ಮಾಡಿ, ಸ್ಯಾಕ್ರಿಫೈಸ್ ಮಾಡಿ ಇಷ್ಟು ದಿವಸ ನಿಂತರೋ ಅವರಿಗೆ ಗೌರವ ಬರತಕ್ಕಂಥ ರೀತಿಯಲ್ಲಿ ಮಾತನಾಡಲಿಲ್ಲವಲ್ಲಾ, ಅವರಿಗೆ ಡಿಸ್ಕರೇಜ್ ಮಾಡತಕ್ಕಂಥ ರೀತಿಯಲ್ಲಿ ಮಾತುಗಳು ಬಂದವಲ್ಲಾ ಎಂದು. ಬೇಕಾದರೆ ಎಲ್ಲಾ ಪೇಪರ್‌ಗಳಲ್ಲಿ ವಿಚಾರ ಬಂದಿದೆ. ತಾವುಗಳು ಕೂಡ ನೋಡಿ. ಜನರು ಸಂಶಯ ಬರತಕ್ಕಂಥ ರೀತಿಯಲ್ಲಿ ಆ ಅಧಿಕಾರಿಗಳ ಫೋರ್ಸ್‌ಗೆ ನೋಡತಕ್ಕಂಥ ರೀತಿಯಲ್ಲಿ ಆ ಹೇಳಿಕೆಯೂ ಬಂತು. ಆ ಹೇಳಿಕೆಯನ್ನು ಯಾರೂ ಕೂಡ ಡಿನ್ಯೆ ಮಾಡಲಿಲ್ಲ. ಕೂಡಲೇ ಡಿನ್ಯೆ ತಾವು ಮಾಡಲಿಲ್ಲ, ಮಾನ್ಯ ರೋಷನ್‌ಬೇಗ್‌ರವರು ಮಾಡಲಿಲ್ಲ, ಫಾರೆಸ್ಟ್ ಮಿನಿಸ್ಟರ್‌ರವರು ಮಾಡಲಿಲ್ಲ. ಹೀಗೆ ಯಾರಾದರೂ ಡಿನ್ಯೆ ಮಾಡಿದ್ದರೆ ನಮಗೆ ಏನಾಗುತ್ತಿತ್ತು ಎಂದರೆ, ಇಲ್ಲ ನಮ್ಮಲ್ಲಿ ಕೆಲಸ ಮಾಡಿದಂಥ ಜನರಿಗೆ ಸರಕಾರ ರಕ್ಷಣೆ ಕೊಡುತ್ತದೆ, ಎಂಬ ಭಾವನೆ ಬರುತ್ತಿತ್ತು.

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಅಧ್ಯಕ್ಷರೇ, ಎಸ್.ಟಿ.ಎಫ್. ತಮಿಳುನಾಡು ಮತ್ತು ಕರ್ನಾಟಕದ್ದು ಇತ್ತು. ಅಂದರೆ ಅವರು ತಮಿಳುನಾಡಿನ ಬಗ್ಗೆ ಹೇಳಿದ್ದಾರೆ ಅಂದರೆ ಏನು?...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಬಿದರಿಯವರು ನಿಮ್ಮ ಡಿಜಿ ಇಂಟಲಿಜೆನ್ಸ್, ಅವರೇ ಬಳ್ಳಾರಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ನಾವು ಅಲ್ಲಿ ಹೋಗಿ ಯಾವುದೇ ಅಟ್ರಾಸಿಟೀಸ್ ಮಾಡಲಿಲ್ಲ, ಯಾವ ತೊಂದರೆಯನ್ನೂ ಮಾಡಲಿಲ್ಲ, ಸುಮ್ಮನೆ ನಮ್ಮ ಮೇಲೆ ಇವೊತ್ತು ಆಪಾದನೆಯನ್ನು ಹೊರಿಸುತ್ತಾ ಇದ್ದಾರೆ, ಈಗಲೂ ಕೂಡ ನಾವು ಅದಕ್ಕೆ ತಯಾರಾಗಿದ್ದೇವೆ, ಎಸ್.ಟಿ.ಎಫ್ ಹೆಡ್ ಮಾಡಿ ನನ್ನನ್ನು ಕಳುಹಿಸಿದರೆ ನಾನು ಹೋಗುವುದಕ್ಕೆ ತಯಾರಾಗಿದ್ದೇನೆ ಎಂದು ಅವರು ಹೇಳಿದ್ದಾರೆ. ಅಂಥ ಒಂದು ಪ್ರಾಮಾಣಿಕತೆಯ ಮಾತನ್ನು ಅವರು ಸ್ವತಃ ಹೇಳಿದ್ದಾರೆ. ಅವರು ಎಲ್ಲಿಯವರೆಗೆ ಹೇಳಿದ್ದಾರೆ ಅಂದರೆ, ಇವೊತ್ತು ಅವನ ಫೋರ್ಸ್ ಕೂಡ ಕಡಿಮೆಯಾಗಿ ಕೇವಲ ಐದು ಜನರು ಮಾತ್ರ ಅವರ ಜೊತೆಯಲ್ಲಿ ಉಳಿದಿದ್ದಾರೆ. ಉಳಿದಂತವರು ದನಕಾಯುವ ಹುಡುಗರು ಅವನ ಜೊತೆಯಲ್ಲಿ ಅಡ್ಡಾಡುತ್ತಾ ಇದ್ದಾರೆ, ಅಲ್ಲಿರತಕ್ಕಂಥ ಹ್ಯಾಮ್ಲೆಟ್‌ನಲ್ಲಿ ವಾಸ ಮಾಡತಕ್ಕಂಥ ಜನರೂ ಕೂಡ ಅವನಿಂದ ದೂರ ಸರಿದಿದ್ದಾರೆ, ಅಂದರೆ ಆತನು ಅಷ್ಟೊಂದು ಅಸಹಾಯಕನಾಗಿದ್ದಾನೆ ಎನ್ನತಕ್ಕಂಥ, ಅಂಥ ಒಂದು ಪರಿಸ್ಥಿತಿಯಲ್ಲಿದ್ದಾನೆ ಎನ್ನತಕ್ಕಂಥ ಮಾತನ್ನು ಕೂಡ ಇವೊತ್ತು ಅವರು ಡಿಸ್‌ಕ್ಲೋಸ್ ಮಾಡಿದ್ದಾರೆ. ಅದಕ್ಕೆ ಯಾವಾಗ ಅವನು ಅಸಹಾಯಕನಾಗಿದ್ದಾನೆ, ಅಂಥ ಸಂದರ್ಭದಲ್ಲಿ ಅವನಿಗೆ ಕನ್‌ಸೆಷನ್ ಕೊಡತಕ್ಕಂಥಾದ್ದು, ಆ ಮಾತನ್ನು ಹೇಳತಕ್ಕಂಥಾದ್ದು, ಅಥವಾ ನಾವು above law ಎಂದು ಹೇಳಿ ಟ್ರೀಟ್ ಮಾಡತಕ್ಕಂಥಾದ್ದು ಅವಶ್ಯಕತೆ ಇಲ್ಲ ಎಂಬ ಮಾತನ್ನು ಮತ್ತು ವಾದವನ್ನು ನಾವು ಇಲ್ಲಿ ಮಂಡಿಸಿದ್ದೇವೆ.

SRI J.H.PATEL: What about eight persons?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ಕೇಳಿ ಸಾರ್. What about eight persons ಅಂದಾಗ ನಾವು ಬಾಯಿಮುಚ್ಚಿಕೊಂಡೇ ಕುಳಿತಿದ್ದೆವು. ತಾವು ಏನು ಹೇಳಿದ್ದಿರಿ? ಈ 8-10 ಜನರು ಅಲ್ಲಿದ್ದಾಗ ಈ ಸದನದಲ್ಲಿ ಅದನ್ನು ಚರ್ಚೆ ಮಾಡುವುದು ಬೇಡ, ಅದರ ಬಗ್ಗೆ ಮಾತನಾಡುವುದು ಬೇಡವೆಂದು ಹೇಳಿದ ಮೇಲೆ ನಾವು ಬಿಟ್ಟಿದ್ದು. ಇವೊತ್ತು ಪ್ರಸ್ತಾಪ ಮಾಡಿದ್ದು ಯಾಕೆಂದರೆ, ಆ್ಯಕ್ಚುಯಾಲಿಟಿ ತಿಳಿದುಕೊಳ್ಳೋಣ what are the facts ಏನು ನಡೆದಿದೆ, ಒಂದು ಕಡೆ ಬಿದರಿಯವರು ಅಲ್ಲಿ ಡಿಸ್‌ಕ್ಲೋಸ್ ಮಾಡುತ್ತಾರೆ. ಐದೇ ಜನರು ಅವನ ಹತ್ತಿರ ಇದ್ದಾರೆ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಸರಕಾರದವರು ಅದರ ಬಗ್ಗೆ ಮಾತನಾಡುವುದೇ ಬೇಡ ಹುಷಾರ್.. ಎಂದು ಹೇಳುತ್ತಿದ್ದಾರೆ. ಹಾಗಾದರೆ ಏನು ವಾಸ್ತವಾಂಶ ಇದೆ; ಯಾವ ಕಾರಣಕ್ಕಾಗಿ ಕೆಲವು ಫ್ಯಾಕ್ಟ್ಸನ್ನು ಹೈಡ್ ಮಾಡುತ್ತಾ ಇದ್ದಾರೆ ಎಂಬ ವಿಚಾರಕ್ಕಾಗಿ ನಾವು ಕೇಳಿದ್ದೆವು. ಅದಕ್ಕೆ ನೀವು ಏನೇನೋ ಕಲರ್ ಕೊಟ್ಟು.. ಇಲಿ ಹಿಡಿಯುವುದಕ್ಕೂ ಆಗುವುದಿಲ್ಲ... ಹುಲಿ ಹಿಡಿಯುವುದು... ಸವಾರಿ ಮಾಡುವುದು... ಬಂದೂಕು ಹಿಡಿಯುವುದು... ಏನೋ ಮಾತುಗಳನ್ನು ಹೇಳಿದ್ದೀರಿ. ಅದನ್ನು ನೋಡಿ ನಾನು ನೀವೇ ಎಲ್ಲಿ ಎಸ್.ಟಿ.ಎಫ್ ಹೆಡ್ ಮಾಡಲು ಹೋಗುತ್ತೀರೋ ಅಂದುಕೊಂಡೆ. ಅದಕ್ಕಾಗಿ ನಾವು ನಿಮ್ಮ ಜೊತೆಯಲ್ಲಿ ಬರುತ್ತೇವೆ ಎಂದು ಹೇಳಿದೆ. ನೀವು ಒಬ್ಬರೇ ಏಕೆ ನಾವೂ ಕೂಡ ನಿಮ್ಮ ಜೊತೆಯಲ್ಲಿ ಬರುತ್ತೇವೆ ಎಂದು ಹೇಳಿದೆ.

ಶ್ರೀ ಜೆ.ಹೆಚ್.ಪಟೇಲ್: ಈ ತರಹದಲ್ಲಿ ವಾದ-ವಿವಾದ ಮಾಡುವುದಕ್ಕಿಂತ ಎಸ್.ಟಿ.ಎಫ್.ಗೆ ಹೋಗುವುದೇ ಒಳ್ಳೆಯದು... ಲೈಫ್ ಸಾರ್ಥಕವಾದರೂ ಆಗುತ್ತದೆ.. ಹೋಗೋಣವೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಮ್ಮ ನೇತೃತ್ವದಲ್ಲಿ ಎಲ್ಲರೂ ಹೋಗೋಣ ಎಂದು ಹೇಳುತ್ತಿದ್ದೇನಲ್ಲಾ? ಒಟ್ಟಿನಲ್ಲಿ ಪೊಲೀಸರಿಗೆ, ಎಸ್.ಟಿ.ಎಫ್‌ಗೆ ಡಿ-ಮಾರಲೈಸ್ ಆಗತಕ್ಕಂಥ ಮಾತನ್ನು ನಾವು ಯಾರೂ ಕೂಡ ಆಡಬಾರದು. ಆಡಿದ್ದರೆ ಅದನ್ನು ಡಿನೈ ಮಾಡಿ. ಆಡಿದವರು ಅದರ ಬಗ್ಗೆ ಹೇಳಿ ಡಿನೈ ಮಾಡಿಸಿ, ಅಥವಾ ಅಲ್ಲಿಂದ ಕೇವಲ ನಮ್ಮ ಬಗ್ಗೆ ಮಾತ್ರ ಹೇಳಿದ್ದೇವೆ ಎಂಬ ಮಾತು ಬರಲಿ. ಮಾನ್ಯರೇ, ಎಲ್ಲಾ ಪತ್ರಿಕೆಗಳಲ್ಲಿ ಆ ವಿಚಾರ ಬಂದಿದೆ. ಕನ್ನಡಪತ್ರಿಕೆಗಳಲ್ಲಿಯೂ ಬಂದಿದೆ. ಓದಲೇ? ನಾನು ನನ್ನ ಬಾಯಲ್ಲಿ ಹುಟ್ಟಿಸಿ ಇದನ್ನು ಹೇಳುತ್ತಿದ್ದೇನೆಯೇ? ಈಗಾಗಲೇ ತಾವು ಅವನ ಬಗ್ಗೆ ಎಷ್ಟು ಪದವನ್ನು ಉಪಯೋಗ ಮಾಡಬೇಕೋ ಅವೆಲ್ಲವನ್ನೂ ಕೂಡ ಉಪಯೋಗಿಸಿದ್ದೀರಿ. ನರಹಂತಕ, ಕಳ್ಳ, ಡಕಾಯಿತ ಮುಂತಾಗಿ ಹೇಳಿದ್ದೀರಿ. ಆದರೆ ಅಂಥವನಿಗೆ ಯಾವುದೇ ಕಾರಣಕ್ಕಾಗಿಯೂ ನಾವು ಮಣಿಯತಕ್ಕಂಥಾದ್ದು ಅಲ್ಲ, ಅಥವಾ ಯಾವುದನ್ನೂ ಒಪ್ಪತಕ್ಕಂಥಾದ್ದೂ ಅಲ್ಲ. ಯಾವ ಕಂಡೀಷನ್ ಹಾಕಿದರೂ

ಕೂಡ ಅದನ್ನು ಒಪ್ಪಬಾರದು. ಪುನಃ ಒಮ್ಮೆ ತಾವು ಮಾತನಾಡಿ, ತಮಿಳುನಾಡಿನ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡಿ, ಅವರ ಎಸ್.ಟಿ.ಎಫ್ ಅನ್ನೂ ಕೂಡ ಸ್ಟೆಂಗ್‌ಥನ್ ಮಾಡಿ, ನಮ್ಮ ಎಸ್.ಟಿ.ಎಫ್. ಅನ್ನೂ ಕೂಡ ಸ್ಟೆಂಥನ್ ಮಾಡಿ ಅವನನ್ನು ಹಿಡಿಯತಕ್ಕಂಥ ಪ್ರಯತ್ನ ಆಗಬೇಕು. ಯಾಕೆಂದರೆ ಅವನು ಇದೊಂದೇ ಅಲ್ಲ, ಅನೇಕ ಸಾರಿ ಇಂಥ ಪ್ರಸಂಗ ಬಂದಾಗ ಹೋಗುವುದು ಬರುವುದು, ಮಾತನಾಡುವುದು, ಮತ್ತೆ ಲಿಫ್ಟ್ ಮಾಡುವುದು-ಮುಂತಾಗಿ ಈ ರೀತಿಯಾಗಿ ಮಾಡಿಕೊಂಡು ಬಂದಿದ್ದಾನೆ. ಮೂರು ಸಾರಿ ಇದೇ ರೀತಿಯಾಗಿ ಮಾಡಿದ್ದಾನೆ. ವೀರೇಂದ್ರ ಪಾಟೀಲರ ಕಾಲದಲ್ಲಿ ಈ ವಿಷಯ ಒಂದು ಸಲ ಬಂದದ್ದೂ ಆಯಿತು, ಅದಾದಮೇಲೆ ಶ್ರೀ ಬಂಗಾರಪ್ಪನವರ ಕಾಲದಲ್ಲಿ, ಶ್ರೀ ವೀರಪ್ಪ ಮೊಯಿಲಿಯವರ ಕಾಲದಲ್ಲೂ ಸಹ ಒಂದು ಸಲ ಬಂದಿತ್ತು. ಈಗಲೂ ಪುನಃ ಆ ಪ್ರಸ್ತಾವನೆ ಬಂದಿದೆ. ಅದಕ್ಕಾಗಿ ಇದೇ ರೀತಿ ಪ್ರಯತ್ನ ಮಾಡುತ್ತಿದ್ದಾರೆಯೇ ಹೊರತು ಬೇರೇನೂ ಇಲ್ಲ. ಎರಡನೆಯದಾಗಿ ಇಲ್ಲಿ ನಾವು ಸಂಶಯ ದೃಷ್ಟಿಯಿಂದ ಮಾತನಾಡಬೇಕು ಎಂದು ಮಾತನಾಡಿದ್ದೇವೆಯೆ ಹೊರತು ಚಟದಿಂದ ಮಾತನಾಡಿಲ್ಲ. ಈಗ ಇದನ್ನೂ ಕೂಡ ಅಲ್ಲಿರುವ ಇಂಟಲಿಜೆನ್ಸ್ ಮುಖಾಂತರ ತಿಳಿದುಕೊಳ್ಳತಕ್ಕಂಥ ಅವಶ್ಯಕತೆ ಏನಿದೆ ಎಂದರೆ ಗೋಪಾಲನ್ ಆಂಟಿಸಿಡೆಂಟ್ಸ್ ಏನು ಅವನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವೀರಪ್ಪನ್ ಜೊತೆಯಲ್ಲಿ ಯಾವ ರೀತಿಯಾದ ಸಂಬಂಧ ಇದೆ? ಇದು ಏನಾದರೂ ಕೇವಲ ಪೇಪರ್ ಕರೆಸ್ಪಾಂಡೆಂಟ್ ಅಥವಾ ಅವನು ಕರ್ನಾಟಕ ಮತ್ತು ತಮಿಳುನಾಡು ರಾಜಕೀಯ ಪಕ್ಷಗಳ ಅಥವಾ ಲೀಡರ್ಸ್ ಹಿತೈಷಿಯೇ ಅಥವಾ ವೀರಪ್ಪನ್ ಜೊತೆಯಲ್ಲಿ ಅವನ ನೇರವಾದ ಸಂಪರ್ಕ ಇದೆಯೇ ಎಂಬುದನ್ನು ತಿಳಿದುಕೊಳ್ಳುವ ಅವಶ್ಯಕತೆ ಇದೆ. ಈ 9 ಜನರನ್ನು ತಾವು ಬಿಡುಗಡೆ ಮಾಡಿಸಿದ್ದೀರಿ. Circumstances of surrendering, circumstances of releasing, circumstances of giving the cassettes ಅವರಲ್ಲಿ ಒಬ್ಬರೂ ಕೂಡ ಓಡಿಹೋಗದ ರೀತಿಯಲ್ಲಿ ಅಲ್ಲಿ ಹೋಗಿ ಕುಳಿತುಕೊಂಡು ಸುಲಲಿತವಾಗಿ ಬಂದುದು, 12ನೇ ತಾರೀಖು ಅವರನ್ನು ಹೋಸ್ಟೇಜ್ ಮಾಡಿದ್ದು, 13ನೇ ತಾರೀಖು ಡ್ರೈವರ್‌ನನ್ನು ಬಿಡುಗಡೆ ಮಾಡಿದ್ದು, 14ನೇ ತಾರೀಖು ನಮ್ಮವರು ಹೋಗಿದ್ದು, 15ನೇ ತಾರೀಖು ತಾವು ಹೋಗಿದ್ದು ಈ ಎಲ್ಲಾ ಇನ್ಸಿಡೆಂಟ್ ನೋಡಿದಾಗ ನಮಗೆ ಸಂಶಯ ಬರುತ್ತದೆ. ಅದಕ್ಕಾಗಿ ಆ 10 ಜನರ ಬಗ್ಗೆಯೂ ಕೂಡ ನೀವು ಯಾವ ರೀತಿ ಎನ್‌ಕ್ವೈರಿ ಮಾಡುತ್ತೀರಿ ಎಂಬುದು ನಿಮಗೆ ಬಿಟ್ಟದ್ದು. ಆದರೆ ಎನ್‌ಕ್ವೈರಿ ಮಾಡಲೇಬೇಕು. ಇಲ್ಲದಿದ್ದರೆ ನಾಳೆ ಕೂಡ ಇದೇ ರೀತಿ ಇನ್ನೊಂದು ಅನಾಹುತ ಆಗತಕ್ಕಂಥ ಸಾಧ್ಯತೆ ಇದೆ. ಇವೊತ್ತು ಸಣ್ಣವರನ್ನು ಒಯ್ದು ಇಟ್ಟುಕೊಂಡು ನೋಡಿದ ಮೇಲೆ ಇನ್ನಾರಾದರೂ 10 ಜನ ದೊಡ್ಡ ಅಧಿಕಾರಿಗಳನ್ನು ಅವನಿಗೆ ಬಲಿ ಕೊಡತಕ್ಕಂಥದ್ದು ಅಥವಾ ಮತ್ತೆ ಯಾರಾದರೂ ನೇರವಾಗಿ ನಿರ್ಣಯಕ್ಕೆ ಸಂಬಂಧಪಟ್ಟಂಥ ಅಧಿಕಾರಿಗಳನ್ನು ಒಯ್ದು ಇಟ್ಟುಕೊಂಡು ಪುನಃ ಆಟವಾಡತಕ್ಕಂಥದ್ದು ಆಗಬಾರದು. ಆ ದೃಷ್ಟಿಯಿಂದ ನಾವು ಪ್ರಸ್ತಾಪ ಮಾಡಿದ್ದೇವೆಯೇ ಹೊರತು ಬೇರೆ

ಯಾವ ದೃಷ್ಟಿಯಿಂದಲೂ ಅಲ್ಲ. ಆದುದರಿಂದ ದಯವಿಟ್ಟು ಇದರ ಬಗ್ಗೆ ತಾವು ಮತ್ತು ತಮಿಳುನಾಡು ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ತಾವು ಹೇಳಿದ ಮಾತುಗಳಲ್ಲಿ ನನ್ನ ಸಂಪೂರ್ಣ ವಿಶ್ವಾಸವಿದೆ. ಏಕೆಂದರೆ ಮತ್ತೆ ಇದೇ ತರ ಮಿಸ್ಚೀಫ್ ಮಾಡಬಹುದು, ಮತ್ತೆ ಗಂಡಾಂತರ ತರಬಹುದು ಎಂಬ ಬಗ್ಗೆ ನಾವೇನೂ ಅವನು ಒಳ್ಳೆಯ ಮನುಷ್ಯ ಎಂದು ನಂಬಿಲ್ಲ. ಅವನು ಬೈ ಟೆಂಡೆನ್ಸಿ ತರ ಮೇನೇಕ್ ಇದ್ದಂತೆ. ಆ ರೀತಿಯ ಕ್ರಿಮಿನಲ್ ಮೈಂಡ್ ಅವನ ಹತ್ತಿರ ಇದೆ. ನಾನು ಹೇಳುವುದೇನೆಂದರೆ ತಮಿಳುನಾಡು ಸರ್ಕಾರ ಇವನು ಶರಣಾಗತನಾಗುವುದಿಲ್ಲ. ಅವನನ್ನು ಏನಾದರೂ ಮಾಡಿ ಹಿಡಿದೇ ತೀರಬೇಕು ಎಂದು ತೀರ್ಮಾನ ಮಾಡಿ ನಮ್ಮನ್ನು ಕೇಳಿದರೆ ಅವತ್ತು ಆ ಕ್ಷಣಕ್ಕೆ ನಾವು ನಮ್ಮ ಜನರನ್ನು ಕಳುಹಿಸಬೇಕಾಗುತ್ತದೆ. ಅವನನ್ನು ಹಿಡಿಯಬೇಕು, ಕಾನೂನಿನ ಒಳಗಡೆ ಬುಕ್ ಮಾಡಬೇಕು ಎಂದು ಅವರು ತೀರ್ಮಾನ ಮಾಡದ ಹೊರತು ನಮ್ಮ ಪ್ರಯತ್ನದಿಂದ ಏನೂ ಆಗುವುದಿಲ್ಲ. ಇದು ನಮ್ಮ, ಅವರ ಮತ್ತು ಎಲ್ಲರ ಅನುಭವ. ಅದಕ್ಕೋಸ್ಕರ ನೀವು ಹೇಳಿದಂತೆ we will be very careful. ತಮಿಳುನಾಡು ಮುಖ್ಯಮಂತ್ರಿಗಳಿಗೂ ಹೇಳುತ್ತೇವೆ. ಸ್ವಾಮಿ ಈಗ ಸಧ್ಯ ನಮಗೆ ಅಪಾಯ ಇಲ್ಲ, ಈಗಲಾದರೂ ಆಲೋಚನೆ ಮಾಡಿ. ಅವನು ಸರೆಂಡರ್ ಆಗಬೇಕು, ಇಲ್ಲದಿದ್ದರೆ ಎರಡೂ ಸರ್ಕಾರಗಳು ಆಪರೇಟ್ ಮಾಡಬೇಕು ಎಂದು ಹೇಳುವುದಕ್ಕೆ That, I agree.

SRI M.MALLIKARJUNA KHARGE: You have to take some action.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ನಾವು ಏನು ನಿರೀಕ್ಷೆ ಮಾಡಿ ಇಲ್ಲಿ ಅಧ್ಯಕ್ಷರು ಮತ್ತು ತಾವು ಹೇಳಿದ ಮೇಲೆ ಆ ಬಗ್ಗೆ ನಾವು ಏಕೆ ಚರ್ಚೆ ಮಾಡಲಿಲ್ಲ ಎಂದರೆ ನಾವು ಮೊದಲು ನಮ್ಮ ಆ 9 ಜನರ ಪ್ರಾಣ ಉಳಿಸಿಕೊಳ್ಳಬೇಕು ಎಂದು. ಆ ಕೆಲಸದಲ್ಲಿ ತಾವು ಯಶಸ್ವಿಯಾಗಿದ್ದೀರಿ. ಆ ಸಮಯದಲ್ಲೇ ಅವನು ಏನೋ ಒಂದು ಕ್ಯಾಸೆಟ್ ಕಳುಹಿಸಿದ. ಆ ಸಂದರ್ಭದಲ್ಲಿ ನಾವು ಆ ಮಾತನ್ನು ನಂಬಬೇಕಾಯಿತು. ಆದರೆ ಆ ಸಂದರ್ಭದಲ್ಲಿ ನೀವು ತಮಿಳುನಾಡು ಮುಖ್ಯಮಂತ್ರಿಗಳ ಮನವೊಲಿಸಿ ಅವನು ಜಂಟಲ್‌ಮನ್ ಆಗಿ ಅವನು ಕ್ಯಾಸೆಟ್‌ನಲ್ಲಿ ಹೇಳಿದಂತೆ ನಡೆದುಕೊಳ್ಳದೆ ಇದ್ದರೆ ಅವನನ್ನು ಅಲ್ಲಿ ರೌಂಡ್ ಆಫ್ ಮಾಡಿ ಅಲ್ಲೇ ಅವನನ್ನು ಹಿಡಿಯಲಿಕ್ಕಾದರೂ ಪ್ಲಾನ್ ಆಗಬೇಕಿತ್ತು. ಆ ಸ್ಟ್ರಾಟಜಿಯನ್ನು ಆಗ ನೀವು ಮಾಡಲಿಲ್ಲ. You have failed there. ಎರಡನೆಯದು ನಾವು ಇವೊತ್ತು ದೇವರನ್ ಬಗ್ಗೆ ಹೇಳುತ್ತೇವೆ ಅವನು ಆವೊತ್ತು ಈ ಟಾಸ್ಕ್‌ಫೋರ್ಸ್ ಜಾಯಿಂಟ್ ಕಮಾಂಡರ್. ಅವನೆ ಇವೊತ್ತು ಗೋಪಾಲನ್ ಬಗ್ಗೆ ಸಂಶಯ ವ್ಯಕ್ತಪಡಿಸಿ ಅವನ ನಡವಳಿಕೆ ಬಗ್ಗೆ ಎನ್‌ಕ್ವೈರಿ ಆಗಬೇಕು

ಎಂದು ಹೇಳುತ್ತಾರೆ; ನಾವು ಕೇಳುತ್ತಿಲ್ಲ. ಆದ್ದರಿಂದ ಈಗಲಾದರೂ ಅವನ ಬಗ್ಗೆ ನಮ್ಮ ಸ್ಪಷ್ಟ ಅಭಿಪ್ರಾಯವೇನೆಂದರೆ ಈ 9 ಜನರನ್ನು ಇದ್ದಕ್ಕಿದ್ದಂತೆ ವೀರಪ್ಪನ್ ಹಿಡಿದುಕೊಂಡು ಹೋಗಿದ್ದ ಅದರ ಬಗ್ಗೆಯೂ ನಿಗಾ ಇಡಿ. ಇದು ನಮ್ಮ ಅಭಿಪ್ರಾಯ. ದಯಮಾಡಿ ತೆಗೆದುಕೊಳ್ಳಿ, ತನಿಖೆ ಮಾಡಿ.

ಶ್ರೀ ವಾಟಾಳ್ ನಾಗರಾಜ್: ತಾವು ಹಿಂದೆ ಅವನು ಶರಣಾಗತನಾದರೆ ಅವನ ನಾಲ್ಕು ಷರತ್ತುಗಳಿಗೆ ತಾವು ಒಪ್ಪಿಕೊಂಡಿದ್ದೀರಿ. ಈ ಷರತ್ತುಗಳು ಈಗಲೂ ಜೀವಂತವಾಗಿವೆಯೇ ಇಲ್ಲವೇ?

ಶ್ರೀ ಜೆ.ಹೆಚ್.ಪಟೇಲ್: ಶರಣಾಗತನಾದರೆ ಆ ವಿಚಾರ.

ಶ್ರೀ ವಾಟಾಳ್‌ನಾಗರಾಜ್: ಇನ್ನೊಂದು ವಿಚಾರವೆಂದರೆ ಅವನು ಅವರನ್ನು ಬಿಡುವುದೇ ಇಲ್ಲ ಎಂದು ಬಹಳ ಹಠ ಹಿಡಿದಿದ್ದ. ಅವರನ್ನು ಬಿಡಿಸಿದಂಥ ತಂತ್ರಗಾರಿಕೆ ಅಥವಾ ಯಾವ ಬುದ್ಧಿವಂತಿಕೆ ಉಪಯೋಗಿಸಿ ಬಿಡಿಸಿದಿರಿ ಎಂದಷ್ಟೇ ನಾನು ಕೇಳುವುದು. ನಿಮ್ಮ ಶೌರ್ಯವನ್ನು ಪ್ರಶಂಸೆ ಮಾಡುತ್ತೇವೆ, ದಯಮಾಡಿ ಹೇಳಿ ಸರ್.

ಶ್ರೀ ಜೆ.ಬೆಚ್.ಪಟೇಲ್: ಅವನು ಶರಣಾಗತನಾದರೆ ಆ ಷರತ್ತುಗಳು ವ್ಯಾಲಿಡ್ ಒಂದು ವೇಳೆ ಶರಣಾಗತನಾಗದೆ ಯಥಾಪ್ರಕಾರ ಅವನ ಪ್ರವೃತ್ತಿಯನ್ನೇ ಅವನು ಮುಂದುವರೆಸಿದರೆ ಎರಡೂ ರಾಜ್ಯಗಳು ಕಾರ್ಯಕ್ರಮಗಳು ಒಟ್ಟಿಗೆ ಆಗಬೇಕು. ಒಬ್ಬರೇ ಮಾಡುವುದಕ್ಕೆ ಆಗುವುದಿಲ್ಲ. ಇದು ಜಂಟಿಯಾಗಿ ಆಗಬೇಕು.

ಶ್ರೀ ವಾಟಾಳ್ ನಾಗರಾಜ್: ಅವನು ಅವರನ್ನು ಬಿಡುಗಡೆ ಮಾಡುವುದೇ ಇಲ್ಲ ಎಂದು ಹಠ ಹಿಡಿದಿದ್ದ. ಅವರೆಲ್ಲರೂ ಶರಣಗತರಾಗದಿದ್ದರೂ ಅವರನ್ನೆಲ್ಲಾ ಬಿಡುಗಡೆ ಮಾಡಿದ್ದಾನೆ. ಅವನು ಒಂದೇ ಸಲ ಅವರ ಕತ್ತನ್ನು ತೆಗೆಯುತ್ತೇನೆ ಎಂದು ಹೇಳಿದ, ಅವರನ್ನು ಬಿಡುವುದೇ ಇಲ್ಲ ಎಂದು ಹೇಳಿದ. 5 ಕೋಟಿ ರೂಪಾಯಿ ಕೊಡಬೇಕು ಎಂದು ಕೇಳಿದ. ಇಷ್ಟೆಲ್ಲಾ ಒತ್ತಡ ಮಾಡಿದ ಮೇಲೆ ಇಷ್ಟೆಲ್ಲಾ ಹಠವಾದಿಯಾಗಿದ್ದವನು ಏಕ್‌ದಂ ಬಿಡುಗಡೆಯಾಗಬೇಕಾದರೆ ಅದೆಷ್ಟು ತಂತ್ರಗಾರಿಕೆಯಾಯಿತು ಎಂದು ಸ್ವಲ್ಪ ಹೇಳಬೇಕು.

ಶ್ರೀ ಜೆ.ಹೆಚ್.ಪಟೇಲ್: ಅವನ ತಂತ್ರಗಾರಿಕೆ ಬಗ್ಗೆ ನಾನು ಹೇಳುತ್ತಿಲ್ಲ. ಅವನಿಗೆ ದೇವರು ಒಳ್ಳೆಯ ಬುದ್ಧಿಯನ್ನು ಕೊಟ್ಟು ನೀನು ಇದೇ ಬದುಕು ಮಾಡಿ ಸಾಯುವ ಬದಲು ಜೈಲಿನಲ್ಲಿ ಹೋಗಿ ಆರಾಮವಾಗಿರು ಎಂದು ಬುದ್ಧಿ ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ ಮತ್ತೆ ಮತ್ತೆ ನಾನು ಇದನ್ನೇ ಹೇಳುತ್ತೇನೆ, ತಮಿಳುನಾಡು ಪೊಲೀಸರು ಮತ್ತು ಕರ್ನಾಟಕದ ಪೊಲೀಸರು ಜೊತೆಗೆ ಸೇರಿ ಕೆಲಸ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಅವರು ಕೇಳುತ್ತಿರುವುದು, ಅವನಿಂದ ಬಿಡಿಸಿಕೊಂಡ

ವಿಧಾನ ಇದೆಯಲ್ಲಾ ಅದರಲ್ಲಿ ಏನು ತಂತ್ರ ಬಳಸಿದ್ದಿರಿ, ಯಾವ ಜಾಲವನ್ನು ಉಪಯೋಗಿಸಿದ್ದಿರಿ ಅದನ್ನೆಲ್ಲಾ ಬಿಡಿಸಿ ಹೇಳಿ ಎಂದು.

ಶ್ರೀ ಜೆ.ಹೆಚ್.ಪಟೇಲ್: ಶ್ರೀ ವಾಟಾಳ್‌ರವರೇ, ಮಲೆಯ ಮಹದೇಶ್ವರ ಬೆಟ್ಟಕ್ಕೆ ಹೋದಾಗ ನಾನು ಆ ದೇವರನ್ನು ಕೇಳಿದ್ದಿಷ್ಟೆ. ದೇವರೇ ಅವನಿಗೆ ಒಳ್ಳೆಯ ಬುದ್ಧಿ ಕೊಡು ಎಂದು ಕೇಳಿದ್ದೆ. ಆ ಕೆಲಸವಾಗಿದೆ.

ಶ್ರೀ ವಾಟಾಳ್ ನಾಗರಾಜ್: ಆ ಮಹದೇಶ್ವರನ ಬಗ್ಗೆ ನಿಮಗೆ ಭಕ್ತಿ ಬಂತಲ್ಲಾ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಒಟ್ಟಿನಲ್ಲಿ ಯಾವುದಾದರೂ ಒಂದು ದೇವರನ್ನು ಇಟ್ಟುಕೊಂಡು ಹೇಳುತ್ತೀರಿ. ಮೊನ್ನೆ ಬಜೆಟ್ ಸೆಷನ್‌ನಲ್ಲಿ ಬಸವಣ್ಣ, ಶಂಕರಾಚಾರ್ಯರನ್ನು ಇಟ್ಟುಕೊಂಡು ಮುಗಿಸಿದರು. ಈಗ ವೀರಪ್ಪನ್ ವಿಷಯಕ್ಕೆ ಮಲೆ ಮಹದೇಶ್ವರ ಬೆಟ್ಟಕ್ಕೆ ಹೋದರು.

ವಿಷಯ: ಚನ್ನರಾಯಪಟ್ಟಣದಲ್ಲಿ ದರೋಡೆ

ಶ್ರೀ ಸಿ.ಎಸ್.ಪುಟ್ಟೇಗೌಡ (ಚನ್ನರಾಯಪಟ್ಟಣ): ಇದುವರೆಗೆ ಬಹಳ ಸುದೀರ್ಘವಾಗಿ ಕಾಡುಗಳ್ಳ ವೀರಪ್ಪನ್ ಬಗ್ಗೆ ಚರ್ಚೆ ಮಾಡಿ ಹಿರಿಯ ಮುಖಂಡರೆಲ್ಲಾ ನಮಗೆ ತಿಳುವಳಿಕೆ ಕೊಟ್ಟಿದ್ದಾರೆ. ನಮಗೆ ಹಳ್ಳಿಯ ಜನ ಒಂದಿಷ್ಟು ತಿಳುವಳಿಕೆ ಕೊಟ್ಟಿದ್ದರು, ನಮ್ಮೂರಿನಲ್ಲಿ ರಾತ್ರಿ ದರೋಡೆಯಾಗಿ ಒಬ್ಬಳ ಪ್ರಾಣ ಹೋಗಿ ಗಂಡನ ಪ್ರಾಣ ಹೋಗುವ ಸ್ಥಿತಿಯಲ್ಲಿದೆ. ಆತ ನಿಮಾನ್ಸ್‌ನಲ್ಲಿದ್ದಾನೆ. ಅದರ ಸಲುವಾಗಿ ಯಾರೋ ಪಾಪ ರಾಜಕೀಯ ಲಾಭ ಪಡೆಯುವುದಕ್ಕೋಸ್ಕರ ರೋಡ್‌ನಲ್ಲಿ ಬಂದು ಬಸ್ ಅಡ್ಡ ಹಾಕಿ ಊರಿನಲ್ಲಿ ಪೊಲೀಸ್ ಸ್ಟೇಷನ್ ಎದುರಿಗೆ ಅಥವಾ ತಾಲ್ಲೂಕು ಆಫೀಸ್ ಎದುರಿಗೆ ಯಾರಾದರೂ ಬಡವರಿಗೆ ಸಹಾಯ ಮಾಡಿ ದೊಡ್ಡಸ್ತಿಕೆ ಪಡೆಯುವುದಕ್ಕೆ ಹೋಗಿ ಅಲ್ಲಿ ಗೋಲಿಬಾರ್ ಆಗಿ ಅವನು ಅಲ್ಲಿ ಸತ್ತಿದ್ದಾನೆ. ಈ ಊರಿನ ಕಾಡುಗಳ್ಳರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ದಯಮಾಡಿ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು: ಸಂಬಂಧಪಟ್ಟವರಿಗೆ ಹೇಳೋಣ.

(ಆ) ಸಹಕಾರ ಸಂಘಗಳಲ್ಲಿ ಸಾಲಗಳ ಮೇಲೆ ಹೆಚ್ಚು ಬಡ್ಡಿ ವಸೂಲಿ.

+ ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಗಮನ ಸೆಳೆಯುವ ಸೂಚನೆ ತಂದಾಗ ಸಹಕಾರ ಸಚಿವರು ಕೊಟ್ಟ ಉತ್ತರದಿಂದಾಗಿ ಇವೊತ್ತು ನಿಯಮ-69ರ ಕೆಳಗೆ ಚರ್ಚೆ ಆರಂಭವಾಗಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಸಹಕಾರ ಸಂಘಗಳಿಂದ ಕೊಡುತ್ತಿರುವ ಸಾಲದ ಮೇಲಿನ ಬಡ್ಡಿ ಬಹಳ ಜಾಸ್ತಿಯಾಗಿದೆ. ಇದು ನಿಯಂತ್ರಣ

ಮೀರಿದೆ. ಇದಕ್ಕೆ ಏನಾದರೂ ಕಡಿವಾಣ ಹಾಕಬೇಕು ಎಂದು ಹೇಳಿ ನಾನು ಸರ್ಕಾರದಿಂದ ಉತ್ತರ ಬಯಸಿದ್ದೆ. ಅಧ್ಯಕ್ಷರೆ, ನಬಾರ್ಡ್‌ನವರು ರಾಜ್ಯ ಸರ್ಕಾರಕ್ಕೆ ಎಲ್ಲಾ ರಾಜ್ಯಕ್ಕೆ ಕೊಟ್ಟಂತೆ ಎರಡು ಸ್ಲ್ಯಾಟ್‌ನಲ್ಲಿ ಬಡ್ಡಿ ನಿಗದಿ ಮಾಡಿ ಅಪೆಕ್ಸ್ ಬ್ಯಾಂಕ್‌ಗೆ ಸಾಲ ಕೊಡುತ್ತಿದ್ದರು. ಇದು 3 ರಿಂದ 5 ಪರ್ಸೆಂಟ್ ಆಗಿದೆ. ಅದನ್ನು ದಿನಾಂಕ 1.7.1996ಕ್ಕೆ 2 ಪರ್ಸೆಂಟ್ ಜಾಸ್ತಿ ಮಾಡಿ 5 ರಿಂದ ಏಳೂವರೆ ಪರ್ಸೆಂಟ್ ಮಾಡಿದರು. ದಿನಾಂಕ:28.6.1997ರಲ್ಲಿ ಮತ್ತೆ ಒಂದು ಪರ್ಸೆಂಟ್ ಹೆಚ್ಚು ಮಾಡಿ ನಾಲ್ಕರಿಂದ ಆರೂವರೆ ಪರ್ಸೆಂಟ್ ಅನ್ನು ಅಪೆಕ್ಸ್ ಬ್ಯಾಂಕ್‌ನವರಿಗೆ ನಬಾರ್ಡ್‌ನಿಂದ ಕೊಡುವ ಸಾಲದ ಮೇಲೆ ಬಡ್ಡಿಯನ್ನು ನಿಗದಿ ಮಾಡಲಾಗಿದೆ. ಇದರ ಮೇಲೆ ಅಪೆಕ್ಸ್ ಬ್ಯಾಂಕ್‌ನವರು ಒಂದು ಪರ್ಸೆಂಟ್ ಎಂದು ಅವರ ಮಾರ್ಜಿನ್ ಇಟ್ಟುಕೊಂಡು ಡಿಸಿಸಿ ಬ್ಯಾಂಕ್‌ಗಳಿಗೆ ಸಾಲ ಕೊಡಬೇಕಾಗಿದೆ. ಈ ರಾಷ್ಟ್ರದ ರಿಸರ್ವ್ ಬ್ಯಾಂಕ್‌ನವರದು ಒಂದು ನಿಯಮ ಇದೆ, 12 ಪರ್ಸೆಂಟ್‌ಗಿಂತ ಕಡಿಮೆ ಇಲ್ಲದಂತೆ ಕೃಷಿ ಸಾಲ ಕೊಡಬೇಕು ಎಂದು. ಅಪೆಕ್ಸ್ ಬ್ಯಾಂಕ್‌ನವರು ಬೇರೆ ಸಹಕಾರ ಸಂಘಗಳಿಗೆ ಮಾತ್ರ ಸಾಲ ಕೊಡುವುದಿಲ್ಲ, ಅಪೆಕ್ಸ್ ಬ್ಯಾಂಕ್‌ನವರು ಕೃಷಿ ಸಾಲಗಳನ್ನೂ, ಸೀಜನಲ್ ಅಗ್ರಿಕಲ್ಚರಲ್ ಆಪರೇಷನ್ಸ್‌ಗೆ ಕಮರ್ಷಿಯಲ್ ಬ್ಯಾಂಕ್‌ನವರಿಗೂ ಸಾಲ ಕೊಡುತ್ತಾರೆ. ಕಮರ್ಷಿಯಲ್ ಬ್ಯಾಂಕ್‌ನವರಿಗೆ ಕೊಡಬೇಕಾದರೂ ಅವರು ಇದೇ ನಿಯಮವನ್ನು ಅನುಸರಿಸುತ್ತಾರೆ. ಎರಡು ಸ್ಲ್ಯಾಬಿನಲ್ಲಿ ಅಂದರೆ 25 ಸಾವಿರದ ಒಳಗಡೆ ಒಂದು, 25 ಸಾವಿರದಿಂದ ಎರಡು ಲಕ್ಷದವರೆಗೆ ಒಂದು, ಎರಡು ಲಕ್ಷದಿಂದ ಮೇಲ್ಭಾಗಕ್ಕೆ ಮತ್ತೊಂದು ಎಂದು. ಸಾಮಾನ್ಯವಾಗಿ 2 ಲಕ್ಷಕ್ಕಿಂತ ಮೇಲ್ಭಾಗದ ಸಾಲಕ್ಕೆ ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ಆ ಸಾಲದ ಬಡ್ಡಿದರವನ್ನು ನಿಗದಿ ಮಾಡುವುದಕ್ಕೆ ಅಧಿಕಾರ ಕೊಡುತ್ತಾರೆ. ಅದರಂತೆ ಡಿಸಿಸಿ ಬ್ಯಾಂಕ್‌ನವರು ಸೊಸೈಟಿಯಿಂದ ರೈತರಿಗೆ ಕೊಡಬೇಕಾದ ಸಾಲಕ್ಕೆ ಹನ್ನೆರಡೂವರೆ ಪರ್ಸೆಂಟ್ ಬಡ್ಡಿದರವನ್ನು 25 ಸಾವಿರದವರೆಗೆ ತೆಗೆದುಕೊಂಡರು, ನಂತರ 2 ಲಕ್ಷದವರೆಗೆ 14 ಪರ್ಸೆಂಟ್ ತೆಗೆದುಕೊಂಡರು, ಅದಾದಮೇಲೆ ಇವರು ಒಂದು ಪರ್ಸೆಂಟ್‌ನ್ನು ಕಡಿಮೆಮಾಡಬೇಕೆಂದು ನಿಯಮ ಮಾಡಿದರು.

6.40 ಪಿ.ಎಂ.

ಆ ನಿಯಮ ಮಾಡುವ ಕಾಲದಲ್ಲಿ ಡಿ.ಸಿ.ಸಿ ಬ್ಯಾಂಕಿನಿಂದ ಒಂದು ಸರ್ಕ್ಯುಲರ್ ಕೊಟ್ಟರು. ಈ ಸಾಲಗಳ ಮೇಲೇನು ಬಡ್ಡಿ ಇದೆ ಅದನ್ನು ರಿಸರ್ವ್ ಬ್ಯಾಂಕ್ ಆದೇಶದ ಪ್ರಕಾರ ಒಂದು ಪರ್ಸೆಂಟ್ ಕಡಿತ ಮಾಡಬೇಕೆಂದು ಇದೆ. ಇಲ್ಲಿ ಎರಡು ಸಮಸ್ಯೆಗಳು ಉದ್ಭವವಾಗುತ್ತದೆ. ಹೊಸದಾಗಿ ಎರಡು ಸ್ಲ್ಯಾಬ್ ಅನ್ನು ಡಿ.ಸಿ.ಸಿ. ಬ್ಯಾಂಕಿನವರು ಸೃಷ್ಟಿ ಮಾಡಿದರು. ಮಾನ್ಯ ಸಹಕಾರ ಸಚಿವರಿಗೆ ಕೂಡ ಅದು ಗೊತ್ತಿದೆ. 10000ದವರೆಗೆ ಮತ್ತು 10000 ರಿಂದ 25000 ದವರೆಗೆ ಮತ್ತು 25000 ರಿಂದ 7 ಲಕ್ಷದವರೆಗೆ ಎಂದು ಇಂತಿಷ್ಟು ಬಡ್ಡಿ ಎಂದು ನಿಗದಿ ಮಾಡಿದ್ದಾರೆ. 10000ದವರೆಗೆ ಏನು ಇದೆ ಇದಕ್ಕೆ 12.5 ಪರ್ಸೆಂಟ್ ಎಂದು ಮಾಡಿದರು. ಮತ್ತು 25000 ದಿಂದ 2 ಲಕ್ಷದವರೆಗೆ ಏನು 12.5

ಪರ್ಸೆಂಟ್ ಮಾಡಿದ್ದರು ಅದನ್ನು ಹಾಗೆಯೇ ಮುಂದುವರಿಸಿದರು. ಅಲ್ಲಿಂದ ಮೇಲು ಭಾಗದ ಸಾಲವನ್ನು ಸಹಕಾರ ಸಂಘದವರು ನಿಗದಿ ಮಾಡಬೇಕೆಂದು ಅವರಿಗೆ ಅಧಿಕಾರ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಕಳೆದ ಸಲ ನನ್ನ ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಚಿವರು ಉತ್ತರ ಕೊಡಬೇಕಾದರೆ ಹೀಗೆ ಹೇಳಿದ್ದಾರೆ. ಸಾಲ 25000 ರೂ.ಗಳವರೆಗೆ 15.5 ಪರ್ಸೆಂಟ್, above 25000 to 2 ಲಕ್ಷ 18 ಪರ್ಸೆಂಟ್ ಬಡ್ಡಿ. ಎಲ್ಲಿ 14 ಪರ್ಸೆಂಟ್ ಅನ್ನು ನೀವು ಕೊಡಬೇಕಾಗಿತ್ತು ಆಗ ಬಡ್ಡಿಯನ್ನು ನಿಗದಿ ಮಾಡಬೇಕಾಗಿತ್ತು ಅಲ್ಲಿಗೆ 18 ಪರ್ಸೆಂಟ್ ತೆಗೆದುಕೊಂಡಿದ್ದಾರೆ. ಇದನ್ನು ಸರಿಯಾಗಿ ಮಾಡುತ್ತೀರಾ ಎಂದು ಮಾನ್ಯ ಸಹಕಾರ ಸಚಿವರನ್ನು ಕೇಳಿದಾಗ ಇದು ಆಂತರಿಕ ವ್ಯವಹಾರ ಇದರಲ್ಲಿ ಸರಕಾರ ಬಾಯಿ ಹಾಕುವುದಿಲ್ಲವೆಂಬ ಒಂದು ಮಾತನ್ನು ತಾವು ಹೇಳಿದ್ದೀರಿ. ತಾವು ನಿಯಮಗಳನ್ನು ಸ್ವಲ್ಪ ನೋಡಬೇಕು ಅಪೆಕ್ಸ್ ಬ್ಯಾಂಕ್ ನಬಾರ್ಡಿನಿಂದ ಯಾವ ಸಾಲ ತೆಗೆದುಕೊಳ್ಳುತ್ತದೆ ಆ ಸಾಲಕ್ಕೆ ತಮ್ಮ ಘನ ಸರಕಾರ ಗ್ಯಾರಂಟಿಯಾಗಿ ನಿಂತಿರುತ್ತದೆ. ಅಪೆಕ್ಸ್ ಬ್ಯಾಂಕ್‌ನವರು ಸರಕಾರದ ಗ್ಯಾರಂಟಿಯನ್ನು ತೆಗೆದುಕೊಳ್ಳದೆ ನಬಾರ್ಡಿನಿಂದ ಹಣ ಡ್ರಾ ಮಾಡುವುದಕ್ಕೆ ಬರುವುದಿಲ್ಲ. ಅಪೆಕ್ಸ್ ಬ್ಯಾಂಕಿನವರು ರಿಸರ್ವ್ ಬ್ಯಾಂಕ್ ನವರು ಮಾಡಿರುವ ನಿಯಮಗಳನ್ನು ಮೀರಿ ನಬಾರ್ಡಿನಿಂದ ಫೈನಾನ್ಸ್ ಆಗಲೀ ರಿಸರ್ವ್ ಬ್ಯಾಂಕ್‌ನಿಂದ ಫೈನಾನ್ಸ್ ಆಗಲೀ ಮೀರಿ ಬಡ್ಡಿ ದರವನ್ನು ನಿಗದಿ ಮಾಡುವುದಕ್ಕೆ ಬರುವುದಿಲ್ಲ. ಪ್ರೈಯಾರಿಟಿ ಸೆಕ್ಟಾರ್‌ಎಂದು ಮಾಡಿದ ಕಾಲದಲ್ಲಿ ಕೃಷಿ ಸಾಲಕ್ಕೆ ಇಷ್ಟೇ ಕೊಡಬೇಕು ಎಂದು ಇದೆ. 40 ಪರ್ಸೆಂಟ್ ಟೋಟಲ್ ಲೆಂಡಿಂಗ್ ಅನ್ನು ಅಗ್ರಿಕಲ್ಚರ್ ಸೆಕ್ಟಾರ್‌ಗೆ ಮಾಡಬೇಕೆಂದು ಮಾಡಿದರು. ಅವರು ಮಾಡಿದ ಉದ್ದೇಶವೇನಾಯಿತು ಸಾಲದ ಕಾಂಪಿಟಿಷನ್ ಜಾಸ್ತಿಯಾದರೆ ಸಾಲದ ಬಡ್ಡಿ ದರ ಕಡಿಮೆ ಮಾಡಬಹುದು ಎಂದು 12 ಪರ್ಸೆಂಟ್‌ಗಿಂತ ಕಡಿಮೆ ಇಲ್ಲದಂತೆ ನೀವು ಬಡ್ಡಿಯನ್ನು ನಿಗದಿ ಮಾಡಿ ಎಂದು ಕೊಟ್ಟರು. ಇವತ್ತು ತಾವು ಎಲ್ಲಿಗೆ ಹೋಗಿದ್ದೀರಿ. 2 ಲಕ್ಷದವರೆಗೆ ಸಾಲವನ್ನು ಸಂಬಂಧಪಟ್ಟ ಬ್ಯಾಂಕ್‌ನವರೇ ನಿಗದಿ ಮಾಡಬಹುದೆಂದು ಹೇಳಿದ್ದೀರಿ. ಕೆನರಾ ಬ್ಯಾಂಕಿನವರು ಸರ್ಟಿಫೈ ಮಾಡಿರುವ ಕಾಪಿ ನನ್ನ ಹತ್ತಿರ ಇದೆ. ಕೆನರಾ ಬ್ಯಾಂಕ್, ಅಥವಾ ಕರ್ಮ್‌ಷಿಯಲ್ ಬ್ಯಾಂಕ್‌ನವರು ಎಷ್ಟಕ್ಕೆ ಕೊಡುತ್ತಿದ್ದಾರೆಂದು ನೋಡೋಣ 25000 ದವರೆಗೆ 12.5 ಪರ್ಸೆಂಟ್, from Rs.25,000 to Rs.2 lakh, 14% 25000ದಿಂದ 2 ಲಕ್ಷ 14 ಪರ್ಸೆಂಟ್ 2 ಲಕ್ಷಕ್ಕಿಂತ ಹೆಚ್ಚು 15.5 ಪರ್ಸೆಂಟ್ ಇದು ಷಾರ್ಟ್ ಟರ್ಮ್ ಲೋನ್ಸ್‌ಗೆ ಟರ್ಮ್ ಲೋನ್‌ಗಾದರೆ 16 ಪರ್ಸೆಂಟ್. ಎಸ್.ಎಸ್.ಐ.ವರ್ಕಿಂಗ್ ಕ್ಯಾಪಿಟಲ್‌ಗೆ 15 ಪರ್ಸೆಂಟ್. ಯಾವುದೇ ಸಾಲಕ್ಕೆ ಕಮರ್ಷಿಯಲ್ ಬ್ಯಾಂಕಿನವರು 16.5 ಪರ್ಸೆಂಟ್‌ಗಿಂತ ಜಾಸ್ತಿ ಕಟ್ಟುತ್ತಿಲ್ಲ. ಆದರೆ ನೀವು ತೆಗೆದುಕೊಳ್ಳುತ್ತಿರುವ ಸಾಲಗಳ ಧಾರಣೆಯನ್ನು ನೋಡೋಣ. ನಬಾರ್ಡಿನವರು ತಮಗೆ ಕೊಡುತ್ತಿರುವುದು. ಎಸ್.ಎ.ಓ. ಆನ್ ಬಿಹಾಫ್ ಆಫ್ ಡಿ.ಸಿ.ಸಿ.ಬ್ಯಾಂಕ್ 5 ಟು 7.5 ಪರ್ಸೆಂಟ್ 6 ಪರ್ಸೆಂಟ್ ಮಾರ್ಜಿನ್ 11 ಪರ್ಸೆಂಟ್ ಅನ್ನು ಬ್ಯಾಂಕಿಂಗ್‌ರೇಟ್ ಆಫ್ ಇಂಟರೆಸ್ಟ್ ಎಂದು ಇಟ್ಟುಕೊಂಡು 6 ಪರ್ಸೆಂಟ್ ರಿಯಾಯಿತಿ ನಿಮಗೆ

ಕೊಟ್ಟಿದ್ದಾರೆ. ಎಗೆನಿಸ್ಟ್ ಪ್ಲೆಡ್ಜ್ ಆಫ್ ಸೆಕ್ಯುರಿಟಿ 12 ಪರ್ಸೆಂಟ್ ಈಗ 10ಕ್ಕೆ ಇಳಿದಿದೆ. ಮಾರ್ಕೆಟಿಂಗ್ ಆಫ್ ಕ್ರಾಫ್ 11 ಪರ್ಸೆಂಟ್ ನಿಂದ 10ಕ್ಕೆ ಇಳಿದಿದೆ. ಪ್ರೊಕ್ಯೂರ್‌ಮೆಂಟ್ ಪ್ಯಾಕಿಂಗ್ ಅಂಡ್ ಡಿಸ್ಟ್ರಿಬ್ಯೂಷನ್ ಆಫ್ ಕೆಮಿಕಲ್ ಫರ್ಟಿಲೈಸರ್ 13 ಪರ್ಸೆಂಟ್ ಇತ್ತು ಈಗ 11 ಪರ್ಸೆಂಟಿಗೆ ಇಳಿಸಿದ್ದಾರೆ. ವೀವರ್ಸ್ ಪ್ರೋಡಕ್ಷನ್ಸ್ ಪ್ರೊಕ್ಯೂರ್‌ಮೆಂಟ್ ಅಂಡ್ ಮಾರ್ಕೆಟಿಂಗ್ ಆ್ಯಕ್ಟಿವಿಟೀಸ್‌ಗೆ 9.5 ಪರ್ಸೆಂಟ್‌ನಿಂದ 8.5 ಪರ್ಸೆಂಟಿಗೆ ಇಳಿಸಿದ್ದಾರೆ. ಟ್ರೇಡಿಂಗ್ ಇನ್ ಯಾರ್ನ್ 11.5 ನಿಂದ 10ಕ್ಕೆ ಇಳಿಸಿದ್ದಾರೆ. ಪ್ರೊಡಕ್ಷನ್ ಅಂಡ್ ಮಾರ್ಕೆಟಿಂಗ್ ಆ್ಯಕ್ಟಿವಿಟೀಸ್ ಆಫ್ ಇಂಡಸ್ಟ್ರೀಯಲ್ ಕೋಆಪರೇಟೀವ್ ಸೊಸೈಟೀಸ್ 9.5ದಿಂದ 8.5 ಕ್ಕೆ ಇಳಿಸಿದ್ದಾರೆ. ಇಂಡುವಿಜ್ಯುಯಲ್ ಆರ್ಟಿಸಾನ್ ತ್ರೂ PCDBS 9 ಪರ್ಸೆಂಟ್‌ನಿಂದ 8 ಪರ್ಸೆಂಟ್‌ಗೆ ಇಳಿಸಿದ್ದಾರೆ. ತಾವು ಕೃಷಿ ಸಾಲ ಕೊಡುವ ಕಾಲದಲ್ಲಿ ಮಾತ್ರ ಇವತ್ತೇನು ಅವರು ಇಳಿಸಿ ಎಂದು ಹೇಳಿದ್ದಾರೆ. ಅವರು ಇಳಿಸಿ ಎಂದು ಹೇಳಿದರೂ ಅವರು ಇಳಿಸಲಿಲ್ಲ. ರಾಜ್ಯ ಸರಕಾರದಲ್ಲಿ ತಾವು ಒಂದು ಹೇಳಿಕೆ ಕೊಟ್ಟು ಇದು ಅವರ ಆಂತರಿಕ ವ್ಯವಹಾರ ನಾವು ಇದರಲ್ಲಿ ಬಾಯಿ ಹಾಕುವ ಹಾಗಿಲ್ಲ ಎಂದು ಹೇಳಿದಿರಿ. ಇದರಲ್ಲಿ ಎರಡು ಮೂಲ ಭೂತ ಪ್ರಶ್ನೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಹಾಗಾದರೆ ನೀವು ಅಪೆಕ್ಸ್ ಬ್ಯಾಂಕ್‌ನವರಿಗೆ ಸಾಲಕ್ಕೆ ಗ್ಯಾರೆಂಟಿ ಕೊಡುವುದನ್ನು ಬಿಡಬೇಕು. ಲೋನ್ ಅಟ್ಯಾಚ್‌ಮೆಂಟ್ ತರಲಿಕ್ಕೆ ತಾವು ಏನು ಕೋ ಆಪರೇಟೀವ್ ಆ್ಯಕ್ಟ್‌ನಲ್ಲಿ ಪ್ರಾವಿಷನ್ ಮಾಡಿದ್ದೀರಿ. ಡಿ.ಸಿ.ಯವರು ಹೋಗಿ ಅವರ ಆಸ್ತಿಯನ್ನು ಮಾರ್ಟಗೇಜ್ ಮಾಡಿಕೊಳ್ಳುವುದು ಅವರು ಕಟ್ಟದಿದ್ದರೆ ಸರಕಾರ ಅದನ್ನು ವಹಿಸಿಕೊಂಡು ಅವರ ಸಾಲವನ್ನು ತೀರಿಸುವುದು. ಎರಡನೆಯದು ಯಾರಿಗೇ ಅದರ ಕ್ಲೇಮ್ ಬರುವುದಕ್ಕೆ ಮೊದಲೇ ಕೋ ಆಪರೇಟಿವ್ ಸೊಸೈಟೀಸ್‌ಗೆ ಅದರ ಮೇಲೆ ಫಸ್ಟ್ ಕ್ಲೇಮ್ ಇರಬೇಕೆಂದು ಮಾಡಿದ್ದೀರಿ. ಇದು ಕೂಡ ಗ್ಯಾರಂಟಿ. ಇದನ್ನೂ ಕೂಡ ಸರಕಾರದವರು ಮೊದಲನೇ ಗ್ಯಾರಂಟಿಯಾಗಿ ಇಟ್ಟಿದ್ದೀರಿ ನಿಂತಿದ್ದೀರಿ ಎನ್ನುವ ಕಾರಣಕ್ಕಾಗಿಯೇ ನೀವು ಅಟ್ಯಾಚ್‌ಮೆಂಟ್ ಅನ್ನು ಅಲ್ಲಿ ತರುತ್ತಿರುವುದು ಇವೆರಡೂ ಇದ್ದ ಮೇಲೆ ನೀವು ಅವರ ಆಂತರಿಕ ವ್ಯವಹಾರಗಳಲ್ಲಿ ನಾವು ಕೈ ಹಾಕುವುದಕ್ಕೆ ಬರುವುದಿಲ್ಲವೆಂದು ಹೇಳುವ ಹಾಗಿಲ್ಲ. 6ರಿಂದ 7 ಪರ್ಸೆಂಟ್ ವ್ಯತ್ಯಾಸವಾಗಿದೆ. ಅವರೇನು ನಿಮಗೆ ಬಹುಶಃ 3.5 ಪರ್ಸೆಂಟ್‌ನಿಂದ 5.5 ಪರ್ಸೆಂಟ್‌ಗೆ ಅಥವಾ 4 ರಿಂದ 6.5 ಪರ್ಸೆಂಟ್‌ಗೆ ಕೊಡುತ್ತಿದ್ದಾರೆ. ಈ 6.5%ಕ್ಕೆ ಕೊಡುತ್ತಿರುವುದನ್ನು 18 ಪರ್ಸೆಂಟ್‌ಗೆ ತಾವು ಜಾರಿ ಮಾಡಿದ್ದೀರಿ. ನಾನು ಆವತ್ತೇ ಪ್ರಸ್ತಾಪ ಮಾಡಿದ್ದೆ. ತಾವು ಅಡಿಷನಲ್ ಷೇರು ಎಂದು 10 ಪರ್ಸೆಂಟ್ ಹಿಡಿಯುತ್ತಿದ್ದೀರಿ ಅದರ ಮೇಲೆ ಕೂಡ ಬಡ್ಡಿ ಹಾಕುತ್ತಿದ್ದೀರಿ. ಒಂದು ಕಡೆ 18 ಪರ್ಸೆಂಟ್ ಬಡ್ಡಿ ಇನ್ನೊಂದು ಕಡೆ ಅವರದ್ದೇ ಹಣಕ್ಕೆ ಅವರೇ ಬಡ್ಡಿ ಕೊಡುವ ಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ. ಅದನ್ನು 18 ಪರ್ಸೆಂಟ್ ಎಂದು ಹಾಕಿಕೊಂಡರೆ 20 ಪರ್ಸೆಂಟ್ ಅನ್ನು ದಾಟುತ್ತದೆ. ನೀವು ಕ್ಯಾಷ್ ಕ್ರೆಡಿಟ್ ಲೋನ್ ಕೂಡ ಕೆಲವು ಡಿ.ಸಿ.ಸಿ. ಬ್ಯಾಂಕ್‌ನಲ್ಲಿ 20 ಪರ್ಸೆಂಟ್ ಇಲ್ಲ. 18-19 ಪರ್ಸೆಂಟ್ ಬಡ್ಡಿ ಇದೆ. ಅವರದ್ದು ಓನ್ ಫಂಡ್ಸ್ ಇದರಲ್ಲಿ ಇನ್‌ವಾಲ್ವ್ ಆಗಿರುತ್ತದೆ

ಬರೀ ನಬಾರ್ಡಿನಿಂದ ಹಣ ಕೊಡುತ್ತಿರುವುದರಲ್ಲೇ ನಾವು ಅಡ್ವಾನ್ಸಸ್ ಮಾಡುತ್ತಿಲ್ಲವೆಂದು ತಾವು ಹೇಳಿದ್ದೀರಿ. ಅವರ ಓನ್ ಫಂಡ್ಸ್‌ಗೆ ಅವರು ಮೊದಲೇ ಜಾಸ್ತಿ ತೆಗೆದುಕೊಳ್ಳುತ್ತಿದ್ದರು. ಅವರ ಓನ್ ಫಂಡ್ಸ್ ಅನ್ನು ಲಾಂಗ್ ಟರ್ಮ್ ಲೋನ್‌ಗಳಿಗೆ ಕೊಡುತ್ತಿದ್ದರು. ಅವರು ಎಸ್.ಎಫ್.ಎ. ಸಾಲಗಳಿಗೆ ಕೊಡುತ್ತಿದ್ದರು. ಕೃಷಿ ಸಾಲಕ್ಕೇನು ಕೊಟ್ಟಿದ್ದೀರಿ ನಬಾರ್ಡಿನಿಂದ ರೀ ಫೈನಾನ್ಸ್ ಆಗಿರುವ ಸಾಲವೇ ಇದು. 5 ಪರ್ಸೆಂಟಿಗೆ ನಬಾರ್ಡಿನಿಂದ ರೈತರಿಗೆ ಬರುವ ಸಾಲವನ್ನು ಮಧ್ಯೆ 2-3 ಏಜೆನ್ಸಿ ಮಾಡಿ 18ಕ್ಕೆ ಇಳಿಸಿದರೆ, ಇದನ್ನು ಯಾರ ಪರ್‌ಪಸ್‌ಗೋಸ್ಕರ ಈ ರಾಜ್ಯದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಕೊಡುತ್ತಿದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಅದರ ಜೊತೆಗೆ ಎಲ್ಲೂ ಹಿಡಿತ ಇಲ್ಲ. ಯಾವುದೇ ಬ್ಯಾಂಕ್ ನಷ್ಟಕ್ಕೆ ಬರಲಿ, ಯಾವುದೇ ಬ್ಯಾಂಕಿನಲ್ಲಿ ವ್ಯಾವಹಾರಿಕ ನಷ್ಟವಾಗಲೀ, ಇದೊಂದೇ ವಿಚಾರದ ಮೇಲೆ ತಾವು ಹಾಕುತ್ತಿರುವುದು. ಆದರೆ ನೀವು ಇನ್ನೊಂದು ಸೆಕ್ಟಾರ್‌ನಲ್ಲಿ ಕಡಿಮೆ ಮಾಡಿಸಿದ್ದೀರಿ. ಸಿ.ಸಿ.ಎ.ನಲ್ಲಿ ಕಡಿಮೆ ಮಾಡಿಸಿದ್ದೀರಿ ನಾನ್ ಅಗ್ರಿಕಲ್ಚರ್ ಫೈನಾನ್ಸ್‌ಗೆ ನೀವು ಕೊಡುತ್ತಿರುವ ಬಡ್ಡಿಯನ್ನು ಕಡಿಮೆ ಮಾಡಿಸಿದ್ದೀರಿ. ಡೆಫಾಸಿಟ್‌ಗೆ ಎಲ್ಲಕ್ಕೂ ಸಹ ಒಂದು ಪರ್ಸೆಂಟ್ ಅರ್ಧ ಪರ್ಸೆಂಟ್ ಜಾಸ್ತಿ ಬಡ್ಡಿ ಕೊಡುತ್ತಿದ್ದೀರಿ. ಒಬ್ಬ ಡೆಪಾಸಿಟರ್‌ಗೆ ಅರ್ಧ ಪರ್ಸೆಂಟ್ ಜಾಸ್ತಿ ಕೊಡಲಿಕ್ಕೆ ನೀವು ಅವಕಾಶ ಮಾಡಿಕೊಟ್ಟಿದ್ದೀರಿ. ಇವೆಲ್ಲಾ ಇಟ್ಟುಕೊಂಡು ಸಹಕಾರಿ ತತ್ವದ ಕೆಳಗೆ ಯಾರಾದರೂ ಸಾಲ ತೆಗೆದುಕೊಳ್ಳಲಿಕ್ಕೆ ಬಂದರೆ 18 ಪರ್ಸೆಂಟ್ ಕೊಡಬೇಕೆಂದು ಕೇಳಿ ರಾಜ್ಯ ಸರಕಾರ ಇದರ ಮೇಲೆ ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲವೆಂದರೆ ಜನರು ಎಲ್ಲಿ ಹೋಗಬೇಕು? ಏಕೆ ಅದನ್ನು ನಿಮ್ಮ ರಿಜೆಸ್ಟ್ರಾರ್ ಕೆಳಗೆ ರಿಜಿಸ್ಟರ್ ಮಾಡಬೇಕು. ಮಾನ್ಯ ಸಹಕಾರ ಸಚಿವರು ಇದಕ್ಕೆ ಉತ್ತರ ಹೇಳಬೇಕು. ಇದರ ಜೊತೆಗೆ ಎಸ್ಟಾಬ್ಲಿಷ್‌ಮೆಂಟ್‌ಗೆ ಎಷ್ಟು ಆಗಿದೆ ಎಂದು ವಿಚಾರ ಮಾಡಬೇಕು. ಅಪೆಕ್ಸ್ ಬ್ಯಾಂಕಿನಲ್ಲಿ ಪೇ ಸ್ಕೇಲ್ ಫಿಕ್ಸ್ ಮಾಡಿರುವ ಚಾರ್ಟ್ ಅನ್ನು ತಾವು ಓದಿದ್ದೀರಾ? ನಾನು ಓದುತ್ತೇನೆ. ಜವಾನರು 2040-4740 ಇದರ ಜೊತೆಗೆ ಆಲೋಯೆನ್ಸ್ ಡಿ.ಎ. ಎಲ್ಲಾ ಬರುತ್ತದೆ. ಸ್ಟೇಟ್‌ಮೆಂಟ್ ರೈಟರ್ 2100-4950 ಗುಮಾಸ್ತರು 2620-6340 ಸಹಾಯಕ ವ್ಯವಸ್ಥಾಪಕರು 4150-7180 ವ್ಯವಸ್ಥಾಪಕರು 4720-9730 ಸಹಾಯಕ ಪ್ರಧಾನ ವ್ಯವಸ್ಥಾಪಕರು 10230 ಉಪ ಪ್ರಧಾನ ವ್ಯವಸ್ಥಾಪಕರು 11630 ಪ್ರಧಾನ ವ್ಯವಸ್ಥಾಪಕರು 11910 ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು 13150 ಇದರ ಮೇಲೆ ಡಿ.ಎ. ಅಲೋಯೆನ್ಸಸ್ ಎಲ್ಲಾ ಸೇರಿ ಸರಿ ಸುಮಾರು 22-23 ಸಾವಿರ ರೂಪಾಯಿಯನ್ನು ಸಹಕಾರಿ ಸಂಘದಲ್ಲಿ ತಾವು ಅಪೆಕ್ಸ್ ಬ್ಯಾಂಕ್‌ನವರಿಗೆ ರಿಜಿಸ್ಟ್ರಾರ್ ಅವರಿಂದ ದಿನಾಂಕ 15-4-97ಕ್ಕೆ ಅನುಮೋದನೆ ಮಾಡಿ ಈ ಪೇ ಸ್ಕೇಲ್ ಅನ್ನು ನಿಗದಿ ಮಾಡಿದ್ದೀರಿ. ಆ ಕಡೆಯ ರೈತರನ್ನೇದರೂ ನೋಡಿದ್ದೀರಾ; ಯಾರ ಹಣದಲ್ಲಿ ಸಂಬಳವನ್ನು ಕೊಡಬೇಕಾಗಿದೆ ಎಂದು ನೋಡಿದ್ದೀರಾ? ಡಿ.ಸಿ.ಸಿ ಬ್ಯಾಂಕ್ ನೌಕರರ ಸಂಬಳದ ಸ್ಕೇಲ್ ನೋಡಿದ್ದೀರಾ? ಸೆಕ್ರೆಟರಿಗಳ ಸಂಬಳದ ಸ್ಕೇಲ್ ನೋಡಿದ್ದೀರಾ? ಏಕೆ ಇದಕ್ಕೆ ರಿಜಿಸ್ಟ್ರಾರ್‌ರಿಂದ ಅನುಮೋದನ ಕೊಡಿಸಿದಿರಿ? Is it

on par with the government employees' pay scale? ಯಾವುದೇ ಕಮರ್ಷಿಯಲ್ ಬ್ಯಾಂಕ್ ಕೊಡುತ್ತಿರುವ ಒಂದೂವರೆಯಷ್ಟು ಸಂಬಳವನ್ನು ನಮ್ಮ ಸಹಕಾರಿ ಬ್ಯಾಂಕುಗಳಲ್ಲಿ ಸಂಬಳವನ್ನು ನಿಗದಿ ಮಾಡಿ ಆ ಬ್ಯಾಂಕ್‌ಗಳಿಗೆ ನಾವು ಅಟಾನಮಿ ಡಿಕ್ಲೇರ್ ಮಾಡಿದ್ದೇವೆ ಅವರ ಆಂತರಿಕ ವ್ಯವಹಾರಗಳಲ್ಲಿ ಬಾಯಿ ಹಾಕುವುದಕ್ಕೆ ಆಗುವುದಿಲ್ಲವೆಂದು ತೀರ್ಮಾನ ತೆಗೆದುಕೊಂಡಿದ್ದೀರಿ. ಇದು ಈ ರಾಜ್ಯದ ಹಿತದೃಷ್ಟಿಗೆ ಧಕ್ಕೆ ತರುವಂಥಾದ್ದಾಗಿದೆ. ತಾವು ಸರಕಾರ ಅಥವಾ ಸಚಿವರು ಮೂಲಭೂತವಾಗಿ ಬೆನಿಫಿಷರೀಸ್ ಅನ್ನು ನೋಡಬೇಕು. ರಿಸರ್ವ್ ಬ್ಯಾಂಕ್ ತಮಗೆ ಸ್ಪಷ್ಟವಾದ ಗೈಡ್‌ಲೈನ್ಸ್ ಕೊಟ್ಟಿದೆ. ಅಲ್ಟಿಮೇಟ್ ಬೆನಿಫಿಷರೀಸ್ ಎಂದು ಅವರು ಹೇಳಿದ್ದಾರೆ. ಅಲ್ಟಿಮೇಟ್ ಬೆನಿಫಿಷರೀಸ್‌ಗೆ ನೀವು ತಲುಪಿಸಬೇಕು. ಏನೊಂದು ಪರ್‌ಸೆಂಟ್ ರಿಯಾಯಿತಿ ಇದೆ, ಸ್ಲಾಬ್ ಮಾಡುತ್ತಿದ್ದೀರಿ, 25 ಸಾವಿರ ಇದ್ದುದ್ದನ್ನು ಸ್ಪ್ಲಿಟ್ ಮಾಡುತ್ತೀರಿ ರಿಸರ್ವ್ ಬ್ಯಾಂಕ್‌ಗೆ ತೋರಿಸಲಿಕ್ಕೆ. ನಾವು ಒಂದು ಪರ್‌ಸೆಂಟ್ ಇಳಿಸಿದ್ದೇವೆ ಎಂದು. ಅಪ್‌ಟು 10 ಸಾವಿರ ರೂಪಾಯಿವರೆಗೆ ಒಬ್ಬ, 10 ಸಾವಿರದಿಂದ 25 ಸಾವಿರ ರೂ.ಗೆ. ಎಂದು ನಬಾರ್ಡ್‌ನವರು ಇಲ್ಲಿ ಹೇಳಲಿಲ್ಲ. 25 ಸಾವಿರಕ್ಕೆ ಒಂದು ಸ್ಲಾಬ್, 25ರಿಂದ 2 ಲಕ್ಷ, 2 ಲಕ್ಷದಿಂದ ಮೇಲೆ ಎಂದು ಇದ್ದುದನ್ನು ಇನ್ನೊಂದು ಸ್ಟೇಜ್. ಏಕೆಂದರೆ ತಾವು ತಪ್ಪಿಸಿಕೊಳ್ಳಬೇಕಾಗಿದೆ ಅಲ್ಲಿಂದ. ಅವರ ಗೈಡ್‌ಲೈನ್ಸ್‌ನ್ನು ವೈಲೇಟ್ ಮಾಡಲಿಕ್ಕೂ ಕೂಡ ನಿಮಗೆ ಅವಕಾಶ ಇವತ್ತು ಬೇಕಾಗಿದೆ. The Reserve Bank of India with effect from close of business on 25th July 97 the rates of interest on GLC fund payable by Nabard to RBI stand reduced by 1% with the effect from 26th June 97. ಆರ್.ಬಿ.ಐ.ಡೈರೆಕ್ಟರ್ ಮಾಡುತ್ತದೆ. ಅವರು ಕೊನೆಯಲ್ಲಿ ಹೇಳುತ್ತಾರೆ: "It has been decided immediately to pass on the benefit of reduction of 1% in the interest rate effected by RBI to the cooperative banks by reducing the rates of interest on refinance from various purposes by not less than 1% with effect from 26th June 97.

Although Cooperative Banks are free to determine their lending rates, it is hoped that the benefits accruing to them from the reduction on rates of interest on refinance effected by Nabard/RBI with effect from 26th June 97will be...passed on ultimately to the beneficiaries." ಇದನ್ನೆಲ್ಲಾ ರೈತನನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಷ್ಟ್ರಸರ್ಕಾರದವರು ರಿಜರ್ವ್ ಬ್ಯಾಂಕ್‌ನವರು ನಬಾರ್ಡ್‌ನವರು ಮಾಡಿರುವ ನಿಯಮ. ತಾವು ಘನ ಸರ್ಕಾರದಲ್ಲಿ

ಬೇರೆ ಬೇರೆ ಮಾಡುತ್ತೀರಿ. ಹತ್ತು ಪರ್‌ಸೆಂಟ್‌ಷೇರು ಹಿಡಿಯುತ್ತಾರೆ ಸನ್ಮಾನ್ಯ ಸಚಿವರೇ ಎಂದು ಹೇಳಿ ನಾವು ಕಾಗದ ಬರೆದರೆ ಹತ್ತು ಪರ್‌ಸೆಂಟ್ ಷೇರನ್ನು ಯಾರು ಯಾರಿಗೆ ಹಂಚ ಬೇಕು ಎಂದು ನಿಯಮ ಮಾಡುತ್ತೀರಿ. ಏಕೆ ಹಿಡಿಯುತ್ತೀರಿ ಎಂದುಕೇಳಲಿಲ್ಲ ನೀವು. 5 ಪರ್‌ಸೆಂಟ್ ಸೊಸೈಟಿಯಲ್ಲಿ ಇಟ್ಟುಕೊಳ್ಳಿ, ಎರಡೂವರೆ ಪರ್‌ಸೆಂಟ್ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಇಟ್ಟುಕೊಳ್ಳಿ, 2 ಪರ್‌ಸೆಂಟ್, ಎರಡೂವರೆ ಪರ್‌ಸೆಂಟ್ ಅಪೆಕ್ಸ್ ಬ್ಯಾಂಕ್‌ಗೆ ಕೊಡಿ ಎನ್ನುತ್ತೀರಿ. ತಮ್ಮ ದೃಷ್ಟಿಯಲ್ಲಿ ಆ ಸದಸ್ಯ ಕಾಣಲೇ ಇಲ್ಲವಾ ಎಂದು ನಾವು ಕೇಳುವುದು. ಆ ರೈತರಿಗೆ ಏನಾದರೂ ಉಳಿಸುವ ಆಲೋಚನೆಯನ್ನು ತಾವು ಮಾಡಬೇಕು. ಎರಡನೇಯದು ನಿಮ್ಮ ಪಕ್ಕದಲ್ಲಿ ಬೇರೆ ಬ್ಯಾಂಕುಗಳಿವೆ, ಕಮರ್ಷಿಯಲ್ ಬ್ಯಾಂಕ್ ಅಲ್ಲಿಯೇ ಆಪರೇಟ್ ಮಾಡುತ್ತಿದೆ. ಅವನು 12 1/2 ಪರ್‌ಸೆಂಟ್ ಬಡ್ಡಿ ಕೊಟ್ಟರೆ ನೀವು ಹದಿನಾಲ್ಕುವರೆ ಪರ್‌ಸೆಂಟ್ ಬಡ್ಡಿಯನ್ನು 25 ಸಾವಿರ ರೂ.ವರೆಗೆ ಕೇಳಿದರೆ ಯಾರು ಬರುತ್ತಾರೆ ನಿಮ್ಮ ಸೊಸೈಟಿಯ ಹತ್ತಿರ? ರಿಸರ್ವ್ ಬ್ಯಾಂಕ್‌ನವರದು ಇನ್ನೊಂದು ಡೈರೆಕ್ಷನ್ ಇದೆ. ಯಾರು ಲೋನಿ ಇರುತ್ತಾನೆ, ಆ ಲೋನಿಯಿಂದ ಯಾವುದೇ ರೀತಿಯ ಡೆಫಾಸಿಟ್ಸ್ ಇವರು ತೆಗೆದುಕೊಳ್ಳಬಾರದು. ಅವನು ಐ.ಆರ್.ಸಿ ಫಲಾನುಭವಿ ಇರಲಿ, ಸ್ಪೆಷಲ್ ಕಾಂಪೊನೆಂಟ್ ಫಲಾನುಭವಿ ಇರಲಿ, ಅವನು ಲೋನ್ ತೆಗೆದುಕೊಳ್ಳುತ್ತಿದ್ದಾನೆ ಒಂದು ಬ್ಯಾಂಕಲ್ಲಿ ಅಂದರೆ ಅವನ ಹತ್ತಿರ ನೀವು ಡೆಪಾಸಿಟ್ ತೆಗೆದುಕೊಂಡರೆ the very principle of lending is defeated. ನೀವು ಅವನ ಹತ್ತಿರ ಡೆಪಾಸಿಟ್ ತೆಗೆದುಕೊಳ್ಳುವುದಿದ್ದರೆ ಸಾಲ ಏಕೆ ಕೊಡುತ್ತೀರಿ? ಹತ್ತು ಪರ್‌ಸೆಂಟ್ ನಾನು ಅಡಿಷನಲ್ ಷೇರು ಇಟ್ಟುಕೊಳ್ಳುತ್ತೇನೆ ಎಂದರೆ ಸಾಲ ಏಕೆ ಕೊಡುತ್ತೀರಿ ನೀವು ನನಗೆ. ಏನು ಅಡಿಷನಲ್ ಷೇರು ಇಟ್ಟುಕೊಳ್ಳುತ್ತಿದ್ದೀರಿ, ಮೊದಲೇ ತಪ್ಪಿಸಬೇಕು. ಮತ್ತೆ you have to match with the guidelines of Nabard and RBI. ಏನು ಅವರು ಹೇಳಿದ್ದಾರೆ, ಹದಿನಾಲ್ಕೂವರೆ ಪರ್‌ಸೆಂಟೇ ಇರಬೇಕು ಎರಡು ಲಕ್ಷ ರೂ.ವರೆಗೆ, ಅದಕ್ಕೆ ಮೀರಲಿಕ್ಕೆ ತಮಗೆ ಅಧಿಕಾರವಿಲ್ಲ. ಮತ್ತೆ ಎರಡು ಲಕ್ಷದ ಮೇಲೆ ಹದಿನಾರು ಪರ್‌ಸೆಂಟ್ ಮೀರಬಾರದು ಎಂದು ಹೇಳಿ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳು ತೀರ್ಮಾನ ತೆಗೆದುಕೊಂಡು ಲೆಂಡ್ ಮಾಡುತ್ತಿದ್ದಾರೆ, ಆ ರೇಟಿಗೆ ತಾವು ಇಳಿಸಬೇಕು ಈ ಸೊಸೈಟಿಗಳು ಕೊಡುತ್ತಿರುವ ಸಾಲವನ್ನು ಎಂದು ಕೇಳಿ, ಇದು ಸೀಸನಲ್ ಅಗ್ರಿಕಲ್ಚರಲ್ ಆಪರೇಷನ್. ಎರಡು ತಿಂಗಳು, ಒಂಭತ್ತು ತಿಂಗಳು ಹತ್ತು ತಿಂಗಳಿಗೆ ಕಟ್ಟುವ ಸಾಲ ಈ ಸಾಲವನ್ನು ಕೊಡಬೇಕಾದರೆ ತಿಂಗಳಿಗೆ ಒಂದೊಂದು ಸರ್ಕ್ಯುಲರ್ ಕೊಟ್ಟುಕೊಂಡು ಕುಳಿತರೆ ಸೊಸೈಟಿಯವರು ಅಡ್ವಾನ್ಸ್‌ಗಳನ್ನು ಮಾಡಲಿಕ್ಕಾಗುವುದಿಲ್ಲ. ಮತ್ತೆ ವಿ.ಎಸ್.ಎಸ್.ನವರು ಅಡ್ವಾನ್ಸ್ ಮಾಡಿದಮೇಲೆ ರೇಟ್ ಆಫ್ ಇಂಟರೆಸ್ಟ್ ಜಾಸ್ತಿ ಮಾಡಿದ್ದು ಇನ್ನೊಂದು ಯಾವ ರೈತರು ಕಟ್ಟುವುದಿಲ್ಲ. ನಾನು ಮಧ್ಯೆ ಒಂದು ಪರ್‌ಸೆಂಟ್ ಕಡಿಮೆ ಮಾಡುತ್ತೇನೆ, ಒಂದು ಪರ್‌ಸೆಂಟ್ ಜಾಸ್ತಿ ಮಾಡುತ್ತೇನೆ, ಈ ತಾರತಮ್ಯವನ್ನು ತಾವು ಹೋಗಲಾಡಿಸಬೇಕು. ತಾವೇನು ಹೇಳಿಕೆ ಕೊಟ್ಟಿದ್ದೀರಿ, government cannot interfere in the affairs of the

societies, ಎಂದು, ಇದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ ಸಚಿವರೇ ಇದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ ಸಚಿವರೇ. ಇದನ್ನು ನೀವು ಒಪ್ಪುವುದೇ ಇಲ್ಲ ಎಂದರೆ ಈ ಸಭೆಯ ಮುಂದೆ ತಾವು ಹೇಳಿಕೆ ಮಾಡಬೇಕು. ಯಾವುದೇ ಲೋನ್‌ಗೆ ಗೌರ್ನಮೆಂಟ್ ಗ್ಯಾರಂಟಿ ನಿಲ್ಲಕೂಡದು. When the government gives guarantee.... ಸೊಸೈಟಿಯವರು, ಡಿ.ಸಿ.ಸಿ ಬ್ಯಾಂಕ್‌ನವರು ಅವರಿಗೆ ಬೇಕಾದ ಗ್ಯಾರಂಟಿ ಕೊಟ್ಟುಕೊಂಡು ಅವರು ಎಲ್ಲಿಂದ ಸಾಲ ತೆಗೆದುಕೊಂಡು ಬಂದು ಕೊಡುತ್ತಾರೆ ಕೊಡಲಿ. Government guarantee ನೀವು ಅದನ್ನು ಸರ್ಕಾರ ಅಥವಾ ಅಪೆಕ್ಸ್ ಬ್ಯಾಂಕ್ ಫೈಲ್ ಆದಾಗ ಸರ್ಕಾರ ತುಂಬಿಕೊಡುತ್ತೇವೆ ಎಂದು ಹೇಳಿ ಗ್ಯಾರಂಟಿ ಕೊಟ್ಟು ಲೋನ್ ತಂದಿದ್ದೀರಿ ಆ ಕಾಲದಲ್ಲಿ, ದಯಮಾಡಿ ನೀವು ಸ್ಟ್ರಿಕ್ಟ್ ಆಗಿ ಡಿ.ಸಿ.ಸಿ ಬ್ಯಾಂಕ್‌ನವರಿಗೆ ಸೂಚನೆ ಕೊಟ್ಟು ರೈತರಿಗೇನು ಅಡಿಷನಲ್ ಷೇರ್ ಹಿಡಿಯುತ್ತಿದ್ದಾರೆ, ಅದನ್ನು ತಪ್ಪಿಸಬೇಕು. ಮತ್ತೆ ರೇಟ್ ಆಫ್ ಇಂಟರೆಸ್ಟ್ ನಬಾರ್ಡ್ ನಿಗದಿ ಮಾಡಿದಂತೆ ಒಂದು ಪರ್‌ಸೆಂಟ್ ಅಪೆಕ್ಸ್ ಬ್ಯಾಂಕ್‌ನವರು ಹಿಡಿಯಬೇಕು, ಒಂದರಿಂದ ಒಂದೂವರೆ ಪರ್‌ಸೆಂಟ್ ಡಿ.ಸಿ.ಬ್ಯಾಂಕ್‌ನವರು ಹಿಡಿಯಬೇಕು, ಒಂದರಿಂದ ಒಂದೂವರೆ ಪರ್‌ಸೆಂಟ್ ಸೊಸೈಟಿಯವರು ಹಿಡಿದು 11 ಪರ್‌ಸೆಂಟ್ ಬ್ಯಾಂಕ್ ರೇಟ್ ಆಫ್ ಇಂಟರೆಸ್ಟ್ ಎಂದು ಗೈಡ್‌ಲೈನ್ಸ್ ಇದೆ. ಅದರಿಂದ 1 ಪರ್‌ಸೆಂಟ್ ಹೆಚ್ಚಿಗೆ ಒಳಗೇ ತಾವು ಮೆಯಿನ್‌ಟೈನ್ ಮಾಡಬೇಕೆಂದು ಕೇಳಿ ಸನ್ಮಾನ್ಯ ಅಧ್ಯಕ್ಷರೇ, ತಾವು ಇದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಅಧ್ಯಕ್ಷರೇ, ಮಾನ್ಯ ಮಾಧುಸ್ವಾಮಿಯವರು ವಿವರವಾಗಿ ಚರ್ಚೆ ಮಾಡಿದ್ದಾರೆ. ಹೊಸದಾಗಿ ಹೇಳುವಂಥದ್ದು ಏನೂ ಇಲ್ಲ. ವಿಶೇಷವಾಗಿ ಅವರು ಸಹಕಾರಿಕ್ಷೇತ್ರದಲ್ಲಿ ಕೆಲಸ ಮಾಡಿದವರಾಗಿದ್ದರಿಂದ ಇದರ ಬಗ್ಗೆ ಹೆಚ್ಚು ಆಸಕ್ತಿಯನ್ನು ಕೂಡ ಹೊಂದಿದ್ದಾರೆ. ನನಗೆ ಒಟ್ಟಾರೆ ಮಂತ್ರಿಗಳು ಕೊಟ್ಟ ಹೇಳಿಕೆ ಒಟ್ಟಾರೆ ನಾವು ಗಮನಿಸಿದ ರೀತಿಯಲ್ಲಿ ಕಂಡು ಬರುವ ಅಂಶವೇನೆಂದರೆ ನಬಾರ್ಡ್‌ನವರು ರಾಜ್ಯ ಅಪೆಕ್ಸ್ ಬ್ಯಾಂಕ್‌ಗೆ ಸಾಲ ಕೊಡುವ ಸಂದರ್ಭದಲ್ಲಿ ಹಿಂದೆ ಇದ್ದ ದರಕ್ಕಿಂತ ಈಗ ಕಡಿಮೆ ಮಾಡಿದ್ದಾರೆ. ಹೀಗೆ ಕಡಿಮೆ ಮಾಡಿರುವ ಸಂದರ್ಭದಲ್ಲಿ ಈ ಲಾಭ ನಮ್ಮ ರೈತರಿಗೆ ಹೋಗಬೇಕಾಗಿತ್ತು. ಹಾಗೆ ಅದು ರೈತರಿಗೆ ಹೋಗುತ್ತಿಲ್ಲ. ಅದರ ಬದಲಾಗಿ ಹಿಂದೆ ಅವರು ಷೇರು ಇಡುವುದಕ್ಕಿಂತ ಹಣಕ್ಕಿಂತ ಜಾಸ್ತಿ ಪ್ರತಿಶತ ಹತ್ತರಷ್ಟು ಷೇರುಗಳನ್ನು ಇಟ್ಟುಕೊಳ್ಳಲೇಬೇಕು ಎನ್ನುವ ಷರತ್ತನ್ನು ಹೊಸದಾಗಿ ನಿಯಮಿಸಿದರು. ಏನು ನಬಾರ್ಡ್‌ನಿಂದ ಬಡ್ಡಿಯ ದರವನ್ನು ಇಳಿಸಿದ್ದಾರೆ, ಅದರ ಪೂರ್ಣ ಪ್ರಯೋಜನ ನಮ್ಮ ರೈತರಿಗೆ ಹೋಗಿ, ರೈತರಿಗೆ ಸ್ಥಳೀಯ ಪ್ರಾಥಮಿಕ ಸಹಕಾರಿ ಸಂಘದಿಂದ ರೈತರಿಗೆ ಕೊಡುವ ಬಡ್ಡಿಯಲ್ಲಿ ವಾಸ್ತವಿಕವಾಗಿ ಶೇಕಡ ಒಂದರಷ್ಟು ಕಡಿಮೆಯಾಗಬೇಕಾಗಿತ್ತು. ಅದರ ಬದಲಾಗಿ ಈಗ ನೀವು ಜಾಸ್ತಿ ಮಾಡಿದ್ದೀರಿ. ಜೊತೆಗೆ ಅವರಿಗೆ ಸಾಲವನ್ನೂ ಕೊಟ್ಟು ಆ ಸಾಲದಲ್ಲಿ ಕೆಲವು ಅಂಶವನ್ನು ನೀವು ಷೇರನ್ನಾಗಿ ಅವರಿಂದ ಹಣವನ್ನು

ಪಡೆದುಕೊಂಡು ಆ ಸಾಲದ ಮೇಲೆ ಈ ಬಡ್ಡಿ, ನೀವೇನು ಷೇರಿಗೇನೂ ಡಿವಿಡೆಂಟ್ ಕೊಡುವುದಿಲ್ಲ. ಬಡ್ಡಿ ಕೊಡುವುದಿಲ್ಲ. ಆ ಸಾಲದಲ್ಲೇ ಒಂದು ಷೇರನ್ನಾಗಿ ಪರಿವರ್ತನೆ ಮಾಡಿಕೊಂಡು ಅವನು ಕೊಟ್ಟಿರುವ ಸಾಲಕ್ಕೆ ಪೂರ್ಣ ನೀವು ಬಡ್ಡಿಯನ್ನು ಹಾಕಿದರೆ ಅವರು ಹೇಳುವ ರೀತಿಯಲ್ಲಿ ಶೇಕಡ 18ರವರೆಗೂ ಹೋಗುತ್ತದೆ. ಇದು ನ್ಯಾಯವೇ ಅಧ್ಯಕ್ಷರೇ? ವಾಸ್ತವಿಕವಾಗಿ ಅನೇಕ ವರ್ಷಗಳಿಂದ ಒತ್ತಾಯ ಏನು ಇದೆ ಎಂದರೆ, ನಬಾರ್ಡ್‌ನವರು ಏನು ಸಾಲವನ್ನು ಕೊಡುತ್ತಾರೆ, ಅದೇ ದರದಲ್ಲೇ ನಾವು ರೈತರಿಗೆ ಕೊಡಬೇಕಾದಂಥದ್ದು ನಮಗೆ ಬೇಕಾಗಿದೆ ಇವತ್ತು. ಈ ಮಧ್ಯೆ ಅಪೆಕ್ಸ್ ಬ್ಯಾಂಕ್‌ನವರ ಖರ್ಚಿಗೋಸ್ಕರ ಡಿಸಿಸಿ ಬ್ಯಾಂಕ್‌ನವರ ಖರ್ಚಿಗೋಸ್ಕರ ಮತ್ತು ಪ್ರಾಥಮಿಕ ಸಂಘದ ಖರ್ಚಿಗೋಸ್ಕರ ಏನು ಅವರಿಗೆ ಖರ್ಚಿಗೆ ಹಣ ಬೇಕಾಗಿದೆ, ವಾಸ್ತವಿಕವಾಗಿ ಸರ್ಕಾರಗಳೇ ಭರಿಸಬೇಕಾಗಿತ್ತು. ಇಲ್ಲ ಎಂದು ತಿಳಿದುಕೊಳ್ಳೋಣ. ಇವು ಮರು ಸಂಸ್ಥೆಗಳಿಗೆ ಎಷ್ಟು ಅಗತ್ಯವೋ ಅಷ್ಟು ಹಣವನ್ನು ಮಾತ್ರ ಕೊಡಬೇಕೇ ವಿನಃ ಈ ಬಡ್ಡಿಯಲ್ಲೇ ನೀವು ದೊಡ್ಡ ಬಂಡವಾಳ ಮಾಡಿಕೊಂಡು, ನೀವು ಬಂಡವಾಳದಾರವಾಗಿ ಬ್ಯಾಂಕಿನ ರೀತಿಯಲ್ಲಿ ವರ್ತನೆ ಮಾಡುವುದು ಸರಿಯಾದುದಲ್ಲ. ಅವರ ಖರ್ಚಿಗೆ ಅಗತ್ಯವಾಗಿ ಎಷ್ಟು ಬೇಕಾಗಬಹುದು, ಅಷ್ಟಕ್ಕೆ ಮಾತ್ರ ಸೀಮಿತಗೊಳಿಸಿಕೊಂಡು ಬಡ್ಡಿಯನ್ನು ಇಟ್ಟುಕೊಳ್ಳಿ. ಒಂದು ಪರ್‌ಸೆಂಟ್ ಹಾಕಬಹುದು ಅಥವಾ ನಮ್ಮ ಅಪೆಕ್ಸ್ ಬ್ಯಾಂಕ್‌ನಂಥ ಭಾಗಕ್ಕೆ ಅರ್ಧ ಪರ್‌ಸೆಂಟ್ ಸಾಕಾಗುತ್ತದೆ. ಡಿ.ಸಿ.ಸಿ. ಬ್ಯಾಂಕ್‌ಗೆ ಅರ್ಧ ಪರ್‌ಸೆಂಟ್ ಸಾಕಾಗುತ್ತದೆ. ಪ್ರಾಥಮಿಕ ಸಹಕಾರ ಸಂಘಕ್ಕೆ ಅದಕ್ಕೆ ಬೇಕಾದರೆ ಒಂದು ಪರ್‌ಸೆಂಟನ್ನೇ ಕೊಡಿ. ಆದ್ದರಿಂದ ಇದನ್ನು ಸ್ವಲ್ಪ ಸಮಗ್ರವಾಗಿ, ಪ್ರಗತಿಪರವಾಗಿ ವಿಚಾರ ಮಾಡುವ ಕಾಲ ಇದೆ. ವಿಶೇಷವಾಗಿ ನಮ್ಮ ರೈತರ ಚಳುವಳಿ ಉಗ್ರವಾಗಿ ನಡೆದವು. ಉಗ್ರವಾಗಿ ನಡೆಯುವ ಕಾಲದಲ್ಲಿ ಇದು ಬಹಳ ವಿಶೇಷವಾಗಿ ಚರ್ಚೆಗೆ ಬಂದಿದ್ದು ಮತ್ತು ಅನೇಕ ಸಲ ಕೂಡ ಪ್ರಸ್ತಾಪ ಆಗಿತ್ತು. ಆದರೆ ಇದನ್ನು ಯಾವುದನ್ನೂ ನೀವು ಗಮನಕ್ಕೆ ತೆಗೆದುಕೊಳ್ಳದೆ ರೈತರಿಗೆ ರಿಯಾಯಿತಿ ಕೊಡುವ ಬದಲಾಗಿ ಮತ್ತೆ ಬಡ್ಡಿಯದರವನ್ನು ಹೆಚ್ಚು ಮಾಡಿರುವುದು ಸರಿಯಲ್ಲ. ನಬಾರ್ಡ್‌ನವರು ಬಡ್ಡಿಯ ದರವನ್ನು ಇಳಿಸಿದ್ದು ಅಪೆಕ್ಸ್ ಬ್ಯಾಂಕ್, ಡಿ.ಸಿ.ಸಿ ಬ್ಯಾಂಕಿನ ಸಿಬ್ಬಂದಿ ವರ್ಗಕ್ಕೆ ಸಂಬಳವನ್ನು ಜಾಸ್ತಿ ಮಾಡಬೇಕು ಎಂದಲ್ಲ, ಆ ಪ್ರಯೋಜನ ರೈತರಿಗೆ ಹೋಗಬೇಕು ಎನ್ನುವ ಉದ್ದೇಶದಿಂದಲೇ ಅವರು ಮಾಡಿರುವುದು. ಇವತ್ತು ರೈತರಿಗೆ ಹೋಗಲಿಲ್ಲ. ಈ ಸಂಸ್ಥೆಯಲ್ಲಿ ಕೆಲಸ ಮಾಡುವ ಸಿಬ್ಬಂದಿ ವರ್ಗಕ್ಕೆ ಹೋಗಿದೆ. ದಯವಿಟ್ಟು ಇದನ್ನು ಕಣ್ತೆರೆದು ನೋಡಿ ಸ್ವಲ್ಪ ನಬಾರ್ಡ್‌ನವರ ದೃಷ್ಟಿಕೋನ ಏನು ಇದೆ, ಅದು ನಮ್ಮ ರೈತರಿಗೆ ಹೋಗುವ ಸಂದರ್ಭದಲ್ಲಿ ಅದರ ಪ್ರತಿಭೆ ಕಾಣ ಬೇಕು ಎನ್ನುವ ದೃಷ್ಟಿಯಿಂದ ಇದನ್ನು ದಯವಿಟ್ಟು ಪುನರ್ ಪರಿಶೀಲನೆ ಮಾಡಿ ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

+ ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ

ಸದಸ್ಯರು ಬಹಳ ಒಳ್ಳೆಯ ಸಲಹೆಯನ್ನು ಮಾಡಿದ್ದಾರೆ. ಬಹುಶಃ ತಮ್ಮ ವಿಚಾರ ಏನಿದೆ ಅದನ್ನು ನಾನೂ ಕೂಡ ಗೌರವಿಸುತ್ತಾ ಇದ್ದೇನೆ. ಬಹುಶಃ ಆ ರೀತಿಯಾಗಿ ನಾವು ಇವತ್ತು ಮಾಡಿದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ನಬಾರ್ಡ್ ಅವರ ವಿಚಾರ ಏನಿದೆ ಎಂದು ಹೇಳಿದರೆ, ನಬಾರ್ಡ್ ಅವರು ಐದರಿಂದ ಏಳೂವರೆ ಪರ್ಸೆಂಟ್‌ವರೆವಿಗೂ ಕೊಡುತ್ತಾರೆ. ಈಗ ಒಂದು ಪರ್ಸೆಂಟ್ ಕಡಿಮೆ ಮಾಡಿದ್ದಾರೆ. ಏಳು ಪರ್ಸೆಂಟ್ ಇದ್ದದ್ದು ನೀವು ರೈತರಿಗೆ 13, 14, 15 ಪರ್ಸೆಂಟ್ ಮಾಡಿದ್ದೀರಿ ಎನ್ನುವ ವಿಚಾರ ಸಾಮಾನ್ಯವಾಗಿ ನೋಡುವುದಕ್ಕೆ ಕಾಣಿಸುತ್ತದೆ. ನಬಾರ್ಡ್ ಅವರು ನಮಗೆ ಸಂಪೂರ್ಣವಾಗಿ ದುಡ್ಡು ಕೊಡುವುದಿಲ್ಲ. ಅವರು ಹೇಳುತ್ತಾರೆ 40 ಪರ್ಸೆಂಟ್ ನೀವು ಹಾಕಿ 60 ಪರ್ಸೆಂಟ್ ನಾವು ಕೊಡುತ್ತೇವೆ ಎಂದು. ಈ ವಿಷಯವಾಗಿ ನಾನು ದೆಹಲಿಗೆ ಹೋಗಿ ಪ್ರಧಾನಮಂತ್ರಿಯವರ ಜೊತೆ ಮಾತನಾಡಿ ಬಂದೆ. ನಬಾರ್ಡ್ ಅವರು 60 ಪರ್ಸೆಂಟ್ ನಮಗೆ ಕೊಡುವುದಿಲ್ಲ, ಅವರು ತಮ್ಮದು ಏನೋ ಒಂದು ಲಿಮಿಟ್ ಮಾಡಿ ನಮ್ಮ ರಾಜ್ಯಕ್ಕೆ ಅಲ್ಲಿ ಅಷ್ಟು ಇಲ್ಲಿ ಅಷ್ಟು ಕೊಡುತ್ತಾರೆ. ನಾವು ಕಳೆದ ಸಲ ಸುಮಾರು ಐದುನೂರು ಕೋಟಿ ರೂಪಾಯಿ ಸಾಲವನ್ನು ಕೊಟ್ಟಿದ್ದೇವೆ. ಆದರೆ ಅವರು ನಮಗೆ ಕೊಟ್ಟಿರುವ ಹಣ ಎಷ್ಟು ಅಂದರೆ ಇನ್ನೂರ ಎಂಬತ್ತು ಕೋಟಿ ಮಾತ್ರ. ಸನ್ಮಾನ್ಯ ಅಧ್ಯಕ್ಷರೆ, ಇನ್ನು ಉಳಿದಂತಹ ಹಣವನ್ನು ನಾವು ನಮ್ಮ ಸಂಪನ್ಮೂಲದಿಂದ ಮತ್ತು ಡೆಪಾಸಿಟ್‌ನಿಂದ ಬಂದಂತಹ ಹಣವನ್ನು ಕೂಡಿಹಾಕಿ ನಾವು ಸಾಲವನ್ನು ಕೊಡಬೇಕಾಗುತ್ತದೆ. ಅದರ ಬಡ್ಡಿ ನಮಗೆ 13 ರಿಂದ 14 ಪರ್ಸೆಂಟ್‌ವರೆವಿಗೂ ಬೀಳುತ್ತದೆ. ಉಳಿದಂತಹ ಎರಡು ನೂರ ಐವತ್ತು ಕೋಟಿ ರೂಪಾಯಿಗೆ. ಆ ದುಡ್ಡು ಸೇರಿಸಿ, ನಾವು ಎರಡನ್ನು ಸಮನಾಗಿ ನೋಡಿ ನಾವು ಬಡ್ಡಿ ದರ ನಿಗದಿ ಮಾಡುತ್ತೇವೆ. ತಾವು ಹೇಳಿದ ಹಾಗೆ ನಮ್ಮ ಆಡಳಿತ ವರ್ಗದವರು ಮಾಡುತ್ತಾರೆ. ಅಪೆಕ್ಸ್ ಬ್ಯಾಂಕಿನವರು ಕೇವಲ 50 ಪೈಸೆ ಮಾತ್ರ ತೆಗೆದುಕೊಳ್ಳುತ್ತಾರೆ. ವಾಸ್ತವವಾಗಿ ಈ ವ್ಯವಹಾರದಲ್ಲಿ ನಮ್ಮ ಅಪೆಕ್ಸ್ ಬ್ಯಾಂಕಿಗೆ ಲಾಸ್ ಆಗುತ್ತಿದೆ. ವಾಸ್ತವವಾಗಿ ಈ ರೀತಿ ಕೊಡುವುದರಿಂದ ಅಪೆಕ್ಸ್ ಬ್ಯಾಂಕಿಗೆ ಹಾನಿ ಆದರೂ ಸಹ ಅವರು ಬೇರೆ ಬೇರೆ ವ್ಯವಹಾರಗಳನ್ನು ಮಾಡಿ, ತಮ್ಮ ಡೆಪಾಸಿಟ್ ಮೇಲೆ ಬಡ್ಡಿ ವ್ಯವಹಾರವನ್ನು ಮಾಡಿಕೊಳ್ಳುತ್ತಾರೆ. ಇನ್ನು ಡಿ.ಸಿ.ಸಿ. ಬ್ಯಾಂಕ್ ಲೆವೆಲ್‌ನಲ್ಲಿ ಎರಡು ಪರ್ಸೆಂಟ್ ತೆಗೆದುಕೊಳ್ಳುತ್ತಾರೆ. ಆನಂತರ ಸೊಸೈಟಿ ಲೆವೆಲ್ ಮೇಲೆ, ಸೊಸೈಟಿಯವರು ಮೂರು ಪರ್ಸೆಂಟ್ ತೆಗೆದುಕೊಳ್ಳುತ್ತಾರೆ. ಈ ಮೂರು ಹಂತದ ವ್ಯವಸ್ಥೆಯನ್ನು ನಾವು ಒಪ್ಪಿಕೊಂಡಿರುವುದರಿಂದ ಹೀಗಾಗಿ ಅದು ಸ್ವಲ್ಪ ಹೆಚ್ಚಾಗುತ್ತದೆ. ಆದರೂ ಕೂಡ ನಾವು ಏನು ಮಾಡಿದ್ದೇವೆ ಎಂದರೆ, ತಾವು ಹೇಳಿದ ಹಾಗೆ ಒಂದು ಪರ್ಸೆಂಟ್ ಕಡಿಮೆ ಆದರೆ, ಮೊದಲು ಹತ್ತು ಸಾವಿರದವರೆಗೆ ಹದಿಮೂರುವರೆ ಪರ್ಸೆಂಟ್ ಕೊಡುತ್ತಾ ಇದ್ದರು. ಮೊನ್ನೆ ಅದೆಲ್ಲಾ ಆದಮೇಲೆ ಹದಿನೈದು ಸಾವಿರದ ವರೆಗೆ ಹನ್ನೆರಡೂವರೆ ಪರ್ಸೆಂಟ್ ಮಾಡಿದ್ದಾರೆ. ಇದನ್ನು ನೇರವಾಗಿ ರೈತರಿಗೆ ಕೊಡಬೇಕು, ಇದರ ನಡುವೆ ಎಷ್ಟಾದರೂ ಹಂಚಿಕೊಳ್ಳಲಿ ಅವರು. ಆಮೇಲೆ, ಹದಿನೈದು ಸಾವಿರದಿಂದ ಇಪ್ಪತ್ತೈದು ಸಾವಿರದವರೆಗೆ

ಹದಿಮೂರುವರೆ ಪರ್ಸೆಂಟ್ ಮಾಡಿದ್ದೇವೆ. ಇಪ್ಪತ್ತೈದು ಸಾವಿರದಿಂದ ಐವತ್ತು ಸಾವಿರದವರೆಗೆ ಹದಿನಾಲ್ಕೂವರೆ ಪರ್ಸೆಂಟ್ ಮ್ಯಾಕ್ಸಿಮಂ ಮಾಡಿದ್ದೇವೆ. ಅವರೂ ಕೂಡ ಏಳರಿಂದ ಏಳೂವರೆವರೆಗೂ ಮಾಡಿದ್ದಾರೆ. ಕೆಲವು ಕಡೆ ಹೆಚ್ಚು ಮಾಡಿದ್ದಾರೆ, ಕೆಲವು ಕಡೆ ಕಡಿಮೆ ಮಾಡಿದ್ದಾರೆ. ಅಂದರೆ ಇಪ್ಪತ್ತೈದು ಸಾವಿರ, ಐವತ್ತು ಸಾವಿರ, ಇದರ ಆಧಾರದ ಮೇಲೆ ಮಾಡಿದ್ದಾರೆ. ಐವತ್ತು ಸಾವಿರದವರೆಗೆ ನಾವು ಹದಿನಾಲ್ಕೂವರೆ ಮಾಡಿರುವುದರಿಂದ ಸಾಮಾನ್ಯವಾಗಿ 90ರಷ್ಟು ರೈತರಿಗೆ ಹದಿನಾಲ್ಕೂವರೆ ಮೇಲೆ ಯಾರಿಗೂ ಕೂಡ ಮಾಡುವುದಿಲ್ಲ. ಇಪ್ಪತ್ತೈದು ಸಾವಿರದವರೆಗೆ ಸಾಮಾನ್ಯವಾಗಿ ಎಂಬತ್ತರಷ್ಟು ರೈತರು ಇದ್ದಾರೆ. ಅದರ ಮೇಲೆ ಐವತ್ತು ಸಾವಿರದವರೆಗೆ, ಒಂದು ಲಕ್ಷದವರೆಗೆ ಇರುವವರು ಒಂದು ಐದು ಪರ್ಸೆಂಟ್ ಇದ್ದಾರೆ. ಸಾಮಾನ್ಯವಾಗಿ ನಾವು ಸಾಲ ಹಂಚಿದವರನ್ನು ತೆಗೆದುಕೊಂಡರೆ ಇರುತ್ತಾರೆ. ಅವರು ಹೇಳಿದ ಹಾಗೆ ನೀವೇ ಅವರಿಗೆ ಜಾಮೀನು ಹಾಕುತ್ತೀರಿ, ಸಾಲ ಕೊಡುತ್ತೀರಿ, ನಿಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಬೇಕು ಎಂದು ಅವರು ಏನು ಹೇಳುತ್ತಾರೆ, ಅದನ್ನು ನಬಾರ್ಡ್ ಅವರು ಒಪ್ಪುತ್ತಾ ಇಲ್ಲ. ನಬಾರ್ಡ್ ಅವರು ಏನು ಮಾಡುತ್ತಾರೆ ಎಂದರೆ ಎಂ.ಒ.ಯು ಮಾಡಿಕೊಳ್ಳುತ್ತಾರೆ, ಆ ಎಂ.ಒ.ಯು.ನಲ್ಲೇ ಏನೋ ಒಂದು ಇದೆ, ನೀವು ಏನೋ ಸರ್ಕಾರದ ಮೇಲೆ ನಿರ್ಬಂಧ ಹಾಕಬೇಡಿ ಎಂದು, ಆದರೂ ಕೂಡ ಅಲ್ಲಿ ದುಡಿಯುವವರೂ ಕೂಡ ನೀವು ಹೇಳಿದ ಹಾಗೆ ಸಹಕಾರ ಸಂಸ್ಥೆಯಲ್ಲಿ ಇರತಕ್ಕಂತವರು ರೈತರೇ ರೈತರೆ ಆರಿಸಿ ಬರುತ್ತಾರೆ. ಡಿ.ಸಿ.ಸಿ. ಬ್ಯಾಂಕಿಗೆ ಬರುವವರು ಅವರೇ, ಅವರೇ ಅಧ್ಯಕ್ಷರಾಗಿ ಬರುತ್ತಾರೆ, ಯಾರಾದರೂ ಮಧ್ಯದಲ್ಲಿ ಬಂದು ಮಾಡುವುದಲ್ಲ. ಈ ವಿಚಾರದಲ್ಲಿ ನಬಾರ್ಡ್ ಅವರು ಏನು ಮಾಡುತ್ತಾರೆ ಅಂದರೆ, ಅವರು ರೈತರ ಹಿತದಿಂದಲೇ ಬಂದಿರುತ್ತಾರೆ, ಅವರೇ ಮಾಡುತ್ತಾರೆ ಎನ್ನುವ ದೃಷ್ಟಿಯಿಂದ ಹೇಳುತ್ತಾರೆ. ಆದರೂ ಸಹ ನಾವು ಮಾತುಕತೆ ಮಾಡಿಕೊಂಡು ಇಷ್ಟೇ ಇರಬೇಕೆಂದು ನಾವು ಆದೇಶವನ್ನು ಹೊರಡಿಸಿಲ್ಲ. ಅವರಿಂದಲೇ ಆದೇಶವನ್ನು ಹೊರಡಿಸುತ್ತೇವೆ. ನಾವು ಅಡ್ವೈಸ್ ಮಾಡುತ್ತೇವೆ ಅಷ್ಟೆ. ನಾವು ಆದೇಶ ಎಂದು ಮಾಡಿದರೆ, ಅದಕ್ಕೆ ನಬಾರ್ಡ್ ಒಪ್ಪುತ್ತಾ ಇಲ್ಲ. ಇದು ಒಂದನೇ ಮಾತು. ನಂತರ ತಾವು ಹೇಳಿದ ಹಾಗೆ, ಈ ಹನ್ನೆರಡೂವರೆ, ಹದಿಮೂರುವರೆ, ಹದಿನಾಲ್ಕೂವರೆ ಪರ್ಸೆಂಟ್ ಮಾಡಿದ್ದನ್ನು ಒಂದು ಪರ್ಸೆಂಟ್ ಕಡಿಮೆ ಮಾಡಿದ್ದೇವೆ. ನಬಾರ್ಡ್ ಅವರಿಗೆ ತಿಳಿಸಿ ನಾವು ಕಡಿಮೆ ಮಾಡಿದ್ದೇವೆ. ಇದನ್ನು ಇನ್ನೂ ಕಡಿಮೆ ಮಾಡಬೇಕು ಎಂಬ ವಿಚಾರ ನಮ್ಮಲ್ಲಿ ಇದೆ. ನಿಜವಾಗಲೂ ಹೇಳಬೇಕು ಅಂದರೆ, ರೈತರಿಗೆ ಹತ್ತು ಪರ್ಸೆಂಟ್ ರೀತಿಯಲ್ಲಿ ಕೊಡಬೇಕು, ಹಾಗೆ ಕೊಡುವುದಕ್ಕೆ ಸಾಧ್ಯ ಇದೆ. ಆದರೆ ಇವತ್ತು ಏನಾಗಿದೆ ಅಂದರೆ ಸೊಸೈಟಿಗಳ ಪರಿಸ್ಥಿತಿ ಬಹಳ ಕೆಟ್ಟು ಹಾಳಾಗಿದೆ. ಕಳೆದ ಎರಡೂವರೆ ವರ್ಷಗಳಿಂದ, ಈ ಸೊಸೈಟಿಗಳನ್ನು ವ್ಯಾಪಾರ ಅಭಿವೃದ್ಧಿ ಯೋಜನೆಯಲ್ಲಿ ತೆಗೆದುಕೊಂಡ ಮೇಲೆ ಬಹುಶಃ ಅಲ್ಲಿ ಕೂಡ ಸೊಸೈಟಿ ಲೋನ್ ಮೇಲೆ ಗ್ರಾಂಟ್ ಅಂತ ಮಾಡಿ ಡೆಫಾಸಿಟ್ ಮಾಡುವುದಕ್ಕೆ ಹೇಳಿದ್ದೇವೆ. ಬೇರೆ ಬೇರೆ ವ್ಯವಹಾರಗಳನ್ನು ಮಾಡುವುದಕ್ಕೆ ಹೇಳಿದ್ದೇವೆ

ಅವರಿಗೆ. ಆ ವ್ಯವಹಾರದಲ್ಲಿ ಅವರು ಲಾಭ ಮಾಡಿಕೊಳ್ಳುವುದರಿಂದ ಇಲ್ಲಿ ಏನು ಮೂರು ಪರ್ಸೆಂಟ್ ರೈತರಿಂದ ತೆಗೆದುಕೊಳ್ಳುತ್ತಾರಲ್ಲಾ, ಈ ರೀತಿ ತೆಗೆದುಕೊಳ್ಳದೆ ಹೋದರೆ ಇದು ನಷ್ಟದಲ್ಲಿ ಬರುತ್ತದೆ. ಈಗಾಗಲೇ ನಮಗೆ ಸುಮಾರು 150 ಕೋಟಿ ರೂ. ಗ್ಯಾಪ್ ಇದೆ ರಾಜ್ಯದಲ್ಲಿ. ಆ ಕಾರಣದಿಂದ ಅವು ತಮ್ಮ ಸ್ವಂತ ಕಾಲ ಮೇಲೆ ತಾನು ನಿಂತರೆ, ಈಗಾಗಲೇ ಕೆಲವು ಸೊಸೈಟಿಗಳು ತಮ್ಮ ಕಾಲ ಮೇಲೆ ತಾವು ನಿಲ್ಲುವಂತಹ ಸ್ಥಿತಿಗೆ ಬಂದಿದ್ದಾವೆ. ಆಗ ಏನಾಗುತ್ತದೆ ಎಂದರೆ, ಈ ಮೂರು ಪರ್ಸೆಂಟ್ ಕಡಿಮೆ ಮಾಡಿ ಕೊಡಬಹುದು. ಆ ರೀತಿಯಾಗಿ ನಾವು ಇವತ್ತು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಬಹುಶಃ ನನಗೆ ತಿಳಿದ ಮಟ್ಟಿಗೆ ಇನ್ನು ಒಂದು ವರ್ಷದಲ್ಲಿ ಹತ್ತು ಪರ್ಸೆಂಟ್‌ಗೆ ಬಡ್ಡಿಯನ್ನು ಇಳಿಸುತ್ತೇವೆ. ಅಷ್ಟು ಧೈರ್ಯ ನನಗೆ ಬಂದಿದೆ. ಈಗಾಗಲೇ ಸುಮಾರು ಅರ್ಧಕ್ಕಿಂತ ಹೆಚ್ಚು ಸಂಸ್ಥೆಗಳು ಲಾಭದಲ್ಲಿ ಬಂದಿದೆ, ಅದಕ್ಕೆ ಎರಡುನೂರ ಐದು ಕೋಟಿ ರೂಪಾಯಿ ಡೆಪಾಸಿಟ್ ಮಾಡಿಸಿದ್ದೇವೆ. ಪ್ರಾಥಮಿಕ ಸೊಸೈಟಿ ಲೋನ್ ಮೇಲೆ, ಇದುವರೆವಿಗೂ ಬೇರೆ ರೀತಿಯ ವ್ಯವಹಾರಗಳನ್ನು ಮಾಡುತ್ತಾ ಇರಲಿಲ್ಲ. ಇದು ಏನಿದ್ದರೂ ಬರೀ ಸಾಲ ಕೊಡುವುದು, ಸಾಲ ತೆಗೆದುಕೊಳ್ಳುವುದು ಇಷ್ಟನ್ನು ಮಾತ್ರ ಮಾಡುತ್ತಿದ್ದವು. ಆದುದರಿಂದ ಸರಿಯಾಗಿ ರೆಕವರಿನೇ ಆಗುತ್ತಿರಲಿಲ್ಲ. ಬಹಳ ಕಾಲದಿಂದ ನಮ್ಮ ರೆಕವರಿ ಪರಿಸ್ಥಿತಿ ಎಲ್ಲಿಗೆ ಹೋಗಿದೆ ಅಂದರೆ, ಕೇವಲ ಮೂವತ್ತು ಪರ್ಸೆಂಟ್‌ಗೆ ಇಳಿದಿದ್ದವು ನಾವು. ಆದರೆ ಈ ವರ್ಷ ನಾವು 75 ಪರ್ಸೆಂಟ್‌ವರೆವಿಗೂ ಹೋಗಿದ್ದೇವೆ. ಸರಿಯಾಗಿ ಪ್ರತಿ ವರ್ಷ ನಮ್ಮ ರೆಕವರಿ ಸೊಸೈಟಿಗೆ ಲಾಭದಲ್ಲಿ ಬಂದರೆ, ಈ ಕೆಲಸವನ್ನು ರೈತರೇ ಮಾಡುವಂತಹ ಕೆಲಸ. ರೈತರೇ ಸಾಲವನ್ನು ವಸೂಲಿ ಮಾಡುವಂತಹದು, ತಾವೇ ನಡೆಸುವಂತಹದು ಮಾಡಬೇಕು, ಏಕೆಂದರೆ ಇದು ಸರ್ಕಾರದವರು ಮಾಡುವಂತಹ ಕೆಲಸ ಅಲ್ಲ. ಆ ಕಾರಣದಿಂದ ಇದು ಲಾಭದ ಹಂತದಲ್ಲಿ ಬರುವುದರಿಂದ ಇದನ್ನೂ ಕೂಡ ತಾವು ಹೇಳಿದ ಹಾಗೆ ಒಂದೆರೆಡು ಪರ್ಸೆಂಟ್ ಏನಾದರೂ ಮಾಡಿ ಇಳಿಸಬೇಕು ಎಂಬ ಪ್ರಯತ್ನ ನಮಗೂ ಇದೆ. ನಾನು ಇಲ್ಲಿಯವರೆವಿಗೂ ವಿಚಾರ ಮಾಡಿದೆನಲ್ಲ, ಹಾಗೆ ಮಧ್ಯದಲ್ಲಿರುವಂತಹ ವ್ಯವಸ್ಥೆಯನ್ನು ತೆಗೆದುಬಿಡೋಣ ಎಂಬ ವಿಚಾರವನ್ನು ನಾನು ಮಾಡಿದ್ದೇನೆ. ಡಿ.ಸಿ.ಸಿ. ಬ್ಯಾಂಕ್ ತೆಗೆಯೋಣ, ಅಥವಾ ತ್ರೀ ಟೈರ್ ತೆಗೆದುಬಿಡೋಣ, ನೇರವಾಗಿ ಅಪೆಕ್ಸ್ ಬ್ಯಾಂಕಿನಿಂದ ಸೊಸೈಟಿಗೆ ಕೊಟ್ಟುಬಿಡೋಣ ಎಂದು ಒಂದು ಹಂತದಲ್ಲಿ ವಿಚಾರ ಮಾಡಿದ್ದೇವೆ. ಆದರೆ ಅದು ಸಾಧು ಅಲ್ಲ ಎಂದು ಒಂದು ಹಂತದಿಂದ ತಿಳಿದು ಬಂದಿದೆ. ಏಕೆಂದರೆ ಡಿ.ಸಿ.ಸಿ. ಬ್ಯಾಂಕಿಗೇ ಕೆಲವರು ಬಂದು ಡೆಪಾಸಿಟ್ ಮಾಡಿದ್ದಾರೆ. ಅವರೂ ಸಹ ಕೆಲವು ಪ್ರಮಾಣ ಹಾಕುತ್ತಾರೆ, ಆ ಕಾರಣದಿಂದ ನಾವು ಎಲ್ಲವನ್ನೂ ಲಾಭದಲ್ಲಿ ತರುವುದರಿಂದ, ಇದನ್ನು ನಾವು ಕಡಿಮೆ ಮಾಡುವುದಕ್ಕೆ ಸಾಧ್ಯ ಇದೆ, ಆ ದಿಸೆಯಲ್ಲಿ ನಾನು ಪ್ರಯತ್ನ ಮಾಡುತ್ತೇನೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಶೇರಿನ ಬಗ್ಗೆ ಹೇಳಿದರೆ, ಬಹುಶಃ ಆ ಶೇರನ್ನು ಅಡಿಷನಲ್ ಶೇರ್ ಎಂದು ತೆಗೆದುಕೊಳ್ಳುವುದಿಲ್ಲ, ಅಡಿಷನಲ್ ಆಗಿ ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ. ನೂರಕ್ಕೆ ಹತ್ತರಷ್ಟು ಆ ಬೈಲಾ ಪ್ರಕಾರ ಶೇರು

ತೆಗೆದುಕೊಳ್ಳುತ್ತೇವೆ ಸೊಸೈಟಿ ಲೆವೆಲ್ ಮೇಲೆ. ಒಬ್ಬ ರೈತನಿಗೆ ನೂರು ರೂಪಾಯಿ ಸಾಲ ಕೊಟ್ಟರೆ, ಒಂದು ಶೇರು ತೆಗೆದುಕೊಳ್ಳುತ್ತೇವೆ. ಅವನು ನೂರಕ್ಕೆ ಹತ್ತರಷ್ಟು ಹತ್ತು ಸಾವಿರ ರೂ. ಸಾಲ ತೆಗೆದುಕೊಂಡಿದ್ದರೆ, ಅವನಿಗೆ ಒಂದು ಸಾವಿರ ರೂಪಾಯಿ ಶೇರ್ ಇದ್ದರೆ ಮುಗಿಯಿತು.

ಶ್ರೀ ಕಾಗೋಡು ತಿಮ್ಮಪ್ಪ: ಒಂದು ವೇಳೆ ಒಬ್ಬ ರೈತ ಐದು ಸಾವಿರ ರೂಪಾಯಿ ತೆಗೆದುಕೊಳ್ಳುತ್ತಾನೆ, ಅವನಿಗೆ ಈ ಪ್ರಕಾರ ಐನೂರು ರೂಪಾಯಿ ಶೇರು ಬಂಡವಾಳ ಇರುತ್ತದೆ, ಐನೂರು ರೂಪಾಯಿ ಶೇರು ಈಗಾಗಲೇ ಅವನ ಹತ್ತಿರ ಇತ್ತು, ಅದು ಇಲ್ಲ ಇಲ್ಲಿ....

ಶ್ರೀ ಎಸ್.ಎಸ್.ಪಾಟೀಲ್: ಆಗ ನಾವು ತೆಗೆದುಕೊಳ್ಳುವುದಿಲ್ಲ. ಒಟ್ಟಿನಲ್ಲಿ ಅವನ ಶೇರು ನೂರಕ್ಕೆ ಹತ್ತರಷ್ಟು ಶೇರು ಇರಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಇದರಲ್ಲಿ 10 ಹಾಗೆಯೇ ಬರುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಇಲ್ಲ, ತೆಗೆದುಕೊಳ್ಳುವುದಿಲ್ಲ.

ಡಾ|| ಎಂ.ಪಿ.ಕರ್ಕಿ: ಪ್ರತಿ ತಾಲ್ಲೂಕು ಕೂಡ ಹತ್ತು ಪರ್ಸೆಂಟ್ ತೆಗೆದುಕೊಳ್ಳುತ್ತಾ ಇದ್ದಾರೆ. ನಾವು ಆಚರಣೆ ಮಾಡುತ್ತಿರುವಂತಹ ಬಡ್ಡಿ 90 ರೂ. ಮೇಲೆ, ನೂರು ರೂಪಾಯಿ ಮೇಲೆ ಅಲ್ಲ, ಹದಿನಾಲ್ಕೂವರೆ ಬಡ್ಡಿ ಆಚರಣೆ ಮಾಡುತ್ತಿದ್ದರೆ ಅದು ನೂರು ರೂಪಾಯಿ ಮೇಲೆ ಆಗುತ್ತದೆ, 90 ರೂ ಮೇಲೆ ಆಚರಣೆ ಮಾಡುತ್ತೀರಿ ಮಾರ್ವಾಡಿ ಬಡ್ಡಿ, ತಾವು ಹತ್ತು ಪರ್ಸೆಂಟ್ ತೆಗೆದುಕೊಂಡ ಮೇಲೆ....

ಶ್ರೀ ಎಸ್.ಎಸ್.ಪಾಟೀಲ್: ಇಲ್ಲ, ಇಲ್ಲ, ನಾವು 90 ರೂ. ಕೊಟ್ಟು ನೂರು ರೂಪಾಯಿ ಮೇಲೆ ಆಖರಣೆ ಮಾಡುತ್ತೇವೆ.

ಡಾ|| ಎಂ.ಪಿ.ಕರ್ಕಿ: ನಾವು ಹೇಳುವುದು ಅದೇ.

ಶ್ರೀ ಎಸ್.ಎಸ್.ಪಾಟೀಲ್: ಅದನ್ನೇ ನಾನು ವಿವರವಾಗಿ ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ನಿಮ್ಮ ನಿಮ್ಮ ಹೇಳಿಕೆಯಲ್ಲಿ ಪ್ರತಿ ಸಾರಿ ಸಂಗ್ರಹಣೆ ಮಾಡತಕ್ಕಂತಹ ಅಭಿಪ್ರಾಯ ಬರುತ್ತಾ ಇದೆ. ಪ್ರಾಥಮಿಕ ಪತ್ತಿನ ಸಹಕಾರಿ ಸಂಘಗಳು ರೈತ ಸದಸ್ಯರುಗಳಿಂದ ಸಾಲದ ಶೇಕಡ ಹತ್ತರಷ್ಟು ಶೇರು ಧನವನ್ನು ಪಡೆಯತಕ್ಕದ್ದು. ಇದೆಯೋ? ಅವನ ಹತ್ತಿರ ಶೇಕಡ ಐದು ಸಾವಿರರೂಪಾಯಿ ತೆಗೆದುಕೊಳ್ಳುವವನು ಐನೂರು ರೂಪಾಯಿ ಶೇರು ಇದೆ ಸೊಸೈಟಿಯಲ್ಲಿ....

ಶ್ರೀ ಎಸ್.ಎಸ್.ಪಾಟೀಲ್: ಮುಗಿಯಿತು ಅಷ್ಟೆ. ಅದು ಮ್ಯಾಗ್ಸಿಮಂ.

(ಗೊಂದಲ)

ಮಾನ್ಯ ಸದಸ್ಯರು: ಐದು ಸಾವಿರದಿಂದ ಹತ್ತು ಸಾವಿರದವರೆಗೆ ಪುನಃ ಸಾಲವನ್ನು ತೆಗೆದುಕೊಂಡರೆ ಅದಕ್ಕೆ ಪುನಃ ಐನೂರು ರೂ. ಶೇರು ಕಟ್ಟಲೇಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಇದರಲ್ಲಿ ಸ್ಪಷ್ಟ ಮಾಡಬೇಕು, ಇದು ಸ್ಪಷ್ಟವಾಗಿ ಇಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಅವರು ಬಾಯಲ್ಲೇ ಹೇಳುತ್ತಾರೆ, ನಮ್ಮ ಆದೇಶ ಬೇಕಾಗಿಲ್ಲ, ಬಾಯಲ್ಲೇ ಇದೆ. ನೂರಕ್ಕೆ ಹತ್ತು ಪರ್ಸೆಂಟ್ ಶೇರು ಇರಬೇಕು ಅವರದ್ದು.

ಅಧ್ಯಕ್ಷರು: ಮೊದಲು ಅವರು ಹೇಳಲಿ, ಆಮೇಲೆ ನೀವು ಸ್ಪಷ್ಟೀಕರಣ ಕೇಳಿ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ನೂರಕ್ಕೆ ಇಪ್ಪತ್ತರಷ್ಟು ಶೇರು ಮುರಿದುಕೊಳ್ಳಬೇಕು, ಆ ಶೇರೇ ಅವರ ಬಂಡವಾಳ, ಅದರ ಮೇಲಿಂದ ಅವರಿಗೆ ಬಾರೋಯಿಂಗ್ ಕೆಪಾಸಿಟಿ ಬರುತ್ತದೆ ಸೊಸೈಟಿಗೆ. ಶೇರು ಇಡಬೇಕಾಗುತ್ತದೆ, ನಮ್ಮದೇ ಆದಂತಹ ಶೇರು ಇಡಬೇಕಾಗುತ್ತದೆ. ಇಲ್ಲದೇ ಹೋದರೆ ಅದು ಎಂತಹ ಸೊಸೈಟಿ? ಆಮೇಲೆ ಸನ್ಮಾನ್ಯ ಅಧ್ಯಕ್ಷರೆ, ನೂರಕ್ಕೆ ಹತ್ತು ರೂಪಾಯಿ ಶೇರು ತೆಗೆದುಕೊಳ್ಳಬೇಕು, ಆಮೇಲೆ ಡಿ.ಸಿ.ಸಿ. ಬ್ಯಾಂಕ್‌ನವರು ಏನು ಮಾಡುತ್ತಿದ್ದರು ಅಂದರೆ, ಸೊಸೈಟಿಯಿಂದ ಇವರೇ ಹತ್ತು ರೂಪಾಯಿ ತೆಗೆದುಕೊಂಡು ಬಿಡುತ್ತಿದ್ದರು, ಅಪೆಕ್ಸ್ ಬ್ಯಾಂಕಿನವರು ಐದು ರೂಪಾಯಿ ತೆಗೆದುಕೊಂಡು ಬಿಡುತ್ತಿದ್ದರು. ಅಂದರೆ ಸೊಸೈಟಿಯಲ್ಲಿ ಶೇರು ಬಂಡವಾಳ ಉಳಿಯುತ್ತಿರಲಿಲ್ಲ, ಸಂಪೂರ್ಣವಾಗಿ ರೈತರಿಂದ ಮುರಿದುಕೊಂಡಿರುವುದನ್ನು ಇವರು ಮುರಿದುಕೊಂಡುಬಿಡುತ್ತಿದ್ದರು; ಡಿ.ಸಿ.ಸಿ ಬ್ಯಾಂಕಿನವರು. ಅದನ್ನು ನಾನು ಬದಲಾವಣೆ ಮಾಡಿ, ಡಿ.ಸಿ.ಸಿ. ಬ್ಯಾಂಕಿನವರು ಸೊಸೈಟಿಯಿಂದ ಕೇವಲ ಐದು ಪರ್ಸೆಂಟ್ ಮುರಿದು ಕೊಳ್ಳಬೇಕೆಂದು ಮಾಡಿದ್ದೇನೆ. ಅಂದರೆ ಐದು ಪರ್ಸೆಂಟ್ ಅಲ್ಲಿ ಉಳಿಯುತ್ತದೆ, ಇನ್ನು ಐದು ಪರ್ಸೆಂಟ್ ಇಲ್ಲಿ ಉಳಿಯುತ್ತದೆ. ಎರಡೂವರೆ ಪರ್ಸೆಂಟ್ ಅಪೆಕ್ಸ್ ಬ್ಯಾಂಕಿನವರು ತೆಗೆದುಕೊಳ್ಳಬೇಕು, ಇವರು ಐದು ಪರ್ಸೆಂಟ್ ತೆಗೆದುಕೊಂಡು ಬಿಡುತ್ತಿದ್ದರು, ಅಂದರೆ ಸೊಸೈಟಿಯಲ್ಲಿ ಡಿ.ಸಿ.ಸಿ. ಬ್ಯಾಂಕಿನವರು ಮತ್ತು ಅಪೆಕ್ಸ್ ಬ್ಯಾಂಕಿನವರು ಸೇರಿ ಯಾವ ಶೇರನ್ನೂ ಉಳಿಸುತ್ತಿರಲಿಲ್ಲ. ಆ ಕಾರಣದಿಂದ ಇವತ್ತು ಹತ್ತು ಪರ್ಸೆಂಟ್ ಅಲ್ಲಿ ಮುರಿದುಕೊಂಡರೆ, ಇವರು ಐದು ಪರ್ಸೆಂಟ್ ಇಲ್ಲಿ ತೆಗೆದುಕೊಳ್ಳಬೇಕು. ಐದು ಪರ್ಸೆಂಟ್ ಶೇರು ಅಲ್ಲಿ ಉಳಿಯುತ್ತದೆ, ಇದರಿಂದ ಸೊಸೈಟಿ ಪರಿಸ್ಥಿತಿ ಸುಧಾರಿಸುತ್ತದೆ. ಈ ಹಿನ್ನಲೆಯಲ್ಲಿ ನಾವು ಮಾಡಿದರೆ ಖಂಡಿತವಾಗಿ ಸೊಸೈಟಿಗಳು ಲಾಭದಲ್ಲಿ ಬರುವುದಕ್ಕೆ ಅನುಕೂಲವಾಗುತ್ತದೆ. ಅವರು ಹೇಳಿದರಲ್ಲ, 90 ರೂಪಾಯಿ ಸಾಲ ಕೊಟ್ಟು ನೂರು ರೂಪಾಯಿಗೆ ಬಡ್ಡಿ ಹಾಕಿದ ಹಾಗೆ ಆಗುತ್ತದೆ. ಆದರೆ ಆ ಹತ್ತು ರೂಪಾಯಿಗೆ ನಾವು ಡಿವಿಡೆಂಟ್ ಕೊಡಬೇಕು. ಸಂಘದ ಸ್ಥಿತಿ ಸರಿ ಇಲ್ಲದ ಕಾರಣ, ಸಂಘದವರು ಸರಿಯಾಗಿ ವಸೂಲಿ ಮಾಡದಿರುವ ಕಾರಣ, ಸರಿಯಾಗಿ ಸಾಲ ಕೊಡದಿರುವ ಕಾರಣ, ಸಾಲವನ್ನು

ಸರಿಯಾಗಿ ಕಟ್ಟದಿರುವ ಕಾರಣ ಆ ರೀತಿ ಆಗುತ್ತದೆ. ಇವತ್ತು ನಾವು ಡಿವಿಡೆಂಡ್ ರೇಟ್ ಕೂಡ ಹನ್ನೆರಡು ಪರ್ಸೆಂಟ್‌ಗಿಂತ ಹೆಚ್ಚಿಗೆ ಮಾಡಬಾರದು ಎಂದು ಇದೆ. ಈಗಾಗಲೇ ನಾನು ಇಪ್ಪತ್ತೈದು ಪರ್ಸೆಂಟ್ ಡಿವಿಡೆಂಡ್ ಹಂಚಬೇಕೆಂದು ತಮ್ಮ ಮುಂದೆ ಒಂದು ಆದೇಶವನ್ನು ಕೂಡ ಹೊರಡಿಸಿದ್ದೇನೆ.

7.10 ಪಿ.ಎಂ

ಲಾಭವನ್ನು ಮಾಡಿ ಹಂಚಿ ಕೊಳ್ಳಬೇಕಾಗುತ್ತದೆ. ಇವತ್ತು ತಮಗೆ ಹೇಳುತ್ತೇನೆ, ಕೆಲವು ಸೊಸೈಟಿಗಳು ಇದ್ದಾವೆ, ತಾವು ಕೇಳಬೇಕು. ಇಲ್ಲೊಂದು ಮೋಟಾರ್ ಓನರ್ಸ್ ಕನ್ಸ್ಯೂಮರ್ಸ್ ಸೊಸೈಟಿ ಎಂದು ಇದೆ. 20 ಲಕ್ಷ ರೂಪಾಯಿ ಅಲ್ಲಿ ಶೇರ್ ಇಟ್ಟಿದ್ದಾರೆ. ಒಂದು ಕೋಟಿ ರೂಪಾಯಿ ಲಾಭ ಅವರು ಮಾಡುತ್ತಾರೆ. ಅವರು 20 ಲಕ್ಷಕ್ಕೆ 20 ಡಿವಿಡೆಂಡ್ ತೆಗೆದುಕೊಳ್ಳಿ ಎಂದು ನಾನು ಹೇಳಿದ್ದೇನೆ. ಹಾಗೆ ನಮ್ಮ ರೈತರೂ ಮಾಡಲಿಕ್ಕೆ ಸಾಧ್ಯ ಇದೆ. ಆದರೆ ಆ ರೀತಿಯಾಗಿ ಬೆಳೆದು ಬಂದಿದ್ದು ಇಲ್ಲ. ಈಗ ಅದು ಖಂಡಿತವಾಗಿ ಬೇರೆ ಬೇರೆ ವ್ಯಾಪಾರದ ರೀತಿ ತಾವುಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ತೆಗೆದುಕೊಂಡು ಮಾಡಿ ಎಂದು ಹೇಳಿದ್ದೇನೆ. ಆ ರೀತಿಯಾಗಿ ನಾವು ಮಾಡಿದರೆ ಖಂಡಿತವಾಗಿ ರೈತರಿಗೆ ಮೂರು ರೂಪಾಯಿ ಆ ಸೊಸೈಟಿ ತೆಗೆದುಕೊಳ್ಳುತ್ತದೆ, ಅವನ ಆಡಳಿತ ವೆಚ್ಚವೆಲ್ಲಾ ಹೊರಗಡೆ ದುಡಿದು ಬಿಟ್ಟರೆ ಈ ಮೂರು ರೂಪಾಯಿ ಕಡಿಮೆ ಮಾಡಲು ಬರುತ್ತದೆ. ಅದೇ ರೀತಿಯಾಗಿ ಡಿ.ಸಿ.ಸಿ. ಬ್ಯಾಂಕ್ ಚೆನ್ನಾಗಿದ್ದರೆ ಒಂದು ಪರ್ಸೆಂಟ್ ಕಡಿಮೆ ಮಾಡುವುದಕ್ಕೆ ಆಗುತ್ತದೆ. ಹೀಗಾಗಿ ಒಂದು ಮೂರ್‍ನಾಲ್ಕು ಪರ್ಸೆಂಟ್ ರೈತರಿಗೆ ಬಡ್ಡಿ ಕಡಿಮೆ ಮಾಡಬಹುದು ಎನ್ನುವ ವಿಚಾರ ನನ್ನ ತಲೆಯೊಳಗೆ ಇದೆ. ಬಹುಶಃ ಆ ರೀತಿ ಮಾಡುವಂತಹ ಪ್ರಯತ್ನ ಮಾಡುತ್ತಿದ್ದೇನೆ. ಅದು ಆದರೆ ಬಹುಶಃ ನಾನೂ ಕೂಡ ತಮ್ಮ ಪರವಾಗಿದ್ದೇನೆ. ರೈತರಿಗೆ 12.5 ಅಲ್ಲ, 8ರಿಂದ 9 ಪರ್ಸೆಂಟ್ ಬಡ್ಡಿಗೆ ಕೊಡಬೇಕು ಎಂದು ನಮ್ಮ ವಿಚಾರ ಇದೆ ಮತ್ತು ಸರ್ಕಾರದವರು ಯಾವುದೇ ರೀತಿಯಿಂದ ಐದು ಪರ್ಸೆಂಟ್ ಪ್ರೊಡಕ್ಷನ್ ಇನ್‌ಸೆಂಟೀವ್ ಕೊಟ್ಟು ಮಾಡಬೇಕೆಂದು ಹೊರಟರೆ ನಬಾರ್ಡ್‌ನವರು ಅಡ್ಡ ಬಂದರು. ಹೀಗಾಗಿ ಅದನ್ನು ಅವರು ಕೊಡದೇ ಇದ್ದರೂ ನಮ್ಮದೇ ಆದ ಸಂಪನ್ಮೂಲಗಳನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವಂತಹ ಮಾತನ್ನು ಕೂಡ ಹೇಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಸನ್ಮಾನ್ಯ ಅಧ್ಯಕ್ಷರೆ, ಇವರ ದುಡ್ಡನ್ನು ಯಾವತ್ತಾದರೂ ಬೆಳೆಸಿಕೊಳ್ಳಲಿ. The principle of National Agriculture and Rural Development Bank ಏನೆಂದರೆ 25 ಸಾವಿರದವರೆಗೆ 12.5 ಪರ್ಸೆಂಟ್‌ಗಿಂತ ಬಡ್ಡಿ ದಾಟಕೂಡದು. 25 ಸಾವಿರದಿಂದ ಎರಡು ಲಕ್ಷದವರೆಗೆ 14 ಪರ್ಸೆಂಟ್ ದಾಟಕೂಡದು. ಎರಡು ಲಕ್ಷದ ಮೇಲಿನದು ಡಿಸ್ಕ್ರಿಷನ್. ಇದು ಇವರೊಬ್ಬರಿಗೆ ಅನ್ವಯಿಸುವುದಿಲ್ಲ. To all the banks, even to

commercial banks. ಈಗ ಕೆನರಾ ಬ್ಯಾಂಕ್‌ನವರು 25 ಸಾವಿರದವರೆಗೆ 12.5 ಪರ್ಸೆಂಟ್ ಬಡ್ಡಿಗೆ ಕೊಡುತ್ತೇನೆ. ಅಡಿಷನಲ್ ಶೇರ್ ತೆಗೆದುಕೊಳ್ಳುವುದಿಲ್ಲ, ಡಿಪಾಸಿಟ್ ತೆಗೆದುಕೊಳ್ಳುವುದಿಲ್ಲ ಎಂದಾಗ When you are running a society, as you say on some principles, ನೀವು ಮೂರು ಸ್ಲಾಬ್ ಏಕೆ ಮಾಡುತ್ತಿದ್ದೀರಿ to cheat that farmer. ಆ ರೈತರನ್ನು ಮೋಸ ಮಾಡಿ ಮುಳುಗಿಸುವುದಕ್ಕೆ ಮಾಡಿರುವ ಕಾರ್ಯಕ್ರಮ ಇದು. ಹತ್ತು ಸಾವಿರಕ್ಕೆ ಒಂದು ಸ್ಲಾಬ್, 15 ಸಾವಿರಕ್ಕೆ ಒಂದು ಸ್ಲಾಬ್, 2.5 ಸಾವಿರಕ್ಕೆ ಒಂದು ಸ್ಲಾಬ್. ಈ ಹೊಸ ತಂತ್ರವನ್ನು ತಾವು ನಿರೂಪಣೆ ಮಾಡಿದ್ದು ಏಕೆ ಎಂಬುದನ್ನೇ ನಾವಿಲ್ಲಿ ಪ್ರಶ್ನೆ ಮಾಡುತ್ತಿರುವುದು. ಬ್ಯಾಂಕ್‌ನಲ್ಲಿ ಕ್ಲಿಯರ್‌ಕಟ್ ಆಗಿ 25 ಸಾವಿರದ ವರೆಗೆ ಒಂದು ಸ್ಲಾಬ್. 25 ಸಾವಿರದಿಂದ ಎರಡು ಲಕ್ಷದವರೆಗೆ ಒಂದು ಸ್ಲಾಬ್ ನಬಾರ್ಡ್ ಗೈಡ್‌ಲೈನ್ಸ್ ವಿರುದ್ಧವಾಗಿ 50 ಸಾವಿರದ ಒಂದ ಸ್ಲಾಬ್ ಸೃಷ್ಟಿ ಆಯಿತು. 10 ಸಾವಿರದ ಒಂದು ಸ್ಲಾಬ್ ಸೃಷ್ಟಿ ಆಯಿತು. 15 ಸಾವಿರದ ಒಂದು ಸ್ಲಾಬ್ ಸೃಷ್ಟಿ ಆಯಿತು. 25 ಸಾವಿರದ್ದು ತಮ್ಮದು, ನಮ್ಮ ಡಿ.ಸಿ.ಸಿ. ಬ್ಯಾಂಕ್‌ಗಳಿಗೆ. ತಾವಿನ್ನೂ ಪಿ.ಎಲ್.ಡಿ. ಬ್ಯಾಂಕಿಗೆ ತಂದಿಲ್ಲ. ಇದರಲ್ಲಿ ಏನು ಮಾಡಿದರು ಎಂದರೆ 10 ಸಾವಿರ, 15 ಸಾವಿರದವರೆಗೂ 12.5ಗಿಂತ ಮೇಲೆ ಮಾಡಿದಿರಿ. 12.5 ಪರ್ಸೆಂಟ್ ಹತ್ತು ಸಾವಿರಕ್ಕೆ ಇಟ್ಟಿರಿ. 13.5 ಪರ್ಸೆಂಟ್ ಮಾಡಿಕೊಂಡಿರಿ 15 ಸಾವಿರ, 25 ಸಾವಿರದವರೆಗೆ. ತಮಗೆ ಅಧಿಕಾರ ಇರಲಿಲ್ಲವಾ? ಈ ರಾಷ್ಟ್ರೀಯ ಬ್ಯಾಂಕ್ ಏನು ಹಣ ಕೊಡುತ್ತಿದೆ ಅದು ರೈತನಿಗೆ ಕೊಡುತ್ತಿರುವುದು. ನಿಮ್ಮ ಡಿ.ಸಿ.ಸಿ. ಬ್ಯಾಂಕಿಗೆ, ಸೊಸೈಟಿಗೆ ಅಲ್ಲ. ಅವನಿಗೆ ತಾವು ದಯಮಾಡಿ ತಲುಪಿಸಿ. 12.5 ಪರ್ಸೆಂಟ್ ನಿಮ್ಮ ಪಕ್ಕದಲ್ಲಿರುವ ಕಮರ್ಷಿಯಲ್ ಬ್ಯಾಂಕ್ ಏನೂ ಕಡಿತ ಮಾಡಿಕೊಳ್ಳದೆ, ತಾವೇನು 10 ಪರ್ಸೆಂಟ್ ಅಡಿಷನಲ್ ಶೇರ್ ಅಲ್ಲ, ಬೇಸಿಕ್ ಶೇರ್ ಎಂದು ಕರೆಯುತ್ತೀರಿ, ಆ ಕಾನ್ಸೆಪ್ಟನ್ನು ಹಿಂದಕ್ಕೆ ತೆಗೆದುಕೊಳ್ಳಿ. ಅಡಿಷನಲ್ ಶೇರೇ ಅದು. ನಾನು ಶೇರ್ ನಿಮ್ಮ ಸೊಸೈಟಿಗೆ ಹಾಕಬೇಕಾದರೆ 100 ರೂಪಾಯಿ. ಇನ್ನು ಮಿಕ್ಕಿದ್ದು ಏನು ತೆಗೆದುಕೊಳ್ಳುತ್ತೀರಿ, ನನ್ನ ಸಾಲದ ಮೊತ್ತದ ಮೇಲೆ ಹತ್ತು ಪರ್ಸೆಂಟ್ ಹಿಡಿಯುತ್ತೀರಿ. ನಾನು 50 ಸಾವಿರ ತೆಗೆದುಕೊಂಡರೆ ನೀವು ಐದು ಸಾವಿರ ಹಿಡಿಯುತ್ತೀರಿ. ನಾನು ಒಂದು ಲಕ್ಷ ರೂಪಾಯಿ ತೆಗೆದುಕೊಂಡರೆ ಹತ್ತು ಸಾವಿರ ಹಿಡಿಯುತ್ತೀರಿ. ಆ ಹತ್ತು ಸಾವಿರಕ್ಕೂ ತಾವು ಬಡ್ಡಿ ಹಾಕುತ್ತೀರಿ. ಆ ಹತ್ತು ಸಾವಿರಕ್ಕೆ ನಾನೇ ಬಡ್ಡಿ ಕೊಡಬೇಕು. ನನ್ನ ಹಣವನ್ನು ನಿಮ್ಮ ಬ್ಯಾಂಕಿನಲ್ಲಿ ಅಥವಾ ಸೊಸೈಟಿಯಲ್ಲಿ ಇಟ್ಟು ನಾನೇ ಹಣ ಕೊಡಬೇಕು. ಡಾ॥ ಕರ್ಕಿಯವರು ಹೇಳಿದ್ದು ಸರಿ. 90 ಪರ್ಸೆಂಟ್ ಅಮೌಂಟನ್ನು ರಿಲೀಸ್ ಮಾಡಿ 100 ಪರ್ಸೆಂಟ್‌ಗೆ ಇಂಟರೆಸ್ಟ್ ಛಾರ್ಜ್ ಮಾಡುತ್ತೀರಿ. ಎಷ್ಟು ಪರ್ಸೆಂಟ್ ಆಯಿತು ಆಗ. Will it not add on to one and a half percent or two percent more? ನನಗೆ ನೀವು ಕೊಟ್ಟಿರುವುದು 90 ರೂಪಾಯಿ. ಬಡ್ಡಿ ತೆಗೆದುಕೊಳ್ಳುತ್ತಿರುವುದು 100 ರೂಪಾಯಿಗೆ ಅಂದರೆ ಇನ್ನು 1.4, 1.6 ಪರ್ಸೆಂಟ್ ಆದರೆ ತಮ್ಮ ಬಡ್ಡಿ ರೇಟ್ ಎಷ್ಟಾಯಿತು 18 ಪರ್ಸೆಂಟ್ ದಾಟಲಿಲ್ಲವಾ

20 ಪರ್ಸೆಂಟ್‌ಗೆ ಹೋಗಲಿಲ್ಲವಾ ಎರಡು ಲಕ್ಷದ ಮೇಲೆ ತೆಗೆದುಕೊಂಡವರಿಗೆ ಏಕೆ? ನ್ಯಾಷನಲೈಸ್ಡ್ ಬ್ಯಾಂಕ್‌ನವರು 2 ಲಕ್ಷಕ್ಕೂ ಮೇಲ್ಪಟ್ಟು 15.5 ಪರ್ಸೆಂಟ್ ಬಡ್ಡಿಗೆ ಶಾರ್ಟ್ ಟರ್ಮ್ ಲೋನ್ ಎಂದು ಹೇಳುವಾಗ ನೀವು 18 ಕೊಟ್ಟು, ಅಡಿಷನಲ್ ಶೇರ್ ಹಿಡಿದು ಸೊಸೈಟಿಗಳನ್ನು ಉಳಿಸುತ್ತೀರಾ? ನಾಳೆ ಯಾರಾದರೂ ನಿಮ್ಮ ಸಹಕಾರ ಸಂಘದ ಹತ್ತಿರ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಬರುತ್ತಾರಾ? ನಾಳೆ ಯಾರಾದರೂ ಬರುತ್ತಾರಾ? ಮಾನ್ಯ ನಾಣಯ್ಯನವರು ನಾವು 9 ಪರ್ಸೆಂಟ್ ಬಡ್ಡಿಗೆ ಇಳಿಸೇ ಇಳಿಸುತ್ತೇವೆ ಜನತಾ ದಳ ಸರ್ಕಾರ ಬಂದ ಮೇಲೆ ಎಂದು ಹೇಳಿದ್ದರು. ಮೇಲುಗಡೆ ಐದು ಪರ್ಸೆಂಟ್, ಏಳು ಪರ್ಸೆಂಟ್ ಸಬ್ಸಿಡೈಸ್ಡ್ ಮಾಡುತ್ತೇವೆಂದೂ ಹೇಳಿದ್ದರು. ನಬಾರ್ಡ್‌ನವರು ಹೇಳಿ ಬಿಟ್ಟರು ನಾವು ಸಬ್ಸಿಡೈಸ್ಡ್ ಮಾಡುವುದಿಲ್ಲ ಎಂದು ಇವತ್ತು ಈ ತರಹ ಹಾಕಿಕೊಂಡು ತಮ್ಮ ರೆಕವರಿ ಹೇಗೆ ಆಗಿದೆ ಸ್ವಾಮಿ? ಎಲ್ಲಾ ರಿನ್ಯೂವಲ್. ಯಾರೂ ದುಡ್ಡು ವಾಪಸ್ ಕಟ್ಟಿಲ್ಲ. ವಾಪಸ್ ಕಟ್ಟುವುದಕ್ಕೆ ಶಕ್ತಿ ಬಂದ ದಿವಸ ನಿಮ್ಮ ಹತ್ತಿರ ಸಾಲ ತೆಗೆದುಕೊಳ್ಳುವಂತಹ ದಡ್ಡರು ಯಾರೂ ಉಳಿದಿಲ್ಲ ರೈತರಲ್ಲಿ; ಇಷ್ಟೊಂದು ಬಡ್ಡಿ ಕಟ್ಟಿ. ಅವನು ಹೊರಗಡೆ ಹೋಗಿ ಒಂದು ಕಾರ್ ತೆಗೆದುಕೊಂಡರೆ 7 ಪರ್ಸೆಂಟ್, 8 ಪರ್ಸೆಂಟ್ ಬಡ್ಡಿಗೆ ಕೊಡುವಂತಹ ಜನ ಇವತ್ತು ಬಂದಿದ್ದಾರೆ. ಕೋ ಆಪರೇಟೀವ್ 18 ಪರ್ಸೆಂಟ್ ತೆಗೆದುಕೊಳ್ಳುವುದನ್ನು ತಾವು ಜಸ್ಟಿಫೈ ಮಾಡಿದರೆ ಬಹುಶಃ ಇದಕ್ಕೆ ಏನು ಹೇಳಬೇಕೋ ಸೊಸೈಟಿಗಳಲ್ಲಿ ನನಗೆ ಅರ್ಥ ಆಗುವುದಿಲ್ಲ. ತಾವೂ ಸಹ ಡಿ.ಸಿ.ಸಿ. ಬ್ಯಾಂಕ್ ಡೈರೆಕ್ಟರ್ ಆಗಿದ್ದವರು. ವಿ.ಎಸ್.ಎಸ್.ನ ಅಧ್ಯಕ್ಷರಾಗಿದ್ದವರು. ನಾನಂತೂ ವಿ.ಎಸ್.ಎಸ್.ನಲ್ಲಿ ಅಧ್ಯಕ್ಷನಾಗಲಿಲ್ಲ. ಕನಿಷ್ಟ ನೀವಾದರೂ ಮೂಲ ರೈತನನ್ನು ನೋಡುತ್ತೀರಾ ಎಂದು ತಿಳಿದುಕೊಂಡಿದ್ದೆವು. ಬಿಟ್ಟು ಬಿಡಿ. ಎಲ್ಲಾ ರೈತರೇ. ದೇಶದಲ್ಲಿ ಎಲ್ಲಾ ವ್ಯವಸ್ಥೆ ಮಾಡಿರುವವರೂ ರೈತರೇ. ತಲೆ ಕಡಿದವರೂ ನಾವೇ, ರೈತರೇ. ಇನ್ಯಾರು ಬಂದಿದ್ದಾರೆ ಈ ದೇಶ ಆಳುವುದಕ್ಕೆ? ಎಲ್ಲಾ ರೈತರು ತಾನೇ? ರೈತರ ಹೆಸರಿನಲ್ಲಿ ಈ ಕೆಲಸ ಮಾಡಬೇಡಿ. ಹೇಳಿ ಬಿಡಿ. ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ರೈತ ನಿಜ. ಆದರೆ 40, 50 ಪರ್ಸೆಂಟ್‌ಗಿಂತ ಹೆಚ್ಚು ನಾನ್ ಫಾರ್ಮಿಂಗ್ ಆಕ್ಟಿವಿಟೀಸ್ ಮಾಡುತ್ತಿರುವುದು ನಿಮ್ಮ ಡಿ.ಸಿ.ಸಿ. ಬ್ಯಾಂಕ್‌ಗಳು. ನಬಾರ್ಡ್ ಕೊಡುತ್ತಿರುವ ಲೋನನ್ನು ಡೈವರ್ಟ್ ಮಾಡಿರುವವರು ನೀವು. ನಾನು ಈ ಮಾತನ್ನು ಹೇಳಿದ್ದೇನೆ. ನೀವು ಎಲ್ಲಾ ಬ್ಯಾಂಕ್ ಕಡತ ತೆಗೆಸಿ. ರೆಕವರಿ ಏನಾದರೂ ಇವತ್ತು ಹೆಲ್ಡ್‌ಫ್ ಆಗಿದ್ದರೆ ನಾನ್ ಫಾರ್ಮಿಂಗ್ ಆಕ್ಟಿವಿಟೀಸ್‌ನಿಂದ ಹೆಲ್ಡಪ್ ಆಗಿರುವುದು. ಅದನ್ನೆಲ್ಲಾ ತೆಗೆದುಕೊಂಡು ರೈತರ ಮೇಲೆ ಯಾರೂ ಕೇಳುವವರು ಇಲ್ಲ ಎಂದು ಬಿಟ್ಟು 4 ಜನ 5 ಜನ ಅಧ್ಯಕ್ಷರು ಕುಳಿತುಕೊಂಡು ಇಲ್ಲೊಂದು ಡಿಸಿಷನ್ ತೆಗೆದುಕೊಂಡರು ಎಂದು ತಾವು ಅಗ್ರಿಮಾಡಿದರೆ 12.5 ಪರ್ಸೆಂಟ್ ಇದ್ದಂತಹ ಸಾಲಕ್ಕೆ ದಿಢೀರನೆ 14.5 ಪರ್ಸೆಂಟಿಗೆ purely on the decision of four or five DCC Bank Presidents. ನನಗೆ ಗೊತ್ತು. 5 ಜನ, 6 ಜನ ಡಿ.ಸಿ.ಸಿ.ಬ್ಯಾಂಕ್ ಅಧ್ಯಕ್ಷರು ಕುಳಿತು ನಿಗದಿ ಮಾಡಿದ್ದಕ್ಕೆ ತಾವು ರಾಜಿ ಆಗಿ ಬಿಟ್ಟಿರಿ. ಹಾಗಾದರೆ ತಾವು ರೈತರಿಗಾಗಿ ಸರ್ಕಾರ ನಡೆಸುತ್ತಿಲ್ಲವಾ? ಮಂತ್ರಿ ಆಗಿಲ್ಲವಾ?

ಇದನ್ನು ತಪ್ಪಿಸಬೇಕು. 25 ಸಾವಿರದವರೆಗೆ ತಾವು 12.5 ಪರ್ಸೆಂಟಿಗೇ ಕೊಡಬೇಕು. ಇಲ್ಲ ನಬಾರ್ಡ್‌ನವರು ಹೇಳಿದಹಾಗೆ ಇನ್ನೊಂದು ಪರ್ಸೆಂಟ್ ಕಡಿಮೆ ಮಾಡಬೇಕು. 25 ಸಾವಿರ ರೂಪಾಯಿಯಿಂದ ಎರಡು ಲಕ್ಷದವರೆಗೆ ಒಂದೇ ಸ್ಲಾಬ್ ಇಡಬೇಕು. You cannot have a in-between slab. ಎರಡು ಲಕ್ಷದವರೆಗೆ 14.5 ಪರ್ಸೆಂಟ್ ಒಳಗೆ ತರಬೇಕು. ಅಡಿಷನಲ್ ಶೇರ್ ಸಿಸ್ಟಂ ಏನು ಇದೆ, ನೀವು ಡಿ.ಸಿ.ಸಿ. ಬ್ಯಾಂಕ್‌ಗೆ ಇಟ್ಟುಕೊಳ್ಳುತ್ತೀರೋ, ವಿ.ಎ.ಎಸ್.ನವರಿಗೆ ಕೊಡುತ್ತೀರೋ ಅಪೆಕ್ಸ್ ಬ್ಯಾಂಕಿನವರಿಗೆ ಕೊಡುತ್ತೀರೋ, ಅದು ನಮ್ಮ ಹಣೆ ಬರಹ ಅಲ್ಲ. ರೈತರನ್ನು ಉಳಿಸಿ ಈ ಅಡಿಷನಲ್ ಶೇರ್ ಕಟ್ ಮಾಡುವುದನ್ನು ದಯಮಾಡಿ ನಿಲ್ಲಿಸುತ್ತೀರಾ ಎಂಬುದನ್ನು ಹೇಳಬೇಕು.

ಶ್ರೀ ಎಸ್.ಎಸ್.ಪಾಟೀಲ್: ಅವರ ವಿಚಾರದಲ್ಲಿ ಇನ್ನೂ ಅಡಿಷನಲ್ ಶೇರ್ ಎಂದು ಹೇಳುತ್ತಾರೆ. ಅಡಿಷನಲ್ ಶೇರ್ ತೆಗೆದುಕೊಳ್ಳುತ್ತಾ ಇಲ್ಲ. ಬೈಲಾ ಪ್ರಕಾರ ಹತ್ತು ಪರ್ಸೆಂಟ್ ಇದೆ. ಅಷ್ಟೇ ತೆಗೆದುಕೊಳ್ಳುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾನು ಸಾಲ ತೆಗೆದುಕೊಂಡಷ್ಟು ದುಡ್ಡು ಕೊಟ್ಟು ಬಿಡಿ. ಏನು ಶೇರ್ ಎಂದು ಕರೆಯುತ್ತೀರೋ ಬಿಟ್ಟು ಬಿಡಿ. ನನಗೆ ಬಡ್ಡಿ ಹಾಕುತ್ತೀರಲ್ಲಾ, ಅಷ್ಟು ಅಮೌಂಟ್ ನನಗೆ ಕೊಡಿ.

ಶ್ರೀ ಎಸ್.ಎಸ್.ಪಾಟೀಲ್: ಅದು ಆ ಸಂಘದ ಬಂಡವಾಳ. ಬಂಡವಾಳ ಇಲ್ಲದೇ ಮತ್ತೆ ಎರಡನೇ ವ್ಯವಹಾರ ಹೇಗೆ ಮಾಡುತ್ತಾರೆ? ಲಾಭ ಮಾಡಿಕೊಂಡು ಹಂಚಿಕೊಳ್ಳಬೇಕೇ ವಿನಹ ನಮ್ಮದೂ ಅಲ್ಲಿ ತಪ್ಪು ಇದೆ. ನಾವು ಸರಿಯಾಗಿ ರೆಕವರಿ ಮಾಡಬೇಕು. ತಾವೇ ಹೇಳುತ್ತೀರಲ್ಲಾ ಬುಕ್ ಅಜಸ್ಟ್‌ಮೆಂಟ್ ಹೇಗೆ ಎಂದು.

ಅಧ್ಯಕ್ಷರು: ಮಾನ್ಯ ಎಸ್.ಎಸ್.ಪಾಟೀಲ್‌ರವರೇ, ಅವರು ಹೇಳತಕ್ಕ ಎಲ್ಲಾ ಮಾತಿನ ಮುಖ್ಯ ಅಂಶ ಏನು ಅಂದರೆ ಹೊರಗಡೆ ಮಾರ್ಕೆಟ್‌ನಲ್ಲಿ ಇದಕ್ಕಿಂತ ಕಡಿಮೆ ದರದಲ್ಲಿ ಬಡ್ಡಿ ಕೊಡುವುದಕ್ಕೆ ಎಲ್ಲಾ ಸಂಸ್ಥೆಗಳು ರೆಡಿ ಆಗಿರುವಾಗ ನೀವು ಸಹಕಾರಿ ಸಂಸ್ಥೆಯಲ್ಲಿ ಇಷ್ಟು ರೇಟ್ ಹೆಚ್ಚಿಗೆ ಮಾಡಿದರೆ ನಿಮ್ಮ ಹತ್ತಿರ ಯಾರು ಬರುತ್ತಾರೆ? ಇದು ಹೇಗೆ ರೈತ ಸೇವಾ ಸಹಕಾರ ಸಂಘಗಳು ಆಗುತ್ತವೆ ಎನ್ನುವುದು ಅವರ ಪ್ರಶ್ನೆ. ಮೂಲ ತತ್ವ ಅವರದ್ದು ಏಕೆಂದರೆ ದಿವಸ ಪೇಪರಿನಲ್ಲಿ ನೋಡುತ್ತೇವೆ. ಏಳು ಪರ್ಸೆಂಟ್ ಕಾರಿಗೆ ಬಡ್ಡಿ ಕೊಡುತ್ತೇವೆ ಎಂದು ಹೇಳುತ್ತಾರೆ, ಇನ್ನೊಂದಕ್ಕೆ ಎಂದು ಹೇಳುತ್ತಾರೆ.

ಡಾ॥ ಎಂ.ಪಿ.ಕರ್ಕಿ: ಫ್ಲಾಟ್ ರೇಟ್ ಇರುತ್ತದೆ.

ಅಧ್ಯಕ್ಷರು: ಫ್ಲಾಟ್ ರೇಟ್ ಆಗಬಹುದು, ಇನ್ನೊಂದು ಆಗಬಹುದು.

ಡಾ॥ ಎಂ.ಪಿ.ಕರ್ಕಿ: ಫ್ಲಾಟ್ ರೇಟ್, ಅದು 18 ಪರ್ಸೆಂಟ್ 20 ಪರ್ಸೆಂಟ್

ವರ್ಕ್‌ಔಟ್ ಆಗುತ್ತದೆ.

ಅಧ್ಯಕ್ಷರು: ಅವರು ಹೇಳುವ ಪ್ರಕಾರ ಇದೂ ಅಲ್ಲಿಗೆ ಬರುತ್ತದಲ್ಲಾ.

ಶ್ರೀ ಎಸ್.ಎಸ್.ಪಾಟೀಲ್: ಬಹುಶಃ ಸಹಕಾರಿ ಸಂಘದಷ್ಟು ಕಡಿಮೆ ಬಡ್ಡಿ ಮೇಲೆ ಎಲ್ಲೂ ದೊರೆಯುವುದಿಲ್ಲ. ಸುಮ್ಮನೆ ಅದನ್ನು ಲೆಕ್ಕ ಹಾಕಿಕೊಂಡು ಕುಳಿತರೆ, ಇಲ್ಲಿ ಬಹಳ ಚರ್ಚೆ ಮಾಡಬಹುದು. ಒಂದು ದಿವಸ ಬೇಕಾದರೆ ಚರ್ಚೆಗೆ ಅವಕಾಶ ಕೊಡಿ. ಅದರ ಬಗ್ಗೆ ಸಂಪೂರ್ಣವಾಗಿ ಹೇಳುತ್ತೇನೆ. ಎಲ್ಲೆಲ್ಲಿ 7 ಪರ್ಸೆಂಟ್ ಕೊಡುತ್ತಾರೆ? ಅವರು ಹೇಗೆ ಚಕ್ರ ಬಡ್ಡಿ ಮಾಡುತ್ತಾರೆ, ಏನು ಮಾಡುತ್ತಾರೆ, ಆ ಶೆಡ್ಯೂಲ್ಡ್ ಬ್ಯಾಂಕ್‌ನಲ್ಲಿ ಏನು ಮಾಡುತ್ತಾರೆ ಅವೆಲ್ಲಾ ಮಾಹಿತಿ ಇದೆ. ಇದೂ ಕಡಿಮೆ ಆಗಬೇಕು. ಆ ಮಾತನ್ನು ಒಪ್ಪಿಕೊಳ್ಳುತ್ತೇನೆ. ನಾನು ಕೂಡ ಅದನ್ನು ಕಡಿಮೆ ಮಾಡುವ ಪ್ರಯತ್ನದಲ್ಲಿದ್ದೇನೆ. ಸ್ವಲ್ಪ ಸಂಘಗಳ ಲಾಭ ಬರದೇ ಹೇಗೆ ಮಾಡುವುದು? ಈಗ ಏನು ಆಗಿದೆ, ರೈತನ ಸ್ಥಿತಿ ಎಂದರೆ ವೇಳೆಗೆ ಸರಿಯಾಗಿ ಸಾಲ ಕೊಟ್ಟರೆ ಸಾಕಷ್ಟು ಎನ್ನುವಂಥ ಸ್ಥಿತಿಗೆ ಸಂಘಗಳು ಆಗಿದ್ದಾವೆ. ಇವತ್ತು ಅವನ್ನೆಲ್ಲಾ ಸುಧಾರಿಸಿ ಒಂದು ರೀತಿಯಿಂದ ವ್ಯಾಪಾರ ಸರಿದೂಗಿಸಬೇಕು. ಸುಮಾರು 4270 ಸೊಸೈಟಿಯಲ್ಲಿ 1,000 ಸೊಸೈಟಿಗಳು ಇವತ್ತು ನೂರಕ್ಕೆ ನೂರು ವಸೂಲಿ ಇದ್ದಾವೆ. ಅವರೇನೋ ಬುಕ್ ಅಡ್ಜಸ್ಟ್‌ಮೆಂಟ್ ಎಂದು ಹೇಳುತ್ತಾರೆ. ತುಮಕೂರಿನಲ್ಲಿ ಇವತ್ತು ತೊಂದರೆಯಲ್ಲಿದೆ. ಅದಕ್ಕೋಸ್ಕರ ಅದನ್ನು ಬುಕ್ ಅಡ್ಜಸ್ಟ್‌ಮೆಂಟ್ ಮಾಡಿಸುತ್ತೇವೆ. ಏನು ಅಂದರೆ ಕನ್‌ವರ್ಷನ್ ಮಾಡಿಸುತ್ತೇವೆ ಅಷ್ಟೆ. ಈಗ ತಾವೇ ಹೇಳಿದ ಹಾಗೆ ಕೆಲವು ಚರ್ಚೆ ಆಯಿತು. ಇವತ್ತು ಮಳೆ ಆಗಿಲ್ಲ. ಇವತ್ತೇ ಡಿ.ಸಿ.ಯಿಂದ ನಾವು ಅಣೆವಾರಿ ಪದ್ಧತಿಯಲ್ಲಿ ತೆಗೆದುಕೊಂಡು ಅದನ್ನು ಕನ್‌ವರ್ಷನ್ ಮಾಡುತ್ತೇವೆ. ಅವರಿಗೆ ಬುಕ್ ಅಡ್ಜಸ್ಟ್‌ಮೆಂಟ್ ಆಗುತ್ತದೆ, ಇಲ್ಲ ಎಂದು ನಾನು ಹೇಳುವುದಿಲ್ಲ.

ಶ್ರೀ ಎಸ್.ಕೃಷ್ಣಪ್ಪ: ಇವತ್ತು ಕಮರ್ಷಿಯಲ್ ಬ್ಯಾಂಕ್ಸ್‌ನಲ್ಲಿ ಬುಕ್ ಅಡ್ಜಸ್ಟ್‌ಮೆಂಟ್ ಆಗುತ್ತಿದೆ. ಯಾರು ಆ ಬ್ಯಾಂಕಿನಲ್ಲಿ ರೈತರು ಸಾಲ ತೆಗೆದುಕೊಂಡಿದ್ದರೋ ಅವರಿಗೆ ಮಾತ್ರ ಕಟ್ಟಿಸಿಕೊಂಡು ದುಡ್ಡನ್ನು ರಿವ್ಯೂ ಮಾಡುತ್ತಿದ್ದಾರೆ. ಹೊಸದಾಗಿ ರೈತರಿಗೂ ಕೂಡ ಅಲ್ಲಿ ಕೊಡುತ್ತಿಲ್ಲ ಸೊಸೈಟಿಯಲ್ಲಿ ಕೂಡ ಅದೇ ತರಹ. ವಿ.ಎಸ್.ಎಸ್.ನಲ್ಲಿ ಪರವಾಗಿಲ್ಲ. ಅಟ್‌ಲೀಸ್ಟ್ 80 ಪರ್ಸೆಂಟ್ ಹಳೇ ಲೋನ್‌ಗೆ ರಿನ್ಯೂವಲ್ ಮಾಡುತ್ತಾರೆ.

ಶ್ರೀ ಎಸ್.ಎಸ್.ಪಾಟೀಲ್: ಕಮರ್ಷಿಯಲ್ ಬ್ಯಾಂಕ್‌ಗೆ ಕೂಡ ನಮ್ಮ ಕೆಲವು ಸೊಸೈಟಿಗಳು ಹೋಗಿದ್ದವು. ಅವರಿಗೆ ಸಾಲ ತೀರಿಸಿಕೊಂಡು ಕೈಬಿಟ್ಟು ಬಿಟ್ಟರು. ನಮಗೆ ಸಾಲ ಕೊಡುವುದಕ್ಕೆ ಆಗುವುದಿಲ್ಲ ಎಂದರು. ತಿರುಗಿ ನಾವು ಡಿ.ಸಿ.ಸಿ.ಬ್ಯಾಂಕ್‌ನಿಂದ ಕೊಡುತ್ತಿದ್ದೇವೆ. ಕಮರ್ಷಿಯಲ್ ಬ್ಯಾಂಕ್ ನವರು ಕೂಡ ಇವತ್ತು ಕೊಡುತ್ತಾ ಇಲ್ಲ. ಆ ಕಾರಣದಿಂದ ರೈತರಿಗೆ ಆಸರೆ ಇದ್ದದ್ದು ಈ ಒಂದೇ ಸಹಕಾರಿ ಕ್ಷೇತ್ರ. ಅನಿವಾರ್ಯವಾಗಿ ನಾವು ಇದನ್ನು ಬಲಪಡಿಸಬೇಕು. ಬಡ್ಡಿಯನ್ನು ಈ ವರ್ಷ ನಾವು ಒಂದು ಪರ್ಸೆಂಟ್

ಕಡಿಮೆ ಮಾಡಿದ್ದೇವೆ. ಇದು ಕೂಡ 13.5, 14ವರೆಗೆ ಇತ್ತು. 10 ಸಾವಿರದವರೆಗೆ 13.5 ತೆಗೆದುಕೊಳ್ಳುತ್ತಿದ್ದರು. ಇವತ್ತು ಅದನ್ನು 15 ಸಾವಿರಕ್ಕೆ ಏರಿಸಿದ್ದೇವೆ. ಈ 25 ಸಾವಿರಕ್ಕೆ ಹೋದರೆ ಸಾಮಾನ್ಯವಾಗಿ 80 ಪರ್ಸೆಂಟ್ ರೈತರು ಹೋಗಿ ಬಿಡುತ್ತಾರೆ. 12.5 ಪರ್ಸೆಂಟ್‌ಗೆ ಹೋಗಿ ಬಿಡುತ್ತಾರೆ. ಆ ಕಾರಣದಿಂದ ಇವತ್ತು ಇದನ್ನೂ ಕೂಡ ಕಡಿಮೆ ಮಾಡುವಂತಹ ಪ್ರಯತ್ನ ಮಾಡುತ್ತೇನೆ. ಇನ್ನು ಅಡಿಷನಲ್ ಶೇರ್ ಎಂದೇನು ಇದೆ, ಅದು ಅಡಿಷನಲ್ ಶೇರ್ ಅಲ್ಲ; ಬೈಲಾ ಪ್ರಕಾರ ನಮಗೆ ಬಂಡವಾಳ ಕೂಡಿಸಬೇಕಾದರೆ ನಾವು ಹತ್ತು ಪರ್ಸೆಂಟ್ ಮುರಿದುಕೊಳ್ಳುತ್ತೇವೆ. ಲಾಭ ಮಾಡಿ ಹಂಚಿಕೊಳ್ಳಬೇಕು ಅವರು. ಇವತ್ತು ಅವರದ್ದೂ ಜವಾಬ್ದಾರಿ ಇದೆ.

ಅಧ್ಯಕ್ಷರು: ಈಗ ಮಾನ್ಯ ಮಾಧುಸ್ವಾಮಿಯವರು ಒಂದು ವಿಚಾರವನ್ನು ಹೇಳಿದ್ದಾರೆ. ನಬಾರ್ಡ್‌ನವರ ಆದೇಶದ ಪ್ರಕಾರವೇ 25 ಸಾವಿರದ ಒಳಗೆ ಸಾಲ ತೆಗೆದುಕೊಳ್ಳತಕ್ಕವರಿಗೆ ಇಂತಿಷ್ಟು ಬಡ್ಡಿ, 25 ಸಾವಿರದಿಂದ ಹಿಡಿದು ಎರಡು ಲಕ್ಷದವರೆಗೆ ಒಂದು ಸ್ಲಾಬ್ ಹಾಕಿದ್ದಾರೆ. ಎರಡು ಲಕ್ಷದ ಮೇಲೆ ತೆಗೆದುಕೊಳ್ಳುವವರಿಗೆ ಅದು ಅವರ ವಿವೇಚನೆಗೆ ಎಂದು ಹೇಳಿದ್ದಾರೆ. ಆ ಆದೇಶವನ್ನು ನಬಾರ್ಡ್‌ನವರ ಆದೇಶವನ್ನು ಉಲ್ಲಂಘನೆ ಮಾಡಿ ಅದಕ್ಕಿಂತಲೂ ಹೆಚ್ಚು ಬಡ್ಡಿಯನ್ನು ತೆಗೆದುಕೊಳ್ಳುತ್ತಿದ್ದರೆ, ಅದಕ್ಕೆ ಏನು ಹೇಳುತ್ತೀರಿ ಹೇಳಿ ಅಷ್ಟೇ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ನಾವು ನಬಾರ್ಡ್‌ನವರ ಆದೇಶವನ್ನು ಮೀರಲಿಕ್ಕೆ ಆಗುವುದೇ ಇಲ್ಲ. ಸ್ವಲ್ಪವೇ ಮೀರಿದರೂ ನಮಗೆ ಅವರು ಕಟ್ ಮಾಡುತ್ತಾರೆ. ಕಾರಣ ನಬಾರ್ಡ್‌ನವರ ಆದೇಶದ ಪ್ರಕಾರವೇ ನಾವು ಇದ್ದೇವೆ. ನಬಾರ್ಡ್‌ನವರ ಆದೇಶವನ್ನು ಎಳ್ಳಷ್ಟೂ ಮೀರಲಿಕ್ಕೆ ಆಗುವುದಿಲ್ಲ.

(7) ಸಚಿವರ ಹೇಳಿಕೆ

ವಿಷಯ: ಗ್ರಂಥಾಲಯಗಳಿಗೆ ಪುಸ್ತಕ ಖರೀದಿಸುವ ಬಗ್ಗೆ.

+ ಶ್ರೀ ಎಂ.ಸಿ.ನಾಣಯ್ಯ (ವಾರ್ತಾ ಮತ್ತು ಪ್ರಚಾರ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅಧ್ಯಕ್ಷರೇ, ನಿನ್ನೆ ದಿವಸ ಯಡಿಯೂರಪ್ಪ ಮತ್ತು ಸುರೇಶ್‌ಕುಮಾರ್ ಅವರು ಒಂದು ವಿಚಾರ ಎತ್ತಿದ್ದರು, ಅದರಲ್ಲಿ ಎರಡು ವಿಚಾರ. ಗ್ರಂಥಾಲಯಗಳಿಗೆ ಪುಸ್ತಕ ಖರೀದಿ ಮಾಡುವ ಸಂದರ್ಭದಲ್ಲಿ ನಿಯಮಾವಳಿ ಪ್ರಕಾರ ಶೇಕಡ 80ರಷ್ಟು ಕನ್ನಡ, 10ರಷ್ಟು ಇಂಗ್ಲಿಷ್ ಬಾಕಿ ಇರುವ 10 ಇತರೆ ಭಾಷೆಗಳಿಗೆ ಸಂಬಂಧಿಸಿದ್ದು, ಇಂತಹ ನಿಯಮಾವಳಿ ಯಾವುದಿತ್ತು ಅದನ್ನು ಸಂಪೂರ್ಣ ರದ್ದುಮಾಡಿಬಿಟ್ಟಿದ್ದಾರೆ. ಇವತ್ತು ಯಾವ್ಯಾವ ಭಾಷೆಯಲ್ಲಿರುವ ಪುಸ್ತಕಗಳನ್ನೂ ಬೇಕಾಬಿಟ್ಟಿಯಾಗಿ ಖರೀದಿ ಮಾಡುತ್ತಿದ್ದಾರೆಂಬುದು ಒಂದು ಆರೋಪ. ನಾನು ಇವತ್ತು ನೇರವಾಗಿ ಹೇಳುತ್ತಿದ್ದೇನೆ 80:10:10 ಎಂಬ ಖರೀದಿಯ ನಿಯಮಗಳ

ಅನುಗುಣವಾಗಿಯೇ ಇವತ್ತೂ ಖರೀದಿ ಮಾಡುತ್ತಿದ್ದಾರೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ. ಮಾನ್ಯ ಯಡಿಯೂರಪ್ಪನವರು ಇನ್ನೊಂದು, ಪ್ರಶ್ನೆ ಎತ್ತಿದರು: ಅದು '50 years of Pakistan Independence.' ಎಂಬ ಪುಸ್ತಕವನ್ನು ಸುಮಾರು 10 ಲಕ್ಷ ರೂ. ಕೊಟ್ಟು ಖರೀದಿ ಮಾಡಿದ್ದಾರೆ. ಇದರಲ್ಲಿ ಒಂದು ಸೆಟ್ಟಿಗೆ 6 ಸಾವಿರ ರೂ, ಆ ಸಂದರ್ಭಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದರು. ಈ ವಿಷಯಕ್ಕೆ ಹಿನ್ನೆಲೆ ಅಂದರೆ ಕನ್ನಡಪ್ರಭಾದಲ್ಲಿ ಒಂದು ಹೇಳಿಕೆ ಬಂದಿತ್ತು. ನಾನೂ ಕೂಡ ಅದನ್ನು ಓದಿದೆ. ಕೂಡಲೇ ಹೇಳಿದೆ, ಇದರ ಬಗ್ಗೆ ನಾವು ಮಾಹಿತಿ ತರಿಸುತ್ತೇವೆ ಮತ್ತು ಶಿಕ್ಷಣ ಇಲಾಖೆ ಕಾರ್ಯದರ್ಶಿಗಳ ಮೂಲಕ ಚರ್ಚೆ ಮಾಡಿ ಒಂದು ಹೇಳಿಕೆ ಕೊಡುತ್ತೇವೆ ಎಂದು ಹೇಳಿದ್ದೆ. ಅವರ ಜೊತೆ ಸಂಪೂರ್ಣ ಚರ್ಚೆ ಮಾಡಿದೆ. ನಿಜ, ಪುಸ್ತಕವನ್ನು ಖರೀದಿ ಮಾಡಿದ್ದಾರೆ. ಎರಡು ಪುಸ್ತಕಗಳನ್ನು 1997ರ ಇಸವಿಯಲ್ಲಿ Grower ಮತ್ತು ಇನ್ನೊಂದು '50 years of Indian Independence' ಎಂಬ ಪುಸ್ತಕದ ಮೂರು ಸೆಟ್ '50 years of Pakistan Independence' ಮೂರು ವಾಲ್ಯೂಮ್ಸನ್ನು ಅವರು ಮಾಡಿದ್ದಾರೆ. 1997ಕ್ಕೆ ಸಂಬಂಧಿಸಿದ ಎರಡು ಪುಸ್ತಕಗಳಲ್ಲಿ '50 years of Indian Independence' ಎಂಬುದನ್ನು 79 ಸೆಟ್‌ಗಳನ್ನು 2,01,450 ರೂಗಳಿಗೆ ಖರೀದಿ ಮಾಡಿದ್ದಾರೆ. ಕರ್ನಾಟಕದಲ್ಲಿ ಒಟ್ಟು 80 ಗ್ರಂಥಾಲಯಗಳಿವೆ. ಅವುಗಳು ಕೇಂದ್ರ ನಗರ ಗ್ರಂಥಾಲಯಗಳು ಮತ್ತು ಜಿಲ್ಲಾಕೇಂದ್ರ ಗ್ರಂಥಾಲಯಗಳು. ಇವುಗಳಿಗೆ ಒಂದೊಂದು ಪುಸ್ತಕ ಕೊಡಬೇಕೆಂಬ ಹಿನ್ನೆಲೆಯಲ್ಲಿ ಮತ್ತು ಅದಕ್ಕಿರುವ ನಿಯಮಾವಳಿಗಳ ಹಿನ್ನೆಲೆಯಲ್ಲಿ ಈ ಪುಸ್ತಕಗಳನ್ನು ಖರೀದಿಸಲು ಅವಕಾಶ ಇದೆ. ಆದ್ದರಿಂದ '50 years of Indian Independence' ಪುಸ್ತಕದ 79 ಸೆಟ್‌ಗಳನ್ನು, ತಲಾ 3 ಸಾವಿರದಂತೆ ಖರೀದಿ ಮಾಡಲಾಗಿದೆ. ಮತ್ತೆ '50 years of Pakistan Independence' ಪುಸ್ತಕದ 64 ಸೆಟ್‌ಗಳನ್ನು ರೂ. 1,63,200 ಕೊಟ್ಟು ಖರೀದಿ ಮಾಡಿದ್ದಾರೆ. ಇವರು ಹೇಳಿದಂತೆ 10 ಲಕ್ಷ ರೂ.ಗಳ ಪುಸ್ತಕ ಖರೀದಿ ಮಾಡಲಿಲ್ಲ. ನಿನ್ನೆ ಅವರು ಪ್ರಸ್ತಾಪಿಸಿದಾಗ ಮುಖ್ಯಮಂತ್ರಿಗಳು ಹೇಳಿದರು ಬಹುಶಃ ಎಲ್ಲಾದರೂ 10 ಲಕ್ಷ ರೂ.ಗಳ ಪುಸ್ತಕ ಖರೀದಿಸಿದ್ದರೆ ಇದರ ಬಗ್ಗೆ ವಿಚಾರ ಮಾಡಿ ನಾವು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಕಾರ್ಯದರ್ಶಿಗಳು ಇಲ್ಲಿದ್ದಾರೆ. ಏಕೆ ಖರೀದಿ ಮಾಡಿದಿರಿ ಎಂಬ ಪ್ರಶ್ನೆ ಬರಬಹುದು: ಅದು ಯಾವುದೇ ರಾಷ್ಟ್ರಕ್ಕೆ ಸಂಬಂಧಿಸಿದ ಪುಸ್ತಕ ಇರಲಿ. ನಮ್ಮಲ್ಲಿ ಚೈನಾ ಪುಸ್ತಕ ಇದೆ, ಅಮೆರಿಕದ ಪುಸ್ತಕ ಜಪಾನ್‌ಗೆ ಸಂಬಂಧಿಸಿದ ಪುಸ್ತಕಗಳೂ ಇವೆ. ಇಂತಹ ಪುಸ್ತಕಗಳನ್ನು ಖರೀದಿಸಿ ರೆಫರೆನ್ಸ್‌ಗಾಗಿ ಲೈಬ್ರರಿಗಳಲ್ಲಿ ಇಟ್ಟುಕೊಳ್ಳುವುದು ತಪ್ಪು ಎಂದು ಹೇಳುವುದಿಲ್ಲ. ಆದರೆ ಪಾಕಿಸ್ತಾನಕ್ಕೆ ಸ್ವಾತಂತ್ರ್ಯ ಸಿಕ್ಕಿದ 50 ವರ್ಷಗಳ ಪುಸ್ತಕದ 64 ಸೆಟ್‌ಗಳನ್ನು ಖರೀದಿಸುವ ಅವಶ್ಯಕತೆ ಇತ್ತೇ ಎಂಬುದು ಒಂದು ವಿಚಾರ. ನಮ್ಮಲ್ಲಿ 80 ಗ್ರಂಥಾಲಯಗಳುಂಟು, ಒಂದೊಂದಕ್ಕೆ ಒಂದೊಂದು ಸೆಟ್ ಕೊಡಲು ನಿಯಮಾವಳಿಯಲ್ಲಿ ಅವಕಾಶ ಉಂಟು. ಆದ್ದರಿಂದ ಈ ಕೆಲಸ ಮಾಡಿದ್ದಾರೆ. ಆದರೂ ಇದರ ಚರ್ಚೆ ಮಾಡಿಯಾದ ಮೇಲೆ, 64

ಸೆಟ್‌ಗಳನ್ನು ಖರೀದಿಸುವ ಅವಶ್ಯಕತೆ ಇರಲಿಲ್ಲ. ಗ್ರಂಥಾಲಯಗಳಲ್ಲಿ ರೆಫರೆನ್ಸ್ ಬುಕ್ ಬೇಕು. ಪ್ರಪಂಚಕ್ಕೆ ಸಂಬಂಧಿಸಿದ ಯಾವುದೇ ವಿಷಯ ಆಗಿರಲಿ, ಅವರಿಗೂ ನಮಗೂ ಇಂಡಿಂಪೆಂಡೆನ್ಸ್ ಸಿಕ್ಕಿ ಒಂದು ದಿವಸ ವ್ಯತ್ಯಾಸ ಇದ್ದರೆ ನಮ್ಮಲ್ಲೇನು ಅಭಿವೃದ್ಧಿ ಆಗಿದೆ ಅವರಲ್ಲೇನು ಅಭಿವೃದ್ಧಿ ಆಗಿದೆ. ಪುಸ್ತಕದ ಆಥರ್ ನಮ್ಮ ದೇಶಕ್ಕೆ ಸಂಬಂಧಿಸಿದವರು. ಇನ್ನು ಇಂತಹ ಪುಸ್ತಕ ಖರೀದಿ ಮಾಡಲು ಒಂದು ಸಮಿತಿ ಇದೆ. ಅಕ್ಬರಅಲಿಯವರ ಅಧ್ಯಕ್ಷತೆಯಲ್ಲಿ 11 ಜನ ಹೆಸರಾಂತ ಸಾಹಿತಿಗಳ ಸಮಿತಿಯನ್ನು ಶ್ರೀ ಗೋವಿಂದಗೌಡರು ಮಾಡಿದ್ದಾರೆ. ಆದರೆ ಈ ಪುಸ್ತಕ ಖರೀದಿ ಸಂಬಂಧ ಆ ಸಮಿತಿ ಮುಂದೆ ಹೋಗಲಿಲ್ಲ. ನಿರ್ದೇಶಕರು ಯಾರಿದ್ದಾರೆ ಅವರೇ ಖರೀದಿ ಮಾಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ಈ ರೀತಿ ಖರೀದಿಮಾಡಿ ಘಟನೋತ್ತರ ಮಂಜೂರಾತಿಗಾಗಿ ಸಮಿತಿ ಮುಂದೆ ಹೋಗುವ ಪದ್ಧತಿ ಉಂಟು. ಇಲಾಖೆ ಜೊತೆ ಚರ್ಚಿಸಿ ಇನ್ನು ಮುಂದೆ ಇಂತಹ ಘಟನೋತ್ತರ ಮಂಜೂರಾತಿಗೆ ಇತಿಶ್ರೀ ಹಾಕಲು ಕ್ರಮ ಕೈಗೊಂಡಿದ್ದೇವೆ. ಡಿಸ್ಕ್ರಿಷನರಿ ಖರೀದಿಯನ್ನೂ ಇನ್ನು ಮುಂದೆ ಮಾಡುವುದಿಲ್ಲ ಮತ್ತು ಖರೀದಿಸುವ ಎಲ್ಲಾ ಪುಸ್ತಕಗಳು ಸಮಿತಿ ಮುಂದೆ ಬಂದು ಆನಂತರ ಖರೀದಿಸಬೇಕೆಂಬುದಕ್ಕೆ ಈಗಾಗಲೇ ಅವರು ತೀರ್ಮಾನ ತೆಗೆದುಕೊಂಡಿದ್ದಾರೆ. ನಿನ್ನೆ ಯಡಿಯೂರಪ್ಪನವರು 10 ಲಕ್ಷ ರೂ.ಪುಸ್ತಕ ಖರೀದಿ ಬಗ್ಗೆ ಮಾತನಾಡಿದ್ದರು ಆದರೆ 1,64,000 ರೂ.ಗಳಿಗೆ ಸಂಬಂಧಪಟ್ಟಂತೆ 64 ಸೆಟ್‌ಗಳನ್ನು 80 ಗ್ರಂಥಾಲಯಕ್ಕೆ 80 ಮಾಡಬಹುದಿತ್ತು-64 ಮಾಡಿದ್ದಾರೆ. ರೆಫರೆನ್ಸ್ ಬುಕ್ಕಾಗಿ ಪ್ರತಿ ಲೈಬರ್ರಿಯಲ್ಲಿ ಇಡಬೇಕೆಂದು ಖರೀದಿಸಿರುವುದು. ಬಹುಶಃ ಇದರಲ್ಲಿ ದುರುದ್ದೇಶ ಇಲ್ಲವೆಂದು ಹೇಳುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಅಧ್ಯಕ್ಷರೆ, ನಾಣಯ್ಯನವರು ಬಹಳ ಹಗುರವಾಗಿ ಏನೂ ಆಗಿಲ್ಲ ಎಂಬ ರೀತಿ ಹೇಳಿದ್ದಾರೆ ತುಂಬ ಸಂತೋಷ. ನನಗೆ ಇಷ್ಟೇ ಬೇಕು ಸಾರ್. ಗ್ರಂಥ ಖರೀದಿಗಾಗಿ ಹಿಂದೊಂದು ಸರ್ಕಾರಿ ಆಜ್ಞೆ ಇತ್ತು ಅದನ್ನು ರದ್ದು ಮಾಡಿ ಹೊಸ ಆಜ್ಞೆಯನ್ನು 20-3-97ರಂದು 23 ಎಲ್.ಡಿ.ಪಿ.94 ಬ ಹೊರಡಿಸಿದ್ದಾರೆ. ಹಿಂದೆ ಗ್ರಂಥಗಳನ್ನು ಕೊಳ್ಳುವಾಗ ಶೇಕಡ 80 ಕನ್ನಡ ಪುಸ್ತಕಗಳು ಶೇಕಡ 10 ಇತರೆ ಭಾಷೆ ಶೇಕಡ 10 ಇಂಗ್ಲಿಷ್ ಪುಸ್ತಕಗಳನ್ನು ಖರೀದಿಸಬೇಕಾಗಿತ್ತು. ಈ ಹೊಸ ಆಜ್ಞೆಯಲ್ಲಿ ಅದರ ಶಬ್ದವೂ ಇಲ್ಲ. ವಿವೇಚನಾನಿಧಿಯಿಂದ ಮುಖ್ಯ ಗ್ರಂಥಾಪಾಲಕರು ಖರೀದಿ ಮಾಡಬೇಕಾದರೆ ಆತನಿಗೆ ಅರ್ಜೆಂಟ್ 5 ಪರ್ಸೆಂಟ್ ಡಿಸ್ಕ್ರಿಷನರಿ ಖರೀದಿಗೆ ಅವಕಾಶ ಇತ್ತು, ಆ ಪುಸ್ತಕದ ಬೆಲೆ 250ಕ್ಕಿಂತ ಜಾಸ್ತಿ ಇರಬಾರದಾಗಿತ್ತು. ಮೂರನೆಯದು ಒಬ್ಬ ಪ್ರಕಾಶನದೇ ವರ್ಷಕ್ಕೆ 35 ಸಾವಿರಕ್ಕಿಂತ ಹೆಚ್ಚಿನ ಪುಸ್ತಕಗಳನ್ನು ಖರೀದಿ ಮಾಡಬಾರದು ಎಂದು ಇತ್ತು. ಎಲ್ಲವನ್ನೂ ಕಿತ್ತೊಗೆದು ತಮಗೆ ಅನುಕೂಲಕರವಾದ ಸರ್ಕಾರಿ ಆಜ್ಞೆ ಮಾಡಿಕೊಂಡಿದ್ದೀರಿ: ಅದರ ಪ್ರಕಾರ ತುಘಲಕ್ ದರ್ಬಾರು ಮಾಡಬಹುದು ಖುಷಿ ಬಂದಷ್ಟು ಖರೀದಿ ಮಾಡಬಹುದು. ಈ ಆಜ್ಞೆಯಂತೆ ಗ್ರಾಮಪಂಚಾಯಿತಿಗಳೆಲ್ಲ ಶೇಕಡ 90 ಭಾಗ ಪುಸ್ತಕಗಳನ್ನೇ

ಖರೀದಿಸಬೇಕೆಂದಿದ್ದರೂ 13 ಸಾವಿರ ರೂ.ಗಳ ಒಂದು ಇಂಗ್ಲೀಷ್ ಪುಸ್ತಕಗಳ ಕಿಟ್ಟನ್ನು ಖರೀದಿಸಬೇಕೆಂದು ಕಳುಹಿಸಿಕೊಟ್ಟಿದ್ದಾರೆ. ಆ ಶಿಫಾರಸಿನ ಕಾಪಿ ನನ್ನ ಹತ್ತಿರ ಇದೆ. ಆದ್ದರಿಂದ ಮೊದಲನೆಯದಾಗಿ ಪುಸ್ತಕ ಖರೀದಿ ಸಂಬಂಧದಲ್ಲಿ ಸರ್ಕಾರದ ಚಾಲ್ತಿಯಲ್ಲಿರುವ ಆಜ್ಞೆಗಳನ್ನು ಟೇಬಲ್ ಮಾಡಿ. ಎರಡನೆಯದು ಮುಖ್ಯಮಂತ್ರಿಗಳು ಏನು ಹೇಳಿದರು: ಪಾಕಿಸ್ತಾನದ ಸ್ವರ್ಣಮಹೋತ್ಸವಕ್ಕೆ ಹೊರತಂದಿರುವ ಗ್ರಂಥಗಳನ್ನು ರಾಜ್ಯದಲ್ಲಿ 10 ಲಕ್ಷ ರೂ.ಗಳಷ್ಟು ಖರೀದಿಸಿರುವ ಪ್ರಕರಣದ ವಿಚಾರಣೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಗ್ರಂಥಾಲಯದ ನಿರ್ದೇಶಕರು ಆ ರೀತಿ ಅನುಮತಿಯಿಲ್ಲದೆ ಖರೀದಿಸಿದ್ದರೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇನೆ ಅದಕ್ಕೆ ಮೊದಲು ಈತ ಯಾರು ಏನು ಯಾರಿಂದ ಅನುಮತಿ ತೆಗೆದುಕೊಂಡಿದ್ದಾನೆ ಎಂಬ ಡಿಟೇಲ್ಸ್ ತೆಗೆದುಕೊಳ್ಳುತ್ತೇನೆ ಎಂದು, ನಂ.1, ತಾವೇ ಹೇಳಿದಂತೆ ಅಕ್ಬರ್‌ಆಲಿ ಸಮಿತಿ ಮುಂದೆ ಗ್ರಂಥ ಖರೀದಿ ವಿಚಾರ ಹೋಗಲಿಲ್ಲ. ಎರಡನೆಯದು ಗ್ರಂಥದ ಬೆಲೆ 250 ರೂ.ಗಿಂತ ಹೆಚ್ಚಿದ್ದರೆ ಖರೀದಿಗೆ ಅವಕಾಶ ಇರಲಿಲ್ಲ. ಅನುಮತಿ ಇಲ್ಲದೆ 1.92 ಲಕ್ಷದ ಪಾಕಿಸ್ತಾನ ಸ್ವಾತಂತ್ರ್ಯದ ಪುಸ್ತಕಗಳನ್ನು ಭಾರತಕ್ಕೆ ಸ್ವಾತಂತ್ರ್ಯದ್ದು 2.37 ಲಕ್ಷ ಅಂದರೆ ಒಟ್ಟು 4.29 ಲಕ್ಷ ರೂ. ಖರೀದಿ ಮಾಡಿದ್ದಾರೆ. ಇವರಿಗೆ ಯಾರು ಅಧಿಕಾರ ಕೊಟ್ಟರು? ನಮ್ಮ ಆಪಾದನೆ ಏನೂಂದರೆ ಕೆಲವರು ಹೈಕೋರ್ಟಿಗೆ ಹೋದರು. ಕಮಿಷನ್ ವ್ಯವಹಾರದಲ್ಲಿ ನಾವು 25-30 ಪರ್ಸೆಂಟ್ ಡಿಸ್ಕೌಂಟ್ ಕೊಡಲು ರೆಡಿ ಇದ್ದೇವೆ ಎಂದು ಹೋದರು. ಆಗ ಸರ್ಕಾರಿ ಆಜ್ಞೆಯನ್ನು ಸಂಪೂರ್ಣ ವಾಪಸ್ ತೆಗೆದುಕೊಂಡು 15 ಪರ್ಸೆಂಟ್ ಡಿಸ್ಕೌಂಟ್‌ನಲ್ಲಿ ತೆಗೆದುಕೊಳ್ಳಹುದೆಂದು ಒಂದು ಆಜ್ಞೆ ಮಾಡಿಕೊಂಡು ಉಳಿದ ಎಲ್ಲಾ ನಿಯಮಾವಳಿಗಳನ್ನು ಗಾಳಿಗೆ ತೂರಿ ಈ ಕೆಲಸ ಮಾಡಿದ್ದಾರೆ. ಪ್ರತಿ ವರ್ಷ 40-50 ಲಕ್ಷ ರೂ. ಇಂತಹ ಗ್ರಂಥಗಳು ರಾಜ್ಯದಲ್ಲಿ ಖರೀದಿಯಾಗುತ್ತಿವೆ. 25-30 ಪರ್ಸೆಂಟ್ ಡಿಸ್ಕೌಂಟನ್ನು ನುಂಗಿ ನೀರು ಕುಡಿಯುತ್ತಿದ್ದಾರೆ. ಖುಷಿ ಬಂದ ಪುಸ್ತಕ ಖರೀದಿ ಮಾಡುತ್ತಿದ್ದಾರೆ. ನಿನ್ನೆ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದರು: ಈ ಗ್ರಂಥಗಳನ್ನು ಖರೀದಿ ಮಾಡಲು ಯಾವನು ಅನುಮತಿ ಕೊಟ್ಟ? ಅನುಮತಿ ಇಲ್ಲದೆ ಖರೀದಿಸಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ, ಏನು ಮಾಡುತ್ತೇನೆ ಎಂದು ಕಾದು ನೋಡಿ ಅಂದರು. ಅದಕ್ಕೇ ಅಧ್ಯಕ್ಷರ ಹತ್ತಿರ ರಿಕ್ವೆಸ್ಟ್ ಮಾಡಿಕೊಂಡೆ. ನಿನ್ನೆ ಮುಖ್ಯಮಂತ್ರಿಗಳು ಬಹಳ ವೀರಾವೇಶದಿಂದ ಹೇಳಿದ್ದರು. ಏನು ಮಾಡುತ್ತಾರೋ ಅವರಿಂದ ಉತ್ತರ ಪಡೆಯೋಣ ಎಂದು ನನಗೆ ಎರಡಕ್ಕೇ ಉತ್ತರ ಕೊಡಿ. ಒಂದನೆಯದು, ಅನುಮತಿ ಇಲ್ಲದೆ ಯಾವನೋ ಒಬ್ಬ ಪ್ರಕಾಶನಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ದುಡ್ಡು ಹೊಡೆಯುವುದಕ್ಕೋಸ್ಕರ ಈಗ ಖರೀದಿ ಮಾಡಿರುವುದು ತಾವು ಹೇಳಿದಂತೆ 1.92 ಲಕ್ಷ 10 ಲಕ್ಷದ್ದು ಪ್ಲಾನ್ ಇದ್ದು ನಿಂತಿರಬಹುದು. 2.92 ಲಕ್ಷವೇ ಆಗಲೀ 69 ಸೆಟ್ ಆಗಲೀ ಯಾರು ಹೇಳಿದ್ದರು ಇವರಿಗೆ ಖರೀದಿ ಮಾಡುವುದಕ್ಕೆ? ಆದ್ದರಿಂದ ಇವರನ್ನು ಸಸ್ಪೆನ್‌ಷನ್‌ನಲ್ಲಿ ಇಡಬೇಕು, ತನಿಖೆಯಾಗಬೇಕು. ಎರಡನೆಯದು ಖರೀದಿಸಿರುವ ಪುಸ್ತಕಗಳನ್ನು ವಾಪಸ್

ಕಳುಹಿಸಬೇಕು. ಈಗ ಯಾವ ಸರ್ಕಾರಿ ಆಜ್ಞೆ ಪ್ರಕಾರ ಖರೀದಿ ಮಾಡುತ್ತಿದ್ದೀರಿ ಅದನ್ನು ದಯಮಾಡಿ ಓದಿ ಹೇಳಿ. ಈಗಿರತಕ್ಕ ಸರ್ಕಾರಿ ಆಜ್ಞೆ ಏನಿದೆ ಅಂದರೆ, ಲೇಟೆಸ್ಟ್ ಆಗಿ 23 ಎಲ್‌ಬಿಸಿ 94 - ದಿನಾಂಕ 23-3-97ರಲ್ಲಿ, ಇವತ್ತು ಏನೇನು ನಿಯಮಾವಳಿಗಳಿದ್ದವು ಅವೆಲ್ಲವನ್ನೂ ಗಾಳಿಗೆ ತೂರಿ ತಮಗೆ ಬೇಕಾದಂಥ ಎರಡು ಮೂರು ಪಾಯಿಂಟ್‌ಗಳನ್ನು ಇಟ್ಟುಕೊಂಡು, ದರೋಡೆ ಹಾಗೂ ಲೂಟಿ ಮಾಡುವಂತಹ ವ್ಯವಸ್ಥೆಯನ್ನು ನಿಮ್ಮ ಅಧಿಕಾರಿಗಳು ಮಾಡಿದ್ದಾರೆ. ಇದು ಹೌದೋ ಅಲ್ಲವೋ ಮತ್ತು ನಿಮ್ಮ ಸರ್ಕಾರದ ಆಜ್ಞೆ ಏನಿದೆ ಎನ್ನುವುದನ್ನು ದಯಮಾಡಿ ತಿಳಿಸಿ.

ಶ್ರೀ ಎಂ.ಸಿ.ನಾಣಯ್ಯ: ಸನ್ಮಾನ್ಯ ಅಧ್ಯಕ್ಷರೆ, ನಾನು ಇದರಲ್ಲಿ ಏನೂ ಲೋಪ ನಡೆದಿಲ್ಲ ಎಂದು ಹೇಳುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ತಾವು ದಯಮಾಡಿ ಈಗ ಗ್ರಂಥಗಳನ್ನು ಖರೀದಿ ಮಾಡಿದ್ದಿರಲ್ಲ ಅದು ಯಾವ ಸರ್ಕಾರಿ ಆದೇಶದ ಮೇರೆಗೆ ಎಂದು ಹೇಳಿ. ಆಮೇಲೆ ಎರಡನೆಯ ವಿಚಾರ.

ಶ್ರೀ ಎಂ.ಸಿ.ನಾಣಯ್ಯ: ಇಲ್ಲಿ ಯಾರನ್ನೂ ಮುಚ್ಚಿಡತಕ್ಕ ಪ್ರಯತ್ನವಾಗಲಿ, ಯಾರನ್ನು ರಕ್ಷಣೆ ಮಾಡತಕ್ಕ ಪ್ರಯತ್ನವನ್ನಾಗಲೀ ನಾವು ಮಾಡುತ್ತಾ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅನುಮತಿ ಇಲ್ಲದೆ, ಮೂರು, ನಾಲ್ಕುವರೆ ಲಕ್ಷದ ಪುಸ್ತಕಗಳನ್ನು ಖರೀದಿ ಮಾಡಲಿಕ್ಕೆ ಯಾರು ಅನುಮತಿಯನ್ನು ಕೊಟ್ಟರು?

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸಭಾಪತಿಗಳೇ, ಈಗಿರತಕ್ಕ ನಿಯಮಾವಳಿಗಳಡಿಯಲ್ಲಿ, ಈಗ ಕೇಂದ್ರ, ನಗರ ಗ್ರಂಥಾಲಯ ಮತ್ತು ಜಿಲ್ಲಾ ಕೇಂದ್ರ ಗ್ರಂಥಾಲಯಗಳ ಗ್ರಂಥಪಾಲಕರು ತಮಗೆ ನೀಡಿರುವ ಶೇಕಡ 5ರಂತೆ ಖರೀದಿಸುವ ಅಧಿಕಾರವನ್ನು ಈ ಕೆಳಗಿನ ಮಾರ್ಗದರ್ಶನದಂತೆ ಚಲಾಯಿಸಬೇಕು. 10ರಿಂದ 50 ರೂಪಾಯಿಯ ಬೆಲೆಯ ಪುಸ್ತಕಗಳು, 3ರಿಂದ 5 ಪುಸ್ತಕಗಳು ಮಾತ್ರ. (2) 52ರಿಂದ 100 ರೂಪಾಯಿಯವರೆಗೆ 2 ಪುಸ್ತಕಗಳು ಮಾತ್ರ. 100ಕ್ಕೆ ಮೇಲ್ಪಟ್ಟ ಒಂದು ಗ್ರಂಥಾಲಯಕ್ಕೆ ಒಂದು ಪುಸ್ತಕವನ್ನು ಮಾತ್ರ ಖರೀದಿ ಮಾಡಬೇಕೆಂದು ಅಧಿಕಾರವನ್ನು ಅವರಿಗೆ ಕೊಟ್ಟಿದ್ದಾರೆ. ಆ ಅಧಿಕಾರದಲ್ಲಿ ಈ 80 ಪುಸ್ತಕಗಳನ್ನು ಖರೀದಿ ಮಾಡಬಹುದಿತ್ತು. ಕೇವಲ 76 ಪುಸ್ತಕಗಳನ್ನು ಮಾತ್ರ ಖರೀದಿ ಮಾಡಿದ್ದಾರೆ ಎಂದು ನಾನು ಸಮರ್ಥನೆ ಮಾಡುವುದಿಲ್ಲ. I am not prepared to justify that. ಆದರೆ ನಾನು ಈ ಸಂದರ್ಭದಲ್ಲಿ ತೆಗೆದುಕೊಂಡಿರತಕ್ಕ ಕ್ರಮವನ್ನು ನೇರವಾಗಿ ಹೇಳುತ್ತೇನೆ. ಒಂದು ಈ ಸಮಿತಿಯ ಮುಂದೆ ಹೋಗಬೇಕಾಗಿತ್ತು, ಹೋಗಲಿಲ್ಲ. ಆದುದರಿಂದ ಸಮಿತಿಯು ಮುಂದೆ ಹೋಗದೇನೇ ಈ ಪುಸ್ತಕಗಳನ್ನು ಖರೀದಿ ಮಾಡುವಂತಹ ಅವಶ್ಯಕತೆ ಏನಿತ್ತು? ಇದರ ಬಗ್ಗೆ ಮಾನ್ಯ ಅಧ್ಯಕ್ಷರೆ, ನಾನು ಇಲಾಖಾ

ಅಧಿಕಾರಿಗಳೊಡನೆ ಚರ್ಚೆ ಮಾಡಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಮೊದಲಿನಿಂದಲೂ ಕೇಳುತ್ತಿರುವುದು even at present ಯಾವ ಒಂದು ಆದೇಶದ ಪ್ರಕಾರ ಈ ಪುಸ್ತಕಗಳನ್ನು ಖರೀದಿ ಮಾಡಿದ್ದೀರಿ? ಇದ್ದಿದ್ದನ್ನು ವಾಪಸ್ಸು ತೆಗೆದುಕೊಂಡು ಬಿಟ್ಟರು. ಹೊಸ ಆಜ್ಞೆ ನನ್ನ ಹತ್ತಿರ ಇದೆ. ಆದರೆ ಅದರಲ್ಲಿ ಏನೂ ಇಲ್ಲ. ಈಗ ಯಾವ ರೀತಿಯಲ್ಲಿ ಖರೀದಿ ಮಾಡುತ್ತಿದ್ದೀರಾ ಅದನ್ನು ಹೇಳಿ. 80 ಪರ್ಸೆಂಟ್ ಕನ್ನಡದ ಪುಸ್ತಕಗಳನ್ನು ಖರೀದಿ ಮಾಡಬೇಕಾಯ್ತು, ಇದರಲ್ಲಿ ಇದೆಯಾ? 10 ಪರ್ಸೆಂಟ್ ಇತರ ಭಾಷೆ ಎಂದು ಇತ್ತು, ಇದರಲ್ಲಿ ಇದೆಯೇ? 10 ಪರ್ಸೆಂಟ್ ಇಂಗ್ಲೀಷ್ ಪುಸ್ತಕಗಳನ್ನು ಖರೀದಿ ಮಾಡಬೇಕು ಎಂದು ಇತ್ತು ಇದನ್ನೆಲ್ಲಾ ಡ್ರಾಪ್ ಮಾಡಿದ್ದೀರಿ ನೀವು; ಈಗ ಏನು ಇದೆ ಅದನ್ನು ಹೇಳಿ ನೀವು.

ಶ್ರೀ ಎಂ.ಸಿ.ನಾಣಯ್ಯ: ಯಡಿಯೂರಪ್ಪನವರು ಬಹಳ ಉದ್ವೇಗದಿಂದ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಬಹಳ ಕಷ್ಟ ಪಟ್ಟು ಇನ್‌ಫಾರ್ಮೇಷನ್ ಕಲೆಕ್ಟ್ ಮಾಡಿ ನಿಮಗೆ ಕೊಟ್ಟಾಗ ತಪ್ಪು ಮಾಡಿದವರ ಮೇಲೆ ಕ್ರಮ ಕೈಗೊಳ್ಳುತ್ತೇವೆ ಎನ್ನುವ ಧಾರಾಳತನ ನಿಮ್ಮಲ್ಲಿ ಬರಬೇಕು. ನಿನ್ನೆ ನಿಮ್ಮ ಮುಖ್ಯಮಂತ್ರಿಗಳು ಹೇಳಿದರು, ಯಾವುದೇ ಅನುಮತಿ ಇಲ್ಲದೆ ಪಾಕಿಸ್ತಾನದ 50 ವರ್ಷದ ಸ್ವಾಂತ್ರ್ಯೋತ್ಸವದ ಪುಸ್ತಕವನ್ನು ಖರೀದಿ ಮಾಡಿದ್ದರೆ, ನಾನು ಏನು ಕ್ರಮ ಕೈಗೊಳ್ಳುತ್ತೇನೆ ಎಂಬುದನ್ನು ಆಮೇಲೆ ನೋಡಿ ಎಂದು ಹೇಳಿದ್ದಾರೆ ಇದಕ್ಕೆ ಯಾರು ಅನುಮತಿ ಕೊಟ್ಟರು ಮೊದಲನೆಯದಾಗಿ ಅದನ್ನು ಹೇಳಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಇದರಲ್ಲಿ ಏನು ವ್ಯತ್ಯಾಸ ಇದೆ. ನನಗೆ ಬಂದಿರುವ ಮಾಹಿತಿ ಪ್ರಕಾರ ಅದನ್ನು ಹೇಳಿದೆ. 10 ಲಕ್ಷ ಖರೀದಿ ಮಾಡಲಿಕ್ಕೆ ಇದ್ದು, ನಾನು ಇಲ್ಲಿ ಪ್ರಸ್ತಾಪ ಮಾಡಿದ್ದರಿಂದ ಕೇವಲ 69 ಸೆಟ್‌ಗಳಿಗೆ ಅಟ್ ಪ್ರೆಸೆಂಟ್ ನೀವು ಖರೀದಿ ಮಾಡಿ ರಸೀತಿ ಹಾಕಿದ್ದೀರಿ. ನಾನು ಕೇಳುವುದು ಏನೆಂದರೆ ಯಾರು ಇದಕ್ಕೆ ಅನುಮತಿ ಕೊಟ್ಟರು? ಅನುಮತಿ ಕೊಡದೇನೇ ಒಂದು ಲಕ್ಷದ ತೊಂಭತ್ತೈದು ಸಾವಿರದ ಪುಸ್ತಕಗಳನ್ನು ಅದು ನಮ್ಮ ದೇಶದ 50 ವರ್ಷದ ಸ್ವಾತಂತ್ರ್ಯೋತ್ಸವದ್ದೇ ಇರಬಹುದು, ಆದರೆ ಯಾವನೋ ಒಬ್ಬ ಪ್ರಕಾಶಕ ಏನೋ ಬೇಡದೇ ಇರುವುದನ್ನು ಅವನಿಗೆ ಖುಷಿ ಬಂದದ್ದನ್ನು ಬರೆದು, ಕೇವಲ ದುಡ್ಡು ಹೊಡೆಯುವುದಕ್ಕೆ ಬರೆದಿರುವಂತಹ ಈ

ಪುಸ್ತಕಗಳನ್ನು ನಾಲ್ಕೂವರೆ ಲಕ್ಷ ಕೊಟ್ಟು ಖರೀದಿ ಮಾಡಿರುವ ನಿರ್ದೇಶಕನ್ನು ಎನ್‌ಕ್ವೈರಿ ಮಾಡಿ, ಸಸ್ಪೆಂಡ್ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಇದರಲ್ಲಿ ಏನು ತಪ್ಪಿದೆ? ಎರಡನೆಯದು ಈ ಖರೀದಿಗಳನ್ನು ಯಾವ ನಿಯಮಾವಳಿಗಳ ಪ್ರಕಾರ ಮಾಡಿದ್ದೀರಿ ಮತ್ತು ನಿಮ್ಮ ಹೊಸ ನಿಯಮಾವಳಿಗಳೇನು ಎಂಬುದನ್ನು ಹೇಳಿ.

SMT. PRAMILA NESARGI: The Government Order in the name of the Governor, ಅದನ್ನು ಈ ಡೈರೆಕ್ಟರ್ ಒಂದು ಸುತ್ತೋಲೆ ಕಳುಹಿಸಿ ತಿದ್ದುಪಡಿಗಳನ್ನೆಲ್ಲಾ ನೀರಿನಲ್ಲಿ ಹೋಮ ಮಾಡುವುದಕ್ಕೆ ಯಾರು ಅಧಿಕಾರ ಕೊಟ್ಟರು? ಅಲ್ಲ ಮೆಲ್ನೋಟಕ್ಕೆ

SRI M.C.NANAIAH: On the face of this Circular, well, I think there appears to be a mistake, I agree. Please don't jump to the conclusion. We are not here to protect anybody. You have brought to the notice. The Government did not lose time in getting all the details. I think we are placing everything before you. ಮಾನ್ಯ ಸಭಾಪತಿಯವರೆ, ಮಾನ್ಯ ಯಡಿಯೂರಪ್ಪನವರು ಹೇಳಿದ್ದು ನಿಜ. ಈ ಹಿಂದೆ ಪುಸ್ತಕಗಳನ್ನು ಖರೀದಿ ಮಾಡತಕ್ಕ ಸಂದರ್ಭಧಲ್ಲಿ ಪ್ರಕಾಶಕರು 25-35 ಪರ್ಸೆಂಟ್ ಡಿಸ್‌ಕೌಂಟ್ ಕೊಡುತ್ತೇವೆ ಎಂದು ಮೇಲೆ ಮೇಲೆ ಬಿದ್ದು ಬಂದಿರತಕ್ಕ ಹಿನ್ನೆಲೆಯಲ್ಲಿ ಕಡೆಯಲ್ಲಿ ಒಂದು ರಿಟ್ ಪಿಟಿಷನ್‌ನ ಫೈಲಾಯ್ತು. ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಫೈಲ್ ಆದ ಮೇಲೆ, ಪ್ರಕಾಶಕರೇ ಹೋಗಿರತಕ್ಕ ಸಂದರ್ಭದಲ್ಲಿ, ಆ ರಿಟ್‌ಪಿಟೀಷನ್ ಯಾವುದಿತ್ತು ಅಂದರೆ, 30132/96; ಕಡೆಗೆ ಈ ಪುಸ್ತಕಗಳ ಖರೀದಿ ಮಾಡುವಲ್ಲಿ ಡಿಸ್‌ಕೌಂಟ್ ಬಗ್ಗೆ ಹೈಕೋರ್ಟಿಗೆ ಹೋಗಿ, ಅದರಲ್ಲಿ ಜಸ್ಟೀಸ್ ಬರೂಚರವರು ಈ ಕೇಸ್ ಎಲ್ಲಾ ಆರ್ಗ್ಯೂಮೆಂಟನ್ನು ಕೇಳಿದ ಮೇಲೆ he fixed guidelines, in what manner it should be purchased, what should be the discount, how it should be run, ಎಂದು ಅವರು ಕೊಟ್ಟಿರತಕ್ಕಂಥ ತೀರ್ಪಿನ ಹಿನ್ನೆಲೆಯಲ್ಲಿ ಆದ್ದರಿಂದಲೇ ಅವರು ಏನು ಮಾಡಿದರು ಅಂದರೆ 1996ರಲ್ಲಿ ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯದ ಪುಸ್ತಕಗಳನ್ನು ಖರೀದಿಸುವಾಗ ಡಿಸ್‌ಕೌಂಟ್ ಬಗ್ಗೆ ಕೆಲವು ಸೂಚನೆಗಳನ್ನು ನೀಡಿತು. ಇದರ ಆಧಾರದ ಮೇಲೆ ಸರ್ಕಾರ ಆದೇಶ ಸಂಖ್ಯೆ ಇಡಿ 23 ದಿನಾಂಕ 24-3-1997ರಲ್ಲಿ ತಿದ್ದುಪಡಿ ಆದೇಶವನ್ನು ಹೊರಡಿಸಿ, ಅದರಂತೆ ಸಾಧ್ಯವಾದಷ್ಟೂ ಮಟ್ಟಿಗೆ ಪ್ರಕಾಶಕರಿಂದಲೇ ಪುಸ್ತಕವನ್ನು ಖರೀದಿಸಲು, ಪುಸ್ತಕಗಳನ್ನು ಖರೀದಿಸುವಾಗ ಕನಿಷ್ಟ ಶೇಕಡ 15ರಂತೆ ಸೋಡಿಯನ್ನು ನಿವ್ವಳ ಬೆಲೆಯ ಮೇಲೆ ಪಡೆಯಲು, ಹಾಗೂ ಸರಬರಾಜು ಆದೇಶ ನೀಡುವ ಮೊದಲು ಜಾಹೀರಾತನ್ನು ವೃತ್ತಪತ್ರಿಕೆಗಳಲ್ಲಿ ನೀಡಲು, ಮುಂತಾದ ಷರತ್ತುಗಳನ್ನು ವಿಧಿಸಿದೆ. ಈ

ತಿದ್ದುಪಡಿಯ ಆದೇಶದಂತೆ, ದಿನಾಂಕ 8-11-95ರ ಅನುಬಂಧದಲ್ಲಿನ ಪುಸ್ತಕ ಖರೀದಿ ವಿಧಾನಕ್ಕೆ ಸಂಬಂಧಿಸಿದಂತೆ ಪೂರ್ಣವಾಗಿ ರದ್ದುಪಡಿಸುತ್ತಾ, ಅದನ್ನು ತಾವು ಓದಿದ್ದೀರಿ. ಈ 15 ಸೋಡಿಯನ್ನು ಕೊಡತಕ್ಕದ್ದು ಮತ್ತು ಅವರು ಹಾಕಿರತಕ್ಕಂಥ ಕೆಲವು ನಿಯಮಗಳನ್ನು ಇವರು ಅಳವಡಿಸಬೇಕೆಂದು ತೀರ್ಮಾನ ಮಾಡಿದಾಗ ಆ ಒಂದು ಸರ್ಕಾರಿ ಆಜ್ಞೆಯನ್ನು ಮಾಡಬೇಕಾದರೆ ಹಿಂದಿರತಕ್ಕ ಸರ್ಕಾರಿ ಆಜ್ಞೆ ಅದರ ಬದಲಾಗಿ ಎಂದು ಹೇಳುವಾಗ ಅದನ್ನು ರದ್ದುಪಡಿಸಿದರು. ಇದರ ಪರಿಣಾಮ ಏನಾಯ್ತು? ಪರಿಣಾಮ ನಿಯಮಗಳಲ್ಲಿರತಕ್ಕ ಈ ಖರೀದಿಯ ಸೂತ್ರ ಯಾವುದಿದೆ, 80-10-10 ಎಂದು ಹೇಳತಕ್ಕಂಥದ್ದು, ಅದು ಹೊರಟು ಹೋಯಿತು. ಮಾನ್ಯ ಸಭಾಧ್ಯಕ್ಷರೆ, ಇದು ಸರ್ಕಾರದ ಗಮನಕ್ಕೆ ಬಂದಾದ ಮೇಲೆ, ಇದನ್ನು ನೀವು ನಿನ್ನೆ ಎತ್ತಿದ್ದೀರಿ, ಈ ಸರ್ಕಾರಿ ಆಜ್ಞೆಯನ್ನು ನೋಡಿದ್ದಾಯ್ತು. ನಾವು ಕಾರ್ಯದರ್ಶಿಗಳ ಜೊತೆ ಮತ್ತು ಮಂತ್ರಿಗಳ ಚರ್ಚೆ ಮಾಡಿಯಾಯ್ತು. ಇವತ್ತಿನವರೆಗೆ ಪುಸ್ತಕದ ಖರೀದಿಯಲ್ಲಿ 80-10-10 ಎಂದು ಹೇಳುವುದರಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಆದರೆ ಈ ರದ್ದು ಪಡಿಸುತ್ತಾ ಎಂದು ಒಂದು ಬಂದಿರುವುದರಿಂದ, ಅದಕ್ಕೆ ಸೂಕ್ತವಾಗಿರತಕ್ಕ ಒಂದು ಸುತ್ತೋಲೆಯನ್ನು ಪುನಃ ಇನ್ನೊಂದು ಆಜ್ಞೆ ಮುಖಾಂತರ ಹೊರಡಿಸಿದ್ದಾರೆ. First time ನಿನ್ನೆ ನೀವು ಹೇಳಿದ್ದಕ್ಕೆ ಈಗಾಗಲೇ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. It will be issued tomorrow. ಆದರೆ ಇವತ್ತಿನವರೆಗೆ 80-10-10ರಲ್ಲಿ ಯಾವುದೇ ತರಹದ ಬದಲಾವಣೆ ಇಲ್ಲ. ಆದರೆ ಒಂದು ಮುಖ್ಯವಾಗಿರತಕ್ಕಂಥದ್ದು, ಈ ಪುಸ್ತಕ ಖರೀದಿ ಮಾಡಲಿಕ್ಕೆ ಒಂದು ವಿವೇಚನೆಯನ್ನು ಕೊಟ್ಟಿದ್ದಾರೆ. ಒಂದೊಂದು ಗ್ರಂಥಾಲಯದಲ್ಲಿರತಕ್ಕಂಥ ಗ್ರಂಥಪಾಲಕರಿಗೆ 5 ರೂಪಾಯಿಂದ 10 ರೂಪಾಯಿಯವರೆಗೆ, 10 ರೂಪಾಯಿಯಿಂದ 100 ರೂಪಾಯಿವರಗೆ ಮತ್ತು 100 ರೂಪಾಯಿಗೆ ಒಳಪಟ್ಟು ಒಂದು ವಿವೇಚನೆಯನ್ನು ಕೊಟ್ಟುಬಿಟ್ಟಿದ್ದಾರೆ. 100 ರೂಪಾಯಿ ಮೇಲೆ ಒಂದು ಗ್ರಂಥಾಲಯಕ್ಕೆ ಒಂದು ಪುಸ್ತಕ ಮಾತ್ರ. ಇಲ್ಲಿರತಕ್ಕ 80 ಗ್ರಂಥಾಲಯಕ್ಕೆ ಅಧಿಕಾರ ನಿರ್ದೇಶಿಸಿದಂತೆ 67 ಪುಸ್ತಕಗಳನ್ನು ಖರೀದಿ ಮಾಡಿದ್ದಾರೆ. ಪಾಕಿಸ್ತಾನಕ್ಕೆ ಸಂಬಂಧಪಟ್ಟಹಾಗೆ ಇಂಡಿಯಾಗೆ ಸಂಬಂಧಪಟ್ಟಹಾಗೆ 79 ಪುಸ್ತಕಗಳನ್ನು ಖರೀದಿ ಮಾಡಿದರು. ಆದರೂ ಕೂಡ ನಾನು ಹೇಳುತ್ತೇನೆ, ಖರೀದಿ ಮಾಡಿರತಕ್ಕ ಈ ವ್ಯವಹಾರದಲ್ಲಿ ಇದನ್ನು ಆ ಸಮಿತಿಯ ಗಮನಕ್ಕೆ ತರಬೇಕಾಗಿತ್ತು, ಆದರೆ ಇದನ್ನು ಸಮಿತಿಯ ಗಮನಕ್ಕೆ ತರಲಿಲ್ಲ. ಆದರೆ ನಿಯಮಾವಳಿಗಳ ಅಡಿಯಲ್ಲಿ ಬರತಕ್ಕ ಅಧಿಕಾರವನ್ನು ಚಲಾಯಿಸಿ ಪುಸ್ತಕವನ್ನು ಖರೀದಿ ಮಾಡಿದ್ದಾರೆಂದು ನಾನು ಹೇಳುತ್ತೇನೆ. ಆದರೆ ಇದು ಸೂಕ್ತ ಎಂದು ಹೇಳುವುದಕ್ಕೆ ನಾನು ತಯಾರಾಗಿ ಇಲ್ಲ. ಮಾನ್ಯ ಸಭಾಪತಿಗಳೇ, ಇವತ್ತು ಅವರನ್ನು ಅಮಾನತ್ತಿನಲ್ಲಿ ಇಡಬೇಕೆಂದು ಅವರು ಕೇಳುತ್ತಿದ್ದಾರೆ, ಆದರೆ ಇವತ್ತು ಈ ಒಂದು ಪರಿಸ್ಥಿತಿಯಲ್ಲಿ ನಾನು ಉತ್ತರ ಕೊಟ್ಟಾದ ಮೇಲೂ ಕೂಡ ಇದು ಈ ಸದನದಲ್ಲಿ ಅಮಾನತ್ತಿನಲ್ಲಿ ಇಡಬೇಕಾದ ಒಂದು ವಿಚಾರ ಅಲ್ಲ, ಇದರ ಬಗ್ಗೆ ತನಿಖೆಯನ್ನು ಮಾತ್ರ ಮಾಡಿಸುತ್ತೇನೆ.

7.40 ಪಿ.ಎಂ

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವೇ ಮಾಡಿಕೊಂಡ ನಿಯಮಾವಳಿ ಪ್ರಕಾರ ಒಬ್ಬ ಪ್ರಕಾಶಕರಿಂದ ಮೂವತ್ತೈದು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಮೊತ್ತದ ಪುಸ್ತಕಗಳನ್ನು ಖರೀದಿಸುವುದಕ್ಕೆ ಅವಕಾಶವಿರಲಿಲ್ಲ. ಈಗ ನೀವೇ ಹೇಳಿರುವ ಪ್ರಕಾರ ಒಬ್ಬ ಪ್ರಕಾಶಕರಿಂದ ನಾಲ್ಕೂವರೆ ಲಕ್ಷ ರೂಪಾಯಿಗಳಿಗೆ ಒಂದೇ ರೀತಿಯ ಪುಸ್ತಕಗಳನ್ನು ಖರೀದಿಸಿದ್ದಾರೆ. ಈ ರೀತಿ ಖರೀದಿಸುವಾಗ ಸಮಿತಿ ಮುಂದೆ ಹೋಗದಿರುವುದು ಅಕ್ಷಮ್ಯ ಅಪರಾಧ. ಈ ಕೆಲಸವನ್ನು ಅತ್ಯಂತ ಉನ್ನತ ಸ್ಥಾನದಲ್ಲಿರುವ ನಿರ್ದೇಶಕರು ಮಾಡಿದ್ದಾರೆ. ಎರಡನೆಯದಾಗಿ, ಈ ವಿಷಯವನ್ನು ನಾನು ನಿನ್ನೆ ಪ್ರಸ್ತಾಪಿಸಿದೆ. ನಿಮ್ಮ ನಿರ್ದೇಶಕರು ಉದ್ದೇಶಪೂರ್ವಕವಾಗಿ ಹಿಂದಿನ ನಿಯಮಾವಳಿ ಎಲ್ಲವನ್ನೂ ಕಿತ್ತೊಗೆದು ಹೊಸದಾದ ಒಂದು ಆಜ್ಞೆ ಹೊರಡಿಸಿದರು. ಶೇಕಡಾ 80ರಷ್ಟು ಕನ್ನಡ ಪುಸ್ತಕಗಳನ್ನು ಖರೀದಿಸಬೇಕೆಂದು ಇದ್ದುದನ್ನೆಲ್ಲವನ್ನೂ ಡ್ರಾಪ್ ಮಾಡಿದರು. ಇದರ ರಕ್ಷಣೆ ತೆಗೆದುಕೊಂಡು ಇಡೀ ಒಂದು ವರ್ಷ ಲೂಟಿ ಮಾಡುವಂಥ ವ್ಯವಸ್ಥೆ ಮಾಡಿದ್ದರು. ನಾನು ನಿನ್ನೆ ಪ್ರಸ್ತಾಪಿಸಿದಾಗ ಇವೊತ್ತು ಅಥವಾ ನಾಳೆ ಈ ಕುರಿತ ಆಜ್ಞೆ ಹೊರಡಿಸುತ್ತೇವೆಂದು ನೀವು ಹೇಳುತ್ತಿದ್ದೀರಿ. ಅಂದರೆ, ಒಬ್ಬ ನಿರ್ದೇಶಕರಾದ ಯಾರು ಅಲ್ಲಿ 15-20 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೋ ಹಿಂದಿದ್ದಂಥ ನಿಯಮಾವಳಿಯನ್ನು ಗಾಳಿಗೆ ತೂರಿ ಇನ್ನೊಂದು ಆದೇಶ ಹೊರಡಿಸಬೇಕಾದರೆ ಹಿಂದೆ ಇದ್ದುದು ಯಾವುದು ಅಗತ್ಯವಿದೆಯೋ ಇಲ್ಲವೋ ಸೇರಿಕೊಳ್ಳಬೇಕಾಗಿತ್ತು ತಾನೇ? ಅಂತಹ ವ್ಯಕ್ತಿಯನ್ನು ಹೇಗೆ ಮುಂದುವರಿಸುತ್ತೀರಿ? ಪ್ರತಿ ವರ್ಷ 40-50 ಲಕ್ಷ ರೂಪಾಯಿಗಳ ಪುಸ್ತಕಗಳು ಖರೀದಿಯಾಗಿದೆ. ನನ್ನ ಅಂದಾಜಿನ ಪ್ರಕಾರ ಸುಮಾರು ಪುಸ್ತಕಗಳ ಖರೀದಿಯಿಂದ ಶೇಕಡಾ ಇಪ್ಪತ್ತರಷ್ಟು ಕಮೀಷನ್ ಪಡೆದುಕೊಂಡು ಕುಳಿತಿದ್ದಾರೆ. ಅದಕ್ಕೋಸ್ಕರ ಹೇಳುತ್ತಿದ್ದೇನೆ: ನೀವು ಇದರ ಬಗ್ಗೆ ಇನ್‌ಕ್ವೈರಿ ಮಾಡಿ, ಮೊದಲು ಆ ವ್ಯಕ್ತಿಯನ್ನು ಆ ಜಾಗದಿಂದ ಬದಲಾಯಿಸಿ. ನಾಲ್ಕೂವರೆ ಲಕ್ಷ ರೂಪಾಯಿಗಳಷ್ಟು ಕಾನೂನುಬಾಹಿರವಾಗಿ ಪುಸ್ತಕಗಳನ್ನು ಏನು ಖರೀದಿಸಿದ್ದಾರೆ, ಪ್ರಕಾಶಕರು ಇವರು ಶಾಮೀಲಾಗಿ ಅಗತ್ಯವಿಲ್ಲದಿರುವಂಥ ಪುಸ್ತಕಗಳನ್ನು ಖರೀದಿಸಿದ್ದಾರೆ. ಅವುಗಳನ್ನು ವಾಪಸ್ಸು ಕಳುಹಿಸಿ ಆತನಿಂದ ರೆಕವರಿ ಮಾಡಿಸಿ. ಇದಕ್ಕಾದರೂ ತೊಂದರೆಯಿದೆಯೇ? ಇವೊತ್ತು ನಾನು ಇದನ್ನು ಇಲ್ಲಿ ಪ್ರಸ್ತಾಪಿಸದೇ ಇದ್ದರೆ ನಿಮಗೆ ಖುಷಿ ಬಂದಂತೆ ಪುಸ್ತಕಗಳನ್ನು ಖರೀದಿಸಬಹುದಿತ್ತು. ಇಷ್ಟೇ ಅಲ್ಲದೆ, ಹದಿಮೂರುವರೆ ಸಾವಿರ ರೂಪಾಯಿಗಳ ಇಂಗ್ಲೀಷ್ ಕಿಟ್ ಖರೀದಿಸಬೇಕೆಂದು ಈ ವ್ಯಕ್ತಿ ಗ್ರಾಮ ಪಂಚಾಯಿತಿವರೆವಿಗೂ ಹೋದರು. ಗ್ರಾಮೀಣ ಪ್ರದೇಶಗಳಲ್ಲಿ ಕನ್ನಡವನ್ನೇ ಸರಿಯಾಗಿ ಓದುವುದಕ್ಕೆ ಬರುವುದಿಲ್ಲ. ಅಂದರೆ, ಈ ಅಧಿಕಾರಿ ಪಬ್ಲಿಷರ್ ಜೊತೆ ಶಾಮೀಲಾಗಿ ಬೇರೆ ಪುಸ್ತಕಗಳನ್ನು ಖರೀದಿಸಿ ವ್ಯವಹಾರ ಮಾಡುವುದಕ್ಕೆ ಉನ್ನತ ಸ್ಥಾನದಲ್ಲಿ ಕೂರಿಸಿದ್ದೀರಾ? ಇಷ್ಟೆಲ್ಲವನ್ನೂ ಹೇಳಿದ ನಂತರ ನಿಮಗೆ

ಮನವರಿಕೆಯಾಗಿಲ್ಲವೇ? ಈಗ ತನಿಖೆ ಮಾಡಿ ಆ ವ್ಯಕ್ತಿಯನ್ನು ಆ ಜಾಗದಿಂದ ಖಾಲಿ ಮಾಡಿಸಿ.

ಶ್ರೀ ಎಂ.ಸಿ.ನಾಣಯ್ಯ: ಈ ವಿಚಾರದಲ್ಲಿ ದಿನಾಂಕ 24.3.97ಕ್ಕೆ ಆಜ್ಞೆ ಬಂದಿದೆ. ಇದಾದ ನಂತರ ಇಲ್ಲಿಯವರೆಗೆ ಎಲ್ಲಿಯಾದರೂ ಈ ಒಂದು ಆಜ್ಞೆಯಿಂದ ಲಾಭ ಪಡೆಯುವುದರ ಮೂಲಕ ಏನಾದರೂ ಹೆಚ್ಚು ಪುಸ್ತಕಗಳನ್ನು ಖರಿದಿಸಿದ್ದರೆ ಅದರ ಬಗ್ಗೆ ಸಂಪೂರ್ಣ ತನಿಖೆ ಮಾಡಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಎರಡನೆಯದಾಗಿ, ತಾವು ಹೇಳಿದಂತೆ ಸುಮಾರು 40-50 ಲಕ್ಷ ರೂಪಾಯಿ ಮೊತ್ತದಷ್ಟು ಪುಸ್ತಕಗಳನ್ನು ಅಥವಾ ಅದು 20 ಲಕ್ಷ ಆಗಲಿ, 30 ಲಕ್ಷ ಆಗಲಿ ಅಥವಾ 10 ಲಕ್ಷ ಆಗಲಿ, 15 ಲಕ್ಷ ಆಗಲಿ ಎಲ್ಲಾದರೂ ಆಜ್ಞೆಯ ಲಾಭ ಪಡೆದುಕೊಂಡು ನಿರ್ದೇಶಕರಾಗಲಿ ಯಾರೇ ಆಗಲೀ ಕೈಗೊಂಡಿದ್ದರೆ ಅದರ ಬಗ್ಗೆಯೂ ತನಿಖೆ ಮಾಡುತ್ತೇವೆ. ಮೂರನೆಯದಾಗಿ, ಬಹುಶಃ ಯಾವುದಾದರೂ ಅವ್ಯವಹಾರ ಮಾಡಿ ಪ್ರಕಾಶಕರೊಂದಿಗೆ ಅವರು ಜೋತು ಬಿದ್ದು ಕಮೀಷನ್ ಪಡೆದುಕೊಂಡಿರುವ ವಿಚಾರ ಬಂದರೆ ನಾವು ಅದರ ಬಗ್ಗೆಯೂ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ನಾನು ಇಷ್ಟನ್ನು ನೇರವಾಗಿ ಹೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರನ್ನು ಆ ಜಾಗದಿಂದ ಖಾಲಿ ಮಾಡಿಸಿ, ಅವರು ಬಹಳ ಪ್ರಭಾವಿ ವ್ಯಕ್ತಿಗಳಾಗಿರುವುದರಿಂದ, ಅವರನ್ನು ಸಸ್ಪೆಂಡ್ ಮಾಡಬೇಡಿ, ಅವರನ್ನು ಆ ಇಲಾಖೆಯಿಂದ ಬೇರೆಡೆಗೆ ಬದಲಾಯಿಸಿ, ಎನ್‌ಕ್ವೈರಿ ಮಾಡಿಸಿ, ಎನ್‌ಕ್ವೈರಿಯಿಂದ ಅವರು ಪ್ರಾಮಾಣಿಕರೆಂದು ಸಾಬೀತಾದರೆ ಅವರನ್ನು ವಾಪಸ್ಸು ತನ್ನಿ, ನಾನು ಬೇಡವೆನ್ನುವುದಿಲ್ಲ. ಇದನ್ನಾದರೂ ಮಾಡಬಹುದೇ?

ಶ್ರೀ ಎಂ.ಸಿನಾಣಯ್ಯ: ಸರ್ಕಾರದ ವತಿಯಿಂದ ಇಷ್ಟೆಲ್ಲಾ ನೇರವಾಗಿ...

ಶ್ರೀ ಬಿ.ಎಸ್.ಯಡಿಯೂರಪ್ಪ: ಮೂವತ್ತೈದು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಮೊತ್ತದ ಪುಸ್ತಕಗಳನ್ನು ಒಬ್ಬ ಪ್ರಕಾಶಕರಿಂದ ಖರೀದಿಸಬಾರದೆಂಬ ನಿಯಮವಿದ್ದರೂ ಸಹ ಉನ್ನತ ಸ್ಥಾನದಲ್ಲಿರುವ ಒಬ್ಬ ಅಧಿಕಾರಿ ನಾಲ್ಕೂವರೆ ಲಕ್ಷ ರೂಪಾಯಿ ಮೊತ್ತದಷ್ಟು ಪುಸ್ತಕಗಳನ್ನು ಖರೀದಿಸುತ್ತಾರೆಂದರೆ ಇದು ಅಪರಾಧವಲ್ಲವೇ? ಇದು ಒಳ ವ್ಯವಹಾರವೆಂದು ನಿಮಗೆ ಅನ್ನಿಸುವುದಿಲ್ಲವೇ? ಗ್ರಂಥಗಳನ್ನು ಖರೀದಿಸುವುದಕ್ಕೆ ಸಮಿತಿ ಏಕೆ ಬೇಕಾಗಿತ್ತು? ಸಮಿತಿ ಮುಂದೆ ಏಕೆ ಕಳುಹಿಸಲಿಲ್ಲ? ಸಮಿತಿ ಅಸ್ತಿತ್ವದಲ್ಲಿ ಇದೆಯೇ? ಇಲ್ಲವೇ?

ಶ್ರೀ ಎಂ.ಸಿ.ನಾಣಯ್ಯ: ಸಮಿತಿ ಮುಂದೆ ಬರಲಿಲ್ಲವೆಂದು ನಾನೇ ಹೇಳಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವಲ್ಲ ಅದನ್ನು ಹೇಳಿದ್ದು, ನಾನು ಅದನ್ನು ಪಾಯಿಂಟ್ ಔಟ್ ಮಾಡುತ್ತಿದ್ದೇನೆ, ನಿನ್ನೆ ನಾನು ಹೇಳಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ: ಸರ್ಕಾರಕ್ಕೆ ಧೈರ್ಯವಿದ್ದರೆ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ತಕ್ಷಣ ಘೋಷಣೆ ಮಾಡಬೇಕು.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಒಂದು ವೇಳೆ ರೂಲ್ಸ್ ಅನ್ನು ವಯಲೇಟ್ ಮಾಡಿ ಒಬ್ಬ ಅಧಿಕಾರಿ ವರ್ತಿಸಿದರೆ ಆತನಿಗೆ ಏನು ಶಿಕ್ಷೆ ವಿಧಿಸುತ್ತೀರಿ?

ಶ್ರೀ ಎಂ.ಸಿ.ನಾಣಯ್ಯ: ರೂಲ್ಸ್ ಅನ್ನು ವಯಲೇಟ್ ಮಾಡಿರುವ ಬಗ್ಗೆ ಎಲ್ಲಾದರೂ with a malafide intention of defrauding the Government, well, I think he shall be kept under suspension and an enquiry should be ordered and he should be dismissed, if it is proved.

SRI M.MALLIKARJUNA KHARGE: Whether malafide, unintentional or intentional,

SRI M.C.NANAIAH: If the rules have seen violated with the bonafide intention, not with an intent of defrauding the Government that is a thing need to be excused.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಧಿಕಾರವಿಲ್ಲದೆ ನಾಲ್ಕೂವರೆ ಲಕ್ಷ ರೂಪಾಯಿಗಳಷ್ಟು ಪುಸ್ತಕಗಳನ್ನು ಖರೀದಿಸುತ್ತಾರೆ.

SRI M.MALLIKARJUNA KHARGE: So, in good faith if he violates the rules...

ಶ್ರೀ ಬಿ.ಎಸ್.ಯಡಿಯೂರಪ್ಪ: ಯಾವ ನಿಯಮಾವಳಿ ಪ್ರಕಾರ ಪುಸ್ತಕಗಳನ್ನು ಖರೀದಿಸಬೇಕೆಂದು ಹೇಳಿದರು? ಯಾವ ನಿಯಮಾವಳಿ ಪ್ರಕಾರ ನಾಲ್ಕೂವರೆ ಲಕ್ಷ ರೂಪಾಯಿಗಳ ಪುಸ್ತಕಗಳನ್ನು ಖರೀದಿಸಿದರು? ಆ ಪಾಕಿಸ್ತಾನದ ಪುಸ್ತಕದ ಅಗತ್ಯವೇನಿತ್ತು?

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ರೂಲ್ಸ್ ಅನ್ನು ವಯಲೇಟ್ ಮಾಡಿದ್ದರೆ ನೀವು ಏನು ಶಿಕ್ಷೆ ಕೊಡುತ್ತೀರೋ ಅದನ್ನು ಕೊಡಿ.

ಶ್ರೀ ಎಂ.ಸಿ.ನಾಣಯ್ಯ: ಇದರ ಬಗ್ಗೆ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಎನ್‌ಕ್ವೈರಿ ಅಲ್ಲ, ಅವರನ್ನು ಸಸ್ಪೆಂಡ್ ಮಾಡಬೇಕು. ಇವೊತ್ತು ಇವರು ಕಾನೂನು ಬಾಹಿರವಾಗಿ ಪುಸ್ತಕಗಳನ್ನು ಖರೀದಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮೇಲ್ನೋಟಕ್ಕೆ ಇದು ಸಾಬೀತಾಗಿದೆಯೆಂದು ಹೇಳುತ್ತಿದ್ದಾರೆ. ಹಾಗೆ ಹೇಳಿದ ನಂತರ ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡುವುದು ಬೇಡ, ಅವರನ್ನು ಬೇರೆ ಇಲಾಖೆಗಾದರೂ ವರ್ಗಾಯಿಸಬೇಕಲ್ಲಾ.

ಶ್ರೀ ಬಿ.ಎಸ್.ಯಡಿಯೂರಪ್ಪ: ಆತನನ್ನು ಸಸ್ಪೆಂಡ್ ಮಾಡಬೇಡಿ, ಸಸ್ಪೆಂಡ್‌ಗೆ ನಾನು ಒತ್ತಾಯ ಮಾಡುವುದಿಲ್ಲ, ಅದು ನಿಮಗೆ ಮಾಡುವುದಕ್ಕಾಗುವುದಿಲ್ಲವೆಂಬುದು ಗೊತ್ತಿದೆ. ಅವರನ್ನು ಆ ಇಲಾಖೆಯಿಂದ ಬೇರೆ ಜಾಗಕ್ಕೆ ಕಳುಹಿಸಿ ಎನ್‌ಕ್ವೈರಿ ಮಾಡಿ, ಇದು ಕಷ್ಟವೇ?

ಶ್ರೀ ವಾಟಾಳ್ ನಾಗರಾಜ್: ಇದರಲ್ಲಿ ಮೇಲ್ನೋಟಕ್ಕೆ ಅನ್ಯಾಯ ನಡೆದಿರುವುದು ತಮ್ಮ ಗಮನಕ್ಕೆ ಬಂದಿದೆಯೆಂದು ಕಾನೂನು ಹಾಗೂ ಸಂಸದೀಯ ಸಚಿವರಾದ ತಾವೇ ಹೇಳಿದ್ದೀರಿ. ತಮ್ಮ ಗಮನಕ್ಕೆ ಬಂದ ನಂತರವೂ ಈಗ ಅವರನ್ನು ಅಲ್ಲಿಂದ ಬದಲಾವಣೆ ಮಾಡಬಹುದಲ್ಲ, ಇದರಲ್ಲೇನಿದೆ?

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸರ್ಕಾರಿ ಆದೇಶವನ್ನು ವಯಲೇಟ್ ಮಾಡಿದ್ದಾರೆ. ವಯಲೇಟ್ ಮಾಡಿದವರಿಗೆ ಸರ್ಕಾರದ ಕಾನೂನಿನ ಪ್ರಕಾರ ಏನು ಶಿಕ್ಷೆ ವಿಧಿಸಬೇಕೆಂದಿದೆಯೋ ಅದನ್ನು ವಿಧಿಸಿ, ಬೇರೆ ಏನೂ ಕೇಳುತ್ತಿಲ್ಲ. You yourself admitted that he has violated the rules. When he violates the rules what is the punishment?

ಶ್ರೀ ಬಿ.ಎಸ್.ಯಡಿಯೂರಪ್ಪ: ಇಲ್ಲದಿದ್ದರೆ, ಈ ಕೇಸ್‌ನಲ್ಲಾದರೂ ತಾವು ಸದನ ಸಮಿತಿ ಮಾಡಿ, ನಿಮ್ಮ ಬಗ್ಗೆ ನಮಗೆ ವಿಶ್ವಾಸವಿದೆ. ಸದನ ಸಮಿತಿ ಮಾಡಿದರೆ ನಿಮ್ಮ ಅನೇಕ ಅವ್ಯವಹಾರಗಳನ್ನು ನಾನು ಬಯಲಿಗೆಳೆಸುತ್ತೇನೆ, ನನ್ನ ಹತ್ತಿರ ಅನೇಕ ದಾಖಲೆಗಳಿವೆ, ಇದೊಂದೇ ಅಲ್ಲ. ನೀವೇನೂ ಮಾಡಬೇಡಿ, ಸಸ್ಪೆಂಡ್‌ನಲ್ಲಿಟ್ಟು ಎನ್‌ಕ್ವೈರಿ ಮಾಡಿಸಿ, ಅದು ಆಗುವುದಿಲ್ಲವೆಂದರೆ ಸದನ ಸಮಿತಿ ಮಾಡಿ. ನನ್ನ ಹತ್ತಿರ ಅನೇಕ ದಾಖಲೆಗಳಿದ್ದು ಅದನ್ನು ನಾನು ಕೊಡುತ್ತೇನೆ. ಹದಿನೈದು ವರ್ಷಗಳಿಂದ ಎಷ್ಟು ಲೂಟಿ ನಡೆದಿದೆಯೆಂದು ನಾನು ಸಾಬೀತು ಮಾಡುತ್ತೇನೆ. ನಿಮಗೇನು ತೊಂದರೆ ಇದೆ?

ಶ್ರೀ ಹೆಚ್.ಎನ್.ನಂಜೇಗೌಡ: ಈ ಹಿಂದೆ ಅರಣ್ಯ ಇಲಾಖೆ ಬಗ್ಗೆ ಗಲಾಟೆಯಾದಾಗ

ಸ್ವಲ್ಪ ಅನುಮಾನ ಬಂತು. ಆಗ ಆ್ಯಕ್ಷನ್ ತೆಗೆದುಕೊಂಡು ರಿಪೋರ್ಟ್ ಕೊಡಬೇಕೆಂದು ತಾವೇ ಅಷ್ಟಣೆ ಕೊಡಿಸಿದ್ದಿರಿ. ಅದನ್ನು ಕೊಡಲಿಲ್ಲ, ಅದು ಬೇರೆ ವಿಷಯ. ಈಗ ಮಂತ್ರಿಗಳು ಲೋಪ-ದೋಷವಾಗಿರುವುದನ್ನು ಒಪ್ಪಿಕೊಳ್ಳುತ್ತಿದ್ದರೂ ತಾವೇಕೆ ದೇವರು ಕುಳಿತಂತೆ ಕುಳಿತುಕೊಂಡಿರಿ? ಇವರ ಕಿವಿ ಹಿಂಡಿ ಆ್ಯಕ್ಷನ್ ತೆಗೆದುಕೊಳ್ಳಬೇಕೆಂದು ಹೇಳಬಾರದೇ?

ಅಧ್ಯಕ್ಷರು: ನನಗೆ ಇವೊತ್ತು ಗೋಪಾಲಕೃಷ್ಣ ಅಡಿಗರ ಗೀತೆಯೊಂದು ಜ್ಞಾಪಕಕ್ಕೆ ಬರುತ್ತಿದ್ದು, ಆಗಿನಿಂದ ಏನೇ ಪ್ರಶ್ನಿಸಿದರೂ ಮರೆಯುವುದಕ್ಕಾಗುತ್ತಿಲ್ಲ. 'ಯಾವ ಮೋಹನ ಮುರಳಿ ಕರೆಯಿತು ದೂರ ತೀರಕೆ ನಿನ್ನನು....' ಇದು ಬಿಟ್ಟು ಬೇರೆ ಏನೂ ಹೊಳೆಯುತ್ತಿಲ್ಲ. ಹಾಗೆ ನೆನಪಿಸಿಕೊಂಡು ಇದ್ದು ಬಿಟ್ಟಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಹಾಗೆ ಒಪ್ಪಿಕೊಂಡ ನಂತರವೂ, ಈಗ ಕೆಲವು ವಿಚಾರದಲ್ಲಿ ರೂಲ್ಸ್ ವಯಲೇಟ್ ಮಾಡಲಿಲ್ಲವೆಂದು ಡಿಫೆಂಡ್ ಮಾಡಿಕೊಳ್ಳುವುದು ಸರಿ. ಆದರೆ, ಈ ವಿಚಾರದಲ್ಲಿ ರೂಲ್ಸ್ ಅನ್ನು ವಯಲೇಟ್ ಮಾಡಿ ಆತ ಆ ಕೆಲಸ ಮಾಡಿದ್ದಾನೆಂದು ಹೇಳಿದ ನಂತರ ನಿಮ್ಮ ಸಿವಿಲ್ ಸರ್ವಿಸ್ ರೂಲ್ಸ್ ಪ್ರಕಾರ ಆ್ಯಕ್ಷನ್ ತೆಗೆದುಕೊಳ್ಳಬೇಕಲ್ಲವೇ? ಅದನ್ನು ಏಕೆ ಮಾಡುತ್ತಿಲ್ಲ? ತಪ್ಪು ಮಾಡಿದಂಥ ಯಾವುದೇ ಅಧಿಕಾರಿಗಳನ್ನೂ ಕೂಡ ಸ್ಪೇರ್ ಮಾಡುವುದಿಲ್ಲವೆಂದು ಹೇಳಿದ್ದೀರಿ, ಮತ್ತೆ ಈ ಪ್ರಕರಣದಲ್ಲಿ ಏಕೆ ಡಿಫೆಂಡ್ ಮಾಡುತ್ತಿದ್ದೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ತಾವು 15 ನಿಮಿಷಗಳ ಕಾಲ ಸದನವನ್ನು ಮುಂದೂಡಿದರೆ ನಾನು ಈ ವಿಚಾರದಲ್ಲಿ ತಮಗೆ ಕನ್‌ವಿನ್ಸ್ ಮಾಡುತ್ತೇನೆ. ನಾಣಯ್ಯನವರೆ, ಇವೊತ್ತು ಈ ಕೇಸ್‌ನಲ್ಲಿ ತಾವು ಡಿಫೆಂಡ್ ಮಾಡಿಕೊಂಡರೆ ನಿಮ್ಮ ಬಗ್ಗೆ ನಮಗಿರುವ ವಿಶ್ವಾಸ ಕಳೆದುಕೊಳ್ಳಬೇಕಾಗುತ್ತದೆ. ನಿಜವಾಗಿಯೂ ನಿಮ್ಮ ಸರ್ಕಾರಕ್ಕೆ ಭವಿಷ್ಯವಿಲ್ಲ. ಇಲ್ಲವಾದರೆ. 'ಯಡಿಯೂರಪ್ಪನವರೆ ಅವರಿಗೆ ಪ್ರಭಾವಿ ವ್ಯಕ್ತಿಗಳ ಬೆಂಬಲವಿದೆ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವಂಥ ಶಕ್ತಿ ನನಗಿಲ್ಲ'ವೆಂದು ಅದನ್ನಾದರೂ ಹೇಳಿ. ಇದು ಗೌರವ ತರುವಂಥ ಸಂಗತಿಯಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ನೆಲಮನೆ ದೇವೇಗೌಡರನ್ನು ಅಧ್ಯಕ್ಷರನ್ನಾಗಿ ಸರ್ಕಾರವೇ ನೇಮಿಸಿದೆ. 'ಕನ್ನಡಕ್ಕೆ ಪ್ರೋತ್ಸಾಹ ಕೊಡುತ್ತಿಲ್ಲ, ಇವರು ಮಾಡಬಾರದ್ದನ್ನು ಮಾಡಿದ್ದಾರೆ' ಎಂದು ಅವರು ತಮ್ಮ ವಿಷಾದ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಾದ ಕೃಷ್ಣಪ್ಪನವರು ಸದನದಲ್ಲಿರುವುದರಿಂದ ನನಗೆ ತಿಳಿದಿರುವಂತೆ ಅವರಿಗೆ ಈ ಕುರಿತ ಅನೇಕ ವಿಚಾರಗಳು ಗೊತ್ತಿರಬೇಕು. ಅವರು ಇದರ ಬಗ್ಗೆ ಬೆಳಕು ಚೆಲ್ಲಿ ಆ್ಯಕ್ಷನ್ ತೆಗೆದುಕೊಳ್ಳುತ್ತೇನೆಂದು ಹೇಳಬೇಕು. ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಎಷ್ಟು ಜನ ಮಂತ್ರಿಗಳ ರಕ್ಷಣೆಗೆ ಬರುವುದು?

ಶ್ರೀ ಬಿ.ಎಸ್.ಯಡಿಯೂರಪ್ಪ: ನಿಜವಾಗಿಯೂ ಜವಾಬ್ದಾರಿ ಇದ್ದಿದ್ದರೆ... ನಿನ್ನೆ ದಿವಸ ಮುಖ್ಯಮಂತ್ರಿಗಳಿಗೆ ನಾನು ಕಳುಹಿಸಿಕೊಟ್ಟೆ, ಅವರು ಉತ್ತರ ಕೊಟ್ಟು ಹೋಗಬೇಕಾಗಿತ್ತು. ನಾಣಯ್ಯನವರು ಹತ್ತು ಲಕ್ಷ ರೂಪಾಯಿಗಳೆಂದು ಹೇಳುತ್ತಾರೆ, ಅಂದರೆ ಒಂದು ಮುಕ್ಕಾಲು ಲಕ್ಷ ರೂಪಾಯಿಗಳಷ್ಟು ಖರೀದಿಸಿದ್ದು ತಪ್ಪಲ್ಲವೇ? ನಾಲ್ಕೂವರೆ ಲಕ್ಷ ರೂಪಾಯಿಗಳಷ್ಟು ಖರೀದಿಸಿದರೆ ತಪ್ಪಲ್ಲವೇ?

ಶ್ರೀ ಎಂ.ಸಿ.ನಾಣಯ್ಯ: ನಿನ್ನೆ ಮುಖ್ಯಮಂತ್ರಿಗಳು ಆ ಮಾತನ್ನು ಆಡಿದ್ದಾರೆ. ಹತ್ತು ಲಕ್ಷ ರೂಪಾಯಿಗಳ ಪುಸ್ತಕಗಳನ್ನು ಖರೀದಿಸುವುದೆಂದಾದರೆ....

ಶ್ರೀ ಬಿ.ಎಸ್.ಯಡಿಯೂರಪ್ಪ: ಈಗ ಹತ್ತು ಲಕ್ಷ ರೂಪಾಯಿಗಳೆಂದು ನೀವೇ ಹೇಳುತ್ತಿದ್ದೀರಿ.

ಶ್ರೀ ಎಂ.ಸಿ.ನಾಣಯ್ಯ: 1,67,000.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಲ್ಲ, ಟೋಟಲ್ ನಾಲ್ಕೂವರೆ ಲಕ್ಷ ರೂಪಾಯಿಗಳು.

ಶ್ರೀ ಎಂ.ಸಿ.ನಾಣಯ್ಯ: ನಿನ್ನೆ ಪಾಕಿಸ್ತಾನದ ಪುಸ್ತಕವೆಂದು ಹೇಳಿದಿರಿ, ಹಿಂದೂಸ್ತಾನದ ಪುಸ್ತಕವೆಂದು ಅವರು ಹೇಳಲಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಸನ್ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರೆ, ಹತ್ತು ಲಕ್ಷ ರೂಪಾಯಿಗಳಾದರೇನು, ಒಂದು ಮುಕ್ಕಾಲು ಲಕ್ಷ ರೂಪಾಯಿಗಳಾದರೇನು, ಮೂವತ್ತೈದು ಸಾವಿರ ರೂಪಾಯಿ ಮೇಲ್ಪಟ್ಟು ಖರೀದಿಸಬಾರದೆಂದು ನಿಯಮವಿರುವಾಗ ಒಂದೂವರೆ ಲಕ್ಷ ರೂಪಾಯಿಗಳಿಗೆ ಖರೀದಿಸಿದರೆ ತಪ್ಪಲ್ಲವೇ? ಆದುದರಿಂದ ಯಾರೋ ಅಧಿಕಾರಿಗೆ ರಕ್ಷಣೆ ಕೊಡತಕ್ಕ ಕೆಲಸವಾಗಬಾರದು. ಇದು ಕೆಟ್ಟ ಪದ್ಧತಿಯಾಗುತ್ತದೆ. ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು ಕನ್ನಡ ಪುಸ್ತಕಗಳಿಗೇ ಅರ್ಧಚಂದ್ರವಾಗಿದೆ, ಪರಭಾಷಾ ಪುಸ್ತಕಗಳು ನಮ್ಮಲ್ಲಿ ಸಿಗುತ್ತಿದೆ, ಕನ್ನಡ ಪುಸ್ತಕಗಳನ್ನು ಕೊಂಡುಕೊಳ್ಳತಕ್ಕ ಪರಿಸ್ಥಿತಿಯಿಲ್ಲವೆಂದು ಅವರ ಅಳಲನ್ನು ಹೇಳಿಕೊಂಡಿದ್ದಾರೆ. ಒಂದು ಕಡೆ ತಾವು ಕನ್ನಡ ರಾಜ್ಯಭಾಷೆ, ಕನ್ನಡದ ಉದ್ಧಾರವಾಗಬೇಕೆಂದು ಹೇಳುತ್ತೀರಿ ಆದರೆ ಇಲ್ಲಿ ಕನ್ನಡವನ್ನು ಕಡೆಗಣಿಸಿ ಬೇರೆ ಭಾಷೆಯ ಪುಸ್ತಕಗಳನ್ನು ಕದ್ದು, ನಿಯಮಕ್ಕೆ ವಿರುದ್ಧವಾಗಿ ಕೊಂಡುಕೊಳ್ಳುತ್ತಿದ್ದೀರಿ. ಇವೆಲ್ಲವೂ ಮೇಲುನೋಟಕ್ಕೆ ಸಾಬೀತಾಗಿರುವಾಗ ಆ ಅಧಿಕಾರಿಯ ಬಗ್ಗೆ ವ್ಯಾಮೋಹವೇಕೆ? ಆ ಅಧಿಕಾರಿಯನ್ನು ಕೂಡಲೇ ಬೇರೆ ಕಡೆ ವರ್ಗ ಮಾಡಿ ಸಮಗ್ರವಾದ ತನಿಖೆ ನಡೆಯಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಆ ಅಧಿಕಾರಿ ಇವೆಲ್ಲಾ ಮಾಡಿರುವುದಕ್ಕೆ ಇನ್ನೂ ಉನ್ನತ ಸ್ಥಾನ ಕೊಡಿ. ಆದರೆ ಬೇರೆ ಕಡೆ ಕಳುಹಿಸಿ ಇಲ್ಲದಿದ್ದರೆ ಸದನದ ಸಮಿತಿ ಮಾಡಿ ಇಲ್ಲದಿದ್ದರೆ ಆ ಅಧಿಕಾರಿಯನ್ನು ವರ್ಗಾವಣೆ ಮಾಡಿ ತನಿಖೆ ಮಾಡಿಸಿ, ನಾನು ಎಲ್ಲಾ ದಾಖಲೆಗಳನ್ನು ಕೊಡುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಯವರು ನಿನ್ನೆ ಇದರ ಬಗ್ಗೆ ಮಾತನಾಡುತ್ತಾ ಈ ರೀತಿ ಅವ್ಯವಹಾರವಾಗಿದ್ದರೆ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳುವುದಾಗಿ ವೀರಾವೇಶದಿಂದ ಹೇಳಿದ್ದರೆಂದು ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. ಆ ರೀತಿ ಮುಖ್ಯಮಂತ್ರಿಯವರು ಹೇಳಿದ್ದು ನಿಜ. ಪಾಕೀಸ್ತಾನದ ಸ್ವಾತಂತ್ರ್ಯೋತ್ಸವದ ಐವತ್ತನೇ ವರ್ಷದ ನೆನಪಿನ ಪುಸ್ತಕವನ್ನು ಮುಖಬೆಲೆ ಆರು ಸಾವಿರದ ಸುಮಾರು ಹತ್ತು ಲಕ್ಷ ರೂಪಾಯಿ ಬೆಲೆಬಾಳುವ ಪುಸ್ತಕವನ್ನು ಖರೀದಿ ಮಾಡಿದ್ದಾರೆಂದು ತಾವು ನಿನ್ನೆ ಹೇಳಿದಾಗ ನಾವೆಲ್ಲರೂ ಸಹ ಒಂದು ವೇಳೆ ಆ ರೀತಿ ಆದರೆ ಅದು ತಪ್ಪು ಎಂದು ಹೇಳಿದ್ದೆವು. ಆ ಸಂದರ್ಭದಲ್ಲಿ ಇದರ ಬಗ್ಗೆ ವಿಚಾರಣೆ ಮಾಡಿಸುವುದಾಗಿ ಮುಖ್ಯಮಂತ್ರಿಯವರು ಹೇಳಿದ್ದರು.

ಶ್ರೀ ಬಿ.ಎಸ್.ಯಡಿಯೂರಪ್ಪ: ನನಗೆ ಅಂದು ಇದ್ದ ಮಾಹಿತಿಯನ್ನು ಕೊಟ್ಟಿದ್ದೆ. ಈಗ ಅದು ಒಂದು ಲಕ್ಷದ 95 ಸಾವಿರ ರೂಪಾಯಿಗಳದ್ದಾಗಿದೆ. 69 ಸೆಟ್ಟು ಪುಸ್ತಕಗಳನ್ನು ತೆಗೆದುಕೊಂಡಿದ್ದಾರೆ. ನಾನು ಮೊದಲು 10 ಲಕ್ಷದ್ದು ಎಂದು ಹೇಳಿದ್ದೆ, ಅಧಿಕೃತವಾಗಿ ಈಗಲೂ 10 ಲಕ್ಷದ್ದೇ ನಡೆದಿದೆ. ಆದರೆ ಅದರ ಬಗ್ಗೆ ದಾಖಲೆ ಇಲ್ಲ. ಈಗ ಒಂದು ಲಕ್ಷ 95 ಸಾವಿರ ರೂಪಾಯಿಗಳದ್ದು ಖರೀದಿ ಮಾಡಿದ್ದಾರೆ. ಇದು ತಪ್ಪಲ್ಲವೇ? ಎಂಜಲನ್ನು ಎಷ್ಟು ತಿಂದರೇನು? ಅಪರಾಧವನ್ನು ಯಾವ ಪ್ರಮಾಣದಲ್ಲಿ ಮಾಡಿದರೇನು? ಅಪರಾಧ ಅಪರಾಧವೇ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಯಡಿಯೂರಪ್ಪನವರು ಹೇಳಿದಂತೆ ಅದು 10 ಲಕ್ಷದ್ದೋ ಅಥವಾ ಬೇರೆ ಮೊತ್ತದ್ದೋ ಎಂದು ಗೊತ್ತಾಗಬೇಕಾದರೆ ಆ ಆದೇಶವನ್ನು ಓದಿಬಿಡಿ. ನಿರ್ದೇಶಕರ ಆಜ್ಞೆಯೊಂದಿದೆ, ಆ ಆದೇಶದ ನಂಬರ್ ಸಂಗ್ರಂ.ಇ.ನಿಕಾ. ಸಾಗ್ರಂಕ. ದಿ:97-98, 4649 ದಿನಾಂಕ: 11-8-97. ಈ ಆದೇಶವನ್ನು ಓದಿ ಬಿಟ್ಟರೆ ಅವರು ಹತ್ತು ಲಕ್ಷಕ್ಕೆ ಮಾಡಿದ್ದಾರೋ ಎಂಟು ಲಕ್ಷಕ್ಕೆ ಮಾಡಿದ್ದಾರೋ ಎಂಬುದು ಗೊತ್ತಾಗುತ್ತದೆ. ಈ ಅಧಿಕಾರಿ ಎಲ್ಲೋ ರಾಜಕೀಯ ಮುತ್ಸದ್ದಿಯವರಿಗೆ ಬೇಕಾಗಿರುವಂತೆ ಕಾಣುತ್ತದೆ. ಅದ್ಯಾರೆಂದು ನನಗೆ ಗೊತ್ತಿಲ್ಲ. ಏಕೆಂದರೆ ಒಬ್ಬೊಬ್ಬ ಅಧಿಕಾರಿಗಳು ಒಬ್ಬೊಬ್ಬರು ಗಾಡ್‌ಫಾದರ್‌ನ್ನು ಇಟ್ಟುಕೊಂಡಿದ್ದಾರೆ. ಕಳ್ಳತನ ಮಾಡುವವರೆಲ್ಲಾ ಒಬ್ಬರು ಗಾಡ್‌ಫಾದರ್‌ನ್ನು ಇಟ್ಟುಕೊಂಡಿರುತ್ತಾರೆ. ಅದು ಯಾವುದೇ ಇಲಾಖೆ ಇರಬಹುದು. ಆದರೆ ಈ ರೀತಿ ಆಗತಕ್ಕದಲ್ಲ. ಆ ಅಧಿಕಾರಿ ಕಾನೂನಿನ ಉಲ್ಲಂಘನೆ ಮಾಡಿದ್ದಾರೆ. ಅದರ ಗಾತ್ರ

ಬೇಡ. ಯಡಿಯೂರಪ್ಪನವರು ಆ ಅಧಿಕಾರಿಯನ್ನು ಅಮಾನತ್ತುಗೊಳಿಸುವುದೂ ಬೇಡ ಕನಿಷ್ಟಪಕ್ಷ ವರ್ಗಾವಣೆ ಮಾಡಿ ಎಂದು ಹೇಳುತ್ತಿದ್ದಾರೆ. ಅಲ್ಲೇಕೆ ಒಬ್ಬರನ್ನೇ ಇಪ್ಪತ್ತು ಮೂವತ್ತು ವರ್ಷಗಳಿಂದ ಇಡುತ್ತೀರಿ? ಅವರನ್ನು ಬದಲಾವಣೆ ಮಾಡಿ ವಿಚಾರಣೆ ನಡೆಸಿ. ಆ ಕೆಲಸವನ್ನು ಮಾಡಬಹುದಲ್ಲ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೆ, ಯಾರನ್ನೂ ಸಹ ರಕ್ಷಣೆ ಮಾಡಬೇಕು ಎಂದು ಸರ್ಕಾರದ ಉದ್ದೇಶವಾಗಿಲ್ಲ. ನಿನ್ನೆ ಇದರ ಬಗ್ಗೆ ಪ್ರಸ್ತಾಪ ಮಾಡಿದ ಕೂಡಲೇ ಇರತಕ್ಕ ಎಲ್ಲಾ ಮಾಹಿತಿಯನ್ನು ತರಿಸಿ ಇಂದು ಸದನದಲ್ಲಿ ಮಂಡಿಸಿದ್ದೇವೆ. ಪುಸ್ತಕ ಎಷ್ಟು ಖರೀದಿಯಾಗಿದೆ ಎಂಬ ಆದೇಶವನ್ನು ಕೊಡಿಯೆಂದು ಕೇಳುತ್ತಿದ್ದಾರೆ. ಒಂದು ಕಡೆ 79 ಪುಸ್ತಕ ಮತ್ತೊಂದು ಕಡೆ 67 ಪುಸ್ತಕವನ್ನು ತೆಗೆದುಕೊಂಡಿದ್ದಾರೆಂದು ನಾನು ಅಧಿಕೃತವಾಗಿ ಹೇಳುತ್ತಿದ್ದೇನೆ. ಅದಕ್ಕೆ ಖರ್ಚಾಗಿರುವ ಹಣದ ಬಗ್ಗೆ ಸಹ ಹೇಳಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಯಾರೋ ಪಬ್ಲಿಷರ್ ಪಾಕಿಸ್ತಾನದ ಬಗ್ಗೆ ಯಾವುದೋ ಪುಸ್ತಕವನ್ನು ನಮ್ಮ ದೇಶದ ಸಾಹಿತಿಗಳೇ ಬರೆದಿದ್ದರೂ ಸಹ ಅದನ್ನು ಕೊಂಡುಕೊಳ್ಳಲು ಅರ್ಹವಿರುವ ಗ್ರಂಥವೆಂದು ಕರೆಯುತ್ತೀರೇನು? ಆ ಪಬ್ಲಿಷರ್ ಯಾರು? ಅವನಿಗೂ ಈ ಅಧಿಕಾರಿಗೂ ಇರುವ ಸಂಬಂಧವೇನು? ಇದರ ಹಿಂದೆ ದೊಡ್ಡ ಇತಿಹಾಸವಿದೆ. ಆದ್ದರಿಂದ ಇದರ ಬಗ್ಗೆ ವಿಚಾರಣೆ ಮಾಡಿಸಿ. ನಾನು ಎಲ್ಲಾ ದಾಖಲೆಗಳನ್ನು ಕೊಡುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸಭಾಧ್ಯಕ್ಷರೆ, ನಮ್ಮ ರಾಷ್ಟದಲ್ಲಿ ಬಹಳ ಉತ್ತಮವಾದ ಸಾಹಿತಿಗಳಿದ್ದಾರೆ. ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಬರೆಯತಕ್ಕ ಬೇಕಾದಷ್ಟು ಉತ್ತಮವಾದ ಸಾಹಿತಿಗಳಿದ್ದಾರೆ. ನಮ್ಮ ದೇಶಕ್ಕೆ ಬಂದಿರುವ ಸ್ವಾತಂತ್ರ್ಯದ ಐವತ್ತನೇ ವರ್ಷದ ಬಗ್ಗೆ ಒಬ್ಬರು ಸಾಹಿತಿಗಳು ಪುಸ್ತಕವನ್ನು ಬರೆದಿದ್ದಾರೆ, ಪಾಕೀಸ್ತಾನಕ್ಕೆ ಸ್ವಾತಂತ್ರ್ಯ ಬಂದಿರುವ ಬಗ್ಗೆ ಒಂದು ಪುಸ್ತಕವನ್ನು ಬರೆದಾಗ ಯಾವುದೋ ಒಂದು ಕಾರಣಕ್ಕೆ ಆ ಪುಸ್ತಕವನ್ನು ಬರೆದರು ಎಂದು ಆ ಸಾಹಿತಿಯ ಬಗ್ಗೆ ನಾವು ಮಾತನಾಡಬೇಕಾಗಿಲ್ಲ. ಆ ಪುಸ್ತಕವಿದೆ, ಅದನ್ನು ಓದಬೇಕೆಂದು ನನಗೂ ಆಸಕ್ತಿ ಇದೆ, Learning and knowing something about what is happening-it is not wrong. What is happening eleswhere in the world, we should know. ಯಾರಾದರೂ ಒಂದು ಪುಸ್ತಕವನ್ನು ಬರೆದಿದ್ದರೆ ಅದನ್ನು ಕೇವಲ ಮಾರಾಟ ಮಾಡುವುದಕ್ಕೋಸ್ಕರವೆಂದು ತಿಳಿಯುವುದಿಲ್ಲ. ಆ ಪುಸ್ತಕವನ್ನು ಬರೆದಿರುವ ಗ್ರೋವರ್ ಎಂದು ಹೇಳತಕ್ಕವರು ಈ ರಾಷ್ಟ್ರದ ಉತ್ತಮವಾದ ಬರಹಗಾರರಲ್ಲಿ ಒಬ್ಬರು. ಇಲ್ಲವೆಂದು ಹೇಳಿದರೆ ನಾನು ಒಪ್ಪುವುದಿಲ್ಲ. Because I have read his books. ಪುಸ್ತಕ ಬರೆಯುವವರೊಬ್ಬರು ಇರುತ್ತಾರೆ, ಪ್ರಕಟಣೆ ಮಾಡುವವರು ಮತ್ತೊಬ್ಬರು ಇರುತ್ತಾರೆ.

ಶ್ರೀ ವಾಟಾಳ್‌ನಾಗರಾಜ್: ಇಲ್ಲಿ ಸಾಹಿತಿಗಳ ಚರ್ಚೆ ನಡೆಯುತ್ತಿಲ್ಲ. ಪ್ರಕಾಶಕರ ಮತ್ತು ಸರ್ಕಾರದ ಸಂಬಂಧದ ಬಗ್ಗೆ ಮಾತ್ರ ಚರ್ಚೆಯಾಗುತ್ತಿದೆ. ಸರ್ಕಾರವೆಂದರೆ ಸಂಬಂಧಪಟ್ಟ ಅಧಿಕಾರಿ, ಆ ನಿರ್ದೇಶಕ.

ಶ್ರೀ ಎಂ.ಸಿ.ನಾಣಯ್ಯ: ಇದರ ಬಗ್ಗೆ ನಿಷ್ಪಕ್ಷಪಾತವಾಗಿರತಕ್ಕ ತನಿಖೆಯನ್ನು ಮಾಡಿಸುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಆ ಅಧಿಕಾರಿಯನ್ನು ಅಲ್ಲೇ ಇಟ್ಟುಕೊಂಡು ವಿಚಾರಣೆ ಮಾಡುತ್ತೀರಾ?

ಶ್ರೀ ಎಂ.ಸಿ.ನಾಣಯ್ಯ: ಅದರ ಬಗ್ಗೆ ಖಂಡಿತವಾಗಿ ಯೋಚನೆ ಮಾಡುತ್ತಿದ್ದೇವೆ. We will definitely take into consideration what you have said.

ಶ್ರೀ ಬಿ.ಎಸ್.ಯಡಿಯೂರಪ್ಪ: ಕಡೆಯ ಪಕ್ಷ ಆ ಅಧಿಕಾರಿಯನ್ನು ವರ್ಗಾವಣೆ ಮಾಡಿ. ಇಲ್ಲಿ ನನ್ನದೂ ಸಹ ಜವಾಬ್ದಾರಿ ಇಲ್ಲವೆ? ಜನರು ನಮ್ಮನ್ನೂ ಸಹ ಇಲ್ಲಿಗೆ ಕಳುಹಿಸಿದ್ದಾರೆ. ಮಾಡಬಾರದ್ದನ್ನು ಮಾಡಿದರೆ ನಾವು ಸುಮ್ಮನೆ ನೋಡಿಕೊಂಡು ಕುಳಿತಿರಲು ಸಾಧ್ಯವೆ? ನಿಯಮದ ಪ್ರಕಾರ 35 ಸಾವಿರ ರೂಪಾಯಿಗಳಿಗಿಂತ ಹೆಚ್ಚು ಬೆಲೆಯ ಪುಸ್ತಕವನ್ನು ಖರೀದಿ ಮಾಡಲು ಅವಕಾಶವಿಲ್ಲ. ಆದರೂ ಸಹ ನಾಲ್ಕೂವರೆ ಲಕ್ಷ ರೂಪಾಯಿ ಬೆಲೆಯ ಪುಸ್ತಕಗಳನ್ನು ಖರೀದಿ ಮಾಡಿದ್ದಾರೆ. 25 ಪರ್‌ಸೆಂಟ್‌ಗಿಂತ ಹೆಚ್ಚು ಕಮಿಷನ್ ಹೊಡೆಯುವ ತಂತ್ರ ಇದರಲ್ಲಿದೆ. ಕಳೆದ ಹತ್ತು ವರ್ಷಗಳಿಂದ ಇಲ್ಲಿ ಅವ್ಯವಹಾರವಾಗಿದೆ. ದಾಖಲೆ ನಾನು ಕೊಡುತ್ತೇನೆ. ಆ ಅಧಿಕಾರಿಯನ್ನು ಬೇರೆ ಕಡೆ ವರ್ಗಾವಣೆ ಮಾಡಿ, ಅಮಾನತ್ತಿನಲ್ಲಿಡಲೂ ಬೇಡಿ, ವಿಚಾರಣೆ ಮಾಡಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: ನಾನು ಇದುವರೆಗೆ ತಮ್ಮ ವಾದಗಳನ್ನು ಕೇಳಿಕೊಂಡು ಕುಳಿತಿದ್ದೆ. ನೀವು ಸಸ್‌ಪೆಂಡ್ ಆದರೂ ಮಾಡಿಕೊಳ್ಳಿ, ಕಂಟಿನ್ಯು ಆದರೂ ಮಾಡಿಕೊಳ್ಳಿ, ಅವರಿಗೆ ನೀವು ಸಮಾಧಾನ ಮಾಡಿ, ಅವರು ನಿಮಗಾದರೂ ಸಮಾಧಾನ ಮಾಡಿಕೊಳ್ಳಲಿ, ಒಂದು ನಿಮಿಷ ಸಮಯ ಕೊಡುತ್ತೇನೆ. ಇಷ್ಟರಲ್ಲಿ ತಾವು ಈ ವಿಚಾರದ ಬಗ್ಗೆ ಇತ್ಯರ್ಥ ಮಾಡಿಕೊಳ್ಳಿ, ಇಲ್ಲದಿದ್ದರೆ ನಾನು ಮುಂದಿನ ವಿಚಾರವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಬೇರೆ ಸಂದರ್ಭಗಳಲ್ಲಿ ತಪ್ಪಾದಾಗ ತಾವು ಸರ್ಕಾರದ ಕಿವಿಹಿಂಡುತ್ತೀರಿ, ತಾವು ಹತ್ತು ನಿಮಿಷ ಸದನವನ್ನು ಮುಂದೂಡಿದರೆ ಇದರ ಬಗ್ಗೆ ನಾನು ತಮಗೆ ಕನ್‌ವಿನ್ಸ್ ಮಾಡುತ್ತೇನೆ. ಇಲ್ಲದಿದ್ದರೆ ಆ ಅಧಿಕಾರಿಯನ್ನು ವರ್ಗ ಮಾಡಿ ತನಿಖೆ ಮಾಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ನಿಮಗೆ

ನಿಜವಾಗಿಯೂ ಪ್ರಾಮಾಣಿಕತೆ ಇದ್ದರೆ ಏನೂ ಮಾಡಬೇಡಿ, ಸದನದ ಸಮಿತಿ ಮಾಡಿ. ಅದನ್ನು ಮಾಡಲು ನಿಮಗೇನು ತೊಂದರೆ?

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೆ, ತಾವು ಒಂದು ನಿಮಿಷ ಸಮಯ ಕೊಟ್ಟಿದ್ದೀರಿ, ಅದರಲ್ಲಿ ಯಡಿಯೂರಪ್ಪನವರು ಇಪ್ಪತ್ತೈದು ಸೆಕೆಂಡ್ ತೆಗೆದುಕೊಂಡರು ಇನ್ನು ಮೂವತ್ತೈದು ಸೆಕೆಂಡ್ ಇದೆ. ಇದರ ಬಗ್ಗೆ ಸಮಗ್ರವಾದ ತನಿಖೆ ಮಾಡುತ್ತೇವೆ ಕ್ರಮ ತೆಗೆದುಕೊಳ್ಳುತ್ತೇವೆ. ಅದನ್ನು ಮಾಡಲು ಹಿಂದೆ ಬೀಳುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ: ಭ್ರಷ್ಟ ಅಧಿಕಾರಿಗಳನ್ನು ರಕ್ಷಣೆ ಮಾಡುವುದಕ್ಕೆ ಇದು ಸರ್ಕಾರದ ಒಂದು ನಿದರ್ಶನವಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ವರ್ಗಾವಣೆ ಮಾಡಿ ತನಿಖೆ ಮಾಡಿಸಲು ಆಗುವುದಿಲ್ಲವೆ? ಮಾನ ಮರ್ಯಾದೆ ಸ್ವಲ್ಪವೂ ಇಲ್ಲ, ಆ ಆಜ್ಞೆಯನ್ನು ತೆಗೆಯದೆ ಹೋದರು, ಲೂಟಿ ಮಾಡಿದರು. ಅವರಿಗೆ ರಕ್ಷಣೆ ಕೊಟ್ಟು. ನಿನ್ನೆ ಮುಖ್ಯಮಂತ್ರಿಯವರು ಆ ರೀತಿ ಪುಸ್ತಕ ತೆಗೆದುಕೊಂಡಿದ್ದರೆ ಏನು ಮಾಡುತ್ತೇನೆ ನೋಡಿ ಎಂದು ವೀರಾವೇಶದ ಮಾತು, ಹತ್ತು ಲಕ್ಷವಲ್ಲ ಕೇವಲ ಒಂದೂವರೆ ಲಕ್ಷವೆಂದು ಹೇಳುವುದಾದರೆ, ಲಂಚ ತಿಂದರೆ ಹತ್ತು ಲಕ್ಷವೆಂದು ನಾನು ಸಾಧನೆ ಮಾಡುತ್ತೇನೆ, ಆದರೆ ಅವನು ಒಂದು ಲಕ್ಷದ ತೊಂಭತ್ತೈದು ಸಾವಿರ ಮಾತ್ರ ತಿಂದಿದ್ದಾನೆ, ಆದ್ದರಿಂದ ಅವನನ್ನು ಡಿಸ್‌ಮಿಸ್ ಮಾಡುವುದಿಲ್ಲವೆಂದು ಹೇಳುವುದಾದರೆ, ಇದಕ್ಕಾಗಿ ಜನರು ಸರ್ಕಾರದ ಬದಲಾವಣೆ ಮಾಡಿದರಾ? ಸರ್ಕಾರದ ಖಜಾನೆಯನ್ನು ಲೂಟಿ ಮಾಡುವ ಅಧಿಕಾರಿಗಳಿಗೆ ರಕ್ಷಣೆ, ಅವರು ಕೊಡುವ ಕಮಿಷನ್‌ನಲ್ಲಿ ಬದುಕತಕ್ಕ ರಾಜಕಾರಣಿಗಳನ್ನೆಂದೂ ನಾನು ನೋಡಿಲ್ಲ.

ಶ್ರೀ ಎಂ.ಸಿ.ನಾಣಯ್ಯ: ಜನರು ಬದಲಾವಣೆ ಬಯಸುವುದಾದರೆ ನೀವೇ ಇಲ್ಲಿ ಬಂದು ಕೂರಿ, ನಾವು ಅಲ್ಲಿಗೆ ಹೋಗುತ್ತೇವೆ. ನಾವು ನಮ್ಮ ವಿಚಾರವನ್ನು ಹೇಳಿದ್ದೇವೆ.

(ಗೊಂದಲ)

(ಈ ಹಂತದಲ್ಲಿ ಸರ್ಕಾರದ ಧೋರಣೆಯನ್ನು ವಿರೋಧಿಸಿ ಬಿ.ಜೆ.ಪಿ. ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್: ಕನ್ನಡ ಪುಸ್ತಕದ ಬಗ್ಗೆ, ಭಾಷೆಯ ಬಗ್ಗೆ ಸರ್ಕಾರಕ್ಕೆ ಅಭಿಮಾನವಿಲ್ಲ, ಯಾರೋ ಪಬ್ಲಿಷರ್‌ಗೆ ಅನುಕೂಲಮಾಡಿಕೊಡಬೇಕು ಎನ್ನತಕ್ಕ ಚಿಂತನೆಯೇನಿದೆ ಅದು ಸರಿಯಲ್ಲ, ತಾವು ಇದರ ಬಗ್ಗೆ ಪ್ರಾಮಾಣಿಕವಾಗಿ ಚಿಂತನೆ ಮಾಡಿ, ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು ಕನ್ನಡಕ್ಕೆ ದ್ರೋಹವಾಗಿದೆ, ಅನ್ಯಾಯವಾಗಿದೆ, ಕನ್ನಡ ಪುಸ್ತಕಗಳನ್ನು ಕೊಂಡುಕೊಳ್ಳುತ್ತಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಸರ್ಕಾರದ

ನೀತಿಯನ್ನು ವಿರೋಧಿಸಿ ನಾನು ಸಹ ಸಭಾತ್ಯಾಗ ಮಾಡುತ್ತಿದ್ದೇನೆ.

(ಸನ್ಮಾನ್ಯ ಸದಸ್ಯರಾದ ವಾಟಾಳ್‌ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು: ಈಗ ಶಾಸನ ರಚನೆ. ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು.

(8) ಶಾಸನ ರಚನಾ ಕಾರ್ಯಕಲಾಪ:

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳು ಮೀಸಲಾತಿ) (ತಿದ್ದುಪಡಿ) ವಿಧೇಯಕ, 1997. (ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ)

ಪ್ರರ್ಯಾಲೋಚನಾ ಪ್ರಸ್ತಾಪ

ಶ್ರೀ ಎಂ.ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ 1997ರ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳು ಮೀಸಲಾತಿ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾವ ಮಂಡಿಸಲ್ಪಟ್ಟಿತು)

ಅಧ್ಯಕ್ಷರು: ಚರ್ಚೆ ಏನಿಲ್ಲ. ಪ್ರಸ್ತಾವ ಏನೆಂದರೆ,

":ವಿಧಾನ ಪರಿಷತ್ತಿನಿಂದ ಅಂಗೀಕೃತವಾದ 1997ರ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳು ಮೀಸಲಾತಿ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 2ಕ್ಕೆ ತಿದ್ದುಪಡಿ:

ಶ್ರೀ ಎಂ.ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, ಖಂಡ 2ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು

ಮಂಡಿಸುತ್ತೇನೆ.

"(1) 4ಎ ಪ್ರಕರಣದಲ್ಲಿ,

(ಎ) (1) ಮತ್ತು (2)ನೇ ಉಪ-ಪ್ರಕರಣಗಳಲ್ಲಿ "ಅಂಥ ರೀತಿಯಲ್ಲಿ ಮತ್ತು ಅಂಥ ಪ್ರಾಧಿಕಾರಿಗೆ" ಎಂಬ ಪದಗಳಿಗೆ "ಮತ್ತು ಅಂಥ ರೀತಿಯಲ್ಲಿ ತಹಶೀಲ್ದಾರನಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (3) ಮತ್ತು (4)ನೇ ಉಪ-ಪ್ರಕರಣಗಳಲ್ಲಿ "ನಿಯಮಿಸಿದ ಪ್ರಾಧಿಕಾರಿಯು" ಎಂಬ ಪದಗಳಿಗೆ "ತಹಶೀಲ್ದಾರನು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(2) 4 ಬಿ ಪ್ರಕರಣದಲ್ಲಿ

(ಎ) (1)ನೇ ಉಪ-ಪ್ರಕರಣದಲ್ಲಿ "ನಿಯಮಿಸಿದ ಪ್ರಾಧಿಕಾರಿಯ" ಎಂಬ ಪದಗಳಿಗೆ "ತಹಶೀಲ್ದಾರನ" ಎಂಬ ಪದವನ್ನು ಮತ್ತು "ನಿಯಮಿಸಬಹುದಾದಂಥ ಪ್ರಾಧಿಕಾರಿಗೆ" ಎಂಬ ಪದಗಳಿಗೆ "ಕಂದಾಯ ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (2)ನೇ ಉಪ-ಪ್ರಕರಣದಲ್ಲಿ "ಅಪೀಲು ವಿಚಾರಣಾ ಪ್ರಾಧಿಕಾರಿಯು" ಎಂಬ ಪದಗಳಿಗೆ "ಕಂದಾಯ ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(3) 4ಸಿ ಪ್ರಕರಣದಲ್ಲಿ -(3)ನೇ ಉಪ-ಪ್ರಕರಣದಲ್ಲಿ "ಮೂರು ತಿಂಗಳುಗಳೊಳಗಾಗಿ" ಎಂಬ ಪದಗಳಿಗೆ "ಮೂವತ್ತು ದಿನಗೊಳಗಾಗಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"(1) 4ಎ ಪ್ರಕರಣದಲ್ಲಿ,

(ಎ) (1) ಮತ್ತು (2)ನೇ ಉಪ-ಪ್ರಕರಣಗಳಲ್ಲಿ "ಅಂಥ ರೀತಿಯಲ್ಲಿ ಮತ್ತು ಅಂಥ ಪ್ರಾಧಿಕಾರಿಗೆ" ಎಂಬ ಪದಗಳಿಗೆ "ಮತ್ತು ಅಂಥ ರೀತಿಯಲ್ಲಿ ತಹಶೀಲ್ದಾರನಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (3) ಮತ್ತು (4)ನೇ ಉಪ-ಪ್ರಕರಣಗಳಲ್ಲಿ " ನಿಯಮಿಸಿದ ಪ್ರಾಧಿಕಾರಿಯು" ಎಂಬ ಪದಗಳಿಗೆ "ತಹಶೀಲ್ದಾರನು" ಎಂಬ ಪದವನ್ನು

ಪ್ರತಿಯೋಜಿಸತಕ್ಕದ್ದು,

(2) 4ಬಿ ಪ್ರಕರಣದಲ್ಲಿ,

(ಎ) (1)ನೇ ಉಪ-ಪ್ರಕರಣದಲ್ಲಿ ''ನಿಯಮಿಸಿದ ಪ್ರಾಧಿಕಾರಿಯ'' ಎಂಬ ಪದಗಳಿಗೆ ತಹಶಿಲ್ದಾರನ'' ಎಂಬ ಪದವನ್ನು ಮತ್ತು ''ನಿಯಮಿಸಬಹುದಾದಂಥ ಪ್ರಾಧಿಕಾರಿಗೆ'' ಎಂಬ ಪದಗಳಿಗೆ ''ಕಂದಾಯ ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರಿಗೆ'' ಎಂಬ ಪದಗಳನ್ನು ಪ್ರತಿಯೊಜಿಸತಕ್ಕದ್ದು,

(ಬಿ) (2)ನೇ ಉಪ-ಪ್ರಕರಣದಲ್ಲಿ ''ಅಪೀಲು ವಿಚಾರಣಾ ಪ್ರಾಧಿಕಾರಿಯು'' ಎಂಬ ಪದಗಳಿಗೆ ''ಕಂದಾಯ ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರನು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು,

(3) 4ಸಿ ಪ್ರಕರಣದಲ್ಲಿ, -(3)ನೇ ಉಪ-ಪ್ರಕರಣದಲ್ಲಿ ''ಮೂರು ತಿಂಗಳುಗಳೊಳಗಾಗಿ'' ಎಂಬ ಪದಗಳಿಗೆ ''ಮೂವತ್ತು ದಿನಗಳೊಳಗಾಗಿ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 2 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

''ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆ ವಿಧೇಯಕ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕರಿಸಲ್ಪಟ್ಟ, ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ 1997 ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕರಿಸಲ್ಪಟ್ಟ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ 1997 ಅನ್ನು ಅಂಗೀಕರಿಸುವುದು''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನೀವು ಬೇಡ ಎಂದರೂ ಪಾಸ್ ಆಗುತ್ತದೆ. ಇನ್ನು ಎರಡು ದಿನಗಳು ಇವೆ. ನಿಮ್ಮದು ಶಾಫ್ಸ್ ಅಂಡ್ ಏಸ್ಟ್ಯಾಬ್ಲಿಷ್‌ಮೆಂಟ್ ಆ್ಯಕ್ಟ್ ಕೆಳಗಡೆ ಕಾರ್ಮಿಕರ ಇಲಾಖೆಯಿಂದ ತಾವು ಮೂವ್ ಮಾಡುವುದು, ಅದರಲ್ಲಿ ಮಕ್ಕಳ ವಯಸ್ಸನ್ನು ಹೆಚ್ಚು ಮಾಡುವುದು, 12 ಇರುವುದು 14, 15 ಇರುವುದು 18 ಮಾಡುವುದು, ಅದು ಕೊಡಬೇಕು, ಇದು ಕೊಡಬೇಕು ಎಂದು ಇದೆ

ಅಧ್ಯಕ್ಷರು: ಖರ್ಗೆಯವರೆ, ಈಗ ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳು ಏನು ಹೇಳುತ್ತಾರೆ, ಖರ್ಗೆಯವರು ಸಲಹೆ ಕೊಡುತ್ತಿದ್ದಾರೆ ಬಿಲ್ಸ್‌ನ್ನು ನಾಳೆಗೆ ತೆಗೆದುಕೊಳ್ಳಿ ಎಂದು.

ಶ್ರೀ ಎಂ.ಸಿನಾಣಯ್ಯ:(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ): ಮಾನ್ಯ ಅಧ್ಯಕ್ಷರೆ, ಲ್ಯಾಂಡ್ ರೆವಿನ್ಯೂ, ಲ್ಯಾಂಡ್ ರಿಫಾರ್ಮ್ಸ್ ಮೇಲೆ ಚರ್ಚೆ ಆಗಿದೆ, ಅದನ್ನಾದರೂ ಪಾಸ್ ಮಾಡಿಕೊಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಲ್ಯಾಂಡ್ ರೆವಿನ್ಯೂ ಮಸೂದೆ ಬಗ್ಗೆ ಚರ್ಚೆ ಆಗಿಲ್ಲ, ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಚರ್ಚೆ ಆಗಿದೆ. ನಾಳೆ ಮಾಡಿಕೊಡೋಣ, ನಾವು ಇಲ್ಲ ಎಂದು ಹೇಳುವುದಿಲ್ಲ.

ಶ್ರೀ ಯು.ಬಿ.ಬಣಕಾರ: ಮಾನ್ಯ ಅಧ್ಯಕ್ಷರೆ, ಇದು ಎ.ಪಿ.ಎಂ.ಸಿ. ಆಕ್ಟ್ ವಿಷಯ ಸಮಿತಿಯವರ ಶಿಫಾರಸ್ಸಿನ ಮೇಲೆ ಆಗಿದೆ. ಅವರು ಇಂಟ್ರಡ್ಯೂಸ್ ಮಾಡಿದರೆ ನಾವು ಒಪ್ಪಿಕೊಂಡು ಬಿಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಎ.ಪಿ.ಎಂ.ಸಿ. ಬೇಕಾದರೆ

ತೆಗೆದುಕೊಳ್ಳಿ ಅದು ಸರಳವಾಗಿದೆ.

ಅಧ್ಯಕ್ಷರು: ಎ.ಪಿ.ಎಂ.ಸಿ. ಇದು ವಿಷಯ ಸಮಿತಿಯ ಶಿಫಾರಸ್ಸಿನ ಮೇಲೆ ಇರುವುದು, ಅದನ್ನು ತೆಗೆದುಕೊಳ್ಳಿ ನಾವು ಒಪ್ಪಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಚನ್ನರಾಯ ಪಟ್ಟಣದಲ್ಲಿ ಕಳ್ಳತನ

+ ಶ್ರೀ ಸಿ.ಎಸ್.ಪುಟ್ಟೇಗೌಡ (ಶ್ರವಣಬೆಳಗೊಳ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಚನ್ನರಾಯಪಟ್ಟಣ ನಗರದಲ್ಲಿ ನಾನು ವಾಸವಾಗಿರುವ ಕುವೆಂಪು ನಗರದಲ್ಲಿ ರಾತ್ರಿ ಡಕಾಯಿತರು ಬಂದು 4-3 ಮನೆಗಳಲ್ಲಿ ಕಳ್ಳತನ ಮಾಡಿ ಅಲ್ಲಿಯ ಜನರ ಜೀವಕ್ಕೆ ಅಪಾಯವಿರುವಂತಹ ವಾತಾವರಣ ಅಲ್ಲಿ ಉಂಟಾಗಿದೆ. ಅಲ್ಲಿಯ ಜನರಿಗೆ ತಾವು ಮನೆ ಕಟ್ಟಿಸಿಕೊಂಡು ಮನೆಗೆ ಬಾಗಿಲು ಇದ್ದರೂ ಕೂಡ ನಾವು ಬದುಕುವುದು ಹೇಗೆ, ಮಲಗುವುದು ಹೇಗೆ ಎಂಬ ಭಯದ ವಾತಾವರಣ ಉಂಟಾಗಿದೆ. 15 ದಿವಸಗಳ ಹಿಂದೆ ಹೀಗೆ ಕಳ್ಳತನವಾಗಿ ಫಣಿರಾಜ ಎನ್ನುವವರ ಮನೆಗೆ ಕಳ್ಳರು ನುಗ್ಗಿ ಅವರಿಗೆ ಹೊಡೆದಿದ್ದಾರೆ, ಅವರಲ್ಲಿ ಇರುವ ಒಡವೆ ವಸ್ತ್ರಗಳನ್ನು ಕೊಟ್ಟು ಪ್ರಾಣ ಉಳಿಸಿಕೊಂಡಿದ್ದಾರೆ. ಕಳೆದ ರಾತ್ರಿ ರಾಮಕೃಷ್ಣಗೌಡ ಎಂಬ ಸರ್ಕಾರಿ ನೌಕರರ ಮನೆಗೆ ಕಳ್ಳರು ನುಗ್ಗಿದ್ದಾರೆ ಅವರ ಮನೆ ಊರಿನ ಹೊರವಲಯದಲ್ಲಿ ಇದೆ, ಅವರ ಮನೆಗೆ ನುಗ್ಗುವುದಕ್ಕಿಂತ ಮುಂಚೆ ಮೂರು ನಾಲ್ಕು ಮುಸಲ್ಮಾನರ ಮನೆಗಳಿಗೆ ನುಗ್ಗಿ ಕಳ್ಳತನ ಮಾಡಿದ್ದಾರೆ. ಈ ರಾಮಕೃಷ್ಣಗೌಡರವರನ್ನು ಚೆನ್ನಾಗಿ ಹೊಡೆದಿದ್ದಾರೆ. ಅವರ ಹೆಂಡತಿಗೂ ಹೊಡೆದಿದ್ದರಿಂದ ತಲೆಗೆ ಬಹಳ ಪೆಟ್ಟು ಬಿದ್ದು ಪ್ರಾಣ ಹಾನಿಯಾಗಿದೆ. ರಾಮಕೃಷ್ಣೇಗೌಡರು ಈಗ ನಿಮ್ಹಾನ್ಸ್‌ನಲ್ಲಿದ್ದಾರೆ. ಅವರ ಸ್ಥಿತಿ ಚಿಂತಾಜನಕವಾಗಿದೆ. ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಡಾಕ್ಟರ್ ಅವರ ಚಿಕಿತ್ಸೆ ಮಾಡುತ್ತಿದ್ದಾರೆ. ನಿನ್ನೆ ಶಿಕ್ಷಕರ ದಿನಾಚರಣೆ ಇರುವುದರಿಂದ ನಾನು ಚನ್ನರಾಯಪಟ್ಟಣ ನಗರದಲ್ಲಿಯೇ ಇದ್ದೆ. ಬೆಳಗಿನ ಜಾವ 6 ಗಂಟೆಗೆ ಯಾರೋ ಅಳುತ್ತಾ ಬಂದು ಈ ರೀತಿಯಾಗಿದೆ ಎಂದು ಹೇಳಿದರು, ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿಯ ಪರಿಸ್ಥಿತಿ ಬಹಳ ಗಂಭೀರವಾಗಿತ್ತು. ಆ ಡಕಾಯಿತರು ಸಾಮಾನ್ಯರಲ್ಲ, ಅವರು ಬಹಳ ಬುದ್ಧಿವಂತಿಕೆಯಿಂದ, ಚಮತ್ಕಾರದಿಂದ ಕಳ್ಳತನ ಮಾಡಿದ್ದಾರೆ; ಈ ರೀತಿ ಪ್ರಾಣ ತೆಗೆದು ದೋಚಿದಂತಹ ಘಟನೆಯನ್ನು ನಾನು ನನ್ನ ಜೀವನದಲ್ಲಿ ನೋಡಿರಲಿಲ್ಲ, ಸಾಕಷ್ಟು ಅಲ್ಲಿ ಇಲ್ಲಿ ಕಳ್ಳತನ ಆಗಿದ್ದು ಕೇಳಿದ್ದೇನೆ ಆದರೆ ಈ ರೀತಿಯಾಗಿಲ್ಲ. ಅಲ್ಲಿಯ ಜನರಲ್ಲಿ ನಾನಾ ರೀತಿಯಲ್ಲಿ ಚರ್ಚೆ ನಡೆಯುತ್ತಾ ಇತ್ತು, ಈ ಪೋಲೀಸ್‌ನವರ ಕೈಯಲ್ಲಿ ಏನು ಆಗುವುದಿಲ್ಲ, ಇವರಿಂದಲೇ ದರೋಡೆಯಾಗುವುದು, ನಮಗೆ ರಕ್ಷಣೆ ಇಲ್ಲ ಎಂದು ಹೇಳುತ್ತಿದ್ದರು, ಇಲ್ಲಿ ಮಾನ್ಯ ಗೃಹ ಸಚಿವರು ಇದ್ದಾರೆ ದಯಮಾಡಿ ಅದನ್ನು ಬಹಳ

ಗಂಭೀರವಾಗಿ ಪರಿಗಣನೆ ಮಾಡಬೇಕು. ಈ ರಾಜ್ಯದಲ್ಲಿ ಯಾವ ಕಾವೇರಿ ನೀರಿನ ಬಗ್ಗೆ ದಿನಗಟ್ಟಲೆ ಚರ್ಚೆಯಾಗುತ್ತದೆ ಈ ಸದನದಲ್ಲಿ, ಕಾಡುಗಳ್ಳನ ಬಗ್ಗೆ ಚರ್ಚೆಯಾಗುತ್ತದೆ, ಆದರೆ ನಮ್ಮ ಊರಿನ ರಾಗಿ ರೊಟ್ಟಿ ತಿನ್ನುವ, ಜೋಳದ ಹಿಟ್ಟು ತಿನ್ನುವ ಜನರ ಪ್ರಾಣವು ಅಷ್ಟೇ ಮಹತ್ವವಾದದ್ದು ಎಂದು ತಿಳಿದುಕೊಂಡು ಇದನ್ನು ಗಂಭೀರವಾಗಿ ಪರಿಗಣನೆ ಮಾಡಬೇಕು. ಈ ರೀತಿಯ ಸಾವು ಸಂಭವಿಸಿದಾಗ ಜನರು ಉದ್ರಿಕ್ತಗೊಳ್ಳುವುದು ಸರ್ವಸಾಮಾನ್ಯ ನಾನು ಅಲ್ಲಿಗೆ ಹೋದಾಗ ಅಲ್ಲಿಯ ಸಿಪಿಐ ಮತ್ತು ಎಸ್‌ಪಿಯವರು ಇದ್ದರು, ನಂತರ ಡಿವೈಎಸ್‌ಪಿಯವರು ಬಂದರು, ನಾನು ಅಲ್ಲಿ ಇದ್ದಾಗ ಆರೂವರೆ ಏಳು ಗಂಟೆಯಾಗಿತ್ತು ಆ ಸಿಪಿಐ ಮೇಲೆ ಜನರು ಏನು ಸ್ವಾಮಿ ಏನು ಮಾಡುತ್ತಿದ್ದೀರಿ. ನೀವು ಪೊಲೀಸ್‌ನವರು ಕೆಲಸ ಮಾಡುತ್ತಿಲ್ಲ ಹಾಗೆ ಹೀಗೆ ಎಂದು ಒಂದು ಆವೇಶದಲ್ಲಿ ಮಾತನಾಡುತ್ತಿದ್ದರು. ಜನಕ್ಕೆ ಪ್ರಾಣ ಹೋದಾಗ ಸಹಜವಾಗಿ ಅವರಿಗೆ ಇದ್ದಂತಹ ರೋಷವನ್ನು ಸರ್ಕಲ್ ಇನ್ಸ್‌ಪೆಕ್ಟರ್ ಮೇಲೆ ವ್ಯಕ್ತಪಡಿಸುತ್ತಿದ್ದರು. ನಾನೂ ಕೂಡ ಈ ಸಂದರ್ಭದಲ್ಲಿ ಮಾತನಾಡುವುದು ಒಳ್ಳೆಯದಲ್ಲ, ಸಮಯ ಪ್ರಜ್ಞೆಯನ್ನು ಅರ್ಥ ಮಾಡಿಕೊಂಡು ನಾನೂ ಕೂಡ ಏನೂ ಮಾತನಾಡದೆ ಸ್ವಲ್ಪ ಸಮಾಧಾನ ಹೇಳಿದಾಗ ಡಿ.ವೈ.ಎಸ್.ಪಿ ಅಲ್ಲಿಗೆ ಬಂದರು. ದಯಮಾಡಿ ಒಂದು ವ್ಯಾನ್ ಹಾಕಿ ಊರಿನ ಸುತ್ತ ಶಬ್ದ ಮಾಡಬೇಕೆಂದು ಹೇಳಿದೆ. ಕಳೆದವಾರ ಏನು ರಾಬರಿಯಾಯಿತು, ಅಲ್ಲಿಗೆ ಪೊಲೀಸ್ ಹಾಕಿದ್ದರು. 8-10 ದಿವಸದ ಕೆಳಗೆ ನಮ್ಮ ಮನೆ ಹತ್ತಿರ ಬೀಟ್ ಮಾಡುವವರು ಬಂದು ಅಲ್ಲಿ ಶಬ್ದ ಮಾಡಿದಾಗ ನಾನು ಬಾಗಿಲು ತೆಗೆದು ನೋಡಿದಾಗ, ಅವರು ನಾನು ಶಬ್ದ ಮಾಡಿದ್ದು ಸ್ವಾಮಿ, ನಮಗೆ ಡ್ಯೂಟಿ ಮಾಡುವುದಕ್ಕೆ ಹಾಕಿದ್ದಾರೆ, ನಮಗೂ ಡಕಾಯಿತರನ್ನು ಐಡೆಂಟಿಫೈ ಮಾಡುವುದಕ್ಕೆ ಕಷ್ಟ ಎಂದು ಹೇಳುತ್ತಿದ್ದಾರೆ. 20 ವರ್ಷಗಳ ಹಿಂದೆ ಪೊಲೀಸರು ಕೆಲಸ ಮಾಡುತ್ತಿದ್ದಂತಹ ಪರಿಸ್ಥಿತಿ ಈಗ ಇಲ್ಲ ಎಂದು ಹೇಳಿದರು. ಒಬ್ಬರು ಹಾಸನ ಪೊಲೀಸರು ಹೇಳಿದರು ಈಗ ಏನಾಗಿದೆ ಎಂದರೆ ಯಾರಪ್ಪ ನೀವು ಎಂದು ಗದರಿದರೆ ಸಾಕು ಬೆಳಿಗ್ಗೆ ನಿಮ್ಮ ಹತ್ತಿರ ಬರುತ್ತಾರೆ' ಏನಯ್ಯಾ ಯಾರು ಎಂದು ಕೇಳುತ್ತಿದ್ದೆಯಲ್ಲಾ ನೀವು ಇರಬೇಕೋ ಈ ಊರಲ್ಲಿ ಹೋಗಬೇಕೋ ಎಂದು ನಮ್ಮನ್ನು ತರಾಟೆಗೆ ತೆಗೆದುಕೊಳ್ಳುತ್ತೀರಿ. ಆಡಳಿತ ಪಕ್ಷದವರು ಒಂದು ರೀತಿ ತರಾಟೆಗೆ ತೆಗೆದುಕೊಳ್ಳುತ್ತಾರೆ, ವಿರೋಧ ಪಕ್ಷದವರು ಒಂದು ರೀತಿ ತರಾಟೆಗೆ ತೆಗೆದುಕೊಳ್ಳುತ್ತಾರೆ; ನಮ್ಮ ಕೆಲಸವನ್ನು ನಾವು ಮಾಡುವುದು ಕಷ್ಟವಿದೆ ಎಂದು ಹೇಳುತ್ತಾರೆ. ನನ್ನ ಒಟ್ಟಾರೆ ವಿಚಾರ ಏನಿದೆ ಎಂದರೆ ಅವತ್ತು ಏನು 30 ಕೋಟಿ ಜನಸಂಖ್ಯೆ ಇದ್ದಂತಹ ಕಲ್ಪನೆಯಲ್ಲಿ ಏನಿತ್ತು, ಪೊಲೀಸ್ ಸ್ಟೇಷನ್ ಎಂದರೆ ಹೇಗಿರಬೇಕು ರಕ್ಷಣೆ ಇಲಾಖೆ ಹೇಗಿರಬೇಕು ಎನ್ನುವ ಬಗ್ಗೆ ಹೇಳುವುದಾದರೆ, ಇವತ್ತು ನಮ್ಮ ಜನಸಂಖ್ಯೆ ನೂರು ಕೋಟಿ ಮೀರಿರುವ ವ್ಯವಸ್ಥೆಗೆ ಇರುವಂತಹ ಪೊಲೀಸ್ ವ್ಯವಸ್ಥೆ ಖಂಡಿತ ಸಾಲದು. ಒಂದು ಗಂಟೆ ಹಿಂದೆ ಈ ಇಲಾಖೆಗೆ ಹೆಚ್ಚು ಬಹಳ ಖರ್ಚಾಗುತ್ತದೆ ಎಂದು ಹೇಳಿದರು. ಅದು ಏನೇ ಖರ್ಚಾದರೂ ಆಗಲಿ ಮನುಷ್ಯರಿಗೆ ರಕ್ಷಣೆ ಬಹಳ ಮುಖ್ಯ. ಇವತ್ತು ಇರತಕ್ಕಂಥ ಪೊಲೀಸ್‌ಮನ್ ಕೂಡ ಸಾಲುವುದಿಲ್ಲ. ಸಬ್‌ಇನ್ಸ್‌ಪೆಕ್ಟರ್ ಹುದ್ದೆ

ಕೂಡ ಸಾಲುವುದಿಲ್ಲ. ಈಗಾಗಲೇ ನಾವು ನಮ್ಮ ತಾಲ್ಲೂಕಿಗೆ ಪೊಲೀಸ್ ಸ್ಟೇಷನ್ ಬೇಕು ಎಂದು ಮನವಿ ಕೊಟ್ಟಿದ್ದೇವೆ. ಚನ್ನರಾಯಪಟ್ಟಣದಲ್ಲಿ ಅರ್ಬನ್ ಮತ್ತು ರೂರಲ್ ಪೊಲೀಸ್ ಸ್ಟೇಷನ್ ಬೇಕು ಎಂದು ಕೇಳಿದ್ದು ಅದು ಮಂಜೂರು ಆಗಿದೆ ಎಂದೂ ಕೂಡ ನನಗೆ ಅನ್ನಿಸಿದೆ. ಅತೀ ಶೀಘ್ರದಲ್ಲಿ ನಾವು ಬಿಲ್ಡಿಂಗ್ ಕಟ್ಟುತ್ತೇವೆ, ಅದಕ್ಕೆ ಪೊಲೀಸ್‌ರನ್ನು ಈ ವಾರದಲ್ಲಿ ನೇಮಕ ಮಾಡುತ್ತೇವೆ ಮತ್ತು ಅಲ್ಲಿ ಅಧಿಕಾರಿಗಳನ್ನು ಹಾಕಿ ಊರಿಗೆ ರಕ್ಷಣೆ ಕೊಡುತ್ತೇವೆ ಎಂದು ಹೇಳಬೇಕು. ಮತ್ತು ಏನು ಈಗ ಸತ್ತಿದ್ದಾರೆ ಅದರ ಜೊತೆಗೆ ಏನಾಯಿತೆಂದರೆ ಇಲ್ಲಿ ಒಂದು ವಿಶೇಷ ಸಮಾಚಾರ ಎಂದರೆ ರಾಬರಿಯಾಗಿ ಅವರು ಸತ್ತರು, ಸಹಜವಾಗಿ ಜನರಿಗೆ ದುಗುಡ ಇರುತ್ತದೆ. ಬೆಳಿಗ್ಗೆ ಇದೇನೋ ರಾಜಕೀಯ ಲಾಭ ಪಡೆಯುವುದಕ್ಕೋಸ್ಕರ ಬೀದಿಗೆ ಬಂದು ಬಸ್ ಎಲ್ಲಾ ನಿಲ್ಲಿಸಿ ಅಲ್ಲಿ ಗೋಲಿಬಾರ್ ಆಗುವಂತಹ ಸನ್ನಿವೇಶ ಉಂಟಾಗಿ, ಪೊಲೀಸ್ ಜೀಪ್ ಸುಟ್ಟುಹಾಕಿದ್ದಾರೆ ಗೋಲಿಬಾರ್‌ನಲ್ಲಿ ಸತ್ತರೆ, ಯಾರೋ ತಬ್ಬಲಿ, ಸೌತೇಕಾಯಿ ಮಾರುವುದಕ್ಕೆ ಬಂದವನು, ಸೌದೆ ಮಾರುವುದಕ್ಕೆ ಬಂದವನು ಈ ಶಿಕ್ಷೆಗೆ ಒಳಗಾಗಬೇಕಾ? ಇದು ರಾಜ್ಯದಲ್ಲಿ ಆಗ್ಗಿಂದಾಗ್ಗೆ ಯಾವಾಗಲೂ ಪುನರಾವರ್ತನೆಯಾಗುತ್ತದೆ. ಇದು ಆಗಬಾರದು. ಏಕೆಂದರೆ ನಾವು ಪಕ್ಷಾತೀತವಾಗಿ ಸಂದರ್ಭವನ್ನು ನೋಡಬೇಕು. ನಮಗೆ ರಾಜಕೀಯ ಮಾಡುವುದಕ್ಕೆ ಬೇರೆ ವಿಚಾರಗಳು, ಬೇರೆ ವೇದಿಕೆಗಳು ಇದೆ. ಇಂತಹ ಪರಿಸ್ಥಿತಿ ಇದ್ದಾಗ ಸ್ವಲ್ಪ ಏನಾದರೂ ಬೆಂಕಿ ತಗುಲಿದರೆ ಅದಕ್ಕೆ ಪೆಟ್ರೋಲ್ ಹಾಕಿದಷ್ಟು ಶಕ್ತಿ ಬರುತ್ತದೆ. ಆ ಒಂದು ಪರಿಣಾಮ ಆಗಬಾರದು. ಅದು ಮುಂದೆ ಮರುಕಳಿಸದ ರೀತಿಯಲ್ಲಿ ನೋಡಿಕೊಳ್ಳಬೇಕು. ಮತ್ತು ಅಲ್ಲಿ ಏನು ಅಮಾಯಕರು ಬಂದು ಸತ್ತರು, ಒಬ್ಬರು ಪ್ರಕಾಶ್ ಮತ್ತು ಈಶ್ವರಾಚಾರ್ ಎಂದು ಮತ್ತೊಬ್ಬರು ಸುಂಡಳ್ಳಿ ಲೋಕೇಶ್ ಎಂದು. ಈಗಾಗಲೇ ಸುದ್ದಿ ಪ್ರಕಾರ ಲೋಕೇಶ್ ಎನ್ನುವವರು ಕೂಡ ತೀರಿಕೊಂಡಿದ್ದಾರೆ ಎನ್ನುವಂತಹ ಮಾತು ಖಚಿತವಾಗಿ ಅಲ್ಲದಿದ್ದರೂ ಸುದ್ದಿ ಇದೆ. ಯಾರೇ ಸತ್ತಿರಲಿ, ಆ ಅಮಾಯಕರಿಗೆ ಸರ್ಕಾರದಿಂದ ಶೀಘ್ರವಾಗಿ ಪರಿಹಾರವನ್ನು ಕೊಡಬೇಕೆಂದು, ಅದು ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಆಗಲಿ ಅಥವಾ ಸರ್ಕಾರ ಯಾವುದೇ ಒಂದು ಸಂಪನ್ಮೂಲದಿಂದ ಎಂದು ಹೇಳುತ್ತಾ, ಏನು ರಾಬರಿಯಲ್ಲಿ ಹೆಣ್ಣುಮಗಳು ಸತ್ತಿದ್ದಾಳೆ, ಅವಳ ಗಂಡನ ಸ್ಥಿತಿ ಚಿಂತಾಜನಕ ಸ್ಥಿತಿಯಲ್ಲಿ ಇದೆ, ಆ ಒಂದು ಕುಟುಂಬದವರು ನಿಗರ್ತಿಕರಾಗಿದ್ದಾರೆ. ಅವರ ಮಕ್ಕಳು ತಬ್ಬಲಿಗಳು ಆಗುತ್ತಾರೆ. ಅವರಿಗೂ ಕೂಡ ಸರ್ಕಾರ ಪರಿಹಾರವನ್ನು ಕೊಡಬೇಕು. ಮತ್ತು ಈ ಗೋಲಿಬಾರ್‌ನಲ್ಲಿ ಸತ್ತಿರುವವರಿಗೆ ಕೂಡ ಪರಿಹಾರವನ್ನು ಕೊಡಬೇಕು. ಮತ್ತು ಇಂತಹ ಘಟನೆ ಮರುಕಳಿಸದಂತೆ ಒಂದು ಬಿಗಿ ಬಂದೋಬಸ್ತು ಮಾಡಿ ಪೊಲೀಸ್ ಸ್ಟೇಷನ್‌ನ್ನು ಹೊಸದಾಗಿ ಮಾಡಬೇಕು. ಮತ್ತು ಬೆಂಗಳೂರಿನಲ್ಲಿ ಏನು ಹೊಯ್ಸಳ ವ್ಯವಸ್ಥೆ ಎಂದು ಮಾಡಿದ್ದೀರಿ, ಇದು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಬಾರದು. ಇದು ನಮ್ಮ ತಾಲ್ಲೂಕು ಕೂಡ ರಾಷ್ಟ್ರೀಯ ಹೆದ್ದಾರಿಯಲ್ಲಿ ಇರತಕ್ಕಂಥ ಊರು. ಬಹಳ ಬೆಳೆದಿರತಕ್ಕಂಥ ಊರು. ಅಲ್ಲೂ ಕೂಡ ನೀವು ಇಂತಹ ವ್ಯವಸ್ಥೆಯನ್ನು ಮಾಡಬೇಕು.

ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣನೆ ಮಾಡಿ ಅಲ್ಲಿ ಒಂದು ಹೊಸ ಪೊಲೀಸ್ ಸ್ಟೇಷನ್ ಮಂಜೂರು ಮಾಡುವುದು ಮತ್ತು ಸತ್ತಂಥ ಕುಟುಂಬದವರಿಗೆ ಪರಿಹಾರ ಕೊಡುವ ಬಗ್ಗೆ ಮತ್ತು ಇಂತಹ ಘಟನೆ ಮರುಕಳಿಸದ ರೀತಿಯಲ್ಲಿ ಕ್ರಮತೆಗೆದುಕೊಳ್ಳಬೇಕು ಎನ್ನುವ ಮಾತನ್ನು ಹೇಳಿ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು): ಮಾನ್ಯ ಅಧ್ಯಕ್ಷರೇ, ಈಗ ಚನ್ನರಾಯ ಪಟ್ಟದಲ್ಲಿ ನಿನ್ನೆ ರಾತ್ರಿ ಮತ್ತು ಬೆಳಿಗ್ಗೆ ನಡೆದ ಘಟನೆಯನ್ನು ಎರಡು ಭಾಗಗಳನ್ನಾಗಿ ಮಾಡಬಹುದು. ಒಂದು ರಾತ್ರಿ ಡಕಾಯಿತಿ ನಡೆದು ಆ ಒಂದು ಘಟನೆಯಲ್ಲಿ ಮೃತ ಹೊಂದಿರತಕ್ಕಂಥವರು. ಡಕಾಯಿತಿ ಘಟನೆ ಆದಮೇಲೆ ಬೆಳಿಗ್ಗೆ ಸಾರ್ವಜನಿಕರಿಂದ ಪ್ರತಿಭಟನೆ ಆಗಿ ಅಲ್ಲಿ ಪ್ರಕ್ಷುಬ್ದ ಪರಿಸ್ಥಿತಿ ಉಂಟಾಗಿರುವುದು ಎರಡನೇ ಘಟನೆ. ಇದು ಸರ್ಕಾರವೇ ಡಕಾಯಿತಿ ಮಾಡಿಸಿದೆ ಎಂದು ನಾನು ಹೇಳುವುದಿಲ್ಲ. ಯಾವ ಸರ್ಕಾರ ಕೂಡ ಡಕಾಯಿತಿ ಮಾಡಿಸುವುದಕ್ಕೆ ಹೋಗುವುದಿಲ್ಲ. ಆದರೆ ಡಕಾಯಿತರ ಹುಟ್ಟು ಅಡಗಿಸುವಂತಹ ನೈತಿಕ ಸ್ಥೈರ್ಯ ಶಕ್ತಿ ನಮ್ಮ ಪೊಲೀಸರಿಗೆ ಇಲ್ಲ ಎಂಬುದು ಈ ಸರ್ಕಾರಕ್ಕೆ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇತ್ತೀಚಿನ ತಿಂಗಳುಗಳಲ್ಲಿ ಈ ಡಕಾಯಿತಿಗಳು ಹೆಚ್ಚಾಗುತ್ತಿವೆ. ಅದನ್ನು ನಿಯಂತ್ರಣ ಮಾಡುವುದಕ್ಕೆ ಸರ್ಕಾರ ವಿಫಲವಾಗಿದೆ ಎನ್ನುವುದನ್ನು ನನ್ನ ಅಭಿಪ್ರಾಯ. ನಾಗರೀಕರ ಜೀವ ಹಾನಿಯಾಗುತ್ತಿದೆ. ಮಾನ ಹಾನಿಯಾಗುತ್ತಿದೆ. ಆಸ್ತಿ ಹಾನಿಯಾಗುತ್ತಿದೆ. ಅದನ್ನು ನಿಯಂತ್ರಣ ಮಾಡುವುದಕ್ಕೆ ಸರ್ಕಾರ ಒಂದು ಉತ್ತಮವಾದ ಕ್ರಮವನ್ನು ಏನು ಕೈಗೊಳ್ಳುವುದಕ್ಕೆ ಇಚ್ಛಿಸುತ್ತದೆ ಎನ್ನುವುದನ್ನು ತಿಳಿಸಬೇಕು. ಅದು ಮೊದಲನೆ ವಿಷಯ. ಇನ್ನು ಎರಡನೆಯದಾಗಿ ರಾತ್ರಿ ಡಕಾಯಿತಿ ಆಯಿತು. ಒಬ್ಬಳು ಹೆಣ್ಣುಮಗಳು ತೀರಿಹೋದಳು. ಅದಾದಮೇಲೆ ಅಲ್ಲಿ ಸಾರ್ವಜನಿಕ ಪ್ರತಿಭಟನೆಯಾಗಿ ಅಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಗಿದೆ. ಈಗಾಗಲೇ ನಮ್ಮ ಸ್ನೇಹಿತರಾದ ನಮ್ಮ ಪುಟ್ಟೇಗೌಡರು ಹೇಳಿದ ಹಾಗೆ ಯಾರೂ ಕೂಡ ಇಂತಹ ನೀಚ ಕೆಲಸ ಮಾಡಬಾರದು. ಆದರೆ ಇಂತಹ ಒಂದು ಪರಿಸ್ಥಿತಿ ಉದ್ಭವವಾಗುವುದಕ್ಕೆ ಕಾರಣ ಏನು ಎನ್ನುವುದನ್ನು ಕೂಡ ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಇಲ್ಲಿ ಏನು ಸ್ನೇಹಿತರು ಹೇಳಿದ ಹಾಗೆ 8-10 ದಿವಸಗಳ ಹಿಂದೇನೇ ಚನ್ನರಾಯಪಟ್ಟಣದಲ್ಲಿ ಡಕಾಯಿತಿಯಾಗಿದೆ. ಕೆಲವು ಮನೆಗಳಿಗೆ ನುಗ್ಗಿ ಆಭರಣ ದೋಚಿ ಹೋಗಿದ್ದಾರೆ. ಇದು ನಿಮ್ಮ ಇಲಾಖೆಗೆ ಗೊತ್ತಿದೆ. ಗೊತ್ತಿದ್ದರೂ ಕೂಡ ಸೂಕ್ತವಾದ ವ್ಯವಸ್ಥೆಯನ್ನು ಏಕೆ ಮಾಡಲಿಲ್ಲ? ಆದುದರಿಂದ ಈ ಘಟನೆ ಆಗುವುದಕ್ಕೆ ಕಾರಣವಾಯಿತು. ಎರಡನೆಯದು ರಾತ್ರಿ ಏನು ಘಟನೆಯಾಯಿತು, ಘಟನೆ ಆದಮೇಲೆ ಪಕ್ಕದ ಮನೆಯವರು ಪೊಲೀಸ್ ಸ್ಟೇಷನ್‌ಗೆ ಫೋನ್ ಮಾಡಿ ಹೇಳಿದ್ದಾರೆ. ಈ ರೀತಿ ಡಕಾಯಿತಿ ಆಗುತ್ತಿದೆ ಎಂದು. ಆ ಪೊಲೀಸರು ಏನು ಹೇಳಿದ್ದಾರೆಂದರೆ ಇಲ್ಲಿ ಯಾರೂ ಇಲ್ಲ, ಡಕಾಯಿತಿ ಆಗುತ್ತಿದ್ದರೆ ನಾವೇನು ಮಾಡಬೇಕು ಎಂದು ಹೇಳಿದಾಗ

ಅಕ್ಕಪಕ್ಕದವರೆಲ್ಲಾ ರೊಚ್ಚಿಗೆದ್ದಿದ್ದಾರೆ. ಪೋಲೀಸರ ಮೇಲೆ ರೊಚ್ಚಿಗೇಳುವುದಕ್ಕೆ ಇದೇ ಮುಖ್ಯ ಕಾರಣ. ಆದುದರಿಂದ ಇವತ್ತು ಅಲ್ಲಿ ಪೊಲೀಸ್ ಫೈರಿಂಗ್ ಆಗಿದೆ. ಮೂರು ಜನರಿಗೆ ತೀವ್ರತರವಾದ ಗಾಯವಾಗಿದೆ. ಈಗಾಗಲೇ ನಮಗೆ ಬಂದಿರತಕ್ಕಂಥ ಮಾಹಿತಿ ಪ್ರಕಾರ ಇನ್ನೊಬ್ಬ ಸೀರಿಯಸ್ಲಿ ಇಂಜ್ಯೂರ್ಡ್ ಎಂದು ಹೇಳಿದ್ದಾರೆ. ನಿಮ್ಮ ಡಿ.ಜಿ.ಪಿ. ಹೇಳಿದ್ದಾರೆ.

"The DGP had directed the SPs and the Commissioners of Police to start anti-dacoity checks in the wake of many incidents during this month." ಡಕಾಯಿತಿ ಈ ರಾಜ್ಯದಲ್ಲಿ ಈ ತಿಂಗಳಿನಲ್ಲಿ ಹೆಚ್ಚುತ್ತಿದೆ ಎನ್ನುವುದನ್ನು ನಿಮ್ಮ ಪೊಲೀಸ್ ವರಿಷ್ಠಾಧಿಕಾರಿ ಒಪ್ಪಿಕೊಂಡಿದ್ದಾರೆಂದರೆ ಸರ್ಕಾರ ವಿಫಲವಾಗಿದೆ ಎಂದು ಅರ್ಥವಾಗುತ್ತದೆ. ಆ ದಿಕ್ಕಿನಲ್ಲಿ ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕು. ಜನರೇ ಕಾನೂನನ್ನು ಕೈಗೆ ತೆಗೆದುಕೊಳ್ಳುವ ಬದಲು ನೀವೇ ಸರಿಯಾಗಿ ಕಾರ್ಯಕ್ರಮವನ್ನು ಕೈಗೊಂಡರೆ ಈ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ. ಅಧ್ಯಕ್ಷರೇ, 8-10 ದಿವಸದಲ್ಲಿ ಆಯಿತು. ಇವತ್ತು ಬೆಳಿಗ್ಗೆ ಪೊಲೀಸರಿಗೆ ಅಕ್ಕಪಕ್ಕದವರು ಫೋನ್ ಮಾಡಿದರೆ ನಿಮ್ಮ ಪೊಲೀಸ್‌ನವರು ಏನು ಉತ್ತರ ಹೇಳಬೇಕು ಹೇಳಿ. ನಾವು ಬಂದು ಏನು ಮಾಡುವುದಕ್ಕೆ ಆಗುತ್ತದೆ, ಇಲ್ಲಿ ಯಾರೂ ಇಲ್ಲ ಎನ್ನುವಂತಹ ಮಾತನ್ನು ಹೇಳಿದರೆ ಜನರು ಏನು ಮಾಡುತ್ತಾರೆ, ಕಾನೂನನ್ನು ಕೈಗೆ ತೆಗೆದುಕೊಳ್ಳುವಂತಹ ವಿಚಾರ ಆಗಬಾರದು. ಇಲ್ಲಿಂದ ಒಂದು ಸಂದೇಶ ಹೋಗಬೇಕು. ಶಾಂತಿ ಸುವ್ಯವಸ್ಥೆಯನ್ನು ಕಾಪಾಡಬೇಕು. ಜನರು ಕೈಗೆ ಕಾನೂನನ್ನು ತೆಗೆದುಕೊಳ್ಳುವುದಾದರೆ ಸರ್ಕಾರ ಇದ್ದರೇನು ಇಲ್ಲದಿದ್ದರೇನು? ಆ ದಿಕ್ಕಿನಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ನಾನು ವಿನಂತಿಸಿಕೊಳ್ಳುತ್ತೇನೆ.

+ ಶ್ರೀ ಆರ್.ರೋಷನ್ ಬೇಗ್: (ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ, ಚನ್ನರಾಯಪಟ್ಟಣದಲ್ಲಿ ಇವತ್ತಿನ ದಿವಸ ಬೆಳಿಗಿನ ಜಾವ ಮೂರು ಗಂಟೆಗೆ ನಾಲ್ಕು ಜನ ಡಕಾಯಿತಿಗಳು ಈ ರಾಮಕೃಷ್ಣ ಎನ್ನುವವರು ಆದಿ ಚುಂಚನಗಿರಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದು, ಅವರ ಮನೆಗೆ ನುಗ್ಗಿ ಬಾಗಿಲು ಎಲ್ಲಾ ಹೊಡೆದು ಅಲ್ಲಿ ಅವರ ಹೆಂಡತಿ ಶ್ರೀಮತಿ ಪ್ರೇಮ ಮತ್ತು ರಾಮಕೃಷ್ಣ ಅವರಿಗೆ ಹೊಡೆದು ಡೆಡ್ಲಿ ವೆಪನ್ಸ್ ಯೂಸ್ ಮಾಡಿ ಲೂಟಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದರ ಜೊತೆಗೆ ಅದಕ್ಕೆ ಮುಂಚೆ ಮೌಸಿನಾ ಮತ್ತು ಜೀನತ್ ಎನ್ನುವವರು ಮನೆಗೆ ಕೂಡ ನುಗ್ಗಿದ್ದಾರೆ. ಅದರ ಜೊತೆಗೆ ಒಬ್ಬ ಕಂಟ್ರಾಕ್ಟರ್ ಮೈಲಾರಿ ಗೌಡ ಅವರ ಮನೆಗೆ ಕೂಡ ನುಗ್ಗುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಈ ಘಟನೆಯಲ್ಲಿ ಶ್ರೀಮತಿ ಪ್ರೇಮಾ ಎಂಬುವರಿಗೆ ತಲೆಗೆ ಏಟು ಬಿದ್ದಿದೆ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅವರು ತೀರಿ ಹೋಗಿದ್ದಾರೆ. ಇನ್ನೊಬ್ಬರು ರಾಮಕೃಷ್ಣ ಎಂಬುವವರನ್ನು ಬೇಲೂರು ಆಸ್ಪತ್ರೆಗೆ ಅಡ್ಮಿಟ್ ಮಾಡಲಾಗಿತ್ತು

ನಂತರ ಅವರನ್ನು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಬಂದು ಅಡ್ಮಿಟ್ ಮಾಡಲಾಗಿದೆ. ಈ ಚನ್ನರಾಯಪಟ್ಟಣದಲ್ಲಿ ಆದ ಘಟನೆಯ ಬಗ್ಗೆ ಪೊಲೀಸ್‌ನವರು ಕ್ರೈಮ್ ನಂಬರ್ 238/97 ಆರ್ಡರ್ ಸೆಕ್ಷನ್ 396 ಐ.ಪಿ.ಸಿ. ಕೇಸನ್ನು ರಿಜಿಸ್ಟರ್ ಮಾಡಿದ್ದಾರೆ. ಇದಕ್ಕೆ ಕಾರಣ ಯಾರು ಏನು ಎಂಬುದರ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಇದಾದ ಮೇಲೆ ಏನಾಗಿದೆ ಎಂದರೆ ಮೂರು ಜನ ಪೊಲೀಸ್‌ನವರು ಸರಿಯಾಗಿ ಕೆಲಸ ಮಾಡಿಲ್ಲ, ಇದಕ್ಕಿಂತ ಮುಂಚೆ ಹದಿನೈದು ದಿಸಗಳ ಹಿಂದೆ ಕೂಡ ಒಂದು ಘಟನೆಯಾದಾಗ ಕೂಡ ಪೊಲೀಸ್‌ನವರು ಸರಿಯಾಗಿ ಕೆಲಸ ಮಾಡಿಲ್ಲ, ಪೊಲೀಸ್ ಸ್ಟೇಷನ್‌ಗೆ ಫೋನ್ ಮಾಡಿದಾಗ ನಮ್ಮ ಹತ್ತಿರ ಸಿಬ್ಬಂದಿಗಳಿಲ್ಲ ನಾವು ಹೇಗೆ ಬರುವುದು ಎಂದು ಹೇಳಿದ್ದಾರೆ ಎಂದು ಅಲ್ಲಿ ಒಂದು ರೂಮರ್ ಆಗಿ ಅಲ್ಲಿಯ ಜನರೆಲ್ಲಾ ಸೇರಿ ಗಲಾಟೆಯಾಗಿ, ನ್ಯಾಶನಲ್ ಹೈವೇ ಟ್ರಾಫಿಕ್ ಎಲ್ಲಾ ಬ್ಲಾಕ್ ಮಾಡಿಸಿ ಪೊಲೀಸ್ ಕ್ವಾರ್ಟರ್ಸ್ ಕಡೆ ಎಲ್ಲಾ ನುಗ್ಗುವುದಕ್ಕೆ ಟ್ರೈ ಮಾಡಿದ್ದಾರೆ. ಆಗ ಪೊಲೀಸ್‌ನವರು ಲಾಠಿ ಚಾರ್ಜ್ ಮಾಡಿದ್ದಾರೆ, ಟಿಯರ್ ಗ್ಯಾಸ್‌ನ್ನು ಬಿಟ್ಟಿದ್ದಾರೆ, ನಂತರ ಗೋಲಿಬಾರ್ ಕೂಡ ಮಾಡಿದ್ದಾರೆ, ಆ ಗೋಲಿಬಾರ್‌ನಲ್ಲಿ ಸುಂಡಹಳ್ಳಿ ಊರಿನವರು ಶ್ರೀ ಈಶ್ವರಾಚಾರ್ಯರವರ ಮಗ ಮಂಜು ಎಂಬುವರು ತೀರಿ ಹೋಗಿದ್ದಾರೆ. ಅದರ ಜೊತೆಗೆ ಲೋಕೇಶ್ ಎಂಬ ವಿಧ್ಯಾರ್ಥಿ ಕೂಡ ಇಂಜ್ಯೂರ್ ಆಗಿದ್ದಾರೆ. ಅಲ್ಲಿ ಈಗ ಅಸಿಸ್ಟೆಂಟ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಲಾ ಆ್ಯಂಡ್ ಆರ್ಡರ್ ಶ್ರೀ ಮಡಿಯಾಳ್‌ರವರು ಅಲ್ಲಿ ಕ್ಯಾಂಪ್ ಮಾಡಿದ್ದಾರೆ. ಈಗ ಡಿ.ಜಿ.ಪಿ. ಕೂಡ ಅಲ್ಲಿ ಹೋಗುತ್ತಿದ್ದಾರೆ. ಅಲ್ಲಿ ಈಗ ಸಿಚ್ಯುಯೇಷನ ಕಂಟ್ರೋಲ್‌ನಲ್ಲಿದೆ ಡಕಾಯಿತಿ ಏನೋ ಆಗಿದೆ. ಇನ್ನು ಮಾನ್ಯ ಸದಸ್ಯರು ಬೆಂಗಳೂರಿನಲ್ಲಿ ಯಾವ ರೀತಿ ಹೊಯ್ಸಳ ಮಾಡಿದ್ದೀರಿ ಅದೇ ತರಹ ಬೇರೆ ಕಡೆ ಕೂಡ ಮಾಡಬೇಕೆಂದು ಹೇಳಿದ್ದಾರೆ. ಸುಮಾರು ಎಂಟು ಹತ್ತು ದಿವಸದಿಂದ ಈ ಡಕಾಯಿತಿ ಘಟನೆಗಳು ಸ್ವಲ್ಪ ಜಾಸ್ತಿಯಾದ ಮೇಲೆ ಸರ್ಕಾರದವರು ಒಂದು ತೀರ್ಮಾನವನ್ನು ಮಾಡಿದ್ದೇವೆ. ಈ ಬೆಂಗಳೂರಿನಲ್ಲಿ ಐವತ್ತು ವೆಹಿಕಲ್ಸ್‌ನ್ನು ನಾವು ಹೋಯ್ಸಳ ಮೊಬೈಲ್ ಕಂಟ್ರೋಲಿಂಗ್ ಎಂದು ಸ್ಕೀಮ್‌ನ್ನು ಏನು ಮಾಡಿದ್ದೇವೆ ಅದು ಬಹಳ ಸಕ್ಸೆಸ್‌ಫುಲ್ ಆಗಿ ನಡೆಯುತ್ತಿದೆ. ಅದೇ ತರಹ ಎಂಟೈರ್ ನ್ಯಾಷನಲ್ ಹೈವೇ ಹಾಗೂ ಸ್ಟೇಟ್ ಹೈವೇನಲ್ಲೂ ಕೂಡ ಈ ಮೊಬೈಲ್ ಪ್ಯಾಟ್ರೋಲನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆದಷ್ಟು ಬೇಗ ಅದನ್ನು ಶುರು ಮಾಡುತ್ತೇವೆ. ಇನ್ನು ಫೋನ್ ಮಾಡಿದ ಮೇಲೆ ಪೊಲೀಸ್‌ನವರು ಏಕೆ ಸರಿಯಾಗಿ ಬಂದಿಲ್ಲ, ಅಲ್ಲಿ ಏನಾಯಿತು ಎಂಬುದರ ಬಗ್ಗೆ ಹೇಳಬೇಕಾದರೆ ಈಗ ನಮ್ಮ ಆಫೀಸರ್ಸ್ ಎಲ್ಲಾ ಅಲ್ಲಿದ್ದಾರೆ ಅವರೆಲ್ಲಾ ಬಂದ ಮೇಲೆ ನಾಳೆ ಅದರ ಬಗ್ಗೆ ಉತ್ತರವನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ನಾನೊಂದು ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ತಮ್ಮ ಮುಖಾಂತರ ಕೇಳುತ್ತೇನೆ. ಅಲ್ಲಿ ಗೋಲಿಬಾರ್ ಮಾಡುವ ಪರಿಸ್ಥಿತಿ

ಉದ್ಭವವಾಗಿತ್ತೇ? ಅಂದರೆ ಅಲ್ಲಿ ಪೊಲೀಸ್ ಸಂಪೂರ್ಣವಾಗಿ ವಿಫಲವಾಗಿದೆ ಎಂದು ತಮಗೆ ನೇರವಾಗಿ ಅರ್ಥವಾಗುತ್ತದೆ. ಡಕಾಯಿತರನ್ನು ಹಿಡಿಯುವುದು ಬಿಟ್ಟು ಪಾಪ ಹಳ್ಳಿ ಜನಗಳ ಮೇಲೆ ಗೋಲಿಬಾರ್ ಮಾಡಿದ್ದಾರೆ ಎಂದರೆ ಇದು ವಿಪರ್ಯಾಸ. ಆದಕಾರಣ ಪೊಲೀಸರು ಜನಗಳ ಮೇಲೆ ಗೋಲಿಬಾರ್ ಮಾಡುವಂಥ ಪರಿಸ್ಥಿತಿ ಏನು ಉದ್ಭವವಾಯಿತು? ಲಾಠಿ ಚಾರ್ಜ್, ಟೀಯರ್ ಗ್ಯಾಸ್ ಯಾವ ಯಾವ ಸಂದರ್ಭಧಲ್ಲಿ ಮಾಡಿದ್ದಾರೆ? ಗೋಲಿಬಾರ್‌ಗೆ ಆದೇಶ ಕೊಟ್ಟವರು ಯಾರು?

ಅಧ್ಯಕ್ಷರು: ಡೀಟೇಲ್ಸ್ ಎಲ್ಲಾ ನಾಳೆ ತರಿಸಿ ಹೇಳುತ್ತಾರೆ.

ಶ್ರೀ ಹೆಚ್.ಎನ್.ಪ್ರಕಾಶ್ (ಹಾಸನ): ಮಾನ್ಯ ಅಧ್ಯಕ್ಷರೆ ಬೆಂಕಿ ಬಿದ್ದ ಮನೆಗೆ ಪೆಟ್ರೋಲ್ ಹಾಕುವಂಥ ಬುದ್ಧಿ ಇದೆಯಲ್ಲಾ ಅದು ಒಳ್ಳೆಯದಲ್ಲ. ಅಲ್ಲಿ ಇವೊತ್ತು ಏನಾಗಿದೆ ಎಂದರೆ ಸತ್ತಂಥ ವ್ಯಕ್ತಿ ಒಂದು ಹೈಸ್ಕೂಲಿನ ಸೂಪರಿಂಟೆಂಡೆಂಟ್ ಆಗಿದ್ದರು. ಆ ಕಾಲೇಜಿಗೆ ಬಂದಂಥ ವಿದ್ಯಾರ್ಥಿಗಳು ಬೆಳಿಗ್ಗೆ ಸೇರಿಕೊಳ್ಳುವುದು ಸಹಜ. ಆದರೆ ಅಲ್ಲಿದ್ದಂಥ ನಾಯಕರು ಇಂತಹ ಸಂದರ್ಭದಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಹೇಳಬೇಕು. ಹಾಗೂ ಶಾಂತಿಯನ್ನು ಮಾಡಬೇಕಾಗಿತ್ತು. ಆದರೆ ಇವರೇ ಅವರನ್ನು ಎತ್ತಿಕಟ್ಟಿ ಕರೆದುಕೊಂಡು ಹೋಗಿದ್ದಾರೆ. ಆದಕಾರಣ ಯಾರೇ ತಪ್ಪು ಮಾಡಿದರು ಪೊಲೀಸರು ಕ್ರಮವನ್ನು ತೆಗೆದುಕೊಳ್ಳಬೇಕು. ಆದಕಾರಣ ಯಾರು ತಪ್ಪಿತಸ್ಥರು ಎಂದು ತನಿಖೆ ಮಾಡಿಸಿ ತರಿಸಲಿ, ಅವರು ಯಾರು ಯಾರು ಮಾಡಿದರು, ಯಾವ ರೀತಿ ಅದು ನಡೆಯಿತು ಅಲ್ಲಿ ಯಾರು ಇದ್ದರೆಂದು ತರಿಸಲಿ. ಆದರೆ ಈ ವಿಷಯವನ್ನು ರಾಜಕೀಯವಾಗಿ ಬಳಸಿಕೊಳ್ಳುವುದು ನಿಜವಾಗಿ ಒಳ್ಳೆಯದಲ್ಲ. ಇವೊತ್ತು ಏನು ಸತ್ತಿದ್ದಾರೆ... ಆ ಹುಡುಗರು ಅವರೇ ಹೊಡೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು: ಬೇರೆ ಕೆಲಸ ಇಲ್ಲದಿದ್ದರೆ ಪಾಪ ಅವರು ತಾನೆ ಏನು ಮಾಡುತ್ತಾರೆ? ಯಾರಾದರೂ ಹಾಗೆ ಮಾಡುತ್ತಾರೆ, ಖಾಲಿ ಇದ್ದಾಗ ಏನೋ ಒಂದು ಮಾಡಬೇಕಲ್ಲಾ.

ಶ್ರೀ ಆರ್.ರೋಷನ್‌ಬೇಗ್: ಚೆನ್ನರಾಯಪಟ್ಟಣದಲ್ಲಿ ಒಂದು ರೂರಲ್ ಪೊಲೀಸ್ ಸ್ಟೇಷನ್ ಪ್ರಾರಂಭ ಮಾಡಬೇಕೆಂದು ಸರ್ಕಾರದಲ್ಲಿ ಒಂದು ಪ್ರಪೋಸಲ್ ಇದೆ. ಇನ್ನು ಪರಿಹಾರದ ಬಗ್ಗೆ ಹೇಳಿದ್ದಾರೆ. ನಾವು ಈಗಾಗಲೇ ಅದರ ಬಗ್ಗೆ ಡಿ.ಸಿ.ಯವರಿಗೆ ಆದೇಶವನ್ನು ಮಾಡಿದ್ದೇವೆ. ಸರ್ಕಾರದ ವತಿಯಿಂದ ಏನು ಅವರಿಗೆ ಪರಿಹಾರ ಕೊಡಬೇಕೋ ಅದನ್ನು ಕೊಡಬೇಕೆಂದು ಈಗಾಗಲೇ ತಿಳಿಸಿದ್ದೇನೆ. ಇನ್ನು ವಾಟಾಳ್ ನಾಗರಾಜ್‌ರವರು ಅಲ್ಲಿ ಫೈರಿಂಗ್ ಮಾಡುವ ಪರಿಸ್ಥಿತಿ ಉದ್ಭವವಾಗಿತ್ತಾ ಎಂದು ಕೇಳಿದ್ದಾರೆ. ಅಲ್ಲಿ ಎಂಟೈರ್ ನ್ಯಾಶನಲ್ ಹೈವೇ ಬ್ಲಾಕ್ ಮಾಡಿ, ಪೊಲೀಸ್ ಸ್ಟೇಶನ್‌ಗೆ ನುಗ್ಗಿ ಹಲ್ಲೆ ಮಾಡಿ, ಪೊಲೀಸ್ ಸ್ಟೇಶನ್‌ಗೆ ಕಲ್ಲು ತೂರಾಟ ಮಾಡಿ ಪೊಲೀಸ್ ಕ್ವಾರ್ಟರ್ಸ್‌ನಲ್ಲಿರುವ ಹೆಂಡತಿ ಮಕ್ಕಳ ಮೇಲೆ ಅಟ್ಯಾಕ್ ಮಾಡಲು ಹೋದಾಗ ಪೊಲೀಸ್‌ನವರು ಲಾಠಿ ಚಾರ್ಜ್ ಮಾಡಿದ್ದಾರೆ, ಟೀಯರ್ ಗ್ಯಾಸ್ ಬಿಟ್ಟಿದ್ದಾರೆ, ಫೈರಿಂಗ್

ಮಾಡಿದ್ದಾರೆ. ಅವರಿಗೆ ಬೇರೆ ಯಾವುದೇ ದಾರಿ ಇರಲಿಲ್ಲ.

(ಆ) ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬಿಗೆ ನ್ಯಾಯ ಬೆಲೆ.

+ಶ್ರೀ ಜೆ.ಬಿ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಮೈಸೂರು ಸಕ್ಕರೆ ಕಾರ್ಖಾನೆ ಈ ರಾಜ್ಯದಲ್ಲಿ ಇರತಕ್ಕಂಥ ಕಾರ್ಖಾನೆಗಳಲ್ಲಿ ಕಬ್ಬು ಅರೆಯುವಂಥ ಕಾರ್ಯವನ್ನು ಪ್ರಾರಂಭ ಮಾಡಲು ಮೊದಲು ಇರತಕ್ಕಂಥದ್ದನ್ನು ತಾವು ತಿಳಿಸಿದ್ದೀರಿ ಎಂದು ಭಾವನೆ ಮಾಡಿಕೊಂಡಿದ್ದೇನೆ. ಇಲ್ಲಿ ಮಾನ್ಯ ಸಕ್ಕರೆ ಸಚಿವರು ಇದ್ದಾರೆ. ನಮ್ಮ ಮೈಸೂರು ಸಕ್ಕರೆ ಕಾರ್ಖಾನೆ ಇದುವರೆಗೂ ನಡೆದುಕೊಂಡು ಬಂದಿರುವ ಪದ್ಧತಿ ಏನು ಎಂದರೆ ಕಬ್ಬು ಅರೆಯುವುದಕ್ಕೆ ಪ್ರಾರಂಭ ಮಾಡುವುದಕ್ಕೆ ಮೊದಲು ಅಲ್ಲಿಯ ಆಡಳಿತ ಮಂಡಳಿಯವರು ಅಲ್ಲಿರತಕ್ಕಂಥ ಜನ ಪ್ರತಿನಿಧಿಗಳು ಸೇರಿ ಒಂದು ಬೆಲೆಯನ್ನು ನಿಗದಿ ಮಾಡತಕ್ಕಂಥ ಒಂದು ಪದ್ಧತಿ ಇಲ್ಲಿಯವರೆಗೆ ನಡೆದುಕೊಂಡು ಬಂದಿದ್ದು ಇತ್ತು ಮಾನ್ಯ ಸಭಾಧ್ಯಕ್ಷರೆ. ಆದರೆ ಈ ಸಾರಿ ಅಲ್ಲಿಯ ಆಡಳಿತ ಮಂಡಳಿಯವರು ಜನ ಪ್ರತಿನಿಧಿಗಳ ಜೊತೆ ಮೀಟಿಂಗ್ ಮಾಡಿದರು. ಅದು ಅಪೂರ್ಣವಾಗಿ ಸರ್ಕಾರದ ಮುಂದೆ ಅದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳತಕ್ಕಂಥ ಪ್ರಸ್ತಾವನೆ ಬಂತು. ಆದರೆ ಎರಡು ಸಾರಿ ಅದನ್ನು ಕರೆದರೂ ಆ ಮೀಟಿಂಗ್ ನಡೆಯಲಿಲ್ಲ. ಆದರೆ ಈಗ ಆಡಳಿತ ಮಂಡಳಿಯವರು ತಾತ್ಕಾಲಿಕವಾಗಿ ರೂ.750ಎಂದು ರೇಟನ್ನು ಘೋಷಣೆ ಮಾಡಿದ್ದಾರೆ. ಆದರೆ ಇತರೆ ಕಾರ್ಖಾನೆಗಳನ್ನು ಹೋಲಿಸಿದರೆ ನಮ್ಮ ಮೈಸೂರು ಸಕ್ಕರೆ ಕಾರ್ಖಾನೆ ಡಿಸ್ಟಿಲರಿ ಇರತಕ್ಕಂಥದ್ದು ಹಾಗೂ ಅಲ್ಲಿ ಕಬ್ಬನ್ನು ಬೆಳೆಯುವ ಪ್ರಮಾಣ ಕೂಡ ಹೆಚ್ಚಿಗೆ ಇಲ್ಲ. ಆದಕಾರಣ ಅಲ್ಲಿಯ ಜನ ಪ್ರತಿನಿಧಿಗಳನ್ನು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅವರಿಗೆ ಒಂದು ಬೆಂಬಲ ಬೆಲೆಯನ್ನು ಕೊಡಬೇಕು ಎನ್ನತಕ್ಕಂಥದ್ದು ಮಾನ್ಯ ಸಚಿವರಿಗೆ ಗೊತ್ತಿದೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದು ಇಷ್ಟೇ ಇನ್ನು ಎರಡು ದಿವಸ ಏನು ಅಧಿವೇಶನ ಇದೆ ಅದಕ್ಕೆ ಮೊದಲು ಆ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಗೆ ಬರತಕ್ಕಂಥ ರೈತ ಪ್ರತಿನಿಧಿಗಳು, ಜನಪ್ರತಿನಿಧಿಗಳು ಇವರನ್ನು ಕರೆದು ತಮ್ಮ ಮೂಲಕ ಒಂದು ಪ್ರೋತ್ಸಾಹ ಬೆಲೆಯನ್ನು ನಿಗದಿ ಮಾಡಿದರೆ ನಮಗೆ ಉತ್ತಮವಾಗಿ ಕಬ್ಬು ಸರಬರಾಜು ಆಗುತ್ತದೆ ಎನ್ನತಕ್ಕಂಥದ್ದನ್ನು ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ನಾನು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಇಲ್ಲದಿದ್ದರೆ ಕಳೆದ ವರ್ಷ ಏನು ನಮ್ಮ ನೀರಾವರಿ ಇಲಾಖೆಯಿಂದ ಐದು ಟಿ.ಎಂ.ಸಿ. ನೀರನ್ನು ನಿಲ್ಲಿಸಿದ್ದರಿಂದ ನಮಗೆ ಕಬ್ಬಿನ ಪ್ರಮಾಣ ಇಲ್ಲ ಬೆಳೆ ಇಲ್ಲ. ಆದಕಾರಣ ದಯಮಾಡಿ ನಾವು ಅಕ್ಕಪಕ್ಕದ ಜಿಲ್ಲೆಯಿಂದ ನಾವು ಕಬ್ಬನ್ನು ಪಡೆದುಕೊಳ್ಳಬೇಕಾಗಿದೆ, ಆದಕಾರಣ ನೀವು ಉತ್ತಮವಾದ ಬೆಳೆಯನ್ನು ಕೊಡಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ವಿನಂತಿಸಿಕೊಂಡು, ಇನ್ನೆರಡು ದಿವಸದಲ್ಲಿ ಆ ಪ್ರದೇಶದ ಜನರನ್ನು ಕರೆದು ಮಾತನಾಡಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

+ ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ಪ್ರತಿ ವರ್ಷ ಕಬ್ಬಿನ ಬೆಳೆಗೆ ಕೇಂದ್ರ ಸರ್ಕಾರ ಶಾಸನ ಬದ್ಧ ಬೆಲೆಯನ್ನು ನಿಗದಿ ಪಡಿಸುತ್ತದೆ. ಶೇ.8.5 ಇಳುವರಿ ಆಧಾರಿತ ಈ ಕನಿಷ್ಠ ಬೆಲೆಯನ್ನು ರಾಷ್ಟ್ರದ ಪ್ರತಿ ಒಂದು ಕಾರ್ಖಾನೆಯೂ ಕೊಡಲು ಕಾನೂನು ಪ್ರಕಾರ ಬದ್ಧವಾಗಿರುತ್ತದೆ.

ಕೇಂದ್ರ ಸರ್ಕಾರ ನಿಗದಿ ಪಡಿಸುವ ಶಾಸನ ಬದ್ಧ ಬೆಲೆ ಕಡಿಮೆ ಇರುವುದನ್ನು ಮನಗಂಡ ರಾಜ್ಯ ಸರ್ಕಾರ ಪ್ರತಿ ವರ್ಷವೂ ಕಬ್ಬಿಗೆ ತನ್ನ ಸಲಹಾ ಬೆಲೆ (ಎಸ್‌ಎಪಿ)ಯನ್ನು ನಿಗದಿ ಮಾಡಿಸುತ್ತಾ ಬಂದಿದೆ. ಈ ರಾಜ್ಯ ಸಲಹಾ ಬೆಲೆ ಕೇಂದ್ರ ಸರ್ಕಾರದ ನಿಗದಿಪಡಿಸುವ ಬೆಲೆಗಿಂತ ಯಾವಾಗಲೂ ಜಾಸ್ತಿ ಇರುತ್ತದೆ.

1997-98ನೇ ಸಾಲಿನ ಹಂಗಾಮಿಗೆ ಸಂಬಂಧಿಸಿದಂತೆ ರಾಜ್ಯದ ದಕ್ಷಿಣ ಭಾಗದ ಸಕ್ಕರೆ ಕಾರ್ಖಾನೆಗಳು ಜುಲೈ ತಿಂಗಳಲ್ಲಿ ಕಬ್ಬು ನುಲುಸಿವಿಕೆಯನ್ನು ಆರಂಭಿಸಿರುವುದರಿಂದ ರಾಜ್ಯ ಸರ್ಕಾರ ತಾರೀಖು 25-7-97ರ ಪ್ರಕಟಣೆ ಮೂಲಕ ಗೇಟ್ ಕಬ್ಬಿಗೆ ಟನ್ ಒಂದಕ್ಕೆ ರೂ.700 ಹಾಗೂ ಹೊಲದ ಕಬ್ಬಿಗೆ (ಎಕ್ಸ್-ಫೀಲ್ಡ್) ಟನ್ ಒಂದಕ್ಕೆ ರೂ.625ರಂತೆ ಮುಂಗಡ ನಿಗದಿಪಡಿಸಿತ್ತು. ಜೊತೆಗೆ, ಅಂತಿಮ ರಾಜ್ಯ ಸಲಹಾ ಬೆಲೆಯನ್ನು ನಿಗದಿಪಡಿಸಲು ತಾ: 27-8-97 ರಂದು ಉನ್ನತ ಮಟ್ಟದ ಸಮಿತಿ ಸಭೆಯನ್ನು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಗಿತ್ತು.

ಈ ಉನ್ನತ ಮಟ್ಟದ ಸಮಿತಿಯ ಸಭೆ ಜರುಗುವುದರೊಳಗಾಗಿ ರಾಜ್ಯ ಸಲಹಾ ಬೆಲೆಯನ್ನು ನಿಗದಿ ಪಡಿಸುವುದರ ವಿರುದ್ಧ ಖಾಸಗಿ ಸಕ್ಕರೆ ಕಾರ್ಖಾನೆಗಳು ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದವು. ರಾಜ್ಯ ಸರ್ಕಾರವು ತಾರೀಖು 25-7-97ರಂದು ನಿಗದಿ ಪಡಿಸಿದ್ದ ಮುಂಗಡ ಬೆಲೆಗೂ ತಡೆಯಾಜ್ಞೆ ಬಂದಿತು. ಹೀಗಾಗಿ ರಾಜ್ಯ ಸಲಹಾ ಬೆಲೆಯನ್ನು ನಿಗದಿ ಪಡಿಸಲು ಸಾಧ್ಯವಾಗಲಿಲ್ಲ.

ಇದಕ್ಕೆ ಮೊದಲು ಅಲಹಾಬಾದ್ ಉಚ್ಚ ನ್ಯಾಯಾಲಯವು ತಾರೀಖು 11-12-96 ಆದೇಶದ ಮೂಲಕ ರಾಜ್ಯ ಸರ್ಕಾರಕ್ಕೆ ಕಬ್ಬಿನ ಬೆಳೆಗೆ ಬೆಲೆ ನಿಗದಿ ಪಡಿಸುವುದಕ್ಕೆ ಕಾನೂನಿನ ಪ್ರಕಾರ ಅವಕಾಶವಿಲ್ಲ ಶುಗರ್. ಕೇನ್ ಕಂಟ್ರೋಲ್ ಆರ್ಡರ್ ಪ್ರಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಅಧಿಕಾರವಿರುತ್ತದೆ, ಎಂದು ಆದೇಶ ಹೊರಡಿಸಿತ್ತು. ಈ ಆದೇಶದ ವಿರುದ್ಧ ಶ್ರೇಷ್ಠ ನ್ಯಾಯಲಯದಲ್ಲಿ ಮೇಲ್ ಮನವಿ ಮಾಡಿ ಉತ್ತರ ಪ್ರದೇಶದ ಸರ್ಕಾರವು ತಡೆಯಾಜ್ಞೆ ಕೋರಿದಾಗ ರಾಜ್ಯ ಸಲಹಾ ಬೆಲೆ ನಿಗದಿಪಡಿಸಲು ಕಾನೂನಿನ ಆಧಾರ ಕಂಡುಬರುವುದಿಲ್ಲವೆಂದು ಶ್ರೇಷ್ಠ ನ್ಯಾಯಾಲಯವು ತಡೆಯಾಜ್ಞೆ ನೀಡಿರುವುದಿಲ್ಲ.

ಸಕ್ಕರೆ ಉದ್ಯಮದ ಬಗ್ಗೆ ಅಲಹಾಬಾದ್ ಉಚ್ಚ ನ್ಯಾಯಾಲಯದ ಆದೇಶದಂತೆ ಕೇಂದ್ರ ಸರ್ಕಾರವು ಶ್ರೀ ಮಹಾಜನ ಆಯೋಗವನ್ನು ರಚಿಸಿದೆ. ಕಬ್ಬಿಗೆ ನ್ಯಾಯಾಬೆಲೆ

ನಿಗದಿ ಪಡಿಸುವ ಅಂಶವನ್ನು ಒಳಗೊಂಡಂತೆ ಹಲವಾರು ವಿಷಯಗಳ ಬಗ್ಗೆ ಈ ಆಯೋಗ ವರದಿ ನೀಡಬೇಕಾಗಿದೆ.

ಮೈಸೂರು ಸಕ್ಕರೆ ಕಾರ್ಖಾನೆಯು ದಿನಾಂಕ 18-8-97ರಂದು ಕಬ್ಬು ನುರಿಸುವಿಕೆಯನ್ನು ಆರಂಭಿಸಿದೆ. ಮುಂಗಡವಾಗಿ ರಾಜ್ಯ ಸರ್ಕಾರ ಟನ್ ಒಂದಕ್ಕೆ ರೂ.700 ರಂತೆ ಪ್ರಕಟಿಸಿತ್ತು. ಬೆಲ್ಲದ ಹೆಚ್ಚಿನ ಬೆಲೆ ಇದ್ದು ಕಾರ್ಖಾನೆಗೆ ಅಗತ್ಯ ಪ್ರಮಾಣದ ಕಬ್ಬು ಪೂರೈಕೆ ಆಗದಿರುವುದರಿಂದ ಕಾರ್ಖಾನೆಯ ಹೆಚ್ಚಿನ ದರ ನೀಡಬೇಕೆಂಬ ಬೇಡಿಕೆ ಇದೆ. ಆದರೆ, ಕಾರ್ಖಾನೆ ತನ್ನ ಆರ್ಥಿಕ ಪರಿಸ್ಥಿತಿ , ಆದಾಯ -ವೆಚ್ಚ ಆಧಾರದ ಮೇಲೆ ಬೆಲೆ ನೀಡಬೇಕಾಗಿದೆ. ಈಗಾಗಲೇ ರೂ.750 ಅನ್ನು ಕೊಡಲು ಕಾರ್ಖಾನೆಯ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಿಸಿದ್ದಾರೆ. ಈ ವಿಷಯದಲ್ಲಿ ರಾಜ್ಯ ಸರ್ಕಾರ ಖುದ್ದಾಗಿ ಭಾಗವಹಿಸಿ ದರ ನಿಗದಿ ಪಡಿಸುವುದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಅವಕಾಶವಿರುವುದಿಲ್ಲ. ಕಾರ್ಖಾನೆ ಹಾಗೂ ರೈತರ ನಡುವೆ ಕಬ್ಬಿನ ದರದ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳಲು (ಅಗ್ರೀಡ್ ಪ್ರೈಸ್) ಲಿಂಕ್ ಇದೆ. ಒಂದು ವೇಳೆ ಕಾರ್ಖಾನೆ ಮತ್ತು ಕಬ್ಬು ಬೆಳೆಗಾರರ ನಡುವೆ ಒಪ್ಪಂದ ಏರ್ಪಡದಿದ್ದರೆ ಸರ್ಕಾರ ಮಧ್ಯ ಪ್ರವೇಶಿಸಿ ರೈತರು ಮತ್ತು ಕಾರ್ಖಾನೆಗಳೆರಡರ ಹಿತ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡ ಕ್ರಮವಿಡುವುದು. ಮಾನ್ಯ ಸಭಾಧ್ಯಕ್ಷರೇ, ಸರ್ಕಾರ ಇದಕ್ಕೆ ರೇಟ್ ಫಿಕ್ಸ್ ಮಾಡುವುದಕ್ಕೆ ಆಗುವುದಿಲ್ಲ. ಆದರೂ ಕೂಡ ಮಾನ್ಯ ಸದಸ್ಯರು ಏನು ಮನವಿಯನ್ನು ಕೊಟ್ಟಿದ್ದಾರೆ, ಆ ಸಲುವಾಗಿ ನಾನು ಇನ್ನೊಮ್ಮೆ ಮೀಟಿಂಗ್ ಕರೆದು ಅದರಲ್ಲಿ ಅಧ್ಯಕ್ಷರನ್ನು, ಎಂ.ಡಿ.ಯವರನ್ನು ಮತ್ತು ಆ ವ್ಯಾಪ್ತಿಗೆ ಬರುವಂಥ ರೈತ ಪ್ರತಿನಿಧಿಗಳನ್ನು ಮತ್ತು ಶಾಸಕರುಗಳನ್ನು ಕರೆದು ರೇಟ್ ಫಿಕ್ಸ್ ಮಾಡಿ ಆದೇಶವನ್ನು ಕೊಡುತ್ತೇವೆ. ಆ ಪ್ರಕಾರ ನಾವು ಆ ರೈತರಿಗೆ ಅನುಕೂಲ ಮಾಡಿಕೊಡುತ್ತೇವೆ. ಅದು ಆಗದೇ ಇದ್ದರೆ, ಸರ್ಕಾರ ಮಧ್ಯೆ ಪ್ರವೇಶಿಸಿ ರೇಟ್ ಫಿಕ್ಸ್ ಮಾಡಲು ಪ್ರಯತ್ನ ಮಾಡುತ್ತದೆ.

(ಇ) ವಿಷಯ: ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿ ನಾಮಫಲಕಗಳನ್ನು ಕಿತ್ತು ಹಾಕುವುದು.

+ ಶ್ರೀ ಪಿ.ಎಸ್.ಪ್ರಕಾಶ್ (ಚಿಕ್ಕಪೇಟೆ): ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿನ ಬೆಳಿಗ್ಗೆ 6 ಗಂಟೆಗೆ ಬೆಂಗಳೂರು ನಗರದ ಆಯುಕ್ತರು ಅವೆನ್ಯೂ ರಸ್ತೆಯಲ್ಲಿರುವ ನಾಮ ಫಲಕಗಳನ್ನು ಹೊಡೆಸಿದ್ದಾರೆ, ಅಂಗಡಿಗಳವರಿಗೆ ಬಹಳ ನಷ್ಟವನ್ನುಂಟುಮಾಡಿದ್ದಾರೆ, ಕೆ.ಇ.ಬಿ ಕನೆಕ್ಷನ್ಸ್ ಮತ್ತು ಟೆಲಿಫೋನ್ ಕನೆಕ್ಷನ್ಸ್ ಕಿತ್ತಾಕಿಸಿದ್ದಾರೆ. ಅಂಗಡಿಗಳ ಕಟ್ಟಡಗಳನ್ನು ಡ್ಯಾಮೇಜ್ ಮಾಡಿಸಿದ್ದಾರೆ. ನಾಮಫಲಕಗಳನ್ನು ಹೊಡೆದು ಹಾಕುವುದಕ್ಕೆ ನಗರಪಾಲಿಕೆಯಿಂದ ಯಾವುದೇ ಸೂಚನೆಯನ್ನು ಮೊದಲೇ ಕೊಟ್ಟಿಲ್ಲ. ನಾಮಫಲಕ ಹಾಕಿಕೊಂಡಿದ್ದವರು ಈಗಾಗಲೇ ಕಾರ್ಪೊರೇಶನ್‌ಗೆ ಅಭಿವೃದ್ಧಿ ಶುಲ್ಕವನ್ನು ಕಟ್ಟಿ ಜಾಹಿರಾತು ವಿಭಾಗದವರಿಂದ ಅನುಮತಿಯನ್ನು ಪಡೆದು ಹಾಕಿರುತ್ತಾರೆ. ಅದನ್ನೂ

ಕೂಡ ಹೊಡೆದು ಹಾಕಿದ್ದಾರೆ ಹಾಗೂ ರಾಮಚಂದ್ರ ಎನ್ನುವ ಅಂಗವಿಕಲ ವ್ಯಕ್ತಿಯೊಬ್ಬ ನಡೆಸುತ್ತಿದ್ದ ಟೆಲಿಫೋನ್ ಬೂತ್‌ನ್ನು ಹೊಡೆದುಹಾಕಿದ್ದಾರೆ. ಈತನಿಗೆ ಮೂರು ವರ್ಷಕ್ಕೆ ಗುತ್ತಿಗೆಯನ್ನಾಗಿ ಈ ಬೂತ್‌ನ್ನು ಕೊಟ್ಟಿದ್ದು ಈತ ತಿಂಗಳಿಗೆ 100-00 ರೂ.ಗಳನ್ನು ಬಾಡಿಗೆಯನ್ನಾಗಿ ಕಾರ್ಪೊರೇಷನ್‌ಗೆ ಕಟ್ಟುತ್ತಿದ್ದರು. ಇದನ್ನು ಪ್ರತಿಭಟಿಸಿ ನನ್ನ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ನಿನ್ನೆ ಬೆಳಿಗ್ಗೆ ಸಂಪೂರ್ಣವಾಗಿ ಬಂದ್ ಆಚರಣೆಯನ್ನು ಮಾಡಲಾಗಿದೆ. ಇದಲ್ಲದೆ ನನ್ನ ಬಗ್ಗೆ ಮತ್ತು ನಮ್ಮ ಸರ್ಕಾರದ ಬಗ್ಗೆ ಬಹಳಷ್ಟು ಟೀಕೆಗಳನ್ನು ಮಾಡಿ ಗಲಾಟೆ ಮಾಡಿದ್ದಾರೆ. ನಮ್ಮ ಮನೆಯ ಹತ್ತಿರ ಕೂಡ ರಾತ್ರಿ 11 ಗಂಟೆಯಲ್ಲಿ ಬಹಳಷ್ಟು ಜನರು ಗಲಾಟೆಯನ್ನು ಮಾಡಿದ್ದಾರೆ. ಇದಕ್ಕೆ ಕಾರಣವೆಂದರೆ ಮೊನ್ನೆ ದಿವಸ ಹಿರಿಯ ಸದಸ್ಯರಾದ ನಂಜೇಗೌಡರು ಚಿಕ್ಕಪೇಟೆ ಮತ್ತು ಶಿವಾಜಿನಗರದಲ್ಲಿ ಏಕೆ ಬಿಲ್ಡಿಂಗ್‌ಗಳನ್ನು ಒಡೆಯುತ್ತಿಲ್ಲ ಎಂದು ಕೇಳಿದರು. ಇದೊಂದೇ ಕಾರಣವನ್ನಿಟ್ಟುಕೊಂಡು ನಿನ್ನೆಯಿಂದ ಎಲ್ಲಾ ಬಿಲ್ಡಿಂಗ್‌ಗಳನ್ನು ಒಡೆದುಕೊಂಡು ಬರುತ್ತಿದ್ದಾರೆ. ಇದನ್ನು ಚಿಕ್ಕಪೇಟೆ, ಬಳೇಪೇಟೆ, ಅವೆನ್ಯೂ ರಸ್ತೆಯ ಮೂಲಕ ಮೈಸೂರು ಬ್ಯಾಂಕ್‌ನವರೆಗೂ ಬಿಲ್ಡಿಂಗ್‌ಗಳನ್ನು ಒಡೆದುಕೊಂಡು ಹೋಗುತ್ತೇವೆ ಎನ್ನುವ ಮಾತನ್ನು ಬೆಂಗಳೂರು ನಗರದ ಆಯುಕ್ತರು ಹೇಳಿದ್ದಾರೆ.

ಅಧ್ಯಕ್ಷರು: ಈಗ ನೀವು ಬಸವನಗುಡಿಯಲ್ಲಿ ಬಿಲ್ಡಿಂಗ್‌ಗಳನ್ನು ಏಕೆ ಒಡೆಯುತ್ತಿಲ್ಲ ಎಂದು ಕೇಳಿ. ಅಲ್ಲೂ ಬಿಲ್ಡಿಂಗ್ ಒಡೆಯುವುದು ಪ್ರಾರಂಭವಾಗಲಿ.

ಶ್ರೀ ಬಿ.ಎಸ್.ಪ್ರಕಾಶ್: ಆಯುಕ್ತರು ತೆಗೆದಕೊಂಡಿರುವ ಕ್ರಮದಿಂದ ಬೆಂಗಳೂರಿನ ನಾಗರೀಕರು ಬಹಳ ಕಿರುಕುಳವನ್ನು ಅನುಭವಿಸುತ್ತಿದ್ದಾರೆ. ಆದುದರಿಂದ ನಿಮಗೆ ನಾನು ಒಂದು ಮನವಿಯನ್ನು ಮಾಡಿಕೊಳ್ಳುವುದೇನೆಂದರೆ ನಾನು ಹೊಸದಾಗಿ ಆ ಕ್ಷೇತ್ರದಿಂದ ಆಯ್ಕೆಯಾಗಿದ್ದು ನಾನು ಎಷ್ಟೇ ಪ್ರಾಮಾಣಿಕವಾಗಿ ನಡೆದುಕೊಂಡರೂ ಕೂಡ ಈ ರೀತಿಯ ದುರಂತ ತಪ್ಪಿಲ್ಲ. ಇಂದು ಬೆಂಗಳೂರಿನಲ್ಲಿ 100 ವಾರ್ಡ್‌ಗಳಿದ್ದು ಅದಕ್ಕೆ 100 ಎ.ಇ.ಯವರುಗಳು ಇದ್ದಾರೆ, ಸುಮಾರು 35 ಎ.ಇ.ಇ.ಗಳು ಇದ್ದಾರೆ, ಇವರುಗಳೆಲ್ಲರೂ ಇದ್ದರೂ ಕೂಡ ನಗರದಲ್ಲಿ ಕಟ್ಟಡಗಳು ತಲೆ ಎತ್ತುವಾಗಲೇ ಇದರ ಬಗ್ಗೆ ಕ್ರಮ ತೆಗೆದುಕೊಂಡು ನಿಲ್ಲಿಸದೇ ಕಟ್ಟಡ ಕಟ್ಟಿಯಾದ ಮೇಲೆ ಈ ರೀತಿ ಕೆಡವಿಕೊಂಡು ಹೋಗುತ್ತಿದ್ದರೆ ಬೇಂಗಳೂರು ನಗರದಲ್ಲಿ ಒಂದುರೀತಿಯ ಅಶಾಂತ ವಾತಾವರಣ ಉಂಟಾಗುತ್ತದೆ. ನಮಗೆ ಜನರು ಶಾಪವನ್ನು ಹಾಕುತ್ತಾರೆ. ಆದುದರಿಂದ ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ದಯವಿಟ್ಟು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ, ಈಗತಾನೇ ಈ ವಿಷಯ ಪ್ರಸ್ತಾಪವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ಮಂತ್ರಿಗಳು ತರಿಸಿಕೊಂಡು ನಾಳೆ ಇದಕ್ಕೆ ಹೇಳಿಕೆಯನ್ನು ಕೊಡಿಸಲಾಗುವುದು.

(ಈ) ಮೈಸೂರು ಆಲನ ಹಳ್ಳಿಯಲ್ಲಿ ಹೆಣ್ಣು ಮಗಳ ಕೊಲೆ

+ ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಅಧ್ಯಕ್ಷರೇ, ಮೈಸೂರಿನ ಆಲನಹಳ್ಳಿಯಲ್ಲಿ ಒಂದು ಹೆಣ್ಣುಮಗುವಿನ ಕೊಲೆಯಾಗಿದೆ. ಈಗ ಹೆಣ್ಣುಮಕ್ಕಳನ್ನು ಸಾಕಿ ಸಲುಹಿ ಮದುವೆ ಮಾಡಿ ಕಳುಹಿಸಿದ ನಂತರ ಕೆಲವೊಂದು ಸಂದರ್ಭಗಳಲ್ಲಿ ಇದು ದುರಂತವಾಗುತ್ತಿದೆ. ಗಿಳಿಯಾಗಿ ಸಾಕಿ ಗಿಡಗನಿಗೆ ಕೊಟ್ಟ ಹಾಗೆ ಇಂದು ಆಗುತ್ತಿದೆ. ಅಂದರೆ 'ಗಿಳಿಯ ಮರಿಯನು ತಂದು ಪಂಜರದೊಳಗೆ ಪೂಜಿಸಿ ಮೃದು ನುಡಿಗಳಾಲಿಸಿ ಕೇಳೋ ಮನುಜ' ಎಂದು ಹೇಳಿದ್ದಾರೆ. ಇಲ್ಲಿ ಗಿಳಿಯ ಹಾಗೆ ಹೆಣ್ಣುಮಗುವನ್ನು ಸಾಕಿ ಗಿಡಗನಿಗೆ ಕೊಟ್ಟ ಹಾಗೆ ಆಗಿದೆ. ಆಕೆಯ ಗಂಡನಿಗೆ ವರದಕ್ಷಿಣೆ ಎಂದು 50 ಗ್ರಾಂ ಚಿನ್ನವನ್ನು ಕೊಡಲಾಗಿದೆ. ಇದಲ್ಲದೇ 25 ಸಾವಿರ ರೂ.ಗಳನ್ನು ನಗದಾಗಿ ಮತ್ತು ಒಂದು ನಿವೇಶನವನ್ನೂ ಕೂಡ ಕೊಡಲಾಗಿದೆ. ಇಷ್ಟು ವರದಕ್ಷಿಣೆ ಕೊಟ್ಟಿದ್ದರೂ ಕೂಡ 14ನೇ ತಾರೀಖು ಈ ರೀತಿಯ ಭೀಕರ ದುರಂತ ನಡೆದಿದೆ. ಒಂದು ವೇಳೆ ಆ ಹೆಣ್ಣು ಮಗಳು ನೇಣು ಹಾಕಿಕೊಂಡು ಸತ್ತಿದ್ದರೆ ಕೈಗಳು ಸೀದಾ ಆಗಿರಬೇಕಾಗಿತ್ತು ಮತ್ತು ನಾಲಿಗೆ ಹೊರ ಚಾಚಿರಬೇಕಾಗಿತ್ತು. ಮತ್ತು ಕಚ್ಚಬೇಕಾಗಿತ್ತು. ಆದರೆ ಕೈ ಈ ಫೋಟೋದಲ್ಲಿರುವ ಹಾಗೆ ಇತ್ತು ಇದನ್ನು ಪೊಲೀಸಿನವರು ಫೋಟೋ ತೆಗೆದಿದ್ದಾರೆ. ಆ ಹೆಣ್ಣು ಮಗಳ ತಂದೆಯ ದುಃಖವನ್ನಂತೂ ಹೇಳುವುದಕ್ಕೆ ಅಸಾಧ್ಯವಾಗುತ್ತದೆ, ಅವರು ನನ್ನ ಬಳಿ ಬಂದು ಕಾಲಿಗೆ ಬಿದ್ದುಬಿಟ್ಟರು, ಏಕೆಂದರೆ ಈ ಕೊಲೆಯ ಬಗ್ಗೆ ಪೊಲೀಸಿನವರು ಆಕೆ ನೇಣುಹಾಕಿಕೊಂಡು ಸತ್ತಿದ್ದಾಳೆ ಎಂದಿದ್ದಾರೆ. ಇದು ನಿಜವಾಗಲೂ ದುರ್ದೈವವಾದ ಹೇಳಿಕೆಯಾಗಿದೆ. ಏಕೆಂದರೆ ಅವರುಗಳು ಈ ಹೆಣ್ಣುಮಗಳ ಪಾಲಿಗೆ ಯಮದೂತರಾಗಿದ್ದಾರೆ. ಆ ಹೆಣ್ಣುಮಗಳ ತಂದೆತಾಯಿಗಳು ಬಹಳ ದುಃಖದಿಂದ ನನ್ನ ಬಳಿ ಹೇಳಿದರು. ಈ ಘಟನೆ ನಡೆದಿರುವ ಕ್ಷೇತ್ರ ನನ್ನ ಕ್ಷೇತ್ರವಲ್ಲದಿದ್ದರೂ ಕೂಡ ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಕೆ.ಎಸ್.ಆರ್.ಪಿ.ಯಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿರುವ ವ್ಯಕ್ತಿಯ ಮಗಳು ಈ ಹೆಣ್ಣುಮಗಳು. ಈ ಸಬ್-ಇನ್ಸ್‌ಪೆಕ್ಟರ್‌ರವರ ಹೆಂಡತಿ ಬಹಳ ಆಘಾತಕ್ಕೆ ಒಳಗಾಗಿ ಬಹುಶಃ ಹೃದಯಾಘಾತವಾಗುತ್ತದೇನೋ ಎನ್ನುವ ದೃಷ್ಟಿಯಲ್ಲಿ ತೊಳಲಾಡುತ್ತಿದ್ದಾರೆ. ಏಕೆಂದರೆ ಪೊಲೀಸಿನವರು ಈ ಘಟನೆಯ ಬಗ್ಗೆ ತಿರುಚಿ ಇದು ಸಹಜವಾದ ಸಾವು ಎಂದು ಹೇಳುತ್ತಿದ್ದಾರೆ. ಆದುದರಿಂದ ಈ ಘಟನೆ ಬಗ್ಗೆ ಸಿ.ಓ.ಡಿ ತನಿಖೆಯನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಈ ಘಟನೆಯಲ್ಲಿ ಯಾರು ತಪ್ಪಿತಸ್ಥರಿದ್ದಾರೆ ಅವರಿಗೆ ಕಠಿಣವಾದ ಶಿಕ್ಷೆಯಾಗಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಆರ್.ರೋಷನ್ ಬೇಗ್:(ಗೃಹ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಈ ಘಟನೆ ನಡೆದಿರುವುದು ನಿಜವಾಗಿದೆ. ದಿನಾಂಕ 16ನೇ ತಾರೀಖು ಸಬ್ ಇನ್ಸ್‌ಪೆಕ್ಟರ್‌ರವರಾದ ವೆಂಕಟರಮಣ ಎಂಬುವರು ತಮ್ಮ ಮಗಳನ್ನು ಈ ರೀತಿಯಲ್ಲಿ ಕೊಲೆ ಮಾಡಿದ್ದಾರೆ

ಎಂಬ ಬಗ್ಗೆ ದೂರನ್ನು ಕೊಟ್ಟಿದ್ದಾರೆ. ಈ ಸಂಬಂಧ ತಕ್ಷಣ ಪೊಲೀಸಿನವರು ಕೇಸ್ ರಿಜಿಸ್ಟರ್ ಮಾಡಿಕೊಂಡು ಕ್ರೈಮ್ ನಂಬರ್ 177/97 ಅಂಡರ್ ಸೆಕ್ಷನ್ 498 (ಎ), 304 (ಬಿ), ಐಪಿಸಿ ರೆಡ್ ವಿತ್ 3 ಅಂಡ್ 4 ಪ್ರಕಾರ ಕೇಸ್ ರಿಜಿಸ್ಟರ್ ಮಾಡಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಕೇಸ್ ರಿಜಿಸ್ಟರ್ ಮಾಡಿ ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ. ಈ ಕೇಸ್‌ನ ಸಂಬಂಧ ಆ ಹೆಣ್ಣುಮಗಳ ಗಂಡ (ಗೋಪಾಲರಾವ್) ಮತ್ತು ಅತ್ತೆಯನ್ನು 16ನೇ ತಾರೀಖು ಅರೆಸ್ಟ್ ಮಾಡಿ ಕೋರ್ಟ್ ಮುಂದೆ ಪ್ರೊಡ್ಯೂಸ್ ಮಾಡಿದ್ದಾರೆ. ಅವರುಗಳು 17ನೇ ತಾರೀಖು ಜ್ಯುಡಿಷಿಯಲ್ ಕಸ್ಟಡಿಗೆ ರಿಮ್ಯಾಂಡ್ ಆಗಿದ್ದಾರೆ. ಇದು ಡೌರಿ ಕೇಸ್‌ನಲ್ಲಿ ಬುಕ್ ಆಗಿದೆ. ಈ ರೀತಿಯ ವರದಕ್ಷಿಣೆ ಕೇಸ್ ಬಗ್ಗೆ ಸಿ.ಓ.ಡಿ.ಗೆ ತಕ್ಷಣ ಹೋಗಿಯೇ ಹೋಗುತ್ತದೆ. ಆಗ ಸಿ.ಓ.ಡಿ ತನಿಖೆಯಾಗೇ ಆಗುತ್ತದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ಇನ್ನು ಮುಂದೆ ಮದುವೆಯಾಗುವ ಹೆಣ್ಣುಮಕ್ಕಳ ಗಂಡನಾಗಲೀ ಅಥವಾ ಗಂಡನ ಮನೆಯವರಾಗಲಿ ತೊಂದರೆ ಕೊಟ್ಟಿದ್ದೇ ಆದರೆ ಅವರಿಗೆ ಸರಿಯಾದ ಶಿಕ್ಷೆಯನ್ನು ಕೊಡುವ ಸಂಬಂಧ ಒಂದು ಶಾಸನವನ್ನು ಮಾಡಬೇಕಾಗಿದೆ. ಅಧ್ಯಕ್ಷರೇ, ನಾನು ಕೆಲವೊಂದು ಪೇಪರ್ಸ್‌ಗಳನ್ನು ಮತ್ತು ಭಾವಚಿತ್ರಗಳನ್ನು ನಿಮಗೆ ಈಗಲೇ ಕೊಡುತ್ತೇನೆ.

ಅಧ್ಯಕ್ಷರು: ಶಂಕರಲಿಂಗೇಗೌಡರೇ, ಈಗ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ, ಬೆಳಿಗ್ಗೆ ಎಲ್ಲಾ ಪೇಪರ್ಸ್‌ನ್ನು ಮತ್ತು ಚಿತ್ರಗಳನ್ನು ನನಗೆ ತೋರಿಸಿದ್ದಾರೆ. ನೀವು ಹೇಳಿದ್ದು ನನಗೆ ಅರ್ಥವಾಯಿತು. ವರದಕ್ಷಿಣೆ ಕೇಸ್‌ನಲ್ಲಿ ಬರುವ ಗಂಡಸರಿಗೆ ಸರಿಯಾದ ಶಿಕ್ಷೆ ಕೊಡಬೇಕೆಂದು ನೀವು ಹೇಳಿದಿರಲ್ಲಾ, ಅದರ ಒಳಗಿನ ಅರ್ಥ ನನಗೆ ಸಂಪೂರ್ಣವಾಗಿ ಗೊತ್ತಾಯಿತು. ಅದರ ಬಗ್ಗೆ ಮಂತ್ರಿಗಳಿಗೆ ನಾಳೆ ಹೇಳುತ್ತೇನೆ.

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ: 'ಯತ್ರನಾರ್ಯಸ್ತು ಪೂಜ್ಯಂತೆ ರಮತೇ ತತ್ರದೇವತಾ' ಎಂದು ಹೆಣ್ಣಿನ ಬಗ್ಗೆ ಹೇಳಲಾಗಿದೆ. ನಮಗೆ ಅಕ್ಕನಾಗಿ, ತಾಯಿಯಾಗಿ, ಮಡದಿಯಾಗಿ, ಮಹಾಮಾತೆಯಾಗಿ ಜಗತ್ತನ್ನು ರಂಜಿಸತಕ್ಕಂಥ ಹೆಣ್ಣು ಮನಸ್ಸಿನ ಬಾಳಿಗೆ ಕಣ್ಣಿದ್ದ ಹಾಗೆ. ಆ ಕಣ್ಣಿಗೆ ಇವೊತ್ತು ಚುಚ್ಚುತ್ತಿದ್ದಾರೆ.

ಅಧ್ಯಕ್ಷರು: ನಾನು ಈಗಾಗಲೇ ಹೇಳಿದ್ದೇನೆ. ನೀವು ಹೇಳಿದ ವಿಚಾರದ ಬಗ್ಗೆ ನಾಳೆ ಮಂತ್ರಿಗಳಿಗೆ ಹೇಳುತ್ತೇನೆ.

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ: ಸಿ.ಓ.ಡಿ. ತನಿಖೆಯಾಗಬೇಕು.

ಅಧ್ಯಕ್ಷರು: ಈಗಾಗಲೇ ಮಂತ್ರಿಗಳು ಹೇಳಿದ್ದಾರಲ್ಲಾ, ಈಗಾಗಲೇ ಆರೋಪಿಗಳನ್ನು ಕಸ್ಟಡಿಗೆ ತೆಗೆದುಕೊಳ್ಳಲಾಗಿದ್ದು ಅವರು ಜ್ಯುಡಿಷಿಯಲ್ ಕಸ್ಟಡಿಗೆ ಒಳಪಟ್ಟಿದ್ದಾರೆ. ಸಾಮಾನ್ಯವಾಗಿ ವರದಕ್ಷಿಣೆ ಕೇಸ್‌ಗಳು ಸಿ.ಓ.ಡಿ. ಮುಂದೆ ಹೋಗಿಯೇ ಹೋಗುತ್ತದೆ.

ಆದುದರಿಂದ ಸಿ.ಓ.ಡಿ. ತನಿಖೆಯಾಗುತ್ತದೆಂದು ಹೇಳಿದ್ದಾರೆ.

ಶ್ರೀ ಸಿ.ಎಂ.ಲಿಂಗಪ್ಪ: ಇಂದು ಕೋರ್ಟ್‌ನವರೂ ಕೂಡ ಇಂಥ ಕೇಸ್‌ಗಳ ಬಗ್ಗೆ ಬಹಳ ಸಿರಿಯಸ್ಸಾಗಿ ನಿರ್ಣಯಗಳನ್ನು ಕೊಡುತ್ತಿದ್ದಾರೆ. ಕೋರ್ಟ್ ಬಹಳ ಕಾಷಿಯಸ್ ಆಗಿ ಕೆಲಸ ಮಾಡುತ್ತಿವೆ. ಇಂಥ ಕೇಸ್‌ಗಳಲ್ಲಿ ಲಘುವಾಗಿ ಪರಿಗಣಿಸಿ ಬೇಲ್ ಮೇಲೆ ಆರೋಪಿಗಳನ್ನು ಬಿಡುತ್ತಿಲ್ಲ.

ಅಧ್ಯಕ್ಷರು: ಕೋರ್ಟ್ ಕೂಡ ಬಹಳ ಸಿರಿಯಸ್ಸಾಗಿ ಇದನ್ನು ತೆಗೆದುಕೊಳ್ಳುತ್ತದೆ. ಅಫೆಂಡರ್ ಕೂಡ ಬಹಳ ಸೀರಿಯಸ್ಸಾಗಿ ಅವರ ಕೆಲಸವನ್ನು ಮುಂದುವರಿಸಿಕೊಂಡೇ ಹೋಗುತ್ತಿದ್ದಾರೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ಈ ಘಟನೆ ಬಗ್ಗೆ ಸಿ.ಓ.ಡಿ. ತನಿಖೆ ಮಾಡಿಸಬೇಕು.

ಅಧ್ಯಕ್ಷರು: ಈಗಾಗಲೇ ಒಪ್ಪಿಸಿಯಾಗಿದೆ.

(ಉ) ಬೆಂಗಳೂರು ಕಂಠೀರವ ಕ್ರೀಡಾಂಗಣದ ಬಳಿ ಸರ್ಕಾರಿ ಭೂಮಿಯನ್ನು ಖಾಸಗೀಯವರು ಒತ್ತುವರಿ ಮಾಡಿಕೊಳ್ಳುತ್ತಿರುವುದು.

+ ಶ್ರೀ ಸಿ.ಎಂ.ಲಿಂಗಪ್ಪ (ರಾಮನಗರ): ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿರತಕ್ಕಂಥ ಸರ್ಕಾರಿ ಭೂಮಿಗಳು ಇತರೆ ಇಲಾಖೆಯ ಅಧೀನದಲ್ಲಿರುವ ಭೂಮಿಗಳು ಹಸ್ತಾಂತರವಾಗುತ್ತಿರುವ ವಿಚಾರದಲ್ಲಿ ಸಹಜವಾಗಿ ಒಂದು ಕುತೂಹಲ ಮೂಡಿ ಅದರ ಬಗ್ಗೆ ಇಲ್ಲಿ ತಮ್ಮ ಮೂಲಕ ಪ್ರಸ್ತಾಪ ಮಾಡಬೇಕೆಂದು ನಮ್ಮ ಆಶಯವನ್ನು ವ್ಯಕ್ತಪಡಿಸುತ್ತಿದ್ದೇವೆ. ಆದರೆ ದುರಾದೃಷ್ಟ, ಇವೊತ್ತು ಬೆಂಗಳೂರು ಪಟ್ಟಣದ ಬಗ್ಗೆ ಜವಾಬ್ದಾರಿ ಹೊತ್ತು ಮಂತ್ರಿಗಳು ಇಲ್ಲಿ ಇಲ್ಲ.

8.40 ಪಿ.ಎಂ

ಬೆಂಗಳೂರನ್ನು ನೋಡಿದಂತಹವರು ಹಿಂದಿನಿಂದಲೂ ಕೂಡ ಈಗಲೂ ಕೂಡ ನಾನಾ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಾರೆ. ಅದು ಒಂದು ಸುಂದರವಾದ ನಗರ, ಗಾರ್ಡ್‌ನ್ ಸಿಟಿ ಇತ್ಯಾದಿ, ಇತ್ಯಾದಿ. ಇತ್ತೀಚೆಗೆ ಅದು ಗಾರ್ಡನ್ ಸಿಟಿ ಆಗಿ ಉಳಿದಿದೆಯೋ ಅಥವಾ ಕಾಂಕ್ರೀಟ್ ಕಟ್ಟಡಗಳ ಕಾಡಾಗುತ್ತಿದೆಯೋ ಒಂದೂ ಹೇಳುವುದಕ್ಕೆ ಬರುವುದಿಲ್ಲ. ಆದರೆ ಇವತ್ತು ಬೆಂಗಳೂರು ನಗರದಲ್ಲಿ ವಾಹನಗಳ ಚಾಲನೆ ನೋಡಿದಾಗ, ವಾಹನಗಳ ಚಾಲನೆಗೆ ಮತ್ತು ವಾಹನಗಳ ನಿಲುಗಡೆಗೆ ಬಹಳಷ್ಟು ಅನಾನುಕೂಲವಾಗುತ್ತಿದೆ. ರಸ್ತೆ ಬದಿಯಲ್ಲಿ ಕಟ್ಟಡಗಳನ್ನು ಕಟ್ಟುವಾಗ ನಿಯಮಾನುಸಾರವಾಗಿ ರಸ್ತೆ ಮಧ್ಯಭಾಗದಲ್ಲಿ ಇಷ್ಟು ಜಾಗ ಬಿಟ್ಟು ಕಟ್ಟಬೇಕು ಎನ್ನುವ

ನಿಯಮವನ್ನು ಪಾಲಿಸದೆ ಇರುವುದು. ಮಾನ್ಯ ಲೋಕೋಪಯೋಗಿ ಸಚಿವರು ಇಲ್ಲಿ ಇದ್ದಾರೆ. ನಮ್ಮ ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ಬೆಂಗಳೂರು ವ್ಯಾಪ್ತಿಯೊಳಗೆ ಇರತಕ್ಕಂಥ ಟಿ.ಹೆಚ್.ಇ.ಎಲ್ ಎದುರುಗಡೆ ರಸ್ತೆ ಪಕ್ಕಕ್ಕೆ ಒಂದು ಕಟ್ಟಡವನ್ನು ಕಟ್ಟುತ್ತಿದ್ದಾರೆ. ತಾವು ಅದನ್ನು ಪರಿಶೀಲನೆ ಮಾಡಿಸಬೇಕು. ಅವರಿಗೆ ಅಲ್ಲಿ ಅನುಮತಿ ಯಾರು ಕೊಟ್ಟವರು? ಅವರಿಗೆ ಲೈಸೆನ್ಸ್ ಕೊಟ್ಟವರು ಯಾರು? ಯಾವರೀತಿ ಅವರು ಈ ಸರ್ಕಾರಿ ಭೂಮಿಯಲ್ಲಿ ಅದನ್ನು ಕಟ್ಟುತ್ತಿದ್ದಾರೆ? ಅದನ್ನು ವಿಚಾರಣೆ ಮಾಡಬೇಕಾಗುತ್ತದೆ. ಇವತ್ತು ಮಧ್ಯಾಹ್ನ ಕೂಡ ಇದರ ಬಗ್ಗೆ ಪ್ರಸ್ತಾಪವಾಗಿದೆ. ಇವತ್ತು ಕಂಠೀರವ ಸ್ಟೇಡಿಯಂ ಜಾಗ ಏನೇನೂ ಸಾಲದು. ಅಲ್ಲಿ ಇರತಕ್ಕಂಥ 15 ಗುಂಟೆ ಪ್ರದೇಶವನ್ನು ಖಾಸಗಿ ಒಡೆತನದಲ್ಲಿ ಇರತಕ್ಕಂಥ ಆಸ್ಪತ್ರೆಗೆ ಪಾರ್ಕಿಂಗ್‌ಗೋಸ್ಕರ ಬಿಟ್ಟುಕೊಡತಕ್ಕಂಥ ಒಂದು ನಡವಳಿಕೆ ಸರ್ಕಾರದಲ್ಲಿ ನಡೆಯುತ್ತಿದೆ. ಇದು ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಕೂಡ 3-4 ಬಾರಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದರೂ ಕೂಡ ಇದಕ್ಕೆ ಸರ್ಕಾರ ಒಪ್ಪಿರಲಿಲ್ಲ. ಸರ್ಕಾರ ಏಕೆ ಈ ರೀತಿ ಮಾಡುತ್ತಿದೆ ಎಂಬುದು ಅರ್ಥವಾಗುತ್ತಿಲ್ಲ. ಅಲ್ಲಿ ಜಾಗವೇ ಇಲ್ಲ. ಇನ್ನು ಅನೇಕ ಕ್ರೀಡಾಭಿವೃದ್ಧಿಗೆ ಬೇಕಾಗಿರುವಾಗ ಸರ್ಕಾರ ಇದನ್ನು ಹಸ್ತಾಂತರ ಮಾಡತಕ್ಕಂಥ ವಿಚಾರವನ್ನು ಕೂಡಲೇ ನಿಲ್ಲಿಸಬೇಕು. ಈಗಾಗಲೇ ಅಲ್ಲಿ ಹಾಕಿದಂತಹ ತಡೆ ಬೇಲಿಯನ್ನು ತುಂಡೀಕರಿಸಿ ಅಲ್ಲಿ ಒಂದು ರ್‍ಯಾಂಪ್‌ನ್ನು ನಿರ್ಮಾಣ ಮಾಡಿ ವಾಹನ ಹತ್ತುವುದಕ್ಕೆ ಇಳಿಯುವುದಕ್ಕೆ ಸಿದ್ಧಪಡಿಸಿಕೊಂಡಿದ್ದಾರೆ. ದಯಮಾಡಿ ಸರ್ಕಾರದವರು ಇದನ್ನು ನಿಲ್ಲಿಸಿ ಸರ್ಕಾರದ ಭೂಮಿ ಯಾವರೀತಿಯಲ್ಲೂ ಹಸ್ತಾಂತರ ಆಗದೆ ಇರುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಹೇಳುತ್ತೇನೆ.

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್: ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ ಈ ವಿಷಯದ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಆಗ ಮಾನ್ಯ ಸದಸ್ಯರು ಇರಲಿಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು: ಯಾವುದು ಇದು ವಿಚಾರ? ನಾನು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ.

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್: ಕಂಠೀರವ ಸ್ಟೇಡಿಯಂ ಕಾರ್ ಪಾರ್ಕಿಂಗ್ ವಿಚಾರವನ್ನು ಬೆಳಿಗ್ಗೆ ನಾನು ಉತ್ತರ ಹೇಳಿದ್ದೇನೆ. ಇನ್ನೊಮ್ಮೆ ಹೇಳುತ್ತೇನೆ. ಈ ತರಹ ಯಾವುದೇ ಜಾಗವನ್ನು ಯಾವುದೇ ಖಾಸಗಿ ಸಂಸ್ಥೆಗೆ ಕೊಟ್ಟಿಲ್ಲ, ಕೊಡುವುದಿಲ್ಲ, ಎನ್ನುವ ಮಾತನ್ನು ಸ್ಪಷ್ಟಪಡಿಸುತ್ತೇನೆ.

ಶ್ರೀ ಸಿ.ಎಂ.ಲಿಂಗಪ್ಪ: ಅಲ್ಲಿ ತಂತಿ ಬೇಲಿ ಕಡಿದು ಹಾಕಿದ್ದಾರೆ

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್: ತಂತಿ ಬೇಲಿ ಒಡೆದಿದ್ದು ನಿಜ. ಬೆಳಿಗ್ಗೆ ಹೇಳಿದ್ದೇನೆ, ಈಗಾಗಲೇ ಹೇಳಿದ್ದೇನೆ.

ಅಧ್ಯಕ್ಷರು: ಬೆಳಿಗ್ಗೆ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಈಗ ಪ್ರಮೀಳಾ ನೇಸರ್ಗಿಯವರು ಆಬ್ಸೆಂಟ್, ಬಸವನಗೌಡ ಪಾಟೀಲ್ ಆಬ್ಸೆಂಟ್, ಶ್ರೀಮಾರೆಡ್ಡಿ ಆಬ್ಸೆಂಟ್, ಪುಟ್ಟಣ್ಣಯ್ಯ ಆಬ್ಸೆಂಟ್ ಈಗ ಚಿಮ್ಮನಕಟ್ಟಿ ಮಾತನಾಡಿ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೇ, ಈಗ ಬಹಳ ಅನಿವಾರ್ಯತೆಯಿಂದ ಇದನ್ನು ಪ್ರಸ್ತಾಪ ಮಾಡಬೇಕಾಗಿದೆ.

ಅಧ್ಯಕ್ಷರು: ಹೇಳಿ ತೊಂದರೆ ಇಲ್ಲ.

(ಊ) ಬಾಗಲ ಕೋಟೆ ಜಿಲ್ಲೆ ಉದ್ಘಾಟನೆ ಸಂದರ್ಭದಲ್ಲಿ ಶಾಸಕರಿಗೆ ಅಗೌರವ ಸೂಚಿಸಿರುವುದು.

+ ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮೊನ್ನೆ ಆಗಸ್ಟ್ 15 ರಂದು ನಮ್ಮ ಬಾಗಲಕೋಟೆ ಜಿಲ್ಲೆ ಉದ್ಘಾಟನೆಯಾಯಿತು. ಅಂದು ಜಿಲ್ಲೆ ಅಸ್ತಿತ್ವಕ್ಕೆ ಬಂದಿತು. ಆ ಒಂದು ಶುಭ ಸಂದರ್ಭದಲ್ಲಿ ನಾವು ವೇದಿಕೆ ಮೇಲೆ ಕೂಡ ಹಾಗೂ ಸದನದಲ್ಲೂ ಸರ್ಕಾರದ ಈ ಒಳ್ಳೆಯ ಕೆಲಸಕ್ಕಾಗಿ ಅವರನ್ನು ಶ್ಲಾಘನೆ ಮಾಡಿದ್ದೇವೆ. ಅಂದು ಆ ಕಾರ್ಯಕ್ರಮದಲ್ಲಿ ಒಳ್ಳೆಯ ಮಾತುಗಳನ್ನು ಎಲ್ಲರೂ ಕೂಡ ಆಡಿದ್ದೇವೆ. ಅಂತಹ ಒಂದು ಐತಿಹಾಸಿಕ ಸಂದರ್ಭ ಬಂದಾಗ ಆ ಜಿಲ್ಲೆಗೆ ಸಂಬಂಧಪಟ್ಟಿರತಕ್ಕಂಥ ಎಲ್ಲಾ ಶಾಸಕರುಗಳನ್ನು ಕೂಡ ಒಂದು ಮರ್ಯಾದೆ ಕೊಡತಕ್ಕಂಥ ಕೆಲಸವನ್ನು ಸರ್ಕಾರದವರು ಮಾಡಬೇಕಾಗಿತ್ತು. ಅಲ್ಲಿ ಕಾರ್ಡ ಪ್ರಿಂಟ್ ಮಾಡಿಸಿದ್ದರು. ಎಲ್ಲಾ ಶಾಸಕರ ಹೆಸರುಗಳನ್ನು ಹಾಕಿಸಿ ಅವರಿಗೆ ವಿಶೇಷ ಆಮಂತ್ರಿತರನ್ನಾಗಿ ಮಾಡಿದ್ದರು. ಇದು ಅಗೌರವ ತರತಕ್ಕಂಥ ಕೆಲಸ. ಹೋಗಲಿ ಅದೂ ಅಲ್ಲದೆ ಅಲ್ಲಿ ಮಾನ್ಯ ಮುಖ್ಯಮಂತ್ರಿಗಳು ಶಿಲಾನ್ಯಾಸ ಮಾಡಿದರು. ಡಿ.ಸಿ. ಆಫೀಸ್ ಮಾಡಿದರು, ಪೊಲೀಸ್ ವರಿಷ್ಠಾಧಿಕಾರಿಗಳ ಆಫೀಸ್‌ನ್ನು ಮಾಡಿದರು. ಆ ಶಿಲಾನ್ಯಾಸ ಮಾಡಿದ್ದರಲ್ಲಿ ಅಲ್ಲಿ ಪ್ರತಿನಿಧಿಸತಕ್ಕಂಥ ಯಾವ ಶಾಸಕರುಗಳ ಹೆಸರೂ ಕೂಡ ಇರಲಿಲ್ಲ. ಇದನ್ನು ನಾನು ಏಕೆ ಹೇಳುತ್ತೇನೆಂದರೆ ಯಾವುದೋ ಒಂದು ತಾಲ್ಲೂಕು ಅಥವಾ ಕ್ಷೇತ್ರದಲ್ಲಿ ಕಾರ್ಯಕ್ರಮವಾಗಿದ್ದರೆ ನಾವು ಅಷ್ಟೊಂದು ಪ್ರಾಮುಖ್ಯತೆ ಕೊಡುತ್ತಿರಲಿಲ್ಲ. ಇದೊಂದು ಐತಿಹಾಸಿಕ ಕಾರ್ಯಕ್ರಮ. ಈ ಕಾರ್ಯಕ್ರಮದನ್ವಯ ಅಲ್ಲಿ ನನ್ನೊಬ್ಬನ ಹೆಸರು ಎಂದು ಹೇಳುವುದಿಲ್ಲ. ಅಲ್ಲಿ ಸಂಬಂಧಪಟ್ಟಿರತಕ್ಕಂಥ ಜಿಲ್ಲಾ ಶಾಸಕರ ಹೆಸರುಗಳನ್ನು ಹಾಕದೇ ಇರುವುದು ಸರ್ಕಾರದ ಒಂದು ದೊಡ್ಡ ನ್ಯೂನ್ಯತೆ. ಆ ನ್ಯೂನ್ಯತೆಯನ್ನು ಹೋಗಿಸುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ಕೈಗೊಳ್ಳುತ್ತದೆಂದು ಕೇಳುತ್ತೇನೆ.

+ ಶ್ರೀ ಅಜಯ್‌ಕುಮಾರ್ ಸರ್‌ನಾಯಕ್ (ಕ್ರೀಡಾ ಮತ್ತು ಯುವಜನ ಸೇವಾ ಸಚಿವರು): ಮಾನ್ಯ ಅಧ್ಯಕ್ಷರೇ, ಬಾಗಲಕೋಟೆ ಜಿಲ್ಲೆ ಉದ್ಘಾಟನೆ ಆಗುವಂತಹ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಕಾರ್ಡ್‌ನ್ನು ಪ್ರಿಂಟ್ ಮಾಡಿದ್ದರು ಅದರಲ್ಲಿ ಆ

ಒಂದು ಜಿಲ್ಲೆಗೆ ಸಂಬಂಧಪಟ್ಟ ಶಾಸಕರ ಹೆಸರುಗಳನ್ನು ವಿಶೇಷ ಆಹ್ವಾನಿತರು ಎಂದು ಹಾಕಿದ್ದರು. ಆಗ ನಾವು ಬೆಂಗಳೂರಿನಲ್ಲಿ ಇದ್ದೆವು. ಆ ಕಾರ್ಡ್ ನಮ್ಮ ಗಮನಕ್ಕೆ ಬಂದ ಮೇಲೆ ಆಗಿದ್ದಾಗ್ಗೆ ನಾನು ಮತ್ತು ಜಿಲ್ಲೆಯ ಉಸ್ತುವಾರಿ ಸಚಿವರಾದ ಮಾನ್ಯ ರಮೇಶ್ ಜಿಗಜಿಣಗಿಯವರು ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ ಕಾರ್ಡ್‌ನ್ನು ತಕ್ಷಣ ಬದಲಾವಣೆ ಮಾಡಿ ಅದರಲ್ಲಿ ವಿಶೇಷ ಆಹ್ವಾನಿತರು ಎನ್ನುವುದನ್ನು ತೆಗೆದು ಅತಿಥಿಗಳು ಎಂದು ಹಾಕಬೇಕೆಂದು ಆದೇಶ ಕೊಟ್ಟಮೇಲೆ ಅಲ್ಲಿ ಬೇರೆ ಕಾರ್ಡ್ ಪ್ರಿಂಟ್ ಮಾಡಿ ಹಂಚಿದ್ದು ಆಗಿದೆ. ಮಾನ್ಯ ಸದಸ್ಯರು ಇನ್ನೊಂದು ವಿಚಾರವಾಗಿ ಹೇಳುತ್ತಾ ಅಲ್ಲಿ ಕಲ್ಲಿನ ಮೇಲೆ ಹೆಸರು ಇಲ್ಲವೆಂದು ಹೇಳಿದರು. ಅವತ್ತು ಮಾನ್ಯ ಮುಖ್ಯಮಂತ್ರಿಗಳು ರಾತ್ರಿ ಅಲ್ಲಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ಕಲ್ಲಿನ ಮೇಲೆ ಎಲ್ಲಾಶಾಸಕರ ಹೆಸರುಗಳನ್ನು ಹಾಕಿದ್ದೇವೆ. ಆದರೆ ಡಿ.ಸಿ. ಆಫೀಸ್ ಮತ್ತು ಎಸ್.ಪಿ. ಆಫೀಸ್ ಏನು ಉದ್ಘಾಟನೆ ಮಾಡಿದ್ದಾರೆ ಅಲ್ಲಿ ಏನಾಯಿತು ಎಂದರೆ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದು ಕೇವಲ ಆಫೀಸ್ ಉದ್ಘಾಟನೆ ಮಾಡಿ ಹೋಗಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೆವು. ಆದರೆ ಕೊನೆ ಗಳಿಗೆಯಲ್ಲಿ, ಇಲ್ಲ ಅಲ್ಲಿ ಒಂದು ಕಲ್ಲನ್ನು ಹಾಕಿ ಅದನ್ನು ಉದ್ಘಾಟನೆ ಮಾಡಬೇಕೆಂದು ಹೇಳಿದಾಗ ಮಾನ್ಯ ಜಿಲ್ಲಾಧಿಕಾರಿಗಳು ಇಲ್ಲ, ಅದು ಗಡಿಬಿಡಿಯಾಯಿತು, ಈಗ ಎಲ್ಲಾ ಅದಕ್ಕೆ ಬರೆಸಿ ಹಾಕಿಸಿದ್ದೆವು, ಆದಕ್ಕೋಸ್ಕರ ಅದನ್ನು ಚೇಂಜ್ ಮಾಡಿ ಎಲ್ಲಾ ಈ ಜಿಲ್ಲೆಗೆ ಸಂಬಂಧಪಟ್ಟ ಶಾಸಕರ ಹೆಸರುಗಳನ್ನು ಹಾಕುವುದಕ್ಕೆ ನಾನು ಹೇಳಿದ್ದೇನೆ.

(ಖ) ಮಡಿಕೇರಿ ತಾಲ್ಲೂಕಿನ ಭಾಗಮಂಡಲದಲ್ಲಿ ನಡೆದಿರುವ ಸಣ್ಣ ಮಕ್ಕಳ ಕೊಲೆಗಳು

+ ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ): ಮಾನ್ಯ ಅಧ್ಯಕ್ಷರೇ, ಈ ವರ್ಷದ ಏಪ್ರಿಲ್ 29ರಂದು ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಭಾಗಮಂಡಲದಲ್ಲಿ ಸುಮಾರು ಗ್ರಾಮದಲ್ಲಿ ಎರಡು ಪುಟ್ಟ ಮಕ್ಕಳ ಕೊಲೆಯಾಗಿದೆ. ಆ ಪುಟ್ಟ ಇಬ್ಬರು ಮಕ್ಕಳನ್ನು ಕತ್ತು ಹಿಚುಕಿ ಕೊಲೆಗೈದಿದ್ದಾರೆ. ಸಾವೂರು ಗ್ರಾಮದ ಕೋಳಿಬೈಲು ಎಂಬಲ್ಲಿ ನಾರಾಯಣ್ ಅವರ ಪುತ್ರ ಯಶವಂತ, 10 ವರ್ಷ ಪ್ರಾಯ, ಮತ್ತು ಅವರ ನೆರೆಮನೆಯ ಮಗು ಸಂಗೀತ, ಬೈರಪ್ಪನವರ ಮಗಳು, 14ವರ್ಷ ಪ್ರಾಯ. ಇಡೀ ಜಿಲ್ಲೆಯಲ್ಲಿ ಆ ಪುಟ್ಟ ಮಕ್ಕಳ ಕೊಲೆ ಜಿಲ್ಲೆಯನ್ನು ನಡುಗಿಸಿದೆ. ಕಾರಣ ಅಲ್ಲಿ ಕಾವೇರಿ ಹುಟ್ಟಿದ ಜಾಗ. ಅಲ್ಲಿ ಕೊಲೆ ನಡೆದು ಇಡೀ ಜಿಲ್ಲೆಯನ್ನು ತಲ್ಲಣಗೊಳಿಸಿದೆ. ಆದರೆ ಅದು ಕೊಲೆಯಾಗಿ ನಾಲ್ಕು ತಿಂಗಳಾದನಂತರ ಇಲ್ಲಿಯವರೆಗೂ ಸಹ ಪೊಲೀಸ್ ಅಧಿಕಾರಿಗಳು ವಿಚಾರಣೆ ಮಾಡುತ್ತಿದ್ದರೂ ಸಹ, ಇನ್ನೊಂದು ದುರಂತವಾಯಿತು ಎಂದರೆ ನಾರಾಯಣ್ ಎನ್ನುವವರ ತಂಗಿ, ಆಕೆಯನ್ನು ವಿಚಾರಣೆಗೆ ಜೂನ್ 17ರಂದು ಕರೆದುಕೊಂಡು ಹೋಗಿದ್ದು ಜೂನ್ 20ರವರೆಗೆ ಪೊಲೀಸ್ ಸ್ಟೇಷನ್‌ನಲ್ಲಿ ಇಟ್ಟುಕೊಂಡು ಜೂನ್ 22ರಂದು ಒಂದು ಹೆಣ ಸಿಗುತ್ತದೆ. ಅದು ನಾರಾಯಣ್‌ರವರ ತಂಗಿ. ಅವಳು ಈ ಮಕ್ಕಳನ್ನು ಕೊಲೆ ಮಾಡಿರಬಹುದು ಎಂದು ಹೇಳಿ ಅವಳ ಶವ ಅಪರಿಚಿತ ಶವ ಎಂದು

ಹೇಳಿ ಮಡಕೇರಿಯಲ್ಲಿ ಸಿಗುತ್ತದೆ. ಅದಾದನಂತರ ಪೊಲೀಸರು ಮತ್ತು ಮುನಿಸಿಪಾಲಿಟಿಯವರು ಶವಸಂಸ್ಕಾರ ಮಾಡುತ್ತಾರೆ. 10 ದಿವಸದ ನಂತರ ಇವಳೇ ಮಾಚಮ್ಮ ಈ ಮಕ್ಕಳನ್ನು ಕೊಲೆ ಮಾಡಿದವಳು ಎಂದು ಆಪಾದನೆಯಾಗುತ್ತದೆ. ಆದರೆ ಆತ್ಮಹತ್ಯೆ ಮಾಡಿಕೊಂಡಳು. ಆದರೆ ಸನ್ಮಾನ್ಯ ಶಂಕರಲಿಂಗೇಗೌಡರು ಹೇಳಿದ ಹಾಗೆ ಅವರ ಕೈ ಕುತ್ತಿಗೆಯಲ್ಲಿ ಇರುವುದಿಲ್ಲ. ಅವರ ಕೈ ಎದೆಮೇಲೆ ಇರುವುದಿಲ್ಲ. ಆ ರೀತಿ ಸಂಶಯಾಸ್ಪದವಾಗಿ ಅಪರಿಚಿತ ಮಹಿಳೆ ಮೇಲೆ ಕೊಲೆ ಆಪಾದನೆ ಹಾಕುತ್ತಾರೆ. ಮತ್ತು ಆ ಪ್ರಕರಣವನ್ನು ಮುಚ್ಚುವುದಕ್ಕೆ ನೋಡುತ್ತಾರೆ. ಎರಡು ಮಕ್ಕಳ ಕೊಲೆ ಜೊತೆಗೆ ಇನ್ನೊಂದು ಮೂರನೇ ಕೊಲೆಯಾಗಿದೆ. ಈ ರೀತಿ ಜಿಲ್ಲೆಯಲ್ಲಿ ಸದನ ಪ್ರಾರಂಭವಾದನಂತರ ಐದು ಕೊಲೆಗಳು ನಡೆದುಹೋಯಿತು. ನಮ್ಮ ಜಿಲ್ಲೆಯಲ್ಲಿ ಪೊಲೀಸರ ವ್ಯವಸ್ಥೆ ಹೇಗಿದೆ ಎಂದು ಏನೂ ಅರ್ಥವಾಗುತ್ತಿಲ್ಲ. ಇಡೀ ಜಿಲ್ಲೆಯಲ್ಲಿ ಇವತ್ತು ಏನಾಗಿದೆಯೆಂದರೆ ಇವತ್ತು ಆ ಪುಟ್ಟ ಮಕ್ಕಳನ್ನು ಕೊಂದಿದ್ದಕ್ಕಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ? ದಯವಿಟ್ಟು ಇದಕ್ಕೆ ಸಿ.ಓ.ಡಿ. ತನಿಖೆಯಾಗಬೇಕೆಂದು ಹೇಳುತ್ತೇನೆ. ಕಾರಣ ಎರಡು ಕೊಲೆ ಜೊತೆಗೆ ಇನ್ನೊಂದು ಸಂಶಯದ ಕೊಲೆಯಾಗಿದೆ. ಇದು ಒಂದು ಕೊಲೆ ಸರಣಿ ನಡೆಯುತ್ತಿದೆ. ದಯವಿಟ್ಟು ಇದನ್ನು ಸಿ.ಓ.ಡಿ. ತನಿಖೆಗೆ ಹಾಕಬೇಕೆಂದು ಕೇಳುತ್ತೇನೆ.

+ ಶ್ರೀ ಆರ್.ರೋಷನ್ ಬೇಗ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ, ಜೀವನಕುಮಾರಿ 14 ವರ್ಷ ಹುಡುಗಿ ಡಾಟರ್ ಆಫ್ ಬೈರಪ್ಪ ಮತ್ತು ಯಶವಂತ 11 ವರ್ಷದ ಹುಡುಗ ನಾರಾಯಣ ಎನ್ನುವವರ ಮಕ್ಕಳು 29ನೇ ತಾರೀಖು ರಾತ್ರಿ ಕೊಲೆಯಾಗುತ್ತದೆ. ಇದರಲ್ಲಿ ಒಂದು ಕೇಸ್ ಫೇಜ್ ನಂಬರ್ 41:97 ಸೆಕ್ಷನ್ 302ರ ಪ್ರಕಾರ ಕೇಸ್ ರಿಜಿಸ್ಟರ್ ಆಗಿದ್ದು ನಿಜ. ಜೊತೆಗೆ ಡೌಟ್ ಯಾರಮೇಲೆ ಬರುತ್ತದೆಯೆಂದರೆ ಶ್ರೀಮತಿ ಮಾಚಮ್ಮ, ನಾರಾಯಣ್ ಅವರ ಸಿಸ್ಟರ್ ಅವರನ್ನು ಪೊಲೀಸರು ಅರೆಸ್ಟ್ ಮಾಡುತ್ತಾರೆ. ಜೂನ್ 21ನೇ ತಾರೀಖು ಯು.ಟಿ.ಆರ್. ನಂಬರ್ 10:97 ಅಂಡರ್ ಸೆಕ್ಷನ್ 174ರ ಪ್ರಕಾರ ಕೇಸ್ ರಿಜಿಸ್ಟರ್ ಮಾಡಿದ್ದೇವೆ. **Systematic investigation is in progress.** ಹೋದ ವಾರ ಶ್ರೀ ಎಂ.ಸಿ.ನಾಣಯ್ಯ, ಜಿಲ್ಲಾ ಉಸ್ತುವಾರಿ ಸಚಿವರು, ಮಡಿಕೇರಿಗೆ ಹೋದಾಗ ಈ ಕೇಸ್‌ನ್ನು ಸಿ.ಓ.ಡಿ.ಗೆ ರೆಫರ್ ಮಾಡಬೇಕೆಂದು ವಿನಂತಿಯನ್ನು ಮಾಡಿದಾಗ, ಅಲ್ಲಿ ಗೃಹ ಸಚಿವರ ಜೊತೆಯಲ್ಲಿ ಮಾತನಾಡಿ ಸಿ.ಓ.ಡಿ.ಗೆ ರೆಫರ್ ಮಾಡಿಸುತ್ತೇನೆಂದು ಹೇಳಿದ್ದರು. ಈಗ ಮಾನ್ಯ ಸಚಿವರು ನನ್ನ ಜೊತೆಯಲ್ಲಿ ಮಾತನಾಡಿದರು. ನಾನು ಈಗಾಗಲೇ ಸಿ.ಓ.ಡಿ.ಗೆ ರೆಫರ್ ಮಾಡಿ ಬಿಟ್ಟಿರುತ್ತೇನೆ.

(ಎ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಟ್ರಾನ್ಸ್ ಫಾರ್ಮರ್ ಗಳು ಸುಟ್ಟು ಹೋಗಿರುವುದರ ಬಗ್ಗೆ.

ಶ್ರೀ ಕೆ.ಪ್ರತಾಪ್ ಚಂದ್ರಶೆಟ್ಟಿ (ಕುಂದಾಪುರ): ಮಾನ್ಯ ಅಧ್ಯಕ್ಷರೇ, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿಯ ಉಪಕರಣಗಳ ಅಭಾವದಿಂದ ಈ ತಾಲ್ಲೂಕು ಕತ್ತಲೆಯಲ್ಲಿದೆ. ಈಗ ರಾಜ್ಯದಲ್ಲಿ ಮಳೆಯು ಬಂದಿರುವುದರಿಂದ ವಿದ್ಯುತ್ ಉತ್ಪಾದನೆಯು ಆಶಾದಾಯಕವಾಗಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಸುತ್ತಲಿನ ಗ್ರಾಮಾಂತರ ಪ್ರದೇಶಗಳಲ್ಲಿ ಟ್ರಾನ್ಸ್‌ಫರ್ಮಾರ್‌ಗಳು ಸುಟ್ಟು ಸುಮಾರು ಒಂದು ತಿಂಗಳಾದರೂ ಸಹಿತ ಅದನ್ನು ಬದಲಾವಣೆ ಮಾಡದೇ ಇರತಕ್ಕಂತಹ ಪ್ರಸಂಗಗಳನ್ನು ಕಾಣುತ್ತಿದ್ದೇವೆ. ಇದರ ಬಗ್ಗೆ ಕಳೆದ ಅಧಿವೇಶದ ಅವಧಿಯಲ್ಲಿ ನಿಯಮ 351ರ ಅಡಿಯಲ್ಲಿ ಪ್ರಸ್ತಾಪವನ್ನು ಮಾಡಿದ್ದೆ. ಆದರೆ ಅದಕ್ಕೆ ನೀವು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ರಾಜ್ಯದಲ್ಲಿ 20,000 ಟ್ರಾನ್ಸ್ ಫಾರ್ಮರ್‌ಗಳು ಸುಟ್ಟು ಹೋಗುತ್ತಿದೆ ಎಂದು ಬಹುಶಃ ಮಾರ್ಚ್ ತಿಂಗಳಿನ ಟೈಮ್‌ನಲ್ಲಿ ವಿದ್ಯುತ್ ಅಭಾವದಿಂದ ಪವರ್ ಕಟ್ ಮಾಡಿದರೆ, ಮತ್ತು ಮಳೆಗಾಲದಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋದರೆ, ಒಟ್ಟಾರೆ ಈ ಗ್ರಾಮಾಂತರ ಪ್ರದೇಶದಲ್ಲಿ ಪವರ್ ಇಲ್ಲದೇ ಕತ್ತಲೆಯಲ್ಲಿರತಕ್ಕಂತಹ ಪ್ರಸಂಗ ಉಂಟಾಗಿದೆ. ಆದ್ದರಿಂದ ಎಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿದೆ ಅದಕ್ಕೆ ತುರ್ತಾಗಿ ಹೊಸ ಟ್ರಾನ್ಸ್‌ಫಾರ್ಮರ್‌ಗಳ ವ್ಯವಸ್ಥೆಯನ್ನು ಮಾಡಬೇಕೆಂದು ಕೋರುತ್ತೇವೆ. ಮತ್ತೊಂದು ಮುಖ್ಯವಾದುದು ಎಂದರೆ ವಿದ್ಯುತ್ ಮೀಟರ್‌ಗಳ ಕೊರತೆ; ಕಂಬದ ಕೊರತೆ, ವೈರ್ ಕೊರತೆ, ಸಿಬ್ಬಂದಿ ಇಲ್ಲ, ಎಲ್ಲಾ ಸಮಸ್ಯೆಗಳ ಮಧ್ಯದಲ್ಲಿ ಈ ವಿದ್ಯುಚ್ಛಕ್ತಿಯ ಇಲಾಖೆಯು ಇದೆ. ಅದನ್ನು ಸರಿಪಡಿಸತಕ್ಕಂತಹ ತುರ್ತು ಕ್ರಮವನ್ನು ಕೈಗೊಳ್ಳಬೇಕೆಂದು ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಶರಣ ಬಸಪ್ಪ ದರ್ಶನಾಪೂರ್ (ಇಂಧನ ರಾಜ್ಯ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ ಹಾಗೆ ಅಲ್ಲಿ ಎಲ್ಲೆಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿವೆ ಎಷ್ಟು ಟ್ರಾನ್ಸ್‌ಫಾರ್ಮರ್‌ಗಳು ಬೇಕು ಅವುಗಳನ್ನು ಸೋಮವಾರದಂದು ಅಥವಾ ಮಂಗಳವಾರದಂದು ಕಳುಹಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆಂದು ತಮ್ಮ ಮೂಲಕ ತಿಳಿಸುತ್ತೇನೆ.

(ಐ) ಪಟ್ಟಣದ ಸದಸ್ಯರಿಗೆ ಮುನಿಸಿಪಾಲಿಟಿ ಸಭೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು.

+ ಶ್ರೀ ಎಸ್.ಸಿ.ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ): ಮಾನ್ಯ ಅಧ್ಯಕ್ಷರೇ, ಶಾಸನ ಸಭೆಯ ಸದಸ್ಯರನ್ನು ಕರ್ನಾಟಕ ಮುನಿಸಿಪಾಲಿಟಿ ಕಾಯ್ದೆ 11 (ಸಿ) ಪ್ರಕಾರ ಎರಡು ಭಾಗವನ್ನು ಮಾಡಿ ಹಳ್ಳಿಯಲ್ಲಿರುವ ಸದಸ್ಯರುಗಳು ಮುನಿಸಿಪಾಲಿಟಿ ಸಭೆಗಳಲ್ಲಿ ಭಾಗವಹಿಸಬಾರದು, ಅವರು ಅದೇ ಭಾಗದ ಎಲೆಕ್ಟೊರೇಟ್‌ನಲ್ಲಿದ್ದರೆ ಮಾತ್ರ

ಭಾಗವಹಿಸಬೇಕೆಂದು ಹೇಳಿ ಸರ್ಕಾರ ಶಾಸನವನ್ನು ಮಾಡಿದೆ. ಇದರಿಂದಾಗಿ ಆ ಭಾಗವನ್ನು ಪ್ರತಿನಿಧಿಸುವಂತಹ ನಮಗೆ ಮುನಿಸಿಪಾಲಿಟಿಯ ಯಾವುದೇ ವ್ಯವಹಾರಗಳು ಅರ್ಥವಾಗದೇ ಅಲ್ಲಿಯ ಜನರಿಗೆ ಸೇವೆಯನ್ನು ಕೊಡಲಿಕ್ಕೆ ತೊಂದರೆಯಾಗಿದೆ. ಇದು ಭಾರತ ಸಂವಿಧಾನದ 243 (ಆರ್)2(2)6 contravention ಆಗಿದೆ. ಆ ಕಾಯಿದೆಯಲ್ಲಿ The Member of the House of the people and the Member of the Legislative Assembly of the State representing constituencies which comprise wholly or partly the municipal area ಎಂದು ಹೇಳಿದೆ In the next clause, "The Member of the Council of State registered as electorate within the municipal area." ರಾಜ್ಯ ಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯರನ್ನು ಸದಸ್ಯರನ್ನಾಗಿ ಮಾಡುವುದಕ್ಕೆ ಅವರನ್ನು ಮತದಾರರ ಯಾದಿಯಲ್ಲಿದ್ದರೆ ಮಾಡಬೇಕೆಂದು ಹೇಳಿದೆ. ವಿಧಾನ ಸಭಾ ಸದಸ್ಯರನ್ನು ಅಥವಾ ಲೋಕ ಸಭಾ ಸದಸ್ಯರನ್ನು ಸದಸ್ಯರನ್ನಾಗಿ ಮಾಡಬಹುದೆಂದು ಹೇಳಿದಾಗ ಅಂತಹ ಒಂದು ರೆಡ್ಡರ್ ಕ್ಲಾಸ್‌ನ್ನು ಸಂವಿಧಾನ ಹಾಕಲಿಲ್ಲ. ಆದರೂ ರಾಜ್ಯ ಸರ್ಕಾರದಲ್ಲಿ ಶಾಸನವನ್ನು ಮಾಡಬೇಕಾದರೆ ವಿಧಾನ ಸಭಾ ಸದಸ್ಯರಿಗೆ ಹಾಕಿದ ಒತ್ತಡನಾ ಅಥವಾ ರೆಡರ್ ಕ್ಲಾಸ್‌ನ್ನು ಎಂ.ಎಲ್.ಎ.ಗಳಿಗೆ ಹಾಕಿ ಇವತ್ತು ಅನಾಮಲಿ ಸೃಷ್ಟಿಯಾಗಿದೆ. ಹಳ್ಳಿಯಲ್ಲಿರುವಂತಹ ಎಂ.ಎಲ್.ಎ. ಮುನಿಸಿಪಾಲಿಟಿ ಸಭೆಗಳಿಗೆ ಹೋಗುವ ಹಾಗೆ ಇಲ್ಲ. ಆದರೆ ಮುನಿಸಿಪಾಟಿಲಿ ಏರಿಯಾದಲ್ಲಿರತಕ್ಕಂತಹ ಸದಸ್ಯರಿಗೆ ಎಲ್ಲಾ ಗ್ರಾಮೀಣ ಪ್ರದೇಶದ ವ್ಯವಹಾರಗಳ ಮೇಲೆ ಅಷ್ಟೇ ಹಕ್ಕನ್ನು ನಿರ್ಮಾಣ ಮಾಡಿಕೊಟ್ಟಿರುತ್ತೀರಿ. ಜಿಲ್ಲಾ ಪಂಚಾಯತಿಗೆ ಬರಬಹುದು, ತಾಲ್ಲೂಕು ಪಂಚಾಯತಿಗೆ ಸಭೆಗಳಿಗೆ ಬರಬಹುದು, ಅವರಿಗೆ ಮತ್ತು ಹಳ್ಳಿಯಲ್ಲಿರುವ ಶಾಸಕರಿಗೆ ಏನು ವ್ಯತ್ಯಾಸ ನಿರ್ಮಾಣವಾಗಲಿಲ್ಲ. ಮುನಿಸಿಪಾಲಿಟಿ ಏರಿಯಾದ ಮತದಾರರ ಪಟ್ಟಿಯಲ್ಲಿ ಇಲ್ಲ ಎನ್ನುವ ಕಾರಣಕ್ಕೆ ಇವತ್ತು ನೀವುಗಳು ಮುನಿಸಿಪಾಲಿಟಿ ಒಳಗಡೆ ಹೋಗಬೇಡಿ, ಓಟನ್ನು ಹಾಕಬೇಡಿ, ಡೈರಕ್ಟರ್ ಆಗಬೇಡಿ ಎನ್ನುವಂಥದ್ದು ತಿದ್ದುಪಡಿ ಮಾಡಬೇಕು. ಇದು ಏನು ಅನಾಮಲಿಯಾಗಿದೆ ಇದನ್ನು ಸರಿಪಡಿಸಬೇಕು. ಇದು ಸಂವಿಧಾನ ಕೊಟ್ಟಂತಹ ತೀರ್ಮಾನಕ್ಕೆ ವಿರುದ್ಧವಾಗಿದೆ. This is 100% in contravention of the Act. ಇದು ಸಂವಿಧಾನದಲ್ಲಿ ಕ್ಲಿಯರ್ ಆಗಿ ಇದೆ. ಎಂ.ಎಲ್.ಎ.ಮತ್ತು ಲೋಕಸಭಾ ಸದಸ್ಯರು ಅಲ್ಲಿಯೇ ಮತದಾರರು ಆಗಿರಬೇಕೆಂದು ಏನೂ ಇಲ್ಲ. ಸಂವಿಧಾನದ 234 (ಎ) (2) ಮತ್ತೆ 2 ರಲ್ಲಿ ಕ್ಲಿಯರ್ ಆಗಿ ಇದೆ. ಎಂ.ಎಲ್.ಎ.ಮತ್ತು ಲೋಕಸಭಾ ಸದಸ್ಯರನ್ನು ಮೆಂಬರ್ ಮಾಡಬಹುದು. If at all the State Government desires. ಹಳ್ಳಿ ಮತ್ತು ಟೌನ್ ಎಂದು ಮಾಡುವಂತಹ ಅಗತ್ಯ ಇರಲಿಲ್ಲ. ದಯಮಾಡಿ ಅದನ್ನು ತಿದ್ದುಪಡಿ ಮಾಡಬೇಕು. ಎಲ್ಲಾ ಶಾಸನ ಸಭಾ ಸದಸ್ಯರುಗಳು ಕೂಡ ಮುನಿಸಿಪಾಲಿಟಿಯಲ್ಲಿ ಹೋಗಿ ಕುಳಿತುಕೊಂಡು ಅಲ್ಲಿಯ ಕಾರ್ಯ

ವ್ಯವಹಾರಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಪಟ್ಟಣದ ಸದಸ್ಯರಿಗೆ ಏನು ಹಕ್ಕು ಬಾಧ್ಯತೆಗಳನ್ನು ಸೃಷ್ಟಿ ಮಾಡಿದ್ದೀರಿ ಅಷ್ಟೇ ಗ್ರಾಮೀಣ ಪ್ರದೇಶದಿಂದ ಗೆದ್ದ ಅವರಿಗೆ ಕ್ಷೇತ್ರದೊಳಗೆ ಬರುವ ಮುನಿಸಿಪಾಲಿಟಿಯ ಸಭೆಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮೀರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ಸಚಿವರು): ಮಾನ್ಯ ಅಧ್ಯಕ್ಷರೇ, 74ನೇ ಅಮೆಂಡ್‌ಮೆಂಟ್ ಪ್ರಕಾರ ಏನು ತರುತ್ತಿದ್ದೇವೆ ಇದರಲ್ಲಿ ಈ ವಿಷಯವನ್ನು ಸಹ ನಾವು ಸೇರಿಸಿದ್ದೇವೆ. ಅವರು ಎಲ್ಲಾ ಶಾಸಕರಿಗೆ ಅನಕೂಲವನ್ನು ಮಾಡಬೇಕೆಂದು ಹೇಳಿದರು ಅದರ ಪ್ರಕಾರ ಅಮೆಂಡ್‌ಮೆಂಟ್ ಸೇರಿಸುತ್ತೇವೆ.

(ಇ) ಶಿಕಾರಿಪುರ ತಾಲ್ಲೂಕಿನ ಉಡುಗುಣೆಯಲ್ಲಿ ವಿದ್ಯುತ್ತಿನ ಸಿಂಗಲ್ ಫೇಸ್‌ನಿಂದ ಆಗುತ್ತಿರುವ ತೊಂದರೆ.

\+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲಾ ಮಂತ್ರಿಗಳಾದ ಶ್ರೀ ಬಸವಣ್ಣಪ್ಪನವರು ಈಗ ಸದನದಲ್ಲಿಯೇ ಇದ್ದಾರೆ ಶಿಕಾರಿ ಪುರ ತಾಲ್ಲೂಕ್‌ನಲ್ಲಿ ಉಡುಗುಣಿ ತಾಳಗುಂಡ ಹೋಬಳಿ ಬರಗಾಲ ಪ್ರದೇಶವಾಗಿದೆ. ಅಲ್ಲಿ ಎಂದಿಗೂ ಸಹ ಮಳೆಯಾಗುವುದಿಲ್ಲ. ಮಳೆಯಾದಂತಹ ಕಾಲದಲ್ಲಿ ಏನೋ ಅಲ್ಪಸ್ವಲ್ಪ ಬೆಳೆಯನ್ನು ಬೆಳೆದುಕೊಳ್ಳುತ್ತಾರೆ. ಅವರುಗಳು ಬೋರ್‌ಗಳ ಮೇಲೆ ಅವಲಂಬಿಸಿರುತ್ತಾರೆ. ಎರಡು ಮೂರು ತಿಂಗಳಿನಿಂದ ಒಳ್ಳೆಯ ವಿದ್ಯುತ್ ಸರಬರಾಜು ಆಗುತ್ತಿತ್ತು. ಬರ ಹೋಗಿದೆ ಎಂದು ನಾವು ತಿಳಿದುಕೊಂಡೆವು. ಈಗ ಶಿಕಾರಿಪುರದ ಉಡುಗುಣಿ ತಾಳಗುಂಡ ಹೋಬಳಿಯಲ್ಲಿ ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಸಂಜೆ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ವಿದ್ಯುತ್‌ನ್ನು ಸಿಂಗಲ್ ಫೇಸ್ ಮಾಡುತ್ತಿದ್ದಾರೆ. ಇದು ಕಳೆದ 15 ದಿವಸಗಳಿಂದ ಆಗುತ್ತಿದೆ. ಅದರ ಪರಿಣಾಮವಾಗಿ ಬೋರ್‌ವೆಲ್ ಮೇಲೆ ಆಗಿ ನೀರು ಬರದೇ ಅಲ್ಲಿಯ ಬೆಳೆಯು ಸಂಪೂರ್ಣವಾಗಿ ನಾಶವಾಗುತ್ತಿದೆ. ಕುಡಿಯುವ ನೀರಿಗೆ ಹಾಹಾಕಾರ ಪ್ರಾರಂಭವಾಗಿದೆ. ನಾನು 3-4 ದಿವಸಗಳ ಹಿಂದೆ ಹೋಗಿ ನೋಡಿಕೊಂಡು ಬಂದೆ. ನಮ್ಮ ಪ್ರಮುಖರು ಎಲ್ಲರೂ ನೇರವಾಗಿ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಫೋನ್ ಮಾಡಿದರೆ ಅವರು ಏನು ಹೇಳಿದರು ಎಂದರೆ ಬೇಕಾದರೆ ನಿಮ್ಮ ಶಾಸಕರಿಗೆ ಸರ್ಕಾರವನ್ನು ಕೇಳಿಕೊಳ್ಳುವುದಕ್ಕೆ ಹೇಳು ಎಂದು. ದಯಮಾಡಿ ಈಗ ಏನು ಲಾಸ್ ಆಗುತ್ತಿದೆ ಅದನ್ನು ಇನ್ನು ಎರಡು ಮೂರು ದಿವಸಗಳಲ್ಲಿ ಸುಧಾರಿಸಿ, ಇಲ್ಲದಿದ್ದರೆ ಕೆ.ಇ.ಬಿ. ಲಾಸ್ ಆಗುವುದನ್ನು ತುಂಬಿಕೊಡುವುದಕ್ಕೆ ಹೇಳಿಬಿಡಿ. ಇಲ್ಲ ಎಂದರೆ ನಿಮ್ಮ ಅಧಿಕಾರಿಯು ಅಲ್ಲಿ ಯಡಿಯೂರಪ್ಪನ್ನು ಕೇಳಿಕೊಳ್ಳಿ ಎಂದು. ಇನ್ನು ಎರಡು ಮೂರು ದಿವಸಗಳಲ್ಲಿ ಅಲ್ಲಿಯ ಪರಿಸ್ಥಿತಿಯನ್ನು ಸುಧಾರಿಸದಿದ್ದರೆ ನಿಮ್ಮ ಮನೆಯ ಮುಂದೆ ಧರಣಿಯನ್ನು ಕುಳಿತುಕೊಳ್ಳುತ್ತಾರೆ, ಅದಕ್ಕೆ ಏನು ಪರಿಹಾರವನ್ನು ಮಾಡಿಕೊಡುತ್ತೀರಿ, ಮಾಡಿಕೊಡಿ.

ಶ್ರೀ ಆರಗಜ್ಞಾನೇಂದ್ರ (ತೀರ್ಥ ಹಳ್ಳಿ): ರಾಜ್ಯದಲ್ಲಿ ಶೆಡ್‌ಡೌನ್ ಏನಾದರೂ ಇದೆಯಾ ಎಂದು ಮಾನ್ಯ ಇಂಧನ ಸಚಿವರು ಹೇಳಬೇಕು. ತೀರ್ಥಹಳ್ಳಿಯ ತಾಲ್ಲೂಕ್‌ನಲ್ಲಿಯೂ ಸಹ ಇದೇ ರೀತಿಯಾಗುತ್ತಿದೆ.

ಶ್ರೀ ಶರಣ ಬಸಪ್ಪ ದರ್ಶನಪೂರ್ (ಇಂಧನ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ರಾಜ್ಯದಲ್ಲಿ ಒಳ್ಳೆಯ ಮಳೆಯಾಗಿದೆ. ವಿದ್ಯುತ್ ಉತ್ಪಾದನೆಯನ್ನೂ ಸಹ ಹೆಚ್ಚು ಪ್ರಮಾಣದಲ್ಲಿ ಮಾಡುತ್ತಿದ್ದೇವೆ. ಆದರೆ ಈಗ 4-5 ಜಿಲ್ಲೆಗಳಲ್ಲಿ ಏನಾಗಿದೆ ಎಂದರೆ, ಸುಮಾರು ಎರಡು ಮೂರು ದಿವಸಗಳಿಂದ ಪವರ್‌ಕಟ್‌ನ್ನು ತೆಗೆದು ಹಾಕಿದ ಮೇಲೆ ಈಗ ಉಪಯೋಗಿಸುತ್ತಿರುವಂತಹ ವಿದ್ಯುತ್ ಸುಮಾರು 67ರಿಂದ 69 ಮಿಲಿಯನ್ ಯೂನಿಟ್ ಹೋಗುತ್ತಿದೆ. ಇದರಿಂದ ನಮ್ಮ ಟ್ರಾನ್ಸ್‌ಫಾರ್ಮರ್‌ಗಳು ಅದನ್ನು ತಡೆದುಕೊಳ್ಳುವಂತಹ ಶಕ್ತಿಯೂ ಕೂಡ ಇಲ್ಲ. 67 ಮಿಲಿಯನ್ ಯೂನಿಟ್ ಕೂಡ ಆಗುತ್ತದೆ. ಸುಮಾರು 54 ಮಿಲಿಯನ್ ಯೂನಿಟ್ಸ್ ಆದರೆ ನಮ್ಮ ಟ್ರಾನ್ಸ್‌ಫಾರ್ಮರ್‌ಗಳು ತಡೆದುಕೊಳ್ಳಬಹುದು. ಆದುದರಿಂದ ಬಹಳಷ್ಟು ಕಡೆಗಳಿಂದ ಇದರ ಬಗ್ಗೆ ಬೇಸಿಗೆಯಲ್ಲಿಯೇ ಒಳ್ಳೆಯ ವಿದ್ಯುತ್‌ನ್ನು ಕೊಟ್ಟಿರುತ್ತೀರಿ. ಆದರೆ ಏಕೆ ಈ ರೀತಿಯಾಗಿ ಮಾಡುತ್ತಿದ್ದೀರಿ ಎಂದು ದೂರುಗಳು ಬಂದಿದೆ. ಶಿಕಾರಿಪುರದಲ್ಲಿ ಸುಮಾರು 3-4 ದಿನಗಳಿಂದ ಲೋಡ್‌ಶೆಡಿಂಗ್ ಮಾಡುತ್ತಿದ್ದೇವೆ. ಈಗಾಗಲೇ ಇದರ ಬಗ್ಗೆ ನಮ್ಮ ಎಕ್ಸಿಕ್ಯೂಟೀವ್ ಇಂಜನಿಯರ್‌ಗೂ ಕೂಡ ಶಿಕಾರಿಪುರಕ್ಕೆ ಭೇಟಿಯನ್ನು ಮಾಡಿ, ನೋಡಿ ಪವರ್ ಕಟ್‌ನ್ನು ಏಕೆ ಹಾಕಿದ್ದಾರೆಂದೂ ಸಹ ಕೇಳಿದ್ದೇವೆ. ಸುಮಾರು 6ನೇ ತಾರೀಖಿನಿಂದ ಬ್ಯಾಚ್‌ವೈಸ್ ಪವರ್‌ನ್ನೂ ಕೂಡ ಕೊಡುತ್ತಿದ್ದೇವೆ. ಇದು ನಿಜವಾದಂತಹ ಸಂಗತಿ. ಬೆಳಿಗ್ಗೆ 6 ಗಂಟೆಯಿಂದ 12 ಗಂಟೆಯವರೆಗೆ ಒಂದು ಶಿಫ್ಟ್ ಮಾಡಿದ್ದೇವೆ. ಮಧ್ಯಾಹ್ನ 12 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮತ್ತೊಂದು ಶಿಫ್ಟ್ ಮಾಡಿದ್ದೇವೆ. ಸಿಂಗಲ್ ಫೇಸ್ ಕೊಡುತ್ತಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೇ, ಸಿಂಗಲ್ ಫೇಸ್ ಇದ್ದರೆ ಬೋರ್‌ವೆಲ್‌ಗಳು ಕೆಲಸವನ್ನು ಮಾಡುವುದಿಲ್ಲ. ಇದರಿಂದ ಕುಡಿಯುವ ನೀರೂ ಸಹ ಸಿಗುವುದಿಲ್ಲ. ಆ ಬೋರ್‌ವೆಲ್‌ಗಳನ್ನೇ ಅವಲಂಬಿಸಿರುವಂತಹ ರೈತರು ನೆಗೆದುಬಿದ್ದು ಹೋಗುತ್ತಾರೆ. ನಿಮ್ಮ ಇಲಾಖೆಗೆ 300 ರೂಪಾಯಿಗಳನ್ನು ಕೊಡುತ್ತಿದ್ದಾರೆ. ನೀವು ಏನು ಪುಕ್ಕಟೆಯಾಗಿ ಕೊಡುತ್ತಿಲ್ಲ. ಈಗ ರೈತರು ಬದುಕುವುದು ಹೇಗೆ ಎಂದು ಒಂದು ಮಾರ್ಗವನ್ನು ಹೇಳಿ. ಇನ್ನು ನಾಲ್ಕು ದಿವಸಗಳಲ್ಲಿ ಸರಿ ಮಾಡದಿದ್ದರೆ ರೈತರಿಗೆ ತುಂಬಾ ತೊಂದರೆಯಾಗುತ್ತದೆ. ಇಲ್ಲದಿದ್ದರೆ ರೈತರಿಗೆ ಕೆ.ಇ.ಬಿ.ಯಿಂದ ಪರಿಹಾರವನ್ನು ಕೊಡಿಸಿ.

ಶ್ರೀ ಶರಣ ಬಸಪ್ಪ ದರ್ಶನಪೂರ್: ಮಾನ್ಯ ಅಧ್ಯಕ್ಷರೇ, ಹೆಚ್ಚು ವಿದ್ಯುತ್‌ನ್ನು ಉಪಯೋಗಿಸುತ್ತಿರುವುದರಿಂದ ನಮ್ಮ ಟ್ರಾನ್ಸ್‌ಫಾರ್ಮರ್‌ಗಳು ಲೋಡಿಂಗ್‌ನ್ನು

ತಡೆದುಕೊಳ್ಳುತ್ತಿಲ್ಲ. ಆದುದರಿಂದಲೇ ಎರಡು ಬ್ಯಾಚ್‌ನ್ನು ಮಾಡಿ ಆರು ಗಂಟೆಗಳ ಕಾಲ ವಿದ್ಯುತ್‌ನ್ನು ಕೊಡುತ್ತಿದ್ದೇವೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಈಗ ಅವರು ಉತ್ತರ ಹೇಳಬಾರದೆ? ಉತ್ತರ ಪೂರ್ಣವಾಗುವುದಕ್ಕಿಂತ ಮುಂಚೆಯೇ ಈ ರೀತಿ ದೊಡ್ಡ ಧ್ವನಿಯಲ್ಲಿ ಹೇಳಿದರೆ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಹಾಗಿದ್ದರೆ ಸಾಯಲಿ. ಏನು ಮಾಡಬೇಕು ಎಂದರೆ? ನಾನು ರಿಕ್ವೆಸ್ಟ್ ಮಾಡುತ್ತಿದ್ದೇನೆ: ಒಂದೇ ಮಾತಿನಲ್ಲಿ ಸರಿಪಡಿಸುತ್ತೇನೆಂದು ಹೇಳಿದ್ದರೆ ಕಳೆದ ಒಂದೂವರೆ ತಿಂಗಳಿನಲ್ಲಿ ನಾನು ಯಾವತ್ತಾದರೂ ಹೀಗೆ ನಡೆದುಕೊಂಡಿದ್ದೇನೆಯೇ? ಇದನ್ನು ಸರಿಪಡಿಸಬೇಕೆಂದು ಕೇಳಿದ್ದಕ್ಕೆ ನಾನೇನು ಮಾಡಲಿ ಎಂದರೆ ಮಾಡುವುದಕ್ಕಾಗದಿದ್ದರೆ ರಾಜೀನಾಮೆ ಕೊಟ್ಟು ಹೋಗಿ ಎಂದು ಹೇಳುತ್ತೇನೆ. ನಾವು ಕ್ರಮ ಕೈಗೊಂಡು ಸರಿಪಡಿಸುತ್ತೇವೆ, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಸೂಚನೆ ಕೊಡುತ್ತೇವೆಂದು ಹೇಳಿದ್ದರೆ ನಾವು ಸುಮ್ಮನಾಗುತ್ತಿದ್ದೆವು. ನಾನೇನು ಮಾಡಲಿ ಎಂದರೆ? ನೀವು ಸರಿಯಾಗಿ ಉತ್ತರ ಕೊಡಲಿಲ್ಲವೆಂದರೆ ಸರಿಯಾದ ಉತ್ತರ ಕೊಡುವ ತನಕ ನಾನು ಒಂದು ಶಬ್ದವೂ ಮಾತನಾಡುವುದಿಲ್ಲ. ನನ್ನ ಪರಿಸ್ಥಿತಿ ಅರ್ಥ ಮಾಡಿಕೊಳ್ಳಿ, ನಾನು ಯಾವತ್ತಾದರೂ ಈ ರೀತಿ ನಡೆದುಕೊಂಡಿದ್ದೇನೆಯೇ? ನಾನು ಸದನದಲ್ಲಿ ಮಾತನಾಡದೇ ಬಾಯ್ಮುಚ್ಚಿಕೊಂಡು ಕುಳಿತಿದ್ದೇನೆ.

ಅಧ್ಯಕ್ಷರು: ಯಡಿಯೂರಪ್ಪನವರೆ, ಸ್ವಲ್ಪ ಸಮಾಧಾನ ಮಾಡಿಕೊಳ್ಳಿ, ನಮಗೆ ಅರ್ಥವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ರೈತರ ಬಗ್ಗೆ ಕೇಳಿದರೆ ಈ ರೀತಿ ಉತ್ತರ ಕೊಡುತ್ತೀರಿ ನನಗೆ ನಿಮ್ಮನ್ನು ನೋವು ಮಾಡಬೇಕೆಂಬ ಉದ್ದೇಶವಲ್ಲ. ನನ್ನ ಕ್ಷೇತ್ರದ ರೈತರ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದೇನೆ. ಸಚಿವರಾದ ಬಸವಣ್ಣನವರನ್ನೇ ಕೇಳಿ. ಆ ಎಕ್ಸಿಕ್ಯೂಟಿವ್ ಇಂಜಿನಿಯರ್ ಸೊಕ್ಕಿನಿಂದ ಮಾತನಾಡುತ್ತಾನೆ.

ಶ್ರೀ ಸಿದ್ಧರಾಮಯ್ಯ: ಎಕ್ಸಿಕ್ಯೂಟಿವ್ ಇಂಜಿನಿಯರ್ ಸೊಕ್ಕಿನಿಂದ ಮಾತನಾಡಿದರೆ ಯಾರ ಜೊತೆಯಲ್ಲೂ ಆ ರೀತಿ ಮಾತನಾಡಬಾರದೆಂದು ಅವರಿಗೆ ಹೇಳೋಣ.

ಅಧ್ಯಕ್ಷರು: ಯಡಿಯೂರಪ್ಪನವರೇ, ನಾವ್ಯಾರೂ ನಿಮ್ಮನ್ನು ತಪ್ಪು ತಿಳಿದುಕೊಳ್ಳುವುದಿಲ್ಲ, ಒಂದೊಂದು ಸಲ ಹಾಗಾಗುತ್ತದೆ. ನಿಮ್ಮ ಕ್ಷೇತ್ರದ ಜನರ ನೋವನ್ನು ವ್ಯಕ್ತಪಡಿಸುವಾಗ ಹಾಗಾಗುತ್ತದೆ. ತಾವು ಉದ್ರೇಕಕ್ಕೊಳಗಾಗಬೇಡಿ.

Don't feel offended.

ಶ್ರೀ ಶರಣಬಸಪ್ಪ ದರ್ಶನಾಪುರ್: ಬರೀ ಶಿಕಾರಿಪುರದಲ್ಲಿ ಮಾತ್ರವಲ್ಲ, ಕೋಲಾರ, ತುಮಕೂರು, ಬೆಂಗಳೂರು ಇನ್ನಿತರ ಎಲ್ಲಾ ಕಡೆಗಳಲ್ಲೂ ಹಾಗೆ ಆಗಿದೆ. ಆದುದರಿಂದ ಇದರ ಬಗ್ಗೆ ಈಗಾಗಲೇ ನಾವು ಅಧಿಕಾರಿಗಳನ್ನು ಕಳುಹಿಸಿದ್ದು ಅಲ್ಲಿ ಏನೇನು ಪರಿಸ್ಥಿತಿಯಿದೆಯೆಂಬುದನ್ನು ಅಧ್ಯಯನ ಮಾಡಿ ನಮಗೆ ವರದಿ ಕೊಡಬೇಕೆಂದು ತಿಳಿಸಿದ್ದೇವೆ. ಶಿಕಾರಿಪುರದಲ್ಲಿ ಆ ರೀತಿ ಇದ್ದರೆ ನಾವು ಸರಿಪಡಿಸುತ್ತೇವೆ.

ಅಧ್ಯಕ್ಷರು: ಈಗ ಸಚಿವರು ಸರಿಪಡಿಸುತ್ತೇವೆಂದು ಹೇಳಿರುವುದರಿಂದ ಯಾಡಿಯೂರಪ್ಪನವರೆ, ತಾವು ಉದ್ವೇಗಕ್ಕೊಳಗಾಗಬಾರದು. ಅದೇನೂ ತಪ್ಪಿಲ್ಲ, ನಾವು ಮನುಷ್ಯರಾಗಿರುವುದರಿಂದ ಈ ರೀತಿಯ ಭಾವನೆಗೊಳಗಾಗುತ್ತೇವೆ. ಈ ರೀತಿಯಲ್ಲಿ ಕೆಲಸ ಮಾಡಿದರೇನೇ ನಾವು ಜನ ಪ್ರತಿನಿಧಿಗಳೆಂದು ಅನ್ನಿಸಿಕೊಳ್ಳುವುದು. ನಾವು ಇಲ್ಲಿ ಮೆಕಾನಿಕಲ್ ಆಗಿ ಗೊಂಬೆಗಳ ತರಹ ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಅವರು ಉತ್ತರ ಕೊಟ್ಟಿದ್ದಾರೆ. ಅಧಿವೇಶನ ಮುಗಿದ ನಂತರ ಎಲ್ಲಾ ಕಡೆಗಳಲ್ಲೂ ಸುತ್ತಿ ಚೆನ್ನಾಗಿ ಕೆಲಸ ಮಾಡಿ, ನೀವು ವಯಸ್ಸಿನಲ್ಲಿ ಚಿಕ್ಕವರಾಗಿರುವುದರಿಂದ ರಾಜೀನಾಮೆ ಏನೂ ಕೊಡಬೇಕಾಗಿಲ್ಲ, ಸ್ವಲ್ಪ ಪರಿಣಾಮಕಾರಿಯಾಗಿ ಕೆಲಸ ಮಾಡಿ. ಅವರೂ ಕೂಡ ತಮ್ಮ ಉದ್ವೇಗವನ್ನು ಕಡಿಮೆ ಮಾಡಿಕೊಳ್ಳುತ್ತಾರೆ. ಈಗ ಸಭೆಯನ್ನು ಮುಂದೂಡೋಣ.

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಅಧ್ಯಕ್ಷರೆ, ಪೆಟ್ರೋಲ್ ವಿಚಾರದಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಿರುವುದರಿಂದ ಆ ಸ್ಟೇಟ್‌ಮೆಂಟನ್ನು ದಯವಿಟ್ಟು ಮಾಡಿಸಬೇಕು.

ಸಚಿವರ ಹೇಳಿಕೆ

ಪೆಟ್ರೋಲ್ ಮತ್ತು ಪೆಟ್ರೋಲ್ ಉತ್ಪನ್ನಗಳ ಬೆಲೆ ಏರಿಕೆ ಬಗ್ಗೆ

+ ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಪೆಟ್ರೋಲ್ ಮತ್ತು ಪೆಟ್ರೋಲ್ ಉತ್ಪನ್ನಗಳ ಬೆಲೆ ಏರಿಕೆ ಬಗ್ಗೆ ಈ ಮನೆಯಲ್ಲಿ ಸಾಕಷ್ಟು ಸದಸ್ಯರುಗಳು ತಮ್ಮ ಆತಂಕ ವ್ಯಕ್ತಪಡಿಸಿದ್ದಾರಲ್ಲದೆ, ಮೇಲ್ಮನೆಯಲ್ಲೂ ಸಹ ಸಾಕಷ್ಟು ಸದಸ್ಯರು ಪ್ರಸ್ತಾಪ ಮಾಡಿದ್ದಾರೆ, ಮತ್ತು ರಾಜ್ಯಾದ್ಯಂತ ಬಳಕೆದಾರರೂ ಸಹ ತಮ್ಮ ಕಳವಳ ವ್ಯಕ್ತಪಡಿಸಿದ್ದಾರೆ. ಸರ್ಕಾರವೂ ಸಹ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ ಕೆಲವೊಂದು ಕ್ರಮಗಳನ್ನು ತೆಗೆದುಕೊಂಡಿದೆ. ಬೆಲೆ ಹೆಚ್ಚಳಕ್ಕೆ ಸರ್‌ಚಾರ್ಜ್ ದರದ ಹೆಚ್ಚಳವೂ ಒಂದು ಪ್ರಮುಖ ಕಾರಣವೆಂದು ತಮಗೆ ಗೊತ್ತಿದೆ. 1,000 ಲೀಟರ್‌ಗೆ 203 ರೂಪಾಯಿಗಳಿದ್ದುದು 1,500 ರೂಪಾಯಿಗಳಾಗಿದೆ, ಅಂದರೆ

ಏಳು ಪಟ್ಟು ಹೆಚ್ಚಾಗಿದೆ. ಪೆಟ್ರೋಲ್ ಬೆಲೆ ಲೀಟರ್‌ಗೆ ರೂ.24.97 ಪೈಸೆಯಿಂದ ರೂ.28.40 ಪೈಸೆಗೇರಿದೆ, ಹೆಚ್ಚಳ ರೂ.3.43 ಪೈಸೆ. ಇದು ರಾಷ್ಟ್ರದಲ್ಲೇ ಅತಿ ಹೆಚ್ಚಳವೆಂದು ನಾವು ಪರಿಗಣಿಸಿದ್ದೇವೆ. ಮೂಲ ಬೆಲೆ ಒಂದು ರೂಪಾಯಿಯಿದ್ದರೆ ಸರ್‌ಚಾರ್ಜ್ ರೂ.1.35 ಪೈಸೆ, ಅಬ್ಕಾರಿ ಶುಲ್ಕ 46 ಪೈಸೆ, ಪ್ರವೇಶ ತೆರಿಗೆ 6 ಪೈಸೆ, ಮಾರಾಟ ತೆರಿಗೆ 62 ಪೈಸೆ, ಈ ರೀತಿ ರೂ.3.43 ಪೈಸೆಯಷ್ಟು ಹೆಚ್ಚಾಗಿದೆ. ಅದೇ ರೀತಿ ಡೀಸೆಲ್ ಬೆಲೆ ರೂ.9.33 ಪೈಸೆ ಇದ್ದುದು 12.49 ಆಗಿದೆ, ಅಡುಗೆ ಅನಿಲದ ಬೆಲೆ ರೂ.29.57 ಪೈಸೆಯಷ್ಟು ಏರಿಸಲಾಗಿದೆ. ರೂ.130.75 ಪೈಸೆಯಷ್ಟಿದ್ದ ಅನಿಲ ಸಿಲಿಂಡರ್ ಬೆಲೆ ಈಗ ರೂ.160.32 ಪೈಸೆಯಾಗಿದೆ. ಇದರ ಬಗ್ಗೆ ಮೊನ್ನೆ ದಿವಸ ಪ್ರಸ್ತಾಪಿಸಲು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ನಾಣಯ್ಯನವರು ಎದ್ದಾಗ, ಮುಖ್ಯ ಕಾರ್ಯದರ್ಶಿಗಳು ಒಂದು ಮೀಟಿಂಗ್ ಕರೆದು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ ತೆಗೆದುಕೊಂಡಿದ್ದರು. The Chief Secretary has convened a meeting with Officers of Oil Coordination Committee, and Officers of Ministry of Petroleum, Government of India ನಮ್ಮ ರಾಜ್ಯ ಸರ್ಕಾರದ ಅಧಿಕಾರಿಗಳು ಅವರೊಡನೆ ಚರ್ಚೆ ಮಾಡಿ...

ಶ್ರೀ ವಾಟಾಳ್ ನಾಗರಾಜ್: ನಮಗೆ ಕೊಟ್ಟಿರುವ ಹೇಳಿಕೆ ಒಂದಾದರೆ, ತಾವು ಬೇರೆ ಓದುತ್ತಿದ್ದೀರಿ.

ಶ್ರೀ ಜಿ.ಬಸವಣ್ಣೆಪ್ಪ: ಅವರು ತೆಗೆದುಕೊಂಡಿರುವ ತೀರ್ಮಾನವನ್ನು ನಾನು ಓದುತ್ತಿದ್ದೇನೆ. ಈಗ ಹೇಳಿಕೆಯನ್ನು ಓದುತ್ತೇನೆ.

ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 24.97 ರೂ.ಗಳಿಂದ 28.40 ರೂ.ಗಳಿಗೆ ಹೆಚ್ಚಿಸಿರುವುದರ ಸಂಬಂಧದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ದಿನಾಂಕ 09.9.97 ರಂದು ಕರೆದ ಸಭೆಯಲ್ಲಿ ತೈಲ ಸಮನ್ವಯ ಸಮಿತಿಯ ಅಧಿಕಾರಿಗಳು, ಭಾರತ ಸರ್ಕಾರದ ಪೆಟ್ರೋಲಿಯಂ ಮಂತ್ರಾಲಯ ಅಧಿಕಾರಿಗಳು ಹಾಗೂ ರಾಜ್ಯ ಸರ್ಕಾರದ ಇತರೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಪೆಟ್ರೋಲಿನ ಚಿಲ್ಲರೆ ಮಾರಾಟ ದರದ ಹೆಚ್ಚಳವು ಲೀಟರ್‌ಗೆ 3.43 ರೂ.ಗಳಾಗಿದ್ದು, ಈ ಹೆಚ್ಚಳವು ದೇಶದಲ್ಲಿಯೇ ಅತೀ ಹೆಚ್ಚಿನದ್ದಾಗಿದೆ. ಭಾರತ ಸರ್ಕಾರದ ಅಧಿಕಾರಿಗಳು ಪೆಟ್ರೋಲಿನ ಮೂಲ ಬೆಲೆಯಲ್ಲಿ 1.00 ರೂ.ಗಳನ್ನು ಮಾತ್ರ ಏರಿಸಿದ್ದರೂ ಇದರ ಮೇಲೆ ವಿಧಿಸಿದ 1.30 ರೂ. ಸರ್ ಚಾರ್ಜ್‌ನಿಂದಾಗಿ ಹೆಚ್ಚಳವಾಗಿದೆಯೆಂದು ತಿಳಿಸಿದರು. (ಹಿಂದೆ 1,000 ಲೀಟರ್ ಪೆಟ್ರೋಲಿಗೆ 203.00 ರೂ.ಗಳಿದ್ದ ಸರ್ ಚಾರ್ಜ್ ಈಗ 1,500 ರೂ.ಗಳಿಗೆ ಏರಿಸಲಾಗಿದೆ). ಈ ಸರ್ ಚಾರ್ಜ್‌ನ್ನು ಎಂ.ಆರ್.ಪಿ.ಎಲ್. ಕಂಪನಿಯು ಖರೀದಿಸುವ ಖಚ್ಚಾತೈಲದ ಮೇಲಿನ ಟರ್ನ್‌ಓವರ್

ಟ್ಯಾಕ್ಸ್ ಹಾಗೂ ಪ್ರವೇಶ ತೆರಿಗೆಗೆ ಸಂಬಂಧಿಸಿದ್ದು ಹಾಗೂ ಸದರಿ ಪೆಟ್ರೋಲನ್ನು ಹಿಂದುಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಇವರು ಖರೀದಿಸುವಾಗ ನೀಡಬೇಕಾದ ಖರೀದಿ ತೆರಿಗೆಯನ್ನು ಒಳಗೊಂಡಿರುತ್ತದೆಯೆಂದು ತಿಳಿಸಿದರು. ಕರ್ನಾಟಕ ಮಾರಾಟ ತೆರಿಗೆಯ ನಿಯಮಗಳ ಪ್ರಕಾರ ಟರ್ನ್ಓವರ್ ಟ್ಯಾಕ್ಸನ್ನು ಗ್ರಾಹಕರಿಗೆ ವರ್ಗಾಯಿಸುವಂತಿಲ್ಲವೆಂದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಪ್ರತಿನಿಧಿಗಳ ಗಮನಕ್ಕೆ ತಂದಿರುತ್ತದೆ. ಎಂ.ಆರ್.ಪಿ.ಎಲ್. ಕಂಪನಿಯು ಖರೀದಿಸುವ ಪೆಟ್ರೋಲನ್ನು ಇತರ ರಾಜ್ಯಗಳಿಗೆ ಸರಬರಾಜು ಮಾಡುವುದರಿಂದ ಹಾಗೂ ಇಂತಹ ಉತ್ಪನ್ನಗಳು ಹೊರ ರಾಜ್ಯದ ಜನರು ಉಪಯೋಗಿಸಿರುವುದರಿಂದ ಈ ಉತ್ಪನ್ನಗಳ ಮೇಲಿನ ಖರೀದಿ ತೆರಿಗೆಯನ್ನು ರಾಜ್ಯದ ಜನತೆಯ ಮೇಲೆ ಹೊರಿಸುವುದು ಸರಿಯಲ್ಲ. ಕೇಂದ್ರ ಸರ್ಕಾರವು ಅಬಕಾರಿ ಸುಂಕವನ್ನು ಹೆಚ್ಚಿನ ದರದಲ್ಲಿ ವಸೂಲಿ ಮಾಡುತ್ತಿರುವುದು ಸರಿಯಲ್ಲ. ಭಾರತ ಸರ್ಕಾರದ ಪ್ರತಿನಿಧಿಗಳು ಸರ್‌ಚಾರ್ಜ್ ಮೊತ್ತದ ಮೇಲಿನ ಸರಿಯಾದ ವಿವರಗಳನ್ನು ನೀಡದೆ ಇರುವುದರಿಂದ ಇವುಗಳನ್ನು ಅವರು ದೆಹಲಿ ತಲುಪಿದ ತಕ್ಷಣ ಒದಗಿಸುವಂತೆ ಕೋರಲಾಗಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸಮಂಜಸವಲ್ಲದ ತೈಲ ಬೆಲೆಯ ಮೇಲಿನ ಸರ್ ಚಾರ್ಜ್ ಮೊತ್ತವನ್ನು ಏರಿಸಿರುವ ಬಗ್ಗೆ ಚರ್ಚಿಸಲು ಸಭೆಯೊಂದನ್ನು ಕೇಂದ್ರ ಸರ್ಕಾರವು ಕರೆಯುವಂತೆ ಹಾಗೂ ತೈಲ ಕಂಪನಿಗಳನ್ನು ಟರ್ನ್ಓವರ್ ಟ್ಯಾಕ್ಸನ್ನು ರಾಜ್ಯದ ಗ್ರಾಹಕರಿಗೆ ವರ್ಗಾಯಿಸದಂತೆ ಕೇಂದ್ರ ಸರ್ಕಾರವನ್ನು ಕೋರಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಕಡಿಮೆ ಏನಾಯಿತು?

ಶ್ರೀ ಎಸ್.ಸುರೇಶ್‌ಕುಮಾರ್: ಇದು ಸರ್ಕಾರದ ಅಸಹಾಯಕತನದ ಪ್ರತೀಕ. ಬೆಂಗಳೂರಿನಲ್ಲಿ ಪೆಟ್ರೋಲ್ ರೇಟ್ ಎಷ್ಟೆಂದು ನಾವು ಮೊನ್ನೆ ಬಹಳ ಸ್ಪಷ್ಟವಾಗಿ ಕೇಳಿದ್ದೆವು. ಇವೊತ್ತು ಆ ಕುರಿತ ಸ್ಟೇಟ್‌ಮೆಂಟನ್ನು ಅನೌನ್ಸ್ ಮಾಡುತ್ತೇವೆಂದು ಹೇಳಿದ್ದೀರಿ. ತಮ್ಮ ಹೇಳಿಕೆಯಲ್ಲಿ ರೇಟ್ ಬಗ್ಗೆ ತಿಳಿಸಿಲ್ಲ. ರೇಟ್ ಏನಿದೆ?

ಶ್ರೀ ಜಿ.ಬಸವಣ್ಣಪ್ಪ: ಈ ಮಧ್ಯೆ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳಿಗೆ ಸವಿಸ್ತಾರವಾಗಿ ಕಾಗದ ಬರೆದಿದ್ದಾರೆ. ಪತ್ರದಲ್ಲಿ ರಾಜ್ಯಕ್ಕಾಗಿರುವ ಅನ್ಯಾಯವನ್ನು ಎತ್ತಿ ತೋರಿಸಿದ್ದಾರೆ ಹಾಗೂ ಇದರ ಬಗ್ಗೆ ಸಂಪೂರ್ಣ ಚರ್ಚೆಯಾಗುವ ತನಕ ಈ ಹೆಚ್ಚಳವನ್ನು ತಡೆ ಹಿಡಿಯಬೇಕೆಂದು ಒತ್ತಾಯಿಸಿದ್ದಾರೆ.

ಶ್ರೀ ಎಸ್.ಸುರೇಶ್‌ಕುಮಾರ್: ಬೆಂಗಳೂರಿನಲ್ಲಿ ಇವೊತ್ತು ಪೆಟ್ರೋಲ್ ರೇಟ್ ಎಷ್ಟು?

ಶ್ರೀ ಜಿ.ಬಸವಣ್ಣಪ್ಪ: ಆಸ್ ಆನ್ ಟುಡೆ ರೂ.28.40 ಪೈಸೆ ಇದೆ.

ಶ್ರೀ ಎಸ್.ಸುರೇಶ್‌ಕುಮಾರ್: ಇದು ತಪ್ಪು ಎಂದು ನಾನು ಹೇಳುತ್ತಿದ್ದೇನೆ. ಈಗ ಅಲ್ಲಿ ತಡೆ ಹಿಡಿಯಲಾಗಿದೆಯೆಂದರೆ...

9.10ಪಿ.ಎಂ

ಶ್ರೀ ಜಿ.ಬಸವಣ್ಣಪ್ಪ: ತಡೆ ಹಿಡಿಯಲು ಕೋರಿದ್ದೇವೆ. ಆದರೆ ತಡೆ ಹಿಡಿಯುವ ಅಧಿಕಾರ ನಮಗೆ ಇಲ್ಲ.

ಅಧ್ಯಕ್ಷರು: ಪೆಟ್ರೋಲ್ ಲೀಟರ್‌ಗೆ 24 ರೂ. 97 ಪೈಸೆ ಇತ್ತು. ಕೇಂದ್ರ ಸರ್ಕಾರ ಲೀಟರ್‌ಗೆ 1 ರೂ. ಮಾತ್ರ ಬೆಲೆಯನ್ನು ಏರಿಸಿದೆ. ಅಂದರೆ ಲೀಟರ್‌ಗೆ 25 ರೂ.97 ಪೈಸೆ ಆಗಬೇಕಾಗಿತ್ತು. ಎಂ.ಆರ್.ಪಿ.ಎಲ್.ಗೆ.ಹಾಕಿರತಕ್ಕಂತಹ ಸರ್‌ಚಾರ್ಜ್ ಟ್ಯಾಕ್ಸ್ ಮತ್ತು ಟರ್ನ್ ಓವರ್ ಟ್ಯಾಕ್ಸ್ ಅವೆರಡನ್ನೂ ಕೂಡ ನಮ್ಮ ನೀತಿಗೆ ವಿರುದ್ಧವಾಗಿ ಕೇಂದ್ರ ಸರ್ಕಾರದವರು ಹಾಕಿದ್ದಾರೆ. ಆ ಕಾರಣದಿಂದ ಈ ಬೆಲೆ ಜಾಸ್ತಿಯಾಗಿದೆ. ಕೇಂದ್ರ ಸರ್ಕಾರದ ಜೊತೆಗೆ ನಾವು ಪ್ರೊಟೆಸ್ಟ್ ಮಾಡಿದ್ದೇವೆ, we have taken up this issue ಎಂದು ಹೇಳುತ್ತಾರೆ. ಇವರು ಹಾಕಿರತಕ್ಕಂಥದ್ದು ಆದರೆ ಇವರು ರೆಡ್ಯೂಸ್ ಮಾಡಬಹುದು. ಕೇಂದ್ರ ಸರ್ಕಾರದ ತಪ್ಪು ಗ್ರಹಿಕೆಯಿಂದ ಉಂಟಾಗಿರತಕ್ಕಂತಹ ಪರಿಸ್ಥಿತಿಯಾಗಿರುವುದರಿಂದ ಕೇಂದ್ರ ಸರ್ಕಾರವೇ ಇದನ್ನು ಪರಿಹರಿಸಬೇಕು. ಈ ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗಿದ್ದಾರೆ. they will take it up. We must found solution only with the Central Government, ಫೆಡರಲ್ ಸಿಸ್ಟಮ್‌ನಲ್ಲಿ ನಾವೇನು ಮಾಡಲಿಕ್ಕೆ ಆಗುತ್ತದೆ? There is no alternative. It is a kind of wrong policy pursued by the Government of India and the State Government has to make out a case and so they have to find relief only with the Central Governemnt.

ಶ್ರೀ ವಾಟಾಳ್ ನಾಗರಾಜ್: ಇದನ್ನು ಮಾಡಲಿಕ್ಕೆ ಏಕಿಷ್ಟು ನಿಧಾನವಾಗಿದೆ? ಒಂದು ವಾರದ ಹಿಂದೆಯೇ ಇದನ್ನು ಮಾಡಬಹುದಾಗಿತ್ತಲ್ಲಾ?

ಅಧ್ಯಕ್ಷರು: ಈಗಲಾದರೂ ದೆಹಲಿಗೆ ಈ ಬಗ್ಗೆ ಚರ್ಚಿಸಲು ಹೋಗಿದ್ದಾರಲ್ಲಾ. ಕೇಂದ್ರ ಸರ್ಕಾರದ ತಪ್ಪು ಗ್ರಹಿಕೆಯಿಂದ ಈ ರೀತಿಯಾಗಿದೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೇ, ಪೆಟ್ರೋಲ್ ಬೆಲೆ ಏಕೆ ಹೆಚ್ಚಳ ಆಗಿದೆ ಎಂಬ ಬಗ್ಗೆ ತಿಳಿಸಿದ್ದಾರೆ. ಆದರೆ ಡೀಸಲ್ ಬೆಲೆ ಬಗ್ಗೆ ಮಾನ್ಯ ಸಚಿವರು ತಮ್ಮ ಹೇಳಿಕೆಯಲ್ಲಿ ಏನೂ ತಿಳಿಸಿಲ್ಲ.

MR. SPEAKER: The samething is applicable. The

principle involved is ಟರ್ನ್‌ಓವರ್ ಟ್ಯಾಕ್ಸ್ ಮತ್ತು ಸರ್‌ಚಾರ್ಜ್ ಅನ್ ಸೈಂಟಿಫಿಕ್ ಆಗಿ ಸೆಂಟ್ರಲ್ ಗೌರ್ನಮೆಂಟ್ ಲಿವಿ ಮಾಡಿರುವುದರಿಂದ ಇಲ್ಲಿ ಆಕ್ಚುಯಲ್ ರೈನ್‌ಗಿಂತಲೂ ಕೂಡ ಸ್ವಲ್ಪ ಜಾಸ್ತಿಯಾಗಿದೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೇ, ನನಗೆ ಅರ್ಥವಾಗಿರುವ ಪ್ರಕಾರ ಟರ್ನ್ ಓವರ್ ಟ್ಯಾಕ್ಸ್ ಅನ್ನು ರಾಜ್ಯ ಸರ್ಕಾರ ಹಾಕುತ್ತದೆ. ತಾವೇನಾದರೂ ಟ್ಯಾಕ್ಸ್ ಹಾಕುತ್ತಿದ್ದೀರಾ?

ಅಧ್ಯಕ್ಷರು: ಮಾನ್ಯ ಉಪ ಮುಖ್ಯಮಂತ್ರಿಗಳು ಏನು ಹೇಳುತ್ತಾರೋ ನೋಡೋಣ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರ ಮೊದಲಿನಿಂದಲೂ ಟಿ.ಓ.ಟಿ. ಹಾಕಿಕೊಂಡು ಬರುತ್ತಿದೆ. ಆಯಿಲ್ ಕಂಪನಿಯವರು ಎಂ.ಆರ್.ಪಿ.ಎಲ್.ನವರಿಗೆ 1.30 ರೂ. ಸರ್‌ಚಾರ್ಜ್ ಹಾಕಿರುತ್ತಾರೆ. ಏಕೆಂದರೆ ಟಿ.ಓ.ಟಿ.ಯನ್ನು ಕನ್‌ಸ್ಯೂಮರ್ಸ್‌ಗೆ ಪಾಸ್-ಅನ್ ಮಾಡಲಿಕ್ಕಾಗುವುದಿಲ್ಲ. ಅದಕ್ಕೆ ಬೇರೆ ರೀತಿಯಲ್ಲಿ ಸರ್‌ಚಾರ್ಜ್ ಹಾಕಿ ಬಿಟ್ಟಿದ್ದಾರೆ. ಇದರ ಮೇಲೆ ಶೇಕಡ 20 ರಷ್ಟು ಎಕ್ಸೈಸ್ ಡ್ಯೂಟಿ ಹಾಕಿಕೊಂಡಿರುತ್ತಾರೆ. ಹಾಗಾಗಿ ಇಲ್ಲಿ ಬೆಲೆ ಜಾಸ್ತಿಯಾಗಿದೆ. ಈ ರೀತಿ ಮಾಡಬಾರದೆಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಕಾಗದ ಬರೆದಿದ್ದಾರೆ. ಅಂತಿಮವಾಗಿ ಈ ಬಗ್ಗೆ ಅಧಿಕಾರಿಗಳೊಡನೆ ಚರ್ಚಿಸಿ ಸಮಸ್ಯೆ ಬಗೆಹರಿಸುವವರೆಗೆ ತಡೆ ಹಿಡಿಯಿರಿ ಎಂದೂ ಕೂಡ ನಾವು ಕಾಗದ ಬರೆದಿದ್ದೇವೆ. We will take it up with the Central Government ನಾವೇನೂ ಇದರಲ್ಲಿ ಮಾಡಲಿಕ್ಕೆ ಬರುವುದಿಲ್ಲ. we have convinced- ನಮ್ಮ ರಾಜ್ಯದ ಇಲ್ಲಿಯ ಕನಸ್ಯೂಮರ್ಸ್‌ಗೆ ತೊಂದರೆಯಾಗುತ್ತಿದೆ ಎಂಬ ಅಂಶವನ್ನು ನಾವು ಕೇಂದ್ರದ ಗಮನಕ್ಕೆ ತಂದಿದ್ದೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಬರಗಾಲ ಪರಿಸ್ಥಿತಿ ಬಂದಾಗ ಕೇಂದ್ರಕ್ಕೆ ದುಡ್ಡು ಕೊಡಿ ಎಂದು ಮನವಿ ಸಲ್ಲಿಸುತ್ತೇವಲ್ಲಾ ಈಗ ಅದೇ ಪರಿಸ್ಥಿತಿ ಆಗಿದೆ. ಪತ್ರ ಬರೆದು ಮಾತುಕತೆಯಾಡಿದರೆ ಖಂಡಿತವಾಗಿಯೂ ಕಡಿಮೆಯಾಗುವುದಿಲ್ಲ. ಇದು ಬಹಳ ಸ್ಪಷ್ಟ. ಇದರಲ್ಲಿ ಬೇರೆ ಅಭಿಪ್ರಾಯವೇ ಇಲ್ಲ. ಇದು ರಾಜ್ಯ ಸರ್ಕಾರದ ಅಸಹಾಯಕತೆಯನ್ನು ತೋರಿಸುತ್ತದೆ. ಇದು ಕೂಡಲೇ ಆಗಬೇಕಾಗಿತ್ತು. ಒಂದು ವಾರ ದಿಂದ ಸುಮ್ಮನೆ ಕುಳಿತಿದ್ದೀರಿ ನೀವು. ಒಂದು ವಾರದಿಂದ ಪ್ರತಿ ಪೆಟ್ರೋಲ್ ಬಂಕ್‌ನಲ್ಲೂ ದರೋಡೆ ನಡೆಯುತ್ತಿದೆ. ಅದರ ಬಗ್ಗೆ ಕೇಂದ್ರ ಸರ್ಕಾರ....

ಶ್ರೀ ಸಿದ್ಧರಾಮಯ್ಯ: ಬೆಲೆ ಕಡಿಮೆ ಮಾಡುವುದು ನಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ಇಲ್ಲ. ತರಾತುರಿಯಲ್ಲೇ ಮೀಟಿಂಗ್ ಕರೆದು ಕೇಂದ್ರ ಪೆಟ್ರೋಲಿಯಂ ಅಧಿಕಾರಿಗಳ

ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು.... ಅವರೆಲ್ಲಾ ಮಾಡಿದ ಮೇಲೂ ಕೂಡ ಕೇಂದ್ರ ಸರ್ಕಾರದ ಜೊತೆಗೆ ಮಾತುಕತೆ ಮಾಡಲೇಬೇಕಾಗುತ್ತದೆ...

ಶ್ರೀ ಎನ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ಕಳೆದ 10 ದಿವಸಗಳಿಂದ ಈ ವಿಚಾರವನ್ನು ನಾವಿಲ್ಲಿ ಪ್ರಸ್ತಾಪ ಮಾಡುತ್ತಾ ಬರುತ್ತಿದ್ದೇವೆ. ನಾಗರೀಕರನ್ನು ಒಂದು ರೀತಿಯಲ್ಲಿ ಲೂಟಿ ಮಾಡಲಾಗುತ್ತಿದೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ನಾವು ಕೇಂದ್ರಕ್ಕೆ ಕಾಗದ ಬರೆದಿದ್ದೇವೆ ಎಂದು ಹೇಳಿದರು. ಇಂದು ಕಮ್ಯುನಿಕೇಷನ್ ಬಹಳ ಡೆವಲಪ್ ಆಗಿದ್ದರೂ ಕೂಡ ನಾವು ಪತ್ರ ಬರೆಯುತ್ತೇವೆ, ಕರೆಸ್ಪಾಡೆಂನ್ಸ್ ಮಾಡುತ್ತೇವೆ ಎನ್ನುವ ರೀತಿಯೇ ಸರಿಯಲ್ಲ. ನಿಮ್ಮಲ್ಲಿ ಫ್ಯಾಕ್ಸ್ ಇದೆ, ಎಲ್ಲಾ ಫೆಸಲಿಟೀಸ್ ಇದೆ. ಕೇಂದ್ರ ಸರ್ಕಾರದ ಜೊತೆಗೆ ಮಾತನಾಡಿ ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ ಲೀಟರ್ 26 ರೂ. ಅಥವಾ 26.50 ರೂ. ಎಂದು ಡಿಸೈಡ್ ಮಾಡದೇ ಇರುವುದು ನಿಮ್ಮ ಸರ್ಕಾರದ ಅಸಹಾಯಕತೆಯನ್ನು ತೋರಿಸುತ್ತದೆ. ಇಡೀ ದೇಶದಲ್ಲಿ ಹೆಚ್ಚಿನ ದರ ತೆರಬೇಕಾದ ಪರಿಸ್ಥಿತಿಗೆ ಬೆಂಗಳೂರಿನ ನಾಗರೀಕರನ್ನು ತಳ್ಳಿರುವುದು ನಿಮ್ಮ ಅಸಹಾಯಕತೆ ಎಂದು ಕೇಳಿ ನಮ್ಮ ಪಕ್ಷದವರು ಸಭಾತ್ಯಾಗ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಇದು ರಾಜ್ಯ ಸರ್ಕಾರ ಹಾಕಿರತಕ್ಕ ಸರ್‌ಚಾರ್ಜ್ ಅಲ್ಲ. ಇದು ಕೇಂದ್ರ ಸರ್ಕಾರ ಹಾಕಿರತಕ್ಕ ಸರ್‌ಚಾರ್ಜ್ ಆಗಿದೆ. ಇದನ್ನು ತೆಗೆಯಬೇಕೆಂದು ಹೇಳಿ ನಾವು ಕೇಂದ್ರ ಸರ್ಕಾರದ ಜೊತೆಗೆ ಮಾತುಕತೆ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನೀವು ಕೇವಲ ಪತ್ರ ಬರೆಯುವುದಲ್ಲ. ನಾನು ಇದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

ಶ್ರೀ ಜಿ.ಬಸವಣ್ಣೆಪ್ಪ: ಪತ್ರ ಬರೆಯುವುದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳೇ ಸ್ವತಃ ಅದೇ ಕೆಲಸಕ್ಕಾಗಿ ದೆಹಲಿಗೆ ಹೋಗಿದ್ದಾರೆ.

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ. ಪಕ್ಷದ ಮಾನ್ಯ ಸದಸ್ಯರುಗಳು ಹಾಗೂ ಕನ್ನಡ ಚಳುವಳಿ ವಾಟಾಳ್ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಈ ಬೆಲೆ ಇಷ್ಟಕ್ಕೇ ನಿಲ್ಲುತ್ತದೆಯೋ ಅಥವಾ ನೀವೂ ಕೂಡ ಜಾಸ್ತಿ ಮಾಡುತ್ತೀರಾ? ಅದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು.

ಅಧ್ಯಕ್ಷರು: ಈ ವಿಷಯದಲ್ಲಿ ಚರ್ಚೆ ಮುಕ್ತಾಯವಾಗಿದೆ. ಈಗ ಸದನವನ್ನು ನಾಳೆಗೆ ಮುಂದೂಡಲಾಗಿದೆ. ಸದನವು ನಾಳೆ ಬೆಳಿಗ್ಗೆ ಪುನಃ 10 ಗಂಟೆಗೆ ಸಮಾವೇಶಗೊಳ್ಳಲಿದೆ.

(ಸದನವು ರಾತ್ರಿ 9 ಗಂಟೆ 10 ನಿಮಿಷಗಳಿಗೆ ಮುಂದೂಡಲ್ಪಟ್ಟು ದಿನಾಂಕ 11.9.97ರಂದು ಬೆಳಿಗ್ಗೆ 10 ಗಂಟೆಗೆ ಪುನಃ ಸಮಾವೇಶಗೊಳ್ಳಲು ತೀರ್ಮಾನಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

(B) 025211

ಸರ್ಕಾರಿ ಪಠ್ಯಪುಸ್ತಕ ಮುದ್ರಣಾಲಯ, ಸರಸ್ವತಿಪುರಂ, ಮೈಸೂರು.